ಪ್ರತಿಯೊಬ್ಬ ಮನುಷ್ಯನಿಗೂ ಸ್ವದೇಶಾಭಿಮಾನ, ಸ್ವಮತಾಭಿಮಾನ ಮತ್ತು ಸ್ವಜನಾಭಿಮಾನಗಳಿರುವುದು ಅವಶ್ಯಕವು. ಸ್ವಭಾವಸಿದ್ಧವಾದ ಈ ಗುಣಗಳು ಯಾವನಲ್ಲಿಲ್ಲವೊ ಅವನು ಪಶುಗಿಂತಲೂ ಕಡೆಯೆಂದು ತಿಳಿಯಲ್ಪಡುವನು. ನಮ್ಮ ಕೈ|| ಸರದಾರರು ಈ ಧರ್ಮಸೂಕ್ಷ್ಮವನ್ನು ಅರಿತವರಾಗಿದ್ದುದರಿಂದಲೇ ಸಜೀವರಾಗಿರುವಾಗ್ಗೆ ಸರ್ಕಾರಿಯುದ್ಯೋಗವನ್ನು ವಹಿಸಿಕೊಂಡು ಅವಿಶ್ರಾಂತಶ್ರಮದಿಂದ ದೇಶಸೇವೆಯನ್ನು ನಿರ್ವಂಚನೆಯಿಂದಲೂ, ರಾಜಭಕ್ತಿಯಿಂದಲೂ, ಪ್ರೀತಿವಿಶ್ವಾಸದಿಂದಲೂ ಮಾಡಿ ಪ್ರಭುಗಳಿಂದಲೂ ಪ್ರಜೆಗಳಿಂದಲೂ ಸನ್ಮಾನಿತರಾಗಿದ್ದುದರಿಂದಲೇ ಚಿರಸ್ಮರಣೀಯರಾಗಿರುವರು. ದೇವತಾಪ್ರತಿಷ್ಠೆ ದಾನ ಮೊದಲಾಗಿ ಅನಂತ ಧರ್ಮಕಾರ್ಯಗಳನ್ನು ಮಾಡಿ ಆಸ್ತಿಕ್ಯಬುದ್ಧಿಯನ್ನು ಪ್ರಕಾಶಗೊಳಿಸಿದರು. ಮತ್ತು ಸ್ವಜನರ ವಿದ್ಯಾಭಿವೃದ್ಧ್ಯಪೇಕ್ಷೆಯಿಂದ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ನಾನಾಮುಖದಲ್ಲಿ ಸಾಹಾಯ್ಯಮಾಡಿ ಅವರುಗಳನ್ನು ಪ್ರೋತ್ಸಾಹಿಸುತ್ತಿದ್ದರಲ್ಲದೆ ಅವರುಗಳಿಗೆ ದ್ರವ್ಯಸಾಹಾಯ್ಯವು ನಿರಂತರವಾಗಿ ನಡೆದುಕೊಂಡುಬರುವುದಕ್ಕಾಗಿ 1½ ಲಕ್ಷ ರೂಪಾಯಿಗಳನ್ನೂ, ರಾಜಧಾನಿಯಲ್ಲಿರುವ ಹೆರುಗೆಯಾಸ್ಪತ್ರೆಯ ಸಾಹಾಯ್ಯಾರ್ಥವಾಗಿಯೂ, ಬಡ ಮಕ್ಕಳುಗಳ ಪೋಷಣೆಗಾಗಿಯೂ 1½ ಲಕ್ಷ ರೂ. ಗಳನ್ನೂ ತಮ್ಮ ಸ್ವಯಾರ್ಜಿತ ದ್ರವ್ಯದಿಂದ ವಿನಿಯೋಗಿಸಬೇಕೆಂದೂ, ತಮ್ಮನ್ನಾಶ್ರಯಿಸಿದ್ದ ಸ್ವಕೀಯ ಪರಕೀಯ ಜನರಿಗೆ ಇಂತಿಷ್ಟು ದ್ರವ್ಯವನ್ನು ಕೊಡಬೇಕೆಂದೂ ಮರಣಶಾಸನದಲ್ಲಿ ಬರೆದು ಸ್ವಜನಾಭಿಮಾನವನ್ನೂ ಪ್ರಾಣಿದಯಾಪರತೆಯನ್ನೂ ವ್ಯಕ್ತಪಡಿಸಿರುವರು. ಕೈ|| ಅರಸಿನವರು ಸೀಮೆಗೆ ಪ್ರಯಾಣಮಾಡುವ ಸಮಯದಲ್ಲಿ ಮೇಲ್ಕಂಡ ಮರಣಶಾಸನವನ್ನು ಬರೆದಿಟ್ಟುಕೊಂಡಿದ್ದು ಕೊಲಂಬೋದಿಂದ ಶ್ರೀಮದ್ಯುವರಾಜರವರ ಹೆಸರಿಗೆ ಅಂಚೆಯದ್ವಾರ ಕಳುಹಿಸಿಕೊಟ್ಟದಾಗಿ ತಿಳಿಯಬರುತ್ತದೆ. ಸ್ವಜನವಿದ್ಯಾಭಿವೃದ್ಧಿಗಾಗಿ ಕೈ|| ಅರಸಿನವರಿಂದ ಕೊಡಲ್ಪಟ್ಟಿರುವ ದ್ರವ್ಯನಿಧಿಯ ವೃದ್ಧ್ಯಂಶವು ಯಾವರೀತಿಯಾಗಿ ವಿನಿಯೋಗಿಸಲ್ಪಡಬೇಕೆಂಬುದನ್ನು ಆಲೋಚಿಸಿ ಅದರಂತೆ ನಡೆಸಲು ಶ್ರೀಮನ್ ಮಹಾರಾಜರವರ ಹುಜೂರು ಸೆಕ್ರೆಟರಿಯವರಾದ ಮ|| ಟಿ. ತಂಬುಸೆಟ್ಟರ ಅಧ್ಯಕ್ಷತೆಯಲ್ಲಿ ಪ್ರಮುಖ ಅರಸು ದೊಡ್ಡಮನುಷ್ಯರ ಸಂಘವೊಂದೇರ್ಪಾಟಾಗಿರುವುದಲ್ಲದೆ ಬಾಣಂತಿಯರ ಮತ್ತು ಮಕ್ಕಳ ಪೋಷಣಾರ್ಥವಾಗಿ ಕೊಡಲ್ಪಟ್ಟಿರುವ ದ್ರವ್ಯವು ಯಾವರೀತಿಯಲ್ಲಿ ವಿನಿಯೋಗಿಸಲ್ಪಡಬೇಕೆಂಬುದನ್ನು ಸಂಸ್ಥಾನದಲ್ಲೂ ಹೊರಗಡೆಯಲ್ಲೂ ಈ ಪೋಷಣ ಕಾರ್ಯದಲ್ಲುದ್ಯುಕ್ತರಾಗಿರುವ ಸ್ತ್ರೀ ಪುರುಷರ ಅಭಿಪ್ರಾಯವನ್ನು ಕೇಳಿ ತಕ್ಕ ಸೂಚನೆಗಳನ್ನು ಕೊಡಲು ಅಸಿಸ್ಟೆಂಟ್ ಪ್ರೈವೇಟ್ ಸೆಕ್ರೆಟರಿಯವರಾದ ಮ|| ಎಸ್. ಪಿ. ರಾಜಗೋಪಾಲಾಚಾರ್ಯರು ಅಪೇಕ್ಷಿಸಲ್ಪಟ್ಟಿರುವುದಾಗಿಯೂ ತಿಳಿಯಬಂದಿದೆ. ಕೈ|| ಕಾಂತರಾಜ ಅರಸಿನವರ ಸ್ವಜನಾಭಿಮಾನವೂ, ಆಶ್ರಿತಜನೋದ್ಧಾರಬುದ್ಧಿಯೂ, ದೀನಜನ ದಯಾಪರತೆಯೂ ಧರ್ಮಬುದ್ಧಿಯೂ ಲೋಕೋತ್ತರವಾಗಿರುವುವಲ್ಲದೆ ಉಪಪನ್ನರಾದವರೆಲ್ಲರಿಗೂ ಆದರ್ಶರೂಪವಾಗಿರುವುವು. ಜೀವಂತರಾಗಿರುವಾಗಲೂ ಅನಂತರವೂ ಬಹುಮುಖವಾಗಿ ಸಾಹಾಯ್ಯವನ್ನು ಮಾಡಿ ಚಿರಸ್ಮರಣೀಯರಾಗಿರುವ ಕೈ|| ಕಾಂತರಾಜಅರಸಿನವರ ಆತ್ಮವು ಸಾಯುಜ್ಯಪದವಿಯನ್ನು ಹೊಂದಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಉಪವಾಸದಿಂದ ಅನೇಕ ರೋಗಗಳು ಗುಣವಾಗುವುವು.

ಚಿಕಾಗೋ ಪಟ್ಟಣದ ವಿಶ್ವವಿದ್ಯಾಲಯದಲ್ಲಿ ಶರೀರಶಾಸ್ತ್ರಾಭ್ಯಾಸಮಾಡುತ್ತಿರುವವರು ಕೆಲಕಾಲ ಉಪವಾಸವಿರುವುದರಿಂದುಂಟಾಗತಕ್ಕ ಪರಿಣಾಮವನ್ನು ಪರೀಕ್ಷಿಸಿನೋಡಿದುದರಲ್ಲಿ ಕುಗ್ಗಿಹೋದ ದೇಹಬಲವು ಮರಳಿ ಬರುವುದೆಂದೂ, ಜಠರಾಗ್ನಿಯು ಪುಟವಾಗುವುದೆಂದೂ ವ್ಯಕ್ತಪಟ್ಟಿತು. ಡಾ|| ಮಾರ್ಗರೆಟ್ ಕುಂಡೆ ಎಂಬಾಕೆಯು 15 ದಿನಗಳವರೆಗೆ ಒಂದು ದಿನದಲ್ಲಿ ಒಂದು ಲೋಟ ನಿರ್ಮಲೋದಕದ ವಿನಾ ಮತ್ತಾವ ವಿಧವಾದ ಆಹಾರವನ್ನೂ ಸೇವಿಸದೆ ಪಾತಪ್ರವಚನೆಗೆ ಹೋಗಿಬರುತ್ತಿದ್ದಳು. ಈಕೆಯು ಉಪವಾಸ ವ್ರತವನ್ನಾಚರಿಸಿದ ಕೆಲವು ದಿನಗಳಮೇಲೆ ಆಹಾರದ ಮೇಲಣ ಇಚ್ಛೆಯು ತಪ್ಪಿಹೋದುದಲ್ಲದೆ ಉಳಿದ ದಿವಸಗಳಲ್ಲಿ ಮನಸ್ಸಿಗೆ ಅತ್ಯಂತ ಉಲ್ಲಾಸವಾಗಿದ್ದಿತೆಂದೂ, ಈಯವಧಿಯಲ್ಲಿ 1 ಪೌಂಡು ತೂಕ ಶರೀರಬಲವು ಕಡಿಮೆಯಾಗಿದ್ದು ಉಪವಾಸವು ತೀರಿದ 10 ದಿನಗಳ ತರುವಾಯ ತನ್ನ ಪೂರ್ವದ ಬಲವು ಬಂದಿತೆಂದೂ, ಇದರಂತೆಯೇ ಕೆಲ ಮನುಷ್ಯರುಗಳನ್ನೂ ಪ್ರಾಣಿಗಳನ್ನೂ ಉಪವಾಸವಿರಿಸಿದ್ದು ಪರೀಕ್ಷಿಸಿದುದರಲ್ಲಿ ದುರ್ಬಲ ದೇಹಿಗಳಿಗೂ, ಬಹುಮೂತ್ರ ಮತ್ತು ಅಜೀರ್ಣರೋಗಿಗಳಿಗೂ ಈ ಉಪವಾಸ ವ್ರತವು ಪರಮೌಷಧವಾಗಿ ಪರಿಣಮಿಸುತ್ತದೆಂದೂ ತಿಳಿಸಿರುತ್ತಾಳೆ. ಈ ಉಪವಾಸ ಚಿಕಿತ್ಸೆಗೆ ಇಂತಹ ಅದ್ಭುತವಾದ ಶಕ್ತಿಯಿರುವುದರಿಂದಲೇ ನಮ್ಮ ಆಯುರ್ವೇದ ವೈದ್ಯಗ್ರಂಥಗಳಲ್ಲಿ "ಲಂಘನಂಪರಮೌಷಧಂ" ಎಂದುಕ್ತವಾಗಿರುವುದು ಮತ್ತು ಆ ಸೂತ್ರವನ್ನು ಹಿಡಿದೇ ವೈದ್ಯರುಗಳು ರೋಗಿಗಳ ಪಥ್ಯವಿಚಾರದಲ್ಲಿ ಬಹು ಜಾಗರೂಕರಾಗಿರುವುದು.

ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ರೀಸರ್ವೆ.

ರೆವಿನ್ಯೂ ಬೋರ್ಡಿನವರ ಸೂಚನೆಯ ಪ್ರಕಾರ ಬಳ್ಳಾರಿ ಡಿಸ್ಟ್ರಿಕ್ಟಿಗೆ ಸೇರಿದ ಹೊಸಪೇಟೆ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ ಮತ್ತು ರಾಯದುರ್ಗ ಈ ಪಶ್ಚಿಮಭಾಗದ 5 ತಾಲ್ಲೂಕುಗಳಲ್ಲಿ ಪುನಸ್ಸರ್ವೆ ಮಾಡಲು ಮದ್ರಾಸ್ ಸರ್ಕಾರದಪ್ಪಣೆಯಾಗಿರುತ್ತದೆ. ಇದರಿಂದ ತರೀ ಜಮೀನುಗಳ ಕಂದಾಯವು ನೂರಕ್ಕೆ 17·07 ರಂತೆಯೂ, ಖುಷ್ಕಿಜಮೀನಿನ ಕಂದಾಯವು ನೂರಕ್ಕೆ 8·83 ರಂತೆಯೂ (ಎರಡರಿಂದಲೂ ಒಟ್ಟು 100ಕ್ಕೆ 11·02 ರಂತೆ) ಹೆಚ್ಚುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಸ್ವದೇಶದ ವೃತ್ತಾಂತಗಳು.

ಕಡೂರು ಡಿಸ್ಟ್ರಿಕ್ಟ್ ಡಿ|| ಕಮೀಷನರಾದ ಮ|| ಎಂ. ಜಿ. ಕೃಷ್ಣಸ್ವಾಮಿರಾಯರು ಬರುವ ಡಿಸಂಬರ್ ತಾ|| 1ರಿಂದ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಕಮೀಷನರಾಗಿ ನಿಯಮಿಸಲ್ಪಟ್ಟಿರುವರು.

ಈ ನವಂಬರ್ ತಾ|| 30 ರಿಂದ ಡಿಸೆಂಬರ್ ತಾ|| 6ರ ವರೆಗೆ ಕೆಡ್ಡಾ ಕ್ಯಾಂಪಿಗೂ ಕಾಕನಕೋಟೆಗೂ ... —

ಈ ನವಂಬರ್ ತಾ|| 30 ರಿಂದ ಡಿಸೆಂಬರ್ ತಾ|| 6ರ ವರೆಗೆ ಕೆಡ್ಡಾಕ್ಕೂ ಕಾರಾಪುರದ ಕ್ಯಾಂಪಿಗೂ ಆಹೂತರಾಗಿರುವ ಅತಿಥಿಗಳ ಮತ್ತು ಅಲ್ಲಿ ಕೆಲಸಮಾಡುವವರ ವಿನಾ ಮತ್ತಾರೂ ಬಿಡಲ್ಪಡುವುದಿಲ್ಲವೆಂದು ಪೋಲೀಸು ಇ|| ಜನರಲ್ ರವರು ಪ್ರಕಟಿಸಿರುತ್ತಾರೆ.

ಶ್ರೀಮನ್ ಮಹಾರಾಜರವರ ಸ್ವಾರಿಯು ಕಳೆದ ಬುಧವಾರದ ದಿವಸ ಮೋಟಾರುಬಂಡಿಯಲ್ಲಿ ಕಾಕನಕೋಟೆಗೆ ಚಿತ್ತೈಸಿ ಕೆಡ್ಡಾದಲ್ಲಿ ಕೂಡಿಹಾಕಲ್ಪಟ್ಟಿರುವ ಆನೆಗಳನ್ನೂ ಇತರ ಏರ್ಪಾಟುಗಳನ್ನೂ ಪರಾಮರ್ಶಿಸಿಕೊಂಡು ಅದೇ ದಿನ ಸಾಯಂಕಾಲ ರಾಜಧಾನಿಗೆ ದಯಮಾಡಿಸಿತು.

ತುಮಕೂರಿನ ಎರಡನೆ ಮುನಸೀಫರಾದ ಮ|| ಬಿ. ರಾಮಣ್ಣನವರು ರಜದಮೇಲಿರುವುದರಿಂದ ಬೆಂಗಳೂರಲ್ಲಿ ಅಡ್ವೋಕೇಟರಾಗಿದ್ದ ಮ|| ಹೊಸದುರ್ಗದ ವೆಂಕಟರಮಣಯ್ಯ, ಬಿ. ಎ., ಬಿ. ಎಲ್., ರವರು ತುಮಕೂರಿನ ಎರಡನೇ ಆಕ್ಟಿಂಗ್ ಮುನಸೀಫರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಯಳಂದೂರು ತಾಲ್ಲೂಕಿಗೆ ಸೇರಿದ ಗುಂಬಹಳ್ಳಿಯಲ್ಲಿ ಕೆಲ ವಾರಗಳ ಹಿಂದೆ ಕಳ್ಳರು ಒಂದುಮನೆಗೆ ಕನ್ನವನ್ನಿಕ್ಕಿ 1000 ರೂ. ಬೆಲೆಯ ಪದಾರ್ಥಗಳನ್ನು ಅಪಹರಿಸಿಕೊಂಡು ಹೋಗಿದ್ದರು. ಪೋಲೀಸರು 7 ಜನರನ್ನು ಹಿಡಿದು ಅವರಿಂದ ಅಪಹರಿಸಲ್ಪಟ್ಟಿದ್ದ ಪದಾರ್ಥಗಳಲ್ಲಿ 900 ರೂ. ವರೆಗೆ ಬೆಲೆಬಾಳುವ ಪದಾರ್ಥಗಳನ್ನು ವಶಪಡಿಸಿಕೊಂಡಿರುತ್ತಾರೆ.

ಬೆಂಗಳೂರು ಇಂಜನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಮ|| ಕೆ. ಆರ್. ಶೇಷಾಚಾರರಿಗೆ ಕ್ರಿಸ್ತಮಸ್ ಹಬ್ಬದ ರಜದೊಡನೆ 1 ತಿಂಗಳು ಮತ್ತು 11 ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುತ್ತದೆ. ಅರಮನೆಯ ಆರ್ಕಿಟೆಕ್ ಇಂಜನಿಯರಾಗಿದ್ದು ಈಗ ರಜದಮೇಲಿರುವ ಮ|| ಲಕ್ಷ್ಮೀನರಸಪ್ಪನವರು ಇಂಜನಿಯರಿಂಗ್ ಕಾಲೇಜಿನ ಆಕ್ಟಿಂಗ್ ಪ್ರಿನ್ಸಿಪಾಲರಾಗಿ ನಿಯಮಿಸಲ್ಪಟ್ಟಿರುವರೆಂದು ಕೇಳುತ್ತೇವೆ.

ದೇಹಾರೋಗ್ಯಕ್ಕಾಗಿ ಬೆಂಗಳೂರಿಗೆ ದಯಮಾಡಿಸಿದ್ದ ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಗಳು ರಾಜಧಾನಿಗೆ ದಯಮಾಡಿಸಿ ವಸಂತಮಹಲ್ಲಿನಲ್ಲಿ ಶ್ರೀಮನ್ ಮಹಾರಾಜರವರ ಅತಿಥಿಗಳಾಗಿದ್ದುಕೊಂಡು ಕೃಷ್ಣರಾಜಸಾಗರಕಟ್ಟೆ ಮೊದಲಾಗಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ತೆರಳಿದರು. ಲೋಕದಲ್ಲಿ ಮನುಷ್ಯನಿಗೆ ಪ್ರಾಶಸ್ತ್ಯವು ಕರ್ಮತಃ ಬರುವುದಲ್ಲದೆ ಜನ್ಮತಃ ಬರುವುದಿಲ್ಲವೆಂಬುದಕ್ಕೆ ರೈ|| ಆ|| ಶಾಸ್ತ್ರಿಗಳೇ ಒಳ್ಳೆಯ ನಿದರ್ಶನರಾಗಿರುತ್ತಾರೆ.

ರಾಜಧಾನಿಯಲ್ಲಿ ಪ್ಲೇಗುರೋಗವು ಇನ್ನೂ ಶಮನವಾಗದೆ ಅಲ್ಲಲ್ಲಿ ಒಂದೊಂದು ಮರಣವಾಗುತ್ತಿದೆ. ಹಗಲಿನಲ್ಲಿ ಬಿಸಲು ಕಾಯುತ ರಾತ್ರಿಯಲ್ಲಿ ಚಳಿಯು ಬಹಳವಾಗಿರುತ್ತದೆ. ಆಹಾರ್ಯ ಪದಾರ್ಥಗಳ ಬೆಲೆಯು ಏರುತಲಿದೆ. ದೇವರಾಜ ಮಾರ್ಕಟ್ಟಿನ ಉತ್ತರಭಾಗದ ಅಂಗಡಿಗಳ ಸಾಲು ಬಹು ಆತುರದಿಂದ ಕಟ್ಟಲ್ಪಡುತ್ತಿದೆ. ವೈಸ್‌ರಾಯ್‌ಪ್ರಭುಗಳು ಚಿತ್ತೈಸುವ ಮಾರ್ಗಗಳು ಸರಿಪಡಿಸಲ್ಪಡುತ್ತಲೂ ಅವುಗಳ ಇಕ್ಕೆಲದಲ್ಲಿರುವ ಕಟ್ಟಡಗಳು ಸುಣ್ಣ ಬಣ್ಣಗಳಿಂದಲಂಕರಿಸಲ್ಪಡುತ್ತಲೂ ಇವೆ.

ಭೂಮಿಯನ್ನು ಪರಾಧೀನ ಮಾಡಲವಕಾಶವಿಲ್ಲದ ರೈತರುಗಳಿಗೂ ಸಣ್ಣಪುಟ್ಟ ವ್ಯಾಪಾರ ಮತ್ತು ಕೂಲಿನಾಲಿ ಮಾಡಿಕೊಂಡಿರತಕ್ಕವರಿಗೂ ಅವರ ಸ್ವಂತ ಮತ್ತು ಇತರರ ಹೊಣೆಯಮೇಲೆ 50 ರೂಪಾಯಿಗಳವರೆಗೆ ಸಾಲಕೊಡಬಹುದೆಂದೂ ಭೂಮಿಯನ್ನಭಿವೃದ್ಧಿಪಡಿಸುವುದಕ್ಕಾಗಿ ಬಡ್ಡಿಯಿಲ್ಲದೆ ತಕಾವಿ ಸಾಲವನ್ನು ಡೆಪ್ಯುಟೀಕಮಿಷನರುಗಳೇ ಕೊಡಬಹುದೆಂದೂ, ಈ ಮೇಲ್ಕಂಡ ಸೌಲಭ್ಯಗಳು ಈಚೆಗಾದ ನದಿಯ ಅನಾಹುತದಿಂದ ನಷ್ಟಪಟ್ಟಿರುವ ಜನರಿಗೆ ಮಾತ್ರ ತೋರ್ಪಡಿಸತಕ್ಕದೆಂದೂ ಸರ್ಕಾರದಪ್ಪಣೆಯಾಗಿರುತ್ತದೆ.

ಕಳೆದ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ಕೆಲಮೆಂಬರುಗಳು ಪ್ರಾರ್ಥಿಸಿಕೊಂಡಿದ್ದ ಪ್ರಕಾರ ಹೊಳೆನರಸೀಪುರದ ರೈಲ್ವೆಸ್ಟೇಷನ್ನಿನಿಂದ ಕೊಂಚ ದೂರದಲ್ಲಿ ಕೋರ್ಟಿಗೆ ಹೋಗತಕ್ಕ ಪ್ರಯಾಣಿಕರು ಇಳಿಯಲನುಕೂಲಿಸುವಂತೆ ಒಂದು ಫ್ಲ್ಯಾಗ್ ಸ್ಟೇಷನನ್ನೇರ್ಪಡಿಸಿ 6 ತಿಂಗಳವರೆಗೆ ಪರೀಕ್ಷಿಸುವುದಾಗಿಯೂ, ನರಸಿಂಹರಾಜಪುರದ ಟ್ರಾಂವೆಸ್ಟೇಷನ್ನಿನಲ್ಲಿ ಒಂದು ವೇಟಿಂಗ್‌ರೂಮನ್ನು ಕಲ್ಪಿಸಿಕೊಡುವುದಾಗಿಯೂ, ಚಿಕ್ಕಜಾಜೂರು-ಚಿತ್ರದುರ್ಗ ರೈಲ್ವೆಯಲ್ಲಿ 4 ಚಕ್ರದ ಒಂದು ಬಂಡಿಯನ್ನು ಹೆಚ್ಚಾಗಿ ಹಾಕುವುದಾಗಿಯೂ, ಚಿಕ್ಕಜಾಜೂರು ಸ್ಟೇಷನ್ನಿನಲ್ಲಿ ಮೂರನೆ ತರಗತಿಯ ಪ್ರಯಾಣಿಕರಿಗಾಗಿ ಒಂದು ವೇಟಿಂಗ್‌ಷೆಡ್ಡನ್ನು ಏರ್ಪಡಿಸುವುದಾಗಿಯೂ, 1924 ನೆಯ ಜನವರಿ ತಾ|| 1 ರಿಂದ ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೆ 2 ವೇಳೆ ಬಂಡಿಗಳನ್ನು ಬಿಟ್ಟು ಪರೀಕ್ಷಿಸುವುದಾಗಿಯೂ ರೈಲ್ವೆ ಸೆಕ್ರೆಟರಿಯವರು ಪ್ರಕಟಿಸಿರುತ್ತಾರೆ.

ಪ್ರಜಾಪ್ರತಿನಿಧಿ ಸಭೆಯ ಅಧಿವೇಶನಗಳಿಗಾಗಿ ರಾಜಧಾನಿಗೆ ಬರತಕ್ಕ ಮೆಂಬರುಗಳಿಗೆ ಈವರೆಗೂ ಪ್ರಯಾಣದ ಖರ್ಚೇನೂ ಕೊಡಲ್ಪಡದೆ ಲವಾಜಮೆ ಅಥವಾ ಅದರ ಬೆಲೆಯಷ್ಟು ಮೊಬಲಗು ಕೊಡಲ್ಪಡುತ್ತಿದ್ದಿತಷ್ಟೆ. ಇನ್ನುಮುಂದೆ (1) ಪ್ರತಿಯೊಬ್ಬ ಮೆಂಬರಿಗೂ ರೈಲ್ವೆ ಪ್ರಯಾಣದಲ್ಲಿ ಒಂದು ಎರಡನೆಯಕ್ಲಾಸು ಟಿಕೆಟ್ಟಿನ ಮತ್ತೊಂದು ಮೂರನೆಯಕ್ಲಾಸು ಟಿಕೆಟ್ಟಿನ ಛಾರ್ಜೂ, (2) ಮಲೆನಾಡಿನಲ್ಲಿ ಪ್ರತಿ 15 ಮೈಲಿಗೂ ಅದರ ಭಿನ್ನಾಂಶಕ್ಕೂ ಮೈದಾನದಲ್ಲಿ ಪ್ರತಿ 20 ಮೈಲಿ ಮತ್ತು ಅದರ ಭಿನ್ನಾಂಶಕ್ಕೂ 5 ರೂಪಾಯಿನಂತೆ ಪ್ರಯಾಣದ ಖರ್ಚು ಕೊಡಲ್ಪಡುವುದು. ಆದರೆ ರೈಲ್ವೆಯಿಂದ 8 ಮೈಲಿ ದೂರದೊಳಗಿರುವ ಸ್ಥಳಗಳಿಂದ ಬರತಕ್ಕವರಿಗೆ ಮೈಲೇಜು ಕೊಡಲ್ಪಡುವುದಿಲ್ಲವು. (3) ಪ್ರತಿಯೊಬ್ಬ ಮೆಂಬರಿಗೂ ದಿನ 1 ಕ್ಕೆ 5 ರೂಪಾಯಿನಂತೆ ಅವರು ನಿಂತಕಾಲದಲ್ಲಿ ಕೊಡಲ್ಪಡುವುದು. (4) ಅಧಿವೇಶನವು ಪೂರೈಸುವವರೆಗೂ ಸಭೆಗೆ ಬಂದರೆ ಮಾತ್ರ ಭತ್ಯವು ಕೊಡಲ್ಪಡುವುದು. ಮೆಂಬರುಗಳ ವಾಸಕ್ಕೆ ಸ್ಥಳವು ಸರ್ಕಾರದಿಂದ ಸಾಧ್ಯವಾದ ಮಟ್ಟಿಗೆ ಒದಗಿಸಿಕೊಡಲ್ಪಡುವುದು, ಆದರೆ ದಿನ 1ಕ್ಕೆ 1 ರೂಪಾಯಿನಂತೆ ಬಾಡಿಗೆ ತೆಗೆದುಕೊಳ್ಳಲ್ಪಡುವುದು. (5) ಪ್ರಯಾಣದ ವೆಚ್ಚವು ಕೊಡಲ್ಪಟ್ಟ ಮೇಲೆ ಲವಾಜಮೆಯ ಪದ್ಧತಿಯು ತಪ್ಪಿಸಲ್ಪಡುವುದು ಎಂದು ಸರ್ಕಾರದಪ್ಪಣೆಯಾಗಿದೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾಗಿ ಆರಿಸಲ್ಪಡಲು ಕೌನ್ಸಿಲರುಗಳಾದ ಮ|| ಬಿ. ಕೆ. ಗರುಡಾಚಾರರೂ, ಮ|| ಸಿ. ಹೈವದನರಾಯರೂ ಅಭ್ಯರ್ಥಿಗಳಾಗಿ ನಿಂತಿದ್ದರು. ಇವರಲ್ಲಿ ಮ|| ಗರುಡಾಚಾರರಿಗೆ ಹೆಚ್ಚು ಮತಗಳು ಬಂದು ಉತ್ತೀರ್ಣರಾದರು. ಆದರೆ ಆ ದಿವಸದ ಚುನಾವಣೆಯು ಹೊಸರೂಲ್ಸು ಅನುಷ್ಠಾನಕ್ಕೆ ಬರುವುದಕ್ಕೆ ಮೊದಲೇ ಗೊತ್ತಾಗಿದ್ದುದರಿಂದ ಹಳೇರೂಲ್ಸಿನ ಪ್ರಕಾರ ನಡಿಯಬೇಕಲ್ಲದೆ ಹೊಸರೂಲ್ಸಿನಂತೆ ನಡಿಯಕೂಡದೆಂದು ಮ|| ಗಳಾದ ಹೈವದನರಾಯರು ಅಬ್ಬಾಸ್ ಖಾನರವರು ಮೊದಲಾದ ಕೌನ್ಸಿಲರುಗಳಿಂದ ನಿರೋಧಿಸಲ್ಪಟ್ಟಾಗ್ಗೂ ಪ್ರೆಸಿಡೆಂಟರಾದ ಮ|| ಶಿರ್ಶಿ ಅನಂದರಾಯರು ಲಕ್ಷಿಸದೆ ಹೊಸರೂಲ್ಸಿನಪ್ರಕಾರ ಎಲೆಕ್ಷನ್ ನಡಿಸಿಬಿಟ್ಟರು. ಈ ಎಲಕ್ಷನ್ನು ಅನ್ಯಾಯವೂ ಅಕ್ರಮವೂ ಆಗಿರುವುದರಿಂದ ಪ್ರೆಸಿಡೆಂಟರು ಅದರ ಪ್ರಕಾರ ಆಚರಣೆಗೆ ತರದಂತೆ ಆತಂಕಪಡಿಸಬೇಕಾಗಿ ಮ|| ಗಳಾದ ಹೈವದನರಾಯರು, ಅಬ್ಬಾಸ್ ಖಾನರವರು ಮತ್ತು ಎಸ್. ವೆಂಕಟಾಚಲಯ್ಯಂಗಾರರು ಬೆಂಗಳೂರು ಒಂದನೆಯ ಮುನಸೀಫ್ ಕೋರ್ಟಿನಲ್ಲಿ ದಾವಾಮಾಡಿರುತ್ತಾರೆ. ಸರ್ಕಾರಿಯ ಅಡ್ವೋಕೇಟರು ಪ್ರೆಸಿಡೆಂಟರ ಪಕ್ಷ ವಹಿಸಿ ವಕೀಲಿಯನ್ನು ನಡಿಸುವಂತೆ ಸರ್ಕಾರದಪ್ಪಣೆಯಾಗಿದೆ. ಈ ವಿವಾದದ ಫಲಿತಾಂಶವು ಬಹು ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿದೆ.

"ಯಥಾರ್ಥವಾದಿಗಳ ಅಪವಾದ" ಎಂಬ ಶಿರೋಲೇಖನದಿಂದ ಒಂದು ಪತ್ರವ್ಯವಹಾರವನ್ನು X·Y·Z· ರವರು ಈ ನವಂಬರ್ ತಾ|| 12ರ ಸಂಪದಭ್ಯುದಯ ಪತ್ರಿಕೆಗೆ ಬರೆದಿರುವುದರಲ್ಲಿ "ಈ ಲೇಖನವನ್ನು ಹೋದವಾರವೇ ಪ್ರಕಟಿಸಬೇಕೆಂದು ಪ್ರಾರ್ಥಿಸಿಕೊಂಡು ಸ್ಟಾರ್‌ಪತ್ರಿಕಾಕರ್ತರಿಗೆ ಕಳುಹಿಸಿದ್ದೆನು. ಇದುವರೆಗೂ ಅಲ್ಲಿ ಪ್ರಕಟವಾಗಲಿಲ್ಲ......" ಎಂದು ಹೇಳಿರುತ್ತಾರೆ. ಈ X.Y.Z. ನಾಮಾಂಕಿತರು ಮತ್ತೊಬ್ಬರೊಡನೆ ಕಳೆದ ತಾ|| 9ರ ಸಾಯಂಕಾಲ ನಮ್ಮಾಫೀಸಿಗೆ ಬಂದು "ಯಥಾರ್ಥವಾದಿಯ ಲೇಖನಕ್ಕೆ ಪ್ರತ್ಯುತ್ತರವಾಗಿ ಬರೆದು ಪೋಸ್ಟುದ್ವಾರ ಕಳುಹಿಸಿಕೊಟ್ಟ ನನ್ನ ಲೇಖನವನ್ನು ಯಾತಕ್ಕಾಗಿ ಪ್ರಕಟಿಸಲಿಲ್ಲ ಮತ್ತು ಹಾಗೆ ಪ್ರಕಟಿಸದಿರಲು ಕಾರಣವನ್ನಾದರೂ ತಿಳಿಸಲಿಲ್ಲ?" ಎಂದು ಬಹಳ ಅಸಮಾಧಾನದಿಂದ ಪ್ರಶ್ನೆಮಾಡಿದುದರ ಮೇಲೆ "ನಿಮ್ಮಿಂದ ಈವರೆಗೂ ಯಾವವಿಧವಾದ ಲೇಖನವೂ ನಮಗೆ ಬಂದಿಲ್ಲವು ಮತ್ತು ಹಾಗೆ ಬಂದಿದ್ದೂ ಪ್ರಕಟಿಸಲ್ಪಡಲಾಗದಿದ್ದಲ್ಲಿ ಅದರ ಕಾರಣವು ಸ್ಟಾರ್ ಪತ್ರಿಕೆಯಲ್ಲಿ ತಿಳುಹಲ್ಪಡುತ್ತಿದ್ದಿತು" ಎಂದು ಇಬ್ಬರು ವೀರಶೈವ ದೊಡ್ಡಮನುಷ್ಯರುಗಳ ಸಮಕ್ಷಮದಲ್ಲಿ ತಿಳಿಸಿದ್ದೆವಾದರೂ ವಿದ್ಯಾವಂತರೂ ಪುರೋವೃದ್ಧಿಯನ್ನು ಹೊಂದತಕ್ಕವರೂ ಆದ X·Y·Z. ರವರು ತೃಪ್ತರಾಗದೆ ತಮ್ಮ ಲೇಖನವನ್ನು ನಾವು ಪ್ರಕಟಿಸಲಿಲ್ಲವೆಂದು ತಾ|| 12 ರ ಸಂಪದಭ್ಯುದಯ ಪತ್ರಿಕೆಯಲ್ಲಿ ಬಹು ದಿಟ್ಟತನದಿಂದ ಬರೆದಿರುವುದಕ್ಕಾಗಿ ವಿಷಾದಿಸುತ್ತೇವೆ.

ರಾಜಧಾನಿಯಲ್ಲಿ ಕಬೀರದಾಸ್ ನಾಟಕಪ್ರಯೋಗದಿಂದ ಪುರನಿವಾಸಿಗಳಿಗೆ ದೈವಭಕ್ತಿರಸಾಸ್ವಾದವನ್ನು ಮಾಡಿಸುತ ಅವರ ಪ್ರೀತಿವಿಶ್ವಾಸಕ್ಕೂ ಶ್ಲಾಘನೆಗೂ ಶ್ರೀಮನ್ ಮಹಾರಾಜರವರ ಕೃಪೆಗೂ ಪಾತ್ರರಾಗಿರುವ ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಲಿಯವರು ಶ್ರೀಮನ್ ಮಹಾರಾಜರವರ ಸನ್ನಿಧಿಯಲ್ಲಿ ಚೌಚೌ ಎಂಬ ಮಿಶ್ರಿತ ನಾಟಕವನ್ನಭಿನಯಿಸಿ ಬಹುಮಾನಿಸಲ್ಪಟ್ಟರೆಂದು ಕೇಳಿ ಸಂತೋಷಿಸುತ್ತೇವಲ್ಲದೆ ಕಳೆದ ಮಂಗಳವಾರ ರಾತ್ರಿ ಪ್ರಭಾಮಣಿ ವಿಜಯವೆಂಬ ನಾಟಕವನ್ನು ಅಭಿನಯಿಸಿ ಅದರಿಂದ ಬಂದುತ್ಪನ್ನದಲ್ಲಿ 250 ರೂಪಾಯಿಗಳನ್ನು ರಾಜಧಾನಿಯ ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರಸ್ವಾಮಿಯ ವಿಶೇಷೋತ್ಸವಕ್ಕಾಗಿ ಭಕ್ತರ ಪ್ರಾರ್ಥನೆಯಂತೆ ಸಾಹಾಯಮಾಡಿ ತಮ್ಮ ದೈವಭಕ್ತಿಯನ್ನೂ ಉದಾರಬುದ್ಧಿಯನ್ನೂ ಪ್ರದರ್ಶಿಸಿದುದಕ್ಕಾಗಿಯೂ, ಬರುವ ಮಂಗಳವಾರ ಸಾಯಂಕಾಲ (ಮ್ಯಾಟನಿ) ಲೋಕಪ್ರಿಯವಾದ ಮತ್ತು ರಾಮನಾಮ ಮಹಿಮಾಪ್ರದರ್ಶಕವಾದ ಕಬೀರದಾಸ ಚರಿತ್ರೆಯನ್ನು ಅಭಿನಯಿಸಿ ಅದರಿಂದ ಬರುವ ಉತ್ಪನ್ನವನ್ನು ಗಾನವಿಶಾರದ ಸಂಗೀತವಿದ್ವಾಂಸ ಮ|| ಬಿ. ಕೃಷ್ಣಪ್ಪನವರಿಂದ ರಾಜಧಾನಿಯಲ್ಲಿ ಕಟ್ಟಿಸಲ್ಪಡುತ್ತಿರುವ ಶ್ರೀರಾಮಮಂದಿರದ ಸಹಾಯಾರ್ಥವಾಗಿ ಕೊಡಲು ವಾಗ್ದಾನಮಾಡಿರುವುದಕ್ಕಾಗಿಯೂ ನಾಟಕಮಂಡಲಿಯವರನ್ನು ಮುಖ್ಯವಾಗಿ ಮ|| ವೀರಣ್ಣನವರನ್ನು ವಂದಿಸುತ್ತೇವೆ. ದೈವಭಕ್ತರಾದ ಪುರನಿವಾಸಿಗಳು ಮಂಗಳವಾರ ದಿವಸ ನಾಟಕಾವಲೋಕನಕ್ಕೆ ಹೋಗಿ ಧರ್ಮಕರ್ತರುಗಳ ಇಷ್ಟಾರ್ಥವನ್ನು ನೆರವೇರಿಸಿ ಶ್ರೀರಾಮನ ಪೂರ್ಣಾನುಗ್ರಹಕ್ಕೆ ಪಾತ್ರರಾಗಲೆಂದು ಕೋರುತ್ತೇವೆ.

MYSORE RAILWAYS.

NOTIFICATION.

In connection with His Excellency the Viceroy's Tour over this Railway, the following changes in the running of Passenger trains will be made:—

1. No. 4 Down Passenger will start from Bangalore at 21-30 Hours Instead of 22 Hours on 28th instant and will arrive Mysore at 5-15 Hours on the morning of 29th Instant instead of 6 Hours.
2. No. 8 Down Mixed Train to Nanjangud will leave Mysore at 6/- Hours instead of 7 Hours on 29th Nov. 1923 and will arrive Nanjangud Town at 7/16 Hours or one hour earlier.
3. No. 5 Up Express on 29th Nov. 1923 will leave Mysore at 6-32 Hours instead of 7-15 Hours and will run through to Seringapatam without stopping at Paschamvahini. She will run to the usual timings from Seringapatam to Bangalore City.
4. No. 4 Down Passenger will leave Banglore at 21-15 Hours on 5th December 1923 instead of at 22-0 Hours and will run to special timings upto Hanakere from where scheduled timings will be picked up.
5. No. 3 Up Passenger of 5th December 1923 will leave Mysore at 21-30 Hours instead of at 22-0 Hours and run to special timings upto Bidadi where she will pick up the scheduled timings.
6. No. 2 Down Mail of 6th December 1923 will not stop at Bidadi.
7. No. 22 Down Narrow Guage Train will leave Bangalore City at 7-40 Hours on 27th Nov. 1923 instead of at 8-20 Hours and will arrive Yesvantapnr at 8-3 Hours instead of at 8-43 Hours and will pick up usual timings from that station.
8. For detailed timings of the trains referred to above, please see notices exhibited on the Notice Boards at Stations on the Bangalore-Mysore-Nanjangud Section.

Traffic Manager's Office,
Mysore, 14th Nov. 1923.
No. T. S. 104/23.

A. A. KHAN,
Traffic Manager.

ಹದಿನಾರನೆಯ

ಹಾಸನದ ದನಗಳ ಪ್ರದರ್ಶನ

ಪ್ರಸಿದ್ಧ ಪತ್ರಿಕೆ.

ಹಾಸನದ ಟರ್ವ ಮುಸಾಫರ್‌ಖಾನೆ ಅಜುಬಾಜೂ ಹಿಂಭಾಗದ ಮೈದಾನಗಳಲ್ಲಿಯೂ ಸಂತೆಮೋಳದಲ್ಲಿಯೂ ಸಹ ಮಾಮೂಲ್ ಮೇರೆ ಸರ್ 1924 ನೆ ಇಸ್ವಿ ಜನವರಿ ಮಾಹೆ 3 ನೇ ತಾರೀಖು ಗುರುವಾರ, 4 ನೇ ತಾರೀಖು ಶುಕ್ರವಾರ ಮತ್ತು 5 ನೇ ಶನಿವಾರ ಈ ದಿವಸಗಳಲ್ಲಿ ದನಗಳ ಪ್ರದರ್ಶನವು ನಡೆಸಲ್ಪಡುತ್ತೆಂಬ ಸಂಗತಿಯನ್ನು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ಪ್ರದರ್ಶನಕ್ಕೆ ಬರತಕ್ಕ ರಾಸುಗಳ ಪೈಕಿ ಉತ್ತಮವಾದ ರಾಸುಗಳಿಗೆ ಧಾರಾಳವಾಗಿ ಬಹುಮಾನಗಳು ಕೊಡಲ್ಪಡುತ್ತೆ.

ಪ್ರದರ್ಶನಕ್ಕೆ ಬರುವ ಜನ ಜಾನ್ವಾರುಗಳಿಗೆ ನೀರು ವಗೈರೆ ಸೌಕರ್ಯಗಳನ್ನು ಧಾರಾಳವಾಗಿ ವದಗಿಸತಕ್ಕ ಏರ್ಪಾಡು ಮಾಡಲ್ಪಡುತ್ತೆ.

ತಪಲ್‌ವರಿವಿಗೂ ಇಲ್ಲಿ ಸಾಂಕ್ರಾಮಿಕ ರೋಗಗಳು ಏನೊಂದೂ ಇರುವುದಿಲ್ಲ ಹವ ಚನ್ನಾಗಿದೆ.

ಜಾನ್ವಾರುಗಳ ಬಿಕ್ರಿಯು ಹೇರಳವಾಗಿ ನಡೆಯುವ ಸಂಭವವಿರುತ್ತೆ. ಈ ಕಾರಣಗಳಿಂದ ಹೆಚ್ಚಾಗಿ ಜನಗಳು ಜಾನ್ವಾರುಗಳು ಸೇರಬಹುದೆಂದು ನಂಬಿದೆ.

ಪ್ರಸಿದ್ಧವಾದ ನಾಟಕದ ಕಂಪನಿಗಳೂ ಸರ್ಕಸ್ ಆಟಗಳೂ ಜನಗಳಿಗೆ ಆನಂದ ವಿನೋದಗಳನ್ನುಂಟುಮಾಡಲು ಏರ್ಪಾಡು ಇರುತ್ತೆ. ಅಲ್ಲದೆ ದೇಶ ಪರದೇಶದ ವ್ಯಾಪಾರಸ್ಥರುಗಳೂ ಜಾತ್ರೆಕಾಲದಲ್ಲಿ ಇಲ್ಲಿ ನೆರದು ಲಕ್ಷಾಂತರ ರೂಪಾಯಿಗಳ ವ್ಯಾಪಾರಗಳು ಮಾಮೂಲಿನಂತೆ ನಡೆಯಬಹುದಾಗಿದೆ.

ಜಾತ್ರೆ ಕಾಲದಲ್ಲಿ ಜನಗಳ ನೆಮ್ಮದಿಗೆ ಭಂಗವಾಗದಂತೆ ರಕ್ಷಣಾಧಿಕಾರಿಗಳ ಸಹಾಯವೂ ಜನ ಜಾನ್ವಾರುಗಳ ವೈದ್ಯ ಚಿಕಿತ್ಸೆಗಳಿಗೆ ತಕ್ಕತಕ್ಕ ಆಸ್ಪತ್ರೆಗಳೂ ಏರ್ಪಾಡ್ಮಾಡಲ್ಪಡುತ್ತೆ.

ಜನಗಳಿಗೆ ತಿಳುವಳಿಕೆ ಉಂಟುಮಾಡುವ ಉದ್ದಿಶ್ಯ ವ್ಯವಸಾಯ, ರೇಷ್ಮೆ ವ್ಯವಸಾಯ ವಗೈರೆಗಳ ವಿಚಾರದಲ್ಲಿ ಅವಶ್ಯಕವಾದ ಪ್ರದರ್ಶನಗಳೂ ಏರ್ಪಾಡುಮಾಡಲ್ಪಡುತ್ತೆ.

ಮೈಸೂರು ಸರ್ಕಾರದವರು ಜಾನ್ವಾರುಗಳಲ್ಲಿ ಸುಪ್ರಸಿದ್ಧವಾಗಿರುವ ಅಮೃತಮಹಲ್ ರಾಸುಗಳನ್ನು ಪ್ರದರ್ಶನ ಕಾಲದಲ್ಲಿ ಹರಾಜು ಮೂಲಕ ವಿಲೇವಾರಿ ಮಾಡುವುದರಿಂದಲೂ ಇನ್ನುಮುಂದೆ ಈ ಜಾನ್ವಾರುಗಳು ದೊರೆಯುವುದೇ ಕಷ್ಟಸಾಧ್ಯವಾಗುವುದರಿಂದಲೂ ಜನಗಳೆಲ್ಲರೂ ಈ ಅವಕಾಶವನ್ನು ತಪ್ಪದೆ ಉಪಯೋಗಿಸಿಕೊಳ್ಳುತ್ತಾರೆಂದು ನಂಬಿದೆ.

ತಾ|| 14-11-1923,
ಹಾಸನ,

Belavadi Suryanarayan Rao,
Vice-President & Chairman,
Cattle Show Committee,
Hassan.

ಮೈಸೂರು ಸ್ಟಾರ್.

೧೯೨೩ ನೇಯ ಇಸವಿ ನವಂಬರ್ ತಾ|| ೧೮ ನೇಯ ಭಾನುವಾರ.

THE WORK BEFORE THE PEOPLE.

There is no denying that when the Representative Assembly and the Legislative Council are reconstituted under the new scheme of reforms they will have far greater powers of influencing the Administration than before. Though responsibility is still retained in the hands of the Government, these two Bodies can yet be a power for good or for bad, for progress or for retrogression, according to their composition. It is of the utmost importance, that the members elected to these two Bodies should be the true representatives of those whom they claim to represent. In a country where the level of general education is very low and which is not accustomed to the western political methods, mere extension of franchise does not solve this problem of securing the return of true representatives of the constituents to the Councils. In Mysore, the generous widening of the electorate by lowering the franchise all round, has swelled the number of voters to over a lakh. In countries more advanced than ours in the working of democratic institutions, there are recognised parties, each organising itself to secure the largest number of seats. Though our constitutionalists of Mysore who are responsible for the scheme of reforms might fondly imagine that their scheme will obviate the necessity for party system and will guard against the tyranny of the majority yet in its actual working they are sure to see the rise of parties. It would not have taken a long time for the party system to manifest itself quite clearly if they had linked the Executive and the Legislature with the responsible chain of the Ministry. But even as it is, it is inevitable. We cannot fail to discern even in the somewhat undefined political situation in Mysore the germs of a party system. There is, on the one hand, a section which stands for a levelling up of inequalities, for equality of opportunities, for an equitable distribution of gubernatorial favours, which principles find an expression in its support of the Educational Memorandum, and the educational cess of the Miller Committee Report, in its demand for throwing open the doors of Sanskrit Colleges to all communities and in such other liberal and progressive measures. There is, on the other hand, the section which stands up against these *innovations* and spares no pains to keep its ancient power and prestige in tact. Be it noted that this latter section is very strongly entrenched, and it is no ordinary task to dislodge it. Mere numbers are no use. It is organisation that counts. This is just the hour when the backward communities should put forward as many of their candidates as possible, and see to their successful return to the Assembly and the Council. Slackness or failure at a time like this would be disastrous, and will only have the effect of undoing what with a great deal of trouble has been done so far. There is a tendency on the part of many of those of the backward communities who have quite a good chance of being returned to either of the Houses and who could do very good work there to keep back with a platonic indifference, and we hope that they will realise their obligations to the country and do their bit by getting themselves elected. A large number of voters are illiterate. The enfranchising of officials has added further difficulties to a situation which was bad enough with social and religious holds. From quarters which are devoid of any sympathy wordy sympathy will begin to flow hereafter in torrents, and golden promises too. It will require a great deal of hard work and courage to counter act these influences. It is the beginning of democracy we are having now and may we hope that the people see to it that it is not reduced to a name merely or, what is worse allow its convertion into a cover to nurture and strengthen old time injustice and iniquity, but a fair and fertile soil on which the nation's manhood and prosperity may develop and thrive splendidly.

ಓಟರುಗಳು ಗಮನಿಸತಕ್ಕದು.

ರಾಜಶಾಸನದ ಪ್ರಕಾರ ನೂತನ ಸಂಸ್ಕರಣದಿಂದ ಏರ್ಪಟ್ಟಿರುವ ಮೈಸೂರು ಪ್ರಜಾಪ್ರತಿನಿಧಿ ಸಭೆಗೂ, ನ್ಯಾಯವಿಧಾಯಕ ಸಭೆಗೂ ಮೆಂಬರುಗಳಾಗಿ ಆರಿಸಲ್ಪಡಲು ಅಭ್ಯರ್ಥಿಗಳಾ (ಉಮೇದುವಾರರಾ) ಗಿ ನಿಲ್ಲುವವರ ಮತ್ತು ಮೆಂಬರುಗಳನ್ನಾರಿಸುವ ಓಟರುಗಳ ಯೋಗ್ಯತಾಪರಿಮಾಣವನ್ನು ತಗ್ಗಿಸಿ ಅಂದರೆ 25 ರೂ. ಗೆ ಕಡಿಮೆಯಿಲ್ಲದೆ ಭೂಗಂದಾಯವನ್ನೂ, 5 ರೂ. ಗೆ ಕಡಿಮೆಯಿಲ್ಲದೆ ಮನೆ, ಬಂಡಿ ಮೊದಲಾದ ಮೊಹತರ್ಫ ತೆರುಗೆಯನ್ನೂ ಕೊಡತಕ್ಕವರೂ, 125 ರೂ. ಬೇರೀಜಿನ ಒಂದು ಅಥವಾ ಅನೇಕ ಇನಾಂ ಗ್ರಾಮುಗಳನ್ನುಳ್ಳವರೂ, ಸರ್ಕಾರಕ್ಕೆ ಆದಾಯದ ಮೇಲಣ ತೆರುಗೆಯನ್ನು ಕೊಡತಕ್ಕವರೂ, ಬಿ. ಎ. ಮೊದಲಾದ ವಿದ್ಯಾಪ್ರಶಸ್ತಿಯನ್ನು ಪಡೆದಿರುವವರೂ, ಸೇನೆಯಲ್ಲಿದ್ದು ಪಿಂಚಿನ್ ಪಡೆಯುತಕ್ಕವರೂ ಆದ ಸ್ತ್ರೀಪುರುಷರೆಲ್ಲರೂ ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರಾಗತಕ್ಕವರಿಗೆ ಓಟನ್ನು ಕೊಡಲು ಅರ್ಹರೆಂದೂ, ಮೇಲ್ಕಂಡ ಯೋಗ್ಯತೆಯನ್ನುಳ್ಳ ಪುರುಷರು ಮಾತ್ರ ಅವಿದ್ಯವಂತರಾಗಿದ್ದರೂ ಪ್ರತಿನಿಧಿಸಭೆಯ ಮೆಂಬರಾಗಲು ಉಮೇದುವಾರರಾಗಿ ನಿಲ್ಲಬಹುದೆಂದೂ, ಒಂದುವರ್ಷದಲ್ಲಿ 50 ರೂ.ನ ಭೂಗಂದಾಯವನ್ನು ಕಟ್ಟತಕ್ಕ ಅಥವಾ 10ರೂ. ಮೊಹತರ್ಫಾ ತೆರುಗೆಯನ್ನು ಕೊಡತಕ್ಕ ಅಥವಾ 250 ರೂ. ಬೇರೀಜಿನ ಇನಾಂ ಜಮೀನುಗಳನ್ನು ಪಡೆದಿರತಕ್ಕ ಅಥವಾ 10 ವರ್ಷಗಳ ಕೆಳಗೆ ಯೂನಿವರ್ಸಿಟಿ ಗ್ರಾಜ್ಯುಯೇಟಾಗಿ 3 ವರ್ಷಗಳಿಗೆ ಕಡಿಮೆಯಿಲ್ಲದೆ ಒಂದು ಡಿಸ್ಟ್ರಿಕ್ಟಿನಲ್ಲಿ ವಾಸವಾಗಿರತಕ್ಕ ಅಥವಾ 100 ರೂ. ಗೆ ಕಡಿಮೆಯಿಲ್ಲದೆ ಸರ್ಕಾರಕ್ಕೆ ವರಮಾನದ ತೆರುಗೆಯನ್ನು ಕೊಡತಕ್ಕ ತಕ್ಕಮಟ್ಟಿಗೆ ಇಂಗ್ಲೀಷು ಭಾಷಾಜ್ಞಾನವನ್ನುಳ್ಳ ಪುರುಷರು ಮಾತ್ರ ನ್ಯಾಯವಿಧಾಯಕ ಸಭೆಗೆ ಮೆಂಬರಾಗಲು ಉಮೇದುವಾರರಾಗಿ ನಿಲ್ಲಬಹುದೆಂದೂ ನಿರ್ಧರಿಸಲ್ಪಟ್ಟಿರುತ್ತದೆ. ಮೇಲೆ ಹೇಳಿದ ರೀತಿಯಲ್ಲಿ ಕಂದಾಯವನ್ನು ಕೊಡತಕ್ಕ ಮತ್ತು ವಿದ್ಯಾಯೋಗ್ಯತೆಯನ್ನುಳ್ಳ ಜನರ ಹೆಸರುಗಳ ಪಟ್ಟಿಯು ಮುದ್ರಿಸಲ್ಪಟ್ಟು ಪ್ರತಿಯೊಂದು ತಾಲ್ಲೂಕು ಮತ್ತು ಮ್ಯುನಿಸಿಪಲ್ ಆಫೀಸುಗಳಲ್ಲಿ ಜನರ ತಿಳಿವಳಿಕೆಗಾಗಿ ಇಡಲ್ಪಟ್ಟಿವೆ. ಮತ್ತು ಅವುಗಳಲ್ಲಿರಬಹುದಾದ ನ್ಯೂನತೆಗಳು ಸರಿಪಡಿಸಲ್ಪಡುವುದಕ್ಕೋಸ್ಕರ ಈ ನವೆಂಬರ್ ತಾ|| 29 ರೊಳಗಾಗಿ ಆಯಾಸ್ಥಳಾಧಿಕಾರಿಗಳಿಗೆ ತಿಳುಹಲ್ಪಡಬೇಕೆಂದು ಗೊತ್ತುಮಾಡಲ್ಪಟ್ಟಿರುತ್ತದೆ.

ಅದುಕಾರಣ, ಮೇಲೆಹೇಳಿರುವ ಪ್ರಕಾರ ಭೂಗಂದಾಯವನ್ನಾಗಲಿ ಮೊಹತರ್ಫ ಅಥವಾ ಆದಾಯದ ಮೇಲಣ ತೆರುಗೆಯನ್ನಾಗಲಿ ಕೊಡತಕ್ಕವರೆಲ್ಲರೂ ತಾಲ್ಲೂಕು ಕಚೇರಿಗಾಗಲಿ ಅಥವಾ ಮ್ಯುನಿಸಿಪಲ್ ಆಫೀಸಿಗಾಗಲಿ ಹೋಗಿ ಮುದ್ರಣವಾಗಿರುವ ಹೆಸರುಗಳ ಪಟ್ಟಿಯಲ್ಲಿ ತಮ್ಮ ಹೆಸರು ಸೇರಿಸಲ್ಪಟ್ಟಿದೆಯೇ ಇಲ್ಲವೇ ಎಂಬುದನ್ನು ಓದಿತಿಳಿದುಕೊಂಡು ಅಥವಾ ಓದಲು ಬಾರದಿದ್ದಲ್ಲಿ ಬೇರೆಯವರಿಂದೋದಿಸಿ ತಿಳಿದುಕೊಂಡು ಹಾಗೆ ತಮ್ಮ ಹೆಸರು ಪಟ್ಟಿಯಲ್ಲಿ ಸೇರಿಸಲ್ಪಡದಿದ್ದ ಪಕ್ಷದಲ್ಲಿ ಕೂಡಲೆ ಸ್ಥಳಾಧಿಕಾರಿಗಳಿಗೆ ಹೆಸರನ್ನು ಸೇರಿಸುವಂತೆ ತಿಳಿಸುವುದು, ಮತ್ತು ಚುನಾವಣೆಯಾಗಲು ಗೊತ್ತಾಗಿರುವ 1924ನೆಯ ಫೆಬ್ರವರಿ ತಾ|| 15ನೆಯ ಶುಕ್ರವಾರದ ದಿವಸ ಸರ್ಕಾರದವರಿಂದ ಗೊತ್ತುಮಾಡಲ್ಪಡುವ ಸ್ಥಳಕ್ಕೆ ಗೊತ್ತಾದ ಕಾಲಕ್ಕೆ ಮುಂಚಿತವಾಗಿ ಹೋಗಿ ತಮ್ಮ ಶ್ರೇಯಸ್ಸನ್ನು ತ್ರಿಕರ್ಣಪೂರ್ವಕವಾಗಿ ಯಾರು ಬಯಸುತ್ತಾರೆಂದು ತಮಗೆ ಮನದಟ್ಟಾಗಿರುತ್ತದೊ ಅಂತಹ ಮೂರುಜನರಿಗೆ ಇತರರ ಬೆದರಿಕೆಗಳಿಗೆ ಅಂಜದೆ ತಮ್ಮ ಘನತರಗಳಾದ ಓಟುಗಳನ್ನು ಕೊಟ್ಟು ಸ್ವಕ್ಷೇಮಾಭಿವೃದ್ಧಿಗೆ ದಾರಿಮಾಡಿಕೊಳ್ಳುವುದಲ್ಲದೆ ಶ್ರೀಮನ್ಮಹಾರಾಜರವರ ನಿರೀಕ್ಷಣೆಯನ್ನು ಸಾರ್ಥಕಪಡಿಸುವರೆಂದು ನಿರೀಕ್ಷಿಸುತ್ತೇವೆ. ಹಾಗಲ್ಲದೆ ಓಟರುಗಳ ಹೆಸರಿನ ಪಟ್ಟಿಯಲ್ಲಿ ತಮ್ಮ ಹೆಸರು ಬಿಡಲ್ಪಟ್ಟಿದ್ದರೂ ಗಮನಿಸದೆ, ಅಥವಾ ಓಟನ್ನು ಕೊಡುವಕಾಲಕ್ಕೆ ಬಾರದೆ ಒಂದುವೇಳೆ ಬಂದರೂ ದಯದಾಕ್ಷಿಣ್ಯಗಳಿಗೆ ವಶರಾಗಿಯೋ ಅಥವಾ ಹೊಗಳಿಕೆಗೆ ಹಿಗ್ಗಿಯೋ ಅಥವಾ ಬೆದರಿಕೆಗಳಿಗೆ ಅಂಜಿಯೋ ತಮ್ಮ ಮನಸ್ಸಾಕ್ಷಿಗೆ ವಿರೋಧವಾಗಿ ಸಿಕ್ಕಿದವರಿಗೆ ತಮ್ಮ ಅಮೋಘವಾದ ಓಟನ್ನು ಕೊಟ್ಟು ತಮ್ಮ ಕಾಲಿನಮೇಲೆ ತಾವೇ ಕಲ್ಲನ್ನು ಹಾಕಿಕೊಂಡು ಪೇಚಾಡುವಂತೆ ಮಾಡಿಕೊಳ್ಳಬಾರದೆಂದು ಸೂಚಿಸುತ್ತೇವೆ.

ಕೈ|| ಸರ್ ಎಂ. ಕಾಂತರಾಜ ಅರಸಿನವರ ಧರ್ಮೌದಾರ್ಯ.

ಪ್ರತಿಯೊಬ್ಬ ಮನುಷ್ಯನಿಗೂ ಸ್ವದೇಶಾಭಿಮಾನ, ಸ್ವಮತಾಭಿಮಾನ ಮತ್ತು ಸ್ವಜನಾಭಿಮಾನಗಳಿರುವುದು ಅವಶ್ಯಕವು. ಸ್ವಭಾವಸಿದ್ಧವಾದ ಈ ಗುಣಗಳು ಯಾವನಲ್ಲಿಲ್ಲವೊ ಅವನು ಪಶುಗಿಂತಲೂ ಕಡೆಯೆಂದು ತಿಳಿಯಲ್ಪಡುವನು. ನಮ್ಮ ಕೈ|| ಸರದಾರರು ಈ ಧರ್ಮಸೂಕ್ಷ್ಮವನ್ನು ಅರಿತವರಾಗಿದ್ದುದರಿಂದಲೇ ಸಜೀವರಾಗಿರುವಾಗ್ಗೆ ಸರ್ಕಾರಿಯುದ್ಯೋಗವನ್ನು ವಹಿಸಿಕೊಂಡು ಅವಿಶ್ರಾಂತಶ್ರಮದಿಂದ ದೇಶಸೇವೆಯನ್ನು ನಿರ್ವಂಚನೆಯಿಂದಲೂ, ರಾಜಭಕ್ತಿಯಿಂದಲೂ, ಪ್ರೀತಿವಿಶ್ವಾಸದಿಂದಲೂ ಮಾಡಿ ಪ್ರಭುಗಳಿಂದಲೂ ಪ್ರಜೆಗಳಿಂದಲೂ ಸನ್ಮಾನಿತರಾಗಿದ್ದುದರಿಂದಲೇ ಚಿರಸ್ಮರಣೀಯರಾಗಿರುವರು. ದೇವತಾಪ್ರತಿಷ್ಠೆ ದಾನ ಮೊದಲಾಗಿ ಅನಂತ ಧರ್ಮಕಾರ್ಯಗಳನ್ನು ಮಾಡಿ ಆಸ್ತಿಕ್ಯಬುದ್ಧಿಯನ್ನು ಪ್ರಕಾಶಗೊಳಿಸಿದರು. ಮತ್ತು ಸ್ವಜನರ ವಿದ್ಯಾಭಿವೃದ್ಧ್ಯಪೇಕ್ಷೆಯಿಂದ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ನಾನಾಮುಖದಲ್ಲಿ ಸಾಹಾಯ್ಯಮಾಡಿ ಅವರುಗಳನ್ನು ಪ್ರೋತ್ಸಾಹಿಸುತ್ತಿದ್ದರಲ್ಲದೆ ಅವರುಗಳಿಗೆ ದ್ರವ್ಯಸಾಹಾಯ್ಯವು ನಿರಂತರವಾಗಿ ನಡೆದುಕೊಂಡುಬರುವುದಕ್ಕಾಗಿ 1½ ಲಕ್ಷ ರೂಪಾಯಿಗಳನ್ನೂ, ರಾಜಧಾನಿಯಲ್ಲಿರುವ ಹೆರಿಗೆಯಾಸ್ಪತ್ರೆಯ ಸಾಹಾಯ್ಯಾರ್ಥವಾಗಿಯೂ, ಬಡ ಮಕ್ಕಳುಗಳ ಪೋಷಣೆಗಾಗಿಯೂ 1½ ಲಕ್ಷ ರೂ. ಗಳನ್ನೂ ತಮ್ಮ ಸ್ವಯಾರ್ಜಿತ ದ್ರವ್ಯದಿಂದ ವಿನಿಯೋಗಿಸಬೇಕೆಂದೂ, ತಮ್ಮನ್ನಾಶ್ರಯಿಸಿದ್ದ ಸ್ವಕೀಯ ಪರಕೀಯ ಜನರಿಗೆ ಇಂತಿಷ್ಟು ದ್ರವ್ಯವನ್ನು ಕೊಡಬೇಕೆಂದೂ ಮರಣಶಾಸನದಲ್ಲಿ ಬರೆದು ಸ್ವಜನಾಭಿಮಾನವನ್ನೂ ಪ್ರಾಣಿದಯಾಪರತೆಯನ್ನೂ ವ್ಯಕ್ತಪಡಿಸಿರುವರು. ಕೈ|| ಅರಸಿನವರು ಸೀಮೆಗೆ ಪ್ರಯಾಣಮಾಡುವ ಸಮಯದಲ್ಲಿ ಮೇಲ್ಕಂಡ ಮರಣಶಾಸನವನ್ನು ಬರೆದಿಟ್ಟುಕೊಂಡಿದ್ದು ಕೊಲಂಬೋದಿಂದ ಶ್ರೀಮದ್ಯುವರಾಜರವರ ಹೆಸರಿಗೆ ಅಂಚೆಯದ್ವಾರ ಕಳುಹಿಸಿಕೊಟ್ಟುದಾಗಿ ತಿಳಿಯುಬರುತ್ತದೆ. ಸ್ವಜನವಿದ್ಯಾಭಿವೃದ್ಧಿಗಾಗಿ ಕೈ|| ಅರಸಿನವರಿಂದ ಕೊಡಲ್ಪಟ್ಟಿರುವ ದ್ರವ್ಯನಿಧಿಯ ವೃದ್ಧ್ಯಂಶವು ಯಾವರೀತಿಯಾಗಿ ವಿನಿಯೋಗಿಸಲ್ಪಡಬೇಕೆಂಬುದನ್ನು ಆಲೋಚಿಸಿ ಅದರಂತೆ ನಡೆಸಲು ಶ್ರೀಮನ್ಮಹಾರಾಜರವರ ಹುಜೂರು ಸೆಕ್ರೆಟರಿಯವರಾದ ಮ|| ಟಿ. ತಂಬುಸೆಟ್ಟರ ಅಧ್ಯಕ್ಷತೆಯಲ್ಲಿ ಪ್ರಮುಖ ಅರಸು ದೊಡ್ಡಮನುಷ್ಯರ ಸಂಘವೊಂದೇರ್ಪಾಟಾಗಿರುವುದಲ್ಲದೆ ಬಾಣಂತಿಯರ ಮತ್ತು ಮಕ್ಕಳ ಪೋಷಣಾರ್ಥವಾಗಿ ಕೊಡಲ್ಪಟ್ಟಿರುವ ದ್ರವ್ಯವು ಯಾವರೀತಿಯಲ್ಲಿ ವಿನಿಯೋಗಿಸಲ್ಪಡಬೇಕೆಂಬುದನ್ನು ಸಂಸ್ಥಾನದಲ್ಲೂ ಹೊರಗಡೆಯಲ್ಲೂ ಈ ಪೋಷಣ ಕಾರ್ಯದಲ್ಲುದ್ಯುಕ್ತರಾಗಿರುವ ಸ್ತ್ರೀ ಪುರುಷರ ಅಭಿಪ್ರಾಯವನ್ನು ಕೇಳಿ ತಕ್ಕ ಸೂಚನೆಗಳನ್ನು ಕೊಡಲು ಅಸಿಸ್ಟೆಂಟ್ ಪ್ರೈವೇಟ್ ಸೆಕ್ರೆಟರಿಯವರಾದ ಮ|| ಎಸ್. ಪಿ. ರಾಜಗೋಪಾಲಾಚಾರ್ಯರು ಅಪೇಕ್ಷಿಸಲ್ಪಟ್ಟಿರುವುದಾಗಿಯೂ ತಿಳಿಯಬಂದಿದೆ. ಕೈ|| ಕಾಂತರಾಜ ಅರಸಿನವರ ಸ್ವಜನಾಭಿಮಾನವೂ, ಆಶ್ರಿತಜನೋದ್ಧಾರಬುದ್ಧಿಯೂ, ದೀನಜನ ದಯಾಪರತೆಯೂ ಧರ್ಮಬುದ್ಧಿಯೂ ಲೋಕೋತ್ತರವಾಗಿರುವುವಲ್ಲದೆ ಉಪಪನ್ನರಾದವರೆಲ್ಲರಿಗೂ ಆದರ್ಶರೂಪವಾಗಿರುವುವು. ಜೀವಂತರಾಗಿರುವಾಗಲೂ ಅನಂತರವೂ ಬಹುಮುಖವಾಗಿ ಸಾಹಾಯ್ಯವನ್ನು ಮಾಡಿ ಚಿರಸ್ಮರಣೀಯರಾಗಿರುವ ಕೈ|| ಕಾಂತರಾಜಅರಸಿನವರ ಆತ್ಮವು ಸಾಯುಜ್ಯಪದವಿಯನ್ನು ಹೊಂದಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಉಪವಾಸದಿಂದ ಅನೇಕ ರೋಗಗಳು ಗುಣವಾಗುವುವು.

ಚಿಕಾಗೋ ಪಟ್ಟಣದ ವಿಶ್ವವಿದ್ಯಾಲಯದಲ್ಲಿ ಶರೀರಶಾಸ್ತ್ರಾಭ್ಯಾಸಮಾಡುತ್ತಿರುವವರು ಕೆಲಕಾಲ ಉಪವಾಸವಿರುವುದರಿಂದುಂಟಾಗತಕ್ಕ ಪರಿಣಾಮವನ್ನು ಪರೀಕ್ಷಿಸಿನೋಡಿದುದರಲ್ಲಿ ಕುಗ್ಗಿಹೋದ ದೇಹಬಲವು ಮರಳಿ ಬರುವುದೆಂದೂ, ಜಠರಾಗ್ನಿಯು ಪುಟವಾಗುವುದೆಂದೂ ವ್ಯಕ್ತಪಟ್ಟಿತು. ಡಾ|| ಮಾರ್ಗರೆಟ್ ಕುಂದೆ ಎಂಬಾಕೆಯು 15 ದಿನಗಳವರೆಗೆ ಒಂದು ದಿನದಲ್ಲಿ ಒಂದು ಲೋಟ ನಿರ್ಮಲೋದಕದ ವಿನಾ ಮತ್ತಾವ ವಿಧವಾದ ಆಹಾರವನ್ನೂ ಸೇವಿಸದೆ ಪಾಠಪ್ರವಚನೆಗೆ ಹೋಗಿಬರುತ್ತಿದ್ದಳು. ಈಕೆಯು ಉಪವಾಸ ವ್ರತವನ್ನಾಚರಿಸಿದ ಕೆಲವು ದಿನಗಳಮೇಲೆ ಆಹಾರದ ಮೇಲಣ ಇಚ್ಛೆಯು ತಪ್ಪಿಹೋದುದಲ್ಲದೆ ಉಳಿದ ದಿವಸಗಳಲ್ಲಿ ಮನಸ್ಸಿಗೆ ಅತ್ಯಂತ ಉಲ್ಲಾಸವಾಗಿದ್ದಿತೆಂದೂ, ಈಯವಧಿಯಲ್ಲಿ 1 ಪೌಂಡು ತೂಕ ಶರೀರಬಲವು ಕಡಿಮೆಯಾಗಿದ್ದು ಉಪವಾಸವು ತೀರಿದ 10 ದಿನಗಳ ತರುವಾಯ ತನ್ನ ಪೂರ್ವದ ಬಲವು ಬಂದಿತೆಂದೂ, ಇದರಂತೆಯೇ ಕೆಲ ಮನುಷ್ಯರುಗಳನ್ನೂ ಪ್ರಾಣಿಗಳನ್ನೂ ಉಪವಾಸವಿರಿಸಿದ್ದು ಪರೀಕ್ಷಿಸಿದುದರಲ್ಲಿ ದುರ್ಬಲ ದೇಹಿಗಳಿಗೂ, ಬಹುಮೂತ್ರ ಮತ್ತು ಅಜೀರ್ಣರೋಗಿಗಳಿಗೂ ಈ ಉಪವಾಸ ವ್ರತವು ಪರಮೌಷಧವಾಗಿ ಪರಿಣಮಿರುತ್ತದೆಂದೂ ತಿಳಿಸಿರುತ್ತಾಳೆ. ಈ ಉಪವಾಸ ಚಿಕಿತ್ಸೆಗೆ ಇಂತಹ ಅದ್ಭುತವಾದ ಶಕ್ತಿಯಿರುವುದರಿಂದಲೇ ನಮ್ಮ ಆಯುರ್ವೇದ ವೈದ್ಯಗ್ರಂಥಗಳಲ್ಲಿ ''ಲಂಘನಂಪರಮೌಷಧಂ'' ಎಂದುಕ್ತವಾಗಿರುವುದು ಮತ್ತು ಆ ಸೂತ್ರವನ್ನು ಹಿಡಿದೇ ವೈದ್ಯರುಗಳು ರೋಗಿಗಳ ಪಥ್ಯವಿಚಾರದಲ್ಲಿ ಬಹು ಜಾಗರೂಕರಾಗಿರುವುದು.

ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ರೀಸರ್ವೆ.

ರೆವಿನ್ಯೂ ಬೋರ್ಡಿನವರ ಸೂಚನೆಯ ಪ್ರಕಾರ ಬಳ್ಳಾರಿ ಡಿಸ್ಟ್ರಿಕ್ಟಿಗೆ ಸೇರಿದ ಹೊಸಪೇಟೆ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ ಮತ್ತು ರಾಯದುರ್ಗ ಈ ಪಶ್ಚಿಮಭಾಗದ 5 ತಾಲ್ಲೂಕುಗಳಲ್ಲಿ ಪುನಸ್ಸರ್ವೆ ಮಾಡಲು ಮದ್ರಾಸ್ ಸರ್ಕಾರದಪ್ಪಣೆಯಾಗಿರುತ್ತದೆ. ಇದರಿಂದ ತರೀ ಜಮೀನುಗಳ ಕಂದಾಯವು ನೂರಕ್ಕೆ 17·07 ರಂತೆಯೂ, ಖುಷ್ಕಿ ಜಮೀನಿನ ಕಂದಾಯವು ನೂರಕ್ಕೆ 8·83 ರಂತೆಯೂ (ಎರಡರಿಂದಲೂ ಒಟ್ಟು 100ಕ್ಕೆ 11·02 ರಂತೆ) ಹೆಚ್ಚುವದಾಗಿ ನಿರೀಕ್ಷಿಸಲ್ಪಟ್ಟಿದೆ.

ಸ್ವದೇಶದ ವೃತ್ತಾಂತಗಳು.

ಕಡೂರು ಡಿಸ್ಟ್ರಿಕ್ಟ್ ಡಿ|| ಕಮೀಷನರಾದ ಮ|| ಎಂ. ಜಿ. ಕೃಷ್ಣಸ್ವಾಮಿರಾಯರು ಬರುವ ಡಿಸಂಬರ್ ತಾ|| 10ರಿಂದ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಕಮೀಷನರಾಗಿ ನಿಯಮಿಸಲ್ಪಟ್ಟಿರುವರು.

ಈ ನವೆಂಬರ್ ತಾ|| 30 ರಿಂದ ಡಿಸೆಂಬರ್ ತಾ|| 6ರ ವರೆಗೆ ಕೆಡ್ಡಾಕ್ಕೂ ಕಾರಾಪುರದ ಕ್ಯಾಂಪಿಗೂ ಆಹೂತರಾಗಿರುವ ಅತಿಥಿಗಳ ಮತ್ತು ಅಲ್ಲಿ ಕೆಲಸಮಾಡುವವರ ವಿನಾ ಮತ್ತಾರೂ ಬಿಡಲ್ಪಡುವುದಿಲ್ಲವೆಂದು ಪೋಲೀಸು ಇ|| ಜನರಲ್ ರವರು ಪ್ರಕಟಿಸಿರುತ್ತಾರೆ.

ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಬುಧವಾರದ ದಿವಸ ಮೋಟಾರುಬಂಡಿಯಲ್ಲಿ ಕಾಕನಕೋಟೆಗೆ ಚಿತ್ತೈಸಿ ಕೆಡ್ಡಾದಲ್ಲಿ ಕೂಡಿಹಾಕಲ್ಪಟ್ಟಿರುವ ಆನೆಗಳನ್ನೂ ಇತರ ಏರ್ಪಾಟುಗಳನ್ನೂ ಪರಾಮರ್ಶಿಸಿಕೊಂಡು ಅದೇ ದಿನ ಸಾಯಂಕಾಲ ರಾಜಧಾನಿಗೆ ದಯಮಾಡಿಸಿತು.

ತುಮಕೂರಿನ ಎರಡನೆ ಮುನಸೀಫರಾದ ಮ|| ಬಿ. ರಾಮಣ್ಣನವರು ರಜದಮೇಲಿರುವುದರಿಂದ ಬೆಂಗಳೂರಲ್ಲಿ ಅಡ್ವೋಕೇಟರಾಗಿದ್ದ ಮ|| ಹೊಸದುರ್ಗದ ವೆಂಕಟರಮಣಯ್ಯ, ಬಿ. ಎ., ಬಿ. ಎಲ್., ರವರು ತುಮಕೂರಿನ ಎರಡನೇ ಆಕ್ಟಿಂಗ್ ಮುನಸೀಫರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಯಳಂದೂರು ತಾಲ್ಲೂಕಿಗೆ ಸೇರಿದ ಗುಂಬಹಳ್ಳಿಯಲ್ಲಿ ಕೆಲ ವಾರಗಳ ಹಿಂದೆ ಕಳ್ಳರು ಒಂದುಮನೆಗೆ ಕನ್ನವನ್ನಿಕ್ಕಿ 1000 ರೂ. ಬೆಲೆಯ ಪದಾರ್ಥಗಳನ್ನು ಅಪಹರಿಸಿಕೊಂಡು ಹೋಗಿದ್ದರು. ಪೋಲೀಸರು 7 ಜನರನ್ನು ಹಿಡಿದು ಅವರಿಂದ ಅಪಹರಿಸಲ್ಪಟ್ಟಿದ್ದ ಪದಾರ್ಥಗಳಲ್ಲಿ 900 ರೂ. ವರೆಗೆ ಬೆಲೆಬಾಳುವ ಪದಾರ್ಥಗಳನ್ನು ವಶಪಡಿಸಿಕೊಂಡಿರುತ್ತಾರೆ.

ಬೆಂಗಳೂರು ಇಂಜನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಮ|| ಕೆ. ಆರ್. ಶೇಷಾಚಾರರಿಗೆ ಕ್ರಿಸ್ತಮಸ್ ಹಬ್ಬದ ರಜದೊಡನೆ 1 ತಿಂಗಳು ಮತ್ತು 11 ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುತ್ತದೆ. ಅರಮನೆಯ ಆರ್ಕಿಟೆಕ್ ಇಂಜನಿಯರಾಗಿದ್ದು ಈಗ ರಜದಮೇಲಿರುವ ಮ|| ಲಕ್ಷ್ಮೀನರಸಪ್ಪನವರು ಇಂಜನಿಯರಿಂಗ್ ಕಾಲೇಜಿನ ಆಕ್ಟಿಂಗ್ ಪ್ರಿನ್ಸಿಪಾಲರಾಗಿ ನಿಯಮಿಸಲ್ಪಟ್ಟಿರುವರೆಂದು ಕೇಳುತ್ತೇವೆ.

ದೇಹಾರೋಗ್ಯಕ್ಕಾಗಿ ಬೆಂಗಳೂರಿಗೆ ದಯಮಾಡಿಸಿದ್ದ ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಗಳು ರಾಜಧಾನಿಗೆ ದಯಮಾಡಿಸಿ ವಸಂತಮಹಲ್ಲಿನಲ್ಲಿ ಶ್ರೀಮನ್ಮಹಾರಾಜರವರ ಅತಿಥಿಗಳಾಗಿದ್ದುಕೊಂಡು ಕೃಷ್ಣರಾಜಸಾಗರಕಟ್ಟೆ ಮೊದಲಾಗಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ತೆರಳಿದರು. ಲೋಕದಲ್ಲಿ ಮನುಷ್ಯನಿಗೆ ಪ್ರಾಶಸ್ತ್ಯವು ಕರ್ಮತಃ ಬರುವುದಲ್ಲದೆ ಜನ್ಮತಃ ಬರುವುದಿಲ್ಲವೆಂಬುದಕ್ಕೆ ರೈ|| ಆ|| ಶಾಸ್ತ್ರಿಗಳೇ ಒಳ್ಳೆಯ ನಿದರ್ಶನರಾಗಿರುತ್ತಾರೆ.

ರಾಜಧಾನಿಯಲ್ಲಿ ಪ್ಲೇಗುರೋಗವು ಇನ್ನೂ ಶಮನವಾಗದೆ ಅಲ್ಲಲ್ಲಿ ಒಂದೊಂದು ಮರಣವಾಗುತ್ತಿದೆ. ಹಗಲಿನಲ್ಲಿ ಬಿಸಲು ಕಾಯುತ ರಾತ್ರಿಯಲ್ಲಿ ಚಳಿಯು ಬಹಳವಾಗಿರುತ್ತದೆ. ಆಹಾರ್ಯ ಪದಾರ್ಥಗಳ ಬೆಲೆಯು ಏರುತಲಿದೆ. ದೇವರಾಜ ಮಾರ್ಕೆಟ್ಟಿನ ಉತ್ತರಭಾಗದ ಅಂಗಡಿಗಳ ಸಾಲು ಬಹು ಆತುರದಿಂದ ಕಟ್ಟಲ್ಪಡುತ್ತಿದೆ. ವೈಸ್‌ರಾಯ್‌ಪ್ರಭುಗಳು ಚಿತ್ತೈಸುವ ಮಾರ್ಗಗಳು ಸರಿಪಡಿಸಲ್ಪಡುತ್ತಲೂ ಅವುಗಳ ಇಕ್ಕೆಲದಲ್ಲಿರುವ ಕಟ್ಟಡಗಳು ಸುಣ್ಣ ಬಣ್ಣಗಳಿಂದಲಂಕರಿಸಲ್ಪಡುತ್ತಲೂ ಇವೆ.

ಭೂಮಿಯನ್ನು ಪರಾಧೀನ ಮಾಡಲವಕಾಶವಿಲ್ಲದ ರೈತರುಗಳಿಗೂ ಸಣ್ಣಪುಟ್ಟ ವ್ಯಾಪಾರ ಮತ್ತು ಕೂಲಿನಾಲಿ ಮಾಡಿಕೊಂಡಿರತಕ್ಕವರಿಗೂ ಅವರ ಸ್ವಂತ ಮತ್ತು ಇತರರ ಹೊಣೆಯಮೇಲೆ 50 ರೂಪಾಯಿಗಳವರೆಗೆ ಸಾಲಕೊಡಬಹುದೆಂದೂ ಭೂಮಿಯನ್ನಭಿವೃದ್ಧಿಪಡಿಸುವುದಕ್ಕಾಗಿ ಬಡ್ಡಿಯಿಲ್ಲದೆ ತಕಾವಿ ಸಾಲವನ್ನು ಡೆಪ್ಯುಟೀಕಮೀಷನರುಗಳೇ ಕೊಡಬಹುದೆಂದೂ, ಈ ಮೇಲ್ಕಂಡ ಸೌಲಭ್ಯಗಳು ಈಚೆಗಾದ ನದಿಯ ಅನಾಹುತದಿಂದ ನಷ್ಟಪಟ್ಟಿರುವ ಜನರಿಗೆ ಮಾತ್ರ ತೋರ್ಪಡಿಸತಕ್ಕುದೆಂದೂ ಸರ್ಕಾರದಪ್ಪಣೆಯಾಗಿರುತ್ತದೆ.

ಕಳೆದ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ಕೆಲಮೆಂಬರುಗಳು ಪ್ರಾರ್ಥಿಸಿಕೊಂಡಿದ್ದ ಪ್ರಕಾರ ಹೊಳೆನರಸೀಪುರದ ರೈಲ್ವೆಸ್ಟೇಷನ್ನಿನಿಂದ ಕೊಂಚ ದೂರದಲ್ಲಿ ಕೋರ್ಟಿಗೆ ಹೋಗತಕ್ಕ ಪ್ರಯಾಣಿಕರು ಇಳಿಯಲನುಕೂಲಿಸುವಂತೆ ಒಂದು ಫ್ಲಾಗ್ ಸ್ಟೇಷನನ್ನೇರ್ಪಡಿಸಿ 6 ತಿಂಗಳವರೆಗೆ ಪರೀಕ್ಷಿಸುವುದಾಗಿಯೂ, ನರಸಿಂಹರಾಜಪುರದ ಟ್ರಾಂವೆಸ್ಟೇಷನ್ನಿನಲ್ಲಿ ಒಂದು ವೇಟಿಂಗ್‌ರೂಮನ್ನು ಕಲ್ಪಿಸಿಕೊಡುವುದಾಗಿಯೂ, ಚಿಕ್ಕಜಾಜೂರು-ಚಿತ್ರದುರ್ಗ ರೈಲ್ವೆಯಲ್ಲಿ 4 ಚಕ್ರದ ಒಂದು ಬಂಡಿಯನ್ನು ಹೆಚ್ಚಾಗಿ ಹಾಕುವುದಾಗಿಯೂ, ಚಿಕ್ಕಜಾಜೂರು ಸ್ಟೇಷನ್ನಿನಲ್ಲಿ ಮೂರನೆ ತರಗತಿಯ ಪ್ರಯಾಣಿಕರಿಗಾಗಿ ಒಂದು ವೇಟಿಂಗ್‌ಷೆಡ್ಡನ್ನು ಏರ್ಪಡಿಸುವುದಾಗಿಯೂ, 1924 ನೆಯ ಜನವರಿ ತಾ|| 1 ರಿಂದ ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೆ 2 ವೇಳೆ ಬಂಡಿಗಳನ್ನು ಬಿಟ್ಟು ಪರೀಕ್ಷಿಸುವುದಾಗಿಯೂ ರೈಲ್ವೆ ಸೆಕ್ರೆಟರಿಯವರು ಪ್ರಕಟಿಸಿರುತ್ತಾರೆ.

ಪ್ರಜಾಪ್ರತಿನಿಧಿ ಸಭೆಯ ಅಧಿವೇಶನಗಳಿಗಾಗಿ ರಾಜಧಾನಿಗೆ ಬರತಕ್ಕ ಮೆಂಬರುಗಳಿಗೆ ಈವರೆಗೂ ಪ್ರಯಾಣದ ಖರ್ಚೇನೂ ಕೊಡಲ್ಪಡದೆ ಲವಾಜಮೆ ಅಥವಾ ಅದರ ಬೆಲೆಯಷ್ಟು ಮೊಬಲಗು ಕೊಡಲ್ಪಡುತ್ತಿದ್ದಿತಷ್ಟೆ. ಇನ್ನುಮುಂದೆ (1) ಪ್ರತಿಯೊಬ್ಬ ಮೆಂಬರಿಗೂ ರೈಲ್ವೆ ಪ್ರಯಾಣದಲ್ಲಿ ಒಂದು ಎರಡನೆಯಕ್ಲಾಸು ಟಿಕೆಟ್ಟಿನ ಮತ್ತೊಂದು ಮೂರನೆಯಕ್ಲಾಸು ಟಿಕೆಟ್ಟಿನ ಛಾರ್ಜು, (2) ಮಲೆನಾಡಿನಲ್ಲಿ ಪ್ರತಿ 15 ಮೈಲಿಗೂ ಅದರ ಭಿನ್ನಾಂಶಕ್ಕೂ ಮೈದಾನದಲ್ಲಿ ಪ್ರತಿ 20 ಮೈಲಿ ಮತ್ತು ಅದರ ಭಿನ್ನಾಂಶಕ್ಕೂ 5 ರೂಪಾಯಿಯಂತೆ ಪ್ರಯಾಣದ ಖರ್ಚು ಕೊಡಲ್ಪಡುವುದು. ಆದರೆ ರೈಲ್ವೆಯಿಂದ 5 ಮೈಲಿ ದೂರದೊಳಗಿರುವ ಸ್ಥಳಗಳಿಂದ ಬರತಕ್ಕವರಿಗೆ ಮೈಲೇಜು ಕೊಡಲ್ಪಡುವುದಿಲ್ಲವು. (3) ಪ್ರತಿಯೊಬ್ಬ ಮೆಂಬರಿಗೂ ದಿನ 1 ಕ್ಕೆ 5 ರೂಪಾಯಿನಂತೆ ಅವರು ನಿಂತಕಾಲದಲ್ಲಿ ಕೊಡಲ್ಪಡುವುದು. (4) ಅಧಿವೇಶನವು ಪೂರೈಸುವವರೆಗೂ ಸಭೆಗೆ ಬಂದರೆ ಮಾತ್ರ ಭತ್ಯವು ಕೊಡಲ್ಪಡುವುದು. ಮೆಂಬರುಗಳ ವಾಸಕ್ಕೆ ಸ್ಥಳವು ಸರ್ಕಾರದಿಂದ ಸಾಧ್ಯವಾದ ಮಟ್ಟಿಗೆ ಒದಗಿಸಿಕೊಡಲ್ಪಡುವುದು, ಆದರೆ ದಿನ 1ಕ್ಕೆ 1 ರೂಪಾಯಿನಂತೆ ಬಾಡಿಗೆ ತೆಗೆದುಕೊಳ್ಳಲ್ಪಡುವುದು. (5) ಪ್ರಯಾಣದ ವೆಚ್ಚವು ಕೊಡಲ್ಪಟ್ಟ ಮೇಲೆ ಲವಾಜಮೆಯ ಪದ್ಧತಿಯು ತಪ್ಪಿಸಲ್ಪಡುವುದು ಎಂದು ಸರ್ಕಾರದಪ್ಪಣೆಯಾಗಿದೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾಗಿ ಆರಿಸಲ್ಪಡಲು ಕೌನ್ಸಿಲರುಗಳಾದ ಮ|| ಬಿ. ಕೆ. ಗರುಡಾಚಾರರೂ, ಮ|| ಸಿ. ಹೈವದನರಾಯರೂ ಅಭ್ಯರ್ಥಿಗಳಾಗಿ ನಿಂತಿದ್ದರು. ಇವರಲ್ಲಿ ಮ|| ಗರುಡಾಚಾರರಿಗೆ ಹೆಚ್ಚು ಮತಗಳು ಬಂದು ಉತ್ತೀರ್ಣರಾದರು. ಆದರೆ ಆ ದಿವಸದ ಚುನಾವಣೆಯು ಹೊಸರೂಲ್ಸು ಅನುಷ್ಠಾನಕ್ಕೆ ಬರುವುದಕ್ಕೆ ಮೊದಲೇ ಗೊತ್ತಾಗಿದ್ದುದರಿಂದ ಹಳೇರೂಲ್ಸಿನ ಪ್ರಕಾರ ನಡಿಯಬೇಕಲ್ಲದೆ ಹೊಸರೂಲ್ಸಿನಂತೆ ನಡಿಯಕೂಡದೆಂದು ಮ|| ಗಳಾದ ಹೈವದನರಾಯರು ಅಬ್ಬಾಸ್‌ಖಾನರವರು ಮೊದಲಾದ ಕೌನ್ಸಿಲರುಗಳಿಂದ ನಿರೋಧಿಸಲ್ಪಟ್ಟಾಗ್ಗೂ ಪ್ರೆಸಿಡೆಂಟರಾದ ಮ|| ಶಿರ್ಶಿ ಆನಂದರಾಯರು ಲಕ್ಷ್ಯಸದೆ ಹೊಸರೂಲ್ಸಿನಪ್ರಕಾರ ಎಲೆಕ್ಷನ್ ನಡಿಸಿಬಿಟ್ಟರು. ಈ ಎಲೆಕ್ಷನ್ನು ಅನ್ಯಾಯವೂ ಅಕ್ರಮವೂ ಆಗಿರುವುದರಿಂದ ಪ್ರೆಸಿಡೆಂಟರು ಅದರ ಪ್ರಕಾರ ಆಚರಣೆಗೆ ತರದಂತೆ ಆತಂಕಪಡಿಸಬೇಕಾಗಿ ಮ|| ಗಳಾದ ಹೈವದನರಾಯರು, ಅಬ್ಬಾಸ್‌ಖಾನರವರು ಮತ್ತು ಎಸ್. ವೆಂಕಟಾಚಲಯ್ಯಂಗಾರರು ಬೆಂಗಳೂರು ಒಂದನೆಯ ಮುನಸೀಫ್ ಕೋರ್ಟಿನಲ್ಲಿ ದಾವಾಮಾಡಿರುತ್ತಾರೆ. ಸರ್ಕಾರಿಯ ಅಡ್ವೋಕೇಟರು ಪ್ರೆಸಿಡೆಂಟರ ಪಕ್ಷ ವಹಿಸಿ ವಕೀಲಿಯನ್ನು ನಡಿಸುವಂತೆ ಸರ್ಕಾರದಪ್ಪಣೆಯಾಗಿದೆ. ಈ ವಿವಾದದ ಫಲಿತಾಂಶವು ಬಹು ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿದೆ.

''ಯಥಾರ್ಥವಾದಿಗಳ ಅಪವಾದ'' ಎಂಬ ಶಿರೋಲೇಖನದಿಂದ ಒಂದು ಪತ್ರವ್ಯವಹಾರವನ್ನು X·Y·Z· ರವರು ಈ ನವೆಂಬರ್ ತಾ|| 12ರ ಸಂಪದಭ್ಯುದಯ ಪತ್ರಿಕೆಗೆ ಬರೆದಿರುವುದರಲ್ಲಿ ''ಈ ಲೇಖನವನ್ನು ಹೋದವಾರವೇ ಪ್ರಕಟಿಸಬೇಕೆಂದು ಪ್ರಾರ್ಥಿಸಿಕೊಂಡು ಸ್ಟಾರ್‌ಪತ್ರಿಕಾಕರ್ತರಿಗೆ ಕಳುಹಿಸಿದ್ದೆನು. ಇದುವರೆಗೂ ಅಲ್ಲಿ ಪ್ರಕಟವಾಗಲಿಲ್ಲ.......'' ಎಂದು ಹೇಳಿರುತ್ತಾರೆ. ಈ X.Y.Z. ನಾಮಾಂಕಿತರು ಮತ್ತೊಬ್ಬರೊಡನೆ ಕಳೆದ ತಾ|| 9ರ ಸಾಯಂಕಾಲ ನಮ್ಮಾಫೀಸಿಗೆ ಬಂದು ''ಯಥಾರ್ಥವಾದಿಯ ಲೇಖನಕ್ಕೆ ಪ್ರತ್ಯುತ್ತರವಾಗಿ ಬರೆದು ಪೋಸ್ಟ್‌ದ್ವಾರ ಕಳುಹಿಸಿಕೊಟ್ಟ ನನ್ನ ಲೇಖನವನ್ನು ಯಾತಕ್ಕಾಗಿ ಪ್ರಕಟಿಸಲಿಲ್ಲ ಮತ್ತು ಹಾಗೆ ಪ್ರಕಟಿಸದಿರಲು ಕಾರಣವನ್ನಾದರೂ ತಿಳಿಸಲಿಲ್ಲ?'' ಎಂದು ಬಹಳ ಅಸಮಾಧಾನದಿಂದ ಪ್ರಶ್ನೆಮಾಡಿದುದರ ಮೇಲೆ ''ನಿಮ್ಮಿಂದ ಈವರೆಗೂ ಯಾವವಿಧವಾದ ಲೇಖನವೂ ನಮಗೆ ಬಂದಿಲ್ಲವು ಮತ್ತು ಹಾಗೆ ಬಂದಿದ್ದೂ ಪ್ರಕಟಿಸಲ್ಪಡಲಾಗದಿದ್ದಲ್ಲಿ ಅದರ ಕಾರಣವು ಸ್ಟಾರ್ ಪತ್ರಿಕೆಯಲ್ಲಿ ತಿಳುಹಲ್ಪಡುತ್ತಿದ್ದಿತು'' ಎಂದು ಇಬ್ಬರು ವೀರಶೈವ ದೊಡ್ಡಮನುಷ್ಯರುಗಳ ಸಮಕ್ಷಮದಲ್ಲಿ ತಿಳಿಸಿದ್ದೆವಾದರೂ ವಿದ್ಯಾವಂತರೂ ಪುರೋವೃದ್ಧಿಯನ್ನು ಹೊಂದತಕ್ಕವರೂ ಆದ X·Y·Z. ರವರು ತೃಪ್ತರಾಗದೆ ತಮ್ಮ ಲೇಖನವನ್ನು ನಾವು ಪ್ರಕಟಿಸಲಿಲ್ಲವೆಂದು ತಾ|| 12 ರ ಸಂಪದಭ್ಯುದಯ ಪತ್ರಿಕೆಯಲ್ಲಿ ಬಹು ದಿಟ್ಟತನದಿಂದ ಬರೆದಿರುವುದಕ್ಕಾಗಿ ವಿಷಾದಿಸುತ್ತೇವೆ.

ರಾಜಧಾನಿಯಲ್ಲಿ ಕಬೀರದಾಸ್ ನಾಟಕಪ್ರಯೋಗದಿಂದ ಪುರನಿವಾಸಿಗಳಿಗೆ ದೈವಭಕ್ತಿರಸಾಸ್ವಾದವನ್ನು ಮಾಡಿಸುತ ಅವರ ಪ್ರೀತಿವಿಶ್ವಾಸಕ್ಕೂ ಶ್ಲಾಘನೆಗೂ ಶ್ರೀಮನ್ಮಹಾರಾಜರವರ ಕೃಪೆಗೂ ಪಾತ್ರರಾಗಿರುವ ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಲಿಯವರು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಚೌಚೌ ಎಂಬ ಮಿಶ್ರಿತ ನಾಟಕವನ್ನಭಿನಯಿಸಿ ಬಹುಮಾನಿಸಲ್ಪಟ್ಟರೆಂದು ಕೇಳಿ ಸಂತೋಷಿಸುತ್ತೇವಲ್ಲದೆ ಕಳೆದ ಮಂಗಳವಾರ ರಾತ್ರಿ ಪ್ರಭಾಮಣಿ ವಿಜಯವೆಂಬ ನಾಟಕವನ್ನು ಅಭಿನಯಿಸಿ ಅದರಿಂದ ಬಂದುತ್ಪನ್ನದಲ್ಲಿ 250 ರೂಪಾಯಿಗಳನ್ನು ರಾಜಧಾನಿಯ ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರಸ್ವಾಮಿಯ ವಿಶೇಷೋತ್ಸವಕ್ಕಾಗಿ ಭಕ್ತರ ಪ್ರಾರ್ಥನೆಯಂತೆ ಸಾಹಾಯಮಾಡಿ ತಮ್ಮ ದೈವಭಕ್ತಿಯನ್ನೂ ಉದಾರಬುದ್ಧಿಯನ್ನೂ ಪ್ರದರ್ಶಿಸಿದುದಕ್ಕಾಗಿಯೂ, ಬರುವ ಮಂಗಳವಾರ ಸಾಯಂಕಾಲ (ಮ್ಯಾಟಿನಿ) ಲೋಕಪ್ರೀಯವಾದ ಮತ್ತು ರಾಮನಾಮ ಮಹಿಮಾಪ್ರದರ್ಶಕವಾದ ಕಬೀರದಾಸ ಚರಿತ್ರೆಯನ್ನು ಅಭಿನಯಿಸಿ ಅದರಿಂದ ಬರುವ ಉತ್ಪನ್ನವನ್ನು ಗಾನವಿಶಾರದ ಸಂಗೀತವಿದ್ವಾನ್ ಮ|| ಬಿ. ಕೃಷ್ಣಪ್ಪನವರಿಂದ ರಾಜಧಾನಿಯಲ್ಲಿ ಕಟ್ಟಿಸಲ್ಪಡುತ್ತಿರುವ ಶ್ರೀರಾಮಮಂದಿರದ ಸಹಾಯಾರ್ಥವಾಗಿ ಕೊಡಲು ವಾಗ್ದಾನಮಾಡಿರುವುದಕ್ಕಾಗಿಯೂ ನಾಟಕಮಂಡಲಿಯವರನ್ನು ಮುಖ್ಯವಾಗಿ ಮ|| ವೀರಣ್ಣನವರನ್ನು ವಂದಿಸುತ್ತೇವೆ. ದೈವಭಕ್ತರಾದ ಪುರನಿವಾಸಿಗಳು ಮಂಗಳವಾರ ದಿವಸ ನಾಟಕಾವಲೋಕನಕ್ಕೆ ಹೋಗಿ ಧರ್ಮಕರ್ತರುಗಳ ಇಷ್ಟಾರ್ಥವನ್ನು ನೆರವೇರಿಸಿ ಶ್ರೀರಾಮನ ಪೂರ್ಣಾನುಗ್ರಹಕ್ಕೆ ಪಾತ್ರರಾಗಲೆಂದು ಕೋರುತ್ತೇವೆ.

ಭರತಖಂಡದ ವೃತ್ತಾಂತಗಳು.

ಧಾರವಾಡದಲ್ಲಿ ಪ್ರಕಟವಾಗುವ ಕರ್ಮವೀರ ಮತ್ತು ನವಶಕ್ತಿ ಎಂಬ ಪತ್ರಿಕಾಸಂಪಾದಕರಾದ ಆರ್. ಆರ್. ದಿವಾಕರರವರು ರಾಜದ್ರೋಹಕಾರಕ ಲೇಖನಗಳನ್ನು ಬರೆದರೆಂಬ ಅಪರಾಧಕ್ಕೆ ಗುರಿಮಾಡಲ್ಪಟ್ಟು ೨ ವರ್ಷಗಳ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು 500 ರೂ. ಅರ್ಥದಂಡವನ್ನೂ ವಿಧಿಸಲ್ಪಟ್ಟರು.

ರೈಲ್ವೆ ಬಂಡಿಯನ್ನು ನಡಿಸುವ ವೇಮ್ಸ್‌ರಾಡ್ಜರ್ಸ್ ಎಂಬಾತನು ಕಳೆದ ಭಾನುವಾರ ರಾತ್ರಿ ಪೂನಾದಿಂದ ಬಂಡಿಯನ್ನು ನಡಿಸಿಕೊಂಡು ತಲ್‌ಘಾಟ್ ಎಂಬ ಬೆಟ್ಟದ ಸುರಂಗದಲ್ಲಿ ಹೋಗುತ್ತಿರುವಾಗ್ಗೆ ಹೇಗೋ ಇಂಜನ್ನಿನಿಂದ ಕೆಳಕ್ಕೆ ಬಿದ್ದು ಸ್ಮೃತಿತಪ್ಪಿಹೋಗಿದ್ದುದರಮೇಲೆ ಇಗತಪುರಿಗೆ ಸಾಗಿಸಲ್ಪಟ್ಟು ವೈದ್ಯಚಿಕಿತ್ಸೆಮಾಡಲ್ಪಟ್ಟಾಗ್ಯೂ ಗುಣವಾಗದೆ ಸತ್ತುಹೋದನು.

ಮಹಮ್ಮದೀಯರ ಪುಣ್ಯಕ್ಷೇತ್ರವಾದ ಜರುಸಲಂನಲ್ಲಿ ಜೀರ್ಣವಾಗಿರತಕ್ಕ ಮಸೀದಿಗಳನ್ನು ಉದ್ಧಾರಮಾಡಲು ಪ್ರಸಂಚದ ಮೇಲಿರುವ ಮಹಮ್ಮದೀಯರಿಂದ ಚಂದಾಹಣವನ್ನೆತ್ತಲು ಒಂದು ರಾಯಭಾರವು ಪಾಲಸ್ಟೈನಿನಲ್ಲಿ ಏರ್ಪಾಟಾಗಿ ಈಗ ಭರತಖಂಡಕ್ಕೆ ಬಂದಿರುತ್ತದೆ. ಈ ರಾಯಭಾರದವರು ಪಾಲಸ್ಟೈನಿನಲ್ಲಿ 1,20,000 ರೂ. ಗಳನ್ನೂ ಹೆಡ್ಜಾಜಿನಲ್ಲಿ 1,80,000 ರೂ. ಗಳನ್ನೂ ಎತ್ತಿ 19,50,000 ರೂ. ಗಳನ್ನು ಭರತಖಂಡದಲ್ಲಿ ಎತ್ತಲು ಬಂದಿರುತ್ತಾರೆ. ಪವಿತ್ರಸ್ಥಾನಗಳ ಜೀರ್ಣೋದ್ಧಾರಕಾರ್ಯವು ಪ್ರತಿಯೊಬ್ಬ ಮಹಮ್ಮದೀಯನಿಗೆ ಸಂಬಂಧಪಟ್ಟುದಾದುದರಿಂದ ಮಹಮ್ಮದೀಯರಿಂದ ಮಾತ್ರ ಚಂದಾದ್ರವ್ಯವು ಎತ್ತಲ್ಪಡಬೇಕೆಂದು ಪಾಲಿಸ್ಟೈನಿನಲ್ಲಿರುವ ಮಹಮ್ಮದೀಯರ ಆಲೋಚನಾಸಭೆಯ ಸಂಕಲ್ಪವಾಗಿರುವುದರಿಂದ ಈ ರಾಯಭಾರದವರು ಹೈದರಾಬಾದು ಮೊದಲಾಗಿ ಮಹಮ್ಮದೀಯ ವಾಸಸ್ಥಳಗಳಲ್ಲಿ ಸಂಚರಿಸಿ ಹಣವನ್ನೆತ್ತುವವರಾಗಿರುವರು. ವೈಸ್‌ರಾಯರೂ ಈ ರಾಯಭಾರದವರಿಗೆ ತಮ್ಮ ದರ್ಶನಭಾಷಣಗಳಿಗೆ ಅವಕಾಶವನ್ನಿತ್ತು ತಮ್ಮ ಸಾನುಭೂತಿಯನ್ನು ತೋರಿಸಿರುವರು. ದಿಲ್ಲಿಪಟ್ಟಣ ಒಂದರಲ್ಲೇ 30,000 ರೂ. ಶೇಖರಿಸಲ್ಪಡುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ನಾಗಪುರದಲ್ಲಿ ಹಿಂದೂಗಳು ತಮ್ಮ ದೇವರುತ್ಸವವನ್ನು ವಾದ್ಯದೊಡನೆ ಮಹಮ್ಮದೀಯರ ಮಸೀತಿಯ ಮುಂದುಗಡೆ ಮಾಡುವ ವಿಚಾರದಲ್ಲಿ ಉಭಯಪಕ್ಷದವರಿಗೂ ಮನಸ್ತಾಪವು ಹುಟ್ಟಿ ಕಲಹವೂ ಆಗಿರುವುದಷ್ಟೆ? ಈಚೆಗೆ ನವಾಬ್ ನಯಬುದ್ದೀನ್‌ಖಾನ್‌ರವರ ಮಧ್ಯಸ್ಥಿಕೆಯಿಂದ ಉಭಯಪಂಗಡದವರಿಗೂ ಸಮಾಧಾನವುಂಟಾಗಿ ಹಿಂದೂಗಳು ತಮ್ಮ ದೇವತೋತ್ಸವವನ್ನು ವಾದ್ಯಸಮೇತ ಮಸೀತಿಯ ಮುಂದೆ ಕಳೆದ ತಾ|| 12 ಮತ್ತು 13 ರಲ್ಲಿ ನಿರಾತಂಕವಾಗಿ ನಡಿಸಿದರು. ಎಲ್ಲೋ ಕೆಲ ಮಹಮ್ಮದೀಯರು ಮಾತ್ರ ಮೈಫೂಜಲ್ ಕಬೀರ್ ಎಂಬಾತನ ಮುಖಂಡತ್ವದಲ್ಲಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರಾದರೂ ತಮ್ಮ ದುರ್ಬಲದಿಂದ ಪ್ರತಿಘಟಿಸಲಾರದೆಹೋದರು. ಕಳೆದ ತಾ|| 12ರ ರಾತ್ರಿ ರಾಜಾ ಲಕ್ಷ್ಮಣರಾವ್ ಭಾನ್ಸಲೆಯವರ ಅಧ್ಯಕ್ಷತೆಯಲ್ಲಿ ಹಿಂದೂಜನರ ದೊಡ್ಡಸಭೆಯು ಸೇರಿದ್ದು ಹಿಂದೂಗಳ ಮತ, ಪ್ರಾಣ ಮತ್ತು ಧನರಕ್ಷಣೆಗಾಗಿ ಒಂದು ಸಂಘವೇರ್ಪಡಿಸಲ್ಪಟ್ಟು ಅಸ್ಪೃಶ್ಯರಾದಿಯಾಗಿ ಎಲ್ಲಾ ಹಿಂದೂಪಂಗಡದವರ ಪ್ರಮುಖಜನರು ಮೆಂಬರುಗಳಾಗಿ ಮಾಡಲ್ಪಟ್ಟರು. ಸರ್ ಗಂಗಾಧರ ಚಿಟ್ನಾವಿಸ್ ಮೊದಲಾದ ಹಿಂದೂಪ್ರಮುಖರು ಸಭೆಗೆ ಬಂದಿದ್ದು ಹಿಂದೂ ಮತಸಂರಕ್ಷಣ ಸಂಬಂಧವಾಗಿ ಉಪನ್ಯಾಸಗಳನ್ನು ಮಾಡಿದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಸನ್ 1923 ನೆಯ ಅಕ್ಟೋಬರ್ 27ನೆಯ ತಾರೀಖಿನ ದಿನ ರಾಜಕೀಯ ಸುಧಾರಣೆಗಳಿಗೆ ಸಂಬಂಧಪಟ್ಟ ರಾಜಶಾಸನವನ್ನು ಓದಿ ಹೇಳುವ ಸಂದರ್ಭದಲ್ಲಿ ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿದ ಭಾಷಣ.

ತಮ್ಮ ಪ್ರಜೆಗಳೆಲ್ಲರೂ ಸುಖ ಸಂಪತ್ತುಗಳೊಡನೆ ಬಾಳಿ ಪುರೋವೃದ್ಧಿಗೆ ಬರುವವರಾಗಲೆಂಬ ಮಹದಾಶಯದೊಡನೆ ಶ್ರೀಮನ್ ಮಹಾರಾಜರವರು ಅವರುಗಳಿಗೆ ವರಪ್ರಸಾದರೂಪವಾಗಿ ಅನುಗ್ರಹಿಸಿರುವ ರಾಜಶಾಸನವನ್ನು ಮಹಾಸ್ವಾಮಿಗಳವರ ಆಜ್ಞಾನುಸಾರ ತಮ್ಮಗಳಿಗೆ ಶ್ರುತಪಡಿಸುವ ಈ ಶುಭಸಮಯದಲ್ಲಿ ಈ ಸಂಸ್ಥಾನದ ಪ್ರಕೃತಸ್ಥಿತಿಗಳಿಗೆ ಅನುಗುಣವಾಗಿರುವುವೆಂಬ ಭಾವನೆಯೊಡನೆ ಆಚರಣೆಗೆ ತರಲ್ಪಟ್ಟಿರುವ ಸುಧಾರಣೆಗಳನ್ನು ಕುರಿತು ನಾವು ವಿಸ್ತಾರವಾಗಿ ಗುಣದೋಷ ವಿಮರ್ಶೆಯನ್ನು ಮಾಡತೊಡಗುವುದಾಗಲಿ, ಅವುಗಳ ಪ್ರಯೋಜನಾಂಶವನ್ನು ಕುರಿತು ಪ್ರಸ್ತಾಪಿಸುವುದಾಗಲಿ ಅಪ್ರಕೃತವಾಗಿರುವುದೆಂತ ಭಾವಿಸುತ್ತೇವೆ. ರಾಜ್ಯಾಡಳಿತದಲ್ಲಿ ತಮ್ಮ ಪ್ರಜೆಗಳು ಹೆಚ್ಚು ಹೆಚ್ಚಾಗಿ ಭಾಗಿಗಳಾಗುವಂತೆ ಅವಕಾಶಗಳನ್ನುಂಟುಮಾಡುವುದೇ ಶ್ರೀಮನ್ ಮಹಾರಾಜರವರ ದೃಢ ಸಂಕಲ್ಪವಾಗಿರುವುದೆಂತ ಕಳೆದ ವರ್ಷ ನಮ್ಮ ಪ್ರಕಟನೆಯಲ್ಲಿ ತಿಳಿಯಪಡಿಸಿದಂದಿನಿಂದೀಚೆಗೆ ರಾಜಕೀಯ ಸುಧಾರಣೆಗಳ ವಿಷಯದಲ್ಲಿ ಅನೇಕರು ಅನೇಕವಿಧವಾದ ಅಭಿಪ್ರಾಯಗಳನ್ನು ಸೂಚಿಸಿರುತ್ತಾರೆ. ಈ ಪೈಕಿ ಕೆಲವರು ಇಷ್ಟು ಹೆಚ್ಚಿನ ಸ್ವಾತಂತ್ರ್ಯಗಳನ್ನು ಈಗಾಗಲೇ ಕೊಡುವುದು ಯುಕ್ತವಾಗಿರಲಾರದೆಂತ ಊಹಿಸಿ ಶಂಕಿಸುವವರಾಗಿದ್ದಾರೆ. ಸರ್ಕಾರದವರು ಈ ಭಾಗದಲ್ಲಿ ಎಚ್ಚರಿಕೆಯನ್ನು ವಹಿಸುವುದು ಅವಶ್ಯಕವೆಂತ ಅವರುಗಳು ಸಾರುತ್ತಿರುವರು. ಬೇರೆ ಕೆಲವರಾದರೋ ಪ್ರಜೆಗಳು ನಿರೀಕ್ಷಿಸಿದ್ದಷ್ಟು ಮಟ್ಟಿನ ಸುಧಾರಣೆಗಳು ದೊರೆಯಲಿಲ್ಲವಲ್ಲಾ ಎಂತ ಅಸಮಾಧಾನವನ್ನು ಸೂಚಿಸುವವರಾಗಿರುತ್ತಾರೆ. ಈ ಉಭಯ ಪಕ್ಷದವರ ಪರಸ್ಪರ ವಿರೋಧಾಭಿಪ್ರಾಯಗಳ ಮಧ್ಯೆ ಅನೇಕ ಕಡೆಯಿಂದ ಗುಣದೋಷ ವಿಮರ್ಶೆಗಳೂ, ಸಲಹೆಗಳೂ ಬಂದಿರುತ್ತವೆ. ಇವುಗಳಲ್ಲಿ ಕೆಲವು ಪ್ರಸ್ತುತಾಂಶಗಳನ್ನು ನಿರ್ಧರಿಸುವುದಕ್ಕೆ ಸಹಾಯಕವಾಗುವುದಕ್ಕೆ ಪ್ರತಿಯಾಗಿ ಕ್ಲಿಷ್ಟತರವಾದ ನಾನಾ ಪ್ರತಿಬಂಧಕಗಳನ್ನು ತಂದೊಡ್ಡಿವೆ. ಈ ರೀತಿಯಾದ ನಾನಾ ವಿಧವಾದ ಭಿನ್ನಾಭಿಪ್ರಾಯಗಳೆಲ್ಲವನ್ನೂ ಪರ್ಯಾಲೋಚನೆಗೆ ತೆಗೆದುಕೊಂಡು ನಾವು ಉದ್ದೇಶಿಸಿದ್ದ ಮೇರೆಗೆ ಸರ್ವಸಮ್ಮತವಾದ ರೀತಿಯಲ್ಲಿ ಸುಧಾರಣೆಗಳನ್ನು ಏರ್ಪಡಿಸುವ ಕಾರ್ಯವು ತುಂಬಾ ದುಷ್ಕರವಾದುದಾಗಿ ಪರಿಣಮಿಸಿತು. ಈ ಸುಧಾರಣೆಗಳ ಯುಕ್ತಾಯುಕ್ತತೆಯನ್ನು ಕುರಿತು ಯಾರಾಗಲೀ ತೀರ್ಮಾನವನ್ನು ಹೇಳುವುದಕ್ಕೆ ಮೊದಲು ಇವುಗಳ ಮುಖ್ಯಾಂಶಗಳನ್ನೆಲ್ಲಾ ಸಾವಧಾನವಾಗಿ ಪರ್ಯಾಲೋಚಿಸಬೇಕೆಂಬುದೇ ನಮ್ಮ ಆಶಯ. ಈ ಸುಧಾರಣೆಗಳನ್ನು ಸಮಸ್ತರೂ ಏಕರೀತಿಯಾಗಿ ತಮ್ಮ ತಮ್ಮ ಅಭಿಪ್ರಾಯಾನುಸಾರ ತೃಪ್ತಿಕರವಾಗಿರುವಂತೆ ಭಾವಿಸುವರೆಂದು ನಿರೀಕ್ಷಿಸಲು ಆಗಲಾರದು. ಯಾವ ದೇಶದಲ್ಲಿ ರಾಜಾಂಗ ಸುಧಾರಣೆಗಳು ಏರ್ಪಟ್ಟರೂ ಅವುಗಳು ಪ್ರಜೆಗಳ ಆಕಾಂಕ್ಷೆಗಳನ್ನು ತೃಪ್ತಿಗೊಳಿಸುವಷ್ಟರ ಮಟ್ಟಿಗೆ ಉತ್ಕೃಷ್ಟವಾಗಿಲ್ಲವೆಂದು ಗೊಣಗಾಡುವುದು ಸ್ವಾಭಾವಿಕವೇ ಸರಿ. ಅದರಂತೆ ಇಲ್ಲಿಯೂ ಈ ಸುಧಾರಣೆಗಳು ಏನೇನೂ ಸಾಲವೆಂದು ಕೆಲವರು ಗೊಣಗಾಡಬಹುದು. ಬೇರೆ ಕೆಲವರಾದರೋ ಇದರಿಂದ ಮುಂದಿನ ಪರಿಣಾಮವೇನಾದೀತೆಂಬುದನ್ನೇ ಅರಿಯದೆ ಸರ್ಕಾರದವರು ಸುಧಾರಣೆಗಳನ್ನು ಏರ್ಪಡಿಸಿರುವರಲ್ಲಾ ಎಂದು ಅಭಿಪ್ರಾಯಪಡಬಹುದು. ಆದರೆ ವಿಚಾರಪರರೂ ವಾಸ್ತವ ಸ್ಥಿತಿಯನ್ನು ಚೆನ್ನಾಗಿ ಅರಿತವರೂ ಆದ ಜನರು ಈ ಉಭಯ ಅಭಿಪ್ರಾಯಗಳನ್ನೂ ಸರಿಯೆಂದು ಒಪ್ಪಲಾರರು. ನಮಗೇನೋ ಈ ಸುಧಾರಣೆಗಳು ಒಂದಲ್ಲ ಒಂದು ದಿನ ದೇಶಕ್ಷೇಮಕ್ಕೆ ಸಾಧಕಗಳಾಗಿ ಪರಿಣಮಿಸಿಯೇ ಪರಿಣಮಿಸುವುವೆಂಬ ಪೂರ್ಣ ಭರವಸೆ ಇರುತ್ತದೆ. ಈ ಸುಧಾರಣೆಗಳನ್ನು ಆಚರಣೆಗೆ ತರುವ ಯೋಚನೆ ಮಾಡಿದುದು ಅನೇಕ ವರ್ಷಗಳಿಂದಲೂ ತಮಗೆ ಆಗಿಂದಾಗ ಕೊಡಲ್ಪಟ್ಟ ಸ್ವಾತಂತ್ರ್ಯಗಳನ್ನು ಪ್ರಜೆಗಳು ಸಾರ್ಥಕಗೊಳಿಸುತ್ತಾ ಬಂದುದರಿಂದಲೇ ಹೊರತು ಅವರ ಪ್ರೇರಣೆಯಿಂದಲ್ಲ. ಇದೂ ಅಲ್ಲದೆ ಸರ್ಕಾರದವರು ತಮ್ಮ ಪರ್ಯಾಲೋಚನೆಯಲ್ಲಿದ್ದ ಮುಖ್ಯ ವಿಷಯಗಳನ್ನು ಹೇಗೆ ನಿರ್ಧರಿಸಬೇಕೆಂಬ ವಿಚಾರದಲ್ಲಿ ಸಾವಧಾನವನ್ನು ವಹಿಸಿದ್ದರೇ ವಿನಾ ಆತುರವನ್ನು ಪ್ರದರ್ಶಿಸಲಿಲ್ಲ. ಸಂಸ್ಥಾನದ ನಾನಾಭಾಗಗಳ ಪ್ರಜಾ ಮುಖಂಡರ ಅಭಿಪ್ರಾಯಗಳನ್ನು ಪಡೆದುಕೊಳ್ಳಬೇಕೆಂಬ ಉದ್ದೇಶದೊಡನೆ ದೀರ್ಘಕಾಲ ಪರ್ಯಾಲೋಚನೆಯಲ್ಲಿಟ್ಟುಕೊಂಡಿದ್ದರು. ಇಷ್ಟೇ ಅಲ್ಲ. ಈ ಸುಧಾರಣೆಗಳ ವಿವರಗಳನ್ನು ಪರಿಶೀಲನೆಮಾಡಿ ಸಲಹೆಗಳನ್ನು ಸೂಚಿಸಲು ಏರ್ಪಟ್ಟಿದ್ದ ನಾನಾ ಪ್ರತಿನಿಧಿಗಳನ್ನೊಳಗೊಂಡ ಕಮಿಟಿಯವರು ಕಳುಹಿಸಿಕೊಟ್ಟ ಸುಪ್ರಕಾಶವಾದ ವರದಿಯನ್ನು ಓದಿದುದರಿಂದ ಎಷ್ಟೋ ಪ್ರಯೋಜನವಾಯಿತು. ಪೂರ್ಣ ಪ್ರಜ್ಞಾಶಾಲಿಗಳೂ, ವಿಚಾರಪರರೂ, ಲೋಕಾನುಭವಿಗಳೂ ಆದ ದೊಡ್ಡಮನುಷ್ಯರನ್ನು ಸದಸ್ಯರನ್ನಾಗಿ ಒಳಗೊಂಡಿದ್ದ ಈ ಕಮಿಟಿಯವರು ಏಕವಾಕ್ಯತೆಯಿಂದ ಸೂಚಿಸಿರುವ ಸಲಹೆಗಳನ್ನೇ ಬಹುಮಟ್ಟಿಗೆ ಸರ್ಕಾರದವರು ಅನುಸರಿಸಿರುತ್ತಾರೆ. ಹಾಗೆ ಅನುಸರಿಸದೆ ವ್ಯತ್ಯಾಸವಾದಿರುವ ಕಡೆಯಲ್ಲಿ ಸರ್ಕಾರದವರು ಕಮಿಟಿಯ ಸದಸ್ಯರ ಪೈಕಿ ಬಹುಭಾಗದವರ ಅಭಿಪ್ರಾಯವನ್ನೇ ಪುಷ್ಟೀಕರಿಸಿರುವರಲ್ಲದೆ ಕೆಲವು ಕಡೆ ಮೊದಲು ಪ್ರಚುರಮಾಡಿದ ಪ್ರಕಟನೆಯಲ್ಲಿ ಸೂಚಿತವಾಗಿದ್ದ ಸಲಹೆಗಳಿಗಿಂತ ಹೆಚ್ಚಿನ ಸ್ವಾತಂತ್ರ್ಯಗಳನ್ನು ಕೊಡುವಂತೆ ನಿರ್ಧರಿಸಿರುತ್ತಾರೆ.

ಈಗಿನ ಸಂದರ್ಭ ವಿಶೇಷದಲ್ಲಿ ನಾವುಗಳೆಲ್ಲರೂ ಅನುಸರಿಸಬೇಕಾದ ಕರ್ತವ್ಯವು ಒಂದೇ ಆಗಿರುವುದು. ಅದಾವುದೆಂದರೆ, ಶ್ರೀಮನ್ಮಹಾರಾಜರವರು ಕೃಪಾಪೂರಿತರಾಗಿ ಅನುಗ್ರಹಿಸಿರುವ ಈ ಸುಧಾರಣೆಗಳನ್ನು ನಾವುಗಳು ವಿನಯಪೂರ್ವಕವಾಗಿಯೂ ಕೃತಜ್ಞತೆಯೊಡನೆಯೂ ಶಿರಸಾವಹಿಸಿ ಅವರ ರಾಜಶಾಸನವನ್ನು ಸಾರ್ಥಕಗೊಳಿಸಬೇಕೆಂಬ ಸ್ಥಿರಸಂಕಲ್ಪವನ್ನಿಟ್ಟುಕೊಂಡು ತನ್ಮೂಲಕ ಈ ಸಂಸ್ಥಾನದ ರಾಜ್ಯಾಡಳಿತವನ್ನು ಸರ್ವೋತ್ಕೃಷ್ಟವಾದುದನ್ನಾಗಿಯೂ, ನವನಾಗರಿಕತೆಗನುಸಾರವಾದುದನ್ನಾಗಿಯೂ ಮಾಡಬೇಕೆಂಬ ಯಾವ ಉದ್ದೇಶದೊಡನೆ ಮಹಾಸ್ವಾಮಿಯವರು ಈ ಸುಧಾರಣೆಗಳನ್ನು ಏರ್ಪಡಿಸಿದರೋ ಆ ಉದ್ದೇಶವನ್ನು ನೆರವೇರಿಸುವವರಾಗಬೇಕು.

ಸುಧಾರಣಾ ಕಮಿಟಿಯವರು ತಮ್ಮ ಕಾರ್ಯನಿರ್ವಾಹದಲ್ಲಿ ವಹಿಸಿದ ಪರಿಶ್ರಮವನ್ನು ಕುರಿತು ಈ ದಿನ ಸಾದರಾದ ಸರ್ಕಾರೀ ಹುಕುಮಿನಲ್ಲಿ ತಕ್ಕಮಟ್ಟಿಗೆ ಮೆಚ್ಚುಗೆಯನ್ನು ತೋರ್ಪಡಿಸಿರುತ್ತದೆಯಾದರೂ ಈ ನಮ್ಮ ಭಾಷಣದಲ್ಲಿ ಅದೇ ವಿಚಾರವನ್ನು ಕುರಿತು ಸ್ವಲ್ಪಮಟ್ಟಿಗೆ ಪ್ರಸ್ತಾಪಿಸುವುದು ಯುಕ್ತವಾಗಿರುವುದೆಂತ ಭಾವಿಸುತ್ತೇವೆ. ಈ ಕಮಿಟಿಗೆ ವಹಿಸಿದ್ದ ಕಾರ್ಯವು ಕಷ್ಟಕರವಾದುದಾಗಿದ್ದಿತು. ಆದರೂ ಅದನ್ನು ನಿರ್ವಹಿಸುವುದರಲ್ಲಿ ಈ ಕಮಿಟಿಯ ಸದಸ್ಯರುಗಳು ವಿಶೇಷ ಪರಿಶ್ರಮವನ್ನೂ, ಸಹನೆಯನ್ನೂ, ದೂರದೃಷ್ಟಿಯನ್ನೂ ಪ್ರದರ್ಶಿಸಿರುತ್ತಾರೆ. ಇವರುಗಳು ಒಪ್ಪಿಸಿದ ವರದಿಯು ಕೆಲವು ವರ್ಷಗಳಿಂದೀಚೆಗೆ ಇದೇ ವಿಚಾರವಾಗಿ ಪ್ರಪಂಚದ ಬೇರೆ ಭಾಗಗಳಲ್ಲಿ ಒಪ್ಪಿಸಲ್ಪಟ್ಟ ವರದಿಗಳ ಪೈಕಿ ಸರ್ವಶ್ರೇಷ್ಠವೂ ಅತ್ಯುತ್ಕೃಷ್ಟವೂ ಆದ ವರದಿಗಳಲ್ಲೊಂದಾಗಿರುವಂತೆ ಪ್ರಖ್ಯಾತಿಯನ್ನು ಪಡೆದಿರುವುದಲ್ಲದೆ ಇದನ್ನು ಹಿಂದೂಸ್ಥಾನದಲ್ಲಿಯೂ ಯೂರೋಪ್ ಖಂಡದಲ್ಲಿಯೂ ಇರುವ ಪ್ರಸಿದ್ಧ ರಾಜ್ಯತಂತ್ರನಿಪುಣರು ತುಂಬಾ ಶ್ಲಾಘನೆ ಮಾಡಿರುತ್ತಾರೆ. ಈ ಕಮಿಟಿಯವರು ಪರ್ಯಾಲೋಚನೆ ಮಾಡಬೇಕಾಗಿದ್ದ ವಿಷಯಗಳು ಸುಲಭವಾಗಿ ನಿರ್ಣಯಿಸಲು ಆಗದೆ ಕೇವಲ ತೊಡಕಾದುವುಗಳಾಗಿದ್ದುವು. ಆದರೂ ಅವುಗಳ ತೊಡಕುಗಳನ್ನು ಬಿಡಿಸಿ, ಅವುಗಳ ವಾಸ್ತವ ಸ್ವರೂಪವನ್ನು ವಿವರಿಸಿ ಶ್ರೀಮನ್ಮಹಾರಾಜರವರ ಮುಖ್ಯೋದ್ದೇಶಕ್ಕೆ ಭಂಗಬಾರದಂತೆಯೂ, ಸ್ಥಳೀಯ ವಿದ್ಯಮಾನಗಳಿಗೂ, ಪೂರ್ವಸಂಪ್ರದಾಯಕ್ಕೂ ಅನುಗುಣವಾಗಿರುವಂತೆಯೂ ಕಮಿಟಿಯವರು ಸಲಹೆಗಳನ್ನು ಕೊಟ್ಟಿರುತ್ತಾರೆ. ಈ ಕಮಿಟಿಯ ಅಧ್ಯಕ್ಷರಾದ ಡಾಕ್ಟರ್ ಬ್ರಜೇಂದ್ರನಾಥ ಶೀಲ್‌ರವರು ಅಸಾಧಾರಣ ಪಾಂಡಿತ್ಯವನ್ನೂ, ಪೂರ್ಣ ವಿದ್ವದ್ವೈದುಷ್ಯವನ್ನೂ, ಮೈಸೂರು ರಾಜ್ಯಾಂಗ ವ್ಯವಸ್ಥೆಗೆ ಆಧಾರಭೂತವಾದ ಮೂಲತತ್ವಗಳನ್ನು ಪರಿಶೀಲಿಸುವುದರಲ್ಲಿ ಅಪಾರವಿಷಯಜ್ಞಾನವನ್ನೂ ಪ್ರದರ್ಶಿಸಿರುತ್ತಾರೆ. ಅಲ್ಲದೆ ಕಮಿಟಿಯವರಿಗೆ ವಹಿಸೋಣಾದ ಸಮಸ್ತ ಕ್ಲಿಷ್ಟ ವಿಷಯಗಳನ್ನೂ ಆಮೂಲಾಗ್ರವಾಗಿ ಪರಿಶೀಲಿಸಿ ತಕ್ಕ ಸಲಹೆಗಳನ್ನು ಕೊಡಲು ಸಾಧ್ಯವಾಗುವಂತೆ ಇತರ ಸದಸ್ಯರುಗಳಿಗೆ ಮಾರ್ಗದರ್ಶಕರಾಗಿ ತುಂಬಾ ಸಹಾಯ ಮಾಡಿರುತ್ತಾರೆ. ಇದಕ್ಕಾಗಿ ಸರ್ಕಾರದವರು ಇವರನ್ನು ಎಷ್ಟು ವಂದಿಸಿದರೂ ಸ್ವಲ್ಪವೇ ಆಗಿರುತ್ತದೆ. ಈ ಮಹನೀಯರು ಯಾವುದೊಂದು ಫಲಾಪೇಕ್ಷೆಯೂ ಇಲ್ಲದೆ ಕೇವಲ ಶ್ರಮವನ್ನು ವಹಿಸಿ ನೆರವೇರಿಸಿದ ಕಾರ್ಯವು ಸಫಲವಾದುದಕ್ಕಾಗಿ ಇವರು ನಮ್ಮ ಅಭಿನಂದನಗಳಿಗೆ ಪಾತ್ರರಾಗಿರುತ್ತಾರೆಂಬುದನ್ನು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳೆಲ್ಲರೂ ಅನುಮೋದಿಸಿಯಾರೆಂತ ನಾವು ದೃಢವಾಗಿ ನಂಬಿರುತ್ತೇವೆ. ಕಮಿಟಿಯ ಇತರ ಸದಸ್ಯರುಗಳಿಗೂ ಸಹ ಪ್ರತ್ಯೇಕವಾಗಿಯೂ, ಸಮಷ್ಟಿಯಾಗಿಯೂ ಸರ್ಕಾರದವರ ವಂದನೆಗಳನ್ನು ತಿಳಿಸಬಯಸುತ್ತೇವೆ. ಅವರ ಕೆಲಸವು ಸುಲಭವಾದುದಾಗಿರಲಿಲ್ಲ. ಅನೇಕವಾಗಿ ಭಿನ್ನಾಭಿಪ್ರಾಯಗಳಿದ್ದರೂ ಪ್ರಮುಖ ವಿಷಯಗಳಿಗೆ ಹೆಚ್ಚು ಗಮನಕೊಟ್ಟು ಐಕಮತ್ಯವನ್ನೂ ಸಾಮರಸ್ಯವನ್ನೂ [illegible] ಮಾಡಿರುತ್ತಾರೆ. ಈ ವಿಷಯವನ್ನು ಚರ್ಚಿಸುವುದರಲ್ಲಿ ಅವರ ಸ್ಥಿತಿಯು ಬಹು ಕ್ಲಿಷ್ಟವಾದುದಾಗಿತ್ತು. ಶ್ರೀಮನ್ಮಹಾರಾಜರವರ ಧರ್ಮಪ್ರಭುತ್ವದಲ್ಲಿ ಈ ಮೊದಲೇ ಸ್ಥಿರಪಟ್ಟಿರುವ ಏರ್ಪಾಡುಗಳನ್ನೇ ಬಲಪಡಿಸಿಕೊಳ್ಳುತ್ತಾ ಬರುವುದೇ ಅಭಿವೃದ್ಧಿಗೆ ಬರಲು ಸೂಕ್ತವಾದ ಮಾರ್ಗವೆನ್ನುವುದನ್ನು ಒಪ್ಪದೆ ಹೋಗುವ ಜನರ ಅಭಿಪ್ರಾಯವನ್ನು ಅನುಮೋದಿಸಬೇಕಾದ ಸಂದರ್ಭಗಳು ಇವರಿಗೆ ಒದಗಿದ್ದುವು. ಆದರೂ ಇವರು ತಮಗೆ ವಹಿಸಿದ್ದ ಮಹತ್ಕಾರ್ಯವನ್ನು ಶ್ಲಾಘನೀಯವಾದ ಏಕಭಾವನೆಯಿಂದ ನಿರ್ವಹಿಸಿರುತ್ತಾರೆ. ಈಗ ಮಂಜೂರು ಆಗಿರುವ ಸುಧಾರಣೆಗಳನ್ನು ಪ್ರಜೆಗಳು ತೃಪ್ತಿಕರವೆಂತ ಭಾವಿಸಿಯಾರೆಂತಲೂ, ಸರ್ಕಾರದವರಿಗೆ ಸಹಾಯಕರಾಗಿ ನಿಂತು ಇವುಗಳನ್ನು ಸಾರ್ಥಕಗೊಳಿಸಿಯಾರೆಂತಲೂ ನಾವು ದೃಢವಾಗಿ ನಂಬಿರುತ್ತೇವೆ.

ಮೈಸೂರು ಚರಿತ್ರೆಯಲ್ಲಿ ಸುಪ್ರಸಿದ್ಧವಾದ ಇಂತಹ ಸಮಯದಲ್ಲಿ ಶ್ರೀಮನ್ ಮಹಾರಾಜಾ ಸರ್ಕಾರದ ಮಂತ್ರಿ ವರ್ಗಕ್ಕೆ ಸೇರಿಕೊಂಡಿದ್ದು ಮಹಾಸ್ವಾಮಿಯವರ ಆಜ್ಞಾನುಸಾರ ರಾಜಕೀಯ ಸುಧಾರಣೆಗಳನ್ನು ಪ್ರಕಟಿಸುವ ಭಾಗ್ಯವು ನಮಗೆ ಲಭಿಸಿದುದಕ್ಕಾಗಿ ನಮ್ಮ ಸಂತೋಷಕ್ಕೆ ಪಾರವೇ ಇಲ್ಲ. ಈ ಸುಧಾರಣೆಗಳನ್ನು ತಾಳ್ಮೆಯಿಂದಲೂ, ಸಾವಧಾನಪೂರ್ವಕವಾದ ವ್ಯವಸ್ಥೆಯಿಂದಲೂ ಆಚರಣೆಗೆ ತರಬೇಕಾಗಿದೆ. ಈ ಸಂಸ್ಥಾನದ ಹೊರಗಡೆಯಲ್ಲಿರುವ ಮೈಸೂರು ದೇಶದ ಹಿತೈಷಿಗಳು ಈ ಏರ್ಪಾಡು ಹೇಗೆ ನೆರವೇರುವುದೆಂಬುದನ್ನು ಕೇವಲ ಕುತೂಹಲದೊಡನೆ ನಿರೀಕ್ಷಿಸುತ್ತಿರುವರು. ಈ ಏರ್ಪಾಡು ಸಾಫಲ್ಯ ಹೊಂದಬೇಕಾದರೆ ಸರ್ಕಾರದವರೂ ಪ್ರಜೆಗಳೂ ಸೌಮನಸ್ಯದಿಂದ ಕಾರ್ಯಭಾಗವನ್ನು ನೆರವೇರಿಸಬೇಕಾದುದು ಆವಶ್ಯಕ.

ಈ ನವೀನ ಸುಧಾರಣೆಗಳಿಗನುಸಾರವಾಗಿ ನಡೆಯುವ ರಾಜ್ಯಾಡಳಿತದಲ್ಲಿ ದಿವಾನ್ ಪದವಿಯಲ್ಲಿರತಕ್ಕವರಿಗೆ ಅಸಾಧಾರಣ ರಾಜನೀತಿ ನೈಪುಣ್ಯವೂ, ಅನ್ಯಾದೃಶವಾದ ಧೈರ್ಯೋತ್ಸಾಹಗಳೂ, ದೃಢವಾದ ಪ್ರಜಾವಾತ್ಸಲ್ಯವೂ ಅತ್ಯಾವಶ್ಯಕವಾಗಿರಬೇಕಾಗಿದೆ. ಇದುವರೆಗೆ ವಾಡಿಕೆಯಲ್ಲಿಲ್ಲದೆ ಇದ್ದ ನವೀನ ಸುಧಾರಣೆಗಳನ್ನು ಸಾಫಲ್ಯಗೊಳಿಸಲು ಬೇಕಾಗುವ ಮೇಲ್ಕಂಡ ಗುಣಗಳು ನಮ್ಮಲ್ಲಿರುವುವೆಂತ ನಾವು ಹೇಳಿಕೊಳಲಾರೆವು. ಆದರೆ ಇಷ್ಟು ಮಾತ್ರ ಹೇಳಿಕೊಳ್ಳಬಹುದು. ಅದೇನೆಂದರೆ, ಈ ಮಹತ್ಕಾರ್ಯದಲ್ಲಿ ನಾವು ಸ್ವಲ್ಪವೂ ಎದೆಗುಂದದೆ ನಮ್ಮ ಸರ್ವ ಸಾಮರ್ಥ್ಯವನ್ನೂ ವಿನಿಯೋಗಿಸಲು ಸಿದ್ಧವಾಗಿರುವೆವೆಂತ ಹೇಳಬಲ್ಲೆವು. ರಾಜ್ಯಾಡಳಿತದಲ್ಲಿ ಅಧ್ಯಕ್ಷತೆಯನ್ನು ವಹಿಸಿರುವ ನಮಗೆ ದೊರೆಯುವ ಪ್ರತಿಯೊಂದು ಅವಕಾಶವನ್ನೂ ಈ ರಾಜಕೀಯ ಸುಧಾರಣೆಗಳಿಗೆ ಆಧಾರಭೂತವಾಗಿರುವ ಮುಖ್ಯ ತತ್ವಗಳನ್ನು ಉದಾರವಾಗಿ ವ್ಯವಹರಿಸುವ ಬಗ್ಗೆ ನಮ್ಮ ಸಾಮರ್ಥ್ಯವಿರುವ ಮಟ್ಟಿಗೂ ಪ್ರಯತ್ನಪಡುವೆವು. ಮತ್ತು ಎಲ್ಲಾ ಪಂಗಡಗಳ ಪ್ರಜೆಗಳೂ ರಾಜಕೀಯ ಸುಧಾರಣೆಯಲ್ಲಿ ಅಭ್ಯುದಯಕ್ಕೆ ಬರುವಂತೆ ಮಾಡುವುದರ ಮೂಲಕ ಅವರುಗಳ ಯಥಾರ್ಥವಾದ ಮತ್ತು ಉತ್ತಮೋತ್ತಮವಾದ ಉದ್ದೇಶಗಳನ್ನು ಶ್ರದ್ಧಾಪೂರ್ವಕವಾಗಿ ನೆರವೇರಿಸಲು ಪ್ರಯತ್ನಿಸುವೆವು. ಇದರಿಂದ ಪ್ರಜೆಗಳೂ, ಸರ್ಕಾರದವರೂ ಏಕೀಭವಿಸಿ ಕಾರ್ಯಸಾಧನೆ ಮಾಡುವಂತಾಗಿ ಸುಧಾರಣೆಗಳನ್ನು ಅನುಗ್ರಹಿಸುವಲ್ಲಿ ಶ್ರೀಮನ್ ಮಹಾರಾಜರವರಿಗಿದ್ದ ಸದುದ್ದೇಶಗಳು ಸಫಲವಾಗುವಂತೆ ಆಗಲೆಂತ ನಿರೀಕ್ಷಿಸುತ್ತೇವೆ.

. . . .

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಶೋಚನೀಯವಾದ ಮೃತ್ಯು.

ಮ|| ಜಿ. ಶಿವಪ್ಪನವರ ಪುತ್ರರೂ, ಭದ್ರಾವತಿ ಟವರ್ನ್ ಮುನ್ಸಿಪಾಲಿಟಿ ವೈಸ್ ಪ್ರೆಸಿಡೆಂಟರೂ ಆದ ಜಿ. ರಾಮಜ್ಜಪ್ಪನವರು ಕೆಲ ದಿನಗಳ ಕೆಳಗೆ ಪ್ಲೇಗ್‌ಜ್ವರಗ್ರಸ್ತರಾಗಿ, ವೈದ್ಯರುಗಳಿಂದ ಚಿಕಿತ್ಸೆಮಾಡಿಸಲ್ಪಟ್ಟಾಗ್ಯೂ ಗುಣಹೊಂದದೆ ಶಿವಾಧೀನರಾದರೆಂದು ತಿಳಿಸಲು ವ್ಯಸನವಾಗುತ್ತದೆ. ಇವರು ದೊಡ್ಡ ಕುಟುಂಬದಲ್ಲಿ ಜನಿಸಿ ತಮ್ಮ ಸನ್ಮಾರ್ಗಪ್ರವರ್ತನೆಯಿಂದ ಜನಾನುರಾಗವನ್ನು ಸಂಪಾದಿಸಿ ಕಳೆದ ವರ್ಷ ಈ ಟವನ್ನಿನ ವೈಸ್ ಪ್ರೆಸಿಡೆಂಟ್ ಪದವಿಯನ್ನು ಹೊಂದಿ ಸರ್ಕಾರಕ್ಕೂ, ಪ್ರಜೆಗಳಿಗೂ ಹಿತಕರವಾಗಿಯೂ, ಹಾಲಿ ನಡೆಯುತ್ತಿರುವ ರೀಡಿಂಗ್‌ರೂಂ ಮೊದಲಾದ ಜನಹಿತಕಾರ್ಯಗಳಿಗೆ ಸಹಾಯಕರಾಗಿಯೂ, ರೀಡಿಂಗ್‌ರೂಂ ಮೊದಲಾದ ಪಬ್ಲಿಕ್ ಕಟ್ಟಡಗಳನ್ನು ಕಟ್ಟಿಸಬೇಕೆಂಬ ಕುತೂಹಲವುಳ್ಳವರಾಗಿಯೂ ಇದ್ದರು. ಇಂಥಾ ಉಮೇದ್‌ವಾರರನ್ನು ಕಳೆದುಕೊಂಡ ನಾವುಗಳು ದೌರ್ಭಾಗ್ಯರೇ ಸರಿ.

ಬಿ. ವೀರಪ್ಪಾ ರುದ್ರಪ್ಪಾ ಅಂಡ್ ಸನ್ ಪುಟ್ಟಪ್ಪಾ ಭದ್ರಾವತಿ.

ದೇವನಹಳ್ಳಿ.

ದೇವನಹಳ್ಳಿ ತಾಲ್ಲೂಕು ಸುತ್ತುಮುತ್ತಲೂ ಮಳೆ ಇಲ್ಲದೆ ಅಲ್ಪಸ್ವಲ್ಪ ಬೆಳದಿದ್ದ ಪೈರುಗಳು ಒಣಗಲಿಕ್ಕೆ ಕಾರಣವಾಗಿದೆ. ದೇವನಹಳ್ಳಿಯಲ್ಲಿ ಕುಡಿಯುವ ನೀರಿಗೆ ಬಹುತೊಂದರೆಯಾಗಿದೆ. ಈ ತಾ|| ಅಮಲ್ದಾರರುಗಳು ಮತ್ತು ಮೇಲ್ಪಟ್ಟ ಆಫೀಸರುಗಳು ಬಂದು ಇನ್ಸ್‌ಸ್ಪೆಕ್ಷನ್ ಮಾಡುವುದು ಸರಿಯಷ್ಟೆ ಆದರೆ ನೀರಿನ ತೊಂದರೆಯನ್ನು ಹೋಗಲಾಡಿಸಲು ಮ್ಯುನಿಸಿಪಾಲಿಟಿಯವರೂ ಮೇಲ್ಪಟ್ಟ ಆಫೀಸರುಗಳೂ ಗಮನಕೊಡದೆ ಇರುವುದನ್ನು ನೋಡಿದರೆ ಪ್ರಜೆಗಳ ದುರಾದೃಷ್ಟವೆಂದು ಭಾವಿಸಬೇಕಾಗಿದೆ. ಮತ್ತು ಈ ಊರಿನ ರೈಲ್ವೆ ಸ್ಟೇಷನ್ನಿನ ಸ್ಟೇಷನ್ ಮಾಸ್ಟರುಗಳು ತಮ್ಮ ಕೆಲಸಗಳಲ್ಲಿ ಚಟುವಟಿಕೆಯುಳ್ಳವರಾಗಿ ಇರುವರಲ್ಲದೆ ಪ್ರಯಾಣಸ್ಥರಿಗೆ ಸೌಕರ್ಯವನ್ನು ಉಂಟುಮಾಡುವವರಾಗಿದ್ದಾರೆ. ಈ ಸ್ಟೇಷನ್ನಿಗೆ ಪ್ರತಿನಿತ್ಯವೂ 7 ಮೈಲಿ ದೂರದಲ್ಲಿರುವ ವಡಿಗೇನಹಳ್ಳಿಯಿಂದ ಎರಡು ಮೋಟಾರು ಬಸ್ಸುಗಳು ಪ್ರಯಾಣಸ್ಥರನ್ನು ತಂದುಬಿಡುವವಗಳಾಗಿವೆ. ಆದರೆ ರೈಲಿನಿಂದ ಇಳಿದ ಪ್ರಯಾಣಸ್ಥರನ್ನು ಬಸ್ಸಿನ ಮಾಲೀಕರು ತಮ್ಮ ಗಾಡಿಗಳಲ್ಲಿ ಕುಳ್ಳಿರಿಸಿಕೊಳ್ಳಲು ಎಳದಾಡಿ ತೊಂದರೆಪಡಿಸುತ್ತಾರೆ. ತಾ|| ಹುದ್ದೇದಾರರು ಈ ಗಲಾಟೆಯನ್ನು ಅಡಗಿಸಿ ಕ್ರಮಪಡಿಸಬೇಕೆಂದು ಬೇಡಿಕೊಳ್ಳುತ್ತೇನೆ ಮಹಾಸ್ವಾಮಿ.

ರೈಲ್ವೆ ಪ್ರಯಾಣಸ್ಥ.

ಧರ್ಮಪ್ರವರ್ತಕ ರಾವಬಹದ್ದೂರ್ ಕೈ|| ಗುಬ್ಬಿ ತೋಟದಪ್ಪನವರ ಧರ್ಮಛತ್ರದ ವ್ಯವಸ್ಥೆಯು.

ಈ ಮಹಾಧರ್ಮಛತ್ರವು ಬೆಂಗಳೂರು ರೈಲ್ವೆ ಸ್ಟೇಷನ್ನಿನ ಪಕ್ಕದಲ್ಲಿರುತ್ತದೆ. ಇದು ಪರಸ್ಥಳದ ಪ್ರಯಾಣಿಕರಿಗೆ ತುಂಬಾ ಅನುಕೂಲವಾಗಿರುವದು. ಈ ಧರ್ಮಛತ್ರದ ಮೇನೇಜರು ಮ|| ಪುಟ್ಟಯ್ಯನವರು ಪರಸ್ಥಳದವರಿಗೆ ಯಾವ ತೊಂದರೆಯಿಲ್ಲದೆ ಬೇಕಾದ ಸಾಮಾನುಗಳನ್ನು ಮತ್ತು ಇತರ ಯಾವತ್ತೂ ಅನುಕೂಲತೆಗಳನ್ನು ಒದಗಿಸಿಕೊಟ್ಟು ಸರ್ವರ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ. ಇದೂ ಅಲ್ಲದೆ ಇವರು ಪ್ರಯಾಣಸ್ಥರಿಗೆ ದೊಡ್ಡದೊಡ್ಡ ಪಟ್ಟಣದಲ್ಲಿ ಅವಶ್ಯಕವಾಗಿರುವ ವಿಷಯಗಳನ್ನು ತಿಳಿಸಿ ಅವರವರ ಯೋಗಕ್ಷೇಮಗಳನ್ನು ವಿಚಾರಿಸುತ್ತಾ ಬಹು ಆದರದಿಂದ ಕಾಣುತ್ತಿರುವರು. ಈ ಛತ್ರಕ್ಕೆ ಬಂದ ಅನೇಕ ಪ್ರಯಾಣೀಕರು ಸದರಿ ಮೇನೇಜರವರು ಮನೆಯವರಿಗಿಂತಲೂ ಹೆಚ್ಚಾಗಿ ಆದರಿಸುತ್ತಿರುವರೆಂದು ಬಹಳ ಕೊಂಡಾಡುತ್ತಿರುವರು. ಅಲ್ಲದೆ ಈ ಛತ್ರದ ಮೇಲ್ವಿಚಾರಣ ಕರ್ತರಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಇ., ಯವರು ಮ|| ಶಂಕ್ರಣ್ಣನವರ ಶಿವಪ್ಪನವರು, ಮ|| ಯಜಮಾನ್ ಬಸಪ್ಪನವರೇ ಮುಂತಾದ ಪ್ರಮುಖರು ಛತ್ರದ ವಿಷಯದಲ್ಲಿ ಬಹಳ ಉತ್ಸಾಹದಿಂದ ಒಳ್ಳೇ ವ್ಯವಸ್ಥೆಯನ್ನು ಮಾಡುತ್ತಿರುವರು. ಮತ್ತು ಈ ಛತ್ರದಲ್ಲಿ ಏರ್ಪಡಿಸಿರುವ ವೀರಶೈವ ಧರ್ಮಾರ್ಥ ವಿದ್ಯಾರ್ಥಿಭವನ (ಹಾಸ್ಟಲ್ಲು) ದಲ್ಲಿರುವ ಹೈಸ್ಕೂಲು, ಕಾಲೇಜು ವೀರಶೈವ ವಿದ್ಯಾರ್ಥಿಗಳ ವ್ಯವಸ್ಥೆಯನ್ನು ಚನ್ನಾಗಿ ಏರ್ಪಡಿಸಿರುತ್ತಾರೆ. ಈ ಛತ್ರದ ಮೇಲ್ವಿಚಾರಣಕರ್ತರು ಇದರ ಆದಾಯವನ್ನು ಹೆಚ್ಚು ಮಾಡುವ ಪ್ರಯತ್ನ ಮಾಡುತ್ತಿರುವದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಇದೇ ಪ್ರಕಾರ ಸದಾಕಾಲದಲ್ಲಿ ಜರಗಿಸಿ ಕೈಲಾಸವಾಸಿ ಧರ್ಮಪ್ರವರ್ತಕ ತೋಟದಪ್ಪನವರ ಆತ್ಮಶಾಂತಿಯನ್ನುಂಟುಮಾಡುವರೆಂದು ಹಾರೈಸುತ್ತೇವೆ. ಇದರಂತೆ ದಕ್ಷಿಣ ಹಿಂದೂಸ್ಥಾನದಲ್ಲಿರುವ ಮೈಸೂರು, ಮದ್ರಾಸು, ರಾಯಚೂರು ಹೈದರಬಾದು, ವಿಜಾಪುರ, ಬಾಗಲಕೋಟಿ, ಧಾರ್ವಾಡ, ಹುಬ್ಬಳ್ಳಿ, ಗದಗ, ಬಳ್ಳಾರಿ ಮೊದಲಾದ ದೊಡ್ಡದೊಡ್ಡ ಪಟ್ಟಣಗಳ ರೈಲ್ವೆ ಸ್ಟೇಷನ್ನುಗಳ ಬಳಿ ಸದಾಸಂಚಾರಮಾಡುವ ಅನೇಕ ವೀರಶೈವರಿಗೆ ಎಲ್ಲಾ ಭಾಗದಲ್ಲಿ ಸೌಕರಗಳನ್ನು ಒದಗಿಸಿ ಕೊಡುವ ಧರ್ಮಛತ್ರಗಳನ್ನು ಅಲ್ಲಲ್ಲಿ ಇರತಕ್ಕ ವೀರಶೈವ ಮಹನೀಯರು ಕಟ್ಟಿಸುವಂತೆ ಪ್ರೇರಿಸಬೇಕಾಗಿ ಶ್ರೀ ಜಗನ್ನಿಯಾಮಕನಾದ ಪರಮಾತ್ಮನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ತೆಲಿಗಿ ಹರಪನಹಳ್ಳಿ ಮಠದ ಸಿದ್ಧಾಂತಿ ವಿರೂಪಾಕ್ಷ ಶಾಸ್ತ್ರಿ,
ಮೇನೇಜರು. ಲಾರ್ಡ್ ಹಾರ್ಡಿಂಜು ಫ್ರೀಡಿಸ್ಪೆನ್ಸರಿ, ಹರಪನಹಳ್ಳಿ.

ವೀರಶೈವ ಪಂಡಿತರಿಗೆ ಆದ ರಾಜಸನ್ಮಾನ.

ಇದೇ ತಿಂಗಳು 10 ರಲ್ಲಿ ರಾಜಧಾನಿಯಲ್ಲಿ ಕವಿತಾಪ್ರದರ್ಶಿನೀ ಎಂಬ ಸಭೆಯೊಂದು ನಡೆಯಿತು. ಈ ಸಭೆಗೆ ಅಂದಾಜ 20 ಜನ ಕವಿಗಳು ದಯಮಾಡಿಸಿದ್ದರು. ಇವರುಗಳಲ್ಲಿ ದಾವಣಗೆರೆ ತೆಲಗಿಮಠದ ಚಂದ್ರಶೇಖರಶಾಸ್ತ್ರಿಗಳೊಬ್ಬರಾಗಿದ್ದರು. ಈ ಸಭೆಯು ಸಮಾಪ್ತಿಯಾದ ಎರಡು ಮೂರು ದಿನಗಳಲ್ಲಿ ವೇ|| ಚಂದ್ರಶೇಖರಶಾಸ್ತ್ರಿಗಳು ಪೃಥಕ್ಕಾಗಿ (ಮುಂದೆ ಪ್ರಕಟವಾಗಿರುವ) ಕೆಲವು ಕನ್ನಡ, ಸಂಸ್ಕೃತ ಪದ್ಯಗಳನ್ನು ರಚಿಸಿಕೊಂಡು ರಾಜಗೃಹದ ಕಿರಿಕಲ್ಲುತೊಟ್ಟಿಯಲ್ಲಿ ಪ್ರಭುಗಳ ದರ್ಶನವಂ ಪಡೆದರು. ತಮ್ಮಿಂದ ವಿರಚಿತವಾದ ಪದ್ಯಗಳನ್ನು ಹಿಂದೆ ಮಾಡಿದ ಶಿವಯೋಗಿಚರಿತ್ರೆ ಮೊದಲಾದ ಗ್ರಂಥಗಳೊಂದಿಗೆ ಒಪ್ಪಿಸಿ ಪದ್ಯಗಳನ್ನು ವಿಧವಿಧ ರಾಗಾಲಾಪಗಳಿಂದಲೂ, ಗಂಭೀರವಾದ ಸ್ವರದಿಂದಲೂ ಓದಿ ಹೇಳಿ ಅವುಗಳ ಅರ್ಥವನ್ನು ಸಹ ಹೇಳಿದರು. ನಮ್ಮ ಮಹಾಪ್ರಭುವರ್ಯರು ಇವರ ವಾಗ್ವೈಖರಿ ಓದುಗಾರಿಕೆ ಅರ್ಥಮಾಡುವ ಪರಿಪಾಟಿ ವೈದುಷ್ಯ ಮುಂತಾದ ಗಾಂಭೀರ್ಯಗುಣಗಳನ್ನು ನೋಡಿ ಶ್ರೀ ಪ್ರಭುಗಳು ಅತಿಶಯವಾಗಿ ಸಂತುಷ್ಟಚಿತ್ತವುಳ್ಳವರಾದರು. ಅನಂತರ ಶಾಸ್ತ್ರಿಗಳಿಗೆ ಯಥೋಚಿತವಾಗಿ ರಾಜಸನ್ಮಾನವು ಸಹ ಲಭಿಸಿತು. ಶ್ರೀಮನ್ಮಹಾರಾಜರು ವಿದ್ವಾಂಸರ ವೈದುಷ್ಯದಿದೃಕ್ಷುಗಳಾಗಿ ನಮ್ಮ ಸಮಾಜದ ಪಂಡಿತರುಗಳಿಗೂ ಈ ವಿಧವಾದ ಪ್ರೋತ್ಸಾಹವನ್ನು ಮಾಡುತ್ತಿರುವುದು ನಮ್ಮ ಸಮಾಜಪ್ರವಿಷ್ಟರಾದ ಪಂಡಿತರ ಭಾಗ್ಯೋದಯವು ಸ್ತುತ್ಯವಾಗಿದೆ, ಮತ್ತು ಈ ಶಾಸ್ತ್ರಿಗಳು ಆರ್ಜಿಸಿದ ನೈಜವಾದ ವೈದುಷ್ಯದೊಂದಿಗೆ ಧೈರ್ಯ ಗಾಂಭೀರ್ಯ ವಾಕ್ಪಟುತ್ವಾದಿ ವಿದ್ವತ್ಕಾಶಕಗಳಾದ ಗುಣಗಳಿಂದ ಕೂಡಿರುವರೆಂದು ಅಶೇಷ ವೀರಶೈವರಿಗೆ ತಿಳಿದಿದ್ದರೂ ಪ್ರಕೃತದಲ್ಲಿ ರಾಜದರ್ಶನ ರಾಜಸನ್ಮಾನಗಳನ್ನು ಪಡೆದುದಕ್ಕಾಗಿ ನಾವುಗಳು ವಿಶೇಷವಾಗಿ ಸಂತೋಷಗೊಂಡಿರುವೆವು. ಇದಕ್ಕೆಲ್ಲಾ ನಮ್ಮ ಮುಜರಾಯಿಭಕ್ಷಿ ಮ|| ಚಿಕ್ಕಲಿಂಗರಾಜ ಅರಸಿನವರೇ ಕಾರಣರು. ಈ ರೀತಿಯಾಗಿ ನಮ್ಮ ವೀರಶೈವ ಪಂಡಿತರನ್ನು ಸಹ ಕರೆಸಿ ಅವರಿಗೆ ಪ್ರೋತ್ಸಾಹವನ್ನುಂಟುಮಾಡುತ್ತಿರುವ ಮುಜರಾಯಿಭಕ್ಷಿಯವರ ಸಹಜವಾದ ಪ್ರೇಮವಾತ್ಸಲ್ಯಗಳು ವೀರಶೈವ ವಿದ್ವಾಂಸರಿಗುಂಟಾದ ಮನೋವ್ಯಾಧಿಗೆ ಜೀವನೌಷಧಗಳೆನಿಸಿರುವವು. ಹೀಗೆ ಲೋಕದಲ್ಲಿ ಅಧಿಕಾರ ಪ್ರವಿಷ್ಟರಾದವರು ಅವರವರ ಅಧಿಕಾರಗಳನ್ನು ನಮ್ಮ ಮಹಾರಾಜರವರ ಸಂಕಲ್ಪಾನುಸಾರವಾಗಿ ನಿರ್ವ್ಯಾಜದಿಂದ ಪ್ರಜಾಸಾಮಾನ್ಯದ ವಿದ್ಯಾಭಿವೃದ್ಧಿಯಪೇಕ್ಷೆಯುಳ್ಳವರಾಗಿ ನಿರ್ವಹಿಸುತ್ತ ಬಂದರೆ ಪ್ರಜೆಗಳಲ್ಲಿ ವಿದ್ಯೌತ್ಸುಕ್ಯವೂ ರಾಜಭಕ್ತಿಯೂ ದಿನೇದಿನೇ ಹೆಚ್ಚುವವು. ನಮ್ಮ ಮುಜರಾಯಿ ಭಕ್ಷಿಯವರು ಸ್ವತಃ ದೊಡ್ಡ ಕವಿಗಳೂ ರಾಜಬಂಧುಗಳೂ ಸದಾ ವಿದ್ವದ್ಗೋಷ್ಠಿಯಲ್ಲಿಯೇ ಕಾಲವನ್ನು ಕಳೆಯುವವರೂ ದೈವಭಕ್ತರೂ ಆದುದರಿಂದಲೂ ಸಕಲಲೋಕದ ವಿದ್ವಾಂಸರುಗಳಲ್ಲಿಯೂ ಅವ್ಯಾಜವಾದ ಕರುಣಾರಸವನ್ನು ಪ್ರಸರಿಸುತ್ತಿರುವುದರಿಂದಲೂ ನಮ್ಮ ಮಹಾರಾಜರ ಉದ್ದೇಶದಂತೆ ಸಮಾಜದ ಪಂಡಿತರಿಗೆ ಈತೆರನಾದ ಗೌರವಪ್ರತಿಷ್ಠೆಗಳು ಲಭಿಸುತ್ತಿರುವವು. ಆಯಾಯ ಶಾಖೆಗಳಲ್ಲಿ ಇಂತಹ ನಿರ್ಮಾತ್ಸರ್ಯವಂತರಿಗೆ ಪ್ರವೇಶವಿದ್ದರೆ ನಮ್ಮ ಶ್ರೀಮನ್ಮಹಾರಾಜರವರ ಅಶೇಷಪ್ರಜಾಪ್ರೋತ್ಸಾಹರೂಪವಾದ ಮಹಾಕಾರ್ಯವು ನಿರ್ವಿಘ್ನವಾಗಿ ನಡೆಯುವುದು. ಈರೀತಿ ವಿದ್ವಜ್ಜನಗಳಿಗೆ ಪ್ರೋತ್ಸಾಹವನ್ನು ಕೊಡಲು ಬದ್ಧಾದರರಾದ ಶ್ರೀಮನ್ಮಹಾರಾಜರವರಿಗೂ ಇದನ್ನು ಕಾರ್ಯತಃ ಸಫಲಗೊಳಿಸುತ್ತಿರುವ ನಮ್ಮ ಮುಜರಾಯಿಭಕ್ಷಿಯವರಿಗೂ ಅವ್ಯಾಜಕರುಣಾಮೂರ್ತಿಯಾದ ಸಾಂಬನು ಅಶೇಷ ಸನ್ಮಂಗಳವನ್ನು ಈಯಲೆಂದು ಹಾರೈಸುತ್ತಿರುವ ಓರ್ವ ವೀರಶೈವ.

ಬೆಳಗಾಂವ ಜಿಲ್ಲಾ ಹುಕ್ಕೇರಿ ತಾಲ್ಲೂಕು ಪೈಕಿ ನಿಡಸೋಸಿ ಕ್ಷೇತ್ರ ಶ್ರೀ ದುರದುಂಡೀಶ್ವರ ಸಿದ್ಧಸಂಸ್ಥಾನ ಮಠದಲ್ಲಿ ಪದ್ಧತಿಪ್ರಕಾರ ನಡೆದ ಮಹೋತ್ಸವ ಸಮಾರಂಭವು.

ಇದೇ ರುಧಿರೋದ್ಗಾರಿನಾಮ ಸಂವತ್ಸರದ ಶ್ರಾವಣಮಾಸದ ಬಾದ್ರ್ಯದ ಆಗಾಯಿತು ಭಾದ್ರಪದ ಶುದ್ಧ ೭ ಮಿತಿವರೆವಿಗೂ ನಿತ್ಯ ಪ್ರಾತಃಕಾಲ ೭ ಘಂಟೆಯಿಂದ ೧೨ ಘಂಟೆಯವರಿವಿಗೂ ಶ್ರೀ ದುರದುಂಡೀಶ್ವರ ಗದ್ದಿಗೆಯಲ್ಲಿ ಮಹಾನ್ಯಾಸೋಕ್ತ ರುದ್ರಾಭಿಷೇಕವೂ ಸದರಿ ಸಂಸ್ಥಾನಕ್ಕೆ ಹಾಲಿ ಅಧಿಕಾರಿಗಳಾಗಿರುವ ಮಹಾತಪೋನಿಷ್ಠಾಗರಿಷ್ಠ ಮಾನಸರಾದ ಶ್ರೀ ನಿಜಲಿಂಗೇಶ್ವರ ಮಹಾಸ್ವಾಮಿಗಳವರ ಮಹಾಪಾದಪೂಜಾ ಸಹಸ್ರಬಿಲ್ವಾರ್ಚನೆ [illegible] ನಿತ್ಯವೂ ಮಹಾ ಗಣಾರಾಧನೆಯೂ ಸಾಯಂಕಾಲ ೬ ಘಂಟೆಯಿಂದ ೮ರ ವರೆವಿಗೂ ಆಸ್ಥಾನದ ಶಾಸ್ತ್ರಿಗಳಾದ ವೇ|| [illegible] ಶಾಸ್ತ್ರಿಗಳು ಶಿವಪುರಾಣವನ್ನು ಹೇಳಿ ಸರ್ವರಿಗೂ ಆನಂದವನ್ನುಂಟುಮಾಡುತ್ತಿದ್ದರು. ಇದೇಪ್ರಕಾರ ಭಾದ್ರಪದ ಶುದ್ಧ ೬ ವರೆವಿಗೂ ನಡೆದು ಆ ದಿವಸ ಸಾಯಂಕಾಲ ೬ ಘಂಟೆಗೆ ಪುರಾಣ ಸಮಾಪ್ತಿ ಮಾಡಲ್ಪಟ್ಟಿದ್ದಲ್ಲದೆ ಶಿವಕೀರ್ತನವೂ ಮಾಡಲ್ಪಟ್ಟಿತು. ಇದೇ ೭ ಸೋಮವಾರ ಪ್ರಾತಃಕಾಲ ೮ ಘಂಟೆಯಿಂದ ೧೧ ಘಂಟೆಯವರೆಗೂ ಶ್ರೀ ದುರದುಂಡೀಶ್ವರ ದೇವರ ಅಂದೋಳಿಕೋತ್ಸವವೂ ಪುರಾಣೋತ್ಸವವೂ ಸಹ ಬಹು ವಿಜೃಂಭಣೆಯಿಂದ ನಡೆದುವು. ಮಧ್ಯಾಹ್ನ ೧೨ ಘಂಟೆಯಿಂದ ಮಹಾಗಣಾರಾಧನೆಯೂ ರಾತ್ರಿ ಶಿವಭಜನೆಯೂ ಇದೇ ಶುದ್ಧ ೮ ಮಂಗಳವಾರ ಪ್ರಾತಃಕಾಲ ೭ರಿಂದ ೧೦ ಘಂಟೆಯವರಿವಿಗೂ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳ ಪರೀಕ್ಷೆಯೂ ಒಂಟಿಮೂರಿ ಸಂಸ್ಥಾನದ ಆಸ್ಥಾನ ಪಂಡಿತರಾದ ವೇ|| ಚೆನ್ನಬಸವಶಾಸ್ತ್ರಿಗಳವರಿಂದ ಮಾಡಲ್ಪಟ್ಟಿತು. ಎಲ್ಲಾ ವಿದ್ಯಾರ್ಥಿಗಳೂ ತಮ್ಮ ತಮ್ಮ ಪಾಠಗಳಲ್ಲಿ ಚೆನ್ನಾಗಿ ತೇರ್ಗಡೆಯಾದರು. ನಂತರ ಆಸ್ಥಾನದ ಪಾಠಶಾಲಾಧ್ಯಾಪಕರಾದ ಭಾಷ್ಯಾಂತ ವ್ಯಾಕರಣದಲ್ಲಿಯೂ ಬಾಧಾಂತತರ್ಕದಲ್ಲಿಯೂ ಪಂಡಿತರಾದ ವೇ|| ರೇವಣಸಿದ್ಧಶಾಸ್ತ್ರಿಗಳು ದ್ವೈತಾದ್ವೈತ ವಿಶಿಷ್ಟಾದ್ವೈತ ಮತಗಳಿಗೂ ಶಕ್ತಿವಿಶಿಷ್ಟಾದ್ವೈತ ಮತಕ್ಕೂ ಇರತಕ್ಕ ತಾರತಮ್ಯವನ್ನು ಬಹು ಚೆನ್ನಾಗಿ ವಿಂಗಡಿಸಿ ಹೇಳಿ ಸರ್ವರಿಗೂ ಅತ್ಯಾನಂದವನ್ನುಂಟುಮಾಡಿದರು. ಈ ಸಮಾರಂಭಕ್ಕೆ ಅಜಮಾಸು 26000 ಜನಗಳು ಸೇರಿದ್ದರು. ಈ ಸಮಾರಂಭವು ಎಂಥಾ ಕ್ಲಿಷ್ಟಸಮಯದಲ್ಲಿಯೂ ಪದ್ಧತಿಪ್ರಕಾರ ನಡೆಯಿಸಲ್ಪಟ್ಟು ಬಂದ ಭಕ್ತಮಾಹೇಶ್ವರರಿಗೂ ಇತರ ಜನಾಂಗದವರಿಗೂ ಯಥೇಚ್ಛ ಮೃಷ್ಟಾನ್ನಭೋಜನಮಾಡಿಸಲ್ಪಡುತ್ತಿಯಲ್ಲದೆ ಈ ಮಠದಲ್ಲಿ ಸದಾಕಾಲದಲ್ಲಿ ಸಕಲ ವರ್ಣದವರಿಗೂ ಅನ್ನದಾಸೋಹವೂ ಸಮರ್ಪಕವಾಗಿ ನಡೆಯುತ್ತಾ ಇದೆ. ಈ ಕಾಲದಲ್ಲಿಯೂ ಈ ಮಹಾಕಾರ್ಯವು ತಪ್ಪದೆ ನಡೆಯಬೇಕಾದರೆ ಮೂಲಕರ್ತೃಗಳಾದ ಶ್ರೀ ದುರದುಂಡೀಶ್ವರದೇವರ ಕೃಪಾಬಲದಿಂದಲೂ ಶಮಾದಿಗುಣಸಂಪನ್ನರಾದ ಸದರಿ ನಿಜಲಿಂಗೇಶ್ವರ ಮಹಾಸ್ವಾಮಿಗಳವರ ತಪೋನುಷ್ಠಾನ ಪ್ರಭಾವದಿಂದಲೂ ನಡೆಯುತ್ತದೆಂದು ಹೇಳಬೇಕಲ್ಲದೆ ಮತ್ತೆ ಬೇರೆಯಿಲ್ಲ.

ಇದೇ ಶುದ್ಧ ೮ ಮಂಗಳವಾರ ಮಧ್ಯಾಹ್ನ ೪ ಘಂಟೆಯಿಂದ ೬ ಘಂಟೆಯವರೆವಿಗೂ ಪೂಜ್ಯಪಾದರಾದ ಜಂಬೂರ ಶ್ರೀಗಳವರ ಅಧ್ಯಕ್ಷತೆಯಲ್ಲಿ ವೀರಶೈವ ಧರ್ಮಸಂಬಂಧ ಸಭಾ ನಡೆಯಿಸಲ್ಪಟ್ಟಿತು. ಸದರಿ ಸಭೆಗೆ ಸಂಕೇಶ್ವರ, ನಿಪ್ಪಾಣಿ, ಗಡಹಿಂಗಲಜು, ಯಮಕನಮರಡಿ, ಹುಕ್ಕೇರಿ, ಚಿಕ್ಕೋಡಿ, ಒಂಟಿಮೂರಿ, ಹಲಕರ್ಣಿ ಮೊದಲಾದ ಗ್ರಾಮಾನುಗ್ರಾಮಗಳ ಪ್ರಮುಖ ಭಕ್ತಮಾಹೇಶ್ವರರು, ಅನ್ಯಮತದ ಬ್ರಾಹ್ಮಣರು ಮೊದಲಾದವರೂ ಬಂದು ಸಭಾಲಂಕಾರವನ್ನು ಮಾಡಿದ್ದರು. ಸದರಿ ಸಭಾ ರಿಪೋರ್ಟರ್ ಆಸ್ಥಾನ ಕಾರಭಾರಿ ವೇ|| ಸುಜ್ಞಾನಶಾಸ್ತ್ರಿಗಳಿಂದ ಓದಲ್ಪಟ್ಟಿತು. ನಂತರವೇ ಬ್ರಂ|| ಕೆ. ಆರ್. ವಿರೂಪಾಕ್ಷಶಾಸ್ತ್ರಿಗಳಿಂದ ವೇದಘೋಷವು ಮಾಡಲ್ಪಟ್ಟಿತು. ನಂತರ ಅಧ್ಯಕ್ಷ ಪೂಜ್ಯಪಾದರವರು ಶಿವಾನುಭವ ವಿಷಯದಲ್ಲಿ ಸಪ್ರಮಾಣವಾಗಿ ಭಾಷಣಮಾಡಿ ಸರ್ವರಿಗೂ ಆನಂದವನ್ನುಂಟು ಮಾಡಿದರು. ನಂತರ ವೇ|| ಸದರಿ ಚೆನ್ನಬಸವಶಾಸ್ತ್ರಿಗಳು ದಾಸೋಹಂ ಎಂಬ ವಿಷಯವಾಗಿ ಭಾಷಣಮಾಡಿದರು. ಈ ಸಂಸ್ಥಾನದಲ್ಲಿ ಬಹು ಕಾಲದಿಂದಲೂ ಸಂಸ್ಕೃತ ಪಾಠಶಾಲೆಯು ಇದ್ದೇ ಇರುವದು. ಈ ಪಾಠಶಾಲೆಯಲ್ಲಿ ವಿದ್ವಾಂಸರಾದ ವೇ|| ದಡ್ಡಿ ಮಲ್ಲಿಕಾರ್ಜುನ ಶಾಸ್ತ್ರಿಗಳಾದಿಯಾಗಿ ಎಷ್ಟೋ ಜನಗಳು ಅಭ್ಯಾಸಮಾಡಿ ಹೋಗಿರುವರು. ಸದರಿಯವರ ಶಿಷ್ಯರು ಶಿಷ್ಯರು ಎಷ್ಟೋ ಜನಗಳಿರುವರು. ಹಾಲಿ ೩೫ ಜನ ಕನ್ನಡ ಸ್ಕೂಲಿನಲ್ಲಿ ಓದತಕ್ಕ ವಿದ್ಯಾರ್ಥಿಗಳು ಮಠದಲ್ಲಿಯೇ ಇರುವರು. ಈ ಸಂಸ್ಥಾನದ ತರ್ಫೆಯಿಂದ ಸದ್ಯಃ ೫ ನೆಯ ತರಗತಿವರೆವಿಗೂ ಶ್ರೀ ದುರದುಂಡೀಶ್ವರೆಂಬ ಅಭಿಧಾನದಿಂದ ಇಂಗ್ಲೀಷ್ ಸ್ಕೂಲನ್ನೂ ಸಂಕೇಶ್ವರದಲ್ಲಿರುವ ತಮ್ಮ ಮಠದಲ್ಲಿಯೇ ಸ್ಥಾಪನವಾಡಿದ್ದಾರೆ. ಇನ್ನೂ ಇದರ ಅಭಿವೃದ್ಧಿ ಸ್ಥಿತಿಯನ್ನು ನಮ್ಮ ಈ ಸಂಸ್ಥಾನದ ಮಹಾಸ್ವಾಮಿಗಳವರು ಚಿಂತಿಸುತ್ತಾ ಇದ್ದಾರೆ. ಆದಕಾರಣ ರಾಂಭಾವು ಕುಲಕರ್ಣಿ ದುಂಡಗೀಕರ ಇವರು ಶಿಕ್ಷಣದ ವಿಷಯವಾಗಿಯೂ ಮಹಾತ್ಮರನಿಂದೆ ಒಳ್ಳೆಯದಲ್ಲವೆಂಬ ವಿಷಯವಾಗಿಯೂ ಭಾಷಣ ಮಾಡಿದರು.

ಈ ಹಿಂದಿನ ದಿವಸ ಬಿ. ಎಲ್ಸಿ. ಪಂಡಿತರಾಯಪ್ಪ ಚಿಕ್ಕೋಡಿಕರ ಇವರು ಈ ಸಂಸ್ಥಾನದ ಯಾವತ್ತೂ ಕಾರ್ಯಗೌರವವನ್ನು ನೋಡಿ ಬಹು ಸಂತೋಷಪಟ್ಟು ಈ ಸಂಸ್ಥಾನದ ಸಕಲ ಕಾರ್ಯವು ಭಕ್ತಿಯುಕ್ತವಾಗಿದೆ. ಈ ಸಮಾರಂಭವನ್ನು ತಪ್ಪಿಸಿದರೆ ವಿಶೇಷ ಜನಗಳಲ್ಲಿರತಕ್ಕ ಭಕ್ತಿಯನ್ನು ತಪ್ಪಿಸಿ ಆ ಪಾಪಕ್ಕೆ ಭಾಗಿಯಾಗಬೇಕಾಗುತ್ತೆ. ಆದಪ್ರಯುಕ್ತ ಈ ಸಮಾರಂಭವನ್ನು ನಿಲ್ಲಿಸಿಯೆನ್ನುವದಕ್ಕಿಂತ ಹೆಚ್ಚಿಸಿ ಎಂದು ಹೇಳಿದರೆ ಇದಕ್ಕಿಂತಲೂ ಜನಗಳಲ್ಲಿ ಭಕ್ತಿ ಹೆಚ್ಚಿ ಆ ಮೂಲಕ ನಮ್ಮ ಸಮಾಜಕ್ಕೆ ಬೇಕಾದ ಕಾರ್ಯಗಳೆಲ್ಲವೂ ಈ ಸಂಸ್ಥಾನದಿಂದ ನಮಗೆ ಪ್ರಾಪ್ತವಾಗುವವು ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಈರೀತಿ ಮೇಲ್ಕಂಡ ಕಾರ್ಯವೆಲ್ಲವೂ ಪೂರ್ತಿಯಾದನಂತರ ಶಿವಭಜನೆ ನಡೆದು ಬಂದ ವಿದ್ವನ್ಮಂಡಲಿಗೆಲ್ಲ ಯೋಗ್ಯತಾ ಮೇರೆ ಸಂಭಾವನೆಯು ಕೊಡಲ್ಪಟ್ಟಿದ್ದಲ್ಲದೆ ಅಶೇಷ ಜನಗಳಿಗೆಲ್ಲ ಫಲಾಶೀರ್ವಾದವು ದಯಪಾಲಿಸಲ್ಪಟ್ಟ ನಂತರ ಸಭಾ ಬರಖಾಸ್ತಾಯಿತು.

Gurupadaya Mastiholimatha, Daddi.

ಮಾದಕಗಳಿಂದುಂಟಾಗುವ ಕೆಟ್ಟ ಪರಿಣಾಮಗಳು.

(ಲೇಖಕ ಭರಮಗೌಡ ಗುಂಡಪ್ಪಗೌಡಾ ಪಾಟೀಲ ಕಡಡಿ)

ವೈಸ್‌ರಾಯ ದಂಪತಿಗಳು ಈ ತಾ|| ೨೭ನೆಯ ಮಂಗಳವಾರ ಬೆಂಗಳೂರಿಗೆ ದಯಮಾಡಿಸಿ ಅಲ್ಲಿ ರೆಸಿಡೆಂಟರ ಅತಿಥ್ಯದಲ್ಲಿದ್ದುಕೊಂಡು ಪ್ರೇಕ್ಷಣೀಯ ಸ್ಥಳಗಳನ್ನೂ ಸೇನಾವಿನ್ಯಾಸವನ್ನೂ ಪರಾಮರ್ಶಿಸಿಕೊಂಡು ತಾ|| ೨೮ರ ರಾತ್ರಿ ಹೆಚ್ಚುಕಟ್ಟಲೆಯ ರೈಲುಬಂಡಿಯಲ್ಲಿ ಪ್ರಯಾಣಮಾಡಿ ತಾ|| ೨೯ನೆಯ ಗುರುವಾರ ಬೆಳಗಿನ ೮½ ಗಂಟೆಗೆ ರಾಜಧಾನಿಯನ್ನು ತಲುಪುವರು. ನಿಲ್ದಾಣದಲ್ಲಿ ಶ್ರೀಮನ್ ಮಹಾರಾಜರವರೂ ಶ್ರೀಮದ್ಯುವರಾಜರವರೂ ವೈಸ್‌ರಾಯ ದಂಪತಿಗಳನ್ನಿದಿರ್ಗೊಂಡು ಕರಾವಲಂಬನವನ್ನಿತ್ತು ಬಂಡಿಯಿಂದಿಳಿಸಿ ಪರಸ್ಪರ ಕುಶಲಪ್ರಶ್ನಾನಂತರ ಬಹು ಸುಂದರವಾಗಿ ರಚಿಸಲ್ಪಟ್ಟಿರುವ ಮಂಟಪದೊಳಕ್ಕೆ ಕರೆದುಕೊಂಡುಬಂದು ಅಲ್ಲಿ ಕಾದಿರುವ ದಿವಾನರು ಕೌನ್ಸಿಲರುಗಳು ಸರದಾರರುಗಳು ಮತ್ತು ಕೆಲ ಪ್ರಮುಖ ಅಧಿಕಾರಿಗಳ ಪರಿಚಯವನ್ನು ಮಾಡಿಸಿದಮೇಲೆ ಹೊರಗಡೆಗೆ ದಯಮಾಡಿ ಸೇನಾಮರ್ಯಾದೆಯನ್ನು ಕೈಕೊಂಡು ಸಿದ್ಧವಾಗಿರುವ ನಾಲ್ಕು ದಿವ್ಯಾಶ್ವಗಳನ್ನು ಹೂಡಿದ ರಥಾರೋಹಣಮಾಡುವರು. ಕೋಟೆಯ ತಪ್ಪಲಿನಲ್ಲಿ ಆಗಮನಸೂಚಕವಾದ ಗುಂಡುಗಳು ಹಾರಿಸಲ್ಪಡುವುವು. ಉತ್ಸವವು ಗಗ್ರಿಬಾಲ್ಯಗಳೊಡನೆಯೂ, ಅಂಗರಕ್ಷಕ ಅಶ್ವಸೇನೆಯೊಡನೆಯೂ ಹೊರಟು ರೈಲ್ವೆಸ್ಟೇಷನ್ ರೋಡಿನಲ್ಲಿ ಶ್ರೀ ಚಾಮರಾಜೇಂದ್ರ ಕೈಗಾರಿಕೆಯ ಪಾಠಶಾಲೆಯವರೆಗೂ ಬಂದು ಅಲ್ಲಿ ಸಯ್ಯಾಜಿರಾವ್ ರೋಡಿಗೆ ತಿರುಗಿ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಮುಂಗಡೆಯಿಂದ ದೊಡ್ಡಮಾರ್ಕಟ್ಟಿನಿದಿರಿಗೆ ಕರ್ಜನ್‌ಪಾರ್ಕು ಗೇಟಿನದ್ವಾರ ಆಲ್ಬರ್ಟ್ ವಿಕ್ಟರ್ ರೋಡಿಗೆ ಎಲಿಜಿನ್ ಫೌಂಟನ್ ಬಳಿ ತಿರುಗಿಕೊಂಡು ಮಾರ್ಗದ ಇಕ್ಕೆಲದಲ್ಲೂ ಪಾವಟಿಗೆಗಳ ಮೇಲೆ ಸಾಲುಸಾಲಾಗಿ ಕುಳಿತಿರುವ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಜಯಧ್ವನಿಯನ್ನು ಲಾಲಿಸಿ ಮನೋಹರವಾಗಿ ರಚಿಸಲ್ಪಟ್ಟಿರುವ ಚಪ್ಪರದಬಳಿ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳೊಪ್ಪಿಸುವ ವಿಜ್ಞಾಪನ ಪತ್ರವನ್ನು ಸ್ವೀಕರಿಸಿ ಕಾಲೋಚಿತವಾದ ಉತ್ತರವನ್ನಿತ್ತು ಮುಂದಕ್ಕೆ ತೆರಳಿ ಹಾರ್ಡಿಂಜ್ ಸರ್ಕಲಿನಲ್ಲಿ ಉತ್ತರದ್ವಾರದಿಂದ ಗೌರ್ನಮೆಂಟ್ ಹೌಸನ್ನು ತಲಪುವರು. ಅದೇ ದಿವಸ 11 ಗಂಟೆಗೆ ವೈಸ್ರಾಯರು ಮರ್ಯಾದೆಯೊಡನೆ ಅರಮನೆಗೆ ಚಿತ್ತೈಸಿ ಶ್ರೀಮನ್ಮಹಾರಾಜರವರ ದರ್ಶನ ಭಾಷಣಗಳನ್ನು ಮಾಡಿಕೊಂಡು ಬರುವರು. ಆ ದಿನ ರಾತ್ರಿ ಗೌರ್ನಮೆಂಟ್ ಹೌಸಿನಲ್ಲಿ ಅರಸೌತಣವಾಗುವುದು. ಮಾರನೆಯ ದಿನ ಮಧ್ಯಾಹ್ನ ವೈಸ್‌ರಾಯದಂಪತಿಗಳು ಶ್ರೀರಂಗಪಟ್ಟಣಕ್ಕೂ ಕೃಷ್ಣರಾಜಸಾಗರಕ್ಕೂ ದಯಮಾಡಿಸಿ ಪರಾಮರ್ಶಿಸಿಕೊಂಡು ಬಂದು ಡಿಸಂಬರ್ ತಾ|| 1 ರಲ್ಲಿ ಮೋಟಾರುಬಂಡಿಗಳ ಸ್ವಾರಿಯಿಂದ ಕಾರಾಪುರಕ್ಯಾಂಪಿಗೆ ಪ್ರಯಾಣಮಾಡಿ ಕೆಡ್ಡಾದಲ್ಲಿ ಕೂಡಿಹಾಕಲ್ಪಟ್ಟಿರುವ ಆನೆಗಳಿಗೆ ಹಗ್ಗಗಳನ್ನು ಬಿಗಿಯುವುದನ್ನೂ ಹೊಸದಾಗಿ ಆನೆಗಳನ್ನು ಕೆಡ್ಡಾಕ್ಕೆ ಅಟ್ಟುವುದನ್ನೂ ಪರಾಮರ್ಶಿಸುವರಲ್ಲದೆ ಕಾಡುಕೋಣ, ಹುಲಿ ಮೊದಲಾಗಿ ಕ್ರೂರಪ್ರಾಣಿಗಳ ಬೇಂಟೆಯಾಡುವುದು, ಮೀನುಗಳನ್ನು ಹಿಡಿಯುವುದು ಮೊದಲಾದ ವಿನೋದಗಳಲ್ಲಿ ತಾ|| ೫ ರ ವರೆಗೆ ವಿಹರಿಸಿಕೊಂಡಿದ್ದು ಅದೇ ದಿವಸ ಸಾಯಂಕಾಲ ರಾಜಧಾನಿಗೆ ಚಿತ್ತೈಸಿ ರಾತ್ರಿ 9½ ಗಂಟೆಗೆ ಹೆಚ್ಚುಗಟ್ಟಲೆಯ ರೈಲುಬಂಡಿಯಲ್ಲಿ ಪ್ರಯಾಣಮಾಡುವರು.

ಸಂಮಾನ್ಯರಾದ ವೈಸ್ರಾಯಿದಂಪತಿಗಳು ನಮ್ಮ ಸಂಸ್ಥಾನಕ್ಕೆ ಶ್ರೀಮನ್ ಮಹಾರಾಜರವರ ಅತಿಥಿಗಳಾಗಿ ದಯಮಾಡಿಸುತ್ತಾರಾದುದರಿಂದ ಸಂಸ್ಥಾನದ ಅತಿಥಿಗಳಾಗಿಯೇ ಇರುತ್ತಾರೆ. ನಮ್ಮೆಲ್ಲರ ಪ್ರತಿನಿಧಿಗಳಾಗಿ ಶ್ರೀಮನ್ ಮಹಾರಾಜರವರು ಆ ದಂಪತಿಗಳಿಗೆ ನಡೆಯಿಸುವ ಆತಿಥ್ಯವು ನಮ್ಮೆಲ್ಲರಿಗೂ ಪ್ರೀತಿಕರವೂ ಉತ್ಸಾಹಕರವೂ ಆಗಿರುತ್ತದೆ. ರಾಜಧಾನಿಯಲ್ಲಿ ಅವರ ಆತಿಥ್ಯಸಮಾರಂಭಗಳು ವಿಜೃಂಭಣೆಯಿಂದ ನಡೆಯುವುದಕ್ಕೆ ತಕ್ಕೇರ್ಪಾಟುಗಳು ಜರುಗಿರುತ್ತವೆ. ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಪ್ರತಿನಿಧಿಗಳಾದ ಲಾರ್ಡ್ ರೀಡಿಂಗ್‌ರವರನ್ನೂ ಅವರ ಧರ್ಮಪತ್ನಿಯವರನ್ನೂ ನಮ್ಮ ಶ್ರೀಮನ್ಮಹಾರಾಜರವರ ಸತ್ಪ್ರಜೆಗಳ ಪರವಾಗಿ ನಾವು ಸುಸ್ವಾಗತಿಸುವುದಲ್ಲದೆ ಈ ದಂಪತಿಗಳು ಈ ದೇಶದಲ್ಲಿರುವಷ್ಟು ಕಾಲವೂ ಅವರ ಆತಿಥ್ಯಸಮಾರಂಭವು ಅವರಿಗೆ ಉಲ್ಲಾಸಕರವಾಗಿಯೂ, ಆರೋಗ್ಯಕರವಾಗಿಯೂ ಇದ್ದು ಮೈಸೂರುದೇಶದ ರಾಜಭಕ್ತಿ ವಿಶ್ವಾಸಗಳ ಅಚಲತ್ವವು ಅವರ ಮೂಲಕ ಚಕ್ರವರ್ತಿಯವರಿಗೆ ನಿವೇದಿತವಾಗಿ ಆಂಗ್ಲಸಾಮ್ರಾಜ್ಯದ ಮತ್ತು ನಮ್ಮ ಸಂಸ್ಥಾನದ ಪರಸ್ಪರ ಪ್ರೀತಿವಿಶ್ವಾಸಗಳೂ ಸ್ನೇಹವೂ ಮತ್ತಷ್ಟು ದೃಢತರವಾಗಲೆಂದು ಕೋರುವೆವು.

ಮಿ|| ಶೌಕತಾಲಿಯವರ ಉಪದೇಶ.

ಕಿಲಾಫತ್ ಫಂಡಿಗೆ ಸಂಭವಿಸಿರುವ 16 ಲಕ್ಷ ರೂ. ಗಳ ನಷ್ಟವನ್ನು ಕುರಿತು ಪರ್ಯಾಲೋಚಿಸುವ ಬಗೆಗೆ ಕಳೆದ ತಾ|| 13 ರಲ್ಲಿ ಅಮೃತಸರದಲ್ಲಿರುವ ಜಲಿಯನ್‌ವಾಲಾಬಾಗಿನಲ್ಲಿ ಡಾಕ್ಟರ್ ಕಿಚ್ಲುಯವರ ಅಧ್ಯಕ್ಷತೆಯಲ್ಲಿ ಮಹಮ್ಮದೀಯರ ಪ್ರಚಂಡಸಭೆಯು ಸೇರಿದ್ದಿತು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಂಬಂಧವಾಗಿ ಅಮೃತಸರಕ್ಕೆ ಬಂದಿದ್ದ ಪ್ರಮುಖ ಕಾಂಗ್ರೆಸ್ ಭಕ್ತರುಗಳೂ ಈ ಸಭೆಗೆ ಬಂದಿದ್ದರು. ಮಿ|| ಶೌಕತಾಲಿಯವರು ಭಾಷಣಮಾಡುವಾಗ್ಗೆ "ಕಿಲಾಫತ್ ಸಂಬಂಧವಾದ ನಮ್ಮ ಪ್ರಯತ್ನವಿಶೇಷದಲ್ಲಿ ಹಿಂದೂಗಳು ಬಹಳವಾಗಿ ಸಾಹಾಯ್ಯವನ್ನು ಮಾಡಿರುತ್ತಾರಾದುದರಿಂದ ಮಹಮ್ಮದೀಯರು ಅವರ ವಿಚಾರದಲ್ಲಿ ಬಹಳ ತಾಳ್ಮೆಯನ್ನುಳ್ಳವರಾಗಿರಬೇಕು. ಹಿಂದೂ ಮಹಮ್ಮದೀಯರ ಐಕಮತ್ಯ ವಿನಾ ನಮ್ಮ ಕಾರ್ಯಸಿದ್ಧಿಯಾಗುವುದಿಲ್ಲವೆಂಬುದು ನನ್ನ ಅನುಭವಕ್ಕೆ ಬಂದಿರುತ್ತದೆ. ಅದುಕಾರಣ ಈಗಣ ವಿದ್ಯಮಾನದಲ್ಲಿ ಸ್ವಾರ್ಥತ್ಯಾಗವೂ ತಾಳ್ಮೆಯೂ ಅತ್ಯಾವಶ್ಯಕವು. ನನ್ನ ಸ್ವಂತತಾಯಿಯನ್ನೂ ಸಹೋದರಿಯನ್ನೂ ಒಬ್ಬ ಹಿಂದುವು ಅಪಮಾನಪಡಿಸಿದರೆ ನಾನು ಅವನನ್ನು ಮನ್ನಿಸುತ್ತೇನೆಂದು ದಿಲ್ಲಿ ಮೊದಲಾದ ಕಡೆಗಳಲ್ಲಿ ಹೇಳಿರುವಂತೆಯೇ ಇಲ್ಲಿಯೂ ಹೇಳುತ್ತೇನೆ. ಸಾಮಭಾವದಿಂದ ನಮ್ಮ ಸಹೋದರಜನರು ಕೌನ್ಸಿಲುಗಳನ್ನು ಪ್ರವೇಶಿಸಲು ಅವಕಾಶವು ಕೊಡಲ್ಪಟ್ಟುದಾಗಿರುತ್ತದೆ. ಮೊದಲು ಸಾತ್ವಿಕನಿರೋಧ ಪ್ರಯತ್ನವನ್ನು ನಡಿಸಿ ಅನಂತರ ಸಹಾಯನಿರಾಕರಣ ವ್ರತವನ್ನು ಕೈಕೊಳ್ಳತಕ್ಕದಾಗಿದೆ." ಎಂದು ಸಭಿಕರ ಮನಸ್ಸಿನಲ್ಲಿ ನಾಟುವಂತೆ ಬೋಧಿಸಿದರು, ಮತ್ತು ಹೆತ್ತತಾಯಿಗೆ ಆದ ಅಪಮಾನವನ್ನು ಸಹಿಸಿಕೊಂಡಿರುವುದು ಸಾಧ್ಯವೆ? ಎಂದು ಸಭಿಕರಲ್ಲೊಬ್ಬನು ಪ್ರಶ್ನಿಸಲು, ಅಹುದು ಖಂಡಿತವಾಗಿಯೂ ಸಹಿಸಿಕೊಂಡಿರಬೇಕೆಂದು ಉತ್ತರವನ್ನು ಕೊಟ್ಟು ಸಮಾಧಾನಪಡಿಸಿದರು. ತರುವಾಯ ಕಿಲಾಫತ್ ಫಂಡಿಗೆ ಸಂಭವಿಸಿರುವ ನಷ್ಟವನ್ನು ಕುರಿತು ಪ್ರಸ್ತಾಪಿಸುವಾಗ್ಗೆ "ಶೇಟ್ ಚೋಟಾನಿಯವರಲ್ಲಿ ನನಗೆ ಪೂರ್ಣ ನಂಬುಗೆಯುಂಟು ಮತ್ತು ಅವರು ತಮಗೆ ವ್ಯಾಪಾರದಲ್ಲಿ ನಷ್ಟವಾಗದಿದ್ದರೆ ಒಂದುಕಾಸು ಕಡಿಮೆಯಿಲ್ಲದಂತೆ ಹಣವನ್ನೆಲ್ಲವನ್ನೂ ಕೊಟ್ಟುಬಿಡುತ್ತಿದ್ದರು, ಅಲ್ಲದೆ ಈಗಲು ತಮ್ಮಾಸ್ತಿಯೆಲ್ಲವನ್ನೂ ಕಿಲಾಫತ್ ಕಮಿಟಿಗೆ ವಹಿಸಿಕೊಟ್ಟಿರುವರು. ಅವುಗಳ ಮಾರಾಟದಿಂದ ಅನುಕೂಲವಾದ ಬೆಲೆಯು ದೊರಕಿದಲ್ಲಿ ಅವರಿಂದ ಬರಬೇಕಾದ 16 ಲಕ್ಷ ರೂಪಾಯಿಯು ಪೂರ್ತಿಯಾಗಿ ಕಿಲಾಫತ್ ಕಮಿಟಿಗೆ ಸಂದಾಯವಾಗುವುದರಲ್ಲಿ ಸಂದೇಹವಿಲ್ಲವು" ಎಂದು ತಿಳಿಸಿದರು. ಅನಂತರ ಮಿ|| ಮಹಮ್ಮದಾಲಿಯವರು ಮತ್ತೆ ಕೆಲರೂ ಸ್ವರಾಜ್ಯಪ್ರಾಪ್ತಿಯ ಪ್ರಯತ್ನದಲ್ಲಿ ಯಾರೂ ಹಿಮ್ಮೆಟ್ಟಬಾರದು ಮತ್ತು ಆತಂಕವನ್ನುಂಟುಮಾಡಕೂಡದು ಎಂದು ಬೋಧಿಸಿದುದಲ್ಲದೆ ಸ್ವರಾಜ್ಯಪ್ರಾಪ್ತಿಯಿಂದ ರಾಜ್ಯಾಡಳಿತವು ಹಿಂದೂಗಳ ಹಸ್ತಗತವಾದರೂ ಬ್ರಿಟಿಷ್ ಸರ್ಕಾರಿಯಾಡಳಿತಕ್ಕಿನ್ನ ಉತ್ತಮವಾಗಿರುವುದೆಂದು ಮಹಮ್ಮದೀಯ ಸಭಾಸದರನ್ನು ಕುರಿತು ಹೇಳಿದರು.

ನಾಗಪುರದಲ್ಲಿ ಹಿಂದೂಮಹಮ್ಮದೀಯರ ಕಲಹ.

ನಾಗಪುರದಲ್ಲಿ ಮಹಮ್ಮದೀಯರ ಮಸೀತಿಯ ಮುಂಗಡೆ ಹಿಂದೂಗಳು ತಮ್ಮ ದೇವರುತ್ಸವವನ್ನು ವಾದ್ಯಸಮೇತ ಮಾಡಿಕೊಂಡು ಹೋಗುವ ವಿಚಾರದಲ್ಲಿ ಮನಸ್ತಾಪಗಳು ಹುಟ್ಟಿ ಕಲಹವಾದುದರಮೇಲೆ ಉಭಯಪಕ್ಷದ ಮುಖಂಡರೂ ಸೇರಿ ಪರಸ್ಪರ ಸೌಹಾರ್ದದಿಂದ ನಡೆದುಕೊಂಡು ಹೋಗಬೇಕೆಂದು ಬೋಧಿಸಿ ಸಮಾಧಾನಪಡಿಸಿದ್ದರು. ಆದರೆ ಕಾರ್ತೀಕ ಏಕಾದಶೀ ದಿವಸ ಹಿಂದೂಗಳು ದೇವತೋತ್ಸವವನ್ನು ಮಾಡುತ್ತಾರೆಂಬ ವರ್ತಮಾನವನ್ನು ತಿಳಿದು ಮಹಮ್ಮದೀಯರು ಉತ್ಸವ ಭಂಗಮಾಡಲೆತ್ನಿಸಿರುವುದನ್ನು ಗೌರ್ನರವರು ತಿಳಿದು ಮಹಮ್ಮದೀಯ ಪ್ರಮುಖರಲ್ಲಿ ನವಾಬ್ ನಿಯೋಜುದ್ದೀನ್ ರವರನ್ನೂ ಹಿಂದೂಮುಖಂಡರಲ್ಲಿ ರಾಜಾಲಕ್ಷ್ಮಣರಾವ್ ಭೋನ್ಸಲೆ, ಸರ್ ಗಂಗಾಧರ ಚಿಟ್ನಾವಿಸ್, ಸರ್ದಾರ್ ಗುಜರ್ ಮತ್ತು ಡಾಕ್ಟರ್ ಮುಂಜೆ ಇವರುಗಳನ್ನೂ ಪ್ರತ್ಯೇಕವಾಗಿ ಬರೆಮಾಡಿಕೊಂಡು ಅವರುಗಳ ಕೂಡ ಉತ್ಸವಸಂಬಂಧವಾಗಿ ಅನೇಕ ವಿಷಯಗಳನ್ನು ಚರ್ಚಿಸಿ ಬೆಳಗಿನ ೫ ಗಂಟೆಯಿಂದ ರಾತ್ರಿ ೯ ಗಂಟೆಯವರೆಗೆ ೫ ವೇಳೆ ಮಹಮ್ಮದೀಯರು ನಮಾಜು ಮಾಡುವ ಕಾಲವನ್ನು ಗೊತ್ತುಪಡಿಸಿ ಉಳಿದ ಕಾಲದಲ್ಲಿ ಹಿಂದೂಗಳು ವಾದ್ಯಸಮೇತ ತಮ್ಮ ದೇವರುತ್ಸವವನ್ನು ಬಹಳ ಶಾಂತವಾಗಿ ನಡೆಸುವಂತೆ ಅಪ್ಪಣೆಮಾಡಿದರು. ಇದರ ಮೇಲೆ ಊರಿನ ಎಲ್ಲಭಾಗದ ಹಿಂದೂಭಜನೆಕೂಟದವರು ವಾದ್ಯವೈಭವದೊಡನೆ ಕಾರ್ತೀಕ ಏಕಾದಶೀವ್ರತ ದಿನವಾದ ಸೋಮವಾರದ ದಿವಸ ಶ್ರೀ ಜಗನ್ನಾಥದೇವಾಲಯಕ್ಕೆ ಸರ್ಕಾರದವರಿಂದ ಕ್ಲಪ್ತಪಡಿಸಿದ್ದ ಕಾಲದಲ್ಲಿ ಯಾವ ಗೊಂದಲಕ್ಕೂ ಅವಕಾಶವಿಲ್ಲದಂತೆ ಉತ್ಸವಪೂರ್ವಕವಾಗಿ ಬರುತ್ತಿರುವಾಗ್ಗೆ ಊರಿನ ಎಲ್ಲ ಮಸೀದಿಗಳಲ್ಲಿಯೂ ಮಹಮ್ಮದೀಯರು ಗುಂಪುಕೂಡಿಕೊಂಡಿದ್ದು, ಉತ್ಸವಭಾಗಿಗಳಾಗಿದ್ದ ಹಿಂದೂಗಳ ಮೇಲೆ ಕಲ್ಲುಗಳ, ಇಟ್ಟಿಗೆಚೂರುಗಳ ಮತ್ತು ಪಾದರಕ್ಷೆಗಳ ಮಳೆಯನ್ನು ಕರೆದರು. ಇದರಿಂದ 15 ಜನ ಪೋಲೀಸರಿಗೂ ಕೆಲ ಹಿಂದೂಗಳಿಗೂ ಪೆಟ್ಟುಬಿದ್ದಿತು. ಹಿಂದುಗಳೂ ಆತ್ಮರಕ್ಷಣೆಗೆ ತಕ್ಕೇರ್ಪಾಟನ್ನು ಮಾಡಿಕೊಂಡು ಬಂದಿದ್ದರಾದರೂ ರಾಜಾಲಕ್ಷ್ಮಣರಾವ್ ಭೋನ್ಸಲೆ, ಡಾಕ್ಟರ್ ಮುಂಜೆ, ಚೋಳ್ಕರ್, ಪರಾಂಜಪೆ, ಹೆಡ್ಗೆವಾರ್ ಮೊದಲಾಗಿ ಹಿಂದೂಪ್ರಮುಖರು ಕೋಪೋದ್ರೇಕರಾಗಿದ್ದ ಹಿಂದೂಗಳಿಗೆ ಬಹಳ ಸಮಾಧಾನವನ್ನು ಹೇಳಿ ಕೋಪಶಮನ ಮಾಡುತ ಬಂದುದರ ಮೇಲು ಮತ್ತೂ ಸಿಟಿಮ್ಯಾಜಿಸ್ಟ್ರೇಟರೂ ಪೋಲೀಸಿನವರೂ ಬಹಳ ಬುದ್ಧಿಚಮತ್ಕಾರದಿಂದ ವರ್ತಿಸಿದುದರಮೇಲು ಮಾರ್ಗಗಳಲ್ಲಿ ಕಲಹಕ್ಕವಕಾಶವಾಗಲಿಲ್ಲವು.

ಸ್ವದೇಶದ ವೃತ್ತಾಂತಗಳು.

ಡೆ|| ಕಮಿಷನರ್ ಮ|| ಜಿ. ಅರ್ವಮುದಯ್ಯಂಗಾರ್‌ರವರಿಗೆ ಕೊಡಲ್ಪಟ್ಟಿರುವ ರಜವು ಅರ್ಧಸಂಬಳದಮೇಲೆ ಇನ್ನೂ ಎರಡು ತಿಂಗಳವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಬೆಂಗಳೂರು ತಾಲ್ಲೂಕು ಪೋಲೀಸು ಇನ್‌ಸ್ಪೆಕ್ಟರಾಗಿದ್ದ ಮ|| ಸಿದ್ದರಾಜಅರಸಿನವರು ಚಾಮರಾಜನಗರ ತಾ|| ಪೋಲೀಸು ಇನ್‌ಸ್ಪೆಕ್ಟರಾಗಿ ವರ್ಗಾಯಿಸಲ್ಪಟ್ಟಿರುವರು.

ಗ್ರಾಮಗಳಿಗೆ ಸಂಬಂಧಿಸಿದಂತೆ ಕಾಡುಗಳನ್ನೇರ್ಪಡಿಸಿ ಅವುಗಳ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುವ ವಿಚಾರದಲ್ಲಿ ರೆವಿನ್ಯೂ ಆಫೀಸರು ಗಮನಿಸಬೇಕಾಗಿ ಸರ್ಕಾರದಪ್ಪಣೆಯಾಗಿರುತ್ತದೆ.

ನೆಲಮಂಗಲ ತಾ|| ಅಮಲ್ದಾರ್ ಮ|| ಪಿ. ಕೃಷ್ಣರಾಯರು ಕ್ಲೋಸ್‌ಪೇಟೆ ಸಬ್ ತಾ|| ಡಿ|| ಅಮಲ್ದಾರರಾಗಿಯೂ ಅಲ್ಲಿಯ ಡಿ|| ಅಮಲ್ದಾರ್ ಮ|| ಸಿ. ಎಲ್. ಕೃಷ್ಣಮೂರ್ತಿಯವರು ನೆಲಮಂಗಲ ತಾ|| ಅಮಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ವೈಸ್‌ರಾಯರು ಕಾಳನಕೋಟೆಗೆ ದಯಮಾಡಿಸಿದ ವೇಳೆಯಲ್ಲಿ ತಂತಿಯಸಾಹಾಯ್ಯವಿಲ್ಲದೆ ರಾಧಾನಿಯಿಂದ ವರ್ತಮಾನವನ್ನು ತಿಳಿದುಕೊಳ್ಳುವುದಕ್ಕಾಗಿ ರಾಜಧಾನಿಯ ಕೋಟೆಯ ಹೊರಗಡೆ ದಕ್ಷಿಣಭಾಗದಲ್ಲಿ ಫಿರಂಗಿಗಳಿಟ್ಟಿರುವ ಮನೆಯಬಳಿ ಎತ್ತರವಾದ ಕಬ್ಬಿನದ ಕಂಭಗಳು ನಡಲ್ಪಟ್ಟು ಯಂತ್ರಸಾಮಗ್ರಿಗಳೇಡಲ್ಪಟ್ಟಿವೆ.

ರಾಜಧಾನಿಯ ವೀರನಗೆರೆಯಲ್ಲಿರುವ ದನಗಳ ತೊಂಡಿನ ಆಳೊಬ್ಬನು ಸಣ್ಣವಯಸ್ಸಿನ ಹಿಂದೂ ಹುಡಿಗಿಯೊಡನೆ ಅಕ್ರಮಸಂಗಮಾಡಿದುದರಿಂದ ಆ ಹುಡುಗಿಯು ಅಪಾಯವನ್ನು ಹೊಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿರುವುದಾಗಿಯೂ ಪೋಲೀಸರು ಆ ದುರಾತ್ಮನನ್ನು ಹಿಡಿದು ವಿಚಾರಣೆಗೆ ಗುರಿಮಾಡಿರುವುದಾಗಿಯೂ ತಿಳಿಯುತ್ತೇವೆ.

ರಾಜಧಾನಿಯಲ್ಲಿ ಪ್ರಸಿದ್ಧ ಹಾರ್ಮೋನಿಯಂ ವರ್ತಕರಾದ ಮ|| ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರು 1924 ನೆಯ ವರ್ಷದ ದೊಡ್ಡ ಹಾಳೆಯ ಕ್ಯಾಲಂಡರನ್ನು ಶ್ರೀಮನ್ ಮಹಾರಾಜ ಸಹೋದರರ ಮತ್ತು ಕುಮಾರ ಜಯಚಾಮರಾಜ ಒಡೆಯರವರ ಸುಂದರ ಭಾವಚಿತ್ರಗಳೊಡನೆ ಅಂದವಾಗಿ ಮುದ್ರಿಸಿ ಪ್ರಕಟಿಸಿರುವರು. 1 ಆಣೆ ಸ್ಟಾಂಪನ್ನು ಪ್ರಸಾರಕರಿಗೆ ಕಳುಹಿಸಿದರೆ 1 ಪ್ರತಿಯು ಕಳುಹಲ್ಪಡುತ್ತದೆ.

ರೆವಿನ್ಯೂ ಸೆಕ್ರೆಟರಿಯವರಾದ ಮ|| ಟಿ. ಇ. ಜಯರಾಮಯ್ಯರ್‌ರವರಿಗೆ ಈ ನವಂಬರ್ ತಾ|| 27 ರಿಂದ 1924ನೆಯ ಏಪ್ರಿಲ್ ತಾ|| 13 ರವರೆಗೆ ಪ್ರಿವಿಲೆಜ್ ಮತ್ತು ಫರ್ಲೋರಜವು ಕೊಡಲ್ಪಟ್ಟಿರುವ ಪ್ರಯುಕ್ತ ಅಂಡರ್ ಸೆಕ್ರೆಟರಿಯವರಾದ ಮ|| ಕೆ. ವಿ. ಅನಂತರಾಮನ್ ಬಿ. ಎ., ಯವರು ರೆವಿನ್ಯೂ ಕಮಿಷನರಾಗಿಯೂ ರಜದಮೇಲಿರುವ ಸೀನಿಯರ್ ಅ|| ಕಮಿಷನರ್ ಮ|| ಸಿ. ಕುಪ್ಪಸ್ವಾಮ್ಯಯ್ಯಂಗಾರರು ಅಂಡರ್ ಸೆಕ್ರೆಟರಿಯಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಮ|| ಜಯರಾಮಯ್ಯರ್‌ರವರು ರಜ ಪೂರೈಸಿದ ಮೇಲೆ ಕೆಲಸದಿಂದ ನಿವೃತ್ತರಾಗುವರಾಗಿರುವರು.

ರಾಜಧಾನಿಯಲ್ಲಿ ಒಬ್ಬ ಲಾಯರ ಗುಮಾಸ್ತೆಯಾಗಿದ್ದ ರಾಮರಾಯನೆಂಬುವವನೂ ಆತನ ಉಪಪತ್ನಿಯಾದ ಚಿನ್ನಮ್ಮನೆಂಬುವವಳೂ ಜಯಮ್ಮನೆಂಬ 13 ವರ್ಷ ವಯಸ್ಸಿನ ಕುರುಬರ ಹುಡುಗಿಯನ್ನು ಉಪಾಯಾಂತರದಿಂದ ಬೆಂಗಳೂರಿಗೆ ಕರೆದುಕೊಂಡುಹೋಗಿ ಅಲ್ಲಿ ಸ್ಕೂಲ್ಮಾಸ್ಟರಾಗಿದ್ದ ನರಸಿಂಹಯ್ಯನೆಂಬುವವನ ಸಾಹಾಯ್ಯದಿಂದ ಹೈದರಾಬಾದುವಾಸಸ್ಥನಾದ ದೇವಿದಾಸ್ ಎಂಬ ಬ್ರಾಹ್ಮಣನಿಗೆ ಆ ಹುಡುಗಿಯನ್ನು ಬ್ರಾಹ್ಮಣಕನ್ಯೆಯೆಂದು ಹೇಳಿ ವಿದುರಾಶ್ವತ್ಥದಲ್ಲಿ ಮದುವೆಮಾಡಿಕೊಟ್ಟು 900 ರೂಪಾಯಿಗಳನ್ನು ಆತನಿಂದ ತೆಗೆದುಕೊಂಡು ಮೋಸಪಡಿಸಿದ ಅಪರಾಧಕ್ಕಾಗಿ ಇಲ್ಲಿಯ ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರೆಂದು ತಿಳುಹಿದ್ದೆವಷ್ಟೆ. ಆ ಮೂವರು ಅಪರಾಧಿಗಳು ಸಿಟಿ ಮ್ಯಾಜಿಸ್ಟ್ರೇಟರಿಂದ ಕೇಸನ್ನು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ತಲಾ ಎರಡೆರಡು ವರ್ಷಗಳಂತೆ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟರು.

ಮೈಸೂರು ಸೀಮೆಯಿಂದ ಬ್ರಿಟಿಷ್‌ಸಾಮ್ರಾಜ್ಯ ಮಹಾವಸ್ತುಪ್ರದರ್ಶನಕ್ಕೆ ಕಳುಹಲ್ಪಡುವ ವಸ್ತುಗಳ ಕೂಡ ಒಬ್ಬ ಸರ್ಕಾರಿಯಧಿಕಾರಿಯೂ, ಇಬ್ಬರು ವರ್ತಕರುಗಳೂ ಕಳುಹಲ್ಪಡುವುದಾಗಿ ಸರ್ಕಾರದಪ್ಪಣೆಯಾಗಿದ್ದಿತಷ್ಟೆ? ಸರ್ಕಾರಿ ಸೂಬೂನು ಕಾರ್ಯಾಲಯದ ಮೇಲ್ವಿಚಾರಕರಾದ ಮ|| ಎಸ್. ಜಿ. ಶಾಸ್ತ್ರಿಗಳು, ಬೆಂಗಳೂರಲ್ಲಿ ಪ್ರಸಿದ್ಧ ಫಲಸರ್ಕು ವ್ಯಾಪಾರಿಗಳಾದ ಮ|| ಆರ್. ಪಾಪಣ್ಣನವರ ಜ್ಯೇಷ್ಠಪುತ್ರರಾದ ಪಿ. ಎಂ. ಬಸಪ್ಪನವರು ಮತ್ತು ಚನ್ನಪಟ್ಟಣದಲ್ಲಿ ಪ್ರಸಿದ್ಧ ರೇಷ್ಮೆ ವ್ಯಾಪಾರಿಗಳಾದ ಮಸ್ತಾನ್‌ಸಾಹೇಬರ ತಮ್ಮನಮಕ್ಕಳಾದ ಮಿ|| ಅಬ್ದುಲ್ ಖುದುಸ್‌ರವರು ಸೀಮೆಗೆ ಕಳುಹಲ್ಪಡುವುದಾಗಿಯೂ, ಈ ಉಭಯವರ್ತಕರುಗಳಿಗೆ ಹೋಗಿಬರುವ ೨ನೆಯ ತರಗತಿಯ ಛಾರ್ಜಿನಲ್ಲಿ ಅರ್ಧ ಮೊಬಲಗೂ ಒಬ್ಬೊಬ್ಬರಿಗೆ 500 ರೂ. ಕೊಡಲ್ಪಡುವುದಾಗಿ ಅಪ್ಪಣೆಯಾಗಿದೆ. ಮ|| ಪಿ. ಎಂ. ಬಸಪ್ಪನವರು ಸರ್ ಎಂ. ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ ಈ ಸೀಮೆಯಿಂದ ಜಪಾನಿಗೆ ಅಲ್ಲಿಯ ಕೈಗಾರಿಕೆ ಮತ್ತು ವ್ಯಾಪಾರಕ್ರಮವನ್ನು ಕಣ್ಣಾರ ನೋಡಿ ಅನುಭವಮಾಡಿಕೊಂಡುಬರಲು ಕಳುಹಲ್ಪಟ್ಟಿದ್ದ ವರ್ತಕರುಗಳಲ್ಲೊಬ್ಬರಾಗಿರುವರಲ್ಲದೆ ಆ ದೇಶದ ಪರಿಸ್ಥಿತಿಯನ್ನು ತಿಳಿದುಕೊಂಡು ಸ್ವದೇಶಕ್ಕೆ ಬಂದು ತಮ್ಮ ವ್ಯಾಪಾರವನ್ನು ಬಹುಮಟ್ಟಿಗೆ ಅಭಿವೃದ್ಧಿಗೆ ತಂದಿರುವರು. ಪ್ರಸಿದ್ಧ ವರ್ತಕ ಮನೆತನದವರಾಗಿಯೂ, ಶ್ರೀಮಂತರಾಗಿಯೂ, ಸ್ವದೇಶ ವ್ಯಾಪಾರವನ್ನು ಅಭಿವೃದ್ಧಿಪಡಿಸುವ ಕಾಂಕ್ಷೆಯುಳ್ಳವರಾಗಿಯೂ ಇರುವ ಮೇಲ್ಕಂಡ ಉಭಯ ಯುವಕವರ್ತಕರುಗಳು ಸಾಮ್ರಾಜ್ಯವಸ್ತುಪ್ರದರ್ಶನವನ್ನು ನೋಡಿ ಬರಲು ಸರ್ಕಾರದವರಿಂದ ಆರಿಸಲ್ಪಟ್ಟಿರುವುದಕ್ಕಾಗಿ ಸಂತೋಷಿಸುತ್ತೇವಲ್ಲದೆ ಈ ಸನ್ನಿವೇಶದಲ್ಲಿ ಪಾಶ್ಚಾತ್ಯದೇಶದ ವ್ಯಾಪಾರಕ್ರಮವನ್ನೂ ಅಭಿವೃದ್ಧಿಯ ಮರ್ಮವನ್ನೂ ತಿಳಿದುಕೊಂಡು ಬಂದು ಸ್ವದೇಶ ವ್ಯಾಪಾರಾಭಿವೃದ್ಧಿಗೆ ಸಾಹಾಯ್ಯಕಾರಿಸುವರೆಂದು ನಿರೀಕ್ಷಿಸುತ್ತೇವೆ.

ನೋಟೀಸು.

ತುಮಕೂರಲ್ಲಿ ಈಗ ಕಟ್ಟಲ್ಪಡುತ್ತಿರುವ ಶ್ರೀ ವೀರಶೈವ ಜಯದೇವ ಹಾಸ್ಟಲ್ ಕಟ್ಟಡದ ಮೇಲ್ವಿಚಾರಣೆಗಾಗಿ ಒಂದು ವರ್ಷಕ್ಕೆ ಕಡಿಮೆ ಯಿಲ್ಲದಂತೆ ಒಬ್ಬ ಸಬ್ ಓವರ್ಸಿಯರು ಬೇಕಾಗಿದೆ. ಕಟ್ಟಡದ ವಿಚಾರದಲ್ಲಿ ಅನುಭವವುಳ್ಳ ಸಬ್ ಓವರ್ಸಿಯರುಗಳು ತಾವು ಎಷ್ಟು ಸಂಬಳವನ್ನಪೇಕ್ಷಿಸುತ್ತೇವೆಂಬುದನ್ನು ನಮೂದಿಸಿ ಸರ್ಟಿಫಿಕೇಟುಗಳೊಡನೆ ಅಪ್ಲಿಕೇಷನ್‌ಗಳನ್ನು 20-12-1923 ರದೊಳಗಾಗಿ ಕೆಳಗಿನ ಅಡ್ರೆಸ್ಸಿಗೆ ತಲಪುವಂತೆ ಕಳುಹಿಸಬೇಕು. ಹೆಚ್ಚಿನ ವಿಚಾರ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿಯಬಹುದು.

ಜೆ. ರುದ್ರಪ್ಪ, ಎಂ.ಎ., ಎಲ್.ಎಲ್.ಬಿ.,
ಪ್ರೆಸಿಡೆಂಟ್,
ಶ್ರೀ ವೀರಶೈವ ಜಯದೇವ ಹಾಸ್ಟಲ್ ಕಮಿಟಿ, ತುಮಕೂರು.

ಮೈಸೂರು ಸ್ಟಾರ್.

೧೯೨೩ ನೆಯ ಇಸವಿ ನವಂಬರ್ ತಾ|| ೨೫ ನೆಯ ಭಾನುವಾರ.

EVEN IF GOD GRANTS THE PRIEST REFUSES.

It was with a very good reason that in the new scheme of constitutional reforms the system of secondary or indirect election in general Constituencies was given up and that of direct election with an extended franchise was instituted. It is definitely stated in the Government Order that the system of direct Election would tend to secure better the proper representation of the constituencies. But the Government were probably little aware how this object was likely to be frustrated at the hands of those to whose interest it was to see that the return of the right candidates enjoying the confidence of the majority of eligible voters was made impossible. The appointing of only officials as returning officers without disinterested non-official element, and the extension of franchise to the officials were undesirable enough. But when compared to the way in which the voters' lists are prepared in some places the above evils would after all not amount to much. In Mysore, the capital of the State with a population of nearly 85,000, the list that is published in the official Gazette only shows a number 1725 voters! And if it is carefully gone through there appears a somewhat generous display of Raos, Iyengars and allied suffixes, while of the rest who should form a substantial majority of voters one finds a sprinkling here and there. The thickly crowded Mohallas in the city proper, compared to their voting capacity, have absolutely an insignificant number of electors. The list that was got up last time for the purpose of municipal elections, which was itself incomplete, showed a strength of 3000 voters. And it is really strange how in the course of two years, and especially when the franchise is extended to all paying income tax, along with those who pay a Mohatarfa of Rs. 2/8 or who are Graduates, the number has dwindled down from 3000 to 1725. It is quite likely that the authorities concerned may make a show of tracing out the omitted—and we know even if they do so whose will be the names that will be included—and increasing the number in the revised list, but we can dare say it will never be a full list. The Municipal authorities may try to take cover under the clause that those who are entitled to vote but whose names are omitted may intimate the fact to them and they will be included. But they know as much as any other that the general level of the knowledge of the voters in these matters is so low that such people who would point out the omissions will be very few and will not materially turn the balance with false scales. That this should happen at the first inception of the new scheme of reforms is as much to be deprecated as deplored. It reminds us of the very trite saying in Kannada which means "Even if God grants the priest refuses." We would not wonder if this manner of preparing lists has been followed in other parts of the State. The only way to put an end to this abuse is to issue strict instructions to the various authorities entrusted with the duty of preparing the voters' lists, to include all eligible voters and to appoint small committees composed of non-officials in all major constituencies to help, which would sometimes amount to watch, the authorities in this important work. If this is not done, the great democratic ideal which His Highness' Government have placed before the people will reduce itself into in practice into an unadulterated oligarchy masquerading in the name of democracy and playing greater mischief than ever before because of the strength which it derives by calling itself democracy. Nothing much will be lost by extending time for the revision of the lists and the Government would be during a real service to the citizens if they could secure a committee for the Mysore City to revise the existing list and appoint such committees, wherever necessary without delay.

ಜರ್ಮನಿಯ ಸದ್ಯಃ ಸ್ಥಿತಿಯು.

ಪ್ರಪಂಚದ ಚಕ್ರಾಧಿಪತ್ಯಗಳಲ್ಲೆಲ್ಲಾ ಕೇಂದ್ರಸ್ಥಾನವನ್ನು ಹೊಂದಿ ಕಲಾಕೌಶಲ್ಯದಲ್ಲೂ ಆರ್ಥಿಕಸ್ಥಿತಿಯಲ್ಲೂ ಸಕಲ ಐಹಿಕಸುಖಸಂಪತ್ತಿನಲ್ಲೂ ಜಗತ್ತಿಗೆ ವಿಸ್ಮಯವನ್ನುಂಟುಮಾಡಿದ್ದ ಜರ್ಮನಿ ರಾಜ್ಯವು ನಿಷ್ಕಾರಣವಾಗಿ ಕಳೆದ ಯೂರೋಪು ಮಹಾಸಂಗ್ರಾಮದಲ್ಲಿ ತೊಡಗಿ ಪರಾಜಿತವಾಗಿ ತನ್ನ ಸಕಲೈಶ್ವರ್ಯವನ್ನು ಕಳೆದುಕೊಂಡುದುದಲ್ಲದೆ ದುರ್ಭರವಾದ ಋಣಬಾಧೆಗೂ ಗುರಿಯಾಗಿ ಅದರಿಂದ ಪಾರಾಗುವ ಉಪಾಯವನ್ನು ಕಾಣದೆ ತನ್ನ ಜನ್ಮ ಶತ್ರುವಾದ ಫ್ರಾನ್ಸಿನ ಉಪಟಳಕ್ಕೆ ಸಿಲ್ಕಿ ಪೇಚಾಡುತ್ತಿರುವುದಲ್ಲದೆ, ಇದರ ಋಣಪರಿಹಾರ ಸಮಸ್ಯೆಯ ವಿಚಾರದಲ್ಲಿ ಮಿತ್ರಮಂಡಲಿಯವರಿಗೆ ಪರಸ್ಪರ ವಾಗ್ವಾದಗಳು ಜರುಗುತ್ತಿರುವುವು. ಇತ್ತಲಾಗಿ ಪದಭ್ರಷ್ಟನಾದ ಕೈಜರನ ಸಂಗಡ ದೇಶಭ್ರಷ್ಟನಾಗಿ ಹೋಗಿದ್ದ ಯುವರಾಜನು ಮರಳಿ ಸ್ವದೇಶಕ್ಕೆ ಬಂದು ರಾಜ್ಯಭಾರಮಾಡಬೇಕೆಂಬ ದುರಾಶಾಬದ್ಧನಾಗಿ ರಾಜಪ್ರಭುತ್ವಸ್ಥಾಪನಾಪೇಕ್ಷಿಗಳಾದವರ ಸಂಚಿನಿಂದ ಜರ್ಮನಿರಾಜ್ಯಪ್ರವೇಶಮಾಡಿರುವನು. ಜರ್ಮನಿಯ ವಿಚಾರದಲ್ಲಿ ಮೊದಲಿಂದಲೂ ಭಯಗೊಂಡಿರುವ ಫ್ರಾನ್ಸು ಯುವರಾಜನ ಪ್ರವೇಶವಾದಂದೀಚೆಗೆ ಮತ್ತಿಷ್ಟು ಹೆಚ್ಚಾಗಿ ಭಯಪಟ್ಟು ಇದರ ಪ್ರತಿಕ್ರಿಯೆಯನ್ನು ಮಾಡಬೇಕೆಂದು ಮಿತ್ರಮಂಡಲಿಯವರನ್ನು ಪೀಡಿಸುತ್ತಿರುವುದು. ಆದರೆ ಈ ವಿಚಾರದಲ್ಲಿ ಇಂಗ್ಲೆಂಡಾಗಲಿ, ಇಟಲಿಯಾಗಲಿ ಫ್ರಾನ್ಸಿನಕೂಡ ಸೇರುವಂತಿಲ್ಲವು ಮತ್ತು ಈ ಸಂದರ್ಭದಲ್ಲಿ ಜರ್ಮನಿಯ ಮತ್ತೆ ಕೆಲಭಾಗವು ಆಕ್ರಮಿಸಲ್ಪಡುವುದಕ್ಕೆ ಇಟಲಿಯು ಸಮ್ಮತಿಸುವುದಿಲ್ಲವು. ಜರ್ಮನಿಯ ಪ್ರಜೆಗಳನ್ನು ಹಾಳುಮಾಡಲು ತಾವು ಅಂಗೀಕರಿಸುವುದಿಲ್ಲವೆಂದು ಇಟಲಿಯ ಪ್ರಧಾನ ಮಂತ್ರಿ ಮುಸಲೋನಿಯವರು ಸ್ಪಷ್ಟವಾಗಿ ಹೇಳಿದರಲ್ಲದೆ, ಜರ್ಮನಿಯು ಕೊಡಬೇಕಾಗಿರುವ ಋಣದ ಮೊಬಲಗು ತಗ್ಗಿಸಲ್ಪಡಬೇಕೆಂದೂ, ಫ್ರಾನ್ಸು ರೂರುಪ್ರಾಂತವನ್ನು ಬಿಟ್ಟುಬಿಡಬೇಕೆಂದೂ ಅಭಿಪ್ರಾಯಪಡುತ್ತಿರುವರು. ಜರ್ಮನಿ ಪ್ರಭುತ್ವದವರನ್ನು ಅಲಕ್ಷಿಸಿ ಜರ್ಮನಿಯ ಪಾರಿಶ್ರಾಮಿಕ ಜನರೊಡನೆ ಪ್ರತ್ಯೇಕವಾಗಿ ಸಂಧಿಯನ್ನು ಮಾಡಿಕೊಳ್ಳಲು ಫ್ರಾನ್ಸು ಪ್ರಯತ್ನಿಸುತ್ತಿರುವುದು. ಆದರೆ ಈ ಪ್ರಯತ್ನವು ಸಫಲವಾಗುವಂತಿಲ್ಲವು. ಸದ್ಯದಲ್ಲಿ ಬಲಹೀನವಾಗಿರುವ ಜರ್ಮನಿಯನ್ನು ಹಿಂಸಿಸುವುದರಿಂದ ಫ್ರಾನ್ಸಿಗೆ ಲಾಭವಾಗುವುದಕ್ಕೆ ಬದಲು ನಷ್ಟವೇ ಸಂಭವಿಸುವುದರಲ್ಲಿ ಸಂದೇಹವಿಲ್ಲವು. ಈ ವಿಚಾರದಲ್ಲಿ ಯಾರು ಎಷ್ಟು ಹಿತವನ್ನು ಹೇಳಿದರೂ ಫ್ರಾನ್ಸು ಮಾತ್ರ ದೂರದೃಷ್ಟಿಯಿಲ್ಲದೆ ಹ್ರಸ್ವದೃಷ್ಟಿಯಿಂದ ವರ್ತಿಸುತ್ತಿರುವುದು. ಜರ್ಮನಿಯಿಂದ ಬರಬೇಕಾದ ಸಾಲದ ಮೊಬಲಗನ್ನು ಕಡಿಮೆಮಾಡುವ ವಿಚಾರದಲ್ಲಿ ಇಂಗ್ಲೆಂಡಿನ ಪ್ರಧಾನ ಮಂತ್ರಿಗಳಾದ ಬಾಲ್ಡ್‌ವಿನ್ ರವರಿಗೆ ಉತ್ತರಕೊಡುವಾಗ್ಗೆ ಪಾಂಕೇರ್‌ರವರು ಋಣವನ್ನು ತಗ್ಗಿಸಲಾಗುವುದಿಲ್ಲವೆಂದೂ ರೂರು ಪ್ರಾಂತವನ್ನು ಬಿಟ್ಟುಕೊಡುವುದಿಲ್ಲವೆಂದೂ ಸ್ಪಷ್ಟವಾಗಿ ತಿಳಿಸಿಬಿಟ್ಟರು.

ಸರ್ವಾಧಿಕಾರವನ್ನು ಕಳೆದುಕೊಂಡು ದೇಶಭ್ರಷ್ಟನಾಗಿ ಹೋಗಿರುವ ಯುವರಾಜನು ಮರಳಿ ಜರ್ಮನಿಯನ್ನು ಪ್ರವೇಶಿಸಲು ಕಾರಣವೇನೆಂದು ಮಿತ್ರಮಂಡಲಿಯವರು ಕೈಜರನನ್ನು ಕೇಳಿರುವಲ್ಲಿ, ಯುವರಾಜನು ತನಗೆ ತಿಳಿಸದೇನೆ ಜರ್ಮನಿಗೆ ಹೋಗಿರುವನೆಂದೂ, ಆತನು ಸರಹದ್ದನ್ನು ದಾಟಿಹೋದ ಮೇಲೆ ತನಗೆ ತಿಳಿದುಬಂದಿತೆಂದೂ ಜರ್ಮನಿಯಲ್ಲಿ ಪುನಃ ರಾಜಪ್ರಭುತ್ವವನ್ನೇರ್ಪಡಿಸುವೇರ್ಪಾಟೇನೂ ತನಗೆ ತಿಳಿಯದೆಂದೂ, ತನ್ನ ಕೂಡ ಯುವರಾಜನು ಆಲೋಚಿಸಿದ್ದಲ್ಲಿ ಈಗ ಜರ್ಮನಿಯ ಪರಿಸ್ಥಿತಿಯು ಉಲ್ಲೋಲಕಲ್ಲೋಲವಾಗಿರುವುದರಿಂದ ಜರ್ಮನಿಗೆ ಹೋಗಕೂಡದೆಂದು ಹೇಳುತಿದ್ದೆನೆಂದೂ ಉತ್ತರವನ್ನು ಕೊಟ್ಟಿರುವನು. ಜರ್ಮನಿಯ ಪ್ರಸ್ತುತಸ್ಥಿತಿಯು ಹೇಗೆ ಪರ್ಯವಸನ್ನವಾಗುವುದೆಂಬುದನ್ನು ಹೇಳಲಾಗುವುದಿಲ್ಲವಾದರೂ ಫ್ರಾನ್ಸು ಹಿಡಿದಿರುವ ಪಟ್ಟಿನಿಂದ ಅಲ್ಲಿಯ ಸ್ಥಿತಿಯು ಕ್ರಮೇಣ ವಿಷಮವಾಗುವುದೆಂದು ಹೇಳಬಹುದಾಗಿದೆ. ಈ ವ್ಯವಹಾರದಲ್ಲಿ ಅಮೇರಿಕೆಯು ಯಾವಪಕ್ಷವನ್ನು ವಹಿಸುವುದೆಂಬುದು ಇನ್ನು ಮೇಲೆ ಗೊತ್ತಾಗತಕ್ಕುದಾಗಿದೆ. ನಾನಾರಾಷ್ಟ್ರಸಂಘದವರು ಈ ವಿಷಯವನ್ನು ಪರಿಷ್ಕರಿಸುವರೆಂದೂಹಿಸಿ ಹೇಳಲಾಗುವುದಿಲ್ಲ. ಏಕೆಂದರೆ—ಈ ನಾನಾರಾಷ್ಟ್ರಸಂಘವು ಒಂದೆರಡು ರಾಷ್ಟ್ರದವರ ವಶವಾಗಿರುತ್ತಾದ ಪ್ರಯುಕ್ತ ಅದರ ಮಧ್ಯಸ್ಥತೆಯಿಂದ ನ್ಯಾಯವು ದೊರಕುವುದಿಲ್ಲವೆಂದು ಪ್ರತಿರಾಷ್ಟ್ರದವರೂ ತಿಳಿದು ಅದನ್ನು ತಿರಸ್ಕರಿಸಹತ್ತಿರುವರು. ಜರ್ಮನಿಯ ಸದ್ಯಃ ಸ್ಥಿತಿಯಲ್ಲಿ ಯೂರೋಪುಖಂಡದ ಮುಂದಣ ಪರಿಣಾಮವು ಹೇಗಾಗುವುದೋ ಅಂದರೆ, ಜರ್ಮನಿಯ ಯುವರಾಜನು ಪುನಃ ಸ್ವದೇಶಕ್ಕೆ ಬಂದುದೇ ನೆಪವಾಗಿ ಕೋಟ್ಯಂತರ ಪ್ರಾಣನಷ್ಟವನ್ನುಂಟುಮಾಡಿ ಜಗತ್ತಿನ ಶಾಂತಿಯನ್ನು ಭಂಗಪಡಿಸಿದಂತಹ ಮಹಾಯುದ್ಧವು ಪುನಃ ಆರಂಭವಾಗಿ ಜಗತ್ಪ್ರಳಯವನ್ನುಂಟುಮಾಡುವುದೋ ಎಂಬ ಶಂಕೆಯುಂಟಾಗಿದೆ. ಆದರೆ ಲೋಕರಕ್ಷಕನಾದ ಪರಮೇಶ್ವರನು ಅಷ್ಟಕ್ಕೆ ಅವಕಾಶಕೊಡದೆ ಎಲ್ಲ ರಾಷ್ಟ್ರದವರಿಗೆ ಮುಖ್ಯವಾಗಿ ಬಿಗಿಪಟ್ಟು ಹಿಡಿದಿರುವ ಫ್ರಾನ್ಸಿಗೆ ಸೌಮ್ಯಬುದ್ಧಿಯನ್ನು ಕೊಟ್ಟು ಜಗಚ್ಛಾಂತಿಸ್ಥಾಪನೆಮಾಡಲೆಂದು ಕೋರುತ್ತೇವೆ.

ದೇವರು ವರಕೊಟ್ಟರೂ ಪೂಜಾರಿಕೊಡಲೊಲ್ಲ.

ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರುಗಳಾಗುವವರ ಮತ್ತು ಅವರುಗಳನ್ನು ಚುನಾಯಿಸುವವರ ಯೋಗ್ಯತಾಪರಿಮಾಣವನ್ನು ತಗ್ಗಿಸುವುದರಿಂದ ಅನೇಕ ಜನರು ಅಭ್ಯರ್ಥಿಗಳಾಗಿ ನಿಲ್ಲಲು ಮತ್ತು ಓಟುಗಳನ್ನು ಕೊಡಲು ಅವಕಾಶವಾಗಿ ತನ್ಮೂಲಕ ಬಹುಜನರಿಂದ ಸಮ್ಮತಿಸಲ್ಪಟ್ಟವರೇ ಪ್ರತಿನಿಧಿಗಳಾಗಿ ಬರುವಂತಾಗುವುದಲ್ಲದೆ ಶ್ರೀಮನ್ಮಹಾರಾಜರವರ ಸಂಕಲ್ಪವೂ ನೆರವೇರಿದಂತಾಗುವುದೆಂಬುದರ ಮೇಲೆ ಓಟನ್ನು ಕೊಡುವವರ ಮತ್ತು ಮೆಂಬರಾಗಲಿಷ್ಟಪಡುವವರ ಆಸ್ತಿ ಯೋಗ್ಯತಾಪರಿಮಾಣವು ಅರ್ಧಕ್ಕಿಳಿಸಲ್ಪಟ್ಟಿರುತ್ತದೆ. ಇದರಿಂದ ಮೊದಲಿದ್ದ ಓಟರುಗಳ ಸಂಖ್ಯೆಯು 1 ಲಕ್ಷಕ್ಕೆ ಮೇಲ್ಪಟ್ಟು ಹೆಚ್ಚಬೇಕಾಗಿ ನಿರೀಕ್ಷಿಸಲ್ಪಟ್ಟಿದೆ. ದೊಡ್ಡ ಪಟ್ಟಣಗಳಲ್ಲಿ ಓಟರುಗಳ ಯೋಗ್ಯತೆಯು ಮ್ಯುನಿಸಿಪಲ್ ಕೌನ್ಸಿಲರುಗಳನ್ನು ಆರಿಸುವುದಕ್ಕಿರುವಷ್ಟು ಯೋಗ್ಯತೆ ಅಂದರೆ ವರ್ಷವೊಂದಕ್ಕೆ 2½ ರೂಪಾಯಿ ಮೊಹತರ್ಫ ಕಂದಾಯವನ್ನು ಕೊಡುವಷ್ಟು ಯೋಗ್ಯತೆಯಿದ್ದರೆ ಸಾಕೆಂದು ವಿಧಾಯಕವಾಗಿರುವುದು. ಅದರಂತೆ ಈ ರಾಜಧಾನಿಯಲ್ಲಿ ಓಟುಕೊಡುವವರ ಸಂಖ್ಯೆಯು ಇಲ್ಲಿನ ಪ್ರಕೃತ ಪ್ರಜಾಸಂಖ್ಯೆಗನುಗುಣವಾಗಿ ಹೆಚ್ಚಾಗಬೇಕು. ಒಂದುವೇಳೆ ಹೆಚ್ಚಾಗದಿದ್ದರೆ ಮೊದಲಿದ್ದಷ್ಟಾದರೂ ಇರಬೇಕೆಂದು ಹೇಳಬೇಕಾದುದಿಲ್ಲವು. ಈಗ ಪ್ರಕಟವಾಗಿರುವ ರಾಜಧಾನಿಯ ಓಟರುಗಳ ಲಿಸ್ಟಿನಲ್ಲಿ 1725 ಹೆಸರುಗಳು ಕೊಡಲ್ಪಟ್ಟಿವೆ. ಆದರೆ ಹಿಂದಣ ಇದೇ ಓಟರುಗಳ ಲೀಸ್ಟಿನಲ್ಲಿ 3000 ದ ವರೆಗೆ ಹೆಸರುಗಳು ಕೊಡಲ್ಪಟ್ಟಿದ್ದುವು. ಹೀಗೆ ಎರಡು ವರ್ಷಗಳ ಅಂತರದಲ್ಲಿ 1000 ದವರೆಗೆ ಹೆಸರಿನ ಸಂಖ್ಯೆಯು ಕಡಿಮೆಯಾಗಬೇಕಾಗಿದ್ದಲ್ಲಿ ಪ್ರಜಾಸಂಖ್ಯೆಯು ಕಡಿಮೆಯಾಗಿರಬೇಕಾಗುತ್ತದೆ, ಆದರೆ ಅದಕ್ಕೆ ಬದಲು ಪ್ರಜಾಸಂಖ್ಯೆಯು ಹೆಚ್ಚಾಗಿರುತ್ತದೆನ್ನುವುದರಲ್ಲಿ ಸಂದೇಹವಿಲ್ಲವು. ಹಾಗಾದರೆ 1000 ಜನರ ಹೆಸರುಗಳು ಬಿಡಲ್ಪಡಲು ಅವುಗಳನ್ನು ಗೊತ್ತುಮಾಡಿ ಬರೆಯುವವರ ಅಶ್ರದ್ಧೆ ಅಜಾಗರೂಕತೆಗಳೇ ಕಾರಣವಾಗಿರಬೇಕು. ಇಂತಹ ರಾಜಧಾನಿಯಲ್ಲೇ ಹೀಗಾಗಿರುವಾಗ್ಗೆ ಇನ್ನು ಗ್ರಾಮಾಂತರವಾಸಿಗಳ ಹೆಸರುಗಳ ಪಟ್ಟಿಯನ್ನು ತಯಾರಿಸುವಲ್ಲಿ ಇನ್ನೆಷ್ಟು ವ್ಯತ್ಯಾಸಗಳು ನಡೆದಿರಬಹುದು ? ಓಟರುಗಳ ಪಟ್ಟಿಯನ್ನೂ ಅವುಗಳ ಮೇಲೆ ಬರುವ ಆಕ್ಷೇಪಗಳನ್ನೂ ವಿಚಾರಿಸಲು ಸರ್ಕಾರಿಯುದ್ಯೋಗಸ್ಥರ ಕೂಡ ಅನೌದ್ಯೋಗಿಕ ದೊಡ್ಡಮನುಷ್ಯರುಗಳನ್ನು ಸೇರಿಸಿ ಕಮಿಟಿಗಳನ್ನೇರ್ಪಡಿಸಿದ್ದಲ್ಲಿ ದೂರಿಗೆ ಅವಕಾಶವಾಗುತ್ತಿರಲಿಲ್ಲವು. "ದೇವರು ವರವನ್ನು ಕೊಟ್ಟರೂ ಪೂಜಾರಿಯು ಕೊಡಲೊಲ್ಲ" ಎಂಬ ಗಾಧೆಗನುಸಾರವಾಗಿ ಶ್ರೀಮನ್ ಮಹಾರಾಜರವರ ಕೃಪಾವಿಶೇಷದಿಂದ ಲಭ್ಯವಾಗಿರುವ ಸೌಲಭ್ಯವನ್ನು ಅವರ ಪ್ರಜೆಗಳು ಅನುಭವಿಸುವುದಕ್ಕೆ ಕೀಳುತರಗತಿಯ ಉದ್ಯೋಗಸ್ಥರ ಕೈವಾಡದಿಂದ ಅವಕಾಶವಿಲ್ಲದಂತಾಗಿರುವ ಪ್ರಯುಕ್ತ ತಕ್ಕಾಸ್ತಿ ಮತ್ತು ವಿದ್ಯಾಯೋಗ್ಯತೆಯುಳ್ಳ ಜನರೆಲ್ಲರೂ ತಮ್ಮ ಪ್ರತಿನಿಧಿಗಳನ್ನಾರಿಸಲು ಭಾಗಿಗಳಾಗಲು ಮತ್ತು ಮೆಂಬರಾಗಿನಿಲ್ಲಲು ಅವಕಾಶವಾಗುವಂತೆ ಸರಿಯಾದ ಲಿಸ್ಟುಗಳು ತಯಾರಿಸಲ್ಪಡಬೇಕಾಗಿಯೂ, ಚುನಾವಣೆಗಳಲ್ಲಿ ಅಕ್ರಮವು ಜರುಗದಂತೆ ಪೋಲಿಂಗ್ ಆಫೀಸರುಗಳ ಕೂಡ ಆಯಾ ಸ್ಥಳಗಳ ಅನೌದ್ಯೋಗಿಕ ದೊಡ್ಡಮನುಷ್ಯರುಗಳು ಇರುವಂತೆಯೂ ಏರ್ಪಡಿಸಬೇಕಾಗಿ ಸೂಚಿಸುತ್ತೇವೆ.

ರಾಜಧಾನಿಗೆ ವೈಸರಾಯರಾಗಮನ.

ವೈಸ್‌ರಾಯ ದಂಪತಿಗಳು ಈ ತಾ|| 27ನೆಯ ಮಂಗಳವಾರ ಬೆಂಗಳೂರಿಗೆ ದಯಮಾಡಿಸಿ ಅಲ್ಲಿ ರೆಸಿಡೆಂಟರ ಅತಿಥ್ಯದಲ್ಲಿದ್ದುಕೊಂಡು ಪ್ರೇಕ್ಷಣೀಯ ಸ್ಥಳಗಳನ್ನೂ ಸೇನಾವಿನ್ಯಾಸವನ್ನೂ ಪರಾಮರ್ಶಿಸಿಕೊಂಡು ತಾ|| 28ರ ರಾತ್ರಿ ಹೆಚ್ಚುಕಟ್ಟಲೆಯ ರೈಲುಬಂಡಿಯಲ್ಲಿ ಪ್ರಯಾಣಮಾಡಿ ತಾ|| 29 ನೆಯ ಗುರುವಾರ ಬೆಳಗಿನ 8½ ಗಂಟೆಗೆ ರಾಜಧಾನಿಯನ್ನು ತಲುಪುವರು. ನಿಲ್ದಾಣದಲ್ಲಿ ಶ್ರೀಮನ್ ಮಹಾರಾಜರವರೂ ಶ್ರೀಮದ್ಯುವರಾಜರವರೂ ವೈಸ್‌ರಾಯ ದಂಪತಿಗಳನ್ನಿದಿರ್ಗೊಂಡು ಕರಾವಲಂಬನವನ್ನಿತ್ತು ಬಂಡಿಯಿಂದಿಳಿಸಿ ಪರಸ್ಪರ ಕುಶಲಪ್ರಶ್ನಾನಂತರ ಬಹು ಸುಂದರವಾಗಿ ರಚಿಸಲ್ಪಟ್ಟಿರುವ

ಮಂಟಪದೊಳಕ್ಕೆ ಕರೆದುಕೊಂಡುಬಂದು ಅಲ್ಲಿ ಕಾದಿರುವ ದಿವಾನರು ಕೌನ್ಸಿಲರುಗಳು ಸರದಾರರುಗಳು ಮತ್ತೆ ಕೆಲ ಪ್ರಮುಖ ಅಧಿಕಾರಿಗಳ ಪರಿಚಯವನ್ನು ಮಾಡಿಸಿದಮೇಲೆ ಹೊರಗಡೆಗೆ ದಯಮಾಡಿ ಸೇನಾಮರ್ಯಾದೆಯನ್ನು ಕೈಕೊಂಡು ಸಿದ್ಧವಾಗಿರುವ ನಾಲ್ಕು ದಿವ್ಯಾಶ್ವಗಳನ್ನು ಹೂಡಿದ ರಥಾರೋಹಣಮಾಡುವರು. ಕೋಟೆಯ ತಪ್ಪಲಿನಲ್ಲಿ ಆಗಮನಸೂಚಕವಾದ ಗುಂಡುಗಳು ಹಾರಿಸಲ್ಪಡುವುವು. ಉತ್ಸವವು ಗಗ್ರಿಬಾಲ್ಯಗಳೊಡನೆಯೂ, ಅಂಗರಕ್ಷಕ ಅಶ್ವಸೇನೆಯೊಡನೆಯೂ ಹೊರಟು ರೈಲ್ವೆಸ್ಟೇಷನ್ ರೋಡಿನಲ್ಲಿ ಶ್ರೀ ಚಾಮರಾಜೇಂದ್ರ ಕೈಗಾರಿಕೆಯ ಪಾಠಶಾಲೆಯವರೆಗೂ ಬಂದು ಅಲ್ಲಿ ಸಯ್ಯಾಜಿರಾವ್ ರೋಡಿಗೆ ತಿರುಗಿ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಮುಂಗಡೆಯಿಂದ ದೊಡ್ಡಮಾರ್ಕಟ್ಟಿನಿದಿರಿಗೆ ಪರ್ಜನ್ ಪಾರ್ಕು ಗೇಟಿನದ್ವಾರ ಆಲ್ಬರ್ಟ್ ವಿಕ್ಟರ್ ರೋಡಿಗೆ ಎಲಿಜನ್ ಫೌಂಟನ್ ಬಳಿ ತಿರುಗಿಕೊಂಡು ಮಾರ್ಗದ ಇಕ್ಕೆಲದಲ್ಲೂ ಪಾವಟಿಗೆಗಳ ಮೇಲೆ ಸಾಲುಸಾಲಾಗಿ ಕುಳಿತಿರುವ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಜಯಧ್ವನಿಯನ್ನು ಲಾಲಿಸಿ ಮನೋಹರವಾಗಿ ರಚಿಸಲ್ಪಟ್ಟಿರುವ ಚಪ್ಪರದಬಳಿ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳೊಪ್ಪಿಸುವ ವಿಜ್ಞಾಪನ ಪತ್ರವನ್ನು ಸ್ವೀಕರಿಸಿ ಕಾಲೋಚಿತವಾದ ಉತ್ತರವನ್ನಿತ್ತು ಮುಂದಕ್ಕೆ ತೆರಳಿ ಹಾರ್ಡಿಂಜ್ ಸರ್ಕಲಿನಲ್ಲಿ ಉತ್ತರದ್ವಾರದಿಂದ ಗೌರ್ನಮೆಂಟ್ ಹೌಸನ್ನು ತಲಪುವರು. ಅದೇ ದಿವಸ 11 ಗಂಟೆಗೆ ವೈಸ್ರಾಯರು ಮರ್ಯಾದೆಯೊಡನೆ ಅರಮನೆಗೆ ಚಿತ್ತೈಸಿ ಶ್ರೀಮನ್ಮಹಾರಾಜರವರ ದರ್ಶನ ಭಾಷಣಗಳನ್ನು ಮಾಡಿಕೊಂಡು ಬರುವರು. ಆ ದಿನ ರಾತ್ರಿ ಗೌರ್ನಮೆಂಟ್ ಹೌಸಿನಲ್ಲಿ ಅರಸೌತಣವಾಗುವುದು. ಮಾರನೆಯ ದಿನ ಮಧ್ಯಾಹ್ನ ವೈಸ್‌ರಾಯದಂಪತಿಗಳು ಶ್ರೀರಂಗಪಟ್ಟಣಕ್ಕೂ ಕೃಷ್ಣರಾಜಸಾಗರಕ್ಕೂ ದಯಮಾಡಿಸಿ ಪರಾಮರ್ಶಿಸಿಕೊಂಡು ಬಂದು ಡಿಸಂಬರ್ ತಾ|| 1 ರಲ್ಲಿ ಮೋಟಾರುಬಂಡಿಗಳ ಸ್ವಾರಿಯಿಂದ ಕಾರಾಪುರಕ್ಯಾಂಪಿಗೆ ಪ್ರಯಾಣಮಾಡಿ ಕೆಡ್ಡಾದಲ್ಲಿ ಕೂಡಿಹಾಕಲ್ಪಟ್ಟಿರುವ ಆನೆಗಳಿಗೆ ಹಗ್ಗಗಳನ್ನು ಬಿಗಿಯುವುದನ್ನೂ ಹೊಸದಾಗಿ ಆನೆಗಳನ್ನು ಕೆಡ್ಡಾಕ್ಕೆ ಅಟ್ಟುವುದನ್ನೂ ಪರಾಮರ್ಶಿಸುವರಲ್ಲದೆ ಕಾಡುಕೋಣ, ಹುಲಿ ಮೊದಲಾಗಿ ಕ್ರೂರಪ್ರಾಣಿಗಳ ಬೇಂಟೆಯಾಡುವುದು, ಮೀನುಗಳನ್ನು ಹಿಡಿಯುವುದು ಮೊದಲಾದ ವಿನೋದಗಳಲ್ಲಿ ತಾ|| 5 ರ ವರೆಗೆ ವಿಹರಿಸಿಕೊಂಡಿದ್ದು ಅದೇ ದಿವಸ ಸಾಯಂಕಾಲ ರಾಜಧಾನಿಗೆ ಚಿತ್ತೈಸಿ ರಾತ್ರಿ 9½ ಗಂಟೆಗೆ ಹೆಚ್ಚುಗಟ್ಟಲೆಯ ರೈಲುಬಂಡಿಯಲ್ಲಿ ಪ್ರಯಾಣಮಾಡುವರು.

ಸಂಮಾನ್ಯರಾದ ವೈಸ್ರಾಯಿದಂಪತಿಗಳು ನಮ್ಮ ಸಂಸ್ಥಾನಕ್ಕೆ ಶ್ರೀಮನ್ ಮಹಾರಾಜರವರ ಅತಿಥಿಗಳಾಗಿ ದಯಮಾಡಿಸುತ್ತಾರಾದುದರಿಂದ ಸಂಸ್ಥಾನದ ಅತಿಥಿಗಳಾಗಿಯೇ ಇರುತ್ತಾರೆ. ನಮ್ಮೆಲ್ಲರ ಪ್ರತಿನಿಧಿಗಳಾಗಿ ಶ್ರೀಮನ್ ಮಹಾರಾಜರವರು ಆ ದಂಪತಿಗಳಿಗೆ ನಡೆಯಿಸುವ ಆತಿಥ್ಯವು ನಮ್ಮೆಲ್ಲರಿಗೂ ಪ್ರೀತಿಕರವೂ ಉತ್ಸಾಹಕರವೂ ಆಗಿರುತ್ತದೆ. ರಾಜಧಾನಿಯಲ್ಲಿ ಅವರ ಆತಿಥ್ಯಸಮಾರಂಭಗಳು ವಿಜೃಂಭಣೆಯಿಂದ ನಡೆಯುವುದಕ್ಕೆ ತಕ್ಕೇರ್ಪಾಟುಗಳು ಜರುಗಿರುತ್ತವೆ. ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಪ್ರತಿನಿಧಿಗಳಾದ ಲಾರ್ಡ್ ರೀಡಿಂಗ್‌ರವರನ್ನೂ ಅವರ ಧರ್ಮಪತ್ನಿಯವರನ್ನೂ ನಮ್ಮ ಶ್ರೀಮನ್ಮಹಾರಾಜರವರ ಸತ್ಪ್ರಜೆಗಳ ಪರವಾಗಿ ನಾವು ಸುಸ್ವಾಗತಿಸುವುದಲ್ಲದೆ ಈ ದಂಪತಿಗಳು ಈ ದೇಶದಲ್ಲಿರುವಷ್ಟು ಕಾಲವೂ ಅವರ ಆತಿಥ್ಯಸಮಾರಂಭವು ಅವರಿಗೆ ಉಲ್ಲಾಸಕರವಾಗಿಯೂ, ಆರೋಗ್ಯಕರವಾಗಿಯೂ ಇದ್ದು ಮೈಸೂರುದೇಶದ ರಾಜಭಕ್ತಿ ವಿಶ್ವಾಸಗಳ ಅಚಲತ್ವವು ಅವರ ಮೂಲಕ ಚಕ್ರವರ್ತಿಯವರಿಗೆ ನಿವೇದಿತವಾಗಿ ಆಂಗ್ಲಸಾಮ್ರಾಜ್ಯದ ಮತ್ತು ನಮ್ಮ ಸಂಸ್ಥಾನದ ಪರಸ್ಪರ ಪ್ರೀತಿವಿಶ್ವಾಸಗಳೂ ಸ್ನೇಹವೂ ಮತ್ತಷ್ಟು ದೃಢತರವಾಗಲೆಂದು ಕೋರುವೆವು.

ಮಿ|| ಶೌಕತಾಲಿಯವರ ಉಪದೇಶ.

ಕಿಲಾಫತ್ ಫಂಡಿಗೆ ಸಂಭವಿಸಿರುವ 16 ಲಕ್ಷ ರೂ. ಗಳ ನಷ್ಟವನ್ನು ಕುರಿತು ಪರ್ಯಾಲೋಚಿಸುವ ಬಗೆಗೆ ಕಳೆದ ತಾ|| 13 ರಲ್ಲಿ ಅಮೃತಸರದಲ್ಲಿರುವ ಜಲಿಯನ್‌ವಾಲಾಬಾಗಿನಲ್ಲಿ ಡಾಕ್ಟರ್ ಕಿಚ್ಲುಯವರ ಅಧ್ಯಕ್ಷತೆಯಲ್ಲಿ ಮಹಮ್ಮದೀಯರ ಪ್ರಚಂಡಸಭೆಯು ಸೇರಿದ್ದಿತು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಂಬಂಧವಾಗಿ ಅಮೃತಸರಕ್ಕೆ ಬಂದಿದ್ದ ಪ್ರಮುಖ ಕಾಂಗ್ರೆಸ್ ಭಕ್ತರುಗಳೂ ಈ ಸಭೆಗೆ ಬಂದಿದ್ದರು. ಮಿ|| ಶೌಕತಾಲಿಯವರು ಭಾಷಣಮಾಡುವಾಗ್ಗೆ "ಕಿಲಾಫತ್ ಸಂಬಂಧವಾದ ನಮ್ಮ ಪ್ರಯತ್ನವಿಶೇಷದಲ್ಲಿ ಹಿಂದೂಗಳು ಬಹಳವಾಗಿ ಸಾಹಾಯ್ಯವನ್ನು ಮಾಡಿರುತ್ತಾರಾದುದರಿಂದ ಮಹಮ್ಮದೀಯರು ಅವರ ವಿಚಾರದಲ್ಲಿ ಬಹಳ ತಾಳ್ಮೆಯನ್ನುಳ್ಳವರಾಗಿರಬೇಕು. ಹಿಂದೂ ಮಹಮ್ಮದೀಯರ ಐಕಮತ್ಯ ವಿನಾ ನಮ್ಮ ಕಾರ್ಯಸಿದ್ಧಿಯಾಗುವುದಿಲ್ಲವೆಂಬುದು ನನ್ನ ಅನುಭವಕ್ಕೆ ಬಂದಿರುತ್ತದೆ. ಅದುಕಾರಣ ಈಗಣ ವಿದ್ಯಮಾನದಲ್ಲಿ ಸ್ವಾರ್ಥತ್ಯಾಗವೂ ತಾಳ್ಮೆಯೂ ಅತ್ಯಾವಶ್ಯಕವು. ನನ್ನ ಸ್ವಂತತಾಯಿಯನ್ನೂ ಸಹೋದರಿಯನ್ನೂ ಒಬ್ಬ ಹಿಂದುವು ಅವಮಾನಪಡಿಸಿದರೆ ನಾನು ಅವನನ್ನು ಮನ್ನಿಸುತ್ತೇನೆಂದು ದಿಲ್ಲಿ ಮೊದಲಾದ ಕಡೆಗಳಲ್ಲಿ ಹೇಳಿರುವಂತೆಯೇ ಇಲ್ಲಿಯೂ ಹೇಳುತ್ತೇನೆ. ಸಾಮುಖ್ಯಭಾವದಿಂದ ನಮ್ಮ ಸಹೋದರಜನರು ಕೌನ್ಸಿಲುಗಳನ್ನು ಪ್ರವೇಶಿಸಲು ಅವಕಾಶವು ಕೊಡಲ್ಪಟ್ಟುದಾಗಿರುತ್ತದೆ. ಮೊದಲು ಸಾತ್ವಿಕನಿರೋಧ ಪ್ರಯತ್ನವನ್ನು ನಡಿಸಿ ಅನಂತರ ಸಹಾಯನಿರಾಕರಣ ವ್ರತವನ್ನು ಕೈಕೊಳ್ಳತಕ್ಕುದಾಗಿದೆ." ಎಂದು ಸಭಿಕರ ಮನಸ್ಸಿನಲ್ಲಿ ನಾಟುವಂತೆ ಬೋಧಿಸಿದರು, ಮತ್ತು ಹೆತ್ತತಾಯಿಗೆ ಆದ ಅಪಮಾನವನ್ನು ಸಹಿಸಿಕೊಂಡಿರುವುದು ಸಾಧ್ಯವೆ ? ಎಂದು ಸಭಿಕರಲ್ಲೊಬ್ಬನು ಪ್ರಶ್ನಿಸಲು, ಅಹುದು ಖಂಡಿತವಾಗಿಯೂ ಸಹಿಸಿಕೊಂಡಿರಬೇಕೆಂದು ಉತ್ತರವನ್ನು ಕೊಟ್ಟು ಸಮಾಧಾನಪಡಿಸಿದರು. ತರುವಾಯ ಕಿಲಾಫತ್ ಫಂಡಿಗೆ ಸಂಭವಿಸಿರುವ ನಷ್ಟವನ್ನು ಕುರಿತು ಪ್ರಸ್ತಾಪಿಸುವಾಗ್ಗೆ "ಶೇಟ್ ಚೋಟಾನಿಯವರಲ್ಲಿ ನನಗೆ ಪೂರ್ಣ ನಂಬುಗೆಯುಂಟು ಮತ್ತು ಅವರು ತಮಗೆ ವ್ಯಾಪಾರದಲ್ಲಿ ನಷ್ಟವಾಗದಿದ್ದರೆ ಒಂದುಕಾಸು ಕಡಿಮೆಯಿಲ್ಲದಂತೆ ಹಣವನ್ನೆಲ್ಲವನ್ನೂ ಕೊಟ್ಟುಬಿಡುತ್ತಿದ್ದರು, ಅಲ್ಲದೆ ಈಗಲು ತಮ್ಮಾಸ್ತಿಯೆಲ್ಲವನ್ನೂ ಕಿಲಾಫತ್ ಕಮಿಟಿಗೆ ವಹಿಸಿಕೊಟ್ಟಿರುವರು. ಅವುಗಳ ಮಾರಾಟದಿಂದ ಅನುಕೂಲವಾದ ಬೆಲೆಯು ದೊರಕಿದಲ್ಲಿ ಅವರಿಂದ ಬರಬೇಕಾದ 16 ಲಕ್ಷ ರೂಪಾಯಿಯು ಪೂರ್ತಿಯಾಗಿ ಕಿಲಾಫತ್ ಕಮಿಟಿಗೆ ಸಂದಾಯವಾಗುವುದರಲ್ಲಿ ಸಂದೇಹವಿಲ್ಲವು" ಎಂದು ತಿಳಿಸಿದರು. ಅನಂತರ ಮಿ|| ಮಹಮ್ಮದಾಲಿಯವರು ಮತ್ತೆ ಕೆಲರೂ ಸ್ವರಾಜ್ಯಪ್ರಾಪ್ತಿಯ ಪ್ರಯತ್ನದಲ್ಲಿ ಯಾರೂ ಹಿಮ್ಮೆಟ್ಟಬಾರದು ಮತ್ತು ಆತಂಕವನ್ನುಂಟುಮಾಡಕೂಡದು ಎಂದು ಬೋಧಿಸಿದುದಲ್ಲದೆ ಸ್ವರಾಜ್ಯಪ್ರಾಪ್ತಿಯಿಂದ ರಾಜ್ಯಾಡಳಿತವು ಹಿಂದೂಗಳ ಹಸ್ತಗತವಾದರೂ ಬ್ರಿಟಿಷ್ ಸರ್ಕಾರಿಯಾಡಳಿತಕ್ಕಿನ್ನ ಉತ್ತಮವಾಗಿರುವುದೆಂದು ಮಹಮ್ಮದೀಯ ಸಭಾಸದರನ್ನು ಕುರಿತು ಹೇಳಿದರು.

ನಾಗಪುರದಲ್ಲಿ ಹಿಂದೂಮಹಮ್ಮದೀಯರ ಕಲಹ.

ನಾಗಪುರದಲ್ಲಿ ಮಹಮ್ಮದೀಯರ ಮಸೀತಿಯ ಮುಂಗಡೆ ಹಿಂದೂಗಳು ತಮ್ಮ ದೇವರುತ್ಸವವನ್ನು ವಾದ್ಯಸಮೇತ ಮಾಡಿಕೊಂಡು ಹೋಗುವ ವಿಚಾರದಲ್ಲಿ ಮನಸ್ತಾಪಗಳು ಹುಟ್ಟಿ ಕಲಹವಾದುದರಮೇಲೆ ಉಭಯಪಕ್ಷದ ಮುಖಂಡರೂ ಸೇರಿ ಪರಸ್ಪರ ಸೌಹಾರ್ದದಿಂದ ನಡೆದುಕೊಂಡು ಹೋಗಬೇಕೆಂದು ಬೋಧಿಸಿ ಸಮಾಧಾನಪಡಿಸಿದ್ದರು. ಆದರೆ ಕಾರ್ತೀಕ ಏಕಾದಶೀ ದಿವಸ ಹಿಂದೂಗಳು ದೇವತೋತ್ಸವವನ್ನು ಮಾಡುತ್ತಾರೆಂಬ ವರ್ತಮಾನವನ್ನು ತಿಳಿದು ಮಹಮ್ಮದೀಯರು ಉತ್ಸವ ಭಂಗಮಾಡಲೆತ್ನಿಸಿರುವುದನ್ನು ಗೌರ್ನರವರು ತಿಳಿದು ಮಹಮ್ಮದೀಯ ಪ್ರಮುಖರಲ್ಲಿ ನವಾಬ್ ನಿಯೋಜುದ್ದೀನ್ ರವರನ್ನೂ ಹಿಂದೂಮುಖಂಡರಲ್ಲಿ ರಾಜಾಲಕ್ಷ್ಮಣರಾವ್ ಭಾನ್ಸುಲೆ, ಸರ್ ಗಂಗಾಧರ ಚಿಟ್ನಾವಿಸ್, ಸರ್ದಾರ್ ಗುಜರ್ ಮತ್ತು ಡಾಕ್ಟರ್ ಮುಂಜೆ ಇವರುಗಳನ್ನೂ ಪ್ರತ್ಯೇಕವಾಗಿ ಬರಮಾಡಿಕೊಂಡು ಅವರುಗಳ ಕೂಡ ಉತ್ಸವಸಂಬಂಧವಾಗಿ ಅನೇಕ ವಿಷಯಗಳನ್ನು ಚರ್ಚಿಸಿ ಬೆಳಗಿನ 5 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ 5 ವೇಳೆ ಮಹಮ್ಮದೀಯರು ನಮಾಜು ಮಾಡುವ ಕಾಲವನ್ನು ಗೊತ್ತುಪಡಿಸಿ ಉಳಿದ ಕಾಲದಲ್ಲಿ ಹಿಂದೂಗಳು ವಾದ್ಯಸಮೇತ ತಮ್ಮ ದೇವರುತ್ಸವವನ್ನು ಬಹಳ ಶಾಂತವಾಗಿ ನಡೆಸುವಂತೆ ಅಪ್ಪಣೆಮಾಡಿದರು. ಇದರ ಮೇಲೆ ಊರಿನ ಎಲ್ಲಭಾಗದ ಹಿಂದೂಭಜನೆಕೂಟದವರು ವಾದ್ಯವೈಭವದೊಡನೆ ಕಾರ್ತೀಕ ಏಕಾದಶೀವ್ರತ ದಿನವಾದ ಸೋಮವಾರದ ದಿವಸ ಶ್ರೀ ಜಗನ್ನಾಥದೇವಾಲಯಕ್ಕೆ ಸರ್ಕಾರದವರಿಂದ ಕ್ಲುಪ್ತಪಡಿಸಿದ್ದ ಕಾಲದಲ್ಲಿ ಯಾವ ಗೊಂದಲಕ್ಕೂ ಅವಕಾಶವಿಲ್ಲದಂತೆ ಉತ್ಸವಪೂರ್ವಕವಾಗಿ ಬರುತ್ತಿರುವಾಗ್ಗೆ ಊರಿನ ಎಲ್ಲ ಮಸೀದಿಗಳಲ್ಲಿಯೂ ಮಹಮ್ಮದೀಯರು ಗುಂಪುಕೂಡಿಕೊಂಡಿದ್ದು, ಉತ್ಸವಭಾಗಿಗಳಾಗಿದ್ದ ಹಿಂದೂಗಳ ಮೇಲೆ ಕಲ್ಲುಗಳ, ಇಟ್ಟಿಗೆಚೂರುಗಳ ಮತ್ತು ಪಾದರಕ್ಷೆಗಳ ಮಳೆಯನ್ನು ಕರೆದರು. ಇದರಿಂದ 15 ಜನ ಪೋಲೀಸರಿಗೂ ಕೆಲ ಹಿಂದೂಗಳಿಗೂ ಪೆಟ್ಟುಬಿದ್ದಿತು. ಹಿಂದುಗಳೂ ಆತ್ಮರಕ್ಷಣೆಗೆ ತಕ್ಕೇರ್ಪಾಟನ್ನು ಮಾಡಿಕೊಂಡು ಬಂದಿದ್ದರಾದರೂ ರಾಜಾಲಕ್ಷ್ಮಣರಾವ್ ಭಾನ್ಸುಲೆ, ಡಾಕ್ಟರ್ ಮುಂಜೆ, ಚೋಳ್ಕರ್, ಪರಾಂಜಪೆ, ಹೆಡ್ಗೆವಾರ್ ಮೊದಲಾಗಿ ಹಿಂದೂಪ್ರಮುಖರು ಕೋಪೋದ್ರೇಕರಾಗಿದ್ದ ಹಿಂದೂಗಳಿಗೆ ಬಹಳ ಸಮಾಧಾನವನ್ನು ಹೇಳಿ ಕೋಪಶಮನ ಮಾಡುತ ಬಂದುದರ ಮೇಲು ಮತ್ತೂ ಸಿಟಿಮ್ಯಾಜಿಸ್ಟ್ರೇಟರೂ ಪೋಲೀಸಿನವರೂ ಬಹಳ ಬುದ್ಧಿಚಮತ್ಕಾರದಿಂದ ವರ್ತಿಸಿದುದರಮೇಲು ಮಾರ್ಗಗಳಲ್ಲಿ ಕಲಹಕ್ಕವಕಾಶವಾಗಲಿಲ್ಲವು.

ಸ್ವದೇಶದ ವೃತ್ತಾಂತಗಳು.

ಡೆ|| ಕಮಿಷನರ್ ಮ|| ಜೆ. ಆರ್ವಮುದಯ್ಯಂಗಾರ್ ರವರಿಗೆ ಕೊಡಲ್ಪಟ್ಟಿರುವ ರಜವು ಅರ್ಧಸಂಬಳದಮೇಲೆ ಇನ್ನೂ ಎರಡು ತಿಂಗಳವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಬೆಂಗಳೂರು ತಾಲ್ಲೂಕು ಪೋಲೀಸು ಇನ್‌ಸ್ಪೆಕ್ಟರಾಗಿದ್ದ ಮ|| ಸಿದ್ದರಾಜಅರಸಿನವರು ಚಾಮರಾಜನಗರ ತಾ|| ಪೋಲೀಸು ಇನ್‌ಸ್ಪೆಕ್ಟರಾಗಿ ವರ್ಗಾಯಿಸಲ್ಪಟ್ಟಿರುವರು.

ಗ್ರಾಮಗಳಿಗೆ ಸಂಬಂಧಿಸಿದಂತೆ ಕಾಡುಗಳನ್ನೇರ್ಪಡಿಸಿ ಅವುಗಳ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುವ ವಿಚಾರದಲ್ಲಿ ರೆವಿನ್ಯೂ ಆಫೀಸರು ಗಮನಿಸಬೇಕಾಗಿ ಸರ್ಕಾರದಪ್ಪಣೆಯಾಗಿರುತ್ತದೆ.

ನೆಲಮಂಗಲ ತಾ|| ಅಮಲ್ದಾರ್ ಮ|| ಸಿ. ಕೃಷ್ಣರಾಯರು ಕ್ಲೋಸ್‌ಪೇಟೆ ಸಬ್ ತಾ|| ಡಿ|| ಅಮಲ್ದಾರರಾಗಿಯೂ ಅಲ್ಲಿಯ ಡಿ|| ಅಮಲ್ದಾರ್ ಮ|| ಸಿ. ಎಲ್. ಕೃಷ್ಣಮೂರ್ತಿಯವರು ನೆಲಮಂಗಲ ತಾ|| ಅಮಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ವೈಸ್‌ರಾಯರು ಕಾಕನಕೋಟೆಗೆ ದಯಮಾಡಿಸಿದ ವೇಳೆಯಲ್ಲಿ ತಂತಿಯಸಾಹಾಯ್ಯವಿಲ್ಲದೆ ರಾಧಾನಿಯಿಂದ ವರ್ತಮಾನವನ್ನು ತಿಳಿದುಕೊಳ್ಳುವುದಕ್ಕಾಗಿ ರಾಜಧಾನಿಯ ಕೋಟೆಯ ಹೊರಗಡೆ ದಕ್ಷಿಣಭಾಗದಲ್ಲಿ ಫಿರಂಗಿಗಳಿಟ್ಟಿರುವ ಮನೆಯಬಳಿ ಎತ್ತರವಾದ ಕಬ್ಬಿಣದ ಕಂಭಗಳು ನಡಲ್ಪಟ್ಟು ಯಂತ್ರಸಾಮಗ್ರಿಗಳಿಡಲ್ಪಟ್ಟಿವೆ.

ರಾಜಧಾನಿಯ ವೀರನಗೆರೆಯಲ್ಲಿರುವ ದನಗಳ ತೊಂಡಿನ ಆಳೊಬ್ಬನು ಸಣ್ಣವಯಸ್ಸಿನ ಹಿಂದೂ ಹುಡುಗಿಯೊಡನೆ ಅಕ್ರಮಸಂಗಮಾಡಿದುದರಿಂದ ಆ ಹುಡುಗಿಯು ಅಪಾಯವನ್ನು ಹೊಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿರುವುದಾಗಿಯೂ ಪೋಲೀಸರು ಆ ದುರಾತ್ಮನನ್ನು ಹಿಡಿದು ವಿಚಾರಣೆಗೆ ಗುರಿಮಾಡಿರುವುದಾಗಿಯೂ ತಿಳಿಯುತ್ತೇವೆ.

ರಾಜಧಾನಿಯಲ್ಲಿ ಪ್ರಸಿದ್ಧ ಹಾರ್ಮೋನಿಯಂ ವರ್ತಕರಾದ ಮ|| ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರು 1924 ನೆಯ ವರ್ಷದ ದೊಡ್ಡ ಹಾಳೆಯ ಕ್ಯಾಲಂಡರನ್ನು ಶ್ರೀಮನ್ ಮಹಾರಾಜ ಸಹೋದರರ ಮತ್ತು ಕುಮಾರ ಜಯಚಾಮರಾಜ ಒಡೆಯರವರ ಸುಂದರ ಭಾವಚಿತ್ರಗಳೊಡನೆ ಅಂದವಾಗಿ ಮುದ್ರಿಸಿ ಪ್ರಕಟಿಸಿರುವರು. 1 ಆಣೆ ಸ್ಟಾಂಪನ್ನು ಪ್ರಸಾರಕರಿಗೆ ಕಳುಹಿಸಿದರೆ 1 ಪ್ರತಿಯು ಕಳುಹಲ್ಪಡುತ್ತದೆ.

ರೆವಿನ್ಯೂ ಸೆಕ್ರೆಟರಿಯವರಾದ ಮ|| ಟಿ. ಇ. ಜಯರಾಮಯ್ಯರ್‌ರವರಿಗೆ ಈ ನವಂಬರ್ ತಾ|| 27 ರಿಂದ 1924ನೆಯ ಏಪ್ರಿಲ್ ತಾ|| 13 ರವರೆಗೆ ಪ್ರಿವಿಲೆಜ್ ಮತ್ತು ಫರ್ಲೋರಜವು ಕೊಡಲ್ಪಟ್ಟಿರುವ ಪ್ರಯುಕ್ತ ಅಂಡರ್ ಸೆಕ್ರೆಟರಿಯವರಾದ ಮ|| ಕೆ. ವಿ. ಅನಂತರಾಮನ್ ಬಿ. ಎ., ಯವರು ರೆವಿನ್ಯೂ ಕಮಿಷನರಾಗಿಯೂ ರಜದಮೇಲಿರುವ ಸೀನಿಯರ್ ಅ|| ಕಮಿಷನರ್ ಮ|| ಸಿ. ಕುಪ್ಪಸ್ವಾಮ್ಯಯ್ಯಂಗಾರರು ಅಂಡರ್ ಸೆಕ್ರೆಟರಿಯಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಮ|| ಜಯರಾಮಯ್ಯರ್‌ರವರು ರಜ ಪೂರೈಸಿದ ಮೇಲೆ ಕೆಲಸದಿಂದ ನಿವೃತ್ತರಾಗುವರಾಗಿರುವರು.

ರಾಜಧಾನಿಯಲ್ಲಿ ಒಬ್ಬ ಲಾಯರ ಗುಮಾಸ್ತೆಯಾಗಿದ್ದ ರಾಮರಾಯನೆಂಬುವವನೂ ಆತನ ಉಪಪತ್ನಿಯಾದ ಚಿನ್ನಮ್ಮನೆಂಬುವವಳೂ ಜಯಮ್ಮನೆಂಬ 13 ವರ್ಷ ವಯಸ್ಸಿನ ಕುರುಬರ ಹುಡುಗಿಯನ್ನು ಉಪಾಯಾಂತರದಿಂದ ಬೆಂಗಳೂರಿಗೆ ಕರೆದುಕೊಂಡುಹೋಗಿ ಅಲ್ಲಿ ಸ್ಕೂಲ್ಮಾಸ್ಟರಾಗಿದ್ದ ನರಸಿಂಹಯ್ಯನೆಂಬುವವನ ಸಾಹಾಯ್ಯದಿಂದ ಹೈದರಾಬಾದು ವಾಸಸ್ಥನಾದ ದೇವಿದಾಸ್ ಎಂಬ ಬ್ರಾಹ್ಮಣನಿಗೆ ಆ ಹುಡುಗಿಯನ್ನು ಬ್ರಾಹ್ಮಣಕನ್ಯೆಯೆಂದು ಹೇಳಿ ವಿದುರಾಶ್ವತ್ಥದಲ್ಲಿ ಮದುವೆಮಾಡಿಕೊಟ್ಟು 900 ರೂಪಾಯಿಗಳನ್ನು ಆತನಿಂದ ತೆಗೆದುಕೊಂಡು ಮೋಸಪಡಿಸಿದ ಅಪರಾಧಕ್ಕಾಗಿ ಇಲ್ಲಿಯ ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರೆಂದು ತಿಳುಹಿದ್ದೆವಷ್ಟೆ. ಆ ಮೂವರು ಅಪರಾಧಿಗಳು ಸಿಟಿ ಮ್ಯಾಜಿಸ್ಟ್ರೇಟರಿಂದ ಸೆಷನ್ಸು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ತಲಾ ಎರಡೆರಡು ವರ್ಷಗಳಂತೆ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟರು.

ಮೈಸೂರು ಸೀಮೆಯಿಂದ ಬ್ರಿಟಿಷ್‌ಸಾಮ್ರಾಜ್ಯ ಮಹಾವಸ್ತುಪ್ರದರ್ಶನಕ್ಕೆ ಕಳುಹಲ್ಪಡುವ ವಸ್ತುಗಳ ಕೂಡ ಒಬ್ಬ ಸರ್ಕಾರಿಯಧಿಕಾರಿಯೂ, ಇಬ್ಬರು ವರ್ತಕರುಗಳೂ ಕಳುಹಲ್ಪಡುವುದಾಗಿ ಸರ್ಕಾರದಪ್ಪಣೆಯಾಗಿದ್ದಿತಷ್ಟೆ ? ಸರ್ಕಾರಿ ಸೂಬೂನು ಕಾರ್ಯಾಲಯದ ಮೇಲ್ವಿಚಾರಕರಾದ ಮ|| ಎಸ್. ಜಿ. ಶಾಸ್ತ್ರಿಗಳು, ಬೆಂಗಳೂರಲ್ಲಿ ಪ್ರಸಿದ್ಧ ಫಲಸರ್ಕು ವ್ಯಾಪಾರಿಗಳಾದ ಮ|| ಆರ್. ಪಾಪಣ್ಣನವರ ಜ್ಯೇಷ್ಠಪುತ್ರರಾದ ಪಿ. ಎಂ. ಬಸಪ್ಪನವರು ಮತ್ತು ಚನ್ನಪಟ್ಟಣದಲ್ಲಿ ಪ್ರಸಿದ್ಧ ರೇಷ್ಮೆ ವ್ಯಾಪಾರಿಗಳಾದ ಮಸ್ತಾನ್‌ಸಾಹೇಬರ ತಮ್ಮನಮಕ್ಕಳಾದ ಮಿ|| ಅಬ್ದುಲ್ ಖುದುಸ್‌ರವರು ಸೀಮೆಗೆ ಕಳುಹಲ್ಪಡುವುದಾಗಿಯೂ, ಈ ಉಭಯವರ್ತಕರುಗಳಿಗೆ ಹೋಗಿಬರುವ 2ನೆಯ ತರಗತಿಯ ಛಾರ್ಜಿನಲ್ಲಿ ಅರ್ಧ ಮೊಬಲಗೂ ಒಬ್ಬೊಬ್ಬರಿಗೆ 500 ರೂ. ಕೊಡಲ್ಪಡುವುದಾಗಿ ಅಪ್ಪಣೆಯಾಗಿದೆ. ಮ|| ಪಿ. ಎಂ. ಬಸಪ್ಪನವರು ಸರ್ ಎಂ. ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ ಈ ಸೀಮೆಯಿಂದ ಜಪಾನಿಗೆ ಅಲ್ಲಿಯ ಕೈಗಾರಿಕೆ ಮತ್ತು ವ್ಯಾಪಾರಕ್ರಮವನ್ನು ಕಣ್ಣಾರ ನೋಡಿ ಅನುಭವಮಾಡಿಕೊಂಡುಬರಲು ಕಳುಹಲ್ಪಟ್ಟಿದ್ದ ವರ್ತಕರುಗಳಲ್ಲೊಬ್ಬರಾಗಿರುವರಲ್ಲದೆ ಆ ದೇಶದ ಪರಿಸ್ಥಿತಿಯನ್ನು ತಿಳಿದುಕೊಂಡು ಸ್ವದೇಶಕ್ಕೆ ಬಂದು ತಮ್ಮ ವ್ಯಾಪಾರವನ್ನು ಬಹುಮಟ್ಟಿಗೆ ಅಭಿವೃದ್ಧಿಗೆ ತಂದಿರುವರು. ಪ್ರಸಿದ್ಧ ವರ್ತಕಮನೆತನದವರಾಗಿಯೂ, ಶ್ರೀಮಂತರಾಗಿಯೂ, ಸ್ವದೇಶ ವ್ಯಾಪಾರವನ್ನು ಅಭಿವೃದ್ಧಿಪಡಿಸುವ ಕಾಂಕ್ಷೆಯುಳ್ಳವರಾಗಿಯೂ ಇರುವ ಮೇಲ್ಕಂಡ ಉಭಯ ಯುವಕವರ್ತಕರುಗಳು ಸಾಮ್ರಾಜ್ಯವಸ್ತುಪ್ರದರ್ಶನವನ್ನು ನೋಡಿ ಬರಲು ಸರ್ಕಾರದವರಿಂದ ಆರಿಸಲ್ಪಟ್ಟಿರುವುದಕ್ಕಾಗಿ ಸಂತೋಷಿಸುತ್ತೇವಲ್ಲದೆ ಈ ಸನ್ನಿವೇಶದಲ್ಲಿ ಪಾಶ್ಚಾತ್ಯದೇಶದ ವ್ಯಾಪಾರಕ್ರಮವನ್ನೂ ಅಭಿವೃದ್ಧಿಯ ಮರ್ಮವನ್ನೂ ತಿಳಿದುಕೊಂಡು ಬಂದು ಸ್ವದೇಶ ವ್ಯಾಪಾರಾಭಿವೃದ್ಧಿಗೆ ಸಾಹಾಯ್ಯಕರಿಸುವರೆಂದು ನಿರೀಕ್ಷಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಭಾರತೀಯ ರೇವೆಪಟ್ಟಣದಿಂದ ಇರಾಕಿಗೆ ಕೂಲಿಕಾರರು, ವ್ಯಾಪಾರಸ್ಥರು ಮತ್ತು ಯಾತ್ರಿಕರು ಪ್ರಯಾಣಮಾಡಲು ಮರಳಿ ಆರಂಭವಾಗಿರುವದು.

ಬೊಂಬಾಯಿನ ಮ್ಯುನಿಸಿಪಾಲಿಟಿಗೆ ಬರುವ ವರ್ಷದಲ್ಲಿ 3,12,08,000 ರೂ. ಆಯವೂ, 3,19,73,000 ರೂ. ವ್ಯಯವೂ ಆಗಿ 7,65,000 ರೂ. ಸಾಲಬೇಬರುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ವೈಸ್‌ರಾಯರ ಹೆಂಡತಿಯವರ ಹೆಸರಿನಿಂದ ಸ್ಥಾಪಿತವಾಗಿರುವ ಭಾರತ ಸ್ತ್ರೀಸಹಾಯನಿಧಿಗೆ ಗ್ವಾಲಿಯರ್ ಮಹಾರಾಜರು 25,000 ರೂ. ಗಳನ್ನೂ, ಇಂದೂರು ಮಹಾರಾಜರು 10,000 ರೂ. ಗಳನ್ನೂ ಕೊಟ್ಟಿರುತ್ತಾರೆ.

ಮದ್ರಾಸು ನ್ಯಾಯವಿಧಾಯಕಸಭೆಗೆ ಮೆಂಬರುಗಳನ್ನು ಆರಿಸಲು ತಗಲಿದ ವೆಚ್ಚದ ಮೊಬಲಗನ್ನು ಅಭ್ಯರ್ಥಿಗಳಾಗಿ ನಿಂತಿದ್ದವರಲ್ಲಿ ಉತ್ತೀರ್ಣರಾದವರೂ ಆಗದಿದ್ದವರೂ ಸೇರಿ ಎಲ್ಲರೂ ಕೊಡಬೇಕೆಂದು ಮದ್ರಾಸು ಸರ್ಕಾರದವರು ಪ್ರಕಟಿಸಿರುತ್ತಾರೆ.

ಭರತಖಂಡದ ಸಾರ್ವಜನಿಕ ಮಹಾಸಭೆಯು 38ನೆಯ ವರ್ಷದ ಅಧಿವೇಶನವು ಬರುವ ಡಿಸಂಬರ್ ತಾ|| 26ರಲ್ಲಿ ಕಾಕಿನಾಡಾದಲ್ಲಿ ಜರುಗುವುದು. ತತ್ಸಂಬಂಧವಾದ ವಿಷಯನಿಯಾಮಕ ಸಭೆಯು ಡಿಸಂಬರ್ ತಾ|| 23ರಲ್ಲಿ ಕೂಡುವುದು. ಅಖಿಲಭಾರತ ಕೈಗಾರಿಕೆಯ ಹಾಗೂ ಖಾದಿಯ ಮಹಾಪ್ರದರ್ಶನವೂ ನಡಿಸಲ್ಪಡಲೇರ್ಪಾಟಾಗಿದೆ.

ಬೊಂಬಾಯಿಯ ಗೌರ್ನರ ಪದವಿಯನ್ನು ಬಿಟ್ಟುಹೋಗುವ ಸರ್ ಜಾರ್ಜ್ ಲಾಯಿಡ್‌ರವರಿಗೆ ಒಂದು ವಿಜ್ಞಾಪನಪತ್ರಿಕೆಯನ್ನು ಕೊಡಬೇಕಾಗಿ ಬೊಂಬಾಯಿನ ಮ್ಯುನಿಸಿಪಲ್ ಕೌನ್ಸಿಲಿನವರು ಬಹುಮತದಿಂದ ನಿರ್ಧರಿಸಿದರು. ಆದರೆ ಕೆಲ ದೇಶಭಕ್ತರು ಕೊಡಕೂಡದೆಂದು ವಿರೋಧಿಸಿದರಾದರೂ ಅಲ್ಪಮತವಾದುದರಿಂದ ಅದು ನೆರವೇರಲಿಲ್ಲವು.

ಬರುವ ಡಿಸಂಬರ್ ತಾ|| 26 ರಲ್ಲಿ ಕಾಕಿನಾಡದಲ್ಲಿ ಜರುಗುವ ಭರತಖಂಡದ ಸಾರ್ವಜನಿಕ ಮಹಾಸಭೆಗೆ ನಾನಾದೇಶದಿಂದ ದಯಮಾಡಿಸುವವರಾಗಿರುವ ಸುಮಾರು 4,000 ಜನರಿಗೆ ಉಚಿತವಾಗಿ ಊಟೋಪಚಾರವನ್ನು ಮಾಡಿಸಲು ದುಗ್ಗಿರಾಲಗೋಪಾಲಕೃಷ್ಣಯ್ಯನವರು ಉದ್ದೇಶಪಟ್ಟು ಆಂಧ್ರದೇಶೀಯರು ಯಥಾಶಕ್ತಿ ಈ ಧರ್ಮನಿರ್ವಹಣ ಕಾರ್ಯದಲ್ಲಿ ಸಾಹಾಯ್ಯಮಾಡಬೇಕೆಂದು ಪ್ರಾರ್ಥಿಸಿರುವರು.

ಮದ್ರಾಸಾಧಿಪತ್ಯದಲ್ಲಿ ಜುಡಿಸಿಯಲ್ ಮತ್ತು ಎಕ್ಸಿಕ್ಯುಟಿವ್ ಉದ್ಯೋಗಗಳನ್ನು ಬೇರ್ಪಡಿಸುವ ವಿಚಾರದಲ್ಲಿ ಮದ್ರಾಸ್ ನ್ಯಾಯವಿಧಾಯಕ ಸಭೆಯವರು ಮಾಡಿದ್ದ ವರದಿಯ ಮೇಲೆ ಸರ್ಕಾರದವರು ಕಾರ್ಯಕ್ರಮ ವಿಧಾನವನ್ನು ಕಲ್ಪಿಸಿ ನ್ಯಾಯವಿಧಾಯಕ ಸಭೆಯವರ ಪರ್ಯಾಲೋಚನೆಗಾಗಿ ಕೂಡಲೆ ಕಳುಹಿಸಿಕೊಟ್ಟು ಅವರಭಿಪ್ರಾಯವನ್ನು ತಿಳಿದುಕೊಂಡು ಅನುಷ್ಠಾನಕ್ಕೆ ತರುವವರಾಗಿರುವರು.

ಕಳೆದ ಶನಿವಾರದ ದಿವಸ ವಿಶಾಖಾಪಟ್ಟಣ ಡಿಸ್ಟ್ರಿಕ್ಟಿನಲ್ಲಿ ವಿಪರೀತ ಮಳೆಯಾಗಿ ವಾಲ್ಟೇರ್ ಮತ್ತು ಅನಕಪಲ್ಲಿ ಈ ಎರಡು ಸ್ಥಳಗಳಲ್ಲಿ ರೈಲ್ವೆರಸ್ತೆಯು 250 ಅಡಿಯವರೆಗೆ ಕೊಚ್ಚಿಹೋಗಿದ್ದು ತಾ|| 21ರಲ್ಲಿ ಸರಿಪಡಿಸಲ್ಪಟ್ಟಿದಾಗಿಯೂ ವಾಲ್ಟೇರು ಸ್ಟೇಷನ್ನುಮನೆಯ ಕೆಲಭಾಗವು ಬಿದ್ದುಹೋಗಿ ನಷ್ಟವಾಗಿರುವುದಾಗಿಯೂ ಕೆಲಸಗಾರರ ಮನೆಗಳು ಬಿದ್ದುಹೋಗಿ 10 ಜನರು ನೀರಿನಲ್ಲಿ ಮುಳಿಗಿ ಸತ್ತಿರುವುದಾಗಿಯೂ ತಿಳಿಯಬಂದಿದೆ.

ಅಲಿಘರಿನಲ್ಲಿ ಕಿಲಾಫತ್ ಮುಖಂಡರು ಜಜಿರತ್-ಉಲ್-ಅರಾಬ್ ಫಂಡಿಗೆ ಹಣವನ್ನು ಶೇಖರಿಸಲು ವಿಶ್ವಪ್ರಯತ್ನಮಾಡುತ್ತಿದಾರಾದರೂ ಜುಮ್ಮಾ ಪ್ರಾರ್ಥನೆಗಾಗಿ ಅಶೇಷ ಮಹಮ್ಮದೀಯರು ಮಸೀತಿಯಲ್ಲಿ ಸೇರಿರುವಾಗ್ಗೆ ಮೇಲ್ಕಂಡ ಫಂಡಿಗೆ ದ್ರವ್ಯಸಹಾಯ ಮಾಡಬೇಕೆಂದು ಮಹಮ್ಮದೀಯ ಮುಖಂಡರು ನಾನಾರೀತಿಯಿಂದ ಬೋಧಿಸಿ ಪ್ರಾರ್ಥಿಸಿದಾಗ್ಗೆ ಕಿಲಾಫತ್ ಕಾರ್ಯಸಾಧನೆಗಾಗಿ ಶೇಖರಿಸಿದ್ದ ದ್ರವ್ಯವೇನಾಯಿತು ಎಂದು ಮೊದಲಾಗಿ ಜನರು ಪ್ರಶ್ನಿಸಲುಪಕ್ರಮಿಸಿದುದರಿಂದ ಮೇಲ್ಕಂಡ ಫಂಡಿಗೆ 7 ರೂಪಾಯಿ ಮಾತ್ರ ಶೇಖರವಾಯಿತು.

ವಿದೇಶದ ವೃತ್ತಾಂತಗಳು.

ಮಿ|| ಮಾಂಟೆಗುಯವರು ತಮ್ಮ ಭರತಖಂಡದ ಪ್ರಯಾಣವನ್ನು ಸದ್ಯದಲ್ಲಿ ನಿಲ್ಲಿಸಿರುವರು.

ತುರ್ಕಿಯ ರೈಲ್ವೆ ಕೆಲಸಗಾರರು ತಮ್ಮ ಸಂಬಳವನ್ನು 100 ಕ್ಕೆ 30 ರಂತೆ ಹೆಚ್ಚಿಸಿ ಕೊಡಬೇಕೆಂದು ಮುಷ್ಕರಹಿಡಿದು 1000 ಜನ ಮಹಮ್ಮದೀಯರೂ 500 ಜನ ಕ್ರೈಸ್ತರೂ ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದಾರೆ.

ಐರ್ಲೆಂಡಿನಲ್ಲಿ ರಾಜದ್ರೋಹಾಪರಾಧಕ್ಕಾಗಿ ಕಾರಾಗೃಹವಾಸ ಶಿಕ್ಷೆಯನ್ನನುಭವಿಸುತ್ತಿದ್ದ ಡೆನಿಸ್‌ಬರ್ರಿ ಎಂಬಾತನು 35 ದಿವಸಗಳವರೆಗೆ ಆಹಾರವನ್ನು ತೆಗೆದುಕೊಳ್ಳದೆ ಉಪವಾಸವಿದ್ದು ಕಡೆಯಲ್ಲಿ ಮೃತನಾದನು.

ತುರ್ಕಿ ಸಂಧಿಯು ಪಾಶ್ಚಾತ್ಯದೇಶಕ್ಕೆ ಶಾಂತಿಪ್ರದವಾಗಿರುವುದೆಂದೂ, ತುರ್ಕಿಗೆ ನ್ಯಾಯವು ದೊರಕಿದುದಕ್ಕಾಗಿ ಭಾರತೀಯರಿಗೆ ಪರಮಸಂತೋಷವುಂಟಾಗಿರುವುದೆಂದೂ, ತುರುಷ್ಕರ ಆಶಯವು ಸಫಲವಾದುದರಿಂದ ಇನ್ನು ಮುಂದೆ ತುರ್ಕಿಯು ಬ್ರಿಟನ್ನಿನ ಕೂಡ ಸದ್ಭಾವದಿಂದಲೂ ಸಖ್ಯದಿಂದಲೂ ಪ್ರವರ್ತಿಸುವುದಾಗಿ ನಿರೀಕ್ಷಿಸುತ್ತೇನೆಂದೂ ಪೀಲುಪ್ರಭುವು ನುಡಿದರು.

ಸಂತತಧಾರೆಯಿಂದ ಮಳೆಯು ಕುಂಭಿಪಾತವಾಗಿ ಸುರಿದುದರಿಂದ ಉತ್ತರ ವೇಲ್ಸುದೇಶದಲ್ಲೂ, ಲಂಕಾಷೈರಿನಲ್ಲೂ, ಡರ್ಬಿಷೈರಿನಲ್ಲೂ 50 ವರ್ಷಗಳಿಂದೀಚೆಗೆಂದೂ ಬಾರದಿದ್ದಷ್ಟು ನದಿಯ ಪ್ರವಾಹವು ಬಂದು 100 ಮನೆಗಳು ಸಂಪೂರ್ಣವಾಗಿ ಮುಳಿಗಿಹೋದುವು; ಅನೇಕ ಮಾರ್ಗಗಳು ನಾಶವಾದುವು. ಪಟ್ಟಣಗಳಲ್ಲಿ ದೀಪಹೊತ್ತಿಸಲ್ಪಡುವ ಗ್ಯಾಸುನಿಂತುಹೋಗಿದೆ.

ಜರ್ಮನಿಯ ರೈಲ್ವೆಗಳಿಗೆ ಫ್ರೆಂಚರಿಂದ ಆಕ್ರಮಿಸಲ್ಪಟ್ಟಿರುವ ರರ್ ಪ್ರಾಂತದಿಂದ ಕಲ್ಲಿದ್ದಲು ದೊರಕುವುದು ದುಸ್ತರವಾಗಿರುವುದರಿಂದ ಇಂಗ್ಲೆಂಡಿನಿಂದ ಕಲ್ಲಿದ್ದಲನ್ನು ಒದಗಿಸಲು ಇಂಗ್ಲೆಂಡಿನ ಒಂದು ಬ್ಯಾಂಕಿನವರು 30 ಲಕ್ಷ ಪೌಂಡನ್ನು ಸಾಲವಾಗಿ ಕೊಡಲೊಪ್ಪಿಕೊಂಡಿರುತ್ತಾರೆ. ಆದರೆ 1,50,000 ಪೌಂಡು ಖರೀದಿಗೆ 5 ಲಕ್ಷವನ್ನು ಕಲ್ಲಿದ್ದಲು ಮಾತ್ರ ಸದ್ಯದಲಿ ದೊರೆಯುವುದಾಗಿದೆ.

ಅಮೇರಿಕೆಗೆ ಆಸ್ಯಾಖಂಡದಿಂದ ಬಂದು ಸೇರಿಕೊಂಡಿರತಕ್ಕವರಾರೂ ಭೂಸ್ಥಿತಿಯನ್ನು ಕ್ರಯಕ್ಕಾಗಲಿ ಬಾಡಿಗೆ ಅಥವಾ ಗುತ್ತಿಗೆಗಾಗಲಿ ತೆಗೆದುಕೊಳ್ಳಕೂಡದೆಂದು ಕ್ಯಾಲಿಫೋರ್ನಿಯಾದವರು ಮಾಡಿದ ವಿಧಿಯು ಯೂನೈಟೆಡ್‌ಸ್ಟೇಟ್ಸಿಗೆ ಸೇರಿದ ವಾಷಿಂಗ್‌ಟನ್ನಿನ ಸೂಪ್ರೀಂಕೋರ್ಟಿನವರಿಂದ ಸ್ಥಿರಗೊಳಿಸಲ್ಪಟ್ಟಿರುವುದರಮೇಲೆ ಅಲ್ಲಿರುವ ಆಸ್ಯಾಖಂಡದ ಜನರು ಆ ದೇಶವನ್ನು ಬಿಟ್ಟು ತೆರಳುವವರಾಗಿದ್ದಾರೆ. ಇವರಲ್ಲಿ 50000 ವರೆಗೆ ಜಪಾನೀಯರೇ ಇರುವರು.

ಸೋವಿಯಟ್ ರಷ್ಯಾವು ತನ್ನ ಆರ್ಥಿಕ ಸ್ಥಿತಿಯು ಬಹಳ ವಿಷಮವಾಗಿದ್ದರೂ ತನ್ನ ವಿಮಾನಗಳ ಸಂಖ್ಯೆಯನ್ನು ಮಾತ್ರ ಹೆಚ್ಚಿಸುತಲೇಯಿದೆ. ಕಳೆದ ಸೆಪ್ಟಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ಬ್ರಿಟನ್ನಿನಿಂದಲೂ, ಜರ್ಮನಿಯಿಂದಲೂ ಹಾಲೆಂಡಿನಿಂದಲೂ 150 ಹೊಸ ವಿಮಾನಗಳನ್ನು ತರಿಸಿಕೊಂಡರು. ಈ ಹೊಸ ವಿಮಾನಗಳೆಲ್ಲವೂ ರಷ್ಯಾದ ಎಲ್ಲೆಕಟ್ಟಿನೊಳಗೇ ಸಂಚರಿಸುತ್ತಿರುವುವು ಮತ್ತು ಹಳೆಯ ವಿಮಾನಗಳು ಸೈಬೀರಿಯಾಕ್ಕೆ ಕಳುಹಲ್ಪಟ್ಟಿರುವುವು. ಕಳೆದ ಮೇ ತಿಂಗಳಲ್ಲಿ ಕರ್ಜನ್ ಪ್ರಭುವು ರಷ್ಯಾಕ್ಕೆ ಅಂತ್ಯ ಸಂದೇಶವನ್ನು ಕೆಲ ವಿಮಾನಗಳಲ್ಲಿ ಕಳುಹಿಸಿ 10 ದಿವಸಗಳ ಅವಧಿಯನ್ನು ಕೊಟ್ಟಿದ್ದರು. ಆಗ ಕೆಲ ಕಾರಣದಿಂದ ರಷ್ಯನರು ಹಿಂದಕ್ಕೆ ಸರಿದು ಹೋಗಬೇಕಾಗಿ ಬಂದಿತು. ಈಗ ಪೂರ್ತಿಯಾಗಿ ಸನ್ನದ್ಧರಾಗುತ್ತಿರುವರು. ಶತ್ರುಗಳು ಕಳುಹಿದ ಅಂತ್ಯ ಸಂದೇಶಕ್ಕೆ ಸಮರ್ಥತೆಯಿಂದ ಪ್ರತ್ಯುತ್ತರವನ್ನು ಕೊಟ್ಟು ಶತ್ರುಗಳ ಕೋರಿಕೆಯನ್ನು ನಿರಾಕರಿಸುವಷ್ಟು ಸಮರ್ಥರಾಗಿರುವರು. ರಷ್ಯಾದ ರೈತರುಗಳು ದೃಢಮನಸ್ಸಂಕಲ್ಪದಿಂದ ಕೆಲಸಮಾಡುತ್ತಿದಾರೆ. ಇವರನ್ನು ಯಾರೂ ಇದಿರಿಸಲಾರರು.

ಬ್ಯಾಂಕಿಟ್ಟಿದ್ದು ದಿವಾಳಿಯಾದ ಬಾಟಮ್ಲೆಯ ಆಸ್ತಿಯನ್ನು ಏಲೇಮಾಡಿ ಸಾಲಗಾರರಿಗೆ ಹಂಚಿಕೊಡಲು ಕೋರ್ಟಿನವರು ಕೆಲ ಅಧಿಕಾರಿಗಳನ್ನು ನಿಯಮಿಸಿದ್ದರು. ಈಗ ಅವರು ಪ್ರಕಟಿಸಿರುವುದರಲ್ಲಿ 90,000 ಸಾಲಗಾರರಿಗೆ 1 ಪೌಂಡಿಗೆ 3¼ ಪೆನ್ಸುಗಳಂತೆ ಅಂದರೆ 15 ರೂ. ಗೆ 3¼ ಆಣೆ ದೊರಕುವುದಾಗಿ ತಿಳಿಯಬರುತ್ತದೆ. ಅವನಿಗೆ ಹಣ ಕೊಟ್ಟಿರುವವರಲ್ಲಿ ಮುಕ್ಕಾಲುಪಾಲು ಜನರು ಬಹಳ ಬಡವರಾಗಿರುವರಲ್ಲದೆ ತಮ್ಮ ಕೂಲಿನಾಲಿಯ ದುಡ್ಡಿನಲ್ಲಿ ಶೇಖರಿಸಿಟ್ಟ ಹಣವನ್ನು ಕೊಟ್ಟಿರತಕ್ಕವರಾಗಿರುವರು. ಒಟ್ಟು ಹಣದಲ್ಲಿ 12,000 ಪೌನು ಮಾತ್ರ ಉಳಿದಿರುವುದಾಗಿಯೂ, ಬಾಟಮ್ಲೆಯ ವಿಚಾರಣೆಯಲ್ಲಿ 2,00,000 ಪೌನುಗಳಿಗೆ ಲೆಖ್ಖವು ಹೇಳಲ್ಪಟ್ಟಿದಲ್ಲದೆ ಉಳಿದ 5 ಲಕ್ಷ ಪೌನುಗಳೇನಾಯಿತೆಂಬುದು ಗೊತ್ತಾಗಲಿಲ್ಲವು. ಅದರಮೇಲೆ ಇವನು ಉಳಿದ ಹಣವನ್ನೆಲ್ಲಾ ಫ್ರಾನ್ಸಿನಲ್ಲಿ ಬಚ್ಚಿಟ್ಟಿದಾನೆಂದು ಬಲವಾಗಿ ವಾದಿಸಲು ಅದನ್ನು ತಿರಸ್ಕರಿಸಿದನು. ಮತ್ತು ಅದನ್ನು ಸ್ಥಾಪಿಸಲು ತಕ್ಕ ನಿದರ್ಶನಗಳು ಇರಲಿಲ್ಲವು. ಅಂತು ಹಣವೇನೋ ಮಾಯವಾಗಿರುವುದು. ಈ ಮೋಸದಿಂದ ಸಾವಿರಾರು ಬಡಜನರು ಕೈಲಿದ್ದ ದುಡ್ಡನ್ನು ಕಳೆದುಕೊಂಡು ರೋದಿಸುತ್ತಿರುವರು.

ತಾಯಿಯು ಮಗನಿಗೆ ಹೇಳುವ ಬುದ್ಧಿವಾಕ್ಯಗಳು.

1. ಹೊಂಬಣ್ಣದ ಕೂದಲಿನ್ನೂ ಕಪ್ಪಾದ ಕಣ್ಣುಗುಡ್ಡೆಯನ್ನೂ ಉಂಟಾಗಿರುವ ಸ್ತ್ರೀಯನ್ನು ನಂಬಬೇಡ. ಅಂಥಾ ಸ್ತ್ರೀಯರು ಅಪಾಯಕಾರಿಗಳು. 2. ದೊಡ್ಡದಾದ ಮೂಗು, ಗದ್ದ, ಬಾಯಿಗಳಿರತಕ್ಕ ಸ್ತ್ರೀಯನ್ನ ಮದುವೆಯಾಗಬೇಡ. ಇವರು ನಿನ್ನಿಷ್ಟಾನುಸಾರ ನಡೆಯುವವರಲ್ಲ. 3. ಶೀಲು ಇಲ್ಲದಿರುವ ಸಾಮಾನ್ಯ ಸ್ತ್ರೀಯಲ್ಲಿ ಸದ್ಗುಣಗಳಿವೆ ಎಂಬ ಭ್ರಾಂತಿಯಿಂದ ಅಂಥಾವರನ್ನು ವಿವಾಹವಾಗಬೇಡ. ಇಂಥವರಲ್ಲಿ ಸೌಂದರ್ಯವಿಲ್ಲದಿದ್ದರೂ, ಸುಂದರಿಯರಲ್ಲಿರುವಷ್ಟೇ ಆಟಪಾಟಗಳಿರಬಹುದು. **4. ಉಡುಪಿನಲ್ಲಿ ತುಂಬಾ ಆಶೆಯುಳ್ಳವರನ್ನು ಮದುವೆಯಾದರೆ ನಿನ್ನ ಆಸ್ತಿಯೇ ಹಾರಿಹೋಗುವುದು. ಯುಕ್ತವಾದ ಉಡುಪುಹಾಕದಿದ್ದವರಲ್ಲಿ ಆತ್ಮಗೌರವವೇ ಕಡಿಮೆಯಾಗಿರುವುದು. 5. ತನ್ನ ಅಭಿಪ್ರಾಯಗಳನ್ನು ಮುಂದಕ್ಕೆ ತರಬೇಕೆನ್ನುವವಳನ್ನ ಮದುವೆಯಾಗಬಾರದು. ಪರರ ಅಭಿಪ್ರಾಯಗಳಿಗೆ ಕಿವಿ ಕೊಡುವ ಆತ್ಮಗೌರವವುಳ್ಳ ಸ್ತ್ರೀಯನ್ನ ವಿವಾಹವಾಗು. 6. ನಿನಗಿಂತಲೂ ಉತ್ತಮಸ್ಥಿತಿಯಲ್ಲಿರುವ ಕನ್ಯೆಯನ್ನು ಮದುವೆಯಾದರೆ, ಆಕೆಯು ನಿನ್ನನ್ನು ಹೀನೈಸುವಳು. ನಿನಗಿಂತಲೂ ಕೀಳುಸ್ಥಿತಿಯಲ್ಲಿರುವವಳನ್ನಾದರೆ, ನೀನೇ ಆಕೆಯನ್ನ ತುಚ್ಛವಾಗಿ ಕಾಣುವೆ. ಇವೆರಡೂ ಕೆಟ್ಟುದು. 7. ಪವಿತ್ರವಾದ ವಿಷಯಗಳನ್ನು ಅಗೌರವವಾಗಿ ಕಾಣುವವಳನ್ನು ಮದುವೆಯಾಗಬಾರದು. ಕಾಲಕ್ರಮೇಣ ನಿನ್ನನ್ನು ಅಗೌರವವಾಗಿ ಕಾಣುವಳು. 8. ವಿಶೇಷ ಪರಿಜ್ಞಾನವುಳ್ಳ ಅಥವಾ ವಿಶೇಷ ವಾಚಾಳಿಯಾದ ಸ್ತ್ರೀಯಾದರೆ ಮಾತಿನಲ್ಲಿಯೇ ಬೆರಗುಮಾಡಿ ನಿನಗೆ ಯಾವ ಗುಟ್ಟನ್ನೂ ತಿಳಿಸಳು. 9. ಪ್ರಥಮದಲ್ಲಿ ಬಹು ಪ್ರೇಮಭರಿತಳಾದಂತೆ ಆಡುವ ಯಾವ ಸ್ತ್ರೀಯನ್ನ ಮದುವೆಯಾಗಬೇಡ. ಅಂಥ ಪ್ರೇಮವು ಜಾಗ್ರತೆ ಸವಿಹೋಗುವುದು. ಅನಂತರ ಪ್ರೇಮಬಂಧನವಿಲ್ಲದೆ ದೀರ್ಘಕಾಲ ಅವಳೊಡನೆ ನೀನು ಸಂಸಾರ ಮಾಡಬೇಕಾಗುವುದು. 10. ಯೌವನಸ್ಥಳಾಗಿರುವ ಅಥವಾ ಯೌವನಸ್ಥರಂತೆ ತೋರ್ಪಡಿಸಿಕೊಳ್ಳುವ ವಿಧವೆಯರ ವಿಚಾರದಲ್ಲಿ ಜಾಗರೂಕನಾಗಿರು. ಪುರುಷರ ದೌರ್ಬಲ್ಯವು ಅವರಿಗೆ ಜಾಗ್ರತೆ ಗೋಚರವಾಗುವುದು. 11. ಸ್ಥೂಲಶರೀರವುಳ್ಳವಳು ಬುದ್ಧಿಹೀನಳು. ಆಕೆಗೆ ಬುದ್ಧಿಯಿದ್ದರೆ ಶರೀರವನ್ನು ಅಷ್ಟಕ್ಕೆ ತಂದುಕೊಳ್ಳುತ್ತಿರಲಿಲ್ಲ. ಅದರೆ ಕೇವಲ ತೆಳುವಾದ ಸ್ತ್ರೀಯು ಬಹುಸಿಡುಕಿನ ಸ್ವಭಾವವುಳ್ಳವಳು. 12. ಹಿಂದೆ ಯಾವುದಾದರೂ ನಡತೆಗೆ ಹೆಸರು ಪಡೆದಿರುವ ಸ್ತ್ರೀಯನ್ನ ಮದುವೆಯಾಗಬಾರದು. ಯಾಕೆಂದರೆ ಆಕೆಯ ಹಿಂದಿನ ನಡತೆಯೇ ಈಗಲೂ ಇರುವುದು ಮತ್ತು ಮುಂದೆ ನಿನ್ನ ಅನುಭವಕ್ಕೂ ಬರುವುದು. 13. ಅವಿವಾಹಿತಳಾದ ಸ್ತ್ರೀಯ ಹೆಸರನ್ನು ಮುಂದಕ್ಕೆ ತರಬಾರದು ಹಾಗೆ ಮಾಡಿದರೆ, ನಿನ್ನನ್ನು ವಿವಾಹವಾಗುವುದಕ್ಕೆ ಆಕೆಗೆ ಮೊದಲು ಯಾವ ಪ್ರತಿ ಬಂಧಕವಿಲ್ಲದಿದ್ದರೂ, ಈಗ ಹೊಸದಾಗಿ ಉಂಟಾದಂತಾಗುವುದು. 14. ಮೋಹವಶನಾಗಿ ದೇವತಾಸ್ವರೂಪಳೆಂದು ಭ್ರಾಂತಿಪಟ್ಟು ಯಾರನ್ನೂ ಮದುವೆಯಾಗಬೇಡ. ಆಕೆಯಲ್ಲಿ ಅಂಥ ದೇವಗುಣವಿಲ್ಲದಿದ್ದರೂ, ಬುದ್ಧಿ ಮಾತ್ರ ಪ್ರಳಯಾಂತಕವಾಗಿರಬಹುದು.** ಒ. ಪ.

(ಆರೋಗ್ಯಚಂದ್ರಿಕೆಯಿಂದ.)

ಆರೋಗ್ಯವಿಧಿಯಿಂದ ಸ್ನಾನಮಾಡುವರೀತಿ.

ಚರ್ಮದ ಉಪಯೋಗವು, ನಮ್ಮ ದೇಹವನ್ನು ಮುಚ್ಚಿಕೊಂಡಿರುವುದು ಮಾತ್ರವೇ ಅಲ್ಲ. ನಮ್ಮ ಮೈಯಲ್ಲಿ ಉಂಟಾಗಬಹುದಾದ ಕೆಲವು ಕಶ್ಮಲಗಳನ್ನು ಹೊರಕ್ಕೆ ಹಾಕುವುದೂ, ದೇಹದ ಉಷ್ಣವನ್ನು ಸರಿಯಾಗಿ ಕಾಪಾಡಿಕೊಂಡು ಬರುವುದೂ, ಇವೆರಡೂ ಚರ್ಮದ ಕೆಲಸಗಳೇ! ನಮ್ಮ ದೇಶದ ಹವಾಗುಣದಲ್ಲಿ ಉಷ್ಣವು ಅಧಿಕವಾದ್ದರಿಂದ, ಬೇರೆ ಶೀತದೇಶಗಳಲ್ಲಿ ಚರ್ಮದಿಂದ ನಡೆಯುವ ಕೆಲಸಕ್ಕಿಂತಲೂ ಇಲ್ಲಿ ಹೆಚ್ಚು ಕೆಲಸವು ನಡೆಯುವುದು. ಎಂದರೆ :—ಆ ದೇಶಗಳಲ್ಲಿ, ಮೂತ್ರಕೋಶ ಮತ್ತು ಶ್ವಾಸಕೋಶಗಳಲ್ಲಿ ನಡೆಯಬೇಕಾದ ಕೆಲಸಗಳಲ್ಲಿ ಕೆಲವು ಭಾಗವು, ಉಷ್ಣದೇಶಗಳಲ್ಲಿ ಚರ್ಮದಿಂದ ನಡೆಯುವುದು. ಇದು ನಮಗೆ ಅನುಭವದಿಂದಲೇ ತಿಳಿಯುತ್ತಿದೆ. ಬೇಸಗೆಯಲ್ಲಿ ನಮಗೆ ಬೆವರು ಹೆಚ್ಚಾಗಿ, ಮೂತ್ರವಿಸರ್ಜನೆ ಕಡಿಮೆಯಾಗುವುದು. ಶೀತಕಾಲಗಳಲ್ಲಿ ಬೆವರು ಕಡಿಮೆಯಾಗಿ ಮೂತ್ರವು ಹೆಚ್ಚಾಗುವುದು. ಸೂಕ್ಷ್ಮದರ್ಶಕ ಯಂತ್ರದಿಂದ ನೋಡಿದರೆ, ಚರ್ಮದಲ್ಲಿ ಒಂದು ಚದುರಂಗುಲದಷ್ಟು ಅಗಲಕ್ಕೆ 300 ಮೊದಲು 3000 ದ ವರೆಗೆ ರಂಧ್ರಗಳು (ರೋಮಕೂಪಗಳು) ಉಂಟು. ಈ ರಂಧ್ರಗಳ ಮೂಲಕವಾಗಿಯೇ ನಮ್ಮ ಮೈಯೊಳಗಿನ ಕಶ್ಮಲವು ಬೆವರಿನ ರೂಪದಿಂದ ಹೊರಬೀಳುವುವು. ಈ ರಂಧ್ರಗಳು ಕೊಳೆಗಳಿಂದಾಗಲಿ, ಸತ್ತು ಹೋದ ಚರ್ಮದ ಪರೆಗಳಿಂದಾಗಲಿ ಮುಚ್ಚಿ ಹೋದರೆ, ಆರೋಗ್ಯಕ್ಕೆ ಹಾನಿಯುಂಟಾಗುವುದು. ಸಾಧಾರಣ ವೇಗವುಳ್ಳ ಒಂದು ವಿಷವು ಹೊಟ್ಟೆಯೊಳಕ್ಕೆ ಸೇರಿದರೆ ಎಷ್ಟು ಅಪಾಯವುಂಟೋ, ಅದೇ ಅಪಾಯವನ್ನು ಇದರಿಂದಲೂ ಊಹಿಸಬಹುದು. ಏಕೆಂದರೆ, ...ವಿಷವಸ್ತುವು ಬಾಯಿಯ ಮೂಲಕವಾಗಿ ಹೊಟ್ಟೆಗೆ ಹೊದರೂ, ಚರ್ಮರಂಧ್ರದ ಮೂಲಕವಾಗಿ ದೇಹದೊಳಗೆ ಸೇರಿದರೂ, ಸಂಭವಿಸುವ ಹಾನಿಯೇನೋ ಒಂದೇ! ಅದರೆ, ಒಂದುವೇಳೆ ಈ ಚರ್ಮದ ಮೂಲಕವಾಗಿ ಮೈಯಲ್ಲಿ ಸೇರಿದ ವಿಷವು, ಅಷ್ಟುವೇಗದಿಂದ ಕೆಲಸಮಾಡದೇ ಇರಬಹುದು. ಇದುಹೊರತು, ಇವುಗಳಿಗೆ ಬೇರೆ ವ್ಯತ್ಯಾಸವೇನೂ ಇಲ್ಲ. ಶುದ್ಧವಾದ ಗಾಳಿಯು ಹೇಗೋ ಹಾಗೆಯೇ ಮೈಚರ್ಮವನ್ನು ಶುಚಿಯಾಗಿಡುವುದೂ, ಆರೋಗ್ಯರಕ್ಷಣೆಗೆ ಅವಶ್ಯವಾಗಿದೆ. ಏಕೆಂದರೆ, ಶರೀರದಲ್ಲಿರುವ ಕಶ್ಮಲಗಳು ಹೊರಗೆ ಬರುವುದಕ್ಕೆ ಚರ್ಮವು ಶುದ್ಧವಾಗಿರಬೇಕಾದುದು ಅವಶ್ಯವು. ಹಾಗೆಯೇ ಶ್ವಾಸಕೋಶಗಳನ್ನು ಶುದ್ಧಿಪಡಿಸುವುದಕ್ಕೆ ಶುದ್ಧವಾದ ಗಾಳಿಯು ಅವಶ್ಯವು. ಇದರಿಂದ, ಶ್ವಾಸಕೋಶಗಳಿಗೆ ಶುದ್ಧವಾದ ಗಾಳಿಯು ಹೇಗೋ ಹಾಗೆ, ಚರ್ಮಶುದ್ಧಿಗೂ ಶುದ್ಧವಾದ ನೀರು ಅವಶ್ಯವು. ಪ್ರತಿದಿನವೂ ಸ್ನಾನಮಾಡಿ ಮೈಯನ್ನು ತೊಳೆಯಬೇಕು. ನಮ್ಮ ಪೂರ್ವಿಕರು ತ್ರಿಕಾಲಸ್ನಾನವನ್ನು ನಮ್ಮ ಮತಾಚಾರದಲ್ಲಿ ಒಂದು ಮುಖ್ಯಭಾಗವನ್ನಾಗಿ ವಿಧಿಸಿದುದೂ ಈ ಉದ್ದೇಶದಿಂದಲೇ! ಈ ವಿಧಿಯನ್ನು ಸರಿಯಾಗಿ ಅನುಷ್ಠಿಸುತ್ತಬಂದರೆ ಈ ದೇಶದಲ್ಲಿ ಮನುಷ್ಯಜಾತಿಗೆ ಬರತಕ್ಕ ಎಷ್ಟೋ ರೋಗಗಳನ್ನು ಬಾರದಂತೆ ನಿವಾರಿಸಬಹುದು. ಅನೇಕರು ಶಾಸ್ತ್ರಾಚಾರಕ್ಕಾಗಿ ಸ್ನಾನಮಾಡುವ ನೆವದಿಂದ, ನಾಲ್ಕಾರು ಚೊಂಬುಗಳ ನೀರನ್ನು ಮೈಮೇಲಿ ಅಥವಾ ತಲೆಯಮೇಲೆ ಸುರಿದುಕೊಂಡು ಬಂದುಬಿಡುವರು. ಇದರಿಂದ ಹೆಸರಿಗೆ ತಾವು ಸ್ನಾನಮಾಡಿಬಂದ ಹಾಗೆ ಹೇಳಿಕೊಳ್ಳಬಹುದೇ ಹೊರತು, ಆ ಸ್ನಾನದಿಂದಾಗುವ ಪ್ರಯೋಜನವೇನೂ ಇಲ್ಲ. ಆದರೆ ಸ್ನಾನವೇ ಇಲ್ಲದಿರುವುದಕ್ಕಿಂತ ಮೇಲೆಂದು ಹೇಳಬಹುದು.

ಚರ್ಮದಲ್ಲಿ ಜಿಡ್ಡುಂಟಾಗುತ್ತಿರುವುದರಿಂದ, ಸ್ನಾನಕಾಲದಲ್ಲಿ ಸಬನ್ನಾಗಲಿ, ಸೀಗೇಕಾಯಿ ಪುಡಿಯನ್ನಾಗಲಿ ಹಾಕಿ ಉಜ್ಜಿ ತೊಳೆಯಬೇಕು. ಮತ್ತು ಒರಟಾದ ಬಟ್ಟೆಯಿಂದ ಮೈಯನ್ನು ಒರೆಸುವುದರಿಂದಲೂ ಚರ್ಮವು ಶುದ್ಧವಾಗುವುದು. ಅದರೆ, ಈಚೀಚೆಗೆ ಹಳ್ಳಿಗಾಡುಗಳ ಜನರೂ ಕೂಡ ಸೋಪಿನ ಗುಣಾವಗುಣಗಳನ್ನು ನೋಡದೆ, ಅಗ್ಗವಾದ ಯಾವುದಾದರೂ ಒಂದು ಸೋಪನ್ನು ಹಾಕಿ ತಿಕ್ಕಿಕೊಳ್ಳುವ ವಾಡಿಕೆಯಿದೆ. ಕೆಲವು ಸೋಪುಗಳು ಚರ್ಮವನ್ನು ಕೆಡಿಸುವುವು. ಸಿಕ್ಕಿದ ಸೋಪುಗಳನ್ನು ಅಗ್ಗದಾಸೆಗಾಗಿ ಕೊಂಡುಕೊಂಡು ಉಪಯೋಗಿಸುವುದಕ್ಕಿಂತಲೂ, ಸೀಗೇಕಾಯಿ ಪುಡಿಯೇ ಒಳ್ಳೆಯದು. ಸೋಪಿನಲ್ಲಿ ಎಣ್ಣೆ ಮತ್ತು ಒಂದು ಬಗೆಯ, “ಅಲ್ಕಲಿ” ಎಂಬ ಕ್ಷಾರ ಇವೆರಡೂ ಸೇರಿದೆ. ಅದನ್ನು ಮೈಗೆ ಉಜ್ಜುವಾಗ ಮೈಯಲ್ಲಿ ಹುಟ್ಟುವ ಕೊಳೆ, ಮತ್ತು ಚರ್ಬಿ ಅಥವಾ ಕೊಬ್ಬು ಇವೆರಡೂ ಆ ಸೋಪಿನ ನೀರಿನಲ್ಲಿ ಕರಗಿ, ನೀರಿನಲ್ಲಿ ಕೊಚ್ಚಿ ಹೋಗುವುದು. ಸೋಪು ಮೃದುವಾಗಿಯೂ, ಕನ್ನಡಿಯಂತೆ ಪಾರದರ್ಶಕ ಗುಣವುಳ್ಳದಾಗಿಯೂ ಇದ್ದರೆ ಉತ್ತಮವು. ಸೋಪನ್ನು ಮೈಗೆಲ್ಲಾ ಚೆನ್ನಾಗಿ ತಿಕ್ಕಿತೊಳೆಯಬೇಕು. ಹೆಚ್ಚು ದುರ್ಗಂಧ ಹುಟ್ಟುವ ಕಂಕುಳು ಮೊದಲಾದ ಸಂಧಿಗಳಲ್ಲೆಲ್ಲಾ ಚೆನ್ನಾಗಿ ಉಜ್ಜಬೇಕು “ಅಲ್ಕಲಿ” ಕ್ಷಾರವಸ್ತುವು ಹೆಚ್ಚಾಗಿ ಸೇರಿದ ಸೋಪನ್ನು ಮೈಗೆ ಹಾಕಿದರೆ, ಚರ್ಮವು ಒರಟಾಗು

ದುಃಖವನ್ನು ನೀಗುವದು! ಓಂ ಸೌಖ್ಯವನ್ನು ಕೊಡಿಸುವದು!

ಶಿವಾನುಭವಬೋಧೆ

ಇದು ಸಾಮವೇದದ ಶಿರವಾದ ಛಾಂದೋಗ್ಯೋಪನಿಷತ್ತಿನ ಆರನೆ ಅಧ್ಯಾಯದಲ್ಲಿ “ತತ್ವಮಸಿ” ಅವಸ್ತುವೇ ನೀನಿರುವಿ ಎಂದು ಶ್ವೇತಕೇತುವೆಂಬ ಉತ್ತಮಾಧಿಕಾರಿಯನ್ನು ಕುರಿತು ಉದ್ದಾಲಕ ಮಹಾಮುನಿಯು ಒಂಭತ್ತುಸಾರಿ ಬೋಧಿಸಿರುವನು. ಗೀರ್ವಾಣಭಾಷಾರಹಿತರಿಗೆ ತದರ್ಥಗೋಚರವಾಗಲರಿಯದೆಂದು ಮುಮುಕ್ಷುಗಳ ಹಿತಾರ್ಥಕ್ಕಾಗಿ ತತುಪನಿಷತ್ಸಾರವನ್ನೇ ಸುಲಭವಾಗಿ ತಿಳಿಯುವಂತೆ ಕನ್ನಡ ಪದ್ಯರೂಪವಾಗಿ ರಚಿಸಲ್ಪಟ್ಟಿದೆ. ಸರ್ವರು ಈ ಉತ್ತಮ ಗ್ರಂಥವನ್ನು ಕರಿಸಿಕೊಂಡು ಶ್ರವಣಮನನಾದಿಗಳನ್ನು ಮಾಡಿ ಜ್ಞಾನಾನಂದಭರಿತರಾಗಿ ಜನ್ಮಸಫಲತೆಯನ್ನು ಸಾರ್ಥಕಗೊಳಿಸಿರಿ ಸ್ವಲ್ಪ ಪ್ರತಿಗಳುಳಿದಿವೆ. ಬೇರೆ ಸ್ವಲ್ಪ ಫಲಪೂರಿತವಾಗಿದೆ. ಕ್ರಯ ೦—೧೨—೦. [೩—೩]

ವಿಳಾಸ:—ಎಂ. ಎಸ್. ಸುಬ್ಬಣ್ಣ ಚಾಕುಬಂಡೆ,
ಪೋಸ್ಟು ಚಿಪ್ಪಗಿರಿ ತಾ|| ಆಲೂರು ಜಿಲ್ಲಾ ಬಳ್ಳಾರಿ.

ವುದಲ್ಲದೆ ಉರಿ ಕಾಣುವುದು. ಬೆಳಗ್ಗೆ, ಹೊತ್ತಿಗೆ ಮುಂಚೆ, ಅಥವಾ ಮಧ್ಯಾಹ್ನಕಾಲದಲ್ಲಿ ಸ್ನಾನಮಾಡುವುದು ಆರೋಗ್ಯಕರವು. ಹೊಟ್ಟೆತುಂಬ ಊಟಮಾಡಿರುವಾಗಾಗಲಿ, ಬಹಳ ದಣಿವಿರುವಾಗಾಗಲಿ ಸ್ನಾನಮಾಡಬಾರದು. ಸಾಯಂಕಾಲ ಅಥವಾ ರಾತ್ರಿ ಸ್ನಾನಮಾಡುವವರು ಬಿಸಿನೀರನ್ನು ಉಪಯೋಗಿಸಬೇಕು. ತಣ್ಣೀರಿನ ಸ್ನಾನವೇನೋ ಬಹಳ ಆರೋಗ್ಯಕರವೇ! ದೃಢಕಾಯರಾದ ತರುಣರು ಯಾವಾಗಲೂ ತಣ್ಣೀರಿನಲ್ಲಿ ಸ್ನಾನಮಾಡುವುದು. ಒಳ್ಳೆಯದು. ಚಿಕ್ಕವಯಸ್ಸಿನವರೂ, ವೃದ್ಧರೂ, ಅಶಕ್ತರೂ ತಣ್ಣೀರಿನಲ್ಲಿ ಸ್ನಾನಮಾಡಿದರೆ ನೆಗಡಿ ಹಿಡಿಯುವುದರಿಂದ ಬಿಸಿನೀರನ್ನೇ ಉಪಯೋಗಿಸಬೇಕು. ತಣ್ಣೀರಿನಲ್ಲಿ ಸ್ನಾನಮಾಡುವವರು ಬಹಳ ಹೊತ್ತು ಅದರಲ್ಲಿ ಅಲೆಯಬಾರದು. ಅದರಲ್ಲಿಯೂ ಮುಖ್ಯವಾಗಿ ಗಾಳಿಯು ತಂಪಾಗಿ ಬೀಸುತ್ತಿರುವಾಗ, ಬಹುಬೇಗನೆ ಸ್ನಾನವನ್ನು ಮುಗಿಸಬೇಕು. ಸ್ನಾನಮಾಡತಕ್ಕ ನೀರು ಶುದ್ಧವಾಗಿಲ್ಲದಿದ್ದರೆ, ಕಜ್ಜಿ, ತುರಿ ಮುಂತಾದ ಚರ್ಮರೋಗಗಳಿಗೆಲ್ಲಾ ಅವಕಾಶವಾಗುವುದರಿಂದ, ಸ್ನಾನದ ನೀರೂ ಶುಚಿಯಾಗಿರುವಂತೆ ನೋಡಬೇಕು. ದೇಹಸ್ವಸ್ಥವಿಲ್ಲದವರು ಸ್ನಾನಮಾಡುವುದು ಕ್ಲಿಷ್ಟವಾದ್ದರಿಂದ, ಬಿಸಿನೀರಿನಲ್ಲಿ ನೆನಸಿದ ಚೌಕದಿಂದ ಮೈಯ್ಯನ್ನು ಒರೆಸುವುದು ಉತ್ತಮ. ಸ್ನಾನಕ್ಕೆ ಮೊದಲು ಮೈಯನ್ನು ಚೆನ್ನಾಗಿ ನೀವಿ. ಅಥವಾ ಒತ್ತಿಸಿಕೊಂಡು, ಆ ಮೇಲೆ ಸ್ನಾನಮಾಡುವ ಪದ್ಧತಿಯಲ್ಲಿ ಬಹಳ ಗುಣವುಂಟು. ಅದರಲ್ಲಿಯೂ ಮುಖ್ಯವಾಗಿ ದೃಢವಾದ ಮೈಕಟ್ಟಿಲ್ಲದ ಬಲಹೀನಪ್ರಕೃತಿಗಳಿಗೆ ಇದು ಬಹಳ ಒಳ್ಳೆಯದು.

ಈ ದೇಶದಲ್ಲಿ ಆಗಾಗ ಎಣ್ಣೆ ಹಚ್ಚಿಕೊಂಡು ಅಭ್ಯಂಜನಸ್ನಾನ ಮಾಡುವ ಸಂಪ್ರದಾಯದಲ್ಲಿ ಬಹಳ ಒಳ್ಳೇ ಗುಣವುಂಟು. ಎಣ್ಣೆಯನ್ನು ನೀವಿ ಮೈಯೊತ್ತುವುದರಲ್ಲಿ ದೇಹಕ್ಕೆ ಸುಖವುಂಟಾಗುವುದರೊಡನೆ, ಆ ಎಣ್ಣೆಯನ್ನು ನಿಶ್ಶೇಷವಾಗಿ ನೀಗಿಸುವುದಕ್ಕಾಗಿ ಸೀಗೇಕಾಯಿಯನ್ನು ಹಾಕಿ ಚೆನ್ನಾಗಿ ಉಜ್ಜಬೇಕಾದ ಅವಶ್ಯಕತೆ ಬರುವುದರಿಂದ, ಕೊಳೆಯೆಲ್ಲಾ ಹೋಗಿ ಚರ್ಮವು ಬಹಳ ಶುದ್ಧವಾಗುವುದು. ಅಲ್ಲದೆ ಅಭ್ಯಂಗನದಿಂದ ಚರ್ಮಕ್ಕೆ ಮೃದುತ್ವವೂ, ಕಣ್ಣಿಗೂ ಮೈಗೂ ತಂಪೂ ಆಗುತ್ತದೆ.

ಆದರೆ, ಕೆಲವರು ತಮಗೆ ತಾವೇ ಎಣ್ಣೆ ಹಚ್ಚಿಕೊಂಡು, ಒಡನೆಯೇ ನಾಲ್ಕಾರು ಚೊಂಬು ನೀರನ್ನು ತಲೆಯಮೇಲೆ ಸುರಿದುಕೊಳ್ಳುವರು. ಆ ಎಣ್ಣೆಯೆಲ್ಲಾ ಚೆನ್ನಾಗಿ ಹೋಗುವಂತೆ ಸೀಗೇಕಾಯನ್ನೂ ಉಜ್ಜದೆ, ಬಹುಬೇಗನೆ ಸ್ನಾನದಿಂದ ಎದ್ದು ಬರುವರು. ಇದರಿಂದ ಪ್ರಯೋಜನವಿಲ್ಲ. ಇದರಿಂದ ಮೈಯಲ್ಲಿ ಎಣ್ಣೆಯ ಜಿಡ್ಡು ಹಾಗೆಯೇ ನಿಂತು ಹೋಗುವುದು. ಹೀಗೆ ಎಣ್ಣೆಯು ನಿಶ್ಶೇಷವಾಗಿ ಬಿಟ್ಟುಹೋಗದಿದ್ದರೆ ಆರೋಗ್ಯಕ್ಕೆ ಹಾನಿಯುಂಟು. ಚರ್ಮರಂಧ್ರಗಳಲ್ಲೆಲ್ಲಾ ಜಿಡ್ಡು ಸೇರಿಕೊಂಡು ಅದರ ಸಂಗಡ ಕೊಳೆಯೂ ನಿಂತುಹೋಗುವುದರಿಂದ, ಆ ರಂಧ್ರಗಳ ಬಾಯಿಯು ಮುಚ್ಚಿ ಹೋಗುವುದು. ಬೆವರಿನ ನೀರೂ, ಕಶ್ಮಲವೂ ಧಾರಾಳವಾಗಿ ಹೊರಕ್ಕೆ ಬರಲು ಅವಕಾಶವಿಲ್ಲದೆ ತುರಿ, ಕಜ್ಜಿ, ಕಡಿ, ಮುಂತಾದ ಚರ್ಮರೋಗಗಳಿಗೂ, ಇತರ ವ್ಯಾಧಿಗಳಿಗೂ ಕಾರಣವಾಗುವುದು.

ಸ್ನಾನಮಾಡುವಾಗ, ಮತ್ತು ಸ್ನಾನಮಾಡಿದ ಕೂಡಲೆ, ಶೀತವಾದ ಗಾಳಿಯು ಹೆಚ್ಚಾಗಿ ಮೈಮೇಲೆ ಬೀಸದಂತೆ ಎಚ್ಚರತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಜ್ವರ, ಕೆಮ್ಮಲು, ವಿಷಮಶೀತಜ್ವರ, ಚಳಿ, ಮುಂತಾದ ಕ್ರೂರವ್ಯಾಧಿಗಳೆಲ್ಲಾ ತಲೆದೋರುವುದಕ್ಕೆ ಅವಕಾಶವಾಗುವುದು. ಆದ್ದರಿಂದ ಮೈಯುಜ್ಜಿ ಸ್ನಾನಮಾಡಿದೊಡನೆ ಬಟ್ಟೆಯಿಂದ ಚೆನ್ನಾಗಿ ಒರೆಸಿಕೊಂಡು, ಮೈಮುಚ್ಚಿ ಹೊದೆದುಕೊಳ್ಳಬೇಕು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಶೋಚನೀಯವಾರ್ತೆ.

ಬೆಂಗಳೂರು ಡಿ|| ಶಿವಗಂಗಾ ಮಹಾಕ್ಷೇತ್ರದಲ್ಲಿರುವ ಮೇಲಣಗವಿ ಸಂಸ್ಥಾನದ ಮಠದ ಏಜಂಟರಾಗಿದ್ದ ಶ್ರೀಮಾನ್ ಮಠದ ಬಸವಲಿಂಗದೇವರು ವೃದ್ಧಾಪ್ಯದೆಶೆಯಿಂದ ಕಳೆದ ತಾ|| 1 ರಲ್ಲಿ ಶಿವಸಾಯುಜ್ಯಪದವಿಯನ್ನು ಹೊಂದಿದರು. ಇವರಿಗೆ ಮರಣಕಾಲದಲ್ಲಿ 63 ವರ್ಷ ವಯಸ್ಸಾಗಿದ್ದಿತು. ಈ ಮಠದ ಪಟ್ಟಾಧ್ಯಕ್ಷರಾದ ಶ್ರೀ ಚನ್ನವೀರದೇಶಿಕೇಂದ್ರ ಮಹಾಸ್ವಾಮಿಯವರು 1900 ರಲ್ಲಿ ಅಧಿಕಾರವನ್ನು ವಹಿಸಿದಾರಾಭ್ಯ, ಕೈ|| ಬಸವಲಿಂಗದೇವರು ಏಜಂಟ್ ಅಧಿಕಾರವನ್ನು ವಹಿಸಿಕೊಂಡು ಈತನಕ್ ವರೆಗೂ ಬಹಳ ದಕ್ಷತೆಯಿಂದ ಮಠದ ಆಡಳಿತವನ್ನು ನಿರ್ವಹಿಸಿದ್ದಲ್ಲದೆ ಜೀರ್ಣವಾಗಿದ್ದ ಮಠವನ್ನು ಬಹಳ ಶ್ರಮವಹಿಸಿ ಕಟ್ಟಿಸಿ ಮಹಾಸ್ವಾಮಿಗಳ ಮೆಚ್ಚಿಕೆಗೂ ಪೂರ್ಣಾನುಗ್ರಹಕ್ಕೂ ಪಾತ್ರರಾಗಿದ್ದರಲ್ಲದೆ ಜನಾನುರಾಗಿಗಳಾಗಿದ್ದರು. ಇವರ 11 ನೆಯ ದಿನದ ಆರಾಧನೆಗೆ ಅನೇಕ ಪೇಟೆಶೆಟ್ಟಿ ಯಜಮಾನರುಗಳೂ ಜಂಗಮಸ್ತೋಮವೂ ಸಾವಿರಾರು ಭಕ್ತರುಗಳೂ ಬಂದಿದ್ದರು. ಇವರ ಮಗನಾದ ಸಿದ್ಧಬಸವಾರಾಧ್ಯರು ತಂದೆಯಂತೆ ಮಠದ ಏಜಂಟ್ ಕೆಲಸವನ್ನು ವಹಿಸಿಕೊಂಡು ಸ್ವಾಮಿಗಳ ಕೃಪೆಗೆ ಪಾತ್ರರಾಗಿ ಜನಾನುರಾಗಿಗಳಾಗುವರೆಂದು ನಿರೀಕ್ಷಿಸುವ

ಮಠದ ಶಿಷ್ಯ.

ತಿಪಟೂರು ಶ್ರೀಮಂತ ಕೊಟ್ಟೂರಪ್ಪನವರ ಕುಮಾರರಾದ ಮ|| ಗುರಪ್ಪನವರು ಡಬ್ಬಲ್‌ನ್ಯುಮೋನಿಯಾ ರೋಗಪೀಡಿತರಾಗಿ ಡಿ|| ಸರ್ಜನ್ ಮೊದಲಾದವರಿಂದ ಚಿಕಿತ್ಸೆ ಹೊಂದಿದಾಗ್ಯೂ ಗುಣಹೊಂದದೆ ಕಳೆದ ಅಕ್ಟೋಬರ್ ತಾ|| 25 ರಲ್ಲಿ ಶಿವಾಧೀನರಾದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತದೆ. ಇವರು ಇನ್ನೂ ಚಿಕ್ಕವಯಸ್ಸಿನವರಾಗಿದ್ದಾಗ್ಯೂ ಬಹಳ ಸರಸಿಗಳಾಗಿಯೂ, ಉದಾರಿಗಳಾಗಿಯೂ ಇದ್ದರಲ್ಲದೆ ರೆಪ್ರೆಜೆಂಟೇಟಿವ್ ಅಸಂಬ್ಲಿ ಮೆಂಬರಾಗಿಯೂ ಈ ಟವನ್ ಮ್ಯುನಿಸಿಪಲ್ ವೈಸ್‌ಪ್ರಸಿಡೆಂಟರಾಗಿಯೂ ಕೆಲ ವರ್ಷಗಳವರೆಗಿದ್ದು ಜನಸೇವೆಮಾಡಿ ಖ್ಯಾತಿಗೊಂಡಿದ್ದರು. ಇವರ ಉತ್ತರಕ್ರಿಯಾದಿಗಳನ್ನು ಇವರ ತಮ್ಮಂದಿರು ತಮ್ಮ ಅಂತಸ್ತಿಗೆ ತಕ್ಕಂತೆ ಬಹಳ ಉದಾರವಾಗಿ ಮಾಡಿದರು. ಇವರ ಅಕಾಲಮರಣದಿಂದ ಇವರ ಬಂಧುಬಳಗಕ್ಕೂ ಊರಿನವರಿಗೂ ಬಹಳ ವ್ಯಸನವುಂಟಾಗಿರುವದಲ್ಲದೆ ಇಲ್ಲಿಯ ಮ್ಯುನಿಸಿಪಾಲಿಟಿಯವರು ಒಂದು ಸ್ಪೆಷಲ್ ಮೀಟಿಂಗ್ ಮಾಡಿ ಮ|| ಗುರಪ್ಪನವರ ಮರಣದಿಂದ ತಮಗುಂಟಾದ ದುಃಖವನ್ನು ಅವರ ತಮ್ಮಂದಿರಿಗೆ ತಿಳಿಸಬೇಕಾಗಿ ರೆಜ್ಯುಲೋಷನ್ ಮಾಡಿದರು. ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಸನ್ನಿಧಿಯ ಅನುತಾಪವನ್ನೂ ದುಃಖೋಪಶಮನವನ್ನೂ ಮೃತರ ತಾಯಿಯವರಿಗೂ ತಮ್ಮನಿಗೂ ತಿಳಿಸಿರುವುದಾಗಿದೆ. ಮೃತರ ತಾಯಿಯವರು ತಮ್ಮ ಕುಮಾರನ ಹೆಸರಿನಿಂದ ಕೈ|| ಶ್ರೀ ಪಂಚಾಕ್ಷರಿಸ್ವಾಮಿಗಳ ಗದ್ದುಗೆಯನ್ನೂ 9 ಅಂಕಣದ ದೇವಸ್ಥಾನವನ್ನೂ 2000 ರೂಪಾಯಿ ಖರ್ಚಿನಿಂದ ಕಟ್ಟಿಸುತ್ತೇವೆಂದು ಶ್ರೀಮನ್ನಿರಂಜನ ರುದ್ರಸ್ವಾಮಿಗಳಿಗೆ ನಮಸ್ಕಾರಮಾಡಿ ಒಪ್ಪಿಕೊಂಡು ಕೆಲಸಕ್ಕುಪಕ್ರಮಿಸಿರುವರು. ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬದವರಿಗೆ ದುಃಖಶಮನವನ್ನೂ ಉಂಟುಮಾಡಬೇಕೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ. ಜಿ. ತಮ್ಮಯ್ಯ, ತಿಪಟೂರು.

ಮಂಡ್ಯ ತಾಲ್ಲೂಕು ಬೆಸಗರಹಳ್ಳಿ.

ಇಲ್ಲಿ ಮಳೆಯಿಲ್ಲದೆ ಪೈರುಪಚ್ಚೆಗಳೆಲ್ಲಾ ಒಣಗಿದವು. ನಮ್ಮ ಹೋಬಳಿ ಶೇಕದಾರ್ರು ಮ|| ಟಿ. ಎಂ. ಈಶ್ವರಯ್ಯನವರು ಇಲ್ಲಿಗೆ ಬಂದಲಾಗಾಯಿತು ಸರ್ಕಾರಿಕೆಲಸಗಳು ಬಹಳ ಚಟುವಟಿಕೆಯಾಗಿ ನಡೆಯುತ್ತಿದ್ದುವು. ಇವರು ರೈತರ ವಿಷಯದಲ್ಲಿ ದಯಾಳುಗಳಾಗಿದ್ದುಕೊಂಡು ಬಹಳ ನಿಷ್ಪಕ್ಷಪಾತೆಯಿಂದ ಕೆಲಸ ಮಾಡುತ್ತಿದ್ದರು. ನಾಲ್ಕಾರು ವರ್ಷಗಳಿಂದಲೂ ಮುಲ್ಕಿಯಲ್ಲಿ ನಿಂತಿದ್ದ ಕಂದಾಯ ಬಾಕಿಗಳೆಲ್ಲವನ್ನೂ ಬೇಬಾಕಾಗಿ ವಸೂಲಿ ಮಾಡಿದರು. ಇಂತಹ ಮಹನೀಯರನ್ನು ಬೇರೆ ಹೋಬಳಿಗೆ ವರ್ಗಮಾಡುವರೆಂಬ ಸಂಗತಿ ಕೇಳಿ ಎಲ್ಲಾ ಗ್ರಾಮಗಳ ರೈತರೂ ಸೇರಿ ಏಕವಾಕ್ಯತೆಯಿಂದ ಡೆಪ್ಯುಟಿಕಮಿಷನರ್ ಸಾಹೇಬರವರಿಗೆ ವರ್ಗಮಾಡದಂತೆ ಫಿರ್ಯಾದು ಹೇಳಿಕೊಂಡೆವು. ರೈತರ ಅಹವಾಲನ್ನು ಚಿತ್ತಕ್ಕೆ ತಂದುಕೊಂಡು ವರ್ಗದ ಆರ್ಡರನ್ನು ಕ್ಯಾನ್ಸಲ್ ಮಾಡುವರೆಂದೂ, ಸರ್ಕಾರಿ ಕೆಲಸದಲ್ಲಿ ಇಷ್ಟು ಶ್ರದ್ಧಾಭಕ್ತಿಯನ್ನು ವಹಿಸಿರುವ ಈ ಶೇಕದಾರ್ರಿಗೆ ಬೇಗ ಪ್ರಮೋಷನ್ ಕೊಡುವರೆಂದೂ ಹಾರೈಸುತ್ತೇವೆ.

ಪ್ರಜಾಹಿತೈಷಿಗಳು, ಬೆಸಗರಹಳ್ಳಿ.

ಬೆಂಕಿಯ ಅನಾಹುತ.

ತಾ|| 18-11-1923 ನೇ ಭಾನುವಾರ ರಾತ್ರಿ 1 ಘಂಟೆ ಸಮಯದಲ್ಲಿ ಮಂಡ್ಯದ ತಾಲ್ಲೂಕು ಕಸಬಾ ಹೋಬಳಿ ಶಿವಾರವೆಂಬ ಗ್ರಾಮದಲ್ಲಿ ಇದ್ದಕ್ಕಿದ್ದಹಾಗೆ ಬೆಂಕಿಯುಬಿದ್ದು ಸುಮಾರು 15 ಮನೆಗಳು ಸುಟ್ಟುಹೋದುದ್ದು ಮಾತ್ರವಲ್ಲದೆ, ರೈತರುಗಳಿಗೂ ಜಾನುವಾರುಗಳಿಗೂ ತುಂಬಾ ಉಕ್ಸಾನಾಗಿರುತ್ತೆ. ಈ ಅನಾಹುತದಿಂದ, ಈ ಗ್ರಾಮಕ್ಕೆ ಸುಮಾರು 2000 ರೂ. ಗಳವರಿಗೂ ನಷ್ಟಸಂಭವಿಸಿರುತ್ತೆ. ಈ ಸಂದರ್ಭದಲ್ಲಿ 2 ಮೇಕೆಗಳು ಮಾತ್ರ ಈಚೆಗೆ ಬರಲಾರದೆ ಒಳಗೇ ಸಿಕ್ಕಿ ಸುಟ್ಟುಹೋದುವು. ಬಾಕಿಯವರಿಗೆ ಪ್ರಾಣಭಯವೇನೂ ಸಂಭವಿಸಲಿಲ್ಲ. ಇಂಥಾ ಕಷ್ಟಕಾಲದಲ್ಲಿ ಕೊಪ್ಪದ ಹೋಬಳಿ ಬೆಸಗರಹಳ್ಳಿ ಗ್ರಾಮದ ಮ|| ಗಳಾದ ಖಾಜಾಹುಸೇನ್ ಸಾಹೇಬರವರ ಮಕ್ಕಳು ಮ|| ಮೊಹಿದೀನ್ ಸಾಹೇಬರುರಾಬಿ ಮತ್ತು ಇವರ ತಮ್ಮಂದಿರು ಮ|| ಗೌಸ್‌ಸಾಹೇಬರೂ ಸಹ ತಮ್ಮಲ್ಲಿದ್ದ ಬಿದುರು, ಬೊಂಬುಗಳು ಮತ್ತು ತೆಂಗಿನಮೊಟ್ಟೆಗಳನ್ನು ಆ ಗ್ರಾಮದವರಿಗೆ ಸಪ್ಲೈಮಾಡುವುದರ ಮೂಲಕ, ಕೈಲಾದ ಸಹಾಯವನ್ನು ಮಾಡುತ್ತಾ ಇದಾರೆ. ಇದು ಕೇವಲ ಸ್ತೋತ್ರಾರ್ಹವಾದುದಾಗಿದೆ. ಈ ಮಹನೀಯರ ಮೇಲ್ಪಂಕ್ತಿಯನ್ನನುಸರಿಸಿ ಅಜೂಬಾಜೂ ಗ್ರಾಮಸ್ಥರೂ ಸಹ ಆ ಗ್ರಾಮದ ದಿಕ್ಕಿಲ್ಲದ ರೈತರುಗಳಿಗೆ ಸಹಾಯಮಾಡುತ್ತಾರೆಂದು ನಂಬಿರುತ್ತೇನೆ.

ಬಿ. ರಾಮಶಾಸ್ತ್ರಿ, ಬೆಸಗರಹಳ್ಳಿ.

ದೊಡ್ಡಬಳ್ಳಾಪುರದ ರೀಡಿಂಗ್ ರೂಂ.

ಇದರ ಪ್ರಾರಂಭೋತ್ಸವವು ಇದೇ 14ನೆ ತಾ|| ಬುಧವಾರ ಪ್ರಾತಃಕಾಲ 9 ಗಂಟೆಗೆ ಥಿಯೋಸಾಫಿಕಲ್ ಹಾಲಿನಲ್ಲಿ ಮ|| ರಾ|| ರೆವಿನ್ಯೂ ಕಮಿಷನರ್ ಕೆ. ಚಾಂಡಿಸಾಹೇಬರವರ ಅಧ್ಯಕ್ಷತೆಯಲ್ಲಿ ನಡಿಸಲ್ಪಟ್ಟಿತು. ಬೆಂಚ್ ಮ್ಯಾಜಿಸ್ಟ್ರೇಟರೂ ಮುನ್ಸಿಪಲ್ ಮೆಂಬರುಗಳೂ ವಗೈರೆ ದೊಡ್ಡ ಮನುಷ್ಯರು 200 ಜನರ ಮೇಲೆ ನೆರೆದಿದ್ದರು. ಸೆಕ್ರೆಟರಿ ಮ|| ಎ. ಆತ್ಮಾರಾಮಶೆಟ್ಟರು ರಿಪೋರ್ಟನ್ನು ಓದಿದ ತರುವಾಯ ಸಭಾಧ್ಯಕ್ಷರು ವಾಚಕಾಲಯದ ಪ್ರಯೋಜನವನ್ನು ಕುರಿತು ತಮ್ಮ ಉಪನ್ಯಾಸದಲ್ಲಿ ಪ್ರಜೆಗಳ ಉಪಯೋಗಕ್ಕಾಗಿ ಮಾಡುವ ಇಂತಹ ಸತ್ಪ್ರಯತ್ನಗಳಲ್ಲಿ ತಮಗಿರುವ ಆಸಕ್ತಿಯನ್ನು ವ್ಯಕ್ತಪಡಿಸಿದರು. ಮತ್ತು ಇಂತಹ ವಾಚಕಾಲಯವು ಊರಿಗೆ ಬಹಳ ಅವಶ್ಯಕವಾದ್ದರಿಂದ ಡಿಸ್ಟ್ರಿಕ್ಟ್ ಬೋರ್ಡ್ ಮುನ್ಸಿಪಾಲಿಟಿ ಇವುಗಳಿಂದ ಸಹಾಯಪಡೆದು ತಪ್ಪದೆ ಚಿರಸ್ಥಾಯಿಯಾಗಿ ನಡಿಯುವಂತೆ ಉತ್ತಮಸ್ಥಿತಿಗೆ ತಂದಿಡಬೇಕೆಂತಲೂ ಮತ್ತು ವಾಚಕಾಲಯವು ಪ್ರಜಾಕೂಟದ ಸ್ಥಳವಾದ್ದರಿಂದ ಅಲ್ಲಿ ನಮ್ಮ ಶ್ರೀಮನ್ ಮಹಾರಾಜಾ ಸಾಹೆಬ್ ಬಹದ್ದೂರರವರ ಭಾವಚಿತ್ರವನ್ನು ತರಿಸಿ ತಗಲುಹಾಕಬೇಕೆಂತಲೂ ಹೇಳಿ ಇನ್ನು ಅನೇಕ ವಿಧವಾಗಿ ಈ ಊರನ್ನು ಅಭಿವೃದ್ಧಿಪಡಿಸಲು ತಮಗಿರುವ ವಾತ್ಸಲ್ಯವನ್ನು ತಿಳಿಸಿದರು. ಮ|| ರಾ|| ಡಿ. ಕೊಂಗಾಡಿಯಪ್ಪನವರು ಇದಕ್ಕೆ ಪ್ರೆಸಿಡೆಂಟರಾಗಿರುವುದರಿಂದ ತಮ್ಮ ಸರ್ವ ಪ್ರಯತ್ನಗಳಿಂದಲೂ ಇದನ್ನು ಶಾಶ್ವತಗೊಳಿಸುವರೆಂದು ನಂಬಿದೆ ಎಂಬುದಾಗಿ ಹೇಳಿದರು.

ಪುರನಿವಾಸಿ.

ಪ್ರಯಾಣದ ಸೌಕರ್ಯವು.

ಹೆಗ್ಗಡದೇವನಕೋಟೆ ತಾಲ್ಲೂಕು ಇತರ ತಾಲ್ಲೂಕುಗಳಿಗಿಂತ ಪ್ರಜಾಭಿವೃದ್ಧಿಯಲ್ಲಿ ಚಿಕ್ಕದಾಗಿಯೂ ಹಿಂದಾಗಿಯೂ ಗೌರ್ನಮೆಂಟ್ ಉತ್ಪತ್ತಿಯಲ್ಲಿ ಸಹ ಬಹಳ ಕಡಿಮೆಯಾಗಿಯೂ ಇರುತ್ತೆ; ಹೀಗಿದ್ದಾಗ್ಯೂ ಈ ತಾಲ್ಲೂಕಿನಲ್ಲಿರುವ ಕಾರಾಪುರದ ಕ್ಯಾಂಪಿನಿಂದಲೂ, ಆನೆಗಳು ಮತ್ತು ಸಾಗ್ವಾನಿಯ ಮರಗಳ ಪ್ರಸಿದ್ಧಿಯಿಂದಲೂ ಇಂಡ್ಯಾದೇಶದಲ್ಲೆಲ್ಲಾ ಕೀರ್ತಿ ಹೊಂದಿರುತ್ತದೆಂದು ಧಾರಾಳವಾಗಿ ಹೇಳಬಹುದು. ಇತರ ತಾಲ್ಲೂಕುಗಳಲ್ಲಿ ಪ್ರಯಾಣಿಕರ ಸೌಕರ್ಯಕ್ಕಾಗಿ ರೈಲ್ ಮತ್ತು ಮೋಟಾರು ಇಡಲ್ಪಟ್ಟಿರುವಂತೆ ಈ ನಮ್ಮ ತಾಲ್ಲೂಕಿನಲ್ಲಿ ಇದುವರಿವಿಗೂ ಇಡಲ್ಪಟ್ಟಿರಲಿಲ್ಲ. **ಇದುನಮ್ಮ ತಾಲ್ಲೂಕಿನ ದೌರ್ಭಾಗ್ಯವೆಂತ ಭಾವಿಸಿ ಈ ವಿಚಾರದಲ್ಲಿ ನಾನು ಆಗಾಗ್ಗೆ ತಿಳಿಸುತ್ತಾ ಇದ್ದದ್ದಲ್ಲದೆ ಕಳೆದ ನಮ್ಮ ತಾಲ್ಲೂಕು ಕಾನ್ಫರೆನ್ಸಿನಲ್ಲೂ ಸಹ ಸಬ್‌ಜಕ್ಟು ಮೂಲಕ ಸರ್ಕಾರದವರಲ್ಲಿ ಅರಿಕೆ ಮಾಡಿರುತ್ತೇನೆ. ಈ ತಿಂಗಳ ಲಾಗಾಯಿತು ಮೈಸೂರು ಮಾರುತಿ ಮೋಟಾರು ಸರ್ವಿಸ್ ಕಂಪನಿಯವರು ಈ ನಮ್ಮ ತಾಲ್ಲೂಕು ಕಡೆ ದೃಷ್ಟಿಯಿಟ್ಟು ಧೈರ್ಯದಿಂದಲೂ ಮುಂದಾಳುತನದಿಂದಲೂ ಉತ್ಸಾಹದಿಂದಲೂ ಪ್ರಸಿದ್ಧಪತ್ರಿಕೆಯನ್ನು ಹಂಚಿ ಪ್ರಯಾಣಿಕರ ಸೌಕರ್ಯಕ್ಕಾಗಿ ಮೋಟಾರು ನಡಿಸುತ್ತಾ ಇರುತ್ತಾರೆ. ಆದ್ದರಿಂದ ನಮ್ಮ ತಾಲ್ಲೂಕು ಮಹಾಜನಗಳಲ್ಲಿ ನಾನು ವಿಜ್ಞಾಪಿಸಿಕೊಳ್ಳುವುದೇನಂದರೆ—ಆಯಾ ಗ್ರಾಮಗಳಲ್ಲಿ ತಕ್ಕ ಪ್ರೋತ್ಸಾಹ ಕೊಟ್ಟು ಪ್ರಯಾಣಿಕರ ಸಂಖ್ಯೆ ಹೆಚ್ಚಿಸಿ ಮೇಲ್ಕಂಡ ಮೋಟಾರು ಕಂಪನಿಯವರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಖಾಯಂ ನಡೆಯುವಂತೆ ನಿಲ್ಲಿಸಿಕೊಳ್ಳಬೇಕಾಗಿ ಅರಿಕೆ.**

ಆರ್. ಕುಮಾರಾರಾಧ್ಯ,
ಗ್ರಾಮಕಮಿಟಿ ಮೆಂಬರ್ ಮತ್ತು ಸ್ಕಾಂಪುವೆಂಡರ್.

ಶಿವಯೋಗೀಶ್ವರ ಬೋರ್ಡಿಂಗ್ ಹಂಸಭಾವಿ.

ಶ್ರೀ ಶಿವಯೋಗಿಗಳ ಕೃಪಾಪಾತ್ರರಾದ ಶ್ರೀ ಪ್ರಣಮಸ್ವರೂಪಿ ಮೃತ್ಯುಂಜಯಸ್ವಾಮಿಗಳ ಆಶೀರ್ವಾದಬಲದಿಂದ ಸನ್ 1918 ನೇ ಇಸವಿಯಲ್ಲಿ “ಹಂಸಭಾವಿ ವೀರಶೈವ ವಿದ್ಯಾವರ್ಧಕ ಸಂಘವು” ಸ್ಥಾಪಿತವಾದದ್ದು ಸರ್ವಶ್ರುತವಿದೆಯಷ್ಟೆ. ಈ ಸಂಘದ ನೇತೃತ್ವದ ಕೆಳಗೆ 1919ನೇ ಇಸವಿಯಲ್ಲಿ “ಶ್ರೀ ಮೃತ್ಯುಂಜಯ ಇಂಗ್ಲೀಷ ಸ್ಕೂಲ” ಎಂಬ ಸಂಸ್ಥೆಯು ಸ್ಥಾಪಿತವಾಗಿ ಅದರಲ್ಲಿ ಈಗ 5ನೇ ಇಯತ್ತೆಗಳವರೆಗೆ ಅಭ್ಯಾಸವು ನಡೆದಿದ್ದು ವಿದ್ಯಾರ್ಥಿಗಳ ಸಂಖ್ಯಾ 60 ರ ಮೇಲ್ಪಟ್ಟು ಅದೆ. ಈ ಸಂಸ್ಥೆಯ ಮುಖ್ಯ ಉದ್ದೇಶವು (To educate and elevate the poor) ಹಳ್ಳಿವಾಡದ ಬಡವಿದ್ಯಾರ್ಥಿಗಳಿಗೆ ಇಂಗ್ಲೀಷ ವಿದ್ಯಾಭ್ಯಾಸಕ್ಕೆ ಅನುಕೂಲಮಾಡಿಕೊಡುವದಿರುತ್ತದೆಂಬುವದು ಈ ಸಂಘವು ಕಳೆದ 5 ವರ್ಷಗಳಿಂದ ಮಾಡುತ್ತಬಂದ ಕಾರ್ಯಗಳಿಂದ ಒಡೆದು ಕಾಣುತ್ತದೆ. 1920 ನೇ ಇಸವಿಯಲ್ಲಿ ಈ ಸಂಸ್ಥೆಯವರು ಶ್ರೀ ಮೃತ್ಯುಂಜಯ ಫ್ರೀ ಬೋರ್ಡಿಂಗ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದನ್ನು ಬಹು ದಕ್ಷತೆಯಿಂದ ನಡಿಸಿಕೊಂಡು ಬಂದಿದ್ದಾರೆ. ಮತ್ತು ವಿದ್ಯಾರ್ಥಿಗಳ ಸಂಖ್ಯೆಯು ಪ್ರತಿವರ್ಷ ಹೆಚ್ಚುತ್ತ ನಡೆದದ್ದರಿಂದ ಸದರಿ ಬೋರ್ಡಿಂಗಿನ ಸಲುವಾಗಿ ಅವಕಾಶ ಒಂದುನೂರು ವಿದ್ಯಾರ್ಥಿಗಳಿಗೆ ಸಾಕಾಗುವಷ್ಟು ಒಂದು ಹೊಸಕಟ್ಟಡವನ್ನು ಮಾಡಿಸಬೇಕೆಂದು ಠರಾಯಿಸಿ ಹೋದವರ್ಷ ವಿಜಯದಶಮಿಯ ದಿವಸ ಮ|| ರುದ್ರಪ್ಪ ಹಂಜಿ ಸಾ|| ಹಿರೇಕೇರೂರ ಇವರ ಹಸ್ತದಿಂದ ಶಂಕುಸ್ಥಾಪನೆಯಾಗಿ ಈಗ ಸದರಿ ಕಟ್ಟಡವು ಮುಗಿಯಿತು. ಇದಕ್ಕೆ ಇನ್ನುಮುಂದೆ “ಶ್ರೀ ಶಿವಯೋಗೀಶ್ವರ ಬೋರ್ಡಿಂಗ್” ಎಂಬ ನಾಮಕರಣವನ್ನಿಟ್ಟು, ಇದೇತಿಂಗಳ 24ನೇ ತಾರೀಖಿನ ದಿವಸ ಬೆಳಗಿನ 10 ಘಂಟೆಯ ಸುಮಾರಕ್ಕೆ ಮೆಹರ್ಬಾನ್ ಕರ್ನಲ್ ಸಿ. ಎಸ್. ಕ್ಯಾಂಬೆಲ್ ಆಯ್.ಸಿ.ಎಸ್. ಕಲೆಕ್ಟರ ಧಾರವಾಡ ಇವರ ಹಸ್ತದಿಂದ “ತೆರೆಯಲ್ಪಡುವ ಸಮಾರಂಭವು ಜರಗಲು ನಿಶ್ಚಯಿಸಲ್ಪಟ್ಟಿದೆ. ಅದೇದಿವಸ ಮಧ್ಯಾಹ್ನ 11 ಘಂಟೆಯ ಸುಮಾರಕ್ಕೆ ಇಲ್ಲಿ ಸ್ಥಾಪಿಸಲ್ಪಟ್ಟಿರುವ “ಶ್ರೀ ಶಿವಯೋಗೀಶ್ವರ” ಸಾರ್ವಜನಿಕ ಲಾಯಬ್ರರಿಯ ಹೊಸಕಟ್ಟಡದ ಶಂಕುಸ್ಥಾಪನೆಯು ಸಹ ಸದರೀಯವರಿಂದಲೇ ಜರಗುವದಲ್ಲದೆ, ಮಧ್ಯಾಹ್ನ 3 ಘಂಟೆಯ ಸುಮಾರಕ್ಕೆ ರಾಜನಿಷ್ಠಾಸಭೆಯೂ ಕೂಡ ಸದರಿ ಕಲೆಕ್ಟರರ ಅಧ್ಯಕ್ಷತೆಯಲ್ಲಿಯೇ ಕೂಡತಕ್ಕದ್ದಿದೆ.

ನಂತರ ಈ ಸಂಘದ 4 ನೇ ಸಮ್ಮೇಲನವು ಶ್ರೀಯುತ ಕರವೀರಪ್ಪ ಕಲಕರ್ಣಿ ಪ್ಲೀಡರ ಧಾರವಾಡ ಇವರ ಅಧ್ಯಕ್ಷತೆಯ ಕೆಳಗೆ 5 ಗಂಟೆಯ ಸಮಯಕ್ಕೆ ಪ್ರಾರಂಭವಾಗುವದು. ಈ ಸಭೆಗೆ ಧಾರವಾಡ, ಹುಬ್ಬಳ್ಳಿ, ಬೆಳಗಾವ, ಹಾವೇರಿ ದಾವಣಗೇರಿ ಮುಂತಾದ ಕಡೆಯಿಂದ ಅನೇಕ ಸದ್ಗೃಹಸ್ಥರೂ ಪದವೀಧರರೂ ಬರುವರಲ್ಲದೆ ಕಾಯಿದೆ ಕೌನ್ಸಿಲ್ಲಿನ ಉಮೇದವಾರರೂ ಸಹ ಬರುವವರಿದ್ದಾರೆ. ಮತ್ತು ಪ್ರಸಿದ್ಧ ವ್ಯಾಖ್ಯಾತರಾದ ಇ. ಟಿ. ಟಿ. ಮುದಿರಡ್ಡಿಯವರು ಸದ್ಯದ ಬ್ರಾಹ್ಮಣೇತರ ಚಳವಳಿಯಮೇಲೂ, ಇ. ಪಿ. ಎಚ್. ಗುಂಜಳ ಬಿ. ಎ. ಎಲ್‌ಎಲ್. ಬಿ. ಪ್ಲೀಡರ ಧಾರವಾಡ ಇವರು ಸದ್ಯದ ರಾಜಕೀಯ ಪರಿಸ್ಥಿತಿಯ ಮೇಲೂ ಇ.ಸಿ.ಕೆ. ಒಡೆಯರವರು ಹಳ್ಳಿವಾಡ ಪ್ರದೇಶದಲ್ಲಿ ಆಂಗ್ಲವಿದ್ಯೆಯ ಮಹತ್ವದ ಮೇಲೂ ದಕ್ಷಿಣಭಾಗದ ಕೋಆಪರೇಟಿವ್ ಖಾತೆಯ ಡೆ. ಡಿರೆಕ್ಟರರಾದ ಇ. ಸಾಲೀಮಠದ ಸಾಹೇಬರವರು ಒಕ್ಕಲಿತನದಲ್ಲಿಯ ಸುಧಾರಣೆ ಮತ್ತು ಸಹಕಾರಿ ಸಂಘಗಳ ಮಹತ್ವ ಇವುಗಳ ಮೇಲೂ ಭಾಷಣಮಾಡಲು ಒಪ್ಪಿಕೊಂಡಿದ್ದಾರೆಂದು ತಿಳಿಸಲು ಆನಂದವಾಗುತ್ತದೆ. ಇವಲ್ಲದೆ ಇನ್ನೂ ಅನೇಕ ಮಹತ್ವದ ಭಾಷಣಗಳು ಆಗತಕ್ಕವವೆ.

ಟೀಪು :—ಅದೇ ದಿವಸ ರಾತ್ರಿ ಶ್ರೀ ಮೃತ್ಯುಂಜಯ ಇಂಗ್ಲೀಷ ಸ್ಕೂಲಿನ ವಿದ್ಯಾರ್ಥಿಗಳು ವಿವಿಧ ವಿನೋದಾವಳಿ ಎಂಬ ನಾಟಕ ಮಾಡಿ ತೋರಿಸತಕ್ಕವರಿದ್ದಾರೆ.

ಇ. ಸೋಮಪ್ಪ ಹುಚ್ಚಗೊಂಡರ ಇ. ಚನವೀರಪ್ಪ ಬೆಳಗನವರ
ಜಯಿಂಟ್, ಜನರಲ್ ಸೆಕ್ರೆಟರಿಗಳು. ಹಂಸಭಾವಿ, ವಿ. ವಿ. ಸಂಘ.

[ಸಂಯೋಜಕರ ಅಜಾಗರೂಕತೆಯಿಂದ ಈ ಲೇಖನವು ಇದಕ್ಕೆ ಪೂರ್ವ ಪ್ರಕಟವಾಗಲಿಲ್ಲವಾಗಿ ಕಾರ್ಯದರ್ಶಿಗಳ ಕ್ಷಮೆಯನ್ನು ಬೇಡುತ್ತೇವೆ.—ಸಂಪಾದಕ.]

ಬಡರೈತರ ಗೋಳು.

ತುಮಕೂರು ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿ ಈ ವರ್ಷ ಮಳೆ ಸುತರಾಂ ಬಿಡದೆ ಕೆರೆಗಳಿಗೆಕೂಡ ನೀರು ಇಲ್ಲದೆ ಹಾಲಿ ಇಟ್ಟಿರುವ ಪೈರುಪಚ್ಚೆಗಳೆಲ್ಲಾ ಪೂರಾ ಒಣಗಿಹೋದ್ದರಿಂದ, ಜನರಿಗೆ ತಿಂಡಿಗೂ ದನಕರುಗಳಿಗೆ ಮೇವಿಗೂ ತುಂಬಾ ಅಭಾವವಾಗಿ ಬಡರೈತರು ಪಡುತ್ತಿರುವ ಶ್ರಮವು ಅತಿ ಮಹತ್ತರವಾದುದೆಂದು ನಮ್ಮ ಮೈಸೂರು ನಾಡಿನಲ್ಲೆಲ್ಲಾ ವರ್ತಮಾನಪತ್ರದಿರುವುದು ಸರ್ವಶ್ರುತವಷ್ಟೆ. ಬಡರೈತರ ಈ ವಿಧವಾದ ಹಾಹಾಕಾರವು ಸರ್ಕಾರದವರ ಪರಾಂಬರಿಕೆಗೆ ಬಂದು ಕೇವಲ ಅನಾವೃಷ್ಟಿ ತಲೆದೋರಿರುವ ಮಧುಗಿರಿ ತಾಲ್ಲೂಕು ಕೊರಟಗೆರೆ ಸಬ್‌ತಾಲ್ಲೂಕುಗಳ ಬಡಪ್ರಜೆಗಳ ಜೀವನೋಪಾಯಕ್ಕಾಗಿ ರಿಲೀಫ್ ಕಾಮಗಾರಿ, ತಕಾವಿಸಾಲಗಳ ರೂಪಕವಾಗಿ ಹತ್ತು ಸಾವಿರ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುವುದು ತುಂಬಾ ಸಂತೋಷಪ್ರದವಾದ ವಿಷಯವೇ ಆಗಿದ್ದರೂ, ಸರ್ಕಾರದವರ ಈ ಘನವುದ್ದೇಶಗಳು ನ್ಯಾಯತಃ ಪರಿಣಮಿಸುವುದರಲ್ಲಿ ರೈತರಿಗೆ ಅನೇಕ ವಿಧವಾದ ತೊಂದರೆಗಳು ಒದಗಿ ಜೀವನೋಪಾಯ ಮಾಡಿಕೊಳ್ಳಲವಕಾಶತಪ್ಪಿ ಸಾಲವಂದಿಗರಾಗಿ ವ್ಯಥೆಪಡುವಂತಾಗುವುದು. ಸರ್ಕಾರದ ಮುಖ್ಯಾ ಉಪಾಲು ಆಸ್ತಿಗೆ ಬಡರೈತರೇ ಮುಖ್ಯಕಾರಣರೆಂಬುದನ್ನು ಯಾರೊಬ್ಬರೂ ಹೇಳದಿರಲಾರರು. ಕಂದಾಯ ವಗೈರೆ ರೂಪದಲ್ಲಿ ರೈತರುಗಳಿಂದ ಹಣವೆಲ್ಲಾ ಸರ್ಕಾರದ ವಶವೇ ಆಗುತ್ತಿರುವುದು. **ಈರೀತಿಯಾದ ವರಮಾನವು ಬಡರೈತರಿಂದಲೇ ದೊರೆತಮೇಲೆ ಅವರಿಗೆ ಅಕಸ್ಮಾತ್ ಒದಗಿದ ಈ ದುರ್ಭಿಕ್ಷಕಾಲದಲ್ಲಿ ಘನಸರ್ಕಾರವು ಅವರಿಗೆ ಸರಿಯಾದ ಅನುಕೂಲತೆಗಳನ್ನು ಒದಗಿಸಿಕೊಟ್ಟು ಪ್ರಾಣದಾನಮಾಡುವುದು ಮುಖ್ಯವು. ಘನಸರ್ಕಾರವು ತಕಾವಿರೂಪವಾಗಿ ರೈತರಿಗೆ ಸಾಲಕೊಟ್ಟು ಋಣಸ್ಥರನ್ನಾಗಿ ಮಾಡುವುದಕ್ಕಿಂತಲೂ ಅವರಿಗೊದಗಿರುವ ಕ್ಷಾಮಬಾಧೆಯಿಂದ ವಿಮುಕ್ತರನ್ನಾಗಿಮಾಡಲು ತಾಲ್ಲೂಕಾಮಲಿ ದವಸದ ಡಿಪೋಗಳನ್ನು ಏರ್ಪಡಿಸುವುದರಮೂಲಕ ಬಡಜನರಿಗೆ ಸುಲಭದರದಲ್ಲಿ ದವಸಧಾನ್ಯಗಳು ದೊರಿಯುವಂತೆಯೂ, ಮೇವಿನ ಡಿಪೋಗಳನ್ನು ಇಡುವುದರಮೂಲಕ ದನಕರುಗಳಿಗೆ ಮೇವು ದೊರೆಯುವಂತೆಯೂ ಅನುಕೂಲಪಡಿಸಿಕೊಡುವುದು ಅವಶ್ಯಕವು. ಅಲ್ಲದೆ ಜೀವನಕ್ಕೆ ಸಾಲದೆ ಪೇಚಾಡುತ್ತಿರುವಾಗ್ಗೆ, ಮುಂದೆ ಕಂದಾಯಕೊಡಬೇಕಾದರೆ ಯಾವರೀತಿ ಮಾಡಬೇಕೆಂಬ ಯೋಚನೆಯು ಬೇರೆ ರೈತರನ್ನು ದಿಗಿಲುಗೊಳಿಸುತ್ತಿದೆ. ಮಳೆ ಬೆಳೆ ಇಲ್ಲದೆ ನಷ್ಟಪಟ್ಟಿರುವ ಕಡೆಗಳಲ್ಲೆಲ್ಲಾ ಸರ್ಕಾರದ ಒಬ್ಬ ಮುಖ್ಯ ಆಫೀಸರು ಸಂಚಾರಮಾಡುವುದರ ಮೂಲಕ ಪ್ರಜೆಗಳ ಅಹವಾಲುಗಳಂತೆ ಈ ವರ್ಷ ಕಂದಾಯ ರಿಮಿಷನ್ ಮಾಡಿಸಲೇರ್ಪಾಡು ಮಾಡಿಕೊಡುವುದು, ಸಾಕಾದಷ್ಟು ಜಲವಸತಿಗಳನ್ನು ಕಲ್ಪಿಸಿಕೊಡುವುದು ಅಂದರೆ ಮೈನರು ಕೆರೆಗಳನ್ನು ದುರಸ್ತುಮಾಡಿಸುವುದು, ಹಳ್ಳಿಗಾಡಿನಲ್ಲಿ ನೀರಿಗೆ ತೊಂದರೆಯಾಗಿರುವ ಕಡೆ ಭಾವಿಗಳನ್ನು ತೆಗಸಲೇರ್ಪಾಡುಮಾಡುವುದ, ಅನುಕೂಲವಾದೆಡೆಗಳಲ್ಲೆಲ್ಲಾ ನೂತನವಾಗಿ ಕೆರೆಗಳನ್ನು ಮಂಜೂರ್‌ಮಾಡುವುದು. ಹಳ್ಳಿಗಾಡಿನಲ್ಲಿರುವ ಕಾಡುರಸ್ತೆಗಳಿಂದ ಪ್ರಜೆಗಳಿಗೆ ವಿಪರೀತ ಕಷ್ಟ ನಷ್ಟಗಳುಂಟಾಗುತ್ತಿಂಬುದು ಹಳ್ಳಿಯವರ ಅನುಭವದಲ್ಲಿ ಮಾತ್ರ ತಿಳಿದಿರುವಷ್ಟು ಗ್ರಾಮಾಂತರದ ಪ್ರಜೆಗಳ ಪಕ್ಷವಾಗಿ ದಯಮಾಡುವ ಪ್ರತಿನಿಧಿ ಸಭಾಸದರುಗಳೂ, ಡಿಸ್ಟ್ರಿಕ್ಟು ಬೋರ್ಡ್ ತಾಲ್ಲೂಕು ಬೋರ್ಡುಗಳೂ ಘನಸರ್ಕಾರ**

ಅವಗಾಹನೆಗೆ ಬಂದರೋ ಇಲ್ಲವೋ ಎಂಬುದು ಸಂದೇಹಾಸ್ಪದವು. ಈಗಲಾದರೂ ಮೇಲ್ಕಂಡ ಅನುಕೂಲತೆಗಳನ್ನು ಕಲ್ಪಿಸಿಕೊಡುವುದರಮೂಲಕ ಬಡರೈತರಿಗೆ ಕೂಲಿಯಾದರೂ ಸಿಗುವಂತೆ ಮಾಡಿದಲ್ಲಿ ಎಷ್ಟೋ ಜನರು ಜೀವನವನ್ನು ಉಳಿಸಿಕೊಳ್ಳಲವಕಾಶವಾಗುವುದು. ಈ ಅನುಕೂಲತೆಗಳನ್ನು ಕಲ್ಪಿಸಿಕೊಡುವುದರಲ್ಲಿ ಘನಸರ್ಕಾರದವು ದ್ರವ್ಯಾಭಾವದ ಮುಗಟ್ಟನ್ನು ತೋರಿಸುವುದಾದರೆ ಬಡಪ್ರಜೆಗಳು ಹೊಟ್ಟೆ ಬಟ್ಟೆಗಳಿಲ್ಲದೆ ಬೀಳಯಾಗಿರುವ ಪರದೇಶಗಳಿಗೆ ವಲಸೆಹೋಗಲಿಚ್ಛಿಸುವವರು ಕೆಲವರು, ತಿಂದಿ ತೀರ್ಥಗಳಿಗಿಲ್ಲದೆ ಪ್ರಾಣಬಿಡುವವರು ಕೆಲವರು ಈರೀತಿ ಮಹದನರ್ಥಗಳಿಗೆ ಗುರಿಯಾಗಲವಕಾಶವಾಗುವುದು. ಈರೀತಿ ತೊಂದರೆಪಡುತ್ತಿರುವ ಬಡರೈತರ ಕಷ್ಟಗಳನ್ನು ದೇವರು ಎಂದಿಗೆ ಪಾರುಗಾಣಿಸುವನೋ ನೋಡಬೇಕು. ಹಳ್ಳಿಯ ರೈತರು ವಿದ್ಯಾಭಿವೃದ್ಧಿಯಲ್ಲಿ ಕೇವಲ ಹಿಂದುಳಿದವರೆಂಬುದು ಪ್ರತಿಯೊಬ್ಬರ ಪ್ರತಿದಿನದ ಬಾಯಿಮಾತಾಗಿರುತ್ತದೆ. ಈ ವಿದ್ಯಾಭ್ಯಾಸದ ವಿಷಯದಲ್ಲಿ ಪಟ್ಟಣವಾಸಿಗಳಿಗೆ ವಿಶೇಷ ಸೌಲಭ್ಯಗಳು ಕಲ್ಪಿಸಲ್ಪಟ್ಟಿರುತ್ತವೆ. ಹಳ್ಳಿಯ ರೈತರಿಗೆ ವಿದ್ಯೆಯ ಮಹತ್ವ ಗೊತ್ತಿಲ್ಲದ್ದರಿಂದಲೂ, ವಿದ್ಯೆಯಿಲ್ಲದೆ ತೊಂದರೆಪಡುತ್ತಿರುವ ಇವರ ವಿಷಯದಲ್ಲಿ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಡುವ ಶಿಕ್ಷಕರು (ಬೋಧಕರು) ಇಲ್ಲದ್ದರಿಂದಲೂ ಅಜ್ಞಾನಾಂಧಕಾರಕ್ಕೆ ಗುರಿಯಾಗಿ ವಿಶೇಷ ತೊಂದರೆಗೀಡಾಗಿರುವರು. ಈಚೀಚಿಗೆ ರೈತರ ಮಕ್ಕಳು ವಿದ್ಯಾಭ್ಯಾಸಮಾಡುವುದರಲ್ಲಿ ಮುಂದರಿದಿರುವದರಿಂದ ಇವರಿಗೆ ವೇತನಗಳನ್ನು ಮಂಜೂರುಮಾಡಿಸಿಕೊಡುವದು ವಗೈರೆ ನಾನು ಅರಿಕೆಮಾಡಿಕೊಂಡಿರುವಂತೆ ಪ್ರೈಮರಿ ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರೋತ್ಸಾಹವು ನಮ್ಮಗಳಿಗೆ ಘನಸರ್ಕಾರದವರಿಂದ ಎಂದಿಗೆ ದೊರೆತೀತೆಂದು ನಿರೀಕ್ಷಿಸುತ್ತೇನೆ. ಟಿ. ವಿ. ಮುತ್ತಯ್ಯ, ಶೀತ.

ಚೌಬೀನೆ ತೊಲೆಗಳ ಹರಾಜ್.

1923 ನೇ ಡಿಶಂಬರು ಮಾಹೆ ಭಾನುವಾರ ದಿವಿ 3 ಗಂಟೆ ಲಾಗಾಯಿತು 5 ಗಂಟೆ ವರೆವಿಗೂ ತರೀಕೆರೆ ಮುಕ್ಕಾಂನಲ್ಲಿ ರೈಲ್‌ಸ್ಟೇಷನ್ ಬಳಿ ಸುಮಾರು 400 ಮತ್ತೀಮರಗಳು ಚಿಕ್ಕ ಲಾಟಾಗಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತವೆ.

ಹರಾಜಿನ ಷರತ್ತುಗಳು.

ಹರಾಜಿನ ಹಣದ ಪೈಕಿ ಕಾಲುಭಾಗ ಹಣವನ್ನು ಒಡನೆಯೇ ಕೊಡತಕ್ಕದ್ದು. ಬಾಕಿ ಹಣ 15 ದಿವಸಗಳ ಒಳಗಾಗಿ ಪಾವತಿಮಾಡತಕ್ಕದ್ದು. ಪೂರಾಹಣ ಪಾವತಿಮಾಡಿದ ಹೊರತು ಮರ ಸಾಗಿಸಲ್ಪಡತಕ್ಕದ್ದಲ್ಲ. [3-1]

ಮುಸ್ಲಿಂಹಾಲ್ ರೋಡ್, ಬೆಂಗಳೂರು ಸಿಟಿ. 19—11—1923.
ಮಹಮ್ಮದ್‌ಅಬ್ಬಾಸ್ ಖಾನ್, ಟಿಂಬರ್‌ಮರ್ಚೆಂಟ್.

ಶ್ರೀ ಕೃಷ್ಣರಾಜೇಂದ್ರಮಿಲ್ಲಿನ

ಬನಿಯನ್ನುಗಳು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿ ಜವಳಿ ವ್ಯಾಪಾರ ಮಾಡುವ ದಾಶರಥಿ ಮತ್ತು ಕಂಪನಿಯವರಲ್ಲಿ ಮಾರಾಟಕ್ಕೆ ಸಿದ್ಧವಾಗಿವೆ.

ಮೈಸೂರು ಕೃಷ್ಣರಾಜೇಂದ್ರ ಮಿಲ್ಲಿನಲ್ಲಿ ನೂತನವಾಗಿ ತಯಾರಾಗಿರುವ ಹತ್ತಿಯ ಮತ್ತು ರೇಷ್ಮೆಯ ಬನಿಯನ್ನುಗಳು ಇತರ ಎಲ್ಲಾ ಬನಿಯನ್ನುಗಳಿಗಿಂತಲೂ ನಯವಾಗಿಯೂ, ಹೊಲಿಗೆಯು ಗಟ್ಟಿಯಾಗಿಯೂ ನೋಡುವುದಕ್ಕೆ ಅಂದವಾಗಿಯೂ ಇರುತ್ತವಲ್ಲದೆ ಈ ಕೆಳಗೆ ಕಂಡ ಅಳತೆಯಲ್ಲಿ ಮಾರಾಟಕ್ಕೆ ನಮ್ಮಲ್ಲಿ ಸಿದ್ಧವಾಗಿರುತ್ತವೆ.—ಗುಂಡಿಯಿರತಕ್ಕ ಮತ್ತು ಗುಂಡಿಯಿಲ್ಲದೆ ತಲೆಯಿಂದ ತೂರಿಸುವ ಹತ್ತಿಯ ಬನಿಯನ್ನುಗಳು, ಗುಂಡಿಹಾಕಿರತಕ್ಕ ರೇಷ್ಮೆಬನಿಯನ್ನುಗಳು 28, 30, 32, 34, 36, 38, 40 ಮತ್ತು 42 ಅಂಗುಲಗಳ ಸೈಜಿನಲ್ಲಿ ದೊರೆಯುತ್ತವೆ. ಬೆಲೆ ಮೊದಲಾದ ವಿಷಯಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು.

11

DASARATHY & COMPANY,
SILK & LACE CLOTH MERCHANTS,
SAYYAJI RAO ROAD, MYSORE.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಬಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಪುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಚಚ್ಚುವು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲಿಗಳು ಡಜನ್ ೧ ಕ್ಕೆ ರೂ. ೧—೮—೦ ವಿ.ಪಿ. ಚಾರ್ಜು ೦—೧೦—೦.

ಒಂದು ಔನ್ಸು ಬಾಟ್ಲಿಗಳು ಡಜನ್ ೧ ಕ್ಕೆ ರೂ. ೨—೮—೦ ವಿ. ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲಿ ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ: — ಟಿ. ಸಿ. ನಾಗಲಿಂಗಪ್ಪಾ ಮತ್ತ ಕಂಪೆನಿ,
[50—3] ಪೋಸ್ಟು ಬಾಕ್ಸ ನಂಬರು ೫೧೬, ಮದರಾಸು.

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪ್ರಭುಸೂಕ್ತ (ಸಟೀಕ)	೦—೨—೦
ಶಿವತತ್ತ್ವಚಿಂತಾಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[36—1] ಹೊಸಮಠ, ಮೈಸೂರು.

MYSORE RAILWAYS.

NOTIFICATION.

In connection with His Excellency the Viceroy's Tour over this Railway, the following changes in the running of Passenger trains will be made:—

1. No. 4 Down Passenger will start from Bangalore at 21-30 Hours Instead of 22 Hours on 28th instant and will arrive Mysore at 5-15 Hours on the morning of 29th Instant instead of 6 Hours.

2. No. 8 Down Mixed Train to Nanjangud will leave Mysore at 6/- Hours instead of 7 Hours on 29th Nov. 1923 and will arrive Nanjangud Town at 7/16 Hours or one hour earlier.

3. No. 5 Up Express on 29th Nov. 1923 will leave Mysore at 6-32 Hours instead of 7-15 Hours and will run through to Seringapatam without stopping at Paschamvahini. She will run to the usual timings from Seringapatam to Bangalore City.

4. No. 4 Down Passenger will leave Banglore at 21-15 Hours on 5th December 1923 instead of at 22-0 Hours and will run to special timings upto Hanakere from where scheduled timings will be picked up.

5. No. 3 Up Passenger of 5th December 1923 will leave Mysore at 21-30 Hours instead of at 22-0 Hours and run to special timings upto Bidadi where she will pick up the scheduled timings.

6. No. 2 Down Mail of 6th December 1923 will not stop at Bidadi.

7. No. 22 Down Narrow Guage Train will leave Bangalore City at 7.40 Hours on 27th Nov. 1923 instead of at 8-20 Hours and will arrive Yesvantapnr at 8-3 Hours instead of at 8-43 Hours and will pick up usual timings from that station.

8. For detailed timings of the trains referred to above, please see notices exhibited on the Notice Boards at Stations on the Bangalore-Mysore-Nanjangud Section.

Traffic Manager's Office,
Mysore, 14th Nov. 1923.
No. T. S. 104/23.

A. A. KHAN,
Traffic Manager.

ಹದಿನಾರನೆಯ

ಹಾಸನದ ದನಗಳ ಪ್ರದರ್ಶನ

[3—2]

ಪ್ರಸಿದ್ಧ ಪತ್ರಿಕೆ.

ಹಾಸನದ ಟರ್ವ ಮುಸಾಫರ್‌ಖಾನೆ ಆಜುಬಾಜೂ ಹಿಂಭಾಗದ ಮೈದಾನಗಳಲ್ಲಿಯೂ ಸಂತೆಮಾಳದಲ್ಲಿಯೂ ಸಹ ಮಾಮೂಲ್ ಮೇರೆ ಸನ್ 1924 ನೆ ಇಸ್ವಿ ಜನವರಿ ಮಾಹೆ 3 ನೇ ತಾರೀಖು ಗುರುವಾರ, 4 ನೇ ತಾರೀಖು ಶುಕ್ರವಾರ ಮತ್ತು 5 ನೇ ಶನಿವಾರ ಈ ದಿವಸಗಳಲ್ಲಿ ದನಗಳ ಪ್ರದರ್ಶನವು ನಡೆಸಲ್ಪಡುತ್ತೆಂಬ ಸಂಗತಿಯನ್ನು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ಪ್ರದರ್ಶನಕ್ಕೆ ಬರತಕ್ಕ ರಾಸುಗಳ ಪೈಕಿ ಉತ್ತಮವಾದ ರಾಸುಗಳಿಗೆ ಧಾರಾಳವಾಗಿ ಬಹುಮಾನಗಳು ಕೊಡಲ್ಪಡುತ್ತೆ.

ಪ್ರದರ್ಶನಕ್ಕೆ ಬರುವ ಜನ ಜಾನ್ವಾರುಗಳಿಗೆ ನೀರು ವಗೈರೆ ಸೌಕರ್ಯಗಳನ್ನು ಧಾರಾಳವಾಗಿ ಒದಗಿಸತಕ್ಕ ಏರ್ಪಾಡು ಮಾಡಲ್ಪಡುತ್ತೆ.

ತಪಸ್‌ಮರಿವಿಗೂ ಇಲ್ಲಿ ಸಾಂಕ್ರಾಮಿಕ ರೋಗಗಳು ಏನೊಂದೂ ಇರುವುದಿಲ್ಲ ಹವ ಚನ್ನಾಗಿದೆ.

ಜಾನ್ವಾರುಗಳ ಬಿಕ್ರಿಯು ಹೇರಳವಾಗಿ ನಡೆಯುವ ಸಂಭವವಿರುತ್ತೆ. ಈ ಕಾರಣಗಳಿಂದ ಹೆಚ್ಚಾಗಿ ಜನಗಳು ಜಾನ್ವಾರುಗಳು ಸೇರಬಹುದೆಂದು ನಂಬಿದೆ.

ಪ್ರಸಿದ್ಧವಾದ ನಾಟಕದ ಕಂಪನಿಗಳೂ ಸರ್ಕಸ್ ಆಟಗಳೂ ಜನಗಳಿಗೆ ಆನಂದ ವಿನೋದಗಳನ್ನುಂಟುಮಾಡಲು ಏರ್ಪಾಡು ಇರುತ್ತೆ. ಅಲ್ಲದೆ ದೇಶ ಪರದೇಶದ ವ್ಯಾಪಾರಸ್ಥರುಗಳೂ ಜಾತ್ರೆಕಾಲದಲ್ಲಿ ಇಲ್ಲಿ ನೆರದು ಲಕ್ಷಾಂತರ ರೂಪಾಯಿಗಳ ವ್ಯಾಪಾರಗಳು ಮಾಮೂಲಿನಂತೆ ನಡೆಯಬಹುದಾಗಿದೆ.

ಜಾತ್ರೆ ಕಾಲದಲ್ಲಿ ಜನಗಳ ನೆಮ್ಮದಿಗೆ ಭಂಗವಾಗದಂತೆ ರಕ್ಷಣಾಧಿಕಾರಿಗಳ ಸಹಾಯವೂ ಜನ ಜಾನ್ವಾರುಗಳ ವೈದ್ಯ ಚಿಕಿತ್ಸೆಗಳಿಗೆ ತಕ್ಕತಕ್ಕ ಆಸ್ಪತ್ರೆಗಳೂ ಏರ್ಪಾಡ್ಮಾಡಲ್ಪಡುತ್ತೆ.

ಜನಗಳಿಗೆ ತಿಳುವಳಿಕೆ ಉಂಟುಮಾಡುವ ಉದ್ದಿಶ್ಯ ವ್ಯವಸಾಯ, ರೇಷ್ಮೆ ವ್ಯವಸಾಯ ವಗೈರೆಗಳ ವಿಚಾರದಲ್ಲಿ ಅವಶ್ಯಕವಾದ ಪ್ರದರ್ಶನಗಳೂ ಏರ್ಪಾಡುಮಾಡಲ್ಪಡುತ್ತೆ.

ಮೈಸೂರು ಸರ್ಕಾರದವರು ಜಾನ್ವಾರುಗಳಲ್ಲಿ ಸುಪ್ರಸಿದ್ಧವಾಗಿರುವ ಅಮೃತಮಹಲ್ ರಾಸುಗಳನ್ನು ಪ್ರದರ್ಶನ ಕಾಲದಲ್ಲಿ ಹರಾಜು ಮೂಲಕ ವಿಲೇವಾರಿ ಮಾಡುವುದರಿಂದಲೂ ಇನ್ನುಮುಂದೆ ಈ ಜಾನ್ವಾರುಗಳು ದೊರೆಯುವುದೇ ಕಷ್ಟಸಾಧ್ಯವಾಗುವುದರಿಂದಲೂ ಜನಗಳೆಲ್ಲರೂ ಈ ಅವಕಾಶವನ್ನು ತಪ್ಪದೆ ಉಪಯೋಗಿಸಿಕೊಳ್ಳುತ್ತಾರೆಂದು ನಂಬಿದೆ.

ತಾ|| 14-11-1923,
ಹಾಸನ,

Belavadi Suryanarayana Rao,
Vice-President & Chairman,
Cattle Show Committee,
Hassan.

ಸುಳುಕ್ರಿಯು ! ಸುಳುಕ್ರಿಯು !!

ಡಾ. ಜೆ. ಬಿ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಸುಗಂಧ ಈ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—14] ಪೋ. ಬಾ. ೫೧೦, ಮದರಾಸು.

ಶ್ರೀಮನ್ ಯುವರಾಜರವರ ಜ್ಯೇಷ್ಠ ಕುಮಾರರಾದ ಶ್ರೀಮನ್ ಜಯಚಾಮರಾಜ ಒಡೆಯರವರ ಭಾವಚಿತ್ರವನ್ನಿಟ್ಟು ತಯಾರಿಸಿರುವ

1924 ನೇ ಇಸವಿಯ ಕ್ಯಾಲೆಂಡರುಗಳು.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು, ಎಂಬ ವಿಳಾಸಕ್ಕೆ ಒಂದಾಣಾ ಸ್ಟಾಂಪ್ ರವಾನಿಸುವವರಿಗೆ 1924 ನೇ ಇಸವಿಯ ಸಚಿತ್ರ ಷೀಟ್ ಕ್ಯಾಲೆಂಡರ್ 1 ನ್ನೂ, 1-2-0 ಮಣಿಯಾರ್ಡರ್ ಮಾಡುವವರಿಗೆ 50 ಕ್ಯಾಲೆಂಡರುಗಳನ್ನೂ, 2-0-0 ಮಣಿಯಾರ್ಡರ್ ಮಾಡುವವರಿಗೆ 100 ಕ್ಯಾಲೆಂಡರ್‌ಗಳನ್ನೂ ಪ್ಯಾಕಿಂಗ್ ಪೋಸ್ಟೇಜು ಯಾವ ಛಾರ್ಜೂ ಇಲ್ಲದೆ ನೀವಿದ್ದೆಡೆಗೆ ಫ್ರೀಯಾಗಿ ರವಾನಿಸುತ್ತೇವೆ.

ಅನೇಕ ಮುಖ್ಯ ವಿಷಯಗಳನ್ನು ನುಣುಪಾದ (ಗ್ಲೇಜ್) ಬಿಳೀ ದಪ್ಪ ಕಾಗದದಲ್ಲಿ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರು ಶ್ರೀಮನ್ ಯುವರಾಜರವರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರವರ ಭಾವಚಿತ್ರಗಳನ್ನು ಇಟ್ಟು ಅಂದವಾಗಿ ಪ್ರಿಂಟ್ ಮಾಡಿಸಿರುತ್ತೇವೆ. ಈ ಮಾದ್ರಿ ಕ್ಯಾಲೆಂಡರ್ 1 ಮಾತ್ರ ನಿಮ್ಮಲ್ಲಿದ್ದರೆ ಒಬ್ಬ ಜೋಯಿಸರು ಸದಾ ನಿಮ್ಮ ಸಂಗಡವಿದ್ದಂತೆಯೇ ಆಗುತ್ತೆ. 50 ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟ್ ಮೂಲಕ ರವಾನಿಸಲಾಗುವುದಿಲ್ಲಾ.

ನೀವು ಬರೆಯುವ ಪ್ರತಿಯೊಂದು ಟಪಾಲಿನಲ್ಲಿಯೂ ನಿಮ್ಮ ಹೆಸರು ವಿಳಾಸ ಸ್ಪಷ್ಟವಾಗಿ ಬರೆಯಬೇಕು.

ಮೈಸೂರು ಅರಮನೆ ಸಮೇತವಿರುವ ರಾಜಮನೆತನದವರ ಫೋಟೋ ಕಾಪಿ 100 ಕ್ಕೆ 2-0-0, ಮಾತ್ರ ಮೊಬಲಗು ಅಡ್ವಾನ್ಸ್ ರವಾನಿಸಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಮಾಫಿ.

ಮಣಿಯಾರ್ಡರ್ ರವಾನಿಸುವ ವಿಳಾಸ:—

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
[50—11] ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

೧೯೨೩ ನೆಯ ಇಸವಿ ನವಂಬರ್ ತಾ|| ೨೫ ರಿಂದ ೧೯೨೩ ನೆಯ ಡಿಶಂಬರ್ ತಾ|| ೧ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ನೆಯ ರುಧಿರೋದ್ಗಾರಿನಾಮಸಂವತ್ಸರದ ಕಾರ್ತೀಕ ಬಹುಳ ಬಿದಿಗೆಯಿಂದ ಕಾರ್ತೀಕ ಬಹುಳ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ ಮಾಸ
25	[1] ಭಾನು	ಬಿದಿ	34-37	ಮೃಗ	51-14	10
26	[2] ಸೋಮ	ತದಿ	38-9	ಆರ್ದ್ರಾ	55-50	11
27	[3] ಮಂಗಳ	ಚೌತಿ	40-36	ಪುನ	59-24	12
28	ಬುಧ	ಪಂಚ	42-13	ಪುಷ್ಯ	60-0	13
29	ಗುರು	ಷಷ್ಠಿ	42-33	ಪುಷ್ಯ	1-42	14
30	ಶುಕ್ರ	ಸಪ್ತ	40-30	ಆಶ್ಲೇ	3-0	15
1	ಶನಿ	ಅಷ್ಟ	39-11	ಮಘ	3-3	16

(1) ಚಾತುರ್ಮಾಸ್ಯದ್ವಿತೀಯಾ. (2) ಕಾರ್ತೀಕಸೋಮವಾರ. (3) ಸಂಕಷ್ಟಚತುರ್ಥಿ.

ಮೈಸೂರು: ಶ್ರೀ. [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕ್ಷಾವತಾರಾ ಪಕ್ಷಜ್ಞ ಸಹೃತ್ತ ಮೋಹರಾಜೀಯಾಶ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಪಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೬) ಮೈಸೂರ್ ಸ್ಟಾರ್ ಸರ್ ೧೯೨೩ ನೆಯ ಇಸವಿ ಡಿಶಂಬರ್ ತಾರೀಖು ೨ ನೆಯ ಭಾನುವಾರ. (ಸಂಚಿಕೆ ೪೮

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಪಾಸ್ತ್ರೀಯರಿಗೂ ತುಳಿತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಪ್ಲೇಗಿಗೆ ಸಂಜೀವನ.

ಲಕ್ಷೋಪಲಕ್ಷ ಪ್ಲೇಗುರೋಗಿಗಳ ಪ್ರಾಣವನ್ನು ಕಾಪಾಡಿರುವ ಕಾಪಾಡುತ್ತಿರುವ ಲಕ್ಷ್ಮೀವಿಲಾಸ ರಸವನ್ನು ಇಂದೇ ತರಿಸಿಟ್ಟುಕೊಳ್ಳಿರಿ. ಪ್ಲೇಗನ್ನೂ, ಪ್ಲೇಗಿರುವಾಗ ಬರುವ ಎಲ್ಲಾ ಜ್ವರಗಳನ್ನೂ, ಸತತ, ಸವಿತಕಾರಿ ಜ್ವರಗಳನ್ನೂ ಸಂದೇಹವಿಲ್ಲದೆ ನಂಬುಗೆಯಾಗಿ ಬೇಗನೆ ಗುಣಪಡಿಸುತ್ತದೆ. ಸೀಸೆ 1—0—0.

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ, ಮೈಕೈ ನೋವು, ತಲೆನೋವುಗಳು ಗುಣವಾಗುತ್ತದೆ. ಡಬ್ಬಿ 0—8—0.

ಪಾಳ್ಯದ ವೆಂಕಟಾಚಲಪಂಡಿತ,
42 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪತ್ಥ್ಯ **ಮದನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ಶೀಘ್ರ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. [50-42]

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ವಚನಶಾಸ್ತ್ರಸಾರ.

ಶ್ರೀ ಬಸವೇಶ್ವರ ಮೊದಲಾದ ಶಿವಶರಣರ ಮತತತ್ವಗಳನ್ನು ಅರಿತುಕೊಳ್ಳಬೇಕೆಂಬ ಆಕಾಂಕ್ಷೆಗಳು ವೀರಶೈವ ಸಮಾಜದಲ್ಲಿ ಇತ್ತಿತ್ತ ಉತ್ಪನ್ನವಾಗಿ ಹುಟ್ಟಿದ್ದು ಶುಭಚಿಹ್ನವೇ ಸರಿ. ಆದರೆ ಈ ತತ್ವಗಳು ಅವರು ರಚಿಸಿದ ವಚನಶಾಸ್ತ್ರದಲ್ಲಿಯೇ ವಿಶೇಷವಾಗಿ ದೊರಕುತ್ತವೆ. ಆದ್ದರಿಂದ ಅವರ ವಚನಗಳನ್ನು ಶೋಧಿಸಿ, ಅವುಗಳಲ್ಲಿಯ ತತ್ವಗಳನ್ನು ಕಂಡುಹಿಡಿದು, ಅವುಗಳನ್ನು ಅವರವರ ವಚನಗಳಿಂದಲೇ ಈ ಗ್ರಂಥದಲ್ಲಿ ವಿಶದವಾಗಿ ನಿರೂಪಿಸಿದೆ. ಇದರಲ್ಲಿ ೧೩೦ ಶಿವಶರಣರ ಶ್ರೇಷ್ಠವಾದ ವಚನಗಳು ಕೊಟ್ಟಿದ್ದಾವೆ. ಇದು ೬೫೧ ಪುಟಗಳ ದೊಡ್ಡ ಗ್ರಂಥವಾಗಿದ್ದು, ಇದರ ಬೆಲೆ ೫ ರೂಪಾಯಿ. ಇದು ಸಿಗುವ ಸ್ಥಳ—

ರಾವಬಹದ್ದೂರ ಫ. ಗು. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ.,
[33—6] ವಕೀಲ, ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ನೃತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦

ಜಗತ್ತಿನ ನಿಜವಾದ್ದು ಆಗತ್ಯವಿದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ಧಿಕ್ಕಾರ ಮಾಡಿದರೆ ಕುಕ್ಕರಿಸಿ ಹೋದೀರಿ.

ವಜ್ರಾಂಗಸುಂದರಪಾಕ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಿತ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ, ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ತೆಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ನಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು.

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಮಕಂದ, ಮಧುಕಂದ, ಜಲಕಂದ, ಶ್ರೇಷ್ಠ ಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಲೀಕಂದ, ಸೇವರಿ (ಬೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅದರ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಕಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕಿ, ಅಮರಕಸ, ಅಫಲ್ಕಾಗೊಂದ, ಪಂಚಾಬಿಮಿತ್ರ, ವಂಶಲೋಚನ, ಸಾಲಮಮಿತ್ರ, ಸಫೇದಮಿತ್ರ, ತಾಲೀಮಖಾನಾ, ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಳೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣಸೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ.

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣ ವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಜೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಜೆ, ತಿಂದು ಮೇಲೆ ಉಸುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೪೨ ತೊಲಿ ಪಾಕಿಗೆ ೫|| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಪ್ರಸಿದ್ಧಿಯಾಗುವ ವರೆಗೆ ಮಾತ್ರ ಇರುವದು. ಕಾರಣತ್ವರೆಮಾಡಿರಿ.

[50—17] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ರಕ್ತಶೋಧಕ ! ಧಾತುಪೌಷ್ಟಿಕ. ಮನೋಲ್ಲಾಸಿಕವೆಂಬ !!

ಮಹದ್ರಾಕ್ಷಾದಿಚೂರ್ಣವು

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ವಿಷಯವು ತಮಗೆ ವೇದ್ಯವಾಗಿರುವದಷ್ಟೆ. ಈ ಔಷಧಿಯು ಕೆಳಗೆಕಂಡ ರೋಗಗಳಿಗೆ ಶ್ರೇಷ್ಠವಾದದ್ದೆಂದು ಅನೇಕ ವೈದ್ಯರೂ ರೋಗವಾರಣೆಯಾದವರೂ ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬಮನುಷ್ಯನು ೨೧ ದಿನ ಸೇವನೆ ಮಾಡಿದರೆ ಕ್ಷಯರೋಗ ೪೦ ಬಗೆಯಾದ ಪಿತ್ಥರೋಗಗಳು, ಮೇಹರೋಗ, ಪಾಂಡುರೋಗ, ಪೀನಸ, ೧೮ ತರದ ಕುಷ್ಠರೋಗಗಳು, ಭಗಂಧರವು, ಮೂತ್ರ ಕೃಚ್ಛ್ರರೋಗ, ೫ ಬಗೆಯಾದ ಕಾಸರೋಗಗಳು, ದೀರ್ಘಜ್ವರ, ಉಬ್ಬಸ, ವಾಕರಿಕೆ, ಸನ್ನಿಪಾತರೋಗ, ಕಣ್ಣುರಿಯುವದು, ಅಂಗಾಲು ಅಂಗೈ ಬಿರಿಯುವದು, ಶಳೆ, ಶಲ್ಲಿ, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವದು, ನಷ್ಟೇಂದ್ರಿಯಾಗುವದು—ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು, ರಕ್ತವನ್ನು ವೃದ್ಧಿಗೊಳಿಸಿ ಧಾತುಪುಷ್ಟಿಯನ್ನುಂಟುಮಾಡುವದು, ನಿಸ್ಸತ್ವವನ್ನು ಹೋಗಲಾಡಿಸಿ ದೇಹಾಂಗವೆಲ್ಲಾ ಅಧಿಕ ಬಲವಾಗಿ ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲಿಕುಟ್ಟು, ಹೊಟ್ಟೆಶೂಲಿ, ಬಿಳಿಶೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕೈಕಾಲು ಹರಿಯುವಿಕೆ ಇತ್ಯಾದಿ ದೋಷಗಳಿಂದ ಗರ್ಭಕೋಶಕ್ಕೆ ತೊಂದರೆಯುಂಟಾಗಿ ದೇಹವು ಕ್ಷೀಣವಾಗಿ ಸಂತಾನಭಂಗವಾಗುವದು. ಆದಕಾರಣ ಸದರಿ ದೋಷಗಳಿಂದ ವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರೂ ಕ್ರಮವಾಗಿ ಒಂದುಮಂಡಲ ಪರಿಯಂತರವರಿಗೂ ಸೇವನೆಮಾಡಿದರೆ ಖಂಡಿತವಾಗಿ ಸಂತಾನಪ್ರಾಪ್ತಿಯಾಗುವದೆಂದು ಸುಪ್ರಸಿದ್ಧವಾಗಿ ಹೇಳಿರುವದು. ಈ ಔಷಧಿಯನ್ನು ನಾವು ನಮ್ಮಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದಕಾರಣ ತುಂಬಾ ಅನುಭವಕ್ಕೆ ಬಂದಿದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದರೆ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ.

ಜ್ವರಸಂಜೀವಿನಿ.—ಇದರ ಸೇವನೆಯಿಂದ ಚಾತುರ್ಥಿಕಜ್ವರ, ದಿನಬಿಟ್ಟು ೧ದಿನ ಬರುವ ಜ್ವರ, ಸರ್ದಿ ಜ್ವರ, ವಾತಪಿತ್ಥಜ್ವರ, ಅಸ್ತಿಗತ ಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲಿಸುತ್ತದೆ.

ಕಫರೋಗಸಂಜೀವಿನಿ.—ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಕೋಶಿಕೆಮ್ಮು ಇತ್ಯಾದಿಗಳನ್ನು ತಕ್ಷಣದಲ್ಲಿ ಗುಣಪಡಿಸುತ್ತದೆ. ಜ್ವರಸಂಜೀವಿನಿ ೧ ಡಜನ್ ಮಾತ್ರೆಗಳನ್ನೂ ಕಫಸಂಜೀವಿನಿ ೧೨ ಮಾತ್ರೆಗಳನ್ನೂ ಮೇಲ್ಕಂಡ ಮಹದ್ರಾಕ್ಷಾದಿ ಚೂರ್ಣವನ್ನೂ ತರಿಸಿಕೊಳ್ಳುವವರಿಗೆ ಈ ೩ ಔಷಧಿಗಳನ್ನು ಉಚಿತವಾಗಿ ಕೊಡುತ್ತೇವೆ. ಅನುಪಾನ ಪತ್ರಿಕೆ ಔಷಧಿಯೊಂದಿಗೆ ಇರುತ್ತದೆ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹಿತ ರೂ. ೫—೪—೦. ಈ ಔಷಧಿಯನ್ನು ಸೇವನೆ ಮಾಡುವ ಮೊದಲನೆದಿನ ಈ ಕೆಳಗೆ ಕಂಡ ಮುಹೂರ್ತರಾಜನೆಂಬ ಶಿವಲಿಖಿತ ಚಕ್ರವನ್ನು ನೋಡಿ ಅದರಲ್ಲಿ ಅಮೃತ ಮಹೇಂದ್ರಿಯಾ ವ್ಯಾಕ್ಯಗಳಲ್ಲಿ ಸೇವನೆಮಾಡಿರಿ. ಬಾಕಿ ವ್ಯಾಕ್ಯ ಕೂಡದು. ಇವರಲ್ಲಿ ಶಿವಲಿಖಿತ ಚಕ್ರವಿರುವದರಿಂದ ನಿಮ್ಮಗಳಿಗೆ ಸಕಲ ಶುಭಾಶುಭ ಕಾರ್ಯಗಳಿಗೆ ಬಹಳ ಪ್ರಶಸ್ತವಾಗಿರುತ್ತದೆ. ಪ್ರತಿಯೊಂದು ಕಾರ್ಯಗಳಲ್ಲಿ ಅವಶ್ಯಕವಾಗಿ ನೋಡಿರಿ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ವಿ. ಪಿ. ಸಹಿತ ಜ್ವರಸಂಜೀವಿನಿ ಮಾತ್ರೆ ಡಜನ್ ೧ಕ್ಕೆ ರೂ. ೧—೦—೦. ಕೆಮ್ಮಿನ ಗುಳಿಗೆ ಡಜನ್ ೧ಕ್ಕೆ ರೂ. ೧—೦—೦.

ಹೆಚ್ಚಾಗಿ ತರಿಸಿಕೊಳ್ಳುವವರು ಅನುಕೂಲವಾದ ಕಮೀಷನ್ ಹೊಂದುವದಕ್ಕೆ ಸಂಶಯವಿಲ್ಲ. ಪತ್ರವ್ಯವಹಾರ ಮೂಲಕ ತಿಳಿದುಕೊಳ್ಳಬಹುದು. ನಿಮ್ಮ ವಿಳಾಸವು ಸ್ಪಷ್ಟವಾಗಿದ್ದರೆ ಸಮಾಧಾನವಾಗುತ್ತದೆ.

ನಮ್ಮ ವಿಳಾಸ—ಹೆಚ್. ಯಂ. ಕರಿಬಸವಾರ್ಯ,
[34—37] ಬಳ್ಳಾರಿ.

ಮೈಸೂರು ಸ್ಟಾರ್.

೧೯೨೩ ನೆಯ ಇಸವಿ ಡಿಸೆಂಬರ್ ತಾ|| ೨ ನೆಯ ಭಾನುವಾರ.

THE VICEREGAL VISIT.

It was a grand and fitting reception that was accorded to His Excellency the Viceroy and Her Excellency the Countess of Reading on their arrival to this ancient and historic capital of the Mysore State on the 29th November 1923. The enthusiasm and the cheering of the huge crowds of people that banked the procession route was indicative of the loyalty of His Highness' subjects to the King Emperor and showed how welcome the representative of the Crown was in the State. Mysore has never lacked in hospitality to her guests and we hope that their Excellencies will have a pleasant sojourn in the State and carry away with them very pleasant memories.

THE BANQUET SPEECHES.

The State Banquet in honour of the visit of their Excellencies the Viceroy and Lady Reading to the State came off on the night of the 29th November, an occasion which is looked for with considerable interest. His Highness the Maharaja in proposing the toast of their Excellencies extended to them an behalf of His Highness and the people a most warm and cordial welcome, and said that India was fortunate in having at the helm of affairs at the present juncture a wise and experienced statesman like His Excellency, and that Her Excellency whose presence on the occasion gave particular pleasure, would ever be remembered for her unremitting labours on behalf of the women and children of India and for her beneficient activities in the furtherance of schemes for social welfare generally. His Highness also spoke of the improvement effected in the financial conditions since the visit of His Excellency Lord Reading's predecessor four year's a , and of the constitutional reforms, which His Highness hoped w make the Government increasingly responsive to popular wishes and would result in improved efficiency of administration and increased contentment and prosperity of the people.

His Excellency the Viceroy in replying to the toast spoke with a genuine candour and said he valued greatly His Highness' kind expressions and felicitations coming as they did from one whose personal character and achievement he held in high regard, and that His Highness' words had a special meaning for him because they revealed the understanding sympathy of a ruler set at the head of an important State who had an intimate knowledge of the doubts and difficulties confronting administrators, and above all, because His Highness had always made efficiency in the Government His Highness' watchword and viewed the interests of His Highness' people as the keystone of His Highness' administration. To us His Highness' subjects these words of His Excellency give particular pleasure and pride as they so correctly express the sentiments of affection and loyalty with which His Highness the Maharaja is held by His Highness' subjects. His Excellency hoped that the new powers granted under the scheme of constitutional reform would be used by the people with an undeviating loyalty to their Maharaja and to the best interests of the Mysore State. The Viceroy was pleased to assure that though his Government might not always be able to help His Highness still they would always be ready to look into His Highness' proposals. His Excellency made important references to some questions pending before the Government of India. He said that as regards the use of the Railway Debenture Sinking Funds for capital outlay in productive work, definite suggestions were now under consideration and that the Mysore Durbar would receive favourable intimation shortly. As regards the other important question of the reduction in the Mysore subsidy, His Excellency said that though the Secretary of State was unable to accept the request in its entirety still it was open to His Highness' Government to claim some reduction in the subsidy, and that the matter was intimately associated with the reorganisation of the Mysore troops. The question of the use of the surplus revenue of the assigned tracts was also before the Government of India and His Excellency hoped it would be solved in a manner agreeable both to the interests of the Mysore State and the Government of India. He expressed his gratification at the agreement arrived at by the technical advisers of Madras and of Mysore in the matter of Krishnarajsagara reservoir.

We are glad to see, on the one hand, the strenuous efforts made by the Mysore Durbar to obtain its just dues from the Government of India, and on the other, the sympathetic consideration that is being given to the Durbar proposals by the Government of India and the Parliament. The claims of the Mysore Durbar are very modest and we hope that the Government of India will further enchance the gratitude of the Mysore people by generously acceeding to the Mysore Durbar's proposals.

VOTERS LISTS.

We had stated in our last issue that the Municipal authorities of Mysore City had presented a list of voters which was rediculously small and in which one could detect a careful manipulation which would work to the detriment of the ratepayers. Following it up, a few of the leading citizens of Mysore City sent up a message to Local and Legislative Secretary to the Mysore Government bringing to the Government's notice the omissions and praying for an extension of time to prepare a revised list according to the rules laid down by Government. But to this they have received a curt reply that it cannot be done and that the people must take their chances according to the present rule for sending up the omitted names within the limited time. It is a surprise to us that though such a grave irregularity is brought to the notice of the Government it refuses to interfere in the matter. We need only give one or two instances to prove what mischief has been played with the list in Mysore. Mysore City with a population of nearly 84,000 has only 1725 voters; while Nanjangud town with a population of nearly 3000 has 664 voters, and Malavalli with a population of 7000 has nearly 1000 voters. This disproportion is in explicable except on the ground of a wanton exclusion of eligible voters. If we remember right the Dewan once told a deputation of the Municipality that they would bring any irregularities to his notice and he would set them right. Here is a sample of it. We could understand, if we were given an elected President for the Municipal Council, our not having such a strong voice to question its acts. But here the Government thrusts upon the Council a President of its own, and in this case one who has avowedly lost the confidence of the Council which fact was made eloquently clear by Rev. E. S. Edwards on Saturday last, and appoints its own Chief Officer and when things go wrong they refuse to interfere. This creates a situation which has no parallel anywhere else. Where is the harm in giving time for revising the list when the elections are still far off, and when there has been such grave irregularities in the preparation of the list? As we said democracy would only be in name if the working of the reforms is not ccarefully watched and guarded against its abuse by interested men. We do hope that the Government will be pleased to reconsider the matter and accede to the reasonable request of the citizens.

The following is the reply sent by the Local and Legislative Secretary to the telegram sent by some of the leading citizens and Municipal Commissioners of Mysore City praying for an extension of time for preparing the revised list according to Municipal Khata and protesting against the list as prepared and published already in the Gazette :—

"Mahomad Sait Esq., Cloth Merchant, Mysore. Your telegram aggrieved voters have to prefer claim according to rules already notified fresh preparation of list cannot be ordered as requested.

Local Secretary.'.

THE VEERASAIVA HOSTEL BOARDERS.

For sometime past the boarders of the Sowcar Kabballi Chennabasappa's Veerasaiva Ashrama have been indulging in irresponsible writings against us in the columns of our well known contemporary the *Sampadabhyudaya* which have been very hospitably thrown out to their use. Recently in its issue of the 21st November 1923 the journal publishes a letter under the heading "The Mysore Star" in which the covering letter, written by some boarder whose name is withheld, says that the letter was sent to the *Mysore Star* but was not published. We are surprised that the boarders should give expression to such a barefaced untruth when no such letter was sent to us for publication. As for the contents of the letter itself all that we need say is that the letter of Mr. G. H. Veeranna contradicting the statements of the boarders, which was puplished in our paper is a sufficient answer. But as regards the attitude of the boarders in engaging themselves with so unreasonable a controversy it is neither within the province of their legitimate duties nor conducive to their progress. For our part, we treat these writings with the contempt they deserve and refuse to refer to them in future. We hope that the management of the Hostel will exercise greater descipline over its boarders and not allow them to fly out of control.

ಅರ್ಲ್ ಆಫ್ ರೀಡಿಂಗ್, ಪಿ.ಸಿ., ಜಿ.ಸಿ.ಬಿ., ಕೆ.ಸಿ.ವಿ.ಒ.,
ಭರತಖಂಡದ ವೈಸ್‌ರಾಯರು.

ಕೌಂಟೆಸ್ ಆಫ್ ರೀಡಿಂಗ್, ಜಿ.ಬಿ.ಇ.,
ವೈಸ್‌ರಾಯರ ಪತ್ನಿಯವರು.

ಈ ಚಿತ್ರಪಟಗಳನ್ನು ಮುದ್ರಿಸಲು ಅನುಮತಿಯನ್ನು ಕೊಟ್ಟುದಕ್ಕಾಗಿ ಮ|| ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರನ್ನು ವಂದಿಸುತ್ತೇವೆ.

ರಾಜಧಾನಿಗೆ ಶ್ರೀಮನ್ ವೈಸ್ರಾಯರವರ ಸಂದರ್ಶನ.

ಘನತೆಯನ್ನೈದಿದ ವೈಸ್‌ರಾಯ್ ಮತ್ತು ಗವರ್ನರ್ ಜನರಲ್‌ರವರಾದ ಅರ್ಲ್ ರೀಡಿಂಗ್‌ರವರು ಪತ್ನೀ ಪರಿವಾರ ಸಮೇತರಾಗಿ ಕಳೆದ ಗುರುವಾರ ಬೆಳಗ್ಗೆ ರಾಜಧಾನಿಗೆ ದಯಮಾಡಿಸಿದರು. ಅತಿಥಿ ಸತ್ಕಾರದಲ್ಲಿ ಅಸಾಧಾರಣವಾದ ಕೀರ್ತಿಯನ್ನು ಪಡೆದಿರುವ ನಮ್ಮ ಸಂಸ್ಥಾನವು ತನ್ನ ಪ್ರಖ್ಯಾತಿಗೆ ತಕ್ಕಂತೆ ಈ ಸನ್ಮಾನ್ಯ ದಂಪತಿಗಳನ್ನು ಸ್ವಾಗತಿಸಿತು. ಭಾರತ ಸಾರ್ವಭೌಮ ಪ್ರತಿನಿಧಿಗಳ ಗೌರವಕ್ಕೆ ಉಚಿತಗಳಾದ ಎಲ್ಲ ಏರ್ಪಾಡುಗಳೂ ಬಹುವಿತರಣೆಯಿಂದ ಮಾಡಲ್ಪಟ್ಟಿರುವುವು. ನಮ್ಮ ಸಂಸ್ಥಾನದ ಆತಿಥ್ಯದಲ್ಲಿ ಇವರಿರುವ ಒಂದು ವಾರ ಕಾಲವು ಇವರ ಘನತರ ರಾಜ್ಯಕಾರ್ಯನಿರ್ವಾಹಸಂಜನಿತವಾದ ಬಳಲಿಕೆಯನ್ನು ಬಲುಮಟ್ಟಿಗೆ ಶಾಂತಿಗೊಳಿಸಿ ಆನಂದಗೊಳಿಸದೆಹೋಗಲಾರದು. ರಾಜಧಾನಿಯ ಸುಂದರತೆ, ಕನ್ನಂಬಾಡಿಕಟ್ಟೆಯ ಅಗಾಧತೆ, ಶ್ರೀರಂಗಪಟ್ಟಣದ ಚಾರಿತ್ರಾವಶಿಷ್ಟತೆ, ಶಾಕನಕೋಟೆಕಾಡಿನ ಆನೆಬಂಗಡಿಯ ಅಪೂರ್ವತರವಾದ ನೋಟ, ಈ ದೇಶದ ಪ್ರಕೃತಿಸೌಂದರ್ಯ, ಇವೆಲ್ಲವೂ ಒಂದಕ್ಕೊಂದು ಅತಿಶಯವಾಗಿ ವೈಸ್ರಾಯದಂಪತಿಗಳ ಮನೋಲ್ಲಾಸವನ್ನು ಮಾಡುತ್ತಿರುವುವೆಂಬುದಕ್ಕೆ ಸಂಶಯವಿಲ್ಲವು. ರಾಜಧಾನಿಯು ತನ್ನ ಪ್ರಾಶಸ್ತ್ಯಕ್ಕೆ ತಕ್ಕಂತೆ ರಮಣೀಯತೆಯನ್ನು ಪಡೆದುಕೊಂಡಿರಬೇಕೆಂಬುದ್ದೇಶದಿಂದ ನಮ್ಮ ಪ್ರಭುವರ್ಯರು ಎಷ್ಟರ ಮಟ್ಟಿನ ಅವಧಾನವನ್ನೂ ಧನ ಸಾಹಾಯ್ಯವನ್ನೂ ಕೊಟ್ಟಿರುವರೆಂಬುದನ್ನು ಹೇಳಬೇಕಾಗಿಲ್ಲ. ಪ್ರತಿಕ್ಷಣದಲ್ಲೂ ಈ ರಾಜಧಾನಿಯ ಸೌಂದರ್ಯವು ವೃದ್ಧಿಗೊಳ್ಳುತ್ತಿದೆ. ಇಂತಪ್ಪ ನಗರವು ಈಗಣ ಸಮಾರಂಭ ಕಾಲದಲ್ಲಿ ಸುಣ್ಣ ಬಣ್ಣಗಳಿಂದಲೂ, ಗುಡಿತೋರಣಗಳಿಂದಲೂ, ಧ್ವಜಪತಾಕೆ ಮೊದಲಾದುವುಗಳಿಂದಲೂ, ವಿದ್ಯುಚ್ಛಕ್ತಿಯ ವಿಶೇಷ ದೀಪರಾಜಿಯಿಂದಲೂ, ನೀರಿನ ಚಿಳೀವಿನಿಂದಲೂ ಹೊಂದಿರುವ ಅಲಂಕಾರದಿಂದ ಎಷ್ಟು ಮನೋರಂಜಕವಾಗಿದೆಯೆಂಬುದು ಅವಲೋಕಿಸಿದವರಿಗೇನೆ ಗೊತ್ತು. ಆರೋಗ್ಯಶಾಖೆಯವರ ಮುತವರ್ಜಿಯೂ ಪೋಲೀಸೇರ್ಪಾಟೂ ಸಮರ್ಪಕವಾಗಿರುವುವು. ಸಂಸ್ಥಾನದ ಅನೇಕ ಭಾಗಗಳಿಂದ ಪೋಲೀಸು ಇನ್‌ಸ್ಪೆಕ್ಟರುಗಳೂ ಕಾನ್‌ಸ್ಟೇಬಲುಗಳೂ, ಬೆಂಗಳೂರಿನಿಂದ ಲ್ಯಾನ್ಸರ್ಸ್ ಅಶ್ವಸೇನೆಯೂ ರಾಜಧಾನಿಗೆ ಬರಮಾಡಲ್ಪಟ್ಟಿರುವುವು. ರಾಜಧಾನಿಯ ಎಲ್ಲ ಪಾಠಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲಾ ಉತ್ಸವ ಬರತಕ್ಕ ಮಾರ್ಗದ ಇಕ್ಕೆಲದಲ್ಲೂ ಹಾಕಲ್ಪಟ್ಟಿದ್ದ ಪಾವಟಿಗೆಗಳಮೇಲೆ ಕುಳ್ಳಿರಿಸಲ್ಪಟ್ಟಿದ್ದರು. ಬಾಲಚಮೂಗಳು ರೈಲ್ವೆಸ್ಟೇಷನ್ನಿನ ಮಾರ್ಗದ ಇಕ್ಕೆಲಗಳಲ್ಲೂ ನಿಲ್ಲಿಸಲ್ಪಟ್ಟಿದ್ದರು. ರೈಲ್ವೆಸ್ಟೇಷನ್ನಿನಿಂದ ಅತಿಥಿಗಳ ಬಿಡಾರವಾದ ಗೌರ್ನಮೆಂಟ್ ಹೌಸ್ ವರೆಗೂ ಮಾರ್ಗಗಳ ಮಗ್ಗುಲುಗಳಲ್ಲಿ ಉದ್ದಕ್ಕೂ ಸಿಪಾಯಿಗಳೂ, ಪೋಲೀಸಿನವರೂ, ಕುದುರೆಯ ಸ್ವಾರರೂ ಅಲ್ಲಲ್ಲಿಗೆ ನಿಲ್ಲಿಸಲ್ಪಟ್ಟಿದ್ದರು. ರೈಲ್ವೆನಿಲ್ದಾಣವು ವಿದ್ಯುದ್ದೀಪಾವಳಿಗಳಿಂದಲೂ ಮಂಟಪರಚನೆ ಮೊದಲಾದುವುಗಳಿಂದಲೂ ರಮಣೀಯವಾಗಿದ್ದಿತು.

ಕಳೆದ ತಾ|| 29ನೆಯ ಗುರುವಾರದ ದಿನ ಬೆಳಗಿನ 7 ಗಂಟೆಯೊಳಗಾಗಿಯೇ ಸ್ಥಳ ಪರಸ್ಥಳ ಜನರು ಉತ್ಸವಮಾರ್ಗಗಳ ಇಕ್ಕೆಲಗಳಲ್ಲೂ, ಮನೆಗಳ ಮಾಡದಮೇಲೂ ಬಂದು ಸೇರಿದ್ದರು. ಅರಮನೆಯ ಸಕಲ ಬಿರುದಾವಳಿಗಳೂ, ಆನೆ ಕುದುರೆ ಒಂಟೆ ಮೊದಲಾದವುಗಳೂ ಸೈನ್ಯಗಳೂ, ಬ್ಯಾಂಡುಗಳ ಸೆಟ್ಟುಗಳೂ ಒಳ್ಳೆಯ ಉಡುಪುಗಳನ್ನು ಧರಿಸಿಕೊಂಡು ನಿಲ್ದಾಣದ ಹೊರಗಡೆ ಕಾದಿದ್ದುವು. ಬ್ರಿಟಿಷ್ ರೆಸಿಡೆಂಟರು ದಿವಾನರು ಕೌನ್ಸಿಲರುಗಳು ಚೀಫ್ ಜಡ್ಜರು, ಸರದಾರರುಗಳು ಶಾಖಾ ಮುಖ್ಯಾಧಿಕಾರಿಗಳು, ರಾಜಬಂಧುಗಳು, ಲಾಯರುಗಳು ಮೊದಲಾಗಿ ಪುರಪ್ರಮುಖರು ನಿಲ್ದಾಣದಲ್ಲಿ ನಿರೀಕ್ಷಿಸಿಕೊಂಡಿದ್ದರು. ಶ್ರೀಮನ್ ಮಹಾರಾಜರವರು ತಮ್ಮ ಸೋದರ ಅಳಿಯಂದರಾದ ರಾಜಕುಮಾರ ದೇಶರಾಜ ಅರಸಿನವರೊಡನೆ ನಾಲ್ಕು ಅಶ್ವಗಳನ್ನು ಹೂಡಿದ ರಥದಲ್ಲಿ ಕುಳಿತು ರಾಜಮರ್ಯಾದೆಯಿಂದ 8¼ ಗಂಟೆಯ ಸಮಯಕ್ಕೆ ನಿಲ್ದಾಣಕ್ಕೆ ದಯಮಾಡಿಸಿದರು. ಬೆಂಗಳೂರು ಮಾರ್ಗವಾಗಿ ವೈಸ್ರಾಯರ ಸ್ಪೆಷಲ್ ರೈಲು ಬಂಡಿಯು 8½ ಗಂಟೆಗೆ ಸರಿಯಾಗಿ ಬಂದು ನಿಲ್ದಾಣವನ್ನು ತಲುಪಿತು. ಬಂಡಿಯನ್ನು ಬಿಟ್ಟು ವೈಸ್ರಾಯರು ಕೆಳಗಿಳಿದ ಕೂಡಲೆ 31 ಗುಂಡುಗಳು ಹಾರಿಸಲ್ಪಲ್ಪಟ್ಟುವು. ಶ್ರೀಮನ್ ಮಹಾರಾಜರವರು ಬ್ರಿಟಿಷ್ ರೆಸಿಡೆಂಟರ ಮೂಲಕ ಪರಿಚಯ ಮಾಡಿಸಲ್ಪಟ್ಟಮೇಲೆ ವೈಸ್ರಾಯ ದಂಪತಿಗಳಿಗೆ ಸ್ವಾಗತ ಮರ್ಯಾದೆಯನ್ನು ಮಾಡಿದರು. ಅನಂತರ ಉಳಿದವರ ಪರಿಚಯವು ವೈಸ್ರಾಯರಿಗೆ ಮಾಡಿಸಲ್ಪಟ್ಟಿತು. ಸೇನಾಮರ್ಯಾದೆಯಾಯಿತು. ನಿಲ್ದಾಣದಿಂದ ಹೊರಗಡೆಗೆ ಬಂದು ಅಲ್ಲಿ ನಿಂತಿದ್ದ ಸಕಲ ಸೈನ್ಯಗಳೂ ವಾದ್ಯಗಾರರೂ ಮಾಡಿದ ಮರ್ಯಾದೆಯನ್ನು ಅಂಗೀಕರಿಸಿ ನಾಲ್ಕು ದಿವ್ಯಾಶ್ವಗಳನ್ನು ಹೂಡಿದ್ದ ರಥದಲ್ಲಿ ವೈಸ್ರಾಯರು ಅವರ ಎಡಗಡೆಗೆ ಮಹಾರಾಜರವರೂ ಮುಂಗಡೆಯಲ್ಲಿ ವೈಸ್ರಾಯರ ಕಡೆಯವರೂ, ಹಿಂಗಡೆಯ ರಥದಲ್ಲಿ ವೈಸ್ರಾಯರ ಪತ್ನಿಯವರೂ ರೆಸಿಡೆಂಟರೂ ಸರದಾರ್ ಗೋಪಾಲರಾಜ ಅರಸಿನವರೂ ಮತ್ತೊಬ್ಬರೂ ಮೂರನೆಯದರಲ್ಲಿ ದಿವಾನರು ವೈಸ್ರಾಯರ ಕಡೆಯ ಕರ್ನಲ್ಲುಗಳೂ ಈ ಪ್ರಕಾರವಾಗಿ ಕುಳಿತುಕೊಂಡು ಹೊರಟರು. ಹಿಂದೆ ಮುಂದೆ ಇಂಪೀರಿಯಲ್ ಲ್ಯಾನ್ಸರ್ಸ್‌ದಳವೂ, ಶ್ರೀಮನ್ಮಹಾರಾಜರವರ ಅಂಗರಕ್ಷಕದಳವೂ, ಮೈಸೂರುಹಾರ್ಸ್; ಪಾರ್ಶ್ವಗಳಲ್ಲಿ ಗಗ್ಗರಿಯ ಬಲ್ಲೆಗಳೂ ಹೋಗುತ್ತಿದ್ದುವು. ಉತ್ಸವವು ಖರ್ಜನ್ ಪಾರ್ಕಿನಲ್ಲಿ ಟರ್ನ್‌ಹಾಲಿನ ದಕ್ಷಿಣಭಾಗದಲ್ಲಿ ಹಾಕಿದ್ದ ಮ್ಯುನಿಸಿಪಲ್ ಚಪ್ಪರದವರೆಗೆ ಬರುವವರೆಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳೂ ಪ್ರೇಕ್ಷಕಜನರೂ ಮಾಡಿದ ಜಯಶಬ್ದಗಳೂ ಹರ್ಷಧ್ವನಿಗಳೂ ಆ ಸಂಮಾನ್ಯ ಅತಿಥಿಗಳ ಮನಸ್ಸಿನಲ್ಲಿ ಆನಂದರಸವನ್ನುಕ್ಕಿಸಿ ಮಂದಹಾಸಯುಕ್ತವಾದ ವದನಮಂಡಲದಿಂದ ಅಖಂಡವಾಗಿ ಹೊರಸೂಸುವಂತೆ ಮಾಡಿಬಿಟ್ಟಿದ್ದುವು. ಆ ಆನಂದಭರದಲ್ಲಿ ವೈಸ್ರಾಯರು ಪ್ರತಿಮರ್ಯಾದೆಯನ್ನು ಮಾಡಲು ತಲೆಯಿಂದ ಟೊಪ್ಪಿಗೆಯನ್ನು ತೆರೆಯುವುದಕ್ಕೆ ಬಿಡುವೇ ಇರಲಿಲ್ಲ. ಮ್ಯುನಿಸಿಪಲ್ ಚಪ್ಪರದಬಳಿ ರಥಗಳು ಬಂದು ನಿಂತಕೂಡಲೇ ಸ್ವಾಗತಪರವಾದ ಎರಡು ಶ್ಲೋಕಗಳು ವಿದ್ವಾಂಸರಿಂದೋದಲ್ಪಟ್ಟುವು. ಅನಂತರ ಪ್ರೆಸಿಡೆಂಟರು ಆಂಗ್ಲಭಾಷೆಯಲ್ಲಿ ವಿಜ್ಞಾಪನಪತ್ರವನ್ನೋದಿ ಒಪ್ಪಿಸಿದರು. (ಇದೂ ಇದಕ್ಕೆ ವೈಸ್ರಾಯರು ಕೊಟ್ಟ ಪ್ರತ್ಯುತ್ತರವೂ ಬೇರೆಕಡೆ ಮುದ್ರಿಸಲ್ಪಟ್ಟಿರುತ್ತವೆ.) ತರುವಾಯ ಸಮರ್ಪಿಸಲ್ಪಟ್ಟ ಪುಷ್ಪಹಾರಗುಚ್ಛಗಳನ್ನು ವೈಸ್ರಾಯರೂ ಹಿಂದಣ ರಥದಲ್ಲಿದ್ದ ವೈಸ್ರಾಯರ ಪತ್ನಿಯವರೂ ಇತರ ಅಧಿಕಾರಿಗಳೂ ಸ್ವೀಕರಿಸಿದ ಮೇಲೆ ಉತ್ಸವವು ಸ್ವಾಟ್ಲೀ ಚೌಕದಿಂದ ಹಾರ್ಡಿಂಜು ಸರ್ಕಲ್ಲಿಗೆ ಬಂದು ಅಲ್ಲಿಂದ ದಕ್ಷಿಣದ್ವಾರದ ಮಾರ್ಗವಾಗಿ ದೊಡ್ಡಬಂಗಲೆಗೆ ಚಿತ್ತೈಸಿತು. ಆ ಕೂಡಲೆ 31 ಗುಂಡುಗಳು ಹಾರಿಸಲ್ಪಟ್ಟುವು. ಒಳಿಕ 10½ ಗಂಟೆಯಲ್ಲಿ ಶ್ರೀಮನ್ಮಹಾರಾಜರವರ ಕಡೆಯಿಂದ ಕೆಲ ಸರದಾರರು ಮರ್ಯಾದಾಪುರಸ್ಸರವಾಗಿ ವೈಸ್ರಾಯರ ಬಿಡಾರಕ್ಕೆ ಹೋಗಿ ಕುಶಲಪ್ರಶ್ನೆ ಮಾಡಿ ಬಂದಮೇಲೆ ವೈಸ್ರಾಯರ ಕಡೆಯ ಕೆಲ ಅಧಿಕಾರಿಗಳು ಅರಮನೆಗೆ ಬಂದು ಶ್ರೀಮನ್ ಮಹಾರಾಜರವರ ಕುಶಲಪ್ರಶ್ನವನ್ನು ಮಾಡಿಕೊಂಡು ಬಂದರು. ತರುವಾಯ 11 ಗಂಟೆಯ ಸಮಯದಲ್ಲಿ ಶ್ರೀಮನ್ ಮಹಾರಾಜರವರು ಮಿತಪರಿವಾರ ಸೈನ್ಯ ಗೌರವದೊಡನೆ ವೈಸ್ರಾಯರ ಬಿಡಾರಕ್ಕೆ ದಯಮಾಡಿಸಿ ವೈಸ್ರಾಯರ ಸಂದರ್ಶನ ಸಂಭಾಷಣೆಗಳನ್ನು ನಡೆಯಿಸಿ ಮರ್ಯಾದೆಗೊಂಡು ಬಂದಮೇಲೆ ವೈಸ್ರಾಯರು 12 ಗಂಟೆಯಲ್ಲಿ ಯಥಾಮರ್ಯಾದೆಯಿಂದ ಅರಮನೆಗೆ ಬಂದು ಶ್ರೀಮನ್ ಮಹಾರಾಜರವರ ಪ್ರತಿದರ್ಶನ ಸಂಭಾಷಣಗಳನ್ನು ಮಾಡಿಕೊಂಡು ಬಿಡಾರಕ್ಕೆ ದಯಮಾಡಿಸಿದರು. ಮಹಾರಾಜರವರ ಮತ್ತು ವೈಸ್ರಾಯರ ಗಮನಾಗಮನಕಾಲಗಳಲ್ಲೂ 21 ಮತ್ತು 31 ಗುಂಡುಗಳು ಹಾರಿಸಲ್ಪಟ್ಟುವು. ಆ ದಿವಸದ ಸಾಯಂಕಾಲ 5 ಗಂಟೆಯಲ್ಲಿ ಶ್ರೀಮನ್ಮಹಾರಾಜರವರು ವೈಸ್ರಾಯರನ್ನು ಮೋಟಾರುಬಂಡಿಯಲ್ಲಿ ಕುಳ್ಳಿರಿಸಿಕೊಂಡು ಚಾಮುಂಡಿಬೆಟ್ಟ ಮೊದಲಾದಕಡೆ ವಿಹರಿಸಿಕೊಂಡು ಬಂದರು. ರಾತ್ರಿ 8½ ಗಂಟೆಗೆ ದೊಡ್ಡಬಂಗಲೆಯಲ್ಲಿ ಅರಸೌತಣವು ಜರುಗಿತು. ಔತಣಾನಂತರ ಶ್ರೀಮನ್ ಮಹಾರಾಜರವರು ದಿವಾನರು ಮೊದಲಾದ ಅಧಿಕಾರಿಗಳೊಡನೆ ದಯಮಾಡಿಸಿ ವೈಸ್ರಾಯದಂಪತಿಗಳ ಆಯುರಾರೋಗ್ಯವನ್ನು ಬಯಸುವ ಸಂದರ್ಭದಲ್ಲಿ ಒಂದು ಭಾಷಣವನ್ನು ಮಾಡಿದರು. ಅದರಲ್ಲಿ—ವೈಸ್ರಾಯದಂಪತಿಗಳ ಗುಣಕಥನಾನಂತರ ಸಂಸ್ಥಾನದ ಉತ್ಪತ್ತಿಸಾಧನಗಳನ್ನು ಹೆಚ್ಚಿಸಿಯೂ ವೆಚ್ಚವನ್ನು ಕಡಿಮೆ ಮಾಡಿಯೂ ಒಟ್ಟು ಆಯವೂ ವ್ಯಯವೂ ಸಮತೂಕಕ್ಕೆ ಬರುವ ಹಾಗೆ ಮಾಡಿರುವುದನ್ನೂ, ಸಂಸ್ಥಾನದ ಆಡಳಿತದಲ್ಲಿ ಪ್ರಜೆಗಳು ಹೆಚ್ಚು ಭಾಗಿಗಳಾಗಲು ಅನುಕೂಲಿಸುವಂತೆ ರಾಜಕೀಯ ಸುಧಾರಣೆಯನ್ನು ಮಾಡಿರುವುದನ್ನೂ ಸಂಕ್ಷೇಪವಾಗಿ ತಿಳಿಸಿ ಈಗ ಇಂಡ್ಯಾ ಸರ್ಕಾರದವರಿಂದ ತೀರ್ಮಾನಿಸಲ್ಪಡಲಿಕ್ಕಿರುವ ಕೆಲ ಆರ್ಥಿಕವಿಚಾರದಲ್ಲಿ ತಾವು ಸಾನುಭೂತಿಪೂರ್ವಕವಾಗಿ ಸಾಹಾಯ್ಯೀಕರಿಸಬೇಕೆಂದು ಕೋರಿದರು. ವೈಸ್ರಾಯರು ಇದಕ್ಕೆ ಉತ್ತರವನ್ನು ಕೊಟ್ಟಿರುವುದರಲ್ಲಿ—ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳು ವಿದ್ಯಾವಂತರುಗಳಾಗಿ ಧಾರ್ಮಿಕ ನೈತಿಕ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಮುಂಬರಿಯಲು ನಾನಾಮುಖವಾಗಿ ಮಾಡುತ್ತಿರುವ ಪ್ರಯತ್ನವಿಶೇಷಗಳನ್ನೂ ಅವರ ಪ್ರಜಾರಂಜನೈಕಪರಾಯಣತೆಯನ್ನೂ ಬಹಳವಾಗಿ ಪ್ರಶಂಸಿಸಿದ ಮೇಲೆ ಪ್ರಭುಗಳ ಕೋರಿಕೆಯ ವಿಚಾರವಾಗಿ ಪ್ರಸ್ತಾಪಿಸುವವರಾಗ್ಗೆ, ನಮ್ಮ ಸರ್ಕಾರದವರು ನಿಮ್ಮ ಕೋರಿಕೆಯನ್ನು ಸಾರ್ವದಾ ನೆರವೇರಿಸಿಕೊಡಲಾರರಾದರೂ, ಮೈಸೂರು ರಾಜ್ಯಭಾರವು ಸಮಾಧಾನದಿಂದ ನಡಿಸಲ್ಪಡುತ್ತಿರುವುದನ್ನೂ, ಅದರ ಸ್ವಾಭಾವಿಕವಾದ ಉತ್ಪತ್ತಿಸಾಧನಗಳನ್ನು ಅಭಿವೃದ್ಧಿಗೊಳಿಸಿ ಇಷ್ಟಾರ್ಥಸಿದ್ಧಿಯನ್ನು ಹೊಂದಿದ್ದುದನ್ನೂ ನೆರಪಿನಲ್ಲಿಟ್ಟುಕೊಂಡು ಯಾವಾಗಲೂ ನಿಮ್ಮ ಕೋರಿಕೆಗಳನ್ನು ಪರ್ಯಾಲೋಚಿಸುವವರಾಗಿರುವರು. ನೀವು ರೈಲ್ವೆಡಿಬೆಂಚರ್ ಸಿಂಕಿಂಗ್ ಫಂಡಿನ ಹಣವನ್ನು ನಿಮ್ಮ ಉತ್ಪತ್ತಿಸಾಧನ ಕೆಲಸಗಳಿಗುಪಯೋಗಿಸಿಕೊಳ್ಳುವ ವಿಚಾರದಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಕೂಡ ಪತ್ರವ್ಯವಹಾರ ನಡಿಸಿದೆ. ನಿಮ್ಮಿಷ್ಟವು ಸಂಪೂರ್ಣವಾಗಿ ನೆರವೇರದಿದ್ದರೂ ತಕ್ಕಮಟ್ಟಿಗೆ ಅನುಕೂಲವಾಗುವುದೆಂದು ಹೇಳಬಲ್ಲೆನು. ತಾವು ನನ್ನನ್ನು ಹಿಂದೆ ನೋಡಿದ್ದಾಗ್ಗೆ ಪೊಗದಿಯನ್ನು ಕಡಿಮೆಮಾಡಿಕೊಡಬೇಕೆಂದು ಕೇಳಿದ್ದಿರಿ. ಕೆಲಕಾಲದಿಂದಲೂ ಚರ್ಚೆಯಲ್ಲಿರುವ ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರೂ ಸ್ಟೇಟ್ ಸೆಕ್ರೆಟರಿಯವರೂ ಅನುಕೂಲಪಡಿಸಿಕೊಡಲು ಅಸಮರ್ಥರಾಗಿರುವರಾದರೂ, ಪ್ರತಿವರ್ಷದಲ್ಲೂ ಕೊಡುವ ಪೊಗದಿಯಲ್ಲಿ ಕೊಂಚ ಕಡಿಮೆಮಾಡಿಕೊಡಬೇಕೆಂದು ನಿಮ್ಮ ಸರ್ಕಾರದವರು ಕೇಳಿಕೊಳ್ಳಲು ಅಭ್ಯಂತರವಿಲ್ಲವು. ನೀವು ನಿಮ್ಮ ಸಂಸ್ಥಾನದ ಸೇನಾವೆಚ್ಚವನ್ನು ಕಡಿಮೆಮಾಡಬೇಕೆಂಬ ನಿಮ್ಮ ಪ್ರಯತ್ನದಿಂದ ನಿಮಗೆ ಉಳಿತಾಯವಾಗುವುದೆಂದು ನಿರೀಕ್ಷಿಸುತ್ತೇನೆ. ದಂಡಿನ ಉತ್ಪತ್ತಿಯಲ್ಲಿ ಮಿಗುವ ಹಣದ ವಿಲೆಯ ವಿಚಾರದಲ್ಲಿ ಕೆಲ ಸೂಚನೆಗಳನ್ನು ನಮ್ಮ ಸರ್ಕಾರಕ್ಕೆ ಕೊಟ್ಟಿರುತ್ತೀರಿ. ಈ ಸಮಸ್ಯೆಯು ನಮ್ಮುಭಯ ಸರ್ಕಾರಗಳಿಗೂ ಅನುಕೂಲವಾಗಿ ಇತ್ಯರ್ಥಗೊಳಿಸಲ್ಪಡುವುದಾಗಿ ನಂಬುತ್ತೇನೆ. ಕೃಷ್ಣರಾಜಸಾಗರ ಕಟ್ಟೆಯ ವಿಚಾರವಾಗಿ ನಿಮ್ಮ ಸರ್ಕಾರಕ್ಕೂ ಮದ್ರಾಸು ಸರ್ಕಾರಕ್ಕೂ ಉಂಟಾಗಿರುವ ವಿವಾದವು ಉಭಯ ಸರ್ಕಾರಗಳಿಗೂ ಅನುಕೂಲವಾಗಿರುವಂತೆ ಪಂಚಾಯಿತರಿಂದ ಬಗೆಹರಿಸಲ್ಪಟ್ಟಿರುವುದೆಂದು ತಿಳಿಯಲು ಸಂತೋಷವಾಗುತ್ತದೆ ಎಂದು ಹೇಳಿದರು. ತಾ|| 30 ರ ಸಾಯಂಕಾಲ 4 ಗಂಟೆಯಲ್ಲಿ ಶ್ರೀಮನ್ ಮಹಾರಾಜರವರು ವೈಸ್ರಾಯರನ್ನು ಮೋಟಾರುಬಂಡಿಯಲ್ಲಿ ಕುಳ್ಳಿರಿಸಿಕೊಂಡು ಕನ್ನಂಬಾಡಿಕಟ್ಟೆ ಮತ್ತು ಶ್ರೀರಂಗಪಟ್ಟಣಗಳಿಗೆ ಹೋಗಿ ತೋರಿಸಿಕೊಂಡು ಬಂದರು. ಅದಿನ ರಾತ್ರಿ 9½ ಗಂಟೆಯಲ್ಲಿ ವೈಸ್ರಾಯರು ಪರಿವಾರದೊಡನೆ ಅರಮನೆಗೆ ಬಂದು ರಾಚಾವಾರದವರ ದೀವಟಿಗೆಯ ವಿನ್ಯಾಸಪರಂಪರೆ ಸಂಗೀತವಾದ್ಯಶ್ರವಣಾದಿಗಳಿಂದಲೂ ಮದ್ದಿನ ವಿನೋದಗಳಿಂದಲೂ ಸತ್ಕರಿಸಲ್ಪಟ್ಟು ರಾತ್ರಿ 11 ಗಂಟೆಗೆ ಬಿಡಾರಕ್ಕೆ ಹಿಂದಿರುಗಿ ದಯಮಾಡಿಸಿದರು. ನೆನ್ನೆಯ ದಿನ ಬೆಳಗ್ಗೆ 11 ಗಂಟೆಯಲ್ಲಿ ಕೆಡ್ಡಾಕ್ಯಾಂಪಿಗೆ ಶ್ರೀಮನ್ ಮಹಾರಾಜರವರ ಕೂಡಚಿತ್ತೈಸಿದರು. ಅಲ್ಲಿ ತಾ|| 2ರಲ್ಲಿ ಆನೆಗಳಿಗೆ ಹಗ್ಗಬಿಗಿಯುವದನ್ನು ಪರಾಮರ್ಶಿಸಿ ತಾ|| 3ರಲ್ಲಿ ಕೋಣನ ಬೇಂಟೆಯನ್ನೂ 4ರಲ್ಲಿ ಹುಲಿಯ ಬೇಂಟೆಯನ್ನೂ ತಾ|| 5ರ ಬೆಳಗ್ಗೆ ಪುನಃ ಕೋಣನ ಬೇಂಟೆಯನ್ನೂ ಮಾಡಿಕೊಂಡು ಅದೇ ಸಾಯಂಕಾಲ 5 ಗಂಟೆಗೆ ರಾಜಧಾನಿಗೆ ಹೊರಟು ರಾತ್ರಿ 10½ ಗಂಟೆಗೆ ರೈಲುಬಂಡಿಯನ್ನು ಹತ್ತಿ ಮುಂದಕ್ಕೆ ಪ್ರಯಾಣಮಾಡುವರು. ಈ ಸಾರ್ವಭೌಮ ಪ್ರತಿನಿಧಿಗಳು ನಮ್ಮ ದೇಶಕ್ಕೆ ಕೃಪಾಪೂರ್ವಕವಾಗಿ ದಯಮಾಡಿಸಿ ಸಂದರ್ಶನವನ್ನಿತ್ತುದುದಕ್ಕಾಗಿ ಸಂಸ್ಥಾನದ ಪ್ರಜಾಪಕ್ಷದಿಂದ ಕೃತಜ್ಞತಾಪುರಸ್ಸರವಾದ ವಂದನೆಗಳನ್ನು ಈ ಮೂಲಕವಾಗಿ ಅರ್ಪಿಸುತ್ತೇವೆ, ಮತ್ತೂ ಇವರಾಗಮನವು ಒಂದಾನೊಂದು ರೀತಿಯಲ್ಲಿ ಮೈಸೂರಿಗೆ ಸ್ಮರಣೀಯವಾಗಿರುವಂತೆ ಪರಿಣಮಿಸುವಂತಾಗಲೆಂದು ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು.

ರೆವಿನ್ಯೂ ಕಮಿಷನರು ಸಂಸ್ಥಾನದ ನಾನಾಭಾಗಗಳಲ್ಲಿ ದನಗಳ ಮೇವಿನ ಸ್ಥಿತಿಯು ನಿತ್ಯದಲ್ಲೂ ಬಹಳ ಶೋಚನೀಯವಾಗುತ್ತಿದೆಯೆಂದು ಸರ್ಕಾರಕ್ಕೆ ವರದಿಮಾಡಿರುತ್ತಾರೆ.

ಡೆಪ್ಯುಟಿಕಮಿಷನರಾಗಿದ್ದು ರಜದಮೇಲಿದ್ದ ಮ|| ಆರ್. ಮುದಯ್ಯಂಗಾರರು ಕೆಲದಿನಗಳಿಂದ ಅಸ್ವಸ್ಥರಾಗಿದ್ದು ಮದರಾಸಿಗೆ ಹೋಗಿ ವೈದ್ಯಚಿಕಿತ್ಸೆಯನ್ನು ಹೊಂದಿದರಾದರೂ ಗುಣಹೊಂದದೆ ಬೆಂಗಳೂರಿಗೆ ಹಿಂದಿರುಗಿ ಬಂದು ಕಳೆದವಾರ ಕಾಲಾಧೀನರಾದರೆಂದು ತಿಳುಹಲು ಖೇದವಾಗುತ್ತದೆ.

ರಾಜಧಾನಿಯ ಪ್ರಸಿದ್ಧ ಹಾರ್ಮೋನಿಯಂ ವರ್ತಕರುಗಳಾದ ಮ|| ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರು ವೈಸ್‌ರಾಯ್ ದಂಪತಿಗಳ ಭಾವಚಿತ್ರಪಟಗಳನ್ನು ಬಹಳ ಮನೋಹರವಾಗಿ ಮುದ್ರಣಮಾಡಿಸಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಿಕೊಟ್ಟಿರುವರು. ಇದರ ಬೆಲೆ ಪ್ರತಿಯೊಂದಕ್ಕೆ 2 ಆಣೆ.

ಕಳೆದ ಗುರುವಾರ ಬೆಳಗ್ಗೆ ವೈಸ್‌ರಾಯ್ ದಂಪತಿಗಳ ಆಗಮನಾರ್ಥವಾಗಿ ಸಯ್ಯಾಜಿರಾವ್ ರೋಡಿನಲ್ಲಿ ಅಲ್ಲಲ್ಲಿಗೆ ನಿಲ್ಲಿಸಲ್ಪಟ್ಟಿದ್ದ ಕುದುರೆಗಳಲ್ಲೊಂದು ಬೆದರಿ ಮೇಲೆ ಕುಳಿತಿದ್ದ ಸ್ವಾರನನ್ನು ಕೆಡವಿಬಿಟ್ಟು ಓಡಿಹೋಯಿತು. ಬಿದ್ದ ಸ್ವಾರನು ಪೆಟ್ಟನ್ನು ತಿಂದು ಕೂಡಲೇ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವನು. ಅದೇದಿವಸ ವೈಸ್‌ರಾಯರು ಶ್ರೀಮನ್ ಮಹಾರಾಜರವರ ಪ್ರತಿದರ್ಶನಕ್ಕಾಗಿ ಅರಮನೆಗೆ ಹೋಗಿಬರುವಾಗ್ಗೆ ಗುಂಡುಗಳನ್ನು ಆರಿಸುತ್ತಿದ್ದ ಗೋಲಂದಾಜರುಗಳಲ್ಲೊಬ್ಬನು ಫಿರಂಗಿಯನ್ನು ತೊಳೆದು ಹಿಂದಕ್ಕೆ ಸರಿಯುವುದರಬದಲು ಫಿರಂಗಿಯ ಮುಂದುಗಡೆಯಿಂದ ಹಾದು ಬರುವಾಗ್ಗೆ ಗುಂಡಿನೇಟು ಅವನ ಭುಜಕ್ಕೆ ತಗುಲಿ ಸುಟ್ಟುಹೋಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಮಾಡಿದಾಗ್ಯೂ ಉಳಿದುಕೊಳ್ಳದೆ ಸತ್ತುಹೋದನು.

ಬೆಂಗಳೂರು—ಮೈಸೂರು ಮ್ಯುನಿಸಿಪಾಲಿಟಿಯವರು ಒಪ್ಪಿಸಿದ ವಿಜ್ಞಾಪನಪತ್ರಿಕೆಗಳ ಸಾರಾಂಶ.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಘನವಂತರಾದ ತಮ್ಮನ್ನೂ ತಮ್ಮ ಧರ್ಮಪತ್ನಿಯವರನ್ನೂ ಬೆಂಗಳೂರು ಪುರನಿವಾಸಿಗಳ ಪರವಾಗಿ ಅವರ ಪ್ರತಿನಿಧಿಗಳಾದ ನಾವು ಮರ್ಯಾದಾಪುರಸ್ಸರವಾಗಿ ಸುಸ್ವಾಗತಿಸಲು ಮತ್ತು ತಾವುಗಳು ಈ ಪಟ್ಟಣಕ್ಕೆ ಆಗಮಿಸಿ ಗೌರವಿಸಿದುದರಿಂದ ನಮ್ಮಗಳಿಗುಂಟಾಗಿರುವ ಮನಃಪೂರ್ವಕವಾದ ಸಂತೋಷಾತಿಶಯವನ್ನು ಪ್ರದರ್ಶಿಸಲು ತಮ್ಮ ಅನುಮತಿಯನ್ನು ಬೇಡುತ್ತೇವೆ. ಈ ಪುರನಿವಾಸಿಗಳಿಗುಂಟಾಗಿರುವ ಸಂತೋಷಾತಿಶಯಕ್ಕೆ ಕಾರಣಭೂತವಾದ ತಮ್ಮಾಗಮನವು ಮುಂದೆ ತಮ್ಮ ಸ್ಮೃತಿಪಥದಲ್ಲಿರುವುದೆಂದು ನಂಬುತ್ತೇವೆ. ಬೆಂಗಳೂರುಪಟ್ಟಣವು ಸಮುದ್ರಮಟ್ಟಕ್ಕಿನ್ನ 3000 ಅಡಿ ಎತ್ತರದಲ್ಲಿ ಮೈಸೂರುಸೀಮೆಯ ಮಧ್ಯಭಾಗದಲ್ಲಿದ್ದು ಆರೋಗ್ಯಕರವಾದ ವಾಯುಗುಣವುಳ್ಳುದಕ್ಕಾಗಿಯೂ, ಪ್ರಕೃತಿಸೌಂದರ್ಯಕ್ಕಾಗಿಯೂ ಪ್ರಖ್ಯಾತವಾಗಿರುವುದು ತಮಗೆ ವೇದ್ಯವೇಯಿದೆ. ಈ ಪಟ್ಟಣವು ಅಷ್ಟು ಪ್ರಖ್ಯಾತವಾಗಿರುವುದರಿಂದಲೇ ಇಲ್ಲಿಗೆ ಪ್ರತಿವರ್ಷದಲ್ಲೂ ಭರತಖಂಡದ ನಾನಾಭಾಗಗಳಿಂದ ಬರತಕ್ಕ ಜನರ ಸಂಖ್ಯೆಯು

ಮೈಸೂರು ಸ್ಟಾರ್.

೧೯೨೩ ನೇಯ ಇಸವಿ ಡಿಸೆಂಬರ್ ತಾ|| ೨ ನೇಯ ಭಾನುವಾರ.

THE VICEREGAL VISIT.

It was a grand and fitting reception that was accorded to His Excellency the Viceroy and Her Excellency the Countess of Reading on their arrival to this ancient and historic capital of the Mysore State on the 29th November 1923. The enthusiasm and the cheering of the huge crowds of people that banked the procession route was indicative of the loyalty of His Highness' subjects to the King Emperor and showed how welcome the representative of the Crown was in the State. Mysore has never lacked in hospitality to her guests and we hope that their Excellencies will have a pleasant sojourn in the State and carry away with them very pleasant memories.

THE BANQUET SPEECHES.

The State Banquet in honour of the visit of their Excellencies the Viceroy and Lady Reading to the State came off on the night of the 29th November, an occasion which is looked for with considerable interest. His Highness the Maharaja in proposing the toast of their Excellencies extended to them an behalf of His Highness and the people a most warm and cordial welcome, and said that India was fortunate in having at the helm of affairs at the present juncture a wise and experienced statesman like His Excellency, and that Her Excellency whose presence on the occasion gave particular pleasure would ever be remembered for her unremitting labours on behalf of the women and children of India and for her beneficient activities in the furtherance of schemes for social welfare generally. His Highness also spoke of the improvement effected in the financial conditions since the visit of His Excellency Lord Reading's predecessor four year's ago, and of the constitutional reforms, which His Highness hoped would make the Government increasingly responsive to popular wishes and would result in improved efficiency of administration and increased contentment and prosperity of the people.

His Excellency the Viceroy in replying to the toast spoke with a genuine candour and said he valued greatly His Highness' kind expressions and felicitations coming as they did from one whose personal character and achievement he held in high regard, and that His Highness' words had a special meaning for him because they revealed the understanding sympathy of a ruler set at the head of an important State who had an intimate knowledge of the doubts and difficulties confronting administrators, and above all, because His Highness had always made efficiency in the Government His Highness' watchword and viewed the interests of His Highness' people as the keystone of His Highness' administration. To us His Highness' subjects these words of His Excellency give particular pleasure and pride as they so correctly express the sentiments of affection and loyalty with which His Highness the Maharaja is held by His Highness' subjects. His Excellency hoped that the new powers granted under the scheme of constitutional reform would be used by the people with an undeviating loyalty to their Maharaja and to the best interests of the Mysore State. The Viceroy was pleased to assure that though his Government might not always be able to help His Highness still they would always be ready to look into His Highness' proposals. His Excellency made important references to some questions pending before the Government of India. He said that as regards the use of the Railway Debenture Sinking Funds for capital outlay in productive work, definite suggestions were now under consideration and that the Mysore Durbar would receive favourable intimation shortly. As regards the other important question of the reduction in the Mysore subsidy, His Excellency said that though the Secretary of State was unable to accept the request in its entirety still it was open to His Highness' Government to claim some reduction in the subsidy, and that the matter was intimately associated with the reorganisation of the Mysore troops. The question of the use of the surplus revenue of the assigned tracts was also before the Government of India and His Excellency hoped it would be solved in a manner agreeable both to the interests of the Mysore State and the Government of India. He expressed his gratification at the agreement arrived at by the technical advisers of Madras and of Mysore in the matter of Krishnarajsagara reservoir.

We are glad to see, on the one hand, the strenuous efforts made by the Mysore Durbar to obtain its just dues from the Government of India, and on the other, the sympathetic consideration that is being given to the Durbar proposals by the Government of India and the Parliament. The claims of the Mysore Durbar are very modest and we hope that the Government of India will further enchance the gratitude of the Mysore people by generously acceeding to the Mysore Durbar's proposals.

VOTERS LISTS.

We had stated in our last issue that the Municipal authorities of Mysore City had presented a list of voters which was rediculously small and in which one could detect a careful manipulation which would work to the detriment of the rate-payers. Following it up, a few of the leading citizens of Mysore City sent up a message to Local and Legislative Secretary to the Mysore Government bringing to the Government's notice the omissions and praying for an extension of time to prepare a revised list according to the rules laid down by Government. But to this they have received a curt reply that it cannot be done and that the people must take their chances according to the present rule for sending up the omitted names within the limited time. It is a surprise to us that though such a grave irregularity is brought to the notice of the Government it refuses to interfere in the matter. We need only give one or two instances to prove what mischief has been played with the list in Mysore. Mysore City with a population of nearly 84,000 has only 1725 voters; while Nanjangud town with a population of nearly 3000 has 664 voters, and Malavalli with a population of 7000 has nearly 1000 voters. This disproportion is in explicable except on the ground of a wanton exclusion of eligible voters. If we remember right the Dewan once told a deputation of the Municipality that they would bring any irregularities to his notice and he would set them right. Here is a sample of it. We could understand, if we were given an elected President for the Municipal Council, our not having such a strong voice to question its acts. But here the Government thrusts upon the Council a President of its own, and in this case one who has avowedly lost the confidence of the Council which fact was made eloquently clear by Rev. E. S. Edwards on Saturday last, and appoints its own Chief Officer and when things go wrong they refuse to interfere. This creates a situation which has no parallel anywhere else. Where is the harm in giving time for revising the list when the elections are still far off, and when there has been such grave irregularities in the preparation of the list? As we said democracy would only be in name if the working of the reforms is not ccarefully watched and guarded against its abuse by interested men. We do hope that the Government will be pleased to reconsider the matter and accede to the reasonable request of the citizens.

The following is the reply sent by the Local and Legislative Secretary to the telegram sent by some of the leading citizens and Municipal Commissioners of Mysore City praying for an extension of time for preparing the revised list according to Municipal Khata and protesting against the list as prepared and published already in the Gazette:—

"Mahomad Sait Esq., Cloth Merchant, Mysore. Your telegram aggrieved voters have to prefer claim according to rules already notified fresh preparation of list cannot be ordered as requested.

Local Secretary.'.

ಅರ್ಲ್ ಆಫ್ ರೀಡಿಂಗ್, ಪಿ.ಸಿ., ಜಿ.ಸಿ.ಬಿ., ಕೆ.ಸಿ.ವಿ.ಓ.,
ಭರತಖಂಡದ ವೈಸ್‌ರಾಯರು.

ಕೌಂಟೆಸ್ ಆಫ್ ರೀಡಿಂಗ್, ಜಿ.ಬಿ.ಇ.,
ವೈಸ್‌ರಾಯರ ಪತ್ನಿಯವರು.

ಈ ಚಿತ್ರಪಟಗಳನ್ನು ಮುದ್ರಿಸಲು ಅನುಮತಿಯನ್ನು ಕೊಟ್ಟುದಕ್ಕಾಗಿ ಮ|| ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರನ್ನು ವಂದಿಸುತ್ತೇವೆ.

THE VEERASAIVA HOSTEL BOARDERS.

For sometime past the boarders of the Sowcar Kabballi Chennabasappa's Veerasaiva Ashrama have been indulging in irresponsible writings against us in the columns of our well known contemporary the *Sampadabhyudaya* which have been very hospitably thrown out to their use. Recently in its issue of the 21st November 1923 the journal publishes a letter under the heading "The Mysore Star" in which the covering letter, written by some boarder whose name is withheld, says that the letter was sent to the *Mysore Star* but was not published. We are surprised that the boarders should give expression to such a barefaced untruth when no such letter was sent to us for publication. As for the contents of the letter itself all that we need say is that the letter of Mr. G. H. Veeranna contradicting the statements of the boarders, which was puplished in our paper is a sufficient answer. But as regards the attitude of the boarders in engaging themselves with so unreasonable a controversy it is neither within the province of their legitimate duties nor conducive to their progress. For our part, we treat these writings with the contempt they deserve and refuse to refer to them in future. We hope that the management of the Hostel will exercise greater descipline over its boarders and not allow them to fly out of control.

ರಾಜಧಾನಿಗೆ ಶ್ರೀಮನ್ ವೈಸ್ರಾಯರವರ ಸಂದರ್ಶನ.

ಘನತೆಯನ್ನೈದಿದ ವೈಸ್‌ರಾಯ್ ಮತ್ತು ಗೌರ್ನರ್ ಜನರಲ್‌ರವರಾದ ಅರ್ಲ್ ರೀಡಿಂಗ್‌ರವರು ಪತ್ನೀ ಪರಿವಾರ ಸಮೇತರಾಗಿ ಕಳೆದ ಗುರುವಾರ ಬೆಳಗ್ಗೆ ರಾಜಧಾನಿಗೆ ದಯಮಾಡಿಸಿದರು. ಅತಿಥಿ ಸತ್ಕಾರದಲ್ಲಿ ಅಸಾಧಾರಣವಾದ ಕೀರ್ತಿಯನ್ನು ಪಡೆದಿರುವ ನಮ್ಮ ಸಂಸ್ಥಾನವು ತನ್ನ ಪ್ರಖ್ಯಾತಿಗೆ ತಕ್ಕಂತೆ ಈ ಸನ್ಮಾನ್ಯ ದಂಪತಿಗಳನ್ನು ಸ್ವಾಗತಿಸಿತು. ಭಾರತ ಸಾರ್ವಭೌಮ ಪ್ರತಿನಿಧಿಗಳ ಗೌರವಕ್ಕೆ ಉಚಿತಗಳಾದ ಎಲ್ಲ ಏರ್ಪಾಡುಗಳೂ ಬಹುವಿತರಣೆಯಿಂದ ಮಾಡಲ್ಪಟ್ಟಿರುವುವು. ನಮ್ಮ ಸಂಸ್ಥಾನದ ಆತಿಥ್ಯದಲ್ಲಿ ಇವರಿರುವ ಒಂದು ವಾರ ಕಾಲವು ಇವರ ಘನತರ ರಾಜ್ಯಕಾರ್ಯನಿರ್ವಾಹಸಂಜನಿತವಾದ ಬಳಲಿಕೆಯನ್ನು ಬಲುಮಟ್ಟಿಗೆ ಶಾಂತಿಗೊಳಿಸಿ ಆನಂದಗೊಳಿಸದೆಹೋಗಲಾರದು. ರಾಜಧಾನಿಯ ಸುಂದರತೆ, ಕನ್ನಂಬಾಡಿಕಟ್ಟೆಯ ಅಗಾಧತೆ, ಶ್ರೀರಂಗಪಟ್ಟಣದ ಚಾರಿತ್ರ್ಯಾವಶಿಷ್ಟತೆ, ಕಾಕನಕೋಟೆಕಾಡಿನ ಆನೆಬಂಗಡಿಯ ಅಪೂರ್ವತರವಾದ ನೋಟ, ಈ ದೇಶದ ಪ್ರಕೃತಿಸೌಂದರ್ಯ, ಇವೆಲ್ಲವೂ ಒಂದಕ್ಕೊಂದು ಅತಿಶಯವಾಗಿ ವೈಸ್ರಾಯದಂಪತಿಗಳ ಮನೋಲ್ಲಾಸವನ್ನು ಮಾಡುತ್ತಿರುವುವೆಂಬುದಕ್ಕೆ ಸಂಶಯವಿಲ್ಲವು. ರಾಜಧಾನಿಯು ತನ್ನ ಪ್ರಾಶಸ್ತ್ಯಕ್ಕೆ ತಕ್ಕಂತೆ ರಮಣೀಯತೆಯನ್ನು ಪಡೆದುಕೊಂಡಿರಬೇಕೆಂಬುದ್ದೇಶದಿಂದ ನಮ್ಮ ಪ್ರಭುವರ್ಯರು ಎಷ್ಟರಮಟ್ಟಿನ ಅವಧಾನವನ್ನೂ ಧನ ಸಾಹಾಯ್ಯವನ್ನೂ ಕೊಟ್ಟಿರುವರೆಂಬುದನ್ನು ಹೇಳಬೇಕಾಗಿಲ್ಲ. ಪ್ರತಿಕ್ಷಣದಲ್ಲೂ ಈ ರಾಜಧಾನಿಯ ಸೌಂದರ್ಯವು ವೃದ್ಧಿಗೊಳ್ಳುತ್ತಿದೆ. ಇಂತಪ್ಪ ನಗರವು ಈಗಣ ಸಮಾರಂಭ ಕಾಲದಲ್ಲಿ ಸುಣ್ಣ ಬಣ್ಣಗಳಿಂದಲೂ, ಗುಡಿತೋರಣಗಳಿಂದಲೂ, ಧ್ವಜಪತಾಕೆ ಮೊದಲಾದುವುಗಳಿಂದಲೂ, ವಿದ್ಯುಚ್ಛಕ್ತಿಯ ವಿಶೇಷ ದೀಪರಾಜಿಯಿಂದಲೂ, ನೀರಿನ ಜಳೇವಿನಿಂದಲೂ ಹೊಂದಿರುವ ಅಲಂಕಾರದಿಂದ ಎಷ್ಟು ಮನೋರಂಜಕವಾಗಿದೆಯೆಂಬುದು ಅವಲೋಕಿಸಿದವರಿಗೇನೆ ಗೊತ್ತು. ಆರೋಗ್ಯಶಾಖೆಯವರ ಮುತವರ್ಜಿಯೂ ಪೊಲೀಸ್ ಏರ್ಪಾಟೂ ಸಮರ್ಪಕವಾಗಿರುವುವು. ಸಂಸ್ಥಾನದ ಅನೇಕ ಭಾಗಗಳಿಂದ ಪೊಲೀಸು ಇನ್ಸ್‌ಪೆಕ್ಟರುಗಳೂ ಕಾನ್ಸ್‌ಟೇಬಲುಗಳೂ, ಬೆಂಗಳೂರಿನಿಂದ ಲ್ಯಾನ್ಸರ್ಸ್ ಅಶ್ವಸೇನೆಯೂ ರಾಜಧಾನಿಗೆ ಬರಮಾಡಲ್ಪಟ್ಟಿರುವುವು. ರಾಜಧಾನಿಯ ಎಲ್ಲ ಪಾಠಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲಾ ಉತ್ಸವ ಬರತಕ್ಕ ಮಾರ್ಗದ ಇಕ್ಕೆಲದಲ್ಲೂ ಹಾಕಲ್ಪಟ್ಟಿದ್ದ ಪಾವಟಿಗೆಗಳಮೇಲೆ ಕುಳ್ಳಿರಿಸಲ್ಪಟ್ಟಿದ್ದರು. ಬಾಲಚಮೂಗಳು ರೈಲ್ವೆಸ್ಟೇಷನ್ನಿನ ಮಾರ್ಗದ ಇಕ್ಕೆಲಗಳಲ್ಲೂ ನಿಲ್ಲಿಸಲ್ಪಟ್ಟಿದ್ದರು. ರೈಲ್ವೆಸ್ಟೇಷನ್ನಿನಿಂದ ಅತಿಥಿಗಳ ಬಿಡಾರವಾದ ಗೌರ್ನಮೆಂಟ್ ಹೌಸ್‌ವರೆಗೂ ಮಾರ್ಗಗಳ ಮಗ್ಗುಲುಗಳಲ್ಲಿ ಉದ್ದಕ್ಕೂ ಸಿಪಾಯಿಗಳೂ, ಪೊಲೀಸಿನವರೂ, ಕುದುರೆಯ ಸ್ವಾರರೂ ಅಲ್ಲಲ್ಲಿಗೆ ನಿಲ್ಲಿಸಲ್ಪಟ್ಟಿದ್ದರು. ರೈಲ್ವೆನಿಲ್ದಾಣವು ವಿದ್ಯುದ್ದೀಪಾವಳಿಗಳಿಂದಲೂ ಮಂಟಪರಚನೆ ಮೊದಲಾದುವುಗಳಿಂದಲೂ ರಮಣೀಯವಾಗಿದ್ದಿತು.

ಕಳೆದ ತಾ|| ೨೯ನೆಯ ಗುರುವಾರದ ದಿನ ಬೆಳಗಿನ 7 ಗಂಟೆಯೊಳಗಾಗಿಯೇ ಸ್ಥಳ ಪರಸ್ಥಳ ಜನರು ಉತ್ಸವಮಾರ್ಗಗಳ ಇಕ್ಕೆಲಗಳಲ್ಲೂ, ಮನೆಗಳ ಮಾಡದಮೇಲೂ ಬಂದು ಸೇರಿದ್ದರು. ಅರಮನೆಯ ಸಕಲ ಬಿರುದಾವಳಿಗಳೂ, ಆನೆ ಕುದುರೆ ಒಂಟೆ ಮೊದಲಾದವುಗಳೂ ಸೈನ್ಯಗಳೂ, ಬ್ಯಾಂಡುಗಳ ಸೆಟ್ಟುಗಳೂ ಒಳ್ಳೆಯ ಉಡುಪುಗಳನ್ನು ಧರಿಸಿಕೊಂಡು ನಿಲ್ದಾಣದ ಹೊರಗಡೆ ಕಾದಿದ್ದುವು. ಬ್ರಿಟಿಷ್ ರೆಸಿಡೆಂಟರು ದಿವಾನರು ಕೌನ್ಸಿಲರುಗಳು ಚೀಫ್ ಜಡ್ಜರು, ಸರದಾರರುಗಳು ಶಾಖಾ ಮುಖ್ಯಾಧಿಕಾರಿಗಳು, ರಾಜಬಂಧುಗಳು, ಲಾಯರುಗಳು ಮೊದಲಾಗಿ ಪುರಪ್ರಮುಖರು ನಿಲ್ದಾಣದಲ್ಲಿ ನಿರೀಕ್ಷಿಸಿಕೊಂಡಿದ್ದರು. ಶ್ರೀಮನ್ ಮಹಾರಾಜರವರು ತಮ್ಮ ಸೋದರ ಅಳಿಯಂದರಾದ ರಾಜಕುಮಾರ ದೇಶರಾಜ ಅರಸಿನವರೊಡನೆ ನಾಲ್ಕು ಅಶ್ವಗಳನ್ನು ಹೂಡಿದ ರಥದಲ್ಲಿ ಕುಳಿತು ರಾಜಮರ್ಯಾದೆಯಿಂದ 8¼ ಗಂಟೆಯ ಸಮಯಕ್ಕೆ ನಿಲ್ದಾಣಕ್ಕೆ ದಯಮಾಡಿಸಿದರು. ಬೆಂಗಳೂರು ಮಾರ್ಗವಾಗಿ ವೈಸ್ರಾಯರ ಸ್ಪೆಷಲ್ ರೈಲು ಬಂಡಿಯು 8½ ಗಂಟೆಗೆ ಸರಿಯಾಗಿ ಬಂದು ನಿಲ್ದಾಣವನ್ನು ತಲುಪಿತು. ಬಂಡಿಯನ್ನು ಬಿಟ್ಟು ವೈಸ್ರಾಯರು ಕೆಳಗಿಳಿದ ಕೂಡಲೆ 31 ಗುಂಡುಗಳು ಹಾರಿಸಲ್ಪಟ್ಟುವು. ಶ್ರೀಮನ್ ಮಹಾರಾಜರವರು ಬ್ರಿಟಿಷ್ ರೆಸಿಡೆಂಟರ ಮೂಲಕ ಪರಿಚಯ ಮಾಡಿಸಲ್ಪಟ್ಟಮೇಲೆ ವೈಸ್ರಾಯ ದಂಪತಿಗಳಿಗೆ ಸ್ವಾಗತ ಮರ್ಯಾದೆಯನ್ನು ಮಾಡಿದರು. ಅನಂತರ ಉಳಿದವರ ಪರಿಚಯವು ವೈಸ್ರಾಯರಿಗೆ ಮಾಡಿಸಲ್ಪಟ್ಟಿತು. ಸೇನಾಮರ್ಯಾದೆಯಾಯಿತು. ನಿಲ್ದಾಣದಿಂದ ಹೊರಗಡೆಗೆ ಬಂದು ಅಲ್ಲಿ ನಿಂತಿದ್ದ ಸಕಲ ಸೈನ್ಯಗಳೂ ವಾದ್ಯಗಾರರೂ ಮಾಡಿದ ಮರ್ಯಾದೆಯನ್ನು ಅಂಗೀಕರಿಸಿ ನಾಲ್ಕು ದಿವ್ಯಾಶ್ವಗಳನ್ನು ಹೂಡಿದ್ದ ರಥದಲ್ಲಿ ವೈಸ್ರಾಯರು ಅವರ ಎಡಗಡೆಗೆ ಮಹಾರಾಜರವರೂ ಮುಂಗಡೆಯಲ್ಲಿ ವೈಸ್ರಾಯರ ಕಡೆಯವರೂ, ಹಿಂಗಡೆಯ ರಥದಲ್ಲಿ ವೈಸ್ರಾಯರ ಪತ್ನಿಯವರೂ ರೆಸಿಡೆಂಟರೂ ಸರದಾರ್ ಗೋಪಾಲರಾಜ ಅರಸಿನವರೂ ಮತ್ತೊಬ್ಬರೂ ಮೂರನೆಯದರಲ್ಲಿ ದಿವಾನರು ವೈಸ್ರಾಯರ ಕಡೆಯ ಕರ್ನಲ್ಲುಗಳೂ ಈ ಪ್ರಕಾರವಾಗಿ ಕುಳಿತುಕೊಂಡು ಹೊರಟರು. ಹಿಂದೆ ಮುಂದೆ ಇಂಪೀರಿಯಲ್ ಲ್ಯಾನ್ಸರ್ಸ್‌ದಳವೂ, ಶ್ರೀಮನ್ಮಹಾರಾಜರವರ ಅಂಗರಕ್ಷಕದಳವೂ, ಮೈಸೂರುಹಾರ್ಸೂ; ಪಾರ್ಶ್ವಗಳಲ್ಲಿ ಗಗ್ಗರಿಯ ಬಲ್ಲೆಗಳೂ ಹೋಗುತ್ತಿದ್ದುವು. ಉತ್ಸವವು ಖರ್ಜನ್ ಪಾರ್ಕಿನಲ್ಲಿ ಟರ್ನ್ ಹಾಲಿಗೆ ದಕ್ಷಿಣಭಾಗದಲ್ಲಿ ಹಾಕಿದ್ದ ಮ್ಯುನಿಸಿಪಲ್ ಚಪ್ಪರದವರೆಗೆ ಬರುವವರೆಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳೂ ಪ್ರೇಕ್ಷಕಜನರೂ ಮಾಡಿದ ಜಯಶಬ್ದಗಳೂ ಹರ್ಷಧ್ವನಿಗಳೂ ಆ ಸಂಮಾನ್ಯ ಅತಿಥಿಗಳ ಮನಸ್ಸಿನಲ್ಲಿ ಆನಂದರಸವನ್ನುಕ್ಕಿಸಿ ಮಂದಹಾಸಯುಕ್ತವಾದ ವದನಮಂಡಲದಿಂದ ಅಖಂಡವಾಗಿ ಹೊರಸೂಸುವಂತೆ ಮಾಡಿಬಿಟ್ಟಿದ್ದುವು. ಆ ಆನಂದಭರದಲ್ಲಿ ವೈಸ್ರಾಯರು ಪ್ರತಿಮರ್ಯಾದೆಯನ್ನು ಮಾಡಲು ತಲೆಯಿಂದ ಟೊಪ್ಪಿಗೆಯನ್ನು ತೆರೆಯುವುದಕ್ಕೆ ಬಿಡುವೇ ಇರಲಿಲ್ಲ. ಮ್ಯುನಿಸಿಪಲ್ ಚಪ್ಪರದಬಳಿ ರಥಗಳು ಬಂದು ನಿಂತಕೂಡಲೇ ಸ್ವಾಗತಪರವಾದ ಎರಡು ಶ್ಲೋಕಗಳು ವಿದ್ವಾಂಸರಿಂದೋದಲ್ಪಟ್ಟುವು. ಅನಂತರ ಪ್ರೆಸಿಡೆಂಟರು ಆಂಗ್ಲಭಾಷೆಯಲ್ಲಿ ವಿಜ್ಞಾಪನಪತ್ರವನ್ನೋದಿ ಒಪ್ಪಿಸಿದರು. (ಇದೂ ಇದಕ್ಕೆ ವೈಸ್ರಾಯರು ಕೊಟ್ಟ ಪ್ರತ್ಯುತ್ತರವೂ ಬೇರೆಕಡೆ ಮುದ್ರಿಸಲ್ಪಟ್ಟಿರುತ್ತವೆ.) ತರುವಾಯ ಸಮರ್ಪಿಸಲ್ಪಟ್ಟ ಪುಷ್ಪಹಾರಗುಚ್ಛಗಳನ್ನು ವೈಸ್ರಾಯರೂ ಹಿಂದಣ ರಥದಲ್ಲಿದ್ದ ವೈಸ್ರಾಯರ ಪತ್ನಿಯವರೂ ಇತರ ಅಧಿಕಾರಿಗಳೂ ಸ್ವೀಕರಿಸಿದ ಮೇಲೆ ಉತ್ಸವವು ಸ್ವ್ಯಾಜು ಚೌಕದಿಂದ ಹಾರ್ಡಿಂಜು ಸರ್ಕಲ್ಲಿಗೆ ಬಂದು ಅಲ್ಲಿಂದ ದಕ್ಷಿಣದ್ವಾರದ ಮಾರ್ಗವಾಗಿ ದೊಡ್ಡಬಂಗಲೆಗೆ ಚಿತ್ತೈಸಿತು. ಆಕೂಡಲೆ 31 ಗುಂಡುಗಳು ಹಾರಿಸಲ್ಪಟ್ಟುವು. ಬಳಿಕ 10½ ಗಂಟೆಯಲ್ಲಿ ಶ್ರೀಮನ್ಮಹಾರಾಜರವರ ಕಡೆಯಿಂದ ಕೆಲ ಸರದಾರರು ಮರ್ಯಾದಾಪುರಸ್ಸರವಾಗಿ ವೈಸ್ರಾಯರ ಬಿಡಾರಕ್ಕೆ ಹೋಗಿ ಕುಶಲಪ್ರಶ್ನೆಮಾಡಿ ಬಂದಮೇಲೆ ವೈಸ್ರಾಯರ ಕಡೆಯ ಕೆಲ ಅಧಿಕಾರಿಗಳು ಅರಮನೆಗೆ ಬಂದು ಶ್ರೀಮನ್ ಮಹಾರಾಜರವರ ಕುಶಲಪ್ರಶ್ನವನ್ನು ಮಾಡಿಕೊಂಡು ಬಂದರು. ತರುವಾಯ 11 ಗಂಟೆಯ ಸಮಯದಲ್ಲಿ ಶ್ರೀಮನ್ ಮಹಾರಾಜರವರು ಮಿತಪರಿವಾರ ಸೈನ್ಯ ಗೌರವದೊಡನೆ ವೈಸ್ರಾಯರ ಬಿಡಾರಕ್ಕೆ ದಯಮಾಡಿಸಿ ವೈಸ್ರಾಯರ ಸಂದರ್ಶನ ಸಂಭಾಷಣೆಗಳನ್ನು ನಡೆಯಿಸಿ ಮರ್ಯಾದೆಗೊಂಡು ಬಂದಮೇಲೆ ವೈಸ್ರಾಯರು 12 ಗಂಟೆಯಲ್ಲಿ ಯಥಾಮರ್ಯಾದೆಯಿಂದ ಅರಮನೆಗೆ ಬಂದು ಶ್ರೀಮನ್ ಮಹಾರಾಜರವರ ಪ್ರತಿದರ್ಶನ ಸಂಭಾಷಣಗಳನ್ನು ಮಾಡಿಕೊಂಡು ಬಿಡಾರಕ್ಕೆ ದಯಮಾಡಿಸಿದರು. ಮಹಾರಾಜರವರ ಮತ್ತು ವೈಸ್ರಾಯರ ಗಮನಾಗಮನಕಾಲಗಳಲ್ಲೂ 21 ಮತ್ತು 31 ಗುಂಡುಗಳು ಹಾರಿಸಲ್ಪಟ್ಟುವು. ಆ ದಿವಸದ ಸಾಯಂಕಾಲ 5 ಗಂಟೆಯಲ್ಲಿ ಶ್ರೀಮನ್ಮಹಾರಾಜರವರು ವೈಸ್ರಾಯರನ್ನು ಮೋಟಾರುಬಂಡಿಯಲ್ಲಿ ಕುಳ್ಳಿರಿಸಿಕೊಂಡು ಚಾಮುಂಡಿಬೆಟ್ಟ ಮೊದಲಾದಕಡೆ ವಿಹರಿಸಿಕೊಂಡು ಬಂದರು. ರಾತ್ರಿ 8½ ಗಂಟೆಗೆ ದೊಡ್ಡಬಂಗಲೆಯಲ್ಲಿ ಅರಸೌತಣವು ಜರುಗಿತು. ಔತಣಾನಂತರ ಶ್ರೀಮನ್ ಮಹಾರಾಜರವರು ದಿವಾನರು ಮೊದಲಾದ ಅಧಿಕಾರಿಗಳೊಡನೆ ದಯಮಾಡಿಸಿ ವೈಸ್ರಾಯದಂಪತಿಗಳ ಆಯುರಾರೋಗ್ಯವನ್ನು ಬಯಸುವ ಸಂದರ್ಭದಲ್ಲಿ ಒಂದು ಭಾಷಣವನ್ನು ಮಾಡಿದರು. ಅದರಲ್ಲಿ—ವೈಸ್ರಾಯದಂಪತಿಗಳ ಗುಣಕಥನಾನಂತರ ಸಂಸ್ಥಾನದ ಉತ್ಪತ್ತಿಸಾಧನಗಳನ್ನು ಹೆಚ್ಚಿಸಿಯೂ ವೆಚ್ಚವನ್ನು ಕಡಿಮೆ ಮಾಡಿಯೂ ಒಟ್ಟು ಆಯವೂ ವ್ಯಯವೂ ಸಮತೂಕಕ್ಕೆ ಬರುವ ಹಾಗೆ ಮಾಡಿರುವುದನ್ನೂ, ಸಂಸ್ಥಾನದ ಆಡಳಿತದಲ್ಲಿ ಪ್ರಜೆಗಳು ಹೆಚ್ಚು ಭಾಗಿಗಳಾಗಲು ಅನುಕೂಲಿಸುವಂತೆ ರಾಜಕೀಯ ಸುಧಾರಣೆಯನ್ನು ಮಾಡಿರುವುದನ್ನೂ ಸಂಕ್ಷೇಪವಾಗಿ ತಿಳಿಸಿ ಈಗ ಇಂಡ್ಯಾ ಸರ್ಕಾರದವರಿಂದ ತೀರ್ಮಾನಿಸಲ್ಪಡಲಿಕ್ಕಿರುವ ಕೆಲ ಆರ್ಥಿಕವಿಚಾರದಲ್ಲಿ ತಾವು ಸಾನುಭೂತಿಪೂರ್ವಕವಾಗಿ ಸಾಹಾಯ್ಯೋಕರಿಸಬೇಕೆಂದು ಕೋರಿದರು. ವೈಸ್ರಾಯರು ಇದಕ್ಕೆ ಉತ್ತರವನ್ನು ಕೊಟ್ಟಿರುವುದರಲ್ಲಿ—ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳು ವಿದ್ಯಾವಂತರುಗಳಾಗಿ ಧಾರ್ಮಿಕ ನೈತಿಕ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಮುಂಬರಿಯಲು ನಾನಾಮುಖವಾಗಿ ಮಾಡುತ್ತಿರುವ ಪ್ರಯತ್ನವಿಶೇಷಗಳನ್ನೂ ಅವರ ಪ್ರಜಾರಂಜನೈಕಪರಾಯಣತೆಯನ್ನೂ ಬಹಳವಾಗಿ ಪ್ರಶಂಸಿಸಿದ ಮೇಲೆ ಪ್ರಭುಗಳ ಕೋರಿಕೆಯ ವಿಚಾರವಾಗಿ ಪ್ರಸ್ತಾಪಿಸುವವಾಗ್ಗೆ, ನಮ್ಮ ಸರ್ಕಾರದವರು ನಿಮ್ಮ ಕೋರಿಕೆಯನ್ನು ಸಾರ್ವದಾ ನೆರವೇರಿಸಿಕೊಡಲಾರರಾದರೂ, ಮೈಸೂರು ರಾಜ್ಯಭಾರವು ಸಮಾಧಾನದಿಂದ ನಡಿಸಲ್ಪಡುತ್ತಿರುವುದನ್ನೂ, ಅದರ ಸ್ವಾಭಾವಿಕವಾದ ಉತ್ಪತ್ತಿಸಾಧನಗಳನ್ನು ಅಭಿವೃದ್ಧಿಗೊಳಿಸಿ ಇಷ್ಟಾರ್ಥಸಿದ್ಧಿಯನ್ನು ಹೊಂದಿದ್ದುದನ್ನೂ ನೆನಪಿನಲ್ಲಿಟ್ಟುಕೊಂಡು ಯಾವಾಗಲೂ ನಿಮ್ಮ ಕೋರಿಕೆಗಳನ್ನು ಪರ್ಯಾಲೋಚಿಸುವವರಾಗಿರುವರು. ನೀವು ರೈಲ್ವೆಡಿಬೆಂಚರ್ ಸಿಂಕಿಂಗ್ ಫಂಡಿನ ಹಣವನ್ನು ನಿಮ್ಮ ಉತ್ಪತ್ತಿಸಾಧನ ಕೆಲಸಗಳಿಗುಪಯೋಗಿಸಿಕೊಳ್ಳುವ ವಿಚಾರದಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಕೂಡ ಪತ್ರವ್ಯವಹಾರ ನಡಿಸಿದೆ. ನಿಮ್ಮಿಷ್ಟವು ಸಂಪೂರ್ಣವಾಗಿ ನೆರವೇರದಿದ್ದರೂ ತಕ್ಕಮಟ್ಟಿಗೆ ಅನುಕೂಲವಾಗುವುದೆಂದು ಹೇಳಬಲ್ಲೆನು. ತಾವು ನನ್ನನ್ನು ಹಿಂದೆ ನೋಡಿದ್ದಾಗ್ಗೆ ಪೊಗದಿಯನ್ನು ಕಡಿಮೆಮಾಡಿಕೊಡಬೇಕೆಂದು ಕೇಳಿದ್ದಿರಿ. ಕೆಲಕಾಲದಿಂದಲೂ ಚರ್ಚೆಯಲ್ಲಿರುವ ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರೂ ಸ್ಟೇಟ್ ಸೆಕ್ರೆಟರಿಯವರೂ ಅನುಕೂಲಪಡಿಸಿಕೊಡಲು ಅಸಮರ್ಥರಾಗಿರುವರಾದರೂ, ಪ್ರತಿವರ್ಷದಲ್ಲೂ ಕೊಡುವ ಪೊಗದಿಯಲ್ಲಿ ಕೊಂಚ ಕಡಿಮೆಮಾಡಿಕೊಡಬೇಕೆಂದು ನಿಮ್ಮ ಸರ್ಕಾರದವರು ಕೇಳಿಕೊಳ್ಳಲು ಅಭ್ಯಂತರವಿಲ್ಲವು. ನೀವು ನಿಮ್ಮ ಸಂಸ್ಥಾನದ ಸೇನಾವೆಚ್ಚವನ್ನು ಕಡಿಮೆಮಾಡಬೇಕೆಂಬ ನಿಮ್ಮ ಪ್ರಯತ್ನದಿಂದ ನಿಮಗೆ ಉಳಿತಾಯವಾಗುವುದೆಂದು ನಿರೀಕ್ಷಿಸುತ್ತೇನೆ. ದಂಡಿನ ಉತ್ಪತ್ತಿಯಲ್ಲಿ ಮಿಗುವ ಹಣದ ವಿಲೆಯ ವಿಚಾರದಲ್ಲಿ ಕೆಲ ಸೂಚನೆಗಳನ್ನು ನಮ್ಮ ಸರ್ಕಾರಕ್ಕೆ ಕೊಟ್ಟಿರುತ್ತೀರಿ. ಈ ಸಮಸ್ಯೆಯು ನಮ್ಮುಭಯ ಸರ್ಕಾರಗಳಿಗೂ ಅನುಕೂಲವಾಗಿ ಇತ್ಯರ್ಥಗೊಳಿಸಲ್ಪಡುವುದಾಗಿ ನಂಬುತ್ತೇನೆ. ಕೃಷ್ಣರಾಜಸಾಗರ ಕಟ್ಟೆಯ ವಿಚಾರವಾಗಿ ನಿಮ್ಮ ಸರ್ಕಾರಕ್ಕೂ ಮದ್ರಾಸು ಸರ್ಕಾರಕ್ಕೂ ಉಂಟಾಗಿರುವ ವಿವಾದವು ಉಭಯ ಸರ್ಕಾರಗಳಿಗೂ ಅನುಕೂಲವಾಗಿರುವಂತೆ ಪಂಚಾಯಿತರಿಂದ ಬಗೆಹರಿಸಲ್ಪಟ್ಟಿರುವುದೆಂದು ತಿಳಿಯಲು ಸಂತೋಷವಾಗುತ್ತದೆ ಎಂದು ಹೇಳಿದರು. ತಾ|| ೩೦ ರ ಸಾಯಂಕಾಲ 4 ಗಂಟೆಯಲ್ಲಿ ಶ್ರೀಮನ್ ಮಹಾರಾಜರವರು ವೈಸ್ರಾಯರನ್ನು ಮೋಟಾರುಬಂಡಿಯಲ್ಲಿ ಕುಳ್ಳಿರಿಸಿಕೊಂಡು ಕನ್ನಂಬಾಡಿಕಟ್ಟೆ ಮತ್ತು ಶ್ರೀರಂಗಪಟ್ಟಣಗಳಿಗೆ ಹೋಗಿ ತೋರಿಸಿಕೊಂಡು ಬಂದರು. ಅದಿನ ರಾತ್ರಿ 9½ ಗಂಟೆಯಲ್ಲಿ ವೈಸ್ರಾಯರು ಪರಿವಾರದೊಡನೆ ಅರಮನೆಗೆ ಬಂದು ರಾಜಾವಾರದವರ ದೀವಟಿಗೆಯ ವಿನ್ಯಾಸಪರಾಂಬರಿಕೆ ಸಂಗೀತವಾದ್ಯಶ್ರವಣಾದಿಗಳಿಂದಲೂ ಮದ್ದಿನ ವಿನೋದಗಳಿಂದಲೂ ಸತ್ಕರಿಸಲ್ಪಟ್ಟು ರಾತ್ರಿ 11 ಗಂಟೆಗೆ ಬಿಡಾರಕ್ಕೆ ಹಿಂದಿರುಗಿ ದಯಮಾಡಿಸಿದರು. ನೆನ್ನೆಯ ದಿನ ಬೆಳಗ್ಗೆ 11 ಗಂಟೆಯಲ್ಲಿ ಕೆಡ್ಡಾಕ್ಯಾಂಪಿಗೆ ಶ್ರೀಮನ್ ಮಹಾರಾಜರವರ ಕೂಡಚಿತ್ತೈಸಿದರು. ಅಲ್ಲಿ ತಾ|| ೨ರಲ್ಲಿ ಆನೆಗಳಿಗೆ ಹಗ್ಗಬಿಗಿಯುವದನ್ನು ಪರಾಮರ್ಶಿಸಿ ತಾ|| ೩ರಲ್ಲಿ ಕೋಣನ ಬೇಟೆಯನ್ನೂ ೪ರಲ್ಲಿ ಹುಲಿಯ ಬೇಟೆಯನ್ನೂ ತಾ|| ೫ರ ಬೆಳಗ್ಗೆ ಪುನಃ ಕೋಣನ ಬೇಟೆಯನ್ನೂ ಮಾಡಿಕೊಂಡು ಅದೇ ಸಾಯಂಕಾಲ ೫ ಗಂಟೆಗೆ ರಾಜಧಾನಿಗೆ ಹೊರಟು ರಾತ್ರಿ 10½ ಗಂಟೆಗೆ ರೈಲುಬಂಡಿಯನ್ನು ಹತ್ತಿ ಮುಂದಕ್ಕೆ ಪ್ರಯಾಣಮಾಡುವರು ಈ ಸಾರ್ವಭೌಮ ಪ್ರತಿನಿಧಿಗಳು ನಮ್ಮ ದೇಶಕ್ಕೆ ಕೃಪಾಪೂರ್ವಕವಾಗಿ ದಯಮಾಡಿಸಿ ಸಂದರ್ಶನವನ್ನಿತ್ತುದುದಕ್ಕಾಗಿ ಸಂಸ್ಥಾನದ ಪ್ರಜಾಪಕ್ಷದಿಂದ ಕೃತಜ್ಞತಾಪುರಸ್ಸರವಾದ ವಂದನೆಗಳನ್ನು ಈ ಮೂಲಕವಾಗಿ ಅರ್ಪಿಸುತ್ತೇವೆ, ಮತ್ತೂ ಇವರಾಗಮನವು ಒಂದಾನೊಂದು ರೀತಿಯಲ್ಲಿ ಮೈಸೂರಿಗೆ ಸ್ಮರಣೀಯವಾಗಿರುವಂತೆ ಪರಿಣಮಿಸುವಂತಾಗಲೆಂದು ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು.

ರೆವಿನ್ಯೂ ಕಮಿಷನರು ಸಂಸ್ಥಾನದ ನಾನಾಭಾಗಗಳಲ್ಲಿ ದನಗಳ ಮೇವಿನ ಸ್ಥಿತಿಯು ನಿತ್ಯದಲ್ಲೂ ಬಹಳ ಶೋಚನೀಯವಾಗುತ್ತಿದೆಯೆಂದು ಸರ್ಕಾರಕ್ಕೆ ವರದಿಮಾಡಿರುತ್ತಾರೆ.

ಡೆಪ್ಯುಟಿಕಮಿಷನರಾಗಿದ್ದು ರಜದಮೇಲಿದ್ದ ಮ|| ಅರ್ವಮುದಯ್ಯಂಗಾರರು ಕೆಲದಿನಗಳಿಂದ ಅಸ್ವಸ್ಥರಾಗಿದ್ದು ಮದರಾಸಿಗೆ ಹೋಗಿ ವೈದ್ಯಚಿಕಿತ್ಸೆಯನ್ನು ಹೊಂದಿದರಾದರೂ ಗುಣಹೊಂದದೆ ಬೆಂಗಳೂರಿಗೆ ಹಿಂದಿರುಗಿ ಬಂದು ಕಳೆದವಾರ ಕಾಲಾಧೀನರಾದರೆಂದು ತಿಳುಹಲು ಖೇದವಾಗುತ್ತದೆ.

ರಾಜಧಾನಿಯ ಪ್ರಸಿದ್ಧ ಹಾರ್ಮೋನಿಯಂ ವರ್ತಕರುಗಳಾದ ಮ|| ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರು ವೈಸ್‌ರಾಯ್‌ದಂಪತಿಗಳ ಭಾವಚಿತ್ರಪಟಗಳನ್ನು ಬಹಳ ಮನೋಹರವಾಗಿ ಮುದ್ರಣಮಾಡಿಸಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಿಕೊಟ್ಟಿರುವರು. ಇದರ ಬೆಲೆ ಪ್ರತಿಯೊಂದಕ್ಕೆ ೨ ಆಣೆ.

ಕಳೆದ ಗುರುವಾರ ಬೆಳಗ್ಗೆ ವೈಸ್‌ರಾಯ್ ದಂಪತಿಗಳ ಆಗಮನಾರ್ಥವಾಗಿ ಸಯ್ಯಾಜಿರಾವ್ ರೋಡಿನಲ್ಲಿ ಅಲ್ಲಲ್ಲಿಗೆ ನಿಲ್ಲಿಸಲ್ಪಟ್ಟಿದ್ದ ಕುದುರೆಗಳಲ್ಲೊಂದು ಬೆದರಿ ಮೇಲೆ ಕುಳಿತಿದ್ದ ಸ್ವಾರನನ್ನು ಕೆಡವಿಬಿಟ್ಟು ಓಡಿಹೋಯಿತು. ಬಿದ್ದ ಸ್ವಾರನು ಪೆಟ್ಟನ್ನುತಿಂದು ಕೂಡಲೇ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವನು. ಅದೇದಿವಸ ವೈಸ್‌ರಾಯರು ಶ್ರೀಮನ್ ಮಹಾರಾಜರವರ ಪ್ರತಿದರ್ಶನಕ್ಕಾಗಿ ಅರಮನೆಗೆ ಹೋಗಿಬರುವಾಗ್ಗೆ ಗುಂಡುಗಳನ್ನು ಅರಿಸುತ್ತಿದ್ದ ಗೋಲಂದಾಜರುಗಳಲ್ಲೊಬ್ಬನು ಫಿರಂಗಿಯನ್ನು ತೊಳೆದು ಹಿಂದಕ್ಕೆ ಸರಿಯುವುದರಬದಲು ಫಿರಂಗಿಯ ಮುಂದುಗಡೆಯಿಂದ ಹಾದುಬರುವಾಗ್ಗೆ ಗುಂಡಿನೇಟು ಅವನ ಭುಜಕ್ಕೆ ತಗುಲಿ ಸುಟ್ಟುಹೋಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಮಾಡಿದಾಗ್ಯೂ ಉಳಿದುಕೊಳ್ಳದೆ ಸತ್ತುಹೋದನು.

ಬೆಂಗಳೂರು—ಮೈಸೂರು ಮ್ಯುನಿಸಿಪಾಲಿಟಿಯವರು ಒಪ್ಪಿಸಿದ ವಿಜ್ಞಾಪನಪತ್ರಿಕೆಗಳ ಸಾರಾಂಶ.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಘನವಂತರಾದ ತಮ್ಮನ್ನೂ ತಮ್ಮ ಧರ್ಮಪತ್ನಿಯವರನ್ನೂ ಬೆಂಗಳೂರು ಪುರನಿವಾಸಿಗಳ ಪರವಾಗಿ ಅವರ ಪ್ರತಿನಿಧಿಗಳಾದ ನಾವು ಮರ್ಯಾದಾಪುರಸ್ಸರವಾಗಿ ಸುಸ್ವಾಗತಿಸಲು ಮತ್ತು ತಾವುಗಳು ಈ ಪಟ್ಟಣಕ್ಕೆ ಆಗಮಿಸಿ ಗೌರವಿಸಿದುದರಿಂದ ನಮ್ಮಗಳಿಗುಂಟಾಗಿರುವ ಮನಃಪೂರ್ವಕವಾದ ಸಂತೋಷಾತಿಶಯವನ್ನು ಪ್ರದರ್ಶಿಸಲು ತಮ್ಮ ಅನುಮತಿಯನ್ನು ಬೇಡುತ್ತೇವೆ. ಈ ಪುರನಿವಾಸಿಗಳಿಗುಂಟಾಗಿರುವ ಸಂತೋಷಾತಿಶಯಕ್ಕೆ ಕಾರಣಭೂತವಾದ ತಮ್ಮಾಗಮನವು ಮುಂದೆ ತಮ್ಮ ಸ್ಮೃತಿಪಥದಲ್ಲಿರುವುದೆಂದು ನಂಬುತ್ತೇವೆ. ಬೆಂಗಳೂರುಪಟ್ಟಣವು ಸಮುದ್ರಮಟ್ಟಕ್ಕಿನ್ನ 3000ಅಡಿ ಎತ್ತರದಲ್ಲಿ ಮೈಸೂರುಸೀಮೆಯ ಮಧ್ಯಭಾಗದಲ್ಲಿದ್ದು ಆರೋಗ್ಯಕರವಾದ ವಾಯುಗುಣವುಳ್ಳದಕ್ಕಾಗಿಯೂ, ಪ್ರಕೃತಿಸೌಂದರ್ಯಕ್ಕಾಗಿಯೂ ಪ್ರಖ್ಯಾತವಾಗಿರುವುದು ತಮಗೆ ವೇದ್ಯವೇಯಿದೆ. ಈ ಪಟ್ಟಣವು ಅಷ್ಟು ಪ್ರಖ್ಯಾತವಾಗಿರುವುದರಿಂದಲೇ ಇಲ್ಲಿಗೆ ಪ್ರತಿವರ್ಷದಲ್ಲೂ ಭರತಖಂಡದ ನಾನಾಭಾಗಗಳಿಂದ ಬರತಕ್ಕ ಜನರ ಸಂಖ್ಯೆಯು

ಹೆಚ್ಚುತ್ತಿರುವುದು. ಕಳೆದ 25 ವರ್ಷಗಳಿಂದ ಈ ಪಟ್ಟಣದ ಪ್ರಜಾಸಂಖ್ಯೆಯು ಹೆಚ್ಚುತ್ತಿರುವುದಲ್ಲದೆ ಇದರ ವಿಸ್ತೀರ್ಣವು ಈ ಪಟ್ಟಣಸ್ಥಾಪಕನೂ ಚರಿತ್ರಪುರುಷನೂ ಆದ ಆ ಪ್ರಖ್ಯಾತ ಕೆಂಪೇಗೌಡನು ಎಲ್ಲಾ ದಿಕ್ಕುಗಳಲ್ಲೂ ಏರ್ಪಡಿಸಿದ್ದ ಗಡಿಯನ್ನು ಸಮೀಪಿಸಿರುತ್ತದೆ. ಈ ಪಟ್ಟಣವು ಅಭಿವೃದ್ಧಿಯಾದಂತೆಲ್ಲಾ ನಮ್ಮ ಆಕಾಂಕ್ಷೆಗಳು ಪ್ರತಿನಿತ್ಯದಲ್ಲೂ ಹೆಚ್ಚುತ್ತಿವೆ. ಈ ಪಟ್ಟಣವಾಸಿಗಳ ಸಾನುಭೂತಿಯಿಂದಲೂ ಸಹಕಾರದಿಂದಲೂ ಮ್ಯುನಿಸಿಪಾಲಿಟಿಯ ವಿಚಾರದಲ್ಲಿ ಬಹಳ ಉದಾರಭಾವದಿಂದಿರುವ ಶ್ರೀಮನ್ಮಹಾರಾಜಾ ಸರ್ಕಾರದವರ ಸಾಹಾಯ್ಯದಿಂದಲೂ ಭಾವಿಸಂವತ್ಸರಗಳಲ್ಲಿ ಪ್ರಜೆಗಳ ನ್ಯಾಯವಾದ ಆಶೋತ್ತರಗಳನ್ನು ನೆರವೇರಿಸಲು ಸಮರ್ಥರಾಗುವೆವೆಂದು ನಿರೀಕ್ಷಿಸುತ್ತೇವೆ. ಇದಕ್ಕೆ ವೈಸ್‌ರಾಯರು ಕೊಟ್ಟ ಉತ್ತರ—ನಿಮ್ಮ ಆದರಪುರಸ್ಸರವಾದ ಸ್ವಾಗತಕ್ಕಾಗಿ ನಾವು ದಂಪತಿಗಳು ನಿಮ್ಮನ್ನು ವಂದಿಸುತ್ತೇವೆ. 1537ನೆ ಇಸವಿಯಲ್ಲಿ ಸ್ಥಾಪಿತವಾದ ಈ ಚರಿತ್ರಪ್ರಸಿದ್ಧವಾದ ನಿಮ್ಮ ಪಟ್ಟಣಕ್ಕೆ ಬರಲು ಅವಕಾಶವದಗಿದುದಕ್ಕಾಗಿ ಸಂತೋಷಿಸುತ್ತೇನೆ. ಒಳ್ಳೆ ಜಲಾಶಯಸಮೀಪದಲ್ಲಿ ಆರೋಗ್ಯಕರವಾದ ಈ ಉನ್ನತಪ್ರದೇಶದಲ್ಲಿ ನಾನೂರು ವರ್ಷಗಳ ಹಿಂದೆ ಸ್ಥಾಪಿತವಾದ ಈ ಬೆಂಗಳೂರುಪಟ್ಟಣದ ಉಚ್ಛ್ರಾಯಸ್ಥಿತಿಗೆ ಈ ಪಟ್ಟಣದ ಸ್ಥಾಪಕನ ದೂರದರ್ಶಿಕತ್ವವೇ ಮುಖ್ಯಕಾರಣವಾಗಿರುತ್ತದೆ. 18ನೇ ಶತಮಾನದ ಅಂತ್ಯಭಾಗದಲ್ಲಿ ಪ್ರಾಪ್ತವಾದ ಉಪಟಳಕ್ಕೆ ಸಿಕ್ಕಿದಾಗ್ಯೂ ಈ ಪಟ್ಟಣವು ತನ್ನ ಪ್ರಾಶಸ್ತ್ಯವನ್ನು ಕಳೆದುಕೊಳ್ಳದೆ ಸ್ಥಾಪಕನ ನಿರೀಕ್ಷಣೆಯನ್ನು ಸಾರ್ಥಕಗೊಳಿಸಿರುವುದು, ಮತ್ತು ಮೂಲಪುರುಷನಿಂದ ಗೊತ್ತುಮಾಡಲ್ಪಟ್ಟಿದ್ದ ಗಡಿಗಳವರೆಗೆ ವಿಸ್ತರಿಸಿ ಸಂಸ್ಥಾನದಲ್ಲೆಲ್ಲಾ ಮುಖ್ಯಪಟ್ಟಣವಾಗಿ ಪರಿಣಮಿಸಿರುತ್ತದೆ. ಪ್ರಜಾಸಂಖ್ಯೆಯಲ್ಲೂ, ವ್ಯಾಪಾರ ಕೈಗಾರಿಕೆಗಳಲ್ಲೂ ಭರತಖಂಡದ ಇತರ ದೊಡ್ಡಪಟ್ಟಣಗಳಿಗೆ ಸರಿಸಮಾನವಾಗಿ ಅಭಿವೃದ್ಧಿಯನ್ನು ಹೊಂದುತ್ತಿರುವುದು. ಕೌನ್ಸಿಲಿನ ಪ್ರಯತ್ನವಿಶೇಷದಿಂದಲೂ, ಸರ್ಕಾರದವರ ಸಾನುಭೂತಿಯುಕ್ತವಾದ ಉದಾರಾಶ್ರಯದಿಂದಲೂ ಸುಂದರವಾದ ದೊಡ್ಡ ಕಟ್ಟಡಗಳು, ಅದೃಷ್ಟಹೀನವಾದ ಪಟ್ಟಣಗಳು ಕರುಬುವಂತೆ ನಿರ್ಮಿಸಲ್ಪಟ್ಟಿರುತ್ತವೆ. ನೀವು ವಹಿಸಿಕೊಂಡಿರುವ ಬಹಳ ಉತ್ತರವಾದಿತ್ವವುಳ್ಳ ಜನೋಪಯುಕ್ತ ಕಾರ್ಯನಿರ್ವಹಣದಲ್ಲಿ ಜಯಶೀಲರಾಗಲೆಂದು ಹಾರೈಸುತ್ತೇನೆ.

ಬೆಂಗಳೂರು ದಂಡಿನ ಮ್ಯುನಿಸಿಪಾಲಿಟಿಯವರೊಪ್ಪಿಸಿದ ವಿಜ್ಞಾಪನ ಪತ್ರಿಕೆಯಲ್ಲಿ—1919 ರಲ್ಲಿ ಲಾರ್ಡ್ ಛೆಲ್ಮ್ಸ್‌ಫರ್ಡ್‌ರವರು ರಾಜಪ್ರತಿನಿಧಿಯಾಗಿ ದಯಮಾಡಿಸಿದ್ದಾಗ್ಗೆ ಕುಡಿಯುವನೀರು ನಿರಾತಂಕವಾಗಿ ಒದಗಿಸಲ್ಪಡುವ, ಭೂಮಿಯೊಳಗೆ ಒಚ್ಚಲನ್ನು ಹಾಕುವ, ಫಸ್ಟ್‌ಗ್ರೇಡ್ ಕಾಲೇಜನ್ನು ಸ್ಥಾಪಿಸುವ, ಡಿ|| ಮತ್ತು ಸೆಷನ್ಸ್‌ಜಡ್ಜರ ಸ್ಥಾನವನ್ನು ಪುನಃ ಏರ್ಪಡಿಸುವ ಅವಶ್ಯಕತೆಯನ್ನು ಕುರಿತು ಪ್ರಾರ್ಥಿಸಿಕೊಂಡಿದ್ದೆವು. ನೀರಿನಕೊರತೆಯು ಕೂಡಲೆ ಪರಿಹಾರವಾಗತಕ್ಕದ್ದಾಗಿದೆ. ಇದು ಸೇನೆಯಿರತಕ್ಕ ಸ್ಥಳವಾದ್ದರಿಂದ ಆರೋಗ್ಯಸ್ಥಿತಿಯು ಉತ್ತಮಪಡಿಸಲ್ಪಡತಕ್ಕದಾಗಿದೆ. ಈ ವಿಚಾರದಲ್ಲಿ ಸ್ಥಳೀಯ ಅಧಿಕಾರಿಗಳು ವಿಶೇಷ ಗಮನಕೊಟ್ಟು ಸಾಹಾಯ್ಯಾಕರಿಸುವವರಾಗಿದ್ದಾರೆ. ಬಡಬಗ್ಗರ ವಾಸಸ್ಥಳವು ಬಹಳ ಅನಾರೋಗ್ಯಕರವಾಗಿರುವುದರಿಂದ ಅವರುಗಳಿಗೆ ಬೇರೆ ಮನೆಗಳನ್ನು ಕಟ್ಟಿಸಿಕೊಟ್ಟು ಆರೋಗ್ಯಸ್ಥಿತಿಯನ್ನು ಉತ್ತಮಪಡಿಸಲುದ್ಯುಕ್ತರಾಗಿದ್ದೇವೆ. ಈ ವಹಿಸಿಕೊಡಲ್ಪಟ್ಟಿರುವ ದಂಡುಪ್ರದೇಶದ ಸ್ಥಿತಿಯು ವಿಜಾತೀಯವಾಗಿದೆ. ಅನ್ಯದೇಶದಲ್ಲಿ ಬ್ರಿಟಿಷ್ ಆಡಳಿತಕ್ಕೊಳಪಟ್ಟ ಪ್ರದೇಶವೆಂಬುದಾಗಿ 1858 ರಲ್ಲಿ ಹೇಳಲ್ಪಟ್ಟದ್ದು ಇಂದಿಗೂ ನಿಜವಾಗಿಯೇ ಇರುತ್ತದೆ. ಇದು 1809ರಲ್ಲಿ ಬ್ರಿಟಿಷ್ ಸೇನಾನಿವಾಸಸ್ಥಾನವಾಗಿ ಏರ್ಪಡಿಸಲ್ಪಟ್ಟು ಶ್ರೀರಂಗಪಟ್ಟಣದಲ್ಲಿದ್ದ ಸೇನೆಯು ಇಲ್ಲಿಗೆ ಬರಮಾಡಲ್ಪಟ್ಟು ನೆಲೆಸಲ್ಪಟ್ಟಿತು ಮತ್ತು 1881ರಲ್ಲಿ ಈ ಪ್ರದೇಶವು ಇಂಡಿಯಾಸರ್ಕಾರದ ಸಂಪೂರ್ಣವಾದ ಆಡಳಿತಕ್ಕೆ ವಹಿಸಿಕೊಳ್ಳಲ್ಪಟ್ಟಿತು. ಇದು ತನ್ನ ಅನುಕೂಲವಾದ ಪರಿಸ್ಥಿತಿಯಿಂದಲೂ, ವಾಯುಗುಣವಿಶೇಷದಿಂದಲೂ, ದಕ್ಷಿಣ ಇಂಡಿಯಾದಲ್ಲಿ ಒಂದು ಪ್ರಮುಖಪಟ್ಟಣವಾಗಿ ಪರಿಣಮಿಸಿರುತ್ತದೆ. ದಂಡಿನ ವಾಸಸ್ಥಳವಾಗಿರುವುದಲ್ಲದೆ ಜನರ ವಾಸಕ್ಕೂ ವ್ಯಾಪಾರ ಮತ್ತು ವಿದ್ಯೆಗಳಿಗೂ ಮಧ್ಯಸ್ಥಳವಾಗಿರುತ್ತದೆ. ರೆಸಿಡೆಂಟರವರ ಅಧೀನದಲ್ಲಿ ಮ್ಯುನಿಸಿಪಲ್ ಆಡಳಿತದ ಉತ್ತರವಾದಿತ್ವವನ್ನು ವಹಿಸಿಕೊಂಡಿರುವ ನಾವು ಪ್ರಜೆಗಳ ಪ್ರತಿನಿಧಿಯಾಗಿ ಬ್ರಿಟಿಷ್ ಇಂಡಿಯಾಕ್ಕೆ ಸೇರಿದ ಈ ತರಹದ ಸ್ಥಳಗಳ ಅಥವಾ ನಮ್ಮ ನೆರೆಯಲ್ಲಿರುವ ಬೆಂಗಳೂರುಸಿಟಿಯ ಆಡಳಿತಕ್ಕೆ ಸರಿಸಮಾನವಾದ ಆಡಳಿತವನ್ನು ನಡೆಸುವ ಸೌಲಭ್ಯವನ್ನು ಹೊಂದಲಪೇಕ್ಷಿಸುತ್ತೇವೆ. ಇಲ್ಲಿ ಪಂಚಮರ ಸಂಖ್ಯೆಯು ಬಹಳವಾಗಿ ಹೆಚ್ಚಿರುತ್ತದೆ. ಈ ದಂಡಿನ ಒಟ್ಟು ಹುಟ್ಟುವಳಿಯಲ್ಲಿ ⅓ ಭಾಗವು ಮಾದಕಪದಾರ್ಥಗಳಿಂದ ಬರತಕ್ಕದ್ದಾಗಿದೆ. ಈ ಮಾದಕಪದಾರ್ಥದ ಉತ್ಪನ್ನಕ್ಕೆ ಪಂಚಮರೇ ವಿಶೇಷವಾಗಿ ಕಾರಣರಾಗಿದ್ದಾರೆ. ಇವರಲ್ಲಿ ಅನೇಕರು ಬಹಳ ಶೋಚನೀಯಸ್ಥಿತಿಯಲ್ಲಿರುವುದರಿಂದ ಅವರ ನೈತಿಕ ಮತ್ತು ಆರ್ಥಿಕಸ್ಥಿತಿಯನ್ನುತ್ತಮಗೊಳಿಸುವ ಭಾರವು ಅಧಿಕಾರಿವರ್ಗದವರ ಮೇಲೆ ಬಿದ್ದುದಾಗಿರುವುದಲ್ಲದೆ ಅವರನ್ನ ವಿದ್ಯಾವಂತರನ್ನಾಗಿ ಮಾಡಿ ಅವರಿಗೆ ಆರೋಗ್ಯಕರವಾದ ವಾಸಸ್ಥಳಗಳನ್ನು ಕಲ್ಪಿಸಿಕೊಡುವುದು ಅವಶ್ಯಕವಾಗಿದೆ. ಈಗ ೩ ವರ್ಷಗಳಿಂದಲೂ ಏರ್ಪಟ್ಟಿರುವ ಮಕ್ಕಳ ಮತ್ತು ಬಾಣಂತಿಯರ ಪೋಷಣೋಪಾಯದಿಂದ ಈ ಜನರಿಗೆ ಬಹಳ ಪ್ರಯೋಜನವಾಗಿರುತ್ತದೆ.

ಈ ದಂಡಿನ ಅಭಿವೃದ್ಧಿಕಾರ್ಯಗಳನ್ನ ಮಾಡಲು ಇಲ್ಲಿಯುತ್ಪನ್ನದಲ್ಲಿ ಗ್ರಾಂಟನ್ನು ಕೊಡಿಸಿರುವದಕ್ಕಾಗಿ ತಮ್ಮ ಸರ್ಕಾರದವರಿಗೆ ಕೃತಜ್ಞರಾಗಿರುತ್ತೇವೆ ಮತ್ತು ಈ ಹಣವು ಅಭಿವೃದ್ಧಿ ಕೆಲಸಕ್ಕಾಗಿಯೇ ಉಪಯೋಗಿಸಲ್ಪಡುತ್ತದೆಂದು ನಾವು ದೃಢವಾಗಿ ಹೇಳುತ್ತೇವೆ. ಈ ಪ್ರದೇಶವನ್ನು ಗೊತ್ತುಗುರಿ ಇಲ್ಲದೆ ವಿಸ್ತರಿಸಬೇಕೆಂಬ ಉದ್ದೇಶವು ನಮಗೆ ಇಲ್ಲವಾದರೂ, ನ್ಯಾಯವಾದ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕಾದ್ದರಿಂದ ದುಡ್ಡಿನ ಸಹಾಯವು ಅವಶ್ಯಕವಾಗಿದೆ. ಇಲ್ಲಿಯ ಒಟ್ಟು ಉತ್ಪತ್ತಿಯಲ್ಲಿ ಖರ್ಚು ಜಾತಾ ಉಳಿಯುವ ಮೊಬಲಗಿನಲ್ಲಿ ಯುಕ್ತವಾದ ಭಾಗವು ಕೊಡಿಸಲ್ಪಡಬೇಕೆಂಬುದು ಕಂದಾಯ ಕೊಡುವ ಪ್ರಜೆಗಳ ಆಶಯವಾಗಿದೆ ಎಂದು ತಮ್ಮಲ್ಲಿ ಬಿನ್ನೈಸಿಕೊಳ್ಳುತ್ತೇವೆ. ಮಾಂಟೆಗೊ ಛಲ್ಮಸ್‌ಫರ್ಡ್‌ರವರ ನೂತನ ರಾಜಕೀಯಸುಧಾರಣೆಯಿಂದ ನಮಗೆ ಯಾವ ಸೌಲಭ್ಯವೂ ದೊರಕಿಲ್ಲವಾದಕಾರಣ ಇಂಪೀರಿಯಲ್ ಲೆಜಿಸ್ಲೇಟೀವ್ ಅಸಂಬ್ಲಿಗೆ ನಮ್ಮ ಪ್ರತಿನಿಧಿಯೊಬ್ಬರನ್ನು, ಆರಿಸಿ ಕಳುಹಿಸಿಕೊಡಲು ಅವಕಾಶವನ್ನುಂಟುಮಾಡಿ ಕೊಡಬೇಕಾಗಿಯೂ ಬ್ರಿಟಿಷ್ ರೆಸಿಡೆಂಟರ ಸಹಾಯಾರ್ಥವಾಗಿ ಒಂದು ಆಲೋಚನಾ ಸಂಘವನ್ನೇರ್ಪಡಿಸಿ ಕೊಡಬೇಕಾಗಿಯೂ ಪ್ರಾರ್ಥಿಸುತ್ತೇವೆ. ಈ ಕಂಟೋನ್ಮೆಂಟಿನಲ್ಲಿ ಬಾಲವಿದ್ಯಾಭ್ಯಾಸವನ್ನು ನಿರ್ಬಂಧದಿಂದ ಮಾಡಿಸಲು ಎಣ್ಣಿಸಿರುತ್ತೇವೆ. ಆದಕ್ಕಾಗಿ ಗ್ರಾಂಟನ್ನು ಕೊಡಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇವೆ.

ವೈಸ್ರಾಯರ ಉತ್ತರ—ನೀವು ನಮ್ಮ ಸುಖಾಗಮನವನ್ನು ಬಯಸಿದುದಕ್ಕಾಗಿ ನಾವು ನಿಮ್ಮನ್ನು ವಂದಿಸುತ್ತೇವೆ. ಇಂಡಿಯಾ ಸರ್ಕಾರದ ರಾಜಧಾನಿಗೆ ಬೆಂಗಳೂರು ಬಹಳ ದೂರವಾಗಿರುವುದರಿಂದ ಅನೇಕ ರಾಜಕಾರ್ಯಗಳಲ್ಲಿ ಉದ್ಯುಕ್ತರಾಗಿರುವ ವೈಸರಾಯಿ ಗೌರ್ನರ್‌ಜನರಲ್ಲುಗಳು ಇಷ್ಟು ದೂರ ಪದೇಪದೇ ಬರಲು ಸಾಧ್ಯವಿಲ್ಲವು. ಅದುಕಾರಣ ದಕ್ಷಿಣಇಂಡಿಯಾದಲ್ಲಿ ಮುಖ್ಯಪಟ್ಟಣವಾಗಿರುವ ಇಲ್ಲಿಗೆ ನಾವು ಬರಲು ಈಗ ಅವಕಾಶವು ದೊರಕಿದುದಕ್ಕಾಗಿ ಸಂತೋಷಿಸುತ್ತೇವೆ. ಈ ಪಟ್ಟಣವನ್ನು ನವೀನ ಆರೋಗ್ಯಸೂತ್ರಕ್ರಮಗಳಿಗನುಸರಿಸಿ ಸುಧಾರಿಸಲು ಮತ್ತು ಪ್ರಜೆಗಳಿಗೆ ಹೆಚ್ಚು ಕಂದಾಯದ ಭಾರವನ್ನು ಹೊರಿಸದೆ ಬಡವರಿಗೆ ವಾಸಸ್ಥಳವನ್ನು ಕಟ್ಟಿಸಿ ಪಟ್ಟಣಾಭಿವೃದ್ಧಿ ಮಾಡಲು ನೀವು ನಡೆಸಿರುವ ಪ್ರಯತ್ನವು ಶ್ಲಾಘ್ಯವಾಗಿದೆ. ಕೂಲಿಯಿಂದ ಜೀವಿಸುವ ಬಡಜನರ ವಾಸಸ್ಥಳಗಳನ್ನುತ್ತಮಪಡಿಸಲು ನೀವು ಮಾಡಿರುವ ಪ್ರಯತ್ನವು ನನಗೂ ಮತ್ತು ನನ್ನ ಪತ್ನಿಯವರಿಗೂ ಸಂತೋಷವನ್ನುಂಟುಮಾಡಿರುತ್ತದೆ. ಜನಭರಿತವಾದ ಪಟ್ಟಣಗಳಲ್ಲಿ ಒಳ್ಳೇನೀರಿನ ಕೊರತೆ ಇರುವಂತೆ ಇಲ್ಲೂ ಇರುತ್ತದೆ. ಇದರ ನಿವಾರಣೆಗಾಗಿ ರೆಸಿಡೆಂಟರು ಕೆಲ ಅನುಭವಸ್ಥರ ಪರ್ಯಾಲೋಚನೆಯಿಂದ ನಿವಾರಣೋಪಾಯವನ್ನು ಗೊತ್ತುಮಾಡಿರುವರು. ಅದು ಇಷ್ಟರಲ್ಲೇ ಕಾರ್ಯಮುಖವಾಗುವದೆಂದು ತಿಳಿಯುತ್ತೇನೆ. ಈ ಕೆಲಸಗಳ ಸಾವಕಾಶಕ್ಕೆ ದುಡ್ಡಿನ ಕೊರತೆಯೇ ಕಾರಣವಾಗಿರುತ್ತದೆ. ರಾಜಕೀಯ ಸುಧಾರಣೆಯ ವಿಚಾರದಲ್ಲಿ ನಿಮಗಿರುವ ಆಶೋತ್ತರವನ್ನು ತಿಳಿಸಿರುತ್ತೀರಿ. ಈ ದಂಡಿನ ಪ್ರದೇಶವು ಬ್ರಿಟಿಷ್ ಇಂಡಿಯಾಕ್ಕೆ ಸೇರದೆ ದೇಶೀಯಸಂಸ್ಥಾನದ ಒಂದು ಭಾಗವಾಗಿದ್ದು ಇಂಡಿಯಾ ಸರ್ಕಾರದವರು ತಮ್ಮ ಸೇನೆಯನ್ನು ಇಡಲು ಅವರಿಗೆ ವಹಿಸಿಕೊಡಲ್ಪಟ್ಟುದಾಗಿ ಇರುತ್ತದೆ. ಈ ಪ್ರದೇಶವು ಇಂಡಿಯಾ ಸರ್ಕಾರದವರ ಪರವಾಗಿ ರೆಸಿಡೆಂಟರ ಆಡಳಿತಕ್ಕೆ ಒಳಪಟ್ಟಿರುವುದಾದರೂ, ಮೈಸೂರು ಸಂಸ್ಥಾನದ ಒಂದು ಭಾಗವಾಗಿರುವುದರಿಂದ ಈ ದಂಡಿನ ಆಡಳಿತವು ಆಜ್ಮೀರ್, ಮಾರವಾರ್ ಅಥವಾ ಡೆಲ್ಲಿಯ ಆಡಳಿತದಂತಿಲ್ಲವು. ಆದುಕಾರಣ ಬ್ರಿಟಿಷ್ ಇಂಡಿಯಾಕ್ಕೆ ಸೇರದೆ ಒಂದು ಸಣ್ಣ ಪ್ರದೇಶವಾಗಿರುವ ನಿಮ್ಮ ಸ್ಥಳದಿಂದ ಲೆಜಿಸ್ಲೇಟೀವ್ ಅಸೆಂಬ್ಲಿಗೆ ಒಬ್ಬ ಪ್ರತಿನಿಧಿಯನ್ನು ಕಳುಹಿಸಿಕೊಡಬೇಕೆಂಬ ನಿಮ್ಮ ಕೋರಿಕೆಯನ್ನು ನೆರವೇರಿಸಲು ಸಾಧ್ಯವಿಲ್ಲ. ಅಡ್ವೈಸರಿ ಕಮಿಟಿಯನ್ನು ನೇಮಿಸುವ ವಿಚಾರದಲ್ಲೂ ತೊಂದರೆ ಇರುತ್ತದೆ.

ಮೈಸೂರು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನವರೊಪ್ಪಿಸಿದ ವಿಜ್ಞಾಪನಪತ್ರಿಕೆಯ ಮುಖ್ಯಾಂಶ—ಘನವಂತರಾದ ತಾವು ದಂಪತಿಗಳು ಈ ರಾಜಧಾನಿಗೆ ಪ್ರಥಮತಃ ಚಿತ್ತೈಸಿರುವ ಈ ಸುಸಮಯದಲ್ಲಿ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳಾದ ನಾವುಗಳು ಆದರಾತಿಶಯದಿಂದ ತಮ್ಮಗಳನ್ನು ಸುಸ್ವಾಗತಿಸುತ್ತೇವೆ. ಘನತರವಾದ ವೈಸ್ರಾಯ್‌ಪದವಿಯನ್ನು ವಹಿಸಿರುವ ತಾವು ತಮ್ಮ ಕಾರ್ಯಕಲಾಪವಿಶೇಷದಲ್ಲಿ ವ್ಯವಧಾನ ಮಾಡಿಕೊಂಡು ನಮ್ಮ ಶ್ರೀಮನ್ ಮಹಾರಾಜರವರ ಆಮಂತ್ರಣವನ್ನು ಪುರಸ್ಕರಿಸಿ ನಮ್ಮ ಸಂಸ್ಥಾನಕ್ಕೆ ಚಿತ್ತೈಸಿದುದಕ್ಕಾಗಿ ವಿಶೇಷ ಕೃತಜ್ಞರಾಗಿರುತ್ತೇವೆ. ಮತ್ತು ತಾವು ನಮ್ಮ ಸಂಸ್ಥಾನದಲ್ಲಿ ಇರುವಷ್ಟು ಕಾಲದಲ್ಲಿ ತಮ್ಮ ಘನತರವಾದ ರಾಜ್ಯಕಾರ್ಯ ನಿರ್ವಾಹದ ಒಳಲಿಕೆಯು ಬಲುಮಟ್ಟಿಗೆ ಶಾಂತವಾಗಿ ಚಿತ್ತರಂಜನೆಯುಂಟಾಗುವುದೆಂದು ನಿರೀಕ್ಷಿಸುತ್ತೇವೆ. ಯಾರ ವಿವೇಕಪೂರಿತವೂ ಉಪಯುಕ್ತವೂ ಆದ ರಾಜ್ಯಭಾರದಿಂದ ನಮ್ಮ ದೇಶವು ಎಲ್ಲಮಾರ್ಗದಲ್ಲೂ ವಿಶೇಷಾಭಿವೃದ್ಧಿಯನ್ನು ಹೊಂದಿರುತ್ತದೋ ಅಂತಹ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಪ್ರಭುತ್ವಕ್ಕೆ ಒಳಪಟ್ಟಿರುವ ಸಂಸ್ಥಾನದ ಪ್ರಜೆಗಳೆಲ್ಲರೂ ವಿಶೇಷಪುಣ್ಯಶಾಲಿಗಳೆಂದು ಭಾವಿಸಿರುತ್ತೇವೆ. ಪ್ರಜಾಪ್ರತಿನಿಧಿಸಭೆಯನ್ನೇರ್ಪಡಿಸಿ ತನ್ಮೂಲಕ ಪ್ರಜೆಗಳು ಸರ್ಕಾರ ಆಡಳಿತಗಳಲ್ಲಿ ಭಾಗಿಗಳಾಗುವಂತೆ ಮಾಡಿರುವರಲ್ಲದೆ ಚಿರಸ್ಮರಣೀಯರಾದ ನಮ್ಮ ಮಹಾರಾಜರವರ ತಂದೆಯವರೇ ಮೊದಲನೆಯವರೆಂದು ತಿಳುಹುವಲ್ಲಿ ನಮಗೆ ಒಂದು ವಿಧವಾದ ಹೆಮ್ಮೆಯುಂಟಾಗುತ್ತದೆ. ಅವರ ತರುವಾಯ ಮಹಾಮಾತುಶ್ರೀ ವಾಣೀವಿಲಾಸಸನ್ನಿಧಾನ ಸಿ.ಐ.ಯವರು ಸಂಸ್ಥಾನದ ಪೂರ್ವಾಚಾರ ಪದ್ಧತಿಗಳನ್ನು ಬಿಡದೆ ತಮ್ಮ ಪತಿಯವರ ಉತ್ಕೃಷ್ಟವಾದ ರಾಜನೀತಿಯನ್ನು ಅನುಸರಿಸಿಕೊಂಡು ಬಂದರು. ಈ ನಮ್ಮ ಪ್ರೀತ್ಯಾಸ್ಪದರಾದ ಶ್ರೀಮನ್ ಮಹಾರಾಜರವರು ಸಂಸ್ಥಾನದ ರಾಜ್ಯಭಾರವನ್ನು ವಹಿಸಿದಾರಭ್ಯ ತಮ್ಮ ಪ್ರಜೆಗಳಾದ ನಮ್ಮನ್ನು ಅಭಿವೃದ್ಧಿಮಾರ್ಗದಲ್ಲಿ ಮುಂದರಿಸುವುದು ತಮ್ಮ ಮುಖ್ಯ ಪುರುಷಾರ್ಥವೆಂದು ಭಾವಿಸಿರುತ್ತಾರೆ. ಈ ರಾಜಧಾನಿಯ ಪುರೋಭಿವೃದ್ಧಿಯಲ್ಲಿ ಪೂರ್ಣಾಸಕ್ತಿಯನ್ನೂ ವ್ಯವಧಾನವನ್ನೂ ತೋರಿಸುತ್ತಿರುವುದಕ್ಕಾಗಿಯೂ ಸ್ವಂತ ಹಣದಿಂದ ಸಹಾಯಮಾಡಿಯೂ ಮಾಡುತ್ತಲೂ ಇರುವದಕ್ಕಾಗಿಯೂ ರಾಜಧಾನಿಯ ನಿವಾಸಿಗಳಾದ ನಾವು ನಮ್ಮ ಮಹಾಸ್ವಾಮಿಯವರಿಗೆ ಪೂರ್ಣಕೃತಜ್ಞರಾಗಿರುತ್ತೇವೆ.

ವೈಸ್ರಾಯರ ಉತ್ತರ—ನಿಮ್ಮ ಸತ್ಕಾರದಿಂದ ನಾವು ದಂಪತಿಗಳು ಸಂತುಷ್ಟರಾಗಿ ನಿಮ್ಮನ್ನು ವಂದಿಸುತ್ತೇವೆ. ಬಹಳ ವರ್ಷದಿಂದಲೂ ಈ ಸಂಸ್ಥಾನವನ್ನು ನೋಡಬೇಕೆಂಬ ನಮ್ಮ ಇಷ್ಟವು ಈಗ ನೆರವೇರಿದುದಕ್ಕಾಗಿ ನಾವು ಸಂತೋಷಿಸುತ್ತೇವೆ ಮತ್ತು ಪರಮಾನಂದವನ್ನು ಹೊಂದಿ ಇಲ್ಲಿಂದ ತೆರಳುವವರಾಗುವೆವೆಂದು ನಿರೀಕ್ಷಿಸುತ್ತೇವೆ. ನಿಮ್ಮ ಪ್ರಭುವರ್ಯರಲ್ಲಿ ನಿಮಗಿರತಕ್ಕ ಗಾಢವಾದ ರಾಜಭಕ್ತಿಯನ್ನು ವ್ಯಕ್ತಗೊಳಿಸಿರುವುದು ಯುಕ್ತವೇ ಸರಿ. ಸಾನುಭೂತಿಪೂರ್ವಕವಾದ ನೂತನ ರಾಜನೀತಿಯನ್ನನುಸರಿಸಿ ಪಾರಂಪರ್ಯವಾಗಿ ರಾಜ್ಯಭಾರವನ್ನು ಮಾಡುತ್ತಿರುವ ಮಹಾರಾಜರವರು ತಮ್ಮ ಪ್ರಜೆಗಳು ವಿದ್ಯಾವಂತರಾಗಿ ಅಭಿವೃದ್ಧಿಹೊಂದಿ ರಾಜ್ಯಾಡಳಿತದಲ್ಲಿ ಭಾಗಿಗಳಾಗುವಂತೆ ಮಾಡುವುದು ತಮ್ಮ ಆದ್ಯಕರ್ತವ್ಯವೆಂದು ತಿಳಿದಿರುವುದಕ್ಕಾಗಿ ನಿಮ್ಮ ಮೆಚ್ಚುಗೆಯನ್ನು ತೋರಿಸಿರುತ್ತೀರಿ. ನಿಮ್ಮ ಮಹಾರಾಜರವರು ಎಷ್ಟರಮಟ್ಟಿಗೆ ಪ್ರಜಾಕ್ಷೇಮ ಚಿಂತಾಮಗ್ನರಾಗಿ ಅವರ ಅಭಿವೃದ್ಧಿಯನ್ನೇ ನಿರೀಕ್ಷಿಸುತ್ತಿರುವರೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ತಮ್ಮ ಪ್ರಜೆಗಳ ಪ್ರೀತಿವಿಶ್ವಾಸಗಳಿಗೂ ಕೃತಜ್ಞತೆಗೂ ಪಾತ್ರರಾದ ಮತ್ತು ತಮ್ಮ ರಾಜ್ಯಾಡಳಿತದಲ್ಲಿ ತಮ್ಮ ಪ್ರಜೆಗಳು ಭಾಗಿಗಳಾಗುವಂತೆ ಮಾಡುವುದರಿಂದ ಅವರ ನಿರಂತರವಾದ ಸಾಹಾಯ್ಯವನ್ನು ಹೊಂದಿರುವ ರಾಜಮನೆತನದವರೇ ಧನ್ಯರು. ಈ ರಾಜಧಾನಿಯ ಅಭಿವೃದ್ಧಿಯವಿಚಾರದಲ್ಲಿ ಮಹಾರಾಜರವರು ಸ್ವತಃ ಅಭಿಮಾನವನ್ನು ವಹಿಸಿರುವುದು ಅದರ ಭಾಗ್ಯವೇ ಸರಿ. ರಾಜಧಾನಿಯ ಆರೋಗ್ಯವಿಚಾರದಲ್ಲೂ ಬಡವರಿಗೆ ವಾಸಸ್ಥಾನಗಳನ್ನು ಕಲ್ಪಿಸಿಕೊಡುವುದರಲ್ಲೂ ತಕ್ಕ ಏರ್ಪಾಟು 1903 ರಿಂದ ಅವಿಚ್ಛಿನ್ನವಾಗಿ ಪ್ರತಿವರ್ಷದಲ್ಲೂ ನಡೆಸಲ್ಪಡುತ್ತಲಿರುವದನ್ನು ಉತ್ಸಾಹದಿಂದ ಅರಿತವನಾಗಿರುತ್ತೇನೆ. ಭರತಖಂಡದ ಮತ್ತಾವಭಾಗದಲ್ಲೂ ಇಷ್ಟರಮಟ್ಟಿಗೆ ಪುರಾಭಿವೃದ್ಧಿಕಾರ್ಯವು 20 ವರ್ಷಗಳಿಂದ ಅವಿಚ್ಛಿನ್ನವಾಗಿ ನಡೆಸಲ್ಪಟ್ಟುದುದಿಲ್ಲವು. ರಾಜಧಾನಿಯ ನಿವಾಸಿಗಳ ಸೌಕರ್ಯಕ್ಕಾಗಿಯೂ ವಿಹಾರಕ್ಕಾಗಿಯೂ ಉದ್ಯಾನಗಳನ್ನು ಕಲ್ಪಿಸಿಕೊಟ್ಟಿರುವುದು ನಿಮಗೆ ಭೂಷಣವಾಗಿದೆ ಅಲ್ಲದೆ ಇವುಗಳರಚನೆಯಲ್ಲಿ ಉದ್ಯುಕ್ತರಾಗಿದ್ದ ಅಧಿಕಾರಿಗಳ ಕೌಶಲ್ಯವನ್ನು ಪ್ರದರ್ಶಿಸತಕ್ಕದಾಗಿದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ನವಂಬರ್ ತಿಂಗಳಿನ ಮ್ಯುನಿಸಿಪಲ್ ಮಿಟೆಂಗು ಹೊಸದಾಗಿ ಕಟ್ಟಲ್ಪಟ್ಟಿರುವ ಮ್ಯುನಿಸಿಪಲ್ ಆಫೀಸಿನಲ್ಲಿ ಕಳೆದ ತಿಂಗಳು ತಾ|| 24 ನೆಯ ಶನಿವಾರದ ದಿವಸ ಪ್ರೆಸಿಡೆಂಟರಾದ ದಿ|| ಬ|| ಸಿ. ಶ್ರೀಕಂಠೇಶ್ವರಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ನಡೆದಿತು. 23 ಜನ ಕೌನ್ಸಿಲರುಗಳು ದಯಮಾಡಿಸಿದ್ದರು. ಸಾಧಾರಣವಾದ 3-4 ವಿಷಯಗಳು ತೀರ್ಮಾನಗೊಳಿಸಲ್ಪಟ್ಟ ಮೇಲೆ, ವೈಸ್‌ರಾಯರ ಆಗಮನದೇರ್ಪಾಟಿನ ಸಂಬಂಧದಲ್ಲಿ ತಮಗೆ ಅವಸರ ಕೆಲಸವಿರುವುದರಿಂದ ತಾವು ಹೋಗಬೇಕಾಗಿರುವ ಪ್ರಯುಕ್ತ ಮೀಟಿಂಗನ್ನು ಮುಕ್ತಾಯಗೊಳಿಸಬೇಕೆಂದು ಪ್ರೆಸಿಡೆಂಟರು ಹೇಳಿದರು. "ಅಕ್ವರಾಯಿ ಬಿಲ್ಲುಗಳಿಗೆ ಎರಡೆರಡು ವೇಳೆ ಹಣವು ಕೊಡಲ್ಪಟ್ಟಿರುತ್ತದೆ; ತೆರುಗೆಯ ಹಣವು ದುರುಪಯೋಗಪಡಿಸಲ್ಪಟ್ಟಿರುತ್ತದೆ ಆದುದರಿಂದ ತತ್ಸಂಬಂಧವಾದ ಕಾಗದಪತ್ರಗಳು ಕೌನ್ಸಿಲರುಗಳ ಪರ್ಯಾಲೋಚನೆಗೆ ತರಲ್ಪಟ್ಟು ಇತ್ಯರ್ಥಗೊಳಿಸಲ್ಪಡಬೇಕೆಂದು 10 ಜನ ಕೌನ್ಸಿಲರುಗಳು ಪ್ರೆಸಿಡೆಂಟರಿಗೆ ಲಿಖಿತಮೂಲಕವಾಗಿ ತಿಳುಹಿಸಿ 6 ತಿಂಗಳುಗಳ ಮೇಲಾದಾಗ್ಯೂ ಪ್ರೆಸಿಡೆಂಟರು ಆರೀತಿ ಕೌನ್ಸಿಲರ ಪರ್ಯಾಲೋಚನೆಗೆ ತಾರದೆ ತತ್ಸಂಬಂಧ ಕಾಗದಪತ್ರಗಳನ್ನು ಸರ್ಕಾರಕ್ಕೆ ನೇರವಾಗಿಕಳುಹಿಸಿ ಅವುಗಳ ಮೇಲೆ ಸರ್ಕಾರದಪ್ಪಣೆಯನ್ನು ತರಿಸಿಕೊಂಡಿರುತ್ತಾರೆ. ಇದೂ ಅಲ್ಲದೆ 12-14-18 ತಿಂಗಳುಗಳಿಂದಲೂ ವಿಲೆಯಾಗದೆ ಬಿದ್ದಿರುವ ಸಬ್ಜೆಕ್ಟುಗಳೆಷ್ಟೋ ಇವೆ. ಅವುಗಳು ಪ್ರತಿ ತಿಂಗಳಲ್ಲೂ ಮುಂದಣ ಮೀಟಿಂಗಿನ ಪರ್ಯಾಲೋಚನೆಗೆಂದು ತೆಗೆದಿಡಲ್ಪಡುತ್ತಿರುವುವು. ಹೀಗೆ ಕೌನ್ಸಿಲರುಗಳು ಕಳುಹಿಸಿಕೊಟ್ಟ ವಿಷಯಗಳು ಪರ್ಯಾಲೋಚಿಸಲ್ಪಡದೆ ತೃಣವಾಗಿಗಣಿಸಲ್ಪಡುವುದಾದಲ್ಲಿ ನಾವುಗಳು ಮೀಟಿಂಗಿಗೆ ಏತಕ್ಕಾಗಿ ಬರಬೇಕು? ಹಾಗೆ ಪ್ರೆಸಿಡೆಂಟರಿಗೆ ಬಹಳ ಅವಸರವಾದ ಕೆಲಸವಿರುವಪಕ್ಷದಲ್ಲಿ ನಮ್ಮ ಕೌನ್ಸಿಲರುಗಳಲ್ಲೊಬ್ಬರನ್ನು ಅಧ್ಯಕ್ಷರನ್ನಾಗಿ ತಾವೇ ಗೊತ್ತುಮಾಡಿ ಈ ದಿವಸದ ಸಭೆಯ ಕೆಲಸವು ನಡೆಯುವಂತೇರ್ಪಡಿಸಿ ತಾವು ದಯಮಾಡಿಸಬಹುದು" ಎಂದು ಮ|| ಮಹಮದ್‌ಸೇಟರು ಸೂಚಿಸಿದರು. ಮ|| ಪುರುಷೋತ್ತಮ ಬಾವಾಜಿಯವರು ಅದನ್ನು ಅನುಮೋದಿಸಿದರು. ತರುವಾಯ "ಅಕ್ವಾಯಿ ಬಿಲ್ಲುಗಳಿಗೆ ಎರಡೆರಡು ವೇಳೆ ಹಣಸಂದಾಯವಾಗಿರುವ ಮತ್ತು ಮ್ಯುನಿಸಿಪಲ್ ಹಣವು ದುರುಪಯೋಗಿಸಲ್ಪಟ್ಟಿರುವ ವಿಷಯಗಳನ್ನೂ ಅವುಗಳಿಗೆ ಸಂಬಂಧಪಟ್ಟ ಕಾಗದಪತ್ರಗಳನ್ನೂ ಕೌನ್ಸಿಲರುಗಳ ಪರ್ಯಾಲೋಚನೆಗೆ ತರುತ್ತೇನೆಂದು ಅನೇಕವೇಳೆ ಭರವಸೆಯನ್ನು ಕೊಟ್ಟಿದ್ದಾಗ್ಯೂ ಆರೀತಿ ಮಾಡದೆ ಸ್ವತಂತ್ರಿಸಿ ಸರ್ಕಾರಕ್ಕೆ ನೇರವಾಗಿ ಕಳುಹಿಸಿರುತ್ತೀರಿ. ಇದರಿಂದ ನಿಮ್ಮಲ್ಲಿ ನಾವು ಇಟ್ಟಿದ್ದ ವಿಶ್ವಾಸ ಮತ್ತು ಭರವಸೆಗಳನ್ನು ವ್ಯರ್ಥಮಾಡಿದಂತಾದ ಪ್ರಯುಕ್ತ ನಾವು ಮುಂದೆ ನಿಮ್ಮ ಮಾತಿನಲ್ಲಿ ಭರವಸೆಯಿಡುವುದು ಹೇಗೆ?" ಎಂದು ಮೊದಲಾಗಿ ರೆವರೆಂಡ್ ಇ. ಎಸ್. ಎಡ್ವರ್ಡ್ಸ್‌ರವರು ಬಹಳ ಯುಕ್ತಾಯುಕ್ತವಾಗಿಯೂ ಆವೇಶದಿಂದಲೂ ಹೇಳಿದರು. ತರುವಾಯ "ಆ ಕಾಗದಪತ್ರಗಳು ಈಗಲೂ ಸಿದ್ಧವಾಗಿಲ್ಲವಾದುದರಿಂದ ನಾನಿದ್ದು ಅವುಗಳ ವಿಚಾರದಲ್ಲಿ ನಿಮಗೆ ತಿಳವಿಕೆ ಕೊಟ್ಟ ಹೊರತು ನಿಮಗೆ ಗೊತ್ತಾಗುವುದಿಲ್ಲವು. ಈಗ ಚರ್ಚಾಸ್ಪದವಾಗಿರುವ ವಿಚಾರಗಳ ಸಂಬಂಧದಲ್ಲಿ ನಡೆದ ವಿದ್ಯಮಾನಗಳನ್ನು ಆಗಾಗ್ಗೆ ಸರ್ಕಾರದ ಗಮನಕ್ಕೆ ತರಬೇಕಾದುದು ಅವಶ್ಯಕವಾದುದರಿಂದ ಆ ರೀತಿ ನಡೆಸಿರುತ್ತೇನೆ ಮತ್ತು ಬರುವ ಡಿಸೆಂಬರ್ ತಾ|| 8ರಲ್ಲಿ ಒಂದು ಹೆಚ್ಚು ಕಟ್ಟಲೆಯ ಸಭೆಯನ್ನು ಸೇರಿಸಿ ಚರ್ಚಾಸ್ಪದವಾದ ವಿಷಯಗಳಿಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ತಾವು ಪರ್ಯಾಲೋಚಿಸಿ ತೀರ್ಮಾನಿಸುವ ಬಗೆಗೆ ತಮ್ಮ ಮುಂದಿಡುತ್ತೇನೆಂದು ಭರವಸೆಯಿಂದ ಹೇಳುತ್ತೇನೆ" ಎಂದು ಪ್ರೆಸಿಡೆಂಟರು ತಿಳಿಸಿದರು. ತರುವಾಯ ಮೀಟಿಂಗನ್ನು ಆ ದಿವಸ ನಿಲ್ಲಿಸುವ ಬಗೆಗೆ ಕೌನ್ಸಿಲರುಗಳ ಓಟನ್ನು ತೆಗೆದುಕೊಳ್ಳುವಲ್ಲಿ ಅದಕ್ಕಾಗಿ ಹೆಚ್ಚು ಓಟು ಬಂದುದರ ಮೇಲೆ ಮುಂದಣ ತಾ|| 8 ರಲ್ಲಿ ಮೀಟಿಂಗು ನಡಿಯಬೇಕಾಗಿ ನಿರ್ಧರಿಸಲ್ಪಟ್ಟಿತು.

ವರ್ತಮಾನಸಂಗ್ರಹ.

ಕವೀಂದ್ರರಾದ ರವೀಂದ್ರರು ಸ್ಥಾಪಿಸಿರುವ ಭಾರತೀ ವಿಶ್ವವಿದ್ಯಾಲಯದ ಪುಸ್ತಕಭಂಡಾರ ನಿಧಿಗೆ ವಧ್ವಾನ್ ಸಂಸ್ಥಾನದ ಥಾಕೂರ್‌ಸಾಹೇಬರು 15,000 ರೂ. ಗಳನ್ನು ಕೊಟ್ಟಿರುವರು.

ಜಪಾನು ರಾಜ್ಯದಲ್ಲಿ ಭೂ ಅಗ್ನಿಪ್ರಳಯದಿಂದ ನಾಶವಾಗಿರುವ ಪ್ರದೇಶಗಳನ್ನು ಪುನಃ ನಿರ್ಮಾಣಮಾಡಲು ಬೇಕಾದ ಸಾಮಗ್ರಿಗಳನ್ನೂ ಹಾಗೂ ಜನರ ಆಹಾರ್ಯಪದಾರ್ಥಗಳನ್ನೂ ಶೇಖರಿಸಲು ಜಪಾನ್ ರಾಜ್ಯದವರು ಆ ಪದಾರ್ಥಗಳ ಮೇಲಿನ ಸುಂಕವನ್ನು ತಪ್ಪಿಸಿಬಿಟ್ಟಿರುತ್ತಾರೆ.

ಮಲಬಾರು ಪ್ರಾಂತದಲ್ಲಿ ವೆಲನಾಡು ತಾಲ್ಲೂಕಿಗೆ ಸೇರಿದ ಆಷಂ ಎಂಬ ಹಳ್ಳಿಯಲ್ಲಿ ಒಬ್ಬ ಮಾಪಿಳ್ಳೆಯು ಅದೇ ಜಾತಿಯ ಓರ್ವ ಪರಸ್ತ್ರೀಯಲ್ಲಿ ಅನುರಕ್ತನಾಗಿ ಆಕೆಯು ಮಾನಕ್ಕೆಹೆದರಿ ವಶಳಾಗದಿರಲು ಆಕೆಯ ಶಿರಚ್ಛೇದನವನ್ನು ಮಾಡಿದೆನೆಂದು ಮ್ಯಾಜಿಸ್ಟ್ರೇಟರ ವಿಚಾರಣೆಯ ಕಾಲದಲ್ಲಿ ಹೇಳಿದನು.

ಭಾವಾನಗರದಲ್ಲಿ ಒಬ್ಬ ತೋಟಗಾರನು ಮೃತನಾಗಲು ಅವನ ಬಂಧುಗಳು ಶವವನ್ನು ಸ್ಮಶಾನಕ್ಕೆ ಸಾಗಿಸಿ ದಹನಮಾಡಿ ಬಂದಮೇಲೆ ಮೃತನ ಹೆಂಡತಿಯು ಪತಿವಿಯೋಗದುಃಖವನ್ನು ಸಹಿಸಲಾರದೆ ತಾನುಟ್ಟಿದ್ದ ಬಟ್ಟೆಗೆ ಸೀಮೆಯೆಣ್ಣೆಯನ್ನು ಸುರಿದು ಬೆಂಕಿಯಿಂದ ಹೊತ್ತಿಸಿ ಪತಿನಾಮಸ್ಮರಣೆಯಿಂದ ಸಹಗಮನಮಾಡಿದಳು.

ನಾನಾ ದೇಶದ ಸ್ಟಾಂಪುಗಳನ್ನು ಕೂಡುಹಾಕುವಲ್ಲಿ ವಿಶೇಷ ಆಸಕ್ತನಾದ ಫೆರಾರ್ ಎಂಬಾತನು ಶೇಖರಿಸಿದ್ದ ಸ್ಟಾಂಪುಗಳು ಹರಾಜುಮಾಡಲ್ಪಟ್ಟುದರಲ್ಲಿ ಬೇರ್ಡ ದೇಶದ ಅಪೂರ್ವವಾದ ಒಂದು ಸ್ಟಾಂಪನ್ನು 84,90,00,00,00,00,000 ಮಾರ್ಕುಗಳಿಗೆ ಅಂದರೆ 71250 ರೂಪಾಯಿಗಳಿಗೆ ಒಬ್ಬ ಜರ್ಮನಿಯವನು ಕೊಂಡುಕೊಂಡನು. ಇದರಿಂದ ಅಪೂರ್ವವಸ್ತುಗಳ ಮೇಲಿನವ್ಯಾಮೋಹವು ಪಾಶ್ಚಾತ್ಯರಿಗೆಷ್ಟರಮಟ್ಟಿಗಿದೆಯೆಂಬುದು ವ್ಯಕ್ತವಾಗುವುದು

ಉತ್ತರ ಆರ್ಕಾಟ್ ಡಿಸ್ಟ್ರಿಕ್ಟಿಗೆ ಸೇರಿದ ಆಂಬೂರಿನಲ್ಲಿ ಕಳೆದವಾರ ಒಬ್ಬ ಶ್ರೀಮಂತನ ಮನೆಗೆ ಸಾಯುಧರಾದ 20 ಜನ ಕಳ್ಳರು ನುಗ್ಗಿ ನಗನಾಣ್ಯ ಬಟ್ಟೆಬರೆಗಳನ್ನು ದೋಚಿಕೊಂಡು ಹೋಗುವಷ್ಟರಲ್ಲಿ ಗ್ರಾಮಸ್ಥರು ಮನೆಯವರ ಆರ್ತಧ್ವನಿಯನ್ನು ಕೇಳಿ ಬಂದು ಮನೆಯ ಸುತ್ತುವರಿದು ನಿಂತುಕೊಂಡು ಕಳ್ಳರು ಓಡಿಹೋಗದಂತೆ ಪ್ರತಿಭಟಿಸಲು ಕಳ್ಳರು ಗುಂಡನ್ನು ಹಾರಿಸಿ ಓಡಿಹೋದರು. ಇದರಿಂದ ಒಬ್ಬನು ಸತ್ತನು ಮತ್ತು 6 ಜನರು ಪೂರಾಪೆಟ್ಟನ್ನು ತಿಂದರು.

ಲಂಡನ್ ಮಹಾನಗರದಲ್ಲಿ ಬರುವ ವರ್ಷ ನಡಿಯುವ ಬ್ರಿಟಿಷ್ ಸಾಮ್ರಾಜ್ಯ ಮಹಾವಸ್ತು ಪ್ರದರ್ಶನಾವಲೋಕನಕ್ಕೆ ಪ್ರಪಂಚದ ಎಲ್ಲಾ ಭಾಗಗಳಿಂದಲೂ 3 ಕೋಟಿಗೆ ಮೇಲ್ಪಟ್ಟು ಜನರು ಬರುವುದಾಗಿಯೂ, ಪ್ರೇಕ್ಷಕರ ಪ್ರವೇಶಧನದಿಂದಲೇ ಈ ಪ್ರದರ್ಶನಕ್ಕೆ ತಗಲುವ ವಿಶಿಷ್ಟ ವೆಚ್ಚವೂ ಕಳೆಯುವುದಾಗಿಯೂ ನಿರೀಕ್ಷಿಸಲ್ಪಟ್ಟಿದೆ. ಈ ಪ್ರದರ್ಶನವು ವೆಂಬ್ಲೆ ಎಂಬಲ್ಲಿಯ ಅತ್ಯಂತ ವಿಶಾಲವಾದ ಪ್ರದೇಶದಲ್ಲಿ ನಡೆಸಲ್ಪಡುವುದಲ್ಲದೆ ಆವರಣದಲ್ಲೇರ್ಪಡಿಸುವ ಮಾರ್ಗಗಳು 15 ಮೈಲಿ ವಿಸ್ತೀರ್ಣ ವಿರುವುದರಿಂದ ಜನರು ಪಾದಚಾರಿಗಳಾಗಿ ತಿರುಗಾಡಲು ಸಾಧ್ಯವಿಲ್ಲವಾದ ಪ್ರಯುಕ್ತ ಎಲೆಕ್ಟ್ರಿಕ್ ಟ್ರಾಂವೆಗಳೂ, ರೈಲ್ವೆ ಬಂಡಿಗಳೂ ಮೊದಲಾಗಿ ಪ್ರಯಾಣ ಸೌಕರ್ಯಗಳು ಕಲ್ಪಿಸಲ್ಪಡುವುವು.

ಬೊಂಬಾಯಿ ಪಟ್ಟಣದಲ್ಲಿ ಧೋಂಡು ಎಂಬುವವನು ತನ್ನ ಹೆಂಡತಿಯು ತನ್ನನ್ನೂ ತನ್ನ ಎರಡು ಮಕ್ಕಳನ್ನೂ ಬಿಟ್ಟು ಎಲ್ಲಿಯೋ ಹೊರಟುಹೋದುದರಿಂದ, ಆ ಮಕ್ಕಳನ್ನು ಕಟ್ಟಿಕೊಂಡು ಮನೆಮನೆಗೂ ಅಲೆದು ತಿರಿದುಂಡು ಜೀವಿಸಲಾರದೆ ತನ್ನ ಸ್ನೇಹಿತನಲ್ಲಿಗೆ ಹೋಗಿ ತನ್ನ ದುಃಖವನ್ನು ಹೇಳಿಕೊಳ್ಳಲಾಗಿ ನಿನ್ನ ಹೆಂಡತಿಯು ಬೇರೊಬ್ಬನನ್ನು ಕಟ್ಟಿಕೊಂಡು ಹೋದಳು, ಅವಳಿಗಾಗಿ ನೀನೇಕೆ ವ್ಯಸನಪಡುತ್ತೀಯೆಂದು ಕೇಳಿದನು. ಆಗ ಧೋಂಡನು ಕೋಪಾವಿಷ್ಟನಾಗಿ ಅಯ್ಯೋ! ಈ ಹಾಳುಮಕ್ಕಳು ನನಗೆ ಹುಟ್ಟಿದವಾಗಿಲ್ಲದಿದ್ದರೂ ಅವನ್ನು ಕೊಂದುಬಿಡುತ್ತಿದ್ದೆನೆಂದು ಹೇಳಲು, ಎಲ್ಲಿ ನೋಡುವ ಕೊಂದುಬಿಡು ಎಂದು ಒಂದು ಚಾಕುವನ್ನು ತಂದುಕೊಟ್ಟನು. ಉನ್ಮಾದನಾಗಿದ್ದ ಆ ಧೋಂಡನು ನಿಜವಾಗಿಯೂ ಚಾಕುವಿನಿಂದ ತನ್ನೆರಡು ಮಕ್ಕಳನ್ನೂ ತಿವಿದು ಕೊಂದುಬಿಟ್ಟು ಪೋಲೀಸಿನವರಿಗೆ ನಡೆದ ಸಂಗತಿಯನ್ನು ಮರೆಮಾಚದೆ ಹೇಳಿಬಿಟ್ಟನು.

ಕೊಯಮತ್ತೂರಿಗೆ ಸೇರಿದ ವಿಲಂ ಹಳ್ಳಿಯ ಶಾನುಭೋಗನಾದ ಚೆಟ್ಟಿ ಎಂಬಾತನು ತನ್ನ ಅಳಿಯನ ಊರಾದ ತಿರಚಂಗೋಡಿಗೆ ಹೋಗಿ ಮಗಳ ನಿಷೇಕಪ್ರಸ್ತವನ್ನು ಮಾಡಲು ನಿಶ್ಚಯಸಿದ್ದೇನಾದುದರಿಂದ ನಿಮ್ಮ ಸಮ್ಮತಿಯನ್ನು ಪಡೆದುಕೊಂಡು ಹೋಗಲು ಬಂದಿದ್ದೇನೆಂದು ಹೇಳಲು, ನಿನ್ನ ಮಗಳು ದುರ್ನೀತಳಾದುದರಿಂದ ಪ್ರಸ್ತಮಾಡಿಕೊಳ್ಳುವುದಿಲ್ಲವೆಂದು ಅಳಿಯನು ಹೇಳಿದನು. ಮಾವನಾದ ಶಾನುಭೋಗನು ಈ ಮಾತನ್ನು ಕೇಳಿ ಅಪಮಾನಿತನಾಗಿ ತನ್ನ ಗ್ರಾಮಕ್ಕೆ ಹಿಂದಿರುಗಿಬಂದು ತನ್ನ ಮಗಳ ನಿಜಸ್ಥಿತಿಯನ್ನು ತಿಳಿದು ಅವಳ ಉಪಪತಿಯೆಂದೆನಿಸಿಕೊಂಡಿದ್ದ ಮನುಷ್ಯನನ್ನು ಕತ್ತರಿಸಿಕೊಂದು ತನ್ನ ಮನೆಗೆಬಂದು ತನ್ನ ಮಗಳನ್ನೂ ಹೆಂಡತಿಯನ್ನೂ ಅವನ ಒಂದು ಸಣ್ಣ ಮಗುವನ್ನೂ ಆಯುಧದಿಂದ ತಿವಿದು ಪ್ರಾಣಾಪಾಯವನ್ನುಂಟುಮಾಡಿ ಕಡೆಯಲ್ಲಿ ಆತ್ಮಹತ್ಯೆಯನ್ನು ಮಾಡಿಕೊಂಡನು. ಗಾಯವಡೆದಿದ್ದ ಸ್ವೈರಿಣಿಯಾದ ಮಗಳು ಮೃತಳಾದಳು; ತಾಯಿ ಮತ್ತು ಮಗುವು ಮಾತ್ರ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದಾರೆ.

ಪ್ರಕಟನ ಪತ್ರಿಕೆ.

ಮದರಾಸಿನಲ್ಲಿ ನೂತನವಾಗಿ ಸ್ಥಾಪಿತವಾಗಿರುವ ವೀರಶೈವಾಶ್ರಮ.

ಸಮಸ್ತ ವೀರಶೈವ ಮಹಾಜನಗಳಿಗೂ ಮುಖ್ಯವಾಗಿ ವೀರಶೈವ ವಿದ್ಯಾರ್ಥಿಗಳಿಗೂ ಈಮೂಲಕ ವಿಜ್ಞಾಪಿಸಿಕೊಳ್ಳುವುದೇನೆಂದರೆ:—

ಇದುವರೆಗೂ ಮದರಾಸು ಪ್ರಾಂತ್ಯಕ್ಕೆ ಬಿ. ಎ. ಮತ್ತು ಬಿ. ಎಲ್. ಮುಂತಾದ ಪ್ರೌಢವಿದ್ಯಾಭ್ಯಾಸವನ್ನು ಮಾಡಲು ದೂರದೇಶಗಳಿಂದ ಬರತಕ್ಕ ವಿದ್ಯಾರ್ಥಿಗಳ ಅಶನವಸನಗಳಿಗೆ ತಕ್ಕ ಅನುಕೂಲ್ಯವಿಲ್ಲದೆ ಬಹಳವಾಗಿ ಶ್ರಮಪಡುತ್ತಿರುವುದನ್ನು ನೋಡಿ ಮದರಾಸಿನಲ್ಲಿಯೇ ವಾಸಿಸುವ ವೀರಶೈವ ಮತಾಭಿಮಾನಿಗಳಾದ ಕೆಲವರು ಇಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳ ವಾಸಕ್ಕೂ ಭೋಜನಕ್ಕೂ ಸಕಲ ವಿಷಯಗಳಲ್ಲಿಯೂ ಅನುಕೂಲವಾಗಿರುವಂತೆ ವೆಂಕಟಾಚಲಮೊದಲಿ ಬೀದಿಯಲ್ಲಿರುವ, ನಂ. 39ನೇ ಕಟ್ಟಡದಲ್ಲಿ "ವೀರಶೈವಾಶ್ರಮ" ಒಂದನ್ನು ಕಳೆದ ಆಶ್ವಯುಜ ಶುದ್ಧ 10 ಲಾಗಾಯಿತು ಸ್ಥಾಪಿಸಿರುತ್ತಾರೆ. ಬಿ. ಎಲ್. ಮುಂತಾದ ಪರೀಕ್ಷೆಗಳಿಗೆ ಅಭ್ಯಾಸಮಾಡುವ ಮೂರು ನಾಲ್ಕು ಜನ ವಿದ್ಯಾರ್ಥಿಗಳೂ ಸಹ ಆಗಲೇ ಈ ಆಶ್ರಮದಲ್ಲಿ ಬಂದು ವಾಸಿಸುತ್ತಿದ್ದಾರೆ.

ಈ ಆಶ್ರಮಕ್ಕೆ ಸೇರಲು ಅಪೇಕ್ಷಿಸುವ ವಿದ್ಯಾರ್ಥಿಗಳು ಮ್ಯಾನೇಜರ್‌ರವರಿಗೆ ಈ ಕೆಳಗಣ ಅಡ್ರೆಸ್ಸಿಗೆ ಅಪ್ಲಿಕೇಷನ್ ಬರೆದುಕೊಳ್ಳಬಹುದಲ್ಲದೆ ಪ್ರವೇಶ ವಿಷಯವಾಗಿ ವಿಶೇಷಾಂಶಗಳನ್ನು ಅವರಿಂದ ತಿಳಿದುಕೊಳ್ಳಬಹುದು.

ಅಲ್ಲದೆ, ಹೊರಗಡೆಯಿಂದ ವ್ಯಾಪಾರ ವ್ಯವಹಾರೋದ್ದೇಶಪೂರ್ವಕವಾಗಿ ಮದರಾಸಿಗೆ ಬರುವ ವರ್ತಕಮಂಡಲಿ ಮುಂತಾದ ವೀರಶೈವ ಮಹಾಜನಗಳಿಗೂ ಸಹ ಭೋಜನಾದಿಗಳಿಗೆ ಅನುಕೂಲವಾಗುವಂತೆ ಇಲ್ಲಿ ಏರ್ಪಡಿಸಿರುತ್ತದೆ.

ಮ್ಯಾನೇಜರ್,
ನಂ. 39, ವೆಂಕಟಾಚಲಮೊದಲಿ ಸ್ಟ್ರೀಟ್,
ಪಿ. ಟಿ. ಮದರಾಸ್.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಮೈಸೂರು ಮಹಾಲಕ್ಷ್ಮೀ ಸಂಗೀತ ನಾಟಕ ಮಂಡಲಿ.

ಈ ಮಂಡಲಿಯು ಸ್ಥಾಪಿಸಲ್ಪಟ್ಟು ಕೆಲವು ದಿವಸಗಳಾಗಿ ಕೇವಲ ಬಾಲ್ಯಾವಸ್ಥೆಯಲ್ಲಿದ್ದು ಈಗ ಅಭಿವೃದ್ಧಿಗೆ ಬರುತ್ತಾ ಇದೆ. ಇವರು ಅಭಿನಯಿಸುವ ಕೃಷ್ಣಲೀಲೆಯು ಪ್ರಾಶಸ್ತ್ಯಾರ್ಹವಾಗಿದೆ. ಕೇವಲ ಬಾಲಕರಾದ ಇವರಿಗೆ ಸರಿಯಾದ ಸಹಾಯವು ದೊರಕಿದಹಾಗೆಲ್ಲಾ ಮುಂದಕ್ಕೆ ಬರಲು ಅವಕಾಶವಿರುತ್ತೆ. ಕಳೆದ 28ನೇ ತಾ|| ಪಲ್ಲಿ ಲಕ್ಷ್ಮೀಪುರದಲ್ಲಿ [illegible] ಯಾದ [illegible] ಮ|| ರಾ|| [illegible] ದಯಮಾಡಿಸಿ ಸಂತೋಷಪಟ್ಟು ಕೃಷ್ಣಪಾತ್ರವಹಿಸಿದ್ದ ಬಾಲಕನಿಗೆ ಪ್ರಸೆಂಟ್‌ಮಾಡಿದ್ದು ತುಂಬಾ ಪ್ರೋತ್ಸಾಹಕರವಾಗಿದೆ. ದೇವರು ಈ ಸಂಘವನ್ನು ಅಭಿವೃದ್ಧಿಗೆ ತರಲೆಂದು ಕೋರುವ,

ಪ್ರೇಕ್ಷಕ.

ಪ್ರಚಂಡರಾಜನಿಷ್ಠಸಭಾ ಹಮ್ಮಿಗಿ.

ಈ ಗ್ರಾಮದಲ್ಲಿ ತಾ|| 22-11-1923ನೇ ಇಸವಿ ದಿವಸ ಮೆ|| ಎಚ್. ವ್ಹಿ. ನಾಯಿಕ ಡಿ. ಡಿ. ಕಲೆಕ್ಟರ ಸಾಹೇಬ ಬಹಾದ್ದೂರ ಡಿ. ಧಾರವಾಡ ಇವರ ಅಧ್ಯಕ್ಷತೆಯ ಕೆಳಗೆ ರಾಜನಿಷ್ಠ ಸಭೆಯು ಕೂಡಿತ್ತು. ಸಭೆಗೆ ಮೆ|| ಮುಂಡರಗಿ ಪೇಟಾಮಹಾಲಕರಿಸಾಹೇಬರವರು ಆಗಮಿಸಿದ್ದಲ್ಲದೆ ಹಮ್ಮಿಗಿ ಗುಮಗೋಳ, ಶಿಂಗ್ಟಾಲೂರ ವಗೈರೆ ಗ್ರಾಮಗಳ ಪಾಟೀಲ ಕುಲಕರ್ಣಿಯವರು ಹಾಗೂ ಯಾವತ್ತೂ ಪ್ರಮುಖ ರೈತ ಜನರು ಕೂಡಿದ್ದರು. ಸಭೆಯಲ್ಲಿ ಮಿ|| ಶಾಂತಪ್ಪಾ ವೀರಭದ್ರಪ್ಪಾ ಕುಬಸದ (ಗುರುಭಕ್ತಕೇಸರಿ) ಇವರು ರಾಜನಿಷ್ಠೆ ಅಂದರೇನು ಹಾಗೂ ರಾಜಪ್ರಜರಲ್ಲಿರತಕ್ಕ ಪರಸ್ಪರ ಸಂಬಂಧ ಈ ವಿಷಯದಲ್ಲಿ ಪ್ರತಿಯೊಬ್ಬರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಬೋಧಿಸಿದ್ದಲ್ಲದೆ ಹಳ್ಳಿಗಳ ಮೇಲೆ ದೊಡ್ಡದೊಡ್ಡ ಸಾಮುದಾರ ಜನರ ಪ್ರೀತಿಯು ಏನುಕಾರಣ ಆಗತಕ್ಕದ್ದು ಎಂಬ ಅಂಶವನ್ನು ಕುರಿತು ಸರಸವಾದ ಭಾಷಣವನ್ನು ಮಾಡಿದರು. ನಂತರ ಮಿ|| ವಿರೂಪಾಕ್ಷಗೌಡ ಪಾಟೀಲ (ವ್ಹಿಲೇಜ ಮಾಜಿಸ್ಟ್ರೇಟ) ಇವರು ಅಸಹಕಾರದಿಂದುಂಟಾಗುವ ದುಷ್ಟಪರಿಣಾಮವನ್ನು ಕುರಿತು ಉತ್ತಮ ಭಾಷಣಮಾಡಿದರು. ತರುವಾಯ ಮೇ|| ಅಧ್ಯಕ್ಷ ಸಾಹೇಬ ಬಹಾದ್ದೂರರವರು, ಮೇಲಿನ ಎರಡೂ ವಿಷಯಗಳನ್ನು ವಿವೇಚನಮಾಡಿ ತಿಳಿಸಿದ್ದಲ್ಲದೆ ಮುಸಲ್ಮಾನ, ಮರಾಠ ಪೇಶ್ವೆಯವರ ಕಾಲದ ರಾಜ್ಯದಾಡಳಿತೆಗೂ ಈಗಿನ ರಾಜ್ಯದಾಡಳಿತೆಗೂ ತುಲನಾಮಾಡಿ ಅತ್ಯುತ್ತಮ ರೀತಿಯಿಂದ ಬೋಧಿಸಿದರು. ಅಧ್ಯಕ್ಷ ಮಹಾಶಯರಲ್ಲಿ ಹಿಂದೂಳಿದ ಜನಾಂಗದವರ ದಶಿಯಿಂದ ಇರತಕ್ಕ ಕಳಕಳಿಯನ್ನೂ ರೈತ ಜನರಲ್ಲಿ ಇರತಕ್ಕ ಪ್ರೇಮಬಂಧನವನ್ನೂ ಕಂಡು ಸಭಿಕರೆಲ್ಲರೂ ಕೊಂಡಾಡಿದರು. ಇಷ್ಟಾದ ಬಳಿಕ ಅಧ್ಯಕ್ಷ ಸಾಹೇಬರವರಿಗೆ ಹಾರ ತುರಾಯಿಗಳನ್ನೂ ಸಭಿಕರಿಗೆ ಗಂಧ ತಾಂಬೂಲಗಳನ್ನೂ ಅರ್ಪಿಸಿ ಶ್ರೀಮನ್ ಪಂಚಮ ಜಾರ್ಜಸಾರ್ವಭೌಮರ ಜಯಘೋಷದೊಡನೆ ಸಭೆಯು ವಿಸರ್ಜನವಾಯಿತು.

ಎಫ್. ಕೆ. ಜವಳಿ,
ರಾಜನಿಷ್ಠಾ ಸಂಘ, ವ್ಹಾಯಿಸಪ್ರಸಿಡೆಂಟ, ಹಮ್ಮಿಗಿ.

ಹೊಸ ಸ್ಕೂಲು ಪ್ರವೇಶೋತ್ಸವ.

ಹೊಳಲ್‌ಕೆರೆ ತಾಲ್ಲೂಕು ದುಮ್ಮಿ ಗ್ರಾಮವು ಸುಮಾರು 300 ಮನೆಗಳಿರತಕ್ಕದ್ದಾಗಿಯೂ 1000 ಪ್ರಜಾಸಂಖ್ಯೆಯುಳ್ಳದ್ದಾಗಿಯೂ 2000 ರೂಪಾಯಿಗಳು ಕಂದಾಯವನ್ನು ಸರ್ಕಾರಕ್ಕೆ ಕೊಡತಕ್ಕದ್ದಾಗಿಯೂ ಇದ್ದು ಹೊಳಲ್‌ಕೆರೆ ತಾಲ್ಲೂಕು ಪೈಕಿ ದೊಡ್ಡ ಗ್ರಾಮವಾಗಿರುತ್ತದೆ. ಇಂಥಾ ಗ್ರಾಮಕ್ಕೆ ಈ ಮೊದಲ ಗ್ರಾಂಟ್ ಸ್ಕೂಲ್ ಇತ್ತು. ಈಚೆಗೆ ನಮ್ಮ ಘನಸರ್ಕಾರದವರು ತಾ|| 1-3-23 ರಿಂದ ನಮ್ಮ ಸ್ಕೂಲನ್ನು ಗೌವರ್ನಮೆಂಟ್ ಸ್ಕೂಲನ್ನಾಗಿ ಮಾಡಿ ಎರಡು ಜನ ಮಾಸ್ಟರನ್ನು ಕೊಟ್ಟಿರುತ್ತಾರೆ. ಹಾಲಿ ಸ್ಕೂಲಿಗೆ 70-80 ಬಾಲಕರು ಬರುತ್ತಾ ಇದ್ದಾರಲ್ಲದೆ ಸಂಖ್ಯೆಯು ಹೆಚ್ಚುವದರಲ್ಲಿದೆ. ಸ್ಕೂಲ್ ಸ್ಥಳಸಂಕೋಚದಿಂದ ಇನ್ನೊಂದು ಹೊಸಸ್ಕೂಲನ್ನು ಸುಮಾರು 700 ರೂ. ಖರ್ಚಿನಿಂದ ಕಮಿಟಿಮೆಂಬರುಗಳಾದ ಮ|| ರಾ|| ನಾಡಿಗರತಿಮ್ಮಪ್ಪನವರು, ಅಣಬೇರುವೀರಪ್ಪನವರು, ಕಾಯಕದಬಸಪ್ಪನವರು, ಆರ್ಕಾಚಾರಿ ಉಜ್ಜನಪ್ಪನವರು, ಪಟೇಲ್ ಶಂಕರಪ್ಪನವರು ಮೊದಲಾದ ಗ್ರಾಮ ಮುಖಂಡರು ಗ್ರಾಮದಲ್ಲಿ ಚಂದಾವಸೂಲಿನಿಂದ ಕಟ್ಟಿಸಿ ತಾ|| 19-10-23ನೇ ಶುಕ್ರವಾರ ಶ್ರೀ ವೀರಭದ್ರದೇವರು ಶ್ರೀ ಆಂಜನೇಯದೇವರುಗಳ ಸಮೇತ ಸಮಸ್ತ ಜನಗಳೂ ಹೊಸ ಸ್ಕೂಲಿಗೆ ಜಯಘೋಷದೊಡನೆ ಬಿಜಯಂಗೈದರು. ಸದರಿ ಸ್ಕೂಲಿನಲ್ಲಿ ಅತಿ ಭಕ್ತಿಯಿಂದ ಭಜನೆ ದೇವತಾಪೂಜೆಗಳು ನಡೆಸಲ್ಪಟ್ಟವು. ತಾ|| 20ನೇ ಶನಿವಾರ ಪ್ರಾತಃಕಾಲ ಗ್ರಾಮದ ಪ್ರಜೆಗಳೆಲ್ಲರೂ ಮ|| ನಾಡಿಗರತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ಮ|| ಎಂ. ಪಿ. ವೀರಯ್ಯನವರಿಂದ "ವಿದ್ಯಾಭ್ಯಾಸದ" ವಿಚಾರದಲ್ಲಿ ಮ|| ಕೆ. ಕಾಳಪ್ಪನವರಿಂದ "ಸತ್ಸಹವಾಸ" ಎಂಬುದರ ವಿಚಾರದಲ್ಲಿ ಉಪನ್ಯಾಸಗಳು ಮಾಡಲ್ಪಟ್ಟವು. ದೇವತಾಸ್ತೋತ್ರ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ಬಾಲಕರಿಂದ ಮಾಡಲ್ಪಟ್ಟ ಮೇಲೆ ಸಮಸ್ತರಿಗೂ ಯಥೇಚ್ಛವಾಗಿ ಫಲ ಪುಷ್ಪ ತಾಂಬೂಲ ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು.

ಪ್ರತ್ಯಕ್ಷದರ್ಶೀ.

ಶಿವಕೀರ್ತನೆ.

ಬೆಳಗಾಂವ ಜಿಲ್ಲಾ ಗೋಕಾಕ ತಾಲೂಕ ಪೈಕಿ ಇರುವ ಮಮದಾಪೂರ ಗ್ರಾಮಕ್ಕೆ ವೇ|| ಚನ್ನಯ್ಯಾ ವಿರುಪಾಕ್ಷಯ್ಯಾ ಸವದತ್ತಿಮಠ ಸಾಕೀನ ಅಸುಂಡಿ ಇವರು ಬಂದು ಸದರಿ ಗ್ರಾಮದ ಪಾಟೀಲರಾದ ಗಿರಿಗೌಡಪ್ಪನವರಲ್ಲಿ ಗ್ರಾಮದ ಪ್ರಮುಖರಿಂದಾದ ವಿಜ್ಞಪ್ತಿಯ ಮೇರೆಗೆ ನಾಲ್ಕು ಶಿವಕೀರ್ತನೆಗಳನ್ನು ಮಾಡಿದರು; ಇನ್ನೂ ಕೆಲವನ್ನು ಮಾಡತಕ್ಕವರಿರುತ್ತಾರೆ. ಇವರ ಕೀರ್ತನೆಗಳಿಂದ ಜನರಲ್ಲಿ ಭಕ್ತಿ ಜ್ಞಾನ ವೈರಾಗ್ಯ ಧರ್ಮಜಾಗ್ರತೆಯಾಗಿದೆ. ಊರವರೆಲ್ಲರೂ ಆನಂದಸಾಗರದಲ್ಲಿ ಮುಳುಗಿದ್ದಾರೆ. ಮೇಲಿಂದ ಮೇಲೆ ಇಂಥ ಶಿವಕೀರ್ತನೆಗಳಾಗಿ ನಮ್ಮ ವೀರಶೈವ ಸಮಾಜದಲ್ಲಿ ತೊಡಗಿಕೊಂಡಂಥ ಅಜ್ಞಾನಾಂಧಕಾರವನ್ನು ಹೊಡೆದೋಡಿಸಲಿಕ್ಕೆ ಇಂಥ ಶಿವಕೀರ್ತನೆಕಾರರು ವಿಪುಲವಾದರೆ ನಮ್ಮೀ ವೀರಶೈವ ಸಮಾಜವು ಸುಧಾರಿಸುತ್ತದೆಂದು ಹೇಳಲಿಕ್ಕೆ ಯಾವ ಅಡ್ಡಿಯೂ ಬರಲಾರದು. ಅವರು ಮಾಡಿದ ವಿಷಯಪ್ರತಿಪಾದನೆಗಳೆಂದರೆ ಮುಖ್ಯವಾಗಿ ವೀರಶೈವ ಧರ್ಮದ ಮಹತ್ವ, ಅಷ್ಟಾವರ್ಣಗಳ ಮಹಿಮೆ, ದ್ವಿತೀಯ ಶಂಭುವಾದ ಬಸವನ ಶ್ರೇಷ್ಠತ್ವ, ಅವನಿಂದಾದ ಸಮಾಜೋತ್ಕರ್ಷ, ಈಗ ನಡೆಯಬೇಕಾದ ಶುದ್ಧಾಚರಣೆ, ದುರಳವೇದಾಂತಿಗಳ ಖಂಡನ ಇವಲ್ಲದೆ ಇನ್ನೂ ಅನೇಕ ವಿಷಯಗಳನ್ನು ಹೃದಯದಲ್ಲಿ ಯಾವಾಗ್ಯೂ ನೆನಪಿರುವಂತೆ ಬೋಧರೂಪವಾಗಿ ಮಾಡುತ್ತಿರುತ್ತಾರೆ. ಮತ್ತು ಅವರ ಶಾಸ್ತ್ರಪರಿಚಯ ಸಂಸ್ಕೃತಜ್ಞಾನ ಸುಸ್ವರದಿಂದೊಡಗೂಡಿದ ಸಂಗೀತ ಸರಸಸಲ್ಲಾಪ ಇವೆಲ್ಲವೂ ಯಾವತ್ತು ಜನರನ್ನು ಚಕಿತಗೊಳಿಸುತ್ತವೆ. ಕೀರ್ತನಕ್ಕೆ ಲಿಂಗಾಯತ ಬ್ರಾಹ್ಮಣ ಮುಸಲ್ಮಾನ ಇತರ ಯಾವತ್ತು ಜನರು ದೊಡ್ಡ ಸಮೂಹದೊಡನೆ ಕೂಡುತ್ತಿರುತ್ತದೆ. ಅವರೆಲ್ಲರೂ ಆದರದಿಂದ ಕೀರ್ತನೆ ಮುಗಿಯುವವರೆಗೆ ಒಳ್ಳೇ ಭಕ್ತಿಯಿಂದ ಆಲಿಸುತ್ತಾರೆ. ಇದರ ಮುಖ್ಯಕಾರಣವೆಂದರೆ ಅವರಲ್ಲಿದ್ದ ಸಮದೃಷ್ಟಿಯೆಂದು ಹೇಳಬಹುದು. ಇದೇ ಪ್ರಕಾರವಾಗಿ ಸದರಿ ಕೀರ್ತನಕಾರರು ಹೋದಕಡೆಗೆಲ್ಲಿ [illegible] ಕೀರ್ತನೆಗಳಾಗಿ ನಮ್ಮ ಸಮಾಜವು ಧನ್ಯವಾಗಲೆಂದು ಪರಮಾತ್ಮನನ್ನು ಅನನ್ಯಭಾವದಿಂದ ಬೇಡಿಕೊಳ್ಳುತ್ತೇನೆ. ನಮ್ಮ ಮಮದಾಪೂರ ಗ್ರಾಮವು [illegible] ಶಿವಕೀರ್ತನೆಗಳನ್ನು ಮಾಡಿ ಧನ್ಯವಾದರು. ಪರಮಾತ್ಮನು ಅವರನ್ನು ಚಿರಾಯುಗಳನ್ನಾಗಿ ಮಾಡಲಿ.

[illegible]

ಹೆಚ್ಚುತ್ತಿರುವುದು. ಕಳೆದ ೨೫ ವರ್ಷಗಳಿಂದ ಈ ಪಟ್ಟಣದ ಪ್ರಜಾಸಂಖ್ಯೆಯು ಹೆಚ್ಚುತ್ತಿರುವುದಲ್ಲದೆ ಇದರ ವಿಸ್ತೀರ್ಣವು ಈ ಪಟ್ಟಣಸ್ಥಾಪಕನೂ ಚರಿತ್ರಪುರುಷನೂ ಆದ ಆ ಪ್ರಖ್ಯಾತ ಕೆಂಪೇಗೌಡನು ಎಲ್ಲಾ ದಿಕ್ಕುಗಳಲ್ಲೂ ಏರ್ಪಡಿಸಿದ್ದ ಗಡಿಯನ್ನು ಸಮೀಪಿಸಿರುತ್ತದೆ. ಈ ಪಟ್ಟಣವು ಅಭಿವೃದ್ಧಿಯಾದಂತೆಲ್ಲಾ ನಮ್ಮ ಆಕಾಂಕ್ಷೆಗಳು ಪ್ರತಿನಿತ್ಯದಲ್ಲೂ ಹೆಚ್ಚುತ್ತಿವೆ. ಈ ಪಟ್ಟಣವಾಸಿಗಳ ಸಾನುಭೂತಿಯಿಂದಲೂ ಸಹಕಾರದಿಂದಲೂ ಮ್ಯುನಿಸಿಪಾಲಿಟಿಯ ವಿಚಾರದಲ್ಲಿ ಬಹಳ ಉದಾರಭಾವದಿಂದಿರುವ ಶ್ರೀಮನ್ಮಹಾರಾಜಾ ಸರ್ಕಾರದವರ ಸಾಹಾಯ್ಯದಿಂದಲೂ ಭಾವಿಸಂವತ್ಸರಗಳಲ್ಲಿ ಪ್ರಜೆಗಳ ನೈಜವಾದ ಆಶೋತ್ತರಗಳನ್ನು ನೆರವೇರಿಸಲು ಸಮರ್ಥರಾಗುವೆವೆಂದು ನಿರೀಕ್ಷಿಸುತ್ತೇವೆ. ಇದಕ್ಕೆ ವೈಸ್‌ರಾಯರು ಕೊಟ್ಟ ಉತ್ತರ—ನಿಮ್ಮ ಆದರಪುರಸ್ಸರವಾದ ಸ್ವಾಗತಕ್ಕಾಗಿ ನಾವು ದಂಪತಿಗಳು ನಿಮ್ಮನ್ನು ವಂದಿಸುತ್ತೇವೆ. 1537ನೆ ಇಸವಿಯಲ್ಲಿ ಸ್ಥಾಪಿತವಾದ ಈ ಚರಿತ್ರಪ್ರಸಿದ್ಧವಾದ ನಿಮ್ಮ ಪಟ್ಟಣಕ್ಕೆ ಬರಲು ಅವಕಾಶವದಗಿದುದಕ್ಕಾಗಿ ಸಂತೋಷಿಸುತ್ತೇವೆ. ಒಳ್ಳೆ ಜಲಾಶಯಸಮೀಪದಲ್ಲಿ ಆರೋಗ್ಯಕರವಾದ ಈ ಉನ್ನತಪ್ರದೇಶದಲ್ಲಿ ನಾನೂರು ವರ್ಷಗಳ ಹಿಂದೆ ಸ್ಥಾಪಿತವಾದ ಈ ಬೆಂಗಳೂರುಪಟ್ಟಣದ ಉಚ್ಛ್ರಾಯಸ್ಥಿತಿಗೆ ಈ ಪಟ್ಟಣದ ಸ್ಥಾಪಕನ ದೂರದರ್ಶಿಕತ್ವವೇ ಮುಖ್ಯಕಾರಣವಾಗಿರುತ್ತದೆ. 18ನೇ ಶತಮಾನದ ಅಂತ್ಯಭಾಗದಲ್ಲಿ ಪ್ರಾಪ್ತವಾದ ಉಪಟಳಕ್ಕೆ ಸಿಕ್ಕಿದಾಗ್ಯೂ ಈ ಪಟ್ಟಣವು ತನ್ನ ಪ್ರಾಶಸ್ತ್ಯವನ್ನು ಕಳೆದುಕೊಳ್ಳದೆ ಸ್ಥಾಪಕನ ನಿರೀಕ್ಷಣೆಯನ್ನು ಸಾರ್ಥಕಗೊಳಿಸಿರುವುದು, ಮತ್ತು ಮೂಲಪುರುಷನಿಂದ ಗೊತ್ತುಮಾಡಲ್ಪಟ್ಟಿದ್ದ ಗಡಿಗಳವರೆಗೆ ವಿಸ್ತರಿಸಿ ಸಂಸ್ಥಾನದಲ್ಲೆಲ್ಲಾ ಮುಖ್ಯಪಟ್ಟಣವಾಗಿ ಪರಿಣಮಿಸಿರುತ್ತದೆ. ಪ್ರಜಾಸಂಖ್ಯೆಯಲ್ಲೂ, ವ್ಯಾಪಾರ ಕೈಗಾರಿಕೆಗಳಲ್ಲೂ ಭರತಖಂಡದ ಇತರ ದೊಡ್ಡಪಟ್ಟಣಗಳಿಗೆ ಸರಿಸಮಾನವಾಗಿ ಅಭಿವೃದ್ಧಿಯನ್ನು ಹೊಂದುತ್ತಿರುವುದು. ಕೌನ್ಸಿಲಿನ ಪ್ರಯತ್ನವಿಶೇಷದಿಂದಲೂ, ಸರ್ಕಾರದವರ ಸಾನುಭೂತಿಯುಕ್ತವಾದ ಉದಾರಾಶ್ರಯದಿಂದಲೂ ಸುಂದರವಾದ ದೊಡ್ಡ ಕಟ್ಟಡಗಳು, ಅದೃಷ್ಟಹೀನವಾದ ಪಟ್ಟಣಗಳು ಕರುಬುವಂತೆ ನಿರ್ಮಿಸಲ್ಪಟ್ಟಿರುತ್ತವೆ. ನೀವು ವಹಿಸಿಕೊಂಡಿರುವ ಬಹಳ ಉತ್ತರವಾದಿತ್ವವುಳ್ಳ ಜನೋಪಯುಕ್ತ ಕಾರ್ಯನಿರ್ವಹಣದಲ್ಲಿ ಜಯಶೀಲರಾಗಲೆಂದು ಹಾರೈಸುತ್ತೇನೆ.

ಬೆಂಗಳೂರು ದಂಡಿನ ಮ್ಯುನಿಸಿಪಾಲಿಟಿಯವರೊಪ್ಪಿಸಿದ ವಿಜ್ಞಾಪನ ಪತ್ರಿಕೆಯಲ್ಲಿ—1919 ರಲ್ಲಿ ಲಾರ್ಡ್ ಛೆಲ್ಮ್ಸ್‌ಫರ್ಡ್‌ರವರು ರಾಜಪ್ರತಿನಿಧಿಯಾಗಿ ದಯಮಾಡಿಸಿದ್ದಾಗ್ಗೆ ಕುಡಿಯುವನೀರು ನಿರಾತಂಕವಾಗಿ ಒದಗಿಸಲ್ಪಡುವ, ಭೂಮಿಯೊಳಗೆ ಒಚ್ಚಲನ್ನು ಹಾಕುವ, ಫಸ್ಟ್‌ಗ್ರೇಡ್ ಕಾಲೇಜನ್ನು ಸ್ಥಾಪಿಸುವ, ಡಿ|| ಮತ್ತು ಸೆಷನ್ಸ್ ಜಡ್ಜರ ಸ್ಥಾನವನ್ನು ಪುನಃ ಏರ್ಪಡಿಸುವ ಆವಶ್ಯಕತೆಯನ್ನು ಕುರಿತು ಪ್ರಾರ್ಥಿಸಿಕೊಂಡಿದ್ದೆವು. ನೀರಿನಕೊರತೆಯು ಕೂಡಲೆ ಪರಿಹಾರವಾಗತಕ್ಕದ್ದಾಗಿದೆ. ಇದು ಸೇನೆಯಿರತಕ್ಕ ಸ್ಥಳವಾದ್ದರಿಂದ ಆರೋಗ್ಯಸ್ಥಿತಿಯು ಉತ್ತಮಪಡಿಸಲ್ಪಡತಕ್ಕದ್ದಾಗಿದೆ. ಈ ವಿಚಾರದಲ್ಲಿ ಸ್ಥಳೀಯ ಅಧಿಕಾರಿಗಳು ವಿಶೇಷ ಗಮನಕೊಟ್ಟು ಸಾಹಾಯ್ಯೀಕರಿಸುವವರಾಗಿದ್ದಾರೆ. ಬಡಬಗ್ಗರ ವಾಸಸ್ಥಳವು ಬಹಳ ಅನಾರೋಗ್ಯಕರವಾಗಿರುವುದರಿಂದ ಅವರುಗಳಿಗೆ ಬೇರೆ ಮನೆಗಳನ್ನು ಕಟ್ಟಿಸಿಕೊಟ್ಟು ಆರೋಗ್ಯಸ್ಥಿತಿಯನ್ನು ಉತ್ತಮಪಡಿಸಲುದ್ಯುಕ್ತರಾಗಿದ್ದೇವೆ. ಈ ವಹಿಸಿಕೊಡಲ್ಪಟ್ಟಿರುವ ದಂಡುಪ್ರದೇಶದ ಸ್ಥಿತಿಯು ವಿಜಾತೀಯವಾಗಿದೆ. ಅನ್ಯದೇಶದಲ್ಲಿ ಬ್ರಿಟಿಷ್ ಆಡಳಿತಕ್ಕೊಳಪಟ್ಟ ಪ್ರದೇಶವೆಂಬುದಾಗಿ 1858 ರಲ್ಲಿ ಹೇಳಲ್ಪಟ್ಟಿದ್ದುದು ಇಂದಿಗೂ ನಿಜವಾಗಿಯೇ ಇರುತ್ತದೆ. ಇದು 1809ರಲ್ಲಿ ಬ್ರಿಟಿಷ್ ಸೇನಾನಿವಾಸಸ್ಥಾನವಾಗಿ ಏರ್ಪಡಿಸಲ್ಪಟ್ಟು ಶ್ರೀರಂಗಪಟ್ಟಣದಲ್ಲಿದ್ದ ಸೇನೆಯು ಇಲ್ಲಿಗೆ ಬರಮಾಡಲ್ಪಟ್ಟು ನೆಲೆಸಲ್ಪಟ್ಟಿತು ಮತ್ತು 1881ರಲ್ಲಿ ಈ ಪ್ರದೇಶವು ಇಂಡಿಯಾಸರ್ಕಾರದ ಸಂಪೂರ್ಣವಾದ ಆಡಳಿತಕ್ಕೆ ವಹಿಸಿಕೊಳ್ಳಲ್ಪಟ್ಟಿತು. ಇದು ತನ್ನ ಅನುಕೂಲವಾದ ಪರಿಸ್ಥಿತಿಯಿಂದಲೂ, ವಾಯುಗುಣವಿಶೇಷದಿಂದಲೂ, ದಕ್ಷಿಣ ಇಂಡಿಯಾದಲ್ಲಿ ಒಂದು ಪ್ರಮುಖಪಟ್ಟಣವಾಗಿ ಪರಿಣಮಿಸಿರುತ್ತದೆ. ದಂಡಿನ ವಾಸಸ್ಥಳವಾಗಿರುವುದಲ್ಲದೆ ಜನರ ವಾಸಕ್ಕೂ ವ್ಯಾಪಾರ ಮತ್ತು ವಿದ್ಯೆಗಳಿಗೂ ಮಧ್ಯಸ್ಥಳವಾಗಿರುತ್ತದೆ. ರೆಸಿಡೆಂಟರವರ ಅಧೀನದಲ್ಲಿ ಮ್ಯುನಿಸಿಪಲ್ ಆಡಳಿತದ ಉತ್ತರವಾದಿತ್ವವನ್ನು ವಹಿಸಿಕೊಂಡಿರುವ ನಾವು ಪ್ರಜೆಗಳ ಪ್ರತಿನಿಧಿಯಾಗಿ ಬ್ರಿಟಿಷ್ ಇಂಡಿಯಾಕ್ಕೆ ಸೇರಿದ ಈ ತರಹದ ಸ್ಥಳಗಳ ಅಥವಾ ನಮ್ಮ ನೆರೆಯಲ್ಲಿರುವ ಬೆಂಗಳೂರುಸಿಟಿಯ ಆಡಳಿತಕ್ಕೆ ಸರಿಸಮಾನವಾದ ಆಡಳಿತವನ್ನು ನಡೆಸುವ ಸೌಲಭ್ಯವನ್ನು ಹೊಂದಲಪೇಕ್ಷಿಸುತ್ತೇವೆ. ಇಲ್ಲಿ ಪಂಚಮರ ಸಂಖ್ಯೆಯು ಬಹಳವಾಗಿ ಹೆಚ್ಚಿರುತ್ತದೆ. ಈ ದಂಡಿನ ಒಟ್ಟು ಹುಟ್ಟುವಳಿಯಲ್ಲಿ ⅓ ಭಾಗವು ಮಾದಕಪದಾರ್ಥಗಳಿಂದ ಬರತಕ್ಕದ್ದಾಗಿದೆ. ಈ ಮಾದಕಪದಾರ್ಥದ ಉತ್ಪನ್ನಕ್ಕೆ ಪಂಚಮರೇ ವಿಶೇಷವಾಗಿ ಕಾರಣರಾಗಿದ್ದಾರೆ. ಇವರಲ್ಲಿ ಅನೇಕರು ಬಹಳ ಶೋಚನೀಯಸ್ಥಿತಿಯಲ್ಲಿರುವುದರಿಂದ ಅವರ ನೈತಿಕ ಮತ್ತು ಆರ್ಥಿಕಸ್ಥಿತಿಯನ್ನುತ್ತಮಗೊಳಿಸುವ ಭಾರವು ಅಧಿಕಾರಿವರ್ಗದವರ ಮೇಲೆ ಬಿದ್ದುದಾಗಿರುವುದಲ್ಲದೆ ಅವರನ್ನು ವಿದ್ಯಾವಂತರನ್ನಾಗಿ ಮಾಡಿ ಅವರಿಗೆ ಆರೋಗ್ಯಕರವಾದ ವಾಸಸ್ಥಳಗಳನ್ನು ಕಲ್ಪಿಸಿಕೊಡುವುದು ಅವಶ್ಯಕವಾಗಿದೆ. ಈಗ ೩ ವರ್ಷಗಳಿಂದಲೂ ಏರ್ಪಟ್ಟಿರುವ ಮಕ್ಕಳ ಮತ್ತು ಬಾಣಂತಿಯರ ಪೋಷಣೋಪಾಯದಿಂದ ಈ ಜನರಿಗೆ ಬಹಳ ಪ್ರಯೋಜನವಾಗಿರುತ್ತದೆ.

ಈ ದಂಡಿನ ಅಭಿವೃದ್ಧಿಕಾರ್ಯಗಳನ್ನ ಮಾಡಲು ಇಲ್ಲಿಯುತ್ಪನ್ನದಲ್ಲಿ ಗ್ರಾಂಟನ್ನು ಕೊಡಿಸಿರುವದಕ್ಕಾಗಿ ತಮ್ಮ ಸರ್ಕಾರದವರಿಗೆ ಕೃತಜ್ಞರಾಗಿರುತ್ತೇವೆ ಮತ್ತು ಈ ಹಣವು ಅಭಿವೃದ್ಧಿ ಕೆಲಸಕ್ಕಾಗಿಯೇ ಉಪಯೋಗಿಸಲ್ಪಡುತ್ತದೆಂದು ನಾವು ದೃಢವಾಗಿ ಹೇಳುತ್ತೇವೆ. ಈ ಪ್ರದೇಶವನ್ನು ಗೊತ್ತುಗುರಿಯಿಲ್ಲದೆ ವಿಸ್ತರಿಸಬೇಕೆಂಬ ಉದ್ದೇಶವು ನಮಗೆ ಇಲ್ಲವಾದರೂ, ನ್ಯಾಯವಾದ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕಾದ್ದರಿಂದ ದುಡ್ಡಿನ ಸಹಾಯವು ಅವಶ್ಯಕವಾಗಿದೆ. ಇಲ್ಲಿಯ ಒಟ್ಟು ಉತ್ಪತ್ತಿಯಲ್ಲಿ ಖರ್ಚು ಜಾತಾ ಉಳಿಯುವ ಮೊಬಲಗಿನಲ್ಲಿ ಯುಕ್ತವಾದ ಭಾಗವು ಕೊಡಿಸಲ್ಪಡಬೇಕೆಂಬುದು ಕಂದಾಯ ಕೊಡುವ ಪ್ರಜೆಗಳ ಆಶಯವಾಗಿದೆ ಎಂದು ತಮ್ಮಲ್ಲಿ ಬಿನ್ನೈಸಿಕೊಳ್ಳುತ್ತೇವೆ. ಮಾಂಟೆಗೊ ಛೆಲ್ಮ್ಸ್‌ಫರ್ಡ್‌ರವರ ನೂತನ ರಾಜಕೀಯಸುಧಾರಣೆಯಿಂದ ನಮಗೆ ಯಾವ ಸೌಲಭ್ಯವೂ ದೊರಕಿಲ್ಲವಾದಕಾರಣ ಇಂಪೀರಿಯಲ್ ಲೆಜಿಸ್ಲೇಟೀವ್ ಅಸಂಬ್ಲಿಗೆ ನಮ್ಮ ಪ್ರತಿನಿಧಿಯೊಬ್ಬರನ್ನು, ಆರಿಸಿ ಕಳುಹಿಸಿಕೊಡಲು ಅವಕಾಶವನ್ನುಂಟುಮಾಡಿ ಕೊಡಬೇಕಾಗಿಯೂ ಬ್ರಿಟಿಷ್ ರೆಸಿಡೆಂಟರ ಸಹಾಯಾರ್ಥವಾಗಿ ಒಂದು ಆಲೋಚನಾ ಸಂಘವನ್ನೇರ್ಪಡಿಸಿ ಕೊಡಬೇಕಾಗಿಯೂ ಪ್ರಾರ್ಥಿಸುತ್ತೇವೆ. ಈ ಕಂಟೋನ್ಮೆಂಟಿನಲ್ಲಿ ಬಾಲವಿದ್ಯಾಭ್ಯಾಸವನ್ನು ನಿರ್ಬಂಧದಿಂದ ಮಾಡಿಸಲು ಎತ್ತಿಸಿರುತ್ತೇವೆ. ಅದಕ್ಕಾಗಿ ಗ್ರಾಂಟನ್ನು ಕೊಡಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇವೆ.

ವೈಸ್ರಾಯರ ಉತ್ತರ—ನೀವು ನಮ್ಮ ಸುಖಾಗಮನವನ್ನು ಬಯಸಿದುದಕ್ಕಾಗಿ ನಾವು ನಿಮ್ಮನ್ನು ವಂದಿಸುತ್ತೇವೆ. ಇಂಡಿಯಾ ಸರ್ಕಾರದ ರಾಜಧಾನಿಗೆ ಬೆಂಗಳೂರು ಬಹಳ ದೂರವಾಗಿರುವುದರಿಂದ ಅನೇಕ ರಾಜಕಾರ್ಯಗಳಲ್ಲಿ ಉದ್ಯುಕ್ತರಾಗಿರುವ ವೈಸರಾಯಿ ಗೌರ್ನರ್‌ಜನರಲ್ಲುಗಳು ಇಷ್ಟು ದೂರ ಪದೇಪದೇ ಬರಲು ಸಾಧ್ಯವಿಲ್ಲವು. ಅದುಕಾರಣ ದಕ್ಷಿಣಇಂಡಿಯಾದಲ್ಲಿ ಮುಖ್ಯಪಟ್ಟಣವಾಗಿರುವ ಇಲ್ಲಿಗೆ ನಾವು ಬರಲು ಈಗ ಅವಕಾಶವು ದೊರಕಿದುದಕ್ಕಾಗಿ ಸಂತೋಷಿಸುತ್ತೇವೆ. ಈ ಪಟ್ಟಣವನ್ನು ನವೀನ ಆರೋಗ್ಯಸೂತ್ರಕ್ರಮಗಳಿಗನುಸರಿಸಿ ಸುಧಾರಿಸಲು ಮತ್ತು ಪ್ರಜೆಗಳಿಗೆ ಹೆಚ್ಚು ಕಂದಾಯದ ಭಾರವನ್ನು ಹೊರಿಸದೆ ಬಡವರಿಗೆ ವಾಸಸ್ಥಳವನ್ನು ಕಟ್ಟಿಸಿ ಪಟ್ಟಣಾಭಿವೃದ್ಧಿ ಮಾಡಲು ನೀವು ನಡೆಸಿರುವ ಪ್ರಯತ್ನವು ಶ್ಲಾಘ್ಯವಾಗಿದೆ. ಕೂಲಿಯಿಂದ ಜೀವಿಸುವ ಬಡಜನರ ವಾಸಸ್ಥಳಗಳನ್ನುತ್ತಮಪಡಿಸಲು ನೀವು ಮಾಡಿರುವ ಪ್ರಯತ್ನವು ನನಗೂ ಮತ್ತು ನನ್ನ ಪತ್ನಿಯವರಿಗೂ ಸಂತೋಷವನ್ನುಂಟುಮಾಡಿರುತ್ತದೆ. ಜನಭರಿತವಾದ ಪಟ್ಟಣಗಳಲ್ಲಿ ಒಳ್ಳೇನೀರಿನ ಕೊರತೆ ಇರುವಂತೆ ಇಲ್ಲೂ ಇರುತ್ತದೆ. ಇದರ ನಿವಾರಣೆಗಾಗಿ ರೆಸಿಡೆಂಟರು ಕೆಲ ಅನುಭವಸ್ಥರ ಪರ್ಯಾಲೋಚನೆಯಿಂದ ನಿವಾರಣೋಪಾಯವನ್ನು ಗೊತ್ತುಮಾಡಿರುವರು. ಅದು ಇಷ್ಟರಲ್ಲೇ ಕಾರ್ಯಮುಖವಾಗುವದೆಂದು ತಿಳಿಯುತ್ತೇನೆ. ಈ ಕೆಲಸಗಳ ಸಾವಕಾಶಕ್ಕೆ ದುಡ್ಡಿನ ಕೊರತೆಯೇ ಕಾರಣವಾಗಿರುತ್ತದೆ. ರಾಜಕೀಯ ಸುಧಾರಣೆಯ ವಿಚಾರದಲ್ಲಿ ನಿಮಗಿರುವ ಆಶೋತ್ತರವನ್ನು ತಿಳಿಸಿರುತ್ತೀರಿ. ಈ ದಂಡಿನ ಪ್ರದೇಶವು ಬ್ರಿಟಿಷ್ ಇಂಡಿಯಾಕ್ಕೆ ಸೇರದೆ ದೇಶೀಯಸಂಸ್ಥಾನದ ಒಂದು ಭಾಗವಾಗಿದ್ದು ಇಂಡಿಯಾ ಸರ್ಕಾರದವರು ತಮ್ಮ ಸೇನೆಯನ್ನು ಇಡಲು ಅವರಿಗೆ ವಹಿಸಿಕೊಡಲ್ಪಟ್ಟುದಾಗಿ ಇರುತ್ತದೆ. ಈ ಪ್ರದೇಶವು ಇಂಡಿಯಾ ಸರ್ಕಾರದವರ ಪರವಾಗಿ ರೆಸಿಡೆಂಟರ ಆಡಳಿತಕ್ಕೆ ಒಳಪಟ್ಟಿರುವುದಾದರೂ, ಮೈಸೂರು ಸಂಸ್ಥಾನದ ಒಂದು ಭಾಗವಾಗಿರುವುದರಿಂದ ಈ ದಂಡಿನ ಆಡಳಿತವು ಅಜ್ಮೀರ್, ಮಾರವಾರ್ ಅಥವಾ ಡೆಲ್ಲಿಯ ಆಡಳಿತದಂತಿಲ್ಲವು. ಆದುಕಾರಣ ಬ್ರಿಟಿಷ್ ಇಂಡಿಯಾಕ್ಕೆ ಸೇರದೆ ಒಂದು ಸಣ್ಣ ಪ್ರದೇಶವಾಗಿರುವ ನಿಮ್ಮ ಸ್ಥಳದಿಂದ ಲೆಜಿಸ್ಲೇಟೀವ್ ಅಸೆಂಬ್ಲಿಗೆ ಒಬ್ಬ ಪ್ರತಿನಿಧಿಯನ್ನು ಕಳುಹಿಸಿಕೊಡಬೇಕೆಂಬ ನಿಮ್ಮ ಕೋರಿಕೆಯನ್ನು ನೆರವೇರಿಸಲು ಸಾಧ್ಯವಿಲ್ಲ. ಅಡ್ವೈಸರಿ ಕಮಿಟಿಯನ್ನು ನೇಮಿಸುವ ವಿಚಾರದಲ್ಲೂ ತೊಂದರೆ ಇರುತ್ತದೆ.

ಮೈಸೂರು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನವರೊಪ್ಪಿಸಿದ ವಿಜ್ಞಾಪನಪತ್ರಿಕೆಯ ಮುಖ್ಯಾಂಶ—ಘನವಂತರಾದ ತಾವು ದಂಪತಿಗಳು ಈ ರಾಜಧಾನಿಗೆ ಪ್ರಥಮತಃ ಚಿತ್ತೈಸಿರುವ ಈ ಸುಸಮಯದಲ್ಲಿ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳಾದ ನಾವುಗಳು ಆದರಾತಿಶಯದಿಂದ ತಮ್ಮಗಳನ್ನು ಸುಸ್ವಾಗತಿಸುತ್ತೇವೆ. ಘನತರವಾದ ವೈಸ್ರಾಯ್‌ಪದವಿಯನ್ನು ವಹಿಸಿರುವ ತಾವು ತಮ್ಮ ಕಾರ್ಯಕಲಾಪವಿಶೇಷದಲ್ಲಿ ವ್ಯವಧಾನ ಮಾಡಿಕೊಂಡು ನಮ್ಮ ಶ್ರೀಮನ್ ಮಹಾರಾಜರವರ ಆಮಂತ್ರಣವನ್ನು ಪುರಸ್ಕರಿಸಿ ನಮ್ಮ ಸಂಸ್ಥಾನಕ್ಕೆ ಚಿತ್ತೈಸಿದುದಕ್ಕಾಗಿ ವಿಶೇಷ ಕೃತಜ್ಞರಾಗಿರುತ್ತೇವೆ. ಮತ್ತು ತಾವು ನಮ್ಮ ಸಂಸ್ಥಾನದಲ್ಲಿ ಇರುವಷ್ಟು ಕಾಲದಲ್ಲಿ ತಮ್ಮ ಘನತರವಾದ ರಾಜ್ಯಕಾರ್ಯ ನಿರ್ವಾಹದ ಬಳಲಿಕೆಯು ಬಲುಮಟ್ಟಿಗೆ ಶಾಂತವಾಗಿ ಚಿತ್ತರಂಜನೆಯುಂಟಾಗುವುದೆಂದು ನಿರೀಕ್ಷಿಸುತ್ತೇವೆ. ಯೋರ ವಿವೇಕಪೂರಿತವೂ ಉಪಯುಕ್ತವೂ ಆದ ರಾಜ್ಯಭಾರದಿಂದ ನಮ್ಮ ದೇಶವು ಎಲ್ಲಮಾರ್ಗದಲ್ಲೂ ವಿಶೇಷಾಭಿವೃದ್ಧಿಯನ್ನು ಹೊಂದಿರುತ್ತದೆ. ಅಂತಹ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಪ್ರಭುತ್ವಕ್ಕೆ ಒಳಪಟ್ಟಿರುವ ಸಂಸ್ಥಾನದ ಪ್ರಜೆಗಳೆಲ್ಲರೂ ವಿಶೇಷಪುಣ್ಯಶಾಲಿಗಳೆಂದು ಭಾವಿಸಿರುತ್ತೇವೆ. ಪ್ರಜಾಪ್ರತಿನಿಧಿಸಭೆಯನ್ನೇರ್ಪಡಿಸಿ ತನ್ಮೂಲಕ ಪ್ರಜೆಗಳು ಸರ್ಕಾರ ಆಡಳಿತಗಳಲ್ಲಿ ಭಾಗಿಗಳಾಗುವಂತೆ ಮಾಡಿರುವರಲ್ಲೆಲ್ಲಾ ಚಿರಸ್ಮರಣೀಯರಾದ ನಮ್ಮ ಮಹಾರಾಜರವರ ತಂದೆಯವರೇ ಮೊದಲನೆಯವರೆಂದು ತಿಳುಹುವಲ್ಲಿ ನಮಗೆ ಒಂದು ವಿಧವಾದ ಹೆಮ್ಮೆಯುಂಟಾಗುತ್ತದೆ. ಅವರ ತರುವಾಯ ಮಹಾಮಾತುಶ್ರೀ ವಾಣೀವಿಲಾಸಸನ್ನಿಧಾನ ಸಿ.ಐ.ಯವರು ಸಂಸ್ಥಾನದ ಪೂರ್ವಾಚಾರ ಪದ್ಧತಿಗಳನ್ನು ಬಿಡದೆ ತಮ್ಮ ಪತಿಯವರ ಉತ್ಕೃಷ್ಟವಾದ ರಾಜನೀತಿಯನ್ನು ಅನುಸರಿಸಿಕೊಂಡು ಬಂದರು. ಈ ನಮ್ಮ ಪ್ರೀತ್ಯಾಸ್ಪದರಾದ ಶ್ರೀಮನ್ ಮಹಾರಾಜರವರು ಸಂಸ್ಥಾನದ ರಾಜ್ಯಭಾರವನ್ನು ವಹಿಸಿದಾರಾಭ್ಯ ತಮ್ಮ ಪ್ರಜೆಗಳಾದ ನಮ್ಮನ್ನು ಅಭಿವೃದ್ಧಿಮಾರ್ಗದಲ್ಲಿ ಮುಂದರಿಸುವುದು ತಮ್ಮ ಮುಖ್ಯ ಪುರುಷಾರ್ಥವೆಂದು ಭಾವಿಸಿರುತ್ತಾರೆ. ಈ ರಾಜಧಾನಿಯ ಪುರೋಭಿವೃದ್ಧಿಯಲ್ಲಿ ಪೂರ್ಣಾಸಕ್ತಿಯನ್ನೂ ವ್ಯವಧಾನವನ್ನೂ ತೋರಿಸುತ್ತಿರುವುದಕ್ಕಾಗಿಯೂ ಸ್ವಂತ ಹಣದಿಂದ ಸಹಾಯಮಾಡಿಯೂ ಮಾಡುತ್ತಲೂ ಇರುವದಕ್ಕಾಗಿಯೂ ರಾಜಧಾನಿಯ ನಿವಾಸಿಗಳಾದ ನಾವು ನಮ್ಮ ಮಹಾಸ್ವಾಮಿಯವರಿಗೆ ಪೂರ್ಣಕೃತಜ್ಞರಾಗಿರುತ್ತೇವೆ.

ವೈಸ್ರಾಯರ ಉತ್ತರ—ನಿಮ್ಮ ಸತ್ಕಾರದಿಂದ ನಾವು ದಂಪತಿಗಳು ಸಂತುಷ್ಟರಾಗಿ ನಿಮ್ಮನ್ನು ವಂದಿಸುತ್ತೇವೆ. ಬಹಳ ವರ್ಷದಿಂದಲೂ ಈ ಸಂಸ್ಥಾನವನ್ನು ನೋಡಬೇಕೆಂಬ ನಮ್ಮ ಇಷ್ಟವು ಈಗ ನೆರವೇರಿದುದಕ್ಕಾಗಿ ನಾವು ಸಂತೋಷಿಸುತ್ತೇವೆ ಮತ್ತು ಪರಮಾನಂದವನ್ನು ಹೊಂದಿ ಇಲ್ಲಿಂದ ತೆರಳುವವರಾಗುವೆವೆಂದು ನಿರೀಕ್ಷಿಸುತ್ತೇವೆ. ನಿಮ್ಮ ಪ್ರಭುವರ್ಯರಲ್ಲಿ ನಿಮಗಿರತಕ್ಕ ಗಾಢವಾದ ರಾಜಭಕ್ತಿಯನ್ನು ವ್ಯಕ್ತಗೊಳಿಸಿರುವುದು ಯುಕ್ತವೇ ಸರಿ. ಸಾನುಭೂತಿಪೂರ್ವಕವಾದ ನೂತನ ರಾಜನೀತಿಯನ್ನನುಸರಿಸಿ ಪಾರಂಪರ್ಯವಾಗಿ ರಾಜ್ಯಭಾರವನ್ನು ಮಾಡುತ್ತಿರುವ ಮಹಾರಾಜರವರು ತಮ್ಮ ಪ್ರಜೆಗಳು ವಿದ್ಯಾವಂತರಾಗಿ ಅಭಿವೃದ್ಧಿಹೊಂದಿ ರಾಜ್ಯಾಡಳಿತದಲ್ಲಿ ಭಾಗಿಗಳಾಗುವಂತೆ ಮಾಡುವುದು ತಮ್ಮ ಆದ್ಯಕರ್ತವ್ಯವೆಂದು ತಿಳಿದಿರುವುದಕ್ಕಾಗಿ ನಿಮ್ಮ ಮೆಚ್ಚುಗೆಯನ್ನು ತೋರಿಸಿರುತ್ತೀರಿ. ನಿಮ್ಮ ಮಹಾರಾಜರವರು ಎಷ್ಟರಮಟ್ಟಿಗೆ ಪ್ರಜಾಕ್ಷೇಮ ಚಿಂತಾಮಗ್ನರಾಗಿ ಅವರ ಅಭಿವೃದ್ಧಿಯನ್ನೇ ನಿರೀಕ್ಷಿಸುತ್ತಿರುವರೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ತಮ್ಮ ಪ್ರಜೆಗಳ ಪ್ರೀತಿವಿಶ್ವಾಸಗಳಿಗೂ ಕೃತಜ್ಞತೆಗೂ ಪಾತ್ರರಾದ ಮತ್ತು ತಮ್ಮ ರಾಜ್ಯಾಡಳಿತದಲ್ಲಿ ತಮ್ಮ ಪ್ರಜೆಗಳು ಭಾಗಿಗಳಾಗುವಂತೆ ಮಾಡುವುದರಿಂದ ಅವರ ನಿರಂತರವಾದ ಸಾಹಾಯ್ಯವನ್ನು ಹೊಂದಿರುವ ರಾಜಮನೆತನದವರೇ ಧನ್ಯರು. ಈ ರಾಜಧಾನಿಯ ಅಭಿವೃದ್ಧಿಯವಿಚಾರದಲ್ಲಿ ಮಹಾರಾಜರವರು ಸ್ವತಃ ಅಭಿಮಾನವನ್ನು ವಹಿಸಿರುವುದು ಅದರ ಭಾಗ್ಯವೇ ಸರಿ. ರಾಜಧಾನಿಯ ಆರೋಗ್ಯವಿಚಾರದಲ್ಲೂ ಬಡವರಿಗೆ ವಾಸಸ್ಥಾನಗಳನ್ನು ಕಲ್ಪಿಸಿಕೊಡುವುದರಲ್ಲೂ ತಕ್ಕ ಏರ್ಪಾಟು 1903 ರಿಂದ ಅವಿಚ್ಛಿನ್ನವಾಗಿ ಪ್ರತಿವರ್ಷದಲ್ಲೂ ನಡೆಸಲ್ಪಡುತ್ತಲಿರುವದನ್ನು ಉತ್ಸಾಹದಿಂದ ಅರಿತವನಾಗಿರುತ್ತೇನೆ. ಭರತಖಂಡದ ಮತ್ತಾವಭಾಗದಲ್ಲೂ ಇಷ್ಟರಮಟ್ಟಿಗೆ ಪುರಾಭಿವೃದ್ಧಿಕಾರ್ಯವು 20 ವರ್ಷಗಳಿಂದ ಅವಿಚ್ಛಿನ್ನವಾಗಿ ನಡೆಸಲ್ಪಟ್ಟುದುದಿಲ್ಲವು. ರಾಜಧಾನಿಯ ನಿವಾಸಿಗಳ ಸೌಕರ್ಯಕ್ಕಾಗಿಯೂ ವಿಹಾರಕ್ಕಾಗಿಯೂ ಉದ್ಯಾನಗಳನ್ನು ಕಲ್ಪಿಸಿಕೊಟ್ಟಿರುವುದು ನಿಮಗೆ ಭೂಷಣವಾಗಿದೆ ಅಲ್ಲದೆ ಇವುಗಳರಚನೆಯಲ್ಲಿ ಉದ್ಯುಕ್ತರಾಗಿದ್ದ ಅಧಿಕಾರಿಗಳ ಕೌಶಲ್ಯವನ್ನು ಪ್ರದರ್ಶಿಸತಕ್ಕದಾಗಿದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ನವಂಬರ್ ತಿಂಗಳಿನ ಮ್ಯುನಿಸಿಪಲ್ ಮೀಟಿಂಗು ಹೊಸದಾಗಿ ಕಟ್ಟಲ್ಪಟ್ಟಿರುವ ಮ್ಯುನಿಸಿಪಲ್ ಆಫೀಸಿನಲ್ಲಿ ಕಳೆದ ತಿಂಗಳು ತಾ|| 24 ನೆಯ ಶನಿವಾರದ ದಿವಸ ಪ್ರೆಸಿಡೆಂಟರಾದ ದಿ|| ಬ|| ಸಿ. ಶ್ರೀಕಂಠೇಶ್ವರಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ನಡೆದಿತು. 23 ಜನ ಕೌನ್ಸಿಲರುಗಳು ದಯಮಾಡಿಸಿದ್ದರು. ಸಾಧಾರಣವಾದ 3-4 ವಿಷಯಗಳು ತೀರ್ಮಾನಗೊಳಿಸಲ್ಪಟ್ಟ ಮೇಲೆ, ವೈಸ್‌ರಾಯರ ಆಗಮನದೇರ್ಪಾಟಿನ ಸಂಬಂಧದಲ್ಲಿ ತಮಗೆ ಅವಸರ ಕೆಲಸವಿರುವುದರಿಂದ ತಾವು ಹೋಗಬೇಕಾಗಿರುವ ಪ್ರಯುಕ್ತ ಮೀಟಿಂಗನ್ನು ಮುಕ್ತಾಯಗೊಳಿಸಬೇಕೆಂದು ಪ್ರೆಸಿಡೆಂಟರು ಹೇಳಿದರು. "ಅಕ್ಬರಾಯಿ ಬಿಲ್ಲುಗಳಿಗೆ ಎರಡೆರಡು ವೇಳೆ ಹಣವು ಕೊಡಲ್ಪಟ್ಟಿರುತ್ತದೆ; ತೆರುಗೆಯ ಹಣವು ದುರುಪಯೋಗಪಡಿಸಲ್ಪಟ್ಟಿರುತ್ತದೆ ಆದುದರಿಂದ ತತ್ಸಂಬಂಧವಾದ ಕಾಗದಪತ್ರಗಳು ಕೌನ್ಸಿಲರುಗಳ ಪರ್ಯಾಲೋಚನೆಗೆ ತರಲ್ಪಟ್ಟು ಇತ್ಯರ್ಥಗೊಳಿಸಲ್ಪಡಬೇಕೆಂದು 10 ಜನ ಕೌನ್ಸಿಲರುಗಳು ಪ್ರೆಸಿಡೆಂಟರಿಗೆ ಲಿಖಿತಮೂಲಕವಾಗಿ ತಿಳುಹಿಸಿ 6 ತಿಂಗಳುಗಳ ಮೇಲಾದಾಗ್ಯೂ ಪ್ರೆಸಿಡೆಂಟರು ಆರೀತಿ ಕೌನ್ಸಿಲರ ಪರ್ಯಾಲೋಚನೆಗೆ ತಾರದೆ ತತ್ಸಂಬಂಧ ಕಾಗದಪತ್ರಗಳನ್ನು ಸರ್ಕಾರಕ್ಕೆ ನೇರವಾಗಿ ಕಳುಹಿಸಿ ಅವುಗಳ ಮೇಲೆ ಸರ್ಕಾರದಪ್ಪಣೆಯನ್ನು ಪಡೆಸಿಕೊಂಡಿರುತ್ತಾರೆ. ಇದೂ ಅಲ್ಲದೆ 12-14-18 ತಿಂಗಳುಗಳಿಂದಲೂ ವಿಲೆಯಾಗದೆ ಬಿದ್ದಿರುವ ಸಬ್ಜೆಕ್ಟುಗಳೆಷ್ಟೋ ಇವೆ. ಅವುಗಳು ಪ್ರತಿ ತಿಂಗಳಲ್ಲೂ ಮುಂದಣ ಮೀಟಿಂಗಿನ ಪರ್ಯಾಲೋಚನೆಗೆಂದು ತೆಗೆದಿಡಲ್ಪಡುತ್ತಿರುವುವು. ಹೀಗೆ ಕೌನ್ಸಿಲರುಗಳು ಕಳುಹಿಸಿಕೊಟ್ಟ ವಿಷಯಗಳು ಪರ್ಯಾಲೋಚಿಸಲ್ಪಡದೆ ತೃಣವಾಗಿಗಣಿಸಲ್ಪಡುವುದಾದಲ್ಲಿ ನಾವುಗಳು ಮೀಟಿಂಗಿಗೆ ಏತಕ್ಕಾಗಿ ಬರಬೇಕು? ಹಾಗೆ ಪ್ರೆಸಿಡೆಂಟರಿಗೆ ಬಹಳ ಅವಸರವಾದ ಕೆಲಸವಿರುವಪಕ್ಷದಲ್ಲಿ ನಮ್ಮ ಕೌನ್ಸಿಲರುಗಳಲ್ಲೊಬ್ಬರನ್ನು ಅಧ್ಯಕ್ಷರನ್ನಾಗಿ ತಾವೇ ಗೊತ್ತುಮಾಡಿ ಈ ದಿವಸದ ಸಭೆಯ ಕೆಲಸವು ನಡೆಯುವಂತೇರ್ಪಡಿಸಿ ತಾವು ದಯಮಾಡಿಸಬಹುದು" ಎಂದು ಮ|| ಮಹಮದ್‌ಸೇಟರು ಸೂಚಿಸಿದರು. ಮ|| ಪುರುಷೋತ್ತಮ ಬಾವಾಜಿಯವರು ಅದನ್ನು ಅನುಮೋದಿಸಿದರು. ತರುವಾಯ "ಅಕ್ಬರಾಯಿ ಬಿಲ್ಲುಗಳಿಗೆ ಎರಡೆರಡು ವೇಳೆ ಹಣಸಂದಾಯವಾಗಿರುವ ಮತ್ತು ಮ್ಯುನಿಸಿಪಲ್ ಹಣವು ದುರುಪಯೋಗಿಸಲ್ಪಟ್ಟಿರುವ ವಿಷಯಗಳನ್ನೂ ಅವುಗಳಿಗೆ ಸಂಬಂಧಪಟ್ಟ ಕಾಗದಪತ್ರಗಳನ್ನೂ ಕೌನ್ಸಿಲರುಗಳ ಪರ್ಯಾಲೋಚನೆಗೆ ತರುತ್ತೇವೆಂದು ಅನೇಕವೇಳೆ ಭರವಸೆಯನ್ನು ಕೊಟ್ಟಿದ್ದಾಗ್ಯೂ ಆರೀತಿ ಮಾಡದೆ ಸ್ವತಂತ್ರಿಸಿ ಸರ್ಕಾರಕ್ಕೆ ನೇರವಾಗಿ ಕಳುಹಿಸಿರುತ್ತೀರಿ. ಇದರಿಂದ ನಿಮ್ಮಲ್ಲಿ ನಾವು ಇಟ್ಟಿದ್ದ ವಿಶ್ವಾಸ ಮತ್ತು ಭರವಸೆಗಳನ್ನು ವ್ಯರ್ಥಮಾಡಿದಂತಾದ ಪ್ರಯುಕ್ತ ನಾವು ಮುಂದೆ ನಿಮ್ಮ ಮಾತಿನಲ್ಲಿ ಭರವಸೆಯಿಡುವುದು ಹೇಗೆ?" ಎಂದು ಮೊದಲಾಗಿ ರೆವರೆಂಡ್ ಇ. ಎಸ್. ಎಡ್ವರ್ಡ್ಸ್‌ರವರು ಬಹಳ ಯುಕ್ತಾಯುಕ್ತವಾಗಿಯೂ ಆವೇಶದಿಂದಲೂ ಹೇಳಿದರು. ತರುವಾಯ "ಆ ಕಾಗದಪತ್ರಗಳು ಈಗಲೂ ಸಿದ್ಧವಾಗಿಲ್ಲವಾದುದರಿಂದ ನಾನಿದ್ದು ಅವುಗಳ ವಿಚಾರದಲ್ಲಿ ನಿಮಗೆ ತಿಳುವಿಕೆ ಕೊಟ್ಟ ಹೊರತು ನಿಮಗೆ ಗೊತ್ತಾಗುವುದಿಲ್ಲವು. ಈಗ ಚರ್ಚಾಸ್ಪದವಾಗಿರುವ ವಿಚಾರಗಳ ಸಂಬಂಧದಲ್ಲಿ ನಡೆವ ವಿದ್ಯಮಾನಗಳನ್ನು ಆಗಾಗ್ಗೆ ಸರ್ಕಾರದ ಗಮನಕ್ಕೆ ತರಬೇಕಾದುದು ಅವಶ್ಯಕವಾದುದರಿಂದ ಆ ರೀತಿ ನಡೆಸಿರುತ್ತೇನೆ ಮತ್ತು ಬರುವ ಡಿಸೆಂಬರ್ ತಾ|| 8ರಲ್ಲಿ ಒಂದು ಹೆಚ್ಚು ಕಟ್ಟಲೆಯ ಸಭೆಯನ್ನು ಸೇರಿಸಿ ಚರ್ಚಾಸ್ಪದವಾದ ವಿಷಯಗಳಿಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ತಾವು ಪರ್ಯಾಲೋಚಿಸಿ ತೀರ್ಮಾನಿಸುವ ಬಗೆಗೆ ತಮ್ಮ ಮುಂದಿಡುತ್ತೇನೆಂದು ಭರವಸೆಯಿಂದ ಹೇಳುತ್ತೇನೆ" ಎಂದು ಪ್ರೆಸಿಡೆಂಟರು ತಿಳಿಸಿದರು. ತರುವಾಯ ಮೀಟಿಂಗನ್ನು ಆ ದಿವಸ ನಿಲ್ಲಿಸುವ ಬಗೆಗೆ ಕೌನ್ಸಿಲರುಗಳ ಓಟನ್ನು ತೆಗೆದುಕೊಳ್ಳುವಲ್ಲಿ ಅದಕ್ಕಾಗಿ ಹೆಚ್ಚು ಓಟು ಬಂದುದರ ಮೇಲೆ ಮುಂದಣ ತಾ|| 8 ರಲ್ಲಿ ಮೀಟಿಂಗು ನಡಿಯಬೇಕಾಗಿ ನಿರ್ಧರಿಸಲ್ಪಟ್ಟಿತು.

ವರ್ತಮಾನಸಂಗ್ರಹ.

ಕವೀಂದ್ರರಾದ ರವೀಂದ್ರರು ಸ್ಥಾಪಿಸಿರುವ ಭಾರತೀ ವಿಶ್ವವಿದ್ಯಾಲಯದ ಪುಸ್ತಕಭಂಡಾರ ನಿಧಿಗೆ ವಧ್ವಾಣ್ ಸಂಸ್ಥಾನದ ಠಾಕೂರ್‌ಸಾಹೇಬರು 15,000 ರೂ. ಗಳನ್ನು ಕೊಟ್ಟಿರುವರು.

ಜಪಾನು ರಾಜ್ಯದಲ್ಲಿ ಭೂ ಅಗ್ನಿಪ್ರಳಯದಿಂದ ನಾಶವಾಗಿರುವ ಪ್ರದೇಶಗಳನ್ನು ಪುನಃ ನಿರ್ಮಾಣಮಾಡಲು ಬೇಕಾದ ಸಾಮಗ್ರಿಗಳನ್ನೂ ಹಾಗೂ ಜನರ ಆಹಾರ್ಯಪದಾರ್ಥಗಳನ್ನೂ ಶೇಖರಿಸಲು ಜಪಾನ್ ರಾಜ್ಯದವರು ಆ ಪದಾರ್ಥಗಳ ಮೇಲಿನ ಸುಂಕವನ್ನು ತಪ್ಪಿಸಿಬಿಟ್ಟಿರುತ್ತಾರೆ.

ಮಲಬಾರು ಪ್ರಾಂತದಲ್ಲಿ ವೆಲನಾಡು ತಾಲ್ಲೂಕಿಗೆ ಸೇರಿದ ಆಷಂ ಎಂಬ ಹಳ್ಳಿಯಲ್ಲಿ ಒಬ್ಬ ಮಾಪಿಳ್ಳೆಯು ಅದೇ ಜಾತಿಯ ಓರ್ವ ಪರಸ್ತ್ರೀಯಲ್ಲಿ ಅನುರಕ್ತನಾಗಿ ಆಕೆಯು ಮಾನಕ್ಕೆಹೆದರಿ ವಶಳಾಗದಿರಲು ಆಕೆಯ ಶಿರಚ್ಛೇದನವನ್ನು ಮಾಡಿದೆನೆಂದು ಮ್ಯಾಜಿಸ್ಟ್ರೇಟರ ವಿಚಾರಣೆಯ ಕಾಲದಲ್ಲಿ ಹೇಳಿದನು.

ಭಾವಾನಗರದಲ್ಲಿ ಒಬ್ಬ ತೋಟಗಾರನು ಮೃತನಾಗಲು ಅವನ ಬಂಧುಗಳು ಶವವನ್ನು ಸ್ಮಶಾನಕ್ಕೆ ಸಾಗಿಸಿ ದಹನ ಮಾಡಿ ಬಂದಮೇಲೆ ಮೃತನ ಹೆಂಡತಿಯು ಪತಿವಿಯೋಗದುಃಖವನ್ನು ಸಹಿಸಲಾರದೆ ತಾನುಟ್ಟಿದ್ದ ಬಟ್ಟೆಗೆ ಸೀಮೆಯೆಣ್ಣೆಯನ್ನು ಸುರಿದು ಬೆಂಕಿಯಿಂದ ಹೊತ್ತಿಸಿ ಪತಿನಾಮಸ್ಮರಣೆಯಿಂದ ಸಹಗಮನಮಾಡಿದಳು.

ನಾನಾ ದೇಶದ ಸ್ಟಾಂಪುಗಳನ್ನು ಕೂಡುಹಾಕುವಲ್ಲಿ ವಿಶೇಷ ಆಸಕ್ತನಾದ ಫೆರಾರ್ ಎಂಬಾತನು ಶೇಖರಿಸಿದ್ದ ಸ್ಟಾಂಪುಗಳು ಹರಾಜುಮಾಡಲ್ಪಟ್ಟುದರಲ್ಲಿ ಬೇರ್ಡ ದೇಶದ ಅಪೂರ್ವವಾದ ಒಂದು ಸ್ಟಾಂಪನ್ನು 84,90,00,00,00,00,000 ಮಾರ್ಕುಗಳಿಗೆ ಅಂದರೆ 71250 ರೂಪಾಯಿಗಳಿಗೆ ಒಬ್ಬ ಜರ್ಮನಿಯವನು ಕೊಂಡುಕೊಂಡನು. ಇದರಿಂದ ಅಪೂರ್ವವಸ್ತುಗಳ ಮೇಲಿನವ್ಯಾಮೋಹವು ಪಾಶ್ಚಾತ್ಯರಿಗೆಷ್ಟರಮಟ್ಟಿಗಿದೆಯೆಂಬುದು ವ್ಯಕ್ತವಾಗುವುದು

ಉತ್ತರ ಆರ್ಕಾಟ್ ಡಿಸ್ಟ್ರಿಕ್ಟಿಗೆ ಸೇರಿದ ಅಂಬೂರಿನಲ್ಲಿ ಕಳೆದವಾರ ಒಬ್ಬ ಶ್ರೀಮಂತನ ಮನೆಗೆ ಸಾಯುಧರಾದ 20 ಜನ ಕಳ್ಳರು ನುಗ್ಗಿ ನಗನಾಣ್ಯ ಬಟ್ಟೆಬರೆಗಳನ್ನು ದೋಚಿಕೊಂಡು ಹೋಗುವಷ್ಟರಲ್ಲಿ ಗ್ರಾಮಸ್ಥರು ಮನೆಯವರ ಆರ್ತಧ್ವನಿಯನ್ನು ಕೇಳಿ ಬಂದು ಮನೆಯ ಸುತ್ತುವರಿದು ನಿಂತುಕೊಂಡು ಕಳ್ಳರು ಓಡಿಹೋಗದಂತೆ ಪ್ರತಿಭಟಿಸಲು ಕಳ್ಳರು ಗುಂಡನ್ನು ಹಾರಿಸಿ ಓಡಿಹೋದರು. ಇದರಿಂದ ಒಬ್ಬನು ಸತ್ತನು ಮತ್ತು 6 ಜನರು ಪೂರಾಪೆಟ್ಟನ್ನು ತಿಂದರು.

ಲಂಡನ್ ಮಹಾನಗರದಲ್ಲಿ ಬರುವ ವರ್ಷ ನಡಿಯುವ ಬ್ರಿಟಿಷ್ ಸಾಮ್ರಾಜ್ಯ ಮಹಾವಸ್ತು ಪ್ರದರ್ಶನಾವಲೋಕನಕ್ಕೆ ಪ್ರಪಂಚದ ಎಲ್ಲಾ ಭಾಗಗಳಿಂದಲೂ 3 ಕೋಟಿಗೆ ಮೇಲ್ಪಟ್ಟು ಜನರು ಬರುವುದಾಗಿಯೂ, ಪ್ರೇಕ್ಷಕರ ಪ್ರವೇಶಧನದಿಂದಲೇ ಈ ಪ್ರದರ್ಶನಕ್ಕೆ ತಗಲುವ ವಿಶಿಷ್ಟ ವೆಚ್ಚವೂ ಕಳೆಯುವುದಾಗಿಯೂ ನಿರೀಕ್ಷಿಸಲ್ಪಟ್ಟಿದೆ. ಈ ಪ್ರದರ್ಶನವು ವೆಂಬ್ಲೆ ಎಂಬಲ್ಲಿಯ ಅತ್ಯಂತ ವಿಶಾಲವಾದ ಪ್ರದೇಶದಲ್ಲಿ ನಡೆಸಲ್ಪಡುವುದಲ್ಲದೆ ಆವರಣದಲ್ಲೇರ್ಪಡಿಸುವ ಮಾರ್ಗಗಳು 15 ಮೈಲಿ ವಿಸ್ತೀರ್ಣ ಇರುವುದರಿಂದ ಜನರು ಪಾದಚಾರಿಗಳಾಗಿ ತಿರುಗಾಡಲು ಸಾಧ್ಯವಿಲ್ಲವಾದ ಪ್ರಯುಕ್ತ ಎಲೆಕ್ಟ್ರಿಕ್ ಟ್ರಾಂವೆಗಳೂ, ರೈಲ್ವೆ ಬಂಡಿಗಳೂ ಮೊದಲಾಗಿ ಪ್ರಯಾಣ ಸೌಕರ್ಯಗಳು ಕಲ್ಪಿಸಲ್ಪಡುವುವು.

ಬೊಂಬಾಯಿ ಪಟ್ಟಣದಲ್ಲಿ ಧೋಂಡು ಎಂಬುವವನು ತನ್ನ ಹೆಂಡತಿಯು ತನ್ನನ್ನೂ ತನ್ನ ಎರಡು ಮಕ್ಕಳನ್ನೂ ಬಿಟ್ಟು ಎಲ್ಲಿಯೋ ಹೊರಟುಹೋದುದರಿಂದ, ಆ ಮಕ್ಕಳನ್ನು ಕಟ್ಟಿಕೊಂಡು ಮನೆಮನೆಗೂ ಅಲೆದು ತಿರಿದುಂಡು ಜೀವಿಸಲಾರದೆ ತನ್ನ ಸ್ನೇಹಿತನಲ್ಲಿಗೆ ಹೋಗಿ ತನ್ನ ದುಃಖವನ್ನು ಹೇಳಿಕೊಳ್ಳಲಾಗಿ ನಿನ್ನ ಹೆಂಡತಿಯು ಬೇರೊಬ್ಬನನ್ನು ಕಟ್ಟಿಕೊಂಡು ಹೋದಳು, ಅವಳಿಗಾಗಿ ನೀನೇಕೆ ವ್ಯಸನಪಡುತ್ತೀಯೆಂದು ಕೇಳಿದನು. ಆಗ ಧೋಂಡನು ಕೋಪಾವಿಷ್ಟನಾಗಿ ಅಯ್ಯೋ! ಈ ಹಾಳುಮಕ್ಕಳು ನನಗೆ ಹುಟ್ಟಿದವಾಗಿಲ್ಲದಿದ್ದರೂ ಅವನ್ನು ಕೊಂದುಬಿಡುತ್ತಿದ್ದೆನೆಂದು ಹೇಳಲು, ಎಲ್ಲಿ ನೋಡುವ ಕೊಂದುಬಿಡು ಎಂದು ಒಂದು ಚಾಕುವನ್ನು ತಂದುಕೊಟ್ಟನು. ಉನ್ಮಾದನಾಗಿದ್ದ ಆ ಧೋಂಡನು ನಿಜವಾಗಿಯೂ ಚಾಕುವಿನಿಂದ ತನ್ನೆರಡು ಮಕ್ಕಳನ್ನೂ ತಿವಿದು ಕೊಂದುಬಿಟ್ಟು ಪೊಲೀಸಿನವರಿಗೆ ನಡೆದ ಸಂಗತಿಯನ್ನು ಮರೆಮಾಚದೆ ಹೇಳಿಬಿಟ್ಟನು.

ಕೊಯಮತ್ತೂರಿಗೆ ಸೇರಿದ ವಿಲಂ ಹಳ್ಳಿಯ ಶಾನುಭೋಗನಾದ ಚೆಟ್ಟಿ ಎಂಬಾತನು ತನ್ನ ಅಳಿಯನ ಊರಾದ ತಿರಚಂಗೋಡಿಗೆ ಹೋಗಿ ಮಗಳ ನಿಷೇಕಪ್ರಸ್ತವನ್ನು ಮಾಡಲು ನಿಶ್ಚಯಿಸಿದ್ದೇನಾದುದರಿಂದ ನಿಮ್ಮ ಸಮ್ಮತಿಯನ್ನು ಪಡೆದುಕೊಂಡು ಹೋಗಲು ಬಂದಿದ್ದೇನೆಂದು ಹೇಳಲು, ನಿನ್ನ ಮಗಳು ದುರ್ನೀತಳಾದುದರಿಂದ ಪ್ರಸ್ತಮಾಡಿಕೊಳ್ಳುವುದಿಲ್ಲವೆಂದು ಅಳಿಯನು ಹೇಳಿದನು. ಮಾವನಾದ ಶಾನುಭೋಗನು ಈ ಮಾತನ್ನು ಕೇಳಿ ಅಪಮಾನಿತನಾಗಿ ತನ್ನ ಗ್ರಾಮಕ್ಕೆ ಹಿಂದಿರುಗಿಬಂದು ತನ್ನ ಮಗಳ ನಿಜಸ್ಥಿತಿಯನ್ನು ತಿಳಿದು ಅವಳ ಉಪಪತಿಯೆಂದೆನಿಸಿಕೊಂಡಿದ್ದ ಮನುಷ್ಯನನ್ನು ಕತ್ತರಿಸಿಕೊಂದು ತನ್ನ ಮನೆಗೆಬಂದು ತನ್ನ ಮಗಳನ್ನೂ ಹೆಂಡತಿಯನ್ನೂ ಅವನ ಒಂದು ಸಣ್ಣ ಮಗುವನ್ನೂ ಆಯುಧದಿಂದ ತಿವಿದು ಪ್ರಾಣಾಪಾಯವನ್ನುಂಟುಮಾಡಿ ಕಡೆಯಲ್ಲಿ ಆತ್ಮಹತ್ಯೆಯನ್ನು ಮಾಡಿಕೊಂಡನು. ಗಾಯವಡೆದಿದ್ದ ಸ್ವೈರಿಣಿಯಾದ ಮಗಳು ಮೃತಳಾದಳು; ತಾಯಿ ಮತ್ತು ಮಗುವು ಮಾತ್ರ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದಾರೆ.

ಪ್ರಕಟನ ಪತ್ರಿಕೆ.

ಮದರಾಸಿನಲ್ಲಿ ನೂತನವಾಗಿ ಸ್ಥಾಪಿತವಾಗಿರುವ ವೀರಶೈವಾಶ್ರಮ.

ಸಮಸ್ತ ವೀರಶೈವ ಮಹಾಜನಗಳಿಗೂ ಮುಖ್ಯವಾಗಿ ವೀರಶೈವ ವಿದ್ಯಾರ್ಥಿಗಳಿಗೂ ಈಮೂಲಕ ವಿಜ್ಞಾಪಿಸಿಕೊಳ್ಳುವುದೇನೆಂದರೆ:—

ಇದುವರೆಗೂ ಮದರಾಸು ಪ್ರಾಂತ್ಯಕ್ಕೆ ಬಿ. ಎ. ಮತ್ತು ಬಿ. ಎಲ್. ಮುಂತಾದ ಪ್ರೌಢವಿದ್ಯಾಭ್ಯಾಸವನ್ನು ಮಾಡಲು ದೂರದೇಶಗಳಿಂದ ಬರತಕ್ಕ ವಿದ್ಯಾರ್ಥಿಗಳ ಅಶನವಸನಗಳಿಗೆ ತಕ್ಕ ಅನುಕೂಲ್ಯವಿಲ್ಲದೆ ಬಹಳವಾಗಿ ಶ್ರಮಪಡುತ್ತಿರುವುದನ್ನು ನೋಡಿ ಮದರಾಸಿನಲ್ಲಿಯೇ ವಾಸಿಸುವ ವೀರಶೈವ ಮತಾಭಿಮಾನಿಗಳಾದ ಕೆಲವರು ಇಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳ ವಾಸಕ್ಕೂ ಭೋಜನಕ್ಕೂ ಸಕಲ ವಿಷಯಗಳಲ್ಲಿಯೂ ಅನುಕೂಲವಾಗಿರುವಂತೆ ವೆಂಕಟಾಚಲಮೊದಲಿ ಬೀದಿಯಲ್ಲಿರುವ, ನಂ. 39ನೇ ಕಟ್ಟಡದಲ್ಲಿ "ವೀರಶೈವಾಶ್ರಮ" ಒಂದನ್ನು ಕಳೆದ ಅಶ್ವಯುಜ ಶುದ್ಧ 10 ಲಾಗಾಯಿತು ಸ್ಥಾಪಿಸಿರುತ್ತಾರೆ. ಬಿ. ಎಲ್. ಮುಂತಾದ ಪರೀಕ್ಷೆಗಳಿಗೆ ಅಭ್ಯಾಸಮಾಡುವ ಮೂರು ನಾಲ್ಕು ಜನ ವಿದ್ಯಾರ್ಥಿಗಳೂ ಸಹ ಆಗಲೇ ಈ ಆಶ್ರಮದಲ್ಲಿ ಬಂದು ವಾಸಿಸುತ್ತಿದ್ದಾರೆ.

ಈ ಆಶ್ರಮಕ್ಕೆ ಸೇರಲು ಅಪೇಕ್ಷಿಸುವ ವಿದ್ಯಾರ್ಥಿಗಳು ಮ್ಯಾನೇಜರ್ರವರಿಗೆ ಈ ಕೆಳಗಣ ಅಡ್ರೆಸ್ಸಿಗೆ ಅಪ್ಲಿಕೇಷನ್ ಬರೆದುಕೊಳ್ಳಬಹುದಲ್ಲದೆ ಪ್ರವೇಶ ವಿಷಯವಾಗಿ ವಿಶೇಷಾಂಶಗಳನ್ನು ಅವರಿಂದ ತಿಳಿದುಕೊಳ್ಳಬಹುದು.

ಅಲ್ಲದೆ, ಹೊರಗಡೆಯಿಂದ ವ್ಯಾಪಾರ ವ್ಯವಹಾರೋದ್ದೇಶಪೂರ್ವಕವಾಗಿ ಮದರಾಸಿಗೆ ಬರುವ ವರ್ತಕಮಂಡಲಿ ಮುಂತಾದ ವೀರಶೈವ ಮಹಾಜನಗಳಿಗೂ ಸಹ ಭೋಜನಾದಿಗಳಿಗೆ ಅನುಕೂಲವಾಗುವಂತೆ ಇಲ್ಲಿ ಏರ್ಪಡಿಸಿರುತ್ತದೆ.

ಮ್ಯಾನೇಜರ್,
ನಂ. 39, ವೆಂಕಟಾಚಲಮೊದಲಿ ಸ್ಟ್ರೀಟ್,
ಪಿ. ಟಿ. ಮದರಾಸ್.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಪ. ಪ್ರ.

ಮೈಸೂರು ಮಹಾಲಕ್ಷ್ಮೀ ಸಂಗೀತ ನಾಟಕ ಮಂಡಲಿ.

ಈ ಮಂಡಲಿಯು ಸ್ಥಾಪಿಸಲ್ಪಟ್ಟು ಕೆಲವು ದಿವಸಗಳಾಗಿ ಕೇವಲ ಬಾಲ್ಯಾವಸ್ಥೆಯಲ್ಲಿದ್ದು ಈಗ ಅಭಿವೃದ್ಧಿಗೆ ಬರುತ್ತಾ ಇದೆ. ಇವರು ಅಭಿನಯಿಸುವ ಕೃಷ್ಣಲೀಲೆಯು ಶ್ಲಾಘ್ಯಾರ್ಹವಾಗಿದೆ. ಕೇವಲ ಬಾಲಕರಾದ ಇವರಿಗೆ ಸರಿಯಾದ ಸಹಾಯವು ದೊರಕಿದವಾಗೆಲ್ಲಾ ಮುಂದಕ್ಕೆ ಬರಲು ಅವಕಾಶವಿರುತ್ತೆ. ಕಳೆದ 25ನೇ ತಾ|| ನಲ್ಲಿ ಲಕ್ಷ್ಮೀ ಥಿಯೇಟರಿನಲ್ಲಿ ಅಭಿನಯಿಸಿದ ಇವರ ಆಟಕ್ಕೆ ಮ|| ರಾ|| [illegible] ದಯಮಾಡಿಸಿ ಸಂತೋಷಪಟ್ಟು ಕೃಷ್ಣಪಾತ್ರವಹಿಸಿದ್ದ ಬಾಲಕನಿಗೆ ಪ್ರಸೆಂಟ್‌ಮಾಡಿದ್ದು ತುಂಬಾ ಸ್ತೋತ್ರಾರ್ಹವಾಗಿದೆ. ದೇವರು ಈ ಸಂಘವನ್ನು ಅಭಿವೃದ್ಧಿಗೆ ತರಲೆಂದು ಕೋರುವ,

ಪ್ರೇಕ್ಷಕ.

ಪ್ರಹಂಡರಾಜನಿಷ್ಠ ಸಭಾ ಹಮ್ಮಿಗಿ.

ಈ ಗ್ರಾಮದಲ್ಲಿ ತಾ|| 22-11-1923ನೇ ಇಸವಿ ದಿವಸ ಮೆ|| ಎಚ್. ವ್ಹಿ. ನಾಯಿಕ ಡಿ. ಡಿ. ಕಲೆಕ್ಟರ ಸಾಹೇಬ ಬಹಾದ್ದೂರ ಡಿ. ಧಾರವಾಡ ಇವರ ಅಧ್ಯಕ್ಷತೆಯ ಕೆಳಗೆ ರಾಜನಿಷ್ಠ ಸಭೆಯು ಕೂಡಿತು. ಸಭೆಗೆ ಮೆ|| ಮುಂಡರಗಿ ಪೇಟಾಮಹಾಲಕರಿಸಾಹೇಬರವರು ಆಗಮಿಸಿದ್ದಲ್ಲದೆ ಹಮ್ಮಿಗಿ ಗುಮಗೋಳ, ಶಿಂಗ್ಟಾಲೂರ ವಗೈರೆ ಗ್ರಾಮಗಳ ಪಾಟೀಲ ಕುಲಕರ್ಣಿಯವರು ಹಾಗೂ ಯಾವತ್ತು ಪ್ರಮುಖ ರೈತ ಜನರು ಕೂಡಿದ್ದರು. ಸಭೆಯಲ್ಲಿ ಮಿ|| ಶಾಂತಪ್ಪಾ ವೀರಭದ್ರಪ್ಪಾ ಕುಬಸದ (ಗುರುಭಕ್ತಕೇಸರಿ) ಇವರು ರಾಜನಿಷ್ಠೆ ಅಂದರೇನು ಹಾಗೂ ರಾಜಪ್ರಜರಲ್ಲಿರತಕ್ಕ ಪರಸ್ಪರ ಸಂಬಂಧ ಈ ವಿಷಯದಲ್ಲಿ ಪ್ರತಿಯೊಬ್ಬರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಬೋಧಿಸಿದ್ದಲ್ಲದೆ ಹಳ್ಳಿಗಳ ಮೇಲೆ ದೊಡ್ಡದೊಡ್ಡ ಶಾಮದಾರ ಜನರ ಪ್ರೀತಿಯು ಏನುಕಾರಣ ಅಗತಕ್ಕದ್ದು ಎಂಬ ಅಂಶವನ್ನು ಕುರಿತು ಸರಸವಾದ ಭಾಷಣವನ್ನು ಮಾಡಿದರು. ನಂತರ ಮಿ|| ವಿರೂಪಾಕ್ಷಗೌಡ ಪಾಟೀಲ (ವ್ಹಿಲೇಜ ಮಾಜಿಸ್ಟ್ರೇಟ) ಇವರು ಅಸಹಕಾರದಿಂದುಂಟಾಗುವ ದುಷ್ಪರಿಣಾಮವನ್ನು ಕುರಿತು ಉತ್ತಮ ಭಾಷಣಮಾಡಿದರು. ತರುವಾಯ ಮೇ|| ಅಧ್ಯಕ್ಷ ಸಾಹೇಬ ಬಹಾದ್ದೂರವರು, ಮೇಲಿನ ಎರಡೂ ವಿಷಯಗಳನ್ನು ವಿವೇಚನಮಾಡಿ ತಿಳಿಸಿದ್ದಲ್ಲದೆ ಮುಸಲ್ಮಾನ, ಮರಾಠ ಪೇಶ್ವೆಯವರ ಕಾಲದ ರಾಜ್ಯದಾಡಳಿತೆಗೂ ಈಗಿನ ರಾಜ್ಯದಾಡಳಿತೆಗೂ ತುಲನಾಮಾಡಿ ಅತ್ಯುತ್ತಮ ರೀತಿಯಿಂದ ಬೋಧಿಸಿದರು. ಅಧ್ಯಕ್ಷ ಮಹಾಶಯರಲ್ಲಿ ಹಿಂದುಳಿದ ಜನಾಂಗದವರ ದೆಶೆಯಿಂದ ಇರತಕ್ಕ ಕಳಕಳಿಯನ್ನೂ ರೈತ ಜನರಲ್ಲಿ ಇರತಕ್ಕ ಪ್ರೇಮಬಂಧನವನ್ನೂ ಕಂಡು ಸಭಿಕರೆಲ್ಲರೂ ಕೊಂಡಾಡಿದರು. ಇಷ್ಟಾದ ಬಳಿಕ ಅಧ್ಯಕ್ಷ ಸಾಹೇಬರವರಿಗೆ ಹಾರ ತುರಾಯಿಗಳನ್ನೂ ಸಭಿಕರಿಗೆ ಗಂಧ ತಾಂಬೂಲಗಳನ್ನೂ ಅರ್ಪಿಸಿ ಶ್ರೀಮನ್ ಪಂಚಮ ಜಾರ್ಜಸಾರ್ವಭೌಮರ ಜಯಘೋಷದೊಡನೆ ಸಭೆಯು ವಿಸರ್ಜನವಾಯಿತು.

ಎಫ್. ಕೆ. ಜವಳಿ,
ರಾಜನಿಷ್ಠಾ ಸಂಘ, ವ್ಹಾಯಿಸಪ್ರೆಸಿಡೆಂಟ, ಹಮ್ಮಿಗಿ.

ಹೊಸ ಸ್ಕೂಲು ಪ್ರವೇಶೋತ್ಸವ.

ಹೊಳಲ್‌ಕೆರೆ ತಾಲ್ಲೂಕು ದುಮ್ಮಿಗ್ರಾಮವು ಸುಮಾರು 300 ಮನೆಗಳಿರತಕ್ಕದ್ದಾಗಿಯೂ 1000 ಪ್ರಜಾಸಂಖ್ಯೆಯುಳ್ಳದ್ದಾಗಿಯೂ 2000 ರೂಪಾಯಿಗಳು ಕಂದಾಯವನ್ನು ಸರ್ಕಾರಕ್ಕೆ ಕೊಡತಕ್ಕದ್ದಾಗಿಯೂ ಇದ್ದು ಹೊಳಲ್‌ಕೆರೆ ತಾಲ್ಲೂಕು ಪೈಕಿ ದೊಡ್ಡ ಗ್ರಾಮವಾಗಿರುತ್ತದೆ. ಇಂಥಾ ಗ್ರಾಮಕ್ಕೆ ಈ ಮೊದಲಿ ಗ್ರಾಂಟ್ ಸ್ಕೂಲ್ ಇತ್ತು. ಈಚೆಗೆ ನಮ್ಮ ಘನಸರ್ಕಾರದವರು ತಾ|| 1-3-23 ರಿಂದ ನಮ್ಮ ಸ್ಕೂಲನ್ನು ಗೌವರ್ನ್‌ಮೆಂಟ್ ಸ್ಕೂಲನ್ನಾಗಿ ಮಾಡಿ ಎರಡು ಜನ ಮಾಸ್ಟರನ್ನು ಕೊಟ್ಟಿರುತ್ತಾರೆ. ಹಾಲಿ ಸ್ಕೂಲಿಗೆ 70-80 ಬಾಲಕರು ಬರುತ್ತಾಇದ್ದಾರಲ್ಲದೆ ಸಂಖ್ಯೆಯು ಹೆಚ್ಚುವದರಲ್ಲಿದೆ. ಸ್ಕೂಲ್ ಸ್ಥಳಸಂಕೋಚದಿಂದ ಇನ್ನೊಂದು ಹೊಸಸ್ಕೂಲನ್ನು ಸುಮಾರು 700 ರೂ. ಖರ್ಚಿನಿಂದ ಛವುಟಿಮೆಂಬರುಗಳಾದ ಮ|| ರಾ|| ನಾಡಿಗತಿಮ್ಮಪ್ಪನವರು, ಅಣಬೇರುವೀರಪ್ಪನವರು, ಕಾಯಕದಬಸಪ್ಪನವರು, ಆರ್ಕಾಚಾರಿ ಉಜ್ಜನಪ್ಪನವರು, ಪಟೇಲ್ ಶಂಕರಪ್ಪನವರು ಮೊದಲಾದ ಗ್ರಾಮ ಮುಖಂಡರು ಗ್ರಾಮದಲ್ಲಿ ಚಂದಾವಸೂಲಿನಿಂದ ಕಟ್ಟಿಸಿ ತಾ|| 19-10-23ನೇ ಶುಕ್ರವಾರ ಶ್ರೀ ವೀರಭದ್ರದೇವರು ಶ್ರೀ ಆಂಜನೇಯದೇವರುಗಳ ಸಮೇತ ಸಮಸ್ತ ಜನಗಳೂ ಹೊಸ ಸ್ಕೂಲಿಗೆ ಜಯಘೋಷದೊಡನೆ ಬಿಜಯಂಗೈದರು. ಸದರಿ ಸ್ಕೂಲಿನಲ್ಲಿ ಅತಿ ಭಕ್ತಿಯಿಂದ ಭಜನೆ ದೇವತಾಪೂಜೆಗಳು ನಡೆಸಲ್ಪಟ್ಟವು. ತಾ|| 20ನೇ ಶನಿವಾರ ಪ್ರಾತಃಕಾಲ ಗ್ರಾಮದ ಪ್ರಜೆಗಳೆಲ್ಲರೂ ಮ|| ನಾಡಿಗರತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ಮ|| ಎಂ. ಪಿ. ವೀರಯ್ಯನವರಿಂದ "ವಿದ್ಯಾಭ್ಯಾಸದ" ವಿಚಾರದಲ್ಲಿ ಮ|| ಕೆ. ಕಾಳಪ್ಪನವರಿಂದ "ಸತ್ಸಹವಾಸ" ಎಂಬುದರ ವಿಚಾರದಲ್ಲಿ ಉಪನ್ಯಾಸಗಳು ಮಾಡಲ್ಪಟ್ಟವು. ದೇವತಾಸ್ತೋತ್ರ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ಬಾಲಕರಿಂದ ಮಾಡಲ್ಪಟ್ಟ ಮೇಲೆ ಸಮಸ್ತರಿಗೂ ಯಥೇಚ್ಛವಾಗಿ ಫಲ ಪುಷ್ಪ ತಾಂಬೂಲ ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು.

ಪ್ರತ್ಯಕ್ಷದರ್ಶೀ.

ಶಿವಕೀರ್ತನೆ.

ಸೀಮೆಗೆ ದಯಮಾಡಿಸಿದ್ದ ಬರೋಡಾ ಸಂಸ್ಥಾನಾಧೀಶ್ವರರಾದ ಗಾಯಕವಾಡ ಮಹಾರಾಜರವರು ಪಾಶ್ಚಾತ್ಯ ದೇಶ ಪರ್ಯಟನವನ್ನು ಪೂರೈಸಿಕೊಂಡು ಬೊಂಬಾಯಿಗೆ ದಯಮಾಡಿಸಿದಾಗ್ಗೆ ಬೊಂಬಾಯಿ ರಾಜಧಾನಿಯ ಹಿಂದೂ ಮಹಾಸಭೆಯವರು ಮಹಾರಾಜರವರನ್ನು ಕಳೆದ ನವಂಬರ್ ತಾ|| 23ರಲ್ಲಿ ಜಯಮಹಲ್ಲಿಗೆ ಬರಮಾಡಿಕೊಂಡು ಅವರ ಸ್ವಾಗತವನ್ನು ಬಯಸಿ ಒಂದು ವಿಜ್ಞಾಪನ ಪತ್ರಿಕೆಯನ್ನೊಪ್ಪಿಸಿದರು. ಆ ಸಭೆಗೆ ಪಂಡಿತ ರಾಧಾಕಾಂತಮಾಳವ್ಯ, ಆನರಬಲ್ ಲಲ್ಲುಭಾಯಿ ಶಾಮಲದಾಸ್, ಜಮುನಾದಾಸ್ ದ್ವಾರಕಾದಾಸ್, ನಾರಾಯಣಲಾಲ್, ರಾಜಾಬಹದ್ದೂರ್ ಶಿವಲಾಲ್, ಮೋತಿಲಾಲ್, ಲಕ್ಷ್ಮಣದಾಸ್, ಶಕಕನ್ವಾರ್, ಚಂದ್‌ಕರಣ್ ಶರ್ದಾ, ಡಾಕ್ಟರ್ ಕಲ್ಯಾಣದಾಸ್, ದೇಶಾಯಿ ಮಾವುಜೀ ಗೋವಿಂದಜೀ ಮೊದಲಾದ ಪ್ರಮುಖ ದೊಡ್ಡಮನುಷ್ಯರು ದಯಮಾಡಿಸಿದ್ದರು. ಪಂಡಿತ ಮಾಳವ್ಯರವರು ಹಿಂದೀಭಾಷೆಯಲ್ಲಿ ಬರೆದಿದ್ದ ಸನ್ಮಾನ ಪತ್ರವನ್ನೋದಿ ಒಪ್ಪಿಸಿದರು. ಅದರಲ್ಲಿ ಗಾಯಕವಾಡ ಮಹಾರಾಜ ದಂಪತಿಗಳು ಮಾತೃಭೂಮಿಗೆ ಕ್ಷೇಮದಿಂದ ಚಿತ್ತೈಸಿದುದಕ್ಕಾಗಿ ಈ ದೇಶಿಯರಿಗುಂಟಾದ ಸಂತೋಷವೂ, ಅವರ ಕುಮಾರರಾದ ಯುವರಾಜ ಜಯಸಿಂಗ್‌ರಾವ್‌ರವರ ಅಕಾಲಮರಣಕ್ಕಾಗಿ ಮಹಾದುಃಖವೂ ಸಾನುಭೂತಿಯೂ ಪ್ರದರ್ಶಿಸಲ್ಪಟ್ಟಿದ್ದುವು. ಅಲ್ಲದೆ ಶ್ರೀಮನ್ ಮಹಾರಾಜರವರು ತಮ್ಮ ಪ್ರಜೆಗಳಲ್ಲಿ ದೊಡ್ಡವರು ಚಿಕ್ಕವರು ಎಂಬ ತಾರತಮ್ಯವಿಡದೆ ಸಮಸ್ತರ ಕಲ್ಯಾಣಕ್ಕಾಗಿ ಎಲ್ಲ ವಿಷಯದಲ್ಲೂ ಮಾಡುತ್ತಿರುವ ಸದುಪಾಯವೂ; ಸಿಕ್ಕರು, ಬೌದ್ಧರು, ಸನಾತರು, ಜೈನರು, ಆರ್ಯರು, ಭೌಮರು ಇವರುಗಳೆಲ್ಲರೂ ಏಕೀಭವಿಸಿ ಕೆಲಸಮಾಡುವಂತೆ ಕಾಶೀ ಹಿಂದೂಮಹಾಸಭೆಯವರು ಕೈಕೊಂಡಿರುವ ಪ್ರಯತ್ನ ವಿಶೇಷವೂ, ನಿಮ್ನ ಜಾತಿಯವರ ಉದ್ಧರಣದಲ್ಲೂ, ರಾಷ್ಟ್ರಭಾಷೆಯೂ ಹಿಂದೂ ವಿದ್ಯೆಯೂ ಕಲಿಸಲ್ಪಡುವ ವಿಚಾರದಲ್ಲೂ, ವಿತಂತುಗಳೂ ಅನಾಥರೂ ಸಂರಕ್ಷಿಸಲ್ಪಡುವುದರಲ್ಲೂ ಮಹಾರಾಜರವರಿಗಿರತಕ್ಕ ಉತ್ಸಾಹ ವಿಶೇಷವೂ ಆ ಸನ್ಮಾನಪತ್ರದಲ್ಲಿ ಪ್ರಶಂಸಿಸಲ್ಪಟ್ಟಿದ್ದುವು. ಪ್ರಾಚೀನ ಆರ್ಯ ವಿಜ್ಞಾನವೂ ಶಾರೀರಕ ವಿಜ್ಞಾನವೂ ನುತಿಸಲ್ಪಟ್ಟಿದ್ದುವಲ್ಲದೆ, ಆರ್ಯಧರ್ಮ ಸ್ಥಾಪನೆಗಾಗಿ ಈಗ ನಡಿಸಲ್ಪಡುತ್ತಿರುವ ಸತ್ಪ್ರಯತ್ನಗಳು ಅಂದರೆ (1) ಬರೋಡಾ ದೇಶದ ನಿಮ್ನಜಾತಿಯ ಜನರು ದೇವಾಲಯಗಳಿಗೆ ಪ್ರವೇಶಿಸಲೂ, ಬಾವಿಗಳಲ್ಲಿ ನೀರನ್ನು ಪಯೋಗಿಸಲೂ, ಕೋರ್ಟು ಕಚೇರಿ ಸ್ಕೂಲು ಮೊದಲಾಗಿ ಪ್ರಜೋಪಯುಕ್ತ ಸಂಸ್ಥೆಗಳಿಗೆ ಇತರರಂತೆ ಹೋಗಿಬರಲೂ ಅವಕಾಶಕಲ್ಪಿಸಲ್ಪಡಬೇಕು (2) ಬಾಲ್ಯವಿವಾಹ ನಿರೋಧಕವಿಧಿಯು ಬಾಲ್ಯವಿವಾಹ ಪದ್ಧತಿಯು ನಿರ್ನಾಮವಾಗುವವರೆಗೂ ಬಹಳ ಕಠಿಣವಾಗಿ ಮಾಡಲ್ಪಡಬೇಕು (3) ಗರುಡಿಯಮನೆಗಳೂ ಬ್ರಹ್ಮಚರ್ಯಾಶ್ರಮಗಳೂ ಸರ್ವತ್ರ ಸ್ಥಾಪಿಸಲ್ಪಡಬೇಕು (4) ವಿದ್ಯಾಧಿಕರು ಪುರೋಣಕ್ತಗಳಾದ ಕಥೆಗಳನ್ನು ಬೋಧಿಸುವುದರ ಮೂಲಕ ಹಿಂದೂಧರ್ಮವನ್ನು ಬೋಧಿಸುತ್ತಿರಬೇಕು (5) ರಾಷ್ಟ್ರೀಯ ಪಾಠಶಾಲೆಗಳಲ್ಲಿ ಮತಸಂಬಂಧವಾದ ಪಾಠಗಳನ್ನು ವಿದ್ಯಾರ್ಥಿಗಳು ತಪ್ಪದೆ ಅಭ್ಯಾಸಮಾಡುವಂತಾಗಬೇಕು (6) ಬರೋಡಾದಲ್ಲಿ ನಿಮ್ನಜಾತಿಯವರನ್ನು ಅಂತ್ಯಜರೆಂದು ಕರೆಯುವುದನ್ನು ತಪ್ಪಿಸಿ ವಾಸಕರ್-ಶ್ರಮಜೀವಿಗಳೆಂದು ಕರೆಯುವಂತಾಗಬೇಕು. (7) ಹಿಂದೂದೇಶಗಳಿಗೆಲ್ಲಾ ಬರೋಡಾ ಸಂಸ್ಥಾನವು ಆದರ್ಶವಾಗಿರುವಂತೆ ಬರೋಡಾ ಪ್ರಜೆಗಳಿಗೆ ಅತಿಶಯಗಳಾದ ಸಂಸ್ಕರಣಗಳನ್ನು ದಯಪಾಲಿಸುತ ಮಹಾರಾಜರವರು ಮಾತೃಭೂಮಿಯಲ್ಲಿ ಹೆಚ್ಚುಕಾಲ ನಿಲ್ಲಬೇಕು. ಎಂದು ಸವಿನಯದಿಂದ ಕೋರಲ್ಪಟ್ಟಿದ್ದಿತಲ್ಲದೆ ಮಹಾರಾಜ ದಂಪತಿಗಳಿಗೆ ದೀರ್ಘಾಯುರಾರೋಗ್ಯವನ್ನು ಭಗವಂತನು ದಯಪಾಲಿಸಬೇಕಾಗಿ ಪ್ರಾರ್ಥಿಸಲ್ಪಟ್ಟಿದ್ದಿತು. ಹಿಂದೂ ಮಹಾಸಭೆಯವರು ಮನಃಪೂರ್ವಕವಾಗಿ ಮಾಡಿದ ಸತ್ಕಾರಕ್ಕಾಗಿ ಮಹಾರಾಜರವರು ಅವರುಗಳನ್ನು ವಂದಿಸಿ ವಿಜ್ಞಾಪನಪತ್ರಿಕೆಯಲ್ಲಿ ಕಂಡ ಅವರ ಆಕಾಂಕ್ಷೆ ಮತ್ತು ಅಭಿಪ್ರಾಯಗಳಿಗನುಸಾರವಾಗಿ ನಡೆದುಕೊಳ್ಳಲು ಪ್ರಯತ್ನಿಸುತ್ತೇನೆಂದು ದೃಢವಾಗಿ ಹೇಳಿದರು.

ಗುಬ್ಬಿ ನಾಟಕಕಂಪನಿಯವರಿಗಾದ ರಾಜಸನ್ಮಾನ.

ರಾಜಧಾನಿಗೆ ಬಂದು 2-3 ತಿಂಗಳುಗಳಿಂದಲೂ ಲೋಕಪ್ರಿಯವಾದ ಕಬೀರದಾಸ್ ಮೊದಲಾದ ನಾಟಕಗಳನ್ನು ಅಭಿನಯಿಸಿ ಪ್ರೇಕ್ಷಕಜನರ ಮೆಚ್ಚುಗೆಗೆ ಪಾತ್ರರಾಗಿರುವ ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಸಭೆಯವರಿಂದ ಸವಾರಮೆ ಕಬೀರದಾಸ್ ಮೊದಲಾಗಿ 4 ನಾಟಕಗಳನ್ನು ಜಗನ್ಮೋಹನಪ್ರಾಸಾದದ ನಾಟಕಶಾಲೆಯಲ್ಲಿ ಶ್ರೀಮನ್ಮಹಾರಾಜರವರು ಆಡಿಸಿ ಸಂತೋಷಪಟ್ಟು 2400 ರೂಪಾಯಿಗಳನ್ನೂ ಬಹುಬೆಲೆ ಬಾಳುವ ಶಾಲುಜೋಡಿ, ಸೀರೆ ಪೇಟ ಮೊದಲಾದ ವಸ್ತ್ರಗಳನ್ನೂ ದಯಪಾಲಿಸಿದುದಲ್ಲದೆ ಕಂಪನಿಯ ಪ್ರೊಪ್ರೈಟರಾದ ಮ|| ವೀರಣ್ಣನವರಿಗೆ "Presented by His Highness the Maharaja of Mysore to G. H. Veeranna Proprietor and Versatile Comedian of G. C. B. K. N. Coy. of Gubbi, 17-11-23 ಎಂದು ಬರೆಯಲ್ಪಟ್ಟಿರುವ ಸುಮಾರು 2 ತೊಲಾ ತೂಕವಿರುವ ಭಂಗಾರದ ಪದಕವನ್ನೂ, ಕಬೀರದಾಸನ ಪಾತ್ರವನ್ನು ವಹಿಸುವ ಮ|| ಮಲ್ಲಪ್ಪನವರಿಗೆ Presented by..................to C. B. Mallappa for his fine acting as a Hero in Kabirdas ಎಂದು ಕೆತ್ತಲ್ಪಟ್ಟಿರುವ ಮತ್ತೊಂದು ಭಂಗಾರದ ಪದಕವನ್ನೂ ದಯಪಾಲಿಸಿರುವರೆಂದು ತಿಳಿಯಲು ಸಂತೋಷವಾಗುತ್ತದೆ. ಈ ನಾಟಕಸಂಘದವರು ತಮ್ಮ ಶ್ಲಾಘ್ಯವಾದ ನಾಟಕಾಭಿನಯದಿಂದ ಜನರ ಮೆಚ್ಚುಗೆಗೆ ಪಾತ್ರರಾಗಿರುವುದಲ್ಲದೆ ಕೆಲನಾಟಕಗಳನ್ನು ಅಭಿನಯಿಸಿ ಅವುಗಳಿಂದ ಬಂದುತ್ಪನ್ನದಲ್ಲಿ ರಾಜಧಾನಿಯ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ 250 ರೂ., ಸಂಗೀತ ವಿದ್ವಾನ್ ಗಾನವಿಶಾರದ ಬಿ. ಕೃಷ್ಣಪ್ಪನವರು ಕಟ್ಟುತ್ತಿರುವ ಶ್ರೀರಾಮ ಮಂದಿರಕ್ಕೆ 375 ರೂ., ನಂಜನಗೂಡಿನಲ್ಲಿ ಕಟ್ಟಲ್ಪಡುತ್ತಿರುವ ಸತ್ಯನಾರಾಯಣ ದೇವಸ್ಥಾನಕ್ಕೆ 150 ರೂ., ರಾಜಧಾನಿಯಲ್ಲಿ ಪಿಂಜ್ರಾಪೋಲ್ ಎಂಬ ಹೆಸರಿನಿಂದ ಸ್ಥಾಪಿತವಾಗಿರುವ ಪಶುಪೋಷಣಾಲಯಕ್ಕೆ 280 ರೂ. ಮೈಸೂರು ವೀರಶೈವಾಶ್ರಮದ ಬಡವಿದ್ಯಾರ್ಥಿಗಳ ಸಹಾಯಕ್ಕಾಗಿ 150 ರೂ. ಈ ಪ್ರಕಾರವಾಗಿ ದ್ರವ್ಯಸಹಾಯಮಾಡಿ ತಮ್ಮ ನಿಸರ್ಗವಾದ ಧರ್ಮಬುದ್ಧಿಯನ್ನು ವ್ಯಕ್ತಪಡಿಸಿರುವುದರಿಂದ ಇಲ್ಲಿಯ ಪುರನಿವಾಸಿಗಳು ಈ ದಿವಸ ಸಾಯಂಕಾಲ ಈ ಕಂಪನಿಯ ಪ್ರೊಪ್ರೈಟರು ಮ|| ವೀರಣ್ಣನವರು ಮೊದಲಾಗಿ ಕೆಲ ಪ್ರಮುಖ ಪಾತ್ರಗಳನ್ನು ವಹಿಸುವವರಿಗೆ ಭಂಗಾರದ ಪದಕಗಳನ್ನು ಕೊಟ್ಟು ಅವರುಗಳನ್ನು ಮರ್ಯಾದಿಸುವವರಾಗಿರುವರೆಂದು ಕೇಳಿ ಸಂತೋಷಿಸುತ್ತೇವೆ.

ಮುದುಕರು ಹರೇದವರಾಗುವುದು.

ಡಾಕ್ಟರ್ ಸ್ಟಾಂಡ್‌ಗಾರ್ಡ್‌ರವರು ಬರ್ಲಿನ್ನಿನ ಡಾಕ್ಟರ್ ಡಿಲಿಟರ್‌ಸ್ಕಿಮಿಡಿವ್‌ರವರ ಸಹಾಯದಿಂದ ಬಹಳ ಸಹಾಸಪಟ್ಟು ಮನುಷ್ಯರ ಶರೀರಕ್ಕೆ ಒಂದು ವಿಧವಾದ ರಸವನ್ನು ರಕ್ತನಾಳದ ಮೂಲಕ ಪ್ರಯೋಗಿಸಿ ಮುದುಕರನ್ನು ಹರೇದವರನ್ನಾಗಿ ಮಾಡುವ ಆಶ್ಚರ್ಯಕರವಾದ ಚಿಕಿತ್ಸಾಕ್ರಮವನ್ನು ಕಂಡುಹಿಡಿದು ಲೋಕಕ್ಕೆ ವಿಸ್ಮಯವನ್ನುಂಟುಮಾಡಿರುವರು. ಈ ಪ್ರಯೋಗದಿಂದ ಕೆಲ ವೃದ್ಧ ಸ್ತ್ರೀಪುರುಷರು ಯವ್ವನಸ್ಥರಾಗಿರುವರೆಂದೂ ಒಬ್ಬ ಯವ್ವನಸ್ಥಳು ವೃದ್ಧಾಪ್ಯವನ್ನು ಬಯಸಿ ಈ ಡಾಕ್ಟರ ಚಿಕಿತ್ಸೆಯನ್ನು ಹೊಂದಿದುದರಮೇಲೆ ಆಕೆಯ ಹಲ್ಲುಗಳು ಬಿದ್ದುಹೋದುವು ತಲೆಯ ಕೂದಲು ಬೆಳ್ಳಗಾಯಿತು; ಮೈಚರ್ಮವು ಸುಕ್ಕುಗಟ್ಟಿತು ಎಂದೂ ಕೇಳುತ್ತೇವೆ. ಈಗ ಈ ಪ್ರಸಿದ್ಧಡಾಕ್ಟರು ಅನೇಕ ಭಾರತೀಯರ ಪ್ರಾರ್ಥನೆಯ ಮೇರೆಗೆ ಬೊಂಬಾಯಿಗೆ ಬಂದಿರುತ್ತಾರೆ. ಇವರು ಬೊಂಬಾಯಿ, ದಿಲ್ಲಿ, ಅಲಹಾಬಾದು, ಕಲಕತ್ತಾ ರಂಗೂನು ಮತ್ತು ಮದ್ರಾಸು ಈ ಪಟ್ಟಣಗಳಲ್ಲಿ ಸಂಚರಿಸಿಕೊಂಡು ಒಂದೊಂದುಕಡೆ 14 ದಿನಗಳ ವರೆಗೆ ನಿಂತು ಸಾಧ್ಯವಿದ್ದಷ್ಟು ಜನರಿಗೆ ತಮ್ಮೌಷಧಪ್ರಯೋಗಮಾಡುವವರಾಗಿರುವರು. ಈ ಔಷಧಿಯ ಅದ್ಭುತಶಕ್ತಿಯು ಪ್ರತ್ಯಕ್ಷವಾಗಿ ಗೋಚರಿಸುವ ಯೋಗವುಂಟಾಗಿದೆ.

ಸ್ವದೇಶದ ವೃತ್ತಾಂತಗಳು.

ಸೀನಿಯರ್ ಅ|| ಕಮಿಷನರ್ ಮ|| ಸಿ. ರಂಗನಾಥರಾವ್ ಸಾಹೇಬರವರು ಭದ್ರಾವತಿಯ ಕಬ್ಬಿಣದ ಕಾರ್ಯಾಲಯದ ಜನರಲ್ ಸೂಪರಿಂಟೆಂಡೆಂಟ್‌ರವರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕಳೆದವಾರ ರಾಜಧಾನಿಯಲ್ಲಿ ಒಬ್ಬ ಗೋಲಂದಾಜನು ತನ್ನ ತೋಳಿಗೆ ಗುಂಡುಹೊಡೆದುಕೊಂಡು ಸತ್ತನೆಂದು ತಿಳಿಸಿದ್ದೆವಷ್ಟೆ? ಅವನು ಈಗ ಆಸ್ಪತ್ರೆಯ ಚಿಕಿತ್ಸೆಯಲ್ಲಿ ಗುಣಹೊಂದುತ್ತಿದ್ದಾನೆಂದು ಕೇಳಿ ಸಂತೋಷಿಸುತ್ತೇವೆ.

ಡೆ|| ಕಮಿಷನರ್ ಮ|| ಎಂ. ಎ. ನಾರಣಯ್ಯಂಗಾರರು ಈ ತಾ|| 15 ರಲ್ಲು ಮತ್ತು ಚೀಫ್ ಕಮಾಂಡೆಂಟರಾದ ಲೆ|| ಕರ್ನಲ್ ಸರದಾರ್ ಬಹದ್ದೂರ್ ಬಿ. ಚಾಮರಾಜ ಅರಸಿನವರು ಬರುವ ಜನವರಿ ತಾ|| 1 ರಲ್ಲು ಉದ್ಯೋಗದಿಂದ ನಿವೃತ್ತರಾಗಲು ಸರ್ಕಾರದಪ್ಪಣೆಯಾಗಿದೆ.

ಸಂಸ್ಥಾನದ ಯಾವ ಭಾಗದಲ್ಲೂ ಹಿಂಗಾರು ಮಳೆಯು ಸಂಪೂರ್ಣವಾಗಿ ಬಾರದೆ ರಾಗಿ ಮೊದಲಾದ ಬೆಳೆಗಳು ಕೆಟ್ಟುಹೋಗಿರುವುದರಿಂದ ರಾಗಿ ಮತ್ತು ಜೋಳ ರೂ. 1ಕ್ಕೆ 6ಸೇರಿನಂತೆಯೂ, ಅಕ್ಕಿ 4 ಸೇರಿನಂತೆಯೂ, ಬೇಳೆ $3\frac{1}{2}$ ಸೇರಿನಂತೆಯೂ ಮಾರಲ್ಪಡುತ್ತಿರುವುವಲ್ಲದೆ ಇವುಗಳ ಬೆಲೆಯು ಇನ್ನೂ ಹೆಚ್ಚುವುದರಲ್ಲಿರುವುದರಿಂದಲೂ, ದನಕರುಗಳಿಗೆ ನೀರೂ ಮೇವೂ ಇಲ್ಲದೆ ಬಹಳ ತೊಂದರೆಯಾಗಿರುವುದರಿಂದಲೂ ಜನರ ಹಾಹಾಕಾರವೆದ್ದಿದೆ. ಕೂಡಲೆ ಮಳೆಯು ಬಾರದಿದ್ದಲ್ಲಿ ವೀರಕ್ಷಾಮ ಪ್ರಾಪ್ತವಾಗುವ ಸಂಭವವಿರುತ್ತದೆ.

ನೆನ್ನೆಯದಿನ ಬೆಳಿಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗು ನಡೆದು, ಕಡಿಮೆ ಸಂಬಳದ ಹೆಲ್ತಾಫೀಸರನ್ನು ಕಳುಹಿಸಿಕೊಡಬೇಕೆಂದು ಸರ್ಕಾರದವರನ್ನು ಪುನಃ ಪ್ರಾರ್ಥಿಸಿಕೊಳ್ಳಬೇಕಾಗಿಯೂ, ಚೀಫ್ ಸ್ಯಾನಿಟರಿ ಇನ್‌ಸ್ಪೆಕ್ಟರಿಗೆ ತಕ್ಕ ಕೆಲಸಗಳನ್ನು ವಹಿಸಿ 1924ನೆಯ ಜೂನ್ ಕಡೆಯವರೆಗೂ ಪರೀಕ್ಷಾರ್ಥವಾಗಿಟ್ಟುಕೊಂಡಿದ್ದು ಆನಂತರ ಆ ಉದ್ಯೋಗವನ್ನು ಸ್ಥಿರಗೊಳಿಸುವ ಅಥವಾ ತೆಗೆದುಬಿಡುವ ವಿಚಾರವನ್ನು ಪರ್ಯಾಲೋಚಿಸಬೇಕಾಗಿಯೂ ನಿರ್ಧರಿಸಲ್ಪಟ್ಟಿತಲ್ಲದೆ ಚೀಫ್ ಸ್ಯಾ|| ಇನ್‌ಸ್ಪೆಕ್ಟರಿಗೆ ವಹಿಸುವ ಕೆಲಸಗಳನ್ನು ಒಂದು ವಾರದೊಳಗಾಗಿ ಗೊತ್ತುಮಾಡಲು 7 ಜನ ಕೌನ್ಸಿಲರುಗಳಿಂದ ಕೂಡಿದ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿತು.

ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಕಮಿಷನರುಗಳೂ ಅಮಲ್ದಾರ್ ಮತ್ತು ಡೆ|| ಅಮಲ್ದಾರರುಗಳೂ ಗ್ರಾಮಾಂತರಗಳಲ್ಲಿ ಸಂಚರಿಸುವಬಗೆಗೆ ಒಳ್ಳೇ ಕುದುರೆಗಳನ್ನಿಟ್ಟಿರಬೇಕಲ್ಲದೆ ಅವುಗಳ ಸ್ವಾರಿಯನ್ನು ಚೆನ್ನಾಗಿ ತಿಳಿದಿರಬೇಕೆಂದು ಸರ್ಕಾರಿಯಪ್ಪಣೆ ಇದ್ದಾಗ್ಯೂ ಇತ್ತೀಚೆಗೆ ಆರೀತಿ ಆಚರಿಸಲ್ಪಡುತ್ತಿಲ್ಲವಾದುದರಿಂದ, ಎಲ್ಲ ಕಾರ್ಯನಿರ್ವಾಹಕ ಅಂದರೆ ಎಕ್ಸಿಕ್ಯುಟಿವ್ ಅಧಿಕಾರಿಗಳು ಕುದುರೆಯ ಸ್ವಾರಿಯಲ್ಲಿ ತೇರ್ಗಡೆಯನ್ನು ಹೊಂದಿ ಒಳ್ಳೆಯ ಕುದುರೆಯನ್ನು ಸಾಕಬೇಕೆಂದೂ ಇವರುಗಳು ಕುದುರೆಸ್ವಾರಿಯಿಂದ ಗ್ರಾಮಾಂತರಗಳನ್ನು ಸಂಚರಿಸುತ್ತಾರೆಂಬುದನ್ನು ಶಾಖಾಧಿಕಾರಿಗಳು ವಿಚಾರಿಸುತ್ತಿದ್ದು ಸರ್ಕಾರಕ್ಕೆ ರಹಸ್ಯವಾಗಿ ಕಳುಹಿಸುವ ವರದಿಯಲ್ಲಿ ತಪ್ಪದೆ ತಿಳಿಸಬೇಕೆಂದೂ ಸರ್ಕಾರದ ಕಟ್ಟಪ್ಪಣೆಯಾಗಿದೆ.

ಅಸಿಸ್ಟೆಂಟ್ ಕಮಿಷನರುದ್ಯೋಗಕ್ಕೆ ಸಮರ್ಥರಾದವರನ್ನು ನಿಯಮಿಸಿಕೊಳ್ಳಲು ಪ್ರತಿ ಎರಡುವರ್ಷಗಳಿಗೊಂದಾವೃತ್ತಿ ಮೈಸೂರು ಸಿವಿಲ್‌ಸರ್ವಿಸ್ ಕಾಂಪೆಟಿಟಿವ್ ಎಕ್ಸಾಮಿನೇಷನ್ ಅಂದರೆ ಪರೀಕ್ಷೆಯ ಸ್ಪರ್ಧೆಯನ್ನು ನಡೆಯಿಸಿ ಅದರಲ್ಲಿ ಉತ್ತೀರ್ಣರಾದಂತಹ ದೃಢಕಾಯರಾದ 2-3 ಯುವಕರನ್ನು ನಿಯಮಿಸಿಕೊಳ್ಳುವ ಪದ್ಧತಿಯು 1919 ರವರೆಗೆ ನಡೆದು ಬಂದು ಈ ಉದ್ಯೋಗಸ್ಥರ ಅನಾವಶ್ಯಕತೆಯಿಂದ ನಿಲ್ಲಿಸಲ್ಪಟ್ಟಿದ್ದಿತು. ಈಗ ಅ|| ಕಮಿಷನರುದ್ಯೋಗಕ್ಕೆ ಇಬ್ಬರನ್ನು ನಿಯಮಿಸಿಕೊಳ್ಳುವ ಅವಶ್ಯಕತೆಯು ಕಂಡುಬಂದುದರಿಂದ 1924 ನೆಯ ಅಕ್ಟೋಬರ್ ತಿಂಗಳಲ್ಲಿ ಸ್ಪರ್ಧೆಯಿಂದ ಒಂದು ಪರೀಕ್ಷೆಯು ನಡಿಸಲ್ಪಡುತ್ತದೆಂದೂ ಪರೀಕ್ಷಿಸಲ್ಪಡುವ ವಿಷಯವು ಮತ್ತು ಕಾಲವು ಸಕಾಲದಲ್ಲಿ ಪ್ರಕಟಿಸಲ್ಪಡುವುದೆಂದೂ ಸರ್ಕಾರದಪ್ಪಣೆಯಾಗಿರುತ್ತದೆ.

ಡಾಕ್ಟರ್ ಮೈಲ್ವಾನರವರು ಸೀನಿಯರ್ ಸರ್ಜನ್ನುದ್ಯೋಗವನ್ನು ಡಾ|| ಉಸ್ಮಾನರವರಿಂದ ಕಳೆದ ಗುರುವಾರ ವಹಿಸಿಕೊಂಡುದರಿಂದ ಡಾ|| ಉಸ್ಮಾನರವರು ಡಾ|| ಬಿ. ನಂಜಪ್ಪನವರಿಂದ ಕೃಷ್ಣರಾಜ ಆಸ್ಪತ್ರೆಯ ಮೆಡಿಕಲ್ ಆಫೀಸರದ್ಯೋಗವನ್ನು ಶುಕ್ರವಾರದ ದಿವಸ ವಹಿಸಿಕೊಂಡರು. ಡಾ|| ಬಿ. ನಂಜಪ್ಪನವರು ಶಿವಮೊಗ್ಗ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿ ವರ್ಗಾಯಿಸಲ್ಪಟ್ಟಿರುವುದಾಗಿ ಕೇಳುತ್ತೇವೆ. ಇವರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಯಮಾಡಿಸಿದಾರಾಭ್ಯ ಚಿಕಿತ್ಸೆಗೆ ಬರುವ ರೋಗಿಗಳಲ್ಲಿ ಬಡವರೂ ಬಲ್ಲಿದರೂ ಎಂಬ ತಾರತಮ್ಯವನ್ನಿಡದೆ ಎಲ್ಲರನ್ನೂ ಒಂದೇ ರೀತಿಯಾಗಿ ಕಂಡು ಉಪಚರಿಸುತ್ತಿದ್ದುದರಿಂದ ವಿಶೇಷ ಜನಾನುರಾಗಕ್ಕೆ ಪಾತ್ರರಾಗಿದ್ದರು. ಈ ರಾಜಧಾನಿಯ ನಿವಾಸಿಗಳು ಇವರನ್ನು ನಾಳೆಯ ದಿನ ಟವರ್ ಹಾಲಿಗೆ ಬರಮಾಡಿಕೊಂಡು ಸಂಗೀತ ನಾಟಕ ಮೊದಲಾದ ವಿನೋದಗಳಿಂದ ಸತ್ಕರಿಸಿ ಅವರಮೇಲೆ ತಮ್ಮಗಳಿಗಿರುವ ಪ್ರೀತಿವಿಶ್ವಾಸವನ್ನು ವ್ಯಕ್ತಗೊಳಿಸುವವರಾಗಿರುವರು.

ಮೊಳಕಾಲ್ಮುರು ತಾಲ್ಲೂಕಿಗೆ ಸೇರಿದ ಸ್ಟೇಟ್ ಫಾರೆಸ್ಟಿನಿಂದ ಒಂದು ತಲೆ ಹೊರೆಗೆ 1 ಆಣೆಯನ್ನು ಕೊಟ್ಟು ಕಮರಾಸೊಪ್ಪನ್ನು ದನಗಳ ಮೇವಿಗಾಗಿ ತೆಗೆದುಕೊಳ್ಳಲು, ಮದ್ದಗಿರಿ ತಾಲ್ಲೂಕಿನಲ್ಲೆಲ್ಲಾ ದನಗಳ ಮೇವಿಗೆ ಬಹಳ ಉಗ್ರಾಮವಾಗಿರುವ ಪ್ರಯುಕ್ತ ಆ ತಾಲ್ಲೂಕಿಗೆ ಸೇರಿದ ಒಟ್ಟು ಸ್ಟೇಟ್ ಫಾರೆಸ್ಟಿನಲ್ಲಿ ದನಗಳನ್ನು ಪುಕಸಟ್ಟೆಯಾಗಿ ಮೇಯಿಸಲು, ದೊಡ್ಡಬಳ್ಳಾಪುರ ತಾ|| ಗೆ ಸೇರಿದ ಸ್ಟೇಟ್ ಫಾರೆಸ್ಟಿನ ಅದರ ಸುತ್ತಲಿರುವ ಹಳ್ಳಿಯವರು ದನಗಳನ್ನು [illegible]

ಮೆಯಿಸಲು, ಹುಣಸೂರು ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಿಗೆ ಸೇರಿದ ಸ್ಟೇಟ್ ಫಾರೆಸ್ಟುಗಳಲ್ಲಿ ನಾಗಮಂಗಲ ತಾಲ್ಲೂಕಿನ ದನಗಳು ದುಡ್ಡಿಲ್ಲದೆ ಮೇಯಲು, ಚಳ್ಳಕೆರೆ ತಾ|| ಗೆ ಸೇರಿದ ಸ್ಟೇಟ್ ಫಾರೆಸ್ಟಿನಲ್ಲಿ ಆ ತಾಲ್ಲೂಕಿನ ದನಗಳನ್ನು ಮೆಯಿಸಲು ಮತ್ತು ಹುಲ್ಲನ್ನು ಕುಯಿದು ಸಾಗಿಸಲು, ಆ ತಾಲ್ಲೂಕಿನ ಗ್ರಾಮಗಳವರು ಕಮರಾಸೊಪ್ಪನ್ನು ಸಾಗಿಸಲು, ಮತ್ತು ಚಿತ್ರಕಲ್‌ದುರ್ಗ ಡಿಸ್ಟ್ರಿಕ್ಟಿನ ದನಗಳು ಶಿವಮಗ್ಗ ಡಿ|| ಫಾರೆಸ್ಟುಗಳಲ್ಲಿ ಪುಕಸಟ್ಟೆಯಾಗಿ ಮೆಯಲು ಮತ್ತು ಮೇವಿಲ್ಲದ ಮೈದಾನ ತಾಲ್ಲೂಕುಗಳ ದನಗಳನ್ನು ಮಲೆನಾಡು ಕಾಡುಗಳಿಗೆ ತೆಗೆದುಕೊಂಡುಹೋಗಿ ಪುಕಸಟ್ಟೆ ಮೆಯಿಸಲು ಸರ್ಕಾರದಪ್ಪಣೆಯಾಗಿರುತ್ತದೆ.

ಭರತಖಂಡದ ವೃತ್ತಾಂತಗಳು.

ಭರತಖಂಡದಲ್ಲಿ ಹದಿನಾರು ಲಕ್ಷ ಪುರೋಹಿತರೂ ಎಪ್ಪತ್ತು ಲಕ್ಷ ಭಿಕ್ಷುಕರೂ ಇರುತ್ತಾರೆ.

ಇಂಡ್ಯಾದಿಂದ ಇಂಗ್ಲೆಂಡು, ಆಸ್ಟ್ರೇಲಿಯಾಗಳಿಗೆ ಆಕಾಶಯಾನಗಳ ಮೂಲಕ ಅಂಚೆಯನ್ನು ಕಳುಹಿಸುವ ಏರ್ಪಾಟು ನಡಿಯುತ್ತಲಿದೆ.

ಪೂನಾದ ಪದಾತಿ ಸೈನಿಕರಲ್ಲಿ ಕೆಲರು ನೆರೆ ಗ್ರಾಮಕ್ಕೆ ಹೋಗಿ ಬಾತುಗಳಿಗೆ ಗುಂಡನ್ನು ಹೊಡಿಯುತ್ತಿರುವಾಗ್ಗೆ ಒಬ್ಬ ಹಳ್ಳಿಯವನಿಗೆ ಗುಂಡು ತಗುಲಿ ಸತ್ತುಹೋದನು.

ಅಖಿಲಭಾರತ ಮಹಮ್ಮದೀಯ ವಿದ್ಯಾ ಸಂಘ ಸಮಾವೇಶವು ಸಾಹೆಬ್ ಜಾಬಾ ಅಫೀತ್‌ಬ್ ಮಹಮ್ಮದ್‌ಖಾನ್ ರವರ ಅಧ್ಯಕ್ಷತೆಯಲ್ಲಿ ಅಲಿಘರದಲ್ಲಿ ಈ ಡಿಸೆಂಬರ್ ತಾ|| 26 ರಿಂದ 31ರ ವರೆಗೆ ನೆಡೆಯುವುದು.

ಮದ್ರಾಸ್ ಗೌರ್ನರವರಾದ ಲಾರ್ಡ್ ವಿಲಿಂಗ್‌ಡನ್ ರವರು ಕೆಲ ದಿವಸಗಳಲ್ಲಿ ಉದ್ಯೋಗದಿಂದ ನಿವೃತ್ತರಾಗುವ ಪ್ರಯುಕ್ತ ಲಾರ್ಡ್ ಗೋಷನ್ ಎಂಬುವರು ಮದ್ರಾಸು ಗೌರ್ನರಾಗಿ ಚಕ್ರವರ್ತಿಯವರಿಂದ ನಿಯಮಿಸಲ್ಪಟ್ಟಿರುವರು.

ಲಾಹೋರಿನ ಪೀಪಲ್ಸ್ ಬ್ಯಾಂಕು ದಿವಾಳಿಯಾದುದರಿಂದ ಷೇರುದಾರರಿಗೆ ರೂಪಾಯಿಯೊಂದಕ್ಕೆ 11 ಕಾಸಿನಂತೆಯೂ ಇದರಂತೆಯೇ ದಿವಾಳಿಯಾದ ಅಮೃತಸರ ಬ್ಯಾಂಕಿನ ಷೇರುದಾರರಿಗೆ ರೂ. 1ಕ್ಕೆ 6 ಕಾಸಿನಂತೆಯೂ ಕೊಡಲ್ಪಡುವುದಾಗಿದೆಯಂತೆ!

ಭರತಖಂಡದ ಸರ್ಕಾರದಾಡಳಿತಕ್ಕೊಳಪಟ್ಟ ಎಲ್ಲಿ ರೈಲ್ವೆಗಳಿಂದಲೂ ಕಳೆದ ನವಂಬರ್ ತಾ|| 17ಕ್ಕೆ ಕಡೆಯಾದ ವಾರದಲ್ಲಿ ಒಟ್ಟು 173 ಕೋಟಿ ರೂಪಾಯಿಗಳುತ್ಪನ್ನವಾಗಿವೆ. ಕಳೆದ ವರ್ಷ ಇದೇ ಕಾಲದಲ್ಲಿ ಉತ್ಪನ್ನವಾಗಿದ್ದುದುಕ್ಕಿನ್ನ ಈ ವಾರದಲ್ಲಿ 4 ಲಕ್ಷ ರೂ. ಹೆಚ್ಚಾಗಿದೆ.

ಪದಚ್ಯುತರಾದ ನಭಾ ಸಂಸ್ಥಾನದ ಮಹಾರಾಜರಿಗೆ ಪುನಃ ರಾಜ್ಯಾಧಿಕಾರವು ಕೊಡಲ್ಪಡಬೇಕೆಂದು ಕಾಶ್ಮೀರ ಮತ್ತು ಜೆಂದ್ ಸಂಸ್ಥಾನಗಳ ಮಹಾರಾಜರುಗಳೂ, ಹೈದರಾಬಾದಿನ ನೈಜಾಂರವರೂ ಬ್ರಿಟಿಷ್ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರುವುದಾಗಿಯೂ, ಇತರ ಸಂಸ್ಥಾನಾಧೀಶರರೂ ಪ್ರಾರ್ಥಿಸಿಕೊಳ್ಳಬೇಕಾಗಿ ಕೋರಲ್ಪಟ್ಟಿರುವುದಾಗಿಯೂ ಒಂದಾನೊಂದು ಪತ್ರಿಕೆಯು ತಿಳಿಸುತ್ತದೆ.

ಬಲೂಚಿಸ್ಥಾನದಲ್ಲಿ ಬ್ರಿಟಿಷರ ಕಡೆ ಪೊಲಿಟಿಕಲ್ ಏಜಂಟರಾಗಿದ್ದ ಮೇಜರ್ ಫಿನಿಸ್‌ರವರು ಮೊಟಾರುಬಂಡಿಯಲ್ಲಿ ಹೋಗುತ್ತಿರುವಾಗ್ಗೆ ವಜೀರಿ ಗುಂಪಿನವರು ಗುಂಡನ್ನು ಹೊಡೆದು ಕೊಂದುಬಿಟ್ಟರು. ಇವರ ಕೂಡ ಇದ್ದ ಬಂಡಿಯನ್ನು ನಡೆಸುವವನಿಗೂ ಇನ್ನೊಬ್ಬ ಸೇವಕನಿಗೂ ಗುಂಡೇಟುಬಿದ್ದು ಪ್ರಾಣಾಪಾಯವಾಗಿದ್ದುದರಿಂದ ಆ ಸೇವಕನು ನಡೆದ ವಿದ್ಯಮಾನವನ್ನೆಲ್ಲಾ ತಿಳಿಸಿ ಸತ್ತುಹೋದನು.

ಪೂರ್ವ ಆಫ್ರಿಕಾದಲ್ಲಿರುವ ಭಾರತೀಯರ ಸಾರ್ವಜನಿಕ ಮಹಾಸಭೆಯು ಮೊಂಬಾಸಾದಲ್ಲಿ ಶ್ರೀಮತಿ ಸರೋಜನಿನಾಯಿಡುದೇವಿಯವರ ಅಧ್ಯಕ್ಷತೆಯಲ್ಲಿ ಈ ಕ್ರಿಸ್ತಮಸ್ ರಜಾಕಾಲದಲ್ಲಿ ನಡಿಯುವುದು. ಈ ಡಿಸೆಂಬರ್ ತಾ|| 12ರಲ್ಲಿ ಮ|| ಗಳಾದ ಎಂ. ಎ. ದೇಸಾಯಿ ಜಾರ್ಜ್‌ಜೋಸಫ್ ಮತ್ತು ಬೆನಾರಸಿದಾಸ್ ಚತುರ್ವೇದಿಯವರು ಸರೋಜಿನಿದೇವಿಯವರ ಕೂಡ ಖಂಡಾಲಾ ಎಂಬ ಹಡಗಿನಲ್ಲಿ ಮೊಂಬಾಸಾಕ್ಕೆ ಪ್ರಯಾಣಮಾಡುವರು.

ಅಹಮದಾಬಾದಿನ ಒಬ್ಬ ಕುರುಡ ಕವಿಯು ತನ್ನ ಒಳ್ಳೆಯ ನಡತೆಗಾಗಿ ಹೊಣೆಯನ್ನು ಕೊಡಲು ತಿರಸ್ಕರಿಸಿದುದರಿಂದ ಒಂದು ವರ್ಷ ಸಾಮಾನ್ಯ ಕಾರಾಗೃಹವಾಸದ ಶಿಕ್ಷೆಗೆ ಗುರಿಮಾಡಲ್ಪಟ್ಟನು. ತನ್ನ ಅಂಗವಿಕಲಿತೆಗಾಗಿ ಕನಿಕರಪಡದೆ ಶಿಕ್ಷೆಯನ್ನು ವಿಧಿಸಬಹುದೆಂದು ಮ್ಯಾಜಿಸ್ಟ್ರೇಟರನ್ನು ಪ್ರಾರ್ಥಿಸಿ ಒಂದು ಪದ್ಯವನ್ನು ರಚಿಸಿ ಹೇಳಿದನು. ಮ್ಯಾಜಿಸ್ಟ್ರೇಟನು ಕನಿಕರಪಟ್ಟು ಅವನನ್ನು ಕಾರಾಗೃಹದಲ್ಲಿ ಪೃಥಕ್ಕಾಗಿಡುವಂತೆ ಆಜ್ಞೆಮಾಡಿದನು.

ಅಖಿಲಭಾರತ ಸಾಂಘಿಕ ಪ್ರಸಾರಕರ ನಾಲ್ಕನೆಯ ವರ್ಷದ ಅಧಿವೇಶನವು ಡಾಕ್ಟರ್ ಅನೆಬೆಸೆಂಟ್ ಅಮ್ಮನವರ ಅಧ್ಯಕ್ಷತೆಯಲ್ಲಿ ಬೊಂಬಾಯಿಯಲ್ಲಿ ಕಳೆದ ತಾ|| 29ನೆಯ ಬುಧವಾರದ ದಿವಸ ಜರುಗಿತು. ಬೊಂಬಾಯಿನಲ್ಲಿರುವ 58 ಸಾಂಘಿಕ ಸಂಘಗಳ ಪ್ರತಿನಿಧಿಗಳೂ ಇತರ ಕಡೆಯ 35 ಸಂಘಗಳ ಪ್ರತಿನಿಧಿಗಳು ಸೇರಿ ಒಟ್ಟು 500 ಪ್ರತಿನಿಧಿಗಳು ಬಂದಿದ್ದರು. ಸಾಂಘಿಕ ಸೇವಾಪ್ರದರ್ಶನವು ತಾ|| 29 ರಿಂದ ಡಿಸೆಂಬರ್ ತಾ|| ೨ರ ವರೆಗೆ ಜರುಗಿತು. ಈ ಪ್ರದರ್ಶನವು ಬಹಳ ಆಕರ್ಷಣೀಯವಾಗಿದ್ದಿತು. ಕಾರ್ಯನಿರ್ವಾಹಕ ಸಂಘಾಧ್ಯಕ್ಷರಾದ ಲಲುಭಾಯಿ ಶಾಮಲದಾಸ್‌ರವರು ಸಭೆಗೆ ಬಂದಿದ್ದ ಪ್ರತಿನಿಧಿ ಮೊದಲಾದವರನ್ನು ಸುಸ್ವಾಗತಿಸಿ “ನಾವು ಮಾಡಬೇಕಾಗಿರುವ ಕಾರ್ಯಗಳು ಇನ್ನೂ ಬಹಳವಾಗಿವೆ. ಆದುದರಿಂದ ಸಾಂಘಿಕ, ಶಾರೀರಕ ನೈತಿಕ ವಿಚಾರಗಳಲ್ಲಿರತಕ್ಕ ಅನರ್ಥಗಳನ್ನು ಸಂಪೂರ್ಣವಾಗಿ ತೊಲಗಿಸಲು ನಮಗೆ ಇನ್ನೂ ಶಕ್ತಿಯು ಸಾಲದು. ಆದರೂ ಸದ್ಯದಲ್ಲಿ ಗೋಚರಿಸುವ ಸಾಂಘಿಕಾನರ್ಥಗಳನ್ನು ಸರಿಯಾಗಿ ಗ್ರಹಿಸಿಕೊಂಡು ನಮ್ಮ ಶಕ್ತಿ ವಂಚನೆಯಿಲ್ಲದೆ ಕೆಲಸಮಾಡಬೇಕಾದುದು ನಮ್ಮ ಕರ್ತವ್ಯವು. ನಾವು ಪೌರಧರ್ಮವನ್ನು ಸರಿಯಾಗಿ ತಿಳಿದುಕೊಳ್ಳುವಲ್ಲಿ ಕೊಂಚ ಅನನುಕೂಲವಿರುತ್ತದೆ” ಎಂದು ಹೇಳಿದರು.

ದಿಲ್ಲಿಯಲ್ಲಿ ಜವಾಹಿರಿ ವ್ಯಾಪಾರಸ್ಥರಾದ ಹ್ಯಾಮಿಲ್ಟನ್ ಕಂಪೆನಿಗೆ ಒಬ್ಬ ಸೇವಕನು ಬೆಳ್ಳಿ ಹಿಡಿಹಾಕಿರುವ ಎರಡು ಬ್ರಷ್ಷುಗಳನ್ನು ತೆಗೆದುಕೊಂಡು ಬಂದು ಅವುಗಳ ಮೇಲೆ ಹೆಸರುಗಳನ್ನು ಕೆತ್ತಿಕೊಡುವಂತೆ ಸರ್ ಮಲ್ಕಾಲಂಹೇಲೆಯವರ ಪರ್ಸನಲ್ ಸೆಕ್ರೆಟರಿಯವರು ಒಂದು ಕಾಗದವನ್ನು ಕೊಟ್ಟಿರುತ್ತಾರೆಂದು ಹೇಳಿಕೊಟ್ಟುಬಿಟ್ಟು ಹೋಗಿ ಕೊಂಚಹೊತ್ತು ಬಿಟ್ಟುಕೊಂಡು ಮರಳಿ ಅದೇ ಅಂಗಡಿಗೆ ಬಂದು ಈ ಕಾಗದವನ್ನು ತರುವವನ ಕೈಲಿ ಕೆಲ ವಜ್ರದುಂಗುರಗಳನ್ನು ನೋಡಲಿಕ್ಕಾಗಿ ಕಳುಹಿಸಿಕೊಡುವುದೆಂದು ಬರೆದಿದ್ದ ಕಾಗದವನ್ನು ಕಂಪನಿಯ ಅಸಿಸ್ಟೆಂಟ್ ಮ್ಯಾನೇಜರಿಗೆ ಕೊಟ್ಟನು. ಆ ಮ್ಯಾನೇಜರು ಕಾಗದವನ್ನೋದಿಕೊಂಡು ಕೊಂಚವೂ ಅನುಮಾನಿಸದೆ ಆ ಸೇವಕನ ಕೈಲಿ 18,000 ರೂ. ಬೆಲೆಬಾಳುವ 10 ವಜ್ರದುಂಗುರಗಳನ್ನು ಕೊಟ್ಟು ಕಳುಹಿಸಿಬಿಟ್ಟು ಮಧ್ಯಾಹ್ನದ ಮೇಲೆ ಆ ಉಂಗುರುಗಳು ತಮಗೆ ಬಂದು ತಲುಪಿವೆ? ಎಂದು ಮಲ್ಕಾಲಂರವರ ಪತ್ನಿಯವರನ್ನು ಟೆಲಿಫೋನ್ ದ್ವಾರ ಕೇಳಿದನು. ಆಕೆಯು ಆ ಉಂಗುರಗಳಿಗಾಗಿ ಯಾರ ಮೂಲಕ ಹೇಳಿಕಳುಹಿಸಿರಲಿಲ್ಲವೆಂದೂ ಅವು ತಮಗೆ ಬರಲಿಲ್ಲವೆಂದೂ ಉತ್ತರವನ್ನು ಕೊಟ್ಟುದರ ಮೇಲೆ ಮ್ಯಾನೇಜರು ದಿಗಿಲುಬಿದ್ದು ನಡೆದ ವಿದ್ಯಮಾನವನ್ನು ಪೋಲೀಸರಿಗೆ ತಿಳುಹಿದನು. ಪೋಲೀಸಿನವರು ಆ ಸೇವಕನನ್ನು ಹಿಡಿದು ವಿಚಾರಿಸುವಲ್ಲಿ ತಾನು ತಪ್ಪಿತಸ್ಥನಲ್ಲವೆಂದೂ ಒಬ್ಬ ಬಂಗಾಳಿಬಾಬು ಉಂಗುರಗಳನ್ನು ತರುವಂತೆ ಹೇಳಿ ಒಂದು ಕಾಗದವನ್ನು ಬರೆದು ತನ್ನ ಕೈಲಿ ಕೊಟ್ಟಿದ್ದನೆಂದೂ ಹೇಳಿದುದರ ಮೇಲೆ ಪೊಲೀಸ್ ಸೆರೆಯಲ್ಲಿಡಲ್ಪಟ್ಟಿರುವನು.

ವಿದೇಶದ ವೃತ್ತಾಂತಗಳು

ಷಫೀಲ್ಡಿನ ಕಲ್ಲಿದ್ದಲು ಗಣಿಯಲ್ಲಿ ಅನಾಹುತವಾಗಿ 7 ಜನರು ಸತ್ತರು ಮತ್ತು 36 ಜನರು ಗಾಯವಡೆದರು.

ಚೀನಾದೇಶದಲ್ಲಿ 1865ರಲ್ಲಿ ಹದಿನಾರು ವಾರ್ತಾಪತ್ರಿಕೆಗಳು ಪ್ರಕಟವಾಗುತ್ತಿದ್ದು ಈಗ ಮೂರುಸಾವಿರ ಪತ್ರಿಕೆಗಳು ಹೊರಡುತ್ತಿವೆ.

ಅಮೇರಿಕೆಯ ಸಂಯುಕ್ತ ಸಂಸ್ಥಾನದಲ್ಲಿ ಮೊಟಾರು ಬಂಡಿಯನಾಹುತದಿಂದ ಕಳೆದವರ್ಷ 11,066 ಜನರು ಮೃತ್ಯುಪಾಲಾದರು; ಇದರ ಹಿಂದಣವರ್ಷ 9,568 ಮರಣಗಳಾಗಿದ್ದುವು.

ಜಪಾನಿನಲ್ಲಿ ಭೂಕಂಪದಿಂದ ಅಪಾರ ನಷ್ಟಸಂಭವಿಸಿರುವ ಪ್ರಯುಕ್ತ 1923 ಮತ್ತು 24 ನೆಯ ಇಸವಿಗಳಲ್ಲಿ ನೌಕಾವೆಚ್ಚವು 39 ಮತ್ತು 41 ಲಕ್ಷ ಟನ್ನುಗಳವರೆಗೆ ಕಡಿಮೆ ಮಾಡಲ್ಪಟ್ಟಿರುತ್ತದೆ.

ತುರುಕರ ಧರ್ಮಪ್ರಭುವಾದ ಕಾಲೀಫನಿಗೂ ರಾಜಕೀಯ ಪ್ರಭುವಾದ ಕೇಮಲ್‌ಪಾಷಾನಿಗೂ ತಿಂಗಳೊಂದಕ್ಕೆ 10,000 ತುರ್ಕಿ ನಾಣ್ಯಗಳನ್ನು ಕೊಡಲು ತುರ್ಕಿ ಪಾರ್ಲಿಮೆಂಟಿನವರು ನಿರ್ಧರಿಸಿರುವರು.

ಯುದ್ಧದಲ್ಲಿ ಅಂಗವಿಕಲರಾದ ಸೈನಿಕರನ್ನು ಉಪಚರಿಸುವುದರಲ್ಲಿ ಬಹಳ ಹೆಸರುವಾಸಿಯಾಗಿದ್ದ ಎಂಡೆಲ್‌ಫಿಲಿಪ್ಸ್ ಎಂಬಾಕೆಯು ತನ್ನ ಗಂಡನಾದ ಪ್ರಿನ್ಸ್ ನಿಕೋಲಸ್ ವಾನ್‌ಡರ್ ಲಿಪ್ಪೆಲಿಪ್ಪಿಗೆ ತನ್ನ ಮೇಲಿದ್ದ ಪ್ರೀತಿಯನ್ನು ತಪ್ಪಿಸಿದಳೆಂದು ತನ್ನ ವಿಧವಾ ಶ್ರೀಮಂತಳಾದ ಅಕ್ಕನ ಮೇಲೆ 3,00,000 ರೂಪಾಯಿಗೆ ದಾವಾ ಮಾಡಿರುತ್ತಾಳೆ.

ಇಟಲಿಯ ಉತ್ತರಭಾಗದಲ್ಲಿರುವ ಬರ್ಗಮೊ ಎಂಬಲ್ಲಿ ಅಸಾಧಾರಣವಾದ ಮಳೆಯು ಬಂದು ಗ್ಲೆನೋ ಸರೋವರಕ್ಕೆ ಕಟ್ಟಿದ್ದ ಅಣೆಕಟ್ಟೆಯು ಒಡೆದುಹೋಗಿ ನೀರುಹರಿದು ಅನೇಕ ಗ್ರಾಮಗಳು ನಾಶವಾದುವು, ಮತ್ತು ಕಾರ್ಖಾನೆಗಳೂ ಸೇತುವೆಗಳೂ ಲೋಹಮಾರ್ಗಗಳೂ ಕೊಚ್ಚಿಹೋದುವು. ಈ ಅನಾಹುತದಿಂದ ಈವರೆಗೆ 600 ಜನರು ನಾಶವಾಗಿರುವುದಾಗಿ ತಿಳಿಯಬಂದಿದೆ.

ಕೆನಡಾದಲ್ಲಿ ಜಗದಾಶ್ಚರ್ಯಕರವಾದೊಂದು ಹಸುವಿರುವುದು. ಇದು ವರ್ಷವೊಂದಕ್ಕೆ 386 ಬಂಗಾಳಾಮಣ ಹಾಲು ಕೊಡುವುದು. ಇದರಿಂದ 21 ಬಂಗಾಳಾಮಣ ತುಪ್ಪವಾಗುವುದು. ಇದರ ಒಂದುದಿನದ ಹಾಲು 300 ಜನರ ಕಾಫಿಗೆ ಸಾಕಾಗುವುದು. ಇದು ಬಹಳ ಸಾಧುವಾದ ಪ್ರಾಣಿಯಾಗಿದೆ. ಇದರ ಬೆಲೆಯು 3,28,000 ರೂಪಾಯಿಗಳಂತೆ. ಈ ಹಸು ಇಂಗ್ಲೆಂಡಿನಲ್ಲಿ ಜರುಗುವ ಮಹಾವಸ್ತುಪ್ರದರ್ಶನಕ್ಕೆ ಕಳುಹಲ್ಪಡುವುದು.

ಮನುಷ್ಯವರ್ಣನಾ ಶಾಸ್ತ್ರಜ್ಞನಾದ ಸರ್ ಆರ್ಥರ್‌ಕೀತ್ ಎಂಬುವನು ಲಂಡನ್ನಿನ ಒಂದು ಬೋಜನಸಮಾರಂಭ ಕೂಟದಲ್ಲಿ ದೇಹಾಲಂಕಾರ ವೈಚಿತ್ರ್ಯವನ್ನು ಕುರಿತು ಭಾಷಣಮಾಡುವಾಗ್ಗೆ ತಲೆಯ ಅಲಂಕಾರಾಭಿರುಚಿಯು ಎಷ್ಟರಮಟ್ಟಿಗೆ ಹೆಚ್ಚುತ್ತಿದೆಯೆಂದರೆ ಇನ್ನು ಒಂದು ಶತಮಾನದಲ್ಲಿ ಸ್ತ್ರೀಯರು ತಮ್ಮ ತಲೆಯನ್ನು ಬೋಳಿಸಿಕೊಳ್ಳುವರೆಂದೂ ಪುರುಷರು ಕೂದಲನ್ನು ಬಿಟ್ಟುಕೊಂಡು ಮುಂಗುರುಳನ್ನು ತಿದ್ದಿಕೊಳ್ಳುವರೆಂದೂ ಹೇಳಿದನು. ಈಗಿನ ಪರಿಸ್ಥಿತಿಯಿಂದ ಈತನ ಭವಿಷ್ಯವು ಅಕ್ಷರಶಃ ನಿಶ್ಚಯವಾಗುವುದೆಂದು ತೋರುತ್ತದೆ.

ಒಬ್ಬ ಸೈನಿಕನು ಕಳೆದ ಯುದ್ಧದಲ್ಲಿ ಕಾದಾಡುವಾಗ್ಗೆ ಮದ್ದಿನ ತೋಟಾಗಳ ಚೂರು ಕಣ್ಣುಗಳಿಗೆ ತಗುಲಿ ಕುರುಡನಾಗಿ ಕಳೆದ 6 ವರ್ಷಗಳಿಂದಲೂ ನರಳುತ್ತಿದ್ದನು. ಡಾಕ್ಟರ್ ಜೊನೆಫ್‌ರೂಫ್‌ಬೊರೆಡಾಕ್ಸ್‌ರವರು ಶಾಸ್ತ್ರರೀತ್ಯಾ ಈಗ್ಗೆ 6 ತಿಂಗಳ ಕೆಳಗೆ ಅವನ ನೇತ್ರಗಳಿಗೆ ಚಿಕಿತ್ಸೆಯನ್ನು ಮಾಡಿ ಗುಣಪಡಿಸಿದರು. ಆ ಕುರುಡನಾಗಿದ್ದ ಮನುಷ್ಯನು ಕಳೆದವಾರ ಒಂದು ಕಾಗದವನ್ನು ಸ್ವತಃ ಬರೆದಿದ್ದುದನ್ನು ಡಾಕ್ಟರು ನೋಡಿ ಪುನಃ ಅವನ ನೇತ್ರಗಳನ್ನು ಪರೀಕ್ಷಿಸಿ ಪೂರ್ವದಲ್ಲಿದ್ದ ದೃಷ್ಟಿಪಾಟದ ಶಕ್ತಿಯಲ್ಲಿ $\frac{3}{10}$ ಭಾಗದಷ್ಟು ಅನುಕೂಲಸ್ಥಿತಿಗೆ ಬಂದಿದೆಯೆಂದು ಹೇಳಿದನು.

ದಕ್ಷಿಣಾಫ್ರಿಕಾದಲ್ಲಿ ಬ್ರಿಟಿಷರ ಮಂತ್ರಿಯಾಗಿರುವ ಜನರಲ್ ಸ್ಮಟ್ಸ್‌ರವರು ಸ್ವಸ್ಥಳಕ್ಕೆ ಹಿಂದಿರುಗಿ ಬಂದ ವೇಳೆ ಬಹಳ ಮರ್ಯಾದೆಯಿಂದ ಸ್ವಾಗತಿಸಲ್ಪಟ್ಟರು. ಇವರು ಬ್ರಿಟಿಷ್ ಸಾಮ್ರಾಜ್ಯ ಮಹಾ ಸಮ್ಮೇಳನದಲ್ಲಿ ತಾವು ನಡೆಸಿದ ಪ್ರತಾಪವನ್ನೆಲ್ಲಾ ಹೇಳುವಾಗ್ಗೆ ಭರತಖಂಡದ ಪ್ರತಿನಿಧಿಯಾಗಿ ಬಂದಿದ್ದ ಅಲ್ವಾರ್ ಮಹಾರಾಜರವರ ಗುಣಪ್ರಶಂಸೆಯನ್ನು ಮಾಡಿದರಲ್ಲದೆ ಆ ಮಹಾರಾಜರೂ ಕ್ರಿಕೆಟ್ ಆಟದಲ್ಲಿ ಲೋಕಪ್ರಖ್ಯಾತರಾಗಿರುವ ಮತ್ತು ನಾನಾಜಾತಿ ಸಂಘದಲ್ಲಿ ಮೆಂಬರಾಗಿರುವ ರಣಜಿತಸಿಂಗರವರು ದಕ್ಷಿಣಾಫ್ರಿಕೆಗೆ ಬರುವವರಾಗಿರುವರೆಂದು ತಿಳಿಸಿದರು.

ಅಮೇರಿಕೆಯಲ್ಲಿ ಜನರಲ್ ಎಲೆಕ್ಟ್ರಿಕ್ ಕಂಪೆನಿಯ ಚೀಫ್‌ಕನ್ಸಲ್ಟಿಂಗ್ ಇಂಜನಿಯರಾಗಿದ್ದ ಡಾಕ್ಟರ್ ಸ್ಟೀನ್‌ಮೆಟ್ಜ್ ಎಂಬಾತನು ಮಳೆಯಿಲ್ಲದೆ ಯಂತ್ರಸಹಾಯದಿಂದ ಬೇಕೆಂದ ವೇಳೆಯಲ್ಲಿ ಸಿಡಿಲನ್ನುಂಟುಮಾಡುವುದನ್ನು ಕಂಡುಹಿಡಿದು ಮರಗಳ ರೆಂಬೆಗಳು ಚೀನಿಬಟ್ಟಲು ಮೊದಲಾದುವುಗಳ ಮೇಲೆ ಅದನ್ನು ಪ್ರಯೋಗಿಸಿ ಅವುಗಳು ಒಡೆದು ಛಿದ್ರವಾಗುವಂತೆ ಮಾಡಿ ತೋರಿಸಿದನು. ಇದೂ ಅಲ್ಲದೆ ಮಂಗಳಗ್ರಹದೊಂದಿಗೆ ತಂತಿಯಿಲ್ಲದೆ ಮಾತಾಡುವ ಯಂತ್ರಸಹಾಯದಿಂದ ಸಂಭಾಷಿಸಬಹುದೆಂದೂ ಈ ಪ್ರಯತ್ನಕ್ಕಾಗಿ 1,50,00,00,00,00,000 ರೂ. ಗಳು ವೆಚ್ಚವಾಗುವುದೆಂದೂ ತಿಳಿಸಿದ್ದನು. ಈ ಡಾಕ್ಟರು ಕೆಲದಿನಗಳ ಕೆಳಗೆ ಮೃತನಾದನು.

ಲಂಡನ್ ನಗರದಲ್ಲಿ ಒಂದಾನೊಂದು ಆಸ್ಪತ್ರೆಯ ಅಡುಗೆಯ ಮನೆಗೆ ರಾತ್ರಿವೇಳೆ ಅನೇಕ ಇಲಿ ಹೆಗ್ಗಣಗಳು ಬಂದು ಬಹಳ ಹಾವಳಿಯನ್ನು ಮಾಡುತ್ತಿದ್ದುದರ ಮೇಲೆ ಫೋಟೋಗ್ರಾಫನ್ನು ತೆಗೆಯಲು ಬಲ್ಲ ಒಬ್ಬ ರೋಗಿಯು ಇಲಿಹೆಗ್ಗಣಗಳು ಬಾರದಂತೆ ಮಾಡಬೇಕೆಂದು ಯೋಚಿಸಿ ಒಂದು ಬೆಕ್ಕಿನ ಫೋಟೋವನ್ನು ಬಹಳ ದೊಡ್ಡಾಕೃತಿಯಲ್ಲಿ ತೆಗೆದು ಅದನ್ನು ಹೆಗ್ಗಣದ ಬಿಲದ ಮುಂಗಡೆ ಇರಿಸಿದನು. ಇಲಿಹೆಗ್ಗಣಗಳು ಬಿಲದಿಂದ ಹೊರಗಡೆ ತಲೆಯಿಕ್ಕಿ ಆ ಫೋಟೋವನ್ನು ನೋಡಿ ದೊಡ್ಡಾಕೃತಿಯ ಬೆಕ್ಕು ಕುಳಿತಿರುವುದೆಂದು ಹೆದರಿ ಹಿಂದಕ್ಕೆ ಓಡಿಹೋದುವು. ಅದರ ಮೇಲೆ ಕೆಲದಿನಗಳವರೆಗೆ ಅದೇ ರೀತಿ ಮಾಡುವಲ್ಲಿ ಇಲಿ ಹೆಗ್ಗಣಗಳ ಸುಳಿವಿಲ್ಲದೆ ಅವುಗಳ ಕಾಟ ತಪ್ಪಿಹೋಯಿತಂತೆ.

ಬಾಲ್ಮರಲ್ ಕ್ಯಾಸಲಿನ ಬಳಿ ಒಂದು ಹದ್ದಿನ ಕಾಲಿಗೆ ಒಂದು ಮೊಲದ ಗೂಡು ತಗಲಿಕೊಂಡು ನೇತಾಡುತ್ತಿದ್ದುದನ್ನು ಚಾರ್ಲ್ಸ್ ಕೊಲ್ಲಿ ಎಂಬುವವನು ನೋಡಿ ಕನಿಕರಪಟ್ಟು ಅದರ ಕಾಲು ಗೂಡಿಗೆ ಸಿಕ್ಕಿಕೊಂಡಿರುವುದನ್ನು ಬಿಡಿಸಲು ಪ್ರಯತ್ನಪಡಲು ಆ ಹದ್ದು ರೇಗಿ ಅವನ ಮೇಲೆ ಬೀಳಲು ಬಹಳ ರಭಸದಿಂದ ಹಾರಿ ಕೆಳಕ್ಕೆ ಬಂದಿತು. ಆದರೆ ಆ ಮನುಷ್ಯನು ಓರೆಯಾಗಿ ಸರಿದು ಅದರ ಏಟಿಗೆ ಸಿಕ್ಕದೆ ತಪ್ಪಿಸಿಕೊಂಡು ಆ ಪಕ್ಷಿಯು ತನ್ನ ಮೇಲೆ ಪುನಃ ಬೀಳಲು ಸುತ್ತಿಕೊಂಡುಬರುತ್ತಿರುವುದನ್ನು ಕಂಡು ಮರದ ರೆಂಬೆಯನ್ನು ಹಿಡಿದು ನೇತುಹಾಕಿಕೊಂಡನು. ಇವನ ಮೇಲೆ ಬೀಳಲು ಬಂದ ಹದ್ದು ಅವನು ನೇತುಹಾಕಿಕೊಂಡಿದ್ದ ರೆಂಬೆಗೆ ತನ್ನ ಶಕ್ತಿಯನ್ನೆಲ್ಲಾ ಬಿಟ್ಟು ಹೊಡೆದುದರಿಂದ ಕೂಡಲೇ ಸತ್ತುಬಿದ್ದಿತು. ಆ ಗೂಡನ್ನು ತೆಗೆದುನೋಡುವಲ್ಲಿ ಆ ಹದ್ದಿನ ಎರಡು ಹೆಬ್ಬೆರಳುಗಳು ಕತ್ತರಿಸಿಬಿದ್ದಿದ್ದುದು ಕಂಡುಬಂದಿತು.

ಬ್ರಹ್ಮಚರ್ಯ.

ವೀರ್ಯವನ್ನು ರಕ್ಷಿಸುವದು ಬ್ರಹ್ಮಚರ್ಯವು.

ಈ ನಮ್ಮ ದೇಹವು ರಸ, ರಕ್ತ, ಮಾಂಸ, ಮೇದ, ಅಸ್ಥಿ, ಮಜ್ಜ ಮತ್ತು ವೀರ್ಯಗಳೆಂಬ ಸಪ್ತಧಾತುಗಳಿಂದ ಪೋಷಿಸಲ್ಪಡುತ್ತದೆ. ಆದ್ದರಿಂದ ಇವುಗಳನ್ನು ನಾವು ಚೆನ್ನಾಗಿ ಕಾಪಾಡಿದರೆ ನಮ್ಮ ದೇಹವು ಆರೋಗ್ಯವಾಗಿಯೂ ಗಟ್ಟಿಯಾಗಿಯೂ ಇರುತ್ತದೆ. ನಮ್ಮ ದೇಹವು ಕೆಟ್ಟುಹೋಯಿತೆಂದರೆ ಜೀವವು ಅದನ್ನು ಬಿಟ್ಟುಹೋಗುತ್ತದೆ (ಅದೇ ಮರಣವು). ಆದ್ದರಿಂದ ನಾವು ಬದುಕುವದಕ್ಕೆ ಈ ದೇಹವು ಬಲವುಳ್ಳದ್ದಿರುವದು ಅತ್ಯವಶ್ಯಕವು. ನಾವು ಊಟಮಾಡುವ ಆಹಾರವು ರಕ್ತವಾಗಿ ಅದರಿಂದ ವೀರ್ಯವಾಗಬೇಕಾದರೆ ಒಂದು ತಿಂಗಳುಬೇಕು. ವೀರ್ಯವು ರಕ್ತಮಾಂಸಾದಿಗಳ ಸತ್ವವಾಗುವದರಿಂದ ಇದು ಅವೆಲ್ಲವುಗಳಿಗಿಂತಲೂ ಮಹತ್ವದ್ದಾಗಿದೆ. ಇಂಥ ಅಪರೂಪ ಮತ್ತು ಅಮೂಲ್ಯವಾದ ವಸ್ತುವನ್ನು ನಾಶಮಾಡಿಕೊಂಡರೆ ಜೀವಿತದ ಸ್ವಾರಸ್ಯವನ್ನೇ ಕಳೆದುಕೊಂಡಂತಾಗುವದು. ಕೆಲವು ಪ್ರಾಣಿಗಳು ವೀರ್ಯನಾಶವಾದೊಡನೆಯೇ ಮರಣ ಹೊಂದುವದನ್ನು ನೋಡಿದರೆ ಜೀವಧಾರಣೆಗೆ ವೀರ್ಯವು ಅವಶ್ಯಕವಾಗಿರುವದು ಗೊತ್ತಾಗುತ್ತದೆ. [illegible] ಮನುಷ್ಯನು [illegible]

ಯಾವ ವಿಧದಲ್ಲಿಯೂ ನಾಶಮಾಡದಿರುವದೇ ಉತ್ತಮವಾದ ಬ್ರಹ್ಮಚರ್ಯವು. ಇದಕ್ಕೆ ನೈಷ್ಠಿಕ ಬ್ರಹ್ಮಚರ್ಯವೆಂದು ಹೇಳುತ್ತಾರೆ. ಈ ವ್ರತವನ್ನು ಹಿಡಿಯುವದು ಸಾಧ್ಯವಿಲ್ಲದಿದ್ದರೆ ಪುರುಷರು ೪೮ ವರ್ಷಗಳವರೆಗೂ ಸ್ತ್ರೀಯರು ೨೪ ವರ್ಷಗಳವರೆಗೂ ಜಿತೇಂದ್ರಿಯರಾಗಿರುವದು ಮಧ್ಯಮ ಬ್ರಹ್ಮಚರ್ಯವು. ಇಷ್ಟು ಕಾಲದವರೆಗೆ ಬ್ರಹ್ಮಚರ್ಯದಿಂದಿರುವದು ಅಸಾಧ್ಯವೆಂದು ತೋರಿದರೆ ಪುರುಷರು ೨೫ ವರ್ಷಗಳವರೆಗಾದರೂ, ಸ್ತ್ರೀಯರು ೧೬ ವರ್ಷಗಳವರೆಗಾದರೂ ಜಿತೇಂದ್ರಿಯರಾಗಿರಲೇಬೇಕು. ಯಾಕೆಂದರೆ ಸ್ತ್ರೀ ಪುರುಷರ ಸಕಲಾವಯವಗಳು ಸಂಪೂರ್ಣಸ್ಥಿತಿಗೆ ಬರಬೇಕಾದರೆ ಇಷ್ಟು ಅವಧಿಯು ಬೇಕೇಬೇಕು. ಆ ಮುಂಚೆಯೇ ಬ್ರಹ್ಮಚರ್ಯವು ಭ್ರಷ್ಟವಾದರೆ ಎಲ್ಲಾ ಅವಯವಗಳ ಬೆಳವಣಿಗೆಯು ಕುಗ್ಗಿ ಹೋಗುತ್ತದೆ.

ಮನುಷ್ಯನು ಆಹಾರ, ನಿದ್ರೆ, ಭಯ ಮತ್ತು ಮೈಥುನಗಳಿಗೆ ಯಾವ ಪ್ರಮಾಣದಿಂದ ಈಡಾಗುತ್ತ ಹೋಗುತ್ತಾನೋ ಆ ಪ್ರಮಾಣದಿಂದ ಅವನಲ್ಲಿ ಪಶುತ್ವವು ಹೆಚ್ಚುತ್ತದೆ. ಮನುಷ್ಯನು ತನ್ನ ಜ್ಞಾನಶಕ್ತಿಯಿಂದ ಇವುಗಳನ್ನು ತಡೆಯಲು ಸಮರ್ಥನಾಗಿದ್ದಾನೆ, ಆದರೆ ಮನುಷ್ಯೇತರ ಪ್ರಾಣಿಗಳಿಗೆ ಇಂಥ ಶಕ್ತಿ ಇಲ್ಲಾ. ಆದಕಾರಣ ಅವು ಮೈಥುನಕ್ರಿಯೆಗೀಡಾಗುತ್ತವೆ. ಆ ಅಜ್ಞ ಪ್ರಾಣಿಗಳಂತೆಯೇ ಮನುಷ್ಯನು ಆಚರಿಸುವದು ಹಿತವಲ್ಲ. ಮನುಷ್ಯನು ಜಿತೇಂದ್ರಿಯನಾದಾಗಲೇ ಆತ್ಮಪ್ರಭೆಯು ಹೊರಸೂಸುತ್ತದೆ. ಬ್ರಹ್ಮಜ್ಞಾನಿಯಾಗಿ ಬ್ರಹ್ಮನಲ್ಲಿ ಲೀನವಾಗುವದೇ ಮನುಷ್ಯನ ಮುಖ್ಯ ಧ್ಯೇಯವಷ್ಟೆ? ಈ ನೈತಿಕ ಬ್ರಹ್ಮಚರ್ಯವಾದರೂ ಆ ಧ್ಯೇಯವನ್ನು ಸಾಧಿಸಲು ಮುಖ್ಯ ಸಾಧನವಾಗಿದೆ. ನೈಷ್ಠಿಕ ಬ್ರಹ್ಮಚಾರಿಗಳಾದರೆ ಪ್ರಪಂಚವು ನಿರ್ಜನ ಪ್ರದೇಶವಾಗುತ್ತದೆಂದು ಊಹಿಸಬಹುದು; ಆದರೆ ಎಲ್ಲರೂ ಅಂಥ ಬ್ರಹ್ಮಚಾರಿಗಳಾಗಿರುವದು ಎಂದೆಂದಿಗೂ ಸಾಧ್ಯವಲ್ಲ. ಮನುಷ್ಯನು ವಿವಾಹಿತನಾಗಿರಲಿ ಅಥವಾ ಅವಿವಾಹಿತನಾಗಿರಲಿ ಆತನು ವೀರ್ಯವನ್ನು ರಕ್ಷಿಸಿ ಚಿತ್ತ ಸ್ಥಿರತೆಯಿಂದ ಜಿತೇಂದ್ರಿಯನಾದ ವಿನಾ ಪರಾಕ್ರಮಶಾಲಿಯಾಗಿ ಆಗಲಿ ಆತ್ಮಜ್ಞಾನಿಯಾಗಿ ಆಗಲಿ ಆಗುವದು ಸಾಧ್ಯವೇ ಅಲ್ಲ.

ವೀರ್ಯನಾಶಕ್ಕೆ ಮುಷ್ಟಿಮೈಥುನ, ವ್ಯಭಿಚಾರ, ಬಾಲ್ಯವಿವಾಹ, ಸ್ವಪ್ನಾವಸ್ಥೆ, ಅತಿಸಂಭೋಗ, ಇವೇ ಮೊದಲಾದ ದುರಭ್ಯಾಸಗಳು ಕಾರಣವಾಗಿವೆ. ಈ ಕೆಟ್ಟ ಚಟಗಳು ದಿನೇ ದಿನೇ ಹೆಚ್ಚುತ್ತ ಹೋಗಿ ದೇಹಶಕ್ತಿಯನ್ನು ಕಡಿಮೆಮಾಡುತ್ತವೆ. ಆಗ ಬೆಳೆಯುವ ಗಿಡಕ್ಕೆ ಹುಳ ಹಿಡಿದಂತೆಯೇ ಸರಿ. ಜ್ಞಾನಿಯಾದ ಮನುಷ್ಯನ ವಿನಾ ಇನ್ಯಾವ ಪ್ರಾಣಿಗಳೂ ಈ ಘೋರ ಪಾಪಕಾರ್ಯವನ್ನು ಮಾಡುವದಿಲ್ಲ. ಅಸಂಖ್ಯ ಬಾಲಕರು ಮತ್ತು ಯುವಕರು ತಮ್ಮ ತಮ್ಮ ಕೈಯಿಂದಲೇ ತಮ್ಮ ಜೀವನಮಾನವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಪವಿತ್ರ ಹಸ್ತವನ್ನು ಅಪವಿತ್ರ ಕಾರ್ಯಕ್ಕುಪಯೋಗಿಸಿ ದುಃಖಕ್ಕೀಡಾಗುತ್ತಿದ್ದಾರೆ. ವೀರ್ಯವು ಯಾವ ರೀತಿಯಿಂದ ನಾಶವಾದರೂ ಉಂಟಾಗುವ ಕೇಡುಗಳು ಮಾತ್ರ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿರುತ್ತವೆ. ಇವುಗಳಿಂದ ಅನೇಕ ತರದ ಬೇನೆಗಳು ಬಂದು ನರಳಬೇಕಾಗುತ್ತದೆ. ಮತ್ತು ಇದರಿಂದ ಮಾನಹಾನಿ ಧನಹಾನಿಗಳಾಗುವದಲ್ಲದೆ ಅಕಾಲದಲ್ಲಿಯೇ ಪ್ರಾಣಹಾನಿಯೂ ಸಂಭವಿಸುತ್ತದೆ. ಇದೇ ಪ್ರಕಾರ ವ್ಯಭಿಚಾರವು ಅವರಿಗೆ ಮಾತ್ರ ಅಪಾಯವನ್ನುಂಟುಮಾಡದೆ ಅವರ ವಂಶಕ್ಕೂ ಮಹತ್ತರವಾದ ಕೇಡನ್ನುಂಟುಮಾಡುತ್ತದೆ. ಇದು ಇಷ್ಟು ಭಯಂಕರವಾದುದರಿಂದಲೇ ಮಹಾತ್ಮಾ ಗಾಂಧಿಯವರು ಹೇಳಿರುವದೇನೆಂದರೆ—“ಪರಸ್ತ್ರೀ ಗಮನಕ್ಕಿಂತ ಆತ್ಮಹತ್ಯವು ಸಹಸ್ರಪಟ್ಟು ಮೇಲಾದದ್ದಾಗಿದೆ.” ಅದರಂತೆಯೇ ಅತಿ ಸಂಭೋಗದ ವಿಷಯವಾಗಿ ಸ್ವಾಮಿ ರಾಮತೀರ್ಥರವರು ಹೇಳುವದೇನಂದರೆ—“ಯಾರು ಸಂತಾನೋತ್ಪತ್ತಿಯಲ್ಲಿಯೇ ಆಸಕ್ತರಾಗಿದ್ದಾರೋ ಮತ್ತು ಕೇವಲ ಕ್ಷಣಿಕ ಸುಖಕ್ಕಾಗಿ ವೀರ್ಯವನ್ನು ಬೇಕಾದಾಗ ಹಾಳುಮಾಡಲು ಸಿದ್ಧರಾಗುತ್ತಾರೋ ಅವರಿಗೆ ಧಿಕ್ಕಾರವಿರಲಿ.”

ಈಗ ಅನಾಚಾರವು ಅತ್ಯಧಿಕವಾಗಿರುವದರಿಂದ ಅಲ್ಪಾಯುಗಳೂ ನಿರ್ಬಲರೂ, ಅಜ್ಞರೂ ಆದ ಜನರು ಅತ್ಯಧಿಕವಾಗಿ ಜೀವನಾರ್ಥದ ಪ್ರಯತ್ನಕ್ಕೆ ಬಹು ಭಯಂಕರ ಸ್ವರೂಪವು ಪ್ರಾಪ್ತವಾಗಿದೆ. ಆದಕಾರಣ ಜನಾಂಗವು ನಾನಾವಿಪತ್ತುಗಳಿಗೀಡಾಗಿದೆ. ಈ ವಿಷಯದಲ್ಲಿ ಪಶುಗಳಿಂದಲೂ ಮನುಷ್ಯನು ಈಗ ಕಲಿಯಬೇಕಾಗಿದೆ. ಅವು ಕೂಡ ಕಾರ್ಯವನ್ನು ಕಾಲವರಿತು ಮಾಡುತ್ತವೆಯೆ ಹೊರ್ತು ಅನೇಕ ಜನರಂತೆ ವಿಷಯೋಪಭೋಗಕ್ಕೀಡಾಗುವದಿಲ್ಲ. ವೀರ್ಯರಕ್ಷಣೆಯ ಈ ಪವಿತ್ರ ಕಾರ್ಯವನ್ನು ಎಲ್ಲಿಯವರೆಗೆ ಗೃಹಸ್ಥರು ಆಚರಿಸುವದಿಲ್ಲವೋ ಅಲ್ಲಿಯವರೆಗೆ ಜನಾಂಗದಲ್ಲಿ ಸುಖಶಾಂತಿಗಳು ನೆಲಿಸುವದಿಲ್ಲ.

ಎಸ್. ಎಸ್. ಪಾಟೀಲ.

(ಆರೋಗ್ಯಚಂದ್ರಿಕೆಯಿಂದ.)

ಮಕ್ಕಳನ್ನು ಅಂಜಿಸುವುದು.

ತಂದೆತಾಯಿಗಳು ಎಂತಹ ಸಂದರ್ಭದಲ್ಲಿಯೂ, ತಮ್ಮ ಮಕ್ಕಳನ್ನು ಭೀತಿಗೊಳಿಸಿ, ಅವುಗಳ ಉದ್ದೇಶವನ್ನು ಭಂಗಪಡಿಸಬಾರದು. ತಂದೆತಾಯಿಗಳು ಶಿಕ್ಷಿಸುವರೆಂಬ ಭಯದಿಂದ ಯಾವಾಗಲೂ ಕಳವಳಿಸುತ್ತಿದ್ದರೆ, ಅಂತಹ ಮಕ್ಕಳ ಮಿದುಳು ದುರ್ಬಲವಾಗುವುದು. ತಂದೆತಾಯಿಗಳಿಗೆ ತಮ್ಮ ಮಕ್ಕಳ ವಿಚಾರದಲ್ಲಿ, ಪ್ರೀತಿಯೂ, ಅವುಗಳನ್ನು ನಿರಪಾಯವಾಗಿ ರಕ್ಷಿಸುವ ಆತುರವೂ ಮುಖ್ಯವಾಗಿರಬೇಕು. ಒಳ್ಳೇ ಮಾತಿನಿಂದಲೇ ಅವುಗಳನ್ನು ದಾರಿಗೆ ತರಬೇಕು. ಕೆಲವು ತಂದೆತಾಯಿಗಳೂ, ದಾದಿಯರೂ ತಿಳುವಳಿಕೆಯಿಲ್ಲದೆ, ಯಾವಾಗಲೂ ಮಕ್ಕಳನ್ನು ಹೊಡೆಯುವುದು, ಬಯ್ಯುವುದು, ಕತ್ತಲೆಮನೆಯಲ್ಲಿ ಕೂಡಿಡುವುದು, ಭಯಂಕರವಾದ ಕಥೆಗಳನ್ನು ಹೇಳುವುದು, ಇವೇ ಮೊದಲಾಗಿ ಇನ್ನೂ ನಾನಾ ವಿಧವಾದ ಕ್ರೂರಮಾರ್ಗಗಳಿಂದ ಮಕ್ಕಳನ್ನು ದಂಡಿಸುವುದುಂಟು. ಇದು ತಪ್ಪು. ಬೇರೆ ಕೆಲವರಿಗೆ, ಮಕ್ಕಳನ್ನು ಶಿಕ್ಷಿಸುವ ಉದ್ದೇಶವಿಲ್ಲದಿದ್ದರೂ, ಅವರಿಗೆ ವಿನೋದವಾದ ಕಥೆಗಳನ್ನು ಹೇಳುವ ನೆವದಿಂದಲೂ, ಕೊಲೆ, ದರೋಡೆ, ಕಳ್ಳತನ, ದುರ್ಮರಣ, ಹುಲಿ, ಹಾವು ಮುಂತಾದುವುಗಳ ಕ್ರೂರಸ್ವಭಾವ, ಇವುಗಳನ್ನೆಲ್ಲಾ ಹೇಳುವುದುಂಟು. ಇದೂ ಕೂಡದು. ಕಥೆಗಳನ್ನು ಹೇಳುವುದಾದರೆ ನಮ್ಮ ಪುರಾತನ ವೀರರ ಚರಿತ್ರೆಗಳನ್ನು ಹೇಳಿ ಪ್ರೋತ್ಸಾಹಗೊಳಿಸಬೇಕು.

ಮಕ್ಕಳ ಮುಂದೆ ದೊಡ್ಡವರು ವಾಂತಿಬೇದಿ, ಪ್ಲೇಗು, ಸಿಡುಬು, ವಿಷಮಜ್ವರ ಮುಂತಾದ ಕ್ರೂರಸಾಂಕ್ರಾಮಿಕಜಾಡ್ಯಗಳ ವಿಷಯವಾಗಿ ತಮಗಿರುವ ಭಯವನ್ನು ಹೊರಪಡಿಸಬಾರದು. ಇಂತಹ ಭೀತಿಗೆ ತಾವೇ ಉದಾಹರಣವನ್ನು ತೋರಿಸಿದಲ್ಲಿ, ಮಕ್ಕಳಿಗೂ ಅದೇ ಭೀರುಸ್ವಭಾವವು ಬೇರೂರುವುದು. ತಂದೆತಾಯಿಗಳು ಯಾವಾಗಲೂ ಉತ್ಸಾಹಶೀಲರಾಗಿ, ಧೈರ್ಯವನ್ನು ತೋರಿಸುತ್ತಿದ್ದಲ್ಲಿ ಅವರ ಮಕ್ಕಳೂ ಆರೋಗ್ಯದೃಢಕಾಯರೂ ಧೀರರೂ ಆಗುವರು.

“ನಿತ್ಯ ರೋಗಾಲಯಗಳು.”

“ನಿತ್ಯ ರೋಗಾಲಯ” ವೆಂದರೆ ಯಾವುದು? ಊಟದ ಹೋಟೆಲು ಅಥವಾ ಕಾಫಿಯ ಕ್ಲಬ್ ಎಂದು ಹೇಳಬಹುದು. ದೇವಾಲಯ, ಚಿಕಿತ್ಸಾಲಯಗಳಂತೆಯೇ ಈ ನಿತ್ಯ ರೋಗಾಲಯವು ಮನುಷ್ಯನಿಗೆ ಒಂದು [illegible] ಒಂದು ಮಹತ್ವದ್ದಾಗಿದೆ. [illegible] ಳ್ಳ ಈ ವಿಷಯದಲ್ಲಿ ನಾನು ವಿಶೇಷವಾಗಿ ಬರೆಯತಕ್ಕದ್ದೇನೂ ಇಲ್ಲ. ಆದರೆ ಯಾವ ವಿಷಯದಲ್ಲಿಯೂ ಎಲ್ಲರ ಅನುಭವವೂ ಒಂದೇ ವಿಧವಾಗಿರುವುದೆಂದು ಹೇಳಲಾಗುವುದಿಲ್ಲ. “ಲೋಕೋಭಿನ್ನರುಚಿಃ” ಎಂಬಂತೆ ಕಾಮಾಲೆ ರೋಗಿಯ ಕಣ್ಣಿಗೆ ಬೆಳದಿಂಗಳು ಹಳದಿಯಾಗಿ ಕಾಣತಕ್ಕದ್ದು ಅನುಭವವಲ್ಲವೆ? ಆದುದರಿಂದ ಪ್ರಕೃತ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ವಾಚಕವರ್ಗದ ಮುಂದಿಡುವೆನು. ಅನೇಕರು ಈ ನನ್ನ ಅಭಿಪ್ರಾಯದಲ್ಲಿಯೂ ಅನುಭವಶಾಲಿಗಳಿರುವುದರಿಂದ ನನ್ನ ಉದ್ಯಮವು ಅರಣ್ಯರೋದನದಂತೆ ನಿಷ್ಫಲವಾಗಲಾರದೆಂದು ಭಾವಿಸುತ್ತೇನೆ.

ಈಗ ಪ್ರಚಾರದಲ್ಲಿರುವ ಲಕ್ಷೋಪಲಕ್ಷ ಹೋಟೆಲುಗಳಿಗೆ ಅನ್ವರ್ಥವಾಗುವ “ನಿತ್ಯರೋಗಾಲಯ” ವೆಂಬ ಹೆಸರಿಗೆ, ನಿರಂತರದಲ್ಲಿಯೂ ರೋಗಗಳನ್ನುಂಟುಮಾಡುವ ಮನೆಯೆಂಬುದಾಗಿ ಅರ್ಥವಾಗುತ್ತದೆ. ಚಿಕಿತ್ಸಾಲಯವು ಹೇಗೆ ರೋಗವನ್ನು ಪರಿಹರಿಸುವ ಸ್ಥಳವಿಶೇಷವೋ, ಅದಕ್ಕೆ ವಿಪರೀತವಾಗಿ ನಿತ್ಯರೋಗಾಲಯವಾದ ಹೋಟೆಲು ನಿರಂತರದಲ್ಲಿಯೂ ರೋಗಗಳನ್ನುಂಟುಮಾಡುವ ಒಂದು ಸಂಸ್ಥೆಯಾಗಿದೆ. ಅದಕ್ಕೆ ಇನ್ನೊಂದು ಹೆಸರು ಕಾಫಿಯ ಕ್ಲಬ್! ಅದೇ ಅಂಟುರೋಗದ ತವರುಮನೆ! ಅದೇ ಈಗಿನ ಜನರ ಸಂಧ್ಯಾಮಂಟಪ! ಅದೇ ಊರುಕೇರಿಗಳಲ್ಲೆಲ್ಲಾ ತುಂಬಿಹೋಗಿರುವ ನಿತ್ಯರೋಗಾಲಯ! ಈ ಹೋಟಲೆಂಬ ಸಾಂಕ್ರಾಮಿಕ ರೋಗಾಲಯವು, ಪ್ರವಾಹವು ಹಳ್ಳವನ್ನು ಆಕ್ರಮಿಸುವಂತೆ ಪ್ರಪಂಚವನ್ನೆಲ್ಲಾ ಆಕ್ರಮಿಸಿದೆ. ಈ ಪ್ರವಾಹದಲ್ಲಿ ಎಷ್ಟು ಜನರು ಕೊಚ್ಚಿಕೊಂಡು ಹೋಗಿದ್ದಾರೆಯೋ, ಇದರಿಂದ ಎಷ್ಟೊಂದು ಬಡವರ ಮನೆಗಳು ಉಪವಾಸವಾಗಿರುತ್ತವೆಯೋ, ಇದಕ್ಕಾಗಿ ಎಷ್ಟು ಜನರು ತಮ್ಮ ಸುಖಸಂಪದಾರೋಗ್ಯಗಳಿಗೆ ರಾಜೀನಾಮೆಯನ್ನು ಕೊಟ್ಟಿರುತ್ತಾರೆಯೋ ಅದನ್ನು ಲೆಕ್ಕವಿಡುವ ಹಾಗಿಲ್ಲ. ಈ ಕಾಫಿಯ ಹೋಟಲೆಂಬುದು ಊರಿಗೆ ಒಂದಲ್ಲ! ಮಠಕ್ಕೆ ಒಂದಲ್ಲ! ಬೀದಿಗೆ ಒಂದಲ್ಲ! ಮನೆಗೆ ಒಂದೊಂದಾಗಿದೆ. ಇನ್ನುಮುಂದಕ್ಕೆ ತಲೆಗೆ ಒಂದರಂತೆಯೂ ಪರಿಣಮಿಸಬಹುದು.

ಈ ಹೋಟಲುಗಳಲ್ಲಿ ಕೆಲವು ಒಂದೇ ಸ್ಥಳದಲ್ಲಿರತಕ್ಕವುಗಳು. ಕೆಲವು ತಿರುಗತಕ್ಕವುಗಳು. ಕೆಲವು ವಾಹನರೂಪವಾದವುಗಳು. ತೀರ್ಥಯಾತ್ರೆಗಳನ್ನು ಮಾಡತಕ್ಕವುಗಳು. ಕೆಲವು ಪಾಸರ್ ದೇವತೆಯ ಆಕ್ರಮಣದಿಂದ ಊರಿಂದೂರಿಗೆ ಅಲೆಯುತಕ್ಕವುಗಳು ಕೆಲವು. ಎಂದರೆ ಒಟ್ಟನಮೇಲೆ ಇವುಗಳನ್ನು ಸ್ಥಾವರಜಂಗಮಗಳೆಂದು ಎರಡಾಗಿ ವಿಭಾಗಿಸಬಹುದು.

ಪ್ರಪಂಚದಲ್ಲಿ ರೋಗಗಳು ಹರಡುವುದಕ್ಕೆ ಈ ಹೋಟಲಿನಂತಹ ಕಾರಣವು ಎಲ್ಲಿ ಹುಡುಕಿದರೂ ಬೇರೆ ಸಿಕ್ಕಲಾರದು. ದುಡ್ಡುಕೊಟ್ಟು ರೋಗಗಳನ್ನು ಪಡೆಯತಕ್ಕವರಿಗೆ ಹೋಟಲು ಒಳ್ಳೆಯ ಆಧಾರವಾಗಿದೆ. ಹೋಟಲೆಂಬುದು ಕೇವಲಸ್ವಾರ್ಥದ ಮೂರ್ತಿಮತ್ತಾದ ರೂಪವಾಗಿದೆ. ಸ್ವಾರ್ಥಗ್ರಹವೇ ಕಾಫಿಕ್ಲಬ್ಬಿನ ಅಧಿದೇವತೆ. ಹೀಗಾದಮೇಲೆ ಅದು ಜನರ ಹಿತವನ್ನು ಬಯಸುವುದು ತೀರಾ ಅಸಂಭವ.

ನಮ್ಮ ಜೀವಿಕೆಯ ಸಾಧನಗಳಲ್ಲಿ ಆಹಾರವು ಒಂದು ಮುಖ್ಯವಾಗಿರುತ್ತದೆ. ಅದನ್ನು ಸರಿಯಾಗಿಟ್ಟುಕೊಳ್ಳುವುದೇ ಸುಖಜೀವಿಕೆಯನ್ನು ಬಯಸತಕ್ಕವರ ಮುಖ್ಯಕರ್ತವ್ಯ. ನಮ್ಮ ಆಹಾರಪದಾರ್ಥಗಳಲ್ಲಿ ಇನ್ನೊಬ್ಬನ ಸ್ವಾರ್ಥವು ತುಂಬಿಕೊಂಡಿದ್ದರೆ ಅದು ನಮ್ಮ ಮೈಗೆ ಅಂಟುವುದಿಲ್ಲ. ಅದೂ ಅಲ್ಲದೆ ಭಿನ್ನಭಾವವುಳ್ಳ ಅನೇಕಜನರ ಕಣ್ಣೆದುರಿಗೆ ಬೀಳುವ ಆಹಾರರಾಶಿಯೂ ಅಶುಚಿಯಾಗುತ್ತದೆ. ಮತ್ತು ಅಂತಹ ಜನರೊಂದಿಗೆ ಸಹಭೋಜನವೂ ದೇಹಕ್ಕೆ ವಿರೋಧವನ್ನು ಮಾಡತಕ್ಕದ್ದು.

ಲಾಭವೇಧ್ಯೇಯವಾಗಿವುಳ್ಳ ಹೋಟಲಿಗೆ ರೋಗಿಯಾದವನು ಬರಕೂಡದೆಂಬ ನಿರ್ಬಂಧವಿಲ್ಲ! ಇಂದಿನ ಪದಾರ್ಥಗಳನ್ನು ನಾಳೆಗಿಡಬಾರದೆಂಬ ನಿಯಮವಿಲ್ಲ! ಮತ್ತು ಒಳ್ಳೆಯ ವಸ್ತುಗಳಲ್ಲೇ ಪದಾರ್ಥಗಳನ್ನು ತಯಾರುಮಾಡಬೇಕೆಂಬ ಶ್ರದ್ಧೆಯಿಲ್ಲ! ತಯಾರಾದ ಪದಾರ್ಥಗಳನ್ನು ಶುಚಿಯಾಗಿ ವಿನಿಯೋಗಿಸಬೇಕೆಂಬ ನಿಯಮವಿಲ್ಲ! ಕಚ್ಚಿ ಕುಡಿಯತಕ್ಕ ಪಾತ್ರೆಗಳ ಬದಲಾವಣೆಯಿಂದ ಒಬ್ಬರ ಲಾಲೆಯು ಇನ್ನೊಬ್ಬರಲ್ಲಿ ಸೇರುವುದರಿಂದಲೂ ಹೋಟಲೆಂಬುದು ಹೊಸಹೊಸ ಕಾಯಿಲೆಗಳನ್ನುಂಟುಮಾಡುವ ಒಂದು ಕೂಟವಾಗಿದೆಯೆಂದು ಧಾರಾಳವಾಗಿ ಹೇಳಬಹುದು. ಹೋಟಲಿನ ಅತಿಥಿವರ್ಗವು, ಅಲ್ಲಿದ್ದ ಒಂದು ಮುಹೂರ್ತದವರೆಗೆ ಮಾತ್ರ ಜಾತಿಮತಗಳ ಭೇದಭಾವನೆಯನ್ನು ಬಿಟ್ಟು ಏಕಮತ್ಯದಿಂದ ಎಂಜಲುತಟ್ಟೆಯ ರುಚಿಯ ಸುಖವನ್ನು ಅನುಭವಿಸಬಹುದು.

ನವನಾಗರಕತೆಯು ನವಯುಗದಲ್ಲಿ ಅಗ್ರಸ್ಥಾನವನ್ನು ಹೊಂದಿದ ಕಾಫಿಯ ಹೋಟಲು ಹಸಿವೆಯಿಲ್ಲದಿದ್ದರೂ ಹುಸಿಹಸಿವನ್ನುಂಟುಮಾಡಿಸಿ ಅಹಿತಪದಾರ್ಥಗಳನ್ನು ತಿನ್ನಿಸಿ, ನಿರಂತರ ಅರುಚಿ, ಅಗ್ನಿಮಾಂದ್ಯ, ಅಜೀರ್ಣ, ಅತಿಸಾರ, ಜ್ವರ, ಕಜ್ಜಿಯೇ ಮೊದಲಾದ ರೋಗಗಳನ್ನುಂಟುಮಾಡುತ್ತದೆ. ಇತರ ಅಂಟುರೋಗಗಳು ನಮ್ಮನ್ನು ಸೇರುವುದಂತೂ ನಮಗೆ ತಿಳಿಯುವುದೇ ಇಲ್ಲ.

ವಿದ್ಯಾರ್ಥಿಗಳು ಹೋಟಲಿನಲ್ಲಿ ಊಟಮಾಡತಕ್ಕ ಪರಿಸ್ಥಿತಿಯನ್ನು ನೋಡಿದರೆ, ಹೋಟಲಿನ ಫಲಿತಾಂಶವು ನಮ್ಮ ಅನುಭವಕ್ಕೆ ಬರುತ್ತದೆ. ರೋಗಗಳನ್ನು ಕಡಿಮೆ ಮಾಡುವ ಉಪಾಯಗಳಲ್ಲಿ, ರೋಗಪ್ರಚಾರಕ್ಕೆ ಕಾರಣಗಳಾದ ಕೆಟ್ಟ ಹೋಟಲುಗಳನ್ನು ಕಡಿಮೆ ಮಾಡುವುದು ಮುಖ್ಯವಾಗಿರುತ್ತದೆ. ಕೆಟ್ಟದೇ ಆಗಲಿ ಒಳ್ಳೆಯದೇ ಆಗಲಿ, ಒಂದು ವಸ್ತುವು ನಿರಂತರವೂ ಕಣ್ಣೆದುರಿಗೆ ಬಿದ್ದರೆ, ಮನುಷ್ಯನಿಗೆ ಆ ವಸ್ತುವಿನಲ್ಲಿ ಸ್ವಾಭಿಮಾನ ಹುಟ್ಟುತ್ತದೆ. ಆದುದರಿಂದ ಕೆಟ್ಟ ಪದಾರ್ಥಗಳು ಕಣ್ಣಿಗೆ ಬೀಳದಂತೆ ಮಾಡಬೇಕು. ಹೋಟಲಿಡತಕ್ಕದ್ದು ದೇಶಾಂತರದ ಸಂಪ್ರದಾಯ! ಅನ್ನಸತ್ರಗಳನ್ನಿಡತಕ್ಕದ್ದು ನಮ್ಮ ಭರತಖಂಡದ ಸಂಪ್ರದಾಯ! ಹೋಟಲುಗಳಿಲ್ಲದ ಕಾಲದಲ್ಲಿಯೂ, ನಮ್ಮ ಪೂರ್ವಿಕರು ಜೀವನ ಮಾಡುತ್ತಿದ್ದರು. ಆದುದರಿಂದ ಈಗಲೂ, ಅಭಕ್ಷ್ಯಭಕ್ಷಣ, ಅಪೇಯಪಾನ, ಇವುಗಳನ್ನು ಬಿಡುವುದರಿಂದ ಅಂತಹ ಮರಣಸಂಕಟವೇನೂ ಇಲ್ಲ.

ಇತರರಿಗೆ ಮೇಲುಪಂಕ್ತಿಯಾಗಿರಲು ಅರ್ಹತೆಯುಳ್ಳ ಬ್ರಾಹ್ಮಣರೇ ಈ ವಿಷಯದಲ್ಲಿ ಬಹುಮಟ್ಟಿಗೆ ಮುಂದಾಗಿರುವುದು ತುಂಬ ವ್ಯಸನಕರವಾದ ವಿಷಯ. ಕಾಫಿ ಹೋಟಲುಗಳ ಪ್ರೊಪ್ರೈಟರುಗಳೂ, ಮೇನೇಜರುಗಳೂ ಈ ನನ್ನ ಪರುಷವಾದ ಲೇಖನಕ್ಕೆ ಸಿಟ್ಟಾಗದೆ, ತಮ್ಮ ತಮ್ಮ ಕುಂದುಗಳನ್ನು ತಿದ್ದಿಕೊಂಡು, ಅಭ್ಯಾಸಮಾಡದೆ, ಜನರಿಗೆ ಹಿತಬಯಸಿ, ಗಳಿಸಿದ ಹಣವನ್ನು ದುಂದುಗಾರಿಕೆಯಿಂದ ಹಾಳುಮಾಡದೆ, ಅದಕ್ಕು ಬೇಗನೆ ಮೇಲಿನ ನ್ಯೂನತೆಗಳನ್ನು ತಿದ್ದಿಕೊಳ್ಳುವರೆಂದು ನಂಬುತ್ತೇನೆ.

ಒಂದು ಪಟ್ಟಣದಲ್ಲಿರುವ ಒಂದೇ ಚಿಕಿತ್ಸಾಲಯವು, ಏಕಕಾಲದಲ್ಲಿ ಅನೇಕ ಕಡೆಗಳಲ್ಲಿ ಅನೇಕಾನೇಕ ಜನರಿಗೆ ವಿಷರೋಗಗಳನ್ನು ಹರಡುವ ನಿತ್ಯರೋಗಾಲಯಗಳನ್ನು ಎದುರಿಸಲಾರದು. ಆದುದರಿಂದ ಪ್ರಜಾಹಿತಚಿಂತಕರಾದವರು ಆ ಹೋಟಲುಗಳನ್ನು ಸುವ್ಯವಸ್ಥಿತಗಳನ್ನಾಗಿ ಮಾಡುವ ಪುಣ್ಯಕ್ಕೆ ಭಾಗಿಗಳಾಗಬೇಕೆಂದು ಪ್ರಾರ್ಥಿಸುತ್ತೇನೆ.

ವೀರಶೈವ ಸದ್ಭಕ್ತರುಗಳಿಗೆ.

ಶ್ರೀ ಪ್ರಣವಸ್ವರೂಪಿಗಳಾದ ಶ್ರೀಮನ್ನಿರಂಜನ ಚಿತ್ರದುರ್ಗದ ಮಠದ ಶ್ರೀ ಚಿಕ್ಕವೀರ ದೇಶಿಕೇಂದ್ರ ಮಹಾಸ್ವಾಮಿಯವರ ಸನ್ನಿಧಾನದಿಂದ ಆಶೀರ್ವಾದಪೂರ್ವಕ ತಿಳಿಸುವುದೇನೆಂದರೆ.—ಈ ರುಧಿರೋದ್ಗಾರಿ ಸಂವತ್ಸರದ ಕಾರ್ತೀಕ ಬಹುಳ ಚೌತಿ ಸೋಮವಾರ ದಿವಸ [illegible] ದೇಶಿಕೇಂದ್ರರಾದ ಶ್ರೀ [illegible] ಸ್ವಾಮಿಗಳು ಲಿಂಗೈಕ್ಯರಾದರು. ತತ್ಸಂಬಂಧವಾದ ಸಮಾರಾಧನೆ ಮತ್ತು ಗುರುಪಾದಪೂಜಾ ಮಹೋತ್ಸವವು ಇದೇ ಸಂವತ್ಸರದ ಮಾರ್ಗಶಿರ ಬಹುಳ ಸಾಧ್ಯಮಿ (ತಾ|| 24-12-1923 ನೇ) ಸೋಮವಾರದ ದಿವಸ ನಡೆಯಲು ನಿಶ್ಚಯಿಸಲ್ಪಟ್ಟಿರುವುದರಿಂದ ತಾವು ತಮ್ಮ ಪರಿವಾರದೊಡನೆ ಒಂದು ದಿವಸ ಮುಂಚಿತವಾಗಿ ಬಂದು ಈ ಪ್ರಮುಖರ ಕಾರ್ಯವನ್ನು ನೆರವೇರಿಸಿ ದರ್ಶನಾಶೀರ್ವಾದವನ್ನು ಪಡೆದು ಹೋಗಬೇಕಾಗಿ ಕೋರುತ್ತೇವೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ನಂಜನಗೂಡಿನ ಸ್ಥಿತಿ.

ಇಲ್ಲಿನ ಮ್ಯುನಿಸಿಪಾಲಿಟಿಯಲ್ಲಿ ಮುಂದುವರಿದ ಜನಾಂಗಗಳ ಪ್ರತಿನಿಧಿಗಳೇ ಹೆಚ್ಚೆಂಬುದು ವಿದಿತವು. ಹೀಗಿದ್ದರೂ ಪುರಾಭಿವೃದ್ಧಿ ಕಾರ್ಯಗಳೊಂದಾದರೂ ಮುಂದುವರಿಯುತ್ತಿಲ್ಲ. ದುಡ್ಡಿಗಾದರೆ ಹಿಂದುಳಿದವರು, ಹೆಸರಿಗಾದರೆ ಮಿಕ್ಕವರು! ಇದೊಂದು ಇಲ್ಲಿನ ಪದ್ಧತಿ. ಹೈಸ್ಕೂಲಿನ ವಿಷಯದಲ್ಲಿಯಾದರೂ ಇದೇ ಹಾಡು. ಬಹುಜನಗಳಿಗೆ ಬೇಡವಾಗಿರುವ ಸ್ಯಾನಿಟರಿ ಇನ್ಸ್‌ಪೆಕ್ಟರನ್ನು ಹೆಚ್ಚು ಸಂಬಳ ಇರುವ ಪ್ರತಿನಿಧಿಗಳು ಇಟ್ಟುಕೊಂಡಿರುವರು. ಇವರು ಇಲ್ಲಿಗೆ ಬಂದು ಹನ್ನೆರಡು ವರ್ಷಗಳ ಮೇಲಾಯಿತು. ಇದರ ರಹಸ್ಯವೇನೊ? ನಮಗಂತೂ ತಿಳಿಯದು. ಆಂಧ್ರಗಳ ದೀಪಗಳು ಇತ್ತೀಚೆಗೆ ಅಂತ್ಯಾವಸ್ಥೆಯನ್ನನುಕರಿಸುತ್ತಿರುವುವು. ಇದಕ್ಕೆ ಜವಾಬ್ದಾರರಾರು? ಈ ಪ್ರತಿನಿಧಿಗಳು ಮುಂದೇನು ಮಾಡಲಿರುವರೆಂಬುದನ್ನೂ ಹಿಂದೇನು ಮಾಡಿದರೆಂಬುದನ್ನೂ ದಯವಿಟ್ಟು ತಿಳಿಸಬಾರದೆ? ಸಂಪದಭ್ಯುದಯದ ಪತ್ರಿಕೆಯಲ್ಲಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಇಲ್ಲಿನ ಅಮಲ್ದಾರರ ಮೇಲಿನದೊಂದು ಬೊಬ್ಬೆ. ಅಗ್ರತೀರ್ಥವನ್ನು ಸ್ವೀಕರಿಸತಕ್ಕವರೇ ಅಮಲ್ದಾರರಾಗಬೇಕಂತೆ! ಶ್ರೀವೈಷ್ಣವರು ಶಿವದೇವಸ್ಥಾನದಲ್ಲಿ ತೀರ್ಥಸ್ವೀಕಾರಮಾಡುವುದಿಲ್ಲವಾಗಿ ಅಂತಹ ಅಮಲ್ದಾರರು ಬಂದರೆ ಇವರೇನು ಮಾಡುವರು? ಪ್ರಜೆಗಳಿಗೆ ರಾಜಪ್ರತಿನಿಧಿಗಳಾಗಿ ಕಾರ್ಯನಿರ್ವಾಹಮಾಡುವವರು ದೇವಸ್ಥಾನದಲ್ಲಿ ರಾಜಪ್ರತಿನಿಧಿಗಳಾಗಲು ಅನರ್ಹರು ಹೇಗೋ ತಿಳಿಯದು. ಮಠಕ್ಕೂ ಮಂತ್ರಪುಷ್ಪಕ್ಕೂ ಎಲ್ಲಕ್ಕೂ ಮೊದಲು ಅಗ್ರತೀರ್ಥವೆ? ಸ್ಪಷ್ಟವಾಗಿ ಬರೆದರಾದೀತು. ಆ ಲೇಖಕರು ಸ್ಥಾನಾರೂಢರಾದ ಅಧಿಕಾರಿಗಳನ್ನು ಏನೆಂದು ಸಂಬೋಧಿಸುವರೋ ತಿಳಿಯಬೇಕಾಗಿದೆ. ಸ್ವಲ್ಪ ಮುಸುಕನ್ನು ತೆಗೆದು ಈಚೆಗೆ ಬಂದರಾದೀತು. ಅಗ್ರತೀರ್ಥಕ್ಕೆ ಗುತ್ತಿಗೆಯು ಬ್ರಾಹ್ಮಣರೇ ಆಗಿರಬೇಕೆಂದೂ ರಾಜಪ್ರತಿನಿಧಿಗಳು ಬ್ರಾಹ್ಮಣರೇ ಆಗಿರಬೇಕೆಂದೂ ಒಂದು ಸ್ವಕಪೋಲಕಲ್ಪಿತ ಶಾಸ್ತ್ರವಚನವನ್ನು ಬರೆದಿದ್ದರಾದೀತು. ಇಂತಹ ಕ್ಷುದ್ರಲೇಖನಗಳಿಗೆ ನಮ್ಮ ಸಂಪದಭ್ಯುದಯ ಬಂಧುವು ಎಡೆಕೊಟ್ಟಿತಲ್ಲಾ ಎಂಬುದೊಂದೇ ಚಿಂತೆ. ಇದರಿಂದ ಬ್ರಾಹ್ಮಣರ ಹಕ್ಕಿಗೆ ಕುಂದೆಂದು ತಿಳಿದಿದ್ದರೆ ಅದು ತೀರಾ ತಪ್ಪು. ಇಲ್ಲಿ ಬ್ರಾಹ್ಮಣೇತರ ಆಫೀಸರುಗಳ ಹೆಚ್ಚು ಸಂಖ್ಯೆಯು ತೀರಾ ಅವಶ್ಯಕವು.

ಧರ್ಮಾಭಿಮಾನಿ.

ವೀರಶೈವ ಶಾಸ್ತ್ರಿಗಳ ಮರಣವು.

ಕಡೂರು ಡಿ|| ಅಜ್ಜಂಪುರದ ಹಿರೇಮಠದ ಬ್ರಹ್ಮಶ್ರೀ ಆರ್. ಉಮಾಪತಿಶಾಸ್ತ್ರಿಗಳವರು 8-10 ದಿವಸಗಳಿಂದ ಅಸ್ವಸ್ಥರಾಗಿದ್ದು ನೇಟಿವ್ ಪಂಡಿತರಿಂದ ವೈದ್ಯೋಪಚಾರ ನಡೆದಾಗ್ಯೂ ಗುಣಹೊಂದದೆ ಕಳೆದ ತಾ|| 20ರಲ್ಲಿ ಅರಸೀಕೆರೆ ತಾ|| ಹಾರನಹಳ್ಳಿ ಶ್ರೀಗುರು ಶಿವಲಿಂಗ ಮಹಾಸ್ವಾಮಿಗಳವರ ಆವಾಸಸ್ಥಾನವಾದ ಅಣ್ಣಾನಾಯಕನಹಳ್ಳಿಯಲ್ಲಿ ಶಾಸ್ತ್ರಿಗಳವರಿಗೆ ಕೇವಲ ಪ್ರಿಯ ಶಿಷ್ಯರಾದ ಚಿಕ್ಕ ಮಲ್ಲೇಗೌಡರ ಶಿವಮಂದಿರದಲ್ಲಿ ಶಿವನಾಮಸ್ಮರಣಪೂರ್ವಕ ಶಿವಾಧೀನರಾದರೆಂಬ ವಿಷಯ ತಿಳಿಸುವುದಕ್ಕೆ ತುಂಬಾ ವಿಷಾದಪಡಬೇಕಾಗಿದೆ. ಈ ಕೈ|| ಶಾಸ್ತ್ರಿಗಳವರು ರಿಕ್ತಕುಟುಂಬಿಗಳಾದ ಅಜ್ಜಂಪುರದ ಹಿರೇಮಠದ ರೇವಣಸಿದ್ಧದೇವರ ಪುತ್ರರಾಗಿ ಅಬ್ಬಿನಹೊಳಲ್ ಗ್ರಾಮದಲ್ಲಿ ಜನಿಸಿ ಬಾಲ್ಯಾವಸ್ಥೆಯಲ್ಲೇ ಮಾತಾಪಿತೃ ವಿಯೋಗವನ್ನು ಹೊಂದಿ ಬೀರೂರು ಶ್ರೀಮಂತ್ ಪತ್ರಿ|| ಚೆಂ|| ರುದ್ರಪ್ಪಯ್ಯನವರ ಆಶ್ರಯದಲ್ಲಿ ಸಂಸ್ಕೃತಾಭ್ಯಾಸವಮಾಡಿ ನಂತರ ದಾವಣಗೆರೆ, ಬೆಂಗಳೂರು, ಮೈಸೂರುಗಳಲ್ಲಿ ಕೆಲವುಕಾಲ ಪ್ರೌಢವಿದ್ಯಾಭ್ಯಾಸಮಾಡಿ ಪತ್ರಿ ಶ್ರೀಮಂತರ ಯಡೇಹಳ್ಳಿ ಇಂ|| ನಿ|| ಶಾಂತಪ್ಪಶೆಟ್ಟರ ಬೀರೂರು ಜವಿರ್ಗಾದಾರ್ ಉಬ್ರಾಣಿಮಠದ ಎನ್. ಎಂ. ಶಿವಲಿಂಗಪ್ಪಯ್ಯನವರ ಮತ್ತು ಶಿತನಕೆರೆ ಸಾಹುಕಾರ್ ಮ|| ಮರುಳಪ್ಪಶೆಟ್ಟರ ಸಹಾಯವಂಹೊಂದಿ ಕಾಶೀಕ್ಷೇತ್ರಕ್ಕೆ ತಮ್ಮ ಅನುಜ ಶ್ರೀಕಂಠಶರ್ಮರೊಡನೆ ಹೋಗಿ ಅಲ್ಲಿನ ವಿಶ್ವಾರಾಧ್ಯ ಜಗದ್ಗುರುಗಳವರ ಮತ್ತು ಶ್ರೀಮಂತ್ ವಾರದ ಅಪ್ಪಾಸಾಹೇಬ್ ಮಲ್ಲಪ್ಪ, ಬಸಪ್ಪ ಸೋಲಾಪೂರ್ ಈ ಮಹನೀಯರ ಕೃಪಾಬಲದಿಂದ 8-10 ವರ್ಷಕಾಲ ಶಾಸ್ತ್ರವಿದ್ಯಾಭ್ಯಾಸವನ್ನು ಮಾಡಿಕೊಂಡು ಬಂದು ವಿವಾಹಿತರಾಗಿ ತಿಪಟೂರಿನಲ್ಲಿ ವರ್ತಕತನವನ್ನು ಮಾಡಿಕೊಂಡಿದ್ದು ಪತ್ನಿವಿಯೋಗದುಃಖಕ್ಕೆ ಗುರಿಯಾಗಿ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಕೃಪಾನುಗ್ರಹಕ್ಕೆ ಒಳಪಟ್ಟು ತಿಪಟೂರು ಪ್ರಮುಖ ಮಹಾಜನರ ಯೋಗ್ಯಸಲಹೆಗಳೊಂದಿಗೆ ಸಂಸಾರತಾಪತ್ರಯದಲ್ಲಿ ವೈರಾಗ್ಯಶಾಲಿಗಳಾಗಿ ಸಮಾಜಸೇವೆಯಲ್ಲಿ ತಮ್ಮ ವಿದ್ವತ್ ಪ್ರೌಢಿಮೆಯನ್ನು ಮುಂದುವರಿಸುವ ಸುಯೋಗದಲ್ಲಿ ಇವರ ಸುಮಾರು 53 ನೆ ವಯಸ್ಸಿನಲ್ಲಿ 2 ಗಂಡು 1 ಹೆಣ್ಣು ಈ ಮೂರು ಚಿಕ್ಕ ಮಕ್ಕಳುಗಳನ್ನು ಬಿಟ್ಟು ಶಿವಸಾಯುಜ್ಯಹೊಂದಿದಬಗ್ಗೆ ಇವರ ಬಂಧುವರ್ಗದವರಿಗೂ ಆಪ್ತೇಷ್ಟರಿಗೂ ಶಿಷ್ಯಮಂಡಲಿಗೂ ಮನೋವ್ಯಥೆಯುಂಟಾಗಿರುವದು. ಜಗದೀಶನು ಶಿವೈಕ್ಯರಾದ ಶಾಸ್ತ್ರಿಗಳವರ ಆತ್ಮಕ್ಕೆ ಸದ್ಗತಿಯನ್ನು ಕೊಡಲೆಂದು ಅನನ್ಯಭಾವದಿಂದ ಪ್ರಾರ್ಥಿಸುವ,

ಓರ್ವ ದುಃಖಭಾಗಿ.

ಶ್ರೀ ಬಸವೇಶ್ವರ ಪುರಾಣಮಹೋತ್ಸವವು.

ಜಯಂತಿ ಜಗದಾನಂದಾ ಲೀಲಾಯುಕ್ತ ಮಹಾತ್ಮನಃ |
ಯಥಾ ರಾಕೇಂದುಶಿರಸಾಶ್ರಿತಾದೇ ಬಸವೇಶ್ವರಂ ||

ಲಾತೂರ ಗ್ರಾಮದಲ್ಲಿ ಶ್ರೀಮನ್ನಿರಂಜನ ಮುರುಘಸ್ವಾಮಿಗಳ ಮಠದಲ್ಲಿ ಹೋದ ಶ್ರಾವಣ ಬಹುಳ 8 ಸೋಮವಾರ ವೀರಶೈವ ಮತೋದ್ಧಾರಕ ಶ್ರೀ ಬಸವೇಶ್ವರ ಮಹಾಪುರಾಣವು ಪಂಡಿತಶ್ರೇಷ್ಠರೂ ಸುಪ್ರಸಿದ್ಧ ಪುರಾಣಿಕರೂ ಆದ ಸೋಲಾಪುರ [illegible] ಶ್ರೀ [illegible] ರದೇವರಿಂದ ಪ್ರಾರಂಭಿಸಲ್ಪಟ್ಟು ಎರಡು [illegible] ತಿಂಗಳವರೆಗೂ ನಡೆಯಿತು. ಪುರಾಣಿಕರು ವೇದಾಗಮೋಪನಿಷತ್ತುಗಳ ಧರ್ಮಗ್ರಂಥಗಳ ಆಧಾರಪೂರ್ವಕವಾದ ಸರಸವಾಣಿಯಿಂದ ಶ್ರೋತೃಸಮೂಹದ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಅಚ್ಚೊತ್ತಿದಂತೆ ಹೇಳುತ್ತಿದ್ದರು. [illegible]

ಮುಳಿಗಿ ಧನ್ಯತೆಯನ್ನು ಪ್ರತಿದಿನದಲ್ಲಿಯೂ ವ್ಯಕ್ತಗೊಳಿಸುತ್ತಿದ್ದರು. ದಿನವೂ ಇನ್ನೂರಕ್ಕೆ ಮೇಲ್ಪಟ್ಟ ಗಣಸಮೂಹಕ್ಕೆ ಪಾಯಸ ಭಕ್ಷ್ಯಾದಿ ಮೃಷ್ಟಾನ್ನತೃಪ್ತಿಯು ಭಕ್ತರಿಂದ ಮಾಡಲ್ಪಡುತ್ತಿದ್ದಿತು. ಪ್ರತಿಕಾಂಡದಲ್ಲಿಯೂ ಸಾವಿರಾರು ಗಣಂಗಳ ಸವಿಶೇಷ ಸಂತರ್ಪಣೆಯು ಭಾರಿ ದಕ್ಷಿಣೆಯು ನಡಿಯುತ್ತಿದ್ದಿತು. ಈ ಗ್ರಾಮದ ಸುತ್ತಮುತ್ತಣದ ಸಮೀಪದ ಹಳ್ಳಿಗಳಲ್ಲಿ ಪ್ಲೇಗಿನ ಗಲಾಟೆಯು ಅತಿಶಯವಾಗಿದ್ದು ಪುರಾಣ ಪ್ರಾರಂಭವಾದ 10-12 ದಿವಸಗಳಲ್ಲಿಯೇ ಇಲ್ಲಿಯೂ ಒಂದೆರಡು ಕೇಸುಗಳಾದರೂ ಪುರಾಣನಾಯಕನಾದ ಶ್ರೀ ಬಸವೇಶನ ಅಗಮ್ಯಪ್ರಭಾವದಿಂದ ಅದರ ತೊಂದರೆಯು ಏನೂ ಉಂಟಾಗದಂತೆ ಊರಲ್ಲಿ ಯಾವತರದ ಗಲಭೆಯು ಅಂಕುಂಸದೆ ಪುರಾಣವು ನಿರ್ವಿಘ್ನತೆಯಿಂದ ಪೂರೈಸಲ್ಪಟ್ಟಿತು. ಪುರಾಣಸಮಾಪ್ತಿಯ ತಿಂಗ 15 ದಿವಸಗಳ ಮುಂಚೆಯೆ ಶ್ರೀಮನ್ನಿರಂಜನ ಪರಮಪೂಜ್ಯಪಾದರೂ ವಾಕ್ಸಿದ್ಧಿಯುತರೂ ಆದ ಬೀದರು ಶ್ರೀ ಗುರುಬಸವಸ್ವಾಮಿಗಳು ತುಳ್ಕಿರಿ ವಿರಕ್ತಮಠದ ಶ್ರೀ ಶಿವಲಿಂಗಸ್ವಾಮಿಗಳು ಸೋಲಾಪೂರು ಕಿಲ್ಲೆಮಠದ ಶ್ರೀ ನಿಜಗುಣಸ್ವಾಮಿಗಳು ಮೊದಲಾದ ವಿರಕ್ತಮೂರ್ತಿಗಳು, ಶ್ರೀಮದ್ವಪ್ಪನಲಿಂಗಚಕ್ರವರ್ತಿಗಳಾದ, ಅವಸದ ಶ್ರೀ ಶಾಂತವೀರಸ್ವಾಮಿಗಳು ಬರದಾಪುರದ ಶ್ರೀ ಮಹಾಲಿಂಗಸ್ವಾಮಿ ಪಟ್ಟದದೇವರು ಶ್ರೀ ಕಲ್ಯಾಣದ ಪಟ್ಟದದೇವರು ಹಾಗರಿಗಿ ಶ್ರೀ ಪಟ್ಟದದೇವರು ಆದಿಯಾದ ಅನೇಕ ಗುರುಸ್ಥಲ ಮೂರ್ತಿಗಳು ಮತ್ತು ನಾಲ್ವಾರದ ಸಂ|| ಜಗದೀಶಶಾಸ್ತ್ರಿಗಳು ಸೋಲಾಪೂರ ವಾರದ ಪಾಠಶಾಲೆಯ ವಿದ್ಯಾರ್ಥಿಗಳು, ಅವಸದ ವೀರಭದ್ರಶಾಸ್ತ್ರಿಗಳು ಮೊದಲಾದ ಪಂಡಿತರು ಪುರಾಣಚಾಲಕರಾದ ಪುರಪ್ರಮುಖರಿಂದ ಆಮಂತ್ರಿಸಲ್ಪಟ್ಟಿದ್ದರು. ಕಾರ್ತೀಕ ಶುದ್ಧ 13 ಬುಧವಾರ ಪುರಾಣ ಸಮಾಪ್ತಿಯು ಕಾ|| ಶು|| 14 ಗುರುವಾರ ಮಹಾಗಣಾರಾಧನೆಯು ಶು|| 15 ಶುಕ್ರವಾರ ಶಿವಭಜನೆಯು ಕಾ|| ಬ|| 1 ಶನಿವಾರ ಸಾಟ್ಟಿಹಾಸನೆಮೆರವಣಿಗೆಯು ಈ ಪ್ರಕಾರವಾದ ಸುವ್ಯವಸ್ಥೆಯ ಬಗ್ಗೆಯೂ ಸಮ್ಮಾನಕ್ಕಾಗಿಯೂ ಪುರಾಣದ ಮಂಗಲಕಿಂತಲೂ ಎರಡು ದಿನ ಮುಂಚಿತವಾಗಿ ಕೈ|| ಶ್ರೀಮಂತ ರಾ|| ಬ|| ಅಪ್ಪಾಸಾಹೇಬ ವಾರದ ಇವರ ಟ್ರಸ್ಟಿಗಳಾದ ಶ್ರೀಯುತ ಮಲ್ಲಿಕಾರ್ಜುನಪ್ಪ ಅಣ್ಣಾ ಪಾಟೀಲ ಇವರು ಇಲ್ಲಿಯ ಅಗ್ರಗಣ್ಯರಿಂದ ಆಮಂತ್ರಿತರಾಗಿ ಬಂದಿದ್ದರು. ಮುಂಬಯಿ ಕಾಯದೆಕೌನ್ಸಿಲ್ಲಿಗೆ ಇದೆ ವರ್ಷ ನೂತನವಾಗಿ ಸೋಲಾಪೂರ ಶಹರವತಿಯಿಂದ ಉಮೇದವಾರರಾಗಿ ನಿಂತಿದ್ದವರಲ್ಲಿ ಬಹುಮತಗಳಿಂದ ಚುನಾಯಿಸಿಬಂದ ಶ್ರೀಮಂತ ನಾಗಪ್ಪ ಅಣ್ಣಾ ಆಬುದೊಲಪುರಕರ ಇವರು ಪುರಾಣೋತ್ಸವಕ್ಕೆ ಆಮಂತ್ರಿಸಲ್ಪಟ್ಟು ಕಾ|| ಶು|| 15 ಶುಕ್ರವಾರ ರಾತ್ರಿ 11 ಗಂಟೆಗೆ ಲಾತೂರಸ್ಟೇಷನಕ್ಕೆ ಬಂದಿಳಿದರು. ತತ್ಕ್ಷಣದಲ್ಲಿ ಬ್ಯಾಂಡು ಮೊದಲಾದ ಅನೇಕ ಮಂಗಲವಾದ್ಯಗಳು ಭೋರ್ಗರೆಯುತ್ತಿರಲು ಸಾವಿರಾರು ಪ್ರೇಕ್ಷಕಜನರ ಕರತಲಜಯಘೋಷದೊಡನೆ ಪುರಪ್ರಮುಖರು ನಾಗಪ್ಪಣ್ಣನವರನ್ನು ಪುಷ್ಪಹಾರಾದಿಗಳಿಂದ ಮರ್ಯಾದಿಸಿ ಉತ್ಸವದೊಡನೆ ಶ್ರೀ ಮುರಘಸ್ವಾಮಿಗಳ ಮಠಕ್ಕೆ ಕರೆತಂದು ಬೀದರು ಶ್ರೀಗಳ ಮೊದಲಾದ ಮಹನೀಯರ ದರ್ಶನಾಶೀರ್ವಾದಗಳಾದ ಬಳಿಕ ವಸತಿಗಾಗಿ ಮೊದಲೆ ಸಿದ್ಧಗೊಳಿಸಿದ್ದ ರಾಜಾನರಸಿಂಗಗಿರಜಿಯವರ ಜಿನಿಂಗಫ್ಯಾಕ್ಟರಿಯ ಭವ್ಯವಾದ ಬಂಗಲೆಯಲ್ಲಿ ಇಳಿಸಿದರು. ಮಾರನೆ ದಿನ ಮಧ್ಯಾಹ್ನ 2 ಗಂಟೆಗೆ ಮುರಘಸ್ವಾಮಿಗಳ (ಕಿಲ್ಲೆಮಠದ ನಿಜಗುಣಸ್ವಾಮಿಗಳ) ಮಠದಲ್ಲಿ ಸಭೆಯು ಸೇರಿ ಇಲ್ಲಿಯ ಪ್ರಸಿದ್ಧ ವಕೀಲರಾದ ಮಿ|| ಬಾಬೂರಾವವಕೀಲರು, ವೀರಶೈವ ಶಿಕ್ಷಣ ಪ್ರಸಾರಕ ಮಾಸಿಕ ಪುಸ್ತಕದ ಎಡಿಟರರೂ ಪ್ರಸಿದ್ಧ ವಕ್ತೃಗಳೂ ಆದ ವೆ. ವಿರೂಪಾಕ್ಷದೇಶಿಕೇಂದ್ರರು ವಕ್ತೃಕಲಾಪಟುಗಳಾದ ಶ್ರೀಯುತ ಮಲ್ಲಿಕಾರ್ಜುನಪ್ಪ ಅಣ್ಣಾ ಪಾಟೀಲ ಇವರೆ ಮೊದಲಾದ ವಿದ್ಯಾವಿಶಾರದರು ಶ್ರೀಮಂತ ನಾಗಪ್ಪಣ್ಣನವರು ಮುಂಬಯಿ ಕಾಯದೆಕೌನ್ಸಿಲ್ಲಿನಲ್ಲಿ ಮೆಂಬರಾಗಿ ಬಂದುದರಿಂದ ಸಮಾಜಕ್ಕುಂಟಾದ ಆನಂದವನ್ನು ಪ್ರಕಟಿಸುವದಲ್ಲದೆ ಅವರ ಸೌಜನ್ಯವನ್ನು ತಮ್ಮ ರಸವತ್ತಾದ ವಾಣಿಯಿಂದ ಕೊಂಡಾಡಿ ಸನ್ಮಾನಿಸಿದರು. ಬಳಿಕ ಶ್ರೀಮಂತ ನಾಗಪ್ಪಣ್ಣನವರು ಅಸ್ಖಲಿತವಾಣಿಯಿಂದ ಸಮಯಕ್ಕನುಗುಣವಾದ ಭಾಷಣವನ್ನು ಮಾಡಿದರು. ಅನಂತರ ಕುಸುಮಮಾಲಿಕಾಗಂಧ ತಾಂಬೂಲಾದಿ ಮರ್ಯಾದೆಯೊಡನೆ ಸಭೆಯು ಸಾಯಂಕಾಲ 4½ ಗಂಟೆಗೆ ವಿಸರ್ಜಿಸಲ್ಪಟ್ಟಿತು. 5 ಗಂಟೆಯಲ್ಲಿ ಇಲ್ಲಿಯ ಶ್ರೀಮಂತ ನಾಗಶೆಟ್ಟೆಪ್ಪ ಜವಳಿ ಇವರ ನೂತನ ಅಂಗಡಿಯಲ್ಲಿ ವಿರೂಪಾಕ್ಷದೇಶಿಕೇಂದ್ರರ ಅಧ್ಯಕ್ಷತೆಯಲ್ಲಿ ಸಭೆಸೇರಿ ನಗರವಾಸಿಗಳ ವತಿಯಿಂದ ಮಾನಪತ್ರವು ಒಪ್ಪಿಸಲ್ಪಟ್ಟಿತು. 7 ಗಂಟೆಯಲ್ಲಿ ಶ್ರೀಮಂತ ಚನ್ನಪ್ಪ ಅಣ್ಣಾ ಎಣ್ಣೆಗುಣಿ ಇವರ ಅಂಗಡಿಯಲ್ಲಿ ಸಭೆಗೂಡಿ ಅನೇಕ ವ್ಯಾಖ್ಯಾತೃಗಳ ಉಪನ್ಯಾಸಗಳಾದ ಬಳಿಕ ಪುಷ್ಪಮಾಲಾದಿಗಳ ಮರ್ಯಾದೆಯು ಜರಿಗಿತು. ಉತ್ಸವಕ್ಕಾಗಿ ಬಂದ ಅವಸದ ವ್ಯಾಪಾರಿ ಪ್ರಮುಖರು ನಾಗಪ್ಪಣ್ಣನವರು ಅನಿವಾರ್ಯ ಕಾರ್ಯಗೌರವ ಮೂಲಕ ತಮ್ಮ ಗ್ರಾಮಕ್ಕೆ ಬಾರದಿರುವದನ್ನು ತಿಳಿದು ಅದೇ ಸಭೆಯಲ್ಲಿಯೆ ಅವಸದ ವೀರಶೈವ ಸಮಾಜದ ವತಿಯಿಂದ ಮಾನಪತ್ರವನ್ನು ಒಪ್ಪಿಸಿ ಮರ್ಯಾದಿಸಿದರು. ನಾಗಪ್ಪಣ್ಣನವರು ಇಲ್ಲಿಯ ಶ್ರೀ ಸಿದ್ಧೇಶ್ವರ ವಾಚನಾಲಯಕ್ಕೆ ಅದರ ಚಾಲಕರ ಆಮಂತ್ರಣವನ್ನು ಗೌರವಿಸಿ ಹೋಗಿ ವಾಚನಾಲಯದ ಸುವ್ಯವಸ್ಥೆಯನ್ನು ನಿರೀಕ್ಷಿಸಿ ಸಂಸ್ಥೆಯ ಪುರೋಭಿವೃದ್ಧಿಗಾಗಿ 25 ರೂಪಾಯಿಗಳನ್ನು ಬಹುಮಾನಿಸಿದರು. ಅದೆ ದಿವಸ ಸಾಯಂಕಾಲ 9 ಗಂಟೆಗೆ ಭವ್ಯವಾದ ಪಲ್ಲಕ್ಕಿಯಲ್ಲಿ ಶ್ರೀ ಬಸವೇಶ್ವರಮೂರ್ತಿಯನ್ನೂ ಪುರಾಣವನ್ನೂ ಇರಿಸಿ ಮೆರವಣಿಗೆಯು ಹೊರಟಿತು. ಪಲ್ಲಕ್ಕಿಯ ಮುಂದೆ ವೈದಿಕರು ವೇದಘೋಷವನ್ನು ಮಾಡುತ್ತಿದ್ದರು. ಉತ್ಸವವು ವಾದ್ಯವಿಶೇಷದಿಂದಲೂ ಜನಸಮೂಹದಿಂದಲೂ ಅಲಂಕೃತವಾದ ಬೀದಿಯಲ್ಲಿ ಹೊರಟು ಅಲ್ಲಲ್ಲಿಗೆ ನಾರಿಯರು ಬೆಳಗುವ ಮಂಗಳಾರತಿಯನ್ನೂ ಒಪ್ಪಿಸುವ ಫಲವನ್ನೂ ಕೈಕೊಳ್ಳುತ ಮಧ್ಯಬಜಾರಕ್ಕೆ ರಾತ್ರಿ 1 ಗಂಟೆಗೆ ಬಂದು ಅಲ್ಲಿರುವ ರಮಣೀಯವಾದ ಗ್ಯಾಸಬತ್ತಿಯ ಕಮಾನುಗಳಿಂದ ಅಲಂಕೃತವಾದ ರಮಣೀಯಮಂಟಪದಲ್ಲಿ ದಿಂಡಿ (ಭಜನಾವಿಶೇಷ) ಯ ಭಜನೆಯು ಭಕ್ತಿರಸವಿಶೇಷದಿಂದಲೂ ವಾರನಾರಿಯರ ಗಾನದ ಸೊಬಗಿನಿಂದಲೂ ತಾರಾಮಂಡಲಾದಿ ಮದ್ದಿನ ಮೆಚ್ಚಿಗೆಯಿಂದಲೂ ನಾಲ್ಕು ಗಂಟೆಯವರಿಗೂ ನೋಟಕವೃಂದದ ನೋಟಗಳಿಗೆ ತೃಪ್ತಿಯನ್ನಿತ್ತು ಕ್ರಮೇಣ ಉತ್ಸವಗೊಂಡು ಮುರಘಮಠದ ಶಾಖಾಮಠದಲ್ಲಿ ಅಗ್ಗಿಯ ಉತ್ಸವವನ್ನು ತೀರಿಸಿ ಸದರಿ ಮಠಕ್ಕೆ ರವಿವಾರ ಮುಂಜಾನೆ 9 ಗಂಟೆಗೆ ಮೆರವಣಿಗೆಯು ಬಂದು ಮುಟ್ಟಿತು. ಬಳಿಕ ಪುರಾಣಿಕಾಗ್ರೇಸರರು ಪದ್ಧತಿಪ್ರಕಾರ ಪುನಃ ಪುರಾಣದ ಮಂಗಲಾಚರಣವನ್ನು ಮಾಡಿ ಶ್ರೋತೃಗಳಿಗಾನಂದವನ್ನು ಮಾಡಿದರು. ಪುರಾಣಚಾಲಕರಾದ ಶ್ರೀಮಂತ ಬಸವಂತ ರಾಯಚೆಟ್ಟಿ, ಗುರುಶಾಂತಯ್ಯಸ್ವಾಮಿ ಕೊಪ್ಪಗಾವ, ವೀರಭದ್ರಪ್ಪ ರಾಚೋಟಿ, ಚನ್ನಪ್ಪ ಎಣ್ಣೆಗಾರ ಶಂಕರಪ್ಪ ಉಪಿಗೆ ಮಡಿವಾಳಪ್ಪ ಮಂಟೋಳ, ಶಂಕರಪ್ಪ ಬಿಡೆ ಇವರು ಅಭ್ಯಾಗತರಾಗಿ ಬಂದಿರುವ ಶ್ರೀಮನ್ನಿರಂಜನ ಮಹಾಸ್ವಾಮಿಗಳಿಗೂ ಶ್ರೀಮದ್ರೇವಲಿಂಗಪಟ್ಟಾಧಿಕಾರಿಗಳಿಗೂ ಶಾಸ್ತ್ರಿಗಳಿಗೂ ದೇಶಿಕರಿಗೂ ವಸ್ತ್ರಗಳಿಂದಲೂ ದಕ್ಷಿಣೆಯಿಂದಲೂ ಮರ್ಯಾದಿಸಿ ಪಾಠಕವ್ಯಾಖ್ಯಾತೃಗಳಾದ ಪುರಾಣಿಕೋತ್ತಮರನ್ನು ವಸ್ತ್ರಾದಿಗಳಿಂದ ಮರ್ಯಾದಿಸಿದರು. ಪರಸ್ಥಳದಿಂದ ಬಂದಿದ್ದ ಗಣಸಮೂಹಕ್ಕೆ ಒಂದೊಂದು ರೂಪಾಯಿಯಂತೆ ಭೂರಿದಕ್ಷಿಣೆಯು ಕೊಡಲ್ಪಟ್ಟಿತು. ಬಳಿಕ ವಿರೂಪಾಕ್ಷದೇಶಿಕೇಂದ್ರರು, ಪುರಾಣವು ಅವಿಚ್ಛಿನ್ನವಾಗಿ ನಡೆದು ಸಂ|| [illegible] ದೊರೆತು, ಶ್ರೋತೃಕರವು ಆನಂದಗೊಂಡುದಕ್ಕೆ ಪುರಾಣಿಕರ ಆಧಾರವನ್ನು ಮತ್ತು ಶ್ರೀ ಬಸವೇಶನ ಮಹಿಮೆಯನ್ನು ಶ್ರೋತೃಗಳಲ್ಲಿ ಪ್ರತಿಫಲಿಸುವಂತೆ ಭಾಷಣ ಮಾಡಿದರು. ಸೋಲಾಪುರ ಕಿಲ್ಲೆಮಠದ ಶ್ರೀಮನ್ನಿರಂಜನ ನಿಜಗುಣಸ್ವಾಮಿಗಳು “ಸಮಾಜದ ಐಕ್ಯ” ಈ ವಿಷಯದಲ್ಲಿ ಅರ್ಧತಾಸಿನವರೆಗೂ ಸರಸವಾಗಿ ಶ್ರಾವಕರ ಮನಸ್ಸಿನಲ್ಲಿ ಸ್ಥಾಯಿಯಾಗಿ ನಿಲ್ಲುವಂತೆ ಭಾಷಣ ಮಾಡಿದರು. ಇದೇ ವಿಷಯವನ್ನು ವಿರೂಪಾಕ್ಷದೇಶಿಕೇಂದ್ರರು ಪುಷ್ಟೀಕರಿಸಿ ಹೇಳಿದರು. ಸೋಲಾಪುರ ಪಾಠಶಾಲಾಧ್ಯಾಪಕ ಸಾ|| ಜಗದೀಶಶಾಸ್ತ್ರಿಗಳು “ವೀರಶೈವ ಮತತತ್ವ” ಈ ವಿಷಯದ ಮೇಲೆ ಸಪ್ರಮಾಣವಾಗಿಯೂ ಸಮಂಜಸವಾಗಿಯೂ ಶ್ರೋತೃಗಳಿಗೆ ತಿಳಿಯುವಂತೆ ಉಪನ್ಯಾಸವಾಡಿದರು. ಬಳಿಕ ಶ್ರೀ ಸ್ವಾಮಿಗಳ ಸನ್ನಿಧಿಯಲ್ಲಿ ಸಕಲ ಭಕ್ತವೃಂದಕ್ಕೆ ಆಶೀರ್ವಾದವಾದ ಬಳಿಕ ಶ್ರೀ ಬಸವದೇವರ ಪ್ರಚಂಡಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ನಾಲ್ಕು ದಿವಸಗಳ ವರಿಗೂ ಅನೇಕ ದೇಶಗಳಿಂದ ಬಂದ 25-26 ಸಾವಿರ ಭಕ್ತಮಾಹೇಶ್ವರರಿಗೆ ಸಂತರ್ಪಣವು ನಡೆಯಿತು. ಲಾತೂರ ಗ್ರಾಮವು ನೈಜಾಮ ಇಲಾಖೆಯಲ್ಲಿದ್ದು ಲಾಯಟ್ ರೈಲುಮಾರ್ಗದಲ್ಲಿರುತ್ತದೆ. ಇಲ್ಲಿ 15-20 ಜಿನಿಂಗ ಫ್ಯಾಕ್ಟರಿಗಳೂ ಪ್ರೆಸ್‌ಗಳೂ ಇರುತ್ತವೆ. ಹಂಗಾಮದಲ್ಲಿ 5-6 ತಿಂಗಳ ಪ್ರತಿನಿತ್ಯ 10 ಸಾವಿರವರಿಗೂ ಹತ್ತಿಯ ಬಂಡಿಗಳು ಬಜಾರಕ್ಕೆ ಬರುತ್ತಿರುತ್ತವೆ. ಹತ್ತಿಯ ವ್ಯಾಪಾರವು ಈ ಗ್ರಾಮದಲ್ಲಿ ದೊಡ್ಡ ಪ್ರಮಾಣದಿಂದ ನಡೆಯುತ್ತಿರುತ್ತದೆ.

ಓರ್ವ ಪ್ರೇಕ್ಷಕ.

ವಿನಂತಿ.

ಇದರಡಿ ವಿವರಿಸಿರುವ ದರದಂತೆ ನಿಮಗೆ ಬೇಕಾದಷ್ಟು ಕಾಪಿಗಳಿಗೆ ಆಗುವ ಪೂರ್ತಾ ಮೊಬಲಗು ಅಡ್ವಾನ್ಸ್ ರವಾನಿಸಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಯಾವ ಖರ್ಚೂ ಇಲ್ಲದೆ ಫ್ರೀಯಾಗಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

I. ಈಗ ಮೈಸೂರಿಗೆ ದಯಮಾಡಿಸಿರುವ ನೈಸ್ರ್ಯಾಯ ದಂಪತಿಗಳ ಫೋಟೋ ಕಾಪಿ 1ಕ್ಕೆ 0-2-0, 50ಕ್ಕೆ 2-2-0, 100ಕ್ಕೆ 4-0-0, ಪೋಸ್ಟೇಜ್ ಮಾಫಿ.

II. ನಮ್ಮನ್ನಾಳಿದ ಮಹಾಸ್ವಾಮಿಯವರಾದ ಶ್ರೀಮನ್ ಚಾಮರಾಜೇಂದ್ರ ಒಡೆಯರ್‌ರವರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರ್‌ರವರ ಫೋಟೋ ಇದ್ದು ಮೈಸೂರು ಅರಮನೆ ಪಿಕ್ಚರ್ ಸಹಾ ಇರುವ ಕಾಪಿ 1ಕ್ಕೆ 0-1-0, 50ಕ್ಕೆ 1-2-0, 100ಕ್ಕೆ 2-0-0, ಪೋಸ್ಟೇಜು ಮಾಫಿ.

III. ಅನೇಕ ವಿಷಯಗಳನ್ನೊಳಗೊಂಡಿದ್ದು ಶ್ರೀಮನ್ ಮಹಾರಾಜಸಹೋದರರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರ್‌ರವರ ಫೋಟೋ ಇರುವ ಶೀಟ್ ಕ್ಯಾಲೆಂಡರ್ 1ಕ್ಕೆ 0-1-0, 50ಕ್ಕೆ 1-2-0, 100ಕ್ಕೆ 2-0-0, ಪೋಸ್ಟೇಜು ಮಾಫಿ.

IV. ದೆಹಲಿದರ್ಬಾರ್ ಫೋಟೊ ಸಮೇತವಿದ್ದು ತಿಂಗಳಿಗೊಂದು ಶೀಟ್‌ನಂತೆ ಹರಿದುಬಿಡುವ ಅಂದವಾದ ಕ್ಯಾಲೆಂಡರ್ 1ಕ್ಕೆ 0-2-6, 12ಕ್ಕೆ 1-8-0, ಪ್ಯಾಕಿಂಗ್ ಪೋಸ್ಟೇಜು ಮಾಫಿ.

V. 1924ನೇ ಇಸವಿಯ ಜೇಬಿನಲ್ಲಿಡಲು ಯೋಗ್ಯವಾದ ಅಂದವಾದ ಪಾಕೆಟ್ ಕ್ಯಾಲೆಂಡರ್ 1ಕ್ಕೆ 0-2-0, 12ಕ್ಕೆ 1-0-0, ಪ್ಯಾಕಿಂಗ್ ಪೋಸ್ಟೇಜ್ ಮಾಫಿ.

ತಮಗೆ ಬೇಕಾದಷ್ಟು ಕಾಪಿಗಳ ಪೂರ್ತಾ ಮೊಬಲಗು ಅಡ್ವಾನ್ಸ್ ರವಾನಿಸಿ ಆರ್ಡರ್ ಕೊಡಬೇಕೆ ಹೊರ್ತು ವಿ. ಪಿ. ಮೂಲಕ ರವಾನಿಸಿರೆಂದು ಬರತಕ್ಕ ಆರ್ಡರುಗಳಿಗೆ ಖಂಡಿತವಾಗಿ ನಿಗಾ ಕೊಡುವುದಿಲ್ಲ.

ಮಣಿಯಾರ್ಡರ್ ರವಾನಿಸುವ ವಿಳಾಸ:—

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—13] ಮೈಸೂರು.

ಚೌಬೀನೆ ತೊಲೆಗಳ ಹರಾಜ್.

1923 ನೇ ಡಿಶಂಬರು ಮಾಹೆ ತಾ|| 16ನೇ ಭಾನುವಾರ ದಿವಿ 3 ಗಂಟೆಲಾಗಾಯಿತು 5 ಗಂಟೆ ವರೆವಿಗೂ ತರೀಕೆರೆ ಮಕ್ಕಾಂನಲ್ಲಿ ರೈಲ್‌ಸ್ಟೇಷನ್ ಬಳಿ ಸುಮಾರು 400 ಮತ್ತೀಮರಗಳು ಚಿಕ್ಕಲಾಟಾಗಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತವೆ.

ಹರಾಜಿನ ಷರತ್ತುಗಳು.

ಹರಾಜಿನ ಹಣದ ಪೈಕಿ ಕಾಲುಭಾಗ ಹಣವನ್ನು ಒಡನೆಯೇ ಕೊಡತಕ್ಕದ್ದು. ಬಾಕಿ ಹಣ 15 ದಿವಸಗಳ ಒಳಗಾಗಿ ಪಾವತಿಮಾಡತಕ್ಕದ್ದು. ಪೂರಾಹಣ ಪಾವತಿಮಾಡಿದ ಹೊರತು ಮರ ಸಾಗಿಸಲ್ಪಡತಕ್ಕದ್ದಲ್ಲ. [3-3]

ಮುಸ್ಲಿಂಹಾಲ್ ರೋಡ್,
ಬೆಂಗಳೂರು ಸಿಟಿ.
19—11—1923.

ಮಹಮ್ಮದ್‌ಅಬ್ಬಾಸ್‌ಖಾನ್,
ಟಿಂಬರ್‌ಮರ್ಚೆಂಟ್.

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಟೀಕೆ)	೦—೨—೦
ಶಿವಸ್ತವಶಿರೋಮಣಿ (ಸಟೀಕ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—3] ಹೊಸಮಠ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾ. ಜೆ. ಬಿ. ಯವರ ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಬಿಟ್ಟಿನ ಸಾಧಾರಣ ನಶ್ಯದ ಸಂಗಡ ಸುಗಂಧ ಈ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ವಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—16] ಪೋ|| ಬಾ. ೫೧೦, ಮದರಾಸು.

ಇನ್‌ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದ್ದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಚಳುವು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ.ಪಿ. ಚಾರ್ಜು ೦—೧೦—೦.

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ. ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತ ಕಂಪೆನಿ,
[50—5] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ದುಃಖವನ್ನು ನೀಗುವದು! ಓಂ ಸೌಖ್ಯವನ್ನು ಕೊಡಿಸುವದು!

ಶಿವಾನುಭವಬೋಧೆ.

ಇದು ಸಾಮವೇದದ ಶಿರವಾದ ಛಾಂದೋಗ್ಯೋಪನಿಷತ್ತಿನ ಆರನೆ ಅಧ್ಯಾಯದಲ್ಲಿ “ತತ್ವಮಸಿ” ಆವಸ್ತುವೇ ನೀನಿರುವಿ ಎಂದು ಶ್ವೇತಕೇತುವೆಂಬ ಉತ್ತಮಾಧಿಕಾರಿಯನ್ನು ಕುರಿತು ಉದ್ದಾಲಕ ಮಹಾಮುನಿಯು ಒಂಭತ್ತುಸಾರಿ ಬೋಧಿಸಿರುವನು. ಗೀರ್ವಾಣಭಾಷಾರಹಿತರಿಗೆ ತದರ್ಥ ಗೋಚರವಾಗಲರಿಯದೆಂದು ಮುಮುಕ್ಷುಗಳ ಹಿತಾರ್ಥಕ್ಕಾಗಿ ತನುಪನಿಷತ್ಸಾರವನ್ನೇ ಸುಲಭವಾಗಿ ತಿಳಿಯುವಂತೆ ಕನ್ನಡ ಪದ್ಯರೂಪವಾಗಿ ರಚಿಸಲ್ಪಟ್ಟಿದೆ. ಸರ್ವರು ಈ ಉತ್ತಮ ಗ್ರಂಥವನ್ನು ತರಿಸಿಕೊಂಡು ಶ್ರವಣ ಮನನಾದಿಗಳನ್ನು ಮಾಡಿ ನಿಜಾನಂದಭರಿತರಾಗಿ ನನ್ನ ಸೇವೆಯನ್ನು ಸಾರ್ಥಕಗೊಳಿಸಿರಿ ಸ್ವಲ್ಪ ಪ್ರತಿಗಳುಳಿದಿವೆ. ಬೆಲೆ ಸ್ವಲ್ಪ ಫಲಮಧಿಕವವಗಿದೆ. ಕ್ರಯ ೦—೧೨—೦. [8—4]

ವಿಳಾಸ:—ಎಂ. ಎಸ್. ಸುಬ್ಬಣ್ಣ ಚಾಕುಬಂಡೆ,
ಪೋಸ್ಟು ಚಿಪ್ಪಿಗಿರಿ ತಾ|| ಆಲೂರು ಜಿಲ್ಲಾ ಬಳ್ಳಾರಿ.

೧೯೨೩ ನೆಯ ಇಸವಿ ಡಿಶಂಬರ್ ತಾ|| ೯ ರಿಂದ ೧೯೨೩ ನೆಯ ಡಿಶಂಬರ್ ತಾ|| ೧೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಮಾರ್ಗಶಿರ ಶುದ್ಧ ಬಿದಿಗೆಯಿಂದ ಮಾರ್ಗಶಿರ ಶುದ್ಧ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ಮಾಸ
9	ಭಾನು	ಬಿದಿ	50-19	ಮೂಲ	31-30	24
10	ಸೋಮ	ತದಿ	46-10	ಪೂಷಾ	28-32	25
11	¹ಮಂಗಳ	ಚೌತಿ	43-11	ಉಷಾ	26-47	26
12	²ಬುಧ	ಪಂಚ	41-13	ಶ್ರವ	26-10	27
13	³ಗುರು	ಷಷ್ಠಿ	40-38	ಧನಿ	26-15	28
14	ಶುಕ್ರ	ಸಪ್ತ	41-30	ಶತ	28-34	29
15	ಶನಿ	ಅಷ್ಟ	43-22	ಪೂಭಾ	31-23	30

(1) ದೂರ್ವಾಗಣಪತಿವ್ರತಂ. (2) ಬನದೇಗೌರೀವ್ರತಂ. (3) [illegible] ಷಷ್ಠಿ, ಸುಬ್ರಹ್ಮಣ್ಯದಲ್ಲಿ ರಥೋತ್ಸವ.

ಮೈಸೂರು: ಶ್ರೀ. [illegible]

REGISTERED No. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ವಾ | ಘನಪಥಕೃತಾವಕಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಪಾಲಕಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

REGISTERED NO. M. 124.

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೬) ಮೈಸೂರ್ ಸ್ಟಾರ್ ಸರ್ ೧೯೨೩ ನೆಯ ಇಸವಿ ಡಿಶಂಬರ್ ತಾರೀಖು ೧೬ ನೆಯ ಭಾನುವಾರ. (ಸಂಚಿಕೆ ೫೦

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SRI SITHARAGHAVA VAIDYASALA

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆನ್ಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಪ್ಲೇಗಿಗೆ ಸಂಜೀವನ.

ಲಕ್ಷೋಪಲಕ್ಷ ಪ್ಲೇಗುರೋಗಿಗಳ ಪ್ರಾಣವನ್ನು ಕಾಪಾಡಿರುವ ಕಾಪಾಡುತ್ತಿರುವ ಲಕ್ಷ್ಮೀವಿಲಾಸ ರಸವನ್ನು ಇಂದೇ ತರಿಸಿಟ್ಟುಕೊಳ್ಳಿರಿ. ಪ್ಲೇಗನ್ನೂ, ಪ್ಲೇಗಿರುವಾಗ ಬರುವ ಎಲ್ಲಾ ಜ್ವರಗಳನ್ನೂ, ಸತತ, ಸದಿತಕಾರಿ ಜ್ವರಗಳನ್ನೂ ಸಂದೇಹವಿಲ್ಲದೆ ನಂಬುಗೆಯಾಗಿ ಬೇಗನೆ ಗುಣಪಡಿಸುತ್ತದೆ. ಸೀಸೆ 1—0—0.

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ, ಮೈಕೈ ನೋವು, ತಲೆನೋವುಗಳು ಗುಣವಾಗುತ್ತದೆ. ಡಬ್ಬಿ 0—8—0.

ಪಾಳ್ಯದ ವೆಂಕಟಾಚಲಪಂಡಿತ,
44 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಶಕ್ತಿ ಮದನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. [50—44]

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ವಚನಶಾಸ್ತ್ರಸಾರ.

ಶ್ರೀ ಬಸವೇಶ್ವರ ಮೊದಲಾದ ಶಿವಶರಣರ ಮತತತ್ವಗಳನ್ನು ಅರಿತುಕೊಳ್ಳಬೇಕೆಂಬ ಆ ಕಾಂಕ್ಷೆಗಳು ವೀರಶೈವ ಸಮಾಜದಲ್ಲಿ ಇತ್ತಿತ್ತ ಉತ್ಕೃಷ್ಟವಾಗಿ ಹುಟ್ಟಿದ್ದು ಶುಭಚಿಹ್ನವೇ ಸರಿ. ಆದರೆ ಈ ತತ್ವಗಳು ಅವರು ರಚಿಸಿದ ವಚನಶಾಸ್ತ್ರದಲ್ಲಿಯೇ ವಿಶೇಷವಾಗಿ ದೊರಕುತ್ತವೆ. ಅದ್ದರಿಂದ ಅವರ ವಚನಗಳನ್ನು ಶೋಧಿಸಿ, ಅವುಗಳಲ್ಲಿಯ ತತ್ವಗಳನ್ನು ಕಂಡುಹಿಡಿದು, ಅವುಗಳನ್ನು ಅವರವರ ವಚನಗಳಿಂದಲೇ ಈ ಗ್ರಂಥದಲ್ಲಿ ವಿಶದವಾಗಿ [illegible]. ಇದರಲ್ಲಿ ೧೩೦ ಶಿವಶರಣರ ಶ್ರೇಷ್ಠವಾದ ವಚನಗಳು [illegible]. ಇದು ೬೫೦ ಪುಟವುಳ್ಳ ದೊಡ್ಡ ಗ್ರಂಥವಾಗಿದ್ದು, ಇದರ ಬೆಲೆ ೫ ರೂಪಾಯಿ. ಇದು ಸಿಗುವ ಪತ್ತೆ—

[illegible] ಫ. ಗು. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ.,
[33—7] [illegible]

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಸಂಚಿಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೪—೦

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.
೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

ವಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ಧಿಕ್ಕಾರ ಮಾಡಿದರೆ ಠುಕ್ಕರಸಿ ಹೋದೀರಿ.

ವಜ್ರಾಂಗಸುಂದರಪಾಕ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರತೆಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ನಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಸಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಕಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ವೇಳೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇದರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಅರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಲಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಸಾಪತ್ರ, ತಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕಿ, ಅಮರಕಸಿ, ಕಫಲ್ಯಾಗೊಂದ, ಪಂಜಾಬಿಮಿಶ್ರಿ, ವಂಶಲೋಚನ, ಸಾಲಮಮಿಶ್ರಿ, ಸಫೇದಮಿಶ್ರಿ, ಕಾಲೀಮುಸಾಲಾ, ಬೀಜಬಂಧ, ಚಿಗರಿಗೊರಸು, ಮೊಂಗೆಲ್ ಬೇದಾಣ, ಮೈದಾಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಳೇರಿಭಾತ, ಗೋಖರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಬಗೋಲ, ಒಣಸೆಲ್ಲಿಕಾಯಿ, ಶಿಲಾಜಿತ, ವರದಾಲಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ.

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಅದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. [illegible].

[50—19] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ವಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ರಕ್ತಶೋಧಕ! ಧಾತುಪೌಷ್ಟಿಕ. ಮನೋಲ್ಲಾಸಕವೆಂಬ!!

ಮಹದ್ರಾಕ್ಷಾದಿಚೂರ್ಣವು

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ವಿಷಯವು ತಮಗೆ ವೇದ್ಯವಾಗಿರುವದಷ್ಟೆ. ಈ ಔಷಧಿಯು ಕೆಳಗೆಕಂಡ ರೋಗಗಳಿಗೆ ಶ್ರೇಷ್ಠವಾದದ್ದೆಂದು ಅನೇಕ ವೈದ್ಯರೂ ರೋಗಮಾರಣೆಯಾದವರೂ ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬಮನುಷ್ಯನು ೨೧ ದಿನ ಸೇವನೆ ಮಾಡಿದರೆ ಕ್ಷಯರೋಗ ೪೦ ಬಗೆಯಾದ ಪಿತ್ಥರೋಗಗಳು, ಮೇಹರೋಗ, ಪಾಂಡುರೋಗ, ಪೀನಸ, ೧೮ ತರದ ಕುಷ್ಠರೋಗಗಳು, ಭಗಂಧರವು, ಮೂತ್ರ ಕೃಚ್ಛ್ರರೋಗ, ೫ ಬಗೆಯಾದ ಕಾಸರೋಗಗಳು, ದೀರ್ಘಜ್ವರ, ಉಬ್ಬಸ, ವಾತರಿಕೆ, ಸನ್ನಿಪಾತರೋಗ, ಕಣ್ಣುರಿಯುವದು, ಅಂಗಾಲು ಅಂಗೈ ಬಿರಿಯುವದು, ಶಕೆ, ಶರ್ದಿ, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವದು, ನಷ್ಟೇಂದ್ರಿಯಾಗುವದು—ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು, ರಕ್ತವನ್ನು ವೃದ್ಧಿಗೊಳಿಸಿ ಧಾತುಪುಷ್ಟಿಯನ್ನುಂಟುಮಾಡುವದು, ನಿಸ್ಸತ್ವವನ್ನು ಹೋಗಲಾಡಿಸಿ ದೇಹಾಂಗವೆಲ್ಲಾ ಅಧಿಕ ಬಲವಾಗಿ ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲಿಕುಟ್ಟು, ಹೊಟ್ಟೆಶೂಲಿ, ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕೈಕಾಲು ಹರಿಯುವಿಕೆ ಇತ್ಯಾದಿ ದೋಷಗಳಿಂದ ಗರ್ಭಕೋಶಕ್ಕೆ ತೊಂದರೆಯುಂಟಾಗಿ ದೇಹವು ಕ್ಷೀಣವಾಗಿ ಸಂತಾನಭಂಗವಾಗುವದು. ಆದಕಾರಣ ಸದರಿ ದೋಷಗಳಿಂದ ವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರೂ ಕ್ರಮವಾಗಿ ಒಂದುಮಂಡಲ ಪರಿಯಂತರವರಿಗೂ ಸೇವನೆಮಾಡಿದರೆ ಖಂಡಿತವಾಗಿ ಸಂತಾನಪ್ರಾಪ್ತಿಯಾಗುವದೆಂದು ಸುಪ್ರಸಿದ್ಧವಾಗಿ ಹೇಳಿರುವದು. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದಕಾರಣ ತುಂಬಾ ಅನುಭವಕ್ಕೆ ಬಂದಿದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದರೆ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ.

ಜ್ವರಸಂಜೀವಿನಿ.—ಇದರ ಸೇವನೆಯಿಂದ ಚಾತುರ್ಥಿಕಜ್ವರ, ದಿನಬಿಟ್ಟು ದಿನ ಬರುವ ಜ್ವರ, ಶೀತ ಜ್ವರ, ವಾತಪಿತ್ಥ ಜ್ವರ, ಅಸ್ತಿಗತ ಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲಿಸುತ್ತದೆ.

ಕಫರೋಗಸಂಜೀವಿನಿ.—ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಕೋತಿಕೆಮ್ಮು ಇತ್ಯಾದಿಗಳನ್ನು ತಕ್ಷಣದಲ್ಲಿ ಗುಣಪಡಿಸುತ್ತದೆ. ಜ್ವರಸಂಜೀವಿನಿ ೧ ಡಜನ್ ಮಾತ್ರೆಗಳನ್ನೂ ಕಫಸಂಜೀವಿನಿ ೧೨ ಮಾತ್ರೆಗಳನ್ನೂ ಮೇಲ್ಕಂಡ ಮಹದ್ರಾಕ್ಷಾದಿ ಚೂರ್ಣವನ್ನೂ ತರಿಸಿಕೊಳ್ಳುವವರಿಗೆ ಈ ೩ ಔಷಧಿಗಳನ್ನು ಉಚಿತವಾಗಿ ಕೊಡುತ್ತೇವೆ. ಅನುಪಾನ ಪತ್ರಿಕೆ ಔಷಧಿಯೊಂದಿಗೆ ಇರುತ್ತದೆ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹಿತ ರೂ. ೫—೪—೦. ಈ ಔಷಧಿಯನ್ನು ಸೇವನೆ ಮಾಡುವ ಮೊದಲನೆದಿನ ಈ ಕೆಳಗೆ ಕಂಡ ಮಹೂರ್ತರಾಜನೆಂಬ ಶಿವಲಿಖಿತ ಚಕ್ರವನ್ನು ನೋಡಿ ಅದರಲ್ಲಿ ಅಮೃತ ಮಹೇಂದ್ರಯಾ ವ್ಯಾಳ್ಯಗಳಲ್ಲಿ ಸೇವನೆಮಾಡಿರಿ. ಬಾಕಿ ವ್ಯಾಳ್ಯ ಕೂಡದು. ಇದರಲ್ಲಿ ಶಿವಲಿಖಿತ ಚಕ್ರವಿರುವದರಿಂದ ನಿಮ್ಮಗಳಿಗೆ ಸಕಲ ಶುಭಾಶುಭ ಕಾರ್ಯಗಳಿಗೆ ಬಹಳ ಪ್ರಶಸ್ತವಾಗಿರುತ್ತದೆ. ಪ್ರತಿಯೊಂದು ಕಾರ್ಯಗಳಲ್ಲಿ ಅವಶ್ಯಕವಾಗಿ ನೋಡಿರಿ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ವಿ. ಪಿ. ಸಹಿತ ಜ್ವರಸಂಜೀವಿನಿ ಮಾತ್ರೆ ಡಜನ್ ೧ಕ್ಕೆ ರೂ. ೧—೦—೦. ಕೆಮ್ಮಿನ ಗುಳಿಗೆ ಡಜನ್ ೧ಕ್ಕೆ ರೂ. ೧—೦—೦.

[illegible]

ನಮ್ಮ ವಿಳಾಸ—ಹೆಚ್. ಎಂ. ಕರೇಬಸವಾರ್ಯ,
[34—19] [illegible]

ಮೈಸೂರು ಸ್ಟಾರ್.

೧೯೨೩ ನೇಯ ಇಸವಿ ಡಿಸೆಂಬರ್ ತಾ|| ೧೬ ನೇಯ ಭಾನುವಾರ.

NON-BRAHMINS ABROAD.

It is gratifying to note that the Non-Brahmin movement in British India is becoming wider and stronger day by day, and has begun to assume a national character. While we in Mysore, who began it early enough, are moving on tardily, they in British India who started much later are taking rapid strides and are regaining fast their rightful position socially and politically. In Madras the non-Brahmins established themselves firmly some years ago and are not likely to be dislodged from their position for a long time to come. In Bombay, though it was of a more recent origin, still it has been effective in getting a resolution, much wider in import than the Miller Committee Report, passed through the Legislative Council, and what is better still, in seeing that the resolution is being given full effect to in practice, so unlike Mysore where the order is counteracted both by the intervention of the disbanded young men whose claims conveniently secured priority and by the District officials and others, in whose hands lays the power of patronage, who distribute places against the standing orders of Government. Further, the Non-Brahmin party in Bombay is gaining slowly in strength, and has a loyal following. What a significant position it holds at present can be gauged from the two deputations which waited on the outgoing and the incoming Governors of Bombay, to present a farewell address to the one and a welcome address to the other. What Sir George Lloyd, the Ex-Governor replied to the address is worth noting by the Mysore Non-Brahmins. Referring to the lack of discipline and cohesion in the ranks of their party he said "If you can combine all your forces, chose a leader whom you can trust, and work for him with unquestioned loyalty, then the political field is yours for the asking. A party split by internal factions, with half a dozen different leaders, has no strength of any kind and must stagnate hopelessly." This is sound advice indeed. It is regrettable that in Mysore State there is the same lack of discipline and cohesion among the party. We do not deny that considerations of personal-gain from Brahmanical quarters, official or financial, often weigh with the political opinions that some Non-Brahmins may hold. But is it too much to expect from the enlightened non-Brahmins a more unselfish spirit of service for the masses, the uplifting of whom is indispensable for a healthy development of the country and the upbuilding of a strong and manly nation. May we also appeal to the Non-Brahmin leaders in Mysore not only to come out of their preoccupations a bit for working for their brethren but also to organise the forces of the party as per the excellent advice of the Ex-Governor of Bombay. At an hour so important as the present, when with the reformed Councils wider powers are conferred on the people, powers which could be employed with considerable benefit to the people, would it not be criminal if the backward classes exhibit an attitude of indifference, and they do not make a strong and earnest effort to organise themselves? To the address of welcome presented by the Deccan Non-Brahmin League to H. E. Sir Leslie Wilson, he was pleased to observe that in the short space of three years there had been indications of the rank and file of the community awakening to the necessities of the political situation and becoming aware of the possibilities afforded them by the introduction of the democratic principle in the constitution. After assuring them of Government's interest in the backward classes, the Governor promised to acquaint himself intimately with the various problems affecting the community. We have referred to these speeches of the two Governors in order to show what sympathy and support the movement gets in British India. Curiously enough in Mysore of late the term Non-Brahmin seems to have become a regular 'anathema' to the Government, for, no chance is lost to decry the "communal turn" or attitude as every attempt of the Backward classes to improve themselves is termed. Nobody denies that it is a communal movement. But what we say is a communal movement of 96 percent of the population is better than a communal movement of nearly 4 percent, however disguisedly it may be carried on. We even assert that this Non-Brahmin movement is the genuine national movement, for, its good is national good. There is no need to feel shy of the movement and make ingenious efforts to perpetuate and keep going the ancient iniquitions social privileges and the modern political monopolies. We hope that the Mysore Government and those of the public who still refuse to see the forces around them will see that the Non-Brahmin cry is not a Mysore cry only but a general cry all over India. Only the other day Mr. A. Gavai M.L.C. Central Provinces, when giving his evidence before the Lee Commission on behalf of the 60 millions of depressed classes said that Indianisation of Services meant Brahminisation, and gave lurid instances of how a Brahmin judge had fined a poor Mahar Rs. 100 for drawing water from a public well and another for taking water from a sacred spring, both of which judgments were upset by a European judge; and when asked by one of the Commissioners whether there was not a change in the outlook of the higher classes, he admitted that there was some slight change, but said that few of them honestly believed in it and only declared themselves in favour of it for political reasons. That this witness should be so bitter and give his evidence against Indianisation shows that there is something radically wrong in our manning of the administrative offices. If probably the rest of his kinsmen had voice they would speak to the same thing. It is needless to add how incumbent it is on the Government to establish a state of order which would give due recognition to the claims of all the communities in the Services as well as the Public Bodies. It is no less incumbent on the educated among the backward classes to organise their forces and work unselfishly and harmoniously for the good of the people, believing in the justice and the righteousness of their cause.

ಹೈದರಾಬಾದಿನಲ್ಲಿ ಲಂಚವನ್ನು ಅಣಗಿಸುವುದು.

ಸರ್ಕಾರದ ಅನೇಕ ಶಾಖೆಗಳಲ್ಲಿ ಮುಖ್ಯವಾಗಿ ರಿಜಿಸ್ಟ್ರೇಷನ್ ಮತ್ತು ಪೋಲೀಸು ಶಾಖೆಗಳಲ್ಲಿ ಲಂಚಕುಳಿಗಳು ಹೆಚ್ಚಿಕೊಂಡು ಜನರಿಗೆ ನಾನಾಹಿಂಸೆಯನ್ನು ಕೊಡುವುದು ಹೆಚ್ಚುತ್ತಿರುವುದಾದರೂ, ಲಂಚವನ್ನು ತೆಗೆದುಕೊಂಡವನಂತೆಯೇ ಕೊಟ್ಟವನೂ ಅಪರಾಧಿಯಾಗುವನೆಂದು ವಿಧಿಯಿರುವುದರಿಂದ ಲಂಚಕುಳಿಗಳ ಇಕ್ಕಳದ ಪಟ್ಟಿಗೆ ಸಿಕ್ಕಿಬಿದ್ದವರು ಆ ಹಿಂಸೆಯನ್ನು "ಮುಸುಕಿನೊಳಗಿನ ಗುದ್ದಿನಂತೆ" ಸಹಿಸಿಕೊಂಡಾದರೂ ಇರುವರೇ ಹೊರತು ಬಾಯಿಬಿಡಲಿಕ್ಕಿಲ್ಲವೆಂಬುದು ಪ್ರತಿಯೊಬ್ಬರೂ ಕಂಡು ಕೇಳಿದ ಮಾತಾಗಿದೆ. ಈ ಲಂಚದ ಹಾವಳಿಯನ್ನು ಅಣಗಿಸಲು ಹೈದರಾಬಾದಿನ ನೈಜಾಂರವರು ಒಂದು ಹೊಸ ಏರ್ಪಾಟನ್ನು ಮಾಡಿರುವರು. ಹೇಗೆಂದರೆ— ಲಂಚದ ಸಂಬಂಧವಾಗಿ ಬರತಕ್ಕ ಅರ್ಜಿಗಳನ್ನು ವಿಚಾರಿಸಿ ಇತ್ಯರ್ಥಮಾಡುವುದಕ್ಕೋಸ್ಕರ ತಮ್ಮ ಕೌನ್ಸಿಲಿನ ಪ್ರೆಸಿಡೆಂಟರು ಮತ್ತು ಮೂವರು ಕೌನ್ಸಿಲ್ ಮೆಂಬರುಗಳಿಂದ ಕೂಡಿದ ಒಂದು ಕಮಿಟಿಯನ್ನೇರ್ಪಡಿಸಿರುವರು. ಈ ಕಮಿಟಿಯವರು ತಮ್ಮಲ್ಲಿಗೆ ಬರುವ ಅರ್ಜಿಗಳನ್ನು ವಿಚಾರಿಸಿ ಲಂಚಕುಳಿಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸುವದಲ್ಲದೆ ಸುಳ್ಳು ಅರ್ಜಿಯನ್ನು ಬರೆದವರನ್ನೂ ಶಿಕ್ಷೆಗೆ ಗುರಿಮಾಡಿ ನೈಜಾಮರವರಿಗೆ ಅರಿಕೆಮಾಡುವರು. ಈ ನಮ್ಮ ಮೈಸೂರು ಸಂಸ್ಥಾನದ ರಿಜಿಸ್ಟ್ರೇಷನ್ನು ಮೊದಲಾದ ಶಾಖೆಗಳಲ್ಲಿ ಲಂಚದ ಹಾವಳಿಯು ಮಿತಿಮೀರಿ ಪ್ರಜೆಗಳಿಗೆ ನಾನಾವಿಧವಾಗಿ ನಷ್ಟ ಕಷ್ಟಗಳುಂಟಾಗುತ್ತಿರುವುದನ್ನು ಪ್ರಜಾಪ್ರತಿನಿಧಿ ಸಭೆಯ ಮೂಲಕ ಸರ್ಕಾರದವರ ಗಮನಕ್ಕೆ ಅನೇಕ ವೇಳೆ ತರಲ್ಪಟ್ಟಿರುತ್ತದೆ. ಲಂಚಕೊಟ್ಟವನೂ ಶಿಕ್ಷಾರ್ಹನೆಂದು ವಿಧಿಯಿರುವುದರಿಂದ ಯಾರೂ ಲಂಚಕೊಟ್ಟೆವೆಂದು ಮುಂದೆ ಬಂದು ಹೇಳಲು ಅಂಜಿ ಅನುಭವಿಸುತ್ತಿರುವರು. ಇದರಿಂದ ಲಂಚದ ಹಾವಳಿಯು ನಿರಾತಂಕವಾಗಿ ಹೆಚ್ಚುತ್ತಿರಲು ಕಾರಣವಾಗಿದೆ. ಆದುದರಿಂದ ಲಂಚಕೊಟ್ಟವರೂ ಶಿಕ್ಷಾರ್ಹರೆಂಬುದನ್ನು ಸರ್ಕಾರದವರು ಪ್ರಜಾಭಿಮಾನದಿಂದ ದಯವಿಟ್ಟು ತಪ್ಪಿಸಿದಲ್ಲಿ, ತಮ್ಮ ಗುಟ್ಟು ರಟ್ಟಾಗುತ್ತದೆಂಬ ಭೀತಿಯಿಂದ ಲಂಚಕುಳಿಗಳು ಎಚ್ಚತ್ತು ಪ್ರಜೆಗಳ ಧನವೆಂಬ ರಕ್ತವನ್ನು ಹೀರುವುದನ್ನು ಬಿಟ್ಟು ಸನ್ಮಾರ್ಗಿಗಳಾಗಲು ಅವಕಾಶವಾಗುತ್ತದೆಂದು ಕಳೆದ ವರ್ಷದ ದಸರಾ ಪ್ರಜಾಪ್ರತಿನಿಧಿ ಸಭಾಧಿವೇಶನಕಾಲದಲ್ಲಿ ಬಿನ್ನೈಸಿಕೊಂಡುದರ ಮೇಲೆ "ಲಂಚಕೊಟ್ಟವರೂ ಶಿಕ್ಷೆಗೆ ಗುರಿಮಾಡಲ್ಪಡುವರೆಂಬ ವಿಧಿಗೆ ಅಂಜಿ ಮೌನವಾಗಿರದೆ ನಿಜವಾದ ಸಂಗತಿಯನ್ನು ಸರ್ಕಾರದ ಗಮನಕ್ಕೆ ತಂದು ನಿರ್ಧರಪಡಿಸಿಕೊಟ್ಟಲ್ಲಿ ಲಂಚವನ್ನು ತೆಗೆದುಕೊಂಡವನು ಯಾರೇ ಆಗಿರಲಿ 'Out he goes' ಅಂದರೆ ನಿವೃತ್ತಿಗೊಳಿಸಲ್ಪಡುವನು" ಎಂದು ಮ|| ಬಾನರ್ಜಿಯವರು ಬಹಳ ಆವೇಶದಿಂದ ಅಪ್ಪಣೆಕೊಡಿಸಿ ಸಭಿಕರ ವಂದನೆಗೂ ಧನ್ಯವಾದಕ್ಕೂ ಪಾತ್ರರಾದರು. ಆದರೆ ಇದು ಭಾಷೋಪಶಮನ ಮಾತಾಗಿ ಪರಿಣಮಿಸಿತಲ್ಲದೆ ಕಾರ್ಯರೂಪವಾಗಲಿಲ್ಲವಾದುದರಿಂದ, ಲಂಚಕುಳಿಗಳು ಇನ್ನಷ್ಟು ಹೆಚ್ಚಾಗಿ ನಿರ್ಭೀತಿಯಿಂದ ವರ್ತಿಸಲು ಮಾರ್ಗವಾಯಿತು. ಆದುಕಾರಣ ಪ್ರಜಾಕ್ಷೇಮವೇ ತಮ್ಮ ಕ್ಷೇಮವೆಂದರಿತು ಪಾಟುಪಡುತ್ತಿರುವ ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದವರು ಈ ಲಂಚದ ಸಂಬಂಧವಾಗಿ ಬರತಕ್ಕ ದೂರುಗಳನ್ನು ವಿಚಾರಿಸಲು ನೆರೆದೇಶೀಯ ಸಂಸ್ಥಾನವಾದ ಹೈದರಾಬಾದಿನಂತೆ ದಿವಾನರ ಅಧ್ಯಕ್ಷತೆಯಲ್ಲಿ ಇಬ್ಬರು ಕೌನ್ಸಿಲರುಗಳು ಮತ್ತು ಇಬ್ಬರು ಸರ್ಕಾರಿ ಉದ್ಯೋಗಸ್ಥರಲ್ಲದ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಸೆಟ್ಟರಂತಹ ದೊಡ್ಡಮನುಷ್ಯರುಗಳಿಂದ ಕೂಡಿದ ಒಂದು ಕಮಿಟಿಯನ್ನೇರ್ಪಡಿಸಿ, ಅವರಿಂದ ಲಂಚಕುಳಿಗಳೆಂದು ನಿರ್ಧರಿಸಲ್ಪಟ್ಟವರನ್ನು ನಿರ್ದಾಕ್ಷಿಣ್ಯದಿಂದ ಕ್ರೂರವಾದ ಶಿಕ್ಷೆಗೆ ಗುರಿಮಾಡಿ ತನ್ಮೂಲಕ ಲಂಚದ ಹಾವಳಿಯು ನಾಮಾವಶೇಷವಾಗುವಂತೆ ಮಾಡಿ ತಮ್ಮ ಪ್ರಜೆಗಳ ಕೃತಜ್ಞತೆಗೂ ಧನ್ಯವಾದಕ್ಕೂ ಪಾತ್ರರಾಗಬೇಕಾಗಿ ಕೋರುತ್ತೇವೆ.

ಹೈದರಾಬಾದು ಹೈಕೋರ್ಟು ಜಡ್ಜಿಯವರಿಗಾದ ಅರ್ಥದಂಡವು.

ಹೈದರಾಬಾದು ಸಂಸ್ಥಾನದ ಹೈಕೋರ್ಟು ಜಡ್ಜಿಗಳಲ್ಲೊಬ್ಬರು ನೈಜಾಮರವರ ಕೂಡ ಸಂಭಾಷಿಸುತ್ತಿರುವಾಗ್ಗೆ, ಕೋರ್ಟಿನಲ್ಲಿ ಅತಿತ್ವರಿತವಾದ ಕೆಲಸವನ್ನು ಮಾಡಬೇಕಾಗಿರುವುದರಿಂದ ಜಾಗ್ರತೆ ಹೋಗಬೇಕೆಂಬ ಸೂಚನೆಯನ್ನು ಕೊಟ್ಟು ತೆರಳಿದುದರ ಮೇಲೆ ಆ ರೀತಿ ಕೋರ್ಟುಕೆಲಸವಿದ್ದುದು ಸುಳ್ಳೆಂಬುದನ್ನು ಆ ಕೂಡಲೇ ನೈಜಾಮರವರು ವಿಚಾರಿಸಿ ತಿಳಿದುಕೊಂಡು ಆ ಜಡ್ಜಿಯ ನಡವಳಿಕೆಯನ್ನು ವಿಚಾರಿಸಿ ಫಲಿತಾಂಶವನ್ನು ತಿಳಿಸುವಬಗೆಗೆ ಒಂದು ಕಮಿಟಿಯನ್ನೇರ್ಪಡಿಸಿ ಆ ಜಡ್ಜಿಯು ಸುಳ್ಳುಹೇಳಿದನೆಂದು ಕಮಿಟಿಯವರು ತೀರ್ಮಾನಿಸಿದುದರ ಮೇಲೆ ಆ ಜಡ್ಜಿಗೆ 500 ರೂ. ಅರ್ಥದಂಡವನ್ನು ವಿಧಿಸಿದರು. ಸರ್ವರ ತಪ್ಪನ್ನು ವಿಚಾರಿಸಿ ದಂಡಿಸುವಂತಹ ದೊಡ್ಡ ನ್ಯಾಯಮೂರ್ತಿಯು ಅನೃತನುಡಿದ ಅಪರಾಧಕ್ಕಾಗಿ ನಿರ್ದಾಕ್ಷಿಣ್ಯದಿಂದ ಶಿಕ್ಷಿಸಲ್ಪಟ್ಟುದು "ಕಂಬಳಿ ಹೊದ್ದಿರುವವನನ್ನು ಹೊಡೆದರೆ ದುಪ್ಪಟಿಯನ್ನು ಹೊದ್ದಿರುವವನು ಎಚ್ಚತ್ತುಕೊಂಡನು" ಎಂಬ ಗಾಥೆಯಂತೆ ಇತರ ಉದ್ಯೋಗಸ್ಥರೆಲ್ಲರೂ ತಂತಮ್ಮ ಕೆಲಸಗಳನ್ನು ಶ್ರದ್ಧೆಯಿಂದಲೂ, ಭಕ್ತಿಯಿಂದಲೂ ಸತ್ಯದಿಂದಲೂ ಮಾಡಲು ಗುಣಪಾಠವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲವು. ಇಂತಹ ಅನೃತಕೃತ್ಯಗಳು ನಮ್ಮ ಮೈಸೂರು ಸಂಸ್ಥಾನದಲ್ಲೂ ನಡಿಯುತ್ತಿವೆಯಾದರೂ ಮೇಲ್ಪಟ್ಟವರ ಗಮನಕ್ಕೆ ಬಂದು ನಿರೋಧಿಸಲ್ಪಡುತ್ತಿಲ್ಲವಾದುದರಿಂದ, ಕೀಳುತರಗತಿಯ ಕೆಲಸಗಾರರು ನಿರ್ಭಯದಿಂದ ಸ್ವೇಚ್ಛೆಯಾಗಿ ವರ್ತಿಸಲು ಅವಕಾಶವಾಗಿರುತ್ತದೆ. ಪ್ರಜೆಗಳಿಗೆ ಇದರಿಂದಾಗತಕ್ಕ ದುಷ್ಪರಿಣಾಮವನ್ನು ಹೇಳತೀರದುದಾಗಿದೆ. ಆದುಕಾರಣ ನಮ್ಮ ಸಂಸ್ಥಾನದಲ್ಲೂ ನೆರೆ ಸಂಸ್ಥಾನದ ಮೇಲುಪಂಗ್ತಿಯನ್ನು ಅನುಸರಿಸಿ ನಿಯತವಾದ ತಂತಮ್ಮ ಕೆಲಸಗಳನ್ನು ಮಾಡುವಲ್ಲಿ ಅನೃತ ಅಶ್ರದ್ಧೆ ಮೊದಲಾದ ದುರ್ನಡತೆಯುಳ್ಳವರು ಎಂತಹ ಉನ್ನತಪದವೀಧರರಾಗಿದ್ದರೂ ಕ್ಷಮಿಸಲ್ಪಡದೆ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸಲ್ಪಡುವಂತಾದರೆ ಸಂಸ್ಥಾನಕ್ಕೆ ಕೀರ್ತಿಯೂ ಪ್ರಜೆಗಳಿಗೆ ಮಹೋಪಕಾರವೂ ಆಗುವುದರಲ್ಲಿ ಸಂದೇಹವಿಲ್ಲವು.

ಸ್ವದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರು ತಮ್ಮ ಪ್ರೈವೇಟ್ ಸೆಕ್ರೆಟರಿ ಮಿ|| ಮೇಕ್ರಿಯವರು ಡಾ|| ಉಸ್ಮಾನ್‌ರವರು ಮತ್ತೆ ಕೆಲ ಪರಿವಾರದೊಡನೆ ತಾ|| 12ರಲ್ಲಿ ಬೊಂಬಾಯಿಗೆ ದಯಮಾಡಿಸಿದರು.

ಮೈಸೂರುಗೆಜೆಟ್ಟು ಪಟೇಲ, ಶಾನುಭೋಗರುಗಳಿಗೆ ಅರ್ಧ ಚಂದಾಹಣಕ್ಕೆ ಕೊಡಲ್ಪಡುತ್ತಿದ್ದುದು ಈಚಿಗೆ ತಪ್ಪಿಸಲ್ಪಟ್ಟಿದ್ದಿತು. ಈಗ ಮೊದಲಿನಂತೆಯೇ ಪಟೇಲ ನಾಡುಪಟೇಲ ಶಾನುಭೋಗ ಮತ್ತು ಶೇಕದಾರ ಇವರುಗಳಿಗೆ ಅರ್ಧ ಚಂದಾಹಣಕ್ಕೆ ಕಳುಹಲ್ಪಡಬೇಕಾಗಿ ಸರ್ಕಾರದಪ್ಪಣೆಯಾಗಿದೆ.

ಡಾಕ್ಟರ್ ಉಸ್ಮಾನ್‌ರವರು ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರುದ್ಯೋಗವನ್ನು ವಹಿಸಿಕೊಂಡಿದ್ದು ಶ್ರೀಮದ್ಯುವರಾಜರ ಬಳಿ 6 ವಾರಕಾಲ ವೈದ್ಯರಾಗಿರಲು ನಿಯಮಿಸಲ್ಪಟ್ಟುದರಿಂದ ಅವರು ಬರುವವರೆಗೆ ಡಾ|| ಬಿ. ನಂಜಪ್ಪನವರು ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿರುವರು.

ರಾಜಧಾನಿಯಲ್ಲಿ ಹಗಲು ಬಿಸಿಲು ಕಾಯುತ್ತದೆ; ರಾತ್ರಿಯಲ್ಲಿ ಸ್ವಲ್ಪ ಚಳಿಯಾಗುತ್ತಾದರೂ ಋತುಧರ್ಮಕ್ಕನುಸಾರವಾಗಿ ಮಂಜು ಮಾತ್ರ ಹೆಚ್ಚಾಗಿ ಬೀಳುತ್ತಿಲ್ಲವು. ಈ ವಿಧವಾದ ವಾಯುಗುಣ ವ್ಯತ್ಯಾಸದಿಂದ ಇನ್ಫ್ಲೂಯಂಜಾ ಜ್ವರವು ತಲೆಹಾಕಿರುವುದಲ್ಲದೆ ಪ್ರಬಲವಾಗುವ ಚಿನ್ಹೆಯು ತೋರುತ್ತದೆ. ಬೆಂಗಳೂರಿನಲ್ಲಿ ಈ ಇನ್ಫ್ಲೂಯಂಜಾ ಜ್ವರವು ಬಹಳ ಉಗ್ರಸ್ವರೂಪವನ್ನು ತಾಳಿರುವುದಾಗಿ ಕೇಳುತ್ತೇವೆ.

ರಾಜಧಾನಿಯ ಸ್ಟ್ಯಾಚ್ಯುಸ್ಕ್ವೇರಿನಲ್ಲಿರುವ ಪ್ರಸಿದ್ಧ ಜೀನಾ ಜವಳಿ ವ್ಯಾಪಾರಿಗಳಾದ ಮೆಸರ್ಸ್. ಅಬ್ಬಾಸ್‌ಅಬ್ದುಲ್ ಶುಕೂರ್ ಸೇಟ್ ಅಂಡ್ ಸನ್ಸ್‌ರವರು ತಮ್ಮ ಅಂಗಡಿಯಲ್ಲಿರುವ ಬನಾತು ಕ್ಯಾಸಿಲ್ಕು ಚೀಟಿ ಮೊದಲಾದ ಬಟ್ಟೆಗಳನ್ನೂ, ವಿಧವಿಧವಾದ ಬೂಟ್ಸುಗಳನ್ನೂ ಅವುಗಳ ಮೊದಲಿನಬೆಲೆಯಲ್ಲಿ ಶೇಕಡ ೫೦ರೂ. ನಂತೆ ಕಡಿಮೆಮಾಡಿ ವಿಕ್ರಯಿಸುತ್ತಿರುವುದರಿಂದ ಕೊಂಡುಕೊಳ್ಳುವವರಿಗೆ ಇದು ಅನುಕೂಲವಾದ ಸಮಯವಾಗಿದೆ.

ರಾಜಶಾಸನದ ಪ್ರಕಾರ ನೂತನಸುಧಾರಣೆಗಳಿಂದೇರ್ಪಡುವ ಮೈಸೂರು ನ್ಯಾಯವಿಧಾಯಕ ಸಭೆಯ ಮೊದಲನೆಯ ಮೀಟಿಂಗು 1924 ನೆಯ ಏಪ್ರಿಲ್ ತಾ|| 2ರಲ್ಲೂ ಪ್ರಜಾಪ್ರತಿನಿಧಿ ಸಭೆಯ ಪ್ರಥಮಾಧಿವೇಶನವು 1924ನೆಯ ಮಾರ್ಚಿ ತಾ|| 21 ರಲ್ಲೂ ನಡೆಯುವುದಾಗಿ ಪ್ರಕಟವಾಗಿದೆ. ಪ್ರಜಾಪ್ರತಿನಿಧಿ ಸಭೆಯ ಆರಂಭೋತ್ಸವವು ರಾಜಧಾನಿಯ ಜಗನ್ಮೋಹನ ಪ್ರಾಸಾದದಲ್ಲಿ ಶ್ರೀಮನ್ಮಹಾರಾಜರವರ ವಿವಾಹಮಹೋತ್ಸವಕ್ಕಾಗಿ ಕಟ್ಟಲ್ಪಟ್ಟಿದ್ದ ಸಭಾಂಗಣದಲ್ಲಿ ಶ್ರೀಮನ್ಮಹಾರಾಜರವರಿಂದ ನೆರವೇರಿಸಲ್ಪಡುವುದಾಗಿ ಕೇಳಿಕೆಯುಂಟು.

ಸಂಸ್ಥಾನದ ಬಹುಭಾಗದಲ್ಲಿ ದನಗಳು ನೀರೂ ಮೇವೂ ಇಲ್ಲದೆ ಕಷ್ಟಪಟ್ಟು ಸಾಯುತ್ತಿರುವವಲ್ಲದೆ ದೊಡ್ಡರೋಗ ತಗುಲಿ ಸಾವಿರಾರುಗಟ್ಟಲೆ ಸಾಯುತ್ತಿರುವುದಾಗಿ ತಿಳಿಯಬರುತ್ತದೆ. ಈ ರಾಜಧಾನಿಯಲ್ಲೂ ದೊಡ್ಡರೋಗದಿಂದ ದನಗಳು ಮೃತವಾಗುತ್ತಿವೆ. ಈ ಸಂದರ್ಭದಲ್ಲಿ ಪಶುವೈದ್ಯರುಗಳು ಬಹಳ ಶ್ರದ್ಧೆಯಿಂದಲೂ ಮೂಗಪ್ರಾಣಿಗಳ ಮೇಲಿನ ಕನಿಕರದಿಂದಲೂ ಗ್ರಾಮಾಂತರ ಸಂಚರಿಸಿ ಸ್ವಸ್ಥವಾಗಿರುವವುಗಳಿಗೆ ರೋಗದ ಸೋಂಕು ತಗುಲದಂತೆ ಇನಾಕ್ಯುಲೇಷನ್ ಮಾಡಿ ಮತ್ತು ರೋಗಗ್ರಸ್ತವಾದವುಗಳಿಗೆ ತಕ್ಕ ವೈದ್ಯಚಿಕಿತ್ಸೆಯನ್ನು ಮಾಡಿ ಕೃತಕೃತ್ಯರಾಗುವರೆಂದು ನಿರೀಕ್ಷಿಸುತ್ತೇವೆ.

ಶ್ರೀಮನ್ ಮಹಾರಾಜರವರ ರಾಜಶಾಸನ ಪತ್ರಿಕೆ, ಇದನ್ನೋದುವ ಕಾಲದಲ್ಲಿ ದಿವಾನರು ಮಾಡಿದ ಭಾಷಣ, ಪ್ರಜಾಪ್ರತಿನಿಧಿಸಭಾ ರೆಗ್ಯುಲೇಷನ್, ನ್ಯಾಯವಿಧಾಯಕ ಸಭಾ ರೆಗ್ಯುಲೇಷನ್, ತಾ|| 27-10-23ರಲ್ಲಿ ಹುಟ್ಟಿದ 1367-1426 ಸಿ. ಬಿ. 100-23 1ನೆಯ ನಂ. ಸರ್ಕಾರಿ ಹುಕುಂ, ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನ್ ಮೇರೆಗೇರ್ಪಟ್ಟ ನಿಬಂಧನೆಗಳು ಇವುಗಳೆಲ್ಲವೂ ಒಟ್ಟುಗೂಡಿಸಲ್ಪಟ್ಟು "ಮೈಸೂರು ನ್ಯಾಯವಿಧಾಯಕ ಸಭೆಗೂ ಪ್ರಜಾಪ್ರತಿನಿಧಿ ಸಭೆಗೂ ಸಂಬಂಧಪಟ್ಟ ಹಸ್ತಪುಸ್ತಕ" ಎಂಬ ಹೆಸರಿನಿಂದ ಪ್ರಕಟಿಸಲ್ಪಟ್ಟು 8 ಆಣೆ ಬೆಲೆ ಇಡಲ್ಪಟ್ಟಿರುತ್ತದೆ.

ಮೈಸೂರು ರೈಲ್ವೆಗಳಲ್ಲಿ ಈ ಡಿಸೆಂಬರ್ ತಾ|| 21 ರಿಂದ 31 ರವರೆಗೆ 1ನೆಯ ಮತ್ತು 2ನೆಯ ತರಗತಿಗಳಲ್ಲಿ 50 ಮೈಲಿಗೆ ಕಡಿಮೆಯಿಲ್ಲದೆ ಪ್ರಯಾಣಮಾಡುವವರಿಗೆ ರಿಟರ್ನ್ (ಹೋಗಿಬರುವ) ಟಿಕೆಟ್ಟು [illegible] ಛಾರ್ಜಿಗೆ ಕೊಡಲ್ಪಡುತ್ತದೆಂದೂ, ಎಂ. ಅಂಡ್ ಎಸ್. ಎಂ. ಮತ್ತು ಎಸ್. ಐ. ರೈಲ್ವೆಗಳಲ್ಲಿಯೂ 100 ಮೈಲಿಗೆ ಮೇಲ್ಪಟ್ಟು ಪ್ರಯಾಣಮಾಡುವವರಿಗೆ ಮೇಲ್ಕಂಡ ದರದಂತೆ ರಿಟರ್ನ್ ಟಿಕೆಟ್ಟುಗಳು ಕೊಡಲ್ಪಡುವುವೆಂದೂ ಮೈಸೂರುರೈಲ್ವೆ ಟ್ರಾಫಿಕ್ ಮ್ಯಾನೇಜರು ಪ್ರಕಟಿಸಿರುತ್ತಾರೆ. ಕ್ರಿಸ್ತಮಸ್ ಹಬ್ಬಕ್ಕಾಗಿ ಪರಸ್ಥಳಕ್ಕೆ ಹೋಗಿಬರುವ ಪ್ರಯಾಣಿಕರಿಗೆ ಮೇಲ್ಕಂಡ ಸೌಲಭ್ಯದಿಂದ ಕೊಂಚಮಟ್ಟಿಗೆ ಅನುಕೂಲವಾಯಿತೆಂದು ಹೇಳಬಹುದು.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರ ಚುನಾವಣೆಯು ಅಕ್ರಮವಾದುದರಿಂದ ಅದನ್ನು ರದ್ದುಪಡಿಸಬೇಕೆಂದು ಮ|| ಗಳಾದ ಸಿ. ಹಯವದನರಾಯರು, ಅಬ್ಬಾಸ್ ಖಾನ್‌ರವರು ಮತ್ತೊಬ್ಬರು ಬೆಂಗಳೂರು ಮುನಸೀಫ್ ಕೋರ್ಟಿನಲ್ಲಿ ಮಾಡಿದ್ದ ವಿವಾದವು ತಳ್ಳುಪಡಿಯಾದುದರ ಮೇಲೆ ಚೀಫ್ ಕೋರ್ಟಿಗೆ ಅಪೀಲನ್ನು ಮಾಡಿರುತ್ತಾರೆ. ಅಲ್ಲಿ ಚೀಫ್ ಜಡ್ಜಿಯರ ಮತ್ತು ಜಸ್ಟಿಸ್ ಪ್ಲುಮರ್‌ರವರ ಸಮಕ್ಷಮ ವಾದಿ ಪರ ಅಡ್ವೋಕೇಟರಾದ ಮ|| ಎಂ. ರಾಮಚಂದ್ರರಾಯರ ಆರ್ಗ್ಯುಮೆಂಟ್ ನಡೆದು ಅದು ಮುಗಿಯಲಿಲ್ಲವಾಗಿ ಈ ತಾ|| 19ಕ್ಕೆ ಹಿಯರಿಂಗ್ ಇಡಲ್ಪಟ್ಟಿರುತ್ತದೆ.

ಮದ್ರಾಸಿನಲ್ಲಿ ಪ್ರತಿ ದಿನವೂ ಆಂಗ್ಲಭಾಷೆಯಲ್ಲಿ ಪ್ರಕಟವಾಗುವ ಹಿಂದೂ ಪತ್ರಿಕೆಯ ಸಂಪಾದಕರಾಗಿದ್ದ ಮ|| ಕಸ್ತೂರಿ ರಂಗಯ್ಯಂಗಾರರು ಸ್ವಲ್ಪ ಕಾಲದಿಂದ ಅಸ್ವಸ್ಥರಾಗಿದ್ದು ಕಳೆದ ತಾ|| 12ರಲ್ಲಿ ವಿಧಿವಶರಾದರೆಂದು ತಿಳುಹಲು ಖೇದವಾಗುತ್ತದೆ. ಇವರು ಕೆಲಕಾಲ ಕೊಯಮುತ್ತೂರಿನಲ್ಲಿ ವಕೀಲರಾಗಿದ್ದು ಅಲ್ಲಿಂದ ಮದ್ರಾಸಿಗೆ 20 ವರ್ಷಗಳ ಕೆಳಗೆ ಬಂದು ವಕೀಲಿಯನ್ನು ನಡಿಸುತ ಹಿಂದೂ ಪತ್ರಿಕೆಯ ಸರ್ವಸ್ವಾಮ್ಯವನ್ನೂ ವಹಿಸಿಕೊಂಡು ಸ್ವಕೀಯ ಸಂಪಾದಕತ್ವದಿಂದ ಪತ್ರಿಕೆಯನ್ನು ನಡಿಸುತ ಬಹಳ ಪ್ರಖ್ಯಾತಿಗೆ ತಂದರು. ಇವರು ತಮ್ಮ ಲೇಖಿನ ಸಾಮರ್ಥ್ಯದಿಂದ ದಕ್ಷಿಣದೇಶದ ಭಾರತೀಯ ಸಂಪಾದಕರುಗಳಲ್ಲೆಲ್ಲಾ ಪ್ರಮುಖರೆನಿಸಿಕೊಂಡಿದ್ದರು. ಇವರಿಗೆ ಮರಣಕಾಲದಲ್ಲಿ 64 ವರ್ಷ ವಯಸ್ಸಾಗಿದ್ದಿತು. ಮತ್ತು ಇವರಿಗೆ ಇಬ್ಬರು ಪುತ್ರರೂ ಇಬ್ಬರು ಪುತ್ರಿಯರೂ ಇರುವರು.

ರಾಜಧಾನಿಯ ಟವ್ನ್‌ಹಾಲಿನ ಇದಿರಿಗಿರುವ ಲಾಡ್ಜಿನ ಹಿಂಭಾಗದಲ್ಲಿ ಬೆಂಗಳೂರಿನ ಮ|| ಎಂ.ವಿ. ಶ್ರೀನಿವಾಸಲುನಾಯುಡುಯವರು 30-40 ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಬಹಳ ವಿಶಾಲವಾಗಿಯೂ, ಭದ್ರವಾಗಿಯೂ, ಸುಂದರವಾಗಿಯೂ, ಅಲಂಕಾರಪ್ರಾಯವಾಗಿಯೂ ಸಿನಿಮಾ ಪ್ರದರ್ಶನಕ್ಕಾಗಿ ಕಟ್ಟಿಸಿರುವ "ಥಿಯೇಟರ್ ಮೆಜೆಸ್ಟಿಕ್" ಭವನದ ಆರಂಭೋತ್ಸವವನ್ನು ಕಳೆದ ತಾ|| 12ರ ಸಾಯಂಕಾಲ ನಡೆಯಿಸಿದರು. ಈ ರಾಜಧಾನಿಯ ಸರ್ಕಾರಿಯಧಿಕಾರಿಗಳು ಮ್ಯು|| ಕೌನ್ಸಿಲರುಗಳು, ಲಾಯರುಗಳು ವರ್ತಕರುಗಳು ಮೊದಲಾಗಿ ದೊಡ್ಡಮನುಷ್ಯರುಗಳನ್ನು ಬರಮಾಡಿಕೊಂಡು ಸಮುದ್ರರಾಣಿ ಎಂಬ ಒಂದು ಸ್ವಾರಸ್ಯವಾದ ಕಥಾಭಾಗವನ್ನು ತಮ್ಮ ಸಿನೀಮಾ ಮೂಲಕ ಪ್ರದರ್ಶಿಸಿ ಆನಂದಗೊಳಿಸಿದರು. ಮತ್ತು ತದಾರಭ್ಯ ಪ್ರತಿ ಸಾಯಂಕಾಲ 6½ ಗಂಟೆಯಿಂದ 8 ಗಂಟೆಯವರೆಗೂ ಪುನಃ 9½ ಯಿಂದ 11ರ ವರೆಗೂ ಸಿನೀಮಾ ಪ್ರದರ್ಶನವನ್ನು ನಡೆಯಿಸುತ್ತಿರುವರು.

ಸಂಸ್ಥಾನದಲ್ಲಿ ಈಚೆಗೆ ನದಿಯಪ್ರವಾಹದ ಅನಾಹುತಕ್ಕೆ ಶಿಲ್ಕಿದ ಪದಾರ್ಥಗಳನ್ನೂ ಪ್ರಾಣಗಳನ್ನೂ ಕಾಪಾಡುವುದರಲ್ಲಿ ದೇಹಶ್ರಮವನ್ನು ವಹಿಸಿದ ಮತ್ತು ವಿಪನ್ನರಿಗೆ ನೆರಳನ್ನೂ ಆಹಾರವನ್ನೂ ಕೊಟ್ಟು ಸಾಹಾಯ್ಯಮಾಡಿದ ತೀರ್ಥಹಳ್ಳಿ ತಾಲ್ಲೂಕಿನ ಮ|| ಗಳಾದ ಆಗುಂಬೆ ರಾಮರಾಯರಿಗೂ, ರಾಮಚಂದ್ರರಾಯರಿಗೂ (ಈ ಉಭಯ ದೊಡ್ಡಮನುಷ್ಯರು ಹೇಳಿಸಿಕೊಳ್ಳುವಂತಹ ಸಹಾಯಮಾಡಿರುವುದರಿಂದ) 1924ರಲ್ಲಿ ನಡಿಯುವ ದಸರಾದರ್ಬಾರಿನಲ್ಲಿ ಒಂದನೆ ತರಗತಿಯ ಪಬ್ಲಿಕ್‌ಸರ್ವಿಸ್ ಮೆಡಲು-ಪದಕಗಳು ಕೊಡಲ್ಪಡುವುದಾಗಿಯೂ, ನರಸಿಂಹರಾಜಪುರ ಸಬ್ ತಾ|| ಮಂದಗದ್ದೆಯ ಅಬ್ದುಲ್ ಖಾನ್‌ರವರ ಮಗ ಹಸನ್ ಖಾನ್, ಇದೇ ಸಬ್‌ತಾಲ್ಲೂಕಿನ ನೊಹದೀನ್ ಖಾನರವರ ಮಗ ಅಮೀರ್‌ಪಾಷಾ, ಸೋಂಪುರದ ಪಟೇಲ್ ನರಸಿಂಹಯ್ಯ, ಬಾಳೆಹೊನ್ನೂರಿನ ಶೇಕದಾರ್ ಜಿ. ರಾಜಗೋಪಾಲಯ್ಯಂಗಾರ್, ಬಾಳೆಹೊನ್ನೂರಿನ ಕಾಫಿಪ್ಲಾಂಟರ್ ಗುಲಾಂ ಸಾಬ್ ಉರಫ್ ಮಿಯಾಸಾಬ್, ಹೊನ್ನಾಳಿ ತಾ|| ಹಿರೇಗೋಣಿಗೆರೆ ಬಸವ, ತೀರ್ಥಹಳ್ಳಿ ತಾ|| ಮಂದಗದ್ದೆಯ ಅಬ್ದುಲ್ ಕರೀಂ, ಕುದೂರುಕಟ್ಟೆ ಸುಬ್ಬಶೆಟ್ಟಿ, ತೀರ್ಥಹಳ್ಳಿ ಕೇಲಾಮೇಸ್ತ್ರಿ, ತೀರ್ಥಹಳ್ಳಿ ಕುಲಮನೆ ಅಬ್ದುಲ್ ಖಾದರ್‌ಬೇರಿ, ಡಿಟೋ ಸ್ಥಳದ ನಾನದಬೇರಿ, ಡಿಟೊ ಹಂದಿಬೈಲು ಸುಬ್ಬ ಇವರುಗಳಿಗೆ 30ರೂ. ಬೆಲೆಬಾಳುವ ಪದಕಗಳನ್ನು ಡೆಪ್ಯುಟಿ ಕಮಿಷನರುಗಳ ಮೂಲಕ ಕೊಡಿಸಲು ರೆವಿನ್ಯೂ ಕಮಿಷನರು ಏರ್ಪಡಿಸಬೇಕಾಗಿಯೂ ಸರ್ಕಾರದಪ್ಪಣೆಯಾಗಿದೆ.

ಭರತಖಂಡದ ವೃತ್ತಾಂತಗಳು.

ಬೊಂಬಾಯಿನ ಮ್ಯುನಿಸಿಪಾಲಿಟಿಯವರು 4·85 ಕೋಟಿ ರೂಪಾಯಿಗಳ ಸಾಲವನ್ನು ತೆಗೆಯಲು ಸರ್ಕಾರದಪ್ಪಣೆಯನ್ನು ಕೇಳಬೇಕಾಗಿ ನಿರ್ಧರಿಸಿರುವರು.

ಈ ತಾ|| 11 ರಲ್ಲಿ ಕಲಕತ್ತಾನಗರದಲ್ಲಿ ದೇಶಬಂಧು ಚಿತ್ತರಂಜನದಾಸರವರು ಗೌರ್ನರ್ ಕೂಡ 1½ ಗಂಟೆಯವರೆಗೆ ಮಾತನಾಡಿದರೆಂದು ಮುಂಬರಿ ಪತ್ರಿಕೆಯು ತಿಳಿಸುತ್ತದೆ.

ಕೊಂತಾಯಿ ಬಳಿ ಥಾಣ ಇಗ್ರಾ ಎಂಬಲ್ಲಿ ಒಂದು ಬತ್ತದ ಗದ್ದೆಯಲ್ಲಿ ಬತ್ತದ ಪೈರನ್ನು ಕುಯ್ಯುವ ವಿಚಾರವಾಗಿ ಎರಡು ಕಕ್ಷಿಯವರಿಗೆ ಕಲಹವೂ ಬಡಿದಾಟವೂ ಆಗಿ ಅನೇಕರು ಪೆಟ್ಟನ್ನುತಿಂದು ಮೃತಪಟ್ಟುದಾಗಿ ತಿಳಿಯಬಂದಿದೆ.

ಅಲಹಾಬಾದಿನ ವಿಶ್ವವಿದ್ಯಾಲಯದವರು ಏರ್ಪಡಿಸಿದ್ದ ಓಟದ ಪಂದ್ಯದಲ್ಲಿ ಬಿ.ಎಸ್.ಸಿ. ಪರೀಕ್ಷೆಗೆ ವ್ಯಾಸಂಗಮಾಡುತ್ತಿದ್ದ ಮೋಹನ್‌ಸಿಂಗ್ ಎಂಬಾತನು 1 ಮೈಲಿ ದೂರ ಓಡುವಾಗ್ಗೆ ಆಕಸ್ಮಾತ್ತಾಗಿ ಕೆಳಗೆ ಬಿದ್ದು ಪ್ರಾಣವನ್ನು ಬಿಟ್ಟನು. ಪ್ರಾಣನಾಡಿಯಾಡದೆ ಮರಣ ಸಂಭವಿಸಿತೆಂದು ವೈದ್ಯ ಪರೀಕ್ಷೆಯಿಂದ ನಿರ್ಧರಪಟ್ಟಿತು.

ಸಂಯುಕ್ತ ಪ್ರಾಂತಗಳಲ್ಲಿ ಕಳೆದ 6 ವರ್ಷಗಳಿಂದಲೂ ಜನರ ಗುಂಪನ್ನು ಕಟ್ಟಿಕೊಂಡು ಊರೂರು ಗ್ರಾಮಗ್ರಾಮಗಳಿಗೆ ನುಗ್ಗಿ ಮನೆಮಾರುಗಳನ್ನು ಸೂರೆಮಾಡಿ ಅನೇಕ ಪ್ರಾಣಹಾನಿಯನ್ನು ಮಾಡುತ ಲೋಕಕಂಟಕನಾಗಿದ್ದ ಸುಲ್ತಾನನೂ ಅವನ ಅನುಚರರಲ್ಲಿ 5 ಜನರೂ ಕಳೆದ ಜನವರಿ ತಾ|| 24ರಲ್ಲಿ ಬಿನ್ಸೋರಿ ಕಾಡಿನಲ್ಲಿ ಪೋಲೀಸರ ಸೆರೆಗೆ ಸಿಕ್ಕಿಬಿದ್ದರು.

ಪೂರ್ವ ಆಫ್ರಿಕಾದಲ್ಲಿರುವ ಭಾರತೀಯರ ಸಾರ್ವಜನಿಕ ಮಹಾಸಭಾಧ್ಯಕ್ಷತೆಯನ್ನು ವಹಿಸುವುದಕ್ಕಾಗಿ ಶ್ರೀ ಸರೋಜಿನಿನಾಯಿಡುದೇವಿಯವರು ಮತ್ತೆ ಕೆಲ ಪ್ರಮುಖ ದೊಡ್ಡಮನುಷ್ಯರೊಡನೆ ಮೊದಲು ಗೊತ್ತಾಗಿದ್ದಂತೆ ಕಳೆದ ಬುಧವಾರ ಪ್ರಯಾಣಮಾಡಲು ಅನಿವಾರ್ಯದಶೆಯಿಂದ ಅವಕಾಶವಾಗಲಿಲ್ಲವಾಗಿ ಬರುವ ಜನವರಿ ತಾ|| 9ರಲ್ಲಿ ಪ್ರಯಾಣಮಾಡುವುದಾಗಿ ಮಹಾಸಭಾ ಚಾಲಕರಿಗೆ ತಿಳಿಸಿರುತ್ತಾರೆ.

ಸುಕ್ಕುಂ ಎಂಬ ಗ್ರಾಮದಲ್ಲಿ ಅಲ್ಲಿಯ ಪಂಚಾಯಿತರುಗಳಲ್ಲೊಬ್ಬನ ಮಗನು ಓರ್ವ ಅವಿವಾಹಿತಳಾದ ಯುವತಿಯ ಮೇಲೆ ಅತ್ಯಾಚಾರವನ್ನು ನಡಿಸಿದನೆಂಬುದರ ಮೇಲೆ ಪಂಚಾಯತರ ವಿಚಾರಣೆಗೆ ಗುರಿಮಾಡಲ್ಪಟ್ಟು ಅಪರಾಧವು ಸಿದ್ಧಗೊಂಡು 700 ರೂಪಾಯಿಗಳ ಅರ್ಥದಂಡವನ್ನು ವಿಧಿಸಲ್ಪಟ್ಟನು ಮತ್ತು ಆ ದಂಡದ್ರವ್ಯವು ಧರ್ಮಕಾರ್ಯಗಳಿಗೆ ವಿನಿಯೋಗಿಸಲ್ಪಡಬೇಕೆಂದು ಗೊತ್ತುಮಾಡಲ್ಪಟ್ಟಿತು.

ಕಲ್ಕತ್ತಾದ ಹೌರಾ ಮ್ಯಾಜಿಸ್ಟ್ರೇಟರು ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಪ್ರಯತ್ನಿಸಿದ್ದ ಶೈಲದಾಸಿ ಎಂಬ ಹೆಂಗುಸಿಗೆ 12 ರೂ. ಅರ್ಥದಂಡವನ್ನು ಅದನ್ನು ಕೊಡದಿದ್ದಲ್ಲಿ 12 ದಿನಗಳ ಸಾಧಾರಣ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿದರು. ವಿಚಾರಣೆಯ ಕಾಲದಲ್ಲಿ ಆಕೆಯು ತನ್ನ ಒಬ್ಬ ಮಗಳು ಸತ್ತುಹೋಗಿ ಒಬ್ಬ ಮಗನು ಅಸ್ವಸ್ಥನಾಗಿರುವುದರ ಮೇಲೆ ತಾನು ಇನ್ನು ಜೀವಿಸಿ ಪ್ರಯೋಜನವಿಲ್ಲವೆಂದು ಬೇಸರಪಟ್ಟು ಆತ್ಮಹತ್ಯೆಗೆ ಪ್ರಯತ್ನಿಸಿದೆನೆಂದು ಹೇಳಿದಳು.

ಸಿಲೋನಿನ ಪ್ರಸಿದ್ಧ ಟೀ ವ್ಯಾಪಾರಿಗಳು ಲಂಡನ್ನಗರದಲ್ಲಿ ನಡಿಯುವ ಸಾಮ್ರಾಜ್ಯವಸ್ತುಪ್ರದರ್ಶನಕ್ಕೆ ವಿಧವಿಧವಾದ ಟೀ ಪೊಟ್ಟಣಗಳನ್ನು ಕಳುಹಿಸಿಕೊಟ್ಟು ಅವುಗಳ ಕಡೆಗೆ ಪ್ರೇಕ್ಷಕರ ಗಮನವನ್ನು ಆಕರ್ಷಿಸಿ ತನ್ಮೂಲಕ ತಮ್ಮ ವ್ಯಾಪಾರವನ್ನು ಹೆಚ್ಚಿಸಲು ಒಂದುಪಾಯವನ್ನು ಹುಡಿಕಿರುವರು. ಹೇಗೆಂದರೆ—ಸಿಲೋನಿನಲ್ಲಿ ಬುದ್ಧನ ಹಲ್ಲು ಇಡಲ್ಪಟ್ಟು ಪೂಜಿಸಲ್ಪಡುತ್ತಿರುವ ಪ್ರಸಿದ್ಧ ದೇವಾಲಯದಂತೆ ಒಂದು ದೇವಾಲಯವನ್ನು ವೆಂಬ್ಲಿಯ ಪ್ರದರ್ಶನ ಪ್ರದೇಶದಲ್ಲಿ ಕಟ್ಟಿ ಅದರಲ್ಲಿ ತಮ್ಮ ಪದಾರ್ಥಗಳನ್ನಿಡಲೆತ್ನಿಸಿರುತ್ತಾರಂತೆ !

ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಭಾರತೀಯರು ಬಹಳ ತುಚ್ಛವಾಗಿ ಕಾಣಲ್ಪಡುತ್ತಿರುವುದರಿಂದ ಎಂಪೈರ್‌ಡೆ ಮಹೋತ್ಸವದ ದಿವಸ ಮ್ಯುನಿಸಿಪಾಲಿಟಿಗೆ ರಜವನ್ನು ಕೊಡುವ ಪದ್ಧತಿಯನ್ನು ತಪ್ಪಿಸಬೇಕೆಂದು ಬೊಂಬಾಯಿನ ಮ್ಯುನಿಸಿಪಲ್ ಕೌನ್ಸಿಲರಾದ ಉಗ್ರವಾದಿಯೊಬ್ಬರು ಮೀಟಿಂಗಿನಲ್ಲಿ ಒಂದು ಸೂಚನೆಯನ್ನು ತಂದು ತಕ್ಕ ಭಾಷಣದಿಂದ ಅದನ್ನು ಸಮರ್ಥಿಸಿದರು. "ಈ ಎಂಪೈರ್ ದಿನೋತ್ಸವವನ್ನು ನೆರವೇರಿಸುವುದು ಭರತಖಂಡದ ಪರಮ ಮಿತ್ರರಾಗಿದ್ದು ಕೀರ್ತಿಶೇಷರಾದ ವಿಕ್ಟೋರಿಯಾ ಮಹಾರಾಣಿಯವರ ಸ್ಮರಣಾರ್ಥವಾಗಿ" ಎಂದು ಸ್ತ್ರೀ ಕೌನ್ಸಿಲರಾದ ಹಾಡ್ಗ್‌ಕಿನ್ಸನ್‌ರವರ ಪತ್ನಿಯವರು ವಾದಿಸಿದುದರ ಮೇಲೆ ಮೆಂಬರುಗಳಲ್ಲಿ ಇಬ್ಬಣವಾಗಿ ರಜ ದಿನವಾಗಿ ಪರಿಗಣಿಸಲ್ಪಡಕೂಡದೆಂಬ ಸೂಚನೆಯು ಪುಷ್ಟಿಕರಿಸಲ್ಪಡದೆ ಬಿದ್ದುಹೋಯಿತು.

ಆಂಧ್ರದೇಶಕ್ಕೆ ಸೇರಿದ ಕಾವಲ ಎಂಬ ಗ್ರಾಮದಲ್ಲಿ ಇಬ್ಬರು ಸಹೋದರರಿರುತ್ತಾರೆ. ಇವರಲ್ಲೊಬ್ಬನಿಗೆ ಯಾವ ಭಾಷೆಯಲ್ಲಿಯಾದರೂ ಏನನ್ನು ಹೇಳಿದರೂ ಅವನು ಅದನ್ನು ಮತ್ತೊಬ್ಬನಿಗೆ ಮೂರು ವಿಧದಲ್ಲಿ ತಿಳಿಸುತ್ತಾನೆ. ಹೇಗೆಂದರೆ- ಕಣ್ಣುರೆಪ್ಪೆಗಳನ್ನು ಬಡಿಯುವುದರಿಂದಲೂ, ಕಣ್ಣುಗುಡ್ಡೆಗಳನ್ನು ತಿರುಗಿಸುವುದರಿಂದಲೂ ತಿಳಿಸುವುದು ಒಂದನೆಯ ವಿಧ. ರಾಮ ಲಕ್ಷ್ಮಣ ಎಂಬ ಎರಡು ಶಬ್ದಗಳನ್ನು ಆಲಾಪನೆಮಾಡಿ ತಿಳಿಸುವುದು ಎರಡನೆಯ ವಿಧ ಮತ್ತು ವಿಷಯವನ್ನು ತಿಳಿದವನು ಮೌನವಾಗಿದ್ದರೂ ಅವನ ಎದೆಯಮೇಲೆ ಎಡಗೈಯ್ಯನ್ನಿಟ್ಟು ಹೃದಯಚಲನೆಯಿಂದ ವಿಷಯಸಂಗ್ರಹಮಾಡಿ ಬಲಗೈಯ್ಯಲ್ಲಿ ಅದನ್ನು ಒಂದು ಕಾಗದದ ಮೇಲೆ ಬರೆದು ಕೊಡುವುದು ಮೂರನೆಯ ವಿಧ. ಈ ಸಹೋದರರು ತಮ್ಮ ಪ್ರಜ್ಞಾವಿಶೇಷವನ್ನು ಕಳೆದ ತಾ|| 4 ರಲ್ಲಿ ತಮ್ಮೂರಿನವರಿದಿರಿಗೆ ಪ್ರದರ್ಶಿಸಿ ವಿಸ್ಮಯವನ್ನುಂಟುಮಾಡಿದರು.

ವಿದೇಶದ ವೃತ್ತಾಂತಗಳು.

ಇಟಲಿ ದೇಶದ ಆರ್ಥಿಕಸ್ಥಿತಿಯು ಬಹಳ ಉತ್ತಮವಾಗಿದೆ. ಅಲ್ಲಿಯ ಆದಾಯವು ಹೆಚ್ಚುತ ವೆಚ್ಚವು ತಗ್ಗುತಿದೆ.

ಪ್ರಪಂಚದಲ್ಲಿ ಗೂಢಚಾರಿಯೆಂದು ಪ್ರಸಿದ್ಧಿಯನ್ನು ಹೊಂದಿದ್ದ ವಿಲಿಂ ಪಿಂಕರ್ಟನ್‌ರವರು ಸತ್ತುಹೋದರು.

ತುರ್ಕಿಯಲ್ಲಿರುವ ಗ್ರೀಕುದೇವಾಲಯಗಳನ್ನು ಬಿಟ್ಟುಹೋಗಬೇಕೆಂದು ಆ ಮತಗುರುಗಳಿಗೆ ಪೋಲೀಸರಾಜ್ಞೆಯಾಗಿರುವುದು.

ಮೂತ್ರರೋಗ ನಿವಾರಣೆಯಾದ ಇನ್ಸುಲಿನ್ ಔಷಧವು ವಿಶೇಷವಾಗಿ ಮಾಡಲ್ಪಡುವ ಏರ್ಪಾಟು ಜರ್ಮನಿಯಲ್ಲಿ ನಡೆದಿರುತ್ತದೆ.

ಬತ್ತದಪೈರಿಗೆ ಅಪಾಯಕರವಾದ ರೋಗವು ತಗುಲುವುದರಿಂದಲೂ, ಹುಳಗಳು ಮುತ್ತುವುದರಿಂದಲೂ, ಮೆಕ್ಸಿಕೊ ರಾಜ್ಯದವಿನಾ ಮತ್ತಾವಕಡೆಯಿಂದಲೂ ಅಮೇರಿಕೆಗೆ ಬೀಜದ ಬತ್ತವನ್ನು ತರಿಸಕೂಡದೆಂದು ವಿಧಾಯಕವಾಗಿರುತ್ತದೆ.

ಒಂದು ಶತಮಾನದ ಹಿಂದೆ ಲಂಡನ್ ಪಟ್ಟಣದ ಪ್ರಜಾಸಂಖ್ಯೆಯು 15 ಲಕ್ಷವಿದ್ದಾಗ್ಗೆ 120 ಕೋಟಿ ರೂಪಾಯಿನ ವ್ಯಾಪಾರವು ನಡೆಯುತ್ತಿದ್ದುದು 75 ಲಕ್ಷ ಪ್ರಜಾಸಂಖ್ಯೆಯಿರುವ ಈ ಕಾಲದಲ್ಲಿ 810 ಕೋಟಿ ರೂಪಾಯಿನ ವ್ಯಾಪಾರವು ನಡೆಯುತ್ತಿದೆ.

ಅಮೇರಿಕೆಯ ಯುನೈಟೆಡ್ ಸ್ಟೇಟ್ಸಿನಲ್ಲಿ ಹಂದಿಯ ಮಾಂಸವು ಹೆಚ್ಚಾಗುತ್ಪತ್ತಿಯಾಗುವಂತೆ ಹಂದಿಗಳನ್ನು ಸಾಕುವ ರೈತರಿಗೆ ಬಹುಮಾನಕೊಡಲ್ಪಡುವ ಪದ್ಧತಿಯೇರ್ಪಡಿಸಲ್ಪಟ್ಟಿರುವುದರಿಂದ ಓಹಿಯೋಪಟ್ಟಣದ ಒಬ್ಬ ರೈತನು ಸಾಕಿದ್ದ ಪೋಲಿಂಡ್‌ದೇಶದ 6 ತಿಂಗಳು ವಯಸ್ಸಿನ 11 ಹಂದಿಮರಿಗಳಿಂದ 2360 ಪೌಂಡು ಮಾಂಸ ದೊರಕಿತಂತೆ.

ರಷ್ಯಾ ದೇಶದಲ್ಲಿರುವ ಮಠಪತಿಗಳೂ ಆಶ್ರಮವಾಸಿಗಳಾದ ಸನ್ಯಾಸಿಸನ್ಯಾಸಿನಿಯರುಗಳೂ ಅಲ್ಲಿಯ ಸರ್ಕಾರದವರಿಂದ ನಾನಾ ಹಿಂಸೆಗೆ ಗುರಿಮಾಡಲ್ಪಟ್ಟು ಸ್ಥಾನಭ್ರಷ್ಟರಾಗಿ ಮಾಡಲ್ಪಡುತ್ತಿರುವರು. ಮತ್ತು ಆ ಪವಿತ್ರಾಶ್ರಮಸ್ಥಾನಗಳು ಗಾಯನನರ್ತನಗೃಹಗಳಾಗಿಯೂ ನಾಸ್ತಿಕ ಮತಬೋಧಾಸ್ಥಾನಗಳಾಗಿಯೂ ಮಾರ್ಪಡಿಸಲ್ಪಡುತ್ತಿರುವುವು.

ಅಮೇರಿಕೆಯ ಯುನೈಟೆಡ್ ಸ್ಟೇಟ್ಸಿನಲ್ಲಿ ರೈತರು ಸಾಕುವ ಹಂದಿಗಳಿಗೆ ವಾಂತಿಭೇದಿರೋಗವು ತಗುಲಿ ಸಾವಿರಾರು ಪ್ರಾಣಿಗಳು ಸತ್ತು ರೈತರಿಗೆ ವಿಶೇಷ ನಷ್ಟವಾಗುತ್ತಿದ್ದಿತು. ಈಗ ಒಂದುವಿಧವಾದ ರಸವನ್ನು ಅವುಗಳ ಶರೀರಕ್ಕೆ ಇನಾಕ್ಯುಲೇಷನ್ ಮಾಡುವುದರಿಂದ ವರ್ಷವೊಂದರಲ್ಲಿ ಆಗುವ 10 ಲಕ್ಷ ಹಂದಿಗಳ ಪ್ರಾಣನಷ್ಟವು ನಿವಾರಣೆಯಾಗಿರುತ್ತದೆ.

ಈ ಡಿಸೆಂಬರ್ ತಾ|| 6 ರಲ್ಲಿ ಮಾಸ್ಕೋ ಪಟ್ಟಣದಲ್ಲಿ ಕಮ್ಯುನಿಸ್ಟ್ ಯುವಜನ ಸಂಘದವರು ಸಭೆ ಸೇರಿ ಗ್ರೇಟ್ ಬ್ರಿಟನ್ನಿನಲ್ಲಿ ಯುವಕ ಯುವತಿಯರು ಸೋವಿಯಟಿನ ಪ್ರಚಾರದಲ್ಲಿ ಎಷ್ಟರಮಟ್ಟಿಗೆ ಅಭಿವೃದ್ಧಿಯನ್ನೈದಿರುವರೆಂಬುದನ್ನು ಕುರಿತು ಆಲೋಚಿಸಿದ್ದಲ್ಲದೆ ಲಂಡನ್ ಮತ್ತು ಇಂಗ್ಲಾಂಡ್,

ಸ್ಕಾಟ್ಲೆಂಡುಗಳಲ್ಲಿ ಕಮ್ಯೂನಿಸ್ಟರ ಪ್ರಯತ್ನವು ಬಹಳಮಟ್ಟಿಗೆ ಜಯಪ್ರದವಾಗಿರುತ್ತದೆಂದು ಹೇಳಿದರು.

ಇಂಗ್ಲೆಂಡಿನ ಮುಖ್ಯ ಮಂತ್ರಿಗಳಾದ ಸ್ಟಾನ್ಲೆಬಾಲ್ಡ್ವಿನ್‌ರವರ ಪತ್ನಿಯವರು ಒಂದು ಕಡೆ ಪ್ರಸ್ತಾಪಿಸುವಾಗ್ಗೆ "ನಾನೇಯಾಗಲಿ ನನ್ನ ಪತಿಯಾಗಲಿ ಕೊಟ್ಟ ವಚನಕ್ಕೆ ತಪ್ಪಿಲ್ಲ. ಮನೋಸಂಕಲ್ಪವಿಲ್ಲದ ಮನುಷ್ಯತ್ವದಿಂದ ಪ್ರಯೋಜನವೇನು? ಭೂಭಾರವಿನಾ ಮತ್ತೇನೂ ಇಲ್ಲವು. ಅಂತಹ ಸಂಕಲ್ಪರಾಹಿತ್ಯಳಾಗಿರುವುದರ ಬದಲು ಸಾಯುವುದು ಲೇಸೆಂದು ತಿಳಿದಿರುತ್ತೇನೆ. ನನ್ನ ದೇಶೀಯರನ್ನು ನಾನು ಬಹಳವಾಗಿ ಪ್ರೀತಿಸುತ್ತೇನೆ ಮತ್ತು ಅವರಿಗೆ ಸಹಾಯ್ಯಮಾಡಲು ನನಗೆ ಅಕ್ಕರೆ ಇದೆ" ಎಂದು ಹೇಳಿದರು.

ಆಂಗ್ಲೋರಾವೃತ್ತಪತ್ರಿಕೆಗಳು ಆಗಾಖಾನರ ಮೇಲೆ ಮಾಡಿರುವ ನಿಂದನೆಯನ್ನು ಅಮೀರಾಲಿಯವರು ಖಂಡಿಸಿರುವರು. ಕಾಲೀಫರ ವಿಚಾರವಾಗಿ ಮುಸಲ್ಮಾನರನ್ನು ಸಮಾಧಾನಪಡಿಸಲು ತುರುಷ್ಕ ಜಾತೀಯ ಸಭೆಯವರು ಪ್ರಯತ್ನಪಡುವುದಕ್ಕಾಗಿ ಈ ಲೇಖನವನ್ನು ಆಗಾಖಾನರೂ ನಾನೂ ಸೇರಿ ಬರೆದಿರುತ್ತೇವೆ. ಇಸ್ಲಾಂ ಮತವು ಕೆಡದಂತೆ ಮಾಡುವುದಕ್ಕಾಗಿ ಈ ರೀತಿ ನಡೆಸಿದುದಾಗಿರುತ್ತದೆ. ಇಂತಹ ಸದುದ್ದೇಶದ ಉತ್ತರವನ್ನು ಕುರಿತು ಇಷ್ಟು ಸಂಕುಚಿತಭಾವದಿಂದ ವಿಪರೀತವಾಗಿ ವ್ಯಾಖ್ಯಾನ ಮಾಡಲ್ಪಡುತ್ತಿರುವುದು ಆಶ್ಚರ್ಯಕರವು ಎಂದು ಅಮೀರಾಲಿಯವರು ತಿಳಿಸಿರುವರು.

16ನೆಯ ಶತಮಾನದಲ್ಲಿ ಇಂಗ್ಲೆಂಡುದೇಶದಲ್ಲಿ ಜಾನ್ ಗೌ ಎಂಬಾತನು 191 ವರ್ಷಗಳವರೆಗೂ, ಫ್ಲೆಮಿಂಗ್ ಎಂಬಾತನು 128 ವರ್ಷಗಳವರೆಗೂ, ಈತನ ಹೆಂಡತಿಯು 115 ವರ್ಷಗಳವರೆಗೂ ಮಗನೂ ಮಗಳೂ ಶತಮಾನಕ್ಕೆ ಮೇಲ್ಪಟ್ಟೂ, ಜೀವಿಸಿದ್ದರು. ಕೌಂಟೆಸ್‌ಡೆಸ್ಮಾಂಡ್ ಎಂಬ ಶ್ರೀಮಂತಳು ತನ್ನ 146ನೆಯ ವರ್ಷದ ವಯಸ್ಸಿನಲ್ಲಿ ಮರದಿಂದ ಬಿದ್ದು ಅಕಾಲಮೃತಿಯನ್ನು ಹೊಂದಿದಳು. ಥಾಮಸ್ ಫಾರ್ ಎಂಬುವವನು ತನ್ನ 152ನೆಯ ವರ್ಷವಯಸ್ಸಿನಲ್ಲಿ ಅಜೀರ್ಣರೋಗದಿಂದ ಸತ್ತನು. ಈ ರೀತಿ ಶತಮಾನಕ್ಕೆ ಮೇಲ್ಪಟ್ಟು ಜೀವಿಸಿರುವವರು ಈ 20ನೆಯ ಶತಮಾನದಲ್ಲಿ ಅತಿವಿರಳರು.

ಸ್ಲಿಮತ್ತಿನ ಬಿಷಪ್ಪನಾದ ಸಫ್ರೆಗಾನ್ ಎಂಬುವವನ ದಾಯಾದಿ ಕ್ಲೀವ್ ಲ್ಯಾಡ್ ಮಾಸ್ಟರ್ ಮನ್ ಎಂಬಾತನ 1950000 ರೂ. ಬೆಲೆ ಬಾಳುವ ಆಸ್ತಿಯನ್ನು ಬಿಟ್ಟು ಸತ್ತುಹೋದನು. ಈತನು ತನ್ನ ಆಸ್ತಿಯಲ್ಲಿ 1,50,000 ರೂ. ನ ಆಸ್ತಿಯು ತನ್ನ ಮನೆಗಾವಲಿನವಳಾದ ಅನ್‌ಬ್ರೂಂ ಎಂಬಾಕೆಗೆ ಸಲ್ಲಿಸಬೇಕಾಗಿ ಮರಣಶಾಸನದಲ್ಲಿ ಬರೆದಿದ್ದನು. ಈ ಅನ್‌ಬ್ರೂಂ ಎಂಬಾಕೆಯನ್ನು ಗತಿಸಿದ ಮಾಸ್ಟರನು 37 ವರ್ಷಗಳ ಕೆಳಗೆ ವಿಧ್ಯುಕ್ತವಾಗಿ ಮದುವೆಯಾಗಿದ್ದನೆಂದೂ, ತಥಾಪ್ಯ ಆಕೆಯನ್ನು ಯಾವಕಾರಣದಿಂದಲೋ ಮನೆಯ ಕಾವಲಿನವಳೆಂದು ಭಾವಿಸಿ ಸಂಬೋಧಿಸುತ್ತಿದ್ದನೆಂದೂ ಈಗ ಹೊರಪಟ್ಟಿದೆ.

ಲಂಡನ್ನಿನಲ್ಲಿರುವ ಸರ್ವವಸ್ತು ಪ್ರದರ್ಶನಾಲಯಕ್ಕೆ ಒಂದು ತಿಮಿಂಗಿಲದ ಅಸ್ತಿಯು ಅದನ್ನು ಕೊಂದ ಮಿಚೇಲ್ ಹೆಡ್ಜಸ್ ಎಂಬುವವರು ಕಳುಹಿಸಿಕೊಟ್ಟಿರುತ್ತಾರೆ. ಇದರ ಬೆನ್ನೆಲುಬಿನ ಅಗಲವು 4 ಅಡಿ 7¾ ಅಂಗುಲವೂ ಉದ್ದವು 98 ಅಡಿಯೂ ಇರುವುದಲ್ಲದೆ ಆಪ್ರಾಣಿಯು ಒಟ್ಟು 100 ಟನ್ ಭಾರವಿದ್ದುದಾಗಿ ಊಹಿಸಲ್ಪಟ್ಟಿದೆ. ಈ ತಿಮಿಂಗಿಲವು ಪನಾಮಾಕಾಲುವೆಯಲ್ಲಿ ಒಂದು ಹಡಗು ಹೋಗುತ್ತಿರುವ ಸಮಯದಲ್ಲಿ ದೊರಕಿದುದಾಗಿಯೂ, ಅದರ ಹೊರಳುವಿಕೆಯಿಂದ ಹಡಗು ಮುಳಿಗಿಸಲ್ಪಡುವ ಸಂಭವವಿದ್ದುದರಿಂದ ಒಂದು ಮಿಷನ್ ಫಿರಂಗಿಯಿಂದ ಹೊಡೆಯಲ್ಪಟ್ಟು ಕೊಲ್ಲಲ್ಪಟ್ಟುದಾಗಿಯೂ ತಿಳಿದುಬಂದಿದೆ.

ಪ್ರಪಂಚದ ವರ್ತಮಾನಗಳು ಒಂದು ಕಾಗದದ ಮೇಲೆ ಮುದ್ರಿಸಲ್ಪಟ್ಟು ಗ್ರಾಹಕರ ಹಸ್ತಗತವಾಗುತ್ತಿರುವುದು ಸರ್ವತ್ರ ಆಚರಣೆಯಲ್ಲಿರುವುದಷ್ಟೆ? ಆದರೆ ಬುಡಪೆಸ್ಟ್ ಎಂಬಲ್ಲಿ ಮಾತ್ರ ಹರ್ಮಾಂಡೋ ಎಂಬ ಒಂದು ವೃತ್ತಪತ್ರಿಕೆಯು ಮುದ್ರಿಸಲ್ಪಡದೆ ಅದರ ಗ್ರಾಹಕರಿಗೆ ಟೆಲಿಫೋನ್ ತಂತಿಯ ಮೂಲಕ ಪ್ರಕಟಿಸಲ್ಪಡುತ್ತದೆ. ಅಂದರೆ ದೇಶವಿದೇಶವಾರ್ತೆಗಳು ಬರೆಯಲ್ಪಟ್ಟು ಟೆಲಿಫೋನ್ ಯಂತ್ರದಲ್ಲಿ ಮಾತಾಡುವವರ ವಶಕ್ಕೆ ಕೊಡಲ್ಪಟ್ಟಲ್ಲಿ ಅವರು ಟೆಲಿಫೋನ್ ಸಂಬಂಧವನ್ನಿಟ್ಟುಕೊಂಡಿರುವ ವರ್ತಕರು ಮೊದಲಾದವರಿಗೆ ಬಾಯಿಮಾತಿನಿಂದ ತಿಳಿಸುತ್ತಾರೆ. ಟೆಲಿಫೋನ್ ದ್ವಾರ ವರ್ತಮಾನವನ್ನು ತಿಳಿಯತಕ್ಕ ಆ ಪತ್ರಿಕೆಯ ಚಂದಾದಾರರು ಸಾವಿರಾರು ಜನರಿರುತ್ತಾರೆ.

ಅಮೇರಿಕೆಯ ನೌಕಾದಳವನ್ನು ಆಧುನಿಕ ವಿಧಾನದಿಂದ ತಯಾರಿಸಲು 3,00,00,000 ಡಾಲರುಗಳನ್ನು ಪ್ರತ್ಯೇಕವಾಗಿ ತೆಗೆದಿಡಬೇಕೆಂದು ನೌಕಾದಳಶಾಖಾ ಕಾರ್ಯದರ್ಶಿಯು ಹೇಳುತ್ತಿರುವನು. ನೌಕಾಶಯ ನಿಮಿತ್ತ 66,76,000 ಡಾಲರುಗಳನ್ನು ವೆಚ್ಚಮಾಡಬೇಕೆಂದಿರುವರು. ವಾಷಿಂಗ್‌ಟನ್ ಒಡಂಬಡಿಕೆಯ ಪ್ರಕಾರ ಯುಕ್ತಸ್ಥಳವನ್ನು ಯುನೈಟೆಡ್ ಸ್ಟೇಟ್ಸಿನವರು ಆಕ್ರಮಿಸಿಕೊಳ್ಳಬೇಕೆಂಬಭಿಪ್ರಾಯದಿಂದ ಈ ಏರ್ಪಾಟನ್ನು ಮಾಡುತ್ತಿರುವರು. ಕ್ರೂಯಿಜರುಗಳನ್ನು ಬ್ರಿಟನ್ನಿನವರಿಗಿಂತ ಅಮೇರಿಕೆಯವರು ಹೆಚ್ಚಿಸಿರುವರು. ಸಂಧಿಪ್ರಕಾರ ಇಟ್ಟುಕೊಳ್ಳಬಹುದಾದ 50,000 ಟನ್ನುಗಳ ಭಾರವಿರುವ ಅಂತರ್ಗಾಮಿಗಳನ್ನು ಕಟ್ಟಬೇಕೆಂದಿರುವರು. ವೈಮಾನಿಕದಳವನ್ನು ಕುರಿತು ವಿಚಾರಮಾಡುತ್ತಿರುವರು. ಕಳೆದ ವರ್ಷ 12 ವಿಮಾನಗಳನ್ನು ಹೆಚ್ಚಿಸಿಕೊಂಡರು. ಅವರ ವಿಧಾನವು ಈ ಕಾಲಕ್ಕೆ ತಕ್ಕಂತೆ ಸುಧಾರಿಸಲ್ಪಟ್ಟುದಾಗಿದೆ.

ಇಟಲಿಯ ಮುಖ್ಯ ಮಂತ್ರಿಯಾದ ಸಿಗ್ನಾರ್ ಮುಸಲೋನಿಯವರು ರೋಂಪಟ್ಟಣದಲ್ಲಿ ಇಟಲಿಯ ಆಕಾಶನಾವೆಯ ಸಂಘದವರು ತಮಗಾಗಿ ಏರ್ಪಡಿಸಿದ್ದ ಔತಣದ ಕಾಲದಲ್ಲಿ ಪ್ರಸ್ತಾಪಿಸುವಾಗ್ಗೆ "ಕಳೆದ 12 ತಿಂಗಳಿನಲ್ಲಿ ಇಟಲಿರಾಜ್ಯದ ಆಕಾಶನಾವೆಯ ನಿರ್ಮಾಣವು ಬಹಳವಾಗಿ ಅಭಿವೃದ್ಧಿಯಾಗಿರುತ್ತದೆ. 1919-20 ರಲ್ಲಿ ಸರ್ಕಾರಿ ಯಾಡಳಿತವನ್ನು ನಡಿಸುತ್ತಿದ್ದ ಅಧಿಕಾರಿಗಳು ಪ್ರಪಂಚದಶಾಂತಿಯು ಸಾರ್ವತ್ರಿಕವಾಗಿ ಸ್ಥಾಪನವಾಗುವುದೆಂಬ ಭರವಸೆಯಿಂದ ಆಕಾಶನಾವೆಯ ನಿರ್ಮಾಣ ಪ್ರಯತ್ನದಲ್ಲಿ ಉದಾಸೀನರಾಗಿದ್ದರು. ಆದರೆ ಈಗಿನ ಪರಿಸ್ಥಿತಿಯು ಬಹು ಕ್ಲಿಷ್ಟವಾಗಿರುವುದರಿಂದ ಆಕಾಶಯಾನ ಪಡೆಗಳನ್ನು ಸಿದ್ಧಗೊಳಿಸಲು ಕೆಲಕಾಲ ಹಿಡಿಯುತ್ತಾದರೂ 1919-20 ರಲ್ಲಿ ಅದರ ಹೆಸರೇ ಇಲ್ಲದಿದ್ದುದು ಮತ್ತು 1921-22 ರಲ್ಲಿ ಬಹಳ ಅಲ್ಪವಾಗಿದ್ದುದು ಈಗ ಹೆಚ್ಚಾಗಿಯೇ ಇರುತ್ತದೆ. ಮತ್ತು ನಮ್ಮ ಆಕಾಶಯಾನ ಪಡೆಯ ಬಲವು ಫ್ರೆಂಚರ ಅಥವಾ ಇಂಗ್ಲೀಷರ ಯಾನಪಡೆಗೆ ಸಮಾನವಾಗಿಲ್ಲದಿದ್ದರೂ, ಅಂತಹ ಸಂದರ್ಭವೇನಾದರೂ ಒದಗಿದರೆ ಪ್ರತಭಟಿಸಿ ನಿಲ್ಲುವಷ್ಟು ಸಮರ್ಥವಾಗಿದೆ. ನಮ್ಮಲ್ಲಿ ಮನುಷ್ಯಸಾಮಗ್ರಿಯಗಳು ಸಂಪೂರ್ಣವಾಗಿವೆ ಮತ್ತು ಹಡಗನ್ನು ನಡಿಸುವ ಇಟಲಿಯವರು ಪ್ರಪಂಚದಲ್ಲಿ ಅತ್ಯಂತ ಪ್ರಖ್ಯಾತರಾಗಿರುವವರ ಸರಿಸಮಾನರಾಗಿರುತ್ತಾರೆ" ಎಂದು ಹೇಳಿದರು.

ನೋಟೀಸು.

ಹಾಸನದ ಮುನ್‌ಸೀಫ್ ಕೋರ್ಟಿನಲ್ಲಿ.

O/S ನಂಬರು 798/22—23.

HG. 17-1-1924.

ವಾದಿ :—ಅರಸೀಕೆರೆ ತಾಲ್ಲೂಕು ಬಾಣಾವಾರದ ಹೋಬಳಿ ಕಲ್ಲುಗುಂಡಿ ಗ್ರಾಮದಲ್ಲಿರುವ ಕಲ್ಲುಸಾದರಹಳ್ಳಿ ಶ್ಯಾನುಭೋಗ್ ರಾಮಯ್ಯನವರ ಮಗ ರಂಗಯ್ಯ.

ಪ್ರತಿವಾದೀರು :—ಅರಸೀಕೆರೆ ತಾಲ್ಲೂಕು ಬಾಣಾವಾರದ ಹೋಬಳಿ ಕಲ್ಲುಗುಂಡಿ ಗ್ರಾಮದಲ್ಲಿರುವರು... ಈ ಗ್ರಾಮದ ಮುಖಂಡರು (1) ವೆಂಕಟರಮಣಯ್ಯನವರ ಮಕ್ಕಳು ವೆಂಕಟಸುಬ್ಬಯ್ಯ, (2) ಮಲ್ಲಿಕಾರ್ಜುನಗೌಡ್ರ ಮಕ್ಕಳು ವೀರೇಗೌಡ, (3) ವೀರೇಗೌಡ್ರ ಮಕ್ಕಳು ಮಲ್ಲೇಗೌಡ.

ಕಲ್ಲುಗುಂಡಿ ಗ್ರಾಮಸ್ಥರುಗಳು ವಾದಿ ಬಾಬತು ನಿವೇಶನವನ್ನು ಪರೀಕು ಮಾಡಿಕೊಂಡು ಹತ್ತುಜನಗಳ ಉಪಯೋಗಕ್ಕಾಗಿ ಒಂದು ಮನೆಯನ್ನು ಕಟ್ಟುತ್ತಾ ಇರುವುದಾಗಿಯೂ ಈ ಮನೆಯನ್ನು ಕಟ್ಟದಂತೆ ಅಟಂಕಪಡಿಸಬೇಕೆಂದು ವಗೈರೆ ಕಲ್ಲುಗುಂಡಿ ಗ್ರಾಮದ ಮುಖಂಡರಾದ ಮೇಲ್ಕಂಡ ಪ್ರತಿವಾದೀರನ್ನು ಪಾರ್ಟಿಯಾಗಿ ಸೇರಿಸಿ ಮೇಲ್ಕಂಡ ನಂಬರಿನಲ್ಲಿ ದಾವಾ ತಂದಿರುತ್ತಾರೆ. ಈ ದಾವೆಯು 17-1-1924 ನೇ ತಾರೀಖಿಗೆ ಹೀರಂಗು ಇರುತ್ತೆ. ಈ ದಾವಾಕ್ಕೆ ಪ್ರತಿವಾದೀರಾಗಿ ಸೇರಲು ಇಷ್ಟವುಳ್ಳವರು ಮೇಲ್ಕಂಡ ತಾರೀಖಿಗೆ ಈ ಕೋರ್ಟಿಗೆ ರೂಬರೂಬು ಹಾಜರಾಗಿ ಪಾರ್ಟಿಗಳಾಗಿ ಸೇರಿಕೊಳ್ಳಬಹುದೆಂತ ಈ ಮೂಲ್ಕ ತಿಳಿಯಪಡಿಸಿರುತ್ತೆ.

N. G. LAKSHMINARASIMHA IYENGAR,
Munsiff.

ನಿಖಿಲಧರ್ಮೋಪನ್ಯಾಸಕ ದ್ವಿತೀಯ ಸಮ್ಮೇಳನವು.

ಇದೇ ಡಿಸೆಂಬರು ತಿಂಗಳು ಕಡೆಯ ವಾರದಲ್ಲಿ "ನಿಖಿಲ ಧರ್ಮೋಪನ್ಯಾಸಕ ದ್ವಿತೀಯ ಸಮ್ಮೇಳನವು" (The Universal Religious Conference) "ಶ್ರೀ ಸಚ್ಚಿದಾನಂದ ಸಂಘ" ದ ವತಿಯಿಂದ ಮದರಾಸಿನಲ್ಲಿ ಕೂಡತಕ್ಕದ್ದಿರುವುದು. ಸಮ್ಮೇಳನದಲ್ಲಿ "ವೀರಶೈವ ಸಿದ್ಧಾಂತ" ದ ಪರವಾಗಿ ಯಾರಾದರೂ ಭಾಷಣಮಾಡುವರಿದ್ದರೆ ಮುಂಚಿತವಾಗಿಯೇ ತಮಗೆ ತಿಳುಹಿಸಬೇಕೆಂದು ಸಭೆಯ ಚಾಲಕರು ಕೋರಿರುತ್ತಾರೆ. ಅನಾದಿ ಸಂಸಿದ್ಧವಾದ ನಮ್ಮೀ ವೀರಶೈವ ಮತವು ಅನೇಕ ತಪ್ಪು ಅಭಿಪ್ರಾಯಗಳಿಗೊಳಪಟ್ಟು ಈ ಆಧುನಿಕ ಯುಗದಲ್ಲಿ ತನ್ನ ನೈಜವಾದ ತೇಜಸ್ಸನ್ನು ಕಳೆದುಕೊಂಡಿದೆಯೆಂಬುವ ಕಡು ಶೋಚನೀಯ ಸಂಗತಿಯು ಸರ್ವರಿಗೂ ವಿದಿತವಷ್ಟೆ? ಆ ತಪ್ಪು ಅಭಿಪ್ರಾಯಗಳನ್ನೆಲ್ಲಾ ವಿಮರ್ಶನಾಪೂರ್ವಕವಾಗಿ ಖಂಡಿಸಿ ತನ್ಮತದ ನಿಜತತ್ತ್ವವನ್ನು ಆಧುನಿಕ ಪ್ರಪಂಚದ ಮುಂದೆ ಇಡುವುದು ನಮ್ಮ ಸಮಾಜದ ವಿದ್ವಾಂಸರ ಮುಖ್ಯ ಕರ್ತವ್ಯವಾಗಿರುತ್ತದೆ. ಸದರಿ ಪವಿತ್ರ ಕರ್ತವ್ಯವನ್ನು ನೆರವೇರಿಸಲು ಈಗ ಒದಗಿರುವ ಈ ಸುಸಂದರ್ಭವನ್ನು ನಮ್ಮ ಸಮಾಜದವರು ಕಳೆದುಕೊಳ್ಳಲಾರರೆಂದು ನಾನು ಪೂರ್ಣನಂಬಿರುತ್ತೇನೆ. ಭಾಷಣಮಾಡಲಿಚ್ಛಿಸುವವರು "ಶ್ರೀ ಸಚ್ಚಿದಾನಂದ ಸಂಘದ ಕಾರ್ಯದರ್ಶಿ (19 ಭಂಗಾರುನಾಯಕ ವೀದಿ ಮದ್ರಾಸು) ಯವರಿಗೆ ತಿಳುಹಿಸಬೇಕು. ಪೂರ್ಣವಾಹಿತಿಯನ್ನಪೇಕ್ಷಿಸುವವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆಯಬಹುದು.

ಶಿವಾನಂದಮಂದಿರ,
೮೨ ಅರ್ಮೀನಿಯನ್ ವೀದಿ
ಮದ್ರಾಸು.

ಸಮಾಜ ಸೇವಕ.
ಟಿ. ಹೆಚ್. ಎಂ. ಸದಾಶಿವಯ್ಯ,
ಬಿ.ಎ. (ಆನರ್ಸ್) ಕ್ಲಾಸು.

ಮೈಸೂರು ಡಿಸ್ಟ್ರಿಕ್ಟಿನಿಂದ ನ್ಯಾಯವಿಧಾಯಕ ಸಭೆಗೆ ಮೆಂಬರನ್ನು ಚುನಾಯಿಸುವ ಓಟರುಗಳಲ್ಲಿ ವಿಜ್ಞಾಪನೆ.

ಮಹನೀಯರೇ!

ನಾನು ತಾಲ್ಲೋಕು ಮತ್ತು ಡಿಸ್ಟ್ರಿಕ್ಟ್‌ಬೋರ್ಡುಗಳಲ್ಲಿಯೂ, ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿಯೂ, ಕಳೆದ ಐದು ವರುಷಗಳಿಂದಲೂ ಮೆಂಬರಾಗಿದ್ದುಕೊಂಡು ಪ್ರಜಾಸೇವೆಯಲ್ಲಿ ನಿರತನಾಗಿರುತ್ತೇನೆ. ಕಳೆದ ನಾಲ್ಕಾರು ವರುಷಗಳಿಂದ ಮೈಸೂರು ದೇಶದಲ್ಲಿಯೂ ಹೊರಗಡೆಯೂ ಸಂಚಾರಮಾಡಿ ಪ್ರಜೆಗಳ ಸ್ಥಿತಿಗತಿಗಳನ್ನೂ ಕಷ್ಟಸುಖಗಳನ್ನೂ ತಕ್ಕಮಟ್ಟಿಗೆ ತಿಳಿದುಕೊಂಡಿರುತ್ತೇನೆ. ಬೆಂಗಳೂರು ಒಕ್ಕಲಿಗರ ಸಂಘದಲ್ಲಿ ಜನರಲ್ ಕೌನ್ಸಿಲ್ ಸೆಕ್ರೆಟರಿಯಾಗಿರುತ್ತೇನೆ. ಸರ್ಕಾರದಿಂದ ಪ್ರಕಟಿಸಲ್ಪಟ್ಟಿರುವ ರೀಫಾರ್ಮ್ಸ್‌ಗಳನ್ನು ಹಿಂದುಳಿದ ಮತಸ್ಥರು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದರಿಂದ, ಅವರ ಏಳ್ಗೆಯು ಖಂಡಿತವಾಗಿಯೂ ಆಗುವುದೆಂಬುದನ್ನು ಹೆಚ್ಚಾಗಿ ನಾನು ತಿಳಿಸಬೇಕಾದುದಿಲ್ಲ. ಪ್ರತಿನಿಧಿ ಸಭೆಯಲ್ಲಿ ಪ್ರಜಾಪಕ್ಷವಾಗಿ ಹೋರಾಡುತ್ತಿದ್ದೇನೆಂಬುದೂ ತಮ್ಮ ಅವಗಾಹನೆಗೆ ಬಂದಿರುತದೆಂದು ನಂಬುತ್ತೇನೆ. ರೀಫಾರ್ಮ್ಸ್‌ಗಳಿಂದ ದೊರೆತಿರುವ ಹೆಚ್ಚಿಗೆ ಸೌಕರ್ಯಗಳನ್ನು ಸಹಾಯಕ್ಕೆ ತಂದುಕೊಂಡು, ಇನ್ನು ಮುಂದೆಯೂ ಪ್ರಜಾಸೇವೆಯಲ್ಲಿ ನಿರತನಾಗಬೇಕೆಂದು ಉದ್ದೇಶಿಸಿರುತ್ತೇನೆ. ಗ್ರಾಮಾಭಿವೃದ್ಧಿಗೆ ಅವಶ್ಯಕವಾದ ಆರೋಗ್ಯ, ವಿದ್ಯೆ, ಮತ್ತು ವೈದ್ಯ ಸಹಾಯಗಳನ್ನು ಒದಗಿಸುವುದರಲ್ಲೂ, ಹಿಂದುಳಿದವರ ಸಂಖ್ಯೆಗನುಗುಣವಾಗಿ ಸರ್ಕಾರದಲ್ಲಿ ನೌಕರಿಗಳನ್ನು ಪಡೆಯುವುದರಲ್ಲೂ ಶ್ರಮಪಡಬೇಕೆಂದು ನನ್ನ ಅಭಿಲಾಷೆ ಇರುತ್ತದೆ. 1924ನೇ ಫೆಬ್ರುವರಿ ತಾ|| 15 ರಲ್ಲಿ ನ್ಯಾಯವಿಧಾಯಕ ಸಭೆಗೆ (ಲೆಜಿಸ್ಲೇಟಿವ್ ಕೌನ್ಸಿಲ್‌ಗೆ) ಒಬ್ಬರು ಮೆಂಬರನ್ನು ಮೈಸೂರು ಡಿಸ್ಟ್ರಿಕ್ಟ್ ಪರವಾಗಿ ಚುನಾವಣೆ ಮಾಡುವವರಾಗಿರುತ್ತೀರಿ. ಸದರೀ ಮೆಂಬರುಸ್ಥಾನಕ್ಕೆ ನಾನೂ ಒಬ್ಬ ಉಮೇದುವಾರನಾಗಿರುತ್ತೇನೆ. ತಮ್ಮ ಅಮೌಲ್ಯವಾದ ಓಟನ್ನು ನನಗೆ ಕೊಟ್ಟು ಮೇಲೆ ಹೇಳಿದಂತೆ ನ್ಯಾಯವಿಧಾಯಕ ಸಭೆಯಲ್ಲಿಯೂ ಕೂಡ ನಾನು ಪ್ರಜಾಸೇವೆ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

16-12-22,
ಮದ್ದೂರು.

ತಮ್ಮ ವಿಧೇಯ,
ಎಂ. ಸಿ. ಲಿಂಗೇಗೌಡ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಯಲಬುರ್ಗಾ.

ಈ ಊರಿಗೆ ಮೊನ್ನೆ ಶಿವಯೋಗ ಮಂದಿರದಲ್ಲಿ ತಯಾರಾದ ಶ್ರೀಮನ್ನಿರಂಜನ ಇಳಕಲ್ಲ ಮಹಾಂತಸ್ವಾಮಿಗಳು ತಮ್ಮ ಮಠಕ್ಕೆ ದಯಮಾಡಿಸಿದ್ದರು. ಇಲ್ಲಿ ಎರಡು ದಿವಸ ದೊಡ್ಡ ಸಭೆಗೂಡಿ ಧಾರ್ಮಿಕ ವಿಷಯದ ಮೇಲೆ ಶ್ರೀಗಳವರ ವ್ಯಾಖ್ಯಾನ ನಡೆಯಿತು. ಸಭೆಗೆ ತಾಲ್ಲೂಕು ಕಚೇರಿ ಆಫೀಸರರೂ ವಿದ್ವಾನ್ ಬ್ರಾಹ್ಮಣರೂ ಸಹ ಬಂದಿದ್ದರು. ಶ್ರೀಗಳ ರಸಭರಿತ ಬೋಧಾಮೃತಪಾನದಿಂದ ಸರ್ವರೂ ಆನಂದಭರಿತರಾಗಿ ಶಿವಯೋಗ ಮಂದಿರವು ಎಂಥೆಂಥ ವಿಭೂತಿಗಳನ್ನು ಹುಟ್ಟಿಸುತ್ತದೆಂದು ಮಂದಿರದ ಧನ್ಯವಾದಮಾಡಿದರು.

ತಮ್ಮ ಸಜ್ಜನ ವಿಧೇಯ,
ದಾನಪ್ಪಾ ಚಿನಿವಾಲರ.

ಕಡೂರು ತಾ|| ಮಲಿದೇವಿಹಳ್ಳಿ ಸ್ಕೂಲು.

ಈ ಊರಿನ ಗ್ರಾಂಟ್ ಸ್ಕೂಲ್ಮಾಸ್ತರಾದ ಮ|| ಎ. ಚನ್ನಪ್ಪನವರು ಅತ್ಯಂತ ಶ್ರಮವನ್ನು ವಹಿಸಿ ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳುತ್ತಿದ್ದರಲ್ಲದೆ ಅನೇಕ ನೀತಿವಾಕ್ಯಗಳನ್ನೂ ಕಥೆಗಳನ್ನೂ ಹೇಳುತ ವಿದ್ಯಾರ್ಥಿಗಳನ್ನು ವಿವೇಕಿಗಳನ್ನಾಗಿಮಾಡಿ ಗ್ರಾಮಸ್ಥರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಇಂಥವರ ಶ್ರಮಕ್ಕೆ ತಕ್ಕ ಬಹುಮಾನವು ದೊರಕುವುದು ನ್ಯಾಯವಾಗಿರುತ್ತದೆ. ಆದರೆ ಕೆಲ ದುಷ್ಟಜನರು ಇವರ ಜನಾನುರಾಗವನ್ನು ಸಹಿಸದೆ ಇವರ ಮೇಲೆ ಇಲ್ಲದ ದೋಷಗಳನ್ನೆಲ್ಲಾ ಆರೋಪಿಸಿ ಸುಳ್ಳು ಅರ್ಜಿಗಳನ್ನು ಬರೆದಮಾತ್ರಕ್ಕೆ ಸ್ಕೂಲು ಇನ್ಸ್ಪೆಕ್ಟರು ಮಾಸ್ತರ ಯೋಗ್ಯತೆಯನ್ನು ಮತ್ತು ಅವರ ಶ್ರಮದಿಂದ ಸ್ಕೂಲು ಅಭಿವೃದ್ಧಿಗೆ ಬಂದಿರುವದನ್ನು ಲೆಕ್ಕಿಸದೆ ಕೆಲಸದಿಂದ ವಜಾಮಾಡಿ ಸ್ಕೂಲಿನ ಗ್ರಾಂಟನ್ನು ನಿಲ್ಲಿಸಿರುವದರಿಂದ ಗ್ರಾಮಸ್ಥರ ಮನಸ್ಸಿಗೆ ಬಹಳ ವ್ಯಸನವಾಗಿದೆ. ಆದಕಾರಣ ಧರ್ಮಪ್ರಭುಗಳಾದ ಇಲಾಖಾ ಮೇಲ್ಪಟ್ಟ ಆಫೀಸರವರು ಎಲ್ಲಾ ಸಂಗತಿಗಳನ್ನು ಘನಚಿತ್ತಕ್ಕೆ ತಂದುಕೊಂಡು ಜೀರ್ಣವಾದ ಸ್ಕೂಲನ್ನು ಉದ್ಧಾರಮಾಡಿ ಗ್ರಾಮಸ್ಥರ ಕೃತಜ್ಞತೆಗೆ ಪಾತ್ರರಾಗುವರೆಂದು ನಿರೀಕ್ಷಿಸುವ

ಓರ್ವ ವಿದ್ಯಾಭಿಮಾನಿ, ಮತ್ತು ಗ್ರಾಮಪ್ರಮುಖ.

1923 ನೆಯ ಇಸವಿ ನವಂಬರ್ 26 ನೆಯ ತಾರೀಖಿನಲ್ಲಿ ಪ್ರಕಟಿಸಲ್ಪಟ್ಟ ಸತ್ಯವಾದಿ ಎಂಬ ಪತ್ರಿಕೆಯಲ್ಲಿ 5 ನೆ ಕಾಲಮಿನಲ್ಲಿ ಕಬೀರ್‌ದಾಸ್ ನಾಟಕದ ವಿಮರ್ಶೆ ಎಂಬ ಶಿರೋಲೇಖನದೊಡನೆ ನಾಟಕಪಕ್ಷಪಾತಿ ಎಂಬ ಹೆಸರಿನಿಂದ ಯಾರೋ ಒಬ್ಬರು ಒಂದು ಲೇಖನವನ್ನು ಕೊಟ್ಟಿದ್ದಾರೆ. ಆದರೆ 1-2-3-4-5 ನೆ ಪ್ಯಾರಾಗಳಲ್ಲಿ ಕಬೀರ್‌ದಾಸನ ನಡತೆಗಳ ವಿಷಯವಾಗಿ ಆಕ್ಷೇಪಗಳನ್ನು ಮಾಡಿ, ಅದರ ಮುಂದಣ ಪ್ಯಾರಾದಲ್ಲಿ ಕಬೀರ್‌ದಾಸನ ಚರಿತ್ರೆಯನ್ನು ಆಡಿಸಬೇಕೆಂದು ಬರೆದ ಕವಿಗಳು ಮುಸಲ್ಮಾನರಲ್ಲಿ ದೊರೆಯುವ ಆತನ ಕಥೆಯನ್ನು ಚನ್ನಾಗಿ ತಿಳಿದು ಆತನ ಮಹಿಮೆಯನ್ನು ತೋರ್ಪಡಿಸುವಂತೆ ನಾಟಕವನ್ನು ಬರೆದಿದ್ದರೆ ಚನ್ನಾಗಿತ್ತು. ಪ್ರಕೃತ ಕನ್ನಡ ಪುಸ್ತಕಗಳಲ್ಲಿ ಬರೆದಿರುವುದು ನಿರಾಧಾರವೆಂದೇ ಹೇಳಬಲ್ಲೆನು, ಎಂದು ತಿಳಿಸಿದ್ದಾರೆ. ಕಬೀರ್‌ದಾಸನು ಮೊದಲು ಮುಸಲ್ಮಾನನಾಗಿದ್ದು ದೈವಪ್ರೇರಣೆಯಿಂದ ವಿಷ್ಣುಭಕ್ತಿ ನಿರ್ವಾಹಕ್ಕಾಗಿ ಕೆಲವು ಕಾರ್ಯಗಳನ್ನು ನಡಸಿದನು. ಹೀಗೆಯೇ ಯಾವ ಮತದಲ್ಲಾದರೂ ಒಬ್ಬೊಬ್ಬ ಭಕ್ತರು ಒಂದೊಂದು ವಿಧವಾಗಿ ತಮ್ಮ ದೈವಭಕ್ತಿಯನ್ನು ತೋರಿಸಿದ್ದಾರೆ. ಅವರ ಚರಿತ್ರೆಯೊಳಗೆ ಭಕ್ತಿಯೇ ಮುಖ್ಯ ವಿಷಯವಲ್ಲದೆ, ಚರಿತ್ರೆಯ ಗುಣದೋಷಗಳ ವಿಚಾರವು ಮುಖ್ಯವಲ್ಲ. ಕಬೀರ್‌ದಾಸನು ಜನ್ಮತಃ ಮಹಮ್ಮದೀಯರಲ್ಲಿ ಹುಟ್ಟಿ ಕಾಲಾಂತರದಲ್ಲಿ ಹಿಂದೂಮತವನ್ನವಲಂಬಿಸಿದುದರಿಂದ ಮಹಮ್ಮದೀಯರಿಗೆ ಪರಮಶತ್ರುವೇ ಆಗಿದ್ದಾನೆಂಬರ್ಥವು ಸ್ಪಷ್ಟವಾಗುವುದು. ಹೀಗಿರುವಲ್ಲಿ ಮಹಮ್ಮದೀಯರಿಗೆ ವಿರೋಧಿಯಾಗಿದ್ದ ಕಬೀರದಾಸನ ಚರಿತ್ರೆಯು ಮಹಮ್ಮದೀಯರಲ್ಲಿರುವುದುಂಟೇ? ಇಮಾಂಸಾಬರಿಗೂ ಗೋಕುಲಾಷ್ಟಮಿಗೂ ಎಷ್ಟುಮಟ್ಟಿನ ಸಂಬಂಧವೋ, ಮಹಮ್ಮದೀಯರಿಗೂ ಕಬೀರ್‌ದಾಸನ ಚರಿತ್ರೆಗೂ ಅಷ್ಟುಮಟ್ಟಿನ ಸಂಬಂಧವಿದೆಯಲ್ಲವೇ? ಕಬೀರ್‌ದಾಸನ ನಾಟಕವನ್ನು ನೋಡಿ ಅನೇಕ ಮುಸಲ್ಮಾನರು ಮನಸ್ಸಿನಲ್ಲಿ ವ್ಯಥೆಪಟ್ಟುಕೊಂಡಿದ್ದಾರೆ. ಎಂದು ನಾಟಕಪಕ್ಷಪಾತಿಗಳು ಹೇಳುತ್ತಾರೆ. ಚಿರಕಾಲ ಮಹಮ್ಮದೀಯನಾಗಿದ್ದು ವಿಷ್ಣುಭಕ್ತನಾದ ಕಬೀರ್‌ದಾಸನ ನಾಟಕವನ್ನು ನೋಡಿದ ಮುಸಲ್ಮಾನರ ಮನಸ್ಸಿನಲ್ಲಿ ವ್ಯಥೆಪಡುವುದು ಆಶ್ಚರ್ಯವಲ್ಲ. ನಾಟಕ ಪಕ್ಷಪಾತಿಗಳು ಮುಸಲ್ಮಾನರಲ್ಲಿರುವ ಕಬೀರ್‌ದಾಸನ ಕಥೆಯಿರುತ್ತದೆ ಎಂದು ಹೇಳಿದ್ದಪಕ್ಷದಲ್ಲಿ ಆ ಕಥಾಸರಣಿಯನ್ನು ಯಾವರೀತಿಯಿಂದಲಾದರೂ ಮುಸಲ್ಮಾನರ ಮುಖದಿಂದ ತಿಳಿದು ತಮ್ಮ ಲೇಖನದಲ್ಲಿ ಸೂಚಿಸಿದ್ದರೆ ಚನ್ನಾಗಿತ್ತು. ಈಗಲಾದರೂ ಶ್ರಮವನ್ನು ವಹಿಸಿ ಕಬೀರ್‌ದಾಸ್ ನಾಟಕದ ಯಥಾರ್ಥ ಕಥಾಸಂವಿಧಾನವನ್ನು ಪತ್ರಿಕೆಯ ಮೂಲಕ ಪ್ರಕಟಿಸಿದ ಮರುದಿವಸವೇ ಅವರು ಆ ನಾಟಕದ ಮೇಲೆ ಮಾಡಿರುವ ಐದು ಆಕ್ಷೇಪಣೆಗಳಿಗೆ ತಕ್ಕ ಸಮಾಧಾನವನ್ನು ನಾನು ಕೊಡುವ ವಿಷಯದಲ್ಲಿ ಬದ್ಧನಾಗಿದ್ದೇನೆ.

ಅನಂತಯ್ಯಂಗಾರ್.

ಶಿವತತ್ವ ರತ್ನಾಕರ.

ಮುದ್ರಾಪಿತ ಬೆಂಗಳೂರಿನಲ್ಲಿರುವ ಬಿ. ಎಂ. ನಾಥ್ ಮತ್ತು ಕಂಪೆನಿಯವರಿಂದ "ಶಿವತತ್ವರತ್ನಾಕರ" ವೆಂಬ ಗ್ರಂಥದ ಮೊದಲನೆಯ ಭಾಗವು

ಈಗ ಪ್ರಸಿದ್ಧವಾಗಿದೆ. ಈ ಹೆಸರು ಕೇಳಿದ ಕೂಡಲೇ ಇದು ಯಾವದೋ ಒಂದು ಶೈವ ಮತಗ್ರಂಥವೆಂದು ತೋರುವುದು. ಆದರೆ ಪ್ರಾಚ್ಯ ವಿಜ್ಞಾನ ಸರ್ವಸ್ವವೆನಿಸಿದ ಇದು ಸಂಸ್ಕೃತಭಾಷೆಯಲ್ಲಿ ಅತು ತ್ತಮವಾದ ಗ್ರಂಥರತ್ನವು. ಕ್ರಿ. ಶ. 18-19 ನೆಯ ಶತಮಾನಗಳಲ್ಲಿ ಕನ್ನಡನಾಡಿನ ಅರಸನಾಗಿದ್ದ ಕೆಳದಿಯ ಬಸವರಾಜನೆಂಬ ವೀರಶೈವ ಪ್ರಭುವು ಇದನ್ನು ರಚಿಸಿರುವನು. ಸಂಸ್ಕೃತ ಭಾಷೆಯಲ್ಲಿ ಗೋಪ್ಯವಾಗಿರುವ ಸಕಲ ಶಾಸ್ತ್ರಗಳೂ, ವಿದ್ಯೆಗಳೂ, ಕಳೆಗಳೂ ಇದರಲ್ಲಿ ಅಡಕವಾಗಿರುವುವು. ಆಂಗ್ಲಭಾಷೆಯಲ್ಲಿ ಪ್ರಕಟಿತವಾಗಿರುವ "ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ" (Encyclopædia Britannica) ಎಂಬ ಗ್ರಂಥಕ್ಕೆ ಇದು ಸಮಾನವಾದುದೆಂದು ವಿಮರ್ಶಕರು ತಿಳಿಯದಿರಲಾರರು. ಇಂತಹ ಗ್ರಂಥವು ಇದುವರೆಗೂ ಪ್ರಕಟಿತವಾಗದಿದ್ದುದು ನಮ್ಮ ವಿದ್ವಾಂಸರಿಗೆ ದೊಡ್ಡ ಕೊರತೆಯೇ ಸರಿ. ಮದರಾಸ್ ಸರ್ಕಾರದ ಸೀನಿಯರ್ ಟ್ರಾನ್ಸ್‌ಲೇಟರ್ ಮ|| ರಾ|| ಶ್ರೀ|| ಬಿ. ರಾಮರಾಯರವರ ಪ್ರೋತ್ಸಾಹದಿಂದ ಬಿ. ಎಂ. ನಾಥ್ ಮತ್ತು ಕಂಪೆನಿಯವರು ಇದರ ಮುದ್ರಣವನ್ನು ಕೈಕೊಂಡುದಕ್ಕಾಗಿ ಅವರ ಪ್ರಯತ್ನವು ಶ್ಲಾಘನೀಯವೆನಿಸದಿರಲಾರದು. ಕ್ರೌನ್ ಅಷ್ಟಪತ್ರದ ಆಕಾರದಲ್ಲಿ ಉತ್ತಮವಾದ ಕಾಗದದಮೇಲೆ ಅಂದವಾದ ನಾಗರಾಕ್ಷರಗಳಲ್ಲಿ 3-4 ಭಾಗಗಳಲ್ಲಿ ಸಂಪೂರ್ಣವಾಗಿ ಗ್ರಂಥವನ್ನು ಪ್ರಕಾಶಗೊಳಿಸಬೇಕೆಂಬುದಾಗಿ ಇವರು ಸಂಕಲ್ಪಿಸಿರುವರು. ಒಟ್ಟಿಗೆ ಗ್ರಂಥದಲ್ಲಿ 9 ಕಲ್ಲೋಲಗಳೂ 108 ತರಂಗಗಳೂ ಸುಮಾರು 13,000 ಶ್ಲೋಕಗಳೂ ಇರುವುವು. ಮೊದಲನೆಯ ಪುಟದಲ್ಲಿ 3 ಕಲ್ಲೋಲಗಳೂ 20 ತರಂಗಗಳೂ ಇರುತ್ತವೆ. ಇವುಗಳಲ್ಲಿ ಸಕಲ ವಿದ್ಯೋದ್ದೇಶ, ಸೃಷ್ಟಿಕ್ರಮ, ಪ್ರಣವಸ್ವರೂಪ, ತ್ರಿಮೂರ್ತಿಸ್ವರೂಪ, ನರಕವರ್ಣನ, ದುಷ್ಕರ್ಮ ಜನಿತರೋಗಾದಿಗಳು, ಸಪ್ತಪಾತಾಳಗಳು, ಮೇರುಪರ್ವತ, ಕೇಸರಾಚಲ, ನವಖಂಡನಗರಗಳು, ದ್ವೀಪಗಳು, ಮೇಘಗಳು, ಗುಹ್ಯಕಾದಿ ಲೋಕಗಳು, ಸೂರ್ಯಾದಿಗ್ರಹಗತಿಗಳು, ಊರ್ಧ್ವಲೋಕ ಮುಂತಾದುವುಗಳ ವರ್ಣನೆಯು ಸವಿಡವಾಗಿರುವುದು. ಪುಟ 1 ಕ್ಕೆ ½ ಆಣೆಯಂತೆ ಒಂದನೆಯ ಸಂಪುಟಕ್ಕೆ (ಅಂಚೆಯ ವೆಚ್ಚದೊಂದಿಗೆ) 2-8-0 ಬೆಲೆಯಾಗುವುದು. ಎರಡನೆಯ ಭಾಗವು 1924 ನೆಯ ಏಪ್ರೆಲ್ ತಿಂಗಳ ಸುಮಾರಿನಲ್ಲಿ ಗ್ರಾಹಕರ ಕೈಸೇರುವುದು. ಇದರಲ್ಲಿ, ಭೂಗೋಳ ಶಾಸ್ತ್ರ, ಯುಗಸ್ವರೂಪ, ಕಾಲನಿರ್ಣಯ, ಚಾತುರ್ವರ್ಣ, ವರ್ಣಾಶ್ರಮ ಧರ್ಮಗಳು, ಪಾಪಭೇದಗಳು, ಅವುಗಳ ಪ್ರಾಯಶ್ಚಿತ್ತಗಳು, ವಿದ್ಯಾನಗರ ನಿರ್ಮಾಣ, ಕರ್ನಾಟಕ ಸಿಂಹಾಸನಸ್ಥಾಪನೆ, ಸಂಗಮೇಶ್ವರ ಬಸವೇಶ್ವರ ವೃತ್ತಾಂತ, ಕಲಿಮಹಿಮೆ, ಉತ್ಪಾತಗಳು ಅವುಗಳ ಶಾಂತಿಗಳು, ಚಿರಜೀವನೋಪಾಯ, ಪರಕಾಯಪ್ರವೇಶ, ಮಣಿಮಂತ್ರೌಷಧಾದಿ ಸಿದ್ಧಿಗಳು, 64 ಕಲೆಗಳು, ನಿಧಿಶೋಧನ, ರಾಜನೀತಿ, ಕೆರೆಗಳನ್ನು ವಿಧಿಸುವ ಕ್ರಮ, ಕೋಟೆ ಕೊತ್ತಲಗಳ ನಿರ್ಮಾಣಕ್ರಮ, ದುರ್ಗಪ್ರಭೇದ, ಶಕುನಶಾಸ್ತ್ರ. ಶಿಲ್ಪಶಾಸ್ತ್ರ, ಭೂಪರೀಕ್ಷೆ, ಶಿಲಾಪರೀಕ್ಷೆ, ಅವುಗಳ ಸ್ವಭಾವ ಮುಂತಾದ ವಿಷಯಗಳು ವರ್ಣಿತವಾಗಿರುವುವು. ಇಂಡಿಯಾ ಗವರ್ನಮೆಂಟಿನ ಶಾಸನ ಪರಿಶೋಧನಾಧಿಕಾರಿಗಳೂ, ಸಂಸ್ಕೃತ ಪಂಡಿತವರ್ಯರೂ ಎನಿಸಿದ ರಾವ್ ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿ ಬಿ. ಎ. ಅವರು ಈ ಗ್ರಂಥಕ್ಕೆ ಪೀಠಿಕೆಯನ್ನು ಬರೆಯಲು ಅನುಮೋದಿಸಿರುತ್ತಾರೆ. ಸಂಸ್ಕೃತಾಂಧ್ರಭಾಷಾಪ್ರವೀಣರೆನಿಸಿ ಪ್ರಖ್ಯಾತಿವೆತ್ತಮಾನವರಲ್ಲಿ ರಾಮಕೃಷ್ಣಕವಿ, ಎಂ.ಎ. ಅವರು ವಿಮರ್ಶೆಯನ್ನು ಬರೆಯುವರು. ಗೌರ್ನಮೆಂಟು ಸೀನಿಯರ್ ಟ್ರಾನ್ಸ್‌ಲೇಟರು ಬೆನಗಲ್ ರಾಮರಾವ್, ಎಂ. ಎ. ಎಲ್ ಎಲ್. ಬಿ., ಅವರು ಆಂಗ್ಲಭಾಷೆಯಲ್ಲಿ ಟಿಪ್ಪಣವನ್ನು ಬರೆಯುವರು. ಈ ಗ್ರಂಥವು ಕನ್ನಡನಾಡಿನ ಪ್ರಭುವಾಗಿದ್ದ ವೀರಶೈವ ಮತಕ್ಕೆ ಸೇರಿದ ರಾಜನಿಂದ ನಿರ್ಮಿತವಾದುದರಿಂದ ಕನ್ನಡಿಗರು ಅವರೊಳಗೂ ಮುಖ್ಯವಾಗ ಲಿಂಗಾಯತರು ಈ ಗ್ರಂಥಕ್ಕೆ ವಿಶೇಷವಾದ ಪ್ರೋತ್ಸಾಹವನ್ನು ತೋರಬೇಕಾದುದು ಅತ್ಯಾವಶ್ಯಕವು. ಸಂಸ್ಕೃತ ಪಾಠಶಾಲೆಗಳೂ, ಆಂಗ್ಲೇಯ ಕಲಾಶಾಲೆಗಳೂ, ಪುಸ್ತಕಭಂಡಾರಗಳೂ, ಶ್ರೀಮಂತರೂ, ಭಾಷಾಭಿಮಾನಿಗಳೂ, ಮತಾಭಿಮಾನಿಗಳೂ ಈ ಗ್ರಂಥವನ್ನು ಕರಿಸಿದಲ್ಲಿ ಅನೇಕ ಸಂದರ್ಭಗಳಲ್ಲಿ ನಿಘಂಟು ವಿನಂತೆ ಈ ಗ್ರಂಥವು ಹೆಚ್ಚಿನ ಉಪಯೋಗವನ್ನುಂಟುಮಾಡದಿರದು. ಮುಖ್ಯವಾಗಿ ಸಂಸ್ಕೃತ ಭಾಷೆಯೊಳಗಣ ಸಕಲ ವಿದ್ಯಾಸಾರವನ್ನು ಒಂದೆಡೆಯಲ್ಲಿ ಅಡಕಗೊಂಡಿರುವ ಇಂತಹ ಗ್ರಂಥರತ್ನವು ಇದುವರೆಗೆ ಮತ್ತೊಂದು ಮುದ್ರಿತವಾಗಿಲ್ಲವೆಂಬುದು ಅತಿಶಯೋಕ್ತಿಯೆನಿಸಲಾರದು.

ಫ. ಗು. ಹಳಕಟ್ಟಿ ವಿಜಾಪುರ.

[ಈ ಅಪೂರ್ವಗ್ರಂಥದ ಪ್ರಥಮಭಾಗದ ಪ್ರತಿಯೊಂದನ್ನು ಅದರ ಪ್ರಸಾರಕರಿಂದ ನಾವು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ. ಅದರ ಗುಣವಿಮರ್ಶೆಯು ಮ|| ಹಳಕಟ್ಟಿಯವರಿಂದ ಮಾಡಲ್ಪಟ್ಟಿರುವ ಪ್ರಯುಕ್ತ ಪುನರ್ವಿಮರ್ಶೆಯು ಅಪ್ರಕೃತವು.—ಪ. ಪ್ರ.]

ಓಟರುಗಳಿಗೆ ವಿಜ್ಞಾಪನೆ.

ಮೈಸೂರು ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿಗಳ ಸ್ಥಾನಗಳಿಗೆ ಸಮ್ಮತಿಯನ್ನು ಕೊಡುವ ಸ್ವಾತಂತ್ರ್ಯವನ್ನು ಹೊಂದಿದ ಮಹಾಶಯರಿಗೆ ಒಂದು ವಿಜ್ಞಾಪನೆ—ಬರುವ ಫೆಬ್ರವರಿ ತಿಂಗಳು 15ನೆ ಶುಕ್ರವಾರವು ಸಮೀಪಿಸುತ್ತ ಬರುತ್ತಿರುವುದು. ಆ ದಿನವು ಬಹಳ ಜವಾಬ್ದಾರಿಯನ್ನುಳ್ಳ ದಿನವಾಗಿ ಸಂಸ್ಥಾನದಲ್ಲೆಲ್ಲಾ ಶೋಭಿಸುವುದು. ಆ ದಿನ ತಮಗೊಂದು ಪರೀಕ್ಷೆಯು ನಿಯಮಿಸಲ್ಪಟ್ಟಿರುವುದು. ಆ ದಿನದ ಪರೀಕ್ಷೆಯಲ್ಲಿ ಹ್ಯಾಗೆ ಉತ್ತೀರ್ಣರಾಗುವಿರೆಂದು ಪರೀಕ್ಷಕರು ನಿರೀಕ್ಷಿಸುತ್ತಿರುವರು. ನಮ್ಮನ್ನಾಳುವ ಮಹಾಸ್ವಾಮಿಗಳಾದ ಶ್ರೀಮನ್ ಮಹಾರಾಜಾಸಾಹೇಬ್ ಬಹದ್ದೂರರವರು ತಮ್ಮ ಪ್ರಜೆಗಳ ಮೇಲೆ ತುಂಬಾ ದಯಾರಸಪೂರಿತವಾಗಿ ಓಟರಿಗೆ ಸ್ವಾತಂತ್ರ್ಯವನ್ನು ಹೆಚ್ಚಿಸಿರುವರು. ಆದಕಾರಣ ಇಂಥ ಸುಸಮಯದಲ್ಲಿ ತಾವುಗಳು ಅಂಥ ಸ್ವಾತಂತ್ರ್ಯಕ್ಕೆ ಚ್ಯುತಿಬಾರದಂತೆ ಕಾರ್ಯವನ್ನು ನೆರವೇರಿಸಿ ತದನಂತರ ಮತಷ್ಟು ಸ್ವಾತಂತ್ರ್ಯವನ್ನು ಬಯಸುವವರಾಗಬೇಕಾಗಿ ತಮ್ಮನ್ನು ಪ್ರಾರ್ಥಿಸುತ್ತೇನೆ. ಅಯ್ಯಾ ಮಹಾಶಯರೆ, ತಾವುಗಳು ಮೇಲಿನ ಎರಡು ಸಭೆಗಳಿಗೂ ತಮ್ಮ ಪರವಾಗಿ ಪ್ರತಿನಿಧಿಗಳನ್ನು ಚುನಾಯಿಸಲು ಸಮ್ಮತಿಯನ್ನು ಕೊಡಬೇಕಾಗಿದೆ. ಆದುದರಿಂದ ಮುಖದಾಕ್ಷಿಣ್ಯಗಳಿಗೂ ದೊಡ್ಡಸ್ತಿಕೆಗೂ ಐಶ್ವರ್ಯದ ಪ್ರಭಾವಕ್ಕೂ ಅತಿಲೋಭಗಳಿಗೂ, ಮರುಳುಮಾತುಗಳಿಗೂ ಬೆರಗಾಗದೆ ನಿಜವಾಗಿಯೂ ದೇಶದ ಏಳ್ಗೆಯನ್ನು ಬಯಸುವವರೂ ಅನುಭವಶಾಲಿಗಳೂ ಖಂಡಿತವಾದಿಗಳೂ ನಿರ್ದಾಕ್ಷಿಣ್ಯ ಪರರೂ ಸಕಲರಲ್ಲೂ ಒಂದೇ ಮನಸ್ಕರೂ ಆದವರನ್ನು ಗೊತ್ತುಮಾಡಿ ಅವರಿಗೆ ಓಟನ್ನು ಕೊಡಬೇಕು. ಹಾಗಲ್ಲದೆ ಮೇಲ್ಕಂಡಂತೆ ದಯದಾಕ್ಷಿಣ್ಯಗಳಿಗೆ ಒಳಗಾಗುವಿರಾದರೆ ಸ್ವಪ್ರಯೋಜನಕ್ಕಾಗಿ ತಮ್ಮ ದೇಶದ ಏಳ್ಗೆಯನ್ನೇ ಹಾನಿಪಡಿಸುವವರಾಗುವಿರಿ. ಈಗ ತಮಗೆ ಕೊಡಲ್ಪಡತಕ್ಕ ಸ್ವಾತಂತ್ರ್ಯವು ಬಹಳ ಅಮೂಲ್ಯವಾದದ್ದಾಗಿಯೂ ಶ್ರೇಷ್ಠವಾದ ವರವಾಗಿಯೂ ಇರುತ್ತೆ. ಇದರ ವಿಷಯದಲ್ಲಿ ನಾಗರೀಕ ದೇಶಗಳವರು ಎಷ್ಟು ಆಸಕ್ತರಾಗಿರುವರೆಂಬುದನ್ನು ವಿಚಾರಮಾಡಿರಿ. ಇದನ್ನು ತಿಳಿಕೊಂಡು ಸರಿಯಾದ ರೀತಿಯಲ್ಲಿ ಉಪಯೋಗಿಸುವದಕ್ಕಾಗಿ ಎಷ್ಟು ದೂರ ಪ್ರದೇಶವಾಗಿದ್ದರೂ ಎಷ್ಟು ತೊಂದರೆಯಿದ್ದರೂ ಅವುಗಳನ್ನು ಒಂದು ಕಡೆಗಿರಿಸಿ ಓಟಿಂಗ್ ಸ್ಥಳಕ್ಕೆ ಬಂದು ಯೋಗ್ಯರಾದವರಿಗೆ ಓಟುಗಳನ್ನು ಕೊಟ್ಟು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿಕೊಳ್ಳಬೇಕಾಗಿರುವುದು. ಈಗ ತಮ್ಮ ಹಸ್ತದಲ್ಲಿರುವ ಸ್ವಾತಂತ್ರ್ಯವನ್ನು ಉಪಯೋಗಿಸುವದಕ್ಕಾಗಿ ಅನೇಕರು ಬಂದು ತಮ್ಮನ್ನು ನಾನಾವಿಧಗಳಿಂದ ಆಶ್ರಯಿಸಿ ತಮ್ಮ ಹಸ್ತದಿಂದ ಅದು ಜಾರಿದ ಕೂಡಲೆ ತಾವು ಜಾರಿಕೊಳ್ಳುವರು. ಈ ಕಾರಣದಿಂದ ಈಗಲೇ ತಕ್ಕ ಎಚ್ಚರಿಕೆಯನ್ನು ಹೊಂದಿರಿ. ದೂರ ಪ್ರದೇಶವೆಂದೋ? ನಿಷ್ಠೂರಕ್ಕೆ ಗುರಿಯಾಗುವೆನೆಂದೋ? ಇಲ್ಲವೆ ಇದರಿಂದ ತಮಗೇನಾಗಬೇಕೆಂದೊ? ಅಲ್ಪಕಾರಣವನ್ನು ಪ್ರಾಧಾನ್ಯವಾಗಿಟ್ಟುಕೊಂಡು ತಮ್ಮ ಸಮ್ಮತಿಯನ್ನು ಕೊಡದೆ ಉಳಿಸಿಕೊಂಡಾಗ್ಗು ಅದು ಪ್ರಯೋಜನಕ್ಕೆ ಬಾರದೆ ಅದನ್ನು ದಯಪಾಲಿಸಿದ ನಮ್ಮ ಕರುಣಾಶಾಲಿಗಳಾದ ಪ್ರಭುವರ್ಯರ ಘನವಾದ ಉದ್ದೇಶಕ್ಕೆ ಭಂಗವನ್ನುಂಟುಮಾಡಿದಂತಾಗುವುದಲ್ಲವೆ? ಹನಿಗೂಡಿದರೆ ಹಳ್ಳ ತೆನೆಗೂಡಿದರೆ ಹೊರೆ ಎಂಬಂತೆ ತಮ್ಮ ಒಂದು ಸಮ್ಮತಿಯು ದೇಶಸೇವಾನಿರತರಿಗೆ ಪ್ರೋತ್ಸಾಹಗೊಳಿಸದೆ ಇರದು. ಅನೇಕ ಉಮೇದುವಾರರು ಈ ಮೂಲಕ ಪ್ರಭುಗಳ ಸಂದರ್ಶನವನ್ನು ಮಾಡಬಹುದೆಂದೂ ಆಸ್ಥಾನಕ್ಕೆ ದಯಮಾಡಿಸಿದ ಗೌರವಕ್ಕೆ ಪಾತ್ರರಾಗುವೆನೆಂದೂ ತಿಳಿದಿರುವವರನ್ನೂ ಪ್ರಾಪಂಚಿಕ ವಿಷಯವನ್ನರಿಯದೆ ಸಭೆಯಲ್ಲಿ ಮಾಗೀಕಾಲದ ಕೋಗಿಲೆಯಂತೆ ಇರುವ ಬೊಂಬೆಗಳಂತೆ ಸ್ಥಾನಾಲಂಕಾರಿಗಳಾದವರನ್ನೂ ಚುನಾಯಿಸುವುದರಿಂದೇನು ಪ್ರಯೋಜನ? ಇದರಿಂದ ತಮ್ಮಗಳ ಸ್ವಾತಂತ್ರ್ಯವನ್ನು ಸರಿಯಾಗಿ ಬಳಸಲು ತಾವುಗಳು ಅಸಮರ್ಥರೆಂಬುವ ನಿಂದೆಗೆ ಗುರಿಯಾಗುವಿರಲವೆ? ಕೊಟ್ಟು ಕರಗಬೇಡ ಕೆಟ್ಟು ಕೊರಗಬೇಡ ಎಂಬ ಗಾದೆಗೊಳಗಾಗುವಿರಿ. ಆದಪ್ರಯುಕ್ತ ತಾವುಗಳು ಧೈರ್ಯಶಾಲಿಗಳೂ ದೇಶಸೇವಾನಿರತರೂ ಆದವರನ್ನೇ ಚುನಾಯಿಸಿರಿ. ಚಿನಿವಾರರು ಒರೆಗಲ್ಲಿನಿಂದ ಭಂಗಾರವನ್ನು ಒರೆಯಿಟ್ಟು ಬಣ್ಣವನ್ನು ನಿರ್ಧರಿಸುವಂತೆ ವೇಷಧಾರಿಗಳ ಬಣ್ಣವನ್ನು ಚನ್ನಾಗಿ ಅರಿತು ನಾವು ಧರ್ಮದಿಂದ ಈ ಸ್ಥಾನಗಳಿಗೆ ಯಾರು ಅರ್ಹರೆಂಬುದನ್ನು ನಿರ್ಧರಿಸಿರಿ "ಸ್ವಾರ್ಥವ ಬಿಟ್ಟು ಲೋಕದೆ ಪರಾರ್ಥವ ಮಾಳ್ಪನರುತ್ತಮರು" ಎಂಬ ಭರ್ತೃಹರಿಯ ವಾಕ್ಯಾನುಸಾರವಾಗಿ ಅನುವರ್ತಿಸಿ ಕೀರ್ತಿಭಾಜನರಾಗಬೇಕಾಗಿ ಅತ್ಯಂತ ವಿನಯದಿಂದ ತಮ್ಮಗಳನ್ನು ಪ್ರಾರ್ಥಿಸುವ,

ಟಿ. ಗುರುಚನ್ನಬಸವಯ್ಯ, ತುಂಕೂರು.

ಸ್ವರಾಜ್ಯ ನಿರ್ವಹಣ.

ಸರ್ಕಾರದವರು ನಮಗೆ ಸುಧಾರಣೆಗಳನ್ನು ಕೊಡಬೇಕೆನ್ನುವುದೂ, ಅವುಗಳನ್ನು ಕೊಟ್ಟರೆ ರಾಮರಾಜ್ಯವನ್ನಾಗಿ ಮಾಡುತ್ತೇವೆನ್ನುವುದೂ ನಮ್ಮಲ್ಲಿನವರ ವಾದವಷ್ಟೆ? ಸರ್ಕಾರದವರೂ ತಮಗೆ ತೋಚಿದಷ್ಟು ಕೊಟ್ಟಂತೆ ಮಾಡಿ ತಮ್ಮ ನೊಗವನ್ನು ಆ ಸ್ವರಾಜ್ಯಕಾಂಕ್ಷಿಗಳ ಹೆಗಲ ಮೇಲೆ ಹೇರುವಂತೆ ಆಚರಣೆಯಲ್ಲಿರುವುದು ಪ್ರತ್ಯಕ್ಷ ನಿದರ್ಶನವಷ್ಟೆ? ಈ ಮಧ್ಯೆ ಸ್ವರಾಜ್ಯಬರುವ ಗೊಂದಲದಲ್ಲಿ ಬ್ರಾಹ್ಮಣೇತರರ ದುಷ್ಟ ಪಾರ್ಟಿಯು ಏರ್ಪಟ್ಟು ಅದಕ್ಕೆ ಅಡಚಣೆಮಾಡುವರೆಂಬ ಅಪವಾದ ಬೇರೆ. ಇಂತಹ ದುಃಸ್ಥಿತಿಯಲ್ಲಿ ಪ್ರಜೆಗಳ ಹಿತದ ಸಲುವಾಗಿ ಹೋರಾಡುವ ಮೆಂಬರರ ಚುನಾವಣೆಯಲ್ಲಿ ಅಷ್ಟೊಂದು ಭೇದಭಾವ. ಮೊದಮೊದಲು ತಾವು ಪ್ರತಿನಿಧಿಗಳಾಗಿ ಉದ್ಧಾರಮಾಡುವವೆಂದು ಜನರ ಮುಂದೆ ಹಲ್ಲುಕಿರಿದು, ಅನಂತರ ರುಮಾಲುಗಳನ್ನು ಹಾಕಿಕೊಂಡು ಮೀಟಿಂಗು ಕುರ್ಚಿಗಳನ್ನು ಒರಗಿದರೆಂದರೆ ಪ್ರಜೆಗಳಿಗೂ ಅವರಿಗೂ ಬಾಂಧವ್ಯವೆಲ್ಲಿಯದು? ಎಲ್ಲ ಮ್ಯುನಿಸಿಪಾಲಿಟಿಗಳೂ ಒಂದು ತೆರನಾದರೆ ಚಾಮರಾಜನಗರದ ಮ್ಯುನಿಸಿಪಾಲಿಟಿಯ ಲಕ್ಷಣವೇ ಬೇರೆ. ಎಲ್ಲರೂ ಸ್ವರಾಜ್ಯಹಿತಕಾರಿಗಳಾದರೆ ಇಲ್ಲಿನವರು ಅದಕ್ಕೆ ವಿರೋಧ. ಕಾಂಗ್ರೆಸ್, ದೇಶಾಭಿಮಾನಸಂಘ, ಮುಂದರಿಯುವ ಮಾರ್ಗಗಳವಾತು ಬಂದರೆ ನಾನು ಮುಂದು ತಾನು ಮುಂದು ಕಾರ್ಯದಲ್ಲಿ ಮಾತ್ರ ನೀನು ಮುಂದು ನಾನು ಹಿಂದು. ಬಾಯಿಯಲ್ಲಿ ಬ್ರಹ್ಮಜ್ಞಾನ ಮನಸ್ಸಿನಲ್ಲಿ ಬೇರೆ ಜ್ಞಾನವೆಂಬುದು ನಮ್ಮ ಮುಖಂಡರ ಸ್ಥಿತಿಯಾಗಿರುವಾಗ ಬಡವರು ಬದುಕುವುದು ಹೇಗೆ? ಬ್ರಾಹ್ಮಣೇತರರೇ ತಮ್ಮ ಪ್ರತ್ಯಕ್ಷದೈವವೆಂದು ಹೊಗಳಿ ಹಿಗ್ಗಿ ತಲೆಯಲ್ಲಾಡಿಸುತ್ತಿದ್ದು ಕೆಲಸದಲ್ಲಿ ಅವರಿಗೆ ಬರೆ ಎಳೆಯುತ್ತಿರುವುದು ಸ್ವರಾಜ್ಯಧರ್ಮವೇನು? ಅಂತಹವರನ್ನು ಪುರಸ್ಕರಿಸುವ ನಮ್ಮ ಮ್ಯುನಿಸಿಪಾಲಿಟಿಯ ಸ್ಥಿತಿಯು ಅತ್ಯಂತ ಶೋಚನೀಯ. ವಿಶ್ವಕರ್ಮ ಪಂಗಡದ ಒಬ್ಬರು ತಮ್ಮ ಬಾಬತು ಖಾಲಿನಿವೇಶನಗಳಲ್ಲಿ ಮನೆಗಳನ್ನು ಕಟ್ಟಲು ಲೈಸೆನ್ಸು ಬೇಡಿದ್ದಕ್ಕೆ ಬ್ರಾಹ್ಮಣ ಶ್ರೇಣಿಯಾದ್ದರಿಂದ ಬ್ರಾಹ್ಮಣೇತರರಿಗೆ ಮನೆಕಟ್ಟಲು ಅವಕಾಶ ಕೊಡಕೂಡದೆಂದು ತಕರಾರು ಬಂದಿರುತ್ತೆ, ಇದು ಪೈಸಲಾಗುವವರಿಗೂ ಲೈಸೆನ್ಸು ಕೊಡುವುದಕ್ಕೆ ಆಗುವುದಿಲ್ಲ" ವೆಂಬ ಹುಕುಂ ಬ್ರಾಹ್ಮಣ ವೈಸ್ ಪ್ರೆಸಿಡೆಂಟರಿಂದ ಸಾದರು. ಇದೇನನ್ಯಾಯ? ಬ್ರಾಹ್ಮಣೇತರರೇ ಮೆಜಾರಿಟಿಯಿರುವ, ಅವರಿಂದಲೇ ವೈಸ್ ಪ್ರೆಸಿಡೆಂಟ್ ಪದವಿಗೆ ಆರಿಸಲ್ಪಟ್ಟ ಮಹನೀಯರೇ ಇಂತಹ ಕೌನ್ಸಿಲಿನಲ್ಲಿದ್ದು, ಒಳಗೇ ಬ್ರಾಹ್ಮಣೇತರರಿಗೆ ಮನನೋಯ್ಯುವ ಹುಕುಂ ಹುಟ್ಟಿಸುವುದರ ಅರ್ಥವೇನೆಂಬುದು ಬ್ರಾಹ್ಮಣೇತರ ಪ್ರಪಂಚವೇ ನೋಡಲಿ. ಕಾಲುಕೆರೆದು ನಿಂತಿರುವರೆಂಬ ಅಪವಾದ ಯಾರ ಮೇಲೆ? ಹೋಗಲಿ. ವೈಸ ಪ್ರೆಸಿಡೆಂಟರ ಹುಕುಂ ನಿಜವೇ? ಯಾವದು ಬ್ರಾಹ್ಮಣ ಶ್ರೇಣಿಯೋ ಅಲ್ಲಿ ವೈಶ್ಯರು ಇರಬಹುದೆ? ಅಲ್ಲಿ ಲಿಂಗಾಯತರು ಮನೆ ಮಾಲೀಕರಾಗಿಲ್ಲವೆ? ಜೈನ ಬ್ರಾಹ್ಮಣರು ಮನೆಕಟ್ಟಿಲ್ಲವೆ? ಸಾಲುದುದಕ್ಕೆ ಹಳೆ ಕರ್ನಾಟಕ ಬ್ರಾಹಣರು ನಿವೇಶನಗಳನ್ನು ಪಡೆದಿಲ್ಲವೆ? ಹೀಗಿದ್ದು ಬ್ರಾಹ್ಮಣ ಶ್ರೇಣಿ ಎಂಬ ಆಧಾರವು ಯಾವ ಮ್ಯುನಿಸಿಪಲ್ ರೆಗ್ಯುಲೇಷನ್ನಲ್ಲಿದೆಯೋ ಕಂಡುಬರುವುದಿಲ್ಲ. ಒಂದು ವೇಳೆ ಈ ವಿಶ್ವಕರ್ಮರಿಗೆ ಸ್ಥಳವನ್ನು ಕ್ರಯಕ್ಕೆ ಕೊಟ್ಟವರಾರು? ಬ್ರಾಹ್ಮಣರಲ್ಲವೆ? ಈ ಶುಷ್ಕ ತಕರಾರಿನಿಂದಲೇ ಮನೆಕಟ್ಟುವುದು ನಿಂತುಹೋದರೆ ನಿವೇಶನವು ಬ್ರಾಹ್ಮಣರಿಗೆ ಸುಲಭವಾಗಿ ದೊರಕುವುದೆಂದೊ? ಇತರರು ಇರಬಾರದೆನ್ನುವವರು ಮುಸಲ್ಮಾನ ಅಮಲ್ದಾರರು ಬ್ರಾಹ್ಮಣಶ್ರೇಣಿ ಎಂದೆನ್ನುವದರ ಒಳ ವಾಸವಾಗಿದ್ದದ್ದನ್ನು ನೋಡಲಿಲ್ಲವೆ? ಬ್ರಾಹ್ಮಣಶ್ರೇಣಿ ಎನ್ನುವುದು ದೇವಸ್ಥಾನದ ಮುಂಭಾಗದಲ್ಲಿ. ಕಂಡಕಂಡ ಕಡೆ ಬ್ರಾಹ್ಮಣಶ್ರೇಣಿ ಆದರೆ ಮನೆಕಟ್ಟಬಾರದಾದರೆ ಬ್ರಾಹ್ಮಣೇತರರ ಜೊತೆಯಲ್ಲಿ ಇವರು ಕೌನ್ಸಿಲ್ಲಿನಲ್ಲಿ ಕೂಡುವುದೂ ದೊಡ್ಡ ಅನ್ಯಾಯವೇ. ಅಲ್ಲದೆ ಬ್ರಾಹ್ಮಣೇತರರು ಬಂದಿಳಿಯುವ ಮುಸಾಫರ ಖಾನೆಯೂ ಅಲ್ಲಿಲ್ಲವೆ? ಇದು ಸುಲಭವಾದ ವಿಷಯವಲ್ಲ. ಮ್ಯುನಿಸಿಪಾಲಿಟಿಯವರು ಈ ಭೇದಗಳನ್ನು ಹಚ್ಚಿಕೊಂಡರೆ ಇವರು ಊರನ್ನು ವೃದ್ಧಿಪಡಿಸುವವರಂತೆ ಕಂಡುಬರುವುದಿಲ್ಲ. ಮ್ಯುನಿಸಿಪಾಲಿಟಿಯ ಆದಾಯವು ಬ್ರಾಹ್ಮಣೇತರರಿಂದಲೇ. ಅದರ ಪ್ರತಿಷ್ಠೆಯೂ ಅವರಿಂದಲೇ. ಬ್ರಾಹ್ಮಣರು ಬ್ರಾಹ್ಮಣೇತರರ ಸ್ಥಳಗಳನ್ನು ಆಕ್ರಮಿಸಿಕೊಳ್ಳುತ್ತಾ ಬಂದು, ತಮ್ಮ ನಿವೇಶನದಲ್ಲಿ ಮನೆಕಟ್ಟಲು ಅಪ್ಪಣೆ ಬೇಡಿದರೆ "ಇತ್ಯರ್ಥವಾಗುವವರೆಗೆ" ಆಗಲಾರದೆನ್ನುವ ಧರ್ಮಬುದ್ಧಿಯು ವೈಸ್‌ಪ್ರೆಸಿಡೆಂಟರಿಗೆ ಕೊಡಲ್ಪಟ್ಟದು ಯಾವ ದೇವರಿಂದ? "ಏನೊಮ್ಮು ವಾದಿ ಮಾಸೊಮ್ಮು ಮಾದೇ" ಎಂದು ವೈಶ್ಯರು ಆಡುವ ಕುಯುಕ್ತಿಯ ಮಾತಿನಂತೆ ಚಾಮರಾಜನಗರದ ಮ್ಯುನಿಸಿಪಾಲಿಟಿಯವರ ಅಪ್ಪಣೆಯು ಬಹು ವಿಷಾದಕರವಾಗಿದೆ. ವಿಶ್ವಕರ್ಮರು ಕನಿಷ್ಠ ಪಂಗಡದವರಲ್ಲ. ಅವರನ್ನು ಅಲ್ಲಿ ಮನೆ ಕಟ್ಟಕೂಡದೆನ್ನುವುದು ಅವರ ಮತಕ್ಕೆ ವಿರೋಧವಾದ ನಡತೆಯಾಗಿದೆ. ನಿಜವಾಗಿಯೂ ಬ್ರಾಹ್ಮಣಶ್ರೇಣಿಯಾದರೆ ತಕರಾರು ಒಪ್ಪಬಹುದು! ಹಾಗೆ ತಕರಾರು ಮಾಡುವುದೂ ನಿಜವಾದರೆ ದೇಶಾಭಿಮಾನಿಗಳು ಇವರೇ ಸರಿ ಎನ್ನಬಹುದು! ಇತರರು ಮನೆ [illegible] ಈಗ ಹಾಗ! ಬಡವರು ಮನೆಕಟ್ಟುವುದಾಗಿ ಮುಂದೆಬಂದರೆ ಅಡಚಣೆ. ಬ್ರಾಹ್ಮಣರು ಇತರರ ಶ್ರೇಣಿಗೆ ಬಂದು ಮನೆಕಟ್ಟಲು ತಕರಾರಿಲ್ಲ. ಇತರರು ಇವರ ಶ್ರೇಣಿಗೆ ಬಂದರೆ ದೊಡ್ಡ ತಕರಾರಂತೆ! ಖಾಲಿನಿವೇಶನಗಳು ಇರುವುದು ರೂಲ್ಸಿಗೆ ವಿರೋಧವಾಗಿರುವಾಗ ಅಲ್ಲಿ ಮನೆಕಟ್ಟುವುದಕ್ಕೆ ಪ್ರೋತ್ಸಾಹಿಸುವುದರಬದಲು ಅಡ್ಡಿಮಾಡಹೊರಟಿದ್ದು ನ್ಯಾಯವಲ್ಲ. ಇಂತಹ ಸಂದಿಗ್ಧ ಸಮಯದಲ್ಲಿ ಕೌನ್ಸಿಲಿನಲ್ಲಿಟ್ಟು ಇತ್ಯರ್ಥಮಾಡಬಹುದಾಗಿತ್ತು. ಹಾಗೆ ಮಾಡದೆ ಹೋದದ್ದರದೆಸೆಯಿಂದ ನನಗೆ ತುಂಬಾ ಪಶ್ಚಾತ್ತಾಪಕ್ಕೆ ಕಾರಣವಾಗಿದೆ.

ಅಧಿಕಾರಿ.

ಹೂಲಿಯಲ್ಲಿ ಪರಮಾತ್ಮನ ಅಗಾಧ ಲೀಲೆಯು ಪುನಃ ಗೋಚರವಾಯಿತು.

ಆಸ್ತಿಕಮಹನೀಯರೇ, ನಮ್ಮ ಹಿಂದುಸ್ಥಾನವು ಪ್ರತಿಯೊಂದುಪ್ರಾಣಿಯ ಜೀವನ್ಮುಕ್ತಿಯ ತವರುಮನೆಯಾಗಿರುವದೆಂದು ಇಲ್ಲಿಯ ಆಸ್ತಿಕಮತದ ಮಹತ್ವದಿಂದ ತಿಳಿದುಬರುತ್ತದೆ. ಇಂಥ ಜೀವನ್ಮುಕ್ತಿಗೆ ಕಾರಣನಾದ ಜಗತ್ಪಾಲಕ ಜಗದೀಶನ ಲೀಲೆಯು ಕುರುಹುಗಳು ಈ ಹಿಂದುಸ್ಥಾನದಲ್ಲಿ ಆಗಾಗ್ಗೆ ಅನೇಕ ಪ್ರಕಾರದಿಂದ ಪ್ರಕಟವಾಗುವದರಿಂದಲೇ ನಾಸ್ತಿಕಮತದ ಪ್ರಭಾವವು ನಾಶವಾಗಿ ಆಸ್ತಿಕ್ಯಭಾವವು ನೆಲೆಗೊಳ್ಳುತ್ತ ಬಂದಿರುತ್ತದೆ. ಇಂಥ ಆಸ್ತಿಕ್ಯಭಾವವು ನೆಲೆಗೊಳ್ಳಲಿಕ್ಕೆ ಆ ಭಗವಂತನೇ ಮೂಲಾಧಾರನೆಂದೂ ಇಂಥ ಭಗವಂತನ ಮಹಿಮೆಯನ್ನರಿತು ಜೀವನ್ಮುಕ್ತರಾಗುವದೇ ಪ್ರತಿಯೊಬ್ಬ ಮನುಷ್ಯಪ್ರಾಣಿಯ ಮುಖ್ಯ ಕರ್ತವ್ಯವೆಂದೂ ತಿಳಿದು ಆಚರಿಸುವ ನಂಬಿಗೆಯು ಆಗಿಂದಾಗ್ಗೆ ಉತ್ಪನ್ನವಾಗುತ್ತದೆಂದು ಹೇಳಲು ಹಿಂದಿನ ಮಹಿಮರ ಚರಿತ್ರೆಯಿಂದಲೂ ಅನೇಕ ಗ್ರಂಥಾಧಾರದಿಂದಲೂ ತಿಳಿದುಬರುತ್ತದೆ. ಇಂಥ ಮಹಿಮೆಯು ಅನೇಕ ಪ್ರಕಾರದವುಗಳಾಗಿದ್ದರೂ ಅವುಗಳನ್ನು ತ್ಯಜಿಸಿ ಇತ್ತಿತ್ತ ನಡೆದುಬಂದ ಶಿಕ್ಷಣದ ಪ್ರಭಾವದಿಂದಲೋ ಅಥವಾ ಐಹಿಕ ಸುಖಸಾಧನೆಯ ಮಬ್ಬಿನಿಂದಲೋ ಆ ಪರಮಾತ್ಮನ ಬಗ್ಗೆ ವಿಚಾರವು ಕುಂಠಿತವಾಗಿ ಪೂಜ್ಯಬುದ್ಧಿಯು ನಾಶವಾಗುತ್ತ ನಡೆದಿರುವದೆಂದು ಹೇಳಲಿಕ್ಕೆ ಈಗಿನ ಸುಶಿಕ್ಷಿತರೆನಿಸುವವರು ಆಗಿಂದಾಗ್ಗೆ ಬಡಬಡಿಸುವ ಐಹಿಕ ಸುಖಸಂಪತ್ತಿನ ನುಡಿಗಳೇ ಮುಖ್ಯವಾಗಿರುವವಲ್ಲದೆ ಇಂಥ ಮಹನೀಯರು ಅದನ್ನು ತ್ಯಜಿಸಲಿಕ್ಕೆ ಮೊನ್ನೆ ಬಿಸಿ ಬಿಸಿಯಾದ ವಾರ್ತೆಯೊಂದದೆ. ಆದೇನಂದರೆ, ಅತಿ ಉನ್ನತಾವಸ್ಥೆಯನ್ನು ಹೊಂದಿದ ಪವಾಡದ ಭೂತಂಪದ ಒಂದು ಉದಾಹರಣೆಯೇ ಸಾಕುಮಾಡಿದೆ. ಇಷ್ಟಾದರೂ ಬುದ್ಧಿ ಬರುವದೋ ಇಲ್ಲವೋ ಎಂಬ ಸಂದೇಹವು ಬರುತ್ತದೆ. ಇಂಥ ಹೀನಸ್ಥಿತಿಯು ಒದಗಲಿಕ್ಕೆ ಪರಮಾತ್ಮನ ಮೇಲಿನ ನಂಬಿಗೆಯು ನಾಶವಾದದ್ದೇ ಮೂಲಕಾರಣವು. ಮಹನೀಯರೇ ಇನ್ನುಮೇಲೆ ಆ ಪರಮಾತ್ಮನ ಮಹಿಮೆಯ ಲೀಲೆಯನ್ನು ನೋಡಿಯಾದರೂ ಕೇಳಿಯಾದರೂ ಪ್ರತ್ಯಕ್ಷ ಉದಾಹರಣೆಯಿಂದಾದರೂ ನಂಬಿಗೆಯನ್ನಿಟ್ಟು ಧನ್ಯರಾಗುವಿರೆಂದು ಒಂದೇ ಉದಾಹರಣೆಯನ್ನು ತಮ್ಮ ಮುಂದೆ ಇಡುವೆನು. ಅದನ್ನು ಲಕ್ಷದಲ್ಲಿಡುವರೆಂಬ ಪೂರ್ಣನಂಬಿಕೆಯದೆ. ವಾಚಕಮಹಾಶಯರೇ, ಭಗವಂತನ ಮಹಿಮೆಯ ಕುರುಹುಗಳನ್ನರುಹುವಂಥ ಸ್ಥಾನಗಳು ನಮ್ಮ ಹಿಂದುಸ್ಥಾನದಲ್ಲಿ ಅನೇಕ ಕಡೆ ಇರುತ್ತಿದ್ದು ಅಂಥ ಸ್ಥಾನಗಳಲ್ಲಿ ಒಂದಾದ ಹೂಲಿಯೆಂಬ ಗ್ರಾಮವು ಈಗ್ಗೆ ಬೆಳಗಾಂವಜಿಲ್ಲೆಗೆ ಸೇರಿದ್ದು ಹಿಂದೆ ಅನೇಕವೇಳೆ ಅತಿವೈಭವದಿಂದ ಮೆರೆದು ಭಗವದ್ಭಕ್ತರ ಅನುಕೂಲ ಸ್ಥಾನವಾಗಿತ್ತೆಂದು ಹೇಳಲು ಇಲ್ಲಿಯ ಕುರುಹುಗಳೇ ಮೂಲಕಾರಣವಾಗಿವೆ. ಇಂಥ ಕುರುಹುಗಳಲ್ಲಿ ಒಂದೇ ಒಂದಾದ ಕುರುಹು ನಿನ್ನೆ ಮತ್ತೆ ಪ್ರಕಟವಾಯಿತು ಅದೇನಂದರೆ—ಈ ಹೂಲಿಯೆಂಬ ಗ್ರಾಮದಲ್ಲಿ ಅನೇಕ ಶಿವಾಲಯಗಳೂ ಪುಣ್ಯತೀರ್ಥಗಳೂ ಇರುತ್ತಿದ್ದು ಆ ತೀರ್ಥಗಳಲ್ಲಿ ಕೆಲವುಗಳಿಗೆ ಇತ್ತಿತ್ತ ಭಾವಿ ಅಂತಾ ಹೆಸರು ಬಂದಿದೆ. ಇಂಥ ಭಾವಿಗಳಲ್ಲಿ ಹುಡೇದ ಭಾವಿ ಎಂಬ ಹೆಸರಿನ ಭಾವಿಯೊಂದು ಮಹಾಜಲಪೂರ್ಣವಿದ್ದು ಎಂಥ ಕಠಿಣ ಪ್ರಸಂಗದಲ್ಲಿಯೂ ಕೂಡ ಯಾವತ್ತು ಗ್ರಾಮಕ್ಕೆ ದನ ಕರ ಕುರಿಮರಿಗಳಿಗೂ ಕೂಡಾ ನೀರಿನ ಪೂರವತೆಯನ್ನು ಮಾಡಿಕೊಡುವಂಥಾದ್ದು ಆಗಿದೆ. ಇಂಥ ಭಾವಿಯು ಈ ವರುಷದ ಅನಾವೃಷ್ಟಿಯ ದೆಸೆಯಿಂದ ನೀರು ಕೆಳಕ್ಕೆಹೋಗಿ 2-3 ಸಾರಿ ಭಾವಿಯನ್ನು ಬಳಿದಿರುವರು. ಇಂಥ ಭಾವಿಯಲ್ಲಿ ನಿನ್ನಿನ ದಿವಸ ಅಂದರೆ ತಾ|| 22ನೆ ಗುರುವಾರ ಒಂದು ಭಗವಂತನ ಕುರುಹುತೋರಿತು. ಈ ಭಾವಿಯಲ್ಲಿ ಪ್ರಾಚೀನಕಾಲದಲ್ಲಿ ರಚಿಸಿದ ಕಟ್ಟಡವು ಅದೆ. ಹೀಗಿದ್ದ ಸ್ಥಾನದಲ್ಲಿ ಒಮ್ಮೊಮ್ಮೆ ತುಂಬಿದ ಮಣ್ಣಿನಕೊಡಗಳು ತಳದಿಂದ ಮೇಲಕ್ಕೆದ್ದು ನೀರಿನಮೇಲೆ ತೇಲಾಡಿ ಅವುಗಳನ್ನು ಯಾರಾದರೂ ಸ್ಪರ್ಶಮಾಡಿದರೆ ಕೂಡಲೇ ನೀರಿನಲ್ಲಿ ಮುಣಿಗಿ ಮಾಯವಾಗುವವು. ಇಂಥ ಕೊಡಗಳು ಏಳುವಾಗ್ಗೆ ನೀರಿನಲ್ಲಿ ಒಂದು ಪ್ರಕಾರದ ಶಬ್ದವು ಹುಟ್ಟಲು ಅದನ್ನರಿತ ಅನುಭವಿಕರು ನೀರನ್ನು ತುಂಬುವದನ್ನು ಯಾವತ್ತರಿಗೂ ಬಂದಮಾಡಲು ಸ್ವಲ್ಪ ಹೊತ್ತಿನಲ್ಲಿ ಭಡಲ್ ಎಂಬುವ ಶಬ್ದವಾದಕೂಡಲೇ ಕೊಡಗಳು ಬಾಯಿಮೇಲಾಗಿಯೂ ಕೆಲವು ಸ್ವಲ್ಪ ವಾರಿಯಾಗಿಯೂ ಕೆಸರುನೀರನ್ನು ತುಂಬಿಕೊಂಡೇ ಮೇಲಕ್ಕೇಳುವವು. ಕೂಡಲೇ ಊರ ಜನರು ವೈಭವದಿಂದ ಭಾವಿಗೆ ಹೋಗಿ ಅವರಲ್ಲಿ ಸ್ನಾನಮಾಡಿದವರು ಭಾವಿಯಲ್ಲಿಳಿದು ಆ ಕೊಡಗಳನ್ನು ತಕ್ಕೊಂಡು ಕಡೆಗೆ ಬಂದು ಆ ಕೊಡಗಳನ್ನು ಗಂಧ ಅಕ್ಷತೆ ಫಲ ನೈವೇದ್ಯಾದಿಗಳಿಂದ ಪೂಜಿಸಿ ಪರಮಾತ್ಮನಾಮಸ್ಮರಣೆಮಾಡುತ್ತ ಈ ಅಗಾಧವಾದ ಮಹಿಮೆಯನ್ನು ಹೊಗಳುತ್ತ ಪುನಃ ಆ ಕೊಡಗಳನ್ನು ನೀರಲ್ಲಿಯೇ ಬಟ್ಟುಬಿಡುವ ಪದ್ಧತಿಯು ಬಹುದಿವಸಗಳಿಂದ ನೆಲೆಗೊಂಡಿದೆ. ಇಂಥ ಮಹಿಮೆಯು ತೋರದೆ 10-15 ವರುಷಗಳಾಗಿ ಕೊಡಗಳು ಏಳದೆ ಇರಲು ಜನರು ಅಲ್ಲಲ್ಲಿ [illegible] ಗುಟ್ಟಲು ಇದನ್ನು ಕೇಳಿದ ಈಗಿನ ತರುಣರು ತುಂಬಿದ ಕೊ[illegible] ನೀರಿನಮೇಲೆ ತೇಲಾಡುವದೂ ಸುಳ್ಳು, ನೀವು ಹೇಳುವದೂ ಸುಳ್ಳೆಂದು ಅನುಭವಿಕರ ಬಾಯಿಬಡಿದು ತಮ್ಮ ನಾಸ್ತಿಕಪಂಥದ ಲಂಡತನವನ್ನೇ ಮುಂದುಮಾಡುತ್ತಿರುವ ಸಮಯದಲ್ಲಿ ಇಂಥ ಧರ್ಮಲಂಡರ ಮತವನ್ನು ಖಂಡಿಸಲಿಕ್ಕೆ ತಯಾರಿಯಾದ ಜಗದೀಶನು ಬಂದನೋ ಏನೋ ಅನ್ನುವಂತೆ ನಿನ್ನೆ ತಾ|| 22 ಗುರುವಾರ ಪ್ರಾತಃಕಾಲದ 9 ಗಂಟೆ ಸುಮಾರಕ್ಕೆ ಊರಜನರು ನೀರನ್ನು ತುಂಬಲಿಕ್ಕೆ ಹೋಗಿರಲು ಆಗ್ಗೆ ಭಾವಿಯಲ್ಲಿ ಕೊಡಗಳು ಏಳುವ ಸೂಚನೆಯುಂಟಾಗಲು ಕೆಲವು ಅನುಭವ ಸ್ತ್ರೀಪುರುಷರು ನೀರನ್ನು ತುಂಬಬೇಡಿರಿ ಅಂತಾ ಶಬ್ದ ಮಾಡಲು ಸ್ವಲ್ಪ ಹೊತ್ತು ನೀರನ್ನು ತುಂಬುವದನ್ನು ಬಿಟ್ಟು ಅಲ್ಲಿ ಯಾವತ್ತರೂ ನಿಂದರಲು ತಕ್ಷಣವೇ ಭಡಲ್ ಅಂತಾ ಶಬ್ದವಾಗಿ ಭಾವಿಯ ಒಂದು ಭಾಗದಲ್ಲಿ ಕೆಸರುನೀರಿನಿಂದಾ ತುಂಬಿದ ಕೊಡವು ಕಾಣಿಸಿತು. ಕೂಡಲೇ ಯಾವತ್ತರೂ ಸಂತುಷ್ಟರಾಗಿ ಕೊಡವೆದ್ದಿತು ಕೊಡವೆದ್ದಿತು ಎಂದು ಅನ್ನಲು ಕೂಡಲೇ ಆ ಕೊಡದ ಹತ್ತರಿದ್ದ ಒಬ್ಬ ಹಾಲುಮತದ ಚಿಕ್ಕ ಹುಡುಗನು ತಿಳಿಯದೆ ಆ ಕೊಡವನ್ನು ಎತ್ತಿ ಸ್ವಲ್ಪ ಮೇಲಕ್ಕೆ ತೆಗೆಯಲು ಕೈಯಿಂದ ಸುಳಿಚಿ ಆ ಕೊಡವು ನೀರಿನಲ್ಲಿ ಮಾಯವಾಯಿತು. ಆಕ್ಷಣವೇ ಭಾವಿಯ ನೀರು ಸ್ವಲ್ಪವೇ ಇದ್ದ ಮೂಲಕ ಕೆಲವರು ಸ್ನಾನಮಾಡಿ ಭಾವಿಯನ್ನೆಲ್ಲಾ ಹುಡುಕಿದರೂ ಕೊಡವು ದೊರೆಯಲಿಲ್ಲ. ಮುಂದೆ ಯಾವತ್ತರೂ ವೈಭವದಿಂದ ಭಾವಿಗೆಹೋಗಿ ಭಾವಿಯನ್ನು ಪೂಜೆಮಾಡಿ ಒಂದು ಹೊಸಕೊಡವನ್ನು ಪೂಜೆಮಾಡಿ ನೀರಿನಲ್ಲಿ ಬಿಟ್ಟು ಆನಂದದಿಂದ ತಮ್ಮ ತಮ್ಮ ಮನೆಗೆ ತೆರಳಿದರು. ಈ ಭಾವಿಯಲ್ಲಿ ಇರುವ ಕೊಡಕ್ಕೆ [illegible]

ತಿಳಿಯುವರು. ಇಂಥ ಅಗಾಧವಾದ ಮಹಿಮೆಯನ್ನು ನೋಡಿದ ಈಗಿನ ತರುಣರು ತಮ್ಮ ನಾಸ್ತಿಕಪಂಥವನ್ನು ತ್ಯಜಿಸಿ ಮುಖವನ್ನು ಕೆಳಗೆಮಾಡಿದರು. ಇವರ ಹಿಂದನೆಗೆ ಪರಮಾತ್ಮನೆ ಇರುವನು; ನಾವು ಹೆದರುವ ಕಾರಣವೇಯಿಲ್ಲ.

ಓರ್ವ ಭಗವದ್ಭಕ್ತ.

ಶೃಂಗೇರಿಗೆ ಕೌನ್ಸಿಲ್‌ಬೇಕೆ?

ಶೃಂಗೇರಿಯವರು ಅಲ್ಲಿನ ಆಡಳಿತಗಳಲ್ಲಿ ಲೋಪವಿರುವದ್ದರಿಂದ ಅದನ್ನು ಕ್ರಮಪಡಿಸುವ ಬಗ್ಗೆ ಆಟವನ್ನು ಹೂಡಿ ಇನ್ನು ಮುಂದೆ ಸ್ವಾಮಿಗಳು ಸ್ವತಃ ಕಾರುಬಾರುಗಳನ್ನು ನಡೆಸುವಂತಾಗಿ ಅವರ ಸಹಾಯಕ್ಕೆ ಏಜಂಟರ ಪ್ರೆಸಿಡೆಂಟ್‌ಗಿರಿಯಿಂದ ಒಂದು ಕೌನ್ಸಿಲ್ ಆಗಬೇಕೆಂದು ದೊಡ್ಡ ಪ್ರಶ್ನೆಯನ್ನು ತಂದೊಡ್ಡಿರುವರು. ಹೀಗೆ ಮಾಡುವುದರಲ್ಲಿ ಈಗಿರುವ ಏಜಂಟರನ್ನು ನಿಂದೆಗೆ ಗುರಿಮಾಡಿ ಪ್ರಬಲವಲ್ಲದ ಕಾರಣಗಳನ್ನು ಹೊರಗೆಡವಿ, ತಮ್ಮ ಹೊಟ್ಟೆಯುರಿಯನ್ನು ತೀರಿಸಿಕೊಂಡಿರುವರು. ಅಲ್ಲದೆ ಸ್ವಾಮಿಗಳ ಬಾಯಿಲೆಯ ಕಾಲದಲ್ಲಿ ಏಜಂಟರನ್ನು ದೂರಿ, ಇಲ್ಲದ ಗಲಾಟೆಯನ್ನೆಬ್ಬಿಸಿ ಸರ್ಕಾರದವರಿಗೂ ಕೂಗುಮುಟ್ಟಿಸಿ, ಕೊನೆಗೆ ಅವರು ಸ್ವಸ್ಥವಾದಾಗ ತಮ್ಮ ಚಳವಳಿಯು ನಿರಾಧಾರವಾದದ್ದರಿಂದ ಸಲುವಾಗಿ ಕೌನ್ಸಿಲ್ ಬೇಕೆಂಬ ದೊಡ್ಡ ಸುಧಾರಣೆಯನ್ನು ಬಯಸಿದ್ದಾರೆ. ಇದು ಸಾಧುವಾದದ್ದೆ ಅಸಾಧುವಾದದ್ದೆ? ಇದರ ಸಾಧಕ ಬಾಧಕಗಳೇನೆಂಬುದನ್ನೂ ಈಗ ಪರ್ಯಾಲೋಚಿಸುವುದು ಯುಕ್ತವಾಗಿದೆ. ಮಠವು ಬಹುಕಾಲದಿಂದಲೂ ಸ್ವತಂತ್ರವಾಗಿದ್ದು ಅನೇಕ ರಾಜರುಗಳಿಂದಲೂ, ಪಾಳೆಯಗಾರರುಗಳಿಂದಲೂ ಪೋಷಿಸಲ್ಪಡುತ್ತಾ, ರಾಜ್ಯದ ಮಠಾಚಾರಗಳನ್ನು ವಿಚಾರಮಾಡಿಕೊಂಡು ಕೆಲವು ಕಾಲ ವೃದ್ಧಿಯಲ್ಲಿಯೂ, ಮತ್ತೆ ಕೆಲವು ಕಾಲ ನಿದ್ದೆಯಲ್ಲಿಯೂ ಮುಂದೆ ಬಂದಿದೆ. ಕೆಲವರು ಸ್ವಾಮಿಗಳು ತಪಸ್ವಿಗಳಾಗಿಯೂ ಕೆಲವರು ಬಾಹ್ಯೇಚ್ಛೆಯಲ್ಲಿಯೂ ಪೀಠವನ್ನು ಅಲಂಕರಿಸಿ ಶಿಷ್ಯರನ್ನನುಗ್ರಹಿಸುತ್ತಿದ್ದರು. ಆ ಕಾಲದಲ್ಲಿ ಬ್ರಿಟಿಷ್ ಸರ್ಕಾರದ ಪದ್ಧತಿಯಾಗಲಿ, ಕಾನೂನುಗಳಾಗಲಿ ಇಲ್ಲದೆ, ಇಲ್ಲಿನ ದೊರೆಗಳಾಗಲಿ, ಪಾಳೆಯಗಾರರಾಗಲಿ ಮಾಡಿದ ಕಾನೂನು ಕಂದಾಚಾರದಂತೆ ಅಲ್ಲಿನ ಆಡಳಿತಗಳು ನಡೆಸಲ್ಪಡುತ್ತಿದ್ದುವು. ಅವೂ ಅತ್ಯಲ್ಪಕಾಲದಲ್ಲಿಯೇ ನಶಿಸಿಹೋಗುತ್ತಿದ್ದುವು. ರಾಜಕೀಯಗಳ ಹೊಡೆತದಿಂದ ಅನೇಕವೇಳೆ ಮಠದ ಸುದ್ದಿಯೇ ಅಡಗಿಹೋಗಿದ್ದುದರ ದಾಖಲೆಗಳೂ ಇರುತ್ತವೆ. ಮಠವನ್ನು ವಿಚಾರಿಸುತ್ತಿದ್ದವರೂ ಇಲ್ಲ, ಮಠದವರೂ ಕ್ರಮಪಡಬೇಕಾಗಿ ಇರಲಿಲ್ಲ. ಆಸ್ತಿಯೂ ಹೆಚ್ಚು ಕಡಿಮೆ ಶ್ರೀ ನರಸಿಂಹಭಾರತಿಗಳ ಕಾಲದವರೆಗೂ ಹಾಗೂಹೀಗೂ ನಡೆದುಬರುತ್ತಿದ್ದಿತು. ಶ್ರೀ ನರಸಿಂಹಭಾರತಿಗಳ ಕಾಲದಿಂದ ಹಿಂದೆ ಸರ್ವಾಧಿಕಾರಿಗಳೆಂಬ ಅಧಿಕಾರಿಯು ಇದ್ದು ಶೃಂಗೇರಿಮಠಕ್ಕೆ ಬರುತ್ತಿದ್ದ ಕಪ್ಪಕಾಣಿಕೆಗಳನ್ನು ಬೇರೆ ಬೇರೆ ಪ್ರಾಂತಗಳಿಂದ ತರಿಸಿಕೊಳ್ಳುತ್ತಿದ್ದರು. ಆಗಿನ ಅಧಿಕಾರಿಗಳಿಗೆ ಸರ್ಕಾರದ ಸಂಬಂಧವು ಅಷ್ಟೇನೂ ಇಲ್ಲದೆ ಕೇವಲ ಶಿಷ್ಯಕೋಟಿಯ ಪಾರುಪತ್ಯವನ್ನೇ ವಹಿಸಿದ್ದು, ಸ್ವಾಮಿಗಳ ಸಂಚಾರಕಾಲದಲ್ಲಿಮಾತ್ರ ಹೆಚ್ಚು ಕೆಲಸ ತಗಲುತ್ತಿತ್ತು. ಸ್ವಾಮಿಗಳ ಸಂಬಂಧಿಗಳೇ ಇಂತಹ ಸರ್ವಾಧಿಕಾರಕ್ಕೆ ನೌಕರರೂ ಮಾಡಲ್ಪಡುತ್ತಿದ್ದರು. ಆದೇಕೆಂದರೆ—ಇತರ ಕಾರಣಗಳ ಜೊತೆಗೆ ಶ್ರೀಗಳ ಪ್ರಾಣರಕ್ಷಣೆಯು ಅತಿಮುಖ್ಯವಾಗಿತ್ತು. ದೊರೆಗಳಿಗೂ ಮಠಾಧಿಪತಿಗಳಿಗೂ ಗಂಡವು ಹೆಚ್ಚಷ್ಟೆ? ಆಗ್ಗೆ ಇತರ ಮಠಗಳಿಗೂ, ಶೃಂಗೇರಿಯ ಉಪಮಠಗಳಿಗೂ ಪರಸ್ಪರ ಅಂತಃಕಲಹವು ಇದ್ದದ್ದರಿಂದ ಮುಖ್ಯ ಸ್ವಾಮಿಗಳಿಗೆ ಪ್ರಾಣಗಂಡವು ಖಂಡಿತವಾಗಿಯೂ ಊಹಿಸಲ್ಪಡುತ್ತಿತ್ತು. ಇಂತಹ ಸರ್ವಾಧಿಕಾರಿಗಳು ಸ್ವಾಮಿಗಳ ಆಶ್ರಯದಲ್ಲಿ ಧನರಾದರಲ್ಲದೆ ಪುಣ್ಯವಂತರಾಗಿಯೂ ಇರುತ್ತಿದ್ದರು. ಶ್ರೀ ನರಸಿಂಹಭಾರತಿಗಳ ಕಾಲಕ್ಕೆ ರಾಜ್ಯದಲ್ಲಿ ಅನೇಕ ಬದಲಾವಣೆಗಳು ಒದಗಿ, ಬ್ರಿಟಿಷ್ ಪ್ರಭುತ್ವವು ನೆಲೆಗೊಂಡು ಎಲ್ಲವೂ ಹೊಸಮಾದರಿಯಾಗಿ ನಡೆಯುತ್ತಿತ್ತು. ಆಗ್ಗೆ ನಿಯಮಿತರಾಗಿದ್ದ ಸರ್ವಾಧಿಕಾರಿಗಳೂ ಮಾರ್ಗತಪ್ಪಿ ಕೇವಲ ವಿಷಯಾಭಿಲಾಷೆಗಳ ಕಡೆಗೆ ಗಮನಕೊಟ್ಟು ಮಠದ ಕೀರ್ತಿಗೆ ಕಳಂಕವನ್ನು ತಂದು ದ್ರವ್ಯಕ್ಕೆ ಲೋಪವನ್ನೂ ತಂದಿದ್ದರು, ಅಲ್ಲದೆ ಸಾಲವನ್ನು ಹೇರಿಬಿಟ್ಟರು. ಅವರು ತಪೋನಿಷ್ಠರೂ ದಿವ್ಯಜ್ಞಾನಿಗಳೂ ಹೌದು. ಅವರಲ್ಲಿ ಗತಿಸಿದ ಶ್ರೀ ಶಿವಾಭಿನವ ನರಸಿಂಹಸ್ವಾಮಿಗಳು ಬಹುದಿನಗಳು ತಂಬಿಯತ್ತನ್ನುಪಡೆದರು. ಅವರು ಅವತಾರ ಪುರುಷರೆಂಬ ಪ್ರತೀತಿಯೂ ಇದೆಯಷ್ಟೆ? ಆ ಮಹಾನುಭಾವರ ಕಾಲದಲ್ಲಿ ಆಡಳಿತಗಳಲ್ಲಿಯೂ ದೇಶದಲ್ಲಿಯೂ ನಾಗರಿಕತೆಯು ಹೆಚ್ಚಿ ರಾಜ್ಯದಲ್ಲಿ ತಹಬಂದಿಯು ನೆಲೆಗೊಂಡು ಅತ್ಯಂತ ಜನೋಪಯೋಗಕರ ಕಾರ್ಯಗಳು ಮಠದವರಿಂದ ಮಾಡಲ್ಪಡಬೇಕಾಯಿತು. ಆಗ್ಗೆ ತಮ್ಮ ಸ್ವಬಂಧುಗಳಾದ ಈಗಿನ ಏಜಂಟರನ್ನು ಸರ್ವಾಧಿಕಾರಕ್ಕೆ ನಿಯಮಿಸಿಕೊಂಡರು. ಅಲ್ಲಿಂದ ಶೃಂಗೇರಿ ಜಹಗೀರು ಸರ್ವೆ, ಪರದೇಶಗಳ ವ್ಯಾವಹಾರ, ಇಂಗ್ಲೀಷರ ಪತ್ರವ್ಯವಹಾರಗಳು, ಮೊದಲಾಗಿ ಆಸೇತು ಹಿಮಾಚಲದವರಿಗಿನ ಶಿಷ್ಯರಿಂದ ಪತ್ರಗಳೂ ಕಪ್ಪಗಳೂ ಹೇರಳವಾಗಿ ಬರಹತ್ತಿದವು. ಸಾಲದ್ದಕ್ಕೆ ಶೃಂಗೇರಿಮಠವು ಸಾಲದಲ್ಲಿಬಿದ್ದು ಅಸ್ತಂಗತವಾಗಿದ್ದುದರಿಂದ ಅದನ್ನು ಪುನರುಜ್ಜೀವನಮಾಡುವ ಭಾರವು ಈಗಿನ ಏಜಂಟರ ಮೇಲೆ ಬಿದ್ದಿತು. ಅವುಗಳೆಲ್ಲವನ್ನೂ ನಿರ್ವಹಿಸಿಕೊಂಡು ಮಠವನ್ನು ವಿಸ್ತರಿಸಿ ಕೀರ್ತಿಯನ್ನು ಹರಡಿ, ಅವತಾರವಾಗಿದ್ದ ಶ್ರೀಗಳವರ ಇಚ್ಛೆಯಂತೆ ಕಾಲಟಿ ಪ್ರತಿಷ್ಠೆ ಕಾರ್ಯವನ್ನು ಮುಗಿಸಿ ಶೃಂಗೇರಿಯಲ್ಲಿ ದೇವಸ್ಥಾನಾದಿ ಕಟ್ಟಡಗಳನ್ನು ಕಟ್ಟಿಸಿದರು. ಸರ್ಕಾರದ-ಶಿಷ್ಯರ ಎದುರಿಗೆ ಅವರು ಪ್ರಬಲಕೀರ್ತಿವಂತರಾದರು. ಶೃಂಗೇರಿಯ ಜನಗಳು ಆಗ್ಗೆ ಏನೊಂದೂ ಅಂತವರಾಗಿರಲಿಲ್ಲ. ಅವರಿಗಾಗಿ ಸ್ಕೂಲು, ಇಂಗ್ಲೀಷುವಿದ್ಯಾಭ್ಯಾಸ, ಆಸ್ಪತ್ರೆ ವಗೈರೆಗಳನ್ನು ತಂದವರು ಈಗಿನ ಏಜಂಟರು. ತಿರುವಾಂಕೂರು ಮೊದಲಾದ ಪರರಾಜ್ಯಗಳಲ್ಲಿ ಬಹು ಮರ್ಯಾದೆಯನ್ನು ಮಠಕ್ಕೆ ತಂದರು. ಅಷ್ಟೇ ಅಲ್ಲದೆ ಶ್ರೀಗಳವರನ್ನು ಎರಡಾವರ್ತಿ ಸರ್ಕೀಟುಮಾಡಿಸಿ ಅನೇಕ ವಿಧವಾಗಿ ಕಪ್ಪಗಳನ್ನು ನಿರ್ವಹಿಸಿ ಮಠದ ಸಾಲಗಳನ್ನು ತೀರಿಸಿದರು. ಅಡವು ಹಾಕಿದ್ದ ಮಠದ ನಗಗಳೆಲ್ಲವನ್ನು ಬಿಡಿಸಿಕೊಂಡರು. ಜಹಗೀರು ಉತ್ಪತ್ತಿಗಳನ್ನು ಹೆಚ್ಚಿಸಿ ಶೃಂಗೇರಿಯೂ ಒಂದು ಸಂಸ್ಥಾನವೆಂದೆನ್ನಿಸಿದರು. ಅಷ್ಟೇಕೆ? ಈಗಿನ ನಾಗರಿಕತೆಗೆ ತಕ್ಕಂತೆ ಮಠವನ್ನು ಅಭಿವೃದ್ಧಿಗೆ ತಂದರೆಂದರೆ ಸಾಕು. ಇವರ ಲೋಪಗಳೂ ಇವೆ. ಮಠದಲ್ಲಿ ಸ್ವೇಚ್ಛೆಯಾಗಿ ತಿನ್ನುತ್ತಿದ್ದದ್ದನ್ನು ತಪ್ಪಿಸಿದ್ದು ಒಂದು, ಬಜೆಟ್ಟನ್ನು ಏರ್ಪಡಿಸಿದ್ದು ಒಂದು, ಅಲ್ಲಿನವರು ಹೇಳುವ ಪುರಾತನ ಸಲಹೆಗಳನ್ನು ನಿರಾಕರಿಸಿದ್ದು ಒಂದು, ಅವರವರ ಯೋಗ್ಯತಾನುಸಾರ ಸಂಬಳಗಳನ್ನು ನಿಷ್ಕರ್ಷೆಮಾಡಿ ವ್ಯಕ್ತಿಗಳನ್ನೇ ಹಿಂದುಹಾಕಿದ್ದವರನ್ನು ಕ್ರಮಪಡಿಸಿದ್ದು ಒಂದು, ಹೊರ ಊರಿನವರಾದ ಇವರು ಹೀಗೆ ಮಾಡಿದ್ದು ಅಲ್ಲಿನವರಿಗೆ ಸರಿಹೋಗದಿರುವುದು ನ್ಯಾಯವೆ. ಈ ಪಾಪಗಳು ಅಲ್ಲಿನವರಿಗೆ ಸರಿಬೀಳದೇಲೂ, ತತ್ಕಾಲದ ಪ್ರಪಂಚ ವ್ಯಾಪಾರದ ದೆಸೆಯಿಂದಲೂ ರಾಜ್ಯವಿಪ್ಲವದಂತಹ ಗಲಭೆ ಹುಟ್ಟಲು ಅಲ್ಲಿ ಕಾರಣವಾಯಿತು. ಅದು ಇಂಗ್ಲೀಷು ಮಹತ್ತೇ ವಿನಾ ಅಲ್ಲಿನವರ ಮಹತ್ತಲ್ಲ. ಸಾಲದ್ದಕ್ಕೆ ಹಿಂದಿನ ಸ್ವಾಮಿಗಳ ಕಾಲದ ಏಜಂಟರು ಹೊಸ ಸ್ವಾಮಿಗಳ ಕಾಲದಲ್ಲಿ ಹೊರಟುಹೋಗಲಿಲ್ಲ. ಹೋಗಿದ್ದರೆ ಶೃಂಗೇರಿಯವರಿಗೆ ಆ ಪದವಿಯು ದೊರೆಯುತ್ತಿದ್ದಿತು. ಸರ್ಕಾರದವರಿಂದಲೂ, ಶ್ರೀಗಳವರಿಂದಲೂ ಈ ಏಜಂಟರೇ ಇರಬೇಕೆಂಬ ಇರಾದೆ ಹುಟ್ಟಿದ್ದರಿಂದ ಅಲ್ಲಿನವರ ಆಶೆಗೆ ಭಂಗಬಂದಿತು. ಆ ಆಶೆಯನ್ನು ನೆರವೇರಿಸಿಕೊಳ್ಳಲು ಕಾಲನಿರೀಕ್ಷಣೆ ಮಾಡುತ್ತಿದ್ದು ಶ್ರೀಗಳವರ ಬಾಯಿಲೆಯ ಶಿವ ಒದಗಿದಾಗ ಹೊರಡಿಸಿದರು. ದೈವಯೋಗವೇ ಬೇರೆ. ತಮ್ಮ ಆಶೆಯು ಪೂರ್ಣವಾಗದಿರಲು ಕೌನ್ಸಿಲ್‌ಬೇಕೆಂದು ಪತ್ರಿಕೆಯಿಂದ ದೋಷಾರೋಪಣೆ ಮಾಡುತ್ತಿರುವರು. ಇದರಿಂದ ಏಜಂಟರಿಗಾಗಲಿ, ಶಿಷ್ಯರಿಗಾಗಲಿ ಯಾವ ಕೊರತೆಯೂ ಇಲ್ಲದಿದ್ದರೂ ಮಠಕ್ಕೂ ಸ್ವಾಮಿಗಳಿಗೂ ತುಂಬಾ ಅನಾನುಕೂಲವಾಗುವುದರಿಂದ ಇಂತಹ ಏರ್ಪಾಡುಗಳು ಶೃಂಗೇರಿಗೆ ತಕ್ಕುದಲ್ಲ. ರಾಜ್ಯಕ್ಕೆ ತಕ್ಕ ಸುಧಾರಣೆಗಳೇ ಇನ್ನೂ ಕೊಡಲ್ಪಡದಿದ್ದಾಗ ಕೇವಲ ಹಳ್ಳಿಗರಂತಿರುವ ಶೃಂಗೇರಿಯವರಿಗೆ ಕೌನ್ಸಿಲ್ ಅಂದರೇನು? ಶ್ರೀಗಳವರ ಸ್ವತಂತ್ರಕ್ಕೆ ನಿರ್ಬಂಧವನ್ನು ಎಳೆಸಿದುದು ಯಾವ ನ್ಯಾಯ? ಮಠದ ಹುಕುಂಗಳನ್ನು ಜಾರಿಮಾಡುವುದರಲ್ಲಿ ಶಿಷ್ಯಕೋಟಿಯವರು ಅಲಕ್ಷ್ಯಮಾಡುವ ಈ ಕಾಲದಲ್ಲಿ ನಾಗರಿಕತೆಯ ಓಲಾಟದಲ್ಲಿ ಕೌನ್ಸಿಲ್ ಮಾಡಿದರೆ ಯಾವ ಪ್ರಯೋಜನ? ಕೌನ್ಸಿಲನವರು ಮಾಡುವುದು ತಾನೇ ಏನು? ಸ್ವಾಮಿಗಳು ಕೊಡುವ ಧರ್ಮಕ್ಕೆ ಕೌನ್ಸಿಲನವರು ಅಡ್ಡಿಪಡಿಸಲಾದೀತೆ? ಕಂದಾಯಕೊಳಿಗೆಗಳನ್ನು ಕೌನ್ಸಿಲನವರು ಸರ್ಕಾರದ ಇರಾದೆಯಿಲ್ಲದೆ ಹೆಚ್ಚಿಸಲಾದೀತೆ? ಕೌನ್ಸಿಲ್ ಮಾಡುವ ಕರ್ತವ್ಯ ತಾನೇ ಏನು? ಮಠದ ಅವಲ್ದಾರರು ಬೇರೆ ಇದ್ದಾರೆ. ತಾಲ್ಲೂಕು ಕಛೇರಿ ಬೇರೆ ಇದೆ. ಇದರ ಮೇಲೆ ಏಜಂಟರ ಆಫೀಸು ಅದರ ಮೇಲೆ ಶ್ರೀಗಳು; ಸಾಲದ್ದಕ್ಕೆ ಮೈಸೂರು ಸರ್ಕಾರ. ಹೀಗಿರುವಲ್ಲಿ ಸಣ್ಣದೊಂದು ಕಾರುಬಾರಿಗೆ ಕೌನ್ಸಿಲ್ ಬೇಕೆನ್ನುವುದು ಯಾವ ರೀತಿ ಒಪ್ಪತಕ್ಕದ್ದು? ಎಲ್ಲರ ಕಣ್ಣು ತಪ್ಪಿ ದುರ್ವಿನಿಯೋಗವಾಗುವ ಮಾರ್ಗ ತಾನೇ ಈಗೇನಿದೆ? ಏಜಂಟರಿಗೂ ಸಂಬಳ, ಅರ್ಚಕನಿಗೂ ಸಂಬಳ. ಕಾರಕೂನರು ಬಹುಮಂದಿ. ಹೀಗಿದ್ದು ಎಲ್ಲರ ಕಣ್ಣುಹೊಡೆದು ಅವಿವೇಕ ವರ್ತನೆಮಾಡಲು ಅವಕಾಶವೆಲ್ಲಿ? ಈಗಿರುವ ಏಜಂಟರು ಮಾಡಿದ ದ್ರೋಹಗಳಿದ್ದರೆ ಅವುಗಳನ್ನು ಹೊರಗೆಡುವ ಸಾಮರ್ಥ್ಯವಿಲ್ಲದೆ ಪೇಚಾಡುವ ಅಲ್ಲಿನವರ ಕೋಲಾಹಲವು ಶುಷ್ಕವಲ್ಲವೆ? ಶ್ರೀಗಳವರೂ ಸರ್ಕಾರದವರೂ ಮೆಚ್ಚಿರುವಾಗ ಗಲಭೆಮಾಡುವುದು ಅಲ್ಲಿನವರ ಆಶಯವನ್ನು ಹೊರಪಡಿಸುವುದು. ಕೌನ್ಸಲ್ ಆಗಲು ಕಾರಣಗಳನ್ನು ತೋರಿಸದೆ ಏಜಂಟರು ಅನ್ಯಾಯಮಾಡುವರು; ಲೋಪಗಳು ಬಹಳ ಇವೆ ಎಂದರೆ ಸಾಕೆ? ಮಹಾರಾಜರು ಕೌನ್ಸಲ್ ಮೂಲಕ ಆಳುವುದಾದರೆ ಜಹಗೀರಿಗೂ ಕೌನ್ಸಲ್ ಬೇಕೆಂದರೆ ಜಹಗೀರುದಾರರಾದ ಶ್ರೀಗಳವರ ಸ್ವಾತಂತ್ರ್ಯಕ್ಕೆ ಕಲ್ಲುಎಳೆದಂತೆಯೇಸರಿ. ಜಹಗೀರಿಯ ಆಡಳಿತಕ್ಕೆ ಶ್ರೀಗಳವರು ಜವಾಬ್ದಾರರು. ಅವರು ಅನ್ಯಾಯಮಾಡುವರೆಂದರೆ ಗುರುದ್ರೋಹವೇ. ಏಜಂಟರ ಅನ್ಯಾಯಗಳಿಗೂ ಅವರು ಸುಮ್ಮನಿರುವರೆಂದರೆ ಅದೂ ದ್ರೋಹವೇ. ಶ್ರೀಗಳವರನ್ನೆ ದಾಕ್ಷಿಣ್ಯಕ್ಕಾಗಿರುವರೆಂದು ಹೊಗಳುವ ಅಲ್ಲಿನವರು ಇನ್ನು ಏನನ್ನುತಾನೆ ಹೇಳರು? ಏಜಂಟರು ಬೇಡವೆಂದರು. ಅವರನ್ನು ವಹಿಸಿಕೊಂಡಿರುವರೆಂದು ಶ್ರೀಗಳನ್ನು ದೂರಿದರು. ಫಿರ್ಯಾದು ಕೇಳಲಿಲ್ಲವೆಂದು ಸರ್ಕಾರವನ್ನು ಅಂದರು. ಮುಂದೆ ಜಹಗೀರಿಯನ್ನು ಕಿತ್ತುಕೊಳ್ಳಬೇಕೆಂದೂ ಹಾಗಿಲ್ಲದಿದ್ದರೆ ಸತ್ಯಾಗ್ರಹವನ್ನು ಆಚರಿಸುವೆವೆಂದೆನ್ನುವರೋ ನೋಡೋಣ. ಕೌನ್ಸಿಲ ವಿಚಾರ ಎಲ್ಲರಿಗೂ ಸಂಬಂಧಪಟ್ಟದ್ದು ತಾನೇ?

ಬಲ್ಲವ.

ವಿನಂತಿ.

ಇದರಡಿ ವಿವರಿಸಿರುವ ದರದಂತೆ ನಿಮಗೆ ಬೇಕಾದಷ್ಟು ಕಾಪಿಗಳಿಗೆ ಆಗುವ ಪೂರ್ತಾ ಮೊಬಲಗು ಅಡ್ವಾನ್ಸ್ ರವಾನಿಸಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಯಾವ ಖರ್ಚೂ ಇಲ್ಲದೆ ಫ್ರೀಯಾಗಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

I. ಈಗ ಮೈಸೂರಿಗೆ ದಯಮಾಡಿಸಿರುವ ವೈಸ್ರಾಯ ದಂಪತಿಗಳ ಫೋಟೋ ಕಾಪಿ 1ಕ್ಕೆ 0-2-0, 50ಕ್ಕೆ 2-2-0, 100ಕ್ಕೆ 4-0-0, ಪೋಸ್ಟೇಜ್ ಮಾಫಿ.

II. ನಮ್ಮನ್ನಾಳಿದ ಮಹಾಸ್ವಾಮಿಯವರಾದ ಶ್ರೀಮನ್ ಚಾಮರಾಜೇಂದ್ರ ಒಡೆಯರ್‌ರವರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರ್‌ರವರ ಫೋಟೋ ಇದ್ದು ಮೈಸೂರು ಅರಮನೆ ಪಿಕ್ಚರ್ ಸಹಾ ಇರುವ ಕಾಪಿ 1ಕ್ಕೆ 0-1-0, 50ಕ್ಕೆ 1-2-0, 100ಕ್ಕೆ 2-0-0, ಪೋಸ್ಟೇಜು ಮಾಫಿ.

III. ಅನೇಕ ವಿಷಯಗಳನ್ನೊಳಗೊಂಡಿದ್ದು ಶ್ರೀಮನ್ ಮಹಾರಾಜಸಹೋದರರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರ್‌ರವರ ಫೋಟೋ ಇರುವ ಷೀಟ್ ಕ್ಯಾಲೆಂಡರ್ 1ಕ್ಕೆ 0-1-0, 50ಕ್ಕೆ 1-2-0, 100ಕ್ಕೆ 2-0-0, ಪೋಸ್ಟೇಜು ಮಾಫಿ.

IV. ಡೆಹಲಿದರ್ಬಾರ್ ಫೋಟೊ ಸಮೇತವಿದ್ದು ತಿಂಗಳಿಗೊಂದು ಷೀಟ್‌ನಂತೆ ಹರುದುಬಿಡುವ ಅಂದವಾದ ಕ್ಯಾಲೆಂಡರ್ 1ಕ್ಕೆ 0-2-6, 12ಕ್ಕೆ 1-8-0, ಪ್ಯಾಕಿಂಗ್ ಪೋಸ್ಟೇಜು ಮಾಫಿ.

V. 1924ನೇ ಇಸವಿಯ ಜೇಬಿನಲ್ಲಿಡಲು ಯೋಗ್ಯವಾದ ಅಂದವಾದ ಪಾಕೆಟ್ ಕ್ಯಾಲೆಂಡರ್ 1ಕ್ಕೆ 0-2-0, 12ಕ್ಕೆ 1-0-0, ಪ್ಯಾಕಿಂಗ್ ಪೋಸ್ಟೇಜ್ ಮಾಫಿ.

ತಮಗೆ ಬೇಕಾದಷ್ಟು ಕಾಪಿಗಳ ಪೂರ್ತಾ ಮೊಬಲಗು ಅಡ್ವಾನ್ಸ್ ರವಾನಿಸಿ ಆರ್ಡರ್ ಕೊಡಬೇಕೆ ಹೊರ್ತು ವಿ. ಪಿ. ಮೂಲಕ ರವಾನಿಸಿರೆಂದು ಬರತಕ್ಕ ಆರ್ಡರುಗಳಿಗೆ ಖಂಡಿತವಾಗಿ ನಿಗಾ ಕೊಡುವುದಿಲ್ಲ.

ಮಣಿಯಾರ್ಡರ್ ರವಾನಿಸುವ ವಿಳಾಸ:—

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—14] ಮೈಸೂರು.

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣಿ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[೩೪—೬] ಹೊಸಮಠ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾ. ಜಿ. ಬಿ. ಯವರ ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಸುಗಂಧ ಈ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—17] ಪೋ. ಬಾ. ೫೧೦, ಮದರಾಸು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುವು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ಕ್ಕೆ ರೂ. ೧—೮—೦ ವಿ.ಪಿ. ಚಾರ್ಜು ೦—೧೦—೦.

ಒಂದು ಔನ್ಸು ಬಾಟ್ಲುಗಳು ಡಜನ್ ೧ಕ್ಕೆ ರೂ. ೨—೮—೦ ವಿ. ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತ ಕಂಪೆನಿ,
[50—6] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ದುಃಖವನ್ನು ನೀಗುವದು! ಓಂ ಸೌಖ್ಯವನ್ನು ಕೊಡಿಸುವದು!

ಶಿವಾನುಭವಬೋಧೆ.

ಇದು ಸಾಮವೇದದ ಶಿರವಾದ ಛಾಂದೋಗ್ಯೋಪನಿಷತ್ತಿನ ಆರನೆ ಅಧ್ಯಾಯದಲ್ಲಿ "ತತ್ವಮಸಿ" ಅವಸ್ತುವೇ ನೀನಿರುವಿ ಎಂದು ಶ್ವೇತಕೇತುವೆಂಬ ಉತ್ತಮಾಧಿಕಾರಿಯನ್ನು ಕುರಿತು ಉದ್ದಾಲಕ ಮಹಾಮುನಿಯು ಒಂಭತ್ತು ಸಾರಿ ಬೋಧಿಸಿರುವನು. ಗೀರ್ವಾಣಭಾಷಾರಹಿತರಿಗೆ ತದರ್ಥಗೋಚರವಾಗಲೆಂದು ಮುಮುಕ್ಷುಗಳ ಹಿತಾರ್ಥಕ್ಕಾಗಿ ತನುಪನಿಷತ್ಸಾರವನ್ನೇ ಸುಲಭವಾಗಿ ತಿಳಿಯುವಂತೆ ಕನ್ನಡ ಪದ್ಯರೂಪವಾಗಿ ರಚಿಸಲ್ಪಟ್ಟಿದೆ. ಸರ್ವರು ಈ ಉತ್ತಮ ಗ್ರಂಥವನ್ನು ತರಿಸಿಕೊಂಡು ಶ್ರವಣ ಮನನಾದಿಗಳನ್ನು ಮಾಡಿ ನಿಜಾನಂದಭರಿತರಾಗಿ ನನ್ನ ಸೇವೆಯನ್ನು ಸಾರ್ಥಕಗೊಳಿಸಿರಿ ಸ್ವಲ್ಪ ಪ್ರತಿಗಳುಳಿದಿವೆ. ಬೆಲೆ ಸ್ವಲ್ಪ ಫಲಮಧಿಕವಾಗಿದೆ. ಕ್ರಯ ೦—೧೨—೦. [8—5]

ವಿಳಾಸ:—ಎಂ. ಎಸ್. ಸುಬ್ಬಣ್ಣ ಚಾಕುಬಂಡೆ,
ಪೋಸ್ಟು ಚಿಪ್ಪಿಗಿರಿ ತಾ|| ಆಲೂರು ಜಿಲ್ಲಾ ಬಳ್ಳಾರಿ.

೧೯೨೩ ನೆಯ ಇಸವಿ ಡಿಶಂಬರ್ ತಾ|| ೧೬ ರಿಂದ ೧೯೨೩ ನೆಯ ಡಿಶಂಬರ್ ತಾ|| ೨೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಮಾರ್ಗಶಿರ ಶುದ ನವಮಿಯಿಂದ ಮಾರ್ಗಶಿರ ಶುದ್ಧ ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾ
16	[1]ಭಾನು	ನವ	46-18	ಉಭಾ	35-30	1
17	ಸೋಮ	ದಶ	50-6	ರೇವ	40-24	2
18	[2]ಮಂಗಳ	ಏಕಾ	54-32	ಅಶ್ವಿ	45-55	3
19	[3]ಬುಧ	ದ್ವಾದ	59-24	ಭರ	50-50	4
20	[4]ಗುರು	ತ್ರಯೋ	60-0	ಕೃತ್ತಿ	57-53	5
21	ಶುಕ್ರ	ತ್ರಯೋ	4-15	ರೋಹಿ	60-0	6
22	[5]ಶನಿ	ಚತು	9-2	ರೋಹಿ	3-50	7

(1) ಧನುರ್ಮಾಸಪೂಜಾರಂಭ. (2) ಸರ್ವತ್ರಏಕಾದಶಿ, ವೈಕುಂಠ ಏಕಾದಶಿ. (3) ಮತ್ಸ್ಯದ್ವಾದಶಿ. (4) ಪ್ರದೋಷ, ಮಾರ್ಗಶಿರಲಕ್ಷ್ಮೀವ್ರತಂ. (5) ಪಾಷಾಣ ಚತುರ್ದಶಿ ಗೌರೀವ್ರತಂ.

ಮೈಸೂರು: ಶ್ರೀ. ವೆಂಕಟಕೃಷ್ಣಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿಕ್ಕಾಪಾ | ಧನಪಥಕೃತಾವಕಾರಾ ಪಕ್ಷಜ್ಞ ಸತ್ಕೃತ ಮೋಚರಾಜೇಯೂಷ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಮೂಳೀಷ್ಟದಳೀಲು ಪಾಳಿಕೀಶ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಕಯಿಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೬ ಮೈಸೂರ್ ಸ್ಟಾರ್ ಸರ್ ೧೯೨೩ ನೆಯ ಇಸವಿ ಡಿಶಂಬರ್ ತಾರೀಖು ೧೬ ನೆಯ ಭಾನುವಾರ. (ಸಂಚಿಕೆ ೫೧

REGISTERED NO. M. 124.

ವಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SREE SITHARAGHAVA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಪ್ಲೇಗಿಗೆ ಸಂಜೀವನ.

ಲಕ್ಷೋಪಲಕ್ಷ ಪ್ಲೇಗುರೋಗಿಗಳ ಪ್ರಾಣವನ್ನು ಕಾಪಾಡಿರುವ ಕಾಪಾಡುತ್ತಿರುವ ಲಕ್ಷ್ಮೀವಿಲಾಸ ರಸವನ್ನು ಇಂದೇ ತರಿಸಿಟ್ಟುಕೊಳ್ಳಿರಿ. ಪ್ಲೇಗನ್ನೂ, ಪ್ಲೇಗಿರುವಾಗ ಬರುವ ಎಲ್ಲಾ ಜ್ವರಗಳನ್ನೂ, ಸನ್ನಿ, ಸವಿತಕಾರಿ ಜ್ವರಗಳನ್ನೂ ಸಂದೇಹವಿಲ್ಲದೆ ನಂಬುಗೆಯಾಗಿ ಬೇಗನೆ ಗುಣಪಡಿಸುತ್ತದೆ. ಸೀಸೆ 1—0—0.

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ, ಮೈಕೈ ನೋವು, ತಲೆನೋವುಗಳು ಗುಣವಾಗುತ್ತವೆ. ಡಬ್ಬಿ 0—8—0.

ವಾಳ್ಯದ ವೆಂಕಟಾಚಲಪಂಡಿತ,
45 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ **ಮದನೋದ್ಭವಗುಳಿಗೆ.** ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ಶೀಘ್ರ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. [50-45]

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ವಚನಶಾಸ್ತ್ರಸಾರ.

ಶ್ರೀ ಬಸವೇಶ್ವರ ಮೊದಲಾದ ಶಿವಶರಣರ ಮತತತ್ವಗಳನ್ನು ಅರಿತುಕೊಳ್ಳಬೇಕೆಂಬ ಆಕಾಂಕ್ಷೆಗಳು ವೀರಶೈವ ಸಮಾಜದಲ್ಲಿ ಇತ್ತಿತ್ತ ಉತ್ಪನ್ನವಾಗ ಹತ್ತಿದ್ದು ಶುಭಚಿಹ್ನವೇ ಸರಿ. ಆದರೆ ಈ ತತ್ವಗಳು ಅವರು ರಚಿಸಿದ ವಚನಶಾಸ್ತ್ರದಲ್ಲಿಯೇ ವಿಶೇಷವಾಗಿ ದೊರಕುತ್ತವೆ. ಆದ್ದರಿಂದ ಅವರ ವಚನಗಳನ್ನು ಶೋಧಿಸಿ, ಅವುಗಳಲ್ಲಿಯ ತತ್ವಗಳನ್ನು ಕಂಡುಹಿಡಿದು, ಅವುಗಳನ್ನು ಅವರವರ ವಚನಗಳಿಂದಲೇ ಈ ಗ್ರಂಥದಲ್ಲಿ ವಿಶದವಾಗಿ ನಿರೂಪಿಸಿದೆ. ಇದರಲ್ಲಿ ೧೪೦ ಶಿವಶರಣರ ಶ್ರೇಷ್ಠವಾದ ವಚನಗಳು ಕೊಡಲ್ಪಟ್ಟಿವೆ. ಇದು ೬೦೦ ಪುಟಗಳ ದೊಡ್ಡ ಗ್ರಂಥವಾಗಿದ್ದು, ಇದರ ಬೆಲೆ ೩ ರೂಪಾಯಿ. ಇದು ಸಿಗುವ ಸ್ಥಳ—

ಫಕೀರಪ್ಪ ಗು. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ.,
[illegible] ವಕೀಲರು, ಬಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್‌ಸ್ಥಲವಿದ್ಯಾ	೦—೪—೦	೦—೭—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೭—೦
ವ್ರತಪಂಚಕ	೦—೪—೦	೦—೭—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ

ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುತ್ಸರಿಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರಸ್ಥಾನದ ಹುಣ್ಣು (ಕಡತಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ತೆಳ್ಳಗೆ ಹಾಗೂ, ರೋಗಿಷ್ಠದ್ದು, ಸಂತತಿ ಬಂದುಆಗೋಣ. ಸಂದು ಬೆನ್ನು, ನಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ಸೆಟ್ಟಿಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಶಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ್ದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇದರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಅರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಟಕಂದ, ಶ್ರೀಹ್ಯಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೋಗಟಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಮುದ್ರ ಕೋಳದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವಿ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಚಪತ್ರ, ತಮಾಲಪತ್ರ, ಜಾಯಪತ್ರ, ಜಾಯಫಳ, ಮದನಮುಸ್ತ, ರತನಪುರುಷ, ರೂಮಾಮುಸ್ತಕ, ಅಮರಕಣ, ಕಫಲ್ಯಾಗೊಂಡ, ಪಂಜಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ, ಬೀಜಬಂಧ, ಚಿಗರಿಗೋರಸು, ಮೊಂಗಲ್ ಬೇದಾಣ, ಮೈದಾಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಅಲದ ಹಾಲು, ಖಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಬಗೋಲ, ಒಣಸೆಲ್ಲಿಕಾಯಿ, ಶಿಲಾಜಿತ, ವರಖಾನಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ.

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ಪಾಕ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ಪಾಕ, ತಿಂದು ಮೇಲೆ ಉಸುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಪ್ರೀವಿಶ್ರಾಂತಿಯಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫|| ರೂ. ಮಾತ್ರ. ವಿ ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಪ್ರಸ್ತುತ ಮಾಡಿದ ತನಕ ಮಾತ್ರ ಇರುವದು. ಅನುಭವಸಿರಿಮಾಡಿರಿ.

[50—30] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ರಕ್ತಶೋಧಕ ! ಧಾತುಪೌಷ್ಟಿಕ. ಮನೋಲ್ಲಾಸಕವೆಂಬ !!

ಮಹದ್ರಾಕ್ಷಾದಿಚೂರ್ಣವು

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ವಿಷಯವು ತಮಗೆ ವೇದ್ಯವಾಗಿರುವದಷ್ಟೆ. ಈ ಔಷಧಿಯು ಕೆಳಗೆಕಂಡ ರೋಗಗಳಿಗೆ ಶ್ರೇಷ್ಠವಾದದ್ದೆಂದು ಅನೇಕ ವೈದ್ಯರೂ ರೋಗಮಾರಣೆಯಾದವರೂ ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬಮನುಷ್ಯನು ೨೧ ದಿನ ಸೇವನೆ ಮಾಡಿದರೆ ಕ್ಷಯರೋಗ ೪೦ ಬಗೆಯಾದ ಪಿತ್ಥರೋಗಗಳು, ಮೇಹರೋಗ, ಪಾಂಡುರೋಗ, ಪೀನಸ, ೧೮ ತರದ ಕುಷ್ಠರೋಗಗಳು, ಭಗಂಧರವು, ಮೂತ್ರ ಕೃಚ್ಛ್ರರೋಗ, ೫ ಬಗೆಯಾದ ಕಾಶರೋಗಗಳು, ದೀರ್ಘಜ್ವರ, ಉಬ್ಬಸ, ವಾಕರಿಕೆ, ಸನ್ನಿಪಾತರೋಗ, ಕಣ್ಣುರಿಯುವದು, ಅಂಗಾಲು ಅಂಗೈ ಬಿರಿಯುವದು, ಶಕೆ, ಶಲ್ಡಿ, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವದು, ನಷ್ಟೇಂದ್ರಿಯಾಗುವದು—ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು, ರಕ್ತವನ್ನು ವೃದ್ಧಿಗೊಳಿಸಿ ಧಾತುಪುಷ್ಟಿಯನ್ನುಂಟುಮಾಡುವದು, ನಿಸ್ಸತ್ವವನ್ನು ಹೋಗಲಾಡಿಸಿ ದೇಹಾಂಗವೆಲ್ಲಾ ಅಧಿಕ ಬಲವಾಗಿ ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಸುಟ್ಟು, ಹೊಟ್ಟೆಶೂಲಿ, ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕೈಕಾಲು ಹರಿಯುವಿಕೆ ಇತ್ಯಾದಿ ದೋಷಗಳಿಂದ ಗರ್ಭಕೋಶಕ್ಕೆ ತೊಂದರೆಯುಂಟಾಗಿ ದೇಹವು ಕ್ಷೀಣವಾಗಿ ಸಂತಾನಭಂಗವಾಗುವದು. ಆದಕಾರಣ ಸದರಿ ದೋಷಗಳಿಂದ ವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರೂ ಕ್ರಮವಾಗಿ ಒಂದುಮಂಡಲ ಪರಿಯಂತರವರಿಗೂ ಸೇವನೆಮಾಡಿದರೆ ಖಂಡಿತವಾಗಿ ಸಂತಾನಪ್ರಾಪ್ತಿಯಾಗುವದೆಂದು ಸುಪ್ರಸಿದ್ಧವಾಗಿ ಹೇಳಿರುವದು. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದಕಾರಣ ತುಂಬಾ ಅನುಭವಕ್ಕೆ ಬಂದಿದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದರೆ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ.

ಜ್ವರಸಂಜೀವಿನಿ.—ಇದರ ಸೇವನೆಯಿಂದ ಚಾತುರ್ಥಿಕಜ್ವರ, ದಿನಬಿಟ್ಟು ದಿನ ಬರುವ ಜ್ವರ, ಶೀತ ಜ್ವರ, ವಾತಪಿತ್ಥಜ್ವರ, ಅಸ್ಥಿಗತ ಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲಿಸುತ್ತದೆ.

ಕಫರೋಗಸಂಜೀವಿನಿ.—ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಕೋಳಿಕೆಮ್ಮು ಇತ್ಯಾದಿಗಳನ್ನು ತಕ್ಷಣದಲ್ಲಿ ಗುಣಪಡಿಸುತ್ತದೆ. ಜ್ವರಸಂಜೀವಿನಿ ೧ ಡಜನ್ ಮಾತ್ರೆಗಳನ್ನೂ ಕಫಸಂಜೀವಿನಿ ೧೨ ಮಾತ್ರೆಗಳನ್ನೂ ಮೇಲ್ಕಂಡ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಈ ೨ ಔಷಧಿಗಳನ್ನು ಉಚಿತವಾಗಿ ಕೊಡುತ್ತೇವೆ. ಅನುಪಾನ ಪತ್ರಿಕೆ ಔಷಧಿಯೊಂದಿಗೆ ಇರುತ್ತದೆ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹಿತ ರೂ. ೫—೪—೦. ಈ ಔಷಧಿಯನ್ನು ಸೇವನೆ ಮಾಡುವ ಮೊದಲನೆಯ ದಿನ ಈ ಕೆಳಗೆ ಕಂಡ ಮುಹೂರ್ತರಾಜನೆಂಬ ಶಿವಲಿಖಿತ ಚಕ್ರವನ್ನು ನೋಡಿ ಅದರಲ್ಲಿ ಅಮೃತ ಮಹೇಂದ್ರಿಯಾ ವಾಕ್ಯಗಳಲ್ಲಿ ಸೇವನೆಮಾಡಿರಿ. ಬಾಕಿ ವಾಕ್ಯ ಕೂಡದು. ಇದರಲ್ಲಿ ಶಿವಲಿಖಿತ ಚಕ್ರವಿರುವದರಿಂದ ನಿಮ್ಮಗಳಿಗೆ ಸಕಲ ಶುಭಾಶುಭಕಾರ್ಯಗಳಿಗೆ ಬಹಳ ಪ್ರಶಸ್ತವಾಗಿರುತ್ತದೆ. ಪ್ರತಿಯೊಂದು ಕಾರ್ಯಗಳಲ್ಲಿ ಅವಶ್ಯಕವಾಗಿ ನೋಡಿರಿ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ವಿ. ಪಿ. ಸಹಿತ ಜ್ವರಸಂಜೀವಿನಿ ಮಾತ್ರೆ ಡಜನ್ ೧ಕ್ಕೆ ರೂ. ೧—೦—೦. ಕೆಮ್ಮಿನ ಗುಳಿಗೆ ಡಜನ್ ೧ಕ್ಕೆ ರೂ. ೧—೦—೦.

ಜೊತೆಗೆ ತರಿಸಿಕೊಳ್ಳುವವರು ಅನುಕೂಲವಾದ ಕವರ್ ಜೋಡಿಸುವದಕ್ಕೆ ಸಂಕೋಚವಿಲ್ಲ. ಪತ್ರವ್ಯವಹಾರ ಮೂಲಕ ತಿಳಿದುಕೊಳ್ಳಬಹುದು. ನಿಮ್ಮ ವಿಳಾಸವು ಚೊಕ್ಕಟವಾಗಿರಬೇಕೆ ಗಮನಿಸುತ್ತೇವೆ.

ನಮ್ಮ ವಿಳಾಸ—ಹೆಚ್. ಎಂ. ಕರಿಬಸವಾರ್ಯ,
[illegible] ಬಳ್ಳಾರಿ.

ಮೈಸೂರು ಸ್ಟಾರ್ ಪತ್ರಿಕೆಯ ವಾಚಕರಿಗೆ ಬಹುಮಾನ.

ಈ ಸ್ಟಾರ್ ಪತ್ರಿಕಾ ವಾಚಕರುಗಳಲ್ಲಿ ಅವರ ಮೇಲಣ ಅಭಿಮಾನವನ್ನು ವೃದ್ಧಿಗೊಳಿಸುವ ಉದ್ದೇಶದಿಂದ ಈ ಕೆಳಗೆ ಕಂಡ ಪ್ರಕಾರ 100 ರೂಪಾಯಿಗಳನ್ನು 3 ಬಹುಮಾನಗಳನ್ನಾಗಿ ವಿಂಗಡಿಸಿ ಕೊಡಲು ಗೊತ್ತುಮಾಡಿರುತ್ತೇವೆ.

ಮೊದಲನೆಯ ಬಹುಮಾನ 50 ರೂಪಾಯಿ
ಎರಡನೆಯ ,, 30 ,,
ಮೂರನೆಯ ,, 20 ,,

1924 ನೆಯ ಫೆಬ್ರವರಿ 2 ನೆ ತಾರೀಖಿನ ಸಂಚಿಕೆಯಿಂದ ಜೂನ್ 28 ನೆ ತಾರೀಖಿನ ಸಂಚಿಕೆಯ ವರೆಗೂ ಪ್ರತಿಯೊಂದು ಪತ್ರಿಕೆಯ ಮೇಲೂ ಬೇರೆ ಬೇರೆ ನಂಬರು ಕೊಡಲ್ಪಟ್ಟು ಅವುಗಳಲ್ಲಿ 30 ನಂಬರುಗಳು ಆರಿಸಲ್ಪಟ್ಟು ಸೀಲ್ ಮಾಡಿದ ಕವರಿನಲ್ಲಿ ಭದ್ರವಾಗಿಡಲ್ಪಟ್ಟಿದ್ದು ಜೂನ್ ತಿಂಗಳ ಕಡೆಯಲ್ಲಿ ಈ 30 ನಂಬರುಗಳನ್ನು ಚೀಟಿಗೆ ಹಾಕಿ ಅವುಗಳಲ್ಲಿ ಅನುಕ್ರಮವಾಗಿ ಯಾವ 3 ನಂಬರುಗಳಿಗೆ ಬಹುಮಾನದ 3 ಚೀಟಿಗಳು ತೇಲುತ್ತವೋ ಆ 3 ನಂಬರುಗಳು ಜುಲೈ ತಿಂಗಳ 5 ನೇ ತಾರೀಖಿನ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುವು.

ಬಹುಮಾನ ಬಂದಿರುವ ನಂಬರಿನ ಪತ್ರಿಕೆಯನ್ನು 1924 ನೆ ಫೆಬ್ರವರಿ 2 ನೆ ತಾರೀಖಿನ ಪತ್ರಿಕೆಯಿಂದ ಜೂನ್ 28 ನೆ ತಾರೀಖಿನ ಪತ್ರಿಕೆಯ ವರೆಗೆ ಪ್ರತಿಯೊಂದುವಾರದ ಸ್ಟಾರ್ ಪತ್ರಿಕೆಯ ಸಮೇತ ಕಳುಹಿಸಿಕೊಟ್ಟಲ್ಲಿ ಅವರವರ ನಂಬರಿಗೆ ಬಂದಿರುವ ಬಹುಮಾನವು ಮನಿಯಾರ್ಡರ್ ದ್ವಾರ ಕಳುಹಲ್ಪಡುವುದು.

ಹಾಗೆ ಎಲ್ಲವಾರದ ಪತ್ರಿಕೆಗಳು ಕಳುಹಲ್ಪಡದೆ ಬಹುಮಾನದ ನಂಬರಿರುವ ಪತ್ರಿಕೆಯು ಮಾತ್ರ ಕಳುಹಲ್ಪಟ್ಟಲ್ಲಿ ಅದಕ್ಕೆ ಬಹುಮಾನದ್ರವ್ಯವು ಖಂಡಿತವಾಗಿಯೂ ದೊರೆಯುವುದಿಲ್ಲವೆಂಬಂಶವನ್ನು ವಾಚಕರು ಮರೆಯಬಾರದು.

ಹೀಗೆ ಬಹುಮಾನವನ್ನು ಹೊಂದುವವರು ಪತ್ರಿಕಾ ಚಂದಾಹಣವನ್ನುಳಿಸಿಕೊಂಡಿದ್ದಲ್ಲಿ ಬಹುಮಾನದ ಮೊಬಲಗಿನಲ್ಲಿ ಚಂದಾಹಣವು ಕಳೆಯಲ್ಪಟ್ಟು ಉಳಿದ ಹಣವು ಕಳುಹಲ್ಪಡುವುದು. ಈ ನೂತನ ಬಹುಮಾನ ವಿನಿಯೋಗವಿಧಾನವು ಸ್ಟಾರ್ ಪತ್ರಿಕಾ ವಾಚಕಜನಾದರಣೀಯವಾಗಿದ್ದಲ್ಲಿ ಮುಂದೆಯೂ ನಡಿಸಲ್ಪಡುವುದು.

ಎಡಿಟರ್.

ಮೈಸೂರು ಸ್ಟಾರ್.

೧೯೨೩ ನೆಯ ಇಸವಿ ಡಿಸೆಂಬರ್ ತಾ|| ೩೦ ನೆಯ ಭಾನುವಾರ.

ELECTORAL NECESSITIES.

The practice hitherto in the matter of taking of votes was to have one polling station for every taluk. This was causing a great deal of inconvenience to voters who had long distances to travel before they could record their votes. But with considerably extended franchise the problem becomes more acute. It becomes absolutely necessary to have more than one polling station in many of the taluks, and it is hoped that the Government who have contemplated this situation in their reforms will be free in making provision for more polling stations than exist now. Another more important need is the appointment of two non-officials of each constituency for every polling station to help the polling officer. A very large number of voters are illiterate and the best way to ensure that the vote of an illiterate is given to a candidate of his choice is the presence of the non-officials. Unfortunately in our country the services are not yet non-political in their outlook, and as such this safeguard is an imperative necessity. These non-officials will also be of help in recognising the voters. In the case of the Sringeri and the Yelandoor constituencies which have their own Amildars, it is necessary to appoint officers of the grade of Assistant Commissioners to be the polling officers, in fairness to the voters. One other point of importance is that the names and the numbers of the candidates should be published sufficiently early, to give time for the voter to get to know the number of the candidate to whom he wishes to vote. Most of them being illiterate, are likely to mistake one candidate for the other which contingency can be obviated to a great extent if he knows the number of his candidate. These are a few of the very necessary things to which, we earnestly hope, the Government will give their consideration so as to ensure a satisfactory working of the reforms.

ಇಂಗ್ಲ ದೇಶದ ಹೊಸ ಪಾರ್ಲಿಮೆಂಟು.

ಆಂಗ್ಲದೇಶೀಯರಲ್ಲಿ ರಾಜಕೀಯ ವಿಚಾರವಾಗಿ ಕನ್ಸರ್ವೇಟಿವ್, ಲಿಬರಲ್, ಲೇಬರ್ ಮತ್ತು ಇಂಡಿಪೆಂಡೆಂಟ್ ಎಂಬ ಪಕ್ಷಗಳು ಏರ್ಪಟ್ಟಿರುತ್ತವೆ. ಈ ಪಕ್ಷಗಳಲ್ಲಿ ಯಾರು ಹೆಚ್ಚು ಸಂಖ್ಯೆಯಿಂದ ಪಾರ್ಲಿಮೆಂಟ್ ಮೆಂಬರುಗಳಾಗಿ ಬರುವರೊ ಅವರೇ ರಾಜ್ಯಾಡಳಿತವನ್ನು ವಹಿಸಿಕೊಂಡು ನಡಿಸುವುದೂ, ಉಳಿದಪಕ್ಷದವರು ಇವರನ್ನು ಇದಿರಿಸಿ ಸೋಲಿಸಿದಾಗ ಪಾರ್ಲಿಮೆಂಟು ಸಭೆಯು ವಿಸರ್ಜಿತವಾಗಿ ಪುನಃ ಹೊಸ ಮೆಂಬರುಗಳ ಚುನಾವಣೆಯಿಂದ ಆರಂಭಗೊಳ್ಳುವುದೂ ಪದ್ಧತಿಯಾಗಿದೆ. ಆದರೆ ಈ ವೇಳೆ ಆ ರೀತಿ ನಡಿಯದೆ, ಆಂಗ್ಲದೇಶದಲ್ಲಿ ಈಗ ಬಡಜನರಿಗೆ ಜೀವನೋಪಾಯವಿಲ್ಲದೆ ಬಹಳ ಕಷ್ಟಪ್ರಾಪ್ತವಾಗಿರುವುದರಿಂದ, ಪರದೇಶಗಳಿಂದ ಇಂಗ್ಲೆಂಡಿಗೆ ಬರತಕ್ಕ ಪದಾರ್ಥಗಳ ಮೇಲಿನ ಸುಂಕವನ್ನು ಹೆಚ್ಚಿಸುವುದರ ಮೂಲಕ ರಾಜ್ಯದ್ಯುತ್ಪನ್ನವನ್ನು ಉತ್ತಮಗೊಳಿಸಿ ಬಡಜನರ ಜೀವನೋಪಾಯ ಮಾರ್ಗಗಳನ್ನು ಕಲ್ಪಿಸಿಕೊಡಬೇಕೆಂಬ ತಮ್ಮ ಮನೋಗತದ ಮೇಲೆ ಜನಾಭಿಪ್ರಾಯವನ್ನು ತಿಳಿಯಬೇಕೆಂಬುದ್ದೇಶದಿಂದ ಮುಖ್ಯ ಮಂತ್ರಿಯಾದ ಸ್ಟಾನ್ಲಿ ಬಾಲ್ಡ್ವಿನ್ರವರು ಹೊಸ ಪಾರ್ಲಿಮೆಂಟಿನ ಚುನಾವಣೆಗೇರ್ಪಡಿಸಿದರು.

ಹೊಸ ಮೆಂಬರುಗಳ ಆರಿಸುವಿಕೆಯು ಈ ತಿಂಗಳ ತಾ|| ೬ಕ್ಕೆ ಮುಗಿದು ಮುಖ್ಯ ಮಂತ್ರಿ ಬಾಲ್ಡ್ವಿನ್ರವರ ಕನ್ಸರ್ವೇಟಿವ್ ಪಕ್ಷದಲ್ಲಿ 258 ಮಂದಿಗಳೂ ರಾಮ್ಸೆ ಮೆಕ್ಡೊನಾಲ್ಡರವರ ಲೇಬರ್ ಪಕ್ಷದಲ್ಲಿ 187 ಮಂದಿಗಳೂ, ಅಸ್ಕ್ವಿತ್ರವರ ಲಿಬರಲ್ ಪಕ್ಷದಲ್ಲಿ 148 ಮಂದಿಗಳೂ ಮೆಂಬರುಗಳಾ[illegible] ಇದರ ಹಿಂದಣ ಪಾರ್ಲಿಮೆಂಟಿನಲ್ಲಿ 350 ಕನ್ಸರ್ವೇಟಿ[illegible] 102 ಲಿಬರಲ್ಲುಗಳೂ, 141 ಲೇಬರುಗಳೂ ಮೆಂಬರಾಗಿದ್ದರು. ಕನ್ಸರ್ವೇಟಿವ್ ಪಕ್ಷದವರ ಸಂಖ್ಯೆಯು ಉಳಿದ ಪಕ್ಷಗಳ ಸಂಖ್ಯೆಗಿನ್ನ ಹೆಚ್ಚಾಗಿದ್ದರೂ ಮೊದಲಿದ್ದುದಕ್ಕೆ ಕಡಿಮೆಯಾಗಿರುವುದು. ಇದರಿಂದ ಬಾಲ್ಡ್ವಿನ್ರವರ ಅಭಿಪ್ರಾಯದಂತೆ ಸುಂಕತೆರಿಗೆಗಳನ್ನು ಹೆಚ್ಚಿಸುವುದು ಬಹು ಜನಕ್ಕೆ ಸಮ್ಮತವಾಗಿಲ್ಲವೆಂಬುದು ವ್ಯಕ್ತವಾಗುತ್ತದೆ. ಕನ್ಸರ್ವೇಟಿವ್ ಪಕ್ಷದ ಸಂಖ್ಯೆಯು ಉಳಿದವಕಿನ್ನ ಹೆಚ್ಚಾಗಿರುವುದರಿಂದ, ಬಾಲ್ಡ್ವಿನ್ರವರ ಮಂತ್ರಿತ್ವವು ನಡೆದುಕೊಂಡು ಬರುವಂತಾಯಿತು. ಲೇಬರು ಮತ್ತು ಲಿಬರಲ್ ಪಕ್ಷಗಳು ಒಟ್ಟುಗೂಡಿದರೆ ಕನ್ಸರ್ವೇಟಿವ್ ಪಕ್ಷವನ್ನು ಇದಿರಿಸಲು ಸಮರ್ಥವಾಗುವುವು. ಆದರೆ ಅವೆರಡು ಪಕ್ಷಗಳೂ ಒಟ್ಟುಗೂಡುವ ಸಂಭವವು ಸದ್ಯದಲ್ಲಿಲ್ಲವು. ಒಂದು ವೇಳೆ ಕನ್ಸರ್ವೇಟಿವ್ ಪಕ್ಷವನ್ನು ಸೋಲಿಸಲು ಲಿಬರಲ್ ಮತ್ತು ಲೇಬರ್ ಪಕ್ಷಗಳೆರಡೂ ಒಟ್ಟುಗೂಡಿದರೂ ರಾಜ್ಯಪರಿಪಾಲನೆಯನ್ನು ನಿರ್ವಹಿಸಲು ಒಟ್ಟುಗೂಡಿ ಕೆಲಸಮಾಡುವಂತೆ ತೋರುವುದಿಲ್ಲವು. ಯಾಕೆಂದರೆ, ಉಭಯಪಕ್ಷದವರ ಮಧ್ಯೆ ಆಸ್ತಿಯ ಮೇಲೆ ತೆರಿಗೆಯನ್ನು ವಿಧಿಸುವ ವಿಚಾರದಲ್ಲಿ ಕೂಡಲೆ ಭೇದಾಭಿಪ್ರಾಯವು ಹುಟ್ಟುವುದು. ಬರುವ ಜನವರಿ ತಾ|| 8ರಲ್ಲಿ ಸಾರ್ವಭೌಮರವರು ಈ ಹೊಸ ಪಾರ್ಲಿಮೆಂಟನ್ನು ಅಂಗೀಕರಿಸಿ ಪ್ರಾರಂಭೋತ್ಸವವನ್ನು ಜರುಗಿಸುವವರಾಗಿರುವರು. ಆಗ್ಗೆ ರಾಜ್ಯಾಡಳಿತದವರು ತಮ್ಮ ಆಶಯವೇನೆಂಬುದನ್ನು ತಿಳಿಸುವರು. ಅದು ಇದಿರು ಪಕ್ಷದವರಿಗೆ ಸರಿಬೀಳದಿದ್ದಲ್ಲಿ ಅದಕ್ಕೆ ವಿರುದ್ಧವಾಗಿ ತಮ್ಮ ಸೂಚನೆಯನ್ನು ಕೊಡುವರು. ಆಗ ಉಭಯಪಕ್ಷಗಳಿಗೂ ವಾದಪ್ರತಿವಾದವು ನಡೆದು ಮಂತ್ರಿಪಕ್ಷದವರಿಗೆ ಅಪಜಯವಾದರೂ ಆಗಬಹುದು ಹಾಗಾದಲ್ಲಿ ಕನ್ಸರ್ವೇಟಿವ್ ಪಕ್ಷಕ್ಕೆ ಎರಡನೆಯದಾದ ಲೇಬರ್ ಪಕ್ಷವು ಅಧಿಕಾರವನ್ನು ವಹಿಸಬೇಕಾಗುತ್ತದೆ. ಆದರೆ ಆ ಪಕ್ಷವು ಲಿಬರಲ್ ಪಕ್ಷದ ಪತ್ತಾಸೆಯಿಲ್ಲದೆ ರಾಜಕಾರ್ಯ ನಿರ್ವಹಣ ಮಾಡಲಾರದು ಮತ್ತು ಲೇಬರ್ ಮತ್ತು ಲಿಬರಲ್ ಪಕ್ಷಗಳು ಏಕೀಭವಿಸಿ ಕೆಲಸಮಾಡುವುದು ಅಸಂಭವವು ಅದುಕಾರಣ ಈ ಪಾರ್ಲಿಮೆಂಟು ವಿಸರ್ಜಿತವಾಗಿ ಹೊಸ ಪಾರ್ಲಿಮೆಂಟಿನ ಯೋಜನೆಯು ನಡೆದರೂ ನಡಿಯಬಹುದೆಂದು ತೋರುತ್ತದೆ. ಮುಖ್ಯವಾಗಿ ಅಲ್ಲಿಯ ಸದ್ಯಃಸ್ಥಿತಿಯಲ್ಲಿ ಮುಂದಣ ಪರಿಣಾಮವೇನಾಗುತ್ತದೆಂದು ಹೇಳಲು ಸಾಧ್ಯವಿಲ್ಲವು.

ಅಫ್ಘಾನಿಸ್ಥಾನದ ವಿಚಾರದಲ್ಲಿ ಇಂಗ್ಲೆಂಡಿಗುಂಟಾಗಿರುವ ಕಳವಳವು.

ಇಂಗ್ಲೆಂಡಿಗೂ ಅಫ್ಘಾನಿಸ್ಥಾನಕ್ಕೂ ಪರಸ್ಪರ ಮೈತ್ರಿಭಾವವು ದೃಢತರವಾಗಿರುವುದೆಂದು ಭರತಖಂಡದಲ್ಲಿ ಈವರೆಗೂ ಭಾವಿಸಲ್ಪಟ್ಟಿರುವುದು. ಆದರೆ ಯೂರೋಪಿನಲ್ಲಿ ಮಾತ್ರ ಈ ವಿಚಾರದಲ್ಲಿ ಕಳವಳವುಂಟಾಗಿರುವಂತೆ ಈಚೆಗೆ ಬಂದ ವರ್ತಮಾನದಿಂದ ತಿಳಿಯಬರುತ್ತದೆ. ಭರತಖಂಡದ ಎಲ್ಲೆಕಟ್ಟಿನಲ್ಲಿ ಗುಡ್ಡವಾಸಿಗಳು ಬ್ರಿಟಿಷ್ ಜನರ ಮೇಲೆ ದಾಳಿನಡೆಯಿಸಿ ಅಫ್ಘಾನಿಸ್ಥಾನಕ್ಕೆ ಓಡಿಹೋಗಿ ಸೇರಿಕೊಂಡಿರುವುದಾಗಿಯೂ, ಅಂತಹವರನ್ನು ಅಫ್ಘನ್ ಪ್ರಭುತ್ವದವರು ಶಿಕ್ಷಿಸಲು ವಿಶೇಷ ಪ್ರಯತ್ನಪಡಿಸುತ್ತಿಲ್ಲವಾಗಿಯೂ ಈ ವಿಧವಾದ ಅಫ್ಘನ್ ಪ್ರಭುತ್ವದವರ ಚೇಷ್ಟೆಯು ಅನುಮಾನಾಸ್ಪದವಾಗಿರುವುದೆಂದೂ ಆಂಗ್ಲ ಪತ್ರಿಕೆಗಳು ಊಹಿಸಿ ನಿಷ್ಕಾರಣವಾಗಿ ವ್ಯಾಖ್ಯಾನಮಾಡತೊಡಗಿ ಇಂಗ್ಲೆಂಡಿನಲ್ಲಿ ಕಳವಳವನ್ನುಂಟುಮಾಡುತ್ತಿರುವುವು. ಅಫ್ಘಾನಿಸ್ಥಾನಕ್ಕೆ ಬ್ರಿಟಿಷರ ಪರಾಕ್ರಮವನ್ನು ತೋರಿಸಬೇಕೆಂದೂ, ಕಾಬೂಲಿನಿಂದ ಬ್ರಿಟಿಷ್ ರಾಯಭಾರಿಯು ಹೊರಟುಬರಬೇಕೆಂದೂ ಲಂಡನ್ನಿನ ಟೈಂಸ್ ಪತ್ರಿಕೆಯು ಕೋರಿರುವುದನ್ನು ನೋಡಿದರೆ ವಿಷಮಸ್ಥಿತಿಯು ಹುಟ್ಟಿರುವಂತೆ ತೋರುತ್ತದೆ. ಪ್ಯಾರಿಸಿನಲ್ಲಿರುವ ಅಫ್ಘಾನಿಸ್ಥಾನದ ರಾಯಭಾರಿಯು ಪತ್ರಿಕಾಪ್ರತಿನಿಧಿಯ ಕೂಡ ಪ್ರಸ್ತಾಪಿಸುವಾಗ್ಗೆ ಬ್ರಿಟಿಷರನ್ನು ಬಹಳವಾಗಿ ನಿಂದಿಸಿದನಲ್ಲದೆ, ಅಫ್ಘಾನಿಸ್ಥಾನದ ಮೇಲೆ ಬ್ರಿಟಿಷರು ಸಿಡಿಮದ್ದುಗಳನ್ನು ಹಾಕಿದರೆಂದೂ ಅದರಿಂದ ಕೆಲವರಿಗೆ ಅಪಾಯವಾಯಿತೆಂದೂ, ಅಫ್ಘಾನಿಸ್ಥಾನಕ್ಕೆ ಹೋಗಬೇಕಾಗಿದ್ದ ಆಯುಧಸಾಮಗ್ರಿಗಳು ಬೊಂಬಾಯಿನಲ್ಲಿಯೇ ತಡೆಯಲ್ಪಟ್ಟುವೆಂದೂ ತಿಳಿಸಿದನು. ಬ್ರಿಟಿಷರ ಮೇಲೆ ದಾಳಿಯನ್ನು ನಡಿಸಿ ಅಫ್ಘಾನಿಸ್ಥಾನಕ್ಕೋಡಿಹೋಗಿ ಸೇರಿಕೊಂಡಿರುವ ಪರ್ವತವಾಸಿಗಳನ್ನು ಶಿಕ್ಷಿಸದೆ ಇರುವ ವಿಚಾರವಾಗಿ ಬ್ರಿಟಿಷ್ ಅಧಿಕಾರಿಗಳು ಕಾಬೂಲು ಪ್ರಭುತ್ವದವರಿಗೆ ಕಠಿಣವಾದ ಲೇಖನವನ್ನು ಬರೆದಿರುವುದಾಗಿಯೂ, ಐರೋಪ್ಯ ಸ್ತ್ರೀಯರು ಕಾಬೂಲಿನಿಂದ ಕಳುಹಲ್ಪಡುತ್ತಿರುವುದಾಗಿಯೂ ತಿಳಿಯಬರುತ್ತದೆ. ಬ್ರಿಟಿಷ್ ಪ್ರಭುತ್ವದವರಿಗೂ ಅಫ್ಘನ್ ಪ್ರಭುತ್ವದವರಿಗೂ ನಿಜವಾಗಿಯೂ ಮನಸ್ತಾಪ ಹುಟ್ಟಿರುವುದಾದರೆ ಅದರ ಪರಿಣಾಮವು ಅನರ್ಥಕಾರಿಯಾಗುವುದರಲ್ಲಿ ಸಂದೇಹವಿಲ್ಲವು. ಆದರೆ ಆಂಗ್ಲದೇಶದ ಪತ್ರಿಕೆಗಳು ಗೊಂದಲವನ್ನು ಹೆಚ್ಚಿ ಕಳವಳವನ್ನುಂಟುಮಾಡುತ್ತಿರುವಾಗ್ಗೆ ನಮ್ಮ ಭರತಖಂಡದ ಪ್ರಭುತ್ವದವರು ಮಾತ್ರ ಯಾವ ಸಮಾಚಾರವನ್ನೂ ಪ್ರಕಟಿಸದೆ ಮೌನವಾಗಿರುವುದರ ಕಾರಣ ಗೊತ್ತಾಗಲಿಲ್ಲವು.

• ಸೆಕ್ರೆಟರಿಯೇಟ್ಟಿನಲ್ಲಿದ್ದ ಮ|| ಡಿ. ಸಿ. ಸುಬ್ರಾಯಪ್ಪ, ಬಿ.ಎ., ಬಿ.ಎಲ್., ರವರು ರೆವಿನ್ಯೂ ಕಮಿಷನರಾಫೀಸಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಶಶ್ವಜ್ಜನಹೃತ್ತಮೋಹರಾ ಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾತ್ಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬಿಭ್ರತಿಯೆಂಶವಾಧೀರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [illegible] ೨-೧೦-೦]

ಸಂಪುಟ ೩೭, ಮೈಸೂರ್ ಸ್ಟಾರ್ ಸನ್ ೧೯೨೩ ನೆಯ ಇಸವಿ ಡಿಶಂಬರ್ ತಾರೀಖು ೩೦ ನೆಯ ಭಾನುವಾರ. ಸಂಚಿಕೆ ೫೨

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SITHARAGHAVA
VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕಲಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಪ್ಲೇಗಿಗೆ ಸಂಜೀವನ.

ಲಕ್ಷೋಪಲಕ್ಷ ಪ್ಲೇಗುರೋಗಿಗಳ ಪ್ರಾಣವನ್ನು ಕಾಪಾಡಿರುವ ಕಾಪಾಡುತ್ತಿರುವ ಲಕ್ಷ್ಮೀವಿಲಾಸ ರಸವನ್ನು ಇಂದೇ ತರಿಸಿಟ್ಟುಕೊಳ್ಳಿರಿ. ಪ್ಲೇಗನ್ನೂ, ಪ್ಲೇಗಿರುವಾಗ ಬರುವ ಎಲ್ಲಾ ಜ್ವರಗಳನ್ನೂ, ಸತತ, ಸದಿತ ಕಾರಿ ಜ್ವರಗಳನ್ನೂ ಸಂದೇಹವಿಲ್ಲದೆ ನಂಬುಗೆಯಾಗಿ ಬೇಗನೆ ಗುಣಪಡಿಸುತ್ತದೆ. ಸೀಸೆ 1—0—0.

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ, ಮೈಕೈ ನೋವು, ತಲೆನೋವುಗಳು ಗುಣವಾಗುತ್ತದೆ. ಡಬ್ಬಿ 0—8—0.

ಪಾಳ್ಯದ ವೆಂಕಟಾಚಲಪಂಡಿತ,
46 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಪಠ್ಯ. ಮದನೋದ್ಭವಗುಳಿಗೆ. ಇಲ್ಲ
(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. [50—46]

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ವಚನಶಾಸ್ತ್ರಸಾರ.

ಶ್ರೀ ಬಸವೇಶ್ವರ ಮೊದಲಾದ ಶಿವಶರಣರ ಮತತತ್ವಗಳನ್ನು ಅರಿತುಕೊಳ್ಳಬೇಕೆಂಬ ಆಕಾಂಕ್ಷೆಗಳು ವೀರಶೈವ ಸಮಾಜದಲ್ಲಿ ಇತ್ತಿತ್ತ ಉತ್ಪನ್ನವಾಗ ಹತ್ತಿದ್ದು ಶುಭಚಿನ್ಹವೇ ಸರಿ. ಆದರೆ ಆ ತತ್ವಗಳು ಅವರು ರಚಿಸಿದ ವಚನಶಾಸ್ತ್ರದಲ್ಲಿಯೇ ವಿಶೇಷವಾಗಿ ದೊರಕುತ್ತವೆ. ಅದ್ದರಿಂದ ಅವರ ವಚನಗಳನ್ನು ಶೋಧಿಸಿ, ಅವುಗಳಲ್ಲಿಯ ತತ್ವಗಳನ್ನು ಕಂಡುಹಿಡಿದು, ಅವುಗಳನ್ನು ಅವರವರ ವಚನಗಳಿಂದಲೇ ಈ ಗ್ರಂಥದಲ್ಲಿ ವಿಶದವಾಗಿ ನಿರೂಪಿಸಿದೆ. ಇದರಲ್ಲಿ ೧೩೦ ಶಿವಶರಣರ ಶ್ರೇಷ್ಠವಾದ ವಚನಗಳು ಕೊಡಲ್ಪಟ್ಟಿವೆ. ಇದು ೬೦೦ ಪುಟವುಳ್ಳ ದೊಡ್ಡ ಗ್ರಂಥವಾಗಿದ್ದು, ಇದರ ಬೆಲೆ ೩ ರೂಪಾಯಿ. ಇದು ಸಿಗುವ ಪತ್ತೆ—

ರಾವಬಹಾದೂರ ಫ. ಗು. ಹಳಕಟ್ಟಿ, ಬಿ.ಎ., ಎಲ್ಎಲ್.ಬಿ.,
[13—9] ವಕೀಲ, ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹಂದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೪—೦

ಜಗತ್ತಿನ ನಿಜವಾದ] ಆಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಬಸರೋಣ, ವೀರ್ಯ ತೆಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ನಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಶಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಶೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಜೋಗಟಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವಿ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಕಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ, ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಳೇರಿಘಾಸ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ.

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣ ಒಳ್ಳೆದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಅದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೪೨ ತೊಲ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಆರಗೂಷ್ಟವೆರ್ಮಾಡಿರಿ.

[50—21] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ರಕ್ತಶೋಧಕ ! ಧಾತುಪೌಷ್ಟಿಕ. ಮನೋಲ್ಲಾಸಕವೆಂಬ !!

ಮಹಾದ್ರಾಕ್ಷಾದಿ ಚೂರ್ಣವು

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ವಿಷಯವು ತಮಗೆ ವೇದ್ಯವಾಗಿರುವದಷ್ಟೆ. ಈ ಔಷಧಿಯು ಕೆಳಗೆಕಂಡ ರೋಗಗಳಿಗೆ ಶ್ರೇಷ್ಠವಾದದ್ದೆಂದು ಅನೇಕ ವೈದ್ಯರೂ ರೋಗವಾರಣೆಯಾದವರೂ ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬಮನುಷ್ಯನು ೨೧ ದಿನ ಸೇವನೆ ಮಾಡಿದರೆ ಕ್ಷಯರೋಗ ೪೦ ಬಗೆಯಾದ ಪಿತ್ಥರೋಗಗಳು, ಮೇಹರೋಗ, ಪಾಂಡುರೋಗ, ಪೀನಸ, ೧೮ ತರದ ಕುಷ್ಠರೋಗಗಳು, ಭಗಂಧರವು, ಮೂತ್ರ ಕೃಚ್ಛ್ರರೋಗ, ೫ ಬಗೆಯಾದ ಕಾಶರೋಗಗಳು, ದೀರ್ಘಜ್ವರ, ಉಬ್ಬಸ, ವಾಕರಿಕೆ, ಸನ್ನಿಪಾತರೋಗ, ಕಣ್ಣುರಿಯುವದು, ಅಂಗಾಲು ಅಂಗೈ ಬಿರಿಯುವದು, ಶಕೆ, ಶಲ್ಡಿ, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವದು, ನಷ್ಟೇಂದ್ರಿಯಾಗುವದು—ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು, ರಕ್ತವನ್ನು ವೃದ್ಧಿಗೊಳಿಸಿ ಧಾತುಪುಷ್ಟಿಯನ್ನುಂಟುಮಾಡುವದು, ನಿಸ್ಸತ್ವವನ್ನು ಹೋಗಲಾಡಿಸಿ ದೇಹಾಂಗವೆಲ್ಲಾ ಅಧಿಕ ಬಲವಾಗಿ ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲಿ, ಬೀಳಿಶೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕೈಕಾಲು ಹರಿಯುವಿಕೆ ಇತ್ಯಾದಿ ದೋಷಗಳಿಂದ ಗರ್ಭಕೋಶಕ್ಕೆ ತೊಂದರೆಯುಂಟಾಗಿ ದೇಹವು ಕ್ಷೀಣವಾಗಿ ಸಂತಾನಭಂಗವಾಗುವದು. ಆದಕಾರಣ ಸದರಿ ದೋಷಗಳಿಂದ ವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರೂ ಕ್ರಮವಾಗಿ ಒಂದುಮಂಡಲ ಪರಿಯಂತರವರಿಗೂ ಸೇವನೆಮಾಡಿದರೆ ಖಂಡಿತವಾಗಿ ಸಂತಾನಪ್ರಾಪ್ತಿಯಾಗುವದೆಂದು ಸುಪ್ರಸಿದ್ಧವಾಗಿ ಹೇಳಿರುವದು. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದಕಾರಣ ತುಂಬಾ ಅನುಭವಕ್ಕೆ ಬಂದಿದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದರೆ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ.

ಜ್ವರಸಂಜೀವಿನಿ.—ಇದರ ಸೇವನೆಯಿಂದ ಚಾತುರ್ಥಿಕಜ್ವರ, ದಿನಬಿಟ್ಟು ದಿನ ಬರುವ ಜ್ವರ, ಶೀತ ಜ್ವರ, ವಾತಪಿತ್ಥಜ್ವರ, ಅಸ್ಥಿಗತ ಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲಿಸುತ್ತದೆ.

ಕಫರೋಗಸಂಜೀವಿನಿ.—ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಕೋಶಿಕೆಮ್ಮು ಇತ್ಯಾದಿಗಳನ್ನು ತಕ್ಷಣದಲ್ಲಿ ಗುಣಪಡಿಸುತ್ತದೆ. ಜ್ವರಸಂಜೀವಿನಿ ೧ ಡಜನ್ ಮಾತ್ರೆಗಳನ್ನೂ ಕಫಸಂಜೀವಿನಿ ೧೨ ಮಾತ್ರೆಗಳನ್ನೂ ಮೇಲ್ಕಂಡ ಮಹದ್ರಾಕ್ಷಾದಿ ಚೂರ್ಣವನ್ನೂ ತರಿಸಿಕೊಳ್ಳುವವರಿಗೆ ಈ ೨ ಔಷಧಿಗಳನ್ನು ಉಚಿತವಾಗಿ ಕೊಡುತ್ತೇವೆ. ಅನುಪಾನ ಪತ್ರಿಕೆ ಔಷಧಿಯೊಂದಿಗೆ ಇರುತ್ತದೆ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹಿತ ರೂ. ೫—೪—೦. ಈ ಔಷಧಿಯನ್ನು ಸೇವನೆ ಮಾಡುವ ಮೊದಲನೆದಿನ ಈ ಕೆಳಗೆ ಕಂಡ ಮುಹೂರ್ತರಾಜನೆಂಬ ಶಿವಲಿಖಿತ ಚಕ್ರವನ್ನು ನೋಡಿ ಅದರಲ್ಲಿ ಅಮೃತ ಮಹೇಂದ್ರಿಯಾ ವ್ಯಾಳ್ಯಗಳಲ್ಲಿ ಸೇವನೆಮಾಡಿರಿ. ಬಾಕಿ ವ್ಯಾಳ್ಯ ಕೂಡದು. ಇದರಲ್ಲಿ ಶಿವಲಿಖಿತ ಚಕ್ರವಿರುವದರಿಂದ ನಿಮ್ಮಗಳಿಗೆ ಸಕಲ ಶುಭಾಶುಭ ಕಾರ್ಯಗಳಿಗೆ ಬಹಳ ಪ್ರಶಸ್ತವಾಗಿರುತ್ತದೆ. ಪ್ರತಿಯೊಂದು ಕಾರ್ಯಗಳಲ್ಲಿ ಅವಶ್ಯಕವಾಗಿ ನೋಡಿರಿ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ವಿ. ಪಿ. ಸಹಿತ ಜ್ವರಸಂಜೀವಿನಿ ಮಾತ್ರೆ ಡಜನ್ ೧ಕ್ಕೆ ರೂ. ೧—೦—೦. ಕೆಮ್ಮಿನ ಗುಳಿಗೆ [illegible] ೧ಕ್ಕೆ ರೂ. ೧—೦—೦.

ಹೆಚ್ಚಾಗಿ ತರಿಸಿಕೊಳ್ಳುವವರು ಅನುಕೂಲವಾದ ಕಮಿಷನ್ ಹೊಂದುವದಕ್ಕೆ ಸಂಶಯವಿಲ್ಲ. ಪತ್ರವ್ಯವಹಾರ ಮೂಲಕ ತಿಳಿದುಕೊಳ್ಳಬಹುದು. ನಮ್ಮ ವಿಳಾಸವು ಚಿಕ್ಕಾಗಿದ್ದರೆ ಸಮಜಕೊಡುತ್ತೇವೆ.

ನಮ್ಮ ವಿಳಾಸ—ಹೆಚ್. ಯಂ. ಕರಣಿಕಬಸವಾರ್ಯ,
[24—21] ಬಳ್ಳಾರಿ.

ಮೈಸೂರು ಸ್ಟಾರ್ ಪತ್ರಿಕೆಯ ವಾಚಕರಿಗೆ ಬಹುಮಾನ.

ಈ ಸ್ಟಾರ್ ಪತ್ರಿಕಾ ವಾಚಕರುಗಳಿಗೆ ಅದರ ಮೇಲಿರುವ ಅಭಿಮಾನವನ್ನು ವೃದ್ಧಿಗೊಳಿಸುವ ಉದ್ದೇಶದಿಂದ ಈ ಕೆಳಗೆ ಕಂಡ ಪ್ರಕಾರ 100 ರೂಪಾಯಿಗಳನ್ನು 3 ಬಹುಮಾನಗಳನ್ನಾಗಿ ವಿಂಗಡಿಸಿ ಕೊಡಲು ಗೊತ್ತುಮಾಡಿರುತ್ತೇವೆ.

ಮೊದಲನೆಯ ಬಹುಮಾನ 50 ರೂಪಾಯಿ
ಎರಡನೆಯ ,, 30 ,,
ಮೂರನೆಯ ,, 20 ,,

1924 ನೆಯ ಫೆಬ್ರವರಿ 2 ನೆ ತಾರೀಖಿನ ಸಂಚಿಕೆಯಿಂದ ಜೂನ್ 28 ನೆ ತಾರೀಖಿನ ಸಂಚಿಕೆಯ ವರೆಗೂ ಪ್ರತಿಯೊಂದು ಪತ್ರಿಕೆಯ ಮೇಲೂ ಬೇರೆ ಬೇರೆ ನಂಬರು ಕೊಡಲ್ಪಟ್ಟು ಅವುಗಳಲ್ಲಿ 30 ನಂಬರುಗಳು ಆರಿಸಲ್ಪಟ್ಟು ಸೀಲ್ ಮಾಡಿದ ಕವರಿನಲ್ಲಿ ಭದ್ರವಾಗಿಡಲ್ಪಟ್ಟಿದ್ದು ಜೂನ್ ತಿಂಗಳ ಕಡೆಯಲ್ಲಿ ಈ 30 ನಂಬರುಗಳನ್ನು ಚೀಟಿಗೆ ಹಾಕಿ ಅವುಗಳಲ್ಲಿ ಅನುಕ್ರಮವಾಗಿ ಯಾವ 3 ನಂಬರುಗಳಿಗೆ ಬಹುಮಾನದ 3 ಚೀಟಿಗಳು ತೇಲುತ್ತವೋ ಆ 3 ನಂಬರುಗಳು ಜುಲೈ ತಿಂಗಳ 5 ನೇ ತಾರೀಖಿನ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುವು.

ಬಹುಮಾನ ಬಂದಿರುವ ನಂಬರನ್ನು 1924 ನೆ ಫೆಬ್ರವರಿ 2 ನೆ ತಾರೀಖಿನ ಪತ್ರಿಕೆಯಿಂದ ಜೂನ್ 28 ನೆ ತಾರೀಖಿನ ಪತ್ರಿಕೆಯ ವರೆಗೆ ಪ್ರತಿಯೊಂದುವಾರದ ಸ್ಟಾರ್ ಪತ್ರಿಕೆಯ ಸಮೇತ ಕಳುಹಿಸಿಕೊಟ್ಟಲ್ಲಿ ಅವರವರ ನಂಬರಿಗೆ ಬಂದಿರುವ ಬಹುಮಾನವು ಮನಿಯಾರ್ಡರ್ ದ್ವಾರ ಕಳುಹಲ್ಪಡುವುದು.

ಹಾಗೆ ಎಲ್ಲವಾರದ ಪತ್ರಿಕೆಗಳು ಕಳುಹಲ್ಪಡದೆ ಬಹುಮಾನದ ನಂಬರಿರುವ ಪತ್ರಿಕೆಯು ಮಾತ್ರ ಕಳುಹಲ್ಪಟ್ಟಲ್ಲಿ ಅದಕ್ಕೆ ಬಹುಮಾನದ್ರವ್ಯವು ಖಂಡಿತವಾಗಿಯೂ ದೊರೆಯುವುದಿಲ್ಲವೆಂಬಂಶವನ್ನು ವಾಚಕರು ಮರೆಯಬಾರದು.

ಹೀಗೆ ಬಹುಮಾನವನ್ನು ಹೊಂದುವವರು ಪತ್ರಿಕಾ ಚಂದಾಹಣವನ್ನು ಸಲ್ಲಿಸಿಕೊಂಡಿದ್ದಲ್ಲಿ ಬಹುಮಾನದ ಮೊಬಲಗಿನಲ್ಲಿ ಚಂದಾಹಣವು ಕಳೆಯಲ್ಪಟ್ಟು ಉಳಿದ ಹಣವು ಕಳುಹಲ್ಪಡುವುದು. ಈ ನೂತನ ಬಹುಮಾನ ವಿನಿಯೋಗವಿಧಾನವು ಸ್ಟಾರ್ ಪತ್ರಿಕಾ ವಾಚಕಜನಾದರಣೀಯವಾಗಿದ್ದಲ್ಲಿ ಮುಂದೆಯೂ ನಡಿಸಲ್ಪಡುವುದು.

ಸಂಪಾದಕ.

ಮೈಸೂರು ಸ್ಟಾರ್.

೧೯೨೩ ನೆಯ ಇಸವಿ ಡಿಸೆಂಬರ್ ತಾ|| ೩೦ ನೆಯ ಭಾನುವಾರ.

THE WORK BEFORE THE PEOPLE.

The elections for the Legislative Council and the Representative Assembly are coming on shortly. It is the cherished desire of His Highness the Maharaja that His Highness' subjects will take the best advantage of the increased privileges granted to the new Assembly and Council. That they are going to materially influence legislation, and the administration in general cannot be denied. It is a definite attempt, however small it may be, to transfer the responsibility to the people themselves. Though it is not obligatory on the Government to accept every recommendation of the Council or the Assembly still it has to respond to the voice of the people as expressed through these constitutional bodies to a much greater degree than before, and it cannot afford to consistently ignore the popular demands. What these two bodies are going to demand will pass as popular demand. What the popular demands are and how far they represent the real needs and interests of the people of the State depends upon how the Assembly and the Council are constituted and who form the majority in them. We are accustomed to see in every country a vigorous campaigning for elections by all parties, but in Mysore, where the general enlightenment is not after all lower than the neighbouring Presidencies, we see a colossal indifference, if not, slackness among all classes except the one, which is always on the alert in such matters. This is hardly a symptom of a healthy political life, much less is it conducive to the people's welfare. In democracy there is no room for slack people. It is only consistent and persistent work that counts. There is a notion prevelent among even persons who stand good chances of being returned to the Assembly and the Council, that they need not trouble themselves about politics and that the matter may be left to others. There are those others who could succeed if they made an earnest effort but who refuse to do so, on the ground that if the voters know what is best for them they would vote for them, otherwise the voters themselves would be sufferers. These modes of reasoning are hardly convincing to any one versed in politics nor useful to the public at large. The people expect that the men most fitted for service of the country stand as candidates, and that these candidates having stood, will put forth their might and secure the seats. Nowhere has even the best of candidates succeeded by merely standing as candidates and making no further effort. It is a very grave responsibility that rests now on the enlightened section of the backward classes, and the meagre efforts that they are making now bodes ill for their future. In the past they were able to gain some thing after a very hard struggle. In the future the struggle is bound to be keener and progress which depends upon the success in the contests which have to be faught out on the floor of the constitutional bodies, would be very much slower. It, therefore behoves on all the leaders of the backward classes to organise their forces, put forth their candidates in all the constituencies, contest the seats and secure a large return of their representatives to the Council and the Assembly. There is not much time left and the sooner they set about the task the better.

ಪ್ರಜಾಪ್ರತಿನಿಧಿಸಭೆಗೂ ನ್ಯಾಯವಿಧಾಯಕಸಭೆಗೂ ಸಭಾಸ್ತರರ ಆರಿಸುವಿಕೆ.

ಪ್ರಜೆಗಳ ಅಭಿಮತವೇನೆಂಬುದನ್ನು ತಿಳಿದುಕೊಂಡು ರಾಜ್ಯಪರಿಪಾಲನೆ ಮಾಡಬೇಕೆಂಬ ಉದಾತ್ತತತ್ವಕ್ಕನುಸಾರವಾಗಿ ನಡಿಸಲ್ಪಡುತ್ತಿರುವ ಪ್ರಜಾಪ್ರತಿನಿಧಿಸಭೆಯ ಮೂಲಕ ದೇಶದ ಸಮಸ್ತಪ್ರಜೆಗಳೂ ತಂತಮ್ಮ ಸ್ಥಳಗಳಿಗೆ ಸಂಬಂಧಿಸಿದ ಅಥವಾ ಸಾರ್ವತ್ರಿಕವಾದ ಕಷ್ಟನಿಷ್ಠುರಗಳನ್ನೂ, ಕೊರತೆಗಳನ್ನೂ ಪರಿಹಾರಗಳನ್ನೂ ಪ್ರಭುತ್ವದವರ ಮುಂದೆ ಅರಿಕೆಮಾಡಿಕೊಳ್ಳುವುದಕ್ಕಾಗಿಯೂ, ಮತ್ತು ನ್ಯಾಯವಿಧಾಯಕ ಸಭೆಯಲ್ಲಿ ವಿಧಿವಿಧಾನಗಳನ್ನು ಕಲ್ಪಿಸುವಲ್ಲಿ ಸರ್ಕಾರದವರಿಗೆ ಸಾಹಾಯ್ಯ ಮಾಡುವುದಕ್ಕಾಗಿಯೂ ಪ್ರಜೆಗಳಿಗೆ ಅವಕಾಶವನ್ನು ಶ್ರೀಮನ್ಮಹಾರಾಜರವರು ಕಲ್ಪಿಸಿಕೊಟ್ಟಿರುವರಲ್ಲದೆ, ಪ್ರಜಾಭಿಪ್ರಾಯವು ಪರಿಪುಷ್ಟವಾಗಬೇಕೆಂದೂ, ಅದಕ್ಕೆ ಗೌರವವು ಹೆಚ್ಚಬೇಕೆಂದೂ ಉದ್ದೇಶಪಟ್ಟು ಈ ಉಭಯಸಭೆಗಳ ಗೌರವವನ್ನೂ, ಕರ್ತವ್ಯಭಾರವನ್ನೂ ನೂತನಶಾಸನದ ಮೂಲಕ ಬಲಪಡಿಸಿರುತ್ತಾರೆ. ಶ್ರೀಮನ್ಮಹಾರಾಜರವರ ಇಂತಹ ಪ್ರಶಸ್ತವಾದ ಉದ್ದೇಶವು ಸಫಲಗೊಳ್ಳಬೇಕಾದರೆ ಪ್ರಜೆಗಳಲ್ಲಿ ಆತ್ಮೋದ್ಧರಣಬುದ್ಧಿಯೂ, ದೇಶಾಭಿಮಾನವೂ, ಐಕಮತ್ಯವೂ, ಪ್ರಯತ್ನವೂ ಹೆಚ್ಚುಗೊಳ್ಳಬೇಕು. ಆದುಕಾರಣ ಸೋಂಬೇರಿತನವನ್ನೂ, ಅಸಾಮರ್ಥ್ಯಭ್ರಮೆಯನ್ನೂ ಮೂಲೆಗೊತ್ತಿ, ತಂತಮ್ಮ ಕಷ್ಟಗಳನ್ನು ಮೊರೆಯಿಟ್ಟುಕೊಳ್ಳಲು ಪ್ರತಿಯೊಂದು ಜನವರ್ಗದಲ್ಲಿ ಮಾತುಬಾರಿಗಳಾದವರು ಸಭೆಗಳಿಗೆ ಪ್ರತಿನಿಧಿಗಳಾಗಿ ಬಂದು ಪ್ರಜಾಪ್ರತಿನಿಧಿಯೆಂಬ ಹೆಸರನ್ನು ಸಾರ್ಥಕಪಡಿಸಬೇಕು. ಈ ಸಭೆಗಳು ಯಾವುದೊಂದು ಜಾತಿಗೇ ಆಗಲಿ ಕೇವಲ ವಿದ್ಯಾವಂತರಿಗೋಸ್ಕರವೇ ಆಗಲಿ ಕಲ್ಪಿಸಲ್ಪಟ್ಟುವಾಗಿರದೆ ಎಲ್ಲರಿಗೂ ಸರ್ವಸಮಾನವಾಗಿ ತೆರೆದಿಡಲ್ಪಟ್ಟ ಬಾಗಿಲುಗಳನ್ನುಳ್ಳವಾಗಿವೆ.

ಒಬ್ಬರ ಕಷ್ಟವನ್ನು ಮತ್ತೊಬ್ಬರ ಬಾಯಿಂದ ಹೇಳಿಸುವುದಕ್ಕಿನ್ನ ತಾವೇ ಹೇಳಿಕೊಳ್ಳುವುದರಲ್ಲಿ ವಿಶೇಷ ಗುಣವಿರುವುದರಿಂದ, ಆಯಾಜನವರ್ಗದವರು ತಂತಮ್ಮ ನಿಜವಾದ ಕಷ್ಟನಿಷ್ಠುರಗಳನ್ನು ತಾವೇ ಹೇಳಿಕೊಳ್ಳಲು ಸಿದ್ಧರಾಗಿಬಂದ ವಿನಾ ಅವರು ಖಂಡಿತವಾಗಿಯೂ ಉದ್ಧಾರವಾಗುವುದಿಲ್ಲವು. ಹಿಂದುಳಿದ ಜನವರ್ಗದವರ ಸಂಖ್ಯೆಯು ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಯಲ್ಲಿ ಅಧಿಕವಾಗಿರುವಂತೆ ಸಭೆಗಳಲ್ಲೂ ಅವರ ಸಂಖ್ಯೆಯು ಅಧಿಕವಾಗಿದ್ದ ಹೊರತು ಅವರುಗಳ ವಿದ್ಯಾಭ್ಯಾಸದ ಕೊರತೆ, ಗ್ರಾಮಾಂತರಗಳ ಅನನುಕೂಲತೆ ಮೊದಲಾದ ಕಷ್ಟಗಳು ಮನ್ವಂತರದವರೆಗೂ ಪರಿಹಾರವಾಗುವಂತಿಲ್ಲವು. ಆದುದರಿಂದ ಪ್ರಜಾಪ್ರತಿನಿಧಿಸಭೆಗೆ ಪ್ರತಿ ಡಿಸ್ಟ್ರಿಕ್ಟಿನಿಂದಲೂ ತಾಲ್ಲೂಕಿನಿಂದಲೂ ಮ್ಯುನಿಸಿಪಲ್ ಸರಹದ್ದುಗಳಿಂದಲೂ ನ್ಯಾಯವಿಧಾಯಕಸಭೆಗೆ ಪ್ರತಿ ಡಿಸ್ಟ್ರಿಕ್ಟಿನಿಂದಲೂ, ಬೆಂಗಳೂರು ಮೈಸೂರು ಪಟ್ಟಣಗಳಿಂದಲೂ ಪ್ರತಿನಿಧಿಗಳಾಗಿ ಬರಲು ಅರ್ಹತೆಯುಳ್ಳ ಜನರು ಉದಾಸೀನರಾಗಿರದೆ ಉಮೇದುವಾರರಾಗಿ ನಿಲ್ಲಲು ಈಗ ಯತ್ನಿಸಬೇಕು. ಓಟನ್ನು ಕೊಡಲು ಮತ್ತು ಮೆಂಬರುಗಳಾಗಿ ನಿಲ್ಲಲು ಅರ್ಹತೆಯುಳ್ಳ ಜನರ ಹೆಸರುಗಳು ಸರ್ಕಾರಿಯ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟಿರುವ ವಿಷಯವನ್ನು ಈ ಪತ್ರಿಕೆಯಲ್ಲಿ ಮುಂದಾಗಿಯೇ ತಿಳಿಸಿದ್ದೆವಲ್ಲದೆ, ಅದರಲ್ಲಿ ಹೆಸರುಗಳು ಬಿಟ್ಟುಹೋಗಿದ್ದರೆ ಅಧಿಕಾರಿಗಳಿಗೆ ಕೂಡಲೆ ತಿಳಿಸಬೇಕಾಗಿಯೂ ಸೂಚಿಸಿದ್ದೆವು. ಅದರಂತೆ ನಡೆಸಿರಬಹುದೆಂದು ನೆನಸುತ್ತೇವೆ. ಈ ಸಂಬಂಧವಾಗಿ ಸರ್ಕಾರದವರು ಪ್ರಕಟಿಸಿರು ಕ್ಯಾಲೆಂಡರು ಓಟರುಗಳ ಹಾಗೂ ಉಮೇದುವಾರುಗಳ ಜ್ಞಾಪನಾರ್ಥವಾಗಿ ಈ ಪತ್ರಿಕೆಯ ಬೇರೊಂದು ಭಾಗದಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಪ್ರಜಾಪ್ರತಿನಿಧಿಸಭೆಗೂ ನ್ಯಾಯವಿಧಾಯಕಸಭೆಗೂ ಮೆಂಬರಾಗಲು ಚುನಾವಣೆಗೆ ನಿಲ್ಲಬೇಕೆಂದಿರುವವರು 26-1-1924 ರೊಳಗಾಗಿ ಅಧಿಕಾರಿಗಳಿಗೆ ಲಿಖಿತ ಮೂಲಕವಾಗಿ ತಿಳಿಸಿಕೊಳ್ಳಬೇಕು. ಚುನಾವಣೆಗೆ ಗೊತ್ತು ಮಾಡಿರುವ 1924 ನೆಯ ಫೆಬ್ರವರಿ ತಾ|| 15ರ ದಿವಸ ಸ್ಥಳಾಧಿಕಾರಿಗಳು ತಿಳಿಸುವ ಸ್ಥಳಕ್ಕೆ ಓಟರುಗಳು ಹೋಗಿ ತಮ್ಮ ಹಿತಚಿಂತಕರಾಗಿಯೂ, ನಂಬುಗೆಗೆ ಅರ್ಹರಾಗಿಯೂ ಇರುವ ಉಮೇದುವಾರರಿಗೆ ಮಾತ್ರ ತಂತಮ್ಮ ಓಟುಗಳನ್ನು ಕೊಟ್ಟು ಅಂತಹವರೇ ಚುನಾವಣೆಗೊಂಡು ಬರುವಂತೆ ಮಾಡಬೇಕು. ಇಷ್ಟು ಶ್ರದ್ಧೆಯಿಂದ ಕೆಲಸಮಾಡದೆ ಹೋದರೆ ಪ್ರಭುತ್ವದವರು ಸಕಲ ಪ್ರಜೆಗಳ ಹಿತಾರ್ಥವಾಗಿ ಮಾಡಿಕೊಟ್ಟಿರುವ ಸೌಕರ್ಯಗಳನ್ನೆಲ್ಲಾ ನಾವು ಉಪಯೋಗಿಸಿಕೊಳ್ಳಲು ಅರಿಯದೆ ನಾವೇ ಕೆಟ್ಟುಹೋಗಬೇಕಾಗುವುದು ಮತ್ತು ಉದಾಸೀನರ ಅಜ್ಞಾನದ ಲಾಭವನ್ನು ಜಾಣರು ಹೊಂದಿ ಸುಖಿಸುವಂತಾಗುವುದು.

ಗಾಯಕವಾಡ ಮಹಾರಾಜರ ಉದಾರ ಮನೋಭಾವವು.

ಬರೋಡಾಸಂಸ್ಥಾನದ ಗಾಯಕವಾಡ ಮಹಾರಾಜರು ತಮ್ಮ ಸುಖಾಗಮನವನ್ನು ಬಯಸಿ ಪ್ರಜೆಗಳೊಪ್ಪಿಸಿದ ವಿಜ್ಞಾಪನಪತ್ರಿಕೆಗೆ ಕೊಟ್ಟ ಉತ್ತರವು ಅವರ ಪ್ರಜಾವಾತ್ಸಲ್ಯವನ್ನೂ, ಸಂಘ ಸಂಸ್ಕರಣದ ವಿಚಾರದಲ್ಲಿ ಅವರಿಗಿರುವ ನಿಜವಾದ ಉದಾತ್ತತತ್ವವನ್ನೂ ಸುವ್ಯಕ್ತಗೊಳಿಸುವುದಲ್ಲದೆ ಇತರ ಸಂಸ್ಥಾನೀಕರುಗಳಿಗೆ ಗುಣಪಾಠವಾಗಿರುವುದು. ಅವರು ಮುಖ್ಯವಾಗಿ ಹೇಳಿದುದೇನೆಂದರೆ—"ಸಾಂಘಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಪ್ರಜೆಗಳ ಅಭ್ಯುನ್ನತಿಯಾಗುವುದಕ್ಕೆ ತಕ್ಕ ಸಾಹಾಯ್ಯ ಪ್ರೋತ್ಸಾಹಗಳನ್ನು ಔದಾರ್ಯದಿಂದಲೂ ಸಾವಧಾನದಿಂದಲೂ ಮಾಡಿಕೊಟ್ಟಿರುತ್ತೇನೆ. ಇದನ್ನು ಫಲಪ್ರದವನ್ನಾಗಿಮಾಡತಕ್ಕದು ಪ್ರಜೆಗಳ ಕರ್ತವ್ಯವಾಗಿದೆ. ಊಚನೀಚಭಾವವನ್ನೂ, ದ್ವೇಷಾಸೂಯೆಯನ್ನೂ ಹೋಗಲಾಡಿಸಲು ಜನರು ವಿಶೇಷವಾಗಿ ಪ್ರಯತ್ನಿಸಬೇಕು. 7 ಕೋಟಿ ಪ್ರಜಾಸಂಖ್ಯೆಯುಳ್ಳ ಪಂಗಡದವರು ಮಾನವವರ್ಗದಲ್ಲಿ ಅತಿ ನೀಚರಾಗಿ ಪರಿಗಣಿಸಲ್ಪಟ್ಟು ಅಸ್ಪೃಶ್ಯರಾಗಿ ಮಾಡಲ್ಪಟ್ಟಿರುವರು. ಅಂತ್ಯಜರನ್ನು ನಾವು ಸಮಾನಸ್ಕಂದರನ್ನಾಗಿಯೂ, ಭ್ರಾತೃಭಾವದಿಂದಲೂ ಕಾಣುವವರೆಗೂ ನಮ್ಮ ಅಭಿವೃದ್ಧಿಯು ಅಭಿವೃದ್ಧಿಯೇ ಅಲ್ಲವು. ನಮ್ಮ ಮನೋನಿಶ್ಚಯವನ್ನೂ, ನ್ಯಾಯಪರತೆಯನ್ನೂ, ಭ್ರಾತೃಭಾವವನ್ನೂ ಕಾರ್ಯತಃ ವ್ಯಕ್ತಗೊಳಿಸತಕ್ಕದಾಗಿದೆ, ಅಲ್ಲದೆ ನಮ್ಮ ನಡವಳಿಕೆಗಳಲ್ಲಿರತಕ್ಕ ವೃದ್ಧಾಚಾರದ ಶೃಂಖಲದಿಂದ ವಿಮುಕ್ತರಾಗತಕ್ಕದಾಗಿದೆ. ಮಹಾತ್ಮ ಗಾಂಧಿಯವರೂ ಅವರ ಅನುಚರರೂ ನಿಮ್ಮಜಾತಿಯ ಜನರ ಉದ್ಧಾರದ ವಿಚಾರದಲ್ಲಿ ಬೇಕಾದಷ್ಟು ಕಾರ್ಯವನ್ನು ಮಾಡಿಯೂ ಬೋಧಿಸಿಯೂ ಇರುತ್ತಾರೆ. ಅವರ ಉಪದೇಶದಂತೆ ನಡೆಯದೆ ಇರುವುದಕ್ಕಾಗಿ ಜನರನ್ನು ನಿಂದಿಸಬೇಕಾಗಿದೆ. ಅವರ ಬುದ್ಧಿವಾದದಂತೆ ನಡೆದು ನಿಮ್ಮಜಾತಿಯಜನರ ವಿಚಾರದಲ್ಲಿ ಸಮಾನತ್ವವನ್ನೂ ಭ್ರಾತೃಭಾವವನ್ನೂ ಧೈರ್ಯದಿಂದ ತೋರಿಸತಕ್ಕುದು ಜನರ ಕರ್ತವ್ಯವು. ಮದ್ಯಸೇವೆಯಿಂದಾಗತಕ್ಕ ಅನರ್ಥವನ್ನು ನಿಮ್ಮಂತೆಯೇ ನಾನೂ ಬಲ್ಲವನಾಗಿರುವೆನಾದರೂ, ಅದರ ನಿರೋಧವಿಧಿಯನ್ನು ಕಲ್ಪಿಸುವಲ್ಲಿರುವ ತೊಂದರೆಗಳನ್ನೂ ಅಸಾಧ್ಯತೆಯನ್ನೂ ಅನುಭವಪೂರ್ವಕವಾಗಿ ಪರ್ಯಾಲೋಚಿಸಬೇಕಾಗಿದೆ.

ಪ್ರಸ್ತುತದಲ್ಲಿ ಹಿಂದೂಗಳ ಅಥವಾ ಭಾರತೀಯ ಜನಾಂಗದ ಉದ್ಧಾರವು ಅತ್ಯಾವಶ್ಯಕವಾದ ಸಮಸ್ಯೆಯಾಗಿದೆ. ನಿಮ್ಮ ಘನತರವಾದ ಉದ್ದೇಶದಲ್ಲಿ ನಾನು ಸಾನುಭೂತಿಯುಳ್ಳವನಾಗಿರುತ್ತೇನೆ ಮತ್ತು ಈ ವಿಚಾರದಲ್ಲಿ ಅಕೃತ್ರಿಮವಾದ ಪ್ರಯತ್ನವು ನಡಿಸಲ್ಪಟ್ಟಿರುವುದಕ್ಕಾಗಿ ಸಂತೋಷಿಸುತ್ತೇನೆ. ಆದರೆ ನಮ್ಮ ಸ್ವಕಲ್ಪಿತಗಳಾದ ಭಿನ್ನಭೇದಗಳೂ ಕೆಲವರಿಗೆ ಮೀಸಲಾಗಿರುವ ಸ್ವತಂತ್ರಾಧಿಕಾರಗಳೂ ನಿರ್ಮೂಲವಾದ ಹೊರತು ನಾವು ಸ್ವದೇಶಾಭಿಮಾನಿಗಳೆಂದೆನ್ನಿಸಿಕೊಳ್ಳಲು ಅರ್ಹರಾಗಲಾರೆವು. ಹಿಂದೂ ಧರ್ಮವಿಚಾರದಲ್ಲಿ ನನಗೆ ಬಹಳ ಪೂಜ್ಯಬುದ್ಧಿಯಿರುವುದು, ಆದರೆ ನಾವು ಅದನ್ನು ಚೆನ್ನಾಗಿ ತಿಳಿದುಕೊಂಡು ಪ್ರಕೃತವಿದ್ಯಮಾನಕ್ಕನುಗುಣವಾಗಿ ಮಾರ್ಪಡಿಸಿಕೊಳ್ಳಬೇಕು.

ಕಳೆದ ಮಹಾಯುದ್ಧದಿಂದ ಯೂರೋಪಿನಲ್ಲಿ ರಾಜಕೀಯ ಮತ್ತು ಸಾಂಘಿಕ ವಿಚಾರಗಳು ಬಹಳಮಟ್ಟಿಗೆ ಸುಧಾರಿಸಿರುತ್ತವೆ. ಅವುಗಳ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದಲ್ಲಿ ಅವುಗಳ ಮಹತ್ವವು ಗೊತ್ತಾಗುವುದು. ನಾವು ಕಾಲಸ್ಥಿತಿಯನ್ನನುಸರಿಸಿ ನಡೆಯದಿದ್ದಲ್ಲಿ 50-60 ವರ್ಷಗಳ ಹಿಂದೆ ಇದ್ದಂತೆಯೇ ಇರುವೆವು. ಆದರೆ ಇತರ ದೇಶದವರು ಮುಂಬರಿಯುತ್ತಿರುವಾಗ ನಾವು ಮಾತ್ರ ಸ್ತಬ್ಧರಾಗಿರಲಿಕ್ಕಾಗುವುದಿಲ್ಲ. ಬರೇ ಅನುಕರಣದಿಂದ ಪ್ರಯೋಜನವಿಲ್ಲವೆಂದು ಪುನಃ ಪುನಃ ಹೇಳುತ್ತೇನೆ. ನಾವು ನಮ್ಮ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದು ಪರರಕೂಡ ಸ್ಪರ್ಧಿಸಲು ಸಾಧಕವಾದ ಯೋಗ್ಯ ಉಪಾಯಗಳನ್ನು ಕಂಡುಹಿಡಿಯತಕ್ಕುದು ಅವಶ್ಯಕವಾಗಿದೆ.

ಈಗಿನಕಾಲದಲ್ಲಿ ವರ್ತಮಾನಪತ್ರಿಕೆಗಳಿಂದ ಮಹಾಪ್ರಯೋಜನವುಂಟು ಮತ್ತು ಅವುಗಳ ಸಾಮರ್ಥ್ಯವೂ ಉತ್ತರವಾದಿತ್ವವೂ ಅಧಿಕವಾಗಿವೆ. ಆದರೆ ಅವುಗಳಿಂದ ಪ್ರಯೋಜನವಾಗುವಂತೆಯೇ ಕೆಡಕೂ ಆಗುವುದುಂಟು. ಸುಳ್ಳು ವರ್ತಮಾನ ಕೊಡುವುದು, ವ್ಯಕ್ತಿವಿಚಾರವಾಗಿ ವ್ಯಾಖ್ಯಾನಮಾಡುವುದು, ಅಸೂಯೆಯಿಂದ ನಿಂದಿಸುವುದು, ಕಕ್ಷಿಗಳನ್ನುಂಟುಮಾಡಿ ಕಲಹಕ್ಕೆ ನಿಲ್ಲಿಸುವುದು ಇತ್ಯಾದಿ ಕರ್ತವ್ಯದಿಂದ ಅವುಗಳು ಸಮಾಜಕ್ಕೆಘಾತವನ್ನು ಮಾಡುವುವು ಅವುಗಳು ಒಂದು ಸಮಾಜದ ಅಥವಾ ಎಲ್ಲ ಜನರ ಅಭಿಪ್ರಾಯವನ್ನು ತಿಳಿಸತಕ್ಕವುಗಳಾಗಿರದೆ ತಮಗೆ ಸಂಬಂಧಪಟ್ಟ ವ್ಯಕ್ತಿಯ ಅಭಿಪ್ರಾಯವನ್ನನುಸರಿಸಿ ನಡೆಯತಕ್ಕುವಾಗಿವೆ. ಎಂಬುದನ್ನು ನೀವು ಜ್ಞಾಪಕದಲ್ಲಿಟ್ಟುಕೊಂಡು ಅವುಗಳ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು. ನಾವು ಅವುಗಳ ವಶವಾಗದೆ ನಮ್ಮಲ್ಲಿ ನಾವೇ ವಿಚಾರಮಾಡಿ ನಮ್ಮ ಮನಸ್ಸಿಗೆ ನ್ಯಾಯವಾಗಿ ತೋರುವ ಮಾರ್ಗದಲ್ಲಿ ಧೈರ್ಯದಿಂದ ವರ್ತಿಸತಕ್ಕುದಾಗಿದೆ.

ನಾನು ವೃದ್ಧನಾಗುತ ಬಂದೆ. ನನಗೆ ಈಗ 60ನೆಯ ವರ್ಷ ಸಮೀಪಿಸಿತು. ಆದುಕಾರಣ ನನ್ನ ಅಧಿಕಾರಿಗಳ ಹಾಗೂ ಪ್ರಜೆಗಳ ಕರ್ತವ್ಯಭಾರವು ಕಠಿಣವಾಗಿಯೂ, ಉತ್ತರವಾದಿತ್ವವು ಮಹತ್ತರವಾಗಿಯೂ ಇರುವುವು. ನಾನು ಈ ವಿಚಾರದಲ್ಲಿ ಬಹಳ ಜಾಗ್ರತನಾಗಿರುವೆನಾದರೂ ನನ್ನ ಸಂಸ್ಥಾನದ ಆಳ್ವಿಕೆಯಲ್ಲಿ ಈವರೆಗೆ ತೋರಿಸಿಕೊಂಡುಬಂದ ಉದಾರಭಾವವು ಮುಂದೆಯೂ ನಡೆದುಕೊಂಡುಬರುವಲ್ಲಿ ಮತ್ತು ನಿಮ್ಮ ಪ್ರಯತ್ನ ವಿಶೇಷಗಳಿಗೆ ರೈಲ್ವೆ ಮತ್ತು ಇತರ ಶಾಖೆಗಳಿಂದ ಉತ್ತೇಜನವು ದೊರಕುವುದರಲ್ಲಿ ನನ್ನ ಪೂರ್ಣಾನುಭವ ಪೂರ್ವಕವಾದ ಸಾಹಾಯ್ಯವನ್ನು ಮಾಡಲು ಸದಾ ಪ್ರಯತ್ನಿಸುವವನಾಗಿರುವೆನು. ನನ್ನ ಅಧಿಕಾರಿಗಳು ಸಾರ್ವದಾ ನನ್ನ ಪ್ರಜೆಗಳ ಅಭಿವೃದ್ಧಿ ವಿಚಾರದಲ್ಲಿ ಸಾನುಭೂತಿಯಿಂದ ಸಾಹಾಯ್ಯ ಮಾಡುವರು. ಆದರೆ ಪ್ರಜೆಗಳ ಅಭಿವೃದ್ಧಿಯಾಕಾಂಕ್ಷೆಯು ಮಾತ್ರ ಯುಕ್ತವಾದುದಾಗಿಯೂ ಸಾಧ್ಯವಾದುದಾಗಿಯೂ ಇರಬೇಕೆಂಬುದನ್ನು ಒತ್ತಿ ಹೇಳಬೇಕಾಗಿದೆ. ರಾಜ್ಯಾಡಳಿತದಲ್ಲಿ ಕಂಡುಬರುವ ಕುಂದುಕೊರತೆಗಳನ್ನು ನೀವು ನನ್ನ ಗಮನಕ್ಕೆ ತರುವಲ್ಲಿ ಅಭ್ಯಂತರವಿಲ್ಲವು. ಆದರೆ ಸಾಧ್ಯವಾದ ಪರಿಹಾರೋಪಾಯವನ್ನು ಮಾತ್ರ ಸೂಚಿಸತಕ್ಕದನ್ನು ಮರೆಯಬಾರದು. ಸಂಸ್ಥಾನದ ಆರ್ಥಿಕ ಮತ್ತು ಇತರ ಪರಿಸ್ಥಿತಿಗಳಿಗನುಗುಣವಾದಂತಹ ಮಾರ್ಗಗಳನ್ನೇ ನೀವು ಯಾವಾಗಲೂ ಸೂಚಿಸತಕ್ಕದಾಗಿದೆ, ಅಲ್ಲದೆ ಸರ್ಕಾರದವರಿಗಿರತಕ್ಕ ತೊಂದರೆಯ ವಿಚಾರಗಳಲ್ಲಿ ನಿಮ್ಮ ಸಾನುಭೂತಿಯನ್ನು ತೋರಿಸಿ ಅಭಿವೃದ್ಧಿಕಾರಕೋಪಾಯಗಳನ್ನು ತೋರಿಸಿಕೊಡತಕ್ಕುದು ಅತ್ಯಾವಶ್ಯಕವು."

ಮಲ್ಲನಮೂಲೆ ಕ್ಷೇತ್ರದಲ್ಲಿ ನಡೆದ ಮಹಾ ಗಣಾರಾಧನೆಯು.

ನಂಜನಗೂಡು ರೈಲ್ವೆಸೇತುವೆಯ ಸಮೀಪದಲ್ಲಿ ಕಪಿಲಾನದೀ ತೀರದಲ್ಲಿರುವ ಮಲ್ಲನಮೂಲೆಕ್ಷೇತ್ರ ಮಠಾಧಿಪತಿಗಳಾಗಿದ್ದ ನಿರಾಭಾರಿ ದೇಶಿಕೇಂದ್ರ ಶ್ರೀ ಕಂಬಳಿಸ್ವಾಮಿಗಳು ಕಳೆದ ಕಾರ್ತೀಕ ಬಹುಳ ಸೋಮವಾರದ ದಿವಸ ಲಿಂಗೈಕ್ಯರಾದ ಪ್ರಯುಕ್ತ ತತ್ಸಂಬಂಧವಾದ ಗುರುಪಾದಪೂಜೆಯೂ ಮಹಾ ಗಣಾರಾಧನೆಯೂ ಕಳೆದ ತಾ|| 24-12-23ರಲ್ಲಿ ಬೆಟ್ಟದಪುರದಮಠದ ಶ್ರೀ ಚಿಕ್ಕವೀರ ದೇಶಿಕೇಂದ್ರ ಮಹಾಸ್ವಾಮಿಯವರಿಂದ ಅಭೂತಪೂರ್ವವಾಗಿ ನಡಿಸಲ್ಪಟ್ಟಿತು. ಈ ಮಹಾಕಾರ್ಯಕ್ಕಾಗಿ 100 ಪಲ್ಲದವರೆಗೆ ಅಕ್ಕಿಯೂ ಅದಕ್ಕೆ ತಕ್ಕಭೋಜನಸಾಮಗ್ರಿಯಗಳೂ ಸಂಗ್ರಹಿಸಲ್ಪಟ್ಟು 20-25 ಸಾವಿರ ಜನ ವೀರಶೈವರಿಗೆ 2-3 ದಿನಗಳವರೆಗೆ ಸುಭೋಜನ ಮಾಡಿಸಲ್ಪಟ್ಟಿತು. ಬಹುದೂರ ದೇಶಗಳಿಂದ ಗುರುಸ್ಥಲ ಮತ್ತು ನಿರಾಭಾರಿ ಮಠಪತಿಗಳೂ ಸಾವಿರಾರು ಗಣಂಗಳೂ ಬಂದಿದ್ದರು. ಭಕ್ತಾದಿಗಳು ಅವರವರ ಶಕ್ತ್ಯನುಸಾರ ಆಹಾರ ಸಾಮಗ್ರಿಗಳನ್ನು ಬಂಡಿಯಲ್ಲಿ ತುಂಬಿಕೊಂಡು ಬಂದೊಪ್ಪಿಸಿದ್ದುದೂ ಶ್ರೀಗಳವರು ಶೇಖರಿಸಿದ್ದುದೂ ಬೆಟ್ಟದಂತೆ ರಾಸಿಬಿದ್ದಿದ್ದುವು. ನೂರಾರು ಕೊಡ ನೀರನ್ನು ಹಿಡಿಯುವ ಪಾತ್ರೆಯಲ್ಲಿ 400-500 ಬೆಲ್ಲದಚ್ಚುಗಳೂ, ಅವಕ್ಕೆ ತಕ್ಕಷ್ಟು ರವೆಯೂ 2-3 ಟಿನ್ನು ಬೆಣ್ಣೆಯೂ ಹಾಕಲ್ಪಟ್ಟು ಪಾಯಸವು ಕಾಯಿಸಲ್ಪಡುತ್ತಿದ್ದಾಗ್ಗೆ ಪಾತ್ರೆಯ ತಳವು ಬಿಟ್ಟುಹೋಗಿ ಪಾಯಸವು ಕಾಲುವೆಯ ನೀರಿನಂತೆ ಹರಿದು ನದಿಯನ್ನು ಸೇರಿತು. ಪಾಯಸದ ಪರಿಮಾಣವು ಇಷ್ಟರಮಟ್ಟಿಗಿದ್ದುದರ ಮೇಲೆ ಉಳಿದ ಭೋಜನದ ಪದಾರ್ಥಗಳ ಪರಿಮಾಣವೆಷ್ಟಿರಬಹುದೆಂಬುದನ್ನು ವಾಚಕರೇ ಊಹಿಸತಕ್ಕುದಾಗಿದೆ. ಇಂತಹ ಅಭೂತಪೂರ್ವವಾದ ಗಣಾರಾಧನೆಯು ಈ ಪ್ರಾಂತದಲ್ಲಿ ಯಾವಾಗಲೂ ನಡೆದಿರಲಿಲ್ಲವೆಂದು ವೃದ್ಧರು ಹೇಳುತ್ತಿರುವರು. ಈ ಗುರುಸೇವಾಮಹೋತ್ಸವಕ್ಕೆ ರಾಜಧಾನಿಯಿಂದ ಡಾಕ್ಟರ್ ಬಿ. ನಂಜಪ್ಪನವರು, ಡಾಕ್ಟರ್ ಟಿ. ಎಸ್. ಸಿದ್ದಪ್ಪನವರು ಅಡ್ವೋಕೇಟರುಗಳಾದ ಮ|| ಬಿ. ಬಸವಾರಾಧ್ಯರು, ಮ|| ಭೋಗಯ್ಯನವರು, ನಂಜನಗೂಡಿನಲ್ಲಿ ಪ್ಲೀಡರಾಗಿರುವ ಮ|| ನಂಜುಂಡಾರಾಧ್ಯರು ಮೊದಲಾಗಿ ವೀರಶೈವ ದೊಡ್ಡಮನುಷ್ಯರು ದಯಮಾಡಿಸಿದ್ದರು. ಈ ಗಣಾರಾಧನಾ ಮಹೋತ್ಸವವು ನಿರ್ವಿಘ್ನವಾಗಿಯೂ, ಅಭೂತಪೂರ್ವವಾಗಿಯೂ, ತೃಪ್ತಿಕರವಾಗಿಯೂ ನಡಿಯಲು ವೀರಶೈವ ಮತೋದ್ಧಾರಕ್ಕಾಗಿ ಕಂಕಣಬದ್ಧರಾಗಿರುವ ಶ್ರೀ ಚಿಕ್ಕವೀರದೇಶಿಕೇಂದ್ರ ಮಹಾಸ್ವಾಮಿಯವರ ಕೃಪಾವಿಶೇಷವೇ ಕಾರಣವು.

ರಾಷ್ಟ್ರೀಯ ಮಹಾಸಭೆ.

ಈ ಸಭೆಯ ಅಧಿವೇಶನವು ಕಾಕಿನಾಡಾದಲ್ಲಿ ಕಳೆದ ತಾ|| 28ರಲ್ಲಿ ಮೌಲಾನಾ ಮಹಮ್ಮದಾಲಿಯವರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ನಡೆಯುತ್ತಿರುವುದು. ಅಧ್ಯಕ್ಷರ ಭಾಷಣವು ಮುದ್ರಣಮಾಡಿದ 134 ಪುಟಗಳುಳ್ಳದಾಗಿದ್ದಿತು. "ಸ್ವರಾಜ್ಯವು ನಿಮ್ಮ ಕೈಯಲ್ಲಿದೆ. ದೇಶಹಿತಾರ್ಥಕ್ಕಾಗಿ ಪ್ರಾಣಕೊಡಲು ಸಿದ್ಧನಿರುತ್ತೇನೆಂದು ನಿಮ್ಮಲ್ಲಿಯ ಪ್ರತಿಯೊಬ್ಬನೂ ನಿರ್ಧರಿಸಿದುದಾದರೆ ಈ ದಿವಸವೇ ಸ್ವರಾಜ್ಯವನ್ನು ಪಡಿಯಬಹುದು" ಎಂಬುದು ಅವರ ಭಾಷಣದ ಮುಖ್ಯಸಾರವು.

ಮೈಸೂರು ರೆಪ್ರಸೆಂಟೇಟಿವ್ ಅಸೆಂಬ್ಲಿಗೂ, ಲೆಜಿಸ್ಲೇಟಿವ್ ಕೌನ್ಸಿಲ್‌ಗೂ, ಮೆಂಬರುಗಳ ಚುನಾವಣೆ ಕ್ಯಾಲೆಂಡರು.

೧. ಚುನಾವಣೆಮಾಡಲು ಅರ್ಹರಾದ ಓಟರುಗಳ ಪಟ್ಟಿಯನ್ನು ಮೈಸೂರು ಗೆಜೆಟ್ಟಿನಲ್ಲಿ ಛಾಯಿಪ್ ಮಾಡುವುದು. ೮-೧೧-೧೯೨೩

೨. ಓಟರುಗಳ ಅನರ್ಹತೆಯನ್ನು ಕುರಿತು ಆಕ್ಷೇಪಣೆ; ಬಿಟ್ಟುಹೋಗಿರುವ ಅರ್ಹರಾದವರ ಹೆಸರುಗಳನ್ನು ಪಟ್ಟಿಯನ್ನು ಸೇರಿಸಲು ಅರ್ಜಿ-ದಾಖಲ್ಮಾಡುವುದು. ೨೫-೧೧-೧೯೨೩ರ ಒಳಗಾಗಿ.

೩. ಮೇಲೆ ೨ನೇ ಪ್ಯಾರಾದಲ್ಲಿ ಕಂಡವರು ಅಪೀಲ್ ಮಾಡುವದಾದರೆ ೧೮-೧೨-೧೯೨೩ರ ಒಳಗಾಗಿ.

೪. ಅರ್ಹತೆಯುಳ್ಳವರನ್ನು ಸೇರಿಸುವ ಅಥವಾ ಅನರ್ಹತೆಯುಳ್ಳವರ ಹೆಸರುಗಳನ್ನು ವಜಾಮಾಡುವ ಆಡೇ ಪಟ್ಟಿ ಛಾಯಿಪ್ ಆಗುವುದು. ೧೬-೧-೨೪ಕ್ಕೆ ಮುಂಚೆ.

೫. ಮೆಂಬರುಗಳಾಗಲು ಉಮೇದುವಾರರಾಗಿ ನಿಲ್ಲುವವರಿಂದ ಬರತಕ್ಕ ಅರ್ಜಿಗಳು. ೨೬-೧-೨೪ ರೊಳಗಾಗಿ.

೬. ಮೆಂಬರುಗಳಾಗಲು ಉಮೇದುವಾರರ ಹೆಸರನ್ನು ಪಬ್ಲಿಷ್ ಮಾಡುವುದು. ೩೦-೧-೧೯೨೪.

೭. ರೆಪ್ರಸೆಂಟೇಟಿವ್ ಅಸೆಂಬ್ಲಿಗೂ ಲೆಜಿಸ್ಲೇಟಿವ್ ಕೌನ್ಸಿಲ್‌ಗೂ ಮೆಂಬರುಗಳ ಚುನಾವಣೆ. ೧೫-೨-೧೯೨೪.

೮. ಓಟು ತೆಗೆಯುವ ಅಧೀಸರುಗಳು ಓಟಿನ ಫಲಿತಾಂಶವನ್ನು ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರುಗಳಿಗೂ ಪ್ರೆಸಿಡೆಂಟರಿಗೂ ತಿಳಿಸುವುದು. ೧೮-೨-೨೪ಕ್ಕೆ ಮುಂಚೆ.

೯. ಓಟಿನ ಫಲಿತಾಂಶವನ್ನು ಗೆಜೆಟ್ಟಿನಲ್ಲಿ ಛಾಯಿಪ್ ಮಾಡಲು ಡೆಪ್ಯುಟಿ ಕಮೀಷನರುಗಳೂ ಪ್ರೆಸಿಡೆಂಟರುಗಳೂ ಸರ್ಕಾರಕ್ಕೆ ತಿಳಿಸುವುದು. ೨೦-೨-೨೪ಕ್ಕೆ ಮುಂಚೆ.

೧೦. ಓಟಿನ ಫಲಿತಾಂಶವು ಗೆಜೆಟ್ಟಿನಲ್ಲಿ ಪ್ರಕಟವಾಗುವುದು. ೨೧-೨-೨೪.

೧೧. ಅಸೆಂಬ್ಲಿ ಚುನಾವಣೆಗೆ ವಿರೋಧವಾಗಿ ಡೆಪ್ಯುಟಿ ಕಮೀಷನರುಗಳಿಗೆ ಅರ್ಜಿ ಹಾಕಿಕೊಳ್ಳುವುದು. ೨೧-೨-೨೪ಕ್ಕೆ ಮುಂಚೆ.

೧೨. ಲೆಜಿಸ್ಲೇಟಿವ್ ಕೌನ್ಸಿಲ್ ಚುನಾವಣೆಗೆ ವಿರೋಧವಾಗಿ ಡಿಸ್ಟ್ರಿಕ್ಟ್ ಜಡ್ಜಿಯವರಿಗೆ ಅರ್ಜಿ ಹಾಕಿಕೊಳ್ಳುವುದು. ೨೫-೨-೨೪ಕ್ಕೆ ಮುಂಚೆ.

೧೩. ಡೆಪ್ಯುಟಿ ಕಮೀಷನರುಗಳು ತಕರಾರು ಅರ್ಜಿಗಳನ್ನು ಫೈಸಲ್ಮಾಡುವುದು. ೪-೩-೧೯೨೪ಕ್ಕೆ ಮುಂಚೆ.

೧೪. ಡಿಸ್ಟ್ರಿಕ್ಟ್ ಜಡ್ಜಿಗಳು ತಕರಾರು ಅರ್ಜಿಗಳನ್ನು ಫೈಸಲ್ಮಾಡುವುದು. ೬-೩-೨೪ಕ್ಕೆ ಮುಂಚೆ.

೧೫. ಸಾಧ್ಯವಿರುವ ಸಂದರ್ಭಗಳಲ್ಲಿ ಸರ್ಕಾರಕ್ಕೆ ಅಪೀಲ್ ದಾಖಲ್. ೬-೩-೨೪ಕ್ಕೆ ಮುಂಚೆ.

೧೬. ಚುನಾವಣೆಯ ಆಖೈರು ಫಲಿತಾಂಶವು ಪ್ರಕಟವಾಗುವುದು ಮತ್ತು ಮೆಂಬರುಗಳು ಮೀಟಿಂಗಿಗೆ ಬರಲು ನೋಟೀಸ್. ೧೪-೩-೨೪ಕ್ಕೆ ಮುಂಚೆ.

೧೭. ಪ್ರಜಾಪ್ರತಿನಿಧಿಸಭೆಯ ಮೀಟಿಂಗ್. ೨೧-೩-೨೪.

೧೮. ಲೆಜಿಸ್ಲೇಟಿವ್ ಕೌನ್ಸಿಲ್ ಮೀಟಿಂಗ್. ೨-೪-೨೪.

ಸ್ವದೇಶದ ವೃತ್ತಾಂತಗಳು.

ಚೀಫ್ ಸೆಕ್ರೆಟರಿಯವರಾದ ಮಿ|| ಮೆಥ್ಯೂ ರವರು ಕ್ರಿಸ್ತಮಸ್ ಹಬ್ಬದ ಜತೆಗೆ ತಾ|| ೨೭ರಿಂದ 6 ದಿನಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುತ್ತಾರೆ.

ರಾಜಧಾನಿಯಲ್ಲಿ ಹಿಮವು ಬೀಳುವುದು ಕಡಿಮೆಯಾಗಿ ಶಕೆಯು ಹೆಚ್ಚುತ್ತಿದೆ. ಪ್ಲೇಗು ರೋಗವು ಶಾಂತವಾಗಿರುವುದಾದರೂ ಇನ್‌ಫ್ಲುಇಂಜಾ ರೋಗವು ವ್ಯಾಪ್ತವಾಗಿ ಜನರನ್ನು ಬಹಳವಾಗಿ ಪೀಡಿಸುತ್ತಿದೆ.

ಎರಡನೆ ತರಗತಿ ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳಾದ ಮ|| ಎಂ. ರಾಮರಾಯರು ಕ್ಲೋಸ್‌ಪೇಟೆಯಿಂದ ಬೆಂಗಳೂರಿಗೂ ಮಿ|| ಇ. ಎಚ್. ಫಾರ್ಸ್ಟರವರು ಬೆಂಗಳೂರಿಂದ ಕ್ಲೋಸ್‌ಪೇಟೆಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಬೊಂಬಾಯಿಗೆ ಚಿತ್ತೈಸಿರುವ ಶ್ರೀಮದ್ಯುವರಾಜರವರೂ ಮಹಾಮಾತೃಶ್ರೀ ವಾಣೀವಿಲಾಸಸನ್ನಿಧಿ ಸಿ. ಐ. ಯವರೂ ಈ ಜನವರಿ ತಾ|| 7 ರಲ್ಲಿ ನಡಿಯುವ ಕೈ|| ಚಾಮರಾಜ ಒಡೆಯರವರ ಎಡೆಕಟ್ಟಲೆಗಾಗಿ ತಾ|| 6 ರಲ್ಲಿ ರಾಜಧಾನಿಗೆ ದಯಮಾಡಿಸುವರು.

ಬೆಂಗಳೂರು ಪ್ರೆಸ್ಸಿನವರು 1924 ನೆ ಇಸವಿಯ ಡೈರಿಯನ್ನೂ ಕ್ಯಾಲಂಡರನ್ನೂ ವಿಶೇಷ ವಿಷಯಗಳಿಂದ ಬಹಳ ಅಂದವಾಗಿ ಮುದ್ರಣಮಾಡಿ ಕಳುಹಿಸಿಕೊಟ್ಟಿರುವ ಪ್ರತಿಗಳನ್ನು ನಾವು ವಿಶ್ವಾಸದಿಂದ ಸ್ವೀಕರಿಸಿರುವೆವು. ಇವು ಎಲ್ಲರಿಂದಲೂ ಸಂಗ್ರಹಿಸಲ್ಪಡತಕ್ಕುವಾಗಿವೆ.

ಒಂದನೆಯ ತರಗತಿಯ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜಿಯವರಾಗಿದ್ದ ಬ್ಯಾರಿಸ್ಟರ್ ಮ|| ಬಿ. ನಾಗಪ್ಪನವರು ಗೌರ್ನಮೆಂಟ್ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟಿರುವ ಪ್ರಯುಕ್ತ ಡಿ|| ಜಡ್ಜರುಗಳಾದ ಮ|| ಕೆ. ರಾಮಸ್ವಾಮಯ್ಯಂಗಾರರು 2ನೆ ತ|| ಇಂದ 1ನೆ ತರಗತಿಗೂ ಮ|| ಜಿ. ಶ್ರೀನಿವಾಸಯ್ಯರ್ ರವರು 3ನೆ ತ|| ಇಂದ 2ನೆ ತರಗತಿಗೂ ಸಬ್‌ಸ್ಟೇಟಂ ಆಗಿ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಮೈಸೂರು ಸೀಮೆಯಲ್ಲಿ ವೃತ್ತಪತ್ರಿಕಾ ಸಂಪಾದಕೋದ್ಯೋಗವನ್ನುತ್ತಮಗೊಳಿಸಿ ಅದರ ಗೌರವವನ್ನು ಕಾಪಾಡಿಕೊಂಡು ಬರುವುದು, ಪತ್ರಿಕೆಗಳ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವುದು, ವೃತ್ತಪತ್ರಿಕಾ ಸ್ವಾತಂತ್ರ್ಯವನ್ನು ಪಡೆಯುವುದು, ಸಂಪಾದಕರುಗಳಲ್ಲಿ ಪರಸ್ಪರ ಮೈತ್ರಿಭಾವವು ಹೆಚ್ಚಿ ದೇಶಾಭ್ಯುದಯಕ್ಕಾಗಿ ಪಾಟುಪಡುವುದು ಇತ್ಯಾದಿ ವಿಷಯಗಳನ್ನು ಪರ್ಯಾಲೋಚಿಸಿ ಸಾಧಿಸುವ ಬಗೆಗೆ ಸಂಪಾದಕರ ಸಂಘವೊಂದನ್ನು ಬೆಂಗಳೂರಲ್ಲಿ ಸ್ಥಾಪಿಸುವ ಪ್ರಯತ್ನವು ನಡೆದಿರುವುದು.

ರಾಜಧಾನಿಯ ನೂರಡಿ ರೋಡಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಅರಮನೆಯ ಆಫೀಸುಗಳ ಕಟ್ಟಡದ ಮುಂಭಾಗದಲ್ಲಿ ಶವಗಳು ತೆಗೆದುಕೊಂಡು ಹೋಗಲ್ಪಡುವುದು ತಪ್ಪಿಸಲ್ಪಟ್ಟು ಸರದಾರ್ ಗೋಪಾಲಕೃಷ್ಣ ಅರಸಿನವರ ಲಾಯದ ಪಕ್ಕದಲ್ಲಿ ಹೊಸದಾಗಿ ಒಂದು ರಸ್ತೆಯು ಹಾಕಲ್ಪಟ್ಟು ಆ ಮಾರ್ಗವಾಗಿ ತೆಗೆದುಕೊಂಡು ಹೋಗಲ್ಪಡುವಂತೆ ಏರ್ಪಡಿಸುವ ಯೋಚನೆಯಿಂದ ಶ್ರೀಮನ್ಮಹಾರಾಜರವರು ಪ್ರೈವೆಟ್ ಸೆಕ್ರೆಟರಿಯವರೊಡನೆ ನೆನ್ನೆಯದಿನ ಆ ಭಾಗದಲ್ಲಿ ಸಂಚರಿಸಿ ಪರಾಂಬರಿಸಿಕೊಂಡು ಬಂದುದಾಗಿ ತಿಳಿಯಬರುತ್ತದೆ.

ಭರತಖಂಡದ ವೃತ್ತಾಂತಗಳು.

ಬೊಂಬಾಯಾಧಿಪತ್ಯದ ಹಿಂದೂಶುದ್ಧಿ ಸಭೆಯವರು ಆನಂದ ಮತ್ತು ವಾರ್ಗಳಾ ಗ್ರಾಮಗಳಲ್ಲಿ 61 ಜನ ಕ್ರೈಸ್ತರನ್ನೂ ಮಹಮ್ಮದೀಯರನ್ನೂ ಶುದ್ಧಿಮಾಡಿ ಹಿಂದೂಮತಕ್ಕೆ ತೆಗೆದುಕೊಂಡರು.

ತಿರುಚನಾಪಳ್ಳಿಯ ಡಿಸ್ಟ್ರಿಕ್ಟು ಬೋರ್ಡ್ [illegible] ಪ್ರೆಸಿಡೆಂಟರಾದ ಸರ್ ಟಿ. ದೇಶಿಕಾಚಾರ್ಯರ [illegible] ಕಳೆದ ಭಾನುವಾರದ ದಿವಸ ಸೇರಿದ್ದು ಸರ್ [illegible]

ಪ್ರೆಸಿಡೆಂಟ್ ಉದ್ಯೋಗದಿಂದ ನಿವೃತ್ತರಾದಮೇಲೆ ಬೋರ್ಡು ಮೆಂಬರುಗಳಲ್ಲೊಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಿ ಗೊತ್ತು ಮಾಡಿಕೊಳ್ಳುವಂತೆ ಅಪ್ಪಣೆಮಾಡಬೇಕಲ್ಲದೆ ಸರ್ಕಾರದವರೇ ಯಾರನ್ನೂ ನಿಯಮಿಸದಂತೆ ಪ್ರಾರ್ಥಿಸಿಕೊಳ್ಳಬೇಕಾಗಿ ನಿರ್ಧರಿಸಿದರು.

ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನ ಪಂಡಿತರಾದ ದೇವಶೇನರ ಹೆಂಡತಿಯು ಒಂದು ರಾತ್ರೆ ದೇಹಾಲಸ್ಯಕ್ಕಾಗಿ ಔಷಧವನ್ನು ಸೇವಿಸಿದಮೇಲೆ ಮೂರ್ಛಿತಳಾಗಲು ಗಂಡನು ಕೂಡಲೆ ಹೊರಗೆಹೋಗಿ ಡಾ|| ಗುರುಸ್ವಾಮಿಯವರನ್ನು ಕರೆದುಕೊಂಡುಬಂದು ನೋಡುವಲ್ಲಿ ಆಕೆಯು ಮೃತಳಾಗಿದ್ದಳು. ಆ ಕೂಡಲೆ ಆಸ್ಪತ್ರೆಗೆ ಶವವು ಸಾಗಿಸಲ್ಪಟ್ಟು ಪರೀಕ್ಷಿಸಲ್ಪಟ್ಟುದಲ್ಲದೆ ಆಕೆಯು ಸೇವಿಸಿದ ಔಷಧವು ಕೆಮಿಕಲ್ ಎಕ್ಸಾಮಿನರ ಪರೀಕ್ಷೆಗಾಗಿ ಕಳುಹಲ್ಪಟ್ಟಿತು.

ಲಾಹೂರಿನಲ್ಲಿ ವಕೀಲಿಯನ್ನು ಮಾಡಿಕೊಂಡಿರುವ ವರಯಂಸಿಂಗ್ ಎಂಬುವವನು ತನ್ನ ಮನೆಗೆಬಂದು ತನ್ನ ಗಂಡನ ಮೇಲೆ ಒಂದು ವಾರಂಟನ್ನು ತೆಗೆದುಕೊಂಡು ಬಂದಿದ್ದೇನೆಂದು ಹೇಳಿ ತನ್ನನ್ನು ದುರ್ಭಾಷೆಯಿಂದ ನಿಂದಿಸಿ ತನ್ನನ್ನು ಕೆಳಕ್ಕೆ ಕೆಡವಿದನೆಂದು ಫಿಷರ್ ಎಂಬ ಐರೋಪ್ಯನ ಹೆಂಡತಿಯು ಆ ಸಿಂಗನಮೇಲೆ ಐರೋಪ್ಯ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದಿಮಾಡಿರಲು ಆ ವಕೀಲನು ಬೇರೆ ಕೋರ್ಟಿಗೆ ವಿಚಾರಣೆಗಾಗಿ ವರ್ಗಮಾಡಿಸಿಕೊಂಡನು.

ಮದ್ರಾಸಿನ ರಾಯಪುರದಲ್ಲಿ ಪಿಶಾಚವನ್ನು ಬಿಡಿಸತಕ್ಕ ಮಂತ್ರಗಾರನಾದ ಪರ್ಸಿ ನಾಬಿ ಎಂಬುವವನು ಕಳೆದ ವಾರ ಒಂದು ದಿನದ ರಾತ್ರಿ ಪಿಶಾಚಗ್ರಸ್ತರಾದವರನ್ನು ಸಮುದ್ರತೀರಕ್ಕೆ ಕರೆದುಕೊಂಡುಹೋಗಿ ಅವರನ್ನು ನೀರಿನ ಸಮೀಪದಲ್ಲಿ ಕುಳ್ಳಿರಿಸಿ ತಾನು ನೀರಿನೊಳಗಿಳಿದು ಕಣ್ಣುಗಳನ್ನು ಮುಚ್ಚಿಕೊಂಡು ಪಿಶಾಚೋಚ್ಚಾಟನೆಗೆ ಮಂತ್ರವನ್ನು ಹೇಳುತ್ತಿರುವಾಗ್ಗೆ ದೊಡ್ಡ ಅಲೆಯು ಒಂದು ಅವನನ್ನು ಕೊಚ್ಚಿಕೊಂಡು ಹೋಗಿ ನೀರಿನಲ್ಲಿ ಮುಳಿಗಿಸಿಬಿಟ್ಟಿತು. ದಡದಲ್ಲಿದ್ದವರು ಕೂಡಲೆ ಓಡಿಹೋಗಿ ನಡೆದ ವಿದ್ಯಮಾನವನ್ನು ಪೋಲೀಸರಿಗೆ ತಿಳುಹಿದರು.

ಕಾಶ್ಮೀರ ಮಹಾರಾಜರವರು ಈಗ ಕಲಕತ್ತಾಕ್ಕೆ ಹೋಗಿರುವರು. ಅಲ್ಲಿ ಅವರು ವೈಸ್‌ರಾಯರನ್ನು ಕಂಡು ತಮ್ಮ ರಾಜ್ಯಕಾರ್ಯನಿರ್ವಹಣದಲ್ಲಿ ಸಾಹಾಯ್ಯಮಾಡಲು ಭರತಖಂಡದ ಪ್ರಭುತ್ವದವರಿಂದ ನಿಯಮಿಸಲ್ಪಟ್ಟಿರುವ ಕೌನ್ಸಿಲಿನ ಸಭಾಸ್ತಾರರ ಅನನುಭವ ಇತ್ಯಾದಿ ನ್ಯೂನತೆಯಿಂದ ರಾಜ್ಯಾಡಳಿತವು ಜನರಂಜಕವಾಗಿ ನಡೆಯದೆ ಅಪಪ್ರಥೆಗೆ ಗುರಿಯಾಗಿರುವುದೆಂದು ಬಿನ್ನೈಸಿಕೊಂಡು ಈಗಿರತಕ್ಕ ಸಭಾಸ್ತಾರರ ಉದ್ಯೋಗದವಧಿಯು ಮುಗಿದಕೂಡಲೆ ರಾಜನೀತಿವಿಶಾರದರೂ, ಲೋಕಾನುಭವಿಗಳೂ, ನಿಸ್ಪೃಹರೂ ಕಾರ್ಯದಕ್ಷರೂ ಆದವರನ್ನು ನಿಯಮಿಸಿಕೊಳ್ಳಲು ಅನುಜ್ಞೆಯನ್ನು ಕೊಡಬೇಕೆಂದು ಕೇಳಿಕೊಳ್ಳುವವರಾಗಿರುವರೆಂದು ತಿಳಿಯಬರುತ್ತದೆ.

ತಿರುಚನಾಪಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟ ಒಂದು ಸೇತುವೆಯನ್ನು ಕಟ್ಟಲು ಕಂಟ್ರಾಕ್ಟನ್ನು ತೆಗೆದುಕೊಂಡಿದ್ದ ಅಯ್ಯಾಸಾಮಿಪಿಳ್ಳೆ ಎಂಬುವವನು ತಾನು ಮಾಡಿದ ಕೆಲಸದ ವಿಚಾರದಲ್ಲಿ ಡಿ|| ಬೋರ್ಡು ಮೆಂಬರಾದ ದೇವಶಿಖಾಮಣಿಯವರು ಅವಮಾನಕರವಾದ ಬರವಣಿಗೆಯನ್ನು ಬರೆದಿರುತ್ತಾರೆಂಬುದರಮೇಲೆ 500 ರೂ. ಪರಿಹಾರದ್ರವ್ಯವನ್ನು ಕೊಡಿಸಬೇಕೆಂದು ಸಬ್‌ಕೋರ್ಟಿನಲ್ಲಿ ವಿವಾದವನ್ನು ಮಾಡಿ ಡಿಕ್ರಿಯನ್ನು ಪಡೆದುಕೊಂಡಿರುತ್ತಾನೆ. ವಾದಿಯು ಮಾಡಿದ ಕೆಲಸದವಿಚಾರದಲ್ಲಿ ತನಗೆ ವಿಶ್ವಸನೀಯವಾಗಿ ತಿಳಿದುಬಂದ ಸಂಗತಿಗಳಮೇಲೆ ಆರೀತಿ ಅಭಿಪ್ರಾಯಪಟ್ಟಿರುತ್ತೇನಲ್ಲದೆ ಅಪಮಾನಮಾಡಬೇಕೆಂದಲ್ಲವೆಂದು ಪ್ರತಿವಾದಿ ಹೇಳಿದನಾದರೂ ಅವನ ಮೇಲೆ ಡಿಕ್ರಿ ಕೊಡಲ್ಪಟ್ಟಿತು.

ಕಲಕತ್ತಾದ ಒಂದು ಆಂಗ್ಲಮಿಷನರಿ ಸಂಘದವರು ಇಬ್ಬರು ಬ್ರಾಹ್ಮಣ ಹುಡುಗಿಯರನ್ನು ಅವರ ತಾಯಿಯರ ಸಮೇತ ವಶಮಾಡಿಕೊಂಡು ರಹಸ್ಯವಾಗಿಟ್ಟುಕೊಂಡಿರುವುದರ ಮೇಲೆ ಹಿಂದೂಗಳು ಕ್ಷುಬ್ಧರಾಗಿ ಒಂದುಸಭೆಯನ್ನು ಕೂಡಿಸಿ ಮಿಷನರಿಗಳ ವರ್ತನವನ್ನು ಖಂಡಿಸಿ ಆ ಹುಡುಗಿಯರನ್ನೂ ಅವರ ತಾಯಿಯರನ್ನೂ ಮಿಷನರಿಗಳ ಸೆರೆಯಿಂದ ಬಿಡಿಸಿಕೊಳ್ಳಬೇಕೆಂದು ನಿರ್ಧಾರವನ್ನು ಮಾಡಿದರು. ಮತ್ತು ಬಿಹಾರಿನ ಸಾಧು ಸಭಾ ಸೆಕ್ರೆಟರಿಯವರಾದ ಸರ್ ಜಗದೀಶ್ವರಾನಂದ ಪರಿವ್ರಾಜಕರವರು ಆ ಹೆಣ್ಣುಮಕ್ಕಳ ಬಿಡುಗಡೆಗಾಗಿ ತಮ್ಮ ಪ್ರಾಣವನ್ನಾದರೂ ಬಲಿಕೊಡಲು ಸಿದ್ಧನಾಗಿರುತ್ತೇನೆಂದು ತಿಳಿಸಿದರು. ಈ ವಿಚಾರವು ಪರಿಷ್ಕರಿಸಲ್ಪಡುವುದಕ್ಕಾಗಿ ಬಂಗಾಳಾ ಸರ್ಕಾರದವರಿಗೆ ತಂತಿಯ ಮೂಲಕ ತಿಳುಹಲ್ಪಟ್ಟು ಪರಿಣಾಮವು ನಿರೀಕ್ಷಿಸಲ್ಪಟ್ಟಿದೆ.

ಶಿವಕರ್ ಎಂಬಾತನು ಗಜಧರನೆಂಬುವವನಿಗೆ ಕೊಡಬೇಕಾಗಿದ್ದ 82 ರೂಪಾಯಿಗಳಿಗಾಗಿ 50 ರೂಪಾಯಿಗೊಂದು 32 ರೂ. ಗೆ ಮತ್ತೊಂದು ಪ್ರೋನೋಟುಗಳನ್ನು ಬರೆದುಕೊಟ್ಟು ಅವುಗಳಿಗೆ ತನ್ನ ಹೆಬ್ಬೆಟ್ಟಿನ ಗುರ್ತನ್ನು ಹಾಕಿದ್ದನು. ಗಜಧರನು ಈ ಹಣವನ್ನು ಬರಮಾಡಿಕೊಳ್ಳಲು ಸ್ಮಾಲ್ ಕಾಜ್ ಕೋರ್ಟಿನಲ್ಲಿ ಬಡ್ಡಿ ಮತ್ತು ಲಾಯರು ಫೀ ಸೇರಿ 130 ರೂ. ಗೆ ದಾವಾಮಾಡಿದನು. ಪ್ರತಿವಾದಿಯು ವಿಚಾರಣೆಯ ಕಾಲದಲ್ಲಿ 32 ರೂ. ನ ಪತ್ರಕ್ಕೆ ಹಾಕಿರುವ ಹೆಬ್ಬೆಟ್ಟಿನ ಗುರ್ತು ತನ್ನದೆಂದೂ 50 ರೂ. ಪತ್ರಕ್ಕೆ ಹಾಕಿರುವ ಹೆಬ್ಬೆಟ್ಟಿನ ಗುರ್ತು ತನ್ನದಾಗಿರದೆ ಫೋರ್ಜರಿ ಮಾಡಲ್ಪಟ್ಟಿರುವುದೆಂದೂ ವಾದಿಸಿದುದರ ಮೇಲೆ ಹೆಬ್ಬೆಟ್ಟಿನ ಗುರ್ತನ್ನು ಪರಿಶೋಧಿಸುವ ಸಮರ್ಥನಿಂದ ವಾದಿ ಪ್ರತಿವಾದಿಗಳ ಸಮಕ್ಷಮ ಒಂದು ಕೊಠಡಿಯಲ್ಲಿ ಪರೀಕ್ಷಿಸಲ್ಪಡುತ್ತಿರುವಾಗ್ಗೆ ಆ ಪರಿಶೋಧಕನು ನಿತಕ್ಕಾಗಿಯೋ ಹೊರಕ್ಕೆಹೋಗಿ ಪುನಃ ಬಂದು ನೋಡುವಷ್ಟರಲ್ಲಿ 50 ರೂ. ನ ಪತ್ರವು ಮಾಯವಾಗಿದ್ದುದನ್ನು ಕಂಡು ಪೋಲೀಸರಿಗೆ ತಿಳುಹಲು ಅವರು ಶಿವಕರನನ್ನು ಹಿಡಿದು ವಿಚಾರಿಸುವಲ್ಲಿ ಆ ಹೆಬ್ಬೆಟ್ಟಿನಗುರ್ತು ತನ್ನದೇ ಆಗಿರುವುದರಿಂದ ತನ್ನ ಮೋಸಕೃತ್ಯವು ಹೊರಬೀಳುತ್ತದೆಂಬ ಶಂಕೆಯಿಂದ ಈರೀತಿ ಮಾಡಿದನೆಂದು ಹೇಳಿದನು.

ವಿದೇಶದ ವೃತ್ತಾಂತಗಳು

ಹೊಸ ಪಾರ್ಲಿಮೆಂಟ್ ಸಭೆಯು ಜನವರಿ ತಾ|| 8ರ ಬದಲು ತಾ|| 15ರಲ್ಲಿ ಚಕ್ರವರ್ತಿ ಸಾರ್ವಭೌಮರವರಿಂದ ಆರಂಭಿಸಲ್ಪಡುವುದು.

ಬ್ರಿಟಿಷ್-ಅಮೇರಿಕಾ ಹೊಗೇಬತ್ತಿ ವ್ಯಾಪಾರ ಕಂಪೆನಿಯವರಿಗೆ 6,74,25,000 ರೂಪಾಯಿಗಳಾದಾಯವು ಒಂದು ನೂರಕ್ಕೆ 24ರಂತೆ ನಫೆಯು ಹಂಚಲ್ಪಟ್ಟಿತು.

ಮದ್ರಾಸ್ ಗೌರ್ನರುದ್ಯೋಗಕ್ಕೆ ಹೊಸದಾಗಿ ನಿಯಮಿತರಾಗಿರುವ ಲಾರ್ಡ್ ಗೋಷೆನ್‌ರವರು ತಮ್ಮಳಿಯಂದರನ್ನೇ ಮಿಲಿಟರಿ ಸೆಕ್ರೆಟರಿಯನ್ನಾಗಿ ನಿಯಮಿಸಿಕೊಂಡಿರುವರು.

ಬಲ್ಕಾನಿನಲ್ಲಿ 24 ಗಂಟೆಯವಧಿಯೊಳಗೆ 12 ವೇಳೆ ಭೂಕಂಪವಾಗಿ ಅನೇಕ ಕಟ್ಟಡಗಳು ಬಿದ್ದುಹೋದುವು, ಮತ್ತು 150 ಜನರು ಸತ್ತು ಸಾವಿರಾರು ಜನರು ಅಪಾಯವನ್ನು ಹೊಂದಿದರು.

ಲಂಡನ್ ನಗರದಲ್ಲಿ ಈ ವರ್ಷ 120,00,00,000 ಜನರು ವಾಹನದಲ್ಲಿ ಸಂಚರಿಸಿರುವರು. ಹಿಂದೆ ಯಾವಾಗಲೂ ಇಷ್ಟೊಂದುಜನ ಸಂಚರಿಸಿರಲಿಲ್ಲವು. 1922ರಲ್ಲಿ 99,40,00,000 ಜನರೂ, 1921ರಲ್ಲಿ 93,20,00,000 ಜನರೂ ಸಂಚರಿಸಿದ್ದರು.

ಚಕ್ರವರ್ತಿ ಸಾರ್ವಭೌಮ ದಂಪತಿಗಳು ಕಳೆದ ಶನಿವಾರದದಿವಸ ಫರಿದ ಕೋಟೆಯ ಮಹಾರಾಣಿಯವರು, ರಾಜಾ ಹರೀಂದ್ರಸಿಂಗ್, ಮಹಾರಾಜ ಕುಮಾರ ಮಜಿತ ಇಂದರ ಸಿಂಗ್ ಇವರುಗಳಿಗೂ ಇವರ ಕೂಡ ಹೋಗಿದ್ದ ಲೇಡಿ ಫಿನ್ನಿಯವರಿಗೂ ದರ್ಶನವನ್ನಿತ್ತು ಸಂಭಾಷಿಸಿ ಕಳುಹಿಸಿಕೊಟ್ಟರು.

ರಷ್ಯಾರಾಜ್ಯದ ಮುಖ್ಯಪಟ್ಟಣವಾದ ಪೆಟ್ರೊಗ್ರಾಡಿನಲ್ಲಿ ಒಣಗಿದ ಹುಲ್ಲಿನಹೊರೆಗಳು ಮಾರ್ಗಗಳಲ್ಲಿರುವ ಸ್ನಾನದಮನೆಗಳ ಬಳಿಯೂ ಬಾವಿಯ ಸಮೀಪದಲ್ಲೂ ಸ್ನಾನಮಾಡಿದವರ ಮೈಯನ್ನೊರಸಿಕೊಳ್ಳಲುಪಯೋಗಿಸಲ್ಪಡುವುದಕ್ಕಾಗಿ ಮಾರಲ್ಪಡುತ್ತಿವೆ. ಒಂದುಹೊರೆ ಹುಲ್ಲಿಗೆ 1 ಕಾಸು ಕ್ರಯವಾಗುತ್ತದೆ. ಜನರು ಅದನ್ನು ಕೊಂಡು ಮೈಯನ್ನು ಒರಸಿ ಬಿಸಾಡಿಬಿಡುವರು.

ಆಸ್ಟ್ರೇಲಿಯಾದಲ್ಲಿ 6 ಹೈಸದ ಕಾರ್ಯಾಲಯದವರು ಕಳುಹಿಸಿಕೊಟ್ಟ ಹಾಲಿನಿಂದ 1 ಟನ್ 10 ಹಂಡ್ರೆಡ್‌ವೇಟ್ 1 ಕ್ವಾರ್ಟರ್ ಮತ್ತು 3 ಪೌಂಡು ತೂಕವುಳ್ಳ ಕೆನೆಯು ತೆಗೆಯಲ್ಪಟ್ಟು ಒಂದು ದೊಡ್ಡ ರೈಲ್ವೆ ಟ್ರಾಲಿ ಬಂಡಿಯಲ್ಲಿ ಒಂದು ದೊಡ್ಡ ಗುಡಾರದ ನೆರಳಿನಲ್ಲಿಡಲ್ಪಟ್ಟು ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಟ್ಟಿತು ಮತ್ತು ಅದನ್ನು ಮಡಗಿದ್ದ ಪೆಟ್ಟಿಗೆಯ ಮೇಲೆ 60 ಪಾಠಶಾಲಾ ಹುಡುಗರು ಕುಳಿತಿರುವಾಗ್ಗೆ ಅದರ ಭಾವಚಿತ್ರವು ತೆಗೆದುಕೊಳ್ಳಲ್ಪಟ್ಟಿತಂತೆ.

ಗ್ರೇಟ್‌ಬ್ರಿಟನ್ನಿನಲ್ಲಿ ಪಶುವರ್ಗಕ್ಕೆ ಮಹಾನರ್ಥವನ್ನುಂಟುಮಾಡುತ್ತಿರುವ ಕಾಲು ಮತ್ತು ಬಾಯಿ ಜ್ವರವು ಸರ್ಕಾರದವರು ಎಷ್ಟು ಪ್ರಯತ್ನಿಸಿದಾಗ್ಗೂ ಶಮನವಾಗದೆ ಇನ್ನೂ ಹೊಸಹೊಸ ಪ್ರದೇಶಗಳಿಗೆ ಹಬ್ಬುತ್ತಿದೆ. ಈ ರೋಗವಾರಂಭವಾದಂದಿನಿಂದ ಈವರೆಗೆ 45,000 ಸಾವಿರ ದನಕರುಗಳೂ 20,000 ಕುರಿ ಟಗರು ಆಡುಗಳೂ, 24,000 ಹಂದಿಗಳೂ ಕೊಲ್ಲಲ್ಪಟ್ಟಿರುವುದರಿಂದ ಅವುಗಳ ಯಜಮಾನರುಗಳಿಗೆ 1,98,75,000 ರೂಪಾಯಿಗಳು ಪರಿಹಾರ ದ್ರವ್ಯವಾಗಿ ಸರ್ಕಾರದಿಂದ ಕೊಡಲ್ಪಟ್ಟಿರುತ್ತವೆ.

ಪ್ರಿನ್ಸ್‌ಆಫ್‌ವೇಲ್ಸ್‌ರವರು ಬ್ರಿಟಿಷ್ ಚಕ್ರಾಧಿಪತ್ಯದ ಕುಷ್ಠರೋಗನಿವಾರಣೀ ಸಂಘದ ಪೋಷಕರಾಗಿರುವರು. ಈ ಸಂಘಾರಂಭ ಸಮಾವೇಶವು ಬರುವ ಜನವರಿಯಲ್ಲಿ ಜರುಗುವುದು. ಭರತಖಂಡದ ಸ್ಟೇಟ್ ಸೆಕ್ರೆಟರಿಯವರೂ ಅಧಿನಿವೇಶಗಳ ಸೆಕ್ರೆಟರಿಗಳೂ ಈ ಸಂಘದ ವೈಸ್‌ಪ್ರೆಸಿಡೆಂಟರುಗಳಾಗಿರುವರು. ಈಗ ಹೊಸದಾಗಿ ಕಂಡುಹಿಡಿಯಲ್ಪಟ್ಟಿರುವ ಚಿಕಿತ್ಸೆಯಿಂದ ನೂರಾರು ಕುಷ್ಠರೋಗಿಗಳು ಗುಣವನ್ನು ಹೊಂದುತ್ತಿದಾರೆ ಮತ್ತು ಇನ್ನು 3 ದಶಕ ಅಂದರೆ 30 ವರ್ಷಗಳಲ್ಲಿ ಈ ರೋಗವನ್ನೇ ನಿರ್ಮೂಲಗೊಳಿಸಬಹುದು ಎಂದು ವೈಕೌಂಟ್ ಚೆಲಮ್ಸ್‌ಫರ್ಡ್‌ರವರು ಹಸ್ತಪತ್ರಿಕೆಗಳ ಮೂಲಕ ಪ್ರಸಿದ್ಧಗೊಳಿಸಿರುತ್ತಾರೆ.

ಲಂಡನ್ ನಗರದಲ್ಲಿ ಜರುಗುವ ಬ್ರಿಟಿಷ್ ಸಾಮ್ರಾಜ್ಯ ಮಹಾವಸ್ತುಪ್ರದರ್ಶನದಲ್ಲಿ ಉದ್ಯಾನ ವಿಚಿತ್ರ ವಿನೋದಗಳನ್ನು 7,35,00,000 ರೂ. ಗಳ ವೆಚ್ಚದಿಂದ ನಡೆಸಲು ಮತ್ತು ಅದರಲ್ಲಿ ರೈಲ್ವೆ ಮೋಟಾರು ಮೊದಲಾದ ವಾಹನದೇರ್ಪಾಟಿಗೆ 15,00,000 ರೂ. ಗಳನ್ನೂ, ಜಲಚರಗಳು ಸಮೇತವಾದ ಸರೋವರಗಳೂ, ರಾಜಭವನ ಸೌಂದರ್ಯಪ್ರದರ್ಶನಕ್ಕಾಗಿ 7,60,000 ರೂ. ಗಳನ್ನೂ ಕೃತಕ ಕಲ್ಲಿದ್ದಲಗಣಿಯ ನಿರ್ಮಾಣಕ್ಕಾಗಿ 15,00,000 ರೂ. ಗಳನ್ನೂ ರಸ್ತೆಗಳು ನೀರಿನ ಕೊಳಾಯಿಗಳು ಕಾಲುವೆಗಳು ದೀಪದ ಗ್ಯಾಸು ಇತ್ಯಾದಿಗಳಿಗಾಗಿ 15,00,000 ರೂ. ಗಳನ್ನೂ ಬ್ರಿಟಿಷ್ ದೇಶಕ್ಕೇ ಅಪೂರ್ವತರವಾದ ನೀರಿನ ಕಾರಂಜಿ ಏರ್ಪಾಟಿಗಾಗಿ 1,50,000 ರೂ. ಗಳನ್ನೂ ವೆಚ್ಚಮಾಡಲು ಗೊತ್ತಾಗಿರುವುದು. ಈ ವಿನೋದಗಳಲ್ಲದೆ ಸಮುದ್ರದಂಡೆಯಲ್ಲಿ ಮುತ್ತುಗಳು ಸ್ಪಂಜು ಮತ್ತು ಸಮುದ್ರದೊಳಗೆ ಮುಳಿಗಿ ಹೋಗಿರುವ ನಿಧಿ ಇವುಗಳನ್ನು ಜನರು ಸಮುದ್ರದೊಳಗೆ ಮುಳಿಗಿ ಮೇಲಕ್ಕೆ ತರುವುದು ತೋರಿಸಲ್ಪಡುವುದು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ನ್ಯಾಯವಿಧಾಯಕಸಭೆಯ ಮೆಂಬರ ಚುನಾವಣೆ.

ಮೈಸೂರು ನ್ಯಾಯವಿಧಾಯಕಸಭೆಯ ಮೆಂಬರು ಚುನಾವಣೆಯು ಬರುವ ಫೆಬ್ರವರಿ 15ನೇ ತಾರೀಖಿನದಿವಸ ಜರಗುವುದು ಸರಿಯಷ್ಟೆ. ಈ ಸಭೆಗೆ ಮೆಂಬರಾಗಲು ಶಿವಮೊಗ್ಗ ಡಿಸ್ಟ್ರಿಕ್ಟಿನ ಪರವಾಗಿ ಮ|| ರಾ|| ಪನಸವಾಡಿ ಬಸವಪ್ಪನವರು ಉಮೇದುವಾರರಾಗಿ ನಿಂತಿದ್ದಾರೆ. ಇವರು ಅನೇಕವರ್ಷಗಳಿಂದ ತಾಲ್ಲೂಕುಬೋರ್ಡು, ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಸೆಂಟೇಟಿವ್ ಅಸೆಂಬ್ಲಿ ಮುಂತಾದ ಸಭೆಗಳಲ್ಲಿ ಮೆಂಬರಾಗಿದ್ದು ಕೇವಲ ಅನುಭವಶಾಲಿಗಳಾಗಿರುವರಲ್ಲದೆ ಕಳೆದ ನ್ಯಾಯವಿಧಾಯಕ ಸಭೆಯಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಪರವಾಗಿ ಮೆಂಬರಾಗಿದ್ದು ದೇಶಸೇವೆಯನ್ನು ಸಮರ್ಥತೆಯಿಂದ ಮಾಡಿದವರಾಗಿರುತ್ತಾರೆ. ಪ್ರಜಾಸಮೂಹದಲ್ಲಿ ಇವರಿಗಿರುವ ಬಳಕೆಯು ಅದ್ವಿತೀಯವಾದುದಾಗಿರುತ್ತೆ. ಇವರು ಕೇವಲ ಉತ್ಸಾಹಿಗಳೂ ಅನುಭವಶಾಲಿಗಳೂ, ಸಮರ್ಥರೂ ಆಗಿರುವುದರಿಂದ ನ್ಯಾಯವಿಧಾಯಕಸಭೆಯ ಮೆಂಬರಾಗಲು ಇವರಿಗೆ ಶಿವಮೊಗ್ಗ ಡಿಸ್ಟ್ರಿಕ್ಟಿನ ಸಕಲ ಓಟರುಗಳೂ ತಮ್ಮ ಓಟನ್ನು ಕೊಟ್ಟು ಪ್ರೋತ್ಸಾಹಿಸುವರೆಂದು ನಂಬಿದ್ದೇನೆ.

ಎಚ್. ಲಿಂಗಪ್ಪ, ಅಡ್ವೋಕೇಟ್, ಶಿವಮೊಗ್ಗ.

ಹಾವೇರಿ.

ಈ ನಮ್ಮ ಗ್ರಾಮಕ್ಕೆ ಸುಮಾರು ಒಂದು ಒಂದೂವರೆ ತಿಂಗಳಗಳ ಕೆಳಗೆ ಹಲಗೇರಿ ಹಾಲಸಿದ್ಧೇಶ್ವರ ನಾಟಕ ಮಂಡಳಿಯವರು ಬಂದು ತಮ್ಮ ಲೋಕಪ್ರಿಯವಾದ ನಾಟಕವನ್ನು ಆಡಿ ತೋರಿಸಿ ಬಹು ಜನರ ಪ್ರೀತಿಗೆ ಪಾತ್ರರಾದರು. ಈ ಕಂಪನಿಯ ಮಾಲಕರಾದ ಜಟ್ಟೆಪ್ಪನವರು ಶಾಂತಸ್ವಭಾವದವರೂ ಉದಾರಿಗಳೂ ಆಗಿರುವರು. ಇವರು ಇಲ್ಲಿ ಸ್ಥಾಪನವಾಗಿರುವ ಶ್ರೀ ಸಿದ್ಧಲಿಂಗೇಶ್ವರ ಲೈಬ್ರರಿಗೆ ತಾ|| 13-11-23ನೇ ಮಂಗಳವಾರ ದಿವಸ ಆಡಿದ “ಶ್ರೀಕೃಷ್ಣಲೀಲೆ” ಎಂಬ ಆಖ್ಯಾನದ ಉತ್ಪನ್ನವನ್ನು (ಖರ್ಚು ಹೋಗಲಾಗಿ ಉಳಿದ 101 ರೂ.) ಕೊಟ್ಟರು. ಈ ಲೈಬ್ರರಿಯ ಕಾಯಂ ಫಂಡು ಚನ್ನಾಗಿದ್ದು, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವದು. ಮೇಲ್ಕಂಡ ನಾಟಕ ಮಂಡಳಿಯ ಭಕ್ತಿ ರಸಪ್ರಧಾನಗಳಾದ ಆಖ್ಯಾನವನ್ನು ನೋಡಿ ಇಲ್ಲಿಯ ಮೇಲ್ಕಂಡ ಲೈಬ್ರರಿ ಸಂಘದವರೂ, ವೀರಶೈವ ತರುಣ ಸಂಘದವರೂ ಕಂಪನಿಗೆ ಒಂದೊಂದು ಸುವರ್ಣಪದಕಗಳನ್ನು ಅರ್ಪಿಸಿ ಗೌರವಿಸಿದರು. ಇದೇ ಪ್ರಕಾರ ಕಂಪನಿಯು ದಿನದಿನಕ್ಕೆ ಅಭಿವೃದ್ಧಿಯನ್ನು ಹೊಂದಲೆಂದು ಇಚ್ಛಿಸುತ್ತೇನೆ.

“ಕಾವ್ಯತೀರ್ಥ” ಗುರುಮೂರ್ತಿಶಾಸ್ತ್ರಿ ಹಿರೇಮಠ,
ಪಾಠಶಾಲಾಧ್ಯಾಪಕ ಹಾವೇರಿ.

ಚಿತ್ರದುರ್ಗದ ತಾಲ್ಲೂಕು ಹಿರೇಗುಂಟನೂರು.

ಈ ಗ್ರಾಮಕ್ಕೆ ಭಾದ್ರಪದಮಾಸದ ಲಾಗಾಯಿತು ಶುದ್ಧಾಂಗವಾಗಿ ಮಳೆಬಾರದೆ ಬಹಳ ಜಮೀನ್ ಬೀಳಾಗಿಹೋಯಿತು. ಧಾರಣೆವಾಸಿ ಒಂದಕ್ಕೆ ಎರಡಾಗಿದೆ. ಹೇಗಾದರೂ ಕಷ್ಟದಿಂದ ಜೀವನಮಾಡೋಣವೆಂದರೆ, ಗ್ರಾಮದ ಹವ ಕೆಟ್ಟುಹೋಗಿ ಬಹುಜನ ರೋಗಗ್ರಸ್ತರಾಗಿರುವರಲ್ಲದೆ ಹೋದತಿಂಗಳಲ್ಲಿ 20 ರವರಿವಿಗೂ ಮರಣನಡದಿರುತ್ತೆ. ಹೀಗೆ ಕೆಲಕಾಲ ನಡೆದರೆ ಬಹಳ ನಷ್ಟವಾಗುತ್ತೆ. ಈ ಗ್ರಾಮದ ಪಟೇಲರು ಆಗಿಯೂ ಬಹು ಜನ ಬಡವರಿಗೆ ಕಷ್ಟಕಾಲದಲ್ಲಿ ಉದಾರದಿಂದ ಸಹಾಯಮಾಡಿದವರಾಗಿಯೂ, ಅಮಲ್ದಾರು ಮ|| ಲಿಂಗಣ್ಣಯ್ಯ ಪ್ರೆಸಿಡೆಂಟ್‌ತನದಲ್ಲಿ ಸ್ಥಾಪಿತವಾದ ಸಂಘದ ವೀರಶೈವ ವಿದ್ಯಾರ್ಥಿಫಂಡಿಗೆ 5000 ರೂ. ಧರ್ಮಸಹಾಯಮಾಡಿಯೂ ಚಿಕ್ಕವಯಸ್ಸಿನಲ್ಲಿ ಶಾಂತತೆ ಕ್ಷಮೆ ದಯಾಸರಗುಣಭರಿತರಾಗಿಯೂ ಇದ್ದ ಪಟೇಲ್ ಬಸಪ್ಪನವರು ಇಲ್ಲಿಯ ಹವಾದೋಷಕ್ಕೆ ಶಿಲ್ಕಿ ಪಿತ್ತರೋಗಗ್ರಸ್ತರಾಗಿ ಹೊಳಲ್ಕೆರೆ ತಾಲ್ಲೂಕು ಹುಲೇಮಳಲಿಗೆಹೋಗಿ ಅಲ್ಲಿಯೂ ಗುಣಹೊಂದದೆ 7-12-1923 ನೇ ಶುಕ್ರವಾರ ರಾತ್ರಿ 2 ಘಂಟೆಗೆ ಶಿವಾಧೀನರಾದರೆಂಬ ಸಂಗತಿ ಕೇಳಿ ವಿಷಾದಿಸುತ್ತೇನೆ. ಈ ಪಟೇಲ್ ಬಸಪ್ಪನವರು ತುಂಬಾ ಅನುಕೂಲಸ್ಥರಾಗಿಯೂ ಈ ಗ್ರಾಮದ ಶ್ರೀ ದ್ಯಾಮಲಾಂಬ ಅಮ್ಮನವರ ದೇವಸ್ಥಾನದ ಧರ್ಮದರ್ಶಿಗಳಾಗಿಯೂ ಇದ್ದು ಶ್ರೀ ದೇವತಾ ಕಾರ್ಯಗಳನ್ನು ಬಹಳ ಮುತವರ್ಜಿಯಿಂದ ನಡಿಸಿ ಶ್ರೀ ದೇವತೆಯ ಸಾವಿರಾರುಮನೆ ಭಕ್ತರಮೆಚ್ಚಿಗೆಗೆ ಪಾತ್ರರಾಗಿದ್ದರು. ಇವರ ವಿಯೋಗದುಃಖಕ್ಕೆ ಗುರಿಯಾದ ಕುಟುಂಬಕ್ಕೆ ಶ್ರೀ ಭಗವಂತನು ಸಮಾಧಾನವನ್ನುಂಟುಮಾಡಿ ಕಾಪಾಡಲೆಂದು ಹಾರೈಸುತ್ತೇನೆ. ಗ್ರಾಮದ ಮುಖ್ಯ ಜನರಿಗೆ ಹೀಗೆ ಬಹಳ ತೊಂದರೆಸಂಭವಿಸುವುದರಿಂದ ಇಲ್ಲಿಯ ಸ್ಕೂಲ್ ಕೆಲಸಗಳು ಮೇಲ್ವಿಚಾರಣೆಯಿಲ್ಲದೆ ಸಮರ್ಪಕವಾಗಿ ನಡಿಯುವದಿಲ್ಲ. ಮೇಲ್ಪಟ್ಟಾಫೀಸರು ಆರು ತಿಂಗಳಿಗೊಂದಾವರ್ತಿಯಾದರೂ ನಿಗಾಕೊಟ್ಟರೆ ಇಷ್ಟು ತೀರ ಅಶ್ರದ್ಧೆಯಿಂದ ನಡಿಯುವದಿಲ್ಲ. ಇನ್ನು ಮುಂದೆಯಾದರೂ ಎಜುಕೇಷನ್ ಇಲಾಖೆಯವರು ನಿಗಾ ಇಡುತ್ತಾರಾಗಿ ಪೂರ್ಣನಂಬಿರುತ್ತೇನೆ.

ಚಂದಾದಾರ್.

ಸದ್ಗುಣಾಭರಣಭೂಷಿತರಾದ ಸತ್ಯಧರ್ಮಾಭಿಮಾನಿಗಳ ಶ್ರೀ ಪಾದಪದ್ಮಂಗಳಿಗೆ.

ಮಹನೀಯರೇ,

ಶಿವಕಥಾ ಬಹುಮಾನವೆಂಬದಾಗಿ ಒಬ್ಬರ ಬಹುಮಾನಸಂಗತಿಯನ್ನು ಪ್ರಕಟಗೊಳಿಸುವುದು ಮತ್ತೊಬ್ಬರ ಶಿವಕಥಾಬಹುಮಾನಸಂಗತಿಯನ್ನು ಪ್ರಕಟಗೊಳಿಸದೆ ಉದಾಸೀನಮಾಡುವುದು ನ್ಯಾಯವಲ್ಲ. 1906ನೇ ಇಸವಿಯಲ್ಲಿ ಬೆಂಗಳೂರು ಶ್ರೀಮದ್ವೀರಶೈವ ಮಹಾಸಭೆಯವರ ಗಾರ್ಡನ್ ಪಾರ್ಟಿಯಲ್ಲಿ ಮತ್ತು 1907ನೇ ಇಸವಿ ಸೊಲ್ಲಾಪುರದ ಶ್ರೀಮದ್ವೀರಶೈವ ಮಹಾಸಭೆಯಲ್ಲಿ ಮತ್ತು 1912 ನೇ ಇಸವಿಯಲ್ಲಿ [illegible] ನೆರವೇರಿಸಲ್ಪಟ್ಟ

ಕಾರೋಣೇಶ್ವನ್ ಮಹಾಸಭಾಮಹೋತ್ಸವದಲ್ಲಿ ಮತ್ತು 1915 ನೇ ಇಸವಿಯಲ್ಲಿ ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾಮಿಯವರ ದ್ವಾದಶವರುಷ ಪಟ್ಟಾಭಿಷೇಕಮಹೋತ್ಸವ ಸಮಯದಲ್ಲಿ ಮತ್ತು 1919 ನೇ ಇಸವಿಯಲ್ಲಿ (Cattie show at Harihar) ಇವೇ ಮೊದಲಾದ ಮಹಾಸ್ಥಳಗಳಲ್ಲಿ ಶಿವಕಥೆಗಳನ್ನು ಮಾಡಿದ ಮೈಸೂರು, ಬ್ರಂ|| ಶ್ರೀ|| ವೇ|| ಶಿವಕಥಾಪಂಡಿತ ಬಿರುದಾಂಕಿತರಾದ ಶಿವಯ್ಯಶಾಸ್ತ್ರಿಗಳವರಿಗೆ ಪ್ರಾಪ್ತವಾದ ಬಹುಮಾನಸಂಗತಿಗಳಾವವೂ ಈವರಿವಿಗೂ ಪ್ರಕಟವಾಗಿರುವುದಿಲ್ಲ. ಮತ್ತು 1921 ನೇ ಇಸವಿ ನವಂಬರ್ ತಾ|| 11 ನೇ ಶುಕ್ರವಾರ ಬೆಂಗಳೂರು ಮೆಜೆಸ್ಟಿಕ್ ಥಿಯೇಟರ್ ಬಳಿ ಹಾಕಿದ್ದ ಗುಬ್ಬಿ, ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಕಂಪನಿಯವರ ಧನಲಕ್ಷ್ಮಿಥಿಯೇಟರಿನಲ್ಲಿ ಮ|| ರಾ|| ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ., ಯವರ ಅಧ್ಯಕ್ಷತೆಯಿಂದ ನೆರವೇರಿಸಲ್ಪಟ್ಟ ಶಿವಕಥೆಗಾದ ಬಹುಮಾನಸಂಗತಿಯೂ ಕೂಡ ಇದುವರೆಗೆ ಪ್ರಕಟವಾಗಿರುವುದಿಲ್ಲ. 1923 ನೇ ಇಸವಿ ಡಿಸೆಂಬರ್ ತಾ|| 11 ನೇ ಮಂಗಳವಾರ ಬೆಂಗಳೂರು ಸಿಟಿ ನಗರ್ತರ ಪೇಟೆ ಭಕ್ತಮಂಡಲಿಯವರ ಇಷ್ಟದಂತೆ, ದೊಡ್ಡಬಳ್ಳಾಪುರದ ನವರಸ ಶಿವಕಥಾಪಂಡಿತ ಶಿವದೇವಶಾಸ್ತ್ರಿಗಳಿಗೆ ಮ|| ರಾ|| ಜಿ. ಪರಮಶಿವಯ್ಯ ಬಿ.ಎ., ಎಲ್.ಎಲ್., ಬಿ. ಯವರ ಹಸ್ತದಿಂದ ಶುದ್ಧವಾಣಿ ಶಿವಕಥಾಪಂಡಿತ ಎಂಬ ಪ್ರಶಸ್ತಿಯುಳ್ಳ ರತ್ನಖಚಿತವಾದ ಬಂಗಾರದ ಮೆಡಲನ್ನು ಕೊಡಿಸಿದರೆಂಬ ಸಮಾಚಾರವನ್ನು ನಿಮ್ಮ ಪತ್ರಿಕಾದ್ವಾರ ತಿಳಿದು ತುಂಬಾ ಸಂತೋಷವಾಯಿತು. ಆದರೆ ಶಿವಕಥಾಬಹುಮಾನ ಪ್ರಕಟನಾವಿಷಯಗಳ ಪಕ್ಷಪಾತವು ನಡೆದಿರುವದರಿಂದ ಮನಸ್ಸಿಗೆ ತುಂಬಾ ವ್ಯಸನವುಂಟಾಗಿದೆ. ಈ ವ್ಯಸನವು ನಿವಾರಣೆಯಾಗಬೇಕಾದರೆ ಶಿವಕಥಾಬಹುಮಾನಪ್ರಶಸ್ತಿಗಳನ್ನು ಚನ್ನಾಗಿತಿಳಿದ ತಮ್ಮಂಥಾ ದೊಡ್ಡ ಮನುಷ್ಯರ ತಿಳುವಳಿಕೆಯಿಂದಲೇ ನಿವಾರಣೆಯಾಗಬೇಕಲ್ಲದೆ ಅನ್ಯಥಾ ಆಗಲಾರದೆಂದು ನಂಬಿರುವ,

ಮೈಸೂರು ಸುಪ್ರಜಾಮಿತ್ರಮಂಡಲಿ ಸೇವಕಾನುಸೇವಕನಾದ
ಓರ್ವ ಕಿಂಕರ.

ಕದಡಿ ರಾಜನಿಷ್ಠ ಸಭೆಯು.

ಗದಗ ತಾ|| ಕದಡಿಯಲ್ಲಿ ಶ್ರೀ ರಾಮಪ್ಪ ಗೋಜನೂರ ಇವರ ಅಧ್ಯಕ್ಷತೆಯು ಕೆಳಗೆ ರಾಜನಿಷ್ಠ ಸಭೆಯು ನೆರೆದು ಗಾವರವಾಡ ಹಡಗಲಿ ಹೊಸ್ನಾಪುರ ಕದಡಿ ಗ್ರಾಮಗಳ ಜನರು ಹಾಜರಿದ್ದು ಮುಂದಣ ಠರಾವುಗಳು ಪಾಸುಮಾಡಲ್ಪಟ್ಟವು. (1) ನಾವೆಲ್ಲರೂ ರಾಜನಿಷ್ಠೆಯುಳ್ಳವರಾಗಿ “ಆಂಗ್ಲಪ್ರಭುತ್ವದ ಆಳಿಕೆಯು ಸ್ಥಿರವಾಗಿರಲಿ” ಎಂಬ ಸದಿಚ್ಛೆಯನ್ನು ಈ ಸಭೆಯು ವ್ಯಕ್ತಪಡಿಸುತ್ತದೆ. ಹೋದ ವರ್ಷ ದುಷ್ಕಾಲವಿದ್ದ ಮೂಲಕ ನಮ್ಮ ಗ್ರಾಮದ ಸರಕಾರಿ ಹಸ್ತೆತಹಕೂಪ ಆಗಿರುತ್ತದೆ. ಈ ವರ್ಷವಾದರೂ ಅತಿ ಸ್ವಲ್ಪ ಮಳೆಯಾದದ್ದರಿಂದ ಕೆಲವು ಜಮೀನುಗಳು ಪಡಬಿದ್ದಿರುತ್ತವೆ ಕೆಲವು ಜಮೀನಿನೊಳಗಿನ ಪೀಕು ಒಣಗಲಿಕ್ಕೆ ಹತ್ತಿರುತ್ತವೆ. ಇಂಥ ದುಸ್ಥಿತಿಯಿಂದ ಎಷ್ಟೋ ಬಡಜನರು ಊರುಬಿಟ್ಟು ಉದರ ಪೋಷಣಾರ್ಥವಾಗಿ ಹೋಗಿರುತ್ತಾರೆ. ಕಾರಣ ಹೋದವರ್ಷದ ಹಾಗೂ ಈ ವರ್ಷದ ಸರಕಾರಿ ತರಿಗೆಯನ್ನು ಪೂರಾಮಾಫಮಾಡಬೇಕೆಂದು ಈ ಸಭೆಯು ಸರಕಾರಕ್ಕೆ ವಿನಂತಿಮಾಡಿಕೊಳ್ಳುತ್ತದೆ. (3) ನಮ್ಮ ಗ್ರಾಮ ಹಾಗೂ ಅಜೂಬಾಜೂ ಗ್ರಾಮಗಳ ಶೀಮೆಯಲ್ಲಿ ಉಡಾಳ ದನಗಳ ಮತ್ತು ಚಿಗುರೆಯ ಹಿಂಡುಗಳ ಹಾವಳಿಯು ಹೆಚ್ಚಾಗಿ ಬಿತ್ತಿದ ಯಾವತ್ತು ಪೈರು ತಿಂದು ಬಿಡುತ್ತವೆ. ಇವುಗಳ ಉಪದ್ರವ ಆಗದಂತೆ ಬಡರೈತರನ್ನು ಸಂರಕ್ಷಣೆ ಮಾಡಬೇಕೆಂದು ಈ ಸಭೆಯು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತದೆ. (4) ನಮ್ಮ ಭರತಖಂಡದ ಎಷ್ಟೋ ಜನಾಂಗಗಳಲ್ಲಿ ವಿದ್ಯೆಯಲ್ಲಿ ಹಿಂದುಳಿದ ಜನಾಂಗವೆಂದರೆ ಕುಡ ಒಕ್ಕಲಿಗ ಜಾತಿಯಂದೇ ಹೇಳಬಹುದು. ದಯಾಳು ಸರಕಾರದವರು. ಈ ಜನಾಂಗದ ವಿದ್ಯಾಭಿವೃದ್ಧಿಯನ್ನು ಕುರಿತು ಸುಲಕ್ಷಪೂರೈಸಿ ಈ ಕೆಳಗೆ ಬರೆದ ಸವಲತ್ತುಗಳನ್ನು ಕೊಡಬೇಕು. (ಅ) ಯಾವತ್ತು ಹಾಯ ಸ್ಕೂಲ ಮತ್ತು ಕರ್ನಾಟಕ ಕಾಲೇಜುಗಳಲ್ಲಿ ಕಲಿಯುವ ಈ ಜ್ಯಾತಿ ವಿದ್ಯಾರ್ಥಿಗಳಿಗೆ ಯೋಗ್ಯ ಸ್ಕಾಲರಶಿಪ್ಪು ಕೊಡಬೇಕು. (ಬ) ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ಗ್ರೇಸು ಮಾರ್ಕುಗಳನ್ನು ಕೊಟ್ಟು ಪಾಸುಮಾಡಿಸಬೇಕು. (ಕ) ಈ ಜ್ಯಾತಿಯ ಜನರು ಪ್ರಾಚೀನ ಕಾಲದಲ್ಲಿಯೂ ಹಾಗೂ ಬ್ರಿಟಿಶರ ಆಳಿಕೆಯ ಕಾಲದಲ್ಲಿಯೂ ಸರಕಾರಿ ಸಣ್ಣ ಅಥವಾ ದೊಡ್ಡ ನೌಕರಿಯಲ್ಲಿ ಒಬ್ಬನಾದರೂ ಇರುವದಿಲ್ಲ. ಕಾರಣ ಎಲ್ಲ ಜಾತಿಯವರಿಗಿಂತ ಮೊದಲು ಈ ಜಾತಿಯ ಜನರಿಗೆ ಸರಕಾರಿ ನೌಕರಿಗಳನ್ನು ಕೊಡಬೇಕು. ಈ ಪ್ರಕಾರ ಮಾಡುವದರಿಂದ ಈ ಸಮಾಜದ ಜಾಗ್ರತೆಯುಂಟಾಗುವದು. ಕಾರಣ ಸರಕಾರದವರು ಈ ಹಿಂದುಳಿದ ಜನಾಂಗದ ಬಗ್ಗೆ ವಿಶೇಷ ಗಮನಕೊಡುವರೆಂದು ಈ ಸಭೆಯು ಸರಕಾರಕ್ಕೆ ಬೇಡಿಕೊಳ್ಳುತ್ತದೆ.

ರಾಮಪ್ಪಾ ಶಕರಪ್ಪಾ ಗೋಜನೂರ
ಅಧ್ಯಕ್ಷ
ಸಾ|| ಕದಡಿ

ಬಿ. ಜಿ. ಪಾಟೀಲ ಕದಡಿ,
ಸೆಕ್ರೆಟರಿ
ರಾಜನಿಷ್ಠ ಸಂಘ.

ಯಾಚಕರ ಹಾವಳಿಯನ್ನು ನಿಲ್ಲಿಸುವುದು.

ಪೂರ್ವಕಾಲದಲ್ಲಿ ಕೆಲವರವಿನಹ ಇತರರು ಯಾಚನೆಯನ್ನುಮಾಡುವುದು ಎಂದರೆ ಬಹಳ ಅಗೌರವವಾದ ಕೆಲಸವೆಂದು ತಿಳಿದಿದ್ದರು. ಈಗಲಾದರೊ ಯಾಚನೆಯಷ್ಟು ಸುಖವಾದ ಜೀವನವು ಮತ್ತಾವುದೂ ಇಲ್ಲವೆಂದು ತಿಳಿದು ಎಲ್ಲರೂ ಯಾಚನೆಯನ್ನು ಮಾಡುವವರಾಗಿದ್ದಾರೆ. ಯಾವಸಂದಿಯಲ್ಲಿ ನೋಡಿದರೂ ಭಿಕ್ಷುಕರೇ ಕಾಣಿಸುವರು. ಐದು ವರ್ಷದ ಹುಡುಗನಿಂದ, ಯೌವನಸ್ಥ ವೃದ್ಧರವರೆಗೂ ಯಾಚನೆಗೆ ಹೊರಡುವರು. ಯಾಚನೆಗೆ ಯಾವ ಜನರು ಹೊರಡಬೇಕು ಎಂದು ತಿಳಿದಿದ್ದರೂ ಇವರು ಯಾಚನೆಯನ್ನು ಮಾಡುವುದಕ್ಕೆ ಸೋಮಾರಿತನವೇ ಮುಖ್ಯಕಾರಣ. ಯಾಚನೆಗೆ ಕುರುಡರು, ಕುಂಟರು, ಹೆಳವರು ಇವರೇ ಮೊದಲಾದ ಅಂಗಹೀನರೂ, ವೃದ್ಧರೂ, ಸನ್ಯಾಸಿಗಳೂ ಹೊರಡುವುದು ನ್ಯಾಯವಾಗಿದೆ. ಆದರೆ ಯೌವನಸ್ಥರಾಗಿ ಟೊಣ್ಣರಾಗಿದ್ದರೂ ಯಾಚನೆಗೆ ಬರುತ್ತಾರೆ. ಇಂಥವರಿಗೆ ದಾನಮಾಡುವುದರಿಂದ ಸೋಮಾರಿಗಳಾಗಿಯೂ, ಪ್ರಪಂಚಕ್ಕೆ ಯಾವ ಉಪಕಾರಿಗಳಾಗದೆಯೂ, “ಪರೋಪಕಾರಾರ್ಥಮಿದಂ ಶರೀರಂ” ಎಂಬ ನುಡಿಗೆ ವ್ಯತಿರಿಕ್ತವಾಗಿಯೂ ಆಗುತ್ತಾರೆ ಮತ್ತು ಹೀಗೆ ಸಂಪಾದಿಸಿದ ದುಡ್ಡನ್ನು ಜೂಜಾಡುವುದಕ್ಕೂ, ಕುಡಿಯುವುದಕ್ಕೂ ಉಪಯೋಗಿಸುತ್ತಾರೆ. ಇಂಥವರಿಗೆ ಯಾರು ಧರ್ಮವನ್ನುಮಾಡುತ್ತಾರೋ ಅವರಿಗೆ ಯಾವ ಪುಣ್ಯಫಲವೂ ಇಲ್ಲದೆ ಮತ್ತಷ್ಟು ಅಧರ್ಮವುಸುತ್ತಿಕೊಳ್ಳುತ್ತದೆ. ಇವರು ಹೀಗಾಗುವುದಕ್ಕೆ [illegible]. ಏಕೆಂದರೆ ಅವರಿಗೆ ಭಿಕ್ಷವನ್ನುಹಾಕುವುದರಿಂದ ಅವರು ಜೀವನದ ಬೇರೆಯೋಚನೆಯಾವುದನ್ನೂ ಮಾಡುವುದಿಲ್ಲ. ಕೆಲವರು ತಮ್ಮ ಹುಡುಗರನ್ನು ಭಿಕ್ಷೆಗೆ ಕಳುಹಿಸಿದರೆ ಸ್ವಲ್ಪ ಅಕ್ಕಿಯಾದ್ದಾದರೂ ತರುತ್ತಾರೆ ಎಂದು ತಿಳಿದು ವಿದ್ಯಾಭ್ಯಾಸವನ್ನೂ ಬಿಡಿಸಿ ಕಳುಹಿಸುತ್ತಾರೆ. ಇಂಥವರು [illegible] ಜೀವನನಡೆಯುವುದನ್ನು ನೋಡುತ್ತಾರೆಯೇಹೊರತು ಮುಂದೆ ಹುಡುಗರ ಗತಿಏನು ಎಂದು ಯೋಚಿಸುವುದಿಲ್ಲ. ತಮ್ಮ ಮಕ್ಕಳ [illegible]. ಆ ಹುಡುಗರು ದೊಡ್ಡವರಾದರೂ ಯಾಚನೆಯ [illegible]

ಹು. ಈ ಪದ್ಧತಿಯು ಬ್ರಾಹ್ಮಣರಲ್ಲಿಯೂ ಬಹಳ ಹೆಚ್ಚಾಗಿದೆ. ಇವರ ಮನೆಗೆ [illegible] ಕಾಳಲಾರದೆ ಸರ್ಕಾರದವರು ಭಿಕ್ಷುಕರು ಯಾರೂ ಮನೆ[illegible]ರುವ ಒಂದು ಸಂಘ[illegible]ದ್ದು, ಅಂಗಹೀನರಾದವರು ಮಾತ್ರ ಪ್ರಜೆಗಳೇರ್ಪಡಿಸಿ[illegible] ಸಹಾಯವನ್ನು ಪಡೆಯಬೇಕು. ಯಾರಾದರೂ ಮನೆಗಳಿಗೆ ಹೋದರೆ ಅವರ[illegible]ನೆಯು ಹಾಕಲ್ಪಡುತ್ತದೆ, ಎಂದು ಬೆಂಗಳೂರಿನಲ್ಲೂ ಮೈಸೂರಿನಲ್ಲಿಯೂ [illegible]ದರೆ ದೇಶಾಭಿವೃದ್ಧಿಯೂ, ಕೈಗಾರಿಕೆ, ಕುಶಲವಿದ್ಯೆ, ವಿದ್ಯಾಭ್ಯಾಸಾಭಿ[illegible] ಇವೇ ಮೊದಲಾದ ಪ್ರಯೋಜನವಾಗುವುದಲ್ಲದೆ ಯಾಚಕರ ಸಂಖ್ಯೆಯು [illegible]ವು ಆಗುತ್ತದೆ. ಆದ್ದರಿಂದ ನಮ್ಮ ಘನಹೊಂದಿದ ಸರ್ಕಾರದವರೂ, [illegible]ರಾದ ಪ್ರಜೆಗಳೂ ಇದಕ್ಕೆ ಗಮನಕೊಟ್ಟು ಆದಷ್ಟು ಜಾಗ್ರತೆಯಾ[illegible] ವಿಧಿಯನ್ನುಮಾಡಿ ಜಾರಿಗೆ ತರಬೇಕೆಂದು ಕೋರುತ್ತೇನೆ. ಏಕೆಂದರೆ ದೊಡ್ಡ ಪಟ್ಟಣಗಳಾದ ಬೆಂಗಳೂರು ಮೈಸೂರು ಪ್ರಜೆಗಳಿಗೆ ಅವರಿಂದ ಬಹಳ ತೊಂದರೆಯಾಗಿದೆ.

ಓರ್ವ ಬಾಲಕ.

ಹುಲಕೋಟಿ ರಾಜನಿಷ್ಠಾ ಸಭೆಯು.

ತಾ|| 10-12-1923 ನೇ ಇಸವಿ ಸೋಮವಾರ 4 ಗಂಟೆಗೆ ಇಲ್ಲಿಯ ಕೋ|| ಸೊಸಾಯಿಟಿಯ ಜನರಲ್ ಹಾಲಿನಲ್ಲಿ ಧಾರವಾಡ ಜಿಲ್ಲಾ ಕಲೆಕ್ಟರ ಸಾಹೇಬ ಬಹಾದ್ದೂರ ಮೆ|| ಜೆ. ಮಾಂಟೆಥ ದೊರೆಗಳವರ ಅಧ್ಯಕ್ಷತೆಯ ಕೆಳಗೆ ರಾಜನಿಷ್ಠಾ ಸಭೆಯು ಕೂಡಿತ್ತು. ಈ ಸಭೆಗೆ ಮೆ|| ಕಲೆಕ್ಟರ ಸಾಹೇಬರವರ ಪತ್ನಿಯವರು ಆಗಮಿಸಿದ್ದರಲ್ಲದೆ ಗದಗ ತಾಲೂಕ ಸದರ ಮಾಮಲೇದಾರ ಮೆ|| ಪಂಡಿತ, ಹಿಂದಿನ ಆಕ್ಟಿಂಗ ಮಾಮಲೇದಾರ ಮೆ|| ಅಚಲಕರ, ಸಹಕಾರೀಸಂಘಗಳ ಮೆ|| ಶೆಟ್ಟಿ ಬಿ.ಎ., ಜೆ. ಅಸಿ|| ರಿಜಸ್ಟ್ರಾರ, ಮೆ|| ಕೆ. ಆರ್. ಕುಲಕರಣಿ ಎಮ್. ಎ. ಆಡಿಟರ, ಮೆ|| ಎಮ್. ಎಸ್. ಕುಲಕರಣಿ ಡಿಸ್ಟ್ರಿಕ್ಟ ಆನರರಿ ಆರ್ಗನಾಯಝರ, ಡಾ|| ಮುಳಕೀ ಗದಗ, ಮಿ|| ಫಕೀರಪ್ಪ ಲಕ್ಷ್ಮೇಶ್ವರ ಕುರ್ತಕೋಟಿ ಡಿ|| ಲೋ|| ಬೋ|| ಮೆಂಬರ, ಮಿ|| ತಿಮ್ಮಣ್ಣ ಮುದಿರಡ್ಡಿ ಹೆಬಸೂರ, ಮಿ|| ದೇವನಗೌಡ ಪಾಟೀಲ, ಬಿ.ಎ., ನಲವಡಿ ಮುಂತಾದ ಪ್ರಮುಖ ಮುಂದಾಳುಗಳು ಬಂದಿದ್ದರು. ಮತ್ತು ಹುಲಕೋಟಿ ಯೂನಿಯನ್ ಹದ್ದಿನ ಹೊಸಹಳ್ಳಿ, ಅಸುಂಡಿ, ಮುಲಸಮುದ್ರ, ಚಿಕ್ಕಹಂದಿಗೋಳ, ಹಿರೇಹಂದಿಗೋಳ ಜನರೂ, ಗದಗ, ಕುರ್ತಕೋಟಿ, ಬಿಂತದಕಟ್ಟಿ, ನಲವಡಿ, ಅಂತೂರ, ಬೆಂತೂರ ಮೊದಲಾದ ಗ್ರಾಮಗಳ ಜನರೂ ಸೇರಿ ಸಭೆಗೆ ಸುಮಾರು 700-800 ವರೆಗೆ ಬಂದಿದ್ದರು. ಪ್ರಾರಂಭದಲ್ಲಿ ಬಾಲಬಾಲಕಿಯರು ಸ್ವಾಗತಪರ ಹಾಡುಗಳನ್ನು ಸುಸ್ವರದಿಂದ ಹಾಡಿದಮೇಲೆ ಮಿ|| ಸಿದ್ದನಗೌಡ ಹಿರೇಗೌಡರ ಇವರು ಸ್ವಾಗತಪರ ಭಾಷಣಮಾಡಿದರು. ಅವರು ತಮ್ಮ ಭಾಷಣದಲ್ಲಿ ಹುಲಕೋಟಿಯ ಪ್ರಾಚೀನ ಹಾಗು ಅರ್ವಾಚೀನ ಇತಿಹಾಸವನ್ನು ಹೇಳಿದರು. ಅನಂತರ ಗದಗ ತಾಲೂಕ ಡೆವಲೆಪ್‌ಮೆಂಟ ಅಸೋಸಿಯೇಶನ್, ಹುಲಕೋಟಿ ಕೋ|| ಕ್ರೆ|| ಸೊಸಾಯಿಟಿ, ಸ್ಕಾ. ಯೂನಿಯನ್, ಹುಲಕೋಟಿ ಕೋ|| ಗ್ರಾ|| ಯೂನಿಯನ್ ಎಜ್ಯುಕೇಶನ್ ಸೊಸಾಯಿಟಿ ಮುಂತಾದ ಸಂಸ್ಥೆಗಳ ರಿಪೋರ್ಟುಗಳನ್ನು ಮಿ|| ಯಲ್ಲಪ್ಪಗೌಡ ಮರಿಯಪ್ಪಗೌಡರ ಬಿ.ಎ., ಮಿ|| ಕೆ. ಆರ್. ಕುಲಕರಣಿ ಎಮ್. ಎ. ಮೊದಲಾದವರು ಓದಿಹೇಳಿದ ಬಳಿಕ ಇಲ್ಲಿಯ ಕನ್ನಡ ಗಂಡುಮಕ್ಕಳ ಶಾಲೆಯ ಹೆಡ್‌ಮಾಸ್ತರ ಮಿ|| ಸೂರ್ಯವಂಶಿ ಇವರು ರಾಜನಿಷ್ಠೆ ಅಂದರೇನು? ಅದರ ಮಹತ್ವವೆಷ್ಟು? ಎಂಬದರಬಗ್ಗೆ ವಿವರಿಸಿ ಹೇಳಿದರು. ಬಳಿಕ ಮಿ|| ಬಸಪ್ಪ ಫಕೀರಪ್ಪ ಕಲ್ಲಣ್ಣವರ ತಾಲೂಕ ಆನರರಿ ಆರ್ಗನಾಯಝರ ನಲವಡಿ ಇವರು ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಚನ್ನಾಗಿ ವಿವರಿಸಿಹೇಳಿ ಜನರು ರಾಜನಿಷ್ಠರಾಗಿ ಸ್ವರಾಜ್ಯವನ್ನು ಹೇಗೆ ಗಳಿಸತಕ್ಕದ್ದೆಂಬ ಬಗ್ಗೆ ಹಾವಭಾವಗಳಿಂದ ಒಳ್ಳೇ ಆವೇಶಯುಕ್ತಭಾಷಣ ಮಾಡಿದರು. ಆ ಮೇಲೆ ಮಿ|| ರಂಗನಗೌಡ ಕೆ. ಪಾಟೀಲ ಇವರು ರಾಜನಿಷ್ಠೆಯ ಮಹತ್ವವನ್ನೂ ಸರಕಾರದ ಕೂಡ ಸಹಕಾರಮಾಡುವ ಅವಶ್ಯಕತೆಯನ್ನೂ ಕುರಿತು ಹೇಳಿದರು. ಬಳಿಕ ಮಿ|| ದೇವನಗೌಡ ಪಾಟೀಲ ಬಿ.ಎ., ನಲವಡಿ ಇವರು ಅಸಹಕಾರಿತೆಯಿಂದ ಸ್ವರಾಜ್ಯ ಸಿಗುವದು ಅಶಕ್ಯವೆಂದೂ, ಸನದಶೀರ ಶಾಂತರೀತಿಯಿಂದ ಅದನ್ನು ದೊರಕಿಸುವದೇ ನಿಜವಾದ ಮಾರ್ಗವೆಂದೂ, ಅಸ್ಪೃಶ್ಯನಿವಾರಣ, ಸಾರ್ವತ್ರಿಕ ಶಿಕ್ಷಣಪ್ರಸಾರ, ಸಹಕಾರೀ ಚಟವಟಿಕೆಗಳು ಮೊದಲಾದ ವಿಧಾಯಕ ವಿಷಯಗಳಲ್ಲಿ ಮನಸ್ಸುಹಾಕಿ ಈಗ ಕೊಟ್ಟಿರುವ ಸ್ವರಾಜ್ಯದ ಹಕ್ಕುಗಳನ್ನು ಉತ್ತಮರೀತಿಯಿಂದ ಉಪಯೋಗಮಾಡಿ ಹೆಚ್ಚಿನ ಹಕ್ಕುಗಳಿಗೆ ಯೋಗ್ಯರಾದಲ್ಲಿ ಸ್ವರಾಜ್ಯವು ತನ್ನಿಂದ ತಾನೇ ದೊರೆಯುವದೆಂದೂ ಒಳ್ಳೇ ಕಳಕಳಿ ಪೂರ್ವಕವಾಗಿ ಅಸ್ಖಲಿತವಾಣಿಯಿಂದ ಇಂಗ್ಲಿಷಿನಲ್ಲಿ ಸುಮಾರು ಮುಕ್ಕಾಲು ತಾಸಿನವರೆಗೆ ಭಾಷಣಮಾಡಿ ಜನರಿಗೆ ತಿಳಿಯ ಹೇಳಿದರು. ಆಮೇಲೆ ಮಿ|| ತಿಮ್ಮಣ್ಣ ಮುದಿರಡ್ಡಿ ಹೆಬಸೂರ ಇವರು ಅಸಹಕಾರಿಗಳ ಮಾತಿಗೂ ಕೃತಿಗೂ ವಿಸಂಗತವಾದ ಪರಿಸ್ಥಿತಿಯನ್ನು ಚನ್ನಾಗಿವಿವರಿಸಿ ಹೇಳಿ ಜನರು ಸಹಕಾರಿತೆಯಿಂದ ಸ್ವರಾಜ್ಯದೊರಕಿಸಬೇಕೆಂದು ಹಾಸ್ಯರಸಯುಕ್ತವಾಗಿಯೂ ಹಾಗು ಹಾವಭಾವಗಳಿಂದಲೂ ಜನರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವಾಗುವಂತೆ ಭಾಷಣಮಾಡಿದರು. ಅನಂತರ ಮೆ|| ಶೆಟ್ಟಿ, ಮೆ|| ಎಮ್. ಎಸ್. ಕುಲಕರಣಿ ಮೊದಲಾದವರ ಸಮಯೋಚಿತ ಭಾಷಣಗಳಾದ ಮೇಲೆ ಮೆ|| ಅಧ್ಯಕ್ಷ ಸಾಹೇಬರವರು ಇಂಗ್ಲಿಷಿನಲ್ಲಿ ಸಮಾರೋಪಭಾಷಣಮಾಡಿದರು. ಇವರ ಭಾಷಣವನ್ನು ಮಿ|| ದೇವನಗೌಡ ಪಾಟೀಲ ಬಿ. ಎ. ನಲವಡಿ ಇವರು ಕನ್ನಡದಲ್ಲಿ ವಿಶದವಾಗಿ ಬಣ್ಣಿಸಿ ಹೇಳಿದರು. ಬಳಿಕ ಅಧ್ಯಕ್ಷರ ಹಾಗು ಸಭಿಕರ ಆಭಾರಮನ್ನಿಸಲ್ಪಟ್ಟು ಅಧ್ಯಕ್ಷ ಸಾಹೇಬರವರಿಗೆ ಹಾರತುರಾಯಿ ತಾಂಬೂಲ ಸಮರ್ಪಿಸಲ್ಪಟ್ಟ ಮೇಲೆ ತ್ರಿವಾರ ಜಯಘೋಷದೊಡನೆ ಸಭೆಯ ಕಾರ್ಯವು ಸಮಾಪ್ತಿಯಾಯಿತು. ಅಲ್ಲಿಂದ ಮೆ|| ಕಲೆಕ್ಟರ ಸಾಹೇಬರವರು ನೇಕಾರಶಾಲೆಯ (Weaving School) ನ್ನು ನೋಡಿಕೊಂಡು ಚಹಪಾನಮಾಡಿ ಮೋಟಾರಿನಿಂದ ಗದಗಿಗೆ ತೆರಳಿದರು.

ತಮ್ಮ
Ranganagowda K. Patil.

ಮಂಜ್ರಾಬಾದು ತಾಲ್ಲೂಕು ಎಸಳೂರುಪೇಟೆ.

ಮಹನೀಯರೇ?

ಜಾನ್ ಮಾಹೆ 25 ನೇ ತಾ|| ನಲ್ಲಿ ಹಾಸನ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿಇನ್‌ಸ್ಪೆಕ್ಟರ್ ಸಾಹೇಬರವರ ಸನ್ನಿಧಾನದಲ್ಲಿ ಎಸಳೂರುಪೇಟೆ ಏರೀಚ್ ಚೇರ್‌ಮನ್ ಮ|| ರಾ|| [illegible] ಬಸಪ್ಪನವರು, ಕ್ಲಾತ್ ಮರ್ಚೆಂಟ್ ಮ|| ರಾ|| ಹೆಚ್. ಪುಟ್ಟಸಂಜಪ್ಪನವರು, ಲ್ಯಾಂಡ್‌ಹೋಲ್ಡರ್ ಮ|| ರಾ|| ಮಲುಗಳಲೆ ಪುಟ್ಟಯ್ಯನವರು, ಮ|| ರಾ|| ಮಹಾಗೋಡುಅಪ್ಪಯ್ಯನವರು, ಪಟ್ಟಣಶೆಟ್ಟರು ಮ|| ರಾ|| ಸಂಜುಂಡಪ್ಪನವರು, ಸಹ [illegible]ಕರ ಅನುಕೂಲಕ್ಕಾಗಿ ಶ್ರೀ ಬಸವೇಶ್ವರ ದೇವಾಲಯದ ಮುಂಭಾಗದ ಪಾಳುಜಾಗದಲ್ಲಿ ಛತ್ರವನ್ನು ಕಟ್ಟಿಸಿ ಸರ್ಕಾರಕ್ಕೆ ಒಪ್ಪಿಸುವುದಾಗಿ ವಾಗ್ದಾನಮಾಡಿ ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ. ಇದುವರಿಗೆ [illegible] ರಂಭೋತ್ಸವವೂ ಜರುಗಿರುವುದಿಲ್ಲ. [illegible] ಮ|| ಮಲ್ಲಪ್ಪಶೆಟ್ಟರು ಕಳೆದವಾರ ಪ್ರೈಮರಿ ಸ್ಕೂಲು ಶಂಕುಸ್ಥಾಪನಾಮಹೋತ್ಸವ ಬೆಳೆಸಿದ್ದಾರೆ. ಇವರುಗಳೂ ಕೂಡ ಶೀಘ್ರದಲ್ಲಿ ವಿಜೃಂಭಣೆಯಿಂದ ಶಂಕುಸ್ಥಾಪನಮಹೋತ್ಸವ ಬೆಳೆಸುತ್ತಾರೆಂದು ನಂಬಿದ್ದೇನೆ. ಒಬ್ಬರು ಮಾಡುವ ಕಾರ್ಯವು ಈಗ ಮುಂದಾಗಿದ್ದರೂ ಐದು ಜನ ಮಹನೀಯರು ಮಾಡುವ ಕಾರ್ಯವು ಎಂದಿಗೂ ಹಿಂದಾಗಲಾರದೆಂದು ಎಲ್ಲರಿಗೂ ಭರವಸೆ ಹುಟ್ಟಿರುವುದು. ಈ ಮಹನೀಯರ ಧರ್ಮಕಾರ್ಯಗಳು ಮಹಾಶಿವರಾತ್ರಿ ಹಬ್ಬದೊಳಗಾಗಿ ಚೆನ್ನಾಗಿಜರುಗಿ ಪ್ರಕಾಶಿಸಲೆಂದು ಹಾರೈಸುತ್ತೇನೆ. ತಮ್ಮ ಸ್ವಕಾರ್ಯದಲ್ಲಿ ಎಷ್ಟು ಕಷ್ಟಗಳುಂಟಾದಾಗ್ಯೂ ಲಕ್ಷಿಸದೆ ಹಿಡಿದ ಪ್ರಯತ್ನ ನೆರವೇರಿಸಲು ಹಟಮಾಡುವರೋ ಹಾಗೆಯೇ ಪುರಾಭಿವೃದ್ಧಿಗಾಗಿ ಮಾಡಿಕೊಡಲು ಒಪ್ಪಿರುವ ಕಾರ್ಯಗಳನ್ನು ಹಾಗೆಮಾಡಿಯೇಬಿಡುತ್ತಾರೆಂದು ಭರವಸೆಯಿದೆ. ಒಂದು ಊ[illegible] ಸಾವಿರಾರು ಜನರಿದ್ದಾಗ್ಯೂ, ನಾಲ್ಕಾರು ಮಂದಿ ಮಾತ್ರ ಧರ್ಮ ಮಾಡುವರು[illegible] ಉಳಿದವರೆಲ್ಲರೂ ಐಶ್ವರ್ಯವಂತರಾಗಿದ್ದಾಗ್ಯೂ ಮಾಡಲಾರರು. ಅನೇಕ [illegible] ಸಜ್ಜನಶಿರೋಮಣಿಗಳು ಈಗತಾನೇ ಕಣ್ತೆರೆದು ತಮ್ಮ ಶಕ್ತ್ಯನುಸಾರ ಧರ್ಮಕೆಲಸಕ್ಕೆ ಆರಂಭಮಾಡಿರುವರು. ಈ ಊರಿಗೆ ಈ ಮಹನೀಯರುಗಳೇ [illegible]ಯಾಗಿರುತ್ತಾರೆ. ಪರೋಪಕಾರವೇ ಸದ್ಗತಿಗೆ ದಾರಿ. ಮನುಷ್ಯನು [illegible] ಹೋದರೂ ಅವನು ಮಾಡಿದ ಧರ್ಮಕೆಲಸದಿಂದ ಇದ್ದಂತೆ ಅವನ ನಾಮವು ಪ್ರಶಸ್ತಿಪಡೆದಲ್ಲೂ ಹೊಗಳಲ್ಪಡುತ್ತಿರುವುದು. ಕೆಲವು ದುರ್ಜನರು ಸಜ್ಜನರ ಕಾರ್ಯಕ್ಕೆ ತಂತ್ರಮಾಡಿ ವಿಘ್ನಮಾಡುವುದು ಸಹಜವಾಗಿದೆ. ಅಂಥವರ ಪ್ರಯತ್ನಕ್ಕೆ ಸ್ಥಳಸಿಕ್ಕದಂತೆ ಆದಷ್ಟು ಜಾಗ್ರತೆ ಕಾರ್ಯದಲ್ಲಿ ನಿರತರಾಗಿ ಉದ್ದೇಶ ನೆರವೇರಿಸಿಕೊಳ್ಳಬೇಕಾಗಿ ಪ್ರಾರ್ಥನೆ. ಸಂತಾನವಿಲ್ಲದ ಐಶ್ವರ್ಯವಂತರು ತಮ್ಮ ಧನವನ್ನು ಪರೋಪಕಾರಕ್ಕಾಗಿ ವಿನಿಯೋಗಿಸಿದರೆ ಜನ್ಮವು ಸಾರ್ಥಕವಾಗಿ ಇಹಲೋಕ ಪರಲೋಕಗಳೆರಡರಲ್ಲೂ ಸುಖವುಂಟಾಗುವುದು. ಎಂಬ ಸಜ್ಜನಾಭಿಪ್ರಾಯದಂತೆ ಕೆಲವರು ಯೋಚಿಸಿ ಪರೋಪಕಾರಕ್ಕೆ ಮನಕೊಟ್ಟರೆ ದೇವರು ಸದಾರಕ್ಷಿಸುವನು. ಈ ಎರಡು ಕಾರ್ಯಗಳು ಜರುಗಿದೊಡನೆ, ರೀಡಿಂಗ್‌ರೂಮ್ ಕಟ್ಟಡ ತಯಾರಾಗುವುದೆಂಬ ಸಂತೋಷವಾರ್ತೆಯು ಗುಟ್ಟಾಗಿಹರಡಿರುವುದು. ದೇವರು ಒಳ್ಳೇಮನಕೊಡಲೆಂದು ಪ್ರಾರ್ಥನೆ. ನಮ್ಮ ಗುರುವರ್ಗದವರು ಬರೇಅಂದವಾದ ಕೋಟೆಕೊತ್ತಲುಗಳನ್ನು ಕಟ್ಟುವುದರ ಜಮಿನುಸಂಪಾದಿಸುವುದರ ಬದಲಾಗಿ ತಮ್ಮ ಧನವನ್ನು ಒಟ್ಟುಗೂಡಿಸಿ ಮತಬೋಧೆಯನ್ನು ಪ್ರಸರಣಮಾಡಲು ಒಂದು ಪಾಠಶಾಲೆ ಏರ್ಪಡಿಸುವುದು ಬಹಳ ಒಳ್ಳೆಯ ಮಾರ್ಗವು. ಈ ಕಾರ್ಯದಲ್ಲಿ ನಮ್ಮ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ಪ್ರತಿನಿತ್ಯವೂ ಮಾಡುತ್ತಿರುವ ಸಹಾಯಗಳು ನಿದರ್ಶನವಾಗಿವೆ. ಮೇಲ್ಕಂಡ ಎರಡು ಧರ್ಮಕೆಲಸಗಳು ಜರುಗಲು ಪ್ರೋದ್ಬೋಧೆಮಾಡಿದವರು, ಹ|| ಡಿ|| ಇ|| ಸಾ|| ರು ಮಿ|| ಶ್ರೀನಿವಾಸರಾಯರು ಆಗಿರುತ್ತಾರೆಂದು ಸಾರಿಸಾರಿ ಹೇಳುತ್ತೇನೆ. ಅಲ್ಲದೆ ಈ ಪೇಟೆಯ ಜನಗಳಲ್ಲಿರುವ ಕೆಲವರ ಕೆಟ್ಟನಡತೆಯೆಂಬ ಕಳೆಯನ್ನು ಕಿತ್ತು, ಸದ್ಗುಣವೆಂಬ ಬೀಜವನ್ನು ಬಿತ್ತಲು ಕಂಕಣಕಟ್ಟಿಕೊಂಡು, ಈ ಊರಿಗೆ ಕಂಪ್ಲೀಟ್ ಮಿಡಲ್ ಸ್ಕೂಲು ಏರ್ಪಡಿಸಿಕೊಡುವಂತೆ ತಮ್ಮ ಉದಾರವಾದ ಶಿಫಾರಸ್ ಘನಸರ್ಕಾರದ ವಿದ್ಯಾಭ್ಯಾಸದ ಇಲಾಖಾ ಹುಜರತ್ ಇ|| ಜ|| ಸಾ|| ರವರ ಸನ್ನಿಧಾನಕ್ಕೆ ಶಿಫಾರಸ್ ಮಾಡಿರುತ್ತಾರೆ. ಇ|| ಜ|| ಸಾ|| ರವರು ಈ ಶಿಫಾರಸ್ಸನ್ನು ದಿವ್ಯಚಿತ್ತಕ್ಕೆ ತಂದುಕೊಂಡು ಅವಿದ್ಯಾವಂತರ ಮಕ್ಕಳು ವಿದ್ಯಾವಂತರಾಗಲು ಅನುಕೂಲಿಸುವಂತೆ ಮಾಡಿಸಿಕೊಟ್ಟು ಕಾಪಾಡುತ್ತಾರೆಂದು ನಿರೀಕ್ಷಿಸುತ್ತೇವೆ. ಕ್ಷಿಪ್ರದಲ್ಲಿಯೇ ನಮ್ಮಗಳ ಉದ್ದೇಶವು ನೆರವೇರುತ್ತೆಂದು ಸರ್ವರೂ ನಂಬಿರುತ್ತಾರೆ. ಭಗವಂತನು ಮಿ|| ಶ್ರೀನಿವಾಸರಾಯರಿಗೆ ದೊಡ್ಡ ಪದವಿಯನ್ನಿತ್ತು ಅವರಿಗೂ ಅವರ ಪತ್ನೀ ಪುತ್ರರಿಗೂ ಧರ್ಮಕೆಲಸಕ್ಕೆ ಮುಂದಾಳುಗಳಾಗಿರುವ ವೀರಶೈವ ಬಾಂಧವರಿಗೂ ಅವರ ಪತ್ನೀ ಪುತ್ರರಿಗೂ ಭಗಂತನು ಆಯುರಾರೋಗ್ಯ ಐಶ್ವರ್ಯಗಳನ್ನಿತ್ತು ಕಾಪಾಡಲೆಂದು ಪ್ರಾರ್ಥನೆ.

ಪ್ರಜಾಹಿತೈಷಿ.

[ಶೃಂಗೇರಿ ಜಹಗೀರಿಸಂಸ್ಥಾನದ ಏಜಂಟರು ಪ್ರಕಟಿಸಿರುವ ಪತ್ರಿಕೆಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ. H. K.]

ಶ್ರೀಜಗದ್ಗುರು ಸಂಸ್ಥಾನ ಶೃಂಗೇರಿ ಶ್ರೀಮಠದ ಆಸ್ಥಾನದಿಂದ

ಶೃಂಗೇರಿಗೆ ಉತ್ತರವಾಗಿ ಒಂದು ಮೈಲು ದೂರದಲ್ಲಿ ಶಾಲಿವಾಹನ ಶಕ [illegible]ನೆಯ ವರ್ಷದಲ್ಲಿ ತುಂಗಾನದಿಯ ತೀರದಲ್ಲಿ ಶ್ರೀ ಜಗದ್ಗುರು ಮಹಾ ಸ್ವಾಮಿಗಳವರ ಆಜ್ಞಾ ಮತ್ತು ಸಹಾಯವನ್ನೂ ಪಡೆದು ಆಗಿನ ಕಾಲದ ಧಾರ್ಮಿಕ ಮಹಾಜನರು ಆನೆಗುಂದವೆಂಬ ಹೆಸರಿನಿಂದ ಒಂದು ಬ್ರಾಹ್ಮಣ ಅಗ್ರಹಾರವನ್ನು ಕಲ್ಪಿಸಿ, ಅಗ್ರಹಾರ ಮಧ್ಯಭಾಗದಲ್ಲಿ ಶಿಲಾಮಯವಾದ ಎರಡು ಆಲಯಗಳನ್ನು ನಿರ್ಮಾಣಮಾಡಿ, ಒಂದು ಆಲಯದಲ್ಲಿ ಶ್ರೀ ಗೋಪಾಲಕೃಷ್ಣ ದೇವರನ್ನೂ, ಇನ್ನೊಂದು ಆಲಯದಲ್ಲಿ ಶ್ರೀ ಗಂಗಾಧರೇಶ್ವರ ದೇವರನ್ನೂ, ಪ್ರತಿಷ್ಠೆ ಮಾಡಿಸಿ—ಈ ದೇವರ ನಿತ್ಯಪೂಜಾ ವಿನಿಯೋಗಕ್ಕಾಗಿಯೂ, ಅಗ್ರಹಾರ ಬ್ರಾಹ್ಮಣರ ನಿರ್ವಾಹಾರ್ಥವಾಗಿಯೂ ಶ್ರೀ ಜಗದ್ಗುರು ಸಂಸ್ಥಾನದಿಂದ ತರಿಬಾಗಾಯಿತು ಜಮೀನು ಇನಾಮತಿಯಾಗಿ ಪಡೆದುಕೊಂಡು, ಆ ಭೂಮಿಗಳ ವರಮಾನದಿಂದಲೂ ಮಹಾಜನರು ತಮ್ಮತಮ್ಮ ಗೃಹಗಳಲ್ಲಿ ನಡೆಯತಕ್ಕ ಶುಭಶೋಭನಾದಿಗಳಲ್ಲಿ ಅಗ್ರಹಾರ ಬ್ರಾಹ್ಮಣರ ಮತ್ತು ದೇವರ ನಿಮಿತ್ತವಾಗಿ ಕೊಟ್ಟು ಬಂದಿರುವ ಸಹಾಯದಿಂದಲೂ ಅಗ್ರಹಾರ ಬ್ರಾಹ್ಮಣರು ದೇವತಾಸೇವೆಯನ್ನು ನೆರವೇರಿಸಿಕೊಂಡು, ತಮ್ಮ ಜೀವನವನ್ನು ನಡೆಸಿಕೊಂಡು ಬಂದಿರುವಂತೆ ತಿಳಿದುಬಂದಿದೆ.

ಈ ಅಗ್ರಹಾರದಲ್ಲಿ ಹತ್ತು ಗೃಹಗಳನ್ನು ನಿರ್ಮಾಣ ಮಾಡಿಸಿ, ಸದಾಚಾರಸಂಪನ್ನರೂ, ಸತ್ಕುಲ ಪ್ರಸೂತರೂ, ಕರ್ಮಾನುಷ್ಠಾನಪರರೂ ಆದ ಹತ್ತು ಜನ ಬ್ರಾಹ್ಮಣರಿಗೆ ಕೊಟ್ಟು, ಅವರನ್ನು ಆ ಗೃಹಗಳಲ್ಲಿ ವಸತಿ ಮಾಡುವಂತೆ ಮಾಡಿರುತ್ತಾರೆ. ಆ ಹತ್ತು ಕುಟುಂಬಗಳೂ, ಪುತ್ರಪೌತ್ರ ಕ್ರಮದಿಂದ ವೃದ್ಧಿಹೊಂದುತ್ತಾ ಬಂದು, ಅದೇ ವಂಶದವರು ಈಗಲೂ ಕೇವಲ ಸ್ಮಾರ್ತಕರಾಗಿಯೂ ವೇದಾಧ್ಯಯನ ಮಾಡಿದವರಾಗಿಯೂ, ಆಚಾರಶೀಲರೂ ಅನುಷ್ಠಾನಪರರೂ ಆಗಿ ತಮ್ಮ ಪೂರ್ವಜರಂತೆ ದೇವತಾ ಸೇವೆಯನ್ನು ನಡೆಸಿಕೊಂಡು, ಯಾವ ವಿಧವಾದ ಉಪಪ್ಲವಗಳಿಗೂ ಒಳಗಾಗದೆ ಸುಖದಿಂದ ಕಾಲಯಾಪನೆ ಮಾಡುತ್ತಾ ಬಂದಿದ್ದರಲ್ಲಿ ಕಾಲವೈಷಮ್ಯದಿಂದ-ಅತ್ಯಂತ ಅದೃಷ್ಟಭರವಾಗಿ ಈ ಸಂವತ್ಸರದಲ್ಲಿ ಪ್ರಾಪ್ತವಾದ ಅತಿವೃಷ್ಟಿಯಿಂದ ತುಂಗಾನದಿಯ ಪ್ರವಾಹವು ಮಿತಿಮೀರಿ, ಅಗ್ರಹಾರ ಗೃಹಗಳನ್ನೂ ದೇವಾಲಯಗಳನ್ನೂ ಪ್ರವೇಶಮಾಡಿ, ಅಗ್ರಹಾರವನ್ನು ನಾಮಾವಶೇಷಿತವಾಗಿ ಮಾಡಿರುವದೆಂಬ ಅಂಶವು ಅತ್ಯಂತ ಶೋಚನೀಯವಾಗಿದ್ದರೂ ಅಲ್ಲಿ ವಸತಿಮಾಡಿರುವ ಬ್ರಾಹ್ಮಣ ಕುಟುಂಬದವರ ಪ್ರಾಣಗಳನ್ನು ಅವರ ಧರ್ಮವೇ ಕಾಪಾಡಿರುವದೆಂಬ ಭಾಗವು ಮಹದಾನಂದವನ್ನು ಉಂಟುಮಾಡತಕ್ಕದ್ದಾಗಿದೆ.

ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಆಜ್ಞಾನುಸಾರವಾಗಿ ಇನ್ನು ಮುಂದೆ ಇಂಥಾ ಅನರ್ಥಗಳಿಗೆ ಅವಕಾಶವಿಲ್ಲದಂತೆಯೂ ಚಿರಕಾಲದಿಂದ ಒಂದೇ ಸ್ಥಳದಲ್ಲಿ ಗುಂಪಾಗಿ ಸೇರಿ ಯಾವತ್ತೂ ಸನ್ಮಾರ್ಗನಿರತರಾಗಿದ್ದ ಜನರು ಅನ್ಯತ್ರ ಚದುರಿ ಹೋಗದೆ ಒಂದೇ ಸ್ಥಳದಲ್ಲಿ ಇದ್ದುಕೊಂಡು, ದೇವತಾಕಾರ್ಯಗಳನ್ನು ನಡಿಸಿಕೊಂಡು ಬರಲು ಅನುಕೂಲವಾಗುವಂತೆಯೂ [illegible] ಅಗ್ರಹಾರ[illegible] ಪ್ರದೇಶಕ್ಕೆ [illegible]

ಪ್ರೆಸಿಡೆಂಟ್ ಉದ್ಯೋಗದಿಂದ ನಿವೃತ್ತರಾದಮೇಲೆ ಬೋರ್ಡು ಮೆಂಬರುಗಳಲ್ಲೊಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಿ ಗೊತ್ತು ಮಾಡಿಕೊಳ್ಳುವಂತೆ ಅಪ್ಪಣೆಮಾಡಬೇಕಲ್ಲದೆ ಸರ್ಕಾರದವರೇ ಯಾರನ್ನೂ ನಿಯಮಿಸದಂತೆ ಪ್ರಾರ್ಥಿಸಿಕೊಳ್ಳಬೇಕಾಗಿ ನಿರ್ಧರಿಸಿದರು.

ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನ ಪಂಡಿತರಾದ ದೇವಶೇಷರ ಹೆಂಡತಿಯು ಒಂದು ರಾತ್ರೆ ದೇಹಾಲಸ್ಯಕ್ಕಾಗಿ ಔಷಧವನ್ನು ಸೇವಿಸಿದಮೇಲೆ ಮೂರ್ಛಿತಳಾಗಲು ಗಂಡನು ಕೂಡಲೆ ಹೊರಗೆಹೋಗಿ ಡಾ|| ಗುರುಸ್ವಾಮಿಯವರನ್ನು ಕರೆದುಕೊಂಡುಬಂದು ನೋಡುವಲ್ಲಿ ಆಕೆಯು ಮೃತಳಾಗಿದ್ದಳು. ಆ ಕೂಡಲೆ ಆಸ್ಪತ್ರೆಗೆ ಶವವು ಸಾಗಿಸಲ್ಪಟ್ಟು ಪರೀಕ್ಷಿಸಲ್ಪಟ್ಟದ್ದಲ್ಲದೆ ಆಕೆಯು ಸೇವಿಸಿದ ಔಷಧವು ಕೆಮಿಕಲ್ ಎಕ್ಸಾಮಿನರ ಪರೀಕ್ಷೆಗಾಗಿ ಕಳುಹಲ್ಪಟ್ಟಿತು.

ಲಾಹೂರಿನಲ್ಲಿ ವಕೀಲಿಯನ್ನು ಮಾಡಿಕೊಂಡಿರುವ ವರಯಂಸಿಂಗ್ ಎಂಬುವವನು ತನ್ನ ಮನೆಗೆಬಂದು ತನ್ನ ಗಂಡನ ಮೇಲೆ ಒಂದು ವಾರಂಟನ್ನು ತೆಗೆದುಕೊಂಡು ಬಂದಿದ್ದೇನೆಂದು ಹೇಳಿ ತನ್ನನ್ನು ದುರ್ಭಾಷೆಯಿಂದ ನಿಂದಿಸಿ ತನ್ನನ್ನು ಕೆಳಕ್ಕೆ ಕೆಡವಿದನೆಂದು ಫಿಷರ್ ಎಂಬ ಐರೋಪ್ಯನ ಹೆಂಡತಿಯು ಆ ಸಿಂಗನಮೇಲೆ ಐರೋಪ್ಯ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದಿಮಾಡಿರಲು ಆ ವಕೀಲನು ಬೇರೆ ಕೋರ್ಟಿಗೆ ವಿಚಾರಣೆಗಾಗಿ ವರ್ಗಮಾಡಿಸಿಕೊಂಡನು.

ಮದ್ರಾಸಿನ ರಾಯಪುರದಲ್ಲಿ ಪಿಶಾಚವನ್ನು ಬಿಡಿಸತಕ್ಕ ಮಂತ್ರಗಾರನಾದ ಹುಸೇನ್‌ಸಾಬಿ ಎಂಬುವವನು ಕಳೆದ ವಾರ ಒಂದು ದಿನದ ರಾತ್ರಿ ಪಿಶಾಚಗ್ರಸ್ತರಾದವರನ್ನು ಸಮುದ್ರತೀರಕ್ಕೆ ಕರೆದುಕೊಂಡುಹೋಗಿ ಅವರನ್ನು ನೀರಿನ ಸಮೀಪದಲ್ಲಿ ಕುಳ್ಳಿರಿಸಿ ತಾನು ನೀರಿನೊಳಗಿಳಿದು ಕಣ್ಣುಗಳನ್ನು ಮುಚ್ಚಿಕೊಂಡು ಪಿಶಾಚೋಚ್ಚಾಟನೆಗೆ ಮಂತ್ರವನ್ನು ಹೇಳುತ್ತಿರುವಾಗ್ಗೆ ದೊಡ್ಡ ಅಲೆಯು ಒಂದು ಅವನನ್ನು ಕೊಚ್ಚಿಕೊಂಡು ಹೋಗಿ ನೀರಿನಲ್ಲಿ ಮುಳುಗಿಸಿಬಿಟ್ಟಿತು. ದಡದಲ್ಲಿದ್ದವರು ಕೂಡಲೆ ಓಡಿಹೋಗಿ ನಡೆದ ವಿದ್ಯಮಾನವನ್ನು ಪೋಲೀಸರಿಗೆ ತಿಳುಹಿದರು.

ಕಾಶ್ಮೀರ ಮಹಾರಾಜರವರು ಈಗ ಕಲಕತ್ತಾಕ್ಕೆ ಹೋಗಿರುವರು. ಅಲ್ಲಿ ಅವರು ವೈಸ್‌ರಾಯರನ್ನು ಕಂಡು ತಮ್ಮ ರಾಜ್ಯಕಾರ್ಯನಿರ್ವಹಣದಲ್ಲಿ ಸಾಹಾಯ್ಯಮಾಡಲು ಧರೆಸಿಂಹದ ಪ್ರಭುತ್ವದವರಿಂದ ನಿಯಮಿಸಲ್ಪಟ್ಟಿರುವ ಕೌನ್ಸಿಲಿನ ಸಭಾಸ್ವಾರರ ಅನನುಭವ ಇತ್ಯಾದಿ ನ್ಯೂನತೆಯಿಂದ ರಾಜ್ಯಾಡಳಿತವು ಜನರಂಜಕವಾಗಿ ನಡೆಯದೆ ಅಪಪ್ರಥೆಗೆ ಗುರಿಯಾಗಿರುವುದೆಂದು ಬಿನ್ನೈಸಿಕೊಂಡು ಈಗಿರತಕ್ಕ ಸಭಾಸ್ವಾರರ ಉದ್ಯೋಗದವಧಿಯು ಮುಗಿದಕೂಡಲೆ ರಾಜನೀತಿವಿಶಾರದರೂ, ಲೋಕಾನುಭವಿಗಳೂ, ನಿಸ್ಪೃಹರೂ ಕಾರ್ಯದಕ್ಷರೂ ಆದವರನ್ನು ನಿಯಮಿಸಿಕೊಳ್ಳಲು ಅನುಜ್ಞೆಯನ್ನು ಕೊಡಬೇಕೆಂದು ಕೇಳಿಕೊಳ್ಳುವವರಾಗಿರುವರೆಂದು ತಿಳಿಯಬರುತ್ತದೆ.

ತಿರುಚನಾಪಳ್ಳಿಯ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟ ಒಂದು ಸೇತುವೆಯನ್ನು ಕಟ್ಟಲು ಕಂಟ್ರಾಕ್ಟನ್ನು ತೆಗೆದುಕೊಂಡಿದ್ದ ಅಯ್ಯಾಸ್ವಾಮಿಪಿಳ್ಳೆ ಎಂಬುವವನು ತಾನು ಮಾಡಿದ ಕೆಲಸದ ವಿಚಾರದಲ್ಲಿ ಡಿ|| ಬೋರ್ಡು ಮೆಂಬರಾದ ದೇವಶಿಖಾಮಣಿಯವರು ಅಪಮಾನಕರವಾದ ಬರವಣಿಗೆಯನ್ನು ಬರೆದಿರುತ್ತಾರೆಂಬುದರಮೇಲೆ 500 ರೂ. ಪರಿಹಾರದ್ರವ್ಯವನ್ನು ಕೊಡಿಸಬೇಕೆಂದು ಸಬ್‌ಕೋರ್ಟಿನಲ್ಲಿ ವಿವಾದವನ್ನು ಮಾಡಿ ಡಿಕ್ರಿಯನ್ನು ಪಡೆದುಕೊಂಡಿರುತ್ತಾನೆ. ವಾದಿಯು ಮಾಡಿದ ಕೆಲಸದವಿಚಾರದಲ್ಲಿ ತನಗೆ ವಿಶ್ವಸನೀಯವಾಗಿ ತಿಳಿದುಬಂದ ಸಂಗತಿಗಳಮೇಲೆ ಆರೀತಿ ಅಭಿಪ್ರಾಯಪಟ್ಟಿರುತ್ತೇನಲ್ಲದೆ ಅಪಮಾನಮಾಡಬೇಕೆಂದಲ್ಲವೆಂದು ಪ್ರತಿವಾದಿ ಹೇಳಿದನಾದರೂ ಅವನ ಮೇಲೆ ಡಿಕ್ರಿ ಕೊಡಲ್ಪಟ್ಟಿತು.

ಕಲಕತ್ತಾದ ಒಂದು ಆಂಗ್ಲಮಿಷನರಿ ಸಂಘದವರು ಇಬ್ಬರು ಬ್ರಾಹ್ಮಣ ಹುಡುಗಿಯರನ್ನು ಅವರ ತಾಯಿಯರ ಸಮೇತ ವಶಮಾಡಿಕೊಂಡು ರಹಸ್ಯವಾಗಿಟ್ಟುಕೊಂಡಿರುವುದರ ಮೇಲೆ ಹಿಂದೂಗಳು ಕ್ಷುಬ್ಧರಾಗಿ ಒಂದುಸಭೆಯನ್ನು ಕೂಡಿಸಿ ಮಿಷನರಿಗಳ ವರ್ತನವನ್ನು ಖಂಡಿಸಿ ಆ ಹುಡುಗಿಯರನ್ನೂ ಅವರ ತಾಯಿಯರನ್ನೂ ಮಿಷನರಿಗಳ ಸೆರೆಯಿಂದ ಬಿಡಿಸಿಕೊಳ್ಳಬೇಕೆಂದು ನಿರ್ಧಾರವನ್ನು ಮಾಡಿದರು. ಮತ್ತು ಬಿಹಾರಿನ ಸಾಧು ಸಭಾ ಸೆಕ್ರೆಟರಿಯವರಾದ ಸರ್ ಜಗದೀಶ್ವರಾನಂದ ಪರಿವ್ರಾಜಕರವರು ಆ ಹೆಣ್ಣುಮಕ್ಕಳ ಬಿಡುಗಡೆಗಾಗಿ ತಮ್ಮ ಪ್ರಾಣವನ್ನಾದರೂ ಬಲಿಕೊಡಲು ಸಿದ್ಧನಾಗಿರುತ್ತೇನೆಂದು ತಿಳಿಸಿದರು. ಈ ವಿಚಾರವು ಪರಿಷ್ಕರಿಸಲ್ಪಡುವುದಕ್ಕಾಗಿ ಬಂಗಾಳಾ ಸರ್ಕಾರದವರಿಗೆ ತಂತಿಯ ಮೂಲಕ ತಿಳುಹಲ್ಪಟ್ಟು ಪರಿಣಾಮವು ನಿರೀಕ್ಷಿಸಲ್ಪಟ್ಟಿದೆ.

ಶಿವಕರ್ ಎಂಬಾತನು ಗಜಧರನೆಂಬುವವನಿಗೆ ಕೊಡಬೇಕಾಗಿದ್ದ 82 ರೂಪಾಯಿಗಳಿಗಾಗಿ 50 ರೂಪಾಯಿಗೊಂದು 32 ರೂ. ಗೆ ಮತ್ತೊಂದು ಪ್ರೋನೋಟುಗಳನ್ನು ಬರೆದುಕೊಟ್ಟು ಅವುಗಳಿಗೆ ತನ್ನ ಹೆಬ್ಬೆಟ್ಟಿನ ಗುರ್ತನ್ನು ಹಾಕಿದ್ದನು. ಗಜಧರನು ಈ ಹಣವನ್ನು ಬರಮಾಡಿಕೊಳ್ಳಲು ಸ್ಮಾಲ್ ಕಾಜ್ ಕೋರ್ಟಿನಲ್ಲಿ ಬಡ್ಡಿ ಮತ್ತು ಲಾಯರು ಫೀ ಸೇರಿ 130 ರೂ. ಗೆ ದಾವಾಮಾಡಿದನು. ಪ್ರತಿವಾದಿಯು ವಿಚಾರಣೆಯ ಕಾಲದಲ್ಲಿ 32 ರೂ. ನ ಪತ್ರಕ್ಕೆ ಹಾಕಿರುವ ಹೆಬ್ಬೆಟ್ಟಿನ ಗುರ್ತು ತನ್ನದೆಂದೂ 50 ರೂ. ಪತ್ರಕ್ಕೆ ಹಾಕಿರುವ ಹೆಬ್ಬೆಟ್ಟಿನ ಗುರ್ತು ತನ್ನದಾಗಿರದೆ ಫೋರ್ಜರಿ ಮಾಡಲ್ಪಟ್ಟಿರುವುದೆಂದೂ ವಾದಿಸಿದುದರ ಮೇಲೆ ಹೆಬ್ಬೆಟ್ಟಿನ ಗುರ್ತನ್ನು ಪರಿಶೋಧಿಸುವ ಸಮರ್ಥನಿಂದ ವಾದಿ ಪ್ರತಿವಾದಿಗಳ ಸಮಕ್ಷಮ ಒಂದು ಕೊಠಡಿಯಲ್ಲಿ ಪರೀಕ್ಷಿಸಲ್ಪಡುತ್ತಿರುವಾಗ್ಗೆ ಆ ಪರಿಶೋಧಕನು ಏತಕ್ಕಾಗಿಯೋ ಹೊರಕ್ಕೆಹೋಗಿ ಪುನಃ ಬಂದು ನೋಡುವಷ್ಟರಲ್ಲಿ 50 ರೂ. ನ ಪತ್ರವು ಮಾಯವಾಗಿದ್ದುದನ್ನು ಕಂಡು ಪೋಲೀಸರಿಗೆ ತಿಳುಹಲು ಅವರು ಶಿವಕರನನ್ನು ಹಿಡಿದು ವಿಚಾರಿಸುವಲ್ಲಿ ಆ ಹೆಬ್ಬೆಟ್ಟಿನಗುರ್ತು ತನ್ನದೇ ಆಗಿರುವುದರಿಂದ ತನ್ನ ಮೋಸಕೃತ್ಯವು ಹೊರಬೀಳುತ್ತದೆಂಬ ಶಂಕೆಯಿಂದ ಈರೀತಿ ಮಾಡಿದನೆಂದು ಹೇಳಿದನು.

ವಿದೇಶದ ವೃತ್ತಾಂತಗಳು

ಹೊಸ ಪಾರ್ಲಿಮೆಂಟ್ ಸಭೆಯು ಜನವರಿ ತಾ|| 8ರ ಬದಲು ತಾ|| 15ರಲ್ಲಿ ಚಕ್ರವರ್ತಿ ಸಾರ್ವಭೌಮರವರಿಂದ ಆರಂಭಿಸಲ್ಪಡುವುದು.

ಬ್ರಿಟಿಷ್-ಅಮೇರಿಕಾ ಹೊಗೇಬತ್ತಿ ವ್ಯಾಪಾರ ಕಂಪೆನಿಯವರಿಗೆ 6,74,25,000 ರೂಪಾಯಿಗಳಾದಾಯವು ಒಂದು ನೂರಕ್ಕೆ 21ರಂತೆ ನಫೆಯು ಹಂಚಲ್ಪಟ್ಟಿತು.

ಮದ್ರಾಸ್ ಗೌರ್ನರುದ್ಯೋಗಕ್ಕೆ ಹೊಸದಾಗಿ ನಿಯಮಿತರಾಗಿರುವ ಲಾರ್ಡ್ ಗೋಷ್ಚನ್‌ರವರು ತಮ್ಮಳಿಯಂದರನ್ನೇ ಮಿಲಿಟರಿ ಸೆಕ್ರೆಟರಿಯನ್ನಾಗಿ ನಿಯಮಿಸಿಕೊಂಡಿರುವರು.

ಬಲ್ಕಾನಿನಲ್ಲಿ 24 ಗಂಟೆಯವಧಿಯೊಳಗೆ 12 ವೇಳೆ ಭೂಕಂಪವಾಗಿ ಅನೇಕ ಕಟ್ಟಡಗಳು ಬಿದ್ದುಹೋದುವು, ಮತ್ತು 150 ಜನರು ಸತ್ತು ಸಾವಿರಾರು ಜನರು ಅಪಾಯವನ್ನು ಹೊಂದಿದರು.

ಲಂಡನ್ ನಗರದಲ್ಲಿ ಈ ವರ್ಷ 120,00,00,000 ಜನರು ವಾಹನದಲ್ಲಿ ಸಂಚರಿಸಿರುವರು. ಹಿಂದೆ ಯಾವಾಗಲೂ ಇಷ್ಟೊಂದುಜನ ಸಂಚರಿಸಿರಲಿಲ್ಲವು. 1922ರಲ್ಲಿ 99,40,00,000 ಜನರೂ, 1921ರಲ್ಲಿ 93,20,00,000 ಜನರೂ ಸಂಚರಿಸಿದ್ದರು.

ಚಕ್ರವರ್ತಿ ಸಾರ್ವಭೌಮ ದಂಪತಿಗಳು ಕಳೆದ ಶನಿವಾರದದಿವಸ ಘಂಡ ಕೋಟೆಯ ಮಹಾರಾಣಿಯವರು, ರಾಜಾ ಹರೀಂದ್ರಸಿಂಗ್, ಮಹಾರಾಜ ಕುಮಾರ ಮಜಿತ ಇಂದರ ಸಿಂಗ್ ಇವರುಗಳಿಗೂ ಇವರ ಕೂಡ ಹೋಗಿದ್ದ ಲೇಡಿ ಫಿನ್ನಿಯವರಿಗೂ ದರ್ಶನವನ್ನಿತ್ತು ಸಂಭಾಷಿಸಿ ಕಳುಹಿಸಿಕೊಟ್ಟರು.

ರಷ್ಯಾರಾಜ್ಯದ ಮುಖ್ಯಪಟ್ಟಣವಾದ ಪೆಟ್ರೊಗ್ರಾಡಿನಲ್ಲಿ ಒಣಗಿದ ಹುಲ್ಲಿನಹೊರೆಗಳು ಮಾರ್ಗಗಳಲ್ಲಿರುವ ಸ್ನಾನದಮನೆಗಳ ಬಳಿಯೂ ಬಾವಿಯ ಸಮೀಪದಲ್ಲೂ ಸ್ನಾನಮಾಡಿದವರ ಮೈಯನ್ನೊರಸಿಕೊಳ್ಳಲುಪಯೋಗಿಸಲ್ಪಡುವುದಕ್ಕಾಗಿ ಮಾರಲ್ಪಡುತ್ತಿವೆ. ಒಂದುಹೊರೆ ಹುಲ್ಲಿಗೆ 1 ಕಾಸು ಕ್ರಯವಾಗುತ್ತದೆ. ಜನರು ಅದನ್ನು ಕೊಂಡು ಮೈಯನ್ನು ಒರಸಿ ಬಿಸಾಡಿಬಿಡುವರು.

ಆಸ್ಟ್ರೇಲಿಯಾದಲ್ಲಿ 6 ಹೈನದ ಕಾರ್ಯಾಲಯದವರು ಕಳುಹಿಸಿಕೊಟ್ಟ ಹಾಲಿನಿಂದ 1 ಟನ್ 10 ಹಂಡ್ರೆಡ್‌ವೇಟ್ 1 ಕ್ವಾರ್ಟರ್ ಮತ್ತು 3 ಪೌಂಡು ತೂಕವುಳ್ಳ ಕೆನೆಯು ತೆಗೆಯಲ್ಪಟ್ಟು ಒಂದು ದೊಡ್ಡ ರೈಲ್ವೆ ಟ್ರಾಲಿ ಬಂಡಿಯಲ್ಲಿ ಒಂದು ದೊಡ್ಡ ಗುಡಾರದ ನೆರಳಿನಲ್ಲಿಡಲ್ಪಟ್ಟು ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಟ್ಟಿತು ಮತ್ತು ಅದನ್ನು ಮಡಗಿದ್ದ ಪೆಟ್ಟಿಗೆಯ ಮೇಲೆ 60 ಪಾಠಶಾಲಾ ಹುಡುಗರು ಕುಳಿತಿರುವಾಗ್ಗೆ ಅದರ ಭಾವಚಿತ್ರವು ತೆಗೆದುಕೊಳ್ಳಲ್ಪಟ್ಟಿತಂತೆ.

ಗ್ರೇಟ್‌ಬ್ರಿಟನ್ನಿನಲ್ಲಿ ಪಶುವರ್ಗಕ್ಕೆ ಮಹಾನರ್ಥವನ್ನುಂಟುಮಾಡುತ್ತಿರುವ ಕಾಲು ಮತ್ತು ಬಾಯಿ ಜ್ವರವು ಸರ್ಕಾರದವರು ಎಷ್ಟು ಪ್ರಯತ್ನಿಸಿದಾಗ್ಯೂ ಶಮನವಾಗದೆ ಇನ್ನೂ ಹೊಸಹೊಸ ಪ್ರದೇಶಗಳಿಗೆ ಹಬ್ಬುತ್ತಿದೆ. ಈ ರೋಗವಾರಂಭವಾದಂದಿನಿಂದ ಈವರೆಗೆ 45,000 ಸಾವಿರ ದನಕರುಗಳೂ 20,000 ಕುರಿ ಟಗರು ಆಡುಗಳೂ, 24,000 ಹಂದಿಗಳೂ ಕೊಲ್ಲಲ್ಪಟ್ಟಿರುವುದರಿಂದ ಅವುಗಳ ಯಜಮಾನರುಗಳಿಗೆ 1,98,75,000 ರೂಪಾಯಿಗಳು ಪರಿಹಾರ ದ್ರವ್ಯವಾಗಿ ಸರ್ಕಾರದಿಂದ ಕೊಡಲ್ಪಟ್ಟಿರುತ್ತವೆ.

ಪ್ರಿನ್ಸ್‌ಆಫ್‌ವೇಲ್ಸ್‌ರವರು ಬ್ರಿಟಿಷ್ ಚಕ್ರಾಧಿಪತ್ಯದ ಕುಷ್ಠರೋಗನಿವಾರಿಣೀ ಸಂಘದ ಪೋಷಕರಾಗಿರುವರು. ಈ ಸಂಘಾರಂಭ ಸಮಾವೇಶವು ಬರುವ ಜನವರಿಯಲ್ಲಿ ಜರುಗುವುದು. ಭರತಖಂಡದ ಸ್ಟೇಟ್ ಸೆಕ್ರೆಟರಿಯವರೂ ಅಧಿನಿವೇಶಗಳ ಸೆಕ್ರೆಟರಿಗಳೂ ಈ ಸಂಘದ ವೈಸ್‌ಪ್ರೆಸಿಡೆಂಟರುಗಳಾಗಿರುವರು. ಈಗ ಹೊಸದಾಗಿ ಕಂಡುಹಿಡಿಯಲ್ಪಟ್ಟಿರುವ ಚಿಕಿತ್ಸೆಯಿಂದ ನೂರಾರು ಕುಷ್ಠರೋಗಿಗಳು ಗುಣವನ್ನು ಹೊಂದುತ್ತಿದಾರೆ ಮತ್ತು ಇನ್ನು 3 ದಶಕ ಅಂದರೆ 30 ವರ್ಷಗಳಲ್ಲಿ ಈ ರೋಗವನ್ನೇ ನಿರ್ಮೂಲಗೊಳಿಸಬಹುದು ಎಂದು ವೈಕೌಂಟ್ ಚೆಲಮ್ಸ್‌ಫರ್ಡ್‌ರವರು ಹಸ್ತಪತ್ರಿಕೆಗಳ ಮೂಲಕ ಪ್ರಸಿದ್ಧಗೊಳಿಸಿರುತ್ತಾರೆ.

ಲಂಡನ್‌ನಗರದಲ್ಲಿ ಜರುಗುವ ಬ್ರಿಟಿಷ್ ಸಾಮ್ರಾಜ್ಯ ಮಹಾವಸ್ತುಪ್ರದರ್ಶನದಲ್ಲಿ ಉದ್ಯಾನ ವಿಚಿತ್ರ ವಿನೋದಗಳನ್ನು 7,35,00,000 ರೂ. ಗಳ ವೆಚ್ಚದಿಂದ ನಡೆಸಲು ಮತ್ತು ಅದರಲ್ಲಿ ರೈಲ್ವೆ ಮೋಟಾರು ಮೊದಲಾದ ವಾಹನದೇರ್ಪಾಟಿಗೆ 15,00,000 ರೂ. ಗಳನ್ನೂ, ಜಲಚರಗಳು ಸಮೇತವಾದ ಸರೋವರಗಳೂ, ರಾಜಭವನ ಸೌಂದರ್ಯಪ್ರದರ್ಶನಕ್ಕಾಗಿ 7,50,000 ರೂ. ಗಳನ್ನೂ ಕೃತಕ ಕಲ್ಲಿದ್ದಲಗಣಿಯ ನಿರ್ಮಾಣಕ್ಕಾಗಿ 15,00,000 ರೂ. ಗಳನ್ನೂ ರಸ್ತೆಗಳು ನೀರಿನ ಕೊಳಾಯಿಗಳು ಕಾಲುವೆಗಳು ದೀಪದ ಗ್ಯಾಸು ಇತ್ಯಾದಿಗಳಿಗಾಗಿ 15,00,000 ರೂ. ಗಳನ್ನೂ ಬ್ರಿಟನ್ ದೇಶಕ್ಕೇ ಅಪೂರ್ವತರವಾದ ನೀರಿನ ಕಾರಂಜಿ ಏರ್ಪಾಟಿಗಾಗಿ 1,50,000 ರೂ. ಗಳನ್ನೂ ವೆಚ್ಚಮಾಡಲು ಗೊತ್ತಾಗಿರುವುದು. ಈ ವಿನೋದಗಳಲ್ಲದೆ ಸಮುದ್ರದಂಡೆಯಲ್ಲಿ ಮುತ್ತುಗಳು ಸ್ಪಂಜು ಮತ್ತು ಸಮುದ್ರದೊಳಗೆ ಮುಳಿಗಿ ಹೋಗಿರುವ ನಿಧಿ ಇವುಗಳನ್ನು ಜನರು ಸಮುದ್ರದೊಳಗೆ ಮುಳಿಗಿ ಮೇಲಕ್ಕೆ ತರುವುದು ತೋರಿಸಲ್ಪಡುವುದು.

ಪತ್ರವ್ಯವಹಾರ.

☞ ಪತ್ರವ್ಯವಹಾರದ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ನ್ಯಾಯವಿಧಾಯಕಸಭೆಯ ಮೆಂಬರ ಚುನಾವಣೆ.

ಮೈಸೂರು ನ್ಯಾಯವಿಧಾಯಕಸಭೆಯ ಮೆಂಬರು ಚುನಾವಣೆಯು ಬರುವ ಫೆಬ್ರವರಿ 15ನೇ ತಾರೀಖಿನದಿವಸ ಜರಗುವುದು ಸರಿಯಷ್ಟೆ. ಈ ಸಭೆಗೆ ಮೆಂಬರಾಗಲು ಶಿವಮೊಗ್ಗ ಡಿಸ್ಟ್ರಿಕ್ಟಿನ ಪರವಾಗಿ ಮ|| ರಾ|| ಹನಸವಾಡಿ ಬಸವಪ್ಪನವರು ಉಮೇದುವಾರರಾಗಿ ನಿಂತಿದ್ದಾರೆ. ಇವರು ಅನೇಕವರ್ಷಗಳಿಂದ ತಾಲ್ಲೂಕುಬೋರ್ಡು, ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಸೆಂಟೇಟಿವ್ ಅಸೆಂಬ್ಲಿ ಮುಂತಾದ ಸಭೆಗಳಲ್ಲಿ ಮೆಂಬರಾಗಿದ್ದು ಕೇವಲ ಅನುಭವಶಾಲಿಗಳಾಗಿರುವರಲ್ಲದೆ ಕಳೆದ ನ್ಯಾಯವಿಧಾಯಕ ಸಭೆಯಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಪರವಾಗಿ ಮೆಂಬರಾಗಿದ್ದು ದೇಶಸೇವೆಯನ್ನು ಸಮರ್ಥತೆಯಿಂದ ಮಾಡಿದವರಾಗಿರುತ್ತಾರೆ. ಪ್ರಜಾಸಮೂಹದಲ್ಲಿ ಇವರಿಗಿರುವ ಬಳಕೆಯು ಅದ್ವಿತೀಯವಾದುದಾಗಿರುತ್ತೆ. ಇವರು ಕೇವಲ ಉತ್ಸಾಹಿಗಳೂ ಅನುಭವಶಾಲಿಗಳೂ, ಸಮರ್ಥರೂ ಆಗಿರುವುದರಿಂದ ನ್ಯಾಯವಿಧಾಯಕಸಭೆಯ ಮೆಂಬರಾಗಲು ಇವರಿಗೆ ಶಿವಮೊಗ್ಗ ಡಿಸ್ಟ್ರಿಕ್ಟಿನ ಸಕಲ ಓಟರುಗಳೂ ತಮ್ಮ ಓಟನ್ನು ಕೊಟ್ಟು ಪ್ರೋತ್ಸಾಹಿಸುವರೆಂದು ನಂಬಿದ್ದೇನೆ.

ಎಚ್. ಲಿಂಗಪ್ಪ, ಅಡ್ವೋಕೇಟ್, ಶಿವಮೊಗ್ಗ.

ಹಾವೇರಿ.

ಈ ನಮ್ಮ ಗ್ರಾಮಕ್ಕೆ ಸುಮಾರು ಒಂದು ಒಂದೂವರೆ ತಿಂಗಳಗಳ ಕೆಳಗೆ ಹುಲಗೇರಿ ಹಾಲಸಿದ್ಧೇಶ್ವರ ನಾಟಕ ಮಂಡಳಿಯವರು ಬಂದು ತಮ್ಮ ಲೋಕಪ್ರಿಯವಾದ ನಾಟಕವನ್ನು ಆಡಿ ತೋರಿಸಿ ಬಹು ಜನರ ಪ್ರೀತಿಗೆ ಪಾತ್ರರಾದರು. ಈ ಕಂಪನಿಯ ಮಾಲಕರಾದ ಜಟ್ಟೆಪ್ಪನವರು ಶಾಂತಸ್ವಭಾವದವರೂ ಉದಾರಿಗಳೂ ಆಗಿರುವರು. ಇವರು ಇಲ್ಲಿ ಸ್ಥಾಪನವಾಗಿರುವ ಶ್ರೀ ಸಿದ್ಧಲಿಂಗೇಶ್ವರ ಲೈಬ್ರರಿಗೆ ತಾ|| 13-11-23ನೇ ಮಂಗಳವಾರ ದಿವಸ ಆಡಿದ "ಶ್ರೀಕೃಷ್ಣಲೀಲೆ" ಎಂಬ ಆಖ್ಯಾನದ ಉತ್ಪನ್ನವನ್ನು (ಖರ್ಚು ಹೋಗಲಾಗಿ ಉಳಿದ 101 ರೂ.) ಕೊಟ್ಟರು. ಈ ಲೈಬ್ರರಿಯ ಕಾಯಂ ಫಂಡು ಚನ್ನಾಗಿದ್ದು, ದಿನೇ ದಿನೇ ಅಭಿವೃದ್ಧಿಹೊಂದುತ್ತಿರುವದು. ಮೇಲ್ಕಂಡ ನಾಟಕ ಮಂಡಳಿಯ ಭಕ್ತಿ ರಸಪ್ರಧಾನಗಳಾದ ಆಖ್ಯಾನವನ್ನು ನೋಡಿ ಇಲ್ಲಿಯ ಮೇಲ್ಕಂಡ ಲೈಬ್ರರಿ ಸಂಘದವರೂ, ವೀರಶೈವ ತರುಣ ಸಂಘದವರೂ ಕಂಪನಿಗೆ ಒಂದೊಂದು ಸುವರ್ಣಪದಕಗಳನ್ನು ಅರ್ಪಿಸಿ ಗೌರವಿಸಿದರು. ಇದೇ ಪ್ರಕಾರ ಕಂಪನಿಯು ದಿನದಿನಕ್ಕೆ ಅಭಿವೃದ್ಧಿಯನ್ನು ಹೊಂದಲೆಂದು ಇಚ್ಛಿಸುತ್ತೇನೆ.

"ಕಾವ್ಯತೀರ್ಥ" ಗುರುಮೂರ್ತಿಶಾಸ್ತ್ರಿ ಹಿರೇಮಠ,
ಪಾಠಶಾಲಾಧ್ಯಾಪಕ ಹಾವೇರಿ.

ಚಿತ್ರದುರ್ಗದ ತಾಲ್ಲೂಕು ಹಿರೇಗುಂಟನೂರು.

ಈ ಗ್ರಾಮಕ್ಕೆ ಭಾದ್ರಪದಮಾಸದ ಲಾಗಾಯಿತು ಶುದ್ಧಾಂಗವಾಗಿ ಮಳೆಬಾರದೆ ಬಹಳ ಜಮೀನ್ ಬೀಳಾಗಿಹೋಯಿತು. ಧಾರಣೆವಾಸಿ ಒಂದಕ್ಕೆ ಎರಡಾಗಿದೆ. ಹೇಗಾದರೂ ಕಷ್ಟದಿಂದ ಜೀವನಮಾಡೋಣವೆಂದರೆ, ಗ್ರಾಮದ ಹವ ಕೆಟ್ಟುಹೋಗಿ ಬಹುಜನ ರೋಗಗ್ರಸ್ತರಾಗಿರುವರಲ್ಲದೆ ಹೋದತಿಂಗಳಲ್ಲಿ 20 ರವರಿವಿಗೂ ಮರಣನಡದಿರುತ್ತೆ. ಹೀಗೆ ಕೆಲಕಾಲ ನಡೆದರೆ ಬಹಳ ನಷ್ಟವಾಗುತ್ತೆ. ಈ ಗ್ರಾಮದ ಪಟೇಲರು ಆಗಿಯೂ ಬಹುಜನ ಬಡವರಿಗೆ ಕಷ್ಟಕಾಲದಲ್ಲಿ ಉದಾರದಿಂದ ಸಹಾಯಮಾಡಿದವರಾಗಿಯೂ, ಅಮಲ್ದಾರು ಮ|| ಲಿಂಗಣ್ಣಯ್ಯ ಪ್ರೆಸಿಡೆಂಟ್‌ತನದಲ್ಲಿ ಸ್ಥಾಪಿತವಾದ ಸಂಘದ ವೀರಶೈವ ವಿದ್ಯಾರ್ಥಿಫಂಡಿಗೆ 5000 ರೂ. ಧರ್ಮಸಹಾಯಮಾಡಿಯೂ ಚಿಕ್ಕವಯಸ್ಸಿನಲ್ಲಿ ಶಾಂತತೆ ಕ್ಷಮೆ ದಯಾಸರಗುಣಭರಿತರಾಗಿಯೂ ಇದ್ದ ಪಟೇಲ್ ಬಸಪ್ಪನವರು ಇಲ್ಲಿಯ ಹವಾದೋಷಕ್ಕೆ ಶಿಲ್ಕಿ ಪಿತ್ತರೋಗಗ್ರಸ್ತರಾಗಿ ಹೊಳಲ್ಕೆರೆ ತಾಲ್ಲೂಕು ಹುಲೀಮಳಲಿಗೆಹೋಗಿ ಅಲ್ಲಿಯೂ ಗುಣಹೊಂದದೆ 7-12-1923 ನೇ ಶುಕ್ರವಾರ ರಾತ್ರೆ 2 ಘಂಟೆಗೆ ಶಿವಾಧೀನರಾದರೆಂಬ ಸಂಗತಿ ಕೇಳಿ ವಿಷಾದಿಸುತ್ತೇನೆ. ಈ ಪಟೇಲ್ ಬಸಪ್ಪನವರು ತುಂಬಾ ಅನುಕೂಲಸ್ಥರಾಗಿಯೂ ಈ ಗ್ರಾಮದ ಶ್ರೀ ದ್ಯಾಮಲಾಂಬ ಅಮ್ಮನವರ ದೇವಸ್ಥಾನದ ಧರ್ಮದರ್ಶಿಗಳಾಗಿಯೂ ಇದ್ದು ಶ್ರೀ ದೇವತಾ ಕಾರ್ಯಗಳನ್ನು ಬಹಳ ಮುತವರ್ಜಿಯಿಂದ ನಡಿಸಿ ಶ್ರೀ ದೇವತೆಯ ಸಾವಿರಾರುಮನೆ ಭಕ್ತರಮೆಚ್ಚಿಗೆಗೆ ಪಾತ್ರರಾಗಿದ್ದರು. ಇವರ ವಿಯೋಗದುಃಖಕ್ಕೆ ಗುರಿಯಾದ ಕುಟುಂಬಕ್ಕೆ ಶ್ರೀ ಭಗವಂತನು ಸಮಾಧಾನವನ್ನುಂಟುಮಾಡಿ ಕಾಪಾಡಲೆಂದು ಹಾರೈಸುತ್ತೇನೆ. ಗ್ರಾಮದ ಮುಖ್ಯ ಜನರಿಗೆ ಹೀಗೆ ಬಹಳ ತೊಂದರೆಸಂಭವಿಸುವುದರಿಂದ ಇಲ್ಲಿಯ ಸ್ಕೂಲ್ ಕೆಲಸಗಳು ಮೇಲ್ವಿಚಾರಣೆಯಿಲ್ಲದೆ ಸಮರ್ಪಕವಾಗಿ ನಡಿಯುವದಿಲ್ಲ. ಮೇಲ್ಪಟ್ಟಾಫೀಸರು ಆರು ತಿಂಗಳಿಗೊಂದಾವರ್ತಿಯಾದರೂ ನಿಗಾಕೊಟ್ಟರೆ ಇಷ್ಟು ತೀರ ಅಶ್ರದ್ಧೆಯಿಂದ ನಡಿಯುವದಿಲ್ಲ. ಇನ್ನು ಮುಂದೆಯಾದರೂ ಎಜುಕೇಷನ್ ಇಲಾಖೆಯವರು ನಿಗಾ ಇಡುತ್ತಾರಾಗಿ ಪೂರ್ಣನಂಬಿರುತ್ತೇನೆ.

ಚಂದಾದಾರ್.

ಸದ್ಗುಣಾಭರಣಭೂಷಿತರಾದ ಸತ್ಯಧರ್ಮಾಭಿಮಾನಿಗಳ ಶ್ರೀ ಪಾದಪದ್ಮಂಗಳಿಗೆ.

ಮಹನೀಯರೇ,

ಶಿವಕಥಾ ಬಹುಮಾನವೆಂಬದಾಗಿ ಒಬ್ಬರ ಬಹುಮಾನಸಂಗತಿಯನ್ನು ಪ್ರಕಟಗೊಳಿಸುವುದು ಮತ್ತೊಬ್ಬರ ಶಿವಕಥಾಬಹುಮಾನಸಂಗತಿಯನ್ನು ಪ್ರಕಟಗೊಳಿಸದೆ ಉದಾಸೀನಮಾಡುವುದು ನ್ಯಾಯವಲ್ಲ. 1905ನೇ ಇಸವಿಯಲ್ಲಿ ಬೆಂಗಳೂರು ಶ್ರೀಮದ್ವೀರಶೈವ ಮಹಾಸಭೆಯವರ ಗಾರ್ಡನ್ ಪಾರ್ಟಿಯಲ್ಲಿ ಮತ್ತು 1907ನೇ ಇಸವಿ ಸೋಲಾಪುರದ ಶ್ರೀಮದ್ವೀರಶೈವ ಮಹಾಸಭೆಯಲ್ಲಿ ಮತ್ತು 1912 ನೇ ಇಸವಿಯಲ್ಲಿ [illegible] ನೆರವೇರಿಸಲ್ಪಟ್ಟ ಕಾರೋನೇಷನ್ ಮಹಾಸಭಾಮಹೋತ್ಸವದಲ್ಲಿ ಮತ್ತು 1915 ನೇ ಇಸವಿಯಲ್ಲಿ ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾಮಿಯವರ ದ್ವಾದಶವರುಷ ಪಟ್ಟಾಭಿಷೇಕಮಹೋತ್ಸವ ಸಮಯದಲ್ಲಿ ಮತ್ತು 1919 ನೇ ಇಸವಿಯಲ್ಲಿ (Cattie show at Harihar) ಇವೇ ಮೊದಲಾದ ಮಹಾಸ್ಥಳಗಳಲ್ಲಿ ಶಿವಕಥೆಗಳನ್ನು ಮಾಡಿದ ಮೈಸೂರು, ಬ್ರಂ|| ಶ್ರೀ|| ವೇ|| ಶಿವಕಥಾಪಂಡಿತ ಬಿರುದಾಂಕಿತರಾದ ಶಿವಯ್ಯ ಶಾಸ್ತ್ರಿಗಳವರಿಗೆ ಪ್ರಾಪ್ತವಾದ ಬಹುಮಾನಸಂಗತಿಗಳಾವವೂ ಈವರಿವಿಗೂ ಪ್ರಕಟವಾಗಿರುವುದಿಲ್ಲ. ಮತ್ತು 1921 ನೇ ಇಸವಿ ನವಂಬರ್ ತಾ|| 11 ನೇ ಶುಕ್ರವಾರ ಬೆಂಗಳೂರು ಮೆಜೆಸ್ಟಿಕ್ ಥಿಯೇಟರ್ ಬಳಿ ಹಾಕಿದ್ದ ಗುಬ್ಬಿ, ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಕಂಪನಿಯವರ ಧನಲಕ್ಷ್ಮೀಥಿಯೇಟರಿನಲ್ಲಿ ಮ|| ರಾ|| ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ., ಯವರ ಅಧ್ಯಕ್ಷತೆಯಿಂದ ನೆರವೇರಿಸಲ್ಪಟ್ಟ ಶಿವಕಥೆಗಾದ ಬಹುಮಾನಸಂಗತಿಯೂ ಕೂಡ ಇದುವರೆಗೆ ಪ್ರಕಟವಾಗಿರುವುದಿಲ್ಲ. 1923 ನೇ ಇಸವಿ ಡಿಸೆಂಬರ್ ತಾ|| 11 ನೇ ಮಂಗಳವಾರ ಬೆಂಗಳೂರು ಸಿಟಿ ನಗರ್ತರಪೇಟೆ ಭಕ್ತಮಂಡಲಿಯವರ ಇಷ್ಟದಂತೆ, ದೊಡ್ಡಬಳ್ಳಾಪುರದ ನವರಸಶಿವಕಥಾಪಂಡಿತ ಶಿವದೇವಶಾಸ್ತ್ರಿಗಳಿಗೆ ಮ|| ರಾ|| ಜಿ. ಪರಮಶಿವಯ್ಯ ಬಿ.ಎ., ಎಲ್.ಎಲ್., ಬಿ. ಯವರ ಹಸ್ತದಿಂದ ಶುದ್ಧವಾಣಿ ಶಿವಕಥಾಪಂಡಿತ ಎಂಬ ಪ್ರಶಸ್ತಿಯುಳ್ಳ ರತ್ನಖಚಿತವಾದ ಭಂಗಾರದ ಮೆಡಲನ್ನು ಕೊಡಿಸಿದರೆಂಬ ಸಮಾಚಾರವನ್ನು ನಿಮ್ಮ ಪತ್ರಿಕಾದ್ವಾರ ತಿಳಿದು ತುಂಬಾ ಸಂತೋಷವಾಯಿತು. ಆದರೆ ಶಿವಕಥಾಬಹುಮಾನ ಪ್ರಕಟನಾವಿಷಯಗಳ ಪಕ್ಷಪಾತವು ನಡೆದಿರುವದರಿಂದ ಮನಸ್ಸಿಗೆ ತುಂಬಾ ವ್ಯಸನವುಂಟಾಗಿದೆ. ಈ ವ್ಯಸನವು ನಿವಾರಣೆಯಾಗಬೇಕಾದರೆ ಶಿವಕಥಾಬಹುಮಾನಪ್ರಶಸ್ತಿಗಳನ್ನು ಚನ್ನಾಗಿತಿಳಿದ ತಮ್ಮಂಥಾ ದೊಡ್ಡ ಮನುಷ್ಯರ ತಿಳುವಳಿಕೆಯಿಂದಲೇ ನಿವಾರಣೆಯಾಗಬೇಕಲ್ಲದೆ ಅನ್ಯಥಾ ಆಗಲಾರದೆಂದು ನಂಬಿರುವ,

ಮೈಸೂರು ಸುಪ್ರಜಾಮಿತ್ರಮಂಡಲಿ ಸೇವಕಾನುಸೇವಕನಾದ
ಓರ್ವ ಕಿಂಕರ.

ಕದಡಿ ರಾಜನಿಷ್ಠ ಸಭೆಯು.

ಗದಗ ತಾ|| ಕದಡಿಯಲ್ಲಿ ಶ್ರೀ ರಾಮಪ್ಪ ಗೋಜನೂರ ಇವರ ಅಧ್ಯಕ್ಷತೆಯು ಕೆಳಗೆ ರಾಜನಿಷ್ಠ ಸಭೆಯು ನೆರೆದು ಗಾವದವಾಡ ಹಡಗಲಿ ಹೊನ್ನಾಪೂರ ಕದಡಿ ಗ್ರಾಮಗಳ ಜನರು ಹಾಜರಿದ್ದು ಮುಂದಿನ ಠರಾವುಗಳು ಪಾಸುಮಾಡಲ್ಪಟ್ಟವು. (1) ನಾವೆಲ್ಲರೂ ರಾಜನಿಷ್ಠೆಯುಳ್ಳವರಾಗಿ "ಆಂಗ್ಲಪ್ರಭುತ್ವದ ಆಳಿಕೆಯು ಸ್ಥಿರವಾಗಿರಲಿ" ಎಂಬ ಸದಿಚ್ಛೆಯನ್ನು ಈ ಸಭೆಯು ವ್ಯಕ್ತಪಡಿಸುತ್ತದೆ. ಹೋದ ವರ್ಷ ದುಷ್ಕಾಲವಿದ್ದ ಮೂಲಕ ನಮ್ಮ ಗ್ರಾಮದ ಸರಕಾರಿ ತಪ್ತೆತಹಕೂಪ ಆಗಿರುತ್ತದೆ. ಈ ವರ್ಷವಾದರೂ ಅತಿ ಸ್ವಲ್ಪ ಮಳೆಯಾದದ್ದರಿಂದ ಕೆಲವು ಜಮೀನುಗಳು ಪಡಬಿದ್ದಿರುತ್ತವೆ ಕೆಲವು ಜಮೀನಿನೊಳಗಿನ ಪೀಕು ಒಣಗಲಿಕ್ಕೆ ಹತ್ತಿರುತ್ತವೆ. ಇಂಥ ದುಸ್ಥಿತಿಯಿಂದ ಎಷ್ಟೋ ಬಡಜನರು ಊರುಬಿಟ್ಟು ಉದರ ಪೋಷಣಾರ್ಥವಾಗಿ ಹೋಗಿರುತ್ತಾರೆ. ಕಾರಣ ಹೋದವರ್ಷದ ಹಾಗೂ ಈ ವರ್ಷದ ಸರಕಾರಿ ತೆರಿಗೆಯನ್ನು ಪೂರಾಮಾಫಮಾಡಬೇಕೆಂದು ಈ ಸಭೆಯು ಸರಕಾರಕ್ಕೆ ವಿನಂತಿಮಾಡಿಕೊಳ್ಳುತ್ತದೆ. (3) ನಮ್ಮ ಗ್ರಾಮ ಹಾಗೂ ಅಜೂಬಾಜೂ ಗ್ರಾಮಗಳ ಶೀಮೆಯಲ್ಲಿ ಉಡಾಳ ದನಗಳ ಮತ್ತು ಚಿಗುರೆಯ ಹಿಂಡುಗಳ ಹಾವಳಿಯು ಹೆಚ್ಚಾಗಿ ಬಿತ್ತಿದ ಯಾವತ್ತು ಪೈರು ತಿಂದುಬಿಡುತ್ತವೆ. ಇವುಗಳ ಉಪದ್ರವ ಆಗದಂತೆ ಬಡರೈತರನ್ನು ಸಂರಕ್ಷಣೆ ಮಾಡಬೇಕೆಂದು ಈ ಸಭೆಯು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತದೆ. (4) ನಮ್ಮ ಭರತಖಂಡದ ಎಷ್ಟೋ ಜನಾಂಗಗಳಲ್ಲಿ ವಿದ್ಯೆಯಲ್ಲಿ ಹಿಂದುಳಿದ ಜನಾಂಗವೆಂದರೆ ಕುಡ ಒಕ್ಕಲಿಗ ಜಾತಿಯಂದೇ ಹೇಳಬಹುದು. ದಯಾಳು ಸರಕಾರದವರು. ಈ ಜನಾಂಗದ ವಿದ್ಯಾಭಿವೃದ್ಧಿಯನ್ನು ಕುರಿತು ಸುಲಕ್ಷಪೂರ್ವಕ ಈ ಕೆಳಗೆ ಬರೆದ ಸವಲತ್ತುಗಳನ್ನು ಕೊಡಬೇಕು. (ಅ) ಯಾವತ್ತು ಹಾಯ ಸ್ಕೂಲ ಮತ್ತು ಕರ್ನಾಟಕ ಕಾಲೇಜುಗಳಲ್ಲಿ ಕಲಿಯುವ ಈ ಜ್ಯಾತಿ ವಿದ್ಯಾರ್ಥಿಗಳಿಗೆ ಯೋಗ್ಯ ಸ್ಕಾಲರಶಿಪ್ಪ ಕೊಡಬೇಕು. (ಬ) ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ಗ್ರೇಸು ಮಾರ್ಕುಗಳನ್ನು ಕೊಟ್ಟು ಪಾಸುಮಾಡಿಸಬೇಕು. (ಕ) ಈ ಜ್ಯಾತಿಯ ಜನರು ಪ್ರಾಚೀನ ಕಾಲದಲ್ಲಿಯೂ ಹಾಗೂ ಬ್ರಿಟಿಶರ ಆಳಿಕೆಯ ಕಾಲದಲ್ಲಿಯೂ ಸರಕಾರಿ ಸಣ್ಣ ಅಥವಾ ದೊಡ್ಡ ನೌಕರಿಯಲ್ಲಿ ಒಬ್ಬನಾದರೂ ಇರುವದಿಲ್ಲ. ಕಾರಣ ಎಲ್ಲ ಜಾತಿಯವರಿಗಿಂತ ಮೊದಲು ಈ ಜಾತಿಯ ಜನರಿಗೆ ಸರಕಾರಿ ನೌಕರಿಗಳನ್ನು ಕೊಡಬೇಕು. ಈ ಪ್ರಕಾರ ಮಾಡುವದರಿಂದ ಈ ಸಮಾಜದ ಜಾಗ್ರತೆಯುಂಟಾಗುವದು. ಕಾರಣ ಸರಕಾರದವರು ಈ ಹಿಂದುಳಿದ ಜನಾಂಗದ ಬಗ್ಗೆ ವಿಶೇಷ ಗಮನಕೊಡುವರೆಂದು. ಈ ಸಭೆಯು ಸರಕಾರಕ್ಕೆ ಬೇಡಿಕೊಳ್ಳುತ್ತದೆ.

ರಾಮಪ್ಪಾ ಸಕರಪ್ಪಾ ಗೋಜನೂರ
ಅಧ್ಯಕ್ಷ
ಸಾ|| ಕದಡಿ

ಬಿ. ಜಿ. ಪಾಟೀಲ ಕದಡಿ,
ಸೆಕ್ರೆಟರಿ
ರಾಜನಿಷ್ಠ ಸಂಘ.

ಯಾಚಕರ ಹಾವಳಿಯನ್ನು ನಿಲ್ಲಿಸುವುದು.

ಪೂರ್ವಕಾಲದಲ್ಲಿ ಕೆಲವರವಿನಹ ಇತರರು ಯಾಚನೆಯನ್ನುಮಾಡುವುದು ಎಂದರೆ ಬಹಳ ಅಗೌರವವಾದ ಕೆಲಸವೆಂದು ತಿಳಿದಿದ್ದರು. ಈಗಲಾದರೋ ಯಾಚನೆಯಷ್ಟು ಸುಖವಾದ ಜೀವನವು ಮತ್ತಾವುದೂ ಇಲ್ಲವೆಂದು ತಿಳಿದು ಎಲ್ಲರೂ ಯಾಚನೆಯನ್ನು ಮಾಡುವವರಾಗಿದ್ದಾರೆ. ಯಾವಸಂದಿಯಲ್ಲಿ ನೋಡಿದರೂ ಭಿಕ್ಷುಕರೇ ಕಾಣಿಸುವರು. ಐದು ವರ್ಷದ ಹುಡುಗನಿಂದ, ಯೌವನಸ್ಥ ವೃದ್ಧರವರೆಗೂ ಯಾಚನೆಗೆ ಹೊರಡುವರು. ಯಾಚನೆಗೆ ಯಾವ ಜನರು ಹೊರಡಬೇಕು ಎಂದು ತಿಳಿದಿದ್ದರೂ ಇವರು ಯಾಚನೆಯನ್ನು ಮಾಡುವುದಕ್ಕೆ ಸೋಮಾರಿತನವೇ ಮುಖ್ಯಕಾರಣ. ಯಾಚನೆಗೆ ಕುರುಡರು, ಕುಂಟರು, ಹೆಳವರು ಇವರೇ ಮೊದಲಾದ ಅಂಗಹೀನರೂ, ವೃದ್ಧರೂ, ಸನ್ಯಾಸಿಗಳೂ ಹೊರಡುವುದು ನ್ಯಾಯವಾಗಿದೆ. ಆದರೆ ಯೌವನಸ್ಥರಾಗಿ ಟೊಣ್ಣರಾಗಿದ್ದರೂ ಯಾಚನೆಗೆ ಬರುತ್ತಾರೆ. ಇಂಥವರಿಗೆ ದಾನಮಾಡುವುದರಿಂದ ಸೋಮಾರಿಗಳಾಗಿಯೂ, ಪ್ರಪಂಚಕ್ಕೆ ಯಾವ ಉಪಕಾರಿಗಳಾಗದೆಯೂ, "ಪರೋಪಕಾರಾರ್ಥಮಿದಂ ಶರೀರಂ" ಎಂಬ ನುಡಿಗೆ ವ್ಯತಿರಿಕ್ತವಾಗಿಯೂ ಆಗುತ್ತಾರೆ ಮತ್ತು ಹೀಗೆ ಸಂಪಾದಿಸಿದ ದುಡ್ಡನ್ನು ಜೂಜಾಡುವುದಕ್ಕೂ, ಕುಡಿಯುವುದಕ್ಕೂ ಉಪಯೋಗಿಸುತ್ತಾರೆ. ಇಂಥವರಿಗೆ ಯಾರು ಧರ್ಮವನ್ನುಮಾಡುತ್ತಾರೋ ಅವರಿಗೆ ಯಾವ ಪುಣ್ಯಫಲವೂ ಇಲ್ಲದೆ ಮತ್ತಷ್ಟು ಕರ್ಮವುಸುತ್ತಿಕೊಳ್ಳುತ್ತದೆ. ಇವರು ಹೀಗಾಗುವುದಕ್ಕೆ ಯಾರೇಕಾರಣರು. ಏಕಕ್ಕೆಂದರೆ ಅವರಿಗೆ ಭಿಕ್ಷವನ್ನುನೀಡುವುದರಿಂದ ಅವರು ಜೀವನದ ಬೇರೆಯೋಚನೆಯಾವುದನ್ನೂ ಮಾಡುವುದಿಲ್ಲ. ಕೆಲವರು ತಮ್ಮ ಹುಡುಗರನ್ನು ಭಿಕ್ಷೆಗೆ ಕಳುಹಿಸಿದರೆ ಸ್ವಲ್ಪ ಅಕ್ಕಿಯನ್ನಾದರೂ ತರುತ್ತಾರೆ ಎಂದು ತಿಳಿದು ವಿದ್ಯಾಭ್ಯಾಸವನ್ನೂ ಬಿಡಿಸಿ ಕಳುಹಿಸುತ್ತಾರೆ. ಇಂಥವರು ಪಕ್ಕಕ್ಕೆ ಜೀವನನಡೆಯುವುದನ್ನು ನೋಡುತ್ತಾರೆಯೇಹೊರತು ಮುಂದೆ ಹುಡುಗರ ಗತಿಏನು ಎಂದು ಯೋಚಿಸುವುದಿಲ್ಲ. ತಮ್ಮ ಮಕ್ಕಳ [illegible] ಕಲ್ಪಿಸುತ್ತಾರೆ. ಆ ಹುಡುಗರು ದೊಡ್ಡವರಾ[illegible] ಹೆಚ್ಚಾಗಿದೆ. ಈ ಪದ್ಧತಿಯು ಬ್ರಾಹ್ಮಣರಲ್ಲಿಯೂ ಬಹಳ ಹೆಚ್ಚಾಗಿದೆ. ಇವರ ಮನೆಗೆ ಹೋ[illegible] ತಾಳಲಾರದೆ ಸರ್ಕಾರದವರು ಭಿಕ್ಷುಕರು ಯಾರೂ ಮನೆ[illegible]ರುವ ಒಂದು ಸಂಸ್ಥೆ[illegible], ಅಂಗಹೀನರಾದವರು ಮಾತ್ರ ಪ್ರಜೆಗಳೀವರ್ಗದಿಂ[illegible] ಸಹಾಯವನ್ನು ಪಡೆಯಬೇಕು. ಯಾರಾದರೂ ಮನೆಗಳಿಗೆ ಹೋದರೆ ಅವರ[illegible]ನೆಯು ಹಾಕಲ್ಪಡುತ್ತದೆ, ಎಂದು ಬೆಂಗಳೂರಿನಲ್ಲೂ ಮೈಸೂರಿನಲ್ಲಿಯೂ [illegible]ದರೆ ದೇಶಾಭಿವೃದ್ಧಿಯೂ, ಕೈಗಾರಿಕೆ, ಕುಶಲವಿದ್ಯೆ, ವಿದ್ಯಾಭ್ಯಾಸಾಭಿ[illegible] ಇವೇ ಮೊದಲಾದ ಪ್ರಯೋಜನವಾಗುವುದಲ್ಲದೆ ಯಾಚಕರ ಸಂಖ್ಯೆಯು [illegible] ಆಗುತ್ತದೆ. ಅದ್ದರಿಂದ ನಮ್ಮ ಘನಹೊಂದಿದ ಸರ್ಕಾರದವರೂ, [illegible]ರಾದ ಪ್ರಜೆಗಳೂ ಇದಕ್ಕೆ ಗಮನಕೊಟ್ಟು ಅದಷ್ಟು ಜಾಗ್ರತೆಯ[illegible] ವಿಧಿಯನ್ನುಮಾಡಿ ಜಾರಿಗೆ ತರಬೇಕೆಂದು ಕೋರುತ್ತೇನೆ. ಏಕೆಂದರೆ ದೊಡ್ಡ ಪಟ್ಟಣಗಳಾದ ಬೆಂಗಳೂರು ಮೈಸೂರು ಪ್ರಜೆಗಳಿಗೆ ಅವರಿಂದ ಬಹಳ ತೊಂದರೆಯಾಗಿದೆ.

ಓರ್ವ ಬಾಲಕ.

ಹುಲಕೋಟಿ ರಾಜನಿಷ್ಠಾ ಸಭೆಯು.

ತಾ|| 10-12-1923 ನೇ ಇಸವಿ ಸೋಮವಾರ 4 ಗಂಟೆಗೆ ಇಲ್ಲಿಯ ಕೋ|| ಸೊಸಾಯಟಿಯ ಜನರಲ್ ಹಾಲಿನಲ್ಲಿ ಧಾರವಾಡ ಜಿಲ್ಲಾ ಕಲೆಕ್ಟರ ಸಾಹೇಬ ಬಹಾದ್ದೂರ ಮೆ|| ಜಿ. ಮಾಂಟಿಥ ದೊರೆಗಳವರ ಅಧ್ಯಕ್ಷತೆಯ ಕೆಳಗೆ ರಾಜನಿಷ್ಠಾ ಸಭೆಯು ಕೂಡಿತ್ತು. ಈ ಸಭೆಗೆ ಮೆ|| ಕಲೆಕ್ಟರ ಸಾಹೇಬರವರ ಪತ್ನಿಯವರು ಆಗಮಿಸಿದ್ದರಲ್ಲದೆ ಗದಗ ತಾಲೂಕ ಸದದ ಮಾಮಲೇದಾರ ಮೆ|| ಸಂಡಿತ, ಹಿಂದಿನ ಆಕ್ಟಿಂಗ ಮಾಮಲೇದಾರ ಮೆ|| ಅಚಲಕರ, ಸಹಕಾರೀಸಂಘಗಳ ಮೆ|| ಶೆಟ್ಟಿ ಬಿ.ಎ., ಜಿ. ಅಸಿ|| ರಿಜಸ್ಟ್ರಾರ, ಮೆ|| ಕೆ. ಆರ್. ಕುಲಕರಣಿ ಎಮ್. ಎ. ಆಡಿಟರ, ಮೆ|| ಎಮ್. ಎಸ್. ಕುಲಕರಣಿ ಡಿಸ್ಟ್ರಿಕ್ಟ ಆನರರಿ ಆರ್ಗನಾಯಝರ, ಡಾ|| ಮುಳಕೀ ಗದಗ, ಮಿ|| ಫಕೀರಪ್ಪ ಲಕ್ಷ್ಮೇಶ್ವರ ಕುರ್ತಕೋಟಿ ಡಿ|| ಲೋ|| ಬೋ|| ಮೆಂಬರ, ಮಿ|| ತಿಮ್ಮಣ್ಣ ಮುದಿರಡ್ಡಿ ಹೆಬಸೂರ, ಮಿ|| ದೇವನಗೌಡ ಪಾಟೀಲ, ಬಿ.ಎ., ನಲವಡಿ ಮುಂತಾದ ಪ್ರಮುಖ ಮುಂದಾಳುಗಳು ಬಂದಿದ್ದರು. ಮತ್ತು ಹುಲಕೋಟಿ ಯೂನಿಯನ್ ಹದ್ದಿನ ಹೊಸಹಳ್ಳಿ, ಅಸುಂಡಿ, ಮಲಸಮುದ್ರ, ಚಿಕ್ಕಹಂದಿಗೋಳ, ಹಿರೇಹಂದಿಗೋಳ ಜನರೂ, ಗದಗ, ಕುರ್ತಕೋಟಿ, ಬಿಂತದಕಟ್ಟಿ, ನಲವಡಿ, ಅಂತೂರ, ಬೆಂತೂರ ಮೊದಲಾದ ಗ್ರಾಮಗಳ ಜನರೂ ಸೇರಿ ಸಭೆಗೆ ಸುಮಾರು 700-800 ವರೆಗೆ ಬಂದಿದ್ದರು. ಪ್ರಾರಂಭದಲ್ಲಿ ಬಾಲಬಾಲಕಿಯರು ಸ್ವಾಗತಪರ ಹಾಡುಗಳನ್ನು ಸುಸ್ವರದಿಂದ ಹಾಡಿದಮೇಲೆ ಮಿ|| ಸಿದ್ದನಗೌಡ ಹಿರೇಗೌಡರ ಇವರು ಸ್ವಾಗತಪರ ಭಾಷಣಮಾಡಿದರು. ಅವರು ತಮ್ಮ ಭಾಷಣದಲ್ಲಿ ಹುಲಕೋಟಿಯ ಪ್ರಾಚೀನ ಹಾಗು ಅರ್ವಾಚೀನ ಇತಿಹಾಸವನ್ನು ಹೇಳಿದರು. ಅನಂತರ ಗದಗ ತಾಲೂಕ ಡೆವಲೆಪ್‌ಮೆಂಟ ಅಸೋಸಿಯೇಶನ್, ಹುಲಕೋಟಿ ಕೋ|| ಕ್ರೆ|| ಸೊಸಾಯಟಿ, ಸ್ಕಾ. ಯೂನಿಯನ್, ಹುಲಕೋಟಿ ಕೋ|| ಗ್ರಾ|| ಯೂನಿಯನ್ ಎಜ್ಯುಕೇಶನ್ ಸೊಸಾಯಟಿ ಮುಂತಾದ ಸಂಸ್ಥೆಗಳ ರಿಪೋರ್ಟುಗಳನ್ನು ಮಿ|| ಯಲ್ಲಪ್ಪಗೌಡ ಮರಿಯಪ್ಪಗೌಡರ ಬಿ.ಎ., ಮಿ|| ಕೆ. ಆರ್. ಕುಲಕರಣಿ ಎಮ್. ಎ. ಮೊದಲಾದವರು ಓದಿಹೇಳಿದ ಬಳಿಕ ಇಲ್ಲಿಯ ಕನ್ನಡ ಗಂಡುಮಕ್ಕಳ ಶಾಲೆಯ ಹೆಡ್‌ಮಾಸ್ತರ ಮಿ|| ಸೂರ್ಯವಂಶಿ ಇವರು ರಾಜನಿಷ್ಠೆ ಅಂದರೇನು? ಅದರ ಮಹತ್ವವೇನು? ಎಂಬದರಬಗ್ಗೆ ವಿವರಿಸಿ ಹೇಳಿದರು. ಬಳಿಕ ಮಿ|| ಬಸಪ್ಪ ಫಕೀರಪ್ಪ ಕಲ್ಲಣ್ಣವರ ತಾಲೂಕ ಆನರರಿ ಆರ್ಗನಾಯಝರ ನಲವಡಿ ಇವರು ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಚನ್ನಾಗಿ ವಿವರಿಸಿಹೇಳಿ ಜನರು ರಾಜನಿಷ್ಠರಾಗಿ ಸ್ವರಾಜ್ಯವನ್ನು ಹೇಗೆ ಗಳಿಸತಕ್ಕದ್ದೆಂಬ ಬಗ್ಗೆ ಹಾವಭಾವಗಳಿಂದ ಒಳ್ಳೇ ಆವೇಶಯುಕ್ತ ಭಾಷಣ ಮಾಡಿದರು. ಆ ಮೇಲೆ ಮಿ|| ರಂಗನಗೌಡ ಕೆ. ಪಾಟೀಲ ಇವರು ರಾಜನಿಷ್ಠೆಯ ಮಹತ್ವವನ್ನೂ ಸರಕಾರದ ಕೂಡ ಸಹಕಾರಮಾಡುವ ಅವಶ್ಯಕತೆಯನ್ನೂ ಕುರಿತು ಹೇಳಿದರು. ಬಳಿಕ ಮಿ|| ದೇವನಗೌಡ ಪಾಟೀಲ ಬಿ.ಎ., ನಲವಡಿ ಇವರು ಅಸಹಕಾರಿತೆಯಿಂದ ಸ್ವರಾಜ್ಯ ಸಿಗುವದು ಅಸತ್ಯವೆಂದೂ, ಸನದಶೀರ ಶಾಂತರೀತಿಯಿಂದ ಅದನ್ನು ದೊರಕಿಸುವದೇ ನಿಜವಾದ ಮಾರ್ಗವೆಂದೂ, ಅಸ್ಪೃಶ್ಯನಿವಾರಣ, ಸಾರ್ವತ್ರಿಕ ಶಿಕ್ಷಣಪ್ರಸಾರ, ಸಹಕಾರೀ ಚಟವಟಿಕೆಗಳು ಮೊದಲಾದ ವಿಧಾಯಕ ವಿಷಯಗಳಲ್ಲಿ ಮನಸ್ಸುಹಾಕಿ ಈಗ ಕೊಟ್ಟಿರುವ ಸ್ವರಾಜ್ಯದ ಹಕ್ಕುಗಳನ್ನು ಉತ್ತಮರೀತಿಯಿಂದ ಉಪಯೋಗಮಾಡಿ ಹೆಚ್ಚಿನ ಹಕ್ಕುಗಳಿಗೆ ಯೋಗ್ಯರಾದಲ್ಲಿ ಸ್ವರಾಜ್ಯವು ತನ್ನಿಂದ ತಾನೇ ದೊರೆಯುವದೆಂದೂ ಒಳ್ಳೇ ಕಳಕಳಿ ಪೂರ್ವಕವಾಗಿ ಅಸ್ಖಲಿತ ವಾಣಿಯಿಂದ ಇಂಗ್ಲಿಷಿನಲ್ಲಿ ಸುಮಾರು ಮುಕ್ಕಾಲು ತಾಸಿನವರೆಗೆ ಭಾಷಣಮಾಡಿ ಜನರಿಗೆ ತಿಳಿಯ ಹೇಳಿದರು. ಆಮೇಲೆ ಮಿ|| ತಿಮ್ಮಣ್ಣ ಮುದಿರಡ್ಡಿ ಹೆಬಸೂರ ಇವರು ಅಸಹಕಾರಿಗಳ ಮಾತಿಗೂ ಕೃತಿಗೂ ವಿಸಂಗತವಾದ ಪರಿಸ್ಥಿತಿಯನ್ನು ಚನ್ನಾಗಿವಿವರಿಸಿ ಹೇಳಿ ಜನರು ಸಹಕಾರಿತೆಯಿಂದ ಸ್ವರಾಜ್ಯದೊರಕಿಸಬೇಕೆಂದು ಹಾಸ್ಯರಸಯುಕ್ತವಾಗಿಯೂ ಹಾಗು ಹಾವಭಾವಗಳಿಂದಲೂ ಜನರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವಾಗುವಂತೆ ಭಾಷಣಮಾಡಿದರು. ಅನಂತರ ಮೆ|| ಶೆಟ್ಟಿ, ಮೆ|| ಎಮ್. ಎಸ್. ಕುಲಕರಣಿ ಮೊದಲಾದವರ ಸಮಯೋಚಿತ ಭಾಷಣಗಳಾದ ಮೇಲೆ ಮೆ|| ಅಧ್ಯಕ್ಷ ಸಾಹೇಬರವರು ಇಂಗ್ಲಿಷಿನಲ್ಲಿ ಸಮಾರೋಪಭಾಷಣಮಾಡಿದರು. ಇವರ ಭಾಷಣವನ್ನು ಮಿ|| ದೇವನಗೌಡ ಪಾಟೀಲ ಬಿ. ಎ. ನಲವಡಿ ಇವರು ಕನ್ನಡದಲ್ಲಿ ವಿಶದವಾಗಿ ಬಣ್ಣಿಸಿ ಹೇಳಿದರು. ಬಳಿಕ ಅಧ್ಯಕ್ಷರ ಹಾಗು ಸಭಿಕರ ಆಭಾರಮನ್ನಿಸಲ್ಪಟ್ಟು ಅಧ್ಯಕ್ಷ ಸಾಹೇಬರವರಿಗೆ ಹಾರ ತುರಾಯಿ ತಾಂಬೂಲ ಸಮರ್ಪಿಸಲ್ಪಟ್ಟ ಮೇಲೆ ತ್ರಿವಾರ ಜಯಘೋಷದೊಡನೆ ಸಭೆಯ ಕಾರ್ಯವು ಸಮಾಪ್ತಿಯಾಯಿತು. ಅಲ್ಲಿಂದ ಮೆ|| ಕಲೆಕ್ಟರ ಸಾಹೇಬರವರು ನೇಕಾರಶಾಲೆಯ (Weaving School) ನ್ನು ನೋಡಿಕೊಂಡು ಚಹಪಾನಮಾಡಿ ಮೋಟಾರಿನಿಂದ ಗದಗಿಗೆ ತೆರಳಿದರು.

ತಮ್ಮ,
Ranganagowda K. Patil.

ಮಂಜರಾಬಾದು ತಾಲ್ಲೂಕು ಎಸಳೂರುಪೇಟೆ.

ಮಹನೀಯರೇ!

ಜೂನ್ ಮಾಹೆ 25 ನೆ ತಾ|| ನಲ್ಲಿ ಹಾಸನ ಡಿಸ್ಟ್ರಿಕ್ಟ ಸ್ಕೂಲುಗಳ ಡೆಪ್ಯುಟಿಇನ್ಸ್‌ಪೆಕ್ಟರ್ ಸಾಹೇಬರವರ ಸನ್ನಿಧಾನದಲ್ಲಿ ಎಸಳೂರುಪೇಟೆ ವಿಲೇಜ್ ಚೇರ್‌ಮನ್ ಮ|| ರಾ|| ತಟ್ಟೆಕೆರೆ ಬಸಪ್ಪನವರು, ಹೆಡ್ ಮಾಸ್ಟರ್ ಮ|| ರಾ|| ಹೆಚ್. ಪುಟ್ಟಸಂಜಪ್ಪನವರು, ಲ್ಯಾಂಡ್‌ಹೋಲ್ಡರ್ ಮ|| ರಾ|| ಮಲುಗಳಲೆ ಪುಟ್ಟಯ್ಯನವರು, ಮ|| ರಾ|| ಮಹಾಗೋಪಾಲಪ್ಪಯ್ಯನವರು, ಪಟ್ಟಣಶೆಟ್ಟರು ಮ|| ರಾ|| ಸಂಜುಂಡಪ್ಪನವರು, [illegible] ಅನುಕೂಲಕ್ಕಾಗಿ ಶ್ರೀ ಬಸವೇಶ್ವರ ದೇವಾಲಯದ ಮುಂಭಾಗದ ಪಾಳುಜಾಗದಲ್ಲಿ ಛತ್ರವನ್ನು ಕಟ್ಟಿಸಿ ಸರ್ಕಾರಕ್ಕೆ ಒಪ್ಪಿಸುವುದಾಗಿ ವಾಗ್ದಾನಮಾಡಿ ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ. ಇದುವರಿಗೆ [illegible] ಜರುಗಿರುವುದಿಲ್ಲ. ಇವರಂತೆ [illegible] ರು ಕಳೆದವಾರ ಪ್ರೈಮರಿ ಸ್ಕೂಲು ಶಂಕುಸ್ಥಾಪನಾಮಹೋತ್ಸವ ಬೆಳೆಸಿದ್ದಾರೆ. ಇವರುಗಳೂ ಕೂಡ ಶೀಘ್ರದಲ್ಲಿ ವಿಜೃಂಭಣೆಯಿಂದ ಶಂಕುಸ್ಥಾಪನಮಹೋತ್ಸವ ಬೆಳೆಸುತ್ತಾರೆಂದು ನಂಬಿದ್ದೇನೆ. ಒಬ್ಬರು ಮಾಡುವ ಕಾರ್ಯವು ಈಗ ಮುಂದಾಗಿದ್ದರೂ ಐದು ಜನ ಮಹನೀಯರು ಮಾಡುವ ಕಾರ್ಯವು ಎಂದಿಗೂ ಹಿಂದಾಗಲಾರದೆಂದು ಎಲ್ಲರಿಗೂ ಭರವಸೆ ಹುಟ್ಟಿರುವುದು. ಈ ಮಹನೀಯರ ಧರ್ಮಕಾರ್ಯಗಳು ಮಹಾಶಿವರಾತ್ರಿ ಹಬ್ಬದೊಳಗಾಗಿ ಚೆನ್ನಾಗಿಜರುಗಿ ಪ್ರಕಾಶಿಸಲೆಂದು ಹಾರೈಸುತ್ತೇನೆ. ತಮ್ಮ ಸ್ವಕಾರ್ಯದಲ್ಲಿ ಎಷ್ಟು ಕಷ್ಟಗಳುಂಟಾದಾಗ್ಯೂ, ಲಕ್ಷಿಸದೆ ಹಿಡಿದ ಪ್ರಯತ್ನ ನೆರವೇರಿಸಲು ಹಟಮಾಡುವರೋ ಹಾಗೆಯೇ ಪುರಾಭಿವೃದ್ಧಿಗಾಗಿ ಮಾಡಿಕೊಡಲು ಒಪ್ಪಿರುವ ಕಾರ್ಯಗಳನ್ನು ಹಾಗೆಮಾಡಿಯೇಬಿಡುತ್ತಾರೆಂದು ಭರವಸೆಯಿದೆ. ಒಂದು ಊರಿನಲ್ಲಿ ಸಾವಿರಾರು ಜನರಿದ್ದಾಗ್ಯೂ, ನಾಲ್ಕಾರು ಮಂದಿ ಮಾತ್ರ ಧರ್ಮ ಮಾಡುವರು ಉಳಿದವರೆಲ್ಲರೂ ಐಶ್ವರ್ಯವಂತರಾಗಿದ್ದಾಗ್ಯೂ ಮಾಡಲಾರರು. ಆನೇಕ [illegible] ಸಜ್ಜನಶಿರೋಮಣಿಗಳು ಈಗಲಾದರೂ ಕಣ್ತೆರೆದು ತಮ್ಮ ಶಕ್ತ್ಯನುಸಾರ ಧರ್ಮಕೆಲಸಕ್ಕೆ ಆರಂಭಮಾಡಿರುವರು. ಈ ಊರಿಗೆ ಈ ಮಹನೀಯರುಗಳೇ [illegible] ಯಾಗಿರುತ್ತಾರೆ. ಪರೋಪಕಾರವೇ ಸದ್ಗತಿಗೆ ದಾರಿ. ಮನುಷ್ಯನು ಸತ್ತು ಹೋದರೂ ಅವನು ಮಾಡಿದ ಧರ್ಮಕೆಲಸದಿಂದ ಇದ್ದಂತೆ ಅವನ ನಾಮವೂ ಪ್ರತಿಷ್ಠಿತವಾಗಿ ಹೊಗಳಲ್ಪಡುತ್ತಿರುವುದು. ಕೆಲವು ದುರ್ಜನರು ಸಜ್ಜನರ ಕಾರ್ಯಕ್ಕೆ ತಂತ್ರಮಾಡಿ ವಿಘ್ನಮಾಡುವುದು ಸಹಜವಾಗಿದೆ. ಅಂಥವರ ಪ್ರಯತ್ನಕ್ಕೆ ಸ್ಥಳಸಿಕ್ಕದಂತೆ ಅದಷ್ಟು ಜಾಗ್ರತೆ ಕಾರ್ಯದಲ್ಲಿ ನಿರತರಾಗಿ ಉದ್ದೇಶ ನೆರವೇರಿಸಿಕೊಳ್ಳಬೇಕಾಗಿ ಪ್ರಾರ್ಥನೆ. ಸಂತಾನವಿಲ್ಲದ ಐಶ್ವರ್ಯವಂತರು ತಮ್ಮ ಧನವನ್ನು ಪರೋಪಕಾರಕ್ಕಾಗಿ ವಿನಿಯೋಗಿಸಿದರೆ ಜನ್ಮವು ಸಾರ್ಥಕವಾಗಿ ಇಹಲೋಕ ಪರಲೋಕಗಳೆರಡರಲ್ಲೂ ಸುಖವುಂಟಾಗುವುದು. ಎಂಬ ಸಜ್ಜನಾಭಿಪ್ರಾಯದಂತೆ ಕೆಲವರು ಯೋಚಿಸಿ ಪರೋಪಕಾರಕ್ಕೆ ಮನಕೊಟ್ಟರೆ ದೇವರು ಸದಾರಕ್ಷಿಸುವನು. ಈ ಎರಡು ಕಾರ್ಯಗಳು ಜರುಗಿದೊಡನೆ, ರೀಡಿಂಗ್‌ರೂಮ್ ಕಟ್ಟಡ ತಯಾರಾಗುವುದೆಂಬ ಸಂತೋಷವಾರ್ತೆಯು ಗುಟ್ಟಾಗಿಹರಡಿರುವುದು. ದೇವರು ಒಳ್ಳೇಮನಕೊಡಲೆಂದು ಪ್ರಾರ್ಥನೆ. ನಮ್ಮ ಗುರುವರ್ಗದವರು ಬರೇಅಂದವಾದ ಕೋಟೆಕೊತ್ತಲುಗಳನ್ನು ಕಟ್ಟುವುದರ ಜಮೀನುಸಂಪಾದಿಸುವುದರ ಬದಲಾಗಿ ತಮ್ಮಧನವನ್ನು ಒಟ್ಟುಗೂಡಿಸಿ ಮತಬೋಧೆಯನ್ನು ಪ್ರಸರಣಮಾಡಲು ಒಂದು ಪಾಠಶಾಲೆ ಏರ್ಪಡಿಸುವುದು ಬಹಳ ಒಳ್ಳೆಯ ಮಾರ್ಗವು. ಈ ಕಾರ್ಯದಲ್ಲಿ ನಮ್ಮ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ಪ್ರತಿಸಲವೂ ಮಾಡುತ್ತಿರುವ ಸಹಾಯಗಳು ನಿದರ್ಶನವಾಗಿವೆ. ಮೇಲ್ಕಂಡ ಎರಡು ಧರ್ಮಕೆಲಸಗಳು ಜರುಗಲು ಸದ್ಬೋಧೆಮಾಡಿದವರು, ಹ|| ಡಿ|| ಇ|| ಸಾ|| ರು ಮಿ|| ಶ್ರೀನಿವಾಸರಾಯರು ಆಗಿರುತ್ತಾರೆಂದು ಸಾರಿಸಾರಿ ಹೇಳುತ್ತೇನೆ. ಅಲ್ಲದೆ ಈ ಪೇಟೆಯ ಜನಗಳಲ್ಲಿರುವ ಕೆಲವರ ಕೆಟ್ಟನಡತೆಯೆಂಬ ಕಳೆಯನ್ನು ಕಿತ್ತು, ಸದ್ಗುಣವೆಂಬ ಬೀಜವನ್ನು ಬಿತ್ತಲು ಕಂಕಣಕಟ್ಟಿಕೊಂಡು, ಈ ಊರಿಗೆ ಕಂಪ್ಲೀಟ್ ಮಿಡಲ್ ಸ್ಕೂಲು ಏರ್ಪಡಿಸಿಕೊಡುವಂತೆ ತಮ್ಮ ಉದಾರವಾದ ಶಿಫಾರಸ್ ಘನಸರ್ಕಾರದ ವಿದ್ಯಾಭ್ಯಾಸದ ಇಲಾಖಾ ಹುಜರತ್ ಇ|| ಜ|| ಸಾ|| ರವರ ಸನ್ನಿಧಾನಕ್ಕೆ ಶಿಫಾರಸ್ ಮಾಡಿರುತ್ತಾರೆ. ಇ|| ಜ|| ಸಾ|| ರವರು ಈ ಶಿಫಾರಸ್ಸನ್ನು ದಿವ್ಯಚಿತ್ತಕ್ಕೆ ತಂದುಕೊಂಡು ಅವಿದ್ಯಾವಂತರ ಮಕ್ಕಳು ವಿದ್ಯಾವಂತರಾಗಲು ಅನುಕೂಲಿಸುವಂತೆ ಮಾಡಿಸಿಕೊಟ್ಟು ಕಾಪಾಡುತ್ತಾರೆಂದು ನಿರೀಕ್ಷಿಸುತ್ತೇವೆ. ಕ್ಷಿಪ್ರದಲ್ಲಿಯೇ ನಮ್ಮಗಳ ಉದ್ದೇಶವು ನೆರವೇರುತ್ತೆಂದು ಸರ್ವರೂ ನಂಬಿರುತ್ತಾರೆ. ಭಗವಂತನು ಮಿ|| ಶ್ರೀನಿವಾಸರಾಯರಿಗೆ ದೊಡ್ಡ ಪದವಿಯನ್ನಿತ್ತು, ಅವರಿಗೂ ಅವರ ಪತ್ನೀ ಪುತ್ರರಿಗೂ ಧರ್ಮಕೆಲಸಕ್ಕೆ ಮುಂದಾಳುಗಳಾಗಿರುವ ವೀರಶೈವ ಬಾಂಧವರಿಗೂ ಅವರ ಪತ್ನೀ ಪುತ್ರರಿಗೂ ಭಗಂತನು ಆಯುರಾರೋಗ್ಯ ಐಶ್ವರ್ಯಗಳನ್ನಿತ್ತು ಕಾಪಾಡಲೆಂದು ಪ್ರಾರ್ಥನೆ.

ಪ್ರಜಾಹಿತೈಷಿ.

[ಶೃಂಗೇರಿ ಜಹಗೀರಿಸಂಸ್ಥಾನದ ಏಜಂಟರು ಪ್ರಕಟಿಸಿರುವ ಪತ್ರಿಕೆಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ. H. K.]

ಶ್ರೀಜಗದ್ಗುರು ಸಂಸ್ಥಾನ ಶೃಂಗೇರಿ ಶ್ರೀಮಠದ ಆಸ್ಥಾನದಿಂದ

ಶೃಂಗೇರಿಗೆ ಉತ್ತರವಾಗಿ ಒಂದು ಮೈಲು ದೂರದಲ್ಲಿ ಶಾಲಿವಾಹನ ಶಕ ೧೪೫೧ನೆಯ ವರ್ಷದಲ್ಲಿ ತುಂಗಾನದಿಯ ತೀರದಲ್ಲಿ ಶ್ರೀ ಜಗದ್ಗುರು ಮಹಾ ಸ್ವಾಮಿಗಳವರ ಆಜ್ಞಾ ಮತ್ತು ಸಹಾಯವನ್ನೂ ಪಡೆದು ಆಗಿನ ಕಾಲದ ಧಾರ್ಮಿಕ ಮಹಾಜನರು ಆನೆಗುಂದವೆಂಬ ಹೆಸರಿನಿಂದ ಒಂದು ಬ್ರಾಹ್ಮಣ ಅಗ್ರಹಾರವನ್ನು ಕಲ್ಪಿಸಿ, ಅಗ್ರಹಾರ ಮಧ್ಯಭಾಗದಲ್ಲಿ ಶಿಲಾಮಯವಾದ ಎರಡು ಆಲಯಗಳನ್ನು ನಿರ್ಮಾಣಮಾಡಿ, ಒಂದು ಆಲಯದಲ್ಲಿ ಶ್ರೀ ಗೋಪಾಲಕೃಷ್ಣ ದೇವರನ್ನೂ, ಇನ್ನೊಂದು ಆಲಯದಲ್ಲಿ ಶ್ರೀ ಗಂಗಾಧರೇಶ್ವರ ದೇವರನ್ನೂ, ಪ್ರತಿಷ್ಠೆ ಮಾಡಿಸಿ—ಈ ದೇವರ ನಿತ್ಯಪೂಜಾ ವಿನಿಯೋಗಕ್ಕಾಗಿಯೂ, ಅಗ್ರಹಾರ ಬ್ರಾಹ್ಮಣರ ನಿರ್ವಾಹಾರ್ಥವಾಗಿಯೂ ಶ್ರೀ ಜಗದ್ಗುರು ಸಂಸ್ಥಾನದಿಂದ ತರಿಬಾಗಾಯಿತು ಜಮೀನು ಇನಾಮತಿಯಾಗಿ ಪಡೆದುಕೊಂಡು, ಆ ಭೂಮಿಗಳ ವರಮಾನದಿಂದಲೂ ಮಹಾಜನರು ತಮ್ಮತಮ್ಮ ಗೃಹಗಳಲ್ಲಿ ನಡೆಯತಕ್ಕ ಶುಭಶೋಭನಾದಿಗಳಲ್ಲಿ ಅಗ್ರಹಾರ ಬ್ರಾಹ್ಮಣರ ಮತ್ತು ದೇವರ ನಿಮಿತ್ತವಾಗಿ ಕೊಟ್ಟು ಬಂದಿರುವ ಸಹಾಯದಿಂದಲೂ ಅಗ್ರಹಾರ ಬ್ರಾಹ್ಮಣರು ದೇವತಾಸೇವೆಯನ್ನು ನೆರವೇರಿಸಿಕೊಂಡು, ತಮ್ಮ ಜೀವನವನ್ನು ನಡೆಸಿಕೊಂಡು ಬಂದಿರುವಂತೆ ತಿಳಿದು ಬಂದಿದೆ.

ಈ ಅಗ್ರಹಾರದಲ್ಲಿ ಹತ್ತು ಗೃಹಗಳನ್ನು ನಿರ್ಮಾಣ ಮಾಡಿಸಿ, ಸದಾಚಾರಸಂಪನ್ನರೂ, ಸತ್ಕುಲ ಪ್ರಸೂತರೂ, ಕರ್ಮಾನುಷ್ಠಾನಪರರೂ ಆದ ಹತ್ತು ಜನ ಬ್ರಾಹ್ಮಣರಿಗೆ ಕೊಟ್ಟು, ಅವರನ್ನು ಆ ಗೃಹಗಳಲ್ಲಿ ವಸತಿ ಮಾಡುವಂತೆ ಮಾಡಿರುತ್ತಾರೆ. ಆ ಹತ್ತು ಕುಟುಂಬಗಳೂ, ಪುತ್ರಪೌತ್ರ ಕ್ರಮದಿಂದ ವೃದ್ಧಿಹೊಂದುತ್ತಾ ಬಂದು, ಅದೇ ವಂಶದವರು ಈಗಲೂ ಕೇವಲ ವೈದಿಕರಾಗಿಯೂ ವೇದಾಧ್ಯಯನ ಮಾಡಿದವರಾಗಿಯೂ, ಆಚಾರಶೀಲರೂ ಅನುಷ್ಠಾನಪರರೂ ಆಗಿ ತಮ್ಮ ಪೂರ್ವಜರಂತೆ ದೇವತಾ ಸೇವೆಯನ್ನು ನಡೆಸಿಕೊಂಡು, ಯಾವ ವಿಧವಾದ ಆಪತ್ತುಗಳಿಗೂ ಒಳಗಾಗದೆ ಸುಖದಿಂದ ಕಾಲಯಾಪನೆ ಮಾಡುತ್ತಾ ಬಂದಿದ್ದರಲ್ಲಿ ಕಾಲವೈಷಮ್ಯದಿಂದ- ಅತ್ಯಂತ ಅದೃಷ್ಟಭರವಾಗಿ ಈ ಸಂವತ್ಸರದಲ್ಲಿ ಪ್ರಾಪ್ತವಾದ ಅತಿವೃಷ್ಟಿಯಿಂದ ತುಂಗಾನದಿಯ ಪ್ರವಾಹವು ಮಿತಿಮೀರಿ, ಅಗ್ರಹಾರ ಗೃಹಗಳನ್ನೂ ದೇವಾಲಯಗಳನ್ನೂ ಪ್ರವೇಶಮಾಡಿ, ಅಗ್ರಹಾರವನ್ನು ನಾಮಾವಶೇಷವಾಗಿ ಮಾಡಿರುವದೆಂಬ ಅಂಶವೂ ಅತ್ಯಂತ ಶೋಚನೀಯವಾಗಿದ್ದರೂ ಅಲ್ಲಿ ವಸತಿಮಾಡಿರುವ ಬ್ರಾಹ್ಮಣ ಕುಟುಂಬದವರ ಪ್ರಾಣಗಳನ್ನು ಅವರ ಧರ್ಮವೇ ಕಾಪಾಡಿರುವದೆಂಬ ಭಾಗವು ಮಹದಾನಂದವನ್ನು ಉಂಟುಮಾಡತಕ್ಕದ್ದಾಗಿದೆ.

ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಆಜ್ಞಾನುಸಾರವಾಗಿ ಇನ್ನು ಮುಂದೆ ಇಂಥಾ ಅನರ್ಥಗಳಿಗೆ ಅವಕಾಶವಿಲ್ಲದಂತೆಯೂ ಚಿರಕಾಲದಿಂದ ಒಂದೇ ಸ್ಥಳದಲ್ಲಿ ಗುಂಪಾಗಿ ಸೇರಿ ಯಾವತ್ತು [illegible] ಜನರು ಅನ್ಯತ್ರ ಚದರಿ ಹೋಗದೆ ಒಂದೇ ಸ್ಥಳದಲ್ಲಿ ಇದ್ದುಕೊಂಡು, ದೇವತಾರಾಧನೆಯನ್ನು ಮಾಡಿಕೊಂಡು ಬರಲು ಅನುಕೂಲವಾಗುವಂತೆ [illegible] ಅಗ್ರಹಾರದ ಪ್ರದೇಶಕ್ಕೆ ಪಶ್ಚಿಮ [illegible]

15 ರಿಂದ 20 ಅಡಿ ಎತ್ತರದವರೆಗೆ ಹೇರಳವಾದ ದ್ರವ್ಯವನ್ನು ಖರ್ಚು ಮಾಡಿ ಗುದ್ದವನ್ನು ತೆಗಿಸಿ ಸಂಸ್ಥಾನದವರು ನಿವೇಶನಗಳನ್ನು ಸಿದ್ಧಪಡಿಸಿರುತ್ತಾರೆ.

ಇದೇ ಮಾದರಿಯ ಚಳವಳಿಯು ಮೊದಮೊದಲು ಕಾಶೀಕ್ಷೇತ್ರದಲ್ಲಿ ಓದುತ್ತಿದ್ದ ಕೆಲವು ತರುಣಮಂಡಳಿಯಲ್ಲಿ ಅಂಕುರಿಸಿತೆಂದೂ ಆಮೇಲೆ ಅದು ಪಂಚಪೀಠಾಚಾರ್ಯರಲ್ಲಿ ಕ್ರಮವಾಗಿ ನೆಲೆಗೊಂಡಿತೆಂದೂ ಬರಬರುತ್ತ ಭಕ್ತವರ್ಗದಲ್ಲಿಯೂ ಕೂಡ ಕೆಲವರನ್ನು ಸುತ್ತಿಕೊಂಡಿತೆಂದೂ ಅಲ್ಲಲ್ಲಿಯ ಬರಹ ಭಾಷಣಗಳ ಮೇಲಿಂದ ಕಂಡುಬರಹತ್ತಿತು. ಆದರೂ ವಿಚಾರವಂತ ಶಾಂತಿಪ್ರಿಯರಾದ ಎಷ್ಟೋ ಜನ ಪ್ರಮುಖರು ಅಶಾಂತಿಗೆ ಜನಕವಾದ ಈ ಶುಷ್ಕವಾದ ಕಲಹಕ್ಕೆ ಕೆಲವು ಅಪಕ್ವವಿಚಾರದ ತರುಣರೂ ಅವರ ದುರ್ಬೋಧನೆಗೊಳಪಟ್ಟಿರುವ ಕೆಲವು ಭಕ್ತ ಮಾಹೇಶ್ವರ ವರ್ಗದವರೂ ಆಶ್ರಯ ಕೊಟ್ಟಿದ್ದರೂ ಕೆಟ್ಟಿರಬಹುದು. ಪರಂತೂ ಸಮಾಜದ ಹೆಚ್ಚಿನ ಸಮ್ಮಂಧವುಳ್ಳ ಪೀಠಾಚಾರ್ಯರು ಮಾತ್ರ ಅಶಾಂತಿಮಯವಾದ ಈ ಕಲಹದಲ್ಲಿ ಸರ್ವಥಾ ಕೈಹಾಕಲಾರರೆಂದು ನಂಬಿದ್ದರು. ಆದರೆ ಉಜ್ಜಯನೀ ಸದ್ಧರ್ಮ ಸಿಂಹಾಸನದ ಧೀಶಭಿವನೆಂಬ ಬಿರುದಾಂಕಿತರಾದ ಬಂಗೀಮಠದ ಗುರುಸಿದ್ಧಶಾಸ್ತ್ರಿಗಳೇ ಮುಂತಾದವರಿಂದ ನಿಂದಾಸ್ಪದವಾದ ಕೆಲವು ನೋಟೀಸ್ ಮತ್ತು ಪುಸ್ತಕಾದಿಗಳು ಪ್ರಕಟವಾದ ಕೂಡಲೇ ಎಷ್ಟೋ ಜನ ಸದ್ಭಕ್ತಶೀಲರಿಗೂ ಕೂಡ ಪಂಚ ಪೀಠಗಳ ವಿಷಯದಲ್ಲಿ ವಿಪರೀತ ಭಾವನೆಗಳು ಜನಿಸಹತ್ತಿದವು. ಪಂಚಪೀಠಾಚಾರ್ಯರೂ ಕೂಡ ಪ್ರಭು ಬಸವೇಶ್ವರಾದಿ ಪ್ರಮಥರಂಥ ಪವಿತ್ರ ವಿಭೂತಿಗಳ ನಿಂದ್ಯೆಯಲ್ಲಿ ಪ್ರವೇಶಿಸಿದ್ದು ಬಹಳ ಆಶ್ಚರ್ಯವಾಯಿತಷ್ಟೇ ಅಲ್ಲ, ಎಷ್ಟೋ ಜನ ಪೀಠಾಭಿಮಾನಿಗಳಿಗೆ ಇದರಿಂದ ಖೇದವೂ ಆಯಿತು. ಮತ್ತು ಈ ವಿಷಯವನ್ನು ಇನ್ನು ಮುಂದೆ ಹೀಗೆಯೇ ಕೈಬಿಟ್ಟರೆ ಸಮಾಜದಲ್ಲಿ ಮತ್ತಿಷ್ಟು ಅಶಾಂತಿಯು ಹೆಚ್ಚಾಗಿ ಪ್ರತಿಯೊಂದು ಸಮಾಜಾಭಿವೃದ್ಧಿಯ ಕಾರ್ಯಗಳಲ್ಲಿ ವಿಘ್ನಗಳುಂಟಾಗದೆ ಬಿಡುವದಿಲ್ಲ. ಒಮ್ಮೆ ಈ ವಿಷಯದ ನಿಷ್ಕರ್ಷೆಯನ್ನು ಮಾಡಲೇಬೇಕೆಂದು ನಿಶ್ಚಯಿಸಿ ತಾ|| 18-11-23ನೇ ರವಿವಾರ ಸಾಯಂಕಾಲ ಐದು ಗಂಟೆಗೆ ಗದಗಿನಲ್ಲಿ ಶ್ರೀಮಂತ ಹುಬ್ಬಳ್ಳಿಯವರ ವಖಾರದಲ್ಲಿ ಒಂದು ಆಲೋಚನಾಕಮಿಟಿಯು ಕೂಡಿತ್ತು. ಆ ಕಮಿಟಿಗೆ ಅಬ್ಬಿಗೇರಿ ಹಾಲಕೇರಿ ಸೂಡಿ ಆಲೂರು ಗಜೇಂದ್ರಗಡ ಇಟಗಿ ಗುಳೇದ ಗುಡ್ಡ ಬಾಗಲಕೋಟೆ ಡೊಂಬಳ ಉಪ್ಪಿನ ಬೆಟಗೇರಿ ನರಗುಂದ ಸಂಗಮ ಹೊಳ್ಳಿನ ಹಡಗಲಿ ಮುಂತಾದ ಎಷ್ಟೋ ಗ್ರಾಮಗಳ ಭಕ್ತ ಮಾಹೇಶ್ವರರು ಸುಮಾರು 300-400 ಜನರು ಕೂಡಿದ್ದರು. ಆ ಕಮಿಟಿಯಲ್ಲಿ ಇದೇ ವಿಷಯದ ಬಗ್ಗೆ ವಾದವಿವಾದಗಳು ಜರುಗಿ ಕಡೆಗೆ ಠರಾಯಿಸಿದ್ದೇನಂದರೆ— "ಪ್ರತ್ಯಕ್ಷವಿದ್ದರೂ ಪ್ರಮಾಣಿಸಿ ನೋಡಬೇಕೆಂಬ [illegible]ಕ್ಕಾಗಿ ದರೂ ಈ ಕಲಹದ ಸೃಷ್ಟಿಸ್ಥಿತಿ ಲಯಾದಿಗಳನ್ನು ಒಮ್ಮೆ ಪೀಠಾಚಾರ್ಯರ ಸನ್ನಿಧಿಯಲ್ಲಿ ಅರಿಕೆಮಾಡಿ ನೋಡಿ ಅನಂತರ ಮುಂದಿನ ಪ್ರಯತ್ನವನ್ನು ಮಾಡಬೇಕಲ್ಲದೆ. ಒಂದು ಪಕ್ಷದವರು ಸುಮ್ಮ ಪ್ರತೀಕಾರ[illegible]ರೆಂದು ತಿಳಿದು ನಾವು ಅದರಂತೆ ಮಾಡುವದು ಹಿತಕರವಾಗುವದಿಲ್ಲ. ಶ್ರೀರಿಂದ ಉಜ್ಜಯನೀ ಪೀಠಾಧೀಶರಾದ ಜಗದ್ಗುರು ಚರಪಟ್ಟ[illegible]ಮಿ ಶಿಷ್ಯಮಂ ಸಿದ್ಧಲಿಂಗ ಶಿವಾಚಾರ್ಯರ ಸನ್ನಿಧಿಗೆ 25-30 ಜನರ ಶಿಷ್ಯಮಂಡಳ ಒಂದನ್ನು ಕಳಿಸತಕ್ಕದ್ದು ಮತ್ತು [illegible] ಉತ್ತರವನ್ನು ಪರ್ಯಾಲೋಚಿಸಿ ಸನ್ನಿಧಿಯಿಂದ ಶಿಷ್ಯಮಂಡಳಿಗೆ ದೊರೆ[illegible]ವನ್ನು ನಿಶ್ಚಯಿಸತಕ್ಕದ್ದು" ಇತ್ಯಾದಿ ಮುಂದಿನ ಪ್ರಯತ್ನವ[illegible]. ಆನಂತರ ಉಕ್ತ ಕಮಿಟಿಯು ಮೇಲ್ಕಂಡ ಠರಾವು ಠರಾವು ಪಾಸಾ[illegible] [illegible]ದಿವಸವೇ ಅಂದರೆ—ತಾ|| 19-11-23ನೇ ಸೋಮ[illegible]ಗನುಸರಿಸಿ [illegible]ಳಿಗ್ಗೆ 25-30 ಜನ ಪ್ರಮುಖರ ಶಿಷ್ಯಮಂಡಳವು ಕೊಟ್ಟೂರು ಪ್ರಾಂತದಲ್ಲಿರುವ (ಕಲ್ಲಳ್ಳಿ) ಮುಕ್ಕಾಮಿಗೆ ಹೋಗಿ ಉಜ್ಜಯನೀ ಸದರೀ ಜಗದ್ಗುರುಗಳ ಸನ್ನಿಧಿಗೆ ತಲ್ಪಿ ಅರಿಕೆಮಾಡಿಕೊಂಡಿದ್ದೇನಂದರೆ--ಮಿ|| ಪಾವಟೆಯವರ ಪ್ರಶ್ನೆಗಳಿಗೆ ಉತ್ತರವೆಂದು ಬರೆದ ಪುಸ್ತಕದಲ್ಲಿ (೩೮) ಮತ್ತು (೯೦) ನೇ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವಾಗ್ಗೆ "ಭಕ್ತ ಶಬ್ದವು ಉತ್ತಮಾಧಮ ಸಕಲ ವರ್ಗದವರಿಗೂ ಉಪಯೋಗಿಸಬಹುದಾದ ಸಾಮಾನ್ಯ ವಾಚಕವಾದ್ದರಿಂದ ಗುರುವರ್ಗದವರು ಆ ಸಾಮಾನ್ಯ ವಾಚಕವನ್ನು ತಮಗೆ ರೂಢಿಯಲ್ಲಿ ಇಟ್ಟುಕೊಳ್ಳದೆ ಅಸ್ಪೃಶ್ಯರಿಗೆ ಮಾತ್ರ ಉಪಯೋಗಿಸುತ್ತ ಅಸ್ಪೃಶ್ಯ ಜಾತಿಯವರನ್ನು ಭಕ್ತವರ್ಗವೆಂದು ಪ್ರತ್ಯೇಕಿಸಿ ಗುರುವರ್ಗದಲ್ಲಿ ಅಂಥವರ ಸಮಾವೇಶವಾಗಬಾರದೆಂದು ನೇಮಿಸಿರುತ್ತಾರೆ" ಇತ್ಯಾದಿಯಾಗಿ ಬಿ. ಗುರುಸಿದ್ಧಶಾಸ್ತ್ರಿಗಳೆಂಬುವರು ಬರೆದಿರುತ್ತಾರೆ. ಮತ್ತು ರಾ|| ಶಾಂತಪ್ಪ ಕುಬಸದ ಹುಮ್ನಾಬಾದ ಇವರು ಬಸವೇಶ್ವರ ಚನ್ನಬಸವೇಶ್ವರ ಅಲ್ಲಮಪ್ರಭುಗಳ ವಿಷಯದಲ್ಲಿ ತಿರಸ್ಕಾರ ರೂಪದಿಂದ ಪ್ರಕಟಿಸಿದ (200) ಪ್ರಶ್ನೆಗಳ ವಿಷಯದಲ್ಲಿಯೂ ಮಹಾಸನ್ನಿಧಿಯ ಅಭಿಪ್ರಾಯವೇನಿರುವದೆಂಬುವದನ್ನು ಅರಿತುಕೊಳ್ಳುವದಕ್ಕಾಗಿ ಬಂದಿರುತ್ತೇವೆಂದು ಅರಿಕೆ ಮಾಡಿಕೊಂಡರು. ಅದಕ್ಕೆ ಮಹಾಸನ್ನಿಧಿಯಿಂದ ಅಪ್ಪಣೆಯಾದದ್ದೇನಂದರೆ— "ಶ್ರೀ ಬಸವಾದಿಪ್ರಮಥರ ತಿರಸ್ಕಾರದಲ್ಲಿಯೂ ಭಕ್ತರು ಅಸ್ಪೃಶ್ಯರು ಎಂಬುವ ವಿಚಾರಗಳಲ್ಲಿಯೂ ಲೇಖಗಳು ಪ್ರಕಟವಾಗುತ್ತಿರುವದು ಸನ್ನಿಧಿಯ ಒಪ್ಪಿಗೆಯಿಂದಾದವುಗಳಲ್ಲ. ಸಂಸ್ಥಾನಕ್ಕೆ ಸಮ್ಮಂಧಿಸಿದ ಯಾವದಾದರೊಂದು ಹೆಸರಿನಿಂದ ಯಾರಾದರೂ ಬರೆದಿದ್ದರೆ ಅದರಲ್ಲಿ ನಮ್ಮ ಅಂಗವಿಲ್ಲ. ಮತ್ತು ಇನ್ನು ಮುಂದೆ ಅಂಥ ಚಳವಳಿಯು ಹುಟ್ಟದಂತೆ ಸನ್ನಿಧಿಯಿಂದ ವ್ಯವಸ್ಥೆಯು ಮಾಡಲ್ಪಡುವದು". ಈ ಪ್ರಕಾರವಾದ ಮಹಾಸನ್ನಿಧಿಯ ಪ್ರಸಾದ ವಾಕ್ಯವನ್ನು ಕೇಳಿ ಶಿಷ್ಯಮಂಡಳಿಯವರು ಪರಮಸಂತುಷ್ಟರಾಗಿ ಪುನಃ ಗದಗಿಗೆ ಬಂದರು.

ಸಹಿ — ಸಂಗನಗೌಡ ಪಾಟೀಲ ವಕೀಲ ಗದಗ,
ಹಸ್ತ-ಗುರುಮೂರ್ತಿಶಾಸ್ತ್ರಿ ಹಿರೇಮಠ ಕಜ್ಜರಿ.

1924ನೇ ಇಸವಿಯ ಕ್ಯಾಲೆಂಡರುಗಳು.

ತಯಾರಾದ ಕೆಲವು ವಾರಗಳಲ್ಲೆ ಸಾವಿರಾರು ವಿಕ್ರಯವಾಗಿವೆ.



ಇದರಡಿ ವಿವರಿಸಿರುವ ದರದಂತೆ ನಿಮಗೆ ಬೇಕಾದಷ್ಟು ಕಾಪಿಗಳಿಗೆ ಆಗುವ ಮೊಬಲಗು ಅಡ್ವಾನ್ಸಾಗಿ ರವಾನಿಸಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ವಗೈರೆ ಯಾವ ಖರ್ಚೂ ಇಲ್ಲದೆ ನೀವಿದ್ದೆಡೆಗೆ ಪೋಸ್ಟು ಮೂಲಕ ರವಾನಿಸಲಾಗುತ್ತೆ. ಜೇಬಿನಲ್ಲಿಡಲು ಅನುಕೂಲಿಸುವಂತೆ ತಯಾರಿಸಿರುವ ಪಾಕೆಟ್ ಕ್ಯಾಲೆಂಡರ್ 1ಕ್ಕೆ 0—2—0

ಪಾಕೆಟ್ ಕ್ಯಾಲೆಂಡರ್ 12ಕ್ಕೆ 0—14—0

ತಿಂಗಳಿಗೊಂದು ಷೀಟಿನಂತೆ ಹಂದುಬಿಡುವ ಗೋಡೆಗೆ ತಗುಲುಹಾಕುವ ಕ್ಯಾಲೆಂಡರ್ 1ಕ್ಕೆ 0—1—6

ಡಿಟೋ ವಾಲ್ ಕ್ಯಾಲೆಂಡರ್ 12ಕ್ಕೆ 1—0—0

ಷೀಟ್ ಕ್ಯಾಲೆಂಡರ್ 1ಕ್ಕೆ 0—1—0, 50ಕ್ಕೆ 1—2—0. 100ಕ್ಕೆ 2—0—0

ವೈಸ್‌ರಾಯ್ ದಂಪತಿಗಳ ಫೋಟೊ ಕ್ಯಾಲೆಂಡರ್ 1ಕ್ಕೆ 0—2—6, 12ಕ್ಕೆ 1—8—0

ಮೈಸೂರು ಕೃಷ್ಣರಾಜಮೊಹಲ್ಲಾದಲ್ಲಿರುವ ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ ತಿಂಗಳುಗಟ್ಲೆಯ ಸುಲಭ ಕಂತಿಗೂ ಸಹ ಸಪ್ಲೈ ಮಾಡುತ್ತಾರೆ. ಅನೇಕ ನಮೂನೆ ಕಾಶ್ಮೀರ್ ಶಾಲುಗಳನ್ನು ತರಿಸಿ ಸುಲಭ ಬೆಲೆಗೆ ಬಿಕರಿಮಾಡುತ್ತಾರೆ. ಖಾತ್ರಿಯಾದ ಚೇಳಿನ ಔಷಧವನ್ನು ಪೆಟ್ಟಿ 1ಕ್ಕೆ 0—8—0 ಮೇರೆ ಬಿಕರಿಗೆ ಇಟ್ಟಿದ್ದಾರೆ. ನೀವು ಇಷ್ಟಪಟ್ಟ ಭಾಷೆಯಲ್ಲಿ ರಬ್ಬರು ಮೊಹರನ್ನೂ, ಅರಗಿನ ಮೊಹರನ್ನೂ ಅಂದವಾಗಿ ತಯಾರಿಸಿ ಕೊಡುವುದರಲ್ಲಿ ಪ್ರಖ್ಯಾತಿ ಪಡೆದಿದ್ದಾರೆ. ಹಾರ್ಮೋನಿಯಂಗಳನ್ನೂ, ಫೌನ್‌ಟನ್‌ಪೆನ್‌ಗಳನ್ನೂ ತೃಪ್ತಿಕರವಾಗಿ ರಿಪೇರಿಮಾಡಿಕೊಡುತ್ತಾರೆ. ಸಚಿತ್ರ ಕ್ಯಾಟಲಾಗ್ ಅಪೇಕ್ಷಿಸುವವರು ಇದರಡಿ ವಿವರಿಸಿರುವ ವಿಳಾಸಕ್ಕೆ 6ಪೈ ಸ್ಟಾಂಪು ರವಾನಿಸಿ ನಿಮ್ಮ ಸಂಪೂರ್ಣ ವಿಳಾಸ ತಿಳಿಸಿ.

ಮನಿಯಾರ್ಡರ್ ರವಾನಿಸುವ ವಿಳಾಸ:—

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—16] ಮೈಸೂರು.

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲ ಸಿದ್ಧಾಂತ	೦ ೪—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—[illegible]—೦
ಶ್ರುತಿಸಾರಭಾಷ್ಯ	೦—[illegible]—೦
ಶ್ರುತಿಸೂಕ್ತಿ (ಟೀಕೆ)	೦—೨—೦
ಶಿವಸ್ತವ[illegible] (ಸಟೀಕ)	೦—[illegible]

ಅಂಚೆ ವೆಚ್ಚ ಬೇರೆ.

ಬಸವಲಿಂಗಸ್ವಾಮಿಗಳು,

[24—6] [illegible], ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾ. ಜೆ. ಬಿ. ಯವರ ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ದರ್ಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—19] ಪೋ|| ಬಾ. ೫೧೦, ಮದರಾಸು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಮುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ.ಪಿ. ಚಾರ್ಜು ೦—೧೦—೦.

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ. ಪಿ ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—8] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ದುಃಖವನ್ನು ನೀಗುವದು! ಓಂ ಸೌಖ್ಯವನ್ನು ಕೊಡಿಸುವದು!

ಶಿವಾನುಭವಬೋಧೆ.

ಇದು ಸಾಮವೇದದ ಶಿರವಾದ ಛಾಂದೋಗ್ಯೋಪನಿಷತ್ತಿನ ಆರನೆ ಅಧ್ಯಾಯದಲ್ಲಿ "ತತ್ವಮಸಿ" ಆವಸ್ತುವೇ ನೀನಿರುವಿ ಎಂದು ಶ್ವೇತಕೇತುವೆಂಬ ಉತ್ತಮಾಧಿಕಾರಿಯನ್ನು ಕುರಿತು ಉದ್ದಾಲಕ ಮಹಾಮುನಿಯು ಒಂಭತ್ತುಸಾರಿ ಬೋಧಿಸಿರುವನು. ಗೀರ್ವಾಣಭಾಷಾರಹಿತರಿಗೆ ತದರ್ಥ ಗೋಚರವಾಗಲರಿಯದೆಂದು ಮುಮುಕ್ಷುಗಳ ಹಿತಾರ್ಥಕ್ಕಾಗಿ ತದುಪನಿಷತ್ಸಾರವನ್ನೇ ಸುಲಭವಾಗಿ ತಿಳಿಯುವಂತೆ ಕನ್ನಡ ಪದ್ಯರೂಪವಾಗಿ ರಚಿಸಲ್ಪಟ್ಟಿದೆ. ಸರ್ವರು ಈ ಉತ್ತಮ ಗ್ರಂಥವನ್ನು ತರಿಸಿಕೊಂಡು ಶ್ರವಣ ಮನನಾದಿಗಳನ್ನು ಮಾಡಿ ನಿಜಾನಂದಭರಿತರಾಗಿ ನನ್ನ ಸೇವೆಯನ್ನು ಸಾರ್ಥಕಗೊಳಿಸಿರಿ ಸ್ವಲ್ಪ ಪ್ರತಿಗಳುಳಿದಿವೆ. ಬೆಲೆ ಸ್ವಲ್ಪ ಫಲಮಧಿಕವಾಗಿದೆ. ಕ್ರಯ ೦—೧೨—೦. [8—7]

ವಿಳಾಸ:—ಎಂ. ಎಸ್. ಸುಬ್ಬಣ್ಣ ಚಾಕುಬಂಡೆ,
ಪೋಸ್ಟು ಚಿಪ್ಪಿಗಿರಿ ತಾ|| ಆಲೂರು ಜಿಲ್ಲಾ ಬಳ್ಳಾರಿ.

೧೯೨೩ನೆಯ ಇಸವಿ ಡಿಸಂಬರ್ ತಾ|| ೩೦ ರಿಂದ ೧೯೨೪ ನೆಯ ಜನವರಿ ತಾ|| ೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಮಾರ್ಗಶಿರ ಬಹುಳ ಸಪ್ತಮಿಯಿಂದ ಮಾರ್ಗಶಿರ ಬಹುಳ ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾ
30	ಭಾನು	ಸಪ್ತ	13-58	ಉತ್ತ	19-30	15
31	ಸೋಮ	ಅಷ್ಟ	9-20	ಹಸ್ತ	16-33	16
1	ಮಂಗಳ	ನ-ದ	3-58 53-42	ಚಿತ್ತ	12-50	17
2	(1) ಬುಧ	ಏಕಾ	51-50	ಸ್ವಾತಿ	8-33	18
3	(2) ಗುರು	ದ್ವಾದ	46-47	ವಿಶಾ	4-2	19
4	(3) ಶುಕ್ರ	ತ್ರಯೋ	39-30	ಅನೂ	0-8	20
5	ಶನಿ	ಚತು	33-02	ಮೂಲ	50-13	21

(1) [illegible]. (2) ವೈಕುಂಠೈಕಾದಶಿ, ಮುಕ್ಕೋಟಿ [illegible] (3) [illegible].

[illegible]

[illegible]ವುದಿಲ್ಲ. ಪ್ರತಿಯೊಂದು ಹಳ್ಳಿಯಲ್ಲಿಯೂ ನಾಲ್ಕಾರು ಜನ [illegible] ಈ ಕಾಲದಲ್ಲಿ ಈ ಪ್ರಕಾರ ಪ್ರಯತ್ನಿಸಿದರೆ ಈ ಕಾರ್ಯವು [illegible]ಲಕಾರಿಯಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಎಲ್ಲಾ [illegible]ಲ್ಲಿಯೂ ಈ ವಿಧವಾದ ಪ್ರಯತ್ನವನ್ನು ಮಾಡಿ ಗೋಸಂರಕ್ಷಣೆಯ [illegible]ವನ್ನು ಹೊಂದಬೇಕಾಗಿ ಪ್ರಾರ್ಥನೆ.

ಹರ್ಡೇಕರ್ ಮಂಜಪ್ಪ.

ಶಿವಕಥಾಬಹುಮಾನ.

ಬೆಂಗಳೂರುಸಿಟಿ ನಗರ್ತರಪೇಟೆ ಭಕ್ತಮಂಡಲಿಯವರು ಶ್ರೀ ನಗರೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಾಕಿರುವ ವಿಶಾಲವಾದ ಚಪ್ಪರದಲ್ಲಿ ಕಾರ್ತೀಕ ಶುದ್ಧ ೪ ಸೋಮವಾರದ ಲಗಾಯಿತು ಮಾರ್ಗಶಿರ ಶುದ್ಧ ೪ ಮಂಗಳವಾರದವರೆಗೂ 1 ತಿಂಗಳು ಪ್ರತಿದಿನ ಸಾಯಂಕಾಲ 6 ಗಂಟೆ ಲಗಾಯಿತು 9 ಗಂಟೆವರೆಗೆ ನವರಸ ಶಿವಕಥಾಪಂಡಿತ ಬಿರುದಾಂಕಿತರಾದ ದೊಡ್ಡಬಳ್ಳಾಪುರದ ಬ್ರ|| ಶ್ರೀ|| ವೇ|| ಶಿವದೇವಶಾಸ್ತ್ರಿಗಳಿಂದ ಶ್ವೇತೋಪಾಖ್ಯಾನಂ, ಓಹಿಲಾಖ್ಯಕಥನಂ, ರಾಜಶೇಖರವಿಲಾಸಂ, ಸಾನಂದಗಣೇಶಕಥನಂ, ಕೋಳೂರು ಕೊಡಗೂಸುಕಥನಂ. ಗುರುಭಕ್ತಾಂಡಾರ್ಕಥನಂ, ಗಂಗಾಧರಲೀಲಾ, ಅಂಧಕಾಸುರವಧಾ, ದಬ್ರಭಕ್ತ (ಸಿರಿಯಾಳ) ಕಥನಂ, ಕಾಳಹಸ್ತಿ ಕಣ್ಣಪ್ಪಯ್ಯಕಥನಂ, ಬಸವೇಶ್ವರ ಶಿವಯೋಗಸಿದ್ಧರಾಮಯ್ಯ ಕಥನಂ, ಕಿರಾತಾರ್ಜುನೀಯಂ, ಬಿಜ್ಜಳವಧಕಥನಂ, ಗಜಾಸುರಸಂಹಾರಕಥನಂ, ರುದ್ರಪಶುಪತಿಕಥನಂ, ಶರಭಲೀಲಾ, ಮಲ್ಲಣಮಲ್ಲಣಿಕಥನಂ, ಚಿರುತೊಂಡನಾರ್ ಕಥನಂ, ಮಾರ್ಕಂಡೇಯಚರಿತಂ ಮುಂತಾದ ಶಿವಕಥಾ ಕಾಲಕ್ಷೇಪವನ್ನು ಪಿಟೀಲ್ ತಬಲ ಮೊದಲಾದ ಮುಂಬಾಲವಾದ್ಯಗಳೊಡನೆ ವಿಜೃಂಭಣೆಯಿಂದ ಜರುಗಿಸಿದರು. ಶಿವಸಂಕೀರ್ತನಪೂರ್ತಿಗೋಸ್ಕರ ತಾ|| 11 ಮಂಗಳವಾರ ಮಧ್ಯಾಹ್ನ ಸಮಾರಾಧನೆಯೂ ಸಾವಿರಾರು ಜನ ಬಡಬಗ್ಗರಿಗೆ ಅನ್ನದಾನವೂ ಮಾಡಲ್ಪಟ್ಟಿತು. ಸಾಯಂಕಾಲ 6 ಗಂಟೆಯಿಂದ ಮತಭೇದವಿಲ್ಲದೆ ಸಹಸ್ರಾರುಜನ ಸ್ತ್ರೀಪುರುಷರ ಸಭೆಯು ನೆರೆದು ಮ|| ಜಿ. ಪರಮಶಿವಯ್ಯ, ಬಿ.ಎ.,ಎಲ್‌ಎಲ್.ಬಿ., ಯವರ ಅಧ್ಯಕ್ಷತೆಯಲ್ಲಿ 10 ಗಂಟೆವರೆಗೆ ಗಿರಿಜಾಕಲ್ಯಾಣಕಥಾ ಕಾಲಕ್ಷೇಪವು ಶಾಸ್ತ್ರಿಗಳಿಂದ ಬಹು ರಸವತ್ತಾಗಿ ನಡೆಸಲ್ಪಟ್ಟು ಕಥಾಂತ್ಯದಲ್ಲಿ ಒಡಗೇನಹಳ್ಳಿ ಬ್ರ|| ಶ್ರೀ|| ವೇ|| ವೀರಪ್ಪಶಾಸ್ತ್ರಿಗಳ ಪೌರೋಹಿತ್ಯದಿಂದ ಗಿರಿಜಾಕಲ್ಯಾಣವು ವಿಧ್ಯುಕ್ತವಾಗಿ ನಡೆಸಲ್ಪಟ್ಟಿತು. ಈ ಸಮಯದಲ್ಲಿ ಭಕ್ತಮಂಡಲಿಯಿಂದ ಸಮರ್ಪಿಸಲ್ಪಟ್ಟ ಮುಯ್ಯಿಗಳು ಓದಲ್ಪಟ್ಟ ಬಳಿಕ ಮ|| ಪರಮಶಿವಯ್ಯನವರು ಭಕ್ತಮಂಡಲಿಯವರ ಸತ್ಕರ್ಮಾಚರಣೆಯ ವಿಷಯವಾಗಿಯೂ ಶಾಸ್ತ್ರಿಗಳ ವಿದ್ವತ್ಪ್ರಶಂಸೆಯಾಗಿಯೂ ಶ್ಲಾಘ್ಯವಾಗಿ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ನಗರ್ತರಪೇಟೆ ಭಕ್ತಮಹಾಜನಗಳು "ಶುದ್ಧವಾಣಿ ಶಿವಕಥಾಪಂಡಿತ" ಎಂಬ ಪ್ರಶಸ್ತಿಯೊಡನೆ ಬಹುಮಾನಿಸಿದ ರತ್ನಖಚಿತವಾದ ಭಂಗಾರದ ಪದಕವನ್ನು ಶಿವದೇವಶಾಸ್ತ್ರಿಗಳಿಗೆ ಒಪ್ಪಿಸಿದರು. ಸಂತೋಷದಿಂದ ಸಭೆಯ ಕರತಾಡನಗಳಾದ ಬಳಿಕ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟು ಗಂಧಪುಷ್ಪಹಾರಾದಿಗಳನ್ನು ಹಂಚಿದ ಬಳಿಕ ಸಭೆಯು ಭರಖಾಸ್ತಾಯಿತು.

ಪ್ರತ್ಯಕ್ಷದರ್ಶಿ.

ನ್ಯಾಯವಿಧಾಯಕ ಸಭೆಯ ಚುನಾವಣೆ.

ಮೈಸೂರು ನ್ಯಾಯವಿಧಾಯಕ ಸಭೆಯ ಸಭಾಸದರ (ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರ) ಚುನಾವಣೆಯು ಇದೇ ಬರುವ ಫೆಬ್ರವರಿ ತಿಂಗಳ ೧೫ ನೆಯ ತಾರೀಖಿನ ದಿವಸ ಜರುಗುವುದಷ್ಟೆ. ಈ ಕೌನ್ಸಿಲ್ಲಿಗೆ ಮೆಂಬರರನ್ನಾರಿಸಲು 25 ರೂ. ಗಳಿಗೆ ಕಡಿಮೆಯಿಲ್ಲದೆ ಭೂಕಂದಾಯ ಕೊಡುವವರು ಅಥವಾ 5 ರೂ. ಗಳಿಗೆ ಕಡಿಮೆಯಿಲ್ಲದೆ ಮನೆಕಂದಾಯ ಕೊಡುವವರು ಅಧಿಕಾರವುಳ್ಳವರಾಗಿದ್ದಾರೆ. ಇಂಥವರು ರಾಜ್ಯದಾಡಳಿತೆಯಲ್ಲಿ ತಮಗೆ ದೊರೆತಿರುವ ಈ ಮಹತ್ವವಾದ ಅಧಿಕಾರವನ್ನು ಕಳೆದುಕೊಳ್ಳದೆ ಆ ದಿವಸ ತಪ್ಪದೇ ತಮ್ಮ ತಾಲ್ಲೂಕು ಸ್ಥಳಕ್ಕೆ ಹೋಗಿ ತಮ್ಮ ಓಟನ್ನು ಕೊಡುವುದು ಆವಶ್ಯಕವಾಗಿದೆ. ಅನೇಕರು ತಮಗಿರುವ ಈ ಓಟಿನ ಮಹತ್ವವನ್ನೂ, ಅದರಿಂದ ಸಮಾಜದ ಮತ್ತು ದೇಶದ ಅಭ್ಯುದಯಕ್ಕಾಗಬಹುದಾದ ಸಹಾಯವನ್ನೂ, ಅರಿಯದೆ ಯಾರು ಮೆಂಬರರಾದರೆ ತಮಗೇನೆಂದು ಉದಾಸೀನ ವೃತ್ತಿಯಿಂದ ಓಟನ್ನು ಕೊಡಲು ಹೋಗುವುದೇ ಇಲ್ಲ. ಈ ಪ್ರಕಾರ ತಮಗಿರುವ ಅಧಿಕಾರದ ಉಪಯೋಗವನ್ನು ಮಾಡಿಕೊಳ್ಳದೆ ಇರುವುದು ದೇಶಕ್ಕೂ ಆ ಮೂಲಕ ತಮಗೂ ಕೇಡನ್ನುಂಟುಮಾಡಿಕೊಂಡಂತೆಯೇ ಸರಿ. ಏಕೆಂದರೆ, ರಾಯನಿಗೆ ರಾಜ್ಯವಾದರೆ ನಮಗೇನು ರಾಗಿ ಬೀಸುವುದು ತಪ್ಪುವುದೇ? ಎಂದು ಹೇಳಿಕೊಳ್ಳುತ್ತಾ ಇದು ಸುಮ್ಮನೇ ಕುಳಿತುಕೊಳ್ಳುವ ಕಾಲವಲ್ಲ. ನಮ್ಮ ಘನವನ್ನು ಹೊಂದಿದ ಶ್ರೀಮನ್ಮಹಾರಾಜರವರು ಪ್ರಜಾಭಿಪ್ರಾಯದಂತೆ ಪ್ರಭುತ್ವವನ್ನು ಮಾಡಬೇಕೆಂಬ ಶ್ಲಾಘ್ಯವಾದ ಉದ್ದೇಶದಿಂದಲೇ ಈ ಸಭೆಯನ್ನೇರ್ಪಡಿಸಿದ್ದಾರೆ. ಇಂತಹ ಸಮಯದಲ್ಲಿ ಯಾರು ಮುಂದೆ ಬಂದು ತಮಗಿರುವ ಅಧಿಕಾರವನ್ನುಪಯೋಗಿಸುತ್ತಾರೆಯೋ ಅವರ ಅಭಿಪ್ರಾಯವೇ ದೇಶದ ಹಿತಾಹಿತಗಳಿಗೆ ಒಂದು ಸಾಧನವಾಗಿಯೂ ಪರಿಣಮಿಸುತ್ತದೆ. ದೇಶದ ಹಿತಾಹಿತಗಳೇ ನಮ್ಮ ಹಿತಾಹಿತಗಳೆಂಬುದನ್ನು ನಾವು ಮರೆಯಬಾರದು. ಆದಕಾರಣ ಓಟರುಗಳು ಫೆಬ್ರವರಿ 15ನೆಯ ತಾರೀಖಿನ ದಿವಸ ತಮಗೆ ಅನ್ಯ ಕೆಲಸಗಳಿದ್ದರೂ ಈ ದೇಶಕಾರ್ಯವನ್ನು ಮರೆಯದೆ ತಮ್ಮ ತಾಲ್ಲೂಕು ಸ್ಥಳಕ್ಕೆ ಹೋಗಿ ಓಟನ್ನು ತಪ್ಪದೇ ಕೊಡುವುದು ಪವಿತ್ರ ಕರ್ತವ್ಯವಾಗಿದೆ. ಈ ನಮ್ಮ ಚಿತ್ರದುರ್ಗ ಡಿಸ್ಟ್ರಿಕ್ಟಿನ ಪರವಾಗಿ ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರರಾಗಲು ದಾವಣಗೆರೆಯ ಅಡ್ವೋಕೇಟ್ ಶ್ರೀಯುತ ಹಿರೇಮಠದ ಚಂದ್ರಶೇಖರಯ್ಯನವರು ಬಿ. ಎ., ಎಲ್ ಎಲ್. ಬಿ. ಇವರು ಉಮೇದುವಾರರಾಗಿ ನಿಂತಿದ್ದಾರೆ. ಇವರು ಉತ್ಸಾಹಿಗಳೂ, ದೇಶಸೇವಾಭಿರುಚಿಯುಳ್ಳವರೂ, ಸಮರ್ಥರೂ ಆಗಿರುವುದರಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿನ ಸಕಲ ಓಟರುಗಳೂ ಮುಖ್ಯವಾಗಿ ವೀರಶೈವ ಸಮಾಜದ ಓಟರುಗಳಂತೂ ಇವರಿಗೇನೇ ತಮ್ಮ ಓಟನ್ನು ಕೊಟ್ಟು ಶ್ರೀಯುತ ಚಂದ್ರಶೇಖರಯ್ಯನವರಿಗೆ ಈ ಮೂಲಕ ದೇಶಕಾರ್ಯವನ್ನು ಮಾಡಲು ಅವಕಾಶವನ್ನುಂಟುಮಾಡಿಕೊಡುವರೆಂದು ನಂಬಿದ್ದೇನೆ.

ಹರ್ಡೇಕರ್ ಮಂಜಪ್ಪ.

ಗುಂಡ್ಲುಪೇಟೆ ತಾಲ್ಲೂಕು ವರ್ತಮಾನ.

ಈ ತಾಲ್ಲೂಕಿನಲ್ಲಿ ಕಾರುಬೆಳೆ ಅಲ್ಪ ಸ್ವಲ್ಪ ಆದರೂ ಹಿಂಗಾರು ಬೈಸುಬೆಳೆ ಮಳೆಯ ಅಭಾವದಿಂದ ಯೇನೂ ಆಗಲಿಲ್ಲ. ಆಗ[illegible]ದರೂ ಮಳೆಯು ಬರುತ್ತಿದ್ದರೆ ಅಲಸಂದೆ ಕೆಲಸಕ್ಕಾದರೂ ಅನುಕೂಲ[illegible]ತು. ಈ ವರ್ತಮಾನದ ಕೆರೆಯಲ್ಲಿ ಇನ್ನು ಮುಂದೆ ಒಂದು ಒಂದು[illegible]ಳು ಮಟ್ಟಿಗೆ ನೀರು ಇರಬಹುದು. ಮುಂದೆ ಜನ ಜಾನುವಾರು[illegible] ಬಾ[illegible] ಕೊಂಡಿರುತ್ತಿದೆ. ಹೊಸ್ಸೆ ಡೆಪ್ಯೂಟಿ ಕಮೀಷನರ್ ಸಾಹೇಬರ[illegible]ಕು ಆಫೀಸ್ ಅಸಿಸ್ಟೆಂಟಾಗಿ ಬಂದಿದ್ದ ಕಾಲದಲ್ಲಿ ಅದ[illegible]ಕ್ಕೆ[illegible]ರುವ ಅರ್ಜಿಯಲ್ಲಿ ಕೇಳಿಕೊಂ[illegible] [illegible]ಯಾ ಪಡೆದುಕೊಂಡಿರುವ ಯೋರಿಯನ್ನು ಕಟ್ಟಿಸಿಕೊಟ್ಟರೆ ಬಹು ಜನಗಳಿಗೆ ಉಪಕಾರಮಾಡಿದಂತಾಗುವುದಲ್ಲದೆ, ಸರ್ಕಾರದವರು ಇಲ್ಲಿನ ಪ್ರಜೆಗಳ ಚಿರಕೃತಜ್ಞತೆಗೆ ಪಾತ್ರರಾಗುತ್ತಾರೆ. ಈ ವರ್ತಮಾನಲ್ಲಿ ರಾಗಿ ರೂಪಾಯಿ ಒಂದಕ್ಕೆ 7-8 ಸೇರು ಜೋಳ 8 ಸೇರು ಅಕ್ಕಿ 4-4½ 5 ಸೇರು ವಿಕ್ರಯವಾಗುತ್ತಿದೆ. ಧಾರಣೆ ವಾಸಿಯು ಮುಂದೆಯೂ ಹೀಗೆಯೇ ಇದ್ದಲ್ಲಿ ರೈತರು ಬದುಕುವುದೇ ಕಷ್ಟವಾಗುತ್ತೆ. ಸರ್ಕಾರದವರು ಇಲ್ಲಿಗೆ ಧಾನ್ಯದ ಡಿಪೋವನ್ನಾದರೂ ಇಡಿಸಿದಲ್ಲಿ ಅನುಕೂಲವಾಗುತ್ತೆ. ನಮ್ಮ ಅಮಲ್ದಾರ್ ಮ|| ಬಿ. ವೆಂಕಟರಂಗಯ್ಯನವರು ಬಂದಮೇಲೆ ಈ ಊರಿನ ಮುನ್ಸಿಪಲ್ ಆಡಳಿತವು ತೃಪ್ತಿಕರವಾಗಿದೆ. ಆದರೆ ಮೊಹತರ್ಫ ಪಟ್ಟಿ ವಸೂಲಿಯು ಬಹುಮಟ್ಟಿಗೆ ಕಡ್ಡಾಯವಾಗಿ ನಡೆಯುವುದಾಗಿ ವರ್ತಮಾನ ಕೇಳಿರುತ್ತೇನೆ. ಚುನಾವಣೆ ಬಗ್ಗೆ ಸರ್ಕಾರದವರು ಲಿಸ್ಟು ಕಳುಹಿಸಿದ್ದರೆಂಬುದಾಗಿಯೂ ಇದು ಖಾಯಂ ಅಮಲ್ದಾರರು ಸ್ಪೆಷಲ್ ಡ್ಯೂಟಿಗೆ ಹೋಗಿರುವ ಕಾಲದಲ್ಲಿ ಬಂದಿದ್ದರಿಂದ ಇತರ ಸ್ಥಾನದಲ್ಲಿದ್ದ ಹೊಸಬರಾದ ತಾಲ್ಲೂಕು ಶಿರಸ್ತೇದಾರರ ಕಾಲದಲ್ಲಿ ಬಂದು ಈ ತಾಲ್ಲೂಕಿನ ಎಲ್ಲಾ ಬಾಬಿನಲ್ಲೂ ಪ್ರಮುಖರೆಂದೆನ್ನಿಸಿಕೊಳ್ಳಬೇಕೆಂದು ಓಡಾಡುತ್ತಿರುವ ಸ್ವಾರ್ಥಪರರಾದ ಮನುಷ್ಯರೊಬ್ಬರ ಮಾತಿಗೆ ಮರುಳಾಗಿ ಇವರಿಗೆ ಬೇಕಾದವರಾದರೋ ಒಬ್ಬಿಬ್ಬರನ್ನು ಹೊಸದಾಗಿ ಲಿಸ್ಟಿಗೆ ಸೇರಿಸಿ ಕಳುಹಿಸಿರುವುದಾಗಿ ವರ್ತಮಾನಕೇಳಿರುತ್ತೇನೆ. ಈ ವರ್ತಮಾನಲ್ಲಿ ವಿದ್ಯಾವಂತರಾಗಿಯೂ ಹಳಬರಾಗಿಯೂ ಅನೇಕ ನ್ಯಾಯಸಂಸ್ಥೆಗಳಲ್ಲಿ ಬೆರೆತು ಅನುಭವಸ್ಥರಾಗಿಯೂ ಇರತಕ್ಕ ಹಿಂದುಳಿದ ವಂಗಡದ ಮುಖಂಡರು ಕೆಲವರಿರುತ್ತಾರೆ. ಇವರು ಡಿಸ್ಟ್ರಿಕ್ಟು ಬೋರ್ಡಿಗೆ ಅರ್ಹರಾಗಿರುತ್ತಾರಾದ್ದರಿಂದ ನಮ್ಮ ಸರ್ಕಾರದವರು ಅನುಭವಸ್ಥರಾದ ಖಾಯಂ ಅಮಲ್ದಾರರು ಬಂದಿರುವ ಈ ಕಾಲದಲ್ಲಿ ಲಿಸ್ಟನ್ನು ಪುನಃ ಕಳುಹಿಸಿ ಸೇರಬೇಕೆಂದಿರುವವರ ಕಾಂಕ್ಷೆಯನ್ನು ನೆರವೇರಿಸುವರೆಂದು ನಂಬಿರುತ್ತೇನೆ. ಮತ್ತು ಈಗಿನ ರಾಜ್ಯಾಡಳಿತದ ಸುಧಾರಣೆಯ ಪ್ರಕಾರ ಪ್ರಜಾಪ್ರತಿನಿಧಿಸಭೆಗೆ ಹೊಸದಾಗಿ ಮೆಂಬರುಗಳನ್ನು ಚುನಾಯಿಸುವ ಕಾಲವು ಸಮೀಪಿಸಿದೆ. ಹಿಂದುಳಿದ ಮುಖಂಡರು ಹೋದಸಾರಿ ಎಲೆಕ್ಷನ್ನಿನಂತೆ ಪರಸ್ಪರ ದ್ವೇಷಾಸೂಯೆಗಳನ್ನು ಬಿಟ್ಟು ಐಕ್ಯಮತ್ಯದಿಂದ ಕೆಲಸಮಾಡಿ ಜಯಶೀಲರಾಗುವರೆಂದು ನಂಬಿರುತ್ತೇನೆ.

ಸ್ಥಳನಿವಾಸಿ.

ಶರಣಬಸವ.

ಈ ವೀರಶೈವ ಸತ್ಪುರುಷನು 18ನೇ ಶತಮಾನದಲ್ಲಿ ನಿಜಾಂ ಇಲಾಖಾ ಕಲಬುರಗೀ ಜಿಲ್ಲೆಯ ಅರಳಗುಂಡಗಿ ಎಂಬ ಪುಣ್ಯಸ್ಥಳದಲ್ಲಿ ಅವತರಿಸಿದನು. ಕೇವಲ ಶಿವಾಚಾರಸಂಪನ್ನನಾದ ಮಹಾನುಭಾವನು ಸಕಲ ಜೀವರಾಶಿಗಳಲ್ಲಿಯೂ ಸಮದೃಷ್ಟಿಯಿಂದ ಮಾಡಿದ ಲೋಕಸೇವೆಯು ಅವರ್ಣನೀಯವಾಗಿದೆ. ಪ್ರಸಂಗಾನುಸಾರ ಈತನು ಆಡಿಯೂ ಮಾಡಿಯೂ ತೋರಿಸಿದ ಅನೇಕ ಪವಾಡಗಳು ವೀರಶೈವಮತದ ತತ್ವಗಳ ಪ್ರಶಂಸೆಯನ್ನೂ ಅಷ್ಟಾವರಣ ಮಹಾತ್ಮೆಯನ್ನೂ ಅಲ್ಲದೆ ಪರಮಾರ್ಥಪರವಾದ ವಿಚಾರಗಳೇ ಮೊದಲಾದವುಗಳನ್ನೂ ಹೊರಗೆಡಹುವದರಲ್ಲಿ ಬಹು ಸಹಕಾರಿಯಾಗಿವೆ. ಇಂತಹ ಪುಣ್ಯಪುರುಷನ ಸ್ಮಾರಕರೂಪವಾದ ಶ್ರೇಷ್ಠವಾದ ದೇವಾಲಯವು ಕೋಟ್ಯಾವಧಿ ಹಣವನ್ನು ವೆಚ್ಚಮಾಡಿ ಕಲಬುರಗಿಯಲ್ಲಿ ಕಟ್ಟಿಸಲ್ಪಟ್ಟಿದೆ. ಈಗಲೂ ಫಾಲ್ಗುಣ ಶುದ್ಧ ಪಂಚಮಿಯಿಂದ ಅಮಾವಾಸ್ಯೆವರೆಗೆ ಘನವಾದ ಯಾತ್ರೆಯು ಸೇರುತ್ತಿರುವುದು. ಐಕ್ಯಸಂದರ್ಭದ ವಿಷಯದಲ್ಲಿ ಈ ಮಹಾನುಭಾವನು ಮಾಡಿದ ಪರಮೋತ್ಸವ ಚಿರಸ್ಮರಣೀಯವಾಗಿದೆ. ಇಂತಹ ಮಹಾವಿಭೂತಿಗಳ ಪರಿಚಯವನ್ನು ಮಾಡಿಕೊಡುವ ಸಂಕಲ್ಪವನ್ನೇ ಮುಖ್ಯವಾಗಿಟ್ಟುಕೊಂಡಿರುವ "ಗದಗ್ ಶ್ರೀ ದತ್ತಾತ್ರಯ ನಾಟಕಮಂಡಲಿಯ" ಸೂತ್ರಧಾರಿಗಳಾದ ಮ|| ರಾ|| ಸದಾಶಿವರಾವ್ "ಅಭಿನಯಕೇಸರಿ"ಯವರು ಕಳೆದ ಸೋಮವಾರ ದಾವಣಗೆರೆಯಲ್ಲಿ "ಶರಣಬಸವ" ನಾಟಕವನ್ನಾಡಿ ಅದರಲ್ಲಿ ಸ್ವತಃ ತಾವೇ ಶರಣಬಸವನ ಪಾತ್ರವನ್ನು ವಹಿಸಿ ತಮ್ಮ ಮಧುರವಾದ ಸಂಗೀತದಿಂದಲೂ, ಅಸ್ಖಲಿತವಾಕ್ಯಗಳಿಂದಲೂ ಪಾರಮಾರ್ಥಪರವಾದ ಉಪನ್ಯಾಸಗಳಿಂದಲೂ ನೆರೆದಿದ್ದ ಸಮಸ್ತಜನರ ಮನಸ್ಸಿನಲ್ಲಿ ಭಕ್ತಿ, ಜ್ಞಾನ, ವೈರಾಗ್ಯ ಬುದ್ಧಿಯು ಹುಟ್ಟುವಂತೆ ಮಾಡಿ ತೋರಿಸಿದರು. ಅಭಿನಯಕೇಸರಿಯವರ ಸದ್ಹೃದಯವನ್ನೂ, ಉದಾರಭಾವವನ್ನೂ, ಸ್ವದೇಶಾಭಿಮಾನವನ್ನೂ ಮತ್ತು ಅವರ ಲೋಕಸೇವೆಯನ್ನೂ ಅರಿಯದ ಕನ್ನಡಿಗರೇ ವಿರಳರು. ಜನರಂಜನೆಮಾಡಿ ಹಣಗಳಿಸುವುದೇ ಮುಖ್ಯವಾಗಿಟ್ಟುಕೊಂಡಿರುವ ಸಾಮಾನ್ಯ ನಾಟಕದವರಂತಿರದೆ, ಈ ನಾಟಕಮಂಡಳಿಯು ನಾಟಕವನ್ನು ಅಭಿನಯಿಸುವುದರಲ್ಲಿ ನೀತಿ ಧರ್ಮಬೋಧೆಗೆ ಹೆಚ್ಚು ಗಮನಕೊಟ್ಟಿರುವುದನ್ನು ನೋಡಿದ ಪ್ರತಿಯೊಬ್ಬನೂ ಸಂತೋಷಿಸದಿರಲಾರನು. ಲೋಕಬೋಧಕವಾಗಿಯೂ ಪರಮಾನಂದವನ್ನುಂಟುಮಾಡುವದಾಗಿಯೂ ಇರುವ ದತ್ತಾತ್ರಯ ನಾಟಕಮಂಡಳಿಯಂಥಾ ಸಂಘಗಳನ್ನು ಯಾವಾತನೇ ಪ್ರೋತ್ಸಾಹಿಸದಿರನು? ಕೇಸರಿಯವರ ಬಳಿ ದೊರೆಯುವ ಮೇಲೆ ಕಾಣಿಸಿರುವ ಪುಸ್ತಕಾವಲೋಕನದಿಂದಲೂ, ಅಲ್ಲಲ್ಲಿ ಅಭಿನಯಿಸುವ ನಾಟಕಗಳಿಗೆ ಪ್ರೋತ್ಸಾಹಕರಾಗುವುದರಿಂದಲೂ ಸದಾಶಿವರಾಯರ ಸತ್ಸಂಕಲ್ಪವನ್ನು ಪೂರ್ಣಗೊಳಿಸುವ ಕಾರ್ಯವು ಸತ್ಪ್ರೇಕ್ಷಕರನ್ನು ಕೂಡಿದ್ದಾಗಿದೆ. ಶರಣಬಸವನಂತಹ ಅನೇಕ ಶಿವಶರಣರ ನಾಟಕಗಳನ್ನು ಅಂದರೆ ಪ್ರಭುಲಿಂಗಲೀಲೆ, ಕಲ್ಯಾಣಬಸವೇಶ್ವರ, ಪಾರ್ವತೀ ಸತ್ವಪರೀಕ್ಷೆ ಮೊದಲಾದವುಗಳನ್ನು ಆಡಲು ಕೇಸರಿಯು ಪ್ರಯತ್ನಪಟ್ಟರೆ ವಿಶೇಷ ಕನ್ನಡಿಗರಿಗೆ ಒಳ್ಳೇ ಪರಿಣಾಮವಾದೀತೆಂದು ಬೇರೆ ಹೇಳಬೇಕಾಗಿಲ್ಲವು. ಇದೇರೀತಿ ನಾಟಕಮಂಡಳಿಗಳೆಲ್ಲವೂ ನೀತಿಬೋಧೆಗೆ ಹೆಚ್ಚು ಗಮನಕೊಟ್ಟರೆ ಸದ್ಯದ ನಾಟಕಗಳ ದುಷ್ಪರಿಣಾಮವು ಅಡಗಿಹೋಗುವದರಲ್ಲಿ ಸಂಶಯವಿಲ್ಲ.

ಶರಣಬಸವ ನಾಟಕಾವಲೋಕಿ.

ಸೊಂಡೂರು ಶ್ರೀ ಕುಮಾರಸ್ವಾಮಿಯ ಯಾತ್ರಾ ಸಮಾರಂಭವು,

ಕಾರ್ತೀಕ ಶು|| 15 ಕೃತ್ತಿಕಾನಕ್ಷತ್ರ ಶಿವನಾಮಯೋಗ ಈ ಶುಭ ಮುಹೂರ್ತದಲ್ಲಿ ಈಶ್ವರದರ್ಶನಮಾಡಿಕೊಂಡ ಪ್ರತಿ ಒಂದು ಪ್ರಾಣಿಗೂ ಪುನರ್ಜನ್ಮವಿಲ್ಲವೆಂಬ ಸ್ಕಾಂದಪುರಾಣೋಕ್ತಿಯಂತೆ ದೂರ ದೇಶಗಳಿಂದ ಅನೇಕ ಜನರು ಇಲ್ಲಿಗೆ ದಯಮಾಡಿಸಿದ್ದರು. ಬರುವ ಜನರಿಗೆ ತಣಿವಿಹಳ್ಳಿ ಸ್ಟೇಷನ್ನು ಲಗತ್ತಾಗಿರುವುದರಿಂದ ಬಹುಜನರು ಸದರಿ ಸ್ಟೇಷನ್ನಿನಲ್ಲಿ ಇಳಿಯುವರಾಗಿದ್ದರು. ಅಲ್ಲಿ ಶ್ರೀಮಂತ ಮಹರಾಜರು ಯಾತ್ರಿಕರ ವಸತಿಗೆ ನೀರು ನೆರಳುಗಳವೆಡಿಯದ ಕೋಟಕೊಟ್ಟಿಗೆಗಳನ್ನು ಯೇರ್ಪಡಿಸಿದ್ದಲ್ಲದೆ ದಿನ ಒಂದಕ್ಕೆ ನಾಲ್ಕು ಐದುಸಾರಿ ಗಾಡಿಗಳನ್ನು ಬಿಡಿಸುತ್ತಾ ಜನರಿಗೆ ಯಾವತರದ ತೊಂದರೆ ಇಲ್ಲದಂತೆ ಏರ್ಪಡಿಸಿದ್ದರು. (ಯಥಾರಾಜ ತಥಾಪ್ರಜಾ) ಎಂಬ ಆರ್ಯೋಕ್ತಿಯಂತೆ ತಣಿವಿಹಳ್ಳಿ [illegible] ಕೊಟ್ರಪ್ಪನವರು ತಮ್ಮ ಧರ್ಮಛತ್ರದಲ್ಲಿ ಅತಿಥಿಸತ್ಕಾರಕ್ಕಾಗಿ ತಕ್ಕ ಏರ್ಪಾಟು ಶ್ರದ್ಧಾಭಕ್ತಿಯಿಂದಮಾಡಿದ್ದರು. ಅಲ್ಲಿಂದ ಸ್ವಾಮಿಯು ಬೆಟ್ಟದವರೆಗೂ ಮೋಟಾರು ಸರ್ವಿಸು ಸವಾರಿಗಾಡಿಗಳೇ ಮುಂತಾದ ವಾಹನಗಳೇರ್ಪಡಿಸಿದ್ದರು. ಮುಖ್ಯ ರಾಜಧಾನಿಯಾದ [illegible] ಎತ್ತ[illegible] ನಾನಾ[illegible] ಛತ್ರಮು[illegible] ಅಲ್ಲಿ ಕೂ[illegible] ಯೇರ್ಪಡಿ[illegible] ಶ್ರೀಲೋಹಾ[illegible] ಮಹನೀಯರಿ[illegible] ಮುಖಮಾರ್ಗವಾ[illegible]ದ್ದರು. ಅಲ್ಲಿ ಕೂಡಾ [illegible] ಅನುಕೂಲವಾಗಿತ್ತು. ಶ್ರೀಮಂತ ಮಹರಾಜರು [illegible] ಸಿಬ್ಬಂದಿಸಹಿತ ಸದರಿ ದೇವಸ್ಥಾನದ ಸಮೀಪದಲ್ಲಿಯೇ ವಸತಿಮಾಡಿದ್ದರು. ಮೇಲೆ ಶ್ರೀ ಕುಮಾರಸ್ವಾಮಿದೇವಸ್ಥಾನದ ಸಮೀಪದಲ್ಲಿ ಸದರಿ ದಿವಸ 10-12 ಸಹಸ್ರ ಜನರು ನೆರೆದಿದ್ದರು. ಅವರ ವಸತಿಗೆ ಛತ್ರ ಮುಂತಾದ ಅತ್ಯವಶ್ಯಕಗಳನ್ನು ದೊರಕಿಸಿದ್ದಲ್ಲದೆ, ರಾತ್ರಿಕಾಲದಲ್ಲಿ ಎಲೆಕ್ಟ್ರಿಕ್ ದೀಪಗಳನ್ನು ಹಚ್ಚಿಸಿ ಸ್ವಲ್ಪವಾದರೂ ಬಾಧೆಯಾಗದಂತೆ ಪೋಲೀಸು ಸಿಬ್ಬಂದಿ ಇರಿಸಿದ್ದರು. ನೆರದಜನರಿಗೆ ಕರ್ಣಾನಂದವನ್ನುಂಟುಮಾಡುವ ಮಿಲ್ಟ್ರಿಬ್ಯಾಂಡು ಮುಂತಾದ ವಾದ್ಯಗಳಿಂದ ಶೋಭಿಸುತ್ತಿರುವ ಗಿರಿಯು ಕೈಲಾಸದಂತೆ ತೋರುತ್ತಿತ್ತು. ಶಿವಯೋಗಕಾಲದಲ್ಲಿಯೆ ಎಲ್ಲಾ ಜನರಿಗೂ ದರ್ಶನಮಾಡಿಸುವ ಕಾರಣ ಸರ್ತಿಯಂತೆ ಜನರನ್ನು ದೇವಸ್ಥಾನದಲ್ಲಿ ಬಿಡುವ ಕಾರ್ಯದಲ್ಲಿ ತೊಡಗಿದ ಪ್ರತಿ ಒಬ್ಬ ಅಧಿಕಾರಿಗಳೂ ವಿನಯಾದಿಸದ್ಗುಣಗಳಿಂದ ಕೂಡಿದ್ದರಲ್ಲದೆ, ಶ್ರೀಮಂತರು ಸಕಾಲಕ್ಕೆ ಆಹಾರ ನಿದ್ರೆಗಳಿಲ್ಲದೆ, ತಾವೇ ಖುದ್ದು ಪಾದಚಾರಿಗಳಾಗಿ ದಯಮಾಡಿಸಿ ಯಾತ್ರಿಕರ ಮೇಲೆ ಕರುಣಾಮೃತಸೂಸುವ ವಿಶ್ವಾತ್ಸಲ್ಯದಿಂದ ಸ್ವಾಮಿದರ್ಶನಮಾಡಿಸುವ ಕಾರ್ಯದಲ್ಲಿಯೇ ತೊಡಗಿದ್ದರು. ತಾವು ಮಾಡಿಸಿದ ಯಾತ್ರೆಯಲ್ಲಿಯೆ ಜಗತ್ತಿನ ಜನರ ಸ್ತುತಿಗೆ ಪಾತ್ರರಾದಮೇಲೆ ಮುಂದೆ ಬರುವ ಯಾತ್ರೆಯನ್ನು ಇದಕ್ಕಿಂತಲೂ ಉನ್ನತಸ್ಥಿತಿಯಲ್ಲಿ ಮಾಡಿಸುವರೆಂದು ಸಂಪೂರ್ಣ ನಂಬಿರುವೆ. ಈರೀತಿ ತ್ರಿಕರ್ಣಶುದ್ಧಿಯಾಗಿ ಯಾತ್ರೆಮಾಡಿಸಿ ಜಯಶೀಲರಾದ ಮಹರಾಜರಿಗೂ ಮಹರಾಣಿಯವರಿಗೂ ಸ್ವಾಮಿದರ್ಶನಮಾಡಿಕೊಂಡ ಮಹಾಜನರಿಗೂ ಶ್ರೀ ಕರುಣಾಮೂರ್ತಿಯಾದ ಕುಮಾರಸ್ವಾಮಿಯು ಅಷ್ಟೈಶ್ವರ್ಯಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ ಸಿ|| ಚಂದ್ರಶೇಖರಶಾಸ್ತ್ರಿ, ಹೊಳಗುಂದಿ,
ಕಬ್ಬಿಣಕಂಥಿಮಠ.

ಚಾಮರಾಜನಗರದ ಮ್ಯುನಿಸಿಪಾಲಿಟಿ.

"ಸ್ವರಾಜ್ಯನಿರ್ವಹಣೆ" ಎಂಬ ಶಿರೋಲೇಖನದಿಂದ ಕಳೆದವಾರ ಬರೆದ ಬಾತ್ಮಿಗೆ ಇಲ್ಲಿನ ಕೆಲವರು ನನ್ನನ್ನೂ ತಮ್ಮನ್ನೂ ಅನ್ನಲು ಮೊದಲುಮಾಡಿ ನನ್ನ ಮೇಲೇನೋ ದೊಡ್ಡದೊಂದು ಗುಂಡನ್ನು ಉರುಳಿಸಿಬಿಡುವಷ್ಟು ಆವೇಶದಿಂದಿದ್ದಾರೆ. ಅವರಿಲ ಲೈಸೆನ್ಸು ಕೊಡುವ ಉದ್ದೇಶವು ಸ್ಯಾನಿಟರಿ ರೂಲ್ಸಿಗೆ ಅನುಸಾರವಾಗಿ ಮನೆಕಟ್ಟುವ ವಿಧಾಯಕವೇ ವಿನಃ ಸ್ವಂತ ಜಾಗದಲ್ಲಿ ಮನೆಕಟ್ಟಲು ತಕರಾರು ವಿಮರ್ಶೆಯಲ್ಲವೆಂಬುದನ್ನು ಎಲ್ಲರೂ ಬಲ್ಲರು. ಒಂದುವೇಳೆ ತಕರಾರು ಬಂದರೆ ಪಾರ್ಟಿಗಳು ಸಿವಿಲ್‌ಕೋರ್ಟಿಗೆ ಹೋಗಲು ತಕ್ಕ ಮಾರ್ಗವಿರುವಾಗ ತಮಗೆ ಸಂಬಂಧವಿಲ್ಲದ ವಿಚಾರದಲ್ಲಿ ವೈಸ್‌ಪ್ರೆಸಿಡೆಂಟರು ಕೈಹಾಕಿದುದು ನ್ಯಾಯವೆ? ಬ್ರಾಹ್ಮಣಶ್ರೇಣಿ ಎಂಬುದು ಸ್ಥಿರಪಡಿಸಿ ಕೋರ್ಟು ಮೂಲಕ ಇಂಜಕ್ಷನ್ ಪಡೆಯುವ ಅವಕಾಶವು ಅವರಿಗಿರಲಿಲ್ಲವೆ? ಹಾಗೆ ಇಲ್ಲದಿದ್ದರೆ ಲೈಸೆನ್ಸಿನ ಷರತ್ತುಗಳಲ್ಲಿ ಸಿವಿಲ್ ವ್ಯಾಜ್ಯದ ತಕರಾರಿದ್ದರೆ ಲೈಸೆನ್ಸು ಬಾಧ್ಯಪಡುವುದಿಲ್ಲವೆಂಬ ಮಾತನ್ನು ಸೇರಿಸತಕ್ಕ ಅವಶ್ಯಕತೆ ಏನಿದೆ? ನಮ್ಮ ಮೆಂಬರುಗಳೂ ವೈಸ್‌ಪ್ರೆಸಿಡೆಂಟರೂ ಪ್ರಜಾಪ್ರಭುಗಳೆಂಬ ಹೆಸರನ್ನು ಪಡೆದು ಊರಿಗೆ ಉಪಕಾರ ಮಾಡಿ ಕೀರ್ತಿಪಡುವ ಮುಖಂಡರಾಗಿರಬೇಕೇ ವಿನಃ ಪ್ರಜಾಸೇವಕರೆಂಬ ನೌಕರರಂತೆ ನಡೆದು ದೊಡ್ಡವರು ಬಂದಾಗ ಮುಂದೆ ನಿಲ್ಲುವ ಗೌರವಕ್ಕಾಗಿ ಅಲ್ಲ. ಬ್ರಾಹ್ಮಣ ಬ್ರಾಹ್ಮಣೇತರ ವಿವಾದಗಳನ್ನು ಎಬ್ಬಿಸಿ ಸಮಯ ಬಂದಾಗ ಬ್ರಾಹ್ಮಣೇತರರ ಸಹಾಯವನ್ನು ಕೇಳಲು ಹಲ್ಲುಕಿರಿಯುವ ಪದ್ಧತಿ ಯಾರಿಗೂ ತಿಳಿಯದೆ? ಅದಿರಲಿ. ಗ್ರಾಮಾರೋಗ್ಯದ ವಿಚಾರದಲ್ಲಿ ಯಾರು ಏನು ಮಾಡಿರುವರು? ಸಿಡುಬಿನ ಹಾವಳಿಯಿಂದ ಎಷ್ಟೊಂದು ಮಕ್ಕಳು ನರಳಲಿಲ್ಲ? ನರಳುತ್ತಿಲ್ಲ? ಸತ್ತಿಲ್ಲ? ತಮ್ಮ ಮುದ್ದುಮಕ್ಕಳು ಘೋರರೋಗದಲ್ಲಿ ಬಿದ್ದು ಸಂಕಟಪಡುವುದನ್ನು ನೋಡಿದ ಮಾತಾಪಿತೃಗಳ ಎಷ್ಟೊಂದು ಆಶೀರ್ವಾದವನ್ನು ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಮಾಡಿಬೇಡ? ಪ್ರತ್ಯೇಕ ವೇಪಿಂಡೆಶರು ಇದ್ದರೂ ಎಷ್ಟೊಂದು ಮಕ್ಕಳು ದೇವಿ ಹಾಕಲ್ಪಡದೆ ಇರಲು ಕಾರಣವೇನು? ಬಲಾತ್ಕಾರದ ಕಾನೂನು ಏನಾಯಿತು? ಇದನ್ನಾದರೂ ಮೆಂಬರರು ಕೇಳಿದರೇ? ಪ್ರೆಸಿಡೆಂಟರಾಗಲಿ, ವೈಸ್‌ಪ್ರೆಸಿಡೆಂಟರಾಗಲಿ ಗ್ರಾಮವನ್ನು ಗಸ್ತುಮಾಡಿ ಪ್ರಜೆಗಳಿಗೆ ಯಾವ ಆರೋಗ್ಯ ವಿಚಾರವನ್ನು ತಿಳಿಸಿದ್ದಾರೆ? ಮುಂದೆನಿಂತು ಹೇಳಲಿ. ಸ್ಯಾನಿಟರಿ ಇನ್ಸ್||ರಾದರೂ ಸಂಬಳದ ಮೇಲಿರುವಷ್ಟು ಆಶೆಯನ್ನು ವೈಸ್‌ಪ್ರೆಸಿಡೆಂಟ್ ಪ್ರೆಸಿಡೆಂಟರ ಹಸಾದಕ್ಕೆ ಹವ್ಯಾಸಿರುವದನ್ನು ಕಡಮೆಮಾಡಿ. ಬರೀ ಲೈಸೆನ್ಸುಗಳನ್ನು ಕೊಡಿಸುವ ಆಫೀಸರಾಗದೆ ಆರೋಗ್ಯ, ನೀರಿನ ನೈರ್ಮಲ್ಯ ಸಾಂಕ್ರಾಮಿಕಜಾಡ್ಯಗಳ ವಿಚಾರದಲ್ಲಿ ಯಾವಜನರಿಗೆ ನೀತಿ ಹೇಳಿದ್ದಾರೆ? ಸಿಡುಬಿನಹಾವಳಿ ಇಷ್ಟೂ ಇರುವಾಗ ನಮ್ಮಲ್ಲಿನ ಡಾಕ್ಟರರನ್ನು ಗ್ರಾಮದಲ್ಲಿ ತಿರುಗಿಸಿ ಜನರಿಗೆ ಧೈರ್ಯಹೇಳಬೇಡವೆ? ಸಾಲದ್ದಕ್ಕೆ ನೀರಿನಲ್ಲಿ ಕ್ರಿಮಿಗಳು ಹೆಚ್ಚಿ ಬೀದಿಬೀದಿಯಲ್ಲಿ ಜನರು ಬಾಯಿಲಿ ಇದ್ದಾರೆ. ಅದರ ಕಡೆಗೆ ಗಮನಕೊಡುವುದು ಇವರ ಕರ್ತವ್ಯವಲ್ಲವೆ? ಕೌನ್ಸಿಲರ್‌ನವರ ಕರ್ತವ್ಯವು ಮೇಲ್ವಿಚಾರಣೆ ಮಾಡತಕ್ಕದ್ದಲ್ಲವೆ? ಅದೂ ಇರಲಿ. ಪೇಟೆಬೀದಿಯ ಧೂಳು, ಹೋಟೆಲುಗಳ ಅವ್ಯವಸ್ಥೆ ಮದ್ಯಪದಾರ್ಥಗಳನ್ನು ವಿಕ್ರಯಿಸುವ ಸ್ಥಳಗಳ ಹೊಲಸನ್ನು ಕೇಳುವವರ್ಯಾರು? ಡಿ. ಪಿ. ಡಬ್ಲ್ಯು ಆಫೀಸಿಗೆ ಸೇರಿದ ಪೇಟೆರಸ್ತೆಯ ಅವಸ್ಥೆಯು ದೇವರಿಗೇ ಪ್ರೀತಿ. ಮುನಿಸಿಪಲ್ ಕೌನ್ಸಿಲಿನವರು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡವೆ? ಧೂಳು ಆಹಾರಪದಾರ್ಥಗಳಲ್ಲಿ ಸೇರಿ ಹೊಟ್ಟೆಗೆ ಹೋಗಿ ನಾನಾವಿಧವಾದ ರೋಗಗಳಿಗೆ ಕಾರಣವಾಗುವುದು ಯಾರಿಗೂ ತಿಳಿಯದೆ? ಸಂತೆಗಾಡಿಗಳು ಊರ ಹೊರಗೆ ಹೋಗಲು ಏರ್ಪಾಡುಮಾಡುವ ಕರ್ತವ್ಯವ್ಯಾರದು? ಹೋಟೆಲುಗಳ ನೈರ್ಮಲ್ಯವನ್ನು ನೋಡಿದರೆ ನಿಜವಾಗಿಯೂ ಮದ್ಯದ ಅಂಗಡಿಯು ಜ್ಞಾಪಕಬರುವುದು. ಇಷ್ಟೇ ಅಲ್ಲ, ಊರಿನ ಪಾಳುನಿವೇಶನಗಳ ಅವಸ್ಥೆಯಾದರೂ ಏನು? ಎಂಜಲೆಲೆಗಳ, ಸೊಪ್ಪುಸದೆಗಳ, ಬೂದಿಗುಡ್ಡೆಗಳ ಭಂಡಾರವೇ. ರಾತ್ರಿಹೆಂಗಸರು ಅವಿವೇಕಿಗಳ ಮಲಮೂತ್ರ ವಿಸರ್ಜನೆಗೆ ವಿಸ್ತಾರವಾದ ಬಯಲಾಡಂತೆ ಆಗಿರುತ್ತವೆ. ಈಕಡೆ ಗಮನಕೊಟ್ಟಿರುವರೆ? ಇವೆಲ್ಲಾ ವೈಸ್‌ಪ್ರೆಸಿಡೆಂಟರಿಗೆ ಸೇರಿಲ್ಲವೆ? ನೀರಿಗೆ ಆಧಾರವಾದ ದೊಡ್ಡ ಕೋಳದಲ್ಲಿ ಹುಳುಗಳು ಬರೀಕಣ್ಣಿಗೆ ಕಾಣುವಷ್ಟು ದೊಡ್ಡವಾಗಿ ಬೆಳೆದಿರುವುದನ್ನು ಊರ ಉಪಕಾರಿಗಳು ಯಾರುನೋಡಿದಾರೆ? ಅವರಿಗೆ ನಿರ್ಮಲವಾದ ನೀರು, ಒಳ್ಳೇಗಾಳಿ, ರುಚಿಯಾದ ಆಹಾರವಿದ್ದರೆ ಸಾಕು. ಕೆರೆಗೆ ಕೊಡುವ ಬಡವರು ಹೇಗಾದರೇನು? ಬಡವರ ಆರೋಗ್ಯಭಾಗ್ಯವು ಇವರಿಗೆ ನಮ್ಮಂಥ ಪಟ್ಟುದಲ್ಲವೆಂಬುದಾಗಿ ಹೇಳಿದರೆ ಇವರು ಖಂಡಿತವಾಗಿ ಕೆರೆಗೆ ಹೋಗುವವರ [illegible]. ಒಟ್ಟಿನಲ್ಲಿ ನಮ್ಮ ಕೌನ್ಸಿಲ್‌ರವರು ಎಷ್ಟು

೧೫ ರಿಂದ ೨೦ ಅಡಿ ಎತ್ತರದವರೆಗೆ ಬೇಕಾದ ದ್ರವ್ಯವನ್ನು ಖರ್ಚು ಮಾಡಿ ಗುತ್ತವನ್ನು ತೆಗಿಸಿ ಸಂಸ್ಥಾನದವರು [illegible] ರುತ್ತಾರೆ.

ಅಗ್ರಹಾರ ಬ್ರಾಹ್ಮಣರು ದೈನಂದಿನವಾದ [illegible] ದರಬದಲು ನಡೆಸಿಕೊಂಡು ಬರುವದರಲ್ಲಿಯೇ ಅಸಮರ್ಥರಾಗಿರ[illegible]ಯವಲ್ಲ. [illegible]ಗೃಹಗಳನ್ನು ನಿರ್ಮಾಣ ಮಾಡಿಕೊಳ್ಳಲು ಸುತರಾಂ [illegible] ಶಾವು ಸಂಗತಿಯನ್ನು ಪ್ರಸ್ತಾಪಿಸಬೇಕಾಗಿಲ್ಲವಷ್ಟೆ. ಕಾಲಸಿ[illegible]ಗಳಿಗೆ ನನ್ನ ದವರು ಸಂಪೂರ್ಣ ಭಾರವನ್ನು ವಹಿಸಿ ಅಗ್ರ[illegible]ಶಹನೆಯನ್ನೂ ಮಾಡಿಸುವದು ಅಸಾಧ್ಯವೆಂಬ ಸಂಗತಿಯು [illegible] ಊರನ್ನು ಅಭಿವೃ[illegible] ಇರುವದು. ಈ ಸಂದರ್ಭಗಳಿಂದ ಧರ್ಮ[illegible] ನಮಸ್ಕಾರ. ತಮ್ಮ ಉದಾರ ಸ್ವಭಾವ ಉಳ್ಳ[illegible]ಗಳೆಂಬ ದೊಡ್ಡ ಬಿರುದನ್ನು ಸಂಸ್ಥಾನ[illegible] ಭೂಷಿಸಿದ್ದರೆ ಅದು ತಂಗೆಕೊಡುವವರ ಹೀನಾದೃಷ್ಟವೆಂತಲೇ ಹೇಳಿ ತಪ್ಪಾಗುವದು. ಇನ್ನು ಮುಂದಾದರೂ ಮೆಂಬರುಗಳೂ, ವೈಸ್‌ಪ್ರೆಸಿಡೆಂಟರೂ ನಮ್ಮ ಊರನ್ನು ಅಭಿವೃದ್ಧಿಗೆ ತರುವ ಪ್ರಯತ್ನಮಾಡಿ ತಮ್ಮನ್ನಾರಿಸಿದ ಮತ್ತು ನಿಯಮಿಸಿದ ಪ್ರಜೆ ಸರ್ಕಾರ ಇವರಿಬ್ಬರ ಭರವಸೆಗಳನ್ನುಳಿಸಿಕೊಂಡು, ಶುಷ್ಕವಾದ ಬ್ರಾಹ್ಮಣ ಬ್ರಾಹ್ಮಣೇತರ ಭೇದಗಳನ್ನು ಮುಖ್ಯವಾಗಿ ಮ್ಯುನಿಸಿಪಾಲಿಟಿಯಲ್ಲಿ ಬಿಡುವದು ಕ್ಷೇಮವಾಗಿದೆ. ಹೀಗಲ್ಲದೆ ಇದು ಬ್ರಾಹ್ಮಣರದು; ಇದು ಬ್ರಾಹ್ಮಣೇತರದು; ಇದು ಮುಸಲ್ಮಾನರದು; ಅದು ಕ್ರಿಶ್ಚಿಯನರದು ಎಂಬೀ ದುರಾಲೋಚನೆಗಳಿಂದ ಸ್ವರಾಜ್ಯ ನಿರ್ವಾಹಕರೆಂಬ ಕೀರ್ತಿ ಬರುವದಿಲ್ಲ.

ಅರಿಕೆದಾರ.

ಸ್ಕೂಲು ಕಟ್ಟಡದ ಶಂಕುಸ್ಥಾಪನೆ ಮತ್ತು ದರ್ಬಾರಡೆ.

ಮಂಜರಾಬಾದು ತಾ॥ ಎಸಳೂರುಪೇಟೆಗೆ ಹಾಸನ ಡಿ॥ ಸ್ಕೂಲುಗಳ ಡಿ॥ ಇನ್ಸ್‌ಪೆಕ್ಟರ್ ಮ॥ ಶ್ರೀನಿವಾಸರಾಯರು ಕಳೆದ ಜೂನ್ ತಿಂಗಳಲ್ಲಿ ದಯಮಾಡಿಸಿದ್ದಾಗ್ಗೆ ಪ್ರೈಮರಿ ಸ್ಕೂಲಿಗಾಗಿ ಒಂದು ಕಟ್ಟಡವಾಗಬೇಕಾಗಿರುವ ವಿಚಾರದಲ್ಲಿ ಮಾಡಿದ ಉಪದೇಶದ ಪ್ರಭಾವದಿಂದ ಸಾಹುಕಾರ್ ಮತ್ತು ತಾ॥ ಬೋರ್ಡು ಮೆಂಬರಾದ ಮ॥ ಕೂಚಹಳ್ಳಿ ಮಲ್ಲಪ್ಪನವರು ಸ್ವಗ್ರಾಮದ ವಿದ್ಯಾಭಿವೃದ್ಧಿಗಾಗಿ ಒಂದು ಕಟ್ಟಡವನ್ನು ಧರ್ಮಾರ್ಥವಾಗಿ ಕಟ್ಟಿಸಿ ಕಳೆದ ತಾ॥ 12 ರಲ್ಲಿ ಸರ್ಕಾರಿಯುದ್ಯೋಗಸ್ಥರನ್ನೂ ಪುರಜನರನ್ನೂ, ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನೂ ಬರಮಾಡಿಕೊಂಡು ತಮ್ಮ ಗುರುಗಳಾದ ತೆಂಕಲುಮಠದ ಪಟ್ಟದ ಶ್ರೀ ಚನ್ನಬಸವಸ್ವಾಮಿಗಳ ಅಮೃತಹಸ್ತದಿಂದ ಶಂಕುಸ್ಥಾಪನೆಯನ್ನು ವಿಧ್ಯುಕ್ತವಾಗಿಯೂ ವಿಜೃಂಭಣೆಯಿಂದಲೂ ಮಾಡಿಸಿದರು. ಈ ಶಂಕುಸ್ಥಾಪನ ಮಹೋತ್ಸವಕ್ಕಾಗಿ ರಚಿಸಲ್ಪಟ್ಟ ತಳಿರುತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಮಂಟಪದಲ್ಲಿ ದರ್ಬಾರಡೆ ಮಹೋತ್ಸವವನ್ನು ಮ॥ ಕೆ. ಮಲ್ಲಪ್ಪನವರು ಅಭಿಪ್ರಾಯಪಟ್ಟುದರಮೇಲೆ ಇವರ ಅಣ್ಣನವರ ಮಕ್ಕಳಾದ ಕೆ. ನಂಜಪ್ಪನವರು ಮತ್ತು ಕೆ. ಅಪ್ಪಯ್ಯನವರು ಮತ್ತೆ ಕೆಲರೊಡನೆ ಆಸ್ಪತ್ರೆಗೆಹೋಗಿ ಸಬ್ ಅ॥ ಸರ್ಜನರಾದ ಡಾ॥ ಎಸ್. ಎ. ರಾಜಣ್ಣರವರನ್ನು ವಾದ್ಯವೈಭವದೊಡನೆ ಕರೆದುಕೊಂಡುಬಂದು ಸಭಿಕರ ಇಷ್ಟಪ್ರಕಾರ ಅಧ್ಯಕ್ಷಸ್ಥಾನವನ್ನು ವಹಿಸಬೇಕಾಗಿ ಪ್ರಾರ್ಥಿಸಿದರು. ಡಾಕ್ಟರು ಸಭಿಕರ ಕರತಾಡನಮಾಡುತ್ತಿರುವಾಗ್ಗೆ ಅಧ್ಯಕ್ಷ ಪೀಠವನ್ನಲಂಕರಿಸಿ ದರ್ಬಾರಡೆ ಮಹೋತ್ಸವದ ಉದ್ದೇಶ ಮತ್ತು ಅದರಿಂದಾಗತಕ್ಕ ಪ್ರಯೋಜನವನ್ನು ಕುರಿತು ಸ್ವಾರಸ್ಯವಾಗಿ ಭಾಷಣಮಾಡಿದ ಮೇಲೆ ಸಭಿಕರೆಲ್ಲರೂ ಎದ್ದುನಿಂತು ಮಂಟಪದಲ್ಲಿ ಎತ್ತರವಾದ ಪೀಠಗಳಮೇಲೆ ಪುಷ್ಪಮಾಲೆಗಳಿಂದಲಂಕರಿಸಲ್ಪಟ್ಟಿದ್ದ ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಭಾವಚಿತ್ರಪಟಗಳಿಗೂ ಯೂನಿಯನ್ ಜಾಕಿಗೂ ವಾದ್ಯವಾಗುತ್ತಿರುವಲ್ಲಿ ಸೆಲ್ಯೂಟು ಮಾಡಿದರು. ತರುವಾಯ ಮ॥ ಗಳಾದ (1) ಇಂಗ್ಲಿಷ್ ಮಾಸ್ಟರು ಬಿ. ಆರ್. ವೆಂಕಟರಾಮಯ್ಯನವರು ಬ್ರಿಟಿಷ್ ಚಕ್ರವರ್ತಿ ಸಾರ್ವಭೌಮರವರ ಚರಿತ್ರೆ ಮತ್ತು ಅವರ ಆಳ್ವಿಕೆಯಿಂದ ಉಂಟಾಗಿರುವ ಪ್ರಯೋಜನ (2) ಗರ್ಲ್ಸ್ ಸ್ಕೂಲು ಅ॥ ಮಾ॥ ಟಿ. ಅಪ್ಪಾಜಪ್ಪನವರು ಸ್ತ್ರೀ ವಿದ್ಯಾಭ್ಯಾಸದ ಆವಶ್ಯಕತೆ (3) ಪ್ರೈಮರಿ ಸ್ಕೂಲು ಅ॥ ಮಾ॥ ಟಿ. ಟಿ. ಗುರುಶಾಂತಪ್ಪನವರು ಈಗಿನ ಮತ್ತು ಹಿಂದಿನ ವಿದ್ಯಾಭ್ಯಾಸದ ಕ್ರಮ ಈ ವಿಷಯಗಳ ಮೇಲೆ ಉಪನ್ಯಾಸಮಾಡಿದರು. ಪ್ರೈಮರಿ ಸ್ಕೂಲು ಅ॥ ಮಾ॥ ವೈ. ಹೆಚ್. ಸಿದ್ದಯ್ಯನವರು ಪ್ರೈಮರಿ ಸ್ಕೂಲು ಹೊಸ ಕಟ್ಟಡವು ತಯಾರ್ಮಾಡಿಸುವಂತೆ ಕೂಚಹಳ್ಳಿ ಮಲ್ಲಪ್ಪನವರಿಗೆ ಉಪದೇಶಮಾಡಿದ ಹಾಸನ ಡಿ॥ ಸ್ಕೂ॥ ಡೆ॥ ಇನ್ಸ್‌ಪೆಕ್ಟರ್ ಸಾಹೇಬರವರ ಮತ್ತು ಸಬ್ ಅ॥ ಸರ್ಜನ್‌ರಾದ ಎಸ್. ಎ. ರಾಜಣ್ಣರವರ ಮತ್ತು ಧರ್ಮಪ್ರವರ್ತಕರಾದ ಕೆ. ಮಲ್ಲಪ್ಪನವರ ಗುಣಕಥನ ಮಾಡಿದರು. ತರುವಾಯ ಪೇಟೆ 4 ಸ್ಕೂಲುಗಳು ಪ್ರಾರಂಭದಿಂದ ಅಭಿವೃದ್ಧಿಗೆ ಬಂದ ಸ್ಥಿತಿ ಈಚೆಗೆ 4 ವರ್ಷಗಳಿಂದ ತುಂಬಾ ಮುಂದುವರಿದ ರೀತಿ ಮತ್ತು ಹಾಲಿ ಹೆಡ್ಮಾಸ್ಟರಾಗಿರುವ ಕೆ. ಸುಬ್ಬರಾಯರ ಉತ್ತಮ ಪ್ರಯತ್ನಗಳಿಂದ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಸವಾರಿಯು ಇಲ್ಲಿಗೆ ದಯಮಾಡಿಸಿದ್ದಾಗ ಕೃಪಾಕಟಾಕ್ಷಕ್ಕೆ ತಂದು ಪಾಠಶಾಲೆಗಳಿಗೆ ಪಡೆದ 40 ರೂ. ಬಹುಮಾನ ಪಾಠಶಾಲೆಯ ತೋಟದ ಅಭಿವೃದ್ಧಿಸ್ಥಿತಿಯಲ್ಲಿ ಹಜರತ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಪ್ರತ್ಯಕ್ಷ ಗಮನಕ್ಕೆ ತಂದು ಪಡೆದ ಸಿಲ್ವರ್‌ಮೆಡಲ್ ಮತ್ತು ತಾವು ಹೇಳುವ ಬೋಧನಾಬಲದಿಂದ ಫಸ್ಟ್‌ಕ್ಲಾಸಿನಲ್ಲಿ ಕನ್ನಡ ಲೋಯರ್ ಸೆಕೆಂಡರಿಯಲ್ಲಿ ತೇರ್ಗಡೆ ಮಾಡಿಸಿದ ವಿಷಯವಾಗಿಯೂ ಪೇಟೆಯ ಜನರು ಸರ್ಕಾರಿ ಅಧಿಕಾರಿಗಳಲ್ಲೂ ಉಪಾಧ್ಯಾಯರುಗಳಲ್ಲೂ ಧರ್ಮಪ್ರವರ್ತಕರಲ್ಲೂ ನಡೆದುಕೊಳ್ಳಬೇಕಾದ ರೀತಿ ಕುರಿತೂ ಬಲು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಇನ್‌ಕಂಪ್ಲೀಟ್ ಮಿಡಲ್ ಸ್ಕೂಲು ಹೆ॥ ಮಾ॥ ಕೆ. ಸುಬ್ಬರಾಯರು ಗರ್ಲ್ಸ್ ಸ್ಕೂಲು, ಪ್ರೈಮರಿ ಸ್ಕೂಲುಗಳೆರಡಕ್ಕೂ ಹಾರ್ಮೋನಿಯಂ ತರಿಸಲು ಗ್ರಾಂಟ್ ಮೊಬಲಗು ಕಟ್ಟಲು ಚಂದಾ ವಸೂಲ್ಮಾಡಲು ತೋರಿಸಿದ ಮೆಹನತ್ತನ್ನು ಕುರಿತು ವಿಲೇಜ್ ಚೇರ್ಮನ್ನರು ತಟ್ಟಳ್ಳಿ ಬಸಪ್ಪನವರ ವಿಷಯದಲ್ಲಿ ಉತ್ಸಾಹ ಹೆಚ್ಚುವಂತಹ ಬಲು ಸ್ವಾರಸ್ಯವಾದ ಭಾಷಣಮಾಡಿದರು. ತರುವಾಯ ಅ॥ ಡಿ॥ ಇ॥ ಸಾಹೇಬರವರು ನಮ್ಮ ಗ್ರಾಮದ ಸ್ಕೂಲುಗಳ ಮೇಲೆ ಇಟ್ಟಿರುವ ವಾತ್ಸಲ್ಯವನ್ನೂ ಮತ್ತು ಮುಂದೆಯೂ ಮಾಡಲು ಯೋಚಿಸಿರುವ ಕೆಲವು ಅಭಿಪ್ರಾಯಗಳನ್ನೂ ತಿಳಿಸಿದ್ದಲ್ಲದೆ ಅ॥ ಮಾಸ್ಟರುಗಳ ಶ್ರಮಸಹಿಷ್ಣುತೆಯನ್ನು ತಿಳಿಸಿ ಸಭಿಕರ ಮನಸ್ಸನ್ನು ಆನಂದಗೊಳಿಸಿ ವಿದ್ಯಾಭ್ಯಾಸದಲ್ಲಿ ಅಭಿರುಚಿ ಹುಟ್ಟಿಸಿದರು. ಹೋಬಳಿ ಶೇಕದಾರ್ ಶೇಷಾಚಾರರವರು ಕೂಚಳ್ಳಿ ಮಲ್ಲಪ್ಪನವರ ಉದಾರಸ್ವಭಾವವನ್ನು ಕುರಿತು ಭಾಷಣಮಾಡುವುದರ ಮೂಲಕ ಪ್ರೈಮರಿ ಹೊಸಕಟ್ಟಡವು ಭದ್ರವಾಗಿ ಅಂದವಾಗಿ ಕಟ್ಟಲ್ಪಡುವಂತೆ ಪ್ರೋತ್ಸಾಹಿಸಿದರು. ಕೂಚಹಳ್ಳಿ ಮಲ್ಲಪ್ಪಶೆಟ್ಟರು ಸಭಿಕರನ್ನು ಕುರಿತು ಅ॥ ಮಾ॥ ವೈ. ಹೆಚ್. ಸಿದ್ದಯ್ಯನವರು ತಮ್ಮ ಪ್ರೀತಿಯಿಂದ ಸ್ವತಃ ತಯಾರಿಸಿಕೊಟ್ಟ ಪಾಠಶಾಲಾ ಪ್ಲಾನನ್ನು ಸಭಾಧ್ಯಕ್ಷರು ಮತ್ತು ಹೆಡ್ಮಾಸ್ಟರು ನೋಡಿ ಒಪ್ಪಿದ್ದರಿಂದ ಅದರಂತೆ ಈಗ ಅಳತೆಮಾಡಿ ಸೈಟ್ ಮಾಡಿಸಿರುತ್ತೇನೆ. ಮೂರು ತಿಂಗಳಲ್ಲಿ ಅದನ್ನು ಬಾಲಕರಿಗೆ ಅನುಕೂಲವಿರುವಂತೆ ಭದ್ರವಾದ ಕಟ್ಟಡ ಕಟ್ಟಿಸಿ ಸರ್ಕಾರಕ್ಕೆ ಒಪ್ಪಿಸುತ್ತೇನೆ. ನಾನು ಕಟ್ಟಿಸುವ ಸಣ್ಣ ಕಟ್ಟಡವನ್ನು ಮಹತ್ತಿದೆಂದು ಭಾವಿಸಿ ನನ್ನನ್ನು ಧನ್ಯನನ್ನಾಗಿ ಮಾಡಬೇಕಾಗಿ ಬೇಡುತ್ತೇನೆ. ನಾನು ಹೊಗಳುವಿಕೆಗೆ ಅರ್ಹನಲ್ಲ. ನಾನು ನಿಮ್ಮಲ್ಲೊಬ್ಬನೆಂದು [illegible] ಹೇಳಿದ ಸಣ್ಣ ಮಾತುಗಳನ್ನು ಕೇಳಿ ಭಗವಂತನು ಇವೆಂತು [illegible] ನಾವು ಆದರಂತೆ [illegible], ಐಶ್ವರ್ಯಗಳನ್ನಿತ್ತು ಪುತ್ರನನ್ನು ಕೊಡಲೆಂದು ಸಭಾಧ್ಯಕ್ಷರು ಹರಿಸಿದ ಮೇಲೆ ಸಭಿಕರು ಪೂರ್ಣ ಕರತಾಡನಮಾಡಿದರು. ಡಬ್ಲ್ಯೂ. ಮಹಲಿಂಗಪ್ಪ, ಎಂ. ಸೋಮಪ್ಪ ಈ ಬಾಲಕರುಗಳು ಸಂಗೀತ ಹಾಡಿ ಜನರನ್ನು ಆನಂದಗೊಳಿಸಿದರು. ಹೆ॥ ಮಾ॥ ರವರು ಕೆ. ನಂಜಪ್ಪನವರು ಕೃಷ್ಣರಾಜೇಂದ್ರ ರೀಡಿಂಗ್‌ರೂಮ್ ಸ್ಥಾಪಿಸಲು ಮಾಡಿದ ಸಹಾಯ ಕುರಿತು ಭಾಷಣಮಾಡಿದರು. ಸಭಾಧ್ಯಕ್ಷರು ಗ್ರಾಮವು ಏಳಿಗೆಗೆ ಬರಲು ಜನರು ಐಕ್ಯಮತ್ಯದಿಂದಲೂ ಸನ್ಮಾರ್ಗದಿಂದಲೂ, ವಿವೇಕಿಗಳ ಸಹವಾಸದಿಂದಲೂ ನಡೆದುಕೊಳ್ಳುವುದೇ ಮುಖ್ಯ ಮಾರ್ಗವೆಂದು ಹೇಳಿದ ತರುವಾಯ ಎಲ್ಲಾ ಬಾಲಕರೂ ಬಾಲಕಿಯರೂ ಒಟ್ಟಾಗಿ ಮಂಗಳಪಾಡಿದರು. ತರುವಾಯ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೂ, ಶ್ರೀಮನ್ಮಹಾರಾಜರಿಗೂ, ಅವರ ಅನುಜರಿಗೂ ಭಗವಂತನು ಸರ್ವಸೌಖ್ಯವನ್ನೀಯಲೆಂದು ಹರಸಿ ಭಗವಂತನನ್ನು ಪ್ರಾರ್ಥಿಸಿದರು. ಅಧ್ಯಕ್ಷರಿಗೆ ಹಾರ ಹಾಕಲ್ಪಟ್ಟು ಗಂಧ ಪುಷ್ಪ ತಾಂಬೂಲ ಹಂಚಲ್ಪಟ್ಟು ಬಾಲಕರಿಗೆ ಮಿಠಾಯಿ ಹಂಚಲ್ಪಟ್ಟಿತು. ವಿದ್ಯಾಭ್ಯಾಸದ ಅ॥ ಇ॥ ಜ॥ ಸಾ॥ ರಿಗೂ ಅವರ ಕೈ ಕೆಳಗಿನ ಅಧಿಕಾರಿಗಳಿಗೂ ಭಗವಂತನು ಸೌಖ್ಯವನ್ನೀಯಲೆಂದು ಪ್ರಾರ್ಥಿಸಿದರು. ಅಲ್ಲದೆ ಸಭಾಧ್ಯಕ್ಷತೆ ವಹಿಸಿ ಕಾರ್ಯವನ್ನು ಬೆಳಸಿದ ಎಸ್. ಎ. ರಾಜಣ್ಣರವರಿಗೆ ಭಗವಂತನು ಸೌಖ್ಯವನ್ನೀಯಲೆಂದು ಎಲ್ಲರೂ ಪ್ರಾರ್ಥಿಸಿದರು. ತರುವಾಯ ಪುರಜನರು ಎಲ್ಲಾ ಅಧಿಕಾರಿಗಳನ್ನು ವಾದ್ಯಸಮೇತವಾಗಿ ಅವರವರ ಮನೆಗೆ ಕಳುಹಿಸಿಕೊಟ್ಟರು. ಹೋಬಳಿ ಶೇಕದಾರರ್ ಶೇಷಾಚಾರರವರ ಉದಾರಸಹಾಯ ನೋಡಿ ಐದಾರು ಮಂದಿ ಪ್ರೀತಿಪೂರ್ವಕವಾಗಿ ವಾಗ್ದಾನಮಾಡಿದ 12 ರೂ. ವಸೂಲಾಗಿ ಸ್ಪೋರ್ಟ್ಸ್ ಏರ್ಪಡಿಸಿದ್ದಾಯಿತು. ಗೊತ್ತಾದ ವೇಳೆಗೆ ಇನ್॥ ಕಂ॥ ಮಿ॥ ಸ್ಕೂಲು ಬಳಿ ಇರುವ ಮೈದಾನಕ್ಕೆ ಸೇರಿದರು. ಎಸ್.ಎ. ರಾಜಣ್ಣರವರು, ಕೆ. ಸುಬ್ಬರಾಯರು, ಕೂಚಹಳ್ಳಿ ಮಲ್ಲಪ್ಪನವರು ಬಾಲಕ ಬಾಲಕಿಯರುಗಳಿಗೆ ಅನೇಕತರಹ ಆಟಗಳನ್ನಾಡಿಸಿ ಸಂತೋಷಕ್ಕಾಗಿ ಬಾಲಕ ಬಾಲಕಿಯರುಗಳಿಗೆ ಅಧ್ಯಕ್ಷರಿಂದ ಬಹುಮಾನ ಹಂಚಿಸಿದರು. ಅಷ್ಟು ಹೊತ್ತಿಗೆ ರಾತ್ರಿ 8 ಗಂಟೆಯಾಯಿತು. ಬಾಲಕರು ಬಾಲಕಿಯರುಗಳು ದೇವರ ಪ್ರಾರ್ಥನೆಮಾಡಿದ ತರುವಾಯ ಸರ್ವರೂ ಅಧ್ಯಕ್ಷರನ್ನು ಅವರ ಬಂಗಲೆಗೆ ಕಳುಹಿಸಿಕೊಟ್ಟು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಇಂಥಾ ಸಂತೋಷಕೂಟವು ಈ ಪೇಟೆಯಲ್ಲಿ ಎಂದೂ ನಡೆದಿರಲಿಲ್ಲ. ಈಗ ನಡೆದದ್ದು ನಮ್ಮಗಳ ಪುಣ್ಯೋದಯವೇ ಸರಿ. ಮೇಲ್ಕಂಡ ಕಾರ್ಯಗಳು ವಿಜೃಂಭಣೆಯಿಂದ ಜರಗುವಂತೆ ತಿಳವಳಿಕೆ ಕೊಟ್ಟು ಮುಂದೆ ಬಂದುನಿಂತು ಅನ್ನ ಆಹಾರಾದಿಗಳು ಬಿಟ್ಟು ಜನರನ್ನು ಸಂತೋಷಗೊಳಿಸಿದ ಮಹನೀಯರುಗಳಿಗೆ ಭಗವಂತನು ಶ್ರೇಯಸ್ಸನ್ನು ಕೊಟ್ಟು ಕಾಪಾಡಲೆಂದು ಹಾರೈಸುತ್ತೇನೆ.

ಗ್ರಾಮಾಭಿಮಾನಿ.

ವಿನಂತಿ.

ಇದರಡಿ ವಿವರಿಸಿರುವ ದರದಂತೆ ನಿಮಗೆ ಬೇಕಾದಷ್ಟು ಕಾಪಿಗಳಿಗೆ ಆಗುವ ಪೂರ್ತಾ ಮೊಬಲಗು ಅಡ್ವಾನ್ಸ್ ರವಾನಿಸಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಯಾವ ಖರ್ಚೂ ಇಲ್ಲದೆ ಫ್ರೀಯಾಗಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

I. ಈಗ ಮೈಸೂರಿಗೆ ದಯಮಾಡಿಸಿರುವ ವೈಸ್ರಾಯ ದಂಪತಿಗಳ ಫೋಟೋ ಕಾಪಿ 1ಕ್ಕೆ 0-2-0, 50ಕ್ಕೆ 2-2-0, 100ಕ್ಕೆ 4-0-0, ಪೋಸ್ಟೇಜ್ ಮಾಫಿ.

II. ನಮ್ಮನ್ನಾಳಿದ ಮಹಾಸ್ವಾಮಿಯವರಾದ ಶ್ರೀಮನ್ ಚಾಮರಾಜೇಂದ್ರ ಒಡೆಯರ್‌ರವರು ಮತ್ತು ಶ್ರೀಮನ್ ಜಯ ಚಾಮರಾಜ ಒಡೆಯರ್‌ರವರ ಫೋಟೋ ಇದ್ದು ಮೈಸೂರು ಅರಮನೆ ಪಿಕ್ಚರ್ ಸಹಾ ಇರುವ ಕಾಪಿ 1ಕ್ಕೆ 0-1-0, 50ಕ್ಕೆ 1-2-0, 100ಕ್ಕೆ 2-0-0, ಪೋಸ್ಟೇಜು ಮಾಫಿ.

III. ಅನೇಕ ವಿಷಯಗಳನ್ನೊಳಗೊಂಡಿದ್ದು ಶ್ರೀಮನ್ ಮಹಾರಾಜಸಹೋದರರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರ್‌ರವರ ಫೋಟೋ ಇರುವ ಷೀಟ್ ಕ್ಯಾಲೆಂಡರ್ 1ಕ್ಕೆ 0-1-0, 50ಕ್ಕೆ 1-2-0, 100ಕ್ಕೆ 2-0-0, ಪೋಸ್ಟೇಜು ಮಾಫಿ.

IV. ದೆಹಲಿದರ್ಬಾರ್ ಫೋಟೋ ಸಮೇತವಿದ್ದು ತಿಂಗಳಿಗೊಂದು ಷೀಟ್‌ನಂತೆ ಹರಿದುಬಿಡುವ ಅಂದವಾದ ಕ್ಯಾಲೆಂಡರ್ 1ಕ್ಕೆ 0-2-6, 12ಕ್ಕೆ 1-8-0, ಪ್ಯಾಕಿಂಗ್ ಪೋಸ್ಟೇಜು ಮಾಫಿ.

V. 1924ನೇ ಇಸವಿಯ ಜೇಬಿನಲ್ಲಿಡಲು ಯೋಗ್ಯವಾದ ಅಂದವಾದ ಪಾಕೆಟ್ ಕ್ಯಾಲೆಂಡರ್ 1ಕ್ಕೆ 0-2-0, 12ಕ್ಕೆ 1-0-0, ಪ್ಯಾಕಿಂಗ್ ಪೋಸ್ಟೇಜ್ ಮಾಫಿ.

ತಮಗೆ ಬೇಕಾದಷ್ಟು ಕಾಪಿಗಳ ಪೂರ್ತಾ ಮೊಬಲಗು ಅಡ್ವಾನ್ಸ್ ರವಾನಿಸಿ ಆರ್ಡರ್ ಕೊಡಬೇಕೆ ಹೊರತು ವಿ. ಪಿ. ಮೂಲಕ ರವಾನಿಸಿರೆಂದು ಬರತಕ್ಕ ಆರ್ಡರುಗಳಿಗೆ ಖಂಡಿತವಾಗಿ ಸಿಗಾ ಕೊಡುವುದಿಲ್ಲ.

ಮಣಿಯಾರ್ಡರ್ ರವಾನಿಸುವ ವಿಳಾಸ:—

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು,
50—15] **ಮೈಸೂರು.**

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೪—೦
ಪರಮಾತ್ಮಪ್ರಕಾಶಿಕೆ (ಪ್ರ. ಸ್ತ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರಾತನರತ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣಿ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[೨೪—೬] **ಹೊಸಮಠ, ಮೈಸೂರು [illegible]**

ಸುಲಭಕ್ರಯ! **ಸುಲಭಕ್ರಯ!**

ಡಾ. ಜಿ. ಬಿ. ಯವರ
ಸುಗಂಧ ನಸ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರು [illegible]ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗುವುದು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—18] ಪೋ. ಬಾ. ೫೧೦, ಮದರಾಸು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ ಪಿ. ಚಾರ್ಜು ೦—೧೦—೦.

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ. ಪಿ ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ: — ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—7] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ದುಃಖವನ್ನು ನೀಗುವದು! ಓಂ ಸೌಖ್ಯವನ್ನು ಕೊಡಿಸುವದು!

ಶಿವಾನುಭವಬೋಧೆ

ಇದು ಸಾಮವೇದದ ಶಿರವಾದ ಛಾಂದೋಗ್ಯೋಪನಿಷತ್ತಿನ ಆರನೆ ಅಧ್ಯಾಯದಲ್ಲಿ "ತತ್ವಮಸಿ" ಅವಸ್ತುವೇ ನೀನಿರುವಿ ಎಂದು ಶ್ವೇತಕೇತುವೆಂಬ ಉತ್ತಮಾಧಿಕಾರಿಯನ್ನು ಕುರಿತು ಉದ್ದಾಲಕ ಮಹಾಮುನಿಯು ಒಂಭತ್ತುಸಾರಿ ಬೋಧಿಸಿರುವನು. ಗೀರ್ವಾಣಭಾಷಾರಹಿತರಿಗೆ ತದರ್ಥ ಗೋಚರವಾಗಲರಿಯದೆಂದು ಮುಮುಕ್ಷುಗಳ ಹಿತಾರ್ಥಕ್ಕಾಗಿ ತನುಪನಿಷತ್ಸಾರವನ್ನೇ ಸುಲಭವಾಗಿ ತಿಳಿಯುವಂತೆ ಕನ್ನಡ ಪದ್ಯರೂಪವಾಗಿ ರಚಿಸಲ್ಪಟ್ಟಿದೆ. ಸರ್ವರು ಈ ಉತ್ತಮ ಗ್ರಂಥವನ್ನು ತರಿಸಿಕೊಂಡು ಶ್ರವಣ ಮನನಾದಿಗಳನ್ನು ಮಾಡಿ ನಿಜಾನಂದಭರಿತರಾಗಿ ನನ್ನ ಸೇವೆಯನ್ನು ಸಾರ್ಥಕಗೊಳಿಸಿರಿ ಸ್ವಲ್ಪ ಪ್ರತಿಗಳುಳಿದಿವೆ. ಬೆಲೆ ಸ್ವಲ್ಪ ಫಲಮಧಿಕವವಗಿದೆ. ಕ್ರಯ ೦—೧೨—೦. [8—6]

ವಿಳಾಸ:—ಎಂ. ಎಸ್. ಸುಬ್ಬಣ್ಣ ಚಾಕುಬಂಡೆ,
ಪೋಸ್ಟು ಚಿಪ್ಪಿಗಿರಿ ತಾ॥ ಆಲೂರು ಜಿಲ್ಲಾ ಬಳ್ಳಾರಿ.

೧೯೨೩ನೆಯ ಇಸವಿ ಡಿಸೆಂಬರ್ ತಾ॥ ೨೩ ರಿಂದ ೧೯೨೩ ನೆಯ ಡಿಸೆಂಬರ್ ತಾ॥ ೨೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಮಾರ್ಗಶಿರ ಶುದ್ಧ ಪೌರ್ಣಿಮೆಯಿಂದ ಮಾರ್ಗಶಿರ ಬಹುಳ ಷಷ್ಠಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾ
23	¹ಭಾನು	ಪೌರ್ಣ	13-11	ಮೃಗ	9-6	8
24	²ಸೋಮ	ಪಾಡ್ಯ	16-32	ಆದ್ರಾ	14-2	9
25	ಮಂಗಳ	ಬಿದಿ	19-3	ಪುನ	18-0	10
26	ಬುಧ	ತದಿ	20-32	ಪುಷ್ಯ	20-23	11
27	³ಗುರು	ಚೌತಿ	20-35	ಆಶ್ಲೇ	20-0	12
28	ಶುಕ್ರ	ಪಂಚ	19-29	ಮಘ	22-20	13
29	ಶನಿ	ಷಷ್ಠಿ	17-15	ಪುಬ್ಬ	21-20	14

(1) [illegible] ಅಂಧಕಾಸುರಸಂಹಾರ. (2) ಆರಿದ್ರೋತ್ಸವ. (3) ಮಾರ್ಗ[illegible] ವರಿ [illegible]

[illegible] ತರು ಕಾಲಜ್ಞಾ[illegible] ಕೃ. [illegible] ಮನವರಿಂದ ಕ್ರಾ[illegible] [illegible] ಪ್ರಕಟಿಸಲ್ಪಟ್ಟಿತು.





REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಿಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿರೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]

[ಲೈಬ್ರರಿಗೆ ೨-೧೦-೦]

ಸಂಪುಟ ೩೭ ಮೈಸೂರ್ ಸ್ಟಾರ್ ಸನ್ ೧೯೨೬ ನೆಯ ಇಸವಿ ಜನವರಿ ತಾರೀಖು ೩ ನೆಯ ಭಾನುವಾರ. ಸಂಚಿಕೆ ೧

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕಳಿಸಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಪ್ಲೇಗಿಗೆ ಸಂಜೀವನ.

ಲಕ್ಷೋಪಲಕ್ಷ ಪ್ಲೇಗುರೋಗಿಗಳ ಪ್ರಾಣವನ್ನು ಕಾಪಾಡಿರುವ ಕಾಪಾಡುತ್ತಿರುವ ಲಕ್ಷ್ಮೀವಿಲಾಸ ರಸವನ್ನು ಇಂದೇ ತರಿಸಿಟ್ಟುಕೊಳ್ಳಿರಿ. ಪ್ಲೇಗನ್ನೂ, ಪ್ಲೇಗಿರುವಾಗ ಬರುವ ಎಲ್ಲಾ ಜ್ವರಗಳನ್ನೂ, ಸತತ, ಸವಿಷಕಾರಿ ಜ್ವರಗಳನ್ನೂ ಸಂದೇಹವಿಲ್ಲದೆ ನಂಬುಗೆಯಾಗಿ ಬೇಗನೆ ಗುಣಪಡಿಸುತ್ತದೆ. ಸೀಸೆ 1—0—0.

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ, ಮೈಕೈ ನೋವು, ತಲೆನೋವುಗಳು ಗುಣವಾಗುತ್ತವೆ. ಡಬ್ಬಿ 0—8—0.

ಪಾಳ್ಯದ ವೆಂಕಟಾಚಲಪಂಡಿತ,
47 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. [50–47]

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ವಚನಶಾಸ್ತ್ರಸಾರ.

ಶ್ರೀ ಬಸವೇಶ್ವರ ಮೊದಲಾದ ಶಿವಶರಣರ ಮತತತ್ವಗಳನ್ನು ಅರಿತುಕೊಳ್ಳಬೇಕೆಂಬ ಆಕಾಂಕ್ಷೆಗಳು ವೀರಶೈವ ಸಮಾಜದಲ್ಲಿ ಇತ್ತಿತ್ತ ಉತ್ಪನ್ನವಾಗ ಹತ್ತಿದ್ದು ಶುಭಚಿನ್ಹವೇ ಸರಿ. ಆದರೆ ಈ ತತ್ವಗಳು ಅವರು ರಚಿಸಿದ ವಚನಶಾಸ್ತ್ರದಲ್ಲಿಯೇ ವಿಶೇಷವಾಗಿ ದೊರಕುತ್ತವೆ. ಆದ್ದರಿಂದ ಅವರ ವಚನಗಳನ್ನು ಶೋಧಿಸಿ, ಅವುಗಳಲ್ಲಿಯ ತತ್ವಗಳನ್ನು ಕಂಡುಹಿಡಿದು, ಅವುಗಳನ್ನು ಅವರವರ ವಚನಗಳಿಂದಲೇ ಈ ಗ್ರಂಥದಲ್ಲಿ ವಿಶದವಾಗಿ ನಿರೂಪಿಸಿದೆ. ಇದರಲ್ಲಿ ೧೩೦ ಶಿವಶರಣರ ಶ್ರೇಷ್ಠವಾದ ವಚನಗಳು ಕೊಟ್ಟಿವೆ. ಇದು ೬೦೧ ಪುಟವುಳ್ಳ ದೊಡ್ಡ ಗ್ರಂಥವಾಗಿದ್ದು, ಇದರ ಬೆಲೆ ೫ ರೂಪಾಯಿ. ಇದು ಸಿಗುವ ಪತ್ತೆ—

ರಾವಸಾಹೇಬ ಫ. ಗು. ಹಳಕಟ್ಟಿ, ಬಿ.ಎ., ಎಲ್.ಎಲ್.ಬಿ.,
[13—10] ವಕೀಲ, ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦	೦—೧೩—೦
ಷಟ್ಸ್ಥಲವಿದ್ಯಾ	೦— ೪—೦	೦— ೬—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೬—೦
ವ್ರತಪಂಚಕ	೦— ೪—೦	೦— ೬—೦
ಗುರುಶಂಕರೇಶ್ವರಶತಕ	೦— ೧—೦	೦— ೩—೦
ಬಸವೇಶ್ವರಜನನ	೦— ೮—೦	೦—೧೩—೦

ಜಗತ್ತಿನ ನಿಜವಾದ) ಅಗತ್ಯಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ
ಸುಪ್ರಸಿದ್ಧ ವೈದ್ಯ ಇವರ
ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಚುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ತೆಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ನಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಪ್ಪರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ತ್ರೀತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭವಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಶೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವಂಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೇಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂವಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮುಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ, ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಕ್ಷುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ.

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣಾತ್ವರೆಮಾಡಿರಿ.

[50—22] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ರಕ್ತಶೋಧಕ ! ಧಾತುಪೌಷ್ಟಿಕ. ಮನೋಲ್ಲಾಸಕವೆಂಬ !!

ಮಹದ್ರಾಕ್ಷಾದಿ ಚೂರ್ಣವು

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯ್ಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ವಿಷಯವು ತಮಗೆ ವೇದ್ಯವಾಗಿರುವದಷ್ಟೆ. ಈ ಔಷಧಿಯು ಕೆಳಗೆಕಂಡ ರೋಗಗಳಿಗೆ ಶ್ರೇಷ್ಠವಾದದ್ದೆಂದು ಅನೇಕ ವೈದ್ಯರೂ ರೋಗವಾರಣೆಯಾದವರೂ ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬಮನುಷ್ಯನು ೨೧ ದಿನ ಸೇವನೆ ಮಾಡಿದರೆ ಕ್ಷಯರೋಗ ೪೦ ಬಗೆಯಾದ ಪಿತ್ಥರೋಗಗಳು, ಮೇಹರೋಗ, ಪಾಂಡುರೋಗ, ಪೀನಸ, ೧೮ ತರದ ಕುಷ್ಟರೋಗಗಳು, ಭಗಂಧರವು, ಮೂತ್ರ ಕೃಚ್ಛ್ರರೋಗ, ೫ ಬಗೆಯಾದ ಕಾಶರೋಗಗಳು, ದೀರ್ಘಜ್ವರ, ಉಬ್ಬಸ, ವಾಕರಿಕೆ, ಸನ್ನಿಪಾತರೋಗ, ಕಣ್ಣುರಿಯುವದು, ಅಂಗಾಲು ಅಂಗೈ ಬರಿಯುವದು, ತಕೆ, ಶಲ್ಧಿ, ಉಷ್ಣ, ವಿರುವು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವದು, ನಷ್ಟೇಂದ್ರಿಯಾಗುವದು—ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು, ರಕ್ತವನ್ನು ವೃದ್ಧಿಗೊಳಿಸಿ ಧಾತುಪುಷ್ಟಿಯನ್ನುಂಟುಮಾಡುವದು, ನಿಸ್ಸತ್ವವನ್ನು ಹೋಗಲಾಡಿಸಿ ದೇಹಾಂಗವೆಲ್ಲಾ ಅಧಿಕ ಬಲವಾಗಿ ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲಿ, ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕೈಕಾಲು ಹರಿಯುವಿಕೆ ಇತ್ಯಾದಿ ದೋಷಗಳಿಂದ ಗರ್ಭಕೋಶಕ್ಕೆ ತೊಂದರೆಯುಂಟಾಗಿ ದೇಹವು ಕ್ಷೀಣವಾಗಿ ಸಂತಾನಭಂಗವಾಗುವದು. ಆದಕಾರಣ ಸದರಿ ದೋಷಗಳಿಂದ ವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರೂ ಕ್ರಮವಾಗಿ ಒಂದುಮಂಡಲ ಪರಿಯಂತರವರಿಗೂ ಸೇವನೆಮಾಡಿದರೆ ಖಂಡಿತವಾಗಿ ಸಂತಾನಪ್ರಾಪ್ತಿಯಾಗುವದೆಂದು ಸುಪ್ರಸಿದ್ಧವಾಗಿ ಹೇಳಿರುವದು. ಈ ಔಷಧಿಯನ್ನು ನಾವು ನಮ್ಮಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದಕಾರಣ ತುಂಬಾ ಅನುಭವಕ್ಕೆ ಬಂದಿದೆ. ಅದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದರೆ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ.

ಜ್ವರಸಂಜೀವಿನಿ.—ಇದರ ಸೇವನೆಯಿಂದ ಚಾತುರ್ಥಿಕಜ್ವರ, ದಿನಬಿಟ್ಟು ದಿನ ಬರುವ ಜ್ವರ, ಶೀತ ಜ್ವರ,ವಾತಪಿತ್ಥಜ್ವರ, ಅಸ್ತಿಗತ ಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲಿಸುತ್ತದೆ.

ಕಫರೋಗಸಂಜೀವಿನಿ.—ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಕೋರಿಕೆಮ್ಮು ಇತ್ಯಾದಿಗಳನ್ನು ತಕ್ಷಣದಲ್ಲಿ ಗುಣಪಡಿಸುತ್ತದೆ. ಜ್ವರಸಂಜೀವಿನಿ ೧ ಡಜನ್ ಮಾತ್ರೆಗಳನ್ನೂ ಕಫಸಂಜೀವಿನಿ ೧೨ ಮಾತ್ರೆಗಳನ್ನೂ ಮೇಲ್ಕಂಡ ಮಹದ್ರಾಕ್ಷಾದಿ ಚೂರ್ಣವನ್ನೂ ತರಿಸಿಕೊಳ್ಳುವವರಿಗೆ ಈ ೨ ಔಷಧಿಗಳನ್ನು ಉಚಿತವಾಗಿ ಕೊಡುತ್ತೇವೆ. ಅನುಪಾನ ಪತ್ರಿಕೆ ಔಷಧಿಯೊಂದಿಗೆ ಇರುತ್ತದೆ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹಿತ ರೂ. ೫—೪—೦. ಈ ಔಷಧಿಯನ್ನು ಸೇವನೆ ಮಾಡುವ ಮೊದಲನೆದಿನ ಈ ಕೆಳಗೆ ಕಂಡ ಮುಹೂರ್ತರಾಜನೆಂಬ ಶಿವಲಿಖಿತ ಚಕ್ರವನ್ನು ನೋಡಿ ಅದರಲ್ಲಿ ಅಮೃತ ಮಹೇಂದ್ರಿಯಾ ವ್ಯಾಳ್ಯಗಳಲ್ಲಿ ಸೇವನೆಮಾಡಿರಿ. ಬಾಕಿ ವ್ಯಾಳ್ಯ ಕೂಡದು. ಇದರಲ್ಲಿ ಶಿವಲಿಖಿತ ಚಕ್ರವಿರುವದರಿಂದ ನಿಮ್ಮಗಳಿಗೆ ಸಕಲ ಶುಭಾಶುಭಕಾರಗಳಿಗೆ ಬಹಳ ಪ್ರಶಸ್ತವಾಗಿರುತ್ತದೆ. ಪ್ರತಿಯೊಂದು ಕಾರ್ಯಗಳಲ್ಲಿ ಅವಶ್ಯಕವಾಗಿ ನೋಡಿರಿ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ವಿ. ಪಿ. ಸಹಿತ ಜ್ವರಸಂಜೀವಿನಿ ಮಾತ್ರೆ ಡಜನ್ ೧ಕ್ಕೆ ರೂ. ೧—೦—೦. ಕೆಮ್ಮಿನ ಗುಳಿಗೆ ಡಜನ್ ೧ಕ್ಕೆ ರೂ. ೧—೦—೦.

ಹೆಚ್ಚಾಗಿ ತರಿಸಿಕೊಳ್ಳುವವರು ಅನುಕೂಲವಾದ ಕಮಿಷನ್ ಹೊಂದುವದಕ್ಕೆ ಸಂಶಯವಿಲ್ಲ. ಪತ್ರವ್ಯವಹಾರ ಮೂಲಕ ತಿಳಿದುಕೊಳ್ಳಬಹುದು. ತಿಮ್ಮ ವಿಳಾಸವು ಚನ್ನಾಗಿದ್ದರೆ ಗಮನಕೊಡುತ್ತೇವೆ.

ನಮ್ಮವಿಳಾಸ—ಹೆಚ್. ಯಂ. ಶರಣಬಸವಾರ್ಯ,
[24—22] ಬಳ್ಳಾರಿ.

REGISTERED No. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಕೀರ್ತಿಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಯಿಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]

[ಲೈಬ್ರರಿಗೆ ೨-೧೨-೦]

ಸಂಪುಟ ೩೭

ಮೈಸೂರ್ ಸ್ಟಾರ್ ಸೆರ್ ೧೯೨೩ ನೆಯ ಇಸವಿ ಜನವರಿ ತಾರೀಖು ೭ ನೆಯ ಭಾನುವಾರ.

ಸಂಚಿಕೆ ೧

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SITHARAGHAVA
VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಪ್ಲೇಗಿಗೆ ಸಂಜೀವನ.

ಲಕ್ಷೋಪಲಕ್ಷ ಪ್ಲೇಗುರೋಗಿಗಳ ಪ್ರಾಣವನ್ನು ಕಾಪಾಡಿರುವ ಕಾಪಾಡುತ್ತಿರುವ ಲಕ್ಷ್ಮೀವಿಲಾಸ ರಸವನ್ನು ಇಂದೇ ತರಿಸಿಟ್ಟುಕೊಳ್ಳಿರಿ. ಪ್ಲೇಗನ್ನೂ, ಪ್ಲೇಗಿರುವಾಗ ಬರುವ ಎಲ್ಲಾ ಜ್ವರಗಳನ್ನೂ, ಸತತ, ಸವಿಶಾರಿ ಜ್ವರಗಳನ್ನೂ ಸಂದೇಹವಿಲ್ಲದೆ ನಂಬುಗೆಯಾಗಿ ಬೇಗನೆ ಗುಣಪಡಿಸುತ್ತದೆ. ಸೀಸೆ 1—0—0.

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ, ಮೈಕೈ ನೋವು, ತಲೆನೋವುಗಳು ಗುಣವಾಗುತ್ತದೆ. ಡಬ್ಬಿ 0—8—0.

ಪಾಳ್ಯದ ವೆಂಕಟಾಚಲಪಂಡಿತ,
47 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. [50-47]

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟು ಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ ಬನವಾಸಿ, ಉತ್ತರಕನಡಾ.

ವಚನಶಾಸ್ತ್ರಸಾರ.

ಶ್ರೀ ಬಸವೇಶ್ವರ ಮೊದಲಾದ ಶಿವಶರಣರ ಮತತತ್ವಗಳನ್ನು ಅರಿತುಕೊಳ್ಳಬೇಕೆಂಬ ಆಕಾಂಕ್ಷೆಗಳು ವೀರಶೈವ ಸಮಾಜದಲ್ಲಿ ಇತ್ತಿತ್ತ ಉತ್ಪನ್ನವಾಗ ಹತ್ತಿದ್ದು ಶುಭಚಿನ್ಹವೇ ಸರಿ. ಆದರೆ ಈ ತತ್ವಗಳು ಅವರು ರಚಿಸಿದ ವಚನಶಾಸ್ತ್ರದಲ್ಲಿಯೇ ವಿಶೇಷವಾಗಿ ದೊರಕುತ್ತವೆ. ಆದ್ದರಿಂದ ಅವರ ವಚನಗಳನ್ನು ಶೋಧಿಸಿ, ಅವುಗಳಲ್ಲಿಯ ತತ್ವಗಳನ್ನು ಕಂಡುಹಿಡಿದು, ಅವುಗಳನ್ನು ಅವರವರ ವಚನಗಳಿಂದಲೇ ಈ ಗ್ರಂಥದಲ್ಲಿ ವಿಶದವಾಗಿ ನಿರೂಪಿಸಿದೆ. ಇದರಲ್ಲಿ ೧೩೦ ಶಿವಶರಣರ ಶ್ರೇಷ್ಠವಾದ ವಚನಗಳು ಕೊಡಲ್ಪಟ್ಟಿವೆ. ಇದು ೬೪೧ ಪುಟವುಳ್ಳ ದೊಡ್ಡ ಗ್ರಂಥವಾಗಿದ್ದು, ಇದರ ಬೆಲೆ ೫ ರೂಪಾಯಿ. ಇದು ಸಿಗುವ ಪತ್ತೆ—

ರಾವಸಾಹೇಬ ಫ. ಗು. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ.,
[13—10] ವಕೀಲ, ವಿಜಾಪುರ.

ಮೈಸೂರುಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರ	೦—೫—೦	೦—೧೦—೦
ಹಂದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೪—೦

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ

ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ತೆಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ನಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಶೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂವಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ತಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಮುದ್ರ ಕೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮುಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ, ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಹಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ.

ಈ ಪ್ರಕಾರ ಮೇಲೆ ಕೊಟ್ಟ ಜೀನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯಯಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣಾತ್ವರೆಮಾಡಿರಿ.

[50—22] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ರಕ್ತಶೋಧಕ ! ಧಾತುಪೌಷ್ಟಿಕ. ಮನೋಲ್ಲಾಸಕವೆಂಬ !!

ಮಹದ್ರಾಕ್ಷಾದಿಚೂರ್ಣವು

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ವಿಷಯವು ತಮಗೆ ವೇದ್ಯವಾಗಿರುವದಷ್ಟೆ. ಈ ಔಷಧಿಯು ಕೆಳಗೆಕಂಡ ರೋಗಗಳಿಗೆ ಶ್ರೇಷ್ಠವಾದದ್ದೆಂದು ಅನೇಕ ವೈದ್ಯರೂ ರೋಗವಾರಣೆಯಾದವರೂ ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬಮನುಷ್ಯನು ೨೧ ದಿನ ಸೇವನೆ ಮಾಡಿದರೆ ಕ್ಷಯರೋಗ ೪೦ ಬಗೆಯಾದ ಪಿತ್ಥರೋಗಗಳು, ಮೇಹರೋಗ, ಪಾಂಡುರೋಗ, ಪೀನಸ, ೧೮ ತರದ ಕುಷ್ಟರೋಗಗಳು, ಭಗಂಧರವು, ಮೂತ್ರ ಕೃಚ್ಛ್ರರೋಗ, ೫ ಬಗೆಯಾದ ಕಾಶರೋಗಗಳು, ದೀರ್ಘಜ್ವರ, ಉಬ್ಬಸ, ವಾಕರಿಕೆ, ಸನ್ನಿಪಾತರೋಗ, ಕಣ್ಣುರಿಯುವದು, ಅಂಗಾಲು ಅಂಗೈ ಬಿರಿಯುವದು, ಶಕೆ, ಶಲ್ದಿ, ಉಷ್ಣ, ನೀರುವು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವದು, ನಷ್ಟೇಂದ್ರಿಯಾಗುವದು—ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು, ರಕ್ತವನ್ನು ವೃದ್ಧಿಗೊಳಿಸಿ ಧಾತುಪುಷ್ಟಿಯನ್ನುಂಟುಮಾಡುವದು, ನಿಸ್ಸತ್ವವನ್ನು ಹೋಗಲಾಡಿಸಿ ದೇಹಾಂಗವೆಲ್ಲಾ ಅಧಿಕ ಬಲವಾಗಿ ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕಟ್ಟು, ಹೊಟ್ಟೆಶೂಲಿ, ಬಿಳಿಸೆರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕೈಕಾಲು ಹರಿಯುವಿಕೆ ಇತ್ಯಾದಿ ದೋಷಗಳಿಂದ ಗರ್ಭಕೋಶಕ್ಕೆ ತೊಂದರೆಯುಂಟಾಗಿ ದೇಹವು ಕ್ಷೀಣವಾಗಿ ಸಂತಾನಭಂಗವಾಗುವದು. ಆದಕಾರಣ ಸದರಿ ದೋಷಗಳಿಂದ ವ್ಯಥೆಪಡತಕ್ಕ ಸ್ತ್ರೀಪುರುಷರೀರ್ವರೂ ಕ್ರಮವಾಗಿ ಒಂದುಮಂಡಲ ಪರಿಯಂತರವರಿಗೂ ಸೇವನೆಮಾಡಿದರೆ ಖಂಡಿತವಾಗಿ ಸಂತಾನಪ್ರಾಪ್ತಿಯಾಗುವದೆಂದು ಸುಪ್ರಸಿದ್ಧವಾಗಿ ಹೇಳಿರುವದು. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದಕಾರಣ ತುಂಬಾ ಅನುಭವಕ್ಕೆ ಬಂದಿದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದರೆ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ.

ಜ್ವರಸಂಜೀವಿನಿ.—ಇದರ ಸೇವನೆಯಿಂದ ಚಾತುರ್ಥಿಕಜ್ವರ, ದಿನಬಿಟ್ಟು ದಿನ ಬರುವ ಜ್ವರ, ಸರ್ಧಿ ಜ್ವರ, ವಾತಪಿತ್ಥ ಜ್ವರ, ಅಸ್ತಿಗತ ಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲಿಸುತ್ತದೆ.

ಕಫರೋಗಸಂಜೀವಿನಿ.—ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಕೋತಿಕೆಮ್ಮು ಇತ್ಯಾದಿಗಳನ್ನು ತಕ್ಷಣದಲ್ಲಿ ಗುಣಪಡಿಸುತ್ತದೆ. ಜ್ವರಸಂಜೀವಿನಿ ೧ ಡಜನ್ ಮಾತ್ರೆಗಳನ್ನೂ ಕಫಸಂಜೀವಿನಿ ೧೨ ಮಾತ್ರೆಗಳನ್ನೂ ಮೇಲ್ಕಂಡ ಮಹದ್ರಾಕ್ಷಾದಿ ಚೂರ್ಣವನ್ನೂ ತರಿಸಿಕೊಳ್ಳುವವರಿಗೆ ಈ ೨ ಔಷಧಿಗಳನ್ನು ಉಚಿತವಾಗಿ ಕೊಡುತ್ತೇವೆ. ಅನುಪಾನ ಪತ್ರಿಕೆ ಔಷಧಿಯೊಂದಿಗೆ ಇರುತ್ತದೆ. ೨೧ ದಿನ ಸೇವಿಸುವ ಮಹದ್ರಾಕ್ಷಾದಿ ಚೂರ್ಣದ ಡಬ್ಬಿ ೧ಕ್ಕೆ ವಿ. ಪಿ. ಸಹಿತ ರೂ. ೫—೪—೦. ಈ ಔಷಧಿಯನ್ನು ಸೇವನೆ ಮಾಡುವ ಮೊದಲನೆದಿನ ಈ ಕೆಳಗೆ ಕಂಡ ಮುಹೂರ್ತರಾಜನೆಂಬ ಶಿವಲಿಖಿತ ಚಕ್ರವನ್ನು ನೋಡಿ ಅದರಲ್ಲಿ ಅಮೃತ ಮಹೇಂದ್ರಿಯಾ ವ್ಯಾಳ್ಯಗಳಲ್ಲಿ ಸೇವನೆಮಾಡಿರಿ. ಬಾಕಿ ವ್ಯಾಳ್ಯ ಕೂಡದು. ಇದರಲ್ಲಿ ಶಿವಲಿಖಿತ ಚಕ್ರವಿರುವದರಿಂದ ನಿಮ್ಮಗಳಿಗೆ ಸಕಲ ಶುಭಾಶುಭಕಾರಗಳಿಗೆ ಬಹಳ ಪ್ರಶಸ್ತವಾಗಿರುತ್ತದೆ. ಪ್ರತಿಯೊಂದು ಕಾರ್ಯಗಳಲ್ಲಿ ಅವಶ್ಯಕವಾಗಿ ನೋಡಿರಿ. ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ವಿ. ಪಿ. ಸಹಿತ ಜ್ವರಸಂಜೀವಿನಿ ಮಾತ್ರೆ ಡಜನ್ ೧ಕ್ಕೆ ರೂ. ೧—೦—೦. ಕೆಮ್ಮಿನ ಗುಳಿಗೆ ಡಜನ್ ೧ಕ್ಕೆ ರೂ. ೧—೦—೦.

ಹೆಚ್ಚಾಗಿ ತರಿಸಿಕೊಳ್ಳುವವರು ಅನುಕೂಲವಾದ ಕಮಿಷನ್ ಹೊಂದುವದಕ್ಕೆ ಸಂಶಯವಿಲ್ಲ. ಪತ್ರವ್ಯವಹಾರ ಮೂಲಕ ತಿಳಿದುಕೊಳ್ಳಬಹುದು. ನಿಮ್ಮ ವಿಳಾಸವು ಚನ್ನಾಗಿದ್ದರೆ ಗಮನಕೊಡುತ್ತೇವೆ.

ನಮ್ಮವಿಳಾಸ—ಹೆಚ್. ಯಂ. ಶರಣಬಸವಾರ್ಯ,
[24—22] ಬಳ್ಳಾರಿ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜನವರಿ ತಾ|| ೬ ನೆಯ ಭಾನುವಾರ.

A WHOLESOME EXAMPLE.

The long-awaited order of the Government on the Sivasamudram Electric embezzlement has come and the public will receive it with considerable satisfaction. We offer our own congratulations to the Government for taking a bold action in the matter, and for doing what is nothing more than the barest justice. It was clear from the beginning that a very large sum amounting to nearly a lakh of rupees was defalcated. The Government instituted a searching inquiry into the case. Mr. K. S. Iyer who was employed expressly for the propose of auditing the accounts confirmed that there was fraud in the matter. The Government then appointed an impartial commission to investigate the case fully and report to the Government. The Government have taken action on the report of the Commission. They find that Mr. S. D. S. Iyengar the chief operator is guilty of all the charges framed against him and are convinced that the facts proved establish both criminal and civil liability on his part and deem it necessary to direct a criminal prosecution of him for abetment of cheating and fabrication of a false document as a public servant, while he will be called upon also to pay Rs. 30,000 in 5 annual instalments, failing which he will be liable for his total liability to the extent of Rs. 76,000 and odd. Criminal proceedings will be instituted against one Overseer Ramakrishnaiengar and contract Munshi Allauddin. As regards Mr. C. M. Kariappa the Assistant Operator it was held by the Commission that he was not privy to the frauds. But as disciplinary action was necessary in the circumstances of the case the Government has reduced his pay from 800 to 700 and made him liable to pay Rs. 15,000 to be recovered from his pay at Rs. 3,000 per year. This is first time in Mysore when the Government have so successfully detected the defalcations, have brought home the guilt to the right persons and have taken suitable measures. Hitherto, there used to be an idea, that things like the one under review could take place with perfect impunity. But now the Government have made such a wholesome example of the Sivasamudram embezzlement that it will be for more effective in securing efficiency and integrity of the services than so much of codal rules and threats in mere words. While it is sure to have a salutory effect on the services, it will at the same time create a greater confidence of the Government in the minds of the people of the State and will thus prove a real boon in the end.

While we are on this subject we may as well refer to some statements made by our local contemporary the *Sampadabhyudaya*, which are made in its usual misleading manner. It says that the public finds fault with the blunder of the Government in making the Head of the Electric Department a member of the Committee of enquiry. We do not know what public it represents and where it got this piece of information so far removed from facts. Next it says that the public say that Mr. Forbs and others concerned in the matter—vagueness cannot go further—are all responsible "equally and proportionately," the meaning of which it is impossible to decipher. Where the journal gathered this precious piece of information is a mystery. And as a final shot it says—"The Government Order in question is considered to be equally outrageous to justice and fairplay. A *primea* facie case has been made out. The whole Department should be placed under suspension and a judicial trial should be ordered." It may not be worth the while to notice these samples of wisdom emanating from that irrepressible and irresponsible quarter. However, it is indicative of the progress of the thoughts of the public which it represents. Further, the Government say that as regards the responsibility of the Head Office and the Audit Office they reserve the matter for separate orders. When that is so and the matter is still *subjudice*, is it not against all canons of decent journalism to reserve comment on that part of the question? But how can we expect anything better from our contemporary having regard to its past!

"EMPLOYER'S COMPLAINT OF PROFESSORS."

As a proposition to the effect "that the S. S. L. C. and the under-graduate coarses be widened by the inclusion, as parts thereof, of new courses intended to prepare for callings in life (vocational courses), or to serve as an introduction to technological or professional studies of the University Grade", is reported to have been accepted at a special meeting of the Senate of the Mysore University held in the Hall (upstairs) of the University Union, Mysore, we think it proper and appropriate to reproduce here the following which appears in the Madras Mail of the 3rd instant:—

Some observations on the present systems of technical and elementary education were made at Chesterfield by Mr. Charles Markham, a leading figure in the coal and iron industries in Derbyshire and South Yorkshire. Mr. Markham, who is the brother of the late Sir Arthur Markham, said the greatest bugbears employers had to contend with to-day were the professors. While admitting that they were idealists, he described their work as bad and their methods antiquated and ridiculous. The professors in Great Britain, with two or three exceptions, could no more run a commercial business than fly.

On one occasion he had special machinery fitted up at a grammar school and invited the professors to send pupils for demonstrations. Not one student came and after the professors had inspected one of the latest machines it was thrown back at him with the remark that it would not work. He sent the engine back to the makers, who reported that the engine had been taken to pieces and put together all wrong. Two scholarships were offered every year by the Staveley Coal and Iron Company (of which he was chairman,) and the youths were guaranteed permanent employment. When these students left the colleges the first thing the officials of the company had to do was to knock out of their heads all that the students had learned from their masters at school.

The methods used in elementary education at the present time were of such a variety that they retarded the children's powers of assimilation. The old plain dame school with its simple subjects and keen discipline achieved far better results. He deplored the abolition of corporal punishment in the schools. It might sound rather brutal, but the judicious use of the cane not only had a moral effect for good on the delinquent, but it had a remarkable influence on all the scholars who saw the punishment administered. A few strokes of the cane would often produce the desired result where kind words and coaxing had been ineffective.

38 ನೆಯ ರಾಷ್ಟ್ರೀಯ ಮಹಾಸಭೆ.

ಭರತಖಂಡದಲ್ಲಿ ಸಭೆಗಳಿಗೆ ಸುಗ್ಗಿ ಕಾಲವಾದ ಡಿಶಂಬರ್ ತಿಂಗಳಲ್ಲಿ ರಾಷ್ಟ್ರೀಯ ಮಹಾಸಭೆ, ಕಿಲಾಫತ್ ಸಭೆ, ಸಂಘಸಂಸ್ಕರಣಸಭೆ ಮೊದಲಾದ ಸಭೆಗಳು ಆಂಧ್ರದೇಶವಾದ ಕಾಕಿನಾಡದಲ್ಲಿ ಜರುಗಿದುವು. ಮಹಾಸಭೆಗಾಗಿ ಖರೇ ಖದ್ದರ್ ಬಟ್ಟೆಯಿಂದಲೇ 40 ಸಾವಿರ ಜನರನ್ನು ಹಿಡಿಯುವಷ್ಟು ವಿಶಾಲವಾದ ಗುಡಾರವು ಹಾಕಲ್ಪಟ್ಟು ಅಲಂಕರಿಸಲ್ಪಟ್ಟಿದ್ದಿತು. ಲೊ|| ತಿಲಕ್, ಮ|| ಗಾಂಧಿ ಈ ಮಹಾಪುರುಷರುಗಳು ಕುಳಿತಿರುವ ಆಕೃತಿಯಲ್ಲಿ ಶಿಲಾವಿಗ್ರಹಗಳ ಮಾದ್ರಿಯಲ್ಲಿ ರಂಗಿನಿಂದ ಮಾಡಲ್ಪಟ್ಟು ಇರಿಸಲ್ಪಟ್ಟಿದ್ದುವು. ಇವುಗಳನ್ನು ನೋಡಿದವರಲ್ಲಿ ಕೆಲವರಿಗೆ ನಿಜವಾಗಿಯೂ ಮಹಾತ್ಮರು ಬಂದಿರುವರೆಂದು ಭ್ರಮೆಯುಂಟಾಯಿತು. ಆಲಿಸಹೋದರರೂ ಸಿ. ಆರ್. ದಾಸ್, ಪಂಡಿತ ಮೋತೀಲಾಲ್‌ನೆಹರು, ಡಾಕ್ಟರ್ ಅನ್ಸಾರಿ, ಷರ್ವಾನಿ, ಸಿ. ರಾಜಗೋಪಾಲಾಚಾರ್, ಪ್ರಕಾಶಂ, ಸಂತಾನಂ, ಯಾಕೂಬ್‌ಹುಸೇನ್ ಸರೋಜಿನಿದೇವಿ ಮೊದಲಾದ ಸ್ವದೇಶಸೇವಾಧುರೀಣರುಗಳು ದಯಮಾಡಿಸಿದ್ದರು. ಮಹಾಸಭಾ ಪ್ರಾರಂಭಕ್ಕೆ ಪೂರ್ವವೇ 1½ ಗಂಟೆಯಿಂದಲೂ ಪ್ರೇಕ್ಷಕರು ಬರಲಾರಂಭವಾಗಿ ಅವರಿಗೋಸ್ಕರ ಏರ್ಪಡಿಸಿದ್ದ ಗ್ಯಾಲರಿಯ ಒಂದು ಭಾಗವು ಜನಸಮ್ಮರ್ದನದಿಂದ ಕುಸಿದು ಹೋಗಿ ಕೆಲವರಿಗೆ ಕೊಂಚ ಪೆಟ್ಟಾದುದರ ವಿನಾ ಮತ್ತಾವ ಅಪಾಯವೂ ಸಂಭವಿಸಲಿಲ್ಲವು. ಮಧ್ಯಾಹ್ನ 3 ಗಂಟೆಗೆ ಸರಿಯಾಗಿ ಅಧ್ಯಕ್ಷರೂ ಇವರ ಸಹಾಯಕರುಗಳೂ ಉತ್ಸವಪೂರ್ವಕವಾಗಿ ದೇಶೀಯ ವಾದ್ಯದೊಡನೆ ಸಭಿಕರ ಜಯಜಯ ಧ್ವನಿಯಾಗುತ್ತಿರುವಾಗ್ಗೆ ಸಭಾಶಾಲೆಯನ್ನು ಪ್ರವೇಶಿಸಿದರು. ಅಕಾಲಿದಳವು ಯೂನಿಫಾರಂ ಉಡುಪುಗಳನ್ನು ಧರಿಸಿಕೊಂಡು ಅಧ್ಯಕ್ಷರ ಅಂಗರಕ್ಷಕರಾಗಿ ಅವರ ಸುತ್ತುವರಿದುಕೊಂಡಿದ್ದು ಸಭಾಪ್ರವೇಶಿಸಿದರು. ಸಭಾಪ್ರಾರಂಭದಲ್ಲಿ ವೈದಿಕರುಗಳು ಜಟಾಘನಯುತವಾಗಿಯೂ ಸ್ವರಸಮೇತವಾಗಿಯೂ ವೇದಪಠನವನ್ನು ಮಾಡಿ ಸದಸ್ಯರುಗಳನ್ನು ಆಶೀರ್ವದಿಸಿದರು. ಅನಂತರ ಒಬ್ಬ ಮೌಲ್ವಿಯು ಫಾರ್ಸಿಭಾಷೆಯಲ್ಲಿ ದೇವರ ಪ್ರಾರ್ಥನೆ ಮಾಡಿದರು. ತರುವಾಯ ಕೆಲ ಹಿಂದೂ ಯುವಕರುಗಳು ವಂದೇಮಾತರಂ ಗೀತವನ್ನೂ ಒಬ್ಬ ಮಹಮ್ಮದೀಯನು ಉರ್ದುಭಾಷೆಯಲ್ಲಿ ಜಾತೀಯ ಗೀತವನ್ನೂ ಹಾಡಿದಮೇಲೆ ಒಬ್ಬ ಆಂಧ್ರಯುವಕನು ಆಂಧ್ರಭಾಷೆಯಲ್ಲಿ ಭಾರತಾಂಧ್ರ ಮಾತೃಪ್ರಶಂಸೆಯನ್ನೂ ದೇಶಭಕ್ತಿಪ್ರವರ್ಧಕವಾದ ಪದ್ಯಗಳನ್ನೂ ಓದಿದನು. ಇದಾದಮೇಲೆ ಸನ್ಮಾನ ಸಂಘಾಧ್ಯಕ್ಷರಾದ ಮ|| ವೆಂಕಟಪ್ಪಯ್ಯಪಂತಲುಯವರು ತಮ್ಮ ಸ್ವಾಗತೋಪನ್ಯಾಸವನ್ನು ಮೊದಲು ಸ್ವಲ್ಪಮಟ್ಟಿಗೆ ಹಿಂದೀಭಾಷೆಯಲ್ಲೂ ಅನಂತರ ಆಂಗ್ಲಭಾಷೆಯಲ್ಲೂ ಓದಿದಮೇಲೆ ತಮ್ಮ ಮನೋಭಾವವನ್ನೆಲ್ಲಾ ವಚನರೂಪದಲ್ಲಿ ಗಂಭೀರವಾಗಿ ತಿಳಿಸಿ ಮೌಲಾನಾ ಮಹಮ್ಮದಾಲಿಯವರು ಅಧ್ಯಕ್ಷಪೀಠವನ್ನಲಂಕರಿಸಿ ಸಭಾಕಾರ್ಯವನ್ನು ಜರುಗಿಸಬೇಕಾಗಿ ಪ್ರಾರ್ಥಿಸಿದರು.

ಅನಂತರ ಮೌಲಾನಾ ಮಹಮ್ಮದಾಲಿಯವರು ಸದಸ್ಯರುಗಳ ಕರತಾಡನ ಮತ್ತು ಜಯಧ್ವನಿಗಳಾಗುತ್ತಿರುವಾಗ್ಗೆ ಅಧ್ಯಕ್ಷಪೀಠವನ್ನಲಂಕರಿಸಿ ತಮ್ಮ ಭಾಷಣವನ್ನು ಆಂಗ್ಲಭಾಷೆಯಲ್ಲಿ ಓದಿದರು. ಈ ಭಾಷಣವು ಮುದ್ರಣವಾದ 134 ಪುಟಗಳುಳ್ಳದಾಗಿದ್ದಿತಲ್ಲದೆ 5 ಗಂಟೆಗೆ ಆರಂಭವಾದುದು ರಾತ್ರಿ 8½ ಗಂಟೆಗೆ ಮುಗಿದಿತು. ಇಷ್ಟು ದೀರ್ಘವಾದ ಭಾಷಣವು ಈವರೆಗೆ ಯಾರಿಂದಲೂ ಮಾಡಲ್ಪಟ್ಟಿರಲಿಲ್ಲವು, ಮತ್ತು ಪುಟಗಟ್ಟಲೆ ನಿತ್ಯದಲ್ಲೂ ಹೊರಡುವ ಪತ್ರಿಕೆಗಳಲ್ಲೇ ಸಮಗ್ರವಾಗಿ ಪ್ರಕಟಿಸಲ್ಪಡಲಿಲ್ಲವಾಗಿ ಇನ್ನು ವಾರಪತ್ರಿಕೆಯಾದ ಈ ಸ್ಟಾರ್‌ಪತ್ರಿಕೆಯಲ್ಲಿ ಎಷ್ಟುಮಾತ್ರಕ್ಕೂ ಸಾಧ್ಯವಿಲ್ಲವಾದುದರಿಂದ ಭಾಷಣದ ಮುಖ್ಯಾಂಶವು ಬೇರೆ ಪತ್ರಿಕೆಯಿಂದುದ್ಧರಿಸಲ್ಪಟ್ಟು ಮತ್ತೊಂದುಕಡೆ ಮುದ್ರಿಸಲ್ಪಟ್ಟಿರುತ್ತದೆ. ಭರತಖಂಡದ ಸಾರ್ವಭೌಮತ್ವವನ್ನನುಭವಿಸಿದಂತಹ ಮಹಮ್ಮದೀಯರ ವರ್ಚಸ್ಸು ಬ್ರಿಟಿಷ್ ಇಂಡಿಯಾದಲ್ಲಿ ಈಗ ಹೇಗಿರುತ್ತದೆಂಬುದನ್ನು ಚಾರಿತ್ರಕಪರಿಜ್ಞಾನದಿಂದ ತಿಳಿಸಿದರು. ಅಲ್ಲದೆ, ಐರೋಪ್ಯಸಂಗ್ರಾಮದಿಂದ ಮಹಮ್ಮದೀಯ ಧರ್ಮಗುರುಸ್ಥಾನವಾದ ತುರ್ಕಿರಾಜ್ಯಕ್ಕೆ ಸಂಭವಿಸಿದ ತೊಂದರೆಯಿಂದ ಮಹಮ್ಮದೀಯ ಪ್ರಪಂಚಕ್ಕುಂಟಾಗಿದ್ದ ಮನೋಕ್ಷೋಭೆಯು ರಾಜಕೀಯ ವಿಚಾರ ನಿರ್ಣಯದಿಂದ ಸಮಾಧಾನವಾಗಿದ್ದರೂ ಮತಧರ್ಮ ಸಂಬಂಧವಾದ ಕಿಲಾಫತ್ ಸಮಸ್ಯೆಯು ಇನ್ನೂ ಪರಿಷ್ಕಾರವಾಗದಿರುವುದು, ಭರತಖಂಡದ ಸ್ವರಾಜ್ಯಸಾಧನೆಯ ಸಮಸ್ಯೆಯಷ್ಟೇ ಅಸಮಾಧಾನಕ್ಕೆ ಕಾರಣವಾಗಿರುತ್ತದೆ. ಹಿಂದೂ ಮಹಮ್ಮದೀಯರ ಐಕಮತ್ಯವೂ ಸಖ್ಯವೂ ಭರತಖಂಡದ ಸ್ವರಾಜ್ಯಸಾಧನೆಗೆ ಎಷ್ಟರಮಟ್ಟಿಗೆ ಅವಶ್ಯಕವಾಗಿರುವುದೋ ಕಿಲಾಫತ್ ಸಮಸ್ಯೆಯ ಪರಿಹಾರಕ್ಕೆ ಅಷ್ಟರಮಟ್ಟಿಗೆ ಅವಶ್ಯಕವಾಗಿರುವುದು. ಈ ಉಭಯ ಸಂಕಲ್ಪಸಾಧನೆಗೆ ದೌರ್ಜನ್ಯರಹಿತವಾದ ಅಸಹಾಯನಿರಾಕರಣೋದ್ಯಮ ವಿನಾ ಬೇರೆಗತ್ಯಂತರವಿಲ್ಲವೆಂದು ಮಹಾತ್ಮ ಗಾಂಧಿಯವರಿಂದ ನನಗೆ ಉಪದೇಶವಾದಾರಭ್ಯ ಮನಗಂಡಿರುವುದು. ದೌರ್ಜನ್ಯದಿಂದ ಭರತಖಂಡಕ್ಕೆ ವಿಜಯವೆಂದಿಗೂ ಆಗಲಾರದು. 33 ಕೋಟಿ ಮಂದಿ ಪ್ರಜೆಗಳಿರುವ ಭಾರತವರ್ಷವು ಅಹಿಂಸೆಯ ಮಾರ್ಗವನ್ನು ಕೈಕೊಳ್ಳುವಂತೆ ಮಾಡದಿರುವುದು ನಿಂದಾರ್ಹವಾದುದು. ದೌರ್ಜನ್ಯದಿಂದ ವಿಜಯವುಂಟಾದರೂ ಅದು ಕೆಲಜನರ ಹೋರಾಟವೆಂದೆನಿಸಿಕೊಳ್ಳುವುದು. ಆದರೆ ಅಹಿಂಸಾಮಾರ್ಗವನ್ನವಲಂಬಿಸಿದರೆ ಪ್ರಜೆಗಳ ಕೊಂಚ ತ್ಯಾಗದಿಂದ ಮಹತ್ತರವಾದ ಫಲಪ್ರಾಪ್ತವಾಗುವುದು, ಮತ್ತು ಅದರಿಂದ ಗಮ್ಯಸ್ಥಾನವನ್ನು ಸುಲಭವಾಗಿ ಸೇರಬಹುದು. ಅದಕ್ಕೆ ಹಿಂದೂ ಮಹಮ್ಮದೀಯರ ಸಖ್ಯ ವಿನಾ ಬೇರೆಯುಪಾಯವಿಲ್ಲವು. ಈ ಸಖ್ಯವು ಕುದುರಲು ಒಬ್ಬರನ್ನೊಬ್ಬರು ಕ್ಷಮಿಸುವುದೂ, ಒಬ್ಬರು ಮಾಡಿದ ಅಕೃತ್ಯವನ್ನು ಮತ್ತೊಬ್ಬರು ಮರೆತುಬಿಡುವುದೂ, ಸುಹೃದ್ಭಾವದಿಂದ ನಡೆದುಕೊಳ್ಳುವುದೂ ಅತ್ಯಾವಶ್ಯಕವು. ಉಭಯ ಸಂಘದವರೂ ಹಿಂದೂದೇಶದಲ್ಲಿ ಕಲೆತು ವಾಸಮಾಡದಿರಲಾಗುವುದಿಲ್ಲವು. ಸ್ವರಾಜ್ಯವು ಹಿಂದೂಗಳಿಗಾಗಲಿ ಮಹಮ್ಮದೀಯರಿಗಾಗಲಿ ಪ್ರತ್ಯೇಕವಾಗಿ ಸೇರಿದುದಾಗಿಲ್ಲವು. ಉಭಯಪಕ್ಷದವರಲ್ಲೂ ತಪ್ಪಿದ್ದೇಯಿರುವುದು. ಅಷ್ಟುಮಾತ್ರಕ್ಕೆ ಒಂದು ಪಕ್ಷದವರು ಇನ್ನೊಂದು ಪಕ್ಷದವರನ್ನು ನಿಂದಿಸುವುದಾಗಲಿ ಅವರ ಮೇಲೆ ಹಗೆಯನ್ನು ಸಾಧಿಸುವುದಾಗಲಿ ಜಾತೀಯ ಸೌಭಾಗ್ಯಸಾಧನವಲ್ಲವು. ಎಂದು ಮಹಮ್ಮದಾಲಿಯವರು ಉಪದೇಶಿಸಿದರಲ್ಲದೆ ಬಾರ್ಡೋಲಿ ಕಾರ್ಯಕ್ರಮಶ್ರೇಷ್ಠತ್ವವನ್ನು ಕೆಲನಾಯಕರುಗಳು ತಿಳಿದುಕೊಂಡು ಅದನ್ನು ದೃಢನಿಶ್ಚಯದಿಂದ ಕೊನೆಸಾಗಿಸುವುದು ಅತ್ಯಾವಶ್ಯಕವು, ಸ್ತ್ರೀಯರು ಖದ್ದರುನಿರ್ಮಾಣದಲ್ಲಿ ಉದ್ಯುಕ್ತರಾಗಬೇಕು, ಜಾತೀಯ ಧನನಿಧಿಗೆ ಧನವಂತರಾದಿಯಾಗಿ ಪ್ರತಿಯೊಬ್ಬರೂ ಬುದ್ಧಿಪೂರ್ವಕವಾಗಿ ಧನಸಹಾಯ ಮಾಡಿ ವೃದ್ಧಿಗೊಳಿಸಬೇಕು, ಪ್ರಜಾಸಾಮಾನ್ಯವು ತಿಲಕುಸ್ವರಾಜ್ಯನಿಧಿಗೆ ಎಷ್ಟು ತೃಣವಾಗಿ ಕೊಟ್ಟರೂ ಅದನ್ನು ಅಮೂಲ್ಯವಾಗಿ ಭಾವಿಸುವುದು ಮುಖ್ಯವು. ಕೋಟಿಮಂದಿ ಸಭ್ಯರು ಕಾಂಗ್ರೆಸ್ಸಿಗೆ ಸೇರಬೇಕಾಗಿದೆ, ಪ್ರಚಾರಕರಿಗೆ ಗೌರವವೇತನಗಳು ಕೊಡಲ್ಪಡಬೇಕೆಂದು ಕೋರಿದರು, ಮತ್ತು ಶರೀರ ಸ್ವಾತಂತ್ರ್ಯವನ್ನು ಕೋರುವುದಕ್ಕಾಗಿ ಪ್ರಾಣವನ್ನು ಸಮರ್ಪಿಸಲು ಸಹ ಭಾರತೀಯರು ಎಂದು ಸಿದ್ಧರಾಗುವರೋ ಅಂದೇ ಸ್ವರಾಜ್ಯವು ಪ್ರತ್ಯಕ್ಷವಾಗುವುದು, ವರ್ಕಿಂಗ್ ಕಮಿಟಿಯವರು ಇದಕ್ಕೆ ಸಿದ್ಧರಾದ ವರ್ಷದಲ್ಲೇ ಮತ್ತು ಅಖಿಲಭಾರತ ಕಾಂಗ್ರೆಸ್ಸು ಸಭೆಯವರು ಇದಕ್ಕೆ ಪ್ರಯತ್ನಪಟ್ಟ ಒಂದು ಮಾಸದಲ್ಲೇ ಸ್ವರಾಜ್ಯವು ಲಭಿಸುವುದೆಂದು ವಾಗ್ದಾನಮಾಡಿದರು. ಮಹಮ್ಮದಾಲಿಯವರು ಹೇಳುವಂತೆ ಹಿಂದೂ ಮಹಮ್ಮದೀಯರ ಐಕಮತ್ಯವೂ ಸಖ್ಯವೂ ದೃಢಪಟ್ಟು, ಕಾಂಗ್ರೆಸ್ ಭಕ್ತರುಗಳು ಆತ್ಮಾರ್ಪಣವನ್ನು ಮಾಡಲು ಸಂಸಿದ್ಧರಾದರೆ ಸ್ವರಾಜ್ಯವು ಕರಗತವಾಗುವುದೆನ್ನುವುದರಲ್ಲಿ ಸಂದೇಹವಿಲ್ಲವು. ಆದರೆ ಹಿಂದೂಗಳಲ್ಲೇ ಪರಸ್ಪರ ಉಚ್ಚನೀಚಭಾವವೂ ತನ್ಮೂಲಕ ದ್ವೇಷಾಸೂಯೆಯೂ ರೂಢಮೂಲವಾಗಿದ್ದು ಅನರ್ಥ ಹೇತುವಾಗಿರುವಾಗ್ಗೆ, ಪರಧರ್ಮದವರಾದ ಹಿಂದೂ ಮಹಮ್ಮದೀಯರು ಪರಸ್ಪರ ವಿಶ್ವಾಸದಿಂದಿರುವುದು ಅಸಂಭವವೆಂಬುವದು ಅಲ್ಲಲ್ಲಿ ನಡಿಯುತ್ತಿರುವ ಹಿಂದೂ ಮಹಮ್ಮದೀಯರ ಕಲಹದಿಂದ ವ್ಯಕ್ತವಾಗುತ್ತದೆ. ಆದರೂ ಮೌಲಾನಾ ಮಹಮ್ಮದಾಲಿಯವರ ಅಭೀಷ್ಟವು ದೈವಾನುಗ್ರಹದಿಂದ ನೆರವೇರುವಂತಾಗಲೆಂದು ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರಾದ ರಾ|| ಬ|| ಮ|| ಕೆ. ಶ್ರೀಕಂಠೇಶ್ವರ ಅಯ್ಯರ್‌ರವರ ಉದ್ಯೋಗದವಧಿಯು ಬರುವ ಮಾರ್ಚಿ ತಿಂಗಳ ಕಡೆಯವರೆಗೂ ಹೆಚ್ಚಿಸಲ್ಪಟ್ಟಿರುತ್ತದೆ.

ಅಪ್ರಾಪ್ತ ವಯಸ್ಕರು ಧೂಮಪಾನಮಾಡುವುದನ್ನು ನಿರೋಧಿಸುವ ವಿಧಿಯು ಈ ತಾ|| 1 ರಿಂದ ಸಂಸ್ಥಾನದ ಎಲ್ಲ ಮ್ಯುನಿಸಿಪಾಲಿಟಿಗಳಲ್ಲೂ ಆಚರಣೆಗೆ ತರಲ್ಪಟ್ಟಿರುವುದಾಗಿ ಪ್ರಕಟವಾಗಿದೆ.

ಮೈಸೂರು ಡಿಸ್ಟ್ರಿಕ್ಟಿನ ಎಲ್ಲಾ ತಾ|| ಅಮಲ್ದಾರರು ಮೊದಲ್ಗೊಂಡು ಗೆಜೆಟೆಡ್ ಆಫೀಸರುಗಳ ಭಾವಚಿತ್ರವು ಶ್ರೀಮನ್ ಮಹಾರಾಜರವರ ಅಪ್ಪಣೆಯಮೇರಿಗೆ ಕಳೆದ ಗುರುವಾರದ ದಿವಸ ಜಗನ್ಮೋಹನ ಪ್ರಾಸಾದದಲ್ಲಿ ತೆಗೆದುಕೊಳ್ಳಲ್ಪಟ್ಟಿತು.

ಬರುವ ಫೆಬ್ರವರಿ ತಾ|| 15 ರಲ್ಲಿ ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರುಗಳನ್ನು ಆರಿಸಲು ಗೊತ್ತಾಗಿರುವುದರಿಂದ ಆ ದಿನ ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳಿಗೂ ವಿದ್ಯಾಶಾಲೆಗಳಿಗೂ ರಜವು ಕೊಡಲ್ಪಡುವುದು.

ರಾಜಧಾನಿಯಲ್ಲಿ ಕಳೆದ ತಾ|| 4 ಮತ್ತು 5 ರಲ್ಲಿ ನಡೆದ ಸೆನೆಟು ಮೀಟಿಂಗಿನಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯು ತಪ್ಪಿಸಲ್ಪಟ್ಟು ಮೊದಲಿನ ಮೆಟ್ರಿಕ್ಯುಲೇಷನ್ ಪರೀಕ್ಷಾಕ್ರಮವು ಪುನರುದ್ಧರಿಸಲ್ಪಡುವಂತೆ ನಿರ್ಧರಿಸಲ್ಪಟ್ಟದಾಗಿ ತಿಳಿಯುತ್ತೇವೆ.

ಯಡತೊರೆ ತಾ|| ಪೊಲೀಸು ಜಮಾದಾರರಾಗಿದ್ದ ಮ|| ಎಂ. ಗೋಪಾಲರಾಜಅರಸಿನವರು ರೈತರನ್ನು ಹಿಂಸಿಸಿ ಹಣವನ್ನು ತೆಗೆದುಕೊಂಡರೆಂಬ ಅಪರಾಧಕ್ಕೆ ಗುರಿಮಾಡಲ್ಪಟ್ಟಿದ್ದು ಹುಣಸೂರು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನ ವಿಚಾರಣೆಯಲ್ಲಿ ನಿರ್ದೋಷಿಗಳಾಗಿಮಾಡಲ್ಪಟ್ಟರೆಂದು ತಿಳುಹಲು ಸಂತೋಷವಾಗುತ್ತದೆ. ಇವರು ಕೆಲಸದಮೇಲೆ ತೆಗೆದುಕೊಳ್ಳಲ್ಪಟ್ಟು ಕಡೂರು ಡಿ|| ಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಶ್ರೀಮನ್ ಮಹಾರಾಜರವರು ಪ್ರೈವೆಟ್ ಸೆಕ್ರೆಟರಿ ಮೊದಲಾಗಿ ಮಿತಪರಿವಾರದೊಡನೆ ಮಂಜರಾಬಾದು ತಾ|| ಶುಕ್ರವಾರಸಂತೆಗೆ ವಿಹಾರಾರ್ಥವಾಗಿ ಹೋಗಿದ್ದು ನೆನ್ನೆಯದಿನ ಹಿಂದಿರುಗಿ ಚಿತ್ತೈಸಿದರು. ಈ ಶುಕ್ರವಾರಸಂತೆಯ ಗುಡ್ಡಪ್ರದೇಶವು ಬಹಳ ಎತ್ತರವಾಗಿಯೂ ನೀಲಗಿರಿಯಲ್ಲಿರುವಂತೆ ಪರಿಳಿತಗಳಿಂದ ಕುದುರೆಸ್ವಾರಿಗೆ ಬಹಳ ಮನೋಹರವಾಗಿಯೂ ಮೃಗಯಾವಿಹಾರಕ್ಕೆ ಪ್ರಶಸ್ತವಾಗಿಯೂ ಇರುವುದಂತೆ.

ರಾಜಧಾನಿಯ ಮ|| ಗಳಾದ ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಚಾಮುಂಡಿ ರೈಸ್‌ಮಿಲ್, ಜವಳಿ ವ್ಯಾಪಾರಿಗಳು ಆರ್. ನರಸಿಂಹಾಚಾರ್ ಅಂಡ್‌ಸನ್ಸ್, ವೀಣೆ ಮತ್ತು ದಂತ ಕೆಲಸಗಳನ್ನು ಮಾಡುವ ಅಹಮುದ್‌ಅಲಿ ಅಂಡ್‌ಸನ್ಸ್ ಇವರುಗಳು ಸುಂದರವಾಗಿ ತಯಾರಿಸಿರುವ 1924 ನೆ ಇಸವಿಯ ಕ್ಯಾಲೆಂಡರ್‌ಗಳನ್ನೂ, ಬೆಂಗಳೂರು ಪ್ರೆಸ್ಸಿನವರೂ ಮೈಸೂರಿನ ಎಂ. ಎಚ್. ಎಸ್. ಅಂಡ್ ಸನ್ಸ್‌ರವರೂ ಪ್ರಕಟಿಸಿರುವ ಅಂದವಾದ ಪಾಕೆಟ್ ಕ್ಯಾಲೆಂಡರುಗಳನ್ನೂ ವಿಶ್ವಾಸಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಕಳೆದ ಗುರುವಾರ ರಾತ್ರಿ ಬೆಂಗಳೂರು ಮ್ಯುನಿಸಿಪಲ್ ಆಫೀಸಿನಲ್ಲಿ ಕಾವಲಿದ್ದ ಸಿದ್ದಪ್ಪ ಮತ್ತು ಸುಬ್ರಮಣ್ಯ ಇವರಿಬ್ಬರ ಕುತ್ತಿಗೆಗಳು ಕತ್ತರಿಸಲ್ಪಟ್ಟು ರಕ್ತದ ಗುಂಡಿಯಲ್ಲಿ ಬಿದ್ದಿದ್ದುವು, ಮತ್ತು ಭೂಮಿಯೊಳಗೆ ಹೂಳಲ್ಪಟ್ಟಿದ್ದ ಹಣದ ಪೆಟ್ಟಿಗೆಯು ಹೊಡೆದುಹಾಕಲ್ಪಟ್ಟು ಒಳಗಿದ್ದ 5,000 ರೂಪಾಯಿಯು ಅಪಹರಿಸಲ್ಪಟ್ಟಿದ್ದಿತು. ಬೆಳಕು ಹರಿಯುತ್ತಲೆ ಈ ವಿಚಾರವು ಪೊಲೀಸಿನವರಿಗೆ ತಿಳಿದುಬಂದು ಮ್ಯುನಿಸಿಪಲ್ ಪ್ರೆಸಿಡೆಂಟರು ಕಮಿಷನರು ಮೊದಲಾಗಿ ಅಧಿಕಾರಿಗಳ ಸಮಕ್ಷಮ ಶವಪರೀಕ್ಷೆಯನ್ನು ನಡಿಸಿ ಆ ಹಂತಕರನ್ನು ತಡಕುತ್ತಿರುವರು. ಡಿಸ್ಟ್ರಿಕ್ಟ್ ಡೆ|| ಕಮಿಷನರಾಫೀಸು ಮುಖ್ಯವಾಗಿ ಪೊಲೀಸು ಸೂಪರಿಂಟೆಂಡೆಂಟರಾಫೀಸು ಸಮೀಪದಲ್ಲಿರುವ ಮ್ಯುನಿಸಿಪಲ್ ಆಫೀಸಿನಲ್ಲಿ ಇಂತಹ ಘೋರಕೃತ್ಯವು ನಡೆದಿರುವುದು ಆಶ್ಚರ್ಯವೇ ಸರಿ.

ರಾಜಧಾನಿಯಲ್ಲಿ ಮಕ್ಕಳ ಪ್ರದರ್ಶನವನ್ನು ಈ ಜನವರಿ ತಾ|| 14 ರಿಂದ 18 ರವರೆಗೆ ನಡೆಯಿಸಲು ಲೋಕಹಿತೈಷಿ ಮ|| ಎಚ್. ನಂಜುಂಡರಾಜ ಅರಸಿನವರ ಅಧ್ಯಕ್ಷತೆಯಿಂದಲೂ ಮ|| ಎ. ಸಿ. ಲಿಂಗರಾಜ ಅರಸಿನವರ ಕಾರ್ಯದರ್ಶಿತ್ವದಿಂದಲೂ ಪ್ರಮುಖ ದೊಡ್ಡ ಮನುಷ್ಯರುಗಳ ಸಭಿಕತ್ವದಿಂದಲೂ ಕೂಡಿದ ಒಂದು ಸಂಘವೇರ್ಪಟ್ಟಿರುತ್ತದೆ. ಮೊದಲನೆಯ ದಿನ ಮಧ್ಯಾಹ್ನ ಆರಂಭೋತ್ಸವವಾದ ಮೇಲೆ ಡಾ|| ಕಾರ್ಪಲೇ ಮತ್ತಬ್ಬರ ಉಪನ್ಯಾಸ, ಎರಡನೆಯ ದಿನ ಸ್ಕೌಟರುಗಳ ಡ್ರಿಲ್, ವಾದ್ಯ, ಶಿಶುಪೋಷಣೆಯ ಮೇಲೆ ಡಾ|| ಬಿ. ನಂಜಪ್ಪನವರ ಉಪನ್ಯಾಸ, 3 ನೆಯ ದಿನ ಬಾಣಂತಿಯರ ಮತ್ತು ಎಳೆಮಕ್ಕಳ ಪೋಷಣೆಯಮೇಲೆ ದೀಪಪ್ರದರ್ಶನದೊಡನೆ ಡಾ|| ಮಥುರಾಬಾಯಿ ಉಟಗಾಂವಕರವರ ಉಪನ್ಯಾಸ, 4 ನೆಯ ದಿನ ಡಾ|| ಶ್ರೀನಿವಾಸಾಚಾರ್ಯರ ಉಪನ್ಯಾಸ, 5 ನೆಯ ದಿನ ಶಿಶುಪ್ರದರ್ಶನ ಮತ್ತು ಬಹುಮಾನ ವಿನಿಯೋಗ, ದೀಪಪ್ರದರ್ಶನದೊಡನೆ ಮಕ್ಕಳ ಕ್ಷೇಮ ಮತ್ತು ಆರೋಗ್ಯವಿಚಾರವಾಗಿ ಡಾ|| ಮ್ಯಾಕ್ಕರನಾಸ್‌ರವರ ಉಪನ್ಯಾಸ ಈ ಪ್ರಕಾರವಾಗಿ ನಡಿಸಲ್ಪಡುವುವಲ್ಲದೆ, ಈ ಮಧ್ಯೆ ಆಯಾ ಮೊಹಲ್ಲಾಗಳಲ್ಲೂ ಮಕ್ಕಳ ಪೋಷಣೆಯ ವಿಷಯವಾಗಿ ಉಪನ್ಯಾಸಗಳು ಕೊಡಲ್ಪಡಲೇರ್ಪಾಟಾಗಿದೆ. ಈ ಕಾರ ನಿರ್ವಾಹಕ್ಕೆ 800 ರೂ. ವರೆಗೂ ವೆಚ್ಚವಾಗಬೇಕಾಗಿರುವುದರಿಂದ ಮಕ್ಕಳ ಪೋಷಣಾಕಾಂಕ್ಷಿಗಳಾದವರೆಲ್ಲರೂ ಅವರವರ ಶಕ್ತ್ಯನುಸಾರ ದ್ರವ್ಯಸಹಾಯ ಮಾಡಬೇಕಾಗಿ ಸೆಕ್ರೆಟರಿಯವರು ಕೋರಿರುತ್ತಾರೆ. ಈ ಪ್ರದರ್ಶನಕ್ಕೆ 1 ರಿಂದ 3 ತಿಂಗಳವರೆಗಿನ, 3 ರಿಂದ 6 ತಿಂಗಳವರೆಗಿನ, 6 ರಿಂದ 1 ವರ್ಷದವರೆಗಿನ, 1 ವರ್ಷದಿಂದ 3 ವರ್ಷಗಳವರೆಗಿನ ವಯಸ್ಸಿನ ಮಕ್ಕಳು ಬರಮಾಡಲ್ಪಟ್ಟು ಅವುಗಳಲ್ಲಿ ಆರೋಗದೃಢಕಾಯವಾಗಿರುವ ಮಕ್ಕಳಿಗೆ ಪ್ರತಿಯೊಂದು ತರಗತಿಯಲ್ಲೂ 8, 6 ಮತ್ತು 4 ರೂ. ಪ್ರಕಾರ 3 ಬಹುಮಾನಗಳು ಕೊಡಲ್ಪಡುವುವು. ಪ್ರದರ್ಶನಕ್ಕೆ ಮಕ್ಕಳನ್ನು ಕಳುಹಿಸಲಿಷ್ಟವುಳ್ಳವರು ಜನವರಿ ತಾ|| 17 ರೊಳಗೆ ಹೆಲ್ತಾಫೀಸರಿಗೆ ತಿಳಿಸಿ ರಿಜಿಸ್ಟರ್ ಮಾಡಿಸಬೇಕು.

ಶಿವನಸಮುದ್ರದಲ್ಲಿರುವ ವಿದ್ಯುಚ್ಛಕ್ತಿ ಕಾರ್ಯಾಲಯದ ಆಡಳಿತದಲ್ಲಿ 97600 ರೂಪಾಯಿಗಳು ದುರುಪಯೋಗವಾಗಿದ್ದುದು ಸರ್ಕಾರದವರ ತಿಳಿವಿಕೆಗೆ ಬಂದು ಅದರ ವಿಚಾರಣೆಗಾಗಿ ರೆವಿನ್ಯೂ ಕಮಿಷನರು, ಫೈನಾನ್ಷಿಯಲ್ ಸೆಕ್ರೆಟರಿ ಮತ್ತು ಚೀಫ್‌ಇಂಜನಿಯರ್ ಇವರುಗಳಿಂದ ಕೂಡಿದ ಒಂದು ಕಮಿಟಿಯೇರ್ಪಡಿಸಲ್ಪಟ್ಟಿದ್ದಿತು. ಈ ಕಮಿಟಿಯವರು ಎಲ್ಲ ವಿದ್ಯಮಾನಗಳನ್ನೂ ಲಿಖಿತಪತ್ರವನ್ನೂ ಸಾದ್ಯಂತವಾಗಿ ವಿಮರ್ಶಿಸಿ ಮತ್ತು ತಪ್ಪಾಪಾದಿಸಲ್ಪಟ್ಟಿರುವವರ ಹೇಳಿಕೆಯನ್ನು ಕೇಳಿ ತಮ್ಮ ಅಭಿಪ್ರಾಯವನ್ನು ತಿಳಿಸಿದುದರಮೇಲೆ, ಮ|| ಎಸ್. ಡಿ. ಶೇಷಾದ್ರಿಅಯ್ಯಂಗಾರರು, ಓವರ್ಸಿಯರ್ ರಾಮಕೃಷ್ಣಯ್ಯಂಗಾರ್ ಮತ್ತು ಕಂಟ್ರಾಕ್ಟರ್ ಮುನ್ಷಿ ಅಲ್ಲಾವುದೀನ್ ಈ ಮೂವರ ಮೇಲೆ ಗೌರ್ನಮೆಂಟ್ ಅಡ್ವೋಕೇಟರು ಕೂಡಲೇ ಕ್ರಿಮಿನಲ್ ವಿವಾದವನ್ನು ನಡಿಸಬೇಕಾಗಿಯೂ, ಕ್ರಿಮಿನಲ್ ವಿವಾದದ ಫಲಿತಾಂಶವು ಗೊತ್ತಾಗುವವರೆಗೂ ಶೇಷಾದ್ರ್ಯಯ್ಯಂಗಾರರೂ, ಓವರ್ಸಿಯರ್ ರಾಮಕೃಷ್ಣಯ್ಯಂಗಾರರೂ ಸಸ್ಪೆಂಡ್ ಮಾಡಲ್ಪಟ್ಟಿರುವುದಾಗಿಯೂ, ಮ|| ಶೇಷಾದ್ರ್ಯಯ್ಯಂಗಾರರಿಂದ 30000 ರೂ. ಗಳನ್ನೂ 5 ವರ್ಷಗಳಲ್ಲಿ ಬರಮಾಡಿಕೊಳ್ಳಲು ಎಲೆಕ್ಟ್ರಿಕಲ್ ಚೀಫ್ ಇಂಜನಿಯರು ತಕ್ಕ ಪ್ರಯತ್ನ ನಡಿಸಿ ಅದರ ಫಲಿತಾಂಶವನ್ನು ಈ ಜನವರಿ ತಿಂಗಳೊಳಗಾಗಿ ಸರ್ಕಾರಕ್ಕೆ ತಿಳಿಸಬೇಕಾಗಿಯೂ, ಮ|| ಶೇಷಾದ್ರಿಅಯ್ಯಂಗಾರರ ಅಸಿಸ್ಟೆಂಟರಾಗಿದ್ದ ಮ|| ಕಾರಿಯಪ್ಪನವರ ಸಂಬಳವು ಅವರ ಅಜಾಗರೂಕತೆಗಾಗಿ 1923 ನೇ ಜುಲೈ ತಾ|| 24 ರಿಂದ 750-50-1000 ಸಂಬಳದಿಂದ 400-50-750ಕ್ಕೆ ಇಳಿಸಲ್ಪಟ್ಟಿರುವುದಾಗಿಯೂ 15000 ರೂ. ಗಳನ್ನು ವರ್ಷ ಒಂದಕ್ಕೆ 3000 ರೂ. ನಂತೆ ಅವರ ಸಂಬಳದಿಂದ ಬರಮಾಡಿಕೊಳ್ಳಲ್ಪಡುವುದಾಗಿಯೂ ಸರ್ಕಾರದ ಅಪ್ಪಣೆಯಾಗಿದೆ. ಈ ರೀತಿಯಾದ ದುರ್ವಿನಿಯೋಗವು ಎಷ್ಟೋ ಶಾಖೆಗಳಲ್ಲಿ ಬಹುಕಾಲದಿಂದಲೂ ನಡಿಯುತ್ತಿದ್ದರೂ ಸರ್ಕಾರದ ಗಮನಕ್ಕೆ ಬಂದು ತಕ್ಕ ಪ್ರತಿಕ್ರಿಯೆಮಾಡಲ್ಪಡದಿದ್ದುದರಮೇಲೆ ನಿರ್ಭೀತಿಯಿಂದ ಸರ್ವಸಾಮಾನ್ಯವಾಗಿ ನಡಿಯಲವಕಾಶವಾಗಿದ್ದಿತು. ಆದರೆ ಈ ವೇಳೆ ಸರ್ಕಾರದವರು ಬೆರಳೆಣಿಸಂದಿನಲ್ಲಿ ಬಿಡದೆ ತಕ್ಕ ವಿಚಾರಣೆಯಿಂದ ಕಠಿಣತರವಾದ ಶಿಕ್ಷೆಯನ್ನು ವಿಧಿಸಿ ಇತರ ದಸ್ತುಗಾರರಿಗೆ ಮರೆಯಬಾರದಂತಹ ಎಚ್ಚರಿಕೆಯನ್ನುಂಟುಮಾಡಿರುವುದು ಪ್ರಶಂಸನೀಯವಾಗಿದೆ. ರಾಜಧಾನಿಯ ಮ್ಯುನಿಸಿಪಲ್ ಆಫೀಸಿನಲ್ಲಿ ಹಣ ದುರುಪಯೋಗವಾಗಿರುವ ವಿಚಾರವು ಮಾತ್ರ ಕೌನ್ಸಿಲರುಗಳ ಗೋಚರಕ್ಕೂ ಸಹ ಬಾರದಿರುವುದು ವಿಚಿತ್ರವಾಗಿದೆ.

ಕಾಕಿನಾಡದಲ್ಲಿ ಜರುಗಿದ ರಾಷ್ಟ್ರೀಯ ಮಹಾಸಭಾಧ್ಯಕ್ಷತೆಯನ್ನು ವಹಿಸಿದ್ದ ಮೌಲಾನಾ ಮಹಮ್ಮದಾಲಿಯವರು ಮಾಡಿದ ಅತ್ಯಂತ ದೀರ್ಘ ಭಾಷಣದ ಮುಖ್ಯಾಂಶವು.

(ಕ|| ವೈಭವದಿಂದ.)

ಪ್ರಸ್ತಾವನೆ.

ನಾನು ರಾಷ್ಟ್ರೀಯ ಮಹಾಸಭೆಗೆ ಬರತಕ್ಕ ಬಹಳ ಸ್ವಲ್ಪ ದಿನಗಳಾದವು. ಬೈತುಲ ಜೇಲದೊಳಗಿನ ನಾಲ್ಕುವರ್ಷದ ಕಾರಾಗೃಹವಾಸವು ಮುಗಿದಮೇಲೆ ಅಮೃತಸರ ಮಹಾಸಭೆಗೆ ಬಂದದ್ದೇ ಮೊದಲನೆಯದು. ನಾಗಪುರ ಮಹಾಸಭೆಯು ಎರಡನೆಯದು. ಆಮೇಲೆ ಇದೇ ಮೂರನೆಯದು. ಆದರೆ ನನಗಿಂತ ಮುಂಚೆ ಈ ಮಹಾಸಭೆಯ ಅಧ್ಯಕ್ಷರಾಗಿದ್ದವರು ಅದರ ಸೇವೆಯಲ್ಲಿ ಅಸಂಖ್ಯ ವರ್ಷಗಳನ್ನು ಕಳೆದಿದ್ದಾರೆ. ಅಂಥವರ ಮುಂದೆ ನಾನು ಚಿಕ್ಕ ಬಾಲಕನಂತೆ ಇರುತ್ತೇನೆ. ಹೀಗಿದ್ದರೂ ನೀವು ನನಗೆ ಈ ಬಹುಮಾನವನ್ನು ಕೊಟ್ಟದ್ದಕ್ಕಾಗಿ ನಾನು ನಿಮ್ಮ ಉಪಕಾರವನ್ನು ಮನಃಪೂರ್ವಕವಾಗಿ ಸ್ಮರಿಸುತ್ತೇನೆ. ಮಹಾಸಭೆಯ ಭಕ್ತರಲ್ಲಿ ಶ್ರೇಷ್ಠರಾಗಿದ್ದಂಥ ಒಬ್ಬ ಮಹಾಪುರುಷರ ಕೂಡ ನನ್ನ ಸಂಬಂಧವು ಬಂದಿರುವುದೇ ಈ ಬಹುಮಾನದ ಮೂಲಕಾರಣವೆಂದು ನಾನು ತಿಳಿಯುತ್ತೇನೆ. ಆದರೆ ಆ ಮಹಾಪುರುಷರು ಈಗ ನಿಮಗೆ ಈ ಮಂಟಪದಲ್ಲಿ ಕಾಣುವಂತಿಲ್ಲ! ಅವರು ಅಮೃತಸರ ಮಹಾಸಭೆಯಲ್ಲಿಯೂ ನಾಗಪುರ ಮಹಾಭೆಯಲ್ಲಿಯೂ ಇದ್ದರು. ಆದರೆ ಆಗಿನಕಿಂತ ಈಗ ನಮಗೆ ನಮ್ಮ ಮುಂದಾಳುಗಳಾದ ಮಹಾತ್ಮಗಾಂಧಿಯವರ ಅವಶ್ಯಕತೆಯು ಬಹಳವಿರುತ್ತದೆ. ಮತ್ತು ಆ ಶ್ರೇಷ್ಠಪುರುಷರ ನಮ್ರಸೇವಕನಾದ ನನ್ನಿಂದ ಈ ಸಭೆಯ ಕಾರ್ಯವು ನೆರವೇರಬೇಕೆಂದು ಈಶಸಂಕಲ್ಪವಿದ್ದಂತೆ ತೋರುತ್ತದೆ. ಮಹಾತ್ಮರು ಜೀವದಿಂದ ಇರುವಂತೆ ಅವರ ಶಕ್ತಿಯಾದರೂ ಜಾಗ್ರತವಾಗಿಯೇ ಇರುತ್ತದೆ. ಅವರ ಶುಭಾಶೀರ್ವಾದದಿಂದಲೇ ನಾವೆಲ್ಲರೂ ಈ ಮಹಾಕಾರ್ಯವನ್ನು ನೆರವೇರಿಸುವ. ಮಿತ್ರರೇ, ಅಮೃತಸರ, ಕಲಕತ್ತಾ, ನಾಗಪುರ ಮತ್ತು ಅಹಮ್ಮದಾಬಾದ ಮುಂತಾದ ಮಹಾಸಭೆಗಳಲ್ಲಿ ನಮಗೆ ಮಾರ್ಗವನ್ನು ತೋರಿಸಿದಂಥ ಮಹಾತ್ಮರೊಬ್ಬರೇ ನಮ್ಮ ಮಾರ್ಗದರ್ಶಿಗಳಾಗಲಿಕ್ಕೆ ಯೋಗ್ಯರಿರುವರು. ಆದರೆ ಅವರು ಈಗ ಶತ್ರುವಿನ ಸೆರೆಮನೆಯಲ್ಲಿ ಸಿಕ್ಕಿದ್ದಾರೆ. ಬರಿದಾದ ಅವರ ಜಾಗವನ್ನು ತುಂಬಿಸುವುದು ಮತ್ತಾರಿಗೂ ಶಕ್ಯವಿಲ್ಲ. ಇನ್ನು ನನ್ನ ವಿಷಯಕ್ಕೆ ಕೇಳಿದರೆ, ನಾನು ನಿಮ್ಮೆಲ್ಲರಂತೆ ಒಬ್ಬ ಸೈನಿಕನಾಗಿದ್ದೇನೆ. ಮತ್ತು ನಿಮ್ಮೆಲ್ಲರ ಸಹಕಾರಿತೆಯಿಂದಲೇ ಈ ಮಹಾಸಭೆಯ ಕಾರ್ಯವು ಜರುಗಬೇಕಾಗಿದೆ. ನಾನು ಚಿಕ್ಕಂದಿನಿಂದ ಕಲಹಪ್ರಿಯನು. ಆದರೆ ತಾವೆಲ್ಲರೂ ನನ್ನನ್ನು ಈ ಮಹಾಸಭೆಯ ಅಧ್ಯಕ್ಷನನ್ನಾಗಿ ಆರಿಸಿ ಕಲಹಕ್ಕಿಂತಲೂ ಶ್ರೇಷ್ಠತರವಾದ ಶಾಂತತೆಯನ್ನು ಕುರಿತು ಪ್ರಸ್ತಾಪಿಸುವ ಜವಾಬದಾರಿಯನ್ನು ನನ್ನಮೇಲೆ ಹೊರಿಸಿದಿರಿ. ಈ ನಿಮ್ಮ ಆಜ್ಞೆಯನ್ನು ನಾನು ಶಿರಸಾವಹಿಸುತ್ತೇನೆ, ಮತ್ತು ನನ್ನ ಕೈಲಾದಮಟ್ಟಿಗೆ ನನ್ನ ಕರ್ತವ್ಯವನ್ನು ಮಾಡಲಿಕ್ಕೆ ಎತ್ನಿಸುತ್ತೇನೆ. ಆದಾಗ್ಯೂ ನಮ್ಮ ಮುಂದಿನ ಮಹಾಕಾರ್ಯವನ್ನು ನಿಮ್ಮೆಲ್ಲರ ಸುವಿಚಾರದಿಂದಲೇ ಮಾಡಬೇಕಾಗಿರುತ್ತದೆಂಬದನ್ನು ಮರೆಯಬೇಡಿರಿ. ಹೆಚ್ಚು ವೇಳೆಯನ್ನು ಕಳೆಯದೆ ವಿಚಾರಪೂರ್ವಕವಾಗಿ ನಮ್ಮ ಮುಂದಿನ ಕಾರ್ಯವನ್ನು ನಿರ್ಣಯಿಸಬೇಕಾಗಿದೆ. ಮಹಾತ್ಮಗಾಂಧಿಯವರಂತೆ ನಿಮ್ಮೆಲ್ಲರ ಮೇಲೆ ವರ್ಚಸ್ಸನ್ನು ಕೂಡ್ರಿಸುವ ಪಾತ್ರತೆಯು ನನ್ನಲ್ಲಿ ಇಲ್ಲ. ಆದ್ದರಿಂದ ನೀವು ನಿಮ್ಮ ವಿಚಾರಗಳನ್ನು ನಿಷ್ಪಕ್ಷಪಾತದಿಂದ ಮೈಮೇಲಿನ ಜವಾಬ್ದಾರಿಯನ್ನು ತಿಳಿದು ಮಾಡಿದರೆಂದು ನನ್ನ ವಿನಂತಿಯಿದೆ. ಮಹಾಸಭೆಯೆಂದರೆ—ಅದೇನು ತಮಾಷೆಯಲ್ಲ. ನಾವು ಇಲ್ಲಿಯವರೆಗೆ ಸುಮ್ಮಸುಮ್ಮನೆ ಬಂದಿಲ್ಲ. ನಮ್ಮನಮ್ಮ ವಿಚಾರಗಳ ವಿಮರ್ಶೆಮಾಡಿ ಕಲ್ಯಾಣ ಮಾಡುವಂಥ ಯೋಗ್ಯವಾದ ದಾರಿಯನ್ನು ತೋರಿಸುವದೇ ಈ ಸಭೆಯ ಮುಖ್ಯ ಉದ್ದೇಶವಾಗಿರುತ್ತದೆ. ನೀವು ಈ ಸಭೆಯಲ್ಲಿ ಅಸಂಖ್ಯ ಠರಾವುಗಳನ್ನು ತಂದು ನಿಮ್ಮ ಎಲ್ಲತರದ ಹಕ್ಕುಗಳನ್ನು ಉಪಯೋಗಿಸಬಲ್ಲಿರಿ. ಆದಾಗ್ಗೂ ಆತ್ಮಸಂಯಮನ ಮತ್ತು ಸುವ್ಯವಸ್ಥೆಗಳ ಹೊರತಾಗಿ ನಮ್ಮ ಕಾರ್ಯವು ಸರಿಯಾಗಿ ಜರುಗಲಾರದು. ಸದ್ಯಕ್ಕೆ ನಾವು ಅಹಿಂಸಾವ್ರತವನ್ನು ಸ್ವೀಕರಿಸಿದ್ದೇವೆ. ಆದ್ದರಿಂದ ನಾವು ಇನ್ನೊಬ್ಬರ ಮನಸ್ಸನ್ನು ಸಹ ನೋಯಿಸುವುದು ಸರಿಯಲ್ಲ. ತತ್ವದ ಬಗ್ಗೆಯಷ್ಟೇ ವಾದವಲ್ಲದೆ ಆ ವಾದದಲ್ಲಿ ವ್ಯಕ್ತಿಸಂಬಂಧವು ಬರಕೂಡದು. ಹೀಗಿದ್ದರೂ ನಮಗೆ ಶಾಂತತೆಯ ಅವಶ್ಯಕತೆಯು ಬಹಳವಿರುತ್ತದೆ. ಮಹಾತ್ಮಾ ಗಾಂಧಿಯವರು ಧಾರ್ಮಿಕ ಮತ್ತು ರಾಜಕೀಯವಿಚಾರಗಳನ್ನು ಒಟ್ಟುಗೂಡಿಸಿದರು. ಧರ್ಮದ ಲವಲೇಶವು ಕೂಡ ಇಲ್ಲದಂಥ ರಾಜಕಾರ್ಯವು ವ್ಯರ್ಥವೇ ಸರಿ. ಈ ಸಭೆಯಲ್ಲಿ ನಾವು ಯಾವುದಾದರೊಂದು ಪಕ್ಷದ ಜಯಕ್ಕಾಗಿ ಹವಣಿಸುವುದು ಉಚಿತವಲ್ಲ. ರಾಷ್ಟ್ರದೊಳಗಿನ ಅನ್ಯಾಯಗಳನ್ನು ದೂರಮಾಡಿ ಸ್ವತಂತ್ರರಾಗುವುದೇ ನಮ್ಮ ಮುಖ್ಯಧ್ಯೇಯವಾಗಿರಲಿಕ್ಕೆ ಬೇಕು. ನನ್ನ ಭಾಷಣಕ್ಕೆ ಇಷ್ಟು ಪ್ರಸ್ತಾವನೆಯು ಸಾಕು.

ಮುಸಲ್ಮಾನರ ಪೂರ್ವೇತಿಹಾಸ

ಹಿಂದು ಮುಸಲ್ಮಾನರ ಒಕ್ಕಟ್ಟು ನಮ್ಮ ಮುಂದಿನ ಮಹತ್ವದ ಪ್ರಶ್ನಗಳಲ್ಲಿ ಒಂದಾಗಿದೆ. ಸನ್ ೧೮೮೫ ರಲ್ಲಿ ಮಹಾಸಭೆಯು ಸ್ಥಾಪನೆಯಾಯಿತಷ್ಟೆ. ಆಗ ಆ ಸಭೆಗೆ ಹಿಂದುಸ್ಥಾನದ ಮುಸಲ್ಮಾನರು ಕೂಡಲಿಲ್ಲ. ಯಾಕೆಂದರೆ ಈ ಚಳವಳಿಗೆ ಅವಶ್ಯವಿದ್ದ ಪಾಶ್ಚಿಮಾತ್ಯ ಶಿಕ್ಷಣವು ಅವರಿಗೆ ಸಿಕ್ಕಿದ್ದಿಲ್ಲ. ಮೇಲಾಗಿ ಅವರ ಮನಸ್ಥಿತಿಯಾದರೂ ಇಂಥ ಚಳವಳಿಗೆ ಅನುಕೂಲವಾಗಿ ಇದ್ದಿಲ್ಲ. ಕೈಯೊಳಗಿನ ರಾಜ್ಯವು ಕಳೆದುಹೋಗಿತ್ತು. ಆದ್ದರಿಂದ ಅದನ್ನು ಕಸಿದುಕೊಂಡಿದ್ದಂಥ ಪರಕೀಯರ ಶಿಕ್ಷಣವನ್ನು ಅವರು ದ್ವೇಷಿಸುತ್ತಿದ್ದರು. ಪ್ಲಾಸಿ ಕಾಳಗದಿಂದ ಬಂಡಾಯದವರೆಗೆ ೧೦೦ ವರ್ಷಗಳಲ್ಲಿ ಹಿಂದುಸ್ಥಾನದ ರಾಜ್ಯವು ಇಂಗ್ರಜರ ಕೈವಶವಾಯಿತು. ಹೀಗಿದ್ದರೂ ಇಂಗ್ರಜರು ತಮಗಿಂತ ಯಾವ ರೀತಿಯಿಂದಲೂ ಶ್ರೇಷ್ಠರಿರುವದಿಲ್ಲವೆಂದು ಇಲ್ಲಿಯ ಮುಸಲ್ಮಾನರು ತಿಳಿಯುತ್ತಿದ್ದರು. ಮತ್ತು ಇದೇ ದ್ವೇಷಭಾವದ ಸ್ಫೋಟವು ೧೮೫೭ರ ಬಂಡಾಯದಲ್ಲಿ ಆಯಿತು. ಈ ಮೇರೆಗೆ ಅವರು ಪಾಶ್ಚಿಮಾತ್ಯ ಶಿಕ್ಷಣದ ವಿರುದ್ಧವಿದ್ದುದರಿಂದ ಮಹಾಸಭೆಯ ಕಾರ್ಯದಲ್ಲಿ ನೆರವಾಗುವದು ಅವರಿಗೆ ಅಶಕ್ಯವಾಯಿತು. ಇದೇ ಕಾಲಕ್ಕೆ ಸುಶಿಕ್ಷಿತ ಮುಸಲ್ಮಾನನು ತನ್ನ ಜಾತಿ ಬಾಂಧವರಿಗೆ ಮಹಾಸಭೆಗೆ ಸಹಾಯಮಾಡಬೇಡಿರೆಂದು ಹೇಳತೊಡಗಿದನು. ಆತನ ಹೆಸರು ಸಯ್ಯದ ಅಹಮ್ಮದಖಾನ. ಆತನ ಭಾಷಣಗಳು ಆಕ್ಷೇಪಾರ್ಹವಿದ್ದಂತೆ ವಿಚಾರಾರ್ಹವಾಗಿಯೂ ಇದ್ದವೆಂದು ನನಗೆ ತೋರುತ್ತದೆ. ಸಯ್ಯದ ಅಹಮ್ಮದನು ಹಿಂದುಗಳನ್ನು ಎಂದೂ ದ್ವೇಷಿಸುತ್ತಿದ್ದಿಲ್ಲ. ಆದರೆ ಅವನು ತನ್ನ ಜಾತಿಯು ಸುಧಾರಿಸಬೇಕೆಂದು ಬಹಳ ಇಚ್ಛಿಸುತ್ತಿದ್ದನು. ಆಗಿನಕಾಲದ ಮುಸಲ್ಮಾನರಿಗೆ ಸರಕಾರವನ್ನು ದ್ವೇಷಿಸುವವನ್ನು ಬಿಟ್ಟು ಇನ್ನಾವ ರೀತಿಯಿಂದಲೂ ಚಳವಳಿಯನ್ನು ಮಾಡುವದು ಶಕ್ಯವಿದ್ದಿಲ್ಲ. ಮೇಲಾಗಿ ಅವರಿಗೆ ತಮ್ಮ ಸಮಾಜದ ಸುಧಾರಣೆಗಾಗಿ ತಮ್ಮ ಸ್ವಂತ ಮಾರ್ಗದಿಂದಲೇ ಸುಶಿಕ್ಷಿತರಾಗುವುದು ಅವಶ್ಯವಾಗಿತ್ತು. ಆದ್ದರಿಂದ ಇದೆಲ್ಲವನ್ನು ಬಿಟ್ಟು ಮುಸಲ್ಮಾನರು ಮಹಾಸಭೆಯ ರಾಜಕೀಯ ಚಳವಳಿಯಲ್ಲಿ ತೊಡಗುವದು ಸರಿಯಲ್ಲವೆಂದು ಆತನಿಗೆ ಅನಿಸಿತ್ತು. ಮತ್ತು ಆಗಿನಂಥ ಕಾಲದಲ್ಲಿ ಅವನು ಮಾಡಿದ್ದೇ ಯೋಗ್ಯವೆಂದು ನನಗಾದರೂ ಅನಿಸುತ್ತದೆ. ಆದರೆ ಸಯ್ಯದ ಅಹಮ್ಮದಖಾನನ ವರ್ಚಸ್ಸವು ಮುಸಲ್ಮಾನ ಸಮಾಜದ ಮೇಲೆ ಬಿದ್ದಿಲ್ಲ. ಅವನು ಸುಶಿಕ್ಷಿತನೂ ಸ್ವತಂತ್ರವಿಚಾರಪರನೂ ಆಗಿದ್ದನು. ಧಾರ್ಮಿಕ ವಿಷಯದಲ್ಲಿಯ ಅವನ ವಿಚಾರಗಳು ಅಂಧಶ್ರದ್ಧೆಯ ಜಾತಿಬಾಂಧವರಿಗೆ ಸೇರಿಬರುತ್ತಿದ್ದಿಲ್ಲ. ಆದ್ದರಿಂದ ಅವರು ಅವನಿಗೆ ತಕ್ಕ ಸನ್ಮಾನವನ್ನು ಕೊಡುತ್ತಿದ್ದಿಲ್ಲ. ಆದಾಗ್ಯೂ ಅವರು ಅವನ ಉಪದೇಶದಂತೆ ಮಹಾಸಭೆಗೆ ಕೂಡಲಿಲ್ಲ. ಈ ಮೇರೆಗೆ ಮಹಾಸಭೆಯ ಮೊದಲಿನ 20 ವರ್ಷಗಳವರೆಗೆ ಮುಸಲ್ಮಾನರು ಯಾವ ಭಾಗವನ್ನೂ ತಕ್ಕೊಳ್ಳಲಿಲ್ಲ. ಇತ್ತ ಸಯ್ಯದ ಅಹಮ್ಮದಖಾನನು ತನ್ನದೊಂದು ಸ್ವತಂತ್ರ ವಿದ್ಯಾಲಯವನ್ನು ಅಲಿಗಡದಲ್ಲಿ ಸ್ಥಾಪಿಸಿ ತನ್ನ ಸಮಾಜದಲ್ಲಿ ಶಿಕ್ಷಣದ ಪ್ರಸಾರವನ್ನು ಮಾಡಹತ್ತಿದನು. ಇದೂ ಕೂಡ ಸರಕಾರಕ್ಕೆ ಸೇರದಂತಾಯಿತು. ಅವರು ಅವನನ್ನು ಪ್ರಸಿದ್ಧ ಬಂಡುಗಾರ (arch-rebel) ನೆಂದು ಕರೆದರು. ಆದರೂ ಇದೇ ಪುರುಷನ ಅಪೂರ್ವಪ್ರಯತ್ನದಿಂದ ಅವನ ಸಹೋದ್ಯೋಗಿಗಳು ಸನ್ 1906ರಲ್ಲಿ ಮುಸ್ಲೀಮಲೀಗವನ್ನು ಸ್ಥಾಪಿಸಿದರು.

ಅವರ ಸದ್ಯಃಸ್ಥಿತಿ.

ಅಂದಿನಿಂದ ಹಿಂದುಸ್ಥಾನದಲ್ಲಿಯ ಮುಸಲ್ಮಾನರಿಗೆ ಹೊಸಯುಗದ ಆರಂಭವಾಯಿತು. ಸುಶಿಕ್ಷಿತರಾದ ಹಿಂದುಗಳು ಏನಾದರೂ ಅಭಿಷವನ್ನು ತೋರಿಸದೆ ಸುಮ್ಮನೆ ಕೂಡ್ರುವಂತೆ ಇದ್ದಿಲ್ಲ. ಆದ್ದರಿಂದ ಮಾರ್ಲೀ-ಮಿಂಟೊ ಸುಧಾರಣೆಯ ವಿಚಾರವು ಪ್ರಾರಂಭವಾಯಿತು. ಈ ಸಮಯಕ್ಕೆ ಮುಸಲ್ಮಾನ ಪ್ರತಿನಿಧಿಗಳು ಆಗಿನ ವೈಸರಾಯರಾದ ಲಾರ್ಡ್ ಮಿಂಟೊ ಇವರಿಗೆ ಭೇಟಿಯಾಗಿ ತಮ್ಮ ಬೇಡಿಕೆಗಳನ್ನು ಅಂಕಿತಮಾಡಿಕೊಂಡರು. ಆಗ ಅವರ ಜಾತಿಬಾಂಧವರಿಗೂ ಕೌನ್ಸಿಲ್ಲಿನಲ್ಲಿ ಕೆಲವು ಜಾಗಗಳು ಸಿಕ್ಕಿದವು ಮತ್ತು ಇದರಿಂದ ಹಿಂದು ಮುಸಲ್ಮಾನರಲ್ಲಿ ವಿಶೇಷ ಸ್ನೇಹಭಾವವು ಉಳಿಯದಂತಾಯಿತು. ಆದಾಗ್ಯೂ ಅವರ ನಡುವಿನ ಭವಿಷತ್ಕಾಲದ ಐಕ್ಯಕ್ಕೆ ಇದರಿಂದ ಕೆಲಮಟ್ಟಿಗೆ ಸಹಾಯವೇ ಆಯಿತು. ಹಿಂದುಗಳಿಗೆ ಇಂತಿಷ್ಟು ಸ್ಥಳಗಳು ಮತ್ತು ಮುಸಲ್ಮಾನರಿಗೆ ಇಂತಿಷ್ಟು ಸ್ಥಳಗಳೆಂದು ಹಾಕಿಕೊಟ್ಟಿದ್ದರಿಂದ ಚುನಾವಣೆಯ ಕಾಲಕ್ಕೆ ಈ ಎರಡು ಜಾತಿಗಳ ಉಮೇದವಾರರು ತಮ್ಮತಮ್ಮೊಳಗೆ ಯಾವ ರೀತಿಯಿಂದಲೂ ಜಗಳಾಡದೆ ಪ್ರತಿಯೊಬ್ಬನು ತನ್ನ ಜಾತಿಯ ಕಲ್ಯಾಣವನ್ನು ಮಾಡಹತ್ತಿದನು. ಮುಸಲ್ಮಾನ ಜಾತಿಯ ಪ್ರತಿನಿಧಿತ್ವದ ವಾದದಲ್ಲಿ ನಾನೂ ಒಬ್ಬ ಪಾಲುಗಾರನಿದ್ದೆನು. ಆದರೆ ಅವರಿಗೆ ಸಾಕಷ್ಟು ಜಾಗಗಳು ಸಿಕ್ಕಿದ್ದರಿಂದ

ಮೈಸೂರು ಸ್ಟಾರ್.

೧೯೨೪ನೆಯ ಇಸವಿ ಜನವರಿ ತಾ॥ ೬ ನೆಯ ಭಾನುವಾರ.

A WHOLESOME EXAMPLE.

The long-awaited order of the Government on the Sivasamudram Electric embezzlement has come and the public will receive it with considerable satisfaction. We offer our own congratulations to the Government for taking a bold action in the matter, and for doing what is nothing more than the barest justice. It was clear from the beginning that a very large sum amounting to nearly a lakh of rupees was defalcated. The Government instituted a searching inquiry into the case. Mr. K. S. Iyer who was employed expressly for the propose of auditing the accounts confirmed that there was fraud in the matter. The Government then appointed an impartial commission to investigate the case fully and report to the Government. The Government have taken action on the report of the Commission. They find that Mr. S. D. S. Iyengar the chief operator is guilty of all the charges framed against him and are convinced that the facts proved establish both criminal and civil liability on his part and deem it necessary to direct a criminal prosecution of him for abetment of cheating and fabrication of a false document as a public servant, while he will be called upon also to pay Rs. 30,000 in 5 annual instalments, failing which he will be liable for his total liability to the extent of Rs. 76,000 and odd. Criminal proceedings will be instituted against one Overseer Ramakrishnaiengar and contract Munshi Allauddin. As regards Mr. C. M. Kariappa the Assistant Operator it was held by the Commission that he was not privy to the frauds. But as disciplinary action was necessary in the circumstances of the case the Government has reduced his pay from 800 to 700 and made him liable to pay Rs. 15,000 to be recovered from his pay at Rs. 3,000 per year. This is first time in Mysore when the Government have so successfully detected the defalcations, have brought home the guilt to the right persons and have taken suitable measures. Hitherto, there used to be an idea, that things like the one under review could take place with perfect impunity. But now the Government have made such a wholesome example of the Sivasamudram embezzlement that it will be for more effective in securing efficiency and integrity of the services than so much of codal rules and threats in mere words. While it is sure to have a salutory effect on the services, it will at the same time create a greater confidence of the Government in the minds of the people of the State and will thus prove a real boon in the end.

While we are on this subject we may as well refer to some statements made by our local contemporary the *Sampadabhyudaya*, which are made in its usual misleading manner. It says that the public finds fault with the blunder of the Government in making the Head of the Electric Department a member of the Committee of enquiry. We do not know what public it represents and where it got this piece of information so far removed from facts. Next it says that the public say that Mr. Forbs and others concerned in the matter—vagueness cannot go further—are all responsible "equally and proportionately," the meaning of which it is impossible to decipher. Where the journal gathered this precious piece of information is a mystery. And as a final shot it says—"The Government Order in question is considered to be equally outrageous to justice and fairplay. A *primea* facie case has been made out. The whole Department should be placed under suspension and a judicial trial should be ordered." It may not be worth the while to notice these samples of wisdom emanating from that irrepressible and irresponsible quarter. However, it is indicative of the progress of the thoughts of the public which it represents. Further, the Government say that as regards the responsibility of the Head Office and the Audit Office they reserve the matter for separate orders. When that is so and the matter is still *subjudice*, is it not against all canons of decent journalism to reserve comment on that part of the question? But how can we expect anything better from our contemporary having regard to its past!

"EMPLOYER'S COMPLAINT OF PROFESSORS."

As a proposition to the effect "that the S. S. L. C. and the under-graduate coarses be widened by the inclusion, as parts thereof, of new courses intended to prepare for callings in life (vocational courses), or to serve as an introduction to technological or professional studies of the University Grade", is reported to have been accepted at a special meeting of the Senate of the Mysore University held in the Hall (upstairs) of the University Union, Mysore, we think it proper and appropriate to reproduce here the following which appears in the Madras Mail of the 3rd instant:—

Some observations on the present systems of technical and elementary education were made at Chesterfield by Mr. Charles Markham, a leading figure in the coal and iron industries in Derbyshire and South Yorkshire. Mr. Markham, who is the brother of the late Sir Arthur Markham, said the greatest bugbears employers had to contend with to-day were the professors. While admitting that they were idealists, he described their work as bad and their methods antiquated and ridiculous. The professors in Great Britain, with two or three exceptions, could no more run a commercial business than fly.

On one occasion he had special machinery fitted up at a grammar school and invited the professors to send pupils for demonstrations. Not one student came and after the professors had inspected one of the latest machines it was thrown back at him with the remark that it would not work. He sent the engine back to the makers, who reported that the engine had been taken to pieces and put together all wrong. Two scholarships were offered every year by the Staveley Coal and Iron Company (of which he was chairman,) and the youths were guaranteed permanent employment. When these students left the colleges the first thing the officials of the company had to do was to knock out of their heads all that the students had learned from their masters at school.

The methods used in elementary education at the present time were of such a variety that they retarded the children's powers of assimilation. The old plain dame school with its simple subjects and keen discipline achieved far better results. He deplored the abolition of corporal punishment in the schools. It might sound rather brutal, but the judicious use of the cane not only had a moral effect for good on the delinquent, but it had a remarkable influence on all the scholars who saw the punishment administered. A few strokes of the cane would often produce the desired result where kind words and coaxing had been ineffective.

38 ನೆಯ ರಾಷ್ಟ್ರೀಯ ಮಹಾಸಭೆ.

ಭರತಖಂಡದಲ್ಲಿ ಸಭೆಗಳಿಗೆ ಸುಗ್ಗಿ ಕಾಲವಾದ ಡಿಶಂಬರ್ ತಿಂಗಳಲ್ಲಿ ರಾಷ್ಟ್ರೀಯ ಮಹಾಸಭೆ, ಕಿಲಾಪತ್ ಸಭೆ, ಸಂಘಸಂಸ್ಕರಣಸಭೆ ಮೊದಲಾದ ಸಭೆಗಳು ಆಂಧ್ರದೇಶವಾದ ಕಾಕಿನಾಡದಲ್ಲಿ ಜರುಗಿದುವು. ಮಹಾಸಭೆಗಾಗಿ ಜರೇ ಖದ್ದರ್ ಬಟ್ಟೆಯಿಂದಲೇ 40 ಸಾವಿರ ಜನರನ್ನು ಹಿಡಿಯುವಷ್ಟು ವಿಶಾಲವಾದ ಗುಡಾರವು ಹಾಕಲ್ಪಟ್ಟು ಅಲಂಕರಿಸಲ್ಪಟ್ಟಿದ್ದಿತು. ಲೊ॥ ತಿಲಕ್, ಮ॥ ಗಾಂಧಿ ಈ ಮಹಾಪುರುಷರುಗಳು ಕುಳಿತಿರುವ ಆಕೃತಿಯಲ್ಲಿ ಶಿಲಾವಿಗ್ರಹಗಳ ಮಾದ್ರಿಯಲ್ಲಿ ರಂಗಿನಿಂದ ಮಾಡಲ್ಪಟ್ಟು ಇರಿಸಲ್ಪಟ್ಟಿದ್ದುವು. ಇವುಗಳನ್ನು ನೋಡಿದವರಲ್ಲಿ ಕೆಲವರಿಗೆ ನಿಜವಾಗಿಯೂ ಮಹಾತ್ಮರು ಬಂದಿರುವರೆಂದು ಭ್ರಮೆಯುಂಟಾಯಿತು. ಅಲಿಸಹೋದರರೂ ಸಿ. ಆರ್. ದಾಸ್, ಪಂಡಿತ ಮೋತೀಲಾಲ್‌ನೆಹರು, ಡಾಕ್ಟರ್ ಅನ್ಸಾರಿ, ಷರ್ವಾನಿ, ಸಿ. ರಾಜಗೋಪಾಲಾಚಾರ್, ಪ್ರಕಾಶಂ, ಸಂತಾನಂ, ಯಾಕೂಬ್‌ಹುಸೇನ್ ಸರೋಜಿನಿದೇವಿ ಮೊದಲಾದ ಸ್ವದೇಶಸೇವಾಧುರೀಣರುಗಳು ದಯಮಾಡಿಸಿದ್ದರು. ಮಹಾಸಭಾ ಪ್ರಾರಂಭಕ್ಕೆ ಪೂರ್ವವೇ 1½ ಗಂಟೆಯಿಂದಲೂ ಪ್ರೇಕ್ಷಕರು ಬರಲಾರಂಭವಾಗಿ ಅವರಿಗೋಸ್ಕರ ಏರ್ಪಡಿಸಿದ್ದ ಗ್ಯಾಲರಿಯ ಒಂದು ಭಾಗವು ಜನಸಮ್ಮರ್ದನದಿಂದ ಕುಸಿದು ಹೋಗಿ ಕೆಲವರಿಗೆ ಕೊಂಚ ಪೆಟ್ಟಾದುದರ ವಿನಾ ಮತ್ತಾವ ಅಪಾಯವೂ ಸಂಭವಿಸಲಿಲ್ಲವು. ಮಧ್ಯಾಹ್ನ 3 ಗಂಟೆಗೆ ಸರಿಯಾಗಿ ಅಧ್ಯಕ್ಷರೂ ಇವರ ಸಹಾಯಕರುಗಳೂ ಉತ್ಸವಪೂರ್ವಕವಾಗಿ ದೇಶೀಯ ವಾದ್ಯದೊಡನೆ ಸಭಿಕರ ಜಯಜಯಧ್ವನಿಯಾಗುತ್ತಿರುವಾಗ್ಗೆ ಸಭಾಶಾಲೆಯನ್ನು ಪ್ರವೇಶಿಸಿದರು. ಅಕಾಲಿದಳವು ಯೂನಿಫಾರಂ ಉಡುಪುಗಳನ್ನು ಧರಿಸಿಕೊಂಡು ಅಧ್ಯಕ್ಷರ ಅಂಗರಕ್ಷಕರಾಗಿ ಅವರ ಸುತ್ತುವರಿದುಕೊಂಡಿದ್ದು ಸಭಾಪ್ರವೇಶಿಸಿದರು. ಸಭಾಪ್ರಾರಂಭದಲ್ಲಿ ವೈದಿಕರುಗಳು ಜಟಾಘನಯುತವಾಗಿಯೂ ಸ್ವರಸಮೇತವಾಗಿಯೂ ವೇದಪಠನವನ್ನು ಮಾಡಿ ಸದಸ್ಯರುಗಳನ್ನು ಆಶೀರ್ವದಿಸಿದರು. ಅನಂತರ ಒಬ್ಬ ಮೌಲ್ವಿಯು ಫಾರ್ಸಿಭಾಷೆಯಲ್ಲಿ ದೇವರ ಪ್ರಾರ್ಥನೆ ಮಾಡಿದರು. ತರುವಾಯ ಕೆಲ ಹಿಂದೂ ಯುವಕರುಗಳು ವಂದೇಮಾತರಂ ಗೀತವನ್ನೂ ಒಬ್ಬ ಮಹಮ್ಮದೀಯನು ಉರ್ದುಭಾಷೆಯಲ್ಲಿ ಜಾತೀಯ ಗೀತವನ್ನೂ ಹಾಡಿದಮೇಲೆ ಒಬ್ಬ ಆಂಧ್ರಯುವಕನು ಆಂಧ್ರಭಾಷೆಯಲ್ಲಿ ಭಾರತಾಂಧ್ರ ಮಾತೃಪ್ರಶಂಸೆಯನ್ನೂ ದೇಶಭಕ್ತಿಪ್ರವರ್ಧಕವಾದ ಪದ್ಯಗಳನ್ನೂ ಓದಿದನು. ಇವಾದಮೇಲೆ ಸನ್ಮಾನ ಸಂಘಾಧ್ಯಕ್ಷರಾದ ಮ॥ ವೆಂಕಟಪ್ಪಯ್ಯಪಂತಲುಯವರು ತಮ್ಮ ಸ್ವಾಗತೋಪನ್ಯಾಸವನ್ನು ಮೊದಲು ಸ್ವಲ್ಪಮಟ್ಟಿಗೆ ಹಿಂದೀಭಾಷೆಯಲ್ಲೂ ಅನಂತರ ಆಂಗ್ಲಭಾಷೆಯಲ್ಲೂ ಓದಿದಮೇಲೆ ತಮ್ಮ ಮನೋಭಾವವನ್ನೆಲ್ಲಾ ವಚನರೂಪದಲ್ಲಿ ಗಂಭೀರವಾಗಿ ತಿಳಿಸಿ ಮೌಲಾನಾ ಮಹಮ್ಮದಾಲಿಯವರು ಅಧ್ಯಕ್ಷಪೀಠವನ್ನಲಂಕರಿಸಿ ಸಭಾಕಾರ್ಯವನ್ನು ಜರುಗಿಸಬೇಕಾಗಿ ಪ್ರಾರ್ಥಿಸಿದರು.

ಅನಂತರ ಮೌಲಾನಾ ಮಹಮ್ಮದಾಲಿಯವರು ಸದಸ್ಯರುಗಳ ಕರತಾಡನ ಮತ್ತು ಜಯಧ್ವನಿಗಳಾಗುತ್ತಿರುವಾಗ್ಗೆ ಅಧ್ಯಕ್ಷಪೀಠವನ್ನಲಂಕರಿಸಿ ತಮ್ಮ ಭಾಷಣವನ್ನು ಆಂಗ್ಲಭಾಷೆಯಲ್ಲಿ ಓದಿದರು. ಈ ಭಾಷಣವು ಮುದ್ರಣವಾದ 134 ಪುಟಗಳುಳ್ಳುದಾಗಿದ್ದಿತಲ್ಲದೆ 5 ಗಂಟೆಗೆ ಆರಂಭವಾದುದು ರಾತ್ರಿ 8½ ಗಂಟೆಗೆ ಮುಗಿದಿತು. ಇಷ್ಟು ದೀರ್ಘವಾದ ಭಾಷಣವು ಈವರೆಗೆ ಯಾರಿಂದಲೂ ಮಾಡಲ್ಪಟ್ಟಿರಲಿಲ್ಲವು, ಮತ್ತು ಪುಟಗಟ್ಟಲೆ ನಿತ್ಯದಲ್ಲೂ ಹೊರಡುವ ಪತ್ರಿಕೆಗಳಲ್ಲೇ ಸಮಗ್ರವಾಗಿ ಪ್ರಕಟಿಸಲ್ಪಡಲಿಲ್ಲವಾಗಿ ಇನ್ನು ವಾರಪತ್ರಿಕೆಯಾದ ಈ ಸ್ಟಾರ್‌ಪತ್ರಿಕೆಯಲ್ಲಿ ಎಷ್ಟುಮಾತ್ರಕ್ಕೂ ಸಾಧ್ಯವಿಲ್ಲವಾದುದರಿಂದ ಭಾಷಣದ ಮುಖ್ಯಾಂಶವು ಬೇರೆ ಪತ್ರಿಕೆಯಿಂದುದ್ಧರಿಸಲ್ಪಟ್ಟು ಮತ್ತೊಂದುಕಡೆ ಮುದ್ರಿಸಲ್ಪಟ್ಟಿರುತ್ತದೆ. ಭರತಖಂಡದ ಸಾರ್ವಭೌಮತ್ವವನ್ನನುಭವಿಸಿದಂತಹ ಮಹಮ್ಮದೀಯರ ವರ್ಚಸ್ಸು ಬ್ರಿಟಿಷ್ ಇಂಡಿಯಾದಲ್ಲಿ ಈಗ ಹೇಗಿರುತ್ತದೆಂಬುದನ್ನು ಚಾರಿತ್ರಕಪರಿಜ್ಞಾನದಿಂದ ತಿಳಿಸಿದರು. ಅಲ್ಲದೆ, ಐರೋಪ್ಯಸಂಗ್ರಾಮದಿಂದ ಮಹಮ್ಮದೀಯ ಧರ್ಮಗುರುಸ್ಥಾನವಾದ ತುರ್ಕಿರಾಜ್ಯಕ್ಕೆ ಸಂಭವಿಸಿದ ತೊಂದರೆಯಿಂದ ಮಹಮ್ಮದೀಯ ಪ್ರಪಂಚಕ್ಕುಂಟಾಗಿದ್ದ ಮನೋಕ್ಷೋಭೆಯು ರಾಜಕೀಯ ವಿಚಾರ ನಿರ್ಣಯದಿಂದ ಸಮಾಧಾನವಾಗಿದ್ದರೂ ಮತಧರ್ಮ ಸಂಬಂಧವಾದ ಕಿಲಾಫತ್ ಸಮಸ್ಯೆಯು ಇನ್ನೂ ಪರಿಹಾರವಾಗದಿರುವುದು, ಭರತಖಂಡದ ಸ್ವರಾಜ್ಯಸಾಧನೆಯ ಸಮಸ್ಯೆಯಷ್ಟೇ ಅಸಮಾಧಾನಕ್ಕೆ ಕಾರಣವಾಗಿರುತ್ತದೆ. ಹಿಂದೂ ಮಹಮ್ಮದೀಯರ ಐಕಮತ್ಯವೂ ಸಖ್ಯವೂ ಭರತಖಂಡದ ಸ್ವರಾಜ್ಯಸಾಧನೆಗೆ ಎಷ್ಟರಮಟ್ಟಿಗೆ ಅವಶ್ಯಕವಾಗಿರುವುದೋ ಕಿಲಾಫತ್ ಸಮಸ್ಯೆಯ ಪರಿಹಾರಕ್ಕೆ ಅಷ್ಟರಮಟ್ಟಿಗೆ ಅವಶ್ಯಕವಾಗಿರುವುದು. ಈ ಉಭಯ ಸಂಕಲ್ಪಸಾಧನೆಗೆ ದೌರ್ಜನ್ಯರಹಿತವಾದ ಅಸಹಾಯನಿರಾಕರಣೋದ್ಯಮ ವಿನಾ ಬೇರೆಗತ್ಯಂತರವಿಲ್ಲವೆಂದು ಮಹಾತ್ಮ ಗಾಂಧಿಯವರಿಂದ ನನಗೆ ಉಪದೇಶವಾದಾರಭ್ಯ ಮನಗಂಡಿರುವುದು. ದೌರ್ಜನ್ಯದಿಂದ ಭರತಖಂಡಕ್ಕೆ ವಿಜಯವೆಂದಿಗೂ ಆಗಲಾರದು. 33 ಕೋಟಿ ಮಂದಿ ಪ್ರಜೆಗಳಿರುವ ಭಾರತವರ್ಷವು ಅಹಿಂಸೆಯ ಮಾರ್ಗವನ್ನು ಕೈಕೊಳ್ಳುವಂತೆ ಮಾಡದಿರುವುದು ನಿಂದಾರ್ಹವಾದುದು. ದೌರ್ಜನ್ಯದಿಂದ ವಿಜಯವುಂಟಾದರೂ ಅದು ಕೆಲಜನರ ಹೋರಾಟವೆಂದೆನಿಸಿಕೊಳ್ಳುವುದು. ಆದರೆ ಅಹಿಂಸಾಮಾರ್ಗವನ್ನವಲಂಬಿಸಿದರೆ ಪ್ರಜೆಗಳ ಕೊಂಚ ತ್ಯಾಗದಿಂದ ಮಹತ್ತರವಾದ ಫಲಪ್ರಾಪ್ತವಾಗುವುದು, ಮತ್ತು ಅದರಿಂದ ಗಮ್ಯಸ್ಥಾನವನ್ನು ಸುಲಭವಾಗಿ ಸೇರಬಹುದು. ಅದಕ್ಕೆ ಹಿಂದೂ ಮಹಮ್ಮದೀಯರ ಸಖ್ಯ ವಿನಾ ಬೇರೆಯುಪಾಯವಿಲ್ಲವು. ಈ ಸಖ್ಯವು ಕುದುರಲು ಒಬ್ಬರನ್ನೊಬ್ಬರು ಕ್ಷಮಿಸುವುದೂ, ಒಬ್ಬರು ಮಾಡಿದ ಅಕೃತ್ಯವನ್ನು ಮತ್ತೊಬ್ಬರು ಮರೆತುಬಿಡುವುದೂ, ಸುಹೃದ್ಭಾವದಿಂದ ನಡೆದುಕೊಳ್ಳುವುದೂ ಅತ್ಯಾವಶ್ಯಕವು. ಉಭಯ ಸಂಘದವರೂ ಹಿಂದೂದೇಶದಲ್ಲಿ ಕಲೆತು ವಾಸಮಾಡದಿರಲಾಗುವುದಿಲ್ಲವು. ಸ್ವರಾಜ್ಯವು ಹಿಂದೂಗಳಿಗಾಗಲಿ ಮಹಮ್ಮದೀಯರಿಗಾಗಲಿ ಪ್ರತ್ಯೇಕವಾಗಿ ಸೇರಿದುದಾಗಿಲ್ಲವು. ಉಭಯಪಕ್ಷದವರಲ್ಲೂ ತಪ್ಪಿದ್ದೇಯಿರುವುದು. ಅಷ್ಟುಮಾತ್ರಕ್ಕೆ ಒಂದು ಪಕ್ಷದವರು ಇನ್ನೊಂದು ಪಕ್ಷದವರನ್ನು ನಿಂದಿಸುವುದಾಗಲಿ ಅವರ ಮೇಲೆ ಹಗೆಯನ್ನು ಸಾಧಿಸುವುದಾಗಲಿ ಜಾತೀಯ ಸೌಭಾಗ್ಯಸಾಧನವಲ್ಲವು. ಎಂದು ಮಹಮ್ಮದಾಲಿಯವರು ಉಪದೇಶಿಸಿದರಲ್ಲದೆ ಬಾರ್ಡೋಲಿ ಕಾರ್ಯಕ್ರಮಶ್ರೇಷ್ಠತ್ವವನ್ನು ಕೆಲನಾಯಕರುಗಳು ತಿಳಿದುಕೊಂಡು ಅದನ್ನು ದೃಢನಿಶ್ಚಯದಿಂದ ಕೊನೆಸಾಗಿಸುವುದು ಅತ್ಯಾವಶ್ಯಕವು, ಸ್ತ್ರೀಯರು ಖದ್ದರುನಿರ್ಮಾಣದಲ್ಲಿ ಉದ್ಯುಕ್ತರಾಗಬೇಕು, ಜಾತೀಯ ಧನನಿಧಿಗೆ ಧನವಂತರಾದಿಯಾಗಿ ಪ್ರತಿಯೊಬ್ಬರೂ ಬುದ್ಧಿಪೂರ್ವಕವಾಗಿ ಧನಸಹಾಯ ಮಾಡಿ ವೃದ್ಧಿಗೊಳಿಸಬೇಕು, ಪ್ರಜಾಸಾಮಾನ್ಯವು ತಿಲಕುಸ್ವರಾಜ್ಯನಿಧಿಗೆ ಎಷ್ಟು ತೃಣವಾಗಿ ಕೊಟ್ಟರೂ ಅದನ್ನು ಅಮೂಲ್ಯವಾಗಿ ಭಾವಿಸುವುದು ಮುಖ್ಯವು. ಕೋಟಿಮಂದಿ ಸಭ್ಯರು ಕಾಂಗ್ರೆಸ್ಸಿಗೆ ಸೇರಬೇಕಾಗಿದೆ, ಪ್ರಚಾರಕರಿಗೆ ಗೌರವವೇತನಗಳು ಕೊಡಲ್ಪಡಬೇಕೆಂದು ಕೋರಿದರು, ಮತ್ತು ಶರೀರ ಸ್ವಾತಂತ್ರ್ಯವನ್ನು ಕೋರುವುದಕ್ಕಾಗಿ ಪ್ರಾಣವನ್ನು ಸಮರ್ಪಿಸಲು ಸಹ ಭಾರತೀಯರು ಎಂದು ಸಿದ್ಧರಾಗುವರೋ ಅಂದೇ ಸ್ವರಾಜ್ಯವು ಪ್ರತ್ಯಕ್ಷವಾಗುವುದು, ವರ್ಕಿಂಗ್ ಕಮಿಟಿಯವರು ಇದಕ್ಕೆ ಸಿದ್ಧರಾದ ವರ್ಷದಲ್ಲೇ ಮತ್ತು ಅಖಿಲಭಾರತ ಕಾಂಗ್ರೆಸ್ಸು ಸಭೆಯವರು ಇದಕ್ಕೆ ಪ್ರಯತ್ನಪಟ್ಟ ಒಂದು ಮಾಸದಲ್ಲೇ ಸ್ವರಾಜ್ಯವು ಲಭಿಸುವುದೆಂದು ವಾಗ್ದಾನಮಾಡಿದರು. ಮಹಮ್ಮದಾಲಿಯವರು ಹೇಳುವಂತೆ ಹಿಂದೂ ಮಹಮ್ಮದೀಯರ ಐಕಮತ್ಯವೂ ಸಖ್ಯವೂ ದೃಢಪಟ್ಟು, ಕಾಂಗ್ರೆಸ್ ಭಕ್ತರುಗಳು ಆತ್ಮಾರ್ಪಣವನ್ನು ಮಾಡಲು ಸಂಸಿದ್ಧರಾದರೆ ಸ್ವರಾಜ್ಯವು ಕರಗತವಾಗುವುದೆನ್ನುವುದರಲ್ಲಿ ಸಂದೇಹವಿಲ್ಲವು. ಆದರೆ ಹಿಂದೂಗಳಲ್ಲೇ ಪರಸ್ಪರ ಊಚನೀಚಭಾವವೂ ತನ್ಮೂಲಕ ದ್ವೇಷಾಸೂಯೆಯೂ ರೂಢಮೂಲವಾಗಿದ್ದು ಅನರ್ಥ ಹೇತುವಾಗಿರುವಾಗ್ಗೆ, ಪರಧರ್ಮದವರಾದ ಹಿಂದೂ ಮಹಮ್ಮದೀಯರು ಪರಸ್ಪರ ವಿಶ್ವಾಸದಿಂದಿರುವುದು ಅಸಂಭವವೆಂಬುವದು ಅಲ್ಲಲ್ಲಿ ನಡಿಯುತ್ತಿರುವ ಹಿಂದೂ ಮಹಮ್ಮದೀಯರ ಕಲಹದಿಂದ ವ್ಯಕ್ತವಾಗುತ್ತದೆ. ಆದರೂ ಮೌಲಾನಾ ಮಹಮ್ಮದಾಲಿಯವರ ಅಭೀಷ್ಟವು ದೈವಾನುಗ್ರಹದಿಂದ ನೆರವೇರುವಂತಾಗಲೆಂದು ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರಾದ ದಿ॥ ಬ॥ ಮ॥ ಸಿ. ಶ್ರೀಕಂಠೇಶ್ವರ ಅಯ್ಯರ್‌ರವರ ಉದ್ಯೋಗದವಧಿಯು ಬರುವ ಮಾರ್ಚಿ ತಿಂಗಳ ಕಡೆಯವರಿಗೂ ಹೆಚ್ಚಿಸಲ್ಪಟ್ಟಿರುತ್ತದೆ.

ಅಪ್ರಾಪ್ತ ವಯಸ್ಕರು ಧೂಮಪಾನಮಾಡುವುದನ್ನು ನಿರೋಧಿಸುವ ವಿಧಿಯು ಈ ತಾ॥ 1 ರಿಂದ ಸಂಸ್ಥಾನದ ಎಲ್ಲ ಮ್ಯುನಿಸಿಪಾಲಿಟಿಗಳಲ್ಲೂ ಆಚರಣೆಗೆ ತರಲ್ಪಟ್ಟಿರುವುದಾಗಿ ಪ್ರಕಟವಾಗಿದೆ.

ಮೈಸೂರು ಡಿಸ್ಟ್ರಿಕ್ಟಿನ ಎಲ್ಲಾ ತಾ॥ ಅಮಲ್ದಾರರು ಮೊದಲ್ಗೊಂಡು ಗೆಜೆಟೆಡ್ ಆಫೀಸರುಗಳ ಭಾವಚಿತ್ರವು ಶ್ರೀಮನ್ ಮಹಾರಾಜರವರ ಅಪ್ಪಣೆಯಮೇರಿಗೆ ಕಳೆದ ಗುರುವಾರದ ದಿವಸ ಜಗನ್ಮೋಹನ ಪ್ರಾಸಾದದಲ್ಲಿ ತೆಗೆದುಕೊಳ್ಳಲ್ಪಟ್ಟಿತು.

ಬರುವ ಫೆಬ್ರವರಿ ತಾ॥ 15 ರಲ್ಲಿ ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರುಗಳನ್ನು ಆರಿಸಲು ಗೊತ್ತಾಗಿರುವುದರಿಂದ ಆ ದಿನ ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳಿಗೂ ವಿದ್ಯಾಶಾಲೆಗಳಿಗೂ ರಜವು ಕೊಡಲ್ಪಡುವುದು.

ರಾಜಧಾನಿಯಲ್ಲಿ ಕಳೆದ ತಾ॥ 4 ಮತ್ತು 5 ರಲ್ಲಿ ನಡೆದ ಸೆನೆಟು ಮೀಟಿಂಗಿನಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯು ತಪ್ಪಿಸಲ್ಪಟ್ಟು ಮೊದಲಿನ ಮೆಟ್ರಿಕ್ಯುಲೇಷನ್ ಪರೀಕ್ಷಾಕ್ರಮವು ಪುನರುದ್ಧರಿಸಲ್ಪಡುವಂತೆ ನಿರ್ಧರಿಸಲ್ಪಟ್ಟುದಾಗಿ ತಿಳಿಯುತ್ತೇವೆ.

ಯಡತೊರೆ ತಾ॥ ಪೋಲೀಸು ಜಮಾದಾರರಾಗಿದ್ದ ಮ॥ ಎಂ. ಗೋಪಾಲರಾಜಅರಸಿನವರು ರೈತರನ್ನು ಹಿಂಸಿಸಿ ಹಣವನ್ನು ತೆಗೆದುಕೊಂಡರೆಂಬ ಅಪರಾಧಕ್ಕೆ ಗುರಿಮಾಡಲ್ಪಟ್ಟಿದ್ದು ಹುಣಸೂರು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನ ವಿಚಾರಣೆಯಲ್ಲಿ ನಿರ್ದೋಷಿಗಳಾಗಿಮಾಡಲ್ಪಟ್ಟರೆಂದು ತಿಳುಹಲು ಸಂತೋಷವಾಗುತ್ತದೆ. ಇವರು ಕೆಲಸದಮೇಲೆ ತೆಗೆದುಕೊಳ್ಳಲ್ಪಟ್ಟು ಕಡೂರು ಡಿ॥ ಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಶ್ರೀಮನ್ ಮಹಾರಾಜರವರು ಪ್ರೈವೆಟ್ ಸೆಕ್ರೆಟರಿ ಮೊದಲಾಗಿ ಮಿತಪರಿವಾರದೊಡನೆ ಮಂಜ್ರಾಬಾದು ತಾ॥ ಶುಕ್ರವಾರಸಂತೆಗೆ ವಿಹಾರಾರ್ಥವಾಗಿ ಹೋಗಿದ್ದು ನೆನ್ನೆಯದಿನ ಹಿಂದಿರುಗಿ ಚಿತ್ತೈಸಿದರು. ಈ ಶುಕ್ರವಾರಸಂತೆಯ ಗುಡ್ಡಪ್ರದೇಶವು ಬಹಳ ಎತ್ತರವಾಗಿಯೂ ನೀಲಗಿರಿಯಲ್ಲಿರುವಂತೆ ಪರಿಲೀತಗಳಿಂದ ಕುದುರೆಸ್ವಾರಿಗೆ ಬಹಳ ಮನೋಹರವಾಗಿಯೂ ಮೃಗಯಾವಿಹಾರಕ್ಕೆ ಪ್ರಶಸ್ತವಾಗಿಯೂ ಇರುವುದಂತೆ.

ರಾಜಧಾನಿಯ ಮ॥ ಗಳಾದ ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಚಾಮುಂಡಿ ರೈಸ್‌ಮಿಲ್, ಜವಳಿ ವ್ಯಾಪಾರಿಗಳು ಆರ್. ನರಸಿಂಹಾಚಾರ್ ಅಂಡ್‌ಸನ್ಸ್, ವೀಣೆ ಮತ್ತು ದಂತ ಕೆಲಸಗಳನ್ನು ಮಾಡುವ ಅಹಮದ್‌ಅಲಿ ಅಂಡ್‌ಸನ್ಸ್ ಇವರುಗಳು ಸುಂದರವಾಗಿ ತಯಾರಿಸಿರುವ 1924 ನೆ ಇಸವಿಯ ಕ್ಯಾಲೆಂಡರ್‌ಗಳನ್ನೂ, ಬೆಂಗಳೂರು ಪ್ರೆಸ್ಸಿನವರೂ ಮೈಸೂರಿನ ಎಂ. ಎಚ್. ಎಸ್. ಅಂಡ್ ಸನ್ಸ್‌ರವರೂ ಪ್ರಕಟಿಸಿರುವ ಅಂದವಾದ ಪಾಕೆಟ್ ಕ್ಯಾಲೆಂಡರುಗಳನ್ನೂ ವಿಶ್ವಾಸಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಕಳೆದ ಗುರುವಾರ ರಾತ್ರಿ ಬೆಂಗಳೂರು ಮ್ಯುನಿಸಿಪಲ್ ಆಫೀಸಿನಲ್ಲಿ ಕಾವಲಿದ್ದ ಸಿದ್ದಪ್ಪ ಮತ್ತು ಸುಬ್ರಮಣ್ಯ ಇವರಿಬ್ಬರ ಕುತ್ತಿಗೆಗಳು ಕತ್ತರಿಸಲ್ಪಟ್ಟು ರಕ್ತದ ಗುಂಡಿಯಲ್ಲಿ ಬಿದ್ದಿದ್ದುವು, ಮತ್ತು ಭೂಮಿಯೊಳಗೆ ಹೂಳಲ್ಪಟ್ಟಿದ್ದ ಹಣದ ಪೆಟ್ಟಿಗೆಯು ಹೊಡೆದುಹಾಕಲ್ಪಟ್ಟು ಒಳಗಿದ್ದ 5,000 ರೂಪಾಯಿಯು ಅಪಹರಿಸಲ್ಪಟ್ಟಿದ್ದಿತು. ಬೆಳಕು ಹರಿಯುತ್ತಲೆ ಈ ವಿಚಾರವು ಪೋಲೀಸಿನವರಿಗೆ ತಿಳಿದುಬಂದು ಮ್ಯುನಿಸಿಪಲ್ ಪ್ರೆಸಿಡೆಂಟರು ಕಮೀಷನರು ಮೊದಲಾಗಿ ಅಧಿಕಾರಿಗಳ ಸಮಕ್ಷಮ ಶವಪರೀಕ್ಷೆಯನ್ನು ನಡಿಸಿ ಆ ಹಂತಕರನ್ನು ತಡಕಲ್ತೊಡಗಿರುವರು. ಡಿಸ್ಟ್ರಿಕ್ಟ್ ಡೆ॥ ಕಮಿಷನರಾಫೀಸು ಮುಖ್ಯವಾಗಿ ಪೋಲೀಸು ಸೂಪರಿಂಟೆಂಡೆಂಟರಾಫೀಸು ಸಮೀಪದಲ್ಲಿರುವ ಮ್ಯುನಿಸಿಪಲ್ ಆಫೀಸಿನಲ್ಲಿ ಇಂತಹ ಘೋರಕೃತ್ಯವು ನಡೆದಿರುವುದು ಆಶ್ಚರ್ಯವೇ ಸರಿ.

ರಾಜಧಾನಿಯಲ್ಲಿ ಮಕ್ಕಳ ಪ್ರದರ್ಶನವನ್ನು ಈ ಜನವರಿ ತಾ॥ 14 ರಿಂದ 18 ರವರೆಗೆ ನಡೆಯಿಸಲು ಲೋಕಹಿತೈಷಿ ಮ॥ ಎಚ್. ನಂಜುಂಡರಾಜ ಅರಸಿನವರ ಅಧ್ಯಕ್ಷತೆಯಿಂದಲೂ ಮ॥ ಎ. ಸಿ. ಲಿಂಗರಾಜ ಅರಸಿನವರ ಕಾರ್ಯದರ್ಶಿಕತ್ವದಿಂದಲೂ ಪ್ರಮುಖ ದೊಡ್ಡ ಮನುಷ್ಯರುಗಳ ಸಭಿಕತ್ವದಿಂದಲೂ ಕೂಡಿದ ಒಂದು ಸಂಘಸ್ಥಾಪಿತವಾಗಿರುತ್ತದೆ. ಮೊದಲನೆಯ ದಿನ ಮಧ್ಯಾಹ್ನ ಆರಂಭೋತ್ಸವವಾದ ಮೇಲೆ ಡಾ॥ ಕಾರ್ಪಲೇ ಮತ್ತಿಬ್ಬರ ಉಪನ್ಯಾಸ, ಎರಡನೆಯ ದಿನ ಸ್ಕೌಟರುಗಳ ಡ್ರಿಲ್, ವಾದ್ಯ, ಶಿಶುಪೋಷಣೆಯ ಮೇಲೆ ಡಾ॥ ಬಿ. ನಂಜಪ್ಪನವರ ಉಪನ್ಯಾಸ, 3 ನೆಯ ದಿನ ಬಾಣಂತಿಯರ ಮತ್ತು ಎಳೆಮಕ್ಕಳ ಪೋಷಣೆಯಮೇಲೆ ದೀಪಪ್ರದರ್ಶನದೊಡನೆ ಡಾ॥ ಮಥುರಾಬಾಯಿ ಉಟಗಾಂವಕರರವರ ಉಪನ್ಯಾಸ, 4 ನೆಯ ದಿನ ಡಾ॥ ಶ್ರೀನಿವಾಸಾಚಾರ್ಯರ ಉಪನ್ಯಾಸ, 5 ನೆಯ ದಿನ ಶಿಶುಪ್ರದರ್ಶನ ಮತ್ತು ಬಹುಮಾನ ವಿನಿಯೋಗ, ದೀಪಪ್ರದರ್ಶನದೊಡನೆ ಮಕ್ಕಳ ಕ್ಷೇಮ ಮತ್ತು ಆರೋಗ್ಯವಿಚಾರವಾಗಿ ಡಾ॥ ಮ್ಯಾಕ್ಕರನಾಸ್‌ರವರ ಉಪನ್ಯಾಸ ಈ ಪ್ರಕಾರವಾಗಿ ನಡಿಸಲ್ಪಡುವುವಲ್ಲದೆ, ಈ ಮಧ್ಯೆ ಆಯಾ ಮೊಹಲ್ಲಾಗಳಲ್ಲೂ ಮಕ್ಕಳ ಪೋಷಣೆಯ ವಿಷಯವಾಗಿ ಉಪನ್ಯಾಸಗಳು ಕೊಡಲ್ಪಡಲೇರ್ಪಾಟಾಗಿದೆ. ಈ ಕಾರ ನಿರ್ವಾಹಕ್ಕೆ 800 ರೂ. ವರೆಗೂ ವೆಚ್ಚವಾಗಬೇಕಾಗಿರುವುದರಿಂದ ಮಕ್ಕಳ ಪೋಷಣಾಕಾಂಕ್ಷಿಗಳಾದವರೆಲ್ಲರೂ ಅವರವರ ಶಕ್ತ್ಯನುಸಾರ ದ್ರವ್ಯಸಹಾಯ ಮಾಡಬೇಕಾಗಿ ಸೆಕ್ರೆಟರಿಯವರು ಕೋರಿರುತ್ತಾರೆ. ಈ ಪ್ರದರ್ಶನಕ್ಕೆ 1 ರಿಂದ 3 ತಿಂಗಳವರೆಗಿನ, 3 ರಿಂದ 6 ತಿಂಗಳವರೆಗಿನ, 6 ರಿಂದ 1 ವರ್ಷದವರೆಗಿನ, 1 ವರ್ಷದಿಂದ 3 ವರ್ಷಗಳವರೆಗಿನ ವಯಸ್ಸಿನ ಮಕ್ಕಳು ಬರಮಾಡಲ್ಪಟ್ಟು ಅವುಗಳಲ್ಲಿ ಆರೋಗದೃಢಕಾಯವಾಗಿರುವ ಮಕ್ಕಳಿಗೆ ಪ್ರತಿಯೊಂದು ತರಗತಿಯಲ್ಲೂ 8, 6 ಮತ್ತು 4 ರೂ. ಪ್ರಕಾರ 3 ಬಹುಮಾನಗಳು ಕೊಡಲ್ಪಡುವುವು. ಪ್ರದರ್ಶನಕ್ಕೆ ಮಕ್ಕಳನ್ನು ಕಳುಹಿಸಲಿಷ್ಟವುಳ್ಳವರು ಜನವರಿ ತಾ॥ 17 ರೊಳಗೆ ಹೆಲ್ತ್ ಆಫೀಸರಿಗೆ ತಿಳಿಸಿ ರಿಜಿಸ್ಟರ್ ಮಾಡಿಸಬೇಕು.

ಶಿವನಸಮುದ್ರದಲ್ಲಿರುವ ವಿದ್ಯುಚ್ಛಕ್ತಿ ಕಾರ್ಯಾಲಯದ ಆಡಳಿತದಲ್ಲಿ 97600 ರೂಪಾಯಿಗಳು ದುರುಪಯೋಗವಾಗಿದ್ದುದು ಸರ್ಕಾರದವರ ತಿಳಿವಿಕೆಗೆ ಬಂದು ಅದರ ವಿಚಾರಣೆಗಾಗಿ ರೆವಿನ್ಯೂ ಕಮಿಷನರು, ಫೈನಾನ್ಶಿಯಲ್ ಸೆಕ್ರೆಟರಿ ಮತ್ತು ಚೀಫ್‌ಇಂಜನಿಯರ್ ಇವರುಗಳಿಂದ ಕೂಡಿದ ಒಂದು ಕಮಿಟಿಯೇರ್ಪಡಿಸಲ್ಪಟ್ಟಿದ್ದಿತು. ಈ ಕಮಿಟಿಯವರು ಎಲ್ಲ ವಿದ್ಯಮಾನಗಳನ್ನೂ ಲೆಖ್ಖಪತ್ರವನ್ನೂ ಸಾದ್ಯಂತವಾಗಿ ವಿಮರ್ಶಿಸಿ ಮತ್ತು ತಪ್ಪಾಪಾದಿಸಲ್ಪಟ್ಟಿರುವವರ ಹೇಳಿಕೆಯನ್ನು ಕೇಳಿ ತಮ್ಮ ಅಭಿಪ್ರಾಯವನ್ನು ತಿಳಿಸಿದುದರಮೇಲೆ, ಮ॥ ಎಸ್. ಡಿ. ಶೇಷಾದ್ರಿಅಯ್ಯಂಗಾರರು, ಓವರ್ಸಿಯರ್ ರಾಮಕೃಷ್ಣಯ್ಯಂಗಾರ್ ಮತ್ತು ಕಂಟ್ರಾಕ್ಟರ್ ಮುನ್ಷಿ ಅಲ್ಲಾವುದೀನ್ ಈ ಮೂವರರ ಮೇಲೆ ಗೌರ್ನಮೆಂಟ್ ಅಡ್ವೋಕೇಟರು ಕೂಡಲೇ ಕ್ರಿಮಿನಲ್ ವಿವಾದವನ್ನು ನಡಿಸಬೇಕಾಗಿಯೂ, ಕ್ರಿಮಿನಲ್ ವಿವಾದದ ಫಲಿತಾಂಶವು ಗೊತ್ತಾಗುವವರೆಗೂ ಶೇಷಾದ್ರ್ಯಯ್ಯಂಗಾರರೂ, ಓವರ್ಸಿಯರ್ ರಾಮಕೃಷ್ಣಯ್ಯಂಗಾರರೂ ಸಸ್ಪೆಂಡ್ ಮಾಡಲ್ಪಟ್ಟಿರುವುದಾಗಿಯೂ, ಮ॥ ಶೇಷಾದ್ರ್ಯಯ್ಯಂಗಾರರಿಂದ 30000 ರೂ. ಗಳನ್ನೂ 5 ವರ್ಷಗಳಲ್ಲಿ ಬರಮಾಡಿಕೊಳ್ಳಲು ಎಲೆಕ್ಟ್ರಿಕಲ್ ಚೀಫ್ ಇಂಜನಿಯರು ತಕ್ಕ ಪ್ರಯತ್ನ ನಡಿಸಿ ಅದರ ಫಲಿತಾಂಶವನ್ನು ಈ ಜನವರಿ ತಿಂಗಳೊಳಗಾಗಿ ಸರ್ಕಾರಕ್ಕೆ ತಿಳಿಸಬೇಕಾಗಿಯೂ, ಮ॥ ಶೇಷಾದ್ರಿಅಯ್ಯಂಗಾರರ ಅಸಿಸ್ಟೆಂಟರಾಗಿದ್ದ ಮ॥ ಕಾರಿಯಪ್ಪನವರ ಸಂಬಳವು ಅವರ ಅಜಾಗರೂಕತೆಗಾಗಿ 1923 ನೇ ಜುಲೈ ತಾ॥ 24 ರಿಂದ 750-50-1000 ಸಂಬಳದಿಂದ 400-50-750ಕ್ಕೆ ಇಳಿಸಲ್ಪಟ್ಟಿರುವುದಾಗಿಯೂ 15000 ರೂ. ಗಳನ್ನು ವರ್ಷ ಒಂದಕ್ಕೆ 3000 ರೂ. ನಂತೆ ಅವರ ಸಂಬಳದಿಂದ ಬರಮಾಡಿಕೊಳ್ಳಲ್ಪಡುವುದಾಗಿಯೂ ಸರ್ಕಾರದ ಅಪ್ಪಣೆಯಾಗಿದೆ. ಈ ರೀತಿಯಾದ ದುರ್ವಿನಿಯೋಗವು ಎಷ್ಟೋ ಶಾಖೆಗಳಲ್ಲಿ ಬಹುಕಾಲದಿಂದಲೂ ನಡಿಯುತ್ತಿದ್ದರೂ ಸರ್ಕಾರದ ಗಮನಕ್ಕೆ ಬಂದು ತಕ್ಕ ಪ್ರತಿಕ್ರಿಯೆಮಾಡಲ್ಪಡದಿದ್ದುದರಮೇಲೆ ನಿರ್ಭೀತಿಯಿಂದ ಸರ್ವಸಾಮಾನ್ಯವಾಗಿ ನಡಿಯಲವಕಾಶವಾಗಿದ್ದಿತು. ಆದರೆ ಈ ವೇಳೆ ಸರ್ಕಾರದವರು ಬೆರಳಿನಸಂದಿನಲ್ಲಿ ಬಿಡದೆ ತಕ್ಕ ವಿಚಾರಣೆಯಿಂದ ಕಠಿಣತರವಾದ ಶಿಕ್ಷೆಯನ್ನು ವಿಧಿಸಿ ಇತರ ದಸ್ತುಗಾರರಿಗೆ ಮರೆಯಬಾರದಂತಹ ಬೆಚ್ಚರಿಕೆಯನ್ನುಂಟುಮಾಡಿರುವುದು ಪ್ರಶಂಸನೀಯವಾಗಿದೆ. ರಾಜಧಾನಿಯ ಮ್ಯುನಿಸಿಪಲ್ ಆಫೀಸಿನಲ್ಲಿ ಹಣ ದುರುಪಯೋಗವಾಗಿರುವ ವಿಚಾರವು ಮಾತ್ರ ಕೌನ್ಸಿಲರುಗಳ ಗೋಚರಕ್ಕೂ ಸಹ ಬಾರದಿರುವುದು ವಿಚಿತ್ರವಾಗಿದೆ.

ಕಾಕಿನಾಡದಲ್ಲಿ ಜರುಗಿದ ರಾಷ್ಟ್ರೀಯ ಮಹಾಸಭಾಧ್ಯಕ್ಷತೆಯನ್ನು ವಹಿಸಿದ್ದ ಮೌಲಾನಾ ಮಹಮ್ಮದಾಲಿಯವರು ಮಾಡಿದ ಅತ್ಯಂತ ದೀರ್ಘ ಭಾಷಣದ ಮುಖ್ಯಾಂಶವು.

(ಕ॥ ವೈಭವದಿಂದ.)

ಪ್ರಸ್ತಾವನೆ.

ನಾನು ರಾಷ್ಟ್ರೀಯ ಮಹಾಸಭೆಗೆ ಬರತಕ್ಕ ಬಹಳ ಸ್ವಲ್ಪ ದಿನಗಳಾದವು. ಬೈತುಲ ಜೇಲದೊಳಗಿನ ನಾಲ್ಕುವರ್ಷದ ಕಾರಾಗೃಹವಾಸವು ಮುಗಿದಮೇಲೆ ಅಮೃತಸರ ಮಹಾಸಭೆಗೆ ಬಂದದ್ದೇ ಮೊದಲನೆಯದು. ನಾಗಪುರ ಮಹಾಸಭೆಯು ಎರಡನೆಯದು. ಅಮೇಲೆ ಇದೇ ಮೂರನೆಯದು. ಆದರೆ ನನಗಿಂತ ಮುಂಚೆ ಈ ಮಹಾಸಭೆಯ ಅಧ್ಯಕ್ಷರಾಗಿದ್ದವರು ಅದರ ಸೇವೆಯಲ್ಲಿ ಅಸಂಖ್ಯವರ್ಷಗಳನ್ನು ಕಳೆದಿದ್ದಾರೆ. ಅಂಥವರ ಮುಂದೆ ನಾನು ಚಿಕ್ಕ ಬಾಲಕನಂತೆ ಇರುತ್ತೇನೆ. ಹೀಗಿದ್ದರೂ ನೀವು ನನಗೆ ಈ ಬಹುಮಾನವನ್ನು ಕೊಟ್ಟದ್ದಕ್ಕಾಗಿ ನಾನು ನಿಮ್ಮ ಉಪಕಾರವನ್ನು ಮನಃಪೂರ್ವಕವಾಗಿ ಸ್ಮರಿಸುತ್ತೇನೆ. ಮಹಾಸಭೆಯ ಛತ್ರದಲ್ಲಿ ಶ್ರೇಷ್ಠರಾಗಿದ್ದಂಥ ಒಬ್ಬ ಮಹಾಪುರುಷರ ಕೂಡ ನನ್ನ ಸಂಬಂಧವು ಬಂದಿರುವುದೇ ಈ ಬಹುಮಾನದ ಮೂಲಕಾರಣವೆಂದು ನಾನು ತಿಳಿಯುತ್ತೇನೆ. ಆದರೆ ಆ ಮಹಾಪುರುಷರು ಈಗ ನಿಮಗೆ ಈ ಮಂಟಪದಲ್ಲಿ ಕಾಣುವಂತಿಲ್ಲ! ಅವರು ಅಮೃತಸರ ಮಹಾಸಭೆಯಲ್ಲಿಯೂ ನಾಗಪುರ ಮಹಾಸಭೆಯಲ್ಲಿಯೂ ಇದ್ದರು. ಆದರೆ ಆಗಿನಕಿಂತ ಈಗ ನಮಗೆ ನಮ್ಮ ಮುಂದಾಳುಗಳಾದ ಮಹಾತ್ಮಗಾಂಧಿಯವರ ಅವಶ್ಯಕತೆಯು ಬಹಳವಿರುತ್ತದೆ. ಮತ್ತು ಆ ಶ್ರೇಷ್ಠ ಪುರುಷರ ನಮ್ರಸೇವಕನಾದ ನನ್ನಿಂದ ಈ ಸಭೆಯ ಕಾರ್ಯವು ನೆರವೇರಬೇಕೆಂದು ಈಶಸಂಕಲ್ಪವಿದ್ದಂತೆ ತೋರುತ್ತದೆ. ಮಹಾತ್ಮರು ಜೀವದಿಂದ ಇರುವಂತೆ ಅವರ ಶಕ್ತಿಯಾದರೂ ಜಾಗೃತವಾಗಿಯೇ ಇರುತ್ತದೆ. ಅವರ ಶುಭಾಶೀರ್ವಾದದಿಂದಲೇ ನಾವೆಲ್ಲರೂ ಈ ಮಹಾಕಾರ್ಯವನ್ನು ನೆರವೇರಿಸುವ. ಮಿತ್ರರೇ, ಅಮೃತಸರ, ಕಲಕತ್ತಾ, ನಾಗಪುರ ಮತ್ತು ಅಹಮ್ಮದಾಬಾದ ಮುಂತಾದ ಮಹಾಸಭೆಗಳಲ್ಲಿ ನಮಗೆ ಮಾರ್ಗವನ್ನು ತೋರಿಸಿದಂಥ ಮಹಾತ್ಮರೊಬ್ಬರೇ ನಮ್ಮ ಮಾರ್ಗದರ್ಶಿಗಳಾಗಲಿಕ್ಕೆ ಯೋಗ್ಯರಿರುವರು. ಆದರೆ ಅವರು ಈಗ ಶತ್ರುವಿನ ಸೆರೆಮನೆಯಲ್ಲಿ ಸಿಕ್ಕಿದ್ದಾರೆ. ಬರಿದಾದ ಅವರ ಜಾಗವನ್ನು ತುಂಬಿಸುವುದು ಮತ್ತಾರಿಗೂ ಶಕ್ಯವಿಲ್ಲ. ಇನ್ನು ನನ್ನ ವಿಷಯಕ್ಕೆ ಕೇಳಿದರೆ, ನಾನು ನಿಮ್ಮೆಲ್ಲರಂತೆ ಒಬ್ಬ ಸೈನಿಕನಾಗಿದ್ದೇನೆ. ಮತ್ತು ನಿಮ್ಮೆಲ್ಲರ ಸಹಕಾರಿತೆಯಿಂದಲೇ ಈ ಮಹಾಸಭೆಯ ಕಾರ್ಯವು ಜರುಗಬೇಕಾಗಿದೆ. ನಾನು ಚಿಕ್ಕಂದಿನಿಂದ ಕಲಹಪ್ರಿಯನು. ಆದರೆ ತಾವೆಲ್ಲರೂ ನನ್ನನ್ನು ಈ ಮಹಾಸಭೆಯ ಅಧ್ಯಕ್ಷನನ್ನಾಗಿ ಆರಿಸಿ ಕಲಹಕ್ಕಿಂತಲೂ ಶ್ರೇಷ್ಠತರವಾದ ಶಾಂತತೆಯನ್ನು ಕುರಿತು ಪ್ರಸ್ತಾಪಿಸುವ ಜವಾಬದಾರಿಯನ್ನು ನನ್ನಮೇಲೆ ಹೊರಿಸಿದಿರಿ. ಈ ನಿಮ್ಮ ಆಜ್ಞೆಯನ್ನು ನಾನು ಶಿರಸಾವಹಿಸುತ್ತೇನೆ, ಮತ್ತು ನನ್ನ ಕೈಲಾದಮಟ್ಟಿಗೆ ನನ್ನ ಕರ್ತವ್ಯವನ್ನು ಮಾಡಲಿಕ್ಕೆ ಎಣಿಸುತ್ತೇನೆ. ಆದಾಗ್ಯೂ ನಮ್ಮ ಮುಂದಿನ ಮಹಾಕಾರ್ಯವನ್ನು ನಿಮ್ಮೆಲ್ಲರ ಸುವಿಚಾರದಿಂದಲೇ ಮಾಡಬೇಕಾಗಿರುತ್ತದೆಂಬದನ್ನು ಮರೆಯಬೇಡಿರಿ. ಹೆಚ್ಚು ವೇಳೆಯನ್ನು ಕಳೆಯದೆ ವಿಚಾರಪೂರ್ವಕವಾಗಿ ನಮ್ಮ ಮುಂದಿನ ಕಾರ್ಯವನ್ನು ನಿರ್ಣಯಿಸಬೇಕಾಗಿದೆ. ಮಹಾತ್ಮಗಾಂಧಿಯವರಂತೆ ನಿಮ್ಮೆಲ್ಲರ ಮೇಲೆ ವರ್ಚಸ್ಸನ್ನು ಕೂಡ್ರಿಸುವ ಪಾತ್ರತೆಯು ನನ್ನಲ್ಲಿ ಇಲ್ಲ. ಅದ್ದರಿಂದ ನೀವು ನಿಮ್ಮ ವಿಚಾರಗಳನ್ನು ನಿಷ್ಪಕ್ಷಪಾತದಿಂದ ಮೈಮೇಲಿನ ಜವಾಬ್ದಾರಿಯನ್ನು ತಿಳಿದು ಮಾಡಿದರೆಂದು ನನ್ನ ವಿನಂತಿಯಿದೆ. ಮಹಾಸಭೆಯೆಂದರೆ—ಅದೇನು ತಮಾಷೆಯಲ್ಲ. ನಾವು ಇಲ್ಲಿಯವರೆಗೆ ಸುಮ್ಮಸುಮ್ಮನೆ ಬಂದಿಲ್ಲ. ನಮ್ಮನಮ್ಮ ವಿಚಾರಗಳ ವಿಮರ್ಶೆಮಾಡಿ ಕಲ್ಯಾಣಮಾಡುವಂಥ ಯೋಗ್ಯವಾದ ದಾರಿಯನ್ನು ತೋರಿಸುವದೇ ಈ ಸಭೆಯ ಮುಖ್ಯ ಉದ್ದೇಶವಾಗಿರುತ್ತದೆ. ನೀವು ಈ ಸಭೆಯಲ್ಲಿ ಅಸಂಖ್ಯ ಠರಾವುಗಳನ್ನು ತಂದು ನಿಮ್ಮ ಎಲ್ಲ ತರದ ಹಕ್ಕುಗಳನ್ನು ಉಪಯೋಗಿಸಬಲ್ಲಿರಿ. ಆದಾಗ್ಯೂ ಆತ್ಮಸಂಯಮನ ಮತ್ತು ಸುವ್ಯವಸ್ಥೆಗಳ ಹೊರತಾಗಿ ನಮ್ಮ ಕಾರ್ಯವು ಸರಿಯಾಗಿ ಜರುಗಲಾರದು. ಸದ್ಯಕ್ಕೆ ನಾವು ಅಹಿಂಸಾವ್ರತವನ್ನು ಸ್ವೀಕರಿಸಿದ್ದೇವೆ. ಅದ್ದರಿಂದ ನಾವು ಇನ್ನೊಬ್ಬರ ಮನಸ್ಸನ್ನು ಸಹ ನೋಯಿಸುವುದು ಸರಿಯಲ್ಲ. ತತ್ವದ ಬಗ್ಗೆಯಷ್ಟೇ ವಾದವಲ್ಲದೆ ಆ ವಾದದಲ್ಲಿ ವ್ಯಕ್ತಿಸಂಬಂಧವು ಬರಕೂಡದು. ಹೀಗಿದ್ದರೂ ನಮಗೆ ಶಾಂತತೆಯ ಅವಶ್ಯಕತೆಯು ಬಹಳವಿರುತ್ತದೆ. ಮಹಾತ್ಮಾ ಗಾಂಧಿಯವರು ಧಾರ್ಮಿಕ ಮತ್ತು ರಾಜಕೀಯವಿಚಾರಗಳನ್ನು ಒಟ್ಟುಗೂಡಿಸಿದರು. ಧರ್ಮದ ಲವಲೇಶವು ಕೂಡ ಇಲ್ಲದಂಥ ರಾಜಕಾರ್ಯವು ವ್ಯರ್ಥವೇ ಸರಿ. ಈ ಸಭೆಯಲ್ಲಿ ನಾವು ಯಾವುದಾದರೊಂದು ಪಕ್ಷದ ಜಯಕ್ಕಾಗಿ ಹವಣಿಸುವುದು ಉಚಿತವಲ್ಲ. ರಾಷ್ಟ್ರದೊಳಗಿನ ಅನ್ಯಾಯಗಳನ್ನು ದೂರಮಾಡಿ ಸ್ವತಂತ್ರರಾಗುವುದೇ ನಮ್ಮ ಮುಖ್ಯಧ್ಯೇಯವಾಗಿರಲಿಕ್ಕೆ ಬೇಕು. ನನ್ನ ಭಾಷಣಕ್ಕೆ ಇಷ್ಟು ಪ್ರಸ್ತಾವನೆಯು ಸಾಕು.

ಮುಸಲ್ಮಾನರ ಪೂರ್ವೇತಿಹಾಸ

ಹಿಂದು ಮುಸಲ್ಮಾನರ ಒಕ್ಕಟ್ಟು ನಮ್ಮ ಮುಂದಿನ ಮಹತ್ವದ ಪ್ರಶ್ನಗಳಲ್ಲಿ ಒಂದಾಗಿದೆ. ಸನ್ ೧೮೮೫ ರಲ್ಲಿ ಮಹಾಸಭೆಯು ಸ್ಥಾಪನೆಯಾಯಿತಷ್ಟೆ. ಆಗ ಆ ಸಭೆಗೆ ಹಿಂದುಸ್ಥಾನದ ಮುಸಲ್ಮಾನರು ಕೂಡಲಿಲ್ಲ. ಯಾಕಂದರೆ ಈ ಚಳವಳಿಗೆ ಅವಶ್ಯವಿದ್ದ ಪಾಶ್ಚಿಮಾತ್ಯ ಶಿಕ್ಷಣವು ಅವರಿಗೆ ಸಿಕ್ಕಿದ್ದಿಲ್ಲ. ಮೇಲಾಗಿ ಅವರ ಮನಸ್ಥಿತಿಯಾದರೂ ಇಂಥ ಚಳವಳಿಗೆ ಅನುಕೂಲವಾಗಿ ಇದ್ದಿಲ್ಲ. ಕೈಯೊಳಗಿನ ರಾಜ್ಯವು ಕಳೆದುಹೋಗಿತ್ತು. ಅದ್ದರಿಂದ ಅದನ್ನು ಕಸಿದುಕೊಂಡದ್ದಂಥ ಪರಕೀಯರ ಶಿಕ್ಷಣವನ್ನು ಅವರು ದ್ವೇಷಿಸುತ್ತಿದ್ದರು. ಪ್ಲಾಸಿ ಕಾಳಗದಿಂದ ಬಂಡಾಯದವರೆಗೆ ೧೦೦ ವರ್ಷಗಳಲ್ಲಿ ಹಿಂದುಸ್ಥಾನದ ರಾಜ್ಯವು ಇಂಗ್ರಜರ ಕೈವಶವಾಯಿತು. ಹೀಗಿದ್ದರೂ ಇಂಗ್ರಜರು ತಮಗಿಂತ ಯಾವ ರೀತಿಯಿಂದಲೂ ಶ್ರೇಷ್ಠರಿರುವದಿಲ್ಲವೆಂದು ಇಲ್ಲಿಯ ಮುಸಲ್ಮಾನರು ತಿಳಿಯುತ್ತಿದ್ದರು. ಮತ್ತು ಇದೇ ದ್ವೇಷಭಾವದ ಸ್ಫೋಟವು ೧೮೫೭ರ ಬಂಡಾಯದಲ್ಲಿ ಆಯಿತು. ಈ ಮೇರೆಗೆ ಅವರು ಪಾಶ್ಚಿಮಾತ್ಯ ಶಿಕ್ಷಣದ ವಿರುದ್ಧವಿದ್ದುದರಿಂದ ಮಹಾಸಭೆಯ ಕಾರ್ಯದಲ್ಲಿ ನೆರವಾಗುವದು ಅವರಿಗೆ ಅಶಕ್ಯವಾಯಿತು. ಇದೇ ಕಾಲಕ್ಕೆ ಸುಶಿಕ್ಷಿತ ಮುಸಲ್ಮಾನನು ತನ್ನ ಜಾತಿ ಬಾಂಧವರಿಗೆ ಮಹಾಸಭೆಗೆ ಸಹಾಯಮಾಡಬೇಡಿರೆಂದು ಹೇಳತೊಡಗಿದನು. ಆತನ ಹೆಸರು ಸಯ್ಯದ ಅಹಮ್ಮದಖಾನ. ಆತನ ಭಾಷಣಗಳು ಆಕ್ಷೇಪಾರ್ಹವಿದ್ದಂತೆ ವಿಚಾರಾರ್ಹವಾಗಿಯೂ ಇದ್ದವೆಂದು ನನಗೆ ತೋರುತ್ತದೆ. ಸಯ್ಯದ ಅಹಮ್ಮದನು ಹಿಂದುಗಳನ್ನು ಎಂದೂ ದ್ವೇಷಿಸುತ್ತಿದ್ದಿಲ್ಲ. ಆದರೆ ಅವನು ತನ್ನ ಜಾತಿಯು ಸುಧಾರಿಸಬೇಕೆಂದು ಬಹಳ ಇಚ್ಛಿಸುತ್ತಿದ್ದನು. ಆಗಿನಕಾಲದ ಮುಸಲ್ಮಾನರಿಗೆ ಸರಕಾರವನ್ನು ದ್ವೇಷಿಸುವದನ್ನು ಬಿಟ್ಟು ಇನ್ನಾವ ರೀತಿಯಿಂದಲೂ ಚಳವಳಿಯನ್ನು ಮಾಡುವದು ಶಕ್ಯವಿದ್ದಿಲ್ಲ. ಮೇಲಾಗಿ ಅವರಿಗೆ ತಮ್ಮ ಸಮಾಜದ ಸುಧಾರಣೆಗಾಗಿ ತಮ್ಮ ಸ್ವಂತ ಮಾರ್ಗದಿಂದಲೇ ಸುಶಿಕ್ಷಿತರಾಗುವುದು ಅವಶ್ಯವಾಗಿತ್ತು. ಅದ್ದರಿಂದ ಇದೆಲ್ಲವನ್ನು ಬಿಟ್ಟು ಮುಸಲ್ಮಾನರು ಮಹಾಸಭೆಯ ರಾಜಕೀಯ ಚಳವಳಿಯಲ್ಲಿ ತೊಡಗುವದು ಸರಿಯಲ್ಲವೆಂದು ಆತನಿಗೆ ಅನಿಸಿತ್ತು. ಮತ್ತು ಆಗಿನಂಥ ಕಾಲದಲ್ಲಿ ಅವನು ಮಾಡಿದ್ದೇ ಯೋಗ್ಯವೆಂದು ನನಗಾದರೂ ಅನಿಸುತ್ತದೆ. ಆದರೆ ಸಯ್ಯದ ಅಹಮ್ಮದಖಾನನ ವರ್ಚಸ್ಸವು ಮುಸಲ್ಮಾನ ಸಮಾಜದ ಮೇಲೆ ಬಿದ್ದಿಲ್ಲ. ಅವನು ಸುಶಿಕ್ಷಿತನೂ ಸ್ವತಂತ್ರವಿಚಾರಪರನೂ ಆಗಿದ್ದನು. ಧಾರ್ಮಿಕ ವಿಷಯದಲ್ಲಿಯ ಅವನ ವಿಚಾರಗಳು ಅಂಧಶ್ರದ್ಧೆಯ ಜಾತಿಬಾಂಧವರಿಗೆ ಸೇರಿಬರುತ್ತಿದ್ದಿಲ್ಲ. ಅದ್ದರಿಂದ ಅವರು ಅವನಿಗೆ ತಕ್ಕ ಸನ್ಮಾನವನ್ನು ಕೊಡುತ್ತಿದ್ದಿಲ್ಲ. ಆದಾಗ್ಯೂ ಅವರು ಅವನ ಉಪದೇಶದಂತೆ ಮಹಾಸಭೆಗೆ ಕೂಡಲಿಲ್ಲ. ಈ ಮೇರೆಗೆ ಮಹಾಸಭೆಯ ಮೊದಲಿನ 20 ವರ್ಷಗಳವರೆಗೆ ಮುಸಲ್ಮಾನರು ಯಾವ ಭಾಗವನ್ನೂ ತಕ್ಕೊಳ್ಳಲಿಲ್ಲ. ಇತ್ತ ಸಯ್ಯದ ಅಹಮ್ಮದಖಾನನು ತನ್ನದೊಂದು ಸ್ವತಂತ್ರ ವಿದ್ಯಾಲಯವನ್ನು ಅಲಿಗಡದಲ್ಲಿ ಸ್ಥಾಪಿಸಿ ತನ್ನ ಸಮಾಜದಲ್ಲಿ ಶಿಕ್ಷಣದ ಪ್ರಸಾರವನ್ನು ಮಾಡ ಹತ್ತಿದನು. ಇದೂ ಕೂಡ ಸರಕಾರಕ್ಕೆ ಸೇರದಂತಾಯಿತು. ಅವರು ಅವನನ್ನು ಪ್ರಸಿದ್ಧ ಬಂಡುಗಾರ (arch-rebel) ನೆಂದು ಕರೆದರು. ಆದರೂ ಇದೇ ಪುರುಷನ ಅಪೂರ್ವಪ್ರಯತ್ನದಿಂದ ಅವನ ಸಹೋದ್ಯೋಗಿಗಳು ಸನ್ 1906ರಲ್ಲಿ ಮುಸ್ಲೀಮಲೀಗವನ್ನು ಸ್ಥಾಪಿಸಿದರು.

ಅವರ ಸದ್ಯಃಸ್ಥಿತಿ.

ಅಂದಿನಿಂದ ಹಿಂದುಸ್ಥಾನದಲ್ಲಿಯ ಮುಸಲ್ಮಾನರಿಗೆ ಹೊಸಯುಗದ ಆರಂಭವಾಯಿತು. ಸುಶಿಕ್ಷಿತರಾದ ಹಿಂದುಗಳು ಏನಾದರೂ ಆಮಿಷವನ್ನು ತೋರಿಸದೆ ಸುಮ್ಮನೆ ಕೂಡ್ರುವಂತೆ ಇದ್ದಿಲ್ಲ. ಅದ್ದರಿಂದ ಮಾರ್ಲೇ-ಮಿಂಟೊ ಸುಧಾರಣೆಯ ವಿಚಾರವು ಪ್ರಾರಂಭವಾಯಿತು. ಈ ಸಮಯಕ್ಕೆ ಮುಸಲ್ಮಾನ ಪ್ರತಿನಿಧಿಗಳು ಆಗಿನ ವೈಸರಾಯರಾದ ಲಾರ್ಡ್ ಮಿಂಟೊ ಇವರಿಗೆ ಭೇಟಿಯಾಗಿ ತಮ್ಮ ಬೇಡಿಕೆಗಳನ್ನು ಅರಿಕೆಮಾಡಿಕೊಂಡರು. ಆಗ ಅವರ ಜಾತಿಬಾಂಧವರಿಗೂ ಕೌನ್ಸಿಲ್ಲಿನಲ್ಲಿ ಕೆಲವು ಜಾಗಗಳು ಸಿಕ್ಕಿದವು ಮತ್ತು ಇದರಿಂದ ಹಿಂದು ಮುಸಲ್ಮಾನರಲ್ಲಿ ವಿಶೇಷ ಸ್ನೇಹಭಾವವು ಉಳಿಯದಂತಾಯಿತು. ಆದಾಗ್ಯೂ ಅವರ ನಡುವಿನ ಭವಿಷತ್ಕಾಲದ ಐಕ್ಯಕ್ಕೆ ಇದರಿಂದ ಕೆಲಮಟ್ಟಿಗೆ ಸಹಾಯವೇ ಆಯಿತು. ಹಿಂದುಗಳಿಗೆ ಇಂತಿಷ್ಟು ಸ್ಥಳಗಳು ಮತ್ತು ಮುಸಲ್ಮಾನರಿಗೆ ಇಂತಿಷ್ಟು ಸ್ಥಳಗಳೆಂದು ಹಾಕಿಕೊಟ್ಟದ್ದರಿಂದ ಚುನಾವಣೆಯ ಕಾಲಕ್ಕೆ ಈ ಎರಡು ಜಾತಿಗಳ ಉಮೇದವಾರರು ತಮ್ಮತಮ್ಮೊಳಗೆ ಯಾವ ರೀತಿಯಿಂದಲೂ ಜಗಳಾಡದೆ ಪ್ರತಿಯೊಬ್ಬನು ತನ್ನ ಜಾತಿಯ ಕಲ್ಯಾಣವನ್ನು ಮಾಡಹತ್ತಿದನು. ಮುಸಲ್ಮಾನ ಜಾತಿಯ ಪ್ರತಿನಿಧಿತ್ವದ ವಾದದಲ್ಲಿ ನಾನೂ ಒಬ್ಬ ಪಾಲುಗಾರನಿದ್ದೆನು. ಆದರೆ ಅವರಿಗೆ ಸಾಕಷ್ಟು ಜಾಗಗಳು ಸಿಕ್ಕದ್ದರಿಂದ

ನಾನು ಒಂದು ವೃತ್ತಪತ್ರವನ್ನು ಹೊರಡಿಸಿ ನನ್ನ ಬಾಂಧವರಿಗೆ ಹಿಂದುಸ್ಥಾನದ ಹಿತಕ್ಕಾಗಿಯೇ ಕೆಲಸ ಮಾಡಿರೆಂದು ಹೇಳತೊಡಗಿದೆನು. ಅತಿ ವಿಸ್ತಾರವಾಗಿದ್ದಂಥ ಈ ಭಾರತಭೂಮಿಯಲ್ಲಿ ಅಸಂಖ್ಯಜಾತಿಗಳೂ ಅಸಂಖ್ಯಪಂಗಡಗಳೂ ಇರುತ್ತವೆ. ಈ ಎಲ್ಲಜಾತಿಗಳು ತಮ್ಮತಮ್ಮೊಳಗಿನ ಭೇದಭಾವವನ್ನು ಸಂಪೂರ್ಣವಾಗಿ ಮರೆತುಬಿಟ್ಟು ಒಮ್ಮನಸ್ಸಿನಿಂದ ಕಾರ್ಯವನ್ನು ಮಾಡುವದು ಅಸಾಧ್ಯವಾದದ್ದು. ಆದ್ದರಿಂದ ಅವರೆಲ್ಲರು ತಮ್ಮ ತಮ್ಮ ಧರ್ಮಗಳನ್ನು ಇದ್ದಂತೆ ಕಾಯ್ದುಕೊಂಡು, ಪರಸ್ಪರರಿಗೆ ಯಾವ ರೀತಿಯಿಂದಲೂ ಅಡ್ಡಬರದೆ, ಇಡೀ ಹಿಂದುಸ್ಥಾನದಲ್ಲಿ ಧರ್ಮಬಂಧುತ್ವವನ್ನು ಬೆಳೆಯಿಸಿ ಈ ದೇಶದ ಏಳ್ಗೆಗಾಗಿ ಯತ್ನಮಾಡತಕ್ಕದ್ದು. ಇದರಿಂದಲೇ ನಮ್ಮ ಉದ್ಧಾರವಾಗುವದು ಮತ್ತು ನಾನು ನನ್ನ "ಕಾಮ್ರೇಡ್" ಪತ್ರದಲ್ಲಿ ಪ್ರತಿಪಾದಿಸಿದಂಥ ಮಹತ್ವದ ವಿಚಾರವಾದರೂ ಇದೇ. ಆದರೆ ನನ್ನ ಈ ಉದ್ದೇಶವು ಆಗ ಕೈಕೂಡಲಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮುಸಲ್ಮಾನ ದೇಶಗಳ ಬಗ್ಗೆ ದ್ವೇಷಭಾವವು ಬೆಳೆಯಿತು. ಮತ್ತು ಹಿಂದುಸ್ಥಾನದ ಮೇಲೂ ಅದರ ದುಷ್ಪರಿಣಾಮವಾಗದೆ ಇರಲಿಲ್ಲ. ಮುಂದೆ ಸನ್ 1911ರಲ್ಲಿ ಬಾದಶಹರ ಜಾಹೀರನಾಮೆಯು ಹೊರಬಿತ್ತು. ಈ ಜಾಹೀರನಾಮೆಯು ಬಂಗಾಲದ ವಿಭಾಗವನ್ನು ರದ್ದುಪಡಿಸಿತು. ಮತ್ತು ಕಲಕತ್ತೆಯ ಬದಲಾಗಿ ದಿಲ್ಲಿಯು ಹಿಂದುಸ್ಥಾನದ ರಾಜಧಾನಿಯಾಯಿತು. ಈ ಜಾಹೀರನಾಮೆಯಿಂದ ಬಿಹಾರ ಪ್ರಾಂತದ ಹಿತವಾಯಿತು. ಬಂಗಾಲಕ್ಕೆ ಲಾಭಹಾನಿಯು ಸರಿಸಮಾನವಾಗಿ ಆಯಿತು ಆದರೆ ಪೂರ್ವಬಂಗಾಲದ ಮುಸಲ್ಮಾನರಿಗೆ ಮಾತ್ರ ಹಾನಿಯಾಯಿತು. ಅವರ ರಾಜನಿಷ್ಠೆಯ ಫಲವಿದು! ನೆರೆಹೊರೆಯವರ ಕೂಡ ಜಗಳ ಹೂಡಿ ಪರಕೀಯ ರಾಜಕರ್ತರಿಗೆ ಮೊರೆಹೋದರೆ ಇಂಥ ವಿಶ್ವಾಸಘಾತಕವಾಗುತ್ತದೆಂದು ಅವರು ಅಂದು ಮನಗಂಡರು. ಅಂದಿನಿಂದ ಅವರು ತಮ್ಮ ದೇಶಬಾಂಧವರೊಡನೆ ಸ್ನೇಹಭಾವದಿಂದ ವರ್ತಿಸಿ ಶಾಶ್ವತವಾದ ಶಾಂತಿಯಿಂದ ಕಾಲ ಕಳೆಯಬೇಕೆಂದು ಅನ್ನಹತ್ತಿದರು. ಮುಸ್ಲೀಮ ಲೀಗದವರಾದರೂ ತಮ್ಮ ಧ್ಯೇಯದಲ್ಲಿ ಹಿಂದುಸ್ಥಾನದ ಸ್ವರಾಜ್ಯಕ್ಕೇ ಮಹತ್ವವನ್ನು ಕೊಟ್ಟರು. ಅಷ್ಟರಲ್ಲಿ ಯುರೋಪದ ಮಹಾಯುದ್ಧವು ಪ್ರಾರಂಭವಾಯಿತು. ಆಗ ನಾನು ತಲಾಟಪಾಶಾ ಇವರಿಗೆ ಯುದ್ಧದಲ್ಲಿ ತೊಡಗುವ ಮುಂಚೆ ಸಾವಿರ ಸಾರೆ ವಿಚಾರಮಾಡಿರೆಂದು ಪತ್ರಬರೆದೆನು. ಹಿಂದುಸ್ಥಾನದ ಮುಸಲ್ಮಾನರು ಯುದ್ಧದ ಕಾಲದಲ್ಲಿ ರಾಜನಿಷ್ಠರಾಗಿ ಉಳಿಯಬೇಕೆಂದು ಹೇಳಿದೆನು. ಹಾಗೂ ಸಾಮ್ರಾಜ್ಯ ಸರ್ಕಾರಕ್ಕೆ ಅರಬಿಸ್ಥಾನದ ಮೇಲೆ ದಾಳಿಯನ್ನು ತರಬೇಡಿರೆಂತಲೂ ಮುಸಲ್ಮಾನರ ಪವಿತ್ರ ಕ್ಷೇತ್ರಗಳನ್ನು ಸಂಕಟಕ್ಕೆ ಗುರಿಯಾಗಿ ಮಾಡಬೇಡಿರೆಂತಲೂ ಬೇಡಿಕೊಂಡೆನು. ಆದರೆ ಇದೆಲ್ಲದರ ಪರಿಣಾಮವೇನಾಯಿತೆಂಬುದು ಎಲ್ಲರಿಗೂ ಗೊತ್ತೇ ಆಗಿರುತ್ತದೆ. ಈ ವಿಶ್ವಾಸಘಾತದಿಂದ ಮುಸಲ್ಮಾನರ ಕಣ್ಣು ಮತ್ತೆ ತೆರೆದವು. ಹಿಂದೂ ಜನರ ಸಹಕಾರತೆಯಿದ್ದರೇನೇ ತಮಗೆ ಕಲ್ಯಾಣವಾಗುವದೆಂದು ಅವರ ಮನವರಿಕೆಯಾಯಿತು. ಆದ್ದರಿಂದ ರಾಷ್ಟ್ರೀಯ ಮಹಾಸಭೆ ಮತ್ತು ಮುಸ್ಲೀಮ ಲೀಗ ಈ ಎರಡು ಸಂಸ್ಥೆಗಳ ವಾರ್ಷಿಕ ಸಭೆಗಳು ಒಂದೇ ಸ್ಥಳದಲ್ಲಿ ಒಂದೇ ಉದ್ದೇಶದಿಂದ ಮತ್ತು ಒಂದೇ ಕಾರ್ಯಕ್ಕಾಗಿ ಕೂಡಹತ್ತಿದವು. ಜಾತಿಯಿಂದ ಮುಸಲ್ಮಾನರಿದ್ದರೂ ತಾವಾದರೂ ಹಿಂದೀ ಜನರೇ ಇರುವೆವೆಂದು ಮುಸಲ್ಮಾನರಿಗೆ ತಿಳಿಯಿತು. ಮತ್ತು ಈಶ ಸಂಕೇತಕ್ಕೆ ಅನುಸಾರವಾಗಿ ಐಕ್ಯಭಾವದ ಇವರ ಪ್ರಯತ್ನಕ್ಕೆ ಜನರಲ್ ಡಾಯರನಿಂದ ಸಹಾಯವಾಯಿತು. ಇದೇ ಕಾಲಕ್ಕೆ ಮಹಾತ್ಮಾ ಗಾಂಧಿಯವರು ಮುಂದೆ ಬಂದು ದೇಶಕ್ಕೆ ಉಪದೇಶ ಮಾಡಿದರು. ಎಷ್ಟೋ ಜನರು ಮಹಾತ್ಮರನ್ನು ಕ್ರಿಸ್ತನಿಗೆ ಹೋಲಿಸುತ್ತಾರೆ. ಕ್ರಿಸ್ತನಂತೆ ಅವರಾದರೂ (೧) ಕಷ್ಟಗಳನ್ನು ಸಹಿಸಿ ಆತ್ಮಶುದ್ಧಿಯನ್ನು ಮಾಡಬೇಕೆಂತಲೂ (೨) ರಾಜ್ಯಕಾರಭಾರದ ಜವಾಬದಾರಿಗಾಗಿ ನೈತಿಕ ತಯಾರಿಯನ್ನು ಮಾಡಬೇಕೆಂತಲೂ ಮತ್ತು (೩) ಸ್ವರಾಜ್ಯಕ್ಕೆ ಸುವ್ಯವಸ್ಥೆಯ ಅವಶ್ಯಕತೆಯಿರುತ್ತದೆಂತಲೂ ಉಪದೇಶಮಾಡಿದರು. ಆದರೆ ಅಂಥ ಧರ್ಮಾತ್ಮನನ್ನೇ ಈ ಕ್ರೈಸ್ತನ ಸರಕಾರವು ಘೋರಪಾತಕಿಯಂತೆ ನಡಿಸಿಕೊಂಡಿತು!

ಸತ್ಯಾಗ್ರಹ.

ಮಹಾತ್ಮಾ ಗಾಂಧಿಯವರು ಮೊದಲಿನಿಂದ ಸರಕಾರದ ಮಿತ್ರರಾಗಿದ್ದರು. ಅವರು ಆಫ್ರಿಕಾದಲ್ಲಿಯೂ ಹಿಂದುಸ್ಥಾನದಲ್ಲಿಯೂ ಸರಕಾರಕ್ಕೆ ಸಹಾಯ ಮಾಡಿರುವರು. ಸರಕಾರವಾದರೂ ಮಹಾಯುದ್ಧದ ಪೂರ್ವದಲ್ಲಿ ಅವರ ಸನ್ಮಾನವನ್ನು ಮಾಡುತ್ತಿತ್ತು. ಆದರೆ ಅವರಂಥ ರಾಜನಿಷ್ಠರಿಗೆ ಸಹ ಯುದ್ಧದ ತರುವಾಯ ಸರಕಾರವನ್ನು ವಿರೋಧಿಸಬೇಕಾಯಿತು. ಅತ್ತ ಗರ್ಗರನೇ ಇಸ್ಪ್ರಿಯ ಸುಧಾರಣೆಯ ವಿಚಾರವು ನಡೆದಾಗಲೇ ಇತ್ತ ರೌಲೆಟ್ ಕಾಯದೆಯು ಪಾಸಾಯಿತು. ಕೂಡಲೆ ಮಹಾತ್ಮರು ತಮ್ಮ ಸುಪ್ರಸಿದ್ಧ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಇದೇ ಅಸಹಕಾರದ ಪ್ರಾರಂಭವು. ಇಡೀ ರಾಷ್ಟ್ರಕ್ಕೆ ಅವಮಾನಕಾರಕವಾದ ಈ ಕಾಯದೆಯನ್ನು ನೋಡಿ ಹೇಡಿಯಂತೆ ಕಣ್ಣು ಮುಚ್ಚಿ ಸುಮ್ಮನೆ ಕೂಡುವದು ಯಾವ ಸ್ವಾಭಿಮಾನಿ ಮನುಷ್ಯನಿಗೂ ಶಕ್ಯವಿದ್ದಿಲ್ಲ. ಆದ್ದರಿಂದ ತಮ್ಮ ಸತ್ಯಾಗ್ರಹದಿಂದ ತಾವು ಗಂಡಾಂತರಕ್ಕೆ ಒಳಗಾಗುತ್ತೇವೆಂದು ಗೊತ್ತಿದ್ದಾಗ್ಯೂ ಮಹಾತ್ಮರು ಅದನ್ನು ಆರಂಭಿಸದೆ ಬಿಡಲಿಲ್ಲ. ಮಹಾತ್ಮರ ಚಳವಳಿಯಲ್ಲಿ ಅಹಿಂಸಾ ತತ್ವವು ಮಹತ್ವವುಳ್ಳದ್ದು. ಕ್ರಿಸ್ತನ ಉಪದೇಶದಂತೆ ಯುರೋಪಿಯನ ರಾಷ್ಟ್ರಗಳು ಈ ತತ್ವವನ್ನು ಎಷ್ಟರಮಟ್ಟಿಗೆ ಪಾಲಿಸುತ್ತವೆಂಬದು ಎಲ್ಲರಿಗೂ ಗೊತ್ತಾಗಿರುತ್ತದೆ. ನಾನಾದರೋ ಮುಸಲ್ಮಾನ ಧರ್ಮದವನು. ನಮ್ಮ ಧರ್ಮದಲ್ಲಿ ಯುದ್ಧವು ಅನಿಷ್ಟಕಾರಕವೆಂತಲೂ ನಿರುಪಾಯವಿಲ್ಲದಿದ್ದರೇನೇ ಅದನ್ನು ಮಾಡಬಹುದೆಂತಲೂ ಹೇಳಿರುತ್ತದೆ. ಮತ್ತು ಹಾಗೆ ನಡೆಯುವದು ನನ್ನ ಕರ್ತವ್ಯವಿರುತ್ತದೆ. ಆದರೂ ನಾನು ಮಹಾತ್ಮರ ಕೂಡ ಸಖ್ಯವನ್ನು ಬೆಳಸಿ ಅಹಿಂಸೆಯ ವ್ರತವನ್ನು ಸ್ವೀಕರಿಸಿದೆನು. ಹಿಂದುಸ್ಥಾನದ ೩೨ ಕೋಟಿ ಜನರಿಗೆ ಹಿಂಸೆಯ ಉಪದೇಶಮಾಡುವದು ಸರಿಯಲ್ಲ. ಮೇಲಾಗಿ ಹಿಂಸೆಯಿಂದ ಸಿಕ್ಕಂಥ ಜಯವು ನಿಜವಾದ ಜಯವಲ್ಲ. ನಮಗೆ ಸರ್ವತಂತ್ರವಾದ ಸ್ವಾತಂತ್ರ್ಯವು ಬೇಕಾಗಿದೆ. ಇದಕ್ಕಾಗಿ ನಾವೆಲ್ಲರೂ ಸ್ವಾರ್ಥತ್ಯಾಗವನ್ನು ಮಾಡಲಿಕ್ಕೇ ಬೇಕು. ಅಹಿಂಸೆಯಿಂದ ನಮ್ಮ ಧ್ಯೇಯವು ಸಾಧ್ಯವಾಗುವದರಿಂದಲೂ ನಮ್ಮ ಆತ್ಮೋನ್ನತಿಯಾಗುವದರಿಂದಲೂ ನಾವು ಅದೇ ಮಾರ್ಗವನ್ನು ಅನುಸರಿಸುವದು ಯೋಗ್ಯವಾದದ್ದು. ಶಾಂತ ರೀತಿಯಿಂದ ಸ್ವರಾಜ್ಯವನ್ನು ದೊರಕಿಸಲಿಕ್ಕೆ ನೀವು ಸಿದ್ಧರಿಲ್ಲವೇ? ಈ ಮೇರೆಗೆ ನಾವು ಶಾಂತ ರೀತಿಯಿಂದ ಸತ್ಯಾಗ್ರಹವನ್ನು ಮಾಡುತ್ತಿದ್ದರೂ ನಮ್ಮ ಸರಕಾರವು ನಮ್ಮ ಮೇಲೆ ಅತ್ಯಾಚಾರದ ಆರೋಪವನ್ನು ಹೊರಿಸುತ್ತದೆ. ಆದರೆ ಇವರು ತಾವು ಸ್ವಂತ ಹೇಗಿರುವರೆಂಬದನ್ನು ಸ್ವಲ್ಪ ನೋಡಿರಿ. ಜಾಲಿಯನವಾಲಾ ಬಾಗದಲ್ಲಿ ನಿರಪರಾಧಿಯಾದವರ ಹಿಂಸೆಯಿಂದ ಕೆಂಪಾದ ಇವರ ಕೈಗಳು ಇನ್ನು ಸ್ವಚ್ಛವಾಗಿಲ್ಲ. ಅಕ್ಷಮ್ಯ ಅಪರಾಧವನ್ನು ಮಾಡಿದಂಥವರಿಗೂ ಇವರು ದಂಡಿಸಿಲ್ಲ, ಉತ್ತೇಜನವನ್ನೇ ಕೊಟ್ಟರು. ಇಂಥವರು ಮಹಾತ್ಮರ ಅಹಿಂಸೆಯ ಮಾರ್ಗಕ್ಕೆ ಹೆಸರಿಡುವದು ಸೋಜಿಗವಲ್ಲವೇ? ಒಮ್ಮೆ ಜಾಗ್ರತವಾಗಿದ್ದ ನಮ್ಮ ರಾಷ್ಟ್ರದಲ್ಲಿ ಇಂದಿನವರೆಗೆ ಇಷ್ಟು ಶಾಂತತೆಯು ಉಳಿದದ್ದೇ ಹೆಚ್ಚಿನದು. ಇಂಥ ಪರಿಸ್ಥಿತಿಯಲ್ಲಿ ಯಾವ ರಾಷ್ಟ್ರವು ನಮ್ಮಷ್ಟು ಶಾಂತತೆಯನ್ನು ಕಾಯ್ದಿರುತ್ತದೆಂದು ನಾನು ಪ್ರಶ್ನೆ ಮಾಡುತ್ತೇನೆ. ಇದರ ಉತ್ತರವನ್ನು ಬೇಕಾದವರು ಕೊಡಲಿ. ಹಿಂದುಸ್ಥಾನದ ಈಗಿನ ಅಪೂರ್ವ ಶಾಂತತೆಯ ಶ್ರೇಯಸ್ಸು ಮಹಾತ್ಮರಿಗೂ ಅವರ ಸಹಕಾರಿಗಳಿಗೂ ಇರುತ್ತದೆ.

ಸಹಕಾರ.

ಅಮೃತಸರ ಮಹಾಸಭೆಯಲ್ಲಿ ಸುಧಾರಣೆಗಳ ವಿಚಾರವು ನಡೆದಾಗ ನನ್ನ ಮಿತ್ರರೂ ಸ್ವರಾಜ್ಯ ಪಕ್ಷದ ಅಧ್ವರ್ಯರುಗಳೂ ಆದ ದೇಶಬಂಧು ದಾಸ ಮತ್ತು ಪರಮ ಪೂಜ್ಯರಾದ ಲೋಕಮಾನ್ಯ ಟಿಳಕ ಇವರು ಸಹಕಾರಿತೆಯನ್ನು ವಿರೋಧಿಸಿದರು. ಆದರೆ ಮಹಾತ್ಮಾ ಗಾಂಧಿಯವರು ಇವರ ನಿರ್ಣಯಕ್ಕೆ ಒಂದು ಉಪಸೂಚನೆಯನ್ನು ತಂದು ಸಹಕಾರಿತೆಯನ್ನು ಮಾಡಿರೆಂದು ಹೇಳಿದರು. ಕಡೆಗೆ ನಮ್ಮೆಲ್ಲರ ಪ್ರಯತ್ನದಿಂದ ಸರಕಾರದ ಕೂಡ ಶಕ್ಯವಿದ್ದ ಮಟ್ಟಿಗೆ ಸಹಕಾರವನ್ನು ಮಾಡಿ ಸ್ವರಾಜ್ಯವನ್ನು ದೊರಕಿಸಬೇಕೆಂದು ಗೊತ್ತಾಯಿತು. ಆದರೆ ಸಹಕಾರತೆಗೆ ಅನುಕೂಲರಿದ್ದ ಗಾಂಧಿಯವರೇ ಈಗ ಸಂಪೂರ್ಣವಾಗಿ ಅದಕ್ಕೆ ವಿರೋಧಿಸಹತ್ತಿದರು. ದೇಶದಲ್ಲಿಯ ಪರಿಸ್ಥಿತಿಯು ಹೇಳಕೂಡದಷ್ಟು ಬದಲಿಸಿರುತ್ತದೆ. ಹಿಂದು ಮುಸಲ್ಮಾನರ ದ್ವೇಷವು ಮಾಯವಾಯಿತು. ಒಣ ಬಾಯಿ ಮಾತಿಗೆ ಬೆಲೆಯುಳಿಯಲಿಲ್ಲ. ದೇಶದಲ್ಲಿ ಜಾಗೃತಿಯುಂಟಾಗಿ ದೇವರ ಹೊರ್ತು ಇನ್ನೊಬ್ಬರ ಭಯವುಳಿಯಲಿಲ್ಲ. ಇದೆಲ್ಲವನ್ನು ನೋಡಿ ಸೆರೆ ಮನೆಯಿಂದ ಹೊರಗೆ ಬಂದಂಥ ನನಗೆ ಅತ್ಯಂತ ಆಶ್ಚರ್ಯವಾಯಿತು. ಅಮೃತಸರದಲ್ಲಿ ಸಹಕಾರವನ್ನು ಮಾಡಿರೆಂದು ಆಗ್ರಹ ತೊಟ್ಟಿದ್ದ ಮಹಾತ್ಮರೇ ಈ ಅಸಹಕಾರದ ಪುರಸ್ಕರ್ತರಾದರು. ಆದರೆ ಇಂಥ ಪರಿವರ್ತನದ ಕಾರಣವೇನು? ಮಹಾಯುದ್ಧದ ಕಾಲಕ್ಕೆ ನಮಗೆ ಅಲ್ಪ ಸ್ವಲ್ಪ ಆಶೆ ಹುಟ್ಟಿತ್ತು. ಆದ್ದರಿಂದ 1919 ರಲ್ಲಿ ಶಕ್ಯವಿದ್ದ ಮಟ್ಟಿಗೆ ಸಹಕಾರಿತೆಯನ್ನು ಮಾಡಲು ಸಿದ್ಧರಾದೆವು. ಆದಾಗ್ಯೂ ಅದರ ಯಶಸ್ಸಿನ ಬಗ್ಗೆ ನನಗೆ ಸಂಶಯವೇ ಇತ್ತು. ಆಳರಸರ ಸಹಕಾರಿತೆಯಿಂದ ಮುಸಲ್ಮಾನರಿಗೆ ಯಾವ ಲಾಭವಾಗಿಲ್ಲೆಂಬದು ನನಗೆ ಗೊತ್ತಾಗಿತ್ತು. ಜಾಲಿಯನವಾಲಾಬಾಗದ ಪ್ರಕರಣವಂತೂ ಮನಸ್ಸಿನಲ್ಲಿ ನಟ್ಟು ಹೋಗಿತ್ತು. ಆದ್ದರಿಂದ ಇವರ ಕೂಡ ಸಹಕಾರಿತೆಯಲ್ಲಿ ಯಾವ ಅರ್ಥವೂ ಇಲ್ಲವೆಂದು ನಾನು ತಿಳಿದಿದ್ದೆನು. ಮುಂದೆ ಕೆನಾಟದ ಡ್ಯೂಕರು ಬಂದು ಮರೆತುಬಿಡಿರಿ ಮತ್ತು ಕ್ಷಮಿಸಿ, ಎಂದು ನಮಗೆ ಉಪದೇಶ ಮಾಡಿದರು. ನಾವು ಒಂದು ವೇಳೆ ಈ ಅನ್ಯಾಯವನ್ನು ಕ್ಷಮಿಸಬಹುದು, ಆದರೆ ಅದನ್ನು ಮರೆಯುವದು ಎಂದಿಗೂ ಶಕ್ಯವಿಲ್ಲ. ಇಂಥ ಅನ್ಯಾಯವನ್ನು ಮರೆಯುವದೆಂದರೆ ಒಮ್ಮೆ ಎಚ್ಚತ್ತವನು ಮತ್ತೆ ಕಣ್ಣು ಮುಚ್ಚಿ ಸುಖ ಸ್ವಪ್ನಗಳನ್ನು ಕಂಡಂತೆಯೇ ಸರಿ. ಆದರೆ ಮಹಾತ್ಮಾ ಗಾಂಧಿಯವರು ಇನ್ನೂ ನಿರಾಶರಾಗಿದ್ದಿಲ್ಲ. ಇಂಗ್ಲೆಂಡು ಪಂಜಾಬು ಮತ್ತು ಖಿಲಾಫತ್ ಪ್ರಕರಣಗಳಲ್ಲಿ ಏನಾದರೂ ಸಹಾಯ ಮಾಡಬಹುದೆಂದು ಅವರು ನಂಬಿದ್ದರು. ಮುಂದೆ ಈ ನಂಬಿಗೆಯೂ ವ್ಯರ್ಥವಾಗಿ ಇಂಗ್ಲೆಂಡು ಮೇಲಿನ ಅವರ ವಿಶ್ವಾಸವು ಹಾರಿ ಹೋಗಲು ಅವರು ಅಸಹಕಾರದ ಮಾರ್ಗವನ್ನು ಹಿಡಿದರು.

ಅಸಹಕಾರ.

ಈ ವಿಷಯದ ಬಗ್ಗೆ ಹೆಚ್ಚಿಗೆ ಹೇಳುವ ಅವಶ್ಯಕತೆಯಿಲ್ಲ. ಅನ್ಯಾಯವನ್ನು ವಿರೋಧಿಸುವದು ನಮಗೆ ಶಕ್ಯವಿಲ್ಲದಿದ್ದರೆ ಅದಕ್ಕೆ ಸಹಾಯವಾದರೂ ಮಾಡಬಾರದೆಂಬುದೇ ಇದರ ಸಾರಾಂಶವಾಗಿರುತ್ತದೆ. ನಮ್ಮ ರಾಷ್ಟ್ರವು ಅಸಹಕಾರವನ್ನು ಅವಲಂಬಿಸಿದರೆ ಈ ಸರಕಾರವು ನಿಷ್ಪ್ರಭವಾಗುವದೆಂದು ನಮ್ಮ ಅಭಿಪ್ರಾಯವದೆ. ನಮ್ಮ ಚಳವಳಿಯಲ್ಲಿ ವಿಘಾತಕ ಕಾರ್ಯಕ್ರಮಕ್ಕಿಂತ ವಿಧಾಯಕ ಕಾರ್ಯಕ್ರಮದ ಅಂಶವೇ ಹೆಚ್ಚಾಗಿರುತ್ತದೆ. ಇದರಿಂದ ಅನ್ಯರ ಸತ್ವಹರಣವಾಗಿ ಆತ್ಮಸಾಮರ್ಥ್ಯವೂ ಬೆಳೆಯುವದು. ನಾವು ಈಗಿನ ರಾಜ್ಯಪದ್ಧತಿಯನ್ನು ನಾಶಗೊಳಿಸದಿದ್ದರೆ ನಮ್ಮ ಉದ್ಧಾರವಾಗುವದಂತೂ ಒತ್ತಟ್ಟಿಗುಳಿದು ಪರಾಜಯವು ಸಹ ಸಿಗದೆ ಸತ್ಯನಾಶವು ಮಾತ್ರ ಆಗುವದು. ಈ ಸರಕಾರವನ್ನು ಬಲಹೀನವಾಗಿ ಮಾಡುವದು ಸಹ ನ್ಯಾಯವೇ ಆಗಿರುತ್ತದೆ. ಸೆರೆಮನೆಯಲ್ಲಿಯ ಪರಿಸ್ಥಿತಿಯು ತಮಗೆ ಗೊತ್ತಿರಬಹುದು. ಆಶೆ ಬುರುಕರಾದ ಕೆಲಜನ ಸೆರೆಯಾಳುಗಳು ಅಲ್ಲಿಯ ಕಾವಲುಗಾರರ ಮೇಲೆ ಕಾವಲವನ್ನಿಡುವ ಕೆಲಸವನ್ನು ವಹಿಸಿ ತಮ್ಮ ಶಿಕ್ಷೆಯನ್ನು ಕಡಿಮೆ ಮಾಡಿಸಿಕೊಳ್ಳುತ್ತಾರೆ. ನಿಜವಾದ ಕಾವಲುಗಾರರು ಯಥೇಚ್ಛವಾಗಿ ನಿದ್ದೆ ಮಾಡುವಾಗ ಸೆರೆಯಾಳುಗಳೇ ಅವರ ಕೆಲಸವನ್ನು ಮನಃಪೂರ್ವಕವಾಗಿ ಮಾಡುತ್ತಾರೆ. ಅದೇ ಮೇರೆಗೆ ಅತಿ ವಿಸ್ತಾರವಾದ ಹಿಂದುಸ್ಥಾನವೆಂಬ ಈ ಜೈಲಿನಲ್ಲಿ ನಾವೆಲ್ಲರೂ ಸೆರೆಯಾಳುಗಳು; ನಮ್ಮ ಸಹಕಾರಿ ಮಿತ್ರರು ಅದರ ನಿಜವಾದ ಕಾವಲುಗಾರರು. ರಾಜ್ಯಕರ್ತರು ಸುಖದಲ್ಲಿ ಮಗ್ನರಾಗಿದ್ದರೂ ಈ ಮಹನೀಯರು ತಮ್ಮ ಕರ್ತವ್ಯವನ್ನು ಅತ್ಯಂತ ದಕ್ಷತೆಯಿಂದ ಮಾಡುತ್ತಿರುವರು. ಆದರೆ ಸೆರೆಮನೆಯೊಳಗಿನ ಸೆರೆಯಾಳುಗಳಂತೆ ಅವರಿಗೆ ತಮ್ಮ ಬಿಡುಗಡೆಯ ಕಲ್ಪನೆಯು ಮಾತ್ರ ಇಲ್ಲ. ಅವರು ತಾವು ಪರತಂತ್ರರೆಂಬುದನ್ನೇ ಮರೆತುಬಿಟ್ಟು ತಮಗೆ ಕಟ್ಟಿ ಹಾಕಿದ್ದ ಸರಪಳಿಯನ್ನೇ ಬಲು ಪ್ರೇಮದಿಂದ ಅಪ್ಪಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ನಾನು ನನ್ನ ಧರ್ಮ ಬಾಂಧವರಿಗೆ ನಾಲ್ಕು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಇಸ್ಲಾಮಿ ಬಂಧುಗಳೇ, ನೀವು ಅಸಹಕಾರ ಚಳವಳಿಯು ಅಪಯಶಸ್ವಿಯಾಯಿತೆಂತಲೂ ಮತ್ತು ನಮ್ಮ ಹಿಂದೂ ಬಾಂಧವರ ಕೂಡ ಸಹಕಾರವನ್ನು ಮಾಡುವದು ವ್ಯರ್ಥವಾದದ್ದೆಂತಲೂ ತಿಳಿಯಬೇಡಿರಿ. ಒಂದು ವೇಳೆ ಅದು ಹಾಗೇ ಇರುವದೆಂದು ತಿಳಿದರೂ ನಮ್ಮ ಮುಂದಿನ ಹೊಸ ಮಾರ್ಗವನ್ನು ಹುಡುಕಬೇಕಾಗುವದು. ಆ ಹೊಸ ದಾರಿಯನ್ನು ನೀವು ತೋರಿಸಬಲ್ಲಿರಾ? ಪರಕೀಯ ರಾಜ್ಯಕರ್ತರ ಕೂಡ ಅಸಹಕಾರವನ್ನೂ ದೇಶಬಾಂಧವರ ಕೂಡ ಸಹಕಾರವನ್ನೂ ಮಾಡುವದು ಶಕ್ಯವಿಲ್ಲದಿದ್ದರೆ ನಾವು ಈಗ ಮಾಡಬೇಕಾದುದಾದರೂ ಏನು? ಬಂದ ಹಾದಿಹಿಡಿದು ತಿರುಗಿ ಹೋಗಬೇಕೆ? ಪರಕೀಯರ ಸಖ್ಯವನ್ನು ಬೆಳಸಿ ಸ್ವಕೀಯರ ಕೂಡ ಕಾದಾಡಬೇಕೆ? ಮತ್ತು ಇದರಿಂದಾಗುವ ಲಾಭವಾದರೂ ಯಾವದು? ಅಲ್ಲ! ಮಿತ್ರರೇ ಹಾಗಲ್ಲ, ಅಂಥ ವಿಚಾರವನ್ನೇ ಮಾಡಬೇಡಿರಿ. ಪರರ ಕೂಡ ಅಸಹಕಾರವನ್ನೂ ದೇಶಬಂಧುಗಳಾದ ಹಿಂದೂ ಜನರ ಕೂಡ ಸಹಕಾರವನ್ನೂ ಮಾಡದೆ ನಮಗೆ ಗತ್ಯಂತರವೇ ಇಲ್ಲ. ಅಶಕ್ಯವಾದ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡು ವ್ಯರ್ಥವಾಗಿ ಕಾಲ ಕಳೆಯಬೇಡಿರಿ. ಆಮೇಲೆ ಅಧ್ಯಕ್ಷರು ಮಾಂಟೆಗ್ಯೂಸಾಹೇಬರ ಬಡತರ್ಫಿ ಮತ್ತು ಲಾಸೇನಪರಿಷತ್ತು ಇವುಗಳ ವಿಷಯಕ್ಕೆ ಚರ್ಚಿಸಿ ಇದರಿಂದಲಾದರೂ ಮುಸಲ್ಮಾನರಿಗೆ ಯಾವ ಲಾಭವೂ ಆಗದ್ದರಿಂದ ಅಸಹಕಾರವು ಒಂದೇ ಒಂದು ಮಾರ್ಗವಿರುತ್ತದೆಂದು ಸಿದ್ಧಮಾಡಿ ತೋರಿಸಿದರು.

ಹಿಂದು ಮುಸಲ್ಮಾನರ ಐಕ್ಯಮತ್ಯ.

ಇನ್ನು ಹಿಂದು ಮುಸಲ್ಮಾನರ ನಡುವಿನ ಐಕ್ಯದ ಬಗ್ಗೆ ವಿಚಾರ ಮಾಡೋಣ. ಮಹಾತ್ಮಾ ಗಾಂಧಿಯವರು ತಮ್ಮ ಇಸ್ಲಾಮಿಧರ್ಮದ ಸಂರಕ್ಷಣೆಗಾಗಿ ಬಹಳ ಶ್ರಮಪಟ್ಟು ಕಾರಾಗೃಹಕ್ಕೆ ಹೋಗಿರಲು ನಾವು ಅವರ ಧರ್ಮಬಂಧುಗಳೊಡನೆ ಸಹಕಾರಿತೆಯನ್ನು ಮಾಡದಿರುವದು ಸರಿಯಲ್ಲ. ಹಿಂದು ಮುಸಲ್ಮಾನರ ನಡುವೆ ಸಂಪೂರ್ಣವಾದ ಐಕ್ಯವು ಇನ್ನೂ ಆಗಿರುವದಿಲ್ಲವೆಂದೂ ಮತ್ತು ಮಲಬಾರ ಮುಲ್ತಾನ ಆಗ್ರಾ ಶಹರಾಣಪೂರ ಮುಂತಾದ ಸ್ಥಳಗಳಲ್ಲಿ ಅವರು ಪರಸ್ಪರ ಬಂಧುಭಾವದ ವಿರುದ್ಧವಾಗಿ ನಡೆದರೆಂತಲೂ ನಾನು ಬಲ್ಲೆನು. ಆದರೆ ಅದಕ್ಕಾಗಿ ಒಂದೇ ಸಮಾಜಕ್ಕೆ ಎಲ್ಲ ದೋಷವನ್ನು ಕೊಡುವದು ಉಚಿತವಲ್ಲ. ಇಂಥ ಜಗಳಗಳನ್ನು ದೂರಮಾಡಲಿಕ್ಕೆ ಮಹಾಸಭೆಯಿಂದ ಅಲ್ಲಲ್ಲಿ ಉಭಯಪಕ್ಷದ ಪಂಚಾಯಿತಿಯನ್ನು ನೇಮಿಸುವದು ತಕ್ಕ ಉಪಾಯವಾಗಿರುತ್ತದೆ. ನಾವು ಇಂಥ ಕ್ಷುದ್ರಕಾರಣಗಳ ನಿಮಿತ್ತವಾಗಿ ನಮ್ಮ ನಮ್ಮೊಳಗೇ ಬಡಿದಾಡುವದನ್ನು ಕಂಡು ನನಗೆ ಬಹಳ ನಾಚಿಕೆಬರುತ್ತದೆ. ಹೀಗೆ ನಾವು ಚಿಕ್ಕಮಕ್ಕಳಂತೆ ಜಗಳಾಡಬಾರದು. ನಮ್ಮ ಧರ್ಮವನ್ನು ಕಾಯ್ದುಕೊಂಡು ಪರಧರ್ಮಕ್ಕೆ ಯಾವ ರೀತಿಯಿಂದಲೂ ತೊಂದರೆಗೊಳಿಸದೆ ನಮ್ಮನಮ್ಮೊಳಗೆ ಬಂಧುಭಾವವನ್ನು ಬೆಳೆಸತಕ್ಕದ್ದು. ನಾವು ಹಾಗೆ ಮಾಡದೆ ಸಾಮಾನ್ಯ ಕಾರಣಕ್ಕಾಗಿ ಜಗಳಾಡಹತ್ತಿದರೆ ನಮ್ಮ ಯೋಗ್ಯತೆಯು ಎಂದೂ ಬೆಳೆಯಲಾರದು, ನಮಗೆ ಸಾಮರ್ಥ್ಯವು ಎಂದಿಗೂ ಬರಲಾರದು, ಮತ್ತು ನಾವು ನಮ್ಮೆಲ್ಲರಿಗೆ ಅತ್ಯವಶ್ಯವಿದ್ದ ಸ್ವರಾಜ್ಯಕ್ಕೆ ಎಂದೂ ಪಾತ್ರರಾಗಲಾರೆವು. ಆದ್ದರಿಂದ ಹಿಂದು ಮುಸಲ್ಮಾನರ ಐಕ್ಯವು ಅವಶ್ಯವಾದದ್ದು. ನಮ್ಮ ದ್ವೇಷಭಾವದ ಮೂಲಕಾರಣವು ಧರ್ಮಭೇದವಿರದೆ ಪಾಶ್ಚಿಮಾತ್ಯ ಶಿಕ್ಷಣದಿಂದ [illegible] ಅಕುಂಚಿತ ದೃಷ್ಟಿ ಮತ್ತು ನೀಚತರದ ವ್ಯಕ್ತಿಸ್ವಾರ್ಥ ಇವೇ ಇರುತ್ತವೆ. ಮಹಾತ್ಮರು ಸೆರೆಮನೆಯ ಹೊರಗೆ ಇರುವಾಗ ಇಂಥ ಕ್ಷುದ್ರಮನುಷ್ಯರ ಬೇಳೆಯು ಬೇಯುವಂತೆ ಇದ್ದಿಲ್ಲ. ನೀವು ಇಂಥವರ ಮಾತುಗಳನ್ನು ಕೇಳಬಾರದು. ಪರಧರ್ಮಗಳನ್ನು ಸುಸೂತ್ರವಾಗಿ ನಡೆಯಗೊಡಬೇಕು. ನಮ್ಮ ಧರ್ಮದ ಮುಖ್ಯ ತತ್ವಗಳನ್ನು ಮಾತ್ರ ನಾಶಮಾಡಗೊಡದೆ ಉಳಿದ ಸಾಮಾನ್ಯ ವಿಷಯಗಳಲ್ಲಿ ಪರಧರ್ಮಿಯರ ಕೂಡ ಸ್ನೇಹಭಾವದಿಂದ ಇರಬೇಕು ಮತ್ತು ತಮ್ಮ ಧರ್ಮಸ್ವಾತಂತ್ರ್ಯವನ್ನು ಕಾಯ್ದುಕೊಂಡು ಹಿಂದೂ ಮುಸಲ್ಮಾನರ ಐಕ್ಯವನ್ನು ಬೆಳಸಬೇಕು. ಈ ವಿಷಯದಲ್ಲಿ ರಾಷ್ಟ್ರಕ್ಕೆ ಯೋಗ್ಯವಾದ ಮಾರ್ಗವನ್ನು ತೋರಿಸುವದು ಮಹಾಸಭೆಯ ಕರ್ತವ್ಯವಾಗಿದೆ. ಇನ್ನು ಗೋವಧದ ವಿಷಯವಾಗಿ ನಾಲ್ಕು ಶಬ್ದಗಳನ್ನು ಹೇಳುವದು ಅವಶ್ಯವದೆ. ಆಕಳು ಹಿಂದುಗಳಿಗೆ ಅತಿ ಪವಿತ್ರವಾದ ಪ್ರಾಣಿಯು. ನಮ್ಮ ಹಿಂದೂ ಬಾಂಧವರು ನಮ್ಮ ಖಿಲಾಫತದ ಸಂರಕ್ಷಣೆಗಾಗಿ ಸಹಾಯಮಾಡಿದಂತೆ ನಾವಾದರೂ ಗೋವಧವನ್ನು ನಿಲ್ಲಿಸಲಿಕ್ಕೇ ಬೇಕು. ನಮ್ಮ ಕೂಡ ಮಹಾತ್ಮರ ಸಂಬಂಧವು ಬಂದಂದಿನಿಂದ ನಮ್ಮ ಮನೆಯಲ್ಲಿ ಗೋಮಾಂಸವನ್ನು ತಿನ್ನುವದು ಕಟ್ಟಾಯಿತು. ಆದರೆ ಉಳಿದ ಪ್ರಕಾರದ ಮಾಂಸಕ್ಕಿಂತ ಗೋಮಾಂಸವು ಹೆಚ್ಚಿಗೆ ಅಗ್ಗವಾಗಿರುವದರಿಂದ ಸಾಮಾನ್ಯ ಜನರಿಗೆ ಈ ಮೋಹವು ಒಮ್ಮೆಲೆ ಬಿಡುವಂತೆ ಇಲ್ಲ. ಆದ್ದರಿಂದ ಉಳಿದ ಮಾಂಸವನ್ನಾದರೂ ಶಕ್ಯವಿದ್ದಮಟ್ಟಿಗೆ ಅಗ್ಗವಾಗಿ ಮಾರಿ ಗೋಹತ್ಯೆಯನ್ನು ನಿಲ್ಲಿಸಲಿಕ್ಕೆ ಬೇಕು. ಪ್ರೇಮದಿಂದಲೇ ಪ್ರೇಮವು ಬೆಳೆಯುತ್ತದಾದ್ದರಿಂದ ಈ ನಿಮ್ಮ ಕರ್ತವ್ಯವನ್ನು ಅವಶ್ಯವಾಗಿ ಮಾಡಿರೆಂದು ನಾನು ನಮ್ಮ ಹಿಂದುಮುಸಲ್ಮಾನ ಬಂಧುಗಳಿಗೆ ಬೇಡಿಕೊಳ್ಳುತ್ತೇನೆ. ಹಿಂದೂ ಮುಸಲ್ಮಾನರ ನಡುವೆ ಐಕ್ಯವುಂಟಾಗಬೇಕಾದರೆ ಪ್ರತಿಯೊಂದು ಪಂಥಕ್ಕೆ ಯೋಗ್ಯವಾದ ಹಕ್ಕುಗಳನ್ನು ಕೊಡುವದು ಒಂದು ಉಪಾಯವಾಗಿದೆ. ಪಂಜಾಬದಂಥ ಕೆಲವು ಸ್ಥಳಗಳಲ್ಲಿ ಈ ದ್ವೇಷಭಾವವು ಇನ್ನೂ ಕಡಿಮೆಯಾಗದ್ದನ್ನು ಕಂಡು ಅತ್ಯಂತ ವಿಷಾದವಾಗುತ್ತದೆ. ಆದರೆ ಈ ದ್ವೇಷದ ಮೂಲಕಾರಣರು ಹಿಂದುಗಳಾಗಲಿ ಮುಸಲ್ಮಾನರಾಗಲಿ ಇರದೆ ಈ ಎರಡು ಸಮಾಜದೊಳಗಿನ ಬದಮಾಷರೂ ರಾಷ್ಟ್ರಘಾತಕರೂ ಇರುತ್ತಾರೆ. ಪರದೇಶದವರು ನಮ್ಮನ್ನು ನೋಡುತ್ತಿದ್ದಾಗ ನಾವು ಈ ಮೇರೆಗೆ ನಮ್ಮ ನಮ್ಮೊಳಗೆ ಜಗಳಾಡುವದು ಎಂದಿಗೂ ಸರಿಯಲ್ಲ. ಆಮೇಲೆ ಅಧ್ಯಕ್ಷರು ಸಂಘಟನ, ಅಸ್ಪೃಶ್ಯನಿವಾರಣ, ಮತ್ತು ಶುದ್ಧಿ ಇವುಗಳ ವಿಷಯಕ್ಕೆ ಭಾಷಣಮಾಡಿ ವೃತ್ತಪತ್ರಕಾರರು ಯಾವ ಪಕ್ಷಪಾತವನ್ನೂ ಮಾಡಬಾರದೆಂತಲೂ ಬೇರೆ ಮುಸಲ್ಮಾನೀ ರಾಷ್ಟ್ರಗಳಿಂದ ನಮಗೆ ಭಯವಿಲ್ಲವೆಂತಲೂ ಹೇಳಿದರು.

ಕೌನ್ಸಿಲ ಪ್ರವೇಶ.

ಪರಕೀಯರ ರಾಜ್ಯಕಾರಭಾರವು ಯಾರಿಗೂ ಬೇಕಾಗಿಲ್ಲ. ಸರ್ವತಂತ್ರವಾದ ಸ್ವರಾಜ್ಯವೇ ಎಲ್ಲರಿಗೂ ಬೇಕಾಗಿರುತ್ತದೆ. ಆದರೆ ಅದನ್ನು ದೊರಕಿಸುವ ಮಾರ್ಗಗಳು ಮಾತ್ರ ಭಿನ್ನವಾಗಿವೆ. ಡಾ|| ಸಪ್ರು ಮುಂತಾದ ಮವಾಳ ಬಂಧುಗಳು ಸಾಮ್ರಾಜ್ಯ ಸರಕಾರದ ಪರಿಷತ್ತಿನಲ್ಲಿರಬೇಕೆಂದು ಬೇಕಾದಷ್ಟು ಶ್ರಮಪಟ್ಟರು. ಆದರೂ ಅವರ ಬೇಡಿಕೆಯು ಅತ್ಯಲ್ಪವಾಗಿತ್ತು. ಸ್ವರಾಜ್ಯ ಸಂಪಾದನೆಯನ್ನು ಬಿಟ್ಟು ಸಮಾನ್ಯ ಮಾತುಗಳ ಬಗೆ ಯಾಚನೆ ಮಾಡುವದೆಂದರೆ ಮದುಮಗನನ್ನು ಮರೆತು ಲಗ್ನಕ್ಕೆ ಹೊರಟಂತೆ ಆಗುವದು. ಮವಾಳರು ಹಿಡಿದ ಮಾರ್ಗವನ್ನು ಸ್ವೀಕರಿಸಿ ಠರಾವು, ವಿನಂತಿ, ನಿಷೇಧ ಮುಂತಾದವುಗಳನ್ನು ಮಾಡುತ್ತ ಕೂತರೆ ನಮ್ಮ ಧ್ಯೇಯವು ಎಂದಿಗೂ ಸಾಧ್ಯವಾಗಲಾರದು. ಇನ್ನು ಎರಡನೆಯ ಪಕ್ಷವೆಂದರೆ ಸ್ವರಾಜ್ಯ ಪಕ್ಷ. ಈ ಪಕ್ಷದ ಜನರಲ್ಲಿ ಪಾಶ್ಚಾತ್ಯ ಸಂಸ್ಕೃತಿಯು ನಟ್ಟುಹೋಗಿದೆ. ಅವರಿಗೆ ಪೌರ್ವಾತ್ಯರಾದ ಮಹಾತ್ಮರ ಮಾರ್ಗವು ವಿಚಿತ್ರವಾಗಿ ತೋರುತ್ತದೆ. ಇಡೀ ಹಿಂದುಸ್ಥಾನವನ್ನು ಸಂಪೂರ್ಣವಾಗಿ ಸ್ವತಂತ್ರ ಮಾಡಲು ಸಮರ್ಥವಾಗಿದ್ದ ಒಂದೇ ಒಂದು ಮಾರ್ಗವಾಗಿದ್ದ ರಾಟಿಗೆ ಸಹ ಅವರು ಹೆಸರಿಡುತ್ತಾರೆ. ಅವರಿಗೆ ಮುಖ್ಯವಾಗಿ ಜಗಳಬೇಕು. ಮಹಾತ್ಮರು ಸವಿನಯ ಶಾಸನ ಭಂಗವನ್ನು ಆರಂಭಿಸಿದ್ದರೆ ಅಥವಾ ಮಹಾತ್ಮರು ಸೆರೆಮನೆಗೆ ಹೋದಾಗ ನಾವಾಗಿ ಅದನ್ನು ಪ್ರಾರಂಭಿಸಿದ್ದರೆ ಸ್ವರಾಜ್ಯ ಪಕ್ಷದ ಸ್ಥಾಪನೆಯಾಗುತ್ತಿದ್ದಿಲ್ಲ. ಕಾಯದೆ ಭಂಗವನ್ನು ನಿಲ್ಲಿಸಲು ಕೌನ್ಸಿಲದ ಒಣವಾದವು ಬೆಳೆಯಿತು. ಮತ್ತು ಸ್ವರಾಜ್ಯ ಪಕ್ಷದ ನಮ್ಮ ಬಂಧುಗಳು ಕೌನ್ಸಿಲುಗಳನ್ನು ಪ್ರವೇಶಿಸಿದರು. ಕೌನ್ಸಿಲ ಪ್ರವೇಶಕ್ಕೆ ಸಹ ಅವರಿಗೆ ಮಹಾತ್ಮರ ಹೆಸರಿನಿಂದಲೂ ಮಹಾ ಸಭೆಯ ಸಹಾನುಭೂತಿಯಿಂದಲೂ ಬಹಳ ಸಹಾಯವಾಯಿತು. ತಾವು ಕೌನ್ಸಿಲುಗಳಿಂದ ಸ್ವರಾಜ್ಯವನ್ನು ದೊರಕಿಸುವೆವೆಂದು ಅವರಿಗೆ ಅನಿಸುತ್ತಿದ್ದರೆ ಹಾಗೇ ಆಗಲಿ. ಯಾವ ಮಾರ್ಗದಿಂದಲಾದರೇನು, ಸ್ವರಾಜ್ಯವು ಸಿಕ್ಕರೆ ಸಾಕು. ಇನ್ನು ಸ್ವಂತ ನನ್ನ ವಿಷಯಕ್ಕೆ ಕೇಳಿದರೆ, ನಾನು ಬಹಿಷ್ಕಾರವಾದಿಯು. ಬಹಿಷ್ಕಾರ ತ್ರಯವು ನನಗೆ ಮೊದಲಿನಿಂದ ಮಾನ್ಯವಿರುತ್ತದೆ. ಕೌನ್ಸಿಲದ ಕಾರ್ಯದಲ್ಲಿ ವಿಶ್ವಾಸವಿಲ್ಲದಂಥ ನಾವು ಇನ್ನುಮೇಲೆ ಬಾರ್ಡೋಲಿಯಲ್ಲಿ ನಿರ್ಣಯಿಸಿದಂತೆ ವಿಧಾಯಕ ಕಾರ್ಯಕ್ರಮವನ್ನೇ ಕೈಕೊಳ್ಳತಕ್ಕದ್ದು. ನಮ್ಮ ವಿಧಾಯಕ ಕಾರ್ಯಕ್ರಮದಲ್ಲಿ ಸ್ವರಾಜ್ಯ ಪಕ್ಷವು ಸಹಾಯ ಮಾಡಿದರೆ ಒಳಿತೇ ಆಯಿತು. ಆದರೆ ನಾವು ಮಾತ್ರ ನಮಗೆ ವಿಶ್ವಾಸವಿಲ್ಲದಂಥ ಕೌನ್ಸಿಲದ ಕಾರ್ಯಕ್ರಮದಲ್ಲಿ ಅವರಿಗೆ ನೆರವಾಗಲಾರೆವು.

ನಮ್ಮ ಮುಂದಿನ ಕೆಲಸ.

ಈಗ ನಾವು ಕೈಕೊಳ್ಳಬೇಕಾಗಿದ್ದ ಮುಖ್ಯ ಕೆಲಸಗಳು ಮೂರು. ಮೊದಲನೆಯದು ಖಾದಿಪ್ರಸಾರ. ಈ ಕಾರ್ಯದಲ್ಲಿ ನಮ್ಮ ಸೋದರಿವರ್ಗದಷ್ಟು ಸಹಾಯವನ್ನು ಮತ್ತಾರೂ ಮಾಡಲಾರರು. ಇವರ ವಿಷಯಕ್ಕೆ ಮಹಾತ್ಮಜಿಯವರ ಮನಸ್ಸಿನಲ್ಲಿ ಬಹಳ ವಿಶ್ವಾಸವಿರುತ್ತದೆ. ಪುರುಷರು ಸೆರೆಮನೆಗೆಹೋಗಲಿ ಮತ್ತೇನಾದರೂ ಮಾಡಲಿ, ಇವರು ರಾಟಿಯ ಸಹಾಯದಿಂದ ಖಾದಿ ಪ್ರಸಾರದ ಮಹಾ ಕಾರ್ಯವನ್ನು ಶಾಂತರೀತಿಯಿಂದ ಮಾಡತಕ್ಕದ್ದು. ರಾಷ್ಟ್ರೀಯ ಶಿಕ್ಷಣವೇ ನಮ್ಮ ಮುಂದಿನ ಎರಡನೆಯ ಕೆಲಸ. ಪ್ರಾಂತಿಕ ಶಿಕ್ಷಣ ಸಮಿತಿಗಳನ್ನೂ ಮಧ್ಯವರ್ತಿ ಮಂಡಲಗಳನ್ನೂ ಅಲ್ಲಲ್ಲಿ ಸ್ಥಾಪಿಸಿ ರಾಷ್ಟ್ರೀಯ ಶಿಕ್ಷಣದ ಕಾರ್ಯವನ್ನು ಸದ್ಯಕ್ಕಿಂತ ಹೆಚ್ಚು ಜೋರಿನಿಂದ ಮಾಡುವದು ಅವಶ್ಯವಿರುತ್ತದೆ. ಇನ್ನು ಮೂರನೆಯ ಕೆಲಸವೆಂದರೆ ಟಿಳಕ ಸ್ವರಾಜ್ಯ ಫಂಡು. ಹಣವಿಲ್ಲದೆ ಯಾವ ಕಾರ್ಯವೂ ಸಾಗುವಂತಿಲ್ಲ. ಸದ್ಯಕ್ಕೆ ರಾಷ್ಟ್ರನಿಧಿಯನ್ನು ಕೂಡಿಸಿ ಅಸಹಕಾರ ಚಳವಳಿಯನ್ನು ಸಾಗಿಸಿದ್ದು ನಿಜವು. ಆದಾಗ್ಯೂ ನಮ್ಮ ಆರ್ಥಿಕಸ್ಥಿತಿಯನ್ನು ಇದಕ್ಕೂ ಹೆಚ್ಚಿಗೆ ಸುವ್ಯವಸ್ಥಿತವಾಗಿ ಮಾಡಬೇಕಾಗಿದೆ. ಸ್ವರಾಜ್ಯ ಫಂಡಿನ ವಾರ್ಷಿಕ ಉತ್ಪನ್ನವು ಕಾರ್ಯಪಕ್ಷಕ್ಕೆ ಇಂತಿಷ್ಟು ಇರತಕ್ಕದ್ದೆಂದು ಗೊತ್ತುಪಡಿಸಿ ಅದನ್ನು ತಪ್ಪದೆ ಕೂಡಿಹಾಕಬೇಕು. ನಮ್ಮ ಸಾಂಪತ್ತಿಕ ಪರಿಸ್ಥಿತಿಯು ಸುವ್ಯವಸ್ಥಿತವಾಗಿ ಉಳಿಯಲಿಕ್ಕೆಂದು ಒಂದು ಮಂಡಲವನ್ನು ನೇಮಿಸಬೇಕು. ಮತ್ತು ರಾಷ್ಟ್ರಕಾರ್ಯಕ್ಕಾಗಿ ಶ್ರಮಪಡುವ ದೇಶಭಕ್ತರಿಗೆ ಈ ಹಣದಿಂದ ಶಕ್ಯವಿದ್ದಮಟ್ಟಿಗೆ ಸಹಾಯಮಾಡಬೇಕು. ಸಿವಿಲ್ ಸರ್ವೆಂಟರು ಅನ್ಯಾಯದಿಂದ ಅಪಾರ ಹಣವನ್ನು ಕಸಿದುಕೊಳ್ಳುತ್ತಿರಲು ಸಮಾಜ ಸೇವಕರು ನ್ಯಾಯದ ಭಿಕ್ಷೆಯನ್ನು ಬೇಡಿದರೆ ಅದನ್ನು ಕೊಡುವದು ನಮ್ಮ ಕರ್ತವ್ಯವೇ ಆಗಿರುತ್ತದೆ.

ನಭಾ ಪ್ರಕರಣ.

ನಮ್ಮ ಶೀಖ ಬಂಧುಗಳ ಧೈರ್ಯ ಶೌರ್ಯ ಮತ್ತು ಅಹಿಂಸಾ ಮುಂತಾದ ಗುಣಗಳು ಅನುಕರಣವಿರುತ್ತವೆ. ನಭಾ ಸಂಸ್ಥಾನದ ಮಹಾರಾಜರ ವಿಷಯಕ್ಕೆ ನಮ್ಮ ಮನಸ್ಸಿನಲ್ಲಿ ಆದರವೇ ಇರುತ್ತದೆ. ಅವರ ಸದ್ಗುಣಗಳೇ ಅವರ ಪದಚ್ಯುತಿಗೆ ಮೂಲವಾದವೆಂದು ಖಂಡಿತವಾಗಿ ಹೇಳಬಹುದು. ನಮ್ಮ ದೇಶೀಯ ಸಂಸ್ಥಾನಗಳು ಎಷ್ಟಾದರೂ ನಮ್ಮವು. ಅವುಗಳ ಅರಸರಾದರೂ ನಮ್ಮ ಧರ್ಮದವರೇ. ಇಂದಿಲ್ಲ ನಾಳೆ ಅವರೂ ನಮಗೇ ಕೂಡುವರು. ಆದರೆ ಅಂಥ ಪ್ರಸಂಗವು ಇಷ್ಟರಲ್ಲಿಯೇ ಬರಬಹುದೆಂದು ನಾನು ತಿಳಿದಿಲ್ಲ. ತಮ್ಮ ಧರ್ಮಬಾಂಧವರಿಗೆ ಪಾರತಂತ್ರ್ಯದಿಂದ ಮುಕ್ತರಾಗಲಿಕ್ಕೂ ಮತ್ತು ಗುರುದ್ವಾರದ ಸುಧಾರಣೆಯನ್ನು ಮಾಡಲಿಕ್ಕೂ ಸಹಾನುಭೂತಿಯನ್ನು ತೋರಿಸಿದ್ದರಿಂದ ನಭಾದ ಮಹಾರಾಜರು ಇಂಥ ಸಂಕಟಕ್ಕೆ ಗುರಿಯಾದರು. ಸಿರೋಮಣಿ ಗುರುದ್ವಾರಪ್ರಬಂಧಕ ಕಮಿಟಿಯನ್ನೂ ಮತ್ತು ಅಕಾಲಿ ದಲವನ್ನೂ ಬೇಕಾಯಿದೇಶೀರ ಎಂದು ನಿರ್ಣಯಿಸಿದ್ದು ಅವರಿಗಷ್ಟೇ ಸಂಬಂಧಪಟ್ಟಿರುವದಿಲ್ಲ. ಅದರಿಂದ ಇಡೀ ಹಿಂದುಸ್ಥಾನಕ್ಕೇ ಒಂದು ತರದ ಅಪಮಾನ ಮಾಡಿದಂತಾಯಿತು. ನಾವು ಅದಕ್ಕೆ ಸರಿಯಾದ ಉತ್ತರವನ್ನು ಕೊಡದಿದ್ದರೆ ನಮ್ಮ ಪಾಡಾದರೂ ಇಂದಲ್ಲ ನಾಳೆ ಹಾಗೇ ಆಗುವದು. ಈ ವಿಷಯದಲ್ಲಿ ನಾವು ಅವರಿಗೆ ಕೇವಲ ವಾಙ್ಮಾತ್ರ ಸಹಾನುಭೂತಿಯನ್ನು ತೋರಿಸದೆ ಪ್ರತ್ಯಕ್ಷ ಸಹಾಯವನ್ನಾದರೂ ಮಾಡಬೇಕು. ಆದರೆ ಸವಿನಯ ಶಾಸನಭಂಗದ ಮಾತು ಕ್ಷುದ್ರವಾದದ್ದಲ್ಲ. ವಿಧಾಯಕ ಕಾರ್ಯಕ್ರಮವನ್ನು ಪೂರ್ತಿಗೊಳಿಸುವದರಿಂದಲೇ ಅಂಥ ಪಾತ್ರತೆಯು ನಮ್ಮಲ್ಲಿ ಬರುವದು. ಸವಿನಯ ಶಾಸನಭಂಗದ ಹೊರ್ತು ಸ್ವರಾಜ್ಯವು ಸಿಗಲಾರದು. ಆದ್ದರಿಂದ ನಾವೆಲ್ಲರು ವಿಶೇಷವಾಗಿ ಈಗ ಸ್ವರಾಜ್ಯಾಕ್ಯಮವನ್ನು ತಂದಂಥವರು ಮುಂದೆಬಂದು ಇಂಥ ತಯಾರಿಯನ್ನು ಮಾಡತಕ್ಕದ್ದು.

ಸ್ವಾತಂತ್ರ್ಯದ ದಾರಿ.

ಮಿತ್ರರೇ, ಸ್ವಾತಂತ್ರ್ಯಕ್ಕೆ ರಾಜಮಾರ್ಗವಿಲ್ಲ. ಆದರೆ ಅದಕ್ಕೆ ಒಂದು ನಡುದಾರಿಯು ಮಾತ್ರ ಇರುತ್ತದೆ. ಸಾವಿಗೆ ಸಿದ್ಧವಾಗುವದೇ ಈ ದಾರಿಯು. ಮಹಾಸಭೆಯ ಕಾರ್ಯಕಾರೀ ಮಂಡಲದ ಎಲ್ಲ ಸಭಾಸದರು ಒಮ್ಮೆಲೆ ಒಮ್ಮನಸ್ಸಿನಿಂದ ಸಾಯಲಿಕ್ಕೆ ಸಿದ್ಧರಾದರೆ ಒಂದೇ ವರ್ಷದಲ್ಲಿ ಸ್ವರಾಜ್ಯವು ಸಿಗುವದೆಂದು ನಾನು ಸಾರಿಹೇಳುತ್ತೇನೆ. ಮಹಾಸಮಿತಿಯು ಇಂಥ ಸ್ವಾರ್ಥತ್ಯಾಗಕ್ಕೆ ಟೊಂಕಕಟ್ಟಿದರೆ ಅದು ಒಂದೇ ತಿಂಗಳದಲ್ಲಿ ಸಿಗುವದು. ಆದರೆ ಮಿತ್ರರೇ, ಸ್ವರಾಜ್ಯವು ಮತ್ತೆಲ್ಲಿಯೂ ಇಲ್ಲ. ಸ್ವಂತ ನಮ್ಮ ಕೈಯಲ್ಲಿಯೇ ಇರುತ್ತದೆ. ರಾಷ್ಟ್ರವು ಕರೆದಾಕ್ಷಣವೇ ಸಾಯಲಿಕ್ಕೆ ನೀವೆಲ್ಲರೂ ಸಿದ್ಧರಾದರೆ ಅದು ಇಂದೇ ಸಿಗುವದು, ಆದರೆ ನಾವು ಇದಕ್ಕೆ ಸಿದ್ಧರಾಗದೆ, ಬಾರ್ಡೋಲಿಯ ಕಾರ್ಯಕ್ರಮಕ್ಕೆ ಮೂಗು ಮುರಿಯುತ್ತ ಕೂತರೆ ಮಹಾಸಭೆಯ ಧ್ಯೇಯದ ಬದಲಾವಣೆಯ ವಿಷಯಕ್ಕೆ ಮಾತಾಡುವದರಲ್ಲಿ ಏನೂ ಅರ್ಥವಿಲ್ಲ. ಆದ್ದರಿಂದ ಮಿತ್ರರೇ, ನಾವೆಲ್ಲರೂ ಈಗಿನಿಂದಲೇ ನಮ್ಮ ಕಾರ್ಯಕ್ಕೆ ಕೈಹಾಕಿ ದೇಶೋದ್ಧಾರಕ್ಕಾಗಿ ಪ್ರಾಣವನ್ನು ಸಹ ಕೊಡಲಿಕ್ಕೆ ಸಿದ್ಧರಾಗೋಣ. ಈಮೇರೆಗೆ ನಾವು ಒಂದು ವರ್ಷದವರೆಗೆ ಕೆಲಸಮಾಡಿ, ವರ್ಷದ ಅಂತದಲ್ಲಿ ಸರಕಾರವು ನಮ್ಮ ಮುಖಂಡರನ್ನು ಸೆರೆಮನೆಯಿಂದ ಹೊರಗೆ ಕರೆದು, ಅವರ ಮುಂದೆ ತಮ್ಮ ಕೃತಕರ್ಮಕ್ಕಾಗಿ ಪಶ್ಚಾತ್ತಾಪವನ್ನು ವ್ಯಕ್ತಗೊಳಿಸಿ, ಅವರಿಗೆ ಸ್ವರಾಜ್ಯದ ಸನದನ್ನು ಅರ್ಪಿಸದಿದ್ದರೆ, ಕೂಡಲೆ ನಾವು ದೇವರನ್ನು ಸ್ಮರಿಸಿ ನಮ್ಮ ಪ್ರಜಾಸತ್ತಾತ್ಮಕ ರಾಜ್ಯವನ್ನು ಜಾಹೀರಮಾಡೋಣ. ಅಖಿಲ ಹಿಂದುಸ್ಥಾನದ ಧರ್ಮ ಬಂಧುತ್ವವನ್ನು ಪ್ರಸಿದ್ಧಪಡಿಸೋಣ. ಸನ್ 1921 ರಲ್ಲಿ ನಾವು ನಮಗೂ ಮತ್ತು ನಮ್ಮ ಸರಕಾರಕ್ಕೂ ಒಂದು ವರ್ಷದ ಅವಧಿಯನ್ನು ಕೊಟ್ಟಿದ್ದೆವು. ಆದರೆ ಆ ಅವಧಿಯಲ್ಲಿ ನಾವು ನಮ್ಮ ಕರ್ತವ್ಯವನ್ನು ಮಾಡಲಿಲ್ಲ. ಆದ್ದರಿಂದ ಒಂದು ವರ್ಷವಾದ ನಂತರ ಸ್ವರಾಜ್ಯವನ್ನು ಬೇಡುವ ಅಧಿಕಾರವೇ ನಮಗೆ ಉಳಿಯಲಿಲ್ಲ. ಆದ್ದರಿಂದ ನಾವು ಮತ್ತೊಮ್ಮೆ ನಾಗಪುರದ ಕಾರ್ಯಕ್ರಮವನ್ನೇ ಕೈಕೊಂಡು ಮಹಾತ್ಮಜಿಯವರು ಹೇಳಿದಂತೆ ಆ ಕೆಲಸವನ್ನು ದೇವರನ್ನು ಸ್ಮರಿಸಿ ಮಾಡೋಣ. ಹಾಗೆ ನಾವು ಮಾಡಿದರೆ ನಮಗೆ ಕಳೆದುಹೋಗಿದ್ದ ಸ್ವರಾಜ್ಯವು ತಿರುಗಿಸಿಗುವದು. ಆ ಮೇಲೆ ನಾವು ನಮ್ಮ ಜಯಭೇರಿಯನ್ನು ಹೊಡಿಯೋಣ. ಈ ಜಯಭೇರಿಯು ಯಾವದಂದರೆ— ಮಹಾತ್ಮಾ ಗಾಂಧಿಕಿ ಜಯ!

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

A WORD TO
MR. HOSKOPPA KRISHNA RAO

(By Rama Sishya)

The one characteristic feature of our people is—blind imitation. Not a single institution exists in British India, which Mysore cannot boast of. To-day a Hindu Sabha springs into existence and lo! there rises into prominence a parallel institution with wellcut programme and high-sounding titles. Another day a journalistic association is established in Bombay and Mysore wants to follow suit. Instances can be multiplied of such institutions and associations not one of which is in a flourishing condition.

The latest instance is that of Mr. Hosakoppa Krishna Rao's "wildgoose chase." He has called for a conference of political workers at Hariharpur, the object of which is to establish a permanent institution in order to attain responsible government in Mysore. Nothing short of responsible government with an executive dependent on the legislature will satisfy Mr. Krishna Rao! In his sporadic outbursts of patriotism, Mr. Krishna Rao has entirely neglected to understand the political genius of our people. This is his one great defect. But that is not all. His greatest weakness lies in that he has failed to grasp the political condition of our State. I sincerely admire the energy, ability and noble sentiments of Mr. Krishna Rao. But he ought to know there is a fundamental difference between British India and our State. Time and again this has been emphasised by the Editor of the "Mysore Star." Our interests are one with His Highness. The Government of His Highness are endeavouring to do their best to improve the condition of our people. His Highness takes particular interest in the welfare of our people. However well-intentioned His Highness may be, at the present state of affairs, he is not in a position to quicken the pace of Reforms. Hence our duty is clear. We should educate the electorate and work the reforms to a successful end so that His Highness may be pleased to grant further instalment of reforms at no distant date. Does this require agitation? So I would like to ask these two questions to Mr. Krishna Rao. (1) What about the condion of our electorate?—Are they not indifferent to politics? (2) What is the political condition of our State?—Are His Highness' Government grudging to give reforms?

It is not my intention to deprecate the attempts of Mr. Krishna Rao. But I only contend that it is too premature and inopportune to have an organization of the kind contemplated by the leader of the Malnad Association.

Before concluding I wish to draw the attention of Mr. Krishna Rao to that portion of Maulana Mohammed Ali's Presidential address at Cocanada concerning Native States.

ಚಳ್ಳಕೆರೆ ತಾಲ್ಲೂಕು ಬಾಜೂರು ಗ್ರಾಮದ ರೈತರ ಗೋಳಾಟ.

ಈಗ್ಗೆ ಸುಮಾರು 5-6 ವರ್ಷಗಳಿಂದಲೂ ಕಾಲಕ್ಕೆ ಸರಿಯಾಗಿ ಮಳೆ ಬಾರದೆ ಬೆಳೆಯು ಅನುಕೂಲವಾಗಿ ಆಗದೆ ಇದ್ದುದಲ್ಲದೆ ಈ ವರ್ಷ ಸುತರಾಂ ಮಳೆ ಬೆಳೆ ಆಗದೆ ವ್ಯವಸಾಯದಿಂದಲೇ ಜೀವಿಸುವ, ಬಡರೈತರು ಕೇವಲ ಹೀನಸ್ಥಿತಿಗೆ ಬಂದಿರುತ್ತಾರೆ. ಈ ಗ್ರಾಮವನ್ನು ಅಭಿವೃದ್ಧಿಪಡಿಸಲು ನೀರಿನ ಸಪ್ಲೈ ಮಾಡಬೇಕೆಂದು ಈ ಪುರನಿವಾಸಿಗಳಾದ ಮ|| ಪಟೇಲ್ ಹನುಮಂತಯ್ಯನವರು ಮತ್ತು ರಾಮಣ್ಣನವರು ಸಹ ಈ ಗ್ರಾಮಕ್ಕೆ ಸಮೀಪದಲ್ಲಿರುವ ವೇದಾವತಿನದಿ ನೀರನ್ನು ನಾಲಾಮೂಲಕ ತಂದುಕೊಳ್ಳಲು ಯೋಚಿಸಿ ಸರ್ಕಾರದ ತಿಳುವಳಿಕೆಗೆ ತಂದು ನಾಲಾತರುವ ಪ್ರಯತ್ನದಲ್ಲಿದ್ದರು. ನಮ್ಮಗಳ ದುರಾದೃಷ್ಟದಿಂದ ಮೇಲ್ಕಂಡ ಇಬ್ಬರೂ ಸ್ವರ್ಗಸ್ಥರಾದರು. ತರುವಾಯ ಗ್ರಾಮದಲ್ಲಿ ಪಾರ್ಟಿಯುಂಟಾಗಿ ಮೇಲಿನ ಪರೋಪಕಾರವಾದ ಕೆಲಸಗಳ್ಯಾವತ್ತೂ ನಿಂತುಹೋದವು. ಈ ಬಡಜನಗಳ ಗೋಳಾಟಹೆಚ್ಚಿದ್ದರಿಂದ ಆಗ್ಗೆ ಇದ್ದ ಸಬಡಿವಿಜನ್ ಸಾಹೇಬರವರಾದ ಮಿ|| ಅಪ್ಪಣ್ಣಯ್ಯಂಗಾರವರು, ಸ್ಥಳಕ್ಕೆ ದಯಮಾಡಿ ಅನುಕೂಲಗಳನ್ನು ಕಲ್ಪಿಸಿಕೊಡುವದಾಗಿ ಅಪ್ಪಣೆಯನ್ನಿತ್ತು, ಪಟೇಲಿ ಕೆಲಸಕ್ಕೆ ಮ|| ಪೌತಿ ಪಟೇಲರ ಖಾಸಾಮಾವ ಪೋದಪ್ಪನವರನ್ನು ನೇಮಿಸಿ ಸರಿಯಾದ ಸಲಹೆ ಕೊಟ್ಟು ವಾಪಸ್ ದಯಮಾಡಿಸಿದರು. ಈ ಪಟೇಲ್ ಪೋದಪ್ಪನವರು ತಮ್ಮ ರೈತರಿಗೆ ಉಂಟಾಗಿದ್ದ ಎಲಾ ತೊಂದರೆಗಳನ್ನು ಹೋಗಲಾಡಿಸಲು ಮೇಲ್ಕಂಡ ನಾಲಾವಿಚಾರದಲ್ಲಿ ರೈತರಿಂದ ಹಣ ವಸೂಲ್ ಮಾಡಿ ಕೆಲವು ರೈತರಿಗೆ ತಾವೂ ಸಹ ಸಾಲಕೊಟ್ಟು 5000 ರೂಪಾಯಿಗಳನ್ನು ಜಮಾಯಿಸಿ ಸರ್ಕಾರದ ಅಪ್ಪಣೆಮೇರೆ ಕಾಂಗಾರಿ ಶುರುಮಾಡಿಸಿರುತ್ತಾರೆ. ನಾಲಾ ಹಾಲಿ 4 ಮೈಲಿ ಫಾಸಲೆ ಬಂದಿರುತ್ತೆ, ಇನ್ನು 6 ಮೈಲಿ ಆಗಬೇಕಾದ್ದು ಬಾಕಿ ಇರುತ್ತೆ. ಈರೀತಿ ಪರೋಪಕಾರಿಯಾದ ಪಟೇಲ್ ಪೋದಪ್ಪನವರಿಗೆ ಈ ಗ್ರಾಮದ ಶ್ಯಾನುಭೋಗರು ಸ್ವಾರ್ಥಪರತೆಯಿಂದ ದ್ವೇಷಿಗಳಾಗಿ ಇಲ್ಲದ ದೋಷಗಳನ್ನೆಲ್ಲಾ ಆರೋಪಿಸುತ್ತ ನಮಗೂ ಮತ್ತು ಪಟೇಲರಿಗೂ ಸಹ ಕೇವಲ ಅಹಿತಚಿಂತಕರಾಗಿರುತ್ತಾರೆ. ಈ ಪಟೇಲ್ ಪೋದಪ್ಪನವರಿಗೆ ಮುಂದೆ ಯೇನಾದರೂ ತೊಂದರೆ ಒದಗಿದ್ದೇ ಆದರೆ ನಾಲಾಕಾಂಗಾರಿ ಕೆಲಸಕ್ಕೆ ಕುಂದಕಬರುವದರಲ್ಲಿ ಅಭ್ಯಂತರವೇನೂ ತೋರುವುದಿಲ್ಲ. ಈ ಸತ್ಕಾರ್ಯ ಪೂರೈಸುವವರಿಯಂತರವಾದರೂ ಪಟೇಲರ ಶ್ರೇಯೋಭಿವೃದ್ಧಿ ಬಯಸುವಂತೆ ಶಾನುಭೋಗರನ್ನು ಪ್ರೇರೇಪಿಸಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಈ ನಾಲಾ ಕಾಂಗಾರಿಯಿಂದ ನೂರಾರು ಮಂದಿ ಕೂಲಿಗಳು ಜೀವಿಸುತ್ತಾರಲ್ಲದೆ ರೈತರಾದ ನಮಗೂ ಅನುಕೂಲವಾಗುತ್ತೆ. ಆದ್ದರಿಂದ ಇದಕ್ಕೆ ಭಂಗಬಾರದಂತೆ ಘನವನ್ನೈದಿದ ನಮ್ಮ ಸರ್ಕಾರದವರು ನಿಗಾಕೊಟ್ಟು ಕಾಪಾಡುತ್ತಾರಾಗಿ ನಂಬಿದ್ದೇನೆ. ಸತ್ಯವಾದಿ.

ಶ್ರೀ ಜಗದ್ಗುರುಗಳಿಂದ ಗುರುಕುಲಸ್ಥಾಪನೆ.

ಗದಗ ತಾ|| ಪೈಕಿ ಶಿಂಗಟಾಲೂರ ಶ್ರೀ ವೀರಭದ್ರದೇವಾಲಯದಲ್ಲಿ ಗುರುವರ್ಗದವರ ಉನ್ನತಿಗಾಗಿ ಪ್ರಧಾನ ಶಿಕ್ಷಣಾಲಯ (ಗುರುಕುಲ) ವನ್ನು ಶ್ರೀ ಜಗದ್ಗುರು ಪಂಚಾಚಾರ್ಯರ ವತಿಯಿಂದ ಸ್ಥಾಪನೆಗೊಳಿಸಬೇಕೆಂದು ಟೆಂಪಲ್ ಕಮಿಟಿಯವರ ಸಮ್ಮತಿಯ ಮೇರಿಗೆ ಗುರುಭಕ್ತಕೇಸರಿ ಪದವೀಧರರಾದ ಶಾಂತಪ್ಪ ವೀರಭದ್ರಪ್ಪ ಕುಬಸದ ಹಮ್ಮಿಗಿ ಇವರು ಈ ವಳಗಾಗಿ ಕರಸ್ಪಾಂಡೆನ್ಸ ನಡೆಸಿದ್ದರಷ್ಟೆ. ಇವರ ಪ್ರಾರ್ಥನೆಯನ್ನು ಅಂಗೀಕರಿಸಿ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಹುವ್ವಿನಹಡಗಲಿ ಮುಕ್ಕಾಮಿನಿಂದ ಹುವ್ವಿನಹಡಗಲಿ, ಹರಪನಹಳ್ಳಿ, ತಾಲ್ಲೂಕ ಬೋರ್ಡ ಪ್ರಸಿಡೆಂಟರೇ ಮೊದಲಾದ ಪ್ರಮುಖರಿಂದೊಡಗೂಡಿ ಇದೇ ಕಾರ್ತೀಕ ಶುದ್ಧ ೧ ದಿವಸ ಶ್ರೀ ದೇವಸ್ಥಾನಕ್ಕೆ ದಯಮಾಡಿಸಿ ಟೆಂಪಲ್ ಕಮಿಟಿಯವರ (ಶಿಂಗಟಾಲೂರ, ಹಮ್ಮಿಗಿ, ನವಲಿಗ್ರಾಮಗಳ ಪಂಚಜನರ) ಅಭಿಪ್ರಾಯವನ್ನರಿತು ಈ ಸ್ಥಾನವು ಗುರುಕುಲವನ್ನು ಸ್ಥಾಪಿಸುವದಕ್ಕೆ ಅತ್ಯಂತ ಪ್ರಶಸ್ತವಾಗಿರುವದಲ್ಲದೆ ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳ ಮಧ್ಯಸ್ಥಲವಾಗಿರುವದರಿಂದ ಈ ಕ್ಷೇತ್ರದಲ್ಲಿ ಗುರುಕುಲವನ್ನು ಅವಶ್ಯವಾಗಿ ಸ್ಥಾಪಿಸಬೇಕೆಂದು ಅಪ್ಪಣೆಕೊಡಿಸಿ, ಎರಡು ದಿವಸಗಳವರೆಗೆ ಅಲ್ಲಿಯೇ ಇದ್ದು ಯಾವತ್ತು ಸ್ಥಳವನ್ನು ಪರಾಮರಿಸಿ ಈ ಸಂಸ್ಥೆಯು ಸುರಕ್ಷಿತವಾಗಿ ಚಿರಕಾಲ ನಡೆಯುವಂತೆ ಮಾಡತಕ್ಕ ಆಲೋಚನೆಗಳನ್ನು ಪೂರೈಸಿಕೊಂಡು ಶ್ರೀ ದೇವಸ್ಥಾನದ ಶರಾ (ವಿಜಿಟರ್ಸ್) ಬುಕ್ಕಿನಲ್ಲಿ [illegible] ಸ್ವಹಸ್ತಾಕ್ಷರಮೂಲಕ ಆಶೀರ್ವಚನವನ್ನು ದಯಪಾಲಿಸಿರುತ್ತಾರೆ. ಅದರೊಳಗಿನ ಮುಖ್ಯಾಂಶವನ್ನು ಇದರಡಿಯಲ್ಲಿ ಕೊಟ್ಟಿರುತ್ತೇನೆ.—ದೈವಭಕ್ತ.

ಇಂಥಾ ಶ್ರೀವೀರಭದ್ರೇಶ್ವರನ ಸ್ಥಾನದಲ್ಲಿ ಧರ್ಮಕಾರ್ಯಗಳ ವ್ಯವಸ್ಥೆಗೊಳಿಸುವದಕ್ಕೆ ಯೋಗ್ಯವಿರುವುದು. ಈ ದೇವಸ್ಥಾನದ ಕಾರ್ಯಕಾರಿ ಮಂಡಳಿಯವರ ಪ್ರಾರ್ಥನೆಯ ಮೇರೆಗೆ ಮಹಾಸಂಸ್ಥಾನದ ಶುದ್ಧಸವಾರಿಯು ಚಿತ್ತೈಸಿ ಪರಾಮರ್ಶಿಸಿದ್ದಾಯಿತು. ಈ ಸ್ಥಾನವು ಬಹುರಮ್ಯವಾಗಿಯೂ ನಿರ್ಮಲವಾಗಿಯೂ ಪವಿತ್ರಕ್ಷೇತ್ರವಾಗಿಯೂ ಇರುವದರಿಂದ, ಶಿವಯೋಗಿಗಳವಾಸಕ್ಕೆ ಯೋಗ್ಯವಾಗಿರುವದು. ಈ ಸ್ಥಾನದಲ್ಲಿ ಶಿವಯೋಗನಿಷ್ಣಾತರಾಗಿಯೂ ಶಿವಶಾಸ್ತ್ರಪಾರಂಗತರಾಗಿಯೂ ಇರತಕ್ಕ ಯೋಗ್ಯರಾದೊಬ್ಬ ಅಧಿಕಾರಿಗಳನ್ನು ಕಳುಹಿಸಿ ಶಿವಯೋಗಸಾಧಕರನ್ನು ತಯಾರಿಸಿ ತದ್ದ್ವಾರ ಸಾಕ್ಷಾತ್ ಶಿವಭಕ್ತರನ್ನು ಧರ್ಮಬೋಧೆಯಿಂದ ಉದ್ಧಾರಗೊಳಿಸುವ ಸುವ್ಯವಸ್ಥೆಯನ್ನು ಮಹಾಸಂಸ್ಥಾನದಿಂದ ಮಾಡೋಣವಾಗುತ್ತೆ.

ಮುಕ್ಕಾಮು ಶಿಂಗಟಾಲೂರ
ಶ್ರೀ ವೀರಭದ್ರದೇವಾಲಯ,
ತಾ|| 11-11-23.

ಶ್ರೀಗಳವರ
ಬಾಲಬೋಧಸಹಿ.

ವೀರಶೈವರೂ ಧಾರವಾಡ ಜಿಲ್ಲೆಯಲ್ಲಿ ನಡೆದ ಕೌನ್ಸಿಲ್ ಚುನಾವಣೆಯೂ.

(ಲೇ—ಕಾವ್ಯತೀರ್ಥ ಗುರುಮೂರ್ತಿಶಾಸ್ತ್ರಿ, ಕಜ್ಜರಿ).

ವಾಠಕಮಹಾಶಯರೇ! ಈ ದಿವಸ ಧಾರವಾಡ ಜಿಲ್ಲೆಯೊಳಗಿನ ವೀರಶೈವರ ಸಂಬಂಧವಾದ ಒಂದು ವಿಚಿತ್ರ ಮತ್ತು ಬೋಧಪ್ರದವಾದ ಚಿತ್ರವನ್ನು ತಮ್ಮೆದುರಿಗಿಡಲಿಕ್ಕೆ ಸಿದ್ಧನಾಗಿರುತ್ತೇನೆ. ಇದನ್ನು ಕಂಡು ಆ ಸಂಬಂಧವುಳ್ಳ ಎಷ್ಟೋ ಜನರು ನನ್ನ ಮೇಲೆ ಕಟಿಕಟಿ ಹಲ್ಲು ಕಡಿದರೂ ಕಡಿಯಬಹುದು. ಪರಂತೂ ನಿಷ್ಪಕ್ಷಪಾತಿಗಳಾದ ಬಹುಜನರು ನನ್ನ ಪಕ್ಷವನ್ನು ಸಮರ್ಥಿಸದೆ ಬಿಡಲಿಕ್ಕಿಲ್ಲವೆಂಬ ಸದ್ಭಾವನೆಯಿಂದ ಮನಸ್ಸಿನಲ್ಲಿ ಸ್ವತಂತ್ರವಾಗಿ ಹೊಳೆದ ನಾಲ್ಕು ಮಾತುಗಳನ್ನು ಬರೆಯುವದೇ ನನ್ನ ಆದ್ಯಕರ್ತವ್ಯವೆಂದು ಭಾವಿಸುತ್ತೇನೆ.—ಮೂರು ವರ್ಷಕ್ಕೊಂದು ಸಾರೆ ಹೇಳಿಕಳಿಸಿದಂತೆ ಬರುವ ಮ್ಯುನ್ಸಿಪಲ್, ಲೋ|| ಬೋರ್ಡ್, ಕಾಯ್ದೆಕೌನ್ಸಿಲ್ ಮುಂತಾದುವುಗಳ ಚುನಾವಣೆಗಳ ಶರತಿಗಳು ಸುಧಾರಿಸಿದ ಇತರ ಜನಾಂಗದವರಿಗೆ ಮಹೋತ್ಸವವಾಗಿ ಪರಿಣಮಿಸಿದರೂ "ಕರ್ನಾಟಕದಲ್ಲಿ ನಮ್ಮನ್ನಾರು ತಡೆಯುವರು" ಎಂದು ಹೆಮ್ಮೆಪಡುವ ನಮ್ಮ ವೀರಶೈವರಿಗೆ ಮಾತ್ರ ಸದ್ಯಕ್ಕಂತೂ ಅವು ಬಕಾಸುರನ ಸರತಿಯಾಗಿ ಪರಿಣಮಿಸಿರುತ್ತದೆ. ಯಾಕಂದರೆ, ಚುನಾವಣೆಯ ಸಮಯವು ಸಮೀಪಿಸಿದ ಕೂಡಲೆ ಸುಧಾರಿಸಿದ ಪ್ರತಿಯೊಂದು ಜನಾಂಗದವರು ತಮ್ಮ ತಮ್ಮ ಸಮಾಜಗಳ ವತಿಯಿಂದ ಒಂದೊಂದು ಜಾಹೀರ ಸಭೆಗಳನ್ನು ಕರೆದು ಆ ಮೂಲಕ ಇಂತಿಷ್ಟು ಜನರಾದ ಇವರೇ ಉಮೇದವಾರರಾಗಿ ನಿಲ್ಲತಕ್ಕದ್ದೆಂದು ನಿಶ್ಚಯಿಸಿ ಆ ಪ್ರಕಾರ ತಮ್ಮ ಪ್ರಯತ್ನವೆಂಬ ರಥವನ್ನು ನಡಿಸಲಿಕ್ಕೆ ಹತ್ತುತ್ತಾರೆ. ಹೀಗಾಗುವದರಿಂದ ಸ್ವಲ್ಪ ಶ್ರಮದಿಂದಲೇ ಅವರು ಸಾಕಷ್ಟು ಫಲವನ್ನು ಹೊಂದಿ ತಮ್ಮ ಇಚ್ಛಾಪ್ರಕಾರ ಯಶಸ್ವಿಗಳಾಗುತ್ತಾರೆ. ಇದರಂತೆ ಆಯಾ ಸಂಘಗಳ ವತಿಯಿಂದ ಪ್ರಕಟಗಳಾಗುವ ವೃತ್ತಪತ್ರಗಳೂ ಕೂಡ ಪ್ರಯತ್ನ ಮಾಡತಕ್ಕವುಗಳಾಗುವದರಿಂದ ಅವರ ಈ ಕಾರ್ಯಗಳಲ್ಲಿ ದ್ರವ್ಯಬಲವೂ ಕೂಡ ಹೆಚ್ಚಿಗೆ ಬೇಕಾಗುವದಿಲ್ಲ. ಇತ್ತ ನಮ್ಮ ವೀರಶೈವ ಸಮಾಜದಲ್ಲಿ ಸದ್ಯಕ್ಕಂತೂ ಯಾವ ರೀತಿಯಿಂದಲೂ ಸುಸಂಬದ್ಧತೆ ಇಲ್ಲದಿರುವದರಿಂದ ವರ್ತಮಾನ ಸಮಯದಲ್ಲಿ ನಮ್ಮಿಂದ ಹೇಳಿಕೊಳ್ಳುವಂಥ ಒಂದು ಕಾರ್ಯವಾದರೂ ಆಗುವಂತಿಲ್ಲ. ರಾಷ್ಟ್ರದ ಪ್ರತಿಯೊಂದು ಪ್ರಮುಖ ಜನಾಂಗದವರು ರಾಜಕೀಯ ಸಾಮಾಜಿಕ ಧಾರ್ಮಿಕ ಮುಂತಾದ ವಿಷಯಗಳಲ್ಲಿ ತಮ್ಮನ್ನು ಸರಕಾರದವರಾಗಲೀ ಅಥವಾ ಇತರರಾಗಲೀ ಪ್ರಶ್ನೆಮಾಡಿದರೆ [illegible] ತಮ್ಮ ಸಂಘಗಳ ವತಿಯಿಂದ ನಿಶ್ಚಿತವಾದ ಧೋರಣವನ್ನು ಥಟ್ಟನೆ ಹೇಳಲಿಕ್ಕೆ ಅಂಥಾ ಸಾರ್ವಜನಿಕ ಸಂಸ್ಥೆಗಳನ್ನು ಮಾಡಿಕೊಂಡಿರುತ್ತಾರೆ. ಆದ್ದರಿಂದಲೇ ಅವರು ರಾಜಕೀಯಾದಿ ವಿಷಯಗಳಲ್ಲಿ ಬರುವ ಅಡಚಣೆಗಳನ್ನು ಅನಾಯಾಸವಾಗಿ ದಾಟಿಹೋಗುತ್ತಾರೆಂದು ಮೇಲೆ ಹೇಳಿರುವೆನಷ್ಟೆ? ಅದರಂತೆ ಎಲ್ಲಿಯವರೆಗೆ ನಮ್ಮ ಸಮಾಜದಲ್ಲಿ ಮಹಾಸಭೆಯು ಸ್ಥಾಯಿಯಾಗಿತ್ತೋ ಅಲ್ಲಿಯವರೆಗೆ ನಮ್ಮಲ್ಲಿ ಸ್ವಲ್ಪ ಸುಸಂಬದ್ಧತೆ ಇತ್ತು. ಮಹಾಸಭೆಯು ನಾಮಾವಶೇಷವಾದ ಕೂಡಲೇ ಸಮಾಜದಲ್ಲಿ ತಲೆತಲೆಗೆ ಪಟ್ಟಗಳಾದವು. ಹಿಂದಕ್ಕೆ ಭಾರತಮಂತ್ರಿಗಳಾದ ಮಾಂಟೇಗ್ಯೂ ಸಾಹೇಬರು ಹಿಂದುಸ್ಥಾನಕ್ಕೆ ಬಂದು ಯಾರ್ಯಾರಿಗೆ ಯಾವ ಯಾವ ತರಹದ ಹಕ್ಕುಗಳು ಬೇಕಾಗಿರುತ್ತವೆಂದು ಕೇಳಬಂದಾಗ್ಗೆ ಇತರ ಜನಾಂಗದವರಂತೆ ಮಹಾಸಭೆಯ ಮೂಲಕ ನಾವೂ ನಮ್ಮ ಬಯಕೆಗಳನ್ನು ಹೇಳಿಕೊಂಡಿದ್ದೆವು. ಸದ್ಯಕ್ಕೆ ಅಂಥಾ ಪ್ರಸಂಗಗಳು ಬರುವದಾದರೆ ಅನಾಯಕತ್ವದಿಂದ ಕೂಡಿದ ನಮ್ಮವರು ಆ ಸಾಹೇಬರು ತಿಳಿಸಲೆಂದು ಕೆಲವರೆಂದರೆ ಈ ಅಣ್ಣನವರು ತಿಳಿಸತಕ್ಕದ್ದೆಂದು ಕೆಲವರಂದು ಅಂತೂ ಇಂತೂ ಒದಗಿಬಂದ ಸಮಯವನ್ನು ನೀಗಲಿಟ್ಟು ಕಾಲಕಳೆಯುವ ಹೇಡಿತನವನ್ನು ಸಂಪಾದಿಸುವದೆಂದರೆ ಎಂಥಾ ನಿರ್ಲಜ್ಜತನದ ಮಾತಾಗಿರುತ್ತದೆ! ಬಹಳ ದಿವಸಗಳ ಮಾತನ್ನು ಬಿಟ್ಟು ಸ್ವಲ್ಪದಿವಸಗಳ ಪರಿಸ್ಥಿತಿಯನ್ನೇ ವಿಚಾರಿಸೋಣ. ಧಾರವಾಡ, ಬೆಂಗಳೂರು, ಸೊಲ್ಲಾಪುರ್, ಬಾಗಲಕೋಟಿ, ಬಳ್ಳಾರಿ ಮುಂತಾದ ಪಟ್ಟಣಗಳಲ್ಲಿ ಜರುಗಿದ ಮಹಾಸಭೆಯ ಮಂಟಪದಲ್ಲಿ ಮಿಮಿಗುಟ್ಟಿದ ಒಕ್ಕಟ್ಟಿನ ಸಮಾಜದ ಸ್ಫೂರ್ತಿಯೆತ್ತ ಈಗಿನ ಕಾಲದಲ್ಲಿ ಸ್ವೇಚ್ಛೆಯಿಂದ ಒದರಾಡುವ ಹಾಳುರಗಳೆಗಳ ಕೂಗಾಟಗಳೆತ್ತ! ಕೈಲಾಸವಾಸಿಗಳಾಗಿಹೋದ ಗುರುಸಿದ್ಧಪ್ಪಣ್ಣಾ ಗಿಲಗಂಜಿ-ಚನಬಸಪ್ಪನವರು ಡಿಪುಟಿ ವಾರದ ಅಪ್ಪಾಸಾಹೇಬರು ಶಿರಸಂಗೀ ಯಜಮಾನರೇ ಮುಂತಾದ ಧುರಂಧರಾಗ್ರಗಣಿಗಳ ಸಮಯದಲ್ಲಿದ್ದ ಸಮಾಜಗೌರವವೆತ್ತ! ಈಗಿನಕಾಲದಲ್ಲಿ ಭಕ್ತಮಾಹೇಶ್ವರರಲ್ಲಿಯ ಒಳಪಂಗಡಗಳ ತಿಕ್ಕಾಟದಿಂದುಂಟಾದ ಅಗೌರವವೆತ್ತ! ಸಾರಾಂಶವೇನಂದರೆ—ಮೊದಲೇ ಅಶಿಕ್ಷಿತವಾದ ನಮ್ಮ ಸಮಾಜವು ಈಗಿನ ಅನಾಯಕತ್ವದಿಂದ ಬೇಳುಕಡಿದ ಚಪಲಪ್ರಾಣಿಯ ವೃತ್ತಿಯನ್ನು ಹೊಂದಿದಂತಾಗಿರುತ್ತದೆ. ಏನೋ ನಮ್ಮ ಪುಣ್ಯದ ಬಲದಿಂದ ಉದಯವಾಗಿದ್ದ ಮಹಾಸಭೆಯ ಆಸುವಿನಿಂದ ಅಖಿಲ ವೀರಶೈವ ಸಮಾಜದ ಧೋರಣವೆಂದು ಹೇಳುವದಕ್ಕೆ ಸಾಮರ್ಥ್ಯವಿಶಿಷ್ಟವಾದ ಒಂದು ಮಾರ್ಗವಿದ್ದಂತಾಗಿತ್ತು. ಪರಂತೂ ನಮ್ಮ ಅಲಕ್ಷ್ಯದಿಂದ ನಮ್ಮ ಅಜಾಗ್ರತೆಯಿಂದ ನಮ್ಮ ಅರದಡ್ಡತನದಿಂದ (ಬೀರೂರಿನಲ್ಲಿ) ಅದನ್ನೂ ನುಂಗಿ ನೀರುಕುಡಿದು ಇಂದಿಗೆ ಮೂರು ನಾಲ್ಕು ವರ್ಷಗಳಾಗಿಹೋದವು. ಕಳೆದೆರಡು ವರ್ಷಗಳಲ್ಲಿ ಸ್ಟಾರ್ ಮುಂತಾದ ಪತ್ರಗಳಲ್ಲಿ ಅಲ್ಪ ಸ್ವಲ್ಪ ಮಹಾಸಭೆಯ ವಿಷಯಕ್ಕೆ ಲೇಖನಗಳು ಪ್ರಕಟಗಳಾಗುತ್ತಿದ್ದವು. ಆದರೆ ಸಭೆಯೇನೂ ಜರಗಲಿಲ. ಹೋದವರ್ಷವಾದರೋ [illegible]

ನಾನು ಒಂದು ವೃತ್ತಪತ್ರವನ್ನು ಹೊರಡಿಸಿ ನನ್ನ ಬಾಂಧವರಿಗೆ ಹಿಂದುಸ್ಥಾನದ ಹಿತಕ್ಕಾಗಿಯೇ ಕೆಲಸ ಮಾಡಿರೆಂದು ಹೇಳತೊಡಗಿದೆನು. ಅತಿ ವಿಸ್ತಾರವಾಗಿದ್ದಂಥ ಈ ಭಾರತಭೂಮಿಯಲ್ಲಿ ಅಸಂಖ್ಯಜಾತಿಗಳೂ ಅಸಂಖ್ಯಪಂಗಡಗಳೂ ಇರುತ್ತವೆ. ಈ ಎಲ್ಲಜಾತಿಗಳು ತಮ್ಮತಮ್ಮೊಳಗಿನ ಭೇದಭಾವವನ್ನು ಸಂಪೂರ್ಣವಾಗಿ ಮರೆತುಬಿಟ್ಟು ಒಮ್ಮನಸ್ಸಿನಿಂದ ಕಾರ್ಯವನ್ನು ಮಾಡುವದು ಅಸಾಧ್ಯವಾದದ್ದು. ಆದ್ದರಿಂದ ಅವರೆಲ್ಲರು ತಮ್ಮ ತಮ್ಮ ಧರ್ಮಗಳನ್ನು ಇದ್ದಂತೆ ಕಾಯ್ದುಕೊಂಡು, ಪರಸ್ಪರರಿಗೆ ಯಾವ ರೀತಿಯಿಂದಲೂ ಅಡ್ಡಬರದೆ, ಇಡೀ ಹಿಂದುಸ್ಥಾನದಲ್ಲಿ ಧರ್ಮಬಂಧುತ್ವವನ್ನು ಬೆಳೆಯಿಸಿ ಈ ದೇಶದ ಏಳ್ಗೆಗಾಗಿ ಯತ್ನಮಾಡತಕ್ಕದ್ದು. ಇದರಿಂದಲೇ ನಮ್ಮ ಉದ್ಧಾರವಾಗುವದು ಮತ್ತು ನಾನು ನನ್ನ "ಕಾಮ್ರೇಡ್" ಪತ್ರದಲ್ಲಿ ಪ್ರತಿಪಾದಿಸಿದಂಥ ಮಹತ್ವದ ವಿಚಾರವಾದರೂ ಇದೇ. ಆದರೆ ನನ್ನ ಈ ಉದ್ದೇಶವು ಆಗ ಕೈಕೂಡಲಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮುಸಲ್ಮಾನ ದೇಶಗಳ ಬಗ್ಗೆ ದ್ವೇಷಭಾವವು ಬೆಳೆಯಿತು. ಮತ್ತು ಹಿಂದುಸ್ಥಾನದ ಮೇಲೂ ಅದರ ದುಷ್ಪರಿಣಾಮವಾಗದೆ ಇರಲಿಲ್ಲ. ಮುಂದೆ ಸನ್ 1911ರಲ್ಲಿ ಬಾದಶಹರ ಜಾಹೀರನಾಮೆಯು ಹೊರಬಿತ್ತು. ಈ ಜಾಹೀರನಾಮೆಯು ಬಂಗಾಲದ ವಿಭಾಗವನ್ನು ರದ್ದುಪಡಿಸಿತು. ಮತ್ತು ಕಲಕತ್ತೆಯ ಬದಲಾಗಿ ದಿಲ್ಲಿಯು ಹಿಂದುಸ್ಥಾನದ ರಾಜಧಾನಿಯಾಯಿತು. ಈ ಜಾಹೀರನಾಮೆಯಿಂದ ಬಿಹಾರ ಪ್ರಾಂತದ ಹಿತವಾಯಿತು. ಬಂಗಾಲಕ್ಕೆ ಲಾಭಹಾನಿಯು ಸರಿಸಮಾನವಾಗಿ ಆಯಿತು. ಆದರೆ ಪೂರ್ವಬಂಗಾಲದ ಮುಸಲ್ಮಾನರಿಗೆ ಮಾತ್ರ ಹಾನಿಯಾಯಿತು. ಅವರ ರಾಜನಿಷ್ಠೆಯ ಫಲವಿದು! ಸರಿಹೊರೆಯವರ ಕೂಡ ಜಗಳ ಹೂಡಿ ಪರಕೀಯ ರಾಜಕರ್ತರಿಗೆ ಮೊರೆಹೋದರೆ ಇಂಥ ವಿಶ್ವಾಸಘಾತಕವಾಗುತ್ತದೆಂದು ಅವರು ಅಂದು ಮನಗಂಡರು. ಅಂದಿನಿಂದ ಅವರು ತಮ್ಮ ದೇಶಬಾಂಧವರೊಡನೆ ಸ್ನೇಹಭಾವದಿಂದ ವರ್ತಿಸಿ ಶಾಶ್ವತವಾದ ಶಾಂತಿಯಿಂದ ಕಾಲ ಕಳೆಯಬೇಕೆಂದು ಅನ್ನಹತ್ತಿದರು. ಮುಸ್ಲೀಮ ಲೀಗದವರಾದರೂ ತಮ್ಮ ಧ್ಯೇಯದಲ್ಲಿ ಹಿಂದುಸ್ಥಾನದ ಸ್ವರಾಜ್ಯಕ್ಕೇ ಮಹತ್ವವನ್ನು ಕೊಟ್ಟರು. ಅಷ್ಟರಲ್ಲಿ ಯುರೋಪದ ಮಹಾಯುದ್ಧವು ಪ್ರಾರಂಭವಾಯಿತು. ಆಗ ನಾನು ಕಲಾಟಿರಾಜಾ ಇವರಿಗೆ ಯುದ್ಧದಲ್ಲಿ ತೊಡಗುವ ಮುಂಚೆ ಸಾವಿರ ಸಾರೆ ವಿಚಾರಮಾಡಿರೆಂದು ಪತ್ರಬರೆದೆನು. ಹಿಂದುಸ್ಥಾನದ ಮುಸಲ್ಮಾನರು ಯುದ್ಧದ ಕಾಲದಲ್ಲಿ ರಾಜನಿಷ್ಠರಾಗಿ ಉಳಿಯಬೇಕೆಂದು ಹೇಳಿದೆನು. ಹಾಗೂ ಸಾಮ್ರಾಜ್ಯ ಸರಕಾರಕ್ಕೆ ಅರಬಿಸ್ಥಾನದ ಮೇಲೆ ದಾಳಿಯನ್ನು ತರಬೇಡಿರೆಂತಲೂ ಮುಸಲ್ಮಾನರ ಪವಿತ್ರ ಕ್ಷೇತ್ರಗಳನ್ನು ಸಂಕಟಕ್ಕೆ ಗುರಿಯಾಗಿ ಮಾಡಬೇಡಿರೆಂತಲೂ ಬೇಡಿಕೊಂಡೆನು. ಆದರೆ ಇದೆಲ್ಲದರ ಪರಿಣಾಮವೇನಾಯಿತೆಂಬುದು ಎಲ್ಲರಿಗೂ ಗೊತ್ತೇ ಆಗಿರುತ್ತದೆ. ಈ ವಿಶ್ವಾಸಘಾತದಿಂದ ಮುಸಲ್ಮಾನರ ಕಣ್ಣು ಮತ್ತೆ ತೆರೆದವು. ಹಿಂದೂ ಜನರ ಸಹಕಾರತೆಯಿದ್ದರೇನೇ ತಮಗೆ ಕಲ್ಯಾಣವಾಗುವದೆಂದು ಅವರ ಮನವರಿಕೆಯಾಯಿತು. ಆದ್ದರಿಂದ ರಾಷ್ಟ್ರೀಯ ಮಹಾಸಭೆ ಮತ್ತು ಮುಸ್ಲೀಮ ಲೀಗ ಈ ಎರಡು ಸಂಸ್ಥೆಗಳ ವಾರ್ಷಿಕ ಸಭೆಗಳು ಒಂದೇ ಸ್ಥಳದಲ್ಲಿ ಒಂದೇ ಉದ್ದೇಶದಿಂದ ಮತ್ತು ಒಂದೇ ಕಾರ್ಯಕ್ಕಾಗಿ ಕೂಡಹತ್ತಿದವು. ಜಾತಿಯಿಂದ ಮುಸಲ್ಮಾನರಿದ್ದರೂ ತಾವಾದರೂ ಹಿಂದೀ ಜನರೇ ಇರುವೆವೆಂದು ಮುಸಲ್ಮಾನರಿಗೆ ತಿಳಿಯಿತು. ಮತ್ತು ಈ ಸಂಕೇತಕ್ಕೆ ಅನುಸಾರವಾಗಿ ಐಕ್ಯಭಾವದ ಇವರ ಪ್ರಯತ್ನಕ್ಕೆ ಜನರಲ್ ಡಾಯರನಿಂದ ಸಹಾಯವಾಯಿತು. ಇದೇ ಕಾಲಕ್ಕೆ ಮಹಾತ್ಮಾ ಗಾಂಧಿಯವರು ಮುಂದೆ ಬಂದು ದೇಶಕ್ಕೆ ಉಪದೇಶ ಮಾಡಿದರು. ಎಷ್ಟೋ ಜನರು ಮಹಾತ್ಮರನ್ನು ಕ್ರಿಸ್ತನಿಗೆ ಹೋಲಿಸುತ್ತಾರೆ. ಕ್ರಿಸ್ತನಂತೆ ಅವರಾದರೂ (೧) ಕಷ್ಟಗಳನ್ನು ಸಹಿಸಿ ಆತ್ಮಶುದ್ಧಿಯನ್ನು ಮಾಡಬೇಕೆಂತಲೂ (೨) ರಾಜ್ಯಕಾರಭಾರದ ಜವಾಬದಾರಿಗಾಗಿ ನೈತಿಕ ತಯಾರಿಯನ್ನು ಮಾಡಬೇಕೆಂತಲೂ ಮತ್ತು (೩) ಸ್ವರಾಜ್ಯಕ್ಕೆ ಸುವ್ಯವಸ್ಥೆಯ ಅವಶ್ಯಕತೆಯಿರುತ್ತದೆಂತಲೂ ಉಪದೇಶಮಾಡಿದರು. ಆದರೆ ಅಂಥ ಧರ್ಮಾತ್ಮನನ್ನೇ ಈ ಕ್ರಿಶ್ಚನ ಸರಕಾರವು ಘೋರಪಾತಕಿಯಂತೆ ನಡಿಸಿಕೊಂಡಿತು!

ಸತ್ಯಾಗ್ರಹ.

ಮಹಾತ್ಮಾ ಗಾಂಧಿಯವರು ಮೊದಲಿನಿಂದ ಸರಕಾರದ ಮಿತ್ರರಾಗಿದ್ದರು. ಅವರು ಆಫ್ರಿಕಾದಲ್ಲಿಯೂ ಹಿಂದುಸ್ಥಾನದಲ್ಲಿಯೂ ಸರಕಾರಕ್ಕೆ ಸಹಾಯ ಮಾಡಿರುವರು. ಸರಕಾರವಾದರೂ ಮಹಾಯುದ್ಧದ ಪೂರ್ವದಲ್ಲಿ ಅವರ ಸನ್ಮಾನವನ್ನು ಮಾಡುತ್ತಿತ್ತು. ಆದರೆ ಅವರಂಥ ರಾಜನಿಷ್ಠರಿಗೆ ಸಹ ಯುದ್ಧದ ತರುವಾಯ ಸರಕಾರವನ್ನು ವಿರೋಧಿಸಬೇಕಾಯಿತು. ಅತ್ತ ಗಳಗನೇ ಇಷ್ಟಿಯ ಸುಧಾರಣೆಯ ವಿಚಾರವು ನಡೆದಾಗಲೇ ಇತ್ತ ರೌಲಿಟ್ ಕಾಯಿದೆಯು ಪಾಸಾಯಿತು. ಕೂಡಲೆ ಮಹಾತ್ಮರು ತಮ್ಮ ಸುಪ್ರಸಿದ್ಧ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಇದೇ ಅಸಹಕಾರದ ಪ್ರಾರಂಭವು. ಇಡೀ ರಾಷ್ಟ್ರಕ್ಕೆ ಅವಮಾನಕಾರಕವಾದ ಈ ಕಾಯಿದೆಯನ್ನು ನೋಡಿ ಹೇಡಿಯಂತೆ ಕಣ್ಣುಮುಚ್ಚಿ ಸುಮ್ಮನೆ ಕೂಡುವದು ಯಾವ ಸ್ವಾಭಿಮಾನಿ ಮನುಷ್ಯನಿಗೂ ಶಕ್ಯವಿದ್ದಿಲ್ಲ. ಆದ್ದರಿಂದ ತಮ್ಮ ಸತ್ಯಾಗ್ರಹದಿಂದ ತಾವು ಗಂಡಾಂತರಕ್ಕೆ ಒಳಗಾಗುತ್ತೇವೆಂದು ಗೊತ್ತಿದ್ದಾಗ್ಯೂ ಮಹಾತ್ಮರು ಅದನ್ನು ಆರಂಭಿಸದೆ ಬಿಡಲಿಲ್ಲ. ಮಹಾತ್ಮರ ಚಳವಳಿಯಲ್ಲಿ ಅಹಿಂಸಾ ತತ್ವವು ಮಹತ್ವವುಳ್ಳದ್ದು. ಕ್ರಿಸ್ತನ ಉಪದೇಶದಂತೆ ಯುರೋಪಿಯನ ರಾಷ್ಟ್ರಗಳು ಈ ತತ್ವವನ್ನು ಎಷ್ಟರಮಟ್ಟಿಗೆ ಪಾಲಿಸುತ್ತವೆಂಬದು ಎಲ್ಲರಿಗೂ ಗೊತ್ತಾಗಿರುತ್ತದೆ. ನಾನಾದರೋ ಮುಸಲ್ಮಾನ ಧರ್ಮದವನು. ನಮ್ಮ ಧರ್ಮದಲ್ಲಿ ಯುದ್ಧವು ಅನಿಷ್ಟಕಾರಕವೆಂತಲೂ ನಿರುಪಾಯವಿಲ್ಲದಿದ್ದರೇನೇ ಅದನ್ನು ಮಾಡಬಹುದೆಂತಲೂ ಹೇಳಿರುತ್ತದೆ. ಮತ್ತು ಹಾಗೆ ನಡೆಯುವದು ನನ್ನ ಕರ್ತವ್ಯವಿರುತ್ತದೆ. ಆದರೂ ನಾನು ಮಹಾತ್ಮರ ಕೂಡ ಸಖ್ಯವನ್ನು ಬೆಳಸಿ ಅಹಿಂಸೆಯ ವ್ರತವನ್ನು ಸ್ವೀಕರಿಸಿದೆನು. ಹಿಂದುಸ್ಥಾನದ ೩೨ ಕೋಟಿ ಜನರಿಗೆ ಹಿಂಸೆಯ ಉಪದೇಶಮಾಡುವದು ಸರಿಯಲ್ಲ. ಮೇಲಾಗಿ ಹಿಂಸೆಯಿಂದ ಸಿಕ್ಕಂಥ ಜಯವು ನಿಜವಾದ ಜಯವಲ್ಲ. ನಮಗೆ ಸರ್ವತಂತ್ರವಾದ ಸ್ವಾತಂತ್ರ್ಯವು ಬೇಕಾಗಿದೆ. ಇದಕ್ಕಾಗಿ ನಾವೆಲ್ಲರೂ ಸ್ವಾರ್ಥತ್ಯಾಗವನ್ನು ಮಾಡಲಿಕ್ಕೇ ಬೇಕು. ಅಹಿಂಸೆಯಿಂದ ನಮ್ಮ ಧ್ಯೇಯವು ಸಾಧ್ಯವಾಗುವದರಿಂದಲೂ ನಮ್ಮ ಆತ್ಮೋನ್ನತಿಯಾಗುವದರಿಂದಲೂ ನಾವು ಅದೇ ಮಾರ್ಗವನ್ನು ಅನುಸರಿಸುವದು ಯೋಗ್ಯವಾದದ್ದು. ಶಾಂತರೀತಿಯಿಂದ ಸ್ವರಾಜ್ಯವನ್ನು ದೊರಕಿಸಲಿಕ್ಕೆ ನೀವು ಸಿದ್ಧರಿಲ್ಲವೇ? ಈ ಮೇರೆಗೆ ನಾವು ಶಾಂತ ರೀತಿಯಿಂದ ಸತ್ಯಾಗ್ರಹವನ್ನು ಮಾಡುತ್ತಿದ್ದರೂ ನಮ್ಮ ಸರಕಾರವು ನಮ್ಮ ಮೇಲೆ ಅತ್ಯಾಚಾರದ ಆರೋಪವನ್ನು ಹೊರಿಸುತ್ತದೆ. ಆದರೆ ಇವರು ತಾವು ಸ್ವಂತ ಹೇಗಿರುವರೆಂಬದನ್ನು ಸ್ವಲ್ಪ ನೋಡಿರಿ. ಜಾಲಿಯನವಾಲಾ ಬಾಗದಲ್ಲಿ ನಿರಪರಾಧಿಯಾದವರ ಹಿಂಸೆಯಿಂದ ಕೆಂಪಾದ ಇವರ ಕೈಗಳು ಇನ್ನೂ ಸ್ವಚ್ಛವಾಗಿಲ್ಲ. ಅಕ್ಷಮ್ಯ ಅಪರಾಧವನ್ನು ಮಾಡಿದಂಥವರಿಗೂ ಇವರು ದಂಡಿಸಿಲ್ಲ, ಉತ್ತೇಜನವನ್ನೇ ಕೊಟ್ಟರು. ಇಂಥವರು ಮಹಾತ್ಮರ ಅಹಿಂಸೆಯ ಮಾರ್ಗಕ್ಕೆ ಹೆಸರಿಡುವದು ಸೋಜಿಗವಲ್ಲವೇ? ಒಮ್ಮೆ ಜಾಗ್ರತವಾಗಿದ್ದ ನಮ್ಮ ರಾಷ್ಟ್ರದಲ್ಲಿ ಇಂದಿನವರೆಗೆ ಇಷ್ಟು ಶಾಂತತೆಯು ಉಳಿದದ್ದೇ ಹೆಚ್ಚಿನದು. ಇಂಥ ಪರಿಸ್ಥಿತಿಯಲ್ಲಿ ಯಾವ ರಾಷ್ಟ್ರವು ನಮ್ಮಷ್ಟು ಶಾಂತತೆಯನ್ನು ಕಾಯ್ದಿರುತ್ತದೆಂದು ನಾನು ಪ್ರಶ್ನೆ ಮಾಡುತ್ತೇನೆ. ಇದರ ಉತ್ತರವನ್ನು ಬೇಕಾದವರು ಕೊಡಲಿ. ಹಿಂದುಸ್ಥಾನದ ಈಗಿನ ಅಪೂರ್ವ ಶಾಂತತೆಯ ಶ್ರೇಯಸ್ಸು ಮಹಾತ್ಮರಿಗೂ ಅವರ ಸಹಕಾರಿಗಳಿಗೂ ಇರುತ್ತದೆ.

ಸಹಕಾರ.

ಅಮೃತಸರ ಮಹಾಸಭೆಯಲ್ಲಿ ಸುಧಾರಣೆಗಳ ವಿಚಾರವು ನಡೆದಾಗ ನನ್ನ ಮಿತ್ರರೂ ಸ್ವರಾಜ್ಯ ಪಕ್ಷದ ಅಧ್ವರ್ಯರುಗಳೂ ಆದ ದೇಶಬಂಧು ದಾಸ ಮತ್ತು ಪರಮ ಪೂಜ್ಯರಾದ ಲೋಕಮಾನ್ಯ ಟಿಳಕ ಇವರು ಸಹಕಾರಿತೆಯನ್ನು ವಿರೋಧಿಸಿದರು. ಆದರೆ ಮಹಾತ್ಮಾ ಗಾಂಧಿಯವರು ಇವರ ನಿರ್ಣಯಕ್ಕೆ ಒಂದು ಉಪಸೂಚನೆಯನ್ನು ತಂದು ಸಹಕಾರಿತೆಯನ್ನು ಮಾಡಿರೆಂದು ಹೇಳಿದರು. ಕಡೆಗೆ ನಮ್ಮೆಲ್ಲರ ಪ್ರಯತ್ನದಿಂದ ಸರಕಾರದ ಕೂಡ ಶಕ್ಯವಿದ್ದ ಮಟ್ಟಿಗೆ ಸಹಕಾರವನ್ನು ಮಾಡಿ ಸ್ವರಾಜ್ಯವನ್ನು ದೊರಕಿಸಬೇಕೆಂದು ಗೊತ್ತಾಯಿತು. ಆದರೆ ಸಹಕಾರತೆಗೆ ಅನುಕೂಲರಿದ್ದ ಗಾಂಧಿಯವರೇ ಈಗ ಸಂಪೂರ್ಣವಾಗಿ ಅದಕ್ಕೆ ವಿರೋಧಿಸಹತ್ತಿದರು. ದೇಶದಲ್ಲಿಯ ಪರಿಸ್ಥಿತಿಯು ಹೇಳಕೂಡದಷ್ಟು ಬದಲಿಸಿರುತ್ತದೆ. ಹಿಂದು ಮುಸಲ್ಮಾನರ ದ್ವೇಷವು ಮಾಯವಾಯಿತು. ಒಣ ಬಾಯಿ ಮಾತಿಗೆ ಬೆಲೆಯುಳಿಯಲಿಲ್ಲ. ದೇಶದಲ್ಲಿ ಜಾಗೃತಿಯುಂಟಾಗಿ ದೇವರ ಹೊರ್ತು ಇನ್ನೊಬ್ಬರ ಭಯವುಳಿಯಲಿಲ್ಲ. ಇದೆಲ್ಲವನ್ನು ನೋಡಿ ಸೆರೆಮನೆಯಿಂದ ಹೊರಗೆ ಬಂದಂಥ ನನಗೆ ಅತ್ಯಂತ ಆಶ್ಚರ್ಯವಾಯಿತು. ಅಮೃತಸರದಲ್ಲಿ ಸಹಕಾರವನ್ನು ಮಾಡಿರೆಂದು ಆಗ್ರಹ ತೊಟ್ಟಿದ್ದ ಮಹಾತ್ಮರೇ ಈ ಅಸಹಕಾರದ ಪುರಸ್ಕೃತರಾದರು. ಆದರೆ ಇಂಥ ಪರಿವರ್ತನದ ಕಾರಣವೇನು? ಮಹಾಯುದ್ಧದ ಕಾಲಕ್ಕೆ ನಮಗೆ ಅಲ್ಪಸ್ವಲ್ಪ ಆಶೆ ಹುಟ್ಟಿತ್ತು. ಆದ್ದರಿಂದ 1919 ರಲ್ಲಿ ಶಕ್ಯವಿದ್ದ ಮಟ್ಟಿಗೆ ಸಹಕಾರಿತೆಯನ್ನು ಮಾಡಲು ಸಿದ್ಧರಾದೆವು. ಆದಾಗ್ಯೂ ಅದರ ಯಶಸ್ಸಿನ ಬಗ್ಗೆ ನನಗೆ ಸಂಶಯವೇ ಇತ್ತು. ಆಳರಸರ ಸಹಕಾರಿತೆಯಿಂದ ಮುಸಲ್ಮಾನರಿಗೆ ಯಾವ ಲಾಭವಾದೀತೆಂಬದು ನನಗೆ ಗೊತ್ತಾಗಿತ್ತು. ಜಾಲಿಯನವಾಲಾಬಾಗದ ಪ್ರಕರಣವಂತೂ ಮನಸ್ಸಿನಲ್ಲಿ ನಟ್ಟುಹೋಗಿತ್ತು. ಆದ್ದರಿಂದ ಇವರ ಕೂಡ ಸಹಕಾರಿತೆಯಲ್ಲಿ ಯಾವ ಅರ್ಥವೂ ಇಲ್ಲವೆಂದು ನಾನು ತಿಳಿದಿದ್ದೆನು. ಮುಂದೆ ಕೆನಾಟದ ಡ್ಯೂಕರು ಬಂದು ಮರೆತುಬಿಡಿರಿ ಮತ್ತು ಕ್ಷಮಿಸಿ, ಎಂದು ನಮಗೆ ಉಪದೇಶ ಮಾಡಿದರು. ನಾವು ಒಂದು ವೇಳೆ ಈ ಅನ್ಯಾಯವನ್ನು ಕ್ಷಮಿಸಬಹುದು, ಆದರೆ ಅದನ್ನು ಮರೆಯುವದು ಎಂದಿಗೂ ಶಕ್ಯವಿಲ್ಲ. ಇಂಥ ಅನ್ಯಾಯವನ್ನು ಮರೆಯುವದೆಂದರೆ ಒಮ್ಮೆ ಎಚ್ಚತ್ತವನು ಮತ್ತೆ ಕಣ್ಣುಮುಚ್ಚಿ ಸುಖಸ್ವಪ್ನಗಳನ್ನು ಕಂಡಂತೆಯೇ ಸರಿ. ಆದರೆ ಮಹಾತ್ಮಾ ಗಾಂಧಿಯವರು ಇನ್ನೂ ನಿರಾಶರಾಗಿದ್ದಿಲ್ಲ. ಇಂಗ್ಲೆಂಡು ಪಂಜಾಬು ಮತ್ತು ಖಿಲಾಫತ್ ಪ್ರಕರಣಗಳಲ್ಲಿ ಏನಾದರೂ ಸಹಾಯ ಮಾಡಬಹುದೆಂದು ಅವರು ನಂಬಿದ್ದರು. ಮುಂದೆ ಈ ನಂಬಿಗೆಯೂ ವ್ಯರ್ಥವಾಗಿ ಇಂಗ್ಲೆಂಡು ಮೇಲಿನ ಅವರ ವಿಶ್ವಾಸವು ಹಾರಿ ಹೋಗಲು ಅವರು ಅಸಹಕಾರದ ಮಾರ್ಗವನ್ನು ಹಿಡಿದರು.

ಅಸಹಕಾರ.

ಈ ವಿಷಯದ ಬಗ್ಗೆ ಹೆಚ್ಚಿಗೆ ಹೇಳುವ ಅವಶ್ಯಕತೆಯಿಲ್ಲ. ಅನ್ಯಾಯವನ್ನು ವಿರೋಧಿಸುವದು ನಮಗೆ ಶಕ್ಯವಿಲ್ಲದಿದ್ದರೆ ಅದಕ್ಕೆ ಸಹಾಯವಾದರೂ ಮಾಡಬಾರದೆಂಬುದೇ ಇದರ ಸಾರಾಂಶವಾಗಿರುತ್ತದೆ. ನಮ್ಮ ರಾಷ್ಟ್ರವು ಅಸಹಕಾರವನ್ನು ಅವಲಂಬಿಸಿದರೆ ಈ ಸರಕಾರವು ನಿಸ್ಸತ್ವವಾಗುವದೆಂದು ನಮ್ಮ ಅಭಿಪ್ರಾಯವದೆ. ನಮ್ಮ ಚಳವಳಿಯಲ್ಲಿ ವಿಘಾತಕ ಕಾರ್ಯಕ್ರಮಕ್ಕಿಂತ ವಿಧಾಯಕ ಕಾರ್ಯಕ್ರಮದ ಅಂಶವೇ ಹೆಚ್ಚಾಗಿರುತ್ತದೆ. ಇದರಿಂದ ಅನ್ಯರ ಸತ್ವಹರಣವಾಗಿ ಆತ್ಮಸಾಮರ್ಥ್ಯವೂ ಬೆಳೆಯುವದು. ನಾವು ಈಗಿನ ರಾಜ್ಯಪದ್ಧತಿಯನ್ನು ನಾಶಗೊಳಿಸದಿದ್ದರೆ ನಮ್ಮ ಉದ್ಧಾರವಾಗುವದಂತೂ ಒತ್ತಟ್ಟಿಗುಳಿದು ಪರಾಜಯವು ಸಹ ಸಿಗದೆ ಸತ್ಯನಾಶವು ಮಾತ್ರ ಆಗುವದು. ಈ ಸರಕಾರವನ್ನು ಬಲಹೀನವಾಗಿ ಮಾಡುವದು ಸಹ ನ್ಯಾಯವೇ ಆಗಿರುತ್ತದೆ. ಸೆರೆಮನೆಯಲ್ಲಿಯ ಪರಿಸ್ಥಿತಿಯು ತಮಗೆ ಗೊತ್ತಿರಬಹುದು. ಆಶೆ ಬುರುಕರಾದ ಕೆಲಜನ ಸೆರೆಯಾಳುಗಳು ಅಲ್ಲಿಯ ಕಾವಲುಗಾರರ ಮೇಲೆ ಕಾವಲವನ್ನಿಡುವ ಕೆಲಸವನ್ನು ವಹಿಸಿ ತಮ್ಮ ಶಿಕ್ಷೆಯನ್ನು ಕಡಿಮೆ ಮಾಡಿಸಿಕೊಳ್ಳುತ್ತಾರೆ. ನಿಜವಾದ ಕಾವಲುಗಾರರು ಯಥೇಚ್ಛವಾಗಿ ನಿದ್ದೆ ಮಾಡುವಾಗ ಸೆರೆಯಾಳುಗಳೇ ಅವರ ಕೆಲಸವನ್ನು ಮನಃಪೂರ್ವಕವಾಗಿ ಮಾಡುತ್ತಾರೆ. ಅದೇ ಮೇರೆಗೆ ಅತಿ ವಿಸ್ತಾರವಾದ ಹಿಂದುಸ್ಥಾನವೆಂಬ ಈ ಜೈಲಿನಲ್ಲಿ ನಾವೆಲ್ಲರೂ ಸೆರೆಯಾಳುಗಳು; ನನ್ನ ಸಹಕಾರಿ ಮಿತ್ರರು ಅದರ ನಿಜವಾದ ಕಾವಲುಗಾರರು. ರಾಜ್ಯಕರ್ತರು ಸುಖದಲ್ಲಿ ಮಗ್ನರಾಗಿದ್ದರೂ ಈ ಮಹನೀಯರು ತಮ್ಮ ಕರ್ತವ್ಯವನ್ನು ಅತ್ಯಂತ ದಕ್ಷತೆಯಿಂದ ಮಾಡುತ್ತಿರುವರು. ಆದರೆ ಸೆರೆಮನೆಯೊಳಗಿನ ಸೆರೆಯಾಳುಗಳಂತೆ ಅವರಿಗೆ ತಮ್ಮ ಬಿಡುಗಡೆಯ ಕಲ್ಪನೆಯು ಮಾತ್ರ ಇಲ್ಲ. ಅವರು ತಾವು ಪರತಂತ್ರರೆಂಬುದನ್ನೇ ಮರೆತುಬಿಟ್ಟು ತಮಗೆ ಕಟ್ಟಿ ಹಾಕಿದ್ದ ಸರಪಳಿಯನ್ನೇ ಬಲು ಪ್ರೇಮದಿಂದ ಅಪ್ಪಿಕೊಳುತ್ತಾರೆ. ಈ ಸಂದರ್ಭದಲ್ಲಿ ನಾನು ನನ್ನ ಧರ್ಮಬಾಂಧವರಿಗೆ ನಾಲ್ಕು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಇಸ್ಲಾಮಿ ಬಂಧುಗಳೇ, ನೀವು ಅಸಹಕಾರ ಚಳವಳಿಯು ಅಪಯಶಸ್ವಿಯಾಯಿತೆಂತಲೂ ಮತ್ತು ನಮ್ಮ ಹಿಂದೂ ಬಾಂಧವರ ಕೂಡ ಸಹಕಾರವನ್ನು ಮಾಡುವದು ವ್ಯರ್ಥವಾದದ್ದೆಂತಲೂ ತಿಳಿಯಬೇಡಿರಿ. ಒಂದು ವೇಳೆ ಅದು ಹಾಗೇ ಇರುವದೆಂದು ತಿಳಿದರೂ ನಮ್ಮ ಮುಂದಿನ ಹೊಸ ಮಾರ್ಗವನ್ನು ಹುಡುಕಬೇಕಾಗುವದು. ಆ ಹೊಸ ದಾರಿಯನ್ನು ನೀವು ತೋರಿಸಬಲ್ಲಿರಾ? ಪರಕೀಯ ರಾಜ್ಯಕರ್ತರ ಕೂಡ ಅಸಹಕಾರವನ್ನೂ ದೇಶಬಾಂಧವರ ಕೂಡ ಸಹಕಾರವನ್ನೂ ಮಾಡುವದು ಶಕ್ಯವಿಲ್ಲದಿದ್ದರೆ ನಾವು ಈಗ ಮಾಡಬೇಕಾದುದಾದರೂ ಏನು? ಬಂದ ಹಾದಿಹಿಡಿದು ತಿರುಗಿ ಹೋಗಬೇಕೆ? ಪರಕೀಯರ ಸಖ್ಯವನ್ನು ಬೆಳಸಿ ಸ್ವಕೀಯರ ಕೂಡ ಕಾದಾಡಬೇಕೆ? ಮತ್ತು ಇದರಿಂದಾಗುವ ಲಾಭವಾದರೂ ಯಾವದು? ಅಲ್ಲ! ಮಿತ್ರರೇ ಹಾಗಲ್ಲ, ಅಂಥ ವಿಚಾರವನ್ನೇ ಮಾಡಬೇಡಿರಿ. ಪರರ ಕೂಡ ಅಸಹಕಾರವನ್ನೂ ದೇಶಬಂಧುಗಳಾದ ಹಿಂದೂ ಜನರ ಕೂಡ ಸಹಕಾರವನ್ನೂ ಮಾಡದೆ ನಮಗೆ ಗತ್ಯಂತರವೇ ಇಲ್ಲ. ಅಶಕ್ಯವಾದ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡು ವ್ಯರ್ಥವಾಗಿ ಕಾಲ ಕಳೆಯಬೇಡಿರಿ. ಆಮೇಲೆ ಅಧ್ಯಕ್ಷರು ಮಾಂಟಗ್ಯೂಸಾಹೇಬರ ಬಡತರ್ಫಿ ಮತ್ತು ಲಾಸೇನಪರಿಷತ್ತು ಇವುಗಳ ವಿಷಯಕ್ಕೆ ಚರ್ಚಿಸಿ ಇದರಿಂದಲಾದರೂ ಮುಸಲ್ಮಾನರಿಗೆ ಯಾವ ಲಾಭವೂ ಆಗದ್ದರಿಂದ ಅಸಹಕಾರವು ಒಂದೇ ಒಂದು ಮಾರ್ಗವಿರುತ್ತದೆಂದು ಸಿದ್ಧಮಾಡಿ ತೋರಿಸಿದರು.

ಹಿಂದು ಮುಸಲ್ಮಾನರ ಐಕ್ಯಮತ್ಯ.

ಇನ್ನು ಹಿಂದು ಮುಸಲ್ಮಾನರ ನಡುವಿನ ಐಕ್ಯದ ಬಗ್ಗೆ ವಿಚಾರಮಾಡೋಣ. ಮಹಾತ್ಮಾ ಗಾಂಧಿಯವರು ತಮ್ಮ ಇಸ್ಲಾಮಿಧರ್ಮದ ಸಂರಕ್ಷಣೆಗಾಗಿ ಬಹಳ ಶ್ರಮಪಟ್ಟು ಕಾರಾಗೃಹಕ್ಕೆ ಹೋಗಿರಲು ನಾವು ಅವರ ಧರ್ಮಬಂಧುಗಳೊಡನೆ ಸಹಕಾರಿತೆಯನ್ನು ಮಾಡಿರುವದು ಸರಿಯಲ್ಲ. ಹಿಂದು ಮುಸಲ್ಮಾನರ ನಡುವೆ ಸಂಪೂರ್ಣವಾದ ಐಕ್ಯವು ಇನ್ನೂ ಆಗಿರುವದಿಲ್ಲವೆಂದೂ ಮತ್ತು ಮಲಬಾರ ಮುಲ್ತಾನ ಆಗ್ರಾ ಸಹರಾಣಪೂರ ಮುಂತಾದ ಸ್ಥಳಗಳಲ್ಲಿ ಅವರು ಪರಸ್ಪರ ಬಂಧುಭಾವದ ವಿರುದ್ಧವಾಗಿ ನಡೆದರೆಂತಲೂ ನಾನು ಬಲ್ಲೆನು. ಆದರೆ ಅದಕ್ಕಾಗಿ ಒಂದೇ ಸಮಾಜಕ್ಕೆ ಎಲ್ಲ ದೋಷವನ್ನು ಕೊಡುವದು ಉಚಿತವಲ್ಲ. ಇಂಥ ಜಗಳಗಳನ್ನು ದೂರಮಾಡಲಿಕ್ಕೆ ಮಹಾಸಭೆಯಿಂದ ಅಲ್ಲಲ್ಲಿ ಉಭಯಪಕ್ಷದ ಪಂಚಾಯತಿಯನ್ನು ನೇಮಿಸುವದು ತಕ್ಕ ಉಪಾಯವಾಗಿರುತ್ತದೆ. ನಾವು ಇಂಥ ಕ್ಷುದ್ರಕಾರಣಗಳ ನಿಮಿತ್ತಮಾಡಿ ನಮ್ಮ ನಮ್ಮೊಳಗೇ ಬಡಿದಾಡುವದನ್ನು ಕಂಡು ನನಗೆ ಬಹಳ ನಾಚಿಕೆಬರುತ್ತದೆ. ಹೀಗೆ ನಾವು ಚಿಕ್ಕಮಕ್ಕಳಂತೆ ಜಗಳಾಡಬಾರದು. ನಮ್ಮ ಧರ್ಮವನ್ನು ಕಾಯ್ದುಕೊಂಡು ಪರಧರ್ಮಕ್ಕೆ ಯಾವ ರೀತಿಯಿಂದಲೂ ತೊಂದರೆಗೊಳಿಸದೆ ನಮ್ಮನಮ್ಮೊಳಗೆ ಬಂಧುಭಾವವನ್ನು ಬೆಳಸತಕ್ಕದ್ದು. ನಾವು ಹಾಗೆ ಮಾಡದೆ ಸಾಮಾನ್ಯ ಕಾರಣಕ್ಕಾಗಿ ಜಗಳಾಡಹತ್ತಿದರೆ ನಮ್ಮ ಯೋಗ್ಯತೆಯು ಎಂದೂ ಬೆಳೆಯಲಾರದು, ನಮಗೆ ಸಾಮರ್ಥ್ಯವು ಎಂದಿಗೂ ಬರಲಾರದು, ಮತ್ತು ನಾವು ನಮ್ಮೆಲ್ಲರಿಗೆ ಅತ್ಯವಶ್ಯವಿದ್ದ ಸ್ವರಾಜ್ಯಕ್ಕೆ ಎಂದೂ ಪಾತ್ರರಾಗಲಾರೆವು. ಆದ್ದರಿಂದ ಹಿಂದು ಮುಸಲ್ಮಾನರ ಐಕ್ಯವು ಅವಶ್ಯವಾದದ್ದು. ನಮ್ಮ ದ್ವೇಷಭಾವದ ಮೂಲಕಾರಣವು ಧರ್ಮಭೇದವಿರದೆ ಪಾಶ್ಚಿಮಾತ್ಯ ಶಿಕ್ಷಣದಿಂದ ವೈಯುಂಡಂಥ ಸಂಕುಚಿತ ದೃಷ್ಟಿ ಮತ್ತು ನೀಚತರದ ವ್ಯಕ್ತಿಸ್ವಾರ್ಥ ಇವೇ ಇರುತ್ತವೆ. ಮಹಾತ್ಮರು ಸೆರೆಮನೆಯ ಹೊರಗೆ ಇರುವಾಗ ಇಂಥ ಕ್ಷುದ್ರಮನುಷ್ಯರ ಬೇಳೆಯು ಬೇಯುವಂತೆ ಇದ್ದಿಲ್ಲ. ನೀವು ಇಂಥವರ ಮಾತುಗಳನ್ನು ಕೇಳಬಾರದು. ಪರಧರ್ಮಗಳನ್ನು ಸುಸೂತ್ರವಾಗಿ ನಡೆಯಗೊಡಬೇಕು. ನಿಮ್ಮ ಧರ್ಮದ ಮುಖ್ಯ ತತ್ವಗಳನ್ನು ಮಾತ್ರ ನಾಶಮಾಡಗೊಡದೆ ಉಳಿದ ಸಾಮಾನ್ಯ ವಿಷಯಗಳಲ್ಲಿ ಪರಧರ್ಮಿಯರ ಕೂಡ ಸ್ನೇಹಭಾವದಿಂದ ಇರಬೇಕು ಮತ್ತು ತಮ್ಮ ಧರ್ಮಸ್ವಾತಂತ್ರ್ಯವನ್ನು ಕಾಯ್ದುಕೊಂಡು ಹಿಂದೂ ಮುಸಲ್ಮಾನರ ಐಕ್ಯವನ್ನು ಬೆಳಸಬೇಕು. ಈ ವಿಷಯದಲ್ಲಿ ರಾಷ್ಟ್ರಕ್ಕೆ ಯೋಗ್ಯವಾದ ಮಾರ್ಗವನ್ನು ತೋರಿಸುವದು ಮಹಾಸಭೆಯ ಕರ್ತವ್ಯವಾಗಿದೆ. ಇನ್ನು ಗೋವಧದ ವಿಷಯವಾಗಿ ನಾಲ್ಕು ಶಬ್ದಗಳನ್ನು ಹೇಳುವದು ಅವಶ್ಯವದೆ. ಆಕಳು ಹಿಂದುಗಳಿಗೆ ಅತಿ ಪವಿತ್ರವಾದ ಪ್ರಾಣಿಯು. ನಮ್ಮ ಹಿಂದೂ ಬಾಂಧವರು ನಮ್ಮ ಖಿಲಾಪತದ ಸಂರಕ್ಷಣೆಗಾಗಿ ಸಹಾಯಮಾಡಿದಂತೆ ನಾವಾದರೂ ಗೋವಧವನ್ನು ನಿಲ್ಲಿಸಲಿಕ್ಕೇ ಬೇಕು. ನಮ್ಮ ಕೂಡ ಮಹಾತ್ಮರ ಸಂಬಂಧವು ಬಂದಂದಿನಿಂದ ನಮ್ಮ ಮನೆಯಲ್ಲಿ ಗೋಮಾಂಸವನ್ನು ತಿನ್ನುವದು ಕಟ್ಟಾಯಿತು. ಆದರೆ ಉಳಿದ ಪ್ರಕಾರದ ಮಾಂಸಕ್ಕಿಂತ ಗೋಮಾಂಸವು ಹೆಚ್ಚಿಗೆ ಅಗ್ಗವಾಗಿರುವದರಿಂದ ಸಾಮಾನ್ಯ ಜನರಿಗೆ ಈ ಮೋಹವು ಒಮ್ಮೆಲೆ ಬಿಡುವಂತೆ ಇಲ್ಲ. ಆದ್ದರಿಂದ ಉಳಿದ ಮಾಂಸವನ್ನಾದರೂ ಶಕ್ಯವಿದ್ದಮಟ್ಟಿಗೆ ಅಗ್ಗವಾಗಿ ಮಾರಿ ಗೋಹತ್ಯೆಯನ್ನು ನಿಲ್ಲಿಸಲಿಕ್ಕೆ ಬೇಕು. ಪ್ರೇಮದಿಂದಲೇ ಪ್ರೇಮವು ಬೆಳೆಯುತ್ತದಾದ್ದರಿಂದ ಈ ನಿಮ್ಮ ಕರ್ತವ್ಯವನ್ನು ಅವಶ್ಯವಾಗಿ ಮಾಡಿರೆಂದು ನಾನು ನಮ್ಮ ಹಿಂದುಮುಸಲ್ಮಾನ ಬಂಧುಗಳಿಗೆ ಬೇಡಿಕೊಳ್ಳುತ್ತೇನೆ. ಹಿಂದೂ ಮುಸಲ್ಮಾನರ ನಡುವೆ ಐಕ್ಯವುಂಟಾಗಬೇಕಾದರೆ ಪ್ರತಿಯೊಂದು ಪಂಥಕ್ಕೆ ಯೋಗ್ಯವಾದ ಹಕ್ಕುಗಳನ್ನು ಕೊಡುವದು ಒಂದು ಉಪಾಯವಾಗಿದೆ. ಪಂಜಾಬದಂಥ ಕೆಲವು ಸ್ಥಳಗಳಲ್ಲಿ ಈ ದ್ವೇಷಭಾವವು ಇನ್ನೂ ಕಡಿಮೆಯಾಗದ್ದನ್ನು ಕಂಡು ಅತ್ಯಂತ ವಿಷಾದವಾಗುತ್ತಿದೆ. ಆದರೆ ಈ ದ್ವೇಷದ ಮೂಲಕಾರಣರು ಹಿಂದುಗಳಾಗಲಿ ಮುಸಲ್ಮಾನರಾಗಲಿ ಇರದೆ ಈ ಎರಡು ಸಮಾಜದೊಳಗಿನ ಬದಮಾಷರೂ ರಾಷ್ಟ್ರಘಾತಕರೂ ಇರುತ್ತಾರೆ. ಪರದೇಶದವರು ನಮ್ಮನ್ನು ನೋಡುತ್ತಿದ್ದಾಗ ನಾವು ಈ ಮೇರೆಗೆ ನಮ್ಮ ನಮ್ಮೊಳಗೆ ಜಗಳಾಡುವದು ಎಂದಿಗೂ ಸರಿಯಲ್ಲ. ಆಮೇಲೆ ಅಧ್ಯಕ್ಷರು ಸಂಘಟನ, ಅಸ್ಪೃಶ್ಯನಿವಾರಣ, ಮತ್ತು ಶುದ್ಧಿ ಇವುಗಳ ವಿಷಯಕ್ಕೆ ಭಾಷಣಮಾಡಿ ವೃತ್ತಪತ್ರಕಾರರು ಯಾವ ಪಕ್ಷಪಾತವನ್ನೂ ಮಾಡಬಾರದೆಂತಲೂ ಬೇರೆ ಮುಸಲ್ಮಾನೀ ರಾಷ್ಟ್ರಗಳಿಂದ ನಮಗೆ ಭಯವಿಲ್ಲವೆಂತಲೂ ಹೇಳಿದರು.

ಕೌನ್ಸಿಲ ಪ್ರವೇಶ.

ಪರಕೀಯರ ರಾಜ್ಯಕಾರಭಾರವು ಯಾರಿಗೂ ಬೇಕಾಗಿಲ್ಲ. ಸರ್ವತಂತ್ರವಾದ ಸ್ವರಾಜ್ಯವೇ ಎಲ್ಲರಿಗೂ ಬೇಕಾಗಿರುತ್ತದೆ. ಆದರೆ ಅದನ್ನು ದೊರಕಿಸುವ ಮಾರ್ಗಗಳು ಮಾತ್ರ ಭಿನ್ನವಾಗಿವೆ. ಡಾ|| ಸಪ್ರು ಮುಂತಾದ ಮವಾಳ ಬಂಧುಗಳು ಸಾಮ್ರಾಜ್ಯ ಸರಕಾರದ ಪಂಕ್ತಿಯಲ್ಲಿರಬೇಕೆಂದು ಬೇಕಾದಷ್ಟು ಶ್ರಮಪಟ್ಟರು. ಆದರೂ ಅವರ ಬೇಡಿಕೆಯು ಅತ್ಯಲ್ಪವಾಗಿತ್ತು. ಸ್ವರಾಜ್ಯ ಸಂಪಾದನೆಯನ್ನು ಬಿಟ್ಟು ಸಮಾನ್ಯ ಮಾತುಗಳ ಬಗ್ಗೆ ಯಾಚನೆ ಮಾಡುವದೆಂದರೆ ಮದುಮಗನನ್ನು ಮರೆತು ಲಗ್ನಕ್ಕೆ ಹೊರಟಂತೆ ಆಗುವದು. ಮವಾಳರು ಹಿಡಿದ ಮಾರ್ಗವನ್ನು ಸ್ವೀಕರಿಸಿ ಠರಾವು, ವಿನಂತಿ, ನಿಷೇಧ ಮುಂತಾದವುಗಳನ್ನು ಮಾಡುತ್ತ ಕೂತರೆ ನಮ್ಮ ಧ್ಯೇಯವು ಎಂದಿಗೂ ಸಾಧ್ಯವಾಗಲಾರದು. ಇನ್ನು ಎರಡನೆಯ ಪಕ್ಷವೆಂದರೆ ಸ್ವರಾಜ್ಯ ಪಕ್ಷ. ಈ ಪಕ್ಷದ ಜನರಲ್ಲಿ ಪಾಶ್ಚಾತ್ಯ ಸಂಸ್ಕೃತಿಯು ನಟ್ಟುಹೋಗಿದೆ. ಅವರಿಗೆ ಪೌರ್ವಾತ್ಯರಾದ ಮಹಾತ್ಮರ ಮಾರ್ಗವು ವಿಚಿತ್ರವಾಗಿ ತೋರುತ್ತದೆ. ಇಡೀ ಹಿಂದುಸ್ಥಾನವನ್ನು ಸಂಪೂರ್ಣವಾಗಿ ಸ್ವತಂತ್ರ ಮಾಡಲು ಸಮರ್ಥವಾಗಿದ್ದ ಒಂದೇ ಒಂದು ಮಾರ್ಗವಾಗಿದ್ದ ರಾಟಿಗೆ ಸಹ ಅವರು ಹೆಸರಿಡುತ್ತಾರೆ. ಅವರಿಗೆ ಮುಖ್ಯವಾಗಿ ಜಗಳಬೇಕು. ಮಹಾತ್ಮರು ಸವಿನಯ ಶಾಸನ ಭಂಗವನ್ನು ಆರಂಭಿಸಿದ್ದರೆ ಅಥವಾ ಮಹಾತ್ಮರು ಸೆರೆಮನೆಗೆ ಹೋದಾಗ ನಾವಾಗಿ ಅದನ್ನು ಪ್ರಾರಂಭಿಸಿದ್ದರೆ ಸ್ವರಾಜ್ಯ ಪಕ್ಷದ ಸ್ಥಾಪನೆಯಾಗುತ್ತಿದ್ದಿಲ್ಲ. ಕಾಯದೆ ಭಂಗವನ್ನು ನಿಲ್ಲಿಸಲು ಕೌನ್ಸಿಲದ ಒಣವಾದವು ಬೆಳೆಯಿತು. ಮತ್ತು ಸ್ವರಾಜ್ಯ ಪಕ್ಷದ ನಮ್ಮ ಬಂಧುಗಳು ಕೌನ್ಸಿಲುಗಳನ್ನು ಪ್ರವೇಶಿಸಿದರು. ಕೌನ್ಸಿಲ ಪ್ರವೇಶಕ್ಕೆ ಸಹ ಅವರಿಗೆ ಮಹಾತ್ಮರ ಹೆಸರಿನಿಂದಲೂ ಮಹಾಸಭೆಯ ಸಹಾನುಭೂತಿಯಿಂದಲೂ ಬಹಳ ಸಹಾಯವಾಯಿತು. ತಾವು ಕೌನ್ಸಿಲುಗಳಿಂದ ಸ್ವರಾಜ್ಯವನ್ನು ದೊರಕಿಸುವೆವೆಂದು ಅವರಿಗೆ ಅನಿಸುತ್ತಿದ್ದರೆ ಹಾಗೇ ಆಗಲಿ. ಯಾವ ಮಾರ್ಗದಿಂದಲಾದರೇನು, ಸ್ವರಾಜ್ಯವು ಸಿಕ್ಕರೆ ಸಾಕು. ಇನ್ನು ಸ್ವಂತ ನನ್ನ ವಿಷಯಕ್ಕೆ ಕೇಳಿದರೆ, ನಾನು ಬಹಿಷ್ಕಾರವಾದಿಯು. ಬಹಿಷ್ಕಾರತ್ರಯವು ನನಗೆ ಮೊದಲಿನಿಂದ ಮಾನ್ಯವಿರುತ್ತದೆ. ಕೌನ್ಸಿಲದ ಕಾರ್ಯದಲ್ಲಿ ವಿಶ್ವಾಸವಿಲ್ಲದಂಥ ನಾವು ಇನ್ನುಮೇಲೆ ಬಾರ್ಡೋಲಿಯಲ್ಲಿ ನಿರ್ಣಯಿಸಿದಂತೆ ವಿಧಾಯಕ ಕಾರ್ಯಕ್ರಮವನ್ನೇ ಕೈಕೊಳ್ಳತಕ್ಕದ್ದು. ನಮ್ಮ ವಿಧಾಯಕ ಕಾರ್ಯಕ್ರಮದಲ್ಲಿ ಸ್ವರಾಜ್ಯ ಪಕ್ಷವು ಸಹಾಯ ಮಾಡಿದರೆ ಒಳಿತೇ ಆಯಿತು. ಆದರೆ ನಾವು ಮಾತ್ರ ನಮಗೆ ವಿಶ್ವಾಸವಿಲ್ಲದಂಥ ಕೌನ್ಸಿಲದ ಕಾರ್ಯಕ್ರಮದಲ್ಲಿ ಅವರಿಗೆ ನೆರವಾಗಲಾರೆವು.

ನಮ್ಮ ಮುಂದಿನ ಕೆಲಸ.

ಈಗ ನಾವು ಕೈಕೊಳ್ಳಬೇಕಾಗಿದ್ದ ಮುಖ್ಯ ಕೆಲಸಗಳು ಮೂರು. ಮೊದಲನೆಯದು ಖಾದಿಪ್ರಸಾರ. ಈ ಕಾರ್ಯದಲ್ಲಿ ನಮ್ಮ ಸೋದರಿವರ್ಗ ಬಹಳ ಸಹಾಯವನ್ನು ಮತ್ತಾರೂ ಮಾಡಲಾರರು. ಇವರ ವಿಷಯಕ್ಕೆ ಮಹಾತ್ಮಜಿಯವರ ಮನಸ್ಸಿನಲ್ಲಿ ಬಹಳ ವಿಶ್ವಾಸವಿರುತ್ತದೆ. ಪುರುಷರು ಸೆರೆಮನೆಗೆಹೋಗಲಿ ಮತ್ತೇನಾದರೂ ಮಾಡಲಿ, ಇವರು ರಾಟಿಯ ಸಹಾಯದಿಂದ ಖಾದಿ ಪ್ರಸಾರದ ಮಹಾ ಕಾರ್ಯವನ್ನು ಶಾಂತರೀತಿಯಿಂದ ಮಾಡತಕ್ಕದ್ದು. ರಾಷ್ಟ್ರೀಯ ಶಿಕ್ಷಣವೇ ನಮ್ಮ ಮುಂದಿನ ಎರಡನೆಯ ಕೆಲಸ. ಪ್ರಾಂತಿಕ ಶಿಕ್ಷಣ ಸಮಿತಿಗಳನ್ನೂ ಮಧ್ಯವರ್ತಿ ಮಂಡಲಗಳನ್ನೂ ಅಲ್ಲಲ್ಲಿ ಸ್ಥಾಪಿಸಿ ರಾಷ್ಟ್ರೀಯ ಶಿಕ್ಷಣದ ಕಾರ್ಯವನ್ನು ಸದ್ಯಕ್ಕಿಂತ ಹೆಚ್ಚು ಜೋರಿನಿಂದ ಮಾಡುವದು ಅವಶ್ಯವಿರುತ್ತದೆ. ಇನ್ನು ಮೂರನೆಯ ಕೆಲಸವೆಂದರೆ ಟಿಳಕ ಸ್ವರಾಜ್ಯ ಫಂಡು. ಹಣವಿಲ್ಲದೆ ಯಾವ ಕಾರ್ಯವೂ ಸಾಗುವಂತಿಲ್ಲ. ಸದ್ಯಕ್ಕೆ ರಾಷ್ಟ್ರನಿಧಿಯನ್ನು ಕೂಡಿಸಿ ಅಸಹಕಾರ ಚಳವಳಿಯನ್ನು ಸಾಗಿಸಿದ್ದು ನಿಜವು. ಆದಾಗ್ಯೂ ನಮ್ಮ ಆರ್ಥಿಕಸ್ಥಿತಿಯನ್ನು ಇದಕ್ಕೂ ಹೆಚ್ಚಿಗೆ ಸುವ್ಯವಸ್ಥಿತವಾಗಿ ಮಾಡಬೇಕಾಗಿದೆ. ಸ್ವರಾಜ್ಯ ಫಂಡಿನ ವಾರ್ಷಿಕ ಉತ್ಪನ್ನವು ಕಡಿಮೆ ಪಕ್ಷಕ್ಕೆ ಇಂತಿಷ್ಟು ಇರತಕ್ಕದ್ದೆಂದು ಗೊತ್ತುಪಡಿಸಿ ಅದನ್ನು ತಪ್ಪದೆ ಕೂಡಿಹಾಕಬೇಕು. ನಮ್ಮ ಸಾಂಪತ್ತಿಕ ಪರಿಸ್ಥಿತಿಯು ಸುವ್ಯವಸ್ಥಿತವಾಗಿ ಉಳಿಯಲಿಕ್ಕೆಂದು ಒಂದು ಮಂಡಲವನ್ನು ನೇಮಿಸಬೇಕು. ಮತ್ತು ರಾಷ್ಟ್ರಕಾರ್ಯಕ್ಕಾಗಿ ಶ್ರಮಪಡುವ ದೇಶಭಕ್ತರಿಗೆ ಈ ಹಣದಿಂದ ಶಕ್ಯವಿದ್ದಮಟ್ಟಿಗೆ ಸಹಾಯಮಾಡಬೇಕು. ಸಿವಿಲ್ ಸರ್ವೆಂಟರು ಅನ್ಯಾಯದಿಂದ ಅಪಾರ ಹಣವನ್ನು ಕಸಿದುಕೊಳ್ಳುತ್ತಿರಲು ಸಮಾಜ ಸೇವಕರು ನ್ಯಾಯದ ಭಿಕ್ಷೆಯನ್ನು ಬೇಡಿದರೆ ಅದನ್ನು ಕೊಡುವದು ನಮ್ಮ ಕರ್ತವ್ಯವೇ ಆಗಿರುತ್ತದೆ.

ನಭಾ ಪ್ರಕರಣ.

ನಮ್ಮ ಸೀಖ ಬಂಧುಗಳ ಧೈರ್ಯ ಶೌರ್ಯ ಮತ್ತು ಅಹಿಂಸಾ ಮುಂತಾದ ಗುಣಗಳು ಅನುಕರಣೀಯವಿರುತ್ತವೆ. ನಭಾ ಸಂಸ್ಥಾನದ ಮಹಾರಾಜರ ವಿಷಯಕ್ಕೆ ನಮ್ಮ ಮನಸ್ಸಿನಲ್ಲಿ ಆದರವೇ ಇರುತ್ತದೆ. ಅವರ ಸದ್ಗುಣಗಳೇ ಅವರ ಪದಚ್ಯುತಿಗೆ ಮೂಲವಾದವೆಂದು ಖಂಡಿತವಾಗಿ ಹೇಳಬಹುದು. ನಮ್ಮ ದೇಶೀಯ ಸಂಸ್ಥಾನಗಳು ಎಷ್ಟಾದರೂ ನಮ್ಮವು. ಅವುಗಳ ಅರಸರಾದರೂ ನಮ್ಮ ಧರ್ಮದವರೇ. ಇಂದಿಲ್ಲ ನಾಳೆ ಅವರೂ ಜಮಗೇ ಕೂಡುವರು. ಆದರೆ ಅಂಥ ಪ್ರಸಂಗವು ಇಷ್ಟರಲ್ಲಿಯೇ ಬರಬಹುದೆಂದು ನಾನು ತಿಳಿದಿಲ್ಲ. ತಮ್ಮ ಧರ್ಮಬಾಂಧವರಿಗೆ ಪಾರತಂತ್ರ್ಯದಿಂದ ಮುಕ್ತರಾಗಲಿಕ್ಕೂ ಮತ್ತು ಗುರುದ್ವಾರದ ಸುಧಾರಣೆಯನ್ನು ಮಾಡಲಿಕ್ಕೂ ಸಹಾನುಭೂತಿಯನ್ನು ತೋರಿಸಿದ್ದರಿಂದ ನಭಾದ ಮಹಾರಾಜರು ಇಂಥ ಸಂಕಟಕ್ಕೆ ಗುರಿಯಾದರು. ಶಿರೋಮಣಿ ಗುರುದ್ವಾರಪ್ರಬಂಧಕ ಕಮಿಟಿಯನ್ನೂ ಮತ್ತು ಅಕಾಲಿ ದಲವನ್ನು ಬೇಕಾಯಿದೇಶೀರ ಎಂದು ನಿರ್ಣಯಿಸಿದ್ದು ಅವರಿಗಷ್ಟೇ ಸಂಬಂಧ ಪಟ್ಟಿರುವದಿಲ್ಲ. ಅದರಿಂದ ಇಡೀ ಹಿಂದುಸ್ಥಾನಕ್ಕೇ ಒಂದು ತರದ ಆಹ್ವಾನ ಮಾಡಿದಂತಾಯಿತು. ನಾವು ಅದಕ್ಕೆ ಸರಿಯಾದ ಉತ್ತರವನ್ನು ಕೊಡದಿದ್ದರೆ ನಮ್ಮ ಹಾದಾದರೂ ಇಂದಲ್ಲ ನಾಳೆ ಹಾಗೇ ಆಗುವದು. ಈ ವಿಷಯದಲ್ಲಿ ನಾವು ಅವರಿಗೆ ಕೇವಲ ವಾಙ್ಮಾತ್ರ ಸಹಾನುಭೂತಿಯನ್ನು ತೋರಿಸದೆ ಪ್ರತ್ಯಕ್ಷ ಸಹಾಯವನ್ನಾದರೂ ಮಾಡಬೇಕು. ಆದರೆ ಸವಿನಯ ಶಾಸನಭಂಗದ ಮಾತು ಕ್ಷುದ್ರವಾದದ್ದಲ್ಲ. ವಿಧಾಯಕ ಕಾರ್ಯಕ್ರಮವನ್ನು ಪೂರ್ತಿಗೊಳಿಸುವದರಿಂದಲೇ ಅಂಥ ಪಾತ್ರತೆಯು ನಮ್ಮಲ್ಲಿ ಬರುವದು. ಸವಿನಯ ವಿಶ್ವಾಸನಭಂಗದ ಹೊರ್ತು ಸ್ವರಾಜ್ಯವು ಸಿಗಲಾರದು. ಆದ್ದರಿಂದ ನಾವೆಲ್ಲರು ವಿಶೇಷವಾಗಿ ಈಗ ಸ್ವರಾಜ್ಯಾಕ್ಯಮವನ್ನು ತಂದಂಥವರು ಮುಂದೆಬಂದು ಇಂಥ ತಯಾರಿಯನ್ನು ಮಾಡತಕ್ಕದ್ದು.

ಸ್ವಾತಂತ್ರ್ಯದ ದಾರಿ.

ಮಿತ್ರರೇ, ಸ್ವಾತಂತ್ರ್ಯಕ್ಕೆ ರಾಜಮಾರ್ಗವಿಲ್ಲ. ಆದರೆ ಅದಕ್ಕೆ ಒಂದು ನಡುದಾರಿಯು ಮಾತ್ರ ಇರುತ್ತದೆ. ಸಾವಿಗೆ ಸಿದ್ಧವಾಗುವದೇ ಈ ದಾರಿಯು. ಮಹಾಸಭೆಯ ಕಾರ್ಯಕಾರೀ ಮಂಡಲದ ಎಲ್ಲ ಸಭಾಸದರು ಒಮ್ಮೆಲೆ ಒಮ್ಮನಸ್ಸಿನಿಂದ ಸಾಯಲಿಕ್ಕೆ ಸಿದ್ಧರಾದರೆ ಒಂದೇ ವರ್ಷದಲ್ಲಿ ಸ್ವರಾಜ್ಯವು ಸಿಗುವದೆಂದು ನಾನು ಸಾರಿಹೇಳುತ್ತೇನೆ. ಮಹಾಸಮಿತಿಯು ಇಂಥ ಸ್ವಾರ್ಥತ್ಯಾಗಕ್ಕೆ ಟೊಂಕಕಟ್ಟಿದರೆ ಅದು ಒಂದೇ ತಿಂಗಳದಲ್ಲಿ ಸಿಗುವದು. ಆದರೆ ಮಿತ್ರರೇ, ಸ್ವರಾಜ್ಯವು ಮತ್ತೆಲ್ಲಿಯೂ ಇಲ್ಲ. ಸ್ವಂತ ನಿಮ್ಮ ಕೈಯಲ್ಲಿಯೇ ಇರುತ್ತದೆ. ರಾಷ್ಟ್ರವು ಆರೆದಾತ್ತನವೇ ಸಾಯಲಿಕ್ಕೆ ನೀವೆಲ್ಲರೂ ಸಿದ್ಧರಾದರೆ ಅದು ಇಂದೇ ಸಿಗುವದು, ಆದರೆ ನಾವು ಇದಕ್ಕೆ ಸಿದ್ಧರಾಗದೆ, ಬಾರ್ಡೋಲಿಯ ಕಾರ್ಯಕ್ರಮಕ್ಕೆ ಮೂಗು ಮುರಿಯುತ್ತ ಕೂತರೆ ಮಹಾಸಭೆಯ ಧ್ಯೇಯದ ಬದಲಾವಣೆಯ ವಿಷಯಕ್ಕೆ ಮಾತಾಡುವದರಲ್ಲಿ ಏನೂ ಅರ್ಥವಿಲ್ಲ. ಆದ್ದರಿಂದ ಮಿತ್ರರೇ, ನಾವೆಲ್ಲರೂ ಈಗಿನಿಂದಲೇ ನಮ್ಮ ಕಾರ್ಯಕ್ಕೆ ಕೈಹಾಕಿ ದೇಶೋದ್ಧಾರಕ್ಕಾಗಿ ಪ್ರಾಣವನ್ನು ಸಹ ಕೊಡಲಿಕ್ಕೆ ಸಿದ್ಧರಾಗೋಣ. ಈಮೇರೆಗೆ ನಾವು ಒಂದು ವರ್ಷದವರೆಗೆ ಕೆಲಸಮಾಡಿ, ವರ್ಷದ ಅಂತ್ಯದಲ್ಲಿ ಸರಕಾರವು ನಮ್ಮ ಮುಖಂಡರನ್ನು ಸೆರೆಮನೆಯಿಂದ ಹೊರಗೆ ಕರೆದು, ಅವರ ಮುಂದೆ ತಮ್ಮ ಕೃತಕರ್ಮಕ್ಕಾಗಿ ಪಶ್ಚಾತ್ತಾಪವನ್ನು ವ್ಯಕ್ತಗೊಳಿಸಿ, ಅವರಿಗೆ ಸ್ವರಾಜ್ಯದ ಸನದನ್ನು ಅರ್ಪಿಸದಿದ್ದರೆ, ಕೂಡಲೆ ನಾವು ದೇವರನ್ನು ಸ್ಮರಿಸಿ ನಮ್ಮ ಪ್ರಜಾಸತ್ತಾತ್ಮಕ ರಾಜ್ಯವನ್ನು ಜಾಹೀರಮಾಡೋಣ. ಅಖಿಲ ಹಿಂದುಸ್ಥಾನದ ಧರ್ಮಬಂಧುತ್ವವನ್ನು ಪ್ರಸಿದ್ಧಪಡಿಸೋಣ. ಸನ್ 1921 ರಲ್ಲಿ ನಾವು ನಮಗೂ ಮತ್ತು ನಮ್ಮ ಸರಕಾರಕ್ಕೂ ಒಂದು ವರ್ಷದ ಅವಧಿಯನ್ನು ಕೊಟ್ಟಿದ್ದೆವು. ಆದರೆ ಆ ಅವಧಿಯಲ್ಲಿ ನಾವು ನಮ್ಮ ಕರ್ತವ್ಯವನ್ನು ಮಾಡಲಿಲ್ಲ. ಆದ್ದರಿಂದ ಒಂದು ವರ್ಷವಾದ ನಂತರ ಸ್ವರಾಜ್ಯವನ್ನು ಬೇಡುವ ಅಧಿಕಾರವೇ ನಮಗೆ ಉಳಿಯಲಿಲ್ಲ. ಆದ್ದರಿಂದ ನಾವು ಮತ್ತೊಮ್ಮೆ ನಾಗಪುರದ ಕಾರ್ಯಕ್ರಮವನ್ನೇ ಕೈಕೊಂಡು ಮಹಾತ್ಮಜಿಯವರು ಹೇಳಿದಂತೆ ಆ ಕೆಲಸವನ್ನು ದೇವರನ್ನು ಸ್ಮರಿಸಿ ಮಾಡೋಣ. ಹಾಗೆ ನಾವು ಮಾಡಿದರೆ ನಮಗೆ ಕಳೆದುಹೋಗಿದ್ದ ಸ್ವರಾಜ್ಯವು ತಿರುಗಿಸಿಗುವದು. ಆ ವೇಳೆ ನಾವು ನಮ್ಮ ಜಯಭೇರಿಯನ್ನು ಹೊಡಿಯೋಣ. ಈ ಜಯಭೇರಿಯು ಯಾವದಂದರೆ— ಮಹಾತ್ಮಾ ಗಾಂಧಿಕಿ ಜಯ!

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಸ.

A WORD TO MR. HOSKOPPA KRISHNA RAO

(By Rama Sishya)

The one characteristic feature of our people is—blind imitation. Not a single institution exists in British India, which Mysore cannot boast of. To-day a Hindu Sabha springs into existence and lo! there rises into prominence a parallel institution with wellcut programme and high-sounding titles. Another day a journalistic association is established in Bombay and Mysore wants to follow suit. Instances can be multiplied of such institutions and associations not one of which is in a flourishing condition.

The latest instance is that of Mr. Hosakoppa Krishna Rao's "wildgoose chase." He has called for a conference of political workers at Hariharpur, the object of which is to establish a permanent institution in order to attain responsible government in Mysore. Nothing short of responsible government with an executive dependent on the legislature will satisfy Mr. Krishna Rao! In his sporadic outbursts of patriotism, Mr. Krishna Rao has entirely neglected to understand the political genius of our people. This is his one great defect. But that is not all. His greatest weakness lies in that he has failed to grasp the political condition of our State. I sincerely admire the energy, ability and noble sentiments of Mr. Krishna Rao. But he ought to know there is a fundamental difference between British India and our State. Time and again this has been emphasised by the Editor of the "Mysore Star." Our interests are one with His Highness. The Government of His Highness are endeavouring to do their best to improve the condition of our people. His Highness takes particular interest in the welfare of our people. However well-intentioned His Highness may be, at the present state of affairs, he is not in a position to quicken the pace of Reforms. Hence our duty is clear. We should educate the electorate and work the reforms to a successful end so that His Highness may be pleased to grant further instalment of reforms at no distant date. Does this require agitation? So I would like to ask these two questions to Mr. Krishna Rao. (1) What about the condion of our electorate?—Are they not indifferent to politics? (2) What is the political condition of our State?—Are His Highness' Government grudging to give reforms?

It is not my intention to deprecate the attempts of Mr. Krishna Rao. But I only contend that it is too premature and inopportune to have an organization of the kind contemplated by the leader of the Malnad Association.

Before concluding I wish to draw the attention of Mr. Krishna Rao to that portion of Maulana Mohammed Ali's Presidential address at Cocanada concerning Native States.

ಚಳ್ಳಕೆರೆ ತಾಲ್ಲೂಕು ಜಾಜೂರು ಗ್ರಾಮದ ರೈತರ ಗೋಳಾಟ.

ಈಗ್ಗೆ ಸುಮಾರು 5-6 ವರ್ಷಗಳಿಂದಲೂ ಕಾಲಕ್ಕೆ ಸರಿಯಾಗಿ ಮಳೆ ಬಾರದೆ ಬೆಳೆಯು ಅನುಕೂಲವಾಗಿ ಆಗದೆ ಇದ್ದುದಲ್ಲದೆ ಈ ವರ್ಷ ಸುತರಾಂ ಮಳೆ ಬೆಳೆ ಆಗದೆ ವ್ಯವಸಾಯದಿಂದಲೇ ಜೀವಿಸುವ, ಬಡರೈತರು ಕೇವಲ ಹೀನಸ್ಥಿತಿಗೆ ಬಂದಿರುತ್ತಾರೆ. ಈ ಗ್ರಾಮವನ್ನು ಅಭಿವೃದ್ಧಿಪಡಿಸಲು ನೀರಿನ ಸಪ್ಲೈಮಾಡಬೇಕೆಂದು ಈ ಪುರನಿವಾಸಿಗಳಾದ ಮ|| ಪಟೇಲ್ ಹನುಮಂತಯ್ಯನವರು ಮತ್ತು ರಾಮಣ್ಣನವರು ಸಹ ಈ ಗ್ರಾಮಕ್ಕೆ ಸಮೀಪದಲ್ಲಿರುವ ವೇದಾವತಿನದಿ ನೀರನ್ನು ನಾಲಾಮೂಲಕ ತಂದುಕೊಳ್ಳಲು ಯೋಚಿಸಿ ಸರ್ಕಾರದ ತಿಳುವಳಿಕೆಗೆ ತಂದು ನಾಲಾತರುವ ಪ್ರಯತ್ನದಲ್ಲಿದ್ದರು. ನಮ್ಮಗಳ ದುರಾದೃಷ್ಟದಿಂದ ಮೇಲ್ಕಂಡ ಇಬ್ಬರೂ ಸ್ವರ್ಗಸ್ಥರಾದರು. ತರುವಾಯ ಗ್ರಾಮದಲ್ಲಿ ಪಾರ್ಟಿಯುಂಟಾಗಿ ಮೇಲಿನ ಪರೋಪಕಾರವಾದ ಕೆಲಸಗಳ್ಯಾವತ್ತೂ ನಿಂತುಹೋದವು. ಈ ಬಡಜನಗಳ ಗೋಳಾಟಹೆಚ್ಚಿದ್ದರಿಂದ ಆಗ್ಗೆ ಇದ್ದ ಸಬ್‌ಡಿವಿಜನ್ ಸಾಹೇಬರವರಾದ ಮಿ|| ಅಪ್ಪಣ್ಣಯ್ಯಂಗಾರವರು, ಸ್ಥಳಕ್ಕೆ ದಯಮಾಡಿ ಅನುಕೂಲಗಳನ್ನು ಕಲ್ಪಿಸಿಕೊಡುವದಾಗಿ ಅಪ್ಪಣೆಯನ್ನಿತ್ತು, ಪಟೇಲಿ ಕೆಲಸಕ್ಕೆ ಮ|| ಪೌ ಪಟೇಲರ ಬಾಸಾಮಾದ ಫೋದಪ್ಪನವರನ್ನು ನೇಮಿಸಿ ಸರಿಯಾದ ಸಲಹೆಕೊಟ್ಟು ವಾಪಸ್ ದಯಮಾಡಿಸಿದರು. ಈ ಪಟೇಲ್ ಫೋದಪ್ಪನವರು ತಮ್ಮ ರೈತರಿಗೆ ಉಂಟಾಗಿದ್ದ ಎಲಾ ತೊಂದರೆಗಳನ್ನು ಹೋಗಲಾಡಿಸಲು ಮೇಲ್ಕಂಡ ನಾಲಾವಿಚಾರದಲ್ಲಿ ರೈತರಿಂದ ಹಣ ವಸೂಲ್‌ಮಾಡಿ ಕೆಲವು ರೈತರಿಗೆ ತಾವೂ ಸಹ ಸಾಲಕೊಟ್ಟು 5000 ರೂಪಾಯಿಗಳನ್ನು ಜಮಾಯಿಸಿ ಸರ್ಕಾರದ ಅಪ್ಪಣೆಮೇರೆ ಕಾಂಗಾರಿ ಶುರುಮಾಡಿಸಿರುತ್ತಾರೆ. ನಾಲಾ ಹಾಲಿ 4 ಮೈಲಿ ಖಾಸಲಿ ಬಂದಿರುತ್ತೆ, ಇನ್ನು 6 ಮೈಲಿ ಆಗಬೇಕಾದ್ದು ಬಾಕಿ ಇರುತ್ತೆ. ಈರೀತಿ ಪರೋಪಕಾರಿಯಾದ ಪಟೇಲ್ ಫೋದಪ್ಪನವರಿಗೆ ಈ ಗ್ರಾಮದ ಶ್ಯಾನುಭೋಗರು ಸ್ವಾರ್ಥಪರತೆಯಿಂದ ದ್ವೇಷಿಗಳಾಗಿ ಇಲ್ಲದ ದೋಷಗಳನ್ನೆಲ್ಲಾ ಆರೋಪಿಸುತ್ತ ನಮಗೂ ಮತ್ತು ಪಟೇಲರಿಗೂ [illegible] ಅಸಹಕಾರತೆಯನ್ನುಂಟುಮಾಡಿರುತ್ತಾರೆ. ಈ ಪಟೇಲ್ ಫೋದಪ್ಪನವರಿಗೆ ಮುಂದೆ ಯಾವಾದರೂ ತೊಂದರೆ ಬರದಂತೆ [illegible] ಸರ್ಕಾರದವರು [illegible] ತೋರುತ್ತದೆ. ಈ ಸತ್ಕಾರ್ಯ ಪೂರ್ತಿಗೊಳಿಸುವುದಕ್ಕಾಗಿ ಈ ಪಟೇಲರ ಶ್ರೇಯೋಭಿವೃದ್ಧಿ [illegible] ಶ್ಯಾನುಭೋಗರನ್ನು ಪ್ರೇರಿಸಲೆಂದು ದೇವರನ್ನು ಪ್ರಾರ್ಥಿಸುತ್ತೇವೆ. ಈ ನಾಲಾ ಕಾಮಗಾರಿಯಿಂದ ನೂರಾರು ಮಂದಿ ಕೂಲಿಗಳು ಜೀವಿಸುತ್ತಿರುವ [illegible] ರೈತರಿಗೂ ಅನುಕೂಲವಾಗುತ್ತೆ. ಆದ್ದರಿಂದ ಇದಕ್ಕೆ [illegible] ನಮ್ಮ ಸರ್ಕಾರದ [illegible] —ಸಕ್ಕನಾದಿ.

ಶ್ರೀ ಜಗದ್ಗುರುಗಳಿಂದ ಗುರುಕುಲಸ್ಥಾಪನೆ.

ಗತಿಸ ತಾ|| ಸೈ|| ತಿಂಗಳೂರಿನ ಶ್ರೀ ವೀರಭದ್ರದೇವಾಲಯದಲ್ಲಿ ಗುರುವರ್ಗದವರ ಉನ್ನತಿಗಾಗಿ ಪ್ರಧಾನ ಶಿಕ್ಷಣಾಲಯ (ಗುರುಕುಲ) ವನ್ನು ಶ್ರೀ ಜಗದ್ಗುರು ಪಂಚಾಚಾರ್ಯರ [illegible] ಬೇಕೆಂದು ಟೆಂಪಲ್ ಕಮಿಟಿಯವರ [illegible] ಶ್ರೀ ವೀರಭದ್ರ [illegible] ಇವರು ಈ ವರ್ಷ [illegible] ಆಗಮಿಸಿ [illegible] ಶ್ರೀ ಕಾಶೀ [illegible] ಜಗದ್ಗುರು [illegible] ಮಹಾಸ್ವಾಮಿಗಳವರು [illegible] ಹುಬ್ಬಳ್ಳಿ [illegible] ಶ್ರೀ ದೇವಸ್ಥಾನದ ಟೆಂಪಲ್ [illegible] ಶ್ರೀ ವೀರಭದ್ರಸ್ವಾಮಿಯ [illegible] ಅಭಿಪ್ರಾಯವನ್ನು [illegible] ಈ ಸ್ಥಳವು ಗುರುಕುಲಕ್ಕೆ [illegible] ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳ ಮಧ್ಯಸ್ಥಲವಾಗಿರುವದರಿಂದ ಈ ಕ್ಷೇತ್ರದಲ್ಲಿ ಗುರುಕುಲವನ್ನು ಅವಶ್ಯವಾಗಿ ಸ್ಥಾಪಿಸಬೇಕೆಂದು ಅಪ್ಪಣೆಕೊಡಿಸಿ, ಎರಡು ದಿವಸಗಳವರೆಗೆ ಅಲ್ಲಿಯೇ ಇದ್ದು ಯಾವತ್ತು ಸ್ಥಳವನ್ನು ಪರಾಮರಿಸಿ ಈ ಸಂಸ್ಥೆಯು ಸುರಕ್ಷಿತವಾಗಿ ಚಿರಕಾಲ ನಡೆಯುವಂತೆ ಮಾಡತಕ್ಕ ಆಲೋಚನೆಗಳನ್ನು ಪೂರೈಸಿಕೊಂಡು ಶ್ರೀ ದೇವಸ್ಥಾನದ ಶರಾ (ವಿಜಿಟರ್ಸ್) ಬುಕ್ಕಿನಲ್ಲಿ ಶ್ರೀಹಸ್ತಗಳಿಂದ ಸ್ವಹಸ್ತಾಕ್ಷರಮೂಲಕ ಆಶೀರ್ವಚನವನ್ನು ದಯಪಾಲಿಸಿರುತ್ತಾರೆ. ಅದರೊಳಗಿನ ಮುಖ್ಯಾಂಶವನ್ನು ಇದರಡಿಯಲ್ಲಿ ಕೊಟ್ಟಿರುತ್ತೇನೆ.—ದೈವಭಕ್ತ.

ಇಂಥಾ ಶ್ರೀವೀರಭದ್ರೇಶ್ವರನ ಸ್ಥಾನದಲ್ಲಿ ಧರ್ಮಕಾರ್ಯಗಳ ವೆವಸ್ಥೆಗೊಳಿಸುವದಕ್ಕೆ ಯೋಗ್ಯವಿರುವುದು. ಈ ದೇವಸ್ಥಾನದ ಕಾರ್ಯಕಾರಿ ಮಂಡಳಿಯವರ ಪ್ರಾರ್ಥನೆಯ ಮೇರೆಗೆ ಮಹಾಸಂಸ್ಥಾನದ ಖುದ್ದು ಸವಾರಿಯು ಚಿತ್ತೈಸಿ ಪರಾಮರ್ಶಿಸಿದ್ದಾಯಿತು. ಈ ಸ್ಥಾನವು ಬಹು ರಮ್ಯವಾಗಿಯೂ ನಿರ್ಮಲವಾಗಿಯೂ ಪವಿತ್ರಕ್ಷೇತ್ರವಾಗಿಯೂ ಇರುವದರಿಂದ, ಶಿವಯೋಗಿಗಳವಾಸಕ್ಕೆ ಯೋಗ್ಯವಾಗಿರುವದು. ಈ ಸ್ಥಾನದಲ್ಲಿ ಶಿವಯೋಗನಿಷ್ಣಾತರಾಗಿಯೂ ಶಿವಶಾಸ್ತ್ರಪಾರಂಗತರಾಗಿಯೂ ಇರತಕ್ಕ ಯೋಗ್ಯರಾದೊಬ್ಬ ಅಧಿಕಾರಿಗಳನ್ನು ಕಳುಹಿಸಿ ಶಿವಯೋಗಸಾಧಕರನ್ನು ತಯಾರಿಸಿ ತದ್ದ್ವಾರ ಸಾಕ್ಷಾತ್ ಶಿವಭಕ್ತರನ್ನು ಧರ್ಮಬೋಧೆಯಿಂದ ಉದ್ಧಾರಗೊಳಿಸುವ ಸುವೆವಸ್ಥೆಯನ್ನು ಮಹಾಸಂಸ್ಥಾನದಿಂದ ಮಾಡೋಣವಾಗುತ್ತೆ.

ಮುಕ್ಕಾಮು ತಿಂಗಳೂರ
ಶ್ರೀ ವೀರಭದ್ರದೇವಾಲಯ,
ತಾ|| 11-11-23.

ಶ್ರೀಗಳವರ
ಬಾಲಬೋಧಸಹಿ.

ವೀರಶೈವರೂ ಧಾರವಾಡ ಜಿಲ್ಲೆಯಲ್ಲಿ ನಡೆದ ಕೌನ್ಸಿಲ್ ಚುನಾವಣೆಯೂ.

(ಲೇ— ಕಾವ್ಯತೀರ್ಥ ಗುರುಮೂರ್ತಿಶಾಸ್ತ್ರಿ, ಕಜ್ಜರಿ.)

ವಾಚಕಮಹಾಶಯರೇ! ಈ ದಿವಸ ಧಾರವಾಡ ಜಿಲ್ಲೆಯೊಳಗಿನ ವೀರಶೈವರ ಸಂಬಂಧವಾದ ಒಂದು ವಿಚಿತ್ರ ಮತ್ತು ಬೋಧಪ್ರದವಾದ ಚಿತ್ರವನ್ನು ತಮ್ಮೆದುರಿಗಿಡಲಿಕ್ಕೆ ಸಿದ್ಧನಾಗಿರುತ್ತೇನೆ. ಇದನ್ನು ಕಂಡು ಆ ಸಂಬಂಧಪಟ್ಟ ಎಷ್ಟೋ ಜನರು ನನ್ನ ಮೇಲೆ ಕಿಂಕರಿ ಹಲ್ಲು ಕಡಿದರೂ ಕಡಿಯಬಹುದು. ಪರಂತು ನಿಷ್ಪಕ್ಷಪಾತಿಗಳಾದ ಬಹುಜನರು ನನ್ನ ಪಕ್ಷವನ್ನು ಸಮರ್ಥಿಸದೆ ಬಿಡಲಿಕ್ಕಿಲ್ಲವೆಂಬ ಸದ್ಭಾವನೆಯಿಂದ ಮನಸ್ಸಿನಲ್ಲಿ ಸ್ವತಂತ್ರವಾಗಿ ಹೊಳೆದ ನಾಲ್ಕು ಮಾತುಗಳನ್ನು ಬರೆಯುವದೇ ನನ್ನ ಆದ್ಯಕರ್ತವ್ಯವೆಂದು ಭಾವಿಸುತ್ತೇನೆ.—ಮೂರು ವರ್ಷಕ್ಕೊಂದು ಸಾರೆ ಹೇಳಕೇಳದಂತೆ ಬರುವ ಮ್ಯುನ್ಸಿಪಲ್, ಲೋ|| ಬೋರ್ಡ್, ಕಾಯ್ದೆ ಕೌನ್ಸಿಲ್ ಮುಂತಾದವುಗಳ ಚುನಾವಣೆಗಳ ಸಡಗರಗಳು ಸುಧಾರಿಸಿದ ಇತರ ಜನಾಂಗದವರಿಗೆ ಮಹೋತ್ಸವವಾಗಿ ಪರಿಣಮಿಸಿದರೂ 'ಕರ್ನಾಟಕದಲ್ಲಿ ನಮ್ಮನ್ಯಾರು ತಡೆಯುವರು' ಎಂದು ಹೆಮ್ಮೆಪಡುವ ನಮ್ಮ ವೀರಶೈವರಿಗೆ ಮಾತ್ರ ಸದ್ಯಕ್ಕಂತೂ ಅದು ಬಕಾಸುರನ ಸರಿಯಾಗಿ ಪರಿಣಮಿಸಿರುತ್ತದೆ. ಯಾಕೆಂದರೆ, ಚುನಾವಣೆಯ ಸಮಯವು ಸಮೀಪಿಸಿದ ಕೂಡಲೆ ಸುಧಾರಿಸಿದ ಪ್ರತಿಯೊಂದು ಜನಾಂಗದವರು ತಮ್ಮ ತಮ್ಮ ಸಮಾಜಗಳ ವತಿಯಿಂದ ಒಂದೊಂದು ಜಾಹೀರ ಸಭೆಗಳನ್ನು ಕರೆದು ಆ ಮೂಲಕ ಇಂತಿಷ್ಟು ಜನರಾದ ಇವರೇ ಉಮೇದವಾರರಾಗಿ ನಿಲ್ಲತಕ್ಕದ್ದೆಂದು ನಿಶ್ಚಯಿಸಿ ಆ ಪ್ರಕಾರ ತಮ್ಮ ಪ್ರಯತ್ನವೆಂಬ ರಥವನ್ನು ನಡಿಸಲಿಕ್ಕೆ ಹತ್ತುತ್ತಾರೆ. ಹೀಗಾಗುವದರಿಂದ ಸ್ವಲ್ಪ ಶ್ರಮದಿಂದಲೇ ಅವರು ಸಾಕಷ್ಟು ಫಲವನ್ನು ಹೊಂದಿ ತಮ್ಮ ಇಚ್ಛಾಪ್ರಕಾರ ಯಶಸ್ವಿಗಳಾಗುತ್ತಾರೆ. ಇದರಂತೆ ಆಯಾ ಸಂಘಗಳ ವತಿಯಿಂದ ಪ್ರಕಟಗೊಳ್ಳುವ ವೃತ್ತಪತ್ರಗಳೂ ಕೂಡ ಪ್ರಯತ್ನ ಮಾಡತಕ್ಕವುಗಳಾಗುವದರಿಂದ ಅವರ ಈ ಕಾರ್ಯಗಳಲ್ಲಿ ದ್ರವ್ಯಬಲವೂ ಕೂಡ ಹೆಚ್ಚಿಗೆ ಬೇಕಾಗುವದಿಲ್ಲ. ಇತ್ತ ನಮ್ಮ ವೀರಶೈವ ಸಮಾಜದಲ್ಲಿ ಸದ್ಯಕ್ಕಂತೂ ಯಾವ ರೀತಿಯಿಂದಲೂ ಸುಸಂಬದ್ಧತೆ ಇಲ್ಲದಿರುವದರಿಂದ ವರ್ತಮಾನ ಸಮಯದಲ್ಲಿ ನಮ್ಮಿಂದ ಹೇಳಿಕೊಳ್ಳುವಂಥ ಒಂದು ಕಾರ್ಯವಾದರೂ ಆಗುವಂತಿಲ್ಲ. ರಾಷ್ಟ್ರದ ಪ್ರತಿಯೊಂದು ಪ್ರಮುಖ ಜನಾಂಗದವರು ರಾಜಕೀಯ ಸಾಮಾಜಿಕ ಧಾರ್ಮಿಕ ಮುಂತಾದ ವಿಷಯಗಳಲ್ಲಿ ತಮ್ಮನ್ನು ಸರಕಾರದವರಾಗಲೀ ಅಥವಾ ಇತರರಾಗಲೀ ಪ್ರಶ್ನೆಮಾಡಿದರೆ ಕಾಲಿಟ್ಟ ತಮ್ಮ ಸಂಘಗಳ ವತಿಯಿಂದ ನಿಶ್ಚಿತವಾದ ಧೋರಣವನ್ನು ಥಟ್ಟನೆ ಹೇಳಲಿಕ್ಕೆ ಅಂಥಾ ಸಾರ್ವಜನಿಕ ಸಂಸ್ಥೆಗಳನ್ನು ಮಾಡಿಕೊಂಡಿರುತ್ತಾರೆ. ಆದ್ದರಿಂದಲೇ ಅವರು ರಾಜಕೀಯಾದಿ ವಿಷಯಗಳಲ್ಲಿ ಬರುವ ಅಡಚಣಿಗಳನ್ನು ಅನಾಯಾಸವಾಗಿ ದಾಟಿಹೋಗುತ್ತಾರೆಂದು ಮೇಲೆ ಹೇಳಿರುವೆನಷ್ಟೆ? ಅದರಂತೆ ಎಲ್ಲಿಯವರೆಗೆ ನಮ್ಮ ಸಮಾಜದಲ್ಲಿ ಮಹಾಸಭೆಯು ಸ್ಥಾಯಿಯಾಗಿತ್ತೋ ಅಲ್ಲಿಯವರೆಗೆ ನಮ್ಮಲ್ಲಿ ಸ್ವಲ್ಪ ಸುಸಂಬದ್ಧತೆ ಇತ್ತು. ಮಹಾಸಭೆಯು ಮಹಾಮಹತ್ವಪೂರ್ಣವಾದ ಕೂಡಲೇ ಸಮಾಜದಲ್ಲಿ ಕಲಹಗಳೆ ಪಟ್ಟಿಗಳಾದವು. ಹಿಂದಕ್ಕೆ ಭಾರತಮಂತ್ರಿಗಳಾದ ಮಾಂಟೆಗ್ಯೂ ಸಾಹೇಬರು ಹಿಂದುಸ್ಥಾನಕ್ಕೆ ಬಂದು ಯಾರ್ಯಾರಿಗೆ ಯಾವ ಯಾವ ತರದ ಹಕ್ಕುಗಳು ಬೇಕಾಗಿರುತ್ತವೆಂದು ಕೇಳಬಂದಾಗ್ಗೆ ಇತರ ಜನಾಂಗದವರಂತೆ ಮಹಾಸಭೆಯ ಮೂಲಕ ನಾವೂ ನಮ್ಮ ಬಯಕೆಗಳನ್ನು ಹೇಳಿಕೊಂಡಿದ್ದೆವು. ಸದ್ಯಕ್ಕೆ ಅಂಥಾ ಪ್ರಸಂಗಗಳು ಬರುವದಾದರೆ ಅನಾಯಕತ್ವದಿಂದ ಕೂಡಿದ ನಮ್ಮವರು ಆ ಸಾಹೇಬರು ತಿಳಿಸಲೆಂದು ಕೆಲವರೆಂದರೆ ಈ ಅಜ್ಞಾನವರು ತಿಳಿಸತಕ್ಕದ್ದೆಂದು ಕೆಲವರೆಂದು ಅಂತೂ ಇಂತೂ ಒದಗಿಬಂದ ಸಮಯವನ್ನು ನೀಗಲಿಟ್ಟು ಕಾಲಕಳೆಯುವ ಹೇಡಿತನವನ್ನು ಸಂಪಾದಿಸುವರೆಂದರೆ ಎಂಥಾ ನಿರ್ಲಜ್ಜತನದ ಮಾತಾಗಿರುತ್ತದೆ! ಬಹಳ ದಿವಸಗಳ ಮಾತನ್ನು ಬಿಟ್ಟು ಸ್ವಲ್ಪದಿವಸಗಳ ಪರಿಸ್ಥಿತಿಯನ್ನೇ ವಿಚಾರಿಸೋಣ. ಧಾರವಾಡ, ಬೆಂಗಳೂರು, ಸೊಲ್ಲಾಪೂರ, ಬಾಗಲಕೋಟೆ, ಬಳ್ಳಾರಿ ಮುಂತಾದ ಪಟ್ಟಣಗಳಲ್ಲಿ ಜರುಗಿದ ಮಹಾಸಭೆಯ ಮಂಟಪದಲ್ಲಿ ವಿಧಿಗುಟ್ಟಿದ ಒಕ್ಕಟ್ಟಿನ ಸಮಾಜ ಸ್ಫೂರ್ತಿಯೆತ್ತ ಈಗಿನ ಕಾಲದಲ್ಲಿ ಸ್ವೇಚ್ಛೆಯಿಂದ ಒದರಾಡುವ ಹಾಳುಗಳಗಳೆತ್ತ ಕಲಹಾಟಗಳೆತ್ತ! ಕೈಲಾಸವಾಸಿಗಳಾಗಿಹೋದ ಗುರುಸಿದ್ಧಪ್ಪಣ್ಣಾ ಗಿಲಗಂಜಿ-ಚನಬಸಪ್ಪನವರು ಡಿಪುಟಿ ವಾರದ ಅಪ್ಪಾಸಾಹೇಬರು ಶಿರಸಂಗಿ ಯಜಮಾನರು ಮುಂತಾದ ಧುರಂಧರಸ್ತಂಭಗಳ ಸಮಯದಲ್ಲಿದ್ದ ಸಮಾಜಗೌರವವೆತ್ತ! ಈಗಿನಕಾಲದಲ್ಲಿ ಭಕ್ತಮಹೇಶ್ವರರಲ್ಲಿಯ ಒಳಪಂಗಡಗಳ ತಿಕ್ಕಾಟದಿಂದುಂಟಾದ ಅಗೌರವವೆತ್ತ! ಸಾರಾಂಶವೇನಂದರೆ—ಮೊದಲೇ ಅಶಿಕ್ಷಿತವಾದ ನಮ್ಮ ಸಮಾಜವು ಈಗಿನ ಅನಾಯಕತ್ವದಿಂದ ಬೇಲಿಕಡಿದ ಚಪಲಪ್ರಾಣಿಯ ವೃತ್ತಿಯನ್ನು ಹೊಂದಿದಂತಾಗಿರುತ್ತದೆ. ಏನೋ ನಮ್ಮ ಪುಣ್ಯದ ಬಲದಿಂದ ಉದಯವಾಗಿದ್ದ ಮಹಾಸಭೆಯ ಆಸರಿನಿಂದ ಅಖಿಲ ವೀರಶೈವ ಸಮಾಜದ ಧೋರಣವೆಂದು ಹೇಳುವದಕ್ಕೆ ಸಾಮರ್ಥ್ಯವಿಶಿಷ್ಟವಾದ ಒಂದು ಮಾರ್ಗವಿದ್ದಂತಾಗಿತ್ತು. ಪರಂತು ನಮ್ಮ ಅಲಕ್ಷ್ಯದಿಂದ ನಮ್ಮ ಅಜಾಗ್ರತೆಯಿಂದ ನಮ್ಮ ಅರಿವಿಲ್ಲತನದಿಂದ (ಬೇಪರವಾಯಿ) ಅದನ್ನು ನುಂಗಿ ನೀರುಕುಡಿದು ಇಂದಿಗೆ ಮೂರು ನಾಲ್ಕು ವರ್ಷಗಳಾಗಿಹೋದವು. ಕಳೆದೆರಡು ವರ್ಷಗಳಲ್ಲಿ ಸ್ಟಾರ್ ಮುಂತಾದ ಪತ್ರಗಳಲ್ಲಿ ಅಲ್ಪ ಸ್ವಲ್ಪ ಮಹಾಸಭೆಯ ವಿಷಯಕ್ಕೆ ಲೇಖನಗಳು ಪ್ರಕಟಗೊಳ್ಳುತ್ತಿದ್ದವು. ಆದರೆ ಸಭೆಯೇನೂ ಜರಗಲಿಲ್ಲ. ಹೋದವರ್ಷವಾದರೋ ಹಾಂಚಬೈಯವರ

1922-23 ನೆಯ ವರ್ಷದಲ್ಲಿ 4627 ಜನರಿಗೂ, 71 ಕಂಪೆನಿಗಳಿಗೂ, 1 ಫರ್ಮಿಗೂ ಆದಾಯದ ತೆರುಗೆಯು ವಿಧಿಸಲ್ಪಟ್ಟುದರ ಮೇಲೆ ಜನರಿಂದ 4,66,760-10-6; ಕಂಪೆನಿಗಳಿಂದ 9,24,795-2-0; ಫರ್ಮುಗಳಿಂದ 3028-14-0; ಹಿಂದಣವರ್ಷದ ಬಾಕಿ ಸೇರಿ ಒಟ್ಟು 18,32,485-1-11 ರೂ. ಬರಬೇಕಾಗಿದ್ದುದಕ್ಕೆ 14,05,000 ರೂ. ವಸೂಲ್ಮಾಡಲ್ಪಟ್ಟಿತು. ಇದರ ಹಿಂದಣವರ್ಷದಲ್ಲಿ 14,32,000 ರೂ. ವಸೂಲ್ಮಾಡಲ್ಪಟ್ಟಿದ್ದಿತು ಹೀಗೆ ಪ್ರಸಕ್ತವರ್ಷದಲ್ಲಿ ಕಡಿಮೆ ವಸೂಲಾಗಲು, ಕಂದಾಯವು ಸಾವಕಾಶವಾಗಿ ವಿಧಿಸಲ್ಪಟ್ಟುದೂ, ವಸೂಲಿ ಕೆಲಸವು ಚುರುಕಾಗಿ ನಡೆಯದಿದ್ದುದೂ ಮುಖ್ಯಕಾರಣವೆಂದು ಈ ಶಾಖೆಯ ವರದಿಯಲ್ಲಿ ಹೇಳಲ್ಪಟ್ಟಿದೆ.

ರಾಜಧಾನಿಯಲ್ಲಿ ಈ ತಾ|| 14 ರಿಂದ 18ರ ವರೆಗೆ ನಡಿಯುವ ಶಿಶು ಪ್ರದರ್ಶನದ ಖರ್ಚಿಗಾಗಿಯೂ, ಆರೋಗ್ಯದೃಢಕಾಯಗಳಾದ ಶಿಶುಗಳಿಗೆ ಬಹುಮಾನ ಕೊಡುವುದಕ್ಕಾಗಿಯೂ ಶ್ರೀಮನ್ ಮಹಾರಾಜರವರು 150 ರೂಪಾಯಿಗಳನ್ನು ದಯಪಾಲಿಸಿರುವರಲ್ಲದೆ ಸೆಂಟ್‌ಜಾನ್ ಆಂಬ್ಯುಲೆನ್ಸ್ ಸಂಘದವರು 150 ರೂ., ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು 100 ರೂ., ರಾಜಧಾನಿಯ ಪೌರಸಾಮಾಜಿಕ ಸಂಘದವರು 100 ರೂ. ಗಳನ್ನು ಕೊಟ್ಟಿರುವರು. ಇದೇ ರೀತಿಯಾಗಿ ಶಿಶು ಆರೋಗ್ಯರಕ್ಷಣಾಭಿಮಾನಶಾಲಿಗಳು ಯಥಾಶಕ್ತಿ ದ್ರವ್ಯ ಸಹಾಯಮಾಡಿ ಈ ಕಾರ್ಯವು ನಿರ್ವಿಘ್ನವಾಗಿ ನಡಿಯುವಂತೆ ಮಾಡಬೇಕಾಗಿ ಕೋರಲ್ಪಟ್ಟಿರುತ್ತಾರೆ.

ಆದಾಯದ ತೆರುಗೆಯು 30 ದಿವಸಗಳಲ್ಲಿ ಮೊದಲನೆಯ ಕಿಸ್ತಾಗಿಯೂ 60 ದಿವಸಗಳಲ್ಲಿ ಎರಡನೆಯ ಕಿಸ್ತಾಗಿಯೂ ಕೊಡಬೇಕಾಗಿರುವುದೂ ಮೊದಲನೆಯ ಕಿಸ್ತು ಕೊಡಲ್ಪಡದಿದ್ದಲ್ಲಿ ಅರ್ಥದಂಡವು ವಿಧಿಸಲ್ಪಡುವುದೂ ವಾಡಿಕೆಯಾಗಿದೆಯಷ್ಟೆ. ಈ ಅರ್ಥದಂಡವು ವಿಧಿಸಲ್ಪಡುವುದು ತಪ್ಪಿಸಲ್ಪಡಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಾರ್ಥಿಸಲ್ಪಟ್ಟುದರಮೇಲೆ ಆ ರೀತಿ ತಪ್ಪಿಸಲ್ಪಡಲಾಗುವುದಿಲ್ಲವಾದುದರಿಂದ, ತೆರುಗೆಯನ್ನು ವಿಧಿಸಿ ನೋಟೀಸು ಕೊಟ್ಟ 60 ದಿನಗಳೊಳಗೆ ಒಟ್ಟು ಹಣವು ಪೂರ್ತಿಯಾಗಿ ಕೊಡಲ್ಪಟ್ಟಲ್ಲಿ ಅರ್ಥದಂಡವನ್ನು ಮನ್ನಿಸಿಬಿಡುವಂತೆ ಇನ್ಕಂಟ್ಯಾಕ್ಸ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕಾಗಿ ಸರ್ಕಾರದಪ್ಪಣೆಯಾಗಿರುತ್ತದೆ.

ಮೈಸೂರು ಸಂಸ್ಥಾನದ ಪಟೇಲರುಗಳ ಪುರೋಭಿವೃದ್ಧಿ ವಿಷಯಕವಾದ ಮಹಾಸಭೆಯು ಈ ಜನವರಿ ತಾ|| 26 ಮತ್ತು 27ರಲ್ಲಿ ಚನ್ನಪಟ್ಟಣದಲ್ಲಿ ಜರಗುವುದಾಗಿಯೂ, ಇದರ ಆರಂಭೋತ್ಸವವು ದಿವಾನರಿಂದ ನಡಿಸಲ್ಪಡುವುದಾಗಿಯೂ ಗೊತ್ತಾಗಿರುವುದು. ಮಹಾಸಭೆಗೆ ಬರತಕ್ಕ ಎಲ್ಲಾ ಮತದ ಪಟೇಲರುಗಳ ವಾಸಕ್ಕೂ ಊಟ ಉಪಚಾರಗಳಿಗೂ ತಕ್ಕೇರ್ಪಾಟು ಮಾಡಲ್ಪಟ್ಟಿರುತ್ತದೆ. ಸಂಸ್ಥಾನದ ಎಲ್ಲಾ ಕಡೆಯ ಪಟೇಲರುಗಳು 2-3 ದಿನಗಳ ಮಟ್ಟಿಗೆ ವಿರಾಮಮಾಡಿಕೊಂಡು ಬಂದು ತಮ್ಮ ಪುರೋಭಿವೃದ್ಧಿ ಸಾಧಕಗಳಾದ ಸೂಚನೆಗಳನ್ನು ಕೊಟ್ಟು ನಿರ್ಧಾರಗಳನ್ನು ಮಾಡಿಸಿ ಅದರಂತೆ ನಡೆಯಲು ಪ್ರಯತ್ನಿಸುವವರಾಗಬೇಕಾಗಿ ಕೋರುತ್ತೇವೆ.

ಕಳೆದ 4 ವರ್ಷಗಳಿಂದಲೂ ಗೌರ್ನಮೆಂಟ್ ಅಸಿಸ್ಟೆಂಟ್ ಸೆಕ್ರೆಟರಿಗಳಾಗಿದ್ದು ಈಗ ರೆವಿನ್ಯೂ ಕಮಿಷನರಾಫೀಸಿಗೆ ವರ್ಗವಟ್ಟಿರುವ ಮ|| ಡಿ.ಸಿ. ಸುಬ್ಬಾರಾಯಪ್ಪ ಬಿ.ಎ.,ಬಿ.ಎಲ್., ರವರನ್ನು ಸೆಕ್ರೆಟರಿಯಟ್ಟಿನ ಎಲ್ಲ ಶಾಖೆಯ ಉದ್ಯೋಗಸ್ಥರುಗಳು ಸೆಕ್ರೆಟರಿಯಟ್ ಕ್ಲಬ್ಬಿಗೆ ಬರಮಾಡಿಕೊಂಡು ಅಲ್ಪಾಹಾರದಿಂದಲೂ, ಸಂಗೀತಶ್ರವಣದಿಂದಲೂ ಸತ್ಕರಿಸಿ, ಅವರ ನಿಸ್ಪೃಹತೆ, ನಿಷ್ಪಕ್ಷದಾತತೆ, ದಯಾಪರತೆ ಮೊದಲಾದ ಸದ್ಗುಣಗಳನ್ನು ಶ್ಲಾಘಿಸಿ ಅವರಲ್ಲಿ ತಮ್ಮಗಳಿಗಿರುವ ಗೌರವ ವಿಶ್ವಾಸಗಳನ್ನು ಪ್ರದರ್ಶಿಸಿದರು. ಮ|| ಸುಬ್ಬಾರಾಯಪ್ಪನವರು ಕಾಲೋಚಿತವಾದ ಸಂಕ್ಷಿಪ್ತ ಭಾಷಣದಿಂದ ಆ ಉದ್ಯೋಗಸ್ಥರುಗಳು ಮಾಡಿದ ಸತ್ಕಾರವನ್ನು ಶ್ಲಾಘಿಸಿ ಅವರುಗಳನ್ನು ವಂದಿಸಿದರು. ಮ|| ಸುಬ್ಬಾರಾಯಪ್ಪನವರು ಸ್ವಭಾವತಃ ನಿಗರ್ವಿಗಳೂ ದಯಾದಾಕ್ಷಿಣ್ಯಪರರೂ ಆಗಿರುವುದರಿಂದ ಸರ್ವತ್ರ ಸನ್ಮಾನೀಯರಾಗಿರುವರೆನ್ನುವುದರಲ್ಲಿ ಸಂದೇಹವಿಲ್ಲವು.

ಭರತಖಂಡದ ವೃತ್ತಾಂತಗಳು.

ಬೊಂಬಾಯಿನಲ್ಲಿ ಮಕ್ಕಳ ಪ್ರದರ್ಶನವು ಈ ತಾ|| 21 ರಿಂದ 27ರ ವರೆಗೆ ನಡಿಸಲ್ಪಡುವುದು.

ತಿರುವನಂತಪುರದ ಮಹಾರಾಜರು ಪೂನಾದಲ್ಲಿರುವ ಸೇವಾಸದನಕ್ಕೆ 1000 ರೂ. ಗಳನ್ನು ಕೊಟ್ಟಿರುವರು.

ಕೊಡಗು ಪ್ರಾಂತಕ್ಕೆ ಹೊಸದಾಗಿ ಏರ್ಪಡಿಸಲ್ಪಟ್ಟಿರುವ ನ್ಯಾಯವಿಧಾಯಕ ಸಭೆಯು ಈ ಜನವರಿ ತಾ|| 28 ರಿಂದ ಅಸ್ತಿತ್ವಕ್ಕೆ ಬರುವುದು.

ತಿರುವಾಂಕೂರಿನ ಮಹಾರಾಜರು ತಿನ್ನವೆಲ್ಲಿಯಲ್ಲಿ ಪ್ರವಾಹದನಾಹುತದಿಂದ ವಿಪನ್ನರಾದವರ ಸಹಾಯಾರ್ಥವಾಗಿ 2000 ರೂ. ಗಳನ್ನು ಕೊಟ್ಟಿರುತ್ತಾರೆ.

ಮಹಾತ್ಮ ಗಾಂಧಿಯವರನ್ನು ಬೊಂಬಾಯಿನ ಹೊಸ ಗವರ್ನರಾದ ಲೆಫ್ಟನೆಂಟ್ ಕರ್ನಲ್ ವೆಸ್ಲಿಯವರು ಸಾಮ್ರಾಜ್ಯಸಭಾ ಸಮಾವೇಶಕ್ಕೆ ಪೂರ್ವ ಕಾರಾಗೃಹನಿರ್ಬಂಧದಿಂದ ಬಿಡಿಸುವುದಾಗಿ ತಿಳಿಯಬರುತ್ತದೆ.

ಮಲಬಾರ್ ದಂಗೆಕೋರರಲ್ಲಿ ಮರಣದಂಡನೆಗೆ ಗುರಿಮಾಡಲ್ಪಟ್ಟಿದ್ದ ಇಬ್ಬರು ಮಾಪಿಳ್ಳೆಯವರು ಆಚೆಶನಿವಾರದ ದಿವಸ ನೇಣುಹಾಕಲ್ಪಟ್ಟ ಮೇಲೆ ಶವಗಳನ್ನು ಮಹಮ್ಮದೀಯರು ಉತ್ಸವದಿಂದ ತೆಗೆದುಕೊಂಡುಹೋಗಿ ಸಂಸ್ಕರಿಸಿದರು.

ತಿರುವನಂತಪುರಕ್ಕೆ ಸೇರಿದ ಕೆಟ್ಟುರ್ಕರಾಯ ಎಂಬಲ್ಲಿ ಒಂದು ಜೋಡೆತ್ತಿನಬಂಡಿಯು ರೈಲುಕಂಬಿಗಳನ್ನು ದಾಟಿಹೋಗುವಾಗ್ಗೆ ರೈಲುಬಂಡಿಯು ಬಂದು ಅದಕ್ಕೆ ತಾಕುಬಡಿದಿತು. ಇದರಿಂದ ಬಂಡಿಯನ್ನು ಹೊಡೆಯುವವನೂ ಒಳಗೆ ಕುಳಿತಿದ್ದವರೂ ಮೃತರಾದರಲ್ಲದೆ ಬಂಡಿಯೂ ನುಚ್ಚುನೂರಾಯಿತು.

ತಿರುವನಂತಪುರಕ್ಕೆ ಸೇರಿದ ಕೈತಮುತ್ತು ಎಂಬ ಗ್ರಾಮದಲ್ಲಿ ಕಳೆದ ತಾ|| 6 ರಲ್ಲಿ ಮಳೆಯು ವಿಶೇಷವಾಗಿ ಬಂದು ಒಂದು ಸಣ್ಣ ಮನೆಯು ಬಿದ್ದುಹೋಯಿತು. ಅದರೊಳಗಿದ್ದ ಒಂದು ಮಗುವು ಸತ್ತುಹೋಯಿತು, ಮತ್ತು ಅದರ ತಾಯಿಗೂ ಮತ್ತೊಂದು ಮಗುವಿಗೂ ಸ್ವಲ್ಪ ಪೆಟ್ಟುತಗಲಿತು.

ಬೊಂಬಾಯಿನ ಕಿಲಾಫತ್ ಕಮಿಟಿಯ ಪ್ರೆಸಿಡೆಂಟರಾದ ಮಿಯಾನ್ ಮಹಮ್ಮದ್ ಎಚ್. ಜೆ. ಎಂ. ಛೋಟಾನಿಯವರೂ, ಸೆಕ್ರೆಟರಿಗಳಾದ ಎ. ಎಚ್. ಎಸ್. ಖಾತ್ರಿ ಮತ್ತು ಶೇಟ್ ಅಬ್ದುಲ್‌ರಹಿಮಾನ್‌ರವರೂ, ಟ್ರೆಜರರಾದ ಎಂ. ಎಚ್. ಎಂ. ಅಬ್ಬಾಯವರೂ ತಮ್ಮುದ್ಯೋಗಗಳನ್ನು ತ್ಯಜಿಸಿಬಿಟ್ಟಿರುತ್ತಾರೆ.

ಕೊಚ್ಚಿನ್ನಿಗೆ ಸೇರಿದ ಒಂದು ಹಳ್ಳಿಯಲ್ಲಿ ಒಬ್ಬ ಕ್ರೈಸ್ತನು ತನ್ನ ಬಲತಾಯಿಯನ್ನು ಕೊಂದುಹಾಕಿ ತಾನು ಒಂದು ಮರಕ್ಕೆ ನೇಣುಹಾಕಿಕೊಂಡು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದನು. ಅವನ ಶವವು ಮರದಿಂದ ಕೆಳಕ್ಕಿಳಿಸಲ್ಪಟ್ಟು ನೋಡುವಲ್ಲಿ, ತನ್ನ ಬಲತಾಯಿಯನ್ನು ಅವಳ ದುರ್ನಡತೆಗಾಗಿ ಕೊಂದುಹಾಕಿ ತಾನು ಆತ್ಮಹತ್ಯೆಗೆ ಯತ್ನಿಸಿದುದಾಗಿ ಬರೆದಿದ್ದ ಕಾಗದವು ದೊರಕಿತು.

ತಿರುವನಂತಪುರದ ಕಲಾಕೌಶಲ್ಯ ಶಾಲೆಯಲ್ಲಿ ಕಲ್ಲಿನ ಮೇಲೆ ವಿಗ್ರಹಗಳನ್ನು ಕೆತ್ತುವ ವಿದ್ಯೆಯನ್ನು ಹೇಳಿಕೊಡುವ ಮಿಚೇಲ್‌ದ್ರವ್ಯಂಪಿಳ್ಳೆ ಎಂಬ ಕ್ರೈಸ್ತಮತಾವಲಂಬಿಯು ಆರ್ಯಸಮಾಜದವರಿಂದ ಕಳೆದ ತಾ|| 6ರಲ್ಲಿ ಹಿಂದೂಮತಕ್ಕೆ ತೆಗೆದುಕೊಳ್ಳಲ್ಪಟ್ಟನು. ಈತನು ತಾ|| 5ರಲ್ಲಿ ನಿರಾಹಾರವಾಗಿಡಲ್ಪಟ್ಟಿದ್ದು ತಾ|| 6ರ ಬೆಳಿಗ್ಗೆ ಆಯುಷ್ಕರ್ಮ ಸ್ನಾನಂತರ ಹವನ ಹೋಮಾದಿಗಳೊಡನೆ ಶುದ್ಧಿಕರ್ಮವು ನಡೆಸಲ್ಪಟ್ಟು ಇತಃಪರಹ ಪ್ರತಿನಿತ್ಯದಲ್ಲೂ ಸ್ನಾನ ಸಂಧ್ಯಾವಂದನೆಗಳನ್ನು ಮಾಡುತ್ತೇನೆಂದೂ ಸತ್ಯ ಮತ್ತು ಅಹಿಂಸಾವ್ರತವನ್ನು ಆಚರಿಸುತ್ತೇನೆಂದೂ ಪ್ರಮಾಣಮಾಡಿಸಲ್ಪಟ್ಟನು. ಈ ಶುದ್ಧಿಸಮಾರಂಭಕ್ಕೆ ನೂರಾರು ಜನರು ಬಂದಿದ್ದು ಆ ಶುದ್ಧನಾದವನನ್ನು ಹರಸಿದರು.

ಆಲಿಪುರ ಡಿ|| ಗೆ ಸೇರಿದ ಕ್ಯಾನಿಂಗ್ ಪಟ್ಟಣದಿಂದ 12 ಮೈಲಿದೂರದಲ್ಲಿರುವ ದಿಯಾರಾ ಗ್ರಾಮವಾಸಿಯಾದ ಒಬ್ಬ ಐಶ್ವರ್ಯವಂತನ ಮನೆಗೆ 24 ಜನ ಕಳ್ಳರು ಕತ್ತಿ, ಕಠಾರಿ, ಬರ್ಜಿ, ಬಂದೂಕ ದೊಣ್ಣೆಗಳನ್ನು ಹಿಡಿದುಕೊಂಡು ಕಳೆದ ಮಂಗಳವಾರ ನುಗ್ಗಿ ಹಣವಿರುವ ಸ್ಥಳವನ್ನು ತೋರಿಸಬೇಕೆಂದು ಯಜಮಾನನನ್ನು ಬೆಂಕಿಯಿಂದಸುಟ್ಟು ಹಿಂಸಿಸುತ್ತಿದ್ದು ಹೊರಗಣಿಂದ ಬಂದ ಅವನಿಬ್ಬರು ಮಕ್ಕಳು ಪ್ರತಿಭಟಿಸಲೆತ್ನಿಸಲು ಅವರುಗಳನ್ನು ಕ್ರೂರವಾಗಿ ಹಿಂಸಿಸಿ ಅವರ ಸಹಾಯಕ್ಕೆ ಬಂದ ಗ್ರಾಮಸ್ಥರು ಹೆದರಿ ಓಡಿಹೋದಮೇಲೆ ಮನೆಯಲ್ಲಿದ್ದುದನ್ನೆಲ್ಲಾ ದೋಚಿಕೊಂಡು ಮನೆಯ ಹೆಂಗುಸರೂ ಗಂಡಸರೂ ಸೇರಿ ಒಟ್ಟು 5 ಜನರನ್ನು ಒಂದು ಸಣ್ಣ ಕೊಠಡಿಯೊಳಗೆ ಕೂಡಿ ಬಾಗಿಲಿಗೆ ಬೀಗವನ್ನು ಹಾಕಿ ಹೊರಗಣಿಂದ ಬೆಂಕಿಯನ್ನು ಹೊತ್ತಿಸಿ ಪಲಾಯನವಾದರು. ಮನೆಯೂ ಆ 5 ಜನರೂ ಅಗ್ನಿಗೆ ಆಹುತಿಯಾದರು.

ಸ್ವರಾಜ್ಯಸಾಧನೆಗೆ ಹಿಂದೂ ಮಹಮ್ಮದೀಯರ ಏಕಮತ್ಯವೂ, ದೌರ್ಜನ್ಯರಹಿತವಾದ ಅಸಹಾಯೋದ್ಯಮವೂ, ಕಾಂಗ್ರೆಸ್ಸಿನ ಮತವನ್ನು ಸರ್ವತ್ರ ಬೋಧಿಸಿ ಅನುಷ್ಠಾನಕ್ಕೆ ತರಲು ಕೋಟಿ ಜನರು ನಡುಕಟ್ಟಿ ನಿಂತುಕೊಳ್ಳುವುದೂ ಅತ್ಯಾವಶ್ಯಕವು; ಅದುವಿನಾ ಸ್ವರಾಜ್ಯವು ಸಿದ್ಧಿಸುವುದಿಲ್ಲವೆಂದು ಅಲಿ ಸಹೋದರರು ಕಾಕಿನಾಡಾದಲ್ಲೂ ಇತರ ಕಡೆಯಲ್ಲೂ ಬಹಿರಂಗವಾಗಿ ಹೇಳುತ, ಬ್ರಿಟಿಷರು ಅಫಘಾನಿಸ್ಥಾನದ ಮೇಲೆ ಯುದ್ಧಮಾಡುವ ಸಂಭವವಿರುತ್ತದೆ, ಅಂತಹ ಸಂದರ್ಭದಲ್ಲಿ ಭಾರತೀಯರಾರೂ ಬ್ರಿಟಿಷರಿಗೆ ಯಾವ ವಿಧದಲ್ಲೂ ಸಾಹಾಯ್ಯಮಾಡದೆ ನಮ್ಮ ಭರತಖಂಡದ ಎಲ್ಲೆಕಟ್ಟಿನಲ್ಲಿರುವ ಪೂರ್ವಾತ್ಯದೇಶಬಂಧುಗಳಿಗೆ ಸಾನುಭೂತಿಯನ್ನು ತೋರಿಸತಕ್ಕದು ನಮ್ಮ ಧರ್ಮವೆಂದು ಮೊದಲಾಗಿ ಜನರಿಗೆ ಅಂತರಂಗದಲ್ಲಿ ಬೋಧಿಸುತ ಅವರುಗಳ ಮನಸ್ಸನ್ನು ಕಲುಷಿತಮಾಡುತ್ತಿರುವರು. ಪ್ರಭುತ್ವದವರು ಈ ವಿಚಾರದಲ್ಲಿ ಉದಾಸೀನರಾಗಿರದೆ ತಕ್ಕ ಪ್ರತಿಬಂಧಕವನ್ನು ಕಲ್ಪಿಸುವುದು ಅತ್ಯಗತ್ಯವು. ಹಾಗಿಲ್ಲದಿದ್ದಲ್ಲಿ ಇದರ ಮುಂದಣ ಪರಿಣಾಮವು ಮಹಾನರ್ಥಕಾರಿಯಾಗುವುದು ಎಂದು ಮೊದಲಾಗಿ ಮದ್ರಾಸು ಮೇಲುಪತ್ರಿಕೆಯು ಪ್ರಭುತ್ವದವರನ್ನೆಚ್ಚರಿಸುತ್ತಿರುವುದು.

ಶೇಲಂಡಿಸ್ಟ್ರಿಕ್ಟಿನಲ್ಲಿ ಅತಿವೃಷ್ಟಿಯಿಂದಾಗಲಿ ಅಥವಾ ಅನಾವೃಷ್ಟಿಯಿಂದಾಗಲಿ ಬೆಳೆ ನಷ್ಟವಾಗಿದ್ದಲ್ಲಿ ಅಥವಾ ಹ

ಮೈಸೂರು ಸ್ಟಾರ್ ಪತ್ರಿಕೆಯ ವಾಚಕರಿಗೆ ಬಹುಮಾನ.

ಈ ಸ್ಟಾರ್ ಪತ್ರಿಕಾ ವಾಚಕರುಗಳಿಗೆ ಅವರ ಮೇಲಿರುವ ಅಭಿಮಾನವನ್ನು ವೃದ್ಧಿಗೊಳಿಸುವ ಉದ್ದೇಶದಿಂದ ಈ ಕೆಳಗೆ ಕಂಡ ಪ್ರಕಾರ 100 ರೂಪಾಯಿಗಳನ್ನು 3 ಬಹುಮಾನಗಳನ್ನಾಗಿ ವಿಂಗಡಿಸಿ ಕೊಡಲು ಗೊತ್ತುಮಾಡಿರುತ್ತೇವೆ.

ಮೊದಲನೆಯ ಬಹುಮಾನ 50 ರೂಪಾಯಿ
ಎರಡನೆಯ ,, 30 ,,
ಮೂರನೆಯ ,, 20 ,,

1924 ನೆಯ ಫೆಬ್ರವರಿ 2 ನೆ ತಾರೀಖಿನ ಸಂಚಿಕೆಯಿಂದ ಜೂನ್ 28 ನೆ ತಾರೀಖಿನ ಸಂಚಿಕೆಯ ವರೆಗೂ ಪ್ರತಿಯೊಂದು ಪತ್ರಿಕೆಯ ಮೇಲೂ ಬೇರೆ ಬೇರೆ ನಂಬರು ಕೊಡಲ್ಪಟ್ಟು ಅವುಗಳಲ್ಲಿ 30 ನಂಬರುಗಳು ಆರಿಸಲ್ಪಟ್ಟು ಸೀಲ್ ಮಾಡಿದ ಕವರಿನಲ್ಲಿ ಭದ್ರವಾಗಿಡಲ್ಪಟ್ಟಿದ್ದು ಜೂನ್ ತಿಂಗಳ ಕಡೆಯಲ್ಲಿ ಈ 30 ನಂಬರುಗಳನ್ನು ಚೀಟಿಗೆ ಹಾಕಿ ಅವುಗಳಲ್ಲಿ ಅನುಕ್ರಮವಾಗಿ ಯಾವ 3 ನಂಬರುಗಳಿಗೆ ಬಹುಮಾನದ 3 ಚೀಟಿಗಳು ತೇಲುತ್ತವೋ ಆ 3 ನಂಬರುಗಳು ಜುಲೈ ತಿಂಗಳ 5 ನೇ ತಾರೀಖಿನ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುವು.

ಬಹುಮಾನ ಬಂದಿರುವ ನಂಬರನ್ನು 1924 ನೆ ಫೆಬ್ರವರಿ 2 ನೆ ತಾರೀಖಿನ ಪತ್ರಿಕೆಯಿಂದ ಜೂನ್ 28 ನೆ ತಾರೀಖಿನ ಪತ್ರಿಕೆಯ ವರೆಗೆ ಪ್ರತಿಯೊಂದುವಾರದ ಸ್ಟಾರ್ ಪತ್ರಿಕೆಯ ಸಮೇತ ಕಳುಹಿಸಿಕೊಟ್ಟಲ್ಲಿ ಅವರವರ ನಂಬರಿಗೆ ಬಂದಿರುವ ಬಹುಮಾನವು ಮನಿಯಾರ್ಡರ್ ದ್ವಾರ ಕಳುಹಲ್ಪಡುವುದು.

ಹಾಗೆ ಎಲ್ಲವಾರದ ಪತ್ರಿಕೆಗಳು ಕಳುಹಲ್ಪಡದೆ ಬಹುಮಾನದ ನಂಬರಿರುವ ಪತ್ರಿಕೆಯು ಮಾತ್ರ ಕಳುಹಲ್ಪಟ್ಟಲ್ಲಿ ಅದಕ್ಕೆ ಬಹುಮಾನದ್ರವ್ಯವು ಖಂಡಿತವಾಗಿಯೂ ದೊರೆಯುವುದಿಲ್ಲವೆಂಬಂಶವನ್ನು ವಾಚಕರು ಮರೆಯಬಾರದು.

ಹೀಗೆ ಬಹುಮಾನವನ್ನು ಹೊಂದುವವರು ಪತ್ರಿಕಾ ಚಂದಾಹಣವನ್ನುಳಿಸಿಕೊಂಡಿದ್ದಲ್ಲಿ ಬಹುಮಾನದ ಮೊಬಲಗಿನಲ್ಲಿ ಚಂದಾಹಣವು ಕಳೆಯಲ್ಪಟ್ಟು ಉಳಿದ ಹಣವು ಕಳುಹಲ್ಪಡುವುದು. ಈ ನೂತನ ಬಹುಮಾನ ವಿನಿಯೋಗವಿಧಾನವು ಸ್ಟಾರ್ ಪತ್ರಿಕಾ ವಾಚಕಜನಾದರಣೀಯವಾಗಿದ್ದಲ್ಲಿ ಮುಂದೆಯೂ ನಡಿಸಲ್ಪಡುವುದು.

ಸಂಪಾದಕ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜನವರಿ ತಾ|| ೧೩ ನೆಯ ಭಾನುವಾರ.

THE PATELS' CONFERENCE.

It is a welcome sign that the Patels of the State are trying to organise themselves with the object of improving their present condition, and we must congratulate the Chennapatna and Closepet taluks to have taken the lead in the matter, and to have arranged to hold a Provincial Patels' Conference at Chennapatna on the 26th and 27th of January. In India the village is the unit of administration. It was so in the good old days and it is so even today. The Patel is the headman and the guardian of the village. How far he has lost that responsible and influential position by reason of his own neglect partly, and mostly of being shorn of his powers by the outside agencies is too well known to be detailed here. They became in common with the rest of the masses, ignorant and illiterate on account of the educational ideals and system which the few adopted for the detriment of the many. The other evils have only been a consequence of their illiteracy. They who should have ruled the villages are now ruled by their own accountants, and in their ignorance display a mentality hardly in keeping with their rightful position. It is time that they shook off their indifference and apathy, realised their rights and regained their former position and influence. The movement is of far reaching consequence, and is fraught with the greatest good to the State. Not all the beneficial measures inaugurated by the Government of His Highness the Maharaja will ever be of so much real help to the masses without the intelligent and sympathetic cooperation of the Patels. An enlightened Patel is the surest guarantee for the progress of his village, and with enlightened patels spread all over the State, how much more rapid will be the progress of the State? A movement like this should have been started long ago. But however, having come now, we hope that the Patels all over the Province will muster strong at Chennapatna and help to make it a success. It is a duty they owe to themselves and to the people entrusted to their charge to so organise themselves and improve their position as to be able to discharge their responsibilities properly. May we also state that a movement so beneficial as this should receive every encouragement at the hands of the Government. It is the first attempt of a people whose deminishing usefulness has been at once a matter of the greatest regret and a source of infinite misery to the masses. It is not too much to say that the regeneration of the country depends on the forward steps that the Patels take in the immediate future. We hope that the Patels themselves will so conduct their deliberations as to secure them the approbation of all, as well as to prove of real benefit to them. We wish the Patels' Conference every success.

ದಿ|| ಬ|| ಪುಟ್ಟಣ್ಣಸೆಟ್ಟರ ಅಭ್ಯರ್ಥಿತ್ವವು.

ದಿವಾನ್ ಬಹದ್ದೂರ್ ರಾಜಸಭಾಭೂಷಣ ಮ|| ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ. ಐ. ಇ. ಯವರು ನಿಯಮನಿರ್ಮಾಣಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಸಭಿಕರಾಗಿ ಬೆಂಗಳೂರು ಪಟ್ಟಣವಾಸಿಗಳಿಂದಾರಿಸಲ್ಪಡಲು ಅಭ್ಯರ್ಥಿಗಳಾಗಿ ನಿಂತಿರುವರೆಂದು ಕೇಳಿ ನಾವು ಬಹಳವಾಗಿ ಸಂತೋಷಿಸುತ್ತೇವಲ್ಲದೆ ಅತ್ಯಧಿಕವಾದ ಮತಗಳ (ಓಟುಗಳ)ನ್ನು ಪಡೆದು ಜಯಶಾಲಿಗಳಾಗಲೆಂದು ಹಾರೈಸುತ್ತೇವೆ. ಮ|| ಸೆಟ್ಟರು ಸಣ್ಣ ಉದ್ಯೋಗದಿಂದ ಎಕ್ಸಿಕ್ಯುಟಿವ್ ಕೌನ್ಸಿಲಿನ ಮೊದಲನೆಯ ಸಭಿಕಸ್ಥಾನದವರೆಗೂ ಏರಿ ಆ ಪ್ರತಿಯೊಂದು ಕಾರ್ಯವನ್ನೂ ಪ್ರಜಾಪ್ರಭುಗಳು ಮೆಚ್ಚುವ ರೀತಿಯಲ್ಲಿ ವಿಶೇಷ ಸಾಮರ್ಥ್ಯದಿಂದಲೂ, ನಿಸ್ಪೃಹತೆಯಿಂದಲೂ, ನಿಷ್ಪಕ್ಷಪಾತತೆಯಿಂದಲೂ ನಡೆಯಿಸಿ ಸ್ವದೇಶ ವಿದೇಶದ ದಿವಾನರುಗಳ ಕಾರ್ಯಭಾರಗಳಲ್ಲೆಲ್ಲಾ ಪ್ರಶಂಸಾಪಾತ್ರರಾಗಿ ಬಂದಿರುವರಲ್ಲದೆ, ಬೆಂಗಳೂರಿನ ಹೊಸತರುಗಪೇಟೆಯ ನಿರ್ಮಾಣದಂತಹ ಅತಿ ದುರ್ಘಟಕಾರ್ಯಗಳನ್ನೆಲ್ಲಾ ಬಹು ಜಾಣ್ಮೆಯಿಂದ ಸಾಧಿಸಿ ಅತ್ಯುತ್ತಮರಾದ ಪ್ರಜಾಬಂಧುಗಳೂ ನಿಸ್ಸೀಮರಾದ ರಾಜಭಕ್ತರೂ ಎಂದು ಸಮಸ್ತ ಜನರಿಂದಲೂ ಹೇಳಿಸಕೊಳ್ಳುತ್ತಿದಾರೆ. ಸರ್ಕಾರಿಯುದ್ಯೋಗದಿಂದ ಇವರು ವಿಶ್ರಾಂತಿಯನ್ನು ಹೊಂದಿದ್ದರೂ ದೇಶದ ಸೇವೆಯ ಭಾರವು ಮಾತ್ರ ಇವರಿಗೆ ಇಂದಿನವರೆಗೂ ತಪ್ಪಿಲ್ಲವು. 7 ವರ್ಷಗಳ ಕಾಲ ಬೆಂಗಳೂರು ಮ್ಯುನಿಸಿಪಾಲಿಟಿಯ ಆನರರಿ ಪ್ರೆಸಿಡೆಂಟರಾಗಿಯೂ ಪುರಾಭಿವೃದ್ಧಿ ಸಂಘದ ಚೇರ್ಮನ್ನರಾಗಿಯೂ ಇದ್ದುಕೊಂಡು ಅವುಗಳ ಕಾರ್ಯಭಾರಗಳನ್ನು ಶ್ಲಾಘ್ಯತಮವಾಗಿ ನಡೆಯಿಸಿ ಮ್ಯುನಿಸಿಪಾಲಿಟಿಯ ಆರ್ಥಿಕಾದಿ ಸ್ಥಿತಿಯನ್ನು ಸರ್ವೋತ್ತಮಗೊಳಿಸಿದುದೂ ಪಟ್ಟಣದಲ್ಲಿ ಅಭಿವೃದ್ಧಿಕಾರ್ಯಗಳನ್ನು ನಡೆಸಿದುದೂ ಸರ್ವರಿಗೂ ಗೋಚರವಾಗಿದೆ. ಮೈಸೂರು ಬ್ಯಾಂಕು ಅಭೂತಪೂರ್ವವಾದ ಉನ್ನತಸ್ಥಿತಿಯನ್ನು ಪಡೆದುಕೊಂಡು ಈ ದೇಶೀಯರಿಗೆಲ್ಲಾ ಸಾಹಾಯ್ಯಮಾಡುತ ಕೀರ್ತಿಪ್ರದವಾಗಿರುವುದಕ್ಕೆ ಮ|| ಸೆಟ್ಟರು ಅದರ ಅಧ್ಯಕ್ಷತೆಯನ್ನು ವಹಿಸಿರುವುದೇ ಮುಖ್ಯಕಾರಣವು. ಮೂಲೆಗೆ ಬಿದ್ದುಹೋಗಿದ್ದ ಚಿಕ್ಕಬಳ್ಳಾಪುರದ ಲೈಟ್ ರೈಲ್ವೆಯ ಕೆಲಸವು ಇವರು ಕೈಹಾಕಿದುದರಿಂದ ಸಫಲವಾಯಿತು. ಸ್ವದೇಶೀಯರಿಂದ ನಡಿಸಲ್ಪಡುತ್ತಿರುವ ಶ್ರೀ ಕೃಷ್ಣರಾಜ ಮಿಲ್ಲು ಮತ್ತು ಬೆಂಗಳೂರು ಮುದ್ರಣಾಲಯವು ಇವರ ಯಾಜಮಾನ್ಯವನ್ನು ಬಿಟ್ಟಿಲ್ಲವು. ಸಂಸ್ಥಾನದಲ್ಲಿ ಸಾರ್ವತ್ರಿಕವಾದ ಯಾವುದೊಂದು ಸಂಘವಾಗಲಿ ಸಮ್ಮೇಳನವಾಗಲಿ ಇವರ ಸಂಬಂಧವನ್ನು ಬಿಟ್ಟಿದ್ದೇ ಇಲ್ಲ. ಪ್ರಭುತ್ವದ ಸಂಪದಭ್ಯುದಯಸಂಘ ನಿಯಮನಿರ್ಮಾಣಸಭೆ ಮೊದಲಾದವುಗಳಲ್ಲೆಲ್ಲಾ ಇವರು ಅವುಗಳ ಆರಂಭಕಾಲದಿಂದಲೂ ಸಭಿಕರಾಗಿದ್ದುಕೊಂಡು ತಮ್ಮ ದೀರ್ಘಾನುಭವಫಲವನ್ನು ಅವುಗಳಿಗುಂಟುಮಾಡಿಕೊಟ್ಟಿರುತ್ತಾರೆ. ಇಂತಹ ಸರ್ವತಸ್ಸಾಮರ್ಥ್ಯವುಳ್ಳವರಿಗೆ ಸಂಸ್ಥಾನದ ದಿವಾನಗಿರಿಯು ಕೆಲಕಾಲದಮಟ್ಟಿಗಾದರೂ ಕೊಡಲ್ಪಡದಂತೆ ಆಗಿಹೋದ ವಿಚಾರದಲ್ಲಿ ಪಶ್ಚಾತ್ತಾಪವು ಶ್ರೀಮನ್ಮಹಾರಾಜರವರಿಗೆ ಆಗಿಂದಾಗ್ಗೆ ಉಂಟಾಗದೆ ಇರಲಾರದಾದುದರಿಂದಲೇ ಪ್ರಭುಗಳು ಇವರಮೇಲೆ ಎಷ್ಟು ಭರವಸೆಯನ್ನು ಇಟ್ಟುಕೊಂಡಿರುವರೆಂಬುದಕ್ಕೆ ಪ್ರತಿಯೊಂದು ಮುಖ್ಯಸಂದರ್ಭದಲ್ಲೂ ಇವರ ಆಲೋಚನೆಯನ್ನೂ ಸಾಹಾಯ್ಯವನ್ನೂ ಪಡೆದುಕೊಳ್ಳುತ್ತಿರುವುದೇ ನಿದರ್ಶನವಾಗಿದೆ. ಈ ಕಾರಣದಿಂದಲೇ ಕೃಷ್ಣರಾಜಸಾಗರದ ವಿಚಾರಕಸಂಘದ ಮತ್ತು ಬಹಳ ದುರ್ಭರವಾಗಿದ್ದ ಆರ್ಥಿಕದುಸ್ಥಿತಿಯನ್ನು ಹೋಗಲಾಡಿಸಲು ಏರ್ಪಡಿಸಿದ್ದ ಸಂಘದ ಅಧ್ಯಕ್ಷಸ್ಥಾನಗಳೂ, ರಾಜ್ಯಾಂಗಸುಧಾರಣಾ ಸಂಘದ ಸಭಿಕತ್ವವೂ ವಹಿಸಲ್ಪಟ್ಟಿದ್ದುವಲ್ಲದೆ, ಈಗ ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲೇರ್ಪಟ್ಟಿರುವ ಭದ್ರಾವತಿ ಲೋಹಾಗಾರದ ಕಾರ್ಯನಿರ್ವಾಹಕ ಸಂಘದ ಸಭಿಕತ್ವವು ವಹಿಸಲ್ಪಟ್ಟಿರುವುದು. ಇದಲ್ಲದೆ ವೀರಶೈವ ವಿದ್ಯಾವರ್ಧಕಸಂಘದ ಮತ್ತು ಧರ್ಮಪ್ರವರ್ತಕ ತೋಟದಪ್ಪನವರ ಸತ್ರದ ಮೇಲ್ವಿಚಾರಣಾಸಂಘದ ಆಧಿಪತ್ಯವನ್ನು ವಹಿಸಿಕೊಂಡು ಸ್ವಜನಾಭಿವೃದ್ಧಿಕಾರ್ಯದಲ್ಲಿ ಪಾಟುಪಡುತ್ತಿರುವರು.

ಮ|| ಸೆಟ್ಟರು ತಮ್ಮಂತೆಯೇ ಉದ್ಯೋಗ ವಿಶ್ರಾಂತಿಯನ್ನು ಹೊಂದಿರುವ ಎಷ್ಟೋ ಅಧಿಕಾರಿಗಳಹಾಗೆ ಸಂಸಾರಲಂಪಟದಲ್ಲಿಯೋ ಅಥವಾ ಮತ್ತಾವ ತೊಂದರೆಯಲ್ಲಿಯೋ ಶಿಲ್ಕಿ ತೊಳಲುತ ತಮ್ಮಾಯುಷ್ಯವನ್ನು ನಿಷ್ಪ್ರಯೋಜಕವಾಗಿ ಮಾಡಿಕೊಂಡಿರುವಂತೆ ಇರದೆ ಪ್ರತಿನಿತ್ಯದಲ್ಲೂ ಉಷಃಕಾಲದಲೆದ್ದು ಪಾದಚಾರಿಯಾಗಿ ಬೈಲುಪ್ರದೇಶಕ್ಕೆ ಹೋಗಿ ವ್ಯಾಯಾಮಮಾಡಿಕೊಂಡು ಬಂದು ಕ್ಲುಪ್ತಕಾಲದವರೆಗೂ ವೃತ್ತಪತ್ರಿಕೆಗಳನ್ನೋದುತ್ತಿದ್ದು ಅನಂತರ ಸ್ನಾನ ಶಿವಪೂಜಾದಿ ನಿತ್ಯಕರ್ಮಗಳನ್ನು ತೀರಿಸಿ ಭೋಜನಮಾಡಿಕೊಂಡುಬಂದು ತಾವು ಕೈಕೊಂಡಿರುವ ಸರ್ಕಾರಿಯ ಸಂಬಂಧವಾದ ಅಥವಾ ದೇಶಸೇವಾಸಂಬಂಧವಾದ ಕೆಲಸಗಳ ಕಾಗದಪತ್ರಗಳನ್ನು ನೋಡಿ ಬಗೆಹರಿಸಿ, ಮಧ್ಯಾಹ್ನದಮೇಲೆ ಅಲ್ಪಾಹಾರವನ್ನು ತೆಗೆದುಕೊಂಡು ತಮ್ಮನ್ನು ನೋಡಲು ಬಂದ ದೊಡ್ಡಮನುಷ್ಯರುಗಳ ಮತ್ತು ಮಿತ್ರರುಗಳ ಕೂಡ ಕೆಲಕಾಲದವರೆಗೆ ಸಂಭಾಷಿಸಿ ಅವರನ್ನು ಕಳುಹಿಸಿಕೊಟ್ಟು ವಿದ್ವಜ್ಜನಗೋಷ್ಠಿಯಿಂದ ಧರ್ಮಗ್ರಂಥಾಲೋಚನೆಯಲ್ಲಿ ಸತ್ಕಾಲಕ್ಷೇಪವನ್ನು ಮಾಡುತ್ತಿದ್ದು ಸಾಯಂಕಾಲಾನಂತರ ಉಪನ್ಯಾಸಗಳಲ್ಲಿ ಅಧ್ಯಕ್ಷತೆಯನ್ನು ವಹಿಸಲೋ ಅಥವಾ ಮತ್ತಾವ ನಿಯುಕ್ತವಾದ ಕಾರ್ಯವನ್ನು ಮಾಡಲೋ ಹೋಗುವರು, ಇಲ್ಲದಿದ್ದಲ್ಲಿ ನಿರ್ಮಲ ವಾಯುವಿಹಾರಮಾಡಿಕೊಂಡು ಬರುವರು. ಈರೀತಿಯಾಗಿ ಕ್ಲುಪ್ತಕಾಲದಲ್ಲಿ ವ್ಯಾಯಮ ಆಹಾರ ನಿದ್ರೆಯನ್ನು ಮಾಡಿ ದೃಢಕಾಯರಾಗಿರುವರಲ್ಲದೆ ಕೈಕೊಂಡ ಕಾರ್ಯವನ್ನು ಅಶ್ರದ್ಧೆ ಆಲಸ್ಯಗಳಿಲ್ಲದೆ ಸಮರ್ಪಕವಾಗಿ ಮಾಡಿ ಸಮಸ್ತವಿಷಯದಲ್ಲೂ ಯುವಕಪ್ರಪಂಚಕ್ಕೆ ಮಾರ್ಗದರ್ಶಿಗಳಾಗಿರುವರು. ದೇಶಸೇವಾಧುರಂಧರರೂ, ಪ್ರಜಾಪ್ರಭುಸನ್ಮಾನಿತರೂ, ಕಾರ್ಯದಕ್ಷತೆ, ನಿಸ್ಪೃಹತೆ ನಿಷ್ಪಕ್ಷಪಾತತೆ ಮೊದಲಾದ ಸದ್ಗುಣೋಪೇತರೂ, ದೇಶಸೇವೆಯನ್ನೇ ತಮ್ಮ ಜೀವಿತದ ಮುಖ್ಯ ಪುರುಷಾರ್ಥವೆಂದು ತಿಳಿದು ಆಚರಿಸುತ್ತಿರುವವರೂ ಆದ ದಿ|| ಬ|| ಪುಟ್ಟಣ್ಣಸೆಟ್ಟರವರು ಪ್ರಜೆಗಳ ಪ್ರತಿನಿಧಿಗಳಾಗಿ ನಿಯಮನಿರ್ಮಾಣಸಭೆಯ ಸಭಿಕತ್ವಕ್ಕೆ ಆರಿಸಲ್ಪಡಲು ಅಭ್ಯರ್ಥಿಗಳಾಗಿ ನಿಂತಿರುವುದು ಈ ದೇಶೀಯರ ಪುಣ್ಯೋದಯವಲ್ಲದೆ ಮತ್ತೆಬೇರೆಇಲ್ಲವು. ಇದಕ್ಕಾಗಿ ಸರ್ವರೂ ಅವರಿಗೆ ಕೃತಜ್ಞರಾಗಿರಬೇಕಾಗಿದೆ. ಇವರು ಬೆಂಗಳೂರು ಪಟ್ಟಣವಾಸಿಗಳಿಂದ ಆರಿಸಲ್ಪಡಲು ಉಮೇದುವಾರರಾಗಿ ನಿಂತಿರುವುದರಿಂದ ಅಲ್ಲಿಯ ಓಟರುಗಳು ಬರುವ ಫೆಬ್ರುವರಿ ತಾ|| 15ನೇ ಶುಕ್ರವಾರದ ದಿವಸ ಗೊತ್ತಾದ ಸ್ಥಳಗಳಿಗೆ ತಪ್ಪದೆ ಹೋಗಿ ಮ|| ಸೆಟ್ಟರವರಿಗೆ ತಮ್ಮ ಘನತರವಾದ ಓಟನ್ನು ಕೊಟ್ಟು ಶ್ರೀಮನ್ಮಹಾರಾಜರವರ ಕೃಪಾವಿಶೇಷದಿಂದ ವರಪ್ರಸಾದರೂಪವಾಗಿ ತಮಗೆ ಅನುಗ್ರಹಿಸಲ್ಪಟ್ಟಿರುವ ಅಧಿಕಾರವನ್ನು ಸಾರ್ಥಕಪಡಿಸಿಕೊಳ್ಳುವವರಾಗಲೆಂದು ಇಚ್ಛೈಸುತ್ತೇವೆ. ಮತ್ತು ದಿ|| ಬ|| ಸೆಟ್ಟರು ಚಿರಕಾಲ ಆರೋಗ್ಯದೃಢಕಾಯರಾಗಿದ್ದುಕೊಂಡು ದೇಶಸೇವೆಯನ್ನು ಮಾಡಿ ಇತೋಪ್ಯತಿಶಯವಾದ ಪ್ರಭುಪ್ರಜಾಸನ್ಮಾನವನ್ನೂ ಶಾಶ್ವತವಾದ ಕೀರ್ತಿಯನ್ನೂ ಪಡೆಯುವವರಾಗಲೆಂದು ಹಾರೈಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಗ್ರಾಮಪಂಚಾಯತಿ ಕೋರ್ಟುಗಳ ವಿಚಾರಣೆಗೆ ಬರುವ ವಿವಾದಗಳಿಗೆ ಕೋರ್ಟು ಫೀ ನಿಬಂಧನೆಯಲ್ಲಿ ಕೊಡಲ್ಪಟ್ಟಿರುವ ಮೊಬಲಗಿನಲ್ಲಿ ½ ಫೀ ವಿಧಿಸಲ್ಪಡಬೇಕಾಗಿ ಸರ್ಕಾರದಪ್ಪಣೆಯಾಗಿದೆ.

ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರುಗಳನ್ನು ಆರಿಸಲು ಅರ್ಹರಾದವರು ಅಂಚೆಯಮೂಲಕ ತಮ್ಮ ಓಟುಗಳನ್ನು ಆಯಾ ಸ್ಥಳದ ರಿಟರ್ನಿಂಗ್ ಆಫೀಸರಿಗೆ ಕಳಿಸಬಹುದೆಂದು ವಿಧಾಯಕವಾಗಿರುತ್ತದೆ.

ಮೈಸೂರುಸಂಸ್ಥಾನದ ರೈಲ್ವೆಯಿಂದ 1923ನೆ ಜುಲೈ 1 ರಿಂದ ಡಿಸೆಂಬರ್ ತಾ|| 22ರ ವರೆಗೆ ನಿರೀಕ್ಷಿತವಾಗಿದ್ದುದಕ್ಕಿನ 26,7,312 ರೂ. ಕಡಿಮೆಯಾಗಿ ಅಂದರೆ 13,43,263 ರೂ. ಉತ್ಪನ್ನವಾಗಿರುತ್ತದೆ.

ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಬೇಸಾಯಕ್ಕೆ ತಾತ್ಕಾಲಿಕವಾಗಿ ನೀರನ್ನೊದಗಿಸುವುದಕ್ಕಾಗಿ ಒಳಗೆರೆಗಳಲ್ಲಿ ಬಾವಿಗಳನ್ನು ತೆಗಿಸಲು ಪ್ರತಿಯೊಬ್ಬ ಡಿ|| ಕಮಿಷನರಿಗೂ 1000 ರೂ. ಕೊಡಲ್ಪಟ್ಟಿರುತ್ತದೆ.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ವಾಣಿವಿಲಾಸ ಸಾಗರದ ಕೆಳಗೆ ನೀರಾವರಿ ಪ್ರದೇಶಕ್ಕೊಳಪಡದ ಭಾಗದಲ್ಲಿ ಎಕರೆ 1ಕ್ಕೆ 2—8—0 ಕಂದಾಯವನ್ನು ಕೊಟ್ಟು ಆಹಾರ್ಯಧಾನ್ಯವನ್ನು ಮಾತ್ರ ಒಂದುವರ್ಷದ ಮಟ್ಟಿಗೆ ಬೆಳೆಯಲು ಸರ್ಕಾರದಪ್ಪಣೆಯಾಗಿರುತ್ತದೆ.

ಮೈದಾನ ಪ್ರದೇಶಗಳಿಂದ ಮಲೆನಾಡಿಗೆ ಮೇವಿಗಾಗಿ ತೆಗೆದುಕೊಂಡು ಹೋಗಲ್ಪಡುವ ದನಗಳಿಗೆ ದೊಡ್ಡರೋಗವು ತಗಲದಂತೆ ಇನಾಕ್ಯುಲೇಷನ್ ಮಾಡಲು ಹಾಲನ್ನು ಕೊಂಡುಕೊಳ್ಳುವುದಕ್ಕಾಗಿ ಸರ್ಕಾರದವರು 5000 ರೂ. ಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ರಾಜಧಾನಿಯ ಮ್ಯುನಿಸಿಪಲ್ ಆವರ್ಣಕ್ಕೆ ಸೇರಿದ ದೊಡ್ಡಪೇಟೆ, ಸಂತೆಬೀದಿ, ಶಿವರಾಮಪೇಟೆ, ದೊಡ್ಡಂಗಡಿಬೀದಿ, ದೀವಟಿಗೆಬೀದಿ, ಮತ್ತು ಮಂಡಿಮಾರ್ಕಟ್ಟು ಮಾರ್ಗಗಳಲ್ಲಿ ಮೋಟಾರುಬಂಡಿಗಳು ಗಂಟೆಯೊಂದಕ್ಕೆ 10 ಮೈಲಿಗೆ ಮೀರಿಯೂ ಇತರ ಭಾಗಗಳಲ್ಲಿ 15 ಮೈಲಿಗೆ ಮೀರಿಯೂ ಬಿಡಲ್ಪಡಕೂಡದೆಂದು ಸರ್ಕಾರದವರು ವಿಧಾಯಕಮಾಡಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ನಂಜನಗೂಡಿನಿಂದ ಚಾಮರಾಜನಗರಕ್ಕೆ ರೈಲುರಸ್ತೆಯನ್ನು ಹಾಕುವುದಕ್ಕಾಗಿ 8 ಲಕ್ಷ ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಳ್ಳಲು ಸರ್ಕಾರದವರು ತಮ್ಮ ಅನುಮತಿಯನ್ನು ಕೊಟ್ಟಿರುವರಲ್ಲದೆ, ಸಾಲದ ಮೊಬಲಗು ವರ್ಷವೊಂದಕ್ಕೆ ಶೇಕಡ 7 ರೂ. ಬಡ್ಡಿದರದ ಮೇಲೆ ಒಂದೇಕಿಸ್ತಿನಲ್ಲಿ ತೆಗೆದುಕೊಳ್ಳಲ್ಪಟ್ಟು 15 ವರ್ಷಗಳಲ್ಲಿ ತೀರಿಸಲ್ಪಡಬೇಕಾಗಿ ವಿಧಾಯಕಮಾಡಿರುತ್ತಾರೆ.

ಬೆಂಗಳೂರು ಮ್ಯುನಿಸಿಪಲ್ ಆಫೀಸಿನ ಕಾವಲುಗಾರರಿಬ್ಬರನ್ನು ಕೊಂದು 5,058 ರೂ. ಗಳನ್ನು ಅಪಹರಿಸಿಕೊಂಡು ಹೋಗಿರುವ ನರಾಧಮರನ್ನು ಹಿಡಿದುಕೊಟ್ಟವರಿಗೆ 1,000 ರೂ. ಬಹುಮಾನಿಸಲ್ಪಡುವುದಾಗಿ ಪೊಲೀಸು ಇ|| ಜನರಲ್‌ರವರು ಪ್ರಕಟಿಸಿರುತ್ತಾರೆ. ಆ ಆಫೀಸಿನಲ್ಲಿ ರಿಕಾರ್ಡುಕೀಪರಾಗಿರುವ ಕೃಷ್ಣರಾವೆಂಬಾತನ ಮೇಲೆ ಪೊಲೀಸರ ದೃಷ್ಟಿಯು ಬಿದ್ದಿತು. ಆದರೆ ಅವನು ಈಗ ಎಲ್ಲಿಯೋ ಮಾಯವಾಗಿರುವನಂತೆ.

ರೆವಿನ್ಯೂ ಸಂಬಂಧವಾದ ಕಾಗದಪತ್ರಗಳ ನಕಲು ಅಧಿಕಾರಿಗಳ ಸೈನ್ ಮೊಹರಿಲ್ಲದೆ ಸ್ಟಾಂಪು ಹಚ್ಚಲ್ಪಡದ ಕಾಲಿಕಾಗದದ ಮೇಲೆ ಕೊಡಲ್ಪಡಬಹುದೆಂದು ರೂಲ್ಸು ಇದ್ದಾಗ್ಯೂ ಆಚರಣೆಯಲ್ಲಿಲ್ಲವೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಅರಿಕೆ ಮಾಡಲ್ಪಟ್ಟದರ ಮೇಲೆ ಸ್ಟಾಂಪಿಲ್ಲದೆ ನಕಲುಗಳು ಅಪೇಕ್ಷಿತರಿಗೆ ಕೊಡಲ್ಪಡುವಂತೆ ಡೆಪ್ಯುಟಿಕಮಿಷನರುಗಳಿಗೆ ಅವಶ್ಯಕವಾದ ಸೂಚನೆಯನ್ನು ಕೊಡಬೇಕೆಂದು ಸರ್ಕಾರದವರು ರೆವಿನ್ಯೂ ಕಮಿಷನರಿಗೆ ತಿಳಿಸಿರುತ್ತಾರೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳಾದ ಮಿ|| ಮಹಮ್ಮದ್ ಸೇಟ್‌ರವರು ಮ|| ಕೆ. ಧನಕೋಟಿ ಸೆಟ್ಟರವರು ಮ|| ವೈ. ವಿರೂಪಾಕ್ಷಯ್ಯನವರು ಮತ್ತು ಅಡ್ವೋಕೇಟರಾದ ಮ|| ಎಚ್. ಸಿ. ದಾಸಪ್ಪ ಬಿ.ಎ., ಎಲ್.ಎಲ್.ಬಿ., ರವರು ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಿಯೂ ಮಿ|| ಮಹಮ್ಮದ್ ಸೇಟರು ನ್ಯಾಯವಿಧಾಯಕ ಸಭೆಗೆ ಮೆಂಬರಾಗಿಯೂ ರಾಜಧಾನಿಯ ಓಟರುಗಳಿಂದ ಆರಿಸಲ್ಪಡಲು ಅಭ್ಯರ್ಥಿಗಳಾಗಿ (ಉಮೇದುವಾರರಾಗಿ) ನಿಂತಿರುವರು.

ಕಳೆದ ತಾ|| 2 ರಲ್ಲಿ ಭದ್ರಾವತಿಯಿಂದ ಅಗಸನಹಳ್ಳಿಗೆ ಸೌದೆಯನ್ನು ತುಂಬಿಕೊಂಡುಬರಲು ಹೋಗುತ್ತಿದ್ದ ಟ್ರಾಂಬಂಡಿಗಳು ದಾರಿಯಲ್ಲಿ ಬಿದ್ದಿದ್ದ ತೊಲೆಗಳಿಗೆ ಹೇಗೋ ತಾಕಿದುದರಿಂದ ಬ್ರೇಕ್ ಬಂಡಿಯೂ ಮತ್ತೈದು ಸೌದೆ ತುಂಬುವ ಬಂಡಿಗಳೂ ಕಂಬಿಯನ್ನು ಬಿಟ್ಟು ಕೆಳಗುರುಳಿದವಾದುದರಿಂದ ಬಂಡಿಗಳಲ್ಲಿ ಕುಳಿತಿದ್ದ ಕೂಲಿಯಾಳುಗಳಲ್ಲಿ ಇಬ್ಬರು ಸತ್ತುಹೋದರು, ಮತ್ತೊಬ್ಬನು ಪೂರಾ ಅಪಾಯ ಹೊಂದಿ ಶಿವಮೊಗ್ಗೆ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವನು.

ಜಪಾನಿಗೆ ಬೇಕಾಗಿರುವ ಉತ್ಕೃಷ್ಟವಾದ ಗಂಧದೆಣ್ಣೆಯು ತೆಗೆಯಲ್ಪಟ್ಟು ಜರ್ಮನಿಯ ವರ್ತಕತನವೆಲ್ಲವನ್ನೂ ತಡೆದು ಬಿಡುವ ಸ್ಥಿತಿಗೆ ಬೆಂಗಳೂರು ಮೈಸೂರು ಪಟ್ಟಣಗಳಲ್ಲಿರುವ ಗಂಧದೆಣ್ಣೆಯ ಕಾರ್ಯಾಲಯಗಳು ಬಂದಿರುತ್ತವೆಂದೂ, ಈ ಕಾರ್ಯಾಲಯಗಳು ಸ್ಥಾಪಿತವಾದಂದಿನಿಂದ 150 ಲಕ್ಷ ರೂಪಾಯಿಗಳ ವೆಚ್ಚವು ಕಳೆದು 7 ಲಕ್ಷ ರೂ. ಲಾಭವು ಬಂದಿರುವುದಾಗಿಯೂ, 1922-23ರಲ್ಲಿ 4 ಲಕ್ಷ ರೂ. ಗೆ ಮೇಲ್ಪಟ್ಟು ಲಾಭವಾಗಿರುವುದಾಗಿಯೂ ಡೈರೆಕ್ಟರವರ ವರದಿಯಿಂದ ತಿಳಿಯಬರುತ್ತದೆ.

1922-23 ನೆಯ ವರ್ಷದಲ್ಲಿ 4627 ಜನರಿಗೂ, 71 ಕಂಪೆನಿಗಳಿಗೂ, 1 ಫರ್ಮಿಗೂ ಆದಾಯದ ತೆರಿಗೆಯು ವಿಧಿಸಲ್ಪಟ್ಟದರ ಮೇಲೆ ಜನರಿಂದ 4,66,760-10-6 ; ಕಂಪೆನಿಗಳಿಂದ 9,24,795-2-0; ಫರ್ಮುಗಳಿಂದ 3028-14-0 ; ಹಿಂದಣವರ್ಷದ ಬಾಕಿ ಸೇರಿ ಒಟ್ಟು 18,32,485-1-11 ರೂ. ಬರಬೇಕಾಗಿದ್ದುದಕ್ಕೆ 14,05,000 ರೂ. ವಸೂಲ್ಮಾಡಲ್ಪಟ್ಟಿತು. ಇದರ ಹಿಂದಣವರ್ಷದಲ್ಲಿ 14,32,000 ರೂ. ವಸೂಲ್ಮಾಡಲ್ಪಟ್ಟಿದ್ದಿತು. ಹೀಗೆ ಪ್ರಸಕ್ತವರ್ಷದಲ್ಲಿ ಕಡಿಮೆ ವಸೂಲಾಗಲು, ಕಂದಾಯವು ಸಾವಕಾಶವಾಗಿ ವಿಧಿಸಲ್ಪಟ್ಟದೂ, ವಸೂಲಿ ಕೆಲಸವು ಚುರಕಾಗಿ ನಡೆಯದಿದ್ದುದೂ ಮುಖ್ಯಕಾರಣವೆಂದು ಈ ಶಾಖೆಯ ವರದಿಯಲ್ಲಿ ಹೇಳಲ್ಪಟ್ಟಿದೆ.

ರಾಜಧಾನಿಯಲ್ಲಿ ಈ ತಾ|| 14 ರಿಂದ 18ರ ವರೆಗೆ ನಡಿಯುವ ಶಿಶು ಪ್ರದರ್ಶನದ ಖರ್ಚಿಗಾಗಿಯೂ, ಆರೋಗ್ಯದೃಢಕಾಯಗಳಾದ ಶಿಶುಗಳಿಗೆ ಬಹುಮಾನ ಕೊಡುವುದಕ್ಕಾಗಿಯೂ ಶ್ರೀಮನ್ ಮಹಾರಾಜರವರು 150 ರೂಪಾಯಿಗಳನ್ನು ದಯಪಾಲಿಸಿರುವರಲ್ಲದೆ ಸೆಂಟ್‌ಜಾನ್ ಆಂಬ್ಯುಲೆನ್ಸ್ ಸಂಘದವರು 150 ರೂ., ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು 100 ರೂ., ರಾಜಧಾನಿಯ ಪೌರಸಾಮಾಜಿಕ ಸಂಘದವರು 100 ರೂ. ಗಳನ್ನು ಕೊಟ್ಟಿರುವರು. ಇದೇ ರೀತಿಯಾಗಿ ಶಿಶುಆರೋಗ್ಯರಕ್ಷಣಾಭಿಮಾನಶಾಲಿಗಳು ಯಥಾಶಕ್ತಿ ದ್ರವ್ಯಸಹಾಯಮಾಡಿ ಈ ಕಾರ್ಯವು ನಿರ್ವಿಘ್ನವಾಗಿ ನಡಿಯುವಂತೆ ಮಾಡಬೇಕಾಗಿ ಕೋರಲ್ಪಟ್ಟಿರುತ್ತಾರೆ.

ಆದಾಯದ ತೆರಿಗೆಯು 30 ದಿವಸಗಳಲ್ಲಿ ಮೊದಲನೆಯ ಕಿಸ್ತಾಗಿಯೂ 60 ದಿವಸಗಳಲ್ಲಿ ಎರಡನೆಯ ಕಿಸ್ತಾಗಿಯೂ ಕೊಡಬೇಕಾಗಿರುವುದೂ ಮೊದಲನೆಯ ಕಿಸ್ತು ಕೊಡಲ್ಪಡದಿದ್ದಲ್ಲಿ ಅರ್ಥದಂಡವು ವಿಧಿಸಲ್ಪಡುವುದೂ ವಾಡಿಕೆಯಾಗಿದೆಯಷ್ಟೆ. ಈ ಅರ್ಥದಂಡವು ವಿಧಿಸಲ್ಪಡುವುದು ತಪ್ಪಿಸಲ್ಪಡಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಾರ್ಥಿಸಲ್ಪಟ್ಟುದರಮೇಲೆ ಆ ರೀತಿ ತಪ್ಪಿಸಲ್ಪಡಲಾಗುವುದಿಲ್ಲವಾದುದರಿಂದ, ತೆರಿಗೆಯನ್ನು ವಿಧಿಸಿ ನೋಟೀಸು ಕೊಟ್ಟ 60 ದಿನಗಳೊಳಗೆ ಒಟ್ಟು ಹಣವು ಪೂರ್ತಿಯಾಗಿ ಕೊಡಲ್ಪಟ್ಟಲ್ಲಿ ಅರ್ಥದಂಡವನ್ನು ಮನ್ನಿಸಿಬಿಡುವಂತೆ ಇನ್ಕಂಟ್ಯಾಕ್ಸ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕಾಗಿ ಸರ್ಕಾರದಪ್ಪಣೆಯಾಗಿರುತ್ತದೆ.

ಮೈಸೂರು ಸಂಸ್ಥಾನದ ಪಟೇಲರುಗಳ ಪುರೋಭಿವೃದ್ಧಿವಿಷಯಕವಾದ ಮಹಾಸಭೆಯು ಈ ಜನವರಿ ತಾ|| 26 ಮತ್ತು 27ರಲ್ಲಿ ಚನ್ನಪಟ್ಟಣದಲ್ಲಿ ಜರಗುವುದಾಗಿಯೂ, ಇದರ ಆರಂಭೋತ್ಸವವು ದಿವಾನರಿಂದ ನಡಿಸಲ್ಪಡುವುದಾಗಿಯೂ ಗೊತ್ತಾಗಿರುವುದು. ಮಹಾಸಭೆಗೆ ಬರತಕ್ಕ ಎಲ್ಲಾ ಮತದ ಪಟೇಲರುಗಳ ವಾಸಕ್ಕೂ ಊಟ ಉಪಚಾರಗಳಿಗೂ ತಕ್ಕೇರ್ಪಾಟು ಮಾಡಲ್ಪಟ್ಟಿರುತ್ತದೆ. ಸಂಸ್ಥಾನದ ಎಲ್ಲಾ ಕಡೆಯ ಪಟೇಲರುಗಳು 2-3 ದಿನಗಳ ಮಟ್ಟಿಗೆ ವಿರಾಮಮಾಡಿಕೊಂಡು ಬಂದು ತಮ್ಮ ಪುರೋಭಿವೃದ್ಧಿ ಸಾಧಕಗಳಾದ ಸೂಚನೆಗಳನ್ನು ಕೊಟ್ಟು ನಿರ್ಧಾರಗಳನ್ನು ಮಾಡಿಸಿ ಅದರಂತೆ ನಡೆಯಲು ಪ್ರಯತ್ನಿಸುವವರಾಗಬೇಕಾಗಿ ಕೋರುತ್ತೇವೆ.

ಕಳೆದ 4 ವರ್ಷಗಳಿಂದಲೂ ಗೌರ್ನಮೆಂಟ್ ಅಸಿಸ್ಟೆಂಟ್ ಸೆಕ್ರೆಟರಿಗಳಾಗಿದ್ದು ಈಗ ರೆವಿನ್ಯೂ ಕಮಿಷನರಾಫೀಸಿಗೆ ವರ್ಗಪಟ್ಟಿರುವ ಮ|| ಡಿ.ಸಿ. ಸುಬ್ರಾಯಪ್ಪ ಬಿ.ಎ.,ಬಿ.ಎಲ್., ರವರನ್ನು ಸೆಕ್ರೆಟರಿಯಟ್ಟಿನ ಎಲ್ಲ ಶಾಖೆಯ ಉದ್ಯೋಗಸ್ಥರುಗಳು ಸೆಕ್ರೆಟರಿಯಟ್ ಕ್ಲಬ್ಬಿಗೆ ಬರಮಾಡಿಕೊಂಡು ಅಲ್ಪಾಹಾರದಿಂದಲೂ, ಸಂಗೀತಶ್ರವಣದಿಂದಲೂ ಸತ್ಕರಿಸಿ, ಅವರ ನಿಸ್ಪೃಹತೆ, ನಿಷ್ಪಕ್ಷದಾತತೆ, ದಯಾಪರತೆ ಮೊದಲಾದ ಸದ್ಗುಣಗಳನ್ನು ಶ್ಲಾಘಿಸಿ ಅವರಲ್ಲಿ ತಮ್ಮಗಳಿಗಿರುವ ಗೌರವ ವಿಶ್ವಾಸಗಳನ್ನು ಪ್ರದರ್ಶಿಸಿದರು. ಮ|| ಸುಬ್ರಾಯಪ್ಪನವರು ಕಾಲೋಚಿತವಾದ ಸಂಕ್ಷಿಪ್ತ ಭಾಷಣದಿಂದ ಆ ಉದ್ಯೋಗಸ್ಥರುಗಳು ಮಾಡಿದ ಸತ್ಕಾರವನ್ನು ಶ್ಲಾಘಿಸಿ ಅವರುಗಳನ್ನು ವಂದಿಸಿದರು. ಮ|| ಸುಬ್ರಾಯಪ್ಪನವರು ಸ್ವಭಾವತಃ ನಿಗರ್ವಿಗಳೂ ದಯಾದಾಕ್ಷಿಣ್ಯಪರರೂ ಆಗಿರುವುದರಿಂದ ಸರ್ವತ್ರ ಸನ್ಮಾನನೀಯರಾಗಿರುವರೆನ್ನುವುದರಲ್ಲಿ ಸಂದೇಹವಿಲ್ಲವು.

ಭರತಖಂಡದ ವೃತ್ತಾಂತಗಳು.

ಬೊಂಬಾಯಿನಲ್ಲಿ ಮಕ್ಕಳ ಪ್ರದರ್ಶನವು ಈ ತಾ|| 21 ರಿಂದ 27ರ ವರೆಗೆ ನಡಿಸಲ್ಪಡುವುದು.

ತಿರುವನಂತಪುರದ ಮಹಾರಾಜರು ಪೂನಾದಲ್ಲಿರುವ ಸೇವಾಸದನಕ್ಕೆ 1000 ರೂ. ಗಳನ್ನು ಕೊಟ್ಟಿರುವರು.

ಕೊಡಗು ಪ್ರಾಂತಕ್ಕೆ ಹೊಸದಾಗಿ ಏರ್ಪಡಿಸಲ್ಪಟ್ಟಿರುವ ನ್ಯಾಯವಿಧಾಯಕ ಸಭೆಯು ಈ ಜನವರಿ ತಾ|| 28 ರಿಂದ ಅಸ್ತಿತ್ವಕ್ಕೆ ಬರುವುದು.

ತಿರುವಾಂಕೂರಿನ ಮಹಾರಾಜರು ತಿನ್ನವೆಲ್ಲಿಯಲ್ಲಿ ಪ್ರವಾಹದನಾಹುತದಿಂದ ವಿಪನ್ನರಾದವರ ಸಹಾಯಾರ್ಥವಾಗಿ 2000 ರೂ. ಗಳನ್ನು ಕೊಟ್ಟಿರುತ್ತಾರೆ.

ಮಹಾತ್ಮ ಗಾಂಧಿಯವರನ್ನು ಬೊಂಬಾಯಿನ ಹೊಸ ಗರ್ನರಾದ ಲೆಫ್ಟನೆಂಟ್ ಕರ್ನಲ್ ವೆಸ್ಲಿಯವರು ಸಾಮ್ರಾಜ್ಯ ಸಭಾ ಸಮಾವೇಶಕ್ಕೆ ಪೂರ್ವ ಕಾರಾಗೃಹನಿರ್ಬಂಧದಿಂದ ಬಿಡಿಸುವುದಾಗಿ ತಿಳಿಯಬರುತ್ತದೆ.

ಮಲಬಾರ್ ದಂಗೆಕೋರರಲ್ಲಿ ಮರಣದಂಡನೆಗೆ ಗುರಿಮಾಡಲ್ಪಟ್ಟಿದ್ದ ಇಬ್ಬರು ಮಾಪ್ಳೆಯವರು ಆಚೆಶನಿವಾರದ ದಿವಸ ನೇಣುಹಾಕಲ್ಪಟ್ಟ ಮೇಲೆ ಶವಗಳನ್ನು ಮಹಮ್ಮದೀಯರು ಉತ್ಸವದಿಂದ ತೆಗೆದುಕೊಂಡುಹೋಗಿ ಸಂಸ್ಕರಿಸಿದರು.

ತಿರುವನಂತಪುರಕ್ಕೆ ಸೇರಿದ ಕೆಟ್ಟುರ್ಕರಾಯ ಎಂಬಲ್ಲಿ ಒಂದು ಜೋಡೆತ್ತಿನಬಂಡಿಯು ರೈಲುಕಂಬಿಗಳನ್ನು ದಾಟಿಹೋಗುವಾಗ್ಗೆ ರೈಲುಬಂಡಿಯು ಬಂದು ಅದಕ್ಕೆ ತಾಕುಬಡಿದಿತು. ಇದರಿಂದ ಬಂಡಿಯನ್ನು ಹೊಡೆಯುವವನೂ ಒಳಗೆ ಕುಳಿತಿದ್ದವರೂ ಮೃತರಾದರಲ್ಲದೆ ಬಂಡಿಯೂ ನುಚ್ಚುನೂರಾಯಿತು.

ತಿರುವನಂತಪುರಕ್ಕೆ ಸೇರಿದ ಕೈತಮುತ್ತು ಎಂಬ ಗ್ರಾಮದಲ್ಲಿ ಕಳೆದ ತಾ|| 6 ರಲ್ಲಿ ಮಳೆಯು ವಿಶೇಷವಾಗಿ ಬಂದು ಒಂದು ಸಣ್ಣ ಮನೆಯು ಬಿದ್ದುಹೋಯಿತು. ಅದರೊಳಗಿದ್ದ ಒಂದು ಮಗುವು ಸತ್ತುಹೋಯಿತು, ಮತ್ತು ಅದರ ತಾಯಿಗೂ ಮತ್ತೊಂದು ಮಗುವಿಗೂ ಸ್ವಲ್ಪ ಪೆಟ್ಟುತಗಲಿತು.

ಬೊಂಬಾಯಿನ ಕಿಲಾಫತ್ ಕಮಿಟಿಯ ಪ್ರೆಸಿಡೆಂಟರಾದ ಮಿಯಾನ್ ಮಹಮ್ಮದ್ ಎಚ್. ಜೆ. ಎಂ. ಚೋಟಾನಿಯವರೂ, ಸೆಕ್ರೆಟರಿಗಳಾದ ಎ. ಎಚ್. ಎಸ್. ಖಾತ್ರಿ ಮತ್ತು ಶೇಟ್ ಅಬ್ದುಲ್‌ರಹಿಮಾನ್‌ರವರೂ, ಟ್ರೆಜರರಾದ ಎಂ. ಎಚ್. ಎಂ. ಅಬ್ಬಾಯಿಯವರೂ ತಮ್ಮುದ್ಯೋಗಗಳನ್ನು ತ್ಯಜಿಸಿಬಿಟ್ಟಿರುತ್ತಾರೆ.

ಕೊಚ್ಚಿನ್ನಿಗೆ ಸೇರಿದ ಒಂದು ಹಳ್ಳಿಯಲ್ಲಿ ಒಬ್ಬ ಕ್ರೈಸ್ತನು ತನ್ನ ಬಲತಾಯಿಯನ್ನು ಕೊಂದುಹಾಕಿ ತಾನು ಒಂದು ಮರಕ್ಕೆ ನೇತುಹಾಕಿಕೊಂಡು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದನು. ಅವನ ಶವವು ಮರದಿಂದ ಕೆಳಕ್ಕಿಳಿಸಲ್ಪಟ್ಟು ನೋಡುವಲ್ಲಿ, ತನ್ನ ಬಲತಾಯಿಯನ್ನು ಅವಳ ದುರ್ನಡತೆಗಾಗಿ ಕೊಂದುಹಾಕಿ ತಾನು ಆತ್ಮಹತ್ಯೆಗೆ ಯತ್ನಿಸಿದುದಾಗಿ ಬರೆದಿದ್ದ ಕಾಗದವು ದೊರಕಿತು.

ತಿರುವನಂತಪುರದ ಕಲಾಕೌಶಲ್ಯ ಶಾಲೆಯಲ್ಲಿ ಕಲ್ಲಿನ ಮೇಲೆ ವಿಗ್ರಹಗಳನ್ನು ಕೆತ್ತುವ ವಿದ್ಯೆಯನ್ನು ಹೇಳಿಕೊಡುವ ಮಿಚೇಲ್‌ದ್ರವ್ಯಂಪಿಳ್ಳೆ ಎಂಬ ಕ್ರೈಸ್ತಮತಾವಲಂಬಿಯು ಆರ್ಯಸಮಾಜದವರಿಂದ ಕಳೆದ ತಾ|| 6ರಲ್ಲಿ ಹಿಂದೂಮತಕ್ಕೆ ತೆಗೆದುಕೊಳ್ಳಲ್ಪಟ್ಟನು. ಈತನು ತಾ|| 5ರಲ್ಲಿ ನಿರಾಹಾರವಾಗಿಡಲ್ಪಟ್ಟಿದ್ದು ತಾ|| 6ರ ಬೆಳಿಗ್ಗೆ ಆಯುಷ್ಕರ್ಮ ಸ್ನಾನಂತರ ಹವನ ಹೋಮಾದಿಗಳೊಡನೆ ಶುದ್ಧಿಕರ್ಮವು ನಡೆಸಲ್ಪಟ್ಟು ಇತಃಪರಹ ಪ್ರತಿನಿತ್ಯದಲ್ಲೂ ಸ್ನಾನ ಸಂಧ್ಯಾವಂದನೆಗಳನ್ನು ಮಾಡುತ್ತೇನೆಂದೂ ಸತ್ಯ ಮತ್ತು ಅಹಿಂಸಾವ್ರತವನ್ನು ಆಚರಿಸುತ್ತೇನೆಂದೂ ಪ್ರಮಾಣಮಾಡಿಸಲ್ಪಟ್ಟನು. ಈ ಶುದ್ಧಿಸಮಾರಂಭಕ್ಕೆ ನೂರಾರು ಜನರು ಬಂದಿದ್ದು ಆ ಶುದ್ಧನಾದವನನ್ನು ಹರಸಿದರು.

ಅಲಿಪುರ ಡಿ|| ಗೆ ಸೇರಿದ ಕ್ಯಾನಿಂಗ್ ಪಟ್ಟಣದಿಂದ 12 ಮೈಲಿದೂರದಲ್ಲಿರುವ ದಿಯಾರಾ ಗ್ರಾಮವಾಸಿಯಾದ ಒಬ್ಬ ಐಶ್ವರ್ಯವಂತನ ಮನೆಗೆ 24 ಜನ ಕಳ್ಳರು ಕತ್ತಿ, ಕಠಾರಿ, ಬರ್ಜಿ, ಬಂದೂಕ ದೊಣ್ಣೆಗಳನ್ನು ಹಿಡಿದುಕೊಂಡು ಕಳೆದ ಮಂಗಳವಾರ ನುಗ್ಗಿ ಹಣವಿರುವ ಸ್ಥಳವನ್ನು ತೋರಿಸಬೇಕೆಂದು ಯಜಮಾನನನ್ನು ಬೆಂಕಿಯಿಂದಸುಟ್ಟು ಹಿಂಸಿಸುತ್ತಿದ್ದು ಹೊರಗಣಿಂದ ಬಂದ ಅವನಿಬ್ಬರು ಮಕ್ಕಳು ಪ್ರತಿಭಟಿಸಲೆತ್ನಿಸಲು ಅವರುಗಳನ್ನು ಕ್ರೂರವಾಗಿ ಹಿಂಸಿಸಿ ಅವರ ಸಹಾಯಕ್ಕೆ ಬಂದ ಗ್ರಾಮಸ್ಥರು ಹೆದರಿ ಓಡಿಹೋದಮೇಲೆ ಮನೆಯಲ್ಲಿದ್ದುದನ್ನೆಲ್ಲಾ ದೋಚಿಕೊಂಡು ಮನೆಯ ಹೆಂಗುಸರೂ ಗಂಡಸರೂ ಸೇರಿ ಒಟ್ಟು 5 ಜನರನ್ನು ಒಂದು ಸಣ್ಣ ಕೊಠಡಿಯೊಳಗೆ ಕೂಡಿ ಬಾಗಿಲಿಗೆ ಬೀಗವನ್ನು ಹಾಕಿ ಹೊರಗಣಿಂದ ಬೆಂಕಿಯನ್ನು ಹೊತ್ತಿಸಿ ಪಲಾಯನವಾದರು. ಮನೆಯೂ ಆ 5 ಜನರೂ ಅಗ್ನಿಗೆ ಆಹುತಿಯಾದರು.

ಸ್ವರಾಜ್ಯಸಾಧನೆಗೆ ಹಿಂದೂ ಮಹಮ್ಮದೀಯರ ಏಕಮತ್ಯವೂ, ದೌರ್ಜನ್ಯರಹಿತವಾದ ಅಸಹಾಯೋದ್ಯಮವೂ, ಕಾಂಗ್ರೆಸ್ಸಿನ ಮತವನ್ನು ಸರ್ವತ್ರ ಬೋಧಿಸಿ ಅನುಷ್ಠಾನಕ್ಕೆ ತರಲು ಕೋಟಿ ಜನರು ನಡುಕಟ್ಟಿ ನಿಂತುಕೊಳ್ಳುವುದೂ ಅತ್ಯಾವಶ್ಯಕವು; ಅದುವಿನಾ ಸ್ವರಾಜ್ಯವು ಸಿದ್ಧಿಸುವುದಿಲ್ಲವೆಂದೂ ಆಲಿಸಹೋದರರು ಕಾಕಿನಾಡಾದಲ್ಲೂ ಇತರ ಕಡೆಯಲ್ಲೂ ಬಹಿರಂಗವಾಗಿ ಹೇಳುತ, ಬ್ರಿಟಿಷರು ಅಫಘಾನಿಸ್ಥಾನದ ಮೇಲೆ ಯುದ್ಧಮಾಡುವ ಸಂಭವವಿರುತ್ತದೆ, ಅಂತಹ ಸಂದರ್ಭದಲ್ಲಿ ಭಾರತೀಯರಾರೂ ಬ್ರಿಟಿಷರಿಗೆ ಯಾವ ವಿಧದಲ್ಲೂ ಸಾಹಾಯ್ಯಮಾಡದೆ ನಮ್ಮ ಭರತಖಂಡದ ಎಲ್ಲೆಕಟ್ಟಿನಲ್ಲಿರುವ ಪೂರ್ವಾತ್ಯ ದೇಶಬಂಧುಗಳಿಗೆ ಸಾನುಭೂತಿಯನ್ನು ತೋರಿಸತಕ್ಕದು ನಮ್ಮ ಧರ್ಮವೆಂದು ಮೊದಲಾಗಿ ಜನರಿಗೆ ಅಂತರಂಗದಲ್ಲಿ ಬೋಧಿಸುತ ಅವರುಗಳ ಮನಸ್ಸನ್ನು ಕಲುಷಿತಮಾಡುತ್ತಿರುವರು. ಪ್ರಭುತ್ವದವರು ಈ ವಿಚಾರದಲ್ಲಿ ಉದಾಸೀನರಾಗಿರದೆ ತಕ್ಕ ಪ್ರತಿಬಂಧಕವನ್ನು ಕಲ್ಪಿಸುವುದು ಅತ್ಯಗತ್ಯವು. ಹಾಗಿಲ್ಲದಿದ್ದಲ್ಲಿ ಇದರ ಮುಂದಣ ಪರಿಣಾಮವು ಮಹಾನರ್ಥಕಾರಿಯಾಗುವುದು ಎಂದು ಮೊದಲಾಗಿ ಮದ್ರಾಸು ಮೇಲುಪತ್ರಿಕೆಯು ಪ್ರಭುತ್ವದವರನ್ನೆಚ್ಚರಿಸುತ್ತಿರುವುದು.

ಕೇಲಂಡಿಸ್ಟ್ರಿಕ್ಟಿನಲ್ಲಿ ಅತಿವೃಷ್ಟಿಯಿಂದಾಗಲಿ ಅಥವಾ ಅನಾವೃಷ್ಟಿಯಿಂದಾಗಲಿ ಬೆಳೆ ನಷ್ಟವಾಗಿದ್ದಲ್ಲಿ ಅಥವಾ ಕೀ

ಭೂಮಿಯಲ್ಲಿ ಖುಷ್ಕಿಬೆಳೆ ಮಾಡಲ್ಪಟ್ಟಿದ್ದಲ್ಲಿ ಕಂದಾಯದ ರಿಮಿಷನ್ನಿಗಾಗಿ ರೈತರು ಈ ಜನವರಿ ತಾ|| 31 ರೊಳಗೆ ಅರ್ಜಿಗಳನ್ನು ಬರೆದುಕೊಳ್ಳಬಹುದೆಂದೂ ಈ ಅರ್ಜಿಗಳಿಗೆ ಸ್ಟಾಂಪನ್ನು ಹಚ್ಚಬೇಕಾದವಶ್ಯಕತೆಯಿಲ್ಲವೆಂದೂ ಡಿಸ್ಟ್ರಿಕ್ಟ ಕಲೆಕ್ಟರು ಪ್ರಕಟಪಡಿಸಿರುವುದರಮೇಲೆ, ಡಿಸ್ಟ್ರಿಕ್ಟಿನ ನಾನಾ ಕಡೆಯಿಂದ ಆಗಲೇ ಸಾವಿರಕ್ಕೆ ಮೇಲ್ಪಟ್ಟು ಅರ್ಜಿಗಳು ಬರೆದುಕೊಳ್ಳಲ್ಪಟ್ಟಿರುತ್ತವೆ. ಮಳೆಯಭಾವದಿಂದಲೂ, ನಾಲೆಗಳಲ್ಲಿ ಸಾಕಷ್ಟು ನೀರೊದಗಿಸಲ್ಪಡದೆ ಹೋದುದರಿಂದಲೂ ಒಟ್ಟು ಭೂಗಂದಾಯದಲ್ಲಿ 10 ಲಕ್ಷ ರೂಪಾಯಿಗಳವರೆಗೆ ರಿಮಿಷನ್ ಮಾಡಲ್ಪಡತಕ್ಕದಾಗಿದೆ.

ಕಲಕತ್ತ ಶಂಕರಿತೋಲಾದಲ್ಲಿ ಸಬ್ ಪೋಸ್ಟ್‌ಮಾಸ್ಟರಾಗಿದ್ದ ಬಾಬು ಅಮೃತಲಾಲ್ ರಾಯ್ ಎಂಬಾತನು ಕೆಲಸಮಾಡುತ್ತಿರುವಾಗ್ಗೆ ದಂಗೆಕೋರರಿಂದ ಕೊಂದುಹಾಕಲ್ಪಟ್ಟುದಕ್ಕಾಗಿ ಇಂಡ್ಯಾಸರ್ಕಾರದವರು ಅವನ 27 ವರ್ಷ ವಯಸ್ಸಿನ ಹೆಂಡತಿಗೆ ಮರಣಾವಧಿ ಅಥವಾ ಅವಳು ಪುನರ್ವಿವಾಹಮಾಡಿಕೊಳ್ಳುವವರೆಗೆ ತಿಂಗಳೊಂದಕ್ಕೆ 25 ರೂ. ಪೆನ್ಷನ್ನು (2) ಅವನ 72 ವಯಸ್ಸಿನ ವೃದ್ಧಮಾತೆಗೆ 15 ರೂ. ಪೆನ್ಷನ್ನು (3) ಅವನ 12 ಮತ್ತು 10 ವರ್ಷಗಳ ವಯಸ್ಸಿನ ಇಬ್ಬರು ಗಂಡುಮಕ್ಕಳಿಗೆ ಅವರು 22 ವರ್ಷ ವಯಸ್ಸಿರಾಗುವವರೆಗೂ ಪ್ರತಿತಿಂಗಳಲ್ಲೂ ಪ್ರತಿಯೊಬ್ಬನಿಗೂ 20 ರೂ. ಪೆನ್ಷನ್ನು (4) 10 ಮತ್ತು 1½ ವರ್ಷ ವಯಸ್ಸಿನ ಇಬ್ಬರು ಹೆಣ್ಣುಮಕ್ಕಳಿಗೆ ಅವರ ಮದುವೆಯಾಗುವವರೆಗೆ ತಲಾ 10 ರೂ. ಪೆನ್ಷನ್ನು ಮತ್ತು ಲಗ್ನಕಾಲದಲ್ಲಿ 5 ವರ್ಷಗಳ ಪೆನ್ಷನ್‌ಮೊಬಲಗು ವರದಕ್ಷಿಣೆಯಾಗಿ ಕೊಡಲ್ಪಡುವುದಾಗಿ ಅಪ್ಪಣೆ ಮಾಡಿರುತ್ತಾರೆ.

ಕಲಕತ್ತಾದಲ್ಲಿ ಇಬ್ಬರು ಗಂಡುಸರೂ ಒಬ್ಬ ಹೆಂಗುಸೂ ಒಂದು ಪರಸ್ಪರಸಹಾಯಸಂಘದ ಅಂಗಡಿಗೆ ಹೋಗಿ ಆ ಮೂವರಲ್ಲೊಬ್ಬನು ಯಜಮಾನನಾಗಿಯೂ ಇನ್ನಿಬ್ಬರೂ ಸೇವಕಸೇವಕಿಯರಾಗಿಯೂ ನಟಿಸಿ ಒಂದು ಟಿನ್ ತುಪ್ಪವನ್ನು ಖರೀದಿಮಾಡಿ ಆ ಯಜಮಾನನು ಹಣವನ್ನು ತೆಗೆದುಕೊಂಡು ಬರುವವರೆಗೂ ನನ್ನ ಕಡೆಯವರಿಬ್ಬರೂ ಇಲ್ಲೇ ಇರುವರೆಂದು ಹೇಳಿ ತುಪ್ಪದಟಿನ್ನನ್ನು ತೆಗೆದುಕೊಂಡು ಹೋದ ಕೊಂಚ ಹೊತ್ತಿನಮೇಲೆ, ಆ ಸೇವಕನು ಹೊಂಚುಹಾಕಿಕೊಂಡಿದ್ದು ತಲೆತಪ್ಪಿಸಿಕೊಂಡು ಹೊರಟುಹೋದನು. ಆದರಮೇಲೆ ಅಂಗಡಿಯವರು ಅನುಮಾನ ಪಟ್ಟುಕೊಂಡು ಸೇವಿಕೆಯೆನಿಸಿಕೊಂಡಿದ್ದ ಹೆಂಗುಸನ್ನು ಕುರಿತು ನಿನ್ನ ಯಜಮಾನನೂ ಸೇವಕನೂ ಎಲ್ಲಿಗೆ ಹೋದರು ಮತ್ತು ಅವರ್ಯಾರು ? ಎಂದು ಕೇಳುವಲ್ಲಿ ಅವರಾರೋ ನನಗೆ ತಿಳಿಯದು ; ನಾನು ದಾರಿಯಲ್ಲಿ ಬರುತ್ತಿರುವಾಗ್ಗೆ ನನಗೆ 1 ರೂಪಾಯಿ ಕೊಡುತ್ತೇನೆಂದು ಹೇಳಿ ಸಂಗಡ ಕರೆದುಕೊಂಡು ಬಂದರು. ಎಂದು ಹೇಳಲು ಅಂಗಡಿಯವರು ಆ ಕೂಡಲೇ ನಡೆದ ಸಂಗತಿಯನ್ನು ಪೋಲೀಸರಿಗೆ ತಿಳಿಸಿದರು; ಅವರು ಆ ಮೋಸಗಾರರನ್ನು ತಡಕುತ್ತಿದಾರೆ.

ಚಿಟಗಾಂಗಿನಲ್ಲಿ ಕೆಲ ತಲೆಬಡುಕರು ರೈಲ್ವೆ ಸ್ಟೇಷನ್ನಿಗೆ ನುಗ್ಗಿ 16870 ರೂಪಾಯಿಗಳನ್ನು ಬಲವಂತದಿಂದ ಅಪಹರಿಸಿಕೊಂಡು ಹೋಗಿ 3 ಮೈಲಿದೂರದಲ್ಲಿರುವ ಒಂದು ಹಳ್ಳಿಯಲ್ಲಿ ಬಿಡುಕೊಂಡಿದ್ದರು. ಈ ಸಮಾಚಾರವನ್ನು ಅಲ್ಲಿಯ ದರೋಗನು ತಿಳಿದು ಆ ಕಳ್ಳರು ಇದ್ದ ಮನೆಯನ್ನು ಕಾಯುವಂತೆ ನೆರೆಮನೆಯವರಿಗೆ ಹೇಳಿ ಪೋಲೀಸರನ್ನು ಕರೆದುಕೊಂಡು ಬರಲು ಪಟ್ಟಣಕ್ಕೆ ಹೋದನು. ಅಷ್ಟರಲ್ಲಿ ಕಳ್ಳರು ಮನೆಯನ್ನು ಬಿಟ್ಟು ಹೊರಗೆ ಹೊರಡಲು ಜನರು ಗುಂಪುಕಟ್ಟಿಕೊಂಡು ಅವರ ಬೆನ್ನಹತ್ತಿದರು. ಜನರು ತಮ್ಮನ್ನು ಹಿಂಬಾಲಿಸಿ ಬರದಿರಲೆಂದು ಅವರ ಗುಂಪಿನಲ್ಲಿ ಹಣವನ್ನೆರಚಿದರಾದರೂ ಜನರು ಹಣವನ್ನಾರಿಸಿಕೊಳ್ಳುವ ಆಶೆಯಿಂದ ನಿಂತುಕೊಳ್ಳದೆ ಬೆನ್ನಹತ್ತಿಹೋಗಲು ಕಳ್ಳರು ಗುಂಡುಗಳನ್ನೂ ಸಿಡಿಮದ್ದನ್ನೂ ಹಾಕಿ ಕೆಲವರಿಗೆ ಅಪಾಯವನ್ನುಂಟುಮಾಡಿದರು. ಇಷ್ಟಾಗುವುದರಲ್ಲಿ ಸಾಯುಧರಾದ 100 ಜನ ಪೋಲೀಸರು ಬಂದು ಕಳ್ಳರನ್ನೋಡಿಸಿಕೊಂಡು ಹೋದರಾದರೂ ಕಳ್ಳರು ಸಿಕ್ಕದೆ ಕಾಡುಗಳ ಮಾರ್ಗವಾಗಿ ಬೆಟ್ಟವನ್ನು ಹತ್ತಿ ಸಂಕೇತಸ್ಥಾನದಲ್ಲಿ ಸೇರಿಕೊಂಡರು. ಪೋಲೀಸಿನವರು ರಾತ್ರಿಯೆಲ್ಲಾ ಕಾದುಕೊಂಡಿದ್ದು ಬೆಳಕುಹರಿದಮೇಲೆ ಸರ್ಜುಕುಮಾರಸೇನ ಬಿ.ಎ., ಮತ್ತು ಅಂಬಿಕಾಚಾರಣ ಎಂಬಿಬ್ಬರು ಯುವಕರನ್ನು ಹಿಡಿದು ಸೆರೆಯಲ್ಲಿಟ್ಟಿರುವರು.

ವಿದೇಶದ ವೃತ್ತಾಂತಗಳು

ಫ್ರಾನ್ಸಿನ ಆರ್ಥಿಕ ಮಂತ್ರಿಯು ಅಲ್ಲಿಯ ನಾಣ್ಯದ ಬೆಲೆಯು ಇಳಿಯದಿರಲು ಒಂದು ಉಪಾಯವನ್ನು ಕಲ್ಪಿಸಿ ಅದರಂತೆ ಅನುಷ್ಠಾನಕ್ಕೆ ತರಲು ಪ್ರಭುತ್ವದವರಿಗೆ ನಿವೇದಿಸಿರುತ್ತಾನೆ.

ಪ್ಯಾರಿಸ್ ಪಟ್ಟಣದಲ್ಲಿ ಸೀನ್ ಎಂಬ ನದಿಯಲ್ಲಿ ಪ್ರವಾಹವು 21 ಅಡಿಯವರೆಗೆ ಬಂದು ಊರಿನೊಳಗೆಲ್ಲ ನೀರು ಹರಿದು ನಿಂತಿರುವುದು. 3000 ಜನರು ಮನೆಯನ್ನು ಬಿಟ್ಟು ಹೋಗಿರುವರು ಮತ್ತು ಅನೇಕ ಕಾರ್ಯಾಲಯಗಳಲ್ಲಿ ಕೆಲಸವು ನಿಲ್ಲಿಸಲ್ಪಟ್ಟಿರುತ್ತದೆ.

ಚಾರ್ಲೆಸ್ ಎಡ್ವರ್ಡ್ ಅರ್ಚಿಬಾಲ್ಡ್ ಹ್ಯಾಮಿಲ್ಟನ್‌ರವರು ಕಳೆದ ಡಿಸೆಂಬರ್ ತಾ|| 30 ರಲ್ಲಿ ಓಕಿಂಗ್ ಎಂಬ ಸ್ಥಳದಲ್ಲಿರುವ ಮಸೀತಿಯಲ್ಲಿ ಅನೇಕ ಮಹಮ್ಮದೀಯರ ಸಮಕ್ಷಮ ಮಹಮ್ಮದೀಯ ಮತವನ್ನವಲಂಬಿಸಿದರೆಂದು ಮಹಮ್ಮದೀಯ ಮತಪ್ರಸಾರಕ ಸಂಘದ ಸೆಕ್ರೆಟರಿಯು ತಿಳಿಸಿರುತ್ತಾನೆ.

ಮುಸ್ತಫಾಕೇಮಲ್‌ಪಾಷಾನು ತನ್ನ ಹೆಂಡತಿಯೊಡನೆ ಸ್ಮರ್ನಾದಲ್ಲಿ ವಿಶ್ರಮಿಸಿಕೊಳ್ಳುತ್ತಿರುವಾಗ್ಗೆ ಒಬ್ಬ ಯುವಕನು ಆ ದಂಪತಿಗಳಿದ್ದ ಬಂಗಲೆಗೆ ಬಂದು ತುರ್ಕಿಯ ಪ್ರೆಸಿಡೆಂಟನ್ನು ನೋಡಬೇಕೆಂದು ಹೇಳಿ ಕೇಮಲ್‌ಪಾಷಾನ ಕಡೆಗೆ ಸಿಡಿಮದ್ದನ್ನು ಬಿಸಾಡಿ ಓಡಿಹೋದನು. ಅದು ಆತನಿಗೆ ತಗುಲದೆ ಆತನ ಹೆಂಡತಿಗೆ ತಗುಲಿ ಅಪಾಯವನ್ನುಂಟುಮಾಡಿತು.

ಟೋಕಿಯೋ ಪಟ್ಟಣದಲ್ಲಿ ಚಕ್ರವರ್ತಿಯವರ ವಿರುದ್ಧವಾಗಿ ಸಂಚು ನಡಿಸಲ್ಪಡುತ್ತಿರುವುದಾಗಿಯೂ ಈ ಕಾರಣದಿಂದಲೇ ಪ್ರಿನ್ಸ್ ಹಿರೋಬಿಟೊಯವರ ಮದುವೆಯ ದಿವಸ ಅವರನ್ನು ಕೊಲ್ಲಲು ಸಿಡಿಮದ್ದು ಹಾರಿಸಲ್ಪಟ್ಟುದಾಗಿಯೂ ಈ ವಿಪ್ಲವಕಾರರ ಪ್ರಯತ್ನವು ಭೂಕಂಪದಿಂದುಂಟಾದ ಭಯಕ್ಕಿನ ಅಧಿಕವಾದ ಭಯವನ್ನುಂಟುಮಾಡಿರುತ್ತದೆಂದು ಅಲ್ಲಿಯ ಜನರು ಆಡಿಕೊಳ್ಳುತ್ತಿರುವರು.

ಲಂಡನ್ ಪಟ್ಟಣದ ಸಮುದ್ರರೇವೆಯಲ್ಲಿ ಅತ್ಯಂತ ಅಗಾಧವಾದ ಅಗ್ನಿಪ್ರವೇಶವಾಗಿ ಕಟ್ಟಡಗಳು ಹೊತ್ತಿಕೊಂಡು ಉರಿಯುತ್ತಿರುವುವು. ಮತ್ತು ಜ್ವಾಲೆಯು 500 ಗಜಗಳ ದೂರದವರೆಗೆ ವ್ಯಾಪಿಸಿರುವುದು. ನೂರಾರುಜನರು ಇಂಜನ್ನುಗಳ ಸಹಾಯದಿಂದ ಜ್ವಾಲೆಯನ್ನಣಗಿಸಲುದ್ಯುಕ್ತರಾಗಿರುವರು. ಅನೇಕ ಜನರು ಮನೆಗಳನ್ನು ಬಿಟ್ಟು ಹೊರಟುಹೋಗಿರುತ್ತಾರೆ. ಇದರಿಂದ ಈವರೆಗೆ 30,00,000 ರೂ. ವರೆಗೆ ನಷ್ಟವಾಗಿರುವುದಾಗಿ ಊಹಿಸಲ್ಪಟ್ಟಿದೆ.

ಜರ್ಮನಿ ರಾಜ್ಯವು ದುರ್ದಶೆಯಲ್ಲಿರುವಾಗ್ಗೆ ಇತರ ದೇಶಗಳಿಗೆ ಹೋಗಿ ಹೋಟಲುಗಳಲ್ಲಿ ಜರ್ಮನರು ವಿಲಾಸಾರ್ಥವಾಗಿ ವಿಪರೀತ ಖರ್ಚುಮಾಡುತ್ತಿರುವರೆಂದು ತಿಳಿದು ಅವರನ್ನು ಶಿಕ್ಷಿಸಲು ಜರ್ಮನಿ ಪ್ರಭುತ್ವದವರು ನಿಶ್ಚಯಿಸಿರುವುದಾಗಿಯೂ, ಅದಕ್ಕಾಗಿ ಗೂಢಚಾರರನ್ನು ನಿಯಮಿಸಿ ಯಾರಾರು ಯಾವಾವ ದೇಶದಲ್ಲಿ ಮನಸ್ವೀ ವೆಚ್ಚಮಾಡಿ ವಿಹರಿಸುತ್ತಿರುವರೆಂಬುದನ್ನು ಗೊತ್ತುಮಾಡಿ ತಿಳಿಸಲು ಏರ್ಪಾಟುಮಾಡಿ ಆ ಪ್ರಕಾರವಾಗಿ ತಿಳಿದುಬಂದವರನ್ನು ಶಿಕ್ಷಿಸುತ್ತಿರುವುದಾಗಿಯೂ ತಿಳಿಯಬರುತ್ತದೆ.

ಅಮೇರಿಕೆಯ ಸಂಯುಕ್ತ ಸಂಸ್ಥಾನದಲ್ಲಿ ಪ್ರತಿ ಹತ್ತು ಜನರಲ್ಲಿ ಒಬ್ಬನು ಮೋಟಾರುಬಂಡಿಯನ್ನಿಟ್ಟಿರುತ್ತಾನೆ. ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ಮಾತ್ರ ಪ್ರತಿ ಕುಟುಂಬವೂ ಒಂದೊಂದು ಮೋಟಾರುಬಂಡಿಯನ್ನಿಟ್ಟುಕೊಂಡಿರುತ್ತದೆ ಪ್ರಪಂಚದಲ್ಲೆಲ್ಲಾ ಒಟ್ಟು 1 ಕೋಟಿ 30 ಲಕ್ಷ ಮೋಟಾರುಬಂಡಿಗಳು ಉಪಯೋಗಿಸಲ್ಪಡುತ್ತಿವೆ. ಅವುಗಳಲ್ಲಿ 1 ಕೋಟಿ 10 ಲಕ್ಷದವರೆಗೂ ಅಮೇರಿಕೆಯೊಂದರಲ್ಲೇ ಇರುತ್ತದೆ. 1899ರವರೆಗೆ 3,700 ಮೋಟಾರುಬಂಡಿಗಳು ಒಂದು ವರ್ಷದಲ್ಲಿ ತಯಾರಾಗುತ್ತಿದ್ದುವು; ಈಗ 30 ಲಕ್ಷದವರೆಗೆ ಅಮೇರಿಕೆಯೊಂದರಲ್ಲೇ ತಯಾರಾಗುತ್ತಿವೆ. ಅಮೇರಿಕೆಯಲ್ಲಿ ಒಂದು ಮೋಟಾರುಬಂಡಿಯ ಬೆಲೆಯು 60 ಪೌನು ಅಂದರೆ 900 ರೂ. ಆಗುವುದಂತೆ! ಅಮೇರಿಕೆಯಲ್ಲಿ ಈ ಬಂಡಿಗಳ ಅನಾಹುತದಿಂದ 1921 ರಲ್ಲಿ 12,500 ಜನರು ಸತ್ತಿರುವರು.

ಓಟರು ಮಹಾಶಯರೆ,

ನಮ್ಮ ಘನ ಸರ್ಕಾರದವರ ರಾಜಕೀಯ ಸುಧಾರಣೆಯ ನಿಯಮವನ್ನನುಸರಿಸಿ ನಾನು ನಮ್ಮ ಮೈಸೂರು ಡಿಸ್ಟ್ರಿಕ್ಟು ಮತ್ತು ಸಿಟಿ ಪರವಾಗಿ ನ್ಯಾಯವಿಧಾಯಕ ಸಭೆಯ ಮೆಂಬರಾಗಿ ಕೆಲಸಮಾಡಲು ಅಭಿಪ್ರಾಯವುಳ್ಳವನಾಗಿರುತ್ತೇನೆ. ಈ ಚುನಾವಣೆಯು ನಡೆಯುವಾಗ್ಗೆ ತಾವು ದಯವಿಟ್ಟು ನನ್ನ ಪರವಾಗಿ ಓಟುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ತಮ್ಮ ವಿಧೇಯ,
ಸಿ. ನರಸಿಂಹಯ್ಯ, ಬಿ.ಎ., ಬಿ.ಎಲ್.,
ಜಮೀನ್ದಾರ್ ಮತ್ತು ಅಡ್ವೊಕೇಟ್,
ಮೈಸೂರು.

ಬೆಂಗಳೂರು ಸಿಟಿಯ ಓಟರು ಮಹಾಶಯರುಗಳಲ್ಲಿ ವಿಜ್ಞಾಪನೆ.

ನೂತನ ರಾಜಕೀಯಸಂಸ್ಕರಣ ಕ್ರಮವನ್ನನುಸರಿಸಿ ಮೈಸೂರು ಪ್ರಜಾಪ್ರತಿನಿಧಿ ಸಭೆ (ರೆಪ್ರೆಜೆಂಟೇಟಿವ್ ಅಸೆಂಬ್ಲಿ) ಗೆ ಮೆಂಬರುಗಳನ್ನು ಚುನಾಯಿಸಲು 1924ನೆ ಫೆಬ್ರವರಿ ತಾರೀಖು 15ನೆಯ ಶುಕ್ರವಾರದ ದಿವಸ ಗೊತ್ತುಮಾಡಲ್ಪಟ್ಟಿರುವುದು ಸರಿಯಷ್ಟೆ. ಆ ದಿವಸ ಪ್ರತಿಯೊಬ್ಬ ಓಟರೂ ಗೊತ್ತಾದಸ್ಥಳಕ್ಕೆ ಬಂದು ನಾಲ್ಕು ಜನರಿಗೆ ತಮ್ಮ ಓಟುಗಳನ್ನು ಕೊಡಲು ಅಧಿಕಾರವುಳ್ಳವರಾಗಿರುತ್ತಾರೆ.

ನಾನು ಈಗ್ಗೆ ಸುಮಾರು 5 ವರ್ಷಗಳಿಗೆ ಮೇಲ್ಪಟ್ಟಾಗಿನಿಂದಲೂ ಪ್ರಜಾಪ್ರತಿನಿಧಿಸಭೆಯ ಮೆಂಬರಾಗಿದ್ದೆನಲ್ಲದೆ ತನ್ಮೂಲಕ ನ್ಯಾಯವಿಧಾಯಕಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಮತ್ತು ಸಂಪದಭಿವೃದ್ಧಿ ಸಮಾಜದ (ಎಕನಾಮಿಕ್ ಕಾನ್ಫರೆನ್ಸಿನ) ಮೆಂಬರಾಗಿ ಚುನಾಯಿಸಲ್ಪಟ್ಟಿದ್ದೆನು. ಮತ್ತು ಸಂಸ್ಥಾನದ ಎಲ್ಲಾ ಜನವರ್ಗದವರಿಗೂ ಸರ್ಕಾರಿಯುದ್ಯೋಗವು ದೊರಕಲು ಅವಕಾಶವನ್ನು ಕಲ್ಪಿಸಿಕೊಡುವುದಕ್ಕಾಗಿ ಸರ್ಕಾರದಿಂದೇರ್ಪಟ್ಟಿರುವ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡಿನಲ್ಲೂ, ಬೆಂಗಳೂರು ಡಿಸ್ಟ್ರಿಕ್ಟ್ ಅಡ್‌ಹಾಕ್ ಸ್ಕಾಲರ್‌ಷಿಪ್ ಕಮಿಟಿಯಲ್ಲೂ, ಕಳೆದೊಂದು ವರ್ಷದಿಂದ ಮೈಸೂರು ಯೂನಿವರ್ಸಿಟಿಯ ಸೆನೇಟಿನಲ್ಲೂ ಮೆಂಬರಾಗಿಯೂ, ಮೈಸೂರು ವೀರಶೈವ ವಿದ್ಯಾವರ್ಧಕಫಂಡ್ ಸಂಘದ ಸೆಕ್ರೆಟರಿಯಾಗಿಯೂ ಇದ್ದುಕೊಂಡು ಪ್ರಜಾಪಕ್ಷವನ್ನು ವಹಿಸಿ ದೇಶದ ಸರ್ವತೋಮುಖವಾದ ಏಳ್ಗೆಯನ್ನೇ ಗಮನದಲ್ಲಿಟ್ಟುಕೊಂಡು ಕೆಲಸಮಾಡುತ್ತಿದೇನೆ.

ದೇಶಸೇವೆಯನ್ನು ಮಾಡಲು ವಿಶೇಷ ಕುತೂಹಲವುಳ್ಳವನಾಗಿರುವುದರಿಂದಲೂ, ಈಸಲದ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಚುನಾವಣೆಯಲ್ಲಿ ನಾನೊಬ್ಬ ಉಮೇದುವಾರನಾಗಿ ನಿಂತುಕೊಳ್ಳಬೇಕೆಂದು ನನ್ನ ಮಿತ್ರರನೇಕರು ಪ್ರೋತ್ಸಾಹವನ್ನು ಮಾಡಿದುದರಮೇಲೂ ಉಮೇದುವಾರನಾಗಿ ನಿಂತಿರುತ್ತೇನೆ.

ನನ್ನ ಕಾರ್ಯದಕ್ಷತೆಯಲ್ಲಿ ನಿಮಗೆ ಭರವಸೆಯಿದ್ದಲ್ಲಿ ನನಗೆ ತಮ್ಮ ಅಮೌಲ್ಯವಾದ ಓಟನ್ನು ಕೊಟ್ಟೂ, ತಮ್ಮ ಮಿತ್ರರ ಓಟನ್ನು ಕೊಡಿಸಿಯೂ ಅವಕಾಶವನ್ನು ಕಲ್ಪಿಸಿಕೊಟ್ಟಲ್ಲಿ ನನ್ನಲ್ಲಿ ತಮಗಿರುವ ನಂಬುಗೆ ವಿಶ್ವಾಸಗಳನ್ನು ವ್ಯರ್ಥಗೊಳಿಸದೆ ಇನ್ನು ಮುಂದೆಯೂ ದೇಶಸೇವೆಯನ್ನು ಮಾಡಲು ಸಿದ್ಧನಾಗಿರುವೆನೆಂದೂ, ಈ ನನ್ನ ಸವಿನಯಪ್ರಾರ್ಥನೆಯನ್ನು ತಾವು ನೆರವೇರಿಸಿಕೊಡುವಿರೆಂದೂ ನಂಬಿರುವ,

ತಮ್ಮ ವಿಧೇಯ,
ಬೆಂಗಳೂರು ಸಿಟಿ, }
ತಾ|| 10-1-24. }
ಜಿ. ಪರಮಶಿವಯ್ಯ,
ಬಿ.ಎ.,ಎಲ್‌ಎಲ್.ಬಿ., ಅಡ್ವೊಕೇಟ್.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ಶ್ರೀ ವೀರಶೈವಮತಸಂವರ್ಧಿನೀಸಭಾ.

ಈ ರುಧಿರೋದ್ಗಾರಿ ಸಂವತ್ಸರದ ಮಾಘ ಶುದ್ಧ 10 ನೆಯ ದಿವಸ ಶ್ರೀ ಮುದುಕುತೊರೆಕ್ಷೇತ್ರದಲ್ಲಿ ಮಾಮೂಲುಮೇರೆ ನಡೆಯುವ ಶ್ರೀ ವೀರಶೈವಮತಸಂವರ್ಧಿನೀ ಸಭೆನಡೆಯುವದಷ್ಟೆ. ಈ ಸಭೆಯಲ್ಲಿ ವೀರಶೈವ ಮತದ ಅಷ್ಟಾವರಣಾಂತರ್ಗತವಾದ, ಗುರು, ಲಿಂಗ, ಜಂಗಮಗಳ ಸ್ವರೂಪಲಕ್ಷಣಾದಿಗಳು ಸ್ಪಷ್ಟವಾಗಿ ಶ್ರೋತೃಗಳ ಮನಸ್ಸಿಗೆ ಬರುವಂತೆ ಸಪ್ರಮಾಣವಾಗಿ ಉಪನ್ಯಾಸವನ್ನು ಮಾಡುವವರಿಗೆ, ಉಪನ್ಯಾಸದ ಯೋಗ್ಯತಾನುಸಾರವಾಗಿ ಬಹುಮಾನದ್ರವ್ಯವು ಕೊಡಲ್ಪಡುವಂತೆಯೂ, ಸಭೆಗೆ ಬರುವುದಕ್ಕೆ ಅನುಕೂಲತೆ ಇಲ್ಲದವರು ಇದ್ದ ಸ್ಥಳದಿಂದಲೇ ಸದರಿ ಉಪನ್ಯಾಸವನ್ನು ಬರೆದು ವರ್ಕಿಂಗ್ ಕಮಿಟಿ ಅಧ್ಯಕ್ಷರಾದ ಕೊಳ್ಳೇಗಾಲದ ಜಿ. ಪಿ. ಮಲ್ಲಪ್ಪನವರಿಗೆ ಕಳುಹಿಸಿಕೊಟ್ಟಲ್ಲಿ ಸಭೆಯೊಳಗೆ ಓದಿ ಅದಕ್ಕೆ ತಕ್ಕ ಬಹುಮಾನದ್ರವ್ಯವು ಉಪನ್ಯಾಸಕರಿಗೆ ಕೊಡಲ್ಪಡುವಂತೆಯೂ, ನಿಯಮಿತವಾಗಿರುವುದರಿಂದ, ವೀರಶೈವ ಸಿದ್ಧಾಂತಪಂಡಿತರು, ತಮ್ಮ ಸಿದ್ಧಾಂತಪಾಂಡಿತ್ಯವನ್ನು ಪ್ರಕಾಶಗೊಳಿಸಿ ತಮ್ಮ ಮತಾಭಿಮಾನವನ್ನು ಪ್ರಕಟಮಾಡುವುದಕ್ಕೆ ಇದು ಸುಸಮಯವೆಂದು ಸಂತೋಷದಿಂದ ತಿಳಿಸುತ್ತೇವೆ.

ಆಸ್ಥಾನಮಹಾವಿದ್ವಾನ್
ಪಿ. ಆರ್. ಕರಿಬಸವಶಾಸ್ತ್ರಿ, ಅಜೀವಸಭಾಧ್ಯಕ್ಷ.

ನ್ಯಾಯವಿಧಾಯಕ ಸಭೆಯ ಮೆಂಬರ ಚುನಾವಣೆ.

ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರುಗಳ ಚುನಾವಣೆಯು ಪ್ರತಿ ತಾಲ್ಲೂಕಿನಲ್ಲಿಯೂ ಈ ವರ್ಷದ ಫೆಬ್ರವರಿ 15ನೇ ತಾರೀಖಿನ ದಿನ ನಡೆಯುವುದು. ಈ ಸಭೆಗೆ ತುಂಕೂರು ಡಿಸ್ಟ್ರಿಕ್ಟಿನಿಂದ ತಿಪಟೂರಿನ ಪ್ರಸಿದ್ಧ ವರ್ತಕರಲ್ಲೊಬ್ಬರಾದ ಮ|| ಡಿ.ಎಸ್. ಮಲ್ಲಪ್ಪನವರು ಉಮೇದುವಾರರಾಗಿ ನಿಂತಿರುತ್ತಾರೆ. ಇವರು ಡಿಸ್ಟ್ರಿಕ್ಟಿನ ಎಲ್ಲಾ ಭಾಗಗಳನ್ನೂ ನೋಡಿ ಜನಗಳ ಸ್ಥಿತಿಗಳನ್ನು ತಿಳಿದವರಾಗಿರುತ್ತಾರಲ್ಲದೆ, ನಿಸ್ಪೃಹತೆಯಿಂದಲೂ, ದಕ್ಷತೆಯಿಂದಲೂ ಉತ್ಸಾಹದಿಂದಲೂ ಕೆಲಸಮಾಡುವವರಾಗಿರುತ್ತಾರೆ. ರಾಜಕೀಯ ವಿಚಾರಗಳಲ್ಲಿ ಇವರಿಗೆ ನಿಶಿತವಾದ ಬುದ್ಧಿಯಿರುತ್ತದೆ. ಹಿಂದೆ ಮೂರು ನಾಲ್ಕಾವರ್ತಿ ಪ್ರಜಾಪ್ರತಿನಿಧಿಸಭೆಗೆ ಮೆಂಬರಾಗಿದ್ದು ದೇಶಸೇವೆಯನ್ನು ಸಮರ್ಥತೆಯಿಂದ ಮಾಡಿರುತ್ತಾರೆಂಬುದಕ್ಕೆ ಪ್ರಜಾಪ್ರತಿನಿಧಿಸಭೆಯ ನಡವಳಿಕೆಗಳೇ ನಿದರ್ಶನವಾಗಿರುತ್ತವೆ. ನ್ಯಾಯವಾದುದನ್ನು ಧೈರ್ಯದಿಂದ ಹೋರಾಡಿ ಚರ್ಚಿಸತಕ್ಕ ಶಕ್ತಿಯುಳ್ಳವರಾಗಿರುತ್ತಾರೆ. ನ್ಯಾಯವಿಧಾಯಕ ಸಭೆಯಲ್ಲಿ ದೇಶದ ಆಯವ್ಯಯ ವಿಚಾರಗಳನ್ನು ಚರ್ಚಿಸುವಾಗ್ಗೆ ದೇಶದ ಸ್ಥಿತಿಗಳನ್ನು ತಿಳಿದ ವರ್ತಕರರೊಬ್ಬರು ಇರಬೇಕಾದದ್ದು ಅವಶ್ಯವೆಂದು ಸರ್ ಎಂ. ವಿಶ್ವೇಶ್ವರಯ್ಯನವರು ನ್ಯಾಯವಿಧಾಯಕ ಸಭೆಗೆ ವರ್ತಕರೊಬ್ಬರನ್ನು ನೇಮಕಮಾಡಿದ್ದರು. ಆ ಕಾಲಕ್ಕಿಂತಲೂ ಈಗ ವರ್ತಕ ಮೆಂಬರಿನ ಆವಶ್ಯಕತೆಯು ಹೆಚ್ಚಾಗಿರುತ್ತದೆ. ಶ್ರೀಯುತ ಮಲ್ಲಪ್ಪನವರು ವ್ಯಾಪಾರದಲ್ಲಿ ವಿಶೇಷ ಪರಿಶ್ರಮವುಳ್ಳವರು, ದೇಶದ ಆಯವ್ಯಯದ ವಿಚಾರವನ್ನು ಚೆನ್ನಾಗಿ ಬಲ್ಲವರು, ದೇಶಸಂಚಾರದಿಂದ ಹೆಚ್ಚು ಅನುಭವವುಳ್ಳವರು, ರೈತರ ಮತ್ತು ವರ್ತಕರ ಹಿತಚಿಂತಕರು ಆಗಿರುತ್ತಾರೆ. ಓಟರುಗಳು ತಮ್ಮ ಓಟನ್ನು ಕೊಡುವುದಕ್ಕೆ ಮುಂಚೆ ಯಾರಿಂದ ತಮಗೆ ಶ್ರೇಯಸ್ಸುಂಟಾಗುತ್ತದೆಂಬುದನ್ನೂ, ಯಾರು ಶ್ರದ್ಧೆಯಿಂದ ಕೆಲಸ ಮಾಡುತ್ತಾರೆಂಬುದನ್ನೂ ಮನಸ್ಸಿನಲ್ಲಿ ಚೆನ್ನಾಗಿ ಯೋಚಿಸಿ ಓಟು ಕೊಡಬೇಕೇ ಹೊರ್ತಾಗಿ ಬರೀ ಆಡಂಬರಗಳಿಗೂ ಆಕರ್ಷಣೆಗಳಿಗೂ ಮರುಳಾಗಿ ಓಟುಕೊಡಬಾರದೆಂಬುದನ್ನು ಮನಸ್ಸಿನಲ್ಲಿಡಬೇಕು. ಮ|| ಮಲ್ಲಪ್ಪನವರು ಕೇವಲ ಉತ್ಸಾಹಿಗಳೂ ಸಮರ್ಥರೂ ಪ್ರಜಾಸೇವೆಯಲ್ಲಿ ಆಸಕ್ತಿಯುಳ್ಳವರೂ ಆಗಿರುವುದರಿಂದ ನ್ಯಾಯವಿಧಾಯಕ ಸಭೆಗೆ ಮೆಂಬರಾಗಲು ಇವರಿಗೆ ತುಂಕೂರು ಡಿಸ್ಟ್ರಿಕ್ಟ್ ಓಟರುಗಳೆಲ್ಲರೂ ತಮ್ಮ ಓಟನ್ನ ಕೊಟ್ಟು ಪ್ರೋತ್ಸಾಹಿಸುತ್ತಾರೆಂದು ನಂಬಿದ್ದೇನೆ.

ಪ್ರಜಾಹಿತಚಿಂತಕ.

The following is the continuation of the address presented to the Ex-Governor of Bombay—which ends in column 1 page 6.

We are very sorry to part with Your Excellency; but we feel that your friendship for us will not diminish and that Your Excellecy, though separated from us by the seas, will continue to care for our uplift and help us by sound advice.

Your Excellency's success in the service of the Empire will not fail to win approbation from His Majesty's Government, and nothing will gratify us more than to see Your Excellency's coming back to India to serve the Empire in a higher and more responsible capacity. We are confident that the country as a whole, and this Presidency in particular, will be the gainers on account of the valuable experience and intimate knowledge of the country Your Excellency has acquired.

In conclusion, we bid Your Excellencies a hearty farewell and wish you a pleasant return home, and pray to God to give you long life, health and prosperity.

Bombay, }
6th Dec. 923. }
We beg to remain,
Your Excellency,
Your Excellency's obedient Servants.

ಶಿವಮೊಗ್ಗ ವೀರಶೈವ ಹಾಸ್ಟಲ್.

ಈ ಹಾಸ್ಟಲಿನ ಕಟ್ಟಡವನ್ನು ಕಟ್ಟುವುದಕ್ಕೆ ಪ್ರಾರಂಭಿಸಿ 6-7 ವರ್ಷಗಳಾಗುತ್ತಾಬಂದಿತು. ಅಡಿಗೆಯ ಮನೆಮಾತ್ರ ತಯಾರಾಗಿದೆ. ಮುಂಭಾಗದ ಮುಖ್ಯ ಕಟ್ಟಡವು ತಯಾರಾಗುವುದಕ್ಕೆ ಇನ್ನೆಷ್ಟು 6-7 ವರ್ಷಗಳಾಗಬೇಕಾಗುವುದೋ ತಿಳಿಯದು. ಇದಕ್ಕೆ ಬಿಲ್ಡಿಂಗ್ ಕಮಿಟಿ ಮೆಂಬರುಗಳ ಮತ್ತು ಡಿಸ್ಟ್ರಿಕ್ಟಾವುಳಿ ಚಂದಾದಾರರ ಅಶ್ರದ್ಧೆಯೇ ಮುಖ್ಯ ಕಾರಣವೆಂದು ತೋರುತ್ತದೆ. ಪ್ರಾರಂಭದಲ್ಲಿ ಕೇವಲ ಶ್ರದ್ಧೆಯನ್ನೂ ಔದಾರ್ಯವನ್ನೂ ತೋರಿಸಿದ ಮಹನೀಯರುಗಳು ಈಚೆಗೆ ಸುಮ್ಮನೆ ಕುಳಿತಿರುವುದು ತುಂಬಾ ಶೋಚನೀಯವಾದ ವಿಷಯವಾಗಿದೆ. ಸಮೀಪದಲ್ಲಿ ಸರಿಯಾದ ಬಾಡಿಗೆಯ ಮನೆಯು ಸಿಕ್ಕದೆ ವಿದ್ಯಾರ್ಥಿಗಳ ವಾಸಕ್ಕೆ ತುಂಬಾ ತೊಂದರೆಯಾದುದರಿಂದಲೂ ಮೊದಲಿನ ಪ್ಲ್ಯಾನ್ ಮೇರೆಗೆ ಮುಂಭಾಗದ ಮುಖ್ಯ ಕಟ್ಟಡವನ್ನು ಶೀಘ್ರದಲ್ಲಿ ಕಟ್ಟಿಸಲು ಸಾಕಾದಷ್ಟು ಹಣ ಜಮಾವಣೆಯಿಲ್ಲದುದರಿಂದಲೂ ಸಂಘದಲ್ಲಿ ಶಿಲ್ಕು ನಿಂತಿದ್ದ ಸುಮಾರು 12-13 ಸಾವಿರ ರೂಪಾಯಿಗಳ ಖರ್ಚನ್ನು ಇಟ್ಟು ಎರಡು ಲೈನಿನಲ್ಲಿ ಹದಿನೆಂಟು ಕೊಠಡಿಗಳನ್ನು ಕಟ್ಟಿಸಿ 50-55 ಜನ ವಿದ್ಯಾರ್ಥಿಗಳ ವಾಸಕ್ಕೆ ಸ್ಥಳವೇನೋ ಏರ್ಪಡಿಸಲ್ಪಟ್ಟಿದೆ. ಆದರೆ ಹಿಡಿದಕೆಲಸವನ್ನು ಪೂರೈಸಿದಂತಾಗಲಿಲ್ಲ. ಅಲ್ಲದೆ ಇನ್ನು ಒಂದೆರಡು ವರ್ಷಗಳಲ್ಲಿಯೇ ಈ ಹಾಸ್ಟಲಿನ ವಿದ್ಯಾರ್ಥಿಗಳ ಸಂಖ್ಯೆಯು ಈಗಿರುವ 55 ರಿಂದ 100 ಕ್ಕೆ ಏರಿರುವುದರಲ್ಲಿ ಯಾವ ಸಂಶಯವೂ ಇಲ್ಲ. ಆದುದರಿಂದ ಇನ್ನೂ 30-40 ಜನ ವಿದ್ಯಾರ್ಥಿಗಳ ವಾಸಕ್ಕೆ ಅನುಕೂಲವಾಗುವಂತೆ ಮೊದಲಿನ ಪ್ಲ್ಯಾನ್‌ಮೇರೆಗೆ ಇಲ್ಲವೇ ಸೂಕ್ತಕಂಡಂತೆ ಬದಲಾವಣೆಯಿಂದ ಮುಂಭಾಗದ ಕಟ್ಟಡವನ್ನು ಆದಷ್ಟು ಶೀಘ್ರವಾಗಿ ಕಟ್ಟಿಸುವುದು ಅತ್ಯಾವಶ್ಯಕವಿರುತ್ತದೆ. ಸಂಘಕ್ಕೆ ಈವರೆಗೆ ವಸೂಲಾಗಿದ್ದ ಸುಮಾರು 28000 ಸಾವಿರ ರೂಪಾಯಿಗಳ ಪೈಕಿ ಮೇಲ್ಕಂಡ ಕಟ್ಟಡಗಳಿಗೆ ಸುಮಾರು 18000 ಸಾವಿರ ರೂಪಾಯಿಗಳು ಖರ್ಚುಬಿದ್ದಿರುವಂತೆಯೂ ಬಾಕಿಯಾಗುವ 10000 ಸಾವಿರ ರೂಪಾಯಿಗಳಿಗೆ ಮೈಸೂರು ಸ್ಟೇಟ್‌ಲೋನ್ ಬಾಂಡುಗಳನ್ನು ತೆಗೆದಿರುವಂತೆಯೂ ತಿಳಿಯುತ್ತೇನೆ. ಆದುದರಿಂದ ಮುಂದಿನ ಕೆಲಸವು ಪುನಃ ಹಣ ವಸೂಲಿಯಿಂದಲೇ ಆಗಬೇಕಾಗಿರುತ್ತದೆ. ಡಿಸ್ಟ್ರಿಕ್ಟಾವುಳಿ ಮಹನೀಯರುಗಳು ತಾವು ವಾಗ್ದಾನಮಾಡಿರುವ ಇಲ್ಲವೇ ಬಾಕಿವುಳಿಸಿಕೊಂಡಿರುವ ಮೊಬಲಗನ್ನು ಸಂಘದ ಸೆಕ್ರೆಟರಿಯವರವಶಕ್ಕೆ ಕಳುಹಿಸುವುದಲ್ಲದೆ ಚಂದಾಹಾಕದೇ ಇರತಕ್ಕ ಮಹನೀಯರುಗಳು ಚಂದಾಹಾಕಿ ಹಿಡಿದಕೆಲಸವನ್ನು ಪೂರೈಸಿದ ಕೀರ್ತಿಗೆ ಭಾಗಿಗಳಾಗುವರೆಂದು ನಂಬಿರುವುದಲ್ಲದೆ ಹಾಸ್ಟಲ್ ಕಮಿಟಿ ಮೆಂಬರುಗಳು ಇನ್ನಾದರೂ ನಿದ್ರೆಯಿಂದ ಎಚ್ಚತ್ತುಕೊಂಡು ಹಣ ಜಮಾವಣೆಗೆ ತಕ್ಕ ಏರ್ಪಾಡುಗಳನ್ನು ಮಾಡಿ ಕಟ್ಟಡದ ಕೆಲಸವನ್ನು ಪೂರೈಸಿ ಕೀರ್ತಿಪಡೆಯುವರೆಂದು ನಂಬಿದ್ದೇನೆ. ಎಚ್. ಲಿಂಗಪ್ಪ, ಶಿವಮೊಗ್ಗ.

ನಿಖಿಲಧರ್ಮೋಪನ್ಯಾಸಕ ಮಹಾಸಭೆ, ಮದ್ರಾಸು.

ಶ್ರೀ ಸಚ್ಚಿದಾನಂದಸಂಘದವರು, ನಿಖಿಲಧರ್ಮೋಪನ್ಯಾಸಕ ಮಹಾಸಭೆಯನ್ನು ಮದರಾಸು ಪಟ್ಟಣದ ತಿರುವಲ್ಲಿಕ್ಕೇಣಿ ಹಿಂದೂ ಹೈಸ್ಕೂಲಿನಲ್ಲಿ ತಾ|| 28-12-23 ರಲ್ಲಿ ಕೂಡಿಸಿದ್ದರು. ಹಿಂದೂದೇಶದಲ್ಲಿರುವ ಎಲ್ಲಾ ಮತಾನುಯಾಯಿಗಳು, ಈ ಮಹಾಸಭೆಗೆ, ಆಗಮಿಸಿದ್ದರು. ಸಂಘದ ಕಾರ್ಯದರ್ಶಿಗಳ ಆಮಂತ್ರಣವನ್ನು ಅಂಗೀಕರಿಸಿ, ಹುಬ್ಬಳ್ಳಿಯಿಂದ ಮ|| ರಾ|| ಶ್ರೀ ಪಾವಟೆ ಸಿದ್ಧರಾಮಪ್ಪ ಬಿ. ಎ., ಎಲ್ ಎಲ್. ಬಿ., ವಕೀಲರು ಮತ್ತು ಬೆಳೇ ಅಂಗಡಿ ವೀರಪ್ಪಣ್ಣಾ ಬಿ.ಎ., ಎಲ್‌ಎಲ್.ಬಿ., ವಕೀಲರು ಇವರುಗಳು ವೀರಶೈವಮತದ ಪರವಾಗಿ ಉಪನ್ಯಾಸಮಾಡಲು ತಾ|| 28-12-23ರ ಬೆಳಗಿನ 6½ ಗಂಟೆಗೆ ಮದರಾಸು ಸೆಂಟ್ರಲ್‌ಸ್ಟೇಷನಿಗೆ ಬಂದು ಇಳಿದರು. ಈ ಉಭಯರು ಬಂದಿಳಿದ ಕೂಡಲೆ ಮದ್ರಾಸು ವಾಸಿಗಳಾದ ಉಪ್ಪಿನ ರೇವಣಸಿದ್ಧಪ್ಪ, ಶಿ|| ಮು|| ಪಿ. ಹೆಚ್. ಎಂ. ಸಿದ್ಧಯ್ಯ ಬಿ.ಎ., ಯವರು ಡಿ. ಮಹಂತಪ್ಪನವರು, ಹೈಕೋರ್ಟು ಉದ್ಯೋಗಸ್ಥರಾದ ಟಿ. ಸಂಗಪ್ಪನವರು, ಮತ್ತು ಶಿವಮೊಗ್ಗಾ ಟಿ. ಎಚ್. ರುದ್ರಾರಾಧ್ಯರವರು ಮತ್ತು ಡಿ. ಯನ್. ಗುರುಪಾದಪ್ಪನವರು ಇನ್ನು ಕೆಲವರು ಸದರಿಯವರನ್ನ ಬರಮಾಡಿಕೊಳ್ಳಲು ಸ್ಟೇಷನ್ನಿಗೆ ಹೋಗಿ ಹಾರ ತುರಾಯಿಗಳಿಂದ ಮರ್ಯಾದಿಸಿ, ಮೋಟರುಗಾಡಿಯಲ್ಲಿ ಕೂಡ್ರಿಸಿಕೊಂಡು ವೈಭವದೊಡನೆ ಈ ಊರಿನಲ್ಲಿರುವ ವೀರಶೈವರ ಮಠಕ್ಕೆ ಕರತಂದರು. ಮಠದಲ್ಲಿ ವೆ|| ಕೆ. ಎಂ. ದಕ್ಷಿಣಾಮೂರ್ತಿಯವರು ಈ ಉಭಯರ ಊಟ ಉಪಚಾರಗಳಿಗೆ ವ್ಯವಸ್ಥೆಗೊಳಿಸಿದ್ದರು. ತಾ|| 30-12-23ನೇ ಭಾನುವಾರಬೆಳಿಗ್ಗೆ, ನಮ್ಮ ವೀರಶೈವ ಮತದ ಸಿದ್ಧರಾಮಪ್ಪನವರು, ಗಂಭೀರವಾಗಿ ವೇದಾಗಮಾದಿ ಪ್ರಮಾಣಗಳಿಂದ ಸಭಿಕರಿಗೆ ಮನೋಲ್ಲಾಸವಾಗುವಂತೆ ವೀರಶೈವ ಮತಪ್ರಾಶಸ್ತ್ಯವನ್ನು ವರ್ಣಿಸಿ ನಂತರ ಶೈವ-ವೀರಶೈವರಿಗಿರುವ ಭೇದವನ್ನು ವಿವರಿಸಿ ವೀರಶೈವರ ಷಟ್‌ಸ್ಥಲದ ಸಿದ್ಧಾಂತವನ್ನು ವಿಶದೀಕರಿಸಿದಮೇಲೆ ಶಕ್ತಿವಿಶಿಷ್ಟಾದ್ವೈತಕ್ಕೂ ದ್ವೈತಕ್ಕೂ ಇರುವ ಭೇದಗಳನ್ನು ವಿವರಿಸಿ ವೇದಾಗಮೋಪನಿಷತ್ತುಗಳ ಆಧಾರಗಳಿಂದ ತಿಳಿಯಪಡಿಸಿದರು. ಅಲ್ಲದೆ ನಮ್ಮ ಶ್ರೀಬಸವಾದಿಪ್ರಮಥರುಗಳು ನುಡಿದು ನಡೆದ ವಚನಗಳನ್ನು ಉದಾಹರಿಸಿ ಸಂಸ್ಕೃತ ಮತ್ತು ಆಂಗ್ಲಭಾಷೆಗಳಲ್ಲಿಯೇ ದೀರ್ಘವಾದ ಉಪನ್ಯಾಸಮಾಡಿದರು. ಮತ್ತು ವೀರಶೈವರ ಮುಖ್ಯ ಧರ್ಮಗಳು ಇಷ್ಟಲಿಂಗಧಾರಣೆಯು ಇಹಲೋಕಸಂಬಂಧವಾದ ಮಹಾ ಮಾಯೆಯನ್ನು ಹೋಗಲಾಡಿಸಿ ತನ್ಮೂಲಕ ಮೋಕ್ಷಸಂಪಾದನೆ ಪಡೆಯಲು, ಇಷ್ಟಲಿಂಗದಲ್ಲಿ ಸ್ಥೂಲದೇಹದ ವಾಸನೆ ಕಳೆದು, ಪ್ರಾಣಲಿಂಗದಿಂದ ಸೂಕ್ಷ್ಮದೇಹ ವಾಸನೆ ಕಳೆದು ಭಾವಲಿಂಗದಿಂದ ಕಾರಣದೇಹದ ವಾಸನೆಕಳೆದು ಗುರು, ಲಿಂಗ, ಜಂಗಮ, ವಿಭೂತಿ ರುದ್ರಾಕ್ಷಿ ಪಾದೋದಕ ಪ್ರಸಾದ ಮಂತ್ರ ಎಂಬ ಅಷ್ಟಾವರ್ಣದವರವು ಮತ್ತು ಪಂಚಾಚಾರಗಳು ಭಕ್ತಿಯುತರಾದ ವೀರಶೈವರ ಧರ್ಮ ದೃಢಭಕ್ತಿಯುಕ್ತವಾದ ಕ್ರಿಯಾಜ್ಞಾನವೆ ವೀರಶೈವಾಚಾರವು. ಶ್ರೀ ಬಸವಾದಿಪ್ರಮಥರು ಇದೇ ಮಾರ್ಗವನ್ನವಲಂಬಿಸಿ ಲಿಂಗೈಕ್ಯರಾದರೆಂದು ಆಗಮಗಳಿಂದ ಪುಷ್ಟೀಕರಿಸಿ ಬಹು ಸ್ವಾರಸ್ಯದಿಂದ ಸಭಿಕರಿಗೆ ಮನನವಾಗುವಂತೆ ತಮ್ಮ ಉಪನ್ಯಾಸದಿಂದ ವಿಶದಪಡಿಸಿದರು. ನಂತರ ವೀರಪ್ಪ ಬೆಳೆಅಂಗಡಿಯವರು ಆಂಗ್ಲಭಾಷೆಯಲ್ಲಿ ಮಾಡಿದ ಉಪನ್ಯಾಸದ ಸಾರವೇನಂದರೆ.—

ವೀರಶೈವರಾದ ಲಿಂಗವಂತರು ಭರತಖಂಡದಲ್ಲಿ 35 ಲಕ್ಷ ಸಂಖ್ಯೆಗೆ ಇದ್ದಾರೆಂಬಲು, ಅಷ್ಟಾವರಣ ಪಂಚಾಚಾರಯುಕ್ತರಾಗಿದ್ದ ವೀರಶೈವರಿಗೆ ತನ್ನ ಇಷ್ಟಲಿಂಗವು ಅಕಸ್ಮಾತ್ ಜಾರಿ ಬಿದ್ದಾಗ [illegible] ದರೆ ತಕ್ಷಣ ಪ್ರಾಣತ್ಯಾಗವೆ ಶ್ರೇಯಸ್ಕರವೆಂತಲೂ ಹೇಳಿದ್ದಲ್ಲದೇ ಸ್ತ್ರೀಪುರುಷರು ಸಹಿತ ಲಿಂಗಧಾರಣೆ ಮಾಡಿಕೊಳ್ಳಬೇಕು, ಗರ್ಭಕ್ಕೆ ಲಿಂಗಧಾರಣೆಯುಂಟು ಅಕಸ್ಮಾತ್ ಗರ್ಭಕ್ಕೆ ಲಿಂಗಧಾರಣೆ ತಪ್ಪಿದರೆ ಶಿಶುವು ಜನನವಾದ ಕೂಡಲೆ ಲಿಂಗಧಾರಣೆ ಮಾಡುವದುಂಟು. ಈರೀತಿ ಹಿಂದೆ ಬಸವಾದಿಪ್ರಮಥರ ಆಚರಣೆಯು ಆಗಿತ್ತೆಂದೂ ಸೂತಕಾದಿಗಳು ನಿತ್ಯವಾದ ಲಿಂಗಾರ್ಚನೆಗೆ ಬಾಧಕವಾಗಿಲ್ಲವೆಂದೂ ನೀಲಾಂಬೆ ಮಹದೇವಿಯಕ್ಕ ಅಕ್ಕನಾಗಮ್ಮ ನಿಂಬಕ್ಕ ಇವರ ಗುಣಕಥನಗಳಿಂದ ವ್ಯಕ್ತಪಡಿಸಿ ತಮ್ಮ ಉಪನ್ಯಾಸವನ್ನು ಮುಗಿಸಿದರು. ಈ ಉಭಯರಿಗೆ ಎರಡುಗಂಟೆ ಕಾಲಾವಧಿ ಕೊಡಲ್ಪಟ್ಟಿತ್ತು. ಪಾವಟೆ ಸಿದ್ಧರಾಮಪ್ಪನವರ ಉಪನ್ಯಾಸವು ಬಹಳಹೊತ್ತು ನಡೆದಿತು. ಈ ಉಭಯರ ಉಪನ್ಯಾಸಗಳು ಮುಗಿದನಂತರ ಕೆಲವರು ಇವರುಗಳನ್ನ ಸುತ್ತುಮುತ್ತಿಕೊಂಡು ಅವರವರಿಗೆ ತೋರಿದ ಪ್ರಶ್ನೆಗಳನ್ನು ಕೇಳಿ ಪ್ರಶ್ನೆಗಳಿಗೆ ಪ್ರತ್ಯುತ್ತರಕೊಟ್ಟುದಕ್ಕೆ ಸರ್ವರೂ ಆನಂದಪರವಶರಾದರು. ಈ ಉಭಯರಿಗೆ ಇಲ್ಲಿನ ಸದ್ಗೃಹಸ್ಥರಾದ ರೇವಣಸಿದ್ಧಪ್ಪಾ ಉಪ್ಪಿನ ಟಿ. ಸಂಗಪ್ಪ ಇವರುಗಳು ಔತಣವನ್ನು ಮಾಡಿಸಿದರು. ಮಂಗಳವಾರ ತಾ|| 1-1-924 ರ ಸಾಯಂಕಾಲ ಗಾಡಿಯಲ್ಲಿ ತಮ್ಮ ಸ್ವಗ್ರಾಮಕ್ಕೆ ಪ್ರಯಾಣಮಾಡಿದರು. ಇವರ ಭಾಷಣಗಳು ಇಂಗ್ಲೀಷುಭಾಷೆಯಲ್ಲಿ ಸಂಘದವರ ಕಡೆಯಿಂದ ಪ್ರಚುರಪಡಿಸಲ್ಪಡುತ್ತವೆ. ಈರೀತಿ ಪರಮತದ ಸಂಘದಲ್ಲಿ ಬಹು ದೂರದೇಶದಿಂದ ಸ್ವಂತದ್ರವ್ಯವನ್ನ ಖರ್ಚುಮಾಡಿಕೊಂಡು ಬಂದು ನಮ್ಮ ವೀರಶೈವಧರ್ಮವನ್ನ ಪ್ರಕಾಶಪಡಿಸಿದ್ದಲ್ಲದೆ ಇತರರು ಕೇಳುವ ಪ್ರಶ್ನೆಗೆ ಪ್ರತ್ಯುತ್ತರವನ್ನು ಬಹು ಧೈರ್ಯವಾಗಿಯೂ ಸಮಂಜಸವಾಗಿಯೂ ಕೊಟ್ಟು ನಮ್ಮ ವೀರಶೈವ ಸಮಾಜಕ್ಕೆ ಶ್ರೇಯಸ್ಕರವಾದ ಗೌರವವನ್ನುಂಟುಮಾಡಿದ ಪಾವಟೆ ಮತ್ತು ಬೆಳಿಯಂಗಡಿಯವರನ್ನ ಬಹುಜನರು ಕೊಂಡಾಡಿ ಸನ್ಮಾನಿಸಿದರು. ಇದೇರೀತಿಯಾಗಿ ನಮ್ಮ ವೀರಶೈವಮತದ ಗುರುವರ್ಗದವರು ತಮ್ಮತಮ್ಮ ಅಂತಃಕಲಹವನ್ನು ಬಿಟ್ಟು ಯೋಗ್ಯರಾದ ಶಾಸ್ತ್ರಿಗಳನ್ನು ಚುನಾಯಿಸಿ ಮತಸಂಬಂಧವಾದ ವಿಷಯಗಳನ್ನ ಪ್ರಚುರಪಡಿಸುವಂತೇರ್ಪಡಿಸಿ ಬಸವಾದಿಪ್ರಮಥರ ದೂಷಕರನ್ನ ದೂರಮಾಡಿ ವಂಶಪಾರಂಪರ್ಯವಾಗಿ ನಡೆದುಬಂದ ವೀರಶೈವಪ್ರಮುಖರ ನಡೆವಳಿಗಳಲ್ಲಿ ಕುಂದುಕೊರತೆಗಳು ಬಾರದಂತೆ ಗುರುಕುಲ ಸಾರ್ವಭೌಮರು ತಮ್ಮ ಪ್ರತಿನಿಧಿಗಳಿಗೆ ಕಟ್ಟಪ್ಪಣೆಯನ್ನಿತ್ತು ದೇಶದಲ್ಲಿ ಭಕ್ತಮಹೇಶ್ವರರು ತ್ರಿಕರಣಶುದ್ಧಿಯಿಂದ ಗುರುಕುಲವರ್ಗದಲ್ಲಿ ವಿಶ್ವಾಸ ಅಭಿಮಾನಗಳಿಂದ ನಡಿಯುವಂತೆ ಏರ್ಪಡಿಸಬೇಕಾಗಿ ಪ್ರಾರ್ಥನೆ. ಅಲ್ಲದೆ ವೀರಶೈವರ ಮತೋದ್ಧಾರಕರಾದ ಬಸವಾದಿಪ್ರಮಥರ ನಿಂದೆಯನ್ನು ಅಣಗೊತ್ತುವದೇ ವೀರಶೈವರ ಮುಖ್ಯಧರ್ಮವಾಗಿದೆ. ಮಹಂತಪ್ಪ, ಮದ್ರಾಸು.

ಬೆಳಗಾಂವಿಯ ಸುದ್ದಿಗಾರನಿಂದ.

ಮಾಜಿ ಗವರನರ ನೇಕ ನಾಮದಾರ ಸರ್ ಜಾರ್ಜ್‌ಲಾಯಿಡ್ ಇವರು ವಿಲಾಯಿತಿಗೆ ದಯಮಾಡಿಸುವ ಕಾಲಕ್ಕೆ ಇಲಾಖೆಯೊಳಗಿನ ಅನೇಕ ಪ್ರಮುಖಜನರು ಮಾನಪತ್ರಗಳನ್ನು ಅರ್ಪಿಸಿದರು. ಅವುಗಳಲ್ಲಿ ಕರ್ನಾಟಕ, ಮಹಾರಾಷ್ಟ್ರ, ಕೊಂಕಣದ ಬ್ರಾಹ್ಮಣೇತರ ಪಕ್ಷದವರ ಮಾನಪತ್ರವು ಒಂದಾಗಿರುವದು. ಮೊದಲಿಗೆ ಗೊತ್ತುಪಡಿಸಿದಂತೆ ತಾ|| 6-12-23 ಗುರುವಾರ ಮಧ್ಯಾಹ್ನ 12½ ಗಂಟೆಗೆ ಸರಿಯಾಗಿ ಮುಂಬಯಿ ಗೌರ್ನಮೆಂಟ್ ಹೌಸಿನಲ್ಲಿ ನಾಮದಾರ ಬಿ. ವಿ. ಜಾದವ ಎಂ.ಎ.,ಎಲ್‌ಎಲ್.ಬಿ., ಎಂ.ಎಲ್.ಸಿ. ಮಿನಿಸ್ಟರ ವಿದ್ಯಾಖಾತೆ, ಇವರ ನಾಯಕತ್ವದಲ್ಲಿ ಸುಮಾರು 360 ಜನ ಬ್ರಾಹ್ಮಣೇತರ ಪ್ರಮುಖರು ಸಂಕಲಿತರಾಗಿದ್ದರು. ಅವರಲ್ಲಿ ಬೆಳಗಾವಿಯಿಂದ ಹೋದ ಪ್ರಮುಖರು ರಾ|| ಬ|| ಮಹಾಂತಶೆಟ್ಟರು, ರಾ|| ಸಾ|| ವೈಜಪ್ಪನವರು, ಹಣ್ಮಂತಪ್ಪನವರು ಅಂಗಡಿ, ಎಂ.ಎಲ್.ಸಿ., ಶಿವಮೂರ್ತಿಸ್ವಾಮಿ ಕಣಬರಗಿಮಠ, ವೀರಪ್ಪಾ ಉಪ್ಪಿನ, ನಿಜಲಿಂಗಪ್ಪಾ ಸಂಗೊಳ್ಳಿ, ಮಹಾರುದ್ರಪ್ಪಾ ಹೊಳ್ಳಿಕೇರಿ, ಮಲ್ಲಪ್ಪಾ ಕತ್ತಿ, ಚನಬಸಪ್ಪಾ ಕತ್ತಿ, ಗಣಪತಿರಾವಮಾನೆ, ಬರಜೆ, ಭೋಸಲೆ ಮುಂತಾದವರು ಇದ್ದು ಮಾನಪತ್ರವನ್ನು ನಾಮದಾರ ಜಾಧವ ಇವರು ಓದಿದರು. ಅದನ್ನು ಸರದಾರ ಘೋರಾತ ಇವರು ಮರಾಠಿಯಲ್ಲಿ ಓದಿದರು. ರಾ|| ಬ|| ಮಹಾಂತಶೆಟ್ಟರು ಅತಿ ಸುಂದರವಾದ ಬೆಳ್ಳಿಭಂಗಾರದಿಂದ ಮಿಶ್ರಿತವಾದ ಕಾಸ್ಕೆಟದಲ್ಲಿ ಮಾನಪತ್ರವನ್ನು ಇಟ್ಟು ನಾಮದಾರರವರಿಗೆ ಸಂತೋಷದಿಂದ ಅರ್ಪಿಸಿದರು. ನಂತರ ನಾಮದಾರ ಗವರ್ನರಸಾಹೇಬರು ಪ್ರತಿಯೊಬ್ಬರ ಭೇಟಿಯನ್ನು ತಗೊಂಡು ಅವರ ಕ್ಷೇಮಲಾಭವನ್ನು ಕೇಳಿದರು. ಅವರಿಗೆ ಅರ್ಪಿಸಿದ ಮಾನಪತ್ರವೂ ಅದಕ್ಕೆ ದೊರೆತ ಅತಿಮಹತ್ವದ ಉಪದೇಶಪರವಾದ ಉತ್ತರವೂ ಇದರ ಲಗತವೆ. ಅವುಗಳನ್ನು ಪ್ರತಿಒಬ್ಬರು ಮನನ ಮಾಡುವಂತಿದೆ. ಬೈಲಹೊಂಗಲದಲ್ಲಿ ವೇ|| ಬಸವಲಿಂಗಶಾಸ್ತ್ರಿಗಳು ಶಿವಯೋಗಮಂದಿರದವತಿಯಿಂದ ಶಿವಕೀರ್ತನೆಗಳನ್ನು ಉತ್ತಮರೀತಿಯಿಂದ ಮಾಡುತ್ತಿರುವರು. ಜಾತಿಭೇದವಿಲ್ಲದೆ ಜನರು ಕೀರ್ತನೆಗಳನ್ನು ಕೇಳಲಿಕ್ಕೆ ಬರುತ್ತಿರುವರು. ಕೊಣ್ಣೂರ ಮರಡಿ ಮಠದ ಕೆಂಪಯ್ಯನವರು ಶಿವಯೋಗಮಂದಿರದಲ್ಲಿ ಯೋಗಶಿಕ್ಷಣಹೊಂದಿ ತಮ್ಮಲ್ಲಿ ಭಕ್ತರ ಉದ್ಧಾರಕ್ಕಾಗಿ ಅನೇಕ ಕಾರ್ಯಗಳನ್ನು ಮಾಡುತ್ತಿರುವರು. ಅಲ್ಲಿ ಸಂಸ್ಕೃತ ಪಾಠಶಾಲೆ, ಇಂಗ್ಲೀಷ್ ಶಾಲೆ, ಕೀರ್ತನೆ ಉಪನ್ಯಾಸ, ಪ್ರಿಂಟಿಂಗ್‌ಪ್ರೆಸ್, ಫ್ರೀ ಬೋರ್ಡಿಂಗ್ ಮುಂತಾದ ಉಪಯುಕ್ತ ಕೆಲಸಗಳು ಬಹಳ ಶ್ಲಾಘನೀಯವಾಗಿ ನಡೆದಿರುವವು.

TO HIS EXCELLENCY
THE RIGHT HONOURABLE
SIR GEORGE AMBROSE LLOYD, G.C.I.E., D.S.O.,
Governor of Bombay.

MAY IT PLEASE YOUR EXCELLENCY,

On behalf of the Non-Brahmans of the Maharashtra, the Karnatak and the Konkan, we the undersigned as their representatives approach Your Excellency to bid you farewell on the eve of your departure to England.

This is the first occasion on which such an address has been presented to any Governor of this Presidency, on behalf of the Communities we have the honour to represent. But this desire among these Communities to come forward and give expression to their feelings of gratitude has its root in the active interest taken by Your Excellency in their welfare from the very beginning of your career.

Our people have been known as the dumb millions; but thanks to the efforts of His Highness the late Shri Shahu Chhatrapati Maharajasaheb of Kolhapur and other workers, the Non-Brahman Movement was started for the purposes of awakening the Masses to their importance and freeing them from the thraldom of the advanced communities. The movement is gaining strength every day and we are putting forth our claims and exposing the grievances under which we have been labouring.

Your Excellency's regime for the last five years has been a memorable one. Important events followed one another in rapid succession requiring very careful handling. The inauguration of constitutional reforms, non-co-operation and other movements started to wreck or make them unworkable, the concerted attempts to defy law and break the public peace, the working of the reforms to ensure steady progress in all directions and especially with a view to advance the cause of the masses on whose uplift all real progress must depend, all these are questions very difficult to solve. Your Excellency's firmness, tact and astute statesmanship was put to a serve test on many an occasion and we congratulate Your Excellency on the success which has attended your efforts.

Your Excellency has worked the constitution of the Provincial Government in a spirit of complete faith in the representatives of the people with the result that Your Excellency has studiously refrained from using the special powers of veto, certification or restoration of rejected grants and generally the conclusions of the Legislative Council have been accepted in a spirit of goodwill even when your Government could not see eye to eye with that body.

The ideals of the Non-Brahman party had in Your Excellency a sympathetic friend. Although our numbers are large and we have been paying the largest amount of Land and Excise Revenues and other direct and indirect taxes, our representation in Government service and in all representative bodies has been quite inadequate and before the Reforms Act we were not able to send any member to represent us in the Legislative Council. Your Excellency's Government have lowered the franchise in the case of the Taluka and District Local Boards and the District and City Municipality of Bombay, and a large number of our people have now got the right of voting. When these acts lately passed come into operation the number of our Members will increase who will take more interest in the administration. Our grievance is that the preparation of the voting lists is primarily in the hands of persons who have somehow been led to omit the names of as many of us as they could, and it is estimated that a large number of our constituents were deprived of the right to vote in the present Council elections.

Our people are suffering from lack of literacy and nothing but free and compulsory education will cure the defect, for which we have been incessantly crying. Your Excellency took particular care to pass the Act and thus laid us under a debt of gratitude. It now rests with Government to work the Act sympathetically and firmly. But we fear that the intentions of Government may not be faithfully carried out as the Educational Department is mainly manned by a community who generally has but little sympathy with the masses. The object in view will not be achieved unless the portfolio of education is entrusted to a Non-Brahman Minister.

Our grievances about the difficulty of getting entrance to the Professional and Training Colleges have been noted and promptly redressed by Your Excellency.

Another grievance under which the Non-Brahmans have been suffering for a long time is that their eligible youths find it very difficult to get admission into the public service. All the branches of the service are heavily manned by a particular community who prevent others from getting employed and put difficulties in the way of those who secure a post. This arrangement also causes great injustice in other ways to the Masses. Your Excellency's attention was drawn to this, and accepting the resolution moved by Mr. Gandhi and by promptly issuing circulars for bringing it into effect, a great service has been done to our cause for which we cannot but be too grateful to Your Excellency.

These do not exhaust the good acts of Your Excellency to the Non-Brahmans. Your Excellency's keen interest in the Shiwaji and Maratha War Memorials is widely appreciated and the

ಭೂಮಿಯಲ್ಲಿ ಕುಷ್ಕಿಬೆಳೆ ಮಾಡಲ್ಪಟ್ಟಿದ್ದಲ್ಲಿ ಕಂದಾಯದ ರಿಮಿಷನ್ನಿಗಾಗಿ ರೈತರು ಈ ಜನವರಿ ತಾ|| 31 ರೊಳಗೆ ಅರ್ಜಿಗಳನ್ನು ಬರೆದುಕೊಳ್ಳಬಹುದೆಂದೂ ಈ ಅರ್ಜಿಗಳಿಗೆ ಸ್ಟಾಂಪನ್ನು ಹಚ್ಚಬೇಕಾದವಶ್ಯಕತೆಯಿಲ್ಲವೆಂದೂ ಡಿಸ್ಟ್ರಿಕ್ಟ್ ಕಲೆಕ್ಟರು ಪ್ರಕಟಪಡಿಸಿರುವುದರಮೇಲೆ, ಡಿಸ್ಟ್ರಿಕ್ಟಿನ ನಾನಾ ಕಡೆಯಿಂದ ಆಗಲೇ ಸಾವಿರಕ್ಕೆ ಮೇಲ್ಪಟ್ಟ ಅರ್ಜಿಗಳು ಬರೆದುಕೊಳ್ಳಲ್ಪಟ್ಟಿರುತ್ತವೆ. ಮಳೆಯಭಾವದಿಂದಲೂ, ನಾಲೆಗಳಲ್ಲಿ ಸಾಕಷ್ಟು ನೀರೊದಗಿಸಲ್ಪಡದೆ ಹೋದುದರಿಂದಲೂ ಒಟ್ಟು ಭೂಕಂದಾಯದಲ್ಲಿ 10 ಲಕ್ಷ ರೂಪಾಯಿಗಳವರೆಗೆ ರಿಮಿಷನ್ ಮಾಡಲ್ಪಡತಕ್ಕದಾಗಿದೆ.

ಕಲಕತ್ತ ಶಂಕರಿತೋಲಾದಲ್ಲಿ ಸಬ್ ಪೋಸ್ಟ್‌ಮಾಸ್ಟರಾಗಿದ್ದ ಬಾಬು ಅಮೃತಲಾಲ್ ರಾಮ್ ಎಂಬಾತನು ಕೆಲಸಮಾಡುತ್ತಿರುವಾಗ್ಗೆ ದಂಗೆಕೋರರಿಂದ ಕೊಂದುಹಾಕಲ್ಪಟ್ಟುದಕ್ಕಾಗಿ ಇಂಡ್ಯಾಸರ್ಕಾರದವರು ಅವನ 27 ವರ್ಷ ವಯಸ್ಸಿನ ಹೆಂಡತಿಗೆ ಮರಣಾವಧಿ ಅಥವಾ ಅವಳು ಪುನರ್ವಿವಾಹಮಾಡಿಕೊಳ್ಳುವವರೆಗೆ ತಿಂಗಳೊಂದಕ್ಕೆ 25 ರೂ. ಪೆನ್ಷನ್ನು (2) ಅವನ 72 ವಯಸ್ಸಿನ ವೃದ್ಧಮಾತೆಗೆ 15 ರೂ. ಪೆನ್ಷನ್ನು (3) ಅವನ 12 ಮತ್ತು 10 ವರ್ಷಗಳ ವಯಸ್ಸಿನ ಇಬ್ಬರು ಗಂಡುಮಕ್ಕಳಿಗೆ ಅವರು 22 ವರ್ಷ ವಯಸ್ಕರಾಗುವವರೆಗೂ ಪ್ರತಿ ತಿಂಗಳಲ್ಲೂ ಪ್ರತಿಯೊಬ್ಬನಿಗೂ 20 ರೂ. ಪೆನ್ಷನ್ನು (4) 10 ಮತ್ತು 1½ ವರ್ಷ ವಯಸ್ಸಿನ ಇಬ್ಬರು ಹೆಣ್ಣುಮಕ್ಕಳಿಗೆ ಅವರ ಮದುವೆಯಾಗುವವರೆಗೆ ತಲಾ 10 ರೂ. ಪೆನ್ಷನ್ನು ಮತ್ತು ಲಗ್ನಕಾಲದಲ್ಲಿ 5 ವರ್ಷಗಳ ಪೆನ್ಷನ್ನೊಬಲಗು ವರದಕ್ಷಿಣೆಯಾಗಿ ಕೊಡಲ್ಪಡುವುದಾಗಿ ಅಪ್ಪಣೆ ಮಾಡಿರುತ್ತಾರೆ.

ಕಲಕತ್ತಾದಲ್ಲಿ ಇಬ್ಬರು ಗಂಡುಸರೂ ಒಬ್ಬ ಹೆಂಗುಸೂ ಒಂದು ಪರಸ್ಪರಸಹಾಯಸಂಘದ ಅಂಗಡಿಗೆ ಹೋಗಿ ಆ ಮೂವರಲ್ಲೊಬ್ಬನು ಯಜಮಾನನಾಗಿಯೂ ಇನ್ನಿಬ್ಬರೂ ಸೇವಕಸೇವಕಿಯರಾಗಿಯೂ ನಟಿಸಿ ಒಂದು ಟೀನ್ ತುಪ್ಪವನ್ನು ಖರೀದಿಮಾಡಿ ಆ ಯಜಮಾನನು ಹಣವನ್ನು ತೆಗೆದುಕೊಂಡು ಬರುವವರೆಗೂ ನನ್ನ ಕಡೆಯವರಿಬ್ಬರೂ ಇಲ್ಲೇ ಇರುವರೆಂದು ಹೇಳಿ ತುಪ್ಪದಟಿನ್ನನ್ನು ತೆಗೆದುಕೊಂಡು ಹೋದ ಕೊಂಚಹೊತ್ತಿನಮೇಲೆ, ಆ ಸೇವಕನು ಹೊಂಚುಹಾಕಿಕೊಂಡಿದ್ದು ತಲೆತಪ್ಪಿಸಿಕೊಂಡು ಹೊರಟುಹೋದನು. ಅದರಮೇಲೆ ಅಂಗಡಿಯವರು ಅನುಮಾನ ಪಟ್ಟುಕೊಂಡು ಸೇವಿಕೆಯೆನಿಸಿಕೊಂಡಿದ್ದ ಹೆಂಗುಸನ್ನು ಕುರಿತು ನಿನ್ನ ಯಜಮಾನನೂ ಸೇವಕನೂ ಎಲ್ಲಿಗೆ ಹೋದರು ಮತ್ತು ಅವರ್ಯಾರು ? ಎಂದು ಕೇಳುವಲ್ಲಿ ಅವರಾರೋ ನನಗೆ ತಿಳಿಯದು ; ನಾನು ದಾರಿಯಲ್ಲಿ ಬರುತ್ತಿರುವಾಗ್ಗೆ ನನಗೆ 1 ರೂಪಾಯಿ ಕೊಡುತ್ತೇನೆಂದು ಹೇಳಿ ಸಂಗಡ ಕರೆದುಕೊಂಡು ಬಂದರು. ಎಂದು ಹೇಳಲು ಅಂಗಡಿಯವರು ಆ ಕೂಡಲೇ ನಡೆದ ಸಂಗತಿಯನ್ನು ಪೊಲೀಸರಿಗೆ ತಿಳಿಸಿದರು; ಅವರು ಆ ಮೋಸಗಾರರನ್ನು ತಡಕುತ್ತಿದಾರೆ.

ಚಿಟಗಾಂಗಿನಲ್ಲಿ ಕೆಲ ತಲೆಬಡುಕರು ರೈಲ್ವೆ ಸ್ಟೇಷನ್ನಿಗೆ ನುಗ್ಗಿ 16870 ರೂಪಾಯಿಗಳನ್ನು ಬಲವಂತದಿಂದ ಅಪಹರಿಸಿಕೊಂಡು ಹೋಗಿ 3 ಮೈಲಿದೂರದಲ್ಲಿರುವ ಒಂದು ಹಳ್ಳಿಯಲ್ಲಿ ಬಿತುಕೊಂಡಿದ್ದರು. ಈ ಸಮಾಚಾರವನ್ನು ಅಲ್ಲಿಯ ದರೋಗನು ತಿಳಿದು ಆ ಕಳ್ಳರು ಇದ್ದ ಮನೆಯನ್ನು ಕಾಯುವಂತೆ ನೆರೆಮನೆಯವರಿಗೆ ಹೇಳಿ ಪೊಲೀಸರನ್ನು ಕರೆದುಕೊಂಡು ಬರಲು ಪಟ್ಟಣಕ್ಕೆ ಹೋದನು. ಅಷ್ಟರಲ್ಲಿ ಕಳ್ಳರು ಮನೆಯನ್ನು ಬಿಟ್ಟು ಹೊರಗೆ ಹೊರಡಲು ಜನರು ಗುಂಪುಕಟ್ಟಿಕೊಂಡು ಅವರ ಬೆನ್ನಹತ್ತಿದರು. ಜನರು ತಮ್ಮನ್ನು ಹಿಂಬಾಲಿಸಿ ಬರದಿರಲೆಂದು ಅವರ ಗುಂಪಿನಲ್ಲಿ ಹಣವನ್ನೆರಚಿದರಾದರೂ ಜನರು ಹಣವನ್ನಾರಿಸಿಕೊಳ್ಳುವ ಆಶೆಯಿಂದ ನಿಂತುಕೊಳ್ಳದೆ ಬೆನ್ನಹತ್ತಿ ಹೋಗಲು ಕಳ್ಳರು ಗುಂಡುಗಳನ್ನೂ ಸಿಡಿಮದ್ದನ್ನೂ ಹಾಕಿ ಕೆಲವರಿಗೆ ಅಪಾಯವನ್ನುಂಟುಮಾಡಿದರು. ಇಷ್ಟಾಗುವುದರಲ್ಲಿ ಸಾಯುಧರಾದ 100 ಜನ ಪೊಲೀಸರು ಬಂದು ಕಳ್ಳರನ್ನೋಡಿಸಿಕೊಂಡು ಹೋದರಾದರೂ ಕಳ್ಳರು ಸಿಕ್ಕದೆ ಕಾಡುಗಳ ಮಾರ್ಗವಾಗಿ ಬೆಟ್ಟವನ್ನು ಹತ್ತಿ ಸಂಕೇತಸ್ಥಾನದಲ್ಲಿ ಸೇರಿಕೊಂಡರು. ಪೊಲೀಸಿನವರು ರಾತ್ರಿಯೆಲ್ಲಾ ಕಾದುಕೊಂಡಿದ್ದು ಬೆಳಕುಹರಿದಮೇಲೆ ಸರ್ಜಕುಮಾರಸೇನ ಬಿ.ಎ., ಮತ್ತು ಅಂಬಿಕಾಚಾರಣ ಎಂಬಿಬ್ಬರು ಯುವಕರನ್ನು ಹಿಡಿದು ಸೆರೆಯಲ್ಲಿಟ್ಟಿರುವರು.

ವಿದೇಶದ ವೃತ್ತಾಂತಗಳು

ಫ್ರಾನ್ಸಿನ ಅರ್ಥಿಕ ಮಂತ್ರಿಯು ಅಲ್ಲಿಯ ನಾಣ್ಯದ ಬೆಲೆಯು ಇಳಿಯದಿರಲು ಒಂದು ಉಪಾಯವನ್ನು ಕಲ್ಪಿಸಿ ಅದರಂತೆ ಅನುಷ್ಠಾನಕ್ಕೆ ತರಲು ಪ್ರಭುತ್ವದವರಿಗೆ ನಿವೇದಿಸಿರುತ್ತಾನೆ.

ಪ್ಯಾರಿಸ್ ಪಟ್ಟಣದಲ್ಲಿ ಸೀನ್ ಎಂಬ ನದಿಯಲ್ಲಿ ಪ್ರವಾಹವು 21 ಅಡಿಯವರೆಗೆ ಬಂದು ಊರಿನೊಳಗೆಲ್ಲ ನೀರು ಹರಿದು ನಿಂತಿರುವುದು. 3000 ಜನರು ಮನೆಯನ್ನು ಬಿಟ್ಟು ಹೋಗಿರುವರು ಮತ್ತು ಅನೇಕ ಕಾರ್ಯಾಲಯಗಳಲ್ಲಿ ಕೆಲಸವು ನಿಲ್ಲಿಸಲ್ಪಟ್ಟಿರುತ್ತದೆ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—22] ಪೋ. ಬಾ. ೫೧೦, ಮದರಾಸು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
[illegible]	೦—೪—೦	೦—೯—೦
ವ್ರತಸಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
[illegible]	೦—೮—೦	೦—೧೩—೦

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦ ೯—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—9] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ

ನಂಬಿ ನಡೆದವರಿಗೆ ಗಂಭೀರವಾದ ಗುಣ.

☞ ೧೦೦೦ ರೂ. ಇನಾಮು. ☜

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಿಗಳಾಯ್ತು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ ಸ್ಥಾನದ ಹುಣ್ಣು (ಛಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಬಿಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಷ್ಟದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಿಗಾದ ಜ್ವರದ ಅಸಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಪ್ರೆಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ತಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೋಚ್ಚೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ತಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರೆಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಕಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಅಮರಕಸ, ಕಫಲ್ಯಾಗೊಂದ, ಪಂಜಾಬಿ ಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ, ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಹಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇಂಭಾತ, ಗೋಕುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ.

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಅದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಅವಸರಮಾಡಿರಿ.

[50—25] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿ
[50—3] ಅಂಡ್ ಸನ್ಸ್, ಜೆ. ಪಿ. ಮಂಡಲಿ, ಮೈಸೂರು.

ಶ್ರೀ ರಕ್ತಾಕ್ಷಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

ಈಗ್ಗೆ ಐದುವರ್ಷಗಳಿಂದ "ಕಲ್ಬುರ್ಗಿ" ಹೆಸರಿನಿಂದ ಹೊರಡತಕ್ಕ ಪಂಚಾಂಗವೇ ಈ ವರ್ಷ (ರಾಯಚೂರು ಗ್ರಾಮದಿಂದ ಹೊರಟಿರುತ್ತದೆ). ಈ ಪಂಚಾಂಗದಲ್ಲಿ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶ ರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ಇದಲ್ಲದೆ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ, ಶ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಆದರೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.. ಕಾಗದ ಮೊದಲಾದವುಗಳ ಬೆಲೆಯು ಗತವರ್ಷಕ್ಕಿಂತಲೂ ಹೆಚ್ಚಾಗಿದ್ದರೂ ತಮಗೆ ವರ್ಷಂಪ್ರತಿ ಕೊಡುತ್ತಿದ್ದ ಬೆಲೆಯಂತೆಯೇ ಈವರ್ಷವೂ ಕೊಡುತ್ತೇವೆ. ಹಿಂದಣ ವರ್ಷಕ್ಕಿಂತಲೂ ಹೆಚ್ಚಿಗೆ ಕಾಪಿಗಳನ್ನು ತರಿಸಿಕೊಂಡು ಸಹಾಯಮಾಡಿರಿ. (25) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ 100 ಕ್ಕೆ 20 ರೂಪಾಯಿಗಳು. (100) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ 500ಕ್ಕೆ 16. (500) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ (1000)ಕ್ಕೆ 13 ರೂ. ಇದರಂತೆ ಕೊಡುವೆವು. ಇದಕ್ಕಿಂತಲೂ ಕಡಿಮೆಬೆಲೆಯಿಂದ ಯಾರಿಗೂ ಕೊಡುವದಿಲ್ಲ ಮತ್ತು (5) ಪಂಚಾಂಗಗಳನ್ನು ಒಂದೇಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಬೇಗನೆ ಆರ್ಡರ್ ಕೊಡಿರಿ. ಚಿಲ್ಲರೆ ಒಂದಕ್ಕೆ ನಾಲ್ಕಾಣೆ.

ವಿಳಾಸ—ಬ್ರ|| ಶ್ರೀ|| ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿಗಳು,
ಜ್ಯೋತಿಷ ಪಾಠಶಾಲಾ,
[12-1] ರಾಯಚೂರು ಡಿ||

ಮೈಸೂರು ಸ್ಟಾರ್ ಪತ್ರಿಕೆಯ ವಾಚಕರಿಗೆ ಬಹುಮಾನ.

ಈ ಸ್ಟಾರ್ ಪತ್ರಿಕಾ ವಾಚಕರುಗಳಿಗೆ ಅವರ ಮೇಲಿರುವ ಅಭಿಮಾ[illegible]ನ್ನು ವೃದ್ಧಿಗೊಳಿಸುವ ಉದ್ದೇಶದಿಂದ ಈ ಕೆಳಗೆ ಕಂಡ ಪ್ರಕಾರ 100 ರೂಪಾಯಿಗಳನ್ನು ಬಹುಮಾನಗಳನ್ನಾಗಿ ವಿಂಗಡಿಸಿ ಕೊಡಲು ಗೊತ್ತುಮಾಡಿರುತ್ತೇವೆ.

ಮೊದಲನೆಯ ಬಹುಮಾನ 50 ರೂಪಾಯಿ
ಎರಡನೆಯ ,, 30 ,,
ಮೂರನೆಯ ,, 20 ,,

1924 ನೆಯ ಫೆಬ್ರವರಿ 2 ನೆ ತಾರೀಖಿನ ಸಂಚಿಕೆಯಿಂದ ಜೂನ್ 28 ನೆ ತಾರೀಖಿನ ಸಂಚಿಕೆಯ ವರೆಗೂ ಪ್ರತಿಯೊಂದು ಪತ್ರಿಕೆಯ ಮೇಲೂ ಬೇರೆ ಬೇರೆ ನಂಬರು ಕೊಡಲ್ಪಟ್ಟು ಅವುಗಳಲ್ಲಿ 30 ನಂಬರುಗಳು ಆರಿಸಲ್ಪಟ್ಟು ಸೀಲ್ ಮಾಡಿದ ಕವರಿನಲ್ಲಿ ಭದ್ರವಾಗಿಡಲ್ಪಟ್ಟಿದ್ದು ಜೂನ್ ತಿಂಗಳ ಕಡೆಯಲ್ಲಿ ಈ 30 ನಂಬರುಗಳನ್ನು ಚೀಟಿಗೆ ಹಾಕಿ ಅವುಗಳಲ್ಲಿ ಅನುಕ್ರಮವಾಗಿ ಯಾವ 3 ನಂಬರುಗಳಿಗೆ ಬಹುಮಾನದ 3 ಚೀಟಿಗಳು ತೇಲುತ್ತವೋ ಆ 3 ನಂಬರುಗಳು ಜುಲೈ ತಿಂಗಳ 5 ನೇ ತಾರೀಖಿನ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುವು.

ಬಹುಮಾನ ಬಂದಿರುವ ನಂಬರನ್ನು 1924 ನೆ ಫೆಬ್ರವರಿ 2 ನೆ ತಾರೀಖಿನ ಪತ್ರಿಕೆಯಿಂದ ಜೂನ್ 28 ನೆ ತಾರೀಖಿನ ಪತ್ರಿಕೆಯ ವರೆಗೆ ಪ್ರತಿಯೊಂದುವಾರದ ಸ್ಟಾರ್ ಪತ್ರಿಕೆಯ ಸಮೇತ ಕಳುಹಿಸಿಕೊಟ್ಟಲ್ಲಿ ಅವರವರ ನಂಬರಿಗೆ ಬಂದಿರುವ ಬಹುಮಾನವು ಮನಿಯಾರ್ಡರ್ ದ್ವಾರ ಕಳುಹಲ್ಪಡುವುದು.

ಹಾಗೆ ಎಲ್ಲವಾರದ ಪತ್ರಿಕೆಗಳು ಕಳುಹಲ್ಪಡದೆ ಬಹುಮಾನದ ನಂಬರಿರುವ ಪತ್ರಿಕೆಯು ಮಾತ್ರ ಕಳುಹಲ್ಪಟ್ಟಲ್ಲಿ ಅದಕ್ಕೆ ಬಹುಮಾನದ್ರವ್ಯವು ಖಂಡಿತವಾಗಿಯೂ ದೊರೆಯುವುದಿಲ್ಲವೆಂಬಂಶವನ್ನು ವಾಚಕರು ಮರೆಯಬಾರದು.

ಹೀಗೆ ಬಹುಮಾನವನ್ನು ಹೊಂದುವವರು ಪತ್ರಿಕಾ ಚಂದಾಹಣವನ್ನುಳಿಸಿಕೊಂಡಿದ್ದಲ್ಲಿ ಬಹುಮಾನದ ಮೊಬಲಗಿನಲ್ಲಿ ಚಂದಾಹಣವು ಕಳೆಯಲ್ಪಟ್ಟು ಉಳಿದ ಹಣವು ಕಳುಹಲ್ಪಡುವುದು. ಈ ನೂತನ ಬಹುಮಾನ ವಿನಿಯೋಗವಿಧಾನವು ಸ್ಟಾರ್ ಪತ್ರಿಕಾ ವಾಚಕಜನಾದರಣೀಯವಾಗಿದ್ದಲ್ಲಿ ಮುಂದೆಯೂ ನಡಿಸಲ್ಪಡುವುದು.

ಸಂಪಾದಕ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜನವರಿ ತಾ|| ೨೭ ನೆಯ ಭಾನುವಾರ.

ಲೇಬರ್ (ಕೂಲಿಕಾರರ) ಪ್ರಭುತ್ವವು.

ಬ್ರಿಟಿಷ್ ಪಾರ್ಲಿಮೆಂಟ್ ಸಭಾಸ್ತಾರರ ಪುನರಾವೃತ್ತಿ ಎಣಿಕೆಯಲ್ಲೂ ಕನ್ಸರ್ವೇಟಿವ್ ಪಕ್ಷದವರ ಸಂಖ್ಯೆಯು ಇತರ ಪಕ್ಷದವರ ಸಂಖ್ಯೆಗಳಿಗಿನ್ನ ಅಧಿಕವಾಗಿ ಒಂದುದರಿಂದ ಆಂಗ್ಲ ಪ್ರಭುತ್ವಾಧಿಕಾರವು ಆ ಪಕ್ಷದವರ ಕೈಯಲ್ಲೇ ಉಳಿಯಿತಲ್ಲದೆ ಮಿ|| ಬಾಲ್ಡ್‌ವಿನ್‌ರವರೇ ಮುಖ್ಯ ಮಂತ್ರಿಪದವಿಯಲ್ಲಿರುವಂತಾಯಿತು. ಆದರೂ ಇವರಿಗೆ ಇದಿರುಪಕ್ಷದವರಾದ ಲೇಬರುಪಕ್ಷದವರು "ಐದುಸಂವತ್ಸರಗಳ ಪರಿಪಾಲನದಲ್ಲಿ ಕನ್ಸರ್ವೇಟಿವ್ ಪಕ್ಷದವರು ಐರ್ಲೆಂಡು, ಭರತಖಂಡ, ರಷ್ಯಾ ದೇಶಗಳಲ್ಲೆಲ್ಲಾ ಬ್ರಿಟಿಷ್ ಸಾಮ್ರಾಜ್ಯದ ಹೆಸರಿಗೆ ಅಪಕೀರ್ತಿಯನ್ನುಂಟುಮಾಡಿದರು" ಎಂದು ಮೊದಲಾಗಿ ಸಭೆಯಲ್ಲಿ ಚರ್ಚಿಸಿದರಲ್ಲದೆ ವಿಶ್ವಾಸರಾಹಿತ್ಯ ಸೂಚನೆಯು ಆ ಪಕ್ಷದ ಮುಖಂಡರಾದ ಮಿ|| ರಾಮ್ಸೆಮೆಕ್ಡೊನಾಲ್ಡರವರಿಂದ ತರಲ್ಪಟ್ಟು ಲಿಬರಲ್ ಪಕ್ಷದವರಿಂದ ಸಮರ್ಥಿಸಲ್ಪಟ್ಟುದರ ಮೇಲೆ ಕನ್ಸರ್ವೇಟಿವ್ ಪಕ್ಷದವರು ಪರಾಜಿತರಾಗಿ ಸ್ಟಾನ್ಲೆಬಾಲ್ಡ್‌ವಿನ್‌ರವರು ತಮ್ಮ ಮುಖ್ಯಮಂತ್ರಿಪದವಿಗೆ ರಾಜೀನಾಮೆಯನ್ನು ಕೊಟ್ಟುಬಿಟ್ಟರು. ಚಕ್ರವರ್ತಿಗಳು ಅವರ ರಾಜೀನಾಮೆಯನ್ನು ಅಂಗೀಕರಿಸಿ ಲೇಬರ್ ಪಕ್ಷದ ಮುಖಂಡರಾದ ರಾಮ್ಸೆಮೆಕ್ಡೋನಾಲ್ಡ್‌ರವರಿಗೆ ಮಂತ್ರಿಪದವಿಯನ್ನು ವಹಿಸಿಕೊಟ್ಟರು.

ಜೇಮ್ಸ್‌ರಾಮ್ಸೆ ಮೆಕ್ಡೊನಾಲ್ಡ್‌ರವರು ಸ್ಕಾಟ್ಲೆಂಡಿಗೆ ಉತ್ತರದಲ್ಲಿರುವ ಲೊಸಿಮೌತ್ ಎಂಬಲ್ಲಿ ಬೇಸಾಯದ ಕುಟುಂಬದಲ್ಲಿ 1866 ರಲ್ಲಿ ಜನಿಸಿದರು. ಇವರು ಬಾಲ್ಯದಲ್ಲಿ ಬಹಳ ಮೇಧಾವಿಗಳಾಗಿಯೂ, ಚಟುವಟಿಕೆಯುಳ್ಳವರಾಗಿಯೂ ಇದ್ದುದರಿಂದ ಬಾಲವಿದ್ಯಾಭ್ಯಾಸವನ್ನು ಅತಿತ್ವರೆಯಲ್ಲಿ ಮುಗಿಯಿಸಿ ಪ್ರೌಢವಿದ್ಯಾಭ್ಯಾಸಕ್ಕಾಗಿ ಲಂಡನ್ನಿಗೆ ಬಂದು ಅಲ್ಲಿ ಒಂದು ವಾರಕ್ಕೆ 15 ಷಿಲ್ಲಿಂಗು ಸಂಬಳದಮೇಲೆ ಕಾಗದಗಳ ಮೇಲೆ ವಿಳಾಸವನ್ನು ಬರೆಯುವ ಕೆಲಸಕ್ಕೆ ಸೇರಿಕೊಂಡಿದ್ದು ಕೆಲಕಾಲಾನಂತರ ಪ್ರೌಢವಿದ್ಯಾಭ್ಯಾಸಕ್ಕಾರಂಭಿಸಿ ವಿಜ್ಞಾನಶಾಸ್ತ್ರದಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡು 1888ರಲ್ಲಿ ಪಾರ್ಲಿಮೆಂಟ್ ಮೆಂಬರಾದ ಟಿಲಾಫ್‌ರವರಿಗೆ ಪ್ರೈವೇಟ್ ಸೆಕ್ರೆಟರಿಯಾಗಿದ್ದು ವೃತ್ತಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು. ಅಲ್ಲಿಂದ ಲೇಬರ್ ಪಕ್ಷಕ್ಕೆ ಸೇರಿ 1896 ರಲ್ಲೂ 1900 ರಲ್ಲೂ ಪಾರ್ಲಿಮೆಂಟ್ ಸಭೆಗೆ ಮೆಂಬರಾಗಲು ಪ್ರಯತ್ನಿಸಿ 1901 ರಲ್ಲಿ ಲಂಡನ್ ಕೌಂಟಿ ಕೌನ್ಸಿಲ್ ಪಕ್ಷದಿಂದಲೂ 1906 ರಲ್ಲಿ ಲೀಸೆಸ್ಟರಿನಿಂದಲೂ ಪಾರ್ಲಿಮೆಂಟ್ ಸಭಾಸ್ತಾರರಾಗಿ ಆರಿಸಲ್ಪಟ್ಟರು. ಇವರು ತಮ್ಮ ಬುದ್ಧಿಶಕ್ತಿಯಿಂದ ಲೇಬರ್ ಪಕ್ಷದ ನಾಯಕತ್ವವನ್ನು ವಹಿಸಿಕೊಂಡು ಕೂಲಿಕಾರರ ಕ್ಷೇಮಚಿಂತನೆಗಾಗಿ ಪಾಟುಪಡುತ್ತಾ ಬಂದರಾದರೂ ಮಹಾ ಯುದ್ಧಕಾಲದಲ್ಲಿ ಮಾತ್ರ ನಿರಪರಾಧಿಗಳ ಮೇಲೆ ಬ್ರಿಟಿಷರು ಯುದ್ಧಕ್ಕೆ ನಿಂತರೆಂದು ಅಸಮಾಧಾನಪಟ್ಟುಕೊಂಡು ಯಾವಗೋಜಿಗೂ ಹೋಗದೆ ಕೆಲಕಾಲ ಮೌನವಾಗಿದ್ದರು. 1922 ರಲ್ಲಿ ಪುನಃ ಪಾರ್ಲಿಮೆಂಟ್ ಸಭಾಸ್ತಾರರಾಗಿ ಆರಿಸಲ್ಪಟ್ಟು ಲೇಬರ್‌ಪಕ್ಷದ ನಾಯಕತ್ವವನ್ನು ವಹಿಸಿಕೊಂಡು ಪ್ರಭುತ್ವಪಕ್ಷದವರ ಇದಿರಾಳಾಗಿ ನಿಂತರು. ಇವರು ಪ್ರತಿಪಕ್ಷವನ್ನು ವಹಿಸಿ ವಾದಿಸುವ ಸಾಮರ್ಥ್ಯವು ಪ್ರತಿಯೊಬ್ಬರಿಗೂ ವಿಸ್ಮಯವನ್ನುಂಟುಮಾಡುವುದು. ಇವರು ಬಹುದೂರ ದೇಶಪರ್ಯಟನಮಾಡಿ ಪರದೇಶಗಳ ಸ್ಥಿತಿಯನ್ನು ಚೆನ್ನಾಗಿ ತಿಳಿದಿರುವವರಾಗಿರುವರಲ್ಲದೆ ಭರತಖಂಡದ ಸಿವಿಲ್ ಉದ್ಯೋಗ ವಿಚಾರವನ್ನು ತಿಳಿಯಲು ಸೀಮೆಯಿಂದ 1912ರಲ್ಲಿ ಬಂದಿದ್ದ ರಾಯಲ್ ಕಮಿಷನ್ನಿನ ಮೆಂಬರುಗಳಲ್ಲಿ ಒಬ್ಬರಾಗಿದ್ದು ಭರತಖಂಡದ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ತಿಳಿದಿರುವವರಾಗಿರುವರು. ಇವರು ಆಡಂಬರರಹಿತರಾಗಿಯೂ ಆಕರ್ಷಣಾಶಕ್ತಿಯುಳ್ಳವರಾಗಿಯೂ, ಮಹಾವಾಗ್ಮಿಗಳಾಗಿಯೂ, ಧೈರ್ಯಶಾಲಿಗಳಾಗಿಯೂ ಇರುವರು. ಮತ್ತು ಸಾಮಾಜಿಕ ಹಾಗೂ ಕಾರ್ಮಿಕವಿಚಾರಗಳಲ್ಲಿಯೂ, ಭರತಖಂಡದ ವಿಚಾರದಲ್ಲಿಯೂ ಕೆಲ ಗ್ರಂಥಗಳನ್ನು ಬರೆದಿರುವರು. ಅಲ್ಲದೆ 1911 ರಲ್ಲಿ ಗತಿಸಿದ ತಮ್ಮ ಹೆಂಡತಿಯ ಜ್ಞಾಪನಾರ್ಥವಾಗಿ ಆಕೆಯ ಜೀವಿತಚರಿತ್ರೆಯನ್ನು ಬರೆದಿರುವರು. ಇವರಿಗೆ ಇಬ್ಬರು ಪುತ್ರರೂ ಮೂವರು ಪುತ್ರಿಯರೂ ಇರುವರು. ಭರತಖಂಡದ ಸ್ಥಿತಿಯನ್ನು ಪ್ರತ್ಯಕ್ಷವಾಗಿ ತಿಳಿದವರಾಗಿ ಭಾರತೀಯರ ಮೇಲೆ ಸಾನುಭೂತಿಯುಳ್ಳವರಾಗಿರುವುದರಿಂದ ಇವರ ಮುಖ್ಯಮಂತ್ರಿತ್ವದಲ್ಲಿ ಭರತಖಂಡಕ್ಕೆ ಉಪಕಾರವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರುಗಳನ್ನು ಚುನಾಯಿಸುವ ವಿಚಾರದಲ್ಲಿ ಸರ್ಕಾರದ ಕೆಲ ಸೂಚನೆಗಳು.

ಚುನಾವಣೆಯ ದಿವಸ ಓಟುಗಳನ್ನು ಕೊಡಲು ಬರುವ ಜನರು ಕಾಲವ್ಯವಧಾನವಿಲ್ಲದೆ ಓಟುಮಾಡಲಾಗದಿದ್ದಲ್ಲಿ ಮಾರನೆಯ ದಿನ ಬಂದು ಅಥವಾ ಎರಡನೆಯ ದಿನ ಬರುವ ಓಟರುಗಳೂ ಓಟನ್ನು ಮಾಡಬಹುದೆ ಎಂಬ ವಿಚಾರವಾಗಿ ಶಿವಮೊಗ್ಗ ಮತ್ತು ಕೋಲಾರ ಡಿಸ್ಟ್ರಿಕ್ಟುಗಳ ಡಿ|| ಕಮಿಷನರುಗಳೂ, ಅನಕ್ಷರಸ್ಥರಾದವರು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾಗಲು ಉಮೇದುವಾರರಾಗಿ ನಿಲ್ಲಬಹುದೆ ಎಂಬ ವಿಚಾರದಲ್ಲಿ ಕೋಲಾರ ಡಿ|| ಕಮಿಷನರೂ ಸರ್ಕಾರದವರ ಸೂಚನೆಯನ್ನು ಕೇಳಿರುವಲ್ಲಿ,

ರಿಜಿಸ್ಟರಾಗಿರುವ ಅಂದರೆ ಸರ್ಕಾರದಿಂದ ಪ್ರಕಟಿಸಲ್ಪಟ್ಟಿರುವ ಓಟರುಗಳ ಲಿಸ್ಟಿನಲ್ಲಿ ಕಂಡ ಓಟರುಗಳು ಕ್ಲುಪ್ತವಾದ ದಿವಸ ಓಟುಮಾಡುವ ಸ್ಥಳಕ್ಕೆ ಪ್ರತ್ಯಕ್ಷವಾಗಿ ಬರಬೇಕಾಗಿದೆ ಮತ್ತು ಪೋಲಿಂಗ್ ಆಫೀಸರು ತಾವು ಇಷ್ಟಪಟ್ಟಲ್ಲಿ ಮಾರನೆಯ ದಿನವೂ ಓಟನ್ನು ತೆಗೆದುಕೊಳ್ಳಬಹುದಾಗಿದೆ. ನ್ಯಾಯವಿಧಾಯಕ ಸಭೆಗೆ ಮೆಂಬರುಗಳನ್ನು ಚುನಾಯಿಸತಕ್ಕವರ ಅಥವಾ ಮೆಂಬರುಗಳಾಗಲು ಉಮೇದುವಾರರಾಗಿ ನಿಲ್ಲತಕ್ಕವರ ವಿದ್ಯಾಯೋಗ್ಯತೆಯ ವಿಚಾರದಲ್ಲಿ ಯಾವ ರೂಲ್ಸೂ ಮಾಡಲ್ಪಟ್ಟಿಲ್ಲವು. ಪೋಸ್ಟ್ ಮೂಲಕ ಓಟುಗಳನ್ನು ಕೊಡಬಹುದೆಂಬುದು ವಿಶೇಷ ಉದ್ದೇಶವನ್ನುಳ್ಳ ಸಂಘಗಳಿಂದ ಮೆಂಬರುಗಳನ್ನು ಆರಿಸತಕ್ಕವರಿಗೆ ಮಾತ್ರ ಅನ್ವಯಿಸತಕ್ಕದ್ದಾಗಿದೆ ಎಂದು ಸರ್ಕಾರದಪ್ಪಣೆಯಾಗಿದೆ. ಇದನ್ನು ಪ್ರತಿಯೊಬ್ಬ ಓಟರೂ ಗಮನಿಸುವುದಾವಶ್ಯಕವು.

ಸ್ವದೇಶದ ವೃತ್ತಾಂತಗಳು.

ಕೊಡಗು ಪ್ರಾಂತಕ್ಕೆ ಹೊಸದಾಗಿ ಏರ್ಪಾಟಾಗಿರುವ ಕೌನ್ಸಿಲ್ ಸಭೆಯಾರಂಭೋತ್ಸವವು ಕೊಡಗಿನ ಚೀಫ್ ಕಮಿಷನರಾದ ಬ್ರಿಟಿಷ್ ರೆಸಿಡೆಂಟರಿಂದ ನಾಳೆಯದಿನ ನಡಿಸಲ್ಪಡುವುದು.

ರಾಜಧಾನಿಯ ಮ|| ಎಂ. ಪುಟ್ಟಯ್ಯ ಅಂಡ್ ಸನ್ಸ್‌ರವರೂ, ನಂಜನಗೂಡಿನ ಸನಾತನ ಧರ್ಮಸಭೆಯವರೂ, ಮೈಸೂರು ಕೃಷ್ಣಾ ಪ್ರೆಸ್ಸಿನವರೂ ಪ್ರಕಟಿಸಿರುವ ಕ್ಯಾಲೆಂಡರುಗಳನ್ನೂ, ಮ|| ಯಜ್ಞನ್ ಸಂಪತ್ಕೃಷ್ಣಜೋಯಿಸರು ಗುಣಿಸಿ ಪ್ರಕಟಿಸಿರುವ ರಕ್ತಾಕ್ಷಿ ಸಂವತ್ಸರದ ಪಂಚಾಂಗವನ್ನೂ ವಿಶ್ವಾಸದಿಂದ ಸ್ವೀಕರಿಸಿರುವೆವು.

ಬೊಂಬಾಯಿಗೆ ದಯಮಾಡಿಸಿದ್ದ ಮಹಾಮಾತೃ ಶ್ರೀ ವಾಣಿವಿಲಾಸ ಸನ್ನಿಧಾನ ಸಿ.ಐ.ಇ. ಯವರೂ, ಜ್ಯೇಷ್ಠ ರಾಜಕುಮಾರಿಯವರೂ ತಾ|| 23ರಲ್ಲೂ, ಮೂರನೆಯ ರಾಜಕುಮಾರಿಯವರು ತಾ|| 25ರಲ್ಲೂ ರಾಜಧಾನಿಗೆ ಚಿತ್ತೈಸಿದರು. ಮತ್ತು ಶ್ರೀಮದ್ಯುವರಾಜರವರ ಸ್ವಾರಿಯು ನೆನ್ನೆಯ ದಿನ ಬೆಂಗಳೂರಿಗೆ ಚಿತ್ತೈಸುವುದಾಗಿ ನಿರೀಕ್ಷಿಸಲ್ಪಟ್ಟಿದ್ದಿತು.

ರಾಜಧಾನಿಗೆ ಸೇರಿದ ಕನ್ನೇಗೌಡನಕೊಪ್ಪಲಿನಲ್ಲೂ ಅದರ ಸುತ್ತುಮುತ್ತಲೂ ಇರುವ ಗ್ರಾಮಗಳಲ್ಲೂ ವಾಂತಿಭೇದಿರೋಗವು ಪ್ರಾರಂಭವಾಗಿರುವುದರಿಂದ ಆ ಗ್ರಾಮಗಳಿಂದ ಬರುವ ಹಾಲು ಮೊಸರು ಮೊದಲಾದ ತಿಂಡಿಯ ಪದಾರ್ಥಗಳನ್ನು ತೆಗೆದುಕೊಳ್ಳಲಾಗದೆಂದೂ, ನೊಣಗಳು ಮನೆಗಳಲ್ಲಿ ಸೇರದಂತೆ ನೋಡಿಕೊಳ್ಳಬೇಕೆಂದೂ, ತಂಗಳನ್ನು ತಿನ್ನಬಾರದೆಂದೂ, ಶುಚಿಯಾಗಿರಬೇಕೆಂದೂ ರಾಜಧಾನಿಯ ಹೆಲ್ತಾಫೀಸರು ಎಚ್ಚರಿಸಿರುವರು.

ಕಿಲಾಫತ್ತಿನ ಪ್ರಮುಖರುಗಳಾದ ಮಿ|| ಷೌಕತಾಲಿಯವರೂ, ಅವರ ತಾಯಿಯವರೂ, ಡಾಕ್ಟರ್ ಕಿಚಲೂಯವರೂ ಡಾಕ್ಟರ್ ಮಹಮದ್‌ರವರೂ ಕಳೆದ ತಾ|| 25ರ ಬೆಳಿಗ್ಗೆ ಬೆಂಗಳೂರು ದಂಡಿಗೆ ಬಂದರು. ಅಲ್ಲಿಯ ಮಹಮ್ಮದೀಯರು ಈ ಪ್ರಮುಖರನ್ನು ನಿಲ್ದಾಣದಲ್ಲಿ ಇದಿರ್ಗೊಂಡು ಮರ್ಯಾದಿಸಿ ಅವರಿಗಾಗಿ ಏರ್ಪಡಿಸಿದ್ದ ಬಿಡಾರಕ್ಕೆ ಕರೆದುಕೊಂಡುಬಂದರು. ಇವರುಗಳು ಆ ದಿವಸ ಮಧ್ಯಾಹ್ನ ಜುಮ್ಮಾಮಸೀದಿಗೆ ಹೋಗಿ ನಮಾಜನ್ನು ಮಾಡಿದರು ಮತ್ತು ಬೆಂಗಳೂರಿನಲ್ಲಿ ಇರುವವರೆಗೂ ಬಹಿರಂಗವಾಗಿ ಯಾವ ಭಾಷಣಗಳನ್ನೂ ಮಾಡಕೂಡದೆಂದು ಅಲ್ಲಿಯ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ನೋಟೀಸನ್ನು ಕೊಟ್ಟಿರುವರು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡೆದ ಕೊಲೆಯನ್ನು ಆಫೀಸಿನ ರಿಕಾರ್ಡ್‌ಕೀಪರ್ ಕೃಷ್ಣರಾಯನೆಂಬುವವನು ನಡೆಸಿದನೆಂಬುದರಮೇಲೆ ಪೋಲೀಸರು ಅವನನ್ನು ಸೆರೆಹಿಡಿದು ಕಳುವಾಗಿದ್ದ 5000 ರೂಪಾಯಿಯನ್ನು ಅವನಿಂದ ಬರಮಾಡಿಕೊಂಡಿರುವುದಾಗಿ ಹಿಂದೆ ತಿಳಿಸಲ್ಪಟ್ಟಿದ್ದಿತಷ್ಟೆ. ಪೋಲೀಸಿನವರು ಇವನನ್ನು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿ ಈ ತಾ|| 29ರ ವರೆಗೆ ರಿಮ್ಯಾಂಡ್ ತೆಗೆದುಕೊಂಡಿದಾರೆ, ಮತ್ತು ಕೃಷ್ಣರಾಯನು ಕೊಲೆಯನ್ನು ತಾನು ನಡಿಸಿರುವುದಾಗಿ ಒಪ್ಪಿಕೊಂಡಿರುವುದರಿಂದ ಅನುಮಾನದಮೇಲೆ ಸೆರೆಹಿಡಿದಿದ್ದ ಅದೇ ಆಫೀಸಿನ ಇಬ್ಬರು ಆಳುಗಳನ್ನು ಬಿಟ್ಟುಬಿಡುವವರಾಗಿರುವರು. ಕೊಲ್ಲಲ್ಪಟ್ಟ ಇಬ್ಬರು ಸೇವಕರ ಕುಟುಂಬಗಳಿಗೆ ಯುಕ್ತವಾದ ಪರಿಹಾರದ್ರವ್ಯವನ್ನು ಕೊಡಬೇಕೆಂದು ಮ್ಯುನ್ಸಿಪಾಲಿಟಿಯವರು ಯೋಚಿಸುತ್ತಿರುವುದಾಗಿಯೂ, ಮ್ಯುನಿಸಿಪಾಲಿಟಿಗೆ ಪ್ರತಿದಿನವೂ ಬರುವ ಹಣವು ಆ ದಿವಸದ ಸಾಯಂಕಾಲದೊಳಗೆ ಮೈಸೂರು ಬ್ಯಾಂಕಿಗೆ ಕಳುಹಲ್ಪಡುವಂತೆ ಏರ್ಪಡಿಸಲ್ಪಟ್ಟಿರುವುದಾಗಿಯೂ ತಿಳಿಯಬಂದಿದೆ.

ಬೆಂಗಳೂರು ಸುಲ್ತಾನ್‌ಪೇಟೆಯಲ್ಲಿ ವಾಸವಾಗಿರುವ ಪುನಂಚಂದ್ ವಾಡಿಲಾಲಷ ಎಂಬುವವನು ತನ್ನ ಮನೆಯಲ್ಲಿ ಒಂದು ಭಾಗವನ್ನು ಮಣಿಲಾಲನೆಂಬುವವನಿಗೆ ಬಾಡಿಗೆಗೆ ಕೊಟ್ಟಿದ್ದನು. ಮನೆ ಯಜಮಾನನ ಹೆಂಡತಿಯು ಕೂಡ ಆ ಮಣಿಲಾಲನ ಹೆಂಡತಿಯು ಬಹಳ ವಿಶ್ವಾಸವನ್ನು ಬೆಳಸಿಕೊಂಡಿದ್ದು ಆಕೆಯ ಆಭರಣದ ಪೆಟ್ಟಿಗೆಯ ಬೀಗದಕೈಯನ್ನು ತನ್ನ ವಶಮಾಡಿಕೊಂಡು ಪೆಟ್ಟಿಗೆಯ ಬಾಗಿಲನ್ನು ತೆಗೆದು 2100 ರೂ. ಬೆಲೆಯಾಭರಣಗಳನ್ನು ಅಪಹರಿಸಿಕೊಂಡು ಪೆಟ್ಟಿಗೆಯ ಬಾಗಲನ್ನು ಮುಚ್ಚಿ ಬೀಗಹಾಕಿ ಯಥಾಪ್ರಕಾರ ಇದ್ದಲ್ಲಿ ಮಡಗಿಬಿಟ್ಟು ಕೊಚ್ಚಿ ಸಂಸ್ಥಾನಕ್ಕೆ ಹೋಗಿಬರುತ್ತೇವೆಂದು ಹೇಳಿ ಕೂಡಲೆ ಮನೆಯನ್ನು ಬಿಟ್ಟು ಹೊರಟುಹೋದರು. ಇದಾದ 8 ದಿವಸಗಳಮೇಲೆ ಮನೆ ಯಜಮಾನಿಯು ಆಭರಣಗಳನ್ನು ತೆಗೆದುಕೊಳ್ಳಲು ಪೆಟ್ಟಿಗೆಯ ಬೀಗವನ್ನು ತೆಗೆದುನೋಡುವಲ್ಲಿ ಆಭರಣಗಳು ಮಾಯವಾಗಿದ್ದುದನ್ನು ಕಂಡು ದಿಗಿಲುಬಿದ್ದು ಪೋಲೀಸಿಗೆ ತಿಳಿಸಿದರು. ಪೋಲೀಸರು ಆ ಕಳ್ಳ ದಂಪತಿಗಳನ್ನು ಹುಡುಕಿಕೊಂಡು ಕ್ವಿಲಾನಿನಲ್ಲಿ ಒಂದು ಸತ್ರದಲ್ಲಿ ಅವರನ್ನು ಹಿಡಿದು ಶೋಧಿಸುವಲ್ಲಿ ಒಂದು ಕಂಠಾಭರಣವು ದೊರಕಿತು. ಅದರಮೇಲೆ ವಿಚಾರಿಸಿದುದಕ್ಕೆ ಉಳಿದ ನಗಗಳು ವಿಕ್ರಯಿಸಲ್ಪಟ್ಟು ಹೊಸದಾಗಿ ನಗಗಳು ಕೊಳ್ಳಲ್ಪಟ್ಟಿರುವುದಾಗಿ ತಿಳಿಯಬಂದುದರಮೇಲೆ ಆ ದಂಪತಿಗಳಿಬ್ಬರನ್ನೂ ಬೆಂಗಳೂರಿಗೆ ಕರೆದುಕೊಂಡು ಬಂದು ವಿಚಾರಣೆಗೆ ಗುರಿಮಾಡಿರುವರು.

ರಾಜಧಾನಿಯ ಓಟರುಗಳಲ್ಲಿ ವಿಜ್ಞಾಪನೆ.

ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳಿಗೆ ರಾಜ್ಯಾಡಳಿತದಲ್ಲಿ ವಿಶೇಷಾಧಿಕಾರವನ್ನು ಕಲ್ಪಿಸಿಕೊಡಬೇಕೆಂಬ ಸತ್ಸಂಕಲ್ಪದಿಂದ ಅನುಗ್ರಹಿಸಿರುವ ನೂತನ ರಾಜಶಾಸನದ ಪ್ರಕಾರ ತಿದ್ದುಪಾಟಾಗಿರುವ ಪ್ರಜಾಪ್ರತಿನಿಧಿ ಸಭೆಗೆ ನಾಲ್ವರನ್ನೂ, ನ್ಯಾಯವಿಧಾಯಕ ಸಭೆಗೆ ಒಬ್ಬರನ್ನೂ ಮೆಂಬರುಗಳನ್ನಾಗಿ ಬರುವ ಫೆಬ್ರವರಿ ತಾರೀಖು 15 ನೇ ಶುಕ್ರವಾರದ ದಿವಸ ರಾಜಧಾನಿಯಲ್ಲಿ ಚುನಾಯಿಸಬೇಕಾಗಿರುವುದಷ್ಟೆ ? ಹೀಗೆ ಚುನಾಯಿಸಲ್ಪಡತಕ್ಕ ಮೆಂಬರುಗಳು ಧೈರ್ಯದಿಂದಲೂ, ನಿರ್ದಾಕ್ಷಿಣ್ಯದಿಂದಲೂ, ನ್ಯಾಯರೀತಿಯಿಂದಲೂ ಪ್ರಜೆಗಳ ಕುಂದುಕೊರತೆಗಳನ್ನು ಸಭೆಯಲ್ಲಿ ಸರ್ಕಾರದವರಿಗೆ ಅರಿಕೆ ಮಾಡಿ ಅವುಗಳ ಪರಿಹಾರೋಪಾಯಗಳನ್ನು ಸೂಚಿಸಲು ಸಮರ್ಥರಾದ ಮೆಂಬರುಗಳನ್ನು ರಾಜಧಾನಿಯ ಪ್ರಜೆಗಳ ಪ್ರತಿನಿಧಿಗಳನ್ನಾಗಿ ಆರಿಸಿ ಕಳುಹಿಸುವ ಭಾರವು ಓಟರುಗಳಾದ ನಮ್ಮ ಮೇಲೆ ಬಿದ್ದಿರುತ್ತದೆ.

ಮೇಲ್ಕಂಡ ಗುಣವುಳ್ಳವರಾಗಿಯೂ ದೇಶಸೇವೆಯೇ ದೇವರ ಸೇವೆಯೆಂದು ತಿಳಿದು ಸ್ವಾರ್ಥಬುದ್ಧಿಯಿಲ್ಲದೆ ಪ್ರಜಾಸೇವೆಯನ್ನು ಮಾಡುತ್ತ ನಮ್ಮಗಳ ಪ್ರತಿನಿಧಿಗಳಾಗಿ ಮೇಲ್ಕಂಡ ಸಭೆಗಳಿಗೆ ಮೆಂಬರುಗಳಾಗಿ ಹೋಗಲು ಅರ್ಹರಾಗಿರುವ (1) ಮ್ಯುನಿಸಿಪಲ್ ಕೌನ್ಸಿಲರೂ, ಟ್ರಸ್ಟ್ ಬೋರ್ಡ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರೂ ಆದ ಮಿ|| **ಮಹಮ್ಮದ್ ಸೇಟರು,** (2) ಮ್ಯುನಿಸಿಪಲ್ ಕೌನ್ಸಿಲರೂ ಟ್ರಸ್ಟ್‌ಬೋರ್ಡ್ ಮೆಂಬರೂ ಆದ ಮ|| **ಕೆ. ಧನಕೋಟಿಸೆಟ್ಟರು,** (3) ಅಡ್ವೋಕೇಟರಾದ ಮ|| **ಎಚ್. ಸಿ. ದಾಸಪ್ಪ,** ಬಿ. ಎ., ಎಲ್‌ಎಲ್. ಬಿ., ಯವರು, (4) ಮ್ಯುನಿಸಿಪಲ್ ಕೌನ್ಸಿಲರೂ ಮೈಸೂರು ಸ್ಟಾರ್‌ಪತ್ರಿಕಾ ಎಡಿಟರೂ ಆದ ಮ|| **ವೈ. ವಿರೂಪಾಕ್ಷಯ್ಯನವರು** ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಲು ಉಮೇದುವಾರರಾಗಿ ನಿಂತಿರುತ್ತಾರೆ. ಇವರುಗಳಲ್ಲಿ ಮಿ|| ಮಹಮ್ಮದ್‌ಸೇಟರು ಮಾತ್ರ ನ್ಯಾಯವಿಧಾಯಕ ಸಭೆಗೆ ಸಹ ಮೆಂಬರಾಗಲು ಉಮೇದುವಾರರಾಗಿರುತ್ತಾರೆ.

ಈ ನಾಲ್ವರು ಉಮೇದುವಾರರುಗಳು ನಮ್ಮಗಳ ನಿರೀಕ್ಷೆಯನ್ನು ಸರ್ವ ವಿಧದಲ್ಲೂ ಸಾರ್ಥಕಪಡಿಸುತ್ತಾರೆಂಬ ಭರವಸೆಯು ನಮ್ಮಗಳಿಗೆ ಸಂಪೂರ್ಣವಾಗಿರುವುದರಿಂದ ತಾವು ತಮ್ಮ ಘನವಾದ ಓಟುಗಳನ್ನು ಅವರುಗಳಿಗೆ ಕೊಟ್ಟು ಮತ್ತು ತಮ್ಮ ಮಿತ್ರರುಗಳಿಂದ ಕೊಡಿಸಿ ಅವರುಗಳು ಉತ್ತೀರ್ಣರಾಗಿ ಬಂದು ಪ್ರಜಾಸೇವೆಯನ್ನು ಇತೋಪ್ಯತಿಶಯವಾಗಿ ಮಾಡಲು ಉತ್ತೇಜನವನ್ನು ಕೊಡುವವರಾಗಬೇಕೆಂದು ಪ್ರಾರ್ಥಿಸುವ,

ತಮ್ಮ ಮಿತ್ರರಾದ,

1. ಲೋಕಹಿತೈಷಿ ಎಚ್. ನಂಜುಂಡರಾಜ ಅರ್ಸ್,
2. ಎಂ. ಎಲ್. ವರ್ಧಮಾನಯ್ಯ (ಸಾಹುಕಾರ್ ಮತ್ತು ಎಸ್. ಕೆ. ಮಿಲ್ಸ್ ಏಜಂಟರು)
3. ಮಹಮ್ಮದ್‌ಜಾಫರ್, (ರಿಟೈರ್ಡ್ ಪೊ|| ಸೂಪರಿಂಟೆಂಡೆಂಟ್ ಮತ್ತು ಮು|| ಕ||)
4. ಎ. ಸಿ. ಲಿಂಗರಾಜ ಅರ್ಸ್ (ಆನರರಿ ಸೆಕ್ರೆಟರಿ ಬೇಬಿವೀಕ್ ಕಮಿಟಿ)
5. ನವಾಬ್‌ನೈಜಾಮುದೀನ್‌ಅಲ್ಲಿಖಾನ್, ಅರಮನೆ ಮುಸಾಹೇಬರು.
6. ವಿ. ತಿರುವೆಂಗಡಮೊದಲಿಯಾರ್ (ಮ್ಯುನಿಸಿಪಲ್ ಕೌನ್ಸಿಲರ್)
7. ಬಿ. ಮುನಿವೆಂಕಟಪ್ಪ (,,)
8. ಎಂ. ಕೆ. ಮಾಧವರಾವ್ (,,)
9. ವಿ. ತಿಮ್ಮಯ್ಯ (,,)
10. ಎನ್. ಸೆಟ್ಟೋಜಿರಾವ್ (,,)
11. ಯು.ಆರ್. ಲಿಂಗೋಜಿರಾವ್ (,,)
12. ಎಂ. ನರಸಿಂಹಸ್ವಾಮಿ, (ಆನರರಿ ಮ್ಯಾಜಿಸ್ಟ್ರೇಟ್)
13. ವಿ. ಜಿ. ರಾಜಾರಾಂ (,,)
14. ಎಸ್. ಸಿದ್ದೋಜಿರಾವ್, (,,)
15 ಕಾವೇರಿಪಟ್ಟಣಂ ಸುಬ್ಬರಾಯಶೆಟ್ಟಿ (,,)
16. ಎಂ. ಅರುಣದಾಸನ್ (,,)
17. ಕೆ. ಸಂಜೀವಶೆಟ್ಟಿ, ಬಿ. ಎ.
18. ಹಕೀಂ ಸಯ್ಯದುಮುಸ್ತಫಾ.
19. ಅಬ್ದುಲ್‌ವಾಹಿದ್‌ಹಾಜಿ ಅಲಿ ಮಹಮ್ಮದ್‌ಸೇಟ್ (ಜವಳಿ ಸಾಹುಕಾರ್)
20. ಎ. ಎನ್. ಸೂರ್ಯನಾರಾಯಣಶೆಟ್ಟಿ (ಸಾಹುಕಾರರು)
21. ಮೋಟಮಲ್ ತಾರುಮಲ್ (ಮುಲ್ತಾನಿ ಸಾಹುಕಾರರು)
22. ಕೆ. ಪಿರೋಜಷಾ ಪೂನಾಗರ್ (ಅಡ್ವೋಕೇಟರು)
23. ವಾದಯ್ಯ (ಚಾಮುಂಡಿ ರೈಸ್‌ಮಿಲ್ಲು ಪ್ರೊಪ್ರೈಟರ್)
24. ಇಬ್ರಾಹಿಂ ಜೂಸಬ್‌ಸೇಟ್ (ಸಂತೇಪೇಟೆ ಮಂಡಿ ಸಾಹುಕಾರರು)
25. ಎಚ್. ಗಿರಿಯಪ್ಪ (ಅಕ್ಕಿ ಅಂಗಡಿ ಸಾಹುಕಾರರು ಸಂತೇಪೇಟೆ)
26. ತಮ್ಮಯ್ಯ, ಸುಬ್ಬಣ್ಣ (,,)
27. ಸಿ. ದೊಡ್ಡಜವರಪ್ಪ (,,)
28. ಎಂ. ಸೋಮಯ್ಯ (,,)
29. ದಾಸಪ್ಪ (,, ಅಗ್ರಹಾರ)
30. ಎಂ. ಎಸ್. ಸಿದ್ದಪ್ಪ (ಎಂ. ಎಸ್. ಸಿದ್ದಪ್ಪಾ ಅಂಡ್ ಬ್ರದರ್ಸ್ ಕೃಷ್ಣರಾಜಮೊಹಲ್ಲಾ)
31. ಜವಳಿಅಂಗಡಿ ಪೊರಸಾಮಯ್ಯ (ದೊಡ್ಡಪೇಟೆ)
32. ಲಾ. ಆದಿಶೇಷಯ್ಯ (ಜವಳಿ ವ್ಯಾಪಾರಿ)
33. ರಾಮಲಿಂಗಯ್ಯ (,,)
34. ಶಿವಲಿಂಗಯ್ಯ (ಲಕ್ಷ್ಮೀಸಹಾಯನಿಧಿ ಕೋ ಆಪರೇಟಿವ್ ಸೊಸೈಟಿ ಸೆಕ್ರಟರಿ)
35. ಚಂದ್ರಭಾನುಸಿಂಗ್ (ಆಯುರ್ವೇದ ಪಂಡಿತರು)
36. ಯಾದ್ಗರಲಿ (ಪೆನ್ಷನ್ ಪೋಲೀಸ್ ಇನ್ಸ್‌ಪೆಕ್ಟರು, ಮಂಡಿ)

The Local Committee for The National Baby Week, Mysore City, beg to acknowledge with many thanks the following Subscriptions.

1. Dr. Brajindranath Seal, M.A., P.H.D. Rs. 25.

Rs. 10 each.

1. Rajasabhabhushana, Dewan Bahadur C. Srikanteswara Iyer, B.A., B.L. 2. Rana Lakshmana Sinji, Esq. 3. Dalavai Nanjaraj Urs, Esq. 4. Lokahitaishi H. Nanjundaraj Urs. 5. N. S. Subba Rao, Esq., M.A. (Cantab.) 6. A. R. Wadia, Esq, B.E., (Oxon.) 7. Sahukar Mohamed Sait, Esq. 8. Sahukar M. L. Vardhamaniah, Esq.

1. G. Srinivasa Iyar, Esq., B.A., M.L. Rs. 7.

1. Sree K. D. Rukminiamma, B.A. Rs. 6.

Rs. 5 each.

1. Sirdar M. Gopal Krishne Urs. 2. Dr. J. V. Mascarenhas, D.P.H. 3. A. V. Subramanyaraj Urs, Esq., (K.K.B.) 4. H. L. Devaraj Urs, Esq. 5. M. Ramaswami, Esq. 6. Sahukar B. Munivenkatappa, Esq. 7. Dharmaprakasha D. Banumiah. 8. Khan Bahadur P. Pollonjee. 9. Lokasevaniratha Amble Anniah Pandit. 10. Prof. S. V. Venkateswara Iyer, M.A., L.T. 11. Dr. Madhura Bai Uchgaokar, L.M. & S. 12. Mrs. Lakshmana Sinji.

Rs. 3 each.

1. R. V. Krishnaswami Iyer, Esq. B.A. 2. Dr. S. Ranganna, L.M. & S. 3. Dr. T. S. Siddappa, L.M. & S. 4. T. G. Ramiyer, Esq., B.A., B.L. 5. M. Abdul Khader, Esq., B.A. 6. Rai Sahib R. A. Srinivasa Iyengar, B.A., B.C.E. 7. Sri K. Subbamma, B.A.

Rs. 2 each.

1. Mrs. R. A. Srinivasa Iyengar. 2. Mrs. S. P. Rajagopalachari. 3. Mrs. Rollo. 4. Sri U. Abhayambal, M.A. (Hons.) 5. Mrs. S. Ranganna. 6. Sri Nagamma, M.A., L.T. 7. Miss E. S. David. 8. Miss B. Gnanakkan. 9. Mrs. Theobald. 10. C. V. Subramanyaraj Urs, Esq. 11. P. S. Anantha Rao Esq. 12. M. S. Krishna Rao, Esq., B.A., B.L. 13. B. M. Srikantiah, Esq., M.A., B.L. 14. V. K. Subraya Chetty, Esq. 15. Proprietor, Sri Chamundi Electric Stores, Mysore. 16. A. Sattar Sait, Esq. 17. H. N. Lingaraj Urs, Esq. 18. T. V. Thampiran, Esq., B.A. 19. S. Shamanna, Esq., M.A.

Re. 1 each.

1. Sri Y. K. Amritha Bai. 2. Sri D. Lakshmamma. 3. Mrs. T. Subbaraj Urs. 4. Mrs. Mysorewala. 5. Sri M. Venkatasubbamma. 6. S. Doreraju, Esq., B.A. 7. B. Devaraj Urs, Esq., M.A., LL.B. 8. K. Ramaswamiah, Esq., B.A., B.L. 9. Sultan Mohamed Khan, Esq. 10. V. S. Raja Gopalachar, Esq. 11. H. V. Srikantiah, Esq., B.A., LL.B., B.Com.

A. C. LINGARAJ URS,
Hon. Secretary.

"To be continued"

ಬೆಂಗಳೂರು ನಗರದ ಪ್ರತಿನಿಧಿಕರ್ತರ ಸನ್ನಿಧಿಯಲ್ಲಿ ರಿಟೈರ್ಡ್ ಕೌನ್ಸಿಲರ್ ದಿವಾನ್‌ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ. ಐ. ಇ., ಯವರು ಮಾಡುವ ವಿಜ್ಞಾಪನೆಗಳು.

ಪೌರಬಾಂಧವರೇ,

1. ಕೆಲವರು ಇಷ್ಟಮಿತ್ರರ ಸಲಹೆಯನ್ನನುಸರಿಸಿ ಮತ್ತು ತಮ್ಮಗಳೆಲ್ಲರ ಉದಾರವಾದ ಸಮ್ಮತಿಯನ್ನು ಪಡೆಯುತ್ತೇನೆಂಬ ನಿರೀಕ್ಷಣೆಯಮೇಲೂ ನಾನು ನಮ್ಮ ಸಂಸ್ಥಾನದಲ್ಲಿ ಹೊಸದಾಗಿ ತಿದ್ದುಪಾಟನ್ನು ಹೊಂದಿ ಏರ್ಪಡುವ « ಲೆಜಿಸ್ಲೆಟಿವ್ ಕೌನ್ಸಿಲ್ » ಅಥವಾ ಶಾಸನ ನಿರ್ಮಾಣ ಸಭೆಗೆ ಬೆಂಗಳೂರು ಪಟ್ಟಣದ ನಿವಾಸಿಗಳ ಪ್ರತಿನಿಧಿಯಾಗಿ ಚುನಾಯಿಸಲ್ಪಡಲು ಉಮೇದುವಾರನಾಗಿ ನಿಲ್ಲಲು ನಿಶ್ಚಯಿಸಿದ್ದೇನೆ. ಬರುವ ಫೆಬ್ರವರಿ ತಿಂಗಳು 15 ನೆಯ ತಾರೀಖಿನ ದಿನ ನಡೆಯುವ ಚುನಾವಣೆಗೆ ತಾವು ದಯಮಾಡಿಸಿ ತಮ್ಮ « ಸಮ್ಮತಿ » ಅಥವ « ಓಟು » ಗಳನ್ನು ನನ್ನ ಹೆಸರಿಗೆ ಕೊಡುವುದಲ್ಲದೆ ತಮ್ಮ ಆಪ್ತ ಮಿತ್ರರಿಂದಲೂ ಕೊಡಿಸಬೇಕೆಂದು ಪ್ರಾರ್ಥಿಸುತ್ತೇನೆ.

2. ಈಗ ಅನೇಕ ವರ್ಷಗಳ ಲಾಗಾಯಿತು ರಾಜ್ಯಾಧಿಕಾರವರ್ಗಕ್ಕೂ ಪ್ರಜಾಸೇವೆಯಲ್ಲೂ ಸೇರಿ ಸಾರ್ವಜನಿಕ ಹಿತಕ್ಕಾಗಿ ನಾನು ಯಾವರೀತಿ ಕೆಲಸಮಾಡಿರುವೆನೆಂಬುದನ್ನು ಇಲ್ಲಿ ಹೇಳಬೇಕಾದ್ದಿಲ್ಲ. ಆದರೆ ಈ ಪಟ್ಟಣದ ಮತ್ತು ಈ ಸಂಸ್ಥಾನದ ಪ್ರಜಾಸಂಸ್ಥೆಗಳಲ್ಲಿಯೂ ಮತ್ತು ಮಹಾಜನ ಸಮಿತಿಗಳಲ್ಲಿಯೂ ನನಗೆ ಎಂತಹ ಸ್ಥಾನಗಳು ವಹಿಸಲ್ಪಟ್ಟಿರುವವೆಂಬುದನ್ನು ಯೋಚಿಸಿ ನೋಡಿದರೆ ತಮ್ಮ ನಂಬಿಕೆಗೂ ಭರವಸೆಗೂ ಅನರ್ಹನೆಂದೆನಿಸಿಕೊಳ್ಳುವಂತೆ ವರ್ತಿಸಿಲ್ಲವೆಂದು ಹೇಳಬಲ್ಲೆನು. ಈ ಸಮಯದಲ್ಲಿ ತಮ್ಮಗಳ ಅಮೂಲ್ಯವಾದ ಸಮ್ಮತಿಗಳನ್ನು ಪಡೆದುಕೊಳ್ಳುವ ಭಾಗ್ಯವು ನನಗೆ ಲಭಿಸಿದರೆ ತನ್ಮೂಲಕ ನಾನು ಹೊಸದಾದ ಶಾಸನ ನಿರ್ಮಾಣಸಭೆಗೆ ಹೋಗಿ ಅಲ್ಲಿ ನನ್ನ ದೇಶಬಾಂಧವರ ಸೇವಾತತ್ಪರನಾಗಿ ಕೆಲಸ ಮಾಡುತ್ತಾ ನನ್ನ ಜೀವಮಾನದಲ್ಲಿ ಇನ್ನು ಕೆಲವು ಕಾಲವನ್ನು ವಿನಿಯೋಗಿಸಬೇಕೆಂಬುದೇ ನನ್ನ ದೃಢಪ್ರಯತ್ನವಾಗಿರುವುದು. ಆ ಸಭೆಯಲ್ಲಿ ಪ್ರಜಾಪಕ್ಷವನ್ನು ಬಲಪಡಿಸಿ ಪ್ರಾರಂಭದಲ್ಲಿಯೇ ಅದನ್ನು ಸರಿಯಾಗಿ ಅಭಿವೃದ್ಧಿಗೆ ತರಬೇಕಾದರೆ ದೇಶವಾತ್ಸಲ್ಯ ಪೂರಿತವಾದ ವಿವಿಧ ಅನುಭವ ಮತ್ತು ತಿಳುವಳಿಕೆಯ ಫಲರೂಪವಾದ ಸಹಾಯ ಸಲಹೆಗಳೆಲ್ಲವೂ ಬೇಕಾಗುತ್ತವೆಂಬುದನ್ನು ನಾನು ತಮ್ಮಗಳಿಗೆ ಹೇಳಬೇಕಾದುದಿಲ್ಲ.

3. ಮುಂದೆ ಯಾವ ಕಾರ್ಯಭಾಗಗಳನ್ನು ನೆರವೇರಿಸಲು ನನ್ನ ಕೈಲಾಗುವಷ್ಟು ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸಬೇಕೆಂದು ಸಂಕಲ್ಪಿಸಿರುವೆನೋ ಅವುಗಳನ್ನು ಕುರಿತು ಇನ್ನು ಸಂಕ್ಷೇಪವಾಗಿ ತಿಳಿಸಲು ಅಪೇಕ್ಷಿಸುತ್ತೇನೆ.

ನಾನು ರಾಜಕೀಯ ಸುಧಾರಣೆಯ ಕಮಿಟಿಯ ಮೆಂಬರಾಗಿದ್ದುಕೊಂಡು ಮೊನ್ನೆ ಪ್ರಸಿದ್ಧಪಡಿಸಲ್ಪಟ್ಟ ರಾಜ್ಯಾಂಗಾಭಿವೃದ್ಧಿ ಕಾರ್ಯದಲ್ಲಿ ಸ್ವಲ್ಪ ಭಾಗಿಯಾಗಿದ್ದೆನೆಂಬುದು ತಮ್ಮ ನೆನಪಿನಲ್ಲಿರಬಹುದು. ಅನುಕೂಲವಾದ ಸಂಪ್ರದಾಯಗಳು (Conventions) ಆಚರಣೆಯಲ್ಲಿ ಬರುವಂತೆ ಪ್ರಯತ್ನಪಡುತ್ತಲೂ ಈಗಿರುವ ನಿಯಮಗಳನ್ನು ಇನ್ನೂ ಚೆನ್ನಾಗಿ ಫಲಕಾರಿಯಾಗುವಂತೆ ವಿಸ್ತರಿಸಬೇಕೆಂದು ವಾದಿಸುತ್ತಲೂ ನಮ್ಮ ರಾಜ್ಯಾಂಗ ಸಭೆಗಳಲ್ಲಿರುವ ಪ್ರಜಾಪಕ್ಷದ ಮೆಂಬರುಗಳ ಅಧಿಕಾರಗಳನ್ನು ಹೆಚ್ಚಿಸುವದು ನನ್ನ ದೃಢಾಪೇಕ್ಷೆಯಾಗಿರುವುದು. ಪ್ರಜಾಪಕ್ಷದ ಸಂಘಟನವನ್ನು ರಚನೆಗೆ ತಂದು ಅದನ್ನು ನಂಬಿಕೆ ಮತ್ತು ಜವಾಬ್ದಾರಿಗೆ ಅರ್ಹರಾದ ಪ್ರಮುಖರ ಅಧೀನದಲ್ಲಿಡಲು ನಾನು ಸಾಧ್ಯವಾದಷ್ಟು ಪ್ರಯತ್ನಮಾಡುವೆನು.

4. « ರಿಟ್ರೆಂಚ್‌ಮೆಂಟ್ ಕಮಿಟಿ » ಎಂದರೆ ಸರ್ಕಾರದ ಆಯವ್ಯಯ ಪರಿಶೋಧಕ ಸಭೆಗೆ ನಾನು ಅಧ್ಯಕ್ಷನಾಗಿದ್ದುಕೊಂಡು ಯಾವಯಾವ ಬಾಬುಗಳಲ್ಲಿ ಖರ್ಚನ್ನು ತಗ್ಗಿಸಬಹುದೆಂಬುದನ್ನು ಸೂಚಿಸಿ ಸರ್ಕಾರದ ಅಂಗೀಕಾರಕ್ಕೆ ಒಂದು ಸಲಹೆಯನ್ನು ಕೊಡುವ ಅವಕಾಶವು ನನಗೆ ದೊರೆತಿದ್ದುದು ತಮಗೆ ಜ್ಞಾಪಕದಲ್ಲಿದೆಯಷ್ಟೆ. ಮುಂದೆಯೂ ಈ ಆಯವ್ಯಯಗಳ ಸ್ಥಿತಿಗತಿಗಳನ್ನು ಚನ್ನಾಗಿ ಪರಿಶೀಲಿಸುತ್ತಾ ಆಯಾಯ ಇಲಾಖೆಗಳ ಆಡಳಿತದಲ್ಲಿ ವೆಚ್ಚವು ಕಡಿಮೆಯಾಗುವಂತೆಯೂ ವಿಚಕ್ಷಣೆಯು ಮಾತ್ರ ತಗ್ಗದಂತೆಯೂ ಏರ್ಪಾಡು ಇಟ್ಟುಕೊಳ್ಳಬೇಕೆಂದು ಕೇಳುವುದನ್ನು ನನ್ನ ಕರ್ತವ್ಯವಾಗಿಟ್ಟುಕೊಳ್ಳುವೆನು.

5. ಪುರಕ್ಷೇಮಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿಯೂ ನನಗೆ ಯಾವಾಗಲೂ ಶ್ರದ್ಧೆಯುಂಟೆಂಬುದನ್ನು ತಾವು ಬಲ್ಲಿರಿ. ನಮ್ಮ « ಮ್ಯುನಿಸಿಪಾಲಿಟಿ » ಅಥವಾ ಪೌರಕಾರ್ಯ ಸಭೆಗಳು ಹೆಚ್ಚು ಸ್ವಾತಂತ್ರ್ಯವನ್ನು ಪಡೆಯಬೇಕೆಂದೂ, ನಗರನೈರ್ಮಲ್ಯ ಪ್ರಜಾರೋಗ್ಯಗಳ ಕಡೆಗೆ ಹೆಚ್ಚು ಗಮನವು ಅವಶ್ಯಕವೆಂದೂ, ವರ್ತಕರಿಗೂ ಕೈಗಾರಿಕೆಗಳವರಿಗೂ, ಕೂಲಿಯ ಜನರಿಗೂ ಸಹ ಬೇಕಾದ ಜೀವನ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದೂ ನಾನು ಇದುವರೆಗೂ ಪದೇ ಪದೇ ವಾದಿಸಿರುವಂತೆಯೇ ಇನ್ನು ಮೇಲೆಯೂ ವಾದಿಸಿ, ನಮ್ಮ ಬೆಂಗಳೂರು ಪಟ್ಟಣದ ಪ್ರಜಾನುಕೂಲ್ಯಗಳನ್ನೂ ಅಂದವನ್ನೂ ಸುಖಸೌಲಭ್ಯಗಳನ್ನೂ ಅಭಿವೃದ್ಧಿಪಡಿಸಲು ಬೇಕಾದ ಸಹಾಯವನ್ನು ಸಂಪಾದಿಸಲು ಪ್ರಯತ್ನಿಸುವೆನು.

6. ಸಂಸ್ಥಾನದ ಪ್ರಮುಖ ಬ್ಯಾಂಕಿನ ಅಧ್ಯಕ್ಷನಾಗಿಯೂ ನಮ್ಮ ಹೊಸ ರಾಜಕೀಯ ಏರ್ಪಾಡಿಗೆ ಈಗ ಅಂಗವಾಗಿ ಏರ್ಪಟ್ಟಿರುವ ಅರ್ಥಸಾಧಕ ಸಮಾಜದ ಮೆಂಬರುಗಳಲ್ಲೊಬ್ಬನಾಗಿಯೂ ಇರುವುದರಿಂದ ನಮ್ಮ ಪಟ್ಟಣದ ಮತ್ತು ನಮ್ಮ ಸಂಸ್ಥಾನದ ಕಸಬು ಕೈಗಾರಿಕೆ ವ್ಯಾಪಾರಾದಿಗಳ ಸ್ಥಿತಿಗತಿಗಳನ್ನು ಚಿಂತನೆಮಾಡಿ ತಿಳಿದುಕೊಳ್ಳುವುದಕ್ಕೆ ನನಗೆ ಅವಕಾಶಗಳು ದೊರೆತು ನಮ್ಮ ವರ್ತಕರು ವ್ಯಾಪಾರಗಾರರು ಮತ್ತು ಇತರ ಕಸಬುದಾರರ ಕಷ್ಟಗಳು ಬಹಳ ಮಟ್ಟಿಗೂ ಗೊತ್ತಾಗಿವೆ. ಅವರ ಹಿತಚಿಂತನೆಯಲ್ಲಿ ನೈಜವಾದ ಸಹಾನುಭೂತಿಯನ್ನೂ ಮತ್ತು ನಿಶ್ಚಲವಾದ ಶ್ರದ್ಧೆಯನ್ನೂ ಯಾವಾಗಲೂ ತೋರಿಸುತ್ತ ಬರುವೆನು.

7. ನಾನೇ ತಕ್ಕಮಟ್ಟಿಗೆ ಜಮೀನ್ದಾರನಾಗಿಯೂ ಸ್ವತಃ ವ್ಯವಸಾಯ ಮಾಡಿಸತಕ್ಕವನಾಗಿಯೂ ಇರೋಣದರಿಂದ ರೈತರ ಮತ್ತು ಜಮೀನ್ದಾರರ ಪಕ್ಷವನ್ನು ಯಾವಾಗಲೂ ವಹಿಸಿ ಇತರರ ಹೋರಾಟದ ಮಧ್ಯೆ ಅವರಿಗೆ ನಿಜವಾಗಿಯೂ ಹಿತಕರವಾದುದನ್ನೇ ಮಾಡಲು ನಾನು ಸಿದ್ಧನಾಗಿ ಇರುವೆನೆಂಬುದನ್ನು ಹೇಳಬೇಕಾದುದಿಲ್ಲ.

8. ನಮ್ಮ ವಿಶ್ವವಿದ್ಯಾನಿಲಯವನ್ನು ಪ್ರಾರಂಭದಲ್ಲಿ ರೂಪಕ್ಕೆ ತರುವ ಕಾರ್ಯದಲ್ಲಿ ನಾನೂ ಸ್ವಲ್ಪ ಭಾಗಿಯಾಗಿದ್ದೆನು ಮತ್ತು ನಮ್ಮ ವಿದ್ಯಾಭ್ಯಾಸಕ್ರಮವನ್ನು ಅವಶ್ಯಬಿದ್ದಾಗಲೆಲ್ಲಾ ಫಲಕಾರಿಯಾಗಿ ತಿದ್ದುಪಡಿಮಾಡಬೇಕೆಂದು ಕಂಠೋಕ್ತವಾಗಿ ಹೇಳಲು ಹಿಂತೆಗೆದವನಲ್ಲ. ಆದುದರಿಂದ ವಿದ್ಯಾಭ್ಯಾಸವು ಹರಡುವುದಕ್ಕೂ ಮತ್ತು ಅದರ ಗುಣಯೋಗ್ಯತೆಯೂ ಹಾಗೆಯೇ ಉತ್ತಮಹೊಂದುವುದಕ್ಕೂ ಸಹ ನಾನು ನಿಜವಾದ ಕುತೂಹಲವನ್ನು ತೋರಿಸುವೆನೆಂದು ತಾವು ನಂಬಬಹುದು.

9. ಮೈಸೂರು ದೇಶೀಯರಲ್ಲಿ ಸ್ಥಿರವಾದ ರಾಜಕೀಯ ಐಕ್ಯಭಾವವು ಬೆಳೆವುದಕ್ಕೂ, ನಮ್ಮ ಪ್ರಜಾಸೇವಾವರ್ತನೆಯಲ್ಲಿ ಭೇದದ್ವೇಷಗಳು ತೊಲಗುವುದಕ್ಕೂ, ವರ್ತಮಾನಪತ್ರಿಕೆಗಳ ಮತ್ತು ಪ್ರಜಾಸಂಸ್ಥೆಗಳ ಶಕ್ತಿಯೂ ವ್ಯಾಪನೆಯೂ ಹೆಚ್ಚಿ ಬೆಳೆವುದಕ್ಕೂ, ನಮ್ಮ ಪಟ್ಟಣ ಮತ್ತು ನಮ್ಮ ಸಂಸ್ಥಾನದ ಹೆಸರುಗಳು ಉಚ್ಛ್ರಾಯಸ್ಥಿತಿಗೂ ಹೆಸರುವಾಸಿಗೂ ಅನ್ವರ್ಥನಾಮಗಳಾಗಿ ಕಂಗೊಳಿಸಲು ಸಹಾಯಮಾಡುವದಕ್ಕೂ ನಾನು ನನ್ನ ಜತೆಯಲ್ಲಿರುವ ಮೆಂಬರುಗಳ ಸಹಾಯವನ್ನು ಪಡೆದು ಕೆಲಸ ಮಾಡಬೇಕೆಂಬುದೇ ನನ್ನ ಸಂಕಲ್ಪವಾಗಿರುವುದು.

10. ಈ ವಿಧಗಳಾದ ಮುಖ್ಯ ಆಶಯಗಳನ್ನು ಮನಸ್ಸಿನಲ್ಲಿರಿಸಿಕೊಂಡು ನಾನು ತಮ್ಮ ವಿಶ್ವಾಸಪೂರ್ವಕವಾದ ಸಮ್ಮತಿಯನ್ನು ಅಪೇಕ್ಷಿಸುವವನಾಗಿದ್ದೇನೆ. ತಾವುಗಳು ಇದುವರೆಗೂ ನನಗೆ ತೋರಿರುವ ಅಭಿಮಾನವನ್ನು ನೋಡಿದರೆ ಈಗಲೂ ತಾವು ನನ್ನ ಕೋರಿಕೆಯನ್ನು ತಿರಸ್ಕರಿಸಲಾರಿರೆಂದು ನನಗೆ ಸಂಪೂರ್ಣ ಭರವಸೆಯುಂಟು. ಆದಕಾರಣ ನನ್ನ ಕೃತಜ್ಞತೆಯನ್ನು ತಮಗೆ ಪೂರ್ವಭಾವಿಯಾಗಿಯೇ ಸಮರ್ಪಿಸುತ್ತೇನೆ.

11. ಪ್ರತಿನಿಧಿಯ ಚುನಾವಣೆಯು 1924 ನೆಯ ಇಸವಿ ಫೆಬ್ರವರಿ ತಿಂಗಳು 15 ನೆಯ ತಾರೀಖು ಶುಕ್ರವಾರದ ದಿವಸ ತಮ್ಮ ಡಿವಿಜನ್ನಿನ ಪೋಲಿಂಗ್ ಸ್ಟೇಷನ್ ಅಂದರೆ ಚುನಾವಣೆ ಸ್ಥಳದಲ್ಲಿ ನಡೆಯುವುದು. ಆ ದಿನ ಅಲ್ಲಿಗೆ ಸಕಾಲಕ್ಕೆ ದಯಮಾಡಿಸಲು ಅವಕಾಶವನ್ನುಂಟುಮಾಡಿಕೊಂಡು ಬಂದು ತಮ್ಮ ಸಮ್ಮತಿಯನ್ನು ನನ್ನ ಹೆಸರಿಗೆ ಕೊಡಬೇಕೆಂದು ಪ್ರಾರ್ಥಿಸುವೆನು.

ಶಾಂತಿನಿವಾಸ,
ಚಾಮರಾಜಪೇಟೆ, ಬೆಂಗಳೂರು,
ತಾ|| 9-1-1924.

ತಮ್ಮ ವಿಧೇಯ,
ಕೆ. ಪಿ. ಪುಟ್ಟಣ್ಣಶೆಟ್ಟಿ.

ಮೈಸೂರು ನ್ಯಾಯವಿಧಾಯಕ ಸಭೆಗೆ ಓಟು ಕೊಡಲರ್ಹರಾದ ಚಿತ್ರದುರ್ಗ ಡಿಸ್ಟ್ರಿಕ್ಟಿನ ಮಹಾಶಯರಿಗೆ ವಿಜ್ಞಾಪನೆ.

ಮೇಲ್ಕಂಡ ಸಭೆಯ ಹೊಸ ಮೆಂಬರುಗಳ ಚುನಾವಣೆಯು ಬರುವ ತಾ|| 15-2-1924ರಲ್ಲಿ ನಡೆಯುವದಾಗಿಯೂ ಈ ಸಭೆಗೆ ನಮ್ಮ ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ ನಿಂತಿರುವ ಕ್ಯಾಂಡಿಡೇಟರ ಪೈಕಿ ನಾನೂ ಒಬ್ಬನಾಗಿಯೂ ಇರತಕ್ಕ ಅಂಶವು ತಮಗೆ ತಿಳಿದಿರಬಹುದು. ನಾನು ಬೊಂಬಾಯಿ ಯೂನಿವರ್ಸಿಟಿಯಲ್ಲಿ ಲಾ ಪರೀಕ್ಷೆಯನ್ನು ಕೊಟ್ಟು ಅಡ್ವೋಕೇಟ್ ಪ್ರಶಸ್ತಿಯನ್ನು ಪಡೆದು ನಮ್ಮ ಡಿಸ್ಟ್ರಿಕ್ಟಿನ ಕೇಂದ್ರಸ್ಥಾನವಾದ ದಾವಣಗೆರೆಯಲ್ಲಿ ವಕೀಲಿ ಕೆಲಸದಲ್ಲುದ್ಯುಕ್ತನಾಗಿರುತ್ತೇನೆ. ಈ ಉದ್ಯೋಗದ ಸಂಬಂಧದಿಂದಲೂ ಮತ್ತು ಈವರೆಗಿನ ಅನುಭವದಿಂದಲೂ ದೇಶಾಳ್ವಿಕೆಯಲ್ಲಿ [illegible] ನ್ಯೂನಾತಿರೇಕಗಳನ್ನು ಗ್ರಹಿಸಿರುವೆನಾದುದರಿಂದ ಅವುಗಳ ನಿವಾರಣಾರ್ಥವಾಗಿ ಕೈಲಾದಮಟ್ಟಿಗೂ ಪ್ರಯತ್ನಿಸಬೇಕೆಂಬ ಸದಿಚ್ಛೆಯುಳ್ಳವನಾಗಿರುತ್ತೇನೆ. ತಮ್ಮೆಲ್ಲರ ಉದಾರಾಶ್ರಯದಿಂದ ನಾನು ಈ ಸಭೆಗೆ ಚುನಾಯಿಸಲ್ಪಟ್ಟರೆ ಈ ಕೆಳಗೆ ವಿವರಿಸಿರುವಪ್ರಕಾರ ಮೊದಲಾದ ಸಾರ್ವಜನಿಕ ಕಾರ್ಯಗಳನ್ನು ಮಾಡಬೇಕೆಂದು ಯೋಚಿಸಿದ್ದೇನೆ. (1) ದೇಶದ ಎಲ್ಲಾ ಭಾಗಗಳಲ್ಲಿಯೂ ಪ್ರಾಥಮಿಕ ವಿದ್ಯಾಭ್ಯಾಸವು ಬಲಾತ್ಕಾರ

ಮೈಸೂರು ಸ್ಟಾರ್ ಪತ್ರಿಕೆಯ ವಾಚಕರಿಗೆ ಬಹುಮಾನ.

ಈ ಸ್ಟಾರ್ ಪತ್ರಿಕಾ ವಾಚಕರುಗಳಿಗೆ ಅವರ ಮೇಲಿರುವ ಅಭಿಮಾನವನ್ನು ವೃದ್ಧಿಗೊಳಿಸುವ ಉದ್ದೇಶದಿಂದ ಈ ಕೆಳಗೆ ಕಂಡ ಪ್ರಕಾರ 100 ರೂಪಾಯಿಗಳನ್ನು ಬಹುಮಾನಗಳನ್ನಾಗಿ ವಿಂಗಡಿಸಿ ಕೊಡಲು ಗೊತ್ತುಮಾಡಿರುತ್ತೇವೆ.

ಮೊದಲನೆಯ ಬಹುಮಾನ 50 ರೂಪಾಯಿ
ಎರಡನೆಯ ,, 30 ,,
ಮೂರನೆಯ ,, 20 ,,

1924 ನೆಯ ಫೆಬ್ರವರಿ 2 ನೆ ತಾರೀಖಿನ ಸಂಚಿಕೆಯಿಂದ ಜೂನ್ 28 ನೆ ತಾರೀಖಿನ ಸಂಚಿಕೆಯ ವರೆಗೂ ಪ್ರತಿಯೊಂದು ಪತ್ರಿಕೆಯ ಮೇಲೂ ಬೇರೆ ಬೇರೆ ನಂಬರು ಕೊಡಲ್ಪಟ್ಟು ಅವುಗಳಲ್ಲಿ 30 ನಂಬರುಗಳು ಆರಿಸಲ್ಪಟ್ಟು ಸೀಲ್ ಮಾಡಿದ ಕವರಿನಲ್ಲಿ ಭದ್ರವಾಗಿಡಲ್ಪಟ್ಟಿದ್ದು ಜೂನ್ ತಿಂಗಳ ಕಡೆಯಲ್ಲಿ ಈ 30 ನಂಬರುಗಳನ್ನು ಚೀಟಿಗೆ ಹಾಕಿ ಅವುಗಳಲ್ಲಿ ಅನುಕ್ರಮವಾಗಿ ಯಾವ 3 ನಂಬರುಗಳಿಗೆ ಬಹುಮಾನದ 3 ಚೀಟಿಗಳು ತೇಲುತ್ತವೋ ಆ 3 ನಂಬರುಗಳು ಜುಲೈ ತಿಂಗಳ 5 ನೇ ತಾರೀಖಿನ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುವು.

ಬಹುಮಾನ ಬಂದಿರುವ ನಂಬರನ್ನು 1924 ನೆ ಫೆಬ್ರವರಿ 2 ನೆ ತಾರೀಖಿನ ಪತ್ರಿಕೆಯಿಂದ ಜೂನ್ 28 ನೆ ತಾರೀಖಿನ ಪತ್ರಿಕೆಯ ವರೆಗೆ ಪ್ರತಿಯೊಂದುವಾರದ ಸ್ಟಾರ್ ಪತ್ರಿಕೆಯ ಸಮೇತ ಕಳುಹಿಸಿಕೊಟ್ಟಲ್ಲಿ ಅವರವರ ನಂಬರಿಗೆ ಬಂದಿರುವ ಬಹುಮಾನವು ಮನಿಯಾರ್ಡರ್ ದ್ವಾರ ಕಳುಹಲ್ಪಡುವುದು.

ಹಾಗೆ ಎಲ್ಲವಾರದ ಪತ್ರಿಕೆಗಳು ಕಳುಹಲ್ಪಡದೆ ಬಹುಮಾನದ ನಂಬರಿರುವ ಪತ್ರಿಕೆಯು ಮಾತ್ರ ಕಳುಹಲ್ಪಟ್ಟಲ್ಲಿ ಅದಕ್ಕೆ ಬಹುಮಾನದ್ರವ್ಯವು ಖಂಡಿತವಾಗಿಯೂ ದೊರೆಯುವುದಿಲ್ಲವೆಂಬಂಶವನ್ನು ವಾಚಕರು ಮರೆಯಬಾರದು.

ಹೀಗೆ ಬಹುಮಾನವನ್ನು ಹೊಂದುವವರು ಪತ್ರಿಕಾ ಚಂದಾಹಣವನ್ನುಳಿಸಿಕೊಂಡಿದ್ದಲ್ಲಿ ಬಹುಮಾನದ ಮೊಬಲಗಿನಲ್ಲಿ ಚಂದಾಹಣವು ಕಳೆಯಲ್ಪಟ್ಟು ಉಳಿದ ಹಣವು ಕಳುಹಲ್ಪಡುವುದು. ಈ ನೂತನ ಬಹುಮಾನ ವಿನಿಯೋಗವಿಧಾನವು ಸ್ಟಾರ್ ಪತ್ರಿಕಾ ವಾಚಕಜನಾದರಣೀಯವಾಗಿದ್ದಲ್ಲಿ ಮುಂದೆಯೂ ನಡಿಸಲ್ಪಡುವುದು.

ಸಂಪಾದಕ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜನವರಿ ತಾ|| ೨೭ ನೆಯ ಭಾನುವಾರ.

ಲೇಬರ್ (ಕೂಲಿಕಾರರ) ಪ್ರಭುತ್ವವು.

ಬ್ರಿಟಿಷ್ ಪಾರ್ಲಿಮೆಂಟ್ ಸಭಾಸ್ತಾರರ ಪುನರಾವೃತ್ತಿ ಎಣಿಕೆಯಲ್ಲೂ ಕನ್ಸರ್ವೇಟಿವ್ ಪಕ್ಷದವರ ಸಂಖ್ಯೆಯು ಇತರ ಪಕ್ಷದವರ ಸಂಖ್ಯೆಗಳಿಗಿನ್ನ ಅಧಿಕವಾಗಿ ಬಂದುದರಿಂದ ಆಂಗ್ಲ ಪ್ರಭುತ್ವಾಧಿಕಾರವು ಆ ಪಕ್ಷದವರ ಕೈಯಲ್ಲೇ ಉಳಿಯಿತಲ್ಲದೆ ಮಿ|| ಬಾಲ್ಡ್ವಿನ್‌ರವರೇ ಮುಖ್ಯ ಮಂತ್ರಿಪದವಿಯಲ್ಲಿರುವಂತಾಯಿತು. ಆದರೂ ಇವರಿಗೆ ಇದಿರುಪಕ್ಷದವರಾದ ಲೇಬರುಪಕ್ಷದವರು "ಐದುಸಂವತ್ಸರಗಳ ಪರಿಪಾಲನದಲ್ಲಿ ಕನ್ಸರ್ವೇಟಿವ್ ಪಕ್ಷದವರು ಐರ್ಲೆಂಡು, ಭರತಖಂಡ, ರಷ್ಯಾ ದೇಶಗಳಲ್ಲೆಲ್ಲಾ ಬ್ರಿಟಿಷ್ ಸಾಮ್ರಾಜ್ಯದ ಹೆಸರಿಗೆ ಅಪಕೀರ್ತಿಯನ್ನುಂಟುಮಾಡಿದರು" ಎಂದು ಮೊದಲಾಗಿ ಸಭೆಯಲ್ಲಿ ಚರ್ಚಿಸಿದರಲ್ಲದೆ ವಿಶ್ವಾಸರಾಹಿತ್ಯ ಸೂಚನೆಯು ಆ ಪಕ್ಷದ ಮುಖಂಡರಾದ ಮಿ|| ರಾಮ್ಸೆಮೆಕ್ಡೊನಾಲ್ಡರವರಿಂದ ತರಲ್ಪಟ್ಟು ಲಿಬರಲ್ ಪಕ್ಷದವರಿಂದ ಸಮರ್ಥಿಸಲ್ಪಟ್ಟುದರ ಮೇಲೆ ಕನ್ಸರ್ವೇಟಿವ್ ಪಕ್ಷದವರು ಪರಾಜಿತರಾಗಿ ಸ್ಟಾನ್ಲೆಬಾಲ್ಡ್ವಿನ್‌ರವರು ತಮ್ಮ ಮುಖ್ಯಮಂತ್ರಿಪದವಿಗೆ ರಾಜೀನಾಮೆಯನ್ನು ಕೊಟ್ಟುಬಿಟ್ಟರು. ಚಕ್ರವರ್ತಿಗಳು ಅವರ ರಾಜೀನಾಮೆಯನ್ನು ಅಂಗೀಕರಿಸಿ ಲೇಬರ್ ಪಕ್ಷದ ಮುಖಂಡರಾದ ರಾಮ್ಸೆಮೆಕ್ಡೊನಾಲ್ಡರವರಿಗೆ ಮಂತ್ರಿಪದವಿಯನ್ನು ವಹಿಸಿಕೊಟ್ಟರು.

ಜೇಮ್ಸ್‌ರಾಮ್ಸೆ ಮೆಕ್ಡೊನಾಲ್ಡ್‌ರವರು ಸ್ಕಾಟ್ಲೆಂಡಿಗೆ ಉತ್ತರದಲ್ಲಿರುವ ಲೂಸಿಮೌತ್ ಎಂಬಲ್ಲಿ ಬೇಸಾಯದ ಕುಟುಂಬದಲ್ಲಿ 1866 ರಲ್ಲಿ ಜನಿಸಿದರು. ಇವರು ಬಾಲ್ಯದಲ್ಲಿ ಬಹಳ ಮೇಧಾವಿಗಳಾಗಿಯೂ, ಚಟವಟಿಕೆಯುಳ್ಳವರಾಗಿಯೂ ಇದ್ದುದರಿಂದ ಬಾಲವಿದ್ಯಾಭ್ಯಾಸವನ್ನು ಅತಿತ್ವರೆಯಲ್ಲಿ ಮುಗಿಯಿಸಿ ಪ್ರೌಢವಿದ್ಯಾಭ್ಯಾಸಕ್ಕಾಗಿ ಲಂಡನ್ನಿಗೆ ಬಂದು ಅಲ್ಲಿ ಒಂದು ವಾರಕ್ಕೆ 15 ಷಿಲ್ಲಿಂಗು ಸಂಬಳದಮೇಲೆ ಕಾಗದಗಳ ಮೇಲೆ ವಿಳಾಸವನ್ನು ಬರೆಯುವ ಕೆಲಸಕ್ಕೆ ಸೇರಿಕೊಂಡಿದ್ದು ಕೆಲಕಾಲಾನಂತರ ಪ್ರೌಢವಿದ್ಯಾಭ್ಯಾಸಕ್ಕಾರಂಭಿಸಿ ವಿಜ್ಞಾನಶಾಸ್ತ್ರದಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡು 1888ರಲ್ಲಿ ಪಾರ್ಲಿಮೆಂಟ್ ಮೆಂಬರಾದ ಟಲೂಫ್‌ರವರಿಗೆ ಪ್ರೈವೇಟ್ ಸೆಕ್ರೆಟರಿಯಾಗಿದ್ದು ವೃತ್ತಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು. ಅಲ್ಲಿಂದ ಲೇಬರ್ ಪಕ್ಷಕ್ಕೆ ಸೇರಿ 1896 ರಲ್ಲೂ 1900 ರಲ್ಲೂ ಪಾರ್ಲಿಮೆಂಟ್ ಸಭೆಗೆ ಮೆಂಬರಾಗಲು ಪ್ರಯತ್ನಿಸಿ 1901 ರಲ್ಲಿ ಲಂಡನ್ ಕೌಂಟಿ ಕೌನ್ಸಿಲ್ ಪಕ್ಷದಿಂದಲೂ 1906 ರಲ್ಲಿ ಲೀಸಿಸ್ಟರಿನಿಂದಲೂ ಪಾರ್ಲಿಮೆಂಟ್ ಸಭಾಸ್ತಾರರಾಗಿ ಆರಿಸಲ್ಪಟ್ಟರು. ಇವರು ತಮ್ಮ ಬುದ್ಧಿಶಕ್ತಿಯಿಂದ ಲೇಬರ್ ಪಕ್ಷದ ನಾಯಕತ್ವವನ್ನು ವಹಿಸಿಕೊಂಡು ಕೂಲಿಕಾರರ ಕ್ಷೇಮಚಿಂತನೆಗಾಗಿ ಪಾಟುಪಡುತ್ತಾ ಬಂದರಾದರೂ ಮಹಾ ಯುದ್ಧಕಾಲದಲ್ಲಿ ಮಾತ್ರ ನಿರಪರಾಧಿಗಳ ಮೇಲೆ ಬ್ರಿಟಿಷರು ಯುದ್ಧಕ್ಕೆ ನಿಂತರೆಂದು ಅಸಮಾಧಾನಪಟ್ಟುಕೊಂಡು ಯಾವಗೋಜಿಗೂ ಹೋಗದೆ ಕೆಲಕಾಲ ಮೌನವಾಗಿದ್ದರು. 1922 ರಲ್ಲಿ ಪುನಃ ಪಾರ್ಲಿಮೆಂಟ್ ಸಭಾಸ್ತಾರರಾಗಿ ಆರಿಸಲ್ಪಟ್ಟು ಲೇಬರ್‌ಪಕ್ಷದ ನಾಯಕತ್ವವನ್ನು ವಹಿಸಿಕೊಂಡು ಪ್ರಭುತ್ವಪಕ್ಷದವರ ಇದಿರಾಳಾಗಿ ನಿಂತರು. ಇವರು ಪ್ರತಿಪಕ್ಷವನ್ನು ವಹಿಸಿ ವಾದಿಸುವ ಸಾಮರ್ಥ್ಯವು ಪ್ರತಿಯೊಬ್ಬರಿಗೂ ವಿಸ್ಮಯವನ್ನುಂಟುಮಾಡುವುದು. ಇವರು ಬಹುದೂರ ದೇಶಪರ್ಯಟನಮಾಡಿ ಪರದೇಶಗಳ ಸ್ಥಿತಿಯನ್ನು ಚೆನ್ನಾಗಿ ತಿಳಿದಿರುವವರಾಗಿರುವರಲ್ಲದೆ ಭರತಖಂಡದ ಸಿವಿಲ್ ಉದ್ಯೋಗ ವಿಚಾರವನ್ನು ತಿಳಿಯಲು ಸೀಮೆಯಿಂದ 1912ರಲ್ಲಿ ಬಂದಿದ್ದ ರಾಯಲ್ ಕಮಿಷನ್ನಿನ ಮೆಂಬರುಗಳಲ್ಲಿ ಒಬ್ಬರಾಗಿದ್ದು ಭರತಖಂಡದ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ತಿಳಿದಿರುವವರಾಗಿರುವರು. ಇವರು ಆಡಂಬರರಹಿತರಾಗಿಯೂ ಆಕರ್ಷಣಾಶಕ್ತಿಯುಳ್ಳವರಾಗಿಯೂ, ಮಹಾವಾಗ್ಮಿಗಳಾಗಿಯೂ, ಧೈರ್ಯಶಾಲಿಗಳಾಗಿಯೂ ಇರುವರು. ಮತ್ತು ಸಾಮಾಜಿಕ ಹಾಗೂ ಕಾರ್ಮಿಕವಿಚಾರಗಳಲ್ಲಿಯೂ, ಭರತಖಂಡದ ವಿಚಾರದಲ್ಲಿಯೂ ಕೆಲ ಗ್ರಂಥಗಳನ್ನು ಬರೆದಿರುವರು. ಅಲ್ಲದೆ 1911 ರಲ್ಲಿ ಗತಿಸಿದ ತಮ್ಮ ಹೆಂಡತಿಯ ಜ್ಞಾಪನಾರ್ಥವಾಗಿ ಆಕೆಯ ಜೀವಿತಚರಿತ್ರೆಯನ್ನು ಬರೆದಿರುವರು. ಇವರಿಗೆ ಇಬ್ಬರು ಪುತ್ರರೂ ಮೂವರು ಪುತ್ರಿಯರೂ ಇರುವರು. ಭರತಖಂಡದ ಸ್ಥಿತಿಯನ್ನು ಪ್ರತ್ಯಕ್ಷವಾಗಿ ತಿಳಿದವರಾಗಿ ಭಾರತೀಯರ ಮೇಲೆ ಸಾನುಭೂತಿಯುಳ್ಳವರಾಗಿರುವುದರಿಂದ ಇವರ ಮುಖ್ಯಮಂತ್ರಿತ್ವದಲ್ಲಿ ಭರತಖಂಡಕ್ಕೆ ಉಪಕಾರವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರುಗಳನ್ನು ಚುನಾಯಿಸುವ ವಿಚಾರದಲ್ಲಿ ಸರ್ಕಾರದ ಕೆಲ ಸೂಚನೆಗಳು.

ಚುನಾವಣೆಯ ದಿವಸ ಓಟುಗಳನ್ನು ಕೊಡಲು ಬರುವ ಜನರು ಕಾಲವ್ಯವಧಾನವಿಲ್ಲದೆ ಓಟುಮಾಡಲಾಗದಿದ್ದಲ್ಲಿ ಮಾರನೆಯ ದಿನ ಒಂದು ಅಥವಾ ಎರಡನೆಯ ದಿನ ಬರುವ ಓಟರುಗಳೂ ಓಟನ್ನು ಮಾಡಬಹುದೆ ಎಂಬ ವಿಚಾರವಾಗಿ ಶಿವಮೊಗ್ಗಾ ಮತ್ತು ಕೋಲಾರ ಡಿಸ್ಟ್ರಿಕ್ಟುಗಳ ಡೆ|| ಕಮಿಷನರುಗಳೂ, ಅನಕ್ಷರಸ್ಥರಾದವರು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾಗಲು ಉಮೇದುವಾರರಾಗಿ ನಿಲ್ಲಬಹುದೆ ಎಂಬ ವಿಚಾರದಲ್ಲಿ ಕೋಲಾರ ಡಿ|| ಕಮಿಷನರೂ ಸರ್ಕಾರದವರ ಸೂಚನೆಯನ್ನು ಕೇಳಿರುವಲ್ಲಿ,

ರಿಜಿಸ್ಟರಾಗಿರುವ ಅಂದರೆ ಸರ್ಕಾರದಿಂದ ಪ್ರಕಟಿಸಲ್ಪಟ್ಟಿರುವ ಓಟರುಗಳ ಲಿಸ್ಟಿನಲ್ಲಿ ಕಂಡ ಓಟರುಗಳು ಕ್ಲುಪ್ತವಾದ ದಿವಸ ಓಟುಮಾಡುವ ಸ್ಥಳಕ್ಕೆ ಪ್ರತ್ಯಕ್ಷವಾಗಿ ಬರಬೇಕಾಗಿದೆ ಮತ್ತು ಪೋಲಿಂಗ್ ಆಫೀಸರು ತಾವು ಇಷ್ಟಪಟ್ಟಲ್ಲಿ ಮಾರನೆಯ ದಿನವೂ ಓಟನ್ನು ತೆಗೆದುಕೊಳ್ಳಬಹುದಾಗಿದೆ. ನ್ಯಾಯವಿಧಾಯಕ ಸಭೆಗೆ ಮೆಂಬರುಗಳನ್ನು ಚುನಾಯಿಸತಕ್ಕವರ ಅಥವಾ ಮೆಂಬರುಗಳಾಗಲು ಉಮೇದುವಾರರಾಗಿ ನಿಲ್ಲತಕ್ಕವರ ವಿದ್ಯಾಯೋಗ್ಯತೆಯ ವಿಚಾರದಲ್ಲಿ ಯಾವ ರೂಲ್ಸೂ ಮಾಡಲ್ಪಟ್ಟಿಲ್ಲವು. ಪೋಸ್ಟ್ ಮೂಲಕ ಓಟುಗಳನ್ನು ಕೊಡಬಹುದೆಂಬುದು ವಿಶೇಷ ಉದ್ದೇಶವನ್ನುಳ್ಳ ಸಂಘಗಳಿಂದ ಮೆಂಬರುಗಳನ್ನು ಆರಿಸತಕ್ಕವರಿಗೆ ಮಾತ್ರ ಅನ್ವಯಿಸತಕ್ಕುದಾಗಿದೆ ಎಂದು ಸರ್ಕಾರದಪ್ಪಣೆಯಾಗಿದೆ. ಇದನ್ನು ಪ್ರತಿಯೊಬ್ಬ ಓಟರೂ ಗಮನಿಸುವುದಾವಶ್ಯಕವು.

ಸ್ವದೇಶದ ವೃತ್ತಾಂತಗಳು.

ಕೊಡಗು ಪ್ರಾಂತಕ್ಕೆ ಹೊಸದಾಗಿ ಏರ್ಪಾಟಾಗಿರುವ ಕೌನ್ಸಿಲ್ ಸಭೆಯಾರಂಭೋತ್ಸವವು ಕೊಡಗಿನ ಚೀಫ್ ಕಮಿಷನರಾದ ಬ್ರಿಟಿಷ್ ರೆಸಿಡೆಂಟರಿಂದ ನಾಳೆಯದಿನ ನಡಿಸಲ್ಪಡುವುದು.

ರಾಜಧಾನಿಯ ಮ|| ಎಂ. ಪುಟ್ಟಯ್ಯ ಅಂಡ್ ಸನ್ಸ್‌ರವರೂ, ನಂಜನಗೂಡಿನ ಸನಾತನ ಧರ್ಮಸಭೆಯವರೂ, ಮೈಸೂರು ಕೃಷ್ಣಾ ಪ್ರೆಸ್ಸಿನವರೂ ಪ್ರಕಟಿಸಿರುವ ಕ್ಯಾಲೆಂಡರುಗಳನ್ನೂ, ಮ|| ಯಜ್ಞಾನ್ ಸಂಪತ್ಕೃಷ್ಣಜೋಯಿಸರು ಗುಣಿಸಿ ಪ್ರಕಟಿಸಿರುವ ರಕ್ತಾಕ್ಷಿ ಸಂವತ್ಸರದ ಪಂಚಾಂಗವನ್ನೂ ವಿಶ್ವಾಸದಿಂದ ಸ್ವೀಕರಿಸಿರುವೆವು.

ಬೊಂಬಾಯಿಗೆ ದಯಮಾಡಿಸಿದ್ದ ಮಹಾಮಾತೃಶ್ರೀ ವಾಣಿವಿಲಾಸ ಸನ್ನಿಧಾನ ಸಿ.ಐ.ಇ. ಯವರೂ, ಜ್ಯೇಷ್ಠ ರಾಜಕುಮಾರಿಯವರೂ ತಾ|| 23ರಲ್ಲೂ, ಮೂರನೆಯ ರಾಜಕುಮಾರಿಯವರು ತಾ|| 25ರಲ್ಲೂ ರಾಜಧಾನಿಗೆ ಚಿತ್ತೈಸಿದರು. ಮತ್ತು ಶ್ರೀಮದ್ಯುವರಾಜರವರ ಸ್ವಾರಿಯು ನೆನ್ನೆಯ ದಿನ ಬೆಂಗಳೂರಿಗೆ ಚಿತ್ತೈಸುವುದಾಗಿ ನಿರೀಕ್ಷಿಸಲ್ಪಟ್ಟಿದ್ದಿತು.

ರಾಜಧಾನಿಗೆ ಸೇರಿದ ಕನ್ನೇಗೌಡನಕೊಪ್ಪಲಿನಲ್ಲೂ ಅದರ ಸುತ್ತುಮುತ್ತಲೂ ಇರುವ ಗ್ರಾಮಗಳಲ್ಲೂ ವಾಂತಿಭೇದಿರೋಗವು ಪ್ರಾರಂಭವಾಗಿರುವುದರಿಂದ ಆ ಗ್ರಾಮಗಳಿಂದ ಬರುವ ಹಾಲು ಮೊಸರು ಮೊದಲಾದ ತಿಂಡಿಯ ಪದಾರ್ಥಗಳನ್ನು ತೆಗೆದುಕೊಳ್ಳಲಾಗದೆಂದೂ, ನೊಣಗಳು ಮನೆಗಳಲ್ಲಿ ಸೇರದಂತೆ ನೋಡಿಕೊಳ್ಳಬೇಕೆಂದೂ, ತಂಗಳನ್ನು ತಿನ್ನಬಾರದೆಂದೂ, ಶುಚಿಯಾಗಿರಬೇಕೆಂದೂ ರಾಜಧಾನಿಯ ಹೆಲ್ತಾಫೀಸರು ಎಚ್ಚರಿಸಿರುವರು.

ಕಿಲಾಫತ್ತಿನ ಪ್ರಮುಖರುಗಳಾದ ಮಿ|| ಷೌಕತಾಲಿಯವರೂ, ಅವರ ತಾಯಿಯವರೂ, ಡಾಕ್ಟರ್ ಕಿಚಲೂಯವರೂ ಡಾಕ್ಟರ್ ಮಹಮುದ್‌ರವರೂ ಕಳೆದ ತಾ|| 25ರ ಬೆಳಿಗ್ಗೆ ಬೆಂಗಳೂರು ದಂಡಿಗೆ ಬಂದರು. ಅಲ್ಲಿಯ ಮಹಮ್ಮದೀಯರು ಈ ಪ್ರಮುಖರನ್ನು ಸಿಲ್ಕಾ ಚಿಲ್ಲಿ ಇಂಗ್ಲೊಂಡು ಮರ್ಯಾದಿಸಿ ಅವರಿಗಾಗಿ ಏರ್ಪಡಿಸಿದ್ದ ಬಿಡಾರಕ್ಕೆ ಕರೆದುಕೊಂಡುಬಂದರು. ಇವರುಗಳು ಆ ದಿವಸ ಮಧ್ಯಾಹ್ನ ಜುಮ್ಮಾಮಸೀದಿಗೆ ಹೋಗಿ ನಮಾಜನ್ನು ಮಾಡಿದರು ಮತ್ತು ಬೆಂಗಳೂರಿನಲ್ಲಿ ಇರುವವರೆಗೂ ಬಹಿರಂಗವಾಗಿ ಯಾವ ಭಾಷಣಗಳನ್ನೂ ಮಾಡಕೂಡದೆಂದು ಅಲ್ಲಿಯ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ನೋಟೀಸನ್ನು ಕೊಟ್ಟಿರುವರು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡೆದ ಕೊಲೆಯನ್ನು ಆಫೀಸಿನ ರಿಕಾರ್ಡುಕೀಪರ್ ಕೃಷ್ಣರಾಯನೆಂಬುವವನು ನಡೆಸಿದನೆಂಬುದರಮೇಲೆ ಪೋಲೀಸರು ಅವನನ್ನು ಸೆರೆಹಿಡಿದು ಕಳುವಾಗಿದ್ದ 5000 ರೂಪಾಯಿಯನ್ನು ಅವನಿಂದ ಬರಮಾಡಿಕೊಂಡಿರುವುದಾಗಿ ಹಿಂದೆ ತಿಳಿಸಲ್ಪಟ್ಟಿದ್ದಿತಷ್ಟೆ. ಪೋಲೀಸಿನವರು ಇವನನ್ನು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿ ಈ ತಾ|| 29ರ ವರೆಗೆ ರಿಮ್ಯಾಂಡ್ ತೆಗೆದುಕೊಂಡಿದಾರೆ, ಮತ್ತು ಕೃಷ್ಣರಾಯನು ಕೊಲೆಯನ್ನು ತಾನು ನಡಿಸಿರುವುದಾಗಿ ಒಪ್ಪಿಕೊಂಡಿರುವುದರಿಂದ ಅನುಮಾನದಮೇಲೆ ಸೆರೆಹಿಡಿದಿದ್ದ ಅದೇ ಆಫೀಸಿನ ಇಬ್ಬರು ಆಳುಗಳನ್ನು ಬಿಟ್ಟುಬಿಡುವವರಾಗಿರುವರು. ಕೊಲ್ಲಲ್ಪಟ್ಟ ಇಬ್ಬರು ಸೇವಕರ ಕುಟುಂಬಗಳಿಗೆ ಯುಕ್ತವಾದ ಪರಿಹಾರದ್ರವ್ಯವನ್ನು ಕೊಡಬೇಕೆಂದು ಮ್ಯುನಿಸಿಪಾಲಿಟಿಯವರು ಯೋಚಿಸುತ್ತಿರುವುದಾಗಿಯೂ, ಮ್ಯುನಿಸಿಪಾಲಿಟಿಗೆ ಪ್ರತಿದಿನವೂ ಬರುವ ಹಣವು ಆ ದಿವಸದ ಸಾಯಂಕಾಲದೊಳಗೆ ಮೈಸೂರು ಬ್ಯಾಂಕಿಗೆ ಕಳುಹಲ್ಪಡುವಂತೆ ಏರ್ಪಡಿಸಲ್ಪಟ್ಟಿರುವುದಾಗಿಯೂ ತಿಳಿಯಬಂದಿದೆ.

ಬೆಂಗಳೂರು ಸುಲ್ತಾನ್‌ಪೇಟೆಯಲ್ಲಿ ವಾಸವಾಗಿರುವ ಪೂನಂಚಂದ್ ವಾಡಿಲಾಲ್ ಎಂಬುವವನು ತನ್ನ ಮನೆಯಲ್ಲಿ ಒಂದು ಭಾಗವನ್ನು ಮಣಿಲಾಲನೆಂಬುವವನಿಗೆ ಬಾಡಿಗೆಗೆ ಕೊಟ್ಟಿದ್ದನು. ಮನೆ ಯಜಮಾನನ ಹೆಂಡತಿಯ ಕೂಡ ಆ ಮಣಿಲಾಲನ ಹೆಂಡತಿಯು ಬಹಳ ವಿಶ್ವಾಸವನ್ನು ಬೆಳಸಿಕೊಂಡಿದ್ದು ಆಕೆಯ ಆಭರಣದ ಪೆಟ್ಟಿಗೆಯ ಬೀಗದಕೈಯನ್ನು ತನ್ನ ವಶಮಾಡಿಕೊಂಡು ಪೆಟ್ಟಿಗೆಯ ಬಾಗಿಲನ್ನು ತೆಗೆದು 2100 ರೂ. ಬೆಲೆಯಾಭರಣಗಳನ್ನು ಅಪಹರಿಸಿಕೊಂಡು ಪೆಟ್ಟಿಗೆಯ ಬಾಗಲನ್ನು ಮುಚ್ಚಿ ಬೀಗ ಹಾಕಿ ಯಥಾಪ್ರಕಾರ ಇದ್ದಲ್ಲಿ ಮಡಗಿಬಿಟ್ಟು ಕೊಚ್ಚಿ ಸಂಸ್ಥಾನಕ್ಕೆ ಹೋಗಿಬರುತ್ತೇವೆಂದು ಹೇಳಿ ಕೂಡಲೆ ಮನೆಯನ್ನು ಬಿಟ್ಟು ಹೊರಟುಹೋದರು. ಇದಾದ 8 ದಿವಸಗಳಮೇಲೆ ಮನೆ ಯಜಮಾನಿಯು ಆಭರಣಗಳನ್ನು ತೆಗೆದುಕೊಳ್ಳಲು ಪೆಟ್ಟಿಗೆಯ ಬೀಗವನ್ನು ತೆಗೆದುನೋಡುವಲ್ಲಿ ಆಭರಣಗಳು ಮಾಯವಾಗಿದ್ದುದನ್ನು ಕಂಡು ದಿಗಿಲುಬಿದ್ದು ಪೋಲೀಸಿಗೆ ತಿಳಿಸಿದರು. ಪೋಲೀಸರು ಆ ಕಳ್ಳ ದಂಪತಿಗಳನ್ನು ಹುಡುಕಿಕೊಂಡು ಕೈಲಾಸಿನಲ್ಲಿ ಒಂದು ಸತ್ರದಲ್ಲಿ ಅವರನ್ನು ಹಿಡಿದು ಶೋಧಿಸುವಲ್ಲಿ ಒಂದು ಕಂಠಾಭರಣವು ದೊರೆಯಿತು. ಅದರಮೇಲೆ ವಿಚಾರಿಸಿದುದಕ್ಕೆ ಉಳಿದ ನಗಗಳು ವಿಕ್ರಯಿಸಲ್ಪಟ್ಟು ಹೊಸದಾಗಿ ನಗಗಳು ಕೊಳ್ಳಲ್ಪಟ್ಟಿರುವುದಾಗಿ ತಿಳಿಯಬಂದುದರಮೇಲೆ ಆ ದಂಪತಿಗಳಿಬ್ಬರನ್ನೂ ಬೆಂಗಳೂರಿಗೆ ಕರೆದುಕೊಂಡು ಬಂದು ವಿಚಾರಣೆಗೆ ಗುರಿಮಾಡಿರುವರು.

ರಾಜಧಾನಿಯ ಓಟರುಗಳಲ್ಲಿ ವಿಜ್ಞಾಪನೆ.

ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳಿಗೆ ರಾಜ್ಯಾಡಳಿತದಲ್ಲಿ ವಿಶೇಷಾಧಿಕಾರವನ್ನು ಕಲ್ಪಿಸಿಕೊಡಬೇಕೆಂಬ ಸತ್ಸಂಕಲ್ಪದಿಂದ ಅನುಗ್ರಹಿಸಿರುವ ನೂತನ ರಾಜಶಾಸನದ ಪ್ರಕಾರ ತಿದ್ದುಪಾಟಾಗಿರುವ ಪ್ರಜಾಪ್ರತಿನಿಧಿ ಸಭೆಗೆ ನಾಲ್ವರನ್ನೂ, ನ್ಯಾಯವಿಧಾಯಕ ಸಭೆಗೆ ಒಬ್ಬರನ್ನೂ ಮೆಂಬರುಗಳನ್ನಾಗಿ ಬರುವ ಫೆಬ್ರವರಿ ತಾರೀಖು 15 ನೇ ಶುಕ್ರವಾರದ ದಿವಸ ರಾಜಧಾನಿಯಲ್ಲಿ ಚುನಾಯಿಸಬೇಕಾಗಿರುವುದಷ್ಟೆ? ಹೀಗೆ ಚುನಾಯಿಸಲ್ಪಡತಕ್ಕ ಮೆಂಬರುಗಳು ಧೈರ್ಯದಿಂದಲೂ, ನಿರ್ದಾಕ್ಷಿಣ್ಯದಿಂದಲೂ, ನ್ಯಾಯರೀತಿಯಿಂದಲೂ ಪ್ರಜೆಗಳ ಕುಂದುಕೊರತೆಗಳನ್ನು ಸಭೆಯಲ್ಲಿ ಸರ್ಕಾರದವರಿಗೆ ಅರಿಕೆ ಮಾಡಿ ಅವುಗಳ ಪರಿಹಾರೋಪಾಯಗಳನ್ನು ಸೂಚಿಸಲು ಸಮರ್ಥರಾದ ಮೆಂಬರುಗಳನ್ನು ರಾಜಧಾನಿಯ ಪ್ರಜೆಗಳ ಪ್ರತಿನಿಧಿಗಳನ್ನಾಗಿ ಆರಿಸಿ ಕಳುಹಿಸುವ ಭಾರವು ಓಟರುಗಳಾದ ನಮ್ಮ ಮೇಲೆ ಬಿದ್ದಿರುತ್ತದೆ.

ಮೇಲ್ಕಂಡ ಗುಣಪೂರ್ಣರಾಗಿಯೂ ದೇಶಸೇವೆಯೇ ದೇವರ ಸೇವೆಯೆಂದು ತಿಳಿದು ಸ್ವಾರ್ಥಬುದ್ಧಿಯಿಲ್ಲದೆ ಪ್ರಜಾಸೇವೆಯನ್ನು ಮಾಡುತ್ತ ನಮ್ಮಗಳ ಪ್ರತಿನಿಧಿಗಳಾಗಿ ಮೇಲ್ಕಂಡ ಸಭೆಗಳಿಗೆ ಮೆಂಬರುಗಳಾಗಿ ಹೋಗಲು ಅರ್ಹರಾಗಿರುವ (1) ಮ್ಯುನಿಸಿಪಲ್ ಕೌನ್ಸಿಲರೂ, ಟ್ರಸ್ಟ್‌ಬೋರ್ಡ್ ಮತ್ತು ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರೂ ಆದ ಮಿ|| **ಮಹಮ್ಮದ್ ಸೇಟರು,** (2) ಮ್ಯುನಿಸಿಪಲ್ ಕೌನ್ಸಿಲರೂ ಟ್ರಸ್ಟ್‌ಬೋರ್ಡ್ ಮೆಂಬರೂ ಆದ ಮ|| **ಕೆ. ಧನಕೋಟಿಸೆಟ್ಟರು,** (3) ಅಡ್ವೋಕೇಟರಾದ ಮ|| **ಎಚ್. ಸಿ. ದಾಸಪ್ಪ,** ಬಿ. ಎ., ಎಲ್‌ಎಲ್. ಬಿ., ಯವರು, (4) ಮ್ಯುನಿಸಿಪಲ್ ಕೌನ್ಸಿಲರೂ ಮೈಸೂರು ಸ್ಟಾರ್‌ಪತ್ರಿಕಾ ಎಡಿಟರೂ ಆದ ಮ|| **ವೈ. ವಿರೂಪಾಕ್ಷಯ್ಯನವರು** ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಲು ಉಮೇದುವಾರರಾಗಿ ನಿಂತಿರುತ್ತಾರೆ. ಇವರುಗಳಲ್ಲಿ ಮಿ|| ಮಹಮ್ಮದ್‌ಸೇಟರು ಮಾತ್ರ ನ್ಯಾಯವಿಧಾಯಕ ಸಭೆಗೆ ಸಹ ಮೆಂಬರಾಗಲು ಉಮೇದುವಾರರಾಗಿರುತ್ತಾರೆ.

ಈ ನಾಲ್ವರು ಉಮೇದುವಾರರುಗಳು ನಮ್ಮಗಳ ನಿರೀಕ್ಷೆಯನ್ನು ಸರ್ವ ವಿಧದಲ್ಲೂ ಸಾರ್ಥಕಪಡಿಸುತ್ತಾರೆಂಬ ಭರವಸೆಯು ನಮ್ಮಗಳಿಗೆ ಸಂಪೂರ್ಣವಾಗಿರುವುದರಿಂದ ತಾವು ತಮ್ಮ ಘನವಾದ ಓಟುಗಳನ್ನು ಅವರುಗಳಿಗೆ ಕೊಟ್ಟು ಮತ್ತು ತಮ್ಮ ಮಿತ್ರರುಗಳಿಂದ ಕೊಡಿಸಿ ಅವರುಗಳು ಉತ್ತೀರ್ಣರಾಗಿ ಬಂದು ಪ್ರಜಾಸೇವೆಯನ್ನು ಇತೋಪ್ಯತಿಶಯವಾಗಿ ಮಾಡಲು ಉತ್ತೇಜನವನ್ನು ಕೊಡುವವರಾಗಬೇಕೆಂದು ಪ್ರಾರ್ಥಿಸುವ,

ತಮ್ಮ ಮಿತ್ರರಾದ,

1. ಲೋಕಹಿತೈಷಿ ಎಚ್. ನಂಜುಂಡರಾಜ ಅರಸ್,
2. ಎಂ. ಎಲ್. ವರ್ಧಮಾನಯ್ಯ (ಸಾಹುಕಾರ್ ಮತ್ತು ಎಸ್. ಕೆ. ಮಿಲ್ ಏಜಂಟರು)
3. ಮಹಮ್ಮದ್‌ಜಾಫರ್, (ರಿಟೈರ್ಡ್ ಪೊ|| ಸೂಪರಿಂಟೆಂಡೆಂಟ್ ಮತ್ತು ಮ್ಯು|| ಕ||)
4. ಎ. ಸಿ. ಲಿಂಗರಾಜ ಅರಸ್ (ಆನರೆರಿ ಸೆಕ್ರೆಟರಿ ಬೇಬಿವೀಕ್ ಕಮಿಟಿ)
5. ಮಿರ್‌ಸೈಜಾಮುದ್ದೀನ್‌ಅಲ್ಲಿಖಾನ್, ಅರಮನೆ ಮುಸಾಹೇಬರು.
6. ಬಿ. ತಿರುವೆಂಗಡಮೊದಲಿಯಾರ್ (ಮ್ಯುನಿಸಿಪಲ್ ಕೌನ್ಸಿಲರ್)
7. ಬಿ. ಮುನಿವೆಂಕಟಪ್ಪ (,,)
8. ಎಂ. ಕೆ. ಮಾಧವರಾವ್ (,,)
9. ಬಿ. ತಿಮ್ಮಯ್ಯ (,,)
10. ಎನ್. ಸೆಟ್ಟೂಜಿರಾವ್ (,,)
11. ಯು.ಆರ್. ಲಿಂಗೋಜಿರಾವ್ (,,)
12. ಎಂ. ನರಸಿಂಹಸ್ವಾಮಿ, (ಆನರೆರಿ ಮ್ಯಾಜಿಸ್ಟ್ರೇಟ್)
13. ಬಿ. ಜಿ. ರಾಜಾರಾಂ (,,)
14. ಎಸ್. ಸಿದ್ದೋಜಿರಾವ್, (,,)
15 ಕಾವೇರಿಪಟ್ಟಣಂ ಸುಬ್ಬರಾಯಶೆಟ್ಟಿ (,,)
16. ಎಂ. ಅರುಣಾಚಲ್ (,,)
17. ಕೆ. ಸಂಜೀವಶೆಟ್ಟಿ, ಬಿ. ಎ.
18. ಹಕೀಂ ಸಯ್ಯದುಮುಸ್ತಫಾ.
19. ಅಬ್ದುಲ್‌ವಾಹಿದ್‌ಹಾಜಿ ಅಲಿ ಮಹಮ್ಮದ್‌ಸೇಟ್ (ಜವಳಿ ಸಾಹುಕಾರ್)
20. ಎ. ಎನ್. ಸೂರ್ಯನಾರಾಯಣಶೆಟ್ಟಿ (ಸಾಹುಕಾರು)
21. ವೋಟುಮಲ್ ತಾರುಮಲ್ (ಮುಲ್ತಾನಿ ಸಾಹುಕಾರು)
22. ಕೆ. ಪೆರೋಜಷಾ ಪೂನ್ವಾಗರ್ (ಅಡ್ವೋಕೇಟರು)
23. ಮಾದಯ್ಯ (ಚಾಮುಂಡಿ ರೈಸ್‌ಮಿಲ್ಲು ಪ್ರೊಪ್ರೈಟರ್)
24. ಇಬ್ರಾಹಿಂ ಜುಸೂಫ್‌ಸೇಟ್ (ಸಂತೆಪೇಟೆ ಮಂಡಿ ಸಾಹುಕಾರು)
25. ಎಚ್. ಗಿರಿಯಪ್ಪ (ಅಕ್ಕಿ ಅಂಗಡಿ ಸಾಹುಕಾರು, ಸಂತೇಪೇಟೆ)
26. ತಮ್ಮಯ್ಯ, ಸುಬ್ಬಣ್ಣ (,,)
27. ಸಿ. ದೊಡ್ಡಜವರಪ್ಪ (,,)
28. ಎಂ. ಸೋಮಯ್ಯ (,,)
29. ದಾಸಪ್ಪ (,, ಅಗ್ರಹಾರ)
30. ಎಂ. ಎಸ್. ಸಿದ್ದಪ್ಪ (ಎಂ. ಎಸ್. ಸಿದ್ದಪ್ಪಾ ಅಂಡ್ ಬ್ರದರ್ಸ್ ಕೃಷ್ಣರಾಜಮೊಹಲ್ಲಾ)
31. ಜವಳಿಅಂಗಡಿ ಹೊರಸಾಮಯ್ಯ, (ದೊಡ್ಡಪೇಟೆ)
32. ಲಾ. ಆನಿಕೇತಯ್ಯ (ಜವಳಿ ವ್ಯಾಪಾರಿ)
33. ರಾಮಲಿಂಗಯ್ಯ (,,)
34. ಶಿವಲಿಂಗಯ್ಯ (ಲಕ್ಷ್ಮೀಸಹಾಯನಿಧಿ ಕೋ ಆಪರೇಟಿವ್ ಸೊಸೈಟಿ ಸೆಕ್ರೆಟರಿ)
35. ಚಂದ್ರಭಾನುಸಿಂಗ್ (ಆಯುರ್ವೇದ ಪಂಡಿತರು)
36. ಯಾದ್ಗಾರಲಿ (ಪೆನ್ಷನ್ ಪೋಲೀಸ್ ಇನ್ಸ್‌ಪೆಕ್ಟರು, ಮಂಡಿ)

The Local Committee for The National Baby Week, Mysore City, beg to acknowledge with many thanks the following Subscriptions.

1. Dr. Brajindranath Seal, M.A., P.H.D. Rs. 25.

Rs. 10 each.

1. Rajasabhabhushana, Dewan Bahadur C. Sri-anteswara Iyer, B.A., B.L. 2. Rana Lakshmana nji, Esq. 3. Dalavai Nanjaraj Urs, Esq. 4. okahitaishi H. Nanjundaraj Urs. 5. N. S. ubba Rao, Esq., M.A. (Cantab.) 6. A. R. Wadia, Esq, B.E., (Oxon.) 7. Sahukar Mohamed Sait, Esq. 8. Sahukar M. L. Vardhamaniah, Esq.

1. G. Srinivasa Iyar, Esq., B.A., M.L. Rs. 7.
1. Sree K. D. Rukminiamma, B.A. Rs. 6.

Rs. 5 each.

1. Sirdar M. Gopal Krishne Urs. 2. Dr. J. V. Mascarenhas, D.P.H. 3. A. V. Subramanyaraj Urs, Esq., (K.K.B.) 4. H. L. Devaraj Urs, Esq. 5. M. Ramaswami, Esq. 6. Sahukar B. Munivenkatappa, Esq. 7. Dharmaprakasha D. Banumiah. 8. Khan Bahadur P. Pollonjee. 9. Lokasevaniratha Amble Anniah Pandit. 10. Prof. S. V. Venkateswara Iyer, M.A., L.T. 11. Dr. Madhura Bai Ucbgaokar, L.M. & S. 12. Mrs. Lakshmana Sinji.

Rs. 3 each.

1. R. V. Krishnaswami Iyer, Esq. B.A. 2. Dr. S. Ranganna, L.M. & S. 3. Dr. T. S. Siddappa, L.M. & S. 4. T. G. Ramiyer, Esq., B.A., B.L. 5. M. Abdul Khader, Esq., B.A. 6. Rai Sahib R. A. Srinivasa Iyengar, B.A., B.C.E. 7. Sri K. Subbamma, B.A.

Rs. 2 each.

1. Mrs. R. A. Srinivasa Iyengar. 2. Mrs. S. P. Rajagopalachari. 3. Mrs. Rollo. 4. Sri U. Abhayambal, M.A. (Hons.) 5. Mrs. S. Ranganna. 6. Sri Nagamma, M.A., L.T. 7. Miss E. S. David. 8. Miss B. Gnanakkan. 9. Mrs. Theobald. 10. C. V. Subramanyaraj Urs, Esq. 11. P. S. Anantha Rao Esq. 12. M. S. Krishna Rao, Esq, B.A.,B.L. 13. B. M. Srikantiah, Esq., M.A., B.L. 14. V. K. Subraya Chetty, Esq. 15. Proprietor, Sri Chamundi Electric Stores, Mysore. 16. A. Sattar Sait, Esq. 17. H. N. Lingaraj Urs, Esq. 18. T. V. Thampiran, Esq., B.A. 19. S. Shamanna, Esq., M.A.

Re. 1 each.

1. Sri Y. K. Amritha Bai. 2. Sri D. Lakshmamma. 3. Mrs. T. Subbaraj Urs. 4. Mrs. Mysorewala. 5. Sri M. Venkatasubbamma. 6. S. Doreraju, Esq., B.A. 7. B. Devaraj Urs, Esq., M.A., LL.B. 8. K. Ramaswamiah, Esq., B.A.,B.L. 9. Sultan Mohamed Khan, Esq. 10. V. S. Raja Gopalachar, Esq. 11. H. V. Srikantiah, Esq., B.A., LL.B., B.Com.

A. C. LINGARAJ URS,
Hon. Secretary.

"To be continued"

ಬೆಂಗಳೂರು ನಗರದ ಪ್ರತಿನಿಧಿಕರ್ತರ ಸನ್ನಿಧಿಯಲ್ಲಿ ರಿಟೈರ್ಡ್ ಕೌನ್ಸಿಲರ್ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ. ಐ. ಇ., ಯವರು ಮಾಡುವ ವಿಜ್ಞಾಪನೆಗಳು.

ಪೌರಬಾಂಧವರೇ,

1. ಕೆಲವರು ಇಷ್ಟಮಿತ್ರರ ಸಲಹೆಯನ್ನನುಸರಿಸಿ ಮತ್ತು ತಮ್ಮಗಳೆಲ್ಲರ ಉದಾರವಾದ ಸಮ್ಮತಿಯನ್ನು ಪಡೆಯುತ್ತೇನೆಂಬ ನಿರೀಕ್ಷಣೆಯ ಮೇಲೂ ನಾನು ನಮ್ಮ ಸಂಸ್ಥಾನದಲ್ಲಿ ಹೊಸದಾಗಿ ತಿದ್ದುಪಾಟನ್ನು ಹೊಂದಿ ಏರ್ಪಡುವ "ಲೆಜಿಸ್ಲೆಟಿವ್ ಕೌನ್ಸಿಲ್" ಅಥವಾ ಶಾಸನ ನಿರ್ಮಾಣ ಸಭೆಗೆ ಬೆಂಗಳೂರು ಪಟ್ಟಣದ ನಿವಾಸಿಗಳ ಪ್ರತಿನಿಧಿಯಾಗಿ ಚುನಾಯಿಸಲ್ಪಡಲು ಉಮೇದುವಾರನಾಗಿ ನಿಲ್ಲಲು ನಿಶ್ಚಯಿಸಿದ್ದೇನೆ. ಬರುವ ಫೆಬ್ರವರಿ ತಿಂಗಳು 15 ನೆಯ ತಾರೀಖಿನ ದಿನ ನಡೆಯುವ ಚುನಾವಣೆಗೆ ತಾವು ದಯಮಾಡಿಸಿ ತಮ್ಮ "ಸಮ್ಮತಿ" ಅಥವ "ಓಟು" ಗಳನ್ನು ನನ್ನ ಹೆಸರಿಗೆ ಕೊಡುವುದಲ್ಲದೆ ತಮ್ಮ ಆಪ್ತ ಮಿತ್ರರಿಂದಲೂ ಕೊಡಿಸಬೇಕೆಂದು ಪ್ರಾರ್ಥಿಸುತ್ತೇನೆ.

2. ಈಗ ಅನೇಕ ವರ್ಷಗಳ ಲಾಗಾಯಿತು ರಾಜ್ಯಾಧಿಕಾರವರ್ಗಕ್ಕೂ ಪ್ರಜಾಸೇವೆಯಲ್ಲೂ ಸೇರಿ ಸಾರ್ವಜನಿಕ ಹಿತಕ್ಕಾಗಿ ನಾನು ಯಾವರೀತಿ ಕೆಲಸಮಾಡಿರುವೆನೆಂಬುದನ್ನು ಇಲ್ಲಿ ಹೇಳಬೇಕಾದ್ದಿಲ್ಲ. ಆದರೆ ಈ ಪಟ್ಟಣದ ಮತ್ತು ಈ ಸಂಸ್ಥಾನದ ಪ್ರಜಾಸಂಸ್ಥೆಗಳಲ್ಲಿಯೂ ಮತ್ತು ಮಹಾಜನ ಸಮಿತಿಗಳಲ್ಲಿಯೂ ನನಗೆ ಎಂತಹ ಸ್ಥಾನಗಳು ವಹಿಸಲ್ಪಟ್ಟಿರುವವೆಂಬುದನ್ನು ಯೋಚಿಸಿ ನೋಡಿದರೆ ತಮ್ಮ ನಂಬಿಕೆಗೂ ಭರವಸೆಗೂ ಅನರ್ಹನೆಂದೆನಿಸಿಕೊಳ್ಳುವಂತೆ ವರ್ತಿಸಿಲ್ಲವೆಂದು ಹೇಳಬಲ್ಲೆನು. ಈ ಸಮಯದಲ್ಲಿ ತಮ್ಮಗಳ ಅಮೂಲ್ಯವಾದ ಸಮ್ಮತಿಗಳನ್ನು ಪಡೆದುಕೊಳ್ಳುವ ಭಾಗ್ಯವು ನನಗೆ ಲಭಿಸಿದರೆ ತನ್ಮೂಲಕ ನಾನು ಹೊಸದಾದ ಶಾಸನ ನಿರ್ಮಾಣಸಭೆಗೆ ಹೋಗಿ ಅಲ್ಲಿ ನನ್ನ ದೇಶಬಾಂಧವರ ಸೇವಾತತ್ಪರನಾಗಿ ಕೆಲಸ ಮಾಡುತಾ, ನನ್ನ ಜೀವಮಾನದಲ್ಲಿ ಇನ್ನು ಕೆಲವು ಕಾಲವನ್ನು ವಿನಿಯೋಗಿಸಬೇಕೆಂಬುದೇ ನನ್ನ ದೃಢಪ್ರಯತ್ನವಾಗಿರುವುದು. ಆ ಸಭೆಯಲ್ಲಿ ಪ್ರಜಾಪಕ್ಷವನ್ನು ಬಲಪಡಿಸಿ ಪ್ರಾರಂಭದಲ್ಲಿಯೇ ಅದನ್ನು ಸರಿಯಾಗಿ ಅಭಿವೃದ್ಧಿಗೆ ತರಬೇಕಾದರೆ ದೇಶವಾತ್ಸಲ್ಯ ಪೂರಿತವಾದ ವಿವಿಧ ಅನುಭವ ಮತ್ತು ತಿಳುವಳಿಕೆಯ ಫಲರೂಪವಾದ ಸಹಾಯ ಸಲಹೆಗಳೆಲ್ಲವೂ ಬೇಕಾಗುತ್ತವೆಂಬುದನ್ನು ನಾನು ತಮ್ಮಗಳಿಗೆ ಹೇಳಬೇಕಾದುದಿಲ್ಲ.

3. ಮುಂದೆ ಯಾವ ಕಾರ್ಯಭಾಗಗಳನ್ನು ನೆರವೇರಿಸಲು ನನ್ನ ಕೈಲಾಗುವಷ್ಟು ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸಬೇಕೆಂದು ಸಂಕಲ್ಪಿಸಿರುವೆನೋ ಅವುಗಳನ್ನು ಕುರಿತು ಇನ್ನು ಸಂಕ್ಷೇಪವಾಗಿ ತಿಳಿಸಲು ಅಪೇಕ್ಷಿಸುತ್ತೇನೆ.

ನಾನು ರಾಜಕೀಯ ಸುಧಾರಣೆಯ ಕಮಿಟಿಯ ಮೆಂಬರಾಗಿದ್ದುಕೊಂಡು ಮೊನ್ನೆ ಪ್ರಸಿದ್ಧಿಪಡಿಸಲ್ಪಟ್ಟ ರಾಜ್ಯಾಂಗಾಭಿವೃದ್ಧಿ ಕಾರ್ಯದಲ್ಲಿ ಸ್ವಲ್ಪ ಭಾಗಿಯಾಗಿದ್ದೆನೆಂಬುದು ತಮ್ಮ ನೆನಪಿನಲ್ಲಿರಬಹುದು. ಅನುಕೂಲವಾದ ಸಂಪ್ರದಾಯಗಳು (Conventions) ಆಚರಣೆಯಲ್ಲಿ ಬರುವಂತೆ ಪ್ರಯತ್ನಪಡುತ್ತಲೂ ಈಗಿರುವ ನಿಯಮಗಳನ್ನು ಇನ್ನೂ ಹೆಚ್ಚಾಗಿ ಫಲಕಾರಿಯಾಗುವಂತೆ ವಿಸ್ತರಿಸಬೇಕೆಂದು ವಾದಿಸುತ್ತಲೂ ನಮ್ಮ ರಾಜ್ಯಾಂಗ ಸಭೆಗಳಲ್ಲಿರುವ ಪ್ರಜಾಪಕ್ಷದ ಮೆಂಬರುಗಳ ಅಧಿಕಾರಗಳನ್ನು ಹೆಚ್ಚಿಸುವದು ನನ್ನ ದೃಢಾಪೇಕ್ಷೆಯಾಗಿರುವುದು. ಪ್ರಜಾಪಕ್ಷದ ಸಂಘಟನವನ್ನು ರಚನೆಗೆ ತಂದು ಅದನ್ನು ನಂಬಿಕೆ ಮತ್ತು ಜವಾಬ್ದಾರಿಗೆ ಅರ್ಹರಾದ ಪ್ರಮುಖರ ಅಧೀನದಲ್ಲಿಡಲು ನಾನು ಸಾಧ್ಯವಾದಷ್ಟು ಪ್ರಯತ್ನಮಾಡುವೆನು.

4. "ರಿಟ್ರೆಂಚ್‌ಮೆಂಟ್ ಕಮಿಟಿ" ಎಂದರೆ ಸರ್ಕಾರದ ಆಯವ್ಯಯ ಪರಿಶೋಧಕ ಸಭೆಗೆ ನಾನು ಅಧ್ಯಕ್ಷನಾಗಿದ್ದುಕೊಂಡು ಯಾವಯಾವ ಬಾಬುಗಳಲ್ಲಿ ಖರ್ಚನ್ನು ತಗ್ಗಿಸಬಹುದೆಂಬುದನ್ನು ಸೂಚಿಸಿ ಸರ್ಕಾರದ ಅಂಗೀಕಾರಕ್ಕೆ ಒಂದು ಸಲಹೆಯನ್ನು ಕೊಡುವ ಅವಕಾಶವು ನನಗೆ ದೊರೆತಿದ್ದುದು ತಮಗೆ ಜ್ಞಾಪಕದಲ್ಲಿದೆಯಷ್ಟೆ. ಮುಂದೆಯೂ ಈ ಆಯವ್ಯಯಗಳ ಸ್ಥಿತಿಗತಿಗಳನ್ನು ಚೆನ್ನಾಗಿ ಪರಿಶೀಲಿಸುತ್ತಾ ಆಯಾಯ ಇಲಾಖೆಗಳ ಆಡಳಿತದಲ್ಲಿ ವೆಚ್ಚವು ಕಡಿಮೆಯಾಗುವಂತೆಯೂ ವಿಚಕ್ಷಣೆಯು ಮಾತ್ರ ತಗ್ಗದಂತೆಯೂ ಏರ್ಪಾಡು ಇಟ್ಟುಕೊಳ್ಳಬೇಕೆಂದು ಕೇಳುವುದನ್ನು ನನ್ನ ಕರ್ತವ್ಯವಾಗಿಟ್ಟುಕೊಳ್ಳುವೆನು.

5. ಪುರಕ್ಷೇಮಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿಯೂ ನನಗೆ ಯಾವಾಗಲೂ ಶ್ರದ್ಧೆಯುಂಟೆಂಬುದನ್ನು ತಾವು ಬಲ್ಲಿರಿ. ನಮ್ಮ "ಮ್ಯುನಿಸಿಪಾಲಿಟಿ" ಅಥವಾ ಪೌರಕಾರ್ಯ ಸಭೆಗಳು ಹೆಚ್ಚು ಸ್ವಾತಂತ್ರ್ಯವನ್ನು ಪಡೆಯಬೇಕೆಂದೂ, ನಗರನೈರ್ಮಲ್ಯ ಪ್ರಜಾರೋಗ್ಯಗಳ ಕಡೆಗೆ ಹೆಚ್ಚು ಗಮನವು ಅವಶ್ಯಕವೆಂದೂ, ವರ್ತಕರಿಗೂ ಕೈಗಾರಿಕೆಗಳವರಿಗೂ, ಕೂಲಿಯ ಜನರಿಗೂ ಸಹ ಬೇಕಾದ ಜೀವನ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದೂ ನಾನು ಇದುವರೆಗೂ ಪದೇ ಪದೇ ವಾದಿಸಿರುವಂತೆಯೇ ಇನ್ನು ಮೇಲೆಯೂ ವಾದಿಸಿ, ನಮ್ಮ ಬೆಂಗಳೂರು ಪಟ್ಟಣದ ಪ್ರಜಾನುಕೂಲ್ಯಗಳನ್ನೂ ಅಂದವನ್ನೂ ಸುಖಸೌಲಭ್ಯಗಳನ್ನೂ ಅಭಿವೃದ್ಧಿಪಡಿಸಲು ಬೇಕಾದ ಸಹಾಯವನ್ನು ಸಂಪಾದಿಸಲು ಪ್ರಯತ್ನಿಸುವೆನು.

6. ಸಂಸ್ಥಾನದ ಪ್ರಮುಖ ಬ್ಯಾಂಕಿನ ಅಧ್ಯಕ್ಷನಾಗಿಯೂ ನಮ್ಮ ಹೊಸ ರಾಜಕೀಯ ಏರ್ಪಾಡಿಗೆ ಈಗ ಅಂಗವಾಗಿ ಏರ್ಪಟ್ಟಿರುವ ಅರ್ಥಸಾಧಕ ಸಮಾಜದ ಮೆಂಬರುಗಳಲ್ಲೊಬ್ಬನಾಗಿಯೂ ಇರುವುದರಿಂದ ನಮ್ಮ ಪಟ್ಟಣದ ಮತ್ತು ನಮ್ಮ ಸಂಸ್ಥಾನದ ಕಸಬು ಕೈಗಾರಿಕೆ ವ್ಯಾಪಾರಾದಿಗಳ ಸ್ಥಿತಿಗತಿಗಳನ್ನು ಚಿಂತನೆಮಾಡಿ ತಿಳಿದುಕೊಳ್ಳುವುದಕ್ಕೆ ನನಗೆ ಅವಕಾಶಗಳು ದೊರೆತು ನಮ್ಮ ವರ್ತಕರು ವ್ಯಾಪಾರಗಾರರು ಮತ್ತು ಇತರ ಕಸಬುದಾರರ ಕಷ್ಟಗಳು ಬಹಳ ಮಟ್ಟಿಗೂ ಗೊತ್ತಾಗಿವೆ. ಅವರ ಹಿತಚಿಂತನೆಯಲ್ಲಿ ನೈಜವಾದ ಸಹಾನುಭೂತಿಯನ್ನೂ ಮತ್ತು ನಿಶ್ಚಲವಾದ ಶ್ರದ್ಧೆಯನ್ನೂ ಯಾವಾಗಲೂ ತೋರಿಸುತ್ತ ಬರುವೆನು.

7. ನಾನೇ ತಕ್ಕಮಟ್ಟಿಗೆ ಜಮೀನ್ದಾರನಾಗಿಯೂ ಸ್ವತಃ ವ್ಯವಸಾಯ ಮಾಡಿಸತಕ್ಕವನಾಗಿಯೂ ಇರೋಣದರಿಂದ ರೈತರ ಮತ್ತು ಜಮೀನ್ದಾರರ ಪಕ್ಷವನ್ನು ಯಾವಾಗಲೂ ವಹಿಸಿ ಇತರರ ಹೋರಾಟದ ಮಧ್ಯೆ ಅವರಿಗೆ ನಿಜವಾಗಿಯೂ ಹಿತಕರವಾದುದನ್ನೇ ಮಾಡಲು ನಾನು ಸಿದ್ಧನಾಗಿ ಇರುವೆನೆಂಬುದನ್ನು ಹೇಳಬೇಕಾದುದಿಲ್ಲ.

8. ನಮ್ಮ ವಿಶ್ವವಿದ್ಯಾನಿಲಯವನ್ನು ಪ್ರಾರಂಭದಲ್ಲಿ ರೂಪಕ್ಕೆ ತರುವ ಕಾರ್ಯದಲ್ಲಿ ನಾನೂ ಸ್ವಲ್ಪ ಭಾಗಿಯಾಗಿದ್ದೆನು ಮತ್ತು ನಮ್ಮ ವಿದ್ಯಾಭ್ಯಾಸ ಕ್ರಮವನ್ನು ಅವಶ್ಯಬಿದ್ದಾಗಲೆಲ್ಲಾ ಫಲಕಾರಿಯಾಗಿ ತಿದ್ದುಪಡಿಮಾಡಬೇಕೆಂದು ಕಂಠೋಕ್ತವಾಗಿ ಹೇಳಲು ಹಿಂತೆಗೆದವನಲ್ಲ. ಆದುದರಿಂದ ವಿದ್ಯಾಭ್ಯಾಸವು ಹರಡುವುದಕ್ಕೂ ಮತ್ತು ಅದರ ಗುಣಯೋಗ್ಯತೆಯೂ ಹಾಗೆಯೇ ಉತ್ತಮಹೊಂದುವುದಕ್ಕೂ ಸಹ ನಾನು ನಿಜವಾದ ಕುತೂಹಲವನ್ನು ತೋರಿಸುವೆನೆಂದು ತಾವು ನಂಬಬಹುದು.

9. ಮೈಸೂರು ದೇಶೀಯರಲ್ಲಿ ಸ್ಥಿರವಾದ ರಾಜಕೀಯ ಐಕ್ಯಭಾವವು ಬೆಳೆವುದಕ್ಕೂ, ನಮ್ಮ ಪ್ರಜಾಸೇವಾವರ್ತನೆಯಲ್ಲಿ ಭೇದದ್ವೇಷಗಳು ತೊಲಗುವುದಕ್ಕೂ, ವರ್ತಮಾನಪತ್ರಿಕೆಗಳ ಮತ್ತು ಪ್ರಜಾಸಂಸ್ಥೆಗಳ ಶಕ್ತಿಯೂ ವ್ಯಾಪನೆಯೂ ಹೆಚ್ಚಿ ಬೆಳೆವುದಕ್ಕೂ, ನಮ್ಮ ಪಟ್ಟಣ ಮತ್ತು ನಮ್ಮ ಸಂಸ್ಥಾನದ ಹೆಸರುಗಳು ಉಚ್ಛ್ರಾಯಸ್ಥಿತಿಗೂ ಹೆಸರುವಾಸಿಗೂ ಅನ್ವರ್ಥನಾಮಗಳಾಗಿ ಕಂಗೊಳಿಸಲು ಸಹಾಯಮಾಡುವದಕ್ಕೂ ನಾನು ನನ್ನ ಜತೆಯಲ್ಲಿರುವ ಮೆಂಬರುಗಳ ಸಹಾಯವನ್ನು ಪಡೆದು ಕೆಲಸ ಮಾಡಬೇಕೆಂಬುದೇ ನನ್ನ ಸಂಕಲ್ಪವಾಗಿರುವುದು.

10. ಈ ವಿಧಗಳಾದ ಮುಖ್ಯ ಆಶಯಗಳನ್ನು ಮನಸ್ಸಿನಲ್ಲಿರಿಸಿಕೊಂಡು ನಾನು ತಮ್ಮ ವಿಶ್ವಾಸಪೂರ್ವಕವಾದ ಸಮ್ಮತಿಯನ್ನು ಅಪೇಕ್ಷಿಸುವವನಾಗಿದ್ದೇನೆ. ತಾವುಗಳು ಇದುವರೆಗೂ ನನಗೆ ತೋರಿರುವ ಅಭಿಮಾನವನ್ನು ನೋಡಿದರೆ ಈಗಲೂ ತಾವು ನನ್ನ ಕೋರಿಕೆಯನ್ನು ತಿರಸ್ಕರಿಸಲಾರಿರೆಂದು ನನಗೆ ಸಂಪೂರ್ಣ ಭರವಸೆಯುಂಟು. ಆದಕಾರಣ ನನ್ನ ಕೃತಜ್ಞತೆಯನ್ನು ತಮಗೆ ಪೂರ್ವಭಾವಿಯಾಗಿಯೇ ಸಮರ್ಪಿಸುತ್ತೇನೆ.

11. ಪ್ರತಿನಿಧಿಯ ಚುನಾವಣೆಯು 1924 ನೆಯ ಇಸವಿ ಫೆಬ್ರವರಿ ತಿಂಗಳು 15 ನೆಯ ತಾರೀಖು ಶುಕ್ರವಾರದ ದಿವಸ ತಮ್ಮ ಡಿವಿಜನ್ನಿನ ಪೋಲಿಂಗ್ ಸ್ಟೇಷನ್ ಅಂದರೆ ಚುನಾವಣೆ ಸ್ಥಳದಲ್ಲಿ ನಡೆಯುವುದು. ಆ ದಿನ ಅಲ್ಲಿಗೆ ಸಕಾಲಕ್ಕೆ ದಯಮಾಡಿಸಲು ಅವಕಾಶವನ್ನುಂಟುಮಾಡಿಕೊಂಡು ಬಂದು ತಮ್ಮ ಸಮ್ಮತಿಯನ್ನು ನನ್ನ ಹೆಸರಿಗೆ ಕೊಡಬೇಕೆಂದು ಪ್ರಾರ್ಥಿಸುವೆನು.

ಶಾಂತಿನಿವಾಸ,
ಚಾಮರಾಜಪೇಟೆ, ಬೆಂಗಳೂರು,
ತಾ|| 9-1-1924.

ತಮ್ಮ ವಿಧೇಯ,
ಕೆ. ಪಿ. ಪುಟ್ಟಣ್ಣಶೆಟ್ಟಿ.

ಮೈಸೂರು ನ್ಯಾಯವಿಧಾಯಕ ಸಭೆಗೆ ಓಟು ಕೊಡಲರ್ಹರಾದ ಚಿತ್ರದುರ್ಗ ಡಿಸ್ಟ್ರಿಕ್ಟಿನ ಮಹಾಶಯರಿಗೆ ವಿಜ್ಞಾಪನೆ.

ಮೇಲ್ಕಂಡ ಸಭೆಯ ಹೊಸ ಮೆಂಬರುಗಳ ಚುನಾವಣೆಯು ಬರುವ ತಾ|| 15-2-1924ರಲ್ಲಿ ನಡೆಯುವದಾಗಿಯೂ ಈ ಸಭೆಗೆ ನಮ್ಮ ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ ನಿಂತಿರುವ ಕ್ಯಾಂಡಿಡೇಟರ ಪೈಕಿ ನಾನೂ ಒಬ್ಬನಾಗಿಯೂ ಇರತಕ್ಕ ಅಂಶವು ತಮಗೆ ತಿಳಿದಿರಬಹುದು. ನಾನು ಬೊಂಬಾಯಿ ಯೂನಿವರ್ಸಿಟಿಯಲ್ಲಿ ಲಾ ಪರೀಕ್ಷೆಯನ್ನು ಕೊಟ್ಟು ಅಡ್ವೊಕೇಟ್ ಪ್ರಶಸ್ತಿಯನ್ನು ಪಡೆದು ನಮ್ಮ ಡಿಸ್ಟ್ರಿಕ್ಟಿನ ಕೇಂದ್ರಸ್ಥಾನವಾದ ದಾವಣಗೆರೆಯಲ್ಲಿ ವಕೀಲಿ ಕೆಲಸದಲ್ಲುದ್ಯುಕ್ತನಾಗಿರುತ್ತೇನೆ. ಈ ಉದ್ಯೋಗದ ಸಂಬಂಧದಿಂದಲೂ ಮತ್ತು ಈವರೆಗಿನ ಅನುಭವದಿಂದಲೂ ದೇಶಾಭ್ಯುದಯಕ್ಕೆ ತಡೆಯಾಗಿರುವ ನ್ಯೂನಾತಿರೇಕಗಳನ್ನು ಗ್ರಹಿಸಿರುವೆನಾದುದರಿಂದ ಅವುಗಳ ನಿವಾರಣಾರ್ಥವಾಗಿ ಕೈಲಾದಮಟ್ಟಿಗೂ ಪ್ರಯತ್ನಿಸಬೇಕೆಂಬ ಇಚ್ಛೆಯುಳ್ಳವನಾಗಿರುತ್ತೇನೆ. ತಮ್ಮೆಲ್ಲರ ಉದಾರತ್ವದಿಂದ ನಾನು ಈ ಸಭೆಗೆ ಚುನಾಯಿಸಲ್ಪಟ್ಟರೆ ಈ ಕೆಳಗೆ ವಿವರಿಸಿರುವವುಗಳೇ ಮೊದಲಾದ ಸಾರ್ವಜನಿಕ ಕಾರ್ಯಗಳನ್ನು ಮಾಡಬೇಕೆಂದು ಯೋಚಿಸಿದ್ದೇನೆ. (1) ದೇಶದ ಎಲ್ಲಾ ಭಾಗಗಳಲ್ಲಿಯೂ ಪ್ರಾಥಮಿಕ ವಿದ್ಯಾಭ್ಯಾಸವು ಬಹುವ್ಯಾಪಕ

ಪದ್ಧತಿಯಿಂದ ಪ್ರಸಾರವಾಗುವಂತೆಯೂ, ಮಾಧ್ಯಮಿಕ ವಿದ್ಯಾಭ್ಯಾಸವು ದೇಶಭಾಷೆಗಳ ಮೂಲಕ ನಡೆಯುವಂತೆಯೂ, ಉದ್ಯೋಗಿಕ ಶಿಕ್ಷಣಕ್ಕೆ ಹೆಚ್ಚಿದ ಪ್ರಾಶಸ್ತ್ಯವು ದೊರೆಯುವಂತೆಯೂ ಪ್ರಯತ್ನಿಸುವದು. (2) ನಮ್ಮ ದೇಶದ ಮುಖ್ಯೋದ್ಯೋಗವಾದ ವ್ಯವಸಾಯದಲ್ಲಿ ತೊಡಗಿರತಕ್ಕ ರೈತರಿಗೆ ದಾರಿದ್ರ್ಯದಿಂದಲೂ, ಅನಾರೋಗ್ಯದಿಂದಲೂ ಸಂಭವಿಸತಕ್ಕ ಕಷ್ಟನಷ್ಟಗಳನ್ನು ಸರ್ಕಾರದವರ ಗಮನಕ್ಕೆ ತಂದುಕೊಡುವದರ ಮೂಲಕ ಅದರ ಜೀವನೋಪಾಯಗಳನ್ನು ಸುಧಾರಿಸುವದು. (3) ಸರ್ಕಾರದವರು ಪ್ರಜಾಹಿತಕ್ಕಾಗಿ ಅನೇಕ ಶಾಖೆಗಳಲ್ಲಿ ಮಾಡತಕ್ಕ ವಿಶಿಷ್ಟವಾದ ಏರ್ಪಾಡುಗಳಿಗೆ ಪ್ರಜೆಗಳೆಲ್ಲರೂ ಸಹಭಾಗಿಗಳಾಗಿರುವಂತೆ ಸಲಹೆಯನ್ನು ಕೊಡುವದು. (4) ಪ್ರಜೆಗಳೆಲ್ಲರೂ ಶ್ರೀಮನ್ಮಹಾರಾಜಾ ಸರ್ಕಾರದ ಕೀರ್ತಿಯನ್ನು ಹೆಚ್ಚಿಸುವಂತೆಯೂ ಮತ್ತು ತಮ್ಮ ಅಭಿವೃದ್ಧಿಯನ್ನು ಮಾಡಿಕೊಳ್ಳುವಂತೆಯೂ ಹೆಚ್ಚು ಹೆಚ್ಚು ಸ್ವಾತಂತ್ರ್ಯವನ್ನು ಹೊಂದಲು ಸಹಕರಿಸುವದು. ಈ ಮೊದಲಾದ ಮಹತ್ಕಾರ್ಯಗಳನ್ನು ದೇಶಾಭಿಮಾನಿಗಳಾದ ತಾವುಗಳೆಲ್ಲರೂ ಗಮನಕ್ಕೆ ತಂದುಕೊಂಡು ಮೇಲ್ಕಂಡ ಚುನಾವಣೆಯಲ್ಲಿ ದಯವಿಟ್ಟು ತಮ್ಮ ಅಮೌಲ್ಯವಾದ ಓಟನ್ನು ನನಗೆ ಕೊಡುವುದರ ಮೂಲಕ ದೇಶ ಸೇವೆಯನ್ನು ಮಾಡಬೇಕೆಂಬ ನನ್ನ ಕುತೂಹಲವನ್ನು ನೆರವೇರಿಸಿ ಕೊಡುವರೆಂದು ನಂಬಿರುವ,

ತಮ್ಮ ವಿಧೇಯ,
ಡಿ. ಎಚ್. ಚಂದ್ರಶೇಖರಯ್ಯ ಅಡ್ವೊಕೇಟ್.

ಶ್ರವಣಬೆಳುಗೊಳದಲ್ಲಿ ಆದ ಮಕ್ಕಳ ಪ್ರದರ್ಶನೋತ್ಸವ.

ಶ್ರ. ಬೆ. ಮುನ್ಸಿಪಲ್ ಕೌನ್ಸಿಲರ್ ಮತ್ತು ಇತರ ದೊಡ್ಡ ಮನುಷ್ಯರುಗಳು ಸಹ ಸೇರಿ ತಾ|| 19-1-24 ರಲ್ಲಿ ಎ. ವಿ. ಸ್ಕೂಲ್ ಬಿಲ್ಡಿಂಗಿನಲ್ಲಿ ಎಲ್ಲಾ ಮಕ್ಕಳುಗಳನ್ನು ಸೇರಿಸಿ, ಟೀಚರ್ ಮತ್ತು ಹುಡುಗರ ಆಟಪಾಟಗಳನ್ನು ಸಹ ನಡಿಸಿ, ಚುನಾಯಿಸಲ್ಪಟ್ಟ ಸಣ್ಣ ಸಣ್ಣ ಮಕ್ಕಳುಗಳಿಗೆ ಬೆಳ್ಳಿಬಟ್ಟು, ಚಂಚ, ಬಟ್ಟೆ, ಚಂಡು ಮುಂತಾದ ಆಟದ ಸಾಮಾನುಗಳನ್ನು ಸಹ ಸೇರಿಸಿ, ಸುಮಾರು ಒಂದು ನೂರರ ಮೌಲ್ಯಪಟ್ಟು ಇನಾಂಗಳನ್ನು ಕೊಟ್ಟು ಉಳಿದ ಎಲ್ಲಾ ಹುಡುಗರಿಗೂ ದೊಡ್ಡವರಿಗೂ ಸಹ ಮಿಠಾಯಿ ಬತಾಸನ್ನು ಹಂಚಿ, ಅನಂತರ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿ, ಸಾಯಂಕಾಲ 6 ಗಂಟೆಗೆ ಅಪ್ಸೆರ್ ಮಾಡಿದರು. ಇದಕ್ಕಾಗಿ ಗ್ರಾಮಾಂತರಗಳಿಂದಲೂ ಸಹ ಸೇರಿ, 500 ಜನ ಬಾಲಕ ಬಾಲಕಿಯರು 200 ಜನ ದೊಡ್ಡಮನುಷ್ಯರು ಸಹ ಸೇರಿ ಬಿಲ್ಡಿಂಗಿನ ಒಳಭಾಗದಲ್ಲಿ ಸ್ಥಳವಿಲ್ಲದೆ ರಸ್ತೆಯಲ್ಲೂ ಅನೇಕ ಜನ ಪ್ರೇಕ್ಷಕರು ನಿಂತಿದ್ದರು. ಪ್ರದರ್ಶನವು ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು.

ಟಿ|| ಚಂ|| ಭರಮಯ್ಯ,
ಬೀಬೀಸ್, ಪೊ. ಕಮಿಟಿ ಸೆಕ್ರಟರಿ.

ಮಕ್ಕಳ ಪ್ರದರ್ಶನ.

ಮಂಡ್ಯದ ತಾಲ್ಲೂಕು ಬೇವುಕಲ್ಲು ಗ್ರಾಮದಲ್ಲಿ ಹೋಬಳಿ ಶೇಕ್‌ದಾರ್ರು ಮ|| ಈಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಜನವರಿ ತಾ|| 19ನೇ ಶನಿವಾರ ಮಕ್ಕಳ ಪ್ರದರ್ಶನವು ವೈಭವದಿಂದ ನಡೆಸಲ್ಪಟ್ಟಿತು. ಸಭೆಯಲ್ಲಿ ಬೇವುಕಲ್ಲು ಮತ್ತು ಅಜುಬಾಜು ಗ್ರಾಮಗಳ ದೊಡ್ಡ ಮನುಷ್ಯರುಗಳೂ ಬಾಲಕ ಬಾಲಕಿಯರೂ ನೆರೆದಿದ್ದರು. ಅಧ್ಯಕ್ಷರು ಪಾಶ್ಚಾತ್ಯ ದೇಶಿಯರ ಮಕ್ಕಳಿಗೂ, ಹಿಂದೂದೇಶೀಯರ ಮಕ್ಕಳಿಗೂ ಇರುವ ತಾರತಮ್ಯವನ್ನು, ಈ ದೇಶಿಯರ ಮಕ್ಕಳ ಪೋಷಣೆಯಲ್ಲಿ ತೋರಿಸುತ್ತಿರುವ ಅಶ್ರದ್ಧೆಯಿಂದ ದೇಶಕ್ಕೆ ಉಂಟಾಗಿರತಕ್ಕ ಕ್ಷೋಭೆಯನ್ನು ಕುರಿತು ಬಹು ರಸಿಕತೆಯಿಂದ ಭಾಷಣಮಾಡಿದರು. ಅಲ್ಲದೆ ದೇಶೋದ್ಧಾರಕರಾಗಿದ್ದ ಶಿವಾಜಿ, ನೆಪೋಲಿಯನ್ ಬೋನಪಾರ್ಟ್ ಮೊದಲಾದ ಮಹಾಪುರುಷರು ಅಷ್ಟು ಶೌರ್ಯಧೈರ್ಯ ಸಂಪನ್ನರಾಗಲು ಅವರ ತಾಯಿಯರು ಮಕ್ಕಳನ್ನು ಎಷ್ಟು ಶ್ರದ್ಧೆಯಿಂದ ಪೋಷಣೆಮಾಡಿದರು. ಎಂಬುದನ್ನೂ, ಮಕ್ಕಳ ವಿಷಯದಲ್ಲಿ ಕ್ರಮವರಿತು ತಿಂಡಿ, ಊಟ ನಿದ್ರೆಗಳಲ್ಲಿಯೂ, ಪೋಷಣವಿಷಯದಲ್ಲಿಯೂ ತಾಯಿಯರು ಬಹು ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಮುಂತಾಗಿ ಸಭಿಕರ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ತಿಳಿಯಪಡಿಸಿದರು. ಅನಂತರ ಮಕ್ಕಳುಗಳಿಗೆಲ್ಲಾ ಸಕ್ಕರೆಯು ಹಂಚಲ್ಪಟ್ಟಿತು. ಕೊನೆಯಲ್ಲಿ ಶ್ರೀಮನ್ ಮೈಸೂರು ದಂಪತಿಗಳಿಗೂ, ಶ್ರೀಮನ್ ಮಹಾರಾಜರವರಿಗೂ ಭಗವಂತನು ಚಿರಾಯುವೀಯಲೆಂದು ಶ್ರೇಯಃ ಪ್ರಾರ್ಥನೆಯಾದ ಬಳಿಕ ಕರತಾಡನದಿಂದ ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶಿಶುಸಂರಕ್ಷಣೆಯ ವಾರ.

ಕುಣಿಗಲ್ ತಾಲ್ಲೂಕ್ ಹುತ್ರೀದುರ್ಗದ ಸಮ್ಮತು ಎಲಿಯೂರು ಗ್ರಾಮದ ಗೌರ್ನಮೆಂಟ್ ಪ್ರೈಮರಿ ಗರ್ಲ್ಸ್ ಸ್ಕೂಲ್ ಕಟ್ಟಡದ ಹಾಲ್‌ನಲ್ಲಿ ಶಿಶು ಸಂರಕ್ಷಣಾಕಾರ್ಯದ ಉತ್ಸವವನ್ನು ತಾ|| 21-1-24ನೇ ಸೋಮವಾರ ಸಾಯಂಕಾಲ 4 ಗಂಟೆಗೆ ಹುತ್ರೀದುರ್ಗದ ಹೋಬಳಿ ಶೇಕದಾರ್ ಮ|| ಎಸ್. ಹನುಮಂತರಾಯರವರು ಅಧ್ಯಕ್ಷತೆಯನ್ನು ವಹಿಸಿ ನೆರವೇರಿಸಿದರು. ಗ್ರಾಮದ ದೊಡ್ಡಮನುಷ್ಯರೂ ಮಹಿಳೆಯರೂ ಅನೇಕವಾಗಿ ಸಭೆಯಲ್ಲಿ ಹಾಜರಾಗಿದ್ದರು. ಗರ್ಲ್ಸ್ ಸ್ಕೂಲ್ ಸಿಂಗಿಂಗ್ ಮಾಸ್ಟರ್ ನರಸಿಂಹಯ್ಯನವರು ಗರ್ಲ್ಸ್ ಸ್ಕೂಲ್ ಬಾಲಿಕೆಯರಿಂದ ಶಿಶು ಸಂರಕ್ಷಣ ಎಂಬ ಮನೋಹರವಾದ ಹಾಡುಗಾರಿಕೆಯನ್ನು ಹೇಳಿಸಿದರು. ನಂತರ ಇಲ್ಲಿನ ಬಾಯ್ಸ್ ಸ್ಕೂಲ್ ಹೆ|| ಮ|| ಎಸ್. ಕಪಿನೀಪತಯ್ಯನವರು ಆರೋಗ್ಯದ ವಿಚಾರದಲ್ಲಿಯೂ ಅ|| ಮಾ|| ಕೆ. ವೆಂಕಟರಾಮಯ್ಯನವರು ನೈರ್ಮಲ್ಯ ವಿಚಾರದಲ್ಲಿಯೂ ಭಾಷಣವನ್ನು ಓದಿದರು. ಅನಂತರ ಗೌ|| ಗರ್ಲ್ಸ್ ಸ್ಕೂಲ್ ಹೆಡ್ಮಾಸ್ಟರವರಾದ ಮ|| ವೈ. ಕಪಿನಯ್ಯಶೆಟ್ಟರು ಮಕ್ಕಳ ಯೋಗಕ್ಷೇಮವು ಸಮಸ್ತರಿಗೂ ಅತ್ಯವಶ್ಯಕವಾದದ್ದೆಂತಲೂ, ಅವುಗಳ ಆರೈಕೆಯನ್ನು ಬಹಳ ಮುತವರ್ಜಿಯಿಂದ ನೋಡಿಕೊಳ್ಳುವದಕ್ಕೆ ಗ್ರಾಮದ ಮುಖಂಡ ಜನಗಳು ತುಂಬಾ ಪ್ರೋತ್ಸಾಹವನ್ನು ಒದಗಿಸಬೇಕೆಂದೂ ಶಿಶು ಜನನ ಅವುಗಳ ಆರೈಕೆ ಮತ್ತು ಪೋಷಣೆ ಅವುಗಳ ಬೆಳವಣಿಗೆ ಮತ್ತು ರೋಗನಿವಾರಣೆ ವಿಚಾರಗಳನ್ನು ಶಾಸ್ತ್ರವತ್ತಾಗಿಯೂ ಆಚರಣೆಯಲ್ಲಿ ಸುಲಭವಾಗಿಯೂ ಇರುವಂತೆ ಬಹಳ ಸ್ವಾರಸ್ಯವಾಗಿ ಭಾಷಣವನ್ನು ಓದಿ ಹೇಳಿದರು. ಬಳಿಕ ಗರ್ಲ್ಸ್ ಸ್ಕೂಲ್ ಐದನೇ ತರಗತಿ ವಿದ್ಯಾರ್ಥಿನಿ ಎಸ್. ರೇವಮ್ಮನು ಶಿಶುವಿನ ಜನನದ ವಿಚಾರದಲ್ಲಿಯೂ ಶ್ರೀ|| ರಾಮಣ್ಣನವರು ಮಕ್ಕಳನ್ನು ಎತ್ತಿಕೊಳ್ಳುವ ವಿಚಾರದಲ್ಲಿಯೂ ಭಾಷಣವನ್ನು ಓದಿದರು. ಅನಂತರ ಕುಣಿಗಲ್ ಆರ್ಯ ಬಾಲಿಕಾಪಾಠಶಾಲೆಯ ಹೆಡ್‌ಮಿಸ್ಟ್ರೆಸ್ ಶಿಂಗಮ್ಮನವರು ಗರ್ಭಿಣಿ ಶಿಶುಸಂರಕ್ಷಣೆಯ ವಿಚಾರವಾಗಿ ಅಲ್ಲಿ ನೆರೆದಿದ್ದ ಮಹಿಳೆಯರ ಸಮಾಜದಲ್ಲಿ ಈಗ ಜನಗಳೆಲ್ಲರೂ ಹೆರಿಗೆ ಶಿಶು ಪೋಷಣೆಗಳ ನಡೆಯುವ ಕ್ರೂರ ವಿಧಾನಗಳನ್ನು ವಿವರಿಸಿ ನಾಡು ಸೂಲಗಿತ್ತಿಯರನ್ನು ಬಿಟ್ಟು ಕಲಿತಿರುವ ಸೂಲಗಿತ್ತಿಯರಿಂದಲೇ ಹೆರಿಗೆ ಮಾಡಿಸುವುದು ಕ್ಷೇಮಕರವೆಂತಲೂ ಬಹಳ ಚೆನ್ನಾಗಿ ತಿಳಿಸಿದರು. ನಂತರ ಮ|| ಜೋಡಿದಾರ್ ನಾರಾಯಣಾಚಾರ್ಯರು ಶಿಶುಸಂರಕ್ಷಣೆಯ ಕಾರ್ಯಕ್ಕೆ ಸಕಲರೂ ದ್ರವ್ಯಸಹಾಯಮಾಡಿಸಬೇಕೆಂತ ಸರ್ವರಿಗೂ ತಿಳಿಸಿದರು. ನಂತರ ಹಿಂದು ಮುಸಲ್ಮಾನ್ ಪಂಚಮ ಮಕ್ಕಳಲ್ಲಿ ಅತ್ಯುತ್ತಮವಾದ ಮಕ್ಕಳಿಗೆ ಬೇಬಿಷೋ ಮೆಂಬರುಗಳಾದ ಬಿ. ನಂಜುಂಡಶೆಟ್ಟರು ಮತ್ತು ಗ್ರಾಮದ ಪಾಟೀಲ್ ಅಪ್ಪುಗೌಡರು ವಗೈರೇರು ಟವಲ್‌ಗಳು ಚೌಕಗಳು ಕಾಲುಚೀಲಗಳು ವಗೈರೆ ಪದಾರ್ಥಗಳನ್ನು ಸಣ್ಣ ಮಕ್ಕಳುಗಳಿಗೆ ಬಹುಮಾನವಾಗಿ ಕೊಡುವಂತೆ ಮೀಟಿಂಗಿನಲ್ಲಿ ತೀರ್ಮಾನಮಾಡಿ ಸಭಾಧ್ಯಕ್ಷರ ಹಸ್ತದಿಂದ ಕೊಡಿಸಿದರು. ನಂತರ ಗರ್ಲ್ಸ್ ಸ್ಕೂಲ್ ಬಾಲಿಕೆಯರಿಂದ ನಮ್ಮ ಇಂಡಿಯಾ ದೇಶದ ಚಕ್ರವರ್ತಿ ಸಾರ್ವಭೌಮರವರ ಶ್ರೇಯಃಪ್ರಾರ್ಥನೆ ಮತ್ತು ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯ ಮಂಗಳಗಳು ನಡೆಸಲ್ಪಟ್ಟವು. ನಂತರ ಸಭೆಯವರಿಗೆಲ್ಲಾ ಗಂಧ, ಪುಷ್ಪ, ತಾಂಬೂಲಾದಿಗಳು ಹಂಚಲ್ಪಟ್ಟವು ನಂತರ ಸಣ್ಣ ಮಕ್ಕಳುಗಳಿಗೆಲ್ಲಾ ಮ|| ಬಿಡದಿ ಮಿಠಾಯಿ ಅಂಗಡಿ ವೀರಣ್ಣನವರು ಮಿಠಾಯಿ ಮತ್ತು ಭಕ್ಷ್ಯಗಳನ್ನು ಹಂಚಿದರು. ಈ ಶಿಶುಸಂರಕ್ಷಣೆಯ ವಾರದಲ್ಲಿ ಹುತ್ರಿದುರ್ಗದ ಹೋಬಳಿ ಶೇಕದಾರ್‌ರವರು ಮತ್ತು ಎಲಿಯೂರು ಗೌ|| ಗರ್ಲ್ಸ್ ಸ್ಕೂಲ್ ಹೆಡ್ಮಾಸ್ಟರು ಸಹ ಬಹಳವಾಗಿ ಮುತವರ್ಜಿಯನ್ನು ವಹಿಸಿ ನಡೆಸಿದುದಕ್ಕಾಗಿ ಅಲ್ಲಿ ನೆರದಿದ್ದ ಸಭಾ ಜನಗಳೆಲ್ಲರೂ ಸಂತೋಷಪಟ್ಟರು.

ಪ್ರಜಾಹಿತೈಷಿ.

ಓಟರುಗಳ ಪೀಕಲಾಟ.

ಓಟಿಂಗ್ ವಿಚಾರದಲ್ಲಿ ಚನ್ನೆಗೌಡನಿಗೂ ಲಿಂಗಪ್ಪನಿಗೂ ನಡೆದ ಸಂಭಾಷಣೆಯು ಬಹಳ ಸ್ವಾರಸ್ಯವಾಗಿರುವುದರಿಂದ ಎಲ್ಲಾ ಓಟರುಗಳ ತಿಳಿವಿಗಾಗಿ ಇಲ್ಲಿ ಕೊಡಲ್ಪಟ್ಟಿದೆ.

ಚನ್ನೆಗೌಡನು ತನ್ನ ಕೆಲಸಕಾರ್ಯಗಳನ್ನೆಲ್ಲಾ ಪೂರೈಸಿಕೊಂಡು ಸಾಯಂಕಾಲದ ಮೇಲೆ ಮನೆಗೆ ಬಂದು ಜಗತಿಯ ಮೇಲೆ ಕೂತಿರುವಾಗ್ಗೆ ನೆರೆಮನೆಯ ಲಿಂಗಪ್ಪನು ತನ್ನ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು ಬೇಸರಿಕೆಯ ಪರಿಹಾರಕ್ಕಾಗಿ ಚನ್ನೆಗೌಡನಿದ್ದಲ್ಲಿಗೆ ಬಂದು ಏನಯ್ಯಾ ಚನ್ನೆಗೌಡ ವಿಶೇಷ ಇಂಜಿನ ಹೊತಾರೆ ಕಣ್ಣಿಗೆ ಕನಡ್ಕ ಹಾಕಿಕೊಂಡು ಮೋಟಾರು ಗಾಡಿಯಲ್ಲಿ ನಮೂರ ಶಾನುಬೋಗ್ರು ಮತ್ತಿಬ್ಬರ ಕೂಡ ಬಂದಿದ್ದರೆಲ್ಲಾ ಅವರ್‍ಯಾರು, ಯಾಕೆ ಬಂದಿದ್ರು ಎಂದು ಕೇಳಿದನು.

ಚನ್ನೆಗೌಡ—ಅಯ್ಯಾ ಲಿಂಗಪ್ಪ ಬಾ ಕೂತ್ಕೊ ಹೇಳ್ತೀನಿ ಕೇಳು. ವತಾರೆ ನಮ್ಮ ಸಾನುಬೋಗರ ಕೂಡ ಕನಡ್ಕ ಹಾಕೊಂಡು ಮೋಟಾರನಲ್ಲಿ ಬಂದಿದ್ದವ್ರು ಒಬ್ರು ದೊಡ್ಡ ಲಾಯರು. ಮೈಸೂರಲ್ಲಿ ಮಾಸೋಮಿಯಲ್ಲಿ ನಡೀತದಲ್ಲಾ ಆ ದೊಡ್ಡ (ಪ್ರಜಾಪ್ರತಿನಿಧಿ) ಸಬೆಗು ಮತ್ತು ಬೆಂಗಳೂರಲ್ಲಿ ನಡ್ತದಂತೆಲಾ ಆ (ನಾಯವಿಧಾಯಕ) ಸಬೆಗೂ ಮೆಂಬರಾಗೋಕೆ ಓಟನ್ನು ನಾನು ಕಡೋದಲ್ದೆ ನಿಮ್ಗೋಳ ಕೈಲಿ ಕೊಡ್ಸಬೇಕೆಂದು ಹೇಳೋಕೆ ಬಂದಿದ್ರು.

ಲಿಂಗಪ್ಪ—ಅದೇನ್ಗೌಡ ಅಷ್ಟು ದೊಡ್ಡಮನ್ಸರು ನಮ್ಮ ಮನೆ ಬಾಕಲ್ಗೆ ಬರಬೇಕೆ.

ಚನ್ನೆಗೌಡ—ಚನ್ನಾಗಿ ಹೇಳ್ದೆ ಕಾಣಯ್ಯ. ಇವರೊಬ್ರೇನು. ಜೋಡಿದಾರ್ರು, ಸಾವ್ಕಾರು, ಶೆಟ್ರು, ಯಾವ್ಯಾವ್ದೊ ಬೋರ್ಡ್ಗಳ ಮೆಂಬ್ರಂತೆ ಅವರೆಲ್ಲಾ ಬಂದು ನಮ್ಗಳ ಆಸ್ರಯ ಮಾಡ್ತಾರೆ. ನಾನು ಅಂತಾ ಕೆಲ್ಸ ಮಾಡಿದ್ದೇನೆ, ಇಂತಾ ಕೆಲ್ಸಮಾಡಿದ್ದೇನೆ, ಉಪ್ಪಿಲ್ಲದೆ ಮೂಗಳಗಂಜಿ ಕುಡಿಯುತ್ತೇನೆ. ಎಂದು ಉತ್ರನ ಪೌರ್ಸ ಕೊಚ್ಕೊಂಡು ನೀವು ನನ್ಗೆ ಓಟುಕೊಟ್ರೆ ನಿಮ್ಗೆ ಕಂದಾಯ ಕಮ್ಮಿಹಾಕ್ಸಿತೀನಿ ನಿಮಗೆ ಕನ್ನಾಂಬ್ಸೇಕಮಾಡ್ಸಿತೀನಿ ಎಂದು ಏನೇನೋ ಕಾಗ್ದಗಳ ಮೇಲೆ ಅಚ್ಚಾಕ್ಸಿ ತಂದ್ಕೊಟ್ಟವರೆ ಸಾಲ್ದಕ್ಕೆ ನಮ್ಮೂರು ಸಾನ್ಬೋಗ್ರು ಬೇರೆಬಂದು ಅವರು ದೊಡ್ಡಲಾಯ್ರು ಬಹಳ ಗಟ್ಗರು ದಿವಾನ್ರುಗಿವಾನ್ರು ಡಿಪ್ಟಿಕಮಿಸ್ನರುಗಿಮಿಸ್ನರು ಯಾರ್ಗೂ ಹೆದ್ರದೆ ಮೇಲ್ಬಿದ್ದು ಹೊಡ್ದಾಡ್ತಾರೆ. ಅವರು ಮಾತ್ರ ನಂಪ್ರಚ್ಯೋಕೆ ಮೆಂಬ್ರಾದರೆ ಕೆರೆ ಕಟ್ಟೆಗಳಲ್ಲೂ ಬಾವ್ಗೆಳ್ಳಲ್ಲೂ ನೀರು ಹರ್ದೋಗುವಂತೆ, ಕಂದಾಯಕೌಲ್ಗೆ ಕಮ್ಮಿ ಆಗುವಂತೆ ಮಾಡ್ಬಿಡ್ತಾರೆ ಅದ್ರಿಂದ ನೀನೂ ನಿನ್ನ ಕಡೋರು ಅವರ್ಗೇ ಕೊಡ್ಲೇಬೇಕಪ್ಪ ಆಫೀಸರ್ಗಳು ಅವರ್ಗೇ ಕೊಡುವಂತೆ ಹೇಳಿಕಳ್ಸಿದ್ದಾರೆ, ಹಾಗೆ ನೀನು ಇತ್ರ ಜನರ ಮಾತ್ಕೇಳಿ ನಾನು ಹೇಳ್ದೋರಿಗೆ ಕೊಡ್ದಿದ್ರೆ ಮೇಲಿನ ದೊಡ್ ದೊಡ್ಡ ಆಫೀಸರ್ಗೆಲ್ಲಾ ಕೋಪಬರ್ತದೆ ನೋಡ್ಕೋಗೌಡ ಎಂದು ಬಯ ಹುಟ್ಸವರೆ.

ಲಿಂಗಪ್ಪ—ಈ ವತ್ತು ನಿನ್ನಮನೆ ಬಾಗಲ್ಗೆ ಬಂದಿದ್ದ ದೊಡ್ಮನ್ಸರು ಹಿಂದೆ ಯಾವಾಗಾದ್ರೂ ಬಂದಿದ್ರಾ ಮತ್ತು ಏನು ಚನ್ನೆಗೌಡ್ರೆ ಚನ್ನಾಗಿದ್ದೀರಾ ನಿಮ್ಗೆಸ್ಟುಬಿಂಡಿ ಬತ್ತರಾಗಿ ಬನ್ತು. ನಿಮ್ಮ ಮಕ್ಕಮರ್ಗಳು ಚನ್ನಾಗವ್ರಾ ಎಂದು ಬೋವಚ್ಛದಿಂದ ಈದಿವ್ಸ ಮಾತಾಡ್ಸಿದಂತೆ ಹಿಂದೆ ಮಾತಾಡ್ಸಿದ್ರಾ.

ಚನ್ನೇಗೌಡ—ಅಯ್ಯೊ ಹುಚ್ಮಾರಾಯ ಹಿಂದೆ ಯಾವಾಗ್ಲೂ ಅವರು ನಮ್ಮಗ್ರಾಮಕ್ಕೆ ಬಂದಿಲ್ಲಾ. ಮತ್ತು ಮರ್ಯಾದೆಯಿಂದ ಮಾತಾಡ್ಸಿದ್ದಿಲ್ಲಾ. ಆದಾಗಿಲ್ಲ ನಾನು ನನ್ನ ಮೊಕದ್ದಮ್ಮೆ ಕೊಡೋಕ ಮೊದ್ಲಾವರ್ತಿ ನಮ್ಮ ಸಾನ್ಬೋಗ ಕರ್ಕೊಂಡುಹೋಗಿದ್ದಾಗ ಮಾತ್ರ ಬನ್ರಿಗೌಡ್ರೆ ಕೂತ್ಕೊಳ್ಳಿ ಎಂದು ಹೇಳಿ ಫೀ ಗೊತ್ತುಮಾಡಿ ಕೇಸ್ತೊಕ್ಟು ಫೀಗಾಗಿ ಅರ್ಧಹಣ ಕೊಟ್ಟು ಬಾಕಿಹಣ ಕೇಸ್ನದಿವಾಗ್ಗೆ ಕೊಡ್ತೀನೆಂದು ಸಾನ್ಬೋಗ್ರ ಜಾಮೀನು ಕೊಟ್ಟುಬಂದು ಎರಡ್ನೆಸಲ ಹೋದಾಗ ಏನಯ್ಯಾ ಬಾಕಿ ಫಿ ತಂದಿದ್ದೀಯಾ ಎಂದೂ ಮೂರ್ನೆವೇಳೆ ಏನೋ ಯಾಕೋ ತರಲಿಲ್ಲ ಎಂದು ಗದ್ದರಿಸಿ ಮಾತ್ನಾಡಿ ಕೂತ್ಕೊಳ್ಳೋಕೆ ಸಹ ಎಳ್ಳಿಲ್ಲ. ಈ ದಿವ್ಸ ಓಟನ್ನು ಕೊಡಲು ಗಟ್ಟಿಮಾಡ್ಕೊಳ್ಳೋಕೆ ಬಾಳಾ ಗೌರ್ವದಿಂದ ಮಾತಾಡ್ಸಿದುದು ಕಣಯ್ಯಾ.

ಲಿಂಗಪ್ಪ—ಇಂತ ಜಂಬದ್ಮನೋರಿಗೆ ಯಾಕಪ್ಪಾ ಓಟ್ಕೊಡೋದು. ನಮ್ಮೋರ್ಗೆ ಯಾಕೆಕೊಡ್ಬಾರ್ದಪ್ಪ.

ಚನ್ನೆಗೌಡ—ಲಿಂಗಪ್ಪ ಚೆನ್ನಾಗೇಳ್ದೆ. ಸಾನ್ಬೋಗರು ದೊಡ್ಡವ್ರು ಸಿಪಾರ್ಸು ಮಾಡೋರಿಗೆ ಕೊಡ್ದಿದ್ರೆ ನಾವು ಬಾಳೋಕುಂಟೆ, ಯಾವ್ದಾದ್ರು ಒಂದು ನೆಪಮಾಡ್ಕೊಂಡು ಸಾನ್ಬೋಗ್ರು ನಮ್ಮನ್ನು ತೊಂದ್ರೆಗೆ ಸಿಕ್ಸಿ ತಮ್ಮ ಹಗೆ ತೀರ್ಸಿಕೊಳ್ಳುವರು.

ಲಿಂಗಪ್ಪ—ಹಾಗಾದ್ರೆ ಸಾನ್ಬೋಗ್ರು, ಸಿಪಾರ್ಸುಮಾಡ್ದೋರ್ಗೇನೆ ನೀನು ಕೊಡ್ತಿಯಂತಾಯ್ತು.

ಚನ್ನೆಗೌಡ—ನೀನು ಮಾತ್ರ ಅವರು ಯೇಳ್ದವರಿಗೆ ಕೊಡ್ದೆ ಇನ್ನಾರ್ಗೆ ಕೊಡ್ತಿ.

ಲಿಂಗಪ್ಪ—ನಮ್ಮಜಾತಿಯವರೊಬ್ಬರು ಒಂದು ತೊನೀತಿದ್ದಾರೆ. ನೀನು ಈಗ ಹೇಳ್ದಂತೆ ನಾನು ಅವರಿಗೆ ನಮ್ಮಗ್ರಾಮದ ಸಾನ್ಬೋಗರು ಹೇಳ್ದೋರ್ಗೆ ಕೊಡ್ದಿದ್ದಲ್ಲಿ ಅವರ್ಗೆ ಕೋಪಬರ್ತದೆ ಮತ್ತು ಅದ್ರಿಂದ ಮುಂದೆ ಕೆಡ್ಕಾಗ್ತದೆ ಎಂದು ಬಾಳ್ವಾಗಿ ಹೇಳ್ದರೂ ಅವರು ಕೇಳ್ದೆ, ನಾವು ಸ್ವಜನ್ರು ನಿಮ್ಮ ಕಷ್ಟಸುಖಕ್ಕೆ ಬಾದ್ಯರು, ನಿಮ್ಗೂನಮ್ಗೂ ವಂದ್ಗಿಂದ್ರೆ ಎಂಜಲಿಲ್ಲ ಮುಟ್ಟಿದ್ರೆ ಮೈಲ್ಗೆಯಿಲ್ಲ. ಇಂಗಿರ್ವಾಗ ಸ್ವಜನಕ್ಕೆ ಕೊಡ್ದೆ ಅನ್ಯರಿಗೆ ಕೊಟ್ರೆ ಕುಲದ್ರೋಹ ಮಾಡ್ದಂತೆ ಅಗ್ತದೆ ಎಂತ ಬಾಳ್ವಾಗಿ ಹೇಳ್ದರ ಮೇಲೆ ನಾನು ಅವರ್ಗೇ ಓಟನ್ನು ಕೊಡ್ತೇನೆಂದು ಬಾಸೆಕೊಟ್ಟಿದ್ದೇನೆ.

ಚನ್ನೆಗೌಡ—ಹೌದು ಲಿಂಗಪ್ಪ ನಮ್ಮ ಕುಲ್ದವನೊಬ್ನು ನನ್ನ ಬೀಗಮೊದ್ಲಾದ ನಂಟ್ರನ್ನು ಕರ್ಕೊಂಡ್ಬಂದು ನಿನ್ನೆ ನಿನ್ನ ಕುಲ್ದವನು ಹೇಳ್ದಂತೆ ನನಗೂ ಹೇಳ್ದರಲ್ಲದೆ, ಕಷ್ಟಸುಕಕ್ಕೆ ಬಾದ್ಯರಾದ ನಂಟಿನಿಸ್ವರ ಮಾತನ್ನು ಕೇಳ್ದೆ ಮತ್ತು ಕುಲಾಬಿಮಾನವಿಲ್ದೆ ಬೇರೆಯವ್ರಗೆ ಸಾಯಮಾಡಿದ್ರೆ ಇನ್ಮೇಲೆ ನಿನ್ಗೂ ನಮ್ಗೂ ಸಂಬಂದ್ವಿಲ್ಲ, ನೀನು ಬೇರೆಯವರನ್ನೇ ಕಟ್ಕೊಂಡು ಬಾಳು ಎಂದು ಹೇಳಿ ಕೋಪ್ಸಿಕೊಂಡೋದರು.

ಲಿಂಗಪ್ಪ—ಅಯ್ಯಾ ಚನ್ನೇಗೌಡ, ಬೇರೆಜನ್ರು ತಮ್ಮ ಕಾರ್ಯ ಗೆಲ್ಲೋಕೆ ಎಸ್ಟರಮಟ್ಗೆ ನಮ್ಮನ್ನು ಇಂದ್ರಚಂದ್ರನಂತೆ ಹೊಗ್ಳಿ ಕೆಲ್ಸಆದ್ಮೇಲೆ ನಮ್ಮನ್ನು ಕಸಕ್ಕೆ ಕಡೆಯಾಗಿ ಕಾಣ್ತಾರೆಂಬ್ದನ್ನು ನೀನೇ ಹೇಳಿದ್ದೀಯ. ಆದ್ರೂ ಅಂತೋರ್ಗೆ ಕೊಡ್ಬೇಕೆಂದು ಇತ್ತಮಾತ್ಗೆ ಕಟ್ಟುಬೀಳೋದು ನ್ಯಾಯವಲ್ಲ.

ಚನ್ನೇಗೌಡ—ಮಳೆ ಸರಿಯಾಗಿ ಬರದೆಹೋದ್ರಿಂದ ಬೆಳೆಹೋಗಿ ನಾವು ಮುಂದಿನ ಬೆಳ್ಸ ಬರೋವರ್ಗೆ ಜೀವ್ಸೋದು ಯಾಂಗೆ ದನಕರ್ಗಳನ್ನು ಸಾಕೊದ್ಯಾಂಗೆ ಇದಲ್ದೆ ಸರ್ಕಾರಕ್ಕೆ ಕಂದಾಯ ಕಟ್ಬೋದು ಯಾಂಗೆ ಎಂದು ಚಿಂತ್ಸಿರುವಾಗ್ಗೆ ನಮ್ಗೋಟುಕೊಡಿ ನಮ್ಗೋಟುಕೊಡಿ ಎಂದು ಬೆಳ್ಕರಿತ್ಲೆ ಕಂಡುಕೇಳ್ದವರು ಇಲ್ಲದಿದ್ದವರು ಯಾರ್‍ಯಾರೋ ಬಂದು ತೊನಿಯುತ್ತಿರುವದಲ್ದೆ ಸಾನ್ಬೋಗ್ರು ಮೊದ್ಲಾದವ್ರು ಹೇಳ್ದಂತೆ ಕೇಳ್ದಿದ್ರೆ ದೊಡ್ಡವ್ರ ಕೋಪಕ್ಕೆ ಗುರಿಯಾಗಬೇಕಾಗ್ತದೆಂದೂ ಕಂದಾಯಕೌಲ್ಗೆ ಕಾಲದಲ್ಲಿ ಜಮೀನು ತಕೊಳ್ಬೇಕಾದಲ್ಲಿ ಸಾಲಕ್ಕಾಗಿ ಹೋಗಬೇಕಾಗಿರುವ ಸಾವಕಾರರ ಮಾತ್ಕೇಳಿ ಓಟುಕೊಡದಿದ್ರೆ ಅವರ ನಿಷ್ಟೂರಕ್ಕೊಳಗಾಗಬೇಕಾಗ್ತದೆಂದೂ ಕುಲಸ್ತರ ಮಾತ್ಕೇಳದಿದ್ರೆ ತೊಂದ್ರೆಯಾಗ್ತದೆಂದೂ ಹೆದ್ರಿಸುತ್ತಿದ್ದಾರೆ. ಹಿಂದಕ್ಕೋದ್ರೆ ಬಾವಿ ಮುಂದಬಂದ್ರೆ ಕೆರೆ ಎಂಬಂಗೆ ಈ ಹಾಳು ಓಟಿನಿಂದ ದುಡ್ಡುಕಾಸಿಲ್ದೆ ನಿಸ್ಕಾರ್ಣವಾಗಿ ನಿಸ್ಟೂರ ಕಟ್ಕೊಳ್ಬೇಕಾದ ಪೀಕ್ಲಾಟ ಬಂತಲ್ಲಪ್ಪಾ, ಲಿಂಗಪ್ಪ ನೀನು ಯಾರ್ಗೆ ಕೊಡ್ತಿ.

ಲಿಂಗಪ್ಪ—ನಮ್ಗೋರ್ಗೆ ಕೊಡ್ತೀನೆಂದು ಮಾತ್ಕೊಟ್ಟಿದ್ದೀನಿ ಅದ್ರಿಂದ ಬಂದನಿಸ್ಟೂರ ಬರಲಿ ಅವರ್ಗೆ ಕೊಡ್ತೀನಪ್ಪ.

ಚನ್ನೇಗೌಡ—ಬುಡು ಬುಡು ನಾವೇನು ಅರಿಚಂದ್ರನೆ ಕೊಟ್ಟಮಾತು ತಪ್ಪದೋಕೆ. ಇಂತಾ ಜಿನವೇ ಕೊಡ್ತೀವೆಂದು ಚಾಪಾಕಾಗ್ದ ಬರ್ಕೊಟು ರಿಜಿಸ್ತ್ರಿಮಾಡ್ಸಿಕೊಟ್ಟಿದ್ರು ಕಾಲಕ್ಕೆ ಸರಿಯಾಗಿ ಕೊಡ್ದೆ ಸತಾಯಿಸಿ ಕೋರ್ಟುಕಚೇರಿಗೆ ಹತ್ಸಿ ಚುಳ್ಳಿಅಣ್ಣು ತಿನ್ಸಿಸ್ತಾರೆ. ಅಂಗಿರ್ವಾಗ ಸಾನ್ಬೋಗ್ರು ಸಾವ್ಕಾರ್ರು ಮೊದ್ಲಾದವ್ರು ಕಾಟ ತಡಿಲಾರ್ದೆ ನೀವೇಳ್ದೋರ್ಗೆ ಕೊಡ್ತೀನೆಂದು ಹೇಳ್ದಮಾತ್ರಕ್ಕೆ ಅವರ್ಗೇ ಕೊಡ್ಬೇಕೊ.

ಲಿಂಗಪ್ಪ—ಅಂಗಾದ್ರೆ ಮುಂದೇನ್ಮಾಡಬೇಕಪ್ಪ ನೀನು ಯಾಂಗೆಹೇಳ್ತೀಯೋ ನಾನೂ ಅಂಗೆ ನಡ್ತೀನಿ.

ಚನ್ನೇಗೌಡ—ಇವರ್ಗಳ ಕಾಟ ನನ್ಗೆ ಈಗ್ಲೆ ತಪ್ಪಲ್ಲ. ಬರುವ ತಿಂಗ 15ನೆ ತಾರೀಕು ತನ್ಕ ಒಬ್ರುಮೇಲೊಬ್ರು ಬಂದು ನಮ್ಮನ್ನ ಆಕಾಸಕ್ಕೆ ತಕ್ಕೊಂಡೋಗಿ ಕುಂದ್ರಿಸಿ ತೊನಿಯುತ್ತಾರೆ. ಅವರೆಲ್ಲರಿಗೂ ಆಗ್ಲಿ ಒಳ್ಳೇದುದೇವ್ರುತಾವೇ ಓಟ್ಕೊಡ್ತೀವೆಂದು ಹೇಳ್ತಿದ್ದು, ನಮ್ಮ ರೈತರ ಮಕ್ಳಳ ವಿದ್ಯಾಬ್ಯಾಸಕ್ಕೂ, ವಿದ್ಯಾವಂತರಾದೋರ್ಗೆ ಸರ್ಕಾರಿ ನೋಕ್ರಿ ಕೊಡ್ಸೋದು, ಗ್ರಾಮಬಿವೃದ್ಧಿ ಮೊದ್ಲಾಗಿ ರೈತರ ಕಷ್ಟಗಳನ್ನ ತಿಳ್ದು ಸರ್ಕಾರ್ದೋರ್ಗೆ ಹೇಳಿ ಹೊಡ್ದಾಡಿದೋರ್ಗೆ ಮತ್ತು ಮುಂದೆಯೂ ಹೊಡ್ದಾಡೋರ್ಗೇನೆ ಕೊಡಬೇಕೆಂದು ಗಟ್ಟಿಮನಸ್ಸುಮಾಡಿದ್ದೀನಿ ನೀನೂ ಅದರಂತೆ ನಡಿಬೇಕಲ್ದೆ ನಮ್ಮೋರ್ಗೆಲ್ಲಾ ಅಂಗೇ ಹೇಳಿ ಮಾಡ್ಸಬೇಕು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಅರಕಲಗೂಡು ತಾಲ್ಲೂಕು ಬಸವಾಪಟ್ಟಣ.

ಬೆಳಗಿನಲ್ಲಿ ಚಳಿಜಾಸ್ತಿ. ಪ್ಲೇಗಿನಿಂದ ಊರುಬಿಟ್ಟಿದ್ದ ಜನಗಳು ಊರು ಸೇರುತ್ತಾ ಬಂದಿರುವರು. ಆದರೆ ಗ್ರಾಮದಲ್ಲಿ ಅನೇಕರು ಕಾಯಿಲೆಯುಳ್ಳವರಾಗಿರುತ್ತಾರೆ. ತಾಲ್ಲೂಕಿಗೆ [illegible] ಹೈರೋಡು [illegible] ಇಲ್ಲಿರುವ ಮತ್ತು ಸುತ್ತಮುತ್ತ ಜನಬಾಹುಳ್ಯವುಳ್ಳ ಅನೇಕ ಅಗ್ರಹಾರಗಳಿಗೆ ಮಧ್ಯಭಾಗದಲ್ಲಿರುವ ಇಂಥಾ ದೊಡ್ಡ ಊರಿಗೆ ಒಂದು ಆಸ್ಪತ್ರೆಯಿಲ್ಲದಿರುವುದು ತುಂಬಾ ಶೋಚನೀಯವಾಗಿದೆ. ಹೊಸದಾಗಿ ಬಂದಿರುವ ಮತ್ತು ಪ್ರಜಾವಾತ್ಸಲ್ಯವುಳ್ಳ ನಮ್ಮ ಡಿ|| ಮೆಡಿಕಲ್ ಆಫೀಸರವರು ಒಂದಾವರ್ತಿ ಈ ಗ್ರಾಮಕ್ಕೆ ದಯಮಾಡಿಸಿ ಈ ವಿಚಾರದಲ್ಲಿ ತಕ್ಕ ತರದೂದುಮಾಡಿಕೊಡಬೇಕಾಗಿ ಇಲ್ಲಿನ ಜನಗಳು ಅಪ್ಲಿಕೇಶನ್ ಹಾಕಿಕೊಳ್ಳುವುದು ಒಳ್ಳೆಯದೆಂದು ತೋರುತ್ತೆ. ಕಳೆದ 19-1-24ನೆ ಶನಿವಾರ ಈ ಗ್ರಾಮದಲ್ಲಿ ನಡೆದ ಮಕ್ಕಳ ಪ್ರದರ್ಶನೋತ್ಸವವು ವಿಲೇಜ್ ಛೇರ್ಮನ್ ಮೆ|| ಹ|| ಮಲ್ಲಶೆಟ್ಟರವರ ಮತ್ತು ಶಾ|| ಕಲ್ಲಪ್ಪಣ್ಣನವರ ವಿತಂಡೆಯಾದ ಏರ್ಪಾಡುಗಳಿಂದ ಹೋಬಳಿ ಶೇಕದಾರ್ರವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟು ನೆರೆದಿದ್ದ ಸ್ತ್ರೀಸಮೂಹದಲ್ಲಿ ವಿಧಾಯಕವಾದ ಉಪನ್ಯಾಸಗಳ ಮೂಲಕ ತಿಳಿವಳಿಕೆ ಕೊಡಿಸಿ ನಂತರ ಬಹುಮಂದಿ ಮಕ್ಕಳಿಗೆ ವಸ್ತ್ರದಾನದಿಂದ ಪ್ರೋತ್ಸಾಹಿಸಿದ ವಿಷಯ ಈ ಹಳ್ಳಿಗಾಡಿನಲ್ಲಿ ನಡೆದಭಾಗ ಬಹಳ ಶ್ಲಾಘ್ಯವಾಗಿರುತ್ತದೆ. ಸರ್ಕಾರದವರು ಹಾಲಿ ಏರ್ಪಡಿಸಿರುವ ಮಿಡಲ್ ಮತ್ತು ಪ್ರೈಮರಿ ಸ್ಕೂಲುಗಳ ಮಾಸ್ಟರುಗಳ ಬದಲಾವಣೆ ವಿಷಯದಲ್ಲಿ ನಮ್ಮ ಡಿ|| ಇನ್|| ರವರು ಇದುವರಿಗೆ ನಡೆಸುತ್ತಾ ಬಂದಿರುವಂತೆ ಕ್ಷಣಿಕಕ್ಕೆ ಒಬ್ಬ ಮಾಸ್ಟರ ಚುನಾವಣೆಯನ್ನು ನಡೆಸದೆ ಗ್ರಾಮಾಭಿಮಾನದಿಂದಲೂ, ಕಾರ್ಯದಕ್ಷತೆಯಿಂದಲೂ ಕೆಲಸಮಾಡುವ ಮುಖ್ಯೋಪಾಧ್ಯಾಯರನ್ನೂ, ಅ|| ಮಾ|| ಗಳನ್ನೂ ಚುನಾಯಿಸಿ ಸ್ಕೂಲಿನ ಅಭಿವೃದ್ಧಿಗೆ ಮಾರ್ಗಮಾಡಿಕೊಡಬೇಕಾಗಿ ಈ ಮೂಲಕ ನಮ್ಮ ವಿದ್ಯಾಇಲಾಖೆ ಇನ್|| ಜ|| ಸಾಹೇಬರನ್ನೂ, ಸರ್ಕಲ್ ಇನ್|| ಸಾಹೇಬರನ್ನೂ ಬೇಡಿಕೊಳ್ಳುತ್ತೇವೆ.

ಸ್ಥಳವಾಸಿ.

ಚಾಮರಾಜನಗರದ ತಾಲ್ಲೂಕು ಕುದೇರು.

ಇಲ್ಲಿನ ಶ್ರೀ ಚನ್ನಬಸವೇಶ್ವರ ವಿಲಾಸ ವಾಚಕಮಂದಿರದ ತೃತೀಯ ವಾರ್ಷಿಕೋತ್ಸವದ ನಿಮಿತ್ತ ಈ ತಿಂಗಳು ತಾ|| 12 ರಲ್ಲಿ ವೇ|| ಶ್ರೀ|| ನಿತ್ಯಾನಂದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮಂದಿರದವರೂ ಮಠಾಧಿಕಾರಿಗಳೂ ವೀರಶೈವ ಮಹಾಜನಗಳಾದಿಯಾಗಿ 300 ಜನಗಳಿಂದ ಸಭೆಯು ಅಲಂಕೃತವಾಗಿತ್ತು. ಆ ಕಾಲದಲ್ಲಿ ಈ ಮಂದಿರದ ಮೆಂಬರ್ಸ್ ಮ|| ಎಂ. ಚನ್ನಬಸಪ್ಪನವರು ಆರೋಗ್ಯ ವಿಷಯದಲ್ಲಿಯೂ ಮ|| ಸಿ. ಮಾದಪ್ಪನವರು ದ್ರವ್ಯದಸದ್ವಿನಿಯೋಗ ವಿಷಯದಲ್ಲಿಯೂ ಮ|| ಎಸ್. ಶಾಂತವೀರಪ್ಪನವರು ಹೊಗೆಸೊಪ್ಪಿನ ವಿಷಯದಲ್ಲಿಯೂ ಅತ್ಯಂತಸ್ವಾರಸವಾಗಿ ಭಾಷಣಮಾಡಿದರು. ಮ|| ಸೆಕ್ರಿಟರಿ ಸಿ. ಸಂಗಪ್ಪನವರು ವಾರ್ಷಿಕರಿಪೋರ್ಟನ್ನು ಓದಿದರು. ನಂತರ ಸಭಾಧ್ಯಕ್ಷರು ಮೇಲೆ ಹೇಳಲ್ಪಟ್ಟ ಉಪನ್ಯಾಸಗಳನ್ನು ಪುಷ್ಟೀಕರಿಸಿದರು. ಇದೇ ಗ್ರಾಮದ ನಿವಾಸಿಗಳಾದ ಮ|| ಜಿ. ಸದಾಶಿವಯ್ಯನವರು ಲೈಬ್ರರಿಗೆ ಬುಕ್ಕನ್ನು ಕೊಟ್ಟಿದ್ದಕ್ಕಾಗಿಯೂ ನಂಜನಗೂಡು ತಾಲ್ಲೋಕು ತಾಯೂರು ಗ್ರಾಮದ ಕಾಂಪೌಂಡರ್ ಮ|| ಸಿದ್ಧಬಸಪ್ಪನವರು ವರ್ಷ ವರ್ಷ 3 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ 3 ರೂಪಾಯಿಗಳನ್ನು ದಾನಮಾಡಿದ್ದಕ್ಕಾಗಿಯೂ ಇವರುಗಳನ್ನು ವಂದಿಸಿದನಂತರ ಸಭೆಯವರಿಗೆಲ್ಲಾ ಗಂಧ ಪುಷ್ಪ ತಾಂಬೂಲ ಫಲಹಾರಾದಿಗಳು ಹಂಚಲ್ಪಟ್ಟು ತರುವಾಯ ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆಯೊಡನೆ ಸಭೆಯು ಬರಖಾಸ್ತಾಯಿತು.

ಸೆಕ್ರಿಟರಿ, ಸಂಗಪ್ಪ.

ಮೈಸೂರು ಆರ್ಯವೈಶ್ಯ ಮಹಾಸಭಾ.

ಹೆಡ್ಡಾಫೀಸು, ಬೆಂಗಳೂರು ಸಿಟಿ.

ಮೈಸೂರು ಸಂಸ್ಥಾನಮುನಂದಗಲ ಶತಗೋತ್ರೋದ್ಭವುಲೈನ ಸಮಸ್ತ ಆರ್ಯವೈಶ್ಯ ಮಹಾಜನಮುಲಕು ತೆಲಿಯಚೇಯುಡಮೇಮನಗಾ :—

ಶ್ರೀ ಶೃಂಗೇರಿ ಮಠಾಧಿಪತುಲೈನ ಶ್ರೀ ಸ್ವಾಮುಲವಾರು ಇಂತಲೋನೆ ದೇಶಸಂಚಾರಮು ವೆಳ್ಳೇದಿಗಾನುನ್ನಾ ಮರಿನ್ನಿ ಅಚ್ಚಟಚ್ಚಟನುಂಡು ಮನ ಆರ್ಯವೈಶ್ಯುಲನು ಪ್ರೋತ್ಸಾಹಮುಚೇಸಿ ಶ್ರೀವಾಂಕಿ ಪಾದಪೂಜಲುವಗೈರಾ ನಡಿಪಿಂಚೇಟಟ್ಟು ಪ್ರಯತ್ನಿಂಚುಚುನ್ನಾರನಿನ್ನಿ ತೆಲಿಯವಚ್ಚಿನದಿ ಗನುಕ ಈ ವಿಚಾರಮುನು ಗುರಿಂಚಿ 7-1-1924 ತಾರೀಖುನ ಹೆಡ್ಡಾಫೀಸುವಾರು ಸಭಚೇರಿ ಈ ಕ್ರಿಂದ ಕನ್ನಪ್ರಕಾರಮು ತೀರ್ಮಾನಮು ಚೇಸಿಯುನ್ನಾರು ಗನುಕ ಮನ ಆರ್ಯವೈಶ್ಯುಲಂದರೂ ಕುಲಾಭಿಮಾನಮುವಿವಾದ ದೃಷ್ಟಿಯುಂಚಿ ಸಭಾತೀರ್ಮಾನಮುನಕು ವಿರೋಧಮುಲೇಕ ನಡುಚುಕೋವಲನನಿ ಪ್ರಾರ್ಥನ :—

ತೀರ್ಮಾನಮು :—

ಶ್ರೀ ಶೃಂಗೇರಿ ಮಠಮುವಾರಿನುಂಚಿ ಪ್ರಚುರಿಂಪಡಿಯುಂಡೆ "ವೈಶ್ಯವೇದೋಕ್ತ ಕ್ರಿಯಾವಿಚಾರವ್ಯವಸ್ಥ" ಯನು ಗ್ರಂಥಮುನು ಸದರಿ ಮಠಮುವಾರು ರದ್ದುಪರಚಿ ಸರ್ವಲಕು ತೆಲಿಯಚೇಯು ವರುಕು ಅಥವಾ ಮನ ಸಭವಾರಿ ಒಪ್ಪಿತಮು ಪ್ರಕಾರಮು ಸದರಿ ಗ್ರಂಥಮುಲೋಯುಂಡೆ ವಿರೋಧಾಂಶಮುಲು ಯಾವತ್ತುನ್ನೂ ಸವರಣ ಚೇಸೇವರಕುನ್ನೂ ಮನ ಆರ್ಯವೈಶ್ಯುಲೆವರುನ್ನೂ ಸದರಿ ಶೃಂಗೇರಿಮಠಮು ಶ್ರೀ ಸ್ವಾಮುಲವಾರುಕು ಭಕ್ತಿ ಪಾದಪೂಜಲಾದಿಗಾ ಯೇ ವಿಧಮೈನ ಮರ್ಯಾದಲುನು ಜರುಪಕೂಡದನಿಯು ತೀರ್ಥಪ್ರಸಾದಮುಲು ಸ್ವೀಕರಿಂಚ ಕೂಡದನಿಯೂ ತೀರ್ಮಾನಮು.

ಪೈಕನ್ನ ಸಭ ತೀರ್ಮಾನಮುನು ವಿನಾ ಗ್ರಾಮಮುಲೋಯುಂಡು ಸರ್ವ ವೈಶ್ಯುಲಕು ತೆಲಿಯಚೇಸಿ ಸಭ ತೀರ್ಮಾನಮುನು ಗೌರವಿಂಚೇಟಟ್ಟು ಚೇಯವಲೆನು.

By order,
ಕುಸುಮ ಸುಬ್ಬರಾಯಶ್ರೇಷ್ಠಿ ಬಿ.ಎ., ಎಲ್‌ಎಲ್.ಬಿ.,
ತಾ|| 10-1-24
ಸೆಕ್ರಟರಿ.

ನಂಜನಗೂಡಿನ ಅಮಲ್ದಾರ್ರವರು.

ಇಲ್ಲಿನ ಅಮಲ್ದಾರರವರಿಗೆ ವರ್ಗವೆಂದು ಕೆಲವರು ಆಡಿಕೊಳ್ಳುತಲಿರುವರು. ಇವರು ಬ್ರಾಹ್ಮಣೇತರರಾಗಿರುವದೇ ಒಂದು ದೊಡ್ಡ ತಪ್ಪಾಗಿದೆ. ಏಕೆಂದರೆ ದೇವಸ್ಥಾನದ ಕೆಲಸಕಾರ್ಯಗಳಿಗೆ ಅಡಚಣೆಯಂತೆ ! ಹೇಗೋ ಕಾಣೆವು, ಇವರಿಗೆ ಇವರಿಂದು ದರಿಂದ ದೇವಸ್ಥಾನದಲ್ಲಿ ನಡೆದ ಚಿಕ್ಕಜಾತ್ರೆಯೇ ಮೊದಲಾದ ದೊಡ್ಡ ದೊಡ್ಡ ಉತ್ಸವಗಳು ಸಮರ್ಪಕವಾಗಿ ನೆರವೇರಿಲ್ಲವೆ ? ಅದು ಹಾಗಿರಲಿ, ದೇವಸ್ಥಾನದ ಗುತ್ತಿಗೆ ಎಲ್ಲವೂ ಬ್ರಾಹ್ಮಣರವರದೇ ಆಗಿರಲಿ, ಅದ್ದಿ ಇಲ್ಲ. ಆದರೆ ತಾಲ್ಲೂಕಿನ ಇತರ ಜನಾಂಗಗಳು ಸಹನಾಶಕ್ತ್ಯಾಯೋವನರೂ ಬ್ರಾಹ್ಮಣೇತರ ಅಮಲ್ದಾರರ ಮುಖಾವಲೋಕನವನ್ನು ಮಾಡದಂತಹ ಪಾಪವನ್ನೇನುಮಾಡಿರುವರು ? ಅಲ್ಪಾವಧಿಯಲ್ಲಿಯೇ ಈಗಿನ ಅಮಲ್ದಾರರೂ ತಾಲ್ಲೂಕಿನ ಜನರ ಮೆಚ್ಚುಗೆಯನ್ನು ತಮ್ಮ ನಿಷ್ಪಕ್ಷಪಾತತೆಯಿಂದಲೇ ಪಡೆದಿರುವರೆಂದು ಧೈರ್ಯದಿಂದ ಹೇಳಬಲ್ಲೆವು. ನಂಜನಗೂಡಿನಂತಹ ಮುಖ್ಯಸ್ಥಳದಲ್ಲಿ ಅಮಲ್ದಾರಿಯಂತಹ ಅಧಿಕಾರವು ಬ್ರಾಹ್ಮಣೇತರರಿಗೆ ಸಲ್ಲತಕ್ಕದ್ದಲ್ಲವೆಂದು ಸರ್ಕಾರವು ಯಾವ ಕಾರಣದಿಂದಲಾದರೂ ಸಾರುವಪಕ್ಷದಲ್ಲಿ ಇವರಿಗೆ ಇಲ್ಲಿ ಅನ್ಯೋನ್ಯದಿಂದಿರುವ ಜನರಲ್ಲಿ ಭೇದಭಾವವನ್ನು ಸರ್ಕಾರವೇ ಬೇರೂರಿಸಿದಂತಾಗುತ್ತದೆ. [illegible] ಹಾಗಾಗದು. ಇನ್ನು [illegible] ಭ್ಯುದಯದಲ್ಲಿ ಗಲಭೆ ಎಬ್ಬಿಸಿರುವರು. ಆ ರಾಯರೆಂಬುವರನ್ನು ನಾನು ನೋಡಿರುವೆನು. ಅವರ ಕೂಡೆ ಸಂಭಾಷಿಸಿರುವೆನು. ಅವರು ಮಹಾತ್ಮ ಗಾಂಧಿಯವರ ಗುಣಗಳನ್ನು ಮರೆತು ಕಾರ್ಯಗಳನ್ನು ಪ್ರಚಾರಪಡಿಸುತ್ತಿರುವರು. ಇಲ್ಲಿ ಯಾವದೂ ಸಾಧ್ಯವಿಲ್ಲವಾಗಿ ಯಾರೂ ಚಿಂತೆಗೆ ಗುರಿಯಾಗಬೇಕಾದುದಿಲ್ಲ. ಅದರಲ್ಲಿಯಾದರೂ ಅಮಲ್ದಾರರ ದೋಷವೇನೂ ಇಲ್ಲ. ಸರ್ಕಾರವೂ ನಮ್ಮ ಪಾತಂದರವರೂ ಈ ಕೆಲಸಕ್ಕೆ ಬಾರದ ಗಲಭೆಗಳಿಗೆ ಗಮನಕೊಡಲಾರರು. ಒಂದು ಅಧಿಕಾರವನ್ನು ಒಂದೇ ಪಂಗಡದವರಿಗೆ ಧಾರೆಯೆರೆಯುವ ಪಕ್ಷದಲ್ಲಿ ಪರಿಣಾಮವು ಅಷ್ಟೇನೂ ಶ್ರೇಯಸ್ಕರವಲ್ಲವು. ಮೇಲಾಗಿ ದೇವಸ್ಥಾನದ ಕಾರ್ಯಗಳಾದರೂ ದರ್ಪದಿಂದಲೂ ವಿಶರಣೆಯಿಂದಲೂ ನೆರವೇರುತ್ತವೆ. ಮುಖ್ಯವಾಗಿ ಅಮಲ್ದಾರಿಗೆ ಎಲ್ಲಾ ಜನಾಂಗಗಳ ಜನರೂ ಬರುತ್ತಿರಬೇಕೆಂಬುದೇ ಈ ತಾಲ್ಲೋಕಿನವರ ಖಂಡಿತವಾದ ಅಂಕೆ ಎಂಬುದನ್ನು ಸರ್ಕಾರದವರು ದೃಢವಾಗಿ ತಿಳಿಯುವದು ಮೇಲು.

ನಿಷ್ಪಕ್ಷಪಾತಿ.

ಉಮೇದುವಾರರು ಪೂರ್ವಾಪರ ವಿಚಾರಮಾಡಿ ಓಟುಮಾಡಬೇಕು.

ಸ್ವಾಮಿ ಕಳೆದ ಡಿಸೆಂಬರ್ 16 ನೇ ತಾರೀಖಿನ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಸಮ್ಮತಿಸುವವರಿಗೆ ವಿಜ್ಞಾಪನೆ ಎಂಬ ಪ್ರಕಟಣೆಯ ಮೇಲೆ ತುಮಕೂರಿನ ಹಿತಚಿಂತಕರೆಂಬುವರು ಆಕ್ಷೇಪಣೆಗಳನ್ನು ಈ ಮಾಹೆ ತಾ|| 6ನೇ ಮೈಸೂರು ಕ್ರಾನಿಕಲ್ ಪತ್ರಿಕೆಯಲ್ಲಿ ಬರೆದಿದ್ದಾರೆ. "ಕುಂಬಳಕಾಯಿ ಕಳ್ಳ ಅಂದರೆ ಹೆಗಲು ತಡವಿಕೊಂಡನೆಂಬಂತೆ" ಚಿಂತಕರಿಗೆ ಅದರಲ್ಲಿನ ಯಾವ ವಿಷಯಗಳು ಕ್ರತ್ಯಾವ್ಯಯವಾಗಿ ಬಾಧಿಸಿದವೊ ಅಂಥಾ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಬದಲಾಗಿ ತಮ್ಮ ವಿಷವನ್ನುಕಾರಿ ಅಲ್ಪತನವನ್ನು ಬಹಿರಂಗಪಡಿಸಿಕೊಂಡರಲ್ಲಾ ಎಂದು ವಿಷಾದಿಸುತ್ತೇನೆ. ಅಲ್ಪವಿದ್ಯಾ ಮಹಾಗರ್ವಿ ಕುರೂಪಿ ಬಹುಚೇಷ್ಟಿತಃ ಎಂದು ಬರೆದಿದ್ದಾರೆ. ವಿದ್ಯಾಪ್ರಸಕ್ತಿಯ ಅವಶ್ಯಕತೆಯೆ ಇಲ್ಲಿ ಇರಲಿಲ್ಲ. ಹೀಗಿದ್ದರೂ ಚಿಂತಕರು ತಮ್ಮ ಪಾಂಡಿತ್ಯವನ್ನು ತೋರ್ಪಡಿಸಲು ಇದನ್ನು ಬರೆದಿರಬೇಕು. ಆದರೆ ಆ ಬರವಣಿಗೆಯೆ ಪಂಡಿತರ ಯೋಗ್ಯತೆಯನ್ನು ಹೊರಪಡಿಸುತ್ತೆ. ಕಿಂದಾದ ವಿದ್ಯೆಯಾಗಲಿ | ಮೆರೆವುದು ತನ್ನಲ್ಲಿ ಸುಗುಣಗಳೊಡನೆ ಮತ್ತಾ || ಒರತೆಯನೀರಾಮೊಡೆತಾಂ ಬರನಂಪಿಂಗಿಸದೆ.......ಇದು ಹಿತಚಿಂತಕರಾದ ಪಂಡಿತರಿಗೆ ತಿಳಿಯದೆಹೋಗಿರಬಹುದು. ಅನುಭವವೆಂಬ ಮಾತಿನ ಅರ್ಥ ಮಾಡಲು ಕಾರ್ಗತ್ತಲೆಯಲ್ಲಿ ಸಂಚರಿಸುವವರಂತೆ ಹಂಬಲಿಸುತಾ ಸೂಟ್ ಬೂಟ್ ಹ್ಯಾಟ್ ಇವುಗಳನ್ನು ಧರಿಸಿದರೆ ಲೋಕವ್ಯವಹಾರಜ್ಞಾನವನ್ನು ತಿಳಿದಂತಾಯಿತೆ ಎಂದು ಬಾಲಭಾಷೆಯನ್ನಾಡಿದ್ದಾರೆ. ಇದು ಚಿಂತಕರ ಮನೋದಾರ್ಢ್ಯವನ್ನ ವಾಚಕರಿಗೆ ತೋರ್ಪಡಿಸದೆ ಇರದು. ಕಚ್ಚುವನಾಯಿ ಬೊಗಳುವುದಿಲ್ಲ ಬೊಗಳುವನಾಯಿ ಕಚ್ಚುವುದಿಲ್ಲ ವೆಂಬ ನಾಣ್ಣುಡಿಯನ್ನು ಹೇಳಿದ್ದಾರೆ. ಆದರೆ ಗಲ್ ಗಲ್ ಎಂದು ಶಬ್ದಮಾಡುವ ಅಶ್ವತ್ಥವೃಕ್ಷವು ಪೂಜಿಸಲ್ಪಡುತ್ತಲೂ ಮಲ್ಲಿಯಂತಿರುವ ಕಲ್ಲಿಯು ಮಂಡಲದಹಾವಿಗೆ ಸಮಾನವೆಂದು ಭಾವಿಸಲ್ಪಡುತ್ತಲೂ ಇರತಕ್ಕ ವಿಷಯವು ಆಬಾಲವೃದ್ಧರಿಗೂ ತಿಳಿಯದೆ ಇಲ್ಲ. ನಾಯಿಬೊಗಳಿದರೆ ದೇವಲೋಕಹಾಳೆ ಎಂಬಂತೆ ಹಿತಚಿಂತಕರ ಬಾಲಭಾಷೆಯು ಯಾರಮನಸ್ಸನ್ನೂ ಬದಲಾಯಿಸಲಾರದು. ಆದ್ದರಿಂದ ಸಮ್ಮತಿಸುವ ಮಹಾಶಯರು ಯೋಗ್ಯತಾ ಯೋಗ್ಯತೆಗಳನ್ನೂ ಉಮೇದುವಾರರ ಹಿಂದಿನ ಪೂರ್ವವೃತ್ತಾಂತವನ್ನೂ ವಿಚಾರಮಾಡಿ ಸಮ್ಮತಿಸುವವರಾಗಲೆಂದು ಪುನರಾವರ್ತಿ ಪ್ರಾರ್ಥಿಸುತ್ತೇನೆ. ಚುನಾವಣೆಯ ಕಾಲವು ಸಮೀಪಿಸಿರುವುದ್ದರಿಂದಲೂ ಅಲ್ಪ ವಿಷಯಗಳಿಗೆ ಗಮನಕೊಡತಕ್ಕದ್ದು ಗುಬ್ಬಚ್ಚಿಯ ಮೇಲೆ ಬ್ರಹ್ಮಾಸ್ತ್ರಪ್ರಯೋಗ ಮಾಡಿದಂತಾಗುವುದರಿಂದಲೂ ಮುಂದಿನ ಈ ಸಂಬಂಧವಾದ ಬರವಣಿಗೆಗೆ ನಿಗಾಕೊಡದೆ ಪತ್ರಿಕಾಪ್ರಸಂಗವನ್ನು ಇಲ್ಲಿಗೆ ಪೂರೈಸಿದ್ದೇನೆ.

ಟಿ. ಗುರುಚನ್ನಬಸವಯ್ಯ, ತುಮಕೂರು.

ಪ್ರಸಿದ್ಧಪತ್ರಿಕೆಯು.

ಬೆಳಗಾಂವ ಜಿಲ್ಲಾ ಗೋಕಾಕ ಥಾಲ್ಲದ ಸಮೀಪಕ್ಕಿರುವ ಸುಪ್ರಸಿದ್ಧವೂ ಪುಣ್ಯಸ್ಥಳವೂ ಆದ ಕೊಣ್ಣೂರ ಮರಡೀ ಮಠದ ಯಾತ್ರಾಸಮಾರಂಭವು ಪ್ರತಿವರ್ಷದಂತೆ ಈಸಾರೆಯಾದರೂ ಮುಂದೆ ಬರುವ ರಕ್ತಾಕ್ಷಿ ಸಂವತ್ಸರದ ಚೈ. ಶು. 15 ಅಂದರೆ ತಾ|| 19-4-24ನೇ ಶನಿವಾರ ಮೊದಲಿಗೊಂಡು 4-5 ದಿವಸಗಳವರೆಗೆ ಒಳ್ಳೇ ವಿಜೃಂಭಣೆಯಿಂದ ಜರಗತಕ್ಕದ್ದಿರುತ್ತದೆ. ಆ ಸಮಯದಲ್ಲಿ ಸುಪ್ರಸಿದ್ಧರಾದ ಪೈಲವಾನರ ಕುಸ್ತಿಗಳೂ, ನೀರಿನಲ್ಲಿ ಈಸುವದು, ಸಾಯಕಲ್ ನಡೆಸುವದು, ಕಾಲಿನಿಂದ ಓಡುವದು ಮುಂತಾದ ಶರ್ಯತ್ತುಗಳು ಜರಗುವವಲ್ಲದೆ, ಒಳ್ಳೇ ಪುಷ್ಟ ಮತ್ತು ಶಕ್ತಿಮಯಗಳಾದ ಎತ್ತು, ಎಮ್ಮೆ, ಟಗರು ಮುಂತಾದವುಗಳಿಗೆ ಭಕ್ಷೀಸು ಹಂಚಲ್ಪಡುತ್ತವೆ. ಮತ್ತು ಈ ವರ್ಷದ ಕಾರ್ಯಕ್ರಮದಲ್ಲಿ ವೀರಶೈವ ಧರ್ಮಗ್ರಂಥಗಳ ಪರೀಕ್ಷೆಯನ್ನೂ, ಉಪನ್ಯಾಸಗಳನ್ನೂ ಇಟ್ಟಿರುತ್ತದೆ. ಅದರಲ್ಲಿ ತೇರ್ಗಡೆಹೊಂದಿದವರಿಗೆ ಕೆಳಗೆ ಬರೆದಂತೆ ಪಾರಿತೋಷಕಗಳಾದ್ದೂ ಹಂಚಲ್ಪಡುತ್ತವೆ. ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಗಳು ತಾವು ತೆಗೆದುಕೊಂಡ ವಿಷಯವನ್ನೂ ತಮ್ಮ ಹೆಸರು, ತಂದೆ ಹೆಸರು, ಗ್ರಾಮ ಮುಂತಾದ ಯೋಗ್ಯ ಮಾಹಿತಿಯು ಪ್ರಾರ್ಥನಾ ಪತ್ರಿಕೆಯನ್ನು ತಮ್ಮ ಅಧ್ಯಾಪಕರ ಸಹಿಯೊಡನೆ ಪೋಷ್ಟ ಗೋಕಾಕ ಥಾಲ್ಲ ಮುಕ್ಕಾಂ ಕೊಣ್ಣೂರ ಮರಡೀ ಮಠದ ಪಾಠಶಾಲಾಧ್ಯಾಪಕರಾದ ಪಂಡಿತ ಸದಾಶಿವ ಶಾಸ್ತ್ರಿಗಳ ಮೇಲ್ವಿಳಾಸಕ್ಕೆ ತಾ|| 12-4-24ನೇ ಶನಿವಾರದೊಳಗಾಗಿ ಕಳಿಸಿಕೊಡತಕ್ಕದ್ದು.

ಪರೀಕ್ಷಾ ಗ್ರಂಥಗಳ ಹೆಸರುಗಳು.	1ನೇ ತರಗತಿ.	2ನೇ ತರಗತಿ.
1 ಕ್ರಿಯಾಸಾರ 28ನೇ ಉಪದೇಶ	8 ರೂ.	5 ರೂ.
2 ಸಿದ್ಧಾಂತಶಿಖಾಮಣಿ ಪಿಂಡಸ್ಥಲದಿಂದ ಚತುರ್ಥ ಸಾರಾಯಸ್ಥಲದವರೆಗೆ	6	4
3 ಪಿ. ಪ್ರಕಾಶಿತ ಪ್ರಸಾದ ಷಟ್ಸ್ಥಲಪ್ರಕರಣ ಸಂಪೂರ್ಣ	6	4
4 ಶತಕತ್ರಯ ಶಿವಾಧವಶತಕಂ	5	3
ಉಪನ್ಯಾಸದ ವಿಷಯಗಳು.		
1 ಧರ್ಮ	5	3
2 ಬ್ರಹ್ಮಚರ್ಯ	,,	,,
3 ಅಹಿಂಸಾ	,,	,,
4 ವಿದ್ಯಾ	,,	,,
5 ವೃತ್ತಪತ್ರಗಳ ಅವಶ್ಯಕತೆ	,,	,,

ಉಪನ್ಯಾಸಗಳನ್ನು ಮಾಡತಕ್ಕವರು ಫುಲಿಸ್ಕೆಪ್ ಕಾಗದದ ಒಂದೇ ಮಗ್ಗುಲಿಗೆ ಸ್ಪುಟವಾದ ಅಕ್ಷರಗಳಿಂದ ನಾಲ್ಕು ಘಟಿಕೆ ಕಡಿಮೆಯಾಗದಂತೆಯೂ ಎಂಟು ಘಟಿಕೆ ಹೆಚ್ಚಾಗದಂತೆಯೂ ಬರೆದು ನಾಲ್ಕು ದಿವಸ ಮುಂಚಿತವಾಗಿಯೇ ಮೇಲಿನ ವಿಳಾಸಕ್ಕೆ ಕಳಿಸಬೇಕು.

• ಶಾಸ್ತ್ರಿಶರ್ಮ • [illegible]

ಧಾರವಾಡ ಡಿ|| ದೇವಗಿರಿಯಲ್ಲಿ ನಡೆದ ಶ್ರೀ ಹಾಲುಮತ (ಕುರುಬರ) 3ನೇ ಧಾರ್ಮಿಕ ಮತ್ತು ವಿದ್ಯಾವರ್ಧಕ ಮಹಾಸಭೆಯು.

ಮೊದಲೇ ಪ್ರಸಿದ್ಧಪಡಿಸಿದ ಮೇರೆಗೆ ತಾ|| 28-12-1923 ನೇ ದಿವಸ ಶ್ರೀ ಹಾಲುಮತದ ಗುರುವರ್ಯರಾದ ಶ್ರೀ|| ಚನ್ನಯ್ಯಸ್ವಾಮಿ ಕೆಂಡದಮಠ ಬಂಕಾಪುರ ಈ ಮಹನೀಯರ ಸನ್ನಿಧಿಯಲ್ಲಿ ದೇವಗಿರಿ ಹಾಲುಮತದವರು ಅಷ್ಟಾಭಿಷೇಕ, ಪೂಜಾಮಹೋತ್ಸವ, ಮಹಾಗಣಾರಾಧನೆ, ಮೆರವಣಿಗೆ ಮೊದಲಾದ ಮಹೋತ್ಸವಗಳನ್ನು ನೆರವೇರಿಸಿದ ಬಳಿಕ ತಾ|| 29-12-1923 ನೇ ಇಸವಿ ದಿವಸ ಪ್ರಾತಃಕಾಲದ 7 ಘಂಟೆಗೆ ಶ್ರೀ ಗುರುಮಠದ ಮುಂದಿನ ದಿವ್ಯವಾದ ಮಂಟಪದಲ್ಲಿ ಶ್ರೀ ಗುರುವರ್ಯರ ಅಧ್ಯಕ್ಷತೆಯ ಕೆಳಗೆ ಹಾಲುಮತದ 3ನೇ ಧಾರ್ಮಿಕ ಹಾಗು ವಿದ್ಯಾವರ್ಧಕ ಮಹಾಸಭೆಯು ನೆರವೇರಿಸಲ್ಪಟ್ಟಿತು. ಶ್ರೀಮಂತ ಭರಮಗೌಡ ಪಾಟೀಲ ದೇವಿಹೊಸೂರ ತಾಲ್ಲೂಕು ಬೋ|| ಮೆಂಬರು ಹಾವೇರಿ, ಇವರು ಉಪಾಧ್ಯಕ್ಷರಾಗಿಯೂ, ರಾ|| ಎಲ್ಲಪ್ಪ ತಿರಕಣ್ಣನವರ ದೇವಗಿರಿ ಇವರು ಸ್ವಾಗತ ಮಂಡಲದ ಅಧ್ಯಕ್ಷರಾಗಿಯೂ ನಿಯಮಿಸಲ್ಪಟ್ಟಿದ್ದರು. ಈ ಮಹಾಸಭೆಗೆ ಧಾರವಾಡ ಜಿಲ್ಲೆಯ ಬಹಳ ಗ್ರಾಮಗಳ ಜನರೂ, ದಾವಣಗೇರಿ, ಹರಿಹರ, ವಿಜಾಪುರ, ಬೆಳಗಾಂವ, ಸವದತ್ತಿ, ಮದ್ರಾಸ್ ಇಲಾಖೆಯ ಜನರೂ ಬಂದಿದ್ದರು. ಸುಮಾರು 5-6 ನೂರು ಜನರು ಕೂಡಿದ್ದರು. ಪ್ರಾರಂಭದಲ್ಲಿ ಈಶಸ್ತವನವಾದನಂತರ ಮಿ|| ಬಸವಣ್ಣೆಪ್ಪ ಹಳವಳ್ಳಿ ಇವರು ಸಭೆಯ ಉದ್ದೇಶವನ್ನು ಸ್ವಲ್ಪದರಲ್ಲಿ ಹೇಳಿದ ಬಳಿಕ ಸ್ವಾಗತಮಂಡಲದ ಅಧ್ಯಕ್ಷ, ಸಭಾಧ್ಯಕ್ಷ ಹಾಗು ಉಪಾಧ್ಯಕ್ಷರ ಭಾಷಣಗಳಾದವು. ಆ ನಂತರ ಧಾರ್ಮಿಕ ಉನ್ನತಿ, ಅಹಿಂಸಾವ್ರತಪಾಲನ, ವಿದ್ಯಾಭಿವೃದ್ಧಿ, ಸಹಕಾರಿತನ, ಸದ್ಯದ ಪರಿಸ್ಥಿತಿ ಮೊದಲಾದ ಮಹತ್ವದ ವಿಷಯಗಳ ಮೇಲೆ ಮಿ|| ಬಸವಣ್ಣೆಪ್ಪ ಹಳವಳ್ಳಿ, ಮಿ|| ಬಸಪ್ಪ ದೇಸಾಯಿ ಅ|| ಮಾಸ್ತರ ಕೋಳಿವಾಡ, ವಿಜಾಪುರ ಚಿಟಿಣೀಸ ಸಾಹೇಬರಾದ ಮೆಹರ್ಬಾನ ಬಸಪ್ಪ ಕೆಜಗಿ ಬಿ.ಎ., ಮಿ|| ಕರಿಯಪ್ಪ ಪೂಜಾರ ಅ|| ಮಾಸ್ತರ ಲಕ್ಷ್ಮೇಶ್ವರ, ಮಿ|| ಹುಚ್ಚಪ್ಪ ಮಗ್ಗಣ್ಣವರ ಹಳೇರಿತ್ತಿ, ಸತ್ಯಪ್ಪ ಮುಲಕೇರಿ ದಾವಣಗೇರಿ, ಮಿ|| ಶಿವಲಿಂಗಪ್ಪ ಕರಾಡಿ ಅ|| ಮಾಸ್ತರ ಯಲಿಗಿ, ಮಿ|| ಶಂಕರಪ್ಪ ಹಲಗಾಪೂರ ಅ|| ಮಾಸ್ತರ ನಲವಡಿ, ಸಹಕಾರಿ ಆವರಂ ಆರ್ಗನಾಯಜ್ಞುರಾದ ಮೇಹರ್ಬಾನ ಬಸಪ್ಪ ಕಲ್ಲಣ್ಣವರ ನಲವಡಿ ಮೊದಲಾದವರ ಕಳಕಳಿಯ ಭಾಷಣಗಳಾಗಿ ಕೆಳಗೆ ಬರೆದ ಠರಾವುಗಳು ಪಾಸಾದವು. (1) ರಾಜನಿಷ್ಠೆ (2) ಹಾಲುಮತ ಬೋರ್ಡಿಂಗ ಸ್ಥಾಪನೆ (3) ಶಾಲಾಕಾಲೇಜಗಳಲ್ಲಿ ಪ್ರಥಮಪ್ರವೇಶ (4) ಇನ್ನುಮೇಲೆ ಸ್ಥಾಪಿಸಲ್ಪಡುವ ಜಿಲ್ಲಾ ಸ್ಕೂಲ ಬೋರ್ಡುಗಳಲ್ಲಿ ನಮ್ಮ ಸಮಾಜಕ್ಕೆ ಕನಿಷ್ಟ ಎರಡು ಜಾಗೆಗಳನ್ನು ಕಾಯ್ದಿಡುವದು. (5) ಹಾಲುಮತ ವಿದ್ಯಾವರ್ಧಕ ಫಂಡು ಕೂಡಿಸುವದು. (6) "ಶ್ರೀ ಹಾಲುಮತ ಸದುಪದೇಶ" ಈ ಗ್ರಂಥಪ್ರಸಾರಮಾಡುವದು. (7) ಉಪಾಧ್ಯಕ್ಷರ ಭಾಷಣದಲ್ಲಿಯ ಠರಾವುಗಳನ್ನು ಅಮಲಿನಲ್ಲಿ ತರುವದು. (8) ಉಣ್ಣೆಯ ವ್ಯವಸಾಯಕ್ಕೆ ಪ್ರೋತ್ಸಾಹ (9) ಹಾಲುಮತ ಸ್ವಯಂಸೇವಕ ಸಂಘಸ್ಥಾಪನೆ (10) ಅಧ್ಯಕ್ಷರ ಆಭಾರಮನ್ನಣೆ ಈ ಪ್ರಕಾರ ಠರಾವುಗಳು ಪಾಸಾದ ಬಳಿಕ ಸಭೆಯ ಕಾರ್ಯಕ್ಕೆ ಅವಿಶ್ರಾಂತಶ್ರಮಪಟ್ಟವರ ಹಾಗು ಸಭಿಕರ ಆಭಾರಮನ್ನಿಸಿ ದಮೋಲಿ ಹಾಲುಮತ ಜಯ ಜಯಕಾರದೊಡನೆ ಸಭೆಯ ಕಾರ್ಯವು ಸಮಾಪ್ತಿಯಾಯಿತು.

ಬಸವಣ್ಣೆಪ್ಪ ಅಳವಂಡಿ,
ಜನರಲ್ ಸೆಕ್ರೆಟರಿ.

ಮಳವಳ್ಳಿ.

ಈ ಊರಿನ ಜನಗಳೆಲ್ಲರೂ ಪ್ಲೇಗ್ ಕಾರಣದಿಂದ ಷೆಡ್ಡಿನಲ್ಲಿ ವಾಸಮಾಡುತ್ತಿರುತ್ತಾರೆ. ಕೆರೆಯಲ್ಲಿ ನೀರು ಬತ್ತಿಹೋಗಿರುತ್ತದೆ. ಕಟ್ಟೆಯಲ್ಲೂ ನೀರು ಬತ್ತಿಹೋಗುವುದರಲ್ಲಿದೆ. ಕುಡಿಯುವ ನೀರಿಗೂ ಬಹು ತೊಂದರೆ ಒದಗುವಂತಿದೆ. ಮಳವಳ್ಳಿ, ಮಾರೇಹಳ್ಳಿ ಕೆರೆಗಳ ಕೆಳಗೆ ನೀರು ಸಾಲದೆ ಭತ್ತದ ಬೆಳೆ ಬಹುವಾಗಿ ಕೆಟ್ಟುಹೋಯಿತು. ಮಳೆಯಿಲ್ಲದೆ ಜೋಳ, ರಾಗಿ, ಹುರಳಿ ಬೆಳೆಗಳು ಬಹುವಾಗಿ ನಷ್ಟವಾದವು. ಬಡಬಗ್ಗರ ತೊಂದರೆ ಬರಿಯಲಸಾಧ್ಯ.—(2) 21-1-24ನೆ ತಾರೀಕಿನಲ್ಲಿ "ಬೇಬಿವೀಕ್" ಎಂಬ ಮಕ್ಕಳ ಪ್ರದರ್ಶನೋತ್ಸವವು ನಮ್ಮ ಅಮಲ್ದಾರ್ರವರಿಂದ ಬಹು ವಿಜೃಂಭಣೆಯಾಗಿ ನಡಿಸಲ್ಪಟ್ಟಿತು. ಪ್ಲೇಗಿನಿಂದ ಊರಿನವರೆಲ್ಲರೂ ಷೆಡ್ಡುಗಳಲ್ಲಿ ವಾಸಮಾಡುತ್ತಿರುವುದರಿಂದ ಹೆಚ್ಚು ದಿನಗಳು ನಡಿಸಲವಕಾಶವಿಲ್ಲದೆ ಹೋಯಿತು. ಬೆಳಗ್ಗೆ ದೊಡ್ಡಮನುಷರ ಸಭೆಯು ಟೌನ್‌ಹಾಲ್ ಕಟ್ಟಡದಲ್ಲಿ ಸೇರಿತ್ತು. ನಮ್ಮ ರೈಲ್ವೆ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ ಮ|| ಕೃಷ್ಣಪ್ಪನವರು ಅಗ್ರಾಸನವನ್ನು ವಹಿಸಿದ್ದರು. ಪ್ರಾರಂಭದಲ್ಲಿ ಬ್ಯಾಂಡು ನಂತರ ಮಕ್ಕಳ ಪ್ರದರ್ಶನದ ವಿಚಾರದಲ್ಲಿ ಅಮಲ್ದಾರ್ರವರ ಭಾಷಣವಾಯಿತು. ನಂತರ ಆರೋಗ್ಯದ ವಿಚಾರದಲ್ಲಿ ನಮ್ಮ ತಾಲ್ಲೂಕ್ ಸಬ್ ಅ|| ಸರ್ಜನ್ ಸಾಹೇಬರವರ ಉಪನ್ಯಾಸ ನಡಿಯಬೇಕಾಗಿತ್ತು. ವಿಸಿಟಿಂಗ್ ಕಾಲದಲ್ಲಿ ತಾವು ಕೋರ್ಟಿಗೆ ಹೋಗುವದನ್ನು ನಿಲ್ಲಿಸಿ ಉಪನ್ಯಾಸಮಾಡುವುದಾಗಿ ಒಪ್ಪಿದ್ದರು. ಪ್ರೋಗ್ರಾಮಿನಲ್ಲಿ ಸೇರಿಸಲ್ಪಟ್ಟಿತು. ಆದರೆ ಗೈರಾಜರಾದರು. ಈ ಉಪನ್ಯಾಸ ನಡಿಯಲಿಲ್ಲ. ಈ ರೀತಿ ಇಂಥ ಉತ್ಸವಕಾಲದಲ್ಲಿ ನಮ್ಮ ಡಾಕ್ಟರ್‌ಸಾಹೇಬರವರು ಮಾಡಿದ್ದು ಶೋಚನೀಯವಾದ ಅಂಶವಾಗಿದೆ. ಇಷ್ಟೇ ಅಲ್ಲದೆ ಇವರು ಇನ್ನೂ ಮ್ಯುನಿಸಿಪಾಲಿಟಿ ವಗೈರೆ ಮೆಂಬರಾಗಿರುವರಂತೆ; ಯಾವ ಮೀಟಿಂಗಿಗೂ ಅಟೆಂಡಾಗುವುದಿಲ್ಲವಂತೆ. ಆಸ್ಪತ್ರೆಯಲ್ಲಿ ಬಡಬಗ್ಗರ ಚಿಕಿತ್ಸೆಗೆ ತುಂಬಾ ತೊಂದರೆಯಾಗಿರುವಂತೆ ಜನಗಳು ಹೇಳಿಕೊಳ್ಳುತ್ತಾರೆ. ಜನಗಳ ಏಳಿಗೆಗಾಗಿ ಇವರ ಕೆಲಸವು ನಿಯಾಮಕವಾಗಿದ್ದರೂ ಡಾಕ್ಟರವರು ಈ ರೀತಿ ಮಾಡುವುದು ಶುದ್ಧ ಅನ್ಯಾಯ. ಮುಂದಾದರೂ ತಮ್ಮ ಕರ್ತವ್ಯಕಾರ್ಯಗಳನ್ನು ಕ್ರಮವಾಗಿ ಮಾಡುವರೆಂದು ನಂಬಿದೇವೆ. ಈ ಮಕ್ಕಳ ಪ್ರದರ್ಶನೋತ್ಸವದಲ್ಲಿ ಅಮಲ್ದಾರ್ರವರ ಭಾಷಣವಾದ ನಂತರ ಎ. ವಿ. ಸ್ಕೂಲ್ ಹೆಡ್ಮಾಸ್ಟರ್ ಡಿ. ರಾಮಚಂದ್ರರಾಯರು ಮಕ್ಕಳ ಪೋಷಣೆ ವಿಚಾರವಾಗಿಯೂ ಪೇಟೆ ಸ್ಕೂಲು ಹೆಡ್ಮಾಸ್ಟರ್ ಎಂ. ನಂಜುಂಡಶಾಸ್ತ್ರಿಗಳು ಮನೆ ಮತ್ತು ಗ್ರಾಮಗಳ ಶುಚಿತ್ವದ ವಿಚಾರದಲ್ಲೂ ಸ್ವಾರಸ್ಯವಾದ ಉಪನ್ಯಾಸಗಳನ್ನು ಓದಿದರು. ನಂತರ ಅಗ್ರಾಸನಾಧಿಪತಿಗಳ ಸಂಭಾಷಣೆ ನಡಿಸಲ್ಪಟ್ಟು ಸಭೆ ಬರಖಾಸ್ತಾಯಿತು. ಮಧ್ಯಾನ್ಹ ಸ್ಕೂಲು ಹುಡುಗರ ಸ್ಪೋರ್ಟುಗಳು ನಡಿಸಲ್ಪಟ್ಟವು. ಮಕ್ಕಳ ಪ್ರದರ್ಶನ ನಡಿಸಲ್ಪಟ್ಟು ಬಹುಮಾನಗಳು ಹಂಚಲ್ಪಟ್ಟವು. ನಂತರ ಸಭೆ ಸೇರಿಸಲ್ಪಟ್ಟಿತು. ಮೊದಲು ಮಳವಳ್ಳಿ ಪೇಟೆ ಕನ್ನಡ ಬಾಯ್ಸ್ ಸ್ಕೂಲು ಹುಡುಗರಿಂದ ಆರೋಗ್ಯ ವಿಚಾರದಲ್ಲಿ ಸಣ್ಣ ನಾಟಕವನ್ನು ಆ ಸ್ಕೂಲು ಹೆಡ್ಮಾಸ್ಟರ್ ಎಂ. ನಂಜುಂಡಶಾಸ್ತ್ರಿಗಳು ಬಹು ಸ್ವಾರಸ್ಯವಾಗಿರುವಂತೆ ಆಡಿಸಿದರು. ಮ|| ಶೇಷರಾವ್ ಸಾಹೇಬರವರಿಂದ ಮ್ಯಾಜಿಕ್‌ಲ್ಯಾಂಟರನ್ ತೋರಿಸಲ್ಪಟ್ಟಿತು. ರಾತ್ರಿ ಯಕ್ಷಗಾನದ ಪ್ರಹ್ಲಾದಚರಿತ್ರೆ ಆಡಿಸಲ್ಪಟ್ಟಿತು. ಈ ಉತ್ಸವಗಳೆಲ್ಲಾ ಬಹು ವಿಜೃಂಭಣೆಯಿಂದ ನಡಿಸಲ್ಪಟ್ಟು ಜನಗಳ ಮನಸ್ಸಿಗೆ ಬಹು ಆನಂದವನ್ನುಂಟುಮಾಡಿತು. ಮುಖ್ಯವಾಗಿ ನಮ್ಮ ಅಮಲ್ದಾರ್ರವರ ಪ್ರೋತ್ಸಾಹ ಮತ್ತು ಸಹಾಯ ಇವುಗಳನ್ನು ಎಷ್ಟು ಕೊಂಡಾಡಿದರೂ ತೀರದು. ಇಂಥ ಅಮಲ್ದಾರ್ರವರು ಈ ತಾಲ್ಲೂಕಿಗೆ [illegible]

ಪದ್ಧತಿಯಿಂದ ಪ್ರಸಾರವಾಗುವಂತೆಯೂ, ಮಾಧ್ಯಮಿಕ ವಿದ್ಯಾಭ್ಯಾಸವು ದೇಶಭಾಷೆಗಳ ಮೂಲಕ ನಡೆಯುವಂತೆಯೂ, ಉದ್ಯೋಗಿಕ ಶಿಕ್ಷಣಕ್ಕೆ ಹೆಚ್ಚಿದ ಪ್ರಾಶಸ್ತ್ಯವು ದೊರೆಯುವಂತೆಯೂ ಪ್ರಯತ್ನಿಸುವದು. (2) ನಮ್ಮ ದೇಶದ ಮುಖ್ಯೋದ್ಯೋಗವಾದ ವ್ಯವಸಾಯದಲ್ಲಿ ತೊಡಗಿರತಕ್ಕ ರೈತರಿಗೆ ದಾರಿದ್ರ್ಯದಿಂದಲೂ, ಅನಾರೋಗ್ಯದಿಂದಲೂ ಸಂಭವಿಸತಕ್ಕ ಕಷ್ಟನಷ್ಟಗಳನ್ನು ಸರ್ಕಾರದವರ ಗಮನಕ್ಕೆ ತಂದುಕೊಡುವದರ ಮೂಲಕ ಅದರ ಜೀವನೋಪಾಯಗಳನ್ನು ಸುಧಾರಿಸುವದು. (3) ಸರ್ಕಾರದವರು ಪ್ರಜಾಹಿತಕ್ಕಾಗಿ ಅನೇಕ ಶಾಖೆಗಳಲ್ಲಿ ಮಾಡತಕ್ಕ ವಿಶಿಷ್ಟವಾದ ಏರ್ಪಾಡುಗಳಿಗೆ ಪ್ರಜೆಗಳೆಲ್ಲರೂ ಸಮಭಾಗಿಗಳಾಗಿರುವಂತೆ ಸಲಹೆಯನ್ನು ಕೊಡುವದು. (4) ಪ್ರಜೆಗಳೆಲ್ಲರೂ ಶ್ರೀಮನ್ಮಹಾರಾಜಾ ಸರ್ಕಾರದ ಕೀರ್ತಿಯನ್ನು ಹೆಚ್ಚಿಸುವಂತೆಯೂ ಮತ್ತು ತಮ್ಮ ಅಭಿವೃದ್ಧಿಯನ್ನು ಮಾಡಿಕೊಳ್ಳುವಂತೆಯೂ ಹೆಚ್ಚು ಹೆಚ್ಚು ಸ್ವಾತಂತ್ರ್ಯವನ್ನು ಹೊಂದಲು ಸಹಕರಿಸುವದು. ಈ ಮೊದಲಾದ ಮಹತ್ಕಾರ್ಯಗಳನ್ನು ದೇಶಾಭಿಮಾನಿಗಳಾದ ತಾವುಗಳೆಲ್ಲರೂ ಗಮನಕ್ಕೆ ತಂದುಕೊಂಡು ಮೇಲ್ಕಂಡ ಚುನಾವಣೆಯಲ್ಲಿ ದಯವಿಟ್ಟು ತಮ್ಮ ಅಮೌಲ್ಯವಾದ ಓಟನ್ನು ನನಗೆ ಕೊಡುವುದರ ಮೂಲಕ ದೇಶಸೇವೆಯನ್ನು ಮಾಡಬೇಕೆಂಬ ನನ್ನ ಕುತೂಹಲವನ್ನು ನೆರವೇರಿಸಿಕೊಡುವರೆಂದು ನಂಬಿರುವ,

ತಮ್ಮ ವಿಧೇಯ,
ಡಿ. ಎಚ್. ಚಂದ್ರಶೇಖರಯ್ಯ ಅಡ್ವೊಕೇಟ್.

ಶ್ರವಣಬೆಳುಗೊಳದಲ್ಲಿ ಆದ ಮಕ್ಕಳ ಪ್ರದರ್ಶನೋತ್ಸವ.

ಶ್ರ. ಬೆ. ಮುನ್ಸಿಪಲ್ ಕೌನ್ಸಿಲರ್ ಮತ್ತು ಇತರ ದೊಡ್ಡಮನುಷ್ಯರುಗಳು ಸಹ ಸೇರಿ ತಾ|| 19-1-24 ರಲ್ಲಿ ಎ. ವಿ. ಸ್ಕೂಲ್ ಬಿಲ್ಡಿಂಗಿನಲ್ಲಿ ಎಲ್ಲಾ ಮಕ್ಕಳುಗಳನ್ನು ಸೇರಿಸಿ, ಟೀಚರ್ ಮತ್ತು ಹುಡುಗರ ಆಟಪಾಟಗಳನ್ನು ಸಹ ನಡಿಸಿ, ಚುನಾಯಿಸಲ್ಪಟ್ಟ ಸಣ್ಣ ಸಣ್ಣ ಮಕ್ಕಳುಗಳಿಗೆ ಬೆಳ್ಳಿಬಟ್ಟಲು, ಚಂಬು, ಬಟ್ಟೆ, ಚೆಂಡು ಮುಂತಾದ ಆಟದ ಸಾಮಾನುಗಳನ್ನು ಸಹ ಸೇರಿಸಿ, ಸುಮಾರು ಒಂದು ನೂರರ ಮೇಲ್ಪಟ್ಟು ಇನಾಂಗಳನ್ನು ಕೊಟ್ಟು ಉಳಿದ ಎಲ್ಲಾ ಹುಡುಗರಿಗೂ ದೊಡ್ಡವರಿಗೂ ಸಹ ಮಿಠಾಯಿ ಬತಾಸ್‌ನ್ನು ಹಂಚಿ, ಅನಂತರ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿ, ಸಾಯಂಕಾಲ 6 ಗಂಟೆಗೆ ಆಪ್ಫೈರ್ ಮಾಡಿದರು. ಇದಕ್ಕಾಗಿ ಗ್ರಾಮಾಂತರಗಳಿಂದಲೂ ಸಹ ಸೇರಿ, 500 ಜನ ಬಾಲಕ ಬಾಲಕಿಯರು 200 ಜನ ದೊಡ್ಡಮನುಷ್ಯರು ಸಹ ಸೇರಿ ಬಿಲ್ಡಿಂಗಿನ ಒಳಭಾಗದಲ್ಲಿ ಸ್ಥಳವಿಲ್ಲದೆ ರಸ್ತೆಯಲ್ಲೂ ಅನೇಕ ಜನ ಪ್ರೇಕ್ಷಕರು ನಿಂತಿದ್ದರು. ಪ್ರದರ್ಶನವು ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು.

ಟಿ|| ಚಂ|| ಭರಮಯ್ಯ,
ಬೇಬೀಸ್, ಪೊ. ಕಮಿಟಿ ಸೆಕ್ರಟರಿ.

ಮಕ್ಕಳ ಪ್ರದರ್ಶನ.

ಮಂಡ್ಯದ ತಾಲ್ಲೂಕು ಬೇವುಕಲ್ಲು ಗ್ರಾಮದಲ್ಲಿ ಹೋಬಳಿ ಶೇಕದಾರ್ರು ಮ|| ಈಶ್ವರೈಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಜನವರಿ ತಾ|| 19ನೇ ಶನಿವಾರ ಮಕ್ಕಳ ಪ್ರದರ್ಶನವು ವೈಭವದಿಂದ ನಡೆಸಲ್ಪಟ್ಟಿತು. ಸಭೆಯಲ್ಲಿ ಬೇವುಕಲ್ಲು ಮತ್ತು ಅಜುಬಾಜು ಗ್ರಾಮಗಳ ದೊಡ್ಡ ಮನುಷ್ಯರುಗಳೂ ಬಾಲಕ ಬಾಲಕಿಯರೂ ನೆರೆದಿದ್ದರು. ಅಧ್ಯಕ್ಷರು ಪಾಶ್ಚಾತ್ಯದೇಶಿಯರ ಮಕ್ಕಳಿಗೂ, ಹಿಂದೂದೇಶೀಯರ ಮಕ್ಕಳಿಗೂ ಇರುವ ತಾರತಮ್ಯವನ್ನು, ಈ ದೇಶಿಯರ ಮಕ್ಕಳ ಪೋಷಣೆಯಲ್ಲಿ ತೋರಿಸುತ್ತಿರುವ ಅಶ್ರದ್ಧೆಯಿಂದ ದೇಶಕ್ಕೆ ಉಂಟಾಗಿರತಕ್ಕ ಕ್ಷೋಭೆಯನ್ನು ಕುರಿತು ಬಹು ರಸಿಕತೆಯಿಂದ ಭಾಷಣಮಾಡಿದರು. ಅಲ್ಲದೆ ದೇಶೋದ್ಧಾರಕರಾಗಿದ್ದ ಶಿವಾಜಿ, ನೆಪೋಲಿಯನ್ ಬೋನಪಾರ್ಟ್ ಮೊದಲಾದ ಮಹಾಪುರುಷರು ಅಷ್ಟು ಶೌರ್ಯಧೈರ್ಯ ಸಂಪನ್ನರಾಗಲು ಅವರ ತಾಯಿಯರು ಮಕ್ಕಳನ್ನು ಎಷ್ಟು ಶ್ರದ್ಧೆಯಿಂದ ಪೋಷಣೆಮಾಡಿದರು. ಎಂಬುದನ್ನೂ, ಮಕ್ಕಳ ವಿಷಯದಲ್ಲಿ ಕ್ರಮವರಿತು ತಿಂಡಿ, ಊಟ ನಿದ್ರೆಗಳಲ್ಲಿಯೂ, ಪೋಷಣವಿಷಯದಲ್ಲಿಯೂ ತಾಯಿಯರು ಬಹು ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಮುಂತಾಗಿ ಸಭಿಕರ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ತಿಳಿಯಪಡಿಸಿದರು. ಅನಂತರ ಮಕ್ಕಳುಗಳಿಗೆಲ್ಲಾ ಸಕ್ಕರೆಯು ಹಂಚಲ್ಪಟ್ಟಿತು. ಕೊನೆಯಲ್ಲಿ ಶ್ರೀಮನ್ ವೈಸ್ರಾಯಿ ದಂಪತಿಗಳಿಗೂ, ಶ್ರೀಮನ್ ಮಹಾರಾಜರವರಿಗೂ ಭಗವಂತನು ಚಿರಾಯುವೀಯಲೆಂದು ಶ್ರೇಯಃ ಪ್ರಾರ್ಥನೆಯಾದ ಬಳಿಕ ಕರತಾಡನದಿಂದ ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶಿಶುಸಂರಕ್ಷಣೆಯ ವಾರ.

ಕುಣಿಗಲ್ ತಾಲ್ಲೂಕ್ ಹುತ್ರಿದುರ್ಗದ ಸಮ್ಮತು ಎಲಿಯೂರು ಗ್ರಾಮದ ಗೌರ್ನಮೆಂಟ್ ಪ್ರೈಮರಿ ಗರ್ಲ್ಸ್ ಸ್ಕೂಲ್ ಕಟ್ಟಡದ ಹಾಲ್‌ನಲ್ಲಿ ಶಿಶುಸಂರಕ್ಷಣಾಕಾರ್ಯದ ಉತ್ಸವವನ್ನು ತಾ|| 21-1-24ನೇ ಸೋಮವಾರ ಸಾಯಂಕಾಲ 4 ಗಂಟೆಗೆ ಹುತ್ರಿದುರ್ಗದ ಹೋಬಳಿ ಶೇಕದಾರ್ ಮ|| ಎಸ್. ಹನುಮಂತರಾಯರವರು ಅಧ್ಯಕ್ಷತೆಯನ್ನು ವಹಿಸಿ ನೆರವೇರಿಸಿದರು. ಗ್ರಾಮದ ದೊಡ್ಡಮನುಷ್ಯರೂ ಮಹಿಳೆಯರೂ ಅನೇಕವಾಗಿ ಸಭೆಯಲ್ಲಿ ಹಾಜರಾಗಿದ್ದರು. ಗರ್ಲ್ಸ್ ಸ್ಕೂಲ್ ಸಿಂಗಿಂಗ್ ಮಾಸ್ಟರ್ ನರಸಿಂಹಯ್ಯನವರು ಗರ್ಲ್ಸ್ ಸ್ಕೂಲ್ ಬಾಲಕಿಯರಿಂದ ಶಿಶುಸಂರಕ್ಷಣ ಎಂಬ ಮನೋಹರವಾದ ಹಾಡುಗಾರಿಕೆಯನ್ನು ಹೇಳಿಸಿದರು. ನಂತರ ಇಲ್ಲಿನ ಬಾಯ್ಸ್ ಸ್ಕೂಲ್ ಹೆ|| ಮ|| ಎಸ್. ಕಪಿನೀಪತಯ್ಯನವರು ಆರೋಗ್ಯದ ವಿಚಾರದಲ್ಲಿಯೂ ಅ|| ಮಾ|| ಕೆ. ವೆಂಕಟರಾಮಯ್ಯನವರು ನೈರ್ಮಲ್ಯ ವಿಚಾರದಲ್ಲಿಯೂ ಭಾಷಣವನ್ನು ಓದಿದರು. ಅನಂತರ ಗೌ|| ಗರ್ಲ್ಸ್ ಸ್ಕೂಲ್ ಹೆಡ್ಮಾಸ್ತರವರಾದ ಮ|| ವೈ. ಕಪಿನಯ್ಯಶೆಟ್ಟರು ಮಕ್ಕಳ ಯೋಗಕ್ಷೇಮವು ಸಮಸ್ತರಿಗೂ ಅತ್ಯವಶ್ಯಕವಾದದ್ದೆಂತಲೂ, ಅವುಗಳ ಆರೈಕೆಯನ್ನು ಬಹಳ ಮುತವರ್ಜಿಯಿಂದ ನೋಡಿಕೊಳ್ಳುವದಕ್ಕೆ ಗ್ರಾಮದ ಮುಖಂಡ ಜನಗಳು ತುಂಬಾ ಪ್ರೋತ್ಸಾಹವನ್ನು ಒದಗಿಸಬೇಕೆಂದೂ ಶಿಶು ಜನನ ಅವುಗಳ ಆರೈಕೆ ಮತ್ತು ಪೋಷಣೆ ಅವುಗಳ ಬೆಳವಣಿಗೆ ಮತ್ತು ರೋಗನಿವಾರಣೆ ವಿಚಾರಗಳನ್ನು ಶಾಸ್ತ್ರವತ್ತಾಗಿಯೂ ಆಚರಣೆಯಲ್ಲಿ ಸುಲಭವಾಗಿಯೂ ಇರುವಂತೆ ಬಹಳ ಸ್ವಾರಸ್ಯವಾಗಿ ಭಾಷಣವನ್ನು ಓದಿ ಹೇಳಿದರು. ಬಳಿಕ ಗರ್ಲ್ಸ್ ಸ್ಕೂಲ್ ಐದನೇ ತರಗತಿ ವಿದ್ಯಾರ್ಥಿನಿ ಎಸ್. ರೇವಮ್ಮನು ಶಿಶುಜನನದ ವಿಚಾರದಲ್ಲಿಯೂ ತ್ಯಾ|| ರಾಮಣ್ಣನವರು ಮಕ್ಕಳನ್ನು ಎತ್ತಿಕೊಳ್ಳುವ ವಿಚಾರದಲ್ಲಿಯೂ ಭಾಷಣವನ್ನು ಓದಿದರು. ಅನಂತರ ಕುಣಿಗಲ್ ಆರ್ಯ ಬಾಲಿಕಾಪಾಠಶಾಲೆಯ ಹೆಡ್ ಮಿಸ್ಟ್ರೆಸ್ ತಿಂಗಮ್ಮನವರು ಗರ್ಭಿಣಿ ಶಿಶುಸಂರಕ್ಷಣೆಯ ವಿಚಾರವಾಗಿ ಅಲ್ಲಿ ನೆರೆದಿದ್ದ ಮಹಿಳೆಯರ ಸಮಾಜದಲ್ಲಿ ಈಗ ಜನಗಳೆಲ್ಲರೂ ಹೇಗೆ ಶಿಶು ಪೋಷಣೆಗಳಿ ನಡೆಯುವ ಕ್ರೂರ ವಿಧಾನಗಳನ್ನು ವಿವರಿಸಿ ನಾಡು ಸೂಲಗಿತ್ತಿಯರನ್ನು ಬಿಟ್ಟು ತರಬೇತಾದ ಸೂಲಗಿತ್ತಿಯರಿಂದಲೇ ಹೆರಿಗೆ ಮಾಡಿಸುವುದು ಕ್ಷೇಮಕರವೆಂತಲೂ ಬಹಳ ಚೆನ್ನಾಗಿ ತಿಳಿಸಿದರು. ನಂತರ ಮ|| ಜೋಡೀದಾರ್ ನಾರಾಯಣಾಚಾರ್ಯರು ಶಿಶುಸಂರಕ್ಷಣೆಯ ಕಾರ್ಯಕ್ಕೆ ಸಕಲರೂ ದ್ರವ್ಯಸಹಾಯಮಾಡಿಸಬೇಕೆಂತ ಸರ್ವರಿಗೂ ತಿಳಿಸಿದರು. ನಂತರ ಹಿಂದು ಮುಸಲ್ಮಾನ್ ಪಂಚಮ ಮಕ್ಕಳಲ್ಲಿ ಅತ್ಯುತ್ತಮವಾದ ಮಕ್ಕಳಿಗೆ ಬೇಬೀಶ್ ಮೆಂಬರುಗಳಾದ ಬಿ. ಸಂಜುಂಡಶೆಟ್ಟರು ಮತ್ತು ಗ್ರಾಮದ ಪಾಟೀಲ್ ಅಪ್ಪುಗೌಡರು ವಗೈರೇರು ಟವೆಲ್‌ಗಳು ಚೌಕಗಳು ಕಾಲುಚೀಲಗಳು ವಗೈರೆ ಪದಾರ್ಥಗಳನ್ನು ಸಣ್ಣ ಮಕ್ಕಳುಗಳಿಗೆ ಬಹುಮಾನವಾಗಿ ಕೊಡುವಂತೆ ಮೀಟಿಂಗಿನಲ್ಲಿ ತೀರ್ಮಾನಮಾಡಿ ಸಭಾಧ್ಯಕ್ಷರ ಹಸ್ತದಿಂದ ಕೊಡಿಸಿದರು. ನಂತರ ಗರ್ಲ್ಸ್ ಸ್ಕೂಲ್ ಬಾಲಕಿಯರಿಂದ ನಮ್ಮ ಇಂಡಿಯಾ ದೇಶದ ಚಕ್ರವರ್ತಿ ಸಾರ್ವಭೌಮರವರ ಶ್ರೇಯಃಪ್ರಾರ್ಥನೆ ಮತ್ತು ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯ ಮಂಗಳಗಳು ನಡೆಸಲ್ಪಟ್ಟವು. ನಂತರ ಸಭೆಯವರಿಗೆಲ್ಲಾ ಗಂಧ, ಪುಷ್ಪ, ತಾಂಬೂಲಾದಿಗಳು ಹಂಚಲ್ಪಟ್ಟವು ನಂತರ ಸಣ್ಣ ಮಕ್ಕಳುಗಳಿಗೆಲ್ಲಾ ಮ|| ಬಿಡದಿ ಮಿಠಾಯಿ ಅಂಗಡಿ ವೀರಣ್ಣನವರು ಮಿಠಾಯಿ ಮತ್ತು ಬತ್ತಾಸುಗಳನ್ನು ಹಂಚಿದರು. ಈ ಶಿಶುಸಂರಕ್ಷಣೆಯ ವಾರದಲ್ಲಿ ಹುತ್ರಿದುರ್ಗದ ಹೋಬಳಿ ಶೇಕದಾರ್‌ರವರು ಮತ್ತು ಎಲಿಯೂರು ಗೌ|| ಗರ್ಲ್ಸ್ ಸ್ಕೂಲ್ ಹೆಡ್ಮಾಸ್ತರು ಸಹ ಬಹಳವಾಗಿ ಮುತವರ್ಜಿಯನ್ನು ವಹಿಸಿ ನಡೆಸಿದುದಕ್ಕಾಗಿ ಅಲ್ಲಿ ನೆರದಿದ್ದ ಸಭಾ ಜನಗಳೆಲ್ಲರೂ ಸಂತೋಷಪಟ್ಟರು.

ಪ್ರಜಾಹಿತೈಷಿ.

ಓಟರುಗಳ ಪೀಕಲಾಟ.

ಓಟಿಂಗ್ ವಿಚಾರದಲ್ಲಿ ಚನ್ನೆಗೌಡನಿಗೂ ಲಿಂಗಪ್ಪನಿಗೂ ನಡೆದ ಸಂಭಾಷಣೆಯು ಬಹಳ ಸ್ವಾರಸ್ಯವಾಗಿರುವುದರಿಂದ ಎಲ್ಲಾ ಓಟರುಗಳ ತಿಳಿವಿಗಾಗಿ ಇಲ್ಲಿ ಕೊಡಲ್ಪಟ್ಟಿದೆ.

ಚನ್ನೆಗೌಡನು ತನ್ನ ಕೆಲಸಕಾರ್ಯಗಳನ್ನೆಲ್ಲಾ ಪೂರೈಸಿಕೊಂಡು ಸಾಯಂಕಾಲದ ಮೇಲೆ ಮನೆಗೆ ಬಂದು ಜಗತಿಯ ಮೇಲೆ ಕೂತಿರುವಾಗ್ಗೆ ನೆರೆಮನೆಯ ಲಿಂಗಪ್ಪನು ತನ್ನ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು ಬೇಸರಿಕೆಯ ಪರಿಹಾರಕ್ಕಾಗಿ ಚನ್ನೆಗೌಡನಿದ್ದಲ್ಲಿಗೆ ಬಂದು ಏನಯ್ಯಾ ಚನ್ನೆಗೌಡ ವಿಶೇಷ ಇಂಜಿನ ಹೊತಾರೆ ಕಣ್ಣಿಗೆ ಕನಡ್ಕ ಹಾಕಿಕೊಂಡು ಮೋಟಾರು ಗಾಡಿಯಲ್ಲಿ ನಮೂರ ಶಾನುಬೋಗ್ರು ಮತ್ತಿಬ್ಬರ ಕೂಡ ಬಂದಿದ್ದರಲ್ಲಾ ಅವರ್ಯಾರು, ಯಾಕೆ ಬಂದಿದ್ರು ಎಂದು ಕೇಳಿದನು.

ಚನ್ನೆಗೌಡ—ಅಯ್ಯಾ ಲಿಂಗಪ್ಪ ಬಾ ಕೂತ್ಕೊ ಹೇಳ್ತೀನಿ ಕೇಳು. ವತಾರೆ ನಮ್ಮ ಸಾನುಬೋಗರ ಕೂಡ ಕನಡ್ಕ ಹಾಕೊಂಡು ಮೋಟಾರನಲ್ಲಿ ಬಂದಿದ್ದವ್ರು ಒಬ್ಬ ದೊಡ್ಡ ಲಾಯರು. ಮೈಸೂರಲ್ಲಿ ಮಾಸೋಮಿಯಲ್ಲಿ ನಡೀತದಲ್ಲಾ ಆ ದೊಡ್ಡ (ಪ್ರಜಾಪ್ರತಿನಿಧಿ) ಸಬೆಗು ಮತ್ತು ಬೆಂಗಳೂರಲ್ಲಿ ನಡ್ತೆದಂತೆಲಾ ಆ (ನಾಯವಿಧಾಯಕ) ಸಬೆಗೂ ಮೆಂಬರಾಗೋಕೆ ಓಟನ್ನು ನಾನು ಕಡೋದಲ್ದೆ ನಿಮ್ಗೋಳ ಕೈಲಿ ಕೊಡ್ಸಬೇಕೆಂದು ಹೇಳೋಕೆ ಬಂದಿದ್ರು.

ಲಿಂಗಪ್ಪ—ಅದೇನ್ಗೌಡ ಅಷ್ಟು ದೊಡ್ಡಮನ್ಸರು ನಮ್ಮ ಮನೆ ಬಾಕಲ್ಗೆ ಬರಬೇಕೆ.

ಚನ್ನೆಗೌಡ—ಚೆನ್ನಾಗಿ ಹೇಳ್ದೆ ಕಾಣಯ್ಯ. ಇವರೊಬ್ರೇನು. ಜೋಡಿದಾರ್ರು, ಸಾವ್ಕಾರು, ಶೆಟ್ರು, ಯಾವ್ಯಾವ್ದೊ ಬೋರ್ಡ್ಗಳ ಮೆಂಬ್ರಂತೆ ಅವರೆಲ್ಲಾ ಬಂದು ನಮ್ಗಳ ಆಸ್ರಯ ಮಾಡ್ತಾರೆ. ನಾನು ಅಂತಾ ಕೆಲ್ಸ ಮಾಡಿದ್ದೇನೆ, ಇಂತಾ ಕೆಲ್ಸಮಾಡಿದ್ದೇನೆ, ಉಪ್ಪಿಲ್ಲದೆ ಮೂಗಳಗಂಜಿ ಕುಡಿಯುತ್ತೇನೆ. ಎಂದು ಉತ್ರನ ಪೌರ್ಸ ಕೊಚ್ಕೊಂಡು ನೀವು ನನ್ಗೆ ಓಟುಕೊಟ್ರೆ ನಿಮ್ಗೆ ಕಂದಾಯ ಕಮ್ಮಿಹಾಕ್ಸಿತೀನಿ ನಿಮಗೆ ಕನ್ನಾಬ್ಸೀಕಮಾಡ್ಸಿತೀನಿ ಎಂದು ಏನೇನೋ ಕಾಗ್ದಗಳ ಮೇಲೆ ಅಚ್ಚಾಕ್ಸಿ ತಂದ್ಕೊಟ್ಟವರೆ ಸಾಲ್ದಕ್ಕೆ ನಮ್ಮೂರು ಸಾನ್ಬೋಗ್ರು ಬೇರೆಬಂದು ಅವರು ದೊಡ್ಡಲಾಯ್ರು ಬಹಳ ಗಟ್ಗರು ದಿವಾನ್ರುಗಿವಾನ್ರು ಡಿಪ್ಟಿಕಮಿಸ್ನರುಗಿಮಿಸ್ನರು ಯಾರ್ಗೂ ಹೆದ್ರದೆ ಮೇಲ್ಬಿದ್ದು ಹೊಡ್ದಾಡ್ತಾರೆ. ಅವರು ಮಾತ್ರ ಸಂಪ್ರಗ್ಳೋಕೆ ಮೆಂಬ್ರಾದರೆ ಕೆರೆ ಕಟ್ಟೆಗಳಲ್ಲೂ ಬಾವ್ಗೊಳ್ಳಲ್ಲೂ ನೀರು ಹರ್ದೋಗುವಂತೆ, ಕಂದಾಯಕೌಲ್ಗ ಕಮ್ಮಿ ಆಗುವಂತೆ ಮಾಡ್ಬಿಡ್ತಾರೆ ಅದ್ರಿಂದ ನೀನೂ ನಿನ್ನ ಕಡೋರು ಅವರ್ಗೇ ಕೊಡ್ಲೇಬೇಕಪ್ಪ ಆಪೀಸರ್ಗಳು ಅವರ್ಗೇ ಕೊಡುವಂತೆ ಹೇಳಿಕಳ್ಸಿದ್ದಾರೆ, ಹಾಗೆ ನೀನು ಇತ್ರ ಜನರ ಮಾತ್ಕೇಳಿ ನಾನು ಹೇಳ್ದೋರಿಗೆ ಕೊಡ್ದಿದ್ರೆ ಮೇಲಿನ ದೊಡ್ ದೊಡ್ಡ ಆಫೀಸರ್ಗೆಲ್ಲಾ ಕೋಪಬರ್ತದೆ ನೋಡ್ಕೋಗೌಡ ಎಂದು ಬಯ ಹುಟ್ಸವರೆ.

ಲಿಂಗಪ್ಪ—ಈ ವತ್ತು ನಿನ್ನಮನೆ ಬಾಗಲ್ಗೆ ಬಂದಿದ್ದ ದೊಡ್ಮನ್ಸರು ಹಿಂದೆ ಯಾವಾಗಾದ್ರೂ ಬಂದಿದ್ರಾ ಮತ್ತು ಏನು ಚನ್ನೆಗೌಡ್ರೆ ಚೆನ್ನಾಗಿದ್ದೀರಾ ನಿಮ್ಗೆಸ್ಟುಬಂಡಿ ಬತ್ರಾಗಿ ಬನ್ತು. ನಿಮ್ಮ ಮಕ್ಕಮರ್ಗಳು ಚೆನ್ನಾಗವ್ರಾ ಎಂದು ಬೋವಚ್ನದಿಂದ ಈದಿವ್ಸ ಮಾತಾಡ್ಸಿದಂತೆ ಹಿಂದೆ ಮಾತಾಡ್ಸಿದ್ರಾ.

ಚನ್ನೇಗೌಡ—ಅಯ್ಯೊ ಹುಚ್ಮಾರಾಯ ಹಿಂದೆ ಯಾವಾಗ್ಲೂ ಅವರು ನಮ್ಮಗ್ರಾಮಕ್ಕೆ ಬಂದಿಲ್ಲಾ. ಮತ್ತು ಮರ್ಯಾದೆಯಿಂದ ಮಾತಾಡ್ಸಿದ್ದಿಲ್ಲಾ. ಆದಾಗಿಲ್ಲ ನಾನು ನನ್ನ ಮೊಕದ್ದಮ್ಮೆ ಕೊಡೋಕ ಮೊದ್ಲಾವರ್ತಿ ನಮ್ಮ ಸಾನ್ಬೋಗ ಕರ್ಕೊಂಡುಹೋಗಿದ್ದಾಗ ಮಾತ್ರ ಬಸ್ರಿಗೌಡ್ರೆ ಕೂತ್ಕೊಳ್ಳಿ ಎಂದು ಹೇಳಿ ಫೀ ಗೊತ್ತುಮಾಡಿ ಕೇಸ್ಕೊಟ್ಟು ಫೀಗಾಗಿ ಅರ್ಧಹಣ ಕೊಟ್ಟು ಬಾಕಿಹಣ ಕೇಸ್ನಡಿವಾಗ್ಗೆ ಕೊಡ್ತೀನೆಂದು ಸಾನ್ಬೊಗ್ರು ಜಾಮೀನು ಕೊಟ್ಟುಬಂದು ಎರಡ್ನೆಸಲ ಹೋದಾಗ ಏನಯ್ಯಾ ಬಾಕಿ ಫಿ ತಂದಿದ್ದೀಯಾ ಎಂದೂ ಮೂರ್ನೆವೇಳೆ ಏನೋ ಯಾಕೋ ತರಲಿಲ್ಲ ಎಂದು ಗದ್ದರಿಸಿ ಮಾತ್ನಾಡಿ ಕೂತ್ಕೊಳ್ಳೋಕೆ ಸಹ ಎಳ್ಳಿಲ್ಲ. ಈ ದಿವ್ಸ ಓಟನ್ನು ಕೊಡಲು ಗಟ್ಟಿಮಾಡ್ಕೊಳ್ಳೋಕೆ ಬಾಳಾ ಗೌರ್ವದಿಂದ ಮಾತಾಡ್ಸಿದುದುಕಣಯ್ಯಾ.

ಲಿಂಗಪ್ಪ—ಇಂತ ಜಂಬದ್ಮನೋರಿಗೆ ಯಾಕಪ್ಪಾ ಓಟ್ಕೊಡೋದು. ನಮ್ಮೋರ್ಗೆ ಯಾಕ್ಕೊಡ್ಬಾರ್ದಪ್ಪ.

ಚನ್ನೆಗೌಡ—ಲಿಂಗಪ್ಪ ಚೆನ್ನಾಗೇಳ್ದೆ. ಸಾನ್ಬೋಗರು ದೊಡ್ಡವ್ರು ಸಿಪಾರ್ಸು ಮಾಡ್ದೋರಿಗೆ ಕೊಡ್ದಿದ್ರೆ ನಾವು ಬಾಳೋಕುಂಟೆ, ಯಾವ್ದಾದ್ರು ಒಂದು ನೆಪಮಾಡ್ಕೊಂಡು ಸಾನ್ಬೊಗ್ರು ನಮ್ಮನ್ನು ತೊಂದ್ರೆಗೆ ಸಿಕ್ಸಿ ತಮ್ಮ ಹಗೆ ತೀರ್ಸಿಕೊಳ್ಳುವರು.

ಲಿಂಗಪ್ಪ—ಹಾಗಾದ್ರೆ ಸಾನ್ಬೋಗ್ರು ಸಿಪಾರ್ಸುಮಾಡ್ದೋರ್ಗೇನೇ ನೀನು ಕೊಡ್ತಿಯಂತಾಯ್ತು.

ಚನ್ನೆಗೌಡ—ನೀನು ಮಾತ್ರ ಅವರು ಯೇಳ್ದವರಿಗೆ ಕೊಡ್ದೆ ಇನ್ನಾರ್ಗೆ ಕೊಡ್ತಿ.

ಲಿಂಗಪ್ಪ—ನಮ್ಮಜಾತಿಯವರೊಬ್ಬರು ಒಂದು ಕೊನೀತಿದ್ದಾರೆ. ನೀನು ಈಗ ಹೇಳ್ದಂತೆ ನಾನು ಅವರಿಗೆ ನಮ್ಮಗ್ರಾಮದ ಸಾನ್ಬೊಗರು ಹೇಳ್ದೋರ್ಗೆ ಕೊಡ್ದಿದ್ದಲ್ಲಿ ಅವರ್ಗೆ ಕೋಪಬರ್ತದೆ ಮತ್ತು ಅದ್ರಿಂದ ಮುಂದೆ ಕೆಡ್ಕಾಗ್ತದೆ ಎಂದು ಬಾಳ್ವಾಗಿ ಹೇಳ್ದರೂ ಅವರು ಕೇಳ್ದೆ, ನಾವು ಸ್ವಜನ್ರು ನಿಮ್ಮ ಕಷ್ಟಸುಖಕ್ಕೆ ಬಾದ್ಯರು, ನಿಮ್ಗೂ ನಮ್ಗೂ ವಂದ್ಗಂಡ್ರೆ ಎಂಜಲಿಲ್ಲ ಮುಟ್ಟಿದ್ರೆ ಮೈಲ್ಗೆಯಿಲ್ಲ. ಇಂಗಿರ್ವಾಗ ಸ್ವಜನಕ್ಕೆ ಕೊಡ್ದೆ ಅನ್ಯರಿಗೆ ಕೊಟ್ರೆ ಕುಲದ್ರೋಹ ಮಾಡ್ದಂತೆ ಆಗ್ತದೆ ಎಂತ ಬಾಳ್ವಾಗಿ ಹೇಳ್ದರ ಮೇಲೆ ನಾನು ಅವರ್ಗೇ ಓಟನ್ನು ಕೊಡ್ತೇನೆಂದು ಬಾಸೆಕೊಟ್ಟಿದ್ದೇನೆ.

ಚನ್ನೆಗೌಡ—ಹೌದು ಲಿಂಗಪ್ಪ ನಮ್ಮ ಕುಲ್ದವನೊಬ್ಬ ನನ್ನ ಬೀಗಮೊದ್ಲಾದ ನಂಟ್ರನ್ನು ಕರ್ಕೊಂಡ್ಬಂದು ನಿನ್ನೆ ನಿನ್ನ ಕುಲ್ದವನು ಹೇಳ್ದಂತೆ ನನಗೂ ಹೇಳ್ದರಲ್ಲದೆ, ಕಷ್ಟಸುಕಕ್ಕೆ ಬಾದ್ಯರಾದ ನಂಟರಿಸ್ಟರ ಮಾತನ್ನು ಕೇಳ್ದೆ ಮತ್ತು ಕುಲಾಬಿಮಾನವಿಲ್ದೆ ಬೇರೆಯವ್ರಿಗೆ ಸಾಯಮಾಡಿದ್ರೆ ಇನ್ಮೇಲೆ ನಿನ್ಗೂ ನಮ್ಗೂ ಸಂಬಂದ್ವಿಲ್ಲ, ನೀನು ಬೇರೆಯವರನ್ನೇ ಕಟ್ಕೊಂಡು ಬಾಳು ಎಂದು ಹೇಳಿ ಕೋಪ್ಸಿಕೊಂಡೋದರು.

ಲಿಂಗಪ್ಪ—ಅಯ್ಯಾ ಚನ್ನೇಗೌಡ, ಬೇರೆಜನ್ರು ತಮ್ಮ ಕಾರ್ಯ ಗೆಲ್ಲೋಕೆ ಎಸ್ಟರಮಟ್ಗೆ ನಮ್ಮನ್ನು ಇಂದ್ರಚಂದ್ರನಂತೆ ಹೊಗ್ಳಿ ಕೆಲ್ಸಆದ್ಮೇಲೆ ನಮ್ಮನ್ನು ಕಸಕ್ಕೆ ಕಡೆಯಾಗಿ ಕಾಣ್ತಾರೆಂಬ್ದನ್ನು ನೀನೇ ಹೇಳಿದ್ದೀಯ. ಅದ್ರೂ ಅಂತೋರ್ಗೆ ಕೊಡ್ಬೇಕೆಂದು ಇತ್ತಮಾತ್ಗೆ ಕಟ್ಟುಬೀಳೋದು ನ್ಯಾಯವಲ್ಲ.

ಚನ್ನೇಗೌಡ—ಮಳೆ ಸರಿಯಾಗಿ ಬರದೆಹೋದ್ರಿಂದ ಬೆಳೆಹೋಗಿ ನಾವು ಮುಂದಿನ ಬೆಳ್ಸು ಬರೋವರ್ಗೆ ಜೀವ್ಸೋದು ಯಾಂಗೆ ದನಕರ್ಗಳನ್ನು ಸಾಕೊದ್ಯಾಂಗೆ ಇದಲ್ದೆ ಸರ್ಕಾರಕ್ಕೆ ಕಂದಾಯ ಕಟ್ಬೋದು ಯಾಂಗೆ ಎಂದು ಚಿಂತ್ಸಿರುವಾಗ್ಗೆ ನಮ್ಗೋಟುಕೊಡಿ ನಮ್ಗೋಟುಕೊಡಿ ಎಂದು ಬೆಳ್ಕು ಅರಿತ್ಲೆ ಕಂಡುಕೇಳ್ದವರು ಇಲ್ಲದಿದ್ದವರು ಯಾರ್ಯಾರೋ ಬಂದು ಕೊನೆಯುತ್ತಿರುವದಲ್ದೆ ಸಾನ್ಬೊಗ್ರು ಮೊದ್ಲಾದವ್ರು ಹೇಳ್ದಂತೆ ಕೇಳ್ದಿದ್ರೆ ದೊಡ್ಡವ್ರ ಕೋಪಕ್ಕೆ ಗುರಿಯಾಗಬೇಕಾಗ್ತದೆಂದೂ ಕಂದಾಯಕೌಲ್ಗ ಕಾಲದಲ್ಲಿ ಜಮೀನು ತಕೊಳ್ಬೇಕಾದಲ್ಲಿ ಸಾಲಕ್ಕಾಗಿ ಹೋಗಬೇಕಾಗಿರುವ ಸಾವಕಾರರ ಮಾತ್ಕೇಳಿ ಓಟುಕೊಡದಿದ್ರೆ ಅವರ ನಿಸ್ಟೂರಕ್ಕೊಳಗಾಗಬೇಕಾಗ್ತದೆಂದೂ ಕುಲಸ್ತರ ಮಾತ್ಕೇಳದಿದ್ರೆ ತೊಂದ್ರೆಯಾಗ್ತದೆಂದೂ ಹೆದ್ರಿಸುತ್ತಿದ್ದಾರೆ. ಹಿಂದಕ್ಕೋದ್ರೆ ಬಾವಿ ಮುಂದ ಬಂದ್ರೆ ಕರೆ ಎಂಬಂಗೆ ಈ ಹಾಳು ಓಟಿನಿಂದ ದುಡ್ಡುಕಾಸಿಲ್ದೆ ನಿಸ್ಕಾರ್ಣವಾಗಿ ನಿಸ್ಟೂರ ಕಟ್ಕೊಳ್ಬೇಕಾದ ಪೀಕ್ಲಾಟ ಬಂತಲ್ಲಪ್ಪಾ, ಲಿಂಗಪ್ಪ ನೀನು ಯಾರ್ಗೆ ಕೊಡ್ತಿ.

ಲಿಂಗಪ್ಪ—ನಮ್ಮೋರ್ಗೆ ಕೊಡ್ತೀನೆಂದು ಮಾತ್ಕೊಟ್ಟಿದ್ದೀನಿ ಅದ್ರಿಂದ ಬಂದನಿಸ್ಟೂರ ಬರಲಿ ಅವರ್ಗೆ ಕೊಡ್ತೀನಪ್ಪ.

ಚನ್ನೇಗೌಡ—ಬುಡು ಬುಡು ನಾವೇನು ಅರಿಚಂದ್ರನೆ ಕೊಟ್ಟಮಾತು ತಪ್ಪದ್ರೋಕೆ. ಇಂತಾ ಜನವೇ ಕೊಡ್ತೀವೆಂದು ಚಾಪಾಕಾಗ್ದ ಬರ್ಕೊಟು ರಿಜಿಸ್ತ್ರಿಮಾಡ್ಸಿಕೊಟ್ಟಿದ್ರು ಕಾಲಕ್ಕೆ ಸರಿಯಾಗಿ ಕೊಡ್ದೆ ಸತಾಯಿಸಿ ಕೋರ್ಟುಕಚೇರಿಗೆ ಹತ್ಸಿ ಚಳ್ಳೆಅಣ್ಣು ತಿನ್ನಿಸ್ತಾರೆ. ಅಂಗಿರ್ವಾಗ ಸಾನ್ಬೋಗ್ರು ಸಾವ್ಕಾರ್ರು ಮೊದ್ಲಾದವ್ರ ಕಾಟ ತಡಿಲಾರ್ದೆ ನೀವೇಳ್ದೋರ್ಗೆ ಕೊಡ್ತೀವೆಂದು ಹೇಳ್ದಮಾತ್ರಕ್ಕೆ ಅವರ್ಗೇ ಕೊಡ್ಬೇಕೊ.

ಲಿಂಗಪ್ಪ—ಅಂಗಾದ್ರೆ ಮುಂದೇನ್ಮಾಡಬೇಕಪ್ಪ ನೀನು ಯಾಂಗೆಹೇಳ್ತೀಯೋ ನಾನೂ ಅಂಗೆ ನಡ್ತೀನಿ.

ಚನ್ನೇಗೌಡ—ಇವರ್ಗಳ ಕಾಟ ನಮ್ಗೆ ಈಗ್ಲೆ ತಪ್ಪಲ್ಲಿಲ್ಲ. ಬರುವ ತಿಂಗ 15ನೆ ತಾರೀಕು ತನ್ಕ ಒಬ್ರುಮೇಲೊಬ್ರು ಒಂದು ನಮ್ಮನ್ನ ಆಕಾಸಕ್ಕೆ ತಕ್ಕೊಂಡೋಗಿ ಕುಂದ್ರಿಸಿ ಕೊನಿಯುತ್ತಾರೆ. ಅವರೆಲ್ಲರಿಗೂ ಆಗ್ಲಿ ಒಳ್ಳೇದುದೇವ್ರುತಾವೇ ಟ್ಟೋರಿಗೇ ಕೊಡುತ್ತೇವೆಂದು ಹೇಳ್ತಿದ್ದು, ನಮ್ಮ ರೈತರ ಮಕ್ಳಳ ವಿದ್ಯಾಬ್ಯಾಸಕ್ಕೂ, ವಿದ್ಯಾವಂತಾದೋರ್ಗೆ ಸರ್ಕಾರಿ ನೋಕ್ರಿ ಕೊಡ್ಸೋದು, ಗ್ರಾಮಬಿವೃದ್ಧಿ ಮೊದ್ಲಾಗಿ ರೈತರ ಕಷ್ಟಗಳನ್ನ ತಿಳ್ದು ಸರ್ಕಾರ್ದೋರ್ಗೆ ಹೇಳಿ ಹೊಡ್ದಾಡಿದೋರ್ಗೆ ಮತ್ತು ಮುಂದೆಯೂ ಹೊಡ್ದಾಡೋರ್ಗೇನೆ ಕೊಡಬೇಕೆಂದು ಗಟ್ಟಿಮನಸ್ಸುಮಾಡಿದ್ದೀನಿ ನೀನೂ ಅದರಂತೆ ನಡಿಬೇಕಲ್ದೆ ನಮ್ಮೋರ್ಗೆಲ್ಲಾ ಅಂಗೇ ಹೇಳಿ ಮಾಡ್ಸಬೇಕು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸ. ಪ್ರ.

ಅರಕಲಗೂಡು ತಾಲ್ಲೂಕು ಬಸವಾಪಟ್ಟಣ.

ಊರಿನಲ್ಲಿ ಚಳಿಜ್ವರ. ಪ್ಲೇಗಿನಿಂದ ಊರುಬಿಟ್ಟಿದ್ದ ಜನಗಳು ಊರು ಸೇರುತ್ತಾ ಬಂದಿರುವರು. ಆದರೆ ಗ್ರಾಮದಲ್ಲಿ ಅನೇಕರು ಜ್ವರಪೀಡಿತರಾಗಿರುತ್ತಾರೆ. ತಾಲ್ಲೋಕಿಗೆ [illegible] ಇಲ್ಲದಿರುವ ಮತ್ತು ಸುತ್ತಮುತ್ತ ಜನಬಾಹುಳ್ಯವುಳ್ಳ ಅನೇಕ ಉಪಗ್ರಾಮಗಳಿಗೆ ಮಧ್ಯಭಾಗದಲ್ಲಿರುವ ಇಂಥಾ ದೊಡ್ಡ ಊರಿಗೆ ಒಂದು ಆಸ್ಪತ್ರೆಯಿಲ್ಲದಿರುವುದು ತುಂಬಾ ಶೋಚನೀಯವಾಗಿದೆ. ಹೊಸದಾಗಿ ಬಂದಿರುವ ಮತ್ತು ಪ್ರಜಾವಾತ್ಸಲ್ಯವುಳ್ಳ ನಮ್ಮ ಡಿ|| ಮೆಡಿಕಲ್ ಆಫೀಸರರವರು ಒಂದಾವರ್ತಿ ಈ ಗ್ರಾಮಕ್ಕೆ ದಯಮಾಡಿಸಿ ಈ ವಿಚಾರದಲ್ಲಿ ತಕ್ಕ ಏರ್ಪಾಡುಮಾಡಿಕೊಡಬೇಕಾಗಿ ಇಲ್ಲಿನ ಜನಗಳು ಅಪ್ಲಿಕೇಷನ್ ಹಾಕಿಕೊಳ್ಳುವುದು ಒಳ್ಳೆಯದೆಂದು ತೋರುತ್ತೆ. ಕಳೆದ 19-1-24ನೆ ಶನಿವಾರ ಈ ಗ್ರಾಮದಲ್ಲಿ ನಡೆದ ಮಕ್ಕಳ ಪ್ರದರ್ಶನೋತ್ಸವವು ವಿಲೇಜ್ ಛೇರ್ಮನ್ ಮ|| ಹ|| ಮಲ್ಲಶೆಟ್ಟರವರ ಮತ್ತು ಶಾ|| ಕಪ್ಪಣ್ಣನವರ ಏರ್ಪಾಡುಗಳಿಂದ ಹೋಬಳಿ ಶೇಕದಾರ್ರವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟು ನೆರೆದಿದ್ದ ಸ್ತ್ರೀಸಮೂಹದಲ್ಲಿ ವಿಧಾಯಕವಾದ ಉಪನ್ಯಾಸಗಳ ಮೂಲಕ ತಿಳುವಳಿಕೆ ಕೊಡಿಸಿ ನಂತರ ಬಹುಮಂದಿ ಮಕ್ಕಳಿಗೆ ವಸ್ತ್ರದಾನದಿಂದ ಪ್ರೋತ್ಸಾಹಿಸಿದ ವಿಷಯವು ಈ ಹಳ್ಳಿಗಾಡಿನಲ್ಲಿ ನಡೆಸಿದ್ದು ಬಹಳ ಶ್ಲಾಘ್ಯವಾಗಿರುತ್ತದೆ. ಸರ್ಕಾರದವರು ಹಾಲಿ ಏರ್ಪಡಿಸಿರುವ ಮಿಡಲ್ ಮತ್ತು ಪ್ರೈಮರಿ ಸ್ಕೂಲುಗಳ ಮಾಸ್ತರುಗಳ ಬದಲಾವಣೆ ವಿಷಯದಲ್ಲಿ ನಮ್ಮ ಡಿ|| ಇನ್|| ರವರು ಇದುವರಿಗೆ ನಡೆಸುತ್ತಾ ಬಂದಿರುವಂತೆ ಕ್ಷಣಕ್ಕೆ ಒಬ್ಬ ಮಾಸ್ತರ ಚುನಾವಣೆಯನ್ನು ನಡೆಸದೆ ಗ್ರಾಮಾಭಿಮಾನದಿಂದಲೂ, ಕಾರ್ಯದಕ್ಷತೆಯಿಂದಲೂ ಕೆಲಸಮಾಡುವ ಮುಖೋಪಾಧ್ಯಾಯರನ್ನೂ, ಅ|| ಮಾ|| ಗಳನ್ನೂ ಚುನಾಯಿಸಿ ಸ್ಕೂಲಿನ ಅಭಿವೃದ್ಧಿಗೆ ಮಾರ್ಗಮಾಡಿಕೊಡಬೇಕಾಗಿ ಈ ಮೂಲಕ ನಮ್ಮ ವಿದ್ಯಾಇಲಾಖಾ ಇನ್|| ಜ|| ಸಾಹೇಬರನ್ನೂ, ಸರ್ಕಲ್ ಇನ್|| ಸಾಹೇಬರನ್ನೂ ಬೇಡಿಕೊಳ್ಳುತ್ತೇವೆ.

ಸ್ಥಳವಾಸಿ.

ಚಾಮರಾಜನಗರದ ತಾಲ್ಲೂಕು ಕುದೇರು.

ಇಲ್ಲಿನ ಶ್ರೀ ಚನ್ನಬಸವೇಶ್ವರ ವಿಲಾಸ ವಾಚಕಮಂದಿರದ ತೃತೀಯ ವಾರ್ಷಿಕೋತ್ಸವದ ನಿಮಿತ್ತ ಈ ತಿಂಗಳು ತಾ|| 12 ರಲ್ಲಿ ವೇ|| ಶ್ರೀ|| ನಿತ್ಯಾನಂದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮಂದಿರದವರೂ ಮಠಾಧಿಕಾರಿಗಳೂ ವೀರಶೈವ ಮಹಾಜನಗಳಾದಿಯಾಗಿ 300 ಜನಗಳಿಂದ ಸಭೆಯು ಅಲಂಕೃತವಾಗಿತ್ತು. ಆ ಕಾಲದಲ್ಲಿ ಈ ಮಂದಿರದ ಮೆಂಬರ್ಸ್ ಮ|| ಎಂ. ಚನ್ನಬಸಪ್ಪನವರು ಆರೋಗ್ಯ ವಿಷಯದಲ್ಲಿಯೂ ಮ|| ಸಿ. ಮಾದಪ್ಪನವರು ದ್ರವ್ಯದಸದ್ವಿನಿಯೋಗ ವಿಷಯದಲ್ಲಿಯೂ ಮ|| ಎಸ್. ಶಾಂತವೀರಪ್ಪನವರು ಹೊಗೆಸೊಪ್ಪಿನ ವಿಷಯದಲ್ಲಿಯೂ ಅತ್ಯಂತಸ್ವಾರಸ್ಯವಾಗಿ ಭಾಷಣಮಾಡಿದರು. ಮ|| ಸೆಕ್ರೆಟರಿ ಸಿ. ಸಂಗಪ್ಪನವರು ವಾರ್ಷಿಕರಿಪೋರ್ಟನ್ನು ಓದಿದರು. ನಂತರ ಸಭಾಧ್ಯಕ್ಷರು ಮೇಲೆ ಹೇಳಲ್ಪಟ್ಟ ಉಪನ್ಯಾಸಗಳನ್ನು ಪುಷ್ಟೀಕರಿಸಿದರು. ಇದೇ ಗ್ರಾಮದ ನಿವಾಸಿಗಳಾದ ಮ|| ಜಿ. ಸದಾಶಿವಯ್ಯನವರು ಲೈಬ್ರರಿಗೆ ಬುಕ್ಕನ್ನು ಕೊಟ್ಟಿದ್ದಕ್ಕಾಗಿಯೂ ನಂಜನಗೂಡು ತಾಲ್ಲೂಕು ತಾಯೂರು ಗ್ರಾಮದ ಸ್ಟ್ಯಾಂಪುವೆಂಡರ್ ಮ|| ಸಿದ್ಧಬಸಪ್ಪನವರು ವರ್ಷ ವರ್ಷ 3 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ 3 ರೂಪಾಯಿಗಳನ್ನು ಪಾವತಿಮಾಡಿದ್ದಕ್ಕಾಗಿಯೂ ಇವರುಗಳನ್ನು ವಂದಿಸಿದನಂತರ ಸಭೆಯವರಿಗೆಲ್ಲಾ ಗಂಧ ಪುಷ್ಪ ತಾಂಬೂಲ ಫಲಹಾರಾದಿಗಳು ಹಂಚಲ್ಪಟ್ಟು ತರುವಾಯ ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆಯೊಡನೆ ಸಭೆಯು ಬರಖಾಸ್ತಾಯಿತು.

ಸೆಕ್ರಟರಿ, ಸಂಗಪ್ಪ.

ಮೈಸೂರು ಆರ್ಯವೈಶ್ಯ ಮಹಾಸಭಾ.
ಹೆಡ್ಡಾಫೀಸು, ಬೆಂಗಳೂರು ಸಿಟಿ.

ಮೈಸೂರು ಸಂಸ್ಥಾನಮುಲಂದುಗಲ ಶತಗೋತ್ರೋದ್ಭವುಲೈನ ಸಮಸ್ತ ಆರ್ಯವೈಶ್ಯ ಮಹಾಜನಲುಕು ತೆಲಿಯಚೇಯುಡಮೇಮನಗಾ :—

ಶ್ರೀ ಶೃಂಗೇರಿ ಮಠಾಧಿಪತುಲೈನ ಶ್ರೀ ಸ್ವಾಮುಲವಾರು ಇಂತಲೋನೆ ದೇಶಸಂಚಾರಮು ವೆಳ್ಳೇವಿಗಾನುನ್ನಾ ಮರಿನ್ನಿ ಅಚ್ಚಟಚ್ಚಟನುಂಡು ಮನ ಆರ್ಯವೈಶ್ಯುಲನು ಪ್ರೋತ್ಸಾಹಮುಚೇಸಿ ಶ್ರೀವಾರಿಕಿ ಪಾದಪೂಜಲುವಗೈರಾ ನಡಿಪಿಂಚೇಟಟ್ಟು ಪ್ರಯತ್ನಿಂಚುಚುನ್ನಾರನಿನ್ನಿ ತೆಲಿಯವಚ್ಚಿನದಿ ಗನುಕ ಈ ವಿಚಾರಮುನು ಗುರಿಂಚಿ 7-1-1924 ತಾರೀಖುನ ಹೆಡ್ಡಾಫೀಸುವಾರು ಸಭಚೇಸಿ ಈ ಕ್ರಿಂದ ಕನ್ನಪ್ರಕಾರಮು ತೀರ್ಮಾನಮು ಚೇಸಿಯುನ್ನಾರು ಗನುಕ ಮನ ಆರ್ಯವೈಶ್ಯುಲಂದರೂ ಕುಲಾಭಿಮಾನಮುವಿಂದ ದೃಷ್ಟಿಯುಂಚಿ ಸಭಾತೀರ್ಮಾನಮುನಕು ವಿರೋಧಮುಲೇಕ ನಡುಚುಕೋವಲೆನನಿ ಪ್ರಾರ್ಥನ :—

ತೀರ್ಮಾನಮು :—

ಶ್ರೀ ಶೃಂಗೇರಿ ಮಠಮುವಾರಿನುಂಚಿ ಪ್ರಚುರಿಂಪಡಿಯುಂಡೆ - ವೈಶ್ಯವೇದೋಕ್ತ ಕ್ರಿಯಾವಿಚಾರವ್ಯವಸ್ಥ - ಯನು ಗ್ರಂಥಮುನು ಸದರಿ ಮಠಮುವಾರು ರದ್ದುಪರಚಿ ಸರ್ವಲುಕು ತೆಲಿಯಚೇಯು ವರಕುನು ಅಥವಾ ಮನ ಸಭವಾರಿ ಒಪ್ಪಿತಮು ಪ್ರಕಾರಮು ಸದರಿ ಗ್ರಂಥಮುಲೋಯುಂಡೆ ವಿರೋಧಾಂಶಮುಲು ಯಾವತ್ತುನ್ನಿ ಸವರಣ ಚೇಸೇವರಕುನುನ್ನಿ ಮನ ಆರ್ಯವೈಶ್ಯಲೆವರುನ್ನಿ ಸದರಿ ಶೃಂಗೇರಿಮಠಮು ಶ್ರೀ ಸ್ವಾಮುಲವಾರುಕು ಭಿಕ್ಷ ಪಾದಪೂಜಲಾದಿಗಾ ಯೇ ವಿಧಮೈನ ಮರ್ಯಾದಲುನು ಜರುಪಕೂಡದನಿಯು ತೀರ್ಥಪ್ರಸಾದಮುಲು ಸ್ವೀಕರಿಂಚ ಕೂಡದನಿಯೂ ತೀರ್ಮಾನಮು.

ಪೈಕನ್ನ ಸಭ ತೀರ್ಮಾನಮುನು ಏ ಗ್ರಾಮಮುಲೋಯುಂಡು ಸರ್ವ ವೈಶ್ಯುಲಕು ತೆಲಿಯಚೇಸಿ ಸಭ ತೀರ್ಮಾನಮುನು ಗೌರವಿಂಚೇಟಟ್ಟು ಚೇಯವಲೆನು.

By order,
ಕುಸುಮ ಸುಬ್ಬರಾಯಶ್ರೇಷ್ಠಿ ಬಿ.ಎ., ಎಲ್‌ಎಲ್.ಬಿ.,
ತಾ|| 10-1-24 ಸೆಕ್ರಟರಿ.

ನಂಜನಗೂಡಿನ ಅಮಲ್ದಾರ್ರವರು.

ಇಲ್ಲಿನ ಅಮಲ್ದಾರರವರಿಗೆ ವರ್ಗವೆಂದು ಕೆಲವರು ಆಡಿಕೊಳ್ಳುತಲಿರುವರು. ಇವರು ಬ್ರಾಹ್ಮಣೇತರರಾಗಿರುವದೇ ಒಂದು ದೊಡ್ಡ ತಪ್ಪಾಗಿದೆ. ಏಕೆಂದರೆ ದೇವಸ್ಥಾನದ ಕೆಲಸಕಾರ್ಯಗಳಿಗೆ ಅಡಚಣೆಯುಂಟೆ! ಹೇಗೋ ಕಾಣೆವು, ಇವರಿಗೆ ಇವರಿದ್ದುದರಿಂದ ದೇವಸ್ಥಾನದಲ್ಲಿ ನಡೆದ ಚಿಕ್ಕಜಾತ್ರೆಯೇ ಮೊದಲಾದ ದೊಡ್ಡ ದೊಡ್ಡ ಉತ್ಸವಗಳು ಸಮರ್ಪಕವಾಗಿ ನೆರವೇರಿಲ್ಲವೆ? ಅದು ಹಾಗಿರಲಿ, ದೇವಸ್ಥಾನದ ಗುತ್ತಿಗೆ ಎಲ್ಲವೂ ಬ್ರಾಹ್ಮಣರವರವೇ ಆಗಿರಲಿ, ಅದ್ದಿ ಇಲ್ಲ. ಆದರೆ ತಾಲ್ಲೂಕಿನ ಇತರ ಜನಾಂಗಗಳು ಈವರೆಗೂ ಯಾರಾದರೂ ಬ್ರಾಹ್ಮಣೇತರ ಅಮಲ್ದಾರರ ಮುಖಾಂತರ ಲೋಪವನ್ನು ಮಾಡದಂತಹ ಪಾಪವನ್ನೇನುಮಾಡಿರುವರು? ಅಲ್ಪಾವಧಿಯಲ್ಲಿಯೇ ಈಗಿನ ಅಮಲ್ದಾರರೂ ತಾಲ್ಲೂಕಿನ ಜನರ ಮೆಚ್ಚುಗೆಯನ್ನು ತಮ್ಮ ನಿಷ್ಪಕ್ಷಪಾತತೆಯಿಂದಲೇ ಪಡೆದಿರುವರೆಂದು ಧೈರ್ಯದಿಂದ ಹೇಳಬಲ್ಲೆವು. ನಂಜನಗೂಡಿನಂತಹ ಮುಖ್ಯಸ್ಥಳದಲ್ಲಿ ಅಮಲ್ದಾರಿಯಂತಹ ಅಧಿಕಾರವು ಬ್ರಾಹ್ಮಣೇತರರಿಗೆ ಸಲ್ಲತಕ್ಕದ್ದಲ್ಲವೆಂದು ಸರ್ಕಾರವು ಯಾವ ಆಧಾರದಿಂದಲಾದರೂ ಸಾರುವಪಕ್ಷದಲ್ಲಿ ಇವರಿಗೆ ಇಲ್ಲಿ ಅನ್ಯೋನ್ಯದಿಂದಿರುವ ಜನರಲ್ಲಿ ಭೇದಭಾವವನ್ನು ಸರ್ಕಾರವೇ ಬೇರೂರಿಸಿದಂತಾಗುತ್ತದೆ. [illegible] ಇನ್ನು ರಾಮಚಂದ್ರರಾಯರೆಂಬುವರೊಬ್ಬರು ನಂಜನ[illegible] ಗಲಭೆ ಎಬ್ಬಿಸಿರುವರು. ಆ ರಾಯರೆಂಬುವರನ್ನು ನಾನು ನೋಡಿರುವೆನು. ಅವರ ಕೂಡೆ ಸಂಭಾಷಿಸಿರುವೆನು. ಅವರು ಮಹಾತ್ಮ ಗಾಂಧಿಯವರ ಗುಣಗಳನ್ನು ಮರೆತು ಕಾರ್ಯಗಳನ್ನು ಪ್ರಚಾರಪಡಿಸುತ್ತಿರುವರು. ಇಲ್ಲಿ ಯಾವದೂ ಸಾಧ್ಯವಿಲ್ಲವಾಗಿ ಯಾರೂ ಚಿಂತೆಗೆ ಗುರಿಯಾಗಬೇಕಾದುದಿಲ್ಲ. ಆದರಲ್ಲಿಯಾದರೂ ಅಮಲ್ದಾರರ ದೋಷವೇನೂ ಇಲ್ಲ. ಸರ್ಕಾರವೂ ನಮ್ಮ ಜಾತಂದರವರೂ ಈ ಕೆಲಸಕ್ಕೆ ಬಾರದ ಗಲಭೆಗಳಿಗೆ ಗಮನಕೊಡಲಾರರು. ಒಂದು ಅಧಿಕಾರವನ್ನು ಒಂದೇ ಪಂಗಡದವರಿಗೆ ಧಾರೆಯೆರೆಯುವ ಪಕ್ಷದಲ್ಲಿ ಪರಿಣಾಮವು ಅಷ್ಟೇನೂ ಶ್ರೇಯಸ್ಕರವಲ್ಲವು. ಮೇಲಾಗಿ ದೇವಸ್ಥಾನದ ಕಾರ್ಯಗಳಾದರೂ ದರ್ಪದಿಂದಲೂ ವಿತರಣೆಯಿಂದಲೂ ನೆರವೇರುತ್ತವೆ. ಮುಖ್ಯವಾಗಿ ಅಮಲ್ದಾರಿಗೆ ಎಲ್ಲಾ ಜನಾಂಗಗಳ ಜನರೂ ಬರುತ್ತಿರಬೇಕೆಂಬುದೇ ಈ ತಾಲ್ಲೋಕಿನವರ ಖಂಡಿತವಾದ ಅಂಕೆ ಎಂಬುದನ್ನು ಸರ್ಕಾರದವರು ದೃಢವಾಗಿ ತಿಳಿಯುವದು ಮೇಲು.

ನಿಷ್ಪಕ್ಷಪಾತಿ.

ಉಮೇದುವಾರರು ಪೂರ್ವಾಪರ ವಿಚಾರಮಾಡಿ ಓಟುಮಾಡಬೇಕು.

ಸ್ವಾಮಿ ಕಳೆದ ಡಿಸಂಬರ್ 16 ನೇ ತಾರೀಖಿನ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಸಮ್ಮತಿಸುವವರಿಗೆ ವಿಜ್ಞಾಪನೆ ಎಂಬ ಪ್ರಕಟಣೆಯ ಮೇಲೆ ತುಮಕೂರಿನ ಹಿತಚಿಂತಕರೆಂಬುವರು ಆಕ್ಷೇಪಣೆಗಳನ್ನು ಈ ಮಾಹೆ ತಾ|| 6ನೇ ಮೈಸೂರು ಕ್ರಾನಿಕಲ್ ಪತ್ರಿಕೆಯಲ್ಲಿ ಬರೆದಿದ್ದಾರೆ. -ಕುಂಬಳಕಾಯಿ ಕಳ್ಳ ಅಂದರೆ ಹೆಗಲು ತಡವಿಕೊಂಡನೆಂಬಂತೆ- ಚಿಂತಕರಿಗೆ ಅದರಲ್ಲಿನ ಯಾವ ವಿಷಯಗಳು ಸ್ವಾಭಾವಿಕವಾಗಿ ಬಾಧಿಸಿದವೊ ಅಂಥಾ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಬದಲಾಗಿ ತಮ್ಮ ವಿಷವನ್ನು ಕಾರಿ ಅಲ್ಪತನವನ್ನು ಬಹಿರಂಗಪಡಿಸಿಕೊಂಡರಲ್ಲ ಎಂದು ವಿಷಾದಿಸುತ್ತೇನೆ. ಅಲ್ಪವಿದ್ಯಾ ಮಹಾಗರ್ವಿ ಕುರೂಪಿ ಬಹುಚೇಷ್ಟಿತಃ ಎಂದು ಬರೆದಿದ್ದಾರೆ. ವಿದ್ಯಾಪ್ರಸಕ್ತಿಯ ಅವಶ್ಯಕತೆಯೆ ಇಲ್ಲಿ ಇರಲಿಲ್ಲ. ಹೀಗಿದ್ದರೂ ಚಿಂತಕರು ತಮ್ಮ ಪಾಂಡಿತ್ಯವನ್ನು ತೋರ್ಪಡಿಸಲು ಇದನ್ನು ಬರೆದಿರಬೇಕು. ಆದರೆ ಆ ಬರವಣಿಗೆಯು ಪಂಡಿತರ ಯೋಗ್ಯತೆಯನ್ನು ಹೊರಪಡಿಸುತ್ತೆ. ಕಿಂದಾದ ವಿದ್ಯೆಯಾಗಲಿ | ಮೆರೆವುದು ತನ್ನಲ್ಲಿ ಸುಗುಣಗಳಿರ್ದೊಡೆ ಮತ್ತಾ || ಒರತೆಯನೀರಾದೊಡೆತಾಂ ಬರನಂ ಪಿಂಗಿಸದೆ........ಇದು ಹಿತಚಿಂತಕರಾದ ಪಂಡಿತರಿಗೆ ತಿಳಿಯದೆಹೋಗಿರಬಹುದು. ಅನುಭವವೆಂಬ ಮಾತಿನ ಅರ್ಥ ಮಾಡಲು ಕಾಗದತ್ತಿಯಲ್ಲಿ ಸಂಚರಿಸುವವರಂತೆ ಹಂಬಲಿಸುತ್ತಾ ಸೂಟ್ ಬೂಟ್ ಹ್ಯಾಟ್ ಇವುಗಳನ್ನ ಧರಿಸಿದರೆ ಲೋಕವ್ಯವಹಾರಜ್ಞಾನವನ್ನು ತಿಳಿದಂತಾಯಿತೆ ಎಂದು ಬಾಲಭಾಷೆಯನ್ನಾಡಿದ್ದಾರೆ. ಇದು ಚಿಂತಕರ ಮನೋದಾರ್ಢ್ಯವನ್ನ ವಾಚಕರಿಗೆ ತೋರ್ಪಡಿಸದೆ ಇರದು. ಕಚ್ಚುವನಾಯಿ ಬೊಗಳುವದಿಲ್ಲ ಬೊಗಳುವನಾಯಿ ಕಚ್ಚುವುದಿಲ್ಲ ವೆಂಬ ಸಾಮತಿಯನ್ನು ಹೇಳಿದ್ದಾರೆ. ಆದರೆ ಗಲ್ ಗಲ್ ಎಂದು ಶಬ್ದಮಾಡುವ ಅಶ್ವತ್ಥವೃಕ್ಷವು ಪೂಜಿಸಲ್ಪಡುತ್ತಲೂ ಮಲ್ಲಿಯಂತಿರುವ ಕಳ್ಳಿಯು ಮಂಡಲದಹಾವಿಗೆ ಸಮಾನವೆಂದು ಭಾವಿಸಲ್ಪಡುತ್ತಲೂ ಇರತಕ್ಕ ವಿಷಯವು ಆಬಾಲವೃದ್ಧರಿಗೂ ತಿಳಿಯದೆ ಇಲ್ಲ. ನಾಯಿಬೊಗಳಿದರೆ ದೇವಲೋಕಹಾಳೆ ಎಂಬಂತೆ ಹಿತಚಿಂತಕರ ಬಾಲಭಾಷೆಯು ಯಾರಮನಸ್ಸನ್ನೂ ಬದಲಾಯಿಸಲಾರದು. ಆದ್ದರಿಂದ ಸಮ್ಮತಿಸುವ ಮಹಾತ್ಮರು ಯೋಗ್ಯಾಯೋಗ್ಯತೆಗಳನ್ನೂ ಉಮೇದುವಾರರ ಹಿಂದಿನ ಪೂರ್ವವೃತ್ತಾಂತವನ್ನೂ ವಿಚಾರಮಾಡಿ ಸಮ್ಮತಿಸುವವರಾಗಲೆಂದು ಪುನರಾವರ್ತಿ ಪ್ರಾರ್ಥಿಸುತ್ತೇನೆ. ಚುನಾವಣೆಯ ಕಾಲವು ಸಮೀಪಿಸಿರುವುದರಿಂದಲೂ ಅಲ್ಪ ವಿಷಯಗಳಿಗೆ ಗಮನಕೊಡತಕ್ಕದ್ದು ಗುಬ್ಬಚ್ಚಿ ಮೇಲೆ ಬ್ರಹ್ಮಾಸ್ತ್ರಪ್ರಯೋಗ ಮಾಡಿದಂತಾಗುವುದರಿಂದಲೂ ಮುಂದಿನ ಈ ಸಂಬಂಧವಾದ ಬರವಣಿಗೆಗೆ ನಿಗಾಕೊಡದೆ ಪತ್ರಿಕಾಪ್ರಸಂಗವನ್ನು ಇಲ್ಲಿಗೆ ಪೂರ್ತಿಗೊಳಿಸಿದ್ದೇನೆ.

ಟಿ. ಗುರುಚನ್ನಬಸವಯ್ಯ, ತುಮಕೂರು.

ಪ್ರಸಿದ್ಧಪತ್ರಿಕೆಯು.

ಬೆಳಗಾಂವ ಜಿಲ್ಲಾ ಗೋಕಾಕ ಫಾಲ್ಸದ ಸಮೀಪಕ್ಕಿರುವ ಸುಪ್ರಸಿದ್ಧವೂ ಪುಣ್ಯಸ್ಥಳವೂ ಆದ ಕೊಣ್ಣೂರ ಮರಡೀ ಮಠದ ಯಾತ್ರಾಸಮಾರಂಭವು ಪ್ರತಿವರ್ಷದಂತೆ ಈಸಾರೆಯಾದರೂ ಮುಂದೆ ಬರುವ ರಕ್ತಾಕ್ಷಿ ಸಂವತ್ಸರದ ಚೈ. ಶು. 15 ಅಂದರೆ ತಾ|| 19-4-24ನೇ ಶನಿವಾರ ಮೊದಲ್ಗೊಂಡು 4-5 ದಿವಸಗಳವರೆಗೆ ಒಳ್ಳೇ ವಿಜೃಂಭಣೆಯಿಂದ ಜರಗತಕ್ಕದ್ದಿರುತ್ತದೆ. ಆ ಸಮಯದಲ್ಲಿ ಸುಪ್ರಸಿದ್ಧರಾದ ಪೈಲವಾನರ ಕುಸ್ತಿಗಳೂ, ನೀರಿನಲ್ಲಿ ಈಸುವದು, ಸಾಯಕಲ್ ನಡೆಸುವದು, ಕಾಲಿನಿಂದ ಓಡುವದು ಮುಂತಾದ ಶರ್ಯತ್ತುಗಳು ಜರಗುವವಲ್ಲದೆ, ಒಳ್ಳೇ ಪುಷ್ಟ ಮತ್ತು ಶಕ್ತಿಯುಗಳಾದ ಎತ್ತು, ಎಮ್ಮೆ, ಟಗರು ಮುಂತಾದವುಗಳಿಗೆ ಬಕ್ಷೀಸು ಹಂಚಲ್ಪಡುತ್ತವೆ. ಮತ್ತು ಈ ವರ್ಷದ ಕಾರ್ಯಕ್ರಮದಲ್ಲಿ ವೀರಶೈವ ಧರ್ಮಗ್ರಂಥಗಳ ಪರೀಕ್ಷೆಯನ್ನೂ, ಉಪನ್ಯಾಸಗಳನ್ನೂ ಇಟ್ಟಿರುತ್ತದೆ. ಅದರಲ್ಲಿ ತೇರ್ಗಡೆಹೊಂದಿದವರಿಗೆ ಕೆಳಗೆ ಬರೆದಂತೆ ಪಾರಿತೋಷಕಗಳು ಹಂಚಲ್ಪಡುತ್ತವೆ. ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಗಳು ತಾವು ತೆಗೆದುಕೊಂಡ ವಿಷಯವನ್ನೂ ತಮ್ಮ ಹೆಸರು, ತಂದೆ ಹೆಸರು, ಗ್ರಾಮ ಮುಂತಾದ ಯೋಗ್ಯ ಮಾಹಿತಿಯ ಪ್ರಾರ್ಥನಾ ಪತ್ರಿಕೆಯನ್ನು ತಮ್ಮ ಅಧ್ಯಾಪಕರ ಸಹಿಯೊಡನೆ ಪೋಷ್ಟ ಗೋಕಾಕ ಫಾಲ್ಸ ಮುಕ್ಕಾಂ ಕೊಣ್ಣೂರ ಮರಡೀ ಮಠದ ಪಾಠಶಾಲಾಧ್ಯಾಪಕರಾದ ಪಂಡಿತ ಸದಾಶಿವ ಶಾಸ್ತ್ರಿಗಳ ಮೇಲ್ವಿಳಾಸಕ್ಕೆ ತಾ|| 12-4-24ನೇ ಶನಿವಾರದೊಳಗಾಗಿ ಕಳಿಸಿಕೊಡತಕ್ಕದ್ದು.

ಪರೀಕ್ಷಾ ಗ್ರಂಥಗಳ ಹೆಸರುಗಳು.	1ನೇ ತರಗತಿ.	2ನೇ ತರಗತಿ.
1 ಕ್ರಿಯಾಸಾರ 28ನೇ ಉಪದೇಶ	8 ರೂ.	5 ರೂ.
2 ಸಿದ್ಧಾಂತಶಿಖಾಮಣಿ ಪಿಂಡಸ್ಥಲದಿಂದ ಚತುರ್ಥ ಸಾರಾಯಸ್ಥಲದವರೆಗೆ	6	4
3 ವಿ. ಪ್ರಕಾಶಿಕಾ ಪ್ರಸಾದ ಷಟ್ಸ್ಥಲಪ್ರಕರಣ ಸಂಪೂರ್ಣ	6	4
4 ಶತಕತ್ರಯ ಶಿವಾಧವಶತಕಂ	5	3
ಉಪನ್ಯಾಸದ ವಿಷಯಗಳು.		
1 ಧರ್ಮ	5	3
2 ಬ್ರಹ್ಮಚರ್ಯ	”	”
3 ಅಹಿಂಸಾ	”	”
4 ವಿದ್ಯಾ	”	”
5 ವೃತ್ತಪತ್ರಗಳ ಅವಶ್ಯಕತೆ	”	”

ಉಪನ್ಯಾಸಗಳನ್ನು ಮಾಡತಕ್ಕವರು ಫುಲ್‌ಸ್ಕೇಪ್ ಕಾಗದದ ಒಂದೇ ಮಗ್ಗಲಿಗೆ ಸ್ಫುಟವಾದ ಅಕ್ಷರಗಳಿಂದ ನಾಲ್ಕು ಪುಟಕ್ಕೆ ಕಡಿಮೆಯಾಗದಂತೆಯೂ ಎಂಟು ಪುಟಕ್ಕೆ ಹೆಚ್ಚಾಗದಂತೆಯೂ ಬರೆದು ನಾಲ್ಕು ದಿವಸ ಮುಂಚಿತವಾಗಿಯೇ ಮೇಲಿನ ವಿಳಾಸಕ್ಕೆ ಕಳಿಸಬೇಕು.

• [illegible] • [illegible]

ಧಾರವಾಡ ಡಿ|| ದೇವಗಿರಿಯಲ್ಲಿ ನಡೆದ ಶ್ರೀ ಹಾಲುಮತ (ಕುರುಬರ) 3 ನೇ ಧಾರ್ಮಿಕ ಮತ್ತು ವಿದ್ಯಾವರ್ಧಕ ಮಹಾಸಭೆಯು.

ಮೊದಲೇ ಪ್ರಸಿದ್ಧಪಡಿಸಿದ ಮೇರೆಗೆ ತಾ|| 28-12-1923 ನೇ ದಿವಸ ಶ್ರೀ ಹಾಲುಮತದ ಗುರುವರ್ಯರಾದ ಶ್ರೀ|| ಚನ್ನಯ್ಯಸ್ವಾಮಿ ಕೆಂಡದಮಠ ಬಂಕಾಪುರ ಈ ಮಹನೀಯರ ಸನ್ನಿಧಿಯಲ್ಲಿ ದೇವಗಿರಿ ಹಾಲುಮತದವರು ಅಷ್ಟಾಭಿಷೇಕ, ಪೂಜಾಮಹೋತ್ಸವ, ಮಹಾಗಣಾರಾಧನೆ, ಮೆರವಣಿಗೆ ಮೊದಲಾದ ಮಹೋತ್ಸವಗಳನ್ನು ನೆರವೇರಿಸಿದ ಬಳಿಕ ತಾ|| 29-12-1923 ನೇ ಇಸವಿ ದಿವಸ ಪ್ರಾತಃಕಾಲದ 7 ಘಂಟೆಗೆ ಶ್ರೀ ಗುರುಮಠದ ಮುಂದಿನ ದಿವ್ಯವಾದ ಮಂಟಪದಲ್ಲಿ ಶ್ರೀ ಗುರುವರ್ಯರ ಅಧ್ಯಕ್ಷತೆಯ ಕೆಳಗೆ ಹಾಲುಮತದ 3 ನೇ ಧಾರ್ಮಿಕ ಹಾಗು ವಿದ್ಯಾವರ್ಧಕ ಮಹಾಸಭೆಯು ನೆರವೇರಿಸಲ್ಪಟ್ಟಿತು. ಶ್ರೀಮಂತ ಭರಮಗೌಡ ಪಾಟೀಲ ದೇವಿಹೊಸೂರ ತಾಲ್ಲೂಕು ಬೋ|| ಮೆಂಬರು ಹಾವೇರಿ, ಇವರು ಉಪಾಧ್ಯಕ್ಷರಾಗಿಯೂ, ರಾ|| ಎಲ್ಲಪ್ಪ ತಿರಕಣ್ಣನವರ ದೇವಗಿರಿ ಇವರು ಸ್ವಾಗತ ಮಂಡಲದ ಅಧ್ಯಕ್ಷರಾಗಿಯೂ ನಿಯಮಿಸಲ್ಪಟ್ಟಿದ್ದರು. ಈ ಮಹಾಸಭೆಗೆ ಧಾರವಾಡ ಜಿಲ್ಹೆಯ ಬಹಳ ಗ್ರಾಮಗಳ ಜನರೂ, ದಾವಣಗೇರಿ, ಹರಿಹರ, ವಿಜಾಪುರ, ಬೆಳಗಾಂವ, ಸವದತ್ತಿ, ಮದ್ರಾಸ್ ಇಲಾಖೆಯ ಜನರೂ ಬಂದಿದ್ದರು. ಸುಮಾರು 5-6 ನೂರು ಜನರು ಕೂಡಿದ್ದರು. ಪ್ರಾರಂಭದಲ್ಲಿ ಈಶಸ್ತವನವಾದನಂತರ ಮಿ|| ಬಸವಣ್ಣೆಪ್ಪ ಹಳವಳ್ಳಿ ಇವರು ಸಭೆಯ ಉದ್ದೇಶವನ್ನು ಸ್ವಲ್ಪದರಲ್ಲಿ ಹೇಳಿದ ಬಳಿಕ ಸ್ವಾಗತಮಂಡಲದ ಅಧ್ಯಕ್ಷ, ಸಭಾಧ್ಯಕ್ಷ ಹಾಗು ಉಪಾಧ್ಯಕ್ಷರ ಭಾಷಣಗಳಾದವು. ಆ ನಂತರ ಧಾರ್ಮಿಕ ಉನ್ನತಿ, ಅಹಿಂಸಾವ್ರತಪಾಲನ, ವಿದ್ಯಾಭಿವೃದ್ಧಿ, ಸಹಕಾರಿತನ, ಸದ್ಯದ ಪರಿಸ್ಥಿತಿ ಮೊದಲಾದ ಮಹತ್ವದ ವಿಷಯಗಳ ಮೇಲೆ ಮಿ|| ಬಸವಣ್ಣೆಪ್ಪ ಹಳವಳ್ಳಿ, ಮಿ|| ಬಸಪ್ಪ ದೇಸಾಯಿ ಅ|| ಮಾಸ್ತರ ಕೋಳಿವಾಡ, ವಿಜಾಪುರ ಚಿಟನೀಸ ಸಾಹೇಬರಾದ ಮೆಹರ್ಬಾನ ಬಸಪ್ಪ ಕಜಗಿ ಬಿ.ಎ., ಮಿ|| ಕರಿಯಪ್ಪ ಪೂಜಾರ ಅ|| ಮಾಸ್ತರ ಲಕ್ಷ್ಮೇಶ್ವರ, ಮಿ|| ಹುಚ್ಚಪ್ಪ ವಗ್ಗಣ್ಣವರ ಹಳೇರಿತ್ತಿ, ಸತ್ಯಪ್ಪ ಮಳಲಕೇರಿ ದಾವಣಗೇರಿ, ಮಿ|| ಶಿವಲಿಂಗಪ್ಪ ಕರಡಿ ಅ|| ಮಾಸ್ತರ ಯಲಿವಿಗಿ, ಮಿ|| ಶಂಕರಪ್ಪ ಹಲಗ್ಗಾಪೂರ ಅ|| ಮಾಸ್ತರ ನಲವಡಿ, ಸಹಕಾರಿ ಆನರರಿ ಆರ್ಗನಾಯಿಝರರಾದ ಮೆಹರ್ಬಾನ ಬಸಪ್ಪ ಕಲ್ಲಣ್ಣವರ ನಲವಡಿ ಮೊದಲಾದವರ ಕಳಕಳಿಯ ಭಾಷಣಗಳಾಗಿ ಕೆಳಗೆ ಬರೆದ ಠರಾವುಗಳು ಪಾಸಾದವು. (1) ರಾಜನಿಷ್ಠೆ (2) ಹಾಲುಮತ ಬೋರ್ಡಿಂಗ ಸ್ಥಾಪನೆ (3) ಶಾಲಾಕಾಲೇಜಗಳಲ್ಲಿ ಪ್ರಥಮಪ್ರವೇಶ (4) ಇನ್ನುಮೇಲೆ ಸ್ಥಾಪಿಸಲ್ಪಡುವ ಜಿಲ್ಲಾ ಸ್ಕೂಲ ಬೋರ್ಡುಗಳಲ್ಲಿ ನಮ್ಮ ಸಮಾಜಕ್ಕೆ ಕನಿಷ್ಠ ಎರಡು ಜಾಗೆಗಳನ್ನು ಕಾಯ್ದಿಡುವದು. (5) ಹಾಲುಮತ ವಿದ್ಯಾವರ್ಧಕ ಫಂಡು ಕೂಡಿಸುವದು. (6) • ಶ್ರೀ ಹಾಲುಮತ ಸಮುಪದೇಶ • ಈ ಗ್ರಂಥಪ್ರಸಾರಮಾಡುವದು. (7) ಉಪಾಧ್ಯಕ್ಷರ ಭಾಷಣದಲ್ಲಿಯ ಠರಾವುಗಳನ್ನು ಅಮಲಿನಲ್ಲಿ ತರುವದು. (8) ಉಣ್ಣೆಯ ವ್ಯವಸಾಯಕ್ಕೆ ಪ್ರೋತ್ಸಾಹ (9) ಹಾಲುಮತ ಸ್ವಯಂಸೇವಕ ಸಂಘಸ್ಥಾಪನೆ (10) ಅಧ್ಯಕ್ಷರ ಆಭಾರಮನ್ನಣೆ ಈ ಪ್ರಕಾರ ಠರಾವುಗಳು ಪಾಸಾದ ಬಳಿಕ ಸಭೆಯ ಕಾರ್ಯಕ್ಕೆ ಅವಿಶ್ರಾಂತಶ್ರಮವಹಿಸಿದವರ ಹಾಗು ಸಭಿಕರ ಆಭಾರಮನ್ನಿಸಿದಮೇಲೆ ಹಾಲುಮತ ಜಯ ಜಯಕಾರದೊಡನೆ ಸಭೆಯ ಕಾರ್ಯವು ಸಮಾಪ್ತಿಯಾಯಿತು.

ಬಸವಣ್ಣೆಪ್ಪ ಅಲವಂಡಿ,
ಜನರಲ್ ಸೆಕ್ರೆಟರಿ.

ಮಳವಳ್ಳಿ.

ಈ ಊರಿನ ಜನಗಳೆಲ್ಲರೂ ಪ್ಲೇಗ್ ಕಾರಣದಿಂದ ಷೆಡ್ಡಿನಲ್ಲಿ ವಾಸಮಾಡುತ್ತಿರುತ್ತಾರೆ. ಕೆರೆಯಲ್ಲಿ ನೀರು ಬತ್ತಿಹೋಗಿರುತ್ತದೆ. ಕಟ್ಟೆಯಲ್ಲೂ ನೀರು ಬತ್ತಿಹೋಗುವುದರಲ್ಲಿದೆ. ಕುಡಿಯುವ ನೀರಿಗೂ ಬಹು ತೊಂದರೆ ಒದಗುವಂತಿದೆ. ಮಳವಳ್ಳಿ, ಮಾರೇಹಳ್ಳಿ ಕೆರೆಗಳ ಕೆಳಗೆ ನೀರು ಸಾಲದೆ ಭತ್ತದ ಬೆಳೆ ಬಹುವಾಗಿ ಕೆಟ್ಟುಹೋಯಿತು. ಮಳೆಯಿಲ್ಲದೆ ಜೋಳ, ರಾಗಿ, ಹುರಳಿ ಬೆಳೆಗಳು ಬಹುವಾಗಿ ನಷ್ಟವಾದುವು. ಬಡಬಗ್ಗರ ತೊಂದರೆ ಬರಿಯಲಸಾಧ್ಯ.—(2) 21-1-24ನೆ ತಾರೀಕಿನಲ್ಲಿ - ಬೇಬಿವೀಕ್ - ಎಂಬ ಮಕ್ಕಳ ಪ್ರದರ್ಶನೋತ್ಸವವು ನಮ್ಮ ಅಮಲ್ದಾರ್ರವರಿಂದ ಬಹು ವಿಜೃಂಭಣೆಯಾಗಿ ನಡಿಸಲ್ಪಟ್ಟಿತು. ಪ್ಲೇಗಿನಿಂದ ಊರಿನವರೆಲ್ಲರೂ ಷೆಡ್ಡುಗಳಲ್ಲಿ ವಾಸಮಾಡುತ್ತಿರುವುದರಿಂದ ಹೆಚ್ಚು ದಿನಗಳು ನಡಿಸಲವಕಾಶವಿಲ್ಲದೆ ಹೋಯಿತು. ಬೆಳಗ್ಗೆ ದೊಡ್ಡಮನುಷ್ಯರ ಸಭೆಯು ಟೌನ್‌ಹಾಲ್ ಕಟ್ಟಡದಲ್ಲಿ ಸೇರಿತ್ತು. ನಮ್ಮ ರೈಲ್ವೆ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ ಮ|| ಕೃಷ್ಣಪ್ಪನವರು ಅಗ್ರಾಸನವನ್ನು ವಹಿಸಿದ್ದರು. ಪ್ರಾರಂಭದಲ್ಲಿ ಬ್ಯಾಂಡು ನಂತರ ಮಕ್ಕಳ ಪ್ರದರ್ಶನದ ವಿಚಾರದಲ್ಲಿ ಅಮಲ್ದಾರ್ರವರ ಭಾಷಣವಾಯಿತು. ನಂತರ ಆರೋಗ್ಯದ ವಿಚಾರದಲ್ಲಿ ನಮ್ಮ ತಾಲ್ಲೂಕ್ ಸಬ್ ಅ|| ಸರ್ಜನ್ ಸಾಹೇಬರವರ ಉಪನ್ಯಾಸ ನಡಿಯಬೇಕಾಗಿತ್ತು. ವಿಸಿಟಿಂಗ್ ಕಾಲದಲ್ಲಿ ತಾವು ಕೋರ್ಟಿಗೆ ಹೋಗುವದನ್ನು ನಿಲ್ಲಿಸಿ ಉಪನ್ಯಾಸಮಾಡುವುದಾಗಿ ಒಪ್ಪಿದ್ದರು. ಪ್ರೋಗ್ರಾಮಿನಲ್ಲಿ ಸೇರಿಸಲ್ಪಟ್ಟಿತು. ಆದರೆ ಗೈರಾಜರಾದರು. ಈ ಉಪನ್ಯಾಸ ನಡಿಯಲಿಲ್ಲ. ಈ ರೀತಿ ಇಂಥ ಉತ್ಸವಕಾಲದಲ್ಲಿ ನಮ್ಮ ಡಾಕ್ಟರ್‌ಸಾಹೇಬರವರು ಮಾಡಿದ್ದು ಶೋಚನೀಯವಾದ ಅಂಶವಾಗಿದೆ. ಇಷ್ಟೇ ಅಲ್ಲದೆ ಇವರು ಇನ್ನೂ ಮ್ಯುನಿಸಿಪಾಲಿಟಿ ವಗೈರೆ ಮೆಂಬರಾಗಿರುವರಂತೆ; ಯಾವ ಮೀಟಿಂಗಿಗೂ ಅಟೆಂಡಾಗುವುದಿಲ್ಲವಂತೆ. ಆಸ್ಪತ್ರೆಯಲ್ಲಿ ಬಡಬಗ್ಗರ ಚಿಕಿತ್ಸೆಗೆ ತುಂಬಾ ತೊಂದರೆಯಾಗಿರುವಂತೆ ಜನಗಳು ಹೇಳಿಕೊಳ್ಳುತ್ತಾರೆ. ಜನಗಳ ಏಳಿಗೆಗಾಗಿ ಇವರ ಕೆಲಸವು ನಿಯಾಮಕವಾಗಿದ್ದರೂ ಡಾಕ್ಟರವರು ಈ ರೀತಿ ಮಾಡುವುದು ಶುದ್ಧ ಅನ್ಯಾಯ. ಮುಂದಾದರೂ ತಮ್ಮ ಕರ್ತವ್ಯಕಾರ್ಯಗಳನ್ನು ಕ್ರಮವಾಗಿ ಮಾಡುವರೆಂದು ನಂಬಿದೇವೆ. ಈ ಮಕ್ಕಳ ಪ್ರದರ್ಶನೋತ್ಸವದಲ್ಲಿ ಅಮಲ್ದಾರ್ರವರ ಭಾಷಣವಾದ ನಂತರ ಎ. ವಿ. ಸ್ಕೂಲ್ ಹೆಡ್ಮಾಸ್ತರ್ ಡಿ. ರಾಮಚಂದ್ರರಾಯರು ಮಕ್ಕಳ ಪೋಷಣೆ ವಿಚಾರವಾಗಿಯೂ ಪೇಟೆ ಸ್ಕೂಲು ಹೆಡ್ಮಾಸ್ತರ್ ಎಂ. ನಂಜುಂಡಶಾಸ್ತ್ರಿಗಳು ಮನೆ ಮತ್ತು ಗ್ರಾಮಗಳ ಶುಚಿತ್ವದ ವಿಚಾರದಲ್ಲೂ ಸ್ವಾರಸ್ಯವಾದ ಉಪನ್ಯಾಸಗಳನ್ನು ಓದಿದರು. ನಂತರ ಅಗ್ರಾಸನಾಧಿಪತಿಗಳ ಸಂಭಾಷಣೆ ನಡಿಸಲ್ಪಟ್ಟು ಸಭೆ ಬರಖಾಸ್ತಾಯಿತು. ಮಧ್ಯಾಹ್ನ ಸ್ಕೂಲು ಹುಡುಗರ ಸ್ಪೋರ್ಟುಗಳು ನಡಿಸಲ್ಪಟ್ಟವು. ಮಕ್ಕಳ ಪ್ರದರ್ಶನ ನಡಿಸಲ್ಪಟ್ಟು ಬಹುಮಾನಗಳು ಹಂಚಲ್ಪಟ್ಟವು. ನಂತರ ಸಭೆ ಸೇರಿಸಲ್ಪಟ್ಟಿತು. ಮೊದಲು ಮಳವಳ್ಳಿ ಪೇಟೆ ಕನ್ನಡ ಬಾಯ್ಸ್ ಸ್ಕೂಲು ಹುಡುಗರಿಂದ ಆರೋಗ್ಯ ವಿಚಾರದಲ್ಲಿ ಸಣ್ಣ ನಾಟಕವನ್ನು ಆ ಸ್ಕೂಲು ಹೆಡ್ಮಾಸ್ತರ್ ಎಂ. ನಂಜುಂಡಶಾಸ್ತ್ರಿಗಳು ಬಹು ಸ್ವಾರಸ್ಯವಾಗಿರುವಂತೆ ಆಡಿಸಿದರು. ಮ|| ಶೇಷರಾವ್ ಸಾಹೇಬರವರಿಂದ ಮ್ಯಾಜಿಕ್‌ಲ್ಯಾಂಟರ್ನ್ ತೋರಿಸಲ್ಪಟ್ಟಿತು. ರಾತ್ರಿ ಉತ್ಸವಗಾನದ ಪ್ರಹ್ಲಾದಚರಿತ್ರೆ ಆಡಿಸಲ್ಪಟ್ಟಿತು. ಈ ಉತ್ಸವಗಳೆಲ್ಲಾ ಬಹು ವಿಜೃಂಭಣೆಯಿಂದ ನಡಿಸಲ್ಪಟ್ಟು ಜನಗಳ ಮನಸ್ಸಿಗೆ ಬಹು ಆನಂದವನ್ನುಂಟುಮಾಡಿತು. ಮುಖ್ಯವಾಗಿ ನಮ್ಮ ಅಮಲ್ದಾರ್ರವರ ಪ್ರೋತ್ಸಾಹ ಮುಂತಾದ ಉಪಕಾರಗಳನ್ನು ಎಷ್ಟು ಕೊಂಡಾಡಿದರೂ ತೀರದು. ಇಂಥ ಅಮಲ್ದಾರ್ರವರು ಈ ತಾಲ್ಲೂಕಿಗೆ ದಯಮಾಡಿಸಿರುವುದು ಇಲ್ಲಿನ ಜನರ ಭಾಗ್ಯವೆಂದೇ

ಭಾವಿಸಬೇಕಾಗಿರುತ್ತದೆ. ಡಾಕ್ಟರ್‌ರವರಿಗೆ ಈ ರೀತಿ ಹೆಸರು ತೆಗೆದುಕೊಳ್ಳಲು ಯಾಕೆ ಮನಸ್ಸು ಬರಲಿಲ್ಲವೊ? ಸತ್ಯವಾದಿ.

ಓಟ್ಸ್ ಕೊಡತಕ್ಕವರ ನಿಜಕರ್ತವ್ಯ.

ತಮ್ಮ ಮತ್ತು ತಮ್ಮವರ ಹಿತದ ಲವಲೇಶವೂ ಹಾನಿಯಾಗದಂತಿರುವುದಕ್ಕೋಸ್ಕರ ಬಹು ಎಚ್ಚರವುಳ್ಳವರಾಗಿರುವಂಥವರು ಪರಹಿತಕ್ಕಾಗಿಯೇ ಪ್ರಯತ್ನಿಸುತ್ತೇವೆಂದು ಹೇಳುವುದು ಬರೇ ಕಾರ್ಯಸಾಧನೆಗಾಗಿ ಹೇಳುವ ಬೂಟಾಟಿಕೆಯ ಮಾತಾಗಿದೆ. ಇದಕ್ಕೆ ಉದಾಹರಣವಾಗಿ ಸರಕಾರದಿಂದ ನಡಿಯತಕ್ಕಂಥಾ ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ಬ್ರಾಹ್ಮಣೇತರರಿಗೂ ಅಭ್ಯಾಸಕ್ಕೆ ಅವಕಾಶವಿರಬೇಕೆಂದು ಕೇಳಲ್ಪಟ್ಟಾಗ ಬ್ರಾಹ್ಮಣವರ್ಗದ ಬಹುಜನ ಮೆಂಬರುಗಳು ಬ್ರಾಹ್ಮಣರ ವಿನಹ ಇತರರಿಗೇ (ವೀರಶೈವರಂಥವರಿಗೂ ಸಹ) ವೇದವಿದ್ಯೆ ಕಲಿಯಲಿಕ್ಕೆ ಶಾಸ್ತ್ರಗಳಲ್ಲಿ ಒಪ್ಪಿಗೆಯಿಲ್ಲವೆಂದು ಮೊದಲಾಗಿ ಸಭೆಯಲ್ಲಿ ಪ್ರತಿಭಟಿಸಿದುದೇ ಆಗಿದೆ. ಇತ್ಯಾದಿಯಾಗಿ ಬ್ರಾಹ್ಮಣೇತರರ ನ್ಯಾಯವಾದ ಬೇಡುವಿಕೆಯಮೇಲೆ ಬೆಂಕಿಯನ್ನು ಕಾರಿದ ಆ ನಮ್ಮ ಬಂಧುಗಳು ಪರಹಿತಕ್ಕೋಸ್ಕರವಾಗಿ ಅಂದರೆ ಸರ್ವಜನರ ಹಿತಕ್ಕೆ ಸಂಬಂಧಪಟ್ಟ ದೇಶಸೇವೆಯನ್ನೇ ಮಾಡುತ್ತೇವೆಂದು ಹೇಳಿ ಜನರಿಂದ ಓಟ್ಸ್ ಪಡೆದು ಬಂದವರಾಗಿದ್ದರಾದರೂ ತಮ್ಮ ಹಿತಕ್ಕೆ ಹಾನಿ ತಟ್ಟೀತೆಂಬ ಸಂಶಯವುದಗಿದಾಗ್ಗೆ ನೋಡಿರಿ ಅವರು ಎಂಥ ಎಚ್ಚರುಳ್ಳವರಾದರು! ಓಟರ್ಸ್ ಮಹಾಶಯರೇ! ಇತ್ಯಾದಿ ಒಂದಲ್ಲ, ಎರಡಲ್ಲ ಅನೇಕಾನೇಕ ಉದಾಹರಣೆಗಳನ್ನು ಕೊಡಬಹುದು. ಆದರೇನು, ಇದೊಂದೇ ಉದಾಹರಣೆಯಮೇಲಿಂದ ನೋಡಿದರೆ ಕೆಲಜನರು ಕೋರಿಕೆಗೆ ಪರಹಿತಸಾಧಕರೆಂತಿದ್ದರೂ ಪ್ರಸಂಗಬಂದಾಗ ಈರೀತಿ ಸ್ವಜನ ಹಿತಸಾಧಕರೇ ಆಗುತ್ತಾರೆಂಬುದು ಸ್ಪಷ್ಟ ಕಾಣಿಸುವುದಿಲ್ಲವೇ? ಆದ್ದರಿಂದ ಯುಕ್ತ ನಮ್ಮ ಹಿತವನ್ನು ನೆಲಸಿಕೊಡುವ ಕೆಲಸಕ್ಕಾಗಿ ವರಿಗೆ ಮತ ಕೊಡುವುದರಿಂದ ಎಂಥ ಹಾನಿತಟ್ಟುತ್ತದೆ ಎಂಬುದನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ. ಇಂಗ್ಲೆಂಡ್ ದೇಶವನ್ನು ನೋಡಿಬಂದ ಒಬ್ಬ ವಿದ್ವಾಂಸ ಗೃಹಸ್ಥರು—ನಮ್ಮದೇಶದ ಜನರನ್ನು ಕುರಿತು ಒಂದುಸಾರಿ ಹೀಗೆ ಹೇಳಿದುದು ನನ್ನ ಜ್ಞಾಪಕದಲ್ಲಿದೆ...ಪಾಶ್ಚಿಮಾತ್ಯದೇಶದ ಜನರು ನಿಮ್ಮಿತಕ್ಕವರನ್ನು ನೋಡಿ ಎತ್ತರಾಗುತ್ತಾರೆ. ಕುಳಿತವರನ್ನು ನೋಡಿ ಎದ್ದುನಿಲ್ಲುತ್ತಾರೆ. ನಿಂತವರನ್ನು ನೋಡಿ ಮುಂದಕ್ಕೋಡುತ್ತಾರೆ. ಆದರೆ ಈ ನಮ್ಮದೇಶದಲ್ಲಿ ಓಡುವವರನ್ನು ನೋಡಿ ಥಟ್ಟನೆ ನಿಂತುಬಿಡುತ್ತಾರೆ. ನಿಂತವರನ್ನು ನೋಡಿ ನೆಲಹಿಡಿದು ಕೂಡ್ರುತ್ತಾರೆ. ಕೂತವರನ್ನು ನೋಡಿ ಗಪ್ಪಚುಪ್ಪಾಗಿ ಮಲಗುತ್ತಾರೆ. ಸಾರಾಂಶ-ನಮ್ಮದೇಶದ ಬಹುಜನರಿಗೆ ಸೋಮಾರಿತನವೆಂಬ ಪ್ರಬಲಪಿಶಾಚಿಯು ಹಿಡಿದುಬಿಟ್ಟಿದೆ ಎಂದು ಹೇಳಿ ತಮ್ಮ ವಿಷಾದವನ್ನು ವ್ಯಕ್ತಗೊಳಿಸಿದ್ದರು. ಹಿಂದುಳಿದ ಮಹಾಶಯರೇ, ಸದ್ಯಕ್ಕೆ ನೀವು ರೆಪ್ರಿಜೆಂಟೇಟಿವ್ ಅಸೆಂಬ್ಲಿಗೂ, ಲೆಜಿಸ್ಲೇಟಿವ್ ಕೌನ್ಸಿಲ್ಲಿಗೂ ಮೆಂಬರರನ್ನು ಚುನಾಯಿಸಿ ಕಳುಹಿಸುವ ಮಹಾಜವಾಬ್ದಾರಿಯನ್ನು ಹೊತ್ತವರಾಗಿರುತ್ತೀರಿ. ಈ ಅಮೌಲ್ಯಸಂದರ್ಭವನ್ನು ದಯವಾಡಿ ನೀವು ವ್ಯರ್ಥ ಕಳೆದುಕೊಳ್ಳದೆ ಸೋಮಾರಿಗಳೆಂದು ನಿಮ್ಮಮೇಲಿರುವ ಆರೋಪವನ್ನು ಹೋಗಲಾಡಿಸಿಕೊಳ್ಳಬೇಕಲ್ಲವೇ? ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರರವರ ಮಹಾಸನ್ನಿಧಿಯೆಂಬ ಕಲ್ಪವೃಕ್ಷದಲ್ಲಿ ಪರಿಪಕ್ವವಾದ ಈ ಉಭಯಸಭೆಗಳೆಂಬ ದಿವ್ಯಫಲಗಳ ಹೆಚ್ಚುಭಾಗವನ್ನು ದೊರಕಿಸಬೇಕೆಂಬ ಅತ್ಯುತ್ಸಾಹದಿಂದ ಇತರರು ಓಡುವುದಕ್ಕೆ ಸಿದ್ಧರಾಗಿರುವುದನ್ನು ನೋಡಿ ಹಿಂದುಳಿದ ಅದರಲ್ಲೂ ತೀರಾಹಿಂದುಳಿದ ವೀರಶೈವರಾದ ನಾವು ನೆಲಹಿಡಿದು ಕುಳಿತುಬಿಟ್ಟರೆ ನಾಗರಿಕರು ನಗಲಿಕ್ಕಿಲ್ಲವೇ? ದಯವಾಡಿ ತಾವೆಲ್ಲರೂ ಈ ಅಮೌಲ್ಯಸಂದರ್ಭವನ್ನು ಕಳೆದುಕೊಳ್ಳಬೇಡಿ. ಅನ್ಯರ ಸಕ್ಕರೆಯಂಥಾ ಸವಿಮಾತಿಗೆ ಮರುಳಾಗಬೇಡಿ, ಯಾವದ ಕಲಹಕ್ಕೆ ಅವಕಾಶಹುಟ್ಟಿಸಿಕೊಂಡು ಅದರ ಫಲವು ಮೂರನೆಯವರಿಗೆ ಪ್ರಯೋಜನವಾಗುವಂತೆ ಮಾಡಬೇಡಿ ಎಂದು ಮತ್ತೂ ಮತ್ತೂ ಬೇಡಿಕೊಂಡು ಈ ಲೇಖನವನ್ನು ಮುಗಿಸುತ್ತೇನೆ.

ಚನ್ನಬಸವಗೌಡ.

ಶ್ರೀಶೈಲಸಿಂಹಾಸನದ ಶ್ರೀ ಜಗದ್ಗುರು ಮಹಾಸಂಸ್ಥಾನದಿಂದ ನೈಜಾಂದೇಶದ ವೀರಶೈವರಿಗಾದ ಮಹೋಪಕಾರ.

ಶ್ಲೋ॥ ಯದಾಯದಾಹಿಶೈವಸ್ಯಹಾನಿರ್ಭವತಿಭೂತಲೇ ।
ತದಾತದಾವತಾರೋಯಂಗಣೇಶಸ್ಯಮಹೀತಲೇ ॥

ಎಂಬಂತೆ ಸದರಿ ಮಹಾ ಸಂಸ್ಥಾನದ ಪಟ್ಟಾಧ್ಯಕ್ಷ ಶ್ರೀ ನಾಗಲೋಟಿ ಚಕ್ರವರ್ತಿ ಶಿವಾಚಾರ್ಯ ಮಹಾಪ್ರಭುಗಳವರು ಇಲಾಖೆಗೆ ದಯಮಾಡಿಸಿ ರಾಯಚೂರಿಗೆ ಬಿಜಯಂಗೈದಾಗ್ಗೆ ಸಂಸ್ಥಾನದ ಪದ್ಧತಿಯಂತೆ ವಿಶೇಷ ಮರ್ಯಾದೆಯೊಡನೆ ಅಲ್ಲಿಯ ಭಕ್ತಮಂಡಲಿಯವರು ಸುಸ್ವಾಗತವಂ ಮಾಡಿದರು. ಅನಂತರ ಶ್ರೀಗಳವರು ಹಿಂದುಳಿದಿರುವ ನಮ್ಮ ಸಮಾಜದಲ್ಲಿ ಧರ್ಮಜಾಗ್ರತೆಯನ್ನು ವಿದ್ಯಾಭಿವೃದ್ಧಿಯ ಪ್ರಯತ್ನವನ್ನು ಈ ಕೆಳಗೆ ಉದಹರಿಸಿರುವಂತೆ ನಡೆಸಿದ್ದು ಶ್ಲಾಘನೀಯವಾಗಿರುತ್ತೆ. ಶ್ರೀಗಳವರು ತಮ್ಮ ಸಂಚಾರದಲ್ಲಿ ಕಾಣಿಕೆಯರೂಪವಾಗಿ ಬಂದ ದ್ರವ್ಯದಲ್ಲಿ ಸರ್ಕೀಟಿನ ಖರ್ಚುಹೋಗಿ ಮಿಕ್ಕ ಹಣದಲ್ಲಿ ರೂಪಾಯಿಗೆ ನಾಲ್ಕಾಣೆಯಂತೆಯೂ ವೀರಶೈವರಿಂದ ವರ್ಷಾಶನರೂಪವಾಗಿ ಈ ಕೆಳಗೆ ಕಾಣಿಸಿದ ಏರ್ಪಾಟಿನಂತೆ ಬರುವ ರೊಕ್ಕದಲ್ಲಿ ಖರ್ಚುಕಳೆದು ಉಳಿದಹಣದಲ್ಲಿ ರೂಪಾಯಿಗೆ ಎಂಟಾಣೆಯಂತೆಯೂ, ನಮ್ಮ ಸಮಾಜದ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸುತ್ತೇವೆಂಬ ತಮ್ಮ ಸಂಕಲ್ಪದಂತೆ ಕಾಣಿಕೆ ರೂಪವಾಗಿ ಬಂದ ಹಣದಲ್ಲಿ ಮೇಲೆ ಬರೆದಂತೆ ರೂಪಾಯಿಗೆ ನಾಲ್ಕಾಣೆಯಂತೆ ತೆಗೆದಿಟ್ಟ ದ್ರವ್ಯದಿಂದ ರಾಯಚೂರು ಜಿಲ್ಲಾ ಮಾನವಿ ತಾಲ್ಲೂಕು ಮಾನವಿಯಲ್ಲಿ ಇದೇ ರುಧಿರೋದ್ಗಾರಿ ಸಂವತ್ಸರದ ವೈಶಾಖ ಬ॥ 5 ರಲ್ಲಿ ಸಂಸ್ಕೃತ ಪಾಠಶಾಲೆಯೊಂದನ್ನು ಸ್ಥಾಪಿಸಿ ಲಿಂಗಸೂಗೂರು ಹಿರೇಮಠದ ವೇ॥ ಅಮರಪ್ಪ ಶಾಸ್ತ್ರಿಗಳವರನ್ನು ಅಧ್ಯಾಪಕರನ್ನಾಗಿಮಾಡಿ ಇವರ ವೇತನಕ್ಕಾಗಿ, 620 ರೂ. ಗಳನ್ನು ಸದರಿ ಶಾಲಾ ವ್ಯವಸ್ಥಾಪಕಮಂಡಲಿಯ ಅಧ್ಯಕ್ಷರಾದ ಶ್ರೀಯುತ ವಕೀಲಿ ತಮ್ಮಣ್ಣನವರ ಕಡೆಗೆ ಪಾವತಿಮಾಡಿಸಿರುವರು. ಪಾಠಶಾಲೆಯು ಅಂದಿನಿಂದ ಸುಲಲಿತವಾಗಿ ನಡೆಯುತ್ತಿರುವದು. ದೇವದುರ್ಗದ ತಾಲ್ಲೂಕು ಕೃಷ್ಣಾತೀರ ಅಣೆಮಲ್ಲೇಶ್ವರ ದೇವಾಲಯದಲ್ಲಿ ವೈದಿಕ ಪಾಠಶಾಲೆಯೊಂದನ್ನು ಸ್ಥಾಪಿಸಲಿಕ್ಕೆ ಅಧ್ಯಾಪಕರ ವೇತನಕ್ಕಾಗಿ ಅಲ್ಲಿಯ ಪ್ರಮುಖರಾದ ಮ॥ ರಾ॥ ಲಿಂಗನಗೌಡರ ಕಡೆಗೆ 200 ರೂ. ಗಳನ್ನು ಕೊಟ್ಟಿರುವರು. ಮತ್ತು ರಾಯಚೂರಲ್ಲಿ ಸಾರ್ವಜನಿಕವಾಗಿ ದೇಶೀಯರ ಸಹಾಯದಿಂದ ಸ್ಥಾಪಿತವಾದ (ಹಂದರ್ ಸ್ಕೂಲ್) ಸಾನುಭೂತಿಯ ಸಾಲೆಯ ವಿದ್ಯಾರ್ಥಿಗಳ ಸಹಾಯಕ್ಕಾಗಿ 500 ರೂ. ಗಳ ವಾಗ್ದಾನಮಾಡಿ ಅದರ ಪೈಕಿ 100 ರೂಪಾಯಿಗಳನ್ನು ಸ್ಕೂಲಿನ ವ್ಯವಸ್ಥಾಪಕ ಸಂಘದ ಅಧ್ಯಕ್ಷರಾದ ಮ॥ ರಾ॥ ವಕೀಲಿ ಶಿರ್ಷರಾಯರಿಗೆ ಕೊಟ್ಟು ಮಿಕ್ಕ ಹಣವನ್ನು ಪ್ರತಿವರ್ಷ ನೂರರಂತೆ ಕೊಡಲು ಸಮ್ಮತಿಸಿರುವರು. ಮತ್ತು ಇದೇ ರಾಯಚೂರಲ್ಲಿ ವೀರಶೈವರ ರಾಜಕೀಯ ಏಳ್ಗೆಗಾಗಿ, ಫಂಡು ಸ್ಥಾಪಿಸಲಿಕ್ಕೆ 2000 ರೂ. ಗಳನ್ನು ಕೊಡಲು ವಾಗ್ದಾನಮಾಡಿ ಸದ್ಯ ಕಿಲ್ಲೇದಮಠದವರ ಕಡೆಗೆ ಮ॥ ರಾ॥ ಎರ್ರಮರಸ್ಸು ಪಾಟೀಲು ಅಮರಪ್ಪನವರಿಗೆ 500 ರೂ. ಗಳು, ಸೋಮವಾರಪೇಟೆ ಮಠದ ಕಡೆ ಮ॥ ರಾಚಪ್ಪನವರ ಕಡೆಗೆ 500 ರೂ. ಗಳು ಒಟ್ಟು ಸಾವಿರ ರೂ. ಗಳನ್ನು ನಗದಾಗಿ ಕೊಟ್ಟಿರುವರು. ಹಾಗು ಈ ಫಂಡಿನ ಅಭಿವೃದ್ಧಿಗಾಗಿ ಚಂದಾದಾರರಾಗುವಂತೆಯೂ, ರಾಯಚೂರು ಜಿಲ್ಲೆಗೆ ಒಳಪಟ್ಟ ಪ್ರತಿಯೊಂದು ಗ್ರಾಮದ ಪ್ರತಿಯೊಂದು ಮನೆಯ ವೀರಶೈವರು ವರ್ಷಂಪ್ರತಿ 1 ರೂಪಾಯಿಗೆ ಒಂದಾಣೆಗೆ ಕಡಿಮೆಯಾಗದಂತೆ ಅವರವರ ಯೋಗ್ಯತಾನುಸಾರ ಕೊಡುವಂತೆಯೂ, ವೀರಶೈವರ ಜಾತಕರ್ಮ ಅಂದರೆ ಲಿಂಗಧಾರಣದಲ್ಲಿ ಗಂಡುಶಿಶುವಿಗೆ ½ ರೂಪಾಯಿ ಸ್ತ್ರೀಶಿಶುವಿಗೆ ¼ ರೂಪಾಯಿ ದೀಕ್ಷಾಕರ್ಮದಲ್ಲಿ ಪ್ರತಿವಟುವಿಗೂ 1 ರೂ. ವಿವಾಹದಲ್ಲಿ ವರನಿಗೆ 2 ರೂ. ವಧುವಿಗೆ 1 ರೂ. ಅಂತೇಷ್ಟ ಮುಂತಾದ ಕಾರ್ಯಗಳಲ್ಲಿ ಅವರವರ ಶಕ್ತ್ಯಾನುಸಾರ, ಈಪ್ರಕಾರ ವೀರಶೈವರ ಶುಭಾಶುಭ ಕಾರ್ಯಗಳಲ್ಲಿ ಧರ್ಮಕಾಣಿಕೆಯನ್ನು ಕೊಡಲು ವ್ಯವಸ್ಥೆ ಮಾಡಿ, ಪ್ರತಿಗೃಹಸ್ಥನು ಮುಷ್ಟಿಫಂಡಿಗೆ ವಾರಕ್ಕೆ 1 ಸೇರು ಅಥವಾ ½ ಸೇರು ಧಾನ್ಯವನ್ನು ಕೊಡಲು ಗೊತ್ತುಪಡಿಸಿರುವರು. ವರ್ಷಾಶನದ ಹಣವನ್ನು ಪ್ರತಿವರ್ಷ ಯುಗಾದಿಹಬ್ಬದ ದಿವಸ ಕೊಡುವಂತೆಯೂ, ವೈದಿಕ ಕರ್ಮಗಳಲ್ಲಿ ಬರಬೇಕಾದ ಹಣವನ್ನು ಆಯಾಕಾಲದಲ್ಲಿ ಆಯಾಗ್ರಾಮದ ಮಠದವರು ಎತ್ತಿ ಪಂಚರವಶಕ್ಕೆ ಕೊಡಬೇಕೆಂತಲೂ, ಮುಷ್ಟಿಫಂಡಿನ ಧಾನ್ಯವನ್ನು ಸಂಘದವರಿಂದ ನಿಯಮಿಸಲ್ಪಟ್ಟ ನೌಕರನ ವಶಕ್ಕೆ ಕೊಡಬೇಕೆಂತಲೂ ನೌಕರನು ತನ್ನ ದುಡಿತಕ್ಕಾಗಿ 10 ಸೇರಿಗೆ 1 ಸೇರಿನಂತೆ ತೆಗೆದುಕೊಳ್ಳಬೇಕೆಂತಲು, ಏರ್ಪಾಟುಮಾಡಿ ಇದರಂತೆ ತಪ್ಪದೆ ಆಚರಿಸುತ್ತೇವೆಂಬ ಬಗ್ಗೆ ರಾಯಚೂರು ದೇವದುರ್ಗ ಮಾನ್ವಿ ಈ ತಾಲೂಕುಗಳ ಭಕ್ತವರ್ಗದಿಂದ ಒಡಂಬಡಿಕೆ ಸಹಿಗಳನ್ನು ತೆಗೆದುಕೊಂಡಿರುತ್ತಾರೆ.

ಮೇಲ್ಕಂಡ ವ್ಯವಸ್ಥೆಯಿಂದ ರಾಯಚೂರು ಗ್ರಾಮದಲ್ಲಿ ಬಂದ ಹಣವೆಲ್ಲ ಸದರಿ ಫಂಡಿಗೆ ಸೇರಬೇಕೆಂತಲು ತಾಲ್ಲೂಕಿನ ಗ್ರಾಮಗಳಲ್ಲಿ ಬಂದ ಹಣದಲ್ಲಿ ಖರ್ಚು ಕಳೆದು ಉಳಿದ ಮೊತ್ತದಲ್ಲಿ ಅರ್ಧಭಾಗ ವಿದ್ಯಾಫಂಡಿಗು ಅರ್ಧಭಾಗ ಶ್ರೀಮತ್ಪಂಚಾಚಾರ್ಯರ ವಿನಿಯೋಗಕ್ಕಾಗಿಯು ಪರ್ವತ ಸಂಸ್ಥಾನಕ್ಕೆ ಪಂಚರು ರವಾನಿಸಬೇಕೆಂತಲು ಏರ್ಪಾಟಾಗಿರುತ್ತೆ. ಇದರ ಮೇಲ್ವಿಚಾರಣೆಗಾಗಿ ತಮ್ಮ ಸಂಸ್ಥಾನದ ಕಾರಭಾರಿಗಳನ್ನು ನೌಕರರನ್ನು ನಿಯಮಿಸುತ್ತೇವೆಂದು ಅಪ್ಪಣೆ ಕೊಡಿಸಿರುತ್ತಾರೆ. ಮಹಾಸ್ವಾಮಿಗಳವರ ಆಗಮನದಿಂದ ವಿದ್ಯಾಭಿವೃದ್ಧಿಯ ಕಾರ್ಯಕ್ಕೆ ತುಂಬಾ ಸಹಾಯವು ದೊರೆಕೊಳ್ಳುವಂತಾದುದಕ್ಕೆ ಸರ್ವರೂ ಶ್ರೀಗಳವರ ಉಚಿತಜ್ಞತೆಗೂ ಉದಾರಭಾವಕ್ಕೂ ತುಂಬಾ ಕೃತಜ್ಞರಾಗಿರುತ್ತಾರೆ. ಶ್ರೀಗಳವರ ಈ ಸುವ್ಯವಸ್ಥೆಯಿಂದ ಧಾರ್ಮಿಕ, ನೈತಿಕ, ವಿಷಯದಲ್ಲಿ ತೀರ ಹಿಂದುಳಿದಿರುವ ನಮ್ಮ ಸಮಾಜವು ಮುಂದುವರಿದು ಅಭಿವೃದ್ಧಿಗೊಳ್ಳಲು ಯಾವ ಸಂದೇಹವಿಲ್ಲ. "ಹನಿಗೂಡಿದರೆ ಹಳ್ಳ, ತೆನೆಗೂಡಿದರೆ ರಾಶಿ" ಎಂಬ ನಾಣ್ನುಡಿಯಂತೆ ಸಕಲರೂ ಇವಕ್ಕೆ ಉತ್ತೇಜನ ಕೊಟ್ಟು ಪರಶಿವನ ಪ್ರೀತಿಗೂ, ಕೀರ್ತಿಗೂ ಭಾಜನರಾಗಬೇಕಾಗಿ ಅಪೇಕ್ಷಿಸುವ,

ವಿದ್ಯಾಭಿಮಾನಿ.

ತಾ॥ 28-10-1923ರಲ್ಲಿ ಇದರ ಅಸಲು ತಯಾರಾದದ್ದು.

1 ಕಿಲ್ಲೇದ ಮಠದ ಪಟ್ಟದದೇವರು ಚೆನ್ನಮಲ್ಲಪ್ಪನವರು ಸ್ವದಸ್ತೂರಿ, 2 ಕಿಲ್ಲೇದ ಮಠದ ಶಾಂತಮಲ್ಲಪ್ಪನವರು, 3 ಕೆ. ಶಿವಯ್ಯನವರು ವಕೀಲು ಕುಷ್ಟಗಿ, 4 ಅಮರಪ್ಪಗೌಡರು ಯರಮರಸ್ಸು, 5 ರಾಮಲಿಂಗಪ್ಪ, 6 ಜಿ. ಅಮರಪ್ಪ ವಕೀಲ್, 7 ಗಣವಿನ್ನಿ ತಿಮ್ಮಣ್ಣ, 8 ಗದ್ವಾಲಿ ಸೂಗಪ್ಪ ರಸ್ತಾಪುರದ 9 ಮುನಿಷ್ಪ, 10 ಕರಿಪ್ಪನವರ ವೀರಭದ್ರಪ್ಪ, 11 ಗಂಜಳ್ಳಿ ಭೀಮಣ್ಣ, 12 ಗುಣಾರಿ ನಾಗಭೂಷಣಯ್ಯ, 13 ಸೋಮವಾರಪೇಟೆ ಮಠದ ರಾಚೋಟಿಸ್ವಾಮಿ ದ॥ಖು॥, 14 ಗದ್ದಿ ಗದ್ದೆಯ್ಯನವರು, 15 ಪಂಚಾಕ್ಷರಿಸ್ವಾಮಿ ವಕೀಲ್ ನೌಲಿ, 16 ದೇವದುರ್ಗದ ಹಿರೇಮಠದ ಸಿರಿನಾಥಸ್ವಾಮಿ, 17 ಪರ್ವತಶಾಸ್ತ್ರಿಗಳು, 18 ಶೆಟ್ಟಿ ರಾಚಪ್ಪನವರು, 19 ಪಲ್ಲಕ್ಕಿ ವೀರಭದ್ರಪ್ಪ, 20 ಇಂದುವಾಸಿ ನರಸಪ್ಪ, 21 ದುರಗ ಶರಭಣ್ಣ, 22 ಗದ್ವಾಲಿ ಅಮರಪ್ಪ, 23 ಚೋರಬಟ್ಟಿ ಬುಡ್ಡಪ್ಪ, 24 ಗುಣಾರಿ ಗುರುಲಿಂಗಯ್ಯ, 25 ಬಳೇ ವೀರಪ್ಪ, ಮುಂತಾದವರು.

ಮಾನವಿ ಗ್ರಾಮದ ವೀರಶೈವರ ವಿಜ್ಞಾಪನೆ.

ಶ್ರೀ ಗಿರಿರಾಜಸೂರ್ಯ ಸಿಂಹಾಸನಾಧೀಶ ಮಹಾಸ್ವಾಮಿಗಳವರ ಪ್ರತಿನಿಧಿಗಳವರು—ನಮ್ಮಲ್ಲಿಯು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿರುವರು. ಇವರ ವರ್ಷಾಶನ ಮುಂತಾದ ಸಮಾಜಾಭಿವೃದ್ಧಿಯ ಕಾರ್ಯಗಳಿಗೆ ನಮ್ಮ ತಾಲ್ಲೂಕು ವೀರಶೈವರೆಲ್ಲ ಅನುಮೋದಿಸಿ ನಿರಾತಂಕವಾಗಿ ಸಹಾಯಮಾಡುವೆವೆಂದು ಕೋರುತ್ತೇವೆ.

1 ಮಠದ ಅಮರಯ್ಯನವರು, 2 ಗುಡಿ ಸಿದ್ಧಲಿಂಗಯ್ಯನವರು, 3 ವಕೀಲ್ ತಮ್ಮಣ್ಣನವರು (ಉರ್ದುನಲ್ಲಿ), 4 ಪೊಲೀಸ ಪಾಟೀಲು ಮಹಾಂತಪ್ಪನವರು (ಉರ್ದುಭಾಷೆಯಲ್ಲಿ), 5 ಬಸವಪ್ಪ ಜಾನೇಕಲ್ಲು, 6 ಅರಿವಿ ಸೂಗಪ್ಪ, 7 ಹೊಗೆಸೊಪ್ಪಿನ ವೀರಭದ್ರಪ್ಪ, 8 ಸಂಪಿಗಿ ಬಸವಪ್ಪ, 9 ವೀರಭದ್ರಪ್ಪ ಪೋತನಾಳು, 10 ಚೆನ್ನಮಲ್ಲಪ್ಪ ನಾಡಗೌಡರು (ಉರ್ದುನಲ್ಲಿ), 11 ಶೆಟ್ಟಿ ಬಸವಪ್ಪ ಮುಂತಾದವರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ## ಮದನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು [50-50]

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತವೆ. ಇದನ್ನು ಉಪಯೋಗಿಸುವಾಗ್ಗೆ ಮನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನಡಾ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರವಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—6—0. 25 ಬಾಟ್ಲುಗಳಿಗೆ 4—8—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲೆಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳುಗಟ್ಟಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್ ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ನೀವು ಇಷ್ಟಪಟ್ಟ ನಮೂನೆಯಲ್ಲಿ ನೀವು ಅಪೇಕ್ಷಿಸುವ ಭಾಷೆಯಿಂದ ನಿಮ್ಮ ಹೆಸರು ವಿಳಾಸಗಳ ರಬ್ಬರ್ ಮೊಹರನ್ನು ಅಂದವಾಗಿ ತಯಾರಿಸಿ ಕೊಡುತ್ತಾರೆ.

ಹಾರ್ಮೋನಿಯಂಗಳನ್ನೂ ಪೌಂಟೆನ್‌ಪೆನ್‌ಗಳನ್ನೂ ತೃಪ್ತಿಕರವಾಗಿ ರಿಪೇರೀ ಮಾಡಿಕೊಡುತ್ತಾರೆ.

ಹೆಚ್ಚು ವಿಷಯಗಳಿಗೆ ಇವರ ಕಂಪನಿಯ ಕ್ಯಾಟಲಾಗ್‌ನ್ನೂ ತರಿಸಿನೋಡಿರಿ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—19] ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುವುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ. ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಸ್ವಾಮಿ ಮತ್ತು ಕಂಪೆನಿ,
[50—11] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

೧೯೨೪ನೆಯ ಇಸವಿ ಜನವರಿ ತಾ॥ ೨೭ರಿಂದ ೧೯೨೪ನೆಯ ಫೆಬ್ರವರಿ ತಾ॥ ೨ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಪುಷ್ಯ ಬಹುಳ ಷಷ್ಠಿಯಿಂದ ಪುಷ್ಯ ಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರ ಮಾಸ
27	ಭಾನು	ಷಷ್ಠಿ	47-50	ಹಸ್ತ	37-0	14
28	ಸೋಮ	ಸಪ್ತ	42-27	ಚಿತ್ತ	33-18	15
29	ಮಂಗಳ	ಅಷ್ಟ	36-27	ಸ್ವಾತಿ	29-6	16
30	ಬುಧ	ನವ	30-7	ವಿಶಾ	24-35	17
31	ಗುರು	ದಶ	24-15	ಅನೂ	20-2	18
1	¹ಶುಕ್ರ	ಏಕಾ	17-52	ಜ್ಯೇಷ್ಠ	15-38	19
2	²ಶನಿ	ದ್ವಾದ	12-7	ಮೂಲ	10-46	20

(1) ಸರ್ವತ್ರ ಏಕಾದಶಿ. (2) ಪ್ರದೋಷ.

ಮೈಸೂರು: ವೈ. ತಿರುಮಲಾಚಾರ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರಿಂಟಿಂಗ್ ವರ್ಕ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜನ [illegible] ಕೃಪಾ | ಘನಪಕ್ಷಕೃತಾವತಾರಾ ಪಕ್ಷ್ಮಜನಕ್ಷತ್ರ ಮೋಹರಾಜೀಯತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲುಂಸ್ತುಂಗವ | ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬಿತ್ತೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭) ಮೈಸೂರ್ ಸ್ಟಾರ್ ಸನ್ ೧೯೨೪ನೆಯ ಇಸವಿ ಫೆಬ್ರವರಿ ತಾರೀಖು ೩ನೆಯ ಭಾನುವಾರ (ಸಂಚಿಕೆ ೫

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಛಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕಳಿತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. ೬ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ವೈಶ್ವಾನರಾಸವ.

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳನ್ನು ಗುಣಪಡಿಸುವ ನಂಬುಗೆಯಾದೌಷಧಿ.

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲೀ ಇಲ್ಲ. ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು ಕ್ರಮವಾಗಿ ಗುಣವಾಗುತ್ತದೆ.

1 ಸೀಸೆ ಬೆಲೆ 1—0—0. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲಪಂಡಿತ,
51 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾ. ಜೆ. ಬಿ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆ[illegible]ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು [illegible]ಳೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

[illegible] ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.

[illegible] ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯವಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—23] ಪೋ॥ ಬಾ. ೫೧೧, ಮದರಾಸು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
[illegible]ಳ ವೀರಶೈವ ವಿವಾಹವಿಧಿ।	೦—೮—೦	೦—೧೩—೦
[illegible] ಲವಿದ್ಯಾ	೦—೪—೦	೦—೭—೦
[illegible]ಸೂಳೇಲಿಚರಿತ್ರೆ	೦—೫—೦	೦—೧೦—೦
[illegible]ಕಾಸಿ	೦—೪—೦	೦—೭—೦
[illegible]ಪಂಚಕ	೦—೪—೦	೦—೭—೦
[illegible]ಸಂಕರೋಕ್ತಿಚಿಂತಕ	೦—೧—೦	೦—೬—೦
[illegible]ವೃತ್ತರತ್ನ	೦—೮—೦	೦—೧೩—೦

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್‌ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಪ್ರ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—10] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯಬಿದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ

ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಷ್ಠದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ಕಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಿಗಾದ ಜ್ವರದ ಅಸಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಶಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರ (ಜೋಗಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರೆಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮುಸ್ತಕ, ಕಮರಕಸ, ಕಫಲ್ಯಾಗೊಂದ, ಪಂಚಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ಶಾಲೀಮಖಾನಾ. ಬೀಜಬಂಧ, ಬಿಗರಿಗೊರಸು, ಮೋಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಳೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಅದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫। ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಅವಶ್ಯ ಲಾಭವುಡೆಯರಿ.

[50—36] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚೆನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿ
[50—4] ಅಂಡ್ ಸನ್ಸ್, ಜೆ. ಪಿ. ಮಂಡಲಿ, ಮೈಸೂರು.

ಶ್ರೀ ರಕ್ತಾಕ್ಷಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

ಈಗ್ಗೆ ಐದುವರ್ಷಗಳಿಂದ "ಕಲ್ಬುರ್ಗಿ" ಹೆಸರಿನಿಂದ ಹೊರಡತಕ್ಕ ಪಂಚಾಂಗವೇ ಈ ವರ್ಷ (ರಾಯಚೂರು ಗ್ರಾಮದಿಂದ ಹೊರಟಿರುತ್ತದೆ). ಈ ಪಂಚಾಂಗದಲ್ಲಿ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶ ರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ಇದಲ್ಲದೆ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ, ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಆದರೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು. ಕಾಗದ ಮೊದಲಾದವುಗಳ ಬೆಲೆಯು ಗತವರ್ಷಕ್ಕಿಂತಲೂ ಹೆಚ್ಚಾಗಿದ್ದರೂ ತಮಗೆ ವರ್ಷಂಪ್ರತಿ ಕೊಡುತ್ತಿದ್ದ ಬೆಲೆಯಂತೆಯೇ ಈವರ್ಷವೂ ಕೊಡುತ್ತೇವೆ. ಹಿಂದಣ ವರ್ಷಕ್ಕಿಂತಲೂ ಹೆಚ್ಚಿಗೆ ಕಾಪಿಗಳನ್ನು ತರಿಸಿಕೊಂಡು ಸಹಾಯಮಾಡಿರಿ. (25) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ 100 ಕ್ಕೆ 20 ರೂಪಾಯಿಗಳು. (100) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ 500ಕ್ಕೆ 16. (500) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ (1000)ಕ್ಕೆ 13 ರೂ. ಇದರಂತೆ ಕೊಡುವೆವು. ಇದಕ್ಕಿಂತಲೂ ಕಡಿಮೆಬೆಲೆಯಿಂದ ಯಾರಿಗೂ ಕೊಡುವದಿಲ್ಲ ಮತ್ತು (5) ಪಂಚಾಂಗಗಳನ್ನು ಒಂದೇಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟಪಟ್ಟವರು ಬೇಗನೆ ಆರ್ಡರ್ ಕೊಡಿರಿ. ಬಿಡಿಕೆ ಒಂದಕ್ಕೆ ನಾಲ್ಕಾಣೆ.

ವಿಳಾಸ—ಬ್ರ॥ ಶ್ರೀ॥ ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿಗಳು,
ಜ್ಯೋತಿಷ ಪಾಠಶಾಲಾ,
[12-3] ರಾಯಚೂರು ಪ॥

ಭಾವಿಸಬೇಕಾಗಿರುತ್ತದೆ. ಡಾಕ್ಟರ್‌ರವರಿಗೆ ಈ ರೀತಿ ಹೆಸರು ಕೆಡಿಸಿಕೊಳ್ಳಲು ಯಾಕೆ ಮನಸ್ಸು ಬರಲಿಲ್ಲವೋ? ಸತ್ಯವಾದಿ.

ಓಟ್ಸು ಕೊಡತಕ್ಕವರ ನಿಜಕರ್ತವ್ಯ.

ತಮ್ಮ ಮತ್ತು ತಮ್ಮವರ ಹಿತದ ಲವಲೇಶವೂ ಹಾನಿಯಾಗದಂತಿರುವದಕ್ಕೇ ಮಾತ್ರ ಬಹು ಎಚ್ಚರವುಳ್ಳವರಾಗಿರುವಂಥವರು ಪರಹಿತಕ್ಕಾಗಿಯೇ ಪ್ರಯತ್ನಿಸುತ್ತೇವೆಂದು ಹೇಳುವುದು ಬರೇ ಕಾರ್ಯಸಾಧನೆಗಾಗಿ ಹೇಳುವ ಬೂಟಾಟಿಕೆಯು ಮಾತಾಗಿದೆ. ಇದಕ್ಕೆ ಉದಾಹರಣವಾಗಿ ಸರ್ಕಾರಿಹಣದಿಂದ ನಡಿಯತಕ್ಕಂಥಾದ ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ಬ್ರಾಹ್ಮಣೇತರರಿಗೂ ಅಭ್ಯಾಸಕ್ಕೆ ಅವಕಾಶವಿರಬೇಕೆಂದು ಕೇಳಿದ್ದಾಗ ಬ್ರಾಹ್ಮಣವರ್ಗದ ಬಹುಜನ ಮೆಂಬರುಗಳು ಬ್ರಾಹ್ಮಣರ ವಿನಹ ಇತರರಿಗೇ (ವೀರಶೈವರಂಥವರಿಗೂ ಸಹ) ವೇದವಿದ್ಯೆ ಕಲಿಯಲಿಕ್ಕೆ ಶಾಸ್ತ್ರಗಳಲ್ಲಿ ಒಪ್ಪಿಗೆಯಿಲ್ಲವೆಂದು ಮೊದಲಾಗಿ ಸಭೆಯಲ್ಲಿ ಪ್ರತಿಭಟಿಸಿದುದೇ ಆಗಿದೆ. ಇತ್ಯಾದಿಯಾಗಿ ಬ್ರಾಹ್ಮಣೇತರರ ನ್ಯಾಯವಾದ ಬೇಡುವಿಕೆಯ ಮೇಲೆ ಬೆಂಕಿಯನ್ನು ಕಾರಿದ ಆ ನಮ್ಮ ಬಂಧುಗಳು ಪರಹಿತಕ್ಕೋಸ್ಕರವಾಗಿ ಅಂದರೆ ಸರ್ವಜನರ ಹಿತಕ್ಕೆ ಸಂಬಂಧಪಟ್ಟ ದೇಶಸೇವೆಯನ್ನೇ ಮಾಡುತ್ತೇವೆಂದು ಹೇಳಿ ಜನರಿಂದ ಓಟ್ಸು ಪಡೆದು ಬಂದವರಾಗಿದ್ದರಾದರೂ ತಮ್ಮ ಹಿತಕ್ಕೆ ಹಾನಿ ತಟ್ಟೀತೆಂಬ ಸಂಶಯವದಗಿದಾಗ್ಗೆ ನೋಡಿರಿ ಅವರು ಎಂಥ ಎಚ್ಚರುಳ್ಳವರಾದರು! ಓಟರ್ಸ್ ಮಹಾಶಯರೇ; ಇತ್ಯಾದಿ ಒಂದಲ್ಲ ಎರಡಲ್ಲ ಅನೇಕಾನೇಕ ಉದಾಹರಣೆಗಳನ್ನು ಕೊಡಬಹುದು. ಆದರೇನು, ಇದೊಂದೇ ಉದಾಹರಣೆಯ ಮೇಲಿಂದ ನೋಡಿದರೆ ಕೆಲಜನರು ತೋರಿಕೆಗೆ ಪರಹಿತಸಾಧಕರಂತಿದ್ದರೂ ಪ್ರಸಂಗಬಂದಗಿದಾಗ ಈರೀತಿ ಸ್ವಜನ ಹಿತಸಾಧಕರೇ ಆಗುತ್ತಾರೆಂಬುದು ಸ್ಪಷ್ಟ ಕಾಣಿಸುವುದಿಲ್ಲವೇ? ಅದಪ್ರಯುಕ್ತ ನಮ್ಮ ಹಿತವನ್ನು ಗಳಿಸಿಕೊಡುವ ಕೆಲಸಕ್ಕಾಗಿ ಪರರಿಗೆ ಮೋಟ್ಸು ಕೊಡುವುದರಿಂದ ಎಂಥ ಹಾನಿತಟ್ಟುತ್ತದೆ ಎಂಬುದನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ. ಇಂಗ್ಲೆಂಡ್ ದೇಶವನ್ನು ನೋಡಿಬಂದ ಒಬ್ಬ ವಿದ್ವಾನ್ ಗೃಹಸ್ಥರು—ನಮ್ಮ ದೇಶದ ಜನರನ್ನು ಕುರಿತು ಒಂದುಸಾರಿ ಹೀಗೆ ಹೇಳಿದುದು ನನ್ನ ಜ್ಞಾಪಕದಲ್ಲಿದೆ.—ಪಾಶ್ಚಿಮಾತ್ಯದೇಶದ ಜನರು ನಿದ್ರಿಸತಕ್ಕವರನ್ನು ನೋಡಿ ಎಚ್ಚರಾಗುತ್ತಾರೆ. ಕುಳಿತವರನ್ನು ನೋಡಿ ಎದ್ದುನಿಲ್ಲುತ್ತಾರೆ. ನಿಂತವರನ್ನು ನೋಡಿ ಮುಂದಕ್ಕೋಡುತ್ತಾರೆ. ಆದರೆ ಈ ನಮ್ಮ ದೇಶದಲ್ಲಿ ಓಡುವವರನ್ನು ನೋಡಿ ಥಟ್ಟನೆ ನಿಂತುಬಿಡುತ್ತಾರೆ. ನಿಂತವರನ್ನು ನೋಡಿ ನೆಲಹಿಡಿದು ಕೂಡ್ರುತ್ತಾರೆ. ಕೂತವರನ್ನು ನೋಡಿ ಗಪ್ಪಚುಪ್ಪಾಗಿ ಮಲಗುತ್ತಾರೆ. ಸಾರಾಂಶ-ನಮ್ಮದೇಶದ ಬಹುಜನರಿಗೆ ಸೋಮಾರಿತನವೆಂಬ ಪ್ರಬಲಪಿಶಾಚಿಯು ಹಿಡಿದುಬಿಟ್ಟಿದೆ ಎಂದು ಹೇಳಿ ತಮ್ಮ ವಿಷಾದವನ್ನು ವ್ಯಕ್ತಗೊಳಿಸಿದ್ದರು. ಹಿಂದುಳಿದ ಮಹಾಶಯರೇ, ಸದ್ಯಕ್ಕೆ ನೀವು ರೆಪ್ರಜೆಂಟೀವ್ ಅಸೆಂಬ್ಲಿಗೂ, ಲೆಜಿಸ್ಲೇಟೀವ್ ಕೌನ್ಸಿಲ್ಲಿಗೂ ಮೆಂಬರರನ್ನು ಚುನಾಯಿಸಿ ಕಳುಹಿಸುವ ಮಹಾಜವಾಬ್ದಾರಿಯನ್ನು ಹೊತ್ತವರಾಗಿರುತ್ತೀರಿ. ಈ ಅಮೌಲ್ಯಸಂದರ್ಭವನ್ನು ದಯಮಾಡಿ ನೀವು ವ್ಯರ್ಥ ಕಳೆದುಕೊಳ್ಳದೆ ಸೋಮಾರಿಗಳೆಂದು ನಿಮ್ಮ ಮೇಲಿರುವ ಆರೋಪವನ್ನು ಹೋಗಲಾಡಿಸಿಕೊಳ್ಳಬೇಕಲ್ಲವೇ? ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರರವರ ಮಹಾಸನ್ನಿಧಿಯೆಂಬ ಕಲ್ಪವೃಕ್ಷದಲ್ಲಿ ಪರಿಪಕ್ವವಾದ ಈ ಉಭಯಸಭೆಗಳೆಂಬ ದಿವ್ಯಫಲಗಳ ಹೆಚ್ಚುಭಾಗವನ್ನು ದೊರಕಿಸಬೇಕೆಂಬ ಅತ್ಯುತ್ಸಾಹದಿಂದ ಇತರರು ಓಡುವುದಕ್ಕೆ ಸಿದ್ಧರಾಗಿರುವುದನ್ನು ನೋಡಿ ಹಿಂದುಳಿದ ಅದರಲ್ಲೂ ಅತಿಹಿಂದುಳಿದ ವೀರಶೈವರಾದ ನಾವು ನೆಲಹಿಡಿದು ಕುಳಿತುಬಿಟ್ಟಲ್ಲಿ ನಾಗರಿಕರು ನಗಲಿಕ್ಕಿಲ್ಲವೇ? ದಯಮಾಡಿ ತಾವೆಲ್ಲರೂ ಈ ಅಮೌಲ್ಯಸಂದರ್ಭವನ್ನು ಕಳೆದುಕೊಳ್ಳಬೇಡಿ. ಅನ್ಯರ ಸಕ್ಕರೆಯಂಥಾ ಸವಿಮಾತಿಗೆ ಮರುಳಾಗಬೇಡಿ, ಯಾದವ ಕಲಹಕ್ಕೆ ಅವಕಾಶಕೊಟ್ಟುಕೊಂಡು ಅದರ ಫಲವು ಮೂರನೆಯವರಿಗೆ ಪ್ರಯೋಜನವಾಗುವಂತೆ ಮಾಡಬೇಡಿ ಎಂದು ಮತ್ತೂ ಮತ್ತೂ ಬೇಡಿಕೊಂಡು ಈ ಲೇಖನವನ್ನು ಮುಗಿಸುತ್ತೇನೆ.

ಚನ್ನಬಸವಗೌಡ.

ಶ್ರೀಶೈಲಸಿಂಹಾಸನದ ಶ್ರೀ ಜಗದ್ಗುರು ಮಹಾಸಂಸ್ಥಾನದಿಂದ ನೈಜಾಂದೇಶದ ವೀರಶೈವರಿಗಾದ ಮಹೋಪಕಾರ.

ಶ್ಲೋ॥ ಯದಾಯದಾಹಿಶೈವಸ್ಯಹಾನಿರ್ಭವತಿಭೂತಲೇ ।
ತದಾತದಾವತಾರೋಯಂಗಣೇಶಸ್ಯಮಹೀತಲೇ ॥

ಎಂಬಂತೆ ಸದರಿ ಮಹಾ ಸಂಸ್ಥಾನದ ಪಟ್ಟಾಧ್ಯಕ್ಷ ಶ್ರೀ ನಾಗಲೂಟಿ ಭಿಕ್ಷಾವರ್ತಿ ಶಿವಾಚಾರ್ಯ ಮಹಾ ಪ್ರತಿನಿಧಿಗಳವರು ಇಲಾಖೆಗೆ ದಯಮಾಡಿಸಿ ರಾಯಚೂರಿಗೆ ಬಿಜಯಂಗೈದಾಗ್ಗೆ ಸಂಸ್ಥಾನದ ಪದ್ಧತಿಯಂತೆ ವಿಶೇಷ ಮರ್ಯಾದೆಯೊಡನೆ ಅಲ್ಲಿಯ ಭಕ್ತಮಂಡಲಿಯವರು ಸುಸ್ವಾಗತವಂ ಮಾಡಿದರು. ಅನಂತರ ಶ್ರೀಗಳವರು ಹಿಂದುಳಿದಿರುವ ನಮ್ಮ ಸಮಾಜದಲ್ಲಿ ಧರ್ಮಜಾಗ್ರತೆಯನ್ನು ವಿದ್ಯಾಭಿವೃದ್ಧಿಯ ಪ್ರಯತ್ನವನ್ನು ಈ ಕೆಳಗೆ ಉದಹರಿಸಿರುವಂತೆ ನಡೆಸಿದ್ದು ಶ್ಲಾಘನೀಯವಾಗಿರುತ್ತೆ. ಶ್ರೀಗಳವರು ತಮ್ಮ ಸಂಚಾರದಲ್ಲಿ ಕಾಣಿಕೆಯರೂಪವಾಗಿ ಬಂದ ದ್ರವ್ಯದಲ್ಲಿ ಸರ್ಕೀಟಿನ ಖರ್ಚುಹೋಗಿ ಮಿಕ್ಕ ಹಣದಲ್ಲಿ ರೂಪಾಯಿಗೆ ನಾಲ್ಕಾಣೆಯಂತೆಯೂ ವೀರಶೈವರಿಂದ ವರ್ಷಾಶನರೂಪವಾಗಿ ಈ ಕೆಳಗೆ ಕಾಣಿಸಿದ ಏರ್ಪಾಟಿನಂತೆ ಬರುವ ರೊಕ್ಕದಲ್ಲಿ ಖರ್ಚುಕಳೆದು ಉಳಿದಹಣದಲ್ಲಿ ರೂಪಾಯಿಗೆ ಎಂಟಾಣೆಯಂತೆಯೂ, ನಮ್ಮ ಸಮಾಜದ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸುತ್ತೇವೆಂಬ ತಮ್ಮ ಸಂಕಲ್ಪದಂತೆ ಕಾಣಿಕೆ ರೂಪವಾಗಿ ಬಂದ ಹಣದಲ್ಲಿ ಮೇಲೆ ಬರೆದಂತೆ ರೂಪಾಯಿಗೆ ನಾಲ್ಕಾಣೆಯಂತೆ ತೆಗೆದಿಟ್ಟ ದ್ರವ್ಯದಿಂದ ರಾಯಚೂರು ಜಿಲ್ಲಾ ಮಾನವಿ ತಾಲ್ಲೂಕು ಮಾನವಿಯಲ್ಲಿ ಇದೇ ರುಧಿರೋದ್ಗಾರಿ ಸಂವತ್ಸರದ ವೈಶಾಖ ಬ॥ 5 ರಲ್ಲಿ ಸಂಸ್ಕೃತ ಪಾಠಶಾಲೆಯೊಂದನ್ನು ಸ್ಥಾಪಿಸಿ ಲಿಂಗಸೂಗೂರು ಹಿರೇಮಠದ ವೇ॥ ಅಮರಪ್ಪಶಾಸ್ತ್ರಿಗಳವರನ್ನು ಅಧ್ಯಾಪಕರನ್ನಾಗಿಮಾಡಿ ಇವರ ವೇತನಕ್ಕಾಗಿ, 620 ರೂ. ಗಳನ್ನು ಸದರಿ ಶಾಲಾ ವ್ಯವಸ್ಥಾಪಕಮಂಡಲಿಯ ಅಧ್ಯಕ್ಷರಾದ ಶ್ರೀಯುತ ವಕೀಲಿ ತಮ್ಮಣ್ಣನವರ ಕಡಿಗೆ ಸಾಪತಿಮಾಡಿಸಿರುವರು. ಪಾಠಶಾಲೆಯು ಅಂದಿನಿಂದ ಸುಲಲಿತವಾಗಿ ನಡೆಯುತ್ತಿರುವದು. ದೇವದುರ್ಗದ ತಾಲ್ಲೂಕು ಕೃಷ್ಣಾತೀರ ಅರೇಮಲ್ಲೇಶ್ವರ ದೇವಾಲಯದಲ್ಲಿ ವೈದಿಕ ಪಾಠಶಾಲೆಯೊಂದನ್ನು ಸ್ಥಾಪಿಸಲಿಕ್ಕೆ ಅಧ್ಯಾಪಕರ ವೇತನಕ್ಕಾಗಿ ಅಲ್ಲಿಯ ಪ್ರಮುಖರಾದ ಮ॥ ರಾ॥ ಲಿಂಗನಗೌಡರ ಕಡಿಗೆ 200 ರೂ. ಗಳನ್ನು ಕೊಟ್ಟಿರುವರು. ಮತ್ತು ರಾಯಚೂರಲ್ಲಿ ಸಾರ್ವಜನಿಕವಾಗಿ ದೇಶೀಯರ ಸಹಾಯದಿಂದ ಸ್ಥಾಪಿತವಾದ (ಹಂಟರ್ ಸ್ಕೂಲ್) ಸಾನುಭೂತಿಯ ಸಾಲೆಯ ವಿದ್ಯಾರ್ಥಿಗಳ ಸಹಾಯಕ್ಕಾಗಿ 500 ರೂ. ಗಳ ವಾಗ್ದಾನಮಾಡಿ ಅದರ ಪೈಕಿ 100 ರೂಪಾಯಿಗಳನ್ನು ಸ್ಕೂಲಿನ ವ್ಯವಸ್ಥಾಪಕ ಸಂಘದ ಅಧ್ಯಕ್ಷರಾದ ಮ॥ ರಾ॥ ವಕೀಲಿ ಶೇಷಗಿರಾಯರಿಗೆ ಕೊಟ್ಟು ಮಿಕ್ಕ ಹಣವನ್ನು ಪ್ರತಿವರ್ಷ ನೂರರಂತೆ ಕೊಡಲು ಸಮ್ಮತಿಸಿರುವರು. ಮತ್ತು ಇದೇ ರಾಯಚೂರಲ್ಲಿ ವೀರಶೈವರ ರಾಜಕೀಯ ವಿದ್ಯಾರ್ಜನೆಗಾಗಿ, ಫಂಡು ಸ್ಥಾಪಿಸಲಿಕ್ಕೆ 2000 ರೂ. ಗಳನ್ನು ಕೊಡಲು ವಾಗ್ದಾನಮಾಡಿ ಸದ್ಯ ಕಿಲ್ಲೇದಮಠದವರ ಕಡಿಗೆ ಮ॥ ರಾ॥ ಎಕ್ಕಮೊರ್ಸು ಪಾಟೀಲ ಅಮರಪ್ಪನವರಿಗೆ 800 ರೂ. ಗಳು, ಸೋಮವಾರಪೇಟೆ ಮಠದ ಕಡೆ ಮ॥ ರಾಚಪ್ಪನವರ ಕಡಿಗೆ 500 ರೂ. ಗಳು ಒಟ್ಟು ಸಾವಿರ ರೂ. ಗಳನ್ನು ನಗದಾಗಿ ಕೊಟ್ಟಿರುವರು. ಹಾಗು ಈ ಫಂಡಿನ ಅಭಿವೃದ್ಧಿಗಾಗಿ ಚಂದಾದಾರರಾಗುವಂತೆಯೂ, ರಾಯಚೂರು ಜಿಲ್ಲೆಗೆ ಒಳಪಟ್ಟ ಪ್ರತಿಯೊಂದು ಗ್ರಾಮದ ಪ್ರತಿಯೊಂದು ಮನೆಯ ವೀರಶೈವರು ವರ್ಷಂಪ್ರತಿ 1 ರೂಪಾಯಿಗೆ ಒಂದಾಣೆಗೆ ಕಮ್ಮಿಯಾಗದಂತೆ ಅವರವರ ಯೋಗ್ಯತಾನುಸಾರ ಕೊಡುವಂತೆಯೂ, ವೀರಶೈವರ ಜಾತಕರ್ಮ ಅಂದರೆ ಲಿಂಗಧಾರಣದಲ್ಲಿ ಗಂಡುಶಿಶುವಿಗೆ ½ ರೂಪಾಯಿ ಸ್ತ್ರೀಶಿಶುವಿಗೆ ¼ ರೂಪಾಯಿ ದೀಕ್ಷಾಕರ್ಮದಲ್ಲಿ ಪ್ರತಿಬಟುವಿಗೂ 1 ರೂ. ವಿವಾಹದಲ್ಲಿ ವರನಿಗೆ 2 ರೂ. ವಧುವಿಗೆ 1 ರೂ. ಅಂತೇಷ್ಟಿ ಮುಂತಾದ ಕಾರ್ಯಗಳಲ್ಲಿ ಅವರವರ ಶಕ್ತ್ಯಾನುಸಾರ, ಈಪ್ರಕಾರ ವೀರಶೈವರ ಶುಭಾಶುಭ ಕಾರ್ಯಗಳಲ್ಲಿ ಧರ್ಮಕಾಣಿಕೆಯನ್ನು ಕೊಡಲು ವ್ಯವಸ್ಥೆಮಾಡಿ, ಪ್ರತಿ ಗೃಹಸ್ಥನು ಮುಷ್ಟಿಫಂಡಿಗೆ ವಾರಕ್ಕೆ 1 ಸೇರು ಅಥವಾ ½ ಸೇರು ಧಾನ್ಯವನ್ನು ಕೊಡಲು ಗೊತ್ತುಪಡಿಸಿರುವರು. ವರ್ಷಾಶನದ ಹಣವನ್ನು ಪ್ರತಿವರ್ಷ ಯುಗಾದಿಹಬ್ಬದ ದಿವಸ ಕೊಡುವಂತೆಯೂ, ವೈದಿಕ ಕರ್ಮಗಳಲ್ಲಿ ಬರಬೇಕಾದ ಹಣವನ್ನು ಆಯಾಕಾಲದಲ್ಲಿ ಆಯಾಗ್ರಾಮದ ಮಠದವರು ಎತ್ತಿ ಪಂಚರವಶಕ್ಕೆ ಕೊಡಬೇಕೆಂತಲೂ, ಮುಷ್ಟಿಫಂಡಿನ ಧಾನ್ಯವನ್ನು ಸಂಘದವರಿಂದ ನಿಯಮಿಸಲ್ಪಟ್ಟ ನೌಕರನ ವಶಕ್ಕೆ ಕೊಡಬೇಕೆಂತಲೂ ನೌಕರನು ತನ್ನ ದುಡಿತಕ್ಕಾಗಿ 10 ಸೇರಿಗೆ 1 ಸೇರಿನಂತೆ ತೆಗೆದುಕೊಳ್ಳಬೇಕೆಂತಲು, ಏರ್ಪಾಟುಮಾಡಿ ಇದರಂತೆ ತಪ್ಪದೆ ಆಚರಿಸುತ್ತೇವೆಂಬ ಬಗ್ಗೆ ರಾಯಚೂರು ದೇವದುರ್ಗ ಮಾನ್ವಿ ಈ ತಾಲೂಕುಗಳ ಭಕ್ತವರ್ಗದಿಂದ ಒಡಂಬಡಿಕೆ ಸಹಿಗಳನ್ನು ತೆಗೆದುಕೊಂಡಿರುತ್ತಾರೆ.

ಮೇಲ್ಕಂಡ ವ್ಯವಸ್ಥೆಯಿಂದ ರಾಯಚೂರು ಗ್ರಾಮದಲ್ಲಿ ಬಂದ ಹಣವೆಲ್ಲ ಸದರಿ ಫಂಡಿಗೆ ಸೇರಬೇಕೆಂತಲು ತಾಲ್ಲೂಕಿನ ಗ್ರಾಮಗಳಲ್ಲಿ ಬಂದ ಹಣದಲ್ಲಿ ಖರ್ಚು ಕಳೆದು ಉಳಿದ ಮೊತ್ತದಲ್ಲಿ ಅರ್ಧಭಾಗ ವಿದ್ಯಾಫಂಡಿಗು ಅರ್ಧಭಾಗ ಶ್ರೀಮತ್ಪಂಚಾಚಾರ್ಯರ ವಿನಿಯೋಗಕ್ಕಾಗಿಯು ಪರ್ವತಸಂಸ್ಥಾನಕ್ಕೆ ಪಂಚರು ರವಾನಿಸಬೇಕೆಂತಲು ಏರ್ಪಾಟಾಗಿರುತ್ತೆ. ಇದರ ಮೇಲ್ವಿಚಾರಣೆಗಾಗಿ ತಮ್ಮ ಸಂಸ್ಥಾನದ ಕಾರಭಾರಿಗಳನ್ನು ನೌಕರರನ್ನು ನಿಯಮಿಸುತ್ತೇವೆಂದು ಅಪ್ಪಣೆ ಕೊಡಿಸಿರುತ್ತಾರೆ. ಮಹಾಸ್ವಾಮಿಗಳವರ ಆಗಮನದಿಂದ ವಿದ್ಯಾಭಿವೃದ್ಧಿಯ ಕಾರ್ಯಕ್ಕೆ ತುಂಬಾ ಸಹಾಯವು ದೊರೆಕೊಳ್ಳುವಂತಾದುದಕ್ಕೆ ಸರ್ವರೂ ಶ್ರೀಗಳವರ ಉಚಿತಜ್ಞತೆಗೂ ಉದಾರಭಾವಕ್ಕೂ ತುಂಬಾ ಕೃತಜ್ಞರಾಗಿರುತ್ತಾರೆ. ಶ್ರೀಗಳವರ ಈ ಸುವ್ಯವಸ್ಥೆಯಿಂದ ಧಾರ್ಮಿಕ, ನೈತಿಕ, ವಿಷಯದಲ್ಲಿ ತೀರ ಹಿಂದುಳಿದಿರುವ ನಮ್ಮ ಸಮಾಜವು ಮುಂದುವರಿದು ಅಭಿವೃದ್ಧಿಗೊಳ್ಳಲು ಯಾವ ಸಂದೇಹವಿಲ್ಲ. “ಹನಿಗೂಡಿದರೆ ಹಳ್ಳ, ತೆನೆಗೂಡಿದರೆ ರಾಶಿ” ಎಂಬ ನಾಣ್ಣುಡಿಯಂತೆ ಸಕಲರೂ ಇದಕ್ಕೆ ಉತ್ತೇಜನ ಕೊಟ್ಟು ಪರಶಿವನ ಪ್ರೀತಿಗೂ, ಕೀರ್ತಿಗೂ ಭಾಜನರಾಗಬೇಕಾಗಿ ಅಪೇಕ್ಷಿಸುವ,

ವಿದ್ಯಾಭಿಮಾನಿ.

ತಾ॥ 28-10-1923ರಲ್ಲಿ ಇದರ ಅಸಲು ತಯಾರಾದದ್ದು.

1 ಕಿಲ್ಲೇದ ಮಠದ ಪಟ್ಟದದೇವರು ಚೆನ್ನಮಲ್ಲಪ್ಪನವರು ಸ್ವದಸ್ತುರಿ, 2 ಕಿಲ್ಲೇದ ಮಠದ ಶಾಂತಮಲ್ಲಪ್ಪನವರು, 3 ಕೆ. ಶಿವಯ್ಯನವರು ವಕೀಲು ಕುಷ್ಟಗಿ, 4 ಅಮರಪ್ಪಗೌಡರು ಯರಮರಸ್ಸು, 5 ರಾಮಲಿಂಗಪ್ಪ, 6 ಜಿ. ಅಮರಪ್ಪ ವಕೀಲ್, 7 ಗಣವಿನ್ನಿ ತಿಮ್ಮಣ್ಣ, 8 ಗದ್ವಾಲಿ ಸೂಗಪ್ಪ ರಸ್ತಾಪುರದ 9 ಮುನೆಪ್ಪ, 10 ಕರಿಪ್ಪನವರ ವೀರಭದ್ರಪ್ಪ, 11 ಗಂಜಳ್ಳಿ ಭೀಮಣ್ಣ, 12 ಗುಣಾರಿ ನಾಗಭೂಷಣಯ್ಯ, 13 ಸೋಮವಾರಪೇಟಿ ಮಠದ ರಾಚೋಟಿಸ್ವಾಮಿ ದ॥ಖು॥, 14 ಗದ್ದಿ ಗದ್ದಿಯ್ಯನವರು, 15 ಪಂಚಾಕ್ಷರಿಸ್ವಾಮಿ ವಕೀಲ್ ನೌಲಿ, 16 ದೇವದುರ್ಗದ ಹಿರೇಮಠದ ಸಿರಿನಾಥಸ್ವಾಮಿ, 17 ಪರ್ವತಶಾಸ್ತ್ರಿಗಳು, 18 ಶೆಟ್ಟಿ ರಾಚಪ್ಪನವರು, 19 ಪಲ್ಲಕ್ಕಿ ವೀರಭದ್ರಪ್ಪ, 20 ಇಂದುವಾಸಿ ನರಸಪ್ಪ, 21 ದುರ್ಗ ಶರಭಣ್ಣ, 22 ಗದ್ವಾಲಿ ಅಮರಪ್ಪ, 23 ಬೋರಬಟ್ಟಿ ಬುದ್ಧಪ್ಪ, 24 ಗುಣಾರಿ ಗುರುಲಿಂಗಯ್ಯ, 25 ಬಳೇ ವೀರಪ್ಪ, ಮುಂತಾದವರು.

ಮಾನ್ವಿ ಗ್ರಾಮದ ವೀರಶೈವರ ವಿಜ್ಞಾಪನೆ.

ಶ್ರೀ ಗಿರಿರಾಜಸೂರ್ಯ ಸಿಂಹಾಸನಾಧೀಶ ಮಹಾಸ್ವಾಮಿಗಳವರ ಪ್ರತಿನಿಧಿಗಳವರು—ನಮ್ಮಲ್ಲಿಯು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿರುವರು. ಇವರ ವರ್ಷಾಶನ ಮುಂತಾದ ಸಮಾಜಾಭಿವೃದ್ಧಿಯ ಕಾರ್ಯಗಳಿಗೆ ನಮ್ಮ ತಾಲ್ಲೂಕು ವೀರಶೈವರೆಲ್ಲ ಅನುಮೋದಿಸಿ ನಿರಾತಂಕವಾಗಿ ಸಹಾಯಮಾಡುವರೆಂದುಕೋರುತ್ತೇವೆ.

1 ಮಠದ ಅಮರಯ್ಯನವರು, 2 ಗುಡಿ ಸಿದ್ಧಲಿಂಗಯ್ಯನವರು, 3 ವಕೀಲ್ ತಮ್ಮಣ್ಣನವರು (ಉರ್ದುನಲ್ಲಿ), 4 ಪೊಲೀಸ ಪಾಟೀಲು ಮಹಾಂತಪ್ಪನವರು (ಉರ್ದು ಭಾಷೆಯಲ್ಲಿ), 5 ಬಸವಪ್ಪ ಜಾನೇಕಲ್ಲು, 6 ಅರಿವಿ ಸೂಗಪ್ಪ, 7 ಹೊಗೆಕೊಪ್ಪಲ ವೀರಭದ್ರಪ್ಪ, 8 ಸಂಪಿಗಿ ಬಸವಪ್ಪ, 9 ವೀರಭದ್ರಪ್ಪ ಪೋತನಾಳು, 10 ಚೆನ್ನಮಲ್ಲಪ್ಪ ನಾಡಗೌಡರು (ಉರ್ದುನಲ್ಲಿ), 11 ಶೆಟ್ಟಿ ಬಸವಪ್ಪ ಮುಂತಾದವರು.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ ಮದನೋದ್ಭವಗುಳಿಗೆ, ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು [50-50]

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತವೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರತ್ಯಕ್ಷ ತಿಳಿಸಿದರೆ ಉತ್ತಮ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನ್ನಡಾ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ಖ್ಯಾತಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದರೆ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರವಾದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—6—0 25 ಬಾಟ್ಲುಗಳಿಗೆ 4—8—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್ ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ನೀವು ಇಷ್ಟಪಟ್ಟ ನಮೂನೆಯಲ್ಲಿ ನೀವು ಅಪೇಕ್ಷಿಸುವ ಭಾಷೆಯಿಂದ ನಿಮ್ಮ ಹೆಸರು ವಿಳಾಸಗಳ ರಬ್ಬರ್ ಮೊಹರನ್ನು ಅಂದವಾಗಿ ತಯಾರಿಸಿ ಕೊಡುತ್ತಾರೆ.

ಹಾರ್ಮೋನಿಯಂಗಳನ್ನೂ ಪೌಂಟೆನ್ ಪೆನ್ನುಗಳನ್ನೂ ತೃಪ್ತಿಕರವಾಗಿ ರಿಪೇರೀ ಮಾಡಿಕೊಡುತ್ತಾರೆ.

ಹೆಚ್ಚು ವಿಷಯಗಳಿಗೆ ಇವರ ಕಂಪನಿಯ ಕ್ಯಾಟಲಾಗ್‌ನ್ನೂ ತರಿಸಿನೋಡಿರಿ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು,
[50—19] ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖ್ಯಾತಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುವುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ. ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—11] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

೧೯೨೪ನೆಯ ಇಸವಿ ಜನವರಿ ತಾ॥ ೨೭ರಿಂದ ೧೯೨೪ನೆಯ ಫೆಬ್ರವರಿ ತಾ॥ ೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಪುಷ್ಯ ಬಹುಳ ಷಷ್ಠಿಯಿಂದ ಪುಷ್ಯ ಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರ ಮಾಸ
27	ಭಾನು	ಷಷ್ಠಿ	47-50	ಹಸ್ತ	37.0	14
28	ಸೋಮ	ಸಪ್ತ	42-27	ಚಿತ್ತ	33-18	15
29	ಮಂಗಳ	ಅಷ್ಟ	36-27	ಸ್ವಾತಿ	29-6	16
30	ಬುಧ	ನವ	30-7	ವಿಶಾ	24-35	17
31	ಗುರು	ದಶ	24-15	ಅನೂ	20-2	18
1	[1]ಶುಕ್ರ	ಏಕಾ	17-52	ಜ್ಯೇಷ್ಠ	15-38	19
2	[2]ಶನಿ	ದ್ವಾದ	12-7	ಮೂಲ	10-46	20

(1) ಸರ್ವತ್ರ ಏಕಾದಶಿ. (2) ಪ್ರದೋಷ.

ಮೈಸೂರು: ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಾಧಿಗತರಾಜತ [illegible] ಕೃಪಾ | ಘನಪಕ್ಷಕ್ಷಮಾವತಾರಾ ಪಕ್ಷಜನಕ್ಷತ್ರ ಮೋಹರಾಜೀಯತಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲುಪ [illegible] ಪುಂಗವ | ಸ್ತೋಮಾಭೀಷ್ಟದಶೀಲ ಪಾಲಿತ ಸಾಧುಸ್ತ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬಿಭ್ರತಿಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೮-೦]

ಸಂಪುಟ ೩೭) ಮೈಸೂರ್ ಸ್ಟಾರ್ ಸನ್ ೧೯೨೪ನೆಯ ಇಸವಿ ಫೆಬ್ರವರಿ ತಾರೀಖು ೩ ನೆಯ ಭಾನುವಾರ (ಸಂಚಿಕೆ ೫

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಛಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ವೈಶ್ವಾನರಾಸವ.

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳನ್ನು ಗುಣಪಡಿಸುವ ನಂಬುಗೆಯಾದೌಷಧಿ.

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲೀ ಇಲ್ಲ. ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು ಕ್ರಮವಾಗಿ ಗುಣವಾಗುತ್ತದೆ.

1 ಸೀಸೆ ಬೆಲೆ 1—0—0. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲಪಂಡಿತ,
51 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾ. ಜಿ. ಬಿ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಕ್ಕಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಡಬ್ಬಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—23] ಪೋ॥ ಬಾ. ೫೧೦, ಮದರಾಸು.

(Registered Trade Mark)

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಳ ವೀರಶೈವ ವಿವಾಹವಿಧಿ।	೦—೮—೦	೦—೧೩—೦
ಲವಿದ್ಯಾ	೦—೪—೦	೦—೭—೦
ಮೋಕ್ಷಚರಿತ್ರ	೦—೫—೦	೦—೧೦—೦
ವಾಸಿ	೦—೪—೦	೦—೭—೦
ಸಂಚಿಕೆ	೦—೪—೦	೦—೭—೦
ಮಂಗಳಶೀಲ್ಯಕಥಾಕ	೦—೧—೦	೦—೬—೦
ಮೈತ್ರಯಜನ	೦—೮—೦	೦—೧೩—೦

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಪ್ರ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—10] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ

ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಿಕೆ) ಮುಷ್ಠಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ಕಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವಂ (ಚೊಗಚಿ) ಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮುಸ್ತಕ, ಕಮರಕಸ, ಕಳಲ್ಕಾಗೊಂದ, ಪಂಚಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ಕಾಲೀಮುಖಾನಾ. ಬೀಜಬಂಧ, ಬಗರಿಗೊರಸು, ಮೋಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಳೇರಿಭಾಜ, ಗೋಖರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಬಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜೀನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಅವಸರಮಾಡಿರಿ.

[50—36] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.
ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.
ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.
ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.
ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.
ಪಂಚಶ್ಲೋಕೀ ಬೆಲೆ ೧—೦—೦.
ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.
ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[50—4] ಅಂಡ್ ಸನ್ಸ್, ಜೆ. ಪಿ. ಮಂಡಲಿ, ಮೈಸೂರು.

ಶ್ರೀ ರಕ್ತಾಕ್ಷಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

ಈಗ್ಗೆ ಐದುವರ್ಷಗಳಿಂದ ‘ಕಲ್ಬುರ್ಗಿ’ ಹೆಸರಿನಿಂದ ಹೊರಡತಕ್ಕ ಪಂಚಾಂಗವೇ ಈ ವರ್ಷ (ರಾಯಚೂರು ಗ್ರಾಮದಿಂದ ಹೊರಟಿರುತ್ತದೆ). ಈ ಪಂಚಾಂಗದಲ್ಲಿ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶ ರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ಇದಲ್ಲದೆ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ, ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಆದರೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು. ಕಾಗದ ಮೊದಲಾದವುಗಳ ಬೆಲೆಯು ಗತವರ್ಷಕ್ಕಿಂತಲೂ ಹೆಚ್ಚಾಗಿದ್ದರೂ ತಮಗೆ ವರ್ಷಂಪ್ರತಿ ಕೊಡುತ್ತಿದ್ದ ಬೆಲೆಯಂತೆಯೇ ಈವರ್ಷವೂ ಕೊಡುತ್ತೇವೆ. ಹಿಂದಣ ವರ್ಷಕ್ಕಿಂತಲೂ ಹೆಚ್ಚಿಗೆ ಕಾಪಿಗಳನ್ನು ತರಿಸಿಕೊಂಡು ಸಹಾಯಮಾಡಿರಿ. (25) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ 100 ಕ್ಕೆ 20 ರೂಪಾಯಿಗಳು. (100) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ 500ಕ್ಕೆ 16. (500) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ (1000)ಕ್ಕೆ 13 ರೂ. ಇದರಂತೆ ಕೊಡುವೆವು. ಇದಕ್ಕಿಂತಲೂ ಕಡಿಮೆಬೆಲೆಯಿಂದ ಯಾರಿಗೂ ಕೊಡುವದಿಲ್ಲ ಮತ್ತು (೬) ಪಂಚಾಂಗಗಳನ್ನು ಒಂದೇಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಬೇಗನೆ ಆರ್ಡರ್ ಕೊಡಿರಿ. ಬಿಡಿ ಒಂದಕ್ಕೆ ಪಾವ್ಕಾಣೆ.

ವಿಳಾಸ—ಬ್ರ॥ ಶ್ರೀ॥ ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿಗಳು,
ಜ್ಯೋತಿಷ ಪಾಠಶಾಲಾ,
[12-8] ರಾಯಚೂರು ಜಿ॥

MYSORE RAILWAYS.

NOTIFICATION.

On and from Tuesday the 5th February 1924, an additional Passenger train service will be introduced between Mysore and Arsikere. On account of this additional service, the timings of Nos. 11 and 12 Mixed trains have also been altered and the timings of these trains are as noted below :—

UP TRAINS.

		No. 11 Mixed. Hrs.	Mts.	No. 41 Passenger. Hrs.	Mts.
Arsikere	Dep.	2	30	14	20
Hassan	Arr.	5	40	16	26
	Dep.	6	0	16	42
Mysore	Arr.	11	50	21	5

DOWN TRAINS.

		No. 42 Passenger. Hrs.	Mts.	No. 12 Mixed. Hrs.	Mts.
Mysore	Dep.	7	25	13	15
Hassan	Arr.	11	50	19	54
	Dep.	12	6	20	14
Arsikere	Arr.	13	35	22	25

2. Consequent on the arrival of No. 41 Passenger at Mysore at 21-5 hours, No. 9 Up Mixed will leave Nanjangud Town at 20-0 hours instead of 19-40 hours and arrive at Mysore at 21/20 hours instead of at 21-0 hours.

3. The timings of the Mail and Express trains on Mysore-Bangalore Section will be altered from 1st March 1924 instead of from 1-2-1924.

Traffic Manager's Office,
Mysore.
29th January 1924.

A. A. KHAN,
Manager.

THE FIRST MYSORE PATELS' (VILLAGE HEADMEN) PROVINCIAL CONFERENCE AT CHENNAPATNA.

(Contributed.)

The First Mysore Patels' Conference was held at Chennapatna on the 26th and 27th January 1924 under the presidency of Mr. K. S. Chennabasappa an influential Patel of Gundlupet Taluk. Over 542 delegates from 32 Taluks in the State besides 500 sympathisers attended the Conference. The following were some of the distinguished Visitors to the Conference.

1. Messrs. B. Venkoba Rao, Deputy Commissioner.
2. K. H. Ramayya, Registrar of Co-operative Societies.
3. G. Paramasiviah, Advocate.
4. Rao Sahib H. Chennayya.
5. M. L. Shame Gowda.
6. R. Ramachendra Rao, Amildar.
7. Abdul Khudus, Merchant, Chennapatna.

Mr. G. Paramasiviah, B.A. LL.B., read the Message kindly sent by the Dewan Mr. A. R. Banerji, C.S.I., C.I.E., Mr. Venkatappa, Secretary, Reception Committee read the Kannada translation of the Dewan's Message.

Mr. K. Chandy, B.A., Revenue Commissioner opened the Conference after delivering an instructive and thoughtful address in the course of which he traced the importance of Patels as powerful factors in the socio-political life of the villages, as police officers for protecting the peace and property of the villagers and their responsible work carried on with a high degree or honesty as Collectors of Revenue to the State to the extent of over 2 crores of rupees. He exhorted them all who weilded a powerful influence over the villagers that form the backbone of the country, to come forward during the present time of drought and distress and give their hearty co-operation in successfully carrying out measures started by Government for allaying the hardship caused to the people.

Mr. K. H. Ramayya, B.A. Bar-at-Law., Registrar of co-operative societies, translated the English speech of the President to the audience.

Mr. Sidde Gowda, Patel and Chairman of the Reception Committee welcomed the delegates in suitable terms. Mr. Chennabasappa then read his Presidential Address which was very instructive and quite suited to the occasion. He surveyed the past and present condition of the Patels and suggested ways and means for their betterment.

Messrs. Rao Sabib H. Chennayya, K. H. Ramayya, M. L. Shame Gowda, G. Paramasiviah and several other gentlemen gave stirring speeches, on the duties and responsibilities of Patels.

The first resolution was about the Loyalty and Reverence of the Patels to H. H. the Maharaja and it was passed unanimously by the whole audience standing. After a keen and interesting discussion of the subjects on the agenda about 30 important resolutions about the requirement of the Patels and their grievances etc., were passed by the members. The Conference came to a close on the 27th with three cheers to H. H. the Maharaja and H. H. the Yuvaraja.

Elaborate arrangements had been made by the Members of the Reception Committee for the boarding and lodging of all the delegates that attended the Conference and their stay was made pleasant and enjoyable. The thanks of the Conference were duly conveyed to the Reception Committee Members for all their trouble.

1924ನೇ ಇಸವಿ ಜನವರಿ 26 ಮತ್ತು 27ನೇ ತಾರೀಖುಗಳಲ್ಲಿ
ಚನ್ನಪಟ್ಟಣದ ಎಂ. ಪಿ. ಪಿ. ಜಯಲಕ್ಷ್ಮೀ
ಥಿಯೇಟರಿನಲ್ಲಿ ನಡೆದ

ಮೈಸೂರು ದೇಶದ ಸಮಸ್ತ ಪಟೇಲರ ಮಹಾಸಭೆ.

(ಬರೆದು ಬಂದುದು.)

ಈ ಮಹಾಸಭೆಯು ಸಮಾಜದ ಏಳಿಗೆಗೆ ಅನೇಕ ವಿಧಗಳಲ್ಲಿ ಮೂಲಸ್ಥಾನವಾದ ಚನ್ನಪಟ್ಟಣದಲ್ಲಿ ಬಹಳ ವಿಜೃಂಭಣೆಯಿಂದ ಜನವರಿ 26 ಮತ್ತು 27ನೇ ತಾರೀಖುಗಳಲ್ಲಿ ನಡೆಯಿತು. ಆ ಕಾಲದಲ್ಲಿ ಥಿಯೇಟರಿನ ಮುಂಭಾಗದಲ್ಲಿ ತಳಿರು ತೋರಣಗಳಿಂದ ನೇತ್ರಾನಂದಕರವಾಗಿ ನಿರ್ಮಿಸಿದ್ದ ಮಂಟಪವು ಬಹು ರಮ್ಯವಾಗಿತ್ತು. 26ನೇ ತಾ|| ಶನಿವಾರ ಸುಮಾರು ಮೂರುಗಂಟೆಗೆ ಸರಿಯಾಗಿ ರೈತರ ಕ್ಷೇಮಾಭಿವೃದ್ಧಿ ಎಂಬ ಕಂಕಣಬದ್ಧರಾಗಿರುವ ಮ|| ಕೆ. ಚಾಂಡಿ ಸಾಹೇಬರವರನ್ನು ಮತ್ತು ಸಾಹುಕಾರ್ ಮ|| ಕೆ. ಚೆನ್ನಬಸಪ್ಪನವರನ್ನು ಅನೇಕ ದೊಡ್ಡಮನುಷ್ಯರು ಟ್ರಾವಲರ್ಸ್ ಬಂಗಲೆಯಲ್ಲಿ ಎದುರುಗೊಂಡು ವಾದ್ಯಘೋಷಗಳಿಂದಲೂ ಜಯಭೇರಿಗಳಿಂದಲೂ ಉತ್ಸವಪೂರ್ವಕವಾಗಿ ಕರೆದುಕೊಂಡು ಬಂದರು. ಆ ಕಾಲದಲ್ಲಿ ನೆರೆದಿದ್ದ ಮ|| ಗಳಾದ ಕೆ. ಎಚ್. ರಾಮಯ್ಯ, ಬಿ.ಎ., ಬಾರ್-ಅಟ್-ಲಾ ಯವರು, ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರಾದ ವೆಂಕೋಬರಾವ್, ಬಿ.ಎ. ಯವರು, ರಾವ್‌ಸಾಹೇಬ್ ಚನ್ನಯ್ಯನವರು, ಪರಮಶಿವಯ್ಯ, ಬಿ.ಎ.ಎಲ್‌ಎಲ್.ಬಿ., ಯವರು, ಮತ್ತು ಅಮಲ್ದಾರರೇ ಮೊದಲಾದ ಅನೇಕಮಂದಿ ದೊಡ್ಡಮನುಷ್ಯರನ್ನೊಳಗೊಂಡು ಥಿಯೇಟರಿನಲ್ಲಿರುವ ಪ್ಲಾಟ್‌ಫಾರಮ್ಮಿನ ಮೇಲೆ ಮೈಸೂರು ದೇಶದ ಎಲ್ಲಾ ತಾಲ್ಲೂಕುಗಳಿಂದ ನೆರೆದಿದ್ದ ನೂರಾರುಮಂದಿ ಪಟೇಲರು ಮತ್ತು ಪಟೇಲರ ಹಿತಚಿಂತಕರಾದ ಅನೇಕ ದೊಡ್ಡಮನುಷ್ಯರುಗಳು ಜಯಘೋಷವನ್ನು ಮಾಡುತ್ತಿರಲು ಮ|| ಚಾಂಡಿ ಸಾಹೇಬರು ಅಗ್ರಾಸನಾಧಿಪತ್ಯವನ್ನು ವಹಿಸಿದರು.

ಆ ಕಾಲದಲ್ಲಿ ನೆರೆದಿದ್ದ ಕೆಲವು ಬಾಲಿಕಾ ಸಹೋದರಿಯರಿಂದ ಭಗವತ್ಪ್ರಾರ್ಥನೆ ನಡಿಸಲ್ಪಟ್ಟಮೇಲೆ ಮಾಲೂರು ಮ|| ವೇಮಾರಡ್ಡಿಯವರು ಮಹಾಸಭೆಯ ಶ್ರೇಯಃಪ್ರಾರ್ಥನೆಯನ್ನು ಮಾಡಿದರು. ತದನಂತರ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರಾದ ರಾಜಮಂತ್ರಧುರೀಣ ಶ್ರೀಯುತ ಎ. ಆರ್. ಬಾನರ್ಜಿ ಎಂ.ಎ., ಸಿ.ಎಸ್.ಐ., ಸಿ.ಐ.ಇ., ಯವರು ದಯಮಾಡಿ ಕಳುಹಿಸಿದ ಶುಭವಾರ್ತಾ ಪತ್ರಿಕೆಯು ಮ|| ಜಿ. ಪರಮಶಿವಯ್ಯನವರಿಂದ ಓದಲ್ಪಟ್ಟಿತು. ಈ ಕಾರ್ಯದಲ್ಲಿ ಇವರ ಸಹಾನುಭೂತಿಯೂ, ಪ್ರೋತ್ಸಾಹವೂ ಸ್ತೋತ್ರಾರ್ಹವಾದ್ದರಿಂದ ಇವರ ಶುಭವಾರ್ತೆಯು ಪೂರ್ತಿಯಾಗಿ ಬೇರೆಕಡೆ ಮುದ್ರಿಸಲ್ಪಟ್ಟಿರುತ್ತೆ. ನಂತರ ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ.ಐ.ಇ., ಯವರು ಬರೆದುಕಳುಹಿಸಿದ್ದ ಪ್ರೋತ್ಸಾಹಕರವಾದ ಶುಭವಾರ್ತೆಯು ಓದಲ್ಪಟ್ಟಿತು. ಇದಾದಮೇಲೆ ಸತ್ಕಾರಮಂಡಲಿಯ ಅಧ್ಯಕ್ಷರಾದ ತಿಮ್ಮಸಂದ್ರದ ಪಟೇಲ್ ಸಿದ್ದೇಗೌಡರು, ಅರ್ಕಕರಹಳ್ಳಿ ಪಟೇಲ್ ಸೋಮೇಗೌಡರು ಸ್ವಾಗತಭಾಷಣವನ್ನು ಮಾಡಿದರು. ಇದೆಲ್ಲಾ ಸಾಂಗವಾಗಿ ನಡೆದಮೇಲೆ ಸಮಸ್ತ ಪಟೇಲರ ಕ್ಷೇಮಾಭಿವೃದ್ಧಿಗೂ ಸ್ತೋತ್ರಕ್ಕೂ ಪಾತ್ರರಾದ ಮ|| ಚಾಂಡಿಸಾಹೇಬರವರು ಪ್ರಜಾಹಿತಚಿಂತನೆಯಿಂದ ಕೂಡಿರುವ ತಮ್ಮ ಭಾಷಣವನ್ನು ಇಂಗ್ಲಿಷಿನಲ್ಲಿ ಮಾಡಿದರು. ಇದರ ಕನ್ನಡ ತರ್ಜುಮೆಯನ್ನು ಮ|| ಕೆ. ಎಚ್. ರಾಮಯ್ಯನವರು ಓದಿಹೇಳಿದರು. ಈ ಭಾಷಣವು ಅತ್ಯಂತ ಸ್ತೋತ್ರಾರ್ಹವಾಗಿರುವುದರಿಂದ ಪ್ರತ್ಯೇಕವಾಗಿ ಮುದ್ರಿಸಲ್ಪಟ್ಟಿದೆ. ಇದಾದ ಮೇಲೆ ಈ ಸಮಸ್ತ ಪಟೇಲರ ಮಹಾಸಭೆಯ ಅಧ್ಯಕ್ಷರಾದ ಗುಂಡ್ಲುಪೇಟೆ ತಾಲ್ಲೂಕು ಕಬ್ಬಳ್ಳಿ ಸಾಹುಕಾರ್ ಮತ್ತು ಪಟೇಲ್ ಮ|| ಎ. ಕೆಸ್. ಚನ್ನಬಸಪ್ಪನವರು ಮಾಡಿದ ಭಾಷಣವು ಬಹಳಮಟ್ಟಿಗೆ ಶ್ಲಾಘ್ಯಾರ್ಹವಾದ್ದರಿಂದ ಪ್ರತ್ಯೇಕವಾಗಿ ಮುದ್ರಿಸಲ್ಪಟ್ಟಿರುತ್ತೆ. ಮ|| ಚಾಂಡಿ ಸಾಹೇಬರು ಹೀಗೆ ಸಭಾಪ್ರಾರಂಭೋತ್ಸವವನ್ನು ಮಾಡಿ ಮುಗಿಸಿದ ಮೇಲೆ ವಾದ್ಯಘೋಷಗಳಿಂದಲೂ, ಜಯಭೇರಿಗಳಿಂದಲೂ ಕಳುಹಿಸಲ್ಪಟ್ಟನಂತರ ಮಹಾಸಭೆಯ ಅಧ್ಯಕ್ಷರಾದ ಮ|| ಕಬ್ಬಳ್ಳಿ ಚನ್ನಬಸಪ್ಪನವರ ಸಮ್ಮುಖದಲ್ಲಿ ಗೋಸ ರಕ್ಷಣೆಯ ವಿಷಯವಾಗಿ ಕೆಲವು ದೊಡ್ಡಮನುಷ್ಯರು ಸಹಾ ನುಭೂತಿಯಿಂದ ಕೂಡಿದ ಕೆಲವು ಭಾಷಣಗಳನ್ನು ಮಾ ದರು. ಸಭೆಯು ಮುಕ್ತಾಯವಾಗುವುದಕ್ಕೆ ಮೊದಲು ಟೇಲರ ಪರವಾಗಿ ಚಿಕ್ಕಬಳ್ಳಾಪುರದ ತಾಲ್ಲೂಕು ಅರಸನಹ ಪಟೇಲ್ ಮ|| ಮುನಿನಂಜೇಗೌಡರ ಮಕ್ಕಳು ಮ|| ಎ ಮುನಿಶಾಮಯ್ಯನವರು ಬಹಳ ಸ್ವಾರಸ್ಯವಾದ, ವಿನೋದಕ ವಾದ ಮತ್ತು ಕೆಲವು ಅನುಭವಧಾರಗಳಿಂದ ಕೂಡಿದ ಒಂದ ಭಾಷಣವನ್ನು ಕನ್ನಡದಲ್ಲಿ ಮಾಡಿದರು. ಇದೆಲ್ಲಾ ಆಗುವಾ ಗ್ಗೆ ಸಾಯಂಕಾಲ ಸುಮಾರು ಆರುವರೆ ಗಂಟೆ ಸಮಯವಾಗ ತ್ತ ಬಂತಾದ್ದರಿಂದ ಆ ದಿವಸ ಸಭೆಯು ಮುಕ್ತಾಯವಾಯಿತು.

27-1-1924 ನೇ ಭಾನುವಾರ.

ಈ ದಿವಸ ಪ್ರಾತಃಕಾಲ ಎಂಟು ಗಂಟೆಗೆ ಸರಿಯಾ ಚನ್ನಪಟ್ಟಣದ ಒಕ್ಕಲಿಗರ ವಿದ್ಯಾರ್ಥಿಗಳ ಸಂಘದ ವಾರ್ಷಿ ಕೋತ್ಸವವು ಮೈಸೂರು ದೇಶದ ಕೈಗಾರಿಕೆ ಮತ್ತು ವಾಣಿ ಜ್ಯ ಇಲಾಖೆಯ ಡೈರೆಕ್ಟರ್ ಸಾಹೇಬರಾದ ಮ|| ಪಿ. ಜಿ ಡಿಸೌಜ. ಬಿ.ಎ., ಬಿ.ಎಲ್., ರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಈ ಮೇಲ್ಕಂಡ ವಿದ್ಯಾರ್ಥಿ ಳಲ್ಲಿ ಕೆಲವರು ಬಹಳ ಮುತುವರ್ಜಿವಹಿಸಿ ಅಭ್ಯಾಸಮಾಡಿದ್ದ (Merchant of Vennice) ಮರ್ಚೆಂಟ್ ಆಫ್. ವೆನಿಸ್ ಎಂಬ ನಾಟಕದಲ್ಲಿನ ಕೋರ್ಟು ಸೀನನ್ನು ಬಹಳ ಸ್ವಾರಸ್ಯವಾಗಿ ಅಭಿನಯಿಸಿದರು. ಇದಾದ ಮೇಲೆ ಸಭಾಧ್ಯಕ್ಷ ಸಮುಖದಲ್ಲಿ ಮ|| ಜಿ. ಪರಮಶಿವಯ್ಯ ಬಿ.ಎ., ಬಿ.ಎಲ್., ರವರು ವಿದ್ಯಾರ್ಥಿಗಳ ಕರ್ತವ್ಯಗಳ ವಿಷಯವಾಗಿ ಬಹಳ ಸ್ವಾರಸ್ಯವಾದ ಒಂದು ಕನ್ನಡ ಉಪನ್ಯಾಸವನ್ನು ಕೊಟ್ಟರು. ಅನಂತರ ಮ|| ಕೆ. ಎಚ್. ರಾಮಯ್ಯ ಬಿ.ಎ., ಬಾರ್-ಅಟ್- ಲಾರವರು ವಿದ್ಯಾರ್ಥಿಗಳ ದೇಹಪಟುತ್ವದ ವಿಷಯವಾಗಿಯೂ ವಿದ್ಯಾರ್ಜನೆಯ ವಿಷಯವಾಗಿಯೂ, ಬ್ರಹ್ಮಚರ್ಯದ ವಿಷಯವಾಗಿಯೂ, ತಂದೆಗಳು ಮಕ್ಕಳ ಆದರಲ್ಲೂ ಸ್ತ್ರೀವಿದ್ಯಾಭ್ಯಾಸದಲ್ಲಿ ಗಮನಿಸಿಬೇಕಾದ ವಿಷಯವಾಗಿ ಸ್ವಾರಸ್ಯವಾದ ಒಂದು ಉಪನ್ಯಾಸಮಾಡಿದರು. ಕಡೆಯಲ್ಲಿ ಮ|| ಡಿಸೌಜ ಸಾಹೇಬರು ಚನ್ನಪಟ್ಟಣದ ತಾಲ್ಲೂಕಿನ ಒಕ್ಕಲಿಗರ ವಿದ್ಯಾರ್ಥಿಗಳ ವಿದ್ಯೆಯಲ್ಲಿ ಮುಂದುವರಿದಿರುವ ವಿಷಯವಾಗಿಯೂ, ಒಕ್ಕಲಿಗರ ಸಂಘದ ಅಭಿವೃದ್ಧಿಮಾಡುವ ವಿಷಯವಾಗಿಯೂ ಇನ್ನೂ ಕೆಲವು ವಿದ್ಯಾಭಿವೃದ್ಧಿ ಕಾಲದೇಶವರ್ತಮಾನ ಬ ಲಾವಣೆಗಳಲ್ಲಿ ಒಕ್ಕಲಿಗ ಮಹಾಶಯರು ಅನುಸರಿಸಬೇಕಾ ಕೆಲವು ಅಂಶಗಳನ್ನು ಕುರಿತು ಸ್ತೋತ್ರಾರ್ಹವಾದ ಒಂದು ಭಾಷಣವನ್ನು ಮಾಡಿದ ನಂತರ ಕೆಲವು ಆಟಪಾಟಗಳಲ್ಲಿಯೂ ಸ್ಪರ್ಧೆಯ ಪರೀಕ್ಷೆಯಲ್ಲೂ ಮುಂದುಬಂದ ಕೆಲವು ವಿದ್ಯಾರ್ಥಿಗಳಿಗೆ ಸಲ್ಲಬೇಕಾದ ಬಹುಮಾನಗಳನ್ನು ಕೊಟ್ಟರು. ಶ್ರೀಮನ್ ಮಹಾರಾಜರವರ ಮತ್ತು ಶ್ರೀಮನ್ ಯುವರಾಜರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಮೇಲೆ ಸಭೆಯು ಮುಕ್ತಾಯವಾಯಿತು.

ಈ ದಿವಸ ಮಧ್ಯಾಹ್ನ ಮೂರು ಗಂಟೆಯ ಮೇಲೆ ಹಿಂದಿನ ದಿವಸದ ಸಭಾಧ್ಯಕ್ಷರಾದ ಕಬ್ಬಳ್ಳಿ ಮ|| ಚನ್ನಬಸಪ್ಪನವರ ಸಮ್ಮುಖದಲ್ಲಿ ಕೆಲವು ತೀರ್ಮಾನಗಳನ್ನು ಮಾಡಲು ಸಭೆಯು ಪುನಃ ಪ್ರಾರಂಭವಾಯಿತು. ನಮ್ಮನ್ನು ಸದಾ ಕೃಪಾಕಟಾಕ್ಷದಿಂದ ಆಳುವ ಶ್ರೀಮನ್ ಮಹಾರಾಜರವರಿಗೆ ಮತ್ತು ಯುವರಾಜರಿಗೆ ಮೈಸೂರು ದೇಶದ ಎಲ್ಲಾ ಪಟೇಲರ ಸಭೆಯ ರಾಜಭಕ್ತಿಯನ್ನು ತಂತಿಯಮೂಲಕ ಅರ್ಪಿಸುವ ಮೊದಲನೆಯ ತೀರ್ಮಾನವು ನಡೆಯಿತು. ಆಮೇಲೆ ರಾವ್‌ಸಾಹೇಬ ಚನ್ನಯ್ಯನವರು ಮತ್ತು ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ ಮ|| ಶಾಮೇಗೌಡರವರು ಕೆಲವು ಭಾಷಣಗಳನ್ನು ಮಾಡಿ ಪೂರೈಸಿದ ಮೇಲೆ ಎಲ್ಲಾ ಪಟೇಲರಿಗೆ ಈಗಿರುವ ಶೋಚನೀಯವಾದ ಸ್ಥಿತಿಗತಿಗಳನ್ನು ಸರಿಪಡಿಸಿಕೊಡುವುದಕ್ಕೋಸ್ಕರ ಕೆಲವು ತೀರ್ಮಾನಗಳನ್ನು ನಡೆಸಿ ಸಭೆಯು ಮುಕ್ತಾಯಮಾಡಲ್ಪಟ್ಟಿತು. ಈ ತೀರ್ಮಾನಗಳು ಮತ್ತೊಂದು ಕಡೆ ಕೊಡಲ್ಪಟ್ಟಿವೆ.

ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರಾದ ರಾಜ ಮಂತ್ರಧುರೀಣ ಶ್ರೀಯುತ ಎ. ಆರ್. ಬ್ಯಾನರ್ಜಿ, ಎಂ. ಎ. ಸಿ.ಎಸ್.ಐ., ಸಿ.ಐ.ಇ., ಯವರು ದಯಮಾಡಿ ಕಳುಹಿಸಿದ ಶುಭವಾರ್ತಾಪತ್ರಿಕೆ.

ನಿಮ್ಮಗಳ ಪ್ರಾರ್ಥನೆಯನ್ನು ಲಾಲಿಸಿ ನಿಮ್ಮಾ ಮಹಾ ಸಭೆಗೆ ಬರಲು ಕಾರಣಾಂತರಗಳಿಂದ ಸಾಧ್ಯವಿಲ್ಲವಾದರೂ, ಗ್ರಾಮಾಡಳಿತಗಳಲ್ಲಿ ಮುಖ್ಯಸ್ಥಾನವನ್ನು ಪಡೆದು, ಇತ್ತೀಚಿಗೆ ಅನೇಕ ಕಾರಣಗಳಿಂದ ತಮ್ಮ ವಿಶೇಷವಾದ ದರ್ಪವನ್ನೂ ಮತ್ತು ಸಾಮಾನ್ಯವಾಗಿ ಅವರ ಅಧಿಕಾರಕ್ಕೆ ಸಂಬಂಧಪಟ್ಟ ಗೌರವವನ್ನೂ ಕಳೆದುಕೊಂಡಿರುವ ಪಟೇಲರುಗಳ ಪರವಾಗಿ ನೀವು ಪ್ರಾರಂಭಿಸಿರುವ ಈ ಕಾರ್ಯದಲ್ಲಿ, ನನ್ನ ಸಹಾನುಭೂತಿಯಿಂದಲೂ ಪ್ರೋತ್ಸಾಹದಿಂದಲೂ ಕೂಡಿದ ಶುಭವಾರ್ತೆಯನ್ನು ನಿಮಗೆ ಕಳುಹಿಸುವುದರಲ್ಲಿ ನನಗೆ ವಿಶೇಷ ಸಂತೋಷವುಂಟು. ನಿಮ್ಮ ಕರ್ತವ್ಯವನ್ನೂ, ನಿಮ್ಮ ಸ್ಥಾನಕ್ಕೆ ಅನ್ವಯಿಸುವ ಸ್ಥಿತಿಗಳನ್ನೂ ಕುರಿತು ಮುಖ್ಯವಾದ ವಿಷಯಗಳನ್ನು ಈ ಮಹಾಸಭೆಯಲ್ಲಿ ಚರ್ಚಿಸುವವರಾಗಿದ್ದೀರೆಂದು ಸಭೆಯ ಕಾರ್ಯಕ್ರಮದ ಪಟ್ಟಿಯಿಂದ ತಿಳಿದು ಸಂತುಷ್ಟನಾಗಿದ್ದೇನೆ. ಪಟೇಲಿ ನೌಕರಿಯ ದಕ್ಷತೆಯನ್ನು ಅಭಿವೃದ್ಧಿಪಡಿಸಲು ನಿಮ್ಮಲ್ಲೇ ಒಂದು ಸಂಸ್ಥೆಯು ಪ್ರಾರಂಭವಾಗಿರುವುದನ್ನು ನೋಡುವುದಕ್ಕಿಂತ ಮತ್ತಾವುದೂ ಹೆಚ್ಚಾದ ಸಂತೋಷವನ್ನು ಸರ್ಕಾರದವರಿಗೆ ಕೊಡಲರಿಯದು. ಸರ್ಕಾರದವರೂ ತಮ್ಮ ಕೈಲಾದ ಪ್ರೋತ್ಸಾಹವನ್ನೆಲ್ಲ ನಿಮಗೆ ಕೊಡುವವರಾಗಿದ್ದಾರೆ. ಪಟೇಲಿ ಹುದ್ದೆಯಲ್ಲಿರುವವರನ್ನು ವಿದ್ಯಾರ್ಜನೆಯಲ್ಲಿ ಮುಂದುವರಿಸುವುದು ; ಗ್ರಾಮಾಂತರಗಳಲ್ಲಿ ಚಿಲ್ಲರೆ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳ ಫೈಸಲಾತಿಗೆ ಅಗತ್ಯವಾದ ಅಧಿಕಾರವನ್ನು ಅವರಿಗೆ ವಹಿಸುವುದು ; ಗ್ರಾಮಾಡಳಿತದಲ್ಲಿ ಪಟೇಲರ ಸ್ಥಾನವೆಂಥದೆಂಬುದನ್ನು ನಿರ್ಧರಿಸುವುದು ; ಇವೆಲ್ಲವೂ ಸ್ತೋತ್ರಾರ್ಹವಾದ ಉದ್ದೇಶಗಳಾಗಿವೆ. ಮತ್ತು ಇವುಗಳ ವಿಷಯದಲ್ಲಿ ಸರ್ಕಾರದವರು ಸಹಾನುಭೂತಿಯನ್ನುಳ್ಳವರಾಗಿರುತ್ತಾರೆ.

ನಿಮ್ಮ ಪರ್ಯಾಲೋಚನೆಗಳಿಗೆ ಜಯಕಾಂಕ್ಷಿಯಾಗಿರುವೆನಲ್ಲದೆ, ನಿಮ್ಮ ಸಭೆಯು ಸರ್ಕಾರದವರ ಗಮನಕ್ಕೆ ತರುವ ಮೇಲ್ಕಂಡ ವಿಷಯುಗಳಲ್ಲೂ ಇತರ ವಿಷಯಗಳಲ್ಲೂ ಮಾಡುವ ನಿರ್ಧಾರಗಳಿಗೆ ಅಗತ್ಯವಾದ ಗಮನ ಕೊಡಲು ಸಿದ್ಧನಾಗಿರುವೆನು.

ರೆವಿನ್ಯೂಕಮಿಷನರ್ ಮ|| ಕೆ. ಚಾಂಡಿ ಸಾಹೇಬರವರು ಮಾಡಿದ ಸಭಾರಂಭ ಭಾಷಣ.

ಮಹಾಶಯರೇ !

ಮೈಸೂರು ಸೀಮೆಯ ಪಟೇಲರುಗಳ ಪ್ರಥಮ ಮಹಾಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸುವುದು ವಿಶೇಷ ಸಂತೋಷಕರವಾಗಿರುವುದಲ್ಲದೆ ಇದನ್ನೊಂದು ಅತಿಶಯವಾದ ಗೌರವವನ್ನಾಗಿ ಭಾವಿಸುತ್ತೇನೆ. ಇದಲ್ಲದೆ ಈ ಸಭಾಧ್ಯಕ್ಷತೆಯನ್ನು ವಹಿಸುವಂತೆ ನನ್ನನ್ನು ಕೇಳಿಕೊಂಡ ಈ ಸಭಾಮುಖಂಡರುಗಳಿಗೆ ವಂದಿಸುತ್ತೇನೆ. ಪ್ರಕೃತ ನನಗೆ ತಕ್ಕಷ್ಟು ವಿರಾಮವಿಲ್ಲದಿರುವ ಪ್ರಯುಕ್ತ ಈ ಸಂದರ್ಭದಲ್ಲಿ ನನ್ನ ಭಾಷಣವು ಸಂಕ್ಷೇಪವಾಗಿರುವುದನ್ನು ನೀವುಗಳು ಮನ್ನಿಸಬೇಕಾಗಿದೆ.

೨. ಈ ಭರತಖಂಡದಲ್ಲಿ ಪಟೇಲರುಗಳು ಅಥವಾ ಗ್ರಾಮಮುಖಂಡರುಗಳು ಏರ್ಪಟ್ಟ ಮೂಲಸಂಗತಿಯನ್ನು ಕುರಿತು ವಿಸ್ತಾರವಾಗಿ ಪ್ರಸ್ತಾಪಿಸುವವನಾಗಿಯೂ ಇಲ್ಲ ಮತ್ತು ಅದು ನನಗೆ ಗೊತ್ತೂ ಇಲ್ಲ. ಆದರೆ ಗ್ರಾಮಸಭೆಗಳು ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳಾಗಿ ಪ್ರಕಟವಾದ ಕಾಲದಿಂದಲೂ ಗ್ರಾಮಮುಖಂಡ, ಗೌಡ ಅಥವಾ ಪಟೇಲರುಗಳು ಏರ್ಪಟ್ಟು ಗ್ರಾಮದ ಮುಖ್ಯ ಪ್ರತಿನಿಧಿಗಳಾಗಿದ್ದಾರೆಂಬುದು ಜನಜನಿತವಾದ ವಿಷಯವಾಗಿದೆ. ಕೆಲವು ಸ್ಥಳಗಳಲ್ಲಿ ಈ ಉದ್ಯೋಗವು ವಂಶಪಾರಂಪರ್ಯವಾಗಿ ಬಂದಿರುತ್ತದೆ. ಮತ್ತೆ ಇತರ ಸ್ಥಳಗಳಲ್ಲಿ ರಾಜರು ಮುಖಂಡನನ್ನು ಚುನಾಯಿಸಿ ನೇಮಕಮಾಡುತ್ತಾರೆ. ಆದರೆ ಪ್ರತಿಯೊಂದು ಸಂದರ್ಭದಲ್ಲಿಯೂ ಮುಖಂಡನೇ ಗ್ರಾಮದ ಮುಖ್ಯ ಪ್ರತಿನಿಧಿಯಾಗಿರುತ್ತಾನೆ. ಎಷ್ಟೋ ರಾಜರುಗಳು ಆಳಿ ಅದೃಶ್ಯರಾಗಿಹೋಗಿದ್ದರೂ, ದಂಡಯಾತ್ರೆಗಳೂ ಕ್ಷಾಮಡಾಮರಗಳೂ ಕ್ಷೋಭೆಯನ್ನುಂಟುಮಾಡಿದ್ದರೂ, ಶಾಂತಿ ಸಮಾಧಾನ ಸ್ಥಿತಿಗಳು ಸ್ಥಿರಪಟ್ಟಾಗ ಪುನಃ ಗ್ರಾಮಸಭೆಗಳು ತಲೆದೋರಿರುತ್ತವೆ. ಮತ್ತು ಅವುಗಳ ಮುಖಂಡರು ಏರ್ಪಟ್ಟಿದ್ದಾರೆ. ಈ ಸಂಗತಿಯೇ ನಿಮ್ಮಗಳ ಈ ಮಹಾಸಭೆಗೆ ಅಸಾಧಾರಣವಾದ ಪ್ರಾಮುಖ್ಯತೆಯನ್ನುಂಟುಮಾಡುತ್ತದೆ.

೩. ಮೈಸೂರು ಸೀಮೆಯಲ್ಲಿ ಪಟೇಲರು ವಂಶಪಾರಂಪರ್ಯವಾಗಿ ಬಂದಿದ್ದಾರೆ. ಮತ್ತು ರಾಜ್ಯಾಡಳಿತಕ್ಕೆ ಮುಖ್ಯಾಂಶರಾಗಿದ್ದಾರೆ. ನಿಮಗೆಲ್ಲಾ ವಿದಿತವಾಗಿರುವಂತೆ, ಪಟೇಲನು ಗ್ರಾಮದಲ್ಲಿ ಕಂದಾಯ ವಸೂಲ್ಮಾಡುವವನಾಗಿರುವುದು ಮಾತ್ರವಲ್ಲದೆ ಗ್ರಾಮಪೋಲೀಸ್ ಆಫೀಸರಾಗಿಯೂ ಇದ್ದಾನೆ. ಈ ವಿಷಯವನ್ನು ಕುರಿತು ಯೋಚಿಸುತ್ತಾ ಹೋದಲ್ಲಿ ಸಾಮರ್ಥ್ಯ ಮತ್ತು ಪ್ರಾಮಾಣಿಕತೆಗಳಿಗೆ ಪಟೇಲರೇ ಒಂದು ಪಂಗಡವಾಗಿರುವರೆಂದು ತಿಳಿದು ವಿಸ್ಮಯವುಂಟಾಗುತ್ತದೆ. ಸುಮಾರು ಎರಡುಕೋಟಿ ರೂಪಾಯಿಯಾಗುವ ಈ ಸಂಸ್ಥಾನದ ಸಮಸ್ತ ಭೂಕಂದಾಯವೂ ಚಿಲ್ಲರೆ ಕಂದಾಯದ ಬಹುಭಾಗವೂ ಈ ಪಟೇಲರ ಹಸ್ತದಿಂದ ಹಾದುಬರುತ್ತದೆ. ಈ ಪಟೇಲರಲ್ಲಿ ಕೆಲವರು ಭಾಗ್ಯವಂತರಾಗಿಯೂ ಬಹುಮಂದಿ ಬಡವರಾಗಿಯೂ ಇದ್ದಾಗ್ಯೂ, ಅವರು ಯಾವ ಬಗೆಯ ಜಾಮೀನನ್ನೂ ಕೊಡಬೇಕಾಗಿರುವುದಿಲ್ಲ. ಆದರೂ ಯಾವುದಾದರೂ ವರ್ಷದಲ್ಲಿ ವಸೂಲಾದ ಬಹುಭಾಗ ಹಣದೊಡನೆ ದುರುಪಯೋಗವಾದ ಮೊಬಲನ್ನು ಹೋಲಿಸಿನೋಡಿದಲ್ಲಿ, ಇದು ಅತ್ಯಲ್ಪವಾಗಿರುವುದೆಂದು ಕಂಡುಬರುತ್ತದೆ. ಇದೂ ಅಲ್ಲದೆ, ಕ್ರಿಮಿನಲ್ ಮೊಕದ್ದಮೆಗಳಲ್ಲಿ ಪಟೇಲರ ರಿಪೋರ್ಟುಗಳಿಗೆ ವಿಶೇಷ ಪ್ರಾಮುಖ್ಯತೆಯು ಕೊಡಲ್ಪಡುತ್ತದೆಯೆಂಬುದನ್ನು ಮ್ಯಾಜಿಸ್ಟ್ರೇಟರಾಗಿರುವವರೆಲ್ಲರೂ ಬಲ್ಲರು. ಇನ್ನೂ ಲಂಬಿಸಿ ಬರೆಯಬಹುದಾಗಿದ್ದ ಹಲವು ರಿಪೋರ್ಟುಗಳನ್ನು ನಾನು ನೋಡಿದ್ದಾಗ್ಯೂ, ಸುಳ್ಳು ರಿಪೋರ್ಟು ಯಾವುದೂ ನನ್ನ ದೃಷ್ಟಿಗೆ ಬಿದ್ದಂತೆ ಜ್ಞಾಪಕವಿಲ್ಲ. ಸುಳ್ಳುರಿಪೋರ್ಟುಗಳನ್ನು ಅರಿಕೆಮಾಡಿದ ಬಗ್ಗೆ ತಕ್ಸೀರು ಆಪಾದಿತರಾದ ಪಟೇಲರ ಸಂಖ್ಯೆಯು ಬೆರಳುಗಳ ಮೇಲೆ ಎಣಿಕೆಮಾಡಿಬಿಡಬಹುದಾದಷ್ಟು ಅಲ್ಪವಾಗಿರುವುದೆಂದು ನಂಬುತ್ತೇನೆ. ಈ ಎರಡು ಸಂದರ್ಭಗಳಲ್ಲಿಯೂ ನಿಮ್ಮಗಳ ವರ್ತನೆಯು ಸ್ತುತ್ಯವಾಗಿದೆ. ಆದರೆ ಇದನ್ನು ಇನ್ನೂ ನಿಷ್ಕಳಂಕವಾಗಿರುವಂತೆ ಮಾಡಿಕೊಳ್ಳಬೇಕೆಂದು ನಿಮ್ಮೆಲ್ಲರಿಗೂ ನಾನು ಆತ್ಮಾಸಕ್ತಿಯಿಂದ ತಿಳಿಸುತ್ತೇನೆ. ಸರ್ಕಾರದ ಹಣವನ್ನು ದುರುಪಯೋಗಪಡಿಸಿದ ಬಗ್ಗೆ ತಕ್ಸೀರು ಸಾಬೀತಾದ ಪ್ರತಿಯೊಂದು ಮೊಕದ್ದಮೆಯ ತಪಶೀಲುಗಳನ್ನು ತೆಗೆದುಕೊಂಡು ಅಂತಹ ಮೊಕದ್ದಮೆಗಳು ನಡೆಯದ ಹಾಗೆ ಪ್ರಯತ್ನಪಟ್ಟಲ್ಲಿ ಈ ಸಂಘದಿಂದ ಈ ಸಂಸ್ಥಾನಕ್ಕೂ ಈ ಸಂಘದ ಮೆಂಬರುಗಳಿಗೂ ಪರಮ ಪ್ರಯೋಜನವಾಗುವುದು. ಹೀಗೆಯೇ ಪ್ರತಿಯೊಬ್ಬ ಪಟೇಲನೂ ಗ್ರಾಮ ಆಫೀಸರುಗಳ ಹಸ್ತಪುಸ್ತಕವನ್ನೂ ಮಾಲೂರಿನ ಮ|| ವೇಮಾರಡ್ಡಿಯವರಿಂದ ಈಚೆಗೆ ಪ್ರಕಟಿಸಲ್ಪಟ್ಟ ಅದೇ ವಿಷಯಕವಾದ ಒಂದು ಪುಸ್ತಕವನ್ನೂ ಓದುವುದು ತನ್ನ ಕರ್ತವ್ಯವೆಂದು ಭಾವಿಸಬೇಕಲ್ಲದೆ ರೆವಿನ್ಯೂ ಮತ್ತು ಪೊಲೀಸ್ ಕರ್ತವ್ಯಗಳಲ್ಲಿ ತಿಳವಳಿಕೆಯುಳ್ಳವನಾಗಬೇಕು. ಉದಾಸೀನನಾದವನಿಗೆ ಅವನ ಮಿತ್ರರಿಂದ ಪ್ರೋತ್ಸಾಹವಾಗಲಿ ಸಹಾಯವಾಗಲಿ ಯಾವುದೂ ದೊರೆಯಲಾರದು. ಯಾವನು ವಿಚಾರಪೂರ್ವಕವಾಗಿ ಸುಳ್ಳು ರಿಪೋರ್ಟು ಕೊಡುವನೋ ಅಥವಾ ಸರ್ಕಾರದ ಹಣವನ್ನು ದುರುಪಯೋಗಪಡಿಸುವನೋ ಅವನನ್ನು ನಿಮ್ಮ ಸಂಘದಿಂದ ತೆಗೆದುಬಿಡಬೇಕು.

೪. ಪ್ರಜಾಧಿಕಾರದ ದೆಸೆಯಿಂದ ನಿಮ್ಮ ಪ್ರಾಚೀನ ಪದವಿ ಪ್ರಾಶಸ್ತ್ಯಗಳಿಗೆ ಕುಂದಕವುಂಟಾಗಿದೆ ಯೆಂಬುದನ್ನು ನೀವು ಬಲ್ಲಿರಿ. ರಾಜರು ಬದಲಾವಣೆಯು ಮತ್ತು ಯುದ್ಧ ಕ್ಷಾಮಡಾಮರಗಳ ಕ್ಷೋಭೆಗಳು ಎದೆಗೊಟ್ಟು ನಿಂತು ಸಹಿಸಿಕೊಂಡು ಬಂದಿದ್ದೀರಿ. ಆದರೆ ಪ್ರಜಾಧಿಕಾರವು ನಿಮ್ಮ ಪ್ರಾಚೀನ ಪ್ರಾಶಸ್ತ್ಯಕ್ಕೆ ವಿಶೇಷ ಅಪಾಯಕರವಾಗಿದೆ. ಏಕೆಂದರೆ ಅದು ಜನರ ಸಮ್ಮತಿಯನ್ನು ಪ್ರಯೋಗಿಸಿದಲ್ಲಿ ಅದೊಂದು ಬಗೆಯ ಹಿತಶತ್ರುವೇ ಆಗಿದೆ. ಅದು ರಭಸದಿಂದ ನಿಮ್ಮ ಮೇಲೆ ಬೀಳುವಂತಿಲ್ಲ. ಆದರೂ ಅದರ ರಭಸವು ಅನಿವಾರ್ಯವಾಗಿದೆ. ಚುನಾವಣೆಯಾದ ಅಧ್ಯಕ್ಷರನ್ನೊಳಗೊಂಡ ಪಂಚಾಯತಿಗಳಲ್ಲಿ ಇದು ನಿಮಗೆ ಗೊತ್ತಾಗಿಯೇ ಇದೆ. ನಿಮ್ಮಲ್ಲಿ ಕೆಲವರಿಗೆ ಚುನಾವಣೆಯಾಗಿದೆ ; ಆದರೆ ಅನೇಕರಿಗೆ ಆಗಿಲ್ಲ. ಇದರಿಂದ ನಿಮ್ಮ ಪ್ರಾಶಸ್ತ್ಯವು ತಪ್ಪಿಹೋಯಿತೆಂದು ನೀವು ವ್ಯಸನಪಡಬಹುದು. ಈ ವಿಷಯದಲ್ಲಿ ನಿಮಗೆ ತಿಳಿಸಬೇಕೆಂದಿರುವುದು ಯಾವುದೆಂದರೆ, ಈಗಿನ ಭೂಕಂದಾಯದ ಮತ್ತು ಪೋಲೀಸಿನ ಪದ್ಧತಿಗಳು ಇರುವವರೆಗೂ ನೀವುಗಳು ಗ್ರಾಮ ನಿರ್ವಾಹಕ್ರಮದಲ್ಲಿ ಪ್ರಯೋಜನಕರವಾದ ಮತ್ತು ಪ್ರಮುಖರಾದ ಜನರಾಗಿರುವಿರಿ. ಆದರೆ ನಿಮ್ಮ ವಂಶಪಾರಂಪರ್ಯದ ಹಕ್ಕುಗಳಿಗೆ ಪ್ರಜಾಧಿಕಾರವು ಅವಾಂತರವನ್ನುಂಟುಮಾಡುವಾಗ ಅದಕ್ಕೆ ತಕ್ಕಂತೆ ನೀವುಗಳು ಸರಿಪಡಿಸಿಕೊಳ್ಳಬೇಕಾದುದು ನಿಮ್ಮ ಕರ್ತವ್ಯವಾಗಿದೆ. ದೇಶಸೇವೆ ಮತ್ತು ದೇಶಸೇವಕ ಎಂಬ ಮಾತಗಳು ಅಪಮಾನಕರವಾದವುಗಳಲ್ಲ. ಇಂಗ್ಲೆಂಡಿನ ಈಗಿನ ಮುಖ್ಯ ಮಂತ್ರಿಯು ವ್ಯವಸಾಯಗಾರರ ಪುತ್ರರಾಗಿದ್ದಾರೆ. ನೀವುಗಳು ನಿಮ್ಮ ಗ್ರಾಮಸೇವೆಯನ್ನು ಉತ್ತಮರೀತಿಯಲ್ಲಿ ಮಾಡಿದರೆ, ನಿಮ್ಮ ವಂಶಪಾರಂಪರ್ಯ ಪ್ರಾಶಸ್ತ್ಯದ ಪ್ರಯೋಜನವನ್ನು ಸುಲಭವಾಗಿ ಕಳೆದುಕೊಳ್ಳುವ ಸಂಭವವಿರುವುದಿಲ್ಲ. ಇದೂ ಅಲ್ಲದೆ ಗ್ರಾಮಸೇವೆಗೆ ಅವಕಾಶಗಳನ್ನು ಪಡೆಯುವುದಕ್ಕೆ ತನ್ನ ಜನರ ಸದಭಿಪ್ರಾಯವನ್ನು ಸಂಪಾದಿಸಿಕೊಳ್ಳಬೇಕಾದುದು ಯಾರೊಬ್ಬರಿಗೂ ಕೆಟ್ಟದಲ್ಲ. ಇದನ್ನು ಮುಂದೆಯೂ ನೀವು ಹೆಚ್ಚು ಹೆಚ್ಚಾಗಿ ಮಾಡಬೇಕಾಗಿದೆ.

೫. ನಿಮ್ಮ ಜನರ ಸದಭಿಪ್ರಾಯವನ್ನು ನೀವು ಸಂಪಾದಿಸಿಕೊಳ್ಳಬೇಕೆಂದು ಹೇಳಿದ್ದೇನಷ್ಟೆ. ಇದಕ್ಕೆ ನಿಮ್ಮ ಗ್ರಾಮಗಳನ್ನು ಶುದ್ಧವಾಗಿಯೂ ಆರೋಗ್ಯಕರವಾಗಿಯೂ ಸುಂದರವಾಗಿಯೂ ಇಟ್ಟುಕೊಂಡು ಆ ಬಗ್ಗೆ ಅವರ ಸಹಕಾರವನ್ನು ಪಡೆಯುವುದಕ್ಕಿಂತಲೂ ಉತ್ತಮವಾದ ಬೇರೆ ಮಾರ್ಗವಿಲ್ಲ. ಪಟ್ಟಣದ ಜೀವಮಾನಕ್ಕೂ ಕೈಗಾರಿಕೆಯ ಕಾರ್ಯಗಳಿಗೂ ಮಿತಿಮೀರಿದ ಪ್ರಾಮುಖ್ಯತೆಯನ್ನು ಕೊಟ್ಟಿರುವುದರಿಂದ ದೇಶಕ್ಕೆ ಕಷ್ಟವುಂಟಾಗಿದೆಯೆಂದೂ ಗ್ರಾಮಜೀವನಕ್ಕೆ ಹೆಚ್ಚು ಗಮನ ಕೊಡಬೇಕಾಗಿದೆಯೆಂದೂ ಜನರು ತಿಳಿದುಕೊಳ್ಳುತ್ತಾ ಬರುತ್ತಿರುವಂತೆ ಕಾಣುತ್ತದೆ. ದೈವಭಕ್ತಿ ಮತ್ತು ಸೌಂದರ್ಯಗಳು ಬಯಲು ಪ್ರದೇಶಗಳಲ್ಲಿ ತೇಜೋಮಯವಾದ ಸೂರ್ಯಾಸ್ತಸಮಯಗಳಲ್ಲಿ ಅನುಭವಕ್ಕೆ ಬರುವುದೇ ಹೊರತು ಪಟ್ಟಣಗಳ ಸಂದುಗೊಂದುಗಳಲ್ಲೂ ದಿವ್ಯ ಮಂದಿರಗಳಲ್ಲೂ ಬರುವುದಿಲ್ಲ. ವಿದ್ಯಾವಂತರಾದ ನಿಮ್ಮಗಳ ಮಕ್ಕಳುಗಳೆಲ್ಲರೂ ಗ್ರಾಮಗಳನ್ನು ಬಿಟ್ಟು ಬಿಡದೆ ಅಲ್ಲಿನ ಜೀವನವು ಆರೋಗ್ಯಪ್ರದವಾಗಿಯೂ ಪರಿಶುದ್ಧವಾಗಿಯೂ ಇರುವಂತೆ ಮಾಡಲು ಅವರುಗಳಿಗೆ ನೀವುಗಳು ಪ್ರೋತ್ಸಾಹಿಸುವಿರೆಂದು ನಂಬುತ್ತೇನೆ. ಪಂಚಮರ ಏಳಿಗೆಯನ್ನು ಅವರಲ್ಲಿ ಸಹಾನುಭೂತಿಯನ್ನು ಒಳಗೊಂಡಂತೆ ಗ್ರಾಮಾಡಳಿತವು ಇಂಡಿಯಾದೇಶದಲ್ಲಿ ಅತ್ಯಗತ್ಯವಾದ ಬಯಕೆಯಾಗಿದೆ.

೬. ನಿಮ್ಮಗಳಿಗೆ ಅಭಿನಂದಿಸಬೇಕಾದ ಮತ್ತೊಂದು ವಿಷಯವೇನೆಂದರೆ, ರಾಜಕೀಯ ಸುಧಾರಣೆಯ ಏರ್ಪಾಟಿನ ಮೇರೆಗೆ ನೀವುಗಳು ಈ ಸಂಸ್ಥಾನದ ಚುನಾವಣೆಯಾದ ಮೆಂಬರುಗಳ ಸಭೆಗಳಲ್ಲಿ ಸೇರುವುದಕ್ಕೆ ಹಕ್ಕುಳ್ಳವರಾಗಿದ್ದಿರಿ. ಸಮಯವು ಸಮನಿಸಿದಾಗ ಈ ಸಭೆಗಳಿಂದ ಸಂಸ್ಥಾನದ ಮಂತ್ರಿಗಳನ್ನು ಚುನಾಯಿಸುವುದು ಶ್ರೀಮನ್ಮಹಾರಾಜರವರಿಗೆ ಮಹದಾನಂದವನ್ನುಂಟುಮಾಡುವುದೆಂದು ಪ್ರಕಟವಾಗಿರುವುದು ನಿಮಗೆ ನೆನಪಿನಲ್ಲಿರಬಹುದು. ಆದಕಾರಣ ನೀವುಗಳು ಗ್ರಾಮಮುಖಂಡರಾಗಿ ಸಂಸ್ಥಾನದ ಸೇವೆಮಾಡಿದಾಗ್ಯೂ, ಈ ಸಭೆಗಳಿಗೆ ಚುನಾಯಿಸಲ್ಪಡಲು ಹಕ್ಕಿಲ್ಲದ ಸಿವಿಲ್ ಅಧಿಕಾರಿಗಳಂತೆ ಅಥವಾ ಸರ್ಕಾರಿ ನೌಕರರಂತೆ ಭಾವಿಸಲ್ಪಡುವುದಿಲ್ಲವೆಂಬ ಈ ಮುಖ್ಯವಾದ ಅಂಶವನ್ನು ನೀವು ಮನಸ್ಸಿನಲ್ಲಿಡಬೇಕೆಂದು ನಿಮಗೆ ಒತ್ತಿಹೇಳುತ್ತೇನೆ. ನಿಮ್ಮಲ್ಲಿ ಅನೇಕರು ಬಡವರೆಂಬುದನ್ನೂ ನಿಮಗೆ ಕೊಡುವ ಪೋಟಗಿಯು ಅಲ್ಪವೆಂಬುದನ್ನೂ ನಾನು ಚೆನ್ನಾಗಿ ಬಲ್ಲೆನು. ಆದರೆ ಪೋಟಗಿಯನ್ನು ಕೂಲಿಯಂತೆ ಭಾವಿಸಬಾರದು. ಅದೊಂದು ಸಂಭಾವನೆಯಂತಿದೆ. ಇದಲ್ಲದೆ ಸಭೆಗಳಿಗೆ ಚುನಾಯಿಸಲ್ಪಟ್ಟ ಮೆಂಬರುಗಳ ಸ್ಥಾನಕ್ಕೆ ನೀವುಗಳು ಉಮೇದುವಾರರಾಗಿ ನಿಲ್ಲಬಹುದೆಂಬ ಸಂಗತಿಯೇ ನೀವುಗಳು ಸಂಬಳ ಪಡೆಯುವ ನೌಕರರಲ್ಲವೆಂಬುದನ್ನು ವ್ಯಕ್ತಪಡಿಸುತ್ತದೆ, ನಗದು ಹಣದ ಜಾಮೀನನ್ನು ಕೊಡದೆ ಇದ್ದಾಗ್ಯೂ, ಸಂಬಳವಿಲ್ಲದೆ ಇದ್ದಾಗ್ಯೂ, ನೀವುಗಳು ಹಿಂದಿನಿಂದ ಮಾಡುತ್ತಾ ಬಂದಿರುವ ಸೇವೆಯು ಅತ್ಯಂತ ಗೌರವಾರ್ಹವಾದುದಾಗಿದೆ, ಇದೇ ರೀತಿಯ ಸೇವೆಯನ್ನು ಮುಂದೆಯೂ ಸಂತೋಷದಿಂದ ಮಾಡುತ್ತಾ ಬರುವಿರೆಂದು ನಂಬಿದ್ದೇನೆ. ಪಟೇಲರು ಯಾವ ಕಾಲದಲ್ಲಾಗಲಿ ಸಂಸ್ಥಾನದ ಸಂಪೂರ್ಣ ಅವಧಿಯ ನೌಕರರಾಗಿ ಏರ್ಪಟ್ಟರೆ ಗ್ರಾಮ ಸೇವೆಗೂ ಪ್ರಜಾಸೇವೆಗೂ ಕುಂದಕವೇ ಹೊರತು ಪ್ರಯೋಜನವಿಲ್ಲವೆಂದು ನನಗೆ ತೋರುತ್ತದೆ.

೭. ನಿಮ್ಮಗಳ ಪ್ರಥಮಸಭೆಯು ಕೇವಲ ಅನಾವೃಷ್ಟಿಯ ಕಾಲದಲ್ಲಿ ನಡೆಯುವಂತಾದುದು ದೌರ್ಭಾಗ್ಯವೇ ಸರಿ. ಇದರಿಂದ ನಿಮ್ಮ ಹಲವು ಪ್ರತಿನಿಧಿಗಳು ಸಭೆಗೆ ಬರಲು ಅವಕಾಶ ತಪ್ಪಿ ಹೋಗಿರಬೇಕಲ್ಲದೆ ಈಗ ಸಮೃದ್ಧಿ ಕಾಲದಲ್ಲಿ ಸೇರಿದ್ದರೆ ಆಗುತ್ತಿದ್ದ ಸಂತೋಷಕ್ಕಿಂತ ಕಡಿಮೆಯೇ ಆಗಿರಬೇಕು. ವಿದ್ಯಮಾನಗಳು ಉತ್ತಮಕ್ಕೆ ಬರುವಂತೆ, ಅದರಲ್ಲಿಯೂ ಮುಖ್ಯವಾಗಿ ಕಡು ಬಡವರ ಮತ್ತು ಪಂಚಮರ ಸ್ಥಿತಿಗತಿಗಳು ಉತ್ತಮಕ್ಕೆ ಬರುವಂತೆ, ನಿಮ್ಮ ಸ್ವಂತ ಗ್ರಾಮಗಳಲ್ಲಿ ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ನೀವುಗಳು ಪ್ರತಿಯೊಬ್ಬರೂ ಮಾಡುವಿರೆಂದೂ, ಕಷ್ಟನಿವಾರಣೆ ಬಗ್ಗೆ ಸ್ಥಳೀಯ ಅಧಿಕಾರಿಗಳ ಗಮನಕ್ಕೆ ಸಮಸ್ತ ವಿಷಯಗಳನ್ನು ತರುವಿರೆಂದೂ ನಂಬುತ್ತೇನೆ.

ನಿಮ್ಮಲ್ಲಿ ಹಣಗಾರರಾಗಿರುವವರು ನಿಮ್ಮ ಹಣವನ್ನೆಲ್ಲಾ ವ್ಯವಸಾಯಕ್ಕೆ ಅನುಕೂಲವಾದ ಬಾವಿಗಳನ್ನು ತೋಡಿಸುವುದಕ್ಕಾಗಿ ವೆಚ್ಚಮಾಡಬೇಕು. ಇದಕ್ಕಾಗಿ ಸರ್ಕಾರದವರು ತಕಾವಿ ಸಾಲಗಳನ್ನು ಕೊಡುತ್ತಾರೆ. ಬಂಜರು ಪ್ರದೇಶಗಳಿಗೆ ಬದಲಾಗಿ ವ್ಯವಸಾಯದ ಬಾವಿಗಳಿಂದ ಕೂಡಿರುವ ಆಹಾರದ ಹಸರು ಬೆಳೆಗಳ ಹೊಲಗದ್ದೆಗಳನ್ನು ನೋಡುವುದಕಿಂತ ಮತ್ತಾವುದೂ ನಮ್ಮ ಕಣ್ಣುಗಳಿಗೂ ಮನಸ್ಸಿಗೂ ಹೆಚ್ಚಿಗೆ ಹರ್ಷವನ್ನುಂಟುಮಾಡಲಾರದು. ಕ್ಷಾಮನಿವಾರಣೆಗೆ ಇಂತಹ ಬಾವಿಗಳು ಮುಖ್ಯ ಸಾಧನಗಳು; ಬಾವಿಗಳನ್ನು ತೋಡಿಸುವುದು, ಇತರರು ತೋಡಿಸುವಂತೆ ಮಾಡುವುದು ಮುಂತಾದ ಈ ವಿಚಾರಗಳಲ್ಲಿ ತಮ್ಮಗಳ ಧಾರಾಳವಾದ ಪರಸ್ಪರ ಸಹಾಯವು ಬಹಳ ಅಗತ್ಯವಾಗಿದೆ.

೮. ನಿಮ್ಮ ದೇಶಕ್ಕೂ ಗ್ರಾಮಗಳಿಗೂ ನೀವು ಮಾಡಬಹುದಾದ ಮತ್ತೊಂದು ಘನತರವಾದ ಉಪಕಾರವೇನೆಂದರೆ, ಕೆರೆಗಳಲ್ಲಿ ನೀರು ತೀರ ಒಣಗಿಹೋಗದಹಾಗೆ ಮಾಡುವಂತೆ ರೈತರಿಗೆ ತಿಳಿಯಹೇಳುವುದು. ನಾನು ಸಕ್ಕೀಟು (ಪ್ರಯಾಣ) ಹೋಗಿದ್ದ ಕಾಲದಲ್ಲಿ ಕೆಲವು ಕೆರೆಗಳಲ್ಲಿ ಸ್ವಲ್ಪವೇ ನೀರಿದ್ದುದನ್ನೂ ಪಕ್ಕದ ಕೆರೆಗಳಲ್ಲಿ ತೀರಾ ಒಣಗಿಹೋಗಿದ್ದುದನ್ನೂ ನೋಡಿದೆನು. ವಿಚಾರಮಾಡುವಲ್ಲಿ ಕೆರೆಯಲ್ಲಿ ಸ್ವಲ್ಪ ನೀರಿದ್ದ ಊರಿನ ರೈತರು ಕೆರೆಯಲ್ಲಿ ಮೂರು ತಿಂಗಳಿನ ನೀರಿದ್ದಾಗಲೇ ಸರ್ವಸಮ್ಮತದಿಂದ ತೂಬುಗಳನ್ನು ಮುಚ್ಚಿದ್ದರಿಂದ ಸ್ವಲ್ಪವಾದರೂ ನೀರು ಉಳಿದುಕೊಂಡಿದೆಯೆಂದು ಗೊತ್ತಾಯಿತು. ಕೆರೆಯಲ್ಲಿ ಮೂರು ತಿಂಗಳಿನ ನೀರಿದ್ದಾಗಲೇ ತೂಬುಗಳನ್ನು ಭದ್ರಪಡಿಸಿದರೆ ೩-೪ ವರ್ಷಗಳ ವರೆಗೆ ಮಳೆಯು ಸರಿಯಾಗಿ ಆಗದಿದ್ದರೂ ಕುಡಿಯುವುದಕ್ಕೂ ದನಕರುಗಳಿಗೂ ಸಾಕಾಗುವಷ್ಟು ನೀರು ಸಿಕ್ಕುವುದೆಂದು ಇಂಜನೀಯರುಗಳು ಹೇಳಿದ್ದಾರೆ. ಹೀಗೆ ಮಾಡಬೇಕಾದರೆ ಸ್ವಲ್ಪ ಸ್ವಾರ್ಥತೆಯನ್ನು ಬಿಡಬೇಕಾಗಿದೆ. ಆದರೆ ಆಯಾಯ ಗ್ರಾಮಗಳ ರೈತರು ಕಲೆತು ಈ ವಿಚಾರದಲ್ಲಿ ಮಾತಾಡಿ ಸರ್ವರ ಸಮ್ಮತಿಯಿಂದ ಹೀಗೆ ಮಾಡುವುದಕ್ಕೆ ಒಪ್ಪಿಕೊಂಡರೆ ಸರ್ಕಾರದವರು ನಿಜವಾಗಿಯೂ ಸಂತೋಷಪಡುತ್ತಾರೆ. ವ್ಯವಸಾಯಕ್ಕನುಕೂಲವಾದ ಅನೇಕ ಬಾವಿಗಳನ್ನು ತೋಡಿಸುವುದು, ಕೆರೆ ದುರಸ್ತಿಗಾಗಿ ಧಾರಾಳವಾದ ಚಂದೆ ಕೊಡುವುದು, ಕೆರೆಗಳನ್ನು ಸರಿಯಾದ ದುರಸ್ತು ಸ್ಥಿತಿಯಲ್ಲಿಟ್ಟುಕೊಳ್ಳುವುದು, ವೃಥಾ ನೀರು ವೆಚ್ಚವಾಗಲು ಅವಕಾಶವಿಲ್ಲದಂತೆ ನೋಡಿಕೊಂಡು ಕೆರೆಗಳಲ್ಲಿ ನೀರನ್ನು ನಿಲ್ಲಿಸಿಕೊಳ್ಳುವುದು, ಇವೆಲ್ಲಾ ಆಗಿಂದಾಗ್ಗೆ ಕ್ಷಾಮಕ್ಕೆ ಗುರಿಯಾಗುವ ಮೈಸೂರು ಸಂಸ್ಥಾನದಲ್ಲಿ ಅತ್ಯಗತ್ಯವಾಗಿ ಮಾಡಬೇಕಾದ ಕಾರ್ಯಗಳಾಗಿವೆ. ಕ್ಷಾಮಕಾಲಗಳಲ್ಲಿ ಕಲಿತ ಪಾಠಗಳು ಸ್ಥಿತಿಗತಿಗಳು ಸ್ವಲ್ಪ ಅನುಕೂಲವಾದ ಕೂಡಲೆ ಮರೆತುಹೋಗುತ್ತವೆ. ಆದರೆ, ಕ್ಷಾಮವು ಕಷ್ಟಸಹಿಷ್ಣುತೆಗಾಗಿ ಭಗವಂತನು ಮಾಡಿದ ಕಾರ್ಯವಲ್ಲವೆಂದೂ, ಮಾನವನ ಹೆಚ್ಚು ಪ್ರಯತ್ನಕ್ಕೂ ನಮ್ಮಗಳಲ್ಲಿರುವ ಉತ್ತಮ ಗುಣಗಳನ್ನು ಹೊರಪಡಿಸುವುದಕ್ಕೂ ಸಹಕಾರಿಯಾದುದೆಂದೂ ಜನಸಾಮಾನ್ಯಕ್ಕೂ ನಿಮ್ಮ ಮಕ್ಕಳಿಗೂ ತಿಳಿಯಹೇಳುವುದು ನಿಮ್ಮಂತಹ ಸಂಘದವರ ಕರ್ತವ್ಯವಾಗಿದೆ.

೯. ನಿಮ್ಮಗಳ ಅಭಿವೃದ್ಧಿಗಾಗಿ ನೀವು ಮಾಡುವ ಪ್ರಯತ್ನಗಳಲ್ಲೆಲ್ಲಾ ಇತರರ ವಿಷಯದಲ್ಲಿಯೂ ವಿಶ್ವಾಸವನ್ನು ತೋರಿಸಬೇಕೆಂದು ನಿಮ್ಮಗಳನ್ನು ಕೇಳಿಕೊಳ್ಳುವುದಕ್ಕೆ ನೀವು ಅವಕಾಶ ಕೊಡುವಿರೆಂದು ನಂಬಿದ್ದೇನೆ. ಸಹೋದರ ಭಾವ ಮತ್ತು ವಿಶ್ವಾಸದಿಂದ ನಿಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುವುದು ಸಾಧ್ಯವೆಂದು ನಾನು ಹೇಳುವುದನ್ನು ನೀವೆಲ್ಲರೂ ಒಪ್ಪಿಕೊಳ್ಳುವುದರಲ್ಲಿ ಸಂದೇಹವಿಲ್ಲ.

೧೦. ಇನ್ನು ನಾನು ಹೆಚ್ಚಿಗೆ ಹೇಳಬೇಕಾದ ವಿಷಯಗಳೇನೂ ಉಳಿದಿಲ್ಲ. ಮೈಸೂರು ಸಿಂಹಾಸನದಲ್ಲೂ ಆಳುವ ಮಹಾಸ್ವಾಮಿಯವರಲ್ಲೂ ನಿಮಗಿರುವ ಭಕ್ತಿವಿಶ್ವಾಸಗಳು ಸುಪ್ರಸಿದ್ಧವಾಗಿವೆಯಲ್ಲದೆ ದೇಶಕ್ಕೆ ಬೆಲೆಯಿಲ್ಲದ ಆಸ್ತಿಯಾಗಿವೆ. ನಿಮ್ಮಗಳ ಅಭಿವೃದ್ಧಿಗಾಗಿ ನೀವು ಮಾಡುವ ಎಲ್ಲಾ ಪ್ರಯತ್ನಗಳಲ್ಲೂ ನಿಮ್ಮ ರಾಜಭಕ್ತಿಯು ಪ್ರಾಮುಖ್ಯವಾಗಿದ್ದುಕೊಂಡು, ನಿಮ್ಮ ಪ್ರಯತ್ನಗಳೆಲ್ಲಾ ಫಲದಾಯಕವಾಗಿಯೂ ವಿಶೇಷ ಜಯಸೂಚಕವಾಗಿಯೂ ಆಗಲೆಂದು ಹಾರೈಸುತ್ತೇನೆ.

ಅಧ್ಯಕ್ಷರಾದ ಮ|| ಕೆ. ಎಸ್. ಚನ್ನಬಸಪ್ಪನವರು ಮಾಡಿದ ಭಾಷಣವು

ಸತ್ಕಾರಸಭಾಸದರೇ, ಸಹೋದರ ಪಟೇಲ ಮಹಾಶಯರೆ,

ಈ ಮಹಾಸಭೆಯ ಅಧ್ಯಕ್ಷಸ್ಥಾನವನ್ನು ವಹಿಸುವುದಕ್ಕೆ ಅರ್ಹತೆಯುಳ್ಳ ಕೇವಲ ವಿದ್ಯಾವಂತರೂ, ಅನುಭವಶಾಲಿಗಳೂ ಆದ ಅನೇಕ ಪಟೇಲರುಗಳು ಇದ್ದಾಗ್ಯೂ, ತಾವುಗಳೆಲ್ಲರೂ ಈ ಗೌರವಸ್ಥಾನವನ್ನು ನನಗೆ ದಯಪಾಲಿಸಿರುವುದಕ್ಕಾಗಿ ನಾನು ಚಿರಕಾಲ ಕೃತಜ್ಞನಾಗಿರುವೆನಲ್ಲದೆ ತಮ್ಮಗಳೆಲ್ಲರಿಗೂ ನನ್ನ ಅನೇಕ ವಂದನೆಗಳನ್ನು ಸಮರ್ಪಿಸುತ್ತೇನೆ.

ಘನ ಉದ್ದೇಶಗಳನ್ನುಳ್ಳ ಬಹು ಜನೇಪ್ಸಿತವಾದ ಈ ಮಹಾಸಭೆಯನ್ನು ನಡೆಸಲು ಮುಂದಾಗಿ ನಿಂತು ಅನೇಕ ದಿನಗಳಿಂದ ಬಹಳ ಪ್ರಯಾಸಪಟ್ಟು, ಬಂದ ವಿಘ್ನಗಳನೆಲ್ಲಾ ಲೆಕ್ಕಿಸದೆ ಕಾರ್ಯಸಾಧನೆಯನ್ನು ಮಾಡಿ ನಮ್ಮ ದೇಶದ ಸಮಸ್ತ ಪಟೇಲರ ಗೌರವಕ್ಕಾಗಿ ತಮ್ಮ ಸಾಹಸಗಳನ್ನು ತೋರಿಸಿರುವ ಚನ್ನಪಟ್ಣ ಮತ್ತು ಕ್ಲೋಸ್‌ಪೇಟೆ ತಾಲ್ಲೂಕುಗಳ ಪಟೇಲರುಗಳು ನಮ್ಮೆಲ್ಲರುಗಳಿಂದಲೂ ವಂದನಾರ್ಹರಾಗಿರುವರು. ಇಂತಹ ಸಭೆಯೊಂದರ ಆವಶ್ಯಕತೆಯು ಬಹು ಕಾಲದಿಂದಲೂ ಇದ್ದಿತು. "ಸಂಘೇ ಶಕ್ತಿ ! ಕಲೌಯುಗೇ" ಎಂಬ ಆರ್ಯೋಕ್ತಿಯಂತೆ ಈ ಕಾಲದಲ್ಲಿ ಪ್ರತಿಯೊಂದು ಜಾತಿಯವರೂ, ಪಂಗಡದವರೂ, ಮಹಾಸಭೆಗಳನ್ನೂ ಸಂಘಗಳನ್ನೂ ಏರ್ಪಡಿಸಿಕೊಂಡು ತಮ್ಮ ತಮ್ಮ ಅಭಿವೃದ್ಧಿಗೆ ಬೇಕಾದ ಕಾರ್ಯಗಳನ್ನು ಮಾಡಿಕೊಳ್ಳಲು ಆತುರರಾಗಿರುವಾಗ ಪಟೇಲರ ಪಂಗಡಕ್ಕೆ ಸೇರಿದವರು ಮಾತ್ರ ತಮ್ಮ ಸ್ಥಿತಿಯು ದಿನಕ್ರಮೇಣ ಇಳಿಯುತ್ತಿದ್ದರೂ, ತಾವು ಅನೇಕ ವಿಷಯಗಳಲ್ಲಿ ಬಹಳ ಹಿಂದುಳಿದಿದ್ದರೂ, ತಮ್ಮ ಏಳಿಗೆಗೆ ಬೇಕಾದ ಪ್ರಯತ್ನಗಳನ್ನು ಇದುವರೆಗೂ ಕೈಕೊಳ್ಳದೆ ತಟಸ್ಥರಾಗಿದ್ದುದು ಶೋಚನೀಯವಾದ ಸಂಗತಿಯಾಗಿದೆ. ಈ ಕೊರತೆಯನ್ನು ಹೋಗಲಾಡಿಸಲು ಈ ಮಹಾಸಭೆಯ ಪ್ರಯತ್ನವು ಈಗಲಾದರೂ ನಡೆದುದಕ್ಕಾಗಿ ನಾವುಗಳೆಲ್ಲರೂ ಆನಂದಿತರಾಗಿದ್ದೇವಲ್ಲದೆ, ಈ ದಿವಸವನ್ನು ನಮ್ಮ ಮುಂದಿನ ಉಚ್ಛ್ರಾಯಸ್ಥಿತಿಗೆ ಸೂಚಕವಾದ ಶುಭದಿವಸವೆಂದೆಣಿಸಬೇಕಾಗಿದೆ.

ಮಹನೀಯರೆ, ಬಹಳ ಪುರಾತನ ಕಾಲದಿಂದಲೂ ನಡೆದು ಬರುತ್ತಿರುವ ಗ್ರಾಮಗಳ ಮುಖ್ಯಾಧಿಕಾರ ಗೌರವವು ದಿನೇದಿನೇ ಸಡಿಲವಾಗುತ್ತಾ ಬಂದ ಹಾಗೆಲ್ಲಾ ಆ ಸ್ಥಾನಕ್ಕಿರಬೇಕಾದ ಪ್ರಾಶಸ್ತ್ಯವು ಕಡಿಮೆಯಾಗುತ್ತ ಬಂದಿರುವುದೂ, ಇದರಿಂದ ಪ್ರಜೆಗಳ ನೆಮ್ಮದಿಗೂ ಸರ್ಕಾರದ ಕಾರ್ಯನಿರ್ವಾಹಕತೆಗೂ ಕುಂದಕವಾಗಿರುತ್ತೆಂಬುದೂ ತಮ್ಮೆಲ್ಲರಿಗೂ ತಿಳಿದ ವಿಷಯಗಳಾಗಿರುತ್ತವೆಂದು ಭಾವಿಸುತ್ತೇನೆ. ಇಂತಹ ಕೊರತೆಗಳ ಪರಿಹಾರಕ್ಕಾಗಿಯೂ, ಗ್ರಾಮದ ಮುಖ್ಯಾಧಿಕಾರಕ್ಕೆ ನ್ಯಾಯವಾಗಿರಬೇಕಾದ ಕಾರ್ಯದಕ್ಷತೆಯನ್ನೂ, ಪ್ರಾಶಸ್ತ್ಯವನ್ನೂ, ಹೊಂದುವುದಕ್ಕಾಗಿಯೂ ಮಾಡಬೇಕಾದ ಕರ್ತವ್ಯಗಳನ್ನು ಚರ್ಚಿಸಿ, ತೀರ್ಮಾನವಾಗುವ ಪ್ರಕಾರ ಕಾರ್ಯಭಾಗಗಳನ್ನು ನಡೆಸಲು ಸೌಕರ್ಯಗಳನ್ನು ಒದಗಿಸಿಕೊಳ್ಳುವುದೇ ಈ ಮಹಾಸಭೆಯ ಮುಖ್ಯೋದ್ದೇಶವಾಗಿರುತ್ತದೆ. ಈ ವಿಚಾರವನ್ನು ಪ್ರಸ್ತಾಪಿಸುವುದಕ್ಕೆ ಪೂರ್ವ ನಮ್ಮಗಳ ಪೂರ್ವೋತ್ತರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ತಿಳಿಸಲು ಅಪೇಕ್ಷಿಸುತ್ತೇನೆ.

ನಮ್ಮಗಳ ಸ್ಥಾನವು ಯಾವ ಕಾಲದಲ್ಲಿ ಪ್ರಾರಂಭವಾಯಿತೆಂಬುದನ್ನು ನಿರ್ಧರಿಸಿ ಹೇಳುವುದಕ್ಕಾಗುವುದಿಲ್ಲ. ಬಹಳ ಕಾಲದ ಹಿಂದಕ್ಕೆ ಹುಡುಕಿ ನೋಡಿದರೂ, ಅದಕ್ಕಿಂತಲೂ ಹಿಂದೆಯೇ ಈ ಅಧಿಕಾರವು ಇದ್ದಂತೆ ಕಾಣಬರುತ್ತಿದೆ. ಮನು ಚಕ್ರವರ್ತಿಯವರ ಕಾಲದಲ್ಲಿಯೂ ಗ್ರಾಮಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನೂ ಆಯಾ ಗ್ರಾಮದ ಗೌಡ ಅಥವಾ ಮುಖ್ಯಸ್ಥರ ಮೂಲಕವಾಗಿಯೇ ನಡೆಸುತ್ತಿದ್ದರೆಂದು ತಿಳಿಯಬರುತ್ತಿದೆ. ನಮ್ಮ ಈ ಭರತಖಂಡದಲ್ಲಿ ಅನೇಕ ಸಂಸ್ಥಾನಗಳೇರ್ಪಟ್ಟು, ಅವುಗಳನ್ನೆಲ್ಲಾ ಬೇರೆ ಬೇರೆ ರಾಜರುಗಳು ಆಳುವುದಕ್ಕೆ ಪ್ರಾರಂಭಿಸಿದ ಕಾಲಕ್ಕಿಂತಲೂ ಹಿಂದೆಯೇ ಅಂದರೆ ಎಂದು ಮಾನವರು ಕಾರಣಾಂತರಗಳಿಂದ ಗುಂಪುಗುಂಪಾಗಿ ಸೇರಿಕೊಂಡು, ಗ್ರಾಮಗಳನ್ನು ಕಟ್ಟಿಕೊಂಡು ವಾಸಿಸುವುದಕ್ಕೆ ಪ್ರಾರಂಭಿಸಿದರೋ, ಆ ಕಾಲದಿಂದಲೂ ಪ್ರತಿಯೊಂದು ಗ್ರಾಮದಲ್ಲೂ ಒಬ್ಬೊಬ್ಬ ಯಜಮಾನರಿದ್ದಂತೆ ಕಾಣುತ್ತದೆ.

ಇಂತಹ ಮುಖ್ಯಸ್ಥರಿಗೆ ಕನ್ನಡದಲ್ಲಿ ಗೌಡರೆಂತಲೂ, ತೆಲುಗಿನಲ್ಲಿ ರೆಡ್ಡಿ ಎಂತಲೂ, ಮಹಾರಾಷ್ಟ್ರದಲ್ಲಿ ಪಾಟೀಲ್ ಎಂತಲೂ, ಇದರಂತೆಯೇ ಬೇರೆ ಬೇರೆ ದೇಶಗಳಲ್ಲಿ ಆಯಾ ದೇಶಭಾಷೆಗಳಿಗನುಸಾರವಾದ ಹೆಸರು ಬಂದಿರುತ್ತದೆ. ನಮ್ಮ ದೇಶದಲ್ಲಿ ಮೊದಲಿನಿಂದಲೂ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಕಾನೂನುಗಳು, ಮಹಾರಾಷ್ಟ್ರ ದೇಶವಾದ ಬೊಂಬಾಯಿ ಪದ್ಧತಿಯನ್ನು ಅನುಸರಿಸಿರುವುದರಿಂದ, ಅಲ್ಲಿಯ ಗೌಡರಿಗೆ ವಾಡಿಕೆಯಾಗಿರುವ ಪಾಟೀಲ್ ಎಂಬ ಹೆಸರೇ ಇಲ್ಲಿಯೂ ಪ್ರಚಾರಕ್ಕೆ ಬಂದು ದಿನಕ್ರಮೇಣ ಆ ಶಬ್ದವು "ಪಟೇಲು" ಎಂಬದಾಗಿ ಮಾರ್ಪಟ್ಟು ಪ್ರಕೃತದಲ್ಲಿ ಗ್ರಾಮದ ಗೌಡರಿಗೆ ಆ ಹೆಸರೇ ರೂಢಿಯಲ್ಲಿ ಬಂದಿದೆ.

[೮ ನೇ ಪುಟವನ್ನು ನೋಡಿ.]

MYSORE RAILWAYS.

NOTIFICATION.

On and from Tuesday the 5th February 1924, an additional Passenger train service will be introduced between Mysore and Arsikere. On account of this additional service, the timings of Nos. 11 and 12 Mixed trains have also been altered and the timings of these trains are as noted below :—

UP TRAINS.

		No. 11 Mixed.		No. 41 Passenger.	
		Hrs.	Mts.	Hrs.	Mts.
Arsikere	Dep.	2	30	14	20
Hassan	Arr.	5	40	16	26
	Dep.	6	0	16	42
Mysore	Arr.	11	50	21	5

DOWN TRAINS.

		No. 42 Passenger.		No. 12 Mixed.	
		Hrs.	Mts.	Hrs.	Mts.
Mysore	Dep.	7	25	13	15
Hassan	Arr.	11	50	19	54
	Dep.	12	6	20	14
Arsikere	Arr.	13	35	22	25

2. Consequent on the arrival of No. 41 Passenger at Mysore at 21-5 hours, No. 9 Up Mixed will leave Nanjangud Town at 20-0 hours instead of 19-40 hours and arrive at Mysore at 21/20 hours instead of at 21-0 hours.

3. The timings of the Mail and Express trains on Mysore-Bangalore Section will be altered from 1st March 1924 instead of from 1-2-1924.

Traffic Manager's Office,
Mysore.
29th January 1924.

A. A. KHAN,
Manager.

THE FIRST MYSORE PATELS' (VILLAGE HEADMEN) PROVINCIAL CONFERENCE AT CHENNAPATNA.

(Contributed.)

The First Mysore Patels' Conference was held at Chennapatna on the 26th and 27th January 1924 under the presidency of Mr. K. S. Chennabasappa an influential Patel of Gundlupet Taluk. Over 542 delegates from 32 Taluks in the State besides 500 sympathisers attended the Conference. The following were some of the distinguished Visitors to the Conference.

1. Messrs. B. Venkoba Rao, Deputy Commissioner.
2. K. H. Ramayya, Registrar of Co-operative Societies.
3. G. Paramasiviah, Advocate.
4. Rao Sahib H. Chennayya.
5. M. L. Shame Gowda.
6. R. Ramachendra Rao, Amildar.
7. Abdul Khudus, Merchant, Chennapatna.

Mr. G. Paramasiviah, B.A. LL.B., read the Message kindly sent by the Dewan Mr. A. R. Banerji, C.S.I., C.I.E., Mr. Venkatappa, Secretary, Reception Committee read the Kannada translation of the Dewan's Message.

Mr. K. Chandy, B.A., Revenue Commissioner opened the Conference after delivering an instructive and thoughtful address in the course of which he traced the importance of Patels as powerful factors in the socio-political life of the villages, as police officers for protecting the peace and property of the villagers and their responsible work carried on with a high degree or honesty as Collectors of Revenue to the State to the extent of over 2 crores of rupees. He exhorted them all who weilded a powerful influence over the villagers that form the backbone of the country, to come forward during the present time of drought and distress and give their hearty co-operation in successfully carrying out measures started by Government for allaying the hardship caused to the people.

Mr. K. H. Ramayya, B.A. Bar-at-Law., Registrar of co-operative societies, translated the English speech of the President to the audience.

Mr. Sidde Gowda, Patel and Chairman of the Reception Committee welcomed the delegates in suitable terms. Mr. Chennabasappa then read his Presidential Address which was very instructive and quite suited to the occasion. He surveyed the past and present condition of the Patels and suggested ways and means for their betterment.

Messrs. Rao Sabib H. Chennayya, K. H. Ramayya, M. L. Shame Gowda, G. Paramasiviah and several other gentlemen gave stirring speeches, on the duties and responsibilities of Patels.

The first resolution was about the Loyalty and Reverence of the Patels to H. H. the Maharaja and it was passed unanimously by the whole audience standing. After a keen and interesting discussion of the subjects on the agenda about 30 important resolutions about the requirement of the Patels and their grievances etc., were passed by the members. The Conference came to a close on the 27th with three cheers to H. H. the Maharaja and H. H. the Yuvaraja.

Elaborate arrangements had been made by the Members of the Reception Committee for the boarding and lodging of all the delegates that attended the Conference and their stay was made pleasant and enjoyable. The thanks of the Conference were duly conveyed to the Reception Committee Members for all their trouble.

1924ನೇ ಇಸವಿ ಜನವರಿ 26 ಮತ್ತು 27ನೇ ತಾರೀಖುಗಳಲ್ಲಿ ಚನ್ನಪಟ್ಟಣದ ಎಂ. ಪಿ. ಪಿ. ಜಯಲಕ್ಷ್ಮೀ ಥಿಯೇಟರಿನಲ್ಲಿ ನಡೆದ ಮೈಸೂರು ದೇಶದ ಸಮಸ್ತ ಪಟೇಲರ ಮಹಾಸಭೆ.

(ಬರೆದು ಬಂದುದು.)

ಈ ಮಹಾಸಭೆಯು ಸಮಾಜದ ಏಳಿಗೆಗೆ ಅನೇಕ ವಿಧಗಳಲ್ಲಿ ಮೂಲಸ್ಥಾನವಾದ ಚನ್ನಪಟ್ಟಣದಲ್ಲಿ ಬಹಳ ವಿಜೃಂಭಣೆಯಿಂದ ಜನವರಿ 26 ಮತ್ತು 27ನೇ ತಾರೀಖುಗಳಲ್ಲಿ ನಡೆಯಿತು. ಆ ಕಾಲದಲ್ಲಿ ಥಿಯೇಟರಿನ ಮುಂಭಾಗದಲ್ಲಿ ತಳಿರು ತೋರಣಗಳಿಂದ ನೇತ್ರಾನಂದಕರವಾಗಿ ನಿರ್ಮಿಸಿದ್ದ ಮಂಟಪವು ಬಹು ರಮ್ಯವಾಗಿತ್ತು. 26ನೇ ತಾ|| ಶನಿವಾರ ಸುಮಾರು ಮೂರುಗಂಟೆಗೆ ಸರಿಯಾಗಿ ರೈತರ ಕ್ಷೇಮಾಭಿವೃದ್ಧಿ ಎಂಬ ಕಂಕಣಬದ್ಧರಾಗಿರುವ ಮ|| ಕೆ. ಚಾಂಡಿ ಸಾಹೇಬರವರನ್ನು ಮತ್ತು ಸಾಹುಕಾರ್ ಮ|| ಕೆ. ಚೆನ್ನಬಸಪ್ಪನವರನ್ನು ಅನೇಕ ದೊಡ್ಡಮನುಷ್ಯರು ಟ್ರಾವಲರ್ಸ್ ಬಂಗಲೆಯಲ್ಲಿ ಎದುರುಗೊಂಡು ವಾದ್ಯಘೋಷಗಳಿಂದಲೂ ಜಯಭೇರಿಗಳಿಂದಲೂ ಉತ್ಸವಪೂರ್ವಕವಾಗಿ ಕರೆದುಕೊಂಡು ಬಂದರು. ಆ ಕಾಲದಲ್ಲಿ ನೆರೆದಿದ್ದ ಮ|| ಗಳಾದ ಕೆ. ಎಚ್. ರಾಮಯ್ಯ, ಬಿ.ಎ., ಬಾರ್-ಆಟ್-ಲಾ ಯವರು, ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರಾದ ವೆಂಕೋಬರಾವ್, ಬಿ.ಎ. ಯವರು, ರಾವ್‌ಸಾಹೇಬ್ ಚನ್ನಯ್ಯನವರು, ಪರಮಶಿವಯ್ಯ, ಬಿ.ಎ.ಎಲ್‌ಎಲ್.ಬಿ., ಯವರು, ಮತ್ತು ಅಮಲ್ದಾರರೇ ಮೊದಲಾದ ಅನೇಕಮಂದಿ ದೊಡ್ಡಮನುಷ್ಯರನ್ನೊಳಗೊಂಡು ಥಿಯೇಟರಿನಲ್ಲಿರುವ ಪ್ಲಾಟ್‌ಫಾರಮ್ಮಿನ ಮೇಲೆ ಮೈಸೂರು ದೇಶದ ಎಲ್ಲಾ ತಾಲ್ಲೂಕುಗಳಿಂದ ನೆರೆದಿದ್ದ ನೂರಾರುಮಂದಿ ಪಟೇಲರು ಮತ್ತು ಪಟೇಲರ ಹಿತಚಿಂತಕರಾದ ಅನೇಕ ದೊಡ್ಡಮನುಷ್ಯರುಗಳು ಜಯಘೋಷವನ್ನು ಮಾಡುತ್ತಿರಲು ಮ|| ಚಾಂಡಿ ಸಾಹೇಬರು ಅಗ್ರಾಸನಾಧಿಪತ್ಯವನ್ನು ವಹಿಸಿದರು.

ಆ ಕಾಲದಲ್ಲಿ ನೆರೆದಿದ್ದ ಕೆಲವು ಬಾಲಿಕಾ ಸಹೋದರಿಯರಿಂದ ಭಗವತ್ಪ್ರಾರ್ಥನೆ ನಡಿಸಲ್ಪಟ್ಟಮೇಲೆ ಮಾಲೂರು ಮ|| ವೇಮಾರಡ್ಡಿಯವರು ಮಹಾಸಭೆಯ ಶ್ರೇಯಃಪ್ರಾರ್ಥನೆಯನ್ನು ಮಾಡಿದರು. ತದನಂತರ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರಾದ ರಾಜಮಂತ್ರಧುರೀಣ ಶ್ರೀಯುತ ಎ. ಆರ್. ಬಾನರ್ಜಿ ಎಂ.ಎ., ಸಿ.ಎಸ್.ಐ., ಸಿ.ಐ.ಇ., ಯವರು ದಯಮಾಡಿ ಕಳುಹಿಸಿದ ಶುಭವಾರ್ತಾ ಪತ್ರಿಕೆಯು ಮ|| ಜಿ. ಪರಮಶಿವಯ್ಯನವರಿಂದ ಓದಲ್ಪಟ್ಟಿತು. ಈ ಕಾರ್ಯದಲ್ಲಿ ಇವರ ಸಹಾನುಭೂತಿಯೂ, ಪ್ರೋತ್ಸಾಹವೂ ಸ್ತೋತ್ರಾರ್ಹವಾದ್ದರಿಂದ ಇವರ ಶುಭವಾರ್ತೆಯು ಪೂರ್ತಿಯಾಗಿ ಬೇರೆಕಡೆ ಮುದ್ರಿಸಲ್ಪಟ್ಟಿರುತ್ತೆ. ನಂತರ ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ.ಐ.ಇ., ಯವರು ಬರೆದುಕಳುಹಿಸಿದ್ದ ಪ್ರೋತ್ಸಾಹಕರವಾದ ಶುಭವಾರ್ತೆಯು ಓದಲ್ಪಟ್ಟಿತು. ಇದಾದಮೇಲೆ ಸತ್ಕಾರಮಂಡಲಿಯ ಅಧ್ಯಕ್ಷರಾದ ತಿಮ್ಮಸಂದ್ರದ ಪಟೇಲ್ ಸಿದ್ದೇಗೌಡರು, ಅರ್ಕಕರಹಳ್ಳಿ ಪಟೇಲ್ ಸೋಮೇಗೌಡರು ಸ್ವಾಗತಭಾಷಣವನ್ನು ಮಾಡಿದರು. ಇದೆಲ್ಲಾ ಸಾಂಗವಾಗಿ ನಡೆದಮೇಲೆ ಸಮಸ್ತ ಪಟೇಲರ ಕ್ಷೇಮಾಭಿವೃದ್ಧಿಗೂ ಸ್ತೋತ್ರಕ್ಕೂ ಪಾತ್ರರಾದ ಮ|| ಚಾಂಡಿಸಾಹೇಬರವರು ಪ್ರಜಾಹಿತಚಿಂತನೆಯಿಂದ ಕೂಡಿರುವ ತಮ್ಮ ಭಾಷಣವನ್ನು ಇಂಗ್ಲೀಷಿನಲ್ಲಿ ಮಾಡಿದರು. ಇದರ ಕನ್ನಡ ತರ್ಜುಮೆಯನ್ನು ಮ|| ಕೆ. ಎಚ್. ರಾಮಯ್ಯನವರು ಓದಿಹೇಳಿದರು. ಈ ಭಾಷಣವು ಅತ್ಯಂತ ಸ್ತೋತ್ರಾರ್ಹವಾಗಿರುವುದರಿಂದ ಪ್ರತ್ಯೇಕವಾಗಿ ಮುದ್ರಿಸಲ್ಪಟ್ಟಿದೆ. ಇದಾದ ಮೇಲೆ ಈ ಸಮಸ್ತ ಪಟೇಲರ ಮಹಾಸಭೆಯ ಅಧ್ಯಕ್ಷರಾದ ಗುಂಡ್ಲುಪೇಟೆ ತಾಲ್ಲೂಕು ಕಬ್ಬಳ್ಳಿ ಸಾಹುಕಾರ್ ಮತ್ತು ಪಟೇಲ್ ಮ|| ಕೆ. ಎಸ್. ಚನ್ನಬಸಪ್ಪನವರು ಮಾಡಿದ ಭಾಷಣವು ಬಹಳಮಟ್ಟಿಗೆ ಶ್ಲಾಘ್ಯಾರ್ಹವಾದ್ದರಿಂದ ಪ್ರತ್ಯೇಕವಾಗಿ ಮುದ್ರಿಸಲ್ಪಟ್ಟಿರುತ್ತೆ. ಮ|| ಚಾಂಡಿ ಸಾಹೇಬರು ಹೀಗೆ ಸಭಾಪ್ರಾರಂಭೋತ್ಸವವನ್ನು ಮಾಡಿ ಮುಗಿಸಿದ ಮೇಲೆ ವಾದ್ಯಘೋಷಗಳಿಂದಲೂ, ಜಯಭೇರಿಗಳಿಂದಲೂ ಕಳುಹಿಸಲ್ಪಟ್ಟನಂತರ ಮಹಾಸಭೆಯ ಅಧ್ಯಕ್ಷರಾದ ಮ|| ಕಬ್ಬಳ್ಳಿ ಚನ್ನಬಸಪ್ಪನವರ ಸಮ್ಮುಖದಲ್ಲಿ ಗೋಸಂರಕ್ಷಣೆಯ ವಿಷಯವಾಗಿ ಕೆಲವು ದೊಡ್ಡಮನುಷ್ಯರು ಸಹಾನುಭೂತಿಯಿಂದ ಕೂಡಿದ ಕೆಲವು ಭಾಷಣಗಳನ್ನು ಮಾಡಿದರು. ಸಭೆಯು ಮುಕ್ತಾಯವಾಗುವುದಕ್ಕೆ ಮೊದಲು ಪಟೇಲರ ಪರವಾಗಿ ಚಿಕ್ಕಬಳ್ಳಾಪುರದ ತಾಲ್ಲೂಕು ಅರಸನಹಳ್ಳಿ ಪಟೇಲ್ ಮ|| ಮುನಿನಂಜೇಗೌಡರ ಮಕ್ಕಳು ಮ|| ಎಂ. ಮುನಿಶಾಮಯ್ಯನವರು ಬಹಳ ಸ್ವಾರಸ್ಯವಾದ, ವಿನೋದಕರವಾದ ಮತ್ತು ಕೆಲವು ಅನುಭವಧಾರಗಳಿಂದ ಕೂಡಿದ ಒಂದು ಭಾಷಣವನ್ನು ಕನ್ನಡದಲ್ಲಿ ಮಾಡಿದರು. ಇದೆಲ್ಲಾ ಆಗುವಾಗ್ಗೆ ಸಾಯಂಕಾಲ ಸುಮಾರು ಆರುವರೆ ಗಂಟೆ ಸಮಯವಾಗಿತ್ತು. ಇಂತಾದ್ದರಿಂದ ಆ ದಿವಸ ಸಭೆಯು ಮುಕ್ತಾಯವಾಯಿತು.

27-1-1924 ನೇ ಭಾನುವಾರ.

ಈ ದಿವಸ ಪ್ರಾತಃಕಾಲ ಎಂಟು ಗಂಟೆಗೆ ಸರಿಯಾಗಿ ಚನ್ನಪಟ್ಟಣದ ಒಕ್ಕಲಿಗರ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ಮೈಸೂರು ದೇಶದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರಕ್ಟರ್ ಸಾಹೇಬರಾದ ಮ|| ಪಿ. ಜಿ. ಡಿಸೌಜ. ಬಿ.ಎ., ಬಿ.ಎಲ್., ರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಈ ಮೇಲ್ಕಂಡ ವಿದ್ಯಾರ್ಥಿಗಳಲ್ಲಿ ಕೆಲವರು ಬಹಳ ಮುತುವರ್ಜಿವಹಿಸಿ ಅಭ್ಯಾಸಮಾಡಿದ್ದ (Merchant of Vennice) ಮರ್ಚೆಂಟ್ ಆಫ್. ವೆನಿಸ್ ಎಂಬ ನಾಟಕದಲ್ಲಿನ ಕೋರ್ಟು ಸೀನನ್ನು ಬಹಳ ಸ್ವಾರಸ್ಯವಾಗಿ ಅಭಿನಯಿಸಿದರು. ಇದಾದ ಮೇಲೆ ಸಭಾಧ್ಯಕ್ಷರ ಸಮುಖದಲ್ಲಿ ಮ|| ಜಿ. ಪರಮಶಿವಯ್ಯ ಬಿ.ಎ.,ಬಿ.ಎಲ್.,ರವರು ವಿದ್ಯಾರ್ಥಿಗಳ ಕರ್ತವ್ಯಗಳ ವಿಷಯವಾಗಿ ಬಹಳ ಸ್ವಾರಸ್ಯವಾದ ಒಂದು ಕನ್ನಡ ಉಪನ್ಯಾಸವನ್ನು ಕೊಟ್ಟರು. ಅನಂತರ ಮ|| ಕೆ. ಎಚ್. ರಾಮಯ್ಯ ಬಿ.ಎ., ಬಾರ್-ಅಟ್-ಲಾರವರು ವಿದ್ಯಾರ್ಥಿಗಳ ದೇಹಪಟುತ್ವದ ವಿಷಯವಾಗಿಯೂ ವಿದ್ಯಾರ್ಜನೆಯ ವಿಷಯವಾಗಿಯೂ, ಬ್ರಹ್ಮಚರ್ಯದ ವಿಷಯವಾಗಿಯೂ, ತಂದೆಗಳು ಮಕ್ಕಳ ಅದರಲ್ಲೂ ಸ್ತ್ರೀವಿದ್ಯಾಭ್ಯಾಸದಲ್ಲಿ ಗಮನಿಸಬೇಕಾದ ವಿಷಯವಾಗಿ ಸ್ವಾರಸ್ಯವಾದ ಒಂದು ಉಪನ್ಯಾಸಮಾಡಿದರು. ಕಡೆಯಲ್ಲಿ ಮ|| ಡಿಸೌಜ ಸಾಹೇಬರು ಚನ್ನಪಟ್ಟಣದ ತಾಲ್ಲೂಕಿನ ಒಕ್ಕಲಿಗರ ವಿದ್ಯಾರ್ಥಿಗಳ ವಿದ್ಯೆಯಲ್ಲಿ ಮುಂದುವರಿದಿರುವ ವಿಷಯವಾಗಿಯೂ, ಒಕ್ಕಲಿಗರ ಸಂಘದ ಅಭಿವೃದ್ಧಿಮಾಡುವ ವಿಷಯವಾಗಿಯೂ ಇನ್ನೂ ಕೆಲವು ವಿದ್ಯಾಭಿವೃದ್ಧಿ ಕಾಲದೇಶವರ್ತಮಾನ ಬದಲಾವಣೆಗಳಲ್ಲಿ ಒಕ್ಕಲಿಗ ಮಹಾಶಯರು ಅನುಸರಿಸಬೇಕಾದ ಕೆಲವು ಅಂಶಗಳನ್ನು ಕುರಿತು ಸ್ತೋತ್ರಾರ್ಹವಾದ ಒಂದು ಭಾಷಣವನ್ನು ಮಾಡಿದ ನಂತರ ಕೆಲವು ಆಟ ಪಾಟಗಳಲ್ಲಿಯೂ ಸ್ಪರ್ಧೆಯ ಪರೀಕ್ಷೆಯಲ್ಲೂ ಮುಂದುಬಂದ ಕೆಲವು ವಿದ್ಯಾರ್ಥಿಗಳಿಗೆ ಸಲ್ಲಬೇಕಾದ ಬಹುಮಾನಗಳನ್ನು ಕೊಟ್ಟರು. ಶ್ರೀಮನ್ ಮಹಾರಾಜರವರ ಮತ್ತು ಶ್ರೀಮನ್ ಯುವರಾಜರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಮೇಲೆ ಸಭೆಯು ಮುಕ್ತಾಯವಾಯಿತು.

ಈ ದಿವಸ ಮಧ್ಯಾಹ್ನ ಮೂರು ಗಂಟೆಯ ಮೇಲೆ ಹಿಂದಿನ ದಿವಸದ ಸಭಾಧ್ಯಕ್ಷರಾದ ಕಬ್ಬಳ್ಳಿ ಮ|| ಚನ್ನಬಸಪ್ಪನವರ ಸಮ್ಮುಖದಲ್ಲಿ ಕೆಲವು ತೀರ್ಮಾನಗಳನ್ನು ಮಾಡಲು ಸಭೆಯು ಪುನಃ ಪ್ರಾರಂಭವಾಯಿತು. ನಮ್ಮನ್ನು ಸದಾ ಕೃಪಾಕಟಾಕ್ಷದಿಂದ ಆಳುವ ಶ್ರೀಮನ್ ಮಹಾರಾಜರವರಿಗೆ ಮತ್ತು ಯುವರಾಜರಿಗೆ ಮೈಸೂರು ದೇಶದ ಎಲ್ಲಾ ಪಟೇಲರ ಸಭೆಯ ರಾಜಭಕ್ತಿಯನ್ನು ತಂತಿಯಮೂಲಕ ಅರ್ಪಿಸುವ ಮೊದಲನೆಯ ತೀರ್ಮಾನವು ನಡೆಯಿತು. ಆಮೇಲೆ ರಾವ್‌ಸಾಹೇಬ್ ಚನ್ನಯ್ಯನವರು ಮತ್ತು ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ ಮ|| ಶಾಮೇಗೌಡರವರು ಕೆಲವು ಭಾಷಣಗಳನ್ನು ಮಾಡಿ ಪೂರೈಸಿದ ಮೇಲೆ ಎಲ್ಲಾ ಪಟೇಲರಿಗೆ ಈಗಿರುವ ಶೋಚನೀಯವಾದ ಸ್ಥಿತಿಗತಿಗಳನ್ನು ಸರಿಪಡಿಸಿಕೊಡುವುದಕ್ಕೋಸ್ಕರ ಕೆಲವು ತೀರ್ಮಾನಗಳನ್ನು ನಡೆಸಿ ಸಭೆಯು ಮುಕ್ತಾಯಮಾಡಲ್ಪಟ್ಟಿತು. ಈ ತೀರ್ಮಾನಗಳು ಮತ್ತೊಂದು ಕಡೆ ಕೊಡಲ್ಪಟ್ಟಿವೆ.

ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರಾದ ರಾಜಮಂತ್ರಧುರೀಣ ಶ್ರೀಯುತ ಎ. ಆರ್. ಬ್ಯಾನರ್ಜಿ, ಎಂ. ಎ. ಸಿ.ಎಸ್.ಐ., ಸಿ.ಐ.ಇ., ಯವರು ದಯಮಾಡಿ ಕಳುಹಿಸಿದ ಶುಭವಾರ್ತಾಪತ್ರಿಕೆ.

ನಿಮ್ಮಗಳ ಪ್ರಾರ್ಥನೆಯನ್ನು ಲಾಲಿಸಿ ನಿಮ್ಮ ಮಹಾಸಭೆಗೆ ಬರಲು ಕಾರಣಾಂತರಗಳಿಂದ ಸಾಧ್ಯವಿಲ್ಲವಾದರೂ, ಗ್ರಾಮಾಡಳಿತಗಳಲ್ಲಿ ಮುಖ್ಯಸ್ಥಾನವನ್ನು ಪಡೆದು, ಇತ್ತೀಚಿಗೆ ಅನೇಕ ಕಾರಣಗಳಿಂದ ತಮ್ಮ ವಿಶೇಷವಾದ ದರ್ಪವನ್ನೂ ಮತ್ತು ಸಾಮಾನ್ಯವಾಗಿ ಅವರ ಅಧಿಕಾರಕ್ಕೆ ಸಂಬಂಧಪಟ್ಟ ಗೌರವವನ್ನೂ ಕಳೆದುಕೊಂಡಿರುವ ಪಟೇಲರುಗಳ ಪರವಾಗಿ ನೀವು ಪ್ರಾರಂಭಿಸಿರುವ ಈ ಕಾರ್ಯದಲ್ಲಿ, ನನ್ನ ಸಹಾನುಭೂತಿಯಿಂದಲೂ ಪ್ರೋತ್ಸಾಹದಿಂದಲೂ ಕೂಡಿದ ಶುಭವಾರ್ತೆಯನ್ನು ನಿಮಗೆ ಕಳುಹಿಸುವುದರಲ್ಲಿ ನನಗೆ ವಿಶೇಷ ಸಂತೋಷವುಂಟು. ನಿಮ್ಮ ಕರ್ತವ್ಯವನ್ನೂ, ನಿಮ್ಮ ಸ್ಥಾನಕ್ಕೆ ಅನ್ವಯಿಸುವ ಸ್ಥಿತಿಗಳನ್ನೂ ಕುರಿತು ಮುಖ್ಯವಾದ ವಿಷಯಗಳನ್ನು ಈ ಮಹಾಸಭೆಯಲ್ಲಿ ಚರ್ಚಿಸುವವರಾಗಿದ್ದೀರೆಂದು ಸಭೆಯ ಕಾರ್ಯಕ್ರಮದ ಪಟ್ಟಿಯಿಂದ ತಿಳಿದು ಸಂತುಷ್ಟನಾಗಿದ್ದೇನೆ. ಪಟೇಲಿ ನೌಕರಿಯ ದಕ್ಷತೆಯನ್ನು ಅಭಿವೃದ್ಧಿಪಡಿಸಲು ನಿಮ್ಮಲ್ಲೇ ಒಂದು ಸಂಸ್ಥೆಯು ಪ್ರಾರಂಭವಾಗಿರುವುದನ್ನು ನೋಡುವುದಕ್ಕಿಂತ ಮತ್ತಾವುದೂ ಹೆಚ್ಚಾದ ಸಂತೋಷವನ್ನು ಸರ್ಕಾರದವರಿಗೆ ಕೊಡಲರಿಯದು. ಸರ್ಕಾರದವರೂ ತಮ್ಮ ಕೈಲಾದ ಪ್ರೋತ್ಸಾಹವನ್ನೆಲ್ಲ ನಿಮಗೆ ಕೊಡುವವರಾಗಿದ್ದಾರೆ. ಪಟೇಲಿ ಹುದ್ದೆಯಲ್ಲಿರುವವರನ್ನು ವಿದ್ಯಾರ್ಜನೆಯಲ್ಲಿ ಮುಂದುಮಾಡುವುದು; ಗ್ರಾಮಾಂತರಗಳಲ್ಲಿ ಚಿಲ್ಲರೆ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳ ಫೈಸಲಾತಿಗೆ ಅಗತ್ಯವಾದ ಅಧಿಕಾರವನ್ನು ಅವರಿಗೆ ವಹಿಸುವುದು; ಗ್ರಾಮಾಡಳಿತದಲ್ಲಿ ಪಟೇಲರ ಸ್ಥಾನವೆಂಥದೆಂಬುದನ್ನು ನಿರ್ಧರಿಸುವುದು; ಇವೆಲ್ಲವೂ ಸ್ತೋತ್ರಾರ್ಹವಾದ ಉದ್ದೇಶಗಳಾಗಿವೆ. ಮತ್ತು ಇವುಗಳ ವಿಷಯದಲ್ಲಿ ಸರ್ಕಾರದವರು ಸಹಾನುಭೂತಿಯನ್ನುಳ್ಳವರಾಗಿರುತ್ತಾರೆ.

ನಿಮ್ಮ ಪರ್ಯಾಲೋಚನೆಗಳಿಗೆ ಜಯಕಾಂಕ್ಷಿಯಾಗಿರುವೆನಲ್ಲದೆ, ನಿಮ್ಮ ಸಭೆಯು ಸರ್ಕಾರದವರ ಗಮನಕ್ಕೆ ತರುವ ಮೇಲ್ಕಂಡ ವಿಷಯಗಳಲ್ಲೂ ಇತರ ವಿಷಯಗಳಲ್ಲೂ ಮಾಡುವ ನಿರ್ಧಾರಗಳಿಗೆ ಅಗತ್ಯವಾದ ಗಮನ ಕೊಡಲು ಸಿದ್ಧನಾಗಿರುವೆನು.

ರೆವಿನ್ಯೂಕಮಿಷನರ್ ಮ|| ಕೆ. ಚಾಂಡಿ ಸಾಹೇಬರವರು ಮಾಡಿದ ಸಭಾರಂಭ ಭಾಷಣ.

ಮಹಾಶಯರೇ !

ಮೈಸೂರು ಸೀಮೆಯ ಪಟೇಲರುಗಳ ಪ್ರಥಮ ಮಹಾಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸುವುದು ವಿಶೇಷ ಸಂತೋಷಕರವಾಗಿರುವುದಲ್ಲದೆ ಇದನ್ನೊಂದು ಅತಿಶಯವಾದ ಗೌರವವನ್ನಾಗಿ ಭಾವಿಸುತ್ತೇನೆ. ಇದಲ್ಲದೆ ಈ ಸಭಾಧ್ಯಕ್ಷತೆಯನ್ನು ವಹಿಸುವಂತೆ ನನ್ನನ್ನು ಕೇಳಿಕೊಂಡ ಈ ಸಭಾ ಮುಖಂಡರುಗಳಿಗೆ ವಂದಿಸುತ್ತೇನೆ. ಪ್ರಕೃತ ನನಗೆ ತಕ್ಕಷ್ಟು ವಿರಾಮವಿಲ್ಲದಿರುವ ಪ್ರಯುಕ್ತ ಈ ಸಂದರ್ಭದಲ್ಲಿ ನನ್ನ ಭಾಷಣವು ಸಂಕ್ಷೇಪವಾಗಿರುವುದನ್ನು ನೀವುಗಳು ಮನ್ನಿಸಬೇಕಾಗಿದೆ.

೨. ಈ ಭರತಖಂಡದಲ್ಲಿ ಪಟೇಲರುಗಳು ಅಥವಾ ಗ್ರಾಮಮುಖಂಡರುಗಳು ಏರ್ಪಟ್ಟ ಮೂಲಸಂಗತಿಯನ್ನು ಕುರಿತು ವಿಸ್ತಾರವಾಗಿ ಪ್ರಸ್ತಾಪಿಸುವವನಾಗಿಯೂ ಇಲ್ಲ ಮತ್ತು ಅದು ನನಗೆ ಗೊತ್ತೂ ಇಲ್ಲ. ಆದರೆ ಗ್ರಾಮಸಭೆಗಳು ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳಾಗಿ ಪ್ರಕಟವಾದ ಕಾಲದಿಂದಲೂ ಗ್ರಾಮಮುಖಂಡ, ಗೌಡ ಅಥವಾ ಪಟೇಲರುಗಳು ಏರ್ಪಟ್ಟು ಗ್ರಾಮದ ಮುಖ್ಯ ಪ್ರತಿನಿಧಿಗಳಾಗಿದ್ದಾರೆಂಬುದು ಜನಜನಿತವಾದ ವಿಷಯವಾಗಿದೆ. ಕೆಲವು ಸ್ಥಳಗಳಲ್ಲಿ ಈ ಉದ್ಯೋಗವು ವಂಶಪಾರಂಪರ್ಯವಾಗಿ ಬಂದಿರುತ್ತದೆ. ಮತ್ತೆ ಇತರ ಸ್ಥಳಗಳಲ್ಲಿ ರಾಜರು ಮುಖಂಡನನ್ನು ಚುನಾಯಿಸಿ ನೇಮಕಮಾಡುತ್ತಾರೆ. ಆದರೆ ಪ್ರತಿಯೊಂದು ಸಂದರ್ಭದಲ್ಲಿಯೂ ಮುಖಂಡನೇ ಗ್ರಾಮದ ಮುಖ್ಯ ಪ್ರತಿನಿಧಿಯಾಗಿರುತ್ತಾನೆ. ಎಷ್ಟೋ ರಾಜರುಗಳು ಅಳಿ ಅದೃಶರಾಗಿಹೋಗಿದ್ದರೂ, ದಂಡಯಾತ್ರೆಗಳೂ ಕ್ಷಾಮಡಾಮರಗಳೂ ಕ್ಷೋಭೆಯನ್ನುಂಟುಮಾಡಿದ್ದರೂ, ಶಾಂತಿ ಸಮಾಧಾನ ಸ್ಥಿತಿಗಳು ಸ್ಥಿರಪಟ್ಟಾಗ ಪುನಃ ಗ್ರಾಮಸಭೆಗಳು ತಲೆದೋರಿರುತ್ತವೆ. ಮತ್ತು ಅವುಗಳ ಮುಖಂಡರು ಏರ್ಪಟ್ಟಿದ್ದಾರೆ. ಈ ಸಂಗತಿಯೇ ನಿಮ್ಮಗಳ ಈ ಮಹಾಸಭೆಗೆ ಅಸಾಧಾರಣವಾದ ಪ್ರಾಮುಖ್ಯತೆಯನ್ನುಂಟುಮಾಡುತ್ತದೆ.

೩. ಮೈಸೂರು ಸೀಮೆಯಲ್ಲಿ ಪಟೇಲರು ವಂಶಪಾರಂಪರ್ಯವಾಗಿ ಬಂದಿದ್ದಾರೆ. ಮತ್ತು ರಾಜ್ಯಾಡಳಿತಕ್ಕೆ ಮುಖ್ಯಾಂಶರಾಗಿದ್ದಾರೆ. ನಿಮಗೆಲ್ಲಾ ವಿದಿತವಾಗಿರುವಂತೆ, ಪಟೇಲನು ಗ್ರಾಮದಲ್ಲಿ ಕಂದಾಯ ವಸೂಲ್ಮಾಡುವವನಾಗಿರುವುದು ಮಾತ್ರವಲ್ಲದೆ ಗ್ರಾಮಪೋಲೀಸ್ ಆಫೀಸರಾಗಿಯೂ ಇದ್ದಾನೆ. ಈ ವಿಷಯವನ್ನು ಕುರಿತು ಯೋಚಿಸುತ್ತಾ ಹೋದಲ್ಲಿ ಸಾಮರ್ಥ್ಯ ಮತ್ತು ಪ್ರಾಮಾಣಿಕತೆಗಳಿಗೆ ಪಟೇಲರೇ ಒಂದು ಪಂಗಡವಾಗಿರುವರೆಂದು ತಿಳಿದು ವಿಸ್ಮಯವುಂಟಾಗುತ್ತದೆ. ಸುಮಾರು ಎರಡುಕೋಟಿ ರೂಪಾಯಿಯಾಗುವ ಈ ಸಂಸ್ಥಾನದ ಸಮಸ್ತ ಭೂಕಂದಾಯವೂ ಚಿಲ್ಲರೆ ಕಂದಾಯದ ಬಹುಭಾಗವೂ ಈ ಪಟೇಲರ ಹಸ್ತದಿಂದ ಹಾದುಬರುತ್ತದೆ. ಈ ಪಟೇಲರಲ್ಲಿ ಕೆಲವರು ಭಾಗ್ಯವಂತರಾಗಿಯೂ ಬಹುಮಂದಿ ಬಡವರಾಗಿಯೂ ಇದ್ದಾಗ್ಯೂ, ಅವರು ಯಾವ ಬಗೆಯ ಜಾಮೀನನ್ನೂ ಕೊಡಬೇಕಾಗಿರುವುದಿಲ್ಲ. ಆದರೂ ಯಾವುದಾದರೂ ವರ್ಷದಲ್ಲಿ ವಸೂಲಾದ ಬಹುಭಾಗ ಹಣದೊಡನೆ ದುರುಪಯೋಗವಾದ ಮೊಬಲನ್ನು ಹೋಲಿಸಿನೋಡಿದಲ್ಲಿ, ಇದು ಅತ್ಯಲ್ಪವಾಗಿರುವುದೆಂದು ಕಂಡುಬರುತ್ತದೆ. ಇದೂ ಅಲ್ಲದೆ, ಕ್ರಿಮಿನಲ್ ಮೊಕದ್ದಮೆಗಳಲ್ಲಿ ಪಟೇಲರ ರಿಪೋರ್ಟುಗಳಿಗೆ ವಿಶೇಷ ಪ್ರಾಮುಖ್ಯತೆಯು ಕೊಡಲ್ಪಡುತ್ತದೆಯೆಂಬುದನ್ನು ಮ್ಯಾಜಿಸ್ಟ್ರೇಟರಾಗಿರುವವರೆಲ್ಲರೂ ಬಲ್ಲರು. ಇನ್ನೂ ಲಂಬಿಸಿ ಬರೆಯಬಹುದಾಗಿದ್ದ ಹಲವು ರಿಪೋರ್ಟುಗಳನ್ನು ನಾನು ನೋಡಿದ್ದಾಗ್ಯೂ, ಸುಳ್ಳು ರಿಪೋರ್ಟು ಯಾವುದೂ ನನ್ನ ದೃಷ್ಟಿಗೆ ಬಿದ್ದಂತೆ ಜ್ಞಾಪಕವಿಲ್ಲ. ಸುಳ್ಳುರಿಪೋರ್ಟುಗಳನ್ನು ಅರಿತುಮಾಡಿದ ಬಗ್ಗೆ ತಕ್ಸೀರು ಆಪಾದಿತರಾದ ಪಟೇಲರ ಸಂಖ್ಯೆಯು ಬೆರಳುಗಳ ಮೇಲೆ ಎಣಿಕೆಮಾಡಿಬಿಡಬಹುದಾದಷ್ಟು ಅಲ್ಪವಾಗಿರುವುದೆಂದು ನಂಬುತ್ತೇನೆ. ಈ ಎರಡು ಸಂದರ್ಭಗಳಲ್ಲಿಯೂ ನಿಮ್ಮಗಳ ವರ್ತನೆಯು ಸ್ತುತ್ಯಕವಾಗಿದೆ. ಆದರೆ ಇದನ್ನು ಇನ್ನೂ ನಿಷ್ಕಳಂಕವಾಗಿರುವಂತೆ ಮಾಡಿಕೊಳ್ಳಬೇಕೆಂದು ನಿಮ್ಮೆಲ್ಲರಿಗೂ ನಾನು ಆತ್ಮಾಸಕ್ತಿಯಿಂದ ತಿಳಿಸುತ್ತೇನೆ. ಸರ್ಕಾರದ ಹಣವನ್ನು ದುರುಪಯೋಗಪಡಿಸಿದ ಬಗ್ಗೆ ತಕ್ಸೀರು ಸಾಬೀತಾದ ಪ್ರತಿಯೊಂದು ಮೊಕದ್ದಮೆಯ ತಪಶೀಲುಗಳನ್ನು ತೆಗೆದುಕೊಂಡು ಅಂತಹ ಮೊಕದ್ದಮೆಗಳು ನಡೆಯದ ಹಾಗೆ ಪ್ರಯತ್ನಪಟ್ಟಲ್ಲಿ ಈ ಸಂಘದ ಈ ಸಂಸ್ಥಾನಕ್ಕೂ ಈ ಸಂಘದ ಮೆಂಬರುಗಳಿಗೂ ಪರಮ ಪ್ರಯೋಜನವಾಗುವುದು. ಹೀಗೆಯೇ ಪ್ರತಿಯೊಬ್ಬ ಪಟೇಲನೂ ಗ್ರಾಮ ಆಫೀಸರುಗಳ ಹಸ್ತಪುಸ್ತಕವನ್ನೂ ಮಾಲೂರಿನ ಮ|| ವೇಮಾರಡ್ಡಿಯವರಿಂದ ಈಚೆಗೆ ಪ್ರಕಟಿಸಲ್ಪಟ್ಟ ಅದೇ ವಿಷಯಕವಾದ ಒಂದು ಪುಸ್ತಕವನ್ನೂ ಓದುವುದು ತನ್ನ ಕರ್ತವ್ಯವೆಂದು ಭಾವಿಸಬೇಕಲ್ಲದೆ ರೆವಿನ್ಯೂ ಮತ್ತು ಪೋಲೀಸ್ ಕರ್ತವ್ಯಗಳಲ್ಲಿ ತಿಳುವಳಿಕೆಯುಳ್ಳವನಾಗಬೇಕು. ಉದಾಸೀನನಾದವನಿಗೆ ಅವನ ಮಿತ್ರರಿಂದ ಪ್ರೋತ್ಸಾಹವಾಗಲಿ ಸಹಾಯವಾಗಲಿ ಯಾವುದೂ ದೊರೆಯಲಾರದು. ಯಾವನು ವಿಚಾರಪೂರ್ವಕವಾಗಿ ಸುಳ್ಳು ರಿಪೋರ್ಟ್ ಕೊಡುವನೋ ಅಥವಾ ಸರ್ಕಾರದ ಹಣವನ್ನು ದುರುಪಯೋಗಮಾಡುವನೋ ಅವನನ್ನು ನಿಮ್ಮ ಸಂಘದಿಂದ ತೆಗೆದುಬಿಡಬೇಕು.

೪. ಪ್ರಜಾಧಿಕಾರದ ದೆಸೆಯಿಂದ ನಿಮ್ಮ ಪ್ರಾಚೀನ ಪದವಿ ಪ್ರಾಶಸ್ತ್ಯಗಳಿಗೆ ಕುಂದಕವುಂಟಾಗಿದೆ ಯೆಂಬುದನ್ನು ನೀವು ಬಲ್ಲಿರಿ. ರಾಜರು ಬದಲಾವಣೆಯು ಮತ್ತು ಯುದ್ಧ ಕ್ಷಾಮಡಾಮರಗಳ ಕ್ಷೋಭೆಗಳೆಲ್ಲವು ಎದೆಗೊಟ್ಟು ನಿಂತು ಸಹಿಸಿಕೊಂಡು ಬಂದಿದ್ದೀರಿ. ಆದರೆ ಪ್ರಜಾಧಿಕಾರವು ನಿಮ್ಮ ಪ್ರಾಚೀನ ಪ್ರಾಶಸ್ತ್ಯಕ್ಕೆ ವಿಶೇಷ ಅಪಾಯಕರ [illegible]ವಾಗಿದೆ. ಏಕೆಂದರೆ ಬ್ರಿಟಿಷ್ ಜನರ ಸಾಮ್ರಾಜ್ಯವನ್ನು ಪ್ರಯೋಗಿಸಿದಲ್ಲಿ ಅದೊಂದು ಬಗೆಯ ಹಿತಕೃತ್ಯವೇ ಆಗಿದೆ. ಅದು ರಭಸದಿಂದ ನಿಮ್ಮ ಮೇಲೆ ಬೀಳುವಂತಿಲ್ಲ. ಆದರೂ ಅದರ ರಭಸವು ಅನಿವಾರಣೀಯವಾಗಿದೆ. ಚುನಾವಣೆಯಾದ ಅಧ್ಯಕ್ಷರನ್ನೊಳಗೊಂಡ ಪಂಚಾಯಿತಿಗಳಲ್ಲಿ ಇದು ನಿಮಗೆ ಗೊತ್ತಾಗಿಯೇ ಇದೆ. ನಿಮ್ಮಲ್ಲಿ ಕೆಲವರಿಗೆ ಚುನಾವಣೆಯಾಗಿದೆ; ಆದರೆ ಅನೇಕರಿಗೆ ಆಗಿಲ್ಲ. ಇದರಿಂದ ನಿಮ್ಮ ಪ್ರಾಶಸ್ತ್ಯವು ತಪ್ಪಿಹೋಯಿತೆಂದು ನೀವು ವ್ಯಸನಪಡಬಹುದು. ಈ ವಿಷಯದಲ್ಲಿ ನಿಮಗೆ ತಿಳಿಸಬೇಕೆಂದಿರುವುದು ಯಾವುದೆಂದರೆ, ಈಗಿನ ಭೂಕಂದಾಯದ ಮತ್ತು ಪೋಲೀಸಿನ ಪದ್ಧತಿಗಳು ಇರುವವರೆಗೂ ನೀವುಗಳು ಗ್ರಾಮ ನಿರ್ವಾಹಕ್ರಮದಲ್ಲಿ ಪ್ರಯೋಜನಕರವಾದ ಮತ್ತು ಪ್ರಮುಖರಾದ ಜನರಾಗಿರುವಿರಿ. ಆದರೆ ನಿಮ್ಮ ವಂಶಪಾರಂಪರ್ಯದ ಹಕ್ಕುಗಳಿಗೆ ಪ್ರಜಾಧಿಕಾರವು ಅವಾಂತರವನ್ನುಂಟುಮಾಡುವಾಗ ಅದಕ್ಕೆ ತಕ್ಕಂತೆ ನೀವುಗಳು ಸರಿಪಡಿಸಿಕೊಳ್ಳಬೇಕಾದುದು ನಿಮ್ಮ ಕರ್ತವ್ಯವಾಗಿದೆ. ದೇಶಸೇವೆ ಮತ್ತು ದೇಶಸೇವಕ ಎಂಬ ಮಾತುಗಳು ಅವಮಾನಕರವಾದುವುಗಳಲ್ಲ. ಇಂಗ್ಲೆಂಡಿನ ಈಗಿನ ಮುಖ್ಯ ಮಂತ್ರಿಯು ವ್ಯವಸಾಯಗಾರರ ಪುತ್ರರಾಗಿದ್ದಾರೆ. ನೀವುಗಳು ನಿಮ್ಮ ಗ್ರಾಮಸೇವೆಯನ್ನು ಉತ್ತಮರೀತಿಯಲ್ಲಿ ಮಾಡಿದರೆ, ನಿಮ್ಮ ವಂಶಪಾರಂಪರ್ಯ ಪ್ರಾಶಸ್ತ್ಯದ ಪ್ರಯೋಜನವನ್ನು ಸುಲಭವಾಗಿ ಕಳೆದುಕೊಳ್ಳುವ ಸಂಭವವಿರುವುದಿಲ್ಲ. ಇದೂ ಅಲ್ಲದೆ ಗ್ರಾಮಸೇವೆಗೆ ಅವಕಾಶಗಳನ್ನು ಪಡೆಯುವದಕ್ಕೆ ತನ್ನ ಜನರ ಸದಭಿಪ್ರಾಯವನ್ನು ಸಂಪಾದಿಸಿಕೊಳ್ಳಬೇಕಾದುದು ಯಾರೊಬ್ಬರಿಗೂ ಕೆಟ್ಟದಲ್ಲ. ಇದನ್ನು ಮುಂದೆಯೂ ನೀವು ಹೆಚ್ಚು ಹೆಚ್ಚಾಗಿ ಮಾಡಬೇಕಾಗಿದೆ.

೫. ನಿಮ್ಮ ಜನರ ಸದಭಿಪ್ರಾಯವನ್ನು ನೀವು ಸಂಪಾದಿಸಿಕೊಳ್ಳಬೇಕೆಂದು ಹೇಳಿದ್ದೇನಷ್ಟೆ. ಇದಕ್ಕೆ ನಿಮ್ಮ ಗ್ರಾಮಗಳನ್ನು ಶುದ್ಧವಾಗಿಯೂ ಆರೋಗ್ಯಕರವಾಗಿಯೂ ಸುಂದರವಾಗಿಯೂ ಇಟ್ಟುಕೊಂಡು ಆ ಬಗ್ಗೆ ಅವರ ಸಹಕಾರವನ್ನು ಪಡೆಯುವುದಕ್ಕಿಂತಲೂ ಉತ್ತಮವಾದ ಬೇರೆ ಮಾರ್ಗವಿಲ್ಲ. ಪಟ್ಟಣದ ಜೀವಮಾನಕ್ಕೂ ಕೈಗಾರಿಕೆಯ ಕಾರ್ಯಗಳಿಗೂ ಮಿತಿಮೀರಿದ ಪ್ರಾಮುಖ್ಯತೆಯನ್ನು ಕೊಟ್ಟಿರುವುದರಿಂದ ದೇಶಕ್ಕೆ ಕಷ್ಟವುಂಟಾಗಿದೆಯೆಂದೂ ಗ್ರಾಮಜೀವನಕ್ಕೆ ಹೆಚ್ಚು ಗಮನ ಕೊಡಬೇಕಾಗಿದೆಯೆಂದೂ ಜನರು ತಿಳಿದುಕೊಳ್ಳುತ್ತಾ ಬರುತ್ತಿರುವಂತೆ ಕಾಣುತ್ತದೆ. ದೈವಭಕ್ತಿ ಮತ್ತು ಸೌಂದರ್ಯಗಳು ಬಯಲು ಪ್ರದೇಶಗಳಲ್ಲಿ ತೇಜೋಮಯವಾದ ಸೂರ್ಯಾಸ್ತಸಮಯಗಳಲ್ಲಿ ಅನುಭವಕ್ಕೆ ಬರುವುದೇ ಹೊರತು ಪಟ್ಟಣಗಳ ಸಂದುಗೊಂದುಗಳಲ್ಲೂ ದಿವ್ಯ ಮಂದಿರಗಳಲ್ಲೂ ಬರುವುದಿಲ್ಲ. ವಿದ್ಯಾವಂತರಾದ ನಿಮ್ಮಗಳ ಮಕ್ಕಳುಗಳೆಲ್ಲರೂ ಗ್ರಾಮಗಳನ್ನು ಬಿಟ್ಟುಬಿಡದೆ ಅಲ್ಲಿನ ಜೀವನವು ಆರೋಗ್ಯಪ್ರದವಾಗಿಯೂ ಪರಿಶುದ್ಧವಾಗಿಯೂ ಇರುವಂತೆ ಮಾಡಲು ಅವರುಗಳಿಗೆ ನೀವುಗಳು ಪ್ರೋತ್ಸಾಹಿಸುವಿರೆಂದು ನಂಬುತ್ತೇನೆ. ಪಂಚಮರ ಏಳಿಗೆಯನ್ನು ಅವರಲ್ಲಿ ಸಹಾನುಭೂತಿಯನ್ನು ಒಳಗೊಂಡಂತೆ ಗ್ರಾಮಾಡಳಿತವು ಇಂಡಿಯಾದೇಶದಲ್ಲಿ ಅತ್ಯಗತ್ಯವಾದ ಬಯಕೆಯಾಗಿದೆ.

೬. ನಿಮ್ಮಗಳಿಗೆ ಅಭಿನಂದಿಸಬೇಕಾದ ಮತ್ತೊಂದು ವಿಷಯವೇನೆಂದರೆ, ರಾಜಕೀಯ ಸುಧಾರಣೆಯ ಏರ್ಪಾಟಿನ ಮೇರೆಗೆ ನೀವುಗಳು ಈ ಸಂಸ್ಥಾನದ ಚುನಾವಣೆಯಾದ ಮೆಂಬರುಗಳ ಸಭೆಗಳಲ್ಲಿ ಸೇರುವುದಕ್ಕೆ ಹಕ್ಕುಳ್ಳವರಾಗಿದ್ದೀರಿ. ಸಮಯವು ಸಮನಿಸಿದಾಗ ಈ ಸಭೆಗಳಿಂದ ಸಂಸ್ಥಾನದ ಮಂತ್ರಿಗಳನ್ನು ಚುನಾಯಿಸುವುದು ಶ್ರೀಮನ್ಮಹಾರಾಜರವರಿಗೆ ಮಹದಾನಂದವನ್ನುಂಟುಮಾಡುವುದೆಂದು ಪ್ರಕಟವಾಗಿರುವುದು ನಿಮಗೆ ನೆನಪಿನಲ್ಲಿರಬಹುದು. ಆದಕಾರಣ ನೀವುಗಳು ಗ್ರಾಮಮುಖಂಡರಾಗಿ ಸಂಸ್ಥಾನದ ಸೇವೆಮಾಡಿದಾಗ್ಯೂ, ಈ ಸಭೆಗಳಿಗೆ ಚುನಾಯಿಸಲ್ಪಡಲು ಹಕ್ಕಿಲ್ಲದ ಸಿವಿಲ್ ಅಧಿಕಾರಿಗಳಂತೆ ಅಥವಾ ಸರ್ಕಾರಿ ನೌಕರರಂತೆ ಭಾವಿಸಲ್ಪಡುವುದಿಲ್ಲವೆಂಬ ಈ ಮುಖ್ಯವಾದ ಅಂಶವನ್ನು ನೀವು ಮನಸ್ಸಿನಲ್ಲಿಡಬೇಕೆಂದು ನಿಮಗೆ ಒತ್ತಿ ಹೇಳುತ್ತೇನೆ. ನಿಮ್ಮಲ್ಲಿ ಅನೇಕರು ಬಡವರೆಂಬುದನ್ನೂ ನಿಮಗೆ ಕೊಡುವ ಪೋಟಗಿಯು ಅಲ್ಪವೆಂಬುದನ್ನೂ ನಾನು ಚೆನ್ನಾಗಿ ಬಲ್ಲೆನು. ಆದರೆ ಪೋಟಗಿಯನ್ನು ಕೂಲಿಯಂತೆ ಭಾವಿಸಬಾರದು. ಅದೊಂದು ಸಂಭಾವನೆಯಂತಿದೆ. ಇದಲ್ಲದೆ ಸಭೆಗಳಿಗೆ ಚುನಾಯಿಸಲ್ಪಟ್ಟ ಮೆಂಬರುಗಳ ಸ್ಥಾನಕ್ಕೆ ನೀವುಗಳು ಉಮೇದುವಾರರಾಗಿ ನಿಲ್ಲಬಹುದೆಂಬ ಸಂಗತಿಯೇ ನೀವುಗಳು ಸಂಬಳ ಪಡೆಯುವ ನೌಕರರಲ್ಲವೆಂಬುದನ್ನು ವ್ಯಕ್ತಪಡಿಸುತ್ತದೆ. ನಗದು ಹಣದ ಜಾಮೀನನ್ನು ಕೊಡದೆ ಇದ್ದಾಗ್ಯೂ, ಸಂಬಳವಿಲ್ಲದೆ ಇದ್ದಾಗ್ಯೂ, ನೀವುಗಳು ಹಿಂದಿನಿಂದ ಮಾಡುತ್ತಾ ಬಂದಿರುವ ಸೇವೆಯು ಅತ್ಯಂತ ಗೌರವಾರ್ಹವಾದುದಾಗಿದೆ, ಇದೇ ರೀತಿಯ ಸೇವೆಯನ್ನು ಮುಂದೆಯೂ ಸಂತೋಷದಿಂದ ಮಾಡುತ್ತಾ ಬರುವಿರೆಂದು ನಂಬಿದ್ದೇನೆ. ಪಟೇಲರು ಯಾವ ಕಾಲದಲ್ಲಾಗಲಿ ಸಂಸ್ಥಾನದ ಸಂಪೂರ್ಣ ಅವಧಿಯ ನೌಕರರಾಗಿ ಏರ್ಪಟ್ಟರೆ ಗ್ರಾಮ ಸೇವೆಗೂ ಪ್ರಜಾಸೇವೆಗೂ ಕುಂದಕವೇ ಹೊರತು ಪ್ರಯೋಜನವಿಲ್ಲವೆಂದು ನನಗೆ ತೋರುತ್ತದೆ.

೭. ನಿಮ್ಮಗಳ ಪ್ರಥಮಸಭೆಯು ಕೇವಲ ಅನಾವೃಷ್ಟಿಯ ಕಾಲದಲ್ಲಿ ನಡೆಯುವಂತಾದುದು ದೌರ್ಭಾಗ್ಯವೇ ಸರಿ. ಇದರಿಂದ ನಿಮ್ಮ ಹಲವು ಪ್ರತಿನಿಧಿಗಳು ಸಭೆಗೆ ಬರಲು ಅವಕಾಶ ತಪ್ಪಿಹೋಗಿರಬೇಕಲ್ಲದೆ ಈಗ ಸಮೃದ್ಧಿ ಕಾಲದಲ್ಲಿ ಸೇರಿದ್ದರೆ ಆಗುತ್ತಿದ್ದ ಸಂತೋಷಕ್ಕಿಂತ ಕಡಿಮೆಯೇ ಆಗಿರಬೇಕು. ವಿದ್ಯಮಾನಗಳು ಉತ್ತಮಕ್ಕೆ ಬರುವಂತೆ, ಅದರಲ್ಲಿಯೂ ಮುಖ್ಯವಾಗಿ ಕಡು ಬಡವರ ಮತ್ತು ಪಂಚಮರ ಸ್ಥಿತಿಗತಿಗಳು ಉತ್ತಮಕ್ಕೆ ಬರುವಂತೆ, ನಿಮ್ಮ ಸ್ವಂತ ಗ್ರಾಮಗಳಲ್ಲಿ ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ನೀವುಗಳು ಪ್ರತಿಯೊಬ್ಬರೂ ಮಾಡುವಿರೆಂದೂ, ಕಷ್ಟನಿವಾರಣೆ ಬಗ್ಗೆ ಸ್ಥಳೀಯ ಅಧಿಕಾರಿಗಳ ಗಮನಕ್ಕೆ ಸಮಸ್ತ ವಿಷಯಗಳನ್ನು ತರುವಿರೆಂದೂ ನಂಬುತ್ತೇನೆ.

ನಿಮ್ಮಲ್ಲಿ ಹಣಗಾರರಾಗಿರುವವರು ನಿಮ್ಮ ಹಣವನ್ನೆಲ್ಲಾ ವ್ಯವಸಾಯಕ್ಕೆ ಅನುಕೂಲವಾದ ಬಾವಿಗಳನ್ನು ತೋಡಿಸುವುದಕ್ಕಾಗಿ ವೆಚ್ಚಮಾಡಬೇಕು. ಇದಕ್ಕಾಗಿ ಸರ್ಕಾರದವರು ತಕಾವಿ ಸಾಲಗಳನ್ನೂ ಕೊಡುತ್ತಾರೆ. ಬಂಜರು ಪ್ರದೇಶಗಳಿಗೆ ಬದಲಾಗಿ ವ್ಯವಸಾಯದ ಬಾವಿಗಳಿಂದ ಕೂಡಿರುವ ಆಹಾರದ ಹಸುರು ಬೆಳೆಗಳ ಹೊಲಗದ್ದೆಗಳನ್ನು ನೋಡುವುದಕಿಂತ ಮತ್ತಾವುದೂ ನನ್ನ ಕಣ್ಣುಗಳಿಗೂ ಮನಸ್ಸಿಗೂ ಹೆಚ್ಚಿಗೆ ಹರ್ಷವನ್ನುಂಟುಮಾಡಲಾರದು. ಕ್ಷಾಮನಿವಾರಣೆಗೆ ಇಂತಹ ಬಾವಿಗಳು ಮುಖ್ಯ ಸಾಧನಗಳು; ಬಾವಿಗಳನ್ನು ತೋಡಿಸುವುದು, ಇತರರು ತೋಡಿಸುವಂತೆ ಮಾಡುವುದು ಮುಂತಾದ ಈ ವಿಚಾರಗಳಲ್ಲಿ ತಮ್ಮಗಳ ಧಾರಾಳವಾದ ಪರಸ್ಪರ ಸಹಾಯವು ಬಹಳ ಅಗತ್ಯವಾಗಿದೆ.

೮. ನಿಮ್ಮ ದೇಶಕ್ಕೂ ಗ್ರಾಮಗಳಿಗೂ ನೀವು ಮಾಡಬಹುದಾದ ಮತ್ತೊಂದು ಘನತರವಾದ ಉಪಕಾರವೇನೆಂದರೆ, ಕೆರೆಗಳಲ್ಲಿ ನೀರು ತೀರ ಒಣಗಿಹೋಗದಹಾಗೆ ಮಾಡುವಂತೆ ರೈತರಿಗೆ ತಿಳಿಯಹೇಳುವುದು. ನಾನು ಸರ್ಕಿಟು (ಪ್ರಯಾಣ) ಹೋಗಿದ್ದ ಕಾಲದಲ್ಲಿ ಕೆಲವು ಕೆರೆಗಳಲ್ಲಿ ಸ್ವಲ್ಪವೇ ನೀರಿದ್ದುದನ್ನೂ ಪಕ್ಕದ ಕೆರೆಗಳಲ್ಲಿ ತೀರಾ ಒಣಗಿಹೋಗಿದ್ದುದನ್ನೂ ನೋಡಿದೆನು. ವಿಚಾರಮಾಡುವಲ್ಲಿ ಕೆರೆಯಲ್ಲಿ ಸ್ವಲ್ಪ ನೀರಿದ್ದ ಊರಿನ ರೈತರು ಕೆರೆಯಲ್ಲಿ ಮೂರು ತಿಂಗಳಿನ ನೀರಿದ್ದಾಗಲೇ ಸರ್ವಸಮ್ಮತದಿಂದ ತೂಬುಗಳನ್ನು ಮುಚ್ಚಿದ್ದರಿಂದ ಸ್ವಲ್ಪವಾದರೂ ನೀರು ಉಳಿದುಕೊಂಡಿದೆಯೆಂದು ಗೊತ್ತಾಯಿತು. ಕೆರೆಯಲ್ಲಿ ಮೂರು ತಿಂಗಳಿನ ನೀರಿದ್ದಾಗಲೇ ತೂಬುಗಳನ್ನು ಭದ್ರಪಡಿಸಿದರೆ ೨-೩ ವರ್ಷಗಳ ವರೆಗೆ ಮಳೆಯು ಸರಿಯಾಗಿ ಆಗದಿದ್ದರೂ ಕುಡಿಯುವದಕ್ಕೂ ದನಕರುಗಳಿಗೂ ಸಾಕಾಗುವಷ್ಟು ನೀರು ನಿಲ್ಲುವುದೆಂದು ಇಂಜನೀಯರುಗಳು ಹೇಳಿದ್ದಾರೆ. ಹೀಗೆ ಮಾಡಬೇಕಾದರೆ ಸ್ವಲ್ಪ ಸ್ವಾರ್ಥತೆಯನ್ನು ಬಿಡಬೇಕಾಗಿದೆ. ಆದರೆ ಆಯಾಯ ಗ್ರಾಮಗಳ ರೈತರು ಕಲೆತು ಈ ವಿಚಾರದಲ್ಲಿ ಮಾತನಾಡಿ ಸರ್ವರ ಸಮ್ಮತಿಯಿಂದ ಹೀಗೆ ಮಾಡುವುದಕ್ಕೆ ಒಪ್ಪಿಕೊಂಡರೆ ಸರ್ಕಾರದವರು ನಿಜವಾಗಿಯೂ ಸಂತೋಷಪಡುತ್ತಾರೆ. ವ್ಯವಸಾಯಕ್ಕನುಕೂಲವಾದ ಅನೇಕ ಬಾವಿಗಳನ್ನು ತೋಡಿಸುವುದು, ಕೆರೆ ದುರಸ್ತಿಗಾಗಿ ಧಾರಾಳವಾದ ಚಂದಾ ಕೊಡುವುದು, ಕೆರೆಗಳನ್ನು ಸರಿಯಾದ ದುರಸ್ತು ಸ್ಥಿತಿಯಲ್ಲಿಟ್ಟುಕೊಳ್ಳುವುದು, ವೃಥಾ ನೀರು ವೆಚ್ಚವಾಗಲು ಅವಕಾಶವಿಲ್ಲದಂತೆ ನೋಡಿಕೊಂಡು ಕೆರೆಗಳಲ್ಲಿ ನೀರನ್ನು ನಿಲ್ಲಿಸಿಕೊಳ್ಳುವುದು, ಇವೆಲ್ಲಾ ಆಗಿಂದಾಗ್ಗೆ ಕ್ಷಾಮಕ್ಕೆ ಗುರಿಯಾಗುವ ಮೈಸೂರು ಸಂಸ್ಥಾನದಲ್ಲಿ ಅತ್ಯಗತ್ಯವಾಗಿ ಮಾಡಬೇಕಾದ ಕಾರ್ಯಗಳಾಗಿವೆ. ಕ್ಷಾಮಕಾಲಗಳಲ್ಲಿ ಕಲಿತ ಪಾಠಗಳು ಸ್ಥಿತಿಗತಿಗಳು ಸ್ವಲ್ಪ ಅನುಕೂಲವಾದ ಕೂಡಲೆ ಮರೆತುಹೋಗುತ್ತವೆ. ಆದರೆ, ಕ್ಷಾಮವು ಕಷ್ಟಸಹಿಷ್ಣುತೆಗಾಗಿ ಭಗವಂತನು ಮಾಡಿದ ಕಾರ್ಯವಲ್ಲವೆಂದೂ, ಮಾನವನ ಹೆಚ್ಚು ಪ್ರಯತ್ನಕ್ಕೂ ನಮ್ಮಗಳಲ್ಲಿರುವ ಉತ್ತಮ ಗುಣಗಳನ್ನು ಹೊರಪಡಿಸುವುದಕ್ಕೂ ಸಹಕಾರಿಯಾದುದೆಂದೂ ಜನಸಾಮಾನ್ಯಕ್ಕೂ ನಿಮ್ಮ ಮಕ್ಕಳಿಗೂ ತಿಳಿಯಹೇಳುವುದು ನಿಮ್ಮಂತಹ ಸಂಘದವರ ಕರ್ತವ್ಯವಾಗಿದೆ.

೯. ನಿಮ್ಮಗಳ ಅಭಿವೃದ್ಧಿಗಾಗಿ ನೀವು ಮಾಡುವ ಪ್ರಯತ್ನಗಳಲ್ಲೆಲ್ಲಾ ಇತರರ ವಿಷಯದಲ್ಲಿಯೂ ವಿಶ್ವಾಸವನ್ನು ತೋರಿಸಬೇಕೆಂದು ನಿಮ್ಮಗಳನ್ನು ಕೇಳಿಕೊಳ್ಳುವುದಕ್ಕೆ ನೀವು ಅವಕಾಶ ಕೊಡುವಿರೆಂದು ನಂಬಿದ್ದೇನೆ. ಸಹೋದರ ಭಾವ ಮತ್ತು ವಿಶ್ವಾಸದಿಂದ ನಿಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುವುದು ಸಾಧ್ಯವೆಂದು ನಾನು ಹೇಳುವುದನ್ನು ನೀವೆಲ್ಲರೂ ಒಪ್ಪಿಕೊಳ್ಳುವುದರಲ್ಲಿ ಸಂದೇಹವಿಲ್ಲ.

೧೦. ಇನ್ನು ನಾನು ಹೆಚ್ಚಿಗೆ ಹೇಳಬೇಕಾದ ವಿಷಯಗಳೇನೂ ಉಳಿದಿಲ್ಲ. ಮೈಸೂರು ಸಿಂಹಾಸನದಲ್ಲೂ ಆಳುವ ಮಹಾಸ್ವಾಮಿಯವರಲ್ಲೂ ನಿಮಗಿರುವ ಭಕ್ತಿವಿಶ್ವಾಸಗಳು ಸುಪ್ರಸಿದ್ಧವಾಗಿವೆಯಲ್ಲದೆ ದೇಶಕ್ಕೆ ಬೆಲೆಯಿಲ್ಲದ ಆಸ್ತಿಯಾಗಿವೆ. ನಿಮ್ಮಗಳ ಅಭಿವೃದ್ಧಿಗಾಗಿ ನೀವು ಮಾಡುವ ಎಲ್ಲಾ ಪ್ರಯತ್ನಗಳಲ್ಲೂ ನಿಮ್ಮ ರಾಜಭಕ್ತಿಯು ಪ್ರಾಮುಖ್ಯವಾಗಿದ್ದುಕೊಂಡು, ನಿಮ್ಮ ಪ್ರಯತ್ನಗಳೆಲ್ಲಾ ಫಲದಾಯಕವಾಗಿಯೂ ವಿಶೇಷ ಜಯಸೂಚಕವಾಗಿಯೂ ಆಗಲೆಂದು ಹಾರೈಸುತ್ತೇನೆ.

ಅಧ್ಯಕ್ಷರಾದ ಮ|| ಕೆ. ಎಸ್. ಚನ್ನಬಸಪ್ಪನವರು ಮಾಡಿದ ಭಾಷಣವು

ಸತ್ಕಾರಸಭಾಪತಿಗಳೇ, ಸಹೋದರ ಪಟೇಲ ಮಹಾಶಯರೆ,

ಈ ಮಹಾಸಭೆಯ ಅಧ್ಯಕ್ಷಸ್ಥಾನವನ್ನು ವಹಿಸುವುದಕ್ಕೆ ಅರ್ಹತೆಯುಳ್ಳ ಕೇವಲ ವಿದ್ಯಾವಂತರೂ, ಅನುಭವಶಾಲಿಗಳೂ ಆದ ಅನೇಕ ಪಟೇಲರುಗಳು ಇದ್ದಾಗ್ಯೂ, ತಾವುಗಳೆಲ್ಲರೂ ಈ ಗೌರವಸ್ಥಾನವನ್ನು ನನಗೆ ದಯಪಾಲಿಸಿರುವುದಕ್ಕಾಗಿ ನಾನು ಚಿರಕಾಲ ಕೃತಜ್ಞನಾಗಿರುವೆನಲ್ಲದೆ ತಮ್ಮಗಳೆಲ್ಲರಿಗೂ ನನ್ನ ಅನೇಕ ವಂದನೆಗಳನ್ನು ಸಮರ್ಪಿಸುತ್ತೇನೆ.

ಘನ ಉದ್ದೇಶಗಳನ್ನುಳ್ಳ ಬಹು ಜನೋಚಿತವಾದ ಈ ಮಹಾಸಭೆಯನ್ನು ನಡೆಸಲು ಮುಂದಾಗಿ ನಿಂತು ಅನೇಕ ದಿನಗಳಿಂದ ಬಹಳ ಪ್ರಯಾಸಪಟ್ಟು, ಬಂದ ವಿಘ್ನಗಳನೆಲ್ಲಾ ಲೆಕ್ಕಿಸದೆ ಕಾರ್ಯಸಾಧನೆಯನ್ನು ಮಾಡಿ ನಮ್ಮ ದೇಶದ ಸಮಸ್ತ ಪಟೇಲರ ಗೌರವಕ್ಕಾಗಿ ತಮ್ಮ ಸಾಹಸಗಳನ್ನು ತೋರಿಸಿರುವ ಚನ್ನಪಟ್ಟಣ ಮತ್ತು ಕ್ಲೋಸ್‌ಪೇಟೆ ತಾಲ್ಲೂಕುಗಳ ಪಟೇಲರುಗಳು ನಮ್ಮೆಲ್ಲರುಗಳಿಂದಲೂ ವಂದನಾರ್ಹರಾಗಿರುವರು. ಇಂತಹ ಸಭೆಯೊಂದರ ಆವಶ್ಯಕತೆಯು ಬಹು ಕಾಲದಿಂದಲೂ ಇದ್ದಿತು. "ಸಂಘೇ ಶಕ್ತಿ ಕಲೌಯುಗೇ" ಎಂಬ ಆರ್ಯೋಕ್ತಿಯಂತೆ ಈ ಕಾಲದಲ್ಲಿ ಪ್ರತಿಯೊಂದು ಜಾತಿಯವರೂ, ಪಂಗಡದವರೂ, ಮಹಾಸಭೆಗಳನ್ನೂ ಸಂಘಗಳನ್ನೂ ಏರ್ಪಡಿಸಿಕೊಂಡು ತಮ್ಮ ತಮ್ಮ ಅಭಿವೃದ್ಧಿಗೆ ಬೇಕಾದ ಕಾರ್ಯಗಳನ್ನು ಮಾಡಿಕೊಳ್ಳಲು ಆತುರರಾಗಿರುವಾಗ ಪಟೇಲರ ಪಂಗಡಕ್ಕೆ ಸೇರಿದವರು ಮಾತ್ರ ತಮ್ಮ ಸ್ಥಿತಿಯು ದಿನಕ್ರಮೇಣ ಇಳಿಯುತ್ತಿದ್ದರೂ, ತಾವು ಅನೇಕ ವಿಷಯಗಳಲ್ಲಿ ಬಹಳ ಹಿಂದುಳಿದಿದ್ದರೂ, ತಮ್ಮ ಏಳಿಗೆಗೆ ಬೇಕಾದ ಪ್ರಯತ್ನಗಳನ್ನು ಇದುವರೆಗೂ ಕೈಕೊಳ್ಳದೆ ತಟಸ್ಥರಾಗಿದ್ದುದು ಶೋಚನೀಯವಾದ ಸಂಗತಿಯಾಗಿದೆ. ಈ ಕೊರತೆಯನ್ನು ಹೋಗಲಾಡಿಸಲು ಈ ಮಹಾಸಭೆಯ ಪ್ರಯತ್ನವು ಈಗಲಾದರೂ ನಡೆದುದಕ್ಕಾಗಿ ನಾವುಗಳೆಲ್ಲರೂ ಆನಂದಿತರಾಗಿದ್ದೇವಲ್ಲದೆ, ಈ ದಿವಸವನ್ನು ನಮ್ಮ ಮುಂದಿನ ಉಚ್ಛ್ರಾಯಸ್ಥಿತಿಗೆ ಸೂಚಕವಾದ ಶುಭದಿವಸವೆಂದೆಣಿಸಬೇಕಾಗಿದೆ.

ಮಹನೀಯರೆ, ಬಹಳ ಪುರಾತನ ಕಾಲದಿಂದಲೂ ನಡೆದು ಬರುತ್ತಿರುವ ಗ್ರಾಮಗಳ ಮುಖ್ಯಾಧಿಕಾರ ಗೌರವವು ದಿನೇದಿನೇ ಸಡಿಲವಾಗುತ್ತಾ ಬಂದ ಹಾಗೆಲ್ಲಾ ಆ ಸ್ಥಾನಕ್ಕಿರಬೇಕಾದ ಪ್ರಾಶಸ್ತ್ಯವು ಕಡಿಮೆಯಾಗುತ್ತ ಬಂದಿರುವುದೂ, ಇದರಿಂದ ಪ್ರಜೆಗಳ ನೆಮ್ಮದಿಗೂ ಸರ್ಕಾರದ ಕಾರ್ಯನಿರ್ವಾಹಕತೆಗೂ ಕುಂದಕವಾಗಿರುತ್ತೆಂಬುದೂ ತಮ್ಮೆಲ್ಲರಿಗೂ ತಿಳಿದ ವಿಷಯಗಳಾಗಿರುತ್ತವೆಂದು ಭಾವಿಸುತ್ತೇನೆ. ಇಂತಹ ಕೊರತೆಗಳ ಪರಿಹಾರಕ್ಕಾಗಿಯೂ, ಗ್ರಾಮದ ಮುಖ್ಯಾಧಿಕಾರಕ್ಕೆ ನ್ಯಾಯವಾಗಿರಬೇಕಾದ ಕಾರ್ಯದಕ್ಷತೆಯನ್ನೂ, ಪ್ರಾಶಸ್ತ್ಯವನ್ನೂ, ಹೊಂದುವುದಕ್ಕಾಗಿಯೂ ಮಾಡಬೇಕಾದ ಕರ್ತವ್ಯಗಳನ್ನು ಚರ್ಚಿಸಿ, ತೀರ್ಮಾನವಾಗುವ ಪ್ರಕಾರ ಕಾರ್ಯಭಾಗಗಳನ್ನು ನಡೆಸಲು ಸೌಕರ್ಯಗಳನ್ನು ಒದಗಿಸಿಕೊಳ್ಳುವುದೇ ಈ ಮಹಾಸಭೆಯ ಮುಖ್ಯೋದ್ದೇಶವಾಗಿರುತ್ತದೆ. ಈ ವಿಚಾರವನ್ನು ಪ್ರಸ್ತಾಪಿಸುವುದಕ್ಕೆ ಪೂರ್ವ ನಮ್ಮಗಳ ಪೂರ್ವೋತ್ತರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ತಿಳಿಸಲು ಅಪೇಕ್ಷಿಸುತ್ತೇನೆ.

ನಮ್ಮಗಳ ಸ್ಥಾನವು ಯಾವ ಕಾಲದಲ್ಲಿ ಪ್ರಾರಂಭವಾಯಿತೆಂಬುದನ್ನು ನಿರ್ಧರಿಸಿ ಹೇಳುವುದಕ್ಕಾಗುವುದಿಲ್ಲ. ಬಹಳ ಕಾಲದ ಹಿಂದಕ್ಕೆ ಹುಡುಕಿ ನೋಡಿದರೂ, ಅದಕ್ಕಿಂತಲೂ ಹಿಂದೆಯೇ ಈ ಅಧಿಕಾರವು ಇದ್ದಂತೆ ಕಾಣಬರುತ್ತಿದೆ. ಮನು ಚಕ್ರವರ್ತಿಯವರ ಕಾಲದಲ್ಲಿಯೂ ಗ್ರಾಮಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನೂ ಆಯಾ ಗ್ರಾಮದ ಗೌಡ ಅಥವಾ ಮುಖ್ಯಸ್ಥರ ಮೂಲಕವಾಗಿಯೇ ನಡೆಸುತ್ತಿದ್ದರೆಂದು ತಿಳಿಯಬರುತ್ತಿದೆ. ನಮ್ಮ ಈ ಭರತಖಂಡದಲ್ಲಿ ಅನೇಕ ಸಂಸ್ಥಾನಗಳೇರ್ಪಟ್ಟು, ಅವುಗಳನ್ನೆಲ್ಲಾ ಬೇರೆ ಬೇರೆ ರಾಜರುಗಳು ಆಳುವುದಕ್ಕೆ ಪ್ರಾರಂಭಿಸಿದ ಕಾಲಕ್ಕಿಂತಲೂ ಹಿಂದೆಯೇ ಅಂದರೆ ಎಂದು ಮಾನವರು ಕಾರಣಾಂತರಗಳಿಂದ ಗುಂಪುಗುಂಪಾಗಿ ಸೇರಿಕೊಂಡು, ಗ್ರಾಮಗಳನ್ನು ಕಟ್ಟಿಕೊಂಡು ವಾಸಿಸುವುದಕ್ಕೆ ಪ್ರಾರಂಭಿಸಿದರೋ, ಆ ಕಾಲದಿಂದಲೂ ಪ್ರತಿಯೊಂದು ಗ್ರಾಮದಲ್ಲೂ ಒಬ್ಬೊಬ್ಬ ಯಜಮಾನರಿದ್ದಂತೆ ಕಾಣುತ್ತದೆ.

ಇಂತಹ ಮುಖ್ಯಸ್ಥರಿಗೆ ಕನ್ನಡದಲ್ಲಿ ಗೌಡರೆಂತಲೂ, ತೆಲುಗಿನಲ್ಲಿ ರೆಡ್ಡಿ ಎಂತಲೂ, ಮಹಾರಾಷ್ಟ್ರದಲ್ಲಿ ಪಾಟೀಲ್ ಎಂತಲೂ, ಇದರಂತೆಯೇ ಬೇರೆ ಬೇರೆ ದೇಶಗಳಲ್ಲಿ ಆಯಾ ದೇಶಭಾಷೆಗನುಸಾರವಾದ ಹೆಸರು ಬಂದಿರುತ್ತದೆ. ನಮ್ಮ ದೇಶದಲ್ಲಿ ಮೊದಲಿನಿಂದಲೂ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಕಾನೂನುಗಳು, ಮಹಾರಾಷ್ಟ್ರ ದೇಶವಾದ ಬೊಂಬಾಯಿ ಪದ್ಧತಿಯನ್ನು ಅನುಸರಿಸಿರುವುದರಿಂದ, ಅಲ್ಲಿಯ ಗೌಡರಿಗೆ ವಾಡಿಕೆಯಾಗಿರುವ ಪಾಟೀಲ್ ಎಂಬ ಹೆಸರೇ ಇಲ್ಲಿಯೂ ಪ್ರಚಾರಕ್ಕೆ ಬಂದು ದಿನಕ್ರಮೇಣ ಆ ಶಬ್ದವು "ಪಟೇಲು" ಎಂಬದಾಗಿ ಮಾರ್ಪಟ್ಟು ಪ್ರಕೃತದಲ್ಲಿ ಗ್ರಾಮದ ಗೌಡರಿಗೆ ಆ ಹೆಸರೇ ರೂಢಿಯಲ್ಲಿ ಬಂದಿದೆ.

[೬ ನೇ ಪುಟವನ್ನು ನೋಡಿ.]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಫೆಬ್ರವರಿ ತಾ|| ೩ ನೆಯ ಭಾನುವಾರ.

LABOUR GOVERNMENT.

One of the biggest changes affecting not only the future of the British Empire but also of the rest of the world has come about in England in the calling up of Mr. Ramsay Macdonald to form the Labour Cabinet. The Labour movement began only about 30 years ago and little did those pioneers think that by this time it would assume the reins of Government. So just and righteous have been their cause and so incontestable their claims that theirs have been the only party gaining in strength and numbers in the recent years. It was not long ago that both the Conservatives and the Liberals were equally decrying and condemning the Labour movement as subversive of the existing State of Society, law and order. These two old parties representing the landed aristocracies and capitalists thought that they were the only people privileged to govern. With the march of events, circumstances changed, the Labour became the most powerful party in the House of Commons, outnumbering the Liberals, and together with Liberals who were in opposition of the Conservative Government far outnumbering the Conservatives. His majesty the King did one of most historic acts in calling upon Mr. Ramsay Macdonald the Leader of the Labour Party to form the Government. The rest accepted without demur. And thus a bloodless revolution, as Mr. Thomas, Secretary of State for Colonies stated, has been brought about. This is how those people in the West adjust themselves to changing conditions. And that is why they progress. Here, in our blessed country, the admission of non-Brahmins to the Sanskrit Colleges is a great problem upsetting the minds of people who probably want to preserve like pickles their time-honoured institutions from pollution. If here and there, like His Highness the Maharaja of Boroda makes a passionate appeal that knowledge, no matter which it is, should be thrown open unreservedly to all classes of people, who is there to take heed of it and put into practice. This is only by way of an illustration of our mental outlook. There are hundred of other instances where we refuse to move, where we prefer to stagnate and rot, rather than progress and succeed. Is there any wonder then that those who move on rule and those who refuse are ruled? Let us hope for a broader and more liberal outlook in all matters affecting people's welfare in Mysore.

ಓಟರುಗಳಿಗೆ ಎಚ್ಚರಿಕೆ.

ಸಂಸ್ಥಾನದ ಎಲ್ಲ ಭಾಗದಲ್ಲೂ ಓಟನ್ನು ಕೊಡಲು ಅರ್ಹರಾದವರ ಹೆಸರುಗಳು ಮುದ್ರಿಸಲ್ಪಟ್ಟಿರುವ ಪಟ್ಟಿಗಳಲ್ಲಿ ಯಾರ ಹೆಸರುಗಳಾದರೂ ಯಾವ ಕಾರಣದಿಂದಲಾದರು ಬಿಟ್ಟುಹೋಗಿದ್ದಲ್ಲಿ ಅಂತಹವರು ಕ್ಲುಪ್ತವಾದ ಕಾಲದೊಳಗೆ ಸ್ಥಳೀಯಾಧಿಕಾರಿಗಳಿಗೆ ತಿಳುಹಿಸಬೇಕೆಂದು ಈ ಪತ್ರಿಕೆಯಲ್ಲಿ ಸೂಚಿಸಲ್ಪಟ್ಟಿದ್ದ ಪ್ರಕಾರ ನಡಿಸಿರಬಹುದೆಂದು ನೆನಸುತ್ತೇವೆ. ಈ ರಾಜಧಾನಿಯ ನಿವಾಸಿಗಳಲ್ಲಿ ಓಟನ್ನು ಕೊಡಲು ಅರ್ಹರಾದವರು ನಾಲ್ಕುಸಾವಿರಕ್ಕೆ ಮೇಲ್ಪಟ್ಟೇ ಇರುವರಾದರೂ, 1725 ಜನರ ಹೆಸರುಗಳು ಮಾತ್ರ ಓಟರುಗಳ ಲಿಸ್ಟಿನಲ್ಲಿ ಕೊಡಲ್ಪಟ್ಟಿದ್ದುದನ್ನು ನೋಡಿ ಆಶ್ಚರ್ಯಚಕಿತರಾಗಿ ಈ ನ್ಯೂನತೆಯನ್ನು ರಾಜಧಾನಿಯ ಮ್ಯುನಿಸಿಪಲ್ ಅಧಿಕಾರಿಗಳಾಗಲಿ ಸರ್ಕಾರದವರಾಗಲಿ ಗಮನಕ್ಕೆ ತಂದು ಕ್ರಮಪಡಿಸಬೇಕೆಂದು ನಾವು ಸೂಚಿಸಿದ್ದೆವು. ಅಲ್ಲದೆ ರಾಜಧಾನಿಯ ಕೆಲ ಮ್ಯುನಿಸಿಪಲ್ ಕೌನ್ಸಿಲರುಗಳೂ ಇತರ ದೊಡ್ಡಮನುಷ್ಯರುಗಳೂ ಸೇರಿ ಲೆಜಿಸ್ಲೇಟಿವ್ ಶಾಖೆಯ ಸೆಕ್ರೆಟರಿಯವರಿಗೆ ಅರ್ಜಿಯಮೂಲಕ ತಿಳುಹಿಸಿ ಮ್ಯುನಿಸಿಪಲ್ ಖಾತೆಯನ್ನನುಸರಿಸಿ ಓಟರುಗಳ ಲಿಸ್ಟನ್ನು ತಯಾರಿಸಲು ಕಾಲಾವಧಿಯನ್ನು ಹೆಚ್ಚಿಸಿಕೊಡಬೇಕೆಂದು ತಂತಿಯಮೂಲಕ ಕೇಳಿಕೊಂಡಿದ್ದುದಕ್ಕೆ, ಓಟರುಗಳು ರೂಲ್ಸನ್ನನುಸರಿಸಿ ತಮ್ಮ ದೂರನ್ನು ಹೇಳಿಕೊಳ್ಳಬಹುದಾಗಿದೆ; ನಿಮ್ಮಪೇಕ್ಷೆಯಂತೆ ಹೊಸಲಿಸ್ಟುಗಳನ್ನು ತಯಾರಿಸಲು ಅಪ್ಪಣೆಮಾಡಲಾಗುವುದಿಲ್ಲ ಎಂದು ಉತ್ತರವನ್ನು ಕೊಟ್ಟರು. ಅದರಮೇಲೆ ಈ ನ್ಯೂನತೆಯನ್ನು ಕುರಿತು ಪರ್ಯಾಲೋಚಿಸುವುದಕ್ಕಾಗಿ ಒಂದು ಸ್ಪೆಷಲ್ ಮೀಟಿಂಗನ್ನು ನಡಿಸಬೇಕೆಂದು ಕೆಲ ಮ್ಯುನಿಸಿಪಲ್ ಕೌನ್ಸಿಲರುಗಳು ಲಿಖಿತಮೂಲಕವಾಗಿ ಪ್ರೆಸಿಡೆಂಟರನ್ನು ಕೇಳಿರುವಲ್ಲಿ, ಈ ವಿಚಾರವನ್ನು ಪರ್ಯಾಲೋಚಿಸಲು ಮ್ಯುನಿಸಿಪಲ್ ಕೌನ್ಸಿಲಿಗೆ ಅಧಿಕಾರವಿಲ್ಲವೆಂದುತ್ತರವನ್ನು ಕೊಟ್ಟರು. ಆದರೂ ಕೆಲ ವಿದ್ಯಾವಂತರುಗಳಿಂದ ದೂರು ಬಂದಮೇಲೆ ಇನ್ನೂ 814 ಹೆಸರುಗಳನ್ನು ಹೆಚ್ಚಾಗಿ ಸೇರಿಸಿ ಒಂದು ಹೊಸಲಿಸ್ಟನ್ನು ತಯಾರಿಸಿದರು. ಇದರಿಂದ ಒಟ್ಟು ಓಟರುಗಳ ಸಂಖ್ಯೆಯು 2539 ಆಗಿರುವುದಾದರೂ, ಪೂರ್ಣವಾಗಿರುವುದಿಲ್ಲವೆಂದೂ ಈಗ ಹೊಸದಾಗಿ ತಯಾರಿಸಲ್ಪಟ್ಟ ಪಟ್ಟಿಗಳಲ್ಲಿ ಅರ್ಧಭಾಗಕ್ಕಿನ್ನ ಹೆಚ್ಚಾಗಿ ವಿಶ್ವವಿದ್ಯಾಲಯದ ಪದವೀಧರರುಗಳ ಹೆಸರುಗಳೇ ಇರುವುದರಿಂದ ಇದಾದರೂ ಸಮರ್ಪಕವಾಗಿಲ್ಲವೆಂದೂ ಹೇಳಬಹುದಾಗಿದೆ. ದೊಡ್ಡಪಟ್ಟಣಗಳಲ್ಲೇ ಹೀಗಾಗಿರುವಾಗ್ಗೆ ಇನ್ನು ತಾಲ್ಲೂಕು ಸ್ಥಳಗಳಲ್ಲಿ ಇನ್ನೆಷ್ಟು ನ್ಯೂನತೆಗಳು ನಡೆದಿರಬಹುದು? ಅಲ್ಲಿಯವರ ಕೂಗಾದರೂ ಗಿರುಮುಟ್ಟಿರುವುದುಂಟೆ! ಉಮೇದುವಾರರುಗಳ ಹೆಸರುಗಳೂ ಪ್ರಕಟವಾಗಿರುವುದಲ್ಲದೆ ಚುನಾವಣೆಯ ಕಾಲವೂ ಸಮೀಪಿಸಿತಾದುದರಿಂದ ಈವರೆಗೆ ನಡೆದಿರುವ ನ್ಯೂನತೆಯ ವಿಚಾರದಲ್ಲಿ ಇಲ್ಲಿಗೆ ವಿರಮಿಸುವ.

ಒಟ್ಟು ಸಂಸ್ಥಾನದಿಂದೆಲ್ಲಾ 901 ಜನರು ಪ್ರಜಾಪ್ರತಿನಿಧಿಸಭೆಗೂ 46 ಜನರು ನ್ಯಾಯವಿಧಾಯಕಸಭೆಗೂ ಉಮೇದುವಾರರಾಗಿ ನಿಂತಿರುತ್ತಾರೆ. ಇವರುಗಳಲ್ಲಿ ಪ್ರಜಾಪ್ರತಿನಿಧಿಸಭೆಗೆ 202 ಜನರೂ, ನ್ಯಾಯವಿಧಾಯಕ ಸಭೆಗೆ 10 ಜನರೂ ಆರಿಸಲ್ಪಡಬೇಕಾಗಿದೆ. ಇವರುಗಳನ್ನು ಚುನಾಯಿಸತಕ್ಕ ಓಟರುಗಳು ತಮ್ಮ ನಿಜವಾದ ಕಷ್ಟಸುಖಗಳ ಅನುಭವವನ್ನು ಪಡೆದು ಸರಿಯಾಗಿ ಅವನ್ನು ಸಭೆಯಲ್ಲಿ ಪ್ರಭುತ್ವದವರ ಕಣ್ಣು ಮುಂದಿಟ್ಟು ಚರ್ಚಿಸಲು ಸಮರ್ಥರಾದ ಮತ್ತು ತಮ್ಮ ನಂಬುಗೆಗೆ ಪಾತ್ರರಾದ ಜನರಿಗೇ ತಮ್ಮಗಳ ಓಟುಗಳನ್ನು ಕೊಟ್ಟು ತಮ್ಮ ಹಿತವನ್ನೂ ದೇಶದ ಹಿತವನ್ನೂ ಸಾಧಿಸಿಕೊಳ್ಳುವ ಕಡೆಗೆ ಮನಸ್ಸು ಕೊಡಬೇಕು; ಹಾಗಲ್ಲದೆ ದಾಕ್ಷಿಣ್ಯಾದಿಗಳಿಗೆ ಬದ್ಧರಾಗಿ ಸ್ವಾರ್ಥಪರರಿಗೋ ಅಥವಾ ವಿಷಯಜ್ಞಾನವಿಲ್ಲದವರಿಗೋ ಓಟುಗಳನ್ನು ಕೊಟ್ಟುಬಿಟ್ಟರೆ ಅಂತಹವರುಗಳಿಂದ ತುಂಬಿದ ಪ್ರಜಾಪ್ರತಿನಿಧಿಸಭೆ ಅಥವಾ ನ್ಯಾಯವಿಧಾಯಕ ಸಭೆಯಿಂದ ದೇಶಕ್ಕೆ ನಿಜವಾದ ಹಿತವಾಗಲಾರದು. ಪ್ರಜೆಗಳು ತಂತಮ್ಮ ಬೊಗಸೆಯಿಂದ ತಾವು ನೀರನ್ನು ಕುಡಿಯುವುದೇ ಹಿತವೆಂಬುದನ್ನು ತಿಳಿದಿದ್ದರೆ, ತಮ್ಮ ಕಷ್ಟಸುಖಗಳಿಗೆ ಭಾಗಿಗಳಾಗಿರುವ ಮತ್ತು ತಮ್ಮ ವಿಶ್ವಾಸಕ್ಕೆ ಪಾತ್ರರಾದ ಜನರನ್ನೇ ತಮ್ಮ ಪ್ರತಿನಿಧಿಗಳನ್ನಾಗಿ ಉಭಯ ಸಭೆಗಳಲ್ಲೂ ಹೆಚ್ಚುಹೆಚ್ಚಾಗಿ ಸೇರಿಸುವುದಕ್ಕಾಗಿ ಅಂತಹವರುಗಳಿಗೇ ಓಟನ್ನು ಕೊಡಬೇಕಲ್ಲದೆ ದಾಕ್ಷಿಣ್ಯಾದಿಗಳಿಗೊಳಪಟ್ಟು ಅಸಲಿಗೆ ಮೋಸಬರುವಂತಹ ಕೆಲಸವನ್ನು ಎಂದಿಗೂ ಮಾಡಿಕೊಳ್ಳಬಾರದು. ಸ್ವಪ್ರತಿಷ್ಠಾ ಕಾಮಿಗಳು ಚತುರುಪಾಯದಿಂದಲೂ ತಾವು ಸಫಲರಾಗಿ ಹೋಗುವುದಕ್ಕೆ ಪ್ರಯತ್ನಿಸುವುದುಂಟು. ಆತ್ಮಹಿತವೇ ಗುರಿಯಾಗುಳ್ಳ ಅವರುಗಳು "ಹೊಳೆಯನ್ನು ದಾಟಿದ ಮೇಲೆ ಅಂಬಿಗನಿಗೆ ಮಿಂಡ" ನೆಂದು ಹೇಳುವ ಗಾಧೆಯಂತೆ ಮೊದಲು ಯಾರನ್ನಾಶ್ರಯಿಸಿ, ಯಾರ ಓಟುಗಳನ್ನು ಪಡೆಯಲು ವಿನಿಯಸ್ನೇಹಾದಿಗಳನ್ನು ಮರೆಯಿಸುವರೋ ಅಂತಹವರುಗಳಿಗೆ ಹಿತಕರವಾಗಿ ಕೆಲಸಮಾಡುವುದು ಹಾಗಿರಲಿ, ಕಡೆಗೆ ಎರಡುಬಗೆಯುವುದಕ್ಕೂ ಹಿಂಜರಿಯುವುದಿಲ್ಲ. ಇದಕ್ಕೆ ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲಿನ ಆರ್ಡರನ್ನು ಅನುಷ್ಠಾನಕ್ಕೆ ತರುವಾಗಲೂ, ಸಂಸ್ಕೃತಕಾಲೇಜುಗಳಿಗೆ ಹಿಂದುಳಿದ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಕೊಡುವ ವಿಚಾರದಲ್ಲಿ ಚರ್ಚೆ ನಡೆದಾಗಲೂ ಎಬ್ಬಿಸಿದ ಬೊಬ್ಬೆಯು ನಿದರ್ಶನವಾಗಿದೆ. ಅದುಕಾರಣ ಇನ್ನು ಮೂರು ವರ್ಷಕಾಲ ಉಭಯ ಸಭೆಗಳಿಂದ ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಕ್ಕೆ ಯಾರ ಪ್ರಾತಿನಿಧ್ಯವು ತಮಗೆ ಇದ್ದರೆ ಅನುಕೂಲವೊ ಅಂತಹವರುಗಳನ್ನೇ ಮುಂದಕ್ಕೆ ನಿಲ್ಲಿಸಿ ಅವರುಗಳಿಗೇ ತಮ್ಮ ಘನವಾದ ಓಟುಗಳನ್ನು ಕೊಡಲು ಖಂಡಿತವಾಗಿ ಮರೆಯಬಾರದೆಂದು ಎಚ್ಚರಿಸುತ್ತೇವೆ.

ಡಾಕ್ಟರ್ ಬಿ. ನಂಜಪ್ಪನವರಿಗೆ ರಾಜಧಾನಿಯಲ್ಲಾದ ಸತ್ಕಾರವು.

ಕಳೆದ 9 ತಿಂಗಳುಗಳಿಂದಲೂ ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿದ್ದು ಶಿವಮೊಗ್ಗೆಗೆ ವರ್ಗವಾಗಿ ದಯಮಾಡಿಸಿದ ಡಾಕ್ಟರ್ ಬಿ. ನಂಜಪ್ಪನವರನ್ನು ಪುರನಿವಾಸಿಗಳು ಈ ತಾ|| 1ರ ಸಾಯಂಕಾಲ ತಳಿರು ತೋರಣಗಳಿಂದಲಂಕೃತವಾದ ಟೌನ್‌ಹಾಲಿಗೆ ಬರಮಾಡಿಕೊಂಡು ಗಾನವಿಶಾರದ ಸಂಗೀತ ವಿದ್ವಾನ್ ಬಿ. ಕೃಷ್ಣಪ್ಪನವರ ಶಿಷ್ಯಮಂಡಲಿಯವರಿಂದ ನಡಿಸಲ್ಪಟ್ಟ ಪಿಟೀಲು, ಜಲತರಂಗು, ಹಾರ್ಮೋನಿಯಂ ಮೃದಂಗ ಮೊದಲಾದ ವಾದ್ಯಗಳಿಂದ ಕೂಡಿದ ಕಾನ್ಸರ್ಟಿನಿಂದಲೂ, ಶಾಕುಂತಲ ನಾಟಕಸಂಘದವರ ದ್ರೌಪದಿಸ್ವಯಂವರ ಕಥಾಭಾಗ ಪ್ರಯೋಗದಿಂದಲೂ, ಅವರ ಗುಣಕಥನದಿಂದಲೂ, ಪುಷ್ಪಮಾಲಾಲಂಕಾರದಿಂದಲೂ ಸತ್ಕರಿಸಿ ಅವರಲ್ಲಿ ತಮ್ಮಗಳಿಗಿರುವ ವಿಶ್ವಾಸಗೌರವಗಳನ್ನು ಪ್ರದರ್ಶಿಸಿದರು. ಡಾ|| ನಂಜಪ್ಪನವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದಾಗ್ಗೆ ಲೋಕಪ್ರಿಯತೆಯನ್ನು ಸಂಪಾದಿಸಿದ್ದುದನ್ನೂ ಅಲ್ಲಿಂದ ಅವರ ಜನ್ಮಸ್ಥಲವಾದ ರಾಜಧಾನಿಗೆ ದಯಮಾಡಿಸಿ ಇಲ್ಲಿದ್ದ ಸ್ವಲ್ಪಕಾಲದಲ್ಲಿಯೇ ಪ್ರತಿಯೊಬ್ಬ ರೋಗಿಯನ್ನೂ ಬಡವ ಬಲ್ಲಿದನೆಂಬ ತಾರತಮ್ಯವಿಲ್ಲದೆ ಪ್ರೀತಿಯಿಂದಲೂ ಸಾನುಭೂತಿಯಿಂದಲೂ ಕಂಡು ಉಪಚರಿಸುತ ಅವರುಗಳ ವಂದನೆ ಕೃತಜ್ಞತೆಗಳಿಗೆ ಪಾತ್ರರಾಗಿ ಸರ್ವಜನ ಸಂಮಾನ್ಯರಾಗಿರುವುದಕ್ಕೆ ಈ ದಿವಸದ ಸತ್ಕಾರಸಮಾರಂಭವೇ ನಿದರ್ಶನವಾಗಿದೆ ಎಂದು ಮೊದಲಾಗಿ ಮ|| ವೆಂಕಟಕೃಷ್ಣಯ್ಯನವರಿಂದ ಅವರ ಗುಣಕಥನವು ಮಾಡಲ್ಪಟ್ಟ ಮೇಲೆ ಡಾಕ್ಟರ್ ಬಿ. ನಂಜಪ್ಪನವರು ಈ ಸತ್ಕಾರಸಮಾರಂಭದಿಂದ ತಮಗುಂಟಾದ ಸಂತೋಷವನ್ನು ತಿಳಿಸುವಾಗ್ಗೆ, "ನನ್ನಿಂದೇನಾದರೂ ಜನರಿಗೆ ಪ್ರಯೋಜನವಾಗಿರುವ ಪಕ್ಷದಲ್ಲಿ ಅದು ನನ್ನ ಸಹೋದ್ಯೋಗಿಗಳಾದ ಡಾಕ್ಟರುಗಳ ಮತ್ತು ನರ್ಸುಗಳ ಸಾಹಾಯ್ಯದಿಂದ ಆಗಿರುವುದೇ ಹೊರತು ನನ್ನೊಬ್ಬನಿಂದಲೇ ಅಲ್ಲವು. ತಾವು ಹೇಳುವಂತೆ ನನ್ನಲ್ಲೇನಾದರೂ ಒಳ್ಳೇ ಗುಣವಿರುವ ಪಕ್ಷದಲ್ಲಿ ಅದು ನನ್ನ ಪ್ರಿಯತಂದೆಯವರ ಪ್ರಭಾವ ವಿಶೇಷದಿಂದಲೇ ಲಭ್ಯವಾಗಿರುವುದೆಂದು ಭಾವಿಸುತ್ತೇನೆ. ನಾನು ಬಾಲಕನಾಗಿರುವಾಗ ಒಬ್ಬ ವೃದ್ಧ ಮುಹಮ್ಮದೀಯನು ಒಂದುದಿವಸ ಹಲಸಿನಹಣ್ಣನ್ನು ಹೊತ್ತಿಕೊಂಡು ಮಾರಲು ಸಾರುತ ನಮ್ಮ ಮನೆ ಮುಂದೆ ಹೋಗುತ್ತಿರುವಾಗ್ಗೆ ನಾನು ಲೋ ಹಲಸಿನಹಣ್ಣಿನವನೇ ಬಾರೋ ಎಂದು ಕೂಗಿ ಕರೆದು ಅದರ ಬೆಲೆಯನ್ನು ಕೇಳಿದೆನು. ಆತನು ಏನಪ್ಪ ನಿನ್ನನ್ನ ನೋಡಿದರೆ ದೊಡ್ಡವರಮಗನ ಹಾಗೆ ಕಾಣುತ್ತೆ ಹೀಗೆ ಕರಿಯುತ್ತೀಯೆ ಎಂದು ಹೇಳಿದನು. ಅದು ಈಗಲೂ ನನ್ನ ಸ್ಮೃತಿಪಥದಲ್ಲಿರುವುದು. ನಾವು ಗೌರವವನ್ನು ಹೊಂದಬೇಕಾದರೆ ಮೊದಲು ನಾವು ಇತರರನ್ನು ಗೌರವಿಸಬೇಕು ಎಂಬುದು ಗೊತ್ತಾಯಿತು. ನಾನು ಸರ್ಕಾರಿ ಉದ್ಯೋಗಕ್ಕೆ ಸೇರಿ 15-20 ವರ್ಷಗಳಮೇಲಾದರೂ ನಾನು ಹುಟ್ಟಿಬೆಳೆದು ವಿದ್ಯಾಭ್ಯಾಸಮಾಡಿದ ಈ ರಾಜಧಾನಿಗೆ ಬಂದು ತಮ್ಮಗಳ ಸೇವೆಯನ್ನು ಅಲ್ಪಕಾಲದವರೆಗಾದರೂ ಮಾಡಲು ಅವಕಾಶವು ದೊರೆದುದಕ್ಕಾಗಿ ಸಂತೋಷಿಸುತ್ತೇನೆ. ತಾವು ವಿಶ್ವಾಸಪೂರ್ವಕವಾಗಿ ಈ ದಿವಸ ನನಗೆ ಮಾಡಿದ ಸತ್ಕಾರಕ್ಕೋಸ್ಕರ ತಮ್ಮಗಳನ್ನು ಬಹಳವಾಗಿ ವಂದಿಸುತ್ತೇನೆ" ಎಂದು ಹೇಳಿದರು. ತರುವಾಯ ಅತಿಥಿಗಳಾದ ಡಾಕ್ಟರರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಮೈಸೂರು ಪಟೇಲರುಗಳ ಮಹಾಸಭೆಯು.

ಗ್ರಾಮವಾಸಿಗಳ ಮಾನ ಪ್ರಾಣ ಧನರಕ್ಷಕರಾಗಿಯೂ, ಸರ್ವದಾ ಅವರ ಹಿತಚಿಂತಕರಾಗಿಯೂ ಸರ್ಕಾರದ ಪ್ರತಿನಿಧಿಗಳಾಗಿಯೂ ಇದ್ದು ಸರ್ಕಾರದ ಅಧಿಕಾರಿಯಷ್ಟೇ ದರ್ಪಗೌರವವುಳ್ಳವರಾಗಿಯೂ ಇದ್ದ ಪಟೇಲರು ಕಾಲಕ್ಕೆತಕ್ಕಂತೆ ವಿದ್ಯೆಯಲ್ಲಿ ಮುಂದರಿಯದೆ ಹೋಗಿ ತಮ್ಮ ಕರ್ಣೀಕರಾಗಿದ್ದ ಶಾನುಭೋಗರ ಆಜ್ಞಾನುವರ್ತಿಗಳಾಗಿ ಅವರ ದಪ್ತರವನ್ನೂ ಮಸೀ ಕುಡಿಕೆಯನ್ನೂ ಹೊತ್ತಿಕೊಂಡು ತಿರುಗುವ ಶೋಚನೀಯಸ್ಥಿತಿಗಳಿರುವುದನ್ನು ಹೋಗಲಾಡಿಸಿ ತಮ್ಮ ಪೂರ್ವ ಗೌರವಪ್ರತಿಷ್ಠೆಯನ್ನು ಹೊಂದಲು ತಕ್ಕ ಪ್ರಯತ್ನಗಳನ್ನು ಮಾಡುವಬಗೆಗೆ ಕಳೆದ ತಾ|| 26-27 ರಲ್ಲಿ ಚನ್ನಪಟ್ಟಣದಲ್ಲಿ ಒಂದು ಮಹಾಸಭೆಯನ್ನು ಸ್ವಜನಾಭಿ ವಿದ್ಯಾಭಿವೃದ್ಧಿಗಾಗಿ ಅರ್ಧಲಕ್ಷ ರೂ.ವರೆಗೆ ವೆಚ್ಚಮಾಡಿ ವೀರಶೈವವಿದ್ಯಾರ್ಥಿನಿಲಯವನ್ನು ರಾಜಧಾನಿಯಲ್ಲಿ ಸ್ಥಾಪಿಸಿ ಸುಪ್ರಖ್ಯಾತರಾಗಿರುವ ಶ್ರೀಮಂತ ಕಬ್ಬಳ್ಳಿ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿಸಿ ಪುರೋಭಿವೃದ್ಧಿ ಸಾಧಕವಾದ ನಿರ್ಧಾರಗಳನ್ನು ಮಾಡಿದುದಲ್ಲದೆ ಒಂದು ಸಂಘವನ್ನು ಸ್ಥಾಪಿಸಿದರು. ಈ ಸಭೆಯ ನಡವಳಿಕೆಗಳೆಲ್ಲವೂ ಸಾದ್ಯಂತವಾಗಿ ಬೇರೆಕಡೆ ಮುದ್ರಿಸಲ್ಪಟ್ಟಿವೆ.

ಸ್ವದೇಶದ ವೃತ್ತಾಂತಗಳು.

ದಿವಾನರು ಈ ತಾ|| 9 ರಲ್ಲಿ ವೈಟ್‌ಫೀಲ್ಡಿಗೆ ದಯಮಾಡಿಸಿ ಅಲ್ಲಿಯ ಸ್ಥಿತಿಗತಿಗಳನ್ನು ಪರಾಮರ್ಶಿಸಿಕೊಂಡು ಬರುವವರಾಗಿರುವರು.

ಮಹಾಮಾತೃ ಶ್ರೀ ವಾಣಿವಿಲಾಸ ಸನ್ನಿಧಿಯವರು ಕಾವೇರಿ ನದಿಯ ಸ್ನಾನಕ್ಕಾಗಿ ಬರುವ ಮಂಗಳವಾರ ಬಲ್ಮುರಿ ಕ್ಷೇತ್ರಕ್ಕೆ ದಯಮಾಡಿಸುವುದಾಗಿ ಕೇಳುತ್ತೇವೆ.

ರಾಜ್ಯಾಂಗ ಸುಧಾರಣೆಯ ಸಂಬಂಧವಾಗಿ ಸ್ಪೆಷಲ್ ಡ್ಯೂಟಿ ಆಫೀಸರಾಗಿದ್ದ ಮ|| ಆರ್. ರಂಗರಾವ್ ಬಿ.ಎ.,ಬಿ.ಎಲ್., ರವರು ಈ ಫೆಬ್ರವರಿ ತಾ|| 1 ರಿಂದ ಪ್ರಜಾಪ್ರತಿನಿಧಿಸಭೆಗೂ ನ್ಯಾಯವಿಧಾಯಕ ಸಭೆಗೂ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮಾಲೂರಿನಲ್ಲಿ ಕುಡಿಯುವ ನೀರಿಗೆ ಬಹಳ ಗೋಟಾಗಿರುವುದರಿಂದ ಆ ಊರಿನ ಪಶ್ಚಿಮದಿಗ್ಭಾಗದಲ್ಲಿರುವ ಕೆರೆಯ ಸಮೀಪದಲ್ಲಿ ಒಂದು ಬಾವಿಯು ಚಿನ್ನದಗಣಿಗೆ ಸೇರಿದ ಮತ್ತು ಬಾವಿಗಳನ್ನು ತೆಗಿಸುವಲ್ಲಿ ನಿಪುಣರಾದ ಮಿ|| ಸ್ಟ್ರೀಮೆಯರ್‌ರವರ ಸೂಚನೆಯಂತೆ ತೆಗೆಯಲ್ಪಡುವುದಕ್ಕಾಗಿ 1000 ರೂ. ವೆಚ್ಚಮಾಡಲು ಸರ್ಕಾರದಪ್ಪಣೆಯಾಗಿದೆ.

ಹೊಸ ಪ್ರಜಾಪ್ರತಿನಿಧಿ ಸಭೆಯು ರಾಜಧಾನಿಯ ಜಗನ್ಮೋಹನಪ್ರಸಾದದಲ್ಲಿರುವ ವಿವಾಹಮಂಟಪದಲ್ಲಿ ಶ್ರೀಮನ್ಮಹಾರಾಜರವರಿಂದ ಆರಂಭಿಸಲ್ಪಡುವುದಾಗಿ ವದಂತಿಯಿದ್ದುದು ತಪ್ಪಿ ಟೌನ್‌ಹಾಲಿನಲ್ಲಿ ಸಭೆಯು ನಡಿಯುವುದಾಗಿಯೂ, ಇದಕ್ಕಾಗಿ ಕಟ್ಟಡವು 5-6 ಸಾವಿರ ರೂ. ಗಳ ವೆಚ್ಚದಿಂದ ಸಜ್ಜುಗೊಳಿಸಲ್ಪಡುವುದಾಗಿಯೂ ಈಚೆಗೆ ವದಂತಿಯುಟ್ಟಿದೆ.

ಕಳೆದ ಬುಧವಾರ ರಾಜಧಾನಿಯಲ್ಲಿ ದಿ. ಬ. ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಗೋರಕ್ಷಣೆಯ ವಿಚಾರವಾಗಿ ಒಂದು ಸಭೆಯು ನಡೆದಿತು. ಇದಕ್ಕಾಗಿ ಬೆಂಗಳೂರಿಂದ ಮ|| ಪೌವ್ವಾಲ್ ಮೊದಲಾಗಿ ಗೋರಕ್ಷಣಾಭಿಮಾನಿಶಾಲಿಗಳು ಬಂದಿದ್ದರು. ಸಭೆಯಲ್ಲಿ ಅನೇಕ ಭಾಷಣಗಳು ನಡೆದು ಒಂದು ನಿಧಿಯನ್ನು ಕೂಡಿಸಲು ಕೆಲ ನಿರ್ಧಾರಗಳು ಮಾಡಲ್ಪಟ್ಟುವು.

ಈ ಫೆಬ್ರವರಿ ತಾ|| 15ರಲ್ಲಿ ರಾಜಧಾನಿಯ ಲಷ್ಕರ್ ಮಂಡಿ ಮತ್ತು ನಜರಬಾದು ಮೊಹಲ್ಲಾಗಳ ಓಟರುಗಳು ಟೌನ್‌ಹಾಲಿಗೂ, ದೇವರಾಜ ಮತ್ತು ಕೃಷ್ಣರಾಜ ಮೊಹಲ್ಲಾಗಳ ಓಟರುಗಳು ಹೊಸ ಮ್ಯುನಿಸಿಪಲ್ ಕಟ್ಟಡಕ್ಕೂ ಚಾಮರಾಜ ಮತ್ತು ಕೃಷ್ಣರಾಜ ಮೊಹಲ್ಲಾಗಳ ಓಟರುಗಳು ಮರಿಮಲ್ಲಪ್ಪನವರ ಹೈಸ್ಕೂಲಿಗೂ ಬಂದು ಓಟುಗಳನ್ನು ಕೊಡಬೇಕಾಗಿ ಗೊತ್ತಾಗಿರುವುದು.

ರಾಜಧಾನಿಗೆ ಸಮೀಪವಾಗಿರುವ ಬೆಳ್ಗೊಳ, ಆನಂದೂರು, ಹೊಸಹಳ್ಳಿ, ಪಾಲಹಳ್ಳಿ, ನಾಗನಹಳ್ಳಿ, ಕೆಸರೆ, ಗುಬ್ಬಿಗೊಂಡನಪುರ ಮೊದಲಾದ ಗ್ರಾಮಗಳಲ್ಲಿ ವಾಂತಿಭೇದಿ ರೋಗವು ಪ್ರಾಪ್ತವಾಗಿ ಜನರು ಸಾಯುತ್ತಿರುವುದಾಗಿಯೂ ರಾಜಧಾನಿಯ ಹೆಲ್ತಾಫೀಸರು ರೋಗಗಳಿರುವ ಸ್ಥಳಗಳಿಗೆ ಹೋಗಿ ಜನರಿಗೆ ಎಚ್ಚರಿಕೆಯನ್ನು ಕೊಟ್ಟು ಕೆಲರೋಗಿಗಳನ್ನು ಸಾಂಕ್ರಾಮಿಕ ಜಾಡ್ಯಗಳ ಆಸ್ಪತ್ರೆಗೆ ಕರೆತಂದು ಚಿಕಿತ್ಸೆಮಾಡಿಸುತ್ತಿರುವುದಾಗಿಯೂ ತಿಳಿಯಬಂದಿದೆ.

ಬೆಂಗಳೂರಿನಲ್ಲಿ ಅರಮನೆ ಡಿವಿಜನ್ನಿನವರು ಹೈಗ್ರೌಂಡ್ ಪೊಲೀಸು ತಾಣಾಕ್ಕೆ, ಬಳೇಪೇಟೆ ಡಿವಿಜನ್ನಿನವರು ಉಪ್ಪಾರಪೇಟೆ ಪೊಲೀಸು ತಾಣಾಕ್ಕೆ, ಮನವಾರ್ತೆಪೇಟೆ ಡಿವಿಜನ್ನಿನವರು ಚಿಕ್ಕಪೇಟೆಯಲ್ಲಿರುವ ಸರ್ಕಾರಿ ಬಾಲಿಕಾ ಪಾಠಶಾಲೆಗೆ, ಅಲ್ಸೂರುಪೇಟೆ ಡಿವಿಜನ್ನಿನವರು ಯಲಹಂಕ ಗೇಟ್ ಪೊಲೀಸು ತಾಣಾಕ್ಕೆ, ನಗರ್ತಪೇಟೆ ಮತ್ತು ಲಾಲಬಾಗು ಡಿವಿಜನ್ನುಗಳವರು ಅಲ್ಸೂರು ಗೇಟ್ ಪೊಲೀಸು ತಾಣಾಕ್ಕೆ, ಕೋಟೆಯ ಡಿವಿಜನ್ನಿನವರು ಟಿಪ್ಪುಸುಲ್ತಾನರ ಅರಮನೆಗೆ, ಬಸವನಗುಡಿ ಡಿವಿಜನ್ನಿನವರು ಬಸವನಗುಡಿ ಪೊಲೀಸು ತಾಣಾಕ್ಕೆ, ಮಲ್ಲೇಶ್ವರಂ ಡಿವಿಜನ್ನಿನವರು ಮಲ್ಲೇಶ್ವರ ಸರ್ಕಾರಿ ಹೈಸ್ಕೂಲಿಗೆ ಈ ಪ್ರಕಾರ ಓಟರುಗಳು ಈ ಫೆಬ್ರವರಿ ತಾ|| 15 ರಲ್ಲಿ ಬಂದು ಕೊಡಲು ಗೊತ್ತಾಗಿರುವುದು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡೆದ ಕೊಲೆಯ ಸಂಬಂಧದಲ್ಲಿ ಸೆರೆ ಹಿಡಿಯಲ್ಪಟ್ಟು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುವ ಅದೇ ಆಫೀಸಿನ ರಿಕಾರ್ಡು ಕೀಪರ್ ಕೃಷ್ಣರಾಯನ ಭಾವಮೈದುನನು ಬೊಂಬಾಯಿನಿಂದ ಬರಮಾಡಲ್ಪಟ್ಟು ಸಾಕ್ಷಿ ವಿಚಾರಣೆ ಮಾಡಲ್ಪಡುವಲ್ಲಿ ತನ್ನ ಭಾವನಾದ ಅಪರಾಧಿ ಕೃಷ್ಣರಾಯನು ತನ್ನ ವಿಚಾರದಲ್ಲಿ ಪೊಲೀಸರು ಅನುಮಾನಪಟ್ಟಿಕೊಂಡಿರುವುದರಿಂದ ನಾನು ಕೂಡಿಟ್ಟಿದ್ದ 3,000 ರೂ. ಗಳನ್ನು ನಿನ್ನ ವಶಕ್ಕೆ ಕೊಟ್ಟು ಜೋಪಾನಪಡಿಸುವುದಕ್ಕಾಗಿ ತೆಗೆದುಕೊಂಡು ಬಂದಿದ್ದೇನೆಂದು ಹೇಳಿ 3000 ರೂ. ಗಳ ನೋಟನ್ನು ನನ್ನ ವಶಕ್ಕೆ ಕೊಟ್ಟನು. ನಾನು ಅವನ ಚರ್ಯವನ್ನು ನೋಡಿ ಅನುಮಾನಗ್ರಸ್ತನಾಗಿ ನೀನು ಕೂಡಲೆ ಊರಿಗೆ ಹೋಗಿ ಪೊಲೀಸರಿಗೆ ನಿನ್ನ ವಿಚಾರದಲ್ಲಿ ಉಂಟಾಗಿರುವ ಅನುಮಾನ ಪರಿಹಾರವಾಗುವಂತೆ ಕಾಣಿಸಿಕೊಳ್ಳುವುದೆಂದು ಹೇಳಿ ಕಳುಹಿದೆನು. ಎಂದು ಸಾಕ್ಷ್ಯವನ್ನು ನುಡಿದನು. ರಕ್ತದಕಲೆಯಿರುವುದೆಂಬ ಅನುಮಾನದಿಂದ ಕೆಮಿಕಲ್ ಎಕ್ಸಾಮಿನರ ಪರೀಕ್ಷೆಗೆ ಕಳುಹಿದ್ದ ಬಟ್ಟೆಯಮೇಲೆ ರಕ್ತದ ಕಲೆಯಿಲ್ಲವೆಂದು ನಿರ್ಧರಿಸಲ್ಪಟ್ಟಿರುವುದು. ಈ ವಿವಾದದ ವಿಚಾರಣೆಯು ನಾಳೆಯದಿನ ಮರಳಿ ನಡಿಯುವುದು.

ರಾಜಧಾನಿಯ ಓಟರು ಮಹಾಶಯರಲ್ಲಿ

ವಿಜ್ಞಾಪನ್.

ಪ್ರಜಾಪ್ರತಿನಿಧಿ ಸಭೆ (ರೆಪ್ರೆಜೆಂಟೇಟಿವ್ ಅಸೆಂಬ್ಲಿ)ಗೆ ಮೆಂಬರುಗಳಾಗಲು ಈ ಕೆಳಗೆ ಕಂಡ ನಾವು ನಾಲ್ವರು ಉಮೇದುವಾರರಾಗಿ ನಿಂತಿರುತ್ತೇವೆ ಮತ್ತು ಮಹಮ್ಮದ್‌ಸೇಟನಾದ ನಾನು ಮಾತ್ರ ಲೆಜಿಸ್ಲೇಟಿವ್ ಕೌನ್ಸಿಲಿಗೆ ಸಹ ಮೆಂಬರಾಗಲು ಉಮೇದುವಾರನಾಗಿರುತ್ತೇನೆ. ಆದ್ದರಿಂದ ತಾವು ಬರುವ ಫೆಬ್ರವರಿ ತಾ|| 15 ರಲ್ಲಿ ಗೊತ್ತಾದ ಸ್ಥಳಕ್ಕೆ ದಯವಿಟ್ಟು ದಯಮಾಡಿ ನಮ್ಮಗಳಿಗೆ ತಮ್ಮ ಘನವಾದ ಓಟುಗಳನ್ನು ಕೊಟ್ಟು ಮತ್ತು ಇತರರಿಂದ ಕೊಡಿಸಿ, ಪ್ರಜಾಸೇವೆಯೇ ಜೀವಿತದ ಪುರುಷಾರ್ಥವೆಂಬ ನಮ್ಮ ಸಂಕಲ್ಪವನ್ನು ನಿದರ್ಶನಪಡಿಸಲು ಅವಕಾಶವನ್ನು ಉಂಟುಮಾಡಿಕೊಡಬೇಕಾಗಿ ಪ್ರಾರ್ಥಿಸುವ,

ತಮ್ಮ ಕೃಪಾಭಿಲಾಷಿಗಳಾದ,

1. ಮಹಮ್ಮದ್‌ಸೇಟ್. 2. ಎಚ್. ಸಿ. ದಾಸಪ್ಪ.
3. ಫಣಕೋಟಿಸೆಟ್ಟಿ. 4. ವೈ. ವಿರೂಪಾಕ್ಷಯ್ಯ.

(Continued from the previous issue)

The Local Committee for The National Baby Week, Mysore City, beg to acknowledge with many thanks the following Subscriptions.

1. Collections through Miss Gnanakan Rs. 14.
2. Contribution from the staff and students of the Sri Chamarajendra Ursu Boarding School, Mysore, Rs. 12-10-0.
3. Contribution from the staff and students of the Sri Vani Vilas Ursu Girls' School, Mysore, Rs. 6-3-0.
4. T. S. Alikhan, Esq., Rs. 3.
5. Mrs. R. V. Pathankar, Rs. 2.

Re. 1 each.

1. U. D. Narayana Murthi, Esq., B.A., B.L. 2. Y. Ramaswami, Esq., L.C.E. 3. S. Krishna Rao, Esq. 4. R. P. Mallappa, Esq., B.A., LL.B. 5. Mr. M. S. 6. Mr. H. S. N. 7. H. R. Venkata Subba Rao, Esq., B.A., L.C.E. 8. K. Parthasarathi Iyengar, Esq. 9. H. C. Dasappa, Esq., B.A., LL.B. 10. P. S. Venkatanarayana, Esq. 11. G. R. Sastry, Esq. 12. S. Muthuswami Iyer, Esq., L.C.E. 13. A Friend. 14. A. Friend. 15. G. Mallayya, Esq. 16. H. L. Raje Urs, Esq. 17. A. R. Basavaraj Urs, Esq. 18. M. G. Dastagir, Esq. 19. Mr. M. V. 20. B. R. Chakravarthi, Esq. 21. M. Venkatakrishniah, Esq. 22. M. A. Srinivasachar, Esq. 23. B. P. Siddaraj Urs, Esq. 24. M. N. Alikhan, Esq. 25. Mr. X. 26. Y. V. Narasimba Murthy, Esq. 27. Sethujeeva Rao, Esq. 28. M. Puttu Rao, Esq.

As. 8 each.

1. Sri Kamalamma. 2. Sri Subbamma. 3. Sri Gangamma. 4. Sri Vedanayakamma. 5. Sri Puttu Thayamma. 6. Sri Lalithamma. 7. Mrs. S. Krishna Rao. 8. C. Krishna Rao, Esq. 9. J. Raghavendra Rao, Esq. 10. T. Kantharaj Urs, Esq. 11. P. M. Nanjaraj Urs, Esq. 12. V. Thimmiah, Esq. 13. H. S. Madhava Rao, Esq. 14. Yalappa chari, Esq. 15. V. Ramiah, Esq. 16. Balaiah Raju, Esq. 17. V. Ramachandra Rao, Esq. 18. P. Parthasarathi Naidu, Esq. 19. Maistry Singrachari, Esq. 20. Nanjundachari, Esq. 21. L. R. Subba Rao, Esq. 22. Adirajiah, Esq. 23. A. Gopalaraj Urs, Esq. 24. P. S. Siddaraj Urs, Esq.

As. 4 each.

1. Sri Subbamma. 2. Sri Seetha Bai. 3. Sri Puttamma. 4. Sri Alamelamma. 5. Sri Kanjamma. 6. Sri T. S. Puttamma. 7. S. Nanjundiah, Esq. 8. Sahukar Ranganna, Esq. 9. Shamachari, Esq. 10. M. S. Rajagopalachar, Esq. 11. N. Shankara Rao, Esq. 12. V. K. Srinivasa Rao, Esq. 13. M. Thimmiah, Esq. 14. K. Rama Sastry, Esq. 15. M. Subbanna Esq. 16. B. Chennakesaviah, Esq.

As. 2 each.

1. Sri S. A. Singamma. 2. Sri S. N. Surma Bai. 3. Sri Kamalamma. 4. Sri Savitramma. 5. Sri Rangamma. 6. Sri Shantha Bai. 7. Sri Narasamma. 8. Sri Yaggamma. 9. Sri Lakshmi Bai. 10. Sri Parvathamma. 11. K. Narasinga Rao, Esq. 12. N. N. Raja Rao, Esq. 13. M. Yellappa, Esq. 14. J. Ragavendra Rao, Esq.

1. S. R. Prasad, Esq., 0-1-9.

An. 1 each.

1. Sri S. K. Shantha Bai. 2. Sri Saroja. 3. Sri Subba Lakshmamma. 4. Sri Seethamma.

1. Myself and my wife, Rs. 10.

A. C. LINGARAJ URS,
Hon. Secretary.

[3ನೇ ಪುಟದಿಂದ ಮುಂದರಿದುದು]

ಒಂದು ಸಂಸಾರಕ್ಕೆ ಒಬ್ಬ ಯಜಮಾನನು ಅಥವಾ ಒಂದು ದೇಶಕ್ಕೆ ಒಬ್ಬ ದೊರೆಯು ಎಷ್ಟು ಅಗತ್ಯವೋ, ಒಂದು ಗ್ರಾಮಕ್ಕೆ ಒಬ್ಬ ಪಟೇಲನೂ ಅಷ್ಟೇ ಅಗತ್ಯವು. ಒಂದು ಸಂಸಾರದ ಭಾರವನ್ನೆಲ್ಲಾ ಅದರ ಯಜಮಾನನು ಹೇಗೆ ಹೊತ್ತು ಸಹಿಸಬೇಕಾಗಿದೆಯೋ ಅಥವಾ ಒಂದು ದೇಶದ ಸಮಸ್ತ ಆಡಳಿತಗಳನ್ನೆಲ್ಲಾ, ಆ ದೇಶದ ಮಹಾರಾಜರು ಹೇಗೆ ದಕ್ಷತೆಯಿಂದ ನಿರ್ವಹಿಸಬೇಕಾಗಿದೆಯೋ ಹಾಗೆಯೇ ಒಂದು ಗ್ರಾಮದ ಸರ್ವ ಆಡಳಿತವನ್ನೂ ಅದರ ಪಟೇಲನು ನೋಡಿಕೊಳ್ಳಬೇಕಾಗಿದೆ.

ಆದುದರಿಂದಲೇ ನಾವು ಕೇವಲ ರೆವಿನ್ಯೂ ನೌಕರರು ಮಾತ್ರವೇ ಅಲ್ಲ. ದೇಶದ ಪ್ರತಿಯೊಂದು ಇಲಾಖೆಗೂ ನಮ್ಮ ಸಂಬಂಧವಿದೆ. ರಾಜ್ಯಾಡಳಿತಕ್ಕಾಗಿ ಏರ್ಪಟ್ಟಿರುವ ಪ್ರತಿಯೊಂದು ಇಲಾಖೆಯ ಅಧಿಕಾರವನ್ನೂ ನಮ್ಮ ಗ್ರಾಮಾಡಳಿತ ಕಾರ್ಯದಲ್ಲಿ ನಡೆಸುವುದಕ್ಕೆ ನಾವು ಜವಾಬ್ದಾರರಾಗಿದ್ದೇವೆ. ಅಂದಮೇಲೆ ರಾಜ್ಯಾಡಳಿತಕ್ಕೆ ಪಟೇಲರಾದ ನಾವುಗಳೇ ಆಧಾರಭೂತರು. ಕಂಭ ಅಥವಾ ಗೋಡೆಗಳಿಲ್ಲದಿದ್ದರೆ ಮನೆಯು ಹೇಗೆ ನಿಲ್ಲಲಾರದೋ ಹಾಗೆಯೇ ಪಟೇಲರಾದ ನಾವುಗಳಿಲ್ಲದಿದ್ದರೆ ದೇಶಾಡಳಿತ ಕಾರ್ಯವು ನಡೆಯಲಾರದು. ನಮಗೂ ಸರ್ಕಾರಕ್ಕೂ, ರೈತರಿಗೂ ಇರುವ ಪರಸ್ಪರ ಸಂಬಂಧವು ಎಂತಹದೆಂಬುದನ್ನು, ನಮ್ಮಗಳ ಕರ್ತವ್ಯದ ವಿಚಾರದಲ್ಲಿ ಈಚೀಚೆಗೆ ಏರ್ಪಟ್ಟಿರುವ ಕಾನೂನುಗಳನ್ನು ಸೂಕ್ಷ್ಮವಾಗಿ ನೋಡಿಕೊಂಡರೆ, ಸುಲಭವಾಗಿ ತಿಳಿದುಕೊಳ್ಳಬಹುದಾಗಿದೆ. ಸರ್ಕಾರಕ್ಕೂ ನಮಗೂ ಇರುವ ಸಂಬಂಧವನ್ನು ಕುರಿತು ಒಂದೆರಡು ವಿಷಯಗಳನ್ನು ಮಾತ್ರ ಇಲ್ಲಿ ತಿಳಿಸುತ್ತೇನೆ. ರಾಜ್ಯಾಡಳಿತ ಕಾರ್ಯಗಳು ಸರಿಯಾಗಿ ನಡೆಯಬೇಕಾದರೆ ಅಗತ್ಯವಾಗಿರುವ ದ್ರವ್ಯವನ್ನು ನಾನಾ ರೂಪಗಳಲ್ಲಿ ರೈತರಿಂದ ವಸೂಲು ಮಾಡಿಕೊಡತಕ್ಕವರು ನಾವು. ಪ್ರಜಾಪಾಲನೆಗೆ ಸಂಬಂಧಪಟ್ಟ [illegible] ಸರ್ಕಾರಿ [illegible]ಗಳನ್ನು ಗ್ರಾಮಗಳಲ್ಲಿ ಪ್ರಚುರಪಡಿ ಅವುಗಳನ್ನು ಸರ್ವತ್ರ ಆಚರಣೆಗೆ ತರುವಂತೆ ನೋಡಿಕೊಳ್ಳುವವರು ನಾವು. ನಮ್ಮ ಗ್ರಾಮಗಳಿಗೆ ಸೇರಿರುವ ಸರ್ಕಾರಿ ಜಮೀನು, ಹುಲ್ಲು ಬನ್ನಿ, ಕಾಡುಗಳು, ಕೆರೆ, ಶಾಲೆ, ರಸ್ತೆ, ಸಾಲುಮರಗಳು, ದೇವಸ್ಥಾನ, ಛತ್ರ, ಸರ್ಕಾರಿ ಕಟ್ಟಡಗಳು ಇವೇ ಮೊದಲಾದುವನ್ನು ದುರಸ್ತು ಸ್ಥಿತಿಯಲ್ಲಿಟ್ಟುಕೊಂಡು ನೋಡಿಕೊಳ್ಳತಕ್ಕವರು ನಾವು. ಆಗಿಂದಾಗ್ಯೆ ತನಿಖೆಗಾಗಿ ನಮ್ಮ ಗ್ರಾಮಗಳಿಗೆ ಬರುವ ಎಲ್ಲಾ ಇಲಾಖೆಯ ಅಧಿಕಾರಿಗಳಿಗೂ, ಅವಶ್ಯಬಿದ್ದಾಗ ನಮ್ಮ ಸರಹದ್ದಿನಲ್ಲಿ ಹೋಗುವ ಸೇನಾ ಇಲಾಖೆಯವರಿಗೂ, ತಕ್ಕ ಸರಬರಾಯಿ ನಡೆಸುವವರು ನಾವು. ಗ್ರಾಮಗಳ ವಿಶಿಷ್ಟ ವಿಚಾರಗಳನ್ನೂ ಕುರಿತು ಬೇರೆ ಬೇರೆ ಇಲಾಖೆಯವರಿಗೆ ಆಗಿಂದಾಗ್ಯೆ ಅರಿಕೆಮಾಡಿಕೊಳ್ಳತಕ್ಕವರೂ ನಾವು.

ಈಗ ರೈತರಿಗೂ ನಮಗೂ ಇರುವ ಸಂಬಂಧವನ್ನು ಕುರಿತು ಸ್ವಲ್ಪ ವಿಚಾರಿಸೋಣ. ಗ್ರಾಮನೈರ್ಮಲ್ಯ, ಗ್ರಾಮರಕ್ಷಣೆ, ಪ್ರಜಾರೋಗ್ಯ ಇವುಗಳನ್ನು ನೋಡಿಕೊಳ್ಳತಕ್ಕವರು ನಾವು. ಜನಜಾನುವಾರುಗಳಿಗೆ ಸಾಂಕ್ರಾಮಿಕ ಜಾಡ್ಯಗಳು ತಗುಲಿದಾಗ ಅವುಗಳ ನಿವಾರಣೆಯ ಬಗ್ಗೆ ಕೆಲಸಮಾಡತಕ್ಕವರು ನಾವು. ಗ್ರಾಮಗಳಲ್ಲಿ ಖೂನಿ ದರೋಡೆ, ಮಾರಾಮಾರಿ, ಕಳ್ಳತನ, ಜೂಜು ಇವುಗಳಿಗೆ ಅವಕಾಶವಾಗದಂತೆ ಉಸ್ತುವಾರಿ ಮಾಡತಕ್ಕವರು ನಾವು. ಸಂತೆ, ಉತ್ಸವ, ಮೆರವಣಿಗೆ, ಜಾತ್ರೆ ಈ ಕಾಲಗಳಲ್ಲಿ ಪ್ರಜಾನೆಮ್ಮದಿಗೆ ಭಂಗ ಬಾರದಂತೆ ತಕ್ಕ ಏರ್ಪಾಡುಗಳನ್ನು ಮಾಡತಕ್ಕವರು ನಾವು. ರೈತರಲ್ಲಿ ವಿದ್ಯೆ, ವ್ಯವಸಾಯ, ಕೈಗಾರಿಕೆ, ವ್ಯಾಪಾರ, ನಾಗರೀಕತೆ ಇವುಗಳು ಅಭಿವೃದ್ಧಿ ಹೊಂದುವಂತೆ ಮಾಡುವ ಭಾರವು ನಮ್ಮದು. ರೈತರಿಗಿರಬಹುದಾದ ಕುಂದುಕೊರತೆಗಳನ್ನು ಘನ ಸರ್ಕಾರದವರ ಅವಗಾಹನೆಗೆ ತಂದು, ಅಗತ್ಯವಾದ ಅನುಕೂಲ ರಿಯಾಯಿತಿಗಳನ್ನು ಒದಗಿಸಿಕೊಡುವುದು ನಮ್ಮ ಕರ್ತವ್ಯವೇ ಆಗಿರುತ್ತದೆ.

ಹೀಗೆ ಯಾವತ್ತೂ ಸರ್ಕಾರಕ್ಕೆ ಜವಾಬ್ದಾರರಾಗಿಯೂ, ಅವರ ಪ್ರತಿನಿಧಿಗಳಾಗಿಯೂ, ರೈತರ ಕ್ಷೇಮಚಿಂತಕರಾಗಿಯೂ ಇದ್ದುಕೊಂಡು ಕೆಲಸಮಾಡತಕ್ಕ ನಮ್ಮಗಳ ಕರ್ತವ್ಯವು ಘನತರವಾದುದೆಂಬುಕ್ಕೆ ಸಂದೇಹವಿಲ್ಲ.

ಸಹೋದರರೆ, ಇಂಥಾ ಘನವಾದ ಕರ್ತವ್ಯವನ್ನೂ, ಗೌರವಾರ್ಹವಾದ ಸ್ಥಾನವನ್ನೂ ಉಳ್ಳ ನಮ್ಮಗಳ ಪ್ರಕೃತ ಸ್ಥಿತಿಯ ವಿಚಾರದಲ್ಲಿ ನಾವು ಸ್ವಲ್ಪ ಆಲೋಚಿಸಬೇಕಾಗಿದೆ. ಮೊದಲು ನಮಗಿದ್ದ ಪ್ರಾಶಸ್ತ್ಯವೂ, ದರ್ಪವೂ ಈಗ ನಶಿಸಿಹೋಗಲು ಕಾರಣವೇನು? ನಮ್ಮಗಳಿಗಿದ್ದ ಒತ್ತಾಸೆ, ಸಹಾಯಗಳು ದಿನಕ್ರಮೇಣ ಕಡಿಮೆಯಾದುದೇತರಿಂದ? ಪಟೇಲನು ಸ್ಥಳದ ತಾಯಿಯೆಂದು ಪ್ರಸಿದ್ಧಿಯುದ್ಧರೂ, ಈಚೀಚೆಗೆ ನಮ್ಮಗಳ ವಿಚಾರದಲ್ಲಿ, ಅಲ್ಲಲ್ಲೇ ಕೆಲವು ರೈತರೂ, ಇತರರೂ ಕೇವಲ ಉದಾಸೀನವನ್ನು ತೋರಿಸುತ್ತಾ, ಗ್ರಾಮಗಳಲ್ಲಿ ಒಡಕು ಹುಟ್ಟುವಂತೆ ಮಾಡುತ್ತಿರುವುದು ಏತರಿಂದ? ಎಂಬಿವೇ ಮೊದಲಾದುವುಗಳನ್ನು ನಾವು ನಿಧಾನವಾಗಿ ಆಲೋಚಿಸಿದುದೇ ಆದರೆ, ಹೀಗಾಗುವುದಕ್ಕೆ ಒಂದಕ್ಕಿಂತಲೂ ಹೆಚ್ಚಾದ ಕಾರಣಗಳು ನಮಗೆ ಸಿಕ್ಕುತ್ತವೆ. ಮುಖ್ಯವಾಗಿ ನಮ್ಮಲ್ಲನೇಕರು ನಮ್ಮ ಕಾರ್ಯದಕ್ಷತೆಗೆ ಸಾಕಾದಷ್ಟು ವಿದ್ಯಾವಂತರಾಗಿಲ್ಲದಿರುವುದೇ ಒಂದು ದೊಡ್ಡ ಕಾರಣವಾಗಿದೆ.

ನಮಗೆ ಬರೀ ಓದು ಬರಹ ಬಂದಮಾತ್ರಕ್ಕೇ ನಮ್ಮ ಕರ್ತವ್ಯವನ್ನು ಸಂಪೂರ್ಣವಾಗಿ ನೆರವೇರಿಸಲು ದಕ್ಷರಾಗಲಾರೆವು. ನಮ್ಮ ಸ್ಥಾನಕ್ಕೆ ಬೇಕಾದ ಕಾರ್ಯದಕ್ಷತೆಯ ವಿಚಾರದಲ್ಲಿ ಕೆಲವು ಕಾಲವಾದರೂ ನಮ್ಮಗಳಿಗೆ ತರಬಿಯತ್ತು ಅವಶ್ಯಕವಾಗಿದೆ. ಹಾಗೆಂದ ಮಾತ್ರಕ್ಕೆ ಪ್ರಕೃತ ನಮ್ಮಲ್ಲಿ ಈ ಸ್ಥಾನಕ್ಕೆ ಅರ್ಹತೆಯುಳ್ಳವರೂ, ದಕ್ಷರೂ ಇಲ್ಲವೇ ಇಲ್ಲವೆಂದು ಭಾವಿಸಲಾಗುವುದಿಲ್ಲ. ನಮ್ಮ ದೇಶದಲ್ಲಿ ಗಣ್ಯರಾದ ಅನೇಕ ಪಟೇಲರಿರುತ್ತಾರೆ. ನಾನು ಮೊದಲೇ ತಿಳಿಸಿರುವಂತೆ ಸರ್ಕಾರಕ್ಕಾಗಿಯೂ ರೈತರಿಗಾಗಿಯೂ ನಾವು ಮಾಡಬೇಕಾದ ಕಾರ್ಯಗಳು ಅಗಣಿತವಾಗಿರುವುದರಿಂದ, ಇವುಗಳನ್ನೆಲ್ಲಾ ಸಂಪೂರ್ಣವಾಗಿ ನೆರವೇರಿಸಲು ೨೪ ಗಂಟೆಗಳ ದಿನಕ್ಕೆ ಬದಲಾಗಿ ೪೮ ಗಂಟೆಗಳ ದಿನವು ಬೇಕಾಗುತ್ತದೆ. ಹೀಗೆ ಹಗಲೂ ರಾತ್ರಿ ನಾವು ಕೆಲಸಮಾಡಿದರೂ ನಮ್ಮ ತಕ್ಕ ಪ್ರತಿಫಲವು ಕೇವಲ ಅಲ್ಪವಾದದ್ದಾಗಿರುತ್ತದೆ. ಪ್ರತಿಯೊಬ್ಬರ ಮೊದಲನೆಯ ಕರ್ತವ್ಯವಾದ ತಮ್ಮ ಸ್ವಂತ ಸಂಸಾರ ರಕ್ಷಣೆಗಾಗಿ ಕೆಲಸಮಾಡುವುದನ್ನು ಪಟೇಲರಾದ ನಾವುಗಳು ಅನುಸರಿಸಿದರೆ "ಪಟೇಲಿ" ಕಾರ್ಯವು ಬಹು ಸಲೀಸಾಗಿ ನಡೆಯಲು ಲೋಪ ಬಂದೇ ಬರುವುದು. ಹಾಗೆ ಮಾಡದೆ "ಪಟೇಲಿ" ಕೆಲಸದಲ್ಲೇ ನಿರತರಾಗಿ ಬಿಟ್ಟರೆ ಸ್ವಂತ ಸಂಸಾರವನ್ನು ನಡೆಸುವುದು ಕಷ್ಟವಾಗುವುದು. ಆದುದರಿಂದ ಪಟೇಲರಾದ ನಮ್ಮ ಕಾರ್ಯಕ್ಕೂ, ಶ್ರಮೆಗೂ, ತಕ್ಕ ಪ್ರತಿಫಲವನ್ನು ನಾವು ಹೊಂದಬೇಕಾದುದು ಅತ್ಯವಶ್ಯಕವಾಗಿದೆ. ನಮ್ಮ ನಂತರ ವಿಶೇಷ ಜವಾಬ್ದಾರಿಯುಳ್ಳ ಈ ಪ್ರಜಾಸೇವಾಕಾರ್ಯಕ್ಕೆ ತಕ್ಕ ಅರ್ಹತೆಯನ್ನು ಪಡೆದುಕೊಂಡು ಸಿದ್ಧರಾಗಿರುವಂತೆ ನಮ್ಮ ಮಕ್ಕಳ ವಿದ್ಯಾಭಿವೃದ್ಧಿಗಾಗಿ ಅವಶ್ಯಕವಾದ ಅನುಕೂಲಗಳನು ಈಗಲೇ ಕಲ್ಪಿಸಿಕೊಳ್ಳುವುದು ನಮ್ಮಗಳ ಕರ್ತವ್ಯವಾಗಿದೆ.

ನಾವು ಕೇವಲ ಗ್ರಾಮ ನೌಕರರು ಮಾತ್ರವಲ್ಲ ವೆಂಬುದನ್ನೂ, ರಾಜ್ಯಾಡಳಿತದಲ್ಲಿ ಮುಖ್ಯವಾದ ಗ್ರಾಮಾಡಳಿತದ ಅಧಿಕಾರಿಗಳೆಂಬುದನ್ನೂ ತೋರ್ಪಡಿಸಿಕೊಂಡ ಹೊರತು ನಮ್ಮ ಮೊದಲಿನ ದರ್ಪವು ನಮಗೆ ದೊರೆಯಲಾರದು. ಆದುದರಿಂದ ನಮ್ಮ ಸರಹದ್ದಿಗೊಳಪಟ್ಟ ಸಣ್ಣ ಪುಟ್ಟ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರವನ್ನೂ, ರೆವಿನ್ಯೂ ಬಾಬಿನಲ್ಲಿ ಈಗ ನಮಗೆ ಸೇರದೆ ಇರತಕ್ಕ ಕೆಲವು ಚಿಲ್ಲರೆ ಅಧಿಕಾರವನ್ನೂ ನಾವು ಪ್ರಯತ್ನಪಟ್ಟು ಪಡೆದುಕೊಳ್ಳುವುದು ನಮ್ಮ ಧರ್ಮವಾಗಿದೆ.

ಈ ನಮ್ಮ ಆಶಯಗಳೆಲ್ಲಾ ನೆರವೇರಿ ನಮ್ಮ ಪ್ರಯತ್ನಗಳು ಶೀಘ್ರದಲ್ಲಿಯೇ ಕೈಗೂಡುವುವೆಂಬುದಕ್ಕೆ ನಿದರ್ಶನವಾಗಿಯೂ, ನಾವು ಕೈಗೊಂಡಿರುವ ಈ ಕಾರ್ಯಕ್ಕೆ ಪ್ರೋತ್ಸಾಹಕರವಾಗಿಯೂ ಇರುವ ಈ ದಿವಸ ನಮ್ಮ ಸಂಸ್ಥಾನದ ಸಚಿವಶಿರೋಮಣಿಗಳಾದ "ರಾಜಮಂತ್ರಧುರೀಣ" ಶ್ರೀಯುತ ಎ. ಆರ್. ಬಾನರ್ಜಿ, ಎಂ. ಎ., ಐ. ಸಿ. ಎಸ್. ಸಿ. ಐ. ಇ., ಯವರು ಈ ಮಹಾಸಭೆಗೆ ಕಳುಹಿಸಿರುವ, ಘನವಾದ ಶುಭವಾರ್ತಾ ಪತ್ರಿಕೆಯೇ ನಮ್ಮಗಳೆಲ್ಲರಿಗೂ ನವಜೀವನವಾಗಿದೆ. ಅಲ್ಲದೆ, ನಮ್ಮ ಸೀಮೆಯ ರೆವಿನ್ಯೂ ಕಮಿಷನರ್ ಸಾಹೇಬರವರಾದ ಮ|| ರಾ|| ಕೆ. ಚಾಂಡಿ, ಬಿ. ಎ. ಯವರು, ನಮ್ಮಗಳ ಅಭಿವೃದ್ಧಿಯಲ್ಲಿ ಕೇವಲ ಆಸಕ್ತರಾಗಿ ಸ್ವಯಂ ಈ ಸಭೆಗೆ ದಯಮಾಡಿಸಿ ನಮ್ಮಗಳೆಲ್ಲರಿಗೂ ಕೊಟ್ಟಿರುವ ಉತ್ತೇಜನ, ಭರವಸೆ ಮತ್ತು ಬುದ್ಧಿವಾದಗಳನ್ನು ನಾವು ನೆನಪಿನಲ್ಲಿಟ್ಟುಕೊಂಡು ಕಾರ್ಯಸಾಧನೆಯನ್ನು ಮಾಡುವುದಾದರೆ ನಾವು ಆಶಾಭಗ್ನರಾಗಬೇಕಾದ ಸಂಭವ ಇರುವುದಿಲ್ಲ.

ಮಹಾಶಯರೆ, ನಾವುಗಳು ಈ ಮಹಾಸಭೆಗೆ ಸಂಬಂಧಪಟ್ಟಂತೆ ಮಾಡಬೇಕಾದ ಕಾರ್ಯಗಳು ಅನೇಕ ಇರುವುದರಿಂದ ನನ್ನ ಭಾಷಣಕ್ಕಾಗಿಯೇ ಇನ್ನು ಹೆಚ್ಚು ಕಾಲವನ್ನು ಉಪಯೋಗಿಸಿಕೊಳ್ಳಲು ಇಷ್ಟವಿಲ್ಲದವನಾಗಿದ್ದೇನೆ. ಆದುದರಿಂದ ಸದ್ಯಸ್ಥಿತಿಯಲ್ಲಿ ನಮ್ಮಗಳೆಲ್ಲರ ಯೋಚನೆಗೆ ಅರ್ಹವಾದ ಮತ್ತೊಂದು ವಿಷಯವನ್ನು ಕುರಿತು ಸ್ವಲ್ಪ ಪ್ರಸ್ತಾಪಿಸಿದ ಮೇಲೆ ನನ್ನೀಭಾಷಣವನ್ನು ಪರಿಸಮಾಪ್ತಿಗೊಳಿಸುವೆನು.

ಈಚೀಚೆಗೆ ವರ್ಷಾಂತ್ಯದಲ್ಲೂ ಮಳೆ ಬೆಳೆಗಳು ಸರಿಯಾಗಿ ಆಗದೆ ರೈತರು ನಾನಾ ವಿಧವಾದ ಕಷ್ಟನಷ್ಟಗಳಿಗೆ ಗುರಿಯಾಗುತ್ತ ದುಃಖವನ್ನು ಅನುಭವಿಸಿಯೂ, ಕಣ್ಣಿಂದ ನೋಡಿಯೂ ತಿಳಿದುಕೊಳ್ಳಬೇಕಲ್ಲದೆ, ಇದನ್ನು ಬರಿ ತಿಳಿಸುವುದಕ್ಕೆ ಸಾಧ್ಯವಿಲ್ಲ. ಅದರಲ್ಲೂ ಈ ವರ್ಷ [illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಫೆಬ್ರವರಿ ತಾ|| ೩ ನೆಯ ಭಾನುವಾರ.

LABOUR GOVERNMENT.

One of the biggest changes affecting not only the future of the British Empire but also of the rest of the world has come about in England in the calling up of Mr. Ramsay Macdonald to form the Labour Cabinet. The Labour movement began only about 30 years ago and little did those pioneers think that by this time it would assume the reins of Government. So just and righteous have been their cause and so incontestable their claims that theirs have been the only party gaining in strength and numbers in the recent years. It was not long ago that both the Conservatives and the Liberals were equally decrying and condemning the Labour movement as subversive of the existing State of Society, law and order. These two old parties representing the landed aristocracies and capitalists thought that they were the only people privileged to govern. With the march of events, circumstances changed, the Labour became the most powerful party in the House of Commons, outnumbering the Liberals, and together with Liberals who were in opposition of the Conservative Government far outnumbering the Conservatives. His majesty the King did one of most historic acts in calling upon Mr. Ramsay Macdonald the Leader of the Labour Party to form the Government. The rest accepted without demur. And thus a bloodless revolution, as Mr. Thomas, Secretary of State for Colonies stated, has been brought about. This is how those people in the West adjust themselves to changing conditions. And that is why they progress. Here, in our blessed country, the admission of non-Brahmins to the Sanskrit Colleges is a great problem upsetting the minds of people who probably want to preserve like pickles their time-honoured institutions from pollution. If here and there, like His Highness the Maharaja of Boroda makes a passionate appeal that knowledge, no matter which it is, should be thrown open unreservedly to all classes of people, who is there to take heed of it and put into practice. This is only by way of an illustration of our mental outlook. There are hundred of other instances where we refuse to move, where we prefer to stagnate and rot, rather than progress and succeed. Is there any wonder then that those who move on rule and those who refuse are ruled? Let us hope for a broader and more liberal outlook in all matters affecting people's welfare in Mysore.

ಓಟರುಗಳಿಗೆ ಎಚ್ಚರಿಕೆ.

ಸಂಸ್ಥಾನದ ಎಲ್ಲ ಭಾಗದಲ್ಲೂ ಓಟನ್ನು ಕೊಡಲು ಅರ್ಹರಾದವರ ಹೆಸರುಗಳು ಮುದ್ರಿಸಲ್ಪಟ್ಟಿರುವ ಪಟ್ಟಿಗಳಲ್ಲಿ ಯಾರ ಹೆಸರುಗಳಾದರೂ ಯಾವ ಕಾರಣದಿಂದಲಾದರು ಬಿಟ್ಟುಹೋಗಿದ್ದಲ್ಲಿ ಅಂತಹವರು ಕ್ಲುಪ್ತವಾದ ಕಾಲದೊಳಗೆ ಸ್ಥಳೀಯಾಧಿಕಾರಿಗಳಿಗೆ ತಿಳುಹಿಸಬೇಕೆಂದು ಈ ಪತ್ರಿಕೆಯಲ್ಲಿ ಸೂಚಿಸಲ್ಪಟ್ಟಿದ್ದ ಪ್ರಕಾರ ನಡಿಸಿರಬಹುದೆಂದು ನೆನಸುತ್ತೇವೆ. ಈ ರಾಜಧಾನಿಯ ನಿವಾಸಿಗಳಲ್ಲಿ ಓಟನ್ನು ಕೊಡಲು ಅರ್ಹರಾದವರು ನಾಲ್ಕುಸಾವಿರಕ್ಕೆ ಮೇಲ್ಪಟ್ಟೇ ಇರುವರಾದರೂ, 1725 ಜನರ ಹೆಸರುಗಳು ಮಾತ್ರ ಓಟರುಗಳ ಲಿಸ್ಟಿನಲ್ಲಿ ಕೂಡಲ್ಪಟ್ಟಿದ್ದುದನ್ನು ನೋಡಿ ಆಶ್ಚರ್ಯಚಕಿತರಾಗಿ ಈ ನ್ಯೂನತೆಯನ್ನು ರಾಜಧಾನಿಯ ಮ್ಯುನಿಸಿಪಲ್ ಅಧಿಕಾರಿಗಳಾಗಲಿ ಸರ್ಕಾರದವರಾಗಲಿ ಗಮನಕ್ಕೆ ತಂದು ಕ್ರಮಪಡಿಸಬೇಕೆಂದು ನಾವು ಸೂಚಿಸಿದ್ದೆವು. ಅಲ್ಲದೆ ರಾಜಧಾನಿಯ ಕೆಲ ಮ್ಯುನಿಸಿಪಲ್ ಕೌನ್ಸಿಲರುಗಳೂ ಇತರ ದೊಡ್ಡಮನುಷ್ಯರುಗಳೂ ಸೇರಿ ಲೆಜಿಸ್ಲೇಟಿವ್ ಶಾಖೆಯ ಸೆಕ್ರೆಟರಿಯವರಿಗೆ ಅರ್ಜಿಯಮೂಲಕ ತಿಳುಹಿಸಿ ಮ್ಯುನಿಸಿಪಲ್ ಖಾತೆಯನ್ನನುಸರಿಸಿ ಓಟರುಗಳ ಲಿಸ್ಟನ್ನು ತಯಾರಿಸಲು ಕಾಲಾವಧಿಯನ್ನು ಹೆಚ್ಚಿಸಿಕೊಡಬೇಕೆಂದು ತಂತಿಯಮೂಲಕ ಕೇಳಿಕೊಂಡಿದ್ದುದಕ್ಕೆ, ಓಟರುಗಳು ರೂಲ್ಸನ್ನನುಸರಿಸಿ ತಮ್ಮ ದೂರನ್ನು ಹೇಳಿಕೊಳ್ಳಬಹುದಾಗಿದೆ; ನಿಮ್ಮಪೇಕ್ಷೆಯಂತೆ ಹೊಸಲಿಸ್ಟುಗಳನ್ನು ತಯಾರಿಸಲು ಅಪ್ಪಣೆಮಾಡಲಾಗುವುದಿಲ್ಲ ಎಂದು ಉತ್ತರವನ್ನು ಕೊಟ್ಟರು. ಅದರಮೇಲೆ ಈ ನ್ಯೂನತೆಯನ್ನು ಕುರಿತು ಪರ್ಯಾಲೋಚಿಸುವುದಕ್ಕಾಗಿ ಒಂದು ಸ್ಪೆಷಲ್ ಮೀಟಿಂಗನ್ನು ನಡಿಸಬೇಕೆಂದು ಕೆಲ ಮ್ಯುನಿಸಿಪಲ್ ಕೌನ್ಸಿಲರುಗಳು ಲಿಖಿತಮೂಲಕವಾಗಿ ಪ್ರೆಸಿಡೆಂಟರನ್ನು ಕೇಳಿರುವಲ್ಲಿ, ಈ ವಿಚಾರವನ್ನು ಪರ್ಯಾಲೋಚಿಸಲು ಮ್ಯುನಿಸಿಪಲ್ ಕೌನ್ಸಿಲಿಗೆ ಅಧಿಕಾರವಿಲ್ಲವೆಂದುತ್ತರವನ್ನು ಕೊಟ್ಟರು. ಆದರೂ ಕೆಲ ವಿದ್ಯಾವಂತರುಗಳಿಂದ ದೂರು ಬಂದಮೇಲೆ ಇನ್ನೂ 814 ಹೆಸರುಗಳನ್ನು ಹೆಚ್ಚಾಗಿ ಸೇರಿಸಿ ಒಂದು ಹೊಸಲಿಸ್ಟನ್ನು ತಯಾರಿಸಿದರು. ಇದರಿಂದ ಒಟ್ಟು ಓಟರುಗಳ ಸಂಖ್ಯೆಯು 2539 ಆಗಿರುವುದಾದರೂ, ಪೂರ್ಣವಾಗಿರುವುದಿಲ್ಲವೆಂದೂ ಈಗ ಹೊಸದಾಗಿ ತಯಾರಿಸಲ್ಪಟ್ಟ ಪಟ್ಟಿಗಳಲ್ಲಿ ಅರ್ಧಭಾಗಕ್ಕಿನ್ನ ಹೆಚ್ಚಾಗಿ ವಿಶ್ವವಿದ್ಯಾಲಯದ ಪದವೀಧರರುಗಳ ಹೆಸರುಗಳೇ ಇರುವುದರಿಂದ ಇದಾದರೂ ಸಮರ್ಪಕವಾಗಿಲ್ಲವೆಂದೂ ಹೇಳಬಹುದಾಗಿದೆ. ದೊಡ್ಡಪಟ್ಟಣಗಳಲ್ಲೇ ಹೀಗಾಗಿರುವಾಗ್ಗೆ ಇನ್ನು ತಾಲ್ಲೂಕು ಸ್ಥಳಗಳಲ್ಲಿ ಇನ್ನೆಷ್ಟು ನ್ಯೂನತೆಗಳು ನಡೆದಿರಬಹುದು? ಅಲ್ಲಿಯವರ ಕೂಗಾದರೂ ಗಿರಿಮುಟ್ಟಿರುವುದುಂಟೆ! ಉಮೇದುವಾರರುಗಳ ಹೆಸರುಗಳೂ ಪ್ರಕಟವಾಗಿರುವುದಲ್ಲದೆ ಚುನಾವಣೆಯ ಕಾಲವೂ ಸಮೀಪಿಸಿತಾದುದರಿಂದ ಈವರೆಗೆ ನಡೆದಿರುವ ನ್ಯೂನತೆಯ ವಿಚಾರದಲ್ಲಿ ಇಲ್ಲಿಗೆ ವಿರಮಿಸುವ.

ಒಟ್ಟು ಸಂಸ್ಥಾನದಿಂದೆಲ್ಲಾ 901 ಜನರು ಪ್ರಜಾಪ್ರತಿನಿಧಿಸಭೆಗೂ 46 ಜನರು ನ್ಯಾಯವಿಧಾಯಕಸಭೆಗೂ ಉಮೇದುವಾರರಾಗಿ ನಿಂತಿರುತ್ತಾರೆ. ಇವರುಗಳಲ್ಲಿ ಪ್ರಜಾಪ್ರತಿನಿಧಿಸಭೆಗೆ 202 ಜನರೂ, ನ್ಯಾಯವಿಧಾಯಕ ಸಭೆಗೆ 10 ಜನರೂ ಆರಿಸಲ್ಪಡಬೇಕಾಗಿದೆ. ಇವರುಗಳನ್ನು ಚುನಾಯಿಸತಕ್ಕ ಓಟರುಗಳು ತಮ್ಮ ನಿಜವಾದ ಕಷ್ಟಸುಖಗಳ ಅನುಭವವನ್ನು ಪಡೆದು ಸರಿಯಾಗಿ ಅವನ್ನು ಸಭೆಯಲ್ಲಿ ಪ್ರಭುತ್ವದವರ ಕಣ್ಣು ಮುಂದಿಟ್ಟು ಚರ್ಚಿಸಲು ಸಮರ್ಥರಾದ ಮತ್ತು ತಮ್ಮ ನಂಬುಗೆಗೆ ಪಾತ್ರರಾದ ಜನರಿಗೇ ತಮ್ಮಗಳ ಓಟುಗಳನ್ನು ಕೊಟ್ಟು ತಮ್ಮ ಹಿತವನ್ನೂ ದೇಶದ ಹಿತವನ್ನೂ ಸಾಧಿಸಿಕೊಳ್ಳುವ ಕಡೆಗೆ ಮನಸ್ಸುಕೊಡಬೇಕು; ಹಾಗಲ್ಲದೆ ದಾಕ್ಷಿಣ್ಯಾದಿಗಳಿಗೆ ಬದ್ಧರಾಗಿ ಸ್ವಾರ್ಥಪರರಿಗೋ ಅಥವಾ ವಿಷಯಜ್ಞಾನವಿಲ್ಲದವರಿಗೋ ಓಟುಗಳನ್ನು ಕೊಟ್ಟುಬಿಟ್ಟರೆ ಅಂತಹವರುಗಳಿಂದ ತುಂಬಿದ ಪ್ರಜಾಪ್ರತಿನಿಧಿಸಭೆ ಅಥವಾ ನ್ಯಾಯವಿಧಾಯಕ ಸಭೆಯಿಂದ ದೇಶಕ್ಕೆ ನಿಜವಾದ ಹಿತವಾಗಲಾರದು. ಪ್ರಜೆಗಳು ತಂತಮ್ಮ ಬೊಗಸೆಯಿಂದ ತಾವು ನೀರನ್ನು ಕುಡಿಯುವುದೇ ಹಿತವೆಂಬುದನ್ನು ತಿಳಿದಿದ್ದರೆ, ತಮ್ಮ ಕಷ್ಟಸುಖಗಳಿಗೆ ಭಾಗಿಗಳಾಗಿರುವ ಮತ್ತು ತಮ್ಮ ವಿಶ್ವಾಸಕ್ಕೆ ಪಾತ್ರರಾದ ಜನರನ್ನೇ ತಮ್ಮ ಪ್ರತಿನಿಧಿಗಳನ್ನಾಗಿ ಉಭಯ ಸಭೆಗಳಲ್ಲೂ ಹೆಚ್ಚುಹೆಚ್ಚಾಗಿ ಸೇರಿಸುವುದಕ್ಕಾಗಿ ಅಂತಹವರುಗಳಿಗೇ ಓಟನ್ನು ಕೊಡಬೇಕಲ್ಲದೆ ದಾಕ್ಷಿಣ್ಯಾದಿಗಳಿಗೊಳಪಟ್ಟು ಅಸಲಿಗೆ ಮೋಸಬರುವಂತಹ ಕೆಲಸವನ್ನು ಎಂದಿಗೂ ಮಾಡಿಕೊಳ್ಳಬಾರದು. ಸ್ವಪ್ರತಿಷ್ಠಾಕಾಮಿಗಳು ಚತುರುಪಾಯದಿಂದಲೂ ತಾವು ಸಫಲರಾಗಿ ಹೋಗುವುದಕ್ಕೆ ಪ್ರಯತ್ನಿಸುವುದುಂಟು. ಆತ್ಮಹಿತವೇ ಗುರಿಯಾಗುಳ್ಳ ಅವರುಗಳು "ಹೊಳೆಯನ್ನು ದಾಟಿದ ಮೇಲೆ ಅಂಬಿಗನಿಗೆ ಮಿಂಡ" ನೆಂದು ಹೇಳುವ ಗಾಥೆಯಂತೆ ಮೊದಲು ಯಾರನ್ನಾಶ್ರಯಿಸಿ, ಯಾರ ಓಟುಗಳನ್ನು ಪಡೆಯಲು ವಿನಯಸ್ನೇಹಾದಿಗಳನ್ನು ಮರೆಯಿಸುವರೋ ಅಂತಹವರುಗಳಿಗೆ ಹಿತಕರವಾಗಿ ಕೆಲಸಮಾಡುವುದು ಹಾಗಿರಲಿ, ಕಡೆಗೆ ಎರಡುಬಗೆಯುವುದಕ್ಕೂ ಹಿಂಜರಿಯುವುದಿಲ್ಲ. ಇದಕ್ಕೆ ಮಿಲ್ಲರ್‌ಕಮಿಟಿ ರಿಪೋರ್ಟು ಮೇಲಿನ ಆರ್ಡರನ್ನು ಅನುಷ್ಠಾನಕ್ಕೆ ತರುವಾಗಲೂ, ಸಂಸ್ಕೃತಕಾಲೇಜುಗಳಿಗೆ ಹಿಂದುಳಿದ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಕೊಡುವ ವಿಚಾರದಲ್ಲಿ ಚರ್ಚೆ ನಡೆದಾಗಲೂ ಎಬ್ಬಿಸಿದ ಬೊಬ್ಬೆಯು ನಿದರ್ಶನವಾಗಿದೆ. ಆದುಕಾರಣ ಇನ್ನು ಮೂರು ವರ್ಷಕಾಲ ಉಭಯ ಸಭೆಗಳಿಂದ ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಕ್ಕೆ ಯಾರ ಪ್ರಾತಿನಿಧ್ಯವು ತಮಗೆ ಇದ್ದರೆ ಅನುಕೂಲವೋ ಅಂತಹವರುಗಳನ್ನೇ ಮುಂದಕ್ಕೆ ನಿಲ್ಲಿಸಿ ಅವರುಗಳಿಗೇ ತಮ್ಮ ಘನವಾದ ಓಟುಗಳನ್ನು ಕೊಡಲು ಖಂಡಿತವಾಗಿ ಮರೆಯಬಾರದೆಂದು ಎಚ್ಚರಿಸುತ್ತೇವೆ.

ಡಾಕ್ಟರ್ ಬಿ. ನಂಜಪ್ಪನವರಿಗೆ ರಾಜಧಾನಿಯಲ್ಲಾದ ಸತ್ಕಾರವು.

ಕಳೆದ 9 ತಿಂಗಳುಗಳಿಂದಲೂ ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿದ್ದು ಶಿವಮೊಗ್ಗೆಗೆ ವರ್ಗವಾಗಿ ದಯಮಾಡಿಸಿದ ಡಾಕ್ಟರ್ ಬಿ. ನಂಜಪ್ಪನವರನ್ನು ಪುರನಿವಾಸಿಗಳು ಈ ತಾ|| 1ರ ಸಾಯಂಕಾಲ ತಳಿರು ತೋರಣಗಳಿಂದಲಂಕೃತವಾದ ಟವರ್‌ಹಾಲಿಗೆ ಬರಮಾಡಿಕೊಂಡು ಗಾನವಿಶಾರದ ಸಂಗೀತ ವಿದ್ವಾನ್ ಬಿ. ಕೃಷ್ಣಪ್ಪನವರ ಶಿಷ್ಯಮಂಡಲಿಯವರಿಂದ ನಡಿಸಲ್ಪಟ್ಟ ಪಿಟೀಲು, ಜಲತರಂಗು, ಹಾರ್ಮೋನಿಯಂ ಮೃದಂಗ ಮೊದಲಾದ ವಾದ್ಯಗಳಿಂದ ಕೂಡಿದ ಕಾನ್ಸರ್ಟಿನಿಂದಲೂ, ಶಾಕುಂತಲ ನಾಟಕ ಸಂಘದವರ ದ್ರೌಪದಿಸ್ವಯಂವರ ಕಥಾಭಾಗ ಪ್ರಯೋಗದಿಂದಲೂ, ಅವರ ಗುಣಕಥನದಿಂದಲೂ, ಪುಷ್ಪಮಾಲಾಲಂಕಾರದಿಂದಲೂ ಸತ್ಕರಿಸಿ ಅವರಲ್ಲಿ ತಮ್ಮಗಳಿಗಿರುವ ವಿಶ್ವಾಸಗೌರವಗಳನ್ನು ಪ್ರದರ್ಶಿಸಿದರು. ಡಾ|| ನಂಜಪ್ಪನವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದಾಗ್ಗೆ ಲೋಕಪ್ರಿಯತೆಯನ್ನು ಸಂಪಾದಿಸಿದ್ದುದನ್ನೂ ಅಲ್ಲಿಂದ ಅವರ ಜನ್ಮಸ್ಥಲವಾದ ರಾಜಧಾನಿಗೆ ದಯಮಾಡಿಸಿ ಇಲ್ಲಿದ್ದ ಸ್ವಲ್ಪಕಾಲದಲ್ಲಿಯೇ ಪ್ರತಿಯೊಬ್ಬ ರೋಗಿಯನ್ನೂ ಒಡವ ಬಲ್ಲಿದನೆಂಬ ತಾರತಮ್ಯವಿಲ್ಲದೆ ಪ್ರೀತಿಯಿಂದಲೂ ಸಾನುಭೂತಿಯಿಂದಲೂ ಕಂಡು ಉಪಚರಿಸುತ ಅವರುಗಳ ವಂದನೆ ಕೃತಜ್ಞತೆಗಳಿಗೆ ಪಾತ್ರರಾಗಿ ಸರ್ವಜನ ಸಂಮಾನ್ಯರಾಗಿರುವುದಕ್ಕೆ ಈ ದಿವಸದ ಸತ್ಕಾರಸಮಾರಂಭವೇ ನಿದರ್ಶನವಾಗಿದೆ ಎಂದು ಮೊದಲಾಗಿ ಮ|| ವೆಂಕಟಕೃಷ್ಣಯ್ಯನವರಿಂದ ಅವರ ಗುಣಕಥನವು ಮಾಡಲ್ಪಟ್ಟ ಮೇಲೆ ಡಾಕ್ಟರ್ ಬಿ. ನಂಜಪ್ಪನವರು ಈ ಸತ್ಕಾರಸಮಾರಂಭದಿಂದ ತಮಗುಂಟಾದ ಸಂತೋಷವನ್ನು ತಿಳಿಸುವಾಗ್ಗೆ, "ನನ್ನಿಂದೇನಾದರೂ ಜನರಿಗೆ ಪ್ರಯೋಜನವಾಗಿರುವ ಪಕ್ಷದಲ್ಲಿ ಅದು ನನ್ನ ಸಹೋದ್ಯೋಗಿಗಳಾದ ಡಾಕ್ಟರುಗಳ ಮತ್ತು ನರ್ಸುಗಳ ಸಾಹಾಯ್ಯದಿಂದ ಆಗಿರುವುದೇ ಹೊರತು ನನ್ನೊಬ್ಬನಿಂದಲೇ ಅಲ್ಲವು. ತಾವು ಹೇಳುವಂತೆ ನನ್ನಲ್ಲೇನಾದರೂ ಒಳ್ಳೇ ಗುಣವಿರುವ ಪಕ್ಷದಲ್ಲಿ ಅದು ನನ್ನ ಪ್ರಿಯತಂದೆಯವರ ಪ್ರಭಾವ ವಿಶೇಷದಿಂದಲೇ ಲಭ್ಯವಾಗಿರುವುದೆಂದು ಭಾವಿಸುತ್ತೇನೆ. ನಾನು ಬಾಲಕನಾಗಿರುವಾಗ ಒಬ್ಬ ವೃದ್ಧ ಮುಹಮ್ಮದೀಯನು ಒಂದುದಿವಸ ಹಲಸಿನಹಣ್ಣನ್ನು ಹೊತ್ತಿಕೊಂಡು ಮಾರಲು ಸಾರುತ ನಮ್ಮಮನೆ ಮುಂದೆ ಹೋಗುತ್ತಿರುವಾಗ್ಗೆ ನಾನು ಲೋ ಹಲಸಿನಹಣ್ಣಿನವನೇ ಬಾರೋ ಎಂದು ಕೂಗಿ ಕರೆದು ಅದರ ಬೆಲೆಯನ್ನು ಕೇಳಿದೆನು. ಆತನು ಏನಪ್ಪ ನಿನ್ನನ್ನ ನೋಡಿದರೆ ದೊಡ್ಡವರಮಗನ ಹಾಗೆ ಕಾಣುತ್ತೆ ಹೀಗೆ ಕರಿಯುತ್ತೀಯೆ ಎಂದು ಹೇಳಿದನು. ಅದು ಈಗಲೂ ನನ್ನ ಸ್ಮೃತಿಪಥದಲ್ಲಿರುವುದು. ನಾವು ಗೌರವವನ್ನು ಹೊಂದಬೇಕಾದರೆ ಮೊದಲು ನಾವು ಇತರರನ್ನು ಗೌರವಿಸಬೇಕು ಎಂಬುದು ಗೊತ್ತಾಯಿತು. ನಾನು ಸರ್ಕಾರಿ ಉದ್ಯೋಗಕ್ಕೆ ಸೇರಿ 15-20 ವರ್ಷಗಳಮೇಲಾದರೂ ನಾನು ಹುಟ್ಟಿ ಬೆಳೆದು ವಿದ್ಯಾಭ್ಯಾಸಮಾಡಿದ ಈ ರಾಜಧಾನಿಗೆ ಬಂದು ತಮ್ಮಗಳ ಸೇವೆಯನ್ನು ಅಲ್ಪಕಾಲದವರೆಗಾದರೂ ಮಾಡಲು ಅವಕಾಶವು ದೊರೆದುದಕ್ಕಾಗಿ ಸಂತೋಷಿಸುತ್ತೇನೆ. ತಾವು ವಿಶ್ವಾಸಪೂರ್ವಕವಾಗಿ ಈ ದಿವಸ ನನಗೆ ಮಾಡಿದ ಸತ್ಕಾರಕ್ಕೋಸ್ಕರ ತಮ್ಮಗಳನ್ನು ಬಹಳವಾಗಿ ವಂದಿಸುತ್ತೇನೆ" ಎಂದು ಹೇಳಿದರು. ತರುವಾಯ ಅತಿಥಿಗಳಾದ ಡಾಕ್ಟರನ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಮೈಸೂರು ಪಟೇಲರುಗಳ ಮಹಾಸಭೆಯು.

ಗ್ರಾಮವಾಸಿಗಳ ಮಾನ ಪ್ರಾಣ ಧನರಕ್ಷಕರಾಗಿಯೂ, ಸರ್ವದಾ ಅವರ ಹಿತಚಿಂತಕರಾಗಿಯೂ ಸರ್ಕಾರದ ಪ್ರತಿನಿಧಿಗಳಾಗಿಯೂ ಇದ್ದು ಸರ್ಕಾರದ ಅಧಿಕಾರಿಯಷ್ಟೇ ದರ್ಪಗೌರವವುಳ್ಳವರಾಗಿಯೂ ಇದ್ದ ಪಟೇಲರು ಕಾಲಕ್ಕೆತಕ್ಕಂತೆ ವಿದ್ಯೆಯಲ್ಲಿ [illegible]ಂದರಿಯದೆ ಹೋಗಿ ತಮ್ಮ ಕರ್ಣೀಕರಾಗಿದ್ದ ಶಾನುಭೋ[illegible] ಜ್ಞಾನುವರ್ತಿಗಳಾಗಿ ಅವರ ದಪ್ತರವನ್ನೂ ಮಸೀ ಕುಡಿಕೆಯನ್ನೂ ಹೊತ್ತಿಕೊಂಡು ತಿರುಗುವ ಶೋಚನೀಯಸ್ಥಿತಿಗಳಿರುವುದನ್ನು ಹೋಗಲಾಡಿಸಿ ತಮ್ಮ ಪೂರ್ವ ಗೌರವಪ್ರತಿಷ್ಠೆಯನ್ನು ಹೊಂದಲು ತಕ್ಕ ಪ್ರಯತ್ನಗಳನ್ನು ಮಾಡುವಬಗೆಗೆ ಕಳೆದ ತಾ|| 26-27 ರಲ್ಲಿ ಚನ್ನಪಟ್ಟಣದಲ್ಲಿ ಒಂದು ಮಹಾಸಭೆಯನ್ನು ಸ್ವಜನಾಭಿವಿದ್ಯಾಭಿವೃದ್ಧಿಗಾಗಿ ಅರ್ಧಲಕ್ಷ ರೂ.ವರೆಗೆ ವೆಚ್ಚಮಾಡಿ ವೀರಶೈವವಿದ್ಯಾರ್ಥಿನಿಲಯವನ್ನು ರಾಜಧಾನಿಯಲ್ಲಿ ಸ್ಥಾಪಿಸಿ ಸುಪ್ರಖ್ಯಾತರಾಗಿರುವ ಶ್ರೀಮಂತ ಕಬ್ಬಳ್ಳಿ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿಸಿ ಪುರೋಭಿವೃದ್ಧಿಸಾಧಕವಾದ ನಿರ್ಧಾರಗಳನ್ನು ಮಾಡಿದುದಲ್ಲದೆ ಒಂದು ಸಂಘವನ್ನು ಸ್ಥಾಪಿಸಿದರು. ಈ ಸಭೆಯ ನಡವಳಿಕೆಗಳೆಲ್ಲವೂ ಸಾದ್ಯಂತವಾಗಿ ಬೇರೆಕಡೆ ಮುದ್ರಿಸಲ್ಪಟ್ಟಿವೆ.

ಸ್ವದೇಶದ ವೃತ್ತಾಂತಗಳು.

ದಿವಾನರು ಈ ತಾ|| 9 ರಲ್ಲಿ ವೈಟ್‌ಫೀಲ್ಡಿಗೆ ದಯಮಾಡಿಸಿ ಅಲ್ಲಿಯ ಸ್ಥಿತಿಗತಿಗಳನ್ನು ಪರಾಮರ್ಶಿಸಿಕೊಂಡು ಬರುವವರಾಗಿರುವರು.

ಮಹಾಮಾತೃ ಶ್ರೀ ವಾಣೀವಿಲಾಸ ಸನ್ನಿಧಿಯವರು ಕಾವೇರಿ ನದಿಯ ಸ್ನಾನಕ್ಕಾಗಿ ಬರುವ ಮಂಗಳವಾರ ಬಲ್ಮುರಿ ಕ್ಷೇತ್ರಕ್ಕೆ ದಯಮಾಡಿಸುವುದಾಗಿ ಕೇಳುತ್ತೇವೆ.

ರಾಜ್ಯಾಂಗ ಸುಧಾರಣೆಯ ಸಂಬಂಧವಾಗಿ ಸ್ಪೆಷಲ್ ಡ್ಯೂಟಿ ಆಫೀಸರಾಗಿದ್ದ ಮ|| ಆರ್. ರಂಗರಾವ್ ಬಿ.ಎ.,ಬಿ.ಎಲ್., ರವರು ಈ ಫೆಬ್ರವರಿ ತಾ|| 1 ರಿಂದ ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮಾಲೂರಿನಲ್ಲಿ ಕುಡಿಯುವ ನೀರಿಗೆ ಬಹಳ ಗೋಟ್ಟಾಗಿರುವುದರಿಂದ ಆ ಊರಿನ ಪಶ್ಚಿಮದಿಗ್ಭಾಗದಲ್ಲಿರುವ ಕೆರೆಯ ಸಮೀಪದಲ್ಲಿ ಒಂದು ಬಾವಿಯು ಚಿನ್ನದಗಣಿಗೆ ಸೇರಿದ ಮತ್ತು ಬಾವಿಗಳನ್ನು ತೆಗಿಸುವಲ್ಲಿ ನಿಪುಣರಾದ ಮಿ|| ಸ್ಟ್ರೀಮೆಯರ್‌ರವರ ಸೂಚನೆಯಂತೆ ತೆಗೆಯಲ್ಪಡುವುದಕ್ಕಾಗಿ 1000 ರೂ. ವೆಚ್ಚಮಾಡಲು ಸರ್ಕಾರದಪ್ಪಣೆಯಾಗಿದೆ.

ಹೊಸ ಪ್ರಜಾಪ್ರತಿನಿಧಿ ಸಭೆಯು ರಾಜಧಾನಿಯ ಜಗನ್ಮೋಹನಪ್ರಸಾದದಲ್ಲಿರುವ ವಿವಾಹಮಂಟಪದಲ್ಲಿ ಶ್ರೀಮನ್ಮಹಾರಾಜರವರಿಂದ ಆರಂಭಿಸಲ್ಪಡುವುದಾಗಿ ವದಂತಿಯಿದ್ದುದು ತಪ್ಪಿ ಟವರ್‌ಹಾಲಿನಲ್ಲಿ ಸಭೆಯು ನಡಿಯುವುದಾಗಿಯೂ, ಇದಕ್ಕಾಗಿ ಕಟ್ಟಡವು 5-6 ಸಾವಿರ ರೂ. ಗಳ ವೆಚ್ಚದಿಂದ ಸಜ್ಜುಗೊಳಿಸಲ್ಪಡುವುದಾಗಿಯೂ ಈಚೆಗೆ ವದಂತಿಹುಟ್ಟಿದೆ.

ಕಳೆದ ಬುಧವಾರ ರಾಜಧಾನಿಯಲ್ಲಿ ದಿ. ಬ. ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಗೋರಕ್ಷಣೆಯ ವಿಚಾರವಾಗಿ ಒಂದು ಸಭೆಯು ನಡೆದಿತು. ಇದಕ್ಕಾಗಿ ಬೆಂಗಳೂರಿಂದ ಮ|| ಪೌರ್ವಾಲ್ ಮೊದಲಾಗಿ ಗೋರಕ್ಷಣಾಭಿಮಾನಿಶಾಲಿಗಳು ಬಂದಿದ್ದರು. ಸಭೆಯಲ್ಲಿ ಅನೇಕ ಭಾಷಣಗಳು ನಡೆದು ಒಂದು ನಿಧಿಯನ್ನು ಕೂಡಿಸಲು ಕೆಲ ನಿರ್ಧಾರಗಳು ಮಾಡಲ್ಪಟ್ಟುವು.

ಈ ಫೆಬ್ರವರಿ ತಾ|| 15ರಲ್ಲಿ ರಾಜಧಾನಿಯ ಲಷ್ಕರ್ ಮಂಡಿ ಮತ್ತು ನಜರಬಾದು ಮೊಹಲ್ಲಾಗಳ ಓಟರುಗಳು ಟವರ್‌ಹಾಲಿಗೂ, ದೇವರಾಜ ಮತ್ತು ಕೃಷ್ಣರಾಜ ಮೊಹಲ್ಲಾಗಳ ಓಟರುಗಳು ಹೊಸ ಮ್ಯುನಿಸಿಪಲ್ ಕಟ್ಟಡಕ್ಕೂ ಚಾಮರಾಜ ಮತ್ತು ಕೃಷ್ಣರಾಜ ಮೊಹಲ್ಲಾಗಳ ಓಟರುಗಳು ಮರಿಮಲ್ಲಪ್ಪನವರ ಹೈಸ್ಕೂಲಿಗೂ ಬಂದು ಓಟುಗಳನ್ನು ಕೊಡಬೇಕಾಗಿ ಗೊತ್ತಾಗಿರುವುದು.

ರಾಜಧಾನಿಗೆ ಸಮೀಪವಾಗಿರುವ ಬಳ್ಗೊಳ, ಆನಂದೂರು, ಹೊಸಹಳ್ಳಿ, ಪಾಲಹಳ್ಳಿ, ನಾಗನಹಳ್ಳಿ, ಕೆಸರೆ, ಗುಜ್ಜುಗೊಂಡನಪುರ ಮೊದಲಾದ ಗ್ರಾಮಗಳಲ್ಲಿ ವಾಂತಿಭೇದಿ ರೋಗವು ಪ್ರಾಪ್ತವಾಗಿ ಜನರು ಸಾಯುತ್ತಿರುವುದಾಗಿಯೂ ರಾಜಧಾನಿಯ ಹೆಲ್ತಾಫೀಸರು ರೋಗಗಳಿರುವ ಸ್ಥಳಗಳಿಗೆ ಹೋಗಿ ಜನರಿಗೆ ಎಚ್ಚರಿಕೆಯನ್ನು ಕೊಟ್ಟು ಕೆಲರೋಗಿಗಳನ್ನು ಸಾಂಕ್ರಾಮಿಕ ಜಾಡ್ಯಗಳ ಆಸ್ಪತ್ರೆಗೆ ಕರೆತಂದು ಚಿಕಿತ್ಸೆಮಾಡಿಸುತ್ತಿರುವುದಾಗಿಯೂ ತಿಳಿಯಬಂದಿದೆ.

ಬೆಂಗಳೂರಿನಲ್ಲಿ ಅರಮನೆ ಡಿವಿಜನ್ನಿನವರು ಹೈಗ್ರೌಂಡ್ ಪೊಲೀಸು ಠಾಣಾಕ್ಕೆ, ಬಳೆಪೇಟೆ ಡಿವಿಜನ್ನಿನವರು ಉಪ್ಪಾರಪೇಟೆ ಪೊಲೀಸು ಠಾಣಾಕ್ಕೆ, ಮನವಾರ್ತೆಪೇಟೆ ಡಿವಿಜನ್ನಿನವರು ಚಿಕ್ಕಪೇಟೆಯಲ್ಲಿರುವ ಸರ್ಕಾರಿ ಬಾಲಿಕಾ ಪಾಠಶಾಲೆಗೆ, ಅಲ್ಸೂರುಪೇಟೆ ಡಿವಿಜನ್ನಿನವರು ಯಲಹಂಕ ಗೇಟ್ ಪೊಲೀಸು ಠಾಣಾಕ್ಕೆ, ನಗರ್ತಪೇಟೆ ಮತ್ತು ಲಾಲಬಾಗು ಡಿವಿಜನ್ನುಗಳವರು ಅಲ್ಸೂರು ಗೇಟ್ ಪೊಲೀಸು ಠಾಣಾಕ್ಕೆ, ಕೋಟೆಯ ಡಿವಿಜನ್ನಿನವರು ಟಿಪ್ಪುಸುಲ್ತಾನರ ಅರಮನೆಗೆ, ಬಸವನಗುಡಿ ಡಿವಿಜನ್ನಿನವರು ಬಸವನಗುಡಿ ಪೊಲೀಸು ಠಾಣಾಕ್ಕೆ, ಮಲ್ಲೇಶ್ವರಂ ಡಿವಿಜನ್ನಿನವರು ಮಲ್ಲೇಶ್ವರ ಸರ್ಕಾರಿ ಹೈಸ್ಕೂಲಿಗೆ ಈ ಪ್ರಕಾರ ಓಟರುಗಳು ಈ ಫೆಬ್ರವರಿ ತಾ|| 15 ರಲ್ಲಿ ಬಂದು ಕೊಡಲು ಗೊತ್ತಾಗಿರುವುದು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡೆದ ಕೊಲೆಯ ಸಂಬಂಧದಲ್ಲಿ ಸೆರೆ ಹಿಡಿಯಲ್ಪಟ್ಟು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುವ ಅದೇ ಆಫೀಸಿನ ರಿಕಾರ್ಡು ಕೀಪರ್ ಕೃಷ್ಣರಾಯನ ಭಾವಮೈದುನನು ಬೊಂಬಾಯಿನಿಂದ ಬರಮಾಡಲ್ಪಟ್ಟು ಸಾಕ್ಷಿ ವಿಚಾರಣೆ ಮಾಡಲ್ಪಡುವಲ್ಲಿ ತನ್ನ ಭಾವನಾದ ಅಪರಾಧಿ ಕೃಷ್ಣರಾಯನು ತನ್ನ ವಿಚಾರದಲ್ಲಿ ಪೊಲೀಸರು ಅನುಮಾನಪಟ್ಟಿಕೊಂಡಿರುವುದರಿಂದ ನಾನು ಕೂಡಿಟ್ಟಿದ್ದ 3,000 ರೂ. ಗಳನ್ನು ನಿನ್ನ ವಶಕ್ಕೆ ಕೊಟ್ಟು ಜೋಪಾನಪಡಿಸುವುದಕ್ಕಾಗಿ ತೆಗೆದುಕೊಂಡು ಬಂದಿದ್ದೇನೆಂದು ಹೇಳಿ 3000 ರೂ. ಗಳ ನೋಟನ್ನು ನನ್ನ ವಶಕ್ಕೆ ಕೊಟ್ಟನು. ನಾನು ಅವನ ಚರ್ಯವನ್ನು ನೋಡಿ ಅನುಮಾನಗ್ರಸ್ತನಾಗಿ ನೀನು ಕೂಡಲೆ ಊರಿಗೆ ಹೋಗಿ ಪೊಲೀಸರಿಗೆ ನಿನ್ನ ವಿಚಾರದಲ್ಲಿ ಉಂಟಾಗಿರುವ ಅನುಮಾನ ಪರಿಹಾರವಾಗುವಂತೆ ಕಾಣಿಸಿಕೊಳ್ಳುವುದೆಂದು ಹೇಳಿ ಕಳುಹಿದೆನು. ಎಂದು ಸಾಕ್ಷ್ಯವನ್ನು ನುಡಿದನು. ರಕ್ತದಕಲೆಯಿರುವುದೆಂಬ ಅನುಮಾನದಿಂದ ಕೆಮಿಕಲ್ ಎಕ್ಸಾಮಿನರ ಪರೀಕ್ಷೆಗೆ ಕಳುಹಿದ್ದ ಬಟ್ಟೆಯಮೇಲೆ ರಕ್ತದ ಕಲೆಯಿಲ್ಲವೆಂದು ನಿರ್ಧರಿಸಲ್ಪಟ್ಟಿರುವುದು. ಈ ವಿವಾದದ ವಿಚಾರಣೆಯು ನಾಳೆಯದಿನ ಮರಳಿ ನಡಿಯುವುದು.

ರಾಜಧಾನಿಯ ಓಟರು ಮಹಾಶಯರಲ್ಲಿ

ವಿಜ್ಞಾಪನ್.

ಪ್ರಜಾಪ್ರತಿನಿಧಿ ಸಭೆ (ರೆಪ್ರೆಜೆಂಟೇಟಿವ್ ಅಸೆಂಬ್ಲಿ)ಗೆ ಮೆಂಬರುಗಳಾಗಲು ಈ ಕೆಳಗೆ ಕಂಡ ನಾವು ನಾಲ್ವರು ಉಮೇದುವಾರರಾಗಿ ನಿಂತಿರುತ್ತೇವೆ ಮತ್ತು ಮಹಮ್ಮದ್‌ಸೇಟನಾದ ನಾನು ಮಾತ್ರ ಲೆಜಿಸ್ಲೇಟಿವ್ ಕೌನ್ಸಿಲಿಗೆ ಸಹ ಮೆಂಬರಾಗಲು ಉಮೇದುವಾರನಾಗಿರುತ್ತೇನೆ. ಆದ್ದರಿಂದ ತಾವು ಬರುವ ಫೆಬ್ರವರಿ ತಾ|| 15 ರಲ್ಲಿ ಗೊತ್ತಾದ ಸ್ಥಳಕ್ಕೆ ದಯವಿಟ್ಟು ದಯಮಾಡಿ ನಮ್ಮಗಳಿಗೆ ತಮ್ಮ ಘನವಾದ ಓಟುಗಳನ್ನು ಕೊಟ್ಟು ಮತ್ತು ಇತರರಿಂದ ಕೊಡಿಸಿ, ಪ್ರಜಾಸೇವೆಯೇ ಜೀವಿತದ ಪುರುಷಾರ್ಥವೆಂಬ ನಮ್ಮ ಸಂಕಲ್ಪವನ್ನು ನಿದರ್ಶನಪಡಿಸಲು ಅವಕಾಶವನ್ನು ಉಂಟುಮಾಡಿಕೊಡಬೇಕಾಗಿ ಪ್ರಾರ್ಥಿಸುವ,

ತಮ್ಮ ಕೃಪಾಭಿಲಾಷಿಗಳಾದ,

1. ಮುಹಮ್ಮದ್‌ಸೇಟ್. 2. ಎಚ್. ಸಿ. ದಾಸಪ್ಪ.
3. ಛಟಕೋಟಿಸೆಟ್ಟಿ. 4. ವೈ. ವಿರೂಪಾಕ್ಷಯ್ಯ.

(Continued from the previous issue)

The Local Committee for The National Baby Week, Mysore City, beg to acknowledge with many thanks the following Subscriptions.

1. Collections through Miss Gnanakan Rs. 14.
2. Contribution from the staff and students of the Sri Chamarajendra Ursu Boarding School, Mysore, Rs. 12-10-0.
3. Contribution from the staff and students of the Sri Vani Vilas Ursu Girls' School, Mysore, Rs. 6-3-0.
4. T. S. Alikhan, Esq., Rs. 3.
5. Mrs. R. V. Pathankar, Rs. 2.

Re. 1 each.

1. U. D. Narayana Murthi, Esq., B.A., B.L. 2. Y. Ramaswami, Esq., L.C.E. 3. S. Krishna Rao, Esq. 4. R. P. Mallappa, Esq., B.A., LL.B. 5. Mr. M. S. 6. Mr. H. S. N. 7. H. R. Venkata Subba Rao, Esq., B.A., L.C.E. 8. K. Parthasarathi Iyengar, Esq. 9. H. C. Dasappa, Esq., B.A., LL.B. 10. P. S. Venkatanarayana, Esq. 11. G. R. Sastry, Esq. 12. S. Muthuswami Iyer, Esq., L.C.E. 13. A Friend. 14. A. Friend. 15. G. Mallayya, Esq. 16. H. L. Raje Urs, Esq. 17. A. R. Basavaraj Urs, Esq. 18. M. G. Dastagir, Esq. 19. Mr. M. V. 20. B. R. Chakravarthi, Esq. 21. M. Venkatakrishnaiah, Esq. 22. M. A. Srinivasachar, Esq. 23. B. P. Siddaraj Urs, Esq. 24. M. N. Alikhan, Esq. 25. Mr. X. 26. Y. V. Narasimba Murthy, Esq. 27. Sethujeeva Rao, Esq. 28. M. Puttu Rao, Esq.

As. 8 each.

1. Sri Kamalamma. 2. Sri Subbamma. 3. Sri Gangamma. 4. Sri Vedanayakamma. 5. Sri Puttu Thayamma. 6. Sri Lalithamma. 7. Mrs. S. Krishna Rao. 8. C. Krishna Rao, Esq. 9. J. Raghavendra Rao, Esq. 10. T. Kantharaj Urs, Esq. 11. P. M. Nanjaraj Urs, Esq. 12. V. Thimmiah, Esq. 13. H. S. Madhava Rao, Esq. 14. Yalappa chari, Esq. 15. V. Ramiah, Esq. 16. Balaiah Raju, Esq. 17. V. Ramachandra Rao, Esq. 18. P. Parthasarathi Naidu, Esq. 19. Maistry Singrachari, Esq. 20. Nanjundachari, Esq. 21. L. R. Subba Rao, Esq. 22. Adirajiah, Esq. 23. A. Gopalaraj Urs, Esq. 24. P. S. Siddaraj Urs, Esq.

As. 4 each.

1. Sri Subbamma. 2. Sri Seetha Bai. 3. Sri Puttamma. 4. Sri Alamelamma. 5. Sri Kanjamma. 6. Sri T. S. Puttamma. 7. S. Nanjundiah, Esq. 8. Sahukar Ranganna, Esq. 9. Shamachari, Esq. 10. M. S. Rajagopalachar, Esq. 11. N. Shankara Rao, Esq. 12. V. K. Srinivasa Rao, Esq. 13. M. Thimmiah, Esq. 14. K. Rama Sastry, Esq. 15. M. Subbanna Esq. 16. B. Chennakesaviah, Esq.

As. 2 each.

1. Sri S. A. Singamma. 2. Sri S. N. Surma Bai. 3. Sri Kamalamma. 4. Sri Savitramma. 5. Sri Rangamma. 6. Sri Shantha Bai. 7. Sri Narasamma. 8. Sri Yaggamma. 9. Sri Lakshmi Bai. 10. Sri Parvathamma. 11. K. Narasinga Rao, Esq. 12. N. N. Raja Rao, Esq. 13. M. Yellappa, Esq. 14. J. Ragavendra Rao, Esq.

1. S. R. Prasad, Esq., 0-1-9.

An. 1 each.

1. Sri S. K. Shantha Bai. 2. Sri Saroja. 3. Sri Subba Lakshmamma. 4. Sri Seethamma.

1. Myself and my wife, Rs. 10.

A. C. LINGARAJ URS,
Hon. Secretary.

[3ನೇ ಪುಟದಿಂದ ಮುಂದರಿದುದು]

ಒಂದು ಸಂಸಾರಕ್ಕೆ ಒಬ್ಬ ಯಜಮಾನನು ಅಥವಾ ಒಂದು ದೇಶಕ್ಕೆ ಒಬ್ಬ ದೊರೆಯು ಎಷ್ಟು ಅಗತ್ಯವೋ, ಒಂದು ಗ್ರಾಮಕ್ಕೆ ಒಬ್ಬ ಪಟೇಲನೂ ಅಷ್ಟೇ ಅಗತ್ಯವು. ಒಂದು ಸಂಸಾರದ ಭಾರವನ್ನೆಲ್ಲಾ ಅದರ ಯಜಮಾನನು ಹೇಗೆ ಹೊತ್ತು ಸಹಿಸಬೇಕಾಗಿದೆಯೋ ಅಥವಾ ಒಂದು ದೇಶದ ಸಮಸ್ತ ಆಡಳಿತಗಳನ್ನೆಲ್ಲಾ, ಆ ದೇಶದ ಮಹಾರಾಜರು ಹೇಗೆ ದಕ್ಷತೆಯಿಂದ ನಿರ್ವಹಿಸಬೇಕಾಗಿದೆಯೋ ಹಾಗೆಯೇ ಒಂದು ಗ್ರಾಮದ ಸರ್ವ ಆಡಳಿತವನ್ನೂ ಅದರ ಪಟೇಲನು ನೋಡಿಕೊಳ್ಳಬೇಕಾಗಿದೆ.

ಆದುದರಿಂದಲೇ ನಾವು ಕೇವಲ ರೆವಿನ್ಯೂ ನೌಕರರು ಮಾತ್ರವೇ ಅಲ್ಲ. ದೇಶದ ಪ್ರತಿಯೊಂದು ಇಲಾಖೆಗೂ ನಮ್ಮ ಸಂಬಂಧವಿದೆ. ರಾಜ್ಯಾಡಳಿತಕ್ಕಾಗಿ ಏರ್ಪಟ್ಟಿರುವ ಪ್ರತಿಯೊಂದು ಇಲಾಖೆಯ ಅಧಿಕಾರವನ್ನೂ ನಮ್ಮ ಗ್ರಾಮಾಡಳಿತ ಕಾರ್ಯದಲ್ಲಿ ನಡೆಸುವುದಕ್ಕೆ ನಾವು ಜವಾಬ್ದಾರರಾಗಿದ್ದೇವೆ. ಅಂದಮೇಲೆ ರಾಜ್ಯಾಡಳಿತಕ್ಕೆ ಪಟೇಲರಾದ ನಾವುಗಳೇ ಆಧಾರಭೂತರು. ಕಂಭ ಅಥವಾ ಗೋಡೆಗಳಿಲ್ಲದಿದ್ದರೆ ಮನೆಯು ಹೇಗೆ ನಿಲ್ಲಲಾರದೋ ಹಾಗೆಯೇ ಪಟೇಲರಾದ ನಾವುಗಳಿಲ್ಲದಿದ್ದರೆ ದೇಶಾಡಳಿತ ಕಾರ್ಯವು ನಡೆಯಲಾರದು. ನಮಗೂ ಸರ್ಕಾರಕ್ಕೂ, ರೈತರಿಗೂ ಇರುವ ಪರಸ್ಪರ ಸಂಬಂಧವು ಎಂತಹದೆಂಬುದನ್ನು, ನಮ್ಮಗಳ ಕರ್ತವ್ಯದ ವಿಚಾರದಲ್ಲಿ ಈಚೀಚೆಗೆ ಏರ್ಪಟ್ಟಿರುವ ಕಾನೂನುಗಳನ್ನು ಸೂಕ್ಷ್ಮವಾಗಿ ನೋಡಿಕೊಂಡರೆ, ಸುಲಭವಾಗಿ ತಿಳಿದುಕೊಳ್ಳಬಹುದಾಗಿದೆ. ಸರ್ಕಾರಕ್ಕೂ ನಮಗೂ ಇರುವ ಸಂಬಂಧವನ್ನು ಕುರಿತು ಒಂದೆರಡು ವಿಷಯಗಳನ್ನು ಮಾತ್ರ ಇಲ್ಲಿ ತಿಳಿಸುತ್ತೇವೆ. ರಾಜ್ಯಾಡಳಿತ ಕಾರ್ಯಗಳು ಸರಿಯಾಗಿ ನಡೆಯಬೇಕಾದರೆ ಅಗತ್ಯವಾಗಿರುವ ದ್ರವ್ಯವನ್ನು ನಾನಾ ರೂಪಗಳಲ್ಲಿ ರೈತರಿಂದ ವಸೂಲು ಮಾಡಿಕೊಡತಕ್ಕವರು ನಾವು. ಪ್ರಜಾಪಾಲನೆಗೆ ಸಂಬಂಧಪಟ್ಟ ವಿವಿಧ ಸರ್ಕಾರಿ ಹುಕುಂಗಳನ್ನು ಗ್ರಾಮಗಳಲ್ಲಿ ಪ್ರಚುರಪಡಿಸಿ ಅವುಗಳನ್ನು ಸರ್ವತ್ರ ಆಚರಣೆಗೆ ತರುವಂತೆ ನೋಡಿಕೊಳ್ಳತಕ್ಕವರು ನಾವು. ನಮ್ಮ ಗ್ರಾಮಗಳಿಗೆ ಸೇರಿರುವ ಸರ್ಕಾರಿ ಜಮೀನು, ಹುಲ್ಲು ಬನ್ನಿ, ಕಾಡುಗಳು, ಕೆರೆ, ಶಾಲೆ, ರಸ್ತೆ, ಸಾಲುಮರಗಳು, ದೇವಸ್ಥಾನ, ಛತ್ರ, ಸರ್ಕಾರಿ ಕಟ್ಟಡಗಳು ಇವೇ ಮೊದಲಾದುವನ್ನು ದುರಸ್ತು ಸ್ಥಿತಿಯಲ್ಲಿಟ್ಟುಕೊಂಡು ನೋಡಿಕೊಳ್ಳತಕ್ಕವರು ನಾವು. ಆಗಿಂದಾಗ್ಯೆ ತನಿಖೆಗಾಗಿ ನಮ್ಮ ಗ್ರಾಮಗಳಿಗೆ ಬರುವ ಎಲ್ಲಾ ಇಲಾಖೆಯ ಅಧಿಕಾರಿಗಳಿಗೂ, ಅವಶ್ಯವಿದ್ದಾಗ ನಮ್ಮ ಸರಹದ್ದಿನಲ್ಲಿ ಹೋಗುವ ಸೇನಾ ಇಲಾಖೆಯವರಿಗೂ, ತಕ್ಕ ಸರಬರಾಯಿ ನಡೆಸುವವರು ನಾವು. ಗ್ರಾಮಗಳ ವಿಶಿಷ್ಟ ವಿಚಾರಗಳನ್ನೂ ಕುರಿತು ಬೇರೆ ಬೇರೆ ಇಲಾಖೆಯವರಿಗೆ ಆಗಿಂದಾಗ್ಯೆ ಅಂಕೆಮಾಡಿಕೊಳ್ಳತಕ್ಕವರೂ ನಾವು.

ಈಗ ರೈತರಿಗೂ ನಮಗೂ ಇರುವ ಸಂಬಂಧವನ್ನು ಕುರಿತು ಸ್ವಲ್ಪ ವಿಚಾರಿಸೋಣ. ಗ್ರಾಮನೈರ್ಮಲ್ಯ, ಗ್ರಾಮರಕ್ಷಣೆ, ಪ್ರಜಾರೋಗ್ಯ ಇವುಗಳನ್ನು ನೋಡಿಕೊಳ್ಳತಕ್ಕವರು ನಾವು. ಜನಜಾನುವಾರುಗಳಿಗೆ ಸಾಂಕ್ರಾಮಿಕ ಜಾಡ್ಯಗಳು ತಗುಲಿದಾಗ ಅವುಗಳ ನಿವಾರಣೆಯ ಬಗ್ಗೆ ಕೆಲಸಮಾಡತಕ್ಕವರು ನಾವು. ಗ್ರಾಮಗಳಲ್ಲಿ ಖೂನಿ ದರೋಡೆ, ಮಾರಾಮಾರಿ, ಕಳ್ಳತನ, ಜೂಜು ಇವುಗಳಿಗೆ ಅವಕಾಶವಾಗದಂತೆ ಉಸ್ತುವಾರಿ ಮಾಡತಕ್ಕವರು ನಾವು. ಸಂತೆ, ಉತ್ಸವ, ಮೆರವಣಿಗೆ, ಜಾತ್ರೆ ಈ ಕಾಲಗಳಲ್ಲಿ ಪ್ರಜಾನೆಮ್ಮದಿಗೆ ಭಂಗ ಬಾರದಂತೆ ತಕ್ಕ ಏರ್ಪಾಡುಗಳನ್ನು ಮಾಡತಕ್ಕವರು ನಾವು. ರೈತರಲ್ಲಿ ವಿದ್ಯೆ, ವ್ಯವಸಾಯ, ಕೈಗಾರಿಕೆ, ವ್ಯಾಪಾರ, ನಾಗರೀಕತೆ ಇವುಗಳು ಅಭಿವೃದ್ಧಿ ಹೊಂದುವಂತೆ ಮಾಡುವ ಭಾರವು ನಮ್ಮದು. ರೈತರಿಗಿರಬಹುದಾದ ಕುಂದುಕೊರತೆಗಳನ್ನು ಘನ ಸರ್ಕಾರದವರ ಅವಗಾಹನೆಗೆ ತಂದು, ಅಗತ್ಯವಾದ ಅನುಕೂಲ ರಿಯಾಯಿತಿಗಳನ್ನು ಒದಗಿಸಿಕೊಡುವುದು ನಮ್ಮ ಕರ್ತವ್ಯವೇ ಆಗಿರುತ್ತದೆ.

ಹೀಗೆ ಯಾವತ್ತೂ ಸರ್ಕಾರಕ್ಕೆ ಜವಾಬ್ದಾರರಾಗಿಯೂ, ಅವರ ಪ್ರತಿನಿಧಿಗಳಾಗಿಯೂ, ರೈತರ ಕ್ಷೇಮಚಿಂತಕರಾಗಿಯೂ ಇದ್ದುಕೊಂಡು ಕೆಲಸಮಾಡತಕ್ಕ ನಮ್ಮಗಳ ಕರ್ತವ್ಯವು ಘನತರವಾದುದೆಂಬುದಕ್ಕೆ ಸಂದೇಹವಿಲ್ಲ.

ಸಹೋದರರೆ, ಇಂಥಾ ಘನವಾದ ಕರ್ತವ್ಯವನ್ನೂ ಗೌರವಾರ್ಹವಾದ ಸ್ಥಾನವನ್ನೂ ಉಳ್ಳ ನಮ್ಮಗಳ ಪ್ರಕೃತ ಸ್ಥಿತಿಯ ವಿಚಾರದಲ್ಲಿ ನಾವು ಸ್ವಲ್ಪ ಆಲೋಚಿಸಬೇಕಾಗಿದೆ. ಮೊದಲು ನಮಗಿದ್ದ ಪ್ರಾಶಸ್ತ್ಯವೂ, ದರ್ಪವೂ ಈಗ ನಶಿಸಿಹೋಗಲು ಕಾರಣವೇನು? ನಮ್ಮಗಳಿಗಿದ್ದ ಒತ್ತಾಸೆ, ಸಹಾಯಗಳು ದಿನಕ್ರಮೇಣ ಕಡಿಮೆಯಾದುದೇತರಿಂದ? ಪಟೇಲನು ಸ್ಥಳದ ತಾಯಿಯೆಂದು ಪ್ರಸಿದ್ಧಿಯಿದ್ದರೂ, ಈಚೀಚೆಗೆ ನಮ್ಮಗಳ ವಿಚಾರದಲ್ಲಿ, ಅಲ್ಲಲ್ಲೇ ಕೆಲವು ರೈತರೂ, ಇತರರೂ ಕೇವಲ ಉದಾಸೀನವನ್ನು ತೋರಿಸುತ್ತಾ, ಗ್ರಾಮಗಳಲ್ಲಿ ಒಡಕು ಹುಟ್ಟುವಂತೆ ಮಾಡುತ್ತಿರುವುದು ಏತರಿಂದ? ಎಂಬಿವೇ ಮೊದಲಾದುವುಗಳನ್ನು ನಾವು ನಿಧಾನವಾಗಿ ಆಲೋಚಿಸಿದುದೇ ಆದರೆ, ಹೀಗಾಗುವುದಕ್ಕೆ ಒಂದಕ್ಕಿಂತಲೂ ಹೆಚ್ಚಾದ ಕಾರಣಗಳು ನಮಗೆ ಸಿಕ್ಕುತ್ತವೆ. ಮುಖ್ಯವಾಗಿ ನಮ್ಮಲ್ಲನೇಕರು ನಮ್ಮ ಕಾರ್ಯದಕ್ಷತೆಗೆ ಸಾಕಾದಷ್ಟು ವಿದ್ಯಾವಂತರಾಗಿಲ್ಲದಿರುವುದೇ ಒಂದು ದೊಡ್ಡ ಕಾರಣವಾಗಿದೆ.

ನಮಗೆ ಬರೀ ಓದು ಬರಹ ಬಂದಮಾತ್ರಕ್ಕೇ ನಮ್ಮ ಕರ್ತವ್ಯವನ್ನು ಸಂಪೂರ್ಣವಾಗಿ ನೆರವೇರಿಸಲು ದಕ್ಷರಾಗಲಾರೆವು. ನಮ್ಮ ಸ್ಥಾನಕ್ಕೆ ಬೇಕಾದ ಕಾರ್ಯದಕ್ಷತೆಯ ವಿಚಾರದಲ್ಲಿ ಕೆಲವು ಕಾಲವಾದರೂ ನಮ್ಮಗಳಿಗೆ ತರಬಿಯತ್ತು ಅವಶ್ಯಕವಾಗಿದೆ. ಹಾಗೆಂದ ಮಾತ್ರಕ್ಕೆ ಪ್ರಕೃತ ನಮ್ಮಲ್ಲಿ ಈ ಸ್ಥಾನಕ್ಕೆ ಅರ್ಹತೆಯುಳ್ಳವರೂ, ದಕ್ಷರೂ ಇಲ್ಲವೇ ಇಲ್ಲವೆಂದು ಭಾವಿಸಲಾಗುವುದಿಲ್ಲ. ನಮ್ಮ ದೇಶದಲ್ಲಿ ಗಣ್ಯರಾದ ಅನೇಕ ಪಟೇಲರಿರುತ್ತಾರೆ. ನಾನು ಮೊದಲೇ ತಿಳಿಸಿರುವಂತೆ ಸರ್ಕಾರಕ್ಕಾಗಿಯೂ ರೈತರಿಗಾಗಿಯೂ ನಾವು ಮಾಡಬೇಕಾದ ಕಾರ್ಯಗಳು ಅಗಣಿತವಾಗಿರುವುದರಿಂದ, ಇವುಗಳನ್ನೆಲ್ಲಾ ಸಂಪೂರ್ಣವಾಗಿ ನೆರವೇರಿಸಲು ೨೪ ಗಂಟೆಗಳ ದಿನಕ್ಕೆ ಬದಲಾಗಿ ೪೮ ಗಂಟೆಗಳ ದಿನವು ಬೇಕಾಗುತ್ತದೆ. ಹೀಗೆ ಹಗಲೂ ರಾತ್ರಿ ನಾವು ಕೆಲಸಮಾಡಿದರೂ ನಮ್ಮ ತಕ್ಕ ಪ್ರತಿಫಲವು ಕೇವಲ ಅಲ್ಪವಾದದ್ದಾಗಿರುತ್ತದೆ. ಪ್ರತಿಯೊಬ್ಬರ ಮೊದಲನೆಯ ಕರ್ತವ್ಯವಾದ ತಮ್ಮ ಸ್ವಂತ ಸಂಸಾರ ರಕ್ಷಣೆಗಾಗಿ ಕೆಲಸಮಾಡುವುದನ್ನು ಪಟೇಲರಾದ ನಾವುಗಳು ಅನುಸರಿಸಿದರೆ "ಪಟೇಲಿ" ಕಾರ್ಯವು ಬಹು ಸಲೀಸಾಗಿ ನಡೆಯಲು ಲೋಪ ಬಂದೇ ಬರುವುದು. ಹಾಗೆ ಮಾಡದೆ "ಪಟೇಲಿ" ಕೆಲಸದಲ್ಲೇ ನಿರತರಾಗಿ ಬಿಟ್ಟರೆ ಸ್ವಂತ ಸಂಸಾರವನ್ನು ನಡೆಸುವುದು ಕಷ್ಟವಾಗುವುದು. ಆದುದರಿಂದ ಪಟೇಲರಾದ ನಮ್ಮ ಕಾರ್ಯಕ್ಕೂ, ಶ್ರಮೆಗೂ, ತಕ್ಕ ಪ್ರತಿಫಲವನ್ನು ನಾವು ಹೊಂದಬೇಕಾದುದು ಅತ್ಯವಶ್ಯಕವಾಗಿದೆ. ನಮ್ಮ ನಂತರ ವಿಶೇಷ ಜವಾಬ್ದಾರಿಯುಳ್ಳ ಈ ಪ್ರಜಾಸೇವಾಕಾರ್ಯಕ್ಕೆ ತಕ್ಕ ಅರ್ಹತೆಯನ್ನು ಪಡೆದುಕೊಂಡು ಸಿದ್ಧರಾಗಿರುವಂತೆ ನಮ್ಮ ಮಕ್ಕಳ ವಿದ್ಯಾಭಿವೃದ್ಧಿಗಾಗಿ ಅವಶ್ಯಕವಾದ ಅನುಕೂಲಗಳನು ಈಗಲೇ ಕಲ್ಪಿಸಿಕೊಳ್ಳುವುದು ನಮ್ಮಗಳ ಕರ್ತವ್ಯವಾಗಿದೆ.

ನಾವು ಕೇವಲ ಗ್ರಾಮ ನೌಕರರು ಮಾತ್ರವಲ್ಲವೆಂಬುದನ್ನೂ, ರಾಜ್ಯಾಡಳಿತದಲ್ಲಿ ಮುಖ್ಯವಾದ ಗ್ರಾಮಾಡಳಿತದ ಅಧಿಕಾರಿಗಳೆಂಬುದನ್ನೂ ತೋರ್ಪಡಿಸಿಕೊಂಡ ಹೊರತು ನಮ್ಮ ಮೊದಲಿನ ದರ್ಪವು ನಮಗೆ ದೊರೆಯಲಾರದು. ಆದುದರಿಂದ ನಮ್ಮ ಸರಹದ್ದಿಗೊಳಪಟ್ಟ ಚಿಲ್ಲ ಪುಟ್ಟ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರವನ್ನೂ, ರೆವಿನ್ಯೂ ಬಾಬಿನಲ್ಲಿ ಈಗ ನಮಗೆ ಸೇರದೆ ಇರತಕ್ಕ ಕೆಲವು ಚಿಲ್ಲರೆ ಅಧಿಕಾರವನ್ನೂ ನಾವು ಪ್ರಯತ್ನಪಟ್ಟು ಪಡೆದುಕೊಳ್ಳುವುದು ನಮ್ಮ ಧರ್ಮವಾಗಿದೆ.

ಈ ನಮ್ಮ ಆಶಯಗಳೆಲ್ಲಾ ನೆರವೇರಿ ನಮ್ಮ ಪ್ರಯತ್ನಗಳು ಶೀಘ್ರದಲ್ಲಿಯೇ ಕೈಗೂಡುವುವೆಂಬುದಕ್ಕೆ ನಿದರ್ಶನವಾಗಿಯೂ, ನಾವು ಕೈಗೊಂಡಿರುವ ಈ ಕಾರ್ಯಕ್ಕೆ ಪ್ರೋತ್ಸಾಹಕರವಾಗಿಯೂ ಇರುವ ಈ ದಿವಸ ನಮ್ಮ ಸಂಸ್ಥಾನದ ಸಚಿವಶಿರೋಮಣಿಗಳಾದ "ರಾಜಮಂತ್ರಧುರೀಣ" ಶ್ರೀಯುತ ಎ. ಆರ್. ಬಾನರ್ಜಿ, ಎಂ. ಎ., ಐ. ಸಿ. ಎಸ್. ಸಿ. ಐ. ಇ., ಯವರು ಈ ಮಹಾಸಭೆಗೆ ಕಳುಹಿಸಿರುವ, ಘನವಾದ ಶುಭವಾರ್ತಾ ಪತ್ರಿಕೆಯೇ ನಮ್ಮಗಳೆಲ್ಲರಿಗೂ ನವಜೀವನವಾಗಿದೆ. ಅಲ್ಲದೆ, ನಮ್ಮ ಸೀಮೆಯ ರೆವಿನ್ಯೂ ಕಮಿಷನರ್ ಸಾಹೇಬರವರಾದ ಮ|| ರಾ|| ಕೆ. ಚಾಂಡಿ, ಬಿ. ಎ. ಯವರು, ನಮ್ಮಗಳ ಅಭಿವೃದ್ಧಿಯಲ್ಲಿ ಕೇವಲ ಆಸಕ್ತರಾಗಿ ಸ್ವಯಂ ಈ ಸಭೆಗೆ ದಯಮಾಡಿ ನಮ್ಮಗಳೆಲ್ಲರಿಗೂ ಕೊಟ್ಟಿರುವ ಉತ್ತೇಜನ, ಭರವಸೆ ಮತ್ತು ಬುದ್ಧಿವಾದಗಳನ್ನು ನಾವು ನೆನಪಿನಲ್ಲಿಟ್ಟುಕೊಂಡು ಕಾರ್ಯಸಾಧನೆಯನ್ನು ಮಾಡುವುದಾದರೆ ನಾವು ಆಶಾಭಗ್ನರಾಗಬೇಕಾದ ಸಂಭವ ಇರುವುದಿಲ್ಲ.

ಮಹಾಶಯರೆ, ನಾವುಗಳು ಈ ಮಹಾಸಭೆಗೆ ಸಂಬಂಧಪಟ್ಟಂತೆ ಮಾಡಬೇಕಾದ ಕಾರ್ಯಗಳು ಅನೇಕ ವಿರುವುದರಿಂದ ನನ್ನ ಭಾಷಣಕ್ಕಾಗಿಯೇ ಇನ್ನು ಹೆಚ್ಚು ಕಾಲವನ್ನು ಉಪಯೋಗಿಸಿಕೊಳ್ಳಲು ಇಚ್ಛೆಯಿಲ್ಲದವನಾಗಿದ್ದೇನೆ. ಆದುದರಿಂದ ಸದ್ಯಸ್ಥಿತಿಯಲ್ಲಿ ನಮ್ಮಗಳೆಲ್ಲರ ಯೋಚನೆಗೆ ಅರ್ಹವಾದ ಮತ್ತೊಂದು ವಿಷಯವನ್ನು ಕುರಿತು ಸ್ವಲ್ಪ ಪ್ರಸ್ತಾಪಿಸಿ ಮೇಲೆ ನನ್ನೀ ಭಾಷಣವನ್ನು ಪರಿಸಮಾಪ್ತಿಗೊಳಿಸುವೆನು.

ಈಚೀಚೆಗೆ ವರ್ಷಂಪ್ರತಿಯೂ ಮಳೆ ಬೆಳೆಗಳು ಸರಿಯಾಗಿ ಆಗದೆ ರೈತರು ನಾನಾ ವಿಧವಾದ ಕಷ್ಟನಷ್ಟಗಳಿಗೆ ಗುರಿಯಾಗುತ್ತಿರುವುದನ್ನು ಅನುಭವಿಸಿಯೂ, ಕಣ್ಣಿಂದ ನೋಡಿಯೂ ತಿಳಿದುಕೊಳ್ಳಬೇಕಿಲ್ಲವಷ್ಟೆ. ಇದ[illegible] ತಿಳಿಸುವುದಕ್ಕೆ ಸಾಧ್ಯವಿಲ್ಲ. ಆದರೂ ಈ [illegible]

ಭಾಗಗಳಲ್ಲಿ ಮಳೆ ಬೆಳೆಗಳು ಸುತರಾಂ ಅಗದೆ ಕುಡಿಯುವ ನೀರಿಗೂ ದನಗಳ ಮೇವಿಗೂ ಅಭಾವವುಂಟಾಗಿ, ಮುಂದೆ ಬರಬಹುದಾದ ಘೋರಕ್ಷಾಮದ ಚಿನ್ಹೆಗಳು ಜನರಲ್ಲಿ ಹಾಹಾಕಾರವನ್ನುಂಟುಮಾಡುತ್ತಿರುತ್ತವೆ. ಈ ಸಂದರ್ಭದಲ್ಲಿ ನಮ್ಮ ದಯಾಳು ಸರ್ಕಾರದವರು ರೈತರ ಜಮೀನಿನ ಕಂದಾಯದಲ್ಲಿ ಉದಾರವಾದ ರಿಯಾಯತಿ (ರಿಮಿಷನ್) ಗಳನ್ನು ತೋರಿಸಿಯೂ, ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಕ್ಷಾಮನಿವಾರಣೋಪಾಯ ಕಾರ್ಯಗಳನ್ನಾಗಿ ಕೈಗೊಂಡು ಬಡರೈತರ ಜೀವನಕ್ಕೆ ಮಾರ್ಗವನ್ನು ಕಲ್ಪಿಸಿಕೊಟ್ಟು, ಅಗತ್ಯವಾದ ಕಡೆಗಳಲ್ಲಿ ನೀರಿನ ಅನುಕೂಲತೆಗೆ ತಕ್ಕ ಏರ್ಪಾಡುಗಳನ್ನು ಮಾಡಿಯೂ ಜನರ ಜೀವನಕ್ಕಾಗಿ ಬೇಕಾದ ದವಸಧಾನ್ಯಗಳೂ, ಜಾನುವಾರುಗಳ ಗ್ರಾಸವೂ ಕ್ಷಾಮರಿಯಾಯತಿ ದರದಲ್ಲಿ ಸಿಕ್ಕುವಂತೆ ಏರ್ಪಡಿಸಿಯೂ, ಭಯಭ್ರಾಂತರಾಗಿರುವ ರೈತರನ್ನು ಎಲ್ಲಾ ವಿಧಗಳಲ್ಲಿಯೂ ಕಾಪಾಡಬೇಕೆಂದು ನಾವುಗಳೆಲ್ಲರೂ ಏಕವಾಕ್ಯತೆಯಿಂದ ನಮ್ಮ ದಯಾಳು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವುದು ಅತ್ಯಗತ್ಯವಾಗಿದೆ.

ಸಹೋದರರೆ, ಪ್ರಜಾಕ್ಷೇಮಕ್ಕಾಗಿಯೂ ನಮ್ಮಗಳ ಅಭಿವೃದ್ಧಿಗಾಗಿಯೂ ಈ ಮಹಾಸಭೆಯಲ್ಲಿ ಅಗತ್ಯವಾದ ಏರ್ಪಾಡುಗಳನ್ನು ಮಾಡಿಕೊಂಡು, ನಮ್ಮಗಳ ಆಶಯಗಳನ್ನು ಉದಾರಭಾವದಿಂದಲೂ ದಯಾಳುತನದಿಂದಲೂ ನಡೆಸಿಕೊಡಬೇಕೆಂದು ನಮ್ಮ ಘನ ಸರ್ಕಾರದವರನ್ನು ರಾಜಭಕ್ತಿ ನಮ್ರತೆಗಳಿಂದ ಪ್ರಾರ್ಥಿಸಿಕೊಂಡು, ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ., ಯವರ ಮತ್ತು ಅವರ ಸಹೋದರರಾದ ಸರ್ ಕಂಠೀರವ ನರಸಿಂಹರಾಜ ಒಡೆಯರವರ ಕೃಪೆಗೂ, ನಮ್ಮ ಘನ ಸರ್ಕಾರದವರ ಮೆಚ್ಚುಗೆಗೂ ಪಾತ್ರರಾಗಬೇಕಲ್ಲದೆ, ಜಗದೀಶ್ವರನು ನಮ್ಮ ರಾಜಮನೆತನದವರನ್ನು ಸರ್ವದಾ ರಕ್ಷಿಸಲೆಂದೂ, ನಮ್ಮ ಮಹಾಸಭೆಯ ಕಾರ್ಯಗಳು ನಿರ್ವಿಘ್ನವಾಗಿ ನಡೆದು, ಮುಂದೆ ನಮ್ಮಗಳ ಅಭಿವೃದ್ಧಿಗಾಗಿ ಏರ್ಪಡುವ ನಮ್ಮ ಸಂಘವು ಚಿರಸ್ಥಾಯಿಯಾಗಿ ನೆಲೆಗೊಳ್ಳುವಂತೆ ಅನುಗ್ರಹಿಸಲೆಂದೂ ನಾವೆಲ್ಲರೂ ಭಗವಂತನನ್ನು ಪ್ರಾರ್ಥಿಸೋಣ.

27-1-1924.

ಈ ದಿವಸ ಮಧ್ಯಾಹ್ನ 3 ಗಂಟೆಗೆ ಪುನಃ ಸಭೆಸೇರಿತು. ರಾವ್ ಸಾಹೇಬ್ ಹೆಚ್. ಚನ್ನಯ್ಯನವರೂ ಮ|| ಗಳಾದ ಎಂ. ಎಲ್ ಕ್ಯಾಮೇಗೌಡರೂ ಮಾಲೂರು ವೇಮಾರೆಡ್ಡಿಯವರೂ, ಆರ್. ಗೋಪಾಲಸ್ವಾಮಿ ಐಯ್ಯರೂ, ಕೆ. ಹೆಚ್. ರಾಮಯ್ಯನವರೂ ಭಾಷಣಗಳನ್ನು ಮಾಡಿದರು. ಅನಂತರ ತೀರ್ಮಾನಗಳ ಚರ್ಚೆಗೆ ಪ್ರಾರಂಭವಾಯಿತು. ಇದಕ್ಕೆ ತತ್ಪೂರ್ವ ಸಭಾಧ್ಯಕ್ಷರು ಸೂಚಿಸಿದಂತೆ ಸಭಿಕರೆಲ್ಲರೂ ಭಕ್ತಿಯಿಂದ ಎದ್ದು ನಿಂತುಕೊಂಡು ಆಳುವ ಮಹಾಸ್ವಾಮಿಯವರಾದ ಶ್ರೀಮನ್ ಮಹಾರಾಜರವರಿಗೆ ಮಹಾಸಭೆಯವರ ರಾಜಭಕ್ತಿಪೂರ್ವಕವಾದ ತೀರ್ಮಾನವನ್ನು ಮಾಡಿ ಟೆಲಿಗ್ರಾಂ ಮೂಲಕ ಕಳುಹಿಸಿದರು. ಆಮೇಲೆ ಮಹಾಸಭೆಗೆ ದಯೆಯಿಂದ ಶುಭವಾರ್ತಾಪತ್ರಿಕೆಯನ್ನು ಕಳುಹಿಸಿಕೊಟ್ಟಿದ್ದ ನಮ್ಮ ದಿವಾನ್ ಸಾಹೇಬರವರಿಗೆ ವಂದನಾಪೂರ್ವಕವಾದ ತೀರ್ಮಾನವನ್ನು ಸಭಾಧ್ಯಕ್ಷರು ಸೂಚಿಸಲು ಸಭಿಕರೆಲ್ಲರೂ ಏಕವಾಕ್ಯತೆಯಿಂದ ಒಪ್ಪಿಕೊಂಡು ಅದನ್ನೂ ಟೆಲಿಗ್ರಾಂ ಮೂಲಕ ಕಳುಹಿಸಿದರು.

ಪಟೇಲರ ಮತ್ತು ಗ್ರಾಮಾಭಿವೃದ್ಧಿ ವಿಷಯಕವಾದ ಅನೇಕ ವಿಷಯಗಳನ್ನು ಕುರಿತು ದೀರ್ಘವಾದ ಚರ್ಚೆ ನಡೆಯಿತು. ಎಲ್ಲಾ ಪಟೇಲರುಗಳೂ ಬಹಳ ಉತ್ಸಾಹದಿಂದ ಚರ್ಚೆನಡೆಸಿದುದು ಸ್ತುತ್ಯವಾದ ವಿಷಯವಾಗಿದೆ. ಸುಮಾರು 40 ವಿಷಯಗಳು ಚರ್ಚಿಸಲ್ಪಟ್ಟವು. ಆ ಪೈಕಿ 27 ವಿಷಯಗಳಲ್ಲಿ ತೀರ್ಮಾನಗಳನ್ನು ಮಾಡಿದರು. 25 ವಿಷಯಗಳನ್ನು ಘನ ಸರ್ಕಾರದವರಿಗೆ ಅರಿಕೆಮಾಡಿಕೊಳ್ಳಬೇಕೆಂದು ಗೊತ್ತಾಯಿತು.

ಇದಾದ ಮೇಲೆ ಸಭಾಧ್ಯಕ್ಷರು ತಮ್ಮ ಉಪಸಂಹಾರ ಭಾಷಣವನ್ನು ಮಾಡಿದರು.

ಶ್ರೀಮನ್ ಮಹಾರಾಜ ಸಹೋದರರ ಶ್ರೇಯಃಪ್ರಾರ್ಥನೆಯು ಆದಮೇಲೆ ಜಯಘೋಷದೊಡನೆ ಮಹಾಸಭೆಯ ಕಾರ್ಯಗಳೆಲ್ಲಾ ಜಯಪ್ರದವಾಗಿ ಮುಕ್ತಾಯಗೊಂಡುವು.

1924ನೆ ಜನವರಿ 26-27ನೇ ತಾ|| ಗಳಲ್ಲಿ ಮಹಾಸಭೆಯಲ್ಲಾದ ತೀರ್ಮಾನಗಳು.

I. ಮೈಸೂರು ದೇಶಕ್ಕೆಲ್ಲಾ ಅನ್ವಯಿಸುವಂತೆ ಒಂದು ಪಟೇಲರ ಸಂಘವನ್ನು ಸ್ಥಾಪಿಸತಕ್ಕದ್ದು.

II. ಈ ಸಂಘದ ಉದ್ದೇಶಗಳನ್ನೂ ನಿಬಂಧನೆಗಳನ್ನೂ ನಿರ್ಧರಿಸಿ ಸಂಘವನ್ನು ಸರ್ಕಾರದಲ್ಲಿ ರಿಜಿಸ್ಟರು ಮಾಡಿಸುವುದಕ್ಕಾಗಿ ಕ್ಲೋಸ್‌ಪೇಟೆ ತಾಲ್ಲೋಕು ಮಾಯಿಗಾನಹಳ್ಳಿ ಪಟೇಲ್ ಮ|| ರಾ|| ಗುರುಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಹತ್ತುಮಂದಿ ಮೆಂಬರುಗಳಿಂದ ಕೂಡಿದ ಒಂದು ಸಬ್‌ಕಮಿಟಿಯು ಏರ್ಪಾಡಾಯಿತು.

III. ಈ ಕೆಳಗೆಕಂಡ ವಿಷಯಗಳನ್ನು ನಮ್ಮ ಘನಸರ್ಕಾರದವರಲ್ಲಿ ಅರಿಕೆಮಾಡಿಕೊಳ್ಳಬೇಕೆಂದು ನಿರ್ಧರವಾಯಿತು.

1. ಮೈಸೂರುದೇಶದ ಪಟೇಲರ ಮಹಾಸಭೆಯನ್ನು ದೇಶದ ಬೇರೆಬೇರೆ ಭಾಗಗಳಲ್ಲಿ ಪ್ರತಿವರುಷವೂ ನಡೆಸುವುದಕ್ಕಾಗಿ ಮೈಸೂರುದೇಶದ ಪಟೇಲರ ಸಂಘಕ್ಕೆ ಸಾಲಿಯಾನ ಧಾರಾಳವಾದ ಗ್ರ್ಯಾಂಟ್ ಅಪ್ಪಣೆಕೊಡಿಸುವಂತೆ ಪ್ರಾರ್ಥಿಸಿಕೊಳ್ಳುವುದು.

2 ಪಟೇಲರ ಸಂಘದಿಂದ ಪ್ರಜಾಪ್ರತಿನಿಧಿಸಭೆಗೆ ಇಬ್ಬರು ಪ್ರತಿನಿಧಿಗಳನ್ನೂ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಒಬ್ಬ ಪ್ರತಿನಿಧಿಯನ್ನೂ ಚುನಾಯಿಸಿ ಕಳುಹಿಸುವಂತೆ ಸಂಘಕ್ಕೆ ಅವಕಾಶಕೊಡುವಂತೆ ಪ್ರಾರ್ಥಿಸಿಕೊಳ್ಳುವುದು.

3. ಪಟೇಲಿ ಕೆಲಸಕ್ಕೆ ತರಬಿಯತ್ತು ಮಾಡಲು ಪ್ರತಿಯೊಂದು ಡಿಸ್ಟ್ರಿಕ್ಟ್ ಮುಖ್ಯಪಟ್ಟಣದಲ್ಲೂ ಒಂದೊಂದು ಪಟೇಲರ ಟ್ರೇನಿಂಗ್ ಸ್ಕೂಲನ್ನು ಸ್ಥಾಪಿಸಿಕೊಡುವಂತೆಯೂ ಇಂತಹ ಸ್ಕೂಲುಗಳಲ್ಲಿ ಓದುವುದಕ್ಕೆ ಹೋಗುವ ಪಟೇಲರು ಮತ್ತು ಉಮೇದುವಾರಿ ಪಟೇಲರುಗಳಿಗೆ ತಕ್ಕ ವೇತನವನ್ನು ಕೊಟ್ಟು ಫ್ರೀ ಬೋರ್ಡಿಂಗಿಗೆ ಅನುಕೂಲಮಾಡಿಕೊಡುವಂತೆ ಸಹ ಪ್ರಾರ್ಥಿಸಿಕೊಳ್ಳುವುದು.

4. ಪಟೇಲರುಗಳು ತಮ್ಮ ಗ್ರಾಮಗಳಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳಿಗೂ ಜವಾಬ್ದಾರರಾಗಿದ್ದುಕೊಂಡು ಕೆಲಸಮಾಡುತ್ತಾ ಇದ್ದರೂ ಇವರ ಕೆಲಸಕ್ಕೂ ಯೋಗ್ಯತೆಗೂ ತಕ್ಕಂತೆ ಸರ್ಕಾರದಿಂದ ಸರಿಯಾದ ಪ್ರತಿಫಲವು ಒದಗುತ್ತಾ ಇಲ್ಲ. ಪಟೇಲರಾದವರು ದಿವಸದ 24 ಗಂಟೆಗಳಲೂ ಸರ್ಕಾರದ ಕೆಲಸದಮೇಲೆ ಇರಬೇಕಾಗಿರುವುದರಿಂದ ವಿಶೇಷ ಪುಣ್ಯವಂತರಲ್ಲದ ಪಟೇಲರುಗಳು ತಮ್ಮ ಜೀವನನಡೆಸುವುದೇ ಕಷ್ಟವಾಗಿದೆ. ಈ ವಿಷಯವನ್ನು ಸರ್ಕಾರದವರು ತಮ್ಮ ಘನವಾದಚಿತ್ತಕ್ಕೆ ತಂದುಕೊಂಡು ಪಟೇಲರ ಪೋಟಿಗೆಯನ್ನು ಬಹಳಮಟ್ಟಿಗೂ ಹೆಚ್ಚಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವುದು.

5. ಹೋಬಳಿ ಶೇಕದಾರರು ರಜಾಮೇಲಿರುವಾಗಲೂ ವರ್ಗಪಟ್ಟ ಶೇಕದಾರರಿಗೆ ಪ್ರತಿಯಾಗಿ ಹೊಸ ಶೇಕದಾರರು ಬರುವುದು ನಿಧಾನವಾದ ಕಾಲದಲ್ಲೂ ಹೋಬಳಿಗೆ ಸೇರಿರತಕ್ಕ ಲಾಯಖ್ ಆದ ಒಬ್ಬ ಪಟೇಲನೇ ಹಂಗಾಮಿಯಾಗಿ ಶೇಕದಾರಿ ಕೆಲಸನೋಡಲು ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

6. ಪಟೇಲನ ವಂಶದಲ್ಲಿ ವಿಶೇಷ ವಿದ್ಯಾವಂತರು ಹೆಚ್ಚುವಂತೆ ಮಾಡುವುದಕ್ಕಾಗಿ ಅವರ ಮಕ್ಕಳಿಗೆ ಸ್ಪೆಷಲ್ ಸ್ಕಾಲರ್‌ಷಿಪ್‌ಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು,

7. ಗ್ರಾಮಕ್ಕೆ ಸಂಬಂಧಪಟ್ಟ ಎಲ್ಲಾ ಕಮಿಟಿಗಳಲ್ಲಿಯೂ ಅಂದರೆ ಗ್ರಾಮಪಂಚಾಯತಿ, ಸ್ಕೂಲ್‌ಕಮಿಟಿ, ಕೆರೆಪಂಚಾಯಿತಿ, ವಿಲೇಜುಕಮಿಟಿ ಮುಂತಾದವುಗಳಲ್ಲೆಲ್ಲಾ ಪಟೇಲರೇ ಅಗತ್ಯವಾಗಿ ಛೇರ್ಮನ್‌ರಾಗಿರುವಂತೆ ಅಪ್ಪಣೆಕೊಡಿಸುವಂತೆ ಪ್ರಾರ್ಥಿಸಿಕೊಳ್ಳುವುದು.

8. ಹೊಸದಾಗಿ ಸಿಕ್ಮಿದಾರರಿಂದ ಕಂದಾಯ ತೆಗೆದುಕೊಳ್ಳಬೇಕಾದರೆ ಅಂತಹ ಸಿಕ್ಮಿದಾರರು ತಾಲ್ಲೋಕಿನಿಂದ ಆರ್ಡರು ಬರೆದು ಪಡೆಯಬೇಕು. ಇದಕ್ಕಾಗಿ ತಾಲ್ಲೋಕು ಕಚೇರಿಯಲ್ಲಿ ಹೊಸ ಸಿಕ್ಮಿಕುಳಗಳ ರಿಜಿಸ್ಟರನ್ನು ಇಡಬೇಕು. ಆ ರಿಜಿಸ್ಟರು ಕಾಪಿಯೊಂದು ಪಟೇಲರಲ್ಲಿರುವಂತೆ ಮಾಡಿ ತಾಲ್ಲೋಕು ಜಮಾಬಂದಿಕಾಲದಲ್ಲಿ ಚೆಕ್‌ಮಾಡುವಂತೆ ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

9. ಕಂದಾಯದ ವಸೂಲಿಬಗ್ಗೆ ಅವಶ್ಯಕವಾಗಿ ಬೇಕಾಗಿರುವ ಸಿಕ್ಮಿ ಆವರ್ಜೆ ಪಟ್ಟಿಯನ್ನು ಶ್ಯಾನುಭೋಗರು ಪಟೇಲರಿಗೆ ಕೊಡುವಂತೆ ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು. ಈ ವಿಷಯದಲ್ಲಿ ಹಿಂದಿನವರ್ಷಗಳ ಕಿರ್ದಿಯಮೇರೆ ವಸೂಲಿ ತಯಾರಾದ ಕಾಪಿಯೊಂದನ್ನು ಕೊಡಿಸಿಕೊಟ್ಟರೆ ಸಾಕಾಗಿದೆ.

10. ಕಿರ್ದಿ ಬರದಮೇಲೆ ಅದನ್ನು ಬದಲಾಯಿಸಲು ಅವಕಾಶವಿರುವುದರಿಂದ ವಸೂಲಿಯಕಾಲದಲ್ಲಿಯೇ ಅದರ ಕಾರ್ಬನ್ ಕಾಪಿಯೊಂದನ್ನು ತಯಾರ್ಮಾಡಿ ತಾಲ್ಲೋಕು ಕಚೇರಿಗೆ ಅದನ್ನು ಇರಸಾಲಿನ ಜತೆಯಲ್ಲಿಯೇ ಹಾಜರ್ಮಾಡುವಂತೆ ಏರ್ಪಾಡುಮಾಡಬೇಕೆಂದು ಪ್ರಾರ್ಥಿಸಿಕೊಳ್ಳುವುದು.

11. ಸಿಕ್ಮಿ ಡೂಪ್ಲಿಕೇಟ್ ರಸೀತಿಗೆ ಬದಲಾಗಿ ಸಿಕ್ಮಿ ಕಾರ್ಬನ್ ರಸೀತಿಕೊಡಲು ಅನುಕೂಲವಾಗುವಂತೆ ಸಿಕ್ಮಿ ರಸೀತಿಬುಕ್ಕುಗಳನ್ನು ಸಪ್ಲೈಮಾಡಬೇಕೆಂದೂ ಇಂತಹ ರಸೀತಿಗಳಲ್ಲಿ ಖಾತೇನಂಬರು ಸರ್ವೆನಂಬರುಗಳನ್ನು ನಮೂದುಮಾಡಬೇಕೆಂದಿರುವ ಖಾನೂನನ್ನು ಜಾರಿಗೆ ತರಬೇಕೆಂದೂ ಪ್ರಾರ್ಥಿಸಿಕೊಳ್ಳುವುದು.

12. ತನಿಕೆಪಟ್ಟಿ, ತಕರಾರು ತಃಖ್ತೆ, ವರ್ಗಾವರ್ಗಿ, ಪೌತಿತಃಖ್ತೆ, ಖಾನೇಷುಮಾರಿ ಲೆಕ್ಕ ಇವುಗಳಿಗೆ ಪಟೇಲರುಗಳ ರುಜು ಇಲ್ಲದೆ ಸರ್ಕಾರದವರು ಅಂಗೀಕರಿಸದಂತೆ ಅಪ್ಪಣೆಮಾಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

13. ಶ್ಯಾನುಭೋಗರುಗಳು ಸಿರ್ಕಾ ಗ್ರಾಮಗಳಲ್ಲಿಯೇ ವಾಸಮಾಡಬೇಕೆಂಬ ಸರ್ಕಾರಿ ಹುಕುಂನ್ನು ಕೂಡಲೇ ಜಾರಿಗೆ ತರಬೇಕೆಂದೂ ಒಬ್ಬ ಶ್ಯಾನುಭೋಗರು ಒಂದು ಸಿರ್ಕಾಕ್ಕಿಂತಲು ಹೆಚ್ಚು ಸಿರ್ಕಾಗಳಲ್ಲಿ ಶ್ಯಾನುಭೋಗರಾಗಿರಕೂಡದೆಂಬುದನ್ನೂ ಸಹ ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

14. ಶ್ಯಾನುಭೋಗರು ಯಾವ ಗ್ರಾಮದಲ್ಲಿ ವಾಸಮಾಡುವುದಿಲ್ಲವೋ ಆ ಗ್ರಾಮದ ಪಹಣಿ, ಖಾನೇಷುಮಾರಿ, ಖೇತುವಾರಿ ರಿಜಿಸ್ಟರುಗಳನ್ನೂ ಗ್ರಾಮದ ಸ್ಟ್ಯಾಟಿಸ್ಟಿಕ್ಸನ್ನೂ ಆ ಗ್ರಾಮದ ಪಟೇಲರವಶಕ್ಕೆ ಕೊಡುವಂತೆ ಅಪ್ಪಣೆಮಾಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

15. ತೋಟಿ ತಳವಾರಿಗಳ ಇನಾಮ್ತಿ ಜಮೀನುಗಳನ್ನು ಬರಾವರ್ದುದಾರನ ವಂಶೀಕರು ಅನೇಕಭಾಗಗಳನ್ನಾಗಿ ಭಾಗಿಸಿಕೊಂಡು ಅನುಭವಿಸುತ್ತಾ ಇರುವುದರಿಂದ ನೌಕರಿಮಾಡುವವರಿಗೆ ಸಾಕಾಗುವಷ್ಟು ವರಮಾನವಿಲ್ಲದ ಕಾರಣ ಸರ್ಕಾರಿಕೆಲಸ ಸಲೀಸಾಗಿ ನಡೆಯುವುದಕ್ಕೆ ಅಡಚಣೆಯಾಗಿದೆ. ಆದುದರಿಂದ ಒಂದುವರ್ಷ ನೌಕರಿಮಾಡತಕ್ಕಂಥಾವನೇ ಆ ವರ್ಷದ ಆದಾಯವನ್ನು ಹೊಂದುವಂತೆ ಅಪ್ಪಣೆಮಾಡಿಸಬೇಕೆಂದು ಕೇಳಿಕೊಳ್ಳುವುದು.

16. ತೋಟಿ ನೀರುಗಂಟಿ ಇವರಿಗೆ ಕೊಡಬೇಕಾದ ಮಿರಾಸೆ ವಿಚಾರದಲ್ಲಿ ತಕರಾರುಬಂದಾಗ್ಗೆ ತಾಲ್ಲೋಕು ಅಮಲ್ದಾರುಗೆ ಪ್ರತಿಯಾಗಿ ಪಟೇಲರೇ ಕ್ರಮ ಜರುಗಿಸಿ ವಸೂಲು ಮಾಡಿಕೊಡಲು ಅಧಿಕಾರವನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

17. ಗ್ರಾಮ ಕೈಡಿಪಿಬುಕ್ಕಿನಲ್ಲಿ ನಮೂದಿರುವ ಕ್ರಿಮಿನಲ್ ಮತ್ತು ಸಿವಿಲ್ ಅಧಿಕಾರವನ್ನು ಲಾಯಖ್ ಪಟೇಲರುಗಳಿಗೆ ದಯಪಾಲಿಸುವಂತೆ ಪ್ರಾರ್ಥಿಸಿಕೊಳ್ಳುವುದು.

18. ಬಾಂದುಕಲ್ಲು ಶಿಕಸ್ತಾಗಿರುವುದನ್ನು ಸರಿಪಡಿಸಬೇಕೆಂದು ಸಂಬಂಧಪಟ್ಟ ರೈತರಿಗೆ ಪಟೇಲರು ತಿಳಿಸಿದಮೇಲೂ ಆ ಕೆಲಸ ನಡೆಯದೆ ಇದ್ದರೆ ಅಗತ್ಯವಾದ ಕೆಲಸವನ್ನು ಪಟೇಲರೇ ಮಾಡಿಸಿ ಅದಕ್ಕೆ ತಗಲುವ ಖರ್ಚನ್ನು ಅವರೇ ನೋಟೀಸು ವಗೈರೆ ಕೊಟ್ಟು ಕ್ರಮಜರುಗಿಸಿ ವಸೂಲಿಮಾಡಿಕೊಳ್ಳಲು ಅಧಿಕಾರ ಅಪ್ಪಣೆಕೊಡಿಸಬೇಕೆಂದು ಕೇಳಿಕೊಳ್ಳುವುದು.

19. ಪಟೇಲರು ಗ್ರಾಮದ ಎಲ್ಲಾ ಬಾಬುಗಳನ್ನು ಕುರಿತು ಸರ್ಕಾರದ ಬೇರೆಬೇರೆ ಇಲಾಖೆಗಳಿಗೆ ರಿಪೋರ್ಟುಮಾಡಿಕೊಳ್ಳಬೇಕಾಗಿರುವುದರಿಂದ ಸಾದಿಲ್‌ವಾರ್ ಅಲೋಯನ್ಸನ್ನು ಹೆಚ್ಚಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವುದು.

20. ಪಟೇಲರುಗಳು ಪೋಲೀಸು ಕೇಸುಗಳಲ್ಲಿ ಎವಿಡೆನ್ಸು ಕೊಡುವುದಕ್ಕಾಗಿ ಮ್ಯಾಜಿಸ್ಟ್ರೇಟ್ ಮುಂತಾದ ಕೋರ್ಟುಗಳಿಗೆ ಹೋದಾಗ್ಗೆ ಭತ್ಯ ಕೊಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವುದು.

21. ಸರ್ಕಾರದಿಂದ ಪಾಯಿಸ್ ಆಗುವ ಹುಕುಂಗಳನ್ನು ಶ್ಯಾನುಭೋಗರಿಗೆ ಮಾತ್ರ ದಾಖಲೆಗೆ ಕೊಡುತ್ತಾರೆ ಅದರಂತೆ ಪಟೇಲರಿಗೂ ಸಹ ದಾಖಲೆಬಗ್ಗೆ ಕೊಡಿಸಿಕೊಡಬೇಕಾಗಿ ಪ್ರಾರ್ಥಿಸಿಕೊಳ್ಳುವುದು.

22. ಮಲನಾಡು ಪ್ರಾಂತ್ಯದ ಪಟೇಲರುಗಳಿಗೆ ಸರ್ಕಾರಿ ಕೆಲಸದ ಕುಮ್ಮಕ್ಕು ಬಗ್ಗೆ ತೋಟಿ ತಳವಾರರು ಇಲ್ಲದೆ ಕಂದಾಯ ವಸೂಲಿ ಗ್ರಾಮ ಪೋಲೀಸು ಕೆಲಸ ಮೊದಲಾದ ಗ್ರಾಮಾಡಳಿತ ಕಾರ್ಯಗಳಿಗೆ ತೊಂದರೆಯುಂಟಾಗಿರುವುದರಿಂದ ಮಲನಾಡು ಪ್ರಾಂತದ ಪಟೇಲರು ತೋಟಿ ತಳವಾರಿಗಳನ್ನು ನಿಯಮಿಸಿಕೊಳ್ಳುವಂತೆ ಅಪ್ಪಣೆಯಾಗಬೇಕೆಂದು ಪ್ರಾರ್ಥಿಸಿಕೊಳ್ಳುವುದು.

23. ಸರ್ವೆ ಇಲಾಖೆಯಿಂದ ಖೇತುವಾರು ಪ್ರತಿಯೊಂದನ್ನು ತಯಾರು ಮಾಡಿಸಿ ಪಟೇಲರಿಗೆ ಕೊಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವುದು.

24. ಗ್ರಾಮಾಂತರಗಳಲ್ಲಿ ವಿದ್ಯಾಭ್ಯಾಸವು ಸರ್ವತ್ರ ಪ್ರಚುರವಾಗುವುದಕ್ಕಾಗಿ ಪ್ರತಿಯೊಂದು ಹಳ್ಳಿಗೂ ಒಂದೊಂದು ಸ್ಕೂಲನ್ನು ದಯಪಾಲಿಸಬೇಕಲ್ಲದೆ ಹಳ್ಳಿಗಾಡಿನಲ್ಲಿ ನಿರ್ಬಂಧ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕೆಂದು ಪ್ರಾರ್ಥಿಸಿಕೊಳ್ಳುವುದು.

25. ಈ ವರುಷ ದೇಶದ ಅನೇಕ ಭಾಗಗಳಲ್ಲಿ ಮಳೆ ಬೆಳೆಗಳು ಸುತರಾಂ ಅಗದೆ ಕುಡಿಯುವ ನೀರಿಗೂ ದನಗಳ ಮೇವಿಗೂ ಅಭಾವ ಉಂಟಾಗಿ ಮುಂದೆ ಬರಬಹುದಾದ ಘೋರಕ್ಷಾಮದ ಚಿನ್ಹೆಗಳು ಜನರಲ್ಲಿ ಹಾಹಾಕಾರವನ್ನುಂಟುಮಾಡುತ್ತಿರುವುದರಿಂದ ನಮ್ಮ ದಯಾಳು ಸರ್ಕಾರದವರು ಅಗತ್ಯಕಂಡೆಡೆಗಳಲ್ಲಿ ರೈತರ ಜಮೀನಿನ ಕಂದಾಯದಲ್ಲಿ ಉದಾರವಾದ ರಿಯಾಯತಿಗಳನ್ನು ತೋರಿಸಿಯೂ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಕ್ಷಾಮನಿವಾರಣೋಪಾಯ ಕಾರ್ಯಗಳನ್ನಾಗಿ ಕೈಗೊಂಡು ಮಾಡಿಸಿ ಬಡ ರೈತರ ಜೀವನಕ್ಕೆ ಮಾರ್ಗವನ್ನು ಕಲ್ಪಿಸಿಕೊಟ್ಟು ನೀರಿನ ಅನುಕೂಲತೆಗೆ ತಕ್ಕ ಏರ್ಪಾಡುಗಳನ್ನು ಮಾಡಿಯೂ ಜನರ ಜೀವನಕ್ಕಾಗಬೇಕಾದ ದವಸಧಾನ್ಯಗಳೂ ಜಾನುವಾರುಗಳ ಗ್ರಾಸವೂ ಕ್ಷಾಮರಿಯಾಯತಿದರದಲ್ಲಿ ದೊರೆಯುವಂತೆ ಏರ್ಪಡಿಸಿಯೂ ಭಯಗ್ರಸ್ತರಾಗಿರುವ ರೈತರನ್ನು ಎಲ್ಲಾ ವಿಧಗಳಲ್ಲಿಯೂ ಕಾಪಾಡಬೇಕೆಂದು ದಯಾಳು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವುದು.

ಅಧ್ಯಕ್ಷರಾದ ಮ|| ಕೆ. ಎಸ್. ಚನ್ನಬಸಪ್ಪನವರು ಮಾಡಿದ ಉಪಸಂಹಾರ ಭಾಷಣವು.

ಮಹನೀಯರೆ,

ನಮ್ಮ ಮಹಾಸಭೆಯ ಕಾರ್ಯಗಳೆಲ್ಲ ನೆನ್ನೆ ದಿವಸವೂ ಈ ದಿವಸವೂ ಈಶಕೃಪೆಯಿಂದ ತೃಪ್ತಿಕರವಾಗಿ ನೆರವೇರಿದುದಕ್ಕೋಸ್ಕರ ನಾವುಗಳೆಲ್ಲರೂ ಸಂತೋಷಿಸುತ್ತೇವೆ, ಅಲ್ಲದೆ ಈ ಮಹಾಕಾರ್ಯವು ನಿರಾಯಾಸವಾಗಿಯೂ ಸಾಂಗವಾಗಿಯೂ ನೆರವೇರುವಂತೆ ಅನುಗ್ರಹಿಸಿದ ಭಗವಂತನನ್ನು ನಾವುಗಳೆಲ್ಲರೂ ಸ್ತುತಿಸಬೇಕಾಗಿದೆ.

ನೆನ್ನೆ ದಿವಸ ನಮ್ಮಗಳ ಕಷ್ಟ ನಿಷ್ಠುರಗಳ ವಿಚಾರವಾಗಿಯೂ ಅವುಗಳ ನಿವಾರಣೋಪಾಯಗಳ ವಿಚಾರವಾಗಿಯೂ ಮಾಡಲ್ಪಟ್ಟ ಅನೇಕ ಉಪನ್ಯಾಸಗಳನ್ನೂ ಸಲಹೆಗಳನ್ನೂ ಕೇಳಿದ್ದೀರಿ. ನಮ್ಮಗಳ ಕರ್ತವ್ಯವೇನು, ಈ ಬಗ್ಗೆ ನಾವು ಮಾಡಬೇಕಾದ ಕಾರ್ಯಗಳೇನು ಎಂಬ ಬಗ್ಗೆ ವಿದ್ಯಾವಂತರು ಅನುಭವಶಾಲಿಗಳೂ ಆದ ಅನೇಕ ಮಹನೀಯರು ಸ್ಫೂರ್ತಿದಾಯಕವಾದ ಉಪನ್ಯಾಸಗಳನ್ನು ಮಾಡಿರುತ್ತಾರೆ. ಅಲ್ಲದೆ ನಾವುಗಳೆಲ್ಲರೂ ಈ ವಿಚಾರಗಳನ್ನು ಕುರಿತು ನಿಧಾನವಾಗಿ ಆಲೋಚನೆಯಿಂದ ಚರ್ಚಿಸಿ ಈಗ ತಾನೆ ಕೆಲವು ತೀರ್ಮಾನಗಳನ್ನು ಮಾಡಿಕೊಂಡಿದ್ದೇವೆ.

ಈ ವಿಚಾರದಲ್ಲಿ ನಾನು ಹೇಳಬೇಕಾಗಿರುವುದು ಒಂದೇ ಮಾತು ಉಳಿದಿದೆ. ಮಹಾಸಭೆಗೆ ಬರುವುದು ಉಪನ್ಯಾಸಗಳನ್ನು ಮಾಡುವುದು ಅಥವಾ ಕೇಳುವುದು ಮತ್ತು ತೀರ್ಮಾನಗಳನ್ನು ಮಾಡಿಕೊಳ್ಳುವುದು ಇಷ್ಟೇ ನಮ್ಮ ಮುಖ್ಯ ಕರ್ತವ್ಯವಲ್ಲ. ಈ ಮಹಾಸಭೆಯಲ್ಲಿ ನಾವು ನಡೆಸಿದ ಕಾರ್ಯಗಳನ್ನೆಲ್ಲಾ ನೆನಪಿನಲ್ಲಿಟ್ಟುಕೊಂಡು ಇಲ್ಲಿಂದ ಹೋದ ಮೇಲೆ ನಮ್ಮ ನಮ್ಮ ಗ್ರಾಮಗಳಲ್ಲಿ ಅವುಗಳನ್ನು ಆಚರಣೆಗೆ ತರಬೇಕಾಗಿದೆ. ನಾವು ಮಾಡಿಕೊಂಡಿರುವ ತೀರ್ಮಾನಗಳು ಕಾರ್ಯತಃ ಕೈಗೂಡಬೇಕಾದರೆ ನಾವುಗಳೆಲ್ಲರೂ ಇಲ್ಲಿಂದ ಮುಂದೆ ನಮ್ಮ ನಮ್ಮ ಶಕ್ತಿಮೀರಿ ಕೆಲಸಮಾಡಬೇಕಾಗಿದೆ.

ಒಂದು ಕೆಲಸವನ್ನು ಪ್ರಾರಂಭಿಸಲೇ ಬಾರದು. ಪ್ರಾರಂಭಿಸಿದ ಮೇಲೆ ಎಷ್ಟು ವಿಘ್ನ ಬಂದರೂ ಅದನ್ನು ನೆರವೇರಿಸದೆ ಬಿಡಬಾರದು. ಇದು ಸತ್ಪುರುಷರ ಲಕ್ಷಣ; ಪ್ರತಿಮಾನವನ ಕರ್ತವ್ಯ. ನಾವು ಈ ಮಹಾಸಭೆಗೆ ಬಂದು ಕಾರ್ಯವನ್ನು ಕೈಕೊಂಡು ತೀರ್ಮಾನಗಳನ್ನು ಮಾಡಿಕೊಂಡಿದ್ದೇವೆ. ಅಂದರೆ ನಮ್ಮ ಮುಂದಿನ ಏಳಿಗೆಗೆ ಸಾಧಕವಾದ ಕಾರ್ಯಾರಂಭವನ್ನು ಮಾಡಿಬಿಟ್ಟಿದ್ದೇವೆ. ಆರಂಭ ಶೂರರೆನಿಸಿಕೊಳ್ಳದೆ ಕಾರ್ಯದಕ್ಷರೆನಿಸಿಕೊಂಡು ನಮ್ಮ ಗ್ರಾಮಗಳ ಮತ್ತು ನಮ್ಮ ದೇಶದ ಅಭಿವೃದ್ಧಿಗೆ ಸಾಧಕವಾದಂತಹ ಈ ಕಾರ್ಯವು ಸಾರೋದ್ಧಾರವಾಗಿ ನೆರವೇರುವಂತೆ ನಾವುಗಳೆಲ್ಲರೂ ನಮ್ಮ ನಮ್ಮ ಶಕ್ತಿಮೀರಿ ಕೆಲಸಮಾಡಬೇಕಲ್ಲದೆ ನಮ್ಮ ನಮ್ಮ ಕೈಲಾದ ಸಹಾಯವನ್ನು ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ತಾವುಗಳೆಲ್ಲರೂ ಸಾಭಿಮಾನದಿಂದಲೂ ದೇಶವಾತ್ಸಲ್ಯದಿಂದಲೂ ಅನೇಕ ತೊಂದರೆಗಳನ್ನು ಸಹಿಸಿಕೊಂಡು ಈ ಮಹಾಸಭೆಗೆ ದಯಮಾಡಿಸಿ ನಮ್ಮೆಲ್ಲರ ಏಳಿಗೆ ವಿಚಾರದಲ್ಲಿ ಕಲೆತು ಆಲೋಚಿಸಿ ಈ ಕಾರ್ಯವನ್ನು ಆಗಮಾಡಿದುದಕ್ಕಾಗಿ ನಿಮ್ಮಗಳೆಲ್ಲರನ್ನೂ ವಂದಿಸುತ್ತೇನೆ. ನಮ್ಮಗಳೆಲ್ಲರನ್ನು ಈ ಮಹಾಸಭೆಗೆ ಬರಮಾಡಿಕೊಂಡು ಸತ್ಕರಿಸಿದ ನಮ್ಮ ಅಭ್ಯಾಗತರಾದ ಚನ್ನಪಟ್ಟಣ ಮತ್ತು ಕ್ಲೋಸ್‌ಪೇಟೆ ತಾಲ್ಲೂಕುಗಳ ನಮ್ಮ ಸಹೋದರ ಪಟೇಲರುಗಳಿಗೆ ನಿಮ್ಮ ಪರವಾಗಿಯೂ ನನಗೆ ಈ ಘನತರವಾದ ಗೌರವವನ್ನು ದಯಪಾಲಿಸಿದುದಕ್ಕಾಗಿಯೂ ನಾನು ಮತ್ತೊಮ್ಮೆ ಬಹಳವಾಗಿ ವಂದಿಸುತ್ತೇನೆ.

ದಾರಿಯಲ್ಲಿ ತಮ್ಮಗಳ ಪ್ರಯಾಣವು ಸುಖಕರವಾಗಿ ಪರಿಣಮಿಸಿ ತಾವುಗಳೆಲ್ಲರೂ ಆರೋಗ್ಯದಿಂದ ಊರು ಸೇರುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಅರಸಿನವರಿಗೆ ಜ್ಞಾನೋದಯವಾದುದು.

ಮ|| ಎಚ್. ನಂಜುಂಡರಾಜೇ ಅರಸಿನವರು ಚುನಾವಣೆಯ ಪ್ರಸಿದ್ಧ ಪತ್ರಿಕೆಗೆ ತಾವು ರುಜುಮಾಡಿರುವುದರ ಕಾರಣವನ್ನು ಕುರಿತು ಕಳೆದ ಜನವರಿ ತಾ|| 31ರ ಮೈಸೂರು ಸಂಪದಭ್ಯುದಯ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ಲನ್ನು ಬರೆದಿರುವರು. ಅದರಲ್ಲಿ ಅವರು ಮುಖ್ಯವಾಗಿ ಹೇಳಿರುವದೇನೆಂದರೆ—"ನಾನು ಒಂದು ದಿವಸ ಸಾಯಂಕಾಲ ಕ್ಲಬ್ಬಿಗೆ ಹೋಗುವದಕ್ಕಾಗಿ ಹೊರಟಾಗ ನನ್ನ ಕಾಂಪೌಂಡ್ ಗೇಟ್ ಬಳಿ ಮ|| ಸಕ್ಕಾರ್ ಸೇಟ್‌ರವರು ಎದುರುಗೊಂಡು ನನ್ನನ್ನೇ ನೋಡುವುದಕ್ಕಾಗಿ ಬಂದಿದ್ದೇನೆಂದು ಹೇಳಿ ನಾಳೆ ನಡೆಯತಕ್ಕ ರೆಪ್ರೆಸೆಂಟಿಟಿವ್ ಮೀಟಿಂಗಿಗೆ ಬ್ರಾಹ್ಮಣೇತರರನ್ನು ಮೆಂಬರುಗಳನ್ನಾಗಿ ಚುನಾಯಿಸಲು 4 ಜನರ ಹೆಸರನ್ನು ನಮೂದಿಸಿರುವ ಈ ಕಾಗದಕ್ಕೆ ಮ|| ವರ್ಧಮಾನಯ್ಯನವರು ಮೊದಲಾದವರು ರುಜು ಮಾಡಿರುತ್ತಾರೆ. ಅವರುಗಳನ್ನು ಚುನಾವಣೆ ಮಾಡುವ ವಿಷಯದಲ್ಲಿ ನನ್ನ ಓಟನ್ನು ಕೊಡಬೇಕೆಂದು ಕೇಳಿದರು. ನಾನು ಮೂರು ಜನ ಬ್ರಾಹ್ಮಣ ಸ್ನೇಹಿತರಿಗೆ ವಾಗ್ದಾನ ಕೊಟ್ಟಿರುತ್ತೇನೆ. ಆದಪ್ರಯುಕ್ತ ಇನ್ನೊಂದು ಓಟನ್ನು ನಮ್ಮ ಅಣ್ಣಂದಿರಿಗೆ ಬೇಕಾದರೆ ಕೊಡುತ್ತೇನೆಂದು ಹೇಳಿದೆನು. ಈ ವಿಚಾರದಲ್ಲಿ ಇನ್ನೂ ಹೆಚ್ಚಾಗಿ ಮಾತನಾಡಬೇಕೆಂದು ಮಿ|| ಸೇಟರು ಹೇಳಲು ಮನೆಯೊಳಕ್ಕೆ ಕರೆದುಕೊಂಡು ಹೋಗಿ ಬಹಳ ಹೊತ್ತು ಮಾತನಾಡಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂಬ ಭೇದಭಾವವು ನನ್ನಲ್ಲಿಲ್ಲ. ಉಭಯತ್ರರಲ್ಲಿ ಯಾರು ಯೋಗ್ಯರೆಂದು ನನಗೆ ತೋರುತ್ತದೋ ಅವರಿಗೆ ಓಟನ್ನು ಕೊಡುವುದಲ್ಲದೆ ಬೇರೆಯವರಿಗೆ ಓಟು ಕೊಡುವುದಿಲ್ಲ. ಮತ್ತು ಸದರಿ ಓಟು ಪಡೆಯತಕ್ಕವರು ತಾವು ಮಾಡತಕ್ಕ ಕೆಲಸಗಳನ್ನು ವಿಶದವಾಗಿ ತಿಳಿಸಿದಲ್ಲಿ ಅದು ಸಮ್ಮತವಾಗಿದ್ದರೆ ಕೊಡುತ್ತೇನೆಂದು ತಿಳಿಸಿದೆನು. ಅದರ ಮೇಲೆ 3 ಜನರಿಗೆ ಓಟು ಕೊಡುವದಾಗಿ ವಾಗ್ದಾನವಾಗಿರುವ ಪಕ್ಷದಲ್ಲಿ ಉಳಿದ 4ನೇ ಓಟನ್ನು ನಮ್ಮ ಅಣ್ಣನವರಿಗೆ ಕೊಡಲು ಅಭ್ಯಂತರವಿಲ್ಲದಿದ್ದರೆ ಈ ಕಾಗದಕ್ಕೆ ರುಜು ಮಾಡಬೇಕೆಂದು ಸೇಟರು ಕೇಳಿದರು. ಅದಕ್ಕೆ ರುಜುಮಾಡಿದೆನು."

ಮ|| ನಂಜುಂಡರಾಜ ಅರಸಿನವರು ಹಳ್ಳಿಯಲ್ಲಿ ಹುಟ್ಟಿ ಸಾಮಾನ್ಯ ವಿದ್ಯಾಭ್ಯಾಸಮಾಡಿದವರಾಗಿದ್ದಾಗ್ಯೂ ಸರ್ಕಾರಿ ಕೆಲಸಕ್ಕೆ ಸೇರಿ ಪೂರ್ವಜನ್ಮ ಪುಣ್ಯ ಪರಿಪಾಕದಿಂದ ಮೈಸೂರು ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟ್ ಮೊದಲಾದ ದೊಡ್ಡ ಉದ್ಯೋಗಗಳಲ್ಲಿ ಬಹುಕಾಲದವರೆಗೂ ಇದ್ದು ಕಡೆಯಲ್ಲಿ ಅಮೃತಮಹಲ್ ಸೂಪರಿಂಟೆಂಡೆಂಟ್ ಕೆಲಸ ಮಾಡಿ ರಿಟೈರಾಗಿರುವರು. ಇಂತಾವರು ಮಿ|| ಸಕ್ಕಾರ್‌ಸೇಟರ ಅಣ್ಣಂದಿರಿಗೆ ಮಾತ್ರ ಓಟನ್ನು ಕೊಡುವವರಾಗಿದ್ದಲ್ಲಿ ನಾಲ್ಕು ಜನರ ಹೆಸರುಗಳನ್ನು ಬರೆದಿರುವ ಪತ್ರಿಕೆಗೆ ಹೇಗೆ ರುಜುಮಾಡಿದರು? ಈಗ ಹೇಳುವಂತೆ ಸೇಟರೊಬ್ಬರಿಗೆ ಕೊಡಬೇಕೆಂದು ರುಜುಮಾಡುವ ಕಾಲದಲ್ಲಿ ತಾವು ಸಂಕಲ್ಪಿಸಿದ್ದರೆ ಆ ನಾಲ್ಕು ಜನರ ಹೆಸರಿರುವ ಕಾಗದ ಮೇಲೆ ಸೇಟರೊಬ್ಬರಿಗೆ ಮಾತ್ರ ಓಟು ಕೊಡುತ್ತೇನೆಂದು ಬರೆಯದೆ ಬಿಡುತ್ತಿದ್ದರೆ? ಮೀಟಿಂಗಿಗೆ ಬ್ರಾಹ್ಮಣೇತರರನ್ನು ಚುನಾವಣೆಮಾಡಲು ನಾಲ್ಕು ಜನರ ಹೆಸರುಗಳು ಈ ಕಾಗದದಲ್ಲಿ ನಮೂದಿದೆ ಅದಕ್ಕೆ ರುಜುಮಾಡಬೇಕೆಂದು ಸೇಟರು ಹೇಳಿದರೆಂದು ಹೇಳಿದ ಮಾತ್ರಕ್ಕೆ 30-35 ವರ್ಷಗಳಕಾಲ ಸರ್ಕಾರಿ ದೊಡ್ಡ ಹುದ್ದೆಮಾಡಿದವರು ಮತ್ತು ಬಹಳ ಹೊತ್ತು ಓಟಿನ ವಿಚಾರದಲ್ಲಿ ಚರ್ಚೆಮಾಡಿದವರು ಆದ ಅರಸಿನವರು ಅಚ್ಚಾಗಿರುವ ಕಾಗದದಲ್ಲಿರುವ ವಿಷಯವನ್ನೋದದೆ ಮತ್ತು ನಾಲ್ಕು ಜನರುಗಳ್ಯಾರು ಎಂಬದನ್ನು ತಿಳಿಯದೆ ಸೇಟರು ಹೇಳಿದ್ದನ್ನು ಕೇಳಿ ರುಜುಮಾಡಿದರೆಂಬುದನ್ನು ನಂಬಲಾಗುವುದೇ? ಒಂದು ವೇಳೆ ಓದದೆ ಮಾಡಿದರೆಂದು ಊಹಿಸುವದಾದರೆ ಇವರು ಸರ್ಕಾರಿಯ ಕೆಲಸದಲ್ಲಿರುವಾಗ್ಗೆ ಕೈಕೆಳಗಿನ ನೌಕರರು ತಂದಿಟ್ಟ ಕಾಗದಗಳನ್ನು ಓದಿನೋಡದೆ ಅವರು ಹೇಳಿದ ಮಾತನ್ನು ನಂಬಿ ಕಣ್ಣುಮುಚ್ಚಿಕೊಂಡು ರುಜುಮಾಡುತ್ತಿದ್ದರೆಂದು ಹೇಳಬೇಕಾಗುತ್ತದಲ್ಲವೆ? ಇದೂ ಅಲ್ಲದೆ ಇವರು, ಓಟರುಗಳ ಯೋಗ್ಯತಾವಿಮರ್ಶೆಮಾಡಲು ಪ್ರಯತ್ನಿಸಿ ತಮ್ಮ ಮನೆಯೊಂದಕ್ಕೆ 35 ರೂ. ಕಂದಾಯ ಹಾಕಲ್ಪಟ್ಟಿದೆ, ಅದು ಹೆಚ್ಚು ಎಂದು ಪ್ರೆಸಿಡೆಂಟರಿಗೆ ಅನೇಕ ಅರ್ಜಿಗಳನ್ನು ಬರೆದುಕೊಂಡಾಗ್ಯೂ ಇಂದಾತನ್ನು ಸಹ ಬರಲಿಲ್ಲ. ಮ|| ಗಳಾದ ಧರ್ಮಪ್ರಕಾಶ ಬನುಮಯ್ಯನವರೂ ಶಾಕಾಯಿಸ್ವಾಮಿಯವರೂ ಬಂದು ನೋಡಿ ಅನ್ಯಾಯವೆಂದು ಅಭಿಪ್ರಾಯಪಟ್ಟುಕೊಂಡು ಹೋಗಿ ಮೊದಲಿನ ಕಂದಾಯವನ್ನೇ ಖಾಯಂ ಮಾಡುವಂತೆ ಸಿಫಾರ್ಸು ಮಾಡಿರುವರಂತೆ. ಎಂದು ಅಸಂಬಂಧ ಪ್ರಲಾಪಮಾಡಿರುತ್ತಾರೆ. ಇದನ್ನೋದಿದರೆ ಪ್ರೆಸಿಡೆಂಟರೂ ಮ್ಯು|| ಕೌನ್ಸಿಲರೂ ತಮ್ಮ ಮನೆಯ ಕಂದಾಯವನ್ನು ಕಡಿಮೆಮಾಡಲಿಲ್ಲವೆಂಬ ಅವರ ಮೇಲಿನ ಆಕ್ರೋಶವನ್ನು ಅರಸಿನವರು ಬೇರೆ ವಿಧವಾಗಿ ತೀರಿಸಿಕೊಳ್ಳುವದಕ್ಕೆ ಧೈರ್ಯಸಾಲದೆ ಈ ಸಂದರ್ಭದಲ್ಲಿ ಬಾಯಿತೀಟೆಯನ್ನು ತೀರಿಸಿಕೊಂಡಿರುವದಾಗಿ ತೋರುತ್ತದೆ. ಬರೆದಿರುವ ಆರ್ಟಿಕಲ್ಲನ್ನು ಸಂಪೂರ್ಣವಾಗಿ ಓದಿದರೆ ಅವರ ವಯಸ್ಸಿಗೆ ತಕ್ಕಂತೆ ಅಥವಾ ಯಾರಿಗೋ ಹೆದರಿ ಈರೀತಿ ಪೂರ್ವಾಪರ ಯೋಚನೆಯಿಲ್ಲದೆ ಬರೆದಿರುತ್ತಾರೆಂಬುದು ವ್ಯಕ್ತವಾಗುತ್ತದೆ. ಹಾಗೆ ಇತರರಿಗೆ ಇವರು ಹೆದರಿ ಬರೆದಿರುವುದು ನಿಜವಾಗಿದ್ದಲ್ಲಿ ಇವರ ಕ್ಷತ್ರಧರ್ಮಕ್ಕೆ ವಿರುದ್ಧವಲ್ಲವೆ? ಪ್ರಾಯಶಃ ಮನೋನಿಗ್ರಹಶಕ್ತಿ ಸಾಲದೆ ಇವರು ತಮ್ಮ ಜನ್ಮಸ್ಥಲ ಸಂಸ್ಕಾರವನ್ನು ಸ್ಮರಿಸಿಕೊಂಡು ಈ ರೀತಿ ವರ್ತಿಸಿರಬಹುದು! ಅರಸಿನವರಿಗೆ ಅಪರವಯಸ್ಸಿನಲ್ಲಿ ಈ ಪ್ರಕಾರವಾಗಿ ಜ್ಞಾನೋದಯವಾದುದಕ್ಕಾಗಿ ಸಂತೋಷಿಸಬೇಕಾಗಿದೆ.

ಗುಣವಿಮರ್ಶಕ.

ನಿಜಾಂ ಇಲಾಖೆ ನಾರಾಯಣಪೇಟೆಯ ವೀರಶೈವರ ಸೂಚನೆ.

ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಪಟ್ಟಾಧ್ಯಕ್ಷ ನಾಗಲೂಟಿ ಭಿಕ್ಷಾವರ್ತಿ ಮಹಾಸ್ವಾಮಿಗಳ ಪ್ರತಿನಿಧಿಗಳವರು, ನಮ್ಮ ಪೇಟೆಗೆ ದಯಮಾಡಿಸಿ ಗ್ರಾಮಕ್ಕೆ ಪೂರ್ವ ದಿಕ್ಕಿನಲ್ಲಿರುವ ಅತಿ ಮನೋಹರವಾದ ಲಿಂಗಯ್ಯನಗುಡಿಯಲ್ಲಿ ವಾಸಮಾಡಿ ಸಮಸ್ತ ಶಿಷ್ಯವೃಂದದೊಡನೆ ಸೇವೆಯಂ ಕೈಕೊಳ್ಳುತ್ತ 1 ತಿಂಗಳಾಗಬಂತು. ತಾರೀಖು 14-1-24ಕ್ಕೆ ಸರಿಯಾದ ಪುಷ್ಯ ಶು|| 8 ಸೋಮವಾರ ಸಾಯಂಕಾಲ 5 ಗಂಟೆಗೆ ದೊಡ್ಡ ಸಭೆಯು ಸದರಿ ಗುಡಿಯಲ್ಲಿ ನೆರೆಯಿತು. ಈ ಸಭೆಗೆ ಇದೇ ಮಹಬೂಬ್‌ನಗರ ಜಿಲ್ಲೆಯ (ಕಲೆಕ್ಟರ್) ಅವ್ವಲ್ ತಾಲ್ಲೂಕುದಾರರಾದ ಶ್ರೀಯುತ ಮೆ|| ರಾಯಜಗಮೋಹನಲಾಲ್, ಬಿ.ಎ. ರವರು ಇಲ್ಲಿಯ ಮುನ್ಸೀಫರಾದ ಶ್ರೀಯುತ ಶಂಕರಸಹಾಯ ಬಿಲ್‌ಗಿರಾಮೀ ಬಿ.ಎ.ಎಲ್.ಎಲ್.ಬಿ., ರವರು ರಾಜಕೀಯ ಶಾಲಾಪ್ರಧಾನೋಪಾಧ್ಯಾಯರಾದ ಮೌಲ್ವೀಮೊಹದೀಹಸನ್ ಸಾ|| ಬಿ.ಎ.ಬಿ.ಟಿ. ಯವರು ರಾಜಕೀಯಾದ್ಯೋಗಿಗಳು, ಶ್ರೀಮಂತರು ಪುರಪ್ರಮುಖರು ಭಕ್ತ ಮಾಹೇಶ್ವರರು ಆಗಮಿಸಿದ್ದುದರಿಂದ ಒಳ್ಳೇ ಶೋಭೆಯುಂಟಾಗಿತ್ತು. ಶ್ರೀಗಳವರು ಸಕಲರ ಜಯಘೋಷದೊಡನೆ ಅಧ್ಯಕ್ಷಸ್ಥಾನವನ್ನಲಂಕರಿಸಲು ಸಭೆಯ ಕಾರ್ಯವು ಪ್ರಾರಂಭವಾಯಿತು. ಮೊದಲು ಇಲ್ಲಿಯ ವೀರಶೈವ ಸಂಸ್ಕೃತಶಾಲಾ ವಿದ್ಯಾರ್ಥಿಗಳು ಈಶಸ್ತುತಿಯನ್ನು ಶ್ರಾವ್ಯವಾಗಿ ಮಾಡಿದ ಬಳಿಕ ವಿದ್ಯಾರ್ಥಿಗಳ ಪರೀಕ್ಷೆಯು ನಡೆದು ನಂತರ ವೇ|| ಮಕ್ತಲಿ ಬಸವಲಿಂಗಾರ್ಯರು ಸದ್ಗುರುಗಳ ಅಥವಾ ಯತಿಗಳ ಸಂದರ್ಶನವು ಸಕಲಮತೀಯರಿಗೂ ಅವಶ್ಯಕವೆಂದೂ, ಈ ದಿನದ ಮಕರಸಂಕ್ರಮಣದ ಪರ್ವಕಾಲದಲ್ಲಿ ಶ್ರೀ ಸನ್ನಿಧಿಯ ದರ್ಶನಾಶೀರ್ವಾದಗಳು ನಮಗೆ ಲಭಿಸಿದ್ದು ಕೇವಲ ಸುಕೃತ ವಿಶೇಷವೆಂದೂ, ಉರ್ದು ಭಾಷೆಯಲ್ಲಿ ಅಧಿಕಾರಿಗಳಿಗೆ ತಿಳಿಯುವಂತೆ ಹೇಳಲು ಸಭಿಕರು ಕರತಾಡನ ಮೂಲಕ ತಮ್ಮ ಆನಂದವಂ ಪ್ರದರ್ಶಿಸಿದರು. ಅಲ್ಲಿಂದ ಹೆಡ್ಮಾಸ್ಟರ್ ಸಾ|| ರು ಸಂಸ್ಕೃತ ವಿದ್ಯೆಯು ಪ್ರಾಚೀನವಾದುದೆಂತಲೂ ಇದರ ವಾಙ್ಮಯವು ಸಕಲ ಭಾಷೆಗಳಲ್ಲು ಸಮಾನ್ಯವೆಂತಲೂ, ಇಂತಹ ಭಾಷೆಯು ನಮ್ಮಗಳ ಅಶ್ರದ್ಧೆ, ಅಲಸತೆಯ, ಕಾರಣದಿಂದ ವಿದೇಶೀಯರ ವಶವಾಗಿ ಅವರ ಕಡೆಯಿಂದ ತಿಳಿದುಕೊಳ್ಳುವ ದುರವಸ್ಥೆಯು ಭರತಖಂಡಕ್ಕೆ ಪ್ರಾಪ್ತವಾಗಿದೆ ಎಂತಲೂ ಇದೇ ಗತಿಯು ಅರಬ್ಬೀ ಭಾಷೆಗು ಬಂದಿದೆ ಎಂತಲೂ ಬಹು ಸ್ವಾರಸ್ಯವಾಗಿ ಭಾಷಣ ಮಾಡಿದುದಲ್ಲದೆ, ಇನ್ನೊಬ್ಬ ಸಹಾಯೋಪಾಧ್ಯಾಯರಾದ ಮೌಲ್ವೀಕಾಯಬು ಸಾ|| ರವರು ಸರ್ಕಾರಿ ಶಾಲೆಯಲ್ಲಿ ಬಡ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ ಸಂಘದ ಸ್ಥಿತಿಯನ್ನು ತಿಳಿಸಿ ಸಹಾಯವನ್ನು ಕೋರಲು ಸನ್ನಿಧಿಯಿಂದ ಕೂಡಲೆ 20 ರೂ. ಗಳು ಆಶೀರ್ವಾದರೂಪವಾಗಿ ಕೊಡಲ್ಪಟ್ಟವು. ಆಮೇಲೆ ಈ ನಿಜಾಂ ಇಲಾಖೆಯ ವೀರಶೈವರ ಧರ್ಮೋನ್ನತಿಗಾಗಿ ಕೆಲ ಸಂಭಾಷಣೆಗಳು ಜರುಗಿ ವೇ|| ಮಸ್ಕಿ ಬಸವಪ್ಪಶಾಸ್ತ್ರಿಗಳವರಿಂದ ರಚಿಸಲ್ಪಟ್ಟ ವಿದ್ಯಾವಿಷಯಕವಾದ ಪದ್ಯಗಳು ಓದಲ್ಪಟ್ಟು ಧರ್ಮಪ್ರಭುಗಳಾದ ನೈಜಾಂರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಇದಾದ ಬಳಿಕ ಶ್ರೀ ಸನ್ನಿಧಿಯ ಸಂಕಲ್ಪದಂತೆ ಅವರು ಕೈ ಕೊಂಡಿರುವ, ವಿದ್ಯಾಪ್ರೋತ್ಸಾಹಕ್ಕಾಗಿ ಕೆಲ ಠರಾವುಗಳು ಸೂಚಿಸಲ್ಪಡಲು ಅದಕ್ಕೆ ನಮ್ಮ ಸಮಾಜದವರು ಒಪ್ಪಿ ಬರವಣಿಗೆಯ ಮೂಲಕ ಸಮ್ಮತಿಯನ್ನು ಕೊಟ್ಟು ಸಹಿಗಳನ್ನು ಮಾಡಿದರು. ಈ ಗ್ರಾಮದಲ್ಲಿ ವೈದಿಕ ಪಾಠಶಾಲೆಯೊಂದು ವೀರಶೈವರ ನಿತ್ಯನೈಮಿತ್ತಿಕ ಕರ್ಮಾಚರಣೆಗಳಿಗಾಗಿ ಏರ್ಪಡಿಸಬೇಕೆಂಬ ಆಲೋಚನೆಯು ಜರುಗಿ ಉಪನ್ಯಾಸ ಕೀರ್ತನೆಗಳನ್ನು ಕಲಿತು ಮತೀಯರಿಗೆ ಮತ ತತ್ವಗಳನ್ನು ಬೋಧಿಸಲು ಬೋಧಕರನ್ನು ಸಿದ್ಧಪಡಿಸಲೋಸುಗ ಕೃಷ್ಣಾನದೀತೀರ ರೈಲ್ವೆ ಸ್ಟೇಷನಿಗೆ ಸಮೀಪ ಖಾನಾಪುರದಲ್ಲಿ ಸಂಗೀತ ಪಾಠಶಾಲೆಯೊಂದನ್ನು ಏರ್ಪಡಿಸಿ ಈ ಶಾಲೆಗೆ ಆನಂಪಲ್ಲಿ ಮಠದ ವೇ|| ಸಂಗೀತ ವಿದ್ವಾನ್ ರಾಚೋಟಪ್ಪನವರನ್ನು ಅಧ್ಯಾಪಕರನ್ನಾಗಿ ನಿಯಮಿಸಿರುತ್ತಾರೆ. ತಮ್ಮ ಕಾಣಿಕೆಯ ವಸೂಲಾತಿಯಲ್ಲಿ ಏಕಚತುರ್ಥಾಂಶದಂತೆ ತೆಗೆಯುವ ಹಣದಲ್ಲಿ 100 ರೂ. ಗಳನ್ನು ಸಂಗೀತಶಾಲಾಧ್ಯಾಪಕರ ವೇತನಕ್ಕು 100 ರೂ. ಗಳನ್ನು ರಾಮಗಡ್ಡೆ ಸಂಸ್ಕೃತ ಶಾಲಾಸಹಾಯಕ್ಕು ಪಾವತಿ ಮಾಡಿಸಿರುವರು. ಮತ್ತು 100 ರೂ. ಗಳನ್ನು ನೈಜಾಂ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸಹಾಯಕ್ಕಾಗಿ ಅದರ ಕೋಶಾಧ್ಯಕ್ಷರಾದ ಮ|| ಲಿಂಗೇರಿ ಕೋನಪ್ಪನವರು ಯಾದಗಿರಿ ಇವರ ಕಡೆ ಮನಿಯಾರ್ಡರು ಮೂಲಕ ಕಳಿಹಿಸಿರುತ್ತಾರೆ. ಸಾಧ್ಯವಾದಂತೆಲ್ಲ ಇದಕ್ಕೆ ಇನ್ನು ಸಹಾಯಮಾಡುತ್ತೇವೆಂದು ಅಪ್ಪಣೆ ಕೊಡಿಸಿರುತ್ತಾರೆ. ಸಂಗೀತಶಾಲಾ ಸಹಾಯಕ್ಕು, ನಾರಾಯಣಪೇಟೆಯಲ್ಲಿ ಏರ್ಪಡುವ ವೈದಿಕ ಶಾಲಾ ಸಹಾಯಕ್ಕು ರಾಯಿಚೂರು ಜಿಲ್ಲೆಯಲ್ಲಿ ವರ್ಷಾಶನ ವಗೈರೆ ವಸೂಲಾಗುವಂತೆ ಈ ಜಿಲ್ಲೆಯಲ್ಲಿಯು ವಸೂಲಾಗುವ ನಿಬಂಧನೆಯನ್ನು ಮಾಡಿ ಈ ಜಿಲ್ಲೆಯ ವೀರಶೈವರಿಂದೆಲ್ಲ ಒಪ್ಪಿಗೆಯ ಸಹಿಗಳನ್ನು ತೆಗೆದುಕೊಳ್ಳುತ್ತಲಿರುವರು. ಸಂಗೀತಶಾಲೆಯ ಮೇಲ್ವಿಚಾರಣೆಯು ನಾರಾಯಣಪೇಟೆಯ ಪಂಚರ ಸ್ವಾಧೀನದಲ್ಲಿರಬೇಕೆಂದು ನಿರ್ಣಯಿಸಲ್ಪಟ್ಟು ಸಭೆಯ ಕಾರ್ಯವು ಮುಗಿದ ಬಳಿಕ ಅಲೀಜನಾಬ್ ಅವ್ವಲ್ ತಾಲುಕುದಾರುಸಾಹೇಬರು ಮುನ್ಸೀಫ್ ಸಾ|| ರವರು ಶ್ರೀಗಳವರ ವಿಜಿಟಿಂಗ್ ಬುಕ್ಕಿನಲ್ಲಿ ಮಹಾಸನ್ನಿಧಿಯಿಂದ ಅಲ್ಲಲ್ಲಿ ವಿದ್ಯಾಭಿವೃದ್ಧಿಗಾಗಿ ವಿಶೇಷವಾಗಿ ದ್ರವ್ಯಸಹಾಯವು ಮಾಡಲ್ಪಡುತ್ತಿರುವುದು ತುಂಬಾ ಸಂತೋಷಕರವೆಂತಲು, ಅದೃಷ್ಟವಶಾತ್ ಜಗದ್ಗುರುಗಳವರ ಸಂದರ್ಶನವು ಪ್ರಾಪ್ತವಾದುದಕ್ಕೆ ತಮಗೆ ಧನ್ಯತೆಯು ಲಭಿಸಿರುವುದೆಂತಲು, ಈ ಮುಂತಾದ ಕೆಲ ವಾಕ್ಯಗಳನ್ನು ಇಂಗ್ಲೀಷಿನಲ್ಲಿ ಬರೆದು ದರ್ಶನ ಕಾಣಿಕೆಯನ್ನು ಅರ್ಪಿಸಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಆಮೇಲೆ ಆಹೂತರಾಗಿ ಬಂದ ಕಲೆಕ್ಟರರೇ ಮುಂತಾದ ಅಧಿಕಾರಿಗಳು ಸಭಿಕರು, ಅಲ್ಪಾಹಾರದಿಂದಲು ಗಂಧ, ಪುಷ್ಪ, ತಾಂಬೂಲಾದಿಗಳಿಂದಲು ಸತ್ಕರಿಸಲ್ಪಡಲು ಅವರ ಆಭಾರಮನ್ನಣೆಯು ಸಭೆಯ ಚಾಲಕರಾದ ವೇ|| ಮಕ್ತಲಿ ಬಸವಲಿಂಗಪ್ಪನವರಿಂದ ಮಾಡಲ್ಪಟ್ಟು ಶ್ರೀಗಳವರು ನಡೆಯಿಸಿರುವ ಮಹತ್ತರವಾದ ಭಗೀರಥ ಪ್ರಯತ್ನಗಳು ಸಫಲವಾಗುವುದಕ್ಕೆ ತಕ್ಕಂತೆ ಮಳೆ ಬೆಳೆಗಳನ್ನು ವಿದ್ಯಾಕಾರ್ಯಗಳಲ್ಲಿ ನಮ್ಮ ಸಮಾಜ ಬಂಧುಗಳಿಗೆ ಉದಾರವಾದ ಮನಸ್ಸನ್ನು ಜಗದೀಶನು ಉಂಟುಮಾಡಲೆಂದು ಹಾಗು ಸಂಸ್ಥಾನದ ನಿರ್ಣಯದಂತೆ ಸಕಲರು ಅಚರಿಸಿ ಪುಣ್ಯಕೀರ್ತಿಗಳಿಗೆ ಭಾಜನರಾಗಲೆಂದು ಕೋರಿ ಸಭೆಯು ವಿಸರ್ಜಿಸಲ್ಪಟ್ಟಿತು.

ಅಸಲ್ ಪತ್ರದಲ್ಲಿ ಸಹಿಮಾಡಿದ ಸದ್ಗೃಹಸ್ಥರು.—ಮ|| ಗಳಾದ 1 ಬಿಬ್ಬಳ್ಳಿ ಬಸಯ್ಯನವರು, 2 ಬಿಬ್ಬಳ್ಳಿ ಶಿವಲಿಂಗಯ್ಯನವರು, 3 ಗುರುಲಿಂಗಯ್ಯನವರು, ಸಿಡುಗುಂದಿ 4 ಗಂದಿ ಚನ್ನಬಸವಪ್ಪನವರು, 5 ಮಲಿಕೇಡು ಬಸವಪ್ಪನವರು, 6 ಕಾನಗಡ್ಡಿ ಬಸವಪ್ಪನವರು, 7 ಬಸವತೀರ್ಥಪ್ಪನವರು, 8 ಪಟ್ಟಣಶೆಟ್ಟಿ ಗುರಪ್ಪನವರು, 9 ಕೋಡ್ಲಿ ಸಿದ್ಧಪ್ಪನವರು, 10 ನಾಗಣ್ಣ ಯಲಿರಿ, 11 ದಾಮರಗಿದ್ದಿ ಗುರುಪಾದಪ್ಪ, 12 ಬಸ್ಸಂಣಿ ಶರಣಪ್ಪ, 13 ತಂಬಾಕು ಸೂಗಪ್ಪ, 14 ಯಾಳಗಿ ನಾಗಪ್ಪ, 15 ಕಡೇಚೂರು ವೀರಣ್ಣ, 16 ಸಿಂದಾರ ದೊಡ್ಡಪ್ಪ, 17 ಬೆಲ್ಲದ ರಾಚಪ್ಪ, 18 ಶೇಣೆದ ಗುರಪ್ಪ, 19 ಶರಣಪ್ಪ, ಬಾಗೋಡಿ 20 ರಾಚಪ್ಪ, ಬಣಗಾರ 21 ಸಾದ್ರಿ ಸಿದ್ಧಪ್ಪ, 22 ಮಂಗಲಗಿ ರಾಚಪ್ಪ, 23 ಗುಂಡಪ್ಪ ಸುಲೇಗಾವಿ 24 ಬುಕ್ಕ ಸಿದ್ಧಪ್ಪ ಮುಂತಾದವರು.

ವರ್ಗ.

ತುಮಕೂರು ಡಿಸ್ಟ್ರಿಕ್ಟು ಶಿರಾ ತಾಲ್ಲೂಕು ಕಸಬಾ ಶಿರಾ ರೇಂಜ್ ಪೋಲೀಸ್ ಇನ್ಸ್‌ಪೆಕ್ಟರಾದ ಮ|| ಬಿ. ಸಿ. ಚನ್ನರಾಜಅರಸಿನವರು ಇಲ್ಲಿಂದ ಬೇರೆ ಸ್ಥಳಕ್ಕೆ ವರ್ಗವಾಗಿ ಹೋಗತಕ್ಕವರಾಗಿರುತ್ತಾರೆಂಬ ವರ್ತಮಾನವಿದೆ, ಇದು ನಿಜವಿದ್ದ ಭಾಗಕ್ಕೆ ಇಲ್ಲಿನ ಜನರಿಗೆ ತುಂಬಾ ವಿಷಾದ ಉಂಟಾಗುತ್ತದೆ. ಇವರು ಕ್ಷತ್ರಿಯರು ಇವರಿಗೆ ತಮ್ಮ ಕರ್ತವ್ಯವೇನೆಂಬುದು ಚೆನ್ನಾಗಿ ಗೊತ್ತಿತ್ತೆಂಬ ವಿಚಾರ ಇವರ ನಡವಳಿಕೆಯಲ್ಲಿ ಕಂಡುಬಂದಿರುವ ಉದಾಹರಣ ರೂಪವಾದ ಕಾರ್ಯಗಳು ತೋರಿಸುತ್ತಲಿವೆ. ಜೂಜುಗಾರರು ತಮ್ಮ ವೃತ್ತಿಗಳಿಗೆ ರಾಜೀನಾಮೆಯನ್ನು ಕೊಟ್ಟರು. ಸೇಂದಿ, ಹರಾಟ್ ಅಂಗಡಿಗಳಲ್ಲಿ ಗಲಾಟೆ ಮಾಡತಕ್ಕ ನಿಶಾಖೋರರ ಹಾವಳಿಯು ನಿರ್ಮೂಲವಾಯಿತು. ಜನರ ವಸತಿಗೆ ಭಂಗವನ್ನುಂಟುಮಾಡುವ ಜನರ ಹಾವಳಿಯು ಕೊನೆಗಂಡಿತು. ನಿಷ್ಪಕ್ಷಪಾತಿಗಳಾದ ಇವರ ಅಧಿಕಾರವು ಸಾಧುಸತ್ಪುರುಷರಿಗೆ ಸಂತೋಷವನ್ನು ಇಮ್ಮಡಿಮಾಡುತ್ತಲಿದೆ ದುರ್ಜನರ ಭಾಗಕ್ಕೆ ತುಂಬಾ ಭಯಪ್ರದವಾಗಿರುತ್ತೆ. ದುಷ್ಕೃತ್ಯಗಳು ನಡೆಯದಂತೆ ನೋಡಿಕೊಳ್ಳುವದೇ ಪೋಲೀಸಿನವರ ಕರ್ತವ್ಯವೆಂದು ಸಂಭವ ಉಂಟಾದಾಗ ಹೇಳುತ್ತಿರುವರಲ್ಲದೆ ಅದರಂತೆ ವರ್ತಿಸಲು ತುಂಬಾ ಆಸಕ್ತಿಯನ್ನು ವಹಿಸಿ ಕೆಲಸಮಾಡುತ್ತಿರುತ್ತಾರೆ. ಇವರ ನಡವಳಿಕೆಯನ್ನರಿತ ನಿಷ್ಪಕ್ಷಪಾತಿಗಳಾದ ಗುಣಗ್ರಾಹಿಗಳು ಇವರ ವರ್ಗದ ವಿಚಾರವಾಗಿ ಉಂಟಾಗಿರುವ ದುಃಖವನ್ನು ಸೂಚಿಸದೆ ಇರಲಾರರು. ಇವರು ಇಲ್ಲಿಗೆ ಬಂದು 9 ತಿಂಗಳಾಗಿರಬಹುದು. ಇಷ್ಟು ಜಾಗ್ರತ ಇವರಿಗೆ ವರ್ಗವಾಗುವ ಸಂಭವವೇನೆಂಬುದು ಇಲ್ಲಿನ ಜನ ಯೋಚನೆಗೆ ಕಾರಣವಾಗಿರುತ್ತೆ. ನಮ್ಮ ಡಿಸ್ಟ್ರಿಕ್ಟು ಪೋಲೀಸ್ ಸೂಪರೆಂಟೆಂಡೆಂಟ್‌ಸಾಹೇಬರವರು ವಿಚಾರಪರರು ಮತ್ತು ಪ್ರಜಾನುರಾಗಿಗಳು ಆದ ಇವರನ್ನು ಇನ್ನು ಕೆಲವುಕಾಲ ಇಲ್ಲೇ ಇಟ್ಟು ವರ್ಗದ ಸುದ್ದಿಯಿಂದ ಜನರಿಗೆ ಉಂಟಾಗಿರುವ ವಿಷಾದವನ್ನು ತಪ್ಪಿಸುವರೆಂಬದಾಗಿ ನಂಬಿರುತ್ತೇನೆ.

ನಿಷ್ಪಕ್ಷಪಾತಿ.

ತಾ|| 20-1-24ರಲ್ಲಿ ವಿದ್ಯಾಭ್ಯಾಸದ ಇಲಾಖಾ ಹಾ|| ಇನ್|| ಸಾ|| ಜ|| ಸಾಹೇಬ್ ಬಹದ್ದೂರ್ ಜಿ. ಎಸ್. ಬಾಲಸುಂದರಂ ಅಯ್ಯರ್‌ರವರೂ ಮತ್ತು ಹ|| ಸ|| ಇನ್|| ಸಾ|| ರವರೂ, ಡಿ|| ಇನ್|| ಸಾ|| ರವರೂ ಮತ್ತು ರೇಂಜ್ ಅ|| ಇ|| ಸಾ|| ರವರೂ ದೇವನಹಳ್ಳಿ ತಾ|| ಹುಣಸಮಾರನಹಳ್ಳಿ ಇನ್|| ಕಂ|| ಮಿ|| ಸ್ಕೂಲನ್ನು ಪರಾಂಬರಿಸುವ ಉದ್ದಿಶ್ಯವಾಗಿ ಪ್ರಾತಃಕಾಲ 9½ ಗಂಟೆಗೆ ದಯಮಾಡಿಸಿದ್ದರು. ಅದಿನ ಗ್ರಾಮವೂ ಮತ್ತು ಸ್ಕೂಲು ತಳಿರುತೋರಣಧ್ವಜಪತಾಕಾದಿಗಳಿಂದ ನೂತನವಾಗಿ ಅಲಂಕರಿಸಲ್ಪಟ್ಟಿತ್ತು. ಸವಾರಿಯು ಚಿತ್ತೈಸಿದ ಕೂಡಲೆ ಊರುಮುಂದಿನ ದಿವ್ಯವಾದ ಭುವನೇಶ್ವರಿ ಚಪ್ಪರದಲ್ಲಿ ಭೋರ್ಗರೆಯುತ್ತಿರುವ ವಾದ್ಯ ವಿಶೇಷಗಳಿಂದ ಎದುರುಗೊಂಡು ಸ್ವಾಗತವು ಬಯಸಲ್ಪಟ್ಟಿತ್ತು. ಅನಂತರ ಸ್ಕೂಲು ಇನ್ಸ್‌ಪೆಕ್ಷನ್ ಕ್ರಮವಾಗಿ ಜರಗಿತು. 4 ಗಂಟೆ ತರುವಾಯ ಸ್ಕೂಲು ವಿದ್ಯಾರ್ಥಿಗಳ ಡಿಬೇಟಿಂಗ್ ಸೊಸೈಟಿ (Debating Society) ಜರಗಿಸಲ್ಪಟ್ಟಿತು. ಇದು ಸಣ್ಣ ಗ್ರಾಮವಾದರೂ ಈ ಗ್ರಾಮದ ಶ್ರೀ ಮಠದ ಸ್ವಾಮಿಗಳವರ ಉದಾರಶ್ರಯದಿಂದಲೂ ಪ್ರೋತ್ಸಾಹದಿಂದಲೂ 5 ಜನ ಬಾಲಕರಿಗೆ ಹಾಸ್ಟಲ್ ಏರ್ಪಾಡಾಗಿ ಸ್ಕೂಲು ಅಭಿವೃದ್ಧಿ ಸ್ಥಿತಿಯಲ್ಲಿರುವುದನ್ನೂ ಸ್ಕೂಲಿನಲ್ಲಿ ಪಾಠ ಪ್ರವಚನಗಳು ತೃಪ್ತಿಕರವಾಗಿ ಜರುಗುತ್ತಿರುವುದನ್ನೂ ಇಲ್ಲಿ ಸುಮಾರು 130 ಜನ ಬಾಲಕರು ವಾಸಂಗಮಾಡುತ್ತಿರುವುದನ್ನೂ ಇದರಲ್ಲಿ ಅನೇಕರು ಪರಸ್ಥಳದಿಂದ ಬಂದು ವಾಸಂಗಮಾಡುತ್ತಿರುವುದನ್ನೂ ಪ್ರತ್ಯಕ್ಷವಾಗಿ ನಮ್ಮ ಖಾವಂದರವರು ಪರಾಂಬರಿಸಿ ಬಹಳ ಸಂತೋಷಪಟ್ಟು ಈ ಸಾಲಿನಲ್ಲಿಯೇ ಈ ಗ್ರಾಮಕ್ಕೆ ಮಿಡಲ್ ಸ್ಕೂಲನ್ನು ದಯಪಾಲಿಸುವುದಾಗಿ ಕೊಟ್ಟಿರುವ ಅಭಯವಚನವು ತುಂಬಾ ಸಂತೋಷಾರ್ಹವಾಗಿರುವುದು.

ಎಸ್. ಎಲ್. ಮುದ್ದುಬಸವಯ್ಯ,
ಹಾಸ್ಟಲ್ ಮಾನೀಟರ್.

ನೆಲಮಂಗಲ ತಾಲ್ಲೂಕಿನಲ್ಲಿ ಮಿಡಲ್ ಸ್ಕೂಲ್ ಮೂಲಕವಾಗಿ ಆಗಲಿ ಪ್ರೈವೇಟ್ ಆಗಿ ಆಗಲಿ ಲೋವರ್ ಸೆಕೆಂಡರಿ ಯಗ್ಜಾಮಿನೇಷನ್‌ಗೆ ಕಟ್ಟಿರುವ ಮತ್ತು ಇಂಗ್ಲೀಷನ್ನು ಫಸ್ಟ್‌ಲಾಂಗ್ವೇಜ್ ಆಗಿಯೂ, ಕನ್ನಡ ಅಥವ ಸಂಸ್ಕೃತವನ್ನು ದ್ವಿತೀಯ ಭಾಷೆಯನ್ನಾಗಿಯೂ ತೆಗೆದುಕೊಂಡು ಹೆಚ್ಚು ರ್ಯಾಂಕ್‌ಗಳನ್ನು ಪಡೆದು ಪ್ಯಾಸ್ ಆಗುವ ವೀರಶೈವ ಇಬ್ಬರು ವಿದ್ಯಾರ್ಥಿಗಳಿಗೆ ನೆಲಮಂಗಲದ ವೀರಶೈವ ತರುಣ ಸಂಘದವರ ಪರವಾಗಿ ಮುನಿಸಿಪಲ್ ವೈಸ್‌ಪ್ರೆಸಿಡೆಂಟರಾಗಿರುವ ಮ|| ಎಂ. ಗುಬ್ಬಿ ಹುಚ್ಚಪ್ಪನವರು ಎರಡು ಬೆಳ್ಳಿಯಮೆಡಲುಗಳನ್ನು ಉತ್ಸಾಹಪೂರ್ವಕವಾಗಿ ಕೊಡಲು ಒಪ್ಪಿರುತ್ತಾರಾಗಿ ಈ ತಾಲ್ಲೂಕಿನ ವೀರಶೈವ ವಿದ್ಯಾರ್ಥಿಗಳು ಈ ಮೆಡಲುಗಳನ್ನು ಪಡೆಯಲು ಅರ್ಹರಾಗಬೇಕಾಗಿ ಕೋರಿದೆ.

ಎಸ್. ಬಿ. ಮಲ್ಲಶೆಟ್ಟರು, ಪ್ರೆಸಿಡೆಂಟ್,
ರುದ್ರೇಶ್ವರ ತರುಣಸಂಘ.

ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನದ ಸೂತ್ರಾನುವರ್ತಿಗಳಾದ ಹಾಲ್ಕೆರೆ ಮಠದ ಯಲಹಂಕದ ಪಟ್ಟಾಧ್ಯಕ್ಷರಾದ ಶ್ರೀ ಶಿವನಂಜುಂಡದೇಶಿಕೇಂದ್ರ ಸ್ವಾಮಿಗಳವರು ತಾ|| 12-1-1924ನೆ ಶನಿವಾರದ ದಿವಸ ಬೇಲೂರು ತಾಲ್ಲೂಕು ಹಳೇಬೀಡು ಹೋಬಳಿ ಯಲಹಂಕದ ಶ್ರೀ ಮಠದಲ್ಲಿ ಶಿವಸಾಯುಜ್ಯವನ್ನು ಹೊಂದಿದರು ಎಂಬ ವರ್ತಮಾನವನ್ನು ಕೇಳಿದ ಶಿಷ್ಯಮಂಡಲಿಗಳಿಗೆಲ್ಲರಿಗೂ ಅಪಾರವಾದ ದುಃಖವನ್ನು ಉಂಟುಮಾಡಿರುತ್ತದೆ. ಇವರಿಗೆ ಪಟ್ಟಾಧಿಕಾರವಾಗಿ ನಾಲ್ವತ್ತುನಾಲ್ಕು ವರುಷವಾಯಿತು. ಈ ಕೈಲಾಸವಾಸಿಗಳಾದ ಸ್ವಾಮಿಗಳವರ ಅಧಿಕಾರದಲ್ಲಿ ಚರಪಟ್ಟಾಧ್ಯಕ್ಷರಾದ ಶ್ರೀಚನ್ನವೃಷಭದೇಶಿಕೇಂದ್ರ ಸ್ವಾಮಿಗಳವರ ಸಹಾಯದಿಂದಲೂ ಶ್ರೀಮನ್ ಮಹಾರಾಜರವರ ಕೃಪೆಯಿಂದಲೂ ಚಿಕ್ಕಮಗಳೂರಿನಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು.

[illegible]

ಭಾಗಗಳಲ್ಲಿ ಮಳೆ ಬೆಳೆಗಳು ಸುತರಾಂ ಆಗದೆ ಕುಡಿಯುವ ನೀರಿಗೂ ದನಗಳ ಮೇವಿಗೂ ಅಭಾವವುಂಟಾಗಿ, ಮುಂದೆ ಬರಬಹುದಾದ ಘೋರಕ್ಷಾಮದ ಚಿನ್ಹೆಗಳು ಜನರಲ್ಲಿ ಹಾಹಾಕಾರವನ್ನುಂಟುಮಾಡಿರುತ್ತವೆ. ಈ ಸಂದರ್ಭದಲ್ಲಿ ನಮ್ಮ ದಯಾಳು ಸರ್ಕಾರದವರು ರೈತರ ಜಮೀನಿನ ಕಂದಾಯದಲ್ಲಿ ಉದಾರವಾದ ರಿಯಾಯತಿ (ರಿಮಿಷನ್) ಗಳನ್ನು ತೋರಿಸಿಯೂ, ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಕ್ಷಾಮನಿವಾರಣೋಪಾಯ ಕಾರ್ಯಗಳನ್ನಾಗಿ ಕೈಗೊಂಡು ಬಡರೈತರ ಜೀವನಕ್ಕೆ ಮಾರ್ಗವನ್ನು ಕಲ್ಪಿಸಿಕೊಟ್ಟು, ಅಗತ್ಯವಾದ ಕಡೆಗಳಲ್ಲಿ ನೀರಿನ ಅನುಕೂಲತೆಗೆ ತಕ್ಕ ಏರ್ಪಾಡುಗಳನ್ನು ಮಾಡಿಯೂ ಜನರ ಜೀವನಕ್ಕಾಗಿ ಬೇಕಾದ ದವಸಧಾನ್ಯಗಳೂ, ಜಾನುವಾರುಗಳ ಗ್ರಾಸವೂ ಕ್ಷಾಮರಿಯಾಯತಿ ದರದಲ್ಲಿ ಸಿಕ್ಕುವಂತೆ ಏರ್ಪಡಿಸಿಯೂ, ಭಯಭ್ರಾಂತರಾಗಿರುವ ರೈತರನ್ನು ಎಲ್ಲಾ ವಿಧಗಳಲ್ಲಿಯೂ ಕಾಪಾಡಬೇಕೆಂದು ನಾವುಗಳೆಲ್ಲರೂ ಏಕವಾಕ್ಯತೆಯಿಂದ ನಮ್ಮ ದಯಾಳು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವುದು ಅತ್ಯಗತ್ಯವಾಗಿದೆ.

ಸಹೋದರರೆ, ಪ್ರಜಾಕ್ಷೇಮಕ್ಕಾಗಿಯೂ ನಮ್ಮಗಳ ಅಭಿವೃದ್ಧಿಗಾಗಿಯೂ ಈ ಮಹಾಸಭೆಯಲ್ಲಿ ಅಗತ್ಯವಾದ ಏರ್ಪಾಡುಗಳನ್ನು ಮಾಡಿಕೊಂಡು, ನಮ್ಮಗಳ ಆಶಯಗಳನ್ನು ಉದಾರಭಾವದಿಂದಲೂ ದಯಾಳುತನದಿಂದಲೂ ನಡೆಸಿಕೊಡಬೇಕೆಂದು ನಮ್ಮ ಘನ ಸರ್ಕಾರದವರನ್ನು ರಾಜಭಕ್ತಿ ನಮ್ರತೆಗಳಿಂದ ಪ್ರಾರ್ಥಿಸಿಕೊಂಡು, ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಸಿ.ಬಿ.ಇ., ಯವರ ಮತ್ತು ಅವರ ಸಹೋದರರಾದ ಸರ್ ಕಂಠೀರವ ನೃಸಿಂಹರಾಜ ಒಡೆಯರವರ ಕೃಪೆಗೂ ನಮ್ಮ ಘನ ಸರ್ಕಾರದವರ ಮೆಚ್ಚುಗೆಗೂ ಪಾತ್ರರಾಗಬೇಕಲ್ಲದೆ, ಜಗದೀಶ್ವರನು ನಮ್ಮ ರಾಜಮನೆತನದವರನ್ನು ಸರ್ವದಾ ರಕ್ಷಿಸಲೆಂದೂ, ನಮ್ಮ ಮಹಾಸಭೆಯ ಕಾರ್ಯಗಳು ನಿರ್ವಿಘ್ನವಾಗಿ ನಡೆದು, ಮುಂದೆ ನಮ್ಮಗಳ ಅಭಿವೃದ್ಧಿಗಾಗಿ ಏರ್ಪಡುವ ನಮ್ಮ ಸಂಘವು ಚಿರಸ್ಥಾಯಿಯಾಗಿ ನೆಲೆಗೊಳ್ಳುವಂತೆ ಅನುಗ್ರಹಿಸಲೆಂದೂ ನಾವೆಲ್ಲರೂ ಭಗವಂತನನ್ನು ಪ್ರಾರ್ಥಿಸೋಣ.

27-1-1924.

ಈ ದಿವಸ ಮಧ್ಯಾಹ್ನ 3 ಗಂಟೆಗೆ ಪುನಃ ಸಭೆಸೇರಿತು. ರಾವ್ ಸಾಹೇಬ್ ಹೆಚ್. ಚನ್ನಯ್ಯನವರೂ ಮ|| ಗಳಾದ ಎಂ. ಎಲ್ ಶ್ಯಾಮೇಗೌಡರೂ ಮಾಲೂರು ವೇಮಾರೆಡ್ಡಿಯವರೂ, ಆರ್. ಗೋಪಾಲಸ್ವಾಮಿ ಐಯ್ಯರೂ, ಕೆ. ಹೆಚ್. ರಾಮಯ್ಯನವರೂ ಭಾಷಣಗಳನ್ನು ಮಾಡಿದರು. ಅನಂತರ ತೀರ್ಮಾನಗಳ ಚರ್ಚೆಗೆ ಪ್ರಾರಂಭವಾಯಿತು. ಇದಕ್ಕೆ ತತ್ಪೂರ್ವ ಸಭಾಧ್ಯಕ್ಷರು ಸೂಚಿಸಿದಂತೆ ಸಭಿಕರೆಲ್ಲರೂ ಭಕ್ತಿಯಿಂದ ಎದ್ದು ನಿಂತುಕೊಂಡು ಆಳುವ ಮಹಾಸ್ವಾಮಿಯವರಾದ ಶ್ರೀಮನ್ ಮಹಾರಾಜರವರಿಗೆ ಮಹಾಸಭೆಯವರ ರಾಜಭಕ್ತಿಪೂರ್ವಕವಾದ ತೀರ್ಮಾನವನ್ನು ಮಾಡಿ ಟೆಲಿಗ್ರಾಂ ಮೂಲಕ ಕಳುಹಿಸಿದರು. ಆಮೇಲೆ ಮಹಾಸಭೆಗೆ ದಯೆಯಿಂದ ಶುಭವಾರ್ತಾಪತ್ರಿಕೆಯನ್ನು ಕಳುಹಿಸಿಕೊಟ್ಟಿದ್ದ ನಮ್ಮ ದಿವಾನ್ ಸಾಹೇಬರವರಿಗೆ ವಂದನಾಪೂರ್ವಕವಾದ ತೀರ್ಮಾನವನ್ನು ಸಭಾಧ್ಯಕ್ಷರು ಸೂಚಿಸಲು ಸಭಿಕರೆಲ್ಲರೂ ಏಕವಾಕ್ಯತೆಯಿಂದ ಒಪ್ಪಿಕೊಂಡು ಅದನ್ನೂ ಟೆಲಿಗ್ರಾಂ ಮೂಲಕ ಕಳುಹಿಸಿದರು.

ಪಟೇಲರ ಮತ್ತು ಗ್ರಾಮಾಭಿವೃದ್ಧಿ ವಿಷಯಕವಾದ ಅನೇಕ ವಿಷಯಗಳನ್ನು ಕುರಿತು ದೀರ್ಘವಾದ ಚರ್ಚೆ ನಡೆಯಿತು. ಎಲ್ಲಾ ಪಟೇಲರುಗಳೂ ಬಹಳ ಉತ್ಸಾಹದಿಂದ ಚರ್ಚೆನಡೆಸಿದುದು ಸ್ತುತ್ಯವಾದ ವಿಷಯವಾಗಿದೆ. ಸುಮಾರು 40 ವಿಷಯಗಳು ಚರ್ಚಿಸಲ್ಪಟ್ಟವು. ಆ ಪೈಕಿ 27 ವಿಷಯಗಳಲ್ಲಿ ತೀರ್ಮಾನಗಳನ್ನು ಮಾಡಿದರು. 25 ವಿಷಯಗಳನ್ನು ಘನ ಸರ್ಕಾರದವರಿಗೆ ಅರಿಕೆಮಾಡಿಕೊಳ್ಳಬೇಕೆಂದು ಗೊತ್ತಾಯಿತು.

ಇದಾದ ಮೇಲೆ ಸಭಾಧ್ಯಕ್ಷರು ತಮ್ಮ ಉಪಸಂಹಾರ ಭಾಷಣವನ್ನು ಮಾಡಿದರು.

ಶ್ರೀಮನ್ ಮಹಾರಾಜ ಸಹೋದರರ ಶ್ರೇಯಃಪ್ರಾರ್ಥನೆಯು ಆದಮೇಲೆ ಜಯಘೋಷದೊಡನೆ ಮಹಾಸಭೆಯ ಕಾರ್ಯಗಳೆಲ್ಲಾ ಜಯಪ್ರದವಾಗಿ ಮುಕ್ತಾಯಗೊಂಡುವು.

1924ನೆ ಜನವರಿ 26-27ನೇ ತಾ|| ಗಳಲ್ಲಿ ಮಹಾಸಭೆಯಲ್ಲಾದ ತೀರ್ಮಾನಗಳು.

I. ಮೈಸೂರು ದೇಶಕ್ಕೆಲ್ಲಾ ಅನ್ವಯಿಸುವಂತೆ ಒಂದು ಪಟೇಲರ ಸಂಘವನ್ನು ಸ್ಥಾಪಿಸತಕ್ಕದ್ದು.

II. ಈ ಸಂಘದ ಉದ್ದೇಶಗಳನ್ನೂ ನಿಬಂಧನೆಗಳನ್ನೂ ನಿರ್ಧರಿಸಿ ಸಂಘವನ್ನು ಸರ್ಕಾರದಲ್ಲಿ ರಿಜಿಸ್ಟರು ಮಾಡಿಸುವುದಕ್ಕಾಗಿ ಕ್ಲೋಸ್‌ಪೇಟೆ ತಾಲ್ಲೋಕು ಮಾಯಿಗಾನಹಳ್ಳಿ ಪಟೇಲ್ ಮ|| ರಾ|| ಗುರುಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಹತ್ತುಮಂದಿ ಮೆಂಬರುಗಳಿಂದ ಕೂಡಿದ ಒಂದು ಸಬ್‌ಕಮಿಟಿಯು ಏರ್ಪಾಡಾಯಿತು.

III. ಈ ಕೆಳಗೆಕಂಡ ವಿಷಯಗಳನ್ನು ನಮ್ಮ ಘನಸರ್ಕಾರದವರಲ್ಲಿ ಅರಿಕೆಮಾಡಿಕೊಳ್ಳಬೇಕೆಂದು ನಿರ್ಧರವಾಯಿತು.

1. ಮೈಸೂರುದೇಶದ ಪಟೇಲರ ಮಹಾಸಭೆಯನ್ನು ದೇಶದ ಬೇರೆಬೇರೆ ಭಾಗಗಳಲ್ಲಿ ಪ್ರತಿವರುಷವೂ ನಡೆಸುವುದಕ್ಕಾಗಿ ಮೈಸೂರುದೇಶದ ಪಟೇಲರ ಸಂಘಕ್ಕೆ ಸಾಲಿಯಾನ ಧಾರಾಳವಾದ ಗ್ರ್ಯಾಂಟ್ ಅಪ್ಪಣೆಕೊಡಿಸುವಂತೆ ಪ್ರಾರ್ಥಿಸಿಕೊಳ್ಳುವುದು.

2 ಪಟೇಲರ ಸಂಘದಿಂದ ಪ್ರಜಾಪ್ರತಿನಿಧಿಸಭೆಗೆ ಇಬ್ಬರು ಪ್ರತಿನಿಧಿಗಳನ್ನೂ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಒಬ್ಬ ಪ್ರತಿನಿಧಿಯನ್ನೂ ಚುನಾಯಿಸಿ ಕಳುಹಿಸುವಂತೆ ಸಂಘಕ್ಕೆ ಅವಕಾಶಕೊಡುವಂತೆ ಪ್ರಾರ್ಥಿಸಿಕೊಳ್ಳುವುದು.

3. ಪಟೇಲಿ ಕೆಲಸಕ್ಕೆ ತರಬಿಯತ್ತು ಮಾಡಲು ಪ್ರತಿಯೊಂದು ಡಿಸ್ಟ್ರಿಕ್ಟು ಮುಖ್ಯಪಟ್ಟಣದಲ್ಲೂ ಒಂದೊಂದು ಪಟೇಲರ ಟ್ರೇನಿಂಗ್ ಸ್ಕೂಲನ್ನು ಸ್ಥಾಪಿಸಿಕೊಡುವಂತೆಯೂ ಇಂತಹ ಸ್ಕೂಲುಗಳಲ್ಲಿ ಓದುವುದಕ್ಕೆ ಹೋಗುವ ಪಟೇಲರು ಮತ್ತು ಉಮೇದುವಾರಿ ಪಟೇಲರುಗಳಿಗೆ ತಕ್ಕ ವೇತನವನ್ನು ಕೊಟ್ಟು ಫ್ರೀ ಬೋರ್ಡಿಂಗಿಗೆ ಅನುಕೂಲಮಾಡಿಕೊಡುವಂತೆ ಸಹ ಪ್ರಾರ್ಥಿಸಿಕೊಳ್ಳುವುದು.

4. ಪಟೇಲರುಗಳು ತಮ್ಮ ಗ್ರಾಮಗಳಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳಿಗೂ ಜವಾಬ್ದಾರರಾಗಿದ್ದುಕೊಂಡು ಕೆಲಸಮಾಡುತ್ತಾ ಇದ್ದರೂ ಇವರ ಕೆಲಸಕ್ಕೂ ಯೋಗ್ಯತೆಗೂ ತಕ್ಕಂತೆ ಸರ್ಕಾರದಿಂದ ಸರಿಯಾದ ಪ್ರತಿಫಲವು ಒದಗುತ್ತಾ ಇಲ್ಲ. ಪಟೇಲರಾದವರು ದಿವಸದ 24 ಗಂಟೆಗಳಲ್ಲೂ ಸರ್ಕಾರದ ಕೆಲಸದಮೇಲೆ ಇರಬೇಕಾಗಿರುವುದರಿಂದ ವಿಶೇಷ ಪುಣ್ಯವಂತರಲ್ಲದ ಪಟೇಲರುಗಳು ತಮ್ಮ ಜೀವನನಡೆಸುವುದೇ ಕಷ್ಟವಾಗಿದೆ. ಈ ವಿಷಯವನ್ನು ಸರ್ಕಾರದವರು ತಮ್ಮ ಘನವಾದಚಿತ್ತಕ್ಕೆ ತಂದುಕೊಂಡು ಪಟೇಲರ ವೋಟಿಗೆಯನ್ನು ಬಹಳಮಟ್ಟಿಗೂ ಹೆಚ್ಚಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವುದು.

5. ಹೋಬಳಿ ಶೇಕದಾರರು ರಜಾಮೇಲಿರುವಾಗಲೂ ವರ್ಗಪಟ್ಟ ಶೇಕದಾರರಿಗೆ ಪ್ರತಿಯಾಗಿ ಹೊಸ ಶೇಕದಾರರು ಬರುವುದು ನಿಧಾನವಾದ ಕಾಲದಲ್ಲೂ ಹೋಬಳಿಗೆ ಸೇರಿರತಕ್ಕ ಲಾಯಖ್ ಆದ ಒಬ್ಬ ಪಟೇಲನೇ ಹಂಗಾಮಿಯಾಗಿ ಶೇಕದಾರಿ ಕೆಲಸನೋಡಲು ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

6. ಪಟೇಲನ ವಂಶದಲ್ಲಿ ವಿಶೇಷ ವಿದ್ಯಾವಂತರು ಹೆಚ್ಚುವಂತೆ ಮಾಡುವುದಕ್ಕಾಗಿ ಅವರ ಮಕ್ಕಳಿಗೆ ಸ್ಪೆಷಲ್ ಸ್ಕಾಲರ್‌ಷಿಪ್‌ಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು,

7. ಗ್ರಾಮಕ್ಕೆ ಸಂಬಂಧಪಟ್ಟ ಎಲ್ಲಾ ಕಮಿಟಿಗಳಲ್ಲಿಯೂ ಅಂದರೆ ಗ್ರಾಮಪಂಚಾಯತಿ, ಸ್ಕೂಲ್‌ಕಮಿಟಿ, ಕೆರೆ ಪಂಚಾಯಿತಿ, ವಿಲೇಜುಕಮಿಟಿ ಮುಂತಾದವುಗಳಲ್ಲೆಲ್ಲಾ ಪಟೇಲರೇ ಅಗತ್ಯವಾಗಿ ಛೇರ್ಮನ್‌ರಾಗಿರುವಂತೆ ಅಪ್ಪಣೆಕೊಡಿಸುವಂತೆ ಪ್ರಾರ್ಥಿಸಿಕೊಳ್ಳುವುದು.

8. ಹೊಸದಾಗಿ ಪಿಕ್ಕಿದಾರರಿಂದ ಕಂದಾಯ ತೆಗೆದುಕೊಳ್ಳಬೇಕಾದರೆ ಅಂತಹ ಪಿಕ್ಕಿದಾರರು ತಾಲ್ಲೋಕಿನಿಂದ ಆರ್ಡರು ಬರೆದು ಪಡೆಯಬೇಕು. ಇದಕ್ಕಾಗಿ ತಾಲ್ಲೋಕು ಕಚೇರಿಯಲ್ಲಿ ಹೊಸ ಪಿಕ್ಕಿಕುಳಗಳ ರಿಜಿಸ್ಟರನ್ನು ಇಡಬೇಕು. ಆ ರಿಜಿಸ್ಟರು ಕಾಪಿಯೊಂದು ಪಟೇಲರಲ್ಲಿರುವಂತೆ ಮಾಡಿ ತಾಲ್ಲೋಕು ಜಮಾಬಂದಿಕಾಲದಲ್ಲಿ ಚೆಕ್‌ಮಾಡುವಂತೆ ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

9. ಕಂದಾಯದ ವಸೂಲಿಬಗ್ಗೆ ಅವಶ್ಯಕವಾಗಿ ಬೇಕಾಗಿರುವ ಪಿಕ್ಕಿ ಆವರ್ಜೆ ಪಟ್ಟಿಯನ್ನು ಶ್ಯಾನುಭೋಗರು ಪಟೇಲರಿಗೆ ಕೊಡುವಂತೆ ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು. ಈ ವಿಷಯದಲ್ಲಿ ಹಿಂದಿನವರ್ಷಗಳ ಕಿರ್ದಿಯಮೇರೆ ವಸೂಲಿ ತಯಾರಾದ ಕಾಪಿಯೊಂದನ್ನು ಕೊಡಿಸಿಕೊಟ್ಟರೆ ಸಾಕಾಗಿದೆ.

10. ಕಿರ್ದಿ ಬರದಮೇಲೆ ಅದನ್ನು ಬದಲಾಯಿಸಲು ಅವಕಾಶವಿರುವುದರಿಂದ ವಸೂಲಿಯಕಾಲದಲ್ಲಿಯೇ ಅದರ ಕಾರ್ಬನ್ ಕಾಪಿಯೊಂದನ್ನು ತಯಾರ್ಮಾಡಿ ತಾಲ್ಲೋಕು ಕಚೇರಿಗೆ ಅದನ್ನು ಇರಸಾಲಿನ ಜತೆಯಲ್ಲಿಯೇ ಹಾಜರ್ಮಾಡುವಂತೆ ಏರ್ಪಾಡುಮಾಡಬೇಕೆಂದು ಪ್ರಾರ್ಥಿಸಿಕೊಳ್ಳುವುದು.

11. ಪಿಕ್ಕಿ ಡೂಪ್ಲಿಕೇಟ್ ರಸೀತಿಗೆ ಬದಲಾಗಿ ಪಿಕ್ಕಿ ಕಾರ್ಬನ್ ರಸೀತಿಕೊಡಲು ಅನುಕೂಲವಾಗುವಂತೆ ಪಿಕ್ಕಿ ರಸೀತಿಬುಕ್ಕುಗಳನ್ನು ಸಪ್ಲೈಮಾಡಬೇಕೆಂದೂ ಇಂತಹ ರಸೀತಿಗಳಲ್ಲಿ ಖಾತೇನಂಬರು ಸರ್ವೆನಂಬರುಗಳನ್ನು ನಮೂದುಮಾಡಬೇಕೆಂದಿರುವ ಖಾನೂನನ್ನು ಜಾರಿಗೆ ತರಬೇಕೆಂದೂ ಪ್ರಾರ್ಥಿಸಿಕೊಳ್ಳುವುದು.

12. ತನಿಕೆಪಟ್ಟಿ, ತಕರಾರು ತಃಖ್ತೆ, ವರ್ಗಾವರ್ಗಿ, ಪೌತಿತಃಖ್ತೆ, ಖಾನೇಷುಮಾರಿ ಲೆಕ್ಕ ಇವುಗಳಿಗೆ ಪಟೇಲರುಗಳ ರುಜು ಇಲ್ಲದೆ ಸರ್ಕಾರದವರು ಅಂಗೀಕರಿಸದಂತೆ ಅಪ್ಪಣೆಮಾಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

13. ಶ್ಯಾನುಭೋಗರುಗಳು ಪಿರ್ಕಾ ಗ್ರಾಮಗಳಲ್ಲಿಯೇ ವಾಸಮಾಡಬೇಕೆಂಬ ಸರ್ಕಾರಿ ಹುಕುಂನ್ನು ಕೂಡಲೇ ಜಾರಿಗೆ ತರಬೇಕೆಂದೂ ಒಬ್ಬ ಶ್ಯಾನುಭೋಗರು ಒಂದು ಪಿರ್ಕಾಕ್ಕಿಂತಲು ಹೆಚ್ಚು ಪಿರ್ಕಾಗಳಲ್ಲಿ ಶ್ಯಾನುಭೋಗರಾಗಿರಕೂಡದೆಂಬುದನ್ನೂ ಸಹ ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

14. ಶ್ಯಾನುಭೋಗರು ಯಾವ ಗ್ರಾಮದಲ್ಲಿ ವಾಸಮಾಡುವುದಿಲ್ಲವೋ ಆ ಗ್ರಾಮದ ಪಹಣಿ, ಖಾನೇಷುಮಾರಿ, ಬೇತುವಾರಿ ರಿಜಿಸ್ಟರುಗಳನ್ನೂ ಗ್ರಾಮದ ಸ್ಟ್ಯಾಟಿಸ್ಟಿಕ್ಸನ್ನೂ ಆ ಗ್ರಾಮದ ಪಟೇಲರವಶಕ್ಕೆ ಕೊಡುವಂತೆ ಅಪ್ಪಣೆಮಾಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

15. ತೋಟಿ ತಳವಾರಿಗಳ ಇನಾಮ್ತಿ ಜಮೀನುಗಳನ್ನು ಬರಾವರ್ದುದಾರನ ವಂಶೀಕರು ಅನೇಕಭಾಗಗಳನ್ನಾಗಿ ಭಾಗಿಸಿಕೊಂಡು ಅನುಭವಿಸುತ್ತಾ ಇರುವುದರಿಂದ ನೌಕರಿಮಾಡುವವರಿಗೆ ಸಾಕಾದಷ್ಟು ವರಮಾನವಿಲ್ಲದ ಕಾರಣ ಸರ್ಕಾರಿಕೆಲಸ ಸಲೀಸಾಗಿ ನಡೆಯುವುದಕ್ಕೆ ಅಡಚಣೆಯಾಗಿದೆ. ಆದುದರಿಂದ ಒಂದುವರ್ಷ ನೌಕರಿಮಾಡತಕ್ಕಂಥಾವನೇ ಆ ವರ್ಷದ ಆದಾಯವನ್ನು ಹೊಂದುವಂತೆ ಅಪ್ಪಣೆಮಾಡಿಸಬೇಕೆಂದು ಕೇಳಿಕೊಳ್ಳುವುದು.

16. ತೋಟಿ ನೀರುಗಂಟಿ ಇವರಿಗೆ ಕೊಡಬೇಕಾದ ಮಿರಾಸೆ ವಿಚಾರದಲ್ಲಿ ತಕರಾರುಬಂದಾಗ್ಗೆ ತಾಲ್ಲೋಕು ಅಮಲ್ದಾರರಿಗೆ ಪ್ರತಿಯಾಗಿ ಪಟೇಲರೇ ಕ್ರಮ ಜರುಗಿಸಿ ವಸೂಲುಮಾಡಿಕೊಡಲು ಅಧಿಕಾರವನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿಕೊಳ್ಳುವುದು.

17. ಗ್ರಾಮ ಕೈಡಿಪಿಬುಕ್ಕಿನಲ್ಲಿ ನಮೂದಿರುವ ಕ್ರಿಮಿನಲ್ ಮತ್ತು ಸಿವಿಲ್ ಅಧಿಕಾರವನ್ನು ಲಾಯಕ್ ಪಟೇಲರುಗಳಿಗೆ ದಯಪಾಲಿಸುವಂತೆ ಪ್ರಾರ್ಥಿಸಿಕೊಳ್ಳುವುದು.

18. ಬಾಂದುಕಲ್ಲು ಶಿಕಸ್ತಾಗಿರುವುದನ್ನು ಸರಿಪಡಿಸಬೇಕೆಂದು ಸಂಬಂಧಪಟ್ಟ ರೈತರಿಗೆ ಪಟೇಲರು ತಿಳಿಸಿದಮೇಲೂ ಆ ಕೆಲಸ ನಡೆಯದೆ ಇದ್ದರೆ ಅಗತ್ಯವಾದ ಕೆಲಸವನ್ನು ಪಟೇಲರೇ ಮಾಡಿಸಿ ಅದಕ್ಕೆ ತಗಲುವ ಖರ್ಚನ್ನು ಅವರೇ ನೋಟೀಸು ವಗೈರೆ ಕೊಟ್ಟು ಕ್ರಮಜರುಗಿಸಿ ವಸೂಲಿಮಾಡಿಕೊಳ್ಳಲು ಅಧಿಕಾರ ಅಪ್ಪಣೆಕೊಡಿಸಬೇಕೆಂದು ಕೇಳಿಕೊಳ್ಳುವುದು.

19. ಪಟೇಲರು ಗ್ರಾಮದ ಎಲ್ಲಾ ಬಾಬುಗಳನ್ನು ಕುರಿತು ಸರ್ಕಾರದ ಬೇರೆಬೇರೆ ಇಲಾಖೆಗಳಿಗೆ ರಿಪೋರ್ಟುಮಾಡಿಕೊಳ್ಳಬೇಕಾಗಿರುವುದರಿಂದ ಸಾದಿಲ್‌ವಾರ್ ಅಲೋಯನ್ಸನ್ನು ಹೆಚ್ಚಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವುದು.

20. ಪಟೇಲರುಗಳು ಪೋಲೀಸು ಕೇಸುಗಳಲ್ಲಿ ಎವಿಡೆನ್ಸು ಕೊಡುವುದಕ್ಕಾಗಿ ಮ್ಯಾಜಿಸ್ಟ್ರೇಟ್ ಮುಂತಾದ ಕೋರ್ಟುಗಳಿಗೆ ಹೋದಾಗ್ಗೆ ಭತ್ಯ ಕೊಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವುದು.

21. ಸರ್ಕಾರದಿಂದ ಪಾಯಿಸ್ ಆಗುವ ಹುಕುಂಗಳನ್ನು ಶ್ಯಾನುಭೋಗರಿಗೆ ಮಾತ್ರ ದಾಖಲೆಗೆ ಕೊಡುತ್ತಾರೆ ಅದರಂತೆ ಪಟೇಲರಿಗೂ ಸಹ ದಾಖಲೆಬಗ್ಗೆ ಕೊಡಿಸಿಕೊಡಬೇಕಾಗಿ ಪ್ರಾರ್ಥಿಸಿಕೊಳ್ಳುವುದು.

22. ಮಲನಾಡು ಪ್ರಾಂತ್ಯದ ಪಟೇಲರುಗಳಿಗೆ ಸರ್ಕಾರಿ ಕೆಲಸದ ಕುಮ್ಮಕ್ಕು ಬಗ್ಗೆ ತೋಟಿ ತಳವಾರರು ಇಲ್ಲದೆ ಕಂದಾಯ ವಸೂಲಿ ಗ್ರಾಮ ಪೋಲೀಸು ಕೆಲಸ ಮೊದಲಾದ ಗ್ರಾಮಾಡಳಿತ ಕಾರ್ಯಗಳಿಗೆ ತೊಂದರೆಯುಂಟಾಗಿರುವುದರಿಂದ ಮಲನಾಡು ಪ್ರಾಂತದ ಪಟೇಲರು ತೋಟಿ ತಳವಾರಿಗಳನ್ನು ನಿಯಮಿಸಿಕೊಳ್ಳುವಂತೆ ಅಪ್ಪಣೆಯಾಗಬೇಕೆಂದು ಪ್ರಾರ್ಥಿಸಿಕೊಳ್ಳುವುದು.

23. ಸರ್ವೆ ಇಲಾಖೆಯಿಂದ ಬೇತುವಾರು ಪ್ರತಿಯೊಂದನ್ನು ತಯಾರು ಮಾಡಿಸಿ ಪಟೇಲರಿಗೆ ಕೊಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವುದು.

24. ಗ್ರಾಮಾಂತರಗಳಲ್ಲಿ ವಿದ್ಯಾಭ್ಯಾಸವು ಸರ್ವತ್ರ ಪ್ರಚುರವಾಗುವುದಕ್ಕಾಗಿ ಪ್ರತಿಯೊಂದು ಹಳ್ಳಿಗೂ ಒಂದೊಂದು ಸ್ಕೂಲನ್ನು ದಯಪಾಲಿಸಬೇಕಲ್ಲದೆ ಹಳ್ಳಿಗಾಡಿನಲ್ಲಿ ನಿರ್ಬಂಧ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕೆಂದು ಪ್ರಾರ್ಥಿಸಿಕೊಳ್ಳುವುದು.

25. ಈ ವರುಷ ದೇಶದ ಅನೇಕ ಭಾಗಗಳಲ್ಲಿ ಮಳೆ ಬೆಳೆಗಳು ಸುತರಾಂ ಆಗದೆ ಕುಡಿಯುವ ನೀರಿಗೂ ದನಗಳ ಮೇವಿಗೂ ಅಭಾವ ಉಂಟಾಗಿ ಮುಂದೆ ಬರಬಹುದಾದ ಘೋರಕ್ಷಾಮದ ಚಿನ್ಹೆಗಳು ಜನರಲ್ಲಿ ಹಾಹಾಕಾರವನ್ನುಂಟುಮಾಡುತ್ತಿರುವುದರಿಂದ ನಮ್ಮ ದಯಾಳು ಸರ್ಕಾರದವರು ಅಗತ್ಯ ಕಂಡೆಡೆಗಳಲ್ಲಿ ರೈತರ ಜಮೀನಿನ ಕಂದಾಯದಲ್ಲಿ ಉದಾರವಾದ ರಿಯಾಯತಿಗಳನ್ನು ತೋರಿಸಿಯೂ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಕ್ಷಾಮನಿವಾರಣೋಪಾಯ ಕಾರ್ಯಗಳನ್ನಾಗಿ ಕೈಗೊಂಡು ಮಾಡಿಸಿ ಬಡ ರೈತರ ಜೀವನಕ್ಕೆ ಮಾರ್ಗವನ್ನು ಕಲ್ಪಿಸಿಕೊಟ್ಟು ನೀರಿನ ಅನುಕೂಲತೆಗೆ ತಕ್ಕ ಏರ್ಪಾಡುಗಳನ್ನು ಮಾಡಿಯೂ ಜನರ ಜೀವನಕ್ಕಾಗಬೇಕಾದ ದವಸಧಾನ್ಯಗಳೂ ಜಾನುವಾರಗಳ ಗ್ರಾಸವೂ ಕ್ಷಾಮರಿಯಾಯತಿದರದಲ್ಲಿ ದೊರೆಯುವಂತೆ ಏರ್ಪಡಿಸಿಯೂ ಭಯಗ್ರಸ್ತರಾಗಿರುವ ರೈತರನ್ನು ಎಲ್ಲಾ ವಿಧಗಳಲ್ಲಿಯೂ ಕಾಪಾಡಬೇಕೆಂದು ದಯಾಳು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವುದು.

ಅಧ್ಯಕ್ಷರಾದ ಮ|| ಕೆ. ಎಸ್. ಚನ್ನಬಸಪ್ಪನವರು ಮಾಡಿದ ಉಪಸಂಹಾರ ಭಾಷಣವು.

ಮಹನೀಯರೆ,

ನಮ್ಮ ಮಹಾಸಭೆಯ ಕಾರ್ಯಗಳೆಲ್ಲ ನೆನ್ನೆ ದಿವಸವೂ ಈ ದಿವಸವೂ ಈಶಕೃಪೆಯಿಂದ ತೃಪ್ತಿಕರವಾಗಿ ನೆರವೇರಿದುದಕ್ಕೋಸ್ಕರ ನಾವುಗಳೆಲ್ಲರೂ ಸಂತೋಷಿಸುತ್ತೇವೆ, ಅಲ್ಲದೆ ಈ ಮಹಾಕಾರ್ಯವು ನಿರಾಯಾಸವಾಗಿಯೂ ಸಾಂಗವಾಗಿಯೂ ನೆರವೇರುವಂತೆ ಅನುಗ್ರಹಿಸಿದ ಭಗವಂತನನ್ನು ನಾವುಗಳೆಲ್ಲರೂ ಸ್ತುತಿಸಬೇಕಾಗಿದೆ.

ನೆನ್ನೆ ದಿವಸ ನಮ್ಮಗಳ ಕಷ್ಟನಿಷ್ಠುರಗಳ ವಿಚಾರವಾಗಿಯೂ ಅವುಗಳ ನಿವಾರಣೋಪಾಯಗಳ ವಿಚಾರವಾಗಿಯೂ ಮಾಡಲ್ಪಟ್ಟ ಅನೇಕ ಉಪನ್ಯಾಸಗಳನ್ನೂ ಸಲಹೆಗಳನ್ನೂ ಕೇಳಿದ್ದೀರಿ. ನಮ್ಮಗಳ ಕರ್ತವ್ಯವೇನು, ಈ ಬಗ್ಗೆ ನಾವು ಮಾಡಬೇಕಾದ ಕಾರ್ಯಗಳೇನು ಎಂಬ ಬಗ್ಗೆ ವಿದ್ಯಾವಂತರು ಅನುಭವಶಾಲಿಗಳೂ ಆದ ಅನೇಕ ಮಹನೀಯರು ಸ್ಫೂರ್ತಿದಾಯಕವಾದ ಉಪನ್ಯಾಸಗಳನ್ನು ಮಾಡಿರುತ್ತಾರೆ. ಅಲ್ಲದೆ ನಾವುಗಳೆಲ್ಲರೂ ಈ ವಿಚಾರಗಳನ್ನು ಕುರಿತು ನಿಧಾನವಾಗಿ ಆಲೋಚನೆಯಿಂದ ಚರ್ಚಿಸಿ ಈಗ ತಾನೆ ಕೆಲವು ತೀರ್ಮಾನಗಳನ್ನು ಮಾಡಿಕೊಂಡಿದ್ದೇವೆ.

ಈ ವಿಚಾರದಲ್ಲಿ ನಾನು ಹೇಳಬೇಕಾಗಿರುವುದು ಒಂದೇ ಮಾತು ಉಳಿದಿದೆ. ಮಹಾಸಭೆಗೆ ಬರುವುದು ಉಪನ್ಯಾಸಗಳನ್ನು ಮಾಡುವುದು ಅಥವಾ ಕೇಳುವುದು ಮತ್ತು ತೀರ್ಮಾನಗಳನ್ನು ಮಾಡಿಕೊಳ್ಳುವುದು ಇಷ್ಟೇ ನಮ್ಮ ಮುಖ್ಯ ಕರ್ತವ್ಯವಲ್ಲ. ಈ ಮಹಾಸಭೆಯಲ್ಲಿ ನಾವು ನಡೆಸಿದ ಕಾರ್ಯಗಳನ್ನೆಲ್ಲಾ ನೆನಪಿನಲ್ಲಿಟ್ಟುಕೊಂಡು ಇಲ್ಲಿಂದ ಹೋದ ಮೇಲೆ ನಮ್ಮ ನಮ್ಮ ಗ್ರಾಮಗಳಲ್ಲಿ ಅವುಗಳನ್ನು ಆಚರಣೆಗೆ ತರಬೇಕಾಗಿದೆ. ನಾವು ಮಾಡಿಕೊಂಡಿರುವ ತೀರ್ಮಾನಗಳು ಕಾರ್ಯತಃ ಕೈಗೂಡಬೇಕಾದರೆ ನಾವುಗಳೆಲ್ಲರೂ ಇಲ್ಲಿಂದ ಮುಂದೆ ನಮ್ಮ ನಮ್ಮ ಶಕ್ತಿಮೀರಿ ಕೆಲಸಮಾಡಬೇಕಾಗಿದೆ.

ಒಂದು ಕೆಲಸವನ್ನು ಪ್ರಾರಂಭಿಸಲೇ ಬಾರದು. ಪ್ರಾರಂಭಿಸಿದ ಮೇಲೆ ಎಷ್ಟು ವಿಘ್ನ ಬಂದರೂ ಅದನ್ನು ನೆರವೇರಿಸದೆ ಬಿಡಬಾರದು. ಇದು ಸತ್ಪುರುಷರ ಲಕ್ಷಣ; ಪ್ರತಿಮಾನವನ ಕರ್ತವ್ಯ. ನಾವು ಈ ಮಹಾಸಭೆಗೆ ಬಂದು ಕಾರ್ಯವನ್ನು ಕೈಕೊಂಡು ತೀರ್ಮಾನಗಳನ್ನು ಮಾಡಿಕೊಂಡಿದ್ದೇವೆ. ಅಂದರೆ ನಮ್ಮ ಮುಂದಿನ ಏಳಿಗೆಗೆ ಸಾಧಕವಾದ ಕಾರ್ಯಾರಂಭವನ್ನು ಮಾಡಿಬಿಟ್ಟಿದ್ದೇವೆ. ಆರಂಭ ಶೂರರೆನಿಸಿಕೊಳ್ಳದೆ ಕಾರ್ಯದಕ್ಷರೆನಿಸಿಕೊಂಡು ನಮ್ಮ ಗ್ರಾಮಗಳ ಮತ್ತು ನಮ್ಮ ದೇಶದ ಅಭಿವೃದ್ಧಿಗೆ ಸಾಧಕವಾದಂತಹ ಈ ಕಾರ್ಯವು ಸಾರೋದ್ಧಾರವಾಗಿ ನೆರವೇರುವಂತೆ ನಾವುಗಳೆಲ್ಲರೂ ನಮ್ಮ ನಮ್ಮ ಶಕ್ತಿಮೀರಿ ಕೆಲಸಮಾಡಬೇಕಲ್ಲದೆ ನಮ್ಮ ನಮ್ಮ ಕೈಲಾದ ಸಹಾಯವನ್ನು ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ತಾವುಗಳೆಲರೂ ಸ್ವಾಭಿಮಾನದಿಂದಲೂ ದೇಶವಾತ್ಸಲ್ಯದಿಂದಲೂ ಅನೇಕ ತೊಂದರೆಗಳನ್ನು ಸಹಿಸಿಕೊಂಡು ಈ ಮಹಾಸಭೆಗೆ ದಯಮಾಡಿಸಿ ನಮ್ಮೆಲ್ಲರ ಏಳಿಗೆ ವಿಚಾರದಲ್ಲಿ ಕಲೆತು ಆಲೋಚಿಸಿ ಈ ಕಾರ್ಯವನ್ನು ಆಗಮಾಡಿದುದಕ್ಕಾಗಿ ನಿಮ್ಮಗಳೆಲ್ಲರನ್ನೂ ವಂದಿಸುತ್ತೇನೆ. ನಮ್ಮಗಳೆಲ್ಲರನ್ನು ಈ ಮಹಾಸಭೆಗೆ ಬರಮಾಡಿಕೊಂಡು ಸತ್ಕರಿಸಿದ ನಮ್ಮ ಅಭ್ಯಾಗತರಾದ ಚನ್ನಪಟ್ಟಣ ಮತ್ತು ಕ್ಲೋಸ್‌ಪೇಟೆ ತಾಲ್ಲೂಕುಗಳ ನಮ್ಮ ಸಹೋದರ ಪಟೇಲರುಗಳಿಗೆ ನಿಮ್ಮ ಪರವಾಗಿಯೂ ನನಗೆ ಈ ಘನತರವಾದ ಗೌರವವನ್ನು ದಯಪಾಲಿಸಿದುದಕ್ಕಾಗಿಯೂ ನಾನು ಮತ್ತೊಮ್ಮೆ ಬಹಳವಾಗಿ ವಂದಿಸುತ್ತೇನೆ.

ದಾರಿಯಲ್ಲಿ ತಮ್ಮಗಳ ಪ್ರಯಾಣವು ಸುಖಕರವಾಗಿ ಪರಿಣಮಿಸಿ ತಾವುಗಳೆಲ್ಲರೂ ಆರೋಗ್ಯದಿಂದ ಊರು ಸೇರುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಅರಸಿನವರಿಗೆ ಜ್ಞಾನೋದಯವಾದುದು.

ಮ|| ಎಚ್. ನಂಜುಂಡರಾಜೇ ಅರಸಿನವರು ಚುನಾವಣೆಯ ಪ್ರಸಿದ್ಧ ಪತ್ರಿಕೆಗೆ ತಾವು ರುಜುಮಾಡಿರುವುದರ ಕಾರಣವನ್ನು ಕುರಿತು ಕಳೆದ ಜನವರಿ ತಾ|| 31ರ ಮೈಸೂರು ಸಂಪದಭ್ಯುದಯ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ಲನ್ನು ಬರೆದಿರುವರು. ಅದರಲ್ಲಿ ಅವರು ಮುಖ್ಯವಾಗಿ ಹೇಳಿರುವದೇನೆಂದರೆ—"ನಾನು ಒಂದು ದಿವಸ ಸಾಯಂಕಾಲ ಕ್ಲಬ್ಬಿಗೆ ಹೋಗುವದಕ್ಕಾಗಿ ಹೊರಟಾಗ ನನ್ನ ಕಾಂಪೌಂಡ್ ಗೇಟ್ ಬಳಿ ಮ|| ಸತ್ತಾರ್ ಸೇಟ್‌ರವರು ಎದುರುಗೊಂಡು ನನ್ನನ್ನೇ ನೋಡುವುದಕ್ಕಾಗಿ ಬಂದಿದ್ದೇನೆಂದು ಹೇಳಿ ನಾಳೆ ನಡೆಯತಕ್ಕ ರೆಪ್ರೆಸೆಂಟಿಟಿವ್ ಮೀಟಿಂಗಿಗೆ ಬ್ರಾಹ್ಮಣೇತರರನ್ನು ಮೆಂಬರುಗಳನ್ನಾಗಿ ಚುನಾಯಿಸಲು 4 ಜನರ ಹೆಸರನ್ನು ನಮೂದಿಸಿರುವ ಈ ಕಾಗದಕ್ಕೆ ಮ|| ವರ್ಧಮಾನಯ್ಯನವರು ಮೊದಲಾದವರು ರುಜು ಮಾಡಿರುತ್ತಾರೆ. ಅವರುಗಳನ್ನು ಚುನಾವಣೆ ಮಾಡುವ ವಿಷಯದಲ್ಲಿ ನನ್ನ ಓಟನ್ನು ಕೊಡಬೇಕೆಂದು ಕೇಳಿದರು. ನಾನು ಮೂರು ಜನ ಬ್ರಾಹ್ಮಣ ಸ್ನೇಹಿತರಿಗೆ ವಾಗ್ದಾನ ಕೊಟ್ಟಿರುತ್ತೇನೆ. ಆದಪ್ರಯುಕ್ತ ಇನ್ನೊಂದು ಓಟನ್ನು ನಮ್ಮ ಅಣ್ಣಂದಿರಿಗೆ ಬೇಕಾದರೆ ಕೊಡುತ್ತೇನೆಂದು ಹೇಳಿದೆನು. ಈ ವಿಚಾರದಲ್ಲಿ ಇನ್ನೂ ಹೆಚ್ಚಾಗಿ ಮಾತನಾಡಬೇಕೆಂದು ಮಿ|| ಸೇಟರು ಹೇಳಲು ಮನೆಯೊಳಕ್ಕೆ ಕರೆದುಕೊಂಡು ಹೋಗಿ ಬಹಳ ಹೊತ್ತು ಮಾತನಾಡಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂಬ ಭೇದಭಾವವು ನನ್ನಲ್ಲಿಲ್ಲ. ಉಭಯತ್ರರಲ್ಲಿ ಯಾರು ಯೋಗ್ಯರೆಂದು ನನಗೆ ತೋರುತ್ತದೊ ಅವರಿಗೆ ಓಟನ್ನು ಕೊಡುವುದಲ್ಲದೆ ಬೇರೆಯವರಿಗೆ ಓಟು ಕೊಡುವದಿಲ್ಲ ಮತ್ತು ಸದರಿ ಓಟು ಪಡೆಯತಕ್ಕವರು ತಾವು ಮಾಡತಕ್ಕ ಕೆಲಸಗಳನ್ನು ವಿಶದವಾಗಿ ತಿಳಿಸದಲ್ಲಿ ಅದು ಸಮ್ಮತವಾಗಿದ್ದರೆ ಕೊಡುತ್ತೇನೆಂದು ತಿಳಿಸಿದೆನು. ಅದರ ಮೇಲೆ 3 ಜನರಿಗೆ ಓಟು ಕೊಡುವದಾಗಿ ವಾಗ್ದಾನವಾಗಿರುವ ಪಕ್ಷದಲ್ಲಿ ಉಳಿದ 4ನೇ ಓಟನ್ನು ನಮ್ಮ ಅಣ್ಣನವರಿಗೆ ಕೊಡಲು ಅಭ್ಯಂತರವಿಲ್ಲದಿದ್ದರೆ ಈ ಕಾಗದಕ್ಕೆ ರುಜು ಮಾಡಬೇಕೆಂದು ಸೇಟರು ಕೇಳಿದರು. ಅದಕ್ಕೆ ರುಜುಮಾಡಿದೆನು."

ಮ|| ನಂಜುಂಡರಾಜ ಅರಸಿನವರು ಹಳ್ಳಿಯಲ್ಲಿ ಹುಟ್ಟಿ ಸಾಮಾನ್ಯ ವಿದ್ಯಾಭ್ಯಾಸಮಾಡಿದವರಾಗಿದ್ದಾಗ್ಯೂ ಸರ್ಕಾರಿ ಕೆಲಸಕ್ಕೆ ಸೇರಿ ಪೂರ್ವಜನ್ಮಪುಣ್ಯ ಪರಿಪಾಕದಿಂದ ಮೈಸೂರು ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟ್ ಮೊದಲಾದ ದೊಡ್ಡ ಉದ್ಯೋಗಗಳಲ್ಲಿ ಬಹುಕಾಲದವರೆಗೂ ಇದ್ದು ಕಡೆಯಲ್ಲಿ ಅಮೃತಮಹಲ್ ಸೂಪರಿಂಟೆಂಡೆಂಟ್ ಕೆಲಸ ಮಾಡಿ ರಿಟೈರಾಗಿರುವರು. ಇಂತಾವರು ಮಿ|| ಸತ್ತಾರ್‌ಸೇಟರ ಅಣ್ಣಂದಿರಿಗೆ ಮಾತ್ರ ಓಟನ್ನು ಕೊಡುವವರಾಗಿದ್ದಲ್ಲಿ ನಾಲ್ಕು ಜನರ ಹೆಸರುಗಳನ್ನು ಬರೆದಿರುವ ಪತ್ರಿಕೆಗೆ ಹೇಗೆ ರುಜುಮಾಡಿದರು? ಈಗ ಹೇಳುವಂತೆ ಸೇಟರೊಬ್ಬರಿಗೆ ಕೊಡಬೇಕೆಂದು ರುಜುಮಾಡುವ ಕಾಲದಲ್ಲಿ ತಾವು ಸಂಕಲ್ಪಿಸಿದ್ದರೆ ಆ ನಾಲ್ಕು ಜನರ ಹೆಸರಿರುವ ಕಾಗದ ಮೇಲೆ ಸೇಟರೊಬ್ಬರಿಗೆ ಮಾತ್ರ ಓಟು ಕೊಡುತ್ತೇನೆಂದು ಬರೆಯದೆ ಬಿಡುತ್ತಿದ್ದರೆ? ಮೀಟಿಂಗಿಗೆ ಬ್ರಾಹ್ಮಣೇತರರನ್ನು ಚುನಾವಣೆಮಾಡಲು ನಾಲ್ಕು ಜನರ ಹೆಸರುಗಳು ಈ ಕಾಗದದಲ್ಲಿ ನಮೂದಿದೆ ಅದಕ್ಕೆ ರುಜುಮಾಡಬೇಕೆಂದು ಸೇಟರು ಹೇಳಿದರೆಂದು ಹೇಳಿದ ಮಾತ್ರಕ್ಕೆ 30-35 ವರ್ಷಗಳಕಾಲ ಸರ್ಕಾರಿ ದೊಡ್ಡ ಹುದ್ದೇಮಾಡಿದವರು ಮತ್ತು ಬಹಳ ಹೊತ್ತು ಓಟಿನ ವಿಚಾರದಲ್ಲಿ ಚರ್ಚೆಮಾಡಿದವರು ಆದ ಅರಸಿನವರು ಅಚ್ಚಾಗಿರುವ ಕಾಗದದಲ್ಲಿರುವ ವಿಷಯವನ್ನೋದದೆ ಮತ್ತು ನಾಲ್ಕು ಜನರುಗಳ್ಯಾರು ಎಂಬುದನ್ನು ತಿಳಿಯದೆ ಸೇಟರು ಹೇಳಿದ್ದನ್ನು ಕೇಳಿ ರುಜುಮಾಡಿದರೆಂಬುದನ್ನು ನಂಬಲಾಗುವುದೇ? ಒಂದು ವೇಳೆ ಓದದೆ ಮಾಡಿದರೆಂದು ಊಹಿಸುವದಾದರೆ ಇವರು ಸರ್ಕಾರಿಯ ಕೆಲಸದಲ್ಲಿರುವಾಗ್ಗೆ ಕೈಕೆಳಗಿನ ನೌಕರರು ತಂದಿಟ್ಟ ಕಾಗದಗಳನ್ನು ಓದಿನೋಡದೆ ಅವರು ಹೇಳಿದ ಮಾತನ್ನು ನಂಬಿ ಕಣ್ಣುಮುಚ್ಚಿಕೊಂಡು ರುಜುಮಾಡುತ್ತಿದ್ದರೆಂದು ಹೇಳಬೇಕಾಗುತ್ತದಲ್ಲವೆ? ಇದೂ ಅಲ್ಲದೆ ಇವರು, ಓಟರುಗಳ ಯೋಗ್ಯತಾವಿಮರ್ಶೆಮಾಡಲು ಪ್ರಯತ್ನಿಸಿ ತಮ್ಮ ಮನೆಯೊಂದಕ್ಕೆ 35 ರೂ. ಕಂದಾಯ ಹಾಕಲ್ಪಟ್ಟಿದೆ, ಅದು ಹೆಚ್ಚು ಎಂದು ಪ್ರೆಸಿಡೆಂಟಿಗೆ ಅನೇಕ ಅರ್ಜಿಗಳನ್ನು ಬರೆದುಕೊಂಡಾಗ್ಯೂ ಇಂದೂ ಉತ್ತರ ಸಹ ಬರಲಿಲ್ಲ. ಮ|| ಗಳಾದ ಧರ್ಮಪ್ರಕಾಶ ಬನುಮಯ್ಯನವರೂ ಸಾಹುಕಾರ್ ಚನ್ನಸ್ವಾಮಿಯವರೂ ಬಂದು ನೋಡಿ ಅನ್ಯಾಯವೆಂದು ಅಭಿಪ್ರಾಯಪಟ್ಟುಕೊಂಡು ಹೋಗಿ ಮೊದಲಿನ ಕಂದಾಯವನ್ನೇ ಖಾಯಂ ಮಾಡುವಂತೆ ಶಿಫಾರಸ್ ಮಾಡಿರುವರಂತೆ. ಎಂದು ಅಸಂಬಂಧ ಪ್ರಲಾಪಮಾಡಿರುತ್ತಾರೆ. ಇದನ್ನೋದಿದರೆ ಪ್ರೆಸಿಡೆಂಟರೂ ಮ್ಯು|| ಕೌನ್ಸಿಲರೂ ತಮ್ಮ ಮನೆಯ ಕಂದಾಯವನ್ನು ಕಡಿಮೆಮಾಡಲಿಲ್ಲವೆಂಬ ಅವರ ಮೇಲಿನ ಆಕ್ರೋಶವನ್ನು ಅರಸಿನವರು ಬೇರೆ ವಿಧವಾಗಿ ತೀರಿಸಿಕೊಳ್ಳುವದಕ್ಕೆ ಧೈರ್ಯಸಾಲದೆ ಈ ಸಂದರ್ಭದಲ್ಲಿ ಬಾಯಿತೀಟೆಯನ್ನು ತೀರಿಸಿಕೊಂಡಿರುವದಾಗಿ ತೋರುತ್ತದೆ. ಬರೆದಿರುವ ಆರ್ಟಿಕಲ್ಲನ್ನು ಸಂಪೂರ್ಣವಾಗಿ ಓದಿದರೆ ಅವರ ವಯಸ್ಸಿಗೆ ತಕ್ಕಂತೆ ಅಥವಾ ಯಾರಿಗೋ ಹೆದರಿ ಈರೀತಿ ಪೂರ್ವಾಪರ ಯೋಚನೆಯಿಲ್ಲದೆ ಬರೆದಿರುತ್ತಾರೆಂಬುದು ವ್ಯಕ್ತವಾಗುತ್ತದೆ. ಹಾಗೆ ಇತರರಿಗೆ ಇವರು ಹೆದರಿ ಬರೆದಿರುವುದು ನಿಜವಾಗಿದ್ದಲ್ಲಿ ಇವರ ಕ್ಷತ್ರಧರ್ಮಕ್ಕೆ ವಿರುದ್ಧವಲ್ಲವೆ? ಪ್ರಾಯಶಃ ಮನೋನಿಗ್ರಹಶಕ್ತಿ ಸಾಲದೆ ಇವರು ತಮ್ಮ ಜನ್ಮಸ್ಥಳ ಸಂಸ್ಕಾರವನ್ನು ಸ್ಮರಿಸಿಕೊಂಡು ಈ ರೀತಿ ವರ್ತಿಸಿರಬಹುದು! ಅರಸಿನವರಿಗೆ ಅಪರವಯಸ್ಸಿನಲ್ಲಿ ಈ ಪ್ರಕಾರವಾಗಿ ಜ್ಞಾನೋದಯವಾದುದಕ್ಕಾಗಿ ಸಂತೋಷಿಸಬೇಕಾಗಿದೆ.

ಗುಣವಿಮರ್ಶಕ.

ನಿಜಾಂ ಇಲಾಕ ನಾರಾಯಣಪೇಟೆಯ ವೀರಶೈವರ ಸೂಚನೆ.

ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಪಟ್ಟಾಧ್ಯಕ್ಷ ನಾಗಲೂಟಿ ಚಕ್ರವರ್ತಿ ಮಹಾಸ್ವಾಮಿಗಳ ಪ್ರತಿನಿಧಿಗಳವರು, ನಮ್ಮ ಪೇಟೆಗೆ ದಯಮಾಡಿಸಿ ಗ್ರಾಮಕ್ಕೆ ಪೂರ್ವ ದಿಕ್ಕಿನಲ್ಲಿರುವ ಅತಿ ಮನೋಹರವಾದ ಲಿಂಗಯ್ಯನಗುಡಿಯಲ್ಲಿ ವಾಸಮಾಡಿ ಸಮಸ್ತ ಶಿಷ್ಯವೃಂದದೊಡನೆ ಸೇವೆಯಂ ಕೈಕೊಳ್ಳುತ್ತ 1 ತಿಂಗಳಾಗಬಂತು. ತಾರೀಕು 14-1-24ಕ್ಕೆ ಸರಿಯಾದ ಪುಷ್ಯ ಶು|| 8 ಸೋಮವಾರ ಸಾಯಂಕಾಲ 5 ಗಂಟೆಗೆ ದೊಡ್ಡ ಸಭೆಯು ಸದರಿ ಗುಡಿಯಲ್ಲಿ ನೆರೆಯಿತು. ಈ ಸಭೆಗೆ ಇದೇ ಮಹಬೂಬ್ ನಗರ ಜಿಲ್ಲೆಯ (ಕಲೆಕ್ಟರ್) ಅವ್ವಲ್ ತಾಲ್ಲುಕುದಾರರಾದ ಶ್ರೀಯುತ ಮ|| ರಾಯಜಗನೋಹನಲಾಲ್, ಬಿ.ಎ. ರವರು ಇಲ್ಲಿಯ ಮುನ್ಸೀಫರಾದ ಶ್ರೀಯುತ ಶಂಕರಸಹಾಯ ಬಿಲ್‌ಗಿರಾಮಿ ಬಿ.ಎ.ಎಲ್.ಎಲ್.ಬಿ., ರವರು ರಾಜಕೀಯ ಶಾಲಾಪ್ರಧಾನೋಪಾಧ್ಯಾಯರಾದ ಮೌಲ್ವೀಮೊಹದೀಹಸನ್ ಸಾ|| ಬಿ.ಎ.ಬಿ.ಟಿ. ಯವರು ರಾಜಕೀಯಾಧಿಕಾರಿಗಳು, ಶ್ರೀಮಂತರು ಪುರಪ್ರಮುಖರು ಭಕ್ತ ಮಾಹೇಶ್ವರರು ಆಗಮಿಸಿದ್ದುದರಿಂದ ಒಳ್ಳೇ ಶೋಭೆಯುಂಟಾಗಿತ್ತು. ಶ್ರೀಗಳವರು ಸಕಲರ ಜಯಘೋಷದೊಡನೆ ಅಧ್ಯಕ್ಷಸ್ಥಾನವನ್ನಲಂಕರಿಸಲು ಸಭೆಯ ಕಾರ್ಯವು ಪ್ರಾರಂಭವಾಯಿತು. ಮೊದಲು ಇಲ್ಲಿಯ ವೀರಶೈವ ಸಂಸ್ಕೃತಶಾಲಾ ವಿದ್ಯಾರ್ಥಿಗಳು ಈಶಸ್ತುತಿಯನ್ನು ಶ್ರಾವ್ಯವಾಗಿ ಮಾಡಿದ ಬಳಿಕ ವಿದ್ಯಾರ್ಥಿಗಳ ಪರೀಕ್ಷೆಯು ನಡೆದು ನಂತರ ವೇ|| ಮುತ್ತಲಿ ಬಸವಲಿಂಗಾರ್ಯರು ಸದ್ಗುರುಗಳ ಅಥವಾ ಯತಿಗಳ ಸಂದರ್ಶನವು ಸಕಲಮತೀಯರಿಗೂ ಅವಶ್ಯಕವೆಂದೂ, ಈ ದಿನದ ಮಕರಸಂಕ್ರಮಣದ ಪರ್ವಕಾಲದಲ್ಲಿ ಶ್ರೀ ಸನ್ನಿಧಿಯ ದರ್ಶನಾಶೀರ್ವಾದಗಳು ನಮಗೆ ಲಭಿಸಿದ್ದು ಕೇವಲ ಸುಕೃತ ವಿಶೇಷವೆಂದೂ, ಉರ್ದು ಭಾಷೆಯಲ್ಲಿ ಅಧಿಕಾರಿಗಳಿಗೆ ತಿಳಿಯುವಂತೆ ಹೇಳಲು ಸಭಿಕರು ಕರತಾಡನ ಮೂಲಕ ತಮ್ಮ ಆನಂದವಂ ಪ್ರದರ್ಶಿಸಿದರು. ಅಲ್ಲಿಂದ ಹೆಡ್ಮಾಸ್ಟರ್ ಸಾ|| ರು ಸಂಸ್ಕೃತ ವಿದ್ಯೆಯು ಪ್ರಾಚೀನವಾದುದೆಂತಲೂ ಇದರ ವಾಙ್ಮಯವು ಸಕಲ ಭಾಷೆಗಳಲ್ಲು ಸಮಾನ್ಯವೆಂತಲೂ, ಇಂತಹ ಭಾಷೆಯು ನಮ್ಮಗಳ ಅಶ್ರದ್ಧೆ, ಆಲಸತೆಯ, ಕಾರಣದಿಂದ ವಿದೇಶೀಯರ ವಶವಾಗಿ ಅವರ ಕಡೆಯಿಂದ ತಿಳಿದುಕೊಳ್ಳುವ ದುರವಸ್ಥೆಯು ಭರತಖಂಡಕ್ಕೆ ಪ್ರಾಪ್ತವಾಗಿದೆ ಎಂತಲೂ ಇದೇ ಗತಿಯು ಅರಬ್ಬೀ ಭಾಷೆಗು ಬಂದಿದೆ ಎಂತಲೂ ಬಹು ಸ್ವಾರಸ್ಯವಾಗಿ ಭಾಷಣ ಮಾಡಿದುದಲ್ಲದೆ, ಇನ್ನೊಬ್ಬ ಸಹಾಯೋಪಾಧ್ಯಾಯರಾದ ಮೌಲ್ವೀತಾಯಬು ಸಾ|| ರವರು ಸರ್ಕಾರಿ ಶಾಲೆಯಲ್ಲಿ ಬಡ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ ಸಂಘದ ಸ್ಥಿತಿಯನ್ನು ತಿಳಿಸಿ ಸಹಾಯವನ್ನು ಕೋರಲು ಸನ್ನಿಧಿಯಿಂದ ಕೂಡಲೆ 20 ರೂ. ಗಳು ಆಶೀರ್ವಾದರೂಪವಾಗಿ ಕೊಡಲ್ಪಟ್ಟವು. ಆಮೇಲೆ ಈ ನಿಜಾಂ ಇಲಾಕೆಯ ವೀರಶೈವರ ಧರ್ಮೋನ್ನತಿಗಾಗಿ ಕೆಲ ಸಂಭಾಷಣೆಗಳು ಜರುಗಿ ವೇ|| ಮುಕ್ತಿ ಬಸವಪ್ಪಶಾಸ್ತ್ರಿಗಳವರಿಂದ ರಚಿಸಲ್ಪಟ್ಟ ವಿದ್ಯಾವಿಷಯಕವಾದ ಪದ್ಯಗಳು ಓದಲ್ಪಟ್ಟು ಧರ್ಮಪ್ರಭುಗಳಾದ ನೈಜಾಂರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಇದಾದ ಬಳಿಕ ಶ್ರೀ ಸನ್ನಿಧಿಯ ಸಂಕಲ್ಪದಂತೆ ಅವರು ಕೈ ಕೊಂಡಿರುವ, ವಿದ್ಯಾಪ್ರೋತ್ಸಾಹಕ್ಕಾಗಿ ಕೆಲ ಠರಾವುಗಳು ಸೂಚಿಸಲ್ಪಡಲು ಅದಕ್ಕೆ ನಮ್ಮ ಸಮಾಜದವರು ಒಪ್ಪಿ ಬರವಣಿಗೆಯ ಮೂಲಕ ಸಮ್ಮತಿಯನ್ನು ಕೊಟ್ಟು ಸಹಿಗಳನ್ನು ಮಾಡಿದರು. ಈ ಗ್ರಾಮದಲ್ಲಿ ವೈದಿಕ ಪಾಠಶಾಲೆಯೆಂದು ವೀರಶೈವರ ನಿತ್ಯನೈಮಿತ್ತಿಕ ಕರ್ಮಾಚರಣೆಗಳಿಗಾಗಿ ಏರ್ಪಡಿಸಬೇಕೆಂಬ ಆಲೋಚನೆಯು ಜರುಗಿ ಉಪನ್ಯಾಸ ಕೀರ್ತನೆಗಳನ್ನು ಕಲಿತು ಮತೀಯರಿಗೆ ಮತತತ್ವಗಳನ್ನು ಬೋಧಿಸಲು ಬೋಧಕರನ್ನು ಸಿದ್ಧಪಡಿಸಲೋಸುಗ ಕೃಷ್ಣಾನದೀತೀರ ರೈಲ್ವೆ ಸ್ಟೇಷನಿಗೆ ಸಮೀಪ ಖಾನಾಪುರದಲ್ಲಿ ಸಂಗೀತ ಪಾಠಶಾಲೆಯೊಂದನ್ನು ಏರ್ಪಡಿಸಿ ಈ ಶಾಲೆಗೆ ಆನಂಪಲ್ಲಿ ಮಠದ ವೇ|| ಸಂಗೀತ ವಿದ್ವಾನ್ ರಾಚೋಟಪ್ಪನವರನ್ನು ಅಧ್ಯಾಪಕರನ್ನಾಗಿ ನಿಯಮಿಸಿರುತ್ತಾರೆ. ತಮ್ಮ ಕಾಣಿಕೆಯ ವಸೂಲಾತಿಯಲ್ಲಿ ಏಕಚತುರ್ಥಾಂಶದಂತ ತೆಗೆಯುವ ಹಣದಲ್ಲಿ 100 ರೂ. ಗಳನ್ನು ಸಂಗೀತಶಾಲಾಧ್ಯಾಪಕರ ವೇತನಕ್ಕು 100 ರೂ. ಗಳನ್ನು ರಾಮಗಡ್ಡ ಸಂಸ್ಕೃತ ಶಾಲಾಸಹಾಯಕ್ಕು ಪಶೀತ ಮಾಡಿಸಿರುವರು. ಮತ್ತು 100 ರೂ. ಗಳನ್ನು ನೈಜಾಂ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸಹಾಯಕ್ಕಾಗಿ ಅದರ ಕೋಶಾಧ್ಯಕ್ಷರಾದ ಮ|| ಲಿಂಗೇರಿ ಕೋನಪ್ಪನವರು ಯಾದಗಿರಿ ಇವರ ಕಡೆ ಮನಿಯಾರ್ಡರು ಮೂಲಕ ಕಳುಹಿಸಿರುತ್ತಾರೆ. ಸಾಧ್ಯವಾದಂತೆಲ್ಲ ಇದಕ್ಕೆ ಇನ್ನು ಸಹಾಯಮಾಡುತ್ತೇವೆಂದು ಅಪ್ಪಣೆ ಕೊಡಿಸಿರುತ್ತಾರೆ. ಸಂಗೀತಶಾಲಾ ಸಹಾಯಕ್ಕು, ನಾರಾಯಣಪೇಟೆಯಲ್ಲಿ ಏರ್ಪಡುವ ವೈದಿಕ ಶಾಲಾ ಸಹಾಯಕ್ಕು ರಾಯಚೂರು ಜಿಲ್ಲೆಯಲ್ಲಿ ವರ್ಷಾಶನ ವಗೈರೆ ವಸೂಲಾಗುವಂತೆ ಈ ಜಿಲ್ಲೆಯಲ್ಲಿಯು ವಸೂಲಾಗುವ ನಿಬಂಧನೆಯನ್ನು ಮಾಡಿ ಈ ಜಿಲ್ಲೆಯ ವೀರಶೈವರಿಂದೆಲ್ಲ ಒಪ್ಪಿಗೆಯ ಸಹಿಗಳನ್ನು ತೆಗೆದುಕೊಳ್ಳುತ್ತಲಿರುವರು. ಸಂಗೀತಶಾಲೆಯ ಮೇಲ್ವಿಚಾರಣೆಯು ನಾರಾಯಣಪೇಟೆಯ ಪಂಚರ ಸ್ವಾಧೀನದಲ್ಲಿರಬೇಕೆಂದು ನಿಶ್ಚಯಿಸಲ್ಪಟ್ಟು ಸಭೆಯ ಕಾರ್ಯವು ಮುಗಿದ ಬಳಿಕ ಅಲೀಜನಾಬ್‌ಅವ್ವಲ್ ತಾಲುಕುದಾರುಸಾಹೇಬರು ಮುನ್ಸಿಫ್ ಸಾ|| ರವರು ಶ್ರೀಗಳವರ ವಿಜಿಟಿಂಗ್ ಬುಕ್ಕಿನಲ್ಲಿ ಮಹಾಸನ್ನಿಧಿಯಿಂದೆ ಅಲ್ಲಲ್ಲಿ ವಿದ್ಯಾಭಿವೃದ್ಧಿಗಾಗಿ ವಿಶೇಷವಾಗಿ ದ್ರವ್ಯಸಹಾಯವು ಮಾಡಲ್ಪಡುತ್ತಿರುವುದು ತುಂಬಾ ಸಂತೋಷಕರವೆಂತಲು, ಅದೃಷ್ಟವಶಾತ್ ಜಗದ್ಗುರುಗಳವರ ಸಂದರ್ಶನವು ಪ್ರಾಪ್ತವಾದುದಕ್ಕೆ ತಮಗೆ ಧನ್ಯತೆಯು ಲಭಿಸಿರುವುದೆಂತಲು, ಈ ಮುಂತಾದ ಕೆಲ ವಾಕ್ಯಗಳನ್ನು ಇಂಗ್ಲೀಷಿನಲ್ಲಿ ಬರೆದು ದರ್ಶನ ಕಾಣಿಕೆಯನ್ನು ಅರ್ಪಿಸಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಆಮೇಲೆ ಆಹೂತರಾಗಿ ಬಂದ ಕಲೆಕ್ಟರರೇ ಮುಂತಾದ ಅಧಿಕಾರಿಗಳು ಸಭಿಕರು, ಅಲ್ಪಾಹಾರದಿಂದಲು ಗಂಧ, ಪುಷ್ಪ, ತಾಂಬೂಲಾದಿಗಳಿಂದಲು ಸತ್ಕರಿಸಲ್ಪಡಲು ಅವರ ಆಭಾರಮನ್ನಣೆಯು ಸಭೆಯ ಚಾಲಕರಾದ ವೇ|| ಮುತ್ತಲಿ ಬಸವಲಿಂಗಪ್ಪನವರಿಂದ ಮಾಡಲ್ಪಟ್ಟು ಶ್ರೀಗಳವರು ಪಡಿಯುತಿರುವ ಮಹತ್ತರವಾದ ಭಗೀರಥ ಪ್ರಯತ್ನಗಳು ಸಫಲವಾಗುವುದಕ್ಕೆ ತಕ್ಕಂತೆ ಮಳೆ ಬೆಳೆಗಳನ್ನು ವಿದ್ಯಾರ್ಥಿಗಳಲ್ಲಿ ತಮ್ಮ ಸಮಾಜ ಬಂಧುಗಳಿಗೆ ಉದಾರವಾದ ಮನಸ್ಸನ್ನು ಜಗದೀಶನು ಉಂಟುಮಾಡಲೆಂದು ಹಾಗು ಸಂಸ್ಥಾನದ ನಿರ್ಣಯದಂತೆ ಸಕಲರು ಆಚರಿಸಿ ಪುಣ್ಯಕೀರ್ತಿಗಳಿಗೆ ಭಾಜನರಾಗಲೆಂದು ಕೋರಿ ಸಭೆಯು ವಿಸರ್ಜಿಸಲ್ಪಟ್ಟಿತು.

ಅಸಲ್ ಪತ್ರದಲ್ಲಿ ಸಹಿಮಾಡಿದ ಸದ್ಗೃಹಸ್ಥರು.—ಮ|| ಗಳಾದ 1 ಬಿಬ್ಬಳ್ಳಿ ಬಸಯ್ಯನವರು, 2 ಬಿಬ್ಬಳ್ಳಿ ಶಿವಲಿಂಗಯ್ಯನವರು, 3 ಗುರುಲಿಂಗಯ್ಯನವರು, ನಿಡುಗುಂದಿ 4 ಗಂಡಿ ಚನ್ನಬಸವಪ್ಪನವರು, 5 ಮಳಿಕೇಡು ಬಸವಪ್ಪನವರು, 6 ಕಾನಗಡ್ಡಿ ಬಸವಪ್ಪನವರು, 7 ಬಸವತೀರ್ಥಪ್ಪನವರು, 8 ಪಟ್ಟಣಶೆಟ್ಟಿ ಗುರಪ್ಪನವರು, 9 ಕೋಡ್ಲಿ ಸಿದ್ದಪ್ಪನವರು, 10 ನಾಗಣ್ಣ ಯಲಿರಿ, 11 ದಾಮರಗಿದ್ದ ಗುರುಪಾದಪ್ಪ, 12 ಬಪ್ಪಂಗಿ ಶರಣಪ್ಪ, 13 ತಂಬಾಕು ಸೂಗಪ್ಪ, 14 ಯೋಗಿ ನಾಗಪ್ಪ, 15 ಕಡೇಚೂರು ವೀರಣ್ಣ, 16 ಸಿಂಗಾರ ದೊಡ್ಡಪ್ಪ, 17 ಬೆಲ್ಲದ ರಾಚಪ್ಪ, 18 ಕೇಣಿದ ಗುರಪ್ಪ, 19 ಶರಣಪ್ಪ, ಬಾಗೋಡಿ 20 ರಾಚಪ್ಪ, ಬಣಗಾರ 21 ಸಾದ್ರಿ ಸಿದ್ದಪ್ಪ, 22 ಮಂಗಲಿಗಿ ರಾಚಪ್ಪ, 23 ಗುಂಡಪ್ಪ ಸುಲೇಗಾವಿ 24 ಬುಕ್ಕ ಸಿದ್ದಪ್ಪ ಮುಂತಾದವರು.

ವರ್ಗ.

ತುಮಕೂರು ಡಿಸ್ಟ್ರಿಕ್ಟು ಶಿರಾ ತಾಲ್ಲೂಕು ಕಸಬಾ ಶಿರಾ ರೇಂಜ್ ಪೋಲೀಸ್ ಇನ್ಸ್‌ಪೆಕ್ಟರಾದ ಮ|| ಬಿ. ಸಿ. ಚನ್ನರಾಜಅರಸಿನವರು ಇಲ್ಲಿಂದ ಬೇರೆ ಸ್ಥಳಕ್ಕೆ ವರ್ಗವಾಗಿ ಹೋಗತಕ್ಕವರಾಗಿರುತ್ತಾರೆಂಬ ವರ್ತಮಾನವಿದೆ, ಇದು ನಿಶವಿಷ್ಟ ಭಾಗಕ್ಕೆ ಇಲ್ಲಿನ ಜನರಿಗೆ ತುಂಬಾ ವಿಷಾದ ಉಂಟಾಗುತ್ತದೆ. ಇವರು ಕ್ಷತ್ರಿಯರು ಇವರಿಗೆ ತಮ್ಮ ಕರ್ತವ್ಯವೇನೆಂಬುದು ಚೆನ್ನಾಗಿ ಗೊತ್ತೆಂಬ ವಿಚಾರ ಇವರ ನಡವಳಿಕೆಯಲ್ಲಿ ಕಂಡುಬಂದಿರುವ ಉದಾಹರಣ ರೂಪವಾದ ಕಾರ್ಯಗಳು ತೋರಿಸುತ್ತಲಿವೆ. ಜೂಜುಗಾರರು ತಮ್ಮ ವೃತ್ತಿಗಳಿಗೆ ರಾಜೀನಾಮೆಯನ್ನು ಕೊಟ್ಟರು. ಶೇಂದಿ, ಶರಾಬ್ ಅಂಗಡಿಗಳಲ್ಲಿ ಗಲಾಟೆ ಮಾಡತಕ್ಕ ನಿಶಾಖೋರರ ಹಾವಳಿಯು ನಿರ್ಮೂಲವಾಯಿತು. ಜನರ ವಸತಿಗೆ ಭಂಗವನ್ನುಂಟುಮಾಡುವ ಜನರ ಹಾವಳಿಯು ಕೊನೆಗಂಡಿತು. ನಿಷ್ಪಕ್ಷಪಾತಿಗಳಾದ ಇವರ ಅಧಿಕಾರವು ಸಾಧುಸತ್ಪುರುಷರಿಗೆ ಸಂತೋಷವನ್ನು ಇಮ್ಮಡಿಮಾಡುತ್ತಲಿದೆ ದುರ್ಜನರ ಭಾಗಕ್ಕೆ ತುಂಬಾ ಭಯಪ್ರದವಾಗಿರುತ್ತೆ. ದುಷ್ಕೃತ್ಯಗಳು ನಡೆಯದಂತೆ ನೋಡಿಕೊಳ್ಳುವದೇ ಪೋಲೀಸಿನವರ ಕರ್ತವ್ಯವೆಂದು ಸಂಭವ ಉಂಟಾದಾಗ ಹೇಳುತ್ತಿರುವರಲ್ಲದೆ ಅದರಂತೆ ವರ್ತಿಸಲು ತುಂಬಾ ಆಸಕ್ತಿಯನ್ನು ವಹಿಸಿ ಕೆಲಸಮಾಡುತ್ತಿರುತ್ತಾರೆ. ಇವರ ನಡವಳಿಕೆಯನ್ನರಿತ ನಿಷ್ಪಕ್ಷಪಾತಿಗಳಾದ ಗುಣಗ್ರಾಹಿಗಳು ಇವರ ವರ್ಗದ ವಿಚಾರವಾಗಿ ಉಂಟಾಗಿರುವ ದುಃಖವನ್ನು ಸೂಚಿಸದೆ ಇರಲಾರರು. ಇವರು ಇಲ್ಲಿಗೆ ಬಂದು 9 ತಿಂಗಳಾಗಿರಬಹುದು. ಇಷ್ಟು ಜಾಗ್ರತೆ ಇವರಿಗೆ ವರ್ಗವಾಗುವ ಸಂಭವವೇನೆಂಬುದು ಇಲ್ಲಿನ ಜನ ಯೋಚನೆಗೆ ಕಾರಣವಾಗಿರುತ್ತೆ. ನಮ್ಮ ಡಿಸ್ಟ್ರಿಕ್ಟು ಪೋಲೀಸ್ ಸೂಪರಿಂಟೆಂಡೆಂಟ್‌ಸಾಹೇಬರವರು ವಿಚಾರಪರರು ಮತ್ತು ಪ್ರಜಾನುರಾಗಿಗಳು ಆದ ಇವರನ್ನು ಇನ್ನು ಕೆಲವುಕಾಲ ಇಲ್ಲೇ ಇಟ್ಟು ವರ್ಗದ ಸುದ್ದಿಯಿಂದ ಜನರಿಗೆ ಉಂಟಾಗಿರುವ ವಿಷಾದವನ್ನು ತಪ್ಪಿಸುವರೆಂಬದಾಗಿ ನಂಬಿರುತ್ತೇನೆ.

ನಿಷ್ಪಕ್ಷಪಾತಿ.

ತಾ|| 20-1-24ರಲ್ಲಿ ವಿದ್ಯಾಭ್ಯಾಸದ ಇಲಾಖಾ ಹಾ|| ಇನ್|| ಸಾ|| ಜ|| ಸಾಹೇಬ್ ಬಹದ್ದೂರ್ ಜಿ. ಎಸ್. ಬಾಲಸುಂದರಂ ಅಯ್ಯರ್‌ರವರೂ ಮತ್ತು ಹ|| ಸ|| ಇನ್|| ಸಾ|| ರವರೂ, ಡಿ|| ಇನ್|| ಸಾ|| ರವರೂ ಮತ್ತು ರೇಂಜ್ ಅ|| ಇ|| ಸಾ|| ರವರೂ ದೇವನಹಳ್ಳಿ ತಾ|| ಹುಣಸಮಾರನಹಳ್ಳಿ ಇನ್|| ಕಂ|| ಮಿ|| ಸ್ಕೂಲನ್ನು ಪರಾಂಬರಿಸುವ ಉದ್ದಿಶ್ಯವಾಗಿ ಪ್ರಾತಃಕಾಲ 9½ ಗಂಟೆಗೆ ದಯಮಾಡಿಸಿದ್ದರು. ಆದಿನ ಗ್ರಾಮವೂ ಮತ್ತು ಸ್ಕೂಲು ತಳಿರುತೋರಣಧ್ವಜಪತಾಕಾದಿಗಳಿಂದ ನೂತನವಾಗಿ ಅಲಂಕರಿಸಲ್ಪಟ್ಟಿತ್ತು. ಸವಾರಿಯು ಚಿತ್ತೈಸಿದ ಕೂಡಲೆ ಊರುಮುಂದಿನ ದಿವ್ಯವಾದ ಭುವನೇಶ್ವರಿ ಚಪ್ಪರದಲ್ಲಿ ಭೋರ್ಗರೆಯುತ್ತಿರುವ ವಾದ್ಯ ವಿಶೇಷಗಳಿಂದ ಎದುರುಗೊಂಡು ಸ್ವಾಗತವು ಬಯಸಲ್ಪಟ್ಟಿತ್ತು. ಅನಂತರ ಸ್ಕೂಲು ಇನ್ಸ್‌ಪೆಕ್ಷನ್ ಕ್ರಮವಾಗಿ ಜರಿಗಿತು. 4 ಗಂಟೆ ತರುವಾಯ ಸ್ಕೂಲು ವಿದ್ಯಾರ್ಥಿಗಳ ಡಿಬೇಟಿಂಗ್ ಸೊಸೈಟಿ (Debating Society) ಜರಿಗಿಸಲ್ಪಟ್ಟಿತು. ಇದು ಸಣ್ಣ ಗ್ರಾಮವಾದರೂ ಈ ಗ್ರಾಮದ ಶ್ರೀ ಮಠದ ಸ್ವಾಮಿಗಳವರ ಉದಾರಾಶ್ರಯದಿಂದಲೂ ಪ್ರೋತ್ಸಾಹದಿಂದಲೂ 5 ಜನ ಬಾಲಕರಿಗೆ ಹಾಸ್ಟಲ್ ಏರ್ಪಾಡಾಗಿ ಸ್ಕೂಲು ಅಭಿವೃದ್ಧಿ ಸ್ಥಿತಿಯಲ್ಲಿರುವುದನ್ನೂ ಸ್ಕೂಲಿನಲ್ಲಿ ಪಾಠ ಪ್ರವಚನಗಳು ತೃಪ್ತಿಕರವಾಗಿ ಜರುಗುತ್ತಿರುವುದನ್ನೂ ಇಲ್ಲಿ ಸುಮಾರು 130 ಜನ ಬಾಲಕರು ವ್ಯಾಸಂಗಮಾಡುತ್ತಿರುವುದನ್ನೂ ಇದರಲ್ಲಿ ಅನೇಕರು ಪರಸ್ಥಳದಿಂದ ಬಂದು ವ್ಯಾಸಂಗಮಾಡುತ್ತಿರುವುದನ್ನೂ ಪ್ರತ್ಯಕ್ಷವಾಗಿ ನಮ್ಮ ಖಾವಂದರವರು ಪರಾಂಬರಿಸಿ ಬಹಳ ಸಂತೋಷಪಟ್ಟು ಈ ಸಾಲಿನಲ್ಲಿಯೇ ಈ ಗ್ರಾಮಕ್ಕೆ ಮಿಡಲ್ ಸ್ಕೂಲನ್ನು ದಯಪಾಲಿಸುವುದಾಗಿ ಕೊಟ್ಟಿರುವ ಅಭಯವಚನವು ತುಂಬಾ ಪ್ರೋತ್ಸಾಹಕರವಾಗಿರುವುದು.

ಎಸ್. ಎಲ್. ಮುದ್ದುಬಸವಯ್ಯ,
ಹಾಸ್ಟಲ್ ಮಾನೀಟರ್.

ನೆಲಮಂಗಲ ತಾಲ್ಲೂಕಿನಲ್ಲಿ ಮಿಡಲ್ ಸ್ಕೂಲ್ ಮೂಲಕವಾಗಿ ಆಗಲಿ ಪ್ರೈವೇಟ್ ಆಗಿ ಆಗಲಿ ಲೋವರ್ ಸೆಕೆಂಡರಿ ಎಗ್ಜಾಮಿನೇಷನ್‌ಗೆ ಕಟ್ಟಿರುವ ಮತ್ತು ಇಂಗ್ಲೀಷನ್ನು ಫಸ್ಟ್ ಲಾಂಗ್ವೇಜ್ ಆಗಿಯೂ, ಕನ್ನಡ ಅಥವ ಸಂಸ್ಕೃತವನ್ನು ದ್ವಿತೀಯ ಭಾಷೆಯನ್ನಾಗಿಯೂ ತೆಗೆದುಕೊಂಡು ಹೆಚ್ಚು ರ್‍ಯಾಂಕ್‌ಗಳನ್ನು ಪಡೆದು ಪ್ಯಾಸ್ ಆಗುವ ವೀರಶೈವ ಇಬ್ಬರು ವಿದ್ಯಾರ್ಥಿಗಳಿಗೆ ನೆಲಮಂಗಲದ ವೀರಶೈವ ತರುಣ ಸಂಘದವರ ಪರವಾಗಿ ಮುನಿಸಿಪಲ್ ವೈಸ್‌ಪ್ರೆಸಿಡೆಂಟರಾಗಿರುವ ಮ|| ಎಂ. ಗುಬ್ಬಿ ಹುಚ್ಚಪ್ಪನವರು ಎರಡು ಬೆಳ್ಳಿಯ ಮೆಡಲುಗಳನ್ನು ಉತ್ಸಾಹಪೂರ್ವಕವಾಗಿ ಕೊಡಲು ಒಪ್ಪಿರುತ್ತಾರಾಗಿ ಈ ತಾಲ್ಲೂಕಿನ ವೀರಶೈವ ವಿದ್ಯಾರ್ಥಿಗಳು ಈ ಮೆಡಲುಗಳನ್ನು ಪಡೆಯಲು ಅರ್ಹರಾಗಬೇಕಾಗಿ ಕೋರಿದೆ.

ಎಸ್. ಟಿ. ಮಲ್ಲಶೆಟ್ಟರು, ಪ್ರೆಸಿಡೆಂಟ್,
ರುದ್ರೇಶ್ವರ ತರುಣಸಂಘ.

ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನದ ಸೂತ್ರಾನುವರ್ತಿಗಳಾದ ಹಾಲ್ಕುರಿಕೆ ಮಠದ ಯಲಹಂಕದ ಪಟ್ಟಾಧ್ಯಕ್ಷರಾದ ಶ್ರೀ ಶಿವನಂಜುಂಡ ದೇಶಿಕೇಂದ್ರ ಸ್ವಾಮಿಗಳವರು ತಾ|| 12-1-1924ನೆ ಶನಿವಾರದ ದಿವಸ ಬೇಲೂರು ತಾಲ್ಲೂಕು ಹಳೇಬೀಡು ಹೋಬಳಿ ಯಲಹಂಕದ ಶ್ರೀ ಮಠದಲ್ಲಿ ಶಿವಸಾಯುಜ್ಯವನ್ನು ಹೊಂದಿದರು ಎಂಬ ವರ್ತಮಾನವನ್ನು ಕೇಳಿದ ಶಿಷ್ಯಮಂಡಲಿಗೆಲ್ಲರಿಗೂ ಅಪಾರವಾದ ದುಃಖವನ್ನು ಉಂಟುಮಾಡುತ್ತದೆ. ಇವರಿಗೆ ಪಟ್ಟಾಧಿಕಾರವಾಗಿ ನಾಲ್ವತ್ತುನಾಲ್ಕು ವರುಷವಾಯಿತು. ಈ ಕೈಲಾಸವಾಸಿಗಳಾದ ಸ್ವಾಮಿಗಳವರ ಅಧಿಕಾರದಲ್ಲಿ ಚರಪಟ್ಟಾಧ್ಯಕ್ಷರಾದ ಶ್ರೀಚನ್ನವೃಷಭದೇಶಿಕೇಂದ್ರ ಸ್ವಾಮಿಗಳವರ ಸಹಾಯದಿಂದಲೂ ಶ್ರೀಮನ್ಮಹಾರಾಜರವರ ಕೃಪೆಯಿಂದಲೂ ಚಿಕ್ಕಮಗಳೂರಿನಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು.

ಬಸವೇಶ.

ಮೈಸೂರು ಓಟರುಗಳ ಸನ್ನಿಧಿಯಲ್ಲಿ ಡಿ. ಬಸಮ್ಮಯ್ಯನ ವಿಜ್ಞಾಪನೆಗಳು.

ಪ್ರಜಾಪ್ರತಿನಿಧಿ ಸಭೆಗೆ ನನ್ನನ್ನು ಮೆಂಬರಾಗಬೇಕೆಂದು ನನಗೆ ಕೆಲವು ಜನ ಮಿತ್ರರು ಸೂಚಿಸಿದರು. ಪ್ರಜಾಪ್ರತಿನಿಧಿ ಸಭೆಗೆ ನಾನು ಉಮೇದುವಾರನಾಗಿರುತ್ತೇನೆ. ಫೆಬ್ರವರಿ 15ನೇ ತಾರೀಖಿನಲ್ಲಿ ಆಗತಕ್ಕ ಚುನಾವಣೆಗಳಲ್ಲಿ ಈ ರಾಜಧಾನಿಗೆ ಚುನಾಯಿಸಲ್ಪಡುವ 4 ಜನಗಳಲ್ಲಿ ನಾನೂ ಒಬ್ಬನಾಗಿರುವುದಕ್ಕೆ ಅರ್ಹನೆಂದು ನಿಮಗೆ ತೋರಿದರೆ ದಯವಿಟ್ಟು 4 ಓಟುಗಳಲ್ಲಿ ನನಗೆ ಒಂದು ಓಟನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ದೇವನಹಳ್ಳಿ ತಾಲ್ಲೂಕು ಓಟರುಗಳ ಸನ್ನಿಧಿಯಲ್ಲಿ ಎಸ್. ಎಲ್. ಮುದ್ದುಬಸವಯ್ಯನ ವಿಜ್ಞಾಪನೆ.

ಹುಣಸವಾರನಹಳ್ಳಿ ಶ್ರೀ ಮರದ ಎಸ್. ತೋಂಟಾರ್ಯರವರು 1914 ರಿಂದ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿಯೂ, 1922 ರಿಂದ ಪ್ರಜಾಪ್ರತಿನಿಧಿ ಸಭೆಯ ಮೆಂಬರಾಗಿಯೂ ಪ್ರಜಾಸೇವೆಮಾಡುತ್ತಾ ಬಂದಿರುವುದು ತಮಗೆಲ್ಲಾ ಗೊತ್ತೇ ಇದೆ. ಫೆಬ್ರವರಿ 15 ನೇಯ ತಾರೀಖಿನಲ್ಲಿ ಆಗತಕ್ಕ ಚುನಾವಣೆಗಳಲ್ಲಿ ಶ್ರೀ ಮರದ ಏಜೆಂಟ್ ಎಸ್. ತೋಂಟಾರ್ಯರವರು ಉಮೇದವಾರರಾಗಿ ನಿಂತಿರುತ್ತಾರೆ. ತಾವು ಕೊಡುವ ಓಟುಗಳಲ್ಲಿ ಒಂದನ್ನು ಮ|| ರಾ|| ಎಸ್. ತೋಂಟಾರ್ಯರವರಿಗೆ ಕೊಡಬೇಕೆಂದು ಅತ್ಯಂತ ವಿನಯವಾಗಿ ಪ್ರಾರ್ಥಿಸುತ್ತೇನೆ.

ಪ್ರಜಾಪ್ರತಿನಿಧಿ ಸಭೆಯ ಎಲೆಕ್ಷನ್ ಈ ವರ್ಷದ ಫೆಬ್ರವರಿ ತಾ|| 15 ಕ್ಕೆ ನಡೆಯುವುದು ಸರ್ವಜನಗಳಿಗೂ ಈವರೆಗೇ ತಿಳಿದಿರುವುದು ಸರಿಯಷ್ಟೆ. ಶಿವಮೊಗ್ಗ ಡಿ|| ಸೊರಬ ತಾಲ್ಲೂಕಿನ ಸರ್ವ ಮಹನೀಯರುಗಳಿಗೆ ವಿನಯದಿಂದ ತಿಳಿಸುವುದೇನೆಂದರೆ:—ಈ ತಾಲ್ಲೂಕಿನಿಂದ ಮೂರು ಜನ ಮೆಂಬರುಗಳು ಚುನಾವಣೆಯಾಗಲು ಅವಕಾಶವಿರುವುದು ಮತ್ತು ಇದಕ್ಕೆ ಅನೇಕ ಜನಗಳು ಉಮೇದ್ವಾರರಾಗಿ ನಿಂತಿರುವರು. ಇವರಲ್ಲಿ ಕುಬಟೂರು ಪಟೇಲ್ ಬಸವಂತಯ್ಯನವರು ಒಬ್ಬ ಉಮೇದ್ವಾರರಾಗಿರುವರು. ಇವರು ವಿದ್ಯಾವಂತರಾಗಿಯೂ ಮುಂದಾಳುಗಳಾಗಿಯೂ ಇರುವರು. ಹಿಂದುಳಿದ ಜನಗಳಿಗೆ ಅನೇಕ ವಿಧದಿಂದ ಸಹಾಯಮಾಡುತ್ತಿರುವರಲ್ಲದೆ ನಮ್ಮ ರೈತ ಜನಗಳಿಗೆ ಇರುವ ಅನೇಕ ತೊಂದರೆಗಳನ್ನು ತಿಳಿದವರಾಗಿಯೂ ಅನುಭವಿಸಿದವರಾಗಿಯೂ ಸಹ ಇರುವರು. ನಮಗೆ ಇರುವ ಇಂಥಾ ಅನೇಕ ತೊಂದರೆಗಳನ್ನು ಮಹಾಸಭೆಯಲ್ಲಿ ಚರ್ಚಿಸಿ ನಿವಾರಣೆಮಾಡಲು ಯೋಗ್ಯರಿರುವರು. ಆದ್ದರಿಂದ ಇವರ ಹೆಸರಿಗೆ ಫೆಬ್ರವರಿ ತಾ|| 15 ಕ್ಕೆ ಆನವಟ್ಟಿ ಮತ್ತು ಸೊರಬ ಈ ಗ್ರೂಪುಗಳಿಗೆ ಬಂದು ತಮ್ಮ ಸಮ್ಮತಿಗಳನ್ನು ಕೊಡಬೇಕೆಂದು ವಿನಯದಿಂದ ಕೋರುತ್ತೇನೆ. ಸರ್ವಜನಹಿತೈಷಿ.

ಕೆ. ಯಂ. ಉಜ್ಜಪ್ಪ, ಕುಬಟೂರು.

ಬೆಂಗಳೂರು ಡಿಸ್ಟ್ರಿಕ್ಟಿನಿಂದ ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ ಓಟು ಮಾಡತಕ್ಕ ಮಹಾಶಯರುಗಳಲ್ಲಿ ವಿಜ್ಞಾಪನೆ.

ಬರುವ ಫೆಬ್ರವರಿ ತಾರೀಖು 15ರಲ್ಲಿ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ (ನ್ಯಾಯವಿಧಾಯಕ ಸಭೆಗೆ) ಬೆಂಗಳೂರು ಡಿಸ್ಟ್ರಿಕ್ಟಿನಿಂದ ಒಬ್ಬ ಮೆಂಬರನ್ನು ಚುನಾಯಿಸಲು ನಿರ್ಧರಿಸಿರುವುದು ಸರಿಯಷ್ಟೆ.

ನಾನು ಶ್ರೀಮನ್ಮಹಾರಾಜಾ ಸರ್ಕಾರದವರ ಉದಾರಾಶ್ರಯದಿಂದ ಜಪಾನ್ ಮೊದಲಾದ ದೇಶಪರ್ಯಟನವನ್ನು ಮಾಡಿರುವುದಲ್ಲದೆ, ಲಂಡನ್ನಿನಲ್ಲಿ ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಸಾಮ್ರಾಜ್ಯ ವಸ್ತುಪ್ರದರ್ಶನಕ್ಕೆ (ಎಂಪೈರ್ ಎಕ್ಸಿಬಿಷನ್ನಿಗೆ) ಸರ್ಕಾರದವರಿಂದ ಕಳುಹಿಸಲ್ಪಡಲು ಚುನಾಯಿಸಲ್ಪಟ್ಟಿರುತ್ತೇನೆ. ಪರದೇಶಪರ್ಯಟನದಿಂದಲೂ, ಸ್ವಾನುಭವದಿಂದಲೂ ತಕ್ಕಮಟ್ಟಿಗೆ ನನಗುಂಟಾಗಿರುವ ಲೋಕವ್ಯವಹಾರ ಜ್ಞಾನದಿಂದ ದೇಶಸೇವೆಯನ್ನು ಮಾಡಬೇಕೆಂಬ ಕುತೂಹಲವು ವಿಶೇಷವಾಗಿ ನನಗಿರುವುದರಿಂದಲೂ, ನನ್ನ ಸ್ನೇಹಿತರನೇಕರು ಪ್ರೋತ್ಸಾಹಿಸಿದ್ದರಿಂದಲೂ, ಈ ಸಾರಿ ಚುನಾವಣೆಗೆ ನಾನು ಉಮೇದುವಾರನಾಗಿ ನಿಂತಿರುತ್ತೇನೆ.

ಜನಸಾಮಾನ್ಯಕ್ಕೂ ಪ್ರಯೋಜನವಾಗತಕ್ಕ ದೇಶಾಭಿವೃದ್ಧಿ ಕಾರ್ಯಗಳಲ್ಲಿ ನಾನು ಭಾಗಿಯಾಗಿ, ನನ್ನ ಮನೋಗತವನ್ನನುಸರಿಸಿ ಪ್ರಜಾಪಕ್ಷವಾಗಿ ಕೆಲಸಮಾಡಲು ಸಿದ್ಧನಾಗಿರುತ್ತೇನೆ. ಚುನಾವಣೆಯ ದಿನ ತಾವು ತಪ್ಪದೆ ಗೊತ್ತಾದ ಸ್ಥಳಕ್ಕೆ ಬಂದು ತಮ್ಮ ಅಮೌಲ್ಯವಾದ ಓಟನ್ನು ನನಗೆ ಕೊಡುವುದರಿಂದಲೂ, ನಿಮ್ಮ ಸ್ನೇಹಿತರುಗಳ ಓಟನ್ನು ಕೊಡಿಸುವುದರಿಂದಲೂ ಚುನಾವಣೆಯಲ್ಲಿ ಉತ್ತೀರ್ಣನಾಗುವಂತೆ ಮಾಡುವಿರೆಂದು ಪೂರ್ಣವಾಗಿ ನಂಬಿರುವ,

ಬೆಂಗಳೂರು,
ತಾ|| 7-1-1924.

ತಮ್ಮ ವಿಧೇಯ,
ಪಿ. ಯಂ. ಬಸಪ್ಪ,
(ಆರ್. ಸಾಪಣ್ಣ ಅಂಡ್ ಸನ್).

ಶಿರಾ ತಾಲ್ಲೂಕಿನ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಓಟರುಗಳ ಸನ್ನಿಧಿಯಲ್ಲಿ ಹಾರೋಗೆರೆ ಕೆ. ಪಿ. ಚನ್ನಬಸವಯ್ಯನು ವಿಜ್ಞಾಪಿಸಿಕೊಳ್ಳುವದೇನೆಂದರೆ—

ಮಹಾಶಯರೇ,

ನಮ್ಮ ಶ್ರೀಮನ್ ಮಹಾರಾಜರವರ ಪ್ರಜೆಗಳಿಗೆ ರಾಜಕೀಯ ಸುಧಾರಣೆಗಳರೀತ್ಯಾ ಹೆಚ್ಚು ಸ್ವಾತಂತ್ರ್ಯಗಳು ಲಭವಾಗಿವೆ ಎಂಬ ಅಂಶವು ತಮ್ಮಗಳಿಗೆಲ್ಲಾ ತಿಳಿದೇ ಇರುವದಷ್ಟೆ.

ಈ ಸುಧಾರಣೆಗಳನುಸ್ಸಾರವಾಗಿ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಚುನಾವಣೆಯು 1924ನೇ ಫೆಬ್ರವರಿ 15 ರಲ್ಲಿ ಈ ತಾಲ್ಲೂಕಿಗೆ ಶಿರಾ ಮತ್ತು ಬರಗೂರು, ಈ ಎರಡು ಸ್ಥಳಗಳಲ್ಲಿ ನಡೆಯುವದಾಗಿರುತ್ತೆ. ಈ ಅನುಕೂಲವು ಓಟರು ಮಹಾಶಯರ ಸೌಕರ್ಯಕ್ಕಾಗಿ ಅಂದರೆ ಕಸಬಾ, ಕಳ್ಳಂಬೆಳ್ಳಾ, ಬುಕ್ಕಾಪಟ್ಟಣ ಹೋಬಳಿ ಯವರಿಗೆ ಶಿರಾ ಸೆಂಟರನ್ನಾಗಿಯೂ, ಗೌಡಗೆರೆ, ಹುಲಿಕುಂಟೆ ಹೋಬಳಿಯವರಿಗೆ ಬರಗೂರು ಸೆಂಟರನ್ನಾಗಿಯೂ ಈ ರೀತಿ ಸರ್ಕಾರದವರು ಏರ್ಪಡಿಸಿರುತ್ತಾರೆ. ಬಡಬಗ್ಗರ ಕಷ್ಟನಿವಾರಣೆಗೆ ಬೇಕಾಗುವ ಸಹಾಯವನ್ನು ಕೈಲಾದ ಮಟ್ಟಿಗೂ ಮಾಡುತ್ತಾ ಇದೇ ಶಿರಾ ಟೌನ್ನಲ್ಲಿ ಮೊಕ್ತಾರ್ ಪ್ಲೀಡರಾಗಿದ್ದುಕೊಂಡು ಇರುವುದಲ್ಲದೆ ಈ ತಾಲ್ಲೂಕಿನಲ್ಲಿ ಜವೀನ್ದಾರನಾಗಿಯೂ ಇರತಕ್ಕ ವಿಚಾರ ತಮ್ಮೆಲ್ಲರ ಅವಗಾಹನೆಗೂ ಬಂದಿರತಕ್ಕ ವಿಚಾರವಾಗಿರುತ್ತೆ. ಮೇಲ್ಕಂಡ ತಾರೀಖಿನಲ್ಲಿ ಆಗುವ ರೆಪ್ರಜಂಟೇಟಿವ್ ಅಸೆಂಬ್ಲಿಗೆ ಮೆಂಬರಾಗಲು ಉಮೇದವಾರನಾಗಿ ನಿಂತಿರೋಣದರಿಂದ ತಾವೆಲ್ಲರೂ ಆ ದಿವಸ ಎಷ್ಟು ಕೆಲಸವಿದ್ದಾಗ್ಯೂ ಬಿಟ್ಟು ನನ್ನ ಮೇಲೆ ಅಭಿಮಾನವಿಟ್ಟು ಗೊತ್ತಾದ ಸ್ಥಳಗಳಿಗೆ ದಯಮಾಡಿಸಿ ತಮ್ಮಗಳ ಪರವಾಗಿ ನಾನು ಮೆಂಬರಾಗಿರಲು ತಮ್ಮಗಳ ಇರಾದೆಯನ್ನು ಕೊಟ್ಟು ದೇಶಸೇವೆಯನ್ನು ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ಬೇಡುತ್ತೇನೆ.

ತುಮಕೂರು ಡಿಸ್ಟ್ರಿಕ್ಟ್ ನ್ಯಾಯನಿರ್ಮಾಣ ಸಭೆ (ಲೆಜಿಸ್ಲೇಟಿವ್ ಕೌನ್ಸಿಲ್) ಓಟರುಗಳ ಸನ್ನಿಧಿಯಲ್ಲಿ ತಿಪಟೂರು ದೇಶಮುದ್ರೆ ಶಂಕರಪ್ಪನವರ ಮಗ ಮಲ್ಲಪ್ಪನ ವಿಜ್ಞಾಪನೆಗಳು.

ಮಹಾಶಯರೆ,

ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ಪ್ರಜೆಗಳಿಗೆ ದಯಪಾಲಿಸಿರುವ ರಾಜಕೀಯ ಸುಧಾರಣೆಗಳ ಪ್ರಕಾರ ಬರುವ ಫೆಬ್ರವರಿ ತಾರೀಖು 15 ರಲ್ಲಿ ನ್ಯಾಯನಿರ್ಮಾಣ ಸಭೆಯ (Legislative Council) ಚುನಾವಣೆಯು ಪ್ರತಿ ತಾಲ್ಲೋಕು ಮತ್ತು ಕೆಲವು ಹೋಬಳಿ ಹೆಡ್ ಕ್ವಾರ್ಟರಿನಲ್ಲಿಯೂ ನಡೆಯುತ್ತದೆ. ನಾನು ಇದುವರೆಗೆ ಸುಮಾರು ಐದು ವರ್ಷಗಳಿಂದ ತಿಪಟೂರು ತಾಲ್ಲೋಕಿನಿಂದ ಪ್ರಜಾಪ್ರತಿನಿಧಿ ಸಭೆಗೆ ಚುನಾಯಿಸಲ್ಪಟ್ಟು ಜನಗಳ ಏಳಿಗೆಗೆ ಪ್ರಯತ್ನಮಾಡಿರುತ್ತೇನಲ್ಲದೆ ಮುನಿಸಿಪಾಲಿಟಿಯ ಮೆಂಬರಾಗಿಯೂ ಸಹ ಕೆಲಸ ಮಾಡಿರುತ್ತೇನೆ. ಮುಂದೆ ಈ ಡಿಸ್ಟ್ರಿಕ್ಟಿನ ಪ್ರಜಾಸೇವೆಯನ್ನು ಮಾಡಲು ನಿಲ್ಲಬೇಕೆಂದು ಅನೇಕ ಸ್ನೇಹಿತರು ನನ್ನನ್ನು ಪ್ರೋತ್ಸಾಹಿಸಿದ್ದರಿಂದ ಈ ಸಾರಿ ನ್ಯಾಯವಿಧಾಯಕ ಸಭೆಗೂ ತುಮಕೂರು ಡಿಸ್ಟ್ರಿಕ್ಟಿನ ಪರವಾಗಿ ಚುನಾವಣೆಗೆ ನಿಂತಿರುತ್ತೇನೆ. ಗ್ರಾಮಾಂತರ ಪ್ರಜೆಗಳು ವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲತೆಗಳಿಲ್ಲದೆ ಕೇವಲ ಹಿಂದುಳಿದಿರುವರಲ್ಲದೆ ವೈದ್ಯಸಹಾಯ, ರಕ್ಷಣೆ ಇವುಗಳ ಸಹಾಯಗಳನ್ನೂ ಸಹ ಪಡೆಯದವರಾಗಿರುತ್ತಾರೆ. ಈ ವಿಚಾರಗಳಲ್ಲಿಯೂ ಮತ್ತು ಅವರ ಏಳಿಗೆಗೆ ಬೇಕಾದ ಇತರ ಎಲ್ಲಾ ವಿಚಾರಗಳಲ್ಲಿಯೂ ಅವರುಗಳ ಪರವಾಗಿ ಕೆಲಸ ಮಾಡಿ ಅವರ ಅನುಕೂಲಗಳನ್ನು ಹೆಚ್ಚಿಸಬೇಕೆಂಬುದೇ ನನ್ನ ಉದ್ದಿಶವಾಗಿದೆ. ಪಟ್ಟಣವಾಸಿಗಳ ಏಳಿಗೆಗೆ ಬೇಕಾದ ಕಾರ್ಯಗಳಲ್ಲಿಯೂ ಕೂಡ ನನ್ನ ಕೈಲಾದ ಮಟ್ಟಿಗೂ ಕೆಲಸ ಮಾಡಲು ಸಿದ್ಧನಾಗಿರುತ್ತೇನೆ. ತಾವು ತಮ್ಮ ಅಮೋಘವಾದ ಓಟನ್ನು ಕೊಟ್ಟು ಪ್ರಜಾಪಕ್ಷದ ಪ್ರತಿನಿಧಿಯಾಗಿ ನ್ಯಾಯನಿರ್ಮಾಣ ಸಭೆಯಲ್ಲಿ ಕೆಲಸ ಮಾಡಲು ಅವಕಾಶವನ್ನು ನನಗೆ ಉಂಟುಮಾಡಿ ಕೊಡಬೇಕಾಗಿ ಪ್ರಾರ್ಥನೆ.

ಬೆಂಗಳೂರು ಸಿಟಿಯ ಓಟರು ಮಹಾಶಯರುಗಳಲ್ಲಿ ವಿಜ್ಞಾಪನೆ.

ನೂತನ ರಾಜಕೀಯಸಂಸ್ಕರಣ ಕ್ರಮವನ್ನನುಸರಿಸಿ ಮೈಸೂರು ಪ್ರಜಾಪ್ರತಿನಿಧಿ ಸಭೆ (ರೆಪ್ರೆಜೆಂಟೇಟಿವ್ ಅಸೆಂಬ್ಲಿ) ಗೆ ಮೆಂಬರುಗಳನ್ನು ಚುನಾಯಿಸಲು 1924ನೆ ಫೆಬ್ರವರಿ ತಾರೀಖು 15ನೆಯ ಶುಕ್ರವಾರದ ದಿವಸ ಗೊತ್ತುಮಾಡಲ್ಪಟ್ಟಿರುವುದು ಸರಿಯಷ್ಟೆ. ಆ ದಿವಸ ಪ್ರತಿಯೊಬ್ಬ ಓಟರೂ ಗೊತ್ತಾದಸ್ಥಳಕ್ಕೆ ಬಂದು ನಾಲ್ಕು ಜನರಿಗೆ ತಮ್ಮ ಓಟುಗಳನ್ನು ಕೊಡಲು ಅಧಿಕಾರವುಳ್ಳವರಾಗಿರುತ್ತಾರೆ.

ನಾನು ಈಗ್ಗೆ ಸುಮಾರು ೫ ವರ್ಷಗಳಿಗೆ ಮೇಲ್ಪಟ್ಟಾಗಿನಿಂದಲೂ ಪ್ರಜಾಪ್ರತಿನಿಧಿಸಭೆಯ ಮೆಂಬರಾಗಿದ್ದೆನಲ್ಲದೆ ತನ್ಮೂಲಕ ನ್ಯಾಯವಿಧಾಯಕಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಮತ್ತು ಸಂಪದಭಿವೃದ್ಧಿ ಸಮಾಜದ (ಎಕನಾಮಿಕ್ ಕಾನ್ಫರೆನ್ಸಿನ) ಮೆಂಬರಾಗಿ ಚುನಾಯಿಸಲ್ಪಟ್ಟಿದ್ದೆನು. ಮತ್ತು ಸಂಸ್ಥಾನದ ಎಲ್ಲಾ ಜನವರ್ಗದವರಿಗೂ ಸರ್ಕಾರಿಯುದ್ಯೋಗವು ದೊರಕಲು ಅವಕಾಶವನ್ನು ಕಲ್ಪಿಸಿಕೊಡುವುದಕ್ಕಾಗಿ ಸರ್ಕಾರದಿಂದೇರ್ಪಟ್ಟಿರುವ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡಿನಲ್ಲೂ, ಬೆಂಗಳೂರು ಡಿಸ್ಟ್ರಿಕ್ಟ್ ಆಡ್‌ಹಾಕ್ ಸ್ಕಾಲರ್‌ಷಿಪ್ ಕಮಿಟಿಯಲ್ಲೂ, ಕಳೆದೊಂದು ವರ್ಷದಿಂದ ಮೈಸೂರು ಯೂನಿವರ್ಸಿಟಿಯ ಸೆನೇಟಿನಲ್ಲೂ ಮೆಂಬರಾಗಿಯೂ, ಮೈಸೂರು ವೀರಶೈವ ವಿದ್ಯಾವರ್ಧಕಫಂಡ್ ಸಂಘದ ಸೆಕ್ರೆಟರಿಯಾಗಿಯೂ ಇದ್ದುಕೊಂಡು ಪ್ರಜಾಪಕ್ಷವನ್ನು ವಹಿಸಿ ದೇಶದ ಸರ್ವತೋಮುಖವಾದ ಏಳ್ಗೆಯನ್ನೇ ಗಮನದಲ್ಲಿಟ್ಟುಕೊಂಡು ಕೆಲಸಮಾಡುತ್ತಿದ್ದೇನೆ.

ದೇಶಸೇವೆಯನ್ನು ಮಾಡಲು ವಿಶೇಷ ಕುತೂಹಲವುಳ್ಳವನಾಗಿರುವುದರಿಂದಲೂ, ಈಸಲದ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಚುನಾವಣೆಯಲ್ಲಿ ನಾನೊಬ್ಬ ಉಮೇದುವಾರನಾಗಿ ನಿಂತುಕೊಳ್ಳಬೇಕೆಂದು ನನ್ನ ಮಿತ್ರರನೇಕರು ಪ್ರೋತ್ಸಾಹವನ್ನು ಮಾಡಿದುದರಮೇಲೂ ಉಮೇದುವಾರನಾಗಿ ನಿಂತಿರುತ್ತೇನೆ.

ನನ್ನ ಕಾರ್ಯದಕ್ಷತೆಯಲ್ಲಿ ನಿಮಗೆ ಭರವಸೆಯಿದ್ದಲ್ಲಿ ನನಗೆ ತಮ್ಮ ಅಮೌಲ್ಯವಾದ ಓಟನ್ನು ಕೊಟ್ಟೂ, ತಮ್ಮ ಮಿತ್ರರ ಓಟನ್ನು ಕೊಡಿಸಿಯೂ ಅವಕಾಶವನ್ನು ಕಲ್ಪಿಸಿಕೊಟ್ಟಲ್ಲಿ ನನ್ನಲ್ಲಿ ತಮಗಿರುವ ನಂಬುಗೆ ವಿಶ್ವಾಸಗಳನ್ನು ವ್ಯರ್ಥಗೊಳಿಸದೆ ಇನ್ನು ಮುಂದೆಯೂ ದೇಶಸೇವೆಯನ್ನು ಮಾಡಲು ಸಿದ್ಧನಾಗಿರುವೆನೆಂದೂ, ಈ ನನ್ನ ಸವಿನಯಪ್ರಾರ್ಥನೆಯನ್ನು ತಾವು ನೆರವೇರಿಸಿಕೊಡುವಿರೆಂದೂ ನಂಬಿರುವ, ತಮ್ಮ ವಿಧೇಯ,

ಬೆಂಗಳೂರು ಸಿಟಿ,
ತಾ|| 10-1-24.

ಜಿ. ಪರಮಶಿವಯ್ಯ,
ಬಿ.ಎ.,ಎಲ್‌ಎಲ್.ಬಿ., ಅಡ್ವೊಕೇಟ್.

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:—ನಾನು ಕಾತ್ಯನಹಳ್ಳಿ ಶಿವಲಿಂಗಯ್ಯನ ತಮ್ಮ ಹಳ್ಳದರಾಮನೆಂಬುವನನ್ನು 8-9 ವರ್ಷಗಳ ಹಿಂದೆ ನಾನು ಅಪುತ್ರವಂತನಾದುದರಿಂದ ಮಗನನ್ನಾಗಿಮಾಡಿಕೊಂಡಿದ್ದೆ. ಆತನು ಈಗ್ಗೆ 6 ವರ್ಷಗಳ ಹಿಂದೆ ಕಾಲವಾದನು. ಆತನ ಹೆಂಡತಿ ಶಿದ್ದಿ ಎಂಬುವಳು ಅಂದಿನಿಂದ ಎಲ್ಲೆಲ್ಲೊ ಮನಸ್ಸಿ ತಿರುಗುತ್ತಾ ದುರ್ಮಾರ್ಗದಲ್ಲಿ ಪ್ರವರ್ತಿಸಿರುತ್ತಾಳೆ. ಈಕೆಯ ಚಾಲುಚಲನ್ ಚನ್ನಾಗಿರುವುದಿಲ್ಲ. ಈಗ ಈಕೆ ಗರ್ಭಿಣಿಯಾಗಿದ್ದಾಳೆಂಬುದನ್ನು ಕೇಳುತ್ತೇನೆ. ಈಕೆಗೆ ನನ್ನ ಆಸ್ತಿಗಳಲ್ಲಿ ಜೀವನಾಂಶ ಭಾಗಾಂಶ ವಗೈರೆ ಯಾವುದೂ ಸೇರತಕ್ಕದ್ದಿರುವುದಿಲ್ಲ. ಈಕೆಯಿಂದ ಯಾರಾದರೂ, ಯಾವ ವಿಧವಾದ ಪರಭಾರೆಮಾಡಿಸಿಕೊಂಡಲ್ಲಿ ಅದು ಊರ್ಜಿತವಾಗುವುದಿಲ್ಲವೆಂಬ ಸಂಗತಿ ಈ ಮೂಲಕ ಎಚ್ಚರಿಸಿದ್ದೇನೆ.

ತಾ|| 2-2-1924. **ನಂಜಣ್ಣನ ಮಗ ಭೈರಣ್ಣ**
ಹರಳಕಟ್ಟೆ, ಅರಸೀಕೆರೆ. ತಾ||

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—6—0 25 ಬಾಟ್ಲುಗಳಿಗೆ 4—8—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್ ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ನೀವು ಇಷ್ಟಪಟ್ಟ ನಮೂನೆಯಲ್ಲಿ ನೀವು ಅಪೇಕ್ಷಿಸುವ ಭಾಷೆಯಿಂದ ನಿಮ್ಮ ಹೆಸರು ವಿಳಾಸಗಳ ರಬ್ಬರ್ ಮೊಹರನ್ನು ಅಂದವಾಗಿ ತಯಾರಿಸಿ ಕೊಡುತ್ತಾರೆ.

ಹಾರ್ಮೋನಿಯಂಗಳನ್ನೂ ಪೌಂಟೆನ್‌ಪೆನ್‌ಗಳನ್ನೂ ತೃಪ್ತಿಕರವಾಗಿ ರಿಪೇರೀ ಮಾಡಿಕೊಡುತ್ತಾರೆ.

ಹೆಚ್ಚು ವಿಷಯಗಳಿಗೆ ಇವರ ಕಂಪನಿಯ ಕ್ಯಾಟಲಾಗ್‌ನ್ನು ತರಿಸಿನೋಡಿರಿ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು,
[50—20] ಮೈಸೂರು.

ಇನ್‌ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್,
(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ. ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—12] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

೧೯೨೪ನೆಯ ಇಸವಿ ಫೆಬ್ರವರಿ ತಾ|| ೩ರಿಂದ ೧೯೨೪ನೆಯ ಫೆಬ್ರವರಿ ತಾ|| ೯ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಪುಷ್ಯ ಬಹುಳ ತ್ರಯೋದಶಿಯಿಂದ ಮಾಘಶುದ್ಧ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮುಸ ಮಾಸ
3	ಭಾನು	ತ್ರಯೋ	7-15	ಪೂಷಾ	8-30	21
4	[1]ಸೋಮ	ಚತು	3-20	ಉಷಾ	6-22	22
5	ಮಂಗಳ	ಅ-ಉ	0-28 57-28	ಶ್ರವ	5-14	23
6	[2]ಬುಧ	ಬಿದಿ	58-12	ಧನಿ	5-18	24
7	[3]ಗುರು	ತದಿ	59-6	ಶತ	7-33	25
8	[4]ಶುಕ್ರ	ಚೌತಿ	60-0	ಪೂಭಾ	9-2	26
9	ಶನಿ	ಚೌತಿ	1-32	ಉಭಾ	12-36	27

(1) ಸರ್ವತ್ರ ಅಮಾವಾಸ್ಯ. (2) ಮಾಘಸ್ನಾನಾರಂಭ, ಮಾಘಗೌರೀಪೂಜಾ. (3) ಕೈಲಾಸಗೌರೀಮೌನ ಗೌರೀವ್ರತಂ. (4) ಕುಂದಗಣಪತಿವ್ರತಂ, ತಿಲಚತುರ್ಥಿ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ... ಟಿಸಲ್ಪಡುವದು.

[ವಾರ್ಷಿಕಚಂದಾ ೧-೧೦-೦] [... ೨-೧೦-೦]

ಸಂಪುಟ ೩೬) ಮೈಸೂರ್ ಸ್ಟಾರ್ ಸರ್ ೧೯೨೪ನೆಯ ಇಸವಿ ಫೆಬ್ರವರಿ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ ೬

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಕೃಶಾವತಾರಾ ಪಕ್ಷಜ ನಕ್ಷತ್ರ ಮೋಹರಾಜೀಯಾನ್
ಶ್ರೀಮತ್ಕೃಷ್ಣನೃಪಾಲಸುತ್ತ ಮಕಲಾಲೋಲಂಸುಧೀಪುಂಗವ | ವಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಮಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

ಬಸವ ಸಮಿತಿ ಬೆಂಗಳೂರು

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಛಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಪ್ಲುಯೆನ್ಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ವೈಶ್ವಾನರಾಸವ.

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳನ್ನು ಗುಣಪಡಿಸುವ ನಂಬುಗೆಯಾದೌಷಧಿ.

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲೀ ಇಲ್ಲ. ಈ ಔಷಧಿಯನ್ನು ಕೊಟ್ಟ ಮೊದಲನೇ ನಿಮಿಷದಿಂದಲೇ ರೋಗವು ಸ್ವಾಧೀನಕ್ಕೆ ಬಂದು ಕ್ರಮವಾಗಿ ಗುಣವಾಗುತ್ತದೆ.

1 ಸೀಸೆ ಬೆಲೆ 1—0—0. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾ. ಜೆ. ಬಿ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು. ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಡಬ್ಬಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—24] ಪೋ. ಬಾ. ೫೧೦, ಮದರಾಸು.

(Registered Trade Mark)

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ. ಪಿ. ಸೇರಿ)
ಶೈವ ಶಿವಪೂಜಾವಿಧಿ	೦—೧೨—೦	೧—೨—೦
ಳ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಲವಿದ್ಯಾ	೦—೪—೦	೦—೯—೦
ರುಷೀಲಚರಿತ್ರೆ	೦—೫—೦	೦—೧೦—೦
ವಾಸಿ	೦—೪—೦	೦—೯—೦
ಪಂಚಕ	೦—೪—೦	೦—೯—೦
ಕಂಠಕೇಶ್ವರಶತಕ	೦—೧—೦	೦—೬—೦
ಮ್ಮರಚಿತನ	೦—೮—೦	೦—೧೩—೦

ಉತ್ತಮವಾದ ವೀರಶೈವ ಮತಗ್ರಂಥಗಳು.

	ಕ್ರಯ.
ವೀರಶೈವ ಷಟ್‌ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಟೀ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—11] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.
ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಿಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಿಕೆ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ಕೆಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಪ್ಪರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೇಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತುಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೋಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮುಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವಂ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಿ ಮಿಶ್ರಿ, ವಂಶಲೋಚನ, ಸಾಲಮಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ. ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮನೆವ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾಲಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯೆಯಿಲ್ಲ. ೨೧ ದಿವಸ ಸಾಲುವ ೪೨ ತೊಲಿ ಪಾಕಿಗೆ ೫|| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣ ತ್ವರೆಮಾಡಿರಿ.

[50—27] ಪತ್ತಾ:—ವೈದ್ಯ ಎ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿ
[50—5] ಅಂಡ್ ಸನ್ಸ್, ಜೆ. ಪಿ. ಮಂಡಲಿ, ಮೈಸೂರು.

ಶ್ರೀ ರಕ್ತಾಕ್ಷಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

ಈಗ್ಗೆ ಐದುವರ್ಷಗಳಿಂದ - ಕಲ್ಬುರ್ಗಿ - ಹೆಸರಿನಿಂದ ಹೊರಡತಕ್ಕ ಪಂಚಾಂಗವೇ ಈ ವರ್ಷ (ರಾಯಚೂರು ಗ್ರಾಮದಿಂದ ಹೊರಟಿರುತ್ತದೆ). ಈ ಪಂಚಾಂಗದಲ್ಲಿ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಾದ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶ ರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ಇದಲ್ಲದೆ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ, ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಆದರೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು. ಕಾಗದ ಮೊದಲಾದವುಗಳ ಬೆಲೆಯು ಗತವರ್ಷಕ್ಕಿಂತಲೂ ಹೆಚ್ಚಾಗಿದ್ದರೂ ತಮಗೆ ವರ್ಷಂಪ್ರತಿ ಕೊಡುತ್ತಿದ್ದ ಬೆಲೆಯಂತೆಯೇ ಈವರ್ಷವೂ ಕೊಡುತ್ತೇವೆ. ಹಿಂದಣ ವರ್ಷಕ್ಕಿಂತಲೂ ಹೆಚ್ಚಿಗೆ ಕಾಪಿಗಳನ್ನು ತರಿಸಿಕೊಂಡು ಸಹಾಯಮಾಡಿರಿ. (25) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ 100 ಕ್ಕೆ 20 ರೂಪಾಯಿಗಳು. (100) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ 500ಕ್ಕೆ 16. (500) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ (1000)ಕ್ಕೆ 13 ರೂ. ಇದರಂತೆ ಕೊಡುವೆವು. ಇದಕ್ಕಿಂತಲೂ ಕಡಿಮೆಬೆಲೆಯಿಂದ ಯಾರಿಗೂ ಕೊಡುವದಿಲ್ಲ. ಮತ್ತು (5) ಪಂಚಾಂಗಗಳನ್ನು ಒಂದೇಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಪೇಕ್ಷೆಯುಳ್ಳವರು ಬೇಗನೆ ಆರ್ಡರ್ ಕೊಡಿರಿ. ಚಿಲ್ಲರೆ ಒಂದಕ್ಕೆ ನಾಲ್ಕಾಣೆ.

ವಿಳಾಸ—ಬ್ರ|| ಶ್ರೀ|| ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿಗಳು,
ಜ್ಯೋತಿಷ ಪಾಠಶಾಲಾ,
[12-3] ರಾಯಚೂರು ಡಿ||

ಮೈಸೂರು ಓಟರುಗಳ ಸನ್ನಿಧಿಯಲ್ಲಿ ಡಿ. ಬಸುಮೈಯ್ಯನ ವಿಜ್ಞಾಪನೆಗಳು.

ಪ್ರಜಾಪ್ರತಿನಿಧಿ ಸಭೆಗೆ ನನ್ನನ್ನು ಮೆಂಬರಾಗಬೇಕೆಂದು ನನಗೆ ಕೆಲವು ಜನ ಮಿತ್ರರು ಸೂಚಿಸಿದರು. ಪ್ರಜಾಪ್ರತಿನಿಧಿ ಸಭೆಗೆ ನಾನು ಉಮೇದುವಾರನಾಗಿರುತ್ತೇನೆ. ಫೆಬ್ರವರಿ 15ನೇ ತಾರೀಖಿನಲ್ಲಿ ಆಗತಕ್ಕ ಚುನಾವಣೆಗಳಲ್ಲಿ ಈ ರಾಜಧಾನಿಗೆ ಚುನಾಯಿಸಲ್ಪಡುವ 4 ಜನಗಳಲ್ಲಿ ನಾನೂ ಒಬ್ಬನಾಗಿರುವುದಕ್ಕೆ ಅರ್ಹನೆಂದು ನಿಮಗೆ ತೋರಿದರೆ ದಯವಿಟ್ಟು 4 ಓಟುಗಳಲ್ಲಿ ನನಗೆ ಒಂದು ಓಟನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ದೇವನಹಳ್ಳಿ ತಾಲ್ಲೂಕು ಓಟರುಗಳ ಸನ್ನಿಧಿಯಲ್ಲಿ ಎಸ್. ಎಲ್. ಮುದ್ದುಬಸವಯ್ಯನ ವಿಜ್ಞಾಪನೆ.

ಹುಣಸಮಾರನಹಳ್ಳಿ ಶ್ರೀ ಮಠದ ಎಸ್. ಕೊಂಟಾರ್ಯರವರು 1914 ರಿಂದ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರಾಗಿಯೂ, 1922 ರಿಂದ ಪ್ರಜಾಪ್ರತಿನಿಧಿ ಸಭೆಯ ಮೆಂಬರಾಗಿಯೂ ಪ್ರಜಾಸೇವೆಮಾಡುತ್ತಾ ಬಂದಿರುವುದು ತಮಗೆಲ್ಲಾ ಗೊತ್ತೇ ಇದೆ. ಫೆಬ್ರವರಿ 15 ನೇಯ ತಾರೀಖಿನಲ್ಲಿ ಆಗತಕ್ಕ ಚುನಾವಣೆಗಳಲ್ಲಿ ಶ್ರೀ ಮಠದ ಏಜೆಂಟ್ ಎಸ್. ಕೊಂಟಾರ್ಯರವರು ಉಮೇದವಾರರಾಗಿ ನಿಂತಿರುತ್ತಾರೆ. ತಾವು ಕೊಡುವ ಓಟುಗಳಲ್ಲಿ ಒಂದನ್ನು ಮ|| ರಾ|| ಎಸ್. ಕೊಂಟಾರ್ಯರವರಿಗೆ ಕೊಡಬೇಕೆಂದು ಅತ್ಯಂತ ವಿನಯವಾಗಿ ಪ್ರಾರ್ಥಿಸುತ್ತೇನೆ.

ಪ್ರಜಾಪ್ರತಿನಿಧಿ ಸಭೆಯ ಎಲೆಕ್ಷನ್ ಈ ವರ್ಷದ ಫೆಬ್ರವರಿ ತಾ|| 15 ಕ್ಕೆ ನಡೆಯುವುದು ಸರ್ವಜನಗಳಿಗೂ ಈವೊದಲೇ ತಿಳಿದಿರುವುದು ಸರಿಯಷ್ಟೆ. ಶಿವಮೊಗ್ಗ ಡಿ|| ಸೊರಬ ತಾಲ್ಲೂಕಿನ ಸರ್ವ ಮಹನೀಯರುಗಳಿಗೆ ವಿನಯದಿಂದ ತಿಳಿಸುವುದೇನೆಂದರೆ:—ಈ ತಾಲ್ಲೂಕಿನಿಂದ ಮೂರು ಜನ ಮೆಂಬರುಗಳು ಚುನಾವಣೆಯಾಗಲು ಅವಕಾಶವಿರುವುದು ಮತ್ತು ಇದಕ್ಕೆ ಅನೇಕ ಜನಗಳು ಉಮೇದ್ವಾರರಾಗಿ ನಿಂತಿರುವರು. ಇವರಲ್ಲಿ ಕುಬಟೂರು ಪಟೇಲ್ ಬಸವಂತಯ್ಯನವರು ಒಬ್ಬ ಉಮೇದ್ವಾರರಾಗಿರುವರು. ಇವರು ವಿದ್ಯಾವಂತರಾಗಿಯೂ ಮುಂದಾಳುಗಳಾಗಿಯೂ ಇರುವರು. ಹಿಂದುಳಿದ ಜನಗಳಿಗೆ ಅನೇಕ ವಿಧದಿಂದ ಸಹಾಯಮಾಡುತ್ತಿರುವರಲ್ಲದೆ ನಮ್ಮ ರೈತ ಜನಗಳಿಗೆ ಇರುವ ಅನೇಕ ತೊಂದರೆಗಳನ್ನು ತಿಳಿದವರಾಗಿಯೂ ಅನುಭವಿಸಿದವರಾಗಿಯೂ ಸಹ ಇರುವರು. ನಮಗೆ ಇರುವ ಇಂಥಾ ಅನೇಕ ತೊಂದರೆಗಳನ್ನು ಮಹಾಸಭೆಯಲ್ಲಿ ಚರ್ಚಿಸಿ ನಿವಾರಣೆಮಾಡಲು ಯೋಗ್ಯರಿರುವರು. ಆದ್ದರಿಂದ ಇವರ ಹೆಸರಿಗೆ ಫೆಬ್ರವರಿ ತಾ|| 15 ಕ್ಕೆ ಆನವಟ್ಟಿ ಮತ್ತು ಸೊರಬ ಈ ಗ್ರೂಪುಗಳಿಗೆ ಬಂದು ತಮ್ಮ ಸಮ್ಮತಿಗಳನ್ನು ಕೊಡಬೇಕೆಂದು ವಿನಯದಿಂದ ಕೋರುತ್ತೇನೆ. ಸರ್ವಜನಹಿತೈಷಿ.

ಕೆ. ಯಂ. ಉಜ್ಜಪ್ಪ, ಕುಬಟೂರು.

ಬೆಂಗಳೂರು ಡಿಸ್ಟ್ರಿಕ್ಟಿನಿಂದ ಲೆಜಿಸ್ಲೆಟಿವ್ ಕೌನ್ಸಿಲ್ಲಿಗೆ ಓಟು ಮಾಡತಕ್ಕ ಮಹಾಶಯರುಗಳಲ್ಲಿ ವಿಜ್ಞಾಪನೆ.

ಬರುವ ಫೆಬ್ರವರಿ ತಾರೀಖು 15ರಲ್ಲಿ ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ಲಿಗೆ (ನ್ಯಾಯವಿಧಾಯಕ ಸಭೆಗೆ) ಬೆಂಗಳೂರು ಡಿಸ್ಟ್ರಿಕ್ಟಿನಿಂದ ಒಬ್ಬ ಮೆಂಬರನ್ನು ಚುನಾಯಿಸಲು ನಿರ್ಧರಿಸಿರುವುದು ಸರಿಯಷ್ಟೆ.

ನಾನು ಶ್ರೀಮನ್ಮಹಾರಾಜಾ ಸರ್ಕಾರದವರ ಉದಾರಾಶ್ರಯದಿಂದ ಜಪಾನ್ ಮೊದಲಾದ ದೇಶಪರ್ಯಟನವನ್ನು ಮಾಡಿರುವುದಲ್ಲದೆ, ಲಂಡನ್ನಿನಲ್ಲಿ ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಸಾಮ್ರಾಜ್ಯ ವಸ್ತುಪ್ರದರ್ಶನಕ್ಕೆ (ಎಂಪೈರ್ ಎಕ್ಸಿಬಿಷನ್‌ಗೆ) ಸರ್ಕಾರದವರಿಂದ ಕಳುಹಿಸಲ್ಪಡಲು ಚುನಾಯಿಸಲ್ಪಟ್ಟಿರುತ್ತೇನೆ. ಪರದೇಶಪರ್ಯಟನದಿಂದಲೂ, ಸ್ವಾನುಭವದಿಂದಲೂ ತಕ್ಕಮಟ್ಟಿಗೆ ನನಗುಂಟಾಗಿರುವ ಲೋಕವ್ಯವಹಾರ ಜ್ಞಾನದಿಂದ ದೇಶಸೇವೆಯನ್ನು ಮಾಡಬೇಕೆಂಬ ಕುತೂಹಲವು ವಿಶೇಷವಾಗಿ ನನಗಿರುವುದರಿಂದಲೂ, ನನ್ನ ಸ್ನೇಹಿತರನೇಕರು ಪ್ರೋತ್ಸಾಹಿಸಿದ್ದರಿಂದಲೂ, ಈ ಸಾರಿ ಚುನಾವಣೆಗೆ ನಾನು ಉಮೇದುವಾರನಾಗಿ ನಿಂತಿರುತ್ತೇನೆ.

ಜನಸಾಮಾನ್ಯಕ್ಕೂ ಪ್ರಯೋಜನವಾಗತಕ್ಕ ದೇಶಾಭಿವೃದ್ಧಿ ಕಾರ್ಯಗಳಲ್ಲಿ ನಾನು ಭಾಗಿಯಾಗಿ, ನಿಮ್ಮ ಮನೋಗತವನ್ನನುಸರಿಸಿ ಪ್ರಜಾಪಕ್ಷವಾಗಿ ಕೆಲಸಮಾಡಲು ಸಿದ್ಧನಾಗಿರುತ್ತೇನೆ. ಚುನಾವಣೆಯ ದಿನ ತಾವು ತಪ್ಪದೆ ಗೊತ್ತಾದ ಸ್ಥಳಕ್ಕೆ ಬಂದು ತಮ್ಮ ಅಮೌಲ್ಯವಾದ ಓಟನ್ನು ನನಗೆ ಕೊಡುವುದರಿಂದಲೂ, ನಿಮ್ಮ ಸ್ನೇಹಿತರುಗಳ ಓಟನ್ನು ಕೊಡಿಸುವುದರಿಂದಲೂ ಚುನಾವಣೆಯಲ್ಲಿ ಉತ್ತೀರ್ಣನಾಗುವಂತೆ ಮಾಡುವಿರೆಂದು ಪೂರ್ಣವಾಗಿ ನಂಬಿರುವ,

ಬೆಂಗಳೂರು,
ತಾ|| 7-1-1924.

ತಮ್ಮ ವಿಧೇಯ,
ಪಿ. ಯಂ. ಬಸಪ್ಪ,
(ಆರ್. ಪಾಪಣ್ಣ ಅಂಡ್ ಸನ್).

ಶಿರಾ ತಾಲ್ಲೂಕಿನ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಓಟರುಗಳ ಸನ್ನಿಧಿಯಲ್ಲಿ ಹಾರೋಗೆರೆ ಕೆ. ಪಿ. ಚನ್ನಬಸವಯ್ಯನು ವಿಜ್ಞಾಪಿಸಿಕೊಳ್ಳುವದೇನೆಂದರೆ—

ಮಹಾಶಯರೇ,

ನಮ್ಮ ಶ್ರೀಮನ್ ಮಹಾರಾಜರವರ ಪ್ರಜೆಗಳಿಗೆ ರಾಜಕೀಯ ಸುಧಾರಣೆಗಳರೀತ್ಯಾ ಹೆಚ್ಚು ಸ್ವಾತಂತ್ರ್ಯಗಳು ಲಭವಾಗಿವೆ ಎಂಬ ಅಂಶವು ತಮ್ಮಗಳಿಗೆಲ್ಲಾ ತಿಳಿದೇ ಇರುವದಷ್ಟೆ.

ಈ ಸುಧಾರಣೆಗಳಿಗನುಸಾರವಾಗಿ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಚುನಾವಣೆಯು 1924ನೇ ಫೆಬ್ರವರಿ 15 ರಲ್ಲಿ ಈ ತಾಲ್ಲೂಕಿಗೆ ಶಿರಾ ಮತ್ತು ಬರಗೂರು, ಈ ಎರಡು ಸ್ಥಳಗಳಲ್ಲಿ ನಡೆಯುವದಾಗಿರುತ್ತೆ. ಈ ಅನುಕೂಲವು ಓಟರು ಮಹಾಶಯರ ಸೌಕರ್ಯಕ್ಕಾಗಿ ಅಂದರೆ ಕಸಬಾ, ಕಳ್ಳಂಬೆಳ್ಳ, ಬುಕ್ಕಾಪಟ್ಟಣ ಹೋಬಳಿ ಯವರಿಗೆ ಶಿರಾ ಸೆಂಟರನ್ನಾಗಿಯೂ, ಗೌಡಗೆರೆ, ಹುಲಿಕುಂಟೆ ಹೋಬಳಿಯವರಿಗೆ ಬರಗೂರು ಸೆಂಟರನ್ನಾಗಿಯೂ ಈ ರೀತಿ ಸರ್ಕಾರದವರು ಏರ್ಪಡಿಸಿರುತ್ತಾರೆ. ಬಡಬಗ್ಗರ ಕಷ್ಟನಿವಾರಣೆಗೆ ಬೇಕಾಗುವ ಸಹಾಯವನ್ನು ಕೈಲಾದ ಮಟ್ಟಿಗೂ ಮಾಡುತ್ತಾ ಇದೇ ಶಿರಾ ಟೌನಿನಲ್ಲಿ ಮೊಕ್ತಾರ್ ಪ್ಲೀಡರಾಗಿದ್ದುಕೊಂಡು ಇರುವುದಲ್ಲದೆ ಈ ತಾಲ್ಲೂಕಿನಲ್ಲಿ ಜಮೀನ್ದಾರನಾಗಿಯೂ ಇರತಕ್ಕ ವಿಚಾರ ತಮ್ಮೆಲ್ಲರ ಅವಗಾಹನೆಗೂ ಬಂದಿರತಕ್ಕ ವಿಚಾರವಾಗಿರುತ್ತೆ. ಮೇಲ್ಕಂಡ ತಾರೀಖಿನಲ್ಲಿ ಆಗುವ ರೆಪ್ರಜಂಟೇಟಿವ್ ಅಸೆಂಬ್ಲಿಗೆ ಮೆಂಬರಾಗಲು ಉಮೇದವಾರನಾಗಿ ನಿಂತಿರೋಣದರಿಂದ ತಾವೆಲ್ಲರೂ ಆ ದಿವಸ ಎಷ್ಟು ಕೆಲಸವಿದ್ದಾಗ್ಯೂ ಬಿಟ್ಟು ನನ್ನ ಮೇಲೆ ಅಭಿಮಾನವಿಟ್ಟು ಗೊತ್ತಾದ ಸ್ಥಳಗಳಿಗೆ ದಯಮಾಡಿಸಿ ತಮ್ಮಗಳ ಪರವಾಗಿ ನಾನು ಮೆಂಬರಾಗಿರಲು ತಮ್ಮಗಳ ಇರಾದೆಯನ್ನು ಕೊಟ್ಟು ದೇಶಸೇವೆಯನ್ನು ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ಬೇಡುತ್ತೇನೆ.

ತುಮಕೂರು ಡಿಸ್ಟ್ರಿಕ್ಟ್ ನ್ಯಾಯನಿರ್ಮಾಣ ಸಭೆ (ಲೆಜಿಸ್ಲೇಟಿವ್ ಕೌನ್ಸಿಲ್) ಓಟರುಗಳ ಸನ್ನಿಧಿಯಲ್ಲಿ ತಿಪಟೂರು ದೇಶಮುದ್ರೆ ಶಂಕರಪ್ಪನವರ ಮಗ ಮಲ್ಲಪ್ಪನ ವಿಜ್ಞಾಪನೆಗಳು.

ಮಹಾಶಯರೆ,

ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ಪ್ರಜೆಗಳಿಗೆ ದಯಪಾಲಿಸಿರುವ ರಾಜಕೀಯ ಸುಧಾರಣೆಗಳ ಪ್ರಕಾರ ಬರುವ ಫೆಬ್ರವರಿ ತಾರೀಖು 15 ರಲ್ಲಿ ನ್ಯಾಯನಿರ್ಮಾಣ ಸಭೆಯ (Legislative Council) ಚುನಾವಣೆಯು ಪ್ರತಿ ತಾಲ್ಲೋಕು ಮತ್ತು ಕೆಲವು ಹೋಬಳಿ ಹೆಡ್‌ಕ್ವಾರ್ಟರಿನಲ್ಲಿಯೂ ನಡೆಯುತ್ತದೆ. ನಾನು ಇದುವರೆಗೆ ಸುಮಾರು ಐದು ವರ್ಷಗಳಿಂದ ತಿಪಟೂರು ತಾಲ್ಲೋಕಿನಿಂದ ಪ್ರಜಾಪ್ರತಿನಿಧಿ ಸಭೆಗೆ ಚುನಾಯಿಸಲ್ಪಟ್ಟು ಜನಗಳ ಏಳಿಗೆಗೆ ಪ್ರಯತ್ನಮಾಡಿರುತ್ತೇನಲ್ಲದೆ ಮುನಿಸಿಪಾಲಿಟಿಯ ಮೆಂಬರಾಗಿಯೂ ಸಹ ಕೆಲಸ ಮಾಡಿರುತ್ತೇನೆ. ಮುಂದೆ ಈ ಡಿಸ್ಟ್ರಿಕ್ಟಿನ ಪ್ರಜಾಸೇವೆಯನ್ನು ಮಾಡಲು ನಿಲ್ಲಬೇಕೆಂದು ಅನೇಕ ಸ್ನೇಹಿತರು ನನ್ನನ್ನು ಪ್ರೋತ್ಸಾಹಿಸಿದ್ದರಿಂದ ಈ ಸಾರಿ ನ್ಯಾಯವಿಧಾಯಕ ಸಭೆಗೂ ತುಮಕೂರು ಡಿಸ್ಟ್ರಿಕ್ಟಿನ ಪರವಾಗಿ ಚುನಾವಣೆಗೆ ನಿಂತಿರುತ್ತೇನೆ. ಗ್ರಾಮಾಂತರ ಪ್ರಜೆಗಳು ವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲತೆಗಳಿಲ್ಲದೆ ಕೇವಲ ಹಿಂದುಳಿದಿರುವರಲ್ಲದೆ ವೈದ್ಯಸಹಾಯ, ರಕ್ಷಣೆ ಇವುಗಳ ಸಹಾಯಗಳನ್ನೂ ಸಹ ಪಡೆಯದವರಾಗಿರುತ್ತಾರೆ. ಈ ವಿಚಾರಗಳಲ್ಲಿಯೂ ಮತ್ತು ಅವರ ಏಳಿಗೆಗೆ ಬೇಕಾದ ಇತರ ಎಲ್ಲಾ ವಿಚಾರಗಳಲ್ಲಿಯೂ ಅವರುಗಳ ಪರವಾಗಿ ಕೆಲಸ ಮಾಡಿ ಅವರ ಅನುಕೂಲಗಳನ್ನು ಹೆಚ್ಚಿಸಬೇಕೆಂಬುದೇ ನನ್ನ ಉದ್ದಿಶ್ಯವಾಗಿದೆ. ಪಟ್ಟಣವಾಸಿಗಳ ಏಳಿಗೆಗೆ ಬೇಕಾದ ಕಾರ್ಯಗಳಲ್ಲಿಯೂ ಕೂಡ ನನ್ನ ಕೈಲಾದ ಮಟ್ಟಿಗೂ ಕೆಲಸ ಮಾಡಲು ಸಿದ್ಧನಾಗಿರುತ್ತೇನೆ. ತಾವು ತಮ್ಮ ಅಮೋಘವಾದ ಓಟನ್ನು ಕೊಟ್ಟು ಪ್ರಜಾಪಕ್ಷದ ಪ್ರತಿನಿಧಿಯಾಗಿ ನ್ಯಾಯನಿರ್ಮಾಣ ಸಭೆಯಲ್ಲಿ ಕೆಲಸ ಮಾಡಲು ಅವಕಾಶವನ್ನು ನನಗೆ ಉಂಟುಮಾಡಿ ಕೊಡಬೇಕಾಗಿ ಪ್ರಾರ್ಥನೆ.

ಬೆಂಗಳೂರು ಸಿಟಿಯ ಓಟರು ಮಹಾಶಯರುಗಳಲ್ಲಿ ವಿಜ್ಞಾಪನೆ.

ನೂತನ ರಾಜಕೀಯಸಂಸ್ಕರಣ ಕ್ರಮವನ್ನನುಸರಿಸಿ ಮೈಸೂರು ಪ್ರಜಾಪ್ರತಿನಿಧಿ ಸಭೆ (ರೆಪ್ರೆಜೆಂಟೇಟಿವ್ ಅಸೆಂಬ್ಲಿ) ಗೆ ಮೆಂಬರುಗಳನ್ನು ಚುನಾಯಿಸಲು 1924ನೆ ಫೆಬ್ರವರಿ ತಾರೀಖು 15ನೆಯ ಶುಕ್ರವಾರದ ದಿವಸ ಗೊತ್ತುಮಾಡಲ್ಪಟ್ಟಿರುವುದು ಸರಿಯಷ್ಟೆ. ಆ ದಿವಸ ಪ್ರತಿಯೊಬ್ಬ ಓಟರೂ ಗೊತ್ತಾದಸ್ಥಳಕ್ಕೆ ಬಂದು ನಾಲ್ಕು ಜನರಿಗೆ ತಮ್ಮ ಓಟುಗಳನ್ನು ಕೊಡಲು ಅಧಿಕಾರವುಳ್ಳವರಾಗಿರುತ್ತಾರೆ.

ನಾನು ಈಗ್ಗೆ ಸುಮಾರು ೫ ವರ್ಷಗಳಿಗೆ ಮೇಲ್ಪಟ್ಟಾಗಿನಿಂದಲೂ ಪ್ರಜಾಪ್ರತಿನಿಧಿಸಭೆಯ ಮೆಂಬರಾಗಿದ್ದೆನಲ್ಲದೆ ತನ್ಮೂಲಕ ನ್ಯಾಯವಿಧಾಯಕಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಮತ್ತು ಸಂಪದಭಿವೃದ್ಧಿ ಸಮಾಜದ (ಎಕನಾಮಿಕ್ ಕಾನ್ಫರೆನ್ಸಿನ) ಮೆಂಬರಾಗಿ ಚುನಾಯಿಸಲ್ಪಟ್ಟಿದ್ದೆನು. ಮತ್ತು ಸಂಸ್ಥಾನದ ಎಲ್ಲಾ ಜನವರ್ಗದವರಿಗೂ ಸರ್ಕಾರಿಯ ಉದ್ಯೋಗವು ದೊರಕಲು ಅವಕಾಶವನ್ನು ಕಲ್ಪಿಸಿಕೊಡುವುದಕ್ಕಾಗಿ ಸರ್ಕಾರದಿಂದೇರ್ಪಟ್ಟಿರುವ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡಿನಲ್ಲೂ, ಬೆಂಗಳೂರು ಡಿಸ್ಟ್ರಿಕ್ಟ್ ಆಡ್‌ಹಾಕ್ ಸ್ಕಾಲರ್‌ಷಿಪ್ ಕಮಿಟಿಯಲ್ಲೂ, ಕಳೆದೊಂದು ವರ್ಷದಿಂದ ಮೈಸೂರು ಯೂನಿವರ್ಸಿಟಿಯ ಸೆನೇಟಿನಲ್ಲೂ ಮೆಂಬರಾಗಿಯೂ, ಮೈಸೂರು ವೀರಶೈವ ವಿದ್ಯಾವರ್ಧಕಫಂಡ್ ಸಂಘದ ಸೆಕ್ರೆಟರಿಯಾಗಿಯೂ ಇದ್ದುಕೊಂಡು ಪ್ರಜಾಪಕ್ಷವನ್ನು ವಹಿಸಿ ದೇಶದ ಸರ್ವತೋಮುಖವಾದ ಏಳ್ಗೆಯನ್ನೇ ಗಮನದಲ್ಲಿಟ್ಟುಕೊಂಡು ಕೆಲಸಮಾಡುತ್ತಿದ್ದೇನೆ.

ದೇಶಸೇವೆಯನ್ನು ಮಾಡಲು ವಿಶೇಷ ಕುತೂಹಲವುಳ್ಳವನಾಗಿರುವುದರಿಂದಲೂ, ಈಸಲದ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಚುನಾವಣೆಯಲ್ಲಿ ನಾನೊಬ್ಬ ಉಮೇದುವಾರನಾಗಿ ನಿಂತುಕೊಳ್ಳಬೇಕೆಂದು ನನ್ನ ಮಿತ್ರರನೇಕರು ಪ್ರೋತ್ಸಾಹವನ್ನು ಮಾಡಿದುದರಮೇಲೂ ಉಮೇದುವಾರನಾಗಿ ನಿಂತಿರುತ್ತೇನೆ.

ನನ್ನ ಕಾರ್ಯದಕ್ಷತೆಯಲ್ಲಿ ನಿಮಗೆ ಭರವಸೆಯಿದ್ದಲ್ಲಿ ನನಗೆ ತಮ್ಮ ಅಮೌಲ್ಯವಾದ ಓಟನ್ನು ಕೊಟ್ಟೂ, ತಮ್ಮ ಮಿತ್ರರ ಓಟನ್ನು ಕೊಡಿಸಿಯೂ ಅವಕಾಶವನ್ನು ಕಲ್ಪಿಸಿಕೊಟ್ಟಲ್ಲಿ ನನ್ನಲ್ಲಿ ತಮಗಿರುವ ನಂಬುಗೆ ವಿಶ್ವಾಸಗಳನ್ನು ವ್ಯರ್ಥಗೊಳಿಸದೆ ಇನ್ನು ಮುಂದೆಯೂ ದೇಶಸೇವೆಯನ್ನು ಮಾಡಲು ಸಿದ್ಧನಾಗಿರುವೆನೆಂದೂ, ಈ ನನ್ನ ಸವಿನಯಪ್ರಾರ್ಥನೆಯನ್ನು ತಾವು ನೆರವೇರಿಸಿಕೊಡುವಿರೆಂದೂ ನಂಬಿರುವ, ತಮ್ಮ ವಿಧೇಯ,

ಬೆಂಗಳೂರು ಸಿಟಿ,
ತಾ|| 10-1-24.

ಜಿ. ಪರಮಶಿವಯ್ಯ,
ಬಿ.ಎ.,ಎಲ್‌ಎಲ್.ಬಿ., ಅಡ್ವೊಕೇಟ್.

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:— ನಾನು ಕಾತ್ಯನಹಳ್ಳಿ ಶಿವಲಿಂಗಯ್ಯನ ತಮ್ಮ ಹಳ್ಳದರಾಮನೆಂಬುವನನ್ನು 8-9 ವರ್ಷಗಳ ಹಿಂದೆ ನಾನು ಅಪುತ್ರವಂತನಾದುದರಿಂದ ಮಗನನ್ನಾಗಿಮಾಡಿಕೊಂಡಿದ್ದೆ. ಆತನು ಈಗ್ಯೆ 6 ವರ್ಷಗಳ ಹಿಂದೆ ಕಾಲವಾದನು. ಆತನ ಹೆಂಡತಿ ತಿದ್ದಿ ಎಂಬುವಳು ಅಂದಿನಿಂದ ಎಲ್ಲೆಲ್ಲೊ ಮನಸ್ಸಿ ತಿರುಗುತ್ತಾ ದುರ್ಮಾರ್ಗದಲ್ಲಿ ಪ್ರವರ್ತಿಸಿರುತ್ತಾಳೆ. ಈಕೆಯ ಚಾಲುಚಲನ್ ಹಸನ್ನಾಗಿರುವುದಿಲ್ಲ. ಈಗ ಈಕೆ ಗರ್ಭಿಣಿಯಾಗಿದ್ದಾಳೆಂಬುದನ್ನು ಕೇಳುತ್ತೇನೆ. ಈಕೆಗೆ ನನ್ನ ಆಸ್ತಿಗಳಲ್ಲಿ ಜೀವನಾಂಶ ಭಾಗಾಂಶ ವಗೈರೆ ಯಾವುದೂ ಸೇರತಕ್ಕದ್ದಿರುವುದಿಲ್ಲ. ಈಕೆಯಿಂದ ಯಾರಾದರೂ, ಯಾವ ವಿಧವಾದ ಪರಭಾರೆಮಾಡಿಸಿಕೊಂಡಲ್ಲಿ ಅದು ಊರ್ಜಿತವಾಗುವುದಿಲ್ಲವೆಂಬ ಸಂಗತಿ ಈ ಮೂಲಕ ಎಚ್ಚರಿಸಿದ್ದೇನೆ.

ತಾ|| 2-2-1924.

ನಂಜಣ್ಣನ ಮಗ ಭೈರಣ್ಣ,
ಹರಳಕಟ್ಟೆ, ಅರಸೀಕೆರೆ. ತಾ||

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳುಳ್ಳ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲು ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡುಸ್ 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲು 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—6—0. 25 ಬಾಟ್ಲುಗಳಿಗೆ 4—8—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಟಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ನೀವು ಇಷ್ಟಪಟ್ಟ ನಮೂನೆಯಲ್ಲಿ ನೀವು ಅಪೇಕ್ಷಿಸುವ ಭಾಷೆಯಿಂದ ನಿಮ್ಮ ಹೆಸರು ವಿಳಾಸಗಳ ರಬ್ಬರ್ ಮೊಹರನ್ನು ಅಂದವಾಗಿ ತಯಾರಿಸಿ ಕೊಡುತ್ತಾರೆ.

ಹಾರ್ಮೋನಿಯಂಗಳನ್ನೂ ಪೌಂಟನ್‌ಪೆನ್‌ಗಳನ್ನೂ ತೃಪ್ತಿಕರವಾಗಿ ರಿಪೇರಿ ಮಾಡಿಕೊಡುತ್ತಾರೆ.

ಹೆಚ್ಚು ವಿಷಯಗಳಿಗೆ ಇವರ ಕಂಪನಿಯ ಕ್ಯಾಟಲಾಗ್‌ನ್ನೂ ತರಿಸಿನೋಡಿರಿ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—20] ಮೈಸೂರು.

ಇನ್‌ಫ್ಲುಯೆನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುವು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ. ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—12] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

೧೯೨೪ನೆಯ ಇಸವಿ ಫೆಬ್ರವರಿ ತಾ|| ೩ರಿಂದ ೧೯೨೪ನೆಯ ಫೆಬ್ರವರಿ ತಾ|| ೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಪುಷ್ಯ ಬಹುಳ ತ್ರಯೋದಶಿಯಿಂದ ಮಾಘಶುದ್ಧ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರ ಮಾಸ
3	ಭಾನು	ತ್ರಯೋ	7-15	ಪೂಷಾ	8-30	21
4	[1] ಸೋಮ	ಚತು	3-20	ಉಷಾ	6-22	22
5	ಮಂಗಳ	ಅ-ಉ	0-28 57-28	ಶ್ರವ	5-14	23
6	[2] ಬುಧ	ಬಿದಿ	58-12	ಧನಿ	5-18	24
7	[3] ಗುರು	ತದಿ	59-6	ಶತ	7-33	25
8	[4] ಶುಕ್ರ	ಚೌತಿ	60-0	ಪೂಭಾ	9-2	26
9	ಶನಿ	ಚೌತಿ	1-32	ಉಭಾ	12-36	27

(1) ಸರ್ವತ್ರ ಅಮಾವಾಸ್ಯೆ. (2) ಮಾಘಸ್ನಾನಾರಂಭಃ, ಮಾಘಗೌರೀಪೂಜಾ. (3) ಕೈಲಾಸಗೌರೀಮೌನ ಗೌರೀವ್ರತಂ. (4) ಕುಂದಗಣಪತಿವ್ರತಂ, ತಿಲಚತುರ್ಥೀ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ |
ಕೃತಾವತಾರಾ ಪಕ್ಕಜ ಸಹೃತ್ತ ಮೋಹರಾಜೀಯಾತ್
ಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ
ಪ್ರೇಮಂಚಿತ್ತೇಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ||

ಬಸವ ಸಮಿತಿ
ಬೆಂಗಳೂರು

[ವಾರ್ಷಿಕಚಂದಾ ೧-೧೦-೦]
[... ೨-೧೦-೦]

ಸಂಪುಟ ೩೩) ಮೈಸೂರ್ ಸ್ಟಾರ್ ಸರ್ ೧೯೨೪ ನೆಯ ಇಸವಿ ಫೆಬ್ರವರಿ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ ೬

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆನ್ಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ಕುಂತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ವೈಶ್ವಾನರಾಸವ.

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳನ್ನು ಗುಣಪಡಿಸುವ ನಂಬುಗೆಯಾದೌಷಧಿ.

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲೀ ಇಲ್ಲ. ಈ ಔಷಧಿಯನ್ನು ಕೊಟ್ಟ ಮೊದಲನೇ ನಿಮಿಷದಿಂದಲೇ ರೋಗವು ಸ್ವಾಧೀನಕ್ಕೆ ಬಂದು ಕ್ರಮವಾಗಿ ಗುಣವಾಗುತ್ತದೆ.

1 ಸೀಸೆ ಬೆಲೆ 1—0—0. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾ. ಜೆ. ಬಿ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

[illegible] ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
[illegible] ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವ [illegible] ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—24] ಪೋ. ಬಾ. ೫೧೦, ಮದರಾಸು.

...ಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
...ಶೈವ ಶಿವಪೂಜಾವಿಧಿಃ	೦—೧೨—೦	೧—೨—೦
...ಕ ವೀರಶೈವ ವಿವಾಹವಿಧಿಃ	೦—೮—೦	೦—೧೪—೦
...ಲವಿದ್ಯಾ	೦—೪—೦	೦—೯—೦
...ರುಷೀಲಚರಿತ್ರೆ	೦—೫—೦	೦—೧೦—೦
...ವಾಸಿ	೦—೪—೦	೦—೯—೦
...ಸಂಚಿಕ	೦—೪—೦	೦—೯—೦
...ರುಕಂಠರೇಶ್ವರಶತಕ	೦—೧—೦	೦—೬—೦
...ಶ್ವರಚನ	೦—೮—೦	೦—೧೪—೦

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್‌ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವಾ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—11] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ಧಿಕ್ಕಾರ ಮಾಡಿದರೆ ಕುತ್ಕರಿಸಿ ಹೋದೀರಿ.

ವಜ್ರಾಂಗಸುಂದರಪಾಕ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ಕೆಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಶಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೋಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ತಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವಂ (ಬೊಗಚಿ) ಕಂದ, ದ್ವಿಬಾಂಶರವಚಾಕಂದ, ಕವಚಬೀಜ, ಮುದ್ರ ಕೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಕವಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕಿ, ಕಮರಕಸ, ಕಫಲ್ಯಾಗೊಂದ, ಪಂಜಾಬಿ ಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ಶಾಲೀಮಖಾನಾ, ಬೀಜಬಂಧ, ಬಿಗರಿಗೊರಸು, ಮೊಂಗಲ್ ಬೇದಾಣ, ಮೈದಾಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾಲಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯುಲ್ಲ. ಸ್ತ್ರೀವರ್ಜ್ಯೆಯುಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫|| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣಾತ್ವರೆಮಾಡಿರಿ.

[50—27] ಪತ್ತಾ:—ವೈದ್ಯ ಎ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎಸ್.ಆರ್. ಕರಿಬಸವಶಾಸ್ತ್ರಿ
[50—5] ಅಂಡ್ ಸನ್ಸ್, ಜೆ. ಪಿ. ಮಂಡಲಿ, ಮೈಸೂರು.

ಶ್ರೀರಕ್ತಾಕ್ಷಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

ಈಗ್ಗೆ ಐದುವರ್ಷಗಳಿಂದ - ಕಲ್ಬುರ್ಗಿ - ಹೆಸರಿನಿಂದ ಹೊರಡತಕ್ಕ ಪಂಚಾಂಗವೇ ಈ ವರ್ಷ (ರಾಯಚೂರು ಗ್ರಾಮದಿಂದ ಹೊರಟಿರುತ್ತದೆ). ಈ ಪಂಚಾಂಗದಲ್ಲಿ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶ ರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ಇದಲ್ಲದೆ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ, ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಆದರೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು. ಕಾಗದ ಮೊದಲಾದವುಗಳ ಬೆಲೆಯು ಗತವರ್ಷಕ್ಕಿಂತಲೂ ಹೆಚ್ಚಾಗಿದ್ದರೂ ತಮಗೆ ವರ್ಷಂಪ್ರತಿ ಕೊಡುತ್ತಿದ್ದ ಬೆಲೆಯಂತೆಯೇ ಈವರ್ಷವೂ ಕೊಡುತ್ತೇವೆ. ಹಿಂದಣ ವರ್ಷಕ್ಕಿಂತಲೂ ಹೆಚ್ಚಿಗೆ ಕಾಪಿಗಳನ್ನು ತರಿಸಿಕೊಂಡು ಸಹಾಯಮಾಡಿರಿ. (25) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ 100 ಕ್ಕೆ 20 ರೂಪಾಯಿಗಳು. (100) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ 500ಕ್ಕೆ 16. (500) ಕ್ಕಿಂತ ಕಡಿಮೆಯಿಲ್ಲದೆ ತರಿಸಿಕೊಂಡರೆ (1000)ಕ್ಕೆ 13 ರೂ. ಇದರಂತೆ ಕೊಡುವೆವು. ಇದಕ್ಕಿಂತಲೂ ಕಡಿಮೆಬೆಲೆಯಿಂದ ಯಾರಿಗೂ ಕೊಡುವದಿಲ್ಲ. ಮತ್ತು (5) ಪಂಚಾಂಗಗಳನ್ನು ಒಂದೇಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಬೇಗನೆ ಆರ್ಡರ್ ಕೊಡಿರಿ. ಚಿಲ್ಲರೆ ಒಂದಕ್ಕೆ ೩ ಆಣೆ.

ವಿಳಾಸ—ಬ್ರ|| ಶ್ರೀ|| ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿಗಳು,
ಜ್ಯೋತಿಷ ಪಾಠಶಾಲಾ,
[12—3] ರಾಯಚೂರು ಡಿ||

ಪ್ರಕಟನೆ.

ರಾಜಧಾನಿಯಿಂದ ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕಸಭೆಗೂ ಮೆಂಬರುಗಳನ್ನು ಚುನಾಯಿಸಲು ಅರ್ಹರಾದ ಓಟರುಗಳು ಅಂದರೆ,

(1) ಲಷ್ಕರ್ (2) ಮಂಡಿ (3) ನಜರ್ಬಾದ್ ಮೊಹಲ್ಲಾಗಳಿಗೆ ಸೇರಿಸಲ್ಪಟ್ಟ ಓಟರುಗಳು

ಟವರ್ ಹಾಲಿಗೆ

(1) ದೇವರಾಜ (2) ಕೃಷ್ಣರಾಜ ಮೊಹಲ್ಲಾಗಳಿಗೆ ಸೇರಿಸಲ್ಪಟ್ಟ ಓಟರುಗಳು

ಧ|| ಪ್ರ|| ಬನುಮಯ್ಯನವರ ಸ್ಕೂಲಿನ ಹತ್ತಿರವಿರುವ

ಹೊಸ ಮ್ಯುನಿಸಿಪಲ್ ಕಟ್ಟಡಕ್ಕೆ

(1) ಚಾಮರಾಜ (2) ಕಿಲ್ಲೆ ಮೊಹಲ್ಲಾಗಳಿಗೆ ಸೇರಿಸಲ್ಪಟ್ಟ ಓಟರುಗಳು

ಮರಿಮಲ್ಲಪ್ಪನವರ ಹೈಸ್ಕೂಲಿಗೆ

ಈ ಫೆಬ್ರವರಿ ತಾ|| 15 ನೆಯ ಶುಕ್ರವಾರ ಬೆಳಿಗ್ಗೆ 11 ಗಂಟೆಯಿಂದ ಬಂದು ತಮ್ಮ ಓಟುಗಳನ್ನು ಕೊಡಬಹುದಾಗಿ ಪ್ರಕಟವಾಗಿದೆ. ಇದಕ್ಕಾಗಿ ಓಟರುಗಳಿಗೆ ಪ್ರತ್ಯೇಕವಾದ ನೋಟೀಸು ಬರುವುದಿಲ್ಲ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಫೆಬ್ರವರಿ ತಾ|| ೧೦ ನೆಯ ಭಾನುವಾರ.

THE CORRECT PERSPECTIVE.

The manifesto issued by some leading gentlemen of this city in favour of some four candidates who stand for the Mysore Representative Assembly and one of whom to the Mysore Legislative Council has altogether upset the mind of the *Sampadabhyudaya* camp, to which we note, not without surprise, there have been some strange recruits of late. "Circumstances make bedfellows of strange men," and verily at present it is a sight to see all and sundry rushing to that famous organ of reaction for giving expression to their spleen. There have been numerous articles, inspired or uninspired, questioning the propriety of the issueing of such a manifesto, but to all of them the letter sent by Mr. A. C. Lingaraj Urs, himself a signitory to the manifesto, to the *Sampadabhyudaya* of the 6th instant which is a clear and dignified note and views the matter from the correct persepective is a complete answer, and must needs give a quietus to further mischievous efforts to misrepresent the situation. A manifesto supporting certain candidatures is certainly no ultimatum to the voters, that if they do not vote to the particular candidates they would be visited with any condign punishment. It is the ordinary electioneering method, and there is nothing preventing any other gentlemen to issue a similar manifesto on behalf of some other candidate or candidates. This is the gist of the letter in question and the public should feel thankful to Mr. Lingaraj Urs for placing this important though well-known aspect of the situation before them. But how arose all this storm and the old time Brahmin Non-Brahmin affair is another interesting question. The manifesto had nothing to do with it. The candidates referred to, much less. The trotting of the bogey was by the same instrument which for the past so many years has been carrying the campaign against popular aspirations regardless of the means employed therefor, and if in its new-fangled course some additional, temporary or permanent is yet to be seen, recruits are drawn in, little wonder. It is of only a repetition of past history. But though these happenings might make the advance of popular cause slower it cannot stop it. It is with a clear conscience and inspired by the righteousness of the cause that those few are standing by the popular cause, and it is for the people to stand by them and help its advancement. There is no place for deception, for political chicanery in this striving. It is an abounding sympathy, dead earnestness and an absolute solfless spirit that are required. Politics is no dilettantism. It is a serious affair. But how few have realised the duty and the responsibility of being a representative of the vast number of electors. How often have these powers vested in the representatives not been abused to the detriment of the represented? We doubt if the capacity for deception has ceased. There is no saivation to the country unless deception is dethroned and sincerety installed in our political life. It is, after all, "the moral forces that govern the standing or falling of nations," and it should be the endeavour of all interested in the progress of Mysore to so organise, strengthen and develop the moral forces as to make her a really powerful and prosperous State. It is our earnest hope that the voters will try to exercise their discretion and judgment in giving their votes and chose men who would truly represent them.

ಅರಮನೆಯಲ್ಲಿ ದ್ವಿತೀಯ ಪುತ್ರಿಕಾರತ್ನೋತ್ಸವವು.

ಈ ಫೆಬ್ರವರಿ ತಾ|| 6 ನೆಯ ಬುಧವಾರ ರಾತ್ರಿ 2-50 ಗಂಟೆಯಲ್ಲಿ ನಮ್ಮ ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರವರಿಗೆ ದ್ವಿತೀಯ ಪುತ್ರಿಕಾರತ್ನೋತ್ಸವವಾಯಿತೆಂದೂ ರಾಜಕುಲ ದೇವತೆಯಾದ ಶ್ರೀ ಚಾಮುಂಡಿಕಾಂಬೆಯ ಪೂರ್ಣಾನುಗ್ರಹದಿಂದ ಮಗು ಬಾಣಂತಿಯರು ಆರೋಗ್ಯವಾಗಿರುವರೆಂದೂ ತಿಳುಹಲು ಅತಿಶಯವಾಗಿ ಸಂತೋಷಿಸುತ್ತೇವೆ. ಜನನವಾದ ಸಂತೋಷಸೂಚಕವಾಗಿ ಮಾರನೆ ದಿನ ಬೆಳಿಗ್ಗೆ 21 ಗುಂಡುಗಳು ಹಾರಿಸಲ್ಪಟ್ಟುವು. ಆ ದಿವಸ ರಾತ್ರಿ ಅರಮನೆಯ ಒಳಹೊರಗಣ ಭಾಗಗಳೂ ಕೋಟೆಯ ಬಾಗಿಲುಗಳೂ, ಟವರ್ ಹಾಲೂ, ದೊಡ್ಡಗಡಿಯಾರವೂ ವಿದ್ಯುದ್ದೀಪಾವಳಿಗಳಿಂದ ಪ್ರಕಾಶಗೊಳಿಸಲ್ಪಟ್ಟು ಅರಮನೆಯ ಪರಮಾನಂದವನ್ನು ಹೊರಗೆಡುಹುವಂತಿದ್ದುವು. ನಮ್ಮ ರಾಜವಂಶವು ಈ ರೀತಿಯಲ್ಲಿ ವೃದ್ಧಿಗೊಳ್ಳುತ್ತಿರುವುದು ಮೈಸೂರು ದೇಶಿಯರಿಗೆಲ್ಲಾ ಪರಮಾನಂದಕರವಾಗಿರುವುದು. ಇಂತಹ ಪುತ್ರಿಪುತ್ರೋತ್ಸವಗಳು ಇನ್ನೂ ವಿಶೇಷವಾಗಿ ನಡೆದು ನಮ್ಮ ರಾಜಸಂತತಿಯು ಬಹುಕಾಲ ಪ್ರಫುಲ್ಲಿತವಾಗಿರುವಂತೆ ಕುಲದೇವನಾದ ಶ್ರೀ ಶ್ರೀಕಂಠೇಶ್ವರನು ಅನುಗ್ರಹಿಸಲೆಂದು ಪ್ರಜಾವರ್ಗದೊಡನೆ ನಾವೂ ಪ್ರಾರ್ಥಿಸುತ್ತಿರುವೆವು.

ಓಟರುಗಳಿಗೆ ಕಡೆಯೆಚ್ಚರಿಕೆ.

ಓಟರುಗಳು ತಮ್ಮ ಘನವಾದ ಓಟನ್ನು ಯಾರಿಗೆ ಕೊಟ್ಟಲ್ಲಿ ತಮಗೆ ಕ್ಷೇಮವಾಗುತ್ತದೆ, ಮತ್ತು ಶ್ರೀಮನ್ ಮಹಾರಾಜರವರಿಂದ ತಮಗೆ ಅನುಗ್ರಹಿಸಲ್ಪಟ್ಟಿರುವ ಅಧಿಕಾರವು ಸಫಲವಾಗಿ ಮಹಾರಾಜರವರಿಗೆ ಸಂತೋಷವಾಗುತ್ತದೆ ಎಂಬ ವಿಚಾರದಲ್ಲಿ ಈ ವರೆಗೂ ನಾವು ಎಷ್ಟೋ ಬರೆದು ಎಚ್ಚರಿಸಿರುತ್ತೇವೆ. ಆದರೂ ಓಟನ್ನು ಕೊಡತಕ್ಕ 15ನೇ ತಾ|| ಶುಕ್ರವಾರವು ಬರಲು ಇನ್ನು 5 ದಿನಗಳು ಮಾತ್ರ ಉಳಿದಿರುವುದರಿಂದ ಈ ಕಡೆಯೆಚ್ಚರಿಕೆಯನ್ನು ಕೊಟ್ಟು ಈ ವಿಚಾರವನ್ನು ಇಲ್ಲಿಗೆ ವಿರಮಿಸುವೆವು. ಓಟನ್ನು ಕೊಡತಕ್ಕವರು ಪ್ರಬಲಸ್ಥರ ಅಥವಾ ಸ್ನೇಹಿತರ ದಾಕ್ಷಿಣ್ಯಕ್ಕೂ ಬಲವಂತಕ್ಕೂ ಬದ್ಧರಾಗಿ ಸ್ವಾರ್ಥವನ್ನು ಸಾಧಿಸುವ ಜನರಿಗೆ ಓಟನ್ನು ಕೊಟ್ಟು ಅವರುಗಳನ್ನು ಮೆಂಬರುಗಳನ್ನಾಗಿ ಕಳುಹಿಸಿ ಕಡೆಯಲ್ಲಿ ಪೇಚಾಡುವುದಲ್ಲದೆ ತಮ್ಮ ಖಡ್ಗವನ್ನು ಅವರ ಕೈಗೆ ಕೊಟ್ಟು ಕೊರಳನ್ನು ಕೊಯ್ಯಿಸಿಕೊಳ್ಳದೆ, ತಮ್ಮ ಕಷ್ಟ ಸುಖಗಳನ್ನು ಚೆನ್ನಾಗಿ ಅರಿತು ಪ್ರಜಾಸೇವೆಯೇ ದೇವರ ಸೇವೆಯೆಂದು ನಿಜವಾಗಿ ಭಾವಿಸಿ ನಡಿಯುವವರಾಗಿಯೂ, ವಿವೇಕದಿಂದಲೂ, ಧೈರ್ಯದಿಂದಲೂ, ನಿರ್ದಾಕ್ಷಿಣ್ಯದಿಂದಲೂ, ಸಮರ್ಥತೆಯಿಂದಲೂ ಪ್ರಜೆಗಳ ಕುಂದುಕೊರತೆಗಳನ್ನು ಮೀಟಿಂಗುಗಳಲ್ಲಿ ಪ್ರಭುತ್ವದವರಿಗೆ ಅರಿಕೆ ಮಾಡಿ ವಾದಿಸಬಲ್ಲವರಾಗಿಯೂ ಇರುವಂಥವರಿಗೇ ಓಟನ್ನು ಕೊಟ್ಟು ಕೃತಕೃತ್ಯರಾಗಬೇಕಲ್ಲದೆ ಬರೀ ತಮ್ಮವರೆಂಬ ಅಭಿಮಾನದಿಂದ ಯೋಗ್ಯತೆಯಿಲ್ಲದವರಿಗೆ ಓಟನ್ನು ಕೊಟ್ಟು ತಮ್ಮ ಕಾಲಿನ ಮೇಲೆ ತಾವೇ ಕಲ್ಲನ್ನೆತ್ತಿ ಹಾಕಿಕೊಂಡು ಪೇಚಾಡುವುದು ಜಾಣತನವಲ್ಲವು.

ಹಿಂದುಳಿದವರ ಹಿತಚಿಂತಕರೆಂದು ಮೇಲಿಮೇಲೆ ನಟಿಸುತ ಅಂತಹ ಅವರ ಅಹಿತವನ್ನೇ ಕೋರುತ್ತಿರುವವರಿಗೆ ಬೆಳ್ಳಗಿರುವುದನ್ನೆಲ್ಲಾ ಹಾಲೆಂದು ಸುಲಭವಾಗಿ ನಂಬುವವರಾದ ಮತ್ತು ದಾಕ್ಷಿಣ್ಯಪರರಾದ ನಮ್ಮ ಹಿಂದುಳಿದ ಸಹೋದರರು ಓಟನ್ನು ಕೊಟ್ಟು ತಮ್ಮ ಭಾಗಕ್ಕೆ ಕಾಮಧೇನುವಿನಂತಿರುವ ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲೆ ಪ್ರಭುತ್ವದವರು ಮಾಡಿರುವ ಆರ್ಡರನ್ನು ರದ್ದುಪಡಿಸಲು ಎಷ್ಟು ಸಾಹಸದಿಂದಲೂ, ಧೈರ್ಯದಿಂದಲೂ, ಒಕ್ಕಟ್ಟಿನಿಂದಲೂ ಅಭಿಯೋಗನಡಿಸಲು ಅವಕಾಶವನ್ನುಂಟುಮಾಡಿಕೊಟ್ಟುದನ್ನೂ, ಹಿಂದುಳಿದ ಜನರುದ್ಧಾರದಲ್ಲಿ ಬದ್ಧಕಂಕಣರಾಗಿದ್ದು ಚಿರಸ್ಮರಣೀಯರಾಗಿರುವ ಕೈ|| ಸರ್ ಎಂ. ಕಾಂತರಾಜ ಅರಸಿನವರು ಅಸೂಯಾಳುಗಳ ವಾಕ್ಪ್ರಹರಗಳಿಗೆ ಹೆದರಿ ಆ ಆರ್ಡರನ್ನು ರದ್ದುಪಡಿಸಿದ್ದಲ್ಲಿ ತಮ್ಮಿಂ ಕಾಮಧೇನು ಗೊಡ್ಡಾಕಳಾಗುತ್ತಿದ್ದಿತೆಂಬುದನ್ನೂ, ಹಿಂದುಳಿದ ಜನವರ್ಗಗಳ ವಿದ್ಯಾರ್ಥಿಗಳನ್ನು ಸಂಸ್ಕೃತ ಕಾಲೇಜುಗಳಿಗೆ ಸೇರಿಸುವ ವಿಚಾರದಲ್ಲಿ ಪ್ರತಿಬಂಧಕಗಳನ್ನು ತಂದೊಡ್ಡಿದುದಲ್ಲದೆ ಅವರನ್ನು ಘೂಥಮಾಲಿಗಳಿಗೂ ಪತಿತರಿಗೂ ಕುಡಕರಿಗೂ ಹೋಲಿಸಿರುವುದನ್ನು ಈಗಲಾದರೂ ತಿಳಿದು ಎಚ್ಚೆತ್ತು ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ, ದರ್ಪಕ್ಕೂ ಹೆದರದೆ ಮೇಲೆ ಹೇಳಿದ ಯೋಗ್ಯತೆಯುಳ್ಳ ತಮ್ಮ ಹಿತೈಷಿಗಳಿಗೇನೇ ಓಟನ್ನು ಕೊಟ್ಟು ತಂತಮ್ಮ ಜನಾಂಗದವರ ಪುರೋಭಿವೃದ್ಧಿಗೆ ಅವಕಾಶವನ್ನುಟುಮಾಡಿಕೊಳ್ಳುವವರಾಗಬೇಕು. ಇದಲ್ಲದೆ ಕೆಲರು ಅವರ ಮಾತನ್ನು ಕೇಳಿದರೆ ಇವರಿಗೆ ಕೋಪ, ಇವರ ಮಾತನ್ನು ಕೇಳಿದರೆ ಅವರಿಗೆ ಕೋಪ, ಅದುಕಾರಣ ಯಾರ ನಿಷ್ಠೂರವೂ ಬೇಡವೆಂದು ಮೌನವಾಗಿರುವುದೂ, ಹಿಂದುಳಿದ ತಂತಮ್ಮಲ್ಲಯೇ ಒಬ್ಬರಮೇಲೊಬ್ಬರು ಪೈಪೋಟಿಮಾಡಿ ತಮ್ಮಲ್ಲಾರಿಗೂ ಓಟುಬಾರದಂತೆ ಮಾಡಿಕೊಂಡು ತಮ್ಮ ಅಹಿತಾಕಾಂಕ್ಷಿಗಳಿಗೆ ನಿರಾಯಾಸವಾಗಿ ಓಟು ದೊರೆಯಲವಕಾಶವನ್ನುಂಟುಮಾಡಿಕೊಡುವುದೂ ಆತ್ಮಘಾತುಕವೂ ಸ್ವಜನದ್ರೋಹವೂ ಆಗುವುದೆಂಬುದನ್ನು ಚೆನ್ನಾಗಿ ತಿಳಿದು ಯಾವ ಕೆಲಸವಿದ್ದಾಗ್ಯೂ ಬಿಟ್ಟು ಈ ಫೆಬ್ರವರಿ ತಾರೀಖು 15ನೆಯ ಶುಕ್ರವಾರದ ದಿವಸ ಗೊತ್ತಾದ ಸ್ಥಳಗಳಿಗೆ ತಪ್ಪದೆ ಬಂದು ತಮ್ಮ ಹಿತಚಿಂತಕರಿಗೆ ಮಾತ್ರ ಓಟನ್ನು ಕೊಡಬೇಕೆಂದೂ, ವಿಘ್ನಸಂತೋಷಿಗಳ ಕಪಟ ಹಿತೋಕ್ತಿಗೆ ಕಿವಿಗೊಟ್ಟು ತಂತಮ್ಮವರ ಮೇಲೆ ಪೈಪೋಟಿಮಾಡದೆ ಯೋಗ್ಯರಾದವರನ್ನು ಚುನಾಯಿಸಿ ಅವರಿಗೆ ಪ್ರತಿಯೊಬ್ಬರೂ ಓಟನ್ನು ಕೊಡುವಂತೆ ಪ್ರಯತ್ನಿಸಬೇಕೆಂದು ಒತ್ತಿಹೇಳುತ್ತೇವೆ. ಇದೆಯೇ ಓಟರುಗಳಿಗೆ ನಮ್ಮ ಕಡೆಯೆಚ್ಚರಿಕೆಯು.

ಮ|| ಗಾಂಧಿಯವರು ಬಂಧವಿಮುಕ್ತರಾದುದು.

ಮಹಾತ್ಮ ಮೋಹನದಾಸ್ ಕರ್ಮಚಂದ್ ಗಾಂಧಿಯವರ ವ್ಯಾಧಿಯು ಸಂಪೂರ್ಣವಾಗಿ ನಿವಾರಣೆಯಾಗಿರುವುದು ಮತ್ತು ಶಸ್ತ್ರಚಿಕಿತ್ಸೆಯಿಂದುಂಟಾಗಿದ್ದ ಗಾಯವು ಪೂರ್ತಿಯಾಗಿ ಮಾದಿರುವುದು. ಮಹಾತ್ಮರು ಸಮುದ್ರ ತೀರಪ್ರಾಂತಕ್ಕೆ ಹೋಗಿ ಕನಿಷ್ಠಪಕ್ಷ 6 ತಿಂಗಳ ಕಾಲವಾದರೂ ಇದ್ದು ವಿಶ್ರಮಿಸಿಕೊಳ್ಳಬೇಕಾದುದು ಅಗತ್ಯವಾಗಿರುವುದರಿಂದ ಅವರನ್ನು ಪೂನಾದ ಸಾಸೂನು ವೈದ್ಯಶಾಲೆಯಿಂದ ಬಿಡುಗಡೆಮಾಡಿ ಕಳುಹಿಸಿಕೊಡಬೇಕೆಂದು ವೈದ್ಯಶಾಖಾಧಿಕಾರಿಗಳು ಬೊಂಬಾಯಿ ಸರ್ಕಾರದವರಿಗೆ ತಿಳಿಸಿದುದರ ಮೇಲೆ ಅವರು ಇಂಡ್ಯಾ ಸರ್ಕಾರದವರ ಅನುಮತಿಯನ್ನು ಪಡೆದು ಯಾವ ವಿಧವಾದ ಷರತ್ತುಗಳನ್ನೂ ಕೋರದೆ ಈ ಫೆಬ್ರವರಿ ತಾ|| 5ರ ಬೆಳಗಿನ 7-55 ಗಂಟೆಯಲ್ಲಿ ಮಹಾತ್ಮರನ್ನು ಬಂಧವಿಮುಕ್ತರನ್ನಾಗಿ ಮಾಡಿದರೆಂದು ತಿಳುಹಲು ಪರಮಾನಂದವಾಗುವುದು. ಆ ದಿವಸ ಭರತಖಂಡದ ಸಮಸ್ತ ಭಾಗದಲ್ಲೂ ಆನಂದೋತ್ಸವಗಳು ನಡಿಸಲ್ಪಟ್ಟು ಮಹಾತ್ಮರ ಆಯುರಾರೋಗ್ಯವು ಬಯಸಲ್ಪಟ್ಟಿತು.

ಮಹಾತ್ಮರ ಸಹಾಯನಿರಾಕರಣ ಮತ್ತು ಶಾಸನೋಲ್ಲಂಘನ ಬೋಧೆಯಿಂದ ದೇಶಕ್ಕೆ ಅನರ್ಥವಾಗುತ್ತದೆಂದು ಬೊಂಬಾಯಿ ಸರ್ಕಾರದವರು ಮಹಾತ್ಮರನ್ನು 1922ನೆ ಮಾರ್ಚಿ ತಾರೀಖು 10ರ ರಾತ್ರೆ ಸೆರೆಹಿಡಿದರು. ಈ ವಿಚಾರವನ್ನು ಮಹಾತ್ಮರು ಮೊದಲೇ ಅರಿತಿದ್ದರಾದುದರಿಂದ "ನಾನು ಸೆರೆಹಿಡಿಯಲ್ಪಟ್ಟರೆ ಯಾರೊಬ್ಬರೂ ಪ್ರಕ್ಷುಬ್ಧರಾಗಿ ಹರತಾಳ ಮೊದಲಾದ ಕಾರ್ಯಗಳನ್ನು ಆಚರಿಸಬಾರದು. ಅಶಾಂತಿಯಿಂದ ಬಹಳ ಅನರ್ಥಗಳುಂಟಾಗಿ ನಮ್ಮ ಸ್ವರಾಜ್ಯ ಪ್ರಾಪ್ತಿಗೆ ಭಂಗಬರುತ್ತಾದಪ್ರಯುಕ್ತ ಯಾರೂ ಅದಕ್ಕೆ ಪ್ರಯತ್ನಿಸಕೂಡದು. ಪರದೇಶದ ಬಟ್ಟೆಗಳನ್ನು ನಾಶಪಡಿಸಿ ಸ್ವದೇಶ ಬಟ್ಟೆಗಳನ್ನು ಮಾತ್ರ ಉಪಯೋಗಿಸುತ್ತ ಬಂದಲ್ಲಿ ನನ್ನ ಮನಸ್ಸಿಗೆ ತೃಪ್ತಿಯುಂಟಾಗುವುದಲ್ಲದೆ ನಮ್ಮ ಕಾರ್ಯಸಿದ್ಧಿಯಾಗುವುದು" ಎಂದು ಒಂದು ಸಂದೇಶವನ್ನು ತಮ್ಮ ಮಿತ್ರಮಂಡಲಿಗೆ ಕಳುಹಿಸಿಕೊಟ್ಟಿದ್ದರು. ಮತ್ತು ವಿಚಾರಣೆಯ ಕಾಲದಲ್ಲಿ ತಮ್ಮ ಹೇಳಿಕೆಯನ್ನು ಬರೆದು ಕೋರ್ಟಿಗೊಪ್ಪಿಸಿದುದರಲ್ಲಿ "ನಿಮ್ಮ ನ್ಯಾಯಶಾಸ್ತ್ರಪ್ರಕಾರ ಅಪರಾಧವಾಗಿಯೂ, ನನ್ನ ಅಭಿಪ್ರಾಯದಲ್ಲಿ ಪಟ್ಟಣವಾಸಿಯಾದ ನನಗೆ ಧರ್ಮವಾಗಿಯೂ, ತೋರಿದ ಕಾರ್ಯವನ್ನು ನಾನು ಮಾಡಿದುದಕ್ಕಾಗಿ ಅತ್ಯಂತ ಕಠಿಣವಾದ ಶಿಕ್ಷೆಯನ್ನು ವಿಧಿಸಬೇಕೆಂದು ನಿಮ್ಮನ್ನು ಪ್ರಾರ್ಥಿಸಿ ಆ ಶಿಕ್ಷೆಯನ್ನು ಸಂತೋಷದಿಂದ ಅನುಭವಿಸಲು ಸಿದ್ಧನಾಗಿರುವೆನು. ನ್ಯಾಯಾಧಿಪತಿಗಳೂ, ಅಸೆಸರುಗಳೂ ಆದ ನೀವುಗಳು ಪರಿಪಾಲಿಸಲಿಕ್ಕಿರುವ ನ್ಯಾಯನಿಬಂಧನೆಯು ದೋಷಯುಕ್ತವೆಂದೂ ನಾನು ನಿರ್ದೋಷಿಯೆಂದೂ ನೀವು ತಿಳಿದದ್ದಲ್ಲಿ ನಿಮ್ಮುದ್ಯೋಗವನ್ನು ಬಿಟ್ಟುಬಿಡುವುದೂ ಹಾಗಲ್ಲದೆ ನಿಬಂಧನೆಯ ಪರಿಪಾಲನಕ್ರಮವು ಒಳ್ಳೆಯದೆಂದೂ, ಭಾರತೀಯರಿಗೆ ಲಾಭಕರವಾದುದೆಂದೂ, ನನ್ನ ಪ್ರಯತ್ನವು ಪ್ರಜೆಗಳಿಗೆ ಭಂಗಕರವಾದುದೆಂದೂ ನೀವು ನಂಬಿದ್ದಲ್ಲಿ ನನಗೆ ಕಠಿಣಶಿಕ್ಷೆಯನ್ನು ವಿಧಿಸುವುದೂ ನಿಮ್ಮ ಮುಖ್ಯ ಕರ್ತವ್ಯವು" ಎಂದು ಬಿನ್ನೈಸಿಕೊಂಡಿದ್ದರು. ಇದೂ ಅಲ್ಲದೆ, ಮಹಾತ್ಮರು ಶಸ್ತ್ರಚಿಕಿತ್ಸೆಗಾಗಿ ಕಾರಾಗೃಹದಿಂದ ಸಾಸೂನು ಆಸ್ಪತ್ರೆಗೆ ಕರೆದುಕೊಂಡು ಹೋಗಲ್ಪಟ್ಟಾಗ್ಗೆ ಚಿಕಿತ್ಸೆಯಾಗುವುದಕ್ಕೆ ಪೂರ್ವ ಆನರಬಲ್ ಶಾಸ್ತ್ರಿಗಳು ತಮ್ಮನ್ನು ಕಂಡು ಮಾತನಾಡುವ ಸಂದರ್ಭದಲ್ಲಿ "ಚಿಕಿತ್ಸೆಯಾದನಂತರ ನನಗೆ ಬಂಧವಿಮೋಚನೆಗಾಗಿ ಏನಾದರೂ ಪ್ರಯತ್ನ ನಡಿಸಲ್ಪಡುವುದಾಗಿದ್ದರೆ ಅದು ಯುಕ್ತಮಾರ್ಗದಲ್ಲಿ ಆಚರಿಸಲ್ಪಡಲಿ. ನನಗೂ ಸರ್ಕಾರದವರಿಗೂ ನಡಿಯುತ್ತಿರುವ ವ್ಯಾಜ್ಯದ ಕಾರಣವು ಪರಿಹಾರವಾದ

ಹೊರತು ವ್ಯಾಜ್ಯವು ಸಮಾಧಾನವಾಗುವಂತಿಲ್ಲವು. ನನ್ನನ್ನು [illegible]ತ್ತು ದೀರ್ಘಕಾಲ ಬಂಧನದಲ್ಲಿಟ್ಟಿರುವುದು ತಪ್ಪು ಮತ್ತು ನಾನು ನಿರಪರಾಧಿ; ನನ್ನ ಉದ್ದೇಶಗಳು ಸಾಧುವಾದುವೆಂದು ಸರ್ಕಾರದವರು ಅರಿತುಕೊಂಡು ನನ್ನ ಬಂಧವಿಮೋಚನೆ ಮಾಡುವುದು ಗೌರವವಾಗಿರುವುದು. ಹಾಗಲ್ಲದೆ ನನ್ನ ಅಸ್ವಸ್ಥತೆ ಮೊದಲಾದ ಕಾರಣಗಳಿಂದ ಬಿಡುವುದಾದರೆ ನಾನು ಸಮ್ಮತಿಸುವುದಿಲ್ಲವು. ಸರ್ಕಾರದವರೊಡನೆ ನಾನು ವ್ಯಾಜ್ಯಮಾಡುತ್ತಿರುವೆನಾದರೂ ನಾನು ಆಂಗ್ಲರನ್ನು ಪ್ರೀತಿಸುತ್ತೇನೆ, ಮತ್ತು ಅವರಲ್ಲಿ ಅನೇಕರು ನನ್ನ ಮಿತ್ರರಾಗಿರುವರು. ಈ ವಿಚಾರದಲ್ಲಿ ನಡಿಸಲ್ಪಡುವ ಆಂದೋಳನವೆಲ್ಲವೂ ಖಂಡಿತವಾಗಿ ದೌರ್ಜನ್ಯರಹಿತವಾಗಿರಬೇಕು" ಎಂದು ಹೇಳಿದರು. ಸ್ವರಾಜ್ಯಸಾಧನ ವ್ರತವು ಕೈಕೂಡುವವರೆಗೂ ದೌರ್ಜನ್ಯರಹಿತವಾದ ಆಂದೋಳವನ್ನು ಬಿಡತಕ್ಕವರಲ್ಲವೆಂದೂ, ಅದಕ್ಕಾಗಿ ಆತ್ಮಾರ್ಪಣವನ್ನು ಮಾಡಲು ಯಾವಾಗಲೂ ಸಿದ್ಧರಾಗಿರುವರೆಂಬುದೂ ಮೇಲೆಹೇಳಿರುವ ಸಂದರ್ಭಗಳಲ್ಲಿ ಅವರು ಆಡಿರುವ ಮಾತಿನಿಂದ ವ್ಯಕ್ತವಾಗುತ್ತದೆ.

ಸ್ವದೇಶದ ವೃತ್ತಾಂತಗಳು.

ಬೆಂಗಳೂರಿಗೆ ದಯಮಾಡಿಸಿದ್ದ ಶ್ರೀಮನ್ ಮಹಾರಾಜರವರು ಕಳೆದ ಗುರುವಾರ ರಾಜಧಾನಿಗೆ ಚಿತ್ತೈಸಿದರು.

ಚೀಫ್ ಜಡ್ಜಿಯರಾಗಿರುವ ಮ|| ಕೆ. ಚಂದ್ರಶೇಖರಯ್ಯರವರಿಗೆ ಬರುವ ಆಗಸ್ಟ್ ಕಡೆಯವರೆಗೆ ರಜವು ಕೊಡಲ್ಪಟ್ಟು ಅನಂತರ ನಿವೃತ್ತಿಗೊಳಿಸಲ್ಪಡುವರೆಂಬ ವದಂತಿ ಹುಟ್ಟಿದೆ. ಇದು ನಿಜವಾಗಿದ್ದ ಪಕ್ಷದಲ್ಲಿ ಮ|| ಅಯ್ಯರ್‌ರವರ ಸ್ಥಾನಕ್ಕೆ ಮತ್ತಾರು ತರಲ್ಪಡುವರೋ ನಿರೀಕ್ಷಿಸಲ್ಪಡತಕ್ಕದಾಗಿದೆ.

ಮೈಸೂರು-ಕೊಡಗು ಮೇಲ್ ಕಂಟ್ರಾಕ್ಟರೂ ಮ್ಯು|| ಕೌನ್ಸಿಲರೂ ಆದ ಖಾನ್ ಬಹದ್ದೂರ್, ಪಾಲಂಜಿಯವರು ತಮ್ಮ ಕುಮಾರ ಮಿ|| ಜಾಲ್ ಪೀರೂಷಾ ಪಾಲಂಜಿಯವರಿಗೆ ಸೌ|| ಬಾನೂಬಾಯಿ ಎಂಬ ಕನ್ಯೆಯನ್ನು ತಂದುಕೊಂಡು ಈ ದಿವಸ ಹುಬ್ಬಳ್ಳಿಯಲ್ಲಿ ವಿವಾಹಮಹೋತ್ಸವವನ್ನು ನಡಿಸುವವರಾಗಿರುವರು.

ರಾಜಧಾನಿಯ ಮ್ಯುನಿಸಿಪಲ್ ಆಫೀಸಿನ ಕೆಲಸಗಾರರಲ್ಲಿ ಕೆಲವರು ಓಟರುಗಳ ಮನೆಗಳಿಗೆ ಹೋಗಿ ಇಂತಹ ಉಮೇದುವಾರರಿಗೇ ಓಟುಗಳನ್ನು ಕೊಡಬೇಕೆಂದು ಹೇಳುತ್ತಿರುವುದಾಗಿಯೂ, ಉಮೇದುವಾರರುಗಳ ಮ್ಯಾನಿಫೆಸ್ಟೊಗಳನ್ನು ಬರೆದು ಹಂಚುತ್ತಿರುವುದಾಗಿಯೂ ನಮ್ಮಲ್ಲಿಗೆ ದೂರುಬಂದಿರುತ್ತದೆ. ಆದ್ದರಿಂದ ಮೇಲ್ಪಟ್ಟ ಅಧಿಕಾರಿಗಳು ಇದರ ನಿಜಾಂಶವನ್ನು ವಿಚಾರಿಸಿ ತಪ್ಪಿತಸ್ಥರನ್ನು ಕಠಿನತರವಾಗಿ ಶಿಕ್ಷಿಸಬೇಕೆಂದು ಸೂಚಿಸುತ್ತೇವೆ.

ರಾಜಧಾನಿಯಲ್ಲಿ ವಾಂತಿಭೇದಿರೋಗವು ಪ್ರಬಲವಾಗಿ ನಿತ್ಯದಲ್ಲೂ 1-2 ಮರಣಗಳಾಗುತ್ತಿವೆ. ಈ ವಿಚಾರದಲ್ಲಿ ಜನರು ಮನೆಗಳಲ್ಲಿ ನೊಣಗಳು ಸೇರದಂತೆ ಮಾಡಬೇಕೆಂದೂ ಚೆನ್ನಾಗಿ ಕಾಯಿಸಿದ ನೀರನ್ನು ಆರಿಸಿ ಕುಡಿಯುವುದುತ್ತಮವೆಂದೂ ಸೋಂಕು ತಗುಲಿದ ಹಳ್ಳಿಗಳಿಂದ ಬರುವ ಮೊಸರು ತರಕಾರಿ ಪದಾರ್ಥಗಳನ್ನೂ ತಂಗಳನ್ನವನ್ನೂ ತಿನ್ನಬಾರದೆಂದೂ ಹೆಲ್ತಾಫೀಸರು ಎಚ್ಚರಿಸಿರುವ ಪ್ರಕಟನಪತ್ರಿಕೆಯನ್ನು ಪ್ರತಿಯೊಬ್ಬರೂ ಗಮನಿಸಿ ಅದರಂತೆ ಆಚರಿಸುವವರಾಗಬೇಕು.

ನಮ್ಮ ಶ್ರೀಮನ್ ಮಹಾರಾಜರವರ ಹುಜೂರು ಸೆಕ್ರೆಟರಿಯವರಾದ ಮ|| ಟಿ. ತಂಬೂಸೆಟ್ಟರು ತಮ್ಮ ಕುಮರಿ ಸೌ|| ಧರ್ಮಾವತಿ ಅಮ್ಮನನ್ನು ರಾ|| ಜೆ. ಎಸ್. ರಾಜು ಎಂ. ಎ., (ಆಕ್ಸನ್) ರವರಿಗೆ ಕೊಟ್ಟು ಬೆಂಗಳೂರು ದಂಡಿನಲ್ಲಿರುವ ರಗ್ಬಿ ಲಾಡ್ಜಿನಲ್ಲಿ ನೆನ್ನೆಯ ದಿನ ಬಹಳ ವಿಜೃಂಭಣೆಯಿಂದ ಪಾಣಿಗ್ರಹಣಮಹೋತ್ಸವವನ್ನು ಜರುಗಿಸಿದರು. ದಿವಾನರು ಕೌನ್ಸಿಲರುಗಳು ಆದಿಯಾಗಿ ಎಲ್ಲಾ ಸರ್ಕಾರಿಯಧಿಕಾರಿಗಳೂ ಪುರಪ್ರಮುಖರುಗಳೂ ದಯಮಾಡಿಸಿದ್ದು ನೂತನದಂಪತಿಗಳಿಗೆ ಸಕಲ ಮಂಗಳವಾಗಲೆಂದು ಹರಸಿದರು.

ಶ್ರೀಮನ್ಮಹಾರಾಜರವರಿಂದ ಅನೇಕವಾದ ಉಡುಗರೆಗಳನ್ನೂ ಪ್ರಶಸ್ತಿಯನ್ನೂ ಪಡೆದು ಈಗ ಮದ್ರಾಸಿಗೆ ಹೋಗಿ ತಮ್ಮ ಪ್ರಸಿದ್ಧವಾದ ಕಬೀರ್‌ದಾಸ್ ಸದಾರಮೆ ಮೊದಲಾದ ನಾಟಕಗಳನ್ನು ಅಭಿನಯಿಸಿ ಅಲ್ಲಿಯ ಪುರನಿವಾಸಿಗಳ ಮೆಚ್ಚು[illegible] ಬಹುಮಾನಗಳಿಗೂ ಪಾತ್ರರಾಗಿರುವರೆಂದು ತಿಳಿದು ಸಂತೋಷಿಸುತ್ತೇವೆ. ಈ ನಾಟಕಸಂಘದವರು 1924 ನೆಯ ವತ್ಸರದ ಕ್ಯಾಲಂಡರನ್ನು ಮನೋಹರಗಳಾದ ಭಾವಚಿತ್ರಗಳಿಂದ ನೇತ್ರಾನಂದಕರವಾಗಿ ಮಾಡಿಸಿ ನಮ್ಮಲ್ಲಿಗೊಂದು ಕಳುಹಿರುವುದನ್ನು ಮತ್ತು ಮದ್ರಾಸಿನ ಪ್ರಸಿದ್ಧ ಗುರು[illegible]ವ ಅಂಡ್ ಕಂಪನಿಯವರು ಕಳುಹಿಸಿರುವ 5 ವಿಧಗಳಾದ ಸಚಿತ್ರ ಕ್ಯಾಲಂಡರುಗಳನ್ನೂ ವಿಶ್ವಾಸದಿಂದ ಸ್ವೀಕರಿಸುತ್ತೇವೆ.

ದಿವಾನರೂ ಎರಡನೆಯ ಕೌನ್ಸಿಲರೂ ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ನೀರಿಗೂ ಆಹಾರಕ್ಕೂ ಬಹಳ ಅಭಾವವಾಗಿರುವ ಪ್ರಾಂತಗಳನ್ನು ಪರಾಮರ್ಶಿಸಿಕೊಂಡು ಬಂದು ಅವುಗಳ ಪರಿಹಾರೋಪಾಯವನ್ನು ತಿಳಿಸಿರುವರು. ಅದರ ಮೇರೆಗೆ ಮದ್ಗಿರಿಯ ಕೋಆಪರೇಟಿವ್ ಸೊಸೈಟಿಗೆ ಅಲ್ಲಿಯ ಸೇಗೆಯವರಿಗೆ ಹಣವನ್ನು ಸಾಲಕೊಟ್ಟು 2 ವರ್ಷಗಳಲ್ಲಿ ಬರಮಾಡಿಕೊಳ್ಳುವುದಕ್ಕಾಗಿ 3000 ರೂ. ಗಳು ಕೊಡಲ್ಪಟ್ಟಿರುವುವು. ಮತ್ತು ಮದ್ಗಿರಿ ತಾ|| ಅಮಲ್ದಾರರು 1924ನೆ ಜೂನ್ ವರೆಗೆ ಕ್ಷಾಮನಿವಾರಣಾಕಾರ್ಯಗಳನ್ನು ನೋಡಿಕೊಳ್ಳಲನುಕೂಲಿಸುವಂತೆ ಮ್ಯಾಜಿಸ್ಟ್ರೇಟ್ ಮತ್ತು ಇತರ ನಿತ್ಯಕಟ್ಟಲೆಯ ಕೆಲಸಗಳನ್ನು ನೋಡಿಕೊಳ್ಳುವುದಕ್ಕಾಗಿ ಒಬ್ಬ ಡಿಪ್ಯುಟಿ ಅಮಲ್ದಾರರು ನಿಯಮಿಸಲ್ಪಟ್ಟಿರುವರು. ಅತ್ಯವಸರವಾದ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ 14 ತಾಲ್ಲೂಕು ಅಮಲ್ದಾರರುಗಳ ವಶಕ್ಕೆ ಪ್ರತಿಯೊಬ್ಬರಿಗೂ 500 ರೂ. ನಂತೆ ಹಣವು ಕೊಡಲ್ಪಟ್ಟಿರುವುದು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ಲಗ್ನದ ಫಂಡು.

1. ಚಿತ್ರದುರ್ಗ ತಾಲ್ಲೂಕು ಕೊಣ್ಣಬೇವು ಗ್ರಾಮದಲ್ಲಿ ರಾಮಗಿರಿ ಚರಂತಿಮಠದ ವೇ|| ಕರಿಸಿದ್ಧಯ್ಯ ಚನ್ನಬಸವಯ್ಯನವರು ಧರ್ಮಾರ್ಥವಾಗಿ ವೀರಮಾಹೇಶ್ವರ ವಟುಗಳಿಗೆ ಶಿವದೀಕ್ಷಾ ಸಂಸ್ಕಾರವನ್ನು ನಡಸಿದ ಕಾಲದಲ್ಲಿ ಸಂಘಕ್ಕಾಗಿ ಚಳ್ಳಕೆರೆ ತಾಲ್ಲೂಕು ನಾಯ್ಕನಹಟ್ಟಿ ಸುಬೇದಾರ್ ಮ|| ರಾ|| ಚಂದ್ರಶೇಖರಯ್ಯನವರಿಂದ 2 ರೂ. ಪೈಕಿ ಯಂ. ಒ. ಕಮಿಷನ್ 0-2-0 ಜಾತಾ 1-14-0

2. ಗುಬ್ಬಿ ಯಜಮಾನ್ ಮ|| ರಾ|| ಹುಚ್ಚವೀರಪ್ಪನವರ ಮೂಲಕ ನಿಡಸಾಲೆ ಮ|| ರಾ|| ರಾಚಪ್ಪನವರ ಕುಮಾರಿ ರಾಚಮ್ಮನ ಲಗ್ನದಲ್ಲಿ 5 ರೂ. ಗಿರಿಜಮ್ಮನವರ ಚನ್ನಪ್ಪನವರ ಮಗಳು ಚಿ|| ಸೌ|| ಗಂಗಮ್ಮನ ಲಗ್ನದಲ್ಲಿ 2 ರೂ. ಗುಬ್ಬಿ ಕಾಯಿನಂಜಪ್ಪನವರ ಮೊಮ್ಮಗಳು ಚಿ|| ಸೌ|| ಅಡವಮ್ಮನ ಲಗ್ನದಲ್ಲಿ 5 ರೂ. ಗುಬ್ಬಿ ವೀರಣ್ಣನವರ ಮಗ ರುದ್ರಯ್ಯನವರ ಲಗ್ನದಲ್ಲಿ 5 ರೂ. ಗುಬ್ಬಿ ಹುಚ್ಚಮಲ್ಲಣ್ಣನವರ ಮಗ ಗಂಗಪ್ಪನವರ ಲಗ್ನದಲ್ಲಿ 2 ರೂ. ಗುಬ್ಬಿ ಜಿ. ಬಿ. ಮುರುಗಪ್ಪನವರ ಮಗ ಗಂಗಾಧರಯ್ಯನವರ ಲಗ್ನದಲ್ಲಿ 8 ರೂ. ಗುಬ್ಬಿ ಸ್ವಾ|| ಲಿಂಗಪ್ಪನವರ ಮಗಳ ಲಗ್ನದಲ್ಲಿ 10 ರೂ. ಜುಮ್ಲಾ 37-0-0 ರೂ. ಗಳು

3. ಹೊಸಪೇಟೆ ತಾಲ್ಲೂಕು ಅನ್ವೇರಹಳ್ಳಿಯಲ್ಲಿರುವ ಶ್ರೀ ರೇವಣಸಿದ್ಧೇಶ್ವರಸ್ವಾಮಿ ಅರ್ಚಕರಾದ ಮ|| ರಾ|| ರುದ್ರಪ್ಪನವರ ನಾದಿನಿ ಚಿ|| ಸೌ|| ಚನುವೀರಮ್ಮನೆಂಬ ವಧುವಿಗೂ ಮಂಡ್ಯದ ತಾಲ್ಲೂಕು ಆಗಲಹಳ್ಳಿ ಮ|| ರಾ|| ಶಿದ್ಧರಾಮಪ್ಪನವರ ಪುತ್ರ ಮುರುಳಪ್ಪನೆಂಬ ವರನಿಗೂ ನಡದ ನಿಷೇಕಪ್ರಸ್ತದಲ್ಲಿ ಚನ್ನಪಟ್ಟಣದ ಮ|| ರಾ|| ಎಂ. ಆರ್. ವೀರಭದ್ರಪ್ಪನವರ ಮೂಲಕ 2 ರೂ.

4. ಕಾರ್ಕಾರ್ಹಳ್ಳಿ ಮ|| ರಾ|| ಗುರುಕಾರ್ ಚನ್ನಬಸಪ್ಪನವರ ಮಗಳ ನಿಷೇಕಪ್ರಸ್ತದಲ್ಲಿ ಫಂಡಿಗಾಗಿ ಮ|| ರಾ|| ಕೆ. ಪಿ. ಪರಶಿವಯ್ಯನವರ ಮೂಲಕ 3 ರೂ.

5. ಬೆಂಗಳೂರು ಸಿಟಿ ಚಿಕ್ಕಪೇಟೆ ಅಪ್ಪಣ್ಣಪ್ಪನವರ ಮ|| ರಾ|| ಎಂ. ನಂಜುಂಡಪ್ಪನವರ ಮಗಳ ಲಗ್ನದಲ್ಲಿ ವಧೂವರರ ಕಡೆಯಿಂದ ಮ|| ರಾ|| ದೇಶದ ಶೆಟ್ಟರು ಶಿದ್ಧಬಸಪ್ಪ ಶೆಟ್ಟರ ಮೂಲಕ 2 ರೂ.

6. ಕೋಲಾರದ ತಾಲ್ಲೂಕು ಹೋಳೂರು ರುದ್ರಪ್ಪನವರ ಮನೆ ಲಗ್ನದಲ್ಲಿ ವಧೂವರರ ಕಡೆಯಿಂದ ಬಂದದ್ದು ಬೆಂಗಳೂರು ದೇಶದ ಶೆಟ್ಟರು ಬಸವಲಿಂಗಶೆಟ್ಟರ ಮೂಲಕ 4 ರೂ.

7. ಚಳ್ಳಕೆರೆ ತಾಲ್ಲೂಕು ಚನುಮನಾಗತ್ತಿಹಳ್ಳಿ ತಪ್ಪದ ಸಾಹುಕಾರ್ ಮಲ್ಲಪ್ಪನವರಿಂದ ಶಿಂಗೆಮಲ್ಲಪ್ಪನವರ ಮನೆ ಲಗ್ನದಲ್ಲಿ ತೆಗೆದದ್ದು 3 ರೂ. ಜುಮ್ಲಾ ರೂ. 52-14-0.

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ.

ಜಿ. ಪರಮಶಿವಯ್ಯ, ಬಿ.ಎ., ಎಲ್.ಎಲ್.ಬಿ., ಸೆಕ್ರೆಟರಿ.
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ,
ಬೆಂಗಳೂರು ಸಿಟಿ.

ನೋಟೀಸ್.

ಯಡತೊರೆ ತಾ|| ಹೊಸಹಳ್ಳಿ ಕೊಪ್ಪಲಲ್ಲಿ ಇರುವ ಸರ್ವೆ ನಂಬರು 195 ಎಕರೆ 17 ಕುಂಟೆ 17 ಆಕಾರ 6½ ರೂ. ಉಳ್ಳ ಹೊಲ ಮತ್ತು ಇದೇ ತಾ|| ಕಸಬ ಹೋ|| ನಾಚನಹಳ್ಳಿ ನಾಲಾಕೆಳಗಡೆ ಹೊಸಹಳ್ಳಿಗ್ರಾಮಕ್ಕೆ ಸೇರಿದ ಚನ್ನೆಗೌಡನ ಖಾತೆ ಬಾಬ್ತು ಪೂರ್ವಕ್ಕೆ ನಾಲ ಪಶ್ಚಿಮಕ್ಕೆ ನಾಲಾಪರಿ ದಕ್ಷಿಣಕ್ಕೆ ಹೊಣಕೆರೆ ಸಿದ್ದೇಗೌಡ ವಗೈರೇರ ಗದ್ದೆ ಉತ್ತರಕ್ಕೆ ಗಿರೀಗೌಡನ ಕಾಳೇಗೌಡನ ಕಾಳೇಗೌಡನ ಗದ್ದೆ ಈ ಮಧ್ಯೆ ಇರುವ ಸರ್ವೆ ನಂಬರು 88 ಎಕರೆ ಗುಂಟೆ 24 ಆಕಾರ 3-4 ಉಳ್ಳ ಗದ್ದೆ ಈ ಎರಡು ಜಮೀನುಗಳು ಮೈಸೂರು ಹಳ್ಳದಕೇರಿ ಖಾರಾವುತರ ಪವುತಿ ಚಿಕ್ಕಸುಬ್ಬರಾಯನಿಗೆ ಸೇರಿದ್ದು. ಈಚೆಗೆ ಇವನ ಮೈನರ್ ಮಗಳು ಗೋಪೀಬಾಯಿಗೆ ಸೇರಿ ಕೋರ್ಟಿನಿಂದ ಗಾರ್ಡಿಯನ್ ನೇಮಕವಾಗಿರುತ್ತದೆ. ಮೈನರಳ ಆಸ್ತಿಯನ್ನ ಖಿಲಲ್ ಮಾಡಬೇಕೆಂಬ ಉದ್ದೇಶದಿಂದ ಈ ಆಸ್ತಿಗಳನ್ನ ಮೋಸದಿಂದ ಆಧಾರ ಭೋಗ್ಯ ಖರೀದಿ ಮಾಡಬೇಕೆಂದು ಕೆಲವರು ಪ್ರಯತ್ನಮಾಡುತ್ತಾರೆಂದು ಕೇಳುತ್ತೇನೆ. ಈ ಮೈನರ ಆಸ್ತಿಯನ್ನು ಯಾರಾದರೂ, ಯಾವ ವಿಧದಿಂದಲಾದರೂ ಪಡೆದುಕೊಂಡರೆ ಅದು ಊರ್ಜಿತವಾಗುವದಿಲ್ಲವೆಂದು ಈ ಮೂಲಕ ಎಚ್ಚರಿಸಿದೆ.

ಮೈಸೂರು, ತಾ|| 8-2-24. } ಗಿರಿಮಾಜಿರಾವ್, ಕೋರ್ಟಿನಿಂದ ನೇಮಿಸಲ್ಪಟ್ಟವರು ಗಾರ್ಡಿಯನ್.

ನೋಟೀಸ್.

ರಾಜಧಾನಿಯ ಸುತ್ತುಮುತ್ತಲು ಇರುವ ಹಳ್ಳಿಗಳಲ್ಲಿ ಕಾಲರ (Cholera) ಇರುವದರಿಂದ ಅಲ್ಲಿಂದ ಬರುವ ಹಾಲು, ಮೊಸರು, ಮಜ್ಜಿಗೆ ಯಾವದನ್ನೂ ಯಾರೂ ತೆಗೆದುಕೊಳ್ಳಬಾರದು. ನೊಣಗಳಿಂದಲೂ, ಮತ್ತು ನೀರು ಮುಂತಾದ ಮನುಷ್ಯ ತಿನ್ನುವ ಆಹಾರಗಳಿಂದಲೂ ಕಾಲರ ರೋಗವು ವ್ಯಾಪಿಸುವದು. ಆದ್ದರಿಂದ ಜನರೆಲ್ಲರೂ ಮನೆಯಲ್ಲಿ ನೊಣಗಳು ಸೇರದಹಾಗೆ ಮನೆ ಮತ್ತು ಹಿತ್ತಲುಗಳನ್ನು ಮತ್ತು ದನದ ಕೊಟ್ಟಿಗೆಗಳನ್ನು ಬಹಳ ಶುಚಿಯಾಗಿಡಬೇಕು. ಮತ್ತು ನೀರು ಕುದಿಸಿ ತಣಗೆ ಮಾಡಿ ಕುಡಿಯಬೇಕು. ಬೆಳಗಿನ ಊಟ ಆ ಹೊತ್ತಿಗೇನೇ ಅಡಿಗೆಮಾಡಿ ಬಿಸಿಬಿಸಿಯಾಗಿ ಊಟಮಾಡಬೇಕು. ತಂಗಳನ್ನ ಎಂದಿಗೂ ಊಟಮಾಡಬಾರದು. ನೊಣಗಳು ಸೇರದ ಹಾಗೆ ಅಡಿಗೆಮಾಡಿದ ಪಾತ್ರೆಗಳನ್ನು ಮುಚ್ಚಿಡಬೇಕು. ರಾತ್ರಿ ಮಾಡುವ ಊಟ ರಾತ್ರಿಯೇ ಅಡಿಗೆಮಾಡಿ ಊಟಮಾಡಬೇಕು.

ಅಜೀರ್ಣವಾಗುವ ಹಣ್ಣುಗಳನ್ನು ಉಪಯೋಗಿಸಬಾರದು. ಮತ್ತು ಅಜೀರ್ಣವಾಗುವ ಯಾವ ಪದಾರ್ಥವನ್ನೂ ತಿನ್ನಬಾರದು.

ಯಾರಮನೆಯಲ್ಲಾದರೂ ವಾಂತಿಭೇದಿ ತಗಲಿದರೆ ತಕ್ಷಣವೇ ಹೆಲ್ತ್ ಡಿಪಾರ್ಟ್‌ಮೆಂಟರವರಿಗೆ ತಿಳಿಸಬೇಕು. ಅವರು ಆಕ್ಷಣವೇ ಮನೆ ಶುದ್ಧಿಮಾಡುವುದಲ್ಲದೆ ಖಾಯಿಲೆ ವ್ಯಾಪಿಸದಂತೆ ಉಪಾಯಗಳನ್ನು ಏರ್ಪಡಿಸುವರು.

J. V. MASCARENHAS,
Health Officer.

ನೋಟೀಸ್.

ಈಚೆಗೆ ಬಿಸಿಲಿನ ತಾಪದಿಂದಲೂ ಮಳೆ ಹಿಂಗಿದಿರುವುದರಿಂದಲೂ ಸಿಟಿಯಲ್ಲಿ ನೀರಿನ ಖರ್ಚು ಬಹಳ ಜಾಸ್ತಿಯಾಗಿರುತ್ತೆ. ಬೆಳಗುಳದಲ್ಲಿರುವ ಹಳೆಯ ಮೂರು ಯಂತ್ರಗಳು ಮತ್ತು ಒಂದು ಹೊಸ ಯಂತ್ರ ಈ ನಾಲ್ಕು ಯಂತ್ರಗಳಿಂದಲೂ ಏಕಕಾಲದಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲವಾಗಿಯೂ ಇವುಗಳ ಪೈಕಿ ಈಚೆಗೆ ಒಂದು ಯಂತ್ರವು ಕೆಟ್ಟುಹೋಗಿರೋಣದರಿಂದಲೂ ಸಿಟಿಗೆ ಸಾಕಾದಷ್ಟು ನೀರನ್ನು ಒದಗಿಸಲು ಕಷ್ಟವಾಗಿರುತ್ತೆ. ಆದ್ದರಿಂದ ಪ್ರತಿ ದಿವಸವೂ ಬೆಳಿಗ್ಗೆ 6 ಗಂಟೆಯು ಲಾಗಾಯ್ತು ಮಧ್ಯಾಹ್ನ 1 ಗಂಟೆಯು ವರಿವಿಗೂ ಪುನಃ ಸಾಯಂಕಾಲ 5 ರಿಂದ 9 ಘಂಟೆಯ ವರಿವಿಗೂ ನೀರು ಸಪ್ಲೈ ಮಾಡಬೇಕಾಗಿ ಬಂದಿರುತ್ತೆ. ದಯವಿಟ್ಟು ಪುರನಿವಾಸಿಗಳು ಕುಮ್ಮಕ್ಕಿನಿಂದ ನೀರಿನ ಖರ್ಚನ್ನು ಕಮ್ಮಿ ಮಾಡಬೇಕಾಗಿ ಸೂಚಿಸಿರುತ್ತೆ.

ಮೈಸೂರು, 6ನೇ ಫೆಬ್ರವರಿ 1924. } ಕಾ. ಶ್ರೀಕಂಠೇಶ್ವರ ಐಯ್ಯರ್.

ರಾಜಧಾನಿಯ ಓಟರು ಮಹಾಶಯರಲ್ಲಿ

ವಿಜ್ಞಾಪನೆ.

ಪ್ರಜಾಪ್ರತಿನಿಧಿ ಸಭೆ (ರೆಪ್ರೆಜೆಂಟೇಟಿವ್ ಅಸೆಂಬ್ಲಿ)ಗೆ ಮೆಂಬರುಗಳಾಗಲು ಈ ಕೆಳಗೆ ಕಂಡ ನಾವು ನಾಲ್ವರು ಉಮೇದುವಾರರಾಗಿ ನಿಂತಿರುತ್ತೇವೆ ಮತ್ತು ಮಹಮ್ಮದ್‌ಸೇಟನಾದ ನಾನು ಮಾತ್ರ ಲೆಜಿಸ್ಲೇಟಿವ್ ಕೌನ್ಸಿಲಿಗೆ ಸಹ ಮೆಂಬರಾಗಲು ಉಮೇದುವಾರನಾಗಿರುತ್ತೇನೆ. ಆದ್ದರಿಂದ ತಾವು ಬರುವ ಫೆಬ್ರವರಿ ತಾ|| **15** ರಲ್ಲಿ ಗೊತ್ತಾದ ಸ್ಥಳಕ್ಕೆ ದಯವಿಟ್ಟು ದಯಮಾಡಿ ನಮ್ಮಗಳಿಗೆ ತಮ್ಮ ಘನವಾದ ಓಟುಗಳನ್ನು ಕೊಟ್ಟು ಮತ್ತು ಇತರರಿಂದ ಕೊಡಿಸಿ, ಪ್ರಜಾಸೇವೆಯೇ ಜೀವಿತದ ಪುರುಷಾರ್ಥವೆಂಬ ನಮ್ಮ ಸಂಕಲ್ಪವನ್ನು ನಿದರ್ಶನಪಡಿಸಲು ಅವಕಾಶವನ್ನು ಉಂಟುಮಾಡಿಕೊಡಬೇಕಾಗಿ ಪ್ರಾರ್ಥಿಸುವ,

...ಎಂಟ ವಿಚಾರ
ತಮ್ಮ ಕೃಪಾಭಿಲಾ[illegible] ತಮ್ಮಗಳ ಘನವಾದ
[illegible]ವರಿಗೂ ಭದ್ರಪ್ಪನವರಿಗೂ
1. ಮುಹಮ್ಮದ್‌ಸೇಟ್. 2[illegible] ಮಾಡುವ ಭಾರತ
3. ಛಟಕೋಟಿಸೆಟ್ಟಿ.
[illegible]ಪ್ಪ, ಕ್ಯಾಂಪ್ ಜೋಲ್ಲರ್.

ಪ್ರಕಟನೆ.

ರಾಜಧಾನಿಯಿಂದ ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕಸಭೆಗೂ ಮೆಂಬರುಗಳನ್ನು ಚುನಾಯಿಸಲು ಅರ್ಹರಾದ ಓಟರುಗಳು ಅಂದರೆ,

(1) ಲಷ್ಕರ್ (2) ಮಂಡಿ (3) ನಜರ್ಬಾದ್ ಮೊಹಲ್ಲಾಗಳಿಗೆ ಸೇರಿಸಲ್ಪಟ್ಟ ಓಟರುಗಳು

ಟವರ್‌ಹಾಲಿಗೆ

(1) ದೇವರಾಜ (2) ಕೃಷ್ಣರಾಜ ಮೊಹಲ್ಲಾಗಳಿಗೆ ಸೇರಿಸಲ್ಪಟ್ಟ ಓಟರುಗಳು

ಧ|| ಪ್ರ|| ಬನುಮಯ್ಯನವರ ಸ್ಕೂಲಿನ ಹತ್ತಿರವಿರುವ

ಹೊಸ ಮ್ಯುನಿಸಿಪಲ್ ಕಟ್ಟಡಕ್ಕೆ

(1) ಚಾಮರಾಜ (2) ಕಿಲ್ಲೆಮೊಹಲ್ಲಾಗಳಿಗೆ ಸೇರಿಸಲ್ಪಟ್ಟ ಓಟರುಗಳು

ಮರಿಮಲ್ಲಪ್ಪನವರ ಹೈಸ್ಕೂಲಿಗೆ

ಈ ಫೆಬ್ರವರಿ ತಾ|| 15 ನೆಯ ಶುಕ್ರವಾರ ಬೆಳಿಗ್ಗೆ 11 ಗಂಟೆಯಿಂದ ಬಂದು ತಮ್ಮ ಓಟುಗಳನ್ನು ಕೊಡಬಹುದಾಗಿ ಪ್ರಕಟವಾಗಿದೆ. ಇದಕ್ಕಾಗಿ ಓಟರುಗಳಿಗೆ ಪ್ರತ್ಯೇಕವಾದ ನೋಟೀಸು ಬರುವುದಿಲ್ಲ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಫೆಬ್ರವರಿ ತಾ|| ೧೦ ನೆಯ ಭಾನುವಾರ.

THE CORRECT PERSPECTIVE.

The manifesto issued by some leading gentlemen of this city in favour of some four candidates who stand for the Mysore Representative Assembly and one of whom to the Mysore Legislative Council has altogether upset the mind of the *Sampadabhyudaya* camp, to which we note, not without surprise, there have been some strange recruits of late. "Circumstances make bedfellows of strange men," and verily at present it is a sight to see all and sundry rushing to that famous organ of reaction for giving expression to their spleen. There have been numerous articles, inspired or uninspired, questioning the propriety of the issueing of such a manifesto, but to all of them the letter sent by Mr. A. C. Lingaraj Urs, himself a signitory to the manifesto, to the *Sampadabhyudaya* of the 6th instant which is a clear and dignified note and views the matter from the correct persepective is a complete answer, and must needs give a quietus to further mischievous efforts to misrepresent the situation. A manifesto supporting certain candidatures is certainly no ultimatum to the voters, that if they do not vote to the particular candidates they would be visited with any condign punishment. It is the ordinary electioneering method, and there is nothing preventing any other gentlemen to issue a similar manifesto on behalf of some other candidate or candidates. This is the gist of the letter in question and the public should feel thankful to Mr. Lingaraj Urs for placing this important though well-known aspect of the situation before them. But how arose all this storm and the old time Brahmin Non-Brahmin affair is another interesting question. The manifesto had nothing to do with it. The candidates referred to, much less. The trotting of the bogey was by the same instrument which for the past so many years has been carrying the campaign against popular aspirations regardless of the means employed therefor, and if in its new-fangled course some additional, temporary or permanent is yet to be seen, recruits are drawn in, little wonder. It is of only a repetition of past history. But though these happenings might make the advance of popular cause slower it cannot stop it. It is with a clear conscience and inspired by the righteousness of the cause that those few are standing by the popular cause, and it is for the people to stand by them and help its advancement. There is no place for deception, for political chicanery in this striving. It is an abounding sympathy, dead earnestness and an absolute solfless spirit that are required. Politics is no dilettantism. It is a serious affair. But how few have realised the duty and the responsibility of being a representative of the vast number of electors. How often have these powers vested in the representatives not been abused to the detriment of the represented? We doubt if the capacity for deception has ceased. There is no salvation to the country unless deception is dethroned and sincerety installed in our political life. It is, after all, "the moral forces that govern the standing or falling of nations," and it should be the endeavour of all interested in the progress of Mysore to so organise, strengthen and develop the moral forces as to make her a really powerful and prosperous State. It is our earnest hope that the voters will try to exercise their discretion and judgment in giving their votes and chose men who would truly represent them.

ಅರಮನೆಯಲ್ಲಿ ದ್ವಿತೀಯ ಪುತ್ರಿಕಾರತ್ನೋತ್ಸವವು.

ಈ ಫೆಬ್ರವರಿ ತಾ|| 6 ನೆಯ ಬುಧವಾರ ರಾತ್ರಿ 2-50 ಗಂಟೆಯಲ್ಲಿ ನಮ್ಮ ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರವರಿಗೆ ದ್ವಿತೀಯ ಪುತ್ರಿಕಾರತ್ನೋತ್ಸವವಾಯಿತೆಂದೂ ರಾಜಕುಲ ದೇವತೆಯಾದ ಶ್ರೀ ಚಾಮುಂಡಿಕಾಂಬೆಯ ಪೂರ್ಣಾನುಗ್ರಹದಿಂದ ಮಗು ಬಾಣಂತಿಯರು ಆರೋಗ್ಯವಾಗಿರುವರೆಂದೂ ತಿಳುಹಲು ಅತಿಶಯವಾಗಿ ಸಂತೋಷಿಸುತ್ತೇವೆ. ಜನಸವಾದ ಸಂತೋಷಸೂಚಕವಾಗಿ ಮಾರನೆ ದಿನ ಬೆಳಿಗ್ಗೆ 21 ಗುಂಡುಗಳು ಹಾರಿಸಲ್ಪಟ್ಟುವು. ಆ ದಿವಸ ರಾತ್ರಿ ಅರಮನೆಯ ಒಳಹೊರಗಣ ಭಾಗಗಳೂ ಕೋಟೆಯ ಬಾಗಿಲುಗಳೂ, ಟವರ್ ಹಾಲೂ, ದೊಡ್ಡಗಡಿಯಾರವೂ ವಿದ್ಯುದ್ದೀಪಾವಳಿಗಳಿಂದ ಪ್ರಕಾಶಗೊಳಿಸಲ್ಪಟ್ಟು ಅರಮನೆಯ ಪರಮಾನಂದವನ್ನು ಹೊರಗೆಡುಹುವಂತಿದ್ದುವು. ನಮ್ಮ ರಾಜವಂಶವು ಈ ರೀತಿಯಲ್ಲಿ ವೃದ್ಧಿಗೊಳ್ಳುತ್ತಿರುವುದು ಮೈಸೂರು ದೇಶಿಯರಿಗೆಲ್ಲಾ ಪರಮಾನಂದಕರವಾಗಿರುವುದು. ಇಂತಹ ಪುತ್ರಿಪುತ್ರೋತ್ಸವಗಳು ಇನ್ನೂ ವಿಶೇಷವಾಗಿ ನಡೆದು ನಮ್ಮ ರಾಜಸಂತತಿಯು ಬಹುಕಾಲ ಪ್ರಫುಲ್ಲಿತವಾಗಿರುವಂತೆ ಕುಲದೇವನಾದ ಶ್ರೀ ಶ್ರೀಕಂಠೇಶ್ವರನು ಅನುಗ್ರಹಿಸಲೆಂದು ಪ್ರಜಾವರ್ಗದೊಡನೆ ನಾವೂ ಪ್ರಾರ್ಥಿಸುತ್ತಿರುವೆವು.

ಓಟರುಗಳಿಗೆ ಕಡೆಯೆಚ್ಚರಿಕೆ.

ಓಟರುಗಳು ತಮ್ಮ ಘನವಾದ ಓಟನ್ನು ಯಾರಿಗೆ ಕೊಟ್ಟಲ್ಲಿ ತಮಗೆ ಕ್ಷೇಮವಾಗುತ್ತದೆ, ಮತ್ತು ಶ್ರೀಮನ್ ಮಹಾರಾಜರವರಿಂದ ತಮಗೆ ಅನುಗ್ರಹಿಸಲ್ಪಟ್ಟಿರುವ ಅಧಿಕಾರವು ಸಫಲವಾಗಿ ಮಹಾರಾಜರವರಿಗೆ ಸಂತೋಷವಾಗುತ್ತದೆ ಎಂಬ ವಿಚಾರದಲ್ಲಿ ಈ ವರೆಗೂ ನಾವು ಎಷ್ಟೋ ಬರೆದು ಎಚ್ಚರಿಸಿರುತ್ತೇವೆ. ಆದರೂ ಓಟನ್ನು ಕೊಡತಕ್ಕ 15ನೇ ತಾ|| ಶುಕ್ರವಾರವು ಬರಲು ಇನ್ನು 5 ದಿನಗಳು ಮಾತ್ರ ಉಳಿದಿರುವುದರಿಂದ ಈ ಕಡೆಯೆಚ್ಚರಿಕೆಯನ್ನು ಕೊಟ್ಟು ಈ ವಿಚಾರವನ್ನು ಇಲ್ಲಿಗೆ ವಿರಮಿಸುವೆವು. ಓಟನ್ನು ಕೊಡತಕ್ಕವರು ಪ್ರಬಲಸ್ಥರ ಅಥವಾ ಸ್ನೇಹಿತರ ದಾಕ್ಷಿಣ್ಯಕ್ಕೂ ಬಲವಂತಕ್ಕೂ ಬದ್ಧರಾಗಿ ಸ್ವಾರ್ಥವನ್ನು ಸಾಧಿಸುವ ಜನರಿಗೆ ಓಟನ್ನು ಕೊಟ್ಟು ಅವರುಗಳನ್ನು ಮೆಂಬರುಗಳನ್ನಾಗಿ ಕಳುಹಿಸಿ ಕಡೆಯಲ್ಲಿ ಪೇಚಾಡುವುದಲ್ಲದೆ ತಮ್ಮ ಖಡ್ಗವನ್ನು ಅವರ ಕೈಗೆ ಕೊಟ್ಟು ಕೊರಳನ್ನು ಕೊಯ್ಯಿಸಿಕೊಳ್ಳದೆ, ತಮ್ಮ ಕಷ್ಟ ಸುಖಗಳನ್ನು ಚೆನ್ನಾಗಿ ಅರಿತು ಪ್ರಜಾಸೇವೆಯೇ ದೇವರ ಸೇವೆಯೆಂದು ನಿಜವಾಗಿ ಭಾವಿಸಿ ನಡಿಯುವವರಾಗಿಯೂ, ವಿವೇಕದಿಂದಲೂ, ಧೈರ್ಯದಿಂದಲೂ, ನಿರ್ದಾಕ್ಷಿಣ್ಯದಿಂದಲೂ, ಸಮರ್ಥತೆಯಿಂದಲೂ ಪ್ರಜೆಗಳ ಕುಂದುಕೊರತೆಗಳನ್ನು ಮೀಟಿಂಗುಗಳಲ್ಲಿ ಪ್ರಭುತ್ವದವರಿಗೆ ಅರಿಕೆಮಾಡಿ ವಾದಿಸಬಲ್ಲವರಾಗಿಯೂ ಇರುವಂಥವರಿಗೇ ಓಟನ್ನು ಕೊಟ್ಟು ಕೃತಕೃತ್ಯರಾಗಬೇಕಲ್ಲದೆ ಬರೀ ತಮ್ಮವರೆಂಬ ಅಭಿಮಾನದಿಂದ ಯೋಗ್ಯತೆಯಿಲ್ಲದವರಿಗೆ ಓಟನ್ನು ಕೊಟ್ಟು ತಮ್ಮ ಕಾಲಿನ ಮೇಲೆ ತಾವೇ ಕಲ್ಲನ್ನೆತ್ತಿ ಹಾಕಿಕೊಂಡು ಪೇಚಾಡುವುದು ಜಾಣತನವಲ್ಲವು.

ಹಿಂದುಳಿದವರ ಹಿತಚಿಂತಕರೆಂದು ಮೇಲೆಮೇಲೆ ನಟಿಸುತ ಅಂತಹ ಅವರ ಅಹಿತವನ್ನೇ ಕೋರುತ್ತಿರುವವರಿಗೆ ಬೆಳ್ಳಗಿರುವುದನ್ನೆಲ್ಲಾ ಹಾಲೆಂದು ಸುಲಭವಾಗಿ ನಂಬುವವರಾದ ಮತ್ತು ದಾಕ್ಷಿಣ್ಯಪರರಾದ ನಮ್ಮ ಹಿಂದುಳಿದ ಸಹೋದರರು ಓಟನ್ನು ಕೊಟ್ಟು ತಮ್ಮ ಭಾಗಕ್ಕೆ ಕಾಮಧೇನುವಿನಂತಿರುವ ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲೆ ಪ್ರಭುತ್ವದವರು ಮಾಡಿರುವ ಆರ್ಡರನ್ನು ರದ್ದುಪಡಿಸಲು ಎಷ್ಟು ಸಾಹಸದಿಂದಲೂ, ಧೈರ್ಯದಿಂದಲೂ, ಒಕ್ಕಟ್ಟಿನಿಂದಲೂ ಅಭಿಯೋಗನಡಿಸಲು ಅವಕಾಶವನ್ನುಂಟುಮಾಡಿಕೊಟ್ಟದನ್ನೂ ಹಿಂದುಳಿದ ಜನರುದ್ಧಾರದಲ್ಲಿ ಬದ್ಧಕಂಕಣರಾಗಿದ್ದು ಚಿರಸ್ಮರಣೀಯರಾಗಿರುವ ಕೃ|| ಸರ್ ಎಂ. ಕಾಂತರಾಜ ಅರಸಿನವರು ಅಸೂಯಾಳುಗಳ ವಾಕ್ಯಹರಗಳಿಗೆ ಹೆದರಿ ಆ ಆರ್ಡರನ್ನು ರದ್ದುಪಡಿಸಿದ್ದಲ್ಲಿ ತಮ್ಮಾ ಕಾಮಧೇನು ಗೊಡ್ಡಾಕಗಳಾಗುತ್ತಿದ್ದಿತೆಂಬುದನ್ನೂ, ಹಿಂದುಳಿದ ಜನವರ್ಗಗಳ ವಿದ್ಯಾರ್ಥಿಗಳನ್ನು ಸಂಸ್ಕೃತ ಕಾಲೇಜುಗಳಿಗೆ ಸೇರಿಸುವ ವಿಚಾರದಲ್ಲಿ ಪ್ರತಿಬಂಧಕಗಳನ್ನು ತಂದೊಡ್ಡಿದುದಲ್ಲದೆ ಅವರನ್ನು ಘೂಥಮಾಲಿಗಳಿಗೂ ಪತಿತರಿಗೂ ಕುಡಕರಿಗೂ ಹೋಲಿಸಿರುವುದನ್ನು ಈಗಲಾದರೂ ತಿಳಿದು ಎಚ್ಚೆತ್ತು ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ, ದರ್ಪಕ್ಕೂ ಹೆದರದೆ ಮೇಲೆ ಹೇಳಿದ ಯೋಗ್ಯತೆಯುಳ್ಳ ತಮ್ಮ ಹಿತೈಷಿಗಳಿಗೇನೇ ಓಟನ್ನು ಕೊಟ್ಟು ತಂತಮ್ಮ ಜನಾಂಗದವರ ಪುರೋಭಿವೃದ್ಧಿಗೆ ಅವಕಾಶವನ್ನುಟುಮಾಡಿಕೊಳ್ಳುವವರಾಗಬೇಕು. ಇದಲ್ಲದೆ ಕೆಲರು ಅವರ ಮಾತನ್ನು ಕೇಳಿದರೆ ಇವರಿಗೆ ಕೋಪ, ಇವರ ಮಾತನ್ನು ಕೇಳಿದರೆ ಅವರಿಗೆ ಕೋಪ, ಅದುಕಾರಣ ಯಾರ ನಿಷ್ಠೂರವೂ ಬೇಡವೆಂದು ಮೌನವಾಗಿರುವುದೂ, ಹಿಂದುಳಿದ ತಂತಮ್ಮಲ್ಲಿಯೇ ಒಬ್ಬರಮೇಲೊಬ್ಬರು ಪೈಪೋಟಿಮಾಡಿ ತಮ್ಮೆಲ್ಲಾರಿಗೂ ಓಟುಬಾರದಂತೆ ಮಾಡಿಕೊಂಡು ತಮ್ಮ ಅಹಿತಾಕಾಂಕ್ಷಿಗಳಿಗೆ ನಿರಾಯಾಸವಾಗಿ ಓಟು ದೊರೆಯಲವಕಾಶವನ್ನುಂಟುಮಾಡಿಕೊಡುವುದೂ ಆತ್ಮಘಾತುಕವೂ ಸ್ವಜನದ್ರೋಹವೂ ಆಗುವುದೆಂಬುದನ್ನು ಚೆನ್ನಾಗಿ ತಿಳಿದು ಯಾವ ಕೆಲಸವಿದ್ದಾಗ್ಯೂ ಬಿಟ್ಟು ಈ ಫೆಬ್ರವರಿ ತಾರೀಖು 15ನೆಯ ಶುಕ್ರವಾರದ ದಿವಸ ಗೊತ್ತಾದ ಸ್ಥಳಗಳಿಗೆ ತಪ್ಪದೆ ಬಂದು ತಮ್ಮ ಹಿತಚಿಂತಕರಿಗೆ ಮಾತ್ರ ಓಟನ್ನು ಕೊಡಬೇಕೆಂದೂ, ವಿಘ್ನಸಂತೋಷಿಗಳ ಕಪಟ ಹಿತೋಕ್ತಿಗೆ ಕಿವಿಗೊಟ್ಟು ತಂತಮ್ಮವರ ಮೇಲೆ ಪೈಪೋಟಿಮಾಡದೆ ಯೋಗ್ಯರಾದವರನ್ನು ಚುನಾಯಿಸಿ ಅವರಿಗೆ ಪ್ರತಿಯೊಬ್ಬರೂ ಓಟನ್ನು ಕೊಡುವಂತೆ ಪ್ರಯತ್ನಿಸಬೇಕೆಂದು ಒತ್ತಿಹೇಳುತ್ತೇವೆ. ಇದೆಯೇ ಓಟರುಗಳಿಗೆ ನಮ್ಮ ಕಡೆಯೆಚ್ಚರಿಕೆಯು.

ಮ|| ಗಾಂಧಿಯವರು ಬಂಧವಿಮುಕ್ತರಾದುದು.

ಮಹಾತ್ಮ ಮೋಹನದಾಸ್ ಕರ್ಮಚಂದ್ ಗಾಂಧಿಯವರ ವ್ಯಾಧಿಯು ಸಂಪೂರ್ಣವಾಗಿ ನಿವಾರಣೆಯಾಗಿರುವುದು ಮತ್ತು ಶಸ್ತ್ರಚಿಕಿತ್ಸೆಯಿಂದುಂಟಾಗಿದ್ದ ಗಾಯವು ಪೂರ್ತಿಯಾಗಿ ಮಾದಿರುವುದು. ಮಹಾತ್ಮರು ಸಮುದ್ರ ತೀರಪ್ರಾಂತಕ್ಕೆ ಹೋಗಿ ಕನಿಷ್ಠ ಪಕ್ಷ 6 ತಿಂಗಳ ಕಾಲವಾದರೂ ಇದ್ದು ವಿಶ್ರಮಿಸಿಕೊಳ್ಳಬೇಕಾದುದು ಅಗತ್ಯವಾಗಿರುವುದರಿಂದ ಅವರನ್ನು ಪೂನಾದ ಸಾಸೂನು ವೈದ್ಯಶಾಲೆಯಿಂದ ಬಿಡುಗಡೆಮಾಡಿ ಕಳುಹಿಸಿಕೊಡಬೇಕೆಂದು ವೈದ್ಯಶಾಲಾಧಿಕಾರಿಗಳು ಬೊಂಬಾಯಿ ಸರ್ಕಾರದವರಿಗೆ ತಿಳಿಸಿದುದರ ಮೇಲೆ ಅವರು ಇಂಡ್ಯಾ ಸರ್ಕಾರದವರ ಅನುಮತಿಯನ್ನು ಪಡೆದು ಯಾವ ವಿಧವಾದ ಷರತ್ತುಗಳನ್ನೂ ಕೋರದೆ ಈ ಫೆಬ್ರವರಿ ತಾ|| 5ರ ಬೆಳಗಿನ 7-55 ಗಂಟೆಯಲ್ಲಿ ಮಹಾತ್ಮರನ್ನು ಬಂಧವಿಮುಕ್ತರನ್ನಾಗಿ ಮಾಡಿದರೆಂದು ತಿಳುಹಲು ಪರಮಾನಂದವಾಗುವುದು. ಆ ದಿವಸ ಭರತಖಂಡದ ಸಮಸ್ತ ಭಾಗದಲ್ಲೂ ಆನಂದೋತ್ಸವಗಳು ನಡಿಸಲ್ಪಟ್ಟು ಮಹಾತ್ಮರ ಆಯುರಾರೋಗ್ಯವು ಬಯಸಲ್ಪಟ್ಟಿತು.

ಮಹಾತ್ಮರ ಸಹಾಯನಿರಾಕರಣ ಮತ್ತು ಶಾಸನೋಲ್ಲಂಘನ ಬೋಧೆಯಿಂದ ದೇಶಕ್ಕೆ ಅನರ್ಥವಾಗುತ್ತದೆಂದು ಬೊಂಬಾಯಿ ಸರ್ಕಾರದವರು ಮಹಾತ್ಮರನ್ನು 1922ನೆ ಮಾರ್ಚಿ ತಾರೀಖು 10ರ ರಾತ್ರಿ ಸೆರೆಹಿಡಿದರು. ಈ ವಿಚಾರವನ್ನು ಮಹಾತ್ಮರು ಮೊದಲೇ ಅರಿತಿದ್ದರಾದುದರಿಂದ "ನಾನು ಸೆರೆಹಿಡಿಯಲ್ಪಟ್ಟರೆ ಯಾರೊಬ್ಬರೂ ಪ್ರಕ್ಷುಬ್ಧರಾಗಿ ಹರತಾಳ ಮೊದಲಾದ ಕಾರ್ಯಗಳನ್ನು ಆಚರಿಸಬಾರದು. ಅಶಾಂತಿಯಿಂದ ಬಹಳ ಅನರ್ಥಗಳುಂಟಾಗಿ ನಮ್ಮ ಸ್ವರಾಜ್ಯ ಪ್ರಾಪ್ತಿಗೆ ಭಂಗಬರುತ್ತಾದಪ್ರಯುಕ್ತ ಯಾರೂ ಅದಕ್ಕೆ ಪ್ರಯತ್ನಿಸಕೂಡದು. ಪರದೇಶದ ಬಟ್ಟೆಗಳನ್ನು ನಾಶಪಡಿಸಿ ಸ್ವದೇಶ ಬಟ್ಟೆಗಳನ್ನು ಮಾತ್ರ ಉಪಯೋಗಿಸುತ್ತ ಬಂದಲ್ಲಿ ನನ್ನ ಮನಸ್ಸಿಗೆ ತೃಪ್ತಿಯುಂಟಾಗುವುದಲ್ಲದೆ ನಮ್ಮ ಕಾರ್ಯಸಿದ್ಧಿಯಾಗುವುದು" ಎಂದು ಬಂದು ಸಂದೇಶವನ್ನು ತಮ್ಮ ಮಿತ್ರಮಂಡಲಿಗೆ ಕಳುಹಿಸಿಕೊಟ್ಟಿದ್ದರು. ಮತ್ತು ವಿಚಾರಣೆಯ ಕಾಲದಲ್ಲಿ ತಮ್ಮ ಹೇಳಿಕೆಯನ್ನು ಬರೆದು ಕೋರ್ಟಿಗೊಪ್ಪಿಸಿದುದರಲ್ಲಿ "ನಿಮ್ಮ ನ್ಯಾಯಶಾಸ್ತ್ರಪ್ರಕಾರ ಅಪರಾಧವಾಗಿಯೂ, ನನ್ನ ಅಭಿಪ್ರಾಯದಲ್ಲಿ ಪಟ್ಟಣವಾಸಿಯಾದ ನನಗೆ ಧರ್ಮವಾಗಿಯೂ, ತೋರಿದ ಕಾರ್ಯವನ್ನು ನಾನು ಮಾಡಿದುದಕ್ಕಾಗಿ ಅತ್ಯಂತ ಕಠಿಣವಾದ ಶಿಕ್ಷೆಯನ್ನು ವಿಧಿಸಬೇಕೆಂದು ನಿಮ್ಮನ್ನು ಪ್ರಾರ್ಥಿಸಿ ಆ ಶಿಕ್ಷೆಯನ್ನು ಸಂತೋಷದಿಂದ ಅನುಭವಿಸಲು ಸಿದ್ಧನಾಗಿರುವೆನು. ನ್ಯಾಯಾಧಿಪತಿಗಳೂ, ಅಸೆಸರುಗಳೂ ಆದ ನೀವುಗಳು ಪರಿಪಾಲಿಸಲಿಕ್ಕಿರುವ ನ್ಯಾಯನಿಬಂಧನೆಯು ದೋಷಯುಕ್ತವೆಂದೂ ನಾನು ನಿರ್ದೋಷಿಯೆಂದೂ ನೀವು ತಿಳಿದದ್ದಲ್ಲಿ ನಿಮ್ಮುದ್ಯೋಗವನ್ನು ಬಿಟ್ಟುಬಿಡುವುದೂ ಹಾಗಲ್ಲದೆ ನಿಬಂಧನೆಯ ಪರಿಪಾಲನಕ್ರಮವು ಒಳ್ಳೆಯದೆಂದೂ, ಭಾರತೀಯರಿಗೆ ಲಾಭಕರವಾದುದೆಂದೂ, ನನ್ನ ಪ್ರಯತ್ನವು ಪ್ರಜೆಗಳಿಗೆ ಭಂಗಕರವಾದುದೆಂದೂ ನೀವು ನಂಬಿದ್ದಲ್ಲಿ ನನಗೆ ಕಠಿಣಶಿಕ್ಷೆಯನ್ನು ವಿಧಿಸುವುದೂ ನಿಮ್ಮ ಮುಖ್ಯ ಕರ್ತವ್ಯವು" ಎಂದು ಬಿನ್ನೈಸಿಕೊಂಡಿದ್ದರು. ಇದೂ ಅಲ್ಲದೆ, ಮಹಾತ್ಮರು ಶಸ್ತ್ರಚಿಕಿತ್ಸೆಗಾಗಿ ಕಾರಾಗೃಹದಿಂದ ಸಾಸೂನು ಆಸ್ಪತ್ರೆಗೆ ಕರೆದುಕೊಂಡು ಹೋಗಲ್ಪಟ್ಟಾಗ್ಗೆ ಚಿಕಿತ್ಸೆಯಾಗುವುದಕ್ಕೆ ಪೂರ್ವ ಆನರಬಲ್ ಶಾಸ್ತ್ರಿಗಳು ತಮ್ಮನ್ನು ಕಂಡು ಮಾತನಾಡುವ ಸಂದರ್ಭದಲ್ಲಿ "ಚಿಕಿತ್ಸೆಯಾದನಂತರ ನನಗೆ ಬಂಧವಿಮೋಚನೆಗಾಗಿ ಏನಾದರೂ ಪ್ರಯತ್ನ ನಡಿಸಲ್ಪಡುವುದಾಗಿದ್ದರೆ ಅದು ಯುಕ್ತಮಾರ್ಗದಲ್ಲಿ ಆಚರಿಸಲ್ಪಡಲಿ. ನನಗೂ ಸರ್ಕಾರದವರಿಗೂ ನಡಿಯುತ್ತಿರುವ ವ್ಯಾಜ್ಯದ ಕಾರಣವು ಪರಿಹಾರವಾದ

ರತು ವ್ಯಾಜ್ಯವು ಸಮಾಧಾನವಾಗುವಂತಿಲ್ಲವು. ನನ್ನನ್ನು ಷ್ಟು ದೀರ್ಘಕಾಲ ಬಂಧನದಲ್ಲಿಟ್ಟಿರುವುದು ತಪ್ಪು ಮತ್ತು ನಾನು ನಿರಪರಾಧಿ; ನನ್ನ ಉದ್ದೇಶಗಳು ಸಾಧುವಾದುವೆಂದು ಸರ್ಕಾರದವರು ಅರಿತುಕೊಂಡು ನನ್ನ ಬಂಧವಿಮೋಚನೆ ಮಾಡುವುದು ಗೌರವವಾಗಿರುವುದು. ಹಾಗಲ್ಲದೆ ನನ್ನ ಅಸ್ವಸ್ಥತೆ ಮೊದಲಾದ ಕಾರಣಗಳಿಂದ ಬಿಡುವುದಾದರೆ ನಾನು ಸಮ್ಮತಿಸುವುದಿಲ್ಲವು. ಸರ್ಕಾರದವರೊಡನೆ ನಾನು ವ್ಯಾಜ್ಯಮಾಡುತ್ತಿರುವೆನಾದರೂ ನಾನು ಆಂಗ್ಲರನ್ನು ಪ್ರೀತಿಸುತ್ತೇನೆ, ಮತ್ತು ಅವರಲ್ಲಿ ಅನೇಕರು ನನ್ನ ಮಿತ್ರರಾಗಿರುವರು. ಈ ವಿಚಾರದಲ್ಲಿ ನಡಿಸಲ್ಪಡುವ ಆಂದೋಳನವೆಲ್ಲವೂ ಖಂಡಿತವಾಗಿ ದೌರ್ಜನ್ಯರಹಿತವಾಗಿರಬೇಕು" ಎಂದು ಹೇಳಿದರು. ಸ್ವರಾಜ್ಯಸಾಧನ ವ್ರತವು ಕೈಕೂಡುವವರೆಗೂ ದೌರ್ಜನ್ಯರಹಿತವಾದ ಆಂದೋಳವನ್ನು ಬಿಡತಕ್ಕವರಲ್ಲವೆಂದೂ, ಅದಕ್ಕಾಗಿ ಆತ್ಮಾರ್ಪಣವನ್ನು ಮಾಡಲು ಯಾವಾಗಲೂ ಸಿದ್ಧರಾಗಿರುವರೆಂಬುದೂ ಮೇಲೆಹೇಳಿರುವ ಸಂದರ್ಭಗಳಲ್ಲಿ ಅವರು ಆಡಿರುವ ಮಾತಿನಿಂದ ವ್ಯಕ್ತವಾಗುತ್ತದೆ.

ಸ್ವದೇಶದ ವೃತ್ತಾಂತಗಳು.

ಬೆಂಗಳೂರಿಗೆ ದಯಮಾಡಿಸಿದ್ದ ಶ್ರೀಮನ್ ಮಹಾರಾಜರವರು ಕಳೆದ ಗುರುವಾರ ರಾಜಧಾನಿಗೆ ಚಿತ್ತೈಸಿದರು.

ಚೀಫ್ ಜಡ್ಜಿಯರಾಗಿರುವ ಮ|| ಕೆ. ಚಂದ್ರಶೇಖರಯ್ಯರವರಿಗೆ ಬರುವ ಆಗಸ್ಟ್ ಕಡೆಯವರೆಗೆ ರಜವು ಕೊಡಲ್ಪಟ್ಟು ಅನಂತರ ನಿವೃತ್ತಿಗೊಳಿಸಲ್ಪಡುವರೆಂಬ ವದಂತಿ ಹುಟ್ಟಿದೆ. ಇದು ನಿಜವಾಗಿದ್ದ ಪಕ್ಷದಲ್ಲಿ ಮ|| ಅಯ್ಯರ್‌ರವರ ಸ್ಥಾನಕ್ಕೆ ಮತ್ತಾರು ತರಲ್ಪಡುವರೊ ನಿರೀಕ್ಷಿಸಲ್ಪಡತಕ್ಕದಾಗಿದೆ.

ಮೈಸೂರು-ಕೊಡಗು ಮೇಲ್ ಕಂಟ್ರಾಕ್ಟರೂ ಮ್ಯು|| ಕೌನ್ಸಿಲರೂ ಆದ ಖಾನ್ ಬಹದ್ದೂರ್, ಪಾಲಂಜೆಯವರು ತಮ್ಮ ಕುಮಾರ ಮಿ|| ಜಾಲ್ ಪೀರೂಜಾ ಪಾಲಂಜೆಯವರಿಗೆ ಸೌ|| ಬಾನೂಬಾಯಿ ಎಂಬ ಕನ್ಯೆಯನ್ನು ತಂದುಕೊಂಡು ಈ ದಿವಸ ಹುಬ್ಬಳ್ಳಿಯಲ್ಲಿ ವಿವಾಹಮಹೋತ್ಸವವನ್ನು ನಡಿಸುವವರಾಗಿರುವರು.

ರಾಜಧಾನಿಯ ಮ್ಯುನಿಸಿಪಲ್ ಆಫೀಸಿನ ಕೆಲಸಗಾರರಲ್ಲಿ ಕೆಲವರು ಓಟರುಗಳ ಮನೆಗಳಿಗೆ ಹೋಗಿ ಇಂತಹ ಉಮೇದುವಾರರಿಗೇ ಓಟುಗಳನ್ನು ಕೊಡಬೇಕೆಂದು ಹೇಳುತ್ತಿರುವುದಾಗಿಯೂ, ಉಮೇದುವಾರರುಗಳ ಮ್ಯಾನಿಫೆಸ್ಟೊಗಳನ್ನು ಬರೆದು ಹಂಚುತ್ತಿರುವುದಾಗಿಯೂ ನಮ್ಮಲ್ಲಿಗೆ ದೂರುಬಂದಿರುತ್ತದೆ. ಅದ್ದರಿಂದ ಮೇಲ್ಪಟ್ಟ ಅಧಿಕಾರಿಗಳು ಇದರ ನಿಜಾಂಶವನ್ನು ವಿಚಾರಿಸಿ ತಪ್ಪಿತಸ್ಥರನ್ನು ಕಠಿನತರವಾಗಿ ಶಿಕ್ಷಿಸಬೇಕೆಂದು ಸೂಚಿಸುತ್ತೇವೆ.

ರಾಜಧಾನಿಯಲ್ಲಿ ವಾಂತಿಭೇದಿರೋಗವು ಪ್ರಬಲವಾಗಿ ನಿತ್ಯದಲ್ಲೂ 1-2 ಮರಣಗಳಾಗುತ್ತಿವೆ. ಈ ವಿಚಾರದಲ್ಲಿ ಜನರು ಮನೆಗಳಲ್ಲಿ ನೊಣಗಳು ಸೇರದಂತೆ ಮಾಡಬೇಕೆಂದೂ ಚೆನ್ನಾಗಿ ಕಾಯಿಸಿದ ನೀರನ್ನು ಆರಿಸಿ ಕುಡಿಯುವುದುತ್ತಮವೆಂದೂ ಸೋಂಕು ತಗುಲಿದ ಹಳ್ಳಿಗಳಿಂದ ಬರುವ ಮೊಸರು ತರಕಾರಿ ಪದಾರ್ಥಗಳನ್ನೂ ತಂಗಳನ್ನವನ್ನೂ ತಿನ್ನಬಾರದೆಂದೂ ಹೆಲ್ತಾಫೀಸರು ಎಚ್ಚರಿಸಿರುವ ಪ್ರಕಟನಪತ್ರಿಕೆಯನ್ನು ಪ್ರತಿಯೊಬ್ಬರೂ ಗಮನಿಸಿ ಅದರಂತೆ ಆಚರಿಸುವವರಾಗಬೇಕು.

ನಮ್ಮ ಶ್ರೀಮನ್ ಮಹಾರಾಜರವರ ಹುಜೂರು ಸೆಕ್ರೆಟರಿಯವರಾದ ಮ|| ಟಿ. ತಂಬೂಸೆಟ್ಟರು ತಮ್ಮ ಕುಮಾರಿ ಸೌ|| ಧರ್ಮಾವತಿ ಅಮ್ಮನನ್ನು ರಾ|| ಜೆ. ಎಸ್. ರಾಜು ಎಂ. ಎ., (ಆಕ್ಸನ್) ರವರಿಗೆ ಕೊಟ್ಟು ಬೆಂಗಳೂರು ದಂಡಿನಲ್ಲಿರುವ ರಗ್ಬಿ ಲಾಡ್ಜಿನಲ್ಲಿ ನೆನ್ನೆಯ ದಿನ ಬಹಳ ವಿಜೃಂಭಣೆಯಿಂದ ಪಾಣಿಗ್ರಹಣಮಹೋತ್ಸವವನ್ನು ಜರುಗಿಸಿದರು. ದಿವಾನರು ಕೌನ್ಸಿಲರುಗಳು ಆದಿಯಾಗಿ ಎಲ್ಲಾ ಸರ್ಕಾರಿಯಧಿಕಾರಿಗಳೂ ಪುರಪ್ರಮುಖರುಗಳೂ ದಯಮಾಡಿಸಿದ್ದು ನೂತನದಂಪತಿಗಳಿಗೆ ಸಕಲ ಮಂಗಳವಾಗಲೆಂದು ಹರಸಿದರು.

ಶ್ರೀಮನ್ಮಹಾರಾಜರವರಿಂದ ಅಮೋಘವಾದ ಉಡುಗರೆಗಳನ್ನೂ ಪ್ರಶಸ್ತಿಯನ್ನೂ ಪಡೆದು ಈಗ ಮದ್ರಾಸಿಗೆ ಹೋಗಿ ತಮ್ಮ ಪ್ರಸಿದ್ಧವಾದ ಕಬೀರ್‌ದಾಸ್ ಸದಾರಮೆ ಮೊದಲಾದ ನಾಟಕಗಳನ್ನು ಅಭಿನಯಿಸಿ ಅಲ್ಲಿಯ ಪುರನಿವಾಸಿಗಳ ಮೆಚ್ಚು ಬಹುಮಾನಗಳಿಗೂ ಪಾತ್ರರಾಗಿರುವರೆಂದು ತಿಳಿದು ಸಂತೋಷಿಸುತ್ತೇವೆ. ಈ ನಾಟಕಸಂಘದವರು 1924 ನೆಯ ವತ್ಸರದ ಕ್ಯಾಲಂಡರನ್ನು ಮನೋಹರಗಳಾದ ಭಾವಚಿತ್ರಗಳಿಂದ ನೇತ್ರಾನಂದಕರವಾಗಿ ಮಾಡಿಸಿ ನಮ್ಮಲ್ಲಿಗೊಂದು ಕಳುಹಿರುವುದನ್ನು ಮತ್ತು ಮದ್ರಾಸಿನ ಪ್ರಸಿದ್ಧ ಗುರುವ ಅಂಡ್ ಕಂಪನಿಯವರು ಕಳುಹಿಸಿರುವ 5 ವಿಧಗಳಾದ ಸಚಿತ್ರ ಕ್ಯಾಲಂಡರುಗಳನ್ನೂ ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.

ದಿವಾನರೂ ಎರಡನೆಯ ಕೌನ್ಸಿಲರೂ ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ನೀರಿಗೂ ಆಹಾರಕ್ಕೂ ಬಹಳ ಅಭಾವವಾಗಿರುವ ಪ್ರಾಂತಗಳನ್ನು ಪರಾಮರ್ಶಿಸಿಕೊಂಡು ಬಂದು ಅವುಗಳ ಪರಿಹಾರೋಪಾಯವನ್ನು ತಿಳಿಸಿರುವರು. ಅದರ ಮೇಲಿಗೆ ಮಧುಗಿರಿಯ ಕೋಆಪರೇಟಿವ್ ಸೊಸೈಟಿಗೆ ಅಲ್ಲಿಯ ನೇಗಿಯವರಿಗೆ ಹಣವನ್ನು ಸಾಲಕೊಟ್ಟು 2 ವರ್ಷಗಳಲ್ಲಿ ಬರಮಾಡಿಕೊಳ್ಳುವುದಕ್ಕಾಗಿ 3000 ರೂ. ಗಳು ಕೊಡಲ್ಪಟ್ಟಿರುವುವು. ಮತ್ತು ಮಧುಗಿರಿ ತಾ|| ಅಮಲ್ದಾರರು 1924ನೆ ಜೂನ್ ವರೆಗೆ ಕ್ಷಾಮನಿವಾರಣಾಕಾರ್ಯಗಳನ್ನು ನೋಡಿಕೊಳ್ಳಲನುಕೂಲಿಸುವಂತೆ ಮ್ಯಾಜಿಸ್ಟ್ರೇಟ್ ಮತ್ತು ಇತರ ನಿತ್ಯಕಟ್ಟಲೆಯ ಕೆಲಸಗಳನ್ನು ನೋಡಿಕೊಳ್ಳುವುದಕ್ಕಾಗಿ ಒಬ್ಬ ಡಿಪ್ಯುಟಿ ಅಮಲ್ದಾರರು ನಿಯಮಿಸಲ್ಪಟ್ಟಿರುವರು. ಅತ್ಯವಸರವಾದ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ 14 ತಾಲ್ಲೂಕು ಅಮಲ್ದಾರರುಗಳ ವಶಕ್ಕೆ ಪ್ರತಿಯೊಬ್ಬರಿಗೂ 500 ರೂ. ನಂತೆ ಹಣವು ಕೊಡಲ್ಪಟ್ಟಿರುವುದು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ಲಗ್ನದ ಫಂಡು.

1. ಚಿತ್ರದುರ್ಗ ತಾಲ್ಲೂಕು ಕೊಣ್ಣಬೇವು ಗ್ರಾಮದಲ್ಲಿ ರಾಮಗಿರಿ ಚರಂತಿಮಠದ ವೇ|| ಕರಿಸಿದ್ದಯ್ಯ ಚನ್ನಬಸವಯ್ಯನವರು ಧರ್ಮಾರ್ಥವಾಗಿ ವೀರಮಾಹೇಶ್ವರ ವಟುಗಳಿಗೆ ಶಿವದೀಕ್ಷಾ ಸಂಸ್ಕಾರವನ್ನು ನಡಸಿದ ಕಾಲದಲ್ಲಿ ಸಂಘಕ್ಕಾಗಿ ಚಳ್ಳಕೆರೆ ತಾಲ್ಲೂಕು ನಾಯ್ಕನಹಟ್ಟಿ ಸುಬೇದಾರ್ ಮ|| ರಾ|| ಚಂದ್ರಶೇಖರಯ್ಯನವರಿಂದ 2 ರೂ. ಪೈಕಿ ಯಂ. ಒ. ಕಮಿಷನ್ 0-2-0 ಜಾತಾ 1-14-0

2. ಗುಬ್ಬಿ ಯಜಮಾನ್ ಮ|| ರಾ|| ಹುಚ್ಚವೀರಪ್ಪನವರ ಮೂಲಕ ನಿಡಸಾಲೆ ಮ|| ರಾ|| ರಾಚಪ್ಪನವರ ಕುಮಾರ್ತಿ ರಾಚಮ್ಮನ ಲಗ್ನದಲ್ಲಿ 5 ರೂ. ಗಿರಿಜಮ್ಮನವರ ಚನ್ನಪ್ಪನವರ ಮಗಳು ಚಿ|| ಸೌ|| ಗಂಗಮ್ಮನ ಲಗ್ನದಲ್ಲಿ 2 ರೂ. ಗುಬ್ಬಿ ಕಾಯಿನಂಜಪ್ಪನವರ ಮೊಮ್ಮಗಳು ಚಿ|| ಸೌ|| ಆಡವಮ್ಮನ ಲಗ್ನದಲ್ಲಿ 5 ರೂ. ಗುಬ್ಬಿ ವೀರಣ್ಣನವರ ಮಗ ರುದ್ರಯ್ಯನವರ ಲಗ್ನದಲ್ಲಿ 5 ರೂ. ಗುಬ್ಬಿ ಹುಚ್ಚಮಲ್ಲಣ್ಣನವರ ಮಗ ಗಂಗಪ್ಪನವರ ಲಗ್ನದಲ್ಲಿ 2 ರೂ. ಗುಬ್ಬಿ ಜಿ. ಬಿ. ಮುರುಗಪ್ಪನವರ ಮಗ ಗಂಗಾಧರಯ್ಯನವರ ಲಗ್ನದಲ್ಲಿ 8 ರೂ. ಗುಬ್ಬಿ ಸ್ವಾ|| ಲಿಂಗಪ್ಪನವರ ಮಗಳ ಲಗ್ನದಲ್ಲಿ 10 ರೂ. ಜುಮ್ಲಾ 37-0-0 ರೂ. ಗಳು

3. ಕ್ಲೋಸಪೇಟೆ ತಾಲ್ಲೂಕು ಅವ್ವೇರಹಳ್ಳಿಯಲ್ಲಿರುವ ಶ್ರೀ ರೇವಣಸಿದ್ಧೇಶ್ವರಸ್ವಾಮಿ ಅರ್ಚಕರಾದ ಮ|| ರಾ|| ರುದ್ರಪ್ಪನವರ ನಾದಿನಿ ಚಿ|| ಸೌ|| ಚನುವೀರಮ್ಮನೆಂಬ ವಧುವಿಗೂ ಮಂಡ್ಯದ ತಾಲ್ಲೂಕು ಆಗಲಹಳ್ಳಿ ಮ|| ರಾ|| ಶಿದ್ಧರಾಮಪ್ಪನವರ ಪುತ್ರ ಮುರುಳಪ್ಪನೆಂಬ ವರನಿಗೂ ನಡದ ನಿಷೇಕಪ್ರಸ್ತದಲ್ಲಿ ಚನ್ನಪಟ್ಟಣದ ಮ|| ರಾ|| ಎಂ. ಆರ್. ವೀರಭದ್ರಪ್ಪನವರ ಮೂಲಕ 2 ರೂ.

4. ಕಾರ್ಕಾರ್‌ಹಳ್ಳಿ ಮ|| ರಾ|| ಗುರುಕಾರ್ ಚನ್ನಬಸಪ್ಪನವರ ಮಗಳ ನಿಷೇಕಪ್ರಸ್ತದಲ್ಲಿ ಫಂಡಿಗಾಗಿ ಮ|| ರಾ|| ಕೆ. ಪಿ. ಪರಶಿವಯ್ಯನವರ ಮೂಲಕ 3 ರೂ.

5. ಬೆಂಗಳೂರು ಸಿಟಿ ಚಿಕ್ಕಪೇಟೆ ಅಪ್ಪಣ್ಣಪ್ಪನವರ ಮ|| ರಾ|| ಎಂ. ನಂಜುಂಡಪ್ಪನವರ ಮಗಳ ಲಗ್ನದಲ್ಲಿ ವಧೂವರರ ಕಡೆಯಿಂದ ಮ|| ರಾ|| ದೇಶದ ಶೆಟ್ಟರು ಶಿದ್ಧಬಸಪ್ಪ ಶೆಟ್ಟರ ಮೂಲಕ 2 ರೂ.

6. ಕೋಲಾರದ ತಾಲ್ಲೂಕು ಹೋಳೂರು ರುದ್ರಪ್ಪನವರ ಮನೆ ಲಗ್ನದಲ್ಲಿ ವಧೂವರರ ಕಡೆಯಿಂದ ಬಂದದ್ದು ಬೆಂಗಳೂರು ದೇಶದ ಶೆಟ್ಟರು ಬಸವಲಿಂಗಶೆಟ್ಟರ ಮೂಲಕ 4 ರೂ.

7. ಚಳ್ಳಕೆರೆ ತಾಲ್ಲೂಕು ಚನುಮನಾಗ್ತಹಳ್ಳಿ ಕಪ್ಪದ ಸಾಹುಕಾರ್ ಮಲ್ಲಪ್ಪನವರಿಂದ ಶಿಂಗೆಮಲ್ಲಪ್ಪನವರ ಮನೆ ಲಗ್ನದಲ್ಲಿ ತೆಗೆದದ್ದು 3 ರೂ. ಜುಮ್ಲಾ ರೂ. 52-14-0.

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರೆಟರಿ.
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ,
ಬೆಂಗಳೂರು ಸಿಟಿ.

ನೋಟೀಸ್.

ಯಡತೊರೆ ತಾ|| ಹೊಸಹಳ್ಳಿ ಕೊಪ್ಪಲಲ್ಲಿ ಇರುವ ಸರ್ವೆ ನಂಬರು 195 ಎಕರೆ 17 ಕುಂಟೆ 17 ಆಕಾರ 6½ ರೂ. ಉಳ್ಳ ಹೊಲ ಮತ್ತು ಇದೇ ತಾ|| ಕಸಬ ಹೋ|| ನಾಚನಹಳ್ಳಿ ನಾಲಾಕೆಳಗಡೆ ಹೊಸಹಳ್ಳಿಗ್ರಾಮಕ್ಕೆ ಸೇರಿದ ಚನ್ನೆಗೌಡನ ಖಾತೆ ಬಾಬ್ತು ಪೂರ್ವಕ್ಕೆ ನಾಲ ಪಶ್ಚಿಮಕ್ಕೆ ನಾಲಾಏರಿ ದಕ್ಷಿಣಕ್ಕೆ ಹೂಣಕೆರೆ ಸಿದ್ದೇಗೌಡ ವಗೈರೇರ ಗದ್ದೆ ಉತ್ತರಕ್ಕೆ ಗಿರೀಗೌಡನ ಕಾಳೇಗೌಡನ ಕಾಳೇಗೌಡನ ಗದ್ದೆ ಈ ಮಧ್ಯೆ ಇರುವ ಸರ್ವೆ ನಂಬರು 88 ಎಕರೆ ಗುಂಟೆ 24 ಆಕಾರ 3-4 ಉಳ್ಳ ಗದ್ದೆ ಈ ಎರಡು ಜಮೀನುಗಳು ಮೈಸೂರು ಹಳ್ಳದಕೇರಿ ಖಾನಾವುತರ ಪವುತಿ ಚಿಕ್ಕಸುಬ್ಬರಾಯನಿಗೆ ಸೇರಿದ್ದು. ಈಚಿಗೆ ಇವನ ಮೈನರ್ ಮಗಳು ಗೋಪೀಬಾಯಿಗೆ ಸೇರಿ ಕೋರ್ಟಿನಿಂದ ಗಾರ್ಡಿಯನ್ ನೇಮಕವಾಗಿರುತ್ತದೆ. ಮೈನರಳ ಆಸ್ತಿಯನ್ನ ಖುಲಲ್ ಮಾಡಬೇಕೆಂಬ ಉದ್ದೇಶದಿಂದ ಈ ಆಸ್ತಿಗಳನ್ನ ಮೋಸದಿಂದ ಆಧಾರ ಭೋಗ್ಯ ಖರೀದಿ ಮಾಡಬೇಕೆಂದು ಅವರು ಪ್ರಯತ್ನಮಾಡುತ್ತಿದ್ದಾರೆಂದು ಕೇಳುತ್ತೇನೆ. ಈ ಮೈನರ ಆಸ್ತಿಯನ್ನು ಯಾರಾದರೂ, ಯಾವ ವಿಧದಿಂದಲಾದರೂ ಪಡೆದುಕೊಂಡರೆ ಅದು ಊರ್ಜಿತವಾಗುವದಿಲ್ಲವೆಂದು ಈ ಮೂಲಕ ಎಚ್ಚರಿಸಿದೆ.

ಮೈಸೂರು,
ತಾ|| 9-2-24. } ಗಿರಿಮಾಜಿರಾವ್,
ಕೋರ್ಟಿನಿಂದ ನೇಮಿಸಲ್ಪಟ್ಟಿರು ಗಾರ್ಡಿಯನ್.

ನೋಟೀಸ್.

ರಾಜಧಾನಿಯ ಸುತ್ತುಮುತ್ತಲು ಇರುವ ಹಳ್ಳಿಗಳಲ್ಲಿ ಕಾಲರ (Cholera) ಇರುವದರಿಂದ ಅಲ್ಲಿಂದ ಬರುವ ಹಾಲು, ಮೊಸರು, ಮಜ್ಜಿಗೆ ಯಾವದನ್ನೂ ಯಾರೂ ತೆಗೆದುಕೊಳ್ಳಬಾರದು. ನೊಣಗಳಿಂದಲೂ, ಮತ್ತು ನೀರು ಮುಂತಾದ ಮನುಷ್ಯ ತಿನ್ನುವ ಆಹಾರಗಳಿಂದಲೂ ಕಾಲರ ರೋಗವು ವ್ಯಾಪಿಸುವದು. ಆದ್ದರಿಂದ ಜನರೆಲ್ಲರೂ ಮನೆಯಲ್ಲಿ ನೊಣಗಳು ಸೇರದಹಾಗೆ ಮನೆ ಮತ್ತು ಹಿತ್ತಲುಗಳನ್ನು ಮತ್ತು ದನದ ಕೊಟ್ಟಿಗೆಗಳನ್ನು ಬಹಳ ಶುಚಿಯಾಗಿಡಬೇಕು. ಮತ್ತು ನೀರು ಕುದಿಸಿ ತಂಣಗೆ ಮಾಡಿ ಕುಡಿಯಬೇಕು. ಬೆಳಗಿನ ಊಟ ಆ ಹೊತ್ತಿಗೇನೇ ಅಡಿಗೆಮಾಡಿ ಬಿಸಿಬಿಸಿಯಾಗಿ ಊಟಮಾಡಬೇಕು. ತಂಗಳನ್ನ ಎಂದಿಗೂ ಊಟಮಾಡಬಾರದು. ನೊಣಗಳು ಸೇರದ ಹಾಗೆ ಅಡಿಗೆಮಾಡಿದ ಪಾತ್ರೆಗಳನ್ನು ಮುಚ್ಚಿಡಬೇಕು. ರಾತ್ರಿ ಮಾಡುವ ಊಟ ರಾತ್ರಿಯೇ ಅಡಿಗೆಮಾಡಿ ಊಟ ಮಾಡಬೇಕು.

ಅಜೀರ್ಣವಾಗುವ ಹಣ್ಣುಗಳನ್ನು ಉಪಯೋಗಿಸಬಾರದು. ಮತ್ತು ಅಜೀರ್ಣವಾಗುವ ಯಾವ ಪದಾರ್ಥವನ್ನೂ ತಿನ್ನಬಾರದು.

ಯಾರಮನೆಯಲ್ಲಾದರೂ ವಾಂತಿಭೇದಿ ತಗಲಿದರೆ ತಕ್ಷಣವೇ ಹೆಲ್ತ್ ಡಿಪಾರ್ಟ್‌ಮೆಂಟರವರಿಗೆ ತಿಳಿಸಬೇಕು. ಅವರು ತಕ್ಷಣವೇ ಮನೆ ಶುದ್ಧಿಮಾಡುವುದಲ್ಲದೆ ಖಾಯಿಲೆ ವ್ಯಾಪಿಸದಂತೆ ಉಪಾಯಗಳನ್ನು ಏರ್ಪಡಿಸುವರು.

J. V. MASCARENHAS,
Health Officer.

ನೋಟೀಸ್.

ಈಚಿಗೆ ಬಿಸಿಲಿನ ತಾಪದಿಂದಲೂ ಮಳೆ ಹಿಂತೆಗೆದಿರುವುದರಿಂದಲೂ ಸಿಟಿಯಲ್ಲಿ ನೀರಿನ ಖರ್ಚು ಬಹಳ ಜಾಸ್ತಿಯಾಗಿರುತ್ತೆ. ಬೆಳಗುಳದಲ್ಲಿರುವ ಹಳೆಯ ಮೂರು ಯಂತ್ರಗಳು ಮತ್ತು ಒಂದು ಹೊಸ ಯಂತ್ರ ಈ ನಾಲ್ಕು ಯಂತ್ರಗಳಿಂದಲೂ ಏಕಕಾಲದಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲವಾಗಿಯೂ ಇವುಗಳ ಪೈಕಿ ಈಚಿಗೆ ಒಂದು ಯಂತ್ರವು ಕೆಟ್ಟುಹೋಗಿರೋದರಿಂದಲೂ ಸಿಟಿಗೆ ಸಾಕಾದಷ್ಟು ನೀರನ್ನು ಒದಗಿಸಲು ಕಷ್ಟವಾಗಿರುತ್ತೆ. ಆದ್ದರಿಂದ ಪ್ರತಿ ದಿವಸವೂ ಬೆಳಿಗ್ಗೆ 6 ಗಂಟೆಯ ಲಾಗಾಯ್ತು ಮಧ್ಯಾಹ್ನ 1 ಗಂಟೆಯ ವರಿವಿಗೂ ಪುನಃ ಸಾಯಂಕಾಲ 5 ರಿಂದ 9 ಘಂಟೆಯ ವರಿವಿಗೂ ನೀರು ಸಪ್ಲೈ ಮಾಡಬೇಕಾಗಿ ಬಂದಿರುತ್ತೆ. ದಯವಿಟ್ಟು ಪುರನಿವಾಸಿಗಳು ಕುಮ್ಮಕ್ಕಿನಿಂದ ನೀರಿನ ಖರ್ಚನ್ನು ಕಮ್ಮಿ ಮಾಡಬೇಕಾಗಿ ಸೂಚಿಸಿರುತ್ತೆ.

ಮೈಸೂರು,
6ನೇ ಫೆಬ್ರವರಿ 1924. } ಕಾ. ಶ್ರೀಕಂಠೇಶ್ವರ ಐಯ್ಯರ್.

ರಾಜಧಾನಿಯ ಓಟರು ಮಹಾಶಯರಲ್ಲಿ

ವಿಜ್ಞಾಪನೆ.

ಪ್ರಜಾಪ್ರತಿನಿಧಿ ಸಭೆ (ರೆಪ್ರೆಜೆಂಟೇಟಿವ್ ಅಸೆಂಬ್ಲಿ)ಗೆ ಮೆಂಬರುಗಳಾಗಲು ಈ ಕೆಳಗೆ ಕಂಡ ನಾವು ನಾಲ್ವರು ಉಮೇದುವಾರರಾಗಿ ನಿಂತಿರುತ್ತೇವೆ ಮತ್ತು ಮಹಮ್ಮದ್‌ಸೇಟನಾದ ನಾನು ಮಾತ್ರ ಲೆಜಿಸ್ಲೇಟಿವ್ ಕೌನ್ಸಿಲಿಗೆ ಸಹ ಮೆಂಬರಾಗಲು ಉಮೇದುವಾರನಾಗಿರುತ್ತೇನೆ. ಆದ್ದರಿಂದ ತಾವು ಬರುವ ಫೆಬ್ರವರಿ ತಾ|| 15 ರಲ್ಲಿ ಗೊತ್ತಾದ ಸ್ಥಳಕ್ಕೆ ದಯವಿಟ್ಟು ದಯಮಾಡಿ ನಮ್ಮಗಳಿಗೆ ತಮ್ಮ ಘನವಾದ ಓಟುಗಳನ್ನು ಕೊಟ್ಟು ಮತ್ತು ಇತರರಿಂದ ಕೊಡಿಸಿ, ಪ್ರಜಾಸೇವೆಯೇ ಜೀವಿತದ ಪುರುಷಾರ್ಥವೆಂಬ ನಮ್ಮ ಸಂಕಲ್ಪವನ್ನು ನಿದರ್ಶನಪಡಿಸಲು ಅವಕಾಶವನ್ನು ಉಂಟುಮಾಡಿಕೊಡಬೇಕಾಗಿ ಪ್ರಾರ್ಥಿಸುವ,

ತಮ್ಮ ಕೃಪಾಭಿಲಾಷಿ ...ಎಂಟು ವಿಚಾರ ತಮ್ಮಗಳ ಘನವಾದ ವರಿಗೂ ಭದ್ರಪ್ಪನವರಿಗೂ
1. ಮಹಮ್ಮದ್‌ಸೇಟ್. 2 ಮಾಡುವ ಭಾರತಿ
3. ಛಟಕೋಟಸೆಟ್ಟಿ. ಪ್ಪ, ಕ್ಯಾಂಪ್ ಹೋಲ್ಡರ್.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಅಸೂಯಾಂಧರು ಮಾಡುವ ಕೋಲಾಹಲ.

ಪ್ರಜಾಪ್ರತಿನಿಧಿ ಸಭೆಗೂ, ನ್ಯಾಯವಿಧಾಯಕ ಸಭೆಗೂ ಮೆಂಬರುಗಳಾಗಿ ಚುನಾಯಿಸಲ್ಪಡಲು ಉಮೇದುವಾರರಾಗಿ ನಿಂತಿರುವ ಮಿ|| ಮಹಮುದ್‌ಸೇಟರು ಮೊದಲಾದ ನಾಲ್ವರಿಗೆ ಓಟುಗಳನ್ನು ಕೊಡಬೇಕಾಗಿ ರಾಜಧಾನಿಯ ಪ್ರಮುಖರುಗಳಲ್ಲಿ 36 ಜನ ದೊಡ್ಡ ಮನುಷ್ಯರುಗಳು ಓಟರುಗಳಿಗೆ ವಿಜ್ಞಾಪಿಸಿಕೊಂಡಿರುವ ವಿಚಾರವಾಗಿ ಆಕ್ಷೇಪಗಳು ಸಂಪದಭ್ಯುದಯ ಪತ್ರಿಕೆಯಲ್ಲಿ ವಾಚಾಮಗೋಚರವಾಗಿ ಮಾಡಲ್ಪಡುತ್ತಿವೆ. ಓಟರುಗಳಲ್ಲಿ ಮಾತುಬಾರಿ ದೊಡ್ಡ ಮನುಷ್ಯರುಗಳ ಸಪೋರ್ಟನ್ನು ಪಡೆಯುವುದು ಈ ಸೀಮೆಗೆ ಹೊಸನಮೂನೆಯು. ಅದನ್ನು ಸೇಟರು ಮೊದಲಾದ ನಾಲ್ವರು ಪಡೆದುಕೊಂಡದ್ದಕ್ಕಾಗಿ ಕೆಲ ಉಮೇದುವಾರರು ಅಸೂಯೆಪಟ್ಟುಕೊಂಡು ದಿಗಿಲುಬಿದ್ದು ಹುಚ್ಚರಂತೆ ಬೀದಿಬೀದಿಯಲ್ಲಿ ತಿರುಗುತ್ತ ಕಂಡಕಂಡವರ ಮುಂದೆ ಸೇಟ್ ಮೊದಲಾದ ನಾಲ್ವರೇ ಮೆಂಬರಾಗಿ ಹೋಗಲು ಅರ್ಹರೋ? ಅವರ ವಿನಹ ಮತ್ಯಾರೂ ಇಲ್ಲವೋ? ಅವರಿಗೇನೇ ಓಟುಕೊಡಬೇಕೆಂದು ಹೇಳಲು 36 ಜನರಿಗೆ ಅಧಿಕಾರಕೊಟ್ಟವರು ಯಾರು? ಅವರಲ್ಲದೆ ಈ ಊರಿನಲ್ಲಿ ಇನ್ಯಾರೂ ದೊಡ್ಡ ಮನುಷ್ಯರಿಲ್ಲವೋ? ಎಂದು ವಗೈರೆ ಹೇಳಿಕೊಂಡು ಪ್ರಲಾಪಿಸುತ್ತಿರುವರಲ್ಲದೆ ಮೆದೆಗೆ ಬೆಂಕಿಯನ್ನು ಹತ್ತಿಸಿ ಅದನ್ನು ಆರಿಸಿಕೊಳ್ಳುವವರೂ ವಿಘ್ನಸಂತೋಷಿಗಳೂ ಎಂದು ಪ್ರಸಿದ್ಧರಾದ ಸಂಪದಭ್ಯುದಯ ಕಾಟಿದವರ ಆಶ್ರಯವನ್ನು ಹೊಕ್ಕು ವಿಜ್ಞಾಪನ ಪತ್ರಿಕೆಗೆ ರುಜುಮಾಡಿರುವ 36 ಜನರಲ್ಲಿ ತಮ್ಮ ಮಾತಿನ ಗೌರವದ ಮೇಲೆ ದೃಷ್ಟಿಯೂ ಪೂರ್ವಾಪರ ವಿಚಾರವೂ ಇಲ್ಲದವರಲ್ಲಿಗೆ ಹೋಗಿ ತಮ್ಮ ಚತುರೋಪಾಯಗಳಿಂದ ಅವರ ಮನಸ್ಸನ್ನು ಕೆಡಿಸಿ ಕೆಟ್ಟಲೆ ವ್ಯಾಜ್ಯಗಳನ್ನೂ ಪರಸ್ಪರ ದ್ವೇಷಾಸೂಯೆಯನ್ನೂ ಹುಟ್ಟಿಸುವ ಲೇಖನಗಳಿಗೆ ಆಶ್ರಯವನ್ನು ಕೊಡಲು ಕಂಕಣ ಬದ್ಧವಾಗಿರುವ ಸಂಪದಭ್ಯುದಯ ಪತ್ರಿಕೆಯಲ್ಲಿ ಮನ್ನಾನಿಬರೆದು ತಮ್ಮ ಹೊಟ್ಟೆಯುರಿಯನ್ನು ತೀರಿಸಿಕೊಳ್ಳುತ್ತಿರುವರಲ್ಲದೆ ಮಿ|| ಮಹಮುದ್‌ಸೇಟ್ ಮೊದಲಾದ ನಾಲ್ವರ ವಿಚಾರದಲ್ಲಿ ಓಟರುಗಳ ಮನಸ್ಸನ್ನು ಕೆಡಿಸಬೇಕೆಂದು ವಿಶ್ವಪ್ರಯತ್ನಮಾಡುತ್ತಿರುವರು. ಈ ಅಸೂಯಾಂಧರೂ ಅವರ ಹಿತೈಷಿಗಳೆಂದು ನಟಿಸುವ ವಿಘ್ನಸಂತೋಷಿಗಳೂ ಈವರೆವಿಗೂ ಬರೆದಿರುವ ಮುಂದೆ ಬರೆಯುವ ಲೇಖನಗಳಲ್ಲಿಯ ಪ್ರತಿಯೊಂದು ಅಕ್ಷರವನ್ನೂ ಖಂಡಿಸಿ ಬರೆಯಬಹುದಾಗಿದ್ದರೂ ಈ ಸ್ಟಾರ್‌ಪತ್ರಿಕೆಯ ಸ್ಥಳಸಂಕೋಚದಿಂದಲೂ ಎಲಕ್ಷನ್ ಈ ತಾ|| 15ಕ್ಕೆ ಮುಗಿದುಹೋಗಿ ಎಲ್ಲಾ ಕೋಲಾಹಲವೂ ತಣ್ಣಗಾಗುವುದರಿಂದಲೂ ಬಿ.ಎ., ಬಿ.ಎಲ್. ಪರೀಕ್ಷೆಗಳನ್ನು ಕೊಟ್ಟು ಲಾಗಳನ್ನು ತಲೆಕೆಳಗೆ ಮಾಡಿರುವವರೂ, ಬೃಹಸ್ಪತಿಗಳೂ, ಸರಸ್ವತಿ ಮುಕುರಗಳೂ ಮೊದಲಾದವರು ತಮ್ಮ ಬುದ್ಧಿಶಕ್ತಿಯನ್ನೆಲ್ಲಾ ಖರ್ಚುಮಾಡಿ ಬರೆದಿರುವ ಆರ್ಟಿಕಲ್ಲುಗಳಲ್ಲಿ ಮುಖ್ಯವಾದ ಕೆಲ ಅಂಶಗಳನ್ನು ಕುರಿತು ಕೊಂಚ ಪ್ರಸ್ತಾಪಿಸಿ ಈ ಅಸೂಯಾಂಧರ ಯೋಗ್ಯತೆಯನ್ನು ಓಟರುಗಳ ಗಮನಕ್ಕೆ ತರತಕ್ಕವನಾಗಿದ್ದೇನೆ.

ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರುಗಳಾಗಿ ಹೋಗುವ ಯೋಗ್ಯತೆಯು ಮಿ|| ಮಹಮುದ್‌ಸೇಟ್ ಮೊದಲಾದ ನಾಲ್ವರಿಗೆ ಮಾತ್ರ ಇದೆ ಮತ್ಯಾರಿಗೂ ಇಲ್ಲವೆಂದೂ, ಈ ನಾಲ್ವರಿಗೆ ಮಾತ್ರ ಓಟನ್ನು ಕೊಡಬೇಕಲ್ಲದೆ ಬೇರೆ ಯಾರಿಗೂ ಕೊಡಕೂಡದೆಂದೂ ಅರ್ಥವಾಗುವಹಾಗೆ ಬರೆಯಲ್ಪಟ್ಟಿದೆಯೋ? ಅಥವಾ ಈ ನಾಲ್ವರೂ ಓಟರುಗಳ ನಿರೀಕ್ಷಣೆಯನ್ನು ಸಾರ್ಥಕಪಡಿಸುತ್ತಾರೆಂಬ ಭರವಸೆಯು ನಮಗಿರುವದರಿಂದ ನಮ್ಮಂತೆಯೇ ಭರವಸೆಯುಳ್ಳವರು ಓಟುಗಳನ್ನು ಕೊಟ್ಟು ಉತ್ತೇಜನಗೊಳಿಸಬಹುದೆಂಬದಾಗಿ ಅರ್ಥವಾಗುವಂತೆ ಬರೆಯಲ್ಪಟ್ಟಿದೆಯೆ ಎಂಬುದು 36 ದೊಡ್ಡ ಮನುಷ್ಯರುಗಳ ರುಜುವಿನಿಂದ ಪ್ರಕಟಿಸಲ್ಪಟ್ಟಿರುವ ವಿಜ್ಞಾಪನ ಪತ್ರಿಕೆಯನ್ನು ಓದಿದ ಎಂಥಾ ದಡ್ಡನಿಗಾದರೂ ಗೊತ್ತಾಗುತ್ತದೆ. ತಲೆ ಮೇಲೆ ಮುಸುಕುಹಾಕಿಕೊಂಡು ಲುಚ್ಛಾನುಚಬೇರಿಗೆ ಹೋಗುವವರಂತೆಯೂ, ನಿಶಾಚರರಂತೆಯೂ ವೇಷಗಳನ್ನು ಬದಲಾಯಿಸಿಕೊಂಡು ವಿಜ್ಞಾಪನ ಪತ್ರಿಕೆಗೆ ರುಜುಮಾಡಿರುವ ದೊಡ್ಡ ಮನುಷ್ಯರುಗಳಲ್ಲಿ ತಮ್ಮ ಬಲೆಗೆ ಬೀಳುವಂಥಾವರ ಮನೆಗಳಿಗೆ ಅಕಾಲದಲ್ಲಿ ಹೋಗಿ ತಮ್ಮಲ್ಲಿ ಒಬ್ಬರನ್ನು ಹೊರಗೆ ಕಾವಲಿರಿಸಿದ್ದು ಉಳಿದವರು ಒಳಗೆಹೋಗಿ ಏನ್ರಿ ಆ ನಾಲ್ವರು ವಿನಾ ಈ ಊರಿನಲ್ಲಿ ಮತ್ಯಾರೂ ಮೆಂಬರಾಗಲು ಯೋಗ್ಯರಿಲ್ಲವೆಂದು ಬರೆದಿರುವ ಪತ್ರಿಕೆಗೆ ರುಜುಮಾಡಿ ಇತರ ಉಮೇದುವಾರರಿಗೆ ಮತ್ತು ಬೇರೆ ವಿದ್ವಾಂಸರಿಗೆ ಅವಮಾನಪಡಿಸಿ ಅವರುಗಳ ನಿಷ್ಠುರಕ್ಕೆ ಗುರಿಯಾದಿರಲ್ಲಾ; ಇದು ಅಲ್ಲದೆ ಈರೀತಿ ಅವಮಾನ ಪಡಿಸಿದ್ದಕ್ಕೆ ನಿಮ್ಮಗಳ ಮೇಲೆ ಫಿರ್ಯಾದುಮಾಡಲು ಯೋಚಿಸಿರುತ್ತೇವೆಂದು ಹೆದರಿಸಿ, ಮತ್ತು ಓಟರುಗಳ ಮನೆಗಳಿಗೆ ಹೋಗಿ, ನೋಡಿ ಆ ನಾಲ್ವರು ಎಷ್ಟು ಮೋಸಮಾಡಿ 36 ಜನರ ರುಜುವನ್ನು ಹಾಕಿಸಿದಾರೆ ಎಂದು ತೋರಿಸಿ ನೀವು ಅವರಿಗೆ ಓಟನ್ನು ಕೊಡಬೇಡಿ ಎಂದು ಹೇಳುತ್ತಿರುವ ಹೇಡಿಗಳಂತೆ ಮಿ|| ಸೇಟರು ಮತ್ತೆ ಮೂವರು ಮಾಡದೆ ಬಹಿರಂಗವಾಗಿ ಮೋಟಾರುಕಾರಿನಲ್ಲಿ ಕುಳಿತು ಗುಣಗ್ರಾಹಿಗಳೂ, ನಿಷ್ಪಕ್ಷಪಾತಿಗಳೂ ಎಂದು ತೋರಿದ ದೊಡ್ಡ ಮನುಷ್ಯರಲ್ಲಿಗೆ ಹೋಗಿ ತಮ್ಮುದ್ದೇಶ ಸಂಕಲ್ಪಗಳನ್ನು ಅವರುಗಳಿಗೆ ತಿಳಿಸಿ ಅವರ ಸಾನುಭೂತಿ ಪ್ರೋತ್ಸಾಹಗಳನ್ನು ಪಡೆದುಕೊಂಡು ಬಂದಿರುತ್ತಾರೆ. ಈ ನಾಲ್ವರಿಗೆ ಸಭೆಯಲ್ಲಿ ಚರ್ಚಿಸುವ ಶಕ್ತಿ ಇದೆ ಇಲ್ಲವೆನ್ನುವದನ್ನು ಅವರಿಗೆ ಓಟುಗಳನ್ನು ಕೊಟ್ಟು ಮೆಂಬರುಗಳನ್ನಾಗಿ ಕಳುಹಿಸಿದ ಮೇಲಲ್ಲವೇ ಪರೀಕ್ಷಿಸತಕ್ಕದ್ದು? ಹಾಗಲ್ಲದೆ ಉತ್ತರನಂತೆ ಈಗ ಪೌರುಷ ಕೊಚ್ಚಿಕೊಳ್ಳುವದರಿಂದ ಪ್ರಯೋಜನವೇನು? ಮಿ|| ಸೇಟರು ಸಭೆಗಳಲ್ಲಿ ವಿಷಯಗಳನ್ನು ಚರ್ಚೆಮಾಡಿ ತಿಳಿದುಕೊಳ್ಳುವಷ್ಟು ಇಂಗ್ಲೀಷು
clear conscience and in ಬಾಗಿದ್ದರೂ, ಸಭೆಗಳಿಗೆ ಮೆಂಬರಾಗಲು
of the cause that those ದಯ ಪತ್ರಿಕೆಯ ಎಡಿಟರು ಸಿಟಿ
popular cause, and it is ವ್ ಇವರುಗಳು ಮಾತ್ರ ಹೇಗೆ
by them and help its advan ರು ಮತ್ತೆ ಮೂವರು ಒಂದುವೇಳೆ
place for deception, for p

ನಿರಕ್ಷರಕುಕ್ಷಿಗಳಾಗಿದ್ದು ಸಂಪದಭ್ಯುದಯ ಕಾಟಿದವರ ಜಾತಿಯವರಾಗಿದ್ದಿದ್ದರೆ ಸಮರ್ಥರಾಗಿ ಹೊಗಳಲ್ಪಟ್ಟು ಶಿಫಾರ್ಸುಮಾಡಲ್ಪಡುತ್ತಿದ್ದರೇನೊ! ಮ|| ದಾಸಪ್ಪನವರು ಈಊರಿಗೆ ಹೊಸಲಾಯರಾಗಿದ್ದರೂ, ಎಷ್ಟೋವರ್ಷಗಳಿಂದಲೂ ಲಾಯರಾಗಿದ್ದಾಗ್ಯೂ, ತಕ್ಕ ಶಕ್ತಿ ಸಾಮರ್ಥ್ಯವೂ ಸಂಪಾದನೆಯೂ ಇಲ್ಲದೆ ಮೂಲೆಗೆ ಮುಟ್ಟಾಗಿ ಅನಾಮಧೇಯರಾಗಿರುವವರಂತೆ ಇರದೆ ವಕೀಲಿಯಲ್ಲಿ ಒಳ್ಳೆಹೆಸರನ್ನು ಸಂಪಾದಿಸುತ್ತ ಅನೇಕ ಸಂಘಗಳಲ್ಲಿ ಮೆಂಬರಾಗಿರುವರಲ್ಲದೆ ಬಹಿರಂಗ ಸಭೆಗಳಲ್ಲಿ ಭಾಷಣಮಾಡಿ ತಮ್ಮ ಬುದ್ಧಿ ಶಕ್ತಿಯನ್ನು ಪ್ರದರ್ಶಿಸಿರುವರು. ಮೈಸೂರಿನಲ್ಲಿ ಮ್ಯುನಿಸಿಪಾಲಿಟಿಯೂ ಟ್ರಸ್ಟ್‌ಬೋರ್ಡೂ ಇರುವದನ್ನೇ ಅಸೂಯಾಂಧತೆಯಿಂದ ಅರಿಯದವರಿಗೆ ಅವುಗಳಲ್ಲಿ ಮೆಂಬರಾಗಿದ್ದುಕೊಂಡು ರೇಟ್‌ಪೇಯರ ಪಕ್ಷವಾಗಿ ಹೊಡದಾಡುತ್ತಿರುವ ಪ್ರಸಿದ್ಧ ಜವಳಿವರ್ತಕರಾದ ಮ|| ಸೆಟ್ಟರು ಯಾರೆಂಬದು ಗೊತ್ತಾಗದಿರುವದು ಆಶ್ಚರ್ಯವಲ್ಲವು. ಯಾರಿಗೂ ಗೊತ್ತಿಲ್ಲದವರೆಂದು ಹೇಳಲ್ಪಟ್ಟಿರುವ ಯಜಮಾನ್ ವೀರಸಂಗಯ್ಯನವರ ಮಕ್ಕಳು ಪ್ರಸಿದ್ಧರು, ಸ್ಟಾರ್ ಪತ್ರಿಕೆಯ ಸಂಪಾದಕರು ಎಂದು ಆಕ್ಷೇಪಕರಾದ ಓಟರು ಬರೆದಿರುವದು ಆಶ್ಚರ್ಯ. ಪ್ರತಿಯೊಂದು ಮ್ಯುನಿಸಿಪಲ್ ಮೀಟಿಂಗಿಗೆ ತಪ್ಪದೆ ಹೋಗಿ ಕುರ್ಚಿಗೆ ಅಲಂಕಾರಪ್ರಾಯವಾಗಿ ಕುಳಿತುಕೊಂಡು ಪ್ರೆಸಿಡೆಂಟರು ಹೇಳಿದ್ದಕ್ಕೆಲ್ಲಾ ತಲೆಯನ್ನು ಅಲ್ಲಾಡಿಸುತ್ತ ಒಂದು ಚಕಾರ ಶಬ್ದವನ್ನು ಸಹ ಹೇಳದೆ ಹೆಚ್ಚಾಗಿ ಓಟು ಬಂದಕಡೆ ಕೈಯತ್ತಿ ಬರುತ್ತಿರುವ ಕೆಲ ಮೆಂಬರುಗಳಂತೆ ಮ|| ವಿರೂಪಾಕ್ಷಯ್ಯನವರು ಇರದೆ ಅವಶ್ಯಕವಾದ ಮತ್ತು ರೇಟ್‌ಪೇಯರುಗಳಿಗೆ ಅನುಕೂಲ ಪ್ರತಿಕೂಲವಾಗುವಂತ ವಿಷಯಗಳು ಪರ್ಯಾಲೋಚಿಸಲ್ಪಡಬೇಕಾದಾಗ್ಗೆ ತಪ್ಪದೆ ಮೀಟಿಂಗಿಗೆ ಹೋಗಿ ಮಿ|| ಸೇಟರು, ಮ|| ಸೆಟ್ಟರು ಇವರುಗಳ ಸಮೇತ ಚರ್ಚಿಸಿ ತಮ್ಮನ್ನು ಚುನಾಯಿಸಿ ಕಳಿಸಿದ ರೇಟ್‌ಪೇಯರುಗಳ ನಿರೀಕ್ಷಣೆಯನ್ನು ಸಾರ್ಥಕಪಡಿಸುತ್ತಿರುವದು ಅಸೂಯಾಂಧರಿಗೆ ತಿಳಿಯುವದು ಹೇಗೆ?

36 ಜನ ದೊಡ್ಡ ಮನುಷ್ಯರು ಮಿ|| ಸೇಟರು ಮತ್ತೆ ಮೂವರಿಗೆ ಓಟುಗಳನ್ನು ಕೊಡಬೇಕೆಂದು ಶಿಫಾರ್ಸುಮಾಡಿ ರುಜುಮಾಡಿರುವ ಪತ್ರಿಕೆಯ ವಿಚಾರದಲ್ಲಿ ಹಿಂದೆ ಯಾರೂ ಮಾಡದಿರುವಂತ ತಪ್ಪು ಮಾಡಲ್ಪಟ್ಟಿದೆ, ಈ ರೀತಿ ಬರೆಯಲು 36 ಜನರಿಗೆ ಅಧಿಕಾರವನ್ನು ಕೊಟ್ಟವರ್ಯಾರು? ಅವರು ಈ ನಾಲ್ವರವಿನಹ ಮತ್ತಾರೂ ಮೆಂಬರಾಗಲು ಅರ್ಹರಿಲ್ಲವೆಂದು ಹೇಳುವದು ಅಪಮಾನಕರವಲ್ಲವೆ? ಎಂದು ವಗೈರೆಯಾಗಿ ಗದ್ದಲವನ್ನೆಬ್ಬಿಸಿರುವ ಈ ಅಸೂಯಾಂಧರುಗಳು ತಾವು ಯಾವ ಪತ್ರಿಕೆಯಲ್ಲಿ ಬರೆದಿರುವರೋ ಅದೇ ಪತ್ರಿಕೆಯಲ್ಲಿ ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರಾಗಲು ಉಮೇದುವಾರರಾಗಿ ನಿಂತಿರುವ ಮ|| ಕರ್ಣೀಕ ಕೃಷ್ಣಮೂರ್ತಿಯವರಿಗೆ ಶಿಫಾರ್ಸು ಮಾಡುವಾಗ್ಗೆ "ಪ್ರಜಾಸೇವೆಮಾಡಿರತಕ್ಕವರಲ್ಲಿ ಇವರು (ಕೆ. ಕೆ. ಮೂರ್ತಿಯವರು) ಅಗ್ರಗಣ್ಯರು. ಇವರಷ್ಟು ನಿರ್ಭಯವಾಗಿಯೂ, ನಿರ್ದಾಕ್ಷಿಣ್ಯವಾಗಿಯೂ ಕೊಡಿದನುಟ್ಟಿಗೂ ಕೂಲಂಕಷ ಪ್ರಜ್ಞೆಯಿಂದಲೂ ಕೆಲಸ ಮಾಡಿರತಕ್ಕವರು ಬಹಳ ವಿರಳರಾಗಿರುವರು. ಇವರು ಮಾಡಿರತಕ್ಕ ಮೆಹನತ್ತನ್ನೂ ಪ್ರಜಾಸೇವೆಯನ್ನೂ ತಪಶೀಲುವಾರಾಗಿ ತಿಳಿಸಬೇಕಾದರೆ ಅದು ಒಂದು ದೊಡ್ಡ ಪುಸ್ತಕವಾಗುವುದು. ಇವರು ಪ್ರತಿನಿಧಿ ಸಭೆಯಲ್ಲೂ ನ್ಯಾಯವಿಧಾಯಕ ಸಭೆಯಲ್ಲೂ ಮಾಡಿರತಕ್ಕ ಮೆಹನತ್ತುಗಳನ್ನು ನೋಡಿದರೆ ಓಟರುಗಳ ನಂಬಿಕೆಗೂ, ಅವರುಗಳ ಪ್ರತಿನಿಧಿಗಳಾಗಿರುವುದಕ್ಕೂ ಇವರ ಅರ್ಹತೆಯು ಅಸಾಧಾರಣವಾದದ್ದೆಂದು ನಮಗೆ ತೋರುತ್ತದೆ. ಇವರಿಗೆ ಓಟುಕೊಡುವುದರಿಂದ ಓಟುಕೊಡತಕ್ಕವರು ತಮ್ಮ ಕೆಲಸಗಳನ್ನು ಸರಿಯಾಗಿ ಮಾಡುವಂತೆ ಆಗುವುದರಲ್ಲಿ ಸಂದೇಹವಿಲ್ಲ" ಎಂದು ಅದೇ ಸಂಪದಭ್ಯುದಯ ಪತ್ರಿಕೆಯ ಎಡಿಟರು ಬರೆದಿರುವುದನ್ನೂ, ಮತ್ತು ಉಮೇದುವಾರರುಗಳು ಒಬ್ಬರಿಗೊಬ್ಬರು ಹೋರಾಡಿ ದ್ವೇಷಿಸಿ ಪತ್ರಿಕೆಗಳಲ್ಲಿ ದೂಷಿಸಿಬರೆದು ಓಟರುಗಳ ಮನಸ್ಸಿಗೆ ಜುಗುಪ್ಸೆ ಹುಟ್ಟುವಂತೆ ಮಾಡುವದು ಶ್ರೇಯಸ್ಕರವಲ್ಲವಾದ್ದರಿಂದ ಮಲೆನಾಡಿನವರು ಮ|| ಹೊಸಕೊಪ್ಪ ಕೃಷ್ಣರಾಯರವರನ್ನೇ ಚುನಾಯಿಸಬೇಕೆಂದು ಠರಾಯಿಸಿರುವ ಮೇಲುಪಂಗ್ತಿಯನ್ನನುಸರಿಸಿ ಇತರಕಡೆಯ ಉಮೇದುವಾರರೂ ಓಟರುಗಳೂ ಸಭೆ ಸೇರಿಸಿ ಉಮೇದುವಾರರುಗಳನ್ನು ಚುನಾಯಿಸಿ ಅವರುಗಳಿಗೇ ಓಟನ್ನು ಕೊಡಬೇಕೆಂದು ಠರಾಯಿಸಬೇಕಾಗಿ ಸೂಚಿಸುತ್ತೇನೆಂದು ಒಬ್ಬ ಓಟರು ಬರೆದಿರುವುದನ್ನೂ ನೋಡಿದರೆ, ರಾಜಧಾನಿಯ ದೊಡ್ಡಮನುಷ್ಯರುಗಳು ಶಿಫಾರ್ಸುಮಾಡಿರುವ ನಾಲ್ವರು ಉಮೇದುವಾರರಿಗೆ ಓಟುಗಳು ಬಂದುಹೋಗುತ್ತವೆಂಬ ಅಸೂಯಾಗ್ನಿಯಿಂದ ದೇಹದ ರಕ್ತವು ಕಾದು ತಲೆಗೇರಿ ಬುದ್ಧಿಭ್ರಾಂತಿಯಿಂದ ಪತ್ರಿಕೆಯಲ್ಲಿ ತಾವು ಬರೆದಿರುವ ಅಸಂಬಂಧವೂ ಅನುಚಿತವೂ ಹೇಯವೂ ಆದ ಬರವಣಿಗೆಗಳಿಗಾಗಿ ಅಸೂಯಾಂಧರೂ ಪಶ್ಚಾತ್ತಾಪಪಟ್ಟು ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದೆ ಇರಲಾರರು. ಮ|| ಗಳಾದ ಕರ್ಣೀಕ ಕೃಷ್ಣಮೂರ್ತಿಯವರ ಮತ್ತು ಹೊಸಕೊಪ್ಪ ಕೃಷ್ಣರಾಯರ ವಿಷಯಕವಾದ ಆರ್ಟಿಕಲ್ಲುಗಳು ಈ ಫೆಬ್ರವರಿ ತಾ|| 5ರ ಸಂಪದಭ್ಯುದಯದಲ್ಲಿ ಮುದ್ರಿಸಲ್ಪಟ್ಟಿರುತ್ತವೆ. ಈ ಅಸೂಯಾಂಧರ ಕ್ಷುಲ್ಲಕ ಬರವಣಿಗೆಗಳಿಗೆ ಪತ್ರಿಕೆಯಲ್ಲಿ ಅವಕಾಶಕೊಟ್ಟ ಸಂಪದಭ್ಯುದಯ ಪತ್ರಿಕೆಯ ಎಡಿಟರು ಮ|| ಕೆ. ಕೃಷ್ಣಮೂರ್ತಿರಾಯರ ವಿಚಾರದಲ್ಲಿ ಶಿಫಾರ್ಸುಮಾಡಿರುವುದು ಸ್ವಜಾತಿ ಅಭಿಮಾನದಿಂದಲ್ಲದೆ ಯೋಗ್ಯತಾಪಕ್ಷಪಾತದಿಂದ ಮಾಡಿರುವುದಾಗಿದ್ದಲ್ಲಿ ಅಸೂಯಾಂಧರಿಗೆ ತಕ್ಕಬುದ್ಧಿವಾದವನ್ನು ಹೇಳಿ ಅವರ ದ್ವೇಷಾಸೂಯೆಯಿಂದ ಕೂಡಿದ ಆರ್ಟಿಕಲ್ಲುಗಳನ್ನು ಪ್ರಚಾರಪಡಿಸಬಾರದಾಗಿತ್ತು. ಇದು ಅವರ ವಯೋಧರ್ಮದಿಂದ ಜ್ಞಾಪಕಕ್ಕೆ ಬರಲಿಲ್ಲವೇನೊ!

ಈ ಸ್ಟಾರ್‌ಪತ್ರಿಕೆಯಲ್ಲಿ ಗುಣವಿಮರ್ಶಕರೆಂಬುವರು ಮ|| ನಂಜುಂಡರಾಜೇ ಅರಸಿನವರ ವಿಚಾರದಲ್ಲಿ ಬರೆದಿರುವ ಆರ್ಟಿಕಲ್ಲನ್ನು ಮ|| ಜಿ. ಮಲ್ಲಾರಾಧ್ಯ, ಬಿ.ಎ., ಎಲ್‌ಎಲ್.ಬಿ., ಎಂಬುವರು ಇದೇ 6ನೇ ತಾ|| ಸಂಪದಭ್ಯುದಯ ಪತ್ರಿಕೆಯಲ್ಲಿ ಖಂಡಿಸಲು ಹೊರಟು ಮ|| ಅರಸಿನವರ ಗುಣಗಳ ವಿಷಯದಲ್ಲಿ ಚರ್ಚಿಸಿ ತೀರ್ಮಾನವನ್ನೂ ಅವರನ್ನೂ ಗುಣವಿಮರ್ಶಕರಿಗಿಂತ ಚೆನ್ನಾಗಿ ತಿಳಿದಿರುವ ಜನರಿಗೆ ಬಿಟ್ಟಿದ್ದರೆ ಚೆನ್ನಾಗಿತ್ತೆಂದು ವಗೈರೆ ಬರೆದಿರುತ್ತಾರೆ. "ನೋಡಿಯೋ ಅಥವಾ ನೋಡದೆಯೋ, ತಿಳಿದೋ ಅಥವಾ ತಿಳಿಯದೆಯೋ ಹೇಗೋ ಒಂದು ಕಾರಣದಿಂದ ತಮ್ಮ ಕೈಲಿಕೊಟ್ಟ ವಿಜ್ಞಾಪನಪತ್ರಿಕೆಗೆ ರುಜುಮಾಡಿದಮೇಲೆ ಆ ಅಂಶವನ್ನು ಹೊರಪಡಿಸುವುದರಿಂದ ಆಗುವ ಪ್ರಯೋಜನಾಂಶವೇನೋ ನಾನು ಬೇರೆ ಕಾಣೆ" ಎಂದು ಮ|| ನಂಜುಂಡರಾಜೇ ಅರಸಿನವರನ್ನು ಚೆನ್ನಾಗಿ ತಿಳಿದಿರುವ ಮ|| ಎ. ಸಿ. ಲಿಂಗರಾಜೇ ಅರಸಿನವರೇ ವಿಜ್ಞಾಪನಪತ್ರಿಕೆಯ ವಿಷಯವಾಗಿ ಹುಟ್ಟಿರುವ ಆಕ್ಷೇಪಕ್ಕೆ ಸಮಾಧಾನವನ್ನು ಹೇಳತಕ್ಕ ಸಂದರ್ಭದಲ್ಲಿ ಬರೆದಿರುತ್ತಾರೆ. ಈ ಲೇಖನವೂ ಮ|| ಆರಾಧ್ಯರು ಬರೆದಿರುವ ಲೇಖನದ ತಲೆಯ ಮೇಲೆ ಅಚ್ಚಾಗಿರುತ್ತದೆ. ತಮಗಿಂತಲೂ ವಯಸ್ಸಿನಲ್ಲಿ ಎಷ್ಟೋ ಚಿಕ್ಕವರಾದ ಮ|| ಎ. ಸಿ. ಲಿಂಗರಾಜೇ ಅರಸಿನವರು ಬಹಳ ವಿವೇಕದಿಂದಲೂ ದೂರದೃಷ್ಟಿಯಿಂದಲೂ ಪರ್ಯಾಲೋಚಿಸಿ ಹೇಳಿರುವಂತೆ ಮ|| ನಂಜುಂಡರಾಜೇ ಅರಸಿನವರು ತಾವು ತಿಳಿದೋ ತಿಳಿಯದೆಯೋ ಮಾಡಿದ ಕೆಲಸವನ್ನು ಬಹಿರಂಗಪಡಿಸದೆ ಮೌನವಾಗಿದ್ದಲ್ಲಿ ಗುಣವಿಮರ್ಶಕರಾಗಲಿ ಮ|| ಲಿಂಗರಾಜೇ ಅರಸಿನವರಾಗಲಿ ಮ|| ನಂಜುಂಡರಾಜೇ ಅರಸಿನವರ ವಿಷಯವಾಗಿ ಬರೆಯಬೇಕಾದ ಪ್ರಮೇಯವೇ ಇರಲಿಲ್ಲ. ಮ|| ನಂಜುಂಡರಾಜೇ ಅರಸಿನವರು ಹಾಗೆ ಪತ್ರಿಕೆಗೆ ಬರೆಯಲು ಅವರಿಗೆ ಮುಸುಕಿನೊಳಗಿನ ಗುದ್ದಿನಂತ ಸಂದರ್ಭವೇನಿತ್ತೋ ನಮಗೇನು ಗೊತ್ತು! ರಾಜ ಬಂಧುವರ್ಗಕ್ಕೇ ಕೀರ್ತಿಪ್ರಾಯರೂ ಹಿಂದುಳಿದ ಜನರ ಉದ್ಧಾರಕರೂ ಆಗಿದ್ದ ಲೇಟ್ ಸರ್ ಎಂ. ಕಾಂತರಾಜೇ ಅರಸಿನವರನ್ನು ಕಿವಿಯಲ್ಲಿ ಕೇಳಬಾರದ ಮಾತುಗಳಿಂದ ನಿಂದಿಸಿ ಪಂಚಮರಿಗೆ ಹೆಣ್ಣನ್ನುಕೊಟ್ಟು ತರಲಿ ಎಂದು ಸಹ ಪತ್ರಿಕೆಗಳಲ್ಲಿ ಬರೆದ ಲೇಖನಗಳು ಮ|| ಆರಾಧ್ಯರಿಗೆ ಹೇಯವಾಗಿಯೂ, ಕಾನೂನುಗಳಿಗೆ ವಿರೋಧವಾಗಿಯೂ ಇಲ್ಲದಿದ್ದದ್ದು ಈಗ ಸ್ವಜನರೇ ತಪ್ಪೆಂದುಹೇಳುವ ಮಾತನ್ನು ಗುಣವಿಮರ್ಶಕರು ತಪ್ಪೆಂದು ಹೇಳಿರುವದು ಹೇಯವಾಗಿಯೂ ಕಾನೂನಿಗೆ ವಿರೋಧವಾಗಿಯೂ ಆರಾಧ್ಯರಿಗೆ ತೋರಿರುವುದೂ ಅದನ್ನು ಪ್ರಕಟಿಸಿದ ಸ್ಟಾರ್ ಎಡಿಟರ ವಿಚಾರದಲ್ಲಿ ಆಶ್ಚರ್ಯವೂ ವ್ಯಸನವೂ ಆಗಿರುವುದೂ ವಿಚಿತ್ರವೇ ಸರಿ. ಸಾಯುವವರ ಕಣ್ಣಿಗೆ ಸುಳಿಯುವವನೇ ಜವರಾಯನೆಂಬ ಗಾದೆಯಂತೆ ಆರಾಧ್ಯರಿಗೆ ತೋರಿರಬಹುದು. ಲೇಟ್ ಕಾಂತರಾಜ ಅರಸಿನವರನ್ನು ದೂಷಿಸಿ ಬರೆಯಲ್ಪಟ್ಟಿದ್ದ ಲೇಖನಗಳು ಕಾನೂನಿಗೆ ವಿರೋಧವೆಂದು ಕಂಡುಹಿಡಿಯಲು ಆಗಿನ ಲಾಯರುಗಳು ಓದಿದ್ದ ಲಾ ಪುಸ್ತಕಗಳಲ್ಲಿ ತಕ್ಕ ಆಧಾರ ಸಿಕ್ಕದಿದ್ದು ಈಗ ನೂತನವಾಗಿ ಲಾ ಪ್ಯಾಸ್ ಮಾಡಿಕೊಂಡು ಬಂದಿರುವ ನಮ್ಮ ಆರಾಧ್ಯರ ಅಸಾಧಾರಣ ಬುದ್ಧಿ ಶಕ್ತಿಗೆ ಸಿಕ್ಕಿರಬಹುದು! ಶಾಬಾಸ್ ಆರಾಧ್ಯರೆ! ನೀವು 5-6 ವರ್ಷ ಕಷ್ಟಪಟ್ಟು ಬಹಳ ದುಡ್ಡು ಖರ್ಚುಮಾಡಿ ಪ್ಯಾಸ್ ಮಾಡಿ ಲಾಯರಾದ್ದಕ್ಕೆ ಸಾರ್ಥಕವಾಯಿತು. ಹೊಸದಾಗಿ ಲಾಯರಾದವರು ಕೇಸುಗಳನ್ನು ತೆಗೆದುಕೊಂಡು ನಡಿಸಲು ಅನುಭವಸಾಲದೆ ಆನೆಗಳು ತಮ್ಮ ತಲೆಮೇಲೆ ಮಣ್ಣನ್ನು ಎರ್ಚಿಕೊಳ್ಳುವಂತೆ ತಮ್ಮ ಕಕ್ಷಿಗಾರರಿಗೇ ವಿರೋಧವಾಗಿ ವಾದಿಸಿ ಅವರ ಎದೆಮೇಲೆ ಚಪ್ಪಡಿಕಲ್ಲನ್ನು ಎಳೆಯುವಂತೆ ನಮ್ಮ ಆರಾಧ್ಯರು ಮ|| ನಂಜುಂಡರಾಜೇ ಅರಸಿನವರ ಪಕ್ಷ ವಕೀಲಿಯನ್ನು ವಹಿಸಿ ಅವರಿಗೆ ಆಗಿರುವ ಮಾನನಷ್ಟವನ್ನು ಪರಿಹಾರಮಾಡಿಕೊಡುವ ಪ್ರಯತ್ನವಾಗಿದೆ. ಮ|| ನಂಜುಂಡರಾಜೇ ಅರಸಿನವರು ಹಳ್ಳಿಯಲ್ಲಿ ಹುಟ್ಟಿದ್ದು ತಪ್ಪಾಗುವ ಪಕ್ಷದಲ್ಲಿ ಮಿ|| ಸರ್ ಎಂ. ವಿಶ್ವೇಶ್ವರಯ್ಯನವರು ಮೋಕ್ಷಗೊಂಡಯೆಂಬ ಹಳ್ಳಿಯಲ್ಲಿ ಹುಟ್ಟಿದ್ದಕ್ಕೋಸ್ಕರ ಅವರನ್ನೂ ದೂಷಿಸಬಹುದಾಗಿತ್ತಲ್ಲವೆ? ಎಂದು ನಮ್ಮ ಬೃಹಸ್ಪತಿಗಳಾದ ಆರಾಧ್ಯರು ಕೇಳಿರುತ್ತಾರೆ. ಸರ್ ಎಂ. ವಿಶ್ವೇಶ್ವರಯ್ಯನವರೂ ತಾವು ಮಾಡಿದ ಕೆಲಸವನ್ನು ಮಾಡಲಿಲ್ಲವೆಂದಾಗಲಿ ತಿಳಿಯದೆ ಮಾಡಿದನೆಂದಾಗಲಿ ಹೇಳುವದಾದರೆ ಇನ್ನೂ ಹೆಚ್ಚಾಗಿ ದೂಷಿಸಲ್ಪಡುವದರಲ್ಲಿ ಸಂದೇಹವಿಲ್ಲ. ಆದರೆ ಅವರಿಗೆ ಮನೋನಿಗ್ರಹಶಕ್ತಿಯುಂಟು. ಹಿಂದೆ ಯಾರೋ ಒಬ್ಬ ಅಧಿಕಾರಿಯು ಸರ್ಕಾರಿ ಗೆಜೆಟ್ಟಿನಲ್ಲಿ ಎಲ್ಲರ ಹೆಸರೂ ಬರುತ್ತದೆ ನನ್ನ ಹೆಸರು ಬರುವದಿಲ್ಲ ಅದಕ್ಕೇನುಮಾಡಬೇಕೆಂದು ತಮ್ಮ ಕ್ಲಾರ್ಕನ್ನು ಕೇಳುವಲ್ಲಿ, ಆತನು ಜಾಣನಾದ್ದರಿಂದ ಹೌದು ಸ್ವಾಮಿ ತಮಂತ ದೊಡ್ಡ ಆಫೀಸರ ಹೆಸರು ಬರದಿರುವದು ತಪ್ಪು. ಅದಕ್ಕೆ 3 ತಿಂಗಳ ರಜಾಕ್ಕೆ ಬರೆದುಕೊಂಡರೆ ಗೆಜೆಟ್ಟಿನಲ್ಲಿ ಮಂಜೂರಾದ್ದು ಛಾಯಿಷಾಗುತ್ತೆಂದು ಹೇಳಲು ಏನಯ್ಯ ಸುಂಸುಂನೆ ಯಾಕೆ ರಜಾತೆಗೆದುಕೊಳ್ಳುವುದು? ಎಂದು ಆಫೀಸರು ಕೇಳಲು ಹಾಗಲ್ಲಾ ಸ್ವಾಮಿ ರಜಾ ಸ್ಯಾಂಕ್ಷನ್ನು ಆದ್ದು ಗೆಜೆಟ್ಟಿನಲ್ಲಿ ಬಂದಮೇಲೆ ರಜಾ ಅನಾವಶ್ಯಕವೆಂದು ಮರಳಿ ಬರೆದರೆ ಅದು ಕ್ಯಾನ್ಸಲಾಗಿದೆ ಎಂದು ಪಬ್ಲಿಷ್ ಆಗುತ್ತೆ. ಇದರಿಂದ ತಮ್ಮ ಹೆಸರು ಎರಡು ವೇಳೆ ಬಂದಂತೆ ಆಗುತ್ತೆಂದು ಹೇಳಲು, ಅಧಿಕಾರಿಯು ಸಂತೋಷಪಟ್ಟುಕೊಂಡಂತೆ ನಮ್ಮ ಆರಾಧ್ಯರು ಉಮೇದುವಾರರಲ್ಲದಿದ್ದರೂ ಪ್ರಕೃತ ಚರ್ಚಾಸ್ಪದ ವಿಷಯದಲ್ಲಿ ತಲೆಹಾಕಿರುವುದನ್ನೋಡಿದರೆ ಈ ನೆಪದಿಂದಲಾದರೂ ತಮ್ಮ ಲಾ ಪಾಂಡಿತ್ಯವೂ ಹೆಸರೂ ಪತ್ರಿಕಾ ಮೂಲಕ ಪ್ರಸಿದ್ಧಿಯಾಗಲೆಂದು ಯೋಚಿಸಿರುವುದಾಗಿ ತೋರುತ್ತದೆ. ಮಿ|| ಮಹಮ್ಮದ್‌ಸೇಟರು ಮತ್ತೆ ಮೂವರು ಮಾಡಿರುವ ಪ್ರಯತ್ನವು ನಿರಾಕ್ಷೇಪವೂ, ಸರ್ವಸಮ್ಮತವೂ ಆದದ್ದೆಂಬುದೂ ಅದಕ್ಕೆ ವಿರೋಧವಾಗಿ ಅಸೂಯಾಂಧರು ಮಾಡುವ ಪ್ರಯತ್ನವೆಲ್ಲವೂ ಅಯೋಗ್ಯವೂ ತಿರಸ್ಕೃತವೂ ಆದದ್ದೆಂಬದೂ, ಇವರಲ್ಲಿ ಯಾರು ಎಲಕ್ಷನ್ ರೂಲಿಗೆ ವಿರೋಧವಾಗಿ ನಡೆದು ಕ್ರಿಮಿನಲ್ ವಿಚಾರಣೆಯಿಂದ ಶಿಕ್ಷಿಸಲ್ಪಡತಕ್ಕವರಾಗಿರುವರೆಂಬುದೂ ಮೇಲೆ ನಾನು ಹೇಳಿರುವ ವಿಷಯಗಳಿಂದ ಓಟರುಗಳಿಗೆ ಚೆನ್ನಾಗಿವ್ಯಕ್ತವಾಗದೆ ಇರದು.

ನಿಷ್ಪಕ್ಷಪಾತ ಓಟರು.

ಮೈಸೂರು ಪಟ್ಟಣದ ಓಟರುಗಳು ದಯವಿಟ್ಟು ಗಮನಿಸತಕ್ಕದ್ದು

ಅಯ್ಯಾ ಓಟರುಗಳಿರಾ!

ಮೈಸೂರು ಪ್ರಜಾಪ್ರತಿನಿಧಿ ಸಭೆಗೂ ಲೆಜಿಸ್ಲೇಟಿವ್ ಕೌನ್ಸಿಲಿಗೂ ಬರುವ ಫೆಬ್ರವರಿ ತಾರೀಖು 15 ರಲ್ಲಿ ತಮ್ಮಿಂದ ಮೆಂಬರುಗಳನ್ನಾಗಿ ಯಿಸಲ್ಪಡಲು ಉಮೇದುವಾರರಾಗಿ ನಿಂತಿರುವವರುಗಳೂ ಅವರ ಏಜಂಟರುಗಳೂ ಪ್ರತಿಯೊಬ್ಬ ಓಟರ ಬಳಿಗೂ ಬಂದು ತಮ್ಮ ಕ್ಯತಾಪ್ರತಾಪಗಳನ್ನು ಹೇಳಿಕೊಂಡು ತಮಗೆ ಓಟನ್ನು ಕೊಡಬೇ ಪೀಡಿಸುವವರು ಕೆಲವರು ಮತ್ತೆ ಕೆಲವರು ಅವರಿಗೆ ವಿದ್ಯೆಯಿಲ್ಲ, ಯಿಲ್ಲ, ಧೈರ್ಯದಿಂದ ಮಾತನಾಡುವದಕ್ಕೆ ಬರುವದಿಲ್ಲ; ಅಂಥಾವರಿಗೆ ಓಟನ್ನು ಕೊಟ್ಟು ಹಾಳುಮಾಡಿಕೊಳ್ಳಬೇಡಿ. ನನಗೆ ಕೊಟ್ಟರೆ ನಿರ್ಭಯದಿಂದ ಹೊಡೆದಾಡುತ್ತೇನೆ, ಆದ್ದರಿಂದ ನನಗೇ ಕೊಡಿ ಮತ್ತೆ ಕೆಲವರು; ನಾನು ಹುಟ್ಟಿದಾರಭ್ಯ ಪ್ರಜಾಸೇವೆಯಲ್ಲೇ ಕಾಲಕ ಅವರ ಕ್ಷೇಮಚಿಂತನೆಗಾಗಿ ಯಾರಿಗೂ ಹೆದರದೆ ಹೊಡದಾಡುತ್ತಿ ಎಂದು ಬೇರೆ ಕೆಲವರು ಬಂದು ಹೇಳಿಕೊಳ್ಳುತ್ತಿರುವದರಿಂದ ಇದ ಯಾರಿಗೆ ಕೊಡಬೇಕು ಯಾರಿಗೆ ಕೊಡಬಾರದೆಂದು ಪರಿಶೀಲಿಸುವ ಸಹ ಅವಕಾಶವಿಲ್ಲವಾಗಿದೆ. ಉಮೇದುವಾರರುಗಳ ಅವರಗಿಂತಲೂ ಗಿ ಅವರಕಡೆ ಮೊಕ್ತಾರ್‌ವಹಿಸಿಕೊಂಡಿರುವವರ ಕಾಟವನ್ನು ತಡೆ ರದೆ ಪೇಚಾಡುತ್ತಿರುವರು.

ಲಾಯರುಗಳು ತಾವು ಮೊಕ್ತಾರು ವಹಿಸಿಕೊಂಡಿರುವ ಕಕ್ಷಿಗಾರರ ಕುಲವನ್ನು ಲಕ್ಷಿಸದೆ, ತಮ್ಮ ಜಾತಿಯವರ ಮೇಲಾಗಲಿ ಬಂಧುಗಳ ಗಲಿ ಕಕ್ಷಿಗಾರರವರ ಫಿರ್ಯಾದುಮಾಡಿ ನಿರ್ದಾಕ್ಷಿಣ್ಯದಿಂದ ಕೇಸನ್ನು ಹೊಡದಾಡುವರೀತಿಯಲ್ಲಿ ಪ್ರಜಾಪ್ರತಿನಿಧಿ ಸಭೆಗಾಗಲಿ ನ್ಯಾಯವಿಧಾ ಸಭೆಗಾಗಲಿ ನಮ್ಮಿಂದ ಓಟನ್ನು ಪಡೆದು ಮೆಂಬರಾಗಿ ಹೋಗತಕ್ಕವರು ಜಾತಿಯವರೇ ಆಗಿರಲಿ ತಮ್ಮ ಜಾತಿಯ ತಾರತಮ್ಯವನ್ನು ಕಡೆ ಟ್ಟು ಸಭೆಗಳಲ್ಲಿ ಎಲ್ಲಾ ಪ್ರಜೆಗಳ ಹಿತಕ್ಕಾಗಿ ಹೊಡೆದಾಡುವವರಾಗಬೇಕ ದೆ ತಮ್ಮ ಜಾತಿಯಭಿಮಾನದಿಂದ ಬಹು ಜನರಿಗುಪಯುಕ್ತವಾದ ವಿಷ ಕ್ಕೆ ವಿರುದ್ಧವಾಗಿ ವಾದಿಸುವಂತಾವರು ಆಗಬಾರದು. ಇದಕ್ಕೆ ಒಂದು ದಾಹರಣೆಯನ್ನು ಇಲ್ಲಿ ಕೊಡುತ್ತೇನೆ—

ಮೈಸೂರು ಸಿಟಿ ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡು, ಪ್ರಜಾ ನಿಧಿಸಭೆ, ಸೆಂಟ್ರಲ್ ವ್ಯವಸಾಯದ ಬೋರ್ಡುವಗೈರೆ ಸಭೆಗಳಲ್ಲಿ ನಿರ್ಭ ವಾಗಿ ತಮ್ಮಗಳ ಸೇವೆಯನ್ನು ಮಾಡುತ್ತಿರುತ್ತೇನೆ ವಗೈರೆಯಾಗಿ ಕೊಂಡು ಓಟುಗಳನ್ನು ಕೊಡಬೇಕೆಂದು ಕೇಳುತ್ತಿರುವ ಮ|| ಈ ಸೋಶ ಮಾನಂದಗಿರಿಗೋಸ್ವಾಮಿ (ಬಾವಾಜಿ) ಮೈಸೂರು ಇವರು ಈಗ ವ ಪ್ರಜಾಪ್ರತಿನಿಧಿಸಭೆಗೆ ಮೆಂಬರಾಗಿ ಹೋಗಿ ಪ್ರಜಾಸೇವೆಯನ್ನು ಮಾಡ ಕೊಂಡಿರುವರೋ ಅದೇ ಪ್ರಜಾಪ್ರತಿನಿಧಿ ಸಭೆಯಲ್ಲಿ ಹಿಂದೆ ಅಂದರೆ ಕಳೆದ ಯ ಇಸವಿಯಲ್ಲಿ ಬ್ರಾಹ್ಮಣೇತರ ವಿದ್ಯಾರ್ಥಿಗಳನ್ನು ಸಂಸ್ಕೃತ ಲೇಜುಗಳಿಗೆ ಸೇರಿಸುವ ವಿಚಾರದಲ್ಲಿ ಚರ್ಚೆಯು ನಡಿಯುವಾಗ್ಗೆ ನು ಹೋಲ್ ಇಂಡ್ಯಾದಲ್ಲೆಲ್ಲಾ ಸಂಚರಿಸಿರುತ್ತೇನೆ. ಎಲ್ಲೂ ಬ್ರಾಹ್ಮ ತರರು ಸಂಸ್ಕೃತ ಕಾಲೇಜಿನಲ್ಲಿ ಓದುತ್ತಿಲ್ಲ ಮತ್ತು ಅವರನ್ನು ಅಲ್ಲಿಗೆ ಸುವುದಿಲ್ಲ. ಯಜ್ಞವೆಂದರೆ ಪಶುವನ್ನು ಕೊಲ್ಲುವದು, ಅದನ್ನು ಗಾಯಿತರು ಮಾಡುವದಿಲ್ಲ. ಆದ್ದರಿಂದ ಅವರಿಗೆ ವೇದಾಧಿಕಾರವಿಲ್ಲ. ಕೃತವು ಬ್ರಾಹ್ಮಣರೊಬ್ಬರಿಗೆ ಮಾತ್ರ ವಿರತಕ್ಕದ್ದೆಂದು" ವಾದಿಸಿದ್ದು ಅದೆ "ಮೈಸೂರು ದೇಶದ 60 ಲಕ್ಷ ಪ್ರಜೆಗಳಲ್ಲಿ ಹಿಂದೂಗಳಿಗೆಲ್ಲಾ ಮಾಡಿಸತಕ್ಕ ಅಧಿಕಾರವು ಬ್ರಾಹ್ಮಣರಿಗೆ ಮಾತ್ರ ಇದೆ. ಆಗಮ ಗಾಗಿ ಅವರಿಗೆ ವೇದಾಭ್ಯಾಸವು ಅವಶ್ಯಕ. ಅವರಿಗೆ ಅದನ್ನು ಕಲಿಸುವ ವನ್ನು ಪ್ರಜೆಗಳು ಕಂದಾಯದರೂಪವಾಗಿ ಸರ್ಕಾರಕ್ಕೆ ಕೊಟ್ಟು ಡಿಸಬೇಕು. ಲಿಂಗಾಯಿತರು ವೇದವನ್ನು ಬರೆದ ವ್ಯಾಸನನ್ನು ಅವ ಮಾನಮಾಡುವದರಿಂದ ಅವರಿಗೆ ಪುನಃ ವೇದ ಓದುವ ಆಶೆಯಾಕೆ?" ವಗೈರೆ 1922ನೆ ನವಂಬರ್ ತಾರೀಕು 3ರ ಸಾಧ್ವಿ ಪತ್ರಿಕೆಯಲ್ಲಿ ದಿರುವರು.

ಅಯ್ಯಾ ರಾಜಧಾನಿಯ ಓಟರು ಬಂಧುಗಳಿರಾ! ನೋಡಿದಿರಾ, ಎಲ್ಲಾ ಯ ಜನರಿಂದಲೂ ಓಟುಗಳನ್ನು ಪಡೆದುಕೊಂಡು ಅವರುಗಳ ಪ್ರತಿ ಮೆಂಬರಾಗಿ ಹೋಗುವ ನಮ್ಮ ಬಾವಾಜಿಯವರು ಎಲ್ಲಾ ಜಾತಿಯ ಕ್ಷೇಮಚಿಂತನೆಯನ್ನು ಎಷ್ಟರಮಟ್ಟಿಗೆ ಮಾಡಿರುವರು! ಇದೂ ದೆ ಇವರು ಸಂದರ್ಭ ಬಿದ್ದಾಗಲೆಲ್ಲಾ I am neither a rd nor a beast ಅಂದರೆ ನಾನು ಪಕ್ಷಿಜಾತಿಗಾಗಲಿ ಅಥವಾ ಜಾತಿಗಾಗಲಿ ಸೇರಿದವನಲ್ಲ ಎಂದು ಹೇಳುತ್ತಿರುವರು. ಹೀಗೆ ಹೇಳು ಂದ ಇವರು ಯಾವ ಪಕ್ಷಕ್ಕೂ ಸೇರದೆ ಗೋಸುಂಬೆಯ ಹಾಗೆ ಸಮ ಂದಂತೆ ತಿರುಗಿಕೊಳ್ಳುವವರೆಂಬುದು ಸ್ಪಷ್ಟವಾಗುತ್ತದೆ. ಹೀಗೆ ಂದಲೇ ಓಟುಗಳನ್ನು ಪಡೆದು ಮೆಂಬರಾಗಿ ಹೋಗಿ ನಮ್ಮವರ ಕ್ಯಾಸಕ್ಕೆ ವಿರೋಧವಾಗಿ ವಾದಿಸಿ ಅಡ್ಡಿಪಡಿಸುವಂತ ಮತ್ತು ಸಮ ಯಂದಹಾಗೆ ಬದಲಾಯಿಸಿಕೊಳ್ಳುವಂತ ಮಹಾ ಪುರುಷರಿಂದ ಪೇಯರುಗಳಾದ ನಮ್ಮಗಳಿಗೆ ಎಷ್ಟು ಉಪಕಾರವಾಗುತ್ತದೆಂಬು ಪ್ರತಿಯೊಬ್ಬರೂ ಯೋಚಿಸಬೇಕು. ಹಾಗಲ್ಲದೆ ಅವರ ಮರುಳಮಾ ತಿಗಾಗಿ ಸೋತುಹೋದರೆ ನಮ್ಮ ಹಗ್ಗವನ್ನು ಅವರ ಕೈಗೆ ಕೊಟ್ಟು ಹಾಕಿಸಿಕೊಳ್ಳಬೇಕಾಗುತ್ತದೆ ಎಂಬುದು ಮ|| ಗೋಸಾಯಿಯವರ ಹರಣೆಯಿಂದ ವ್ಯಕ್ತವಾಗುತ್ತದೆ. ಆದಕಾರಣ ಅಯ್ಯಾ ಓಟರು ಗಳಿರಾ, ಯಾರು ನಮ್ಮ ಕಷ್ಟಸುಖಗಳನ್ನು ಚನ್ನಾಗಿ ಬಲ್ಲವರಾಗಿ ಕ್ಷೇಮಚಿಂತನೆಯನ್ನು ನಿಜವಾಗಿ ಬಯಸುವವರಾಗಿರುವರೋ ಅಂಥ ಓಟನ್ನು ಕೊಟ್ಟು ನಮ್ಮನ್ನಾಳುವ ಶ್ರೀಮನ್ ಮಹಾರಾಜರವರು ಪಾಲಿಸಿರುವ ವಿಶೇಷವಾದ ಅಧಿಕಾರವನ್ನು ಸಾರ್ಥಕಪಡಿಸಿ ನಾವೂ ಪಾತ್ರ ಜ್ಞಾನವುಳ್ಳವರೆಂದು ಅನ್ನಿಸಿಕೊಳ್ಳಬೇಕಲ್ಲದೆ ಮರುಳಮಾ ತಿಗಾಗಿ ಸಿಕ್ಕಿದವರಿಗೆ ಓಟನ್ನು ಕೊಟ್ಟು ಅನಂತರ ಪೇಚಾಡುವದು ಚಿತವಲ್ಲವು. ಈ ತತ್ವವನ್ನು ಖಂಡಿತವಾಗಿ ಮರಿಯಬೇಡಿ. ಜೋಕೆ!

ಒಬ್ಬ ಓಟರು.

ಮದ್ರಾಸು ಕರ್ನಾಟಕ ಸಭೆ.

ಸಭೆಯವರ ಒಂದು ಸಂತೋಷಕೂಟವು ಇದೇ ಫೆಬ್ರವರಿ ತಿಂಗಳು ರೀಖು ಭಾನುವಾರ ಸಾಯಂಕಾಲ 4 ಗಂಟೆಗೆ ಮದ್ರಾಸ್ ರ್ ವಕೀಲ್ ಮ|| ರಾ|| ಕೆ. ಯು. ಶ್ಯಾಮರಾಯರವರ ರು "ಭವನದಲ್ಲಿ ನೆರೆಯಿತು. ಮದರಾಸಿನ ಪ್ರಮುಖರಾದ ಕ ಮಹನೀಯರನೇಕರು ಸಭೆಗೆ ದಯಮಾಡಿಸಿದ್ದರು. ಉಪಾ ಗಳು ನಡೆದ ಬಳಿಕ ಸಭೆಯು ಶಾಶ್ವತಾಧ್ಯಕ್ಷರಾದ ಡಾ|| ಯು. ಯರವರ ನಿರುಪಾಯವಾದ ಗೈರಹಾಜರಿಯ ದೆಸೆಯಿಂದ ಕಾರ್ಯ ದ ಮ|| ರಾ|| ಬಿ. ರಾಮರಾವ್, ಎಂ.ಎ., ಎಲ್‌ಎಲ್.ಬಿ ರ್ಥನೆಯಂತೆ ಸಭೆಯ ಉಪಾಧ್ಯಕ್ಷರೂ ರಿಟೈರ್ಡು ಡಿಸ್ಟ್ರಿ ರೂ ಆದ ರಾ|| ಬ|| ಎಸ್. ಎಚ್. ವಿ. ರಾಜಾಚಾರ್ಯ, ಬಿ.ಎ ಪ್ರಾಸನವನ್ನು ಅಲಂಕರಿಸಿದರು. ಸಭೆಯ ಅಧ್ಯಕ್ಷರಾದ ಮ|| ರಾಮರಾಯರವರೂ, ಸದಸ್ಯರುಗಳಾದ ಮಂಗಳೂರಿನ ಹಾಜಿ ಸಾಹೇಬ ಬಹದ್ದೂರರವರೂ, ಬಳ್ಳಾರಿಯ ಮ|| ರಾ|| ಪಿ. ಶಿವ ಎ., ಬಿ.ಎಲ್., ಅವರೂ ಈ ಬಾರಿಯ ಮದ್ರಾಸ್ ನ್ಯಾಯವಿ ಭೆಗೆ ಚುನಾಯಿಸಲ್ಪಟ್ಟಿದ್ದಕ್ಕಾಗಿಯೂ, ಸಭೆಯ ಪ್ರಾರ್ಥನೆ ಪ್ರಾಸಿಡೆನ್ಸಿ ಕಾಲೇಜಿನ ಕನ್ನಡ ಪಂಡಿತರಾದ ಮೈಸೂರು ಮಹಾವಿದ್ವಾನ್ ಬ್ರ|| ಶಿವಶಂಕರಶಾಸ್ತ್ರಿಗಳವರಿಗೆ "ಮಹಾಮಹೋಪಾಧ್ಯಾಯ" ಬಿರುದು ದೊರೆತುದಕ್ಕಾಗಿಯೂ, ಪ್ರೆಸಿಡೆನ್ಸಿ ಕಾಲೇಜಿನ ರಿಟೈರ್ಡ "ಜಿಯಾಲಜಿ ಪ್ರೊಫೆಸರ್ ಮ|| ರಾ|| ಎಚ್. ನಾರಾಯಣರಾವ್, ಎಂ. ಎ. ಅವರಿಗೆ "ರಾವ್‌ಬಹದೂರ್" ಎಂಬ ಬಿರುದು ದೊರೆತುದಕ್ಕಾಗಿಯೂ ಸಭೆಯವರ ಪರವಾಗಿ ಮ|| ರಾ|| ಬಿ. ರಾಮರಾಯರವರು ಅಭಿನಂದಿಸಿ, ಕರ್ನಾಟಕ ಪ್ರಾಂತದ ಗುಬ್ಬಿ ನಾಟಕ ಮಂಡಲಿಯ ಪ್ರೊಪ್ರೈಟರ್ ವಿನೋದರತ್ನಾಕರ ಮ|| ರಾ|| ಜಿ. ಎಚ್. ವೀರಣ್ಣನವರು, ಮಾನೇಜರ್ ನಾಗೇಶರಾಯರೊಡನೆ ಸಭೆಯ ಸಮಾವೇಶನಕ್ಕೆ ದಯಮಾಡಿಸಿ ಸಭೆಯವರನ್ನು ಗೌರವಿಸಿದುದಕ್ಕಾಗಿ ತಮ್ಮ ಸಂತೋಷವನ್ನು ಹೊರಪಡಿಸಿ, ಸದರಿ ಗುಬ್ಬಿ ನಾಟಕ ಮಂಡಲಿಯ ಅಭಿನಯಚಾತುರ್ಯಕ್ಕೂ ಗಾನಕೌಶಲ್ಯಕ್ಕೂ ಮೆಚ್ಚಿ ಸಭೆಯ ಪರವಾಗಿ ಪಾರಿತೋಷಕವನ್ನು ಕೊಡುವುದಾಗಿ ಸಭೆಯವರು ತೀರ್ಮಾನಿಸಿರುವ ವಿಷಯವನ್ನು ತಿಳಿಯಪಡಿಸಿದರು. ಬಳಿಕ ಪ್ರೆಸಿಡೆನ್ಸಿ ಕಾಲೇಜಿನ ಕರ್ನಾಟಕ ಪಂಡಿತರಾದ ಮ|| ರಾ|| ಎಂ. ಡಿ. ಅಳಸಿಂಗರಾಚಾರ್ಯರವರು ಕರ್ನಾಟಕ ಪ್ರಾಂತ್ಯದ ಅನೇಕ ನಾಟಕ ಮಂಡಲಿಯವರು ಇತ್ತೀಚೆಗೆ ಮದರಾಸಿಗೆ ಬಂದು ತಮ್ಮ ನಾಟಕಾಭಿನಯ ಮತ್ತು ಗಾನಕೌಶಲ್ಯದಿಂದ ಜನಗಳ ಮೆಚ್ಚಿಕೆಗೆ ಪಾತ್ರರಾಗಿ ಕರ್ನಾಟಕ ದೇಶಕ್ಕೂ ರಂಗಭೂಮಿಗೂ ಪ್ರಾಶಸ್ತ್ಯವನ್ನು ಸಂಪಾದಿಸಿದ ಸಲುವಾಗಿ ತಮ್ಮ ಅಭಿನಂದನವನ್ನು ಹೊರಪಡಿಸಿದರು. ಬಳಿಕ ಕ್ರಿಶ್ಚಿಯನ್ ಕಾಲೇಜು ಕನ್ನಡ ಪಂಡಿತರೂ ಸಭೆಯ ಉಪಕಾರ್ಯದರ್ಶಿಗಳೂ ಆದ ಮ|| ಕೆ. ನರಸಿಂಗರಾವ್ ಬಿ.ಎ. ಅವರು ಮದ್ರಾಸಿನ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಭಾಷೆಯ ಪ್ರತಿನಿಧಿಗಳಾಗಿ ಮ|| ಬಿ. ರಾಮರಾಯರವರು ನಿಯಮಿಸಲ್ಪಟ್ಟುದುದಕ್ಕಾಗಿಯೂ, ಅವರು ಕಳೆದ ಎರಡು ವರ್ಷಗಳಲ್ಲಿ "ಘೋಷಯಾತ್ರೆ" ಮತ್ತು "ಕುಂದಮಾಲೆ" ಗಳೆಂಬ ಸಂಸ್ಕೃತ ನಾಟಕಗಳೆರಡನ್ನೂ ಕನ್ನಡ ಭಾಷೆಗೆ ಪರಿವರ್ತಿಸಿ ಕರ್ನಾಟಕ ಸಾಹಿತ್ಯವನ್ನು ವೃದ್ಧಿಗೊಳಿಸಿದುದಕ್ಕಾಗಿಯೂ, ಸಭೆಯ ಸದಸ್ಯರಾದ ಹೈಕೋರ್ಟು ವಕೀಲ್ ಮ|| ರಾ|| ಬಿ. ಸೀತಾರಾಮಯ್ಯರವರೂ, ರಾವ್‌ಬಹದ್ದೂರ್ ಎಚ್. ನಾರಾಯಣರಾಯರವರೂ, ಹ|| ಹಾಜಿಅಬ್ದುಲ್ಲಾಸಾಹೇಬ ಬಹದ್ದೂರರವರೂ, ಮ|| ಟಿ. ರಾಜಗೋಪಾಲರಾಯರವರೂ ಮದ್ರಾಸಿನ ಸೆನೆಟ್ ಮೆಂಬರರಾಗಿ ಬಂದಿರುವುದಕ್ಕಾಗಿಯೂ, ಮದರಾಸು ಗೌರ್ನಮೆಂಟು ಓರಿಯಂಟಲ್ ಲೈಬ್ರೆರಿಯ ಅ|| ಲೈಬ್ರೇರಿಯನ್ ಬ್ರ|| ಸಿ. ಸುಂದರಶಾಸ್ತ್ರಿಗಳವರು ಭಾಸನ ಹದಿಮೂರು ನಾಟಕಗಳನ್ನೂ ಮತ್ತೆರಡು ನಾಟಕಗಳನ್ನೂ ಸಹ ಕನ್ನಡ ಗದ್ಯರೂಪವಾಗಿ ಪರಿವರ್ತಿಸಿ ಕರ್ನಾಟಕ ಮಾತೃಸೇವೆಯನ್ನು ಮಾಡುತ್ತಿರುವುದಕ್ಕಾಗಿಯೂ ಸಭೆಯವರ ಪರವಾಗಿ ಅಭಿನಂದನಗಳನ್ನು ಹೊರಪಡಿಸಿದರು. ಆ ತರುವಾಯ ಗುಬ್ಬಿ ನಾಟಕ ಕಂಪೆನಿಯ ಮ್ಯಾನೇಜರ್ ಮ|| ನಾಗೇಶರಾಯರು ಸದರೀ ನಾಟಕ ಮಂಡಲಿಯ ಪರವಾಗಿ ತಮ್ಮ ಕೃತಜ್ಞತೆಗಳನ್ನು ಹೊರಪಡಿಸಿ, ಶೀಘ್ರದೊಳಗಾಗಿ ಕರ್ನಾಟಕ ಸಭೆಯ ಆಶ್ರಯದಲ್ಲಿ ಒಂದು ನಾಟಕವನ್ನು ಆಡುವುದಾಗಿ ಪ್ರೊಪ್ರೈಟರವರ ಪರವಾಗಿ ತಿಳಿಯಪಡಿಸಿದರು. ಸಭಾಧ್ಯಕ್ಷರು ಸಂಕ್ಷೇಪವಾಗಿಯೂ ಹೃದಯಂಗಮವಾಗಿಯೂ ಕೆಲವು ಮಾತುಗಳನ್ನಾಡಿದ ತರುವಾಯ ಗಂಧ ಪುಷ್ಪಾದಿಗಳು ವಿನಿಯೋಗಿಸಲ್ಪಟ್ಟು, ನೆರೆದಿದ್ದವರ ಪ್ರತಿಕೃತಿಯು (ಫೋಟೊ) ತೆಗೆಯಲ್ಪಟ್ಟಿತು. ಸಭಾಸದರಿಗೂ ಮ|| ರಾ|| ಕೆ. ಯು. ಶಾಮರಾಯರವರಿಗೂ ವಂದನೆಗಳು ಸಮರ್ಪಿಸಲ್ಪಟ್ಟ ತರುವಾಯ ಸಭೆಯು ಚದರಿತು. ಈ ಕೂಟದಲ್ಲಿ ನಡೆದ ಭಾಷಣಗಳಲ್ಲಿ ಪ್ರಾಯಶಃ ಕನ್ನಡದಲ್ಲಿಯೇ ನಡೆದಿದ್ದುವೆಂಬುದು ಇಲ್ಲಿ ಗಮನಿಸತಕ್ಕ ಮುಖ್ಯ ವಿಷಯವಾಗಿದೆ.

ಓರ್ವ ಸಭಾಸದ.

ರಿಮಿಷನ್ನಾಗಬೇಕು.

23-1-24 ನೇ ತಾ|| ಒಕ್ಕಲಿಗರ ಪತ್ರಿಕೆಯಲ್ಲಿ ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಮಳೆ ಬೆಳೆ ವಿಚಾರವಾಗಿ ಮಿ|| ಲಕ್ಷ್ಮೀನಾರಾಯಣರಾವ್ ರವರು ಕೊಟ್ಟಿರುವ ಆರ್ಟಿಕಲನ್ನು ನಾನು ನೋಡಿದೆನು. ಅಷ್ಟೇ ಅಲ್ಲದೆ ಇದೇ ತಾ|| ಶ್ರವಣಬೆಳ್ಗೊಳದ ಸರ್ವಮಾನ್ಯಗ್ರಾಮಕ್ಕೆ ಸೇರಿದ ಹೊಸಹಳ್ಳಿ ಕೆರೆಹಿಂಭಾಗದ ಮಠದ ಜಮೀನಿನಲ್ಲಿ ಹಾಕಿಸಿದ ಭತ್ತದಪೈರು ಸಹ ನೀರಿಲ್ಲದೆ ಪೈರೆಲ್ಲಾ ಒಣಗಿಹೋಗಿ ಕೆಲವು ಜಮೀನಿಗೆ ಪೈರುಸಹ ಹಾಕಲು ಅವಕಾಶವಿಲ್ಲದೆ ಬಹಳ ನಷ್ಟವಾಗಿ ಎಲ್ಲರೂ ಈಲಾಗಾಯ್ತು ಮೇಘವನ್ನೇ ನೋಡುತ್ತಾ ಬಾಯಿಬಿಡುತ್ತಿದಾರೆ. ಮತ್ತು ಬೆಕ್ಕದ ಅಮಾನೀಕೆರೆ ಹಿಂಭಾಗದಲ್ಲಿ ಹಾಜರಿರುವ ಸುಮಾರು 1 ಲಕ್ಷಗುಣಿ ಮೇಲ್ಪಟ್ಟು ಸುಮಾರು 10-15 ಸಾವಿರ ರೂ. ಬೆಲೆಬಾಳುವ ಕಬ್ಬಿನಫಸಲು ಸಹ ಒಣಗಿಹೋಗುತ್ತಾ ಇದೆ. ನೀರಾವರಿ ಜಮೀನ್ ಪಾಡೆ ಹೀಗಿರುವಲ್ಲಿ ಖುಷ್ಕಿ ಜಮೀನುಗಳ ಅವಸ್ಥೆ ಬರೆಯಬೇಕಾದ್ದೆ ಇಲ್ಲ. ಆದ್ದರಿಂದ ಘನವನ್ನ ಹೊಂದಿದ ನಮ್ಮ ಮೈಸೂರು ಗೌರ್ನಮೆಂಟಿನವರು ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಉದಾರಾಶ್ರಯದಿಂದ ರೈತರುಗಳಿಗೆ ರಿಮಿಷನ್ ಮಾಡಿಸದೆ ಹೋದರೆ ಪ್ರಜೆಗಳು ಬದುಕುವದೇ ಬಹಳ ತೊಂದರೆಯಾಗುವದರಲ್ಲಿ ಸಂಶಯವೇ ಇಲ್ಲ. ನಮ್ಮ ಶ್ರೀಮನ್ಮಹಾರಾಜರವರು ಪ್ರಜೆಗಳಿಗೆ ಕೊಟ್ಟಿರುವ ಕಾರ್ಯ ಗೌರವದ ಹಕ್ಕನ್ನ ಉಪಯೋಗಿಸಿ ಮಹಾರಾಜರವರ ಮತ್ತು ಪ್ರಜೆಗಳ ಸೇವೆ ಮಾಡಲು ನಮ್ಮ ಊರಿನಲ್ಲಿ ಅನೇಕರುಗಳು ಸಿದ್ಧರಾಗಿದ್ದಾಗ್ಯೂ, ಇದಕ್ಕೆ ಅವಕಾಶವಿಲ್ಲದಂತೆ ಓಟರ್ ಲೀಸ್ಟಿಗೆ ಸೇರಿಸದೆ ಇರುವದು ಶ್ರವಣಬೆಳುಗೋಳದ ದುರದೃಷ್ಟವೆಂತ ಭಾವಿಸಬೇಕಾಗಿದೆ.

ಭರಮಯ್ಯ, ಶ್ರವಣಬೆಳುಗೋಳ.

ಪಕ್ಷಪಾತ.

ಕೋಲಾರ ಗೋಲ್ಡ್‌ಫೀಲ್ಡ್ಸ್‌ನಲ್ಲಿ ರೆವಿನ್ಯೂ ಆಫೀಸರ್ ಮತ್ತು ಇನ್‌ಕಂಟ್ಯಾಕ್ಸ್ ಇನ್‌ಸ್ಪೆಕ್ಟರ ಕೆಲಸ ಈಗ 6-7 ತಿಂಗಳು ಲಾಗಾಯಿತು ಖಾಲಿಯಿತ್ತು. ಈ ಕೆಲಸದ ತಲಬು ಮಾಹೆಯೊಂದಕ್ಕೆ 200 ರೂ. ಗಳು. ಈ ಕೆಲಸಕ್ಕಾಗಿ ಕೆಲವು ಬ್ರಾಹ್ಮಣೇತರರು ಕೋಲಾರ ಡೆಪ್ಯುಟೀ ಕಮಿಷನರನ್ನು ಕೇಳಿಕೊಂಡಾಗ ಆ ಕೆಲಸ ಅಗತ್ಯವಿಲ್ಲಾ ತೆಗೆದುಹಾಕಿಬಿಟ್ಟಿರುತ್ತೇವೆಂದು ಹೇಳಿ ಕಳುಹಿಸಿದರು. ಈಗ 8-10 ದಿನಗಳ ಕೆಳಗೆ ಅದೇ ಕೋಲಾರ ಡೆಪ್ಯುಟೀ ಕಮಿಷನರು ತಮಗೆ ಹತ್ತಿರಬಂಧುವಾದ ಬೌರಿಂಗ್‌ಪೇಟೆ ಸ್ಯಾನಿಟರಿ ಇನ್‌ಸ್ಪೆಕ್ಟರು ಮ|| ವೆಂಕಟಸುಬ್ಬಯ್ಯ ಎಂಬುವ 50 ರೂ. ತಲಬಿನವರನ್ನು ಈ ಮೇಲ್ಕಂಡ ರೆವಿನ್ಯೂ ಆಫೀಸರ್ ದೊಡ್ಡ ಕೆಲಸಕ್ಕೆ ಹಾಕಿ ಆರ್ಡರ್ ಮಾಡಿರುತ್ತಾರೆ. ಈತನಿಗಿಂತ ಅನೇಕರು ಬ್ರಾಹ್ಮಣೇತರ ಸೀನಿಯರುಗಳು ಇರುತ್ತಾರೆ. ಇವರ ಹಕ್ಕುಬಾಧ್ಯತೆಯನ್ನು ನಿರಾಕರಿಸಿ ತಮಗೆ ಬೇಕಾಗಿರುವ ಒಬ್ಬ ಚಿಕ್ಕನೌಕರನಿಗೆ ಕೊಟ್ಟಿರುವುದು ಯಾವ ನ್ಯಾಯವೋ ತಿಳಿಯದು. ಮುಂದೆ ಈ ಕೆಲಸವೇ ಖಾಯಂಮಾಡಬೇಕೆಂಬ ಉದ್ದೇಶದಿಂದಲೂ, ಏಕಾಏಕಿ ಒಂದೇಸಲ 200 ರೂ. ಕೆಲಸವನ್ನು ಜಿಲ್ಲಾ ಉದ್ಯೋಗಸ್ಥನಿಗೆ ಕೊಟ್ಟರೆ ಗೌರ್ನಮೆಂಟಿನವರು ಮಂಜೂರ್‌ಮಾಡುವುದಿಲ್ಲವೆಂದೂ, ಹಂಗಾಮಿಯಿಂದೂ ನೆಪಮಾತ್ರಕ್ಕೆ ಸದ್ಯಕ್ಕೆ ಮಾಡಿರುತ್ತಾರೆ. ಈ ಕೆಲಸದ ಖಾಲಿಸಂಗತಿ ಗೆಜೆಟ್ಟಿನಲ್ಲಿ ಪಾಯಿಷ್‌ಮಾಡಲಿಲ್ಲ ಮತ್ತು ಮಿಲ್ಲರ್ ಕಮಿಟಿ ರಿಪೋರ್ಟನ್ನು ಲಕ್ಷ್ಯಕ್ಕೆ ತರಲಿಲ್ಲಾ. ಘನವಾದ ಸರ್ಕಾರದವರು ಇದನ್ನು ವಿಚಾರಿಸಿ ಸೀನಿಯರಾದ ಬ್ರಾಹ್ಮಣೇತರರಿಗೆ ಕೊಡುವಂತೆ ಅಪ್ಪಣೆಮಾಡಿ ಹಿಂದುಳಿದವರನ್ನು ಕಾಪಾಡಬೇಕಾಗಿ ಬೇಡುತ್ತೇನೆ.

ಸತ್ಯಕಾಮಿ.

ಗಾಣಿಗಮಹಾಜನಗಳಲ್ಲಿ ವಿನಂತಿ.

ಈ ಮತವು ಪುರಾಣಪ್ರಸಿದ್ಧವಾಗಿಯೂ ಚರಿತ್ರಾರ್ಹವಾಗಿಯೂ ಇದ್ದು ವಿದ್ಯಾ, ವಿವೇಕ, ಜ್ಞಾನ, ಯಶಸ್ಸು, ಐಕಮತ್ಯ, ನಾಗರೀಕತ್ವ ಇವೆ ಮೊದಲಾದುವುಗಳಲ್ಲಿ ಹಿಂದೆಬಿದ್ದು ಮತದ ಮೂಲತತ್ವ ಏನೆಂಬುದನ್ನರಿಯದೆ ಅತ್ಯಾಚಾರ ನಡಾವಳಿಯಿಂದ ವರ್ತಿಸುತ್ತಿರುವುದನ್ನು ನೋಡಿ ಯಾರುತಾನೆ ನಗಾಡದಿರುವರು. ಇಷ್ಟೆ ಅಲ್ಲಾ. ಈವರಿಗಾದರು ಈ ಮತದಲ್ಲಿ ಒಬ್ಬರಾದರು ಪ್ರೌಢವಿದ್ಯೆಯಲ್ಲಿ ಉತ್ತೀರ್ಣರಾಗಿ ಶ್ರೀಮನ್ ಮಹಾರಾಜ ಸರ್ಕಾರದವರ ಪ್ರೋತ್ಸಾಹಕ್ಕೆ ಪಾತ್ರರಾಗಿ, ದೇಶಸೇವೆಯಲ್ಲಿ ಮುಂದುವರಿಯದಿರುವುದನ್ನು ಕೇಳಿ ತುಂಬಾ ವಿಷಾದಪಡಬೇಕಾಗಿದೆ. ಅದಂತಿರಲಿ. ಎಲ್ಲಾ ಮತದವರು ಕೂಡ ಅವರವರ ಮತಾಭಿವೃದ್ಧಿಗಾಗಿ ಅಲ್ಲಲ್ಲೇ ಸಂಘಗಳನ್ನೇರ್ಪಡಿಸಿಕೊಂಡು ನಾನಾಭಾಗದಲ್ಲು ವೃದ್ಧಿಹೊಂದುತ್ತಿರುವುದನ್ನು ಕಿವಿಯಿಂದಕೇಳಿ ಕಣ್ಣಿನಿಂದನೋಡಿ ಮೇಲ್ಕಂಡ ಯಾವ ಆಚರಣೆಗೂ ಮನಕೊಡದೆ ಮೌನಾವಸ್ಥೆಯಿಂದ ನಿದ್ರಾದೇವಿಯಂತೆ ಮಲಗಿರುವದು ಈ ಮತದವರ ದುರಾದೃಷ್ಟವಲ್ಲವೆ! ಇನ್ನಾದರು ಇವರು ಮಂದನಿದ್ರೆಯಿಂದ ಎಚ್ಚತ್ತು ಇವರ ಏಳ್ಗೆಗೆ ಬೇಕಾಗುವ ಸೌಕರ್ಯಗಳನ್ನು ದಯಾಳುಸರ್ಕಾರದವರಿಂದ ಹೊಂದಿ ಗಾಣಿಗಮಹಾಜನಗಳ ಪ್ರಜಾಸಂಖೆ ಹೆಚ್ಚಾಗಿರುವ ಮುಖ ಮುಖ್ಯ ಸ್ಥಳಗಳಲ್ಲಿ ಸಂಘಗಳನ್ನು ಕಲ್ಪಿಸುವರಾಗಿ ನಂಬಿರುವ,

ಓರ್ವ ಮತಾಭಿಮಾನಿ.

ಅರಸೀಕೆರೆ ತಾಲ್ಲೂಕು ಕಣಕಟ್ಟೆ.

ಈ ವರ್ಷ ಮಳೆ ಇಲ್ಲದೆ 2 ಆಣೆ ಬೆಳೆಯು ಸಹ ಆಗಲಿಲ್ಲ. ಧಾರಣೆವಾಸಿಗಳು ದಿನದಿನಕ್ಕೂ ಹೆಚ್ಚುತ್ತಾ ಇರುತ್ತವೆ. ಬಡವರ ಪರಿತಾಪವು ಹೇಳಲು ಸಾಧ್ಯವಿಲ್ಲ. ರೂಪಾಯಿಗೆ 7 ಸೇರು ರಾಗಿ 4-4½ ಸೇರು ಅಕ್ಕಿ ಮಾರುತ್ತಾರೆ. ನೀರಿನತೊಂದರೆಯು ಹೇಳತೀರದು. ಈಚೆಗೆ ಕೆರೆಯ ಅಂಗಳದಲ್ಲಿರುವ ದೊಡ್ಡ ಭಾವಿಯನ್ನು ಮ|| ಪಟೇಲ್ ಕೃಷ್ಣಮೂರ್ತಿರಾಯರು ಮತ್ತು ಶಾನುಭೋಗ್ ರಾಮಯ್ಯನವರು ಬಹಳ ಮುತುವರ್ಜಿ ವಹಿಸಿ ಸದ್ಯಕ್ಕೆ ಕುಡಿಯುವದಕ್ಕೆ ನೀರು ದೊರಕುವಂತೆ ಮಾಡಿಸಿರುತ್ತಾರೆ. ದನಕರುಗಳು ಮೇವು, ನೀರು ಇಲ್ಲದೆ ಸಾಯುವ ಸ್ಥಿತಿಗೆ ಬಂದಿವೆ. ಈ ಊರಿನಲ್ಲಿ ಕೆಲವು ಪೋಲೀಹುಡುಗರು ರಾತ್ರಿಯ ಹೊತ್ತು ಊರಿನಲ್ಲೆಲ್ಲಾ ತಿರುಗುತ್ತಾ ಇದ್ದು ಮನೆಗಳ ಕದವನ್ನು ಒದೆಯುವುದು, ಅಗಣಿತೆಗೆಯುವುದು, ಈರೀತಿ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಪೋಲೀಸಿನವರು ನಿಗಾತೆಗೆದುಕೊಳ್ಳುವುದು ಅವಶ್ಯಕವಾಗಿದೆ.

ಪ್ರತ್ಯಕ್ಷದರ್ಶಿ.

ಬೆಂಗಳೂರು ಸಿಟಿಯ ಓಟರು ಮಹಾಶಯರುಗಳಲ್ಲಿ ವಿಜ್ಞಾಪನೆ.

ನೂತನ ರಾಜಕೀಯಸಂಸ್ಕರಣ ಕ್ರಮವನ್ನನುಸರಿಸಿ ಮೈಸೂರು ಪ್ರಜಾಪ್ರತಿನಿಧಿ ಸಭೆ (ರೆಪ್ರೆಜೆಂಟೇಟಿವ್ ಅಸೆಂಬ್ಲಿ) ಗೆ ಮೆಂಬರುಗಳನ್ನು ಚುನಾಯಿಸಲು 1924ನೆ ಫೆಬ್ರವರಿ ತಾರೀಖು 15ನೆಯ ಶುಕ್ರವಾರದ ದಿವಸ ಗೊತ್ತುಮಾಡಲ್ಪಟ್ಟಿರುವುದು ಸರಿಯಷ್ಟೆ. ಆ ದಿವಸ ಪ್ರತಿಯೊಬ್ಬ ಓಟರೂ ಗೊತ್ತಾದಸ್ಥಳಕ್ಕೆ ಬಂದು ನಾಲ್ಕು ಜನರಿಗೆ ತಮ್ಮ ಓಟುಗಳನ್ನು ಕೊಡಲು ಅಧಿಕಾರವುಳ್ಳವರಾಗಿರುತ್ತಾರೆ.

ನಾನು ಈಗ್ಗೆ ಸುಮಾರು 6 ವರ್ಷಗಳಿಗೆ ಮೇಲ್ಪಟ್ಟಾಗಿನಿಂದಲೂ ಪ್ರಜಾಪ್ರತಿನಿಧಿಸಭೆಯ ಮೆಂಬರಾಗಿದ್ದೆನಲ್ಲದೆ ತನ್ಮೂಲಕ ನ್ಯಾಯವಿಧಾಯಕಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಮತ್ತು ಸಂಪದಭಿವೃದ್ಧಿ ಸಮಾಜದ (ಎಕನಾಮಿಕ್ ಕಾನ್ಫರೆನ್ಸಿನ) ಮೆಂಬರಾಗಿ ಚುನಾಯಿಸಲ್ಪಟ್ಟಿದ್ದೆನು. ಮತ್ತು ಸಂಸ್ಥಾನದ ಎಲ್ಲಾ ಜನವರ್ಗದವರಿಗೂ ಸರ್ಕಾರಿಯುದ್ಯೋಗವು ದೊರಕಲು ಅವಕಾಶವನ್ನು ಕಲ್ಪಿಸಿಕೊಡುವುದಕ್ಕಾಗಿ ಸರ್ಕಾರದಿಂದೇರ್ಪಟ್ಟಿರುವ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡಿನಲ್ಲೂ, ಬೆಂಗಳೂರು ಡಿಸ್ಟ್ರಿಕ್ಟ್ ಆಡ್‌ಹಾಕ್ ಸ್ಕಾಲರ್‌ಷಿಪ್ ಕಮಿಟಿಯಲ್ಲೂ, ಕಳೆದೊಂದು ವರ್ಷದಿಂದ ಮೈಸೂರು ಯೂನಿವರ್ಸಿಟಿಯ ಸೆನೇಟಿನಲ್ಲೂ ಮೆಂಬರಾಗಿಯೂ, ಮೈಸೂರು ವೀರಶೈವ ವಿದ್ಯಾವರ್ಧಕಫಂಡ್ ಸಂಘದ ಸೆಕ್ರೆಟರಿಯಾಗಿಯೂ ಇದ್ದುಕೊಂಡು ಪ್ರಜಾಪಕ್ಷವನ್ನು ವಹಿಸಿ ದೇಶದ ಸರ್ವತೋಮುಖವಾದ ಏಳ್ಗೆಯನ್ನೇ ಗಮನದಲ್ಲಿಟ್ಟುಕೊಂಡು ಕೆಲಸಮಾಡುತ್ತಿದ್ದೇನೆ.

ದೇಶಸೇವೆಯನ್ನು ಮಾಡಲು ವಿಶೇಷ ಕುತೂಹಲವುಳ್ಳವನಾಗಿರುವುದರಿಂದಲೂ, ಈಸಲದ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಚುನಾವಣೆಯಲ್ಲಿ ನಾನೊಬ್ಬ ಉಮೇದುವಾರನಾಗಿ ನಿಂತುಕೊಳ್ಳಬೇಕೆಂದು ನನ್ನ ಮಿತ್ರರನೇಕರು ಪ್ರೋತ್ಸಾಹವನ್ನು ಮಾಡಿದುದರಮೇಲೂ ಉಮೇದುವಾರನಾಗಿ ನಿಂತಿರುತ್ತೇನೆ.

ನನ್ನ ಕಾರ್ಯದಕ್ಷತೆಯಲ್ಲಿ ನಿಮಗೆ ಭರವಸೆಯಿದ್ದಲ್ಲಿ ನನಗೆ ತಮ್ಮ ಅಮೌಲ್ಯವಾದ ಓಟನ್ನು ಕೊಟ್ಟೂ, ತಮ್ಮ ಮಿತ್ರರ ಓಟನ್ನು ಕೊಡಿಸಿಯೂ ಅವಕಾಶವನ್ನು ಕಲ್ಪಿಸಿಕೊಟ್ಟಲ್ಲಿ ನನ್ನಲ್ಲಿ ತಮಗಿರುವ ನಂಬುಗೆ ವಿಶ್ವಾಸಗಳನ್ನು ವ್ಯರ್ಥಗೊಳಿಸದೆ ಇನ್ನು ಮುಂದೆಯೂ ದೇಶಸೇವೆಯನ್ನು ಮಾಡಲು ಸಿದ್ಧನಾಗಿರುವೆನೆಂದೂ, ಈ ನನ್ನ ಸವಿನಯಪ್ರಾರ್ಥನೆಯನ್ನು ತಾವು ನೆರವೇಲಿಸಿ ಕೊಡುವಿರೆಂದೂ ನಂಬಿರುವ, ತಮ್ಮ ವಿಧೇಯ,

ಬೆಂಗಳೂರು ಸಿಟಿ, } **ಜಿ. ಪರಮಶಿವಯ್ಯ,**
ತಾ|| 10-1-24. } ಬಿ.ಎ.,ಎಲ್‌ಎಲ್.ಬಿ., ಅಡ್ವೊಕೇಟ್.

ಕಡೂರು ತಾಲ್ಲೋಕು ಓಟರುಮಹಾಶಯರುಗಳಲ್ಲಿ.

ಯಳ್ಳಂಬಳಸೆ ಕೆಂಚೇಗೌಡರವರ ಮ|| ರಾ|| ಮರುಳಪ್ಪನವರು, ಲೆಜಿಸ್ಲೆಟಿವ್ ಕೌನ್ಸಿಲ್ ಪದವಿಗೂ, ಪ್ರಜಾಪ್ರತಿನಿಧಿಸಭೆಗೂ ಇದೇ ಯಳ್ಳಂಬಳಸೆ ಮ|| ಪಟೇಲ್ ಭದ್ರಪ್ಪನವರು ಪ್ರತಿನಿಧಿ ಮೆಂಬರಾಗಿ ನಿಂತಿರುವುದು ತಮ್ಮಗಳಿಗೆ ವಿದಿತವಾಗಿರುವ ವಿಷಯವಾಗಿಯೇ ಇದೆ. ಈ ಮಹನೀಯರುಗಳು ಎಷ್ಟರಮಟ್ಟಿಗೆ ಪ್ರಜಾಹಿತಚಿಂತನೆಯಲ್ಲಿ ನಿರತರಾಗಿರುವರು ಎಂಬ ವಿಚಾರ ಜನರಿಗೆ ತಿಳಿದಂತಹಾಗಿಯೇ ಇದೆ. ಅದಪ್ರಯುಕ್ತ ತಮ್ಮಗಳ ಘನವಾದ ಓಟುಗಳನ್ನು ಮ|| ರಾ|| ಗಳಾದ ಮರುಳಪ್ಪನವರಿಗೂ ಭದ್ರಪ್ಪನವರಿಗೂ ಕೊಟ್ಟು ಅವರುಗಳು ದೇಶಸೇವೆಯಲ್ಲಿ ನಿರತರನ್ನಾಗಿ ಮಾಡುವ ಭಾರವು ಓಟರು ಮಹಾಶಯರುಗಳಿಗೇ ಸೇರಿದ್ದಾಗಿದೆ.

ಎಸ್. ಚನ್ನಬಸಪ್ಪ, [illegible]

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ಅಸೂಯಾಂಧರು ಮಾಡುವ ಕೋಲಾಹಲ.

ಪ್ರಜಾಪ್ರತಿನಿಧಿ ಸಭೆಗೂ, ನ್ಯಾಯವಿಧಾಯಕ ಸಭೆಗೂ ಮೆಂಬರುಗಳಾಗಿ ಚುನಾಯಿಸಲ್ಪಡಲು ಉಮೇದುವಾರರಾಗಿ ನಿಂತಿರುವ ಮಿ|| ಮಹಮದ್‌ಸೇಟರು ಮೊದಲಾದ ನಾಲ್ವರಿಗೆ ಓಟುಗಳನ್ನು ಕೊಡಬೇಕಾಗಿ ರಾಜಧಾನಿಯ ಪ್ರಮುಖರುಗಳಲ್ಲಿ 36 ಜನ ದೊಡ್ಡ ಮನುಷ್ಯರುಗಳು ಓಟರುಗಳಿಗೆ ವಿಜ್ಞಾಪಿಸಿಕೊಂಡಿರುವ ವಿಚಾರವಾಗಿ ಆಕ್ಷೇಪಗಳು ಸಂಪದಭ್ಯುದಯ ಪತ್ರಿಕೆಯಲ್ಲಿ ವಾಚಾಮಗೋಚರವಾಗಿ ಮಾಡಲ್ಪಡುತ್ತಿವೆ. ಓಟರುಗಳಲ್ಲಿ ಮಾತುಬಾರಿ ದೊಡ್ಡ ಮನುಷ್ಯರುಗಳ ಸಪೋರ್ಟನ್ನು ಪಡೆಯುವುದು ಈ ಸೀಮೆಗೆ ಹೊಸನಮೂನೆಯು. ಅದನ್ನು ಸೇಟರು ಮೊದಲಾದ ನಾಲ್ವರು ಪಡೆದುಕೊಂಡದ್ದಕ್ಕಾಗಿ ಕೆಲ ಉಮೇದುವಾರರು ಅಸೂಯೆಪಟ್ಟುಕೊಂಡು ದಿಗಲುಬಿದ್ದು ಹುಚ್ಚರಂತೆ ಬೀದಿಬೀದಿಯಲ್ಲಿ ತಿರುಗುತ್ತ ಕಂಡಕಂಡವರ ಮುಂದೆ ಸೇಟ್ ಮೊದಲಾದ ನಾಲ್ವರೇ ಮೆಂಬರಾಗಿ ಹೋಗಲು ಅರ್ಹರೋ? ಅವರ ವಿನಹ ಮತ್ತ್ಯಾರೂ ಇಲ್ಲವೋ? ಅವರಿಗೇನೇ ಓಟುಕೊಡಬೇಕೆಂದು ಹೇಳಲು 36 ಜನರಿಗೆ ಅಧಿಕಾರಕೊಟ್ಟವರು ಯಾರು? ಅವರಲ್ಲದೆ ಈ ಊರಿನಲ್ಲಿ ಇನ್ಯಾರೂ ದೊಡ್ಡ ಮನುಷ್ಯರಿಲ್ಲವೋ? ಎಂದು ವಗೈರೆ ಹೇಳಿಕೊಂಡು ಪ್ರಲಾಪಿಸುತ್ತಿರುವರಲ್ಲದೆ ಮನೆಗೆ ಬೆಂಕಿಯನ್ನು ಹತ್ತಿಸಿ ಅವಲನ್ನು ಅರಿಸಿಕೊಳ್ಳುವವರೂ ವಿಘ್ನಸಂತೋಷಿಗಳೂ ಎಂದು ಪ್ರಸಿದ್ಧರಾದ ಸಂಪದಭ್ಯುದಯ ಕಾಟದವರ ಆಶ್ರಯವನ್ನು ಹೊಕ್ಕು ವಿಜ್ಞಾಪನ ಪತ್ರಿಕೆಗೆ ರುಜುಮಾಡಿರುವ 36 ಜನರಲ್ಲಿ ತಮ್ಮ ಮಾತಿನ ಗೌರವದ ಮೇಲೆ ದೃಷ್ಟಿಯೂ ಪೂರ್ವಾಪರ ವಿಚಾರವೂ ಇಲ್ಲದವರಲ್ಲಿಗೆ ಹೋಗಿ ತಮ್ಮ ಚತುರೋಪಾಯಗಳಿಂದ ಅವರ ಮನಸ್ಸನ್ನು ಕೆಡಿಸಿ ಕೀಟಲೆ ವ್ಯಾಜ್ಯಗಳನ್ನೂ ಪರಸ್ಪರ ದ್ವೇಷಾಸೂಯೆಯನ್ನೂ ಹುಟ್ಟಿಸುವ ಲೇಖನಗಳಿಗೆ ಆಶ್ರಯವನ್ನು ಕೊಡಲು ಕಂಕಣ ಬದ್ಧವಾಗಿರುವ ಸಂಪದಭ್ಯುದಯ ಪತ್ರಿಕೆಯಲ್ಲಿ ಮನಸ್ಸಾಕ್ಷಿಬರೆದು ತಮ್ಮ ಹೊಟ್ಟೆಯುರಿಯನ್ನು ತೀರಿಸಿಕೊಳ್ಳುತ್ತಿರುವರಲ್ಲದೆ ಮಿ|| ಮಹಮದ್‌ಸೇಟ್ ಮೊದಲಾದ ನಾಲ್ವರ ವಿಚಾರದಲ್ಲಿ ಓಟರುಗಳ ಮನಸ್ಸನ್ನು ಕೆಡಿಸಬೇಕೆಂದು ವಿಶ್ವಪ್ರಯತ್ನಮಾಡುತ್ತಿರುವರು. ಈ ಅಸೂಯಾಂಧರೂ ಅವರ ಹಿತೈಷಿಗಳೆಂದು ನಟಿಸುವ ವಿಘ್ನಸಂತೋಷಿಗಳೂ ಈವರೆವಿಗೂ ಬರೆದಿರುವ ಮುಂದೆ ಬರೆಯುವ ಲೇಖನಗಳಲ್ಲಿಯ ಪ್ರತಿಯೊಂದು ಅಕ್ಷರವನ್ನೂ ಖಂಡಿಸಿ ಬರೆಯಬಹುದಾಗಿದ್ದರೂ ಈ ಸ್ಟಾರ್‌ಪತ್ರಿಕೆಯ ಸ್ಥಳಸಂಕೋಚದಿಂದಲೂ ಎಲೆಕ್ಷನ್ ಈ ತಾ|| 15ಕ್ಕೆ ಮುಗಿದುಹೋಗಿ ಎಲ್ಲಾ ಕೋಲಾಹಲವೂ ತಣ್ಣಗಾಗುವುದರಿಂದಲೂ ಬಿ.ಎ., ಬಿ.ಎಲ್. ಪರೀಕ್ಷೆಗಳನ್ನು ಕೊಟ್ಟು ಲಾಗಳನ್ನು ತಲೆಕೆಳಗೆ ಮಾಡಿರುವವರೂ, ಬೃಹಸ್ಪತಿಗಳೂ, ಸರಸ್ವತಿ ಮುರುಕಗಳೂ ಮೊದಲಾದವರು ತಮ್ಮ ಬುದ್ಧಿಶಕ್ತಿಯನ್ನೆಲ್ಲಾ ಖರ್ಚುಮಾಡಿ ಬರೆದಿರುವ ಆರ್ಟಿಕಲ್ಲುಗಳಲ್ಲಿ ಮುಖ್ಯವಾದ ಕೆಲ ಅಂಶಗಳನ್ನು ಕುರಿತು ಕೊಂಚ ಪ್ರಸ್ತಾಪಿಸಿ ಈ ಅಸೂಯಾಂಧರ ಯೋಗ್ಯತೆಯನ್ನು ಓಟರುಗಳ ಗಮನಕ್ಕೆ ತರತಕ್ಕವನಾಗಿದ್ದೇನೆ.

ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರುಗಳಾಗಿ ಹೋಗುವ ಯೋಗ್ಯತೆಯು ಮಿ|| ಮಹಮದ್‌ಸೇಟ್ ಮೊದಲಾದ ನಾಲ್ವರಿಗೆ ಮಾತ್ರ ಇದೆ ಮತ್ತ್ಯಾರಿಗೂ ಇಲ್ಲವೆಂದೂ, ಈ ನಾಲ್ವರಿಗೆ ಮಾತ್ರ ಓಟನ್ನು ಕೊಡಬೇಕಲ್ಲದೆ ಬೇರೆ ಯಾರಿಗೂ ಕೊಡಕೂಡದೆಂದೂ ಅರ್ಥವಾಗುವಹಾಗೆ ಬರೆಯಲ್ಪಟ್ಟಿದೆಯೋ ಅಥವಾ ಈ ನಾಲ್ವರೂ ಓಟರುಗಳ ನಿರೀಕ್ಷಣೆಯನ್ನು ಸಾರ್ಥಕಪಡಿಸುತ್ತಾರೆಂಬ ಭರವಸೆಯು ನಮಗಿರುವದರಿಂದ ನಮ್ಮಂತೆಯೇ ಭರವಸೆಯುಳ್ಳವರು ಓಟುಗಳನ್ನು ಕೊಟ್ಟು ಉತ್ತೇಜನಗೊಳಿಸಬಹುದೆಂಬದಾಗಿ ಅರ್ಥವಾಗುವಂತೆ ಬರೆಯಲ್ಪಟ್ಟಿದೆಯೆ ಎಂಬದು 36 ದೊಡ್ಡ ಮನುಷ್ಯರುಗಳ ರುಜುವಿನಿಂದ ಪ್ರಕಟಿಸಲ್ಪಟ್ಟಿರುವ ವಿಜ್ಞಾಪನ ಪತ್ರಿಕೆಯನ್ನು ಓದಿದ ಎಂಥಾ ದಡ್ಡನಿಗಾದರೂ ಗೊತ್ತಾಗುತ್ತದೆ. ತಲೆಮೇಲೆ ಮುಸುಕುಹಾಕಿಕೊಂಡು ಲುಕ್ಸಾನುಕಚೇರಿಗೆ ಹೋಗುವವರಂತೆಯೂ, ನಿಶಾಚರರಂತೆಯೂ ವೇಷಗಳನ್ನು ಬದಲಾಯಿಸಿಕೊಂಡು ವಿಜ್ಞಾಪನ ಪತ್ರಿಕೆಗೆ ರುಜುಮಾಡಿರುವ ದೊಡ್ಡ ಮನುಷ್ಯರುಗಳಲ್ಲಿ ತಮ್ಮ ಬಲೆಗೆ ಬೀಳುವಂಥಾವರ ಮನೆಗಳಿಗೆ ಅಕಾಲದಲ್ಲಿ ಹೋಗಿ ತಮ್ಮಲ್ಲಿ ಒಬ್ಬರನ್ನು ಹೊರಗೆ ಕಾವಲಿರಿಸಿದ್ದು ಉಳಿದವರು ಒಳಗೆಹೋಗಿ ಏನ್ರಿ ಆ ನಾಲ್ವರು ವಿನಾ ಈ ಊರಿನಲ್ಲಿ ಮತ್ತ್ಯಾರೂ ಮೆಂಬರಾಗಲು ಯೋಗ್ಯರಿಲ್ಲವೆಂದು ಬರೆದಿರುವ ಪತ್ರಿಕೆಗೆ ರುಜುಮಾಡಿ ಇತರ ಉಮೇದುವಾರರಿಗೆ ಮತ್ತು ಬೇರೆ ವಿದ್ಯಾವಂತರಿಗೆ ಅವಮಾನಪಡಿಸಿ ಅವರುಗಳ ನಿಷ್ಠೂರಕ್ಕೆ ಗುರಿಯಾದರಲ್ಲಾ; ಇದು ಅಲ್ಲದೆ ಈರೀತಿ ಅವಮಾನ ಪಡಿಸಿದ್ದಕ್ಕೆ ನಿಮ್ಮಗಳ ಮೇಲೆ ಫಿರ್ಯಾದುಮಾಡಲು ಯೋಚಿಸಿರುತ್ತೇವೆಂದು ಹೆದರಿಸಿ, ಮತ್ತು ಓಟರುಗಳ ಮನೆಗಳಿಗೆ ಹೋಗಿ, ನೋಡಿ ಆ ನಾಲ್ವರು ಎಷ್ಟು ಮೋಸಮಾಡಿ 36 ಜನರ ರುಜುವನ್ನು ಹಾಕಿಸಿದಾರೆ ಎಂದು ತೋರಿಸಿ ನೀವು ಅವರಿಗೆ ಓಟನ್ನು ಕೊಡಬೇಡಿ ಎಂದು ಹೇಳುತ್ತಿರುವ ಹೇಡಿಗಳಂತೆ ಮಿ|| ಸೇಟರು ಮತ್ತೆ ಮೂವರು ಮಾಡದೆ ಬಹಿರಂಗವಾಗಿ ಮೋಟಾರುಕಾರಿನಲ್ಲಿ ಕುಳಿತು ಗುಣಗ್ರಾಹಿಗಳೂ, ನಿಷ್ಪಕ್ಷಪಾತಿಗಳೂ ಎಂದು ತೋರಿದ ದೊಡ್ಡ ಮನುಷ್ಯರಲ್ಲಿಗೆ ಹೋಗಿ ತಮ್ಮ ಉದ್ದೇಶ ಸಂಕಲ್ಪಗಳನ್ನು ಅವರುಗಳಿಗೆ ತಿಳಿಸಿ ಅವರ ಸಾನುಭೂತಿ ಪ್ರೋತ್ಸಾಹಗಳನ್ನು ಪಡೆದುಕೊಂಡು ಬಂದಿರುತ್ತಾರೆ. ಈ ನಾಲ್ವರಿಗೆ ಸಭೆಯಲ್ಲಿ ಚರ್ಚಿಸುವ ಶಕ್ತಿ ಇದೆ ಇಲ್ಲವೆನ್ನುವದನ್ನು ಅವರಿಗೆ ಓಟುಗಳನ್ನು ಕೊಟ್ಟು ಮೆಂಬರುಗಳನ್ನಾಗಿ ಕಳುಹಿಸಿದ ಮೇಲಲ್ಲವೇ ಪರೀಕ್ಷಿಸತಕ್ಕದ್ದು? ಹಾಗಲ್ಲದೆ ಉತ್ತರನಂತೆ ಈಗ ಪೌರುಷ ಕೊಚ್ಚಿಕೊಳ್ಳುವದರಿಂದ ಪ್ರಯೋಜನವೇನು? ಮಿ|| ಸೇಟರು ಸಭೆಗಳಲ್ಲಿ ವಿಷಯಗಳನ್ನು ಚರ್ಚೆಮಾಡಿ ತಿಳಿದುಕೊಳ್ಳುವಷ್ಟು ಇಂಗ್ಲೀಷು

clear conscience and in ಗಿದ್ದರೂ, ಸಭೆಗಳಿಗೆ ಮೆಂಬರಾಗಲು
of the cause that those ದಯ ಪತ್ರಿಕೆಯ ಎಡಿಟರು ಪಿಪಾ
popular cause, and it is ವ್ ಇವರುಗಳು ಮಾತ್ರ ಹೇಗೆ
by them and help its advan ರು ಮತ್ತೆ ಮೂವರು ಒಂದುವೇಳೆ
place for deception, for p

ನಿರಕ್ಷರಕುಕ್ಷಿಗಳಾಗಿದ್ದು ಸಂಪದಭ್ಯುದಯ ಕಾಟದವರ ಜಾತಿಯವರಾಗಿದ್ದಿದ್ದರೆ ಸಮರ್ಥರಾಗಿ ಹೊಗಳಲ್ಪಟ್ಟು ಶಿಫಾರಸ್ಸುಮಾಡಲ್ಪಡುತ್ತಿದ್ದರೇನೊ! ಮ|| ದಾಸಪ್ಪನವರು ಈಊರಿಗೆ ಹೊಸಲಾಯರಾಗಿದ್ದರೂ, ಎಷ್ಟೋವರ್ಷಗಳಿಂದಲೂ ಲಾಯರಾಗಿದ್ದಾಗ್ಯೂ, ತಕ್ಕ ಶಕ್ತಿ ಸಾಮರ್ಥ್ಯವೂ ಸಂಪಾದನೆಯೂ ಇಲ್ಲದೆ ಮೂಲೆಗೆ ಮುಟ್ಟಾಗಿ ಅನಾಮಧೇಯರಾಗಿರುವವರಂತೆ ಇರದೆ ವಕೀಲಿಯಲ್ಲಿ ಒಳ್ಳೆಹೆಸರನ್ನು ಸಂಪಾದಿಸುತ್ತ ಅನೇಕ ಸಂಘಗಳಲ್ಲಿ ಮೆಂಬರಾಗಿರುವರಲ್ಲದೆ ಬಹಿರಂಗ ಸಭೆಗಳಲ್ಲಿ ಭಾಷಣಮಾಡಿ ತಮ್ಮ ಬುದ್ಧಿ ಶಕ್ತಿಯನ್ನು ಪ್ರದರ್ಶಿಸಿರುವರು. ಮೈಸೂರಿನಲ್ಲಿ ಮ್ಯುನಿಸಿಪಾಲಿಟಿಯೂ ಟ್ರಸ್ಟ್‌ಬೋರ್ಡೂ ಇರುವದನ್ನೇ ಅಸೂಯಾಂಧತೆಯಿಂದ ಅರಿಯದವರಿಗೆ ಅವುಗಳಲ್ಲಿ ಮೆಂಬರಾಗಿದ್ದುಕೊಂಡು ರೇಟ್‌ಪೇಯರ ಪಕ್ಷವಾಗಿ ಹೊಡದಾಡುತ್ತಿರುವ ಪ್ರಸಿದ್ಧ ಜವಳಿವರ್ತಕರಾದ ಮ|| ಸೆಟ್ಟರು ಯಾರೆಂಬದು ಗೊತ್ತಾಗದಿರುವದು ಆಶ್ಚರ್ಯವಲ್ಲವು. ಯಾರಿಗೂ ಗೊತ್ತಿಲ್ಲದವರೆಂದು ಹೇಳಲ್ಪಟ್ಟಿರುವ ಯಜಮಾನ್ ವೀರಸಂಗಯ್ಯನವರ ಮಕ್ಕಳು ಪ್ರಸಿದ್ಧರು, ಸ್ಟಾರ್ ಪತ್ರಿಕೆಯ ಸಂಪಾದಕರು ಎಂದು ಆಕ್ಷೇಪಕರಾದ ಓಟರು ಬರೆದಿರುವದು ಆಶ್ಚರ್ಯ.. ಪ್ರತಿಯೊಂದು ಮ್ಯುನಿಸಿಪಲ್ ಮಿಾಟಿಂಗಿಗೆ ತಪ್ಪದೆ ಹೋಗಿ ಕುರ್ಚಿಗೆ ಅಲಂಕಾರಪ್ರಾಯವಾಗಿ ಕುಳಿತುಕೊಂಡು ಪ್ರೆಸಿಡೆಂಟರು ಹೇಳಿದ್ದಕ್ಕೆಲ್ಲಾ ತಲೆಯನ್ನು ಅಲ್ಲಾಡಿಸುತ್ತ ಒಂದು ಚಕಾರ ಶಬ್ದವನ್ನು ಸಹ ಹೇಳದೆ ಹೆಚ್ಚಾಗಿ ಓಟು ಬಂದಕಡೆ ಕೈಯೆತ್ತಿ ಬರುತ್ತಿರುವ ಕೆಲ ಮೆಂಬರುಗಳಂತೆ ಮ|| ವಿರೂಪಾಕ್ಷಯ್ಯನವರು ಇರದೆ ಅವಶ್ಯಕವಾದ ಮತ್ತು ರೇಟ್‌ಪೇಯರುಗಳಿಗೆ ಅನುಕೂಲ ಪ್ರತಿಕೂಲವಾಗುವಂತ ವಿಷಯಗಳು ಪರ್ಯಾಲೋಚಿಸಲ್ಪಡಬೇಕಾದಾಗ್ಗೆ ತಪ್ಪದೆ ಮಿಾಟಿಂಗಿಗೆ ಹೋಗಿ ಮಿ|| ಸೇಟರು, ಮ|| ಸೆಟ್ಟರು ಇವರುಗಳ ಸಮೇತ ಚರ್ಚಿಸಿ ತಮ್ಮನ್ನು ಚುನಾಯಿಸಿ ಕಳಿಸಿದ ರೇಟ್‌ಪೇಯರುಗಳ ನಿರೀಕ್ಷಣೆಯನ್ನು ಸಾರ್ಥಕಪಡಿಸುತ್ತಿರುವದು ಅಸೂಯಾಂಧರಿಗೆ ತಿಳಿಯುವದು ಹೇಗೆ?

36 ಜನ ದೊಡ್ಡ ಮನುಷ್ಯರು ಮಿ|| ಸೇಟರು ಮತ್ತೆ ಮೂವರಿಗೆ ಓಟುಗಳನ್ನು ಕೊಡಬೇಕೆಂದು ಶಿಫಾರಸ್ಸುಮಾಡಿ ರುಜುಮಾಡಿರುವ ಪತ್ರಿಕೆಯ ವಿಚಾರದಲ್ಲಿ ಹಿಂದೆ ಯಾರೂ ಮಾಡದಿರುವಂತ ತಪ್ಪು ಮಾಡಲ್ಪಟ್ಟಿದೆ, ಈ ರೀತಿ ಬರೆಯಲು 36 ಜನರಿಗೆ ಅಧಿಕಾರವನ್ನು ಕೊಟ್ಟವರ್ಯಾರು? ಅವರು ಈ ನಾಲ್ವರಿನಹ ಮತ್ತ್ಯಾರೂ ಮೆಂಬರಾಗಲು ಅರ್ಹರಿಲ್ಲವೆಂದು ಹೇಳುವದು ಅಪಮಾನಕರವಲ್ಲವೆ? ಎಂದು ವಗೈರೆಯಾಗಿ ಗದ್ದಲವನ್ನೆಬ್ಬಿಸಿರುವ ಈ ಅಸೂಯಾಂಧರುಗಳು ತಾವು ಯಾವ ಪತ್ರಿಕೆಯಲ್ಲಿ ಬರೆದಿರುವರೋ ಅದೇ ಪತ್ರಿಕೆಯಲ್ಲಿ ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರಾಗಲು ಉಮೇದುವಾರರಾಗಿ ನಿಂತಿರುವ ಮ|| ಕರ್ಣಿಕ ಕೃಷ್ಣಮೂರ್ತಿಯವರಿಗೆ ಶಿಫಾರಸ್ಸು ಮಾಡುವಾಗ್ಗೆ "ಪ್ರಜಾಸೇವೆಮಾಡಿರತಕ್ಕವರಲ್ಲಿ ಇವರು (ಕೆ. ಕೆ. ಮೂರ್ತಿಯವರು) ಅಗ್ರಗಣ್ಯರು. ಇವರಷ್ಟು ನಿರ್ಭಯವಾಗಿಯೂ, ನಿರ್ದಾಕ್ಷಿಣ್ಯವಾಗಿಯೂ ಕೂಡಿದನುಟ್ಟಿಗೂ ಕೂಲಂಕಷ ಪ್ರಜ್ಞೆಯಿಂದಲೂ ಕೆಲಸ ಮಾಡಿರತಕ್ಕವರು ಬಹಳ ವಿರಳರಾಗಿರುವರು. ಇವರು ಮಾಡಿರತಕ್ಕ ಮೆಹನತ್ತನ್ನೂ ಪ್ರಜಾಸೇವೆಯನ್ನೂ ತಪಶೀಲುವಾರಾಗಿ ತಿಳಿಸಬೇಕಾದರೆ ಅದು ಒಂದು ದೊಡ್ಡ ಪುಸ್ತಕವಾಗುವುದು. ಇವರು ಪ್ರತಿನಿಧಿ ಸಭೆಯಲ್ಲೂ ನ್ಯಾಯವಿಧಾಯಕ ಸಭೆಯಲ್ಲೂ ಮಾಡಿರತಕ್ಕ ಮೆಹನತ್ತುಗಳನ್ನು ನೋಡಿದರೆ ಓಟರುಗಳ ನಂಬಿಕೆಗೂ, ಅವರುಗಳ ಪ್ರತಿನಿಧಿಗಳಾಗಿರುವುದಕ್ಕೂ ಇವರ ಅರ್ಹತೆಯು ಅಸಾಧಾರಣವಾದದ್ದೆಂದು ನಮಗೆ ತೋರುತ್ತದೆ. ಇವರಿಗೆ ಓಟುಕೊಡುವುದರಿಂದ ಓಟುಕೊಡತಕ್ಕವರು ತಮ್ಮ ಕೆಲಸಗಳನ್ನು ಸರಿಯಾಗಿ ಮಾಡುವಂತೆ ಆಗುವುದರಲ್ಲಿ ಸಂದೇಹವಿಲ್ಲ" ಎಂದು ಅದೇ ಸಂಪದಭ್ಯುದಯ ಪತ್ರಿಕೆಯ ಎಡಿಟರು ಬರೆದಿರುವುದನ್ನೂ, ಮತ್ತು ಉಮೇದುವಾರರುಗಳು ಒಬ್ಬರಿಗೊಬ್ಬರು ಹೋರಾಡಿ ದ್ವೇಷಿಸಿ ಪತ್ರಿಕೆಗಳಲ್ಲಿ ದೂಷಿಸಿಬರೆದು ಓಟರುಗಳ ಮನಸ್ಸಿಗೆ ಜುಗುಪ್ಸೆಹುಟ್ಟುವಂತೆ ಮಾಡುವದು ಶ್ರೇಯಸ್ಕರವಲ್ಲವಾದ್ದರಿಂದ ಮಲೆನಾಡಿನವರು ಮ|| ಹೊಸಕೊಪ್ಪ ಕೃಷ್ಣರಾಯರವರನ್ನೇ ಚುನಾಯಿಸಬೇಕೆಂದು ಠರಾಯಿಸಿರುವ ಮೇಲುಪಂಗ್ತಿಯನ್ನನುಸರಿಸಿ ಇತರಕಡೆಯ ಉಮೇದುವಾರರೂ ಓಟರುಗಳೂ ಸಭೆ ಸೇರಿಸಿ ಉಮೇದುವಾರರುಗಳನ್ನು ಚುನಾಯಿಸಿ ಅವರುಗಳಿಗೇ ಓಟನ್ನು ಕೊಡಬೇಕೆಂದು ಠರಾಯಿಸಬೇಕಾಗಿ ಸೂಚಿಸುತ್ತೇನೆಂದು ಒಬ್ಬ ಓಟರು ಬರೆದಿರುವುದನ್ನೂ ನೋಡಿದರೆ, ರಾಜಧಾನಿಯ ದೊಡ್ಡ ಮನುಷ್ಯರುಗಳು ಶಿಫಾರಸ್ಸುಮಾಡಿರುವ ನಾಲ್ವರು ಉಮೇದುವಾರರಿಗೆ ಓಟುಗಳು ಬಂದುಹೋಗುತ್ತದೆಂಬ ಅಸೂಯಾಗ್ನಿಯಿಂದ ದೇಹದ ರಕ್ತವು ಕಾದು ತಲೆಗೇರಿ ಬುದ್ಧಿಭ್ರಾಂತಿಯಿಂದ ಪತ್ರಿಕೆಯಲ್ಲಿ ತಾವು ಬರೆದಿರುವ ಅಸಂಬಂಧವೂ ಅನುಚಿತವೂ ಹೇಯವೂ ಆದ ಬರವಣಿಗೆಗಳಿಗಾಗಿ ಅಸೂಯಾಂಧರೂ ಪಶ್ಚಾತ್ತಾಪಪಟ್ಟು ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದೆ ಇರಲಾರರು. ಮ|| ಗಳಾದ ಕರ್ಣಿಕ ಕೃಷ್ಣಮೂರ್ತಿಯವರ ಮತ್ತು ಹೊಸಕೊಪ್ಪ ಕೃಷ್ಣರಾಯರ ವಿಷಯಕವಾದ ಆರ್ಟಿಕಲ್ಲುಗಳು ಈ ಫೆಬ್ರವರಿ ತಾ|| ೯ರ ಸಂಪದಭ್ಯುದಯದಲ್ಲಿ ಮುದ್ರಿಸಲ್ಪಟ್ಟಿರುತ್ತವೆ. ಈ ಅಸೂಯಾಂಧರ ಕ್ಷುಲ್ಲಕ ಬರವಣಿಗೆಗಳಿಗೆ ಪತ್ರಿಕೆಯಲ್ಲಿ ಅವಕಾಶಕೊಟ್ಟ ಸಂಪದಭ್ಯುದಯ ಪತ್ರಿಕೆಯ ಎಡಿಟರು ಮ|| ಕೆ. ಕೃಷ್ಣಮೂರ್ತಿರಾಯರ ವಿಚಾರದಲ್ಲಿ ಶಿಫಾರಸ್ಸುಮಾಡಿರುವುದು ಸ್ವಜಾತಿ ಅಭಿಮಾನದಿಂದಲ್ಲದೆ ಯೋಗ್ಯತಾಪಕ್ಷಪಾತದಿಂದ ಮಾಡಿರುವುದಾಗಿದ್ದಲ್ಲಿ ಅಸೂಯಾಂಧರಿಗೆ ತಕ್ಕಬುದ್ಧಿವಾದನನ್ನು ಹೇಳಿ ಅವರ ದ್ವೇಷಾಸೂಯೆಯಿಂದ ಕೂಡಿದ ಆರ್ಟಿಕಲ್ಲುಗಳನ್ನು ಪ್ರಚಾರಪಡಿಸಬಾರದಾಗಿತ್ತು. ಇದು ಅವರ ವಯೋಧರ್ಮದಿಂದ ಜ್ಞಾಪಕಕ್ಕೆ ಬರಲಿಲ್ಲವೇನೊ!

ಈ ಸ್ಟಾರ್‌ಪತ್ರಿಕೆಯಲ್ಲಿ ಗುಣವಿಮರ್ಶಕರೆಂಬುವರು ಮ|| ನಂಜುಂಡರಾಜೇ ಅರಸಿನವರ ವಿಚಾರದಲ್ಲಿ ಬರೆದಿರುವ ಆರ್ಟಿಕಲ್ಲನ್ನು ಮ|| ಜಿ. ಮಲ್ಹಾರರಾವ್, ಬಿ.ಎ., ಎಲ್‌ಎಲ್.ಬಿ., ಎಂಬುವರು ಇದೇ ೮ನೇ ತಾ|| ಸಂಪದಭ್ಯುದಯ ಪತ್ರಿಕೆಯಲ್ಲಿ ಖಂಡಿಸಲು ಹೊರಟು ಮ|| ಅರಸಿನವರ ಗುಣಗಳ ವಿಷಯದಲ್ಲಿ ಚರ್ಚಿಸಿ ತೀರ್ಮಾನವನ್ನೂ ಅವರನ್ನೂ ಗುಣವಿಮರ್ಶಕರಿಗಿಂತ ಚೆನ್ನಾಗಿ ತಿಳಿದಿರುವ ಜನಗಳಿಗೆ ಬಿಟ್ಟಿದ್ದರೆ ಚೆನ್ನಾಗಿತ್ತೆಂದು ವಗೈರೆ ಬರೆದಿರುತ್ತಾರೆ. "ನೋಡಿಯೋ ಅಥವಾ ನೋಡದೆಯೋ, ತಿಳಿದೋ ಅಥವಾ ತಿಳಿಯದೆಯೋ ಹೇಗೋ ಒಂದು ಕಾರಣದಿಂದ ತಮ್ಮ ಕೈಲಿ ಕೊಟ್ಟ ವಿಜ್ಞಾಪನಪತ್ರಿಕೆಗೆ ರುಜುಮಾಡಿದಮೇಲೆ ಆ ಅಂಶವನ್ನು ಹೊರಪಡಿಸುವುದರಿಂದ ಆಗುವ ಪ್ರಯೋಜನಾಂಶವೇನೋ ನಾನು ಬೇರೆ ಕಾಣೆ" ಎಂದು ಮ|| ನಂಜುಂಡರಾಜೇ ಅರಸಿನವರನ್ನು ಚೆನ್ನಾಗಿ ತಿಳಿದಿರುವ ಮ|| ಎ. ಸಿ. ಲಿಂಗರಾಜೇ ಅರಸಿನವರೇ ವಿಜ್ಞಾಪನಪತ್ರಿಕೆಯ ವಿಷಯವಾಗಿ ಹುಟ್ಟಿರುವ ಆಕ್ಷೇಪಕ್ಕೆ ಸಮಾಧಾನವನ್ನು ಹೇಳತಕ್ಕ ಸಂದರ್ಭದಲ್ಲಿ ಬರೆದಿರುತ್ತಾರೆ. ಈ ಲೇಖನವೂ ಮ|| ಆರಾಧ್ಯರು ಬರೆದಿರುವ ಲೇಖನದ ತಲೆಯಮೇಲೆ ಅಚ್ಚಾಗಿರುತ್ತದೆ. ತಮಗಿಂತಲೂ ವಯಸ್ಸಿನಲ್ಲಿ ಎಷ್ಟೋ ಚಿಕ್ಕವರಾದ ಮ|| ಎ. ಸಿ. ಲಿಂಗರಾಜೇ ಅರಸಿನವರು ಬಹಳ ವಿವೇಕದಿಂದಲೂ ದೂರದೃಷ್ಟಿಯಿಂದಲೂ ಪರ್ಯಾಲೋಚಿಸಿ ಹೇಳಿರುವಂತೆ ಮ|| ನಂಜುಂಡರಾಜೇ ಅರಸಿನವರು ತಾವು ತಿಳಿದೋ ತಿಳಿಯದೆಯೋ ಮಾಡಿದ ಕೆಲಸವನ್ನು ಬಹಿರಂಗಪಡಿಸದೆ ಮೌನವಾಗಿದ್ದಲ್ಲಿ ಗುಣವಿಮರ್ಶಕರಾಗಲಿ ಮ|| ಲಿಂಗರಾಜೇ ಅರಸಿನವರಾಗಲಿ ಮ|| ನಂಜುಂಡರಾಜೇ ಅರಸಿನವರ ವಿಷಯವಾಗಿ ಬರೆಯಬೇಕಾದ ಪ್ರಮೇಯವೇ ಇರಲಿಲ್ಲ. ಮ|| ನಂಜುಂಡರಾಜೇ ಅರಸಿನವರು ಹಾಗೆ ಪತ್ರಿಕೆಗೆ ಬರೆಯಲು ಅವರಿಗೆ ಮುಸುಕಿನೊಳಗಿನ ಗುದ್ದಿನಂತ ಸಂದರ್ಭವೇನಿತ್ತೋ ನಮಗೇನು ಗೊತ್ತು! ರಾಜ ಬಂಧುವರ್ಗಕ್ಕೇ ಕೀರ್ತಿಪ್ರಾಯರೂ ಹಿಂದುಳಿದ ಜನರ ಉದ್ಧಾರಕರೂ ಆಗಿದ್ದ ಲೇಟ್ ಸರ್ ಎಂ. ಕಾಂತರಾಜೇ ಅರಸಿನವರನ್ನು ಕಿವಿಯಲ್ಲಿ ಕೇಳಬಾರದ ಮಾತುಗಳಿಂದ ನಿಂದಿಸಿ ಪಂಚಮರಿಗೆ ಹೆಣ್ಣನ್ನುಕೊಟ್ಟು ತರಲಿ ಎಂದು ಸಹ ಪತ್ರಿಕೆಗಳಲ್ಲಿ ಬರೆದ ಲೇಖನಗಳು ಮ|| ಆರಾಧ್ಯರಿಗೆ ಹೇಯವಾಗಿಯೂ, ಕಾನೂನುಗಳಿಗೆ ವಿರೋಧವಾಗಿಯೂ ಇಲ್ಲದಿದ್ದದ್ದು ಈಗ ಸ್ವಜನರೇ ತಪ್ಪೆಂದುಹೇಳುವ ಮಾತನ್ನು ಗುಣವಿಮರ್ಶಕರು ತಪ್ಪೆಂದು ಹೇಳಿರುವದು ಹೇಯವಾಗಿಯೂ ಕಾನೂನಿಗೆ ವಿರೋಧವಾಗಿಯೂ ಆರಾಧ್ಯರಿಗೆ ತೋರಿರುವುದೂ ಅದನ್ನು ಪ್ರಕಟಿಸಿದ ಸ್ಟಾರ್ ಎಡಿಟರ ವಿಚಾರದಲ್ಲಿ ಆಶ್ಚರ್ಯವೂ ವ್ಯಸನವೂ ಆಗಿರುವುದೂ ವಿಚಿತ್ರವೇ ಸರಿ. ಸಾಯುವವರ ಕಣ್ಣಿಗೆ ಸುಳಿಯುವವನೇ ಜವರಾಯನೆಂಬ ಗಾದೆಯಂತೆ ಆರಾಧ್ಯರಿಗೆ ತೋರಿರಬಹುದು. ಲೇಟ್ ಕಾಂತರಾಜ ಅರಸಿನವರನ್ನು ದೂಷಿಸಿ ಬರೆಯಲ್ಪಟ್ಟಿದ್ದ ಲೇಖನಗಳು ಕಾನೂನಿಗೆ ವಿರೋಧವೆಂದು ಕಂಡುಹಿಡಿಯಲು ಆಗಿನ ಲಾಯರುಗಳು ಓದಿದ್ದ ಲಾ ಪುಸ್ತಕಗಳಲ್ಲಿ ತಕ್ಕ ಆಧಾರ ಸಿಕ್ಕದಿದ್ದು ಈಗ ನೂತನವಾಗಿ ಲಾ ಪ್ಯಾಸ್ ಮಾಡಿಕೊಂಡು ಬಂದಿರುವ ನಮ್ಮ ಆರಾಧ್ಯರ ಅಸಾಧಾರಣ ಬುದ್ಧಿ ಶಕ್ತಿಗೆ ಸಿಕ್ಕಿರಬಹುದು! ಶಾಬಾಸ್ ಆರಾಧ್ಯರೆ! ನೀವು 5-6 ವರ್ಷ ಕಷ್ಟಪಟ್ಟು ಬಹಳ ದುಡ್ಡು ಖರ್ಚುಮಾಡಿ ಪ್ಯಾಸ್ ಮಾಡಿ ಲಾಯರಾದ್ದಕ್ಕೆ ಸಾರ್ಥಕವಾಯಿತು. ಹೊಸದಾಗಿ ಲಾಯರಾದವರು ಕೇಸುಗಳನ್ನು ತೆಗೆದುಕೊಂಡು ನಡಿಸಲು ಅನುಭವಸಾಲದೆ ಆನೆಗಳು ತಮ್ಮ ತಲೆಮೇಲೆ ಮಣ್ಣನ್ನು ಎರಚಿಕೊಳ್ಳುವಂತೆ ತಮ್ಮ ಕಕ್ಷಿಗಾರರಿಗೇ ವಿರೋಧವಾಗಿ ವಾದಿಸಿ ಅವರ ಎದೆಮೇಲೆ ಚಪ್ಪಡಿಕಲ್ಲನ್ನು ಎಳೆಯುವಂತೆ ನಮ್ಮ ಆರಾಧ್ಯರು ಮ|| ನಂಜುಂಡರಾಜೇ ಅರಸಿನವರ ಪಕ್ಷ ವಕೀಲಿಯನ್ನು ವಹಿಸಿ ಅವರಿಗೆ ಆಗಿರುವ ಮಾನನಷ್ಟವನ್ನು ಪರಿಹಾರಮಾಡಿಕೊಡುವ ಪ್ರಯತ್ನವಾಗಿದೆ. ಮ|| ನಂಜುಂಡರಾಜೇ ಅರಸಿನವರು ಹಳ್ಳಿಯಲ್ಲಿ ಹುಟ್ಟಿದ್ದು ತಪ್ಪಾಗುವ ಪಕ್ಷದಲ್ಲಿ ಮಿ|| ಸರ್ ಎಂ. ವಿಶ್ವೇಶ್ವರಯ್ಯನವರು ಮೋಕ್ಷಗೊಡಯೆಂಬ ಹಳ್ಳಿಯಲ್ಲಿ ಹುಟ್ಟಿದ್ದಕ್ಕೋಸ್ಕರ ಅವರನ್ನೂ ದೂಷಿಸಬಹುದಾಗಿತ್ತಲ್ಲವೆ? ಎಂದು ನಮ್ಮ ಬೃಹಸ್ಪತಿಗಳಾದ ಆರಾಧ್ಯರು ಕೇಳಿರುತ್ತಾರೆ. ಸರ್ ಎಂ. ವಿಶ್ವೇಶ್ವರಯ್ಯನವರೂ ತಾವು ಮಾಡಿದ ಕೆಲಸವನ್ನು ಮಾಡಲಿಲ್ಲವೆಂದಾಗಲಿ ತಿಳಿಯದೆ ಮಾಡಿದನೆಂದಾಗಲಿ ಹೇಳುವದಾದರೆ ಇನ್ನೂ ಹೆಚ್ಚಾಗಿ ದೂಷಿಸಲ್ಪಡುವದರಲ್ಲಿ ಸಂದೇಹವಿಲ್ಲ. ಆದರೆ ಅವರಿಗೆ ಮನೋನಿಗ್ರಹಶಕ್ತಿಯುಂಟು. ಹಿಂದೆ ಯಾರೋ ಒಬ್ಬ ಅಧಿಕಾರಿಯು ಸರ್ಕಾರಿ ಗೆಜೆಟ್ಟಿನಲ್ಲಿ ಎಲ್ಲರ ಹೆಸರೂ ಬರುತ್ತದೆ ನನ್ನ ಹೆಸರು ಬರುವದಿಲ್ಲ ಅದಕ್ಕೇನುಮಾಡಬೇಕೆಂದು ತಮ್ಮ ಕ್ಲಾರ್ಕನ್ನು ಕೇಳುವಲ್ಲಿ, ಆತನು ಜಾಣನಾದ್ದರಿಂದ ಹೌದು ಸ್ವಾಮಿ ತಮಂತ ದೊಡ್ಡ ಆಫೀಸರ ಹೆಸರು ಬರದಿರುವದು ತಪ್ಪು. ಅದಕ್ಕೆ 3 ತಿಂಗಳ ರಜಾಕ್ಕೆ ಬರೆದುಕೊಂಡರೆ ಗೆಜೆಟ್ಟಿನಲ್ಲಿ ಮಂಜೂರಾದ್ದು ಛಾಯಿಷಾಗುತ್ತೆಂದು ಹೇಳಲು ಏನಯ್ಯ ಸುಂಸುಂನೆ ಯಾಕೆ ರಜಾತೆಗೆದುಕೊಳ್ಳುವುದು? ಎಂದು ಆಫೀಸರು ಕೇಳಲು ಹಾಗಲ್ಲಾ ಸ್ವಾಮಿ ರಜಾ ಸ್ಯಾಂಕ್ಷನ್ನು ಆದ್ದು ಗೆಜೆಟ್ಟಿನಲ್ಲಿ ಬಂದಮೇಲೆ ರಜಾ ಅನಾವಶ್ಯಕವೆಂದು ಮರಳಿ ಬರೆದರೆ ಅದು ಕ್ಯಾನ್ಸಲಾಗಿದೆ ಎಂದು ಪಬ್ಲಿಷ್ ಆಗುತ್ತೆ. ಇದರಿಂದ ತಮ್ಮ ಹೆಸರು ಎರಡು ವೇಳೆ ಬಂದಂತೆ ಆಗುತ್ತೆಂದು ಹೇಳಲು, ಅಧಿಕಾರಿಯು ಸಂತೋಷಪಟ್ಟುಕೊಂಡಂತೆ ನಮ್ಮ ಆರಾಧ್ಯರು ಉಮೇದುವಾರರಲ್ಲದಿದ್ದರೂ ಪ್ರಕೃತ ಚರ್ಚಾಸ್ಪದ ವಿಷಯದಲ್ಲಿ ತಲೆಹಾಕಿರುವುದನ್ನೋಡಿದರೆ ಈ ನೆಪದಿಂದಲಾದರೂ ತಮ್ಮ ಲಾ ಪಾಂಡಿತ್ಯವೂ ಹೆಸರೂ ಪತ್ರಿಕಾ ಮೂಲಕ ಪ್ರಸಿದ್ಧಿಯಾಗಲೆಂದು ಯೋಚಿಸಿರುವುದಾಗಿ ತೋರುತ್ತದೆ. ಮಿ|| ಮಹಮ್ಮದ್‌ಸೇಟರು ಮತ್ತೆ ಮೂವರು ಮಾಡಿರುವ ಪ್ರಯತ್ನವು ನಿರಾಕ್ಷೇಪವೂ, ಸರ್ವಸಮ್ಮತವೂ ಆದದ್ದೆಂಬುದೂ ಅದಕ್ಕೆ ವಿರೋಧವಾಗಿ ಅಸೂಯಾಂಧರು ಮಾಡುವ ಪ್ರಯತ್ನವೆಲ್ಲವೂ ಅಯೋಗ್ಯವೂ ತಿರಸ್ಕೃತವೂ ಆದದ್ದೆಂಬದೂ, ಇವರಲ್ಲಿ ಯಾರು ಎಲೆಕ್ಷನ್ ರೂಲಿಗೆ ವಿರೋಧವಾಗಿ ನಡೆದು ಕ್ರಿಮಿನಲ್ ವಿಚಾರಣೆಯಿಂದ ಶಿಕ್ಷಿಸಲ್ಪಡತಕ್ಕವರಾಗಿರುವರೆಂಬುದೂ ಮೇಲೆ ನಾನು ಹೇಳಿರುವ ವಿಷಯಗಳಿಂದ ಓಟರುಗಳಿಗೆ ಚೆನ್ನಾಗಿವ್ಯಕ್ತವಾಗದೆ ಇರದು.

ನಿಷ್ಪಕ್ಷಪಾತ ಓಟರು.

ಮೈಸೂರು ಪಟ್ಟಣದ ಓಟರುಗಳು ದಯವಿಟ್ಟು ಗಮನಿಸತಕ್ಕದ್ದು

ಅಯ್ಯಾ, ಓಟರುಗಳಿರಾ!

ಮೈಸೂರು ಪ್ರಜಾಪ್ರತಿನಿಧಿ ಸಭೆಗೂ ಲೆಜಿಸ್ಲೇಟಿವ್ ಕೌನ್ಸಿಲಿಗೂ ಬರುವ ಫೆಬ್ರುವರಿ ತಾರೀಖು 15 ರಲ್ಲಿ ತಮ್ಮಿಂದ ಮೆಂಬರುಗಳಾಗ್ಗಿ ಯಿಸಲ್ಪಡಲು ಉಮೇದುವಾರರಾಗಿ ನಿಂತಿರುವವರುಗಳೂ ಅವರ ಏಜಂಟರುಗಳೂ ಪ್ರತಿಯೊಬ್ಬ ಓಟರ ಬಳಿಗೂ ಬಂದು ತಮ್ಮ ಕಾಪ್ರತಾಪಗಳನ್ನು ಹೇಳಿಕೊಂಡು ತಮಗೆ ಓಟನ್ನು ಕೊಡಬೇ ಪೀಡಿಸುವವರು ಕೆಲವರು ಮತ್ತೆ ಕೆಲವರು ಅವರಿಗೆ ವಿದ್ಯೆಯಿಲ್ಲ, ಯಿಲ್ಲ, ಧೈರ್ಯದಿಂದ ಮಾತನಾಡುವದಕ್ಕೆ ಬರುವದಿಲ್ಲ; ಅಂಥಾವರಿಗೆ ಓಟನ್ನು ಕೊಟ್ಟು ಹಾಳುಮಾಡಿಕೊಳ್ಳಬೇಡಿ. ನನಗೆ ಕೊಟ್ಟರೆ ನಿರ್ಭಯದಿಂದ ಹೊಡೆದಾಡುತ್ತೇನೆ, ಆದ್ದರಿಂದ ನನಗೇ ಕೊಡಿ ಮತ್ತೆ ಕೆಲವರು; ನಾನು ಹುಟ್ಟಿದಾರಭ್ಯ ಪ್ರಜಾಸೇವೆಯಲ್ಲೇ ಕಾಲಕ ಅವರ ಕ್ಷೇಮಚಿಂತನೆಗಾಗಿ ಯಾರಿಗೂ ಹೆದರದೆ ಹೊಡದಾಡುತ್ತಿ ಎಂದು ಬೇರೆ ಕೆಲವರು ಬಂದು ಹೇಳಿಕೊಳ್ಳುತ್ತಿರುವದರಿಂದ ಇದ ಯಾರಿಗೆ ಕೊಡಬೇಕು ಯಾರಿಗೆ ಕೊಡಬಾರದೆಂದು ಪರಿಶೀಲಿಸುವ ಸಹ ಅವಕಾಶವಿಲ್ಲವಾಗಿದೆ. ಉಮೇದುವಾರರುಗಳ ಅವರಗಿಂತಲೂ ಗಿ ಅವರಕಡೆ ಮೊಕ್ತಾರ್‌ವಹಿಸಿಕೊಂಡಿರುವವರ ಕಾಟವನ್ನು ತಡೆಲಾರದೆ ಪೇಚಾಡುತ್ತಿರುವರು.

ಲಾಯರುಗಳು ತಾವು ಮೊಕ್ತಾರು ವಹಿಸಿಕೊಂಡಿರುವ ಕಕ್ಷಿಗಾರರ ಕುಲವನ್ನು ಲಕ್ಷಿಸದೆ, ತಮ್ಮ ಜಾತಿಯವರ ಮೇಲಾಗಲಿ ಬಂಧುಗಳ ಗಲಿ ಕಕ್ಷಿಗಾರರಪರ ಫಿರ್ಯಾದುಮಾಡಿ ನಿರ್ದಾಕ್ಷಿಣ್ಯದಿಂದ ಕೇಸನ್ನು ಹೊಡದಾಡುವರೀತಿಯಲ್ಲಿ ಪ್ರಜಾಪ್ರತಿನಿಧಿ ಸಭೆಗಾಗಲಿ ನ್ಯಾಯವಿಧಾಯಕ ಸಭೆಗಾಗಲಿ ನಮ್ಮಿಂದ ಓಟನ್ನು ಪಡೆದು ಮೆಂಬರಾಗಿ ಹೋಗತಕ್ಕವರು ಜಾತಿಯವರೇ ಆಗಿರಲಿ ತಮ್ಮ ಜಾತಿಯ ತಾರತಮ್ಯವನ್ನು ಕಡೆ ಸಭೆಗಳಲ್ಲಿ ಎಲ್ಲಾ ಪ್ರಜೆಗಳ ಹಿತಕ್ಕಾಗಿ ಹೊಡೆದಾಡುವವರಾಗಬೇಕ ದೆ ತಮ್ಮ ಜಾತಿಯಭಿಮಾನದಿಂದ ಬಹು ಜನರಿಗುಪಯುಕ್ತವಾದ ವಿಷ ವಿರುದ್ಧವಾಗಿ ವಾದಿಸುವಂತಾವರು ಆಗಬಾರದು. ಇದಕ್ಕೆ ಒಂದು ದಾಹರಣೆಯನ್ನು ಇಲ್ಲಿ ಕೊಡುತ್ತೇನೆ —

ಮೈಸೂರು ಸಿಟಿ ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡು, ಪ್ರಜಾ ನಿಧಿಸಭೆ, ಸೆಂಟ್ರಲ್ ವ್ಯವಸಾಯದ ಬೋರ್ಡುವಗೈರೆ ಸಭೆಗಳಲ್ಲಿ ನಿರ್ಭ ವಾಗಿ ತಮ್ಮಗಳ ಸೇವೆಯನ್ನು ಮಾಡುತ್ತಿರುತ್ತೇನೆ ವಗೈರೆಯಾಗಿ ಕೊಂಡು ಓಟುಗಳನ್ನು ಕೊಡಬೇಕೆಂದು ಕೇಳುತ್ತಿರುವ ಮ|| ಈ ಸುಜೋತ ಮಾನಂದಗಿರಿಗೋಸ್ವಾಮಿ (ಬಾವಾಜಿ) ಮೈಸೂರು ಇವರು ಈಗ ವ ಪ್ರಜಾಪ್ರತಿನಿಧಿಸಭೆಗೆ ಮೆಂಬರಾಗಿ ಹೋಗಿ ಪ್ರಜಾಸೇವೆಯನ್ನು ಮಾಡ ಕೊಂಡಿರುವರೋ ಅದೇ ಪ್ರಜಾಪ್ರತಿನಿಧಿ ಸಭೆಯಲ್ಲಿ ಹಿಂದೆ ಅಂದರೆ ಕಳೆದ ಯ ಇಸವಿಯಲ್ಲಿ ಬ್ರಾಹ್ಮಣೇತರ ವಿದ್ಯಾರ್ಥಿಗಳನ್ನು ಸಂಸ್ಕೃತ ಲೇಜುಗಳಿಗೆ ಸೇರಿಸುವ ವಿಚಾರದಲ್ಲಿ ಚರ್ಚೆಯು ನಡೆಯುವಾಗ್ಗೆ ನು ಹೋಲ್ ಇಂಡ್ಯಾದಲ್ಲೆಲ್ಲಾ ಸಂಚರಿಸಿರುತ್ತೇನೆ. ಎಲ್ಲೂ ಬ್ರಾಹ್ಮಣೇತರರು ಸಂಸ್ಕೃತ ಕಾಲೇಜಿನಲ್ಲಿ ಓದುತ್ತಿಲ್ಲ ಮತ್ತು ಅವರನ್ನು ಅಲ್ಲಿಗೆ ಸುವುದಿಲ್ಲ. ಯಜ್ಞವೆಂದರೆ ಪಶುವನ್ನು ಕೊಲ್ಲುವದು, ಅದನ್ನು ಗಾಯಿತರು ಮಾಡುವದಿಲ್ಲ. ಆದ್ದರಿಂದ ಅವರಿಗೆ ವೇದಾಧಿಕಾರವಿಲ್ಲ. ತವು ಬ್ರಾಹ್ಮಣರೊಬ್ಬರಿಗೆ ಮಾತ್ರ ವಿರತಕ್ಕದ್ದೆಂದು" ವಾದಿಸಿದ್ದು ದೆ "ಮೈಸೂರು ದೇಶದ 60 ಲಕ್ಷ ಪ್ರಜೆಗಳಲ್ಲಿ ಹಿಂದೂಗಳಿಗೆಲ್ಲಾ ಮಾಡಿಸತಕ್ಕ ಅಧಿಕಾರವು ಬ್ರಾಹ್ಮಣರಿಗೆ ಮಾತ್ರ ಇದೆ. ಆಗವು ಗಾಗಿ ಅವರಿಗೆ ವೇದಾಭ್ಯಾಸವು ಅವಶ್ಯಕ. ಅವರಿಗೆ ಅದನ್ನು ಕಲಿಸುವ ನ್ನು ಪ್ರಜೆಗಳು ಕಂದಾಯದರೂಪವಾಗಿ ಸರ್ಕಾರಕ್ಕೆ ಕೊಟ್ಟು ಸಬೇಕು. ಲಿಂಗಾಯಿತರು ವೇದವನ್ನು ಬರೆದ ವ್ಯಾಸನನ್ನು ಅವ ಮಾಡುವದರಿಂದ ಅವರಿಗೆ ಪುನಃ ವೇದ ಓದುವ ಆಶೆಯಾಕೆ?" ವಗೈರೆ 1922ನೆ ನವಂಬರ್ ತಾರೀಖು 3ರ ಸಾಧ್ವಿ ಪತ್ರಿಕೆಯಲ್ಲಿ ದಿರುವರು.

ಅಯ್ಯಾ ರಾಜಧಾನಿಯ ಓಟರು ಬಂಧುಗಳಿರಾ! ನೋಡಿದಿರಾ, ಎಲ್ಲಾ ಯ ಜನರಿಂದಲೂ ಓಟುಗಳನ್ನು ಪಡೆದುಕೊಂಡು ಅವರುಗಳ ಪ್ರತಿ ಮೆಂಬರಾಗಿ ಹೋಗುವ ನಮ್ಮ ಬಾವಾಜಿಯವರು ಎಲ್ಲಾ ಜಾತಿಯ ಕ್ಷೇಮಚಿಂತನೆಯನ್ನು ಎಷ್ಟರಮಟ್ಟಿಗೆ ಮಾಡಿರುವರು! ಇದೂ ನೆ ಇವರು ಸಂದರ್ಭ ಬಿದ್ದಾಗಲೆಲ್ಲಾ I am neither a d nor a beast ಅಂದರೆ ನಾನು ಪಕ್ಷಿಜಾತಿಗಾಗಲಿ ಅಥವಾ ಜಾತಿಗಾಗಲಿ ಸೇರಿದವನಲ್ಲ ಎಂದು ಹೇಳುತ್ತಿರುವರು. ಹೀಗೆ ಹೇಳು ಂದ ಇವರು ಯಾವ ಪಕ್ಷಕ್ಕೂ ಸೇರದೆ ಗೋಸುಂಬೆಯ ಹಾಗೆ ಸಮ ಯಂತೆ ತಿರುಗಿಕೊಳ್ಳುವವರೆಂಬುದು ಸ್ಪಷ್ಟವಾಗುತ್ತದೆ. ಹೀಗೆ ವಲೀ ಓಟುಗಳನ್ನು ಪಡೆದು ಮೆಂಬರಾಗಿ ಹೋಗಿ ನಮ್ಮವರ ಶ್ಯಾಸಕ್ಕೆ ವಿರೋಧವಾಗಿ ವಾದಿಸಿ ಅಡ್ಡಿಪಡಿಸುವಂತ ಮತ್ತು ಸಮ ಯಬಂದಹಾಗೆ ಬದಲಾಯಿಸಿಕೊಳ್ಳುವಂತ ಮಹಾ ಪುರುಷರಿಂದ ಹೇಯರುಗಳಾದ ನಮ್ಮಗಳಿಗೆ ಎಷ್ಟು ಉಪಕಾರವಾಗುತ್ತದೆಂಬು ಪ್ರತಿಯೊಬ್ಬರೂ ಯೋಚಿಸಬೇಕು. ಹಾಗಲ್ಲದೆ ಅವರ ಮರುಳಮಾ ತುಗಳಿಗಾಗಿ ಸೋತುಹೋದರೆ ನಮ್ಮ ಹಗ್ಗವನ್ನು ಅವರ ಕೈಗೆ ಕೊಟ್ಟು ಹಾಕಿಸಿಕೊಳ್ಳಬೇಕಾಗುತ್ತದೆ ಎಂಬುದು ಮ|| ಗೋಸಾಯಿಯವರ ಹರಣೆಯಿಂದ ವ್ಯಕ್ತವಾಗುತ್ತದೆ. ಆದಕಾರಣ ಅಯ್ಯಾ ಓಟರುಗಳಿರಾ, ಯಾರು ನಮ್ಮ ಕಷ್ಟಸುಖಗಳನ್ನು ಚನ್ನಾಗಿ ಬಲ್ಲವರಾಗಿ ಕ್ಷೇಮಚಿಂತನೆಯನ್ನು ನಿಜವಾಗಿ ಬಯಸುವವರಾಗಿರುವರೋ ಅಂಥ ಗೆ ಓಟನ್ನು ಕೊಟ್ಟು ನಮ್ಮನ್ನಾಳುವ ಶ್ರೀಮನ್ ಮಹಾರಾಜರವರು ಪಾಲಿಸಿರುವ ವಿಶೇಷವಾದ ಅಧಿಕಾರವನ್ನು ಸಾರ್ಥಕಪಡಿಸಿ ನಾವೂ ಮಾತ್ರ ಜ್ಞಾನವುಳ್ಳವರೆಂದು ಅನ್ನಿಸಿಕೊಳ್ಳಬೇಕಲ್ಲದೆ ಮರುಳಮಾ ತಿಗಾಗಿ ಸಿಕ್ಕಿದವರಿಗೆ ಓಟನ್ನು ಕೊಟ್ಟು ಅನಂತರ ಪೇಚಾಡುವದು ಚಿತವಲ್ಲವು. ಈ ತತ್ವವನ್ನು ಖಂಡಿತವಾಗಿ ಮರಿಯಬೇಡಿ. ಜೋಕೆ!

ಒಬ್ಬ ಓಟರು.

ಮದ್ರಾಸು ಕರ್ಣಾಟಕ ಸಭೆ.

ಸಭೆಯವರ ಒಂದು ಸಂತೋಷಕೂಟವು ಇದೇ ಫೆಬ್ರವರಿ ತಿಂಗಳು ರೀಖು ಭಾನುವಾರ ಸಾಯಂಕಾಲ 4 ಗಂಟೆಗೆ ಮದ್ರಾಸ್ ವಕೀಲ್ ಮ|| ರಾ|| ಕೆ. ಯು. ಶ್ಯಾಮರಾಯರವರ ರು" ಭವನದಲ್ಲಿ ನೆರವಿತು. ಮದರಾಸಿನ ಪ್ರಮುಖರಾದ ಮಹನೀಯರನೇಕರು ಸಭೆಗೆ ದಯಮಾಡಿಸಿದ್ದರು. ಉಪಾ ಳು ನಡೆದ ಬಳಿಕ ಸಭೆಯು ಶಾಶ್ವತಾಧ್ಯಕ್ಷರಾದ ಡಾ|| ಯು. ಯರವರ ನಿರುಪಾಯವಾದ ಗೈರಹಾಜರಿಯ ದೆಸೆಯಿಂದ ಕಾರ್ಯ ದ ಮ|| ರಾ|| ಬಿ. ರಾಮರಾವು, ಎಂ.ಎ., ಎಲ್‌ಎಲ್.ಬಿ. ರ್ಥನೆಯಂತೆ ಸಭೆಯ ಉಪಾಧ್ಯಕ್ಷರೂ ರಿಟೈರ್ಡು ಡಿಸ್ಟ್ರಿ ರೂ ಆದ ರಾ|| ಬ|| ಎಸ್. ಎನ್. ವಿ. ರಾಜಾಚಾರ್ಯ, ಬಿ.ಎ. ಸನವನ್ನು ಅಲಂಕರಿಸಿದರು. ಸಭೆಯ ಅಧ್ಯಕ್ಷರಾದ ಮ|| ರಾಮರಾಯರವರೂ, ಸದಸ್ಯರುಗಳಾದ ಮಂಗಳೂರಿನ ಹಾಜಿ ಸಾಹೇಬ ಬಹದ್ದೂರರವರೂ, ಬಳ್ಳಾರಿಯ ಮ|| ರಾ|| ಪಿ. ಶಿವ ಎ., ಬಿ.ಎಲ್., ಅವರೂ ಈ ಬಾರಿಯ ಮದ್ರಾಸ್ ನ್ಯಾಯವಿ ಗೆ ಚುನಾಯಿಸಲ್ಪಟ್ಟದಕ್ಕಾಗಿಯೂ, ಸಭೆಯ ಪ್ರಾರ್ಥನೆ ಪ್ರಾಣ ಪ್ರೆಸಿಡೆನ್ಸಿ ಕಾಲೇಜಿನ ಕನ್ನಡ ಪಂಡಿತರಾದ ಮೈಸೂರು ಮಹಾವಿದ್ವಾನ್ ಬ್ರ|| ಶಿವಶಂಕರಶಾಸ್ತ್ರಿಗಳವರಿಗೆ "ಮಹಾಮಹೋಪಾಧ್ಯಾಯ" ಬಿರುದು ದೊರೆತುದಕ್ಕಾಗಿಯೂ, ಪ್ರೆಸಿಡೆನ್ಸಿ ಕಾಲೇಜಿನ ರಿಟೈರ್ಡ್ "ಜಿಯಾಲಜಿ ಪ್ರೊಫೆಸರ್ ಮ|| ರಾ|| ಎಚ್. ನಾರಾಯಣರಾವ್, ಎಂ. ಎ. ಅವರಿಗೆ "ರಾವ್‌ಬಹದ್ದೂರ್" ಎಂಬ ಬಿರುದು ದೊರೆತುದಕ್ಕಾಗಿಯೂ ಸಭೆಯವರ ಪರವಾಗಿ ಮ|| ರಾ|| ಬಿ. ರಾಮರಾಯರವರು ಅಭಿನಂದಿಸಿ, ಕರ್ಣಾಟಕ ಪ್ರಾಂತದ ಗುಬ್ಬಿ ನಾಟಕ ಮಂಡಲಿಯ ಪ್ರೊಪ್ರೈಟರ್ ವಿನೋದರತ್ನಾಕರ ಮ|| ರಾ|| ಜಿ. ಎಚ್. ವೀರಣ್ಣನವರು, ಮಾನೇಜರ್ ನಾಗೇಶರಾಯರೊಡನೆ ಸಭೆಯ ಸಮಾವೇಶನಕ್ಕೆ ದಯಮಾಡಿಸಿ ಸಭೆಯವರನ್ನು ಗೌರವಿಸಿದುದಕ್ಕಾಗಿ ತಮ್ಮ ಸಂತೋಷವನ್ನು ಹೊರಪಡಿಸಿ, ಸದರಿ ಗುಬ್ಬಿ ನಾಟಕ ಮಂಡಲಿಯ ಅಭಿನಯಚಾತುರ್ಯಕ್ಕೂ ಗಾನಕೌಶಲ್ಯಕ್ಕೂ ಮೆಚ್ಚಿ ಸಭೆಯ ಪರವಾಗಿ ಪಾರಿತೋಷಕವನ್ನು ಕೊಡುವುದಾಗಿ ಸಭೆಯವರು ತೀರ್ಮಾನಿಸಿರುವ ವಿಷಯವನ್ನು ತಿಳಿಯಪಡಿಸಿದರು. ಬಳಿಕ ಪ್ರೆಸಿಡೆನ್ಸಿ ಕಾಲೇಜಿನ ಕರ್ಣಾಟಕ ಪಂಡಿತರಾದ ಮ|| ರಾ|| ಎಂ. ಡಿ. ಅಳಸಿಂಗರಾಚಾರ್ಯರವರು ಕರ್ಣಾಟಕ ಪ್ರಾಂತ್ಯದ ಅನೇಕ ನಾಟಕ ಮಂಡಲಿಯವರು ಇತ್ತೀಚೆಗೆ ಮದರಾಸಿಗೆ ಬಂದು ತಮ್ಮ ನಾಟಕಾಭಿನಯ ಮತ್ತು ಗಾನಕೌಶಲ್ಯದಿಂದ ಜನಗಳ ಮೆಚ್ಚಿಕೆಗೆ ಪಾತ್ರರಾಗಿ ಕರ್ಣಾಟಕ ದೇಶಕ್ಕೂ ರಂಗಭೂಮಿಗೂ ಪ್ರಾಶಸ್ತ್ಯವನ್ನು ಸಂಪಾದಿಸಿದ ಸಲುವಾಗಿ ತಮ್ಮ ಅಭಿನಂದನವನ್ನು ಹೊರಪಡಿಸಿದರು. ಬಳಿಕ ಕ್ರಿಶ್ಚಿಯನ್ ಕಾಲೇಜು ಕನ್ನಡ ಪಂಡಿತರೂ ಸಭೆಯ ಉಪಕಾರ್ಯದರ್ಶಿಗಳೂ ಆದ ಮ|| ಕೆ. ನರಸಿಂಗರಾವ್ ಬಿ.ಎ. ಅವರು ಮದ್ರಾಸಿನ ವಿಶ್ವವಿದ್ಯಾಲಯದಲ್ಲಿ ಕರ್ಣಾಟಕ ಭಾಷೆಯ ಪ್ರತಿನಿಧಿಗಳಾಗಿ ಮ|| ಬಿ. ರಾಮರಾಯರವರು ನಿಯಮಿಸಲ್ಪಟ್ಟುದುದಕ್ಕಾಗಿಯೂ, ಅವರು ಕಳೆದ ಎರಡು ವರ್ಷಗಳಲ್ಲಿ "ಘೋಷಯಾತ್ರೆ" ಮತ್ತು "ಕುಂದಮಾಲೆ" ಗಳೆಂಬ ಸಂಸ್ಕೃತ ನಾಟಕಗಳೆರಡನ್ನೂ ಕನ್ನಡ ಭಾಷೆಗೆ ಪರಿವರ್ತಿಸಿ ಕರ್ಣಾಟಕ ಸಾಹಿತ್ಯವನ್ನು ವೃದ್ಧಿಗೊಳಿಸಿದುದಕ್ಕಾಗಿಯೂ, ಸಭೆಯ ಸದಸ್ಯರಾದ ಹೈಕೋರ್ಟು ವಕೀಲ್ ಮ|| ರಾ|| ಬಿ. ಸೀತಾರಾಮಯ್ಯರವರೂ, ರಾವ್‌ಬಹದ್ದೂರ್ ಎಚ್. ನಾರಾಯಣರಾಯರವರೂ, ಹ|| ಹಾಜಿಅಬ್ದುಲ್ಲಾಸಾಹೇಬ ಬಹದ್ದೂರರವರೂ, ಮ|| ಟಿ. ರಾಜಗೋಪಾಲರಾಯರವರೂ ಮದ್ರಾಸಿನ ಸೆನೆಟ್ ಮೆಂಬರರಾಗಿ ಬಂದಿರುವುದಕ್ಕಾಗಿಯೂ, ಮದರಾಸು ಗೌರ್ನಮೆಂಟು ಓರಿಯಂಟಲ್ ಲೈಬ್ರೆರಿಯ ಅಸಿಸ್ಟೆಂಟ್ ಲೈಬ್ರೇರಿಯನ್ ಬ್ರ|| ಸಿ. ಸುಂದರಶಾಸ್ತ್ರಿಗಳವರು ಭಾಸನ ಹದಿಮೂರು ನಾಟಕಗಳನ್ನೂ ಮತ್ತೆರಡು ನಾಟಕಗಳನ್ನೂ ಸಹ ಕನ್ನಡ ಗದ್ಯರೂಪವಾಗಿ ಪರಿವರ್ತಿಸಿ ಕರ್ಣಾಟಕ ಮಾತೃಸೇವೆಯನ್ನು ಮಾಡುತ್ತಿರುವುದಕ್ಕಾಗಿಯೂ ಸಭೆಯವರ ಪರವಾಗಿ ಅಭಿನಂದನಗಳನ್ನು ಹೊರಪಡಿಸಿದರು. ಆ ತರುವಾಯ ಗುಬ್ಬಿ ನಾಟಕ ಕಂಪೆನಿಯ ಮ್ಯಾನೇಜರ್ ಮ|| ನಾಗೇಶರಾಯರು ಸದರೀ ನಾಟಕ ಮಂಡಲಿಯ ಪರವಾಗಿ ತಮ್ಮ ಕೃತಜ್ಞತೆಗಳನ್ನು ಹೊರಪಡಿಸಿ, ಕ್ಷಿಪ್ರದೊಳಗಾಗಿ ಕರ್ಣಾಟಕ ಸಭೆಯ ಆಶ್ರಯದಲ್ಲಿ ಒಂದು ನಾಟಕವನ್ನು ಆಡುವುದಾಗಿ ಪ್ರೊಪ್ರೈಟರವರ ಪರವಾಗಿ ತಿಳಿಯಪಡಿಸಿದರು. ಸಭಾಧ್ಯಕ್ಷರು ಸಂಗ್ರಹವಾಗಿಯೂ ಹೃದಯಂಗಮವಾಗಿಯೂ ಕೆಲವು ಮಾತುಗಳನ್ನಾಡಿದ ತರುವಾಯ ಗಂಧ ಪುಷ್ಪಾದಿಗಳು ವಿನಿಯೋಗಿಸಲ್ಪಟ್ಟು, ನೆರೆದಿದ್ದವರ ಪ್ರತಿಕೃತಿಯು (ಫೋಟೊ) ತೆಗೆಯಲ್ಪಟ್ಟಿತು. ಸಭಾಸದರಿಗೂ ಮ|| ರಾ|| ಕೆ. ಯು. ಶ್ಯಾಮರಾಯರವರಿಗೂ ವಂದನೆಗಳು ಸಮರ್ಪಿಸಲ್ಪಟ್ಟ ತರುವಾಯ ಸಭೆಯು ಚದರಿತು. ಈ ಕೂಟದಲ್ಲಿ ನಡೆದ ಭಾಷಣಗಳಲ್ಲಿ ಪ್ರಾಯಶಃ ಕನ್ನಡದಲ್ಲಿಯೇ ನಡೆದಿದ್ದುವೆಂಬುದು ಇಲ್ಲಿ ಗಮನಿಸತಕ್ಕ ಮುಖ್ಯ ವಿಷಯವಾಗಿದೆ.

ಓರ್ವ ಸಭಾಸದ.

ರಿಮಿಷನ್ನಾಗಬೇಕು.

23-1-24 ನೇ ತಾ|| ಒಕ್ಕಲಿಗರ ಪತ್ರಿಕೆಯಲ್ಲಿ ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಮಳೆ ಬೆಳೆ ವಿಚಾರವಾಗಿ ಮಿ|| ಲಕ್ಷ್ಮೀನಾರಾಯಣರಾವ್ ರವರು ಕೊಟ್ಟಿರುವ ಆರ್ಟಿಕಲನ್ನು ನಾನು ನೋಡಿದೆನು. ಅಷ್ಟೇ ಅಲ್ಲದೆ ಇದೇ ತಾ|| ಶ್ರವಣಬೆಳ್ಗೊಳದ ಸರ್ವಮಾನ್ಯಗ್ರಾಮಕ್ಕೆ ಸೇರಿದ ಹೊಸಹಳ್ಳಿ ಕೆರೆಹಿಂಭಾಗದ ಮಳದ ಜಮಿನಿನಲ್ಲಿ ಹಾಕಿಸಿದ ಭತ್ತದಪೈರು ಸಹ ನೀರಿಲ್ಲದೆ ಪೈರೆಲ್ಲಾ ಒಣಗಿಹೋಗಿ ಕೆಲವು ಜಮಿನಿನ ಪೈರುಸಹ ಹಾಕಲು ಅವಕಾಶವಿಲ್ಲದೆ ಬಹಳ ನಷ್ಟವಾಗಿ ಎಲ್ಲರೂ ಈಲಾಗಾಯ್ತು ಮೇಘವನ್ನೇ ನೋಡುತ್ತಾ ಬಾಯಿಬಿಡುತ್ತಿದಾರೆ. ಮತ್ತು ಬೆಕ್ಕದ ಅಮಾನೀಕೆರೆ ಹಿಂಭಾಗದಲ್ಲಿ ಹಾಜರಿರುವ ಸುಮಾರು 1 ಲಕ್ಷಗುಣಿ ಮೇಲ್ಪಟ್ಟು ಸುಮಾರು 10-15 ಸಾವಿರ ರೂ. ಬೆಲೆಬಾಳುವ ಕಬ್ಬಿನಫಸಲು ಸಹ ಒಣಗಿಹೋಗುತ್ತಾ ಇದೆ. ನೀರಾವರಿ ಜಮೀನ್ ಪಾಡೆ ಹೀಗಿರುವಲ್ಲಿ ಖುಷ್ಕಿ ಜಮೀನುಗಳ ಅವಸ್ಥೆ ಬರೆಯಬೇಕಾದ್ದೆ ಇಲ್ಲ. ಆದ್ದರಿಂದ ಘನವನ್ನು ಹೊಂದಿದ ನಮ್ಮ ಮೈಸೂರು ಗೌರ್ನಮೆಂಟಿನವರು ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಉದಾರಾಶ್ರಯದಿಂದ ರೈತರುಗಳಿಗೆ ರಿಮಿಷನ್ ಮಾಡಿಸದೆ ಹೋದರೆ ಪ್ರಜೆಗಳು ಬದುಕುವದೇ ಬಹಳ ತೊಂದರೆಯಾಗುವದರಲ್ಲಿ ಸಂಶಯವೇ ಇಲ್ಲ. ನಮ್ಮ ಶ್ರೀಮನ್ಮಹಾರಾಜರವರು ಪ್ರಜೆಗಳಿಗೆ ಕೊಟ್ಟಿರುವ ಕಾರ್ಯ ಗೌರವದ ಹಕ್ಕನ್ನ ಉಪಯೋಗಿಸಿ ಮಹಾರಾಜರವರ ಮತ್ತು ಪ್ರಜೆಗಳ ಸೇವೆ ಮಾಡಲು ನಮ್ಮ ಊರಿನಲ್ಲಿ ಅನೇಕರುಗಳು ಸಿದ್ಧರಾಗಿದ್ದಾಗ್ಯೂ, ಇದಕ್ಕೆ ಅವಕಾಶವಿಲ್ಲದಂತೆ ಓಟರ್ ಲಿಸ್ಟಿಗೆ ಸೇರಿಸದೆ ಇರುವದು ಶ್ರವಣಬೆಳುಗೊಳದ ದುರದೃಷ್ಟವೆಂತ ಭಾವಿಸಬೇಕಾಗಿದೆ.

ಭರಮಯ್ಯ, ಶ್ರವಣಬೆಳುಗೊಳ.

ಪಕ್ಷಪಾತ.

ಕೋಲಾರ ಗೋಲ್ಡ್‌ಫೀಲ್ಡ್ಸ್‌ನಲ್ಲಿ ರೆವಿನ್ಯೂ ಆಫೀಸರ್ ಮತ್ತು ಇನ್‌ಕಂಟ್ಯಾಕ್ಸ್ ಇನ್‌ಸ್ಪೆಕ್ಟರ ಕೆಲಸ ಈಗ 6-7 ತಿಂಗಳು ಲಾಗಾಯಿತು ಖಾಲಿಯಿತ್ತು. ಈ ಕೆಲಸದ ಸಂಬಳ ಮಾಹೆಯೊಂದಕ್ಕೆ 200 ರೂ. ಗಳು. ಈ ಕೆಲಸಕ್ಕಾಗಿ ಕೆಲವು ಬ್ರಾಹ್ಮಣೇತರರು ಕೋಲಾರ ಡೆಪ್ಯುಟೀ ಕಮಿಷನರನ್ನು ಕೇಳಿಕೊಂಡಾಗ ಆ ಕೆಲಸ ಅಗತ್ಯವಿಲ್ಲಾ ತೆಗೆದುಹಾಕಿಬಿಟ್ಟರುತ್ತೇವೆಂದು ಹೇಳಿ ಕಳುಹಿಸಿದರು. ಈಗ 8-10 ದಿನಗಳ ಕೆಳಗೆ ಅದೇ ಕೋಲಾರ ಡೆಪ್ಯುಟೀ ಕಮಿಷನರು ತಮಗೆ ಹತ್ತರಬಂಧುವಾದ ಬೌರಿಂಗ್‌ಪೇಟೆ ಸ್ಯಾನಿಟರಿ ಇನ್‌ಸ್ಪೆಕ್ಟರು ಮ|| ವೆಂಕಟಸುಬ್ಬಯ್ಯ ಎಂಬುವ 50 ರೂ. ಸಂಬಳದವರನ್ನು ಈ ಮೇಲ್ಕಂಡ ರೆವಿನ್ಯೂ ಆಫೀಸರ್ ದೊಡ್ಡ ಕೆಲಸಕ್ಕೆ ಹಾಕಿ ಆರ್ಡರ್ ಮಾಡಿರುತ್ತಾರೆ. ಈತನಿಗಿಂತ ಅನೇಕರು ಬ್ರಾಹ್ಮಣೇತರ ಸೀನಿಯರುಗಳು ಇರುತ್ತಾರೆ. ಇವರ ಹಕ್ಕು ಬಾಧ್ಯತೆಯನ್ನು ನಿರಾಕರಿಸಿ ತಮಗೆ ಬೇಕಾಗಿರುವ ಒಬ್ಬ ಚಿಕ್ಕನೌಕರನಿಗೆ ಕೊಟ್ಟಿರುವುದು ಯಾವ ನ್ಯಾಯವೋ ತಿಳಿಯದು. ಮುಂದೆ ಈ ಕೆಲಸವೇ ಖಾಯಂಮಾಡಬೇಕೆಂಬ ಉದ್ದೇಶದಿಂದಲೂ, ಏಕಾಯೇಕಿ ಒಂದೇಸಲ 200 ರೂ. ಕೆಲಸವನ್ನು ಸಣ್ಣ ಉದ್ಯೋಗಸ್ಥನಿಗೆ ಕೊಟ್ಟರೆ ಗೌರ್ನಮೆಂಟಿನವರು ಮಂಜೂರ್ಮಾಡುವುದಿಲ್ಲವೆಂದೂ, ಹಂಗಾಮಿಯೆಂದೂ ನೆಪಮಾತ್ರಕ್ಕೆ ಸದ್ಯಕ್ಕೆ ಮಾಡಿರುತ್ತಾರೆ. ಈ ಕೆಲಸದ ಖಾಲಿಸಂಗತಿ ಗೆಜೆಟ್ಟಿನಲ್ಲಿ ಪಾಯಿಷ್‌ಮಾಡಲಿಲ್ಲ ಮತ್ತು ಮಿಲ್ಲರ್ ಕಮಿಟಿ ರಿಪೋರ್ಟನ್ನು ಲಕ್ಷ್ಯಕ್ಕೆ ತರಲಿಲ್ಲಾ. ಘನವಾದ ಸರ್ಕಾರದವರು ಇದನ್ನು ವಿಚಾರಿಸಿ ಸೀನಿಯರಾದ ಬ್ರಾಹ್ಮಣೇತರರಿಗೆ ಕೊಡುವಂತೆ ಅಪ್ಪಣೆಮಾಡಿ ಹಿಂದುಳಿದವರನ್ನು ಕಾಪಾಡಬೇಕಾಗಿ ಬೇಡುತ್ತೇನೆ.

ಸತ್ಯವಾದಿ.

ಗಾಣಿಗಮಹಾಜನಗಳಲ್ಲಿ ವಿನಂತಿ.

ಈ ಮತವು ಪುರಾಣಪ್ರಸಿದ್ಧವಾಗಿಯೂ ಚರಿತ್ರಾರ್ಹವಾಗಿಯೂ ಇದ್ದು ವಿದ್ಯಾ, ವಿವೇಕ, ಜ್ಞಾನ, ಯಶಸ್ಸು, ಐಕಮತ್ಯ, ನಾಗರೀಕತ್ವ ಇವೆ ಮೊದಲಾದುವುಗಳಲ್ಲಿ ಹಿಂದೆಬಿದ್ದು ಮತದ ಮೂಲತತ್ವ ಏನೆಂಬುದನ್ನರಿಯದೆ ಅತ್ಯಾಚಾರ ನಡಾವಳಿಯಿಂದ ವರ್ತಿಸುತ್ತಿರುವುದನ್ನು ನೋಡಿ ಯಾರುತಾನೆ ನಗಾಡದಿರುವರು. ಇಷ್ಟೇ ಅಲ್ಲಾ. ಈವರಿಗಾದರು ಈ ಮತದಲ್ಲಿ ಒಬ್ಬರಾದರು ಪ್ರೌಢವಿದ್ಯೆಯಲ್ಲಿ ಉತ್ತೀರ್ಣರಾಗಿ ಶ್ರೀಮನ್ಮಹಾರಾಜ ಸರ್ಕಾರದವರ ಪ್ರೋತ್ಸಾಹಕ್ಕೆ ಪಾತ್ರರಾಗಿ, ದೇಶಸೇವೆಯಲ್ಲಿ ಮುಂದುವರಿಯದಿರುವುದನ್ನು ಕೇಳಿ ತುಂಬಾ ವಿಷಾದಪಡಬೇಕಾಗಿದೆ. ಅದಂತಿರಲಿ. ಎಲ್ಲಾ ಮತದವರು ಕೂಡ ಅವರವರ ಮತಾಭಿವೃದ್ಧಿಗಾಗಿ ಅಲ್ಲಲ್ಲೇ ಸಂಘಗಳನ್ನೇರ್ಪಡಿಸಿಕೊಂಡು ನಾನಾಭಾಗದಲ್ಲು ವೃದ್ಧಿಹೊಂದುತ್ತಿರುವುದನ್ನು ಕಿವಿಯಿಂದಕೇಳಿ ಕಣ್ಣಿನಿಂದನೋಡಿ ಮೇಲ್ಕಂಡ ಯಾವ ಆಚರಣೆಗೂ ಮನಕೊಡದೆ ಮೌನಾವಸ್ಥೆಯಿಂದ ನಿದ್ರಾದೇವಿಯಂತೆ ಮಲಗಿರುವದು ಈ ಮತದವರ ದುರಾದೃಷ್ಟವಲ್ಲವೆ! ಇನ್ನಾದರು ಇವರು ಮಂದನಿದ್ರೆಯಿಂದ ಎಚ್ಚತ್ತು ಇವರ ಏಳ್ಗೆಗೆ ಬೇಕಾಗುವ ಸೌಕರ್ಯಗಳನ್ನು ದಯಾಳುಸರ್ಕಾರದವರಿಂದ ಹೊಂದಿ ಗಾಣಿಗಮಹಾಜನಗಳ ಪ್ರಜಾಸಂಖೆ ಹೆಚ್ಚಾಗಿರುವ ಮುಖ ಮುಖ್ಯ ಸ್ಥಳಗಳಲ್ಲಿ ಸಂಘಗಳನ್ನು ಕಲ್ಪಿಸುವರಾಗಿ ನಂಬಿರುವ,

ಓರ್ವ ಮತಾಭಿಮಾನಿ.

ಅರಸೀಕೆರೆ ತಾಲ್ಲೂಕು ಕಣಕಟ್ಟೆ.

ಈ ವರ್ಷ ಮಳೆ ಇಲ್ಲದೆ 2 ಆಣೆ ಬೆಳೆಯು ಸಹ ಆಗಲಿಲ್ಲ. ಧಾರಣೆವಾಸಿಗಳು ದಿನದಿನಕ್ಕೂ ಹೆಚ್ಚುತ್ತಾ ಇರುತ್ತವೆ. ಬಡವರ ಪರಿತಾಪವು ಹೇಳಲು ಸಾಧ್ಯವಿಲ್ಲ. ರೂಪಾಯಿಗೆ 7 ಸೇರು ರಾಗಿ 4-4½ ಸೇರು ಅಕ್ಕಿ ಮಾರುತ್ತಾರೆ. ನೀರಿನತೊಂದರೆಯು ಹೇಳತೀರದು. ಈಚೆಗೆ ಕೆರೆಯ ಅಂಗಳದಲ್ಲಿರುವ ದೊಡ್ಡ ಭಾವಿಯನ್ನು ಮ|| ಪಟೇಲ್ ಕೃಷ್ಣಮೂರ್ತಿರಾಯರು ಮತ್ತು ಶಾನುಭೋಗ್ ರಾಮಯ್ಯನವರು ಬಹಳ ಮುತುವರ್ಜಿ ವಹಿಸಿ ಸಧ್ಯಕ್ಕೆ ಕುಡಿಯುವದಕ್ಕೆ ನೀರು ದೊರಕುವಂತೆ ಮಾಡಿಸಿರುತ್ತಾರೆ. ದನಕರುಗಳು ಮೇವು, ನೀರು ಇಲ್ಲದೆ ಸಾಯುವ ಸ್ಥಿತಿಗೆ ಬಂದಿವೆ. ಈ ಊರಿನಲ್ಲಿ ಕೆಲವು ಪೋಲೀಹುಡುಗರು ರಾತ್ರಿಯ ಹೊತ್ತು ಊರಿನಲ್ಲೆಲ್ಲಾ ತಿರುಗುತ್ತಾ ಇದ್ದು ಮನೆಗಳ ಕದವನ್ನು ಒದೆಯುವುದು, ಅಗಣಿತಗೆಯುವುದು, ಈರೀತಿ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಪೋಲೀಸಿನವರು ನಿಗಾತಗೆದುಕೊಳ್ಳುವುದು ಅವಶ್ಯಕವಾಗಿದೆ.

ಪ್ರತ್ಯಕ್ಷದರ್ಶಿ.

ಬೆಂಗಳೂರು ಸಿಟಿಯ ಓಟರು ಮಹಾಶಯರುಗಳಲ್ಲಿ ವಿಜ್ಞಾಪನೆ.

ನೂತನ ರಾಜಕೀಯಸಂಸ್ಕರಣ ಕ್ರಮವನ್ನನುಸರಿಸಿ ಮೈಸೂರು ಪ್ರಜಾಪ್ರತಿನಿಧಿ ಸಭೆ (ರೆಪ್ರೆಜೆಂಟೇಟಿವ್ ಅಸೆಂಬ್ಲಿ) ಗೆ ಮೆಂಬರುಗಳನ್ನು ಚುನಾಯಿಸಲು 1924ನೆ ಫೆಬ್ರುವರಿ ತಾರೀಖು 15ನೆಯ ಶುಕ್ರವಾರದ ದಿವಸ ಗೊತ್ತುಮಾಡಲ್ಪಟ್ಟಿರುವುದು ಸುಯಷ್ಟೆ. ಆ ದಿವಸ ಪ್ರತಿಯೊಬ್ಬ ಓಟರೂ ಗೊತ್ತಾದಸ್ಥಳಕ್ಕೆ ಬಂದು ನಾಲ್ಕು ಜನರಿಗೆ ತಮ್ಮ ಓಟುಗಳನ್ನು ಕೊಡಲು ಅಧಿಕಾರವುಳ್ಳವರಾಗಿರುತ್ತಾರೆ.

ನಾನು ಈಗ್ಗೆ ಸುಮಾರು 6 ವರ್ಷಗಳಿಗೆ ಮೇಲ್ಪಟ್ಟಾಗಿನಿಂದಲೂ ಪ್ರಜಾಪ್ರತಿನಿಧಿಸಭೆಯ ಮೆಂಬರಾಗಿದ್ದೆನಲ್ಲದೆ ತನ್ಮೂಲಕ ನ್ಯಾಯವಿಧಾಯಕಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಮತ್ತು ಸಂಪದಭಿವೃದ್ಧಿ ಸಮಾಜದ (ಎಕನಾಮಿಕ್ ಕಾನ್ಫರೆನ್ಸಿನ) ಮೆಂಬರಾಗಿ ಚುನಾಯಿಸಲ್ಪಟ್ಟಿದ್ದೆನು. ಮತ್ತು ಸಂಸ್ಥಾನದ ಎಲ್ಲಾ ಜನವರ್ಗದವರಿಗೂ ಸರ್ಕಾರಿಯುದ್ಯೋಗವು ದೊರಕಲು ಅವಕಾಶವನ್ನು ಕಲ್ಪಿಸಿಕೊಡುವುದಕ್ಕಾಗಿ ಸರ್ಕಾರದಿಂದೇರ್ಪಟ್ಟಿರುವ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡಿನಲ್ಲೂ, ಬೆಂಗಳೂರು ಡಿಸ್ಟ್ರಿಕ್ಟ್ ಆಡ್‌ಹಾಕ್ ಸ್ಕಾಲರ್‌ಷಿಪ್ ಕಮಿಟಿಯಲ್ಲೂ, ಕಳೆದೊಂದು ವರ್ಷದಿಂದ ಮೈಸೂರು ಯೂನಿವರ್ಸಿಟಿಯ ಸೆನೇಟಿನಲ್ಲೂ ಮೆಂಬರಾಗಿಯೂ, ಮೈಸೂರು ವೀರಶೈವ ವಿದ್ಯಾವರ್ಧಕಫಂಡ್ ಸಂಘದ ಸೆಕ್ರೆಟರಿಯಾಗಿಯೂ ಇದ್ದುಕೊಂಡು ಪ್ರಜಾಪಕ್ಷವನ್ನು ವಹಿಸಿ ದೇಶದ ಸರ್ವತೋಮುಖವಾದ ಏಳ್ಗೆಯನ್ನೇ ಗಮನದಲ್ಲಿಟ್ಟುಕೊಂಡು ಕೆಲಸಮಾಡುತ್ತಿದ್ದೇನೆ.

ದೇಶಸೇವೆಯನ್ನು ಮಾಡಲು ವಿಶೇಷ ಕುತೂಹಲವುಳ್ಳವನಾಗಿರುವುದರಿಂದಲೂ, ಈಸಲದ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಚುನಾವಣೆಯಲ್ಲಿ ನಾನೊಬ್ಬ ಉಮೇದುವಾರನಾಗಿ ನಿಂತುಕೊಳ್ಳಬೇಕೆಂದು ನನ್ನ ಮಿತ್ರರನೇಕರು ಪ್ರೋತ್ಸಾಹವನ್ನು ಮಾಡಿದುದರಮೇಲೂ ಉಮೇದುವಾರನಾಗಿ ನಿಂತಿರುತ್ತೇನೆ.

ನನ್ನ ಕಾರ್ಯದಕ್ಷತೆಯಲ್ಲಿ ನಿಮಗೆ ಭರವಸೆಯಿದ್ದಲ್ಲಿ ನನಗೆ ತಮ್ಮ ಅಮೌಲ್ಯವಾದ ಓಟನ್ನು ಕೊಟ್ಟೂ, ತಮ್ಮ ಮಿತ್ರರ ಓಟನ್ನು ಕೊಡಿಸಿಯೂ ಅವಕಾಶವನ್ನು ಕಲ್ಪಿಸಿಕೊಟ್ಟಲ್ಲಿ ನನ್ನಲ್ಲಿ ತಮಗಿರುವ ನಂಬುಗೆ ವಿಶ್ವಾಸಗಳನ್ನು ವ್ಯರ್ಥಗೊಳಿಸದೆ ಇನ್ನು ಮುಂದೆಯೂ ದೇಶಸೇವೆಯನ್ನು ಮಾಡಲು ಸಿದ್ಧನಾಗಿರುವೆನೆಂದೂ, ಈ ನನ್ನ ಸವಿನಯಪ್ರಾರ್ಥನೆಯನ್ನು ತಾವು ನೆರವೇಲಿಸಿಕೊಡುವಿರೆಂದೂ ನಂಬಿರುವ, ತಮ್ಮ ವಿಧೇಯ,

ಬೆಂಗಳೂರು ಸಿಟಿ, }
ತಾ|| 10-1-24. }

ಜಿ. ಪರಮಶಿವಯ್ಯ,
ಬಿ.ಎ.,ಎಲ್‌ಎಲ್.ಬಿ., ಅಡ್ವೋಕೇಟ್.

ಕಡೂರು ತಾಲ್ಲೋಕು ಓಟರುಮಹಾಶಯರುಗಳಲ್ಲಿ.

ಯಳ್ಳಂಬಳಸೆ ಕೆಂಚೇಗೌಡರವರ ಮ|| ರಾ|| ಮರುಳಪ್ಪನವರು, ಲೆಜಿಸ್ಲೇಟಿವ್ ಕೌನ್ಸಿಲ್ ಪದವಿಗೂ, ಪ್ರಜಾಪ್ರತಿನಿಧಿಸಭೆಗೂ ಅದೇ ಯಳ್ಳಂಬಳಸೆ ಮ|| ಪಟೇಲ್ ಭದ್ರಪ್ಪನವರು ಪ್ರತಿನಿಧಿ ಮೆಂಬರಾಗಿ ನಿಂತಿರುವುದು ತಮ್ಮಗಳಿಗೆ ವಿದಿತನಾಗಿರುವ ವಿಷಯವಾಗಿಯೇ ಇದೆ. ಈಮಹಾಶಯರುಗಳು ಎಷ್ಟರಮಟ್ಟಿಗೆ ಪ್ರಜಾಹಿತಚಿಂತನೆಯಲ್ಲಿ ನಿರತರಾಗಿರುವರು ಎಂಬ ವಿಚಾರ ಜನರಿಗೆ ತಿಳಿದಂಶವಾಗಿಯೇ ಇದೆ. ಅದಪ್ರಯುಕ್ತ ತಮ್ಮಗಳ ಘನವಾದ ಓಟುಗಳನ್ನು ಮ|| ರಾ|| ಗಳಾದ ಮರುಳಪ್ಪನವರಿಗೂ ಭದ್ರಪ್ಪನವರಿಗೂ ಕೊಟ್ಟು ಅವರುಗಳು ದೇಶಸೇವೆಯಲ್ಲಿ ನಿರತರಾಗುವಂತೆ ಮಾಡುವ ಭಾರವು ಓಟರು ಮಹಾಶಯರುಗಳಿಗೇ ಸೇರಿದ್ದಾಗಿದೆ.

ಎಸ್. ಚನ್ನಬಸಪ್ಪ, [illegible].

ಸಾಗರ ತಾಲ್ಲೂಕಿನ ಓಟರು ಮಹಾಶಯರಿಗೆ ವಿಜ್ಞಾಪನೆ.

ನೂತನ ರಾಜಕೀಯ ಸಂಸ್ಕರಣಕ್ರಮವನ್ನು ಅನುಸರಿಸಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ (ರೆಪ್ರೆಜೆಂಟೇಟಿವ್ ಅಸೆಂಬ್ಲಿಗೆ) ಮೆಂಬರುಗಳ ಚುನಾವಣೆಯು ಸರ್ 1924 ನೆ ಇಸವಿ ಫೆಬ್ರವರಿ ತಾರೀಖು 15ನೆ ಶುಕ್ರವಾರ ದಿವಸ 12 ಗಂಟೆಗೆ ನಡೆಯುವುದು ಸರಿಯಷ್ಟೆ. ಆ ದಿವಸ ಪ್ರತಿಯೊಬ್ಬ ಓಟರು ತುಂಬಾ ಅಭಿಮಾನವಿಟ್ಟು ಸಾಗರ ತಾಳಗುಪ್ಪಾ ಕರೂರು ಈ ಮೂರು ಸ್ಥಳಗಳಲ್ಲಿ ತಮಗೆ ಸಮೀಪವಾಗಿರುವ ಒಂದು ಸ್ಥಳಕ್ಕೆ ದಯಮಾಡಿಸಿ ತಮ್ಮ ಅಮೋಘವಾದ ಓಟನ್ನು ಉಮೇದುವಾರರ ಲಿಸ್ಟಿನಲ್ಲಿರುವ ಹೆಸರುಗಳನ್ನು ಓದಿಕೊಂಡು ಅಥವಾ ಓದಿಸಿಕೊಂಡು ತಮಗೆ ಮನೋವಾಕ್ಕಾಯಕರ್ಮಗಳಿಂದ ಪ್ರಜಾಸೇವೆ ಮಾಡುವರೆಂದು ಕಂಡುಬರುವ ಪ್ರಜಾನುರಾಗಿಗಳಿಗೆ ಮೂವರಿಗೆ ತಮ್ಮ ಓಟನ್ನು ದಯಪಾಲಿಸುವುದು ಸರಿಯಷ್ಟೆ. ಮಹಾಶಯರೇ ನಾವಿಬ್ಬರೂ ತರುಣರಾಗಿಯೂ ಜಮೀನ್ದಾರರಾಗಿಯೂ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವವರಾಗಿಯೂ ಇದ್ದು ದೇಶಸೇವೆಯನ್ನು ಮಾಡಬೇಕೆಂಬ ಇಚ್ಛೆಯಿಂದಲೂ ನಮ್ಮ ತಾಲ್ಲೂಕಾವಳಿ ಸಮಾಜದ ವಯೋವೃದ್ಧರ ಮತ್ತು ಮಿತ್ರರುಗಳ ಪ್ರೋತ್ಸಾಹದಿಂದಲೂ ಉಮೇದುವಾರರಾಗಿ ನಿಂತುಕೊಂಡು ತಮ್ಮಗಳ ಉದಾರಾಶ್ರಯವನ್ನು ಬೇಡಿದ್ದೇವೆ. ಪ್ರಯುಕ್ತ ಅಭಿಮಾನಶಾಲಿಗಳಾದ ತಮ್ಮಗಳ ಮಹತ್ತರವಾದ ಉಪಕಾರಸ್ಮರಣೀಯವಾದ ಅಭಿಮತವನ್ನು (ಓಟನ್ನು) ನಮಗೆ ಕೊಡಬೇಕೆಂದು ಬೇಡುವ ತಮ್ಮ ಕೃಪಾಭಿಲಾಷಿಗಳಾದ

ಹೆಚ್. ಎಲ್. ಚನ್ನೀರಯ್ಯಗೌಡಾ ಪಟೇಲ ಮತ್ತು ಜಹಗೀರ್ದಾರ್ ಶಿರುವಂತೆ ಸಾಗರ ತಾಲ್ಲೂಕು. ಮತ್ತು ಶಿವಲಿಂಗಯ್ಯಗೌಡಾ ಪಟೇಲ ಮತ್ತು ಜಹಗೀರ್ದಾರ್ ನೆಲ್ಲೂರಕಾಗೋಡ ಸಾಗರತಾಲ್ಲೂಕು.

ತುಮಕೂರು ಡಿಸ್ಟ್ರಿಕ್ಟು ನ್ಯಾಯನಿರ್ಮಾಣ ಸಭೆ (ಲೆಜಿಸ್ಲೇಟಿವ್ ಕೌನ್ಸಿಲ್) ಓಟರುಗಳ ಸನ್ನಿಧಿಯಲ್ಲಿ ತಿಪಟೂರು ದೇಶಮುದ್ರೆ ಶಂಕರಪ್ಪನವರ ಮಗ ಮಲ್ಲಪ್ಪನ ವಿಜ್ಞಾಪನೆಗಳು.

ಮಹಾಶಯರೆ,

ನಮ್ಮ ಸ್ವಾಮಿಯವರಾದ ಶ್ರೀಮನ್ಮಹಾರಾಜರವರು ಪ್ರಜೆಗಳಿಗೆ ದಯಪಾಲಿಸಿರುವ ರಾಜಕೀಯ ಸುಧಾರಣೆಗಳ ಪ್ರಕಾರ ಬರುವ ಫೆಬ್ರವರಿ ತಾರೀಖು 15ರಲ್ಲಿ ನ್ಯಾಯನಿರ್ಮಾಣ ಸಭೆಯ (Legislative Council) ಚುನಾವಣೆಯು ಪ್ರತಿ ತಾಲ್ಲೋಕು ಮತ್ತು ಕೆಲವು ಹೋಬಳಿ ಹೆಡ್ ಕ್ವಾರ್ಟರಿನಲ್ಲಿಯೂ ನಡೆಯುತ್ತದೆ. ನಾನು ಇದುವರೆಗೆ ಸುಮಾರು ಐದು ವರ್ಷಗಳಿಂದ ತಿಪಟೂರು ತಾಲ್ಲೋಕಿನಿಂದ ಪ್ರಜಾಪ್ರತಿನಿಧಿ ಸಭೆಗೆ ಚುನಾಯಿಸಲ್ಪಟ್ಟು ಜನಗಳ ಏಳಿಗೆಗೆ ಪ್ರಯತ್ನಮಾಡಿರುತ್ತೇನಲ್ಲದೆ ಮುನಿಸಿಪಾಲಿಟಿಯ ಮೆಂಬರಾಗಿಯೂ ಸಹ ಕೆಲಸಮಾಡಿರುತ್ತೇನೆ. ಮುಂದೆ ಈ ಡಿಸ್ಟ್ರಿಕ್ಟಿನ ಪ್ರಜಾಸೇವೆಯನ್ನುಮಾಡಲು ನಿಲ್ಲಬೇಕೆಂದು ಅನೇಕ ಸ್ನೇಹಿತರು ನನ್ನನ್ನು ಪ್ರೋತ್ಸಾಹಿಸಿದ್ದರಿಂದ ಈ ಸಾರ್ತಿ ನ್ಯಾಯವಿಧಾಯಕಸಭೆಗೂ ತುಮಕೂರು ಡಿಸ್ಟ್ರಿಕ್ಟಿನ ಪರವಾಗಿ ಚುನಾವಣೆಗೆ ನಿಂತಿರುತ್ತೇನೆ. ಗ್ರಾಮಾಂತರ ಪ್ರಜೆಗಳು ವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲತೆಗಳಿಲ್ಲದೆ ಕೇವಲ ಹಿಂದುಳಿದಿರುವರಲ್ಲದೆ ವೈದ್ಯಸಹಾಯ, ರಕ್ಷಣೆ ಇವುಗಳ ಸಹಾಯಗಳನ್ನೂ ಸಹ ಪಡೆಯದವರಾಗಿರುತ್ತಾರೆ. ಈ ವಿಚಾರಗಳಲ್ಲಿಯೂ ಮತ್ತು ಅವರ ಏಳಿಗೆಗೆ ಬೇಕಾದ ಇತರ ಎಲ್ಲಾ ವಿಚಾರಗಳಲ್ಲಿಯೂ ಅವರುಗಳ ಪರವಾಗಿ ಕೆಲಸಮಾಡಿ ಅವರ ಅನುಕೂಲಗಳನ್ನು ಹೆಚ್ಚಿಸಬೇಕೆಂಬುದೇ ನನ್ನ ಉದ್ದೇಶವಾಗಿದೆ. ಪಟ್ಟಣವಾಸಿಗಳ ಏಳಿಗೆಗೆ ಬೇಕಾದ ಕಾರ್ಯಗಳಲ್ಲಿಯೂ ಕೂಡ ನನ್ನ ಕೈಲಾದಮಟ್ಟಿಗೂ ಕೆಲಸಮಾಡಲು ಸಿದ್ಧನಾಗಿರುತ್ತೇನೆ. ತಾವು ತಮ್ಮ ಅಮೋಘವಾದ ಓಟನ್ನು ಕೊಟ್ಟು ಪ್ರಜಾಪಕ್ಷದ ಪ್ರತಿನಿಧಿಯಾಗಿ ನ್ಯಾಯನಿರ್ಮಾಣಸಭೆಯಲ್ಲಿ ಕೆಲಸಮಾಡಲು ಅವಕಾಶವನ್ನು ನನಗೆ ಉಂಟುಮಾಡಿಕೊಡಬೇಕಾಗಿ ಪ್ರಾರ್ಥನೆ.

ಮೈಸೂರು ನ್ಯಾಯವಿಧಾಯಕ ಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್ಲಿನ) ಮೆಂಬರನ್ನು ಆರಿಸುವ ಅಧಿಕಾರವನ್ನು ಹೊಂದಿರುವ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಓಟರು ಮಹಾಶಯರಲ್ಲಿ

ಶಿವಮೊಗ್ಗಾ ತಾಲ್ಲೂಕು ಹನಸವಾಡಿ ಗಡಲಬಸಪ್ಪನು (ಹೆಚ್. ಜಿ. ಬಸಪ್ಪನು) ಕೃತಪಡಿಸುವುದೇನೆಂದರೆ :—

ದೇಶಬಾಂಧವರೇ,

ನಮ್ಮ ಸರ್ಕಾರದ ವೆಚ್ಚಗಳು ದಿನೇ ದಿನೇ ಹೆಚ್ಚಿ, ಬಡಪ್ರಜೆಗಳಾದ ನಾವು ಹೊಸ ತೆರಿಗೆಗಳನ್ನು ಹೊರಬೇಕಾಗುತ್ತಿರುವುದು. ಅಧಿಕಾರಿಗಳು ಕೈತುಂಬ ಸಂಬಳಗಳನ್ನು ತೆಗೆದುಕೊಂಡರೂ ಅವರಲ್ಲಿ ಮನಮುಟ್ಟಿ ಕೆಲಸಮಾಡುವವರು ಕಮ್ಮಿ. ಸಂದಿಗೊಂದಿಯಲ್ಲಿ ಹೊಂಚುಹಾಕುತ್ತಿರುವ ಲಂಚದ ಹಾವಳಿಯನ್ನಂತೂ ಹೇಳಬೇಕಾಗಿಲ್ಲ. ಕಾಲಕಾಲಕ್ಕೆ ಮಳೆಯಾಗದೆ ಕ್ಷಾಮವು ಮೇಲೆ ಮೇಲೆ ಬರುತ್ತಿದ್ದರೂ ದೊಡ್ಡ ಕೆರೆಕಟ್ಟೆಗಳಿಗೆ ದುಡ್ಡಿಲ್ಲ. ರಾಜ್ಯದ ಬೊಕ್ಕಸವನ್ನು ಹೆಚ್ಚಾಗಿ ತುಂಬುವುವು ಹಳ್ಳಿಗಳು; ಅದರ ಪ್ರಯೋಜನಗಳನ್ನು ಅಧಿಕವಾಗಿ ಅನುಭವಿಸುವುವು ಪಟ್ಟಣಗಳು. ಸ್ಕೂಲು ಆಸ್ಪತ್ರೆ, ಪೊಲೀಸ್ ಸ್ಟೇಷನ್ ಪಟ್ಟಣಕ್ಕೆ ಮಾತ್ರ; ಇನ್ನು ಹಳ್ಳಿಗೆ ಉಳಿದದ್ದು ಕೇಳಬೇಕು. ವರ್ಷೇ ವರ್ಷೇ ಸಾವಿರಾರು ಗ್ರಾಮಗಳಲ್ಲಿ ಬಡಬಗ್ಗರ ಹುಲ್ಲು ಮನೆಗಳು ಸಾಲುಸಾಲಾಗಿ ಬೇಸಿಗೆ ಬೆಂಕಿಯಲ್ಲಿ ಬೂದಿಯಾಗುತ್ತಿದ್ದರೂ ಫಾರೆಸ್ಟ್ ಡಿಪಾರ್ಟ್‍ಮೆಂಟಿನವರು ಹೆಂಚಿನ ಮನೆಗಳಿಗೆ ಮರಗಳನ್ನು ಕಾಡಿನಿಂದ ಕೊಡುವುದಕ್ಕೂ ಕಾಡಿಸುತ್ತಾರೆ. ಸಾರ್ವಜನಿಕವಾದ ಸರ್ಕಾರದ ಹಣದಿಂದ ಮೈಸೂರು ಮತ್ತು ಬೆಂಗಳೂರು ಸಂಸ್ಕೃತ ಕಾಲೇಜುಗಳು ನಡೆಯುತ್ತಿದ್ದರೂ ಬ್ರಾಹ್ಮಣೇತರರಿಗೆ ಅವುಗಳಲ್ಲಿ ಪ್ರವೇಶವಿಲ್ಲ. ಇಂಥಾ ಕಷ್ಟನಷ್ಟಗಳನ್ನು ಯಾವ ಪ್ರಜಾಭಾಗವು ಅನುಭವಿಸುತ್ತಿರುವುದೊ ಅದರ ನಿಜವಾದ ಪ್ರತಿನಿಧಿಗಳು ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿ ಸಭೆಗಳಲ್ಲಿ ಹೆಚ್ಚಾಗಿರುವುದು ಅತ್ಯವಶ್ಯಕವು. ಇಲ್ಲದಿದ್ದರೆ "ಸುಲಿಸಿಕೊಂಡವನೊಬ್ಬ ಸುದ್ದಿ ಹೇಳಿದವನೊಬ್ಬ" ಎಂಬ ಗಾದೆಗೆ ಸರಿಯಾಗುವುದು. ಇದನ್ನು ಪರ್ಯಾಲೋಚಿಸಿಯೇ ಪ್ರಜಾರಂಜಕರಾದ ನಮ್ಮ ಶ್ರೀಮನ್ಮಹಾರಾಜರವರು ವಿದ್ಯಾ ನಾಗರೀಕತೆಗಳಲ್ಲಿಯೂ ಸರ್ಕಾರದ ಅಧಿಕಾರಗಳಲ್ಲಿಯೂ ಹಿಂದುಳಿದಿರುವ ತಮ್ಮ ಪ್ರಜಾಭಾಗವು ಆ ಉಭಯ ಸಭೆಗಳಲ್ಲಿಯೂ ಹೆಚ್ಚಾಗಿ ಸೇರುವುದಕ್ಕೆ ಸೌಲಭ್ಯವನ್ನೂ ಅವುಗಳಿಗೆ ಹೆಚ್ಚಿನ ಸ್ವಾತಂತ್ರ್ಯಗಳನ್ನೂ ಸಹ ಅನುಗ್ರಹಿಸಿರುತ್ತಾರೆ. ಈ ಸುಸಮಯದಲ್ಲಿ ನಾನೂ ನನ್ನ ಕೈಲಾದ ಪ್ರಜಾಸೇವೆಯನ್ನು ಮಾಡಬೇಕೆಂದು ಮುಂದಿನ ನ್ಯಾಯವಿಧಾಯಕ ಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್ಲಿನ) ಮೆಂಬರಾಗಲು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಪರವಾಗಿ ಅಭ್ಯರ್ಥಿಯಾಗಿ ನಿಂತಿರುತ್ತೇನೆ. ನಾನು ಕಳೆದ 3-4 ವರ್ಷಗಳಿಂದ ಸದರಿ ಕೌನ್ಸಿಲ್‍ನಲ್ಲಿಯೂ ಪ್ರಜಾಪ್ರತಿನಿಧಿ ಸಭೆಯಲ್ಲಿಯೂ, ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಬೋರ್ಡ್‍ಗಳಲ್ಲಿಯೂ ಕೆಲಸ ಮಾಡಿ ತಕ್ಕಷ್ಟು ಅನುಭವವನ್ನು ಪಡೆದಿರುವುದರಿಂದಲೂ ಹಿಂದುಳಿದ ಜನಾಂಗಕ್ಕೆ ಸೇರಿದವನಾದ್ದರಿಂದಲೂ ಮತ್ತು ಹಳ್ಳಿಯವನಾಗಿ ಗ್ರಾಮಾಂತರಗಳ ಸ್ಥಿತಿಗತಿಗಳನ್ನು ತಿಳಿದವನಾದ್ದರಿಂದಲೂ ನಾನು ಅರ್ಹನೆಂದು ತಮಗೆ ತೋರಿದರೆ ಬರುವ ಫೆಬ್ರವರಿ ತಾರೀಖು 15ನೆ ಶುಕ್ರವಾರ ನಡೆಯುವ ಚುನಾವಣೆಯಲ್ಲಿ ತಮ್ಮ ಘನವಾದ "ಓಟನ್ನು" (ಅಭಿಮತವನ್ನು) ನನ್ನ ಪರವಾಗಿ ಕೊಡುವುದಲ್ಲದೆ ತಮ್ಮಂತೆ ಆರಿಸುವ ಅಧಿಕಾರವನ್ನು ಹೊಂದಿರುವ ತಮ್ಮ ಇಷ್ಟಮಿತ್ರರೂ ಕೊಡುವಂತೆ ಪ್ರೋತ್ಸಾಹಿಸಬೇಕಾಗಿ ಬೇಡುತ್ತೇನೆ.

ಚಿತ್ರದುರ್ಗ ಡಿಸ್ಟ್ರಿಕ್ಟಿನ ಓಟರ್ಸ್ ಮಹಾಶಯರೇ ಯಾರಿಗೆ ಓಟ್ ಕೊಡುವಿರಿ ?

ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ನಮ್ಮೆಲ್ಲರ ಹಿತಾಭಿವೃದ್ಧಿಗೋಸ್ಕರ ದಯಪಾಲಿಸಿರುವ ನೂತನ ನ್ಯಾಯವಿಧಾಯಕ ಸಭೆಗೆ (ಲೆಜಿಸ್ಲೇಟಿವ್ ಕೌನ್ಸಿಲ್) ನಮ್ಮ ಡಿಸ್ಟ್ರಿಕ್ಟಿನಿಂದ ಒಬ್ಬ ಪ್ರತಿನಿಧಿಯನ್ನು ಚುನಾಯಿಸಿ ಕಳುಹಿಸಬೇಕಾಗಿರುವ ಜವಾಬ್ದಾರಿಯು ತಮ್ಮೆಲ್ಲರ ಮೇಲೆ ಬಿದ್ದಿರುವುದಷ್ಟೆ. ಈ ಜವಾಬ್ದಾರಿಯ ಭಾರದಿಂದ ತಾವು ನಿವೃತ್ತರಾಗಬೇಕಾದ ಮತ್ತು ಈ ಜವಾಬ್ದಾರಿಯ ಕಾರ್ಯವನ್ನು ತಾವು ಎಷ್ಟರಮಟ್ಟಿಗೆ ಮಾಡಬಹುದೆಂಬ ಪರೀಕ್ಷೆಯಕಾಲವು ತೀರಾ ಸಮೀಪವಾಗುತ್ತಾ ಬಂದಿತು. ತಮ್ಮಿಂದ ಚುನಾಯಿಸಲ್ಪಡತಕ್ಕ ಪ್ರತಿನಿಧಿಯ ಸ್ಥಾನದಲ್ಲಿ ನಮ್ಮ ಡಿಸ್ಟ್ರಿಕ್ಟಿನಿಂದ ಕೆಲವರು ಉಮೇದುವಾರರಾಗಿ ನಿಂತಿರುವುದೂ, ಅವರ್ಯಾರ್ಯಾರೆಂಬುದೂ, ಅವರವರು ಕಳಿಸಿರುವ ಅಂದವಾದ ವಿಜ್ಞಾಪನಪತ್ರಿಕೆಗಳಿಂದ ತಮಗೆ ಆಗಲೇ ತಿಳಿದಿರಬಹುದು, ಅಲ್ಲದೆ, ಅವರವರ ಉತ್ತೇಜಕರೂ, ಹಿಂಬಾಲಕರೂ ತಮ್ಮ ಮನೆಗಳ ಬಾಗಿಲಿಗೆ ಬಂದುಬಂದು ಬಗೆಬಗೆಯಾಗಿ ಉಪದೇಶಮಾಡಿ ಇಂಥವರಿಗೇ ಓಟ್ ಕೊಡಿರೆಂಬುದಾಗಿ ಹೇಳಿಕೊಂಡೂ ಹೋಗಿರಬಹುದು. ಆದರೆ, ಯಾರಿಗೆ ಓಟ್ ಕೊಡಬೇಕೆಂಬ ಕಠಿಣವಾದ ಪ್ರಶ್ನೆಯು ಮಾತ್ರ ತಮ್ಮನ್ನು ಇನ್ನೂ ಪೀಡಿಸುತ್ತಿರಬಹುದಲ್ಲವೆ ? ಯಾರು ನಮ್ಮ ಕಷ್ಟನಷ್ಟಗಳನ್ನು ತಿಳಿದು ಅವುಗಳನ್ನು ನಿವಾರಣೆಮಾಡಲು ಸರ್ಕಾರದವರ ಸಂಗಡ ಹೋರಾಡುವಷ್ಟು ಧೈರ್ಯಶಾಲಿಗಳೂ, ದಾಕ್ಷಿಣ್ಯರಹಿತರೂ ಆಗಿರುವರೋ, ಯಾರು ನಮ್ಮೆಲ್ಲರ ಕ್ಷೇಮಾಭಿವೃದ್ಧಿಗೋಸ್ಕರ ಅವಿಶ್ರಾಂತ ಶ್ರಮಪಡುವಷ್ಟು ಉತ್ಸಾಹಿಗಳೂ, ಸಮರ್ಥರೂ ಆಗಿರುವರೋ, ಯಾರು ಜಾತಿ, ಮತಭೇದಗಳನ್ನು ದೂರೀಕರಿಸಿ, ಸರ್ವಪ್ರಜೆಗಳ ಸೇವೆಯನ್ನು ಮನಃಪೂರ್ವಕವಾಗಿ ಮಾಡುವಷ್ಟು ನಿಷ್ಪಕ್ಷಪಾತಿಗಳೂ, ನ್ಯಾಯಶೀಲರೂ ಆಗಿರುವರೋ ಅಂಥವರಿಗಲ್ಲವೆ ? ಹಾಗಾದರೆ, ಈವಾಗ ನಿಂತಿರುವ ಉಮೇದುವಾರರಲ್ಲಿ ಅಂಥವರು ಯಾರು ? ಯಾರನ್ನು ಯೋಗ್ಯರೆಂದು ಅನೇಕ ದೊಡ್ಡ ಮನುಷ್ಯರು ಪ್ರೋತ್ಸಾಹಿಸಿ ನಿಲ್ಲಿಸಿದ್ದಾರೆಯೋ, ಯಾರಿಗೆ ಓಟ್ ಕೊಟ್ಟರೆ, ಓಟ್ ಕೊಟ್ಟದ್ದಕ್ಕೆ ಸಾರ್ಥಕವಾಯಿತೆಂದು ತಾವು ಮುಂದೆ ತಿಳಿದುಕೊಳ್ಳುವಿರೋ, ಯಾರು ತಮ್ಮ ವಿಶ್ವಾಸಪೂರ್ವಕವಾದ ಸಮ್ಮತಿಯನ್ನು (ಓಟ್) ಖಂಡಿತವಾಗಿ ಪಡೆಯುತ್ತೇವೆಂಬ ನಿರೀಕ್ಷಣೆಯುಳ್ಳವರಾಗಿರುವರೋ ಅಂಥವರಾದ ದಾವಣಗೆರೆಯಲ್ಲಿ ಅಡ್ವೋಕೇಟ್‍ರಾಗಿರುವ ವೇ|| ಹಿರೇಮಠದ ಚಂದ್ರಶೇಖರಯ್ಯ, ಬಿ.ಎ., ಎಲ್‍ಎಲ್.ಬಿ., ಇವರು. ಇವರಲ್ಲಿರತಕ್ಕ ಕಾರ್ಯದಕ್ಷತೆ, ವಿಚಾರಜ್ಞಾನ, ಸರಳತನ, ಅತುಲ ಧೈರ್ಯ ಮೊದಲಾದ ಸದ್ಗುಣಗಳನ್ನು ಕುರಿತು ವಿಶೇಷವಾಗಿ ಪ್ರಕೃತ ವರ್ಣನೆಮಾಡಬೇಕಾದ ಆವಶ್ಯಕತೆಯಿಲ್ಲ. ಆದರೆ, ನ್ಯಾಯವಿಧಾಯಕಸಭೆಗೆ ತಮ್ಮೆಲ್ಲರ ಸಹಾಯದಿಂದ ಮೆಂಬರರಾಗಿ ಇವರು ಸಾಧಿಸುವ ಕಾರ್ಯಗಳ ರೂಪದಲ್ಲಿ ಆ ಸದ್ಗುಣಗಳ ವರ್ಣನೆಯು ತಾನಾಗಿಯೇ ಪ್ರಕಾಶವಾಗುವುದು. ಆದುದರಿಂದ ಚುನಾವಣೆಗಾಗಿ ಗೊತ್ತುಮಾಡಲ್ಪಟ್ಟಿರುವ ಈ ತಿಂಗಳು 15ನೆಯ ತಾರೀಖಿನ ದಿವಸ ತಾವೆಲ್ಲರೂ ತಮ್ಮತಮ್ಮ ಓಟಿಂಗ್ ಸ್ಥಳಗಳಿಗೆ ಸಕಾಲಕ್ಕೆ ತಪ್ಪದೆ ದಯಮಾಡಿಸಿ ತಮ್ಮ ಉದಾರವಾದ ಓಟನ್ನು ಇವರ ಹೆಸರಿಗೇನೇ ಒಮ್ಮನಸ್ಸಿನಿಂದ ಕೊಟ್ಟು ತಮ್ಮ ಜವಾಬ್ದಾರಿಯ ಕೆಲಸವನ್ನು ಸಾರ್ಥಕಗೊಳಿಸುವಿರೆಂದು ತುಂಬಾ ನಂಬಿದ್ದೇನೆ. ಓಟರ್ಸ್ ಮಹಾಶಯರೇ ! ಅನ್ಯರ ಅಂದವಾದ ವಿಜ್ಞಾಪನಪತ್ರಿಕೆಗಳಲ್ಲಿರುವ ಸಕ್ಕರೆಯಂಥ ಸವಿಮಾತುಗಳಿಗೆ ಕಿವಿಗೊಡಬೇಡಿರಿ. ಅಂಥವರ ಪರವಾಗಿ ಹೊರಟು ತಮ್ಮ ಮನೆಗಳ ಬಾಗಿಲಿಗೆ ಬಂದು ಅವರ ಪ್ರಶಂಸೆಯನ್ನು ಕುರಿತು ಅನೇಕವಿಧವಾಗಿ ಹೇಳಿಹೋಗಿರುವ ಮತ್ತು ಹೇಳುವುದಕ್ಕೆ ಬರುವ ಹಲವರ ಬೂಟಾಟಿಕೆಯ ಮಾತುಗಳಿಗೆ ಮರುಳಾಗಬೇಡಿರಿ. ಈವಾಗ ಅಂಥವರ ಮಾತುಗಳು ಬಹು ರುಚಿಯಾಗಿ ತೋರುತ್ತವೆ. ಆದರೆ ಮುಂದೆ ಅವರುಮಾಡುವ ಕೃತಿಗಳು ಬಹು ಕಹಿಯಾಗಿ ಪರಿಣಮಿಸುತ್ತವೆ. ಆದಕಾರಣ ದಾಕ್ಷಿಣ್ಯಕ್ಕಾಗಲಿ, ಸ್ವಾರ್ಥಕಾರ್ಯ ಸಾಧನೆಗಾಗಲಿ, ತಮ್ಮ ಓಟಿಂಗ್ ಶಕ್ತಿಯನ್ನು ಹಾಳುಮಾಡಿಕೊಳ್ಳಬೇಡಿರಿ. ಚುನಾವಣೆಯ ಕಾಲವು ತೀರಾ ಸಮೀಪಿಸಿರುವುದರಿಂದಲೂ, ತಾವೆಲ್ಲರೂ ಸಾರಾಸಾರ ವಿಚಾರಪರರಾಗಿರುವುದರಿಂದಲೂ ನಾನು ಹೆಚ್ಚಿಗೆ ಹೇಳಲಾರೆ, ಆದರೆ ಎಚ್ಚರ.

ದಾವಣಗೆರೆ,
6-2-1924. ಬಿ. ಎಸ್. ಕುರುವತ್ತಿ,

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:— ನಾನು ಕ್ಯಾತನಹಳ್ಳಿ ಶಿವಲಿಂಗಯ್ಯನ ತಮ್ಮ ಹಳ್ಳದರಾಮನೆಂಬುವನನ್ನು 8-9 ವರ್ಷಗಳ ಹಿಂದೆ ನಾನು ಅಪುತ್ರವಂತನಾದುದರಿಂದ ಮಗನನ್ನಾಗಿಮಾಡಿಕೊಂಡಿದ್ದೆ. ಆತನು ಈಗ್ಯೆ 6 ವರ್ಷಗಳ ಹಿಂದೆ ಕಾಲವಾದನು. ಆತನ ಹೆಂಡತಿ ಶಿದ್ದಿ ಎಂಬುವಳು ಅಂದಿನಿಂದ ಎಲ್ಲೆಲ್ಲೊ ಮನಸ್ಸಿಗೆ ತಿರುಗುತ್ತಾ ದುರ್ಮಾರ್ಗದಲ್ಲಿ ಪ್ರವರ್ತಿಸಿರುತ್ತಾಳೆ. ಈಕೆಯ ಚಾಲುಚಲನ್ ಚನ್ನಾಗಿರುವುದಿಲ್ಲ. ಈಗ ಈಕೆ ಗರ್ಭಿಣಿಯಾಗಿದ್ದಾಳೆಂಬುದನ್ನು ಕೇಳುತ್ತೇನೆ. ಈಕೆಗೆ ನನ್ನ ಆಸ್ತಿಗಳಲ್ಲಿ ಜೀವನಾಂಶ ಭಾಗಾಂಶ ವಗೈರೆ ಯಾವುದೂ ಸೇರತಕ್ಕದ್ದಿರುವುದಿಲ್ಲ. ಈಕೆಯಿಂದ ಯಾರಾದರೂ, ಯಾವ ವಿಧವಾದ ಸರಭರೆಮಾಡಿಸಿಕೊಂಡಲ್ಲಿ ಅದು ಊರ್ಜಿತವಾಗುವುದಿಲ್ಲವೆಂಬ ಸಂಗತಿ ಈ ಮೂಲಕ ಎಚ್ಚರಿಸಿದ್ದೇನೆ.

ತಾ|| 2-2-1924. ನಂಜಣ್ಣನ ಮಗ ಭೈರಣ್ಣ,
ಹರಳಕಟ್ಟೆ, ಅರಸೀಕೆರೆ ತಾ||

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿ ಇರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಊದುಬತ್ತಿ ಷಾಪ್, ಕಳ್ಳಪ್ಪ,
ಬೆಂಗಳೂರು ಸಿಟಿ ದೊಡ್ಡಪ್ಯಾಟೆ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರ ಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪ ವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನವ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳು ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅ ಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರವಮಾಡಿದಂತಾಗು ಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4— 12 ಬಾಟ್ಲುಗಳಿಗೆ 2—6—0. 25 ಬಾಟ್ಲುಗಳಿಗೆ 4—8—0. ಅ ಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‍ಗಳನ್ನು ಪೋಸ್ಟೇಜು ನಾವ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‍ರವರು ಉತ್ತ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸು ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್ ಶಾಲುಗಳನ್ನು ಸುಲಭ ಬೆಲೆಯಿಂದ ಬಿ ಮಾಡುತ್ತಾರೆ.

ನೀವು ಇಷ್ಟಪಟ್ಟ ನಮೂನೆಯಲ್ಲಿ ನೀವು ಅಪೇಕ್ಷಿಸುವ ಭಾಷೆಯಿಂ ನಿಮ್ಮ ಹೆಸರು ವಿಳಾಸಗಳ ರಬ್ಬರ್ ಮೊಹರನ್ನು ಅಂದವಾಗಿ ತಯಾ ಕೊಡುತ್ತಾರೆ.

ಹಾರ್ಮೋನಿಯಂಗಳನ್ನೂ ಪೌಂಟೆನ್ ಪೆನ್‍ಗಳನ್ನೂ ತೃಪ್ತಿಕರವಾ ರಿಪೇರೀ ಮಾಡಿಕೊಡುತ್ತಾರೆ.

ಹೆಚ್ಚು ವಿಷಯಗಳಿಗೆ ಇವರ ಕಂಪನಿಯ ಕ್ಯಾಟಲಾಗ್‍ನ್ನೂ ತರಿಸಿನೋಡಿ

ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು,
[50—21] ಮೈಸೂ

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯ ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಚಳಿಮ ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮— ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮— ವಿ. ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ :—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—13] ಪೋಸ್ಟು ಬಾಕ್ಸು ನಂಬರು ೩೧೬, ಮದರಾಸ

೧೯೨೪ನೆಯ ಇಸವಿ ಫೆಬ್ರವರಿ ತಾ|| ೧೦ರಿಂದ ೧೯೨೪ ನೆಯ ಫೆ ವರಿ ತಾ|| ೧೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರು ರೋದ್ಗಾರಿನಾಮ ಸಂವತ್ಸರದ ಮಾಘಶುದ್ಧ ಪಂಚಮಿಯಿಂದ ಮಾಘಶು ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
10	[1]ಭಾನು	ಪಂಚ	4.38	ರೇವ	17.8
11	[2]ಸೋಮ	ಷಷ್ಠಿ	8.30	ಅಶ್ವಿ	22.25
12	[3]ಮಂಗಳ	ಸಪ್ತ	13.2	ಭರ	28.9
13	[4]ಬುಧ	ಅಷ್ಟ	17.45	ಕೃತ್ತಿ	34.0
14	[5]ಗುರು	ನವ	22.38	ರೋಹಿ	40.8
15	ಶುಕ್ರ	ದಶ	27.8	ಮೃಗ	45.51
16	[6]ಶನಿ	ಏಕಾ	31.12	ಆರ್ದ್ರಾ	51.0

(1) ಮದನಪಂಚಮಿ. (2) ಕುಮಾರಷಷ್ಠಿ. (3) ರಥಸಪ್ತ ಸೂರ್ಯಚಂದ್ರವ್ರತಂ, ಬಾಸ್‍ಪಟ್ಟಾಭಿಷೇಕ ಬೆಳದದ್ದು. (4) ಭೀಷ್ಮಾ ಷ್ಟಮಿ. (5) ಮಧ್ವನವಮಿ, ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿರ (6) ಸರ್ವತ್ರ ಏಕಾದಶಿ, ಭೀಷ್ಮೈಕಾದಶಿ, ತಿಲಪದ್ಮವ್ರತಂ.

ಮೈಸೂರು : ವೈ. ಏಕಾಂಬರಯ್ಯನವರಿಂದ ಶ್ರೀ ಎಚ್ಚಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿಭಾನ ಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮರ್ಧಿಗತರಾಜಮು ಸಪಥಕೃತಾವತಾರಾ ಪಕ್ಷ್ಮಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಮತ್ತಮುಕಲಾಲೋಲ ನಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಿ ಮಂಚಿತ್ತಿಲೆಯಂಕದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭) ಮೈಸೂರ್ ಸ್ಟಾರ್ ಸರ್ ೧೯೨೪ ನೇಯ ಇಸವಿ ಫೆಬ್ರವರಿ ತಾರೀಖು ೨೪ ನೇಯ ಭಾನುವಾರ. ಸಂಚಿಕೆ ೭

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ವೈಶ್ವಾನರಾಸವ.

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳನ್ನು ಗುಣಪಡಿಸುವ ನಂಬುಗೆಯಾದೌಷಧಿ.

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲೀ ಇಲ್ಲ. ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು ಕ್ರಮವಾಗಿ ಗುಣವಾಗುತ್ತದೆ.

1 ಸೀಸೆ ಬೆಲೆ 1—0—0. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲಪಂಡಿತ,
54 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾ. ಜೆ. ಬಿ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ :—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—26] ಪೋ. ಬಾ. ೫೧೦, ಮದರಾಸು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ.	೦—೧೨—೦	೧—೨—೦
ವೀರಶೈವ ವಿವಾಹವಿಧಿ.	೦—೮—೦	೦—೧೪—೦
[illegible]	೦—೪—೦	೦—೯—೦
[illegible]	೦—೫—೦	೦—೧೦—೦
[illegible]	೦—೪—೦	೦—೯—೦
[illegible]	೦—೪—೦	೦—೯—೦
[illegible]	೦—೧—೦	೦—೬—೦
[illegible]	೦—೯—೦	೦—೧೪—೦

ಉತ್ತಮವಾದ ವೀರಶೈವ ಮತಗ್ರಂಥಗಳು.

	ಕ್ರಯ.
ವೀರಶೈವ ಷಟ್‍ಸ್ಥಲಸಿದ್ಧಾಂತ	೦—೯—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣಿ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—13] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಿಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಿಕೆ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಬಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದಾಗೋಣ, ಸಂದು ಬೆನ್ನು, ತೆಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುಬಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಿಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆಯುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಲ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಸಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರ (ಬೊಗಟಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶಣಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿಸಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ಶಾಲೀಮಖಾನಾ. ಬೀಜಬಂಧ, ಜಿಂಗೊರಸು, ಮೊಂಗಲ್ ಬೇದಾಣ, ಮೈದಾಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ವಂಗಜ), ಅಲದ ಹಾಲು, ಪಾಕೇರಿಭಾತ, ಗೋಖರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಬಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜೀನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ತ್ವರೆಮಾಡಿರಿ.

[50—29] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿ
[50—7] ಅಂಡ್ ಸನ್ಸ್, ಜೆ. ಪಿ. ಮಂಡಲಿ, ಮೈಸೂರು.

ಶ್ರೀ ರಕ್ತಾಕ್ಷಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

ವೀರಶೈವ ಪಂಚಾಚಾರ್ಯ ಪೀಠಗಳಲ್ಲೊಂದಾದ ಶ್ರೀ ರಂಭಾಪುರೀ (ಬಾಳೆಹಳ್ಳಿಯ) ಜಗದ್ಗುರು ಪೀಠದ ಚರಪಟ್ಟಾಧಿಕಾರಿಗಳಾಗಿದ್ದ ಶ್ರೀ ಪಂಚಾಕ್ಷರೀರಾಜ ದೇಶಿಕೇಂದ್ರ ಮಹಾಸ್ವಾಮಿಗಳು ಶಿವೈಕ್ಯರಾಗಿ ೨ ವರ್ಷಗಳ ಮೇಲಾಯಿತು. ಸ್ವಾಮಿಗಳು ತಾವೇ ತಮ್ಮ ಉತ್ತರಾಧಿಕಾರಿಗಳನ್ನು ಗೊತ್ತುಮಾಡದೆ ಹೋದುದರಿಂದ ಆ ಸ್ಥಳಕ್ಕೆ ಯೋಗ್ಯರಾದವರನ್ನು ಆರಿಸುವ ಭಾರವು ಸಮಾಜದವರ ಮೇಲೆ ಬೀಳಲಾಗಿ ಪೂರ್ವಾರಭ್ಯ ಈ ಪೀಠದ ಅಭಿಮಾನಿಗಳಲ್ಲಿ ಮುಂದಾಗಿರುವ ಮತ್ತು ಹಿಂದೆ ಅಧಿಕಾರಿಗಳನ್ನು ಗೊತ್ತುಮಾಡುವುದರಲ್ಲಿ ಒಬ್ಬಾದವರಾಗಿದ್ದ ನರಸಿಂಹರಾಜಪುರದ ಮ|| ಇಂ. ಶಾಂತಪ್ಪ ಸೆಟ್ಟರೂ, ಬೀರೂರಿನ ಪತ್ರೆ ಮನೆತನದವರೂ ಅರಸೀಕೆರೆ ಮೊದಲಾದ ಆ ಪ್ರಾಂತದ ಸಮಾಜಬಾಂಧವರ ಸಹಾಯ್ಯದಿಂದ 1923ನೆ ನವಂಬರ್ ತಿಂಗಳಲ್ಲಿ ಅರಸೀಕೆರೆಯಲ್ಲಿ ಒಂದು ಸಭೆಯನ್ನು ಕೂಡಿಸಿ ಈ ಪೀಠಕ್ಕೆ ಒಬ್ಬ ಪಟ್ಟಾಧಿಕಾರಿಗಳನ್ನು ನಿಯಮಿಸಲು ನಿಶ್ಚಯಿಸಿ ಇದಕ್ಕೆ ತಕ್ಕವರನ್ನು ಆರಿಸಿ ತರಲು ನಾಲ್ಕು ಮಂದಿ ದೊಡ್ಡಮನುಷ್ಯರುಗಳನ್ನು ಗೊತ್ತುಮಾಡಿದುದರ ಮೇಲೆ, '' ಈ ನಿಯುಕ್ತರಾದ ದೊಡ್ಡಮನುಷ್ಯರುಗಳು ಬಹು ಜನಾಭಿಪ್ರಾಯವನ್ನು ತೆಗೆದುಕೊಳ್ಳದೆ ತಮಗಿಷ್ಟರಾದವರೊಬ್ಬರನ್ನು ಕರೆದುಕೊಂಡು ಬಂದು ಪಟ್ಟಕಟ್ಟುವವರಾಗಿರುವರು. ಇದರಿಂದ ಸಮಾಜದಲ್ಲಿ ಅಸಮಾಧಾನವೂ ಅನರ್ಥವೂ ಉಂಟಾಗುವುವು'' ಎಂದು ಮೊದಲಾಗಿ ನಾನಾಕಡೆಯಿಂದ ಅನೇಕ ಆಕ್ಷೇಪಗಳು ಹೊರಟವು. ಶಾಖಾಮಠಗಳಿಗೆ ಉತ್ತರಾಧಿಕಾರಿಗಳನ್ನು ನಿಯಮಿಸಬೇಕಾದಾಗ್ಗೆ ಬಹಿರಂಗ ಪ್ರಕಟನೆಗಳ ಮೂಲಕ ಯೋಗ್ಯ ವಟುಗಳನ್ನಪೇಕ್ಷಿಸಿ ಬರಮಾಡಿಕೊಂಡು ಕಾರ್ಯವನ್ನು ನೆರವೇರಿಸುವ ಉತ್ತಮ ಪದ್ಧತಿಯು ಅಲ್ಲಲ್ಲಿ ಬಳಕೆಗೆ ಬಂದಿರುವಾಗ್ಗೆ ಇಂತಹ ಮುಖ್ಯ ಆಚಾರ್ಯಪೀಠಗಳಿಗೆ ಅಂತಹ ನಿರಾಕ್ಷೇಪಮಾರ್ಗವನ್ನು ಅನುಸರಿಸದೆ ಹೋಗುವುದು ಯುಕ್ತವಲ್ಲವು. ಅದುಕಾರಣ ಕಳೆದುಕೊಂಡಿರುವ ಪೀಠದ ಪೂರ್ವಾಸ್ಥ್ಯವನ್ನು ಸಂಪಾದಿಸಿಕೊಳ್ಳಬೇಕೆಂಬ ನಿರಂತರ ಕುತೂಹಲವೂ, ಅದಕ್ಕೆ ತಕ್ಕ ಶಕ್ತಿಯೂ, ವಿದ್ವತ್ತೂ ಸದಾಚಾರ ಕುಲಶೀಲಾದಿ ಸಂಪತ್ತೂ ಇವೆಲ್ಲಕ್ಕಿಂತಲೂ ಮಿಗಿಲಾಗಿ ಸಮಾಜದಲ್ಲಿ ಐಕಮತ್ಯವನ್ನು ವೃದ್ಧಿಗೊಳಿಸಿ ಅದಕ್ಕೆ ಸರ್ವತೋಮುಖವಾದ ಏಳ್ಗೆಯನ್ನುಂಟುಮಾಡಬೇಕೆಂಬ ದೃಢತರಮನೋಭಾವವೂ, ಶಮದಮಾದಿ ಗುಣಾತಿಶಯವೂ ಇರತಕ್ಕವರು ಅಧಿಕಾರಕ್ಕೆ ತರಲ್ಪಡಬೇಕು. 3-4 ಜನರು ಸೇರಿ ಇಂತಹವರನ್ನು ಪರೀಕ್ಷಿಸಿ ಗೊತ್ತುಮಾಡುವುದೆಂದರೆ ಸಾಧ್ಯವಲ್ಲವು ಮತ್ತು ಹಾಗೆ ಪರೀಕ್ಷೆಮಾಡತಕ್ಕವರಲ್ಲಿಯೂ ತಕ್ಕ ಸಾಮರ್ಥ್ಯವಿರಬೇಕಾಗುತ್ತದೆ. ಅದುಕಾರಣ ಅಂತಹ ದೊಡ್ಡ ಕಾರ್ಯವನ್ನು ನಾಲ್ಕಾರು ಜನರ ತಲೆಯಮೇಲೆ ಹೇರಿ ನಿಷ್ಠುರಕ್ಕೂ ಕಷ್ಟಕ್ಕೂ ಅವರನ್ನು ಗುರಿಮಾಡಿಬಿಡುವುದಕ್ಕಿಂತಲೂ, ದೇಶಮಧ್ಯದಲ್ಲಿರುವ ವೀರಶೈವ ವೃತ್ತಪತ್ರಿಕೆಗಳಲ್ಲಿ ಇಂತಿಂತಹ ಯೋಗ್ಯತೆಯುಳ್ಳವರು ಈ ಪೀಠಾಧಿಕಾರಕ್ಕೆ ಬೇಕೆಂದೂ, ಅಭ್ಯರ್ಥಿಗಳು ಇಂತಹವರಲ್ಲಿಗೆ ಬರೆದುಕೊಳ್ಳಬೇಕೆಂದೂ ಪ್ರಕಟಪಡಿಸಿ ಪಟ್ಟಾಭಿಷೇಕಕಾಲಕ್ಕೆ ಅಂತಹವರನ್ನೆಲ್ಲಾ ಬರಮಾಡಿಕೊಂಡು, ಪರೀಕ್ಷೆಮಾಡಲು ಯೋಗ್ಯತಾ ಸಂಪನ್ನರಾದ ಕೆಲ ದೊಡ್ಡಮನುಷ್ಯರುಳ್ಳ ಒಂದು ಸಂಘದ ಮೂಲಕ ಆ ಅಭ್ಯರ್ಥಿಗಳಲ್ಲಿ ಉತ್ತಮತರಗತಿಯವರಾದವರನ್ನು ನಿರ್ಧರಗೊಳಿಸಿಕೊಂಡು ಅವರುಗಳಲ್ಲಿ ಪ್ರತಿಯೊಬ್ಬರ ಯೋಗ್ಯತಾಂಶವನ್ನು ಆ ಕಾಲಕ್ಕೆ ಸೇರಿರುವ ಮಹಾಜನ ಸಮೂಹಕ್ಕೆ ಶ್ರುತಪಡಿಸಿ ಅವರುಗಳ ಓಟುಗಳನ್ನು ತೆಗೆದುಕೊಂಡು ಹೆಚ್ಚು ಓಟುಗಳು ಯಾರಿಗೆ ದೊರೆಯುವುದೋ ಅವರನ್ನು ಅಧಿಕಾರಕ್ಕೆ ಗೊತ್ತುಪಡಿಸಿ ಕಾರ್ಯವನ್ನು ಸಾಂಗಗೊಳಿಸುವುದು ನಿರಾಕ್ಷೇಪವೂ ಸರ್ವಸಮ್ಮತವೂ ಆದ ಮಾರ್ಗವೆನಿಸುತ್ತದೆ. ಈ ನಮ್ಮ ಸೂಚನೆಯು ಸೂಕ್ತವಾಗಿ ಕಂಡರೆ ಈ ಕಾರ್ಯವ್ಯವಸ್ಥಾಪಕಮಹಾಶಯರು ಅಂಗೀಕರಿಸಬಹುದು. ಎಂದು ತಿಳಿಸಿದ್ದೆವು.

ಈ ಮಹಾಪೀಠದ ಉತ್ತರಾಧಿಕಾರ ಕಾರ್ಯಾಸಕ್ತರಾದವರು ನಾವು ಮೊದಲು ಕೊಟ್ಟಿರುವ ಸೂಚನೆಯನ್ನು ಮಾನ್ಯಮಾಡಿ ಅದರಂತೆ ಮಹಾಉತ್ತರವಾದಿತ್ವವುಳ್ಳ ಈ ಕಾರ್ಯವನ್ನು ನಡೆಯಿಸಲು ನಿಶ್ಚಯಿಸಿರುವುದಾಗಿ ಈ ಪತ್ರಿಕೆಯ ಬೇರೊಂದು ಕಡೆ ಸಂಸ್ಥಾನದ ಏಜಂಟರ ಹೆಸರಿನಿಂದ ಪ್ರಕಟವಾಗಿರುವ ಪ್ರಸಿದ್ಧಪತ್ರಿಕೆಯಿಂದ ವ್ಯಕ್ತವಾಗುತ್ತದೆ. ಹಿಂದಿದ್ದ ಶ್ರೀಗಳವರು ಶಿವಾಧೀನರಾಗಿ ಬಹಳ ಕಾಲವಾದರೂ ಪೀಠದ ಮುಂದಣ ಪರಿಣಾಮವೇನೆಂಬುದನ್ನೂ, ಅರಣ್ಯದಲ್ಲಿರುವ ಆ ಮಠದ ನಿತ್ಯನೈಮಿತ್ತಿಕ ಕಾರ್ಯಗಳ ಅವಸ್ಥೆ ಏನೆಂಬುದನ್ನೂ ಯಾರೊಬ್ಬರೂ ಪರ್ಯಾಲೋಚಿಸದೆ ಮಠದ ಸ್ಥಿತಿಯು ಬಹಳ ಶೋಚನೀಯವಾಗುತ್ತಾ ಬಂದುದರ ಮೇಲೆ, ಮೂರು ನಾಲ್ಕು ತಲೆಗಳಿಂದಲೂ ಅನುಸರಿಸಿ ಬಂದ ಅಭಿಮಾನ ಭಕ್ತಿ ಶ್ರದ್ಧಾದಿಗಳಿಂದಲೂ, ಮಠದ ಅನಾಥಸ್ಥಿತಿಯನ್ನು ನೋಡಲಾರದ ಕನಿಕರದಿಂದಲೂ ಮ|| ಶಾಂತಪ್ಪಸೆಟ್ಟರು ಮತ್ತೆ ಕೆಲರು ಮುಂದಾಳುಗಳಾಗಿ ನಿಂತರು. ಅವರುಗಳು ಯಾವುದೋ ಸಾಂಕೇತಿಕಾಭಿಪ್ರಾಯದಿಂದಲೂ, ಪಕ್ಷಾಭಿಮಾನದಿಂದಲೂ ಈ ಮಹಾಕಾರ್ಯವನ್ನು ಬಹಿರಂಗಪಡಿಸದೆ ತಾವು ಕೆಲಜನರು ಮಾತ್ರ ಕೂಡಿ ನೆರವೇರಿಸುವವರಾಗಿರುವರೆಂದು ಮೊದಲಾಗಿ ವೃತ್ತಪತ್ರಿಕೆಗಳ ಮೂಲಕವೂ ಇತರ ವಿಧದಲ್ಲೂ ಜನರು ಆಕ್ಷೇಪಿಸಲುಪಕ್ರಮಿಸಿದುದರ ಮೇಲೆ, ಪೀಠಾಭಿಮಾನಿಶಾಲಿಗಳಾದ ಆ ಮುಂದಾಳುದೊಡ್ಡಮನುಷ್ಯರುಗಳು ಈವರೆಗೂ ತಟಸ್ಥರಾಗಿದ್ದಂತೆ ತೋರುತ್ತದೆ. ಲೋಕದಲ್ಲಿ ಯಾವಕಾರ್ಯವನ್ನಾಗಲಿ ಆಕ್ಷೇಪಿಸುವುದು ಸುಲಭವೇ ಹೊರತು ಮಾಡುವುದು ಸುಲಭವಲ್ಲ. ಪ್ರತಿಯೊಂದು ಕಾರ್ಯದಲ್ಲೂ ಮುಂದಾಳುಗಳಿಗೆ ತೊಡಕುಗಳು ತಪ್ಪದುವಲ್ಲ. ಅದುಕಾರಣ ಸಮಾಜಬಾಂಧವರು ಬರೇ ಆಕ್ಷೇಪಣೆಗಳಲ್ಲೇ ಕಾಲಹರಣ ಮಾಡದೆ ಮುಂದಾಳುಗಳಿಗೆ ಬೆಂಬಲರಾಗಿ ನಿಂತು ಕಾರ್ಯಾಚರಣೆಯಲ್ಲಿ ತಪ್ಪಿದ್ದರೆ ತಿದ್ದಿಕೊಟ್ಟು ಕಾರ್ಯವು ನಿರ್ವಿಘ್ನವಾಗಿಯೂ ನಿರಾಕ್ಷೇಪವಾಗಿಯೂ ನಡೆಯುವಂತೆ ಮಾಡಿ ಕೃತಕೃತ್ಯರಾಗುವುದು ಒಳ್ಳೆಯದು. ಈ ಮಹಾಕಾರ್ಯವು ರಹಸ್ಯವಾಗಿಯೂ ಜನರಭಿಪ್ರಾಯಕ್ಕೆ ವಿರುದ್ಧವಾಗಿಯೂ ನಡಿಸಲ್ಪಡದೆ ಅಭಿಮಾನಶಾಲಿಗಳಾದ ಪ್ರಮುಖದೊಡ್ಡಮನುಷ್ಯರ ಸಹಾಯ್ಯಸಾನುಭೂತಿಯಿಂದ ಬಹಿರಂಗವಾಗಿ ನಡಿಸಲ್ಪಡುವುದೆಂದು ಮ|| ಶಾಂತಪ್ಪಸೆಟ್ಟರು ಲಿಖಿತಮೂಲಕವಾಗಿಯೂ ಪ್ರತ್ಯಕ್ಷವಾಗಿಯೂ ನಮ್ಮ ಕೂಡ ತಿಳಿಸಿರುತ್ತಾರಾದುದರಿಂದಲೂ, ಶ್ರೀಮದುಜ್ಜಯಿನಿ ಸಂಸ್ಥಾನಾಧೀಶ್ವರರು ಈ ಮಹಾಕಾರ್ಯನಿರ್ವರ್ತನದಲ್ಲಿ ಅಧ್ಯಕ್ಷರಾಗಿ ನಿಂತಿರುವುದರಿಂದಲೂ ಕೆಲಜನರು ಶಂಕಿಸುವಂತೆ ಸಮಾಜದ ಬಹುಜನಾಭಿಪ್ರಾಯಕ್ಕೆ ವಿರುದ್ಧವಾಗಿ ನಡಿಯಲಾರದೆಂದು ತೋರುತ್ತದೆ. ಅದುಕಾರಣ ಸುಪ್ರಸಿದ್ಧವಾಗಿಯೂ, ಪ್ರಾಚೀನವಾಗಿಯೂ, ಬಹುಸಂಖ್ಯಾಕ ಶಿಷ್ಯಮಂಡಲಿ ದಾಗಿಯೂ ಇರುವ ಶ್ರೀ ರಂಭಾಪುರೀ ಪೀಠದಲ್ಲಿ ಶ್ವಾಸವುಳ್ಳ ವೀರಶೈವರು ಪಟ್ಟಾಭಿಷೇಕಕಾಲಕ್ಕೆ ತಪ್ಪ ದೆಹೊಸ್ನೂರಿಗೆ ಹೋಗಿ ಅಧಿಕಾರಸ್ವೀಕಾರಕಾಂಕ್ಷಿಗ ಳ ವಟುಗಳಲ್ಲಿ ಕುಲಶೀಲಸಂಪನ್ನರಾಗಿಯೂ, ವಿದ್ಯಾವಂತ ಗಿಯೂ, ಕಾಲಗತಿವೈಚಿತ್ರ್ಯದಿಂದ ಈಪೀಠಕ್ಕೆ ಪ್ರಾಪ್ತವಾ ದ ಗ್ಲಾನಿಯು ತಪ್ಪಿಹೋಗಿ ಪೂರ್ವಾಸ್ತಿತ್ಯವನ್ನು ಸಂಪಾ ದಿಸಲು ಸಮರ್ಥರಾಗಿಯೂ, ಪೀಠಾಚಾರ್ಯರು ಮುಖ್ಯ ವಹಿಸಬೇಕಾದ ಮತಧಾರ್ಮಿಕಾಭ್ಯಭಿವೃದ್ಧಿ ಕಾರ್ಯ ರಾಗಿಯೂ, ಸಮಾಜಕ್ಕೆ ಉತ್ಪಾತ ರೂಪವಾಗಿ ಹುಟ್ಟಿಸ ಲ್ಪಟ್ಟಿರುವ ವಿರಕ್ತ ಪಟ್ಟಾಧಿಕಾರಿಗಳ ವಿಷಮ ಕಲಹಕ್ಕೆ ಮಾತ್ರವೂ ಅವಕಾಶಕೊಡದೆ ಅದರ ಶಾಂತಿಗಾಗಿ ಸಾಹ ಡತಕ್ಕವರಾಗಿಯೂ ಇರತಕ್ಕವರನ್ನು ಆರಿಸಿ ಅವರಿಗೆ ಕಟ್ಟಿ ಕೃತಕೃತ್ಯರಾಗುವುದಲ್ಲದೆ, ಸಮಾಜಬಾಂಧವರ ದನೆಗಳಿಗೂ, ಈಶ್ವರನ ಪೂರ್ಣಾನುಗ್ರಹಕ್ಕೂ ಪಾತ್ರರಾಗ ಗಿ ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು.

ನೂತನವಾಗಿ ಸಂಸ್ಕರಿಸಲ್ಪಟ್ಟ ಪ್ರಜಾಪ್ರತಿನಿಧಿ ಸಭೆಯ ಂಭೋತ್ಸವವು ಶ್ರೀಮನ್ಮಹಾರಾಜರವರಿಂದ ಬರುವ ಮಾರ್ಚಿ || 12 ರಲ್ಲಿ ನಡಿಸಲ್ಪಡುವುದಾಗಿ ತಿಳಿಯಬರುತ್ತದೆ.

ಮಂಗಳೂರಿನ ಉಲ್ಕ್ ಮಾರ್ಟ್‌ರವರಲ್ಲಿ ದೊರೆಯುವ ರ್ಥಗಳ ಪ್ರಕಟನಪತ್ರಿಕೆಯು ಈ ಸಂಚಿಕೆಯ ಕೂಡ ಹಂ ಟ್ಟಿರುತ್ತದೆ. ವಾಚಕರು ಗಮನಿಸಬೇಕಾಗಿ ಕೋರುತ್ತೇವೆ.

ರೆವಿನ್ಯೂ ಕಮೀಷನರಾಫೀಸಿನಲ್ಲಿರುವ ಅ|| ಕಮೀಷನರ್ || ಡಿ. ಸಿ. ಸುಬ್ರಾಯಪ್ಪ, ಬಿ.ಎ.,ಬಿ.ಎಲ್., ರವರು ಹಾಸ ಡಿಸ್ಟ್ರಿಕ್ಟ್‌ಟ್ರಿಜರಿ ಛಾರ್ಜಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಹಾಸನ ಡಿ|| ಟ್ರಿಜರಿ ಛಾರ್ಜಿಗೆ ವರ್ಗಾಯಿಸಲ್ಪಟ್ಟಿದ್ದ || ಆರ್. ಪಿ. ಮಲ್ಲಪ್ಪ, ಬಿ.ಎ., ಎಲ್‌ಎಲ್.ಬಿ. ಯವರು ಂಡ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಜೋಗುನೀರಿನಿಂದ ತರೀ ಫಸಲಿಡಲ್ಪಟ್ಟಲ್ಲಿ ಬರೇ ನೀರಿನ ದಾಯವು ವಿಧಿಸಲ್ಪಡುವುದಾಗಿಯೂ, ಈ ರೀತಿ 5 ವರ್ಷ ಲ ಫಸಲಿಡಲ್ಪಟ್ಟಲ್ಲಿ ತರೀಕಂದಾಯ ದಾಖಲ್ಮಾಡಲ್ಪಡುವು ಗಿಯೂ ಜೋಗುನೀರಿನಿಂದ ಫಸಲಿಡಲ್ಪಟ್ಟಿರುವುದು ಅಮಲ್ದಾ ಂದ ಪ್ರತ್ಯಕ್ಷವಾಗಿ ಪರೀಕ್ಷಿಸಲ್ಪಟ್ಟು ಸರ್ಟಿಫೈ ಮಾಡಲ್ಪಡ ಕಾಗಿಯೂ ಸರ್ಕಾರದಪ್ಪಣೆಯಾಗಿರುತ್ತದೆ.

ಮ|| ಶೇಷಾದ್ರಿಅಯ್ಯಂಗಾರರು ಸರ್ಕಾರಿಹಣವನ್ನು ದುರು ಯೋಗಿಸಿದುದಕ್ಕಾಗಿ ಅವರ ಮೇಲೆ ಬೆಂಗಳೂರು ಸಿಟಿಮ್ಯಾಜಿ ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಲ್ಪಟ್ಟದ್ದಿತೆಂಬುದು ಷ್ಟು, ಆದರೆ ಗೌರ್ನಮೆಂಟ್ ಅಡ್ವೋಕೇಟರಾದ ಮ|| ಶಂಕ ನಾರಾಯಣರಾಯರು ಮೊನ್ನೆಯದಿನ ರಾಜಧಾನಿಗೆ ಬಂದಿದ್ದು ಕ್ಲಾಸ್ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಸರ್ಕಾ ರ ಫಿರ್ಯಾದನ್ನು ಹೂಡಿರುವುದಾಗಿಯೂ ಈ ವಿಚಾರಣೆ ಬರುವ ಮಾರ್ಚಿ ತಾ|| 13 ರಲ್ಲಿ ನಡಿಸಲ್ಪಡುವುದಾಗಿಯೂ ಯಬರುತ್ತದೆ.

ಬೆಂಗಳೂರು ಸಿಟಿ ಓಟರುಮಹಾಶಯರುಗಳು ಕಳೆದ 15 ತ್ತು 16ನೇ ತಾ|| ಗಳಲ್ಲಿ ನಡೆದ ಮೈಸೂರು ಪ್ರಜಾಪ್ರತಿನಿಧಿ ಾ ಮೆಂಬರುಗಳ ಚುನಾವಣೆಗಾಗಿ ತಮ್ಮ ದೇಹಶ್ರಮವನ್ನೂ ರ್ಯಗೌರವವನ್ನೂ ಲೆಕ್ಕಿಸದೆ ಆಯಾಯ ಚುನಾವಣೆಯ ನಗಳಿಗೆ ದಯಮಾಡಿಸಿ ವಿಶ್ವಾಸದಿಂದ ತಮ್ಮ ಅಮೌಲ್ಯ ದ ಓಟನ್ನು ಕೊಟ್ಟು ಚುನಾವಣೆಯಲ್ಲಿ ಉತ್ತೀರ್ಣರಾಗು ತೆ ಸಹಾಯಮಾಡಿದುದಕ್ಕಾಗಿ ಮ|| ಜಿ. ಪರಮಶಿವಯ್ಯನ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಯನ್ನು ದಯ ಟ್ಟು ಸ್ವೀಕರಿಸಬೇಕಾಗಿ ಈ ಮೂಲಕ ಅವರುಗಳನ್ನು ಪ್ರಾ ಸುತ್ತಾರೆ.

ರಾಜಧಾನಿ ಮಂಡಿಮಹಲ್ಲಾ ತೊಗರೀಬೀದಿಯಲ್ಲಿರುವ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಕಳೆದ 10 ತಿಂಗ ಮಹಾಭಾರತ ಕಥಾಶ್ರವಣವು ನಡಿಸಲ್ಪಡುತ್ತಿದ್ದು ದ ತಾ|| 15 ರಲ್ಲಿ ಶ್ರೀ ಧರ್ಮರಾಜಪಟ್ಟಾಭಿಷೇಕ ಮಹೋ ವವು ವಿಧ್ಯುಕ್ತವಾಗಿಯೂ ವಿಜೃಂಭಣೆಯಿಂದಲೂ ನಡಿಸಲ್ಪ ಟ್ಟಿದೆ ಪುರಾಣೀಕರಾದ ಮ|| ಹಿರೀಸಾವೆ ರಾಮಕೃಷ್ಣಯ್ಯ ಸುಶ್ರಾವ್ಯವಾಗಿಯೂ, ಲಲಿತವಾಗಿಯೂ ರಾಗಾಲಾಪ ದಲೂ ಓದುವುದಕ್ಕೂ ಮ|| ಕಿಕ್ಕೇರಿ ನಾರಾಯಣಶಾ ಅರ್ಥಮಾಡುವುದಕ್ಕೂ ಭಕ್ತಮಂಡಲಿಯವರು ಸಂತು ಅವರುಗಳಿಗೆ ಸುವರ್ಣಾಭರಣಗಳನ್ನೂ ವಸ್ತ್ರಗಳನ್ನೂ ನಿಸಿದರೆಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿರುತ್ತಾರೆ.

ಫೆಬ್ರುವರಿ ತಾ|| 9 ಕ್ಕೆ ಕಡೆಯಾದ ಒಂದು ವಾರದಲ್ಲಿ ಸ್ಥಾನದಲ್ಲೆಲ್ಲಾ ಒಟ್ಟು 55 ಜನರಿಗೆ ಪ್ಲೇಗು ತಗುಲಿ 40 ಸತ್ತರು, ಮತ್ತು 297 ಜನರಿಗೆ ವಾಂತಿಭೇದಿರೋಗವು 193 ಜನರು ಸತ್ತರು. ಇದರಲ್ಲಿ ರಾಜಧಾನಿಯೊಂದ 8 ಜನರಿಗೆ (ಇವರಲ್ಲಿ 39 ಹೊರಗಿನಿಂದ ಬಂದವರು) 34 ಜನ ಸತ್ತರು. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 2, ರಿ ತಾ|| ನಲ್ಲಿ 11, ಕೃಷ್ಣರಾಜಪೇಟೆ ತಾ|| ನಲ್ಲಿ 4, ತಾ|| ನಲ್ಲಿ 15, ಹುಣಸೂರು ತಾ|| ನಲ್ಲಿ 15, ಆರಕಲ ತಾ|| ನಲ್ಲಿ 6, ಹೊಸಕೋಟೆ ತಾ|| ನಲ್ಲಿ 6, ದೇವನ ಾ|| ನಲ್ಲಿ 4, ಕೋಲಾರ ತಾ|| ನಲ್ಲಿ 4 ಮತ್ತು ಶಿಡ್ಲ ಾ|| ನಲ್ಲಿ 3 ಇಂತಿಷ್ಟು ಗ್ರಾಮಗಳಲ್ಲಿ ವಾಂತಿಭೇದಿ ಂಟಾಗಿದೆ.

ನಾಲಾ ಕೆಳಗಿನ ಜಮೀನುಗಳಲ್ಲಿ ಗೊಬ್ಬರಕ್ಕೂ ದನಗಳ ಮೇವಿಗೂ ಅನುಕೂಲವಾದ ಬೆಳಸನ್ನಿಡುವವರು ಎಕರೆಯೊಂದಕ್ಕೆ 1 ರೂ. ಕಂದಾಯವನ್ನು ಕೊಟ್ಟು ನೀರನ್ನುಪಯೋಗಿಸಿಕೊಳ್ಳುವಂತೆ ಸೌಲಭ್ಯವು ಕಲ್ಪಿಸಲ್ಪಟ್ಟಿರುವುದರ ಮೇಲೆ ಜನರು ವಿಶೇಷವಾಗಿ ಬೆಳಸುಮಾಡುತ್ತಿರುವುದರಿಂದ ಸೌಲಭ್ಯವನ್ನು ಇನ್ನೂ ಹೆಚ್ಚಿಸಿಕೊಟ್ಟಲ್ಲಿ 1000 ಎಕರೆಯಷ್ಟು ಹೆಚ್ಚು ಭೂಮಿಯಲ್ಲಿ ಮೇವಿನ ಬೆಳಸನ್ನಿಡಲು ಅವಕಾಶವಾಗುತ್ತದೆಂದು ವ್ಯವಸಾಯ ಶಾಖೆಯ ಡೈರೆಕ್ಟರು ಅಭಿಪ್ರಾಯಪಟ್ಟುದರ ಮೇಲೆ, 1000 ಎಕರೆ ಜಮೀನಿಗೆ ಸಾಕಾಗುವಷ್ಟು ಬಿತ್ತನೆಯ ಬೀಜವು ಕೊಡಲ್ಪಟ್ಟು ಬೆಳಸಾದ ಕೂಡಲೆ ಬರಮಾಡಿಕೊಳ್ಳಬೇಕೆಂದೂ, ಒಂದು ಬಂಡಿಗೆ 4 ರೂಪಾಯಿ ನಂತೆ ಎಕರೆ ಯೊಂದಕ್ಕೆ 3 ಬಂಡಿಗಳಿಗೆ ಹೆಚ್ಚಿಲ್ಲದೆ 1000 ಎಕರೆ ಜಮೀನಿನಲ್ಲಿಡಲ್ಪಡುವ ಬೆಳಸು ಸರ್ಕಾರಕ್ಕೆ ಕೊಳ್ಳಲ್ಪಟ್ಟು, ಕ್ರಯದ ಮೊಬಲಗು ಕೊಡಲ್ಪಡುವುದಾಗಿಯೂ, ರೈತರು ಮೇಲ್ಕಂಡ ದರಕ್ಕಿನ್ನ ಹೆಚ್ಚಾದ ದರದಲ್ಲಿ ಯಾರಿಗೆ ಬೇಕಾದರೂ ಮೇವಿನ ಬೆಳಸೆಲ್ಲವನ್ನೂ ವಿಕ್ರಯಿಸಬಹುದಾಗಿಯೂ ಸರ್ಕಾರದಪ್ಪಣೆಯಾಗಿರುತ್ತದೆ.

ಚುನಾವಣೆಯ ಫಲಿತಾಂಶ.

ನ್ಯಾಯವಿಧಾಯಕಸಭೆಗೆ

ಮ|| ಗಳಾದ

ಬೆಂಗಳೂರು ಪಟ್ಟಣದಿಂದ—ರಾಜಸಭಾಭೂಷಣ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ. ಐ. ಇ. ಯವರು.
ರಾಜಧಾನಿಯಿಂದ—ಸಿ. ನರಸಿಂಹಯ್ಯ, ಬಿ. ಎ., ಬಿ. ಎಲ್. ರವರು, ಅಡ್ವೋಕೇಟ್.
ಕೋಲಾರ ಡಿಸ್ಟ್ರಿಕ್ಟಿನಿಂದ—ಡಿ. ವೆಂಕಟೇಶಯ್ಯ, ಬಿ. ಎ., ಬಿ ಎಲ್. ರವರು ಅಡ್ವೋಕೇಟ್.
ಹಾಸನ ಡಿ||—ಎಚ್. ಎಸ್. ನಂಜುಂಡಯ್ಯನವರು, ಪ್ಲೀಡರ್.
ಬೆಂಗಳೂರು ಡಿ||—ಬಿ. ಅಬ್ದುಲ್‌ರಹಿಮಾನ್, ಬಿ. ಎ., ಡಿ|| ಬೋರ್ಡು ಪ್ರಸಿಡೆಂಟರು.
ಮೈಸೂರು ಡಿ||—ಬಿ. ನರಸಿಂಗರಾಯರು, ಪ್ಲೀಡರ್.
ಶಿವಮೊಗ್ಗ ಡಿ||—ಎಚ್. ಜಿ. ಬಸಪ್ಪನವರು, ಜಮೀನ್ದಾರ್.
ತುಮಕೂರು ಡಿ||—ಎಚ್. ವೆಂಕಟೇಶಯ್ಯನವರು, ಅಡ್ವೋಕೇಟ್.
ಕಡೂರು ಡಿ||-ಹೊಸಕೊಪ್ಪ ಕೃಷ್ಣರಾಯರು. ಜಮೀನ್ದಾರ್.
ಚಿತ್ರದುರ್ಗ ಡಿ||—ಎಚ್. ಚಂದ್ರಶೇಖರಯ್ಯ, ಬಿ. ಎ., ಎಲ್ ಎಲ್. ಬಿ., ಅಡ್ವೋಕೇಟರು.

ಇವರುಗಳು ಮೆಂಬರುಗಳಾಗಿ ಆರಿಸಲ್ಪಟ್ಟಿರುತ್ತಾರೆ.

ಪ್ರಜಾಪ್ರತಿನಿಧಿ ಸಭೆಗೆ

ಬೆಂಗಳೂರು ಡಿ||

ಮ|| ಗಳಾದ

ಬೆಂಗಳೂರು ತಾ|| ಇಂದ—(1) ಬಿ. ಮುನಿಸ್ವಾಮಪ್ಪನವರು ಜಮೀನ್ದಾರ್ (2) ಚಿಕ್ಕಬಿಂಡಪ್ಪ ಉರುಫ್ ಆವಲಪ್ಪನವರು, ಬೇಸಾಯಗಾರರು (3) ಬೇಲೂರು ಶ್ರೀನಿವಾಸಯ್ಯಂಗಾರ್ರು ಬಿ.ಎ.,ಬಿ.ಎಲ್., ಅಡ್ವೋಕೇಟ್.
ದೊಡ್ಡಬಳ್ಳಾಪುರ ತಾ||—(1) ವೀರೇಗೌಡರು ಪಟೇಲ್ (2) ಹನುಮೇಗೌಡರು ಪಟೇಲ್,
ಹೊಸಕೋಟೆ ತಾ||—(1) ಗುರುಸ್ವಾಮಿಗೌಡ ಉರುಫ್ ಮುನಿಸ್ವಾಮಿಗೌಡರು ಜಮೀನ್ದಾರ್ (2) ಜಿ. ರುದ್ರಪ್ಪ ಉರಫ್ ಮುನಿಯಪ್ಪನವರು ವರ್ತಕರು,
ಕಾನಕಾನಹಳ್ಳಿ ತಾ||—(1) ಗುರಿಕಾರ್ ವೆಂಕಟರಮಣಗೌಡರು, ಜಮೀನ್ದಾರ್ (2) ವೆಂಕಟೇಗೌಡರು ಉರಫ್ ತಿಮ್ಮೇಗೌಡರು ಜಮೀನ್ದಾರ್.
ದೇವನಹಳ್ಳಿ ತಾ||—(1) ಡಿ. ಎಸ್. ಹನುಮಂತರಾವ್ ಉರಫ್ ಸೂರಪ್ಪನವರು, ಶಾನುಭೋಗ್ (2) ತೋಂಟಾರ್ಯ ಉರಫ್ ಸಿದ್ಧಲಿಂಗಪ್ಪನವರು ಮಠದೇಜಂಟು.
ಚನ್ನಪಟ್ಟಣ ತಾ||—(1) ಅಪ್ಪಾಜಿಗೌಡರು ಉರಫ್ ಸಿದ್ದೇಗೌಡರು, ಪಟೇಲ್ (2) ಕೆಂಚೆಗೌಡರು ಉರಫ್ ವೀರೇಗೌಡರು, ಪಟೇಲ್.
ಕ್ಲೋಸ್‌ಪೇಟೆ ಸಬ್ ತಾ||—ಜಿ. ಸುಬ್ಬರಾವ್ ಉರಫ್ ಗರಳಪುರಯ್ಯನವರು, ಶಾನುಭೋಗ್.
ಆನಕಲ್ ತಾ||—(1) ಬಿ. ಶ್ರೀನಿವಾಸಯ್ಯಂಗಾರ್ರು, ಇನಾಂದಾರ್ (2) ಹೊನ್ನಗಂಗಪ್ಪನವರು, ಬೇಸಾಯ.
ನೆಲಮಂಗಲ ತಾ||—(1) ಸಿ. ನರಹರಯ್ಯನವರು, ವೈಸ್ ಪ್ರಸಿಡೆಂಟ್ (2) ಹುಚ್ಚಹನುಮೇಗೌಡರು ಜಮೀನ್ದಾರ್.
ಮಾಗಡಿ ತಾ||—(1) ಟಿ. ರಾಮಚಂದ್ರರಾಯರು, ಪ್ಲೀಡರ್ (2) ಕರ್ಣಿಕಕೃಷ್ಣಮೂರ್ತಿರಾಯರು, ಜಮೀನ್ದಾರ್.
ಕ್ಲೋಸ್ಪೇಟೆ ಮ್ಯುನ್ಸಿಪಾಲಿಟಿ—ಎ. ಎಂ. ವೆಂಕಟಸಾಮಯ್ಯ ಉರಫ್ ಮುನಿಯಪ್ಪ ಜಮೀನ್ದಾರ್
ದೇವನಹಳ್ಳಿ ಮ್ಯುನ್ಸಿಪಾಲಿಟಿ—ರುದ್ರಪ್ಪ ಉರಫ್ ಕಲ್ಲು ಬಸಣ್ಣನವರು, ಬ್ಯಾಂಕರ್.
ಬೆಂಗಳೂರು ಮ್ಯುನ್ಸಿ—(1) ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ, ಅಡ್ವೋಕೇಟರು, (2) ಬಿ.ಎಲ್. ಬಯಣ್ಣನವರು, ಜಮೀನ್ದಾರ್, (3) ಆರ್. ಗೋಪಾಲಸ್ವಾಮಿ ಅಯ್ಯರ್‌ರವರು, ಜಮೀನ್ದಾರ್ (4) ಎಂ.ಪಿ. ಸೋಮಶೇಖರರಾವ್, ಬಿ. ಎ., ಎಲ್ ಎಲ್. ಬಿ., ಅಡ್ವೋಕೇಟರು.
ಆನಕಲ್ ಟವುನ್—ಆರ್. ಸುಬ್ಬರಾವ್ ಬಿನ್ ಅಕ್ಕಪ್ಪಯ್ಯನವರು, ವರ್ತಕರು.
ಮಾಗಡಿ ಟವುನ್—ಎಂ. ಶೇಷಗಿರಿರಾಯರು, ಶಾನಭೋಗ್.
ಚನ್ನಪಟ್ಟಣ ಟವುನ್—ಎಫ್. ಎಂ. ಅಬ್ದುಲ್‌ಕುದುಸಾಬ್ ಉರಫ್ ಹೈದರ್‌ಸಾಬ್, ರೇಷ್ಮೆ ವ್ಯಾಪಾರಿ.
ದೊಡ್ಡಬಳ್ಳಾಪುರ ಟವುನ್-ಎ. ಶ್ರೀಕಂಠಪ್ಪನವರು, ವ್ಯಾಪಾರಿ.
ಕಾನಕಾನಹಳ್ಳಿ ಟವುನ್-ಕೆ.ಟಿ. ಪರಶಿವಯ್ಯನವರು, ವ್ಯಾಪಾರಿ.

ಕೋಲಾರ ಡಿಸ್ಟ್ರಿಕ್ಟ್.

ಕೋಲಾರ ತಾ||—(1) ಕೆ. ರಾಮಕೃಷ್ಣಯ್ಯರ್‌ರವರು, ಪ್ಲೀಡರು (2) ದೊಡ್ಡರಾಮೇಗೌಡರು, ಜಮೀನ್ದಾರ್, (3) ಬೈರೇಗೌಡರು ಜಮೀನ್ದಾರ್.
ಬೌರಿಂಗ್‌ಪೇಟೆ ತಾ||—(1) ಕೆ. ರಾಮೇಗೌಡರು, ಪಟೇಲ್ (2) ಚೆನ್ನಬಸಪ್ಪನವರು ವರ್ತಕರು.
ಕೋಲಾರ ಗೋಲ್ಡ್‌ಫೀಲ್ಡ್ಸ್ ಸ್ಯಾನಿಟರಿ ಬೋರ್ಡು—ಎ.ವಿ. ರಾಜಗೋಪಾಲ್ ಬಿನ್ ವೀರಾಸಾಮಿನಾಯಿಡುಯವರು, ಕಂಟ್ರಾಕ್ಟರ್. (2) ಎಂ. ನರಸಿಂಗರಾಯರು ಬಿನ್ ರಾಘವೇಂದ್ರರಾಯರು, ಪ್ಲೀಡರ್.
ಚಿಂತಾಮಣಿ ತಾ||—(1) ಚಿನ್ನಾರಡ್ಡಿಯವರು ಪಟೇಲ್ (2) ದಾದಿರೆಡ್ಡಿಯವರು ಪಟೇಲ್.
ಮುಳಬಾಗಲು ತಾ||—(1) ಶ್ಯಾಮರಾಯರು, ಶಾನಭೋಗ್ (2) ಎಚ್. ಕೃಷ್ಣಮೂರ್ತ್ಯಾಚಾರ್ರು ಜಮಿನ್ದಾರ್.
ಸಿಡ್ಲಘಟ್ಟ ತಾ||—(1) ಚಿಕ್ಕಮುನಿಯಪ್ಪನವರು, ಜಮೀನ್ದಾರ್ (2) ಲಕ್ಷ್ಮಪ್ಪನವರು, ಶ್ಯಾನಭೋಗ್.
ಚಿಕ್ಕಬಳ್ಳಾಪುರ ತಾ||-ಎನ್. ಸೊನ್ನಪ್ಪನವರು ಜಮೀನ್ದಾರ್ (2) ವೆಂಕಟರಾಯ ರೆಡ್ಡಿಯವರು, ಪಟೇಲ್.
ಬಾಗೇಪಲ್ಲಿ ತಾ||—(1) ಚಿಕ್ಕನರಸಾರೆಡ್ಡಿಯವರು, ಜಮೀನ್ದಾರ್ (2) ಬಿ. ನಾರಾಯಣ ರೆಡ್ಡಿಯವರು, ಪಟೇಲ್.
ಮಾಲೂರು ತಾ||—(1) ಎಲ್. ವೇಮಾರಡ್ಡಿಯವರು, ಜಮೀನ್ದಾರ್ (2) ವೆಂಕಟಸಾಮಿಗೌಡರು, ಪಟೇಲ್.
ಶ್ರೀನಿವಾಸಪುರ ತಾ||—(1) ಜಿ. ರಾಮಪ್ಪನವರು, ಪಟೇಲ್ (2) ಸಂಗಣ್ಣ ಉರುಫ್ ಮೇದಸಂಜೀವಯ್ಯನವರು, ವ್ಯಾಪಾರ.
ಗೋರಿಬಿದನೂರು ತಾ||-(1) ಸೇಂದಿ ಅಂಜನಪ್ಪನವರು, ಜಮೀನ್ದಾರ್ (2) ವೆಂಕಟರಮಣಪ್ಪನವರು, ಶಾನಭೋಗ್.
ಗುಡಿಬಂಡ ತಾ||-ಜಿ. ಕೆ. ನಾರಾಯಣರಾಯರು, ಜಮೀನ್ದಾರ್
ಬೌರಿಂಗ್‌ಪೇಟೆ ಮ್ಯುನ್ಸಿ-ರಾಜಾಹನುಮಂತಸೆಟ್ಟರು, ವ್ಯಾಪಾರಿ
ಚಿಂತಾಮಣಿ ಮ್ಯುನ್ಸಿ—ಕರುಪಾಕಲಸೂರಯ್ಯನವರು, ,,
ಚಿಕ್ಕಬಳ್ಳಾಪುರ ಮ್ಯುನ್ಸಿ—ಸಿ. ನಾರಾಯಣಸ್ವಾಮಿಸೆಟ್ಟರು, ವೈಸ್ ಪ್ರೆಸಿಡೆಂಟ್.
ಮುಳಬಾಗಲು ಮ್ಯುನ್ಸಿ—ಶ್ರೀನಿವಾಸಾಚಾರ್ಯರ ಮಗ ಎಚ್. ಕೃಷ್ಣಮೂರ್ತ್ಯಾಚಾರ್ರು ಜಮೀನ್ದಾರ್.
ಕೋಲಾರದ ಮ್ಯುನ್ಸಿ—ಚಿಕ್ಕಚನ್ನಂಜಪ್ಪನವರು, ಮ್ಯು|| ಕೌನ್ಸಿಲರ್.

ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ತಾ||—(1) ಅಬ್ದುಲ್‌ನಬಿಖಾನ್ ಉರಫ್ ಮಿಯಾಲಾಲ್‌ರವರು, ವ್ಯಾಪ್ಯಾರಿ (2) ಜಿ.ರುದ್ರಪ್ಪ, ಎಂ.ಎ.ಎಲ್‌ಎಲ್.ಬಿ. ಯವರು, ಅಡ್ವೋಕೇಟ್ (3) ಕೊಳಾಳ ಸೂರ್ಯನಾರಾಯಣರಾಯರು ಜೋಡಿದಾರ್.
ಮದ್ಗಿರಿ ತಾ||—(1) ಪುಟ್ಟವೀರಭದ್ರಪ್ಪ ಉರಫ್ ರಾಚೋಟಪ್ಪನವರು ಕಂಟ್ರಾಕ್ಟರ್ (2) ಲಕ್ಷ್ಮೀನರಸಪ್ಪ ಬಿನ್ ದೊಡ್ಡಪ್ಪನವರು, ವ್ಯಾಪಾರ.
ಚಿಕ್ಕನಾಯಕನಹಳ್ಳಿ ತಾ||-(1) ಮರುಳಸಿದ್ದಪ್ಪಶೆಟ್ಟರ ಮಗ ಶಿವಲಿಂಗಪ್ಪಶೆಟ್ಟರು, ಜಮೀನ್ದಾರ್ (2) ಸಿದ್ದಯ್ಯ ಬಿನ್ ಲಿಂಗಣ್ಣನವರು, ಜಮೀನ್ದಾರ್.
ತಿಪಟೂರು ತಾ||—(1) ಶಿಂಗ್ರಿನಂಜಪ್ಪನವರು ವ್ಯಾಪಾರಿ (2) ಡಿ. ಎಸ್. ಮಲ್ಲಪ್ಪನವರು, ವ್ಯಾಪಾರಿ.
ಪಾವಗಡ ತಾ||—(1) ಜಿ. ಆಂಜನೇಯಶೆಟ್ಟರು, ಕಂಟ್ರಾಕ್ಟರ್ (2) ಸಿ. ರಾಮರಾಯರು, ಜಮೀನ್ದಾರ್.
ಕುಣಿಗಲ್ ತಾ||—(1) ಬಾಳೆಗೌಡರು, ಪಟೇಲ್ (2) ಕೆಂಪೇಗೌಡರು, ಪಟೇಲ್.
ಕೊರಟಗೆರೆ ಸಬ್ ತಾ||—ಯಜಮಾನ್ ಚಂದ್ರಶೇಖರಪ್ಪ ಬಿನ್ ಶಂಕರಪ್ಪನವರು, ಜಮೀನ್ದಾರ್.
ತುರ್ವೆಕೆರೆ ಸಬ್ ತಾ||—ನರಸಿಂಹೇಗೌಡರು, ಜಮೀನ್ದಾರ್.
ಗುಬ್ಬಿ ತಾ||-(1) ಕಡಬದ ಹುಚ್ಚೀರೆಗೌಡರು, ಜಮೀನ್ದಾರ್ (2) ಜಿ. ಎಸ್. ಮುರಿಗೆಪ್ಪನವರು, ಪ್ಲೀಡರ್.
ಶಿರಾ ತಾ||—(1) ಎಸ್. ಸೂರಪ್ಪನವರು, ವ್ಯಾಪಾರಿ (2) ಭೀಮಣ್ಣನವರು, ಶ್ಯಾನಭೋಗ್.
ತುಮಕೂರು ಟವುನ್—ಗುರುಚನ್ನಬಸವಯ್ಯನವರು, ಲೇವಾದೇವಿ.
ಮದ್ಗಿರಿ ಟವುನ್—ಎಸ್. ರಾಮಶಾಸ್ತ್ರಿಗಳು, ಪ್ಲೀಡರು.
ಚಿಕ್ಕನಾಯಕನಹಳ್ಳಿ ಟವುನ್—ಸಿ. ಪಟ್ಟಾಭಿರಾಮಶೆಟ್ಟರು, ವ್ಯಾಪಾರ.
ಶಿರಾ ಟವುನ್—ಶಿವನಗೆರೆ ನಾರಾಯಣಪ್ಪನವರು, ವ್ಯಾಪಾರ.
ಗುಬ್ಬಿ ಟವುನ್—ಜಿ. ಮುರಿಗೆಪ್ಪನವರು, ವ್ಯಾಪಾರ.

(ಸ[illegible]

ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯ ರುಧಿರೋದ್ಗಾರಿ ಸಂವತ್ಸರದ ವಿದ್ಯಾರ್ಥಿ ಪಾರಿತೋಷಿಕ ಸಭೆಯಲ್ಲಿ ಓದಲ್ಪಟ್ಟ ಕರ್ಣಾಟಕ ಭಾಷಾತ್ಮಕವಾದ ಮಂಗಳಾಶಾಸನ ಪದ್ಯಗಳು.

ಶ್ರೀಃ

ಆವಲಿಸವು ತನ್ನನೇನಿಜ
ಭಾವಶುದ್ಧಿಯೊಳ್ಬಿಡೆ ನಂಬಿಹ
ಭೂವಿನುತ ಯದುವಂಶದಾಣ್ಮರ ಪೊರೆಯಲೋಸುಗವೆ |
ಶಾವನೆಸಗಿ ಮಹಾಬಲಾದ್ರಿಯೊ
ಳಾವಗಂ ನೆಲಸಿಹಳೊ ತಾನಾ
ದೇವಿಚಾಮುಂಡಾಂಬೆ ಸಲಹಲಿ ಕೃಷ್ಣಭೂಮಿಪನ ‖ ೧
ವೇದಶಾಸ್ತ್ರಾಂಬುಧಿಯನೊಳ ಪೊ
ಕ್ಕಾದಯಾಳುಗಳೆಮ್ಮ ಋಷಿಗಳ
ಗಾಧಮೆನಿಸಿಪದನೆಮಗೆ ಸುಲಭದೆ ತಿಳುಹಲೋಸುಗವೇ |
ಶೋಧನೆಯಿನವರರ್ಥಸಾರವ
ನಾದರಮ್ಮಿಗೆ ತೋರಿಸಿರ್ದೊಡ
ನೋದಿನಾವದನರಿದುಕೊಳ್ವುದೆ ಕಷ್ಟಮಾಗಿಹುದು ‖ ೨
ಬ್ರಹ್ಮವಿದ್ಯೆಯೆ ದೈವದಾಣತಿ
ಬ್ರಹ್ಮವಿದ್ಯೆಯೆನಿಹುದು ಸದ್ಗತಿ
ಬ್ರಹ್ಮವಿದ್ಯೆಯನರಿತಬ್ರಾಹ್ಮಣನೈದೆ ಶೋಭಿಪನು |
ತಮ್ಮ ಸೊಮ್ಮನುತೊರೆದು ಸುಮ್ಮನೆ
ನೆಮ್ಮಿಪೆರತನು ಬಾಳ್ವೊಡಿವರಿಂ
ದೆಮ್ಮ ಕರ್ಮಗಳೆಂತು ಸಾಗುವುವೆನ್ನದಿಹುದೆಜನ ‖ ೩
ಭರತಖಂಡದೆ ಗಣನೆಯೆನು ವಿಶಾ
ಲಿರುವನಿತು ಜನವೇದಮಾತೆಯ
ಚರಣಸೇವೆಯ ಸೊಲವಿನೆಸಗಿತದಂಗರಕ್ಷಣೆಯ |
ಪರಮಪಾವನ ಕಾರ್ಯದೊಳೆನೆರೆ |
ನಿರತರಾಗಿರ್ಪೆಮ್ಮ ನೀಕ್ಷಿಸಿ
ಮೆರೆವ ಧರಣೀವಿಬುಧವರೆಂದರಿದು ಪೂಜಿಸರು ‖ ೪
ವೇದವನುಧಿಕ್ಕರಿಪ ಜನವನು
ಹಾದಿದಪ್ಪಿದುದೆಂದು ಜರಿವೆವು
ವೇದವೇಪರದೈವವೆಂಬಾವಕ್ಕಟಂತಿಹೆವೆ |
ಭೇದವೇನವರ್ಗೆಮಗೆಬಗೆಯ
ಲ್ಕೀದುರಂತವೆನಿಪ್ಪದಶೆಯಿಂ
ವೇದಮೂರ್ತಿಗಳಪ್ಪ ಗುರುವರರೆಮ್ಮ ರಕ್ಷಿಸುಗೆ ‖ ೫
ಶುದ್ಧವೈದಿಕವಿದ್ಯೆಯನುನೆರೆ
ಯುದ್ಧರಿಸಬೇಕೆಂದುಮನದೆನಿ
ಬದ್ಧಮಾದಾಕಾಂಕ್ಷೆಯಿಂದೆಮ್ಮಾಳ್ವಭೂಮಿಪನು |
ಬದ್ಧಕಂಕಣನಾಗಿಪರಮ
ಶ್ರದ್ಧೆಯಿಂದೀಪಾಠಶಾಲೆಯ
ಸಿದ್ಧಗೈಸಿಪುರೋಭಿವೃದ್ಧಿಯಬಯಸುತಿರ್ದಪನು ‖ ೬
ಈಸುಸಮಯವನೆಮ್ಮವಿದ್ಯಾ
ಭ್ಯಾಸಕುಪಯೋಗಿಸದೆಶುಷ್ಕಾ
ಯಾಸವೆಂದಾವ್ರುಳಿಯೆಸುದಿನಗಳ್ಗಿಲ್ಲಮುಂದೆಮಗೆ |
ಕ್ಲೇಶಮಾದೊಡವಿನಿಸುಸ್ಮರಿಸಿ
ಭೂಸುರೋಚಿತವಿದ್ಯೆಯೊಳ್ಪ್ರಾ
ಣಾಶೆಯಿಟ್ಟಭ್ಯುದಯವೊಂದುವುದೆಮಗೆಸಮುಚಿತವು ‖ ೭
ಧರಣಿಧಂಸುತೆಪರಿಷ್ಕೃತಾನತ
ದುರಿತವಿಲಸಿತಸತ್ಕೃಪಾರಸ
ಭರಿತಭಾವಿತಸಕಲಕಾಮಿತವಿತರಣೈಕರತೆ |
ಪರಮಚರಿತೆವಿಪನ್ನಧರಣ
ತ್ವರಿತೆಮಂಗಳದಿವ್ಯತೇಜ
ಸ್ಫುರಿತೆಚಾಮುಂಡಾಂಬೆಸಲಹೌಕೃಷ್ಣಭೂಮಿಪನ ‖ ೮

ಎಚ್. ಲಿಂಗರಾಜೇಅರಸು,
ಅರಮನೆಯ ಮುಜರಾಯಿ ಬಕ್ಷಿಯವರು.

ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್ ಮೈಸೂರು.

ಮಹಾಶಯರೆ!

ಇದೇ ಮಾಹೆ 16 ನೇ ತಾರೀಖಿನಲ್ಲಿ ತಮಗೆ ಕಳುಹಿಸಿರುವ ನೋಟೀಸ್ ಪ್ರಕಾರ ಪ್ರಜಾಪ್ರತಿನಿಧಿ ಸಭೆಗೆ ಅಸೋಸಿಯೇಷನ್ನಿಂದ ಒಬ್ಬ ಮೆಂಬರನ್ನು ಚುನಾಯಿಸಿ ಕಳುಹಿಸಲು ನಡೆಯಬೇಕಾದ ಮೀಟಿಂಗನ್ನು ಮುಂದಿನತಿಂಗಳು ಅಂದರೆ ಮಾರ್ಚಿ 5 ನೇ ತಾರೀಖು ಬುಧವಾರ ನಡೆಯಿಸಬೇಕೆಂದೂ, ಮೆಂಬರಾಗಲು ಇಷ್ಟವುಳ್ಳವರು ಇದೇ ತಿಂಗಳು 26ನೇ ತಾರೀಖಿನೊಳಗಾಗಿ ತಮ್ಮ ಅಪ್ಲಿಕೇಷನ್ನನ್ನು ಬೆಂಗಳೂರಿನ ಜನರಲ್ ಮತ್ತು ರೆವಿನ್ಯು ಸೆಕ್ರೆಟರಿಯಟ್ ಪ್ರೊಟೆಕ್ಷನ್ ಬ್ರಾಂಚಿನ ಅಸಿಸ್ಟೆಂಟ್ ಸೆಕ್ರೆಟರಿಯವರಿಗೆ ಸೀದಾ ಕಳುಹಿಸಿಕೊಡಬೇಕೆಂದೂ, ಸರ್ಕಾರದವರು ನೋಟೀಸ್ ಕೊಟ್ಟಿರುತ್ತಾರಾಗಿ ಉಮೇದುವಾರರು ತಕ್ಷಣವೇ ಮೇಲ್ಕಂಡ ಆಫೀಸರವರಿಗೆ ಅಪ್ಲಿಕೇಷನ್ ಹಾಕಿಕೊಳ್ಳಬೇಕಾಗಿ ಕೋರಿದೆ. ಅಲ್ಲದೆ ಮೇಲ್ಕಂಡ ಮಾರ್ಚಿ 5ನೇ ತಾರೀಖು ಬುಧವಾರ ಮೈಸೂರಿನಲ್ಲಿ ನಡೆಯುವ ಚುನಾವಣೆ ಮೀಟಿಂಗಿಗೆ ಎಲ್ಲಾ ಮೆಂಬರುಗಳೂ ತಪ್ಪದೆ ದಯಮಾಡಬೇಕಾಗಿ ಪ್ರಾರ್ಥನೆ.

ಕಾರ್ಯದರ್ಶಿಗಳು.

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ — ನನ್ನ ಚಿಕ್ಕತಂದೆ ನಂಜುಂಡಶೆಟ್ಟಿಯು ಅಪುತ್ರವಂತನಾಗಿ ಈಗ್ಗೆ 1½ ವರ್ಷಗಳ ಕೆಳಗೆ ಶಿವಾಧೀನನಾದನು. ಆತನ ಹೆಂಡತಿಯಾದ ಚನ್ನಮ್ಮನೆಂಬ ನನ್ನ ಚಿಕ್ಕಮ್ಮನು ನಮ್ಮ ಪಿತ್ರಾರ್ಜಿತವಾದ ಚರಸ್ಥಿರ ಆಸ್ತಿಗಳನ್ನು ಯಾವದಾದರೊಂದು ವಿಧ ಪರಭಾರೆಮಾಡುವ ಯೋಚನೆ ಇಟ್ಟುಕೊಂಡಿರುವುದಾಗಿ ತಿಳಿಯಬರುತ್ತೆ. ಸದರಿ ಆಸ್ತಿಗಳಿಗೆ ಉತ್ತರವಾರಸ್ಸುದಾರ ನಾನಿರುವಲ್ಲಿ ಯಾರೇ ಆಗಲಿ ಮೇಲ್ಕಂಡ ನನ್ನ ಚಿಕ್ಕಮ್ಮ ಚನ್ನಮ್ಮನೆಂಬುವಳಿಂದ, ಕ್ರಯ, ಭೋಗ್ಯ, ಆಧಾರ, ದಾನ, ಮುಂತಾದ ಯಾವ ವಿಧ ಪರಭಾರೆಮಾಡಿಸಿಕೊಳ್ಳಕೂಡದು; ಹಾಗೇನಾದರು ಮಾಡಿಸಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ. ಮುಂದೆ ಇದಕ್ಕಾಗುವ ಕಷ್ಟ ನಷ್ಟಗಳಿಗೆ ಬಾಧ್ಯರಾಗುತ್ತೀರೆಂಬ ಅಂಶತಿಳಿಯತಕ್ಕದ್ದು. ಹಾಗೆ ಯಾರಾದರೂ ಮೇಲ್ಕಂಡಂತೆ ಪರಭಾರೆಮಾಡಿಕೊಂಡಲ್ಲಿ ಅವರುಗಳ ನಷ್ಟಕ್ಕೆ ನಾನು ಪಾತ್ರನಲ್ಲವೆಂಬ ಸಂಗತಿ ಈ ಮೂಲಕ ಎಚ್ಚರಿಸಿದ್ದೇನೆ.

ಮರುಳಶೆಟ್ಟಿ ಉರುಫ್ ಸಣ್ಣಮುದ್ದಶೆಟ್ಟಿ, ರುಜು.
ತುಂಬಾಪುರ ಗ್ರಾಮ ಕಣಕಟ್ಟೆ ಹೋಬಳಿ, ಅರಸೀಕೆರೆ, ತಾ॥

ಶ್ರೀ ಜಗದ್ಗುರು ರಂಭಾಪುರೀ ಪೀಠಾಧಿಕಾರದ ಪ್ರಸಿದ್ಧ ಪತ್ರಿಕೆಯು.

ಭರತಖಂಡದಲ್ಲಿರುವ ಸಮಸ್ತ ವೀರಶೈವರಿಗೆ ತಿಳಿಸುವದೇನಂದರೆ— ಶ್ರೀ ಜಗದ್ಗುರು ರೇಣುಕಾಚಾರ್ಯರ ಪೀಠಕ್ಕೆ ಇದೇ ರುಧಿರೋದ್ಗಾರಿ ಸಂವತ್ಸರದ ಫಾಲ್ಗುಣ ಶುಕ್ಲಪಕ್ಷದಲ್ಲಿ ಪಟ್ಟಾಧಿಕಾರವನ್ನು ಮಾಡಬೇಕೆಂದು ನಿಶ್ಚಯಿಸಿದೆ. ಯಾವತ್ತು ಪ್ರಾಂತ್ಯದ ವೀರಶೈವರ ಪ್ರಾರ್ಥನೆ ಮೇರೆಗೆ ಈ ಜಗದ್ಗುರುಪೀಠಕ್ಕೆ ಅಧಿಕಾರಿಗಳನ್ನು ಗೊತ್ತುಮಾಡುವದಕ್ಕೋಸ್ಕರ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ದಯಮಾಡಿಸುತ್ತಾರೆ. ಅಸಾಧಾರಣ ಪಾಂಡಿತ್ಯ, ಸತ್ಕುಲ, ಸದಾಚಾರ ಸದ್ಗುಣ ಮೊದಲಾದವುಗಳಿಂದ ಯುಕ್ತರಾದ ಶಿಷ್ಯರುಳ್ಳ ಶುದ್ಧ ಮಠಸ್ಥಲೀಯ ಬ್ರಹ್ಮಚಾರಿಗಳನ್ನು ಪಟ್ಟಗಟ್ಟಬೇಕಾಗಿದೆ. ಅಭಿಲಾಷಿಗಳು ತಮ್ಮ ತಮ್ಮ ಪಾಂಡಿತ್ಯ, ಕುಲಾದಿಗಳ ಬಗ್ಗೆ ಬಾಳೆಹೊನ್ನೂರು ಮೊಕ್ಕಾಮಿಗೆ ಮೇಲ್ಕಂಡ ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಗೆ ಅರಿಕೆಮಾಡಿಕೊಳ್ಳಬೇಕು. ಸರ್ವರೀತಿಯಿಂದ ಯೋಗ್ಯರಾದವರನ್ನು ಸಂಸ್ಥಾನದ ಪದ್ಧತಿಯ ಮೇರೆಗೆ ಅಧಿಕಾರಿಗಳನ್ನಾಗಿ ನೇಮಿಸುವದಾಗುವುದು. ಭದ್ರಂಭೂಯಾತ್

ಎಸ್. ಕೆ. ಯಂ. ರುದ್ರಾರಾಧ್ಯ.
ಶ್ರೀ ರಂಭಾಪುರೀ ಮಹಾ ಸಂಸ್ಥಾನದ ಏಜಂಟು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

A POINT FOR
MR. M. VENKATAKRISHNAYYA.

Sir,

May I request you to be so good as to publish the following with regard to the Mysore City Elections :—

I find that at a public meeting held on the Maidan near the Town Hall, Mysore on the 15th instant under the presidency of Mr. M. Venkatakrishnayya himself a candidate to the Assembly, a resolution was passed alleging a number of serious irregularities and wires were sent to His Highness the Maharaja, and the Dewan of Mysore, and the same was reported to the President. The question arises whether Mr. Venkatakrishnayya, to be true to his own convictions and to be consistent with his own conduct, should not prove those irregularities in the City elections. I am addressing this only to Mr. Venkatakrishnayya though there were other candidates subscribing their names to the resolution, as he presided on the occasion and headed the aggrieved candidates. There has always been a talk of political principles, consistency of views and securing of justice. If it is so, could the conduct of Mr. Venkatakrishnayya in keeping quiet after the elections are over, simply because he succeeded, be justified? Will it not show that he did all that, with no real and sincere conviction about the irregularities, but only as a second string to his bow, so that if he failed, he would employ it against the successful candidates? Is it political integrity, or is it even common honesty? If Mr. Venkatakrishnayya wants to justify his claim to be a genuine politician, here is a chance for him, and he ought to pursue his resolution to its logical conclusion and try his best to secure a cancellation of the City elections.

HONESTY.

To
THE EDITOR OF THE MYSORE STAR,
MYSORE.

Sir,

I consider myself as highly obliged, if you kindly publish this short article in your popular and sympathetic paper.

It is a welknown fact that the Visvakarma Community is very backward since a pretty long time. It is really a pitiable thing to say that th[illegible] is no member from this Community either in [illegible] Representative Assembly or in the Legislat[illegible] Council even during these Democratic days, [illegible] represent their grievance and thus enable the[illegible] selves to improve in Education, Labour a[illegible] Industry. I here that one Mr. S. V. Gurumur[illegible] acharya, Municipal Councillor of Shravanbelgo[illegible] who has been induced by the community, is t[illegible] ing with the Government to get a seat both [illegible] the Legislative Council and the Representati[illegible] Assebly. I trust that benevolent Goverment w[illegible] favourably consider his application, and nomina[illegible] him to to the Assembly and the Legislature [illegible] behalf of us all.

I remain,
Sir,
Your faithfully,
T. SHAMANNA,
A member of the commun[illegible]

ಪುಣ್ಯತಿಥಿ.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯ ಈ ಆಚಾರ್ಯರು ಮಹಾಶಿವರಾತ್ರಿ ಪುಣ್ಯತಿಥಿಯ[illegible] ಅವತರಿಸಿದ್ದಾರೆ. ಕಾರಣ ಯಾವತ್ತೂ ವೀರಶೈವರು ಈ ದಿನವನ್ನು ಸ್ವ[illegible] ತದ ಪವಿತ್ರ ಹಬ್ಬವೆಂದು ತಿಳಿದು ಅದರಂತೆ ಆಚರಿಸಿ ಜನರಲ್ಲಿ ಸರ್ವ[illegible] ವಾಗಿ ಪೀಠಾಚಾರ್ಯರ ಜಾಗ್ರತೆಯನ್ನುಂಟುಮಾಡಬೇಕಾಗಿ ಇಚ್ಛಿಸುತ್ತೇ[illegible]

ಸಿ. ವಿ. ಸಿಂಧೂರ ಚನ್ನವೀರೇಶವಾಚನಮಂದಿರ ಸೆಕ್ರೆ[illegible]

ಹುಣಸಮಾರನಹಳ್ಳಿ ವಿಚಾರ.

ದೇವನಹಳ್ಳಿ ತಾ॥ ಹುಣಸಮಾರನಹಳ್ಳಿಯಲ್ಲಿ ಫಾಲ್ಗುಣ ಪೌರ್ಣ[illegible]ಯಲ್ಲಿ ನಡೆಯಬೇಕಾದ ಶ್ರೀ ಚಂದ್ರಮೌಳೀಶ್ವರಸ್ವಾಮಿಯವರ ರಥೋ[illegible]ವದ ಕೂಡ ನಡೆಯುವ ದನಗಳ ಪ್ರದರ್ಶನವು ಈ ವರ್ಷ ನೀರಿಗೆ [illegible] ಅಭಾವವಾದ್ದರಿಂದ ಈ ವರ್ಷ ನಿಲ್ಲಿಸಲ್ಪಟ್ಟಿದೆ. ಕಳೆದ ತಾ॥ 7 ರ ರಾ[illegible] ಯಾರೋ ದುಷ್ಟರು ಈ ಊರಿನ ಗೌ॥ ಇ॥ ಕಂ॥ ಮಿ॥ ಸ್ಕೂಲಿನ ಬಾ[illegible]ಲುಗಳಿಗೆ ಹಾಕಿದ್ದ ಬೀಗಗಳನ್ನು ಒಡೆದು ಒಳಗೆ ಪ್ರವೇಶಿಸಿ ಒಳಗಿ[illegible] ಎರಡು ಬೀರುಗಳ ಮತ್ತು ಪೆಟ್ಟಿಯ ಬೀಗಗಳನ್ನು ಒಡೆದು ಅವರ [illegible]ಯೋಗಕ್ಕೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಸ್ಕೂಲ್ [illegible]ರ್ದುಗಳನ್ನು ಈಚೆಬಿಸಾಡಿ ಹೋಗಿದ್ದರು. ಪೋಲೀಸ್ ಆಫೀಸರ[illegible] ಮಹಜರ್ ಮಾಡಿಕೊಂಡುಹೋಗಿ ಪತ್ತೆತರದೂದಿನಲ್ಲಿರುತ್ತಾರೆ. ಕ್ಷಾಮಕಾಲದಲ್ಲಿ ಕಳ್ಳರಹಾವಳಿಯನ್ನು ನೋಡಿದರೆ ಮುಂದೆ ಏನಾಗು[illegible]ಬುದು ಗೊತ್ತಿಲ್ಲ. ಇದಕ್ಕೆ ನಮ್ಮ ದಯಾಳು ಸರ್ಕಾರದವರು ಹಳ್ಳಿಗಾ[illegible]ಗಳಲ್ಲಿ ಆಗತಕ್ಕ ಕಳ್ಳತನಗಳಿಗೆ ನಿಗಾಯಿಟ್ಟು ತಕ್ಕಶರದೂದು ನಡೆಯಿ[illegible]ತ್ತಾರೆಂದು ನಂಬಿರುತ್ತೇನೆ.

ಎಸ್. ಎಲ್. ಮುದ್ದುಬಸವ[illegible]

ವಾಚನಾಲಯ ಸ್ಥಾಪನೆ.

1919 ನೆಯ ಡಿಸೆಂಬರ್ ತಿಂಗಳಲ್ಲಿ ಚಿತ್ರದುರ್ಗದ ಶ್ರೀ ಜಗದ್ಗು[illegible] ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ಚಿತ್ತೈಸಿದ್ದಾ[illegible] ಇದೇ ಊರಿನ ಮೆ॥ ಕೆ. ರುದ್ರಪ್ಪನವರು ಶ್ರೀಗಳವರು ಈ ಗ್ರಾಮ[illegible] ದಯಮಾಡಿಸಿದ ಜ್ಞಾಪಕಾರ್ಥವಾಗಿ "ಶ್ರೀ ಜಯದೇವ ವಾಚನಾಲಯ" ಎಂಬ ಹೆಸರಿಟ್ಟು ಒಂದು ಕಟ್ಟಡವನ್ನು ಕಟ್ಟಿಸಿಕೊಡುವುದಾಗಿ [illegible] 1923 ರಲ್ಲಿ ಕಟ್ಟಡದಕೆಲಸ ಪೂರೈಸಿದರು. ಇದಕ್ಕೆ ಶ್ರೀಗಳವ[illegible] ಸಹಾಯಮಾಡುವುದಾಗಿ ಅಭಯವನ್ನು ಕೊಟ್ಟಿರುತ್ತಾರೆ. [illegible]ಕೂರು ಮಾಮೂಲ್‌ಪೇಟೆ ಬಿ. ಹುಚ್ಚಪ್ಪನವರು ಶ್ರೀ ಜಯದೇವ ವಾ[illegible]ನಾಲಯ ಎಂಬ ನಾಮಧೇಯದಿಂದ ಒಂದು ಬೋರ್ಡನ್ನು ತಯಾರಾ[illegible] ಮುಫತಾಗಿ ಕೊಡುವುದಾಗಿ ಒಪ್ಪಿರುತ್ತಾರೆ. ಈ ವಾಚನಾಲಯ[illegible] ಪ್ರಾರಂಭೋತ್ಸವವನ್ನು ಜಾಗ್ರತೆ ನೆರವೇರಿಸಬೇಕೆಂದು ಮೆ॥ ಕೆ. ರುದ್ರ[illegible]ನವರು ಕುತೂಹಲವುಳ್ಳವರಾಗಿರುತ್ತಾರೆ. ಆದ್ದರಿಂದ ಮೇಲ್ಕಂಡ ಮಹ[illegible]ಯರುಗಳೂ ಸುಗ್ಗನಹಳ್ಳಿ ಗ್ರಾಮಸ್ಥರೂ ಸಮಸ್ತ ವೀರಶೈವಮಂಡಲಿ[illegible]ವರೂ ತಮ್ಮ ಶಕ್ತ್ಯಾನುಸಾರ ದ್ರವ್ಯಸಹಾಯಮಾಡಿ ಕೀರ್ತಿಭಾಗಿಗಳಾ[illegible]ತ್ತಾರೆಂದು ನಂಬಿರುತ್ತೇನೆ.

ವಿದ್ಯಾಭಿಮಾನಿ.

ಶ್ರೀ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ[illegible]ಮಿಗಳವರ ಧಾರವಾಡ ಹಾವೇರಿಪೇಟೆ ಮುರಘಾಮಠ

ಶ್ರೀ ಪಾಠಶಾಲ ಮತ್ತು ಫ್ರೀ ಬೋರ್ಡಿಂಗ ಮ್ಯಾ. ಕಂ. ಚೇರಮ[illegible]ರಿಂದ ತಿಳಿಸುವದೇನಂದರೆ—

ಸದರಿ ಬೋರ್ಡಿಂಗಿನಲ್ಲಿ ಸೇರಬಿಚ್ಛಿಸುವ ವಿದ್ಯಾರ್ಥಿಗಳು ಸನ್ 19[illegible]ನೇ ಇಸವಿ ಮೇ ಆಖೈರ ದೊಳಗಾಗಿ ಅರ್ಜಿಗಳನ್ನು ಕಳಿಸತಕ್ಕದ್ದು. ಸ[illegible] ಅರ್ಜಿ ಫಾರ್ಮಗಳು ಸದರಿ ಬೋರ್ಡಿಂಗ ಕ್ಲಾರ್ಕರ ಕಡಿಗೆ ದೊರೆ[illegible]ತ್ತವೆ. ಅರ್ಜಿ ಲಗತ್ತ ತಮ್ಮ ಯಾವತ್ತು ವಿಷಯಗಳ ಗುಣಗಳನ್ನು ತು[illegible] ಕ್ಲಾಸ ಮಾಸ್ತರರ ಸಹಿನಿಶಿಯಿಂದ ಕಳಿಸಿಕೊಟ್ಟಲ್ಲಿ, ನಿಮ್ಮ ಅರ್ಜಿಗಳ[illegible] ವಿಚಾರಮಾಡುವದರಲ್ಲಿ ಬರುವದು.

ಶ್ರೀ ಮಹಾತಪಸ್ವಿಗಳವರ ಕೃಪಾಪಾತ್ರರಾದ ಶ್ರೀ ಮೃತ್ಯುಂಜ[illegible] ಸ್ವಾಮಿಗಳವರ ಅಪ್ಪಣೆಯ ಮೇರೆಗೆ ಗತ ವರ್ಷದಂತೆ ಚಾಲುಸಾ[illegible] ಮಾರ್ಚ ಮತ್ತು ಎಪ್ರೀಲ ತಿಂಗಳಲ್ಲಿ ಆಗತಕ್ಕ ಮ್ಯಾಟ್ರಿಕ ಮತ್ತು ಮು[illegible] ಪರೀಕ್ಷೆಗೆ ಬರತಕ್ಕ ವೀರಶೈವ ಬಡವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ[illegible]ಗಳನ್ನು ಕರಕೊಂಡುಬರುವ ವೀರಶೈವ ಮಾಸ್ತರರಿಗೂ ಊಟದ ಸೌ[illegible]ವನ್ನು ಮಾಡುವದರಲ್ಲಿ ಬರುವದು. ಪರೀಕ್ಷೆಗಿಂತ 10 ದಿವಸ ಮುಂ[illegible]ವಾಗಿ ತಮ್ಮ ತಮ್ಮ ಅರ್ಜಿಗಳನ್ನು ಸದರಿ ಶ್ರೀ ಬೋರ್ಡಿಂಗಿಗೆ ಕಳಿ[illegible]ಕ್ಕದ್ದು. ತಡಮಾಡಿ ಬಂದ ಅರ್ಜಿಗಳಿಗೆ ಅವಕಾಶ ದೊರೆಯಲಿಕ್ಕಿ[illegible] ಪ್ರತಿಯೊಬ್ಬರು ಬರುವಾಗ್ಗೆ ತಮ್ಮ ತಮ್ಮ ಹಂಚಿಗೆಯನ್ನು ತರತಕ್ಕ[illegible]

ಪ್ರಜಾನುರಾಗಿ ಶೇಕದಾರರವರ್ಗ.

ಕೋಳಾಲವೆಂಬ ಸಮ್ಮತು ಎಷ್ಟು ಅದೃಷ್ಟಹೀನವಾದುದ[illegible] ಏಕೆಂದರೆ—ಈ ಸಮ್ಮತಿನ ಪ್ರಜೆಗಳಿಗೆ ಯಾವ ವಿಧವಾದ ಸೌಕರ್ಯಗಳ[illegible] ಇದ್ದರೂ, ಇದ್ದ ಒಂದಾನೊಂದು ಅಮೋಘವಾದ ಸೌಕರ್ಯವನ್ನೂ [illegible] ದುಕಿಟ್ಟರು. ಈ ಸಮ್ಮತಿಗೆ ಈಗ್ಗೆ 2 ವರ್ಷಗಳ ಮುಂಚೆ ಬಂದ [illegible]ದಾರ್ ಬಿ. ಕೆ. ಗುಲಾಂಮಹಮದ್‌ಸಾಹೇಬರೆಂಬುವರು ಧರ್ಮಿಷ್ಠ[illegible]ಗಿಯೂ, ನ್ಯಾಯಪರರಾಗಿಯೂ, ಗೌರವಸ್ಥರಾಗಿಯೂ, ಪ್ರಜೆಗಳ ಸುಖ[illegible] [illegible]ಮ್ಮ ಸುಖವೆಂಬ ದೊಡ್ಡ ಭಾವನೆಯಿಂದ ಪ್ರಜೆಗಳನ್ನು ಕಾಪಾಡುತ್ತಿದ್ದರು. [illegible]ರ್ಕಾರದವರು ಇಂತಹ ಅಮೂಲ್ಯವಸ್ತುವನ್ನು ಗುಬ್ಬಿ ಕಸಬಾ ಹೋಬ[illegible]ಳಿಗೆ ವರ್ಗಮಾಡಿರುವುದರಿಂದ ನಮ್ಮಗಳ ಅದೃಷ್ಟವು ಎಷ್ಟು ಹೀನವಾದುದೆಂದು ಹೇಳಿದರೂ ಸಾಲದಾಗಿದೆ. ಪ್ರಜೆಗಳ ಸುಖವೇ ತಮ್ಮದೆಂದು ಭಾವಿಸಿ ಪ್ರಜೋಪಕಾರನಿರತರಾಗಿದ್ದ ಈ ಮಹನೀಯರನ್ನು ಇಂತಹ [illegible]ಮಕಾಲದಲ್ಲಿ ವರ್ಗಮಾಡಿರುವುದು ನಮಗೆ ಬಂದಿರತಕ್ಕ ಹೊಟ್ಟೆಗಿಲ್ಲದ [illegible]ಮದ ನಾಲ್ಕರಷ್ಟು ದುಃಖವನ್ನು ಹೆಚ್ಚಿಸಿದೆ. ಇವರ ಗುಣಗಳನ್ನೂ, [illegible]ಲಸಮಾಡುವುದರಲ್ಲಿರುವ ದಕ್ಷತೆಯನ್ನೂ ನೋಡಿ ನಮ್ಮ ತಾಲ್ಲೂಕಿನ [illegible]ಮಲ್‌ದಾರ್ರವರಾದ ಮ॥ ರಾ॥ ಬಿ. ಲಿಂಗಯ್ಯನವರಿಗೂ, ನಮ್ಮ ಅಸಿ[illegible]ಸ್ಟೆಂಟ್ ಕಮಿಷನರ್‌ಸಾಹೇಬರವರಾದ ಮ॥ ರಾ॥ ಸಿ. ಎಂ. ಹೆಚ್. [illegible]ಣಜೋಧ್‌ಸಿಂಗ್‌ರವರಿಗೂ ಸಹ ಇವರನ್ನು ಬೇರೆಕಡೆ ಕಳುಹಿಸಲು ಇಷ್ಟವಿಲ್ಲದೆ ಹಜರತ್ ನಮ್ಮ ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರ್ ಸಾಹೇಬರವರಿಗೆ ಈ ವರ್ಗವನ್ನು ಕ್ಯಾನ್ಸಲ್ ಮಾಡಬೇಕೆಂದು ಶಿಫಾರಸು ಮಾಡಿರುವುದಾಗಿಯೂ, ಅದರ ಮೇಲೆ ಸಧ್ಯದಲ್ಲಿ ಹುಜೂರ್ ಜಮಾಬಂದಿ ಆಗುವವರೆಗೂ ಇಲ್ಲಿಯೇ ಇಟ್ಟಿರುವುದಾಗಿ ಹುಕ್ಕುಂ ಅಪ್ಪಣೆ ಆಗಿರುವಂತೆಯೂ ವರ್ತಮಾನಕೇಳುತ್ತೇವೆ. ದಯಾಳುಗಳಾದ ಘನಸರ್ಕಾರದವರು ಈ ನಮ್ಮ ಪ್ರಾರ್ಥನೆಗೆ ಗಮನಕೊಟ್ಟು, ಇವರ ವರ್ಗವನ್ನು ಕ್ಯಾನ್ಸಲ್ ಮಾಡಿಸಿ, ಇಂತಹ ನಿಷ್ಪಕ್ಷಪಾತಿಗಳಾದ ಮೇಲ್ಕಂಡ ಮಹನೀಯರನ್ನು ಇನ್ನೂ ಕೆಲವು ಕಾಲ ನಮ್ಮ ಸಮ್ಮತಿಗೆ ಶೇಕದಾರರನ್ನಾಗಿ ನಿಲ್ಲಿಸಿ ನಮ್ಮಗಳನ್ನು ಕಾಪಾಡಬೇಕೆಂದು ಬೇಡುತ್ತೇವೆ.

ಪ್ರಜಾಹಿತೈಷಿಗಳು.
ಕೋಳಾಲ, ತುಮಕೂರು ತಾಲ್ಲೂಕು.

ಶ್ರೀಶೈಲ ಜೀರ್ಣೋದ್ಧಾರ.

ನಮ್ಮ ಭಾರತಭೂಮಿಯ ಪವಿತ್ರಪುಣ್ಯಕ್ಷೇತ್ರಗಳಲ್ಲಿ ಪ್ರಸಿದ್ಧವಾದ ಶ್ರೀಶೈಲವೆಂಬ ಪ್ರಾಚೀನಯಾತ್ರಾಸ್ಥಳದ ಧರ್ಮಾಧಿಕಾರವು ಪಾರಂಪರ್ಯವಾಗಿ ಶ್ರೀ ೧೦೮ ರಾಜಸೂರ್ಯ ಸಿಂಹಾಸನದ ವೀರಶೈವ ಜಗದ್ಗುರುಗಳ ಕಾಟಿಯಲ್ಲಿತ್ತು. ಅದು ಕೆಲವು ವರ್ಷಗಳ ಕೆಳಗೆ ಕಾರಣಾಂತರದಿಂದ ತಪ್ಪಿ ಪುಷ್ಪಗಿರಿ ಬ್ರಾಹ್ಮಣ ಮಠಾಧಿಕಾರಿಗಳ ಕೈಗೆ ಸಿಕ್ಕಿ ಕ್ಷೀಣಗತಿಯನ್ನು ಹೊಂದುತಾ ಬಂದಿರುವುದು ಜನಜನಿತವಾಗಿದೆ. ದೈವಭಕ್ತಿ, ತತ್ಪರರಾದ ಶ್ರೀಶೈಲ ಪ್ರಾಂತದ ರಾಜಕೀಯಾಧಿಕಾರಿಗಳೂ ಹಾಗೂ ತನ್ನತ್ಕರಾದ ಪ್ರಜೆಗಳೂ ಆ ಬಗ್ಗೆ ತುಂಬಾ ಚಿಂತೆಗೊಂಡು ಪರಿಪರಿಯಿಂದ ಎಚ್ಚರಿಸಿದರೂ ಆನೂತನ ಧರ್ಮಾಧಿಕಾರಿಗಳ ಕಿವಿಯಲ್ಲಿಯೇ ಬೀಳಲಿಲ್ಲ. ಇವರ ನಿರಂಕುಶಪ್ರಭುತ್ವದ ಅನ್ಯಾಯ ಸ್ವೇಚ್ಛಾಚಾರಗಳಿಗಾಗಿ ಭಕ್ತಕೋಟಿಯು ಮುನಿದು ಆ ಶ್ರೀಶೈಲಕ್ಕೆ ಸಂಬಂಧಿಗಳಾದ ಪರ್ವತ ಪೀಠದವರಿಗೆ ಮೊರೆಯಿಡಲು ಸದರಿ ಸೂರ್ಯ ಸಿಂಹಾಸನದ ಗುಂತಕಲ್ಲು ಪಟ್ಟದವರು ನಿರಾಕರಿಸಿಬಿಟ್ಟರು. ಅದೇ ಪೀಠದವರು ಕಾರ್ಯಗೌರವ ಇಂಗಿತಜ್ಞರಾದ್ದರಿಂದಲೇ ರಾಜಕೀಯ ನ್ಯಾಯಸ್ಥಾನವಾದ ಕರ್ನೂಲು ಜಿಲ್ಲಾ ಜಡ್ಜಿ ಕೋರ್ಟಿನಲ್ಲಿ ಅಸಲ್ ನಂ॥ ೫ನೇ ದಾವೆ ದಾಖಲ್ಮಾಡಿ ಆ ನಿರಂಕುಶಾಧಿಕಾರಿಗಳನ್ನು ತೊಲಗಿಸಿ ಆಸ್ಥಾನಕ್ಕೆ ಮಾಮೂಲಂತೆ ತಮ್ಮನ್ನು ನಿಯೋಜಿಸಬೇಕೆಂದು ಕೇಳಿದ್ದರಷ್ಟೆ. ಈ ವಿವಾದವು ಇನ್ನೂ ನಿಮರ್ಶೆಯಲ್ಲಿದ್ದಾಗ್ಯೂ ನ್ಯಾಯಾಧೀಶರಿಗೆ ಪುಷ್ಪಗಿರಿಯವರ ಅನ್ಯಾಯಗಳೆಲ್ಲಾ ಮನವರಿಕೆಯಾದ್ದರಿಂದ ತೀರ್ಮಾನಕ್ಕೆ ಪೂರ್ವಭಾವಿಯಾಗಿಯೇ ವಾದಿಗಳ ಇಷ್ಟದಂತೆ ಅವರ ಪ್ರಭುತ್ವವನ್ನು ಕಿತ್ತುಹಾಕಿ ಒಬ್ಬ ರಿಸೀವರ್ ಅಧಿಕಾರಿಗಳ ಮೂಲಕ ಮಹಾಶಿವರಾತ್ರಿ ಪೂಜೋತ್ಸವಾದಿಗಳನ್ನು ಕ್ರಮಪಡಿಸಲು ತಾ॥ 19-12-23 ರಲ್ಲಿ ನೇಮಿಸಿರುತ್ತಾರೆ. ಇದುವರಿಗಿನ ಅಧಿಕಾರಿಗಳು ಯಾತ್ರಿಕರ ಯೋಗಕ್ಷೇಮದ ಕಡೆ ಲಕ್ಷ್ಯಗೊಡದೆ ಇದ್ದದ್ದರಿಂದ ಬಹುಜನ ಭಕ್ತರು ಯಾತ್ರೆಯ ವಿಷಯದಲ್ಲಿ ನಿರುತ್ಸಾಹಿಗಳಾಗಿದ್ದರೆಂದು ಪ್ರತ್ಯೇಕಿಸಿ ಹೇಳಬೇಕಾದ್ದಿಲ್ಲ. ಆದರೆ ಈ ಸಂವತ್ಸರ ಯಾತ್ರಾಕಾರ್ಯ ನಿರ್ವಾಹಕ್ಕೆ ಕರ್ನೂಲು ಪಟ್ಟಣದಲ್ಲಿರುವ ರಿಟೈರ್ಡ್ ಸಬ್ ಮೇಜಿಸ್ಟ್ರೇಟರು ಮ॥ [illegible]ಪ್ಪಯ್ಯನಾಯಡುಯವರು ರಿಸೀವರಾಗಿ ನೇಮಿಸಲ್ಪಟ್ಟಿದ್ದಾರೆ. ಹೀಗೆ ಪರ್ವತ ಸಂಸ್ಥಾನದವರ ಕೋರಿಕೆಯಂತೆ ರಾಜಕೀಯಾಧಿಕಾರಿಗಳು ದೈವಭಕ್ತಿ ತತ್ಪರರಾದ ಮೇಲ್ಕಂಡ ರಿಸೀವರನ್ನು ನೇಮಿಸಿರುವುದರಿಂದ ಧರ್ಮಾಭಿಮಾನಿಗಳಾದ ಆ ರಿಸೀವರ್ ಪದವೀಧರರು ಸರ್ವ ಸಹಾಯಸಂಪತ್ತಿನಿಂದ ಈ ಸಂವತ್ಸರದ ಯಾತ್ರಾಪೂಜೋತ್ಸವಾದಿಗಳನ್ನು ತೃಪ್ತಿಕರವಾಗಿ ನಡೆಸಿ ಯಾತ್ರಿಕರಿಗೆ ಯೋಗ್ಯವಾದ ಸೌಕರ್ಯ ಸೌಲಭ್ಯಗಳನ್ನು ಒದಗಿಸಿಕೊಡುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಆದುದರಿಂದ ಈ ಸಂವತ್ಸರದ ಶಿವರಾತ್ರಿಯೇ ಶ್ರೀಶೈಲದ ಪುನರುದ್ಧಾರಣ ವರ್ಷ ವರ್ಧಂತ್ಯುತ್ಸವ ದಿನವೆಂದು ಭಾವಿಸಿ ಯಾತ್ರೆಗೆ ನಿಮ್ಮೆಲ್ಲರ ಸುಭಾಗಮನವನ್ನು ಬಯಸೋಣವಾಗಿದೆ.

ವಿ. ಎಂ. ಚಂದ್ರಶೇಖರಯ್ಯ, ವ್ಯವಸ್ಥಾಪಕ
ಶ್ರೀಶೈಲ ಧಾರ್ಮಿಕ ಫಂಡ್ ಕಮಿಟಿ.

ಮಂಡ್ಯದ ತಾ॥ ಬೆಸಗರಹಳ್ಳಿ ವೃತ್ತಾಂತ.

ನಮ್ಮ ಗ್ರಾಮದ ಶ್ರೀ॥ ಚಂದ್ರಮೌಳಿ ಪರಸ್ಪರಸಹಾಯ ಸಂಘ [illegible] ಲಿಮಿಟೆಡ್ ಸೊಸೈಟಿಯು ಪ್ರಾರಂಭವಾಗಿ 6-7 ವರ್ಷಗಳಾಗಿರುತ್ತೆ. ಪ್ರಾರಂಭವಾದ 2-3 ವರ್ಷಗಳು ಮಾತ್ರ ಅಭಿವೃದ್ಧಿಸ್ಥಿತಿಯಲ್ಲಿ ಇದ್ದು [illegible]ಚಗೆ ಬಹಳ ಹೀನಸ್ಥಿತಿಗೆ ಬಂದಿರುತ್ತೆ. ಈಗ್ಗೆ ಸುಮಾರು 4-5 ತಿಂಗಳಿಂ[illegible] ನಮ್ಮ ಗ್ರಾಮಕ್ಕೆ ಮಂಡ್ಯದ ಧರಣೇಂದ್ರಪ್ಪನವರು ಮತ್ತು ಶಾಮ[illegible]ಣ್ಣನವರು ಸಹ ದಯಮಾಡಿಸಿ, ಜನಗಳಿಗೆ ಪ್ರೋತ್ಸಾಹಕೊಟ್ಟು ಸೊಸೈಟಿ [illegible]ನಹ ಜೀರ್ಣೋದ್ಧಾರವಾಗುವಹಾಗೆ ಮಾಡಿದ್ದಲ್ಲದೆ ಹಿಂದೆ ಸೂಚಿಸಿದ್ದ [illegible]ಮೇರೆ ಸದರಿಯವರು ಸೊಸೈಟಿಯ ಮ॥ ಅ॥ ರಿಜಿಸ್ಟ್ರಾರ್‌ಸಾಹೇಬರನ್ನು [illegible] ಇನ್ಸ್‌ಪೆಕ್ಟರ್‌ರವರನ್ನು ಸಹ ನಮ್ಮ ಗ್ರಾಮಕ್ಕೆ ತಾ॥ 10-2-24 ನೆ [illegible]ನುವಾರ ಕರೆದುಕೊಂಡು ಬರಲು ಪುರನಿವಾಸಿಗಳು ಅವರನ್ನು ಇದಿ[illegible]ರುಗೊಂಡು ತಳಿರುತೋರಣಗಳಿಂದ ಅಲಂಕೃತವಾದ ಇನ್‌ಕಂಪ್ಲೀಟ್ ಮಿಡ[illegible] ಸ್ಕೂಲ್ ಕಟ್ಟಡಕ್ಕೆ ಕರೆದುಕೊಂಡುಬಂದು ಸದರಿ ಅ॥ ರಿಜಿಸ್ಟ್ರಾರವ[illegible]ರೇ ಸಭಾಧ್ಯಕ್ಷರನ್ನಾಗಿ ನೇಮಿಸಿದರು. ಸದರಿ ರಿಜಿಸ್ಟ್ರಾರ್‌ಸಾಹೇಬರು [illegible]ಸೊಸೈಟಿಯಿಂದ ಜನಗಳಿಗೆ ಆಗತಕ್ಕ ಪ್ರಯೋಜನವನ್ನೂ, ಸೊಸೈಟಿ ಕೆಲಸ [illegible] ಸೆಕ್ರೆಟರಿಯವರು ಮತ್ತು ಕಮಿಟಿ ಮೆಂಬರುಗಳು ಸಹ ನಡೆಸುವ [illegible]ರೀತಿಯನ್ನೂ ಕುರಿತು ಬಹಳ ಸ್ವಾರಸ್ಯವಾಗಿ ಅಲ್ಲಿ ನೆರೆದಿದ್ದ ಸಭಿಕರ ಮನ[illegible]ಗೆ ಹಿಡಿಯುವಂತೆ ಉಪನ್ಯಾಸಮಾಡಿದರು. ಮತ್ತು ಈ ವಿಷಯವಾಗಿ [illegible]ರಣೇಂದ್ರಪ್ಪನವರು ಮತ್ತು ಶಾಮಣ್ಣನವರು ಸಹ ಉಪನ್ಯಾಸಮಾಡಿ[illegible]ದರು. ಅನಂತರ ಹಿಂದಿನಿಂದಲೂ ನಿಂತು ಬಂದಿದ್ದ ಲೆಕ್ಕವನ್ನು ಆಡಿಟ್ [illegible] ಓದಿಹೇಳಿದರು. ನಂತರ ಸೊಸೈಟಿಶೇರ್‌ದಾರರ ನಫೆಯನ್ನು ಮತ್ತು [illegible]ಸೊಸೈಟಿಯ ಕಟ್ಟಡಕಟ್ಟಲು ಮೆಂಬರ್‌ದಾರರು ಅನುಮೋದಿಸಿದರು. ರಿಜರ್ವ್ [illegible]ಫಂಡನ್ನು ಸದರಿ ಕಟ್ಟಡ ಕಟ್ಟಲುಪಯೋಗಿಸಲು ರಿಜಿಸ್ಟ್ರಾರ್ ಸಾಹೇಬರ[illegible] ಕೇಳಿದ್ದಕ್ಕೆ ಹಾಗೆಆಗಲೆಂದು ಅನುಮೋದಿಸಿದರು. ನಂತರ ಕೆಲವು ವಿಷ[illegible]ಯಗಳನ್ನು ಚರ್ಚಿಸಿ ಸಭಾಧ್ಯಕ್ಷರಿಗೆ ಸಭಿಕರಪರವಾಗಿ ವಂದನೆ ಸಮರ್ಪಿಸಿ [illegible]ಮೇಲೆ ಎಲ್ಲರಿಗೂ ಗಂಧಪುಷ್ಪತಾಂಬೂಲವಿನಿಯೋಗಿಸಿದ ಮೇಲೆ ಸಭೆಯು [illegible]ಕಾಸ್ತಾಯಿತು. ಈ ವರ್ಷ ಸುತರಾಂ ಮಳೆ ಬಾರದ ಬೆಳೆಯೂ ಆಗದೆ [illegible]ವಸಾಯದಿಂದಲೇ ಜೀವಿಸುವ ಬಡರೈತರ ಗೋಳಾಟವನ್ನು ಹೇಳತೀರ[illegible]ದು. ಅದರಲ್ಲಿಯೂ ನೀರಿನ ತೊಂದರೆಯನ್ನು ಎಷ್ಟು ಹೇಳಿದರೂ ಸಾಧ್ಯವಿಲ್ಲ. ಕುಡಿಯುವ ನೀರಿಗಾಗಿ ಕೆರೆಗಳಲ್ಲಿ 10-15 ಬಾವಿ ತೋಡಿದರೂ ಸಹ ನೀರು ಸಪ್ಲೈಯಾಗದ್ದರಿಂದ ಇದೇ ಗ್ರಾಮದ ಮ॥ ಸಾಹುಕಾರ್ ಕಾಡಮಲ್ಲಪ್ಪನವರು ಕೆಲವು ಜನ ದೊಡ್ಡ ಮನುಷ್ಯರುಗಳ ಪ್ರೋತ್ಸಾಹದಿಂದ ನೂರಾರು ರೂಪಾಯಿ ಖರ್ಚಿಟ್ಟು ಜೋಡಿರಾಟೆಯ ಭಾವಿಯನ್ನು ಕಟ್ಟಿಸಿ ಕೊಡುತ್ತೇನೆಂದು ವಾಗ್ದಾನಮಾಡಿ ತಾ॥ 2-2-24ನೇ ಶನಿವಾರದ ಸಾಯಂಕಾಲ ಪುರಪ್ರಮುಖರೊಡನೆ ಸದರಿ ಬಾವಿ ತೋಡುವ ಕೆರೆಯ ಮುಂಭಾಗದ ಪ್ರದೇಶಕ್ಕೆ ಹೋಗಿ ಅಂಕುರಾರ್ಪಣ ಮಾಡಿರುತ್ತಾರೆ. ಈ ಕೆಲಸವು ನಿರ್ವಿಘ್ನವಾಗಿ ಜಾಗ್ರತೆ ನೆರವೇರುವಹಾಗೂ ಜನಗಳಿಗುಂಟಾಗಿರುವ ನೀರಿನ ತೊಂದರೆ ತಪ್ಪಿಸುವಹಾಗೂ, ಕಾರ್ಯದರ್ಶಿಗಳಿಗೆ ಉತ್ಸಾಹ ಹೆಚ್ಚಿ ಬಾವಿಯ ಕೆಲಸ ಜಾಗ್ರತೆ ನೆರವೇರುವಹಾಗೂ ಮತ್ತು ಸೊಸೈಟಿ ಕೆಲಸವು ನಿರ್ವಿಘ್ನವಾಗಿ ನಡೆಯಲು ಸೆಕ್ರೆಟರಿಯವರಿಗೂ, ಮೆಂಬರುಗಳಿಗೂ ಶೇರ್‌ದಾರರಿಗೂ ಸಹ ಪ್ರೀತಿ ವಿಶ್ವಾಸ ಹೆಚ್ಚಿಗೆ ಉಂಟುಮಾಡುವಹಾಗೂ ನಿರಂತರವೂ ಜಗನ್ನಿಯಾಮಕನಾದ ಪರಶಿವನನ್ನು ಧ್ಯಾನಿಸುತ್ತೇವೆ.

ಪುರನಿವಾಸಿಗಳು.

ಸಂಸ್ಕೃತ ಶಿಕ್ಷಣಪದ್ಧತಿ.

(ಲೇಖಕ—ಸ್ವಾಮಿ ವಿರೂಪಾಕ್ಷವಡೆಯರ್ ಪ್ರೊಫೇಸರ್, ಸಂಸ್ಕೃತಕಾಲೇಜ್, ಇಂದೋರ)

ಸಂಸ್ಕೃತಭಾಷೆಯ ಶಿಕ್ಷಣಪದ್ಧತಿಯ ವಿಷಯವಾಗಿ ಏಲೀಕಡೆಗೆ ಮಹಾರಾಷ್ಟ್ರ ಹಾಗೂ ಉತ್ತರಹಿಂದುಸ್ಥಾನಗಳಲ್ಲಿ ಬಹುರೀತಿ ಚರ್ಚೆ ನಡೆಸಿದ್ದು ಈಬಗ್ಗೆ ಅನೇಕ ಸಂಸ್ಕೃತಪಂಡಿತರ ಅಭಿಪ್ರಾಯಗಳನ್ನು ಅಲ್ಲಿಯ ದೊಡ್ಡದೊಡ್ಡ ಸಂಸ್ಥೆಯವರು ಕೇಳಿದ್ದು ಅದರಲ್ಲಿ ಮಹಾರಾಷ್ಟ್ರದ ಕೇಸರೀಕಾರರೂ, ಹಾಗೂ ಆಗ್ರಾಪಟ್ಟಣದ ಸಂಸ್ಕೃತ ಸಾಹಿತ್ಯಸಮಿತಿಯವರೂ ಹಿಂದಕ್ಕೆ ನಮ್ಮನ್ನು ಕೇಳಿದ್ದು ಆಗ್ಗೆಯೇ ನಮ್ಮ ಅಭಿಪ್ರಾಯವನ್ನು ಬರದು ತಿಳಿಸಿರುವೆವು. ಇದಲ್ಲದೆ ಈ ಸಂಬಂಧಿಯಾದ "ಸಂಸ್ಕೃತ ಶಿಕ್ಷಣಪದ್ಧತಿ" ಎಂಬ ಮರಾಠೀ ಲೇಖವು ಇಂದುಪ್ರಕಾಶ ಮೊದಲಾದ ಮರಾಠಿಪತ್ರಗಳಲ್ಲಿ ಪ್ರಸಿದ್ಧವಾಗಿರುವದು. ಆದರೆ ನಮ್ಮ ಕರ್ನಾಟಕ ದೇಶೀಯರಲ್ಲಿಯೂ ಸಂಸ್ಕೃತ ಶಿಕ್ಷಣಪದ್ಧತಿಯು ಸುಧಾರಿಸಲೆಂಬ ಸದಿಚ್ಛೆಯಿಂದ ಈಗ ಕನ್ನಡದಲ್ಲಿ ಬರೆದಿರುವೆವು. ಇದಲ್ಲದೆ ಸಂಸ್ಕೃತದಲ್ಲಿಯೂ ಈ ವಿಷಯವಾಗಿ "ಸಂಸ್ಕೃತ ಶಿಕ್ಷಣಪದ್ಧತಿ" ಎಂಬ ಒಂದು ಪುಸ್ತಕವನ್ನು ಬರೆದು ಛಾಪಿಸಿರುವೆವು.

ಜಗತ್ತಿನ ಎಲ್ಲ ಭಾಷೆಗಳಿಗಿಂತಲೂ ಸಂಸ್ಕೃತಭಾಷೆಯೇ ಅತಿ ಪುರಾತನವಾದದ್ದು. ಅದರಲ್ಲಿಯೂ ವೈದಿಕಭಾಷೆಯು ಅತಿ ಹಳೆಯಭಾಷೆಯೆಂದು ಪರೋಪ್ಯರಾದ ಮ್ಯಾಕ್ಸ್‌ಮೂಲರ, ವಾಲಡ್ಕೂರ್ಸ್, ಥಿಬೋ ಮೊದಲಾದ ಪಂಡಿತರು ಮುಕ್ತಕಂಠದಿಂದ ಒಪ್ಪಿ ಬರೆದಿರುವರು. ಇಂಥಾ ಹಳೆಯಭಾಷೆಯನ್ನೇ ಓದುವದರಿಂದ ಆಗಿನಕಾಲದ ಜಗತ್ತಿನ ಹಾಗೂ ಜನಾಂಗದ ಪರಿಸ್ಥಿತಿಯು ಗೊತ್ತಾಗುವದು.

ಇನ್ನು ಬರೇ ಹಳೆಯದಾದಾಕ್ಷಣಕ್ಕೆ ಸುಮ್ಮನೇ ಯಾವದಕ್ಕೂ ಶ್ರೇಷ್ಠತೆಯು ಬರಲಾರದು. ಆದರೆ ಶೌರ್ಯ, ಧೈರ್ಯ, ಅತುಲಸಾಹಸ, ರಸ ಇತ್ಯಾದಿ ಗುಣಗಳೂ ಹಾಗೂ ಅನಾಧತತ್ವಸಿದ್ಧಾಂತವೂ ಯಾವದರಲ್ಲಿ ವಿವೇಚಿಸಲ್ಪಟ್ಟಿರುವದೋ ಅಂಥಾ ಭಾಷೆಗಾದರೂ ಅಥವಾ ಅಂಥಾ ಜನಾಂಗಕ್ಕಾದರೂ ಘನತೆಯು ಪ್ರಾಪ್ತವಾಗುವದು ನೈಸರ್ಗಿಕವಾಗಿರುವದು, ಆದರೆ ಅಂಥಾ ವಿಶಿಷ್ಟಗುಣಗಳು ಈ ಸಂಸ್ಕೃತಭಾಷೆಯಲ್ಲಿ ತೋರಿಸಿರುವವೋ ಇಲ್ಲವೋ ಎಂದು ವಿಚಾರಮಾಡಿದಲ್ಲಿ ಜಗತ್ತಿನ ಎಲ್ಲಾ ಭಾಷೆಗಳಿಗಿಂತಲೂ ರಸವತ್ತರವಾಗಿ ಪ್ರತಿಪಾದನ ಮಾಡುವ ಶೈಲಿಯೂ, ಮೃದು, ಮಧುರ, ಗಾಂಭೀರ್ಯಾದಿ ಗುಣಗಳನ್ನು ಲೋಕೋತ್ತರರೀತಿಯಿಂದ ತೋರಿಸುವದೂ, ದೃಷ್ಟಿಗೋಚರಾಗೋಚರಗಳಾದ ಋತು, ಕಾಲ, ನಕ್ಷತ್ರ, ಸೂರ್ಯಚಂದ್ರಾದಿಗಳ ಗತಿಯನ್ನೂ, ಕಿಂಬಹುನಾ, ಸರ್ವೇಂದ್ರಿಯಗಳಿಗೂ ಸರ್ವೋಪಾಯಗಳಿಗೂ ಸಿಲುಕದ ಮೂಲಪ್ರಕೃತಿಯನ್ನೂ ತದಧೀಶನಾದ ಪರಮಾತ್ಮನನ್ನೂ ಈ ವೈದಿಕಭಾಷೆಯಲ್ಲಿಯೇ ಪ್ರತಿಪಾದಿಸಿದ್ದು ಇವುಗಳನ್ನೆಲ್ಲಾ ಈ ಭಾಷಾಜ್ಞಾನದಿಂದಲೇ ಕಂಡುಹಿಡಿಯಬೇಕಾಗಿರುವದು. ಯಾಕಂದರೆ ಜಗತ್ತಿನಲ್ಲಿಯ ಮತಾಂತ್ಯಭಾಷೆಗಳಲ್ಲಿಯೂ ಈ ವೈದಿಕಭಾಷೆಯಲ್ಲಿ ತೋರಿಸಿದಂತೆ ಆತ್ಮತತ್ವವಿಚಾರವು ತೋರಿಸಿಲ್ಲ. ಇಷ್ಟೇ ಅಲ್ಲದೆ ಹಿಂದೆಯೂ ಹಾಗೂ ಈಗಲೂ ಏನೊಂದು ಅಲ್ಪಸ್ವಲ್ಪ ತತ್ವವಿಚಾರವು ಆಯಾಯ ದೇಶೀಭಾಷೆಗಳಲ್ಲಿ ಕಂಡುಬರುವದೋ ಅದೆಲ್ಲವೂ ನಮ್ಮ ವೈದಿಕಭಾಷಾಜ್ಞಾನದಿಂದ ಅವರ ಪೂರ್ವಜರಿಂದಲೇಯಾಗಿ ಅವರಲ್ಲಿ ಅಂಕುರಿಸಲ್ಪಡಿಸಿರುವದು.

ಇನ್ನು ಈ ಭಾಷೆಯ ವಿಷಯವಾಗಿ ನಮ್ಮ ಪೂರ್ವಋಷಿಗಳ ಅಭಿಪ್ರಾಯವೇನಿರುವದೆಂದು ಆಲೋಚಿಸಿದಲ್ಲಿ

> ಅನಾದಿನಿಧನಾನಿತ್ಯಾ ವಾಗುತ್ಸೃಷ್ಟಾಸ್ವಯಂಭುವಾ |
> ಆದೌವೇದಮಯೀ ದಿವ್ಯಾ ಯತಃಸರ್ವಾಃ ಪ್ರವೃತ್ತಯಃ ‖

ಈ ವೇದವಿದ್ಯೆಯು ಆದ್ಯಂತಗಳಿಂದ ರಹಿತವಾಗಿಯೂ, ಸ್ವಯಂಭುವಾದ ಪರಮೇಶ್ವರನಿಂದ ನಿರ್ಮಿತವಾದ್ದರಿಂದ ಅಪೌರುಷೇಯವಾಗಿಯೂ ಇರುವದೆಂದು ಋಷಿಗಳು ಹೇಳುವದರಿಂದ ಆ ವೇದವಿದ್ಯೆಯನ್ನು ಪ್ರತಿಪಾದಿಸುವ ವೈದಿಕಭಾಷೆಯಾದರೂ ಅತಿಪುರಾತನವಿದ್ದಿರಲಿಕ್ಕೆ ಬೇಕೆಂಬುವದು ಸ್ಪಷ್ಟವಾಗುವದು.

ಇದಲ್ಲದೆ ನವಿಷ್ಯ ಭಾರತೀಯ ನವೀನ ಸುಶಿಕ್ಷಿತರು ಈ ಸಂಸ್ಕೃತ ಭಾಷೆಯು ಈಗ್ಗೆ 21 ಸಾವಿರ ವರ್ಷಗಳ ಪೂರ್ವದಲ್ಲಿಯೇ ಪ್ರಚಾರವಾಗಿರಬಹುದೆಂದು ಅಭಿಪ್ರಾಯಪಟ್ಟಿರುವರು. ಮತ್ತು ಮಾನವೀಪ್ರಪಂಚದ ನಿಜಸ್ಥಿತಿಯನ್ನು ತಿಳುಕೊಳ್ಳುವ ಕುತೂಹಲವುಳ್ಳವರು ಅವಶ್ಯ ಈ ಭಾಷೆಯನ್ನು ಓದಿಯೇ ತೀರಬೇಕೆಂತಲೂ ಈ ಭಾಷಾಜ್ಞಾನದ ಹೊರತು ಮಾನವೀ ಜ್ಞಾನದ ಪರಿಪೂರ್ತಿಯೇ ಆಗುವಂತಿಲ್ಲವೆಂಬದಾಗಿಯೂ ಕಲಕತ್ತೆಯ 1876 ನೇ ಇಸವಿಯ ಲೆಫ್ಟನೆಂಟ ಗವರ್ನರರವರು

> "The Education of a Hindu gentleman can never be said to be complete without a thorough mastery of Sanskrit language and literature"

ಈರೀತಿಯಾಗಿ ಅಂದ ಉದ್ಗಾರಗಳ ಮೇಲಿಂದಲೇ ಸಂಸ್ಕೃತಭಾಷೆಯ ಮಹತ್ವವು ಕಂಡುಬರುವದು, ಅಂದಮೇಲೆ ಇಂಥಾದ್ದೊಂದು ಜ್ಞಾನಕ್ಕೆ ಸಾಧನವಾದ ವೈದಿಕಭಾಷಾಭ್ಯಾಸದ ಆವಶ್ಯಕತೆಯು ಪ್ರತಿಯೊಬ್ಬ ಮಾನವೀಪ್ರಾಣಿಗೆ ಎಷ್ಟು ಅವಶ್ಯಕತೆಯುಳ್ಳದ್ದೆಂಬುವದನ್ನು ವಾಚಕರೇ ಊಹಿಸಬಹುದು.

ಆದರೆ ಈಗಿನಕಾಲದ ಕೆಲವು ಪಾಶ್ಚಾತ್ಯ ವಿದ್ಯಾಶಿಕ್ಷಿತರು ಸಂಸ್ಕೃತ ಭಾಷೆಯಲ್ಲಿ ಐತಿಹಾಸಿಕ, ಗಣಿತ, ಭೂಗೋಲ ಹಾಗೂ ರಾಜಕೀಯ ಮೊದಲಾದ ವಿಷಯಗಳೂ ಮತ್ತು ಯಂತ್ರರಚನಾ, ಯುದ್ಧಕಲ, ನೌಕಾಯಾನ ರಚನಾಪದ್ಧತಿಗಳ ವಿವರಣವಿರದೆ ಕೇವಲ ಅತಿಶಯೋಕ್ತಿಪೂರ್ವಕವಾದ ವರ್ಣನೆಯು ಮಾತ್ರ ಇರುವದೆಂದು ಹೀಯಾಳಿಸುತ್ತಿರುವರು. ನನ್ನ ವಿಚಾರದಿಂದ ಇದು ಅವರ ಶುದ್ಧತಪ್ಪೆಂದು ಹೇಳುವೆನು. ಯಾಕೆಂದರೆ, ಈಗಿನ ಕಾಲದ ಬಿ.ಎ., ಎಂ.ಎ. ಪರ್ಯಂತ ಓದುವವರೆಗೆ ಕಾವ್ಯ ನಾಟಕ ಅಲಂಕಾರಗಳ ಕೆಲವು ಭಾಗಗಳನ್ನೂ ಅಲ್ಲಲ್ಲಿಯ ತಾತ್ವಿಕವಿಷಯಗಳ ಕೆಲವಂಶವನ್ನು ಮಾತ್ರ ಅವರು ಕಲಿಯುವದರಿಂದ ಇತರ ಮಹತ್ವವಿಷಯಗಳ ಗ್ರಂಥಸಂಗ್ರಹವೇ ಅವರಕಣ್ಣಿಗೆ ಬೀಳದ್ದರಿಂದ ಈರೀತಿ ಅವರ ಚೇಷ್ಟೆಗಾಸ್ಪದವಾಗಿರುವದು. ಹೀಗಿಲ್ಲದಿದ್ದಲ್ಲಿ ನಮ್ಮ ಪೂರ್ವಭಾರತೀಯರಲ್ಲಿ ಸರ್ವವ್ಯವಹಾರಕುಶಲರೂ, ರಾಜಕಾರ್ಯದುರಂಧರರೂ ಆದ ಅನೇಕ ಮಹಾಪುರುಷರುಗಳಾಗಿ ಹೋಗಿರುವರು. ಅವರಿಗೆಲ್ಲ ಈ ಸಾಮರ್ಥ್ಯವು ಬಂದದ್ದು ಈ ಭಾಷೆಯಿಂದಲ್ಲವೇ? ಆದ್ದರಿಂದಲೇ ಮನುಮಹರ್ಷಿಯು ಈ ಭಾಷೆಯನ್ನು

> "ಭೂತಂಭವ್ಯಂಭವಿಷ್ಯಂಚಸರ್ವಂವೇದಾತ್ಪ್ರಸಿಧ್ಯತಿ"
> ಸೇನಾಪತ್ಯಂಚರಾಜ್ಯಂಚ ದಂಡನೇತೃತ್ವಮೇವಚ |
> ಸರ್ವಲೋಕಾಧಿಪತ್ಯಂಚವೇದಶಾಸ್ತ್ರವಿದರ್ಹತಿ ‖

ಮನುಸ್ಮೃತಿ ಅ. ೧೨.

> ನಾಸ್ತಿವೇದಾತ್‌ಪರಂಶಾಸ್ತ್ರಂನಾಸ್ತಿಮಾತೃಸಮೋಗುರುಃ ‖

ಮಹಾಭಾರತ ಅನು. ೧೦—೬೬.

ಮೇಲಿನ ಶ್ಲೋಕಗಳಿಂದ ಎಷ್ಟು ಗೌರವಿಸಿರುವರೆಂಬುವದನ್ನು ವಾಚಕರೇ ವಿಚಾರಮಾಡಲಿ.

ಇನ್ನು ಈ ಭಾಷಾಜ್ಞಾನದಿಂದಲೇ ಹರ್ಷ, ವಿಕ್ರಮ, ನಲ, ಭರ್ತೃಹರಿ, ಭೋಜ ಮೊದಲಾದ ರಾಜಕಾರ್ಯಧುರಂಧರರಾದ ರಾಜಪುಂಗವರೂ ಭೀಷ್ಮ, ದ್ರೋಣ, ಬಸವೇಶ, ವಿದ್ಯಾರಣ್ಯ ಮೊದಲಾದ ಮಂತ್ರಿವರರೂ ಶುಕ್ರ, ವಿದುರ, ಚಾಣಕ್ಯ ಮೊದಲಾದ ರಾಜನೀತಿಜ್ಞರೂ, ವಾಲ್ಮೀಕಿ, ವ್ಯಾಸ, ದೂರ್ವಾಸ, ಪ್ರಭೃತಿ, ದಿವ್ಯಜ್ಞಾನಿಗಳಾದ ಋಷಿಗಳೂ, ಶಿವದೇವ, ಶಂಕರ, ಶ್ರೀಕರ, ರಾಮಾನುಜ, ಮಹಾವೀರ, ನಾನಕ ಮೊದಲಾದ ತತ್ವಜ್ಞ ಆಚಾರ್ಯಶಿಖಾಮಣಿಗಳೂ ತಮ್ಮತಮ್ಮ ವಿಚಾರಕೌಶಲ್ಯದಿಂದ ನಮ್ಮ ಭರತಭೂಮಿಯನ್ನು ದಿವ್ಯದೃಷ್ಯವನ್ನಾಗಿ ಮಾಡಿದರಲ್ಲದೆ ಜಗತ್ತನ್ನು ಚಕಿತಚಿತ್ರದಂತೆ ಮಾಡಿದ ಚರಿತ್ರವುಳ್ಳವರಾಗಿ ಹೋಗಿರುವರು. ಆದರೆ ಇವರೆಲ್ಲರಿಗೂ ಆಂಗ್ಲಭಾಷಾಜ್ಞಾನವೇ ಇತ್ತೋ ಹಾಗೆ? ಇಲ್ಲ. ಇವರ ಅಗಾಧಚರಿತ್ರೆಗೆ ಈ ಭಾಷಾಜ್ಞಾನವೇ ಕಾರಣವು.

ಇನ್ನು ಈ ಭಾಷೆಗೆ ಬಹುಕಾಲದಿಂದ ರಾಜಾಶ್ರಯ ತಪ್ಪಿಹೋಗಿದ್ದರಿಂದ ಈ ಭಾಷೆಯಲ್ಲಿ ಏನೇನೆ ಹೊಸಹೊಸ ವಿಚಾರಭರಿತ ಪುಸ್ತಕಗಳು ತಯಾರಾಗಲು ಆಸ್ಪದವಿಲ್ಲವಾಯಿತು. ಇಷ್ಟೇ ಅಲ್ಲದೆ ಪರದೇಶೀಯ ರಾಜರ ಆಕ್ರಮಣವು ಹಿಂದುಸ್ಥಾನದಲ್ಲಿ ಮೊದಲು ಆಗುವಾಗ್ಗೆ ಈ ಪುಸ್ತಕ ಭಂಡಾರವು ಅಗ್ನಿಯ ಆಹುತಿಯಾಗುತ್ತಿತ್ತು. ಇದಕ್ಕೆ ಧರ್ಮಾಜ್ಞಾನಿಗಳ ದ್ವೇಷವೇ ಕಾರಣವು. ಇದರಂತೆ ನಮ್ಮ ಭಾರತೀಯರಲ್ಲಿಯೇ ಸ್ವಾರ್ಥಬುದ್ಧಿಯ ಧರ್ಮದ್ವೇಷದಿಂದ ಅಮೌಲ್ಯಗ್ರಂಥಗಳು ಭಾರತೀಯರಿಂದಲೇ ಎಷ್ಟೋ ಸುಡಲ್ಪಟ್ಟಿರುವವು. ಈ ರೀತಿ ನಷ್ಟವಾದಾಗ್ಯೂ, ಈವತ್ತಿಗೆ ೫೦ ಸಾವಿರ ಪುಸ್ತಕಗಳು ಸಂಸ್ಕೃತಭಾಷೆಯಲ್ಲಿರುವುದು ಕಂಡುಬರುವದು.

ಆದರೆ ಈ ಸಂಸ್ಕೃತಭಾಷೆಯ ಪಠನಪಾಠನ ಪದ್ಧತಿಯು ಕೆಲವು ಕಾಲದಿಂದ ಋಷಿಸಂಪ್ರದಾಯಕ್ಕೆ ವಿರುದ್ಧವಾಗಿ ಯದ್ವಾತದ್ವಾ ನಡೆದದ್ದರಿಂದ ಈ ಭಾಷೆಯ ಉನ್ನತಿಗೆ ಎಷ್ಟೋ ಕುಂದು ಬಂದೊದಗಿತು. ಯಾಕೆಂದರೆ ಅರ್ವಾಚೀನ ಪಂಡಿತರು ಸ್ವಾರ್ಥಿಗಳೂ ಆಲಸ್ಯವಂತರೂ ವ್ಯರ್ಥದುರಭಿಮಾನಿಗಳೂ ಆಗಿ ಪುರಾತನದ ಅನುಕರಣೆಯನ್ನೇ ಮರೆತುಬಿಟ್ಟು ತಮ್ಮ ಪಾಂಡಿತ್ಯಪ್ರಸರಣೆಯಲ್ಲಿಯೇ ಬೆರೆತುಗೊಂಡು ಲೋಕಕಲ್ಯಾಣವನ್ನು ನಿರೀಕ್ಷಿಸಲಿಲ್ಲ. ಹಾಗೂ ಭಾಷೋನ್ನತಿಯನ್ನು ಚಿಂತಿಸಲಿಲ್ಲ. ಇಷ್ಟೇ ಅಲ್ಲದೆ ಭಾಷೆಯ ಕಾಠಿಣ್ಯವನ್ನು ತೋರಿಸುವದರಲ್ಲಿಯೇ ತೊಡಗಿದರು. ಆದರೆ ಪೂರ್ವಋಷಿಗಳ ವಿಚಾರವು ಹೀಗಿದ್ದಿಲ್ಲ. ಯಾಕಂದರೆ, ಮಹಾಭಾಷ್ಯಕಾರರಾದ ಪತಂಜಲಿಮಹರ್ಷಿಗಳು ತಮ್ಮ ವ್ಯಾಕರಣಾದಿ ಸಮಸ್ತ ಶಾಸ್ತ್ರಗಳೆಲ್ಲಾ ವೇದಗಳ ಅಂಗೋಪಾಂಗಗಳಿದ್ದು, ಮನುಷ್ಯದೇಹದಲ್ಲಿ ಹಸ್ತಪಾದಾದ್ಯವಯವಗಳು ಹ್ಯಾಗೆ ದೇಹಸಂರಕ್ಷಣೆಗಾಗಿರುವವೋ ಅದರಂತೆ ಇವೆಲ್ಲಾ ಶಾಸ್ತ್ರಗಳು ಮೂಲವಾದ ವೇದಸಂರಕ್ಷಣೆಗಾಗಿ ಅರ್ಥಾತ್ ವೇದಜ್ಞಾನಸಂಪಾದನೆಗಾಗಿರುವವೆಂದು ಹೇಳುವರು ಹ್ಯಾಗಂದರೆ,—

"ರಕ್ಷೋಹಾಗಮಲಘ್ವಸಂದೇಹಾಃ ಪ್ರಯೋಜನಂ". "ವೇದಾನಾಂ ರಕ್ಷಾರ್ಥಮಧ್ಯೇಯಂ ವ್ಯಾಕರಣಂ" ಇತ್ಯಾದಿ ವಾಕ್ಯಗಳಿಂದ ವ್ಯಾಕರಣಾದಿ ಸರ್ವವಿಷಯಗಳು ವೇದಾರ್ಥಜ್ಞಾನಸಂಪಾದನೆಗೆ ಸಾಧನಗಳಾಗಿರುವವೆಂಬುವದು ಸ್ಪಷ್ಟವಾಗಿ ತಿಳಿಯುತ್ತಿದ್ದು ಒಂದುವೇಳೆ ಮನುಷ್ಯನು ತನ್ನ ಆಯುಷ್ಯವನ್ನು ಸಾಧನಗಳಾದ ವ್ಯಾಕರಣಾದಿಗಳಲ್ಲಿಯೇ ಕಳೆದು ಹೋದರೆ ಈ ಸಾಧನಗಳಿಂದ ಸಾಧಿಸಬೇಕಾದ ಸಾಧ್ಯವಾದ ವೇದಗಳನ್ನು ಯಾವಾಗ ಸಾಧಿಸುವನು? ಆದ್ದರಿಂದ ಇವೆಲ್ಲಾ ಶಾಸ್ತ್ರಗಳನ್ನು ಒಂದೇ ಜನ್ಮದಲ್ಲಿ ಕಲಿತು ಸಾಧ್ಯವಾದ ವೇದವನ್ನು ಸಾಧಿಸಿ ಅಂತಿಮಪದ ಪಡಿಯಬೇಕೆಂಬ ಋಷಿಗಳ ಸದಭಿಪ್ರಾಯವನ್ನು ಅರ್ವಾಚೀನ ಪಂಡಿತರು ತಪ್ಪಿಸಿ ಒಂದೊಂದು ಶಾಸ್ತ್ರವೂ ಒಂದೊಂದು ಜನ್ಮದಲ್ಲಿ ಪೂರ್ಣವಾಗಲಾರದೆಂದು ವೃಥಾ ಕಂಠಶೋಷಣ ಮಾಡಲು ತೊಡಗಿದರು. ಮತ್ತು ಅದರಂತೆ ಪ್ರಾರಂಭದಲ್ಲಿ "ಅಮರಕೋಶ" ವೆಂಬುವದನ್ನು ವರ್ಷ, ನಾಲ್ಕುವರ್ಷ ವೃಥಾ ಕಂಠಪಾಠ ಮಾಡಿಸಲು ಹತ್ತಿ ಇತರ ವಿಷಯಗಳನ್ನು ಬಹುತೇಕ ಕಂಠಪಾಠ ಮಾಡಿಸುವದರಲ್ಲಿಯೇ ಆಸಕ್ತರಾದರು. ಇದರಿಂದ ಶಿಷ್ಯರ ವ್ಯರ್ಥ ಆಯುಷ್ಯವು ಹೋಗಿ ಈ ಪಾಠಮಾಡುವ ಪದ್ಧತಿಯಿಂದ ಶಿಷ್ಯರ ವಿಚಾರಶಕ್ತಿಯು ಬೆಳಿಯದೆ ಇದ್ದದ್ದು ಮಂದವಾಗಿ ಮೇಧಾಶಕ್ತಿಯೂ ಕುಗ್ಗುವದು.

ಬಾಂಧವರೇ, ವಿಚಾರಮಾಡಿರಿ. ಅಮರಕೋಶದಂತೆ ಒಟ್ಟು ಹದಿನಾಲ್ಕು ಕೋಶಗಳಿದ್ದು ಈ ಕೋಶವೆಂಬುವದು ಒಂದು ಡಿಕ್ಷನರಿಯಾಗಿರುವದು. ಅಂದಮೇಲೆ ಬರೇ ಇಂಥಾ ಒಂದು ಡಿಕ್ಷನರಿಯನ್ನು ಪಾಠಮಾಡುವದರಿಂದ ಮನುಷ್ಯನಿಗೆ ಭಾಷೆಯೂ ಹಾಗೂ ಜ್ಞಾನವೂ ಬರುವದುಂಟೇ? ಫಕ್ತಪ್ರಸಂಗ ಬಿದ್ದಾಗ ಶಬ್ದಾರ್ಥಾದಿಗಳನ್ನು ನೋಡಿಕೊಳ್ಳಲಿಕ್ಕೆ ಮಾತ್ರ ಈ ಕೋಶಗಳು ಬೇಕಾಗಿರುವವು.

ಅಂದಮೇಲೆ ಈ ರೀತಿ ಕಂಠಗತ ಮಾಡುವದರಿಂದ ವ್ಯರ್ಥಕಾಲಕ್ಷೇಪವಾಗಿ ಅಮೌಲ್ಯವಿಚಾರವುಳ್ಳ ಋಷಿಗ್ರಂಥಗಳ ಆಲೋಚನೆಗೆ ಸಮಯವೂ ಸಿಗದೆ ವ್ಯವಹಾರಶೂನ್ಯರಾಗಿ ಲೋಕನಿಂದೆಗೆ ಪಾತ್ರರಾಗುವರು. ಹಾಗೂ ತಮ್ಮೊಡನೆ ಭಾಷೆಯನ್ನು ನಿಂದಾಸ್ಪದ ಮಾಡುವರು. ಆದ್ದರಿಂದ ನಾವು ಇದನ್ನೆಲ್ಲಾ ಪರ್ಯಾಲೋಚಿಸಿ ಸಂಸ್ಕೃತ ಶಿಕ್ಷಣಪದ್ಧತಿಯು ಸುಧಾರಿಸಲೆಂಬ ಆಶೆಯಿಂದ ಕೆಳಗೆ ಬರೆದ ಪ್ರಕಾರ ವಿಷಯ ನಿಯಮವನ್ನು ಮತ್ತು ಕಾಲದ ಅವಧಿಯನ್ನು ತೋರಿಸಿರುವೆವು.

ಸಶೇಷ.

(ಆರೋಗ್ಯಚಂದ್ರಿಕೆಯಿಂದ.)

"ಆರೋಗ್ಯಚಕ್ರವರ್ತಿಯ ದರ್ಬಾರ್.

(ಒಂದು ಸಣ್ಣ ನಾಟಕರಂಗ).

(ರಾಜನು ತನ್ನ ಸಾಮಂತಪರಿಜನರೊಡನೆ ದರ್ಬಾರಿಗೆ ಯೋಗ್ಯವಾದ ವಸ್ತ್ರಾಭರಣಗಳನ್ನು ಧರಿಸಿ ಕುಳಿತಿರುವನು.)

ಕಂಚುಕಿ.—(ಪ್ರವೇಶಿಸಿ) ಮಹಾರಾಜನಿಗೆ ವಿಜಯವಾಗಲಿ! ಪ್ರಭೋ! ಮರಣಾಧಿದೇವತೆಯಾದ ಯಮನು ಕೆಲವು ಪರಿವಾರರೊಡನೆ ಮಹಾಸ್ವಾಮಿಯವರ ದರ್ಶನಕ್ಕಾಗಿ ಬಾಗಿಲಲ್ಲಿ ಪರೀಕ್ಷಿಸುತ್ತಿರುವನು.

ರಾಜ.—(ವಿಸ್ಮಯದಿಂದ ತಕ್ಷಣ್ಣಿ ಹಾಸು, ಏನಿದು? ಯಮದೇವನು ನಮ್ಮನ್ನು ನೋಡುವುದಕ್ಕೆ ಬಂದಿರುವನೆ? ಅವನು ಯಾವಾಗಲೂ ತನಗೆ

ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯ ರುಧಿರೋದ್ಗಾರಿ ಸಂವತ್ಸರದ ವಿದ್ಯಾರ್ಥಿ ಪಾರಿತೋಷಿಕ ಸಭೆಯಲ್ಲಿ ಓದಲ್ಪಟ್ಟ ಕರ್ಣಾಟಕ ಭಾಷಾತ್ಮಕವಾದ ಮಂಗಳಾಶಾಸನ ಪದ್ಯಗಳು.

ಶ್ರೀಃ

ಆವಲಿಶಿವು ತನ್ನನೇನಿಜ
ಭಾವಶುದ್ಧಿಯೊಳೈದೆ ನಂಬಿಹ
ಭೂಮಿಸುತ ಯದುವಂಶದಾಣ್ಮರ ಪೊರೆಯಲೋಸುಗವೆ |
ತಾವನೆಸಗಿ ಮಹಾಬಲಾದ್ರಿಯೊ
ಳಾವಗಂ ನೆಲಸಿಹಳೊ ತಾನಾ
ದೇವಿಚಾಮುಂಡಾಂಬೆ ಸಲಹಲಿ ಕೃಷ್ಣಭೂಮಿಪನ || ೧
ವೇದಶಾಸ್ತ್ರಾಂಬುಧಿಯನೊಳ ಪೊ
ಕ್ಕಾದಯಾಳುಗಳೆಮ್ಮ ಋಷಿಗಳ
ಗಾಧಮೆನಿಪದನೆಮಗೆ ಸುಲಭದೆ ತಿಳುಹಲೋಸುಗವೇ |
ಶೋಧನೆಯೊನಿಸದರರ್ಥಸಾರವ
ನಾದರಮ್ಮಿಗೆ ತೋರಿಸಿರ್ದೊಡ
ಮೋದಿನಾವದನರಿದುಕೊಳ್ಳದೆ ಕಷ್ಟಮಾಗಿಹುದು || ೨
ಬ್ರಹ್ಮವಿದ್ಯೆಯೆ ದೈವದಾಣತಿ
ಬ್ರಹ್ಮವಿದ್ಯೆಯೆನಿಸುದು ಸದ್ಗತಿ
ಬ್ರಹ್ಮವಿದ್ಯೆಯನರಿತಬ್ರಾಹ್ಮಣನೈದೆ ಶೋಭಿಸನು |
ತಮ್ಮ ಸೊಮ್ಮನುತೊರೆದು ಸುಮ್ಮನೆ
ನೆಮ್ಮಿ ಪೆರತನು ಬಾಳ್ವೊಡಿವರಿಂ
ದೆಮ್ಮ ಕರ್ಮಗಳೆಂತು ಸಾಗುವುವೆನ್ನುತಿಹುದೆಜನ || ೩
ಭರತಖಂಡದೆ ಗಣನೆಯನು ವಿಶಾ
ಲಿರುವನಿತು ಜನವೇದಮಾತೆಯ
ಚರಣಸೇವೆಯ ನೊಲವಿನೆಸಗಿತದಂಗರಕ್ಷಣೆಯ |
ಪರಮಪಾವನ ಕಾರ್ಯದೊಳೆನೆರೆ |
ನಿರತರಾಗಿರ್ಪೆಮ್ಮ ನೀಕ್ಷಿಸಿ
ಮೆರೆವ ಧರಣೀವಿಬುಧರಿವರೆಂದರುದು ಪೂಜಿಸರು || ೪
ವೇದವನುಧಿಕ್ಕರಿಪ ಜನವನು
ಕಾದಿದಪ್ಪಿದುದೆಂದು ಜರಿವೆವು
ವೇದವೇಪರದೈವವೆಂಬಾವಕ್ಕಟಂತಿಹವೆ |
ಭೇದವೇನವರ್ಗೆಮಗೆಬಗೆಯ
ಲ್ಕೀದುರಂತವನೆನಿಪ್ಪದಶೆಯಿಂ
ವೇದಮೂರ್ತಿಗಳಪ್ಪ ಗುರುವರರೆಮ್ಮ ರಕ್ಷಿಸುಗೆ || ೫
ಶುದ್ಧವೈದಿಕವಿದ್ಯೆಯನುನೆರೆ
ಯುದ್ಧರಿಸಬೇಕೆಂದುಮನದೆನಿ
ಬದ್ಧಮಾದಾಕಾಂಕ್ಷೆಯಿಂದೆಮ್ಮಾಳ್ವಭೂಮಿಪನು |
ಬದ್ಧಕಂಕಣನಾಗಿಪರಮ
ಶ್ರದ್ಧೆಯಿಂದೀಪಾಠಶಾಲೆಯ
ಸಿದ್ಧಗೈಸಿಪ್ಪರೋಧಿವೃದ್ಧಿಯಬಯಸುತಿರ್ದಪನು || ೬
ಈಸುಸಮಯವನೆಮ್ಮ ವಿದ್ಯಾ
ಭ್ಯಾಸಕುಪಯೋಗಿಸದೆಶುಷ್ಕಾ
ಯಾಸವೆಂದಾವ್ಯಳೆಯೆಸುದಿನಗಳೆಲ್ಲಮುಂದೆಮಗೆ |
ಕ್ಲೇಶಮಾದೊಡಮಿನಿಸುಸ್ಮರಿಸಿ
ಭೂಸುರೋಚಿತವಿದ್ಯೆಯೊಳ್ಪ್ರ
ಕಾಶಿಯಿಟ್ಟಭ್ಯುದಯವೊಂದುವುದೆಮಗೆಸಮುಚಿತವು || ೭
ಧರಣಿಧರಸುತೆಪರಿವೃತಾಸನ
ದುರಿತವಿಲಸಿತಸತ್ಕೃಪಾರಸ
ಭರಿತಭಾವಿತಸಕಲಕಾಮಿತವಿತರಣೈಕರತೆ |
ಪರಮಹರಿತೆವಿಪನ್ನಭರಣ
ತ್ವರಿತೆಮಂಗಳದಿವ್ಯತೇಜ
ಸ್ಫುರಿತೆಚಾಮುಂಡಾಂಬೆಸಲಹೌ ಕೃಷ್ಣಭೂಮಿಪನ || ೮

ಎಚ್. ಲಿಂಗರಾಜೇಅರಸು,
ಅರಮನೆಯ ಮುಜರಾಯಿ ಬಕ್ಷಿಯವರು.

ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್ ಮೈಸೂರು.

ಮಹಾಶಯರೆ !

ಇದೇ ಮಾಹೆ 16 ನೇ ತಾರೀಖಿನಲ್ಲಿ ತಮಗೆ ಕಳುಹಿಸಿರುವ ನೋಟೀಸ್ ಪ್ರಕಾರ ಪ್ರಜಾಪ್ರತಿನಿಧಿ ಸಭೆಗೆ ಅಸೋಸಿಯೇಷನ್ನಿಂದ ಒಬ್ಬ ಮೆಂಬರನ್ನು ಚುನಾಯಿಸಿ ಕಳುಹಿಸಲು ನಡೆಯಬೇಕಾದ ಮೀಟಿಂಗನ್ನು ಮುಂದಿನತಿಂಗಳು ಅಂದರೆ ಮಾರ್ಚಿ 5 ನೇ ತಾರೀಖು ಬುಧವಾರ ನಡೆಯಿಸಬೇಕೆಂದೂ, ಮೆಂಬರಾಗಲು ಇಷ್ಟವುಳ್ಳವರು ಇದೇ ತಿಂಗಳು 26ನೇ ತಾರೀಖಿನೊಳಗಾಗಿ ತಮ್ಮ ಅಪ್ಲಿಕೇಷನನ್ನು ಬೆಂಗಳೂರಿನ ಜನರಲ್ ಮತ್ತು ರೆವಿನ್ಯು ಸೆಕ್ರೆಟರಿಯಟ್ ಪೊಲಿಟಿಕಲ್ ಬ್ರಾಂಚಿನ ಅಸಿಸ್ಟೆಂಟ್ ಸೆಕ್ರೆಟರಿಯವರಿಗೆ ಸೀದಾ ಕಳುಹಿಸಿಕೊಡಬೇಕೆಂದೂ, ಸರ್ಕಾರದವರು ನೋಟೀಸ್ ಕೊಟ್ಟಿರುತ್ತಾರಾಗಿ ಉಮೇದುವಾರರು ತಕ್ಷಣವೇ ಮೇಲ್ಕಂಡ ಆಫೀಸರವರಿಗೆ ಅಪ್ಲಿಕೇಷನ್ ಹಾಕಿಕೊಳ್ಳಬೇಕಾಗಿ ಕೋರಿದೆ. ಅಲ್ಲದೆ ಮೇಲ್ಕಂಡ ಮಾರ್ಚಿ 5ನೇ ತಾರೀಖು ಬುಧವಾರ ಮೈಸೂರಿನಲ್ಲಿ ನಡೆಯುವ ಚುನಾವಣೆ ಮೀಟಿಂಗಿಗೆ ಎಲ್ಲಾ ಮೆಂಬರುಗಳೂ ತಪ್ಪದೆ ದಯಮಾಡಬೇಕಾಗಿ ಪ್ರಾರ್ಥನೆ.

ಕಾರ್ಯದರ್ಶಿಗಳು.

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ.— ನನ್ನ ಚಿಕ್ಕತಂದೆ ನಂಜುಂಡಶೆಟ್ಟಿಯು ಅಪುತ್ರವಂತನಾಗಿ ಈಗ್ಗೆ 1½ ವರ್ಷಗಳ ಕೆಳಗೆ ಶಿವಾಧೀನನಾದನು. ಆತನ ಹೆಂಡತಿಯಾದ ಚನ್ನಮ್ಮನೆಂಬ ನನ್ನ ಚಿಕ್ಕಮ್ಮನು ನಮ್ಮ ಪಿತ್ರಾರ್ಜಿತವಾದ ಚರಸ್ಥಿರ ಆಸ್ತಿಗಳನ್ನು ಯಾವಪಾದರೊಂದು ವಿಧ ಪರಭಾರೆಮಾಡುವ ಯೋಚನೆ ಇಟ್ಟುಕೊಂಡಿರುವುದಾಗಿ ತಿಳಿಯಬರುತ್ತೆ. ಸದರಿ ಆಸ್ತಿಗಳಿಗೆ ಉತ್ತರವಾರಸುದಾರ ನಾನಿರುವಲ್ಲಿ ಯಾರೇ ಆಗಲಿ ಮೇಲ್ಕಂಡ ನನ್ನ ಚಿಕ್ಕಮ್ಮ ಚನ್ನಮ್ಮನೆಂಬುವಳಿಂದ, ಕ್ರಯ, ಭೋಗ್ಯ, ಆಧಾರ, ದಾನ, ಮುಂತಾದ ಯಾವ ವಿಧ ಪರಭಾರೆಮಾಡಿಸಿಕೊಳ್ಳಕೂಡದು; ಹಾಗೇನಾದರು ಮಾಡಿಸಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ. ಮುಂದೆ ಇದಕ್ಕಾಗುವ ಕಷ್ಟ ನಷ್ಟಗಳಿಗೆ ಬಾಧ್ಯರಾಗುತ್ತೀರೆಂಬ ಅಂಶತಿಳಿಯತಕ್ಕದ್ದು. ಹಾಗೆ ಯಾರಾದರೂ ಮೇಲ್ಕಂಡಂತೆ ಪರಭಾರೆಮಾಡಿಕೊಂಡಲ್ಲಿ ಅವರುಗಳ ನಷ್ಟಕ್ಕೆ ನಾನು ಪಾತ್ರನಲ್ಲವೆಂಬ ಸಂಗತಿ ಈ ಮೂಲಕ ಎಚ್ಚರಿಸಿದ್ದೇನೆ.

ಮರುಳಶೆಟ್ಟಿ ಉರುಫ್ ಸಣ್ಣ ಮುದ್ದಶೆಟ್ಟಿ, ರುಜು.
ತುಂಬಾಪುರ ಗ್ರಾಮ ಕಣಕಟ್ಟೆ ಹೋಬಳಿ, ಅರಸೀಕೆರೆ, ತಾ||

ಶ್ರೀ ಜಗದ್ಗುರು ರಂಭಾಪುರೀ ಪೀಠಾಧಿಕಾರದ ಪ್ರಸಿದ್ಧ ಪತ್ರಿಕೆಯು.

ಭರತಖಂಡದಲ್ಲಿರುವ ಸಮಸ್ತ ವೀರಶೈವರಿಗೆ ತಿಳಿಸುವದೇನಂದರೆ.— ಶ್ರೀ ಜಗದ್ಗುರು ರೇಣುಕಾಚಾರ‍್ಯರ ಪೀಠಕ್ಕೆ ಇದೇ ರುಧಿರೋದ್ಗಾರಿ ಸಂವತ್ಸರದ ಫಾಲ್ಗುಣ ಶುಕ್ಲಪಕ್ಷದಲ್ಲಿ ಪಟ್ಟಾಧಿಕಾರವನ್ನು ಮಾಡಬೇಕೆಂದು ನಿಶ್ಚಯಿಸಿದೆ. ಯಾವತ್ತು ಪ್ರಾಂತ್ಯದ ವೀರಶೈವರ ಪ್ರಾರ್ಥನೆ ಮೇರೆಗೆ ಈ ಜಗದ್ಗುರುಪೀಠಕ್ಕೆ ಅಧಿಕಾರಿಗಳನ್ನು ಗೊತ್ತುಮಾಡುವದಕ್ಕೋಸ್ಕರ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ‍್ಯ ಮಹಾಸ್ವಾಮಿಗಳವರು ದಯಮಾಡಿಸುತಾರೆ. ಅಸಾಧಾರಣ ಪಾಂಡಿತ್ಯ ಸತ್ಕುಲ ಸದಾಚಾರ ಸದ್ಗುಣ ಮೊದಲಾದವುಗಳಿಂದ ಯುಕ್ತರಾದ ಶಿಷ್ಯರುಳ್ಳ ಶುದ್ಧ ಮಠಸ್ಥಲೀಯ ಬ್ರಹ್ಮಚಾರಿಗಳನ್ನು ಪಟ್ಟಗಟ್ಟಬೇಕಾಗಿದೆ. ಅಭಿಲಾಷಿಗಳು ತಮ್ಮ ತಮ್ಮ ಪಾಂಡಿತ್ಯ ಕುಲಾದಿಗಳ ಬಗ್ಗೆ ಬಾಳೆಹೊನ್ನೂರು ಮೊಕ್ಕಾಮಿಗೆ ಮೇಲ್ಕಂಡ ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಗೆ ಅರಿಕೆಮಾಡಿಕೊಳ್ಳಬೇಕು. ಸರ್ವರೀತಿಯಿಂದ ಯೋಗ್ಯರಾದವರನ್ನು ಸಂಸ್ಥಾನದ ಪದ್ಧತಿಯ ಮೇರೆಗೆ ಅಧಿಕಾರಿಗಳನ್ನಾಗಿ ನೇಮಿಸುವದಾಗುವುದು. ಭದ್ರಂಭೂಯಾತ್

ಎಸ್. ಕೆ. ಯಂ. ರುದ್ರಾರಾಧ್ಯ.
ಶ್ರೀ ರಂಭಾಪುರೀ ಮಹಾ ಸಂಸ್ಥಾನದ ಏಜಂಟು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

A POINT FOR
MR. M. VENKATAKRISHNAYYA.

Sir,

May I request you to be so good as to publish the following with regard to the Mysore City Elections :—

I find that at a public meeting held on the Maidan near the Town Hall, Mysore on the 15th instant under the presidency of Mr. M. Venkatakrishnayya himself a candidate to the Assembly, a resolution was passed alleging a number of serious irregularities and wires were sent to His Highness the Maharaja, and the Dewan of Mysore, and the same was reported to the President. The question arises whether Mr. Venkatakrishnayya, to be true to his own convictions and to be consistent with his own conduct, should not prove those irregularities in the City elections. I am addressing this only to Mr. Venkatakrishnayya though there were other candidates subscribing their names to the resolution, as he presided on the occasion and headed the aggrieved candidates. There has always been a talk of political principles, consistency of views and securing of justice. If it is so, could the conduct of Mr. Venkatakrishnayya in keeping quiet after the elections are over, simply because he succeeded, be justified? Will it not show that he did all that, with no real and sincere conviction about the irregularities, but only as a second string to his bow, so that if he failed, he would employ it against the successful candidates? Is it political integrity, or is it even common honesty? If Mr. Venkatakrishnayya wants to justify his claim to be a genuine politician, here is a chance for him, and he ought to pursue his resolution to its logical conclusion and try his best to secure a cancellation of the City elections.

HONESTY.

To
THE EDITOR OF THE MYSORE STAR,
MYSORE.

Sir,

I consider myself as highly obliged, if you kindly publish this short article in your popular and sympathetic paper.

It is a welknown fact that the Visvakarma Community is very backward since a pretty long time. It is really a pitiable thing to say that th is no member from this Community either in Representative Assembly or in the Legislat Council even during these Democratic days, represent their grievance and thus enable the selves to improve in Education, Labour a Industry. I here that one Mr. S. V. Gurumun acharya, Municipal Councillor of Shravanbelg who has been induced by the community, is t ing with the Government to get a seat both the Legislative Council and the Representati Assebly. I trust that benevolent Goverment w favourably consider his application, and nomina him to to the Assembly and the Legislature behalf of us all.

I remain,
Sir,
Your faithfully,
T. SHAMANNA,
A member of the commun

ಪುಣ್ಯತಿಥಿ.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಡಿತಾರಾ ಮತ್ತು ವಿಶ್ವಾರಾಧ್ಯ ಈ ಆಚಾರ‍್ಯರು ಮಹಾಶಿವರಾತ್ರಿ ಪುಣ್ಯತಿಥಿಯ ಅವತರಿಸಿದ್ದಾರೆ. ಕಾರಣ ಯಾವತ್ತೂ ವೀರಶೈವರು ಈ ದಿನವನ್ನು ಸ್ವ ತದ ಪವಿತ್ರ ಹಬ್ಬವೆಂದು ತಿಳಿದು ಅದರಂತೆ ಆಚರಿಸಿ ಜನರಲ್ಲಿ ಸರ್ವ ವಾಗಿ ಪೀಠಾಚಾರ‍್ಯರ ಜಾಗ್ರತೆಯನ್ನುಂಟುಮಾಡಬೇಕಾಗಿ ಇಚ್ಛಿಸುತ್ತೇ

ಸಿ. ವಿ. ಸಿಂಧೂರ ಚನ್ನವೀರೇಶವಾಚನಮಂದಿರ ಸೆಕ್ರೆ

ಹುಣಸಮಾರನಹಳ್ಳಿ ವಿಚಾರ.

ದೇವನಹಳ್ಳಿ ತಾ|| ಹುಣಸಮಾರನಹಳ್ಳಿಯಲ್ಲಿ ಫಾಲ್ಗುಣ ಪೌರ್ಣ ಯಲ್ಲಿ ನಡೆಯಬೇಕಾದ ಶ್ರೀ ಚಂದ್ರಮೌಳೀಶ್ವರಸ್ವಾಮಿಯವರ ಉತ್ಸ ವದ ಕೂಡ ನಡೆಯುವ ದನಗಳ ಪ್ರದರ್ಶನವು ಈ ವರ್ಷ ನೀರಿಗೆ ಬ ಅಭಾವವಾದ್ದರಿಂದ ಈ ವರ್ಷ ನಿಲ್ಲಿಸಲ್ಪಟ್ಟಿದೆ. ಕಳೆದ ತಾ|| 7 ರ ರಾ ಯಾರೋ ದುಷ್ಟರು ಈ ಊರಿನ ಗ|| ಇ|| ಕಂ|| ಮಿ|| ಸ್ಕೂಲಿನ ಬಾ ಲುಗಳಿಗೆ ಹಾಕಿದ್ದ ಬೀಗಗಳನ್ನು ಒಡೆದು ಒಳಗೆ ಪ್ರವೇಶಿಸಿ ಒಳಗ ಎರಡು ಬೀರುಗಳ ಮತ್ತು ಪೆಟ್ಟಿಯ ಬೀಗಗಳನ್ನು ಒಡೆದು ಅವರ ಉ ಯೋಗಕ್ಕೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಸ್ಕೂಲ್ ರ್ದುಗಳನ್ನು ಊಟಿಬಿಸಾಡಿ ಹೋಗಿದ್ದರು. ಪೋಲೀಸ್ ಆಫೀಸರ ಮಹಜರ್ ಮಾಡಿಕೊಂಡುಹೋಗಿ ಪತ್ತೆ ತರದೂದಿನಲ್ಲಿರುತ್ತಾರೆ. ಕ್ಷಾಮಕಾಲದಲ್ಲಿ ಕಳ್ಳರಹಾವಳಿಯನ್ನು ನೋಡಿದರೆ ಮುಂದೆ ಏನಾಗು ಬುದು ಗೊತ್ತಿಲ್ಲ. ಇದಕ್ಕೆ ನಮ್ಮ ದಯಾಳು ಸರ್ಕಾರದವರು ಹಳ್ಳಿಗಾ ಗಳಲ್ಲಿ ಆಗತಕ್ಕ ಕಳ್ಳತನಗಳಿಗೆ ನಿಗಾಯಿಟ್ಟು ತಕ್ಕ ತರದೂದು ನಡೆಯಿ ತ್ತಾರೆಂದು ನಂಬಿರುತ್ತೇನೆ.

ಎಸ್. ಎಲ್. ಮುದ್ದುಬಸವ

ವಾಚನಾಲಯ ಸ್ಥಾಪನೆ.

1919 ನೆಯ ಡಿಸೆಂಬರ್ ತಿಂಗಳಲ್ಲಿ ಚಿತ್ರದುರ್ಗದ ಶ್ರೀ ಜಗದ್ಗು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ಚಿತ್ತೈಸಿದ್ದಾ ಇದೇ ಊರಿನ ಮ|| ಕೆ. ರುದ್ರಪ್ಪನವರು ಶ್ರೀಗಳವರು ಈ ಗ್ರಾಮ ದಯಮಾಡಿಸಿದ ಜ್ಞಾಪಕಾರ್ಥವಾಗಿ - ಶ್ರೀ ಜಯದೇವ ವಾಚನಾಲ ಎಂಬ ಹೆಸರಿಟ್ಟು ಒಂದು ಕಟ್ಟಡವನ್ನು ಕಟ್ಟಿಸಿಕೊಡುವುದಾಗಿ 1923 ರಲ್ಲಿ ಕಟ್ಟಡದಕೆಲಸ ಪೂರೈಸಿದರು. ಇದಕ್ಕೆ ಶ್ರೀಗಳವ ಸಹಾಯಮಾಡುವುದಾಗಿ ಅಭಯವನ್ನು ಕೊಟ್ಟಿರುತ್ತಾರೆ. ಕೂರು ಮಾಮೂಲ್‌ಪೇಟೆ ಬಿ. ಹುಚ್ಚಪ್ಪನವರು ಶ್ರೀ ಜಯದೇವ ವಾ ನಾಲಯ ಎಂಬ ನಾಮಧೇಯದಿಂದ ಒಂದು ಬೋರ್ಡನ್ನು ತಯಾರ ಮುಫತಾಗಿ ಕೊಡುವುದಾಗಿ ಒಪ್ಪಿರುತ್ತಾರೆ. ಈ ವಾಚನಾಲಯ ಪ್ರಾರಂಭೋತ್ಸವವನ್ನು ಜಾಗ್ರತೆ ನೆರವೇರಿಸಬೇಕೆಂದು ಮ|| ಕೆ. ರುದ್ರ ನವರು ಕುತೂಹಲವುಳ್ಳವರಾಗಿರುತ್ತಾರೆ. ಆದ್ದರಿಂದ ಮೇಲ್ಕಂಡ ಮಠ ಯರುಗಳೂ ಸಂಗನಹಳ್ಳಿ ಗ್ರಾಮಸ್ಥರೂ ಸಮಸ್ತ ವೀರಶೈವಮಂಡಲಿ ವರೂ ತಮ್ಮ ಶಕ್ತ್ಯಾನುಸಾರ ದ್ರವ್ಯಸಹಾಯಮಾಡಿ ಕೀರ್ತಿಭಾಗಿಗಳ ತ್ತಾರೆಂದು ನಂಬಿರುತ್ತೇನೆ.

ವಿದ್ಯಾಭಿಮಾನಿ.

ಶ್ರೀ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ ಮಿಗಳವರ ಧಾರವಾಡ ಹಾವೇರಿಪೇಟೆ ಮುರಘಾಮಠ

ಶ್ರೀ ಪಾಠಶಾಲ ಮತ್ತು ಫ್ರೀ ಬೋರ್ಡಿಂಗ ಮ್ಯಾ. ಕಂ. ಚೇರಮ ರಿಂದ ತಿಳಿಸುವದೇನಂದರೆ—

ಸದರಿ ಬೋರ್ಡಿಂಗಿನಲ್ಲಿ ಸೇರಲಿಚ್ಛಿಸುವ ವಿದ್ಯಾರ್ಥಿಗಳು ಸನ್ 19 ನೇ ಇಸವಿ ಮೇ ಆಖೈರ ದೊಳಗಾಗಿ ಅರ್ಜಿಗಳನ್ನು ಕಳಿಸತಕ್ಕದ್ದು. ಸ ಅರ್ಜಿ ಫಾರ್ಮುಗಳು ಸದರಿ ಬೋರ್ಡಿಂಗ ಕ್ಲಾರ್ಕರ ಕಡಿಗೆ ದೊರೆ ತ್ತವೆ. ಅರ್ಜಿ ಲಗತ್ತ ತಮ್ಮ ಯಾವತ್ತು ವಿಷಯಗಳ ಗುಣಗಳನ್ನು ತಮ ಕ್ಲಾಸ ಮಾಸ್ತರರ ಸಹಿನಿಶಿಯಿಂದ ಕಳಿಸಿಕೊಟ್ಟಲ್ಲಿ, ನಿಮ್ಮ ಅರ್ಜಿಗಳ ವಿಚಾರಮಾಡುವದರಲ್ಲಿ ಬರುವದು.

ಶ್ರೀ ಮಹಾತಪಸ್ವಿಗಳವರ ಕೃಪಾಪಾತ್ರರಾದ ಶ್ರೀ ಮೃತ್ಯುಂಜ ಸ್ವಾಮಿಗಳವರ ಅಪ್ಪಣೆಯ ಮೇರೆಗೆ ಗತ ವರ್ಷದಂತೆ ಚಾಲುಸಾ ಮಾರ್ಚ ಮತ್ತು ಎಪ್ರೀಲ ತಿಂಗಳಲ್ಲಿ ಆಗತಕ್ಕ ಮ್ಯಾಟ್ರಿಕ ಮತ್ತು ಮು ಪರೀಕ್ಷೆಗೆ ಬರತಕ್ಕ ವೀರಶೈವ ಬಡವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ಗಳನ್ನು ಕರಕೊಂಡುಬರುವ ವೀರಶೈವ ಮಾಸ್ತರರಿಗೂ ಊಟದ ಸೌಲ ವನ್ನು ಮಾಡುವದರಲ್ಲಿ ಬರುವದು. ಪರೀಕ್ಷೆಗಿಂತ 10 ದಿವಸ ಮುಂಚ ವಾಗಿ ತಮ್ಮ ತಮ್ಮ ಅರ್ಜಿಗಳನ್ನು ಸದರಿ ಶ್ರೀ ಬೋರ್ಡಿಂಗಿಗೆ ಕಳ ಕ್ಕದ್ದು. ತಡಮಾಡಿ ಬಂದ ಅರ್ಜಿಗಳಿಗೆ ಅವಕಾಶ ದೊರೆಯಲಿಕ್ಕಿ ಪ್ರತಿಯೊಬ್ಬರು ಬರುವಾಗ್ಗೆ ತಮ್ಮ ತಮ್ಮ ಕಂಬಳಿಗೆಯನ್ನು ತರತಕ್ಕದ್ದು.

ಪ್ರಜಾನುರಾಗಿ ಶೇಕದಾರರವರ್ಗ.

ಕೋಳಾಲವೆಂಬ ನಮ್ಮ ಹೋಬಳಿ ಎಷ್ಟು ಅದೃಷ್ಟಹೀನವಾದುದು ಏಕೆಂದರೆ— ಈ ಸಮ್ಮತಿನ ಪ್ರಜೆಗಳಿಗೆ ಯಾವ ವಿಧವಾದ ಸೌಕರ್ಯಗಳ ಇದ್ದರೂ, ಇದ್ದ ಒಂದಾನೊಂದು ಅಮೋಘವಾದ ಸೌಕರ್ಯವನ್ನೂ ದುಕೊಟ್ಟರು. ಈ ಸಮ್ಮತಿಗೆ ಈಗ್ಗೆ 2 ವರ್ಷಗಳ ಮುಂಚೆ ಬಂದ ಶೇ ದಾರ್ ಮ. ಕೆ. ಗುರುರಾಮಯ್ಯನವರ್ ಸಾಹೇಬರೆಂಬುವರು ಧರ್ಮಿಷ್ಠ ಗಿಯೂ, ನ್ಯಾಯಪರರಾಗಿಯೂ, ಗೌರವಸ್ಥರಾಗಿಯೂ, ಪ್ರಜೆಗಳ ಸು

ನ್ನು ಸುಖವೆಂಬ ದೊಡ್ಡ ಭಾವನೆಯಿಂದ ಪ್ರಜೆಗಳನ್ನು ಕಾಪಾಡುತ್ತಿದ್ದರು. ಸರ್ಕಾರದವರು ಇಂತಹ ಅನುಕೂಲ್ಯವಸ್ತುವನ್ನು ಗುಬ್ಬಿ ಕಸಬಾ ಹೋಬಳಿಗೆ ವರ್ಗಮಾಡಿರುವುದರಿಂದ ನಮ್ಮಗಳ ಅದೃಷ್ಟವು ಎಷ್ಟು ಹೀನವಾದುದೆಂದು ಹೇಳಿದರೂ ಸಾಲದಾಗಿದೆ. ಪ್ರಜೆಗಳ ಸುಖವೇ ತಮ್ಮದೆಂದು ಭಾವಿಸಿ ಪ್ರಜೋಪಕಾರನಿರತರಾಗಿದ್ದ ಈ ಮಹನೀಯರನ್ನು ಇಂತಹ ಕ್ಷಾಮಕಾಲದಲ್ಲಿ ವರ್ಗಮಾಡಿರುವುದು ನಮಗೆ ಬಂದಿರತಕ್ಕ ಹೊಟ್ಟೆಗಿಲ್ಲದ ಕ್ಷಾಮದ ನಾಲ್ಕರಷ್ಟು ದುಃಖವನ್ನು ಹೆಚ್ಚಿಸಿದೆ. ಇವರ ಗುಣಗಳನ್ನೂ, ಕೆಲಸಮಾಡುವುದರಲ್ಲಿರುವ ದಕ್ಷತೆಯನ್ನೂ ನೋಡಿ ನಮ್ಮ ತಾಲ್ಲೂಕಿನ ಅಮಲ್‌ದಾರ್ರವರಾದ ಮ|| ರಾ|| ಬಿ. ಲಿಂಗಯ್ಯನವರಿಗೂ, ನಮ್ಮ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಾದ ಮ|| ರಾ|| ಸಿ. ಎಂ. ಹೆಚ್. ರಣಜೋಧ್‌ಸಿಂಗ್‌ರವರಿಗೂ ಸಹ ಇವರನ್ನು ಬೇರೆಕಡೆ ಕಳುಹಿಸಲು ಇಷ್ಟವಿಲ್ಲದೆ ಹಜರತ್ ನಮ್ಮ ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರ್ ಸಾಹೇಬರವರಿಗೆ ಈ ವರ್ಗವನ್ನು ಕ್ಯಾನ್ಸಲ್ ಮಾಡಬೇಕೆಂದು ಶಿಫಾರಸ್ಸು ಮಾಡಿರುವುದಾಗಿಯೂ, ಅದರ ಮೇಲೆ ಸಧ್ಯದಲ್ಲಿ ಹುಜೂರ್ ಜಮಾಬಂದಿ ಆಗುವವರೆಗೂ ಇಲ್ಲಿಯೇ ಇಟ್ಟಿರುವುದಾಗಿ ಹುಕ್ಕುಂ ಅಪ್ಪಣೆ ಆಗಿರುವಂತೆಯೂ ವರ್ತಮಾನ ಕೇಳುತ್ತೇವೆ. ದಯಾಳುಗಳಾದ ಘನಸರ್ಕಾರದವರು ಈ ನಮ್ಮ ಪ್ರಾರ್ಥನೆಗೆ ಗಮನಕೊಟ್ಟು, ಇವರ ವರ್ಗವನ್ನ ಕ್ಯಾನ್ಸಲ್ ಮಾಡಿಸಿ, ಇಂತಹ ನಿಷ್ಪಕ್ಷಪಾತಿಗಳಾದ ಮೇಲ್ಕಂಡ ಮಹನೀಯರನ್ನ ಇನ್ನೂ ಕೆಲವು ಕಾಲ ನಮ್ಮ ಸಮ್ಮತಿಗೆ ಶೇಕದಾರರನ್ನಾಗಿ ನಿಲ್ಲಿಸಿ ನಮ್ಮಗಳನ್ನು ಕಾಪಾಡಬೇಕೆಂದು ಬೇಡುತ್ತೇವೆ. ಪ್ರಜಾಹಿತೈಷಿಗಳು.

ಕೋಳಾಲ, ತುಮಕೂರು ತಾಲ್ಲೂಕು.

ಶ್ರೀಶೈಲ ಜೀರ್ಣೋದ್ಧಾರ.

ನಮ್ಮ ಭಾರತಭೂಮಿಯ ಪವಿತ್ರಪುಣ್ಯಕ್ಷೇತ್ರಗಳಲ್ಲಿ ಪ್ರಸಿದ್ಧವಾದ ಶ್ರೀಶೈಲವೆಂಬ ಪ್ರಾಚೀನಯಾತ್ರಾಸ್ಥಲದ ಧರ್ಮಾಧಿಕಾರವು ಪಾರಂಪರ್ಯವಾಗಿ ಶ್ರೀ ಗಿರಿರಾಜಸೂರ್ಯ ಸಿಂಹಾಸನದ ವೀರಶೈವ ಜಗದ್ಗುರುಗಳ ಕಾಬಿಯಲ್ಲಿತ್ತು. ಅದು ಕೆಲವು ವರ್ಷಗಳ ಕೆಳಗೆ ಕಾರಣಾಂತರದಿಂದ ತಪ್ಪಿ ಪುಷ್ಪಗಿರಿ ಬ್ರಾಹ್ಮಣ ಮಠಾಧಿಕಾರಿಗಳ ಕೈಗೆ ಸಿಕ್ಕಿ ಕ್ಷೀಣಗತಿಯನ್ನು ಹೊಂದುತ್ತಾ ಬಂದಿರುವುದು ಜನಜನಿತವಾಗಿದೆ. ದೈವಭಕ್ತಿ ತತ್ಪರರಾದ ಶ್ರೀಶೈಲ ಪ್ರಾಂತದ ರಾಜಕೀಯಾಧಿಕಾರಿಗಳೂ ಹಾಗೂ ತದ್ಭಕ್ತರಾದ ಪ್ರಜೆಗಳೂ ಆ ಬಗ್ಗೆ ತುಂಬಾ ಖೇದಗೊಂಡು ಸರಕಾರದಿಂದ ಎಚ್ಚರಿಸಿದರೂ ಆನೂತನ ಧರ್ಮಾಧಿಕಾರಿಗಳ ಕಿವಿಯಲ್ಲಿಯೇ ಬೀಳಲಿಲ್ಲ. ಇವರ ನಿರಂಕುಶಪ್ರಭುತ್ವದ ಅನ್ಯಾಯ ಸ್ವೇಚ್ಛಾಚಾರಗಳಿಗಾಗಿ ಭಕ್ತಕೋಟಿಯು ಮುನಿದು ಆ ಶ್ರೀಶೈಲಕ್ಕೆ ಸಂಬಂಧಿಗಳಾದ ಪರ್ವತ ಪೀಠದವರಿಗೆ ಮೊರೆಯಿಡಲು ಸದರಿ ಸೂರ್ಯ ಸಿಂಹಾಸನದ ಗುಂತಕಲ್ಲು ಪಟ್ಟದವರು ನಿರಾಕರಿಸಿಬಿಟ್ಟರು. ಅದೇ ಪೀಠದವರು ಕಾರ್ಯಗೌರವ ಇಂಗಿತಜ್ಞರಾದ್ದರಿಂದಲೇ ರಾಜಕೀಯ ನ್ಯಾಯಸ್ಥಾನವಾದ ಕರ್ನೂಲು ಜಿಲ್ಲಾ ಜಡ್ಜಿ ಕೋರ್ಟಿನಲ್ಲಿ ಅಸಲ್ ನಂ $\frac{3}{21}$ ನೇ ದಾವ ದಾಖಲ್ಮಾಡಿ ಆ ನಿರಂಕುಶಾಧಿಕಾರಿಗಳನ್ನು ತೊಲಗಿಸಿ ಆಸ್ಥಾನಕ್ಕೆ ಮಾಮೂಲಂತೆ ತಮ್ಮನ್ನು ನಿಯೋಜಿಸಬೇಕೆಂದು ಕೇಳಿದ್ದರಷ್ಟೆ. ಈ ವಿವಾದವು ಇನ್ನೂ ವಿಮರ್ಶೆಯಲ್ಲಿದ್ದಾಗ್ಯೂ ನ್ಯಾಯಾಧೀಶರಿಗೆ ಪುಷ್ಪಗಿರಿಯವರ ಅನ್ಯಾಯಗಳೆಲ್ಲಾ ಮನವರಿಕೆಯಾದ್ದರಿಂದ ತೀರ್ಮಾನಕ್ಕೆ ಪೂರ್ವಭಾವಿಯಾಗಿಯೇ ವಾದಿಗಳ ಇಷ್ಟದಂತೆ ಅವರ ಪ್ರಭುತ್ವವನ್ನು ಕಿತ್ತುಹಾಕಿ ಒಬ್ಬ ರಿಸೀವರ್ ಅಧಿಕಾರಿಗಳ ಮೂಲಕ ಮಹಾಶಿವರಾತ್ರಿ ಪೂಜೋತ್ಸವಾದಿಗಳನ್ನು ಕ್ರಮಪಡಿಸಲು ತಾ|| 19-12-23 ರಲ್ಲಿ ನೇಮಿಸಿರುತ್ತಾರೆ. ಇದುವರೆಗಿನ ಅಧಿಕಾರಿಗಳು ಯಾತ್ರಿಕರ ಯೋಗಕ್ಷೇಮದ ಕಡೆ ಲಕ್ಷ್ಯಕೊಡದೆ ಇದ್ದದ್ದರಿಂದ ಬಹುಜನ ಭಕ್ತರು ಯಾತ್ರೆಯ ವಿಷಯದಲ್ಲಿ ನಿರುತ್ಸಾಹಿಗಳಾಗಿದ್ದರೆಂದು ಪ್ರತ್ಯೇಕಿಸಿ ಹೇಳಬೇಕಾದ್ದಿಲ್ಲ. ಆದರೆ ಈ ಸಂವತ್ಸರ ಯಾತ್ರಾಕಾರ್ಯ ನಿರ್ವಾಹಕ್ಕೆ ಕರ್ನೂಲು ಪಟ್ಟಣದಲ್ಲಿರುವ ರಿಟೈರ್ಡ್ ಸಬ್ ಮೇಜಿಸ್ಟ್ರೇಟರು ಮ|| ಅಪ್ಪಯ್ಯನಾಯುಡುಯವರು ರಿಸೀವರಾಗಿ ನೇಮಿಸಲ್ಪಟ್ಟಿದ್ದಾರೆ. ಹೀಗೆ ಸರ್ವತ ಸಂಸ್ಥಾನದವರ ಕೋರಿಕೆಯಂತೆ ರಾಜಕೀಯಾಧಿಕಾರಿಗಳು ದೈವಭಕ್ತಿ ತತ್ಪರರಾದ ಮೇಲ್ಕಂಡ ರಿಸೀವರನ್ನು ನೇಮಿಸಿರುವುದರಿಂದ ಧರ್ಮಾಭಿಮಾನಿಗಳಾದ ಆ ರಿಸೀವರ್ ಪದವೀಧರರು ಸರ್ವ ಸಹಾಯಸಂಪತ್ತಿನಿಂದ ಈ ಸಂವತ್ಸರದ ಯಾತ್ರಾಪೂಜೋತ್ಸವಾದಿಗಳನ್ನು ತೃಪ್ತಿಕರವಾಗಿ ನಡೆಸಿ ಯಾತ್ರಿಕರಿಗೆ ಯೋಗ್ಯವಾದ ಸೌಕರ್ಯ ಸೌಲಭ್ಯಗಳನ್ನು ಒದಗಿಸಿಕೊಡುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಆದುದರಿಂದ ಈ ಸಂವತ್ಸರದ ಶಿವರಾತ್ರಿಯೇ ಶ್ರೀಶೈಲದ ಪುನರುದ್ಧರಣ ವರ್ಷ ವರ್ಧಂತ್ಯುತ್ಸವದಿನವೆಂದು ಭಾವಿಸಿ ಯಾತ್ರೆಗೆ ನಿಮ್ಮೆಲ್ಲರ ಸುಖಾಗಮನವನ್ನು ಬಯಸೋಣವಾಗಿದೆ.

ಪಿ. ಎಂ. ಚಂದ್ರಶೇಖರಯ್ಯ, ವ್ಯವಸ್ಥಾಪಕ
ಶ್ರೀಶೈಲ ಧಾರ್ಮಿಕ ಫಂಡ್ ಕಮಿಟಿ.

ಮಂಡ್ಯದ ತಾ|| ಬೆಸಗರಹಳ್ಳಿ ವೃತ್ತಾಂತ.

ನಮ್ಮ ಗ್ರಾಮದ ಶ್ರೀ|| ಚಂದ್ರಮೌಳಿ ಪರಸ್ಪರಸಹಾಯ ಸಂಘ ಅನ್‌ಲಿಮಿಟೆಡ್ ಸೊಸೈಟಿಯು ಪ್ರಾರಂಭವಾಗಿ 6-7 ವರ್ಷಗಳಾಗಿರುತ್ತೆ. ಪ್ರಾರಂಭವಾದ 2-3 ವರ್ಷಗಳು ಮಾತ್ರ ಅಭಿವೃದ್ಧಿಸ್ಥಿತಿಯಲ್ಲಿ ಇದ್ದು ಈಚೆಗೆ ಬಹಳ ಹೀನಸ್ಥಿತಿಗೆ ಬಂದಿರುತ್ತೆ. ಈಗ್ಗೆ ಸುಮಾರು 4-5 ತಿಂಗಳಿಂದೀಚೂ ನಮ್ಮ ಗ್ರಾಮಕ್ಕೆ ಮಂಡ್ಯದ ಧರಣೇಂದ್ರಪ್ಪನವರು ಮತ್ತು ಶಾಮಣ್ಣನವರು ಸಹ ದಯಮಾಡಿಸಿ, ಜನಗಳಿಗೆ ಪ್ರೋತ್ಸಾಹಕೊಟ್ಟು ಸೊಸೈಟಿಯು ಪುನಹ ಜೀರ್ಣೋದ್ಧಾರವಾಗುವಹಾಗೆ ಮಾಡಿದ್ದಲ್ಲದೆ ಹಿಂದೆ ಸೂಚಿಸಿದ್ದ ಮೇರೆ ಸದರಿಯವರು ಸೊಸೈಟಿಯ ಮ|| ಅ|| ರಿಜಸ್ಟ್ರಾರ್ ಸಾಹೇಬರನ್ನು ಮತ್ತು ಇನ್ಸ್‌ಪೆಕ್ಟರ್‌ರವರನ್ನು ಸಹ ನಮ್ಮ ಗ್ರಾಮಕ್ಕೆ ತಾ|| 10-2-24 ನೆ ಭಾನುವಾರ ಕರೆದುಕೊಂಡು ಬರಲು ಪುರನಿವಾಸಿಗಳು ಅವರನ್ನು ಇದಿರುಗೊಂಡು ತಳಿರುತೋರಣಗಳಿಂದ ಅಲಂಕೃತವಾದ ಇನ್‌ಕಂಪ್ಲೀಟ್ ಮಿಡಲ್ ಸ್ಕೂಲ್ ಕಟ್ಟಡಕ್ಕೆ ಕರೆದುಕೊಂಡುಬಂದು ಸದರಿ ಅ|| ರಿಜಸ್ಟ್ರಾರರವರನ್ನೇ ಸಭಾಧ್ಯಕ್ಷರನ್ನಾಗಿ ನೇಮಿಸಿದರು. ಸದರಿ ರಿಜಸ್ಟ್ರಾರ್ ಸಾಹೇಬರು ಸೊಸೈಟಿಯಿಂದ ಜನಗಳಿಗೆ ಆಗತಕ್ಕ ಪ್ರಯೋಜನವನ್ನೂ ಸೊಸೈಟಿ ಕೆಲಸವನ್ನು ಸೆಕ್ರೆಟರಿಯವರು ಮತ್ತು ಕಮಿಟಿ ಮೆಂಬರುಗಳು ಸಹ ನಡೆಸುವ ರೀತಿಯನ್ನೂ ಕುರಿತು ಬಹಳ ಸ್ವಾರಸ್ಯವಾಗಿ ಅಲ್ಲಿ ನೆರೆದಿದ್ದ ಸಭಿಕರ ಮನಸ್ಸಿಗೆ ಹಿಡಿಯುವಂತೆ ಉಪನ್ಯಾಸಮಾಡಿದರು. ಮತ್ತು ಈ ವಿಷಯವಾಗಿ ಧರಣೇಂದ್ರಪ್ಪನವರು ಮತ್ತು ಶಾಮಣ್ಣನವರು ಸಹ ಉಪನ್ಯಾಸಮಾಡಿದರು. ಅನಂತರ ಹಿಂದಿನಿಂದಲೂ ನಿಂತು ಬಂದಿದ್ದ ಲೆಕ್ಕವನ್ನು ಆಡಿಟ್ ಮಾಡಿ ಓದಿಹೇಳಿದರು. ನಂತರ ಸೊಸೈಟಿಷೇರ್‌ದಾರರ ನಷ್ಟೆಯನ್ನು ಮತ್ತು ಸೊಸೈಟಿಯ ಕಟ್ಟಡಕಟ್ಟಲು ಮೆಂಬರ್‌ದಾರರುಅನುಮೋದಿಸಿದರು. ರಿಜರ್ವ್ ಫಂಡನ್ನು ಸದರಿ ಕಟ್ಟಡ ಕಟ್ಟಲುಉಪಯೋಗಿಸಲು ರಿಜಸ್ಟ್ರಾರ್ ಸಾಹೇಬರನ್ನು ಕೇಳಿದ್ದಕ್ಕೆ ಹಾಗೆಆಗಲೆಂದು ಅನುಮೋದಿಸಿದರು. ನಂತರ ಕೆಲವುವಿಷಯಗಳನ್ನು ಚರ್ಚಿಸಿ ಸಭಾಧ್ಯಕ್ಷರಿಗೆ ಸಭಿಕರಪರವಾಗಿ ವಂದನೆ ಸಮರ್ಪಿಸಿ ಮೇಲೆ ಎಲ್ಲರಿಗೂ ಗಂಧಪುಷ್ಪತಾಂಬೂಲವಿನಿಯೋಗಿಸಿದ ಮೇಲೆ ಸಭೆಯು ಮುಕ್ತಾಯವಾಯಿತು. ಈ ವರ್ಷ ಸುತರಾಂ ಮಳೆ ಬಾರದೆ ಬೆಳೆಯೂ ಆಗದೆ ವ್ಯವಸಾಯದಿಂದಲೇ ಜೀವಿಸುವ ಬಡರೈತರ ಗೋಳಾಟವನ್ನು ಹೇಳತೀರದಾಗಿದೆ. ಅದರಲ್ಲಿಯೂ ನೀರಿನ ತೊಂದರೆಯನ್ನು ಎಷ್ಟು ಹೇಳಿದರೂ ಸಾಧ್ಯವಿಲ್ಲ. ಕುಡಿಯುವ ನೀರಿಗಾಗಿ ಕೆರೆಗಳಲ್ಲಿ 10-15 ಬಾವಿ ತೋಡಿದರೂ ಸಹ ನೀರು ಸಪ್ಲೈಯಾಗದ್ದರಿಂದ ಇದೇ ಗ್ರಾಮದ ಮ|| ಸಾಹುಕಾರ್ ಕಾಡಮಲ್ಲಪ್ಪನವರು ಕೆಲವು ಜನ ದೊಡ್ಡ ಮನುಷ್ಯರುಗಳ ಪ್ರೋತ್ಸಾಹದಿಂದ ನೂರಾರು ರೂಪಾಯಿ ಖರ್ಚಿಟ್ಟು ಜೋಡಿರಾಟೆಯ ಭಾವಿಯನ್ನು ಕಟ್ಟಿಸಿ ಕೊಡುತ್ತೇನೆಂದು ವಾಗ್ದಾನಮಾಡಿ ತಾ|| 2-2-24ನೇ ಶನಿವಾರದ ಸಾಯಂಕಾಲ ಪುರಪ್ರಮುಖರೊಡನೆ ಸದರಿ ಬಾವಿ ತೋಡುವ ಕೆರೆಯ ಮುಂಭಾಗದ ಪ್ರದೇಶಕ್ಕೆ ಹೋಗಿ ಅಂಕುರಾರ್ಪಣ ಮಾಡಿರುತ್ತಾರೆ. ಈ ಕೆಲಸವು ನಿರ್ವಿಘ್ನವಾಗಿ ಜಾಗ್ರತೆ ನೆರವೇರುವಹಾಗೂ ಜನಗಳಿಗುಂಟಾಗಿರುವ ನೀರಿನ ತೊಂದರೆ ತಪ್ಪಿಸುವಹಾಗೂ, ಕಾರ್ಯದರ್ಶಿಗಳಿಗೆ ಉತ್ಸಾಹ ಹೆಚ್ಚಿ ಬಾವಿಯ ಕೆಲಸ ಜಾಗ್ರತೆ ನೆರವೇರುವಹಾಗೂ ಮತ್ತು ಸೊಸೈಟಿ ಕೆಲಸವು ನಿರ್ವಿಘ್ನವಾಗಿ ನಡೆಯಲು ಸೆಕ್ರೆಟರಿಯವರಿಗೂ, ಮೆಂಬರುಗಳಿಗೂ ಷೇರ್‌ದಾರರಿಗೂ ಸಹ ಪ್ರೀತಿ ವಿಶ್ವಾಸ ಹೆಚ್ಚಿಗೆ ಉಂಟುಮಾಡುವಹಾಗೂ ನಿರಂತರವೂ ಜಗನ್ನಿಯಾಮಕನಾದ ಪರಶಿವನನ್ನು ಧ್ಯಾನಿಸುತ್ತೇವೆ.

ಪುರನಿವಾಸಿಗಳು.

ಸಂಸ್ಕೃತ ಶಿಕ್ಷಣಪದ್ಧತಿ.

(ಲೇಖಕ—ಸ್ವಾಮಿ ವಿರೂಪಾಕ್ಷ ವಡೆಯರ್ ಪ್ರೊಫೆಸರ್,
ಸಂಸ್ಕೃತಕಾಲೇಜ್, ಇಂದೋರ್)

ಸಂಸ್ಕೃತಭಾಷೆಯ ಶಿಕ್ಷಣಪದ್ಧತಿಯ ವಿಷಯವಾಗಿ ಇಲೀಕಡೆಗೆ ಮಹಾರಾಷ್ಟ್ರ ಹಾಗೂ ಉತ್ತರಹಿಂದುಸ್ಥಾನಗಳಲ್ಲಿ ಬಹುರೀತಿ ಚರ್ಚೆ ನಡೆಸಿದ್ದು ಈಬಗ್ಗೆ ಅನೇಕ ಸಂಸ್ಕೃತಪಂಡಿತರ ಅಭಿಪ್ರಾಯಗಳನ್ನು ಅಲ್ಲಲ್ಲಿಯ ದೊಡ್ಡ ದೊಡ್ಡ ಸಂಸ್ಥೆಯವರು ಕೇಳಿದ್ದು ಅದರಲ್ಲಿ ಮಹಾರಾಷ್ಟ್ರದ ಕೇಸರೀಕಾರರೂ, ಹಾಗೂ ಆಗ್ರಾಪಟ್ಟಣದ ಸಂಸ್ಕೃತ ಸಾಹಿತ್ಯಸಮಿತಿಯವರೂ ಹಿಂದಕ್ಕೆ ನಮ್ಮನ್ನು ಕೇಳಿದ್ದು ಆಗ್ಗೆಯೇ ನಮ್ಮ ಅಭಿಪ್ರಾಯವನ್ನು ಬರೆದು ತಿಳಿಸಿರುತ್ತೇವೆ. ಇದಲ್ಲದೆ ಈ ಸಂಬಂಧಿಯಾದ "ಸಂಸ್ಕೃತ ಶಿಕ್ಷಣಪದ್ಧತಿ" ಎಂಬ ಮರಾಠೀ ಲೇಖವು ಇಂದುಪ್ರಕಾಶ ಮೊದಲಾದ ಮರಾಠೀಪತ್ರಗಳಲ್ಲಿ ಪ್ರಸಿದ್ಧವಾಗಿರುವದು. ಆದರೆ ನಮ್ಮ ಕರ್ನಾಟಕ ದೇಶೀಯರಲ್ಲಿಯೂ ಸಂಸ್ಕೃತ ಶಿಕ್ಷಣಪದ್ಧತಿಯು ಸುಧಾರಿಸಲೆಂಬ ಸದಿಚ್ಛೆಯಿಂದ ಈಗ ಕನ್ನಡದಲ್ಲಿ ಬರೆದಿರುತ್ತೇವೆ. ಇದಲ್ಲದೆ ಸಂಸ್ಕೃತದಲ್ಲಿಯೂ ಈ ವಿಷಯವಾಗಿ "ಸಂಸ್ಕೃತ ಶಿಕ್ಷಣಪದ್ಧತಿ" ಎಂಬ ಒಂದು ಪುಸ್ತಕವನ್ನು ಬರೆದು ಛಾಪಿಸಿರುವೆವು.

ಜಗತ್ತಿನ ಎಲ್ಲ ಭಾಷೆಗಳಿಗಿಂತಲೂ ಸಂಸ್ಕೃತಭಾಷೆಯೇ ಅತಿ ಪುರಾತನವಾದದ್ದು. ಅದರಲ್ಲಿಯೂ ವೈದಿಕಭಾಷೆಯು ಅತಿ ಹಳೆಯಭಾಷೆಯೆಂದು ಯುರೋಪ್ಯರಾದ ಮೈಕ್ಸ್‌ಮೂಲರ, ವಾಲ್ಡಟ್‌ಸ್ಟರ, ಥೀಬೋ ಮೊದಲಾದ ಪಂಡಿತರು ಮುಕ್ತಕಂಠದಿಂದ ಒಪ್ಪಿ ಬರೆದಿರುವರು. ಇಂಥಾ ಹಳೆಯಭಾಷೆಯನ್ನೇ ಓದುವದರಿಂದ ಆಗಿನಕಾಲದ ಜಗತ್ತಿನ ಹಾಗೂ ಜನಾಂಗದ ಪರಿಸ್ಥಿತಿಯು ಗೊತ್ತಾಗುವದು.

ಇನ್ನು ಬರೇ ಹಳೆಯದಾದಾಕ್ಷಣಕ್ಕೆ ಸುಮ್ಮನೇ ಯಾವದಕ್ಕೂ ಶ್ರೇಷ್ಠತೆಯು ಬರಲಾರದು. ಆದರೆ ಶೌರ್ಯ, ಧೈರ್ಯ, ಅತುಲಸಾಹಸ, ರಸ ಇತ್ಯಾದಿ ಗುಣಗಳೂ ಹಾಗೂ ಅಗಾಧತತ್ವಸಿದ್ಧಾಂತವೂ ಯಾವದರಲ್ಲಿ ವಿವೇಚಿಸಲ್ಪಟ್ಟಿರುವದೋ ಅಂಥಾ ಭಾಷೆಗಾದರೂ ಅಥವಾ ಅಂಥಾ ಜನಾಂಗಕ್ಕಾದರೂ ಘನತೆಯು ಪ್ರಾಪ್ತನಾಗುವದು ನೈಸರ್ಗಿಕವಾಗಿರುವದು, ಆದರೆ ಅಂಥಾ ವಿಶಿಷ್ಟಗುಣಗಳು ಈ ಸಂಸ್ಕೃತಭಾಷೆಯಲ್ಲಿ ತೋರಿಸಿರುವವೋ ಇಲ್ಲವೋ ಎಂದು ವಿಚಾರಮಾಡಿದಲ್ಲಿ ಜಗತ್ತಿನ ಎಲ್ಲಾ ಭಾಷೆಗಳಿಗಿಂತಲೂ ರಸವತ್ತರವಾಗಿ ಪ್ರತಿಪಾದನ ಮಾಡುವ ಶೈಲಿಯೂ, ಮೃದು, ಮಧುರ, ಗಾಂಭೀರ್ಯಾದಿ ಗುಣಗಳನ್ನು ಲೋಕೋತ್ತರರೀತಿಯಿಂದ ತೋರಿಸುವದೂ, ದೃಷ್ಟಿಗೋಚರಾಗೋಚರಗಳಾದ ಋತು, ಕಾಲ, ನಕ್ಷತ್ರ, ಸೂರ್ಯಚಂದ್ರಾದಿಗಳ ಗತಿಯನ್ನೂ, ಕಿಂಬಹುನಾ, ಸರ್ವೇಂದ್ರಿಯಗಳಿಗೂ ಸರ್ವೋಪಾಯಗಳಿಗೂ ಸಿಲುಕದ ಮೂಲಪ್ರಕೃತಿಯನ್ನೂ ತದ್ಧೀಶನಾದ ಪರಮಾತ್ಮನನ್ನೂ ಈ ವೈದಿಕಭಾಷೆಯಲ್ಲಿಯೇ ಪ್ರತಿಪಾದಿಸಿದ್ದು ಇವುಗಳನ್ನೆಲ್ಲಾ ಈ ಭಾಷಾಜ್ಞಾನದಿಂದಲೇ ಕಂಡುಹಿಡಿಯಬೇಕಾಗಿರುವದು. ಯಾತಕಂದರೆ ಜಗತ್ತಿನಲ್ಲಿಯ ಮತ್ತಾವ ಭಾಷೆಗಳಲ್ಲಿಯೂ ಈ ವೈದಿಕಭಾಷೆಯಲ್ಲಿ ತೋರಿಸಿದಂತೆ ಆತ್ಮ ತತ್ವವಿಚಾರವು ತೋರಿಸಿಲ್ಲ. ಇಷ್ಟೇ ಅಲ್ಲದೆ ಹಿಂದೆಯೂ ಹಾಗೂ ಈಗಲೂ ಏನೊಂದು ಅಲ್ಪಸ್ವಲ್ಪ ತತ್ವವಿಚಾರವು ಆಯಾಯ ದೇಶೀಭಾಷೆಗಳಲ್ಲಿ ಕಂಡುಬರುವದೋ ಅದೆಲ್ಲವೂ ನಮ್ಮ ವೈದಿಕಭಾಷಾಜ್ಞಾನದಿಂದ ಅವರ ಪೂರ್ವಜರಿಂದಾಗಿ ಅವರಲ್ಲಿ ಅಂಕುರಿಸಲ್ಪಡಿಸಿರುವದು.

ಇನ್ನು ಈ ಭಾಷೆಯ ವಿಷಯವಾಗಿ ನಮ್ಮ ಪೂರ್ವಋಷಿಗಳ ಅಭಿಪ್ರಾಯವೇನಿರುವದೆಂದು ಆಲೋಚಿಸಿದಲ್ಲಿ

ಅನಾದಿನಿಧನಾನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ |
ಆದೌವೇದಮಯೀ ದಿವ್ಯಾ ಯತಃಸರ್ವಾಃ ಪ್ರವೃತ್ತಯಃ ||

ಈ ವೇದವಿದ್ಯೆಯು ಅದ್ಯಂತಗಳಿಂದ ರಹಿತವಾಗಿಯೂ, ಸ್ವಯಂಭುವಾದ ಪರಮೇಶ್ವರನಿಂದ ನಿರ್ಮಿತವಾದ್ದರಿಂದ ಅಪೌರುಷೇಯವಾಗಿಯೂ ಇರುವದೆಂದು ಋಷಿಗಳು ಹೇಳುವದರಿಂದ ಆ ವೇದವಿದ್ಯೆಯನ್ನು ಪ್ರತಿಪಾದಿಸುವ ವೈದಿಕಭಾಷೆಯಾದರೂ ಅತಿಪುರಾತನವಿದ್ದಿರಲಿಕ್ಕೆ ಬೇಕೆಂಬುವದು ಸ್ಪಷ್ಟವಾಗುವದು.

ಇದಲ್ಲದೆ ನವ್ಯ ಭಾರತೀಯ ನವೀನ ಸುಶಿಕ್ಷಿತರು ಈ ಸಂಸ್ಕೃತಭಾಷೆಯು ಈಗ್ಗೆ 21 ಸಾವಿರ ವರ್ಷಗಳ ಪೂರ್ವದಲ್ಲಿಯೇ ಪ್ರಚಾರವಾಗಿರಬಹುದೆಂದು ಅಭಿಪ್ರಾಯಪಟ್ಟಿರುವರು. ಮತ್ತು ಮಾನವೀಪ್ರಪಂಚದ ನಿಜಸ್ಥಿತಿಯನ್ನು ತಿಳುಕೊಳ್ಳುವ ಕುತೂಹಲವುಳ್ಳವರು ಅವಶ್ಯ ಈ ಭಾಷೆಯನ್ನು ಓದಿಯೇ ತೀರಬೇಕೆಂತಲೂ ಈ ಭಾಷಾಜ್ಞಾನದ ಹೊರ್ತು ಮಾನವೀ ಜ್ಞಾನದ ಪರಿಪೂರ್ತಿಯೇ ಆಗುವಂತಿಲ್ಲವೆಂಬವಾಗಿಯೂ ಕಲಕತ್ತೆಯ 1876 ನೇ ಇಸವಿಯ ಲೆಫ್ಟನೆಂಟ ಗವರ್ನರರವರು

> "The Education of a Hindu gentleman can never be said to be complete without a thorough mastery of Sanskrit language and literature"

ಈರೀತಿಯಾಗಿ ಅಂದ ಉದ್ಗಾರಗಳ ಮೇಲಿಂದಲೇ ಸಂಸ್ಕೃತಭಾಷೆಯ ಮಹತ್ವವು ಕಂಡುಬರುವದು, ಅಂದಮೇಲೆ ಇಂಥಾದ್ದೊಂದು ಜ್ಞಾನಕ್ಕೆ ಸಾಧನವಾದ ವೈದಿಕಭಾಷಾಭ್ಯಾಸದ ಆವಶ್ಯಕತೆಯು ಪ್ರತಿಯೊಬ್ಬ ಮಾನವಪ್ರಾಣಿಗೆ ಎಷ್ಟು ಅವಶ್ಯಕತೆಯುಳ್ಳದ್ದೆಂಬುವದನ್ನು ವಾಚಕರೇ ಊಹಿಸಬಹುದು.

ಆದರೆ ಈಗಿನಕಾಲದ ಕೆಲವು ಪಾಶ್ಚಾತ್ಯ ವಿದ್ಯಾಶಿಕ್ಷಿತರು ಸಂಸ್ಕೃತಭಾಷೆಯಲ್ಲಿ ಐತಿಹಾಸಿಕ, ಗಣಿತ, ಭೂಗೋಲ ಹಾಗೂ ರಾಜಕೀಯ ಮೊದಲಾದ ವಿಷಯಗಳೂ ಮತ್ತು ಯಂತ್ರರಚನಾ, ಯುದ್ಧಕಲ, ನೌಕಾಯಾನರಚನಾಪದ್ಧತಿಗಳ ವಿವರಣವಿರದೆ ಕೇವಲ ಅತಿಶಯೋಕ್ತಿಪೂರ್ವಕವಾದ ವರ್ಣನೆಯು ಮಾತ್ರ ಇರುವದೆಂದು ಹೀಯಾಳಿಸುತ್ತಿರುವರು. ನನ್ನ ವಿಚಾರದಿಂದ ಇದು ಅವರ ಶುದ್ಧತಪ್ಪೆಂದು ಹೇಳುವೆನು. ಯಾಕಂದರೆ, ಈಗಿನ ಕಾಲದ ಬಿ.ಎ., ಎಂ.ಎ. ಪರ್ಯಂತ ಓದುವವರಿಗೆ ಕಾವ್ಯ ನಾಟಕ ಅಲಂಕಾರಗಳ ಕೆಲವು ಭಾಗಗಳನ್ನೂ ಅಲ್ಲಲ್ಲಿಯ ತಾತ್ವಿಕವಿಷಯಗಳ ಕೆಲವಂಶವನ್ನು ಮಾತ್ರ ಅವರು ಕಲಿಯುವವರಿಂದ ಇತರ ಮಹತ್ವವಿಷಯಗಳ ಗ್ರಂಥಸಂಗ್ರಹವೇ ಅವರಕಣ್ಣಿಗೆ ಬೀಳದ್ದರಿಂದ ಈರೀತಿ ಅವರ ಚೇಷ್ಟೆಗಾಸ್ಪದವಾಗಿರುವದು. ಹೀಗಿಲ್ಲದಿದ್ದಲ್ಲಿ ನಮ್ಮ ಪೂರ್ವಭಾರತೀಯರಲ್ಲಿ ಸರ್ವವ್ಯವಹಾರಕುಶಲರೂ, ರಾಜಕಾರ್ಯದುರಂಧರರೂ ಆದ ಅನೇಕ ಮಹಾಪುರುಷರುಗಳಾಗಿ ಹೋಗಿರುವರು. ಅವರಿಗೆಲ್ಲ ಈ ಸಾಮರ್ಥ್ಯವು ಬಂದದ್ದು ಈ ಭಾಷೆಯಿಂದಲ್ಲವೇ ? ಅದ್ದರಿಂದಲೇ ಮನುಮಹರ್ಷಿಯು ಈ ಭಾಷೆಯನ್ನು

"ಭೂತಂಭವ್ಯಂಭವಿಷ್ಯಂಚಸರ್ವಂವೇದಾತ್ಪ್ರಸಿಧ್ಯತಿ"
ಸೇನಾಪತ್ಯಂಚರಾಜ್ಯಂಚ ದಂಡನೇತೃತ್ವಮೇವಚ |
ಸರ್ವಲೋಕಾಧಿಪತ್ಯಂಚವೇದಶಾಸ್ತ್ರವಿದರ್ಹತಿ ||
ಮನುಸ್ಮೃತಿ ಅ. ೧೨.
ನಾಸ್ತಿವೇದಾತ್ಪರಂಶಾಸ್ತ್ರಂನಾಸ್ತಿಮಾತೃಸಮೋಗುರುಃ ||
ಮಹಾಭಾರತ ಅನು. ೧೦—೬೬.

ಮೇಲಿನ ಶ್ಲೋಕಗಳಿಂದ ಎಷ್ಟು ಗೌರವಿಸಿರುವರೆಂಬುದನ್ನು ವಾಚಕರೇ ವಿಚಾರಮಾಡಲಿ.

ಇನ್ನು ಈ ಭಾಷಾಜ್ಞಾನದಿಂದಲೇ ಹರ್ಷ, ವಿಕ್ರಮ, ನಲ, ಭರ್ತೃಹರಿ, ಭೋಜ ಮೊದಲಾದ ರಾಜಕಾರ್ಯಧುರಂಧರರಾದ ರಾಜಪುಂಗವರೂ ಭೀಷ್ಮ, ದ್ರೋಣ, ಬಸವೇಶ, ವಿದ್ಯಾರಣ್ಯ ಮೊದಲಾದ ಮಂತ್ರಿವರ್ಯರೂ ಶುಕ್ರ, ವಿದುರ, ಚಾಣಕ್ಯ ಮೊದಲಾದ ರಾಜನೀತಿಜ್ಞರೂ, ವಾಲ್ಮೀಕಿ, ವ್ಯಾಸ, ದೂರ್ವಾಸ, ಪ್ರಭೃತಿ, ಬ್ರಹ್ಮಜ್ಞಾನಿಗಳಾದ ಋಷಿಗಳೂ, ಶಿವದೇವ, ಶಂಕರ, ಶ್ರೀಕರ, ರಾಮಾನುಜ, ಮಹಾವೀರ, ನಾನಕ ಮೊದಲಾದ ತತ್ವಜ್ಞಆಚಾರ್ಯಶಿಖಾಮಣಿಗಳೂ ತಮ್ಮ ತಮ್ಮ ವಿಚಾರಕೌಶಲ್ಯದಿಂದ ನಮ್ಮ ಭರತಭೂಮಿಯನ್ನು ವಿದ್ವದ್ರತ್ನವನ್ನಾಗಿ ಮಾಡಿದರಲ್ಲದೆ ಜಗತ್ತನ್ನು ಚಕಿತಚಿತ್ರದಂತೆ ಮಾಡಿದ ಚರಿತ್ರಪುರುಷರಾಗಿ ಹೋಗಿರುವರು. ಆದರೆ ಇವರೆಲ್ಲರಿಗೂ ಆಂಗ್ಲಭಾಷಾಜ್ಞಾನವೇ ಇತ್ತೋ ಹಾಗೆ ? ಇಲ್ಲ. ಇವರ ಅಗಾಧಚರಿತ್ರೆಗೆ ಈ ಭಾಷಾಜ್ಞಾನವೇ ಕಾರಣವು.

ಇನ್ನು ಈ ಭಾಷೆಗೆ ಬಹುಕಾಲದಿಂದ ರಾಜಾಶ್ರಯ ತಪ್ಪಿಹೋಗಿದ್ದರಿಂದ ಈ ಭಾಷೆಯಲ್ಲಿ ಏನೆನೆ ಹೊಸಹೊಸ ವಿಚಾರಭರಿತ ಪುಸ್ತಕಗಳು ತಯಾರಾಗಲು ಆಸ್ಪದವಿಲ್ಲವಾಯಿತು. ಇಷ್ಟೇ ಅಲ್ಲದೆ ಪರದೇಶೀಯರಾಜರ ಆಕ್ರಮಣವು ಹಿಂದುಸ್ಥಾನದಲ್ಲಿ ಮೊದಲು ಆಗುವಾಗ್ಗೆ ಈ ಪುಸ್ತಕಭಂಡಾರವು ಅಗ್ನಿಯ ಆಹುತಿಯಾಗುತ್ತಿತ್ತು. ಇದಕ್ಕೆ ಧರ್ಮಾಜ್ಞಾನಿಗಳ ದ್ವೇಷವೇ ಕಾರಣವು. ಇದರಂತೆ ನಮ್ಮ ಭಾರತೀಯರಲ್ಲಿಯೇ ಸ್ವಾರ್ಥಬುದ್ಧಿಯ ಧರ್ಮದ್ವೇಷದಿಂದ ಅಮೌಲ್ಯಗ್ರಂಥಗಳು ಭಾರತೀಯರಿಂದಲೇ ಎಷ್ಟೋ ಸುಡಲ್ಪಟ್ಟಿರುವವು. ಈ ರೀತಿ ನಷ್ಟವಾದಾಗ್ಯೂ, ಈವತ್ತಿಗೆ ೫೦ ಸಾವಿರ ಪುಸ್ತಕಗಳು ಸಂಸ್ಕೃತಭಾಷೆಯಲ್ಲಿರುವುದು ಕಂಡುಬರುವದು.

ಆದರೆ ಈ ಸಂಸ್ಕೃತಭಾಷೆಯ ಪಠನಪಾಠನ ಪದ್ಧತಿಯು ಕೆಲವು ಕಾಲದಿಂದ ಋಷಿಸಂಪ್ರದಾಯಕ್ಕೆ ವಿರುದ್ಧವಾಗಿ ಯದ್ವಾತದ್ವಾ ನಡೆದದ್ದರಿಂದ ಈ ಭಾಷೆಯ ಉನ್ನತಿಗೆ ಎಷ್ಟೋ ಕುಂದು ಬಂದೊದಗಿತು. ಯಾಕಂದರೆ ಅರ್ವಾಚೀನ ಪಂಡಿತರು ಸ್ವಾರ್ಥಿಗಳೂ ಆಲಸ್ಯವಂತರೂ ವ್ಯರ್ಥದುರಭಿಮಾನಿಗಳೂ ಆಗಿ ಸುಮಾರ್ಗದ ಅನುಸರಣೆಯನ್ನೇ ಮರೆತುಬಿಟ್ಟು ತಮ್ಮ ಪಾಂಡಿತ್ಯಪ್ರಸರಣೆಯಲ್ಲಿಯೇ ಬೆರೆತುಗೊಂಡು ಲೋಕಕಲ್ಯಾಣವನ್ನು ನಿರೀಕ್ಷಿಸಲಿಲ್ಲ. ಹಾಗೂ ಭಾಷೋನ್ನತಿಯನ್ನು ಚಿಂತಿಸಲಿಲ್ಲ. ಇಷ್ಟೆ ಅಲ್ಲದೆ ಭಾಷೆಯ ಕಾಠಿಣ್ಯವನ್ನು ತೋರಿಸುವದರಲ್ಲಿಯೇ ತೊಡಗಿದರು. ಆದರೆ ಪೂರ್ವಋಷಿಗಳ ವಿಚಾರವು ಹೀಗಿದ್ದಿಲ್ಲ. ಯಾಕಂದರೆ, ಮಹಾಭಾಷ್ಯಕಾರರಾದ ಪತಂಜಲಿಮಹರ್ಷಿಗಳು ತಮ್ಮ ವ್ಯಾಕರಣಾದಿ ಸಮಸ್ತಶಾಸ್ತ್ರಗಳೆಲ್ಲಾ ವೇದಗಳ ಅಂಗೋಪಾಂಗಗಳೆದ್ದು, ಮನುಷ್ಯದೇಹದಲ್ಲಿ ಹಸ್ತಪಾದಾದ್ಯವಯವಗಳು ಹ್ಯಾಗೆ ದೇಹಸಂರಕ್ಷಣೆಗಾಗಿರುವವೋ ಅದರಂತೆ ಇವೆಲ್ಲಾ ಶಾಸ್ತ್ರಗಳು ಮೂಲವಾದ ವೇದಸಂರಕ್ಷಣೆಗಾಗಿ ಅರ್ಥಾತ್ ವೇದಜ್ಞಾನಸಂಪಾದನೆಗಾಗಿರುವವೆಂದು ಹೇಳುವರು ಹ್ಯಾಗಂದರೆ,—

"ರಕ್ಷೋಹಾಗಮಲಘ್ವಸಂದೇಹಾಃ ಪ್ರಯೋಜನಂ". "ವೇದಾನಾಂ ರಕ್ಷಾರ್ಥಮಧ್ಯೇಯಂ ವ್ಯಾಕರಣಂ" ಇತ್ಯಾದಿ ವಾಕ್ಯಗಳಿಂದ ವ್ಯಾಕರಣಾದಿ ಸರ್ವವಿಷಯಗಳು ವೇದಾರ್ಥಜ್ಞಾನಸಂಪಾದನೆಗೆ ಸಾಧನಗಳಾಗಿರುವವೆಂಬುವದು ಸ್ಪಷ್ಟವಾಗಿ ತಿಳಿಯುತ್ತಿದ್ದು ಒಂದುವೇಳೆ ಮನುಷ್ಯನು ತನ್ನ ಆಯುಷ್ಯವನ್ನು ಸಾಧನಗಳಾದ ವ್ಯಾಕರಣಾದಿಗಳಲ್ಲಿಯೇ ಕಳೆದುಹೋದರೆ ಈ ಸಾಧನಗಳಿಂದ ಸಾಧಿಸಬೇಕಾದ ಸಾಧ್ಯವಾದ ವೇದಗಳನ್ನು ಯಾವಾಗ ಸಾಧಿಸುವನು ? ಅದ್ದರಿಂದ ಇವೆಲ್ಲಾ ಶಾಸ್ತ್ರಗಳನ್ನು ಒಂದೇ ಜನ್ಮದಲ್ಲಿ ಕಲಿತು ಸಾಧ್ಯವಾದ ವೇದವನ್ನು ಸಾಧಿಸಿ ಅಂತಿಮಪದ ಪಡೆಯಬೇಕೆಂಬ ಋಷಿಗಳ ಸದಭಿಪ್ರಾಯವನ್ನು ಅರ್ವಾಚೀನ ಪಂಡಿತರು ತಪ್ಪಿಸಿ ಒಂದೊಂದು ಶಾಸ್ತ್ರವೂ ಒಂದೊಂದು ಜನ್ಮದಲ್ಲಿ ಪೂರ್ಣವಾಗಲಾರದೆಂದು ವೃಥಾ ಕಂಠಶೋಷಣ ಮಾಡಲು ತೊಡಗಿದರು. ಮತ್ತು ಅದರಂತೆ ಪ್ರಾರಂಭದಲ್ಲಿ "ಅಮರಕೋಶ"ವೆಂಬುವದನ್ನು ವರ್ಷ, ನಾಲ್ಕುವರ್ಷ ವೃಥಾ ಕಂಠಪಾಠ ಮಾಡಿಸಲು ಹತ್ತಿ ಇತರ ವಿಷಯಗಳನ್ನು ಬಹುಕಾಲ ಕಂಠಪಾಠ ಮಾಡಿಸುವದರಲ್ಲಿಯೇ ಆಸಕ್ತರಾದರು. ಇದರಿಂದ ಶಿಷ್ಯರ ವ್ಯರ್ಥ ಆಯುಷ್ಯವು ಹೋಗಿ ಈ ಪಾಠಮಾಡುವ ಪದ್ಧತಿಯಿಂದ ಶಿಷ್ಯರ ವಿಚಾರಶಕ್ತಿಯು ಬೆಳೆಯದೆ ಇದ್ದದ್ದು ಮಂದವಾಗಿ ಮೇಧಾಶಕ್ತಿಯೂ ಕುಗ್ಗುವದು.

ಬಾಂಧವರೇ, ವಿಚಾರಮಾಡಿರಿ. ಅಮರಕೋಶದಂತೆ ಒಟ್ಟು ಹದಿನಾಲ್ಕು ಕೋಶಗಳಿದ್ದು ಈ ಕೋಶವೆಂಬುವದು ಒಂದು ಡಿಕ್ಷನರಿಯಾಗಿರುವದು. ಅಂದಮೇಲೆ ಬರೇ ಇಂಥಾ ಒಂದು ಡಿಕ್ಷನರಿಯನ್ನು ಪಾಠಮಾಡುವದರಿಂದ ಮನುಷ್ಯನಿಗೆ ಭಾಷೆಯೂ ಹಾಗೂ ಜ್ಞಾನವೂ ಬರುವದುಂಟೇ ? ಫಕ್ತ ಪ್ರಸಂಗ ಬಿದ್ದಾಗ ಶಬ್ದಾರ್ಥಾದಿಗಳನ್ನು ನೋಡಿಕೊಳ್ಳಲಿಕ್ಕೆ ಮಾತ್ರ ಈ ಕೋಶಗಳು ಬೇಕಾಗಿರುವವು.

ಅಂದಮೇಲೆ ಈ ರೀತಿ ಕಂಠಗತ ಮಾಡುವದರಿಂದ ವ್ಯರ್ಥಕಾಲಕ್ಷೇಪವಾಗಿ ಅಮೌಲ್ಯವಿಚಾರವುಳ್ಳ ಋಷಿಗ್ರಂಥಗಳ ಆಲೋಚನೆಗೆ ಸಮಯವೂ ಸಿಗದೆ ವ್ಯವಹಾರಶೂನ್ಯರಾಗಿ ಲೋಕನಿಂದೆಗೆ ಪಾತ್ರರಾಗುವರು. ಹಾಗೂ ತಮ್ಮೊಡನೆ ಭಾಷೆಯನ್ನು ನಿಂದಾಸ್ಪದ ಮಾಡುವರು. ಅದ್ದರಿಂದ ನಾವು ಇದನ್ನೆಲ್ಲಾ ಪರ್ಯಾಲೋಚಿಸಿ ಸಂಸ್ಕೃತ ಶಿಕ್ಷಣಪದ್ಧತಿಯು ಸುಧಾರಿಸಲೆಂಬ ಆಶೆಯಿಂದ ಕೆಳಗೆ ಬರೆದ ಪ್ರಕಾರ ವಿಷಯ ನಿಯಮನವನ್ನು ಮತ್ತು ಕಾಲದ ಅವಧಿಯನ್ನು ಕೋರಿಸಿರುವೆವು. ಸಶೇಷ.

(ಆರೋಗ್ಯಚಂದ್ರಿಕೆಯಿಂದ.)

ಆರೋಗ್ಯಚಕ್ರವರ್ತಿಯ ದರ್ಬಾರ್.

(ಒಂದು ಸಣ್ಣ ನಾಟಕರಂಗ).

(ರಾಜನು ತನ್ನ ಸಾಮಂತಪರಿಜನರೊಡನೆ ದರ್ಬಾರಿಗೆ ಯೋಗ್ಯವಾದ ವಸ್ತ್ರಾಭರಣಗಳನ್ನು ಧರಿಸಿ ಕುಳಿತಿರುವನು.)

ಕಂಚುಕಿ.—(ಪ್ರವೇಶಿಸಿ) ಮಹಾರಾಜನಿಗೆ ವಿಜಯವಾಗಲಿ! ಪ್ರಭೋ! ಮರಣಾಧಿದೇವತೆಯಾದ ಯಮನು ಕೆಲವು ಪರಿವಾರದೊಡನೆ ಮಹಾಸ್ವಾಮಿಯವರ ದರ್ಶನಕ್ಕಾಗಿ ಬಾಗಿಲಲ್ಲಿ ನಿರೀಕ್ಷಿಸುತ್ತಿರುವನು.

ರಾಜ.—(ವಿಸ್ಮಯದಿಂದ ತಕ್ಷಣ್ಣಿ ಹಾಸ್ಯ) ಏನದು ? ಯಮದೇವನು ನಮ್ಮನ್ನು ನೋಡುವುದಕ್ಕೆ ಬಂದಿರುವನೆ ? ಅವನು ಯಾವಾಗಲೂ ನಮಗೆ

ಅಸಮ್ಮತವಾದ ಕಾರ್ಯಗಳನ್ನೇ ನಡೆಸತಕ್ಕವನು. ಅವನು ನಮಗೆ ಜನ್ಮ ವೈರಿ! ಅವನು ಅಕಸ್ಮಾತ್ತಾಗಿ ಬರಲು ಕಾರಣವೇನು! ಹೇಗಾದರೂ ಇರಲಿ! ಬಂದವರನ್ನು ಆದರಿಸಿ ಅವರ ಕಷ್ಟನಿಷ್ಠುರಗಳನ್ನು ಕೇಳಬೇಕಾದುದು ರಾಜಧರ್ಮವು. (ಪ್ರಕಾಶಂ) ಜಯಂಧರಾ! ಹೋಗು! ಅವನನ್ನು ತಕ್ಷಣ ಆದರಿಸಿ ಕರೆದುಕೊಂಡುಬಾ!

ಕಂಚುಕಿ.—ಅಪ್ಪಣೆ! (ಎಂದು ಹೊರಡುವನು.)

ರಾಜ.—ಜಯಂಧರಾ! ನಿಲ್ಲು! ಇನ್ನೊಂದು ಮಾತು! ಯಮನನ್ನು ಹಿಂಬಾಲಿಸಿ ಬಂದಿರುವರಾರೆಂಬುದನ್ನು ಬಲ್ಲೆಯಾ?

ಕಂಚುಕಿ.—ಮಹಾಸ್ವಾಮಿ! ಅಷ್ಟು ಚೆನ್ನಾಗಿ ನನಗೇನೂ ತಿಳಿಯದು. ಆದರೆ ಅವರಲ್ಲಿ ಐದು ಮಂದಿ ಮಾತ್ರ ಮಹಾಘೋರರೂಪಿಗಳಾಗಿ ಕಾಣುತ್ತಿರುವರು. ಅವರು ತಮ್ಮೊಳಗೆ ಒಬ್ಬರಿಗೊಬ್ಬರು ಹೆಸರು ಹಿಡಿದು ಕರೆಯುತ್ತಿರುವುದನ್ನು ಕೇಳಿದರೆ, ಕಾಲರ, ಪ್ಲೇಗು, ಕುಷ್ಠ, ಸಿಡುಬು, ಕ್ಷಯ, ಈ ಹೆಸರುಗಳೇ ಇದ್ದಂತೆ ಕಾಣುತ್ತಿವೆ.

ರಾಜ.—ಸರಿ! ಗೊತ್ತಾಯಿತು. ಆ ಪರಿವಾರಗಳನ್ನೆಲ್ಲಾ ದೂರದಲ್ಲಿರುವಂತೆ ಹೇಳಿ, ಅವರಿಗೆ ನಿಯಾಮಕನಾದ ಯಮನನ್ನು ಮಾತ್ರ ಇಲ್ಲಿಗೆ ಬರಹೇಳು ವಿಚಾರಿಸುವೆವು.

ಕಂಚುಕಿ.—ಅಪ್ಪಣೆ! (ಎಂದು ಮುಂದೆಹೋಗಿ ಯಮನನ್ನು ಕರೆತರುವನು.)

ಯಮ.—(ತನ್ನ ಪರಿವಾರಗಳನ್ನು ಹಿಂದೆ ನಿಲ್ಲಿಸಿ ಮಹಿಷಾರೂಢನಾಗಿ ಮುಂದೆ ಬಂದು) ಅಯ್ಯಾ! ಜಯಶೀಲನಾಗು. ಅತ್ಯವಶ್ಯವಾದ ಒಂದು ರಾಜಕಾರ್ಯವನ್ನು ಕುರಿತು ಆಲೋಚಿಸುವುದಕ್ಕಾಗಿ ನಾನೇ ಈಗ ಇಲ್ಲಿಗೆ ಬರಬೇಕಾಯಿತು. ಪ್ರಜೆಗಳನ್ನು ನಿರಪಾಯವಾಗಿ ರಕ್ಷಿಸುವ ಕಾರ್ಯಕ್ಕೆ ನೀನು ಹೇಗೋ, ಹಾಗೆಯೇ ಪ್ರಾಣಿಗಳನ್ನು ಸಂಹರಿಸುವ ಕಾರ್ಯಕ್ಕಾಗಿ ನಾನು ನಿಯಮಿಸಲ್ಪಟ್ಟಿರುವೆನು. ಲೋಕಕ್ಕೆ ನಿನ್ನ ಕಾರ್ಯವನ್ನು ನೀನು ಎಷ್ಟು ಪ್ರಧಾನವೆಂದು ಎಣಿಸಿರುವೆಯೋ, ಅದರಂತೆ ನನ್ನ ಕಾರ್ಯವೂ ನನಗೆ ಪ್ರಧಾನವಾಗಿದೆ. ಪ್ರತಿನಿತ್ಯವೂ ಸೃಷ್ಟಿಕಾರ್ಯದಿಂದ ಹೆಚ್ಚಿ ಹೋಗುತ್ತಿರುವ ಪ್ರಾಣಿವರ್ಗವನ್ನು, ಸಮಸ್ಥಿತಿಗೆ ತರುವುದಕ್ಕಾಗಿ ನಾನೂ, ಆಯುಸ್ಸಿನ ಪ್ರಮಾಣಕ್ಕೆ ತಕ್ಕಂತೆ ನಿತ್ಯವೂ ಸಂಹರಿಸುತ್ತಿರುವೆನು. ಹಾಗೆ ನಾನು ನನ್ನ ಕಾರ್ಯದಲ್ಲಿ ಪ್ರವರ್ತಿಸದೆ ನಿಂತು ಬಿಟ್ಟರೆ, ಹುಟ್ಟಿದ ಪ್ರಾಣಿಗಳಿಗೆಲ್ಲಾ, ನಿಲ್ಲುವುದಕ್ಕೆ ಸ್ಥಳವೂ ಸಾಲದೆ, ಜೀವನಕ್ಕೆ ಆಹಾರವೂ ಸಾಲದೆ ಕಷ್ಟಕಕ್ಕುಲತೆಗಳಾಗುವರೆಂಬುದನ್ನು ನೀನು ಯೋಚಿಸಿನೋಡು, ಆದ್ದರಿಂದ ನಿನ್ನ ಹಾಗೆ ನಾನೂ ಲೋಕಕ್ಷೇಮಕ್ಕಾಗಿಯೇ ಕೆಲಸಮಾಡುತ್ತಿರುವೆನೆಂದು ತಿಳಿ! ಹೀಗಿರುವಾಗ ನಮ್ಮಿಬ್ಬರ ಕೆಲಸಗಳಲ್ಲಿ ಒಬ್ಬರಿಗೊಬ್ಬರು ಅಡ್ಡಬರಬಾರದೆಂಬುದು ನನಗೆ ತಿಳಿಯದವಿಷಯವಲ್ಲ. ಹಾಗಿದ್ದರೂ ಈಚೀಚೆಗೆ, ಈಗ್ಗೆ ಕೆಲವು ಕಾಲದಿಂದ ನಿನ್ನ ಕಡೆಯವರು, ನಮ್ಮವರ ಪ್ರಯತ್ನಕ್ಕೆ ನಾನಾವಿಧವಾಗಿ ಭಂಗವನ್ನುಂಟುಮಾಡುವುದಾಗಿ ತಿಳಿದು ಬಂದಿದೆ. ನಿಮ್ಮ ಪಿತೂರಿಯಿಂದ (ಪ್ರೇರಣೆಯಿಂದ) ವಾಯು ವರುಣ ಸೂರ್ಯಾದಿದೇವತೆಗಳೂ ಪ್ರಸನ್ನರಾಗಿ (ಶುದ್ಧವಾದ ಗಾಳಿ, ನೀರು ಮತ್ತು ಬೆಳಕು) ನಿಮಗೆ ಅನುಕೂಲರಾಗಿ ವರ್ತಿಸುವರೆಂದೂ ಕೇಳುತ್ತೇನೆ. ಇದೋ! ನನ್ನ ಮುಖ್ಯ ಪರಿವಾರಗಳಾದ ಈ ಐದು ಮಂದಿಯೂ ನಾನಾ ಕಡೆಯಲ್ಲಿ ತಮ್ಮ ಪ್ರಯತ್ನವು ಸಾಗದೆ ತಿರಸ್ಕೃತರಾಗಿ ಬಂದು ನನ್ನಲ್ಲಿ ದೂರುತ್ತಿರುವರು. ನೀನು ಇಷ್ಟಕ್ಕೆ ಅವಕಾಶಕೊಡುವುದು ಸರಿಯಲ್ಲ. ಇದರಿಂದ ನಿಮಗೆ ನಮಗೆ ನಿಷ್ಕಾರಣ ವಿರೋಧವು ಹೆಚ್ಚಲು ಕಾರಣವಾಗುವುದು. ಈಗಲೂ ಚಿಂತೆಯಿಲ್ಲ! ಇನ್ನುಮೇಲಾದರೂ ನೀನು ನಿಮ್ಮವರಿಗೆ ಎಚ್ಚರಿಸಿ, ಅವರನ್ನು ತಟಸ್ಥರಾಗಿರುವಂತೆ ನಿರ್ಬಂಧಿಸುವುದು ಒಳ್ಳೆಯದು.

ರಾಜಂ.—(ಸಾವಧಾನದಿಂದ ಕೇಳಿ ನಗುತ್ತ) ಕೃತಾಂತ! ನಿನಗೂ ಈ ಭ್ರಾಂತಿಯೆ? ನೀನು ಸಹಜವಾದ ಮಾರ್ಗದಲ್ಲಿ ವರ್ತಿಸಿದರೆ ಅದಕ್ಕೆ ನಾವೇನೂ ಅಡ್ಡಿಮಾಡುವಹಾಗಿಲ್ಲ. ಹಾಗೆ ಅಡ್ಡಿಮಾಡುವುದು ನಮ್ಮಿಂದ ಸಾಧ್ಯವೂ ಅಲ್ಲ. ಪ್ರಾಣಿಗಳಿಗೆ ನಿಯತವಾದ ಆಯುಷ್ಯವನ್ನು ಹೆಚ್ಚಿಸುವುದಕ್ಕೆ ನಮ್ಮಿಂದಾಗಲಿ, ಕೊನೆಗೆ ಅವರನ್ನು ಸೃಷ್ಟಿಸಿದ ಬ್ರಹ್ಮನಿಂದಾಗಲಿ ಸಾಧ್ಯವೆ? ಆಯುಃ ಪ್ರಮಾಣವು ಮುಗಿದಾಗ ಅವರನ್ನು ನೀನು ವಶಗೊಳಿಸಿಕೊಳ್ಳುವುದಕ್ಕೆ ಯಾರು ತಾನೇ ಅಡ್ಡಿಮಾಡಬಲ್ಲರು? ಹಾಗಿಲ್ಲದೆ ಜನರು ಎಚ್ಚರತಪ್ಪಿರುವ ಸಮಯವನ್ನು ನೋಡಿ, ಈ ನಿನ್ನ ಕ್ರೂರಭಟರು ಅವರನ್ನು ಅಕಾಲ ಮರಣಕ್ಕೆ ಗುರಿಮಾಡುವ ಸಂಭವಗಳು ನನಗೆ ತಿಳಿದುಬಂದುವು. ಅದಕ್ಕೆ ಗುರಿಯಾಗದಂತೆ ಜನರಿಗೆ ಎಚ್ಚರಿಸುವುದು ನನ್ನ ಕರ್ತವ್ಯವಾಗಿದೆ. ಇಂತಹ ಕ್ರೂರಕರ್ಮಿಗಳಿಗೆ ಅವಕಾಶಕೊಡುವುದು ನಿನ್ನ ತಪ್ಪಲ್ಲವೆ? ಇಷ್ಟೇ ಅಲ್ಲ! ನೀನು ನಿನ್ನ ಸಂಹಾರಕಾರ್ಯಕ್ಕೆ ಸಹಾಯಮಾಡುವುದಕ್ಕಾಗಿ, ಈಚೀಚೆಗೆ ದೇಶಾಂತರಗಳಿಂದ ಹೊಸದಾಗಿ ಕಪ್ಪು, ಹಳದಿ. ಮುಂತಾದ ನಾನಾಬಣ್ಣದ ಕ್ರೂರಪರಿವಾರಗಳನ್ನು (ಕಪ್ಪುಜ್ವರ, ಹಳದೀಜ್ವರ, ಮುರುಕೊಳಿಸುವ ಜ್ವರ ಮುಂತಾದುವು) ಕರೆತಂದು ಹಾವಳಿಮಾಡುವುದಾಗಿಯೂ ನನಗೆ ತಿಳಿದುಬಂದಿತು. ಹೀಗೆ ನೀವು ಅತಿಕ್ರಮಿಸಿ ನಡೆದಷ್ಟೂ, ಅದರಿಂದ ಜನಗಳಿಗೆ ಅಪಾಯವಿಲ್ಲದಂತೆ ತಪ್ಪಿಸುವುದಕ್ಕಾಗಿ ನಾವೂ ಅದಷ್ಟು ಪ್ರಯತ್ನಮಾಡದೆ ಇರಲಾರೆವು. ಇದು ಖಂಡಿತ! ನಾವಿಬ್ಬರೂ ನಡೆಸಬೇಕಾದ ಕಾರ್ಯಗಳು ಪರಸ್ಪರ ವಿರುದ್ಧವಾದುದರಿಂದ, ನಮ್ಮಿಬ್ಬರಲ್ಲಿ ಅನ್ಯೋನ್ಯಸಹಕಾರವಾಗಲಿ, ಸಮಾಧಾನವಾಗಲಿ ಎಂದಿಗೂ ನಡೆಯತಕ್ಕುದಲ್ಲ. ಇನ್ನು ನೀವು ಹೊರಡಬಹುದು.

ಯಮಂ.—(ಕೋಪಾಕ್ಷಿಯುಗಗಳಿಂದ ರಾಜನನ್ನು ದುರದುರನೆ ನೋಡುತ್ತ) ಸರಿ! ಹಾಗಿದ್ದರೆ ನಿಮ್ಮ ಇಷ್ಟವಿದ್ದಂತೆ ನಡೆಯಬಹುದು. (ತನ್ನ ಪರಿವಾರಗಳ ಕಡೆಗೆ ತಿರುಗಿ ಎಲೈಸಾಮಂತರೆ! ಕೇಳಿದರಲ್ಲವೇ ಈ ಅಹಂಭಾವದ ಮಾತುಗಳನ್ನು? ಇರಲಿ! ನಮಗೆ ಬೇರೆ ಉಪಾಯವುಂಟು. ನಡೆಯಿರಿ! (ಎಲ್ಲರೊಡನೆ ಹೊರಟುಹೋಗುವನು. ತೆರೆಯು ಬೀಳುವುದು.)

ಅಸ್ಥಾನ:—ದರ್ಬಾರ್ ಹಾಲಿನ ಹೊರಗೆ ಯಮನು ತಿರುಗಿ ತನ್ನ ಪರಿವಾರಗಳೊಡನೆ ಪ್ರವೇಶಿಸುವನು.

ಯಮಂ.—ಎಲೈ ಮಿತ್ರರೆ! ಈ ನಮ್ಮ ಶತ್ರುಗಳು ನಮ್ಮೊಡನೆ ಸಂಧಿಗಾಗಲಿ, ಸಮಾಧಾನಕ್ಕಾಗಲಿ ಬರುವಹಾಗಿಲ್ಲ. ಇರಲಿ! ಚಿಂತೆಯಿಲ್ಲ! ನಮ್ಮ ಉದ್ದೇಶವನ್ನು ಸಾಧಿಸುವುದಕ್ಕೆ ನಮಗೆ ನಾನಾಮಾರ್ಗಗಳುಂಟು. ಒಂದುವೇಳೆ ನಿಮ್ಮ ವಿರೋಧಿಗಳಿಂದ ನಿಮ್ಮ ಪ್ರಯತ್ನಕ್ಕೆ ಅಲ್ಲಲ್ಲಿ ಭಂಗವುಂಟಾದರೂ ನಿಮ್ಮ ಕೆಲಸವನ್ನು ನೀವು ಬಿಡಬೇಡಿರಿ! ಆಶಾಭಂಗಹೊಂದದೆ ಅವಕಾಶಸಿಕ್ಕಿದ ಕಡೆಗಳಲ್ಲಿ ಒಳನುಗ್ಗಿ ಜನರನ್ನು ಕೊಳ್ಳೆಹೊಡೆಯಿರಿ! ಕಸಾಯಿ ಅಂಗಡಿಗಳು, ಪಡಖಾನೆಗಳು, ಕಾಫೀಕ್ಲಬ್ಬುಗಳು, ಇವೆಲ್ಲಾ ನಿಮ್ಮ ಕಾರ್ಯಸಾಧನೆಗಳಿಗೆ ಅನುಕೂಲಸ್ಥಳಗಳು. ಅಲ್ಲಿ ಹೊಂಚುಹಾಕುತ್ತಿರಿ! ಅಲ್ಲಿಗೆ ಬಂದು ಹೋಗುವವರಮೇಲೆ ನಿಮಗೆ ದೃಷ್ಟಿಯಿರಲಿ! ಸೊಳ್ಳೆಗಳು, ನೊಣಗಳು, ಸಿಗುಣೆ, ಇವಿಷ್ಟೂ ಕೆಲಸಕ್ಕೆ ಬಾರದ ಅಲ್ಪ ಪ್ರಾಣಿಗಳಂತಿದ್ದರೂ ನಮಗೆ ಅವೇ ಚತುರಂಗಬಲಗಳಾಗಿರುವುವು. ಈ ನಡುವೆ ನಾನೂ ಕೂಡ ಒಂದು ಕಡೆ ಭೂಕಂಪ, ಮತ್ತೊಂದುಕಡೆ ಅತಿವೃಷ್ಟಿ, ಇನ್ನೊಂದುಕಡೆ ಅನಾವೃಷ್ಟಿ, ಬೇರೊಂದುಕಡೆ ಅಗ್ನಿಗಂಡ, ಮತ್ತೊಂದುಕಡೆ ಪ್ರಚಂಡವಾಯು, ಮೊದಲಾದ ಅಕಾಹಿತಗಳಿಂದ ಆರೋಗ್ಯವಂತರನ್ನೇ ಒಟ್ಟೊಟ್ಟಿಗೆ ಸಾಗಿಸಿ, ನಮ್ಮ ಹಗೆಯನ್ನು ತೀರಿಸಿಕೊಳ್ಳುವ ಉಪಾಯವನ್ನು ಮಾಡುವೆನು. ಇನ್ನು ತಾಮಸಮಾಡಬಾರದು ನಡೆಯಿರಿ! (ಹೋಗುವರು.) (ತೆರೆಯು ಬೀಳುವುದು.)

ಪಾತ್ರೆಗಳನ್ನು ಕಚ್ಚಿಕುಡಿಯುವುದು ಮತ್ತು ಎಂಜಲು.

(ಇವುಗಳಿಂದುಂಟಾಗುವ ಅಪಾಯಗಳು.)

ತುಟಿಯಿಂದ ಮನುಷ್ಯನಿಗೆ ಎಷ್ಟು ಮಟ್ಟಿಗೆ ಸಹಾಯವೂ, ಸೌಕರ್ಯವೂ ಕಂಡುಬರುತ್ತವೆಯೋ, ಅಷ್ಟೇ ಅಪಾಯಗಳೂ ಅದರಿಂದ ಸಂಭವಿಸುವುದಕ್ಕೆ ಅವಕಾಶವುಂಟು. ತುಟಿಯಲ್ಲಿ ಜೊಲ್ಲು ಮತ್ತು ಕಫ ಮುಂತಾದ ಕಶ್ಮಲಗಳನ್ನು ಕಕ್ಕುವ ಚರ್ಮದ ಪರೆಯು, ಬಹಳ ಮೃದುವಾಗಿರುವುದರಿಂದ, ಆ ಪರೆಯ ಮೂಲಕವಾಗಿ ಒಬ್ಬರಿಂದೊಬ್ಬರಿಗೆ ಕೆಟ್ಟ ರೋಗಗಳ ಸೋಂಕು ಬಹುಸುಲಭವಾಗಿ ವ್ಯಾಪಿಸುವುದು. ಕುಷ್ಠರೋಗ, ಫಿರಂಗಿ ಟಾಕಿ ಮುಂತಾದ ಮೇಹರೋಗಗಳು, ಕ್ಷಯ, ಕಾಸ ಮುಂತಾದ ದೀರ್ಘವ್ಯಾಧಿಗಳು, ಕೆಲವು ಚರ್ಮವ್ಯಾಧಿಗಳು, ಇವೆಲ್ಲಾ ಈ ತುಟಿಯ ಚರ್ಮದ ಮಾರ್ಗವಾಗಿಯೇ ಸುಲಭವಾಗಿ ವ್ಯಾಪಿಸುವುವು. ಅಮಶಂಕೆ ಅಥವಾ ಶೀತಭೇದಿ, ಸನ್ನಿಪಾತಜ್ವರ ವಾಂತಿಭೇದಿ, ಮುಂತಾದ ತೀವ್ರವೇಗವುಳ್ಳ ಕೆಲಕೆಲವು ಸೋಂಕು ರೋಗಗಳೆಲ್ಲಾ ಆಗಾಗ ಊರುಗಳಲ್ಲಿ ನಾನಾಕಡೆ ಹರಡುವುದಕ್ಕೆ, ಕಾಫೀ ಹೋಟೆಲುಗಳಲ್ಲಿ, ಒಬ್ಬರು ಕಚ್ಚಿದ ಪಾತ್ರೆಯನ್ನು ಮತ್ತೊಬ್ಬರು ಕಚ್ಚುವ ವಾಡಿಕೆಯೇ ಒಂದು ಪ್ರಧಾನಕಾರಣವೆಂದು ಹೇಳಬಹುದಾಗಿದೆ. ಹೋಟೆಲುಗಳಿಗೆ ಇಂತವರೇ ಬರಬಹುದೆಂಬ ನಿರ್ಬಂಧವೇನೂ ಇಲ್ಲ. ಮೇಲ್ಕಂಡ ನಾನಾರೋಗಗಳ ಸೋಂಕುಳ್ಳವರೆಲ್ಲಾ ಬಂದು ಸೇರಲು ಅದರಲ್ಲಿ ಅವಕಾಶವುಂಟು. ಇಂತಹ ಜನಗಳ ಸಂಪರ್ಕದಿಂದ, ಅದರಲ್ಲಿಯೂ ಮುಖ್ಯವಾಗಿ ಅಲ್ಲಿನ ಎಂಜಲುಗಳ ಸಂಪರ್ಕದಿಂದ ವ್ಯಾಧಿಗಳು ಹರಡುವುವು. ಮಕ್ಕಳನ್ನು ಅಥವಾ ಪ್ರಿಯಜನರನ್ನು ಮುತ್ತಿಕ್ಕುವುದು, ಅವರ ತುಟಿಯನ್ನು ಕಚ್ಚುವುದು, ಇವೆಲ್ಲಾ ಅನ್ಯೋನ್ಯ ಪ್ರೇಮಾತಿಶಯವನ್ನು ತೋರಿಸತಕ್ಕ ಕಾರ್ಯಗಳಾದರೂ, ಆ ಕ್ಷಣಕಾಲದ ಆತ್ಮತೃಪ್ತಿಗಾಗಿ, ಮರಣಾವಧಿ ನಿಂತುಹೋಗುವ ಕೆಟ್ಟ ರೋಗಗಳಿಗೂ, ಅಂಗವಿಕಾರಗಳಿಗೂ ಅವು ಬೀಜಹಾಕಿದಂತಾಗುವುವು.

ಕಾಫಿಯನ್ನು ಅಥವಾ ಟೀರಸವನ್ನು ಕುಡಿಯುವಾಗ. ಕೆಲವರಿಗೆ ಎಂಜಲುಮಾಡದೆ ಕುಡಿಯುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಸಾಧ್ಯವಾದರೂ, ಹಾಗೆ ಕುಡಿದ ಕಾಫಿಯಲ್ಲಿ ಕೆಲವರಿಗೆ ರುಚಿಯೇ ತೋರುವುದಿಲ್ಲ. ಇದರಿಂದ ಈಗಿನ ಎಲ್ಲಾ ಹೋಟೆಲುಗಳಲ್ಲಿಯೂ ಪ್ರಾಯಕವಾಗಿ, ಕಾಫಿಯನ್ನು ಕಚ್ಚಿಕುಡಿಯುವುದೇ ವಾಡಿಕೆಗೆ ಬಂದಿದೆ. ಹೀಗೆ ಒಬ್ಬರು ಕಚ್ಚಿಕುಡಿದ ಪಾತ್ರೆಯನ್ನು ಮತ್ತೊಬ್ಬರು ಕಚ್ಚಿ ಕುಡಿಯುವುದು ಬಹಳ ಅಪಾಯಕರವು. ಹೀಗೆ ತತ್ಕಾಲಕ್ಕೆ ರುಚಿಯನ್ನು ಬಿಡಲಾರದೆ ಕಚ್ಚಿ ಕುಡಿದ ಒಂದು ಬಟ್ಟಲು ಕಾಫಿಯು, ಜೀವಾವಧಿ ಕಹಿಯಾದ ಔಷಧಿಯ ಬಟ್ಟಲುಗಳನ್ನು ಕುಡಿಯುವ ಹಾಗೆ ಮಾಡುವುದನ್ನು ತಿಳಿಯದೆ ಜನರು ಮೋಸಹೋಗುವರು. ಕಚ್ಚಿಕುಡಿಯುವುದು ಪಾಶ್ಚಾತ್ಯದೇಶದ ಪದ್ಧತಿ. ಕೆಲವು ಪ್ರಾಟೆಸ್ಟೆಂಟ್ ಚರ್ಚುಗಳಲ್ಲಿ ದ್ರಾಕ್ಷೀರಸ ಅಥವಾ ವೈನನ್ನು ಕುಡಿಯುವಾಗ, ಕಚ್ಚಿ ಕುಡಿದ ಪಾತ್ರೆಯನ್ನು ತೊಳೆಯದೆ ಒಬ್ಬರಿಂದೊಬ್ಬರಿಗೆ ಕೊಡುತ್ತ ಹೋಗುವ ಸಂಪ್ರದಾಯವಿದ್ದಹಾಗೆ ಹೇಳಿಕೆಯುಂಟು. ಹೀಗೆ ಮಾಡುವುದರಲ್ಲಿ ಅವರ ಸಂಪ್ರದಾಯ ನಿರ್ಬಂಧವು ಹೇಗಾದರೂ ಇರಲಿ! ಈಚೀಚೆಗೆ ಅಮೇರಿಕಾ ಮತ್ತು ಯೂರೋಪುಖಂಡಗಳ ಅನೇಕ ಕಡೆಗಳಲ್ಲಿ ಈ ಪದ್ಧತಿಯು ಅನಾರೋಗ್ಯಕಾರಣವೆಂಬುದನ್ನು ತಿಳಿದು ಅದನ್ನು ನಿಲ್ಲಿಸಿರುವರು.

ಇಂಡಿಯಾದೇಶದಲ್ಲಿ ಆ ಆಚಾರವು ಇನ್ನೂ ತಪ್ಪಿಲ್ಲವೆಂದು ತಿಳಿಯಬರುತ್ತಿದೆ. ಚರ್ಚುಗಳ ವಿಷಯವಿರಲಿ! ನಮ್ಮ ಜನರಲ್ಲಿ ಆ ಪದ್ಧತಿಯು ಹೆಚ್ಚುತ್ತಲೇ ಬರುತಿದೆ. (ಈ ಮೇಲೆ ಕಾಣಿಸಿರುವ ಚಿತ್ರಪಟವು.) ನಮ್ಮ ದೇಶದ ಕಾಫೀಹೋಟಲುಗಳಲ್ಲಿ ಕುಡಿದಾಟದ ಸಂಭ್ರಮವನ್ನು ಕಾಣಿಸುತ್ತಿದೆ.

ನಮ್ಮ ದೇಶದ ಕಾಫೀಹೋಟಲುಗಳಲ್ಲಿ ಕಚ್ಚಿ ಕುಡಿಯುವ ಅಭ್ಯಾಸವನ್ನು ಏಕಾಏಕಿ ತಪ್ಪಿಸುವುದಕ್ಕೆ ಸಾಧ್ಯವಿಲ್ಲದಿದ್ದರೂ, ಒಬ್ಬರು ಎಂಜಲುಮಾಡಿ ಕುಡಿದ ಪಾತ್ರೆಗಳನ್ನು ಚೆನ್ನಾಗಿ ಶುದ್ಧಪಡಿಸಿಯಾದರೂ ಬೇರೆಯವರಿಗೆ ಕೊಡುವ ಹಾಗಿದ್ದರೆ, ಅದರಿಂದ ಅಷ್ಟೇನೂ ಅಪಾಯವಿಲ್ಲ. ಈ ವಿಚಾರವನ್ನು ಆಯಾ ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟ ಆರೋಗ್ಯದ ಇಲಾಖೆಯವರು ಗಮನಿಸಿ, ನಿರ್ಬಂಧಗಳನ್ನಿಟ್ಟರೆ ಒಳ್ಳೆಯದು. ಜನಗಳು ತಾವಾಗಿಯೂ ಎಚ್ಚರಗೆದುಕೊಳ್ಳಬೇಕಾದುದು ಅವಶ್ಯವು.

ಗೃಹಕೃತ್ಯದ ನೋಟೀಸು.

ಚಿತ್ರದುರ್ಗ ಡಿಸ್ಟ್ರಿಕ್ಟ್ ಹೊಳಲಕೆರೆಯಲ್ಲಿರುವ ಸುಂಕದ ವೆಂಕಟನಾರಣಪ್ಪನವರ ಮಕ್ಕಳು 1 ನೆ ರಾಮಸ್ವಾಮಯ್ಯ, 2ನೆ ರಂಗರಾವ್, 3ನೆ ಸುಬ್ಬರಾವ್ ಈ ಮೂರು ಜನಗಳೂ ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—

ನಮ್ಮ ತಂದೆ ವೆಂಕಟನಾರಣಪ್ಪನವರಿಗೆ ಈಗ 60 ವರ್ಷಗಳಿಗೆ ಮೇಲ್ಪಟ್ಟ ವಯಸ್ಸಾಗಿದೆ. ಅಲ್ಲದೆ ಈಗ್ಯೆ ಸುಮಾರು 2 ತಿಂಗಳ ಅಗಾಯ್ತು ಅವರಿಗೆ ಆರೋಗ್ಯ ಕೆರಳುತ್ತಿದ್ದಂತೆ ಬುದ್ಧಿವಿಕಲ್ಪವಾಗಿ ನಮ್ಮ ಒಟ್ಟುಕುಟುಂಬದ ಆಸ್ತಿಗಳನ್ನು ನಮಗೆ ಆಗದವರ ದುರ್ಬೋಧನೆಯಿಂದಲೂ ಸಹಜವಾದ ಅವರ ಬುದ್ಧಿಭ್ರಮಣೆಯಿಂದಲೂ ಪರಭಾರೆಮಾಡಿ ದುರ್ವ್ಯಯ ಮಾಡುವ ಪ್ರಯತ್ನದಲ್ಲಿದ್ದಾರೆ. ಸದರಿಯವರು ಈರೀತಿಯಲ್ಲಿ ದ್ರಾವ್ಯ ಮಾಡಿದ ಕ್ರಯ ದಾನ ಭೋಗ್ಯ ವಗೈರೆ ಯಾವವಿಧವಾದ ಪರಭಾರೆಯೂ ಊರ್ಜಿತವಾಗತಕ್ಕದ್ದಲ್ಲವಾದ್ದರಿಂದಲೂ ಅವರು ಈಗ ಮಾಡುವ ಸಾಲವೂಕೂಡ ಒಟ್ಟುಕುಟುಂಬದ ಆಸ್ತಿಹಕ್ಕನ್ನು ಬಾಧಿಸತಕ್ಕದ್ದಲ್ಲವಾದ್ದರಿಂದಲೂ ಸದರಿಯವರಿಗೆ ಯಾರಾಗಲಿ ಯಾವವಿಧವಾದ ಸಾಲ ವಗೈರೆ ಕೊಟ್ಟಲ್ಲಿ ವೃಥಾ ನಷ್ಟಕ್ಕೆ ಗುರಿಯಾಗುತ್ತಾರಾಗಿ ಈ ಮೂಲಕ ತಿಳಿಯಪಡಿಸಿದೆ.

ಹೊಳಲಕೆರೆ,
4-2-1924.

ಹೆಚ್. ವಿ. ರಾಮಸ್ವಾಮಯ್ಯ
ಹೆಚ್. ವಿ. ರಂಗರಾವ್
ಹೆಚ್. ವಿ ಸುಬ್ಬರಾವ್

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿ ಇರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಊದುಬತ್ತಿ ಷಾಪ್, ಎಸ್. ಕಳ್ಳಪ್ಪ,
ಬೆಂಗಳೂರು ಸಿಟಿ ದೊಡ್ಡಪ್ಯಾಟೆ.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್,
(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಪುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ. ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—15] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟ ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತಾ ಬಂದವರು ನಗುತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರವಾದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—6—0. 25 ಬಾಟ್ಲುಗಳಿಗೆ 4—8—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲೆಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್ ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು,
[50—23] ಮೈಸೂರು.

೧೯೨೪ ನೇಯ ಇಸವಿ ಫೆಬ್ರವರಿ ತಾ|| ೨೪ ರಿಂದ ೧೯೨೪ ನೇಯ ಮಾರ್ಚಿ ತಾ|| ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೇಯ ರುಧಿರೋದ್ಗಾರಿನಾಮ ಸಂವತ್ಸರದ ಮಾಘಬಹುಳ ಚೌತಿಯಿಂದ ಮಾಘಬಹುಳ ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
24	ಭಾನು	ಚೌತಿ	25-24	ಚಿತ್ತ	54-3	13
25	ಸೋಮ	ಪಂಚ	19-52	ಸ್ವಾತಿ	49 55	14
26	ಮಂಗಳ	ಷಷ್ಠಿ	13-50	ವಿಶಾ	45-23	15
27	ಬುಧ	ಸಪ್ತ	7-30	ಅನೂ	40 47	16
28	ಗುರು	ಅ-ನ	1-8 53-23	ಜ್ಯೇಷ್ಠ	36-20	17
29	ಶುಕ್ರ	ದಶ	49-14	ಮೂಲ	32-20	18
1	ಶನಿ	ಏಕಾ	44 23	ಪೂಷಾ	28-59	19

ಮೈಸೂರು: ನ್ಯೂ. ವಿರೂಪಾಕ್ಷಯ್ಯನವರಿಂದ ಶ್ರೀ ಎಟ್ಟಿ[illegible]
ಕೃಷ್ಣ[illegible] ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾ[illegible]ತೃಷಾ | ಘನಸಭಕ್ತಾವಕಾರಾ ಪಕ್ಷಜ ನಕ್ಷತ್ರ ಮೋಹರಾಜೀಯತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ[illegible] ಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಯಂಸದಾಪೊರೆಗೆ ಗೌರೀಕಾಮುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೭) ಮೈಸೂರ್ ಸ್ಟಾರ್ ಸೆ೯ ೧೯—೨೪ ನೇಯ ಇಸವಿ ಮಾರ್ಚಿ ತಾರೀಖು ೨ ನೇಯ ಭಾನುವಾರ (ಸಂಚಿಕೆ ೯

REGISTERED NO. M. 124.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SREE SITHARAGHAVA VAIDYASALA

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. ೬ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ವೈಶ್ವಾನರಾಸವ.

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳನ್ನು ಗುಣಪಡಿಸುವ ನಂಬುಗೆಯಾದೌಷಧಿ.

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲೀ ಇಲ್ಲ. ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು ಕ್ರಮವಾಗಿ ಗುಣವಾಗುತ್ತದೆ.

1 ಸೀಸೆ ಬೆಲೆ 1—0—0. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲಪಂಡಿತ,
6 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾ. ಜೆ. ಬಿ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು [illegible]ಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು [illegible] ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.



[illegible] ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
[illegible] ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.
[illegible]ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—27] ಪೋ. ಬಾ. ೫೧೧, ಮದರಾಸು.

[illegible]ಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
[illegible]ವ ಶಿವಪೂಜಾವಿಧಿ.	೦—೧೨—೦	೧—೨—೦
[illegible] ವೀರಶೈವ ವಿವಾಹವಿಧಿ.	೦—೮—೦	೦—೧೩—೦
[illegible]ಲವಿದ್ಯಾ	೦—೪—೦	೦—೭—೦
[illegible]ಲೀಲಚರಿತ್ರೆ	೦—೫—೦	೦—೧೦—೦
[illegible]ಸಿ	೦—೪—೦	೦—೭—೦
[illegible]ಂಚಿಕ	೦—೪—೦	೦—೭—೦
[illegible]ಂಶಲೇಶ್ವರಶತಕ	೦—೧—೦	೦—೬—೦
[illegible]ವಶತಕ	೦—೭—೦	೦—೧೪—೦

ಉತ್ತಮವಾದ ವೀರಶೈವ ಮತಗ್ರಂಥಗಳು.

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦ ೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.
ಬಸವಲಿಂಗಸ್ವಾಮಿಗಳು,
[24—14] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯವಿದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಂತಾದ್ದರಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮಧುರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಸಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಕ್ಷಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವಬಂದು ಕಾಮವಾಸನೆವುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೋಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರಪಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಕಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಥಲ್ಯಾಗೊಂದ, ಪಂಜಾಬಿ ಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ. ಬೀಜಬಂಧ, ಜಿನಗಿನೊರಸು, ಮೊಂಗಲ್ ಬೇದಾಣ, ಮೈದಾಚಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ಮರದಾಲ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೪೨ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಅವಸರಮಾಡಿರಿ.

[50—30] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ.ಆರ್. ಕರಿಬಸವಶಾಸ್ತ್ರಿ
[50—8] ಅಂಡ್ ಸನ್ಸ್, ಜೆ. ಪಿ. ಮಂಡಲಿ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್,
(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಪುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ. ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—16] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿ ಇರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಊದುಬತ್ತಿ ಷಾಪ್, ಎಸ್. ಕಳ್ಳಪ್ಪ,
ಬೆಂಗಳೂರು ಸಿಟಿ ದೊಡ್ಡಪ್ಯಾಟೆ.

ಅಸಮ್ಮತವಾದ ಕಾರ್ಯಗಳನ್ನೇ ನಡೆಸತಕ್ಕವನು. ಅವನು ನಮಗೆ ಜನ್ಮವೈರಿ! ಅವನು ಅಕಸ್ಮಾತ್ತಾಗಿ ಬರಲು ಕಾರಣವೇನು! ಹೇಗಾದರೂ ಇರಲಿ! ಬಂದವರನ್ನು ಆದರಿಸಿ ಅವರ ತಪ್ಪನಿಷ್ಟುರಗಳನ್ನು ಕೇಳಬೇಕಾದುದು ರಾಜಧರ್ಮವು. (ಪ್ರಕಾಶಂ) ಜಯಂಧರಾ! ಹೋಗು! ಅವನನ್ನು ತಕ್ಷಣ ಆದರಿಸಿ ಕರೆದುಕೊಂಡುಬಾ!

ಕಂಚುಕಿ.—ಅಪ್ಪಣೆ! (ಎಂದು ಹೊರಡುವನು.)

ರಾಜ.—ಜಯಂಧರಾ! ನಿಲ್ಲು! ಇನ್ನೊಂದು ಮಾತು! ಯಮನನ್ನು ಹಿಂಬಾಲಿಸಿ ಬಂದಿರುವವರಾರೆಂಬುದನ್ನು ಬಲ್ಲೆಯಾ?

ಕಂಚುಕಿ.—ಮಹಾಸ್ವಾಮಿ! ಅಷ್ಟು ಚೆನ್ನಾಗಿ ನನಗೇನೂ ತಿಳಿಯದು. ಆದರೆ ಅವರಲ್ಲಿ ಐದು ಮಂದಿ ಮಾತ್ರ ಮಹಾಘೋರರೂಪಿಗಳಾಗಿ ಕಾಣುತ್ತಿರುವರು. ಅವರು ತಮ್ಮೊಳಗೆ ಒಬ್ಬರಿಗೊಬ್ಬರು ಹೆಸರು ಹಿಡಿದು ಕರೆಯುತ್ತಿರುವುದನ್ನು ಕೇಳಿದರೆ, ಕಾಲರ, ಪ್ಲೇಗು, ಕುಷ್ಠ, ಸಿಡುಬು, ಕ್ಷಯ, ಈ ಹೆಸರುಗಳೇ ಇದ್ದಂತೆ ಕಾಣುತ್ತಿವೆ.

ರಾಜ.—ಸರಿ! ಗೊತ್ತಾಯಿತು. ಆ ಪರಿವಾರಗಳನ್ನೆಲ್ಲಾ ದೂರದಲ್ಲಿರುವಂತೆ ಹೇಳಿ, ಅವರಿಗೆ ನಿಯಾಮಕನಾದ ಯಮನನ್ನು ಮಾತ್ರ ಇಲ್ಲಿಗೆ ಬರಹೇಳು ವಿಚಾರಿಸುವೆವು.

ಕಂಚುಕಿ.—ಅಪ್ಪಣೆ! (ಎಂದು ಮುಂದೆಹೋಗಿ ಯಮನನ್ನು ಕರೆತರುವನು.)

ಯಮ.—(ತನ್ನ ಪರಿವಾರಗಳನ್ನು ಹಿಂದೆ ನಿಲ್ಲಿಸಿ ಮಹಿಷಾರೂಢನಾಗಿ ಮುಂದೆ ಬಂದು) ಅಯ್ಯಾ! ಜಯಶೀಲನಾಗು. ಅತ್ಯವಶ್ಯವಾದ ಒಂದು ರಾಜಕಾರ್ಯವನ್ನು ಕುರಿತು ಆಲೋಚಿಸುವುದಕ್ಕಾಗಿ ನಾನೇ ಈಗ ಇಲ್ಲಿಗೆ ಬರಬೇಕಾಯಿತು. ಪ್ರಜೆಗಳನ್ನು ನಿರಪಾಯವಾಗಿ ರಕ್ಷಿಸುವ ಕಾರ್ಯಕ್ಕೆ ನೀನು ಹೇಗೋ, ಹಾಗೆಯೇ ಪ್ರಾಣಿಗಳನ್ನು ಸಂಹರಿಸುವ ಕಾರ್ಯಕ್ಕಾಗಿ ನಾನು ನಿಯಮಿಸಲ್ಪಟ್ಟಿರುವೆನು. ಲೋಕಕ್ಕೆ ನಿನ್ನ ಕಾರ್ಯವನ್ನು ನೀನು ಎಷ್ಟು ಪ್ರಧಾನವೆಂದು ಎಣಿಸಿರುವೆಯೋ, ಅದರಂತೆ ನನ್ನ ಕಾರ್ಯವೂ ನನಗೆ ಪ್ರಧಾನವಾಗಿದೆ. ಪ್ರತಿನಿತ್ಯವೂ ಸೃಷ್ಟಿಕಾರ್ಯದಿಂದ ಹೆಚ್ಚಿ ಹೋಗುತ್ತಿರುವ ಪ್ರಾಣಿವರ್ಗವನ್ನು, ಸಮಸ್ಥಿತಿಗೆ ತರುವುದಕ್ಕಾಗಿ ನಾನೂ, ಆಯಾಸೃಷ್ಟಿಪ್ರಮಾಣಕ್ಕೆ ತಕ್ಕಂತೆ ನಿತ್ಯವೂ ಸಂಹರಿಸುತ್ತಿರುವೆನು. ಹಾಗೆ ನಾನು ನನ್ನ ಕಾರ್ಯದಲ್ಲಿ ಪ್ರವರ್ತಿಸದೆ ನಿಂತು ಬಿಟ್ಟರೆ, ಹುಟ್ಟಿದ ಪ್ರಾಣಿಗಳಿಗೆಲ್ಲಾ, ನಿಲ್ಲುವುದಕ್ಕೆ ಸ್ಥಳವೂ ಸಾಲದೆ, ಜೀವನಕ್ಕೆ ಆಹಾರವೂ ಸಾಲದೆ ಕಷ್ಟಕ್ಕೊಳಗಾಗುವರೆಂಬುದನ್ನು ನೀನು ಯೋಚಿಸಿನೋಡು, ಆದ್ದರಿಂದ ನಿನ್ನ ಹಾಗೆ ನಾನೂ ಲೋಕಕ್ಷೇಮಕ್ಕಾಗಿಯೇ ಕೆಲಸಮಾಡುತ್ತಿರುವೆನೆಂದು ತಿಳಿ! ಹೀಗಿರುವಾಗ ನಮ್ಮಿಬ್ಬರ ಕೆಲಸಗಳಲ್ಲಿ ಒಬ್ಬರಿಗೊಬ್ಬರು ಅಡ್ಡಬರಬಾರದೆಂಬುದು ನಿನಗೆ ತಿಳಿಯದವಿಷಯವಲ್ಲ. ಹಾಗಿದ್ದರೂ ಈಚೀಚೆಗೆ, ಈಗ್ಗೆ ಕೆಲವು ಕಾಲದಿಂದ ನಿನ್ನ ಕಡೆಯವರು, ನಮ್ಮವರ ಪ್ರಯತ್ನಕ್ಕೆ ನಾನಾಮುಖವಾಗಿ ಭಂಗವನ್ನುಂಟುಮಾಡುವುದಾಗಿ ತಿಳಿದು ಬಂದಿದೆ. ನಿಮ್ಮ ಪಿತೂರಿಯಿಂದ (ಪ್ರೇರಣೆಯಿಂದ) ವಾಯು ವರುಣ ಸೂರ್ಯಾದಿದೇವತೆಗಳೂ ಪ್ರಸನ್ನರಾಗಿ (ಶುದ್ಧವಾದ ಗಾಳಿ, ನೀರು ಮತ್ತು ಬೆಳಕು) ನಿಮಗೆ ಅನುಕೂಲರಾಗಿ ವರ್ತಿಸುವರೆಂದೂ ಕೇಳುತ್ತೇನೆ. ಇದೋ! ನನ್ನ ಮುಖ್ಯ ಪರಿವಾರಗಳಾದ ಈ ಐದು ಮಂದಿಯೂ ನಾನಾ ಕಡೆಯಲ್ಲಿ ತಮ್ಮ ಪ್ರಯತ್ನವು ಸಾಗದೆ ತಿರಸ್ಕೃತರಾಗಿ ಬಂದು ನನ್ನಲ್ಲಿ ದೂರುತ್ತಿರುವರು. ನೀನು ಇಷ್ಟಕ್ಕೆ ಅವಕಾಶಕೊಡುವುದು ಸರಿಯಲ್ಲ. ಇದರಿಂದ ನಿಮಗೆ ನಮಗೆ ನಿಷ್ಕಾರಣ ವಿರೋಧವು ಹೆಚ್ಚಲು ಕಾರಣವಾಗುವುದು. ಈಗಲೂ ಚಿಂತೆಯಿಲ್ಲ! ಇನ್ನುಮೇಲಾದರೂ ನೀನು ನಿಮ್ಮವರಿಗೆ ಎಚ್ಚರಿಸಿ, ಅವರನ್ನು ತಟಸ್ಥರಾಗಿರುವಂತೆ ನಿರ್ಬಂಧಿಸುವುದು ಒಳ್ಳೆಯದು.

ರಾಜಂ.—(ಸಾವಧಾನದಿಂದ ಕೇಳಿ ನಗುತ್ತ) ಕೃತಾಂತ! ನಿನಗೂ ಈ ಭ್ರಾಂತಿಯೆ? ನೀನು ಸಹಜವಾದ ಮಾರ್ಗದಲ್ಲಿ ವರ್ತಿಸಿದರೆ ಅದಕ್ಕೆ ನಾವೇನೂ ಅಡ್ಡಿಮಾಡುವಹಾಗಿಲ್ಲ. ಹಾಗೆ ಅಡ್ಡಿಮಾಡುವುದು ನಮ್ಮಿಂದ ಸಾಧ್ಯವೂ ಅಲ್ಲ. ಪ್ರಾಣಿಗಳಿಗೆ ನಿಯತವಾದ ಆಯುಷ್ಯವನ್ನು ಹೆಚ್ಚಿಸುವುದಕ್ಕೆ ನನ್ನಿಂದಾಗಲಿ, ಕೊನೆಗೆ ಅವರನ್ನು ಸೃಷ್ಟಿಸಿದ ಬ್ರಹ್ಮನಿಂದಾಗಲಿ ಸಾಧ್ಯವೆ? ಆಯುಃಪ್ರಮಾಣವು ಮುಗಿದಾಗ ಅವರನ್ನು ನೀನು ವಶಗೊಳಿಸಿಕೊಳ್ಳುವುದಕ್ಕೆ ಯಾರು ತಾನೇ ಅಡ್ಡಿಮಾಡಬಲ್ಲರು? ಹಾಗಿಲ್ಲದೆ ಜನರು ಎಚ್ಚರತಪ್ಪಿರುವ ಸಮಯವನ್ನು ನೋಡಿ, ಈ ನಿನ್ನ ಕ್ರೂರಭಟರು ಅವರನ್ನು ಅಕಾಲಮರಣಕ್ಕೆ ಗುರಿಮಾಡುವ ಸಂಭವಗಳು ನನಗೆ ತಿಳಿದುಬಂದುವು. ಅದಕ್ಕೆ ಗುರಿಯಾಗದಂತೆ ಜನರಿಗೆ ಎಚ್ಚರಿಸುವುದು ನನ್ನ ಕರ್ತವ್ಯವಾಗಿದೆ. ಇಂತಹ ಕ್ರೂರಕರ್ಮಿಗಳಿಗೆ ಅವಕಾಶಕೊಡುವುದು ನಿನ್ನ ತಪ್ಪಲ್ಲವೆ? ಇಷ್ಟೇ ಅಲ್ಲ! ನೀನು ನಿನ್ನ ಸಂಹಾರಕಾರ್ಯಕ್ಕೆ ಸಹಾಯಮಾಡುವುದಕ್ಕಾಗಿ, ಈಚೀಚೆಗೆ ದೇಶಾಂತರಗಳಿಂದ ಹೊಸದಾಗಿ ಕಪ್ಪು, ಹಳದಿ ಮುಂತಾದ ನಾನಾಬಣ್ಣದ ಕ್ರೂರಪರಿವಾರಗಳನ್ನು (ಕಪ್ಪುಜ್ವರ, ಹಳದೀಜ್ವರ, ನಡುಕೊಳಿಸುವ ಜ್ವರ ಮುಂತಾದುವು) ಕರೆತಂದು ಹಾವಳಿಮಾಡುವುದಾಗಿಯೂ ನನಗೆ ತಿಳಿದುಬಂದಿತು. ಹೀಗೆ ನೀವು ಅತಿಕ್ರಮಿಸಿ ನಡೆದಷ್ಟು, ಅದರಿಂದ ಜನಗಳಿಗೆ ಅಪಾಯವಿಲ್ಲದಂತೆ ತಪ್ಪಿಸುವದಕ್ಕಾಗಿ ನಾವೂ ಅದಷ್ಟು ಪ್ರಯತ್ನಮಾಡದೆ ಇರಲಾರೆವು. ಇದು ಖಂಡಿತ! ನಾವಿಬ್ಬರೂ ನಡೆಸಬೇಕಾದ ಕಾರ್ಯಗಳು ಪರಸ್ಪರ ವಿರುದ್ಧವಾದುದರಿಂದ, ನಮ್ಮಿಬ್ಬರಲ್ಲಿ ಅನ್ಯೋನ್ಯಸಹಕಾರವಾಗಲಿ, ಸಮಾಧಾನವಾಗಲಿ ಎಂದಿಗೂ ನಡೆಯತಕ್ಕದ್ದಲ್ಲ. ಇನ್ನು ನೀವು ಹೊರಡಬಹುದು.

ಯಮಂ.—(ಕೋಪಾಕ್ಷಿಗಳಿಂದ ರಾಜನನ್ನು ದುರದುರನೆ ನೋಡುತ್ತ) ಸರಿ! ಹಾಗಿದ್ದರೆ ನಿಮ್ಮ ಇಷ್ಟವಿದ್ದಂತೆ ನಡೆಯಬಹುದು. (ತನ್ನ ಪರಿವಾರಗಳ ಕಡೆಗೆ ತಿರುಗಿ ಎಲೈಸಾಮಂತರೆ! ಕೇಳಿದರಲ್ಲವೇ ಈ ಅಹಂಭಾವದ ಮಾತುಗಳನ್ನು? ಇರಲಿ! ನಮಗೆ ಬೇರೆ ಉಪಾಯವುಂಟು. ನಡೆಯಿರಿ! (ಎಲ್ಲರೊಡನೆ ಹೊರಟುಹೋಗುವನು. ತೆರೆಯು ಬೀಳುವುದು.)

ಆಸ್ಥಾನ:—ದರ್ಬಾರ್‌ಹಾಲಿನ ಹೊರಗೆ ಯಮನು ತಿರುಗಿ ತನ್ನ ಪರಿವಾರಗಳೊಡನೆ ಪ್ರವೇಶಿಸುವನು.

ಯಮಂ.—ಎಲೈ ಮಿತ್ರರೆ! ಈ ನಮ್ಮ ಶತ್ರುಗಳು ನಮ್ಮೊಡನೆ ಸಂಧಿಗಾಗಲಿ, ಸಮಾಧಾನಕ್ಕಾಗಲಿ ಬರುವಹಾಗಿಲ್ಲ. ಇರಲಿ! ಚಿಂತೆಯಿಲ್ಲ! ನಮ್ಮ ಉದ್ದೇಶವನ್ನು ಸಾಧಿಸುವುದಕ್ಕೆ ನಮಗೆ ನಾನಾಮಾರ್ಗಗಳುಂಟು. ಒಂದುವೇಳೆ ನಿಮ್ಮ ವಿರೋಧಿಗಳಿಂದ ನಿಮ್ಮ ಪ್ರಯತ್ನಕ್ಕೆ ಅಲ್ಲಲ್ಲಿ ಭಂಗವುಂಟಾದರೂ ನಿಮ್ಮ ಕೆಲಸವನ್ನು ನೀವು ಬಿಡಬೇಡಿರಿ! ಆಶಾಭಂಗಹೊಂದದೆ ಅವಕಾಶಸಿಕ್ಕಿದ ಕಡೆಗಳಲ್ಲಿ ಒಳನುಗ್ಗಿ ಜನರನ್ನು ಕೊಳ್ಳೆಹೊಡೆಯಿರಿ! ಕಸಾಯಿ ಅಂಗಡಿಗಳು, ಪಡಖಾನೆಗಳು, ಕಾಫೀಕ್ಲಬ್ಬುಗಳು, ಇವೆಲ್ಲಾ ನಿಮ್ಮ ಕಾರ್ಯಸಾಧನೆಗಳಿಗೆ ಅನುಕೂಲಸ್ಥಳಗಳು. ಅಲ್ಲಿ ಹೊಂಚುಹಾಕುತ್ತಿರಿ! ಅಲ್ಲಿಗೆ ಬಂದು ಹೋಗುವವರಮೇಲೆ ನಿಮಗೆ ದೃಷ್ಟಿಯಿರಲಿ! ಸೊಳ್ಳೆಗಳು, ನೊಣಗಳು, ಸಿಗುಣೆ, ಇವಿಷ್ಟು ಕೆಲಸಕ್ಕೆ ಬಾರದ ಅಲ್ಪಪ್ರಾಣಿಗಳಂತಿದ್ದರೂ ನಿಮಗೆ ಅವೇ ಚತುರಂಗಬಲಗಳಾಗಿರುವುವು. ಈ ನಡುವೆ ನಾನೂ ಕೂಡ ಒಂದು ಕಡೆ ಭೂಕಂಪ, ಮತ್ತೊಂದುಕಡೆ ಅತಿವೃಷ್ಟಿ, ಇನ್ನೊಂದುಕಡೆ ಅನಾವೃಷ್ಟಿ, ಬೇರೊಂದುಕಡೆ ಅಗ್ನಿಗಂಡ, ಮತ್ತೊಂದುಕಡೆ ಪ್ರಚಂಡವಾಯು, ಮೊದಲಾದ ಅಕಸ್ಮಿಕಗಳಿಂದ ಆರೋಗ್ಯವಂತರನ್ನೇ ಒಟ್ಟೊಟ್ಟಿಗೆ ಸಾಗಿಸಿ, ನನ್ನ ಹಗೆಯನ್ನು ತೀರಿಸಿಕೊಳ್ಳುವ ಉಪಾಯವನ್ನು ಮಾಡುವೆನು. ಇನ್ನು ತಾಮಸಮಾಡಬಾರದು ನಡೆಯಿರಿ! (ಹೋಗುವರು.) (ತೆರೆಯು ಬೀಳುವುದು.)

ಪಾತ್ರೆಗಳನ್ನು ಕಚ್ಚಿಕುಡಿಯುವುದು ಮತ್ತು ಎಂಜಲು.

(ಇವುಗಳಿಂದುಂಟಾಗುವ ಅಪಾಯಗಳು.)

ತುಟಿಯಿಂದ ಮನುಷ್ಯನಿಗೆ ಎಷ್ಟು ಮಟ್ಟಿಗೆ ಸಹಾಯವೂ, ಸೌಕರ್ಯವೂ ಕಂಡುಬರುತ್ತಿವೆಯೋ, ಅಷ್ಟೇ ಅಪಾಯಗಳೂ ಅದರಿಂದ ಸಂಭವಿಸುವುದಕ್ಕೆ ಅವಕಾಶವುಂಟು. ತುಟಿಯಲ್ಲಿ ಬೊಲ್ಲು ಮತ್ತು ಕಫ ಮುಂತಾದ ಕಶ್ಮಲಗಳನ್ನು ಕಕ್ಕುವ ಚರ್ಮದ ಪರೆಯು, ಬಹಳ ಮೃದುವಾಗಿರುವುದರಿಂದ, ಆ ಪರೆಯು ಮೂಲಕವಾಗಿ ಒಬ್ಬರಿಂದೊಬ್ಬರಿಗೆ ಕೆಟ್ಟ ರೋಗಗಳ ಸೋಂಕು ಬಹುಸುಲಭವಾಗಿ ಮೈಗೆ ವ್ಯಾಪಿಸುವುದು. ಕುಷ್ಠರೋಗ, ಫಿರಂಗಿ ಟಾಕಿ ಮುಂತಾದ ಮೇಹರೋಗಗಳು, ಕ್ಷಯ, ಖಾಸ ಮುಂತಾದ ದೀರ್ಘವ್ಯಾಧಿಗಳು, ಕೆಲವು ಚರ್ಮವ್ಯಾಧಿಗಳು, ಇವೆಲ್ಲಾ ಈ ತುಟಿಯ ಚರ್ಮದ ಮಾರ್ಗವಾಗಿಯೇ ಸುಲಭವಾಗಿ ಮೈಗೆ ವ್ಯಾಪಿಸುವುವು. ಅಮಶಂಕೆ ಅಥವಾ ಶೀತಭೇದಿ, ಸನ್ನಿಪಾತಜ್ವರ ವಾಂತಿಭೇದಿ, ಮುಂತಾದ ತೀವ್ರವೇಗವುಳ್ಳ ಕೆಲಕೆಲವು ಸೋಂಕು ರೋಗಗಳೆಲ್ಲಾ ಆಗಾಗ ಊರುಗಳಲ್ಲಿ ನಾನಾಕಡೆ ಹರಡುವುದಕ್ಕೆ, ಕಾಫೀ ಹೋಟೆಲುಗಳಲ್ಲಿ, ಒಬ್ಬರು ಕಚ್ಚಿದ ಪಾತ್ರೆಯನ್ನು ಮತ್ತೊಬ್ಬರು ಕಚ್ಚುವ ವಾಡಿಕೆಯೇ ಒಂದು ಪ್ರಧಾನಕಾರಣವೆಂದು ಹೇಳಬಹುದಾಗಿದೆ. ಹೋಟೆಲುಗಳಿಗೆ ಇಂತವರೇ ಬರಬಹುದೆಂಬ ನಿರ್ಬಂಧವೇನೂ ಇಲ್ಲ. ಮೇಲ್ಕಂಡ ನಾನಾರೋಗಗಳ ಸೋಂಕುಳ್ಳವರೆಲ್ಲಾ ಬಂದು ಸೇರಲು ಅದರಲ್ಲಿ ಅವಕಾಶವುಂಟು. ಇಂತಹ ಜನಗಳ ಸಂಪರ್ಕದಿಂದ, ಅದರಲ್ಲಿಯೂ ಮುಖ್ಯವಾಗಿ ಅಲ್ಲಿನ ಎಂಜಲುಗಳ ಸಂಪರ್ಕದಿಂದ ವ್ಯಾಧಿಗಳು ಹರಡುವುವು. ಮಕ್ಕಳನ್ನು ಅಥವಾ ಪ್ರಿಯಜನರನ್ನು ಮುತ್ತಿಕ್ಕುವುದು, ಅವರ ತುಟಿಯನ್ನು ಕಚ್ಚುವುದು, ಇವೆಲ್ಲಾ ಅನ್ಯೋನ್ಯಪ್ರೇಮಾತಿಶಯವನ್ನು ತೋರಿಸತಕ್ಕ ಕಾರ್ಯಗಳಾದರೂ, ಆ ಕ್ಷಣಕಾಲದ ಆತ್ಮತೃಪ್ತಿಗಾಗಿ, ಮರಣಾವಧಿ ನಿಂತುಹೋಗುವ ಕೆಟ್ಟ ರೋಗಗಳಿಗೂ, ಅಂಗವಿಕಾರಗಳಿಗೂ ಅವು ಬೀಜಹಾಕಿದಂತಾಗುವುವು.

ಕಾಫಿಯನ್ನು ಅಥವಾ ಟೀರಸವನ್ನು ಕುಡಿಯುವಾಗ, ಕೆಲವರಿಗೆ ಎಂಜಲುಮಾಡದೆ ಕುಡಿಯುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಸಾಧ್ಯವಾದರೂ, ಹಾಗೆ ಕುಡಿದ ಕಾಫಿಯಲ್ಲಿ ಕೆಲವರಿಗೆ ರುಚಿಯೇ ತೋರುವುದಿಲ್ಲ. ಇದರಿಂದ ಈಗಿನ ಎಲ್ಲಾ ಹೋಟೆಲುಗಳಲ್ಲಿಯೂ ಪ್ರಾಯಕವಾಗಿ, ಕಾಫಿಯನ್ನು ಕಚ್ಚಿ ಕುಡಿಯುವುದೇ ವಾಡಿಕೆಗೆ ಬಂದಿದೆ. ಹೀಗೆ ಒಬ್ಬರು ಕಚ್ಚಿಕುಡಿದ ಪಾತ್ರೆಯನ್ನು ಮತ್ತೊಬ್ಬರು ಕಚ್ಚಿ ಕುಡಿಯುವುದು ಬಹಳ ಅಪಾಯಕರವು. ಹೀಗೆ ತತ್ಕಾಲಕ್ಕೆ ರುಚಿಯನ್ನು ಬಿಡಲಾರದೆ ಕಚ್ಚಿ ಕುಡಿದ ಒಂದು ಬಟ್ಟಲು ಕಾಫಿಯು, ಜೀವಾವಧಿ ಕಹಿಯಾದ ಔಷಧಿಯ ಬಟ್ಟಲುಗಳನ್ನು ಕುಡಿಯುವ ಹಾಗೆ ಮಾಡುವುದನ್ನು ತಿಳಿಯದೆ ಜನರು ಮೋಸಹೋಗುವರು. ಕಚ್ಚಿ ಕುಡಿಯುವುದು ಪಾಶ್ಚಾತ್ಯದೇಶದ ಪದ್ಧತಿ. ಕೆಲವು ಪ್ರಾಟೆಸ್ಟೆಂಟ್ ಚರ್ಚುಗಳಲ್ಲಿ ದ್ರಾಕ್ಷೀರಸ ಅಥವಾ ವೈನನ್ನು ಕುಡಿಯುವಾಗ, ಕಚ್ಚಿ ಕುಡಿದ ಪಾತ್ರೆಯನ್ನು ತೊಳೆಯದೆ ಒಬ್ಬರಿಂದೊಬ್ಬರಿಗೆ ಕೊಡುತ್ತ ಹೋಗುವ ಸಂಪ್ರದಾಯವಿದ್ದಹಾಗೆ ಹೇಳಿಕೆಯುಂಟು. ಹೀಗೆ ಮಾಡುವುದರಲ್ಲಿ ಅವರ ಸಂಪ್ರದಾಯ ನಿರ್ಬಂಧವು ಹೇಗಾದರೂ ಇರಲಿ! ಈಚೀಚೆಗೆ ಅಮೇರಿಕಾ ಮತ್ತು ಯೂರೋಪುಖಂಡಗಳ ಅನೇಕ ಕಡೆಗಳಲ್ಲಿ ಈ ಪದ್ಧತಿಯು ಅನಾರೋಗ್ಯಕಾರಣವೆಂಬುದನ್ನು ತಿಳಿದು ಅದನ್ನು ನಿಲ್ಲಿಸಿರುವರು.

ಇಂಡಿಯಾದೇಶದಲ್ಲಿ ಆ ಆಚಾರವು ಇನ್ನೂ ತಪ್ಪಿಲ್ಲವೆಂದು ತಿಳಿಯಬರುತ್ತಿದೆ. ಚರ್ಚುಗಳ ವಿಷಯವಿರಲಿ! ನಮ್ಮ ಜನರಲ್ಲಿ ಆ ಪದ್ಧತಿಯು ಹೆಚ್ಚುತ್ತಲೇ ಬರುತ್ತಿದೆ. (ಈ ಮೇಲೆ ಕಾಣಿಸಿರುವ ಚಿತ್ರಪಟವು.) ನಮ್ಮ ದೇಶದ ಕಾಫೀಹೋಟಲುಗಳಲ್ಲಿ ಕುಡಿದಾಟದ ಸಂಭ್ರಮವನ್ನು ಕಾಣಿಸುತ್ತಿದೆ.

ನಮ್ಮ ದೇಶದ ಕಾಫೀಹೋಟಲುಗಳಲ್ಲಿ ಕಚ್ಚಿ ಕುಡಿಯುವ ಅಭ್ಯಾಸವನ್ನು ಏಕಾಏಕಿ ತಪ್ಪಿಸುವುದಕ್ಕೆ ಸಾಧ್ಯವಿಲ್ಲದಿದ್ದರೂ, ಒಬ್ಬರು ಎಂಜಲು ಮಾಡಿ ಕುಡಿದ ಪಾತ್ರೆಗಳನ್ನು ಚೆನ್ನಾಗಿ ಶುದ್ಧಪಡಿಸಿಯಾದರೂ ಬೇರೆಯವರಿಗೆ ಕೊಡುವ ಹಾಗಿದ್ದರೆ, ಅದರಿಂದ ಅಷ್ಟೇನೂ ಅಪಾಯವಿಲ್ಲ. ಈ ವಿಚಾರವನ್ನು ಆಯಾ ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟ ಆರೋಗ್ಯದ ಇಲಾಖೆಯವರು ಗಮನಿಸಿ, ನಿರ್ಬಂಧಗಳನ್ನಿಟ್ಟರೆ ಒಳ್ಳೆಯದು. ಜನಗಳು ತಾವಾಗಿಯೂ ಎಚ್ಚರತೆಗೆದುಕೊಳ್ಳಬೇಕಾದುದು ಅವಶ್ಯವು.

ಗೃಹಕೃತ್ಯದ ನೋಟೀಸು.

ಚಿತ್ರದುರ್ಗ ಡಿಸ್ಟ್ರಿಕ್ಟು ಹೊಳಲಕೆರೆಯಲ್ಲಿರುವ ಸುಂಕದ ವೆಂಕಟನಾರಣಪ್ಪನವರ ಮಕ್ಕಳು 1 ನೆ ರಾಮಸ್ವಾಮಯ್ಯ, 2ನೆ ರಂಗರಾವ್, 3ನೆ ಸುಬ್ಬರಾವ್ ಈ ಮೂರು ಜನಗಳೂ ಈ ಮೂಲಕ ಸಮಸ್ತಜನರಿಗೂ ತಿಳಿಯಪಡಿಸುವದೇನೆಂದರೆ—

ನಮ್ಮ ತಂದೆ ವೆಂಕಟನಾರಣಪ್ಪನವರಿಗೆ ಈಗ 60 ವರ್ಷಗಳಿಗೆ ಮೇಲ್ಪಟ್ಟ ವಯಸ್ಸಾಗಿದೆ. ಅಲ್ಲದೆ ಈಗ್ಯೆ ಸುಮಾರು ೨ ತಿಂಗಳ ಲಾಗಾಯ್ತು ಅವರಿಗೆ ಆಗಾಗ್ಯೆ ಕೆರಳುತ್ತಿದ್ದಂತೆ ಬುದ್ಧಿವಿಕಲ್ಪವಾಗಿ ನಮ್ಮ ಒಟ್ಟುಕುಟುಂಬದ ಆಸ್ತಿಗಳನ್ನು ನಮಗೆ ಆಗದವರ ದುರ್ಬೋಧನೆಯಿಂದಲೂ ಸಹಜವಾದ ಅವರ ಬುದ್ಧಿಭ್ರಮಣೆಯಿಂದಲೂ ಪರಭಾರೆಮಾಡಿ ದುರ್ವ್ಯಯ ಮಾಡುವ ಪ್ರಯತ್ನದಲ್ಲಿದಾರೆ. ಸದರಿಯವರು ಈರೀತಿಯಲ್ಲಿ ದ್ಯಾಗ್ಯೆ ಮಾಡಿದ ಕ್ರಯ ದಾನ ಭೋಗ್ಯ ವಗೈರೆ ಯಾವವಿಧವಾದ ಪರಭಾರೆಯೂ ಊರ್ಜಿತವಾಗತಕ್ಕದ್ದಲ್ಲವಾದ್ದರಿಂದಲೂ ಅವರು ಈಗ ಮಾಡುವ ಸಾಲವೂ ಕೂಡ ಒಟ್ಟುಕುಟುಂಬದ ಆಸ್ತಿಹಕ್ಕನ್ನು ಬಾಧಿಸತಕ್ಕದ್ದಲ್ಲವಾದ್ದರಿಂದಲೂ ಸದರಿಯವರಿಗೆ ಯಾರಾಗಲಿ ಯಾವವಿಧವಾದ ಸಾಲ ವಗೈರೆ ಕೊಟ್ಟಲ್ಲಿ ವೃಥಾ ನಷ್ಟಕ್ಕೆ ಗುರಿಯಾಗುತ್ತಾರಾಗಿ ಈ ಮೂಲಕ ತಿಳಿಯಪಡಿಸಿದೆ.

ಹೊಳಲಕೆರೆ,
4-2-1924.

ಹೆಚ್. ವಿ. ರಾಮಸ್ವಾಮಯ್ಯ
ಹೆಚ್. ವಿ. ರಂಗರಾವ್
ಹೆಚ್. ವಿ ಸುಬ್ಬರಾವ್

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧಪಬಿಲ್ಲೆ ವಗ್ಯೆರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿ ಇರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಊದುಬತ್ತಿ ಷಾಪ್, ಎಸ್. ಕಳ್ಳಪ್ಪ,
3 ಬೆಂಗಳೂರು ಸಿಟಿ ದೊಡ್ಡಪ್ಯಾಟೆ.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦
ವಿ. ಪಿ. ಚಾರ್ಜು ೦—೧೦—೦
ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦
ವಿ. ಪಿ. ಚಾರ್ಜು ೦—೧೨—೦.
೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦
ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—15] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟ ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತಾ ಬಂದವರು ನಗುತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸಮಾದರಿ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—6—0. 25 ಬಾಟ್ಲುಗಳಿಗೆ 4—8—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—23] ಮೈಸೂರು.

೧೯೨೪ ನೆಯ ಇಸವಿ ಫೆಬ್ರವರಿ ತಾ|| ೨೪ ರಿಂದ ೧೯೨೪ ನೆಯ ಮಾರ್ಚಿ ತಾ|| ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಮಾಘಬಹುಳ ಚೌತಿಯಿಂದ ಮಾಘಬಹುಳ ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
24	ಭಾನು	ಚೌತಿ	25-24	ಚಿತ್ತ	54-3	13
25	ಸೋಮ	ಪಂಚ	19-52	ಸ್ವಾತಿ	49 55	14
26	ಮಂಗಳ	ಷಷ್ಠಿ	13-50	ವಿಶಾ	45-23	15
27	ಬುಧ	ಸಪ್ತ	7-30	ಅನೂ	40 47	16
28	ಗುರು	ಅ-ನ	1-8 53-23	ಜ್ಯೇಷ್ಠ	36-20	17
29	ಶುಕ್ರ	ದಶ	49-14	ಮೂಲ	32-20	18
1	ಶನಿ	ಏಕಾ	44 23	ಪೂಷಾ	28-59	19

ಮೈಸೂರು: ಸ್ಯೆ. ವಿರೂಪಾಕ್ಷಯ್ಯನವರಿಂದ ಶ್ರೀ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾ [illegible] ಕೃಪಾ | ಘನಪಥಕೃತಾವತಾರಾ ಪಕ್ಷಜ್ಞಸತ್ಪತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ [illegible] ತುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಿಶೆಯಂಸದಾಪೂರಿಗೆ ಗೌರೀಕಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಪುಸ್ತಕ ೩೭) ಮೈಸೂರ್ ಸ್ಟಾರ್ ಸರ್ ೧೯೨೪ ನೆಯ ಇಸವಿ ಮಾರ್ಚಿ ತಾರೀಖು ೨ ನೆಯ ಭಾನುವಾರ (ಸಂಚಿಕೆ ೯

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

SREE SITHARAGHAVA VAIDYASALA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಛಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. [illegible]ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ವೈಶ್ವಾನರಾಸವ.

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳನ್ನು ಗುಣಪಡಿಸುವ ನಂಬುಗೆಯಾದೌಷಧಿ.

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬುವುದಾಗಲೀ ಇಲ್ಲ. ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು ಕ್ರಮವಾಗಿ ಗುಣವಾಗುತ್ತದೆ.

1 ಸೀಸೆ ಬೆಲೆ 1—0—0. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲಪಂಡಿತ,
6 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾ. ಜೆ. ಬಿ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆ[illegible] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು [illegible]ಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು [illegible] ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

[illegible] ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
[illegible] ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.
[illegible]ಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—27] ಪ್ರೋ. ಬಾ. ೫೧೦, ಮದರಾಸು.

ಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
[illegible]ವ ಶಿವಪೂಜಾವಿಧಿ।	೦—೧೨—೦	೧—೨—೦
[illegible] ವೀರಶೈವ ವಿವಾಹವಿಧಿ।	೦—೮—೦	೦—೧೪—೦
[illegible]ಲವಿದ್ಯಾ	೦—೪—೦	೦—೯—೦
[illegible]ಶೀಲಚರಿತ್ರೆ	೦—೫—೦	೦—೧೦—೦
[illegible]ಸಿ	೦—೪—೦	೦—೯—೦
[illegible]ಂಚಿಕ	೦—೪—೦	೦—೯—೦
[illegible]ಂಕರೇಶ್ವರಶತಕ	೦—೧—೦	೦—೬—೦
[illegible]ಕೃತಶತಕ	೦—೬—೦	೦—೧೪—೦

ಉತ್ತಮವಾದ ವೀರಶೈವ ಮತಗ್ರಂಥಗಳು.

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣಿ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—14] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ ಅಗತ್ಯವಿದರ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.	ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ. ವಜ್ರಾಂಗಸುಂದರಪಾಕ.	ಧಿಕ್ಕಾರ ಮಾಡಿದರೆ ಕುಕ್ಕರಿಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಷ್ಟ, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳಿಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಿಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ನಿಗ್ಧತೆ, ಎಲ್ಲ ಪಿತ್ತವಿಕಾರ, ಸ್ಮೃತಿಶಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಶೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವಬಂದು ಕಾಮವಾಸನೆಯುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ತಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚೆ) ಕಂದ, ದ್ವಿಪಾಂತರಪಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವಿ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಕಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕವಾರಕಸ, ಕಥಲ್ಯಾಗೊಂದ, ಪಂಜಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ, ಬೀಜಬಂಧ, ಜಿಗರಿಗೊರಟು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೫೦ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. [illegible]

[50—30] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪರ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.
ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.
ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಬಸವರಾಜವಿಜಯ (ಚತುರ್ಥಿ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.
ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.
ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.
ಪಂಚಶ್ಲೋಕೀ ಬೆಲೆ ೧—೦—೦.
ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.
ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ.ಆರ್. ಕರಿಬಸವಶಾಸ್ತ್ರಿ
[50—8] ಅಂಡ್ ಸನ್ಸ್, ಜಿ. ಪಿ. ಮಂಡಲಿ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.
ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್,
(ನೀಲಗಿರಿ ಎಣ್ಣೆ)
ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.
ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦
ವಿ. ಪಿ. ಚಾರ್ಜು ೦—೧೦—೦
ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦
ವಿ. ಪಿ. ಚಾರ್ಜು ೦—೧೨—೦
೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦
ಚಾರ್ಜು ರೂ. ೧—೧—೦.
ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—16] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.
ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗ್ಯೆರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿ ಇರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.
ಊದುಬತ್ತಿ ಷಾಪ್, ಎಸ್. ಕಳ್ಳಪ್ಪ,
4 ಬೆಂಗಳೂರು ಸಿಟಿ ದೊಡ್ಡಪ್ಯಾಟೆ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಮಾರ್ಚ್ ತಾ|| ೨ ನೆಯ ಭಾನುವಾರ.

ಪ್ರಜಾಪ್ರತಿನಿಧಿಸಭೆಯಿಂದ ನ್ಯಾಯವಿಧಾಯಕ ಸಭಾ ಸಭಿಕರನ್ನು ಆರಿಸುವಿಕೆ.

ನೂತನ ರಾಜಶಾಸನದ ಪ್ರಕಾರ ವಿಶೇಷಸುಧಾರಣೆಯಿಂದ ಉದ್ಭವಿಸಿರುವ ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಸಭಿಕರ ಆರಿಸುವಿಕೆಯು ಸಂಸ್ಥಾನದ ಎಲ್ಲ ಭಾಗಗಳಲ್ಲೂ ನಡೆದು ಉತ್ತೀರ್ಣರಾದ ದೊಡ್ಡಮನುಷ್ಯರುಗಳ ಹೆಸರುಗಳು ಪ್ರಕಟವಾಗಿರುತ್ತವೆ. ಈ ಮಾರ್ಚ್ ತಾ|| 12ರಲ್ಲಿ ರಾಜಧಾನಿಯ ಜಗನ್ಮೋಹನ ಪ್ರಾಸಾದದ ವಿವಾಹ ಮಂಟಪದಲ್ಲಿ ಶ್ರೀಮನ್ಮಹಾರಾಜರವರ ಅಮೃತಹಸ್ತದಿಂದ ಆರಂಭಿಸಲ್ಪಡಲಿಕ್ಕಿರುವ ಪ್ರಜಾಪ್ರತಿನಿಧಿಸಭಾಧಿವೇಶನದಲ್ಲಿ ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿಸಭೆಯ ಪರವಾಗಿ 8 ಮಂದಿ ಸಭಿಕರನ್ನು ಆರಿಸುವುದು ಮುಖ್ಯಕಾರ್ಯವಾಗಿರುತ್ತದೆ.

ಸಂಸ್ಥಾನದ ಪ್ರಾಯಶಃ 60 ಲಕ್ಷ ಪ್ರಜೆಗಳ ಪ್ರಾತಿನಿಧ್ಯವು ಈ ಸಭೆಗಳಿಗಿರುವುದರಿಂದ ಇವುಗಳ ಘನತೆಯನ್ನೂ ಪ್ರಯೋಜನವನ್ನೂ ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲವು. ಸದಾ ಸ್ವಪ್ರಜಾಕ್ಷೇಮಚಿಂತನೆಯಲ್ಲಿ ಮಗ್ನರಾಗಿರುವ ನಮ್ಮ ಶ್ರೀಮನ್ಮಹಾರಾಜ ಪ್ರಭುವರ್ಯರೂ ಅವರ ಘನಸರ್ಕಾರದವರೂ ಈ ಉಭಯಸಭೆಗಳ ವಿಷಯದಲ್ಲಿಟ್ಟಿರುವ ಗೌರವಬುದ್ಧಿಯೂ, ಆದರವೂ ಈ ಸಭೆಗಳಿಗೆ ನೂತನವಾಗಿ ದಯಪಾಲಿಸಲ್ಪಟ್ಟಿರುವ ವಿಶೇಷಾಧಿಕಾರಗಳಿಂದ ಸುವ್ಯಕ್ತವಾಗುತ್ತವೆ. ಪುತ್ರನಿರ್ವಿಶೇಷದಿಂದ ಪ್ರಜಾಪಾಲನೆ ಮಾಡುತ್ತಿರುವ ನಮ್ಮ ಪ್ರಭುಶ್ರೇಷ್ಠರಿಗೂ ಅವರ ಸರ್ಕಾರದವರಿಗೂ ಈ ಉಭಯಸಭೆಗಳ ವಿಷಯದಲ್ಲಿರುವ ಒಲವೆಯೂ ಅಭಿಮಾನವೂ ಸಾರ್ಥಕವಾಗಲು ಸಭೆಗಳಿಗೆ ಪ್ರತಿನಿಧಿಗಳಾಗಿ ಬರತಕ್ಕ ಪ್ರಜೆಗಳ ಕಾರ್ಯತತ್ಪರತೆಯೂ, ದಕ್ಷತೆಯೂ ಮುಖ್ಯಸಾಧನಗಳಾಗಿರುತ್ತವೆ. ಪ್ರಜಾಪ್ರತಿನಿಧಿ ಸಭೆಯಾಗಲಿ, ನ್ಯಾಯವಿಧಾಯಕ ಸಭೆಯಾಗಲಿ ಕಲ್ಪಿಸಲ್ಪಟ್ಟಿರುವುದು ಸಕಲಪ್ರಜೆಗಳ ಹಿತಸಾಧನೆಗಲ್ಲದೆ ಕೆಲಜನರ ಪ್ರಯೋಜನಮಾತ್ರಕ್ಕೆಂದಿಗೂ ಅಲ್ಲ. ಅದುಕಾರಣವೇ ಈ ಸಭೆಗಳೂ ಇವುಗಳ ಪ್ರಯೋಜನಗಳೂ ಎಲ್ಲ ಪ್ರಜೆಗಳಿಗೂ ಸಮನಾಗಿ ಬಾಯಿತೆರೆದಿಡಲ್ಪಟ್ಟಿರುವುವು. ಇಂತಹ ಸಭೆಗಳಿಂದ ಆಗಬೇಕಾದ ಪ್ರಯೋಜನಗಳನ್ನು ಯಾವರೀತಿಯಲ್ಲಿ ಸಾಧಿಸಿಕೊಳ್ಳಬೇಕೆಂದು ಅರಿತು ಯಾವ ಜನರು ನಡೆದುಕೊಳ್ಳುವರೊ ಅವರು ಖಂಡಿತವಾಗಿಯೂ ಸುಖಪಡುವರು. ಅದನ್ನು ತಿಳಿಯದವರೂ, ತಿಳಿದೂ ಉದಾಸೀನರಾಗಿರುವವರೂ ನಷ್ಟಕಷ್ಟಗಳನ್ನು ಅನುಭವಿಸುವರು.

ಯಾರ ದುರದೃಷ್ಟದಿಂದಲೋ ಜಾತಿಮತ ದ್ವೇಷಗಳು ಉಕ್ಕೇರುತ್ತಿರುವ ಈಗಣಕಾಲದಲ್ಲಿ ತಂತಮ್ಮ ಜನವರ್ಗಗಳ ಕ್ಷೇಮವನ್ನು ತಾವುತಾವೇ ಮಾಡಿಕೊಳ್ಳಬೇಕಾದ ಅವಸ್ಥೆಯು ದೇಶದಲ್ಲಿ ಪ್ರಾಪ್ತವಾಗಿರುವುದರಿಂದಲೇ "ನಿಂನಿಮಗೆ ಇಷ್ಟರಾದ ಜನರಿಗೆ ನೀವು ಓಟುಗಳನ್ನು ಕೊಟ್ಟು ನಿಮ್ಮಗಳಿಗೆ ಸರಿಯಾದ ಪ್ರಾತಿನಿಧ್ಯವು ಇರುವಂತೆ ಮಾಡಿಕೊಳ್ಳುವ ಕೆಲಸವು ನಿಮ್ಮ ಕೈಯಲ್ಲೇ ಇರುತ್ತದೆ" ಎಂದು ಶ್ರೀಮನ್ಮಹಾರಾಜರವರು ಹಿಂದುಳಿದ ಜನವರ್ಗಗಳ ಡೆಪ್ಯುಟೇಷನ್ನಿಗೆ ಉತ್ತರವನ್ನು ಕೊಡುವಾಗ್ಗೆ ಬೋಧಿಸಿರುತ್ತಾರೆ. ಅಲ್ಲದೆ "ಒಬ್ಬರ ಪ್ರಯತ್ನದಿಂದ ಮತ್ತೊಬ್ಬರು ಉದ್ಧರಿಸಲ್ಪಡುವುದು ಶುದ್ಧ ಸುಳ್ಳು. ಹಿಂದುಳಿದವರು ಮುಂದಕ್ಕೆ ಬರಬೇಕೆಂದು ಸ್ವಯಂಪ್ರಯತ್ನ ಮಾಡದಿದ್ದರೆ ಚಕ್ರವರ್ತಿಗಳೇ ಆಗಲೀ ಪ್ರಭುಗಳೇ ಆಗಲೀ ಯಾರೂ ಅವರನ್ನು ಮುಂದಕ್ಕೆ ತರಲು ಆಗುವುದಿಲ್ಲ" ಎಂದು ಬ್ರಾಹ್ಮಣರ ವಕೀಲನಾಗಿರುವ ಸಂಪದಭ್ಯುದಯ ಪತ್ರಿಕೆಯೂ ಕೂಡ ತನ್ನ ಒಂದಾನೊಂದು ಸಂಚಿಕೆಯಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ಇದನ್ನೆಲ್ಲಾ ನೋಡುವುದರಿಂದಲೂ, ಕೇಳುವುದರಿಂದಲೂ "ಉದ್ಧರೇದಾತ್ಮನಾತ್ಮಾನಾಂ" ಎಂಬ ಶಾಸ್ತ್ರವಚನದಂತೆ ತಂತಮ್ಮ ಉದ್ಧಾರವನ್ನು ತಾವುತಾವೇ ಮಾಡಿಕೊಳ್ಳಬೇಕೆಂಬುದು ಸಿದ್ಧವಾಗುತ್ತದೆ. ಕಾಲಪರಿಸ್ಥಿತಿಯು ಹೀಗಿರುವಾಗ ಹಿಂದುಳಿದವರು ಸರ್ಕಾರಿಯುದ್ಯೋಗಗಳಲ್ಲಿ ಮುಂಬರಿದವರ ಸಮಭಾಗವಾಗಿ ಸೇರುವ ಪ್ರಯತ್ನದಲ್ಲೂ, ಯತ್ಕಿಂಚಿತ್ತು ಬ್ಯಾಕ್‌ವರ್ಡ್ ಸ್ಕಾಲರ್‌ಷಿಪ್ಪನ್ನು ಪಡೆಯುವುದರಲ್ಲೂ, ಸರ್ಕಾರಿಸಂಸ್ಕೃತಮಹಾಪಾಠಶಾಲೆಗಳಲ್ಲಿ ವ್ಯಾಸಂಗಮಾಡಲು ಪ್ರವೇಶವನ್ನು ಹೊಂದುವುದರಲ್ಲೂ ಮತ್ಸರಿಸಿ ನಾನಾವಿಘ್ನಗಳನ್ನು ತಂದೊಡ್ಡಿದುದಲ್ಲದೆ ಈ ಹಿಂದುಳಿದವರ ಆಕಾಂಕ್ಷೆಯನ್ನು ಪೂರೈಸಿಕೊಡುವುದರಲ್ಲಿ ವ್ಯಗ್ರರಾಗಿದ್ದ ದಿವಾನರಾದಿಯಾಗಿ ಸರ್ಕಾರಿಯಧಿಕಾರಿಗಳನ್ನು ಅಲ್ಲದಸಲ್ಲದ ಲೇಖನ ಭಾಷಣಗಳಿಂದ ಮನಸ್ವೀ ನಿಂದಿಸಿಯೂ ನಿಂದಿಸುತ್ತಲೂ ಇರುವ ಆ ನಮ್ಮ ಹಗೆಗಳಿಂದಲೂ, ನಮ್ಮಲ್ಲಿ ಉದಾಸೀನರಾಗಿರುವವರಿಂದಲೂ ನಮ್ಮ ಹಿತವನ್ನು ಮಾಡಿಸಿಕೊಳ್ಳುತ್ತೇವೆಂದು ಯಾರಾದರೂ ತಿಳಿದಿದ್ದರೆ ಅವರಿಗಿಂತಲೂ ಹಸೀದಡ್ಡರು ಲೋಕದಲ್ಲಿ ಮತ್ತಾರಾದರೂ ಇರುವುದುಂಟೆ?

ಹಿಂದುಳಿದ ಜನವರ್ಗಗಳ ಅಭ್ಯುದಯದಲ್ಲಿ ಕಪಟಾಭಿಮಾನವುಳ್ಳ ಜನರನ್ನು ನಮ್ಮಗಳ ಪ್ರತಿನಿಧಿಗಳೆಂದು ನಾವುಗಳು ಭಾವಿಸುವುದಾದರೆ, ನಮ್ಮ ಪರಿಣಾಮವೇನಾಗುವುದೆಂಬುದನ್ನು ಹಿಂದಣ ಅನುಭವದಿಂದಲಾದರೂ ಯೋಚಿಸಿಕೊಳ್ಳಬೇಡವೆ? ಪರರನ್ನು ನಂಬದೆ ನಮ್ಮ ಹಿತವನ್ನು ನಾವು ಮಾಡಿಕೊಳ್ಳಬೇಕಾದರೆ ಮೊದಲಿನಿಂದಲೂ ನಾವು ಎಚ್ಚತ್ತು ನಡೆದುಕೊಳ್ಳಬೇಕು. ಸರ್ಕಾರವಿರುವುದು ಸರ್ವಪ್ರಜೆಗಳಿಗೂ ಅಲ್ಲದೆ ಸ್ವರ್ಗಲೋಕದಿಂದಿಳಿದುಬಂದವೆಂದು ಹೇಳುವ ಕೆಲಜನರಿಗೆ ಮಾತ್ರವೇ ಅಲ್ಲವು. ಅದುಕಾರಣ ಪ್ರತಿಯೊಂದು ಸರ್ಕಾರಿ ಸಭೆಯಲ್ಲೂ ನಮ್ಮ ಹಿತವನ್ನು ನಿಜವಾಗಿ ಬಯಸುವ ನಂಬುಗೆಯಾದ ಜನರೇ ಆ ಆ ಸ್ಥಳಗಳಲ್ಲಿ ನಮ್ಮ ಪ್ರತಿನಿಧಿಗಳಾಗಿರುವಂತೆ ಮಾಡಿಕೊಳ್ಳುವಲ್ಲಿ ಎಚ್ಚರಗೊಂಡಿರಬೇಕಾದುದು ನಮ್ಮ ಮುಖ್ಯ ಕರ್ತವ್ಯವಾಗಿರುತ್ತದೆ. ಅಷ್ಟೇಅಲ್ಲದೆ ಇಂತಹ ನಮ್ಮ ಪ್ರಯತ್ನಗಳಿಗೆ ಹಸ್ತಾವಲಂಬನವನ್ನು ಕೊಡತಕ್ಕ ಜನರು ಅಧಿಕಾರಸ್ಥಾನಗಳಲ್ಲಿರಬೇಕಾದ ಆವಶ್ಯಕತೆಯನ್ನೂ ನಾವು ಮರೆಯದೆ ಇಟ್ಟುಕೊಂಡು ಕೆಲಸಮಾಡಬೇಕಾಗಿರುತ್ತದೆ. ಇವು ನಮ್ಮ ಸದುದ್ದೇಶವಲ್ಲದೆ ಯಾರನ್ನೂ ಮತ್ಸರಿಸುವುದಾಗಲಿ ನಿಂದಿಸುವುದಾಗಲಿ ಸರ್ವಥಾ ನಮ್ಮ ಕಾರ್ಯವಾಗಿಲ್ಲವು. ನಮ್ಮ ಸತ್ಪ್ರಯತ್ನದಲ್ಲಿ ನಾವು ನಿಮಗ್ನಚಿತ್ತರಾಗಿರುವಾಗ ನಮ್ಮುದ್ದೇಶಕ್ಕೆ ಭಂಗಕಾರಿಗಳಾಗಿ ಬರತಕ್ಕವರನ್ನು ಎಷ್ಟುಮಾತ್ರಕ್ಕೂ ನಾವು ಲಕ್ಷ್ಯಸಬಾರದು, ಮತ್ತು ಆ ವಿಘ್ನಗಳನ್ನು ಒತ್ತರಿಸುವುದರಲ್ಲಿ ನಮ್ಮ ದೃಢಪ್ರಯತ್ನಗಳು ಐಕಮತ್ಯಬಲವುಳ್ಳವುಗಳಾಗಿರುವಂತೆ ಮಾಡಿಕೊಂಡಿರಬೇಕು. ಸದ್ಯಃ ಪ್ರಜಾಪ್ರತಿನಿಧಿಸಭೆಯಿಂದ ನ್ಯಾಯವಿಧಾಯಕ ಸಭೆಗೆ 8 ಜನ ಪ್ರತಿನಿಧಿ ಸಭಿಕರನ್ನು ಆರಿಸಿ ಕಳುಹಿಸಿಕೊಡಬೇಕಾದ ಕಾರ್ಯವು ಒದಗಿರುತ್ತದೆ. ಈ ಸಮಯದಲ್ಲಿ ಹಿಂದುಳಿದ ಸಭಿಕರೆಲ್ಲರೂ ಎಚ್ಚತ್ತು ಕೆಲಸ ಮಾಡಬೇಕು. ಇದುವರೆಗೆ ಹಿಂದುಳಿದವರ ಹಿತಸಾಧನೆಗಾಗಿ ನ್ಯಾಯವಿಧಾಯಕಸಭೆ ಮೊದಲಾದವುಗಳಲ್ಲಿ ಗುದ್ದಾಡಿ ಯಾರು ದೇಶಕ್ಷೇಮವನ್ನು ಸಾಧಿಸಿರುವರೆಂಬುದನ್ನು ಸ್ಮರಿಸಿಕೊಳ್ಳಬೇಕು. ಈಗ ಯಾರಿಗೆ ಓಟನ್ನು ಕೊಟ್ಟರೆ ಅವರು ತಮ್ಮ ಪ್ರತಿನಿಧಿಗಳಾಗಿ ಮೋಸವಿಲ್ಲದೆ ಕೆಲಸ ಮಾಡುತ್ತಾರೆಂಬುದನ್ನು ಚೆನ್ನಾಗಿ ಆಲೋಚಿಸಿಕೊಳ್ಳಬೇಕು. ರಾಜಕೀಯ ವಿಷಯಗಳಲ್ಲಿ ಜಾತಿ ಮತಭೇಧಗಳನ್ನು ಗಣಿಸದೆ ಕಾರ್ಯನಿರ್ವಾಹಶಕ್ತಿಯೊಂದನ್ನೇ ಗಮನಿಸಿ ಅಂತಹವರಿಗೆ ತಮ್ಮ ಪ್ರಾತಿನಿಧ್ಯವನ್ನು ಕೊಡಬೇಕೆಂದು ಕೆಲವರು ಬೋಧಿಸುತ್ತಿರುವರು. ಜಾತಿಮತಭೇದವನ್ನು ಲಕ್ಷಿಸದೆ ಕೆಲಸಮಾಡತಕ್ಕ ಔದಾರ್ಯವು ಅಂತಹ ಬೋಧಕರಲ್ಲೂ ಕೂಡ ಮಾತಿನಲ್ಲಿರುವಂತೆ ಕಾರ್ಯದಲ್ಲಿಲ್ಲ. ಮತ ಜಾತಿ ಧರ್ಮಗಳೂ, ಅಭಿಮಾನಗಳೂ ಪೂರ್ವದೇಶೀಯರಾದ ನಮ್ಮ ರಕ್ತದೊಡನೆ ಅಂಟಿಬಂದಿರುವ ಗುಣಗಳಾಗಿವೆಯೇ ವಿನಾ, ಬೇಕಾದಾಗ ತೊಟ್ಟುಕೊಂಡು ಬೇಡವಾದಾಗ ಕಳಚಿಬಿಡುವ ಅಂಗಿಯಂತಿರುವುದಿಲ್ಲವು. ಅದುಕಾರಣ ರಾಜಕೀಯ ವಿಷಯದಲ್ಲಾಗಲಿ ಲೌಕೀಕ ವಿಷಯದಲ್ಲಾಗಲಿ ಜಾತಿ ಮತಧರ್ಮಗಳ ಸಂಬಂಧವು ಮಾನವನ ಜೀವಿತದಲ್ಲಿ ಸಮರಸವಾಗಿ ಇದ್ದೇ ಇರುತ್ತದೆ. ಆದುದರಿಂದ ಹಿಂದುಳಿದ ಪ್ರಜಾಪ್ರತಿನಿಧಿ ಸಭಾಮೆಂಬರುಗಳೆಲ್ಲರೂ ಕಪಟಹಿತೋಕ್ತಿಗಳಿಗೆ ಗಮನಕೊಡದೆ ಎಚ್ಚತ್ತು ಕೆಲಸಮಾಡಬೇಕಾಗಿದೆ. ಇದುವರೆಗೆ ಹಿಂದುಳಿದವರ ಹಿತಸಾಧನೆಗಾಗಿ ನಿಯಮನಿರ್ಮಾಣ ಸಭೆ ಮೊದಲಾದವುಗಳಲ್ಲಿ ಹೋರಾಡಿ ಯಾರು ದೇಶಕ್ಷೇಮವನ್ನು ಸಾಧಿಸಿರುವರೆಂಬುದನ್ನು ಸ್ಮರಿಸಿಕೊಂಡು ಅಂತಹವರನ್ನು ಪ್ರೋತ್ಸಾಹಿಸಿ ಉಮೇದುವಾರರನ್ನಾಗಿ ನಿಲ್ಲಿಸಿ ಅವರಿಗೇ ತಮ್ಮ ಓಟನ್ನು ಕೊಡಬೇಕು. ಹಾಗಲ್ಲದೆ, ಸ್ವಕಾರ್ಯಸಾಧನೆಗಾಗಿ ಓಟನ್ನು ಪಡೆದುಕೊಳ್ಳುವವರೆಗೂ ಬೆಣ್ಣೆ ಮಾತನ್ನಾಡಿ, ಬೆಟ್ಟದಗಾತ್ರದ ಮರ್ಯಾದೆಯನ್ನೂ, ಸಮುದ್ರದಷ್ಟು ಅಭಿಮಾನವನ್ನೂ, ಹೊಳೆಯ ನೀರಿನಷ್ಟು ದಾಕ್ಷಿಣ್ಯವನ್ನೂ ತೋರಿಸಿಬಿಟ್ಟು ಹಿಂದೂ ಮುಂದೂ ಸುತ್ತಾಡಿ ಬಳಿಕ ತಮ್ಮದಾರಿ ತಾವು ನೋಡಿಕೊಳ್ಳುವ ಗೋಮುಖವ್ಯಾಘ್ರಗಳ ಮೋಸಕ್ಕೆ ಖಂಡಿತವಾಗಿಯೂ ಒಳಗಾಗಬಾರದು.

ಬೆಂಗಳೂರು ಪಟ್ಟಣದಿಂದ ಪ್ರಜಾಪ್ರತಿನಿಧಿ ಸಭೆಗೆ ಆರಿಸಲ್ಪಟ್ಟಿರುವ ನಾಲ್ವರಲ್ಲಿ ಹೆಚ್ಚು ಓಟುಗಳನ್ನು ಪಡೆದು ಮೊದಲನೆಯವರಾಗಿ ಬಂದಿರುವ ಬೆಂಗಳೂರಿನ ಅಡ್ವೋಕೇಟ್ ಮ|| ಜಿ. ಪರಮಶಿವಯ್ಯ, ಬಿ. ಎ., ಎಲ್ ಎಲ್, ಬಿ., ಯವರು ಪ್ರಜಾಪ್ರತಿನಿಧಿ ಸಭೆಯಿಂದ ನ್ಯಾಯವಿಧಾಯಕ ಸಭೆಗೆ ಒಬ್ಬ ಮೆಂಬರಾಗಿ ಆರಿಸಲ್ಪಡಲು ಉಮೇದುವಾರರಾಗಿ ನಿಂತಿರುತ್ತಾರೆ. ಇವರು ಚಿಕ್ಕವಯಸ್ಸಿನವರಾಗಿಯೂ, ವಿದ್ಯಾವಂತರಾಗಿಯೂ, ದೇಶಸೇವೆಗಾಗಿ ತಮ್ಮ ತನು ಮನಗಳನ್ನು ಸಮರ್ಪಿಸಲು ಸಾರ್ವದಾ ನಿರತರಾಗಿಯೂ, ಹಿಂದುಳಿದ ಜನವರ್ಗಕ್ಕೆ ಸೇರಿ ಅವರ ಅಭ್ಯುದಯವನ್ನೇ ಚಿಂತಿಸತಕ್ಕವರಾಗಿಯೂ, ಹಿಂದುಳಿದ ಜನಗಳ ಉದ್ಧಾರಕ್ಕಾಗಿಯೇ ಜನ್ಮವೆತ್ತಿದ್ದರೆಂದು ಖ್ಯಾತಿಗೊಂಡಿದ್ದ ಕೈ|| ಬಸವಯ್ಯನವರ ಅಕಾಲಮೃತ್ಯುವಿನಿಂದುಂಟಾದ ಲೋಪವನ್ನು ಪರಿಹರಿಸುವವರಾಗಿಯೂ ಇರುತ್ತಾರೆಂಬುದು ಹಿಂದಣ ಪ್ರಜಾಪ್ರತಿನಿಧಿ ಸಭೆಯಲ್ಲೂ ನ್ಯಾಯವಿಧಾಯಕ ಸಭೆಯಲ್ಲೂ ಪ್ರತಿನಿಧಿಗಳೆಂದಾರಿಸಲ್ಪಟ್ಟ ಮೆಂಬರಾಗಿದ್ದುಕೊಂಡು ಇವರು ಮಾಡಿರುವ ಸೇವೆಯಿಂದ ತಾನಾಗಿ ವ್ಯಕ್ತವಾಗುತ್ತದೆ. ಇಂತಹವರಿಗೆ ಪ್ರಜೆಗಳ ಬೆಂಬಲವೂ ಪ್ರೋತ್ಸಾಹವೂ ಎಷ್ಟೆಷ್ಟು ದೊರೆದರೆ ಅಷ್ಟಷ್ಟು ಅವರ ಕಾರ್ಯನಿರ್ವಾಹ ಕುತೂಹಲವು ಉಜ್ವಲಗೊಳ್ಳುತ್ತದೆ. ಅದುಕಾರಣ ಇಂತಹವರ ಕಾರ್ಯೋತ್ಸಾಹಕ್ಕೆ ಹಿಂದುಳಿದ ಜನವರ್ಗದವರು ಉತ್ತೇಜನಕೊಟ್ಟು ತಮ್ಮ ಅಧ್ವರ್ಯರುಗಳನ್ನಾಗಿ ಮಾಡಿಕೊಳ್ಳುವುದು ವಿಶೇಷ ಪ್ರಯೋಜಕವಾದುದರಿಂದ, ತಮ್ಮಗಳ ಓಟುಗಳನ್ನು ಮ|| ಪರಮಶಿವಯ್ಯನವರಿಗೂ ಇವರಂತೆ ಕಾರ್ಯೋತ್ಸಾಹಕರೂ ದಕ್ಷರೂ ಆದ ಮತ್ತೆ 7 ಜನ ಮೆಂಬರುಗಳಿಗೂ ಕೊಟ್ಟು ನ್ಯಾಯವಿಧಾಯಕ ಸಭೆಗೆ ತಮ್ಮಗಳ ಪ್ರತಿನಿಧಿಗಳಾಗಿ ಅವರುಗಳೇ ಬರುವಂತೆ ಏಕಮತ್ಯದಿಂದ ಕೆಲಸಮಾಡಿ ಇಷ್ಟಾರ್ಥಸಿದ್ಧಿಯನ್ನು ಪಡೆದು ಆತ್ಮಗೌರವವನ್ನು ಉಳಿಸಿಕೊಂಡು ತಮ್ಮ ಸ್ಥಿರಸಂಕಲ್ಪವನ್ನು ಕಾಪಾಡಿಕೊಳ್ಳದೆ ಇರಲಾರರೆಂದು ನಂಬುತ್ತೇವೆ.

ಮೈಸೂರು ರೈಲ್ವೆಗಳು.

ಸಂಸ್ಥಾನದಲ್ಲಿ ಮದ್ರಾಸ್ ಸದರ್ನ್ ಮರಾಟಾ ಕಂಪೆನಿಯವರಿಂದಲೂ ನಮ್ಮ ಸರ್ಕಾರದವರ ಮೇಲ್ವಿಚಾರಣೆಯಿಂದಲೂ ನಡಿಸಲ್ಪಡುತ್ತಿರುವ ರೈಲ್ವೆ ಆಡಳಿತದ ವರದಿಯು ಈಗತಾನ ಪ್ರಕಟವಾಗಿದೆ. ಈ ವರ್ಷದಲ್ಲಿ ಉತ್ಪತ್ತಿಯು ಗತವರ್ಷಕ್ಕಿನ್ನ ಅಧಿಕವಾಗಿರುವುದಾದರೂ, ವೆಚ್ಚವು ಇನ್ನೂ ಹೆಚ್ಚಾಗಿರುವುದರಿಂದ ಆದಾಯವು ಅಷ್ಟು ತೃಪ್ತಿಕರವಾಗಿರುವುದಿಲ್ಲ ವೆಂದು ಈ ವರದಿಯನ್ನೋಡುವುದರಿಂದ ವ್ಯಕ್ತವಾಗುತ್ತದೆ. ಮದ್ರಾಸ್ ಸದರ್ನ್ ಮರಾಟಾ ಕಂಪೆನಿಯವರಿಂದ ನಡಿಸಲ್ಪಡುತ್ತಿರುವ ಲೋಹಮಾರ್ಗಗಳಿಂದ 44,40,015 ರೂ. ಒಟ್ಟು ಉತ್ಪನ್ನವಾಗಿರುತ್ತದೆ, ಇದರ ಹಿಂದಣ ವರ್ಷದಲ್ಲಿ 39,42,39 ಉತ್ಪನ್ನವಾಗಿದ್ದಿತು. ವೆಚ್ಚಮಾತ್ರ 28,00,018 ರೂ. ಹಿಂ 28,03,122 ರೂ. ಗಳಿದಿತು. ಕಂಪೆನಿಯವರು ಮಾಡಿದ ಕೆ ಸಕ್ಕಾಗಿಯೂ ಅವರು ಸಾಲಕೊಟ್ಟಿರುವ ಹಣದ ಬಡ್ಡಿಗಾ ಯೂ ಕೊಡಲ್ಪಟ್ಟುದರ ಜಾತಾ 8,17,710 ರೂಪಾಯಿಗಳು ಸರ್ಕಾರಕ್ಕೆ ಉಳಿತಾಯವಾಯಿತು. ಹಿಂದಣ ವರ್ಷ 2,62,73 ರೂ. ಉಳಿದಿದ್ದಿತು. ಸರ್ಕಾರದವರಿಂದ ನಡಿಸಲ್ಪಡುತ್ತಿರುವ ರೈಲ್ವೆಗಳಿಂದ 32,02,564 ಉತ್ಪನ್ನವೂ, 27,20,291 ವೆಚ್ಚವೂ ಆಗಿರುತ್ತದೆ. ಇದರ ಹಿಂದಣ ವರ್ಷದಲ್ಲಿ 3004082 ರೂ. ಉತ್ಪನ್ನವೂ 26,39,755 ರೂ. ವೆಚ್ಚವೂ ಆಗಿದ್ದಿತು. ಒಟ್ಟು ಮೂಲಧನದ ಮೇಲೆ ಹಿಂದಣ ವರ್ಷ 1·36 ರಂತೆ ಉತ್ಪನ್ನವಾಗಿದ್ದುದು ಈ ವರ್ಷದಲ್ಲಿ 1·66 ರಂತೆ ಆಗಿರುತ್ತದೆ. ವೆಚ್ಚವು ಇನ್ನೂ ಬಹುಮಟ್ಟಿಗೆ ತಗ್ಗಿಸಲ್ಪಡಲು ತಕ್ಕೇರ್ಪಾಟು ಮಾಡಲ್ಪಡುತ್ತಿರುವುದಾಗಿ ತಿಳುಹಲ್ಪಟ್ಟಿದೆ. ಒಟ್ಟುತ್ಪತ್ತಿಯು ಕೊಂಚ ಹೆಚ್ಚು ಕಂಡುಬಂದಿರುವುದಾದರೂ, ಪದಾರ್ಥಗಳಿಗಾ ವೆಚ್ಚವಾಗಿರುವ ಮೊಬಲಗಿನಿಂದ ಬಡ್ಡಿಯನ್ನು ಕಳೆದುಬಿಟ್ಟ ಸರ್ಕಾರದಿಂದ ನಡಿಸಲ್ಪಡುವ ರೈಲುಗಳಿಂದ 1,34,528 ರೂ ನಷ್ಟವಾಗಿರುವುದು ಕಂಡುಬರುತ್ತದೆ. ಸರ್ಕಾರದವರಿಂದ ನ ಸಲ್ಪಡುವ ರೈಲ್ವೆಗಳಲ್ಲಿ ಪ್ರಯಾಣಿಕರ ಸಂಖ್ಯೆಯು 5 ಲಕ್ಷ ವರಿಗೆ ಕಡಮೆಯಾಗಿರುವುದಾದರೂ ಟಿಕೆಟ್ಟಿನುತ್ಪತ್ತಿಯು ಮಾತ್ರ 18,46,322 ರೂ. ಆಗಿರುವುದು. ಇದರ ಹಿಂದ ವರ್ಷದಲ್ಲಿ 18,05,541 ರೂ. ಆಗಿದ್ದಿತು. ಹೀಗಾಗಲು ರೈ ಛಾರ್ಜು ಹೆಚ್ಚಿಸಲ್ಪಟ್ಟುದೇಕಾರಣವಾಗಿದೆ. ಈಗ ಛಾರ್ ಪುನಹ ತಗ್ಗಿಸಲ್ಪಟ್ಟಿದೆ. ಸಾಮಾನುಗಳಿಂದ ಬಂದುತ್ಪನ್ನ 9,46,934 ರೂ. ಇಂದ 11,17,214 ರೂ. ಗೆ ಹೆಚ್ಚಿರುತ್ತ ಪ್ರಸಕ್ತ ವರ್ಷದಲ್ಲಿ ರೈಲ್ವೆಯುತ್ಪನ್ನವು ನಾನಾ ರೀತಿಯಿಂ ಅಧಿಕವಾಗಿರುವುದಕ್ಕಾಗಿ ಸರ್ಕಾರದವರು ತಮ್ಮ ಸಂತೋ ವನ್ನು ವ್ಯಕ್ತಗೊಳಿಸಿರುವರಲ್ಲದೆ, ಕೆಲಸಗಳಲ್ಲೂ ಕೊಂಡುಕೊ ಳ್ಳುವ ಸಾಮುಗ್ರಿಗಳಲ್ಲೂ ಇನ್ನೂ ಇತರ ಸಾಧ್ಯವಾದ ವಿಧಾ ದಲ್ಲೂ ಆದಷ್ಟು ವೆಚ್ಚವನ್ನು ಕಡಿಮೆಮಾಡಬೇಕಾಗಿ ಸೂಚಿ ರುತ್ತಾರೆ.

ಶ್ರೀಮದ್ರಂಭಾಪುರೀ ಪೀಠಾಧಿಕಾರ.

ಈಗ ಬರಿದಾಗಿರುವ ಶ್ರೀ ಜಗದ್ಗುರು ರೇಣುಕಾಚಾ ರ್ಯರ ಪೀಠಕ್ಕೆ ತಮಗೆ ಬೇಕಾದವರೊಬ್ಬರನ್ನು ಬಹು ಜನಾ ಪ್ರಾಯವಿಲ್ಲದೆ ರಹಸ್ಯವಾಗಿ ಚುನಾಯಿಸಿ ಅವರಿಗೆ ಈ ಮಾ ತಿಂಗಳಲ್ಲಿ ಪಟ್ಟಕಟ್ಟಬೇಕಾಗಿ ಕೆಲರು ಪ್ರಯತ್ನಿಸುತ್ತಿರುವು ರಿಂದ ಆರೀತಿ ರಹಸ್ಯವಾಗಿ ನಡಿಯಲು ಅವಕಾಶವನ್ನು ಕೊ ಬಾರದೆಂದು ಕಡೂರು ಡಿ|| ಕಮಿಷನರನ್ನೂ, ಮುಜರಾ ಕಮಿಷನರನ್ನೂ ಪ್ರಾರ್ಥಿಸಿಕೊಳ್ಳಬೇಕೆಂದು ಚಿಕ್ಕಮಗಳೂ ಪ್ರಾಂತದ ಮ|| ಗಳಾದ ವೀರಭದ್ರಸೆಟ್ಟರು, ಸಿದ್ಧಲಿಂಗಸೆ ಟ್ಟರು, ಸಿ. ಪಿ. ಬಸವೇಗೌಡರು, ಡಿ. ವೀರಣ್ಣಗೌಡರು, ಸಿ. ಮಲ್ಲೇಗೌಡರು ಮೊದಲಾದ ವೀರಶೈವ ದೊಡ್ಡಮ ಷ್ಯರು ಕಾಫಿಪ್ಲಾಂಟರ್ ಮ|| ಟಿ. ಚನ್ನಬಸಪ್ಪಸೆಟ್ಟರ ಅಧ್ಯ ತೆಯಲ್ಲಿ ಸಭೆಸೇರಿ ನಿರ್ಧರಿಸಿ ಆದರ ಪ್ರತಿಯೊಂದನ್ನು ನ ಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ. ಇದರಂತೆ ಅನೇಕ ಕಡೆಗಳಿ ಆಕ್ಷೇಪಕರಗಳಾದ ಲೇಖನಗಳು ಬಂದಿರುತ್ತವೆ. ಈ ಗಳಾದ ಆಕ್ಷೇಪಗಳಿಂದ ಕಾರ್ಯವಿಘಾತವಾಗುವುದಲ್ಲದೆ ಕಾ ಸಾಧಕವಾಗುವುದಿಲ್ಲವಾದಪ್ರಯುಕ್ತ ಪೀಠಾಭಿಮಾನಿಗಳಾ ಸಮಾಜಬಾಂಧವರು ಅನಾಯಕವಾಗಿರುವ ಮಠದಮೇಲೆ ಕರಪಟ್ಟು ಯೋಗ್ಯರಾದ ಪಟುವನ್ನು ಸರ್ವಸಮ್ಮತಿಯಿಂ ಅಧಿಕಾರಸ್ಥಾನಾಪನ್ನರಾಗಿ ಮಾಡುವ ಉಪಾಯವ ಸೂಚಿಸಿ, ಮಠಸ್ಥಾಪನಾಚಾರ್ಯರ ಪೂರ್ಣಾನುಗ್ರಹ ನಿರ್ವಿಘ್ನವಾಗಿ ಮಹಾಕಾರ್ಯವನ್ನು ನಡೆಯಿಸಿದ ಕೀರ್ತಿ ಭಾಜನರಾಗಲೆಂದು ಕೋರುತ್ತೇವೆ.

ಚುನಾವಣೆಯಲ್ಲಾದ ಅಕ್ರಮಾಚರಣೆಯ ಮೇಲಿನ ವಿವಾದ.

ಮೈಸೂರು ಡಿ|| ಚಾಮರಾಜನಗರ, ಗುಂಡ್ಲುಪೇ ಹೆಗ್ಗಡದೇವನಕೋಟೆ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ಕ || 15 ಮತ್ತು 16ರಲ್ಲಿ ನಡೆದ ಚುನಾವಣೆಯಲ್ಲಿ ಅಕ್ರಮಾ ಣೆಯು ನಡಿಸಲ್ಪಟ್ಟಿತಾದುದರಿಂದ ವಿಚಾರಣೆಯಿಂದ ಕ್ರಮ ಸಬೇಕಾಗಿ ಕೆಲರು 100 ರೂಪಾಯಿಗಳನ್ನು ಮೈಸೂರು ಡಿ|| ಕಮಿಷನರಲ್ಲಿ ಒತ್ತೆಯಿಟ್ಟು ವಿವಾದಗಳನ್ನು ಹೂಡಿದ್ದರು. ಡಿ|| ಕಮಿಷನರವರು ಇವುಗಳ ವಿಚಾರಣೆಯನ್ನು ಮಾಡಿ ಮ್ಮಾನಿಸಿರುವುದು ಹೇಗೆಂದರೆ—

(1) ಗುಂಡ್ಲುಪೇಟೆ ತಾ|| ಚುನಾವಣೆಯಲ್ಲಿ ರಿಜಿಸ್ಟರ್ಡ್ ಓಟರುಗಳಲ್ಲದ ನಾಲ್ವರು ಮ|| ಕೆ. ಎಸ್. ಚನ್ನಬಸಪ್ಪನವರಿಗೆ ಓಟನ್ನು ಕೊಟ್ಟುದರಿಂದ ತಮಗೆ ತಪ್ಪಿ ಚನ್ನಬಸಪ್ಪನವರು ಚುನಾವಣೆಯಾಗಿರುತ್ತಾರೆ. ಇದನ್ನು ವಿಚಾರಿಸಿ ರದ್ದುಪಡಿಸಿ ತಮ್ಮ ಚುನಾವಣೆಯನ್ನು ಅಂಗೀಕರಿಸಬೇಕೆಂಬ ಮ|| ವಿ. ಕೆ. ನಂಜುಂಡಯ್ಯನವರ ಹೇಳಿಕೆಯಮೇಲೆ ಉಭಯಕಡೆಯ ಸಾಕ್ಷಿಗಳನ್ನು ವಿಚಾರಮಾಡಿದುದರಲ್ಲಿ ಅರ್ಜಿದಾರರು ಹೇಳುವ ನಾಲ್ವರು ಅವರಿಗೂ ಚೆನ್ನಬಸಪ್ಪನವರಿಗೂ ಓಟುಗಳನ್ನು ಕೊಟ್ಟಿದ್ದರೆಂಬುದು ನಿದರ್ಶನಕ್ಕೆ ಬರಲಾಗಿ ನಂಜುಂಡಯ್ಯನವರ ಅರ್ಜಿಯು ವಜಾಮಾಡಲ್ಪಟ್ಟು, ಮ|| ಚೆನ್ನಬಸಪ್ಪನವರ ಖರ್ಚು ಕೊಡಲ್ಪಡಬೇಕಾಗಿ ತೀರ್ಮಾನಿಸಲ್ಪಟ್ಟಿತು. ಮ|| ಕೆ. ಎಸ್. ಚನ್ನಬಸಪ್ಪನವರ ಪರ ರಾಜಧಾನಿಯ ಅಡ್ವೋಕೇಟ್ ಮ|| ಎಚ್. ಸಿ. ದಾಸಪ್ಪನವರು ವಕೀಲಿಯನ್ನು ವಹಿಸಿದ್ದು ಚೆನ್ನಾಗಿ ವಾದಿಸಿದರು.

(2) ಚಾಮರಾಜನಗರ ತಾ|| ಎಲಕ್ಷನ್ನಿನಲ್ಲಿ ತಮಗೆ ಓಟನ್ನು ಕೊಡಲು ಅನೇಕರು ಬಂದಿದ್ದು ರಾತ್ರಿ 9 ಗಂಟೆಯವರೆಗೆ ಕಾದಿದ್ದರೂ ಓಟ್ ಮಾಡಲವಕಾಶವಾಗಲಿಲ್ಲವಾಗಿ ಓಟುಮಾಡದೆ ಹೊರಟುಹೋದರು ಮತ್ತು ಮಾರನೆಯ ದಿನವೂ ಅವರುಗಳು ಓಟ್ಮಾಡಲು ಅಧಿಕಾರಿಗಳು ಅವಕಾಶಕೊಡಲಿಲ್ಲವಾದ್ದರಿಂದ ತಮಗೆ ಓಟು ಸಿಕ್ಕಲಿಲ್ಲ. ಆದ್ದರಿಂದ ಪುನಃ ಓಟುಮಾಡಲು ಅವಕಾಶವನ್ನು ಕೊಡಬೇಕೆಂದು ಮ|| ಕೆ. ವೀರಣ್ಣನವರು ದೂರು ಮಾಡಿದ್ದರು ಮತ್ತು ಅದನ್ನೇ 12 ಜನ ಸಾಕ್ಷಿಗಳಿಂದ ಹೇಳಿಸಿದರು. ಡಿ|| ಕ|| ರವರು ಅದನ್ನು ನಂಬದೆ ಅರ್ಜಿಯನ್ನು ತಳ್ಳುಪಡಿಮಾಡಿದರು.

(3) ಮಂಡ್ಯ ತಾ|| ಎಲಕ್ಷನ್ನಿನಲ್ಲಿ ಉಮೇದುವಾರರಾಗಿದ್ದ ಮ|| ಚನ್ನೇಗೌಡರು ಓಟರುಗಳಿಗೆ ಬಂಡಿ ಬಾಡಿಗೆಯನ್ನು ಕೊಟ್ಟುದಲ್ಲದೆ ಊಟವುಪಚಾರವನ್ನು ಮಾಡಿಸಿದುದರಿಂದಲೂ, ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರು ಮತ್ತು ಸ್ಕಾಲರ್‌ಷಿಪ್ ಕಮಿಟಿ ಮೆಂಬರು ಅಲ್ಲದಿದ್ದರೂ ಆರೀತಿ ಸುಳ್ಳುಬರವಣಿಗೆಯಿಂದ ಮ್ಯಾನಿಫೆಸ್ಟೋ ಹೊರಡಿಸಿದುದರಿಂದಲೂ ಅರ್ಜಿದಾರನಗಿಂತಲೂ ಹೆಚ್ಚು ಓಟುಗಳನ್ನು ಬರುವಂತೆ ಮಾಡಿಕೊಂಡಿರುವುದರಿಂದ ವಿಚಾರಣೆಮಾಡಿ ಅದನ್ನು ರದ್ದುಪಡಿಸಿ ಚೆನ್ನೇಗೌಡರಿಗೆ ಎರಡನೆಯವರಾಗಿರುವ ತಮ್ಮನ್ನು ಮೆಂಬರನ್ನಾಗಿ ಅಂಗೀಕರಿಸಬೇಕೆಂದು ಮದ್ದೂರಿನ ಮ|| ಎಂ. ಸಿ. ಲಿಂಗೇಗೌಡರು ವಾದಿಸಿದುದಲ್ಲದೆ, ಚನ್ನೇಗೌಡರಿಂದ ರೈಲುಛಾರ್ಜನ್ನು ತೆಗೆದುಕೊಂಡು ಊಟ ಉಪಚಾರವನ್ನು ಹೊಂದಿದ್ದ ಓಟರುಗಳಿಂದಲೇ ಸಾಕ್ಷ್ಯವನ್ನು ಹೇಳಿಸಿದುದರ ಮೇಲೆ ಮ|| ಚೆನ್ನೇಗೌಡರ ಚುನಾವಣೆ ರದ್ದುಮಾಡಲ್ಪಟ್ಟು ಅವರ ಬದಲು ಮ|| ಲಿಂಗೇಗೌಡರು ಮೆಂಬರಾಗಿ ಅಂಗೀಕರಿಸಲ್ಪಟ್ಟರು. ಮತ್ತು ಅವರ ಖರ್ಚು ಕೊಡಿಸಲ್ಪಟ್ಟಿತು. ಈ ವಿವಾದದಲ್ಲೂ ಮ|| ಎಚ್. ಸಿ. ದಾಸಪ್ಪನವರು ವಕೀಲಿಯನ್ನು ವಹಿಸಿದ್ದರು.

(4) ಹೆಗ್ಗಡದೇವನಕೋಟೆ ತಾ|| ಚುನಾವಣೆಯಲ್ಲಿ ಅನರ್ಹರಾದವರಿಂದ ಓಟು ಮಾಡಿಸಲ್ಪಟ್ಟಿತು. ಓಟುಚೀಟಿ ಹಾಕುವ ಪೆಟ್ಟಿಗೆ ಮೊಹರ್ಮಾಡಲ್ಪಟ್ಟಿರಲಿಲ್ಲ. ಓಟು ಗೋಪ್ಯವಾಗಿ ನಡಿಯಲಿಲ್ಲ. ಪೋಲಿಂಗ್ ಆಫೀಸರು ಓಟರುಗಳ ಕೋರಿಕೆಯನ್ನು ನೆರವೇರಿಸದೆ ಅವರ ಕೈಕೆಳಗಿನ ನೌಕರರು ತಮ್ಮಿಷ್ಟಬಂದಂತೆ ಹೆಸರುಗಳನ್ನು ಬರೆದುಹಾಕುತ್ತಿದ್ದರು. ಆದ್ದರಿಂದ ಚುನಾವಣೆಯನ್ನು ರದ್ದುಪಡಿಸಿ ಮರಳಿ ನಡಿಯುವಂತೆ ಅಪ್ಪಣೆಯಾಗಬೇಕೆಂದು ರಾಜಧಾನಿಯ ಅಡ್ವೋಕೇಟ್ ಮ|| ಸಿ. ನರಸಿಂಹಯ್ಯನವರು ವಾದಿಸಿದರು ಮತ್ತು 8 ಜನ ಸಾಕ್ಷಿಗಳಿಂದ ಹೇಳಿಸಿದರು. ಆದರೆ ಹಾಗೆಮಾಡಲು ಸಾಕಷ್ಟು ಕಾರಣ ಕಂಡುಬರಲಿಲ್ಲವಾಗಿ ಮೊದಲಿನ ಚುನಾವಣೆಯೇ ಸ್ಥಿರಗೊಳಿಸಲ್ಪಟ್ಟು ಅವರ ಅರ್ಜಿಯು ತಿರಸ್ಕರಿಸಲ್ಪಟ್ಟಿತು.

ಪದಚ್ಯುತರಾದ ಷಾ ಪ್ರಭುವಿನ ಆಭರಣದ ವಿವರ.

ಪದಚ್ಯುತಪ್ರಭುತ್ವದವರು ಲೋಹಮಾರ್ಗವನ್ನು ಹಾಕುವ ವೆಚ್ಚಕ್ಕಾಗಿ ಅರಮನೆಯಲ್ಲಿರುವ ಷಾರವರ ಆಭರಣಗಳಲ್ಲಿ ಕೆಲವನ್ನು ವಿಕ್ರಯಿಸಲು ನಿರ್ಧರಿಸಿರುವರು. ಈ ಷಾರವರ ನವರತ್ನಖಚಿತವಾದ ಆಭರಣಗಳ ಬೆಲೆಯು 10,50,00,000 ರೂಪಾಯಿಗಳಾಗುವುದಾಗಿ ಕೆಲ ವರ್ಷಗಳ ಹಿಂದೆ ಅಂದಾಜು ಮಾಡಲ್ಪಟ್ಟಿದ್ದಿತು. ಅವುಗಳಲ್ಲಿ ದರಿಯಾ ಇನೂರು ಅಂದರೆ ಕಾಂತಿಸಾಗರವೆಂದು ಕರೆಯಲ್ಪಡುವ ವಜ್ರಮಣಿಯು ಜಗತ್ಪ್ರಸಿದ್ಧವಾಗಿರುವುದಲ್ಲದೆ ಅಮೋಘವಾದ ಮುತ್ತಿನ ಮಣಿಯ ಕವಚ, ವಜ್ರದ ಭುಜಕೀರ್ತಿ 5,000 ನವರತ್ನಮಣಿ ಖಚಿತವಾಗಿ 20 ಅಂಗುಲದ ವ್ಯಾಸವುಳ್ಳ ಭೂಗೋಳ, ವಜ್ರ ಖಚಿತವಾದ ಕುರಿಮರಿ ಚರ್ಮದ ಟೊಪ್ಪಿಗೆ ರತ್ನಖಚಿತವಾದ ಕತ್ತಿಯ ಒರೆಗಳು ಮತ್ತು ಜಂಬಿಯಾಗಳು ಮುತ್ತುಗಳಿಂದಲೂ, ಇಂದ್ರನೀಲಮಣಿಗಳಿಂದಲೂ ತುಂಬಲ್ಪಟ್ಟ ತಟ್ಟೆಗಳು ಇರುತ್ತವೆ. ಒಂದೊಂದು ಪಚ್ಚೆಯು 1½ ಅಂಗುಲ ಉದ್ದ ಮತ್ತು ಅಂಗುಲ ಅಗಲವಿರುತ್ತದೆ. ಪ್ರಪಂಚದಲ್ಲೆಲ್ಲಾ ಉತ್ಕೃಷ್ಟವಾದ ಹಸುರು ಮೇಲಿನ ನೀಲಿವಜ್ರವು ವಜ್ರದಿಂದ ಕೆತ್ತಲ್ಪಟ್ಟ ಗುರಾಣಿ, ಕೆಂಪುಗಳಿಂದ ಕೂಡಿದ ಕವಚಗಳು ಇರುತ್ತವೆ. ಕಾಂತಿ ಸಮುದ್ರವೆಂದು ಲೋಕವಿಖ್ಯಾತವಾದ ವಜ್ರಮಣಿಯು ಜಗತ್ಪ್ರಸಿದ್ಧಿಯಾದ ಕೋಹಿನೂರು ವಜ್ರದಷ್ಟು 180 ಕ್ಯಾರೆಟ್ ತೂಕವಿರುತ್ತದೆ. ಷಾರವರ ಕಿರೀಟದಲ್ಲಿರುವ ವಿಜಯಸಾಗರವೆಂಬ ವಜ್ರಮಣಿಯು ಅಲ್ಲದೆ ಕಾಂತಿಪರ್ವತವೆಂಬ ಮತ್ತೊಂದು ವಜ್ರವಿರುತ್ತದೆ. ಇದು 135 ಕ್ಯಾರೆಟು ತೂಕವಿದ್ದು 22,50,000 ರೂ. ಬೆಲೆಬಾಳುವುದಾಗಿ ನಿರೀಕ್ಷಿಸಲ್ಪಟ್ಟಿದೆ. ಷಾರವರ ಕಿರೀಟದ ತಿಬರದಲ್ಲಿ ಒಂದು ಕೋಳಿ ಮೊಟ್ಟೆಯ ಗಾತ್ರದ ರತ್ನವೂ, ವಜ್ರ, ಪಚ್ಚೆ ಮತ್ತು ಕೆಂಪುಗಳಿಂದ ಕೆತ್ತಲ್ಪಟ್ಟ 1 ಅಡಿ ಅಗಲದ ವಡ್ಯಾಣವೂ ಇರುತ್ತವೆ. ನವರತ್ನ ಖಚಿತವಾದ ಭೂಗೋಳವೊಂದೇ 1,75,00,000 ರೂ. ಬೆಲೆಬಾಳುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಸ್ವದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರು ಇಷ್ಟರಲ್ಲಿ ಉದಕಮಂಡಲಕ್ಕೆ ಚಿತ್ತೈಸುವವರಾಗಿರುವರೆಂದು ವದಂತಿಯಿದೆ.

ರಾಜಧಾನಿಯ ಒಂದನೆಯ ಮುನಸೀಫರಾದ ಮ|| ಎಚ್. ಕೃಷ್ಣಸ್ವಾಮಿಯವರು ಅಸ್ವಸ್ಥತೆಯಿಂದ ಕೋರ್ಟಿಗೆ ಬರುತ್ತಿಲ್ಲವಾಗಿ ನಾಳೆಯ ದಿನ ಬೇರೊಬ್ಬರು ಆಕ್ಟ್ ಮಾಡಲು ಬರುವುದಾಗಿ ತಿಳಿಯುತ್ತೇವೆ.

ಶ್ರೀಮನ್ ಮಹಾರಾಜರವರು ಸರದಾರ್ ಗೋಪಾಲರಾಜ ಅರಸಿನವರು ಮತ್ತು ಪಡಿಕಾರಂಗರು ಇವರುಗಳೊಡನೆ ಆಚೆ ಶನಿವಾರ ಶ್ರೀ ಕೆಂಡಗಣ್ಣಸ್ವಾಮಿ ಗದ್ದುಗೆಯ ಸ್ಥಳಕ್ಕೆ ಮೃಗಯಾ ವಿಹಾರಕ್ಕಾಗಿ ದಯಮಾಡಿದ್ದರಲ್ಲದೆ ಈಗ ಪುನಃ ತಾ|| 28ರಲ್ಲಿ ದಯಮಾಡಿಸಿದರು ಮತ್ತು ನೆನ್ನೆಯ ದಿನ ಹಿಂದಿರುಗಿ ಚಿತ್ತೈಸುವವರಾಗಿದ್ದರು.

ರಾಜಧಾನಿಯ ಹಳೆ ಅಗ್ರಹಾರದಲ್ಲಿರುವ ಶ್ರೀ ಚಿಕ್ಕಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಮ|| ರಾ|| ಕೋಟಿ ನಂಜಪ್ಪನವರು ಒಂದು ಮಂಟಪವನ್ನು ಕಟ್ಟಿಸಿ ಅದರಲ್ಲಿ ಶ್ರೀ ವಿಶ್ವೇಶ್ವರಸ್ವಾಮಿಯ ವಿಗ್ರಹವನ್ನು ಕಳೆದ ಶುಕ್ರವಾರ ವಿಧ್ಯುಕ್ತವಾಗಿ ವೇ|| ಬಸವರಾಜಶಾಸ್ತ್ರಿಗಳ ಮೂಲಕ ಪ್ರತಿಷ್ಠೆಯನ್ನು ಮಾಡಿಸಿ ತತ್ಸಂಬಂಧವಾಗಿ ನೂರಾರು ಜನರಿಗೆ ಸುಮಾರಾಧನೆಯನ್ನು ಮಾಡಿಸಿದರು ಎಂದು ಕೇಳಿ ಸಂತೋಷಿಸುತ್ತೇವೆ.

1923 ನೆಯ ಜುಲೈ ತಾ|| 30ಕ್ಕೆ ಕಡೆಯಾದ ಅರ್ಧ ವರ್ಷದಲ್ಲಿ ಸಂಸ್ಥಾನದಲ್ಲೆಲ್ಲಾ ಜನೋಪಯುಕ್ತಗಳಾದ ಒಟ್ಟು 72442 ಕಾಲ್ನಡೆಗಳು ಮೃತವಾದುವು. ಇದರ ಹಿಂದಣ ವರ್ಷದಲ್ಲಿ 57382 ಪ್ರಾಣಿಗಳು ಮೃತವಾಗಿದ್ದುವು. ಈ 72442 ಪ್ರಾಣಿಗಳಲ್ಲಿ 27094 ದನಗಳು ಸಾಂಕ್ರಾಮಿಕ ಜಾಡ್ಯಗಳು ತಗುಲಿ ಸತ್ತವು. ಎಂದು ವ್ಯವಸಾಯ ಶಾಖಾಡೈರೆಕ್ಟರ ವರದಿಯಿಂದ ತಿಳಿಯಬರುತ್ತದೆ.

ಬೆಂಗಳೂರು ಚೇಂಬರ್ ಆಫ್ ಕಾಮರ್ಸ್ ಎಂಬ ವರ್ತಕ ಸಂಘದವರಿಂದ ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮ|| ಬಿ. ಕೆ. ಗರುಡಾಚಾರ್ರ್ಯ ನ್ಯಾಯವಿಧಾಯಕ ಸಭಾಮೆಂಬರಾಗಿಯೂ, ಬೆಂಗಳೂರು ಬೆಂಚ್‌ಮ್ಯಾಜಿಸ್ಟ್ರೇಟರೂ ಮಂಡಿ ವರ್ತಕರೂ ಆದ ಮ|| ಕೂಬಗೆರೆ ನಂಜಪ್ಪನವರು ಪ್ರಜಾಪ್ರತಿನಿಧಿ ಸಭಾಮೆಂಬರಾಗಿಯೂ, ಇನಾಂದಾರರ ಸಂಘದಿಂದ ಬೆಂಗಳೂರಿನ ಲಾಯರ್ ಮ|| ಸೂರಪ್ಪನವರು ಪ್ರಜಾಪ್ರತಿನಿಧಿ ಸಭಾ ಮೆಂಬರಾಗಿಯೂ ಚುನಾಯಿಸಲ್ಪಟ್ಟಿರುವರು.

ನಂಜನಗೂಡು ತಾ|| ತಗಡೂರಿನಲ್ಲಿ ಒಬ್ಬ ವೃದ್ಧಬ್ರಾಹ್ಮಣನು ಒಂದು ತೋಟಕ್ಕೆ ಹೋಗಿ ಬಾಳೆಯಲೆಯನ್ನು ಕೊಯುತ್ತಿರುವಾಗ್ಗೆ ಆ ತೋಟಗಾರನಾದ ಕುರುಬರವನು ಅದನ್ನು ಕಂಡು ಆ ಬ್ರಾಹ್ಮಣನನ್ನು ಹಿಡಿದುಕೊಳ್ಳಲು ಉಭಯರಿಗೂ ಚರ್ಚೆನಡೆದು ಕಡೆಯಲ್ಲಿ ಆ ಕುರುಬನು ಶಿಟ್ಟಿನಿಂದ ಬ್ರಾಹ್ಮಣನನ್ನು ಹೊಡೆದನು. ಆ ವೃದ್ಧನು ಆ ಪೆಟ್ಟನ್ನು ತಡೆದುಕೊಳ್ಳಲಾರದೆ ಕೆಳಗೆ ಬಿದ್ದು ಪ್ರಾಣಬಿಡಲು ಕುರುಬನು ಹೆದರಿ ಆ ಶವವನ್ನು ಒಂದು ಬಾವಿಗೆ ಹಾಕಿಬಿಟ್ಟನೆಂದೂ, ಈ ಸಮಾಚಾರವನ್ನು ಪೋಲೀಸರು ತಿಳಿದು ವಿಚಾರಣೆನಡಿಸಿ ರುಜುವಾತುಬರಲಿಲ್ಲವಾಗಿ ಶವವನ್ನು ದಹನ ಮಾಡಲು ಅವಕಾಶವನ್ನು ಕೊಟ್ಟರೆಂದೂ ಅದರ ಮೇಲೆ ಆ ಮೃತನ ಮಗನು ಮೇಲ್ಪಟ್ಟ ಅಧಿಕಾರಿಗಳಿಗೆ ಅರ್ಜಿ ಬರೆದುಕೊಂಡುದರ ಮೇಲೆ ವಿಚಾರಣೆ ನಡಿಯುತ್ತಿರುವುದೆಂದೂ ತಿಳಿಯಬರುತ್ತದೆ.

ಈ ಸಂವತ್ಸರ ಮಳೆಯಿಲ್ಲದೆ ಒಣಗಿಹೋಗಿರುವ ಕೆರೆಕಟ್ಟೆಗಳಲ್ಲೆಲ್ಲಾ ಕರಬೂಜ ಹಣ್ಣುಗಳು ಗೊತ್ತುಗುರಿಯಿಲ್ಲದೆ ಬೆಳೆಯಲ್ಪಟ್ಟು ನಿತ್ಯದಲ್ಲೂ ನೂರಾರು ಗಾಡಿಗಳಲ್ಲಿ ರಾಜಧಾನಿಗೆ ತರಲ್ಪಡುತ್ತವೆ. ಆದರೆ ಕೊಳ್ಳುವವರಿಲ್ಲದೆ ಇದ್ದ ಸ್ಥಳದಲ್ಲಿಯೇ ಕೊಳೆತು ನೀರು ಹರಿಯುತ್ತದೆ. ದೇವರಾಜ ಮಾರ್ಕೆಟ್ಟಿನಲ್ಲಿ ರಾಶಿಗಟ್ಟಲೆ ಬಿದ್ದು ಕೊಳೆಯುತ್ತಿರುವ ಹಣ್ಣಿನ ದುರ್ವಾಸನೆಯು ಸಹಿಸಲಶಕ್ಯವಾಗಿರುವುದಲ್ಲದೆ ಕಾಲರಾ ರೋಗಕ್ಕೆ ಸಹಾಯಕವಾಗಿರುವುದಾದರೂ ಮಾರ್ಕೆಟ್ಟಿನಲ್ಲಿರುವ ಸ್ಯಾನಿಟರಿ ಇನ್ಸ್‌ಪೆಕ್ಟರ ಗಮನಕ್ಕೆ ಬಂದಂತೆ ತೋರುವುದಿಲ್ಲ. ಪಾಪ! ಇವರ ಕಾಲವೆಲ್ಲವೂ ಹೋಟಲುಗಳ ಮೇಲ್ವಿಚಾರಣೆಯಲ್ಲೇ ಕಳೆದು ಹೋಗುತ್ತಿರುವುದರಿಂದ ಇತರ ಕಡೆ ಗಮನಿಸಲು ವ್ಯವಧಾನವಿಲ್ಲವೆಂದು ತೋರುತ್ತದೆ. ಅದುಕಾರಣ ಹೆಲ್ತ್ ಆಫೀಸರಾದರೂ ಪ್ರತ್ಯಕ್ಷವಾಗಿ ಬಂದು ನೋಡಿ ದುರ್ವಾಸನೆಯಾಗದಂತೆ ತಕ್ಕೇರ್ಪಾಟಿಡುವವರಾಗಬೇಕು.

ಟಿ. ನರಸೀಪುರ ತಾ|| ಮೂಗೂರು ಹೋಬಳಿ ಆಲದಬೆಟ್ಟಹಳ್ಳಿಯಲ್ಲಿ ಒಬ್ಬ ಶಿವಾಚಾರದವನು ತನ್ನ ಜಮೀನನ್ನು ವತ್ತಿಕೊಂಡಿದ್ದನೆಂದು ಶಾನುಭೋಗನಿಂದ ಸುಳ್ಳುವಿಚಾರಣೆಗೆ ಗುರಿಮಾಡಲ್ಪಟ್ಟದ್ದು ಶಿಕ್ಷೆವಿಧಿಸಲ್ಪಟ್ಟುದ್ದರ ಮೇಲೆ ಸಮಯ ನಿರೀಕ್ಷಿಸಿಕೊಂಡಿದ್ದು ಒಂದು ದಿವಸ ಶಾನುಭೋಗನ ಮೇಲೆ ಬಿದ್ದು ಲಾಳವುಂಡಿಗೆಯಿಂದ ಅವನ ತಲೆಯ ಮೇಲೆ ಪೂರಾಪೆಟ್ಟನ್ನು ಹಾಕಲು ಆ ಶಾನುಭೋಗನು ಮೂರ್ಛಿತನಾಗಿ ಬಿದ್ದು ಪುನಃ ಸ್ಮೃತಿಯನ್ನು ಹೊಂದದೆ ಸತ್ತುಹೋದನು. ಇದಕ್ಕಾಗಿ ಆ ಶಿವಾಚಾರದವನು ರಾಜಧಾನಿಯ ಸ್ಪೆಷಲ್ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಯನ್ನು ಹೊಂದುತ್ತಿರುವನು. ಸರ್ಕಾರಿ ಉದ್ಯೋಗದಲ್ಲಿರುವ ಸಣ್ಣ ನೌಕರರು ಈ ರೀತಿ ಬಡ ರೈತರ ಮೇಲೆ ಸುಳ್ಳು ವ್ಯವಹಾರವನ್ನು ನಡಿಸಿ ಅವರ ಮನಸ್ಸನ್ನುದ್ರೇಕಗೊಳಿಸುವುದರ ಪರಿಣಾಮವು ಉಭಯರಿಗೂ ಪ್ರಾಣಕಂಟಕವಾಗುವುದೆಂಬುದನ್ನು ಮರೆಯಬಾರದು.

ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ತ್ರೈವಾರ್ಷಿಕ ಸಭೆಯು ಡೈರೆಕ್ಟರುಗಳ ಬೋರ್ಡಿನ ಚೇರ್ಮನ್ನರಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ. ಐ. ಇ., ಯವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 29 ನೆಯ ಶುಕ್ರವಾರ ಸಾಯಂಕಾಲ ರಾಜಧಾನಿಯಲ್ಲಿರುವ ಆಫೀಸ್ ಕಟ್ಟಡದಲ್ಲಿ ಕೂಡಿದ್ದು ಡೈರೆಕ್ಟರುಗಳ ವರದಿಯೂ ಆಯವ್ಯಯದ ಲೆಖ್ಖದ ಪಟ್ಟಿಯೂ ಓದಲ್ಪಟ್ಟವು. ಪ್ರಸಕ್ತ ವರ್ಷದಲ್ಲಿ 67,260-3-10 ರೂ. ಒಟ್ಟು ಆದಾಯವು ಬಂದಿರುವುದೆಂದೂ, ನೂಲು ಸ್ವಲ್ಪವಾಗಿ ತಯಾರಿಸಲ್ಪಟ್ಟದ್ದಾಗ್ಗೂ ಅದರಿಂದ ಬಂದ ಲಾಭವು ಒಟ್ಟು ವೆಚ್ಚದಲ್ಲಿ ಶೇಕಡ 88 ರಷ್ಟು ಆಗಿರುವುದೆಂದೂ, ಅಲು ಕಾಳುಗಳ ಮತ್ತು ಕಾರ್ಯನಿರ್ವಾಹದ ವೆಚ್ಚವು ಈ ವರ್ಷದಷ್ಟೇ ಮುಂದಣ ವರ್ಷವೂ ಆಗುವುದಾದರೂ ಕೆಲಸಗಾರರು ನುರುಗಿರುವುದರಿಂದ ಹೆಚ್ಚು ನೂಲು ತಯಾರಾಗುವುದೆಂದೂ ಈ ಮಿಲ್ಲಿನಲ್ಲಿ ತಯಾರಿಸಲ್ಪಟ್ಟ ಪದಾರ್ಥ ಚೆನ್ನಾಗಿವೆಯೆಂದು ಜನರು ಅಭಿಪ್ರಾಯಪಟ್ಟಿರುವರೆಂದೂ, ಕಾರ್ಯಾಲಯದ ಮ್ಯಾನೇಜರಾದ ಮಿ|| ಟಾಮ್ಲಿಯವರು ಕೆಲಸಗಾರರನ್ನು ಈ ಹೊಸ ಕೆಲಸದಲ್ಲಿ ನುರುಗಿಸಲು ಶ್ರಮವನ್ನು ವಹಿಸುತ್ತಿರುವುದು ಪ್ರಶಂಸನೀಯವಾಗಿರುವುದೆಂದೂ ವರದಿಯಲ್ಲಿ ತಿಳುಹಲ್ಪಟ್ಟಿದೆ.

ಸಂಸ್ಥಾನಾವಳಿ ಚುನಾವಣೆಯಲ್ಲಿ ಉತ್ತೀರ್ಣರಾಗಿ ಬರದೆ ಇರುವ ಅಲ್ಪಸಂಖ್ಯಾತರಾದ ಪಂಗಡದವರು ತಂತಮ್ಮ ಸಂಘಗಳದ್ವಾರ ಇಂತಿಷ್ಟು ಮೆಂಬರುಗಳನ್ನು ತಾವು ತಾವೇ ಚುನಾಯಿಸಿ ಪ್ರಜಾಪ್ರತಿನಿಧಿಸಭೆಗೆ ಕಳುಹಬಹುದೆಂದೂ, ಸಂಘವೇರ್ಪಡಿಸಿಕೊಳ್ಳದಿದ್ದವರಲ್ಲಿ ಒಬ್ಬೊಬ್ಬರು ಸರ್ಕಾರದಿಂದಲೇ ನೇಮಿಸಿಕೊಳ್ಳಲ್ಪಡುವರೆಂದೂ ವಿಧಾಯಕವಾಗಿರುವ ಪ್ರಕಾರ ಮಹಮ್ಮದೀಯರಲ್ಲಿ 7 ಜನರು ಚುನಾವಣೆಯಾಗಿರುವುದರಿಂದ ಇನ್ನು 8 ಜನರೂ, ಇಂಡಿಯನ್ ಕ್ರೈಸ್ತರಲ್ಲಿ 5, ನಿಮ್ನಜಾತಿಯವರಲ್ಲಿ 3 ಜನರೂ ಚುನಾಯಿಸಲ್ಪಡಬೇಕೆಂದೂ, 15000 ಜನ ಸಂಖ್ಯೆಯುಳ್ಳ ದರ್ಜಿಯವರಲ್ಲಿ ಒಬ್ಬನೂ, 42000 ಜನ ಸಂಖ್ಯೆಯುಳ್ಳ ವೈಶ್ಯ ಮತ್ತು ಕೋಮಟಿಗರಲ್ಲಿ 11 ಜನರೂ, 17810 ಸಂಖ್ಯೆಯುಳ್ಳ ನಗರ್ತರಲ್ಲಿ ಒಬ್ಬನೂ ಚುನಾವಣೆಗೊಂಡಿರುವುದರಿಂದ ಅವರಲ್ಲಿ ಪುನಃ ಚುನಾಯಿಸಲ್ಪಡಬೇಕಾದುದಿಲ್ಲವೆಂದೂ, ಬಣಜಿಗರಲ್ಲಿ ಇಬ್ಬರೂ, ಕುರುಬರಲ್ಲಿ ಒಬ್ಬನೂ ಚುನಾವಣೆಗೊಂಡಿರುವರಾದರೂ ಈ ಪಂಗಡದವರ ಸಂಖ್ಯೆಯು ಹೆಚ್ಚಾಗಿರುವುದರಿಂದ ಬಲಿಜ ಸಂಘದವರಿಂದ ಒಬ್ಬ ಮೆಂಬರೂ, ಕುರುಬರ ಸಂಘದಿಂದ ಇಬ್ಬರು ಮೆಂಬರೂ, ಜೈನರು, ದೇವಾಂಗದವರು, ಕ್ಷತ್ರಿಯರು, ಮಹರಾಟಿಯವರು ಇವರುಗಳ ಸಂಘಗಳಿಂದ ಒಬ್ಬೊಬ್ಬ ಮೆಂಬರೂ ಚುನಾಯಿಸಲ್ಪಡಬೇಕೆಂದೂ, ಬೇಡ, ಬೆಸ್ತ, ಗೊಲ್ಲ, ವಡ್ಡ, ಪಾಂಚಾಳ, ಉಪ್ಪಾರ, ತಿಗಳ, ನೆಯಿಗೆ, ನಾಯಿಂದ, ಗಾಣಿಗ, ಸಾಲ್ಯಗಾರ ಮತ್ತು ಅಗಸ ಈ 12 ಪಂಗಡದವರಿಂದ ಒಬ್ಬೊಬ್ಬ ಮೆಂಬರು ಸರ್ಕಾರದಿಂದಲೇ ನೇಮಿಸಲ್ಪಡುವರೆಂದೂ ಪ್ರಕಟವಾಗಿದೆ.

ಭರತಖಂಡದ ವೃತ್ತಾಂತಗಳು.

ಕುಳ್ಳಿಗ್ರಾಮದಲ್ಲಿ ಕ್ರೈಸ್ತಸನ್ಯಾಸಿನಿ ಆಶ್ರಮದವರ ಪ್ರಯತ್ನವಿಶೇಷದಿಂದ ನಾಡರು ಮತ್ತು ಕನಿಯಾರು ಜಾತಿಯ 500 ಜನರು ಕ್ರೈಸ್ತಮತಕ್ಕೆ ಸೇರಿಕೊಂಡರು.

ಟ್ಯುಟಿಕಾರಿನ್ನಿನಲ್ಲಿ ಪ್ಲೇಗಿನಿಂದ ಬಹಳ ಜನರು ಸತ್ತರು. ಇದರ ಕೂಡ ಈಗ ವಾಂತಿಭೇದಿ ರೋಗವೂ ಪ್ರಾಪ್ತವಾಗಿ ಸ್ಕೂಲುಗಳೂ ಕೋರ್ಟುಗಳೂ ಮುಚ್ಚಲ್ಪಟ್ಟಿವೆ.

ಮದ್ರಾಸಿನ ತಿರುವಲಕ್ಕೇಣಿಯಲ್ಲಿ ಒಂದು ಕುದುರೆಯ ಲಾಯಕ್ಕೆ ಬೆಂಕಿಬಿದ್ದು ಮಟ್ಟೆಗರಿಯ ಮೇಲುಹೊದ್ದಿಕೆಯು ಹೊತ್ತಿಕೊಂಡು ಅದರಕೆಳಗೆ ಕಟ್ಟಲ್ಪಟ್ಟಿದ್ದ 5 ಕುದುರೆಗಳು ಸುಟ್ಟು ಭಸ್ಮವಾದುವು.

ಕುಂಭಕೋಣ ತಾಲ್ಲೂಕಿಗೆ ಸೇರಿದ ತಂಡಲಂ ಎಂಬ ಗ್ರಾಮದಲ್ಲಿ ಕಂದಾಯದ ಬಾಕಿಗಾಗಿ ಧಾನ್ಯವು ಹರಾಜು ಮಾಡಲ್ಪಡುವಾಗ್ಗೆ ಅಲ್ಪಸ್ವಲ್ಪ ಬೆಲೆಗೂ ಯಾರೂ ಕೇಳಲಿಲ್ಲವಾಗಿ ಹರಾಜು ನಿಷ್ಪ್ರಯೋಜನವಾಯಿತು.

ಪೂಸನೂರು ಸಮೀಪಗ್ರಾಮದಲ್ಲಿ ಪಳ್ಳರ್ ಎಂಬ ಜಾತಿಯವರಿಗೂ ಗೌಡರಿಗೂ ಮನಸ್ತಾಪದಿಂದ ಕಕ್ಷಿಯುಂಟಾಗಿದ್ದು ಆಚೆವಾರ ಉಭಯರಿಗೂ ಬಡಿದಾಟವಾಗಿ ಪಳ್ಳರ ಯಜಮಾನನೂ 4-5 ಜನ ಗೌಡರೂ ಕೊಂದುಹಾಕಲ್ಪಟ್ಟರು.

ಬಲಿಯಘೋಲಾದಲ್ಲಿ ಬಂಕಚಂದ್ರರಾಯಿ ಎಂಬ ಧನವಂತನ ಮನೆಗೆ ಕೆಲ ತಲೆಬಡುಕರು ನುಗ್ಗಿ ಯಜಮಾನನಿಗೆ ಪ್ರಾಣಭಯವನ್ನು ಹುಟ್ಟಿಸಿ ಅವನ ಕೈಯಿಂದಲೇ ಪೆಟ್ಟಿಗೆಯ ಬೀಗವನ್ನು ತೆಗೆಯಿಸಿ 10,000 ರೂಪಾಯಿಗಳವರೆಗೆ ದೋಚಿಕೊಂಡುಹೋಗಿರುವುದಾಗಿ ನಾತಿನಗರದ ಪೋಲೀಸುಠಾಣಾಕ್ಕೆ ವರ್ತಮಾನ ಬಂದಿದೆ.

ಲಾಹೋರಿನಲ್ಲಿರುವ ವಿಧವಾವಿವಾಹ ಸಾಹಾಯಕಸಂಘದವರ ಮತ್ತು ಭರತಖಂಡದ ನಾನಾಭಾಗದಲ್ಲಿರುವ ಅದರ ಶಾಖಾಸಂಘಗಳ ಪ್ರೋತ್ಸಾಹದಿಂದ 1923ನೆ ವರ್ಷದಲ್ಲಿ ಬ್ರಾಹ್ಮಣರು 163, ಕತ್ರಿ 183, ಅರೋಬ 232, ಕಾಯಸ್ತ 19, ಅಗ್ಗರ್ವಾಲ 105, ರಜಪುತ್ರ 63, ಸಿಕ್ 6, ಇತರರು 121 ಈ ಪ್ರಕಾರ ಒಟ್ಟು 892 ವಿಧವಾ ವಿವಾಹಗಳಾಗಿರುತ್ತವೆ.

ತಿರುವನಂತಪುರದಲ್ಲಿ ಕಳೆದ 30 ವರ್ಷಗಳಿಂದಲೂ ಕ್ರೈಸ್ತಮತಾವಲಂಬಿಗಳಾಗಿದ್ದ ಸ್ಯಾಮ್ಯುಯಲ್ ಮತ್ತು ಜಾಕೂಬ್ ಎಂಬುವವರು ಕಳೆದ ಫೆಬ್ರುವರಿ ತಾ|| 18 ರಲ್ಲಿ ಆರ್ಯಸಮಾಜದವರಿಂದ ಹೋಮ ಮೊದಲಾದ ವಿಧ್ಯುಕ್ತಕರ್ಮಾಚರಣೆಯಿಂದ ಹಿಂದೂಮತಕ್ಕೆ ತೆಗೆದುಕೊಳ್ಳಲ್ಪಟ್ಟು ಶಂಕರ ಮತ್ತು ಜನಾರ್ದನ ಎಂದು ನಾಮಕರಣ ಮಾಡಲ್ಪಟ್ಟರು.

ಇಂದೂರು ಸಂಸ್ಥಾನದ ಯುವರಾಜ ಹೊಳ್ಕರವರ ವಿವಾಹಮಹೋತ್ಸವದ ಜ್ಞಾಪನಾರ್ಥವಾಗಿ ಜನೋಪಯುಕ್ತವಾದ ಕಾರ್ಯವನ್ನು ಮಾಡಲು 1 ಲಕ್ಷ ರೂಪಾಯಿಗಳು

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ.—ನನ್ನ ಚಿಕ್ಕತಂದೆ ನಂಜುಂಡಶೆಟ್ಟಿಯು ಅಪುತ್ರವಂತನಾಗಿ ಈಗೆ 1½ ವರ್ಷಗಳ ಕೆಳಗೆ ಶಿವಾಧೀನನಾದನು. ಆತನ ಹೆಂಡತಿಯಾದ ಚೆನ್ನಮ್ಮನೆಂಬ ನನ್ನ ಚಿಕ್ಕಮ್ಮನು ನಮ್ಮ ಪಿತ್ರಾರ್ಜಿತವಾದ ಚರಸ್ಥಿರ ಆಸ್ತಿಗಳನ್ನು ಯಾವದಾದರೊಂದು ವಿಧ ಪರಭಾರೆಮಾಡುವ ಯೋಚನೆ ಇಟ್ಟುಕೊಂಡಿರುವುದಾಗಿ ತಿಳಿಯಬರುತ್ತೆ. ಸದರಿ ಆಸ್ತಿಗಳಿಗೆ ಉತ್ತರವಾರಸ್ಸುದಾರ ನಾನಿರುವಲ್ಲಿ ಯಾರೇ ಆಗಲಿ ಮೇಲ್ಕಂಡ ನನ್ನ ಚಿಕ್ಕಮ್ಮ ಚೆನ್ನಮ್ಮನೆಂಬುವಳಿಂದ ಕ್ರಯ, ಭೋಗ್ಯ, ಆಧಾರ, ದಾನ, ಮುಂತಾದ ಯಾವ ವಿಧ ಪರಭಾರೆಮಾಡಿಕೊಳ್ಳಕೂಡದು; ಹಾಗೇನಾದರು ಮಾಡಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ. ಮುಂದೆ ಇದಕ್ಕಾಗುವ ಕಷ್ಟ ನಷ್ಟಗಳಿಗೆ ಬಾಧ್ಯರಾಗುತ್ತೀರೆಂಬ ಅಂಶತಿಳಿಯತಕ್ಕದ್ದು. ಹಾಗೆ ಯಾರಾದರೂ ಮೇಲ್ಕಂಡಂತೆ ಪರಭಾರೆಮಾಡಿಕೊಂಡಲ್ಲಿ ಅವರುಗಳ ನಷ್ಟಕ್ಕೆ ನಾನು ಬಾಧ್ಯನಲ್ಲವೆಂಬ ಸಂಗತಿ ಈ ಮೂಲಕ ಎಚ್ಚರಿಸಿದ್ದೇನೆ.

ಮರುಳಶೆಟ್ಟಿ ಅಳಿಯ ನಂಜುಂಡಶೆಟ್ಟಿ, ರುಜು.
ಕುಂಬಾರಕೊಪ್ಪಲು ಗ್ರಾಮ ಕಸಬೆ ಹೋಬಳಿ, ಮೈಸೂರು, ತಾ||

ಮೈಸೂರು ಸ್ಟಾರ್.

೧೯೨೪ನೆಯ ಇಸವಿ ಮಾರ್ಚ್ ತಾ|| ೨ನೆಯ ಭಾನುವಾರ.

ಪ್ರಜಾಪ್ರತಿನಿಧಿಸಭೆಯಿಂದ ನ್ಯಾಯವಿಧಾಯಕ ಸಭಾ ಸಭಿಕರನ್ನು ಆರಿಸುವಿಕೆ.

ನೂತನ ರಾಜಶಾಸನದ ಪ್ರಕಾರ ವಿಶೇಷಸುಧಾರಣೆಯಿಂದ ಉದ್ಭವಿಸಿರುವ ಪ್ರಜಾಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ಸಭಿಕರ ಆರಿಸುವಿಕೆಯು ಸಂಸ್ಥಾನದ ಎಲ್ಲ ಭಾಗಗಳಲ್ಲೂ ನಡೆದು ಉತ್ತೀರ್ಣರಾದ ದೊಡ್ಡಮನುಷ್ಯರುಗಳ ಹೆಸರುಗಳು ಪ್ರಕಟವಾಗಿರುತ್ತವೆ. ಈ ಮಾರ್ಚಿ ತಾ|| 12ರಲ್ಲಿ ರಾಜಧಾನಿಯ ಜಗನ್ಮೋಹನ ಪ್ರಾಸಾದದ ವಿವಾಹ ಮಂಟಪದಲ್ಲಿ ಶ್ರೀಮನ್ಮಹಾರಾಜರವರ ಅಮೃತಹಸ್ತದಿಂದ ಆರಂಭಿಸಲ್ಪಡಲಿಕ್ಕಿರುವ ಪ್ರಜಾಪ್ರತಿನಿಧಿಸಭಾಧಿವೇಶನದಲ್ಲಿ ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿಸಭೆಯ ಪರವಾಗಿ 8 ಮಂದಿ ಸಭಿಕರನ್ನು ಆರಿಸುವುದು ಮುಖ್ಯಕಾರ್ಯವಾಗಿರುತ್ತದೆ.

ಸಂಸ್ಥಾನದ ಸ್ಥಾಯಕಃ 60 ಲಕ್ಷ ಪ್ರಜೆಗಳ ಪ್ರಾತಿನಿಧ್ಯವು ಈ ಸಭೆಗಳಿಗಿರುವುದರಿಂದ ಇವುಗಳ ಘನತೆಯನ್ನೂ ಪ್ರಯೋಜನವನ್ನೂ ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲವು. ಸದಾ ಸ್ವಪ್ರಜಾಕ್ಷೇಮಚಿಂತನೆಯಲ್ಲಿ ಮಗ್ನರಾಗಿರುವ ನಮ್ಮ ಶ್ರೀಮನ್ಮಹಾರಾಜ ಪ್ರಭುವರ್ಯರೂ ಅವರ ಘನಸರ್ಕಾರದವರೂ ಈ ಉಭಯಸಭೆಗಳ ವಿಷಯದಲ್ಲಿಟ್ಟಿರುವ ಗೌರವಬುದ್ಧಿಯೂ, ಆದರವೂ ಈ ಸಭೆಗಳಿಗೆ ನೂತನವಾಗಿ ದಯಪಾಲಿಸಲ್ಪಟ್ಟಿರುವ ವಿಶೇಷಾಧಿಕಾರಗಳಿಂದ ಸುವ್ಯಕ್ತವಾಗುತ್ತವೆ. ಪುತ್ರನಿರ್ವಿಶೇಷದಿಂದ ಪ್ರಜಾಪಾಲನೆ ಮಾಡುತ್ತಿರುವ ನಮ್ಮ ಪ್ರಭುಶ್ರೇಷ್ಠರಿಗೂ ಅವರ ಸರ್ಕಾರದವರಿಗೂ ಈ ಉಭಯಸಭೆಗಳ ವಿಷಯದಲ್ಲಿರುವ ಭರವಸೆಯೂ ಅಭಿಮಾನವೂ ಸಾರ್ಥಕವಾಗಲು ಸಭೆಗಳಿಗೆ ಪ್ರತಿನಿಧಿಗಳಾಗಿ ಬರತಕ್ಕ ಪ್ರಜೆಗಳ ಕಾರ್ಯತತ್ಪರತೆಯೂ, ದಕ್ಷತೆಯೂ ಮುಖ್ಯಸಾಧನಗಳಾಗಿರುತ್ತವೆ. ಪ್ರಜಾಪ್ರತಿನಿಧಿ ಸಭೆಯಾಗಲಿ, ನ್ಯಾಯವಿಧಾಯಕ ಸಭೆಯಾಗಲಿ ಕಲ್ಪಿಸಲ್ಪಟ್ಟಿರುವುದು ಸಕಲಪ್ರಜೆಗಳ ಹಿತಸಾಧನೆಗಲ್ಲದೆ ಕೆಲಜನರ ಪ್ರಯೋಜನಮಾತ್ರಕ್ಕೆಂದಿಗೂ ಅಲ್ಲ. ಅದುಕಾರಣವೇ ಈ ಸಭೆಗಳೂ ಇವುಗಳ ಪ್ರಯೋಜನಗಳೂ ಎಲ್ಲ ಪ್ರಜೆಗಳಿಗೂ ಸಮನಾಗಿ ಬಾಯಿತೆರೆದಿಡಲ್ಪಟ್ಟಿರುವುವು. ಇಂತಹ ಸಭೆಗಳಿಂದ ಆಗಬೇಕಾದ ಪ್ರಯೋಜನಗಳನ್ನು ಯಾವರೀತಿಯಲ್ಲಿ ಸಾಧಿಸಿಕೊಳ್ಳಬೇಕೆಂದು ಅರಿತು ಯಾವ ಜನರು ನಡೆದುಕೊಳ್ಳುವರೊ ಅವರು ಖಂಡಿತವಾಗಿಯೂ ಸುಖಪಡುವರು. ಅದನ್ನು ತಿಳಿಯದವರೂ, ತಿಳಿದೂ ಉದಾಸೀನರಾಗಿರುವವರೂ ನಷ್ಟಕಷ್ಟಗಳನ್ನು ಅನುಭವಿಸುವರು.

ಯಾರ ದುರದೃಷ್ಟದಿಂದಲೋ ಜಾತಿಮತ ದ್ವೇಷಗಳು ಉಕ್ಕೇರುತ್ತಿರುವ ಈಗಣಕಾಲದಲ್ಲಿ ತಂತಮ್ಮ ಜನವರ್ಗಗಳ ಕ್ಷೇಮವನ್ನು ತಾವುತಾವೇ ಮಾಡಿಕೊಳ್ಳಬೇಕಾದ ಅವಸ್ಥೆಯು ದೇಶದಲ್ಲಿ ಪ್ರಾಪ್ತವಾಗಿರುವುದರಿಂದಲೇ '' ನಿಂಮಿಮಗೆ ಇಷ್ಟರಾದ ಜನರಿಗೆ ನೀವು ಓಟುಗಳನ್ನು ಕೊಟ್ಟು ನಿಮ್ಮಗಳಿಗೆ ಸರಿಯಾದ ಪ್ರಾತಿನಿಧ್ಯವು ಇರುವಂತೆ ಮಾಡಿಕೊಳ್ಳುವ ಕೆಲಸವು ನಿಮ್ಮ ಕೈಯಲ್ಲೇ ಇರುತ್ತದೆ'' ಎಂದು ಶ್ರೀಮನ್ ಮಹಾರಾಜರವರು ಹಿಂದುಳಿದ ಜನವರ್ಗಗಳ ಡೆಪ್ಯುಟೇಷನ್ನಿಗೆ ಉತ್ತರವನ್ನು ಕೊಡುವಾಗ್ಗೆ ಬೋಧಿಸಿರುತ್ತಾರೆ. ಅಲ್ಲದೆ '' ಒಬ್ಬರ ಪ್ರಯತ್ನದಿಂದ ಮತ್ತೊಬ್ಬರು ಉದ್ಧರಿಸಲ್ಪಡುವುದು ಶುದ್ಧ ಸುಳ್ಳು. ಹಿಂದುಳಿದವರು ಮುಂದಕ್ಕೆ ಬರಬೇಕೆಂದು ಸ್ವಯಂಪ್ರಯತ್ನ ಮಾಡದಿದ್ದರೆ ಚಕ್ರವರ್ತಿಗಳೇ ಆಗಲೀ ಪ್ರಭುಗಳೇ ಆಗಲೀ ಯಾರೂ ಅವರನ್ನು ಮುಂದಕ್ಕೆ ತರಲು ಆಗುವುದಿಲ್ಲ'' ಎಂದು ಬ್ರಾಹ್ಮಣರ ವಕೀಲನಾಗಿರುವ ಸಂಪದಭ್ಯುದಯ ಪತ್ರಿಕೆಯೂ ಕೂಡ ತನ್ನ ಒಂದಾನೊಂದು ಸಂಚಿಕೆಯಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ಇದನ್ನೆಲ್ಲಾ ನೋಡುವುದರಿಂದಲೂ, ಕೇಳುವುದರಿಂದಲೂ '' ಉದ್ಧರೇದಾತ್ಮನಾತ್ಮಾನಾಂ '' ಎಂಬ ಶಾಸ್ತ್ರವಚನದಂತೆ ತಂತಮ್ಮ ಉದ್ಧಾರವನ್ನು ತಾವುತಾವೇ ಮಾಡಿಕೊಳ್ಳಬೇಕೆಂಬುದು ಸಿದ್ಧವಾಗುತ್ತದೆ. ಕಾಲಪರಿಸ್ಥಿತಿಯು ಹೀಗಿರುವಾಗ ಹಿಂದುಳಿದವರು ಸರ್ಕಾರಿಯುದ್ಯೋಗಗಳಲ್ಲಿ ಮುಂಬರಿದವರ ಸಮಭಾಗವಾಗಿ ಸೇರುವ ಪ್ರಯತ್ನದಲ್ಲೂ, ಯತ್ಕಿಂಚಿತ್ತು ಬ್ಯಾಕ್‌ವರ್ಡ್ ಸ್ಕಾಲರ್‌ಷಿಪ್ಪನ್ನು ಪಡೆಯುವುದರಲ್ಲೂ, ಸರ್ಕಾರಿಸಂಸ್ಕೃತಮಹಾಪಾಠಶಾಲೆಗಳಲ್ಲಿ ವ್ಯಾಸಂಗಮಾಡಲು ಪ್ರವೇಶವನ್ನು ಹೊಂದುವುದರಲ್ಲೂ ಮತ್ಸರಿಸಿ ನಾನಾವಿಘ್ನಗಳನ್ನು ತಂದೊಡ್ಡಿದುದಲ್ಲದೆ ಈ ಹಿಂದುಳಿದವರ ಆಕಾಂಕ್ಷೆಯನ್ನು ಪೂರೈಸಿಕೊಡುವುದರಲ್ಲಿ ವ್ಯಗ್ರರಾಗಿದ್ದ ದಿವಾನರಾದಿಯಾಗಿ ಸರ್ಕಾರಿಯಧಿಕಾರಿಗಳನ್ನು ಅಲ್ಲದ ಸಲ್ಲದ ಲೇಖನ ಭಾಷಣಗಳಿಂದ ಮನಸ್ವೀ ನಿಂದಿಸಿಯೂ ನಿಂದಿಸುತ್ತಲೂ ಇರುವ ಆ ನಮ್ಮ ಹಗೆಗಳಿಂದಲೂ, ನಮ್ಮಲ್ಲಿ ಉದಾಸೀನರಾಗಿರುವವರಿಂದಲೂ ನಮ್ಮ ಹಿತವನ್ನು ಮಾಡಿಸಿಕೊಳ್ಳುತ್ತೇವೆಂದು ಯಾರಾದರೂ ತಿಳಿದಿದ್ದರೆ ಅವರಿಗಿಂತಲೂ ಹುಚ್ಚರು ಲೋಕದಲ್ಲಿ ಮತ್ತಾರಾದರೂ ಇರುವುದುಂಟೆ?

ಹಿಂದುಳಿದ ಜನವರ್ಗಗಳ ಅಭ್ಯುದಯದಲ್ಲಿ ಕಪಟಾಭಿಮಾನವುಳ್ಳ ಜನರನ್ನು ನಮ್ಮಗಳ ಪ್ರತಿನಿಧಿಗಳೆಂದು ನಾವುಗಳು ಭಾವಿಸುವುದಾದರೆ, ನಮ್ಮ ಪರಿಣಾಮವೇನಾಗುವುದೆಂಬುದನ್ನು ಹಿಂದಣ ಅನುಭವದಿಂದಲಾದರೂ ಯೋಚಿಸಿಕೊಳ್ಳಬೇಡವೆ? ಪರರನ್ನು ನಂಬದೆ ನಮ್ಮ ಹಿತವನ್ನು ನಾವು ಮಾಡಿಕೊಳ್ಳಬೇಕಾದರೆ ಮೊದಲಿನಿಂದಲೂ ನಾವು ಎಚ್ಚೆತ್ತು ನಡೆದುಕೊಳ್ಳಬೇಕು. ಸರ್ಕಾರವಿರುವುದು ಸರ್ವಪ್ರಜೆಗಳಿಗೂ ಅಲ್ಲದೆ ಸ್ವರ್ಗಲೋಕದಿಂದಿಳಿದುಬಂದೆವೆಂದು ಹೇಳುವ ಕೆಲಜನರಿಗೆ ಮಾತ್ರವೇ ಅಲ್ಲವು. ಅದುಕಾರಣ ಪ್ರತಿಯೊಂದು ಸರ್ಕಾರಿ ಸಭೆಯಲ್ಲೂ ನಮ್ಮ ಹಿತವನ್ನು ನಿಜವಾಗಿ ಬಯಸುವ ನಂಬುಗೆಯಾದ ಜನರೇ ಆ ಆ ಸ್ಥಳಗಳಲ್ಲಿ ನಮ್ಮ ಪ್ರತಿನಿಧಿಗಳಾಗಿರುವಂತೆ ಮಾಡಿಕೊಳ್ಳುವಲ್ಲಿ ಎಚ್ಚರಗೊಂಡಿರಬೇಕಾದುದು ನಮ್ಮ ಮುಖ್ಯ ಕರ್ತವ್ಯವಾಗಿರುತ್ತದೆ. ಅಷ್ಟೇಅಲ್ಲದೆ ಇಂತಹ ನಮ್ಮ ಪ್ರಯತ್ನಗಳಿಗೆ ಹಸ್ತಾವಲಂಬನವನ್ನು ಕೊಡತಕ್ಕ ಜನರು ಅಧಿಕಾರಸ್ಥಾನಗಳಲ್ಲಿರಬೇಕಾದ ಅವಶ್ಯಕತೆಯನ್ನೂ ನಾವು ಮರೆಯದೆ ಇಟ್ಟುಕೊಂಡು ಕೆಲಸಮಾಡಬೇಕಾಗಿರುತ್ತದೆ. ಇವು ನಮ್ಮ ಸದುದ್ದೇಶವಲ್ಲದೆ ಯಾರನ್ನೂ ಮತ್ಸರಿಸುವುದಾಗಲಿ ನಿಂದಿಸುವುದಾಗಲಿ ಸರ್ವಥಾ ನಮ್ಮ ಕಾರ್ಯವಾಗಿಲ್ಲವು. ನಮ್ಮ ಸತ್ಪ್ರಯತ್ನದಲ್ಲಿ ನಾವು ನಿಮಗ್ನಚಿತ್ತರಾಗಿರುವಾಗ ನಮ್ಮುದ್ದೇಶಕ್ಕೆ ಭಂಗಕಾರಿಗಳಾಗಿ ಬರತಕ್ಕವರನ್ನು ಎಷ್ಟುಮಾತ್ರಕ್ಕೂ ನಾವು ಲಕ್ಷಿಸಬಾರದು, ಮತ್ತು ಆ ವಿಘ್ನಗಳನ್ನು ಒತ್ತರಿಸುವುದರಲ್ಲಿ ನಮ್ಮ ದೃಢಪ್ರಯತ್ನಗಳು ಏಕಮತ್ಯಬಲವುಳ್ಳವುಗಳಾಗಿರುವಂತೆ ಮಾಡಿಕೊಂಡಿರಬೇಕು. ಸದ್ಯಃ ಪ್ರಜಾಪ್ರತಿನಿಧಿಸಭೆಯಿಂದ ನ್ಯಾಯವಿಧಾಯಕ ಸಭೆಗೆ 8 ಜನ ಪ್ರತಿನಿಧಿ ಸಭಿಕರನ್ನು ಆರಿಸಿ ಕಳುಹಿಸಿಕೊಡಬೇಕಾದ ಕಾರ್ಯವು ಒದಗಿರುತ್ತದೆ. ಈ ಸಮಯದಲ್ಲಿ ಹಿಂದುಳಿದ ಸಭಿಕರೆಲ್ಲರೂ ಎಚ್ಚೆತ್ತು ಕೆಲಸಮಾಡಬೇಕು. ಇದುವರೆಗೆ ಹಿಂದುಳಿದವರ ಹಿತಸಾಧನೆಗಾಗಿ ನ್ಯಾಯವಿಧಾಯಕಸಭೆ ಮೊದಲಾದವುಗಳಲ್ಲಿ ಗುದ್ದಾಡಿ ಯಾರು ದೇಶಕ್ಷೇಮವನ್ನು ಸಾಧಿಸಿರುವರೆಂಬುದನ್ನು ಸ್ಮರಿಸಿಕೊಳ್ಳಬೇಕು. ಈಗ ಯಾರಿಗೆ ಓಟನ್ನು ಕೊಟ್ಟರೆ ಅವರು ತಮ್ಮ ಪ್ರತಿನಿಧಿಗಳಾಗಿ ಮೋಸವಿಲ್ಲದೆ ಕೆಲಸ ಮಾಡುತ್ತಾರೆಂಬುದನ್ನು ಚೆನ್ನಾಗಿ ಆಲೋಚಿಸಿಕೊಳ್ಳಬೇಕು. ರಾಜಕೀಯ ವಿಷಯಗಳಲ್ಲಿ ಜಾತಿ ಮತಭೇದಗಳನ್ನು ಗಣಿಸದೆ ಕಾರ್ಯನಿರ್ವಾಹಶಕ್ತಿಯೊಂದನ್ನೇ ಗಮನಿಸಿ ಅಂತಹವರಿಗೆ ತಮ್ಮ ಪ್ರಾತಿನಿಧ್ಯವನ್ನು ಕೊಡಬೇಕೆಂದು ಕೆಲವರು ಬೋಧಿಸುತ್ತಿರುವರು. ಜಾತಿಮತಭೇದವನ್ನು ಲಕ್ಷಿಸದೆ ಕೆಲಸಮಾಡತಕ್ಕ ಔದಾರ್ಯವು ಅಂತಹ ಬೋಧಕರಲ್ಲೂ ಕೂಡ ಮಾತಿನಲ್ಲಿರುವಂತೆ ಕಾರ್ಯದಲ್ಲಿಲ್ಲ. ಮತ ಜಾತಿ ಧರ್ಮಗಳೂ, ಅಭಿಮಾನಗಳೂ ಪೂರ್ವದೇಶೀಯರಾದ ನಮ್ಮ ರಕ್ತದೊಡನೆ ಅಂಟಿಬಂದಿರುವ ಗುಣಗಳಾಗಿವೆಯೇ ವಿನಾ, ಬೇಕಾದಾಗ ತೊಟ್ಟುಕೊಂಡು ಬೇಡವಾದಾಗ ಕಳಚಿಬಿಡುವ ಅಂಗಿಯಂತಿರುವುದಿಲ್ಲವು. ಅದುಕಾರಣ ರಾಜಕೀಯ ವಿಷಯದಲ್ಲಾಗಲಿ ಲೌಕೀಕ ವಿಷಯದಲ್ಲಾಗಲಿ ಜಾತಿ ಮತಧರ್ಮಗಳ ಸಂಬಂಧವು ಮಾನವನ ಜೀವಿತದಲ್ಲಿ ಸಮರಸವಾಗಿ ಇದ್ದೇ ಇರುತ್ತದೆ. ಆದುದರಿಂದ ಹಿಂದುಳಿದ ಪ್ರಜಾಪ್ರತಿನಿಧಿ ಸಭಾಮೆಂಬರುಗಳೆಲ್ಲರೂ ಕಪಟಹಿತೋಕ್ತಿಗಳಿಗೆ ಗಮನಕೊಡದೆ ಎಚ್ಚೆತ್ತು ಕೆಲಸಮಾಡಬೇಕಾಗಿದೆ. ಇದುವರೆಗೆ ಹಿಂದುಳಿದವರ ಹಿತಸಾಧನೆಗಾಗಿ ನಿಯಮನಿರ್ಮಾಣ ಸಭೆ ಮೊದಲಾದವುಗಳಲ್ಲಿ ಹೋರಾಡಿ ಯಾರು ದೇಶಕ್ಷೇಮವನ್ನು ಸಾಧಿಸಿರುವರೆಂಬುದನ್ನು ಸ್ಮರಿಸಿಕೊಂಡು ಅಂತಹವರನ್ನು ಪ್ರೋತ್ಸಾಹಿಸಿ ಉಮೇದುವಾರರನ್ನಾಗಿ ನಿಲ್ಲಿಸಿ ಅವರಿಗೇ ತಮ್ಮ ಓಟನ್ನು ಕೊಡಬೇಕು. ಹಾಗಲ್ಲದೆ, ಸ್ವಕಾರ್ಯಸಾಧನೆಗಾಗಿ ಓಟನ್ನು ಪಡೆದುಕೊಳ್ಳುವವರೆಗೂ ಬೆಣ್ಣೆ ಮಾತನ್ನಾಡಿ, ಬೆಟ್ಟದಗಾತ್ರದ ಮರ್ಯಾದೆಯನ್ನೂ, ಸಮುದ್ರದಷ್ಟು ಅಭಿಮಾನವನ್ನೂ, ಹೊಳೆಯ ನೀರಿನಷ್ಟು ದಾಕ್ಷಿಣ್ಯವನ್ನೂ ತೋರಿಸಿಬಿಟ್ಟು ಹಿಂದೂ ಮುಂದೂ ನುತ್ತಾಡಿ ಬಳಿಕ ತಮ್ಮದಾರಿ ತಾವು ನೋಡಿಕೊಳ್ಳುವ ಗೋಮುಖವ್ಯಾಘ್ರಗಳ ಮೋಸಕ್ಕೆ ಖಂಡಿತವಾಗಿಯೂ ಒಳಗಾಗಬಾರದು.

ಬೆಂಗಳೂರು ಪಟ್ಟಣದಿಂದ ಪ್ರಜಾಪ್ರತಿನಿಧಿ ಸಭೆಗೆ ಆರಿಸಲ್ಪಟ್ಟಿರುವ ನಾಲ್ವರಲ್ಲಿ ಹೆಚ್ಚು ಓಟುಗಳನ್ನು ಪಡೆದು ಮೊದಲನೆಯವರಾಗಿ ಬಂದಿರುವ ಬೆಂಗಳೂರಿನ ಅಡ್ವೋಕೇಟ್ ಮ|| ಜಿ. ಪರಮಶಿವಯ್ಯ, ಬಿ. ಎ., ಎಲ್‌ಎಲ್. ಬಿ., ಯವರು ಪ್ರಜಾಪ್ರತಿನಿಧಿ ಸಭೆಯಿಂದ ನ್ಯಾಯವಿಧಾಯಕ ಸಭೆಗೆ ಒಬ್ಬ ಮೆಂಬರಾಗಿ ಆರಿಸಲ್ಪಡಲು ಉಮೇದುವಾರರಾಗಿ ನಿಂತಿರುತ್ತಾರೆ. ಇವರು ಚಿಕ್ಕವಯಸ್ಸಿನವರಾಗಿಯೂ, ವಿದ್ಯಾವಂತರಾಗಿಯೂ, ದೇಶಸೇವೆಗಾಗಿ ತಮ್ಮ ತನು ಮನಗಳನ್ನು ಸಮರ್ಪಿಸಲು ಸಾರ್ವದಾ ನಿರತರಾಗಿಯೂ, ಹಿಂದುಳಿದ ಜನವರ್ಗಕ್ಕೆ ಸೇರಿ ಅವರ ಅಭ್ಯುದಯವನ್ನೇ ಚಿಂತಿಸತಕ್ಕವರಾಗಿಯೂ, ಹಿಂದುಳಿದ ಜನಗಳ ಉದ್ಧಾರಕ್ಕಾಗಿಯೇ ಜನ್ಮವೆತ್ತಿದ್ದರೆಂದು ಖ್ಯಾತಿಗೊಂಡಿದ್ದ ಕೈ|| ಬಸವಯ್ಯನವರ ಅಕಾಲಮೃತ್ಯುವಿನಿಂದುಂಟಾದ ಲೋಪವನ್ನು ಪರಿಹರಿಸುವವರಾಗಿಯೂ ಇರುತ್ತಾರೆಂಬುದು ಹಿಂದಣ ಪ್ರಜಾಪ್ರತಿನಿಧಿ ಸಭೆಯಲ್ಲೂ ನ್ಯಾಯವಿಧಾಯಕ ಸಭೆಯಲ್ಲೂ ಪ್ರತಿನಿಧಿಗಳೆಂದಾರಿಸಲ್ಪಟ್ಟ ಮೆಂಬರಾಗಿದ್ದುಕೊಂಡು ಇವರು ಮಾಡಿರುವ ಸೇವೆಯಿಂದ ತಾನಾಗಿ ವ್ಯಕ್ತವಾಗುತ್ತದೆ. ಇಂತಹವರಿಗೆ ಪ್ರಜೆಗಳ ಬೆಂಬಲವೂ ಪ್ರೋತ್ಸಾಹವೂ ಎಷ್ಟೆಷ್ಟು ದೊರೆದರೆ ಅಷ್ಟಷ್ಟು ಅವರ ಕಾರ್ಯನಿರ್ವಾಹ ಕುತೂಹಲವು ಉಜ್ವಲಗೊಳ್ಳುತ್ತದೆ. ಅದುಕಾರಣ ಇಂತಹವರ ಕಾರ್ಯೋತ್ಸಾಹಕ್ಕೆ ಹಿಂದುಳಿದ ಜನವರ್ಗದವರು ಉತ್ತೇಜನಕೊಟ್ಟು ತಮ್ಮ ಅಧ್ವರ್ಯರುಗಳನ್ನಾಗಿ ಮಾಡಿಕೊಳ್ಳುವುದು ವಿಶೇಷ ಪ್ರಯೋಜಕವಾದುದರಿಂದ, ತಮ್ಮಗಳ ಓಟುಗಳನ್ನು ಮ|| ಪರಮಶಿವಯ್ಯನವರಿಗೂ ಇವರಂತೆ ಕಾರ್ಯೋತ್ಸಾಹಕರೂ ದಕ್ಷರೂ ಆದ ಮತ್ತೆ 7 ಜನ ಮೆಂಬರುಗಳಿಗೂ ಕೊಟ್ಟು ನ್ಯಾಯವಿಧಾಯಕ ಸಭೆಗೆ ತಮ್ಮಗಳ ಪ್ರತಿನಿಧಿಗಳಾಗಿ ಅವರುಗಳೇ ಬರುವಂತೆ ಏಕಮತ್ಯದಿಂದ ಕೆಲಸಮಾಡಿ ಇಷ್ಟಾರ್ಥಸಿದ್ಧಿಯನ್ನು ಪಡೆದು ಆತ್ಮಗೌರವವನ್ನು ಉಳಿಸಿಕೊಂಡು ತಮ್ಮ ಸ್ಥಿರಸಂಕಲ್ಪವನ್ನು ಕಾಪಾಡಿಕೊಳ್ಳದೆ ಇರಲಾರರೆಂದು ನಂಬುತ್ತೇವೆ.

ಮೈಸೂರು ರೈಲ್ವೆಗಳು.

ಸಂಸ್ಥಾನದಲ್ಲಿ ಮದ್ರಾಸ್ ಸದರ್ನ್ ಮರಾಟಾ ಕಂಪೆನಿಯವರಿಂದಲೂ ನಮ್ಮ ಸರ್ಕಾರದವರ ಮೇಲ್ವಿಚಾರಣೆಯಿಂದಲೂ ನಡಿಸಲ್ಪಡುತ್ತಿರುವ ರೈಲ್ವೆ ಆಡಳಿತದ ವರದಿಯು ಈಗತಾನೆ ಪ್ರಕಟವಾಗಿದೆ. ಈ ವರ್ಷದಲ್ಲಿ ಉತ್ಪತ್ತಿಯು ಗತವರ್ಷಕ್ಕಿನ್ನ ಅಧಿಕವಾಗಿರುವುದಾದರೂ, ವೆಚ್ಚವು ಇನ್ನೂ ಹೆಚ್ಚಾಗಿರುವುದರಿಂದ ಆದಾಯವು ಅಷ್ಟು ತೃಪ್ತಿಕರವಾಗಿರುವುದಿಲ್ಲವೆಂದು ಈ ವರದಿಯನ್ನೋದುವುದರಿಂದ ವ್ಯಕ್ತವಾಗುತ್ತದೆ. ಮದ್ರಾಸ್ ಸದರ್ನ್ ಮರಾಟಾ ಕಂಪೆನಿಯವರಿಂದ ನಡಿಸಲ್ಪಡುತ್ತಿರುವ ಲೋಹಮಾರ್ಗಗಳಿಂದ 44,40,015 ರೂ. ಒಟ್ಟು ಉತ್ಪನ್ನವಾಗಿರುತ್ತದೆ, ಇದರ ಹಿಂದಣ ವರ್ಷದಲ್ಲಿ 39,42,39 ಉತ್ಪನ್ನವಾಗಿದ್ದಿತು. ವೆಚ್ಚಮಾತ್ರ 28,00,018 ರೂ. ಹಿಂದೆ 28,03,122 ರೂ. ಗಳಿದಿತು. ಕಂಪೆನಿಯವರು ಮಾಡಿದ ಕೆ ಸಕ್ಕಾಗಿಯೂ ಅವರು ಸಾಲಕೊಟ್ಟಿರುವ ಹಣದ ಬಡ್ಡಿಗಾ ಯೂ ಕೊಡಲ್ಪಟ್ಟುದರ ಜಾತಾ 8,17,710 ರೂಪಾಯಿಗಳ ಸರ್ಕಾರಕ್ಕೆ ಉಳಿತಾಯವಾಯಿತು. ಹಿಂದಣ ವರ್ಷ 2,62,73 ರೂ. ಉಳಿದಿದ್ದಿತು. ಸರ್ಕಾರದವರಿಂದ ನಡಿಸಲ್ಪಡುತ್ತಿರು ರೈಲ್ವೆಗಳಿಂದ 32,02,564 ಉತ್ಪನ್ನವೂ, 27,20,291 ವೆ ವೂ ಆಗಿರುತ್ತದೆ. ಇದರ ಹಿಂದಣ ವರ್ಷವಲ್ಲಿ 3004082 ರೂ. ಉತ್ಪನ್ನವೂ 26,39,755 ರೂ. ವೆಚ್ಚವೂ ಆಗಿದ್ದಿತು. ಒಟ್ಟು ಮೂಲಧನದ ಮೇಲೆ ಹಿಂದಣ ವರ್ಷ 1·36 ರಂತೆ ಉತ್ಪ ವಾಗಿದ್ದುದು ಈ ವರ್ಷದಲ್ಲಿ 1·66 ರಂತೆ ಆಗಿರುತ್ತದೆ. ವೆ ವು ಇನ್ನೂ ಬಹುಮಟ್ಟಿಗೆ ತಗ್ಗಿಸಲ್ಪಡಲು ತಕ್ಕೇರ್ಪಾಟು ಮಾಡಲ್ಪಡುತ್ತಿರುವುದಾಗಿ ತಿಳುಹಲ್ಪಟ್ಟಿದೆ. ಒಟ್ಟುತ್ಪತ್ತಿಯು ಕೊಂಚ ಹೆಚ್ಚು ಕಂಡುಬಂದಿರುವುದಾದರೂ, ಪದಾರ್ಥಗಳಿಗಾ ವೆಚ್ಚವಾಗಿರುವ ಮೊಬಲಗಿನಿಂದ ಬಡ್ಡಿಯನ್ನು ಕಳೆದುಬಿಟ್ಟ ಸರ್ಕಾರದಿಂದ ನಡಿಸಲ್ಪಡುವ ರೈಲುಗಳಿಂದ 1,31,528 ರೂ. ನಷ್ಟವಾಗಿರುವುದು ಕಂಡುಬರುತ್ತದೆ. ಸರ್ಕಾರದವರಿಂದ ನ ಸಲ್ಪಡುವ ರೈಲ್ವೆಗಳಲ್ಲಿ ಪ್ರಯಾಣಿಕರ ಸಂಖ್ಯೆಯು 5 ಲಕ್ಷ ವರಿಗೆ ಕಡಮೆಯಾಗಿರುವುದಾದರೂ ಟಿಕೆಟ್ಟಿನುತ್ಪತ್ತಿಯು ಮಾತ್ರ 18,46,322 ರೂ. ಆಗಿರುವುದು. ಇದರ ಹಿಂದಿ ವರ್ಷದಲ್ಲಿ 18,05,541 ರೂ. ಆಗಿದ್ದಿತು. ಹೀಗಾಗಲು ರೈಲ್ವೆ ಛಾರ್ಜು ಹೆಚ್ಚಿಸಲ್ಪಟ್ಟುದೇಕಾರಣವಾಗಿದೆ. ಈಗ ಛಾರ್ಜು ಪುನಹ ತಗ್ಗಿಸಲ್ಪಟ್ಟಿದೆ. ಸಾಮಾನುಗಳಿಂದ ಬಂದುತ್ಪನ್ನ 9,46,934 ರೂ. ಇಂದ 11,17,214 ರೂ. ಗೆ ಹೆಚ್ಚಿರುತ್ತದೆ. ಪ್ರಸಕ್ತ ವರ್ಷದಲ್ಲಿ ರೈಲ್ವೆಯುತ್ಪನ್ನವು ನಾನಾ ರೀತಿಯಿಂ ಅಧಿಕವಾಗಿರುವುದಕ್ಕಾಗಿ ಸರ್ಕಾರದವರು ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿರುವರಲ್ಲದೆ, ಕೆಲಸಗಳಲ್ಲೂ ಕೊಂಡುಕೊಳ್ಳುವ ಸಾಮಗ್ರಿಗಳಲ್ಲೂ ಇನ್ನೂ ಇತರ ಸಾಧ್ಯವಾದ ವಿಧಾ ದಲ್ಲೂ ಆದಷ್ಟು ವೆಚ್ಚವನ್ನು ಕಡಿಮೆಮಾಡಬೇಕಾಗಿ ಸೂಚಿ ರುತ್ತಾರೆ.

ಶ್ರೀಮದ್ರಂಭಾಪುರೀ ಪೀಠಾಧಿಕಾರ.

ಈಗ ಬರಿದಾಗಿರುವ ಶ್ರೀ ಜಗದ್ಗುರು ರೇಣುಕಾಚಾರ್ಯರ ಪೀಠಕ್ಕೆ ತಮಗೆ ಬೇಕಾದವರೊಬ್ಬರನ್ನು ಬಹು ಜನಾಭಿಪ್ರಾಯವಿಲ್ಲದೆ ರಹಸ್ಯವಾಗಿ ಚುನಾಯಿಸಿ ಅವರಿಗೆ ಈ ಮಾ ತಿಂಗಳಲ್ಲಿ ಪಟ್ಟಕಟ್ಟಬೇಕಾಗಿ ಕೆಲರು ಪ್ರಯತ್ನಿಸುತ್ತಿರುವ ರಿಂದ ಆರೀತಿ ರಹಸ್ಯವಾಗಿ ನಡಿಯಲು ಅವಕಾಶವನ್ನು ಕೊ ಬಾರದೆಂದು ಕಡೂರು ಡಿ|| ಕಮಿಷನರನ್ನೂ, ಮುಜರಾ ಕಮಿಷನರನ್ನೂ ಪ್ರಾರ್ಥಿಸಿಕೊಳ್ಳಬೇಕೆಂದು ಚಿಕ್ಕಮಗಳೂ ಪ್ರಾಂತದ ಮ|| ಗಳಾದ ವೀರಭದ್ರಸೆಟ್ಟರು, ಸಿದ್ಧಲಿಂಗಪ್ಪ ಟ್ಟರು, ಸಿ. ಪಿ. ಬಸವೇಗೌಡರು, ಡಿ. ವೀರಣ್ಣಗೌಡರು, ಸಿ. ಮಲ್ಲೇಗೌಡರು ಮೊದಲಾದ ವೀರಶೈವ ದೊಡ್ಡಮ ಷ್ಯರು ಕಾಫಿಪ್ಲಾಂಟರ್ ಮ|| ಟಿ. ಚನ್ನಬಸಪ್ಪಸೆಟ್ಟರ ಅಧ್ಯ ತೆಯಲ್ಲಿ ಸಭೆಸೇರಿ ನಿರ್ಧರಿಸಿ ಅದರ ಪ್ರತಿಯೊಂದನ್ನು ನ ಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ. ಇದರಂತೆ ಅನೇಕ ಕಡೆಗಳಿಂ ಆಕ್ಷೇಪಕರಗಳಾದ ಲೇಖನಗಳು ಬಂದಿರುತ್ತವೆ. ಈ ಗಳಾದ ಆಕ್ಷೇಪಗಳಿಂದ ಕಾರ್ಯವಿಘಾತವಾಗುವುದಲ್ಲದೆ ಕಾ ಸಾಧಕವಾಗುವುದಿಲ್ಲವಾದಪ್ರಯುಕ್ತ ಪೀಠಾಭಿಮಾನಿಗಳ ಸಮಾಜಬಾಂಧವರು ಅನಾಯಕವಾಗಿರುವ ಮತದಮೇಲೆ ಕರಪಟ್ಟು ಯೋಗ್ಯರಾದ ವಟುವನ್ನು ಸರ್ವಸಮ್ಮತಿಯಿಂ ಅಧಿಕಾರಸ್ಥಾನಾಪನ್ನರಾಗಿ ಮಾಡುವ ಉಪಾಯವ ಸೂಚಿಸಿ, ಮತಸ್ಥಾಪನಾಚಾರ್ಯರ ಪೂರ್ಣಾನುಗ್ರಹ ನಿರ್ವಿಘ್ನವಾಗಿ ಮಹಾಕಾರ್ಯವನ್ನು ನಡೆಯಿಸಿದ ಕೀರ್ತಿ ಭಾಜನರಾಗಲೆಂದು ಕೋರುತ್ತೇವೆ.

ಚುನಾವಣೆಯಲ್ಲಾದ ಅಕ್ರಮಾಚರಣೆಯ ಮೇಲಿನ ವಿವಾದ.

ಮೈಸೂರು ಡಿ|| ಚಾಮರಾಜನಗರ, ಗುಂಡ್ಲುಪೇ ಹೆಗ್ಗಡದೇವನಕೋಟೆ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ಕ || 15 ಮತ್ತು 16ರಲ್ಲಿ ನಡೆದ ಚುನಾವಣೆಯಲ್ಲಿ ಅಕ್ರಮಾ ಣೆಯು ನಡಿಸಲ್ಪಟ್ಟಿತಾದುದರಿಂದ ವಿಚಾರಣೆಯಿಂದ ಕ್ರಮ ಸಬೇಕಾಗಿ ಕೆಲರು 100 ರೂಪಾಯಿಗಳನ್ನು ಮೈಸೂರು ಡಿ|| ಕಮಿಷನರಲ್ಲಿ ಒತ್ತೆಯಿಟ್ಟು ವಿವಾದಗಳನ್ನು ಹೂಡಿದ್ದರು. ಡಿ|| ಕಮಿಷನರವರು ಇವುಗಳ ವಿಚಾರಣೆಯನ್ನು ಮಾಡಿ ರ್ಮಾನಿಸಿರುವುದು ಹೇಗೆಂದರೆ—

(1) ಗುಂಡ್ಲುಪೇಟೆ ತಾ|| ಚುನಾವಣೆಯಲ್ಲಿ ರಿಜಿಸ್ಟರ್ಡ್ ಓಟರುಗಳಲ್ಲದ ನಾಲ್ವರು ಮ|| ಕೆ. ಎಸ್. ಚನ್ನಬಸಪ್ಪನವರಿಗೆ ಓಟನ್ನು ಕೊಟ್ಟುದರಿಂದ ತಮಗೆ ತಪ್ಪಿ ಚನ್ನಬಸಪ್ಪನವರು ಚುನಾವಣೆಯಾಗಿರುತ್ತಾರೆ. ಇದನ್ನು ವಿಚಾರಿಸಿ ರದ್ದುಪಡಿಸಿ ತಮ್ಮ ಚುನಾವಣೆಯನ್ನು ಅಂಗೀಕರಿಸಬೇಕೆಂಬ ಮ|| ವಿ. ಕೆ. ನಂಜುಂಡಯ್ಯನವರ ಹೇಳಿಕೆಯಮೇಲೆ ಉಭಯಕಡೆಯ ಸಾಕ್ಷಿಗಳನ್ನು ವಿಚಾರಮಾಡಿದುದರಲ್ಲಿ ಅರ್ಜಿದಾರರು ಹೇಳುವ ನಾಲ್ವರು ಅವರಿಗೂ ಚೆನ್ನಬಸಪ್ಪನವರಿಗೂ ಓಟುಗಳನ್ನು ಕೊಟ್ಟಿದ್ದರೆಂಬುದು ನಿದರ್ಶನಕ್ಕೆ ಬರಲಾಗಿ ನಂಜುಂಡಯ್ಯನವರ ಅರ್ಜಿಯು ವಜಾಮಾಡಲ್ಪಟ್ಟು, ಮ|| ಚೆನ್ನಬಸಪ್ಪನವರ ಖರ್ಚು ಕೊಡಲ್ಪಡಬೇಕಾಗಿ ತೀರ್ಮಾನಿಸಲ್ಪಟ್ಟಿತು. ಮ|| ಕೆ. ಎಸ್. ಚನ್ನಬಸಪ್ಪನವರ ಪರ ರಾಜಧಾನಿಯ ಅಡ್ವೋಕೇಟ್ ಮ|| ಎಚ್. ಸಿ. ದಾಸಪ್ಪನವರು ವಕೀಲಿಯನ್ನು ವಹಿಸಿದ್ದು ಚೆನ್ನಾಗಿ ವಾದಿಸಿದರು.

(2) ಚಾಮರಾಜನಗರ ತಾ|| ಎಲಕ್ಷನ್ನಿನಲ್ಲಿ ತಮಗೆ ಓಟನ್ನು ಕೊಡಲು ಅನೇಕರು ಬಂದಿದ್ದು ರಾತ್ರಿ 9 ಗಂಟೆಯವರೆಗೆ ಕಾದಿದ್ದರೂ ಓಟ್ ಮಾಡಲವಕಾಶವಾಗಲಿಲ್ಲವಾಗಿ ಓಟುಮಾಡದೆ ಹೊರಟುಹೋದರು ಮತ್ತು ಮಾರನೆಯ ದಿನವೂ ಅವರುಗಳು ಓಟ್ಮಾಡಲು ಅಧಿಕಾರಿಗಳು ಅವಕಾಶಕೊಡಲಿಲ್ಲವಾದ್ದರಿಂದ ತಮಗೆ ಓಟು ಸಿಕ್ಕಲಿಲ್ಲ. ಆದ್ದರಿಂದ ಪುನಃ ಓಟುಮಾಡಲು ಅವಕಾಶವನ್ನು ಕೊಡಬೇಕೆಂದು ಮ|| ಕೆ. ವೀರಣ್ಣನವರು ದೂರು ಮಾಡಿದ್ದರು ಮತ್ತು ಅದನ್ನೇ 12 ಜನ ಸಾಕ್ಷಿಗಳಿಂದ ಹೇಳಿಸಿದರು. ಡಿ|| ಕ|| ರವರು ಅದನ್ನು ನಂಬದೆ ಅರ್ಜಿಯನ್ನು ತಳ್ಳಿಪಡಿಮಾಡಿದರು.

(3) ಮಂಡ್ಯ ತಾ|| ಎಲಕ್ಷನ್ನಿನಲ್ಲಿ ಉಮೇದುವಾರರಾಗಿದ್ದ ಮ|| ಚನ್ನೇಗೌಡರು ಓಟರುಗಳಿಗೆ ಬಂಡಿ ಬಾಡಿಗೆಯನ್ನು ಕೊಟ್ಟುದಲ್ಲದೆ ಊಟವುಪಚಾರವನ್ನು ಮಾಡಿಸಿದುದರಿಂದಲೂ, ಡಿಸ್ಟ್ರಿಕ್ಟುಬೋರ್ಡು ಮೆಂಬರು ಮತ್ತು ಸ್ಕಾಲರ್‌ಷಿಪ್ ಕಮಿಟಿ ಮೆಂಬರು ಅಲ್ಲದಿದ್ದರೂ ಅರೀತಿ ಸುಳ್ಳುಬರವಣಿಗೆಯಿಂದ ಮ್ಯಾನಿಫೆಸ್ಟೋ ಹೊರಡಿಸಿದುದರಿಂದಲೂ ಅರ್ಜಿದಾರನಿಗಿಂತಲೂ ಹೆಚ್ಚು ಓಟುಗಳನ್ನು ಬರುವಂತೆ ಮಾಡಿಕೊಂಡಿರುವುದರಿಂದ ವಿಚಾರಣೆಮಾಡಿ ಅದನ್ನು ರದ್ದುಪಡಿಸಿ ಚೆನ್ನೇಗೌಡರಿಗೆ ಎರಡನೆಯವರಾಗಿರುವ ತಮ್ಮನ್ನು ಮೆಂಬರನ್ನಾಗಿ ಅಂಗೀಕರಿಸಬೇಕೆಂದು ಮದ್ದೂರಿನ ಮ|| ಎಂ. ಸಿ. ಲಿಂಗೇಗೌಡರು ವಾದಿಸಿದುದಲ್ಲದೆ, ಚನ್ನೇಗೌಡರಿಂದ ರೈಲುಛಾರ್ಜನ್ನು ತೆಗೆದುಕೊಂಡು ಊಟಉಪಚಾರವನ್ನು ಹೊಂದಿದ್ದ ಓಟರುಗಳಿಂದಲೇ ಸಾಕ್ಷ್ಯವನ್ನು ಹೇಳಿಸಿದುದರ ಮೇಲೆ ಮ|| ಚೆನ್ನೇಗೌಡರ ಚುನಾವಣೆ ರದ್ದುಮಾಡಲ್ಪಟ್ಟು ಅವರ ಬದಲು ಮ|| ಲಿಂಗೇಗೌಡರು ಮೆಂಬರಾಗಿ ಅಂಗೀಕರಿಸಲ್ಪಟ್ಟರು ಮತ್ತು ಅವರ ಖರ್ಚು ಕೊಡಿಸಲ್ಪಟ್ಟಿತು. ಈ ವಿವಾದದಲ್ಲೂ ಮ|| ಎಚ್. ಸಿ. ದಾಸಪ್ಪನವರು ವಕೀಲಿಯನ್ನು ವಹಿಸಿದ್ದರು.

(4) ಹೆಗ್ಗಡದೇವನಕೋಟೆ ತಾ|| ಚುನಾವಣೆಯಲ್ಲಿ ಅನರ್ಹರಾದವರಿಂದ ಓಟು ಮಾಡಿಸಲ್ಪಟ್ಟಿತು. ಓಟುಚೀಟಿ ಹಾಕುವ ಪೆಟ್ಟಿಗೆ ಮೊಹರ್ಮಾಡಲ್ಪಟ್ಟಿರಲಿಲ್ಲ. ಓಟು ಗೋಪ್ಯವಾಗಿ ನಡಿಯಲಿಲ್ಲ. ಪೋಲಿಂಗ್ ಆಫೀಸರು ಓಟರುಗಳ ಕೋರಿಕೆಯನ್ನು ನೆರವೇರಿಸದೆ ಅವರ ಕೈಕೆಳಗಿನ ನೌಕರರು ತಮ್ಮಿಷ್ಟ ಬಂದಂತೆ ಹೆಸರುಗಳನ್ನು ಬರೆದುಹಾಕುತ್ತಿದ್ದರು. ಆದ್ದರಿಂದ ಚುನಾವಣೆಯನ್ನು ರದ್ದುಪಡಿಸಿ ಮರಳಿ ನಡಿಯುವಂತೆ ಅಪ್ಪಣೆಯಾಗಬೇಕೆಂದು ರಾಜಧಾನಿಯ ಅಡ್ವೋಕೇಟ್ ಮ|| ಸಿ. ನರಸಿಂಹಯ್ಯನವರು ವಾದಿಸಿದರು ಮತ್ತು 8 ಜನ ಸಾಕ್ಷಿಗಳಿಂದ ಹೇಳಿಸಿದರು. ಆದರೆ ಹಾಗೆಮಾಡಲು ಸಾಕಷ್ಟು ಕಾರಣ ಕಂಡುಬರಲಿಲ್ಲವಾಗಿ ಮೊದಲಿನ ಚುನಾವಣೆಯೇ ಸ್ಥಿರಗೊಳಿಸಲ್ಪಟ್ಟು ಅವರ ಅರ್ಜಿಯು ತಿರಸ್ಕರಿಸಲ್ಪಟ್ಟಿತು.

ಪರ್ಷ್ಯಾದ ಷಾ ಪ್ರಭುವಿನ ಆಭರಣದ ವಿವರ.

ಪರ್ಷ್ಯಾಪ್ರಭುತ್ವದವರು ಲೋಹಮಾರ್ಗವನ್ನು ಹಾಕುವ ವೆಚ್ಚಕ್ಕಾಗಿ ಅರಮನೆಯಲ್ಲಿರುವ ಷಾರವರ ಆಭರಣಗಳಲ್ಲಿ ಕೆಲವನ್ನು ವಿಕ್ರಯಿಸಲು ನಿರ್ಧರಿಸಿರುವರು. ಈ ಷಾರವರ ನವರತ್ನಖಚಿತವಾದ ಆಭರಣಗಳ ಬೆಲೆಯು 10,50,00,000 ರೂಪಾಯಿಗಳಾಗುವುದಾಗಿ ಕೆಲ ವರ್ಷಗಳ ಹಿಂದೆ ಅಂದಾಜಾಮಾಡಲ್ಪಟ್ಟಿದ್ದಿತು. ಅವುಗಳಲ್ಲಿ ದರಿಯಾ ಇನೂರು ಎಂದರೆ ಕಾಂತಿಸಾಗರವೆಂದು ಕರೆಯಲ್ಪಡುವ ವಜ್ರಮಣಿಯು ಜಗತ್ಪ್ರಸಿದ್ಧವಾಗಿರುವುದಲ್ಲದೆ ಅಮೋಘವಾದ ಮುತ್ತಿನ ಮಣಿಯ ಕವಚ, ವಜ್ರದ ಭುಜಕೀರ್ತಿ 5,000 ನವರತ್ನಮಣಿ ಖಚಿತವಾಗಿ 20 ಅಂಗುಲದ ವ್ಯಾಸವುಳ್ಳ ಭೂಗೋಳ, ವಜ್ರ ಖಚಿತವಾದ ಕುರಿಮರಿ ಚರ್ಮದ ಟೊಪ್ಪಿಗೆ ರತ್ನಖಚಿತವಾದ ಕತ್ತಿಯ ಒರೆಗಳು ಮತ್ತು ಜಂಬಿಯಾಗಳು ಮುತ್ತುಗಳಿಂದಲೂ, ಇಂದ್ರನೀಲಮಣಿಗಳಿಂದಲೂ ತುಂಬಲ್ಪಟ್ಟ ತಟ್ಟೆಗಳು ಇರುತ್ತವೆ. ಒಂದೊಂದು ಪಚ್ಚೆಯು 1½ ಅಂಗುಲ ಉದ್ದ ಮತ್ತು ಅಂಗುಲ ಅಗಲವಿರುತ್ತದೆ. ಪ್ರಪಂಚದಲ್ಲೆಲ್ಲಾ ಉತ್ಕೃಷ್ಟವಾದ ಹಸುರು ಮೇಲಿನ ನೀಲಿವಜ್ರವು ವಜ್ರದಿಂದ ಕೆತ್ತಲ್ಪಟ್ಟ ಗುರಾಣಿ, ಕೆಂಪುಗಳಿಂದ ಕೂಡಿದ ಕವಚಗಳು ಇರುತ್ತವೆ. ಕಾಂತಿ ಸಮುದ್ರವೆಂದು ಲೋಕವಿಖ್ಯಾತವಾದ ವಜ್ರಮಣಿಯು ಜಗತ್ಪ್ರಸಿದ್ಧಿಯಾದ ಕೋಹಿನೂರು ವಜ್ರದಷ್ಟು 180 ಕ್ಯಾರೆಟ್ ತೂಕವಿರುತ್ತದೆ. ಷಾರವರ ಕಿರೀಟದಲ್ಲಿರುವ ವಿಜಯಸಾಗರವೆಂಬ ವಜ್ರಮಣಿಯು ಅಲ್ಲದೆ ಕಾಂತಿಪರ್ವತವೆಂಬ ಮತ್ತೊಂದು ವಜ್ರವಿರುತ್ತದೆ. ಇದು 135 ಕ್ಯಾರೆಟ್ ತೂಕವಿದ್ದು 22,50,000 ರೂ. ಬೆಲೆಬಾಳುವುದಾಗಿ ನಿರೀಕ್ಷಿಸಲ್ಪಟ್ಟಿದೆ. ಷಾರವರ ಕಿರೀಟದ ಶಿಖರದಲ್ಲಿ ಒಂದು ಕೋಳಿ ಮೊಟ್ಟೆಯ ಗಾತ್ರದ ರತ್ನವೂ, ವಜ್ರ, ಪಚ್ಚೆ ಮತ್ತು ಕೆಂಪುಗಳಿಂದ ಕೆತ್ತಲ್ಪಟ್ಟ 1 ಅಡಿ ಅಗಲದ ವಡ್ಯಾಣವೂ ಇರುತ್ತವೆ. ನವರತ್ನ ಖಚಿತವಾದ ಭೂಗೋಳವೊಂದೇ 1,75,00,000 ರೂ. ಬೆಲೆಬಾಳುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಸ್ವದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರು ಇಷ್ಟರಲ್ಲಿ ಉದಕಮಂಡಲಕ್ಕೆ ಚಿತ್ತೈಸುವವರಾಗಿರುವರೆಂದು ವದಂತಿಯಿದೆ.

ರಾಜಧಾನಿಯ ಒಂದನೆಯ ಮುನಸೀಫರಾದ ಮ|| ಎಚ್. ಕೃಷ್ಣಸ್ವಾಮಿಯವರು ಅಸ್ವಸ್ಥತೆಯಿಂದ ಕೋರ್ಟಿಗೆ ಬರುತ್ತಿಲ್ಲವಾಗಿ ನಾಳೆಯ ದಿನ ಬೇರೊಬ್ಬರು ಆಕ್ಟ್ ಮಾಡಲು ಬರುವುದಾಗಿ ತಿಳಿಯುತ್ತೇವೆ.

ಶ್ರೀಮನ್ ಮಹಾರಾಜರವರು ಸರದಾರ್ ಗೋಪಾಲರಾಜ ಅರಸಿನವರು ಮತ್ತು ಪರಿವಾರದವರು ಇವರುಗಳೊಡನೆ ಆಚೆ ಶನಿವಾರ ಶ್ರೀ ಕಂಠಗಣ್ಣಸ್ವಾಮಿ ಗದ್ದಿಗೆಯ ಸ್ಥಳಕ್ಕೆ ಮೃಗಯಾ ವಿಹಾರಕ್ಕಾಗಿ ದಯಮಾಡಿದ್ದರಲ್ಲದೆ ಈಗ ಪುನಃ ತಾ|| 28ರಲ್ಲಿ ದಯಮಾಡಿಸಿದರು ಮತ್ತು ನೆನ್ನೆಯ ದಿನ ಹಿಂದಿರುಗಿ ಚಿತ್ತೈಸುವವರಾಗಿದ್ದರು.

ರಾಜಧಾನಿಯ ಹಳೆ ಅಗ್ರಹಾರದಲ್ಲಿರುವ ಶ್ರೀ ಚಿಕ್ಕಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಮ|| ರಾ|| ಕೋಟಿ ನಂಜಪ್ಪನವರು ಒಂದು ಮಂಟಪವನ್ನು ಕಟ್ಟಿಸಿ ಅದರಲ್ಲಿ ಶ್ರೀ ವಿಶ್ವೇಶ್ವರಸ್ವಾಮಿಯ ವಿಗ್ರಹವನ್ನು ಕಳೆದ ಶುಕ್ರವಾರ ವಿಧ್ಯುಕ್ತವಾಗಿ ವೇ|| ಬಸವರಾಜಶಾಸ್ತ್ರಿಗಳ ಮೂಲಕ ಪ್ರತಿಷ್ಠೆಯನ್ನು ಮಾಡಿಸಿ ತತ್ಸಂಬಂಧವಾಗಿ ನೂರಾರು ಜನರಿಗೆ ಸುಮಾರಾಧನೆಯನ್ನು ಮಾಡಿಸಿದರು ಎಂದು ಕೇಳಿ ಸಂತೋಷಿಸುತ್ತೇವೆ.

1923 ನೆಯ ಜುಲೈ ತಾ|| 30ಕ್ಕೆ ಕಡೆಯಾದ ಅರ್ಧ ವರ್ಷದಲ್ಲಿ ಸಂಸ್ಥಾನದಲ್ಲೆಲ್ಲಾ ಜನೋಪಯುಕ್ತಗಳಾದ ಒಟ್ಟು 72442 ಕಾಲ್ನಡೆಗಳು ಮೃತವಾದುವು. ಇದರ ಹಿಂದಣ ವರ್ಷದಲ್ಲಿ 57382 ಪ್ರಾಣಿಗಳು ಮೃತವಾಗಿದ್ದುವು. ಈ 72442 ಪ್ರಾಣಿಗಳಲ್ಲಿ 27094 ದನಗಳು ಸಾಂಕ್ರಾಮಿಕ ಜಾಡ್ಯಗಳು ತಗುಲಿ ಸತ್ತವು. ಎಂದು ವ್ಯವಸಾಯ ಶಾಖಾಡೈರೆಕ್ಟರ ವರದಿಯಿಂದ ತಿಳಿಯಬರುತ್ತದೆ.

ಬೆಂಗಳೂರು ಚೇಂಬರ್ ಆಫ್ ಕಾಮರ್ಸ್ ಎಂಬ ವರ್ತಕ ಸಂಘದವರಿಂದ ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮ|| ಬಿ. ಕೆ. ಗರುಡಾಚಾರ್ಯ ನ್ಯಾಯವಿಧಾಯಕ ಸಭಾಮೆಂಬರಾಗಿಯೂ, ಬೆಂಗಳೂರು ಬೆಂಚ್‌ಮ್ಯಾಜಿಸ್ಟ್ರೇಟರೂ ಮಂಡಿ ವರ್ತಕರೂ ಆದ ಮ|| ತೂಬಗೆರೆ ನಂಜಪ್ಪನವರು ಪ್ರಜಾಪ್ರತಿನಿಧಿ ಸಭಾಮೆಂಬರಾಗಿಯೂ, ಇನಾಂದಾರರ ಸಂಘದಿಂದ ಬೆಂಗಳೂರಿನ ಲಾಯರ್ ಮ|| ಸೂರಪ್ಪನವರು ಪ್ರಜಾಪ್ರತಿನಿಧಿ ಸಭಾ ಮೆಂಬರಾಗಿಯೂ ಚುನಾಯಿಸಲ್ಪಟ್ಟಿರುವರು.

ನಂಜನಗೂಡು ತಾ|| ತಗಡೂರಿನಲ್ಲಿ ಒಬ್ಬ ವೃದ್ಧಬ್ರಾಹ್ಮಣನು ಒಂದು ತೋಟಕ್ಕೆ ಹೋಗಿ ಬಾಳೆಯಲೆಯನ್ನು ಕೊಯ್ಯುತ್ತಿರುವಾಗ್ಗೆ ಆ ತೋಟಗಾರನಾದ ಕುರುಬರವನು ಅದನ್ನು ಕಂಡು ಆ ಬ್ರಾಹ್ಮಣನನ್ನು ಹಿಡಿದುಕೊಳ್ಳಲು ಉಭಯರಿಗೂ ಚರ್ಚೆನಡೆದು ಕಡೆಯಲ್ಲಿ ಆ ಕುರುಬನು ಶಿಟ್ಟಿನಿಂದ ಬ್ರಾಹ್ಮಣನನ್ನು ಹೊಡೆದನು. ಆ ವೃದ್ಧನು ಆ ಪೆಟ್ಟನ್ನು ತಡೆದುಕೊಳ್ಳಲಾರದೆ ಕೆಳಗೆ ಬಿದ್ದು ಪ್ರಾಣಬಿಡಲು ಕುರುಬನು ಹೆದರಿ ಆ ಶವವನ್ನು ಒಂದು ಬಾವಿಗೆ ಹಾಕಿಬಿಟ್ಟನೆಂದೂ, ಈ ಸಮಾಚಾರವನ್ನು ಪೋಲೀಸರು ತಿಳಿದು ವಿಚಾರಣೆನಡಿಸಿ ರುಜುವಾತುಬರಲಿಲ್ಲವಾಗಿ ಶವವನ್ನು ದಹನ ಮಾಡಲು ಅವಕಾಶವನ್ನು ಕೊಟ್ಟರೆಂದೂ ಅದರ ಮೇಲೆ ಆ ಮೃತನ ಮಗನು ಮೇಲ್ಪಟ್ಟ ಅಧಿಕಾರಿಗಳಿಗೆ ಅರ್ಜಿ ಬರೆದುಕೊಂಡುದರ ಮೇಲೆ ವಿಚಾರಣೆ ನಡಿಯುತ್ತಿರುವುದೆಂದೂ ತಿಳಿಯಬರುತ್ತದೆ.

ಈ ಸಂವತ್ಸರ ಮಳೆಯಿಲ್ಲದೆ ಒಣಗಿಹೋಗಿರುವ ಕೆರೆಕಟ್ಟೆಗಳಲ್ಲೆಲ್ಲಾ ಕರಬೂಜ ಹಣ್ಣುಗಳು ಗೊತ್ತುಗುರಿಯಿಲ್ಲದೆ ಬೆಳೆಯಲ್ಪಟ್ಟು ನಿತ್ಯದಲ್ಲೂ ನೂರಾರು ಗಾಡಿಗಳಲ್ಲಿ ರಾಜಧಾನಿಗೆ ತರಲ್ಪಡುತ್ತಿವೆ. ಆದರೆ ಕೊಳ್ಳುವವರಿಲ್ಲದೆ ಇದ್ದ ಸ್ಥಳದಲ್ಲಿಯೇ ಕೊಳೆತು ನೀರು ಹರಿಯುತ್ತಿದೆ. ದೇವರಾಜ ಮಾರ್ಕೆಟ್ಟಿನಲ್ಲಿ ರಾಸಿಗಟ್ಟಲೆ ಬಿದ್ದು ಕೊಳೆಯುತ್ತಿರುವ ಹಣ್ಣಿನ ದುರ್ವಾಸನೆಯು ಸಹಿಸಲಶಕ್ಯವಾಗಿರುವುದಲ್ಲದೆ ಕಾಲರಾ ರೋಗಕ್ಕೆ ಸಹಾಯಕವಾಗಿರುವುದಾದರೂ ಮಾರ್ಕೆಟ್ಟಿನಲ್ಲಿರುವ ಸ್ಯಾನಿಟರಿ ಇನ್ಸ್‌ಪೆಕ್ಟರ ಗಮನಕ್ಕೆ ಬಂದಂತೆ ತೋರುವುದಿಲ್ಲ. ಪಾಪ ! ಇವರ ಕಾಲವೆಲ್ಲವೂ ಹೋಟಲುಗಳ ಮೇಲ್ವಿಚಾರಣೆಯಲ್ಲೇ ಕಳೆದು ಹೋಗುತ್ತಿರುವುದರಿಂದ ಇತರ ಕಡೆ ಗಮನಿಸಲು ವ್ಯವಧಾನವಿಲ್ಲವೆಂದು ತೋರುತ್ತದೆ. ಅದುಕಾರಣ ಹೆಲ್ತಾಫೀಸರಾದರೂ ಪ್ರತ್ಯಕ್ಷವಾಗಿ ಬಂದು ನೋಡಿ ದುರ್ವಾಸನೆಯಾಗದಂತೆ ತಕ್ಕೇರ್ಪಾಟಿಡುವವರಾಗಬೇಕು.

ಟಿ. ನರಸೀಪುರ ತಾ|| ಮೂಗೂರು ಹೋಬಳಿ ಆಲದಬೆಟ್ಟಹಳ್ಳಿಯಲ್ಲಿ ಒಬ್ಬ ಶಿವಾಚಾರದವನು ತನ್ನ ಜಮೀನನ್ನು ಒತ್ತಿಕೊಂಡಿದ್ದನೆಂದು ಶಾನುಭೋಗನಿಂದ ಸುಳ್ಳುವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ಶಿಕ್ಷೆ ವಿಧಿಸಲ್ಪಟ್ಟುದರ ಮೇಲೆ ಸಮಯ ನಿರೀಕ್ಷಿಸಿಕೊಂಡಿದ್ದು ಒಂದು ದಿವಸ ಶಾನುಭೋಗನ ಮೇಲೆ ಬಿದ್ದು ಲಾಳವುಂಡುಗೆಯಿಂದ ಅವನ ತಲೆಯ ಮೇಲೆ ಪೂರಾಪೆಟ್ಟನ್ನು ಹಾಕಲು ಆ ಶಾನುಭೋಗನು ಮೂರ್ಛಿತನಾಗಿ ಬಿದ್ದು ಪುನಃ ಸ್ಮೃತಿಯನ್ನು ಹೊಂದದೆ ಸತ್ತುಹೋದನು. ಇದಕ್ಕಾಗಿ ಆ ಶಿವಾಚಾರದವನು ರಾಜಧಾನಿಯ ಸ್ಪೆಷಲ್ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಯನ್ನು ಹೊಂದುತ್ತಿರುವನು. ಸರ್ಕಾರಿ ಉದ್ಯೋಗದಲ್ಲಿರುವ ಸಣ್ಣ ನೌಕರರು ಈ ರೀತಿ ಬಡ ರೈತರ ಮೇಲೆ ಸುಳ್ಳು ವ್ಯವಹಾರವನ್ನು ನಡಿಸಿ ಅವರ ಮನಸ್ಸನ್ನುದ್ರೇಕಗೊಳಿಸುವುದರ ಪರಿಣಾಮವು ಉಭಯರಿಗೂ ಪ್ರಾಣಕಂಟಕವಾಗುವುದೆಂಬುದನ್ನು ಮರಿಯಬಾರದು.

ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ತ್ರೈವಾರ್ಷಿಕ ಸಭೆಯು ಡೈರೆಕ್ಟರುಗಳ ಬೋರ್ಡಿನ ಚೇರ್ಮನ್ನರಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ. ಐ. ಇ., ಯವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 29 ನೆಯ ಶುಕ್ರವಾರ ಸಾಯಂಕಾಲ ರಾಜಧಾನಿಯಲ್ಲಿರುವ ಆಫೀಸ್ ಕಟ್ಟಡದಲ್ಲಿ ಕೂಡಿದ್ದು ಡೈರೆಕ್ಟರುಗಳ ವರದಿಯೂ ಆಯವ್ಯಯದ ಲೆಖ್ಖದ ಪಟ್ಟಿಯೂ ಓದಲ್ಪಟ್ಟುವು. ಪ್ರಸಕ್ತ ವರ್ಷದಲ್ಲಿ 67,260-3-10 ರೂ. ಒಟ್ಟು ಆದಾಯವು ಬಂದಿರುವುದೆಂದೂ, ನೂಲು ಸ್ವಲ್ಪವಾಗಿ ತಯಾರಿಸಲ್ಪಟ್ಟದ್ದಾಗ್ಯೂ ಅದರಿಂದ ಬಂದ ಲಾಭವು ಒಟ್ಟು ವೆಚ್ಚದಲ್ಲಿ ಶೇಕಡ 88 ರಷ್ಟು ಆಗಿರುವುದೆಂದೂ, ಆಳು ಕಾಳುಗಳ ಮತ್ತು ಕಾರ್ಯನಿರ್ವಾಹದ ವೆಚ್ಚವು ಈ ವರ್ಷದಷ್ಟೇ ಮುಂದಣ ವರ್ಷವೂ ಆಗುವುದಾದರೂ ಕೆಲಸಗಾರರು ನುರುಗಿರುವುದರಿಂದ ಹೆಚ್ಚು ನೂಲು ತಯಾರಾಗುವುದೆಂದೂ ಈ ಮಿಲ್ಲಿನಲ್ಲಿ ತಯಾರಿಸಲ್ಪಟ್ಟ ಪದಾರ್ಥ ಚೆನ್ನಾಗಿವೆಯೆಂದು ಜನರು ಅಭಿಪ್ರಾಯಪಟ್ಟಿರುವರೆಂದೂ, ಕಾರ್ಯಾಲಯದ ಮ್ಯಾನೇಜರಾದ ಮಿ|| ಟಾಮ್ಸನ್ನಯವರು ಕೆಲಸಗಾರರನ್ನು ಈ ಹೊಸ ಕೆಲಸದಲ್ಲಿ ನುರುಗಿಸಲು ಶ್ರಮವನ್ನು ವಹಿಸುತ್ತಿರುವುದು ಪ್ರಶಂಸನೀಯವಾಗಿರುವುದೆಂದೂ ವರದಿಯಲ್ಲಿ ತಿಳುಹಲ್ಪಟ್ಟಿದೆ.

ಸಂಸ್ಥಾನಾವಳಿ ಚುನಾವಣೆಯಲ್ಲಿ ಉತ್ತೀರ್ಣರಾಗಿ ಬರದೆ ಇರುವ ಅಲ್ಪಸಂಖ್ಯಾಕರಾದ ಪಂಗಡದವರು ತಂತಮ್ಮ ಸಂಘಗಳದ್ವಾರ ಇಂತಿಷ್ಟು ಮೆಂಬರುಗಳನ್ನು ತಾವು ತಾವೇ ಚುನಾಯಿಸಿ ಪ್ರಜಾಪ್ರತಿನಿಧಿಸಭೆಗೆ ಕಳುಹಬಹುದೆಂದೂ, ಸಂಘವೇರ್ಪಡಿಸಿಕೊಳ್ಳದಿದ್ದವರಲ್ಲಿ ಒಬ್ಬೊಬ್ಬರು ಸರ್ಕಾರದಿಂದಲೇ ನೇಮಿಸಿಕೊಳ್ಳಲ್ಪಡುವರೆಂದೂ ವಿಧಾಯಕವಾಗಿರುವ ಪ್ರಕಾರ ಮಹಮ್ಮದೀಯರಲ್ಲಿ 7 ಜನರು ಚುನಾವಣೆಯಾಗಿರುವುದರಿಂದ ಇನ್ನು 8 ಜನರೂ, ಇಂಡಿಯನ್ ಕ್ರೈಸ್ತರಲ್ಲಿ 5, ನಿಮ್ನಜಾತಿಯವರಲ್ಲಿ 3 ಜನರೂ ಚುನಾಯಿಸಲ್ಪಡಬೇಕೆಂದೂ, 15000 ಜನ ಸಂಖ್ಯೆಯುಳ್ಳ ದರ್ಜಿಯವರಲ್ಲಿ ಒಬ್ಬನೂ, 42000 ಜನ ಸಂಖ್ಯೆಯುಳ್ಳ ವೈಶ್ಯ ಮತ್ತು ಕೋಮಟಿಗರಲ್ಲಿ 11 ಜನರೂ, 17810 ಸಂಖ್ಯೆಯುಳ್ಳ ನಗರ್ತರಲ್ಲಿ ಒಬ್ಬನೂ ಚುನಾವಣೆಗೊಂಡಿರುವುದರಿಂದ ಅವರಲ್ಲಿ ಪುನಃ ಚುನಾಯಿಸಲ್ಪಡಬೇಕಾದುದಿಲ್ಲವೆಂದೂ, ಬಣಜಿಗರಲ್ಲಿ ಇಬ್ಬರೂ, ಕುರುಬರಲ್ಲಿ ಒಬ್ಬನೂ ಚುನಾವಣೆಗೊಂಡಿರುವರಾದರೂ ಈ ಪಂಗಡದವರ ಸಂಖ್ಯೆಯು ಹೆಚ್ಚಾಗಿರುವುದರಿಂದ ಬಲಿಜ ಸಂಘದವರಿಂದ ಒಬ್ಬ ಮೆಂಬರೂ, ಕುರುಬರ ಸಂಘದಿಂದ ಇಬ್ಬರು ಮೆಂಬರೂ, ಜೈನರು, ದೇವಾಂಗದವರು, ಕ್ಷತ್ರಿಯರು, ಮಹರಾಟಿಯವರು ಇವರುಗಳ ಸಂಘಗಳಿಂದ ಒಬ್ಬೊಬ್ಬ ಮೆಂಬರೂ ಚುನಾಯಿಸಲ್ಪಡಬೇಕೆಂದೂ, ಬೇಡ, ಬೆಸ್ತ, ಗೊಲ್ಲ, ವಡ್ಡ, ಪಾಂಚಾಳ, ಉಪ್ಪಾರ, ತಿಗಳ, ನೆಯಿಗೆ, ನಾಯಿಂದ, ಗಾಣಿಗ, ಸಾಳ್ಯಗಾರ ಮತ್ತು ಅರಸು ಈ 12 ಪಂಗಡದವರಿಂದ ಒಬ್ಬೊಬ್ಬ ಮೆಂಬರು ಸರ್ಕಾರದಿಂದಲೇ ನೇಮಿಸಲ್ಪಡುವರೆಂದೂ ಪ್ರಕಟವಾಗಿದೆ.

ಭರತಖಂಡದ ವೃತ್ತಾಂತಗಳು.

ಕುಲ್ನೆಗ್ರಾಮದಲ್ಲಿ ಕ್ರೈಸ್ತಸನ್ಯಾಸಿನಿ ಆಶ್ರಮದವರ ಪ್ರಯತ್ನವಿಶೇಷದಿಂದ ನಾಜರು ಮತ್ತು ಕನಿಯಾರು ಜಾತಿಯ 500 ಜನರು ಕ್ರೈಸ್ತಮತಕ್ಕೆ ಸೇರಿಕೊಂಡರು.

ಟ್ಯುಟಿಕಾರಿನ್ನಿನಲ್ಲಿ ಪ್ಲೇಗಿನಿಂದ ಬಹಳ ಜನರು ಸತ್ತರು. ಇದರ ಕೂಡ ಈಗ ವಾಂತಿಬೇಧಿ ರೋಗವೂ ಪ್ರಾಪ್ತವಾಗಿ ಸ್ಕೂಲುಗಳೂ ಕೋರ್ಟುಗಳೂ ಮುಚ್ಚಲ್ಪಟ್ಟಿವೆ.

ಮದ್ರಾಸಿನ ತಿರುವಲಿಕ್ಕೇಣಿಯಲ್ಲಿ ಒಂದು ಕುದುರೆಯ ಲಾಯಕ್ಕೆ ಬೆಂಕಿಬಿದ್ದು ಮಟ್ಟಿಗರಿಯ ಮೇಲುಹೊದ್ದಿಕೆಯು ಹೊತ್ತಿಕೊಂಡು ಅದರಕೆಳಗೆ ಕಟ್ಟಲ್ಪಟ್ಟಿದ್ದ 5 ಕುದುರೆಗಳು ಸುಟ್ಟು ಭಸ್ಮವಾದುವು.

ಕುಂಭಕೋಣ ತಾಲ್ಲೂಕಿಗೆ ಸೇರಿದ ತಂಡಲಂ ಎಂಬ ಗ್ರಾಮದಲ್ಲಿ ಕಂದಾಯದ ಬಾಕಿಗಾಗಿ ಧಾನ್ಯವು ಹರಾಜು ಮಾಡಲ್ಪಡುವಾಗ್ಗೆ ಅಲ್ಪಸ್ವಲ್ಪ ಬೆಲೆಗೂ ಯಾರೂ ಕೇಳಲಿಲ್ಲವಾಗಿ ಹರಾಜು ನಿಷ್ಪ್ರಯೋಜನವಾಯಿತು.

ಪೂಸಸೂರು ಸಮೀಪಗ್ರಾಮದಲ್ಲಿ ಪಳ್ಳರ್ ಎಂಬ ಜಾತಿಯವರಿಗೂ ಗೌಡರಿಗೂ ಮನಸ್ತಾಪದಿಂದ ಕಕ್ಷಿಯುಂಟಾಗಿದ್ದು ಆಚೆವಾರ ಉಭಯರಿಗೂ ಬಡಿದಾಟವಾಗಿ ಪಳ್ಳರ ಯಜಮಾನನೂ 4–5 ಜನ ಗೌಡರೂ ಕೊಂದುಹಾಕಲ್ಪಟ್ಟರು.

ಬಲಿಯಬೋಲಾದಲ್ಲಿ ಬಂಕಚಂದ್ರರಾಯಿ ಎಂಬ ಧನವಂತನ ಮನೆಗೆ ಕೆಲ ತಲೆಬಡುಕರು ನುಗ್ಗಿ ಯಜಮಾನನಿಗೆ ಪ್ರಾಣಭಯವನ್ನು ಹುಟ್ಟಿಸಿ ಅವನ ಕೈಯಿಂದಲೇ ಪೆಟ್ಟಿಗೆಯ ಬೀಗವನ್ನು ತೆಗೆಯಿಸಿ 10,000 ರೂಪಾಯಿಗಳವರೆಗೆ ದೋಚಿಕೊಂಡುಹೋಗಿರುವುದಾಗಿ ನಾತಿನಗರದ ಪೋಲೀಸುಠಾಣಾಕ್ಕೆ ವರ್ತಮಾನ ಬಂದಿದೆ.

ಲಾಹೋರಿನಲ್ಲಿರುವ ವಿಧವಾವಿವಾಹ ಸಾಹಾಯಕಸಂಘದವರ ಮತ್ತು ಭರತಖಂಡದ ನಾನಾಭಾಗದಲ್ಲಿರುವ ಅದರ ಶಾಖಾಸಂಘಗಳ ಪ್ರೋತ್ಸಾಹದಿಂದ 1923ನೆ ವರ್ಷದಲ್ಲಿ ಬ್ರಾಹ್ಮಣರು 163, ಕತ್ರಿ 183, ಅರೋಡ 232, ಕಾಯಸ್ತ 19, ಅಗ್ರವಾಲ 105, ರಜಪುತ್ರ 63, ಸಿಕ್ 6, ಇತರರು 121 ಈ ಪ್ರಕಾರ ಒಟ್ಟು 892 ವಿಧವಾ ವಿವಾಹಗಳಾಗಿರುತ್ತವೆ.

ತಿರುವನಂತಪುರದಲ್ಲಿ ಕಳೆದ 30 ವರ್ಷಗಳಿಂದಲೂ ಕ್ರೈಸ್ತಮತಾವಲಂಬಿಗಳಾಗಿದ್ದ ಸ್ಯಾಮ್ಯುಯಲ್ ಮತ್ತು ಜಾಕೂಬ್ ಎಂಬುವವರು ಕಳೆದ ಫೆಬ್ರುವರಿ ತಾ|| 18 ರಲ್ಲಿ ಆರ್ಯಸಮಾಜದವರಿಂದ ಹೋಮ ಮೊದಲಾದ ವಿಧ್ಯುಕ್ತಕರ್ಮಾಚರಣೆಯಿಂದ ಹಿಂದೂಮತಕ್ಕೆ ತೆಗೆದುಕೊಳ್ಳಲ್ಪಟ್ಟು ಶಂಕರ ಮತ್ತು ಜನಾರ್ದನ ಎಂದು ನಾಮಕರಣ ಮಾಡಲ್ಪಟ್ಟರು.

ಇಂದೂರು ಸಂಸ್ಥಾನದ ಯುವರಾಜ ಹೋಲ್ಕರವರ ವಿವಾಹಮಹೋತ್ಸವದ ಜ್ಞಾಪನಾರ್ಥವಾಗಿ ಜನೋಪಯುಕ್ತವಾದ ಕಾರ್ಯವನ್ನು ಮಾಡಲು 1 ಲಕ್ಷ ರೂಪಾಯಿಗಳು

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ.—ನನ್ನ ಚಿಕ್ಕತಂದೆ ನಂಜುಂಡಶೆಟ್ಟಿಯು ಅಪುತ್ರವಂತನಾಗಿ ಈಗೆ 1½ ವರ್ಷಗಳ ಕೆಳಗೆ ಶಿವಾಧೀನನಾದನು. ಆತನ ಹೆಂಡತಿಯಾದ ಚೆನ್ನಮ್ಮನೆಂಬ ನನ್ನ ಚಿಕ್ಕಮ್ಮನು ನನ್ನ ಪಿತ್ರಾರ್ಜಿತವಾದ ಚರಸ್ಥಿರ ಆಸ್ತಿಗಳನ್ನು ಯಾವದಾದರೊಂದು ವಿಧ ಪರಭಾರೆಮಾಡುವ ಯೋಚನೆ ಇಟ್ಟುಕೊಂಡಿರುವುದಾಗಿ ತಿಳಿಯಬರುತ್ತೆ. ಸದರಿ ಆಸ್ತಿಗಳಿಗೆ ಉತ್ತರವಾರಸ್ಸುದಾರ ನಾನಿರುವಲ್ಲಿ ಯಾರೇ ಆಗಲಿ ಮೇಲ್ಕಂಡ ನನ್ನ ಚಿಕ್ಕಮ್ಮ ಚೆನ್ನಮ್ಮನೆಂಬುವಳಿಂದ ಕ್ರಯ, ಭೋಗ್ಯ, ಆಧಾರ, ದಾನ, ಮುಂತಾದ ಯಾವ ವಿಧ ಪರಭಾರೆಮಾಡಿಸಿಕೊಳ್ಳಕೂಡದು; ಹಾಗೇನಾದರು ಮಾಡಿಸಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ. ಮುಂದೆ ಇದಕ್ಕಾಗುವ ಕಷ್ಟ ನಷ್ಟಗಳಿಗೆ ಬಾಧ್ಯರಾಗುತ್ತೀರೆಂಬ ಅಂಶತಿಳಿಯತಕ್ಕದ್ದು. ಹಾಗೆ ಯಾರಾದರೂ ಮೇಲ್ಕಂಡಂತೆ ಪರಭಾರೆಮಾಡಿಕೊಂಡಲ್ಲಿ ಅವರುಗಳ ನಷ್ಟಕ್ಕೆ ನಾನು ಬಾಧ್ಯನಲ್ಲವೆಂಬ ಸಂಗತಿ ಈ ಮೂಲಕ ಎಚ್ಚರಿಸಿದ್ದೇನೆ.

ಮರುಳಶೆಟ್ಟಿ ಅಲಿಯಾಸ್ ಚಿಕ್ಕಮುದ್ದಶೆಟ್ಟಿ, ರುಜು.
ಕುಂಬಾರ್ಪುರ ಗ್ರಾಮ [illegible] ಹೋಬಳಿ, ಆನೇಕಲ್, ತಾ||

ಬಹುಮಾನಿಸಲ್ಪಟ್ಟಿರುವುದಲ್ಲದೆ ಈ ವಿವಾಹಮಹೋತ್ಸವ ಕಾರ್ಯನಿರ್ವಾಹದಲ್ಲುದ್ಯುಕ್ತರಾಗಿದ್ದು ಬಹಳ ಶ್ರಮಪಟ್ಟ ದಿವಾನರಿಗೆ 25,000 ರೂ. ಗಳೂ ಇತರ ಉದ್ಯೋಗಸ್ಥರುಗಳಿಗೆಲ್ಲಾ 1,75,000 ರೂ. ಗಳೂ ಒಟ್ಟು 2 ಲಕ್ಷ ರೂ. ಗಳು ಬಹುಮಾನಿಸಲ್ಪಟ್ಟುವು

ಲಾಹೋರಿನಲ್ಲಿ ಕಳೆದ ತಾ|| 23ರಲ್ಲಿ ಮಾಹೇಷರ ಮತ್ತು ಪಂಕೇಷರ್ ಸ್ಟೇಷನ್ನುಗಳ ಮಧ್ಯೆ 29 ಭರ್ತಿಬಂಡಿಗಳನ್ನೆಳದುಕೊಂಡು ಹೋಗುತ್ತಿದ್ದ ರೈಲ್ವೆ ಇಂಜನ್ನು ಒಂದು ಸೇತುವೆಯಿಂದ ನದಿಯೊಳಕ್ಕುರುಳಿ ಸಂಪೂರ್ಣವಾಗಿ ನಾಶವಾಯಿತು. ಇದರಿಂದ ರೈಲ್ವೆ ಕೆಲಸಗಾರರಲ್ಲಿ 7 ಜನರು ಮೃತರಾದರು ಮತ್ತು 11 ಜನರು ಪೆಟ್ಟನ್ನು ತಿಂದರು, ಮತ್ತು ಸೇತುವೆಯ ಎರಡುಕಮಾನುಗಳು ಮುರಿದುಬಿದ್ದುಹೋದುವು. ಮಾರ್ಗವು ಸರಿಪಡಿಸಲ್ಪಡುತಲಿದೆ.

ಸಿಕಿಂದ್ರಾಬಾದಿನ ಇಬ್ಬರುಪೋಲೀಸಿನವರು ಒಬ್ಬ ಬಂದಿಗೆ ಕೈಕೋಳವನ್ನು ಹಾಕಿ ಅಸಿರಾಬಾದಿಗೆ ಕರೆದುಕೊಂಡು ಕಾಡನ್ನು ಹಾದುಹೋಗುತ್ತಿರುವಾಗ್ಗೆ ಒಂದು ಹೆಬ್ಬುಲಿಯು ಇದಿರಾಗಿ ಬರಲು ಆ ಪೋಲೀಸಾಳುಗಳು ಭಯಪಟ್ಟುಕೊಂಡು ಆ ಕಳ್ಳನನ್ನು ಅಲ್ಲೇ ಬಿಟ್ಟು ತಾವು ಮಾತ್ರ ಊರಿಗೆ ಓಡಿಹೋಗಿ ನಡೆದ ಸಂಗತಿಯನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು. ಕಾಡಿನಲ್ಲಿ ಬಿಡಲ್ಪಟ್ಟ ಕಳ್ಳನು ಹುಲಿಯ ಪಾಲಾದನೋ ಅಥವಾ ಪಲಾಯನ ಮಾಡಿದನೋ ಯಾವುದೂ ತಿಳಿಯಬಂದಿಲ್ಲವು.

ತಿರುವನ್ನಾಮಲೆಯ ಡಿಸ್ಟ್ರಿಕ್ಟ್ ಮುನಸೀಫ್ ಕೋರ್ಟಿನ ಒಬ್ಬ ಅಮೀನನು ವೆಸ್ಮಿಯರ್ ತಾಳಗ್ರಾಮದವನ ಮೇಲೆ ಹುಟ್ಟಿದ್ದ ವಾರಂಟನ್ನು ಜಾರಿಮಾಡುವುದಕ್ಕಾಗಿ ಆ ಗ್ರಾಮಕ್ಕೆ ಹೋಗಿ ರಾತ್ರಿ 3 ಗಂಟೆಯ ವೇಳೆಯಲ್ಲಿ ಆ ವಾರಂಟು ಹುಟ್ಟಿದ್ದವನ ಮನೆಗೆ ಹೋಗಿ ಒಳಗೆ ಹೆಂಡತಿಯ ಕೂಡ ಮಲಗಿಕೊಂಡು ನಿದ್ರಿಸುತ್ತಿದ್ದವನನ್ನು ಹಿಡಿದು ಹೊರಕ್ಕೆಳದುಕೊಂಡುಬಂದ ಅಪರಾಧಕ್ಕಾಗಿ ಒಂದುತಿಂಗಳ ಕಠಿಣ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಲ್ಪಟ್ಟನಲ್ಲದೆ ಆ ಅಮೀನನಿಗೆ ಸಹಾಯಕನಾಗಿದ್ದವನಿಗೂ ಒಂದು ತಿಂಗಳ ಕಠಿನ ಕಾರಾಗೃಹವಾಸದ ಶಿಕ್ಷೆಯು ವಿಧಿಸಲ್ಪಟ್ಟಿತು. ಈ ಮೈಸೂರು ಸೀಮೆಯ ಸರ್ಮ್‌ಜವಾನರು ಮತ್ತು ಅಮೀನರುಗಳಿಂದ ಇಂತಹ ಅತ್ಯಾಚಾರಗಳು ಎಷ್ಟೋ ನಡಿಸಲ್ಪಡುತ್ತಿರುವುದಾದರೂ ಯಾರಗಮನಕ್ಕೂ ತರಲ್ಪಟ್ಟು ತಕ್ಕ ಶಾಸ್ತಿಯು ಮಾಡಲ್ಪಡದಿರುವುದು ವಿಷಾದಕರವು.

ಕರ್ನೂಲು ಡಿ|| ಪತ್ತಿಕೊಂಡ ತಾಲ್ಲೂಕಿನಲ್ಲಿ ಕ್ಷಾಮ ಪ್ರಾಪ್ತವಾಗಿರುವುದರಿಂದ ಆ ತಾಲ್ಲೂಕಿನ 1,500 ಜನ ರೈತರು ಕಳೆದ ತಾ|| 18 ರಲ್ಲಿ ಬಜಾರ್ ರಡ್ಡಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಕೂಡಿಸಿ ಹಿಂಗಾರು ಮಳೆಯು ಸುತರಾಂ ಬಾರದೆ ಬೆಳೆಯಾಗದೆಯಿರುವುದರಿಂದಲೂ, ಕುಡಿಯಲು ನೀರಿಲ್ಲದೆಯಿರುವುದರಿಂದಲೂ ಜನರು ಬಹಳ ಕಷ್ಟವನ್ನನುಭವಿಸುತ್ತಿರುವರಾದುದರಿಂದ ಕಂದಾಯದ ವಸೂಲಿಯನ್ನು ಕೆಲ ಕಾಲದಮಟ್ಟಿಗೆ ನಿಲ್ಲಿಸಿರಬೇಕೆಂದೂ, ಭೂಮಿಯನ್ನುತ್ತಮಪಡಿಸಲಿಕ್ಕೂ ದನಗಳಿಗೆ ಮೇವನ್ನೂ ಆಹಾರಪದಾರ್ಥಗಳನ್ನೂ ಕೊಂಡುಕೊಳ್ಳಲು ಹಣವನ್ನು ಸಾಲಕೊಡಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿ ನಿರ್ಧರಿಸಿ ಅಧ್ಯಕ್ಷರಾದ ಮ|| ರೆಡ್ಡಿಯವರ ಮುಂದಾಳುತನದಲ್ಲಿ ಕೆಲ ರೈತರ ಒಂದು ರಾಯಭಾರವು ಗೌರ್ನರಲ್ಲಿಗೂ ರೆವಿನ್ಯೂ ಕಮೀಷನರು ಮತ್ತು ಕ್ಷಾಮನಿವಾರಣಾ ಕಮೀಷನರುಗಳಲ್ಲಿಗೂ ಹೋಗಬೇಕಾಗಿ ಗೊತ್ತುಮಾಡಿದರು.

ಕಾಂಚೀಪುರದ ಪೆಚ್ಚಯ್ಯಪ್ಪನವರ ಹೈಸ್ಕೂಲ್ ಕಟ್ಟಡದಲ್ಲಿ ಹಂದ್ರವರ್ಮ ಎಂಬುವರು ಕ್ರಿಸ್ತನ ಚರಿತ್ರೆಯ ಮೇಲೆ ಉಪನ್ಯಾಸ ಮಾಡುವಾಗ್ಗೆ, ನ್ಯೂಟೆಸ್ಟ್‌ಮೆಂಟ್ ಎಂಬ ಹೊಸ ಬೈಬಲ್ ಬುಕ್ಕಿನಲ್ಲಿ ಹೇಳಲ್ಪಟ್ಟಿರುವುದೆಲ್ಲವೂ ಅಬದ್ಧವೂ ಕಟ್ಟುಕಥೆಯೂ ಆಗಿರುವುದೆಂದು ಸಿದ್ಧಾಂತ ಮಾಡಲಿಕ್ಕೆ ಹೊರಟು ರಮೇಶಚಂದ್ರದತ್ತರವರ ಲೇಖನವನ್ನು ಉದ್ಧರಿಸಿ ಕ್ರಿಸ್ತನು ಶ್ರೀಕೃಷ್ಣನ ಅವತಾರವಲ್ಲದೆ ಮತ್ತೆಬೇರೆಯಿಲ್ಲ; ಮತ್ತು ಯಾವ ಕ್ರೈಸ್ತನಾಗಲಿ ನಾನು ಹೇಳುವುದು ಸುಳ್ಳೆಂದು ಸ್ಥಾಪಿಸಲೆಂಬುದಾಗಿ ಕಳೆದ 25 ವರ್ಷಗಳಿಂದಲೂ ವಾದಿಸುತ್ತಿದ್ದೇನೆ. ಹಾಗಲ್ಲದೆ ಕ್ರಿಸ್ತನು ಬೇರೆವ್ಯಕ್ತಿಯೆಂದು ಯಾವ ಕ್ರೈಸ್ತಮತಸ್ಥನಾಗಲಿ ನನ್ನನ್ನು ಒಡಂಬಡಿಸುವುದಾದರೆ ನಾನು ಕ್ರೈಸ್ತಮತವನ್ನವಲಂಬಿಸುತ್ತೇನೆಂದು ಈ ದಿವಸ ನಿಮ್ಮಗಳಿದಿರಿಗೆ ನಿಂತು ಪ್ರಮಾಣಮಾಡಿ ಹೇಳುತ್ತೇನೆ. ಇದಕ್ಕೆ ತಪ್ಪಿದಲ್ಲಿ ಆ ಕ್ರೈಸ್ತಮತಸ್ಥನು ಹಿಂದೂಮತವನ್ನವಲಂಬಿಸಲು ಸಿದ್ಧನಾಗಿರಬೇಕೆಂದು ಹೇಳಿದರು.

ವಿದೇಶದ ವೃತ್ತಾಂತಗಳು

ಫ್ರೆಂಚ್ ಸರ್ಕಾರದವರು ಎಲ್ಲ ಕಂದಾಯವನ್ನೂ ಶೇಕಡ 20 ರಂತೆ ಹೆಚ್ಚಿಸಲು ಪ್ರಯತ್ನಿಸಿರುತ್ತಾರೆ.

ಹೊಟ್ಟೆಯೊಳಗಿನ ಹುಣ್ಣಿಗೆ ಶಸ್ತ್ರಚಿಕಿತ್ಸೆಮಾಡುವಾಗ್ಗೆ ರೋಗಿಯ ಜ್ಞಾನವು ತಪ್ಪಿಸಲ್ಪಡುವುದಷ್ಟೆ. ಈಗ ಸ್ಟೋವೈನ್ ಎಂಬ ವಾಯುಸೇವನೆಯಿಂದ ಲಂಡನ್ ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆಯಕಾಲದಲ್ಲಿ ಒಬ್ಬ ರೋಗಿಯು ವರ್ತಮಾನ ಪತ್ರಿಕೆಯನ್ನು ಓದುತಿದ್ದನಂತೆ !

ಗ್ರೀಸಿನ ವಾಯುಗುಣದಲ್ಲಿ ಔಷ್ಣ್ಯವು 19·4 ಡಿಗ್ರಿಗಿಳಿದುಹೋಗಿ ಅಭೂತಪೂರ್ವವಾದ ಚಳಿಯುಂಟಾಗಿರುತ್ತದೆ. ಮಂಜು ರಾಶಿಯಾಗಿಬಿದ್ದು ಕರಗದೆಯಿರುವುದರಿಂದ ರೈಲು ಬಂಡಿಗಳ ತಿರುಗಾಟವು ನಿಂತುಹೋಗಿದ್ದಿತು, ಮತ್ತು 200 ಜನರು ಚಳಿಯನ್ನು ಸಹಿಸಲಾರದೆ ಮೃತರಾದರು.

ನಿಕೊಲಸ್ ವ್ಲಾಡಿಮರ್ ಲಿಪ್ಪಲಿಸ್ಕಿ ಯುವರಾಜನ ಹೆಂಡತಿಯು ತನ್ನ ಗಂಡನನ್ನು ತನ್ನ ಅಕ್ಕನು ವಶಮಾಡಿಕೊಳ್ಳಬೇಕೆಂದು ಪ್ರಯತ್ನಿಸಿದಳಾದುದರಿಂದ 2,00,000 ರೂ. ಗಳ ಪರಿಹಾರದ್ರವ್ಯವನ್ನು ಕೊಡಿಸಿಕೊಡಬೇಕೆಂದು ತನ್ನ ಅಕ್ಕನಮೇಲೆ ನ್ಯೂಯಾರ್ಕು ಕೋರ್ಟಿನಲ್ಲಿ ವಿವಾದಮಾಡಿ ಡಿಕ್ರಿ ಪಡೆದುಕೊಂಡಳು.

ವಿಯೂನದ ಒಂದು ನಾಟಕಶಾಲೆಯಲ್ಲಿ ಇಬ್ಬರು ಸ್ತ್ರೀಯರು ಅಭಿನಯಿಸುತ್ತಿರುವಾಗ್ಗೆ ಒಬ್ಬಾಕೆಯ ಉಡುಪಿಗೆ ಬೆಂಕಿಯು ಹೊತ್ತಿಕೊಳ್ಳಲು ದಿಗಲುಬೀಳದೆ ಆಕೆಯು ಆ ಕೂಡಲೆ ಸ್ಟೇಜನ್ನು ಬಿಟ್ಟು ನೆಲದಮೇಲೆ ಹಾರಿಬಿದ್ದು ಜ್ವಾಲೆಯು ತಣ್ಣಗಾಗುವವರೆಗೂ ಉರುಳಾಡಿದಳು ಮತ್ತೊಬ್ಬಳು ಹಾಡುತ್ತಲೇ ಇದ್ದು ಪ್ರೇಕ್ಷಕರ ಮನಸ್ಸು ಚದರದಂತೆ ಮಾಡಿದಳು. ಈ ಉಭಯರ ಮನಸ್ಥೈರ್ಯವು ಅಗಾಧವಾದುದು.

ಇಂಗ್ಲೆಂಡಿನಲ್ಲೂ ವೇಲ್ಸಿನಲ್ಲೂ 1923 ರಲ್ಲಿ 1000 ಜನರಿಗೆ 14·6 ರಂತೆ ಜನನವಾಗಿರುತ್ತದೆ. 1917 ರಿಂದ 1919 ರ ವರೆಗೆ ಯುದ್ಧದಶೆಯಿಂದ ಜನನ ಸಂಖ್ಯೆಯು ಕಡಿಮೆಯಾಗಿದ್ದುದರ ವಿನಾ ಇತರ ವರ್ಷಗಳಲ್ಲಿ ಕಳೆದ ವರ್ಷದಷ್ಟು ಕಡಿಮೆಯಾಗಿರಲಿಲ್ಲವು. ಇದಕ್ಕೆ ತಕ್ಕಂತೆಯೇ ದೊಡ್ಡವರ ಮರಣ ಸಂಖ್ಯೆಯು 11·6 ರಂತೆಯೂ ಮಕ್ಕಳ ಮರಣವು 69 ರಂತೆಯೂ ಕಡಿಮೆಯಾಗಿರುತ್ತದೆ. 15·2 ರಂತೆ ವಿವಾಹಗಳು ನಡೆದಿರುತ್ತವೆ.

ಅಮೆರಿಕೆಯಲ್ಲಿ ಜಾರ್ಜ್‌ಫರ್‌ಪಾಯಿಟ್ ಎಂಬ ಒಬ್ಬ ಶ್ರೀಮಂತನು ತನ್ನ ತಂದೆಯ ಜ್ಞಾಪನಾರ್ಥವಾಗಿ 5,10,00,000 ರೂ. ಬೆಲೆಯ ಪುಸ್ತಕ ಭಂಡಾರವನ್ನು ಬಹು ಬೆಲೆಬಾಳುವ ಕಟ್ಟಡ ಸಮೇತ ಜನರುಪಯೋಗಾರ್ಥವಾಗಿ ಕೊಟ್ಟು ಅದರ ಮೇಲ್ವಿಚಾರಣೆಗೆ ಒಂದು ಕಮಿಟಿಯನ್ನೇರ್ಪಡಿಸಿ ಆ ಭಂಡಾರದ ಪೋಷಣೆಗಾಗಿ 45,00,000 ರೂ. ಗಳ ಪುದುವಟ್ಟನ್ನು ಹಾಕಿರುತ್ತಾನೆ. ಈ ಭಂಡಾರದಲ್ಲಿ ಬಹಳ ಅಪೂರ್ವವೂ ಅಮೌಲ್ಯವೂ ಆದ 25,000 ಗ್ರಂಥಗಳಿರುತ್ತವೆ.

ಅಮೇರಿಕೆಯ ನ್ಯೂಯಾರ್ಕಿನ ಒಬ್ಬ ರತ್ನಪುಡಿ ವರ್ತಕನು 60,000 ರೂ. ಬೆಲೆಯ ಆಭರಣಗಳನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಫಿಲ್ಡಲ್‌ಫಿಯಾಕ್ಕೆ ವ್ಯಾಪಾರಕ್ಕಾಗಿ ಹೋದ ವಿಷಯವನ್ನು ಅದೇ ನ್ಯೂಯಾರ್ಕಿನ ಒಬ್ಬ ಯುವತಿಯು ತಿಳಿದು ಅವನನ್ನು ತಡಕಲು ಫಿಲ್ಡಲ್‌ಫಿಯಾಕ್ಕೆ ಪ್ರಯಾಣಮಾಡಿ ಅಲ್ಲಿಯ ಒಂದು ದೊಡ್ಡಬೀದಿಯಲ್ಲಿ ಕಂಡು ಪೋಸ್ಟಾಫೀಸಿಗೆ ಹೋಗುವ ಮಾರ್ಗವನ್ನು ತೋರಿಸೆಂದು ಕೇಳಿ ಅವನು ತನಗೆ ತಿಳಿಯದೆಂದು ಹೇಳಿದುದರ ಮೇಲೆ ತನ್ನ ಕೈ ಪೆಟ್ಟಿಗೆಯಿಂದ ಒಂದು ಪಿಸ್ತೂಲನ್ನು ತೆಗೆದು ಹೊಡೆದು ಕೊಂದುಬಿಡುತ್ತೇನೆಂದು ಗುರಿಕಟ್ಟಲು ಆ ವರ್ತಕನು ಹೆದರಿ ಇದುರಿಗಿದ್ದ ಒಂದು ಸಂದಿಗೆ ನುಗ್ಗಿದನು. ಆಗ ಅಲ್ಲಿ ಇಬ್ಬರು ಪುರುಷರು ಅವನನ್ನು ಹಿಡಿದುಕೊಂಡು ಅವನ ಆಭರಣದ ಪೆಟ್ಟಿಗೆ ವಜ್ರದುಂಗುರ, ಗಡಿಯಾರ ಮತ್ತು ನಗದು 300 ರೂ. ಗಳನ್ನು ಕಿತ್ತುಕೊಂಡು ಪಲಾಯನವಾದರು. ಆ ಯುವತಿಯು ಇದಕ್ಕೆ ಮೊದಲು ನಾಲ್ಕು ದಿನಗಳಲ್ಲಿ 3 ಕಳ್ಳತನಗಳನ್ನೂ ಮೂರು ವಾರಗಳಲ್ಲಿ 12 ಕಳ್ಳತನಗಳನ್ನೂ ನಡಿಸಿದ್ದಳು.

MYSORE RAILWAYS.

NOTIFICATION.

The train service on the Metre and Narrow Gauge Sections of this Railway will be revised as under on and from 1st March 1924:—

1. Bangalore-Mysore Section.

DOWN TRAINS.

		2 Mail. Hrs.	2 Mail. Mts.	6 Express. Hrs.	6 Express. Mts.	4 Passenger. Hrs.	4 Passenger. Mts.
Bangalore City	Dep.	7	20	14	5	21	45
Maddur	Arr.	9	53	16	47	1	47
	Dep.	10	13	16	57	2	6
Mysore	Arr.	12	35	19	30	6	0

UP TRAINS.

		5 Express. Hrs.	5 Express. Mts.	1 Mail. Hrs.	1 Mail. Mts.	3 Passenger. Hrs.	3 Passenger. Mts.
Mysore	Dep.	7	20	13	40	22	0
Maddur	Arr.	9	39	15	51	1	23
	Dep.	9	59	16	1	1	50
Bangalore City	Arr.	13	0	19	0	6	15

2. Mysore-Arsikere Section.

DOWN TRAINS.

		42 Mixed Hrs.	42 Mixed Mts.	12 Mixed Hrs.	12 Mixed Mts.
Mysore	Dep.	6	50	13	0
Hassan	Arr.	11	15	19	56
	Dep.	11	31	20	18
Arsikere	Arr.	13	0	22	30

UP TRAINS.

		11 Mixed. Hrs.	11 Mixed. Mts.	41 Mixed. Hrs.	41 Mixed. Mts.
Arsikere	Dep.	2	30	14	20
Hassan	Arr.	5	40	16	26
	Dep.	6	0	16	44
Mysore	Arr.	11	50	21	5

3. Birur-Shimoga Section.

UP TRAINS.

		18 Mixed Hrs.	18 Mixed Mts.	20 Mixed Hrs.	20 Mixed Mts.
Birur	Dep.	4	15	16	2
Simoga	Arr.	6	35	19	1

DOWN TRAINS.

		19 Mixed Hrs.	19 Mixed Mts.	17 Mixed Hrs.	17 Mixed Mts.
Shimoga	Dep.	6	55	19	45
Birur	Arr.	9	50	23	5

4. Chikjajur-Chitaldrug Railway.

DOWN TRAINS.

		16 Mixed. Hrs.	16 Mixed. Mts.	14 Passenger Hrs.	14 Passenger Mts.
Chikjajur	Dep.	7	30	13	45
Chitaldrug	Arr.	9	30	15	25

UP TRAINS.

		13 Passenger. Hrs.	13 Passenger. Mts.	15 Mixed. Hrs.	15 Mixed. Mts.
Chitaldrug	Dep.	10	40	16	5
Chikjajur	Arr.	12	40	17	45

5. Bangalore City-Bowringpet Section.

DOWN TRAINS.

		22 Mix. Hs.	22 Mix. Ms.	24 Mix. Hs.	24 Mix. Ms.	26 Mix. Hs.	26 Mix. Ms.	28 Mix. Hs.	28 Mix. Ms.
Bangalore City	D.	8	30	...	...	18	5	...	...
Chikballapur	A.	11	20	...	...	22	28	...	...
	D.	11	35	...	...	...	...	5	1
Kolar	A.	15	16	...	...	...	...	10	5
	D.	15	39	6	50	...	...	...	...
Bowringpet	A.	16	50	7	40	...	...	...	...

UP TRAINS.

		21 Mix. Hs.	21 Mix. Ms.	23 Mix. Hs.	23 Mix. Ms.	25 Mix. Hs.	25 Mix. Ms.	27 Mix. Hs.	27 Mix. Ms.
Bowringpet	D.	8	40	20	10	...	...	...	...
Kolar	A.	9	20	20	50	...	...	...	...
	D.	9	50	...	...	...	...	17	3
Chikballapur	A.	14	1	...	...	...	...	22	3
	D.	14	26	...	...	5	40	...	...
Bangalore City	A.	17	35	...	...	10	15	...	...

6. Tarikere-Narasimharajapura Tramway.

DOWN TRAINS.

		30 Mixed. Hrs.	30 Mixed. Mts.
Tarikere	Dep.	8	40
Narasimharajapura	Arr.	12	40

UP TRAINS.

		29 Mixed. Hrs.	29 Mixed. Mts.
Narasimharajapura	Dep.	13	0
Tarikere	Arr.	16	57

There will be no changes in the services o the Mysore-Nanjangud Section.

Traffic Manager's Office,
Mysore, 24th Feb. 1924.

A. A. KHAN,
Traffic Manager.

ಚುನಾವಣೆಯ ಫಲಿತಾಂಶ.

(ಕಳೆದವಾರದ ಶೇಷ)

ಪ್ರಜಾಪ್ರತಿನಿಧಿ ಸಭೆಗೆ

ಮೈಸೂರು ಡಿಸ್ಟ್ರಿಕ್ಟ್

ಮ|| ಗಳಾದ.

ಮೈಸೂರು ತಾ||—(1) ಜಿ. ಮಲ್ಲಣ್ಣನವರು, ಜಮೀನ್ದಾರ್ (2) ಎಸ್. ಕೃಷ್ಣಸ್ವಾಮಿರಾವ್, ಬಿ.ಎ., ಎಲ್‌ಎಲ್.ಬಿ., ಅಡ್ವೋಕೇಟರು (3) ಮಾದೇಗೌಡರು, ಪಟೇಲ್.

ಯಡತೊರೆ ತಾ||—(1) ಚೆನ್ನಪ್ಪನವರು, ಪಟೇಲ್, (2) ಬಳೆ ಸಿದ್ಧಲಿಂಗಸೆಟ್ಟರು, ವ್ಯಾಪಾರ.

ಹುಣಸೂರು ತಾ||—(1) ಎಚ್. ಎನ್. ರಾಘವೇಂದ್ರರಾಯರು, ಬೇಸಾಯ (2) ರಾಜಗೋಪಾಲಮೊದಲಿಯಾರ್ರು, ವ್ಯಾಪಾರ (3) ಎಚ್. ವಿ. ಹನುಮಂತಸೆಟ್ಟರು, ವ್ಯಾಪಾರ.

ಹೆಗ್ಗಡದೇವನಕೋಟೆ ತಾ||—(1) ಎಂ. ಸುಬ್ಬರಾಯರು ಜಮೀನ್ದಾರ್ (2) ದಾಸೇಗೌಡರು ಪಟೇಲ್.

ಕೃಷ್ಣರಾಜಪೇಟೆ ತಾ||—(1) ಲಿಂಗೇಗೌಡರು, ಪಟೇಲ್ (2) ಎಸ್. ತಿಮ್ಮೇಗೌಡ ಉರಫ್ ತಮ್ಮಯ್ಯಗೌಡರು, ಜಮೀನ್ದಾರ್.

ಶ್ರೀರಂಗಪಟ್ಟಣ ತಾ||—(1) ಬಿ. ನರಸಿಂಗರಾಯರು, ಪ್ಲೀಡರ್ (2) ಎಸ್. ದೇವಯ್ಯನವರು, ಜಮೀನ್ದಾರ್ (3) ಅಕ್ಕೀಗೌಡರು, ಜಮೀನ್ದಾರ್.

ಮಂಡ್ಯ ತಾ||—(1) ತಿಮ್ಮೇಗೌಡರು, ಜಮೀನ್ದಾರ್ (2) ಎಸ್.ಸಿ. ಮಲ್ಲಯ್ಯನವರು, ಜಮೀನ್ದಾರ್ (3) ಚೆನ್ನೇಗೌಡರು, ಜಮೀನ್ದಾರ್.

ಮಳವಳ್ಳಿ ತಾ||—(1) ಚಿಕ್ಕೇಗೌಡರು, ಜಮೀನ್ದಾರ್ (2) ವೆಂಕಟಪ್ಪ ಉರಫ್ ಚಿಕ್ಕಣ್ಣನವರು, ವ್ಯಾಪಾರ.

ನಾಗಮಂಗಲ ತಾ||—(1) ಟಿ. ಎಂ. ಕಪನೀಗೌಡರು, ಜಮೀನ್ದಾರ್ (2) ಮಹಮದ್‌ಗೌಸ್‌ಸಾಬರು, ಜಮೀನ್ದಾರ್.

ನಂಜನಗೂಡು ತಾ||—(1) ವಿ. ಲಿಂಗಯ್ಯನವರು, ವ್ಯಾಪಾರ (2) ಸಿ. ಪಾಪಣ್ಣನವರು, ವ್ಯಾಪಾರ.

ಚಾಮರಾಜನಗರ ತಾ||—(1) ಪುಟ್ಟಣ್ಣನವರು, ಜಮೀನ್ದಾರ್ (2) ವೆಂಕಟಾಚಲಪ್ಪಸೆಟ್ಟರು, ವ್ಯಾಪಾರ.

ಗುಂಡ್ಲುಪೇಟೆ ತಾ||—(1) ಸುರುಕಾರ್ ನಂಜಪ್ಪನವರು, ಜಮೀನ್ದಾರ್ (2) ಕೆ. ಎಸ್. ಚನ್ನಬಸಪ್ಪನವರು ಸಾಹುಕಾರ್.

ನರಸೀಪುರ ತಾ||—(1) ಮಾಯಿಗೌಡರು, ಪಟೇಲ್ (2) ಸಿದ್ದೇಗೌಡರು, ಪಟೇಲ್.

ಯಳಂದೂರು ಜಹಗೀರಿ—ವೈ. ಶ್ರೀನಿವಾಸಯ್ಯಂಗಾರ್ರು, ಜಮೀನ್ದಾರ್.

ನಂಜನಗೂಡು ಮ್ಯುನಿಸಿ—ಕೆ. ವೆಂಕಟಾಚಲಯ್ಯ, ಬಿ.ಎ., ಬಿ.ಎಲ್., ಅಡ್ವೋಕೇಟರು.

ಶ್ರೀರಂಗಪಟ್ಟಣ ಮ್ಯುನಿಸಿ—ಜಿ. ದೇವೋಜಿರಾಯರು, ಪ್ಲೀಡರ್.

ಚಾಮರಾಜನಗರ ಮ್ಯುನಿಸಿ—ಸಂಗನಬಸಪ್ಪನವರು, ವ್ಯಾಪಾರ.

ಮಳವಳ್ಳಿ ಟೌನ್—ಸೀತಾರಾಮಯ್ಯನವರು, ಶಾನ್‌ಭೋಗ್.

ಮೈಸೂರು ಸಿಟಿ—(1) ಎಂ. ವೆಂಕಟಕೃಷ್ಣಯ್ಯನವರು, ರಿಟೈರ್ಡ್ ಹೆಡ್ಮಾಸ್ತರ್ (2) ಎಂ. ರಾಮಸ್ವಾಮಿಯವರು, (3) ಬಿ. ಕೆ. ರಾಮಕೃಷ್ಣಯ್ಯನವರು, ಅಡ್ವೋಕೇಟ್ (4) ಮಹಮುದ್‌ಸೇಟರು ವ್ಯಾಪಾರ.

ಶಿವಮೊಗ್ಗ ಡಿಸ್ಟ್ರಿಕ್ಟ್.

ಶಿವಮೊಗ್ಗ ತಾ||—(1) ಅಂಗಡಿ ನಂಜಪ್ಪನವರ ಮಗ ಎಂ. ಮುರಿಗೆಪ್ಪನವರು, ಸಾಹುಕಾರ್ (2) ಎ. ಅನಂತಯ್ಯನವರು, ಪ್ಲೀಡರ್ (3) ಭರ್ಮಾಜಪ್ಪನವರು, ಜಮೀನ್ದಾರ್.

ಚನ್ನಗಿರಿ ತಾ||—(1) ಬಕೆಟ್ಟಪ್ಪನವರು, (ಹೊನ್ನಾಳಿ) ಸಾಹುಕಾರ್ (2) ಹಾಲಪ್ಪನವರು, (ನಲ್ಲೂದ್ರೆ) ಪಟೇಲ್.

ಸಾಗರ ತಾ||—(1) ಗುಂಡಪ್ಪ ಕಾಳಿಯವರು, ಜಮೀನ್ದಾರ್ (2) ಬಸವಲಿಂಗಪ್ಪ ದಳವಾಯಿಯವರು, ಜಮೀನ್ದಾರ್ (3) ಚನ್ನಪ್ಪಸೆಟ್ಟರು, ಜಮೀನ್ದಾರ್.

ತೀರ್ಥಹಳ್ಳಿ ತಾ||—(1) ಬೇಗವಳ್ಳಿ ಗೋಪಾಲಾಚಾರ್ರು, ವ್ಯಾಪಾರ (2) ತುಡ್ಕಿ ರಾಮಣ್ಣನವರು, ಕಂಟ್ರಾಕ್ಟರ್ (3) ಹೊಸಹಳ್ಳಿ ವೆಂಕಟಪ್ಪಗೌಡರು, ವ್ಯಾಪಾರ.

ಹೊನ್ನಾಳಿ ತಾ||—(1) ನಗರದ ಗುರುಲಿಂಗಪ್ಪನವರು, ಜಮೀನ್ದಾರ್ (2) ಪಟೇಲ್ ರಂಗಪ್ಪನವರು, ಜಮೀನ್ದಾರ್.

ಸೊರಬ ತಾ||—(1) ಉಳವಿನಾಡಿಗ ಭಾಸ್ಕರರಾಯರು ಜಮೀನ್ದಾರ್, (2) ನಾಡಿಗ ಲಕ್ಷ್ಮಣರಾಯರು ಜಮೀನ್ದಾರ್, (3) ಚಂದ್ರಶೇಖರಪ್ಪನವರು ಜಮೀನ್ದಾರ್.

ನಗರ ತಾ||—(1) ನಗರದ ಶ್ರೀನಿವಾಸಉಡುಪರು, ಸಾಹುಕಾರ್ (2) ವೀರಭದ್ರಯ್ಯನವರು ಪಟೇಲ್.

ಕುಂಸಿ ಸಬ್ ತಾ||—ನಾಡಿಗ ಅಪ್ಪಣ್ಣರಾಯರು, ಜಮೀನ್ದಾರ್.

ಶಿಕಾರಿಪುರ ತಾ||—(1) ಪುಟ್ಟಮಲ್ಲಪ್ಪ ಬಿನ್ ಮುದಿಯಪ್ಪನವರು, ಜಮೀನ್ದಾರ್ (2) ಸಿದ್ಧಬಸಪ್ಪ ಬಿನ್ ಬಸಪ್ಪ ಸೂರಣಗಿಯವರು ಜಮೀನ್ದಾರ್.

ಶಿವಮೊಗ್ಗ ಟೌನ್—ದುಮ್ಮಿ ಪಂಚಾಕ್ಷರಪ್ಪನವರು, ಅಡಿಕೆವ್ಯಾಪಾರಿ.

ಕಡೂರು ಡಿಸ್ಟ್ರಿಕ್ಟ್.

ಚಿಕ್ಕಮಗಳೂರು ತಾ||—(1) ಎಸ್. ಹೊನ್ನಪ್ಪಯ್ಯನವರು, ಶಾನ್‌ಭೋಗ್ (2) ಬಿ. ರಾಮಪ್ಪಗೌಡರು, ಪಟೇಲ್ (3) ಬಿ. ಕೇಶವಯ್ಯನವರು, ಜಮೀನ್ದಾರ್.

ಕಡೂರು ತಾ||—(1) ಎನ್. ಎಂ. ಶಿಲಿಂಗಪ್ಪಯ್ಯನವರು, ಜಮೀನ್ದಾರ್ (2) ಕೆ. ತಿಮ್ಮೇಗೌಡರು, ಜಮೀನ್ದಾರ್ (3) ಶಿವಮೊಗ್ಗ ಸೋಮಣ್ಣನವರು, ಜಮೀನ್ದಾರ್.

ಕೊಪ್ಪ ತಾ||—(1) ಹೊಸಕೊಪ್ಪ ಕೃಷ್ಣರಾಯರು, ಜಮೀನ್ದಾರ್ (2) ಜಮ್ಮಟಿಗೆ ರಾಮನಾಚೋಯಿಸರು, ಜಮೀನ್ದಾರ್ (3) ಎಚ್. ಡಿ. ನರಸಿಂಹಶಾಸ್ತ್ರಿಗಳು, ಜಮೀನ್ದಾರ್.

ತರೀಕೆರೆ ತಾ||—(1) ಪಿನಾರ್ ಮಹಮ್ಮದ್‌ಸಾಬರು, ಜಮೀನ್ದಾರ್ (2) ಬಸೆಟ್ಟಪ್ಪನವರು, ಜಮೀನ್ದಾರ್.

ಮೂಡಿಗೆರೆ ತಾ||—(1) ಮಂಜೇಗೌಡರು. ಪಟೇಲ್ (2) ದ್ಯಾವಪ್ಪಗೌಡರು, ಪಟೇಲ್.

ನರಸಿಂಹರಾಜಪುರ ಸಬ್ ತಾ||—ಬಿ. ಎನ್. ಸುಬ್ಬರಾಯರು, ಪ್ಲೀಡರ್.

ಶೃಂಗೇರಿ ಜಹಗೀರಿ—ಚನ್ನವೀರಪ್ಪರಾಜಯ್ಯನವರು, ಜಮೀನ್ದಾರ್.

ಚಿಕ್ಕಮಗಳೂರು ಟೌನ್—ಸಯ್ಯದ್‌ಅಲ್ಲಿಸಾಬರ ಮಗ ಸಿ. ಸಯ್ಯದ್‌ಪೀರ್‌ಸಾಬರು, ಕಾಫಿಪ್ಲಾಂಟರು.

ತರೀಕೆರೆ ಟೌನ್—ಮುಸ್ತಾನ್‌ಸಾಬರ ಮಕ್ಕಳು ಮಹಮ್ಮದ್ ಇಮಾಂಸಾಬ್ ಉರಫ್ ಬಾಬಾಸಾಬರು, ಜಮೀನ್ದಾರ್,

ಚಿತ್ರದುರ್ಗ ಡಿಸ್ಟ್ರಿಕ್ಟ್.

ಚಿತ್ರದುರ್ಗ ತಾ||—(1) ಎಸ್. ವೀರಭದ್ರಪ್ಪನವರು ಸಾಹುಕಾರ್ (2) ಸಾಟಿಹಾಲಪ್ಪನವರು, ಬೇಸಾಯ.

ಚಳ್ಳಕೆರೆ ತಾ||—(1) ಅನಂತತೀರ್ಥರಾಯರು, ಪ್ಲೀಡರ್ (2) ರಾಮಪ್ಪನವರು, ಬೇಸಾಯ.

ಮೊಳಕಾಲ್ಮೂರು ತಾ||—(1) ಪಟ್ಟಿಬಸಪ್ಪನವರು, ಜಮೀನ್ದಾರ್ (2) ಎಂ. ಎಸ್. ನರಸಿಂಗರಾವು, ವ್ಯಾಪಾರ.

ಹಿರಿಯೂರು ತಾ|| (1) ಶಾನ್‌ಭೋಗ್ ಚನ್ನಬಸವಯ್ಯ ಬಿನ್ ಚನ್ನಗೌರಯ್ಯನವರು, ಶಾನ್‌ಭೋಗ್ (2) ಬಿ. ಸೀತಾರಾಮಯ್ಯ ಬಿನ್ ನಾರಣಪ್ಪನವರು, ಮ್ಯುನಿ ವೈಸ್ ಪ್ರೆಸಿಡೆಂಟ್.

ಹೊಳಲ್ಕೆರೆ ತಾ||—(1) ನಾಡಿಗ ಮಲ್ಲಪ್ಪನವರು, ಪಟೇಲ್ ತನಗೇಹಳ್ಳಿ ಬೇಸಾಯ. (2) ಪಟೇಲ್ ಮಲ್ಲಪ್ಪನವರು, ಪಟೇಲ್.

ಜಗಳೂರು ತಾ||—(1) ಜಿ. ಎಸ್. ಮಹಲಿಂಗಪ್ಪನವರು, ಬೇಸಾಯ (2) ಜಿ. ಎಸ್. ಮಲ್ಲಪ್ಪನವರು, ಸಾಹುಕಾರ್.

ರಿಹರ ಸಬ್ ತಾ||—ಮುರ್ಗ್ಳ ರಾಚೋಟಪ್ಪನವರು, ಸಾಹುಕಾರ್.

ವಣಗೆರೆ ತಾ|| (1) ಕಂದಗಲ್ ಚೆನ್ನಬಸಪ್ಪನವರು, (2) ಶಾಮನೂರು ಭಿಕ್ಷಪ್ಪನವರು.

ದುರ್ಗ ಟೌನ್—ಸಿ. ಸುಬ್ಬರಾಯರು, ಶಾನ್‌ಭೋಗ್.

ಕಳೆದ ಫೆಬ್ರವರಿ 14-15-16ನೇ ತಾರೀಖುಗಳಲ್ಲಿ ಪದ್ಧತಿಯ ಮೇರೆ ಸಭಾಕಾರ್ಯಗಳು ವೇ|| ಆಸ್ಥಾನ ಮಹಾವಿದ್ವಾನ್ ಕರ್ನಾಟಕ ಭಾಷಾರತ್ನಂ ಪಿ. ಆರ್. ಕರಿಬಸವಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು. ಜಾತ್ರೆಗೆ ಗಾಡಿಗಳು ವಗೈರೆ ಜನ ಸಮುದಾಯವು ವಿಶೇಷವಾಗಿ ಸೇರಕೂಡದೆಂದು ಸರ್ಕಾರದಿಂದ ನಿರ್ಬಂಧವು ಕಲ್ಪಿಸಲ್ಪಟ್ಟಿದ್ದಾಗ್ಯೂ ಮಹಾಭಕ್ತಾದಿಗಳ ಸಂಖ್ಯೆಯು ಹಿಂದಿನ ವರ್ಷಗಳಿಗಿಂತ ಹೆಚ್ಚಾಗಿಯೇ ಇದ್ದಿತು. ಕಳೆದ ವರ್ಷ ನಿರ್ಧರಿಸಲ್ಪಟ್ಟ ಗುರು ಲಿಂಗ ಜಂಗಮ ಲಕ್ಷಣ ಸ್ವರೂಪಾದಿಗಳ ಉಪನ್ಯಾಸವನ್ನು ಕೆಲವರು ಮಾಡಿದರು. ಅವರುಗಳಿಗೆ ಬಹುಮಾನವು ಕೊಡಲ್ಪಟ್ಟಿತು. ಈ ಸಾರಿ ಬಹುಮಾನ ಸಭೆಯ ದಿವಸ ಈ ಸಭಾ ವರ್ಕಿಂಗ್ ಕಮಿಟಿಯ ಅಧ್ಯಕ್ಷರಾದ ಶ್ರೀಯುತ, ಜಿ. ಪಿ. ಮಲ್ಲಪ್ಪನವರ 10 ವರ್ಷ ವಯಸ್ಸಿನ ಜಿ. ಎಂ. ನಟರಾಜನೆಂಬ ಬಾಲಕನು ಪಾಲಗಾಟದ ಸಂಗೀತ ವಿದ್ವಾನ್ ಈಶ್ವರಭಾಗವತರ್ ಮುಂತಾದ ಸಭಿಕರ ಮುಂದೆ ಸಂಗೀತವಿದ್ಯೆಯಲ್ಲಿ ತನ್ನ ವಯಸ್ಸಿಗೆ ಮೀರಿದ ಪ್ರೌಢಿಮೆಯನ್ನು ತೋರಿಸಿ ಸಭಿಕರೆಲ್ಲರಿಗೂ ಆಶ್ಚರ್ಯವೂ ಆನಂದವೂ ಉಂಟಾಗುವಂತೆ ಗಾನವಿದ್ಯಾ ಚಾತುರ್ಯವನ್ನು ಪ್ರದರ್ಶಿಸಿದ್ದಕ್ಕೆ ಮೆಚ್ಚಿ ವೇ|| ಆಸ್ಥಾನ ಮಹಾವಿದ್ವಾನ್ ಕರ್ನಾಟಕ ಭಾಷಾರತ್ನಂ ಪಿ. ಆರ್. ಕರಿಬಸವಶಾಸ್ತ್ರಿಗಳವರು ಒಂದು ಬಂಗಾರದ ಪದಕವನ್ನು ಆಶೀರ್ವಾದ ಪೂರ್ವಕವಾಗಿ ತಕ್ಕಬುದ್ಧಿವಾದವನ್ನು ಹೇಳಿ ಬಹುಮಾನಿಸಿದರು. ಮತ್ತು ಈ ಬಾಲಕನಿಗೆ ಸಂಗೀತಪಾಠವನ್ನು ಹೇಳುವ ಕೊಳ್ಳೇಗಾಲದ ಹೈಸ್ಕೂಲಿನಲ್ಲಿ ಬೋಧಕರಾದ ಮ|| ರಾ|| ಎಂ. ಡಿ. ನಾರಾಯಣಸ್ವಾಮಿಯವರ ಬೋಧನ ಕ್ರಮವನ್ನು ಸಹ ಶ್ಲಾಘಿಸಿ ತಕ್ಕ ಮರ್ಯಾದೆಯೊಡನೆ ಅವರನ್ನು ಪ್ರೋತ್ಸಾಹಿಸಿದನಂತರ ಗಂಧ ಪುಷ್ಪ ತಾಂಬೂಲಾದಿ ವಿನಿಯೋಗದೊಡನೆ ಸಭಾಕಾರ್ಯವು ಸಾಂಗಗೊಳಿಸಲ್ಪಟ್ಟಿತು. ಮುಂದಣ ವರ್ಷದಲ್ಲಿ ಅಂದರೆ ರಕ್ತಾಕ್ಷಿ ಸಂವತ್ಸರದಲ್ಲಿ ನಡೆವ ಸಭೆಯಲ್ಲಿ ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ಸ್ವೀಕಾರ ವಿಷಯದಲ್ಲಿ ವೀರಶೈವ ಪ್ರಾಚೀನ ಪಂಡಿತ ಜನರಿಂದ ಶಿವಾಗಮಪುರಾಣ ವಚನಗಳೊಡನೆ ರಚಿಸಲ್ಪಟ್ಟ ಸಿದ್ಧಾಂತಾನುಸಾರವಾಗಿ ಉಪನ್ಯಾಸವನ್ನು ವೀರಶೈವ ಮತದ ವಿದ್ವಾಂಸರು ಸಭೆಯಲ್ಲಿ ಮಾಡುವಂತೆಯೂ, ಆ ಉಪನ್ಯಾಸಗಳೊಳಗೆ ಉತ್ತಮೋಪನ್ಯಾಸಕ್ಕೆ 50 ರೂಪಾಯಿ ಬಹುಮಾನವು ಕೊಡಲ್ಪಡುವಂತೆಯೂ, ಉಳಿದ ಉಪನ್ಯಾಸಗಳಿಗೆ ಅವುಗಳ ಯೋಗ್ಯತಾನುಸಾರವಾಗಿ ಬಹುಮಾನ ಕೊಡಲ್ಪಡುವಂತೆಯೂ ನಿರ್ಧರಿಸಲ್ಪಟ್ಟಿತು.

ಸಭೆಯ ಮೆಂಬರು.

[ಈ ಚಿರಂಜೀವಿ ಬಾಲಕನ ಶಾಸ್ತ್ರಬದ್ಧವಾದ ಗಾನವನ್ನು ನಾವು ಕೇಳಿರುವೆವು. ಈತನಿಗೆ ತಾಳ ಮತ್ತು ರಾಗಜ್ಞಾನವು ಅದ್ಭುತವಾಗಿರುವುದಲ್ಲದೆ ಈ ಲೋಕರಂಜಕವಾದ ವಿದ್ಯೆಯಲ್ಲಿ ಸಂಪೂರ್ಣ ಪಾಂಡಿತ್ಯವನ್ನು ಪಡೆಯಬೇಕೆಂಬ ಕಾಂಕ್ಷೆಯು ಬಹಳವಾಗಿರುವದು ! ಈತನ ಗಾನ ಮಾಧುರ್ಯಕ್ಕೆ ತಕ್ಕಂತೆ ರೂಪುಲಾವಣ್ಯ ಸೌಜನ್ಯಗಳಿರುವುವು. ಈ ಬಾಲಕನು ಚಿರಂಜೀವಿಯಾಗಿಯೂ ದೃಢಕಾಯನಾಗಿಯೂ ಇದ್ದು ಪೂರ್ಣಪಾಂಡಿತ್ಯವನ್ನು ಪಡೆದು ಲೋಕವಿಖ್ಯಾತನಾಗಲೆಂದು ಹರಸುತ್ತೇವೆ.—ಸಂಪಾದಕ.]

ಶಿವಯೋಗಮಂದಿರಕ್ಕೆ ಕಲೆಕ್ಟರವರು ಆಗಮಿಸಿದ್ದು.

ಸೋಮವಾರ ತಾ|| 4-2-24 ದಿವಸ ಮುಂಜಾನೆ ಮೆ|| ಹೆಂಡರಸನ್ ಸಾ|| ಬ|| ಕಲೆಕ್ಟರ ವಿಜಾಪುರ ಇವರು, ರಾ|| ಸಾ|| ಬಸಪ್ಪನವರು ಕರ್ಜಗಿ ಜಟಿಂಗ ಮತ್ತು ಶಿವಮೂರ್ತಿಸ್ವಾಮಿ ಕಣಬರಗಿಮಠ, ಇವರ ಸಂಗಡ ಶಿವಯೋಗಮಂದಿರಕ್ಕೆ ಬಂದರು. ಅಲ್ಲಿ ರಾ|| ಬ|| ರೇವಣಸಿದ್ಧಯ್ಯ, ಕಿತ್ತೂರ, ಪ್ರೆಸಿಡೆಂಟ್ ಡಿ. ಡಿ. ಸಿ. ಇವರು ಸಾಹೇಬರನ್ನು ಇದಿರುಗೊಂಡು ಕ್ಷೇಮಲಾಭವನ್ನು ವಿಚಾರಿಸಿದಮೇಲೆ ಮೋಟಾರದಿಂದಿಳಿದು ಶಿವಯೋಗಮಂದಿರದ ಎಲ್ಲ ತೋಟಗಳನ್ನೂ ಹೊಸದಾಗಿ ತರಿಸಿದ ಎಲ್ಲ ನೀರಿನ ಎಂಜಿನಗಳನ್ನೂ, ಬೇರೆಬೇರೆ ಗೃಹಸ್ಥರು ಕಟ್ಟಿಸಿದ ಅಂದವಾದ ಮಂದಿರಗಳನ್ನೂ ನೋಡಿಕೊಂಡು, ಶಿವಯೋಗಸಾಧಕರಿರುವ ಸ್ಥಳಗಳನ್ನು ಕಂಡು ಮುಖ್ಯಮಂದಿರಕ್ಕೆ ಬಂದರು. ಅಲ್ಲಿ ಸಭಾಮಂಟಪವನ್ನು ಚೆನ್ನಾಗಿ ಶೃಂಗರಿಸಿ ತಳಿರುತೋರಣ ಪತಾಕೆಗಳು ಹಚ್ಚಲ್ಪಟ್ಟಿದ್ದವು. ಮಂದಿರದ ಶಿವಯೋಗಿಗಳ ಮತ್ತು ಸಾಧಕರ ದರ್ಶನವಾದಕೂಡಲೇ ಸಾಹೇಬರು ಆನಂದಪರವಶರಾದರು. ಅಜುಬಾಜು ಹಳ್ಳಿಗಳಿಂದಲೂ ಅನೇಕ ಜನರು ಸಾ|| ಬ|| ರವರ ದರ್ಶನಕ್ಕೆ ಬಂದಿದ್ದರು. ಶಿವಯೋಗಿಗಳು ಸಾ|| ಬ|| ರವರಿಗೆ ಸ್ವಾಗತಮಾಡಿ ಆಶೀರ್ವದಿಸಿದರು. ಸಾಧಕರು ಮಂಗಳಪದ್ಯವನ್ನು ಹಾಡಿದರು. ಪ್ರಸಿದ್ಧ ಗವಾಯಿ ಪಂಚಾಕ್ಷರಸ್ವಾಮಿಗಳು ಉತ್ತಮ ಗಾನಮಾಡಿದರು. ಇನ್ನುಳಿದ ಈವರ ಗವಾಯಿಗಳು ಹಾಡಿದನಂತರ ಸಾ|| ಬ|| ರವರ ತಾಂಬೂಲ ಸಮಾರಂಭಕ್ಕೆ ಪ್ರಾರಂಭವಾಯಿತು. ಶ್ರೀಮನ್ನಿರಂಜನ ನವಲಗುಂದ ಸ್ವಾಮಿಗಳು ಸಾಹೇಬರ ಗುಣವರ್ಣನೆ ಮಾಡಿ ರಾಜನಿಷ್ಠೆಯ ಬಗ್ಗೆ ಬಲುಸ್ವಾರಸ್ಯವಾಗಿ ವ್ಯಾಖ್ಯಾನಕೊಟ್ಟರು. ನಂತರ ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರು ಸದರೀ ಹೆಂಡರಸನ್ ಸಾಹೇಬರು ವಿಜಾಪುರ ಜಿಲ್ಲೆಗೆ ಬಂದಂದಿನಿಂದ ತಮ್ಮ ಸರ್ಕಾರಿಕೆಲಸದ ಹೊರತಾಗಿ ಕುರುಡರ ದುಃಖವಾರಣೆಗಾಗಿ ಶ್ರಮಪಡುತ್ತಿರುವದನ್ನು ತಮ್ಮ ಅಸ್ಖಲಿತವಾಣಿಯಿಂದ ಬಲುಸರಸಾಗಿ ವರ್ಣಿಸಿದರು. ಮತ್ತು ಆ ಕುರುಡರ ಫಂಡು ಇಂದಿಗೆ 130000 ಒಂದುಲಕ್ಷ ಮೂವತ್ತುಸಾವಿರವಾಗಿದ್ದು ಅದರಿಂದ 20000 ಸಾವಿರ ಕುರುಡರ ಚಿಕಿತ್ಸೆಯಾಗಿರುವದು. ಪ್ರತಿವರ್ಷ 600 ಜನ ಕುರುಡರ ಕಣ್ಣುಗಳಿಗೆ ಶಸ್ತ್ರಕ್ರಿಯೆ ಆಗುತ್ತಿರುವದು. ಈರೀತಿ ಮಾನವಪ್ರಾಣಿಯ ಸರ್ವೇಂದ್ರಿಯಗಳಲ್ಲಿ ಪ್ರಾಧಾನವಾದ ಕಣ್ಣುಗಳಿಗಾಗಿ ಸಾಹೇಬರವರು ಶ್ರಮಪಡುವದು ಬಲುದೊಡ್ಡ ಪರೋಪಕಾರದ ಕೆಲಸವಿರುವದರಿಂದ ಇಡೀ ಕರ್ನಾಟಕಸ್ಥರು ಅದರ ಉಪಯೋಗಮಾಡಿಕೊಳ್ಳಬೇಕೆಂದು ಶಿವಮೂರ್ತಿಸ್ವಾಮಿಗಳು ಕೂಡಿದ ಸಮೂಹಕ್ಕೆ ಉಪದೇಶಮಾಡಿದರು. ಸಾಹೇಬರು ಅಲ್ಲಲ್ಲಿ ಕುರುಡರಬಗ್ಗೆ ದವಾಖಾನೆಗಳನ್ನಿಟ್ಟು ಪುಕಟ ಔಷಧ ಕೊಡಿಸುವರು. ಹಳ್ಳಿಹಳ್ಳಿಗೆ ಹೋಗಿ ಹುಟ್ಟದಕೂಸುಗಳ ಮೊದಲ್ಗೊಂಡು ಜನರ ಕಣ್ಣು ಪರೀಕ್ಷಿಸಿ ಔಷಧಕೊಡುವಂತೆ ಅನೇಕಜನರನ್ನು ಇಟ್ಟಿರುವರು. ಶಸ್ತ್ರಕ್ರಿಯೆಗಾಗಿ ಉತ್ತಮವ್ಯವಸ್ಥೆ ಮಾಡಿರುವರು. ಇನ್ನು 1-2 ತಿಂಗಳಲ್ಲಿ ಸಾಹೇಬರು ವಿಲಾಯತಿಗೆ ಹೋಗುವದರಿಂದ ಕಾರಣ ಅವರ ಗುಣಕಥನಮಾಡಿ ಸತ್ಕರಿಸಿ ತಾಂಬೂಲವನ್ನು ಅರ್ಪಿಸಿ ಇಂಥ ಉತ್ತಮವಾದ ಸಂಸ್ಥೆಗೆ ಜನರು ಹಣದ ಸಹಾಯಮಾಡುವದು ಅವಶ್ಯವೆಂತಲೂ ಅದು ನಿರಾಯಾಸವಾಗಿ ನಿರಂತರ ನಡೆಯಬೇಕೆಂತಲೂ ಅದರ ಉಪಯೋಗವನ್ನು ಇಡೀ ಕರ್ನಾಟಕದವರು ತೆಗೆದುಕೊಳ್ಳಬೇಕೆಂತಲೂ ಹೇಳಿ ಶ್ರೀ ಕಣಬರಗಿಮಠ ಇವರು ಶಿವಯೋಗಮಂದಿರದ ಪರಿಯಿಂದ ಸಾಹೇಬರು ತಮ್ಮ ಆಮಂತ್ರಣ ಸ್ವೀಕರಿಸಿಬಂದ ಬಗ್ಗೆ ಅವರ ಆಭಾರಮನ್ನಿಸಿದರು. ನಂತರ ರಾ|| ಸಾ|| ಕರ್ಜಗಿಯವರು ತಮ್ಮ ಮಂಜುಳವಾಣಿಯಿಂದ ಆಸಕರವಾಗಿ ಲೋಕಸೇವೆ ಮತ್ತು ರಾಜಸೇವೆಯ ಬಗ್ಗೆ ಭಾಷಣಮಾಡಿದರು. ನಂತರ ಶ್ರೀ ಶಿವಯೋಗಮಂದಿರದ ಪರವಾಗಿ ಕುರುಡರ ಫಂಡಿಗಾಗಿ ಶ್ರೀ ಶಿವಮೂರ್ತಿಸ್ವಾಮಿಗಳು 100 ರೂ. ಗಳನ್ನು ಕೊಟ್ಟರು. ಇದಕ್ಕೂ ಪೂರ್ವದಲ್ಲಿ ಸದರೀ ಕುರುಡರ ಫಂಡಿಗಾಗಿ ಶಿವಯೋಗಮಂದಿರದವರು ಎರಡು ಸಾರೆ ಕೊಟ್ಟಿದ್ದನ್ನು ತಿಳಿಸಿದರು. ನಂತರ ಮೆ|| ಹೆಂಡರಸನ್ ಸಾಹೇಬರು ಸಮಯಕ್ಕನುಸರಿಸಿ ಅರ್ಧತಾಸಿನವರೆಗೆ ಭಾಷಣಮಾಡಿದರು. ಶಿವಯೋಗಮಂದಿರದ ವ್ಯವಸ್ಥೆ ಶಿವಯೋಗಿಗಳ ವ ಸಾಧಕರ ದರ್ಶನದಿಂದ ತಮಗಾದ ಆನಂದ, ಮಂದಿರವು ನಿರಂತರವಾಗಿ ನಡೆಯುವದಕ್ಕೆ ಮಾಡಿದ ಉತ್ತಮವ್ಯವಸ್ಥೆ, ಹವ, ನೀರು, ವಿದ್ಯಾರ್ಥಿಗಳ ಶರೀರಸಂಪತ್ತುಗಳನ್ನು ನೋಡಿ, ಶ್ರೀಮನ್ನಿರಂಜನಮೂರ್ತಿ ಶ್ರೀ ಹಾನಗಲ್ಲ ಮಹಾಸ್ವಾಮಿಗಳನ್ನು ವಿಶೇಷವಾಗಿ ಶ್ಲಾಘಿಸಿದರು. ಮಂದಿರದ ಸಭಾಮಂಟಪದಲ್ಲಿ ಅಲ್ಲಲ್ಲಿ ತೂಗಹಾಕಿದ ರಾಜನಿಷ್ಠೆ. ರಾಜನೀತಿಪ್ರದವಾದ ವಾಕ್ಯಗಳನ್ನು ಕಂಡು ಸಂತೋಷಿತರಾಗಿ ಮೊದಲಿನ ರಾಜ್ಯಪದ್ಧತಿ, ಈಗಿನ ಸುಧಾರಣೆ, ತಮ್ಮ ಕರ್ತವ್ಯ, ಕುರುಡರಿಗಾಗಿ ಮಾಡಿದ ಕೆಲಸ, ಅದು ನಿರಂತರ ನಡೆಯುವಂತೆ ಮಾಡಬೇಕೆಂದ ಆಲೋಚನೆ ಮುಂತಾದ ವಿಷಯದಮೇಲೆ ಭಾಷಣಮಾಡಿ ಮಂದಿರದ ಬಗ್ಗೆ ವಿಜಿಟರ್ಸ್ ಬುಕ್ಕಿನಲ್ಲಿ ಹೀಗೆ ಬರೆದು ತಮಗೆ ಆನಂದಕೊಟ್ಟ ಬಗ್ಗೆ ಎಲ್ಲರನ್ನೂ ಕೊಂಡಾಡಿದರು, ನಂತರ ಮಂದಿರದ ಗೋವುಗಳನ್ನು ಮೈಸೂರುಸೀಮೆಯಿಂದ ತಂದ ಬೀಜದಹೋರಿಯನ್ನು ಕಂಡು ಆನಂದಪಟ್ಟರು. ತರುವಾಯ ಶಿವಯೋಗಿಗಳು ವೇದೋಕ್ತ ಆಶೀರ್ವಾದಮಾಡಿ ಫಲಪುಷ್ಪಗಳನ್ನು ಸಮರ್ಪಿಸಿದರು. ಅಂತೂ ಸಾಹೇಬರು ಮೂರು ತಾಸುಗಳವರೆಗೆ ಶಿವಯೋಗಮಂದಿರದಲ್ಲಿ ಕಾಲಕಳೆದು ದಯಮಾಡಿಸಿದರು. ಸಾಹೇಬರವರು ಶೀಘ್ರವೇ ವಿಲಾಯತಿಗೆ ಹೋಗುವವರಿದ್ದು ಮೂಲಕ ಅನೇಕಕಡೆಗೆ ಇವರಿಗೆ ಪಾನಸುಪಾರಿಗಳು ಆಗುತ್ತಿದ್ದು ಆಶ್ಚರ್ಯವಲ್ಲ. ಜಕನೂರಲ್ಲಿ ಬಾದಾಮಿ ತಾಲ್ಲೂಕು ಲೋಕಲ್‌ಬೋರ್ಡು ಪ್ರೆಸಿಡೆಂಟರಾದ ರಾ|| ರಾ|| ಭದ್ರಗೌಡಾ ಪಾಟೀಲ ಇವರ ತಾಂಬೂಲ ಸಮಾರಂಭವು ಬಹಳ ಉತ್ತಮರೀತಿಯಿಂದ ಜರುಗಿತು. ಅದರಂತೆ ಬನಶಂಕರಿಯಲ್ಲಿ ಬದಾಮಿಯಲ್ಲಿ ಗುಳೇದಗುಡ್ಡದಲ್ಲಿ ಮತ್ತು ಬಾಗಲಕೋಟೆಯಲ್ಲಿ ಆದವು. ಪ್ರತಿವರ್ಷದಂತೆ ಈ ಮಹಾಶಿವರಾತ್ರಿಗೆ ಶಿವಯೋಗಮಂದಿರದಲ್ಲಿ ದೊಡ್ಡಸಭೆ ನೆರೆದು ಶಿವಕೀರ್ತನೆ, ಪುರಾಣ, ವ್ಯಾಖ್ಯಾನ ಮುಂತಾದವುಗಳು ನಡೆಯುವವು.

ಪ್ರತ್ಯಕ್ಷದರ್ಶಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

APPLY FOR
SCORPION CURE.
M.S.SIDDAPPA BROS
MYSORE.

ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತಾ ಬಂದವರು ನಗುತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0 12 ಬಾಟ್ಲುಗಳಿಗೆ 2—6—0 25 ಬಾಟ್ಲುಗಳಿಗೆ 4—8—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲೆಂಡರ್ 0—14—0. ಮಾ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಟಲೆ ಸುಲಭ ಕಂತಿಗೂ, ಸಹ ಸಪ್ಲೈ ಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್ ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು,
[50—24] ಮೈಸೂರು.

೧೯೨೪ ನೆಯ ಇಸವಿ ಮಾರ್ಚಿ ತಾ|| ೨ ರಿಂದ ೧೯೨೪ ನೆಯ ಮಾರ್ಚಿ ತಾ|| ೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಮಾಘಬಹುಳ ದ್ವಾದಶಿಯಿಂದ ಫಾಲ್ಗುಣ ಶುದ್ಧ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	[illegible]
2	ಭಾನು	ದ್ವಾದ	40.30	ಉಷಾ	26.32	20
3	¹ಸೋಮ	ತ್ರಯೋ	33.43	ಶ್ರವ	25.8	21
4	ಮಂಗಳ	ಚತು	36.8	ಧನಿ	24.54	22
5	ಬುಧ	ಅಮಾ	35.48	ಶತ	25.55	23
6	ಗುರು	ಪಾಡ್ಯ	36.44	ಪೂಭಾ	28.8	24
7	ಶುಕ್ರ	ಬಿದಿ	38.47	ಉಭಾ	31.27	25
8	ಶನಿ	ತದಿ	41.50	ರೇವ	35.46	[illegible]

(1) ಪ್ರದೋಷ, ಮಹಾಶಿವರಾತ್ರಿ, ನಂಜನಗೂಡಿನಲ್ಲಿ ಚಿಕ್ಕ ರ ಸವಾಹನ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿರಾಜಮಂಡಲಚಿಕ್ಕಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮುಖ್ಯ ಕ್ಷಸ್ವಪಾಲಮತ್ತ ಮಕಲಾರೋಲಂಸುಧೀಭೃಂಗವ | ಸ್ತೋಮಾಭೀಷ್ಟದಶೀಲ ಶಾಕರೆ ಸಾಧ್ಯಾಲವಾಲಂವಲಂ ||
ಶೀತಾಂಶೀತಯಶಃಪ್ರತಾಪವಿಪುಲಂ ಸದ್ವೃತ್ತ ಮಾಲಾಕುಲಂ | ಪ್ರೇಮಂಚೆತ್ತಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೪-೦]

ಸಂಪುಟ ೩೭] ಮೈಸೂರು ಸ್ಟಾರ್ ಸರ್ ೧೯೨೪ ನೆಯ ಇಸವಿ ಮಾರ್ಚಿ ತಾರೀಖು ೧೬ ನೆಯ ಭಾನುವಾರ. [ಸಂಚಿಕೆ ೧೧

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಪ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕಳೆತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟಿದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
7 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾ. ಜೆ. ಬಿ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುದ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—29] ಪೋ. ಬಾ. ೫೧೦, ಮದರಾಸು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಚಿತ್ರ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವೃಷಭಸಂದೇಶ	೦—೪—೦	೦—೯—೦
[illegible]	೦—೧—೦	೦—೬—೦
[illegible]	೦—೮—೦	೦—೧೩—೦

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—16] ಹೊಸಮಠ, ಮೈಸೂರು.

ಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

☛ ೧೦೦೦ ರೂ. ಇನಾಮು. ☚

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಶುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಇರುವ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡೆ, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುಬಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಭ್ರಂಶ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವಬಂದು ಕಾಮವಾಸನೆವುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೀಹಸ್ತಿಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಮುದ್ರ ಕೋಶದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಕವಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕಿ, ಕಮರಕಸ, ಕಫಲ್ಯಾಗೊಂದ, ಪಂಚಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ಶಾಲೀಮುಖಾನಾ. ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಇಲಕಡಿ, ಕಹಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ಪಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಪಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜೀನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. [illegible]

ಕಾಗದ ಬರೆಯತಕ್ಕವರು ತಮ್ಮ ಪೂರಾ ಅಡ್ರಸ್ [illegible] ಸಹ ಬರೆಯಿರಿ.

[50—33] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೫-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.
ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.
ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.
ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.
ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.
ಪಂಚಶ್ಲೋಕೀ ಬೆಲೆ ೧—೦—೦.
ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.
ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿ
[50—10] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಪುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಗಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ. ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—18] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿ ಇರುತ್ತೇನೆ. ಇಷ್ಟಪಡುವವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಊದುಬತ್ತಿ ಷಾಪ್, ಎಸ್. ಕಳ್ಳಪ್ಪ,
ಬೆಂಗಳೂರು ಸಿಟಿ ದೊಡ್ಡಪ್ಯಾಟೆ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಮಾರ್ಚಿ ತಾ|| ೧೬ ನೆಯ ಭಾನುವಾರ.

HIS HIGHNESS' ADDRESS.

"This day marks dawning of a new era in the history of Mysore." So spoke His Highness the Maharaja at the inaugural ceremony of the reconstituted Mysore Legislature on the 12th inst. at the Jagan Mohan Palace where the two popular Houses had met in their new and reformed garb. The address, which was delivered in a clear and impressive tone, bore all the marks of wisdom and dignity which are associated with His Highness and of the abounding sympathy with the aspirations of the people. For over twenty years, His Highness has been ruling the State, with what keen and genuine regard for the welfare and progress of the subjects it is impossible to describe. That has been our unique good fortune.

His Highness called upon the members to use their new powers to strengthen all the beneficent activities in the country, industrial, civil, social and educational, the need for instructing the people to practise thrift in these days of uncertain seasons a virtue, which the Government may also practise with considerable good to the State. His Highness was pleased to touch the rather delicate question of party conflicts, and it was only on the experience of all legislatures in the world that His Highness gave expression to, when His Highness said that party conflicts were inevitable. There have been in our midst some politicians who though always carrying on their agitation in the interest of a class are never tired of decrying outwardly the party system. It was a wise advice of His Highness to have asked the members to place the interests of the State as a whole before those of any section or class. His Highness asked them to keep " in close touch with the Government and the people and to interpret the one to the other, and hoped that the long silence of the depressed and the humble would be broken and full responsibility for their well-being shouldered by the educated and the well-to-do classes, words which we sincerely hope will be taken to heart by the members. His Highness has asked the members to realise that the interests of Government and the people are identical, and that the difference of opinion between both could refer only to the means, never to the end. The stand point of the Government, so often differs from that of the people, and if some device could be found to bridge the gulf and establish a correlation between both, there would be very much less room for differences. The members have to be very grateful to His Highness for the assurance of the responsiveness and goodwill of the Government which doubtless the members will reciprocate. We hope that the members will ponder over the words of wisdom of our Patriotic Sovereign and by helping " to build up the prosperity and reputation of the State," justify the expectations of His Highness.

UNITY AND ELECTIONS.

The recent elections from the Represetative Assembly to the Legislative Council, the standing Committees, and the Boards of the Economic Conference, are a striking domonstration of what united effort and loyalty to a cause could accomplish. Six out of 8 candidates put up by the popular party have got into the Legislative Council and this in spite of all the nefarious and unholy attempts made by interested men to create splits in the camp. Thanks to the judgment and to the loyalty of the main body of the House, the stupendous efforts of the opponents proved in the main abbortive. There was quite a number, who, simpletons that they are, strayed out of the flock listening to the syrenlike music of men with friendly garbs, and under the misleading guidance even worked against the popular party in vain. But they have, we hope learnt a lesson, that constancy to a cause is a better qualification for success, than an arrogant and exaggerated notion of one's own importance. It may still take time for men to become amenable to party discipline, and we hope the experience they have gained this time will stand in good stead in future years. There is also the lesson for the popular party to organise itself better, and we hope the executive of the Prajamitra Mandali will exert better to strengthen the association and extend its activities. The District elections to the Legislative are not quite satisfactory and a beginning must be made to fight the elections better. It is strange that in Hassan District there should be only one candidate standing to the Legislative Council and that he should be returned unopposed. We hope that the members will not rest quiet with the temporary victory, but will continue their task of propaganda not merely in the political field but in the matter of education and social uplift of the humble classes. The reforms have come in good time. The mission of the members is a holy and responsible one. There have been many iniquities in the past, and the present is not without them. They have to be got rid of. The enlightenment of the masses is a sufficient task by itself and it would require all the energy of the people's representative to combat the ignorance of the masses. The poverty of the country as a whole presents a 'nd less difficult problem. Labour there is, but those who labour do not reap the fruits thereof. We hope that the members, conscious of their responsibilities and the expectations of those who have elected them will strive their utmost for the good of the country.

ಶ್ರೀಮನ್ ಮಹಾರಾಜರವರ ನಿರೂಪ.

ನೂತನ ರಾಜಕೀಯ ಸಂಸ್ಕರಣಗಳಿಂದ ರೂಪುಗೊಂಡಿರುವ ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಆರಂಭೋತ್ಸವವು ಕಳೆದ ತಾ|| 12 ರ ಸಾಯಂಕಾಲ 5 ಗಂಟೆಯಲ್ಲಿ ಜಗನ್ಮೋಹನಪ್ರಾಸಾದದ ವಿವಾಹಮಂಟಪದಲ್ಲಿ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರಿಂದ ನೆರವೇರಿಸಲ್ಪಟ್ಟಿತು. ದಿವಾನರು, ಕೌನ್ಸಿಲರುಗಳು, ಶಾಖಾಧಿಕಾರಿಗಳು, ಸೆಕ್ರೆಟರಿಗಳು, ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಮೆಂಬರುಗಳು ಸ್ಥಳೀಯಾಧಿಕಾರಿಗಳು ಮತ್ತು ಪುರಪ್ರಮುಖರು ದಯಮಾಡಿಸಿದ್ದರು. ಸಭಾರಂಭೋತ್ಸವಕಾಲದಲ್ಲಿ ಶ್ರೀಮನ್ ಮಹಾರಾಜರವರು ಇಂಗ್ಲೀಷಿನಲ್ಲಿ ಅಪ್ಪಣೆ ಕೊಡಿಸಿದ ನಿರೂಪವು ಬೋಧಪರವೂ, ಪರಸ್ಪರ ವಿಶ್ವಾಸ ಏಕಮತ್ಯಾನುಬಂಧವೂ ಆಗಿರುವುದಲ್ಲದೆ, ಅದರಂತೆ ಪ್ರಜಾಪ್ರತಿನಿಧಿಗಳು ಸರ್ಕಾರದವರೊಡನೆ ಸಹಕಾರ ಸಾನುಭೂತಿಯಿಂದ ವರ್ತಿಸಿದುದಾದರೆ ರಾಜಕಾರ್ಯವು ಸುಲಲಿತವಾಗಿ ನಡೆದು ಸಂಸ್ಥಾನಕ್ಕೆ ಕೀರ್ತಿಪ್ರತಿಷ್ಠೆಯೂ, ಪ್ರಜಾಕ್ಷೇಮವೂ ಆಗುವುದಲ್ಲದೆ ಶ್ರೀಮನ್ ಮಹಾರಾಜರವರು ಸಂತುಷ್ಟರಾಗಿ ತಮ್ಮ ಪ್ರಜೆಗಳಿಗೆ ಇತೋಪ್ಯತಿಶಯವಾದ ಅಧಿಕಾರ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಅವಕಾಶವುಂಟಾಗುವುದರಲ್ಲಿ ಸಂದೇಹವಿಲ್ಲವು. ಇದರ ಕನ್ನಡ ಪರಿವರ್ತನವು ಬೇರೆಕಡೆ ಪ್ರಕಟಿಸಲ್ಪಟ್ಟಿದೆ. ಪ್ರಜೆಗಳು ವಿದ್ಯೆ, ಕೈಗಾರಿಕೆಗಳಲ್ಲೂ ಪೌರಸಾಮಾಜಿಕ ವಿಚಾರದಲ್ಲೂ ಅಭಿವೃದ್ಧಿಯನ್ನು ಹೊಂದುವಂತೆಯೂ, ಈ ದುಷ್ಕಾಲದಲ್ಲಿ ದುಂದುವೆಚ್ಚ ಮಾಡದಂತೆಯೂ ಪ್ರಜಾಪ್ರತಿನಿಧಿಗಳು ಬೋಧಿಸಬೇಕಾಗಿ ಶ್ರೀಮನ್ ಮಹಾರಾಜರವರು ದೂರದೃಷ್ಟಿಯಿಂದ ಅಪ್ಪಣೆಕೊಡಿಸಿರುತ್ತಾರೆ. ಪ್ರಜಾಪ್ರತಿನಿಧಿ ಮೆಂಬರುಗಳು ಇದನ್ನು ಖಂಡಿತವಾಗಿಯೂ ಮರೆಯಬಾರದು ಮತ್ತು ಮಹಾಸ್ವಾಮಿಯವರು ಅಪ್ಪಣೆ ಕೊಡಿಸಿರುವಂತೆ ಪ್ರಜೆಗಳ ನಿಜವಾದ ಕುಂದುಕೊರತೆಗಳನ್ನು ಸರ್ಕಾರದವರಲ್ಲಿ ಬಿನ್ನವಿಸಿ ಅವುಗಳ ಪರಿಹಾರೋದ್ಯಮದಲ್ಲಿ ಸರ್ಕಾರದವರ ಕೂಡ ಸಹಕಾರಿಗಳಾಗಿದ್ದು ಪ್ರಭುಗಳಿಗೆ ಸಂತೋಷವನ್ನೂ ಪ್ರಜೆಗಳಿಗೆ ಲಾಭವನ್ನೂ ಉಂಟುಮಾಡಿ ಪ್ರಭುಪ್ರಜಾಸನ್ಮಾನಕ್ಕೆ ಪಾತ್ರರಾಗುವರೆಂದು ನಿರೀಕ್ಷಿಸುತ್ತೇವೆ. ನೂತನ ಶಕಾರಂಭ ದಿವಸ ಮಹಾಪ್ರಭುವರ್ಯ್ಯರ ಅಮೃತವಾಣಿಯಿಂದ ಅಪ್ಪಣೆ ಕೊಡಿಸಲ್ಪಟ್ಟ ಮಹಾನಿರೂಪವು ಅವಿದ್ಯಾವಂತರಾದಿಯಾಗಿ ಸಂಸ್ಥಾನದ ಆಬಾಲವೃದ್ಧರೆಲ್ಲರಿಂದಲೂ ನಿರಾಯಾಸವಾಗಿ ತಿಳಿಯಲ್ಪಟ್ಟು ಮನನಮಾಡಲ್ಪಡುವಂತೆ ಬಿಡುಗನ್ನಡದಲ್ಲಿ ಸುಲಭಶೈಲಿಯಿಂದ ಬರೆಯಲ್ಪಟ್ಟಿದ್ದರೆ ಅನುಕೂಲವಾಗಿರುತ್ತಿದ್ದಿತು.

ನ್ಯಾಯವಿಧಾಯಕ ಸಭೆಗೆ 8 ಜನ ಮೆಂಬರುಗಳು ಚುನಾಯಿಸಲ್ಪಟ್ಟದು.

ಪ್ರಜಾಪ್ರತಿನಿಧಿ ಸಭೆಯಿಂದ ನ್ಯಾಯವಿಧಾಯಕ ಸಭೆಗೆ 8 ಜನ ಮೆಂಬರುಗಳನ್ನು ಮತ್ತು ಇತರ ಬೋರ್ಡುಗಳಿಗೂ ಸ್ಟ್ಯಾಂಡಿಂಗ್ ಕಮಿಟಿಗಳಿಗೂ ಮೆಂಬರುಗಳನ್ನು ಆರಿಸುವ ಕೆಲಸವು ಕಳೆದ ತಾ|| 12 ರ ಸಾಯಂಕಾಲ 5½ ಗಂಟೆಯಿಂದ ರಾತ್ರಿ 8½ ಗಂಟೆಯುವರೆಗೂ ಮಾರನೆಯದಿನ ಬೆಳಿಗ್ಗೆ 8 ಗಂಟೆಯಿಂದ 11½-12 ಗಂಟೆಯುವರೆಗೂ ಜಗನ್ಮೋಹನಪ್ರಾಸಾದದ ವಿವಾಹಮಂಟಪದಲ್ಲಿ ಜರುಗಿತು. ನ್ಯಾಯವಿಧಾಯಕ ಸಭೆಯ ಚುನಾವಣೆಗೆ ಈ ಕೆಳಗಣ ಪಟ್ಟಿಯಲ್ಲಿ ಕಂಡ 44 ಮಂದಿಗಳು ಅಭ್ಯರ್ಥಿಗಳಾಗಿ ನಿಂತಿದ್ದರು. ಇವರಲ್ಲಿ ಕೆಲರು ವಿನಾ ಉಳಿದ ಹಿಂದುಳಿದವರ್ಗಗಳ ಪ್ರತಿನಿಧಿ ಮೆಂಬರುಗಳು ಹಿಂದಣ ದಿವಸ ಸಭೆ ಸೇರಿದ್ದು ತಂತಮ್ಮೊಳಗೆ ಪರ್ಯಾಲೋಚಿಸಿಕೊಂಡು ಮ|| ಗಳಾದ (1) ಜೆ. ರುದ್ರಪ್ಪ, ಎಂ.ಎ., ಎಲ್‌ಎಲ್.ಬಿ., ಯವರು, (2) ಬಿ. ಎಲ್. ಬಯಣ್ಣನವರು, (3) ಜೆ. ಪರಮಶಿವಯ್ಯ, ಬಿ.ಎ. ಎಲ್‌ಎಲ್.ಬಿ., ಯವರು, (4) ನೀಲ್ಗಿರಿ ಜೆ. ಸಂಜೀವಯ್ಯನವರು, (5) ಎಂ. ಅಬ್ಬಾಸ್ ಖಾನರವರು, (6) ಎಂ. ಸಿ. ಲಿಂಗೇಗೌಡರು, (7) ಎಲ್. ವೇಮಾರಡ್ಡಿಯವರು, (8) ಡಿ. ಎಸ್. ಮಲ್ಲಪ್ಪನವರು ಚುನಾವಣೆಗೆ ನಿಂತು ಉಳಿದ 19 ಜನರು ತಮ್ಮ ಉಮೇದುವಾರಿತನವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದರು. ಆದರೆ ಕೆಲರು ಈ ನಿರ್ಧಾರಕ್ಕೊಪ್ಪದೆ ಹೋದರು. ಓಟಿಂಗ್ ಸ್ಥಾನಗಳು 6 ಕಡೆ ಏರ್ಪಡಿಸಲ್ಪಟ್ಟಿದ್ದುವು. ಮೊದಲನೆಯ ದಿನ ಉಭಯ ಕೌನ್ಸಿಲರುಗಳೂ ಓಟಿಂಗ್ ಮುಗಿಯುವವರೆಗೂ ಇದ್ದರು. ಮಾರನೆಯ ದಿನ ಪ್ರಾತಃಕಾಲ ಮಾತ್ರ ಸ್ವಲ್ಪಹೊತ್ತಿದ್ದು ಹೊರಟುಹೋದರು. ಈ ಪೈಪೋಟಿಯು ಬಹಳ ಉತ್ಸಾಹದಿಂದಲೂ, ಸ್ಪರ್ಧೆಯಿಂದಲೂ ನಡೆದಿತು. ಎರಡನೆಯ ದಿನ ಓಟಿಂಗು ಮುಗಿದ ಕೂಡಲೆ ಪೋಲಿಂಗ್ ಆಫೀಸರಾದ ಮ|| ಕೆ. ಅನಂತರಾಮರ್ ರವರು ಓಟುಗಳನ್ನು ಗಣನೆಮಾಡಿಸಿ ದಿವಾನರಲ್ಲಿಗೆ ಕಳುಹಿಸಿಕೊಟ್ಟು ಅವರನುಮತಿಯಿಂದ ಉಮೇದುವಾರರ ಇದಿರಿಗೆ ಓದಿ ಹೇಳಿದುದರಲ್ಲಿ ಜೆ. ಪರಮಶಿವಯ್ಯ, ಬಿ.ಎ.,ಎಲ್‌ಎಲ್.ಬಿ., ಯವರು, ಮಹಮ್ಮದ್ ಅಬ್ಬಾಸ್ ಖಾನರವರು, ಜೆ. ರುದ್ರಪ್ಪ, ಎಂ.ಎ.,ಎಲ್‌ಎಲ್.ಬಿ., ಯವರು, ಬಿ. ಎಲ್. ಬಯಣ್ಣನವರು, ಎಂ. ವೆಂಕಟಕೃಷ್ಣಯ್ಯನವರು, ನೀಲ್ಗಿರಿ ಜೆ. ಸಂಜೀವಯ್ಯನವರು, ಎಂ. ರಾಮಚಂದ್ರರಾವ್ ಸಿಂಧ್ಯರವರು, ಡಿ. ಎಸ್. ಮಲ್ಲಪ್ಪನವರು ಈ 8 ಜನರೇ ನ್ಯಾಯವಿಧಾಯಕಸಭಾ ಸಭಿಕರಾಗಿ ಆರಿಸಲ್ಪಟ್ಟರೆಂದು ಗೊತ್ತಾಯಿತು. ಉಳಿದ ಚುನಾವಣೆಯ ಫಲಿತಾಂಶವನ್ನು ಮುಂದೆ ತಿಳಿಸುತ್ತೇವೆ. ಹಿಂದುಳಿದ ಜನವರ್ಗಗಳ ಮೆಂಬರುಗಳೆಲ್ಲರೂ ಓಟಿಂಗಿನ ಹಿಂದಣದಿವಸ ಸಭೆ ಸೇರಿ ನಿರ್ಧರಿಸಿದಪ್ರಕಾರ 8 ಜನರ ವಿನಾ ಉಳಿದವರೆಲ್ಲರೂ ತಂತಮ್ಮ ಉಮೇದುವಾರಿತನವನ್ನು ಹಿಂದಕ್ಕೆ ತೆಗೆದುಕೊಂಡು ಪ್ರಜಾಪ್ರತಿನಿಧಿಗಳೆಲ್ಲರೂ ಆ 8 ಜನರಿಗೇ ಓಟುಮಾಡುವಂತೆ ಪ್ರಯತ್ನಿಸಿದ್ದಲ್ಲಿ ಆ ಹಿಂದುಳಿದ 8 ಜನರೇ ಉತ್ತೀರ್ಣರಾಗಿ ಬರುತ್ತಿದ್ದುದರಲ್ಲಿ ಅಭ್ಯಂತರವೇ ಇರಲಿಲ್ಲವು. ಆದರೆ ಕೆಲರು ಹಿತಶತೃಗಳ ಕಪಟೋಕ್ತಿಗೆ ಮನಸೋತು ಮುಷ್ಕರಹಿಡಿದು ಉಮೇದುವಾರಿತನವನ್ನು ಹಿಂದಕ್ಕೆ ತೆಗೆದುಕೊಳ್ಳದೆ ಹೋದುದಲ್ಲದೆ ಪ್ರತಿಭಟಿಸಿ ಕೆಲಸಮಾಡಿದುದರ ಮೇಲೆ ಗೊತ್ತುಮಾಡಲ್ಪಟ್ಟಿದ್ದ 8 ಜನರಲ್ಲಿ ಇಬ್ಬರು ತಪ್ಪಿಹೋಗಿ ತಾವೂ ಬರದೆ ಬೇರೆಯವರು ಬರಲು ಅವಕಾಶವಾಯಿತು. ಹೀಗೆ ಹಿಂದೆಬಿದ್ದವರಲ್ಲಿ ಮದ್ದೂರಿನ ಮ|| ಎಂ. ಸಿ. ಲಿಂಗೇಗೌಡರು ಒಬ್ಬರಾಗಿರುವರು. ಕಾರ್ಯೋತ್ಸಾಹಶೀಲರೂ, ದಕ್ಷರೂ, ಹಿಂದುಳಿದ ಸೋದರಜನರ ಶ್ರೇಯೋಭಿಲಾಷೆಯಿಂದ ಪಾಟುಪಡುತ್ತಿರುವವರೂ ಆದ ಇವರು ಉತ್ತೀರ್ಣರಾಗದಿರುವುದಕ್ಕಾಗಿ ನಾವು ಚಿಂತಿಸುತ್ತೇವಲ್ಲದೆ, ಇವರು ಇನ್ನೂ ತರುಣರಾಗಿರುವುದರಿಂದ ನಿರುತ್ಸಾಹಿಗಳಾಗದೆ ಮುಂದಣ ಭರವಸೆಯ ಮೇಲೆ ಲಕ್ಷ್ಯವಿಟ್ಟು ತಾವು ಕೈಕೊಂಡಿರುವ ಪ್ರಜಾಸೇವಾ ಸತ್ಪ್ರಯತ್ನದಲ್ಲಿ ನಿಮಗ್ನಚಿತ್ತರಾಗಿರುವರೆಂದು ನಿರೀಕ್ಷಿಸುತ್ತೇವೆ.

ಕಳೆದ ತಾ|| ೨ ರ ಸಂಚಿಕೆಯಲ್ಲಿ ಮ|| ಪರಮಶಿವಯ್ಯನವರ ಯೋಗ್ಯತಾವಿಶೇಷವನ್ನೂ, ದೇಶಸೇವಾ ಕಾರ್ಯದಲ್ಲಿ ಅವರಿಗಿರುವ ಅಭಿನಿವೇಶವನ್ನೂ ನಾವು ಸ್ಪಷ್ಟವಾಗಿ ಬರೆದಿದ್ದೆವು. ಪ್ರಜಾಪ್ರತಿನಿಧಿಗಳಲ್ಲಿ ವಿಶೇಷಭಾಗದವರು ಗುಣಗ್ರಹಣಮಾಡಿ ತಮ್ಮಗಳ ಓಟುಗಳನ್ನು ಇವರಿಗೂ ಇವರಂತೆಯೇ ಹಿಂದುಳಿದ ವರ್ಗಗಳಿಗೆ ಸೇರಿದ ಮ|| ಅಬ್ಬಾಸ್ ಖಾನ್ ಮೊದಲಾಗಿ ಐವರಿಗೂ ಕೊಟ್ಟು ತಮ್ಮ ಪಕ್ಷದ ಸರಿಯಾದ ಪ್ರತಿನಿಧಿಗಳು ನ್ಯಾಯವಿಧಾಯಕಸಭೆಗೆ ಬರುವಂತೆ ಮಾಡಿಕೊಂಡುದು ಅವರಿಗೆ ಭೂಷಣವಾಗಿರುತ್ತದೆ. ಈ ಕಾರಣದಿಂದ ಸಂಕಲ್ಪಸಿದ್ಧಿಯನ್ನು ಬಹುಮಟ್ಟಿಗೆ ಪಡೆದ ಹಿಂದುಳಿದ ಪ್ರತಿನಿಧಿ ಮಹಾಶಯರನ್ನೂ ಮ|| ಗಳಾದ ಜೆ. ಪರಮಶಿವಯ್ಯನವರು, ಅಬ್ಬಾಸ್ ಖಾನರವರು, ಜೆ. ರುದ್ರಪ್ಪನವರು, ನೀಲ್ಗಿರಿ ಸಂಜೀವಯ್ಯನವರು, ಬಯಣ್ಣನವರು ಮತ್ತು ಡಿ.ಎಸ್. ಮಲ್ಲಪ್ಪನವರು ಇವರುಗಳನ್ನೂ ನಾವು ಅಭಿನಂದಿಸುವುದಲ್ಲದೆ ಪ್ರತಿನಿಧಿಗಳು ತಮ್ಮಲ್ಲಿಟ್ಟ ಭರವಸೆಯನ್ನು ಸಾರ್ಥಕಪಡಿಸುವಂತೆ ನ್ಯಾಯವಿಧಾಯಕಸಭೆಯಲ್ಲಿ ಇವರುಗಳು ಕೆಲಸಮಾಡಿ ಇತೋಪ್ಯತಿಶಯವಾಗಿ ಸಹೋದರ ಪ್ರಜಾಪ್ರೀತಿಪಾತ್ರರೂ, ಯಶೋವಂತರೂ ಆಗಲೆಂದು ಕೋರುತ್ತೇವೆ. ಮತ್ತು ಆತ್ಮೋದ್ಧಾರಕ್ಕೆ ಅತ್ಯಂತ ಅವಶ್ಯಕವಾದ ಇಂತಹ ಏಕಮತ್ಯವೂ ಕರ್ತವ್ಯ ತತ್ಪರತೆಯೂ ಹಿಂದುಳಿದ ಜನವರ್ಗಗಳಲ್ಲಿ ಹೀಗೆಯೇ ಜಾಗರೂಕತವಾಗಿರ ಕೋರಿ ಅವರೆಲ್ಲರ ಶುಭವನ್ನೂ ಹಾರೈಸುತ್ತೇವೆ. ಈ ದಲ್ಲಿ ಒಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ಸುತ್ತೇವೆ, ಅದೇನಂದರೆ—ಹಿಂದುಳಿದ ಒಕ್ಕಲಿಗ ಜನ ದವರ ಪ್ರಾತಿನಿಧ್ಯವು ಅವರ ಜನಸಂಖ್ಯಾನುಗುಣವಾಗಿ ಯವಿಧಾಯಕ ಸಭೆಯಲ್ಲಿಲ್ಲವಾದುದರಿಂದ ಅಂದರೆ 14 ಜನರಿಗೆ ಇಬ್ಬರು ಮಾತ್ರ ಇರುವುದರಿಂದ ಘನಸರ್ಕಾರ ಜನಸಂಖ್ಯಾಮಾನದಿಂದ ಇತರ ಎಲ್ಲ ಜನವರ್ಗಗಳಿ ಅತ್ಯಧಿಕವಾಗಿ ನ್ಯಾಯವಿಧಾಯಕ ಸಭೆಯಲ್ಲಿ ತಿನಿಧ್ಯವನ್ನು ಹೊಂದಿರುವ ಅಲ್ಪಸಂಖ್ಯಾಕವಾದ ಜನವ ದವರೊಬ್ಬರನ್ನು ಯಾವ ತತ್ವದಮೇಲೆ ನಾಮಿನೇಟ್ ಡಿರುವರೋ ಅದೇ ತತ್ವದಮೇಲೆ ಬಹು ಸಂಖ್ಯಾಕರಾದ ಲಿಗರಲ್ಲೊಬ್ಬರನ್ನೂ ಪ್ರಾತಿನಿಧ್ಯವನ್ನು ಹೊಂದಲು ಅವ ದೊರೆಯದಿರುವ ಜೈನರಲ್ಲೊಬ್ಬರನ್ನೂ ನ್ಯಾಯವಿಧಾ ಸಭೆಗೆ ನಾಮಿನೇಟ್ ಮಾಡಬೇಕಾದುದು ಅವಶ್ಯಕವಾ ತ್ತದೆ.

ನ್ಯಾಯವಿಧಾಯಕಸಭೆಗೆ ಪ್ರಜಾಪ್ರತಿನಿಧಿ ಸಭೆಯಿಂದ ಆರಿಸಲ್ಪಟ್ಟ ಮೆಂಬರುಗಳು ಮತ್ತು ಅವರಿಗೆ ಬಂದ ಓಟ್ಸು.

ಮ|| ಗಳಾದ

ಜೆ. ಪರಮಶಿವಯ್ಯನವರು, ಬಿ.ಎ.,ಎಲ್‌ಎಲ್.ಬಿ., ಅಡ್ವೋಕೇಟ್, ಬೆಂಗಳೂರು	ಬಂದ ಓಟ್ಸು 111
ಮಹಮ್ಮದ್ ಅಬ್ಬಾಸ್‌ಖಾನರವರು, ತೊಲೆವ್ಯಾಪಾರಿ, ಬೆಂಗಳೂರು	,, 90
ಜೆ. ರುದ್ರಪ್ಪ, ಎಂ.ಎ.,ಎಲ್‌ಎಲ್.ಬಿ., ಯವರು, ಅಡ್ವೋಕೇಟ್, ತುಮಕೂರು	,, 87
ಬಿ. ಎಲ್. ಬಯ್ಯಣ್ಣನವರು, ಲ್ಯಾಂಡ್‌ಹೋಲ್ಡರ್, ಬೆಂಗಳೂರು	,, 85
ಎಂ. ವೆಂಕಟಕೃಷ್ಣಯ್ಯನವರು, ಮರಿಮಲ್ಲಪ್ಪನವರ ಹೈಸ್ಕೂಲ್ ರಿ|| ಹೆ|| ಮಾಸ್ಟರ್	,, 80
ಎಂ. ರಾಮಚಂದ್ರರಾವ್ ಸಿಂಧ್ಯರು ಮರ್ಚಂಟ್ ಬೆಂಗಳೂರು	,, 78
ನೀಲ್ಗಿರಿ ಜೆ. ಸಂಜೀವಯ್ಯನವರು ಮರ್ಚೆಂಟ್, ಬೆಂಗಳೂರು	,, 77
ಡಿ. ಎಸ್. ಮಲ್ಲಪ್ಪನವರು, ಮರ್ಚೆಂಟ್ ತಿಪಟೂರು	,, 71

ಮೆಂಬರುಗಳಾಗಿ ನಿಂತಿದ್ದು ಉತ್ತೀರ್ಣರಾಗದೆ ಹೋದವರು.

ಮ|| ಗಳಾದ

ಟಿ. ನಾರಾಯಣಸ್ವಾಮಿಸೆಟ್ಟರು ಫಸ್ಟ್‌ಗ್ರೇಡ್ ಪ್ಲೀಡರ್, ಚಿಕ್ಕಬಳ್ಳಾಪುರ	ಬಂದ ಓಟ್ಸು 22
ಎಂ. ಅನಂತಯ್ಯನವರು, ಪ್ಲೀಡರ್, ಶಿವಮೊಗ್ಗ	,, 31
ಡಿ. ಎಸ್. ಹನುಮಂತರಾಯರು, ಶಾನಭೋಗ್,	,, 6
ಕೆ. ಸೂರ ನಾರಾಯಣರಾಯರು, ಜೋಡಿದಾರ್,	,, 9
ಎಚ್. ಪಿ. ರಂಗಸ್ವಾಮಿ, ಬಿ.ಎ., ಎಲ್‌ಎಲ್.ಬಿ., ಅಡ್ವೋಕೇಟ್, ಹಾಸನ	,, 49
[illegible] ಕೃಷ್ಣಮೂರ್ತಿರಾಯರು, ಜಮೀನ್ದಾರ್, ಬೆಂಗಳೂರು	,, 58
ಬಿ. ಶ್ರೀನಿವಾಸಯ್ಯಂಗಾರ್ ಇನಾಮ್ದಾರ್, ಬೆಂಗಳೂರು	,, 51
ಜಿ. ದೇಪೋಜಿರಾಯರು, ಫಸ್ಟ್‌ಗ್ರೇಡ್ ಪ್ಲೀಡರ್, ಶ್ರೀರಂಗಪಟ್ಟಣ	,, 49
ಬಿ. ಕೆ. ರಾಮಕೃಷ್ಣಯ್ಯ, ಎಂ.ಎ., ಎಲ್‌ಎಲ್.ಬಿ., ಯವರು, ಅಡ್ವೋಕೇಟ್, ಮೈಸೂರು	,, 22
ಜಿ. ಕೆ. ಬಲಿಜಾ, ಫಸ್ಟ್‌ಗ್ರೇಡ್ ಪ್ಲೀಡರ್, ಬೆಂಗಳೂರು	,, 17
ಜೆ. ಆರ್. ಐಸಾಕ್, ಬಿ.ಎ., ಎಂ. ಬಿ. ಇ. ಯವರು	,, 15
ಎಚ್. ಕೃಷ್ಣಸ್ವಾಮಿರಾವ್, ಬಿ.ಎ.,ಎಲ್‌ಎಲ್.ಬಿ.,ಯವರು ಅಡ್ವೋಕೇಟ್, ಮೈಸೂರು	,, 23
ಎಚ್. ಎನ್. ರಾಘವೇಂದ್ರರಾಯರು, ಬೇಸಾಯಗಾರರು, ಹುಣಸೂರು	,, 7
ಎಂ. ಪಿ. ಸೋಮಶೇಖರರಾವ್, ಅಡ್ವೋಕೇಟರು, ಬೆಂಗಳೂರು	,, 10
ಬಿ. ವೆಂಕಟನಾರಣಪ್ಪನವರು, ಎಂ.ಎ., ಬೆಂಗಳೂರು	,, 15
ಎಚ್. ಶ್ರೀಕಂಠಯ್ಯನವರು, ಬಿ.ಎ., ಬಿ.ಎಲ್., ಅಡ್ವೋಕೇಟ್, ಬೆಂಗಳೂರು	,, 45
ಎ. ಅಬ್ದುಲ್‌ನಬಿ, ಬಿ. ಎ. ಎಲ್‌ಎಲ್. ಬಿ., ಯವರು, ಅಡ್ವೋಕೇಟ್ ಬೆಂಗಳೂರು	,, 47
ಕೆ. ವೆಂಕಟಸ್ವಾಮಯ್ಯನವರು ಬಿ.ಎ., ಬಿ.ಎಲ್., ಅಡ್ವೋಕೇಟ್, ನಂಜನಗೂಡು	,, 14
ರಾಮೇಗೌಡರು, ಕಾಮಸಮುದ್ರ	,, 18
ಸಿ. ಲಿಂಗೇಗೌಡರು, ಮದ್ದೂರು	,, 67
ಸಿ. ಬಿ. ಶ್ರೀನಿವಾಸರಾಯರು, ಎಂ. ಎ., ಎಲ್‌ಎಲ್, ಬಿ., ಅಡ್ವೋಕೇಟ್, ಬೆಂಗಳೂರು	,, 18
. ದೇವಯ್ಯನವರು, ಲ್ಯಾಂಡ್‌ಹೋಲ್ಡರ್, ಶ್ರೀರಂಗಪಟ್ಟಣ	,, 5
. ವೇಮಾರಡ್ಡಿಯವರು, ಮಾಲೂರು,	,, 60
. ಎಂ. ಅಬ್ದುಲ್‌ಖುದುಸ್‌ರವರು ಮರ್ಚೆಂಟ್, ಪಟ್ಟಣ	,, 7
. ಪಿ. ಹನುಮಂತರಾಜುಯವರು ಸ್ಕೂಲ್‌ಮಾಸ್ಟರ್ ದುರ್ಗ	,, 7
ಸುಬ್ಬರಾಯರು, ಬಿ. ಎ., ಬಿ. ಎಲ್., ಅಡ್ವೋಕೇಟ್ ಮುಗ್ಗ	,, 40
. ಪಿ. ಲಕ್ಷ್ಮೀಪತಯ್ಯನವರು ಬಿ. ಎ., ಮೈಸೂರು	,, 48
ಚನ್ನಬಸಪ್ಪನವರು, ತುಮಕೂರು	,, 7

ಸ್ವದೇಶದ ವೃತ್ತಾಂತಗಳು.

ರಾಜಧಾನಿಯ ಟ್ರೇನಿಂಗ್ ಕಾಲೇಜಿನ ಆರಂಭದಿನೋತ್ಸವವು ವಿದ್ಯಾಭ್ಯಾಸದ ಇ||ಜನರಲ್‌ರವರ ಅಧ್ಯಕ್ಷತೆಯಲ್ಲಿ ಆಟಪಾಟ ವಿನೋದಗಳೊಡನೆ ಕಳೆದ ತಾ|| 12 ಮತ್ತು 13 ರಲ್ಲಿ ನಡೆದಿತು.

ರಾಜಧಾನಿಯಲ್ಲಿ ಕಳೆದ 1 ವಾರದಿಂದಲೂ ಪ್ರಾತಃಕಾಲದಲ್ಲಿ ಮಂಜು ಬೀಳುತ ಮಧ್ಯಾಹ್ನದಲ್ಲಿ ಬಿಸಲಿನತಾಪವು ಸಹಿಸಲಶಕ್ಯವಾಗಿದೆ. ವಾಂತಿಭೇದಿರೋಗದಿಂದ ಅಲ್ಲಲ್ಲಿ 1-2 ಮರಣಗಳಾಗುತ್ತಿವೆ.

ಪ್ರಜಾಪ್ರತಿನಿಧಿ ಸಭಾರಂಭೋತ್ಸವಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದ ದಿವಾನರು ಕೌನ್ಸಿಲರುಗಳೂ, ಶಾಖಾಧಿಕಾರಿಗಳೂ, ಸೆಕ್ರೆಟರಿಗಳೂ, ಮೊನ್ನೆಯದಿನ ಹಿಂದಿರುಗಿ ಪ್ರಯಾಣಮಾಡಿದರು.

ರಾಜಧಾನಿಯ ವೀರಶೈವರು ಕಳೆದ ತಾ|| 6 ರಲ್ಲಿ ಸಭೆ ಸೇರಿ ಮಾಡಿದ ನಿರ್ಧಾರಗಳೆಂದು ತಾ|| 9 ರ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುವುದು ಸರಿಯಲ್ಲವೆಂದು ಬರೆದುಬಂದಿರುವ ಪತ್ರವ್ಯವಹಾರವು ಮುಂದಣವಾರ ಪ್ರಕಟಿಸಲ್ಪಡುವುದು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ದಿ|| ಬ|| ಶ್ರೀಕಂಠೇಶ್ವರಯ್ಯರ್‌ರವರು ಈ ತಿಂಗಳ ಕಡೆಯಲ್ಲಿ ಉದ್ಯೋಗದಿಂದ ನಿವೃತ್ತರಾಗಿ ಹಾಸನದ ಡಿ|| ಕ|| ರವರಾದ ಮ|| ಕೆ. ಮೈಲಾರಿರಾಯರು ಪ್ರೆಸಿಡೆಂಟರಾಗಿ ಬರುವರೆಂಬ ವದಂತಿಯು ಪ್ರಬಲವಾಗಿದೆ.

ಶ್ರೀ ಶೃಂಗಗಿರಿ ಸ್ವಾಮಿಗಳವರು ನಾಳೆಯದಿನ ಬೆಳಿಗ್ಗೆ 8 ಗಂಟೆಗೆ ರಾಜಧಾನಿಗೆ ಚಿತ್ತೈಸಿ 3 ವಾರದವರೆಗೆ ಇಲ್ಲಿ ನಿಂತು ತಮ್ಮ ಶಿಷ್ಯರುಗಳಿಂದ ಪಾದಪೂಜಾದಿ ಕೈಂಕರ್ಯವನ್ನು ಸ್ವೀಕರಿಸಿ, ತಮ್ಮ ಗುರುಗಳ ಜನ್ಮಸ್ಥಲದ ಜ್ಞಾಪನಾರ್ಥವಾಗಿ ದೊಡ್ಡ ಕೆರೆಯ ಕೆಳಗಡೆ ಕಟ್ಟಲ್ಪಡುವ ಕಟ್ಟಡದ ಶಂಕುಸ್ಥಾಪನೆಯನ್ನು ಈ ತಾ|| 31ರಲ್ಲಿ ಮಾಡಿ ಮುಂದಕ್ಕೆ ಪ್ರಯಾಣಮಾಡುವವರಾಗಿರುವರು. ಸಂಸ್ಕೃತ ಮಹಾಕಾಲೇಜು ಶ್ರೀಗಳವರ ಬಿಡಾರಕ್ಕಾಗಿ ಬಿಡಲ್ಪಟ್ಟಿರುವುದು.

ಚನ್ನಗಿರಿ ತಾ|| ಹೋದಿಗ್ಗೆರೆಯ ವಾಸಸ್ಥರಾದ ಲಕ್ಷ್ಮೀಶ್ವರದ ಶ್ರೀಮಂತ ಅಡಿವಿಯಪ್ಪಸೆಟ್ಟರು ಅಸ್ವಸ್ಥರಾಗಿದ್ದು ಕಳೆದ ತಾ|| 14ರ ಮಧ್ಯಾಹ್ನ ಕೈಲಾಸವಾಸಿಗಳಾದರೆಂದು ತಿಳುಹಲು ಬಹಳ ವಿಷಾದವಾಗುತ್ತದೆ. ಇವರು ಪೂರ್ಣ ಶ್ರೀಮಂತರಾಗಿದ್ದರೂ ನಿಗರ್ವ ಶಿಖಾಮಣಿಗಳೂ, ಶಾಂತಸ್ವಭಾವದವರೂ, ದಯಾಪರರೂ, ಆರ್ತಜನ ಸಂರಕ್ಷಕರೂ, ಗುರುಭಕ್ತರೂ ಆಚಾರಶೀಲರೂ ಆಗಿದ್ದು ಸರ್ವಜನವಂದನೀಯರಾಗಿದ್ದರು. ಇಂತಹ ಸದ್ಗುಣಶೀಲಸಂಪನ್ನರ ಮೃತ್ಯುವಿನಿಂದ ಅವರ ಕುಟುಂಬಕ್ಕೆ ಮಾತ್ರವಲ್ಲದೆ ವೀರಶೈವ ಸಮಾಜಕ್ಕೇ ಅಪಾರ ನಷ್ಟವಾಯಿತೆನ್ನುವುದರಲ್ಲಿ ಸಂದೇಹವಿಲ್ಲವು. ಮೃತರ ಆತ್ಮಕ್ಕೆ ಶಾಂತಿಯೂ ಅವರ ಕುಟುಂಬಕ್ಕೆ ಮನಸ್ಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ರಾಜಧಾನಿಯಲ್ಲಿ ಮಹಮ್ಮದೀಯ ವಿದ್ಯಾರ್ಥಿಗಳಿಗೆ ಸ್ವತಂತ್ರವಾದ ಹಾಸ್ಟಲ್ಲು ಇಲ್ಲದೆ ಬಹಳ ತೊಂದರೆಯಾಗಿರುವುದನ್ನು ಇಲ್ಲಿಯ ದೊಡ್ಡ ಜವಳಿವ್ಯಾಪಾರಿಗಳೂ ಮ್ಯುನ್ಸಿಪಲ್ ಕೌನ್ಸಿಲರೂ ಆದ ಮಿ|| ಮಹಮುದ್‌ಸೇಟರು ಅರಿತು ಸಯ್ಯಾಜಿರಾವ್ ರೋಡಿನಲ್ಲಿ ಮಿಷನ್ ಗೋಷಾಬಾಲಿಕಾಪಾಠಶಾಲೆಯ ಪಕ್ಕದಲ್ಲಿ ಒಂದು ವಿಶಾಲವಾದ ನಿವೇಶನವನ್ನು ಪಡೆದು ಹಾಸ್ಟಲ್ ಕಟ್ಟಡವನ್ನು ಕಟ್ಟಿಸಬೇಕೆಂದು ಸಂಕಲ್ಪಿಸಿ ಅದಕ್ಕಾಗಿ ತಾವೂ ಉದಾರವಾಗಿ ಚಂದಾದ್ರವ್ಯವನ್ನು ವಾಗ್ದಾನ ಮಾಡಿರುವುದಲ್ಲದೆ ಇತರ ಮಹಮ್ಮದೀಯ ದೊಡ್ಡ ಮನುಷ್ಯರುಗಳಿಂದ ಚಂದಾ ಹಣವನ್ನೆತ್ತಲುಪಕ್ರಮಿಸಿರುವರೆಂದು ಕೇಳಿ ನಾವು ಸಂತೋಷಿಸುವೆವಲ್ಲದೆ, ಅವರ ಈ ಶ್ಲಾಘ್ಯಪ್ರಯತ್ನವು ಸಫಲವಾಗಿ ಅವರಿಗೆ ಕೀರ್ತಿಯೂ ಅವರ ಮತದ ವಿದ್ಯಾರ್ಥಿಗಳಿಗೆ ಪ್ರಯೋಜನವೂ ಆಗಲೆಂದು ಆಶಿಸುತ್ತೇವೆ.

ರಕ್ಷಕರು ಭಕ್ಷಕರಾಗುತ್ತಾರೆಯೇ ?

ಇದೇ ತಿಂಗಳ ತಾ|| 19 ರಲ್ಲಿ ದಾವಣಗೆರೆಯಲ್ಲಿ ದುರ್ಗಾದೇವಿಯ ಜಾತ್ರೆಯೂ ರಥೋತ್ಸವವೂ ನಡೆಯುವುದೆಂದು ಇದೇ ತಿಂಗಳ ತಾ|| 3 ರಲ್ಲಿ ಹುಬ್ಬಳ್ಳಿಯಿಂದ ಒಬ್ಬ ಮಹಾಶಯರು ಬರೆದಿರುವ ಕಾಗದದಿಂದಲೂ ತಾ|| 8ರ ಸಂಪದಭ್ಯುದಯ ಪತ್ರಿಕೆಯಿಂದಲೂ ಗೊತ್ತಾಯಿತು. ಈ ಉತ್ಸವದಲ್ಲಿ 500 ಕೋಣಗಳೂ 5000 ಕುರಿಗಳೂ ಕತ್ತರಿಸಲ್ಪಡುವುವಂತೆ! ಈ ಉತ್ಸವವು ಅಜ್ಞಜನರಿಗೆ ಸಂತೋಷವನ್ನುಂಟುಮಾಡುವುದಾಗಿದ್ದರೂ ಆ 5500 ಅನಾಥಪ್ರಾಣಿಗಳ ಜೀವನಲೀಲೆಯನ್ನು ಕೊನೆಗಾಣಿಸುವ ಭಯಂಕರ ಉತ್ಸವವಾಗಿದೆ! ಆ ಪ್ರಾಣಿಗಳಿಗೆ ಈ ಭೂಲೋಕದ ನೀರಿನ ಋಣವು 19 ನೆಯ ತಾರೀಕಿಗೆ ತೀರಿಹೋಗುವುದು!! ಈ ಕಾರ್ಯವನ್ನು ನಡೆಯಿಸುವವರು ಧರ್ಮಪ್ರಾಣವಾದ ಹಿಂದೂ ದೇಶದಲ್ಲಿ ಹುಟ್ಟಿದ ಹಿಂದೂಗಳು !!! ಹಾ ! ವಿಧಿಯೇ !

ಈ ನವನಾಗರಿಕಕಾಲದಲ್ಲಿಯೂ ಮೂಢಭಕ್ತಿಗೆ ಧಕಲ್ಪಟ್ಟಿಯನ್ನು ಕೊಡದೆ ಇಂತಹ ಘೋರಕೃತ್ಯವನ್ನು ನಡೆಯಿಸುತ್ತಿರುವುದು ಬಹಳ ಆಶ್ಚರ್ಯಕರವಾಗಿದೆ. ನಿರ್ಬಲಗಳೂ, ನಿರಪರಾಧಿಗಳೂ, ಕಾಡುಗುಡ್ಡಗಳಲ್ಲಿ ಸೊಪ್ಪುಸದೆಗಳನ್ನು ತಿಂದು ಜೀವಿಸುವುವೂ, ಮಕ್ಕಳಂತೆ ಆಶ್ರಿತಗಳೂ ಆದ ಆ ಮೂಗಪ್ರಾಣಿಗಳನ್ನು ಸ್ವಲ್ಪವೂ ಕನಿಕರವಿಲ್ಲದೆ ದುರ್ಗಾದೇವಿಯ ಮುಂದೆ ತಲೆಕಡಿಯುವವರಿಗೆ ಪುಣ್ಯವು ಬರುವುದೋ ಘೋರವಾದ ಪಾಪವು ಬರುವುದೋ ಎಂಬುದನ್ನು ವಿಚಾರಶೀಲರಾದ ವಾಚಕರೇ ವಿಚಾರಮಾಡಲಿ. ಇಂತಹ ಅನ್ಯಾಯವಾದ ಘೋರಹಿಂಸೆಯಿಂದಲೂ ಪುಣ್ಯವು ಬರುವುದಾದರೆ ಲೋಕದಲ್ಲಿ ಪಾಪಕಾರ್ಯವೇ ಇಲ್ಲವೆಂದು ಹೇಳಬೇಕಾಗುವುದು.

ಮಹಾಭಾರತದಲ್ಲಿ ''ಕಂಟಕೇನಾಪಿ ವಿದ್ಧಸ್ಯ ಮಹತೀ ವೇದನಾ ಭವೇತ್ | ಚಕ್ರಕುಂತಾಸಿಯಷ್ಟ್ಯಾದ್ಯೈಃ ಮಾರ್ಯಮಾಣಸ್ಯ ಕಿಂಪುನಃ,—ಮುಳ್ಳುತಗಲಿದ ಪ್ರಾಣಿಗೂ ಬಹಳ ವೇದನೆಯಾಗುವುದು. ಚಕ್ರ ಕುಂತಾಯುಧ ಖಡ್ಗ ದೊಣ್ಣೆ ಮೊದಲಾದುವುಗಳಿಂದ ಹೊಡೆಯಲ್ಪಡುವ ಪ್ರಾಣಿಗಾದರೋ ಹೇಳುವುದೇನು ?'' ಎಂದು ಹೇಳುವಂತೆ ತಮ್ಮ ಕಾಲಿಗೊಂದು ಮುಳ್ಳುತಗಲಿದರೂ ಬಹಳ ನೋವಾಗುವುದನ್ನು ಸ್ವಾನುಭವ ಪ್ರತ್ಯಕ್ಷದಿಂದ ತಿಳಿದೂ ತಮ್ಮಂತೆಯೇ ಆ ಪ್ರಾಣಿಗಳಿಗೂ ದುಃಖವಾಗುವುದೆಂಬುದನ್ನು ವಿಚಾರಮಾಡದೆ ದುರ್ಗಾದೇವಿಯ ಹೆಸರನ್ನು ಹೇಳಿ ತೀಕ್ಷ್ಣವಾದ ಅಸ್ತ್ರಗಳಿಂದ ಆ ಅನಾಥ ಪ್ರಾಣಿಗಳ ಕತ್ತುಗಳನ್ನು ಕತ್ತರಿಸುವುದು ಯಾವಧರ್ಮ ? ಈ ಕ್ರೂರಕೃತ್ಯದಿಂದ ದೇವಿಯು ಸಂತೋಷಪಡುವಳೇ ? ಎಂದೂ ಇಲ್ಲ.

ವಿಶ್ವಸಾರತಂತ್ರದಲ್ಲಿ ''ಸಾ ಮಾಯಾ ಪ್ರಕೃತೀ ದೇವೀ ಯದ್ವಿಮಾತಾ ಚ ಕಥ್ಯತೇ | ಯದ್ವಿಮಾತಾ ಇಮೇಸರ್ವೇ ಪುತ್ರಾಃ ಸ್ಥಾವರಜಂಗಮಾಃ,—ಆ ಶಕ್ತಿಯು ಮಾಯೆಯೆಂದೂ ಪ್ರಕೃತಿಯೆಂದೂ ದೇವಿಯೆಂದೂ ಮಾತೆಯೆಂದೂ ಹೇಳಲ್ಪಡುತ್ತದೆ. ಆ ದೇವಿಯು ತಾಯಿಯಾದುದರಿಂದ ಈ ಸ್ಥಾವರಜಂಗಮಗಳೆಲ್ಲವೂ ಮಕ್ಕಳು'' ಎಂದು ಹೇಳಿದೆ. ಆ ದೇವಿಯು ''ಹೇ ಜಗನ್ಮಾತಃ! ಜಗದಂಬ!'' ಇತ್ಯಾದಿ ಮಾತೃವಾಚಕಶಬ್ದಗಳಿಂದ ಕರೆಯಲ್ಪಡುತ್ತಾಳೆ. ಇಂತಹ ಚರಾಚರಜಗತ್ತಿಗೆ ದೇವಿಯು ತಾಯಿಯಾದಮೇಲೆ ಜಗದಂತರ್ಭೂತವಾದ ಆ ಮೂಗಪ್ರಾಣಿಸಮುದಾಯಕ್ಕೆ ದೇವಿಯು ತಾಯಿಯಾಗಲಿಲ್ಲವೇ ? ಬಲಿಷ್ಠರಾದ ಮಕ್ಕಳು ಬಲಹೀನರೂ ನಿರಪರಾಧಿಗಳೂ ಆದ ಇತರ ಮಕ್ಕಳನ್ನು ಹಿಡಿದು ತಾಯಿಯ ಮುಂದೆ ತಾಯಿಗೇ ಬಲಿಯನ್ನು ಕೊಟ್ಟರೆ ತಾಯಿಗೆ ಅಪಾರವಾದ ದುಃಖವಾಗುವುದಿಲ್ಲವೇ ? ತಾಯಿಯು ಬಲಿಷ್ಠರಾದ ಮಕ್ಕಳಮೇಲೆ ಮುನಿಯುವುದಿಲ್ಲವೇ ? ಅದೇ ವಿಶ್ವಸಾರತಂತ್ರದಲ್ಲಿ ದೇವಿಯು ಹೇಳುವ ಮಾತುಗಳನ್ನು ನೋಡಿ:—''ಮಮ ನಾಮ್ನಿ ಪಶುಂ ಹಂತಾ ವಧಭಾಗೀ ಭವೇನ್ನರಃ | ಏತತ್ತತ್ತ್ವಂ ನಜಾನಾತಿ ಮಾತಾ ಕಿಂ ಭಕ್ಷಯೇತ್ಸುತಾನ್ :—ನನ್ನ ಹೆಸರಿನಲ್ಲಿ ಪಶುವನ್ನು ಕೊಲ್ಲುವ ಮನುಷ್ಯನು ಹಿಂಸೆಯ ಪಾಪಭಾಗಿಯಾಗುವನು. ತಾಯಿಯು ಮಕ್ಕಳನ್ನು ಭಕ್ಷಿಸುತ್ತಾಳೆಯೇ ? ಎಂಬೀ ತತ್ತ್ವವನ್ನು ತಿಳಿಯುವುದಿಲ್ಲ.''

ಎಂತಹ ಕ್ರೂರಿಯಾದ ಪಶುವಾದರೂ ತನ್ನ ಮಕ್ಕಳ ಮೃತ್ಯುವಿನಿಂದ ದುಃಖಪಡುವುದು ಪ್ರತ್ಯಕ್ಷಸಿದ್ಧವಾಗಿರುವಾಗ ಜಗಜ್ಜನನಿಯಾದ ದೇವಿಯು ದುಃಖಪಡುವುದಿಲ್ಲವೆಂದರೆ ಅದೆಂತಹ ಕ್ರೂರತನ ? ಪುತ್ರರಕ್ಷಕಳಾದ ಜಗನ್ಮಾತೆಯು ಪುತ್ರಭಕ್ಷಕಳಾಗುವಳೇ ? ಹಾಗೆ ರಕ್ಷಕಳಾದ ತಾಯಿಯೇ ಭಕ್ಷಣೆಗೆ ಹೊರಟರೆ ಇನ್ನು ರಕ್ಷಿಸುವವರಾರು ? ಲೋಕವೆಲ್ಲ ಆ ಜಗನ್ಮಾತೆಯ ಸೊತ್ತಾಗಿರುವಾಗ ಅವಳ ಸೊತ್ತನ್ನು ಬೇರೆಯವರು ಅವಳಿಗೆ ಬಲಿ ಕೊಡಬೇಕೆ ? ಪಶುಗಳ ಹಿಂಡಿಗೆ ತಾನೇ ಪ್ರವೇಶಿಸಿ ಬಲಿ ತೆಗೆದುಕೊಳ್ಳುವ ಶಕ್ತಿಯು ಆ ಶಕ್ತಳಿಗಿಲ್ಲವೇ ? ಆ ಶಕ್ತಿಯಿಲ್ಲವೆಂದು ಹೇಳುವುದಾದರೆ ಅಂತಹ ಅಶಕ್ತಳು ಭಕ್ತರ ಅಭೀಷ್ಟವನ್ನು ನೆರವೇರಿಸುವುದು ದಿಟವೇ ? ಕೆಲವು ಅಜ್ಞಾನಿಗಳು ಯಾವುದನ್ನೂ ವಿಚಾರಮಾಡದೆ ಆ ಜಗಜ್ಜನನಿಗೆ ಮಾರಿ, ಮಹಾಮಾರಿ ಇತ್ಯಾದಿ ಹೆಸರುಗಳನ್ನಿಕ್ಕಿ ಆ ಪವಿತ್ರಮೂರ್ತಿಗೆ ಇಂತಹ ನಿಂದ್ಯವಾದ ಕಳಂಕವನ್ನು ತಂದೊಡ್ಡುತ್ತಾರೆ. ಇದರಿಂದ ಮುಂದಕ್ಕಾಗುವ ವಿಷಫಲವನ್ನು ವಿಚಾರಮಾಡುವುದಿಲ್ಲ. ಈ ಸಂದರ್ಭದಲ್ಲಿ ದುರ್ಗಾದೇವಿಯು ಪರಮೇಶ್ವರನೊಡನೆ ಹೇಳುವ ಮಾತನ್ನು ಪದ್ಮಪುರಾಣದಲ್ಲಿ ಹೀಗೆ ಹೇಳಿದೆ :—'' ಮದರ್ಥೇ ಶಿವ ! ಕುರ್ವಂತಿ ತಾಮಸಾ ಜೀವಘಾತನಂ | ಆಕಲ್ಪಕೋಟಿ ನಿರಯೇ ತೇಷಾಂ ವಾಸೋ ನ ಸಂಶಯಃ—ಶಿವನೇ ! ಪಾಪಿಗಳು ನನಗೋಸ್ಕರ ಜೀವವಧೆಯನ್ನು ಮಾಡುತ್ತಾರೆ. ಅದರಿಂದ ಅವರಿಗೆ ಕೋಟಿಕಲ್ಪಕಾಲದವರೆಗೂ ನರಕದಲ್ಲಿ ವಾಸವುಂಟಾಗುವುದು; ಸಂದೇಹವಿಲ್ಲ.''

ಕ್ಷಾಮ ರೋಗ ಮೊದಲಾದ ದೇಶೋಪದ್ರವಗಳಿಗೆ ಇಂತಹ ಕ್ರೂರಕೃತ್ಯಗಳನ್ನು ಮಾಡಿದರೆ ಉಪಶಾಂತಿಯಾಗುವುದೆಂದು ಕೆಲವರು ತಿಳಿದಿರುತ್ತಾರೆ. ಇದು ತಪ್ಪುತಿಳುವಳಿಕೆಯಾಗಿದೆ. ಯಾವ ಕಾಲದಲ್ಲಿಯೂ ಬೆಂಕಿಯಿಂದ ಶೈತ್ಯಗುಣವುಂಟಾಗಲಾರದು. ಕೃಷ್ಣಸರ್ಪದ ಬಾಯಿಯಿಂದ ಅಮೃತ

ಮೈಸೂರು ಸ್ಟಾರ್.

೧೯೨೪ ನೇಯ ಇಸವಿ ಮಾರ್ಚಿ ತಾ|| ೧೬ ನೇಯ ಭಾನುವಾರ.

HIS HIGHNESS' ADDRESS.

"This day marks dawning of a new era in the history of Mysore." So spoke His Highness the Maharaja at the inaugural ceremony of the reconstituted Mysore Legislature on the 12th inst. at the Jagan Mohan Palace where the two popular Houses had met in their new and reformed garb. The address, which was delivered in a clear and impressive tone, bore all the marks of wisdom and dignity which are associated with His Highness and of the abounding sympathy with the aspirations of the people. For over twenty years, His Highness has been ruling the State, with what keen and genuine regard for the welfare and progress of the subjects it is impossible to describe. That has been our unique good fortune.

His Highness called upon the members to use their new powers to strengthen all the beneficent activities in the country, industrial, civil, social and educational, the need for instructing the people to practise thrift in these days of uncertain seasons a virtue, which the Government may also practise with considerable good to the State. His Highness was pleased to touch the rather delicate question of party conflicts, and it was only on the experience of all legislatures in the world that His Highness gave expression to, when His Highness said that party conflicts were inevitable. There have been in our midst some politicians who though always carrying on their agitation in the interest of a class are never tired of decrying outwardly the party system. It was a wise advice of His Highness to have asked the members to place the interests of the State as a whole before those of any section or class. His Highness asked them to keep "in close touch with the Government and the people and to interpret the one to the other, and hoped that the long silence of the depressed and the humble would be broken and full responsibility for their well-being shouldered by the educated and the well-to-do classes, words which we sincerely hope will be taken to heart by the members. His Highness has asked the members to realise that the interests of Government and the people are identical, and that the difference of opinion between both could refer only to the means, never to the end. The stand point of the Government, so often differs from that of the people, and if some device could be found to bridge the gulf and establish a correlation between both, there would be very much less room for differences. The members have to be very grateful to His Highness for the assurance of the responsiveness and goodwill of the Government which doubtless the members will reciprocate. We hope that the members will ponder over the words of wisdom of our Patriotic Sovereign and by helping "to build up the prosperity and reputation of the State," justify the expectations of His Highness.

UNITY AND ELECTIONS.

The recent elections from the Represetative Assembly to the Legislative Council, the standing Committees, and the Boards of the Economic Conference, are a striking domonstration of what united effort and loyalty to a cause could accomplish. Six out of 8 candidates put up by the popular party have got into the Legislative Council and this in spite of all the nefarious and unholy attempts made by interested men to create splits in the camp. Thanks to the judgment and to the loyalty of the main body of the House, the stupendous efforts of the opponents proved in the main abortive. There was quite a number, who, simpletons that they are, strayed out of the flock listening to the syrenlike music of men with friendly garbs, and under the misleading guidance even worked against the popular party in vain. But they have, we hope learnt a lesson, that constancy to a cause is a better qualification for success, than an arrogant and exaggerated notion of one's own importance. It may still take time for men to become amenable to party discipline, and we hope the experience they have gained this time will stand in good stead in future years. There is also the lesson for the popular party to organise itself better, and we hope the executive of the Prajamitra Mandali will exert better to strengthen the association and extend its activities. The District elections to the Legislative are not quite satisfactory and a beginning must be made to fight the elections better. It is strange that in Hassan District there should be only one candidate standing to the Legislative Council and that he should be returned unopposed. We hope that the members will not rest quiet with the temporary victory, but will continue their task of propaganda not merely in the political field but in the matter of education and social uplift of the humble classes. The reforms have come in good time. The mission of the members is a holy and responsible one. There have been many iniquities in the past, and the present is not without them. They have to be got rid of. The enlightenment of the masses is a sufficient task by itself and it would require all the energy of the people's representative to combat the ignorance of the masses. The poverty of the country as a whole presents a 'nd less difficult problem. Labour there is, but those who labour do not reap the fruits thereof. We hope that the members, conscious of their responsibilities and the expectations of those who have elected them will strive their utmost for the good of the country.

ಶ್ರೀಮನ್ಮಹಾರಾಜರವರ ನಿರೂಪ.

ನೂತನ ರಾಜಕೀಯ ಸಂಸ್ಕರಣಗಳಿಂದ ರೂಪುಗೊಂಡಿರುವ ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಆರಂಭೋತ್ಸವವು ಕಳೆದ ತಾ|| 12 ರ ಸಾಯಂಕಾಲ 5 ಗಂಟೆಯಲ್ಲಿ ಜಗನ್ಮೋಹನಪ್ರಾಸಾದದ ವಿವಾಹಮಂಟಪದಲ್ಲಿ ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಂದ ನೆರವೇರಿಸಲ್ಪಟ್ಟಿತು. ದಿವಾನರು, ಕೌನ್ಸಿಲರುಗಳು, ಶಾಖಾಧಿಕಾರಿಗಳು, ಸಕ್ರೆಟರಿಗಳು, ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಮೆಂಬರುಗಳು ಸ್ಥಳೀಯಾಧಿಕಾರಿಗಳು ಮತ್ತು ಪುರಪ್ರಮುಖರು ದಯಮಾಡಿಸಿದ್ದರು. ಸಭಾರಂಭೋತ್ಸವಕಾಲದಲ್ಲಿ ಶ್ರೀಮನ್ಮಹಾರಾಜರವರು ಇಂಗ್ಲೀಷಿನಲ್ಲಿ ಅಪ್ಪಣೆ ಕೊಡಿಸಿದ ನಿರೂಪವು ಬೋಧಪರವೂ, ಪರಸ್ಪರ ವಿಶ್ವಾಸ ಏಕಮತ್ಯಾನುಬಂಧವೂ ಆಗಿರುವುದಲ್ಲದೆ, ಅದರಂತೆ ಪ್ರಜಾಪ್ರತಿನಿಧಿಗಳು ಸರ್ಕಾರದವರೊಡನೆ ಸಹಕಾರ ಸಾನುಭೂತಿಯಿಂದ ವರ್ತಿಸಿದುದಾದರೆ ರಾಜಕಾರ್ಯವು ಸುಲಲಿತವಾಗಿ ನಡೆದು ಸಂಸ್ಥಾನಕ್ಕೆ ಕೀರ್ತಿಪ್ರತಿಷ್ಠೆಯೂ, ಪ್ರಜಾಕ್ಷೇಮವೂ ಆಗುವುದಲ್ಲದೆ ಶ್ರೀಮನ್ಮಹಾರಾಜರವರು ಸಂತುಷ್ಟರಾಗಿ ತಮ್ಮ ಪ್ರಜೆಗಳಿಗೆ ಇತೋಪ್ಯತಿಶಯವಾದ ಅಧಿಕಾರ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಅವಕಾಶವುಂಟಾಗುವುದರಲ್ಲಿ ಸಂದೇಹವಿಲ್ಲವು. ಇದರ ಕನ್ನಡ ಪರಿವರ್ತನವು ಬೇರೆಕಡೆ ಪ್ರಕಟಿಸಲ್ಪಟ್ಟಿದೆ. ಪ್ರಜೆಗಳು ವಿದ್ಯೆ, ಕೈಗಾರಿಕೆಗಳಲ್ಲೂ ಪೌರಸಾಮಾಜಿಕ ವಿಚಾರದಲ್ಲೂ ಅಭಿವೃದ್ಧಿಯನ್ನು ಹೊಂದುವಂತೆಯೂ, ಈ ದುಷ್ಕಾಲದಲ್ಲಿ ದುಂದುವೆಚ್ಚ ಮಾಡದಂತೆಯೂ ಪ್ರಜಾಪ್ರತಿನಿಧಿಗಳು ಬೋಧಿಸಬೇಕಾಗಿ ಶ್ರೀಮನ್ಮಹಾರಾಜರವರು ದೂರದೃಷ್ಟಿಯಿಂದ ಅಪ್ಪಣೆಕೊಡಿಸಿರುತ್ತಾರೆ. ಪ್ರಜಾಪ್ರತಿನಿಧಿ ಮೆಂಬರುಗಳು ಇದನ್ನು ಖಂಡಿತವಾಗಿಯೂ ಮರೆಯಬಾರದು ಮತ್ತು ಮಹಾಸ್ವಾಮಿಯವರು ಅಪ್ಪಣೆ ಕೊಡಿಸಿರುವಂತೆ ಪ್ರಜೆಗಳ ನಿಜವಾದ ಕುಂದುಕೊರತೆಗಳನ್ನು ಸರ್ಕಾರದವರಲ್ಲಿ ಬಿನ್ನವಿಸಿ ಅವುಗಳ ಪರಿಹಾರೋದ್ಯಮದಲ್ಲಿ ಸರ್ಕಾರದವರ ಕೂಡ ಸಹಕಾರಿಗಳಾಗಿದ್ದು ಪ್ರಭುಗಳಿಗೆ ಸಂತೋಷವನ್ನೂ ಪ್ರಜೆಗಳಿಗೆ ಲಾಭವನ್ನೂ ಉಂಟುಮಾಡಿ ಪ್ರಭುಪ್ರಜಾಸನ್ಮಾನಕ್ಕೆ ಪಾತ್ರರಾಗುವರೆಂದು ನಿರೀಕ್ಷಿಸುತ್ತೇವೆ. ನೂತನ ಶಕಾರಂಭ ದಿವಸ ಮಹಾಪ್ರಭುವರ್ಯರ ಅಮೃತವಾಣಿಯಿಂದ ಅಪ್ಪಣೆ ಕೊಡಿಸಲ್ಪಟ್ಟ ಮಹಾನಿರೂಪವು ಆವಿದ್ಯಾವಂತರಾದಿಯಾಗಿ ಸಂಸ್ಥಾನದ ಆಬಾಲವೃದ್ಧರೆಲ್ಲರಿಂದಲೂ ನಿರಾಯಾಸವಾಗಿ ತಿಳಿಯಲ್ಪಟ್ಟು ಮನನಮಾಡಲ್ಪಡುವಂತೆ ಬಿಡುಗನ್ನಡದಲ್ಲಿ ಕುಲಭಕ್ತಿಯಿಂದ ಬರೆಯಲ್ಪಟ್ಟಿದ್ದರೆ ಅನುಕೂಲವಾಗಿರುತ್ತಿದ್ದಿತು.

ನ್ಯಾಯವಿಧಾಯಕ ಸಭೆಗೆ 8 ಜನ ಮೆಂಬರುಗಳು ಚುನಾಯಿಸಲ್ಪಟ್ಟುದು.

ಪ್ರಜಾಪ್ರತಿನಿಧಿ ಸಭೆಯಿಂದ ನ್ಯಾಯವಿಧಾಯಕ ಸಭೆಗೆ 8 ಜನ ಮೆಂಬರುಗಳನ್ನು ಮತ್ತು ಇತರ ಬೋರ್ಡುಗಳಿಗೂ ಸ್ಟಾಂಡಿಂಗ್ ಕಮಿಟಿಗಳಿಗೂ ಮೆಂಬರುಗಳನ್ನು ಆರಿಸುವ ಕೆಲಸವು ಕಳೆದ ತಾ|| 12 ರ ಸಾಯಂಕಾಲ 5½ ಗಂಟೆಯಿಂದ ರಾತ್ರಿ 8½ ಗಂಟೆಯವರೆಗೂ ಮಾರನೆಯದಿನ ಬೆಳಿಗ್ಗೆ 8 ಗಂಟೆಯಿಂದ 11½-12 ಗಂಟೆಯವರೆಗೂ ಜಗನ್ಮೋಹನಪ್ರಾಸಾದದ ವಿವಾಹಮಂಟಪದಲ್ಲಿ ಜರುಗಿತು. ನ್ಯಾಯವಿಧಾಯಕ ಸಭೆಯ ಚುನಾವಣೆಗೆ ಈ ಕೆಳಗಣ ಪಟ್ಟಿಯಲ್ಲಿ ಕಂಡ 44 ಮಂದಿಗಳು ಅಭ್ಯರ್ಥಿಗಳಾಗಿ ನಿಂತಿದ್ದರು. ಇವರಲ್ಲಿ ಕೆಲರು ವಿನಾ ಉಳಿದ ಹಿಂದುಳಿದವರ್ಗಗಳ ಪ್ರತಿನಿಧಿ ಮೆಂಬರುಗಳು ಹಿಂದಣ ದಿವಸ ಸಭೆ ಸೇರಿದ್ದು ತಂತಮ್ಮೊಳಗೆ ಪರ್ಯಾಲೋಚಿಸಿಕೊಂಡು ಮ|| ಗಳಾದ (1) ಜೆ. ರುದ್ರಪ್ಪ, ಎಂ.ಎ., ಎಲ್‌ಎಲ್.ಬಿ., ಯವರು, (2) ಬಿ. ಎಲ್. ಬಯ್ಯಣ್ಣನವರು, (3) ಜೆ. ಪರಮಶಿವಯ್ಯ, ಬಿ.ಎ. ಎಲ್‌ಎಲ್.ಬಿ., ಯವರು, (4) ನೀಲ್ಗಿರಿ ಜೆ. ಸಂಜೀವಯ್ಯನವರು, (5) ಎಂ. ಅಬ್ಬಾಸ್ ಖಾನರವರು, (6) ಎಂ. ಸಿ. ಲಿಂಗೇಗೌಡರು, (7) ಎಲ್. ವೇಮಾರಡ್ಡಿಯವರು, (8) ಡಿ. ಎಸ್. ಮಲ್ಲಪ್ಪನವರು ಚುನಾವಣೆಗೆ ನಿಂತು ಉಳಿದ 19 ಜನರು ತಮ್ಮ ಉಮೇದುವಾರಿತನವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದರು. ಆದರೆ ಕೆಲರು ಈ ನಿರ್ಧಾರಕ್ಕೊಪ್ಪದೆ ಹೋದರು. ಓಟಿಂಗ್ ಸ್ಥಾನಗಳು 6 ಕಡೆ ಏರ್ಪಡಿಸಲ್ಪಟ್ಟಿದ್ದುವು. ಮೊದಲನೆಯ ದಿನ ಉಭಯ ಕೌನ್ಸಿಲರುಗಳೂ ಓಟಿಂಗ್ ಮುಗಿಯುವವರೆಗೂ ಇದ್ದರು. ಮಾರನೆಯ ದಿನ ಪ್ರಾತಃಕಾಲ ಮಾತ್ರ ಸ್ವಲ್ಪಹೊತ್ತಿದ್ದು ಹೊರಟುಹೋದರು. ಈ ಪೈಪೋಟಿಯು ಬಹಳ ಉತ್ಸಾಹದಿಂದಲೂ, ಸ್ಪರ್ಧೆಯಿಂದಲೂ ನಡೆದಿತು. ಎರಡನೆಯ ದಿನ ಓಟಿಂಗು ಮುಗಿದ ಕೂಡಲೆ ಪೋಲಿಂಗ್ ಆಫೀಸರಾದ ಮ|| ಕೆ. ಅನಂತರಾಮಯ್ಯರವರು ಓಟುಗಳನ್ನು ಗಣನೆಮಾಡಿಸಿ ದಿವಾನರಲ್ಲಿಗೆ ಕಳುಹಿಸಿಕೊಟ್ಟು ಅವರನುಮತಿಯಿಂದ ಉಮೇದುವಾರರ ಇದಿರಿಗೆ ಓದಿ ಹೇಳಿದುದರಲ್ಲಿ ಜೆ. ಪರಮಶಿವಯ್ಯ, ಬಿ.ಎ.,ಎಲ್‌ಎಲ್.ಬಿ., ಯವರು, ಮಹಮ್ಮದ್ ಅಬ್ಬಾಸ್ ಖಾನರವರು, ಜೆ. ರುದ್ರಪ್ಪ, ಎಂ.ಎ.,ಎಲ್‌ಎಲ್.ಬಿ., ಯವರು, ಬಿ. ಎಲ್. ಬಯ್ಯಣ್ಣನವರು, ಎಂ. ವೆಂಕಟಕೃಷ್ಣಯ್ಯನವರು, ನೀಲ್ಗಿರಿ ಜೆ. ಸಂಜೀವಯ್ಯನವರು, ಎಂ. ರಾಮಚಂದ್ರರಾವ್ ಸಿಂಧ್ಯರವರು, ಡಿ. ಎಸ್. ಮಲ್ಲಪ್ಪನವರು ಈ 8 ಜನರೇ ನ್ಯಾಯವಿಧಾಯಕಸಭಾ ಸಭಿಕರಾಗಿ ಆರಿಸಲ್ಪಟ್ಟರೆಂದು ಗೊತ್ತಾಯಿತು. ಉಳಿದ ಚುನಾವಣೆಯ ಫಲಿತಾಂಶವನ್ನು ಮುಂದೆ ತಿಳಿಸುತ್ತೇವೆ. ಹಿಂದುಳಿದ ಜನವರ್ಗಗಳ ಮೆಂಬರುಗಳೆಲ್ಲರೂ ಓಟಿಂಗಿನ ಹಿಂದಣದಿವಸ ಸಭೆ ಸೇರಿ ನಿರ್ಧರಿಸಿದಪ್ರಕಾರ 8 ಜನರ ವಿನಾ ಉಳಿದವರೆಲ್ಲರೂ ತಂತಮ್ಮ ಉಮೇದುವಾರಿತನವನ್ನು ಹಿಂದಕ್ಕೆ ತೆಗೆದುಕೊಂಡು ಪ್ರಜಾಪ್ರತಿನಿಧಿಗಳೆಲ್ಲರೂ ಆ 8 ಜನರಿಗೇ ಓಟುಮಾಡುವಂತೆ ಪ್ರಯತ್ನಿಸಿದ್ದಲ್ಲಿ ಆ ಹಿಂದುಳಿದ 8 ಜನರೇ ಉತ್ತೀರ್ಣರಾಗಿ ಬರುತ್ತಿದ್ದುದರಲ್ಲಿ ಅಭ್ಯಂತರವೇ ಇರಲಿಲ್ಲವು. ಆದರೆ ಕೆಲರು ಹಿತಶತ್ರುಗಳ ಕಪಟೋಕ್ತಿಗೆ ಮನಸೋತು ಮುಷ್ಕರಹಿಡಿದು ಉಮೇದುವಾರಿತನವನ್ನು ಹಿಂದಕ್ಕೆ ತೆಗೆದುಕೊಳ್ಳದೆ ಹೋದುದಲ್ಲದೆ ಪ್ರತಿಭಟಿಸಿ ಕೆಲಸಮಾಡಿದುದರ ಮೇಲೆ ಗೊತ್ತುಮಾಡಲ್ಪಟ್ಟಿದ್ದ 8 ಜನರಲ್ಲಿ ಇಬ್ಬರು ತಪ್ಪಿಹೋಗಿ ತಾವೂ ಬರದೆ ಬೇರೆಯವರು ಬರಲು ಅವಕಾಶವಾಯಿತು. ಹೀಗೆ ಹಿಂದೆಬಿದ್ದವರಲ್ಲಿ ಮದ್ದೂರಿನ ಮ|| ಎಂ. ಸಿ. ಲಿಂಗೇಗೌಡರು ಒಬ್ಬರಾಗಿರುವರು. ಕಾರ್ಯೋತ್ಸಾಹಶೀಲರೂ, ದಕ್ಷರೂ, ಹಿಂದುಳಿದ ಸೋದರಜನರ ಶ್ರೇಯೋಭಿಲಾಷೆಯಿಂದ ಪಾಟುಪಡುತ್ತಿರುವವರೂ ಆದ ಇವರು ಉತ್ತೀರ್ಣರಾಗದಿರುವುದಕ್ಕಾಗಿ ನಾವು ಚಿಂತಿಸುತ್ತೇವಲ್ಲದೆ, ಇವರು ಇನ್ನೂ ತರುಣರಾಗಿರುವುದರಿಂದ ನಿರುತ್ಸಾಹಿಗಳಾಗದೆ ಮುಂದಣ ಭರವಸೆಯ ಮೇಲೆ ಲಕ್ಷ್ಯವಿಟ್ಟು ತಾವು ಕೈಕೊಂಡಿರುವ ಪ್ರಜಾಸೇವಾ ಸತ್ಪ್ರಯತ್ನದಲ್ಲಿ ನಿಮಗ್ನಚಿತ್ತರಾಗಿರುವರೆಂದು ನಿರೀಕ್ಷಿಸುತ್ತೇವೆ.

ಕಳೆದ ತಾ|| ೨ ರ ಸಂಚಿಕೆಯಲ್ಲಿ ಮ|| ಪರಮಶಿವಯ್ಯನವರ ಯೋಗ್ಯತಾವಿಶೇಷವನ್ನೂ, ದೇಶಸೇವಾ ಕಾರ್ಯದಲ್ಲಿ ಅವರಿಗಿರುವ ಅಭಿನಿವೇಶವನ್ನೂ ನಾವು ಸ್ಪಷ್ಟವಾಗಿ ಬರೆದಿದ್ದೆವು. ಪ್ರಜಾಪ್ರತಿನಿಧಿಗಳಲ್ಲಿ ವಿಶೇಷಭಾಗದವರು ಗುಣಗ್ರಹಣಮಾಡಿ ತಮ್ಮಗಳ ಓಟುಗಳನ್ನು ಇವರಿಗೂ ಇವರಂತೆಯೇ ಹಿಂದುಳಿದ ವರ್ಗಗಳಿಗೆ ಸೇರಿದ ಮ|| ಅಬ್ಬಾಸ್ ಖಾನ್ ಮೊದಲಾಗಿ ಐವರಿಗೂ ಕೊಟ್ಟು ತಮ್ಮಪಕ್ಷದ ಸರಿಯಾದ ಪ್ರತಿನಿಧಿಗಳು ನ್ಯಾಯವಿಧಾಯಕಸಭೆಗೆ ಬರುವಂತೆ ಮಾಡಿಕೊಂಡುದು ಅವರಿಗೆ ಭೂಷಣವಾಗಿರುತ್ತದೆ. ಈ ಕಾರಣದಿಂದ ಸಂಕಲ್ಪಸಿದ್ಧಿಯನ್ನು ಬಹುಮಟ್ಟಿಗೆ ಪಡೆದ ಹಿಂದುಳಿದ ಪ್ರತಿನಿಧಿ ಮಹಾಶಯರನ್ನೂ ಮ|| ಗಳಾದ ಜೆ. ಪರಮಶಿವಯ್ಯನವರು, ಅಬ್ಬಾಸ್ ಖಾನರವರು, ಜೆ. ರುದ್ರಪ್ಪನವರು, ನೀಲ್ಗಿರಿ ಸಂಜೀವಯ್ಯನವರು, ಬಯ್ಯಣ್ಣನವರು ಮತ್ತು ಡಿ.ಎಸ್. ಮಲ್ಲಪ್ಪನವರು ಇವರುಗಳನ್ನೂ ನಾವು ಅಭಿನಂದಿಸುವುದಲ್ಲದೆ ಪ್ರತಿನಿಧಿಗಳು ತಮ್ಮಲ್ಲಿಟ್ಟ ಭರವಸೆಯನ್ನು ಸಾರ್ಥಕಪಡಿಸುವಂತೆ ನ್ಯಾಯವಿಧಾಯಕಸಭೆಯಲ್ಲಿ ಇವರುಗಳು ಕೆಲಸಮಾಡಿ ಇತೋಪ್ಯತಿಶಯವಾಗಿ ಸಹೋದರ ಪ್ರಜಾಪ್ರೀತಿಪಾತ್ರರೂ, ಯಶೋವಂತರೂ ಆಗಲೆಂದು ಕೋರುತ್ತೇವೆ. ಮತ್ತು ಆತ್ಮೋದ್ಧಾರಕ್ಕೆ ಅತ್ಯಂತ ಅವಶ್ಯಕವಾದ ಇಂತಹ ಏಕಮತ್ಯವೂ ಕರ್ತವ್ಯ ತತ್ಪರತೆಯೂ ಹಿಂದುಳಿದ ಜನವರ್ಗಗಳಲ್ಲಿ ಹೀಗೆಯೇ ಜಾಗರೂಕವಾಗಿರ ...ಕೋರಿ ಅವರೆಲ್ಲರ ಶುಭವನ್ನು ಹಾರೈಸುತ್ತೇವೆ. ಈ ...ದಲ್ಲಿ ಒಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ...ಸುತ್ತೇವೆ, ಅದೇನಂದರೆ—ಹಿಂದುಳಿದ ಒಕ್ಕಲಿಗ ಜನ...ದವರ ಪ್ರಾತಿನಿಧ್ಯವು ಅವರ ಜನಸಂಖ್ಯಾನುಗುಣವಾಗಿ ...ಯವಿಧಾಯಕ ಸಭೆಯಲ್ಲಿಲ್ಲವಾದುದರಿಂದ ಅಂದರೆ 14 ...ಜನರಿಗೆ ಇಬ್ಬರು ಮಾತ್ರ ಇರುವುದರಿಂದ ಘನಸರ್ಕಾರ...ರು ಜನಸಂಖ್ಯಾಮಾನದಿಂದ ಇತರ ಎಲ್ಲ ಜನವರ್ಗಗಳಿ... ಅತ್ಯಧಿಕವಾಗಿ ನ್ಯಾಯವಿಧಾಯಕ ಸಭೆಯಲ್ಲಿ ...ತಿನಿಧ್ಯವನ್ನು ಹೊಂದಿರುವ ಅಲ್ಪಸಂಖ್ಯಾಕವಾದ ಜನವ...ದವರೊಬ್ಬರನ್ನು ಯಾವ ತತ್ವದಮೇಲೆ ನಾಮಿನೇಟ್ ...ಡಿರುವರೋ ಅದೇ ತತ್ವದಮೇಲೆ ಬಹು ಸಂಖ್ಯಾಕರಾದ ...ಕಲಿಗರಲ್ಲೊಬ್ಬರನ್ನೂ ಪ್ರಾತಿನಿಧ್ಯವನ್ನು ಹೊಂದಲು ಅವ...ಶದೊರೆಯದಿರುವ ಜೈನರಲ್ಲೊಬ್ಬರನ್ನೂ ನ್ಯಾಯವಿಧಾ... ಸಭೆಗೆ ನಾಮಿನೇಟ್ ಮಾಡಬೇಕಾದುದು ಅವಶ್ಯವಾ...ತ್ತದೆ.

...ಯವಿಧಾಯಕಸಭೆಗೆ ಪ್ರಜಾಪ್ರತಿನಿಧಿ ಸಭೆಯಿಂದ ಆರಿಸಲ್ಪಟ್ಟ ಮೆಂಬರುಗಳು ಮತ್ತು ಅವರಿಗೆ ಬಂದ ಓಟ್ಸು.

ಮ|| ಗಳಾದ

ಜೆ. ಪರಮಶಿವಯ್ಯನವರು, ಬಿ.ಎ.,ಎಲ್‌ಎಲ್.ಬಿ., ಅಡ್ವೋಕೇಟ್, ಬೆಂಗಳೂರು	ಬಂದ ಓಟ್ಸು 111
ಮಹಮ್ಮದ್ ಅಬ್ಬಾಸ್‌ಖಾನರವರು, ಕೋಲಿವಾ ಪಾಂ, ಬೆಂಗಳೂರು	,, 90
ಜೆ. ರುದ್ರಪ್ಪ, ಎಂ.ಎ.,ಎಲ್‌ಎಲ್.ಬಿ., ಯವರು, ಅಡ್ವೋಕೇಟ್, ತುಮಕೂರು	,, 87
ಬಿ. ಎಲ್. ಬಯ್ಯಣ್ಣನವರು, ಲ್ಯಾಂಡ್‌ಹೋಲ್ಡರ್, ಬೆಂಗಳೂರು	,, 85
ಎಂ. ವೆಂಕಟಕೃಷ್ಣಯ್ಯನವರು, ಮರಿಮಲ್ಲಪ್ಪನವರ ಹೈಸ್ಕೂಲ್ ರಿ|| ಹೆ|| ಮಾಸ್ಟರ್	,, 80
ಎಂ. ರಾಮಚಂದ್ರರಾವ್ ಸಿಂಧ್ಯರು ಮರ್ಚಂಟ್ ಬೆಂಗಳೂರು	,, 78
ನೀಲ್ಗಿರಿ ಜೆ. ಸಂಜೀವಯ್ಯನವರು ಮರ್ಚಂಟ್, ಬೆಂಗಳೂರು	,, 77
ಡಿ. ಎಸ್. ಮಲ್ಲಪ್ಪನವರು, ಮರ್ಚಂಟ್ ತಿಪಟೂರು	,, 71

ಮೆಂಬರುಗಳಾಗಿ ನಿಂತಿದ್ದು ಉತ್ತೀರ್ಣರಾಗದೆ ಹೋದವರು.

ಮ|| ಗಳಾದ

ಸಿ. ನಾರಾಯಣಸ್ವಾಮಿಸೆಟ್ಟರು ಫಸ್ಟ್‌ಗ್ರೇಡ್ ಪ್ಲೀಡರ್, ಚಿಕ್ಕಬಳ್ಳಾಪುರ	ಬಂದ ಓಟ್ಸು 22
ಎಂ. ಅನಂತಯ್ಯನವರು, ಪ್ಲೀಡರ್, ಶಿವಮೊಗ್ಗ	,, 31
ಡಿ. ಎಸ್. ಹನುಮಂತರಾಯರು, ಶಾನಭೋಗ್,	,, 6
ಕೆ. ಸೂರನಾರಾಯಣರಾಯರು, ಜೋಡಿದಾರ್,	,, 9
ಎಚ್. ವಿ. ರಂಗಸ್ವಾಮಿ, ಬಿ.ಎ., ಎಲ್‌ಎಲ್.ಬಿ., ಅಡ್ವೋಕೇಟ್, ಹಾಸನ	,, 49
ಕಾರ್ಲೇಕ ಕೃಷ್ಣಮೂರ್ತಿರಾಯರು, ಜಮೀನ್ದಾರ್, ಬೆಂಗಳೂರು	,, 58
ಬಿ. ಶ್ರೀನಿವಾಸಯ್ಯಂಗಾರ್ ಇನಾಮ್ದಾರ್, ಬೆಂಗಳೂರು	,, 51
ಜಿ. ದೇವೋಜಿರಾಯರು, ಫಸ್ಟ್‌ಗ್ರೇಡ್ ಪ್ಲೀಡರ್, ಶ್ರೀರಂಗಪಟ್ಟಣ	,, 49
ಬಿ. ಕೆ. ರಾಮಕೃಷ್ಣಯ್ಯ, ಎಂ.ಎ., ಎಲ್‌ಎಲ್.ಬಿ., ಯವರು, ಅಡ್ವೋಕೇಟ್, ಮೈಸೂರು	,, 22
ಜಿ. ಕೆ. ಬಲಿಜಾ, ಫಸ್ಟ್‌ಗ್ರೇಡ್ ಪ್ಲೀಡರ್, ಬೆಂಗಳೂರು	,, 17
ಜಿ. ಆರ್. ಐಸಾಕ್, ಬಿ.ಎ., ಎಂ. ಬಿ. ಇ. ಯವರು	,, 15
ಎಸ್. ಕೃಷ್ಣಸ್ವಾಮಿರಾವ್, ಬಿ.ಎ.,ಎಲ್‌ಎಲ್.ಬಿ.,ಯವರು ಅಡ್ವೋಕೇಟ್, ಮೈಸೂರು	,, 23
ಎಚ್. ಎನ್. ರಾಘವೇಂದ್ರರಾಯರು, ಬೇಸಾಯಗಾರರು, ಹುಣಸೂರು	,, 7
ಎಂ. ಪಿ. ಸೋಮಶೇಖರರಾವ್, ಅಡ್ವೋಕೇಟರು, ಬೆಂಗಳೂರು	,, 10
ಬಿ. ವೆಂಕಟನಾರಣಪ್ಪನವರು, ಎಂ.ಎ., ಬೆಂಗಳೂರು	,, 15
ಎಸ್. ಶ್ರೀಕಂಠಯ್ಯನವರು, ಬಿ.ಎ., ಬಿ.ಎಲ್., ಅಡ್ವೋಕೇಟ್, ಬೆಂಗಳೂರು	,, 45
ಅಬ್ದುಲ್‌ನಬಿ, ಬಿ. ಎ. ಎಲ್‌ಎಲ್. ಬಿ., ಯವರು, ಅಡ್ವೋಕೇಟ್ ಬೆಂಗಳೂರು	,, 47
ವೆಂಕಟಸ್ವಾಮಯ್ಯನವರು ಬಿ.ಎ., ಬಿ.ಎಲ್., ಅಡ್ವೋಕೇಟ್, ನಂಜನಗೂಡು	,, 14
ರಾಮೇಗೌಡರು, ಕಾಮಸಮುದ್ರ	,, 18
ಸಿ. ಲಿಂಗೇಗೌಡರು, ಮದ್ದೂರು	,, 67
ಬಿ. ಶ್ರೀನಿವಾಸರಾಯರು, ಎಂ. ಎ., ಎಲ್‌ಎಲ್, ಬಿ., ಅಡ್ವೋಕೇಟ್, ಬೆಂಗಳೂರು	,, 18
ದೇವಯ್ಯನವರು, ಲ್ಯಾಂಡ್‌ಹೋಲ್ಡರ್, ಶ್ರೀರಂಗಪಟ್ಟಣ	,, 5
ವೇಮಾರಡ್ಡಿಯವರು, ಮಾಲೂರು,	,, 60
ಎಂ. ಅಬ್ದುಲ್‌ಖುದುಸ್‌ರವರು ಮರ್ಚಂಟ್, ...ಪಟ್ಟಣ	,, 7
ವಿ. ಹನುಮಂತರಾಜುರವರು ಸ್ಕೂಲ್‌ಮಾಸ್ಟರ್ ...ದುರ್ಗ	,, 7
ಸುಬ್ಬರಾಯರು, ಬಿ. ಎ., ಬಿ. ಎಲ್., ಅಡ್ವೋಕೇಟ್ ...ಮೊಗ್ಗ	,, 40
ಎ. ಲಕ್ಷ್ಮೀಪತಯ್ಯನವರು ಬಿ. ಎ., ಮೈಸೂರು	,, 48
[illegible] ಕೃಷ್ಣಪ್ಪನವರು, ತುಮಕೂರು	,, 7

ಸ್ವದೇಶದ ವೃತ್ತಾಂತಗಳು.

ರಾಜಧಾನಿಯ ಟ್ರೇನಿಂಗ್ ಕಾಲೇಜಿನ ಆರಂಭದಿನೋತ್ಸವವು ವಿದ್ಯಾಭ್ಯಾಸದ ಇ|| ಜನರಲ್‌ರವರ ಅಧ್ಯಕ್ಷತೆಯಲ್ಲಿ ಆಟಪಾಟ ವಿನೋದಗಳೊಡನೆ ಕಳೆದ ತಾ|| 12 ಮತ್ತು 13 ರಲ್ಲಿ ನಡೆದಿತು.

ರಾಜಧಾನಿಯಲ್ಲಿ ಕಳೆದ 1 ವಾರದಿಂದಲೂ ಪ್ರಾತಃಕಾಲದಲ್ಲಿ ಮಂಜು ಬೀಳುತ ಮಧ್ಯಾಹ್ನದಲ್ಲಿ ಬಿಸಲಿನತಾಪವು ಸಹಿಸಲಶಕ್ಯವಾಗಿದೆ. ವಾಂತಿಭೇದಿರೋಗದಿಂದ ಅಲ್ಲಲ್ಲಿ 1-2 ಮರಣಗಳಾಗುತ್ತಿವೆ.

ಪ್ರಜಾಪ್ರತಿನಿಧಿ ಸಭಾರಂಭೋತ್ಸವಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದ ದಿವಾನರು ಕೌನ್ಸಿಲರುಗಳೂ, ಶಾಖಾಧಿಕಾರಿಗಳೂ, ಸೆಕ್ರೆಟರಿಗಳೂ, ಮೊನ್ನೆಯದಿನ ಹಿಂದಿರುಗಿ ಪ್ರಯಾಣಮಾಡಿದರು.

ರಾಜಧಾನಿಯ ವೀರಶೈವರು ಕಳೆದ ತಾ|| 6 ರಲ್ಲಿ ಸಭೆ ಸೇರಿ ಮಾಡಿದ ನಿರ್ಧಾರಗಳೆಂದು ತಾ|| 9 ರ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುವುದು ಸರಿಯಲ್ಲವೆಂದು ಬರೆದುಬಂದಿರುವ ಪತ್ರವ್ಯವಹಾರವು ಮುಂದಣವಾರ ಪ್ರಕಟಿಸ್ಪಡುವುದು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ದಿ|| ಬ|| ಶ್ರೀಕಂಠೇಶ್ವರಯ್ಯರ್‌ರವರು ಈ ತಿಂಗಳ ಕಡೆಯಲ್ಲಿ ಉದ್ಯೋಗದಿಂದ ನಿವೃತ್ತರಾಗಿ ಹಾಸನದ ಡಿ|| ಕ|| ರವರಾದ ಮ|| ಕೆ. ಮೈಲಾರಿರಾಯರು ಪ್ರೆಸಿಡೆಂಟರಾಗಿ ಬರುವರೆಂಬ ವದಂತಿಯು ಪ್ರಬಲವಾಗಿದೆ.

ಶ್ರೀ ಶೃಂಗಗಿರಿ ಸ್ವಾಮಿಗಳವರು ನಾಳೆಯದಿನ ಬೆಳಿಗ್ಗೆ 8 ಗಂಟೆಗೆ ರಾಜಧಾನಿಗೆ ಚಿತ್ತೈಸಿ 3 ವಾರದವರೆಗೆ ಇಲ್ಲಿ ನಿಂತು ತಮ್ಮ ಶಿಷ್ಯರುಗಳಿಂದ ಪಾದಪೂಜಾದಿ ಕೈಂಕರ್ಯವನ್ನು ಸ್ವೀಕರಿಸಿ, ತಮ್ಮ ಗುರುಗಳ ಜನ್ಮಸ್ಥಲದ ಜ್ಞಾಪನಾರ್ಥವಾಗಿ ದೊಡ್ಡಕೆರೆಯ ಕೆಳಗಡೆ ಕಟ್ಟಲ್ಪಡುವ ಕಟ್ಟಡದ ಶಂಕುಸ್ಥಾಪನೆಯನ್ನು ಈ ತಾ|| 31ರಲ್ಲಿ ಮಾಡಿ ಮುಂದಕ್ಕೆ ಪ್ರಯಾಣಮಾಡುವವರಾಗಿರುವರು. ಸಂಸ್ಕೃತ ಮಹಾಕಾಲೇಜು ಶ್ರೀಗಳವರ ಬಿಡಾರಕ್ಕಾಗಿ ಬಿಡಲ್ಪಟ್ಟಿರುವುದು.

ಚನ್ನಗಿರಿ ತಾ|| ಹೋದಿಗ್ಗೆರೆಯ ವಾಸಸ್ಥರಾದ ಲಕ್ಷ್ಮೀಶ್ವರದ ಶ್ರೀಮಂತ ಅಡಿವಿಯಪ್ಪಸೆಟ್ಟರು ಅಸ್ವಸ್ಥರಾಗಿದ್ದು ಕಳೆದ ತಾ|| 14ರ ಮಧ್ಯಾಹ್ನ ಕೈಲಾಸವಾಸಿಗಳಾದರೆಂದು ತಿಳುಹಲು ಬಹಳ ವಿಷಾದವಾಗುತ್ತದೆ. ಇವರು ಪೂರ್ಣ ಶ್ರೀಮಂತರಾಗಿದ್ದರೂ ನಿಗರ್ವ ಶಿಖಾಮಣಿಗಳೂ, ಶಾಂತಸ್ವಭಾವದವರೂ, ದಯಾಪರರೂ, ಆರ್ತಜನ ಸಂರಕ್ಷಕರೂ, ಗುರುಭಕ್ತರೂ ಆಚಾರಶೀಲರೂ ಆಗಿದ್ದು ಸರ್ವಜನವಂದನೀಯರಾಗಿದ್ದರು. ಇಂತಹ ಸದ್ಗುಣಶೀಲಸಂಪನ್ನರ ಮೃತ್ಯುವಿನಿಂದ ಅವರ ಕುಟುಂಬಕ್ಕೆ ಮಾತ್ರವಲ್ಲದೆ ವೀರಶೈವ ಸಮಾಜಕ್ಕೇ ಅಪಾರ ನಷ್ಟವಾಯಿತೆನ್ನುವುದರಲ್ಲಿ ಸಂದೇಹವಿಲ್ಲವು. ಮೃತರ ಆತ್ಮಕ್ಕೆ ಶಾಂತಿಯೂ ಅವರ ಕುಟುಂಬಕ್ಕೆ ಮನಸ್ಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ರಾಜಧಾನಿಯಲ್ಲಿ ಮಹಮ್ಮದೀಯ ವಿದ್ಯಾರ್ಥಿಗಳಿಗೆ ಸ್ವತಂತ್ರವಾದ ಹಾಸ್ಟಲ್ಲು ಇಲ್ಲದೆ ಬಹಳ ತೊಂದರೆಯಾಗಿರುವುದನ್ನು ಇಲ್ಲಿಯ ದೊಡ್ಡ ಜವಳಿವ್ಯಾಪಾರಿಗಳೂ ಮ್ಯುನ್ಸಿಪಲ್ ಕೌನ್ಸಿಲರೂ ಆದ ಮಿ|| ಮಹಮುದ್‌ಸೇಟರು ಅರಿತು ಸಯ್ಯಾಜಿರಾವ್ ರೋಡಿನಲ್ಲಿ ಮಿಷನ್ ಗೋಷಾಬಾಲಿಕಾಪಾಠಶಾಲೆಯ ಪಕ್ಕದಲ್ಲಿ ಒಂದು ವಿಶಾಲವಾದ ನಿವೇಶನವನ್ನು ಪಡೆದು ಹಾಸ್ಟಲ್ ಕಟ್ಟಡವನ್ನು ಕಟ್ಟಿಸಬೇಕೆಂದು ಸಂಕಲ್ಪಿಸಿ ಅದಕ್ಕಾಗಿ ತಾವೂ ಉದಾರವಾಗಿ ಚಂದಾದ್ರವ್ಯವನ್ನು ವಾಗ್ದಾನ ಮಾಡಿರುವುದಲ್ಲದೆ ಇತರ ಮಹಮ್ಮದೀಯ ದೊಡ್ಡ ಮನುಷ್ಯರುಗಳಿಂದ ಚಂದಾ ಹಣವನ್ನೆತ್ತಲುಪಕ್ರಮಿಸಿರುವರೆಂದು ಕೇಳಿ ನಾವು ಸಂತೋಷಿಸುವೆವಲ್ಲದೆ, ಅವರ ಈ ಶ್ಲಾಘ್ಯಪ್ರಯತ್ನವು ಸಫಲವಾಗಿ ಅವರಿಗೆ ಕೀರ್ತಿಯೂ ಅವರ ಮತದ ವಿದ್ಯಾರ್ಥಿಗಳಿಗೆ ಪ್ರಯೋಜನವೂ ಆಗಲೆಂದು ಆಶಿಸುತ್ತೇವೆ.

ರಕ್ಷಕರು ಭಕ್ಷಕರಾಗುತ್ತಾರೆಯೇ ?

ಇದೇ ತಿಂಗಳ ತಾ|| 19 ರಲ್ಲಿ ದಾವಣಗೆರೆಯಲ್ಲಿ ದುರ್ಗಾದೇವಿಯ ಜಾತ್ರೆಯೂ ರಥೋತ್ಸವವೂ ನಡೆಯುವುದೆಂದು ಇದೇ ತಿಂಗಳ ತಾ|| 3 ರಲ್ಲಿ ಹುಬ್ಬಳ್ಳಿಯಿಂದ ಒಬ್ಬ ಮಹಾಶಯರು ಬರೆದಿರುವ ಕಾಗದದಿಂದಲೂ ತಾ|| ೫ರ ಸಂಪದಭ್ಯುದಯ ಪತ್ರಿಕೆಯಿಂದಲೂ ಗೊತ್ತಾಯಿತು. ಈ ಉತ್ಸವದಲ್ಲಿ 500 ಕೋಣಗಳೂ 5000 ಕುರಿಗಳೂ ಕತ್ತರಿಸಲ್ಪಡುವುವಂತೆ! ಈ ಉತ್ಸವವು ಅಜ್ಞಜನರಿಗೆ ಸಂತೋಷವನ್ನುಂಟುಮಾಡುವುದಾಗಿದ್ದರೂ ಆ 5500 ಅನಾಥಪ್ರಾಣಿಗಳ ಜೀವನಲೀಲೆಯನ್ನು ಕೊನೆಗಾಣಿಸುವ ಭಯಂಕರ ಉತ್ಸವವಾಗಿದೆ! ಆ ಪ್ರಾಣಿಗಳಿಗೆ ಈ ಭೂಲೋಕದ ನೀರಿನ ಋಣವು 19 ನೆಯ ತಾರೀಖಿಗೆ ತೀರಿಹೋಗುವುದು!! ಈ ಕಾರ್ಯವನ್ನು ನಡೆಯಿಸುವವರು ಧರ್ಮಪ್ರಾಣವಾದ ಹಿಂದೂ ದೇಶದಲ್ಲಿ ಹುಟ್ಟಿದ ಹಿಂದೂಗಳು !!! ಹಾ ! ವಿಧಿಯೇ !

ಈ ನವನಾಗರಿಕಕಾಲದಲ್ಲಿಯೂ ಮೂಢಭಕ್ತಿಗೆ ಧಿಕ್ಕಟ್ಟಿಯನ್ನು ಕೊಡದೆ ಇಂತಹ ಘೋರಕೃತ್ಯವನ್ನು ನಡೆಯಿಸುತ್ತಿರುವುದು ಬಹಳ ಆಶ್ಚರ್ಯಕರವಾಗಿದೆ. ನಿರ್ಬಲಗಳೂ, ನಿರಪರಾಧಿಗಳೂ, ಕಾಡುಗುಡ್ಡಗಳಲ್ಲಿ ಸೊಪ್ಪುಸದೆಗಳನ್ನು ತಿಂದು ಜೀವಿಸುವುವೂ, ಮಕ್ಕಳಂತೆ ಆಶ್ರಿತಗಳೂ ಆದ ಆ ಮೂಗಪ್ರಾಣಿಗಳನ್ನು ಸ್ವಲ್ಪವೂ ಕನಿಕರವಿಲ್ಲದೆ ದುರ್ಗಾದೇವಿಯ ಮುಂದೆ ತಲೆಕಡಿಯುವವರಿಗೆ ಪುಣ್ಯವು ಬರುವುದೋ ಘೋರವಾದ ಪಾಪವು ಬರುವುದೋ ಎಂಬುದನ್ನು ವಿಚಾರಶೀಲರಾದ ವಾಚಕರೇ ವಿಚಾರಮಾಡಲಿ. ಇಂತಹ ಅನ್ಯಾಯವಾದ ಘೋರಹಿಂಸೆಯಿಂದಲೂ ಪುಣ್ಯವು ಬರುವುದಾದರೆ ಲೋಕದಲ್ಲಿ ಪಾಪಕಾರ್ಯವೇ ಇಲ್ಲವೆಂದು ಹೇಳಬೇಕಾಗುವುದು.

ಮಹಾಭಾರತದಲ್ಲಿ "ಕಂಟಕೇನಾಪಿ ವಿದ್ಧಸ್ಯ ಮಹತೀ ವೇದನಾ ಭವೇತ್ | ಚಕ್ರಕುಂತಾಸಿಯಷ್ಟ್ಯಾದ್ಯೈಃ ಮಾರ್ಯಮಾಣಸ್ಯ ಕಿಂಪುನಃ,—ಮುಳ್ಳುತಗಲಿದ ಪ್ರಾಣಿಗೂ ಬಹಳ ವೇದನೆಯಾಗುವುದು. ಚಕ್ರ ಕುಂತಾಯುಧ ಖಡ್ಗ ದೊಣ್ಣೆ ಮೊದಲಾದುವುಗಳಿಂದ ಹೊಡೆಯಲ್ಪಡುವ ಪ್ರಾಣಿಗಾದರೋ ಹೇಳುವುದೇನು ?" ಎಂದು ಹೇಳುವಂತೆ ತಮ್ಮ ಕಾಲಿಗೊಂದು ಮುಳ್ಳುತಗಲಿದರೂ ಬಹಳ ನೋವಾಗುವುದನ್ನು ಸ್ವಾನುಭವ ಪ್ರತ್ಯಕ್ಷದಿಂದ ತಿಳಿದೂ ತಮ್ಮಂತೆಯೇ ಆ ಪ್ರಾಣಿಗಳಿಗೂ ದುಃಖವಾಗುವುದೆಂಬುದನ್ನು ವಿಚಾರಮಾಡದೆ ದುರ್ಗಾದೇವಿಯ ಹೆಸರನ್ನು ಹೇಳಿ ತೀಕ್ಷ್ಣವಾದ ಅಸ್ತ್ರಗಳಿಂದ ಆ ಅನಾಥ ಪ್ರಾಣಿಗಳ ಕತ್ತುಗಳನ್ನು ಕತ್ತರಿಸುವುದು ಯಾವಧರ್ಮ ? ಈ ಕ್ರೂರಕೃತ್ಯದಿಂದ ದೇವಿಯು ಸಂತೋಷಪಡುವಳೇ ? ಎಂದೂ ಇಲ್ಲ.

ವಿಶ್ವಸಾರತಂತ್ರದಲ್ಲಿ "ಸಾ ಮಾಯಾ ಪ್ರಕೃತೀ ದೇವೀ ಯದ್ಧಿಮಾತಾ ಚ ಕಥ್ಯತೇ | ಯದ್ಧಿಮಾತಾ ಇಮೇಸರ್ವೇ ಪುತ್ರಾಃ ಸ್ಥಾವರಜಂಗಮಾಃ,—ಆ ಶಕ್ತಿಯು ಮಾಯೆಯೆಂದೂ ಪ್ರಕೃತಿಯೆಂದೂ ದೇವಿಯೆಂದೂ ಮಾತೆಯೆಂದೂ ಹೇಳಲ್ಪಡುತ್ತದೆ. ಆ ದೇವಿಯು ತಾಯಿಯಾದುದರಿಂದ ಈ ಸ್ಥಾವರಜಂಗಮಗಳೆಲ್ಲವೂ ಮಕ್ಕಳು" ಎಂದು ಹೇಳಿದೆ. ಆ ದೇವಿಯು "ಹೇ ಜಗನ್ಮಾತಃ! ಜಗದಂಬ!" ಇತ್ಯಾದಿ ಮಾತೃವಾಚಕಶಬ್ದಗಳಿಂದ ಕರೆಯಲ್ಪಡುತ್ತಾಳೆ. ಇಂತಹ ಚರಾಚರಜಗತ್ತಿಗೆ ದೇವಿಯು ತಾಯಿಯಾದಮೇಲೆ ಜಗದಂತರ್ಭೂತವಾದ ಆ ಮೂಗಪ್ರಾಣಿಸಮುದಾಯಕ್ಕೆ ದೇವಿಯು ತಾಯಿಯಾಗಲಿಲ್ಲವೇ ? ಬಲಿಷ್ಠರಾದ ಮಕ್ಕಳು ಬಲಹೀನರೂ ನಿರಪರಾಧಿಗಳೂ ಆದ ಇತರ ಮಕ್ಕಳನ್ನು ಹಿಡಿದು ತಾಯಿಯ ಮುಂದೆ ತಾಯಿಗೇ ಬಲಿಯನ್ನು ಕೊಟ್ಟರೆ ತಾಯಿಗೆ ಅಪಾರವಾದ ದುಃಖವಾಗುವುದಿಲ್ಲವೇ? ತಾಯಿಯು ಬಲಿಷ್ಠರಾದ ಮಕ್ಕಳಮೇಲೆ ಮುನಿಯುವುದಿಲ್ಲವೇ? ಅದೇ ವಿಶ್ವಸಾರತಂತ್ರದಲ್ಲಿ ದೇವಿಯು ಹೇಳುವ ಮಾತುಗಳನ್ನು ನೋಡಿ:—"ಮಮ ನಾಮ್ನಿ ಪಶುಂ ಹಂತಾ ವಧಭಾಗೀ ಭವೇನ್ನರಃ | ಏತತ್ತತ್ತ್ವಂ ನಜಾನಾತಿ ಮಾತಾ ಕಿಂ ಭಕ್ಷಯೇತ್ಸುತಾನ್ :—ನನ್ನ ಹೆಸರಿನಲ್ಲಿ ಪಶುವನ್ನು ಕೊಲ್ಲುವ ಮನುಷ್ಯನು ಹಿಂಸೆಯ ಪಾಪಭಾಗಿಯಾಗುವನು. ತಾಯಿಯು ಮಕ್ಕಳನ್ನು ಭಕ್ಷಿಸುತ್ತಾಳೆಯೇ ? ಎಂಬೀ ತತ್ತ್ವವನ್ನು ತಿಳಿಯುವುದಿಲ್ಲ."

ಎಂತಹ ಕ್ರೂರಿಯಾದ ಪಶುವಾದರೂ ತನ್ನ ಮಕ್ಕಳ ಮೃತ್ಯುವಿನಿಂದ ದುಃಖಪಡುವುದು ಪ್ರತ್ಯಕ್ಷಸಿದ್ಧವಾಗಿರುವಾಗ ಜಗಜ್ಜನನಿಯಾದ ದೇವಿಯು ದುಃಖಪಡುವುದಿಲ್ಲವೆಂದರೆ ಅದೆಂತಹ ಕ್ರೂರತನ? ಪುತ್ರರಕ್ಷಕಳಾದ ಜಗನ್ಮಾತೆಯು ಪುತ್ರಭಕ್ಷಕಳಾಗುವಳೇ? ಹಾಗೆ ರಕ್ಷಕಳಾದ ತಾಯಿಯೇ ಭಕ್ಷಣೆಗೆ ಹೊರಟರೆ ಇನ್ನು ರಕ್ಷಿಸುವವರಾರು? ಲೋಕವೆಲ್ಲ ಆ ಜಗನ್ಮಾತೆಯ ಸೊತ್ತಾಗಿರುವಾಗ ಅವಳ ಸೊತ್ತನ್ನು ಬೇರೆಯವರು ಅವಳಿಗೆ ಬಲಿ ಕೊಡಬೇಕೆ? ಪಶುಗಳ ಹಿಂಡಿಗೆ ತಾನೇ ಪ್ರವೇಶಿಸಿ ಬಲಿ ತೆಗೆದುಕೊಳ್ಳುವ ಶಕ್ತಿಯು ಆ ಶಕ್ತಳಿಗಿಲ್ಲವೇ? ಆ ಶಕ್ತಿಯಿಲ್ಲವೆಂದು ಹೇಳುವುದಾದರೆ ಅಂತಹ ಅಶಕ್ತಳು ಭಕ್ತರ ಅಭೀಷ್ಟವನ್ನು ನೆರವೇರಿಸುವುದು ದಿಟವೇ? ಕೆಲವು ಅಜ್ಞಾನಿಗಳು ಯಾವುದನ್ನೂ ವಿಚಾರಮಾಡದೆ ಆ ಜಗಜ್ಜನನಿಗೆ ಮಾರಿ, ಮಹಾಮಾರಿ ಇತ್ಯಾದಿ ಹೆಸರುಗಳನ್ನಿಕ್ಕಿ ಆ ಪವಿತ್ರಮೂರ್ತಿಗೆ ಇಂತಹ ನಿಂದ್ಯವಾದ ಕಳಂಕವನ್ನು ತಂದೊಡ್ಡುತ್ತಾರೆ. ಇದರಿಂದ ಮುಂದಕ್ಕಾಗುವ ವಿಷಫಲವನ್ನು ವಿಚಾರಮಾಡುವುದಿಲ್ಲ. ಈ ಸಂದರ್ಭದಲ್ಲಿ ದುರ್ಗಾದೇವಿಯು ಪರಮೇಶ್ವರನೊಡನೆ ಹೇಳುವ ಮಾತನ್ನು ಪದ್ಮಪುರಾಣದಲ್ಲಿ ಹೀಗೆ ಹೇಳಿದೆ:—"ಮದರ್ಥೇ ಶಿವ! ಕುರ್ವಂತಿ ತಾಮಸಾ ಜೀವಘಾತನಂ | ಆಕಲ್ಪಕೋಟಿ ನಿರಯೇ ತೇಷಾಂ ವಾಸೋ ನ ಸಂಶಯಃ—ಶಿವನೇ! ಪಾಪಿಗಳು ನನಗೋಸ್ಕರ ಜೀವವಧೆಯನ್ನು ಮಾಡುತ್ತಾರೆ. ಅದರಿಂದ ಅವರಿಗೆ ಕೋಟಿಕಲ್ಪಕಾಲದವರೆಗೂ ನರಕದಲ್ಲಿ ವಾಸವುಂಟಾಗುವುದು; ಸಂದೇಹವಿಲ್ಲ."

ಕ್ಷಾಮ ರೋಗ ಮೊದಲಾದ ದೇಶೋಪದ್ರವಗಳಿಗೆ ಇಂತಹ ಕ್ರೂರಕೃತ್ಯಗಳನ್ನು ಮಾಡಿದರೆ ಉಪಶಾಂತಿಯಾಗುವುದೆಂದು ಕೆಲವರು ತಿಳಿದಿರುತ್ತಾರೆ. ಇದು ತಪ್ಪುತಿಳುವಳಿಕೆಯಾಗಿದೆ. ಯಾವ ಕಾಲದಲ್ಲಿಯೂ ಬೇಂಕಿಯಿಂದ ಶೈತ್ಯಗುಣವುಂಟಾಗಲಾರದು. ಕೃಷ್ಣಸರ್ಪದ ಬಾಯಿಯಿಂದ ಅಮೃತ

ವುಂಟಾಗಲಾರದು. ಉಪ್ಪುನೀರನ್ನು ಕುಡಿದರೆ ಬಾಯಾರಿಕೆಯು ನಿಲ್ಲದು. ದೇಶದಲ್ಲಿ ಇಂತಹ ಭಯಂಕರವಾದ ರಾಕ್ಷಸಕೃತ್ಯಗಳು ನಡೆಯುತ್ತಿದ್ದರೆ ದಯಾಮಯನಾದ ಜಗದೀಶ್ವರನ ಅನುಗ್ರಹವು ಕಡಿಮೆಯಾಗಿ ದೇಶೋಪದ್ರವಗಳು ಇನ್ನಷ್ಟು ಹೆಚ್ಚುವುವು. ನಾವು ನಿರ್ದಯರಾಗಿ ಇಂತಹ ಘೋರಕೃತ್ಯಗಳನ್ನು ನಡೆಯಿಸುತ್ತಿದ್ದರೆ ಭಗವಂತನು ನಮ್ಮನ್ನು ಕಣ್ಣೆತ್ತಿ ನೋಡಲಾರನು. ಲೋಕದಲ್ಲಿ ಸುಖಶಾಂತಿಗಳು ನೆಲೆಗೊಳ್ಳಬೇಕಾದರೆ ಧರ್ಮವನ್ನು ಕೈಬಿಡಬಾರದು. ಅದನ್ನು ವೃದ್ಧಿಪಡಿಸುತ್ತ ಬಂದಹಾಗೆಲ್ಲ ಸುಖಶಾಂತಿಗಳು ವೃದ್ಧಿಯಾಗುವುವು. ಧರ್ಮದಲ್ಲಿ ಅನೇಕ ಭೇದಗಳಿವೆ. ಅವುಗಳಲ್ಲೆಲ್ಲ ''ಶ್ರೂಯತೇ ಸರ್ವಶಾಸ್ತ್ರೇಷು ಸರ್ವೇಷು ಸಮಯೇಷು ಚ | ಅಹಿಂಸಾಲಕ್ಷಣೋಧರ್ಮಸ್ತದ್ವಿಪಕ್ಷಶ್ಚ ಪಾತಕಂ,—ಸಮಸ್ತ ಶಾಸ್ತ್ರಗಳಲ್ಲಿಯೂ ಮತಗಳಲ್ಲಿಯೂ ಅಹಿಂಸಾಲಕ್ಷಣವುಳ್ಳದು ಧರ್ಮವೆಂದೂ; ಅದಕ್ಕೆ ವಿಪರೀತವಾದ ಲಕ್ಷಣವುಳ್ಳದು ಅಧರ್ಮವೆಂದೂ ಹೇಳಲ್ಪಡುತ್ತದೆ.'' ಎಂಬೀ ವಚನಾನುಸಾರವಾಗಿ ಅಹಿಂಸಾಧರ್ಮವೇ ಪರಮೋತ್ಕೃಷ್ಟವಾದುದು. ಸತ್ಯ ಅಚೌರ್ಯ ಮೊದಲಾದ ಧರ್ಮಗಳೆಲ್ಲ ಈ ಅಹಿಂಸಾಧರ್ಮದ ಪುಷ್ಟಿಗೋಸ್ಕರವೇ ಬೇರೆಬೇರೆಯಾಗಿ ಹೇಳಲ್ಪಟ್ಟಿವೆ. ಸಾವಿರಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡುವುದು ಒಂದು ಪ್ರಾಣಿಯ ರಕ್ಷಣೆಗೆ ಸಮಾನವಾಗುವುದಿಲ್ಲವೆಂದು ಮಹಾಭಾರತದ ''ಕಪಿಲಾನಾಂ ಸಹಸ್ರಾಣಿ ಯೋ ವಿಪ್ರೇಭ್ಯಃ ಪ್ರಯಚ್ಛತಿ | ಏಕಸ್ಯ ಜೀವಿತಂ ದದ್ಯಾನ್ನ ಚ ತುಲ್ಯಂ ಯುಧಿಷ್ಠಿರ!'' ಎಂಬೀ ಪದ್ಯದಿಂದ ಹೇಳಲ್ಪಟ್ಟಿದೆ. ಅದೇ ಮಹಾಭಾರತದಲ್ಲಿ ''ಯಾವಂತಿ ಪಶುರೋಮಾಣಿ ಪಶುಗಾತ್ರೇಷು ಭಾರತ! ತಾವದ್ವರ್ಷಸಹಸ್ರಾಣಿ ಪಚ್ಯಂತೇ ಪಶುಘಾತಿನಃ,—ಎಲೈ ಭಾರತ! ಪಶುಗಳ ಶರೀರದಲ್ಲಿ ಎಷ್ಟು ರೋಮಗಳಿವೆಯೋ ಅಷ್ಟು ಸಾವಿರ ವರ್ಷಗಳವರೆಗೆ ಪಶುಘಾತಕರು ದುಃಖಿಸುತ್ತಾರೆ'' ಎಂದು ಹೇಳಿದೆ. ಬ್ರಹ್ಮವೈವರ್ತಪುರಾಣದಲ್ಲಿ ''ಜೀವಿತಸ್ಯ ಪ್ರದಾನಾದ್ಧಿ ನಾನ್ಯದ್ದಾನಂ ವಿಶಿಷ್ಯತೇ,—ಜೀವಿತ-ಪ್ರಾಣದಾನಕ್ಕಿಂತಲೂ ಹೆಚ್ಚಿನ ದಾನವಿಲ್ಲ'' ಎಂದು ಹೇಳಿದೆ. ಹೀಗಿರುವಾಗ ಆ ಅನಾಥಪಂಚೇಂದ್ರಿಯಮೂಗಪ್ರಾಣಿಗಳನ್ನು ತಂಡೋಪತಂಡವಾಗಿ ದೇವಿಗೆ ಬಲಿ ಕೊಡಬೇಕೆಂದು ಯಾವ ಧರ್ಮಶಾಸ್ತ್ರದಲ್ಲಿ ಹೇಳಿದೆಯೋ ತಿಳಿಯದು. ''ಧರ್ಮಶಾಸ್ತ್ರದಲ್ಲಿ ಏನು ಹೇಳುವುದು? ನಾವು ನಮ್ಮಿಷ್ಟಬಂದ ಹಾಗೆ ಮಾಡುತ್ತೇವೆ, ನಮಗೆ ಪಾಪಬಂದರೆ ಬರಲಿ'' ಎಂದು ಹೇಳುವವರಿಗೆ ಉತ್ತರವಿಲ್ಲ. ಕೆಲವರು ''ಅಷ್ಟನ್ನೆಲ್ಲ ನಡೆಯಿಸುವುದಕ್ಕೆ ಯಾರಿಗೆ ಶಕ್ತಿಯಿದೆ?'' ಎಂದು ಹೇಳುತ್ತಾರೆ. ತನಗೆ ಶಕ್ತಿಯಿಲ್ಲದ ಕಾರ್ಯವನ್ನು ಮಾಡಬೇಕೆಂದು ಯಾರೂ ಹೇಳುವುದಿಲ್ಲ. ಶಕ್ಯಾನುಷ್ಠಾನದಲ್ಲಿಯೂ ಶಕ್ತಿಯಿಲ್ಲವೆಂದು ಹೇಳದೆ ಯಥಾಶಕ್ತಿಯಾಗಿ ಧರ್ಮವನ್ನನುಷ್ಠಿಸುವುದು ಮನುಷ್ಯನ ಕರ್ತವ್ಯವಾಗಿದೆಯೆಂದೇ ಧರ್ಮಶಾಸ್ತ್ರಗಳ ಅಭಿಪ್ರಾಯವು.

ಕೃಷಿಪ್ರಧಾನವಾದ ನಮ್ಮ ದೇಶದ ಮದ್ಗಿರಿ ಸೀತ್ಕಲ್ಲು ಅಡುಗೂರು ಮೊದಲಾದ ಇನ್ನೂ ಅನೇಕ ಕಡೆಗಳಲ್ಲಿ ಪ್ರತಿವರ್ಷವೂ ಸಾವಿರಾರು ಕೋಣಗಳು ಮಾರಿಪೂಜೆಯ ನೆಪದಿಂದ ಯಮನಪಾಲಾಗುತ್ತಿವೆ! ಈ ವರ್ಷದಲ್ಲಿ ಕ್ಷಾಮದ ದೆಶೆಯಿಂದಂತು ಮೇವುನೀರಿಲ್ಲದೆ ಅಸಂಖ್ಯಾಕವಾಗಿ ಗೋಮಹಿಷಗಳು ಮೃತ್ಯುವಿಗೆ ತುತ್ತಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಕೃಷಿಯು ಎಷ್ಟರಮಟ್ಟಿಗೆ ನಡೆಯಬಹುದೆಂಬುದನ್ನೂ ದೇಶದಲ್ಲಿ ಹಾಲು ಮೊಸರು ಎಷ್ಟರಮಟ್ಟಿಗೆ ಸಮೃದ್ಧಿಯಾಗಿರಬಹುದೆಂಬುದನ್ನೂ ದೇವರೇಬಲ್ಲ. ದೇಶದಲ್ಲಿ ಎಲ್ಲಿ ನೋಡಿದರೂ ಹಾಹಾಕಾರವು ಕೇಳಿಸುತ್ತಿದೆ. ಇಂತಹ ಕರಾಳಕಾಲದಲ್ಲಿಯೂ, ಮರದಕೊಂಬೆಯ ಮೇಲೆ ಕುಳಿತು ಬುಡವನ್ನು ಕಡಿಯುವವನಂತೆ, ಕೆಲವರು ತಮಗೆ ಬರುವ ಹಾನಿಯನ್ನು ವಿಚಾರಮಾಡದೆ ಮೈಮರೆತು ಕ್ರೂರಕೃತ್ಯಗಳನ್ನಾಚರಿಸುವುದು ಮಾತ್ರವಲ್ಲದೆ ದೇಶಕ್ಕೂ ಹಾನಿಯನ್ನುಂಟುಮಾಡುತ್ತಾರೆ. ಹೀಗೆ ಅರ್ಥಿಕದೃಷ್ಟಿಯಿಂದಲೂ ಪಶುಬಲಿಯು ದೇಶಕ್ಕೆ ಅನರ್ಥಕಾರಿಯೆಂಬುದು ವ್ಯಕ್ತವಾಗುವುದು.

ಧಾರ್ಮಿಕದೃಷ್ಟಿಯಿಂದಲೂ ಅರ್ಥಿಕದೃಷ್ಟಿಯಿಂದಲೂ ಮಹಾಹಾನಿಕಾರಿಯಾದ ಈ ಪಶುಬಲಿಯನ್ನು ಘನಸರ್ಕಾರದವರೂ ಆಯಾಸ್ಥಳಗಳ ಬ್ರಾಹ್ಮಣ ವೀರಶೈವ ಮೊದಲಾದ ಧಾರ್ಮಿಕ ಮಹಾಜನಗಳೂ ನಿಲ್ಲಿಸಿ, ಆ ನಿಂದ್ಯವಾದ ಪಶುಬಲಿಗೆ ಬದಲಾಗಿ ಉತ್ತಮವಾದ ಗಂಧ ಫಲ ಪುಷ್ಪ ಚರು ದೀಪ ಧೂಪ ಮೊದಲಾದ ವಸ್ತುಗಳಿಂದ ದುರ್ಗಾದೇವಿಯನ್ನು ಪೂಜಿಸುವ ಪ್ರಚಾರವನ್ನು ರೂಢಿಗೆ ತಂದು ಲೋಕದಲ್ಲಿ ಸುಖಶಾಂತಿಗೆ ಕಾರಣವಾದ ಸನಾತನಧರ್ಮವನ್ನು ಕಾಪಾಡಿ ಪುಣ್ಯಕ್ಕೂ ಪ್ರಜಾಸಾಮಾನ್ಯದ ಮತ್ತು ಆ ಅನಾಥವಾದ ಮೂಗಪ್ರಾಣಿಗಳ ಕೃತಜ್ಞತೆಗೂ ಪಾತ್ರರಾಗಬೇಕಾಗಿ ಪ್ರಾರ್ಥನಾಪೂರ್ವಕವಾಗಿ ನಿವೇದಿಸುತ್ತೇವೆ.

ಜೀವಕಾರುಣ್ಯವು ಒಂದು ಗೊತ್ತಾದ ಜಾತಿಗಾಗಲಿ ವ್ಯಕ್ತಿಗಾಗಲಿ ಸಂಬಂಧಪಡತಕ್ಕ ಧರ್ಮವಲ್ಲ. ಇದು ಸ್ವಹಿತವನ್ನಿಚ್ಛಿಸುವ ಪ್ರತಿಯೊಬ್ಬ ಮನುಷ್ಯನ ಧರ್ಮವಾಗಿದೆ. ಸಮಸ್ತಶಾಸ್ತ್ರಗಳಲ್ಲಿಯೂ ಇದೇ ಅಭಿಪ್ರಾಯವು ತೋರುತ್ತದೆ. ಪರಹಿತನಿರತರಾದ ಮ|| ಗಾಂಧಿಯವರ ಹಿತಬೋಧೆಯೂ ಇದೇಯಾಗಿದೆ. ಇದನ್ನು ಅನುಷ್ಠಾನದಲ್ಲಿ ತರುವುದು ಪ್ರತಿಯೊಬ್ಬ ಧರ್ಮ ಮತ್ತು ದೇಶಾಭಿಮಾನಿಯ ಕರ್ತವ್ಯವಾಗಿದೆ.

ಪರದುಃಖದುಃಖಿತ,
ಎ. ಶಾಂತರಾಜಶಾಸ್ತ್ರೀ, ಮೈಸೂರು.

ಮೈಸೂರು ಸಂಸ್ಥಾನದ ಹೊಸ ರಾಜಕೀಯ ಸುಧಾರಣೆಗಳು.

ನೂತನ ಪ್ರತಿನಿಧಿ ಸಭೆಗಳ ಪ್ರಾರಂಭೋತ್ಸವ.

ಶ್ರೀಮನ್ಮಹಾರಾಜರವರ ನಿರೂಪವು.

ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಸದಸ್ಯರಿರಾ,—ಪುನರ್ವ್ಯವಸ್ಥಿತವಾದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ ಇವೆರಡರ ಸಮಾರಂಭೋತ್ಸವವನ್ನು ಈ ದಿವಸ ನೆರವೇರಿಸಲು ನಮಗೆ ಅಪಾರವಾದ ಸಂತೋಷವುಂಟಾಗಿರುತ್ತದೆ. ಮಹನೀಯರೇ! ನೀವು ಮೊದಲಿಗಿಂತಲೂ ಬಹುಮಟ್ಟಿಗೆ ಹೆಚ್ಚಿಸಲ್ಪಟ್ಟ ಚುನಾವಣೆದಾರರ ಸಮುದಾಯಕ್ಕೆ ಪ್ರಾತಿನಿಧ್ಯ ಕೊಡತಕ್ಕವರಾಗಿರುತ್ತೀರಿ; ವಿಸ್ತರಗೊಳಿಸಲ್ಪಟ್ಟ ಚುನಾವಣೆಯ ಹಕ್ಕುಗಳಿಗನುಸಾರವಾಗಿ ನಿಮಗೆ ಪ್ರಾತಿನಿಧ್ಯವು ದೊರೆತಿರುತ್ತದೆ; ಮತ್ತು ಕಳೆದ ಅಕ್ಟೋಬರ್ ತಿಂಗಳಿನಲ್ಲಿನ ನಮ್ಮ ರಾಜಶಾಸನ ಪತ್ರಿಕೆ (Proclamation)ಯಲ್ಲಿ ನಿಮಗೆ ಕೊಡಲ್ಪಟ್ಟಿರುವ ಅಧಿಕಾರಗಳಿಂದಲೂ ಉತ್ತರವಾದಿತ್ವಗಳಿಂದಲೂ ನೀವುಗಳು ಕಾರ್ಯಾರಂಭ ಮಾಡತಕ್ಕವರಾಗಿರುತ್ತೀರಿ. ಈಗಲೀಗ ನೀವುಗಳು ಹಿಂದೆ ಇದ್ದುದಕಿಂತ ಸಾರತರವಾದ ರೀತಿಯಲ್ಲಿ ನಿಮ್ಮ ಚುನಾವಣಯಸ್ಥಾನಗಳಿಗೆ ಪ್ರಾತಿನಿಧ್ಯ ಕೊಡತಕ್ಕವರಾಗಿರುತ್ತೀರಿ. ಅಲ್ಲದೆ ಪ್ರಜೆಗಳ ಅಪೇಕ್ಷೆಗನುಸಾರವಾಗಿ ಸರ್ಕಾರದ ತೀರ್ಮಾನಗಳು ನಡೆಯುವಂತೆ ಅನುನಯಗೊಳಿಸುವುದಕ್ಕೆ ನಿಮಗೆ ಮೊದಲಿದ್ದುದಕ್ಕಿಂತ ಅತ್ಯಧಿಕವಾದ ಸನ್ನಿವೇಶಗಳುಂಟಾಗಿರುತ್ತವೆ. ಈಗ ಲಭಿಸಿರುವ ನೂತನಸಂದರ್ಭಗಳಿಗನುಸಾರವಾಗಿ ಅನುರಾಗದಿಂದ ದೇಶಸೇವೆಯನ್ನು ಮಾಡುವುದಕ್ಕೂ, ತರಂಗತರಂಗವಾಗಿ ವಿಸ್ತಾರಗೊಳಿಸಿ ಪ್ರಜೆಗಳ ಶ್ರೇಯೋಭಿವೃದ್ಧಿಯನ್ನು ಮುಂದುವರಿಸುವುದಕ್ಕೂ ನಿಮಗೆ ಪೂರ್ವಭಾವಿಯಾಗಿ ಈ ಸಂಸ್ಥಾನದಲ್ಲಿದ್ದವರು ಸ್ತೋತ್ರಾರ್ಹವಾಗಿ ಪರಿಪಾಲಿಸಿದವುಗಳಿಗಿಂತಲೂ ಹೆಚ್ಚಿನ ಉತ್ತರವಾದಿತ್ವಗಳನ್ನು ವಹಿಸುವುದಕ್ಕೂ, ನಿಮಗೆ ಸ್ವಾಗತವನ್ನು ಬಯಸುತ್ತೇವೆ.

ನಾವು ರಾಜ್ಯಾಡಳಿತ ಸೂತ್ರವನ್ನು ಸ್ವೀಕರಿಸಿದ ಮೇಲೆ ಈಗ್ಗೆ ಸುಮಾರು ಇಪ್ಪತ್ತೊಂದು ವರುಷಗಳ ಹಿಂದೆ, ನಾವೇ ಮೊದಲನೆಯ ಸಾರಿ ಪ್ರಜಾಪ್ರತಿನಿಧಿ ಸಭೆಯ ಸಮಾಗಮೋತ್ಸವವನ್ನು ನೆರವೇರಿಸಿದ ಕಾಲದಲ್ಲಿ ನಾವು ಆಡಿದ ಮಾತುಗಳು ಈ ಸಮಯದಲ್ಲಿ ನಮ್ಮ ನೆನಪಿಗೆ ಬರುತ್ತವೆ. ವರ್ಷಂಪ್ರತಿಯಲ್ಲಿಯೂ ಪ್ರಜಾಪ್ರತಿನಿಧಿ ಸಭೆಯ ಸಮ್ಮೇಳನವು ನಡೆಯುವುದು ನಮ್ಮ ಪ್ರಜೆಗಳ ಶ್ರೇಯಸ್ಸಿಗೂ, ಪರಿತೃಪ್ತಿಗೂ ಸಾಧಕವಾಗುವುದರಲ್ಲಿ ಎಷ್ಟುಮಟ್ಟಿಗೆ ಅನರ್ಘ್ಯವಾದುದೆಂಬ ವಿಚಾರದಲ್ಲಿ ನಾವು ಆಗ್ಗೆ ಸೂಚಿಸಿದ ಆಶೋತ್ತರಗಳು ಯಥೇಷ್ಟವಾಗಿ ಸಫಲಗೊಂಡಿರುತ್ತವೆ; 1907ನೇ ಇಸ್ವಿಯಲ್ಲಿ ಏರ್ಪಡಿಸಲ್ಪಟ್ಟನ್ಯಾಯನಿರ್ಮಾಣ ಸಭೆಯೂ ಕೂಡ, ತನಗೆ ವಹಿಸಲ್ಪಟ್ಟಿದ್ದ ನಿಯಮನಿರ್ಮಾಣ, ರಾಜ್ಯಾದಾಯದ ಆಡಳಿತ ವಿಚಾರ, ಸಾಮಾನ್ಯವಾಗಿ ಇತರ ರಾಜ್ಯಾಡಳಿತ ವಿಚಾರಗಳು, ಇವುಗಳ ಮೇಲಣ ಕೆಲವು ಪ್ರಾಮುಖ್ಯವಾದ ಅಧಿಕಾರಗಳನ್ನು ಶ್ರೇಷ್ಠತೆಯಿಂದ ಪ್ರಯೋಗಿಸಿ ನಮ್ಮ ನಿರೀಕ್ಷಣೆಗಳನ್ನು ಸಾರ್ಥಕಗೊಳಿಸಿರುತ್ತದೆ. ಆದಾಗ್ಯೂ ಈ ದಿವಸ ನಾವು ನೆರವೇರಿಸುತ್ತಲಿರುವ ಈ ಸಮಾರಂಭೋತ್ಸವದ ದೆಸೆಯಿಂದ ಉಂಟಾಗುವ ಬದಲಾವಣೆಗಳು ಮೂಲತತ್ವರೂಪವಾದವುಗಳೆಂಬುದೂ, ಪ್ರಜೆಗಳ ಪ್ರತಿನಿಧಿಗಳಿಗೂ ರಾಜ್ಯಾಡಳಿತ ಕ್ರಮಕ್ಕೂ, ಮೊದಲಿಗಿಂತಲೂ ಗಾಢವಾದ ಸಂಬಂಧವನ್ನುಂಟುಮಾಡತಕ್ಕವೆಂಬುದೂ, ಈಗ್ಗೆ ಕೆಲವು ವರುಷಗಳ ಹಿಂದೆ ಸಾಧ್ಯವೆನಿಸಿದ್ದುದಕ್ಕಿಂತ ಎಷ್ಟೋ ಹೆಚ್ಚು ಧಾರಾಳವಾದ ರೀತಿಯಲ್ಲಿ ಪ್ರಜೆಗಳ ಸ್ವಾಭಾವಿಕವಾದ ಮತ್ತು ಸೂಕ್ತವಾದ ಆಕಾಂಕ್ಷೆಗಳುಉಕ್ಕಿಹರಿಯುವಂತೆ ಅವಕಾಶವನ್ನು ಕಲ್ಪಿಸತಕ್ಕವೆಂಬುದೂ, ನಿಮಗೆ ವಿದಿತವಾಗಿಯೇ ಆಗುತ್ತವೆ.

ಚುನಾವಣೆಯ ಹಕ್ಕನ್ನು ಇನ್ನೂ ವಿಸ್ತರಿಸಿಕೊಟ್ಟು ಪ್ರಜೆಗಳಿಗೆ ಇನ್ನೂ ಹೆಚ್ಚು ಅಧಿಕಾರಗಳನ್ನು ಕೊಡಬೇಕೆಂಬುದೇ ಮುಂತಾದ ಅನೇಕ ಸಮೂಲವಾದ ಬದಲಾವಣೆಗಳುಂಟಾಗಬೇಕೆಂದು ನಮ್ಮ ಪ್ರಜೆಗಳಲ್ಲಿ ಒಂದು ಗುಂಪಿನವರ ಅಭಿಮತವಾಗಿದ್ದಿತೆಂಬುದನ್ನು ನಾವು ಬಲ್ಲೆವು. ಅವರ ಗುರಿಯಲ್ಲಿರುವ ಆದರ್ಶ ತತ್ವಗಳ ವಿಚಾರದಲ್ಲಿ ಸಂಪೂರ್ಣವಾಗಿ ಸಹಾನುಭೂತಿಯಿಂದೊಡಗೂಡಿರುತ್ತೇವೆ; ನಮ್ಮ ಈಗಿನ ತೀರ್ಮಾನವು ಬಹುದೀರ್ಘಕಾಲ ಮಂತ್ರಾಲೋಚನೆಮಾಡಿ ನಡೆದುದೆಂದು ಹೇಳಬೇಕಾಗಿದೆ. ಯಾವುದೊಂದು ದೇಶವೇ ಆಗಲಿ, ತನ್ನ ಸ್ಥಿತಿಗತಿಗಳನ್ನೂ, ಪ್ರಜಾಸ್ವಭಾವವನ್ನೂ ಅನುಸರಿಸಿ ಅವಕ್ಕೆ ತಕ್ಕಂತೆ ರಾಜ್ಯಾಡಳಿತಕ್ರಮವನ್ನು ಪರಿವರ್ತನಗೊಳಿಸಿಕೊಳ್ಳಬೇಕು. ಎಲ್ಲಾ ವಿಧವಾದ ರಾಜ್ಯಭಾರಕ್ರಮಗಳ ವ್ಯವಸ್ಥೆಯ ಅಭಿವೃದ್ಧಿಯಲ್ಲಿಯೂ ಸಾಮಾನ್ಯವಾಗಿ ಕಂಡುಬರುವ ಮೂಲತತ್ವಗಳನ್ನು ಪರಿತ್ಯಜಿಸದಂತೆ ನೋಡಿಕೊಂಡು ಚೆನ್ನಾಗಿ ಪರಿಶೀಲಮಾಡಿದುದರಲ್ಲಿ, ನಮ್ಮ ಪ್ರಜಾಪ್ರತಿನಿಧಿ ಸಭೆಯು ಮುಂಚಿನಂತೆ ಸ್ಪಷ್ಟವಾಗಿ ನೆಟ್ಟನೆ ಪ್ರಜೆಗಳ ಕುಂದು ಕೊರತೆಗಳನ್ನು ತಿಳಿಸತಕ್ಕುದಾಗಿಯೂ, ಪ್ರಜೆಗಳ ಪ್ರಾತಿನಿಧ್ಯದಿಂದೊಡಗೂಡಿ ಮಂತ್ರಾಲೋಚನೆಗೂ, ಸಮರ್ಪಿಸಿದ ವಿಷಯದಲ್ಲಿ ತೀರ್ಮಾನ ಹೇಳುವುದಕ್ಕೂ, ಬೇಕಾದ ಮುಖ್ಯಸ್ಥಾನವಾಗಿಯೂ ಇರುವ ಸಂಸ್ಥೆಯಾಗಿರುವುದಲ್ಲದೆ ಪ್ರಜೆಗಳಿಗೆ ರಾಜಕೀಯವಿಚಾರಗಳಲ್ಲಿನ ತಿಳುವಳಿಕೆಯೂ, ಅಭಿರುಚಿಯೂ, ಹೆಚ್ಚಿದಂತೆಲ್ಲಾ ಅದಕ್ಕನುಗುಣವಾಗಿ ಹೆಚ್ಚು ಹೆಚ್ಚಾಗಿ ವಿಕಾಸಗೊಳ್ಳುವಂತಹ ಸ್ವಭಾವವುಳ್ಳ ವ್ಯವಸ್ಥಾ ಕ್ರಮದಿಂದೊಡಗೂಡಬೇಕೆಂದೂ, ನ್ಯಾಯವಿಧಾಯಕ ಸಭೆಯು ವಿಶೇಷತಃ ನಿಮಿತ್ತಮಾತ್ರದ ಕೆಲಸವೆನಿಸುವ ನಿಯಮನಿರ್ಮಾಣ ಕಾರ್ಯವನ್ನೂ, ಇಂತಹ ಸಭೆಗಳು ನಡೆಸತಕ್ಕುದು ರೂಢಿಯಾಗಿರುವ ಇತರ ಕಾರ್ಯಕಲಾಪಗಳನ್ನೂ ನೆರವೇರಿಸಬೇಕೆಂದೂ ನಿರ್ಧರಗೊಳಿಸತಕ್ಕುದು ಅವಶ್ಯಕವಾಯಿತು.

ನಿಮಗೆ ಈಗ ಹೊಸದಾಗಿ ದೊರೆತಿರುವ ಅಧಿಕಾ ವಿದ್ಯಾಭಿವೃದ್ಧಿಮಾಡುವುದು, ಜ್ಞಾನಪ್ರಸಾರಣ ಮಾಡು ಸರಕಾರಿ ಮತ್ತು ಖಾಸಗಿ ಈ ಎರಡು ವಿಧದಲ್ಲಿಯೂ ಕೆಯ ಉದ್ಯಮಗಳನ್ನ ಹೆಚ್ಚಿಸುವುದು, ಪೌರಕಾರ್ಯ ಗಮನಕೊಡುವ ಸದ್ಗುಣಗಳನ್ನು ಪರಿಪೋಷಿಸುವುದು, ಸಮಾಜ ಸೇವೆಯಲ್ಲಿ ಆಸಕ್ತಿಯನ್ನು ಅಭಿವೃದ್ಧಿಗೊಳಿಸ ಅಂತು ದೇಶದಲ್ಲಿ ನಡೆಯುತ್ತಿರುವ ಹಿತಸಾಧನೆಯ ಉ ಳಿಗೆಲ್ಲಾ ಒತ್ತಾಸೆಕೊಟ್ಟು ಪರಿಪುಷ್ಟಿಗೊಳಿಸುವುದರಲ್ಲಿ ವಿ ಗಿಸುವರೆಂಬ ವಿಚಾರವು ನಮಗೆ ನಿಸ್ಸಂದೇಹವಾಗಿದೆ. ದೇಶದ ವ್ಯವಸಾಯ ಸನ್ನಿವೇಶದ ಶೋಚನೀಯವಾದ ಗಳೆನಿಸಿ ಯಾವಾಗಲಾದರೂ ಬಂದೊದಗಬಹುದಾದ ಷ್ಟಿ ಮತ್ತು ಕ್ಷಾಮ ಇವುಗಳ ಬಾಧೆಯನ್ನು ಪರಿಹರಿ ಲು ಧನವನ್ನೂ ದಿನಸಿಗಳನ್ನೂ ಸಂಗ್ರಹಮಾಡಿಟ್ಟುಕ ಇರುವಂತೆಯೂ, ಮಿತವ್ಯಯಮಾಡುವಂತೆಯೂ ಬೋಧನ ಮಾಡಬೇಕೆಂದೆ ನಿಮಗೆ ಅತ್ಯಂತವಾಗಿ ಒತ್ತಿ ತ್ತೇವೆ. ದೂರದೃಷ್ಟಿಯಿಟ್ಟು ಮೊದಲೇ ಸಾಕಾದಷ್ಟು ವನ್ನೂ, ಧನವನ್ನೂ ಶೇಖರಿಸಿಟ್ಟುಕೊಂಡರೆ ಈಗ ನಮ್ಮ ದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಜನರಿಗೆ ಸಂಭವಿಸಿರು ಘೋರವಾದ ಕಷ್ಟಗಳನ್ನು ಬಹುಮಟ್ಟಿಗೆ ಪರಿಹರಿಸ ವುದು ಸಾಧ್ಯ. ವಿಧಿಸ್ಥಾಪಕ ಸಂಸ್ಥೆಗಳ ''ಸ್ಟ್ಯಾಂ ಮಿಟಿ'' ಗಳೆಂಬ ಉಪಸಭೆಗಳು ಸರಕಾರದ ಮುಖ್ಯ ಗಳೊಡನೆ ಪ್ರಜೆಗಳ ಪ್ರತಿನಿಧಿಗಳಿಗೆ ಹೆಚ್ಚು ಪರಿಚಯ ಸಂಬಂಧವನ್ನೂ, ಕಲ್ಪಿಸಿಕೊಡಲೆಂಬುದಾಗಿ ನಾವು ಹ ತ್ತೇವೆ. ಈಗ ಪರ್ಯಾಲೋಚಿಸಲ್ಪಟ್ಟಿರುವ ''ಸೆಲ್ಫ್ ಮೆಂಟು'' ಎಂದರೆ ಸ್ಥಳೀಯ ಆಡಳಿತ ನಿರ್ವಹಣದ ಯಾದ ಕ್ರಮವು ಆಚರಣೆಗೆ ಬಂದು, ಡಿಸ್ಟ್ರಿಕ್ಟು ಗಳು, ತಾಲ್ಲೋಕು ಬೋರ್ಡುಗಳು, ಮ್ಯುನಿಸಿಪಾ ಮತ್ತು ಗ್ರಾಮಪಂಚಾಯತಿ ಸಭೆಗಳು ಇವುಗಳ ಗಳು ಹೆಚ್ಚಿಸಲ್ಪಟ್ಟಾಗ್ಗೆ ದಕ್ಷರಾದ ಜನರಿಗೆ ಸ್ಥಳೀಯ ಗಳನ್ನು ತಮ್ಮಲ್ಲೇ ವ್ಯವಹರಿಸಿಕೊಳ್ಳುವುದಕ್ಕೂ ಪ್ರಜಾ ಯ ಸಾಧಕವಾದ ಕಾರ್ಯಗಳಲ್ಲಿ ಭಾಗಿಗಳಾಗುವ ಅನೇಕ ಅವಕಾಶಗಳುಂಟಾಗುತ್ತವೆ.

ಪ್ರಜಾಭ್ಯುದಯ ಸಾಧಕವಾದ ವಿಚಾರಗಳನ್ನು ರೀತಿಯಲ್ಲಿ ಪರ್ಯಾಲೋಚಿಸಿ ನೆರವೇರಿಸುವುದರಲ್ಲಿ ಸ ದೊರೆಯಬೇಕಾದರೆ ಒಂದುವಿಧದ ಆತ್ಮಸಂಯಮವು ಮೂಲಕಾರಣವೆನಿಸಿ ಅವಶ್ಯವಾಗಿರುತ್ತದೆ; ನೀವುಗಳು ಚಾರದಲ್ಲಿ ಅಂತಹ ಆತ್ಮಸಂಯಮವನ್ನು ಅವಲಂಬಿಸತ ಅವಶ್ಯವಾಗಿರುತ್ತದೆ. ಪಂಗಡಗಳು ಪರಸ್ಪರವಾಗಿ ವಾ ವಾದ ಮಾಡುವುದು ಎಂದಿಗೂ ತಪ್ಪತಕ್ಕುದಲ್ಲವಾಗಿದಾ ನೀವು ನಡೆಯಿಸುವ ಚರ್ಚೆಗಳು ಪರಸ್ಪರ ಸಹಿಷ್ಣುತೆಯಿ ಮರ್ಯಾದೆಯಿಂದಲೂ ಕೂಡಿ ರಾಜ್ಯದ ವಿಧಿಸ್ಥಾಪಕ ಗಳೆಂಬ ನಾಮಧೇಯಕ್ಕನುಗುಣವಾದ ದರ್ಪದಿಂದಲೂ ನೀತಿಗಳಿಂದಲೂ ಸಾಗುವುವೆಂದು ನಂಬಿರುತ್ತೇವೆ. ನಿಮ್ಮ ಪ್ರಾಯಗಳನ್ನು ವ್ಯಕ್ತಗೊಳಿಸುವಾಗ ವಿವೇಕಮಯವಾ ಯಮದಿಂದ ಕೂಡಿ ವರ್ತಿಸುವುದು ಅವಶ್ಯಕ. ಅತ್ಯು ನಿಷ್ಠುರದ ನುಡಿಗಳೂ ಹೊರಟರೆ ಉದ್ದಿಷ್ಟಕಾರ್ಯಸಾ ಅವುಗಳು ಕುಂದಕವನ್ನು ತರುತ್ತವೆ. ಮತ್ತು ಭಾಷಣ ಬೇಕೆಂದಿರುವ ವಿಚಾರಗಳನ್ನು ಪೂರ್ವಭಾವಿಯಾಗಿ ವಾಗಿ ಪರಿಶೀಲಿಸಿ ಆಮೇಲೆ ಮಾತನಾಡಬೇಕೆಂದೂ ನಿವ ದಾನುವಾದಗಳೆಲ್ಲದರಲ್ಲಿಯೂ ಯಾವುದಾದರೂ ಪಂ ಅಥವಾ ಜಾತಿಗಳ ಶ್ರೇಯಸ್ಸಾಧನೆಗಿಂತಲೂ ಹೆಚ್ಚಾಗಿ ರಾಜ್ಯದ ಶ್ರೇಯೋಭಿವೃದ್ಧಿಗೆ ಪ್ರಾಮುಖ್ಯತೆಯನ್ನು ಕೆ ಕೆಂದೂ ಒತ್ತಿಹೇಳುತ್ತೇವೆ. ಮೂರನೆಯ ಅಂಶವಾಗಿ ಮುಖ್ಯವಾಗಿ ನಿಮ್ಮ ಗಮನಕ್ಕೆ ತರುವುದೇನೆಂದರೆ, ನಿ ಸರಕಾರದವರಲ್ಲಿಯೂ, ಪ್ರಜೆಗಳಲ್ಲಿಯೂ ಮಿಳಿತರಾಗಿ ಮಾಡುತ್ತಾ ಪ್ರಜೆಗಳ ವಿಚಾರದಲ್ಲಿ ಸರಕಾರದವರಿಗೂ ರದವರ ವಿಚಾರದಲ್ಲಿ ಪ್ರಜೆಗಳಿಗೂ, ಸರಿಯಾದ ತಿಳುವಳಿ ಟಾಗುವಂತೆ ವಿಷಯವಿವರಣಮಾಡುತ್ತಾ ಬರತಕ್ಕುದು. ಮಾಡುತ್ತಾ ಬಂದಲ್ಲಿ ಮಾತ್ರವೇ ನಿಮ್ಮ ತರಗತಿಯವರು ಕೃಷ್ಟರೂ, ಎನಿಸಿರುವ ಬಡಪಾಯಿಗಳಲ್ಲಿ ಬಹುಕಾಲದಿ ನೆಲೆಗಟ್ಟಿ ಬಂದಿರುವ ಮೌನವು ಹುಟ್ಟಡಗಿ ಅವರ ಶ್ರೇಯೋ ದ್ಧಿಯ ವಿಚಾರದಲ್ಲಿ ವಿದ್ಯಾವಂತರೂ, ಮತ್ತು ಸಿರಿವಂತರೂ ಪಂಗಡಗಳವರು ಸಂಪೂರ್ಣ ಉತ್ತರವಾದಿತ್ವವನ್ನು ಎದೆಕೊಟ್ಟು ನಿಲ್ಲುವಂತಾಗುವುದೆಂದು ನಮ್ಮ ಕೋರಿಕೆ ರುತ್ತದೆ.

ನಮ್ಮ ರಾಜ್ಯದ ಪ್ರಜೆಗಳು ತಮ್ಮ ಸಮಸ್ತ ಆಶ ನ್ನೂ ತಾವೇ ನೆರವೇರಿಸಿಕೊಳ್ಳತಕ್ಕ ಸಾಮರ್ಥ್ಯವನ್ನೂ ನೀತಿಗಳನ್ನೂ ಅಭಿವೃದ್ಧಿಪಡಿಸಿಕೊಂಡು, ಮಹತ್ಕಾರ್ಯ ತಪ್ಪದೆ ಧೈರ್ಯದಿಂದ ಪ್ರಾರಂಭಿಸತಕ್ಕವರೂ, ಅದ್ಯ ಪಟುಗಳೂ, ಆಗಿ ದೇಶದಲ್ಲಿ ಸಮಸ್ತ ಪುರೋಭಿವೃದ್ಧಿಯ ರ್ಯಕಲಾಪಗಳಲ್ಲಿಯೂ ಮುಂದಾಳುಗಳಾಗಿ ನಿಂತು ಕೃ ರಾಗುವುದನ್ನು ನೋಡಬೇಕೆಂಬುದೇ ನಮ್ಮ ಮುಖ್ಯ ಯಾಗಿರುತ್ತದೆ. ನಮ್ಮ ಭಾವಿಕಾರ್ಯಕ್ರಮಗಳನ್ನು ಅ ಕೊಳ್ಳುವುದರಲ್ಲಿ, ಈಚೀಚೆಗೆ ನಡೆದುಬಂದಿರುವ ಅಗಾ ಮತ್ತು ಮಹತ್ತರವಾದ ಬದಲಾವಣೆಗಳನ್ನು ಗಮನಿಸ ಬ್ರಿಟಿಷ್ ಜನಾಂಗದ ಕೃಪಾಭರಿತವಾದ ಮಾರ್ಗದರ್ಶ ಸಹಾಯದಿಂದ ಇಂಡಿಯಾ ದೇಶವು, ಪ್ರಾಂತ್ಯಗಳಿಂ ಸಂಸ್ಥಾನಗಳಿಂದಲೂ ಕೂಡಿದ ಒಂದು ಸಾಂಘಾತಿಕ

ನುಗುಣವಾಗಿ ಮಾರ್ಪಡುತ್ತಾ ಬರುತ್ತಿದೆ. ಮೈಸೂರು ನದಲ್ಲಿರುವ ನಾವೆಲ್ಲರೂ ಜನಾಂಗದೊಳಗಣ ಮತ್ತೊಂ ಜನಾಂಗವೋ ಎಂಬಂತೆ ಇರುತ್ತೇವೆ. ಒಟ್ಟು ದೇಶಕ್ಕೆ ಅ ದಯವನ್ನುಂಟುಮಾಡುವ ಕಾರ್ಯಗಳಲ್ಲೆಲ್ಲಾ ನಾವು ಇಂಡಿಯಾ ಸರಕಾರದವರ ಮತ್ತು ಒಟ್ಟು ಭರತಖಂಡದ ಪ್ರಜೆ ನೆಯೂ ಪರಸ್ಪರ ಸಹಾಯಮಾಡಿಕೊಂಡು ವರ್ತಿಸುವು ಸ್ಥಳೀಯವಾಗಿ ನಮ್ಮ ದೇಶದಲ್ಲಿ, ಇಲ್ಲಿಯಜನರು ಅಭ್ಯು ಸೋಪಾನದಲ್ಲಿ ಇತರ ಪ್ರಾಂತ್ಯಗಳವರ ಮತ್ತು ಇತರ ಸಂಸ್ಥಾನಗಳ ಜನರಿಗಿಂತ ಕೆಳಗೆ ಬೀಳದಂತೆ ನಮ್ಮ ಸ್ಥಿತಿಗತಿಗ ನ್ನನುಸರಿಸಿ ಸಾಧ್ಯವೆನಿಸುವಷ್ಟು ಸಂಪೂರ್ಣವಾಗಿ ವಿದ್ಯಾ ಭಿವೃದ್ಧಿಯನ್ನೂ, ಅರ್ಥಸಾಧಕಸಂಪತ್ತಿನ ಬೆಳವಣಿಗೆಯನ್ನೂ ದಗಿಸಿಕೊಳ್ಳಬೇಕು.

ಇತ್ತೀಚಿನಿಂದಲೂ ಮೈಸೂರಿನ ಇತಿಹಾಸವು ಸುಸೂತ್ರವಾಗಿಯೂ, ಸರಳವಾಗಿಯೂ, ಸಾಗಿ ಬಂದಿರುವುದೇ ಭವಿಷ್ಯತ್ತಿಗೆ ಶುಭಸೂಚಕವೆನಿಸಿರುತ್ತದೆ. ತಟ್ಟನೆ ಬದಲಾವಣೆಗಳು ನಡೆದುದನ್ನಾಗಲೀ, ಇಲ್ಲವೇ, ಏನೂ ನಡೆಯದೆ ಒಂದೇ ನೆಲೆಯಲ್ಲಿ ನಿಂತುದನ್ನಾಗಲೀ ನಾವು ಕಂಡರಿಯೆವು. ಕಾಲಕ್ರಮಕ್ಕೂ ಪ್ರಜೆಗಳ ಆಶೋತ್ತರಗಳಿಗೂ, ಅವಶ್ಯಕತೆಗಳಿಗೂ, ತಕ್ಕಂತೆ ನಮ್ಮ ಪ್ರಭುತ್ವಕ್ರಮವನ್ನೂ, ಆಡಳಿತ ವಿಚಾರಗಳನ್ನೂ ಸಮರ್ಪಕವಾಗಿ ಹೊಂದಿಕೆಗೊಳಿಸುತ್ತಾ, ಕ್ರಮವರಿತು ಒಂದೇ ಸಮವಾಗಿ ನಾವು ಮುಂದುವರಿಯುತ್ತಿದ್ದೇವೆ. ಪ್ರಭುತ್ವಕ್ರಮದ ಅಭ್ಯುದಯವೆಲ್ಲಾ ಪ್ರಜೆಗಳ ಪರಿಷ್ಕರಣಕ್ಕೂ, ಅವರ ಶಕ್ತಿಸಾಮರ್ಥ್ಯಗಳನ್ನು ಹೆಚ್ಚಿಸಿ ರಾಜ್ಯಾಡಳಿತ ವಿಧಾನದಲ್ಲಿ ವಿನಿಯೋಗಿಸಿಕೊಳ್ಳುವುದಕ್ಕೂ ಸಂಬಂಧಪಟ್ಟಿದೆ. ಈ ವಿಧದ ಅಭ್ಯುದಯ ಸಾಧನೆಯೇ ನಿರಂತರವೂ ಮೈಸೂರು ಸರಕಾರದವರ ಮುಖ್ಯ ಗುರಿಯಾಗಿರುತ್ತದೆ. ಆದ್ದರಿಂದ ಈ ದಿವಸ ನಾವು ನೆರವೇರಿಸುತ್ತಿರುವ ಸಮಾರಂಭೋತ್ಸವವು ಈಗ್ಗೆ ನಾಲ್ವತ್ತು ವರುಷಗಳಿಗೆ ಮೇಲ್ಪಟ್ಟ ಕಾಲದಿಂದಲೂ ಸೂಕ್ತವಾದ ರೀತಿಯಲ್ಲಿ ಕ್ರಮವರಿತು ಅವಿಚ್ಛಿನ್ನವಾಗಿ ನಡೆದುಬರುತ್ತಿರುವ ಅಭಿವೃದ್ಧಿ ಮಾರ್ಗದಲ್ಲಿನ ಮತ್ತೊಂದು ಮುಂದಣಹೆಜ್ಜೆಯೇ ಸರಿ. ಇದೇ ವಿಧವಾದ ಸುಸಜ್ಜಿತವಾದ ಹೊಂದಿಕೆಯಿಂದ ಈ ಕ್ರಮವು ಮುಂದುವರಿಯಲೆಂಬುದೇ ನಮ್ಮ ಹಾರೈಕೆಯಾಗಿರುತ್ತದೆ.

ಇನ್ನು ಮುಂದೆ ರಾಜ್ಯಶಾಸನ ರೀತಿಯ ವಿಚಾರದಲ್ಲಿ ನಿಮ್ಮ ಪ್ರಭಾವವು ಎಷ್ಟೋ ಹೆಚ್ಚಾಗಿ ನಡೆಯುವುದು; ಮತ್ತು ಅನೇಕ ಸಂದರ್ಭಗಳಲ್ಲಿ ಅದರಂತೆಯೇ ಕಾರ್ಯಕ್ರಮವು ನಿರ್ಧರಪಡಬೇಕಾಗುವುದು. ನಿಮ್ಮ ಠರಾವುಗಳು (Resolutions) ಮಾತ್ರವೇ ಅಲ್ಲದೆ, ಚರ್ಚೆಯಲ್ಲಿ ನೀವು ಒತ್ತಿ ಹೇಳುವ ಅಂಶಗಳಿಗೆ ಕೂಡ ಅತ್ಯಂತ ಪ್ರಾಮುಖ್ಯತೆಯುಂಟಾಗುತ್ತದೆ. ಸರಕಾರದ ಹಿತಸಾಧನೆಯೂ, ಪ್ರಜೆಗಳ ಹಿತಸಾಧನೆಯೂ ಐಕ್ಯತೆಗೊಂಡು ನಿಂತಿರುವುವೆಂಬ ಸಾರತತ್ವವನ್ನು ಮಾತ್ರ ನೀವುಗಳು ಮನಸ್ಸಿನಲ್ಲಿಯೂ, ಹೃದಯದಲ್ಲಿಯೂ, ಗ್ರಹಿಸಿಟ್ಟುಕೊಳ್ಳಬೇಕೆಂಬುದೇ ನಮ್ಮ ಕೋರಿಕೆಯಾಗಿರುತ್ತದೆ. ಪ್ರಜೆಗಳ ಸೌಖ್ಯವೇ ಸರಕಾರದವರ ಸೌಖ್ಯವೂ, ಸಾರ್ಥಕ್ಯವೂ, ಆಗಿರುತ್ತದೆ. ಎಲ್ಲಾ ದೇಶಗಳಲ್ಲಿಯೂ, ಮತ್ತು ಅಭ್ಯುದಯ ಮಾರ್ಗದಲ್ಲಿ ದಾರಿಯುದ್ದಕ್ಕೂ, ವಿವಿಧವಾದ ಭಿನ್ನಾಭಿಪ್ರಾಯಗಳು ಸ್ವಾಭಾವಿಕವಾಗಿ ಉಂಟಾಗುತ್ತವೆ. ರಾಜ್ಯಾಡಳಿತಗಳನ್ನು ನಿರ್ವಹಿಸತಕ್ಕ ಅಧಿಕಾರಿಗಳಿಗೂ ನಿಮಗೂ ಪರಸ್ಪರವಾಗಿ ಭಿನ್ನಾಭಿಪ್ರಾಯವುಂಟಾದರೆ, ಅದು ಕಾರ್ಯಕ್ರಮಕ್ಕೆ ಅನ್ವಯಿಸತಕ್ಕುದೇ ಹೊರತು ಕಾರ್ಯದ ಉದ್ದೇಶಕ್ಕೆಂದಿಗೂ ಅಲ್ಲ. ಸರಕಾರದವರು ನಿಮ್ಮಲ್ಲಿ ಸದುದ್ದೇಶವೂ, ಆದರಪುರಸ್ಸರವಾದ ಸಹಾಯಕ್ರಿಯೆಯೂ, ಇರತಕ್ಕುದೆಂದೂ ಹೇಗೆ ನಿರೀಕ್ಷಿಸಿ ಪರಿಗಣಿಸಿರುವರೋ ಹಾಗೆಯೇ ನೀವೂ ಅವರಲ್ಲಿ ಅದೇ ಗುಣಗಳನ್ನು ನಿರೀಕ್ಷಿಸಿ ಪರಿಗಣಿಸಬಹುದು.

ಈ ಕಾರಣಗಳಿಂದ ಮೈಸೂರು ಸಂಸ್ಥಾನದ ಚರಿತ್ರೆಯಲ್ಲಿ ಈ ಸುದಿನವು ಹೊಸ ಶಕೆಯೊಂದನ್ನು ಆರಂಭಗೊಳಿಸುತ್ತದೆ. ಸ್ವದೇಶಪ್ರೇಮದಿಂದೊಡಗೂಡಿ ದೇಶಸೇವೆ ಮಾಡುವುದರಲ್ಲಿ ನಮ್ಮ ಪ್ರಜೆಗಳಿಗಿರುವ ಆದರ ಮತ್ತು ಸಾಮರ್ಥ್ಯಗಳ ವಿಚಾರದಲ್ಲಿ ನಮ್ಮ ಭರವಸೆಯು ಅನುಭವವಿದಿತವಾಗಿ ರೂಢಮೂಲವಾಗಿ ನಿಂತಿರುತ್ತದೆ. ನಿಮ್ಮ ಆಶೋತ್ತರಗಳ ವಿಚಾರದಲ್ಲಿ ನಮಗೆ ನಿರಂತರವೂ ಗಾಢವಾದ ಸಹಾನುಭೂತಿಯುಂಟೆಂದು ನೀವುಗಳು ದೃಢವಾಗಿ ನಂಬತಕ್ಕುದು. ನೀವು ನಿಮ್ಮ ಪ್ರತಿಯೊಂದು ಕೆಲಸವನ್ನೂ, ಊಹಾಪೋಹವಿಚಾರದ ಸಾಮಾನ್ಯನಿಯಮದಿಂದಲೂ, ಸದುದ್ದೇಶದಿಂದಲೂ, ವಿಷಯವಿಮರ್ಶೆ ಮತ್ತು ಅನುಭವಪರಿಶೀಲನೆ ಇವುಗಳಿಂದಲೂ, ಕೂಡಿ ವರ್ತಿಸಿ ನಿಮಗೆ ಹೊಸದಾಗಿ ದೊರಕಿರುವ ಅಧಿಕಾರಗಳನ್ನು ಜನಸಾಮಾನ್ಯದ ಉಪಯೋಗಕ್ಕಾಗಿ ಮಾತ್ರ ಉಪಯೋಗಿಸುವ ಪಕ್ಷಕ್ಕೆ, ನೀವುಗಳು ಅಧಿಕಾರದಲ್ಲಿಯೂ, ಪ್ರಾಭವದಲ್ಲಿಯೂ, ಮೇಲಕ್ಕೇರುವುದೆಂದಿಗೂ ತಪ್ಪದು; ಮತ್ತು ನಮ್ಮ ಸಂಸ್ಥಾನದ ಪ್ರಾಯಸ್ಥಿತಿಯನ್ನೂ, ಯಶಸ್ಸನ್ನೂ ಅಭಿವೃದ್ಧಿಪಡಿಸಿ ಪ್ರತಿ ಲು ಸಹಾಯಮಾಡಿ ನಮ್ಮೊಡನೆ ನೀವೆಲ್ಲರೂ ನಮ್ಮ ನದ ಶಾಶ್ವತವಾದ ಶ್ರೇಯೋ ಭಂಡಾರದ ರಕ್ಷಕರಾಗಿ ಕ್ಕುದು.

ಮಹನೀಯರೇ! ಈ ಮಾರ್ಗಗಳಲ್ಲಿನ ನಿಮ್ಮ ಸಮಸ್ತ ತ್ನಗಳಿಗೂ ಭಗವಂತನ ಪ್ರಸಾದವೂ, ಕಾರ್ಯಸಿದ್ಧಿ , ಲಭಿಸಲೆಂದು ಹಾರೈಸುವೆವು; ಅಲ್ಲದೆ ಶಕ್ತಿಯೂ, ವಿವೇ , ನಿರ್ದೇಶದ ಸ್ಪಷ್ಟತೆಯೂ, ನಿರಂತರವೂ ನಿಮ್ಮಲ್ಲಿ ನೆಲೆಸ ು ಪ್ರಾರ್ಥಿಸುತ್ತೇವೆ.

ಲೋವರ್‌ಸೆಕೆಂಡರೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸೂಚನೆ.

ಬೆಂಗಳೂರು ಸೆಂಟರು.

1924ನೇ ಇಸವಿ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್‌ಸೆಕೆಂಡರಿ ಪರೀಕ್ಷೆಗೆ ಬೆಂಗಳೂರು ಸೆಂಟರಿಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೂ ಮಾಷ್ಟರುಗಳಿಗೂ ಸಹ ಮಾಮೂಲಿನಂತೆ ನನ್ನ ಸ್ವಂತಮನೆಯಲ್ಲಿ ಭೋಜನಕ್ಕೂ ಮತ್ತು ವಾಸಕ್ಕೂ ಅನುಕೂಲಪಡಿಸಲ್ಪಡುತ್ತೆ. ಬರತಕ್ಕಂಥಾವರು ಮುಂಚಿತವಾಗಿ ಕಾರ್ಡು ಮೂಲಕ ತಿಳಿಸಬೇಕು.

ಎಸ್. ಕಳ್ಳೆಪ್ಪ,
ಅವಿನ್ಯೂರೋಡ್, ಬೆಂಗಳೂರು ಸಿಟಿ.

ದಾವಣಗೆರೆ ಸೆಂಟರು.

ಬರುವ ಎಪ್ರೇಲ್ ತಿಂಗಳಿನಲ್ಲಿ ದಾವಣಗೆರೆ ಸೆಂಟರಿನಲ್ಲಿ ನಡೆಯುವ ಇಂಗ್ಲೀಷು ಮತ್ತು ಕನ್ನಡ ಮೈಸೂರು ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ವಿದ್ಯಾರ್ಥಿನಿಯರಿಗೂ ಮಾಸ್ತರುಗಳಿಗೂ ಸಹಾ ದಾವಣಗೆರೆ ವೀರಶೈವ ವಿದ್ಯಾವರ್ಧಕ ಸಂಘದಿಂದ ಶ್ರೀ ವಿರಕ್ತಮಠದಲ್ಲಿ ಭೋಜನಕ್ಕೂ ವಾಸಕ್ಕೂ ಏರ್ಪಡಿಸಿರುತ್ತೇವೆ. ಪ್ರತಿಯೊಬ್ಬರೂ ತಂಬಿಗೆ, ಹಾಸಿಗೆಹೊದ್ದಿಕೆಗಳನ್ನು ತೆಗೆದುಕೊಂಡುಬರತಕ್ಕದ್ದು.

ಪ್ರೆಸಿಡೆಂಟು.

ಕಡೂರು ಸೆಂಟರು.

ಮಾಮೂಲ್ ಮೇರಿಗೆ 1924ನೆ ಏಪ್ರಿಲ್ 1ನೆ ತಾರೀಖಿನಲ್ಲಿ ಕಡೂರು ಸೆಂಟರಿನಲ್ಲಿ ನಡೆಯುವ ಕನ್ನಡ ಮತ್ತು ಇಂಗ್ಲೀಷ್ ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ ಇವರಲ್ಲಿ ಊಟಮಾಡುವ ಇತರ ವಿದ್ಯಾರ್ಥಿಗಳಿಗೂ ಮತ್ತು ಉಪಾಧ್ಯಾಯರುಗಳಿಗೂ ಸಹ ಬೀರೂರು ವೇ|| ನಲ್ಲೂರು ಉಬ್ರಾಣಿಮಠದ ಎಚ್. ಎಂ. ಶಿವಲಿಂಗಪ್ಪಯ್ಯನವರು ಧರ್ಮಾರ್ಥವಾಗಿ ಕಡೂರಿನಲ್ಲಿರುವ ತಮ್ಮ ಸ್ವಂತ ಬಂಗ್ಲೆಯಲ್ಲಿ ಪರೀಕ್ಷಾಕಾಲದಲ್ಲಿ ಊಟಕ್ಕೂ ಫಲಹಾರಕ್ಕೂ ಏರ್ಪಡಿಸಿರುತ್ತಾರೆ. ಬರತಕ್ಕ ವಿದ್ಯಾರ್ಥಿಗಳು ಮಾರ್ಚಿ ತಾರೀಖು 25ರ ಒಳಗೇನೆ ಸದರಿಯವರಿಗೆ ಬರದುಕೊಳ್ಳಬೇಕು.

ಮರುಳಸಿದ್ಧಯ್ಯ.

ತುಮಕೂರು ಸೆಂಟರು.

ಈ ವರ್ಷ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್‌ಸೆಕೆಂಡರಿ ಪರೀಕ್ಷೆಗೆ ತುಮಕೂರು ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಮಾಮೂಲಿನಂತೆ ಮುರುಘಾಮಠದಲ್ಲಿ ಅನ್ನವಸತಿಗಳನ್ನು ಏರ್ಪಡಿಸಿದೆ. ಬರತಕ್ಕ ವೀರಶೈವ ವಿದ್ಯಾರ್ಥಿಗಳು 2 ದಿನ ಮುಂಚಿತವಾಗಿ ಕೆಳಗಿನ ಅಡ್ರೆಸ್ಸಿಗೆ ತಿಳಿಸುವುದಲ್ಲದೆ ಅವಶ್ಯವಾದ ತಂಬಿಗೆ ಹಾಸಿಗೆಗಳನ್ನು ತರತಕ್ಕದ್ದು.

ಜೆ. ರುದ್ರಪ್ಪ, ಅಡ್ವೊಕೇಟ್, ತುಂಕೂರು.

ತುಮಕೂರು ಸೆಂಟರಿಗೆ ಮೈಸೂರು ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೆ ಭೋಜನಕ್ಕೂ ಮತ್ತು ವಾಸಕ್ಕೂ ಏರ್ಪಾಡುಮಾಡಿರುತ್ತೆ. ಹಾಗೆ ಬರುವ ವಿದ್ಯಾರ್ಥಿಗಳು ಈ ತಿಂಗಳು 25ನೆ ತಾರೀಖಿನವೊಳಗಾಗಿ ತಿಳಿಸತಕ್ಕದ್ದು.

ಭಾವಿಕಟ್ಟಿ ಚನ್ನಬಸಪ್ಪ ತುಮಕೂರು.

SREE JAYADEVA MURUGHA RAJENDRA VEERASAIVA HOSTEL, BANGALORE.

It is hereby notified that arrangements as regards lodging and boarding would be provided at reduced rates at this Hostel to Veerasaiva students appearing to several ensuing public examinations as Lower Secondary, S. S. L. C. etc. from the Bangalore centre. Those that are willing to avail themselves of the conveniences are required to apply previously to the following address.

HON. SECRETARY,
Sree Jayadeva Veerasaiva Hostel,
Seshadri Road, Bangalore.

ಶಿವಮೊಗ್ಗ ಸೆಂಟರು.

ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್‌ಸೆಕೆಂಡರಿ ಪರೀಕ್ಷೆಗೆ ಶಿವಮೊಗ್ಗ ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನದ ಏರ್ಪಾಡನ್ನು ಮಾಡಲು ಇದೇ ಟವನ್ ವಾಸಿಗಳಾದ ಮ|| ರಾ|| ಜಿ. ಯಂ. ಕಾಡಪ್ಪನವರು ಒಪ್ಪಿಕೊಂಡಿರುತ್ತಾರೆ. ಕಳೆದ ವರ್ಷವೂ ಇವರು ಇದೇರೀತಿ ಏರ್ಪಾಡುಮಾಡಿ ಪರೀಕ್ಷೆಗೆ ಬಂದ ನೂರಾರು ವಿದ್ಯಾರ್ಥಿಗಳಿಗೆ ಸುಖಭೋಜನವನ್ನಿತ್ತು ಕೇವಲ ಪ್ರೀತಿಯಿಂದ ಆದರಿಸಿದುದೂ, ಈ ವರ್ಷವೂ ಪುನಃ ಈ ಏರ್ಪಾಡನ್ನು ಮಾಡಿರುವುದೂ ಇವರ ಧರ್ಮಬುದ್ಧಿ, ದಯೆ, ವಿದ್ಯಾಭಿಮಾನವನ್ನು ವ್ಯಕ್ತಗೊಳಿಸುತ್ತೆ. ವಿದ್ಯಾರ್ಥಿವರ್ಗಕ್ಕೆ ಪ್ರಯೋಜನವಾಗುವ ಒಂದು ಮಹತ್ತರವಾದ ಕೆಲಸವನ್ನು ಮಾಡಬೇಕೆಂಬ ಸಂಕಲ್ಪವೂ ಇವರಲ್ಲಿ ಪೂರ್ಣವಾಗಿ ನೆಲೆಗೊಂಡಿದೆ. ಅದು ಬಹುಶಃ 3-4 ತಿಂಗಳಲ್ಲಿಯೇ ಪ್ರಕಾಶಕ್ಕೆ ಬರಬಹುದು. ಇಂತಹ ವಿದ್ಯಾಭಿಮಾನಿಗಳಾದ ಇವರಿಗೆ ದೇವರು ಆಯುರಾರೋಗ್ಯ ಸಂಪತ್ತನ್ನಿತ್ತು ಕಾಪಾಡಲಿ. ಮೇಲ್ಕಂಡ ಭೋಜನದ ಏರ್ಪಾಡು ಇಲ್ಲಿಯ ವೀರಶೈವ ಹಾಸ್ಟಲಿನಲ್ಲಿ ಇಡಿಸಲ್ಪಡುತ್ತೆ. ವಿದ್ಯಾರ್ಥಿಗಳು ಇಳಿದುಕೊಳ್ಳುವುದಕ್ಕೆ ಸ್ಥಳವೂ ಕೊಡಲ್ಪಡುತ್ತೆ. ಅಪೇಕ್ಷೆಯುಳ್ಳ ವಿದ್ಯಾರ್ಥಿಗಳು ಮಾರ್ಚಿ 25 ನೇ ತಾರೀಖಿನೊಳಗೆ ಬಂದು ತಲಪುವಂತೆ ಈ ಕೆಳಗಿನವಿಳಾಸಕ್ಕೆ ಬರೆದು ತಿಳಿಸತಕ್ಕದ್ದು.

ಹೆಚ್. ಲಿಂಗಪ್ಪ ಬಿ.ಎ., ಎಲ್‌ಎಲ್.ಬಿ.,
ಅಡ್ವೋಕೇಟ್, ಶಿವಮೊಗ್ಗ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಸ್ಸಿಗೂ ಆಕ್ಷೇಪಕ್ಕೂ ಅವಕಾಶವಿಲ್ಲದೆ ಸರ್ವ ಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟಿದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ಮಾರುಮಾರುದ್ದ ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಪರಸ್ಪರ ಸಮಾಜಗಳಲ್ಲಿ ಐಕಮತ್ಯವನ್ನೂ, ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಮನಸ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೂಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರಃ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಾಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾ ಸಂಬಂಧ ಲೇಖನಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕರೂ ಖಂಡಿತವಾಗಿ ಗಮನಿಸಬೇಕು.

—ಸಂಪಾದಕ.

ರಥೋತ್ಸವ.

ಶ್ರೀಮತ್ಸಾಕ್ಷಾದ್ರಂಭಾಪುರಿ ಮಹಾಸಂಸ್ಥಾನ ಮಠದಲ್ಲಿ ಅನಾದಿಯಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಯಂತೆ ಈ ರುಧಿರೋದ್ಗಾರಿ ಸಂ|| ದ ಫಾಲ್ಗುಣ ಶು|| ೮ ಯಿಂದ ಬ|| ೮ ವರೆಗೆ ಉಭಯ ದಿನಗಳಲ್ಲಿಯೂ ನಡೆಯುವ ನಿತ್ಯೋತ್ಸವಗಳಿಗೂ, ಈ ಶುದ್ಧ ೧೩, ಮಹಾನಕ್ಷತ್ರದಲ್ಲಿ ನಡೆಯುವ ಶ್ರೀ ರುದ್ರಮುನಿಸ್ವಾಮಿಯವರ ಶ್ರೀ ಮಹಾರಥೋತ್ಸವಕ್ಕೂ ಸಹ ಭಕ್ತಿ ಮುಕ್ತಿ ಪರಾಯಣರಾದ ವೀರಶೈವ ಮಹನೀಯರುಗಳು ತಮ್ಮ ಇಷ್ಟ ಮಿತ್ರರೊಡನೆ ದಯಮಾಡಿಸಿ, ಶ್ರೀ ಮಹಾಸ್ವಾಮಿಯವರ ಮೇಲ್ಕಂಡ ಸೇವಾಕಾರ್ಯವನ್ನು ನೆರವೇರಿಸಿ, ಶ್ರೀ ಜಗದ್ಗುರು ರೇಣುಕಾಚಾರ್ಯರವರ ದಿವ್ಯಕೃಪೆಗೆ ಪಾತ್ರರಾಗಬೇಕೆಂದು ಈ ಮೂಲಕ ಕೋರಲ್ಪಟ್ಟಿದೆ.

ಎಸ್. ಕೆ. ಎಂ. ರುದ್ರಾರಾಧ್ಯ.
ಏಜಂಟ್.

ತೋಟಿ ತಳಾರಿಗಳ ಮಿರಾಸೆ ಮನ್ನಾ.

ಇದೇ ಮಾರ್ಚಿ ತಾರೀಖು 9ನೆ ಸ್ಟಾರ್ ಪತ್ರಿಕೆಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಲ್ಲಿ ಬಡ ರೈತರ ಅರಿಕೆಯೆಂಬುದಾಗಿ ಬರದಿರುವ ತೋಟಿ, ತಳಾರಿ, ನೀರುಗಂಟಿ ಇವರುಗಳ ಮಿರಾಸಿ ವಿಷಯದ ತಪಸೀಲ್ ಓದಿದೆನು. ಇದಕ್ಕಾಗಿ 1917ನೆ ಇಸವಿಯಲ್ಲಿ ಅದಕ್ಕೆ ತತ್ಪೂರ್ವವೂ, ಈಚೆಗೂ ನಮ್ಮ ತಾಲ್ಲೂಕಿನಲ್ಲಿ ನಾನು ಮೊದಲಾಗಿ ಸಾವಿರಾರು ಪ್ರಜೆಗಳು ಅರ್ಜಿಬರೆದು ನಮ್ಮನ್ನು ಆಳುವ ಮಹಾಸ್ವಾಮಿಯವರ ಸವಾರಿ ಚಿತ್ತೈಸಿದಾಗ ರೂಬರೂಬು ಹೇಳಿಕೊಂಡು ಅರ್ಜಿಕೊಟ್ಟುದರ ಮೇಲೆ ರೈತರು ಕೊಡುವ ಕಂದಾಯದ ಮೊಬಲಗಿನ ಮೇಲೆ ರೂಪಾಯಿಗೆ ಒಂದಣೆ ಧಾನ್ಯಕ್ಕಿಂತ ಹೆಚ್ಚಾಗಿ ಕೊಡಿಸತೂಡದೆಂತಲೂ 31-12-1915ನೆ ನಂಬ್ರ್ಯಂ R 6292-6302 L.R 369-10-4ನೆ ಹುಕ್ಕುಂ ಫೈಸಲಾಗಿರುತ್ತೆಂತ 14-9-17 ರಲ್ಲು R 2835ನೆ (ಇಂಡಾರ್ಸ್ಮ ಹುಕುಂ) ಗೌರ್ನಮೆಂಟ್ ರೆವಿನ್ಯೂ ಸೆಕ್ರೆಟರಿಯವರ ಆಫೀಸಿನಿಂದ ಇಂಡಾರ್ಸ್ಮ ಹುಕುಂ ಅಪ್ಪಣೆ ಆಗಿರುತ್ತೆ. ಈ ಇಂಡಾರ್ಸ್ಮ ನನ್ನಲ್ಲಿ ಹಾಜರಿದೆ. ಇದರಂತೆ ಈಚೆಗೆ ನಡೆದ ನೌಕರರ ಫಿರ್ಯಾದಿನ ಮೇಲೆ ಮದ್ದಗಿರಿ ತಾಲ್ಲೂಕಿನಲ್ಲೂ, ಗೌರಿಬಿದನೂರು ತಾಲ್ಲೂಕು ಸರ್ವಮಾನ್ಯ ಗೊಲ್ಲಹಳ್ಳಿ ಶ್ಯಾನುಭೋಗ್ ಎಸ್. ನಾಗಪ್ಪನವರ ಮೇಲೂ ಫೈಸಲಾಗಿರುತ್ತೆ. ಈ ವಿಷಯ ಹಿಂದೆ ತೀರ್ಮಾನವಾಗಿರುವುದರಿಂದಲೂ ರೆವಿನ್ಯೂ ಮ್ಯಾನುಯಲ್‌ನಲ್ಲಿ ಗೌರ್ನಮೆಂಟಿನವರು ತಿದ್ದುಪಾಡುಮಾಡಿರುವುದರಿಂದಲೂ ಇದನ್ನ ಪುನಃ ನಾನು ಮೊದಲಾದ ರೈತರು ಚರ್ಚೆಮಾಡಬೇಕಾದ್ದ ಇಲ್ಲಾ. ಎಕರೆ 1ಕ್ಕೆ 10 ಸೇರಿನಂತೆ ದವಸವನ್ನು ಕೊಡಬೇಕೆಂಬ 1-8-78 ನೆ ನಂಬ್ರ್ಯಂ 123 ನೆ ಹುಕುಂ ಬಹು ದಿವಸದ ಕೆಳಗೆ ಆದದ್ದಾಗಿ ಇರುವುದು ಮೇಲಿನ ಫೈಸಲಾತಿಯಿಂದಾ ರದ್ದಾಗಿರುತ್ತೆ.

ತಾ|| ಲಿಂಗಣ್ಣಯ್ಯ ನಾಗಸಂದ್ರ, ಕುಣಿಗಲ್ ತಾ||

ಬರದವಳ್ಳಿಯಲ್ಲಿ ನಡೆದ ವಿದ್ಯಾಭಿವೃದ್ಧಿ ಸಭೆ.

ಸಾಗರ ತಾ|| ಬರದವಳ್ಳಿಯಲ್ಲಿ ವಿದ್ಯಾಭಿವೃದ್ಧಿ ವಿಚಾರವಾಗಿ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರವರ ಅಧ್ಯಕ್ಷತೆಯಲ್ಲಿ ಕಳೆದ 9ರಲ್ಲಿ ಒಂದು ಸಭೆಯು ಸ್ಕೂಲಿನ ಮುಂದೆ ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಚಪ್ಪರದಲ್ಲಿ ನಡೆಯಿತು. ನೆರೆಗ್ರಾಮಗಳ ಸ್ಕೂಲ್‌ಗಳೂ ಪ್ರಮುಖಜನರೂ ಬಂದಿದ್ದರು. ದೇವರ ಪ್ರಾರ್ಥನೆಯಾದ ಮೇಲೆ ಮ|| ಬಿ. ಕೆ. ಚನ್ನಬಸಪ್ಪಗೌಡರ ಪ್ರಾರ್ಥನೆಯ ಮೇರೆಗೆ ಇ|| ಜ|| ಸಾಹೇಬರು ಅಧ್ಯಕ್ಷತೆಯನ್ನು ವಹಿಸಿದನಂತರ ಮ|| ಚನ್ನಬಸಪ್ಪನವರು ಸ್ವಾಗತಭಾಷಣವನ್ನು ಮಾಡಿದರು. ನಂತರ ಮ|| ಗುರಪ್ಪಗೌಡರು ಈವರೆಗೆ ಇಲ್ಲಿಯ ಸ್ಕೂಲ್ ಅಭಿವೃದ್ಧಿಸ್ಥಿತಿಗೆ ಬರಲು ಇಲ್ಲಿಯ ಹೆ|| ಮಾ|| ಬಿ. ಎಸ್. ರಾಮಚಂದ್ರಯ್ಯನವರು ತಿಳುವಳಿಕೆ ಇಲ್ಲದ ಜನರಿಗೆ ಪ್ರೋತ್ಸಾಹ ಕೊಡುತ್ತಲೂ ತಮ್ಮ ಬೋಧನಾಶಕ್ತಿಯಿಂದಲೂ ಸ್ಕೂಲನ್ನು ಒಳ್ಳೆಯ ಸ್ಥಿತಿಗೆ ತಂದರೆಂತಲೂ ಈ ಸ್ಕೂಲನ್ನು ಇನ್‌ಕಂಪ್ಲೀಟ್ ಮಿಡಲ್ ಸ್ಕೂಲನ್ನಾಗಿ ಮಾಡಿಸಿ ಕೊಡಬೇಕೆಂತಲೂ ಸ್ಕೂಲ್ ಕಟ್ಟಡ ಕಟ್ಟಿಸಿ ಕೊಡಬೇಕೆಂತಲೂ ಸ್ಕೂಲಿಗೆ ಬೇಕಾದ ಫರ್ನೀಚರ್ ಒದಗಿಸಬೇಕೆಂತಲೂ ಹೆಡ್‌ಮಾಸ್ಟರ್ ಬಿ. ಯಸ್. ರಾಮಚಂದ್ರಯ್ಯನವರನ್ನು ಇಲ್ಲಿಯೇ ಖಾಯಂ ಇಡಬೇಕೆಂತಲೂ ಪ್ರಾರ್ಥಿಸಿರುವ ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿದರು. ಅಧ್ಯಕ್ಷರವರು ಮೇಲ್ಕಂಡ ವಿಶಿಷ್ಟಾಂಶಗಳನ್ನು ಎತ್ತಿ ಭಾಷಣಮಾಡಿದ್ದಲ್ಲದೆ ಗ್ರಾಮಸ್ಥರ ಪ್ರಾರ್ಥನೆಗಳಲ್ಲಿ ಇನ್‌ಕಂಪ್ಲೀಟ್ ಮಿಡಲ್ ಸ್ಕೂಲನ್ನು ಹಂಗಾಮಿಯಾಗಿ ಕೊಡುವುದಾಗಿಯೂ ಉಳಿದ ಎಲ್ಲಾ ಕೆಲಸಗಳನ್ನು ಮಾಡಿಕೊಡುವುದಾಗಿಯೂ ಒಪ್ಪಿಕೊಂಡರು. ನಂತರ ಬಾಲಕರು ಶ್ರೇಯಃಪ್ರಾರ್ಥನಾರೂಪವಾದ ಮಂಗಳವನ್ನು ಹಾಡಿದ ಮೇಲೆ ಉಪಹಾರನಡೆದು ಗಂಧ ಪುಷ್ಪ ತಾಂಬೂಲ ಹಂಚಲ್ಪಟ್ಟು ಸಭೆ ಮುಕ್ತಾಯಮಾಡಲ್ಪಟ್ಟಿತು. ತರುವಾಯ ಇ|| ಜ|| ಸಾಹೇಬರು ಇಲ್ಲಿನ ದೇವಸ್ಥಾನವನ್ನೂ ಮುಂದೆ ಸ್ಕೂಲ್‌ಕಟ್ಟಡ ಆಗತಕ್ಕ ಸ್ಥಳವನ್ನೂ ನೋಡಿ ಮೋಟಾರಿನಲ್ಲಿ ಸಾಗರಕ್ಕೆ ದಯಮಾಡಿಸಿದರು.

ಸ್ಥಳಿಕ.

ಶಿವಲಿಂಗಪ್ರತಿಷ್ಠಾ ಮಹೋತ್ಸವ.

ಚಿತ್ರದುರ್ಗದ ತಾ|| ಜಂಪಣ್ಣನಾಯಕನಕೋಟೆ ಮಜರೆ [illegible] ಪ್ಪದ ವೀರಶೈವ ಭಕ್ತಾದಿಗಳು ನೂತನವಾಗಿ ಶಿವದೇವಸ್ಥಾನವನ್ನು [illegible] ಇದೇ ಸಂವತ್ಸರದ ಮಾಘ ಶು|| ೫ ರಿಂದ ೧೧ರ ವರೆಗೂ ಶ್ರೀ ಪ್ರತಿಷ್ಠೆಯೂ ಶಿವದೀಕ್ಷಾ ಸಂಸ್ಕಾರವೂ ವೇ|| ಸಾಣೇಕೆರೆಮಠದ ? ಸ್ವಾಮಿಗಳೂ ಶಿರಾಹೋಳಿನ ಹಂಪಯ್ಯನವರ ಮಠದ ಶ್ರೀ [illegible]

[illegible]

ವುಂಟಾಗಲಾರದು. ಉಪ್ಪುನೀರನ್ನು ಕುಡಿದರೆ ಬಾಯಾರಿಕೆಯು ನಿಲ್ಲದು. ದೇಶದಲ್ಲಿ ಇಂತಹ ಭಯಂಕರವಾದ ರಾಕ್ಷಸಕೃತ್ಯಗಳು ನಡೆಯುತ್ತಿದ್ದರೆ ದಯಾಮಯನಾದ ಜಗದೀಶ್ವರನ ಅನುಗ್ರಹವು ಕಡಿಮೆಯಾಗಿ ದೇಶೋಪದ್ರವಗಳು ಇನ್ನಷ್ಟು ಹೆಚ್ಚುವುವು. ನಾವು ನಿರ್ದಯರಾಗಿ ಇಂತಹ ಘೋರಕೃತ್ಯಗಳನ್ನು ನಡೆಯಿಸುತ್ತಿದ್ದರೆ ಭಗವಂತನು ನಮ್ಮನ್ನು ಕಣ್ಣೆತ್ತಿ ನೋಡಲಾರನು. ಲೋಕದಲ್ಲಿ ಸುಖಶಾಂತಿಗಳು ನೆಲೆಗೊಳ್ಳಬೇಕಾದರೆ ಧರ್ಮವನ್ನು ಕೈಬಿಡಬಾರದು. ಅದನ್ನು ವೃದ್ಧಿಪಡಿಸುತ್ತ ಬಂದಹಾಗೆಲ್ಲ ಸುಖಶಾಂತಿಗಳು ವೃದ್ಧಿಯಾಗುವುವು. ಧರ್ಮದಲ್ಲಿ ಅನೇಕ ಭೇದಗಳಿವೆ. ಅವುಗಳಲ್ಲೆಲ್ಲ "ಶ್ರೂಯತೇ ಸರ್ವಶಾಸ್ತ್ರೇಷು ಸರ್ವೇಷು ಸಮಯೇಷು ಚ | ಅಹಿಂಸಾಲಕ್ಷಣೋಧರ್ಮಸ್ತದ್ವಿಪಕ್ಷಶ್ಚ ಪಾತಕಂ,—ಸಮಸ್ತ ಶಾಸ್ತ್ರಗಳಲ್ಲಿಯೂ ಮತಗಳಲ್ಲಿಯೂ ಅಹಿಂಸಾಲಕ್ಷಣವುಳ್ಳದು ಧರ್ಮವೆಂದೂ; ಅದಕ್ಕೆ ವಿಪರೀತವಾದ ಲಕ್ಷಣವುಳ್ಳದು ಅಧರ್ಮವೆಂದೂ ಹೇಳಲ್ಪಡುತ್ತದೆ." ಎಂಬೀ ವಚನಾನುಸಾರವಾಗಿ ಅಹಿಂಸಾಧರ್ಮವೇ ಪರಮೋತ್ಕೃಷ್ಟವಾದುದು. ಸತ್ಯ ಅಚೌರ್ಯ ಮೊದಲಾದ ಧರ್ಮಗಳೆಲ್ಲ ಈ ಅಹಿಂಸಾಧರ್ಮದ ಪುಷ್ಟಿಗೋಸ್ಕರವೇ ಬೇರೆಬೇರೆಯಾಗಿ ಹೇಳಲ್ಪಟ್ಟಿವೆ. ಸಾವಿರಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡುವುದು ಒಂದು ಪ್ರಾಣಿಯ ರಕ್ಷಣೆಗೆ ಸಮಾನವಾಗುವುದಿಲ್ಲವೆಂದು ಮಹಾಭಾರತದ "ಕಪಿಲಾನಾಂ ಸಹಸ್ರಾಣಿ ಯೋ ವಿಪ್ರೇಭ್ಯಃ ಪ್ರಯಚ್ಛತಿ | ಏಕಸ್ಯ ಜೀವಿತಂ ದದ್ಯಾನ್ನ ಚ ತುಲ್ಯಂ ಯುಧಿಷ್ಠಿರ!" ಎಂಬೀ ಪದ್ಯದಿಂದ ಹೇಳಲ್ಪಟ್ಟಿದೆ. ಅದೇ ಮಹಾಭಾರತದಲ್ಲಿ "ಯಾವಂತಿ ಪಶುರೋಮಾಣಿ ಪಶುಗಾತ್ರೇಷು ಭಾರತ! ತಾವದ್ವರ್ಷಸಹಸ್ರಾಣಿ ಪಚ್ಯಂತೇ ಪಶುಘಾತಿನಃ,—ಎಲೈ ಭಾರತ! ಪಶುಗಳ ಶರೀರದಲ್ಲಿ ಎಷ್ಟು ರೋಮಗಳಿವೆಯೋ ಅಷ್ಟು ಸಾವಿರ ವರ್ಷಗಳವರೆಗೆ ಪಶುಘಾತಕರು ದುಃಖಪಡುತ್ತಾರೆ" ಎಂದು ಹೇಳಿದೆ. ಬ್ರಹ್ಮವೈವರ್ತಪುರಾಣದಲ್ಲಿ "ಜೀವಿತಸ್ಯ ಪ್ರದಾನಾದ್ಧಿ ನಾನ್ಯದ್ದಾನಂ ವಿಶಿಷ್ಯತೇ,—ಜೀವಿತ-ಪ್ರಾಣದಾನಕ್ಕಿಂತಲೂ ಹೆಚ್ಚಿನ ದಾನವಿಲ್ಲ" ಎಂದು ಹೇಳಿದೆ. ಹೀಗಿರುವಾಗ ಆ ಅನಾಥಪಂಚೇಂದ್ರಿಯಮೂಗಪ್ರಾಣಿಗಳನ್ನು ತಂಡೋಪತಂಡವಾಗಿ ದೇವಿಗೆ ಬಲಿ ಕೊಡಬೇಕೆಂದು ಯಾವ ಧರ್ಮಶಾಸ್ತ್ರದಲ್ಲಿ ಹೇಳಿದೆಯೋ ತಿಳಿಯದು. "ಧರ್ಮಶಾಸ್ತ್ರದಲ್ಲಿ ಏನು ಹೇಳುವುದು? ನಾವು ನಮ್ಮಿಷ್ಟ ಬಂದ ಹಾಗೆ ಮಾಡುತ್ತೇವೆ, ನಮಗೆ ಪಾಪಬಂದರೆ ಬರಲಿ" ಎಂದು ಹೇಳುವವರಿಗೆ ಉತ್ತರವಿಲ್ಲ. ಕೆಲವರು "ಅಷ್ಟನ್ನೆಲ್ಲ ನಡೆಯಿಸುವುದಕ್ಕೆ ಯಾರಿಗೆ ಶಕ್ತಿಯಿದೆ?" ಎಂದು ಹೇಳುತ್ತಾರೆ. ತನಗೆ ಶಕ್ತಿಯಿಲ್ಲದ ಕಾರ್ಯವನ್ನು ಮಾಡಬೇಕೆಂದು ಯಾರೂ ಹೇಳುವುದಿಲ್ಲ. ಶಕ್ಯಾನುಷ್ಠಾನದಲ್ಲಿಯೂ ಶಕ್ತಿಯಿಲ್ಲವೆಂದು ಹೇಳದೆ ಯಥಾಶಕ್ತಿಯಾಗಿ ಧರ್ಮವನ್ನನುಷ್ಠಿಸುವುದು ಮನುಷ್ಯನ ಕರ್ತವ್ಯವಾಗಿದೆಯೆಂದೇ ಧರ್ಮಶಾಸ್ತ್ರಗಳ ಅಭಿಪ್ರಾಯವು.

ಕೃಷಿಪ್ರಧಾನವಾದ ನಮ್ಮ ದೇಶದ ಮದ್ಗಿರಿ ಸೀತ್ಕಲ್ಲು ಅಡುಗೂರು ಮೊದಲಾದ ಇನ್ನೂ ಅನೇಕ ಕಡೆಗಳಲ್ಲಿ ಪ್ರತಿವರ್ಷವೂ ಸಾವಿರಾರು ಕೋಣಗಳು ಮಾರಿಪೂಜೆಯ ನೆಪದಿಂದ ಯಮಸಪಾಲಾಗುತ್ತಿವೆ! ಈ ವರ್ಷದಲ್ಲಿ ಕ್ಷಾಮದ ದೆಸೆಯಿಂದಂತು ಮೇವುನೀರಿಲ್ಲದೆ ಅಸಂಖ್ಯಾಕವಾಗಿ ಗೋಮಹಿಷಗಳು ಮೃತ್ಯುವಿಗೆ ತುತ್ತಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಕೃಷಿಯು ಎಷ್ಟರಮಟ್ಟಿಗೆ ನಡೆಯಬಹುದೆಂಬುದನ್ನೂ ದೇಶದಲ್ಲಿ ಹಾಲು ಮೊಸರು ಎಷ್ಟರಮಟ್ಟಿಗೆ ಸಮೃದ್ಧಿಯಾಗಿರಬಹುದೆಂಬುದನ್ನೂ ದೇವರೇಬಲ್ಲ. ದೇಶದಲ್ಲಿ ಎಲ್ಲಿ ನೋಡಿದರೂ ಹಾಹಾಕಾರವು ಕೇಳಿಸುತ್ತಿದೆ. ಇಂತಹ ಕರಾಳಕಾಲದಲ್ಲಿಯೂ, ಮರದಕೊಂಬೆಯ ಮೇಲೆ ಕುಳಿತು ಬುಡವನ್ನು ಕಡಿಯುವವನಂತೆ, ಕೆಲವರು ತಮಗೆ ಬರುವ ಹಾನಿಯನ್ನು ವಿಚಾರಮಾಡದೆ ಮೈಮರೆತು ಕ್ರೂರಕೃತ್ಯಗಳನ್ನಾಚರಿಸುವುದು ಮಾತ್ರವಲ್ಲದೆ ದೇಶಕ್ಕೂ ಹಾನಿಯನ್ನುಂಟುಮಾಡುತ್ತಾರೆ. ಹೀಗೆ ಅರ್ಥಿಕದೃಷ್ಟಿಯಿಂದಲೂ ಪಶುಬಲಿಯು ದೇಶಕ್ಕೆ ಅನರ್ಥಕಾರಿಯೆಂಬುದು ವ್ಯಕ್ತವಾಗುವುದು.

ಧಾರ್ಮಿಕದೃಷ್ಟಿಯಿಂದಲೂ ಅರ್ಥಿಕದೃಷ್ಟಿಯಿಂದಲೂ ಮಹಾಹಾನಿಕಾರಿಯಾದ ಈ ಪಶುಬಲಿಯನ್ನು ಘನಸರ್ಕಾರದವರೂ ಆಯಾಸ್ಥಳಗಳ ಬ್ರಾಹ್ಮಣ ವೀರಶೈವ ಮೊದಲಾದ ಧಾರ್ಮಿಕ ಮಹಾಜನಗಳೂ ನಿಲ್ಲಿಸಿ, ಆ ನಿಂದ್ಯವಾದ ಪಶುಬಲಿಗೆ ಬದಲಾಗಿ ಉತ್ತಮವಾದ ಗಂಧ ಫಲ ಪುಷ್ಪ ಚರು ದೀಪ ಧೂಪ ಮೊದಲಾದ ವಸ್ತುಗಳಿಂದ ದುರ್ಗಾದೇವಿಯನ್ನು ಪೂಜಿಸುವ ಪ್ರಚಾರವನ್ನು ರೂಢಿಗೆ ತಂದು ಲೋಕದಲ್ಲಿ ಸುಖಶಾಂತಿಗೆ ಕಾರಣವಾದ ಸನಾತನಧರ್ಮವನ್ನು ಕಾಪಾಡಿ ಪುಣ್ಯಕ್ಕೂ ಪ್ರಜಾಸಾಮ್ರಾಜ್ಯದ ಮತ್ತು ಆ ಅನಾಥವಾದ ಮೂಗಪ್ರಾಣಿಗಳ ಕೃತಜ್ಞತೆಗೂ ಪಾತ್ರರಾಗಬೇಕಾಗಿ ಪ್ರಾರ್ಥನಾಪೂರ್ವಕವಾಗಿ ನಿವೇದಿಸುತ್ತೇನೆ.

ಜೀವಕಾರುಣ್ಯವು ಒಂದು ಗೊತ್ತಾದ ಜಾತಿಗಾಗಲಿ ವ್ಯಕ್ತಿಗಾಗಲಿ ಸಂಬಂಧಪಡತಕ್ಕ ಧರ್ಮವಲ್ಲ. ಇದು ಸ್ವಹಿತವನ್ನಿಚ್ಛಿಸುವ ಪ್ರತಿಯೊಬ್ಬ ಮನುಷ್ಯನ ಧರ್ಮವಾಗಿದೆ. ಸಮಸ್ತಶಾಸ್ತ್ರಗಳಲ್ಲಿಯೂ ಇದೇ ಅಭಿಪ್ರಾಯವು ತೋರುತ್ತದೆ. ಪರಹಿತನಿರತರಾದ ಮ|| ಗಾಂಧಿಯವರ ಹಿತಬೋಧೆಯೂ ಇದೇಯಾಗಿದೆ. ಇದನ್ನು ಅನುಷ್ಠಾನದಲ್ಲಿ ತರುವುದು ಪ್ರತಿಯೊಬ್ಬ ಧರ್ಮ ಮತ್ತು ದೇಶಾಭಿಮಾನಿಯ ಕರ್ತವ್ಯವಾಗಿದೆ.

ಪರದುಃಖದುಃಖಿತ,
ಎ. ಶಾಂತರಾಜಶಾಸ್ತ್ರೀ, ಮೈಸೂರು.

ಮೈಸೂರು ಸಂಸ್ಥಾನದ ಹೊಸ ರಾಜಕೀಯ ಸುಧಾರಣೆಗಳು.

ನೂತನ ಪ್ರತಿನಿಧಿ ಸಭೆಗಳ ಪ್ರಾರಂಭೋತ್ಸವ.

ಶ್ರೀಮನ್ಮಹಾರಾಜರವರ ನಿರೂಪವು.

ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಸದಸ್ಯರಿರಾ,—ಪುನರ್ವ್ಯವಸ್ಥಿತವಾದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ ಇವೆರಡರ ಸಮಾರಂಭೋತ್ಸವವನ್ನು ಈ ದಿವಸ ನೆರವೇರಿಸಲು ನಮಗೆ ಅಪಾರವಾದ ಸಂತೋಷವುಂಟಾಗಿರುತ್ತದೆ. ಮಹನೀಯರೇ! ನೀವು ಮೊದಲಿಗಿಂತಲೂ ಬಹುಮಟ್ಟಿಗೆ ಹೆಚ್ಚಿಸಲ್ಪಟ್ಟ ಚುನಾವಣೆದಾರರ ಸಮುದಾಯಕ್ಕೆ ಪ್ರಾತಿನಿಧ್ಯ ಕೊಡತಕ್ಕವರಾಗಿರುತ್ತೀರಿ; ವಿಸ್ತರಗೊಳಿಸಲ್ಪಟ್ಟ ಚುನಾವಣೆಯ ಹಕ್ಕುಗಳಿಗನುಸಾರವಾಗಿ ನಿಮಗೆ ಪ್ರಾತಿನಿಧ್ಯವು ದೊರೆತಿರುತ್ತದೆ; ಮತ್ತು ಕಳೆದ ಅಕ್ಟೋಬರ್ ತಿಂಗಳಿನಲ್ಲಿನ ನಮ್ಮ ರಾಜಶಾಸನ ಪತ್ರಿಕೆ (Proclamation)ಯಲ್ಲಿ ನಿಮಗೆ ಕೊಡಲ್ಪಟ್ಟಿರುವ ಅಧಿಕಾರಗಳಿಂದಲೂ ಉತ್ತರವಾದಿತ್ವಗಳಿಂದಲೂ ನೀವುಗಳು ಕಾರ್ಯಾರಂಭ ಮಾಡತಕ್ಕವರಾಗಿರುತ್ತೀರಿ. ಈಗಲೀಗ ನೀವುಗಳು ಹಿಂದೆ ಇದ್ದುದಕ್ಕಿಂತ ಸಾರತರವಾದ ರೀತಿಯಲ್ಲಿ ನಿಮ್ಮ ಚುನಾವಣಾಯಸ್ಥಾನಗಳಿಗೆ ಪ್ರಾತಿನಿಧ್ಯ ಕೊಡತಕ್ಕವರಾಗಿರುತ್ತೀರಿ. ಅಲ್ಲದೆ ಪ್ರಜೆಗಳ ಅಪೇಕ್ಷೆಗನುಸಾರವಾಗಿ ಸರ್ಕಾರದ ತೀರ್ಮಾನಗಳು ನಡೆಯುವಂತೆ ಅನುನಯಗೊಳಿಸುವುದಕ್ಕೆ ನಿಮಗೆ ಮೊದಲಿದ್ದುದಕ್ಕಿಂತ ಅತ್ಯಧಿಕವಾದ ಸನ್ನಿವೇಶಗಳುಂಟಾಗಿರುತ್ತವೆ. ಈಗ ಲಭಿಸಿರುವ ನೂತನಸಂದರ್ಭಗಳಿಗನುಸಾರವಾಗಿ ಅನುರಾಗದಿಂದ ದೇಶಸೇವೆಯನ್ನು ಮಾಡುವುದಕ್ಕೂ, ತರಂಗತರಂಗವಾಗಿ ವಿಸ್ತಾರಗೊಳಿಸಿ ಪ್ರಜೆಗಳ ಶ್ರೇಯೋಭಿವೃದ್ಧಿಯನ್ನು ಮುಂದುವರಿಸುವುದಕ್ಕೂ ನಿಮಗೆ ಪೂರ್ವಭಾವಿಯಾಗಿ ಈ ಸಂಸ್ಥಾನದಲ್ಲಿದ್ದವರು ಸ್ತೋತ್ರಾರ್ಹವಾಗಿ ಪರಿಪಾಲಿಸಿದವುಗಳಿಗಿಂತಲೂ ಹೆಚ್ಚಿನ ಉತ್ತರವಾದಿತ್ವಗಳನ್ನುವಹಿಸುವುದಕ್ಕೂ, ನಿಮಗೆ ಸ್ವಾಗತವನ್ನು ಬಯಸುತ್ತೇವೆ.

ನಾವು ರಾಜ್ಯಾಡಳಿತ ಸೂತ್ರವನ್ನು ಸ್ವೀಕರಿಸಿದ ಮೇಲೆ ಈಗ್ಗೆ ಸುಮಾರು ಇಪ್ಪತ್ತೊಂದು ವರುಷಗಳ ಹಿಂದೆ, ನಾವೇ ಮೊದಲನೆಯ ಸಾರಿ ಪ್ರಜಾಪ್ರತಿನಿಧಿ ಸಭೆಯ ಸಮಾಗಮೋತ್ಸವವನ್ನು ನೆರವೇರಿಸಿದ ಕಾಲದಲ್ಲಿ ನಾವು ಆಡಿದ ಮಾತುಗಳು ಈ ಸಮಯದಲ್ಲಿ ನಮ್ಮ ನೆನಪಿಗೆ ಬರುತ್ತವೆ. ವರ್ಷಂಪ್ರತಿಯಲ್ಲಿಯೂ ಪ್ರಜಾಪ್ರತಿನಿಧಿ ಸಭೆಯ ಸಮ್ಮೇಳನವು ನಡೆಯುವುದು ನಮ್ಮ ಪ್ರಜೆಗಳ ಶ್ರೇಯಸ್ಸಿಗೂ, ಪರಿತೃಪ್ತಿಗೂ ಸಾಧಕವಾಗುವುದರಲ್ಲಿ ಎಷ್ಟುಮಟ್ಟಿಗೆ ಅನರ್ಘ್ಯವಾದುದೆಂಬ ವಿಚಾರದಲ್ಲಿ ನಾವು ಆಗ್ಗೆ ಸೂಚಿಸಿದ ಆಶೋತ್ತರಗಳು ಯಥೇಷ್ಟವಾಗಿ ಸಫಲಗೊಂಡಿರುತ್ತವೆ; 1907ನೇ ಇಸ್ವಿಯಲ್ಲಿ ಏರ್ಪಡಿಸಲ್ಪಟ್ಟನ್ಯಾಯನಿರ್ಮಾಣ ಸಭೆಯೂ ಕೂಡ, ತನಗೆ ವಹಿಸಲ್ಪಟ್ಟಿದ್ದ ನಿಯಮನಿರ್ಮಾಣ, ರಾಜ್ಯಾದಾಯದ ಆಡಳಿತ ವಿಚಾರ, ಸಾಮಾನ್ಯವಾಗಿ ಇತರ ರಾಜ್ಯಾಡಳಿತ ವಿಚಾರಗಳು, ಇವುಗಳ ಮೇಲಣ ಕೆಲವು ಪ್ರಾಮುಖ್ಯವಾದ ಅಧಿಕಾರಗಳನ್ನು ಶ್ರೇಷ್ಠತೆಯಿಂದ ಪ್ರಯೋಗಿಸಿ ನಮ್ಮ ನಿರೀಕ್ಷಣೆಗಳನ್ನು ಸಾರ್ಥಕಗೊಳಿಸಿರುತ್ತದೆ. ಆದಾಗ್ಯೂ ಈ ದಿವಸ ನಾವು ನೆರವೇರಿಸುತ್ತಲಿರುವ ಈ ಸಮಾರಂಭೋತ್ಸವದ ದೆಸೆಯಿಂದ ಉಂಟಾಗುವ ಬದಲಾವಣೆಗಳು ಮೂಲತತ್ವರೂಪವಾದವುಗಳೆಂಬುದೂ, ಪ್ರಜೆಗಳ ಪ್ರತಿನಿಧಿಗಳಿಗೂ ರಾಜ್ಯಾಡಳಿತ ಕ್ರಮಕ್ಕೂ, ಮೊದಲಿಗಿಂತಲೂ ಗಾಢವಾದ ಸಂಬಂಧವನ್ನುಂಟುಮಾಡತಕ್ಕವೆಂಬುದೂ, ಈಗ್ಗೆ ಕೆಲವು ವರುಷಗಳ ಹಿಂದೆ ಸಾಧ್ಯವೆನಿಸಿದ್ದುದಕ್ಕಿಂತ ಎಷ್ಟೋ ಹೆಚ್ಚು ಧಾರಾಳವಾದ ರೀತಿಯಲ್ಲಿ ಪ್ರಜೆಗಳ ಸ್ವಾಭಾವಿಕವಾದ ಮತ್ತು ಸೂಕ್ತವಾದ ಆಕಾಂಕ್ಷೆಗಳುಉಕ್ಕಿಹರಿಯುವಂತೆ ಅವಕಾಶವನ್ನು ಕಲ್ಪಿಸತಕ್ಕವೆಂಬುದೂ, ನಿಮಗೆ ವಿದಿತವಾಗಿಯೇ ಆಗುತ್ತವೆ.

ಚುನಾವಣೆಯ ಹಕ್ಕನ್ನು ಇನ್ನೂ ವಿಸ್ತರಿಸಿಕೊಟ್ಟು ಪ್ರಜೆಗಳಿಗೆ ಇನ್ನೂ ಹೆಚ್ಚು ಅಧಿಕಾರಗಳನ್ನು ಕೊಡಬೇಕೆಂಬುದೇ ಮುಂತಾದ ಅನೇಕ ಸಮೂಲವಾದ ಬದಲಾವಣೆಗಳುಂಟಾಗಬೇಕೆಂದು ನಮ್ಮ ಪ್ರಜೆಗಳಲ್ಲಿ ಒಂದು ಗುಂಪಿನವರ ಅಭಿಮತವಾಗಿದ್ದಿತೆಂಬುದನ್ನು ನಾವು ಬಲ್ಲೆವು. ಅವರ ಗುರಿಯಲ್ಲಿರುವ ಆದರ್ಶ ತತ್ವಗಳ ವಿಚಾರದಲ್ಲಿ ಸಂಪೂರ್ಣವಾಗಿ ಸಹಾನುಭೂತಿಯಿಂದೊಡಗೂಡಿರುತ್ತೇವೆ; ನಮ್ಮ ಈಗಿನ ತೀರ್ಮಾನವು ಬಹುದೀರ್ಘಕಾಲ ಮಂತ್ರಾಲೋಚನೆಮಾಡಿ ನಡೆದುದೆಂದು ಹೇಳಬೇಕಾಗಿದೆ. ಯಾವುದೊಂದು ದೇಶವೇ ಆಗಲಿ, ತನ್ನ ಸ್ಥಿತಿಗತಿಗಳನ್ನೂ, ಪ್ರಜಾಸ್ವಭಾವವನ್ನೂ ಅನುಸರಿಸಿ ಅವಕ್ಕೆ ತಕ್ಕಂತೆ ರಾಜ್ಯಾಡಳಿತಕ್ರಮವನ್ನು ಪರಿವರ್ತನಗೊಳಿಸಿಕೊಳ್ಳಬೇಕು. ಎಲ್ಲಾ ವಿಧವಾದ ರಾಜ್ಯಭಾರಕ್ರಮಗಳ ವ್ಯವಸ್ಥೆಯ ಅಭಿವೃದ್ಧಿಯಲ್ಲಿಯೂ ಸಾಮಾನ್ಯವಾಗಿ ಕಂಡುಬರುವ ಮೂಲತತ್ವಗಳನ್ನು ಪರಿತ್ಯಜಿಸದಂತೆ ನೋಡಿಕೊಂಡು ಚೆನ್ನಾಗಿ ಪರಿಶೀಲಮಾಡಿದುದರಲ್ಲಿ, ನಮ್ಮ ಪ್ರಜಾಪ್ರತಿನಿಧಿ ಸಭೆಯು ಮುಂಚಿನಂತೆ ಸ್ಪಷ್ಟವಾಗಿ ನೆಟ್ಟನೆ ಪ್ರಜೆಗಳ ಕುಂದು ಕೊರತೆಗಳನ್ನು ತಿಳಿಸತಕ್ಕುದಾಗಿಯೂ, ಪ್ರಜೆಗಳ ಪ್ರಾತಿನಿಧ್ಯ ದಿಂದೊಡಗೂಡಿ ಮಂತ್ರಾಲೋಚನೆಗೂ, ಸಮರ್ಪಿಸಿದ ವಿಷಯದಲ್ಲಿ ತೀರ್ಮಾನ ಹೇಳುವುದಕ್ಕೂ, ಬೇಕಾದ ಮುಖ್ಯಸ್ಥಾನವಾಗಿಯೂ ಇರುವ ಸಂಸ್ಥೆಯಾಗಿರುವುದಲ್ಲದೆ ಪ್ರಜೆಗಳಿಗೆ ರಾಜಕೀಯವಿಚಾರಗಳಲ್ಲಿನ ತಿಳಿವಳಿಕೆಯೂ, ಅಭಿರುಚಿಯೂ, ಹೆಚ್ಚಿದಂತೆಲ್ಲಾ ಅದಕ್ಕನುಗುಣವಾಗಿ ಹೆಚ್ಚು ಹೆಚ್ಚಾಗಿ ವಿಕಾಸಗೊಳ್ಳುವಂತಹ ಸ್ವಭಾವವುಳ್ಳ ವ್ಯವಸ್ಥಾ ಕ್ರಮದಿಂದೊಡಗೂಡಬೇಕೆಂದೂ, ನ್ಯಾಯವಿಧಾಯಕ ಸಭೆಯು ವಿಶೇಷತಃ ನಿಮಿತ್ತಮಾತ್ರದ ಕೆಲಸವೆನಿಸುವ ನಿಯಮನಿರ್ಮಾಣ ಕಾರ್ಯವನ್ನೂ, ಇಂತಹ ಸಭೆಗಳು ನಡೆಸತಕ್ಕುದು ರೂಢಿಯಾಗಿರುವ ಇತರ ಕಾರ್ಯಕಲಾಪಗಳನ್ನೂ ನೆರವೇರಿಸಬೇಕೆಂದೂ ನಿರ್ಧರಗೊಳಿಸತಕ್ಕುದು ಅವಶ್ಯಕವಾಯಿತು.

ನಿಮಗೆ ಈಗ ಹೊಸದಾಗಿ ದೊರೆತಿರುವ ಅಧಿಕಾ ವಿದ್ಯಾಭಿವೃದ್ಧಿಮಾಡುವುದು, ಜ್ಞಾನಪ್ರಸಾರಣ ಮಾಡ ಸರಕಾರಿ ಮತ್ತು ಖಾಸಗಿ ಈ ಎರಡು ವಿಧದಲ್ಲಿಯೂ ಕೆಯ ಉದ್ಯಮಗಳನ್ನ ಹೆಚ್ಚಿಸುವುದು, ಪೌರಕಾ ಗಮನಕೊಡುವ ಸದ್ಗುಣಗಳನ್ನು ಪರಿಪೋಷಿಸುವುದು, ಸಮಾಜ ಸೇವೆಯಲ್ಲಿ ಆಸಕ್ತಿಯನ್ನು ಅಭಿವೃದ್ಧಿಗೊಳಿಸ ಅಂತು ದೇಶದಲ್ಲಿ ನಡೆಯುತ್ತಿರುವ ಹಿತಸಾಧನೆಯ ಉ ಳಿಗೆಲ್ಲಾ ಒತ್ತಾಸೆಕೊಟ್ಟು ಪರಿಪುಷ್ಟಿಗೊಳಿಸುವುದರಲ್ಲಿ ಗಿಸುವರೆಂಬ ವಿಚಾರವು ನಮಗೆ ನಿಸ್ಸಂದೇಹವಾಗಿದೆ. ದೇಶದ ವ್ಯವಸಾಯ ಸನ್ನಿವೇಶದ ಶೋಚನೀಯವಾದ ಗಳಿಸಿಸಿ ಯಾವಾಗಲಾದರೂ ಬಂದೊದಗಬಹುದಾದ ಷ್ಟಿ ಮತ್ತು ಕ್ಷಾಮ, ಇವುಗಳ ಬಾಧೆಯನ್ನು ಪರಿಹರಿ ಲು ಧನವನ್ನೂ ದಿನಸಿಗಳನ್ನೂ ಸಂಗ್ರಹಮಾಡಿಟ್ಟು ಇರುವಂತೆಯೂ, ಮಿತವ್ಯಯಮಾಡುವಂತೆಯೂ ಬೋಧನ ಮಾಡಬೇಕೆಂದೆ ನಿಮಗೆ ಅತ್ಯಂತವಾಗಿ ಒತ್ತಿ ತ್ತೇವೆ. ದೂರದೃಷ್ಟಿಯಿಟ್ಟು ಮೊದಲೇ ಸಾಕಾದಷ್ಟು ವನ್ನೂ, ಧನವನ್ನೂ ಶೇಖರಿಸಿಟ್ಟುಕೊಂಡರೆ ಈಗ ನಮ್ಮ ದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಜನರಿಗೆ ಸಂಭವಿಸಿರು ಘೋರವಾದ ಕಷ್ಟಗಳನ್ನು ಬಹುಮಟ್ಟಿಗೆ ಪರಿಹರಿಸ ವುದು ಸಾಧ್ಯ. ವಿಧಿಸ್ಥಾಪಕ ಸಂಸ್ಥೆಗಳ "ಸ್ಟಾಂ ಮಿಟಿ" ಗಳೆಂಬ ಉಪಸಭೆಗಳು ಸರಕಾರದ ಮುಖ್ಯ ಗಳೊಡನೆ ಪ್ರಜೆಗಳ ಪ್ರತಿನಿಧಿಗಳಿಗೆ ಹೆಚ್ಚು ಪರಿಚಯ ಸಂಬಂಧವನ್ನೂ, ಕಲ್ಪಿಸಿಕೊಡಲೆಂಬುದಾಗಿ ನಾವು ತ್ತೇವೆ. ಈಗ ಪರ್ಯಾಲೋಚಿಸಲ್ಪಟ್ಟಿರುವ "ಸೆಲ್ಫ್ ಮೆಂಟು" ಎಂದರೆ ಸ್ಥಳೀಯ ಆಡಳಿತ ನಿರ್ವಹಣದ ಯಾದ ಕ್ರಮವು ಆಚರಣೆಗೆ ಬಂದು, ಡಿಸ್ಟ್ರಿಕ್ಟು ಗಳು, ತಾಲ್ಲೋಕು ಬೋರ್ಡುಗಳು, ಮ್ಯುನಿಸಿಪಾ ಮತ್ತು ಗ್ರಾಮಪಂಚಾಯತಿ ಸಭೆಗಳು ಇವುಗಳ ಗಳು ಹೆಚ್ಚಿಸಲ್ಪಟ್ಟಾಗ್ಗೆ ದಕ್ಷರಾದ ಜನರಿಗೆ ಸ್ಥಳೀಯ ಗಳನ್ನು ತಮ್ಮಲ್ಲೇ ವ್ಯವಹರಿಸಿಕೊಳ್ಳುವುದಕ್ಕೂ ಪ್ರಜಾ ಯ ಸಾಧಕವಾದ ಕಾರ್ಯಗಳಲ್ಲಿ ಭಾಗಿಗಳಾಗುವ ಅನೇಕ ಅವಕಾಶಗಳುಂಟಾಗುತ್ತವೆ.

ಪ್ರಜಾಭ್ಯುದಯ ಸಾಧಕವಾದ ವಿಚಾರಗಳನ್ನು ರೀತಿಯಲ್ಲಿ ಪರ್ಯಾಲೋಚಿಸಿ ನೆರವೇರಿಸುವುದರಲ್ಲಿ ದೊರೆಯಬೇಕಾದರೆ ಒಂದುವಿಧದ ಆತ್ಮಸಂಯಮವು ಮೂಲಕಾರಣವೆನಿಸಿ ಅವಶ್ಯವಾಗಿರುತ್ತದೆ; ನೀವುಗಳು ಚಾರದಲ್ಲಿ ಅಂತಹ ಆತ್ಮಸಂಯಮವನ್ನು ಅವಲಂಬಿಸತ ಅವಶ್ಯವಾಗಿರುತ್ತದೆ. ಪಂಗಡಗಳು ಪರಸ್ಪರವಾಗಿ ವಾ ವಾದ ಮಾಡುವುದು ಎಂದಿಗೂ ತಪ್ಪತಕ್ಕುದಲ್ಲವಾಗಿದಾ ನೀವು ನಡೆಯಿಸುವ ಚರ್ಚೆಗಳು ಪರಸ್ಪರ ಸಹಿಷ್ಣುತೆಯಿ ಮರ್ಯಾದೆಯಿಂದಲೂ ಕೂಡಿ ರಾಜ್ಯದ ವಿಧಿಸ್ಥಾಪಕ ಗಳೆಂಬ ನಾಮಧೇಯಕ್ಕನುಗುಣವಾದ ದರ್ಪದಿಂದಲೂ ನೀತಿಗಳಿಂದಲೂ ಸಾಗುವುವೆಂದು ನಂಬಿರುತ್ತೇವೆ. ನಿಮ್ಮ ಪ್ರಾಯಗಳನ್ನು ವ್ಯಕ್ತಗೊಳಿಸುವಾಗ ವಿವೇಕಮಯವಾ ಯಮದಿಂದ ಕೂಡಿ ವರ್ತಿಸುವುದು ಅವಶ್ಯಕ. ಅತ್ಯು ನಿಷ್ಠುರದ ನುಡಿಗಳೂ ಹೊರಟರೆ ಉದ್ದಿಷ್ಟಕಾರ್ಯಸಾ ಅವುಗಳು ಕುಂದಕವನ್ನು ತರುತ್ತವೆ. ಮತ್ತು ಭಾಷಣ ಬೇಕೆಂದಿರುವ ವಿಚಾರಗಳನ್ನು ಪೂರ್ವಭಾವಿಯಾಗಿ ವಾಗಿ ಪರಿಶೀಲಿಸಿ ಆಮೇಲೆ ಮಾತನಾಡಬೇಕೆಂದೂ ನಿಮ್ಮ ದಾನುವಾದಗಳೆಲ್ಲದರಲ್ಲಿಯೂ ಯಾವುದಾದರೂ ಪಂ ಅಥವಾ ಜಾತಿಗಳ ಶ್ರೇಯಸ್ಸಾಧನೆಗಿಂತಲೂ ಹೆಚ್ಚಾಗಿ ರಾಜ್ಯದ ಶ್ರೇಯೋಭಿವೃದ್ಧಿಗೆ ಪ್ರಾಮುಖ್ಯತೆಯನ್ನು ಕೆಂದೂ ಒತ್ತಿಹೇಳುತ್ತೇವೆ. ಮೂರನೆಯ ಅಂಶವಾಗಿ ಮುಖ್ಯವಾಗಿ ನಿಮ್ಮ ಗಮನಕ್ಕೆ ತರುವುದೇನೆಂದರೆ, ನೀ ಸರಕಾರದವರಲ್ಲಿಯೂ, ಪ್ರಜೆಗಳಲ್ಲಿಯೂ ಮಿಳಿತರಾಗಿ ಮಾಡುತ್ತಾ ಪ್ರಜೆಗಳ ವಿಚಾರದಲ್ಲಿ ಸರಕಾರದವರಿಗೂ ರದವರ ವಿಚಾರದಲ್ಲಿ ಪ್ರಜೆಗಳಿಗೂ, ಸರಿಯಾದ ತಿಳಿವಳಿ ಟಾಗುವಂತೆ ವಿಷಯವಿವರಣಮಾಡುತ್ತಾ ಬರತಕ್ಕುದು. ಮಾಡುತ್ತಾ ಬಂದಲ್ಲಿ ಮಾತ್ರವೇ ನಿಮ್ಮ ತರಗತಿಯವರ ಕೃಷ್ಟರೂ, ಎಸಿಸಿರುವ ಬಡಪಾಯಿಗಳಲ್ಲಿ ಬಹುಕಾಲದಿ ನೆಲೆಗಟ್ಟಿಬಂದಿರುವ ಮೌನವು ಹುಟ್ಟಡಗಿ ಅವರ ಶ್ರೇಯ ದ್ಧಿಯ ವಿಚಾರದಲ್ಲಿ ವಿದ್ಯಾವಂತರೂ, ಮತ್ತು ಸಿರಿವಂತರ ಪಂಗಡಗಳವರು ಸಂಪೂರ್ಣ ಉತ್ತರವಾದಿತ್ವವನ್ನು ಎದೆಕೊಟ್ಟು ನಿಲ್ಲುವಂತಾಗುವುದೆಂದು ನಮ್ಮ ಕೋರಿಕೆ ರುತ್ತದೆ.

ನಮ್ಮ ರಾಜ್ಯದ ಪ್ರಜೆಗಳು ತಮ್ಮ ಸಮಸ್ತ ಆಶ ನ್ನೂ ತಾವೇ ನೆರವೇರಿಸಿಕೊಳ್ಳತಕ್ಕ ಸಾಮರ್ಥ್ಯವನ್ನೂ ನೀತಿಗಳನ್ನೂ ಅಭಿವೃದ್ಧಿಪಡಿಸಿಕೊಂಡು, ಮಹತ್ಕಾರ್ಯ ತಪ್ಪದೆ ಧೈರ್ಯದಿಂದ ಪ್ರಾರಂಭಿಸತಕ್ಕವರೂ, ಅಧ್ಯವ ಪಟುಗಳೂ, ಆಗ ದೇಶದಲ್ಲಿ ಸಮಸ್ತ ಪುರೋಭಿವೃದ್ಧಿಯ ರ‍್ಯಕಲಾಪಗಳಲ್ಲಿಯೂ ಮುಂದಾಳುಗಳಾಗಿ ನಿಂತು ಕೃ ರಾಗುವುದನ್ನು ನೋಡಬೇಕೆಂಬುದೇ ನಮ್ಮ ಮುಖ್ಯ ಯಾಗಿರುತ್ತದೆ. ನಮ್ಮ ಭಾವಿಕಾರ್ಯಕ್ರಮಗಳನ್ನು ಅ ಕೊಳ್ಳುವುದರಲ್ಲಿ, ಈಚೀಚೆಗೆ ನಡೆದುಬಂದಿರುವ ಅಗಾ ಮತ್ತು ಮಹತ್ತರವಾದ ಬದಲಾವಣೆಗಳನ್ನು ಗಮನಿಸ ಬ್ರಿಟಿಷ್ ಜನಾಂಗದ ಕೃಪಾಘಟಿತವಾದ ಮಾರ್ಗದರ್ಶ ಸಹಾಯದಿಂದ ಇಂಡಿಯಾ ದೇಶವು, ಪ್ರಾಂತ್ಯಗಳಿಂ ಸಂಸ್ಥಾನಗಳಿಂದಲೂ ಕೂಡಿದ ಒಂದು ಸಾಂಘಾತಿಕ

ನುಗುಣವಾಗಿ ಮಾರ್ಪಡುತ್ತಾ ಬರುತ್ತದೆ. ಮೈಸೂರು ನದಲ್ಲಿರುವ ನಾವೆಲ್ಲರೂ ಜನಾಂಗದೊಳಗಣ ಮತ್ತೊಂ ಜನಾಂಗವೋ ಎಂಬಂತೆ ಇರುತ್ತೇವೆ. ಒಟ್ಟು ದೇಶಕ್ಕೆ ಅ ದಯವನ್ನುಂಟುಮಾಡುವ ಕಾರ್ಯಗಳಲ್ಲೆಲ್ಲಾ ನಾವು ಇಂಡಿಯಾ ಸರಕಾರದವರ ಮತ್ತು ಒಟ್ಟು ಭರತಖಂಡದ ಪ್ರಜೆ ನೆಯೂ ಪರಸ್ಪರ ಸಹಾಯಮಾಡಿಕೊಂಡು ವರ್ತಿಸುವು ಸ್ಥಳೀಯವಾಗಿ ನಮ್ಮ ದೇಶದಲ್ಲಿ, ಇಲ್ಲಿಯಜನರು ಅಭ್ಯು ಸೋಪಾನದಲ್ಲಿ ಇತರ ಪ್ರಾಂತ್ಯಗಳವರ ಮತ್ತು ಇತರ ಸಂಸ್ಥಾನಗಳ ಜನರಿಗಿಂತ ಕೆಳಗೆ ಬೀಳದಂತೆ ನಮ್ಮ ಸ್ಥಿತಿಗತಿಗಳನ್ನನುಸರಿಸಿ ಸಾಧ್ಯವೆನಿಸುವಷ್ಟು ಸಂಪೂರ್ಣವಾಗಿ ವಿದ್ಯಾಭಿವೃದ್ಧಿಯನ್ನೂ, ಅರ್ಥಸಾಧಕಸಂಪತ್ತಿನ ಬೆಳವಣಿಗೆಯನ್ನೂ ಒದಗಿಸಿಕೊಳ್ಳಬೇಕು.

ಇತ್ತೀಚಿನಿಂದಲೂ ಮೈಸೂರಿನ ಇತಿಹಾಸವು ಸುಸೂತ್ರವಾಗಿಯೂ, ಸರಳವಾಗಿಯೂ, ಸಾಗಿ ಬಂದಿರುವುದೇ ಭವಿಷ್ಯತ್ತಿಗೆ ಶುಭಸೂಚಕವೆನಿಸಿರುತ್ತದೆ. ತಟ್ಟನೆ ಬದಲಾವಣೆಗಳು ನಡೆದುದನ್ನಾಗಲೀ, ಇಲ್ಲವೇ, ಏನೂ ನಡೆಯದೆ ಒಂದೇ ನೆಲೆಯಲ್ಲಿ ನಿಂತುದನ್ನಾಗಲೀ ನಾವು ಕಂಡಯೆವು. ಕಾಲಕ್ರಮಕ್ಕೂ ಪ್ರಜೆಗಳ ಆಶೋತ್ತರಗಳಿಗೂ, ಅವಶ್ಯಕತೆಗಳಿಗೂ, ತಕ್ಕಂತೆ ನಮ್ಮ ಪ್ರಭುತ್ವಕ್ರಮವನ್ನೂ, ಆಡಳಿತ ವಿಚಾರಗಳನ್ನೂ ಸಮರ್ಪಕವಾಗಿ ಹೊಂದಿಕೆಗೊಳಿಸುತ್ತಾ, ಕ್ರಮವರಿತು ಒಂದೇ ಸಮವಾಗಿ ನಾವು ಮುಂದುವರಿಯುತ್ತಿದ್ದೇವೆ. ಪ್ರಭುತ್ವಕ್ರಮದ ಅಭ್ಯುದಯವೆಲ್ಲಾ ಪ್ರಜೆಗಳ ಪರಿಷ್ಕರಣಕ್ಕೂ, ಅವರ ಶಕ್ತಿಸಾಮರ್ಥ್ಯಗಳನ್ನು ಹೆಚ್ಚಿಸಿ ರಾಜ್ಯಾಡಳಿತ ವಿಧಾನದಲ್ಲಿ ವಿನಿಯೋಗಿಸಿಕೊಳ್ಳುವುದಕ್ಕೂ ಸಂಬಂಧಪಟ್ಟಿದೆ. ಈ ವಿಧದ ಅಭ್ಯುದಯ ಸಾಧನೆಯೇ ನಿರಂತರವೂ ಮೈಸೂರು ಸರಕಾರದವರ ಮುಖ್ಯ ಗುರಿಯಾಗಿರುತ್ತದೆ. ಆದ್ದರಿಂದ ಈ ದಿವಸ ನಾವು ನೆರವೇರಿಸುತ್ತಿರುವ ಸಮಾರಂಭೋತ್ಸವವು ಈಗ್ಗೆ ನಾಲ್ವತ್ತು ವರುಷಗಳಿಗೆ ಮೇಲ್ಪಟ್ಟ ಕಾಲದಿಂದಲೂ ಸೂಕ್ತವಾದ ರೀತಿಯಲ್ಲಿ ಕ್ರಮವರಿತು ಅವಿಚ್ಛಿನ್ನವಾಗಿ ನಡೆದುಬರುತ್ತಿರುವ ಅಭಿವೃದ್ಧಿ ಮಾರ್ಗದಲ್ಲಿನ ಮತ್ತೊಂದು ಮುಂದಣಹೆಜ್ಜೆಯೇ ಸರಿ. ಇದೇ ವಿಧವಾದ ಸುಸಜ್ಜಿತವಾದ ಹೊಂದಿಕೆಯಿಂದ ಈ ಕ್ರಮವು ಮುಂದುವರಿಯಲೆಂಬುದೇ ನಮ್ಮ ಹಾರೈಕೆಯಾಗಿರುತ್ತದೆ.

ಇನ್ನು ಮುಂದೆ ರಾಜ್ಯಶಾಸನ ರೀತಿಯ ವಿಚಾರದಲ್ಲಿ ನಿಮ್ಮ ಪ್ರಭಾವವು ಎಷ್ಟೋ ಹೆಚ್ಚಾಗಿ ನಡೆಯುವುದು; ಮತ್ತು ಅನೇಕ ಸಂದರ್ಭಗಳಲ್ಲಿ ಅದರಂತೆಯೇ ಕಾರ್ಯಕ್ರಮವು ನಿರ್ಧರಪಡಬೇಕಾಗುವುದು. ನಿಮ್ಮ ಠರಾವುಗಳು (Resolutions) ಮಾತ್ರವೇ ಅಲ್ಲದೆ, ಚರ್ಚೆಯಲ್ಲಿ ನೀವು ಒತ್ತಿ ಹೇಳುವ ಅಂಶಗಳಿಗೆ ಕೂಡ ಅತ್ಯಂತ ಪ್ರಾಮುಖ್ಯತೆಯುಂಟಾಗುತ್ತದೆ. ಸರಕಾರದ ಹಿತಸಾಧನೆಯೂ, ಪ್ರಜೆಗಳ ಹಿತಸಾಧನೆಯೂ ಐಕ್ಯತೆಗೊಂಡು ನಿಂತಿರುವುವೆಂಬ ಸಾರತತ್ವವನ್ನು ಮಾತ್ರ ನೀವುಗಳು ಮನಸ್ಸಿನಲ್ಲಿಯೂ, ಹೃದಯದಲ್ಲಿಯೂ, ಗ್ರಹಿಸಿಟ್ಟುಕೊಳ್ಳಬೇಕೆಂಬುದೇ ನಮ್ಮ ಕೋರಿಕೆಯಾಗಿರುತ್ತದೆ. ಪ್ರಜೆಗಳ ಸೌಖ್ಯವೇ ಸರಕಾರದವರ ಸೌಖ್ಯವೂ, ಸಾರ್ಥಕ್ಯವೂ, ಆಗಿರುತ್ತದೆ. ಎಲ್ಲಾ ದೇಶಗಳಲ್ಲಿಯೂ, ಮತ್ತು ಅಭ್ಯುದಯ ಮಾರ್ಗದಲ್ಲಿ ದಾರಿಯುದ್ದಕ್ಕೂ, ವಿವಿಧವಾದ ಭಿನ್ನಾಭಿಪ್ರಾಯಗಳು ಸ್ವಾಭಾವಿಕವಾಗಿ ಉಂಟಾಗುತ್ತದೆ. ರಾಜ್ಯಾಡಳಿತಗಳನ್ನು ನಿರ್ವಹಿಸತಕ್ಕ ಅಧಿಕಾರಿಗಳಿಗೂ ನಿಮಗೂ ಪರಸ್ಪರವಾಗಿ ಭಿನ್ನಾಭಿಪ್ರಾಯವುಂಟಾದರೆ, ಅದು ಕಾರ್ಯಕ್ರಮಕ್ಕೆ ಅನ್ವಯಿಸತಕ್ಕುದೇ ಹೊರತು ಕಾರ್ಯದ ಉದ್ದೇಶಕ್ಕೆಂದಿಗೂ ಅಲ್ಲ. ಸರಕಾರದವರು ನಿಮ್ಮಲ್ಲಿ ಸದುದ್ದೇಶವೂ, ಆದರಪುರಸ್ಸರವಾದ ಸಹಾಯಕ್ರಿಯೆಯೂ, ಇರತಕ್ಕುದೆಂದೂ ಹೇಗೆ ನಿರೀಕ್ಷಿಸಿ ಪರಿಗಣಿಸಿರುವರೋ ಹಾಗೆಯೇ ನೀವೂ ಅವರಲ್ಲಿ ಅದೇ ಗುಣಗಳನ್ನು ನಿರೀಕ್ಷಿಸಿ ಪರಿಗಣಿಸಬಹುದು.

ಈ ಕಾರಣಗಳಿಂದ ಮೈಸೂರು ಸಂಸ್ಥಾನದ ಚರಿತ್ರೆಯಲ್ಲಿ ಈ ಸುದಿನವು ಹೊಸ ಶಕೆಯೊಂದನ್ನು ಆರಂಭಗೊಳಿಸುತ್ತದೆ. ಸ್ವದೇಶಪ್ರೇಮದಿಂದೊಡಗೂಡಿ ದೇಶಸೇವೆ ಮಾಡುವುದರಲ್ಲಿ ನಮ್ಮ ಪ್ರಜೆಗಳಿಗಿರುವ ಆದರ ಮತ್ತು ಸಾಮರ್ಥ್ಯಗಳ ವಿಚಾರದಲ್ಲಿ ನಮ್ಮ ಭರವಸೆಯು ಅನುಭವವಿದಿತವಾಗಿ ರೂಢಮೂಲವಾಗಿ ನಿಂತಿರುತ್ತದೆ. ನಿಮ್ಮ ಆಶೋತ್ತರಗಳ ವಿಚಾರದಲ್ಲಿ ನಮಗೆ ನಿರಂತರವೂ ಗಾಢವಾದ ಸಹಾನುಭೂತಿಯುಂಟೆಂದು ನೀವುಗಳು ದೃಢವಾಗಿ ನಂಬತಕ್ಕುದು. ನೀವು ನಿಮ್ಮ ಪ್ರತಿಯೊಂದು ಕೆಲಸವನ್ನೂ, ಊಹಾಪೋಹವಿಚಾರದ ಸಾಮಾನ್ಯನಿಯಮದಿಂದಲೂ, ಸದುದ್ದೇಶದಿಂದಲೂ, ವಿಷಯವಿಮರ್ಶೆ ಮತ್ತು ಅನುಭವಪರಿಶೀಲನೆ ಇವುಗಳಿಂದಲೂ, ಕೂಡಿ ವರ್ತಿಸಿ ಈಗ ಹೊಸದಾಗಿ ದೊರಕಿರುವ ಅಧಿಕಾರಗಳನ್ನು ಜನಸಾಮಾನ್ಯದ ಉಪಯೋಗಕ್ಕಾಗಿ ಮಾತ್ರ ಉಪಯೋಗಿಸುವ ಪಕ್ಷಕ್ಕೆ, ನೀವುಗಳು ಅಧಿಕಾರದಲ್ಲಿಯೂ, ಪ್ರಾಭವದಲ್ಲಿಯೂ, ಮೇಲಕ್ಕೇರುವುದೆಂದಿಗೂ ತಪ್ಪದು; ಮತ್ತು ನಮ್ಮ ಸಂಸ್ಥಾನದ ಸತ್ಪ್ರಾಯಸ್ಥಿತಿಯನ್ನೂ, ಯಶಸ್ಸನ್ನೂ ಅಭಿವೃದ್ಧಿಪಡಿಸಿ ಪ್ರತಿ ಲು ಸಹಾಯಮಾಡಿ ನಮ್ಮೊಡನೆ ನೀವೆಲ್ಲರೂ ನಮ್ಮ ಸ್ಥಾನದ ಶಾಶ್ವತವಾದ ಶ್ರೇಯೋ ಭಂಡಾರದ ರಕ್ಷಕರಾಗಿ ತಕ್ಕುದು.

ಮಹನೀಯರೇ! ಈ ಮಾರ್ಗಗಳಲ್ಲಿನ ನಿಮ್ಮ ಸಮಸ್ತ ಯತ್ನಗಳಿಗೂ ಭಗವಂತನ ಪ್ರಸಾದವೂ, ಕಾರ್ಯಸಿದ್ಧಿ , ಲಭಿಸಲೆಂದು ಹಾರೈಸುವೆವು; ಅಲ್ಲದೆ ಶಕ್ತಿಯೂ, ವಿವೇ , ನಿರ್ದೇಶದ ಸ್ಪಷ್ಟತೆಯೂ, ನಿರಂತರವೂ ನಿಮ್ಮಲ್ಲಿ ನೆಲೆಸ ು ಪ್ರಾರ್ಥಿಸುತ್ತೇವೆ.

ಲೋವರ್‌ಸೆಕೆಂಡರೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸೂಚನೆ.

ಬೆಂಗಳೂರು ಸೆಂಟರು.

1924ನೇ ಇಸವಿ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್‌ಸೆಕೆಂಡರಿ ಪರೀಕ್ಷೆಗೆ ಬೆಂಗಳೂರು ಸೆಂಟರಿಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೂ ಮಾಷ್ಟರುಗಳಿಗೂ ಸಹ ಮಾಮೂಲಿನಂತೆ ನನ್ನ ಸ್ವಂತಮನೆಯಲ್ಲಿ ಭೋಜನಕ್ಕೂ ಮತ್ತು ವಾಸಕ್ಕೂ ಅನುಕೂಲಪಡಿಸಲ್ಪಡುತ್ತೆ. ಬರತಕ್ಕಂಥಾವರು ಮುಂಚಿತವಾಗಿ ಕಾರ್ಡು ಮೂಲಕ ತಿಳಿಸಬೇಕು.

ಎಸ್. ಕಳ್ಳೆಪ್ಪ,
ಅವಿನ್ಯೂರೋಡ್, ಬೆಂಗಳೂರು ಸಿಟಿ.

ದಾವಣಗೆರೆ ಸೆಂಟರು.

ಬರುವ ಎಪ್ರೇಲ್ ತಿಂಗಳಿನಲ್ಲಿ ದಾವಣಗೆರೆ ಸೆಂಟರಿನಲ್ಲಿ ನಡೆಯುವ ಇಂಗ್ಲೀಷು ಮತ್ತು ಕನ್ನಡ ಮೈಸೂರು ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ವಿದ್ಯಾರ್ಥಿನಿಯರಿಗೂ ಮಾಸ್ತರುಗಳಿಗೂ ಸಹಾ ದಾವಣಗೆರೆ ವೀರಶೈವ ವಿದ್ಯಾವರ್ಧಕ ಸಂಘದಿಂದ ಶ್ರೀ ವಿರಕ್ತಮಠದಲ್ಲಿ ಭೋಜನಕ್ಕೂ ವಾಸಕ್ಕೂ ಏರ್ಪಡಿಸಿರುತ್ತೇವೆ. ಪ್ರತಿಯೊಬ್ಬರೂ ಕಂಬಿಗೆ, ಹಾಸಿಗೆಹೊದ್ದಿಕೆಗಳನ್ನು ತೆಗೆದುಕೊಂಡುಬರತಕ್ಕದ್ದು.

ಪ್ರೆಸಿಡೆಂಟು.

ಕಡೂರು ಸೆಂಟರು.

ಮಾಮೂಲ್ ಮೇರೆಗೆ 1924ನೆ ಏಪ್ರಿಲ್ 1ನೆ ತಾರೀಖಿನಲ್ಲಿ ಕಡೂರು ಸೆಂಟರಿನಲ್ಲಿ ನಡಿಯುವ ಕನ್ನಡ ಮತ್ತು ಇಂಗ್ಲೀಷ್ ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ ಇವರಲ್ಲಿ ಊಟಮಾಡುವ ಇತರ ವಿದ್ಯಾರ್ಥಿಗಳಿಗೂ ಮತ್ತು ಉಪಾಧ್ಯಾಯರುಗಳಿಗೂ ಸಹ ಬೀರೂರು ವೇ|| ನಲ್ಲೂರು ಉಬ್ರಾಣಿಮಠದ ಎಚ್. ಎಂ. ಶಿವಲಿಂಗಪ್ಪಯ್ಯನವರು ಧರ್ಮಾರ್ಥವಾಗಿ ಕಡೂರಿನಲ್ಲಿರುವ ತಮ್ಮ ಸ್ವಂತ ಬಂಗ್ಲೆಯಲ್ಲಿ ಪರೀಕ್ಷಾ ಕಾಲದಲ್ಲಿ ಊಟಕ್ಕೂ ಫಲಹಾರಕ್ಕೂ ಏರ್ಪಡಿಸಿರುತ್ತಾರೆ. ಬರತಕ್ಕ ವಿದ್ಯಾರ್ಥಿಗಳು ಮಾರ್ಚಿ ತಾರೀಖು 25ರ ಒಳಗೇನೆ ಸದರಿಯವರಿಗೆ ಬರದುಕೊಳ್ಳಬೇಕು.

ಮರುಳಸಿದ್ಧಯ್ಯ.

ತುಮಕೂರು ಸೆಂಟರು.

ಈ ವರ್ಷ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್‌ಸೆಕೆಂಡರಿ ಪರೀಕ್ಷೆಗೆ ತುಮಕೂರು ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಮಾಮೂಲಿನಂತೆ ಮುರುಘಾಮಠದಲ್ಲಿ ಅನ್ನವಸತಿಗಳನ್ನು ಏರ್ಪಡಿಸಿದೆ. ಬರತಕ್ಕ ವೀರಶೈವ ವಿದ್ಯಾರ್ಥಿಗಳು 2 ದಿನ ಮುಂಚಿತವಾಗಿ ಕೆಳಗಿನ ಅಡ್ರೆಸ್ಸಿಗೆ ತಿಳಿಸುವುದಲ್ಲದೆ ಅವಶ್ಯವಾದ ಕಂಬಿಗೆ ಹಾಸಿಗೆಗಳನ್ನು ತರತಕ್ಕದ್ದು.

ಜಿ. ರುದ್ರಪ್ಪ, ಅಡ್ವೊಕೇಟ್, ತುಮಕೂರು.

ತುಮಕೂರು ಸೆಂಟರಿಗೆ ಮೈಸೂರು ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೆ ಭೋಜನಕ್ಕೂ ಮತ್ತು ವಾಸಕ್ಕೂ ಏರ್ಪಾಡುಮಾಡಿರುತ್ತೆ. ಹಾಗೆ ಬರುವ ವಿದ್ಯಾರ್ಥಿಗಳು ಈ ತಿಂಗಳು 25ನೆ ತಾರೀಖಿನವೊಳಗಾಗಿ ತಿಳಿಸತಕ್ಕದ್ದು.

ಭಾವಿಕಟ್ಟೆ ಚನ್ನಬಸಪ್ಪ ತುಮಕೂರು.

SREE JAYADEVA MURUGHA RAJENDRA VEERASAIVA HOSTEL, BANGALORE.

It is hereby notified that arrangements as regards lodging and boarding would be provided at reduced rates at this Hostel to Veerasaiva students appearing to several ensuing public examinations as Lower Secondary. S. S. L. C. etc. from the Bangalore centre. Those that are willing to avail themselves of the conveniences are required to apply previously to the following address.

HON. SECRETARY,
Sree Jayadeva Veerasaiva Hostel,
Seshadri Road, Bangalore.

ಶಿವಮೊಗ್ಗ ಸೆಂಟರು.

ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್‌ಸೆಕೆಂಡರಿ ಪರೀಕ್ಷೆಗೆ ಶಿವಮೊಗ್ಗ ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನದ ಏರ್ಪಾಡನ್ನು ಮಾಡಲು ಇದೇ ಟವನ್ ವಾಸಿಗಳಾದ ಮ|| ರಾ|| ಜಿ. ಯಂ. ಕಾಡಪ್ಪನವರು ಒಪ್ಪಿಕೊಂಡಿರುತ್ತಾರೆ. ಕಳೆದ ವರ್ಷವೂ ಇವರು ಇದೇರೀತಿ ಏರ್ಪಾಡುಮಾಡಿ ಪರೀಕ್ಷೆಗೆ ಬಂದ ನೂರಾರು ವಿದ್ಯಾರ್ಥಿಗಳಿಗೆ ಸುಖಭೋಜನವನ್ನಿತ್ತು ಕೇವಲ ಪ್ರೀತಿಯಿಂದ ಆದರಿಸಿದುದೂ, ಈ ವರ್ಷವೂ ಪುನಃ ಈ ಏರ್ಪಾಡನ್ನು ಮಾಡಿರುವುದೂ ಇವರ ಧರ್ಮಬುದ್ಧಿ, ದಯೆ, ವಿದ್ಯಾಭಿಮಾನವನ್ನು ವ್ಯಕ್ತಗೊಳಿಸುತ್ತೆ. ವಿದ್ಯಾರ್ಥಿವರ್ಗಕ್ಕೆ ಪ್ರಯೋಜನವಾಗುವ ಒಂದು ಮಹತ್ತರವಾದ ಕೆಲಸವನ್ನು ಮಾಡಬೇಕೆಂಬ ಸಂಕಲ್ಪವೂ ಇವರಲ್ಲಿ ಪೂರ್ಣವಾಗಿ ನೆಲೆಗೊಂಡಿದೆ. ಅದು ಬಹುಶಃ 3-4 ತಿಂಗಳಲ್ಲಿಯೇ ಪ್ರಕಾಶಕ್ಕೆ ಬರಬಹುದು. ಇಂತಹ ವಿದ್ಯಾಭಿಮಾನಿಗಳಾದ ಇವರಿಗೆ ದೇವರು ಆಯುರಾರೋಗ್ಯ ಸಂಪತ್ತನ್ನಿತ್ತು ಕಾಪಾಡಲಿ. ಮೇಲ್ಕಂಡ ಭೋಜನದ ಏರ್ಪಾಡು ಇಲ್ಲಿಯ ವೀರಶೈವ ಹಾಸ್ಟಲಿನಲ್ಲಿ ಇಡಿಸಲ್ಪಡುತ್ತೆ. ವಿದ್ಯಾರ್ಥಿಗಳು ಇಳಿದುಕೊಳ್ಳುವುದಕ್ಕೆ ಸ್ಥಳವೂ ಕೊಡಲ್ಪಡುತ್ತೆ. ಅಪೇಕ್ಷೆಯುಳ್ಳ ವಿದ್ಯಾರ್ಥಿಗಳು ಮಾರ್ಚಿ 25 ನೇ ತಾರೀಖಿನೊಳಗೆ ಬಂದು ತಲಪುವಂತೆ ಈ ಕೆಳಗಿನವಿಳಾಸಕ್ಕೆ ಬರೆದು ತಿಳಿಸತಕ್ಕದ್ದು.

ಹೆಚ್. ಲಿಂಗಪ್ಪ ಬಿ.ಎ., ಎಲ್‌ಎಲ್.ಬಿ.,
ಅಡ್ವೋಕೇಟ್, ಶಿವಮೊಗ್ಗ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಸಂ.

ಪತ್ರವ್ಯವಹಾರಕರಿಗೆ ಸೂಚನೆ.

ಬೇರ ಮನಸ್ಸಿಗೇಶಕ್ಕೂ ಅವಕಾಶವಿಲ್ಲದೆ ಸರ್ವ ಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟಿದ್ದ ವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ಮಾರುಮಾರುದ್ದ ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಪರಸ್ಪರ ಸಮಾಜಗಳಲ್ಲಿ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಮನಸ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೂಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರಃ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಾಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟ ವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾ ಸಂಬಂಧ ಲೇಖನಗಳು ಆಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕರೂ ಖಂಡಿತವಾಗಿ ಗಮನಿಸಬೇಕು.

—ಸಂಪಾದಕ.

ರಥೋತ್ಸವ.

ಶ್ರೀಮತ್ಸಾಕ್ಷಾದ್ರಂಭಾಪುರಿ ಮಹಾಸಂಸ್ಥಾನ ಮಠದಲ್ಲಿ ಅನಾದಿಯಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಯಂತೆ ಈ ರುಧಿರೋದ್ಗಾರಿ ಸಂ|| ದ ಫಾಲ್ಗುಣ ಶು|| ೮ ಯಿಂದ ಬ|| ೮ ವರೆಗೆ ಉಭಯ ದಿನಗಳಲ್ಲಿಯೂ ನಡೆಯುವ ನಿತ್ಯೋತ್ಸವಗಳಿಗೂ, ಈ ಶುದ್ಧ ೧೩, ಮಘಾನಕ್ಷತ್ರದಲ್ಲಿ ನಡೆಯುವ ಶ್ರೀ ರುದ್ರಮುನಿಸ್ವಾಮಿಯವರ ಶ್ರೀ ಮಹಾರಥೋತ್ಸವಕ್ಕೂ ಸಹ ಭಕ್ತಿ ಮುಕ್ತಿ ಪರಾಯಣರಾದ ವೀರಶೈವ ಮಹನೀಯರುಗಳು ತಮ್ಮ ಇಷ್ಟ ಮಿತ್ರರೊಡನೆ ದಯಮಾಡಿಸಿ, ಶ್ರೀ ಮಹಾಸ್ವಾಮಿಯವರ ಮೇಲ್ಕಂಡ ಸೇವಾಕಾರ್ಯವನ್ನು ನೆರವೇರಿಸಿ, ಶ್ರೀ ಜಗದ್ಗುರು ರೇಣುಕಾಚಾರ್ಯರವರ ದಿವ್ಯಕೃಪೆಗೆ ಪಾತ್ರರಾಗಬೇಕೆಂದು ಈ ಮೂಲಕ ಕೋರಲ್ಪಟ್ಟಿದೆ.

ಎಸ್. ಕೆ. ಎಂ. ರುದ್ರಾರಾಧ್ಯ.
ಏಜಂಟ್.

ತೋಟಿ ತಳಾರಿಗಳ ಮಿರಾಸೆ ಮನ್ನಾ.

ಇದೇ ಮಾರ್ಚಿ ತಾರೀಖು 9ನೆ ಸ್ಟಾರ್ ಪತ್ರಿಕೆಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಲ್ಲಿ ಬಡ ರೈತರ ಅಂಕೆಯೆಂಬುದಾಗಿ ಬರದಿರುವ ತೋಟಿ, ತಳಾರಿ, ನೀರುಗಂಟಿ ಇತರರುಗಳ ಮಿರಾಶಿ ವಿಷಯದ ತಪಸೀಲ್ ಓದಿದೆನು. ಇದಕ್ಕಾಗಿ 1917ನೆ ಇಸವಿಯಲ್ಲಿ ಅದಕ್ಕೆ ತತ್ಪೂರ್ವವೂ, ಈಚೆಗೂ ನಮ್ಮ ತಾಲ್ಲೂಕಿನಲ್ಲಿ ನಾನು ಮೊದಲಾಗಿ ಸಾವಿರಾರು ಪ್ರಜೆಗಳು ಅರ್ಜಿಬರೆದು ನಮ್ಮನ್ನು ಆಳುವ ಮಹಾಸ್ವಾಮಿಯವರ ಸವಾರಿ ಚಿತ್ತೈಸಿದಾಗ ರೂಬರೂಬು ಹೇಳಿಕೊಂಡು ಅರ್ಜಿಕೊಟ್ಟುದರ ಮೇಲೆ ರೈತರು ಕೊಡುವ ಕಂದಾಯದ ಮೊಬಲಗಿನ ಮೇಲೆ ರೂಪಾಯಿಗೆ ಒಂದಣೆ ಧಾನ್ಯಕ್ಕಿಂತ ಹೆಚ್ಚಾಗಿ ಕೊಡಿಸಕೂಡದೆಂತಲೂ 31-12-1915ನೆ ಮರ್ಕುಂ R 6292-6302 L. R 369-10-4ನೆ ಹುಕ್ಕುಂ ಫೈಸಲಾಗಿರುತ್ತಂತ 14-9-17 ರಲ್ಲು R 2835ನೆ (ಇಂಡಾರ್ಸ್ ಹುಕುಂ) ಗೌರ್ನಮೆಂಟ್ ರೆವಿನ್ಯೂ ಸೆಕ್ರೆಟರಿಯವರ ಆಫೀಸಿನಿಂದ ಇಂಡಾರ್ಸ್ ಹುಕುಂ ಅಪ್ಪಣೆ ಆಗಿರುತ್ತೆ. ಈ ಇಂಡಾರ್ಸ್ ನನ್ನಲ್ಲಿ ಹಾಜರಿದೆ. ಇದರಂತೆ ಈಚೆಗೆ ನಡೆದ ನೌಕರರ ಫಿಯಾರ್ದಿನ ಮೇಲೆ ಮದ್ದಗಿರಿ ತಾಲ್ಲೂಕಿನಲ್ಲೂ, ಗೋರಿಬಿದನೂರು ತಾಲ್ಲೂಕು ಸರ್ವಮಾನ್ಯ ಗೊಲ್ಲಹಳ್ಳಿ ಶ್ಯಾನುಭೋಗ್ ಎಸ್. ನಾಗಪ್ಪನವರ ಮೇಲೂ ಫೈಸಲಾಗಿರುತ್ತೆ. ಈ ವಿಷಯ ಹಿಂದೆ ತೀರ್ಮಾನವಾಗಿರುವುದರಿಂದಲೂ ರೆವಿನ್ಯೂ ಮ್ಯಾನುಯಲ್‌ನಲ್ಲಿ ಗೌರ್ನಮೆಂಟಿನವರು ತಿದ್ದುಪಾಡುಮಾಡಿರುವುದರಿಂದಲೂ ಇದನ್ನ ಪುನಃ ನಾನು ಮೊದಲಾದ ರೈತರು ಚರ್ಚೆಮಾಡಬೇಕಾದ್ದು ಇಲ್ಲಾ. ಎಕರೆ 1ಕ್ಕೆ 10 ಸೇರಿನಂತೆ ದವಸವನ್ನು ಕೊಡಬೇಕೆಂಬ 1-8-78 ನೆ ಮರ್ಕುಂ 123 ನೆ ಹುಕುಂ ಬಹು ದಿವಸದ ಕೆಳಗೆ ಆದದ್ದಾಗಿರುವುದು ಮೇಲಿನ ಫೈಸಲಾತಿಯಿಂದಾ ರದ್ದಾಗಿರುತ್ತೆ.

ತಾ|| ಲಿಂಗಂಣ್ಣಯ್ಯ, ನಾಗಸಂದ್ರ, ಕುಣಿಗಲ್ ತಾ||

ಬರದವಳ್ಳಿಯಲ್ಲಿ ನಡೆದ ವಿದ್ಯಾಭಿವೃದ್ಧಿ ಸಭೆ.

ಸಾಗರ ತಾ|| ಬರದವಳ್ಳಿಯಲ್ಲಿ ವಿದ್ಯಾಭಿವೃದ್ಧಿ ವಿಚಾರವಾಗಿ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರ ಅಧ್ಯಕ್ಷತೆಯಲ್ಲಿ ಕಳೆದ 9ರಲ್ಲಿ ಒಂದು ಸಭೆಯು ಸ್ಕೂಲಿನ ಮುಂದೆ ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಚಪ್ಪರದಲ್ಲಿ ನಡೆಯಿತು. ನೆರೆಗ್ರಾಮಗಳ ಸ್ಕೂಲ್‌ಗಳೂ ಪ್ರಮುಖಜನರೂ ಬಂದಿದ್ದರು. ದೇವರ ಪ್ರಾರ್ಥನೆಯಾದ ಮೇಲೆ ಮ|| ಬಿ. ಕೆ. ಚನ್ನಬಸಪ್ಪಗೌಡರ ಪ್ರಾರ್ಥನೆಯ ಮೇರಿಗೆ ಇ|| ಜ|| ಸಾಹೇಬರು ಅಧ್ಯಕ್ಷತೆಯನ್ನು ವಹಿಸಿದನಂತರ ಮ|| ಚನ್ನಬಸಪ್ಪನವರು ಸ್ವಾಗತಭಾಷಣವನ್ನು ಮಾಡಿದರು. ನಂತರ ಮ|| ಗುರಪ್ಪಗೌಡರು ಈವರೆಗೆ ಇಲ್ಲಿಯ ಸ್ಕೂಲ್ ಅಭಿವೃದ್ಧಿ ಸ್ಥಿತಿಗೆ ಬರಲು ಇಲ್ಲಿಯ ಹೆ|| ಮಾ|| ಬಿ. ಎಸ್. ರಾಮಚಂದ್ರಯ್ಯನವರು ತಿಳಿವಳಿಕೆ ಇಲ್ಲದ ಜನರಿಗೆ ಪ್ರೋತ್ಸಾಹ ಕೊಡುತ್ತಲೂ ತಮ್ಮ ಬೋಧನಾಶಕ್ತಿಯಿಂದಲೂ ಸ್ಕೂಲನ್ನು ಒಳ್ಳೆಯ ಸ್ಥಿತಿಗೆ ತಂದರೆಂತಲೂ ಈ ಸ್ಕೂಲನ್ನು ಇನ್‌ಕಂಪ್ಲೀಟ್ ಮಿಡಲ್ ಸ್ಕೂಲನ್ನಾಗಿ ಮಾಡಿಸಿ ಕೊಡಬೇಕೆಂತಲೂ ಸ್ಕೂಲ್ ಕಟ್ಟಡ ಕಟ್ಟಿಸಿ ಕೊಡಬೇಕೆಂತಲೂ ಸ್ಕೂಲಿಗೆ ಬೇಕಾದ ಫರ್ನೀಚರ್ ಒದಗಿಸಬೇಕೆಂತಲೂ ಹೆಡ್‌ಮಾಸ್ಟರ್ ಬಿ. ಯಸ್. ರಾಮಚಂದ್ರಯ್ಯನವರನ್ನು ಇಲ್ಲಿಯೇ ಖಾಯಂ ಇಡಬೇಕೆಂತಲೂ ಪ್ರಾರ್ಥಿಸಿರುವ ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿದರು. ಅಧ್ಯಕ್ಷರವರು ಮೇಲ್ಕಂಡ ವಿಷಯಾಂಶಗಳನ್ನು ಎತ್ತಿ ಭಾಷಣಮಾಡಿದ್ದಲ್ಲದೆ ಗ್ರಾಮಸ್ಥರ ಪ್ರಾರ್ಥನೆಗಳಲ್ಲಿ ಇನ್‌ಕಂಪ್ಲೀಟ್ ಮಿಡಲ್ ಸ್ಕೂಲನ್ನು ಹಂಗಾಮಿಯಾಗಿ ಕೊಡುವುದಾಗಿಯೂ ಉಳಿದ ಎಲ್ಲಾ ಕೆಲಸಗಳನ್ನು ಮಾಡಿಕೊಡುವುದಾಗಿಯೂ ಒಪ್ಪಿಕೊಂಡರು. ನಂತರ ಬಾಲಕರು ಶ್ರೇಯಃಪ್ರಾರ್ಥನಾರೂಪವಾದ ಮಂಗಳವನ್ನು ಹಾಡಿದ ಮೇಲೆ ಉಪಹಾರನಡೆದು ಗಂಧ ಪುಷ್ಪ ತಾಂಬೂಲ ಹಂಚಲ್ಪಟ್ಟು ಸಭೆ ಮುಕ್ತಾಯಮಾಡಲ್ಪಟ್ಟಿತು. ತರುವಾಯ ಇ||ಜ|| ಸಾಹೇಬರು ಇಲ್ಲಿನ ದೇವಸ್ಥಾನವನ್ನೂ ಮುಂದೆ ಸ್ಕೂಲ್‌ಕಟ್ಟಡ ಆಗತಕ್ಕ ಸ್ಥಳವನ್ನೂ ನೋಡಿ ಮೋಟಾರಿನಲ್ಲಿ ಸಾಗರಕ್ಕೆ ದಯಮಾಡಿಸಿದರು.

ಸ್ಥಳೀಕ.

ಶಿವಲಿಂಗಪ್ರತಿಷ್ಠಾ ಮಹೋತ್ಸವ.

ಚಿತ್ರದುರ್ಗದ ತಾ|| ಜಂಪಣ್ಣನಾಯಕನಕೋಟೆ ಮಜರೇ [illegible] ವೀರಶೈವ ಭಕ್ತಾದಿಗಳು ನೂತನವಾಗಿ ಶಿವದೇವಸ್ಥಾನವನ್ನು [illegible] ಇದೇ ಸಂವತ್ಸರದ ಮಾಘ ಶು|| ೫ ರಿಂದ ೧೧ರ ವರೆಗೂ ಶ್ರೀ ಪ್ರತಿಷ್ಠೆಯೂ ಶಿವದೀಕ್ಷಾ ಸಂಸ್ಕಾರವೂ ವೇ|| ಸಾಣೇಹಳ್ಳಿಮಠದ ಸ್ವಾಮಿಗಳೂ [illegible] ಹಂಪಯ್ಯನವರ ಮಠದ ಶ್ರೀ [illegible]

[illegible]

ರಾದ ಶಿದ್ಧಪ್ಪದೇವರು ಈ ಉಭಯಮಠದ ಅಗಮಿಕರ ಪೌರೋಹಿತ್ಯದಿಂದ ವಿಧ್ಯುಕ್ತವಾಗಿಯೂ ವಿಜ್ರಂಭಣೆಯಿಂದಲೂ ನಡೆಸಲ್ಪಟ್ಟು ಶ್ರೀ ವಿಶ್ವೇಶ್ವರಸ್ವಾಮಿಯೆಂದು ನಾಮಕರಣವು ಮಾಡಲ್ಪಟ್ಟಿತು. ಈ ದೇವತೋತ್ಸವಕ್ಕೆ ಬಂದಿದ್ದ ಜನರಿಗೆಲ್ಲಾ ಮಹಾಗಣಾರಾಧನೆಯು ಅತಿ ವಿಚಕ್ಷಣೆಯಿಂದ ನಡಿಸಲ್ಪಟ್ಟಿತು. ಸದರೀ ಗ್ರಾಮದ ಶ್ರೀಮಠದ ಶಿವಶ್ರೀಸ್ವಾಮಿಗಳೂ ಮಧುರೆಮಠದ ಶ್ರೀ ನೀಲಕಂಠಪ್ಪನವರು ಸಹ ಕಾರ್ಯದರ್ಶಿಗಳಾಗಿಯೂ ಸದರೀ ಗ್ರಾಮದ ಪಾಟೀಲ್ ಸಣ್ಣರಂಗಪ್ಪನವರ ಸಿದ್ಧಪ್ಪನವರು ದೊಡ್ಡಸಿದ್ದಪ್ಪನವರು ಬೈ|| ದೊಡ್ಡಸಿದ್ದಪ್ಪನವರು ಸಣ್ಣಕೆರೆ ಪಾಟೀಲ್ ಶೆಟ್ಟಪ್ಪನವರು ಪೊಂಬರಿದ ಲಿಂಗಪ್ಪನವರು ಇನ್ನುಮುಂತಾದ ವೀರಶೈವ ಸದ್ಭಕ್ತಾದಿಗಳೂ ಧರ್ಮದರ್ಶಿಗಳಾಗಿಯೂ ನಿಂತಿದ್ದರು. ಇದಕ್ಕಾಗಿ ಅನೇಕ ಕಡೆಗಳ ಭಕ್ತಾದಿಗಳೂ ಸೇರಿ ಸುಮಾರು 3-4 ಸಹಸ್ರ ಜನಸಂದಣೆಯು ಸೇರಿತ್ತು. ಇಂಥ ಮಹತ್ತರವಾದ ಸ್ವಾಮಿಕಾರ್ಯದಲ್ಲಿ ನಮ್ಮ ಮೈಸೂರು ಕ್ಕೆ|| ಯುವರಾಜ್ ವೀರಸಂಗಪ್ಪನವರ ಹೆಸರಿನ ಮೇಲೂ (2-0-0) ಶ್ರೀಮದ್ವೀರಶೈವ ವಿದ್ಯಾಭಿವೃದ್ಧಿ ಫಂಡಿಗೂ (4-0-0) ಸಹಾ ಆರುರೂಪಾಯಿಗಳನ್ನು ತೆಗೆದು ಮೇಲ್ಕಂಡ ಶಿರಾ|| ಹೇ|| ಮ|| ಪಟ್ಟಾಧ್ಯಕ್ಷರಾದ ಶಿದ್ಧಪ್ಪದೇವರ ವಶಕ್ಕೆ ಕೊಟ್ಟು ಮಹತ್ಕಾರ್ಯವು ಬಲಬಾಸ್ತು ಮಾಡಲ್ಪಟ್ಟಿತು. ಇಂಥಾ ಶಿವಪ್ರತಿಷ್ಠೆಯನ್ನು ಅತಿ ವಿಜ್ರಂಭಣೆಯಿಂದಲೂ ಬಹುವೈಭವದಿಂದಲೂ ಭಕ್ತಿವಿಶ್ವಾಸದಿಂದಲೂ ನಡಿಸಿದ ಶ್ರೀಮತ್ ವೀರಶೈವ ಭಕ್ತಾದಿಗಳಿಗೂ ಇವರ ಬಂಧುಮಿತ್ರಕುಟುಂಬದವರಿಗೂ ಆಯುರಾರೋಗ್ಯ ಅಷ್ಟೈಶ್ವರ್ಯಾದಿ ಭಾಗ್ಯಗಳನ್ನಿತ್ತು ದೇವರು ಕಾಪಾಡಲೆಂದು ಶ್ರೀ ಪಾರ್ವತೀ ಪರಮೇಶ್ವರರನ್ನು ಸ್ಮರಿಸುತ್ತೇನೆ. ಚಂದಾದಾರ್.

[ಶಿರಾಹೋಳ್ಳಿ ಅಪ್ಪಯ್ಯನವರ ಮಠದ ಪಟ್ಟಾಧ್ಯಕ್ಷ ಶಿದ್ಧಪ್ಪದೇವರಿಂದ 2 ರೂ. ಬಂದಿದೆ.—ಸ. ಸ್ಟಾ.]

ಬಹುಮಾನವಿನಿಯೋಗ ಸಮಾರಂಭ.

ಇದೇ ಮಾರ್ಚಿ ತಿಂಗಳು 2 ನೆಯ ತಾರೀಖು ಭಾನುವಾರ ಸಾಯಂಕಾಲ 5½ ಗಂಟೆಗೆ ಮದರಾಸು ತಿರುವಲ್ಲಿಕ್ಕೇಣಿ 'ಎಂಪ್ರೆಸ್' ನಾಟಕಶಾಲೆಯಲ್ಲಿ ಮೈಸೂರು ಸಂಸ್ಥಾನದ ಗುಬ್ಬಿ ನಾಟಕ ಮಂಡಲಿಯವರು, ಮದರಾಸಿನ ಕರ್ನಾಟಕ ಸಭೆಯವರ ಆಶ್ರಯದಲ್ಲಿ ಸಂಪೂರ್ಣ 'ಶ್ರೀ ಕೃಷ್ಣಲೀಲೆ' ಯನ್ನು ಪ್ರದರ್ಶಿಸಿದರು. ಸಾಮಾನ್ಯವಾಗಿ ಮದರಾಸಿನಲ್ಲಿರುವ ಕರ್ನಾಟಕರೆಲ್ಲರೂ ಸಕುಟುಂಬಪರಿವಾರವಾಗಿ ನಾಟಕಕ್ಕೆ ದಯಮಾಡಿಸಿದ್ದರು. ಈ ಸಮಾರಂಭದಲ್ಲಿ, ಕಳೆದ ಫೆಬ್ರವರಿ 2ನೇ ತಾರೀಖು ಭಾನುವಾರ 'ಕೊಹಿನೂರು' ಭವನದಲ್ಲಿ ನೆರೆದಿದ್ದ ಕನ್ನಡಿಗರ ಸಂತೋಷಕೂಟದಲ್ಲಿ ಸೂಚಿಸಿದ್ದ ಪ್ರಕಾರ ಮದರಾಸಿನ ಕರ್ನಾಟಕ ಸಭೆಯವರು ಮೇಲ್ಕಂಡ ನಾಟಕ ಮಂಡಲಿಯ ಮುಖಂಡರಾದ ಮ|| ರಾ|| ವಿನೋದ ರತ್ನಾಕರ ವೀರಣ್ಣನವರಿಗೆ ಮರ್ಯಾದಾರ್ಥವಾಗಿ ಸುಂದರವಾದ ಒಂದು ದೊಡ್ಡ ಬೆಳ್ಳಿಯ ಬಟ್ಟಲನ್ನು (Trophy cup) ಮೇಲ್ಕಂಡ ಸಂತೋಷಕೂಟದ ಕಾಲದಲ್ಲಿ ಕರ್ನಾಟಕ ಸಭೆಯ ಸದಸ್ಯರ ಮತ್ತು ಮಿತ್ರಮಂಡಲಿಯವರ ನಡುವೆ ಮ|| ಗಳಾದ ವೀರಣ್ಣನವರೂ ಮ್ಯಾನೇಜರು ನಾಗೇಶರಾಯರೂ ಕುಳಿತು ತೆಗೆದಿದ್ದ (ಫೋಟೋವಿನ) ಛಾಯಾಪಟದ ಚಲುವಾದ ಚೌಕಟ್ಟಿನಲ್ಲಿ ಹಾಕಿದ ಒಂದು ಪ್ರತಿಯನ್ನು ಪಾರಿತೋಷಿಕವಾಗಿ ದಯಪಾಲಿಸಿದರು. ಕರ್ನಾಟಕ ಸಭೆಯ ಅಧ್ಯಕ್ಷರಾದ ಮ|| ರಾ|| ರಾವ್‌ಸಾಹೇಬ್ ಡಾ. ಯು. ರಾಮರಾಯರವರ ಅನಿವಾರ್ಯನಿಮಿತ್ತವಾದ ಗೈರುಹಾಜರಿಯ ದೆಸೆಯಿಂದ ವಯೋವೃದ್ಧರೂ ಜ್ಞಾನವೃದ್ಧರೂ ಪೂಜ್ಯರೂ ಆದ ಮೈಸೂರು ಸರ್ಕಾರದ ರಿ|| ಚೀಫ್‌ಇಂಜನೀಯರ್ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾವ್ ಬಿ. ಎಸ್. ಸಿ. ಎಲ್. ಸಿ. ಇ. ಅವರು ಆಶೀರ್ವಾದರೂಪವಾದ ಚಿಕ್ಕದೊಂದು ಭಾಷಣವನ್ನು ಮಾಡಿ ಈ ಪಾರಿತೋಷಿಕಗಳನ್ನು ಕರ್ನಾಟಕ ಸಭೆಯ ಪರವಾಗಿ ಕೊಟ್ಟರು. ಮತ್ತು ಮ|| ವೀರಣ್ಣನವರು ತಮ್ಮ ಮತ್ತು ತಮ್ಮ ಕಂಪೆನಿಯವರ ಕೃತಜ್ಞತೆಯನ್ನು ತೋರ್ಪಡಿಸಿ ಅದನ್ನು ಅಂಗೀಕರಿಸಿದರು. ಇದೇ ಸಮಯದಲ್ಲಿ ಸದರಿ ಕರ್ನಾಟಕ ಸಭೆಯ ಕಾರ್ಯದರ್ಶಿಗಳಾದ ಗವರ್ನ್ಮೆಂಟು ಸೀನಿಯರ್ ಟ್ರಾನ್ಸ್‌ಲೇಟರ್ ಮ|| ರಾ|| ಬಿ. ರಾಮರಾವ್, ಎಂ.ಎ. ಎಲ್ ಎಲ್.ಬಿ., ಅವರು ಆ ದಿವಸ ಶ್ರೀ ಕೃಷ್ಣವೇಷವನ್ನು ವಹಿಸಿದ್ದ ಚಿ|| ಟಿ. ಕೃಷ್ಣಸಿಂಗ್ ಎಂಬ ಸುಮಾರು 12 ವರ್ಷ ವಯಸ್ಸಿನ ಬಾಲಕನ ಕೌಶಲ್ಯಕ್ಕೂ ಅಭಿನಯ ಚಾತುರ್ಯಕ್ಕೂ ಮೆಚ್ಚಿ ತಮ್ಮ ಸ್ವಂತ ವೆಚ್ಚದಿಂದ ಸದರೀ ಬಾಲಕನಿಗೆ ಒಂದು ಚಿನ್ನದ ಪದಕವನ್ನು ಅನುಗ್ರಹಿಸಿದರು. ನಾಟಕವು ಬಹು ಶ್ಲಾಘ್ಯರೀತಿಯಿಂದ ಅಭಿನಯಿಸಲ್ಪಟ್ಟು ಸಮಸ್ತರಿಗೂ ಆತ್ಮಾನಂದವನ್ನುಂಟುಮಾಡಿತು.

ಪ್ರತ್ಯಕ್ಷದರ್ಶಿ.

ಉಜ್ಜಯನಿ ಶ್ರೀ ಸಿದ್ಧಲಿಂಗಸ್ವಾಮಿಗಳ ಅಭಿಪ್ರಾಯ.

ನಾನು ನನ್ನ ಸಹಜ ಕೆಲಸದ ನಿಮಿತ್ತ ತಾ|| 4-3-24ನೇ ಮಂಗಳವಾರ ದಿವಸ ಶಿವಮೊಗ್ಗಾ ಡಿ|| ಹೊನ್ನಾಳಿ ಗ್ರಾಮಕ್ಕೆ ಹೋಗಿದ್ದೆನು. ಅದೇದಿವಸ ಆ ಗ್ರಾಮದಲ್ಲಿ ಉಜ್ಜಯನಿ ಸಂಸ್ಥಾನದ ಶ್ರೀ ಸಿದ್ಧಲಿಂಗಸ್ವಾಮಿಗಳ ಮುಕ್ಕಾಮ್ ಇದ್ದ ಕಾರಣ, ನಾನು ದರ್ಶನಕ್ಕೆ ಸುಮಾರು ರಾತ್ರಿ 8 ಗಂಟೆಗೆ ಹೋದೆನು. ಸ್ವಾಮಿಗಳ ಸನ್ನಿಧಿಯಲ್ಲಿ ಮ|| ಗದ್ದಬಸಪ್ಪನವರು, ಎಡೆಹಳ್ಳಿ ಮ|| ಶಾಂತಪ್ಪಶೆಟ್ಟರು, ಹೊನ್ನಾಳಿ ಮ|| ಕುಂಕೋದ ಬಸವಣ್ಣೆಪ್ಪನವರು ಮೊದಲಾದ ಸದ್ಗೃಹಸ್ಥರು ನನ್ನಂತೆ ದರ್ಶನಕ್ಕೆ ಬಂದಿದ್ದರು. ಮ|| ಗದ್ದಬಸಪ್ಪನವರು ನಮ್ಮ ಸಮಾಜದಲ್ಲಿ ಪ್ರಚಲಿತಗಳಾಗಿ ನಡೆಯುವ ಷಟ್‌ಸ್ಥಲ ಗುರುಸ್ಥಲದ ವಿಷಯವಾಗಿ ಕೆಲವು ಪ್ರಶ್ನೆಗಳನ್ನು ಮಾಡಿದರು. ಸುಮಾರು ಎರಡು ತಾಸಿನವರೆಗೆ ಸ್ವಾಮಿಗಳೊಡನೆ ಚರ್ಚೆಯು ನಡೆಯಿತು. ಆ ಕಾಲಕ್ಕೆ ಶ್ರೀ ಸಿದ್ಧಲಿಂಗಸ್ವಾಮಿಗಳ ಮುಖದಿಂದ ಹೊರಟ ಅಭಿಪ್ರಾಯವನ್ನು ಸಮಾಜದ ಹಿತಕ್ಕಾಗಿ ಕೊಡುವದು ಅವಶ್ಯಕೆಂಡದ್ದರಿಂದ ಇಲ್ಲಿ ಕೊಡುತ್ತೇನೆ. ಬಸವೇಶ್ವರಾದಿ ಪ್ರಮಥರ ವಿಷಯದಲ್ಲಿ ತಮ್ಮ ಅಸೂಯೆಯಾಗಲೀ ಅಥವಾ ಭಿನ್ನಾಭಿಪ್ರಾಯವಾಗಲೀ ಸರ್ವಥಾ ಇರುವುದಿಲ್ಲವೆಂತಲೂ ಮತ್ತು ತಾವು ಕಾಶೀನಾಥನೇ ಮೊದಲಾದ ಅರ್ವಾಚೀನ ಪಂಡಿತರ ಪ್ರಮುಖರಲ್ಲವೆಂತಲೂ ಅವರ ಅಭಿಪ್ರಾಯಕ್ಕೆ ಪೂರಾ ಒಳಪಟ್ಟವರಲ್ಲವೆಂತಲೂ ತಮ್ಮ ಮತ್ತು ಅವರ ಅಭಿಪ್ರಾಯಗಳಲ್ಲಿ ಬಹಳ ವ್ಯತ್ಯಾಸಗಳುಂಟೆಂತಲೂ ಪ್ರಮಥರ ವಿಷಯದಲ್ಲಿ ಈ ಪ್ರಕಾರ ಅಭಿಪ್ರಾಯಪಟ್ಟರು. ಇನ್ನು ಗುರುಸ್ಥಲ ಷಟ್‌ಸ್ಥಲ (ವಿರಕ್ತರ) ವಿಷಯದಲ್ಲಿ ಮಾತ್ರ ಗುರುಸ್ಥಲವೇ ಶಾಸ್ತ್ರವಿಹಿತ ಮಾರ್ಗದಿಂದ ಶ್ರೇಷ್ಠವಾದದ್ದೆಂತಲೂ ಅದ್ದರಿಂದ ವಿರಕ್ತರು ಯಾವಾಗಲೂ ಗುರುವರ್ಗದ ಶಿಷ್ಯರಾಗಿರಬೇಕೆಂತಲೂ ಇವೆರಡು ವರ್ಗಗಳಲ್ಲಿ ಸಂಬಂಧವಿರುವದಾದರೆ ಗುರು ಶಿಷ್ಯರ ಸಂಬಂಧವಿ ಂತಲೂ ಅಭಿಪ್ರಾಯಪಟ್ಟರು. ಮತ್ತು ಈ ವಿಷಯವನ್ನು ನಿರ್ಣಯಿ ಬಗ್ಗೆ ತಮ್ಮ ಪಂಚಪೀಠಗಳಿಂದಲೂ ಒಪ್ಪೊಪ್ಪ ಪಂಡಿತರನ್ನು ಜ್ಞಮಾಡುವದಕ್ಕಾಗಿ ಕೊಡಲಿಕ್ಕೆ ಸಿದ್ಧರಿರುತ್ತೇವೆಂತಲೂ ಇದಕ್ಕೆ ಯೊಕ್ಷದವರೂ ಒಪ್ಪಿ ತಮ್ಮ ಪಕ್ಷದಿಂದ ಪಂಡಿತರನ್ನು ನೇಮಿಸಿ ಮಾಡುವದಕ್ಕೆ ಸಭೆ ನೆರವೇರಿಸುವದಾದರೆ ಅಲ್ಲಿ ನಿರ್ಣಯಿಯಲಿಕ್ಕೆ ತಾವು ಸಿದ್ಧರಿರುತ್ತೇವೆಂತಲೂ, ಇಷ್ಟೇ ಅಲ್ಲ ಒಂದು ಕ್ತ ವರ್ಗವೇ ಅಧಿಕ ವರ್ಗವೆಂದು ಗುರುವರ್ಗವು ಆ ವರ್ಗದ ಶಿಷ್ಯತ್ವವನ್ನು ಸ್ವೀಕರಿಸುವದೇ ಯೋಗ್ಯವೆಂದೂ ಸಿದ್ಧವಾದಲ್ಲಿ ತಾವು ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ ಆ ಶೀರ್ಷಿನ ಪ್ರಕಾರ ನಡೆಯಲಿಕ್ಕೆ ಸಿದ್ಧರಿರುತ್ತೇವೆಂತಲೂ ಅಲ್ಲಿ ಕುಳಿತ 70-80 ಪ್ರಮುಖಜನರ ಸಮಕ್ಷಮ ಕೈಯ್ಯೆತ್ತಿ ಸಾರಿ ಹೇಳಿದರು. ಇದನ್ನು ಕೇಳಿ ಮ|| ಶಾಂತಪ್ಪಶೆಟ್ಟರು ಈ ಪ್ರಕಾರ ನಿರ್ಣಯವಾಗುವವರೆಗೂ ಲಿಂಗಾಯತ ಸಮಾಜಕ್ಕೆ ಬಹಳ ಕಷ್ಟ ಉಂಟೆಂದು ಉದ್ಗಾರ ತೆಗೆದರು. ಆದರೆ ಉಜ್ಜಯನಿ ಸ್ವಾಮಿಗಳು ವಿರಕ್ತರ ವಿಷಯದಲ್ಲಿ ಹೇಳಿದ ಸ್ಪಷ್ಟೋಕ್ತಿಗೆ ನಾನು ಅವರನ್ನು ಅಭಿನಂದಿಸದೆ ಇರಲಾರೆನು. ಯಾಕಂದರೆ, ತಮಗೆ ನ್ಯೂನತೆಯು ಪ್ರಾಪ್ತವಾಗುವಂತಿದ್ದರೆ ವಿರಕ್ತರೆಲ್ಲರೂ ಒಕ್ಕಟ್ಟಾಗಿ ಸಿಂಹಾಸನದವರಂತೆ ತಾವೂ ಐದು ಜನ ಪಂಡಿತರನ್ನಿಟ್ಟು, ಶಾಸ್ತ್ರಾರ್ಥವನ್ನು ಮಾಡಿಸಿ, ತಮ್ಮ ಅಧಿಪತ್ಯವನ್ನು ಸಂಪಾದಿಸಿಕೊಳ್ಳುವರು, ಬೇಡಾದರೆ ಬಿಡುವರು, ಪರಂತೂ ಬಸವೇಶ್ವರಾದಿ ಪ್ರಮಥರನ್ನು ತಾವು ಸರ್ವಥಾ ನಿಂದಿಸುವದಿಲ್ಲವೆಂದು ಉಜ್ಜಯನಿ ಶ್ರೀಗಳು ಒಂದು ಕಡಿಗೆ ಹೇಳುತ್ತಾ, ಮತ್ತೊಂದು ಕಡಿಗೆ ಪ್ರಮಥದ್ವೇಷಿಗಳಾದ ಕುಬಸದ ಕಾಶೀನಾಥನೇ ಮುಂತಾದವರನ್ನು ನಿಕಟಸಂಬಂಧಿಗಳನ್ನಾಗಿ ತಮ್ಮ ಸಂಸ್ಥಾನದಲ್ಲಿ ಓಡಾಡಿಸುವ ಶ್ರೀಗಳ ಕೂಟನೀತಿಯನ್ನೂ ಸಹ ತಿಳಿಯದಷ್ಟು ಅರದಡ್ಡತನವು ನಮ್ಮ ಸಮಾಜದಲ್ಲಿ, ಇನ್ನೂ ಇರಬಹುದೇನು ?

S. R. Nesargi B.A.,
Haveri.

(ಆರೋಗ್ಯಚಂದ್ರಿಕೆಯಿಂದ.)

ಸ್ನಾನಮಾಡುವುದರಲ್ಲಿ ಕೆಲವು ಮುಖ್ಯ ನಿಯಮಗಳು.

(1) ಊಟಮಾಡಿದಮೇಲೆ ಮೂರುನಾಲ್ಕು ಘಂಟೆಗಳು ಕಳೆಯುವುದಕ್ಕೆ ಮೊದಲು ಯಾವಾಗಲೂ ತಲೆಗೆ ಸ್ನಾನಮಾಡಬಾರದು.

(2) ವಯಸ್ಸು ಕಳೆದ ಮುದುಕರು ಬಹಳ ಶೀತಲವಾದ ಅಥವಾ ಬಹಳ ಬಿಸಿಯಾದ ನೀರಿನಲ್ಲಿ ಸ್ನಾನಮಾಡಬಾರದು.

(3) ಕೆಲಸಮಾಡಿ ಬಹಳವಾಗಿ ದಣಿದು ಬಂದಿರುವಾಗ ಮತ್ತು ಚಳಿಯು ಮೈಗೆ ತಡೆಯಲಾರದ ಸ್ಥಿತಿಯಲ್ಲಿರುವಾಗ ಎಂತವರಾದರೂ ತಣ್ಣೀರಿನಲ್ಲಿ ಸ್ನಾನಮಾಡಬಾರದು.

(4) ಬಿಸಿನೀರಿನಲ್ಲಿ ಸ್ನಾನಮಾಡಿದರೂ, ಕೊನೆಯಲ್ಲಿ ಅಷ್ಟು ಬಿಸಿಯಿಲ್ಲದೆ ಉಷ್ಣಾಂಶವು ಕಡಿಮೆಯಾಗಿರುವ ನೀರಿನಲ್ಲಿ ಸ್ನಾನಮಾಡಬೇಕು.

(5) ಬಿಸಿನೀರಿನಲ್ಲಿ ಸ್ನಾನಮಾಡತಕ್ಕವರು, ಸ್ನಾನಕ್ಕೆ ಮೊದಲು ಧಾರಾಳವಾಗಿ ಬಿಸಿನೀರನ್ನು ಕುಡಿಯುವುದು ಒಳ್ಳೆಯದು.

(6) ಸ್ನಾನಕ್ಕೆ ಮೊದಲು ತಲೆಗೆ ತಣ್ಣೀರನ್ನು ಹಾಕುವುದು ಯಾವಾಗಲೂ ಒಳ್ಳೆಯದು.

(7) ಸ್ನಾನಮಾಡಿ ಎದ್ದಮೇಲೆ ಮಡಿಬಟ್ಟೆಯಿಂದ ಮೈಯನ್ನು ಚೆನ್ನಾಗಿ ತಿಕ್ಕಿ ರೋಮಕೂಪಗಳಲ್ಲಿ ತೇವ ಇಲ್ಲದಂತೆ ಒರೆಸಬೇಕು.

(8) ಸ್ನಾನವಾದ ಮೇಲೆ ಚಳಿಯಡಗಿ ಚೆನ್ನಾಗಿ ಶಾಖ ಹುಟ್ಟುವವರೆಗೆ ಮೈಯನ್ನು ಬಲವಾಗಿ ತಿಕ್ಕುತ್ತಿರಬೇಕು.

(9) ತಣ್ಣೀರಿನಲ್ಲಿ ಸ್ನಾನಮಾಡಿದ ಮೇಲೆ, ಮೈಯಲ್ಲಿ ರಕ್ತಸಂಚಾರಕ್ಕೆ ಉತ್ತೇಜನ ಕೊಡುವುದಕ್ಕಾಗಿ ಸ್ವಲ್ಪ ವ್ಯಾಯಾಮವನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಅನ್ನಪಾನಗಳ ವಿಷಯದಲ್ಲಿ ಕೆಲವು ನಿಷೇಧ ವಾಕ್ಯಗಳು.

(1) ಕಶ್ಮಲವಾದ ನೀರನ್ನು ಕುಡಿಯಬಾರದು.

(2) ಚೆನ್ನಾಗಿ ಮರಳಿಸದ ಮತ್ತು ತಣ್ಣಗಾರಿಸದ ನೀರನ್ನು ಕುಡಿಯಬಾರದು.

(3) ಊಟಮಾಡುವಾಗ ನೀರನ್ನು ಹೆಚ್ಚಾಗಿ ಕುಡಿಯಬಾರದು.

(4) ಊಟಕ್ಕೆ ಒಂದು ಗಂಟೆ ಮುಂದಾಗಿ ಆದಷ್ಟು ಹೆಚ್ಚುನೀರನ್ನು ಕುಡಿಯಲು ಮರೆಯಬಾರದು.

(5) ಕಾಫೀ ಅಥವಾ ಟೀ, ಇವುಗಳನ್ನು ಕುಡಿಯುವ ವಾಡಿಕೆ ಮಾಡಬಾರದು.

(6) ನಿಶಾ ಹುಟ್ಟಿಸುವ ಮದ್ಯರಸಗಳನ್ನು ಕುಡಿಯಬಾರದು.

(7) ಪ್ರತಿದಿನವೂ ತಕ್ಕಷ್ಟು ಹಾಲನ್ನು ಕುಡಿಯದೆ ಇರಬಾರದು.

(8) ಮಕ್ಕಳು ಹುಟ್ಟಿದ 8, 9 ತಿಂಗಳವರೆಗೆ ಹಾಲು ಮತ್ತು ನೀರು ಇವುಹೊರತು ಬೇರೊಂದನ್ನೂ ಕುಡಿಸಬಾರದು.

(9) ಎಳೆಯ ಕೂಸುಗಳಿಗೆ ಮೊಲೆ ಹಾಲೊಂದನ್ನು ಹೊರತು ಬೇರೊಂದನ್ನೂ ಕುಡಿಸಬಾರದು.

(10) ನಡುರಾತ್ರಿಯಲ್ಲಿ ಶಿಶುಗಳಿಗೆ ಹಾಲುಣಿಸಬಾರದು. (ಸ್ವಲ್ಪ ನೀರನ್ನು ಕುಡಿಸಬಹುದು.)

(11) ಅಂಗಡಿಗಳಲ್ಲಿ ಮಾರುವ ಸೋಡಾ, ಲೆಮೆನೇಡ್, ಲೈಮ್‌ಜೂಯಿಸ್ ಮುಂತಾದ ದ್ರವಗಳನ್ನು ಕುಡಿಯಬಾರದು.

(12) ದಿನಕ್ಕೆ ಮೂರು ವೇಳೆಗಿಂತ ಹೆಚ್ಚುಸಲ ಊಟ ಮಾಡಬಾರದು. (ಆ ಮೂರರಲ್ಲಿಯೂ ಒಂದು ಭೋಜನವು ಬಹಳ ಮಿತವಾಗಿರಬೇಕು.)

(13) ಸಾಧಾರಣವಾದ ಮತ್ತು ಪುಷ್ಟಿಕರವಾದ ಆಹಾರಗಳನ್ನುಹೊರತು ಬೇರೆ ಆಹಾರಪದಾರ್ಥಗಳಿಗೆ ಆಶಿಸಬಾರದು.

(14) ಆತುರದಿಂದ ಊಟಮಾಡಬಾರದು.

(15) ಆಹಾರಪದಾರ್ಥಗಳನ್ನು ಚೆನ್ನಾಗಿ ಅಗಿಯದೆ ನುಂಗಬಾರದು.

(16) ಅಪಕ್ವವಾದ ಮತ್ತು ಅತಿಪಕ್ವವಾದ ಆಹಾರವನ್ನು ತಿನ್ನಬಾರದು.

(17) ಹದಿನೈದುದಿನಗಳಿಗೊಮ್ಮೆ ಉಪವಾಸವಿರುವುದನ್ನು ಮರೆಯಬಾರದು,

(18) ಸೊಪ್ಪು, ಕಾಯಿಪಲ್ಯಗಳು, ಧಾನ್ಯಗಳು ಇವುಗಳನ್ನು ಅನಾದರಿಸಬಾರದು.

(19) ಮಾಂಸವನ್ನು ತಿನ್ನಬಾರದು.

(20) ಶುದ್ಧವಲ್ಲದ ಎಣ್ಣೆ, ತುಪ್ಪ ಮುಂತಾದುವುಗಳನ್ನು ಸೇವಿಸಬಾರದು.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲು ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರವಾಡಿದಂತಾಗುತ್ತ ಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರದ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—6—0. 25 ಬಾಟ್ಲುಗಳಿಗೆ 4—8—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾರಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—26] ಮೈಸೂರು.

೧೯೨೪ ನೆಯ ಇಸವಿ ಮಾರ್ಚಿ ತಾ|| ೧೬ ರಿಂದ ೧೯೨೪ ನೆಯ ಇಸವಿ ಮಾರ್ಚಿ ತಾ|| ೨೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಫಾಲ್ಗುಣಶುದ್ಧ ದಶಮಿಯಿಂದ ಫಾಲ್ಗುಣ ಬಹುಳ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ದಿನಮಾನ
16	[1] ಭಾನು	ದಶ	11.9	ಪುನ	14.5	4
17	[2] ಸೋಮ	ಏಕಾ	13.17	ಪುಷ್ಯ	17.36	5
18	[3] ಮಂಗಳ	ದ್ವಾದ	14.48	ಆಶ್ಲೆ	20.2	6
19	[4] ಬುಧ	ತ್ರಯೋ	14.4	ಮಖ	21.16	7
20	[5] ಗುರು	ಚತು	12.35	ಪುಬ್ಬ	20.17	8
21	ಶುಕ್ರ	ಪೌರ್ಣ	9.51	ಉತ್ತ	20.3	9
22	ಶನಿ	ಪಾಡ್ಯ	5.53	ಹಸ್ತ	17.4	10

(1) ನಂಜನಗೂಡಿನಲ್ಲಿ ಶ್ರೀಕಂಠಮುಡಿ ಉತ್ಸವ. (2) ಸರ್ವತ್ರ ಏಕಾದಶಿ, ಮೇಲುಕೋಟೆಯಲ್ಲಿ ವೈರಮುಡೀ ಉತ್ಸವ. (3) ಪ್ರದೋಷ, ಚಂದ್ರಪುರದ ಚಂದ್ರಮೌಳೀಶ್ವರರಥ. (4) ನಂಜನಗೂಡು ಶ್ರೀಕಂಠೇಶ್ವರಸ್ವಾಮಿರಥ, ತಿರಮಕೂಡ್ಲು ಅಗಸ್ತ್ಯೇಶ್ವರರಥ. (5) ಕಾಮದಹನ, ಹೋಳಿಹಬ್ಬ.

ಮೈಸೂರು: ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರು ಸ್ಟಾರ್

REGISTERED NO. M. 12.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವೆಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಯೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೪-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಮಾರ್ಚಿ ತಾರೀಖು ೨೩ ನೆಯ ಭಾನುವಾರ. [ಸಂಚಿಕೆ ೧೨

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಪ್ಲುಯೆನ್ಜಾ	ಗಳನ್ನು ಗುಣಪಡಿಸುತ್ತವೆ·
ಪ್ಲೇಗುಜ್ವರ	

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. ೬ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
8 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾ. ಜೆ. ಬಿ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಗೃಹಸ್ಥರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಡಬ್ಬಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—30] ಪೋ. ಬಾ. ೫೧೦, ಮದರಾಸು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಳ ವೀರಶೈವ ವಿವಾಹವಿಧಿ।	೦—೮—೦	೦—೧೩—೦
ಲವಿದ್ಯಾ	೦—೪—೦	೦—೯—೦
ರುಷೀಲಚರಿತ್ರ	೦—೫—೦	೦—೧೦—೦
ವಾಸಿ	೦—೪—೦	೦—೯—೦
ಸಂಚಿಕೆ	೦—೪—೦	೦—೯—೦
[illegible]	೦—೧—೦	೦—೬—೦
[illegible]	೦—೮—೦	೦—೧೩—೦

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್‌ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—16] ಹೊಸಮಠ, ಮೈಸೂರು.

ಗತ್ತಿನ ನಿಜವಾದ] ಅಗತ್ಯಬಿದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ಧಿಕ್ಕಾರ ಮಾಡಿದರೆ ಠುಕ್ಕರಸಿ ಹೋದೀರಿ.

ವಜ್ರಾಂಗಸುಂದರಪಾಕ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಕಾಲ್ಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವಿ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ತಮಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಥಲ್ಯಾಗೊಂದ, ಪಂಚಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ನಾಗೇಂದ್ರಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಬಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾಲಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಅದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೪೨ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಫುಲ್ ಅಡ್ರೆಸ್ ಪೋಸ್ಟಾಫೀಸ್ ಸಹ ಬರೆಯಿರಿ.

[50—33] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.
ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.
ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.
ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.
ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.
ಪಂಚಶ್ಲೋಕೀ ಬೆಲೆ ೧—೦—೦.
ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.
ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿ
[50—11] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ :—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—18] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಕಡ್ಡಿ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿ ಇರುತ್ತೇನೆ. ಅಪೇಕ್ಷೆಯುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತೀರೆಂದು ಕೋರುತ್ತೇನೆ.

ಊದುಬತ್ತಿ ಷಾಪ್, ಎಸ್. ಕಳ್ಳಪ್ಪ,
7 ಬೆಂಗಳೂರು ಸಿಟಿ ದೊಡ್ಡಪ್ಯಾಟೆ.

ರಾದ ಶಿದ್ಧಪ್ಪದೇವರು ಈ ಉಭಯಮಠದ ಅಗಡಿಮಠದ ಪೌರೋಹಿತ್ಯದಿಂದ ವಿಧ್ಯುಕ್ತವಾಗಿಯೂ ವಿಜೃಂಭಣೆಯಿಂದಲೂ ನಡೆಸಲ್ಪಟ್ಟು ಶ್ರೀ ವಿಶ್ವೇಶ್ವರಸ್ವಾಮಿಯೆಂದು ನಾಮಕರಣವು ಮಾಡಲ್ಪಟ್ಟಿತು. ಈ ದೇವಕೋತ್ಸವಕ್ಕೆ ಬಂದಿದ್ದ ಜನರಿಗೆಲ್ಲಾ ಮಹಾಗಣಾರಾಧನೆಯು ಅತಿ ವಿಚಕ್ಷಣೆಯಿಂದ ನಡಿಸಲ್ಪಟ್ಟಿತು. ಸದರೀ ಗ್ರಾಮದ ಶ್ರೀಮಠದ ಶಿಪ್ಪೇಸ್ವಾಮಿಗಳೂ ಮಧುರೆಮಠದ ಶ್ರೀ ನೀಲಕಂಠಪ್ಪನವರು ಸಹ ಕಾರ್ಯದರ್ಶಿಗಳಾಗಿಯೂ ಸದರೀ ಗ್ರಾಮದ ಪಾಟೀಲ್ ಸಣ್ಣರಂಗಪ್ಪನವರ ಸಿದ್ಧಪ್ಪನವರು ದೊಡ್ಡಸಿದ್ಧಪ್ಪನವರು ಚೈ|| ದೊಡ್ಡಸಿದ್ಧಪ್ಪನವರು ಸಣ್ಣಕೆರೆ ಪಾಟೀಲ್ ಶೆಟ್ಟಪ್ಪನವರು ಪೋರಾಬರಿದ ಲಿಂಗಪ್ಪನವರು ಇನ್ನು ಮುಂತಾದ ವೀರಶೈವ ಸದ್ಭಕ್ತಾದಿಗಳೂ ಧರ್ಮದರ್ಶಿಗಳಾಗಿಯೂ ನಿಂತಿದ್ದರು. ಇದಕ್ಕಾಗಿ ಅನೇಕ ಕಡೆಗಳ ಭಕ್ತಾದಿಗಳೂ ಸೇರಿ ಸುಮಾರು 3-4 ಸಹಸ್ರ ಜನಸಂದಣಿಯು ಸೇರಿತ್ತು. ಇಂಥ ಮಹತ್ತರವಾದ ಸ್ವಾಮಿಕಾರ್ಯದಲ್ಲಿ ನಮ್ಮ ಮೈಸೂರು ಕೈ|| ಯಜಮಾನ್ ವೀರಸಂಗಪ್ಪನವರ ಹೆಸರಿನ ಮೇಲೂ (2-0-0) ಶ್ರೀಮದ್ವೀರಶೈವ ವಿದ್ಯಾಭಿವೃದ್ಧಿ ಫಂಡಿಗೂ (4-0-0) ಸಹಾ ಆರುರೂಪಾಯಿಗಳನ್ನು ತೆಗೆದು ಮೇಲ್ಕಂಡ ಶಿರಾ|| ಹೇ|| ಮ|| ಪಟ್ಟಾಧ್ಯಕ್ಷರಾದ ಶಿದ್ಧಪ್ಪದೇವರ ವಶಕ್ಕೆ ಕೊಟ್ಟು ಮಹತ್ಕಾರ್ಯವು ಬರಖಾಸ್ತು ಮಾಡಲ್ಪಟ್ಟಿತು. ಇಂಥಾ ಶಿವಪ್ರತಿಷ್ಠೆಯನ್ನು ಅತಿ ವಿಜೃಂಭಣೆಯಿಂದಲೂ ಬಹು ವೈಭವದಿಂದಲೂ ಭಕ್ತಿವಿಶ್ವಾಸದಿಂದಲೂ ನಡಿಸಿದ ಶ್ರೀಮತ್ ವೀರಶೈವ ಭಕ್ತಾದಿಗಳಿಗೂ ಇವರ ಬಂಧುಮಿತ್ರಕುಟುಂಬದವರಿಗೂ ಆಯುರಾರೋಗ್ಯ ಐಶ್ವರ್ಯಾದಿ ಭಾಗ್ಯಗಳನ್ನಿತ್ತು ದೇವರು ಕಾಪಾಡಲೆಂದು ಶ್ರೀ ಪಾರ್ವತೀ ಪರಮೇಶ್ವರರನ್ನು ಸ್ಮರಿಸುತ್ತೇನೆ. ಚಂದಾದಾರ್.

[ಶಿರಾಹೋಳ್ಳಿ ಅಜ್ಜಯ್ಯನವರ ಮಠದ ಪಟ್ಟಾಧ್ಯಕ್ಷ ಶಿದ್ಧಪ್ಪದೇವರಿಂದ 2 ರೂ. ಬಂದಿದೆ—ಸಂ ಸ್ಟಾ.]

ಬಹುಮಾನವಿನಿಯೋಗ ಸಮಾರಂಭ.

ಇದೇ ಮಾರ್ಚಿ ತಿಂಗಳು 2 ನೆಯ ತಾರೀಖು ಭಾನುವಾರ ಸಾಯಂಕಾಲ 5½ ಗಂಟೆಗೆ ಮದರಾಸು ತಿರುವಲ್ಲಿಕ್ಕೇಣಿ 'ಎಂಪ್ರೆಸ್' ನಾಟಕಶಾಲೆಯಲ್ಲಿ ಮೈಸೂರು ಸಂಸ್ಥಾನದ ಗುಬ್ಬಿ ನಾಟಕ ಮಂಡಲಿಯವರು, ಮದರಾಸಿನ ಕರ್ನಾಟಕ ಸಭೆಯವರ ಆಶ್ರಯದಲ್ಲಿ ಸಂಪೂರ್ಣ 'ಶ್ರೀ ಕೃಷ್ಣಲೀಲೆ' ಯನ್ನು ಪ್ರದರ್ಶಿಸಿದರು. ಸಾಮಾನ್ಯವಾಗಿ ಮದರಾಸಿನಲ್ಲಿರುವ ಕರ್ನಾಟಕರೆಲ್ಲರೂ ಸಕುಟುಂಬಪರಿವಾರವಾಗಿ ನಾಟಕಕ್ಕೆ ದಯಮಾಡಿಸಿದ್ದರು. ಈ ಸಮಾರಂಭದಲ್ಲಿ, ಕಳೆದ ಫೆಬ್ರವರಿ 2ನೇ ತಾರೀಖು ಭಾನುವಾರ 'ಕೊಹಿನೂರು' ಭವನದಲ್ಲಿ ನೆರೆದಿದ್ದ ಕನ್ನಡಿಗರ ಸಂತೋಷ ಕೂಟದಲ್ಲಿ ಸೂಚಿಸಿದ್ದ ಪ್ರಕಾರ ಮದರಾಸಿನ ಕರ್ನಾಟಕ ಸಭೆಯವರು ಮೇಲ್ಕಂಡ ನಾಟಕ ಮಂಡಲಿಯ ಮುಖಂಡರಾದ ಮ|| ರಾ|| ವಿನೋದ ರತ್ನಾಕರ ವೀರಣ್ಣನವರಿಗೆ ಮರ್ಯಾದಾರ್ಥವಾಗಿ ಸುಂದರವಾದ ಒಂದು ದೊಡ್ಡ ಬೆಳ್ಳಿಯ ಬಟ್ಟಲನ್ನೂ (Trophy cup) ಮೇಲ್ಕಂಡ ಸಂತೋಷಕೂಟದ ಕಾಲದಲ್ಲಿ ಕರ್ನಾಟಕ ಸಭೆಯ ಸದಸ್ಯರ ಮತ್ತು ಮಿತ್ರ ಮಂಡಲಿಯವರ ನಡುವೆ ಮ|| ಗಳಾದ ವೀರಣ್ಣನವರೂ ಮ್ಯಾನೇಜರು ನಾಗೇಶರಾಯರೂ ಕುಳಿತು ತೆಗೆದಿದ್ದ (ಫೋಟೋದಿನ) ಛಾಯಾಪಟದ ಚಲುವಾದ ಚೌಕಟ್ಟಿನಲ್ಲಿ ಹಾಕಿದ ಒಂದು ಪ್ರತಿಯನ್ನು ಪಾರಿತೋಷಿಕವಾಗಿ ದಯಪಾಲಿಸಿದರು. ಕರ್ನಾಟಕ ಸಭೆಯ ಅಧ್ಯಕ್ಷರಾದ ಮ|| ರಾ|| ರಾವ್‌ರಾಹೇಬ್ ಡಾ. ಯು. ರಾಮರಾಯರವರ ಅನಿವಾರ್ಯನಿಮಿತ್ತವಾದ ಗೈರುಹಾಜರಿಯ ದೆಸೆಯಿಂದ ವಯೋವೃದ್ಧರೂ ಜ್ಞಾನವೃದ್ಧರೂ ಪೂಜ್ಯರೂ ಆದ ಮೈಸೂರು ಸರ್ಕಾರದ ರಿ|| ಚೀಫ್‌ಇಂಜನೀಯರ್ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾವ್ ಬಿ. ಎಸ್. ಸಿ. ಎಲ್. ಸಿ. ಇ. ಅವರು ಆಶೀರ್ವಾದರೂಪವಾದ ಚಿಕ್ಕದೊಂದು ಭಾಷಣವನ್ನು ಮಾಡಿ ಈ ಪಾರಿತೋಷಿಕಗಳನ್ನು ಕರ್ನಾಟಕ ಸಭೆಯ ಪರವಾಗಿ ಕೊಟ್ಟರು. ಮತ್ತು ಮ|| ವೀರಣ್ಣನವರು ತಮ್ಮ ಮತ್ತು ತಮ್ಮ ಕಂಪೆನಿಯವರ ಕೃತಜ್ಞತೆಯನ್ನು ತೋರ್ಪಡಿಸಿ ಅದನ್ನು ಅಂಗೀಕರಿಸಿದರು. ಇದೇ ಸಮಯದಲ್ಲಿ ಸದರಿ ಕರ್ನಾಟಕ ಸಭೆಯ ಕಾರ್ಯದರ್ಶಿಗಳಾದ ಗವರ್ನಮೆಂಟು ಸೀನಿಯರ್ ಟ್ರಾನ್ಸ್‌ಲೇಟರ್ ಮ|| ರಾ|| ಬಿ. ರಾಮರಾವ್, ಎಂ.ಎ. ಎಲ್ ಎಲ್.ಬಿ., ಅವರು ಆ ದಿವಸ ಶ್ರೀ ಕೃಷ್ಣವೇಷವನ್ನು ವಹಿಸಿದ್ದ ಚಿ|| ಟಿ. ಕೃಷ್ಣಸಿಂಗ್ ಎಂಬ ಸುಮಾರು 12 ವರ್ಷ ವಯಸ್ಸಿನ ಬಾಲಕನ ಕೌಶಲ್ಯಕ್ಕೂ ಅಭಿನಯ ಚಾತುರ್ಯಕ್ಕೂ ಮೆಚ್ಚಿ ತಮ್ಮ ಸ್ವಂತ ವೆಚ್ಚದಿಂದ ಸದರೀ ಬಾಲಕನಿಗೆ ಒಂದು ಚಿನ್ನದ ಪದಕವನ್ನು ಅನುಗ್ರಹಿಸಿದರು. ನಾಟಕವು ಬಹು ಶ್ಲಾಘ್ಯರೀತಿಯಿಂದ ಅಭಿನಯಿಸಲ್ಪಟ್ಟು ಸಮಸ್ತರಿಗೂ ಅತ್ಯಾನಂದವನ್ನುಂಟುಮಾಡಿತು.

ಪ್ರತ್ಯಕ್ಷದರ್ಶಿ.

ಉಜ್ಜಯನಿ ಶ್ರೀ ಸಿದ್ಧಲಿಂಗಸ್ವಾಮಿಗಳ ಅಭಿಪ್ರಾಯ.

ನಾನು ನನ್ನ ಸಹಜ ಕೆಲಸದ ನಿಮಿತ್ತ ತಾ|| 4-3-24ನೇ ಮಂಗಳವಾರ ದಿವಸ ಶಿವಮೊಗ್ಗ ಡಿ|| ಹೊನ್ನಾಳಿ ಗ್ರಾಮಕ್ಕೆ ಹೋಗಿದ್ದೆನು. ಅದೇದಿವಸ ಆ ಗ್ರಾಮದಲ್ಲಿ ಉಜ್ಜಯನಿ ಸಂಸ್ಥಾನದ ಶ್ರೀ ಸಿದ್ಧಲಿಂಗಸ್ವಾಮಿಗಳ ಮುಕ್ಕಾಮ್ ಇದ್ದ ಕಾರಣ, ನಾನು ದರ್ಶನಕ್ಕೆ ಸುಮಾರು ರಾತ್ರಿ 8 ಗಂಟೆಗೆ ಹೋದೆನು. ಸ್ವಾಮಿಗಳ ಸನ್ನಿಧಿಯಲ್ಲಿ ಮ|| ಗದ್ದಬಸಪ್ಪನವರು, ಎಡೆಹಳ್ಳಿ ಮ|| ಶಾಂತಪ್ಪಶೆಟ್ಟರು, ಹೊನ್ನಾಳಿ ಮ|| ಕುಂಕೋದ ಬಸವಣ್ಣಪ್ಪನವರು ಮೊದಲಾದ ಸದ್ಗೃಹಸ್ಥರು ನನ್ನಂತೆ ದರ್ಶನಕ್ಕೆ ಬಂದಿದ್ದರು. ಮ|| ಗದ್ದಬಸಪ್ಪನವರು ನಮ್ಮ ಸಮಾಜದಲ್ಲಿ ಪ್ರಚಲಿತಗಳಾಗಿ ನಡೆಯುವ ಷಟ್‌ಸ್ಥಲ ಗುರುಸ್ಥಲದ ವಿಷಯವಾಗಿ ಕೆಲವು ಪ್ರಶ್ನೆಗಳನ್ನು ಮಾಡಿದರು. ಸುಮಾರು ಎರಡು ತಾಸಿನವರೆಗೆ ಸ್ವಾಮಿಗಳೊಡನೆ ಚರ್ಚೆಯು ನಡೆಯಿತು. ಆ ಕಾಲಕ್ಕೆ ಶ್ರೀ ಸಿದ್ಧಲಿಂಗಸ್ವಾಮಿಗಳ ಮುಖದಿಂದ ಹೊರಟ ಅಭಿಪ್ರಾಯವನ್ನು ಸಮಾಜದ ಹಿತಕ್ಕಾಗಿ ಕೊಡುವದು ಅವಶ್ಯಕಂಡದ್ದರಿಂದ ಇಲ್ಲಿ ಕೊಡುತ್ತೇನೆ. ಬಸವೇಶ್ವರಾದಿ ಪ್ರಮಥರ ವಿಷಯದಲ್ಲಿ ತಮ್ಮ ಅಸೂಯೆಯಾಗಲೀ ಅಥವಾ ಭಿನ್ನಾಭಿಪ್ರಾಯವಾಗಲೀ ಸರ್ವಥಾ ಇರುವದಿಲ್ಲವೆಂತಲೂ ಮತ್ತು ತಾವು ಕಾಶೀನಾಥನೇ ಮೊದಲಾದ ಅರ್ವಾಚೀನ ಪಂಡಿತರ ಪ್ರಮುಖರಲ್ಲವೆಂತಲೂ ಅವರ ಅಭಿಪ್ರಾಯಕ್ಕೆ ಪೂರಾ ಒಳಪಟ್ಟವರಲ್ಲವೆಂತಲೂ ತಮ್ಮ ಮತ್ತು ಅವರ ಅಭಿಪ್ರಾಯಗಳಲ್ಲಿ ಬಹಳ ವ್ಯತ್ಯಾಸಗಳುಂಟೆಂತಲೂ ಪ್ರಮಥರ ವಿಷಯದಲ್ಲಿ ಈ ಪ್ರಕಾರ ಅಭಿಪ್ರಾಯಪಟ್ಟರು. ಇನ್ನು ಗುರುಸ್ಥಲ ಷಟ್‌ಸ್ಥಲ (ವಿರಕ್ತರ) ವಿಷಯದಲ್ಲಿ ಮಾತ್ರ ಗುರುಸ್ಥಲವೇ ಶಾಸ್ತ್ರವಿಹಿತ ಮಾರ್ಗದಿಂದ ಶ್ರೇಷ್ಠವಾದದ್ದೆಂತಲೂ ಆದ್ದರಿಂದ ವಿರಕ್ತರು ಯಾವಾಗಲೂ ಗುರುವರ್ಗದ ಶಿಷ್ಯರಾಗಿರಬೇಕೆಂತಲೂ ಇವೆರಡು ವರ್ಗಗಳಲ್ಲಿ ಸಂಬಂಧವಿರುವದಾದರೆ ಗುರು ಶಿಷ್ಯರ ಸಂಬಂಧವೆಂತಲೂ ಅಭಿಪ್ರಾಯಪಟ್ಟರು. ಮತ್ತು ಈ ವಿಷಯವನ್ನು ನಿರ್ಣಯ ಬಗ್ಗೆ ತಮ್ಮ ಪಂಚಪೀಠಗಳಿಂದಲೂ ಒಬ್ಬೊಬ್ಬ ಪಂಡಿತರನ್ನು ಮಾಡುವದಕ್ಕಾಗಿ ಕೊಡಲಿಕ್ಕೆ ಸಿದ್ಧರಿರುತೇವೆಂತಲೂ ಇದಕ್ಕೆ ಪಕ್ಷದವರೂ ಒಪ್ಪಿ ತಮ್ಮ ಕಡೆಯಿಂದ ಪಂಡಿತರನ್ನು ನೇಮಿಸಿ ಮಾಡುವದಕ್ಕೆ ಸಭೆ ನೆರವೇರಿಸುವದಾದರೆ ಅಲ್ಲಿ ನಿರ್ಣಯ ಯಲಿಕ್ಕೆ ತಾವು ಸಿದ್ಧರಿರುತ್ತೇವೆಂತಲೂ, ಇಷ್ಟೇ ಅಲ್ಲ ಒಂದು ಕ್ತ ವರ್ಗವೇ ಅಧಿಕ ವರ್ಗವೆಂದು ಗುರುವರ್ಗವು ಆ ವರ್ಗದ ಶಿಷ್ಯತ್ವವನ್ನು ಸ್ವೀಕರಿಸುವದೇ ಯೋಗ್ಯವೆಂದೂ ಸಿದ್ಧವಾದಲ್ಲಿ ತಾವು ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ ಆ ತೀರ್ಪಿನ ಪ್ರಕಾರ ನಡೆಯಲಿಕ್ಕೆ ಸಿದ್ಧರಿರುತ್ತೇವೆಂತಲೂ ಅಲ್ಲಿ ಕುಳಿತ 70-80 ಪ್ರಮುಖಜನರ ಸಮಕ್ಷಮ ಕೈಯೆತ್ತಿ ಸಾರಿ ಹೇಳಿದರು. ಇದನ್ನು ಕೇಳಿ ಮ|| ಶಾಂತಪ್ಪಶೆಟ್ಟರು ಈ ಪ್ರಕಾರ ನಿರ್ಣಯವಾಗುವವರೆಗೂ ಲಿಂಗಾಯತ ಸಮಾಜಕ್ಕೆ ಬಹಳ ಕಷ್ಟ ಉಂಟೆಂದು ಉದ್ಗಾರ ತೆಗೆದರು. ಆದರೆ ಉಜ್ಜಯನಿ ಸ್ವಾಮಿಗಳು ವಿರಕ್ತರ ವಿಷಯದಲ್ಲಿ ಹೇಳಿದ ಸ್ಪಷ್ಟೋಕ್ತಿಗೆ ನಾನು ಅವರನ್ನು ಅಭಿನಂದಿಸದೆ ಇರಲಾರೆನು. ಯಾಕಂದರೆ, ತಮಗೆ ನ್ಯೂನತೆಯು ಪ್ರಾಪ್ತವಾಗುವಂತಿದ್ದರೆ ವಿರಕ್ತರೆಲ್ಲರೂ ಒಕ್ಕಟ್ಟಾಗಿ ಸಿಂಹಾಸನದವರಂತೆ ತಾವೂ ಐದು ಜನ ಪಂಡಿತರನ್ನಿಟ್ಟು, ಶಾಸ್ತ್ರಾರ್ಥವನ್ನು ಮಾಡಿಸಿ, ತಮ್ಮ ಅಧಿಪತ್ಯವನ್ನು ಸಂಪಾದಿಸಿಕೊಳ್ಳುವರು, ಬೇಡಾದರೆ ಬಿಡುವರು, ಪರಂತೂ ಬಸವೇಶ್ವರಾದಿ ಪ್ರಮಥರನ್ನು ತಾವು ಸರ್ವಥಾ ನಿಂದಿಸುವದಿಲ್ಲವೆಂದು ಉಜ್ಜಯನಿ ಶ್ರೀಗಳು ಒಂದು ಕಡಿಗೆ ಹೇಳುತ್ತಾ, ಮತ್ತೊಂದು ಕಡಿಗೆ ಪ್ರಮಥದ್ವೇಷಿಗಳಾದ ಕುಬಸದ ಕಾಶೀನಾಥನೇ ಮುಂತಾದವರನ್ನು ನಿಕಟಸಂಬಂಧಿಗಳನ್ನಾಗಿ ತಮ್ಮ ಸಂಸ್ಥಾನದಲ್ಲಿ ಓಡಾಡಿಸುವ ಶ್ರೀಗಳ ಕೂಟನೀತಿಯನ್ನೂ ಸಹ ತಿಳಿಯದಷ್ಟು ಅರದಡ್ಡತನವು ನಮ್ಮ ಸಮಾಜದಲ್ಲಿ, ಇನ್ನೂ ಇರಬಹುದೇನು ?

S. R. Nesargi B.A.,
Haveri.

(ಆರೋಗ್ಯಚಂದ್ರಿಕೆಯಿಂದ.)

ಸ್ನಾನಮಾಡುವುದರಲ್ಲಿ ಕೆಲವು ಮುಖ್ಯ ನಿಯಮಗಳು.

(1) ಊಟಮಾಡಿದಮೇಲೆ ಮೂರುನಾಲ್ಕು ಘಂಟೆಗಳು ಕಳೆಯುವುದಕ್ಕೆ ಮೊದಲು ಯಾವಾಗಲೂ ತಲೆಗೆ ಸ್ನಾನಮಾಡಬಾರದು.

(2) ವಯಸ್ಸು ಕಳೆದ ಮುದುಕರು ಬಹಳ ಶೀತಲವಾದ ಅಥವಾ ಬಹಳ ಬಿಸಿಯಾದ ನೀರಿನಲ್ಲಿ ಸ್ನಾನಮಾಡಬಾರದು.

(3) ಕೆಲಸಮಾಡಿ ಬಹಳವಾಗಿ ದಣಿದು ಬಂದಿರುವಾಗ ಮತ್ತು ಚಳಿಯು ಮೈಗೆ ತಡೆಯಲಾರದ ಸ್ಥಿತಿಯಲ್ಲಿರುವಾಗ ಎಂತವರಾದರೂ ತಣ್ಣೀರಿನಲ್ಲಿ ಸ್ನಾನಮಾಡಬಾರದು.

(4) ಬಿಸಿನೀರಿನಲ್ಲಿ ಸ್ನಾನಮಾಡಿದರೂ, ಕೊನೆಯಲ್ಲಿ ಅಷ್ಟು ಬಿಸಿಯಿಲ್ಲದೆ ಉಷ್ಣಾಂಶವು ಕಡಿಮೆಯಾಗಿರುವ ನೀರಿನಲ್ಲಿ ಸ್ನಾನಮಾಡಬೇಕು.

(5) ಬಿಸಿನೀರಿನಲ್ಲಿ ಸ್ನಾನಮಾಡತಕ್ಕವರು, ಸ್ನಾನಕ್ಕೆ ಮೊದಲು ಧಾರಾಳವಾಗಿ ಬಿಸಿನೀರನ್ನು ಕುಡಿಯುವುದು ಒಳ್ಳೆಯದು.

(6) ಸ್ನಾನಕ್ಕೆ ಮೊದಲು ತಲೆಗೆ ತಣ್ಣೀರನ್ನು ಹಾಕುವುದು ಯಾವಾಗಲೂ ಒಳ್ಳೆಯದು.

(7) ಸ್ನಾನಮಾಡಿ ಎದ್ದಮೇಲೆ ಮಡಿಬಟ್ಟೆಯಿಂದ ಮೈಯನ್ನು ಚೆನ್ನಾಗಿ ತಿಕ್ಕಿ ರೋಮಕೂಪಗಳಲ್ಲಿ ತೇವ ಇಲ್ಲದಂತೆ ಒರೆಸಬೇಕು.

(8) ಸ್ನಾನವಾದ ಮೇಲೆ ಚಳಿಯಡಗಿ ಚೆನ್ನಾಗಿ ಶಾಖ ಹುಟ್ಟುವವರೆಗೆ ಮೈಯನ್ನು ಬಲವಾಗಿ ತಿಕ್ಕುತ್ತಿರಬೇಕು.

(9) ತಣ್ಣೀರಿನಲ್ಲಿ ಸ್ನಾನಮಾಡಿದ ಮೇಲೆ, ಮೈಯಲ್ಲಿ ರಕ್ತಸಂಚಾರಕ್ಕೆ ಉತ್ತೇಜನ ಕೊಡುವುದಕ್ಕಾಗಿ ಸ್ವಲ್ಪ ವ್ಯಾಯಾಮವನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಅನ್ನಪಾನಗಳ ವಿಷಯದಲ್ಲಿ ಕೆಲವು ನಿಷೇಧ ವಾಕ್ಯಗಳು.

(1) ಕಶ್ಮಲವಾದ ನೀರನ್ನು ಕುಡಿಯಬಾರದು.

(2) ಚೆನ್ನಾಗಿ ಮರಳಿಸದ ಮತ್ತು ತಣ್ಣಗಾರಿಸದ ನೀರನ್ನು ಕುಡಿಯಬಾರದು.

(3) ಊಟಮಾಡುವಾಗ ನೀರನ್ನು ಹೆಚ್ಚಾಗಿ ಕುಡಿಯಬಾರದು.

(4) ಊಟಕ್ಕೆ ಒಂದು ಗಂಟೆ ಮುಂದಾಗಿ ಆದಷ್ಟು ಹೆಚ್ಚು ನೀರನ್ನು ಕುಡಿಯಲು ಮರೆಯಬಾರದು.

(5) ಕಾಫೀ ಅಥವಾ ಟೀ, ಇವುಗಳನ್ನು ಕುಡಿಯುವ ವಾಡಿಕೆ ಮಾಡಬಾರದು.

(6) ನಿಶಾ ಹುಟ್ಟಿಸುವ ಮದ್ಯರಸಗಳನ್ನು ಕುಡಿಯಬಾರದು.

(7) ಪ್ರತಿದಿನವೂ ತಕ್ಕಷ್ಟು ಹಾಲನ್ನು ಕುಡಿಯದೆ ಇರಬಾರದು.

(8) ಮಕ್ಕಳು ಹುಟ್ಟಿದ 8, 9 ತಿಂಗಳವರೆಗೆ ಹಾಲು ಮತ್ತು ನೀರು ಇವುಹೊರತು ಬೇರೊಂದನ್ನೂ ಕುಡಿಸಬಾರದು.

(9) ಎಳೆಯ ಕೂಸುಗಳಿಗೆ ಮೊಲೆ ಹಾಲೊಂದನ್ನು ಹೊರತು ಬೇರೊಂದನ್ನೂ ಕುಡಿಸಬಾರದು.

(10) ನಡುರಾತ್ರಿಯಲ್ಲಿ ಶಿಶುಗಳಿಗೆ ಹಾಲುಣಿಸಬಾರದು. (ಸ್ವಲ್ಪ ನೀರನ್ನು ಕುಡಿಸಬಹುದು.)

(11) ಅಂಗಡಿಗಳಲ್ಲಿ ಮಾರುವ ಸೋಡಾ, ಲೆಮ್ನೆಡ್, ಲೈಮ್‌ಜೂಯಿಸ್ ಮುಂತಾದ ದ್ರವಗಳನ್ನು ಕುಡಿಯಬಾರದು.

(12) ದಿನಕ್ಕೆ ಮೂರು ವೇಳೆಗಿಂತ ಹೆಚ್ಚುಸಲ ಊಟ ಮಾಡಬಾರದು. (ಆ ಮೂರರಲ್ಲಿಯೂ ಒಂದು ಭೋಜನವು ಬಹಳ ಮಿತವಾಗಿರಬೇಕು.)

(13) ಸಾಧಾರಣವಾದ ಮತ್ತು ಪುಷ್ಟಿಕರವಾದ ಆಹಾರಗಳನ್ನು ಹೊರತು ಬೇರೆ ಆಹಾರಪದಾರ್ಥಗಳಿಗೆ ಆಶಿಸಬಾರದು.

(14) ಆತುರದಿಂದ ಊಟಮಾಡಬಾರದು.

(15) ಆಹಾರಪದಾರ್ಥಗಳನ್ನು ಚೆನ್ನಾಗಿ ಅಗಿಯದೆ ನುಂಗಬಾರದು.

(16) ಅಪಕ್ವವಾದ ಮತ್ತು ಅತಿಪಕ್ವವಾದ ಆಹಾರವನ್ನು ತಿನ್ನಬಾರದು.

(17) ಹದಿನೈದುದಿನಗಳಿಗೊಮ್ಮೆ ಉಪವಾಸವಿರುವುದನ್ನು ಮರೆಯಬಾರದು,

(18) ಸೊಪ್ಪು, ಕಾಯಿಪಲ್ಯಗಳು, ಧಾನ್ಯಗಳು ಇವುಗಳನ್ನು ಅನಾದರಿಸಬಾರದು.

(19) ಮಾಂಸವನ್ನು ತಿನ್ನಬಾರದು.

(20) ಶುದ್ಧವಲ್ಲದ ಎಣ್ಣೆ, ತುಪ್ಪ ಮುಂತಾದುವುಗಳನ್ನು ಸೇವಿಸಬಾರದು.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲು ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರವಾದಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರದ ಕಸ್ತೂರೀಮಾತ್ರೆ ಬಾಟ್ಲ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—6—0. 25 ಬಾಟ್ಲುಗಳಿಗೆ 4—8—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾರಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50 – 26] ಮೈಸೂರು.

೧೯೨೪ ನೆಯ ಇಸವಿ ಮಾರ್ಚಿ ತಾ|| ೧೬ ರಿಂದ ೧೯೨೪ ನೆಯ ಇಸವಿ ಮಾರ್ಚಿ ತಾ|| ೨೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಫಾಲ್ಗುಣ ಶುದ್ಧ ದಶಮಿಯಿಂದ ಫಾಲ್ಗುಣ ಬಹುಳ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ದಿನ ಮಾಸ
16	[1]ಭಾನು	ದಶ	11-9	ಪುನ	14-5	4
17	[2]ಸೋಮ	ಏಕಾ	13-17	ಪುಷ್ಯ	17-36	5
18	[3]ಮಂಗಳ	ದ್ವಾದ	14-48	ಆಶ್ಲೆ	20-2	6
19	[4]ಬುಧ	ತ್ರಯೋ	14-4	ಮಖ	21-16	7
20	[5]ಗುರು	ಚತು	12-35	ಪುಬ್ಬ	20-17	8
21	ಶುಕ್ರ	ಪೌರ್ಣ	9-51	ಉತ್ತ	20-3	9
22	ಶನಿ	ಪಾಡ್ಯ	5-53	ಹಸ್ತ	17-4	10

(1) ನಂಜನಗೂಡಿನಲ್ಲಿ ಶ್ರೀಕಂಠಮುಡಿ ಉತ್ಸವ. (2) ಸರ್ವತ್ರ ಏಕಾದಶಿ, ಮೇಲುಕೋಟೆಯಲ್ಲಿ ವೈರಮುಡೀ ಉತ್ಸವ. (3) ಪ್ರದೋಷ, ಚಂದ್ರಪುರದ ಚಂದ್ರಮೌಳೀಶ್ವರರಥ. (4) ನಂಜನಗೂಡು ಶ್ರೀಕಂಠೇಶ್ವರಸ್ವಾಮಿರಥ, ತಿರುಮಕೂಡ್ಲು ಅಗಸ್ತ್ಯೇಶ್ವರರಥ. (5) ಕಾಮದಹನ, ಹೋಳಿಹಬ್ಬ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 12.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಸಪಕ್ಷತಾವತಾರಾ ಪಕ್ಷಜ್ಞ ಸತ್ಕೃತ ಸೋಮರಾಜೇಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವೆಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಯಿಂ ಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೮-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಮಾರ್ಚಿ ತಾರೀಖು ೨೩ ನೆಯ ಭಾನುವಾರ. [ಸಂಚಿಕೆ ೧೨

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. ಡಜ. 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.

ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
8 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾ. ಜೆ. ಬಿ. ಯವರ

ಸುಗಂಧ ನಶ್ಯದ ಪುಡಿ.



(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆ[illegible]ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು [illegible]ಳೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಗೃಹಸ್ಥರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

[illegible] ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
[illegible] ೧೨ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—30] ಪೋ. ಬಾ. ೫೧೦, ಮದರಾಸು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
[illegible]ಶೈವ ಶಿವಪೂಜಾವಿಧಿ	೦—೧೨—೦	೧—೨—೦
[illegible] ವೀರಶೈವ ವಿವಾಹವಿಧಿ	೦—೮—೦	೦—೧೩—೦
[illegible]	೦—೪—೦	೦—೯—೦
[illegible]ರುಹೀಲಚರಿತ್ರೆ	೦—೫—೦	೦—೧೦—೦
[illegible]ವಾಸಿ	೦—೪—೦	೦—೯—೦
[illegible]ಸಂಚಿಕೆ	೦—೪—೦	೦—೯—೦
[illegible]ಶ್ವರವಚನ	೦—೧—೦	೦—೬—೦
[illegible]	೦—೮—೦	೦—೧೩—೦

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—16] ಹೊಸಮಠ, ಮೈಸೂರು.

ಗತ್ತಿನ ವಿಷವಾದ] ಆಗತ್ಯಬಿದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ

ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ವಜ್ರಾಂಗಸುಂದರಪಾಕ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ತರಕೆ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಜವಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕೆ, ಕಮರಕಸ, ಕಥಲ್ಯಾಗೊಂದ, ಪಂಜಾಬಿ ಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇದಮಿಶ್ರ, ತಾಲೀಮಖಾನಾ. ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಳೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯೆಯಿಲ್ಲ. ೨೧ ದಿವಸ ಸಾಲುವ ೪೦ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣ ತ್ವರೆಮಾಡಿರಿ.

ಕಾಗದ ಬರೆಯುವವರು ತಮ್ಮ ಪೂರ್ಣ ಅಡ್ರೆಸ್ [illegible] ಸಹ ಬರೆಯಿರಿ.

[50—33] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎಸ್.ಆರ್. ಕರಿಬಸವಶಾಸ್ತ್ರಿ
[50—11] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಗಾಯ, ಚಳುಕು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—18] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು ೪೦ ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಕಟಪಡಿಸಿ ಇರುತ್ತೇನೆ. ಅಪೇಕ್ಷೆಯುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಊದುಬತ್ತಿ ಷಾಪ್, ಎಸ್. ಕಳ್ಳಪ್ಪ,
7 ಬೆಂಗಳೂರು ಸಿಟಿ ದೊಡ್ಡಪ್ಯಾಟೆ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಮಾರ್ಚಿ ತಾ|| ೨೩ ನೆಯ ಭಾನುವಾರ.

NOMINATIONS TO COUNCIL.

We had thought that the avowed object of the Government in reserving certain seats in the Legislative Council and the Representative Assembly was to give representation to unrepresented and inaduquately represented communities. The Government have accepted this as a right principle, and have acted upon it in making nominations to the Representative Assembly. But when we come to the Legislative Council, all this has been given a go by and they have gone on in their old fashion increasing the strength of the very community which has gained more than its due share in the elections. There have been many instances in Mysore when principles, very just and noble in themselves, have been enunciated, only to be forsaken at the time of their being translated into practice. But the present nominations to the Council coming as they do at the inauguration of the new Council is a nagation of the accepted principle in making nominations not only in Mysore but in British India also. It is impossible to explain why either Rao Bahadur M. Shama Rao or Dewan Bahadur C. Srikanteswara Iyer should have been nominated to the Council when there were more than 10 of their elected representatives in the Council. Were there not so many unrepresented communities and inadequately represented communities in the Council, whose claims should have received priority in the nominations? When the major associations such as the Vokkaligara Sangha and the Lingayet Education Fund Association asked for representation to the Representative Assembly the theory of their being already represented in that body was trotted and for denying them the long-enjoyed and fully-justified privilege. We wonder what special claims these two gentlemen possessed to receive this special treatment at the hands of the Government, and what interests they represent which are not already well-represented. If we go further, we find the choice of the Government is very unhappy. Mr. Shama Rao the retired I. G. of Education once said in the Council that he could confidently say he never was guided by motives of caste in making appointments. The other Mr. Srikanteswara Iyer's unpopularity is well-known in the Mysore City. There is a continuous fight between the Municipal Councillors and himself, and the ratepayers have numerous grievances against him. Were there no better men, for the Government to nominate from that community? Besides the desire of the Government to nominate old retired officers of the State only shows that they are afraid of the non-official criticisim and want to support themselves with the help of such retired officers. It is only in our State that we find that this great regard is shown to the retired officers. Elsewhere, we could never think of old retired officers from a well-represented community being nominated. The people think that our State is progressing, or at any rate attempts are being made to see the progress of the State. The Government of course is never tired of professing about it. But when we see such things as above, we may well say that we are as far away from genuine attempts at progress as we were ever before. It is not that the whole course of legislation will be changed by the introduction of these two gentlemen into the Council. But when principles and policies so loudly proclaimed by Government are given up so easily we would be justified in expressing our doubts about the success of the reforms, which demand a perfectly straightforward and impartial handling.

69 ಗ್ರಾಮಗಳಲ್ಲಿ ಹೆಚ್ಚಿಸಲ್ಪಟ್ಟಿದ್ದ ತರಿಕಂದಾಯವು ತಗ್ಗಿಸಲ್ಪಟ್ಟುದು.

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಶ್ರೀರಂಗಪಟ್ಟಣ ತಾ|| ನಲ್ಲಿ 61 ಗ್ರಾಮಗಳು, ಮೈಸೂರು ತಾ|| ನಲ್ಲಿ 6 ಗ್ರಾಮಗಳು ಮತ್ತು ಕೃಷ್ಣರಾಜಪೇಟೆ ತಾ|| ನಲ್ಲಿ 2 ಗ್ರಾಮಗಳು, ಒಟ್ಟು 69 ಗ್ರಾಮಗಳಲ್ಲಿ ಕುಷ್ಕಿ, ತರಿ, ಬಾಗಾಯಿತು ಭೂಮಿಗಳ ರೀಸರ್ವೆ ಮಾಡಲ್ಪಟ್ಟು, ಈ ಭೂಮಿಗಳು ಕೃಷ್ಣರಾಜಸಾಗರದ ಕಾಲುವೆಗಳ ಮತ್ತು ದೊಡ್ಡದೊಡ್ಡ ಕೆರೆಗಳ ಜಲಾಶಯದಲ್ಲಿದ್ದು ಅವುಗಳ ಬೆಲೆಯು ಬಹಳವಾಗಿ ಹೆಚ್ಚಿರುವುದಲ್ಲದೆ ಅವುಗಳ ಮಾರಾಟದಿಂದ ಕಂದಾಯಕ್ಕೆ 5 ರಷ್ಟು ಹೆಚ್ಚಾಗಿ ಜನರು ಸಂಪಾದಿಸುತ್ತಿರುವುದರಿಂದಲೂ, ಅವುಗಳಲ್ಲಿ ಬೆಳೆಯುವ ಪದಾರ್ಥಗಳ ಬೆಲೆಯು 100ಕ್ಕೆ 100 ರಷ್ಟು ಹೆಚ್ಚಿರುವುದರಿಂದಲೂ ಕುಷ್ಕಿ I ನೆ ತರಗತಿಯ ಕಂದಾಯವು 2 ರೂ. ಇಂದ 2-10-0 ಗೂ, II ನೆ ತ|| ಕಂದಾಯವು 1-12-0 ಇಂದ 2-4-0 ಗೂ, III ನೆ ತ|| ಕಂದಾಯವು 1-8-0 ಇಂದ 2-0-0 ಗೂ, ನಾಲಾಕೆಳಗಿನ ತರೀ I ನೆ ತ|| ಕಂದಾಯವು 11-0-0 ಇಂದ 15-8-0 ಗೂ, II ನೆ ತ|| ಕಂದಾಯವು 10-0-0 ಇಂದ 14-8-0 ಗೂ, ಕೆರೆ ಕೆಳಗಿನ ತರೀ ಕಂದಾಯವು 8-0-0 ಇಂದ 9-8-0 ಗೂ, ಬಾಗಾಯಿತು Iನೆ ತ|| ಕಂದಾಯವು 11-0-0 ಇಂದ 15-0-0 ಗೂ, II ನೆ ತ|| ಕಂದಾಯವು 10-0-0 ಇಂದ 14-0-0 ಗೂ ಹೆಚ್ಚಿಸಲ್ಪಟ್ಟಿರುವುದಾಗಿಯೂ, ಈ ಹೆಚ್ಚಿಸಲ್ಪಟ್ಟಿರುವ ದರವು ಇನ್ನು 30 ವರ್ಷಗಳವರೆಗೆ ಬದಲಾಯಿಸಲ್ಪಡುವುದಿಲ್ಲವಾಗಿಯೂ ಸರ್ಕಾರದವರು 1923 ನೆ ಜುಲ್ ತಾ|| 27ರಲ್ಲಿ ಅಪ್ಪಣೆಮಾಡಿದರು. ಆದರೆ ಈ ಹೆಚ್ಚು ಕಂದಾಯಕ್ಕೆ ಗುರಿಯಾದ 69 ಗ್ರಾಮದ ರೈತರುಗಳು (1) ಭೂಮಿಗಳ ರೀಸರ್ವೆ ಮಾಡಲ್ಪಡುವ ವಿಚಾರವು ರೈತರಿಗೆ ಮುಂದಾಗಿ ತಿಳುಹಲ್ಪಡದೆಯೂ, ಅದರಮೇಲೆ ರೈತರ ಆಕ್ಷೇಪಗಳನ್ನು ನಿರೀಕ್ಷಿಸದೆಯೂ ಸರ್ಕಾರದವರು ಕಂದಾಯವನ್ನು ಹೆಚ್ಚಿಸಿರುವುದು ಅನುಚಿತವು (2) ದರವು ಬಹಳ ಹೆಚ್ಚಾಗಿರುವುದು (3) ಕೆಲಗ್ರಾಮಗಳ ಸೆಟ್ಲಮೆಂಟು ಚಾಲ್ತಿ ವರ್ಷಾರಂಭದಲ್ಲಿ ಮುಗಿಸಲ್ಪಟ್ಟಿರುವುದರಿಂದ ಚಾಲ್ತಿ ಸಾಲಿನಲ್ಲಿ ಹೊಸದರದಂತೆ ಕಂದಾಯವು ವಿಧಿಸಲ್ಪಡಕೂಡದು. ಎಂದು ಬಿನ್ನೈಸಿಕೊಂಡುದರಮೇಲೂ, ಮ|| ಎಂ. ಸಿ. ರಂಗಯ್ಯಂಗಾರರು ಮೇಲ್ಕಂಡ ಆಕ್ಷೇಪಗಳನ್ನೇ ಆಧಾರವಾಗಿಟ್ಟುಕೊಂಡು ನ್ಯಾಯವಿಧಾಯಕಸಭೆಯಲ್ಲಿ ಚರ್ಚಿಸಿದುದರಮೇಲೂ ಸರ್ಕಾರದವರು ತತ್ಸಂಬಂಧವಾದ ಆಕ್ಷೇಪಗಳನ್ನೆಲ್ಲಾ ಚೆನ್ನಾಗಿ ಪರ್ಯಾಲೋಚಿಸಿ ಮುಂದೆ ಹೇಳುವಂತೆ ನಾಲಾಕೆಳಗಿನ ತರಿ ಭೂಗಂದಾಯವನ್ನು ಸ್ವಲ್ಪಮಟ್ಟಿಗೆ ಕಡಿಮೆಮಾಡಿರುತ್ತಾರೆ.

ಕೃಷ್ಣರಾಜಸಾಗರ ಜಲಾಶಯ ನಿರ್ಮಾಣದಿಂದ ನೀರು ತಪ್ಪದೆ ಒದಗಿಸಲ್ಪಡುವುದೆಂಬ ಭರವಸೆಯಿಂದ ಈ ಸಾಗರದ ನಾಲಾಕೆಳಗಿನ ತರಿ ಭೂಮಿಯ ಬೆಲೆಯು ಬಹಳವಾಗಿ ಹೆಚ್ಚಿರುವುದೂ, ಬತ್ತ ಮತ್ತು ಇತರ ಆಹಾರ್ಯ ಧಾನ್ಯಗಳ ಬೆಲೆಯು 100 ಕ್ಕೆ 100 ರಷ್ಟು ಏರಿರುವುದೂ ತರೀ ಕಂದಾಯವನ್ನು ಹೆಚ್ಚಿಸಲು ಮುಖ್ಯಕಾರಣಗಳಾಗಿರುವುವಾದರೂ, ಈಗ ರೈತರು ಹೇಳುವಂತೆ ತರೀಭೂಪ್ರದೇಶದ ಅನಾರೋಗ್ಯಸ್ಥಿತಿಯಿಂದ ಜೀತಗಾರರು ದೊರಕದ ಪ್ರಯುಕ್ತ ವ್ಯವಸಾಯಾಭಿವೃದ್ಧಿಗಿರುವ ಅಡಚಣೆಯನ್ನು ಪರಿಗಣಿಸಿ ಮತ್ತು ಕೃಷ್ಣರಾಜಸಾಗರ ಜಲಾಶಯ ನಿರ್ಮಾಣಸೌಕರ್ಯದಿಂದ ಸಾಧ್ಯವಾದಷ್ಟು ತರೀವ್ಯವಸಾಯಾಭಿವೃದ್ಧಿಯಾಗುವುದರಮೇಲೆ ಲಕ್ಷ್ಯವಿಟ್ಟು ರೈತರಮೇಲೆ ಕಂದಾಯದ ಹೊರೆಯನ್ನು ಏಕಾಏಕಿ ಹಾಕುವುದು ಯುಕ್ತವಲ್ಲವೆಂದು ಸರ್ಕಾರದವರು ಅಭಿಪ್ರಾಯಪಟ್ಟು I ನೆ ತರಗತಿಯ ತರೀಕಂದಾಯವನ್ನು 15-8-0 ಇಂದ 14-4-0 ಗೂ, II ನೆ ತ|| ತರೀಕಂದಾಯವನ್ನು 14-8-0 ಇಂದ 13-4-0 ಗೂ ಇಳಿಸಿರುತ್ತಾರೆ. 11 ರಿಂದ 15½ ಗೂ 10 ರಿಂದ 14½ ಗೂ ಮೊದಲು ಹೆಚ್ಚಿಸಿದುದರಿಂದ 71,165 ರೂ. ಹೆಚ್ಚಾಗಿ ಉತ್ಪನ್ನವಾಗುತ್ತಿದ್ದುದು ಈಗ 14¼ ಮತ್ತು 13¼ ಗೆ ಇಳಿಸಲ್ಪಟ್ಟುದರಿಂದ 54,768 ರೂ. ಮಾತ್ರ ಹೆಚ್ಚಾಗುವುದೆಂದು ತಿಳಿಸಲ್ಪಟ್ಟಿದೆ. ಕುಷ್ಕಿ ಜಮೀನುಗಳ, ಕೆರೆ ಕೆಳಗಿನ ತರೀಜಮೀನುಗಳ ಮತ್ತು ತೋಟಗಳ ಕಂದಾಯವು ಹೆಚ್ಚಿಸಲ್ಪಟ್ಟಿರುವುದು ಅನುಕೂಲವಾಗಿರುವುದರಿಂದ ಬದಲಾಯಿಸಲ್ಪಡಲಾಗುವುದಿಲ್ಲವೆಂದು ಹೇಳಿರುತ್ತಾರೆ. ಈ ಜಮೀನುಗಳ ಕಂದಾಯವು ಅಷ್ಟೇನು ಹೆಚ್ಚು ಮಾಡಲ್ಪಟ್ಟಿಲ್ಲವಾದುದರಿಂದ ಅದು ತಗ್ಗಿಸಲ್ಪಡಲಿಲ್ಲವೆಂದು ಅಷ್ಟು ಚಿಂತಿಸಬೇಕಾದುದಿಲ್ಲವು. ಆದರೆ ಕೃಷ್ಣರಾಜಸಾಗರ ಜಲಾಶಯಕಲ್ಪನೆಯಿಂದ ನಿರೀಕ್ಷಿತವಾದಷ್ಟು ತರೀ ವ್ಯವಸಾಯಾಭಿವೃದ್ಧಿಯಾಗಲು ಕೆಲ ಅಡಚಣೆಗಳಿರುವುವೆಂದು ಸರ್ಕಾರದವರು ತಿಳಿದಿರುವರಾದರೂ 1ಕ್ಕೆ $1\frac{9}{22}$ ರಷ್ಟು ಹೆಚ್ಚಿಸಿದ್ದುದನ್ನು 1ಕ್ಕೆ $1\frac{13}{44}$ ರಂತೆ ತಗ್ಗಿಸಿರುವುದರಿಂದ ರೈತರಿಗಷ್ಟೇನೂ ಪ್ರಯೋಜನವಾಗಲಿಲ್ಲವೆಂದು ಹೇಳಬೇಕಾದುದಿಲ್ಲವು. ಮತ್ತು ಸರ್ಕಾರದವರು ಮೊದಲು ಹೆಚ್ಚಿಸಿದ್ದುದಕ್ಕೂ, ಕಡಿಮೆಮಾಡಿಕೊಡಬೇಕೆಂದು ರೈತರು ಪ್ರಾರ್ಥಿಸಿಕೊಂಡಿರುವುದಕ್ಕೂ ಮಧ್ಯಸ್ಥವಾಗಿ ಅಂದರೆ 13¼ ಮತ್ತು 12¼ ರಂತೆ ಮಾಡಿದ್ದರೆ ರೈತರು ಹೆಚ್ಚು ಗೊಣಗುಟ್ಟಲು ಅವಕಾಶವಿರುತ್ತಿರಲಿಲ್ಲವು. ಪ್ರಸಕ್ತ ವರ್ಷದಲ್ಲಿ ಮಳೆಬೆಳೆಯಾಗದೆ ಜೀವನಕ್ಕೆ ತೊಂದರೆಯಾಗಿರುವುದರಿಂದಲೂ, ವ್ಯವಸಾಯಕ್ಕೆ ಮುಖ್ಯ ಆಧಾರವಾದ ಕಾಲ್ನಡೆಗಳು ರೋಗೋಪದ್ರಗಳಿಂದ ಬಹಳವಾಗಿ ನಾಶವಾದುದರಿಂದಲೂ ಮುಂದಣ ವರ್ಷದಲ್ಲಿಯೂ ಮಳೆ ಬೆಳೆಯು ಚೆನ್ನಾಗಿ ಆಗುವ ಭರವಸೆಯಿಲ್ಲದಿರುವುದರಿಂದಲೂ ದಯಾಳು ಸರ್ಕಾರದವರು ಮತ್ತೊಂದು ವೇಳೆ 69 ಗ್ರಾಮಗಳ ರೈತರ ಪ್ರಾರ್ಥನೆಯನ್ನು ಪರ್ಯಾಲೋಚಿಸಿ ನಾವು ಮೇಲೆ ಹೇಳಿದಂತೆ ಕಂದಾಯದ ದರವನ್ನು ಇಳಿಸಿ ಮತ್ತು ಇನ್ನು ಮುಂದೆ ಆಗುವ ರೀಸೆಟ್ಲಮೆಂಟಿನಲ್ಲಿ ಇದೇ ರೀತಿ ವಿಧಿಸುವಂತೆ ಅಪ್ಪಣೆ ಮಾಡಿ ರೈತರ ಚಿರಕೃತಜ್ಞತೆಗೆ ಪಾತ್ರರಾಗಬೇಕಾಗಿ ಕೋರುತ್ತೇವೆ.

ರಾಜಧಾನಿಯಲ್ಲಿ ನರಬಲಿ ಪ್ರಯತ್ನ.

ವಿಚಿತ್ರತರವಾದ ಕಟ್ಟುಕಥೆ.

ರಾಜಧಾನಿಯಲ್ಲಿ ಕೆಲತಿಂಗಳ ಹಿಂದೆ ಮಕ್ಕಳುಗಳು ಅ ಹರಿಸಲ್ಪಡುತ್ತಿದ್ದವೆಂಬ ಸುದ್ದಿಯು ಬಹಳವಾಗಿ ಹಬ್ಬಿ ಸ್ಥ ಪರಸ್ಥಳ ವೃತ್ತಪತ್ರಿಕೆಗಳಲ್ಲಿ ವಿಧವಿಧವಾದ ವ್ಯಾಖ್ಯಾ ನಗಳು ನಡಿಯುತ್ತಿದ್ದುದರ ಮೇಲೂ ಇಲ್ಲಿಯ ನಿವಾಸಿಗಳಿ ತತ್ರಾಪಿ ಮಕ್ಕಳುಳ್ಳ ತಂದೆತಾಯಿಗಳಿಗೆ ಭಯಭ್ರಾಂತಿಯ ಉಂಟಾಗಿದ್ದುದರ ಮೇಲೂ ಡಿಪ್ಯುಟಿ ಕಮಿಷನರೂ ಪೋಲೀ ನವರೂ ಈ ಸುದ್ದಿಯ ನಿಜಸ್ಥಿತಿಯನ್ನು ಕೂಲಂಕಷವಾ ಪರಿಶೋಧಿಸಿ, ಇಬ್ಬರು ಮೂವರು ಮಹಮ್ಮದೀಯ ಬಾಲಬಾ ಲಿಕೆಯರು ತಮ್ಮ ಮನೆಯಲ್ಲಿ ಯಾರಿಗೂ ತಿಳಿಸದೆ ಪರಸ್ಥ ಳ್ಳಿರುವ ನೆಂಟರಮನೆಗೆ ಹೋಗಿದ್ದುದರ ಮೇಲೆ ಈ ವಿಧವಾ ಸುದ್ದಿಯು ಹುಟ್ಟಿಸಲ್ಪಟ್ಟಿದ್ದಿತಲ್ಲದೆ ವಾಸ್ತವ್ಯವಾಗಿಯ ಯಾವ ಮಕ್ಕಳೂ ಯಾರಿಂದಲೂ ಅಪಹರಿಸಲ್ಪಟ್ಟಿರಲಿಲ್ಲವೆಂ ಪತ್ರಿಕೆಗಳದ್ವಾರ ನಿಜಸ್ಥಿತಿಯನ್ನು ಪ್ರಕಟಿಸಿದನಂತರ ರಾ ಧಾನಿಯ ನಿವಾಸಿಗಳ ಮನಸ್ಸು ಶಾಂತವಾಗಿ ಅಂದಿನಿಂ ಅಂತಹ ಭಯೋತ್ಪಾತಸುದ್ದಿಯು ಇರಲಿಲ್ಲವು. ಈಗ ಹಿಂ ಯಾವಾಗಲೂ ನಡೆಯದಿರುವಂತಹ ವಿಚಿತ್ರತರವಾದ ನರಬ ಕಥೆಯೊಂದು ಹುಟ್ಟಿಸಲ್ಪಟ್ಟು ಜನರ ಮನಸ್ಸಿನಲ್ಲಿ ವಿಶೇಷತ ವಾದ ಭಯಭ್ರಾಂತಿಯುಂಟುಮಾಡಲ್ಪಟ್ಟಿರುತ್ತದೆ.

ರಾಜಧಾನಿಯ ಸಂಸ್ಕೃತ ಮಹಾಪಾಠಶಾಲೆಯ ಪ್ರಿನ್ಸಿ ಪಾಲರಾದ ಮ|| ಸಿ. ರಾಮಾನುಜಯ್ಯಂಗಾರ್, ಎಂ. ಎ. ಯವರ ಅಣ್ಣಂದಿರ ಕುಮಾರರೂ ಮಹಾರಾಜಾ ಕಾಲೇಜಿನ ಬಿ.ಎ., ತರಗತಿಯ ವಿದ್ಯಾರ್ಥಿಯೂ ಆದ ಪ್ರಾಯಶಃ 20-2 ವರ್ಷ ವಯಸ್ಸಿನ ಮ|| ರಾಮಸ್ವಾಮಿ ಎಂಬುವವರು ಪ್ರ ದಿವಸ ಉಷಃಕಾಲದಲ್ಲಿ ಶರೀರವ್ಯಾಯಾಮಕ್ಕಾಗಿ 4-5 ಮೈ ದೂರ ಓಡುವ ಪದ್ಧತಿಯನ್ನಿಟ್ಟುಕೊಂಡಿರುವರಂತೆ. ಇವ ನರಬಲಿಗಾಗಿ ಎಳೆದುಕೊಂಡು ಹೋಗಲ್ಪಟ್ಟಿದ್ದು ಉಪಾಯಾಂ ತರದಿಂದ ತಪ್ಪಿಸಿಕೊಂಡುಬಂದ ವಿಚಾರವನ್ನು ವರ್ಣಿಸಿ ಹೇಳು ತ್ತಿರುವುದು ಹೇಗೆಂದರೆ—ನಾನು ಎಂದಿನಂತೆ ಈ ಮಾರ್ಚ ತಾ|| 6ರ ಬೆಳಿಗ್ಗೆ 4½ ಗಂಟೆ ಸಮಯದಲ್ಲಿ ರಾಜಧಾನಿಯ ಲಕ್ಷ್ಮೀಪುರದ ಪೊಲೀಸುಠಾಣದಿಂದ ಕೆಲಗಜಗಳ ದೂರದಲ್ಲಿ ರುವ ತೆಂಪಡವಲುದಿಕ್ಕಿನ ಮೂಲೆಯಲ್ಲಿ ಓಡಿಹೋಗುತ್ತಿರು ವಾಗ್ಗೆ ಯಾವನೋ ಒಬ್ಬ ಅಪರಿಚಿತ ಮನುಷ್ಯನು ಬಂದು ನನ್ನನ್ನು ತಡೆದು ನಿಲ್ಲಿಸಿ ನನ್ನ ತೋಳನ್ನು ಬಲವಾಗಿ ಹಿಡಿದು ಕೊಂಡನು. ಅವನು ಪೊಲೀಸು ಕಾನಸ್ಟೆಬಲಿರಬೇಕೆಂದೂಹಿಸಿ ನನ್ನನ್ನು ಹಿಡಿದುಕೊಳ್ಳಲು ಕಾರಣವೇನೆಂದು ಕೇಳುತ್ತಿರುವ ಷ್ಟರಲ್ಲಿ ಇನ್ನು 3-4 ಜನರು ಬಂದು ನನ್ನ ಸುತ್ತವರಿದು ನಿಂತು ಹಿಡಿದು ಎಳೆಯುತ್ತಿರುವಾಗ್ಗೆ ನಾನು ಕೂಗಿಕೊಳ್ಳಲೆತ್ನಿಸಲು ನನ್ನ ಬಾಯಿಗೆ ಗಟ್ಟಿಯಾಗಿ ಬಟ್ಟೆಯನ್ನು ತುರಿಕಿ ನನ್ನ ಕಣ್ಣು ಗಳನ್ನೂ ಕೈಗಳನ್ನೂ ಬಟ್ಟೆಯಿಂದ ಬಿಗಿಯಾಗಿ ಕಟ್ಟಿ ರಾಜ ಮಾರ್ಗವನ್ನು ಬಿಟ್ಟು ಕಲ್ಲುಮಣ್ಣಿನ ಮಾರ್ಗದಲ್ಲಿ 2 ಗಂಟೆಯ ಕಾಲ ನಡಿಸಿಕೊಂಡುಹೋಗಿ ಒಂದುಕಡೆ ಕುಳ್ಳಿರಿಸಿದರು. ಆಗ ನೆಲವು ಬೆಚ್ಚಗಿದ್ದುದನ್ನು ತಿಳಿದು ಬೆಳಗಿನ 7½-8ಗಂಟೆಯಾಗಿರಬ ಹುದೆಂದೂಹಿಸಿಕೊಂಡೆನು. ನನ್ನ ಬೆಂಗಾವಲಿಗೆ ಒಬ್ಬ ಮನುಷ್ಯ ನು ಇಡಲ್ಪಟ್ಟಿದ್ದನು. ಸಾಯಂಕಾಲದವರೆಗೂ ಕಣ್ಣು ಮತ್ತು ಕೈಕಟ್ಟುಗಳು ಬಿಚ್ಚಲ್ಪಡಲಿಲ್ಲವು. ಮಧ್ಯಾಹ್ನದಲ್ಲಿ ಬಾಯಾ ರಿಕೆಯನ್ನು ತಡೆಯಲಾರದೆ ಕುಡಿಯಲು ನೀರನ್ನು ಕೇಳಿದೆನು. ಬೆಂಗಾವಲಿದ್ದವನು ಗದರಿಸಿಬಿಟ್ಟನು. ಆದರೆ ಸಾಯಂಕಾಲ 4½ ಗಂಟೆ ಸಮಯದಲ್ಲಿ ನನ್ನ ಬಾಯನ್ನು ತೆರೆಯಲು ಹೇಳಿ ಒಂದುಲೋಟ ನೀರು ಹಾಕಲ್ಪಟ್ಟಿತು. ಆಗ ನನ್ನ ಬಾಯಾರಿ ಕೆಯು ಶಮನವಾಗಿ ಮನಸ್ಸಿಗೆ ಕೊಂಚ ಸಮಾಧಾನವಾಯಿ ತು. ಸಾಯಂಕಾಲ ಪ್ರಾಯಶಃ 7 ಗಂಟೆ ಸಮಯದಲ್ಲಿ ನನ್ನ ಕಣ್ಣು ಮತ್ತು ಕೈಗಳಿಗೆ ಕಟ್ಟಿದ್ದ ಬಟ್ಟೆಯು ಬಿಚ್ಚಲ್ಪಟ್ಟಿತು. ಇದರಿಂದ ನನ್ನ ಮನಸ್ಸಿಗೆ ಆನಂದವಾಗಿ ಕಣ್ಣುಗಳನ್ನು ಬಿಟ್ಟು ಇದಿರಿಗೆ ನಿಂತಿದ್ದ ಘೋರಾಕೃತಿಯ ಒಬ್ಬ ಕರೀಟೊಣ್ಯನನ್ನು ನೋಡಿ ಭಯವೂ ಮೈನಡುಕವೂ ಉಂಟಾದುವಾದರೂ ಧೈರ್ಯ ತಂದುಕೊಂಡು, ನೀನಾರು ನನ್ನನ್ನು ಏಕೆ ಇಲ್ಲಿಗೆ ಕರೆದು ಕೊಂಡುಬಂದಿರುವಿ? ಎಂದು ಆ ವಿಕಾರಸ್ವರೂಪನನ್ನು ಕೇಳಿ ದೆನಲ್ಲದೆ, ನನ್ನ ಹತ್ತಿರ ದುಡ್ಡೇನೂ ಇಲ್ಲವೆಂದು ಹೇಳಿದೆನು. ಅದಕ್ಕೆ ಆ ಟೊಣ್ಯನು ನಾಳೆಯದಿನ ನಿನ್ನನ್ನು ಮಾರಮ್ಮನಿಗೆ ಬಲಿಯನ್ನು ಕೊಡಲು ಕರೆದುಕೊಂಡುಬಂದಿರುತ್ತೇವೆಂದು ಹೇಳುತಲೆ ನನಗೆ ಸಿಡಿಲುಬಡಿದಷ್ಟು ಭಯಭ್ರಾಂತಿಯುಂಟಾ ಯಿತು. ಮಾರನೆಯದಿನ ನನ್ನ ಬಟ್ಟಬರೆಗಳನ್ನೆಲ್ಲಾ ತೆಗೆದು ಕೊಂಡು ನನ್ನನ್ನು ದಯವಿಟ್ಟು ಬಿಟ್ಟುಕೊಡಿ ಎಂದು ಅವರ ನ್ನು ಎಷ್ಟೋ ವಿಧವಾಗಿ ಕೇಳಿಕೊಂಡೆನು. ಆದರೂ ಅವರಿಗೆ ನನ್ನ ಮೇಲೆ ಕನಿಕರಹುಟ್ಟಲಿಲ್ಲವಾಗಿ ನಾನು ಮನಸ್ಸಿಗೆ ಧೈರ್ಯವನ್ನು ತಂದುಕೊಂಡು, ನಾನೇನೋ ಬಲಿಕೊಡ ಲ್ಪಡುವೆನಾದುದರಿಂದ ದೇವರಧ್ಯಾನ ಮಾಡಲು ಅವಕಾಶ ವನ್ನು ಕೊಡಿ ಎಂದು ಕೇಳಿಕೊಂಡುದರ ಮೇಲೆ ಅವರು ಅದಕ್ಕೊಪ್ಪಿಕೊಂಡರು. ನನ್ನ ಹತವಿಧಿಯನ್ನು ಕುರಿತು ಚಿಂತಿಸುವಾಗ್ಗೆ ನನಗೆ ಕೊಂಚ ಸ್ಮೃತಿತಪ್ಪಿತು. ಆದರೂ ಕೂಡಲೆ ಚೇತರಿಸಿಕೊಂಡು, ಮಲಬಾಧೆಗೆ ಬಹಳ ಅವಸರವಾ ಗುತ್ತದೆ ಕೊಂಚ ಬಿಟ್ಟುಕೊಡಿ ಎಂದು ಅವರುಗಳನ್ನು ಕೇಳ ಲು, ಬಿಡುವುದಿಲ್ಲವೆಂದು ಅವರು ಗದ್ದರಿಸಿ ಹೇಳಿದರು. ಹಾಗೆ ನೀವು ಅವಕಾಶಕೊಡದಿದ್ದ ಪಕ್ಷದಲ್ಲಿ ಉಟ್ಟ ಬಟ್ಟೆಯಲ್ಲೇ ವಿಸರ್ಜನೆ ಮಾಡಬೇಕಾಗುತ್ತದೆ; ಅದರಿಂದ ಅಶುಚಿಯಾಗು ನೀವು ಕುರಿ ಕೋಣಗಳನ್ನು ಸಹ ಕೊಳೆದು ಮಡಿ ಗಳನ್ನು ಹಾಕಿ ಅರಿಶಿನ ಕುಂಕುಮಗಳಿಂದ ಅಲಂಕರಿಸಿ ಬಲಿಕೊಡುವಿರಲ್ಲವೆ? ಆದುದರಿಂದ ನಾನು ಜಲಮಲ ಬಾಧೆಗಳನ್ನು ತೀರಿಸಿಕೊಂಡು ಶುಚಿಯಾಗಿರುವುದಕ್ಕಾಗಿ ನೀರಿರುವ ಕಡೆಗೆ ಕರೆದುಕೊಂಡು ಹೋಗಿ ಎಂದು ಬಹಳವಾಗಿ ಹೇಳಿಕೊಂಡುದರ ಮೇಲೆ ಒಬ್ಬನು ನನ್ನನ್ನು ಹಿಡಿದುಕೊಂಡು ಒಂದು ಹಳ್ಳಕ್ಕೆ ಕರೆದುಕೊಂಡು ಬಂದನು. ಕೊಂಚ ದೂರ ನಿಂತುಕೊಳ್ಳುವಂತೆ ನಾನು ಅವನನ್ನು ಕೇಳಿಕೊಂಡು ಮಲವಿಸರ್ಜನೆಗಾಗೆಂದು ಹಳ್ಳದಲ್ಲಿ ಕೊಂಚಕಾಲ ಕುಳಿತುಕೊಂಡಿದ್ದಂತೆ ನಟಿಸಿ ನನ್ನ ಬೆಂಗಾವಲಿದ್ದವನು 10-12 ಗಜ ದೂರದಲ್ಲಿ ನಿಂತಿರುವಾಗ್ಗೆ ನಾನು ಊರಿನ ಕಡೆಗೆ ಸೇರಿಕಿತ್ತೆನು. ಕಾವಲಿದ್ದವನು ಆಸಾಮಿ ಪರಾರಿಯೆಂದು ಕೂಗುತ್ತ ನನ್ನನ್ನ ಹಿಂಬಾಲಿಸಿದನು. ನಾನು ಮಲವಿಸರ್ಜನೆ ಮಾಡಿಬರುವುದನ್ನ ನಿರೀಕ್ಷಿಸಿಕೊಂಡಿದ್ದ ನಾಲ್ವರು ಮನುಷ್ಯರೂ ಇದನ್ನ ಕೇಳಿ ನನ್ನ ಹಿಂದೆಯೇ ಓಡಿಬಂದರು. ನಾನು ಇವರು ಬೆನ್ನಹತ್ತಿ ಬರುವುದನ್ನು ಕಂಡು ಮೈ ಮೇಲೆ ಪ್ರಜ್ಞೆ ಇಲ್ಲದೆ ಮತ್ತು ಹಳ್ಳಕೊಳ್ಳಗಳನ್ನು ಲಕ್ಷಿಸದೆ ಒಂದೇ ಉಸಿರಿಗೆ ಓಡಿ ಓಡಿ ಒಂದು ಗಂಧದೆಣ್ಣೆ ಕಾರ್ಖಾನೆಯ ಬಳಿಯಿರುವ ದೀಪದ ಬೆಳಕನ್ನು ಕಂಡು ಕೊಂಚಧೈರ್ಯತಂದುಕೊಂಡು ಎಲ್ಲೂ ನಿಲ್ಲದೆ ಮನೆಗೆ ಬಂದೆನು. ಈ ಮಧ್ಯೆ ನಾನು ಓಡಿಬರುವಾಗ್ಗೆ ನನ್ನನ್ನು ಹಿಂಬಾಲಿಸಿದ್ದವರಲ್ಲೊಬ್ಬನು ಕತ್ತಲೆಯಲ್ಲಿ ಒಂದು ಹಳ್ಳಕ್ಕೆ ಮುಗ್ಗರಿಸಿಬಿದ್ದುಬಿಟ್ಟಿದ್ದನು. ನಾನು ಮನೆಯೊಳಗೆ ಪ್ರವೇಶಿಸುತಲೆ ಮೂರ್ಛಿತನಾಗಿ ಬಿದ್ದಿದ್ದು ಮನೆಯವರು ಪಚಾರದಿಂದ ಚೇತರಿಸಿಕೊಂಡನೆಂದು ಗೊತ್ತಾಯಿತು. ಎಂದು ವಿದ್ಯಾರ್ಥಿ ಮ|| ರಾಮಸ್ವಾಮಿಯವರು ಕಂಡು ಕೇಳಿದವರಿಗೆಲ್ಲಾ ಹೇಳುತ್ತಿರುವರಲ್ಲದೆ ಸ್ಥಳ ಪರಸ್ಥಳ ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಗಿ ಜನರು ತಮಗೆ ತೋರಿದಂತೆ ವ್ಯಾಖ್ಯಾನಮಾಡುತ್ತಿರುವರಾದುದರಿಂದ, ಏನನ್ನೂ ಅರಿಯದ ಜನರ ಮನಸ್ಸಿನಲ್ಲಿ ಒಂದು ವಿಧವಾದ ಕಳವಳವುಂಟಾಗಿರುತ್ತದೆ. ಈ ರಾಮಸ್ವಾಮಿಯವರಿಗೆ ಹಿಂದೆ ಒಂದುಕಾಲದಲ್ಲಿ ಕೊಂಚ ಚಿತ್ತಭ್ರಮೆಯುಂಟಾಗಿದ್ದಿತೆಂದೂ, ಅದೇ ರೀತಿ ಈ ವೇಳೆಯೂ ಆಗಿದ್ದು ಈ ಪ್ರಕಾರ ಹೇಳುತ್ತಿರಬಹುದೆಂದೂ ಕೆಲರಾಡಿಕೊಳ್ಳುತ್ತಿದ್ದಾರೆ. ಯಾವುದೋ ನಿಗೂಢವಾದ ಕಾರಣದಿಂದ ಇಂತಹ ವಿಪತ್ತಿಗೆ ಗುರಿಯಾಗಿ ಅದನ್ನು ಹೇಳಿಕೊಳ್ಳಲಿಕ್ಕೆ ನಾಚುಗೆಗೊಂಡು ಈ ಅದ್ಭುತ ಕಥೆಯನ್ನು ಹುಟ್ಟಿಸಿರುವುದಾಗಿದೆಯೆಂದು ಮತ್ತೆ ಕೆಲರು ಅಂದುಕೊಳ್ಳುತ್ತಿದಾರೆ. ಈ ರಾಜಧಾನಿಯಲ್ಲಿ ಯಾವಾಗಲೂ ಯಾರಿಂದಲೂ ಮಾರಿ ಮಸ್ಣಿಗಳಿಗೆ ನರಬಲಿ ಕೊಡುವ ಪ್ರಯತ್ನವು ನಡೆದಿದ್ದುದನ್ನು ಕೇಳಿಲ್ಲವೆಂದು ಬಹಳ ವೃದ್ಧರು ಹೇಳುತ್ತಿರುವರು; ನಾವಾದರು ಇದೇ ಅಭಿಪ್ರಾಯವುಳ್ಳವರಾಗಿರುತ್ತೇವೆ. ಈ ಭಯಭ್ರಾಂತಿಕರವಾದ ನರಬಲಿಯ ಕಟ್ಟುಕಥೆಯನ್ನು ಯಾರೂ ನಂಬಿ ಕಳವಳಪಡಬೇಕಾದುದಿಲ್ಲವು. ಮತ್ತು ಡೆ|| ಕ|| ರವರಾಗಲಿ ಪೊಲೀಸಿನವರಾಗಲಿ ಈ ಕಥೆಯು ಹುಟ್ಟಲು ಕಾರಣವನ್ನು ತಿಳಿದು ನಿಜಾಂಶವನ್ನು ಪ್ರಕಟಿಸಿ ಭಯಗ್ರಸ್ತರಾದ ಜನರ ಮನಸ್ಸಿಗೆ ಸಮಾಧಾನವನ್ನುಂಟುಮಾಡುವುದಾವಶ್ಯಕವು.

ಪುರುಷಗರ್ಭವು.

ಅವಳಿಜವಳಿ ಪಿಂಡಗಳು ಧರಿಸಲ್ಪಟ್ಟಿದ್ದುವು.

ನ್ಯೂಯಾರ್ಕಿನಲ್ಲಿ ಪ್ರಕಟವಾಗುವ "ಮೆಡಿಕಲ್ ಕ್ರಿಟಿಕ್ ಮತ್ತು ಗೈಡ್" ಎಂಬ ವೈದ್ಯಪತ್ರಿಕೆಯಲ್ಲಿ ವಿಚಿತ್ರಮಯವಾದ ಪುರುಷಗರ್ಭಧಾರಣೆಯ ವಿಚಾರವು ಪ್ರಕಟವಾಗಿರುತ್ತದೆ. ಸರ್ಬಿಯಾಕ್ಕೆ ಸೇರಿದ ಬೆಲಗ್ರೇಡಿನ ಜನರಲ್ ಆಸ್ಪತ್ರೆಗೆ ಕೆಲವಾರಗಳ ಕೆಳಗೆ 22 ವರ್ಷ ವಯಸ್ಸಿನ ಒಬ್ಬ ಟೊಣ್ಯರೈತನು ಬಂದು ಹೊಟ್ಟೆ ನೋಯುತ್ತದೆಂದು ಡಾಕ್ಟರಿಗೆ ತಿಳಿಸಿದನು. ಡಾಕ್ಟರು ಆ ರೈತನ ಹೊಟ್ಟೆಯನ್ನು ಪರೀಕ್ಷಿಸಿ ಹೊಟ್ಟೆಯಲ್ಲಿ ಏನೋ ಒಂದು ವಿಚಿತ್ರವಾದ ಗಡ್ಡೆಯು ಬಳೆದುಕೊಂಡು ಬಂದಿರುತ್ತದೆ; ಅದನ್ನು ಕುಯಿದುನೋಡಬೇಕೆಂದು ಹೇಳಿ ಲೋಕವಿಖ್ಯಾತ ಡಾಕ್ಟರಾದ ಹಾರಿಕ್‌ರವರು ಆ ರೈತರೋಗಿಯ ಹೊಟ್ಟೆಯನ್ನು ಕುಯಿದು ಒಳಗಿದ್ದ ಬಹು ದಪ್ಪನಾದ ಗಡ್ಡೆಯನ್ನು ಹೊರಕ್ಕೆ ತೆಗೆದು ಅದನ್ನು ಉಪಾಯದಲ್ಲಿ ಬಿಚ್ಚಿನೋಡಲು ಎರಡು ಪುರುಷಪಿಂಡಗಳಿದ್ದುವು. ಅವುಗಳಲ್ಲೊಂದು 10 ಅಂಗುಲ ಉದ್ದವೂ ಇನ್ನೊಂದು 5 ಅಂಗುಲ ಉದ್ದವೂ [illegible]ವು. ಅವೆರಡರಲ್ಲಿ ದೊಡ್ಡಪಿಂಡದ ತಲೆ, ಬಾಯಿ, ಕುತ್ತಿಗೆ [illegible]ಲುಗಳು ಚೆನ್ನಾಗಿ ಬಳೆದು ಪುಷ್ಟವಾಗಿದ್ದು ಎರಡುಹಲ್ಲುಗಳೂ ಹುಟ್ಟಿದ್ದುವು. ಎಡಗೈನಲ್ಲಿ 6 ಬೆರಳುಗಳಿದ್ದು ಉಗುರುಗಳು ಉದ್ದವಾಗಿ ಬೆಳೆದಿದ್ದುವು. ಇನ್ನೊಂದು ಚಿಕ್ಕಪಿಂಡವು ಇನ್ನೂ ಚೆನ್ನಾಗಿ ರೂಪುಗೊಂಡಿರಲಿಲ್ಲವಾದರೂ ಮೂಳೆಯನ್ನು [illegible]ಯಾದ ಎರಡು ದೊಡ್ಡಕಣ್ಣುಗಳು ಮಾತ್ರ ಇದ್ದುವು. [illegible]ಲೋಕಾಶ್ಚರ್ಯಕರವಾದ ವರ್ತಮಾನವು ಜ್ವಾಲೆಯೋಪಾದಿ ಊರಲ್ಲೆಲ್ಲಾ ಹಬ್ಬಿ ಜನರು ಆಶ್ಚರ್ಯಚಕಿತರಾಗಿ ತಂಡತಂಡವಾಗಿ ಬಂದು ಗರ್ಭಧಾರಣೆ ಮಾಡಿದ್ದ ಆ ಪುರುಷ ರೈತನನ್ನು ನೋಡಿಕೊಂಡು ಹೋಗುತ್ತಿದ್ದರು. ಡಾಕ್ಟರು [illegible] ಈ ದೈವಸೃಷ್ಟಿಗೆ ವಿರುದ್ಧವೂ ಅತ್ಯಂತ ವಿಚಿತ್ರವೂ [illegible]ತಪೂರ್ವವೂ ಆದ ಪುರುಷಗರ್ಭಧಾರಣೆಯನ್ನು ನೋಡಿ [illegible]ರಾಗಿ ಇದರ ಕಾರಣವನ್ನು ತಮ್ಮ ಬುದ್ಧಿ ಶಕ್ತಿ ಸಾಮ[illegible]ನ್ನೆಲ್ಲಾ ವೆಚ್ಚಮಾಡಿ ಕಂಡು ಹಿಡಿದುದರಲ್ಲಿ, ಗರ್ಭವನ್ನು [illegible] ಯುವಕನ ತಾಯಿಯು ಅವನ ಸಮೇತ 3 ಪಿಂಡಗಳನ್ನು ಧರಿಸಿರಬೇಕೆಂದೂ ಅವುಗಳಲ್ಲಿ ಎರಡು ಪಿಂಡಗಳೂ ಇನ್ನೂ ಚೆನ್ನಾಗಿ ಬಲಿತು ಪ್ರಾಣಧಾರಣೆ ಮಾಡುವುದಕ್ಕೆ ಪೂರ್ವ ಆ ರೈತನ ಪಿಂಡಕೋಶದೊಳಗೆ ಸೇರಿಕೊಂಡು ಅವನು ಜನಿಸಿದ ಮೇಲೆ ಈವರೆಗೂ ಅವನ ಹೊಟ್ಟೆಯಲ್ಲಿದ್ದುಕೊಂಡು ಬಂದವೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಇದು ಸೃಷ್ಟಿಕ್ರಮಕ್ಕೆ ವ್ಯತಿರಿಕ್ತವಾಗಿರುವುದರಿಂದ ನಂಬಲು ಸಾಧ್ಯವಿಲ್ಲವಾದರೂ ಪ್ರಸಿದ್ಧ ಡಾಕ್ಟರುಗಳು ಪರೀಕ್ಷಿಸಿ ಹೇಳಿರುವುದರಿಂದ ನಂಬಬೇಕಾಗಿದೆ. ಈ ಕಲಿಯುಗದಲ್ಲಿ ಇನ್ನೇನು ವಿಚಿತ್ರಗಳು ನಡಿಯುವುವೋ ಯಾರು ಬಲ್ಲರು!

ಪ್ರಿನ್ಸ್ಆಫ್‌ವೇಲ್ಸ್‌ರವರು ಗಾಯಪಡೆದುದು.

ಪ್ರಿನ್ಸ್‌ಆಫ್‌ವೇಲ್ಸ್‌ರವರು ಕಳೆದ ತಾ|| 17 ರಲ್ಲಿ ಸೈನಿಕ ಸ್ವಾರರಕೂಡ ತಮ್ಮ ಕುದುರೆಯನ್ನು ಬೇಲಿ ದಾಂಟಿಸುವಾಗ್ಗೆ ಮೊದಲಾವೃತ್ತಿ ಇತರ ಮೂರು ಕುದುರೆಗಳು ಬಿದ್ದುಹೋದುವು; ಕಡೆವೇಳೆ ಯುವರಾಜರವರ ಕುದುರೆಯೂ ಬಿದ್ದುಹೋಗಿ ಅವರ ಹಣೆಗೂ ಕೈಗಳಿಗೂ ಪೆಟ್ಟು, ಕೊಂಚ ಹೆಚ್ಚಾಗಿಯೇ ಬಿದ್ದಿತು ಮತ್ತು ಕುದುರೆಯ ಪಾದತಾಡನವು ಅವರ ಹಣೆಗೆ ಬಿದ್ದು ಮೂಗಿನಿಂದ ರಕ್ತವು ಬಹಳವಾಗಿ ಸುರಿದುದರಿಂದ ಕೊಂಚ ಸ್ಮೃತಿಯು ತಪ್ಪಿದ್ದಿತು. ಆ ಕೂಡಲೆ ಯುವರಾಜರು ಮೋಟಾರು ಬಂಡಿಯಲ್ಲಿ ಆಲ್ಡರ್‌ಷಾಟಿನಲ್ಲಿರುವ ಅವರ ವ್ಯವಸಾಯ ಗೃಹಕ್ಕೆ ಸಾಗಿಸಲ್ಪಟ್ಟು ಉಪಚರಿಸಲ್ಪಡುತ್ತಿರುವರು; ಇನ್ನೂ ಲಂಡನ್ ಪಟ್ಟಣಕ್ಕೆ ಬಂದಿಲ್ಲವು. ಕಳೆದ ಫೆಬ್ರವರಿಯಲ್ಲಿ ಹೀಗೆಯೇ ಕುದುರೆ ಮೇಲಿಂದ ಬಿದ್ದು ಕತ್ತಿನ ಎಲಬಿಗೆ ಪೆಟ್ಟು ತಾಗಿದ್ದಿತು. ತದಾರಭ್ಯ ಯುವರಾಜರು ಹೊರಗೆ ಸ್ವಾರಿ ಮಾಡಿಕೊಂಡು ಬಂದಿರಲಿಲ್ಲವು.

ಸ್ಟ್ಯಾಂಡಿಂಗ್ ಕಮಿಟಿಗಳಿಗೂ ಬೋರ್ಡುಗಳಿಗೂ ಚುನಾಯಿಸಲ್ಪಟ್ಟ ಮೆಂಬರುಗಳು.

ರೈಲ್ವೆ, ವಿದ್ಯುಚ್ಛಕ್ತಿ, ಇಂಜನಿಯರ್ ಇಲಾಖೆಗಳ ಸ್ಟ್ಯಾಂಡಿಂಗ್ ಕಮಿಟಿಗೆ—

ಮ|| ಗಳಾದ ಬಿ. ಎಲ್. ಬೈಯಣ್ಣನವರು, ನೀಲಗಿರಿ ಸಂಜೀವಯ್ಯನವರು, ಜಿ. ಉಸ್ಮಾನ್‌ಖಾನ್‌ರವರು, ಕರ್ಣಿಕ ಕೃಷ್ಣಮೂರ್ತಿರಾಯರು, ಸಿ. ಅಬ್ದುಲ್ ನಬಿಯವರು, ಡಿ. ಎಸ್. ಮಲ್ಲಪ್ಪನವರು, ಚೆನ್ನಪ್ಪನವರು, ಎಸ್. ವೀರಭದ್ರಪ್ಪನವರು, ಎಸ್. ಸಿ. ಮಲ್ಲಯ್ಯನವರು, ಸಿ. ಸುಬ್ಬರಾಯರು, ಸಿ. ನಾರಾಯಣಸ್ವಾಮಿಶೆಟ್ಟರು, ಎಸ್. ದೇವಯ್ಯನವರು, ಎಸ್. ಕೃಷ್ಣಸ್ವಾಮಿರಾಯರು, ಎಂ. ಗುರುಲಿಂಗಪ್ಪನವರು, ಎಫ್. ಎಂ. ಅಬ್ದುಲ್‌ಖುದ್ದುಸ್‌ರವರು.

ಲೋಕಲ್ ಸೆಲ್ಫ್ ಗವರ್ನಮೆಂಟ್ ಸ್ಟ್ಯಾಂಡಿಂಗ್ ಕಮಿಟಿಗೆ.

ಮ|| ಗಳಾದ ಜಿ. ಕೆ. ಬಲಿಜರವರು, ಕೆ. ರಾಮೇಗೌಡರು, ಎಂ. ಸಿ. ಲಕ್ಷ್ಮೀಪತಯ್ಯನವರು, ಕರಣಿಕ ಕೃಷ್ಣಮೂರ್ತಿರಾಯರು, ಎಂ. ವೆಂಕಟಕೃಷ್ಣಯ್ಯನವರು, ಬಳೆ ಸಿದ್ಧಲಿಂಗಸೆಟ್ಟರು, ಜಿ. ಎಸ್. ಮಹಲಿಂಗಪ್ಪನವರು, ಮೀರ್ ಮಹಮದ್‌ರವರು, ಆರ್. ಗೋಪಾಲಸ್ವಾಮಿ ಅಯ್ಯರ್‌ರವರು, ಎನ್. ಗುರುಲಿಂಗಪ್ಪನವರು, ಎಸ್. ವೀರಭದ್ರಪ್ಪನವರು, ಬಿ. ಉಸ್ಮಾನ್‌ಖಾನ್‌ರವರು, ಜೆ.ಆರ್. ಬಿಜಕ್‌ರವರು, ಬಿ. ನರಸಿಂಗರಾಯರು, ಭಾವಿಕಟ್ಟೆ ಚನ್ನಬಸಪ್ಪನವರು.

ಹಣಕಾಸು ಮತ್ತು ತೆರಿಗೆಗಳ ಸ್ಟ್ಯಾಂಡಿಂಗ್ ಕಮಿಟಿಗೆ—

ಮ|| ಗಳಾದ ಶಿಂಗ್ರಿನಂಜಪ್ಪನವರು, ಜಿ. ಪರಮಶಿವಯ್ಯನವರು, ಬಿ. ಎಲ್. ಬೈಯಣ್ಣನವರು, ಕರಣಿಕ ಕೃಷ್ಣಮೂರ್ತಿರಾಯರು, ನೀಲಗಿರಿ ಸಂಜೀವಯ್ಯನವರು, ಡಿ. ಎಸ್. ಮಲ್ಲಣ್ಣನವರು, ಬಿ. ನರಸಿಂಗರಾಯರು, ಎಸ್. ಶ್ರೀಕಂಠಯ್ಯನವರು, ಜಿ. ಎಸ್. ಮಹಲಿಂಗಪ್ಪನವರು, ಸಿ. ಅಬ್ದುಲ್ ನಬಿಯವರು, ಸಿ. ಸುಬ್ಬರಾಯರು, ಹೊಸಕೊಪ್ಪ ಕೃಷ್ಣರಾಯರು, ದುಮ್ಮಿ ಪಂಚಾಕ್ಷರಪ್ಪನವರು. ಸಾಟಿ ಹಾಲಪ್ಪನವರು, ಎಂ. ಎಸ್, ನರಸಿಂಗರಾಯರು.

ವಿದ್ಯಾಭ್ಯಾಸದ ಬೋರ್ಡಿಗೆ.

ಮ|| ಗಳಾದ ಜಿ. ಮಲ್ಲಣ್ಣನವರು, ಎಂ.ಎಸ್.ನರಸಿಂಗರಾಯರು.

ಕಸಬು, ವಾಣಿಜ್ಯಗಳ ಬೋರ್ಡಿಗೆ.

ಮ|| ಗಳಾದ ಎನ್. ಎಂ. ಶಿವಲಿಂಗಪ್ಪನವರು, ಸಾಟಿ ಹಾಲಪ್ಪನವರು.

ವ್ಯವಸಾಯದ ಬೋರ್ಡಿಗೆ.

ಮ|| ಗಳಾದ ಮುಚ್ಚೀರೇಗೌಡರು, ಎಚ್. ಬೋರಣ್ಣನವರು.

ಸ್ವದೇಶದ ವೃತ್ತಾಂತಗಳು.

ಆಲಬೆಟ್ಟಹಳ್ಳಿಯ ಕೊಲೆಯ ಕೇಸು ಶೆಷನ್ಸು ವಿಚಾರಣೆಗೆ ಕಮಿಟ್ ಆಗಿರುತ್ತದೆ, ಮತ್ತು ಶೆಷನ್ಸು ವಿಚಾರಣೆಗೆ ಗುರಿಯಾಗಿರುವ [illegible] ಕೊಲೆಯ ಕೇಸು ಈ ತಾ|| 27ರಲ್ಲಿ ನಡಿಯುವುದು.

ಪ್ರಥಮರಾಜ ಕುಮಾರಿಯವರು ಮದ್ರಾಸಿನಲ್ಲಿ ಎರಡು ವಾರಗಳ ಕಾಲ ಇದ್ದು ಬರಲು ಮ|| ಎಂ. ಪಿ. ಸುಬ್ರಹ್ಮಣ್ಯರಾಜ ಅರಸಿನವರು ಮತ್ತೆ ಕೆಲ ಮಿತಪರಿವಾರದೊಡನೆ ದಯಮಾಡಿಸಿರುವರು.

ಬೆಂಗಳೂರು ಮ್ಯು|| ಕೌನ್ಸಿಲ್ ಪ್ರೆಸಿಡೆಂಟರಾಗಿದ್ದ [illegible] ಮ|| [illegible] ಅನಂತರಾಯರು [illegible] ತಾ|| 21ರಲ್ಲಿ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಡಾಕ್ಟರ್ ಆಸ್ಮಾನ್‌ರವರು 5-6 ದಿನಗಳಿಂದಲೂ ನ್ಯುಮೋನಿಯ ಜ್ವರಪೀಡಿತರಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರೆಂದು ಕೇಳಿ ವಿಷಾದಿಸುತ್ತೇವೆ, ಮತ್ತು ಜಾಗ್ರತೆಯಲ್ಲಿ ಗುಣವನ್ನು ಹೊಂದಲೆಂದು ಹಾರೈಸುತ್ತೇವೆ.

ಅಫಿಸಿಯೇಟಿಂಗ್ ರೆಸಿಡೆಂಟರಾದ ಮಿ|| ವಾಟ್ಸನ್‌ರವರು ಸಪತ್ನೀಕರಾಗಿ ತಾ|| 21 ರಲ್ಲಿ ರಾಜಧಾನಿಗೆ ಬಂದು ಶ್ರೀಮನ್ ಮಹಾರಾಜರವರ ಅತಿಥಿಗಳಾಗಿ ಗೌರ್ನಮೆಂಟ್ ಹೌಸಿನಲ್ಲಿಳಿದುಕೊಂಡಿದ್ದು ಶ್ರೀಮನ್ ಮಹಾರಾಜರವರ ದರ್ಶನ ಪ್ರತಿದರ್ಶನ ಮಾಡಿಕೊಂಡು ಕೊಡಗಿಗೆ ಪ್ರಯಾಣಮಾಡಿದರು.

ಎಕ್ಸೈಸ್ ಕಮಿಷನರಾದ ಮ|| ಎ. ಸುಬ್ರಹ್ಮಣ್ಯಯ್ಯರ್‌ರವರು 6 ತಿಂಗಳ ಕಾಲ ಫರ್ಲೋ ರಜವನ್ನು ತೆಗೆದುಕೊಳ್ಳುವುದರಿಂದ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರಾಗಿರುವ ಮ|| ಬಾಲಸುಂದರಂ ಅಯ್ಯರ್‌ರವರು ಎಕ್ಸೈಸ್ ಕಮಿಷನರಾಗಿಯೂ, ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಮ|| ಎನ್. ಎಸ್. ಸುಬ್ಬರಾಯರು ವಿದ್ಯಾಭ್ಯಾಸದ ಇ|| ಜನರಲ್‌ರವರಾಗಿಯೂ ನಿಯಮಿಸಲ್ಪಡುವರೆಂಬ ವದಂತಿಯದೆ.

ಕೊಯಂಬತ್ತೂರಿನ ಸೂಪರಿಂಟೆಂಡಿಂಗ್ ಇಂಜನಿಯರ್ ಮೋಲ್ಸ್‌ವರ್ತ್ ರವರು ಸಪತ್ನೀಕರಾಗಿ ಮೋಟಾರುಬಂಡಿಯಲ್ಲಿ ಉದಕಮಂಡಲಕ್ಕೆ ಹೋಗುತ್ತಿರುವಾಗ್ಗೆ ಗುಂಡ್ಲುಪೇಟೆಗೆ 10-11 ಮೈಲಿ ದೂರದಲ್ಲಿ ಒಬ್ಬ ಶಿವಾಚಾರದ ಹೆಂಗುಸಿಗೆ ಬಂಡಿಯು ತಗುಲಿ ಗಾಯವಾದುದರ ಮೇಲೂ ಬಂಡಿಯನ್ನು ನಡಿಸುತ್ತಿದ್ದವನು ತೆಗೆದುಕೊಂಡಿದ್ದ ಲೈಸನ್ಸಿನ ಕಾಲಾವಧಿಯು ಗತಿಸಿಹೋಗಿದ್ದುದರ ಮೇಲೂ ಪೊಲೀಸರು ಅವನನ್ನು ಹಿಡಿದು ವಿಚಾರಣೆಗೆ ಗುರಿಪಡಿಸಿರುವರು.

ರಾಜಧಾನಿಯ ಮ್ಯು|| ಕೌನ್ಸಿಲ್ ಪ್ರೆಸಿಡೆಂಟುದ್ಯೋಗದಿಂದ ನಿವೃತ್ತರಾಗುವ ದಿ|| ಬ|| ಶ್ರೀಕಂಠೇಶ್ವರ ಅಯ್ಯರ್‌ರವರು ನ್ಯಾಯವಿಧಾಯಕ ಸಭೆಯ ಮೆಂಬರಾಗಿ ಸರ್ಕಾರದವರಿಂದ ನಿಯಮಿಸಲ್ಪಟ್ಟಿರುತ್ತಾರೆ. ಇದಕ್ಕೆ ಮೊದಲೇ ರಾ|| ಬ|| ಎಂ. ಶಾಮರಾಯರು ನಿಯಮಿಸಲ್ಪಟ್ಟಿರುವರು. ಹೀಗೆ ರಿಟೈರ್ಡ್ ಆಫೀಸರನ್ನು ನ್ಯಾಯವಿಧಾಯಕಸಭಾ ಸಭಿಕರನ್ನಾಗಿ ನೀಯಮಿಸಿಕೊಳ್ಳುತ್ತಿರುವುದನ್ನೋಡಿದರೆ ಸಭೆಯಲ್ಲಿ ಸರ್ಕಾರದ ಪಕ್ಷವನ್ನು ಬಲಪಡಿಸಿಕೊಳ್ಳುವುದಕ್ಕಾಗೆಂದು ತೋರುತ್ತದೆ.

ಹಾಸನ ಡಿ|| ಡೆಪ್ಯುಟಿ ಕಮಿಷನರಾದ ಮ|| ಕೆ. ಮೈಲಾರ್‌ರಾವ್, ಬಿ.ಎ., ಬಿ.ಎಲ್., ರವರು ಬರುವ ಏಪ್ರಿಲ್ ತಾ|| 1 ರಿಂದ ಉದ್ಯೋಗದಿಂದ ನಿವೃತ್ತರಾಗಲು ಅಪ್ಪಣೆ ಕೊಡಲ್ಪಟ್ಟು ದಿ|| ಬ|| ಶ್ರೀಕಂಠೇಶ್ವರಯ್ಯರ್‌ರವರ ಬದಲು ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುವುದರಿಂದ ಕೋಲಾರದ ಗಣಿಯಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿರುವ ಮ|| ಎ. ವಿ. ರಾಮನಾಥನ್, ಬಿ.ಎ. ಯವರು ಹಾಸನದ ಡಿ|| ಆಕ್ಟಿಂಗ್ ಡೆ|| ಕಮಿಷನರಾಗಿ ನಿಯಮಿಸಲ್ಪಟ್ಟಿರುವರು.

ಮಿ|| ಮಹಮದ್ ಜಾಫರ್‌ಸಾಹೇಬರವರು ಪೊಲೀಸು ಸೂಪರಿಂಟೆಂಡೆಂಟ್ ಉದ್ಯೋಗದಿಂದ ನಿವೃತ್ತರಾದಾರಭ್ಯ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರಾಗಿಯೂ, ಟ್ರಸ್ಟ್‌ಬೋರ್ಡಿನ ಮೆಂಬರಾಗಿಯೂ ಇದ್ದು ಈಚೆಗೆ ತಮಗುಂಟಾದ ಅಸ್ವಸ್ಥತೆಯ ದೆಸೆಯಿಂದ ಮೇಲ್ಕಂಡ ಎರಡು ಉದ್ಯೋಗಗಳನ್ನೂ ತ್ಯಜಿಸಿಬಿಟ್ಟುದರ ಮೇಲೆ ಅವರ ಬದಲು ಮ್ಯು|| ಕೌನ್ಸಿಲರೂ ಆನರರಿ ಮ್ಯಾಜಿಸ್ಟ್ರೇಟರೂ ಆದ ಮಿ|| ಟಿಪ್ಪುಸುಲ್ತಾನ್ ಅಲ್ಲಿಖಾನ್‌ರವರು ಟ್ರಸ್ಟ್‌ಬೋರ್ಡು ಮೆಂಬರಾಗಿ ನಿಯಮಿಸಲ್ಪಟ್ಟಿರುವರು.

ಶ್ರೀ ಶೃಂಗಗಿರಿ ಸ್ವಾಮಿಗಳು ಕಳೆದ ಸೋಮವಾರ ರಾಜಮುದ್ರಾದಿಯಿಂದ ರಾಜಧಾನಿಗೆ ಚಿತ್ತೈಸಿ ಸಂಸ್ಕೃತ ಮಹಾಪಾಠಶಾಲಾ ಕಟ್ಟಡದಲ್ಲಿಳಿದುಕೊಂಡಿರುವರು. ನೆನ್ನೆಯದಿನ ಅರಮನೆಗೆ ದಯಮಾಡಿಸಿ ಶ್ರೀಮನ್ ಮಹಾರಾಜರವರಿಂದಲೂ ರಾಣೀವಾಸದವರಿಂದಲೂ ಪಾದಪೂಜೆಗೊಂಡು ಬಂದರು, ಮತ್ತು ಈ ದಿವಸ ದಿ|| ಬ|| ಶ್ರೀಕಂಠೇಶ್ವರ ಅಯ್ಯರ್‌ರವರ ಮನೆಗೆ ಪಾದಪೂಜೆ ಮತ್ತು ಭಿಕ್ಷೆಗಾಗಿ ಚಿತ್ತೈಸುವರೆಂದು ಕೇಳುತ್ತೇವೆ. ಪ್ರತಿನಿತ್ಯದಲ್ಲೂ ಮಠದಿಂದ ಸಾವಿರಾರು ಬ್ರಾಹ್ಮಣರಿಗೆ ಸಂತರ್ಪಣೆಯು ನಡಿಸಲ್ಪಡುತ್ತದೆ.

ಕಳೆದ ಸೋಮವಾರ ಮೇಲುಕೋಟೆಯಲ್ಲಿ ವೈರಮುಡಿಯುತ್ಸವವು ನಡೆಯಿತು. ಈ ವೇಳೆ ಅಲ್ಲಿ ನೀರಿನ ಅಭಾವವು ವಿಶೇಷವಾಗಿರುವುದರಿಂದ ಜನಸಂದಣಿಯಿಂದ ವಾಂತಿಭೇದಿ ರೋಗವು ಪ್ರಾಪ್ತವಾಗಬಹುದೆಂಬ ಶಂಕೆಯಿಂದ ಪರಸ್ಥಳಗಳಿಂದ ಬರುವ ಯಾತ್ರಿಕರು ಬಿಡಲ್ಪಡಕೂಡದೆಂದು ಸರ್ಕಾರದವರು ಕಟ್ಟುಮಾಡಿದ್ದರು. ಶ್ರೀ ಚೆಲುವರಾಯಸ್ವಾಮಿಯ ಹರಕೆಯನ್ನು ತೀರಿಸುವುದಕ್ಕಾಗಿ ಮದ್ರಾಸು ಮೊದಲಾದ ದೂರ ದೇಶಗಳಿಂದ ಬರತಕ್ಕ ಯಾತ್ರಿಕರಿಗೆ ಈ ನಿರ್ಬಂಧದಿಂದ ತೊಂದರೆಯಾಗಿರುವ ಪ್ರಯುಕ್ತ ಅದನ್ನು ತಪ್ಪಿಸಿಕೊಡಬೇಕೆಂದು ಮ|| ಸೆಟ್ಲೂರ್‌ರವರು ಶ್ರೀಮನ್ ಮಹಾರಾಜರವರಿಗೆ ಅರ್ಜಿಬರೆದುಕೊಂಡು ಬಹಳ ಗೊಂದಲವನ್ನೆಬ್ಬಿಸಿದುದರ ಮೇಲೆ ಪರಸ್ಥಳದಿಂದ ಜನರು ಮೇಲುಕೋಟೆಗೆ ಬಿಡಲ್ಪಡಕೂಡದೆಂಬ ನಿರ್ಬಂಧವು ತಪ್ಪಿಸಲ್ಪಟ್ಟುದಾಗಿ ಕೇಳುತ್ತೇವೆ.

ಒಳ್ಳೆ ಬೇಂಟೆಗಾರರಾದ ಮಿ|| ಇ. ಆರ್. ಷಾರವರು ಕಳೆದ ತಾ|| 10 ರಲ್ಲಿ ಕ್ಲೋಸ್‌ಪೇಟೆಗೆ ಬೇಂಟೆಗಾಗಿ ಬಂದು 15 ಗಜಗಳ ದೂರದಲ್ಲಿ ಅಕಸ್ಮಾತ್ತಾಗಿ ಇದಿರಿಗೆ ಕಾಣಿಸಿಕೊಂಡು ತಮ್ಮ ಮೇಲೆ ಹಾರಿಬೀಳಲು ಹವಣಿಸುತ್ತಿದ್ದ ಚಿರತೆಯನ್ನು ತಮ್ಮ ಕೋವಿಯಿಂದ ಎರಡು ವೇಳೆ ಅದರ ತಲೆಬುರುಡೆಗೆ ಗುರಿಕಟ್ಟಿ ಹೊಡೆದರು. ಆದರೂ ಆ ಚಿರತೆಯು ಅವರ ಮೇಲೆ ಹಾರಿಬಂದಿತು. ಆಗ ಷಾರವರು ಪುನಃ ಕೋವಿಯಿಂದ ಗುಂಡನ್ನು ಅದರ ದೇಹದ ಒಂದು ಪಾರ್ಶ್ವಕ್ಕೆ ಗುರಿಕಟ್ಟಿ ಹೊಡಿಯಲು ಅದು ಪೆಟ್ಟನ್ನು ತಿಂದು ಕೆಳಗೆ ಬಿದ್ದು ತೆವಳಿಕೊಂಡು ಒಂದು ಪೊದೆಗೆ ಹೋಗಿ ಸೇರಿ ಬಹಳ ಸುಸ್ತಾಗಿ ಬಿದ್ದು ಪ್ರಾಣಬಿಟ್ಟಿತು. ಆಗ ಷಾರವರು ಅದನ್ನು ತಡಕಿ ಹೊರಗೆ ತೆಗೆಸಿಕೊಂಡು ಬಂದರು. ಅದು ಕ್ಲೋಸ್‌ಪೇಟೆಗೆ ಎರಡುಮೈಲಿ ದೂರದಲ್ಲಿ ಒಬ್ಬ ಹಳ್ಳಿಯವನನ್ನು ಕೊಂದುಹಾಕಿದ್ದಿತು ಮತ್ತು ಆ ಪ್ರಾಂತದಲ್ಲಿ ಬಹಳ ಹಾವಳಿಮಾಡುತ ಜನರಿಗೆ ಭಯವನ್ನುಂಟುಮಾಡಿದ್ದಿತು. ಅದರ ಶರೀರವು 7 ಅಡಿ 10 ಅಂಗುಲ ಉದ್ದವಿದ್ದಿತಂತೆ. ಷಾರವರಿಗೆ ಅಧಿಕಾರಿಗಳಿಂದ ಬಹುಮಾನ ಕೊಡಲ್ಪಟ್ಟಿರುವುದಾದರೂ ಆ ಕ್ರೂರ ಪ್ರಾಣಿಯ ಹಾವಳಿಯನ್ನು ತಪ್ಪಿಸಿಕೊಟ್ಟುದಕ್ಕಾಗಿ ಇನ್ನೂ ವಿಶೇಷ ಬಹುಮಾನವನ್ನು ಕೊಡಬೇಕೆಂದು ಆ ಪ್ರಾಂತದ ಗ್ರಾಮಸ್ಥರುಗಳು ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿದ್ದಾರಂತೆ.

ಭರತಖಂಡದ ವೃತ್ತಾಂತಗಳು.

ಶಾಲ್ಯದಲ್ಲಿ ಸೇವಾಪೇಟೆಯ ಕಾರಿಕರ ಬೀದಿಯಲ್ಲೂ ಸೂರಮಂಗಳದಲ್ಲೂ ಕಳೆದ ತಾ|| 14 ರಲ್ಲಿ ಅಗ್ನಿ ಪ್ರವೇಶವಾಗಿ 70 ಮನೆಗಳು ಸುಟ್ಟು ಭಸ್ಮವಾದುವು ಮತ್ತು 40 ಜನರವರೆಗೆ ಸತ್ತು 3000 ರೂ. ವರೆಗೂ ನಷ್ಟವಾಗಿರುವುದಂತೆ.

ತಿರುಚನಾಪಲ್ಲಿ ಡಿಸ್ಟ್ರಿಕ್ಟಿಗೆ ಸೇರಿದ ಚಿರಕ್ಕಲ್ ಮತ್ತು ಕೊಟ್ಟಾಯಂ ತಾಲ್ಲೂಕುಗಳಲ್ಲಿ 170 ದೇವತೆಗಳು ಎಷ್ಟಾ

ಜಾತಿಯ ಜನರಿಂದ ಆರಾಧಿಸಲ್ಪಡುತ್ತಿರುವುದಾಗಿ ಆ ತಾಲ್ಲೂಕುಗಳಲ್ಲಿ ಈಚೆಗೆ ತೆಗೆಯಲ್ಪಟ್ಟ ದೇವರುಗಳ ಪರಿಗಣೆಕೆಯಿಂದ ತಿಳಿಯಬರುತ್ತದೆ.

ಕಲಕತ್ತಾದಲ್ಲಿ ಒಬ್ಬ ಮಾರ್ವಾಡಿ ಧನವಂತನ ಸೇವಕನು 10000 ರೂ. ಗಳ ನೋಟುಗಳನ್ನು ತೆಗೆದುಕೊಂಡು ಯಜಮಾನನ ಅಂಗಡಿಗೆ ಬರುತ್ತಿರುವಾಗ್ಗೆ ದಾರಿಯಲ್ಲಿ ಇಬ್ಬರು ಘಾತುಕರು ಅವನ ಹಿಂದಣಿಂದ ಬಂದು ಅವನನ್ನು ಹಿಡಿದುಕೊಂಡು ಒಬ್ಬನು ಚಾಕುವಿನಿಂದ ಸೇವಕನ ಹೊಟ್ಟೆಗೆ ತಿವಿದು ಕೆಳಕ್ಕೆ ಕೆಡವಿದನು ಮತ್ತೊಬ್ಬನು ಅವನ ಕೈಯಲ್ಲಿದ್ದ ನೋಟಿನ ಚೀಲವನ್ನು ಕಿತ್ತುಕೊಂಡು ಉಭಯರೂ ಪಲಾಯನರಾದರು.

ರೋಹಿಲ್‌ಕಂಡ್-ಕುಮಾನ್ ರೈಲ್ವೆಗೆ ಸೇರಿದ ಒಂದು ಮಿಕ್ಸೆಡ್ ಟ್ರೇನು ಕಳೆದ ತಾ|| 14 ರ ರಾತ್ರಿ 7 ಗಂಟೆಯಲ್ಲಿ ರಾಮಗಂಜ್ ಸೇತು ಮೇಲೆ ಹೋಗುತ್ತಿರುವಾಗ್ಗೆ ಪ್ರಚಂಡ ಸುಂಟರಗಾಳಿಯೆದ್ದು ಹಿಂಗಡೆಯಿದ್ದ 5 ಮೂರನೆ ತರಗತಿಯ ಬಂಡಿಗಳನ್ನೂ ಒಂದು ಬ್ರೇಕು ಬಂಡಿಯನ್ನೂ ಮೇಲಕ್ಕೆ ಹಾರಿಸಿಬಿಟ್ಟಿತು. ಇವುಗಳಲ್ಲಿ 3 ಬಂಡಿಗಳು ನದಿಯ ನೀರಿನೊಳಕ್ಕೂ ಇನ್ನೆರಡು ಮರಳಿನ ಮೇಲೂ ಬಿದ್ದು ನುಚ್ಚುನೂರಾದುವು. 53 ಜನ ಪ್ರಯಾಣಿಕರಿಗೆ ಘೋರಾ ಪೆಟ್ಟುಬಿದ್ದಿರುತ್ತದೆ ಮತ್ತು 29-30 ಜನರು ಸತ್ತಿರುವುದಾಗಿ ನಿರೀಕ್ಷಿಸಲ್ಪಟ್ಟಿದೆ. ಗಾರ್ಡು ಸಹ ಘೋರಾಪೆಟ್ಟನ್ನು ತಿಂದು ಪ್ರಾಣಾಪಾಯಸ್ಥಿತಿಯಲ್ಲಿದ್ದನು.

ಕಲಕತ್ತಾ ಪೋಲೀಸಿನವರು ಮನಿಕತೋಲಾದಲ್ಲಿ ಒಂದು ಮನೆಯೊಳಗೆ ಸಿಡಿಮದ್ದನ್ನು ಕೆಲ ಅರಾಜಕರು ತಯಾರುಮಾಡುತ್ತಾರೆಂಬ ಸುದ್ದಿಯನ್ನು ತಿಳಿದು ಕಳೆದ 15ರಲ್ಲಿ ಆ ಮನೆಗೆ ನುಗ್ಗಿ ತಡಕುವಲ್ಲಿ ಬಹಳ ತೀಕ್ಷ್ಣವಾದ 6 ಸಿಡಿಮದ್ದುಗಳೂ, ಅವನ್ನು ಮಾಡುವ ಯಂತ್ರ ಸಾಮಗ್ರಿಗಳೂ ದ್ರಾವಕ ಪಾಷಾಣ ಮೊದಲಾದ ಪದಾರ್ಥಗಳೂ ಇಬ್ಬರು ಬಂಗಾಳೀ ಯುವಕರೂ ಸಿಕ್ಕಿಬಿದ್ದರು. ಮತ್ತೊಬ್ಬನು ಪೋಲೀಸರು ಮನೆಯೊಳಗೆ ಪ್ರವೇಶಮಾಡಿದ ಸುಳುವನ್ನು ತಿಳಿದು ತಲೆತಪ್ಪಿಸಿಕೊಂಡು ಓಡಿಹೋಗಿದ್ದನು. ಈಗ ಪೋಲೀಸರ ಸೆರೆಯಲ್ಲಿರುವವರಲ್ಲೊಬ್ಬನು ಬಂಗಾಳೀ ರೆಜಿಮೆಂಟಿನಲ್ಲಿ ಕೆಲಕಾಲ ಕೆಲಸ ಮಾಡಿಕೊಂಡಿದ್ದವನಂತೆ.

ತಿವಾರಂ ಸಂಸ್ಥಾನದ ರಾಜರಾದ ಲೆಫ್ಟನೆಂಟ್ ದುರ್ಗನಾರಾಯಣಸಿಂಗ್‌ರವರು ಕಳೆದ ಜುಲೈ ತಿಂಗಳಲ್ಲಿ ತಿವಾರದಲ್ಲಿ ತಾವು ಹೊಸದಾಗಿ ಸ್ಥಾಪಿಸಿದ ಆಂಗ್ಲಭಾಷಾ ಸ್ಕೂಲಿನ ಪೋಷಣೆಗಾಗಿ ಮೊದಲು ಕೊಟ್ಟಿದ್ದ 15000 ರೂ. ಅಲ್ಲದೆ ಇನ್ನೂ 2,37,000 ರೂಗಳನ್ನೂ, ಸ್ಕೂಲಿಗಾಗಿಯೂ ವಾಸಕ್ಕಾಗಿಯೂ ಕಟ್ಟಡಗಳನ್ನು ಕಟ್ಟಿಸಲು 1,30,000 ರೂ. ಗಳನ್ನೂ ಇತರ ವೆಚ್ಚಕ್ಕಾಗಿ 7,000 ರೂ. ಗಳನ್ನೂ ಆ ಸ್ಕೂಲು ಮೇಲ್ವಿಚಾರಣೆಗಾಗಿ ಗೊತ್ತುಮಾಡಲ್ಪಟ್ಟಿರುವ ಟ್ರಸ್ಟಿಗಳ ವಶಕ್ಕೆ ಕೊಟ್ಟಿರುವರಲ್ಲದೆ, 1,00,000 ರೂ. ಗಳನ್ನು ಸರ್ಕಾರಿ ಖಜಾನೆಯಲ್ಲಿ ಪುದುವಟ್ಟಿಟ್ಟು ಪ್ರತಿವರ್ಷದಲ್ಲೂ 6000 ರೂ. ಬಡ್ಡಿ ಬರುವಂತೇರ್ಪಡಿಸಿರುವರು.

ಬ್ಯಾಂಗ್‌ಕಾಕಿನಲ್ಲಿ ಒಬ್ಬ 16 ವರ್ಷದ ಬೆಸ್ತರ ಹುಡುಗನು ನದಿಯೊಳಗೆ ಮೀನನ್ನು ಹಿಡಿಯಲು ಬಲೆಯನ್ನು ಬೀಸಿದ್ದು ಮೀನುಗಳು ಬಲೆಗೆಬಿದ್ದಕೂಡಲೆ ಅದನ್ನ ನೀರಿನ ಮೇಲಕ್ಕೆಳೆದುಕೊಂಡು ಬಂದು ಮೀನನ್ನು ಹೊರಕ್ಕೆ ತೆಗೆದು ತನ್ನ ಬಾಯಿನಲ್ಲಿ ಅದರ ತಲೆಯನ್ನು ಕಚ್ಚಿ ಹಿಡಿದುಕೊಂಡು ಮತ್ತೊಂದು ಮೀನನ್ನು ಬಲೆಯಿಂದ ಹೊರಕ್ಕೆ ತೆಗೆದುಕೊಳ್ಳುತ್ತಿರುವಷ್ಟರಲ್ಲಿ ಅವನು ಬಾಯಿನಲ್ಲಿ ಕಚ್ಚಿಕೊಂಡಿದ್ದ ಮೀನು ಅವನ ಗಂಟಲಿನೊಳಕ್ಕೆ ಜಾರಿ ದಪ್ಪವಾಗಿದ್ದುದರಿಂದ ಗಂಟಲಿನಿಂದ ಕೆಳಕ್ಕಿಳಿಯದೆ ಮತ್ತೂ ಹೊರಕ್ಕೆ ಎಳೆದರೂ ಬಾರದೆ ಮಧ್ಯದಲ್ಲಿ ಸಿಕ್ಕಿಕೊಂಡಿದ್ದುದರಿಂದ ಆ ಬೆಸ್ತ ಹುಡುಗನು ಉಸಿರಾಡಲಿಕ್ಕೆ ಮಾರ್ಗವಿಲ್ಲದೆ ಸತ್ತುಹೋದನು.

ಕಲ್ಲಿಕೋಟೆಯಲ್ಲಿ ಕಾಡಾನೆಗಳು ಬಹಳವಾಗಿ ಹೆಚ್ಚಿಕೊಂಡು ಗದ್ದೆಗಳಿಗೆ ನುಗ್ಗಿ ಅಲ್ಲಿ ನಿಂತಿರುವ ಬೆಳೆಗಳನ್ನೆಲ್ಲಾ ನಾಶಮಾಡುತ್ತಿವೆ. ಒಂದು ಮದಿಸಿದಾನೆಯು ಕಳೆದವಾರ ನೀಲಂಬೂರಿನೊಳಕ್ಕೆ ನುಗ್ಗಿ ಒಬ್ಬ ಐಶ್ವರ್ಯವಂತನಾದ ಮಾಪಿಳ್ಳೆಯ ಮನೆಯ ಒಂದುಭಾಗವನ್ನು ಸೊಂಡಿಲಿನಿಂದ ಹಿಡಿದೆಳೆದು ಕೆಡವಿಬಿಟ್ಟಿತು. ಒಳಗಡೆ ಅಡಿಗೆಯ ಒಲೆಯಲ್ಲಿ ಉರಿಯುತ್ತಿದ್ದ ಬೆಂಕಿಯು ಮನೆಯ ಮೇಲು ಹೊದ್ದಿಕೆಗೆ ತಗುಲಿ ಹೊತ್ತಿಕೊಂಡು ಒಟ್ಟು ಮನೆಯೇ ಉರಿದು ಭಸ್ಮವಾಯಿತು. ಒಳಗಿದ್ದವರು ಪ್ರಾಣಭಯದಿಂದ ಹೊರಕ್ಕೋಡಿ ಹೋಗುತ್ತಿರುವಾಗ್ಗೆ ಆ ಕಾಡಾನೆಯು ಅವರಲ್ಲೊಬ್ಬನನ್ನು ಹಿಂಬಾಲಿಸಿ ಸೊಂಡಿಲಿನಿಂದ ಹಿಡಿದು ನೆಲದ ಮೇಲೆ ಕೆಡವಿ ತಿವಿದು ಕೊಂದುಬಿಟ್ಟಿತು.

ಮದ್ರಾಸ್ ಗೌರ್ನರ್ ಪದವಿಯಿಂದ ನಿವೃತ್ತರಾಗುವ ಲಾರ್ಡ್ ವೆಲಿಂಗ್‌ಡನ್ ದಂಪತಿಗಳು ಬರುವ ಏಪ್ರಿಲ್ ತಾ|| 8 ರಲ್ಲಿ ಮದ್ರಾಸಿನಿಂದ ಪೂನಾಕ್ಕೆ ಪ್ರಯಾಣಮಾಡಿ ಅಲ್ಲಿ ಒಂದು ದಿವಸ ತಂಗಿದ್ದು ಅನಂತರ ಬೊಂಬಾಯಿಗೆ ಹೋಗಿ ಅಲ್ಲಿಂದ ತಾ|| 12ರಲ್ಲಿ ಹಡಗನ್ನು ಹತ್ತಿ ಇಂಗ್ಲೆಂಡಿಗೆ ತೆರಳುವರು. ಇವರ ಬದಲು ಮದ್ರಾಸ್ ಗೌರ್ನರಾಗಿ ನಿಯಮಿಸಲ್ಪಟ್ಟಿರುವ ಲಾರ್ಡ್ ಗಾಸ್ಚನ್‌ರವರು ಸಪತ್ನೀಕರಾಗಿ ಮಧುರಾ ಎಂಬ ಹಡಗಿನಲ್ಲಿ ಪ್ರಯಾಣಮಾಡಿ ಏಪ್ರಿಲ್ ತಾ|| 14 ರಲ್ಲಿ ಮದ್ರಾಸ್ ಪಟ್ಟಣವನ್ನು ತಲುಪಿ ಅದೇ ದಿವಸ ಗೌರ್ನರುದ್ಯೋಗವನ್ನು ವಹಿಸಿಕೊಳ್ಳುವವರಾಗಿರುವರು. ತಾ|| 12 ರಿಂದ 14ರ ವರೆಗೆ ಆನರಬಲ್ ಸರ್ ಚಾರ್ಲ್ಸ್‌ಟಾಡ್‌ಹಂಟರ್‌ರವರು ಗೌರ್ನರುದ್ಯೋಗವನ್ನು ಬದಲು ನೋಡುವರು.

ಕಳೆದ ಫೆಬ್ರವರಿ ತಾ|| 29ಕ್ಕೆ ಅಂತ್ಯವಾದ ಒಂದು ಪಕ್ಷದಲ್ಲಿ ಮದ್ರಾಸಾಧಿಪತ್ಯದಲ್ಲಿದ್ದ ಆಹಾರ ಪದಾರ್ಥಗಳ ಬೆಲೆಯು—ನೆಲ್ಲೂರು, ಕೊಯಮತ್ತೂರು ಮತ್ತು ತಿರ್ಚನಾಪಲ್ಲಿಯಲ್ಲಿ ಅಕ್ಕಿ ಧಾರಣೆಯು ಶೇಕಡ 7 ರಂತೆ ಹೆಚ್ಚಿದ್ದಿತು. ಕುಂಭಕೋಣದಲ್ಲಿ ಜೋಳದ ಧಾರಣೆಯು ಶೇಕಡ 10 ರಂತೆ ಇಳಿದಿದ್ದಿತು. ಚಿತ್ತೂರಿನಲ್ಲಿ ರಾಗಿ ಧಾರಣೆಯು ಶೇಕಡ 5 ರಂತೆ ಏರಿದ್ದಿತು. ಗುಂಟೂರು, ನೆಲ್ಲೂರು, ಮತ್ತು ತಿನ್ನವೆಲ್ಲಿ ಈ ಸ್ಥಳಗಳ ವಿನಾ ಮದ್ರಾಸಾಧಿಪತ್ಯದಲ್ಲೆಲ್ಲಾ ಕಳೆದ ವರ್ಷ ಇದ್ದುದಕ್ಕಿನ್ನ ಈ ವರ್ಷದಲ್ಲಿ ದಿನಸಿಯ ಧಾರಣೆಯು ಸಾಮಾನ್ಯವಾಗಿ ಹೆಚ್ಚೇ ಇದ್ದಿತು. ಆದರೆ ನೆಲ್ಲೂರು ಮತ್ತು ಮಧುರೆಗಳಲ್ಲಿ ಮಾತ್ರ ಅಕ್ಕಿಯ ಧಾರಣೆಯು ಶೇಕಡ 15 ರಂತೆ ಕಡಿಮೆಯಾಗಿದ್ದಿತು. ಗಂಜಾಂ ಮತ್ತು ವಿಶಾಖಾಪಟ್ಟಣಗಳಲ್ಲಿ ಧಾರಣೆಯು ಶೇಕಡ 15 ರಿಂದ 25ರ ವರೆಗೂ ಹೆಚ್ಚಿದ್ದಿತು. ಅಕ್ಕಿಧಾರಣೆಯು ಕಡಪಾದಲ್ಲಿ ಶೇಕಡ 23 ರಂತೆಯೂ, ಗೋದಾವರಿ, ಕೃಷ್ಣ, ಕರ್ನೂಲು, ಉತ್ತರ ಆರ್ಕಾಟು ಮತ್ತು ಸೇಲಂ ಈ ಸ್ಥಳಗಳಲ್ಲಿ ಶೇಕಡ 15 ರಂತೆಯೂ; ಜೋಳದ ಬೆಲೆಯು ಕಡಪಾದಲ್ಲಿ ಶೇಕಡ 40 ರಂತೆಯೂ; ಸೇಲಂ ಮತ್ತು ಕೊಯಮತ್ತೂರುಗಳಲ್ಲಿ ಶೇಕಡ 20 ರಂತೆಯೂ ಕಂಬಿನ ಧಾರಣೆಯು ಗೋದಾವರಿ ಮತ್ತು ಕಡಪಾಗಳಲ್ಲಿ ಶೇಕಡ 25 ರಂತೆಯೂ; ರಾಗಿ ಧಾರಣೆಯು ಬಳ್ಳಾರಿ, ಅನಂತಪುರ ಮತ್ತು ಶಾಲ್ಯ ಈ ಸ್ಥಳಗಳಲ್ಲಿ ಶೇಕಡ 15 ರಂತೆಯೂ ಹೆಚ್ಚಿದ್ದಿತು.

ಕಾಳಿಘಟ್ಟದಲ್ಲಿರುವ ನಿಖಿಲಭಾರತ ಅನಾಥಾಶ್ರಮದ ಸೂಪರಿಂಟೆಂಡೆಂಟಾದ ಸುಖದೇವಶರ್ಮನೆಂಬುವವನು ಆ ಆಶ್ರಮವಾಸಿಗಳಾದ ಸುರುಚಿಬಾಲಾದೇವಿ ಮತ್ತು ಸರಸ್ವತಿದಾಸಿ ಎಂಬಿಬ್ಬರು ಅನಾಥ ಬಾಲೆಯರನ್ನು ದುರ್ಮಾರ್ಗಪ್ರವರ್ತಕರನ್ನಾಗಿ ಮಾಡಬೇಕೆಂಬ ದುರಭಿಪ್ರಾಯದಿಂದ ನನ್ನ ಮಾತನ್ನು ಕೇಳಿದರೆ ಬಹಳ ಉಛ್ರಾಯಸ್ಥಿತಿಯಲ್ಲಿರಿಸುತ್ತೇನೆ ಎಂದು ಮೊದಲಾಗಿ ಅವರಿಗೆ ದುರ್ಬೋಧೆಯನ್ನು ಮಾಡಿದನು. ಅವರು ಅದಕ್ಕೊಪ್ಪದೆ ಹೋಗಲು ಸುಖದೇವಶರ್ಮನು ಆ ಇಬ್ಬರು ಅನಾಥೆಯರನ್ನು ಚೆನ್ನಾಗಿ ಹೊಡೆದು ಹಿಂಸಿಸಿ ಒಂದು ಕೊಠಡಿಯಲ್ಲಿ ಕೂಡಿಹಾಕಿದ್ದನು. ಒಂದು ದಿವಸ ಸಾಯಂಕಾಲ ಸುಖದೇವನು ವಾಯುವಿಹಾರಕ್ಕಾಗಿ ಹೊರಗೆ ಹೋಗಿರಲು ಸುರುಚಿಯು ಆಶ್ರಮದ ಮೇಟ್ರನ್ನನ್ನು ಕರೆದು ಕುಡಿಯಲು ನೀರನ್ನು ಕೇಳಿ ಆಕೆಯು ಬಾಗಿಲನ್ನು ತೆರೆದು ನೀರನ್ನು ಕೊಡಲು ಒಳಗೆ ಹೋದಾಗ ಸುರುಚಿಯು ಮೇಟ್ರನ್ನಿನ ಕೈಬಿಡಿಸಿಕೊಂಡು ಹೊರಕ್ಕೆ ನುಗ್ಗಿಬಂದು ಮೇಲು ಹೊದ್ದಿಕೆಗಾಗಿ ಹಾಕಿದ್ದ ತಗಡಿನಮೇಲೆ ಹತ್ತಿ ಮಗ್ಗುಲ ಮನೆಯೊಳಕ್ಕಿಳಿದು ಅಲ್ಲಿಂದ ಮುಂದಕ್ಕೆ ಹೋಗಲಾರದೆ ಅಲ್ಲೇ ರೋದಿಸುತ್ತಾ ಕುಳಿತುಕೊಂಡಳು. ಆ ಮನೆಯವರು ಆಕೆಯ ಆರ್ತಧ್ವನಿಯನ್ನು ಕೇಳಿ ಅವಳ ಬಳಿಗೆ ಬಂದು ನಡೆದ ವಿದ್ಯಮಾನವನ್ನೆಲ್ಲಾ ಕೇಳಿ ತಿಳಿದುಕೊಂಡು ಪೋಲೀಸ್ ಠಾಣಾಕ್ಕೆ ಆಕೆಯ ಸಮೇತ ಹೋಗಿ ಎಲ್ಲ ಸಂಗತಿಯನ್ನೂ ತಿಳಿಸಿದರು. ಪೋಲೀಸರು ಆ ಅನಾಥಾಲಯದ ಸೂಪರಿಂಟೆಂಡೆಂಟ್ ಸುಖದೇವಶರ್ಮನ ಮೇಲೆ ಮ್ಯಾಜಿಸ್ಟ್ರೇಟರಲ್ಲಿ ವಿವಾದವನ್ನು ನಡಿಸಿರುವರು.

ವಿದೇಶದ ವೃತ್ತಾಂತಗಳು.

ತುರ್ಕಿರಾಜ್ಯದಲ್ಲಿ ಬಹು ಪತ್ನಿತ್ವವನ್ನು ತಪ್ಪಿಸಬೇಕೆಂದು ಅಲ್ಲಿಯ ಪ್ರಜಾಪ್ರಭುತ್ವದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿ ತುರ್ಕಿಯ ಸ್ತ್ರೀಯರು ಒಂದು ಮಹಾಸಭೆಯನ್ನು ಸೇರಿಸಿ ನಿರ್ಧರಿಸಿದರು.

ಜೈನಾರಾಜ್ಯದಲ್ಲಿ ನೂಲಿನ ಮತ್ತು ರೇಷ್ಮೆ ಬಟ್ಟೆಗಳ ವ್ಯಾಪಾರವು ಬಹುಮಟ್ಟಿಗೆ ಕಡಿಮೆಯಾಗಿರುವುದರಿಂದ ಅನೇಕ ನೂಲುಬಟ್ಟೆಯ ಯಂತ್ರಾಲಯಗಳು ಮುಚ್ಚಲ್ಪಟ್ಟಿವೆ ಮತ್ತು ರೇಷ್ಮೆ ಯಂತ್ರಾಲಯಗಳು ಮುಚ್ಚಲ್ಪಡಲಿಕ್ಕಿವೆ.

ಅಮೇರಿಕೆಯ ಸೀಮೆಯೆಣ್ಣೆ ಕಂಪನಿಗಳಲ್ಲಿ ಪ್ರಸಿದ್ಧವಾದ ಸ್ಟಾಂಡರ್ಡ್ ಆಯಿಲ್ ಕಂಪೆನಿಯ ಸ್ಥಾಪಕರಲ್ಲೊಬ್ಬನಾದ ಪೂರ್ಣ ಶ್ರೀಮಂತನ 1,20,00,000 ರೂಪಾಯಿಗಳ ಆಸ್ತಿಗೆ ಬಾಧ್ಯಳೂ ಅವನ ಮೊಮ್ಮಗಳೂ ಆದ ಮಿಸ್ ಮಿಲ್ಲಿ ಸೆಂಟ್ ರೋಗರ್ ಎಂಬಾಕೆಯನ್ನು ಕೌಂಟ್ ಲಡ್ವಿಗ್ ಸಾಂವರ್ ಹೊಗರ್ಟನ್ ಎಂಬಾತನು ವಿವಾಹಮಾಡಿಕೊಂಡನು.

ಬಾಸ್ಟನ್ನಿನ ಮಾರ್ಗರೆಟ್ ಹಾರ್ಡಿಂಗ್ ಎಂಬಾಕೆಯು ಹೊಗೆಬತ್ತಿಯನ್ನು ಮಿತಿಮೀರಿ ಸೇದುತ್ತಿದ್ದುದರಿಂದ ಕಫಕೋಶದಲ್ಲಿ ರೋಗವು ಪ್ರಾಪ್ತವಾಗಿ ಅದನ್ನು ಸಹಿಸಲಾರದೆ ಆಕೆಯು ಆತ್ಮಹತ್ಯೆಯನ್ನು ಮಾಡಿಕೊಂಡಳು. ಅದರಮೇಲೆ ಈಗ ಅಮೇರಿಕೆಯಲ್ಲಿ ಸ್ತ್ರೀಯರು ಧೂಮಪಾನಮಾಡುವುದನ್ನು ನಿರೋಧಿಸುವ ವಿಚಾರದಲ್ಲಿ ಬಹಳ ಚಳವಳವು ನಡೆಯುತ್ತಿದೆ.

ಸೀಮೆಯ ಒಂದು ಹೋಟಲಿನಲ್ಲಿಳಿದುಕೊಂಡಿದ್ದ ಒಬ್ಬ ರತ್ನಪುಡಿ ವ್ಯಾಪಾರಸ್ಥನಲ್ಲಿದ್ದ ಅಮೋಘವಾದ ವಜ್ರಗಳು ಮುತ್ತಿನಸರಗಳೂ, ವಜ್ರದುಂಗುರಗಳೂ, ಹತ್ತಕಡುಕುಗಳೂ ಇತ್ಯಾದಿ 7,50,000 ರೂ. ಬೆಲೆಬಾಳುವ ಆಭರಣಗಳ ಪೆಟ್ಟಿಗೆಯು ಅದೇ ಹೋಟಲಿನಲ್ಲಿದ್ದ ಚೋರಶಿಖಾಮಣಿಯು ಅಪಹರಿಸಿಕೊಂಡುಹೋದನು. ಅವನನ್ನು ಕಂಡುಹಿಡಿದವರಿಗೆ 15,000 ರೂ. ಗಳ ಬಹುಮಾನವನ್ನು ಕೊಡುವುದಾಗಿ ಆ ವರ್ತಕನು ಸಾರಿಸಿದ್ದಾನೆ.

ಕೆನಿಯಾಕ್ಕೆ ಸೇರಿದ ನಾಯುಕಿ ಡಿಸ್ಟ್ರಿಕ್ಟಿನಲ್ಲಿ ಒಬ್ಬ ರೈತನ ತುಂಡವಾದ ಕೊಂಬುಗಳುಳ್ಳ ಒಂದುಗೂಳಿಯು ಮೃಗರಾಜನಾದ ಸಿಂಹನ ಕೂಡ ಬಹಳವಾಗಿ ಕಾದಾಡಿ ಆಯ ಪಟ್ಟು ಒಂದು ಮರದಕೆಳಗೆ ಮಲಗಿಕೊಂಡಿದ್ದಿತು. ಇ ಹೆಗಲು ಬಗೆದುಹಾಕಲ್ಪಟ್ಟಿದ್ದಿತು, ಮುಖವು ಬಹಳವಾಗಿ ಚಲ್ಪಟ್ಟಿದ್ದಿತು, ಬಾಲವು ತುಂಡಾಗಿದ್ದಿತು, ಅದರ ಒ ಕೊಂಬು ರಕ್ತದಲ್ಲಿ ಅದ್ದಲ್ಪಟ್ಟಿದ್ದಿತು, ನೆಲದ ಮಣ್ಣೆಲ್ಲವೂ ರೀತವಾಗಿ ಕೆದಕಿಹಾಕಲ್ಪಟ್ಟಿದ್ದಿತು ಮತ್ತು ಮರಕ್ಕೆ ಸಿಂಹದ ಕೂದಲು ಹತ್ತಿಕೊಂಡಿದ್ದಿತು. ಆದರೆ ಸಿಂಹವು ಮ ಏನಾಯಿತೆಂಬುದು ಗೊತ್ತಾಗಲಿಲ್ಲವು. ಇದರ ಹಿಂದಣವರ್ಷ ಹೀಗೆ ಗೂಳಿಗೂ ಸಿಂಹಕ್ಕೂ ಜಗಳವು ನಡೆದು ಸಿಂ ಕೊಂದುಹಾಕಲ್ಪಟ್ಟಿತು.

ಕ್ರಿಸ್ಟಲ್ ಅರಮನೆಯಲ್ಲಿ ಪಂಜರದೊಳಗಿನ ಪಕ್ಷಿ ಪ್ರದರ್ಶನವು ನಡೆದಿತು. ಈ ಪ್ರದರ್ಶನಕ್ಕೆ 2339 ಪಕ್ಷಿ ತರಲ್ಪಟ್ಟಿದ್ದುವು. ಇವುಗಳಲ್ಲಿ ಕ್ಯಾನರಿ ದೇಶದಿಂದ ಬಂ ಒಂದುಪಕ್ಷಿಗೆ 15000 ರೂ. ಬೆಲೆ ಕಟ್ಟಲ್ಪಟ್ಟಿದ್ದಿತು. ಇದ ಇಂಗ್ಲೀಷು ಫ್ರೆಂಚ್ ಮತ್ತು ಪೋರ್ಚುಗೀಸು ಭಾಷೆಗ ಮಾತನಾಡುವ ಒಂದು ಗಿಳಿಯು ತರಲ್ಪಟ್ಟಿದ್ದಿತು. ಇ ಹಾಡುವುದೂ, ನರ್ತನಮಾಡುವುದೂ, ಸೀಟಿಹಾಕುವು ನಗುವುದು, ಟೆಲಿಫೋನಿನಲ್ಲಿ ಮಾತನಾಡುವುದು, ಪಂಜರದ ಬಾ ಲನ್ನು ತಾನೇ ತೆಗೆದು ಮುಚ್ಚುವುದು; ಮಗುವಿನಹಾಗೆ ಅ ವುದು, ಬೊಗಳಿಯಹಾಗೆ ಸುತ್ತುವುದು, ಸತ್ತುಹೋದಂತೆ ನ ಸುವುದು ಇತ್ಯಾದಿ ಮಾನುಷಕೃತ್ಯಗಳನ್ನೆಲ್ಲಾ ಮಾಡಿತೋ ಪ್ರೇಕ್ಷಕರಿಗೆ ವಿಸ್ಮಯವನ್ನುಂಟುಮಾಡುತ್ತಿದ್ದಿತಂತೆ!

ಪಾಶ್ಚಾತ್ಯ ರಾಷ್ಟ್ರಗಳಿಗೆ ಸೇರಿದ ನವೀಟನ್ ಎಂ ಥಾಮಸ್ ಡಿಕೆನ್ಸ್ ಎಂಬಾತನು 30 ವರ್ಷಗಳಕಾಲ ಕು ನಾಗಿದ್ದು ತನ್ನ 107 ನೆಯ ವರ್ಷ ವಯಸ್ಸಿನಲ್ಲಿ ವಿಧಿವಶ ದನು. ಅವನು ಮಧ್ಯದಲ್ಲಿ ಪ್ರಾಪ್ತವಾದ ಅಂಧತ್ವದ ವಿ ಯಾವುದೊಂದು ರೋಗವಿಲ್ಲದೆ ಸಂಪೂರ್ಣ ಆರೋಗ್ಯದಿಂ ಯಾವಾಗಲೂ ಔಷಧವನ್ನು ಸೇವಿಸಿದವನಲ್ಲವೆಂದು ಹೆ ಡುತ್ತಿದ್ದನು. ಇವನು ತನ್ನ ಯವ್ವನದಲ್ಲಿ ದೋಣಿಗಳಲ್ಲಿ ಸಮಾಡಿಕೊಂಡಿದ್ದು ಕೆಲ ಕಾಲಾನಂತರ ಗಣಿಗಳಲ್ಲಿ ಕೆಲಸ ಸೇರಿದನು. ಇವನ ಕಣ್ಮುಂದೆ 5 ತಲೆಗಳು ಆಗಿಹೋದು ಮತ್ತು ಇವನಿಗೆ 12 ವರ್ಷ ವಯಸ್ಸಿನ ಮೂಳಮಗಳೊಬ್ಬ ರುವಳು. ಹೆಂಡನ್ ಎಂಬಲ್ಲಿ ಜೆಸಿಸ್ ಬ್ರೌನ್ ಎಂಬಾಕೆ ಕಳೆದ ಸೆಪ್ಟಂಬರಿನಲ್ಲಿ ತನ್ನ 102 ನೆಯ ವರ್ಷ ವಯಸ್ಸಿ ಸತ್ತುಹೋದಳು. ಈಗ ಆಕೆಗೆ 70 ವರ್ಷ ವಯಸ್ಸಿನ ಇಬ್ಬ ಗಂಡುಮಕ್ಕಳಿರುವರು.

ಬೈಟನ್ನಿನಲ್ಲಿ ಒಂದು ಪಿಶಾಚವು ರಾತ್ರಿವೇಳೆ 11-ನೆ ಗಂಟೆಯ ಮೇಲೆ ಬೆಳಕುಹರಿಯುವವರೆಗೂ ಪ್ರತಿ ಮನೆಯ ಬಂದು ಜನರಿಗೆ ಗೋಚರವಾಗದಂತೆ ಒಂದು ವಿಧವಾದ ಧ ಯನ್ನು ಮಾಡುತ್ತಿದೆ. ಪ್ರತಿಯೊಂದು ಮನೆಯವರೂ ನೆರೆ ಯವರು ಗದ್ದಲಮಾಡುವುದರಿಂದ ತಮ್ಮ ನಿದ್ರೆಗೆ ಭಂಗವಾ ತ್ತಾದ ಪ್ರಯುಕ್ತ ಶಬ್ದಮಾಡದಂತೆ ಅವರಿಗೆ ಹೇಳಬೇಕೆಂ ಪೋಲೀಸರಿಗೆ ದೂರುಮಾಡುತ್ತಿರುವರು. ಪೋಲೀಸಿನವ ಎಷ್ಟು ಪ್ರಯತ್ನಿಸಿದರೂ ಶಬ್ದಮಾಡುವವರಾರೆಂಬುದು ತ್ತಾಗದೆ ಜನರದೂರು ಮಾತ್ರ ನಿತ್ಯದಲ್ಲೂ ಬಹಳವಾಗುತ್ತಿ ವುದರ ಮೇಲೆ ನೀರುಬರುವ ಕೊಳಾಯಿಗಳಲ್ಲಿ ಶಬ್ದವಾಗು ದೆಂದು ಅನುಮಾನಿಸಿ ಆ ಶಾಖೆಯವರ ಮೂಲಕ ಪರೀಕ್ಷಿ ವಲ್ಲಿ ಅದರಿಂದ ಶಬ್ದವಾಗುವುದಿಲ್ಲವೆಂದು ಗೊತ್ತಾಯಿ ಅಂತು ಆ ಪಟ್ಟಣದ ಜನರೆಲ್ಲರೂ ಈ ಅಗೋಚರವಾದ ದಿಂದ ನಿದ್ರೆಯಿಲ್ಲದಿರುವುದಲ್ಲದೆ ಅದರ ಕಾರಣ ತಿಳಿಯದೆ ಭ ಗ್ರಸ್ತರಾಗಿದ್ದಾರಂತೆ!

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸು ಲಗ್ನದ ಫಂಡು.

1. ತಿಪಟೂರು ತಾಲ್ಲೂಕು ಮಾರಂಗೆರೆಯಲ್ಲಿರುವ ಬೆಳಗು ಮಠದ ವೇ|| ಚನ್ನವೀರಯ್ಯನವರ ಮಕ್ಕಳು ರುದ್ರಯ್ಯನವರ ಲಗ್ನ ವಸೂಲಾದ್ದು ತಿಪಟೂರು ಮ|| ರಾ|| ಸಿ. ಗಿರಿಯಪ್ಪನವರ ಮೂಲಕ ಬಾಬತು ಒಂದು ರೂಪಾಯನ್ನು ಕೈ|| ವೀರಸಂಗಪ್ಪನವರ ಫಂಡಿಗೆ ಹಿಸಿರುತ್ತೆ.) 6—0—0.

2. ಚಿತ್ರದುರ್ಗದ ತಾಲ್ಲೂಕು ಜಂಪಣ್ಣನಾಯ್ಕನಕೋಟೆ ಕ ಪ್ಪದಲ್ಲಿ ಹೊಸದಾಗಿ ಶ್ರೀ ವಿಶ್ವೇಶ್ವರಸ್ವಾಮಿ ಪ್ರತಿಷ್ಠೆಮಾಡಿಸಿದ ಕಾ ಶಿರಾಹೋ ನಹಟ್ಟಿಮಠದ ಶ್ರೀ ಪಟ್ಟಾಧ್ಯಕ್ಷರು ವೇ|| ಶಿದ್ದಪ್ಪನ ಮೂಲಕ 4—0—0. ಜುಮ್ಲಾ 10—0—

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂ
ಬೆಂಗಳೂರು ಸಿಟಿ.

ವೀರಶೈವ ವಿದ್ಯಾರ್ಥಿಗಳು ಗಮನಿಸತಕ್ಕದು.

ಬರುವ ಏಪ್ರಿಲ್ ತಿಂಗಳಲ್ಲಿ ಚಿತ್ರದುರ್ಗದ ಸೆಂಟರಿನಲ್ಲಿ ನಡೆಯು ಇಂಗ್ಲೀಷು, ಮತ್ತು ಕನ್ನಡ ಮೈಸೂರು ಲೋವರ್‌ಸೆಕಂಡರಿ ಪರೀಕ್ಷೆ ಬರುವ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ವಿದ್ಯಾರ್ಥಿನಿಯರಿ ಮಾಸ್ಟರುಗಳಿಗೂ ಮತ್ತು ವೀರಶೈವರಲ್ಲಿ ಊಟಮಾಡತಕ್ಕ ಇತರೇ ಸ್ಥರಿಗೂ ಸಹ ಚಿತ್ರದುರ್ಗದ ಶ್ರೀ ಜಗದ್ಗುರು ಜಯದೇವ ವೀರಶೈ ಹಾಸ್ಟಲಿನಲ್ಲಿ ಭೋಜನಕ್ಕೆ ಏರ್ಪಡಿಸಿರುತ್ತೆ. ಪ್ರತಿಯೊಬ್ಬರೂ ತಂಬ ಹಾಸಿಗೆ ಹೊದ್ದಿಕೆಗಳನ್ನು ತೆಗೆದುಕೊಂಡು ಬರತಕ್ಕದ್ದು. ಬರ ವಿದ್ಯಾರ್ಥಿಗಳು ಮಾರ್ಚಿ ತಾರೀಖು 27ರ ವಳಗೆ ಶ್ರೀ ಹಾಸ್ಟೆಲ್ ಸೆಕ್ರೆ ಯವರಿಗೆ ಬರೆದುಕೊಳ್ಳತಕ್ಕದ್ದು.

C. R. Veerabhadrappa,
for Secretar

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತ ವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ತಿರಸ್ಕೃತಲೇಖನಗಳು.

(1) ಅನ್ನಿತ ಮತ್ತಗಜಕೇಸರಿ ಮತ್ತು ಓರ್ವ ಪೀಠಾಭಿಮಾನಿ— ಲೇಖನಗಳೂ ಶ್ರೀ ರಂಭಾಪುರಿಪೀಠಾಧಿಕಾರ ವಿಚಾರವಾಗಿ ಒಬ್ಬ ಬರೆಯಲ್ಪಟ್ಟಿರುವುವಲ್ಲದೆ ನಿಜವಾದ ನಾಮವು ನಮ್ಮ ತಿಳಿವಿಕೆಗಾಗಿ ಸಲ್ಪಟ್ಟಿಲ್ಲವಾದುದರಿಂದ ಪ್ರಕಟಿಸಲ್ಪಡಲಿಲ್ಲವು.

ಸಂತೋಷವಾರ್ತೆ.

ಕೋಲಾರ ಡಿಸ್ಟ್ರಿಕ್ಟ್ ಶಿಡ್ಲಘಟ್ಟದಲ್ಲಿರುವ ಈ ಪ್ರಾಂತ್ಯದ ವೀರ ವರಲ್ಲಿ ಗಣ್ಯರಾದ ಮ|| ರಾ|| ಎಸ್. ಹಂಪಯ್ಯನವರನ್ನು ಮೈಸೂರು ಪ್ರತಿನಿಧಿ ಸಭೆಯ ಮೆಂಬರಾಗಿ ನಮ್ಮ ಘನಸರ್ಕಾರದವರು ನೇಮಕ ಮಾಡಿರುವದರಿಂದ ಈ ಡಿಸ್ಟ್ರಿಕ್ಟಿನ ವೀರಶೈವ ಜನಾಂಗಕ್ಕೆ ಸಂತೋಷವುಂಟಾಗಿರುತ್ತೆ. ಇವರು ಬಹಳ ದಿನಗಳಿಂದಲೂ ಪ್ರತಿನಿಧಿ ಸಭೆಯ ಮೆಂಬರಾಗಿಯೂ, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿಯೂ ಇರುತಾರಲ್ಲದೆ ಹಾಲಿ ಈ ಟವುನ್ ಮ್ಯುನಿಸಿಪಲ್ ಸ್‌ಪ್ರೆಸಿಡೆಂಟರಾಗಿಯೂ, ಬೆಂಚ್‌ಕೋರ್ಟ್ ಛೇರ್ಮನ್‌ರಾಗಿಯೂ ಸಮಾಡುತ್ತಾರೆ. ಈ ಟವುನ್ ಮೂಲಕ ಪ್ರತಿನಿಧಿಸಭೆಗೆ ಮೆಂಬರು ನಾಮಕೆಯಾಗತಕ್ಕ ಹಕ್ಕು ಕಾರಣಾಂತರಗಳಿಂದ ಈಗ್ಗೆ ತಪ್ಪಿರುವ ಪ್ರಯು ಇವರು ಈಸಾರಿ ಪ್ರತಿನಿಧಿಸಭಾ ಮೆಂಬರಾಗಿ ಆರಿಸಲ್ಪಡಲು ಅವಕಾಶ ಗಲಿಲ್ಲ. ಭಾರೀ ಜವೀನ್ದಾರರೂ ರೈತಾಪಿಗಳ ಕ್ಷೇಮಚಿಂತಕರಿಗಾಗಿ ಮವರ್ಜಿಯಿಂದ ಕೆಲಸಮಾಡತಕ್ಕವರೂ ಆಗಿರುವ ಇವರು ಮೆಂಬ ದೆಯದ್ದ ಕೊರತೆಯನ್ನು ನಿವಾರಣೆಮಾಡಿ ಸರ್ಕಾರದಿಂದ ನೇಮಕ ಮಾಡಿರುವದಕ್ಕೆ ಕೃತಜ್ಞರಾಗಿರುತ್ತೇವೆ. ಮ|| ಎಸ್. ಹಂಪಯ್ಯನವರು ಗೆ ವಹಿಸಲ್ಪಟ್ಟಿರುವ ಜವಾಬ್ದಾರಿಕೆಲಸವನ್ನು ಮುತವರ್ಜಿಯಿಂದ ಧೈರ್ಯದಿಂದಲೂ ನಿರ್ವಹಿಸುವವರಾಗಲೆಂದು ಹಾರೈಸುತ್ತೇವೆ.

ಶ್ರೇಯೋಭಿಲಾಷಿ.

ನಿಡಗುಂದಿ ಹಿರೇಮಠದ ಪಟ್ಟಾಧಿಕಾರವು.

ಬಿ. ವಿಜಾಪುರ ತಾಲ್ಲೂಕು ಬಾಗೇವಾಡಿ ಪೈಕಿ ನಿಡಗುಂದಿ ಗ್ರಾಮದ ಮಠ ಪಟ್ಟದ ಶಿವಮೂರ್ತಿಸ್ವಾಮಿಗಳು ಶಿವೈಕ್ಯರಾಗಿ 5-6 ವರುಷ ದವು. ಸದರಿ ಮಠವು ಪುತ್ರವರ್ಗವಿದ್ದು ಮತ್ತು ದಾರುಕ ಶಾಖಾದ್ದು ಅವರ ದೂರದ ಸಂತತಿಯವರಾದ ಇದೇ ತಾ|| ದಿಂಡವಾರ ಗ್ರಾಮ ಸಮಠದವರನ್ನು ತಪಾಸುಮಾಡಿ ಇಲ್ಲಿಯ ದೈವದವರು ವಶಿಷರು ಗಿ ಆ ಮಠದ ಒಬ್ಬ ಮರಿದೇವರನ್ನು (ಅನ್ನದಾನಿಸ್ವಾಮಿಯನ್ನು) ತು ಇದೇ ಮಾಘ ಬ|| ೧೩ ಚಂದ್ರವಾರ ಉದಯದ 8 ಗಂಟೆಗೆ ಶುಭ ಮುಹೂರ್ತದಲ್ಲಿ ವಿಧಿಪೂರ್ವಕ ಶ್ರೀ ಅನ್ನದಾನಿಸ್ವಾಮಿ ಗುರುಶಿವಮೂರ್ತಿ ಮಿ ಹಿರೇಮಠ ಇವರಿಗೆ ಪಟ್ಟಾಧಿಕಾರವನ್ನು ಮಾಡಿದರು. ಉಜ್ಜಯನಿ ಸಿಂಹಾಸನಾಧಿಪತಿಗಳಿಗೆ ಗುರುಕಾಣಿಕೆಯನ್ನರ್ಪಿಸಿ ಮ. ಆ. ರೂಪ ಕಳಿಸಿದರು. ಈ ಶುಭಕಾರ್ಯಕ್ಕೆ ಇದೇ ಗ್ರಾಮದ ಶ್ರೀ ರುದ್ರ ಮಿ ಪಟ್ಟಾಧಿಕಾರಿಗಳು ಮನಗೋಳಿ ಹಿರೇಮಠದ ಪಟ್ಟಾಧಿಕಾರಿಗಳು ವಾರ ಗಚ್ಚಿನಮಠದ ಪಟ್ಟಾಧಿಕಾರಿಗಳು ಇನ್ನುಳಿದ ಗುರುಸ್ಥಲದ ಗಳು ಕೆಲಕೆಲವು ಊರುಗಳ ಪ್ರಮುಖಜನರು ಅಂತು ಅನೇಕ ಭಕ್ತ ಶ್ವರರು ಕೂಡಿದ್ದರು. ಚಂದ್ರವಾರ ಭೌಮ್ಯವಾರ ಈ ಎರಡುದಿವಸ ಜಂಗಮರಿಗೂ ಭಕ್ತ ಜನರಿಗೂ ಇತರರಿಗೂ ಮೃಷ್ಟಾನ್ನಭೋಜನವು ತು. ಉತ್ಸವವಾದರೂ ಒಳ್ಳೇ ವೈಭವದಿಂದ ನೆರವೇರಿತು.

ಲುಮತದ (ಕುರುಬರ) ಸಂಘದ ವತಿಯಿಂದ ನೆರೆಯುವ ಬಯಿ ಕರ್ನಾಟಕ ಹಾಲುಮತದ ದ್ವಿತೀಯಮಹಾಸಭೆ.

ಧಾರವಾಡ ಜಿಲ್ಲಾ ಬಂಕಾಪುರದಲ್ಲಿ ಸದರಿ ಸಭೆಯನ್ನು ಸನ್ 1924 ತಿಂಗಳಲ್ಲಿ ಕೂಡಿಸುವದಕ್ಕೆ ಒಪ್ಪಿಕೊಂಡ ಮತ್ತು ಮಹಾಸಭೆಯ ರಿಯನ್ನ ಈಗಿನಿಂದಲೇ ಮಾಡುವದಕ್ಕಾಗಿ ಅವಿಶ್ರಾಂತ ಶ್ರಮಪಡುತ್ತ ವ ಬಂಕಾಪುರದ ಮತ್ತು ಈ ತಾಲ್ಲೂಕಿನ ನಮ್ಮ ಬಂಧುಗಳನ್ನು ಅಭಿನಂದಿಸದೆ ಇರಲಾರೆವು. ಈ ಗ್ರಾಮದಲ್ಲಿ ನಮ್ಮವರ ವಸ್ತಿಯು, ಇದ್ದು ಬಹು ವರ್ಚಸುಳ್ಳವರಾಗಿದ್ದಾರೆ. ಮತ್ತು ನಮ್ಮ ಧರ್ಮದ ಪುರಾಣಪ್ರಸಿದ್ಧವದೆ. ಇತಿಹಾಸದಿಂದ ಹೆಸರಾಗಿದೆ. ಇದು ರೈಲ್ವೆ ಹತ್ತು ಮತ್ತೂರಿಂದ 10 ಮೈಲಿ ಕರ್ಜಗಿಯಿಂದ 9 ಮೈಲ ಯಿಂದ 12 ಮೈಲಿ ಇದ್ದು ಇದಕ್ಕೆ ಸುತ್ತಕಡೆಯಿಂದ ಟ್ರೈನವಾರ ಒಂದು ಕೂಡಿರುವದರಿಂದ ಬೇರದ ಸ್ಟೇಷನ್ನಿಂದ ಮೋಟಾರ, ಟಾಂಗ ವಗೈರೆ ವಾಹನಗಳು ಸಿಗುವದರಿಂದ ಪ್ರಯಾಣಿಕರಿಗೆ ಅನುಕೂಲವದೆ. ಇಲ್ಲಿಯೇ ಮಹಾಸಭೆಯ ಆಲೋಚನೆ ಕಮಿಟಿ ತಾರೀಖು 13-4-1924ನೇ ಇಸವಿಯ ದಿವಸ ಸಾಯಂಕಾಲದ 4 ನಗಲ್ಲ ಗುರುಶಾಂತಪ್ಪನವರ ಮನೆಯಲ್ಲಿ ಕೂಡುತ್ತದೆ. ಆಗ ಸೂಚಿಸಿದ ವಿಷಯಗಳನ್ನು ಚರ್ಚಿಸತಕ್ಕದ್ದು. ವಿಷಯಗಳು, (1) ಸಭೆಯ ಸ್ವಾಗತಮಂಡಳವನ್ನು ಆರಿಸತಕ್ಕದ್ದು. (2) ಅಧ್ಯಕ್ಷ ಗೊತ್ತುಪಡಿಸುವದು. (3) ಸಭೆಯ ತಾರೀಖು ವೇಳೆ ವಗೈರೆ ನಿರ್ಣಯಿಸುವದು. (4) ಸಭೆಗೆ ಸಂಬಂಧಿಸಿರುವ ಇತರ ವಿಷಯಗಳನ್ನು ಚರ್ಚಿ ಸು. ಕಾರಣ ಈ ಸಭೆಯು, ಬಹಳೇ ಮಹತ್ವದ್ದಿದ್ದು, ತಾವೆಲ್ಲರೂ ವಿಶೇಷ ಚಳವಳಿ ಮಾಡಿಸಿ ಮತ್ತು ಆಲೋಚನಾ ಕಮಿಟಿಗೆ ನಮ್ಮ ಆಗ್ರಹದ ಪ್ರಾರ್ಥನೆ.

ಬಂಧುಗಳು. (1) ಪಾವಾಡಿಗೌಡ, ಫ ಪಾಟೀಲ ಹಲರ್ಗಾಪುರ ಪ್ಪ, ನಿ. ಅಲದಕಟ್ಟಿ, ಬಂಕಾಪುರ (3) ಪರಪ್ಪಾ ನರಗುಂದ ಕೋಟಬಾಗಿ (5) ಬಸಪ್ಪಾ, ಫೀ. ಕಲ್ಲಣ್ಣನವರ ನಲವಡಿ.

ಸ್ವಯಂಸೇವಕ.

ಶ್ರೀ ವಿಶ್ವೇಶ್ವರ ವಾಚನಾಲಯ, ನಾರಾಯಣಪೇಟೆ.

ನ ಮೊಗಲಾಯ ಚಕ್ರವರ್ತಿಗಳ ಆಳ್ವಿಕೆಯಲ್ಲಿ ದಕ್ಖನ್ ಸುಬೇ ಅಧಿಕಾರವನ್ನು ಮಾಡಿದ ನಿಜಾಮುಲ್ ಮುಲ್ಕ್ ಆಸಫ್‌ಜಾ ಅಂಕಿತರಾದ ಮೀರ್‌ಕಮರುದ್ದೀನ್ ಎಂಬ ಮಹನೀಯರೇ ವನ್ನು ಸ್ಥಾಪಿಸಿ ಸ್ವಾತಂತ್ರ್ಯವನ್ನು ಪಡೆದವರು. ಅಂದಿ ದೇಶೀಯ ಸಂಸ್ಥಾನದಲ್ಲಿ ಪ್ರಾಮುಖ್ಯತೆಯನ್ನು ಹೊಂದಿ [illegible] ಇನ್ನೂರು ವರುಷಗಳು ಪೂರೈಸಿದವು. ಈ ವತ್ಸರದ ವರ್ಧಂತಿಯು ಈ ರಾಜ ದ ಎಲ್ಲಾ ಕಡೆಯಲ್ಲೂ ರಿಂದ ಜರುಗಿತು. ಇದರ ಸ್ಮಾರಕರೂಪವಾಗಿ ನಾರಾಯಣ ಕಮಂಡಲಿಯವರು ತಮ್ಮಲ್ಲಿ ಸದರಿ ವಾಚನಾಲಯದ ಪ್ರಾ ವನ್ನು ಉತ್ಸುಕತೆಯಿಂದ ಮಾಡಿದರು. ಇದರ ಆರಂಭ ಸಭೆಯು ಈ ಫಾಲ್ಗುಣ ಶು|| ೨ ಶುಕ್ರವಾರ ಸಾಯಂಕಾಲ ೫ ಗಂಟೆಗೆ ಇಲ್ಲಿಯ ಶ್ರೀಯುತ ಶೆಟ್ಟಿಕೇಶವಪ್ಪನವರ ಮನೆಯ ಮುಂಭಾಗದಲ್ಲಿ ಶ್ರೀಮಾನ್ ರಾಯಶಂಕರಸಹಾಯ ಬಿಲ್‌ಗಾಮಿ ಬಿ.ಎ., ಎಲ್‌ಎಲ್.ಬಿ., ಮುನಸೀಫ್‌ರವರ ಅಧ್ಯಕ್ಷತೆಯಲ್ಲಿ ನೆರೆಯಿತು. ಇದಕ್ಕೆ ಇಲ್ಲಿಯ ಕೈಗಾರಿಕೆಯ ತಾಲಾಧಿಕಾರಿಗಳಾದ ಮೌಲ್ವಿಮಹಾಮೂದ್ ಅಲಿ ಸಾ|| ರು, ರಾಜಕೀಯಶಾಲಾ ಪ್ರಧಾನೋಪಾಧ್ಯಾಯರಾದ ಮೌಲ್ವಿ ಮಹಮ್ಮದ್ ಹಸನ್ ಸಾ|| ಬಿ.ಎ.ಬಿ.ಟಿ. ಯವರು, ಅಸಿಸ್ಟೆಂಟ್ ಸರ್ಜನ್‌ರಾದ ಯಂ. ಎಚ್. ದೇಶಪಾಂಡ್ಯರವರು, ನ್ಯಾಯವಾದಿಗಳು, ಉದ್ಯೋಗಿಗಳು, ಪುರಪ್ರಮುಖರು ಆಗಮಿಸಿದ್ದರು. ಸಭೆಯು ಆರಂಭಿಸಲ್ಪಡುವುದಕ್ಕೆ ಮುಂಚಿತವಾಗಿ ವಾಚನಾಲಯದಲ್ಲಿ ಶ್ರೀ ಗಣಪತಿ, ಸರಸ್ವತೀ ಪೂಜೆಯು ವೈದಿಕರಿಂದ ವಿಧ್ಯುಕ್ತವಾಗಿ ಜರುಗಿದನಂತರ, ಸಭಾರಂಭದಲ್ಲಿ ಪಾಠಶಾಲಾವಿದ್ಯಾರ್ಥಿಗಳಾದ ವೀರಭದ್ರಪ್ಪಶರ್ಮ ಇವರಿಂದ ಈಶಸ್ತುತಿಯು ಮಾಡಲ್ಪಟ್ಟು ಬಳಿಕ ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಲು ಡಾಕ್ಟರ್‌ರವರು ಸದ್ಯದ ನಮ್ಮ ಪರಿಸ್ಥಿತಿಯನ್ನೂ, ನಾವು ಮುಂದುವರಿಯಲು ಮಾಡಬೇಕಾದ ಪ್ರಯತ್ನಗಳನ್ನೂ ಕುರಿತು ಯುಕ್ತಿಯುಕ್ತವಾಗಿ ಭಾಷಣವನ್ನು ಮರಾಠೀ ಭಾಷೆಯಲ್ಲಿ ಮಾಡಲು ಕುಷ್ಟಗಿ ಜಿಲ್ಲಾ ಕುಕನೂರು ಗ್ರಾಮದ ದೇಶೀಯ ಶಾಲಾಧ್ಯಾಪಕರಾದ ರಾಘವೇಂದ್ರರಾಯರು ಶಿಕ್ಷಣದ ಅವಶ್ಯಕತೆಯನ್ನೂ ಅದರ ಪರಿಣಾಮಸ್ಥಿತಿಯನ್ನೂ ಕುರಿತು ಕನ್ನಡದಲ್ಲಿ ಹೇಳಿದರು. ವಾಚನಾಲಯದ ಉತ್ಪಾದಕರಾದ ವೇ|| ಮಕ್ತಲಿ ಬಸವಲಿಂಗಾರ್ಯರು ನಿಜಾಂ ರಾಜ್ಯವು ಸ್ಥಾಪನೆಯಾದ ಬಳಿಕಿಂದಿನವರೆಗೆ ನಡೆದ ಚರಿತ್ರೆಯನ್ನೂ ನಮ್ಮನ್ನಾಳುವ ಮಹಾಪ್ರಭುಗಳ ಪ್ರಜಾರಂಜಕತೆಯನ್ನೂ ಸಂಕ್ಷಿಪ್ತವಾಗಿ ತಿಳುಹಿ ಅವರು ವಿದ್ಯಾಪ್ರಸಾರಕ್ಕಾಗಿ ಮಾಡುತ್ತಲಿರುವ ಮಹದುಪಕಾರವನ್ನು ಸ್ಮರಿಸಿ ವಾಚನಾಲಯದ ಅವಶ್ಯಕತೆಯನ್ನು ಕುರಿತು ಪ್ರಸ್ತಾಪಿಸಿದನಂತರ ವಕೀಲರಾದ ಮೌಲ್ವಿಮಹಮ್ಮದಲೀ ಸಾ|| ರವರು ತಾವು ಉರ್ದು ಫಾರಸಿ ಭಾಷೆಯಲ್ಲಿ ರಚಿಸಿದ ಮಂಗಲಪದ್ಯಗಳನ್ನು ಓದಲು ಸ್ಕೂಲ್ ಹೆಡ್ಮಾಸ್ಟರ್‌ರವರು ಯಾವುದಾದರೊಂದು ಕಾರ್ಯವನ್ನು ಉಪಕ್ರಮಿಸುವುದು ಸುಲಭವೆಂತಲೂ ಮಧ್ಯದಲ್ಲಿ ಬಂದೊದಗುವ ತೊಂದರೆಗಳನ್ನು ತಡೆದು ಕಾರ್ಯವನ್ನು ಫಲದ್ರೂಪಕ್ಕೆ ತರುವುದು ಕಷ್ಟವೆಂತಲೂ ಆರಂಭಶೂರರೆಂಬ ಬಿರುದಿಗೆ ಪಾತ್ರರಾಗದೆ ಕೈಕೊಂಡುದನ್ನು ಕೊನೆಮುಟ್ಟಿಸಲು ತುಂಬಾ ಪ್ರಯತ್ನಿಸಬೇಕೆಂತಲೂ ಹೇಳಿ, ಅಧ್ಯಕ್ಷರು ತಮ್ಮ ಭಾಷಣ ಮಾಡಿದರು. ವಕೀಲ ಗೋವಿಂದರಾಯರು ಸಭಿಕರ ಆಭಾರವನ್ನು ಮನ್ನಿಸಿ ಪ್ರಭುಗಳ ಶ್ರೇಯಃಪ್ರಾರ್ಥನೆಯನ್ನು ಮಾಡಿದ ಬಳಿಕ ಸಮಸ್ತರೂ ಗಂಧಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವಪುರವಾಸಿ.

ನ್ಯಾಯವೊ ಬ್ರಾಹ್ಮಣೇತರರ ಮೇಲಿನ ದ್ವೇಷವೊ ?

ನಂಜನಗೂಡಿನ ಅಮಲ್ದಾರ್ರು ಮ|| ಕೃಷ್ಣಸ್ವಾಮಿಪಿಳ್ಳೆಯವರನ್ನು ಅಲ್ಲಿಂದ ವರ್ಗಮಾಡಿದ ಸುದ್ದಿಯನ್ನು ವಾಚಕರು ಕೇಳಿರಬಹುದು. ಹಾಗೆ ಮಾಡಿದ್ದು ನ್ಯಾಯವೇ ಎಂಬುದರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಬರೆಯಲು ಈ ಸಮಯದಲ್ಲಿ ಮುಂದೆ ಬರುತ್ತೇನೆ. ಈಗ ಅಧಿಕಾರಕ್ಕೆ ಬ್ರಾಹ್ಮಣೇತರರು ಬಂದರೆಂದರೆ ಪ್ರತಿವಾದಿಗಳ ಕಣ್ಣು ಕೆಂಪಗೆ ಆಗುತ್ತಿರುವುದು ನಿಮಗೆ ತಿಳಿಯದೇ ಇಲ್ಲ. ಹಾಳು ಅವರ ದುರಾದೃಷ್ಟಕ್ಕೆ ಸರ್ಕಾರದವರಾದರೂ ಮಧ್ಯ ಮಧ್ಯ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸೊಪ್ಪುಹಾಕುತ್ತಿರುವುದು ಮಾತ್ರ ನ್ಯಾಯವೇನು ? ಮ|| ಪಿಳ್ಳೆಯವರು ಬ್ರಾಹ್ಮಣೇತರರಾಗಿ ಹುಟ್ಟಿದ ಪಾಪದ ಜೊತೆಗೆ ಅಧಿಕಾರಕ್ಕೆ ಬಂದ ಪಾಪವೂ ಸೇರಿ, ನಂಜನಗೂಡಿಗೆ ಬಂದದ್ದು ಯಾವ ಪಾಪದಿಂದ ? ಅವರು ನಂಜನಗೂಡಿಗೆ ಬರುವ ಹುಕ್ಕುಂ ಬಂದಕೂಡಲೆ ನಮ್ಮ ಡೆ|| ಕ|| ರು ಬ್ರಾಹ್ಮಣ-ಬ್ರಾಹ್ಮಣೇತರರೆಂಬ ಚರ್ಚೆಯು ಮುಂದೆ ಬರಬಹುದೆಂಬ ಸೂಚನೆಯನ್ನು ರೆವಿನ್ಯೂಕಮಿಷನರಿಗೆ ಕೊಟ್ಟರೆಂದು ತಿಳಿಯುತ್ತೇನೆ. ಅದಕ್ಕೆ ಅವರು ಸೊಪ್ಪುಹಾಕದೆ ಮುಂದೆ ನಡೆಯುವ ಕಾರುಭಾರುಗಳನ್ನು ನಿರೀಕ್ಷಿಸಿದ್ದು ನ್ಯಾಯವಾದರೂ ಡೆ|| ಕ|| ರು ಊಹೆಮಾಡಿದಂತೆ ಬ್ರಾಹ್ಮಣ-ಬ್ರಾಹ್ಮಣೇತರ ಕಲಹವು ಹೆಚ್ಚಿ ಮ|| ಪಿಳ್ಳೆಯವರ ಮೇಲೆ ಇಲ್ಲವಲ್ಲದ ದೋಷಾರೋಪಣೆಗಳಾಗಿ ಅವರನ್ನು ಅಲ್ಲಿಂದ ವರ್ಗಮಾಡಿದ್ದು ಸರ್ಕಾರದ ಬಂದೋಬಸ್ತಿಗೆ ಕುಂದಕವೆಂದೇ ನಾನು ಎಣಿಸುತ್ತೇನೆ. ಇರಲಿ ಮ|| ಪಿಳ್ಳೆಯವರಾದರೂ ಮಾಡಿದ ತಪ್ಪೇನೆಂದು ನೋಡೋಣ. ಅವರು ನಂಜನಗೂಡಿಗೆ ಬಂದಕೂಡಲೆ ದೇವಸ್ಥಾನದ ವಿಚಾರದಲ್ಲಿ ಬಹು ಮುತುವರ್ಜಿಮಾಡಿ ಕೆಲಸ ಮಾಡತೊಡಗಿದರು. ಕಳೆದ ವರುಷ ಸ್ವಾಕುಮಾಡಿದ್ದ ಭಕ್ತದ ಲೆಖ್ಖವೇ ಇಲ್ಲದೆ ಅವ್ಯವಸ್ಥೆಯಾಗಿದ್ದದ್ದನ್ನು ಕ್ರಮಪಡಿಸಲು ಪ್ರಯತ್ನಪಟ್ಟರು. ರಥೋತ್ಸವವು ಈಬಾರಿ ಸುಸೂತ್ರವಾಗಿ ನಡೆಯಲು ಬಹು ಬಂದೋಬಸ್ತಾದ ಏರ್ಪಾಡುಗಳನ್ನು ಮಾಡಿ, ಹಳ್ಳಿಗಳಿಂದ ಎಷ್ಟೋ ವಾಲಂಟಿಯರುಗಳು ಬರುವಂತೆ ಏರ್ಪಾಡು ಮಾಡಿದರು. ಪೂಜೆಪುನಸ್ಕಾರಗಳಲ್ಲಿದ್ದ ಅಕ್ರಮಗಳನ್ನು ಎತ್ತಿ ಕೆಡವಿ ದೇವರಕಾರ್ಯವು ಚೆನ್ನಾಗಿ ನಡೆಯಲು ಏರ್ಪಾಡುಮಾಡಿದರು. ರೈತರಿಗಾದರೋ ಅತ ರಿತ ಉಪಕಾರವನ್ನು ಮಾಡುತ್ತಾ, ಸರ್ಕಾರಿ ಕೆಲಸಗಳನ್ನು ಬಹಳ ಜರೂರಾಗಿ ಮಾಡುತ್ತಿದ್ದರು. ಈ ಸಹನೆಯಿಲ್ಲದೆ ಇಲ್ಲ ವಲ್ಲದ ತುಪಾನು ಮಾಡಿದರೆ ಸರ್ಕಾರದವರು ಅಲ್ಪ ಕಾಲದಲ್ಲಿ ವರ್ಗಮಾಡಿದ್ದು ಅನ್ಯಾಯವೆಂದೇ ಹೇಳುತ್ತೇನೆ. ಒಂದು ವೇಳೆ ಮ|| ಪಿಳ್ಳೆಯವರು ಬ್ರಾಹ್ಮಣರನ್ನು ದ್ವೇಷಮಾಡಿ ಎಷ್ಟು ಮಂದಿಯನ್ನು ಹಿಂಸೆಮಾಡಿದ್ದಾರೆಂಬುದನ್ನು ಯಾರಾದರೂ ಹೇಳಬಲ್ಲಿರಾ ? ದೇವರನ್ನು ಅಪವಿತ್ರಮಾಡಿರುವರೆ ? ಬ್ರಾಹ್ಮಣರ ಮನೆಗಳಿಗೆ ನುಗ್ಗಿರುವರೇ ? ಅವರನ್ನು ಸುಲಿಗೆಮಾಡಿರುವರೇ ? ಇದೊಂದೂ ಇಲ್ಲವಾದರೆ ಅವರನ್ನು ವರ್ಗಮಾಡಿದ ಕಾರಣವ್ಯಾವುದೆಂಬುದನ್ನು ಸರ್ಕಾರದವರು ಹೇಳಲಿ. ಈಸಾರಿ ಅವರು ಮಾಡಿದ ರಥೋತ್ಸವದ ಏರ್ಪಾಡುಗಳು ಹಿಂದೆ ಯಾವಾಗಲೂ ನಡೆಯಲಿಲ್ಲವೆಂದು ನಾನು ಹೇಳುತ್ತೇನೆ. ಅಂತಹ ಶಕ್ತರನ್ನು ಅಲ್ಲಿಂದ ವರ್ಗಮಾಡಿದ್ದು ನ್ಯಾಯವೆ ? ನಂಜನಗೂಡಿಗೆ ಬ್ರಾಹ್ಮಣೇತರ ಅಮಲ್ದಾರರು ಇರಕೂಡದಾದರೆ ಮೈಸೂರು ಡಿ|| ಗೆ ಬ್ರಾಹ್ಮಣ ಡೆ|| ಕಮಿಷನರೇಕೆ ? ಒಂದು ವೇಳೆ ನಂಜನಗೂಡಿನಲ್ಲಿ ದೇವಸ್ಥಾನವಿರುವುದರಿಂದ ಬ್ರಾಹ್ಮಣರೇ ಬೇಕೆಂದರೆ, ಚಾಮರಾಜನಗರಕ್ಕೆ ಆ ರೂಲಿಸು ಅನ್ವಯಿಸಬೇಡವೆ ? ಅಲ್ಲಿಯೂ ಬ್ರಾಹ್ಮಣೇತರಾಧಿಕಾರಿಗಳಿಲ್ಲವೆ ? ತಿರುಮಕೂಡ್ಲು ನರಸೀಪುರದಲ್ಲಿ ಹಿಂದೆ ಮ|| ಅಬ್ದುಲ್‌ಹಕ್ಕರು ಅಮಲ್ದಾರರಾಗಿದ್ದಾಗ ರಾಜಮರ್ಯಾದೆಯು ಅಮಲ್ದಾರರಿಗೇ ಸಲ್ಲತಕ್ಕದ್ದೆಂದು ಹೇಳಿದ ಆಗಮಿಕರು ಈಗ ಮಾತ್ರ ಬ್ರಾಹ್ಮಣ ಪಕ್ಷವಾದಿಗಳಾದದ್ದು ಪಕ್ಷಪಾತವಲ್ಲವೆ ? ಇದುವರೆಗೂ ಸರ್ಕಾರದವರು ಈ ಭೇದಗಳಲ್ಲಿ ಹೆಚ್ಚು ಪ್ರವೇಶ ಮಾಡುವುದಿಲ್ಲವೆಂದು ನಾವು ತಿಳಿದಿದ್ದೆವು. ಈ ವರ್ಗದಿಂದ ಬ್ರಾಹ್ಮಣ ಬ್ರಾಹ್ಮಣೇತರ ವಿಚಾರದಲ್ಲಿ ಅಭಿಮಾನವು ಸರ್ಕಾರದಲ್ಲಿ ಕೆಲಸಮಾಡುವುದೆಂದೂ, ಬ್ರಾಹ್ಮಣಾಧಿಕಾರಿಗಳು ಉಚ್ಚ ಪದವಿಯಲ್ಲಿದ್ದರೆ ಅವರ ಕಡೆಯವರ ಕೂಗುಗಳಿಗೆ ಬೆಲೆ ಬರುವುದೆಂದೂ ನಮಗೆ ದೃಢಪಟ್ಟಿತು. ಅಂಜುಬುರುಕರಾದ, ವಿದ್ಯಾವಿಚಾರದಲ್ಲಿ ಹಿಂದೆ ಬಿದ್ದಿರುವ ನಾವು ಮಾಡುವ ಕೆಲಸಗಳು ವಿರೋಧವೂ, ಆಡುವ ಮಾತುಗಳು ಅಸಹ್ಯವೂ ಆಗಿ ಸಾಲದ್ದಕ್ಕೆ ನಮ್ಮ ಅಧಿಕಾರಿಗಳಿಗೆ ಈ ವಿಧವಾದ ಅಪಜಯವು ಬರುತ್ತಿರುವುದು ನಮ್ಮ ಹೀನಸ್ಥಿತಿಯಿಂದಲೇ ಎಂದು ಹೇಳಬಹುದು. ಒಂದು ವೇಳೆ ಪಿಳ್ಳೆಯವರು ಏನಾದರೂ ಅನ್ಯಾಯ, ಅಕ್ರಮಗಳನ್ನು ಮಾಡಿದ್ದರೆ ವಿಚಾರಿಸಿ ಮಾಡಿ ಸರ್ಕಾರದವರು ಮುಂದೆ ಕ್ರಮನಡೆಸಬಹುದಾಗಿತ್ತು. ಹಾಗಿಲ್ಲದೆ ಮಡುಕಿದ್ದು ಸರ್ಕಾರದಲ್ಲಿ ಜನರಿಗಿದ್ದ ನಂಬಿಕೆಯು ಸಡಿಲವಾಗಲು ಕಾರಣವಾಯಿತು. ಮುಂದಾದರೂ ಬೇರೆ ಬೇರೆ ತಾಲ್ಲೂಕುಗಳಿಗೆ ಇಂಥಹ ಜಾತಿಯ ಅಮಲ್ದಾರರೇ ಇರಬೇಕೆಂದೂ, ಅಲ್ಲಲ್ಲಿಗೆ ಇಂತಹವರನ್ನೇ ವರ್ಗಮಾಡಬೇಕೆಂದೂ ವಿಧಾಯಕಮಾಡುವುದಾದರೆ ಅದೊಂದು ಮೇಲ್ಪಂಕ್ತಿಯಾದಂತೆಯೇಸರಿ, ಬ್ರಾಹ್ಮಣೇತರ ಬ್ರಾಹ್ಮಣಕಲಹಗಳು ನ್ಯಾಯವಲ್ಲವೆಂದು ಸಾರುವ ತಜ್ಞರು ನಂಜನಗೂಡಿನ ಗಲಭೆಯನ್ನು ನೋಡಿ ನಾಚಿಕೊಂಡರೆ ನನ್ನ ಲೇಖನವು ಸಾರ್ಥಕವಾಗುವುದು. ಬ್ರಾಹ್ಮಣಾಧಿಕಾರಿಗಳೇ ನಂಜನಗೂಡಿಗೆ ಬೇಕೆಂದು ಊಹೆಮಾಡಿದ ನಮ್ಮ ಡೆ|| ಕ|| ರವರ ಊಹೆಯು ಸಾರ್ಥಕವಾದದ್ದಕ್ಕಾಗಿ ನಾನು ತುಂಬಾ ಸಂತೋಷಪಡುತ್ತೇನೆ.

ಅರಿಕುಠಾರ.

ರಾಜಧಾನಿಯ ವೀರಶೈವ ಅಸೋಸಿಯೇಷನ್, ಮೀಟಿಂಗು.

ಸ್ವಾಮಿ, ಎಡಿಟರೆ !

ತಾ|| 9-3-24ನೇ ಮರ್ಕ್ಯುಂ ಸ್ಟಾರ್ ಪತ್ರಿಕೆಯ ಒಳದೇಶದ ವೃತ್ತಾಂತದಲ್ಲಿ ಪ್ರಕಟಿಸಿರುವ, ಮೇಲ್ಕಂಡ ಅಸೋಸಿಯೇಷನ್ ಮೀಟಿಂಗಿನ ಕೆಲವು ರೆಜ್ಯುಲ್ಯುಷನ್‌ಗಳ ವಾಸ್ತವ್ಯವಾದಂಶವನ್ನು ತಾವು ಪ್ರಕಟಿಸದೇ ಇರುವ ಪ್ರಯುಕ್ತ ಈ ಕೆಳಗೆ ನಮೂದಿಸಿರುವ ನಿಜವಾದಂಶವನ್ನು ದಯವಿಟ್ಟು ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ. ಸದರಿ ಮೀಟಿಂಗಿಗೆ ರಾಜಧಾನಿಯ ವೀರಶೈವರಲ್ಲಿ ಸುಮಾರು 40-45 ಜನರು ಸೇರಿದ್ದರು. ಡಾ|| ಶಿದ್ದಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅವರು ಶ್ರೀ ರಂಭಾಪುರೀ ಪೀಠಕ್ಕೆ ಅಧಿಕಾರಿಗಳ ಚುನಾವಣೆ ವಿಷಯವನ್ನು ತಿಳಿಸಿದರು. ಅದಕ್ಕೆ ಮ|| ಸಿಟ್ರಿಬಸಪ್ಪನವರು, ಶ್ರೀ ಪೀಠದ ವಿಚಾರವನ್ನು ವಿಶದವಾಗಿ ಹೇಳಿ, ಅಧಿಕಾರಿಗಳನ್ನು ಚುನಾಯಿಸತಕ್ಕ ಬಗ್ಗೆ ಒಂದು ಶುಭದಿವಸವನ್ನು ಗೊತ್ತುಮಾಡಿ ಆಗ್ಗೆ ಇಂಡಿಯಾ ದೇಶದ ವೀರಶೈವ ಮಹನೀಯರೆಲ್ಲಾ ದಯಮಾಡಿಸುವಂತೆ ಆಹ್ವಾನಕಳುಹಿಸಿ, ಆ ದಿವಸ ಸಭೆ ಸೇರಿ, ಬಹು ಸಮ್ಮತದಿಂದ ಚುನಾವಣೆಯಾದ ಪಟುವನ್ನು ಅಧಿಕಾರಿಯನ್ನಾಗಿ ಗೊತ್ತುಮಾಡುವಂತೆ, ನಿರ್ಧಾರಮಾಡಬೇಕೆಂದು ಸೂಚಿಸಿದರು. ಇದರ ಮೇಲೆ ಮ|| ಲಿಂಗಪ್ಪಯ್ಯನವರು, ಮ|| ಸಿಟ್ರಿಬಸಪ್ಪನವರು ಸೂಚಿಸಿದಂತೆ ಮಾಡಲು ಬಹಳ ಗದ್ದಲವಾಗುವದರಿಂದ ಅದು ಸಾಧ್ಯವಲ್ಲವೆಂತಲೂ, ಸರಿಯಾದ ಯೋಗ್ಯತೆ ಇಲ್ಲದವರು ಆರಿಸಲ್ಪಡುವುದಕ್ಕೆ ಅವಕಾಶವಾಗಬಹುದೆಂತಲೂ, 4 ಸಿಂಹಾಸನದವರು ಮುಜರಾಯಿ ಕಮಿಷನರು, ಸ್ಥಳೀಯ ದೊಡ್ಡ ಮನುಷ್ಯರ ಪೈಕಿ 2 ಇವರುಗಳಿಂದ ಆರಿಸಲ್ಪಟ್ಟ ಪಟುವನ್ನು ಚುನಾಯಿಸುವಂತೆ ಅಮೆಂಡ್‌ಮಾಡಬೇಕೆಂದು ಸೂಚಿಸಿದರು. ಇದರಮೇಲೆ ಬಹಳಕಾಲ ಚರ್ಚೆ ನಡೆಯಿತು, ಶೂನ್ಯಸಿಂಹಾಸನದ ವಿಚಾರವನ್ನೇ ಬಿಟ್ಟು ಮಾತನಾಡುತ್ತಾ ಇರುವುದು ಯುಕ್ತವಲ್ಲವೆಂದು ವಗೈರೆ ಮ|| ಶಿವಾನುಭವ ಸಿದ್ದಪ್ಪನವರು ಪ್ರಸ್ತಾಪವಮಾಡಿದರು. ನಂತರ ಬಹು ಸಮ್ಮತದ ಮೇರೆಗೆ ಕರಾರಾದ ರೆಜ್ಯುಲ್ಯೂಷನ್ ಏನಂದರೆ—(1) ಎಲ್ಲಾ ಸಿಂಹಾಸನಾಧಿಪತಿಗಳೂ, ಮೈಸೂರು ದೇಶದ 8 ಡಿಸ್ಟ್ರಿಕ್ಟುಗಳಿಗೆ, ಡಿಸ್ಟ್ರಿಕ್ಟು ಒಂದಕ್ಕೆ ಆರು ಜನರಿಗೆ ಕಡಮೆ ಇಲ್ಲದಂತೆ ಪ್ರತಿನಿಧಿಗಳೂ, ಗೌ|| ಮುಜರಾಯಿ ಕಮಿಷನರೂ, ಅರಮನೆ ಮು|| ಬಕ್ಷಿಯವರೂ, ಮತ್ತು ಡಿ. ಬ. ಕೆ. ಪಿ. ಪುಟ್ಟಣ್ಣಸೆಟ್ಟರವರೂ, ಉಳ್ಳ ಒಂದು ಕಮಿಟಿಯ ಮೂಲಕ ಪಟುವನ್ನು ಚುನಾಯಿಸಬಹುದೆಂದು ಗೊತ್ತುಮಾಡಲಾಯಿತು. (2) ಮಹಾಸಭಾ ವಿಚಾರವಾಗಿ ತಾವು ಪ್ರಕಟಿಸಿರುವುದು ಸರಿಯಾಗಿದೆ. (3) ಶ್ರೀ ಶಂಕರವಿಲಾಸ ಪಾಠಶಾಲಾ ಮತ್ತು ದೇವಸ್ಥಾನವನ್ನು ಮ್ಯುನಿಸಿಪಾಲಿಟಿಯವರೇ ಕಟ್ಟಿಸಬೇಕೆಂದು, ಕೇಳಿಕೊಳ್ಳುವ ವಿಚಾರದಲ್ಲಿ ಶ್ರೀ ಶಂಕರವಿಲಾಸ ಪಾಠಶಾಲೆಯ ಕಟ್ಟಡವು ಹೊಸಮಠದ ಶ್ರೀ ಯವರಿಗೆ ಸೇರಿದ ನಿವೇಶನದಲ್ಲಿ ಲೇಟ್ ಅತ್ತಿಗೋಡು ಬಸಪ್ಪನವರಿಂದ ಧರ್ಮಾರ್ಥವಾಗಿ ಕಟ್ಟಿಸಲ್ಪಟ್ಟಿತು. ಪಾಠಶಾಲಾ ಮ್ಯಾನೇಜುಮೆಂಟು ರಾಜಧಾನಿಯ ವೀರಶೈವಮಹನೀಯರಿಗೆ ವಹಿಸಲ್ಪಟ್ಟಿತು. ಅವರುಗಳು ಚಂದಾಮೂಲಕ ಸಹಾಯಮಾಡಿ ನಡೆಸಿಕೊಂಡು ಬರುತ್ತಾ ಇದ್ದಾರೆ. ಹಾಗೆ ಪಾಠಶಾಲೆಯು ನಡೆಯದೆ ನಿಂತಪಕ್ಷದಲ್ಲಿ ಕಟ್ಟಡವು ಶ್ರೀ ಯವರಿಗೆ ಸೇರತಕ್ಕದ್ದೆಂದು ಶ್ರೀ ಯವರಿಗೂ ಮತ್ತು ಲೇಟ್ ಅತ್ತಿಗೋಡುಬಸಪ್ಪನವರಿಗೂ ರಿಜಿಸ್ಟರಾದ ಎಗ್ರಿಮೆಂಟಿರುವುದು ಸರ್ವರಿಗೂ ತಿಳಿದೇ ಇದೆ. ಆದರೆ ಹೊಸ ಮ್ಯುನಿಸಿಪಲ್ ಆಫೀಸು ಕಟ್ಟಡಕ್ಕಾಗಿ, ಶ್ರೀ ಶಂಕರವಿಲಾಸ ಪಾಠಶಾಲೆಯನ್ನು ಅಕ್ವೈರುಮಾಡಿಕೊಳ್ಳುವದರಿಂದ ಪಾಠಶಾಲೆಯು ನಡೆಯದೆ ನಿಂತಿತೆಂದು ಭಾವಿಸುವಂತೆ ಇಲ್ಲ. ಆದ್ದರಿಂದ ಪಾಠಶಾಲೆಯನ್ನು ಕಟ್ಟಿಸುವ ಪರಿಯಂತರ ಬಾಡಿಗೆ ಕಟ್ಟಡದಲ್ಲಿ ನಡೆಸಬೇಕಾಗಿದೆ. ಹಾಲಿ ಈಗ ಇರುವಂತೆಯೇ ಇದೇ ಸಾಮಾನುಗಳನ್ನು ಹಾಕಿ ಈ ಅಳತೆಗನುಸಾರವಾಗಿ ಮ್ಯುನಿಸಿಪಾಲಿಟಿಯವರು ಕಟ್ಟಿಸಿಕೊಡುವುದಾಗಿ ಒಪ್ಪಿರುತ್ತಾರೆಂದು ಅಧ್ಯಕ್ಷರು ತಿಳಿಸಿರುತ್ತಾರೆ. ಅದಕ್ಕೆ ನಾವುಗಳು ಒಪ್ಪಿಕೊಳ್ಳುವುದು ಖಂಡಿತವಾಗಿಯೂ ಸರಿಯಾದದ್ದಲ್ಲ, ಅನುಕೂಲವಾದ ಸ್ಥಳದಲ್ಲಿ ಈಗಿನ ಕಾಲಕ್ಕೆ ತಕ್ಕಂತೆ ಕಟ್ಟಡವು ಆಗಬೇಕಾದ್ದು ಅವಶ್ಯಕವು. ಈ ಕಾರಣಗಳಿಂದ ಮ್ಯುನಿಸಿಪಾಲಿಟಿಯವರನ್ನು ಕೇಳಿಕೊಳ್ಳಬೇಕಾದದ್ದು ಅನವಶ್ಯಕ. ನಾವುಗಳು ಶ್ರೀಯವರನ್ನು ಕೇಳಿಕೊಳ್ಳಬೇಕು. ಏನಂದರೆ—ಶ್ರೀ ಶಂಕರವಿಲಾಸ ಪಾಠಶಾಲೆಯ ಕಟ್ಟಡವನ್ನು ಅಕ್ವೈರುಮಾಡಿಕೊಳ್ಳುತ್ತಾರಾದ್ದರಿಂದ, ಅದಕ್ಕೆ ಅವಾರ್ಡಾಗಿ ಬರತಕ್ಕ ಮೊಬಲಗಿನಲ್ಲಿ, ನೀವೇ ನಿಂತು ಕಟ್ಟಡವನ್ನು ಕಟ್ಟಿಸಿಕೊಡಬೇಕು. ಹಾಗೆ ನಿಮಗೆ ಆಗದಿದ್ದಲ್ಲಿ ಅ|| ಪ್ರ|| ರಾದ ಡಾಕ್ಟರ್ ಟಿ. ಎಸ್. ಸಿದ್ದಪ್ಪನವರಿಗೆ ಮೊಬಲಗನ್ನು ಕೊಡಿಸಿ ಅವರು ಕಟ್ಟಿಸುವುದಕ್ಕೆ ಅವಕಾಶಕೊಡಬೇಕು. (2) ಒಂದು ವೇಳೆ ಮೊಬಲಗು ಸಾಲದಿದ್ದರೆ, ಶ್ರೀಯವರು, ರೂ. 500 ಗಳವರಿಗೆ ಸಹಾಯಮಾಡಿಕೊಡಬೇಕು. (3) ಕಟ್ಟಡ ಕಟ್ಟಲ್ಪಡುವವರಿಗೆ ಬಾಡಿಗೆ ತರೀಖಾಗಿ ಪ್ರತಿತಿಂಗಳು ಶ್ರೀಯವರು ತಕ್ಕಮಟ್ಟಿಗೆ ದ್ರವ್ಯಸಹಾಯ ಮಾಡಬೇಕು ಎಂದು ಕೇಳಿಕೊಳ್ಳತಕ್ಕದ್ದು. ಸರಿಯಾದ ಜಾಗವನ್ನು ಕೊಡಿಸಿಕೊಡುವದಕ್ಕೂ ಕಂಪನ್‌ಸೇಷನ್ ಮೊಬಲಗನ್ನು ಬರಮಾಡಿಕೊಡುವುದಕ್ಕೂ ಸಹ ಅ|| ಪ್ರ|| ರಾದ ಡಾ|| ಟಿ.ಎಸ್. ಸಿದ್ದಪ್ಪನವರು ಸಹಾಯಮಾಡಿಕೊಡಬೇಕು. ದೇವಸ್ಥಾನವು ಶ್ರೀಯವರಿಗೆ ಸೇರಿದ್ದಾಗಿದೆ. ಅದನ್ನು ಇತರರು ಕಟ್ಟಿಸಿಕೊಡುವಂತೆ ನಾವುಗಳು ಕೇಳಿಕೊಳ್ಳಬೇಕೆಂಬುವದು ನಮಗೇನೆ ಸಂಬಂಧಪಟ್ಟದ್ದಲ್ಲ. ಈ ವಿಚಾರವನ್ನು ಈ ರೀತಿಯಲ್ಲಿ ನೋಟೀಸ್ ಮೂಲಕ ಪ್ರಚುರಪಡಿಸಿರುವುದು ಶ್ರೀಯವರಿಗೆ ವೃಥಾ ಮನೋವ್ಯಥೆಯನ್ನು ಉಂಟುಮಾಡುತ್ತದೆಯಲ್ಲದೆ ಕ್ರಮವಾಗಿ ಬರತಕ್ಕ ಕಂಪನ್‌ಸೇಷನ್ನಿಗೂ ಸಹ ಅಡ್ಡಿಮಾಡುವುದರಿಂದ ಶ್ರೀಯವರಿಗೆ ಲುಕ್ಸಾನಾಗುತ್ತೆಂದು ಮ|| ಸಿಟ್ರಿಬಸಪ್ಪನವರು ವಿಶದವಾಗಿ ಹೇಳಿದ್ದನ್ನು ಎಲ್ಲರೂ ಅನುಮೋದಿಸಿ ಆ ರೀತಿ ರೆಜ್ಯುಲ್ಯೂಷನ್ ಬರೆಯಬಹುದೆಂದು ಹೇಳಿ, ಆಗ್ಗೆ ಸುಮಾರು 10 ಗಂಟೆ ರಾತ್ರಿಯಾದ್ದರಿಂದ ಎಲ್ಲರೂ ಹೊರಟುಹೋದರು. ಶ್ರೀ ಬಸವೇಶ್ವರ ದೇವಸ್ಥಾನದ ಹಳ್ಳದಾರಿ ವಿಚಾರದಲ್ಲಿ ಮೈಸೂರು 1 ನೆ ಮು|| ಕೋರ್ಟಿನಲ್ಲಿ ದಾವಾನಡೆದು ಶ್ರೀಯವರ ಪರವಾಗಿ ಒಂದುವರ್ಷದ ಹಿಂದೆ ಡಿಕ್ರಿಯಾಗಿದೆಯಂತಲೂ, ಅದರ ಮೇಲೆ ರಿವಿಜನ್ ನಡೆದು ಕಳೆದ ತಿಂಗಳಿನಲ್ಲಿ ಸದರಿ ರಿವಿಜನ್ ವಜಾ ಆಗಿ ಒಂದು ತಿಂಗಳ ಒಳಗೆ ಶ್ರೀಯವರಿಗೆ ಕೋರ್ಟು ಮುಖಾಂತರ ಸ್ವಾಧೀನವಾಗಿರುತ್ತೆಂತಲೂ, ಅದರ ಮೇಲೆ ಪ್ರತಿವಾದಿಯಾದ ಕಾಶಿ ಬಸಪ್ಪನವರು ಅಪೀಲು ಮಾಡಿರುವರೆಂತಲೂ ವರ್ತಮಾನ ಕೇಳುತ್ತೇನೆ. ಅಪೀಲು ಅರ್ಜಿಯು [illegible]

6

ಶ್ರೀ. ಶಂಕರವಿಲಾಸ ಪಾಠಶಾಲೆಯನ್ನು ಸಮಾಜದವರೇ ಕಟ್ಟಿಸಬೇಕೆಂದು ನಿರ್ಧರವಾಯಿತೆಂದು ತಾವು ಪ್ರಕಟಿಸಿರುವದು ಸರಿಯಲ್ಲವಾದ್ದರಿಂದ ಆ ದಿವಸ ಮೀಟಿಂಗಿನಲ್ಲಿ ನಡೆದ ವಿದ್ಯಮಾನವನ್ನು ಯಥಾವತ್ತಾಗಿ ಬರೆಯಬೇಕಾಯಿತು. ಪತ್ರ ವಿಸ್ತಾರಕ್ಕೆ ಕ್ಷಮೆಯಿರಲಿ.

ಆ ದಿವಸದ ಸಭೆಯಲ್ಲಿದ್ದ ಒಬ್ಬ ವೀರಶೈವ.

ಘೋರಕೃತ್ಯ.

ಈ ಮಾಹೆ ತಾ|| 16ರ ಸ್ಟಾರ್ ಪತ್ರಿಕೆಯನ್ನು ನೋಡಿದೆನು. “ರಕ್ಷಕರು ಭಕ್ಷಕರಾಗುತ್ತಾರೆಯೆ?” ಎಂಬ ಹೆಡ್ಡಿಂಗಿನಿಂದ ಮೈಸೂರಿನ ಮ|| ಎ. ಶಾಂತರಾಜಶಾಸ್ತ್ರಿಗಳೆಂಬುವರು ಬರೆದ ಲೇಖನದಿಂದಲೂ ತಾ|| 8ರ ಸಂಪದಭ್ಯುದಯದ ಪತ್ರಿಕೆಯ ಅವಲೋಕನದಿಂದಲೂ, ದಾವಣಗೆರೆಯಲ್ಲಿ ಈ ಮಾಹೆ ತಾ|| 19ರಲ್ಲಿ ದುರ್ಗಾದೇವಿಯ ಜಾತ್ರೆ ನೆವದಿಂದ 5500 ಮೂಗು ಪ್ರಾಣಿಗಳು ಏಕಕಾಲದಲ್ಲಿ ವಧಿಸಲ್ಪಡುವುವೆಂದು ಗೊತ್ತಾಯಿತು. ಮ|| ಶಾಸ್ತ್ರಿಗಳವರು ಮಹಾಭಾರತ, ವಿಶ್ವಸಾರತಂತ್ರವೇ ಮೊದಲಾದ ಗ್ರಂಥಗಳ ಆಧಾರದಿಂದ, ಅಶೇಷ ಹಿಂದುಗಳೆಲ್ಲರಿಗೂ ಪ್ರಾಣಿಗಳಲ್ಲಿ ಕನಿಕರ ವಿರಬೇಕೆಂಬುದನ್ನೂ, ಅವುಗಳನ್ನು ಹಿಂಸಿಸುವವರು ಎಷ್ಟರಮಟ್ಟಿನ ನರಕಯಾತನೆಗಳನ್ನು ಅನುಭವಿಸಬೇಕೆಂಬುದನ್ನೂ ಬಹಳ ಯುಕ್ತಿಯುಕ್ತವಾಗಿ ವಿವರಿಸಿ, ತಮ್ಮ ಅನುತಾಪವನ್ನು ವ್ಯಕ್ತಪಡಿಸಿರುತ್ತಾರೆ. ಭರತಖಂಡದ ಅನೇಕ ಭಾಗಗಳಲ್ಲಿ ಗೋರಕ್ಷಣ ಸಂಘಗಳನ್ನು ಸ್ಥಾಪಿಸಿ, ಗೋವಧೆಯನ್ನು ನಿಲ್ಲಿಸಲು ಅನೇಕ ಮಹನೀಯರು ಪ್ರಯತ್ನಪಟ್ಟೂ ಪಡುತ್ತಲೂ ಇದ್ದಾರೆ. ಈ ಕ್ರಮವನ್ನನುಸರಿಸಿಯೇ ಮೈಸೂರು ದೇಶಕ್ಕೆ ಕಲಶಪ್ರಾಯವಾದ ಬೆಂಗಳೂರು ಪಟ್ಟಣದಲ್ಲಿಯೂ ಕೂಡ ಘನಹೊಂದಿದ ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ. ಇವರ ಅಧ್ಯಕ್ಷತೆಯಲ್ಲಿ ಒಂದು ಸಂಘವೇರ್ಪಟ್ಟಿರುವುದು. “ನಿರಪರಾಧಿಗಳಾದ ಯಾವ ಪ್ರಾಣಿಗಳನ್ನೂ ಯಾವ ಕಾರಣಗಳಿಂದಲೂ, ಕೊಲ್ಲಲೂ, ಹಿಂಸಿಸಲೂ ಬಾರದು. ಸರ್ವೇಶ್ವರನಿಂದ ಸೃಷ್ಟಿಸಲ್ಪಟ್ಟ ಪ್ರತಿಯೊಂದು ಪ್ರಾಣಿಯಲ್ಲಿಯೂ ಸರ್ವಸಮಾನವಾದ ದಯಾದೃಷ್ಟಿ ಇರಬೇಕೆಂಬುದೇ ಈ ಸಂಘದ ಮೂಲತತ್ವವು.” ಪ್ರತಿವರ್ಷದಲ್ಲೂ ನಾನಾ ಕಾರಣಗಳಿಂದ ಹತವಾಗುತ್ತಿರುವ ಗೋವುಗಳ ಸಂಖ್ಯೆಯು ಮಿತಿಮೀರಿರುವುದರಿಂದ ಸದ್ಯದಲ್ಲಿ ಗೋಹತ್ಯವನ್ನು ದೂರಮಾಡಬೇಕೆಂಬುದು ಈ ಸಂಘದ ಸದ್ಯದ ಪ್ರಬಲ ಪ್ರಯತ್ನವಾಗಿದೆ. ಈ ವಿಷಯದಲ್ಲಿ ಸರ್ಕಾರದವರೂ ಪೂರ್ಣಗಮನಕೊಟ್ಟು ಗೋವಧೆಯನ್ನು ನಿರೋಧಿಸತಕ್ಕ ವಿಷಯದಲ್ಲಿ ಒಂದು ಶಾಸನವನ್ನು ಜಾರಿಗೆ ತಂದಲ್ಲಿ ದೇಶಕ್ಕೆ ಮಹೋಪಕಾರವಾದೀತು. ಈ ರೀತಿಯಾಗಿ ಅನೇಕ ಕಡೆ ಪ್ರಾಣಿವಧೆಯನ್ನು ತಪ್ಪಿಸುವಸಲುವಾಗಿ ಪ್ರಬಲ ಪ್ರಯತ್ನಗಳು ನಡೆಯುತ್ತಿದ್ದರೂ ಬೇರೇ ಕಡೆಗಳಲ್ಲಿ ಜಾತ್ರೆ, ಹಬ್ಬ ಮುಂತಾದ ನೆವಗಳಿಂದ ಸಾವಿರಾರು ಪ್ರಾಣಿಗಳು ಹತವಾಗುತ್ತಲೇ ಇವೆ. ಪವಿತ್ರಮಹರ್ಷಿಗಳ ಅಂಶಸಂಭೂತರಾದ ಹಿಂದೂ ಜನಾಂಗದವರೆಲ್ಲರಿಗೂ ಭೂತದಯೆಯು ಅಂದರೆ ಪ್ರಾಣಿಗಳಲ್ಲಿ ದಯೆಯು ಇರಬೇಕಾದ್ದು ಪರಮಪವಿತ್ರವಾದ ಧರ್ಮವು. ಯಾವ ದೇಶದಲ್ಲಿ ನಿರಂತರವೂ ಮೂಗುಪ್ರಾಣಿಗಳ ವಧೆಯು ನಡೆಯುತ್ತಿರುವುದೋ ಆ ದೇಶಕ್ಕೆ ಹಾನಿಯು ತಪ್ಪದು. ಆದುದರಿಂದ ಇಂಥಾ ಮಹತ್ತರವಾದ ಧರ್ಮವನ್ನು ಉಜ್ಜೀವನಮಾಡುವುದು ಪ್ರತಿಯೊಬ್ಬ ಹಿಂದೂ ಪುರುಷನ ಮುಖ್ಯ ಕರ್ತವ್ಯವು. ವಿಷಯಗಳು ಹೀಗಿರುವಲ್ಲಿ, ಈ ನವನಾಗರಿಕಕಾಲದಲ್ಲಿ, ಅದರಲ್ಲೂ ಪವಿತ್ರ ಭರತಖಂಡದ ನಾಗರಿಕ ಸೀಮೆಯಲ್ಲಿ, ವಿಶೇಷ ಉತ್ತಮ ಹಿಂದೂವರ್ಗದವರಿಂದ ತುಂಬಿ ತುಳುಕುತ್ತಿರುವ, ಮೈಸೂರು ಸೀಮೆಯ ವ್ಯಾಪಾರಕ್ಕೆ ಕೇಂದ್ರಸ್ಥಾನವಾದ ದಾವಣಗೆರೆಯಲ್ಲಿ 5500 ಮೂಗು ಪ್ರಾಣಿಗಳ ವಧೆಯು ಏಕ ಕಾಲದಲ್ಲಿ ನಡೆಯುವುದನ್ನು ಕೇಳಿದ ಯಾವ ಹಿಂದೂ ಸತ್ಪುರುಷನ ಹೃದಯವು ತಾನೇ ಭೇದಿಸಿ ಹೋಗಲಾರದು! ಮೂಗು ಪ್ರಾಣಿಗಳ ಬಲಿಯಿಂದಲ್ಲದೆ, ಮತ್ಯಾವ ಅರ್ಚನೆಗಳಿಂದಲೂ ದೇವಿಯು ಸಂತುಷ್ಟಳಲೆ? ಆ ದಿವಸ ದಾವಣಗೆರೆಯು ಪ್ರತ್ಯಕ್ಷ ನರಕವಾಗಿ ಮಾರ್ಪಡುವುದಲ್ಲವೆ? ದಾವಣಗೆರೆಯಲ್ಲಿ ಅನೇಕ ಮಂದಿ ವಿದ್ಯಾವಂತರೂ, ಆಚಾರಶೀಲರೂ, ಪವಿತ್ರಾತ್ಮರೂ ಇರುವರಲ್ಲವೆ? ತಮ್ಮ ವಿಶ್ವಪ್ರಯತ್ನಗಳಿಂದ ಈ ಘೋರಕೃತ್ಯವನ್ನು, ಈ ಅತ್ಯಾಚಾರವನ್ನು ನಿರ್ಮೂಲನಮಾಡಲು ಯಾತಕ್ಕೆ ಯತ್ನಮಾಡಬಾರದು? ಕುರಿ ಮತ್ತು ಕೋಣಗಳ ಬಲಿಯು ಮಾತೃಸ್ವರೂಪಳಾದ ದೇವಿಯನ್ನು ತೃಪ್ತಿಪಡಿಸಬಲ್ಲುದೇ? ಎಂದಿಗೂ ಇಲ್ಲ. ನಿಮ್ಮ ಬಲಿಗಳಿಂದ ಸಾವಿರಾರು ಮೂಗು ಪ್ರಾಣಿಗಳನ್ನು ನಿಷ್ಕರುಣೆಗಳಾಗಿ ಆಯುಧಗಳಿಂದ ಕಡಿಯುವುದರಿಂದ ದೇವಿಯು ಸಂತೋಷಪಡುವುದಿಲ್ಲ. ನೀವು ಅಧರ್ಮವನ್ನು ತೊರೆದು, ಧರ್ಮಮಾರ್ಗವನ್ನು ಅನುಸರಿಸುವುದರಿಂದ, ನಿಮ್ಮ ತಾಮಸವೃತ್ತಿಯನ್ನು ಬಿಟ್ಟು ಸಾತ್ವಿಕವೃತ್ತಿಯನ್ನವಲಂಬಿಸುವುದರಿಂದ, ಪರಪೀಡನೆಯಲ್ಲಿ ಪರಾಙ್ಮುಖರಾಗಿ, ಪರೋಪಕಾರಿಗಳಾಗಿ ಪರಿಣಮಿಸುವುದರಿಂದ, ಮುಖ್ಯವಾಗಿ ಪ್ರಾಣಿವಧೆಯಲ್ಲಿ ವಿಮುಖರಾಗಿ, ಪ್ರಾಣಿರಕ್ಷಣೆಯಲ್ಲಿ ಸುಮುಖರಾಗುವುದರಿಂದ ಜಗಜ್ಜನನಿಯು ಆನಂದಪೂರಿತಾಶ್ರುಗಳುಳ್ಳವಳಾಗಿ ನಿಮ್ಮ ಇಷ್ಟಾರ್ಥಗಳನ್ನು ದಯಪಾಲಿಸುವಳು. ಹಾಗಲ್ಲದೆ ನೀವು ಇದಕ್ಕೆ ವಿರೋಧವಾಗಿ ನಡೆದಲ್ಲಿ, ಘೋರಕೃತ್ಯಗಳನ್ನು ಆಚರಿಸಿ ದೇವಿಗೆ ಅಪಾರವಾದ ಅಪರಾಧವನ್ನು ಮಾಡಿದಲ್ಲಿ, ಆಕೆಯು ದುಃಖಾಶ್ರುಪೂರಿತಳಾಗಿ ಪರಿತಪಿಸುವಳು ಮತ್ತು ಕ್ಷಾಮಾದಿಬಾಧೆಗಳಿಂದಲೂ, ಸಾಂಕ್ರಾಮಿಕ ರೋಗಗಳಿಂದಲೂ ನಿರ್ಮೂಲನಮಾಡುವಳು. ಘೋರಕೃತ್ಯಕ್ಕೆ ಉತ್ತೇಜನಮಾಡಲೆಣಿಸಿರುವ ಸೋದರರೇ! ಯಾರಾದರೂ ನಿಮ್ಮ ಕೆನ್ನೆಯಮೇಲೊಂದು ಬಲವಾದ ಪೆಟ್ಟನ್ನು ಕೊಡಲು, ಅಥವಾ ಒಂದೆರಡು ದುರ್ಭಾಷೆಗಳನ್ನಾಡಲು, ಕ್ರಿಮಿನಲ್ ರಿಪೋರ್ಟ್ ಬರಸಿಕೊಂಡು ನ್ಯಾಯಸ್ಥಾನಕ್ಕೆ ಹೋಗಿ ನ್ಯಾಯವನ್ನು ಹೊಂದಲು ಪ್ರಯತ್ನಿಸುತ್ತೀರಲ್ಲವೆ? ಆ ಮೂಕ ಪ್ರಾಣಿಗಳು ಯಾರಿಗೆ ಮೊರೆಯಿಡಬೇಕು? ಅವುಗಳ ಮೊರೆಯನ್ನು ಕೇಳುವವರೇ ಇಲ್ಲವಲ್ಲಾ! ಆ ನಿರಾಪರಾಧಿಗಳಾದ ಪ್ರಾಣಿಗಳಲ್ಲಿಯೂ ಪರಮಾತ್ಮನ ಪವಿತ್ರಾಂಶವು ನೆಲೆಗೊಂಡಿಲ್ಲವೆ? ಆ ವಿಶ್ವವ್ಯಾಪಕನ ಕಟ್ಟಳೆಗಳನ್ನು ಮೀರಿ ನಡೆಯುವದರಿಂದ ಆತನ ಕೋಪಾಗ್ನಿಯು ನಮ್ಮೆಲ್ಲರನ್ನೂ ದಹಿಸಿಬಿಡುವುದಲ್ಲವೆ? ಅಜ್ಞಾನದಿಂದಲೋ, ವೃಥಾಚಾರವೆಂದು ತಿಳಿದೋ ಜಾತ್ರೆ, ಹಬ್ಬ ಮುಂತಾದ ನಿಮಿತ್ತಗಳಿಂದ ಸಾವಿರಾರು ಪ್ರಾಣಿಗಳನ್ನು ವಧಿಸುತ್ತೀರಿ. ಹೀಗೆ ವಧಿಸುವುದರ ಉದ್ದೇಶವೇನು? ಆರೋಗ್ಯ ದೃಢಕಾಯದಿಂದಿರುವ ಪ್ರಾಣಿಗಳನ್ನು ಕೊಂದು ತಿನ್ನಬೇಕೆಂಬುದೇ. ಕೇವಲ ಸಸ್ಯವರ್ಗಗಳಿಂದುತ್ಪನ್ನವಾದ ಪದಾರ್ಥಗಳಿಂದಲೇ ಈಗಿನ ಕಾಲದಲ್ಲಿ ಅತ್ಯಂತ ರುಚಿಕರವಾದ ಪದಾರ್ಥಗಳನ್ನು ಪಕ್ವಮಾಡಿ ಭುಂಜಿಸುವರು. ಮಾಂಸಹಾರವು ಮನುಷ್ಯರಲ್ಲಿ ಕೇವಲ ತಾಮಸಬುದ್ಧಿಯನ್ನುಂಟುಮಾಡುವುದು. ಸೋದರರೇ! ಪ್ರಾಚೀನ ಆರ್ಯಋಷಿಗಳು ವಾಸಮಾಡುತ್ತಿದ್ದ ಪವಿತ್ರ ಹಿಂದೂ ದೇಶದ ನಿವಾಸಿಗಳೇ! ಈ ನಿಮ್ಮ ಅಜ್ಞಾನಾಂಧಕಾರವನ್ನು ಜ್ಞಾನಮಾರ್ತಾಂಡನು ಹೋಗಲಾಡಿಸಲಿ! ದಾವಣಗೆರೆಯ ಪ್ರಮುಖ ಮಹಾಜನಗಳು ಈ ಘೋರಕೃತ್ಯಗಳಿಗೆ ಉತ್ತೇಜನಕೊಡದಿರಲಿ! ಸರ್ವೇಶ್ವರನ ಪೂರ್ಣದೃಷ್ಟಿಯು ಮೂಗು ಪ್ರಾಣಿಗಳ ಮೇಲುಂಟಾಗಲಿ! ಅಧರ್ಮವು ಮೂಲೋಚ್ಚಾಟನಮಾಡಲ್ಪಟ್ಟು, ಧರ್ಮವು ಉಜ್ಜೀವಿಸಲ್ಪಡಲಿ! ಭಾರತಮಾತೆಯ ಪುತ್ರರಲ್ಲಿ ಭೂತದಯೆ ಎಂಬ ಸಸಿಯು ಪ್ರಬಲಿಸಿ, ದೊಡ್ಡ ವೃಕ್ಷವಾಗಿ ಅದರ ಫಲವು ಭಾರತ ಜನವರ್ಗಕ್ಕುಂಟಾಗಲಿ!

ಗ್ರಂಡಿಗೆ ಬಿ. ಸಂಜಪ್ಪ, ತಿಪಟೂರು.

ಪಶುಬಲಿಯ ಒಂದು ಅದ್ಭುತ ದೃಷ್ಟಾಂತ.

ಅಯ್ಯಾ ಪತ್ರಿಕರ್ತರೆ! ತಮ್ಮ ಹೋದವಾರದ ಪತ್ರಿಕೆಯಲ್ಲಿ ಪ್ರಕಟಪಡಿಸಿದ “ರಕ್ಷಕರು ಭಕ್ಷಕರಾಗುತ್ತಾರೆಯೇ?” ಎಂಬ ಅಮೂಲ್ಯವಾದ ವಿಷಯವನ್ನು ಓದಿನೋಡಿ ಬಹಳ ಸಂತೋಷಪಟ್ಟೆನು. ಧರ್ಮದ ತೌರುಮನೆಯಾಗಿರುವ ನಮ್ಮ ಭಾರತವರ್ಷದಲ್ಲಿ, ಪುರಾತನ ಕಾಲದಿಂದ ಅಹಿಂಸೆಯೆಂಬ ಅಮೋಘವಾದ ಅಮೃತವನ್ನು ಕುಡಿದು ಬೆಳೆಯುತ್ತಿದ್ದ ಈ ಪುಣ್ಯಭೂಮಿಯಲ್ಲಿ, ರಕ್ತದ ಮಳೆಯಾಗುತ್ತಿದ್ದ ಈ ಪವಿತ್ರಕ್ಷೇತ್ರದಲ್ಲಿ ಅಜ್ಞಾನವು ಆವರಿಸಿ ರಕ್ತದ ಮಳೆ ಬರುವಂತೆ ಆಗಿರುವುದೆಂದರೆ ಯಾರಿಗೆ ತಾನೆ ಕಣ್ಣೀರು ಬರುವುದಕ್ಕಿಲ್ಲ? ಅಯ್ಯೋ! ಪಾಪ! ಅನೇಕ ಜನಗಳು ಕೇವಲ ಅಜ್ಞಾನದಿಂದ ಮೂಗಜಂತುಗಳನ್ನು ದೇವರಿಗೆ ಒಪ್ಪಿಸುವ ನೆಪದಲ್ಲಿ ಕೊಲೆಮಾಡುತ್ತಾರೆ. ಅದರೆ ಕೊಲೆಮಾಡುವುದು ಏತಕ್ಕೋಸ್ಕರ? ತಮ್ಮ ಊರಿಗೆ ಶಾಂತಿಯಾಗಲೆಂದು! ತಮಗೆ ಬಂದಿರುವ ರೋಗಾದಿ ದುಃಖಗಳು ಪಾರಾಗಲೆಂದು!! ಆಹಾ! ಏನು ಅಜ್ಞಾನ? ವಿಷವನ್ನು ಭುಂಜಿಸಿದರೆ ಹಸಿವೆ ಆರುವುದೆ? ಹುಚ್ಚಾಟದಿಂದ ಕಿಚ್ಚು ಶಾಂತವಾಗುವುದೆ? ಕೊಲೆಮಾಡುವುದರಿಂದ ಶಾಂತಿ ನೆಲೆಯಾಗುವುದೆ? ಎಲ್ಲಿಯ ಮಾತು? ಆದರೂ ಅನೇಕರು ಕೊಲೆಮಾಡಿ ಕುಶಲರಾಗುವೆವೆಂದು ತಿಳಿದಿರುತ್ತಾರೆ. ಇದಕ್ಕೆ ನನ್ನ ಪ್ರತ್ಯಕ್ಷದೃಷ್ಟವಾದ ಒಂದು ನಿದರ್ಶನವನ್ನು ವಿಜ್ಞಾಪಿಸಿಕೊಳ್ಳುತ್ತೇನೆ—ನಮ್ಮ ಗ್ರಾಮದ (ಕಾಳೇನಹಳ್ಳಿಯ) ಲ್ಲಿ ಹೋದವರ್ಷ ಪ್ಲೇಗುಜಾಡ್ಯವು ತಲೆದೋರಿತು. ಅಲ್ಲಲ್ಲೇ ಇಲಿಗಳು ಬೀಳುವುವೆಂಬ ವಿಷಯವು ಗೊತ್ತಾಯಿತು. ಅನಂತರ ನಾನು ನಮ್ಮ ಗ್ರಾಮದಲ್ಲಿ ಇರದೆ ಸಮೀಪದಲ್ಲಿರುವ ಮತ್ತೊಂದು ಗ್ರಾಮಕ್ಕೆ ಹೊರಟುಹೋದೆನು. ಆ ಗ್ರಾಮದಲ್ಲಿ ನಾನು ಮೂರುನಾಲ್ಕು ದಿವಸಗಳು ಇರುವಾಗಲೇ ನಮ್ಮ ಗ್ರಾಮದಲ್ಲಿ ಕೆಲವರಿಗೆ ಬಾಯಿಲೆಯಾಗಿದೆಯೆಂದು ಗೊತ್ತಾಯಿತು. ಆದರೂ ಯಾರೂ ಊರನ್ನು ಬಿಡುವ ಗಡಿಬಿಡಿಯಲ್ಲಿರದೆ ತಟಸ್ಥರಾಗಿದ್ದರು. ವಿಷಯವೇನೆಂದು ಕೇಳಿದಾಗ ಆ ಊರನ್ನು ನಮ್ಮ ಊರಿನ ಗ್ರಾಮದೇವತೆಯಾದ ಮಾರಿದೇವಿಯು ಬಿಡಕೂಡದೆಂದೂ, ಯಾರಿಗೂ ಏನೂ ಅಪಾಯವಾಗದಂತೆ ಕಾಪಾಡುತ್ತೇನೆಂದೂ, ಅದಕ್ಕೋಸ್ಕರ ಅವಳಿಗೆ ಎಷ್ಟೋ ಕೋಣಗಳನ್ನೂ, ಕುರಿ ಮೇಕೆಗಳನ್ನೂ ಆಹುತಿ ಕೊಡಬೇಕೆಂದೂ ನಮ್ಮ ಊರ ಮಾರಿದೇವಿಯ ಪೂಜಾರಿಯಮೂಲಕ ಹೇಳಿಸಿ ಅಭಯದಾನ ಮಾಡಿರುವಳೆಂದು ಗೊತ್ತಾಯಿತು. ನಾನು ಮತ್ತು ಮ|| ಹೊಸದುರ್ಗದ ಉಪದೇಶಕ ಪದ್ಮನಾಭಯ್ಯನವರು ಆಗ ಈ ವಿಷಯವನ್ನು ಕೇಳಿ ಬಹಳ ಪಶ್ಚಾತ್ತಾಪಪಟ್ಟೆವು. ಆಗ ನಮ್ಮ ಊರಿನ ಮುಖ್ಯಸ್ಥರೆಲ್ಲರೂ ಸೇರಿ ಈ ಪ್ರಾಣಿವಧೆಗೆ ಚಂದಾವನ್ನು ಎತ್ತುವುದಕ್ಕೆ ಪ್ರಾರಂಭಮಾಡಿದರು. ಅನೇಕ ಜನ ದರಿದ್ರರು ತಿನ್ನುವುದಕ್ಕೆ ಗತಿಯಿಲ್ಲದಿದ್ದರೂ ಮಾರಿಯು ತಮ್ಮನ್ನು ಮರಣದಿಂದ ಕಾಪಾಡುವಳೆಂದು ಕೇಳಿದ ಕೂಡಲೇ ಬಹಳ ಕಷ್ಟಪಟ್ಟು ಚಂದಾವನ್ನು ಕೊಟ್ಟರು. ಆಗ ನಮ್ಮ ಮನೆಗೂ ಚಂದಾ ವಸೂಲಿಗಾಗಿ ಜನಗಳು ಬಂದರು. ನಮ್ಮ ತಾಯಿಯವರು ಅವರ ಉದ್ದೇಶವನ್ನು ಧಿಕ್ಕಾರಮಾಡಿ, ದೇವರನ್ನು ಫಲಪುಷ್ಪಗಳಿಂದ ಪೂಜಿಮಾಡಬೇಕಲ್ಲದೆ ಪ್ರಾಣಿವಧೆಯಿಂದ ಪೂಜಿಸುವುದು ಅಜ್ಞಾನವೆಂದು ಹೇಳಿ ಅವರಿಗೆ ಒಂದು ಕಾಸನ್ನೂ ಕೊಡದೆ ಕಳುಹಿಸಿದರು. ಕೂಡಲೇ ನಾವು ನಮ್ಮ ಊರಿನ ಒಬ್ಬ ಒಕ್ಕಲಿಗ ದೊಡ್ಡಮನುಷ್ಯರನ್ನು ಕಂಡು ಈ ಕ್ರೂರಕೃತ್ಯದ ವಿಷಯವನ್ನು ಬಹಳವಾಗಿ ಹೇಳಿದೆವು. ಅವರು ಇದನ್ನು ನಿಲ್ಲಿಸುವುದಕ್ಕೆ ಒಪ್ಪಿದರು. ಆದರೆ ಹಳ್ಳಿಗಳಲ್ಲಿ ಅಜ್ಞಾನಿಗಳ ಒಂದು ಪದ್ಧತಿಯುಂಟು. ಹತ್ತುಜನಗಳು ಹೇಳಿದಹಾಗೆ ಮಾಡಬೇಕೆಂಬ ನಿಯಮವನ್ನು ಇಟ್ಟಿರುತ್ತಾರೆ. ಆದರೆ ಆ ನಿಯಮವನ್ನು ಒಳ್ಳೇಕಾರ್ಯಗಳು ಬಂದಾಗ ಮೀರಿ ದುಷ್ಕಾರ್ಯಗಳು ಬಂದಾಗ ನೆರವೇರಿಸುತ್ತಾರೆ. ನಾವು ಎಷ್ಟೋ ತರಹದಲ್ಲಿ ಹೇಳಿದೆವು. ಯಾರೂ ಆಲಿಸಲಿಲ್ಲ. ಊರಿನಲ್ಲಿ ರೋಗವು ಪ್ರಬಲವಾಯಿತು. ಆಗಲೂ ಜನಗಳು ಕೊಲೆಮಾಡುವ ಪ್ರಯತ್ನದಲ್ಲಿಯೇ ಇದ್ದರು. ಅನೇಕ ಮನೆಗಳು ನಾಶವಾಗಿ ಹೋದವು. ಮಾರೀದೇವತೆಯು ಮೈಮೇಲೆ ಬಂದಿತೆಂದು ಕುಣಿದು ಹಳ್ಳಿಜನಗಳನ್ನು ಮೋಸಮಾಡಿದ ಪೂಜಾರಿಯ ಹೇಳಿಕೆಯನಂತರ ಸುಮಾರು ಇಪ್ಪತ್ತು ಜನಗಳು ರೋಗದಿಂದ ಸತ್ತರು. ಇನ್ನೊಂದು ವಿಶೇಷ—ಯಾವ ಪೂಜಾರಿಯು ತನ್ನಮೇಲೆ ಮಾರಮ್ಮನು ಬಂದಿರುವಳೆಂದು ನಟಿಸಿ ಕೊಲೆಮಾಡಬೇಕೆಂದು ಹಳ್ಳಿಜನಗಳನ್ನು ವಂಚಿಸಿದನೋ ಅವನೇ ಪ್ಲೇಗು ತಗಲಿ ಪ್ರಾಣಬಿಟ್ಟನು. ಹೀಗೆಂದಮೇಲೆ ಏನಾಯಿತು? ದೇವಿಯು ಪವಿತ್ರಳಾದ್ದರಿಂದ ಕೊಲೆಮಾಡಬೇಕೆಂದು ತನ್ನನ್ನು ನೆಪಮಾಡಿ ಮೋಸಮಾಡಿದ ಪೂಜಾರಿಯ ಮೇಲೆ ಸಿಟ್ಟುಮಾಡಿ ಅವನನ್ನೇ ಕೊಂದಳೆಂದು ಹೇಳಬೇಕಾಗುತ್ತದೆ. ಮಾರಿಯು ಹೀಗೆಮಾಡಿ ಅನೇಕ ಪ್ರಾಣಿಗಳ ಪ್ರಾಣವನ್ನು ಉಳಿಸಿದ್ದಲ್ಲದೆ ಪ್ರಾಣಘಾತಕರಿಗೆ ಸರ್ವನಾಶವೆಂಬ ವಿಷಯವನ್ನು ವ್ಯಕ್ತಪಡಿಸಿದಂತೆ ತೋರುವುದು. ದೇವಿಯು ತನ್ನ ತಾಯಿಯೆಂದು ಹೇಳಿದರೆ ಅವಳು ಪ್ರಪಂಚದಲ್ಲಿರುವ ಎಲ್ಲಾ ಪ್ರಾಣಿವರ್ಗಕ್ಕೂ ತಾಯಿಯೆಂದು ಹೇಳಿದಂತಾಯಿತು. ಅವಳಿಗೆ ಪಕ್ಷಪಾತವಿಲ್ಲ. ಮನುಷ್ಯನಾಗಲಿ, ಗೋವಾಗಲಿ, ಕುರಿಯಾಗಲಿ, ಆಡಾಗಲಿ ಎಲ್ಲರೂ ಅವಳ ಮಕ್ಕಳೇ! ದೊಡ್ಡಮಗನನ್ನು ಕುರಿತು “ನಿನ್ನ ಸಹೋದರರನ್ನೆಲ್ಲಾ ಬಲಿಕೊಡು” ಎಂದು ತಾಯಿಯು ಎಂದಾದರೂ ಹೇಳುವಳೇ? ಅನ್ಯಾಯವಾಗಿ ಕೊಲೆಮಾಡಿ ರಕ್ತವನ್ನು ಚೆಲ್ಲಿ ಪವಿತ್ರಳಾದ ದೇವಿಗೆ ಕಳಂಕತರುವವರು ಅಜ್ಞಾನಿಗಳಾದ ಮನುಷ್ಯರಲ್ಲದೆ ಮತ್ತೆ ಯಾರಿರುವರು?

ಹೀಗೆ ಪೂಜಾರಿಯು ಸತ್ತಕೂಡಲೇ ಜನಗಳಿಗೆ ಭಯಹುಟ್ಟಿತು. ಅವನು ಹೇಳಿದ್ದು ದೇವಿಯ ಮಾತಲ್ಲವೆಂದು ಗೊತ್ತಾಯಿತು. ಎಲ್ಲರೂ ಊರುಬಿಟ್ಟು ಹೊರಗೆ ಹೊರಟುಹೋದರು. ಆದರೂ ರೋಗವು ಊರಿನಲ್ಲಿಯೇ ಬೆಳೆದು ಹೊರಕ್ಕೆಹೋದರೂ ಅನೇಕರನ್ನು ಆಹುತಿಯನ್ನಾಗಿ ತೆಗೆದುಕೊಂಡಿತು. ಕೊಳಕಿನಿಂದ ಗಾಳಿ ಕೆಟ್ಟು ರೋಗಬಂದರೆ ಆ ಸ್ಥಳವನ್ನು ಬಿಟ್ಟು ಬೇರೆಕಡೆ ಹೋಗಿ ಪ್ರಾಣವನ್ನುಳಿಸಿಕೊಳ್ಳುವುದನ್ನು ಬಿಟ್ಟು ಪ್ಲೇಗುಬಂದರೆ ಮಾತುಬಾರದ ಪ್ರಾಣಿಗಳನ್ನು ಬಲಿ ಕೊಡುವುದೆಂದರೆ ಅದರಲ್ಲೇನಾದರೂ ಅರ್ಥವಿರುವುದೇ? ರೋಗಾದಿಗಳು ಬಂದರೆ ಚಂದಾವನ್ನು ವಸೂಲುಮಾಡಿ ತಮ್ಮತಮ್ಮ ದೇವರುಗಳನ್ನು ಫಲಪುಷ್ಪ ದೀಪಧೂಪಗಳಿಂದ ಪೂಜಿಮಾಡಿ ಗಂಟೆ ಜಾಗಟೆಗಳನ್ನು ಊರಿನಲ್ಲೆಲ್ಲಾ ಬಾಜಿಸಿದರೆ ಊರಿಗೆ ಶಾಂತಿಯುಂಟಾಗುವುದಲ್ಲದೆ, ಮೂಗಪ್ರಾಣಿಗಳನ್ನು ಹಿಡಿದುಕೊಂಡು ಬಂದು ಅವುಗಳು “ಅಮ್ಮಾ” ಎಂದು ಕೂಗಿದರೂ ಬಿಡದೆ ತಲೆಗಳನ್ನು ಕತ್ತರಿಸಿ ಅವುಗಳ ರಕ್ತವನ್ನು ಬೀದಿಗಳಲ್ಲಿ ಚೆಲ್ಲಿದರೆ “ಹಾಹಾ” ಕಾರವು ಹೆಚ್ಚಾಗಿ ಸರ್ವನಾಶವಾಗುವುದಿಲ್ಲವೆ? ನಮ್ಮ ಊರಿನಲ್ಲಿ ರೋಗ ನಿಲ್ಲದೆ ಹೆಚ್ಚಾದ್ದರಿಂದ ಕೊಲೆಮಾಡದೆ ಬಿಟ್ಟುಬಿಟ್ಟರು. ಅಕಸ್ಮಾತ್ತಾಗಿ ರೋಗವು ಶಾಂತಕ್ಕೆ ಬಂದಿದ್ದರೆ ಮಾರಿಯು ಮಾಡಿದಳೆಂದು ಪ್ರಾಣಿಗಳನ್ನು ಹತಮಾಡುತ್ತಿದ್ದರಲ್ಲವೆ? ನಮ್ಮ ಸಹೋದರರೇ! ಮತ್ತು ಇದೇ ದೇಶದ ದಯಾವಂತರೆ,!! ನಾವು ದೇವೇಂದ್ರನಂತೆ ಪ್ರಭಾವಶಾಲಿಗಳೂ ಕರುಣಾಳುಗಳೂ ಆದ ನಮ್ಮ ಪ್ರಭುಗಳ ಯಥಾರ್ಥವಾದ ಪ್ರಜೆಗಳಾದರೆ ಅವರ ಮುಖಮಂಡಲದಲ್ಲಿ ಹೊಳೆಯುತ್ತಿರುವ ಶಾಂತಿಯು ಎಲ್ಲೆಲ್ಲಿಯೂ ಹರಡುವುದಕ್ಕೆ ನಾವುಗಳು ಪ್ರಯತ್ನಪಡಬೇಕು. ಈ ಮೇಲೆಹೇಳಿದ ನಮ್ಮ ಸ್ಥಳದ ಉದಾಹರಣೆಯು ನಮ್ಮ ಊರಿನಲ್ಲಿ ನಡೆಯತಾದರೂ ದೇಶದಲ್ಲಿ ಎಲ್ಲೆಲ್ಲಿಯೂ ಅನೇಕರು ಅನೇಕ ಪ್ರಾಣಿಗಳನ್ನು ಅಜ್ಞಾನದಿಂದ ಬಲಿಕೊಡುವರಾದ್ದರಿಂದ ಈ ನಿದರ್ಶನವನ್ನಾದರೂ ನೋಡಿ ತಾವು ದಯಾಳುಗಳಾಗಿ ತಮ್ಮ ಮಕ್ಕಳಂತೆ ಸಾಕುತ್ತಿರುವ ಪ್ರಾಣಿಗಳಲ್ಲಿ ಕನಿಕರವಿಟ್ಟು ಮಕ್ಕಳನ್ನು ಮಾರಿಗೆ ಬಲಿಕೊಡಬೇಕೆಂದು ಯಾವನಾದರೂ ಅವೇ ದಂತೆ ನಟಿಸಿ ಹೇಳಿದರೆ ಬಲಿಕೊಡುವುದಕ್ಕೆ ಹೇಗೆ ಹಿಂಜರಿಯುತ್ತಾ ಹಾಗೆಯೇ ಪ್ರಾಣಿಗಳೂ ತಮ್ಮ ಮಕ್ಕಳಾದುದರಿಂದ ಶಿಶುಹತ್ಯ ದೋ ಭಯಪಟ್ಟವರಾಗಿ ಈ ಅನಾಹುತವನ್ನು ನಿಲ್ಲಿಸಿ ಪ್ರಾಣಿಗಳ “ಹ ಎನ್ನುವ “ಹಾಹಾ” ಕಾರವನ್ನು ತಪ್ಪಿಸಿ ಎಲ್ಲೆಲ್ಲಿಯೂ ಶಾಂತಿಯು ಡುವಂತೆ ಮಾಡುವಿರೆಂದೂ, ಭೂತದಯಾಹೃದಯರಾದ ವಿವೇಕಿಗಳು ಸ್ಸಿಗೆ ತೆಗೆದುಕೊಂಡು ತಮ್ಮ ತಮ್ಮ ಗ್ರಾಮಗಳಲ್ಲಿ ಈ ಕೊಲೆಯನ್ನು ಸುತ್ತಾರೆಂದೂ ನಂಬಿರುತ್ತೇನೆ. ಭಗವಂತನು ಎಲ್ಲರಿಗೂ ದಯಾಹೃ ವನ್ನು ದಯಪಾಲಿಸಿ ಮೂಗಪ್ರಾಣಿಗಳ ದುಃಖವನ್ನು ಹೋಗಲಾಡಿಸಲಿ ಪ್ರಾರ್ಥಿಸುತ್ತೇನೆ.

ಭೂತದಯಾಪರ,
ಕೆ. ಎಸ್. ಧರಣೇಂದ್ರ

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರ

APPLY FOR
SCORPION CURE.
M.S.SIDDAPPA BROS
MYSORE.

ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ
12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತೆ ವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಬಂದವರು ನಗುತ್ತಾಹೋಗುವಂತೆ ಮಾಡುವ ನಮ್ಮ ಕಂಪನಿಯ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಅದರೆ ನಿಮ್ಮ ಸಮಯಕ್ಕೆ ಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾ ಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4 12 ಬಾಟ್ಲುಗಳಿಗೆ 2—6—0. 25 ಬಾಟ್ಲುಗಳಿಗೆ 4—8—0. ಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಟಿ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದ
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗ
[50—27] ಮೈಸ

೧೯೨೪ ನೆಯ ಇಸವಿ ಮಾರ್ಚಿ ತಾ|| ೨೩ ರಿಂದ ೧೯೨೪ ಇಸವಿ ಮಾರ್ಚಿ ತಾ|| ೨೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಫಾಲ್ಗುಣ ಬಹುಳ ಬಿದಿಗೆ ಫಾಲ್ಗುಣ ಬಹುಳ ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
23	ಭಾನು	ಬಿ-ಉ	1-12 52-48	ಚಿತ್ತ	14.35
24	ಸೋಮ	ಚೌತಿ	49.30	ಸ್ವಾತಿ	10.42
25	ಮಂಗಳ	ಪಂಚ	43.2	ವಿಶಾ	6.20
26	ಬುಧ	ಷಷ್ಠಿ	37.2	ಅನೂ	2.2
27	ಗುರು	ಸಪ್ತ	30.25	ಮೂಲ	52.57
28	ಶುಕ್ರ	ಅಷ್ಟ	24.42	ಪೂಷಾ	49.25
29	ಶನಿ	ನವ	20.14	ಉಷಾ	46.48

ಮೈಸೂರು: ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆ
ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮುಂಡ ಕೃಪಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀ ಂಗವ | ಸ್ತೋತ್ರಾಭೀಷ್ಟದಲೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಮಾರ್ಚಿ ತಾರೀಖು ೩೦ ನೆಯ ಭಾನುವಾರ. [ಸಂಚಿಕೆ ೧೩

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತ ಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
9 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾ. ಜೆ. ಬಿ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಸಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

(Registered Trade Mark)

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—31] ಪೋ. ಬಾ. ೫೧೧, ಮದರಾಸು.

ಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವ ಶಿವಪೂಜಾವಿಧಿ.	೦—೧೨—೦	೧—೨—೦
ವೀರಶೈವ ವಿವಾಹವಿಧಿ.	೦—೮—೦	೦—೧೩—೦
ಲವಿದ್ಯಾ	೦—೪—೦	೦—೯—೦
ಲೀಲಿಚರಿತ್ರೆ	೦—೫—೦	೦—೧೦—೦
ಸಿ	೦—೪—೦	೦—೯—೦
ಂಗಳ	೦—೪—೦	೦—೯—೦
ಂಕರೀಸ್ತ್ಯರಚಕಳ	೦—೧—೦	೦—೬—೦
ಕ್ಯರೂಪಕ	೦—೮—೦	೦—೧೩—೦

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—17] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

☞ ೧೦೦೦ ರೂ. ಇನಾಮು. ☜

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಳಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ
ಸುಪ್ರಸಿದ್ಧ ವೈದ್ಯ ಇವರ
ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಬಸರೋಣ, ವೀರ್ಯಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಶಪ್ಪೀಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಶೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಕ್ರೀಷ್ಟಕಂದ, ತಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಮುದ್ರ ಕೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಥಲ್ಯಾಗೊಂಡ, ಪಂಚಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ. ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜೀನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲೆ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಅಣುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯೆಯಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ಣ ಅಡ್ರೆಸ್ ಪೋಸ್ಟಾಫೀಸ್ಟ ಸಹ ಬರೆಯಿರಿ.

[50—34] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.
ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.
ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.
ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.
ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.
ಪಂಚಶ್ಲೋಕೀ ಬೆಲೆ ೧—೦—೦.
ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.
ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿ
[50—12] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,
(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—18] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗ್ಯೆರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದ್ದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿ ಇರುತ್ತೇನೆ. ಇಷ್ಟಪಟ್ಟವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಊದುಬತ್ತಿ ಷಾಪ್, ಎಸ್. ಕಳ್ಳಪ್ಪ,
8 ಬೆಂಗಳೂರು ಸಿಟಿ ದೊಡ್ಡಪ್ಯಾಟೆ.

ಸೂಚನೆ.

ಬರುವ ಶನಿವಾರದ ದಿವಸ ಯುಗಾದಿ ಹಬ್ಬವಾದ ಕಾರಣ ಮುಂದಣ ತಾ|| 6—4—1924 ನೆಯ ಭಾನುವಾರದ ಸ್ಟಾರ್ ಪತ್ರಿಕೆಯು ಹೊರಡುವುದಿಲ್ಲವು. ಸಂಪಾದಕ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಮಾರ್ಚಿ ತಾ|| ೩೦ ನೆಯ ಭಾನುವಾರ.

THE PROPOSED FACULTIES.

The Senate of the Mysore University in its sitting on Friday the 28th instant decided upon the creation of two new Faculties, Medicine and Law. There seems to have been not much need of pleading in justification of these proposals as the House was favourably inclined towards them. They are no new proposals for they had been hanging fire for years past, practically since the founding of the University. It would be interesting to examine the need for creating these two faculties of all others. The primary object, if we have correctly understood the Senate's standpoint, is to provide occupation for the graduates that come out of the Colleges in large numbers every year. That doubtless is a problem, but we doubt whether the solution offered is the best in the circumstances. Nowhere, does a Faculty come into existence because of such a need. It must seek its justification in fulfilling a real demand of the people or the State in which the University is situated. Judged from this point of view however there is more to justify medicine than Law in Mysore. Our students are placed in unfortunate circumstances. Unless they are graduates they cannot be admitted into the Medical Colleges of Bombay or Madras. Then again, the State is in real need of more well-trained medical men. The only matter that should be guarded against is that the preparation for the medical degree here does not fall below the right standard. The problem of the equipment and the staff cannot be solved so easily in these days of financial stringency, and it is hoped that the medical officers who will become professors will show a spirit of generous service, and not let the patriotism which they have so well exhibited in advocating for the establishment of the Faculty transform itself into heavy extra allowances. The Engineering College affords a sad example of unemployed and suffering graduates, and we hope that there will not be a repetition of the same with regard to the Medical College products. This is a matter which must be carefully explored, especially in view of the fact that private practitioners cannot thrive well in Mysore State.

As regards the creation of Faculty of Law, we have made no secret of our opinion and there is no harm in repeating it. For one thing, this is a Faculty in least demand by the public. There is hardly room for the lawyers coming down from Bombay and Madras. They are already multiplying in undesirable numbers. A university has its own responsibility to the State. The accepted principle, apart from meeting the real needs of the State, is that the new faculties must be such as are calculated to develop the economic condition of the State and to increase its prosperity. There has also been so much talk about the poly-technical courses and the importance to be attached to Applied Science. But all that has been given a goby in favour of manufacturing discontented lawyers in still larger numbers, who cannot add a pie to the prosperity of the country and who can only feed upon the already impoverished people. One could understand the reasonableness of it, if the doors of the Law Colleges of Bombay, Madras or Travancore were barred against the Mysore graduates. Besides the ethics of it, is it in the best interests of the State to have the law graduates brought up into being in Mysore, without allowing them an opportunity to see the outside world. One would ask, how far have the present lawyers with outside knowledge acquitted themselves. We must say, we are grievously disappointed with them. But the fear is that if they do not even get that training, they would be worse, and progress would be slower than ever before. For our part, beyond some profitable allowances coming in handy to some lawyers who would become professors nobody else would benefit by the opening of this Faculty. There is yet another matter of serious moment. There seems to be a designed attempt to reduce the more important problems of mass education and primary education into negligible factors, and resort to the more showy schemes which are calculated for the benefit of the few. This outlook of the Mysore intelligentia presents a regrettable contrast to that of our brethren in British India, where since the days of Ranade and Gokhale the leaders have been consistently fighting for the enlightenment of the masses, and not for the increase of Faculties. It is only when spectacular effect is subordinated to substantial work, when the interest of the people as a whole is placed before that of the few, that we would be able to see the rapid all round progress of the State.

ಗತಿಸುತ್ತಿರುವ ಮತ್ತು ಉದಿಸುತ್ತಿರುವ ವರ್ಷಗಳು.

ಪ್ರಪಂಚದಲ್ಲಿ ಪ್ರತಿಯೊಂದು ಜನಾಂಗಕ್ಕೂ ನೂತನ ವರ್ಷಾರಂಭ ದಿನವು ಒಂದಾನೊಂದು ಗೊತ್ತಾದ ದಿವಸದಲ್ಲಿ ಬರುತ್ತದೆ. ಮಹಮ್ಮದೀಯ ಪ್ರಪಂಚಕ್ಕೆ ವರ್ಷಾರಂಭವು ಮೊಹರಂ ಮೊದಲನೆಯ ದಿನವಾಗುತ್ತದೆ. ಕ್ರೈಸ್ತ ಜನಾಂಗಕ್ಕೆ ಜನವರಿ ಒಂದನೆಯ ತಾರೀಖಿನಲ್ಲಿ ವರ್ಷಾರಂಭವಾಗುತ್ತದೆ. ಆದರೆ ಹಿಂದೂ ಜನರಿಗೆ ಮಾತ್ರ ವರ್ಷಾರಂಭ ದಿನವು ಒಂದೇ ಒಂದಾಗಿರದೆ ಸೌರಮಾನ ಮತ್ತು ಚಾಂದ್ರಮಾನ ಸಂಪ್ರದಾಯಾನುಸಾರವಾಗಿ ಬೇರೆ ಬೇರೆ ದೇಶೀಯರಿಗೆ ಬೇರೆ ಬೇರೆ ಕಾಲಗಳಲ್ಲಿ ವರ್ಷಾರಂಭವಾಗುತ್ತದೆ. ಪ್ರಕೃತದಲ್ಲಿ ಚಾಂದ್ರಮಾನ ಸಂಪ್ರದಾಯದ ನಮ್ಮಗಳಿಗೆ ಇನ್ನು ಐದು ದಿವಸಗಳಲ್ಲಿ ರುಧಿರೋದ್ಗಾರಿ ವರ್ಷವು ಪೂರೈಸಿ ಏಪ್ರಿಲ್ ತಾ|| 5 ಕ್ಕೆ ಸರಿಹೋಗುವ ಚೈತ್ರಶುದ್ಧ ಪಾಡ್ಯಮಿ ಶನಿವಾರದ ದಿವಸ ರಕ್ತಾಕ್ಷಿ ಸಂವತ್ಸರವು ಆರಂಭವಾಗುವುದು. ಜಗದೀಶನ ಆಜ್ಞೆಯಂತೆ ಕಾಲಚಕ್ರಪರಿವರ್ತನ ಕ್ರಮದಲ್ಲಿ ಒಂದು ಆವೃತ್ತವು ಮುಗಿದು ಅದರ ಹಿಂದೆಯೇ ಮತ್ತೊಂದು ಸುತ್ತು ಆರಂಭಿಸಲಿಕ್ಕಿರುವುದು. ತರುಗುಲ್ಮಲತಾದಿಗಳು ಹಿಂದಿನ ವರ್ಷ ಹಣ್ಣೆಲೆಗಳ ಸಂಬಂಧವನ್ನೆಲ್ಲಾ ಕಳೆದುಕೊಂಡು ಚಕಚಕಿಸುವ ನವೀನ ಪಲ್ಲವಕುಸುಮಾದಿಗಳನ್ನು ತಳೆದು ನೂತನ ವರ್ಷದ ವಸಂತಾಗಮನವನ್ನು ಸ್ವಾಗತಿಸುತ್ತಿವೆ. ಮಾನವ ವರ್ಗದವರೂ ಕೂಡ ಕಳೆದ ವರ್ಷದ ಕಷ್ಟಗಳನ್ನೆಲ್ಲಾ ಮರೆತು ನವೀನ ವರ್ಷದ ಸುಖವನ್ನು ಬಯಸಿ ನೂತನ ವಸ್ತ್ರಾದಿಗಳಿಂದಲಂಕೃತರಾಗಿ ನೂತನ ವರ್ಷವನ್ನು ಸ್ವಾಗತಮಾಡುವುದರಲ್ಲಿದ್ದಾರೆ. ತರುಗುಲ್ಮಾದಿಗಳು ವಸಂತಾಗಮದಲ್ಲಿ ಬಹಿರಲಂಕೃತವಾಗುತ್ತಿವೆ. ಮಾನವರೂ ಈ ಕಾಲದಲ್ಲಿ ನೂತನ ವಸ್ತ್ರಾಲಂಕೃತರಾಗುತ್ತಾರೆ. ಆ ತರುಜಾತಿಯಿಂದ ಆಗುವಷ್ಟು ಪರೋಪಕಾರವನ್ನು ಕೂಡ ಯಾವ ಮಾನವರು ಮಾಡಲಾರದೆ ಹೋಗುವರೋ ಅಂತಹವರು ಕೇವಲ ಬಹಿರಲಂಕರ್ಣ ಮಾತ್ರದಿಂದ ನೂತನ ವರ್ಷಾಗಮೋತ್ಸವವನ್ನು ಕಳೆದುಬಿಟ್ಟರೆ ಪ್ರಯೋಜನವೇನು ? ಮಾನವ ಜನ್ಮಕ್ಕೆ ಸಾರ್ಥಕತೆಯೇನು ? ಬರುವ ರಕ್ತಾಕ್ಷಿಸಂವತ್ಸರವೂ ಅನಿಷ್ಟ ಫಲಪ್ರದವಾದುದೆಂಬ ಅಂಜಿಕೆಯನ್ನು ಪಡಿಯಬೇಕಾದುದಿಲ್ಲವು. ಗತಿಸಿಹೋಗುವುದು ಕಾಲಧರ್ಮವಾಗಿದೆ. ಅದನ್ನು ಉಪಯೋಗಿಸಿಕೊಂಡು ಧನ್ಯರಾಗುವುದು ಮಾನವರವಶದಲ್ಲಿದೆ. ಅದುಕಾರಣ ತಮ್ಮ ಜೀವಮಾನದ ಕರ್ತವ್ಯವೇನೆಂಬುದನ್ನು ಸದ್ವಿಚಾರದಿಂದಲೂ, ಸತ್ಪುರುಷರ ಆದರ್ಶದಿಂದಲೂ ಅರಿತು, ಸದ್ವರ್ತನ, ಸದ್ಭಕ್ತಿ, ಸ ಲೋಚನೆ, ಸತ್ಸಂಕಲ್ಪ, ಶಾಂತಿ, ತೃಪ್ತಿ, ಪರಸ್ಪರ ಪ್ರೀತಿ, ಸ ದರ ವಾತ್ಸಲ್ಯ ಮೊದಲಾದ ಸದ್ಗುಣಗಳಿಂದ ಮುಂದ ವರ್ಷದ ಕಾಲವನ್ನು ಕಳೆಯಲು ಕೃತಸಂಕಲ್ಪರಾಗಿ ನ ವಾಚಕ ವರ್ಗವು ಆ ವರ್ಷದ ಕಾಲವನ್ನು ಸಾರ್ಥಕಪ ಕೊಳ್ಳುವಂತೆ ಜಗದೀಶನು ಅನುಗ್ರಹಿಸಲಿ.

ಗತಿಸಲಿಕ್ಕಿರುವ ಈ ರುಧಿರೋದ್ಗಾರಿ ಸಂವತ್ಸರದ ಮಳೆಬೆಳೆಗಳು ಸರಿಯಾಗಿ ಆಗದೆಹೋದುದರಿಂದ ಜನರ ಮತ್ತು ದನಕರುಗಳ ಆಹಾರ್ಯಪದಾರ್ಥಗಳಿಗೂ ಕುಡಿಯುವ ನೀರಿಗ ಬಹಳ ಅಭಾವವಾಯಿತು; ಪದಾರ್ಥಗಳ ಬೆಲೆಯು ಏರಿ ವಿನಾ ಇಳಿಯಲಿಲ್ಲ. ಆದರೆ ಕಾಶಿ ಮೊದಲಾಗಿ ಕೆಲ ಉತ್ತ ದೇಶಗಳಲ್ಲೂ ನಮ್ಮ ಸೀಮೆಯ ಉತ್ತರಭಾಗದಲ್ಲೂ ಮ ಳೂರು ಪ್ರಾಂತದಲ್ಲೂ ಅತಿವೃಷ್ಟಿಯಾಗಿ ನದಿಗಳಲ್ಲಿ ಅಭೂ ಪೂರ್ವವಾದ ಪ್ರವಾಹವು ಒಂದು ವಿಶೇಷ ಧನಧಾನ್ಯ ಹಾನಿಯಾಯಿತು. ರೋಗಾದಿಗಳೂ ಪ್ರಬಲವಾಗಿದ್ದು ಮ ಷ್ಯರನ್ನೂ, ದನಕರುಗಳನ್ನೂ ಬಹಳವಾಗಿ ಆಹುತಿಗೊಂಡ ದೇಶೀಯ ಸಂಸ್ಥಾನವಾದ ನಭಾರಾಜರ ಪದಚ್ಯುತಿಯು ಆಕಾಲಿಜನರ ಮನಸ್ಸಿಗೆ ಕ್ಷೋಭೆಯುಂಟಾಗಿ ಮಹಾಸ ಕಾರಿಯಾಗಿ ಪರಿಣಮಿಸಿರುವದು. ಕೆನಿಯಾದಲ್ಲಿರುವ ಭಾ ತೀಯರ ದುಸ್ಥಿತಿಯ ನಿವಾರಣೆಗಾಗಿ ಮಾಡಿದ ಪ್ರಯತ್ನ ವೂ ನಿಷ್ಫಲವಾಗಿ ಅವರ ಸ್ಥಿತಿಯು ಮತ್ತಷ್ಟು ಶೋಚನೀ ವಾಗಿ ಪರಿಣಮಿಸಿದುದರಿಂದ, ಭಾರತೀಯರ ಮನಸ್ಸು ಉ ಕಗೊಳ್ಳುವಂತಾಯಿತು. ಆದರೆ ಮಹಾತ್ಮಾಗಾಂಧಿ, ಅಲಿಸ ದರರು ಮೊದಲಾಗಿ ದೇಶಭಕ್ತರುಗಳ ನಿರ್ಬಂಧದಿಂದ ಪ್ರ ಬ್ಧವಾಗಿದ್ದ ಭಾರತೀಯರ ಮನಸ್ಸು ಈಗ ಆ ದೇಶಭಕ್ತರು ಬಂಧವಿಮೋಚನದಿಂದ ತಕ್ಕಮಟ್ಟಿಗೆ ಶಾಂತವಾಗಿರು ಮತ್ತು ಮಹಾತ್ಮಗಾಂಧಿಯವರಿಗೆ ಪ್ರಾಪ್ತವಾಗಿದ್ದ ಕಂಟಕವು ಭಾರತಮಾತೆಯ ಪೂರ್ಣಾನುಗ್ರಹದಿಂದ ನಿವಾ ಯಾಗಿ ಆಕೆಯ ಪುತ್ರರೆಲ್ಲರಿಗೂ ಪರಮಾನಂದವಾಗಿರು ಅತ್ತಲಾಗಿ ಮಹಾ ಉಛ್ರಾಯಸ್ಥಿತಿಯಲ್ಲಿದ್ದ ಪಾಶ್ಚಾತ್ಯ ಷ್ಟ್ರಗಳಿಗೆಲ್ಲಾ ಕಣ್ಣೇನೆಯನ್ನುಂಟುಮಾಡಿದ್ದ ಜಪಾನ ಜ್ಯದಲ್ಲಿ ಭೂಕಂಪದಿಂದ ಮಹಾಗ್ನಿಪ್ರಳಯವೂ, ಜಲಪ್ರ ವೂ ಆಗಿ ಸಾವಿರಾರು ಪ್ರಾಣಹಾನಿಯೂ ಕೋಟ್ಯ ದ್ರವ್ಯನಷ್ಟವೂ ಪ್ರಾಪ್ತವಾದುವು. ತುರುಷ್ಕರಿಗೂ ಆ ಗೂ ಒಡಂಬಡಿಕೆ ನಡೆದು ಪರಸ್ಪರ ಮೈತ್ರಿಯು ಹೆಪ್ಪುಗ ತು. ಮಹಮ್ಮದೀಯ ಪ್ರಪಂಚಕ್ಕೆ ಜಗದ್ಗುರುವಾಗಿದ್ದ ಫರಿಗೆ ಪದಭ್ರಷ್ಟತೆಯುಂಟಾಯಿತು. ಅಮೇರಿಕೆಯ ಪ್ರೆಸಿಡೆ ವಿಲ್ಸನ್ನರವರು, ಆಂಗ್ಲಮಂತ್ರಿ ಬೊನಾರ್ಲಾ, ಸೆಕ್ರೆಟರಿ ಆ ಮಾರ್ಲೆ ಮಹಾಪ್ರಭೃತಿಗಳು ಪರಲೋಕಯಾತ್ರೆಯನ್ನು ದರು. ಇತ್ತಲಾಗಿ ನಮ್ಮ ಮೈಸೂರು ದೇಶೀಯರ ಪುಣ್ಯಮ ಯಾಗಿ ಅವತರಿಸಿದ್ದ ಸರ್ ಕಾಂತರಾಜ ಅರಸಿನವರ ನಿಧನ ಸಂಸ್ಥಾನಕ್ಕೆ ಅಪಾರವಾದ ನಷ್ಟವು ಸಂಭವಿಸಿತು. ಅಹೋ ತ್ರಿ ಸ್ವಪ್ರಜಾಕ್ಷೇಮಚಿಂತನೆಯಲ್ಲೇ ನಿಮಗ್ನರಾಗಿರುವ ನ್ನಾಳುವ ಶ್ರೀ ನಾಲ್ವಡಿಕೃಷ್ಣರಾಜಭೂಪರವರ ಮಹಾಪ್ರ ದದಿಂದ ಅನುಗ್ರಹಿಸಲ್ಪಟ್ಟಿರುವ ರಾಜ್ಯಾಂಗ ಸುಧಾರಣೆ ನಿಸ್ಸೀಮರಾಜಭಕ್ತಿಯುತರಾದ ಪ್ರಜೆಗಳು ಆನಂದಭರಿತ ಇತೋಪ್ಯತಿಶಯವಾದ ಮಹಾಸ್ವಾಮಿಯವರ ಮಹಾಪ್ರ ಸಾದ ನಿರೀಕ್ಷಣೆಯಲ್ಲಿರುವರು. ಮತ್ತು ಮಹಾಸ್ವಾಮಿಯ ಅಮೃತಹಸ್ತದಿಂದ ರಾಜ್ಯಾಂಗ ಸಭಾರಂಭ ದಿನವು ನೂತನ ಶಕವಾಗಿ ಮಾರ್ಪಟ್ಟಿತು. ಈರೀತಿಯಾಗಿ ರುಧಿ ದ್ಗಾರಿ ಸಂವತ್ಸರವು 16 ಆಣೆಗಳಲ್ಲಿ ನಾಲ್ಕಾಣೆಯಷ್ಟು ಸಂತೋಷಗಳನ್ನೂ 12 ಆಣೆಗಳಷ್ಟು ನಷ್ಟಗಳನ್ನೂ ಮಾಡಿ, ಕನಿಷ್ಠಂಬೆಸುಗೆಗೆ ಸೇರಿದ 20 ವರ್ಷಗಳಲ್ಲೂ 5 ವರ್ಷಗಳು ಕ್ರೂರತರವಾದುವುವೆಂಬುದನ್ನು ಸಿದ್ಧಾಂ ಪಡಿಸಿತು.

ಮುಂದಣ ಶನಿವಾರದ ದಿವಸ ಆರಂಭಿಸಲಿಕ್ಕಿರುವ ಕ್ಷಿ (ರಕ್ತದಷ್ಟು ಕೆಂಪು ಕಣ್ಣುಳ್ಳ) ಸಂವತ್ಸರದಲ್ಲಿ ರಾ ಶನಿ, ಅವನೇ ಸೇನಾಧಿಪತಿ, ಅರ್ಘಾಧಿಪತಿ ಮತ್ತು ಮೇ ಪತಿ ಆಗಿರುವನು; ರವಿಯು ಮಂತ್ರಿಯಾಗಿಯೂ, ಸಸ್ಯಾಧಿಪನಾಗಿಯೂ, ಚಂದ್ರನು ಧಾನ್ಯಾಧಿಪನಾಗಿ ಶುಕ್ರನು ರಸಾಧಿಪತಿಯಾಗಿಯೂ, ಬಲರಾಮನು ಪಶು ಕನಾಗಿಯೂ ಇರುವರು. ಈ ವರ್ಷದಲ್ಲಿ ಕ್ರೂರ ಗ್ರ ಹೆಚ್ಚು ಆಧಿಪತ್ಯವು ದೊರಕಿರುವುದರಿಂದ ಅಲ್ಲಲ್ಲಿ ಬಾಧೆಯೂ, ರೋಗಾದ್ಯುಪದ್ರಗಳೂ, ಅಗ್ನಿಭಯವೂ, ರುಗಳಲ್ಲಿ ಪರಸ್ಪರ ದ್ವೇಷವೂ, ಮಧ್ಯಸ್ಥವೃಷ್ಟಿಯೂ, ಬೆಳೆಯೂ, ಚೋರರ ಭಯವೂ ಉಂಟಾಗುವುವು. ಮಾಸದಲ್ಲಿ ಪೂರ್ಣ ಚಂದ್ರಗ್ರಹಣವೂ, ಮಾಘಮಾ ಅರ್ಧಾಧಿಕವಾದ ಚಂದ್ರಗ್ರಹಣವೂ ಬರುವುವು. ದೈವಜ್ಞರು ಹೇಳಿರುತ್ತಾರೆ. ಈ ನೂತನ ವರ್ಷದಲ್ಲಿ ಜ ಅನುಗ್ರಹದಿಂದ ರಾಜಪ್ರಜೆಗಳ ಮಧ್ಯದಲುಂಟಾಗಿರುವ ಸ್ತಾಪವು ನಿವಾರಣೆಯಾಗಿ ಭಾರತೀಯರ ಕೋರಿ ರಾಜ್ಯಾಡಳಿತದಲ್ಲಿ ವಿಶೇಷಾಧಿಕಾರ ಸೌಲಭ್ಯಗಳು ದೆ ದೂ, ಪ್ರಜೆಗಳ ಸರ್ವ ವ್ಯಾಪಾರಗಳೂ ಶಾಂತಿಯಿಂ ಸುಖಸಂಪತ್ತುಗಳು ನೆಲಸುವಂತೆ ಆಗಲೆಂದೂ, ವರ್ಷಾರಂಭ ಕಾಲದಲ್ಲಿ ನೂತನ ಭಕ್ತ್ಯುತ್ಸಾಹ ವಾಚಕವರ್ಗವೆಲ್ಲವೂ ಆ ಜಗದೀಶನನ್ನು ಪ್ರಾರ್ಥಿ ಲೆಂದೂ ಕೋರಿ ಅವರೊಡನೆ ನಾವೂ ನೂತನ ಸ್ವಾಗತಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಎರಡನೇ ಕೌನ್ಸಿಲರಾದ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರೂ, ರೆವಿನ್ಯೂ ಕಮಿಷನರಾದ ಮಿ|| ಕೆ. ಚಾಂಡಿಯವರೂ, ಪೋಲೀಸು ಇ|| ಜನರಲ್‌ರವರಾದ ಮಿ|| ಪಿ. ಎಫ್. ಂಗ್‌ರವರೂ ತಂತಮ್ಮ ಉದ್ಯೋಗಸ್ಥಾನಗಳಲ್ಲಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ನಗರ್ಲೆಯಲ್ಲಾದ ಕೊಲೆಯ ಕೇಸಿನ ಸೆಷನ್ಸು ವಿಚಾರಣೆಯು ರಾಜಧಾನಿಯಲ್ಲಿ ಕಳೆದ ತಾ|| 27ರಿಂದ ನಡಿಯುತ್ತಿದೆ. ಬೆಂಗಳೂರು ದಂಡಿನಲ್ಲಿರುವ ಬ್ಯಾರಿಸ್ಟರ್ ಮ|| ಜಂಗಂಕೋಟೆ ಕೃಷ್ಣರಾಯರು ಅಪರಾಧಿಗಳಪರ ಮುಖ್ಯವಕೀಲರಾಗಿ ನಿಂತು ವಿವಾದವನ್ನು ನಡಿಸುತ್ತಿರುವರು.

ಮದ್ರಾಸಿನ ಮ|| ಗುರುಬಸವ ಕಂಪನಿಯವರು ಕಳುಹಿಸಿಕೊಟ್ಟಿರುವ ಅವರ ಪ್ರಸಿದ್ಧ ಡಾಕ್ಟರ್ ಜೆ. ಬಿ. ಯವರ ಮೆಡಿಕೇಟೆಡ್ ನಶ್ಯವನ್ನು ನಾವು ವಿಶ್ವಾಸದಿಂದ ಸ್ವೀಕರಿಸಿದೆವು. ಕಳೆದ ಡಿಸಂಬರ್ ತಿಂಗಳಲ್ಲಿ ಬರೋಡಾದಲ್ಲಿ ಜರುಗಿದ ಭರತಖಂಡದ ಕೈಗಾರಿಕೆಯ ವಸ್ತುಪ್ರದರ್ಶನದಲ್ಲಿ ಭಂಗಾರದ ಪದಕವು ಈ ನಶ್ಯದ ಉತ್ಕೃಷ್ಟತೆಗಾಗಿ ಕೊಡಲ್ಪಟ್ಟಿರುತ್ತದೆ.

ಆಸ್ಥಾನ ವಿದ್ವಾಂಸರೂ ಪ್ರಸಿದ್ಧ ಜೋತಿಷ್ಕರೂ ಆಗಿದ್ದ ಚನ್ನಪಟ್ಟಣದ ಅನಂತಜೋಯಿಸರ ಕುಮಾರರಾದ ಬ್ರಹ್ಮಶ್ರೀ ಸಚ್ಚಿದಾನಂದ ಜೋಯಿಸರು ಪದ್ಧತಿಯಪ್ರಕಾರ ಗುಣಿಸಿ ಪ್ರಕಟಿಸಿರುವ ರಕ್ತಾಕ್ಷಿ ಸಂವತ್ಸರದ ಪಂಚಾಂಗವನ್ನು ನಾವು ವಿಶ್ವಾಸದಿಂದ ಸ್ವೀಕರಿಸಿದೆವು ಇದರಲ್ಲಿ ಗ್ರಹಚಾರಗಳು, ಮಾಸ ವರ್ಷಫಲಗಳು ಇತ್ಯಾದಿ ಉಪಯುಕ್ತ ವಿಷಯಗಳು ಕೊಡಲ್ಪಟ್ಟಿವೆ.

ರಾಜಧಾನಿಯ ಅಸಿಸ್ಟೆಂಟ್ ಪೊಲೀಸ್ ಸೂಪರಿಂಟೆಂಡೆಂಟರಾದ ಮಿ|| ಷಿರಾಜುದ್ದೀನರವರು 3 ತಿಂಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಂಡು ತಮ್ಮ ಪತ್ನಿಯ ಊರಾದ ಹೈದರಾಬಾದಿಗೆ ಹೋಗಿಬರುವರೆಂದೂ, ಅವರು ಬರುವವರೆಗೆ ಸ್ಪೆಷಲ್ ರಿಜರ್ವ್ ಪೊಲೀಸು ಇನ್ಸ್ಪೆಕ್ಟರಾದ ಮಿ|| ಸಿರಲ್‌ರವರು ರಾಜಧಾನಿಯ ಆಕ್ಟಿಂಗ್ ಅ|| ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಡುವರೆಂದೂ ತಿಳಿಯಬರುತ್ತದೆ.

ಕೋಆಪರೇಟಿವ್ ಸೊಸೈಟಿಗಳ ಅಸಿಸ್ಟೆಂಟ್ ರೆಜಿಸ್ಟ್ರಾರರಾದ ಮಿ|| ಸಿ. ಅಬ್ದುಲ್ ಅಜೀಜ್‌ಖಾನ್, ಬಿ.ಎ., ಯವರು ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಚೀಫ್ ಆಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇವರು ಶ್ರದ್ಧೆಯಿಂದಲೂ ಚಟುವಟಿಕೆಯಿಂದಕೂ, ನಿಷ್ಪಕ್ಷಪಾತತೆಯಿಂದಲೂ ಕೆಲಸ ಮಾಡತಕ್ಕವರೆಂದೂ ನಿಗರ್ವಿಗಳೆಂದೂ ಹೆಸರ್ಪಡೆದಿದಾರೆ; ಅದಕ್ಕಿನ್ನ ಅತಿಶಯವಾದ ಹೆಸರನ್ನು ಈ ಹೊಸ ಉದ್ಯೋಗದಲ್ಲಿ ಪಡೆಯುವರೆಂದು ನಿರೀಕ್ಷಿಸುತ್ತೇವೆ.

ಲೋವರ್‌ಸೆಕೆಂಡರಿ ಪರೀಕ್ಷೆಗಾಗಿ ಪರಸ್ಥಳದಿಂದ ರಾಜಧಾನಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳ ಭೋಜನಕ್ಕೂ ವಾಸಕ್ಕೂ ವಿಲ್ಲೆಪೊಹಲ್ಲಾ ಗುರುಕಾರ್ ದೇವಣ್ಣನವರ ಬೀದಿಯಲ್ಲಿರುವ ಮ|| ಬಿ. ಸಿ. ಸೋಮಶೇಖರಪ್ಪನವರು ಪದ್ಧತಿಯಂತೆ ಏರ್ಪಡಿಸಿರುತ್ತಾರೆಂದೂ, ಬರತಕ್ಕ ವಿದ್ಯಾರ್ಥಿಗಳು ತಂಬಿಗೆ ಹಾಸಿಗೆ ಹೊದ್ದಿಕೆಗಳನ್ನು ತಮ್ಮ ಕೂಡ ತರತಕ್ಕದ್ದೆಂದೂ, ರಾಜಧಾನಿಯ ಕೃಷ್ಣರಾಜ ಮಹಲ್ಲಾದಲ್ಲಿರುವ ಪ್ರಸಿದ್ಧ ಹಾರ್ಮೋನಿಯಂ ವ್ಯಾಪಾರಿಗಳಾದ ಮ|| ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರು ತಿಳಿಸಿರುತ್ತಾರೆ.

ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆ ಮತ್ತು ವ್ಯಾಪಾರ ಬೋರ್ಡುಗಳಿಗೆ ಇಬ್ಬರು ಮೆಂಬರುಗಳನ್ನೂ, ರೈಲ್ವೆ, ವೈದ್ಯುತ, ಪಬ್ಲಿಕ್ ವರ್ಕ್ಸ್, ಸ್ಥಳೀಯ ಸರ್ಕಾರ, ವೈದ್ಯ, ಆರೋಗ್ಯ ಹಣ ಕಾಸು ಮತ್ತು ತೆರುಗೆ ಇವುಗಳ ಸಂಬಂಧವಾದ ಸ್ಟಾಂಡಿಂಗ್ ಕಮಿಟಿಗಳಿಗೆ 10 ಮೆಂಬರುಗಳನ್ನೂ ನ್ಯಾಯವಿಧಾಯಕ ಸಭಾ ಸಭಿಕರುಗಳಿಂದ ಆರಿಸುವ ಕೆಲಸವು ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಏಪ್ರಿಲ್ ತಾ|| 4ರಲ್ಲಿ ನ್ಯಾಯವಿಧಾಯಕ ಸಭೆಯ ಪ್ರಥಮಾಧಿವೇಶನವು ನಡೆದಮೇಲೆ ಅಂದರೆ ಸಾಯಂಕಾಲ 6 ಗಂಟೆಯಿಂದ ರಾತ್ರಿ 8 ಗಂಟೆಯವರೆಗೂ ನಡೆಯುವುದಾಗಿ ಗೊತ್ತಾಗಿದೆ.

ನ್ಯುಮೋನಿಯಾ ಜ್ವರಪೀಡಿತರಾಗಿ ಕೃಷ್ಣರಾಜ ಆಸ್ಪತ್ರೆಯ ಚಿಕಿತ್ಸೆಯಲ್ಲಿರುವ ಡಾಕ್ಟರ್ ಉಸ್ಮಾನರವರಿಗೆ ಜ್ವರ ಕಡಿಮೆಯಾಗಿ ಗುಣಮುಖವಾಗಿರುವುದೆಂದು ತಿಳುಹಲು ವಾಗುತ್ತದೆ. ಸೀನಿಯರ್ ಸರ್ಜನರು ಹೋದವಾರವೂ ರವೂ ಬಂದು ಅವರ ದೇಹಸ್ಥಿತಿಯನ್ನು ನೋಡಿಕೊಂಡು ದ ಚಿಕಿತ್ಸೆಗೆ ತಕ್ಕೇರ್ಪಾಟನ್ನು ಮಾಡಿಹೋದರು. ಡಾ|| ಉಸ್ಮಾನರವರ ಪತ್ನಿಯವರೂ ಗಂಡಾಮಾಲೆಗೆ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡು ಬಹಳವಾಗಿ ಣಪಟ್ಟಿರುವರೆಂದು ಕೇಳಿ ಸಂತೋಷಿಸುತ್ತೇವೆ. ಈ ದಂಪತಿ ಜಾಗ್ರತೆಯಲ್ಲಿ ಸಂಪೂರ್ಣ ಗುಣವನ್ನು ಹೊಂದಲೆಂದು ರೈಸುತ್ತೇವೆ.

ಮೈಸೂರು ನ್ಯಾಯವಿಧಾಯಕಸಭಾ ಸಭಿಕತ್ವಕ್ಕೆ ಅಭ್ಯ ಯಾಗಿ ನಿಂತಿದ್ದು ಸಾಕಷ್ಟು ಓಟುಗಳನ್ನು ಪಡೆಯದೆ ಜಿತರಾದವರುಗಳಲ್ಲೊಬ್ಬರಾದ ಬೆಂಗಳೂರಿನ ಮ|| ಎಂ. ಕೃಷ್ಣಮೂರ್ತಿಯವರು ಓಟಿಂಗು ಸಕ್ರಮವಾಗಿ ನಡಿ ವಾದ ಪ್ರಯುಕ್ತ ತಾವು ಕೋರಿರುವ ತಮ್ಮಂತೆ ಪರಾ ಅಭ್ಯರ್ಥಿಗಳ ಮತ್ತು ಕೆಲರ ಸಾಕ್ಷಿ ವಿಚಾರಣೆಯಿಂದ ಅದನ್ನು ರದ್ದುಪಡಿಸಿ ಹೊಸದಾಗಿ ಚುನಾವಣೆಯು ನಡೆಯಲು ಅಪ್ಪಣೆಯಾಗಬೇಕೆಂದು ಮೈಸೂರು ಡಿಸ್ಟ್ರಿಕ್ಟ್‌ಜಡ್ಜಿಯವರಲ್ಲಿ 100 ರೂ.ಯನ್ನು ಒತ್ತೆಯಿಟ್ಟು ಬಿನ್ನೈಸಿಕೊಂಡಿರುತ್ತಾರೆಂದೂ ಇದರ ವಿಚಾರಣೆಯು ಬರುವ ಏಪ್ರಿಲ್ ತಾ|| 2ರಲ್ಲಿ ನಡಿಯುವುದೆಂದೂ ಕೇಳುತ್ತೇವೆ.

ಪ್ರಥಮ ರಾಜಕುಮಾರಿಯರಾದ ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರು ಮದ್ರಾಸಿಗೆ ದಯಮಾಡಿಸಿದ್ದರಷ್ಟೆ? ಅಲ್ಲಿ ಅವರು ಅಸ್ವಸ್ಥರಾದುದರ ಮೇಲೆ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಿಯವರು ಮದ್ರಾಸಿಗೆ ಚಿತ್ತೈಸಿ ಕುವರಿಯವರನ್ನು ಬೆಂಗಳೂರಿಗೆ ಕರೆದುಕೊಂಡುಬಂದು ಡಾಕ್ಟರುಗಳಿಂದ ಚಿಕಿತ್ಸೆಮಾಡಿಸುತ್ತಿರುವರು. ವ್ಯಾಧಿಯು ಪ್ರಬಲವಾಗಿರುವುದಾಗಿಯೂ, ಕೈ|| ಕಾಂತರಾಜ ಅರಸಿನವರ ಸೋದರಳಿಯಂದರಾದ ಸರದಾರ್ ಬಾಳರಾಜ ಅರಸಿನವರ ತಮ್ಮಂದಿರು ಮ|| ಪುಟ್ಟಬಾಳರಾಜ ಅರಸಿನವರು ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರ ದತ್ತಪುತ್ರರಾಗಿ ಈ ದಿವಸ ಸ್ವೀಕರಿಸಲ್ಪಡುವರೆಂದೂ ಕೇಳುತ್ತೇವೆ. ಶ್ರೀಮನ್ಮಹಾರಾಜರವರೂ, ಉದಕಮಂಡಲದಲ್ಲಿದ್ದ ಶ್ರೀಮದ್ಯುವರಾಜರವರೂ, ಮೂರನೆಯ ರಾಜಕುವರಿಯವರೂ ಅಕ್ಕಯ್ಯನವರ ದೇಹಸ್ಥಿತಿಯನ್ನು ಪರಾಂಬರಿಸಲಿಕ್ಕಾಗಿ ಬೆಂಗಳೂರಿಗೆ ದಯಮಾಡಿಸಿರುವರು.

ಎಕ್ಸೈಸ್ ಕಮಿಷನರಾದ ಮ|| ಎ. ಸುಬ್ರಹ್ಮಣ್ಯ ಅಯ್ಯರ್‌ರವರು ಬರುವ ಏಪ್ರಿಲ್ ತಾ|| 1 ರಿಂದ 6 ತಿಂಗಳ ರಜವನ್ನು ಪಡೆದುಕೊಂಡಿರುವುದರಿಂದ ಸ್ಪೆಷಲ್ ಡ್ಯೂಟಿಯ ಮೇಲಿರುವ ಮ|| ವಿ. ಆರ್. ತ್ಯಾಗರಾಜ ಅಯ್ಯರ್, ಬಿ.ಎ., ಯವರು ಆಕ್ಟಿಂಗ್ ಎಕ್ಸೈಸ್ ಕಮಿಷನರಾಗಿಯೂ, ಇನ್ಕಂಟ್ಯಾಕ್ಸ್ ಕಮಿಷನರಾಗಿಯೂ, ರೆಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ ಆಗಿಯೂ, ಜಾಯಿಂಟ್‌ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಮತ್ತು ಸೀನಿಯರ್ ಅ|| ಕಮಿಷನರ್ ಮ|| ಬಿ. ಟಿ. ಕೇಶವಯ್ಯಂಗಾರರು ಲೋಕಲ್ ಸೆಲ್ಫ್ ಗೌರ್ನಮೆಂಟ್ ಸಂಬಂಧವಾಗಿ ಸ್ಪೆಷಲ್ ಡ್ಯೂಟಿ ಆಫೀಸರಾಗಿ ನಿಯಮಿಸಲ್ಪಟ್ಟು ಮ|| ಸಿ. ಎಸ್. ಬಾಲಸುಂದರಂ ಅಯ್ಯರ್ ಬಿ.ಎ. ಯವರು ವಿದ್ಯಾಭ್ಯಾಸದ ಇ|| ಜನರಲ್‌ರವರಾಗಿಯೂ, ಮಿ|| ಸಿ. ಜೆ. ಡಿಸೋಜಾ ಬಿ.ಎ., ಬಿ.ಎಲ್. ರವರು ಕೈಗಾರಿಕೆಯ ಡೈರೆಕ್ಟರಾಗಿಯೂ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ವೀರಶೈವರ ವಿದ್ಯಾಭಿವೃದ್ಧಿಗೂ ಸಮಾಜ ಸುಧಾರಣೆಗೂ ಮುಖ್ಯ ಸಾಧನವಾಗಿದ್ದ ಯಾವದ್ಭಾರತ ವೀರಶೈವ ಮಹಾಸಭೆಯು ಬೀರೂರಿನಲ್ಲಿ ಕೂಡಿದಾಗ ಬೇರುಬಿಟ್ಟುದುದನ್ನು ಈವರೆಗೆ ಯಾರೂ ಕದಲಿಸಲು ಸಮರ್ಥರಾಗಿಲ್ಲವಾಗಿ, ಬೆಂಗಳೂರಿನ ವೀರಶೈವ ಬಂಧುಗಳು ಮಹಾಸಭೆಯ ಬೇರನ್ನು ಬಿಡಿಸಿ ಅದನ್ನು ಬರುವ ಜೂನ್ ತಿಂಗಳಲ್ಲಿ ಅಥವಾ ಡಿಶಂಬರ್ ತಿಂಗಳಿನಲ್ಲಿ ಬೆಂಗಳೂರಿಗೆ ಬರಮಾಡಿಕೊಳ್ಳುವ ಯೋಚನೆಯುಳ್ಳವರಾಗಿರುವರೆಂದು ಕೇಳಿ ಸಂತೋಷಿಸುತ್ತೇವೆ. ಹಿಡಿದ ಕಾರ್ಯವನ್ನು ಬಿಡದೆ ನೆರವೇರಿಸುವ ಸಾಮರ್ಥ್ಯವುಳ್ಳವರೂ ದೂರದರ್ಶಿಗಳೂ ಎಂದು ಸುಪ್ರಖ್ಯಾತರಾಗಿರುವ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ. ಐ. ಇ., ಯವರ ಯಜಮಾನ್ಯದಲ್ಲಿ ಮತ್ತು ಮ|| ಯಜಮಾನ್ ಬಸಪ್ಪನವರು ಮೊದಲಾಗಿ ವೀರಶೈವ ಪ್ರಮುಖ ದೊಡ್ಡ ಮನುಷ್ಯರುಗಳ ಪ್ರಯತ್ನ ವಿಶೇಷದಲ್ಲಿ ಈ ಮಹಾಸಭಾಕಾರ್ಯವು ವಿಜೃಂಭಣೆಯಿಂದಲೂ ನಿರ್ವಿಘ್ನದಿಂದಲೂ ನೆರವೇರುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲವು.

ಭರತಖಂಡದ ವೃತ್ತಾಂತಗಳು.

ಬೊಂಬಾಯಿನ ಪ್ರೆಸಿಡೆನ್ಸಿ ಮಿಲ್ಲಿಗೆ ಅಗ್ನಿಪ್ರವೇಶವಾಗಿ 25000 ರೂ. ಬೆಲೆ ಪದಾರ್ಥಗಳು ಸುಟ್ಟು ಭಸ್ಮವಾದುವು.

ರಂಗೂನಿನಲ್ಲಿ ಒಂದು ರೈಲುಬಂಡಿಯು ಹೋಗುತ್ತಿರುವಾಗ್ಗೆ ಒಂದು ಆನೆಯು ಇಂಜನ್ನಿಗೆ ಸಿಕ್ಕಿ ಸತ್ತುಹೋಯಿತು ಮತ್ತು ಇಂಜನೂ ಇನ್ನೊಂದು ಬಂಡಿಯೂ ಕಂಬಿಯಿಂದ ಕೆಳಗೆ ಉರುಳಿಹೋದುವು.

ಭರತಖಂಡದ ಲೆಜಿಸ್ಲೇಟಿವ್‌ಅಸೆಂಬ್ಲಿಯು ಹಿಂದೆ ಸಿಮ್ಲಾ ನಗರದಲ್ಲಿ ಸೇರಿ ಸುಮಾರು ನಾಲ್ಕುವಾರಗಳು ಸಭೆ ನಡಿಸಿದ್ದರಿಂದ, ಮೆಂಬರುಗಳ ಟ್ರಾವಲಿಂಗ್ ಅಲೋಯನ್ಸಿಗೂ ದಿನವಹಿ ಭತ್ತೆಗೂ 99000 ರೂ. ಗಳು ಖರ್ಚಾಯಿತೆಂದು ಗೊತ್ತಾಗುತ್ತದೆ.

ಆಂಗ್ಲೊ ಇಂಡಿಯನ್ ಸ್ಟೀಂ ನ್ಯಾವಿಗೇಷನ್ ಕಂಪನಿಯು ಸ್ಥಾಪನೆಯಾಗಿ ನಾಲ್ಕು ವರ್ಷಗಳಾಯಿತು. ಇದರ ಮೂಲಧನ 10 ಕೋಟಿ ರೂಪಾಯಿಗಳು. ಡೈರೆಕ್ಟರುಗಳು ಸ್ವೇಚ್ಛೆಯಾಗಿ ಕೆಲಸಮಾಡಿ, ಕಂಪೆನಿಯ ಏಳಿಗೆಗೆ ಗಮನಕೊಡದೆ ಹೋದ್ದರಿಂದ ಕಂಪನಿಗೆ 30 ಲಕ್ಷ ರೂಪಾಯಿಗಳವರೆಗೆ ನಷ್ಟವಾಗಿರುವುದೆಂದೂ, ಈ ನಷ್ಟವನ್ನು ಡೈರೆಕ್ಟರುಗಳು ತಮ್ಮ ಕೈಯಿಂದ ತೆರಬೇಕೆಂದೂ ಅಫಿಷಿಯಲ್ ಲಿಕ್ವಿಡೇಟರು ಡೈರೆಕ್ಟರುಗಳ ಮೇಲೆ ಬೊಂಬಾಯಿ ಹೈಕೋರ್ಟಿನಲ್ಲಿ ದಾವಾ ಮಾಡಿರುತ್ತಾರೆ.

ಮಧ್ಯ ಪ್ರಾಂತಗಳ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಸ್ವರಾಜ್ಯಪಂಗಡದವರೇ ಬಹುಮಂದಿ ಮೆಂಬರುಗಳಾಗಿರುವರಷ್ಟೆ. ಇಂಡಿಯಕ್ಕೆ ಸ್ವರಾಜ್ಯ ಸರ್ಕಾರವನ್ನು ಬ್ರಿಟಿಷ್ ಸರ್ಕಾರದವರು ಕೊಡುವವರೆಗೂ, ಸರ್ಕಾರದ ಆಡಳಿತಗಳಿಗೆಲ್ಲಾ ಅಡಚಣೆಯನ್ನು ಒಡ್ಡುವುದೇ ಇವರ ಮುಖ್ಯ ಕರ್ತವ್ಯವಾಗಿರುವುದು. ಇದನ್ನು ನೋಡಿ ಮಧ್ಯಪ್ರಾಂತಗಳ ಗೌರ್ನರಾದ ಸರ್ ಫ್ರಾಂಕ್ ಸ್ಲೈರವರು ಈಗಿನ ಕೌನ್ಸಿಲನ್ನು ವಜಾಮಾಡಿ ಪುನಹ ಮುಂದಿನ ಜೂನ್ ತಿಂಗಳಲ್ಲಿ ಪ್ರತಿನಿಧಿಗಳನ್ನು ಚುನಾಯಿಸಲು ಏರ್ಪಾಡುಮಾಡಬೇಕೆಂದಿರುವರು.

ಕಡಲೂರು ಬಳಿ ಒಂದು ಗ್ರಾಮದಲ್ಲಿ ನಾಯಿಂದರು (ಕ್ಷೌರಿಕರು) ದೇವಸ್ಥಾನಕ್ಕೆ ಹೋಗುವಾಗಲೆಲ್ಲಾ ಹಿತ್ತಾಳೆ ಅಥವಾ ತಾಮ್ರದ ತಟ್ಟೆಗಳಲ್ಲಿ ಹಣ್ಣುಕಾಯಿಗಳನ್ನು ತೆಗೆದುಕೊಂಡು ಹೋಗುವ ಪದ್ಧತಿಯಿತ್ತು. ಈಚೆಗೆ ಈ ತಟ್ಟೆಗಳಲ್ಲಿ ಹಣ್ಣುಕಾಯಿಗಳನ್ನು ತಂದರೆ ಅವುಗಳನ್ನು ತಾವು ಪೂಜೆಗೆ ತೆಗೆದುಕೊಳ್ಳುವುದಿಲ್ಲವೆಂದು ಅರ್ಚಕರು ನಿರಾಕರಿಸಿದರು. ಅದರ ಮೇಲೆ ನಾಯಿಂದರೆಲ್ಲಾ ಒಗ್ಗಟ್ಟಾಗಿ ದೇವಸ್ಥಾನದ ಕೆಲಸಗಳಿಗಾಗಲಿ, ಗ್ರಾಮಸ್ಥರ ಕೆಲಸಗಳಿಗಾಗಲಿ ಹೋಗದೆ ನಿಂತಿರುತ್ತಾರೆ. ಇದರಿಂದ ಜನರಿಗೆ ತೊಂದರೆಯಾಗಿದೆ.

ಕವೀಂದ್ರರಾದ ರವೀಂದ್ರನಾಥ ಟಾಗೂರ್‌ರವರು ಪೆಕಿಂಗಿನ ವಿಶ್ವವಿದ್ಯಾಲಯದವರ ಪ್ರಾರ್ಥನೆಯಮೇರಿಗೆ ಅಲ್ಲಿಯ ವಿದ್ಯಾರ್ಥಿಗಳುಪಯೋಗಾರ್ಥವಾಗಿ ಉಪನ್ಯಾಸಗಳನ್ನು ಕೊಡಲು ಚೈನಾದೇಶಕ್ಕೆ ಪ್ರಯಾಣಮಾಡಿದರು. ಈ ಕವಿಸಾರ್ವಭೌಮರವರು ಜಪಾನು, ಇಂಡ್ಯೊಚೈನಾ, ಕಾಂಬೋಡಿಯಾ, ಸಿಯಾಂ ಮತ್ತು ಜಾವಾ ಈ ದೇಶಗಳಲ್ಲಿ ಸಂಚರಿಸಿ ಬುದ್ಧಿವಿಕಾಸಕ ಮತ್ತು ಪಾರಮಾರ್ಥಿಕ ವಿಚಾರಗಳಲ್ಲಿ ಭಾರತೀಯರಿಗೂ ಆ ದೇಶೀಯರಿಗೂ ಇರತಕ್ಕ ಪರಸ್ಪರ ಜ್ಞಾನಸಂಬಂಧವನ್ನು ವೃದ್ಧಿಗೊಳಿಸುವ, ಬೌದ್ಧ ಮತ್ತು ಸಂಸ್ಕೃತ ಗ್ರಂಥಗಳಾಲೋಚನೆಯಿಂದ ಭರತಖಂಡಕ್ಕೂ ಆ ದೇಶಗಳಿಗೂ ಪರಸ್ಪರಾನುರಾಗಬಂಧವನ್ನು ವೃದ್ಧಿಗೊಳಿಸುವ ಪ್ರಯತ್ನಗಳನ್ನು ಮಾಡತಕ್ಕವರಾಗಿರುತ್ತಾರೆ.

ತಿರುಚನಾಪಲ್ಲಿ ಡಿಸ್ಟ್ರಿಕ್ಟಿಗೆ ಸೇರಿದ ದಿಕುದೇರುಗ್ರಾಮದಲ್ಲಿ ಗ್ರಾಮಪಂಚಾಯತಿಗಾಗಿ ಜನರು ಸೇರಿರುವಾಗ್ಗೆ ಖದ್ದರುಬಟ್ಟೆಯ ಧಾರಣೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಆ ಊರಿಗೆ ಹೋಗಿದ್ದ ಜನರು ಮ|| ಗಾಂಧಿಯವರ ಸಂಕಲ್ಪದಂತೆ ಖದ್ದರುಬಟ್ಟೆಯನ್ನು ಧರಿಸುವುದರಿಂದ ಆಗುವ ಪ್ರಯೋಜನವನ್ನು ಜನರಿಗೆ ಬೋಧಿಸುತ್ತಿರುವಲ್ಲಿ ಪೆರನಮಲೈ ಎಂಬುವವನು ಅದನ್ನು ಕೇಳಿ ಮಹಾತ್ಮರ ಬೋಧೆಯಂತೆ ಖದ್ದರ್ ಬಟ್ಟೆಯನ್ನು ಧರಿಸುವ ವಿಚಾರದಲ್ಲಿ ಖಂಡಿಸಿ ಮಾತನಾಡಿದನು. ಇವನು ಇದಾದ 1-2 ಗಂಟೆಗಳಲ್ಲಿ ವಾಂತಿಭೇದಿ ರೋಗತಗುಲಿ ಸತ್ತುಹೋಗಲು, ಮಹಾತ್ಮರನ್ನೂ ಅವರಿಗೆ ಪ್ರಿಯವಾದ ಖದ್ದರ್‌ಬಟ್ಟೆಯ ಧಾರಣೆಯನ್ನೂ ನಿಂದಿಸಿಮಾತನಾಡಿದುದರಿಂದ ಅವನಿಗೆ ಮರಣಸಂಭವಿಸಿತೆಂದು ಆ ಗ್ರಾಮದ ಜನರ ಮನಸ್ಸಿಗೆ ತೋರಿ ಒಂದುವಿಧವಾದ ಭಯಹುಟ್ಟಿತಂತೆ !

ರಂಗಪುರ ಡಿಸ್ಟ್ರಿಕ್ಟಿಗೆ ಸೇರಿದ ಅಮಲಗಚ್ಚಿ ಗ್ರಾಮವಾಸಿಯಾದ ಕೇಶವಬೈರಾಗಿ ಎಂಬ ಅತ್ಯಂತಬಡವನ ಹೆಂಡತಿ ವರದಸುಂದರಿ ಎಂಬ ಯುವತಿಯನ್ನು ಕೆಲದಿನಗಳ ಹಿಂದೆ ಒಂದು ಸಾಯಂಕಾಲ 7½ ಗಂಟೆಯಲ್ಲಿ 9 ಜನ ತುಂಡಾಂಡಿಗ ಮಹಮ್ಮದೀಯರು ಆಕೆಯ ಮನೆಗೆ ನುಗ್ಗಿ ಬಲವಂತದಿಂದ ಅಪಹರಿಸಿಕೊಂಡು ಹೋಗಿ ಬೇರೊಂದು ಮನೆಯಲ್ಲಿ ಬಚ್ಚಿಟ್ಟಿದ್ದರು. ಆಕೆಯು ಹೇಗೋ ಅವರ ಸೆರೆಯಿಂದ ತಪ್ಪಿಸಿಕೊಂಡು ಪೊಲೀಸು ಠಾಣಕ್ಕೆ ಹೋಗಿ ನಡೆದ ಸಂಗತಿಯನ್ನು ತಿಳಿಸಿದಳು. ಆದರೆ ಪೊಲೀಸಿನವರು ಆಕೆಯ ದೂರನ್ನು ಕಿವಿಗೆಹಾಕಿಕೊಳ್ಳದೆ ತಟಸ್ಥರಾದುದಲ್ಲದೆ ಪೊಲೀಸು ಇನ್ಸ್ಪೆಕ್ಟರು ಆಕೆಯನ್ನು ಮೋಹಿಸಿ ಆಕೆಯಮೇಲೆ ಅತ್ಯಾಚಾರವನ್ನು ನಡಿಸಲುದ್ಯುಕ್ತನಾಗಲು, ಆಕೆಯು ಒಡಂಬಡದೆ ತನ್ನ ಮನೆಗೆ ಬಂದುಬಿಟ್ಟು ನಡೆದ ಸಂಗತಿಯನ್ನು ಪತಿಗೆ ತಿಳುಹಿದಳಾದರೂ ರಿಕ್ತಸ್ಥಿತಿಯಿಂದ ದಂಪತಿಗಳು ಏನನ್ನೂ ಮಾಡಲಾರದೆ ಸುಮ್ಮನಾಗಬೇಕಾಯಿತು. ಆದರೆ ಅಮಲಗಚ್ಚಿ ಗ್ರಾಮದ ಜಮೀನ್ದಾರರಾದ ಬಾಬು ಗೌರೀವಿನೋದ ಚೌಧೂರಿಯೂ ಬಾಬು ಸೀತಾನಾಥ ಗೋಸ್ವಾಮಿಯೂ ಆಕೆಯ ದುಸ್ಥಿತಿಯನ್ನು ಕೇಳಿ ಬಹಳವಾಗಿ ಮರುಗಿ ಪೊಲೀಸರ ನಿಷ್ಠುರಕ್ಕೆ ಲಕ್ಷಿಸದೆ ಆಕೆಯಿಂದ ವಿವಾದವನ್ನು ನಡಿಸಿದುದರಮೇಲೆ ಆಕೆಯನ್ನು ಅಪಹರಿಸಿಕೊಂಡು ಹೋಗಿದ್ದ ಮಹಮ್ಮದೀಯರು ಶಿಕ್ಷಿಸಲ್ಪಟ್ಟರಲ್ಲದೆ ಆಕೆಯಲ್ಲಿ ವ್ಯಾಮೋಹಿತನಾಗಿ ಅತ್ಯಾಚಾರವನ್ನು ನಡಿಸಲುದ್ಯುಕ್ತಪಟ್ಟು ಅದು ಸಾಧ್ಯವಾಗಲಿಲ್ಲವಾಗಿ ಏನೊಂದು ಕಾರ್ಯಭಾಗವನ್ನು ನಡಿಸದೆ ಇದ್ದುದಲ್ಲದೆ ಅಪರಾಧಿಗಳಿಂದ ಲಂಚವನ್ನು ತೆಗೆದುಕೊಂಡರೆಂಬುದರಮೇಲೆ ಪೊಲೀಸಿನವರೂ ತಪ್ಪಿತಸ್ಥರಾಗಿ ಮಾಡಲ್ಪಟ್ಟರು.

ವಿದೇಶದ ವೃತ್ತಾಂತಗಳು.

ಕಾಫಿ-ಟೀ ಪಾನವು ಮದ್ಯದಷ್ಟೇ ಸ್ಮೃತಿಯನ್ನು ತಪ್ಪಿಸುವುದಾದುದರಿಂದ ನ್ಯೂಯಾರ್ಕಿನಲ್ಲಿ ಇವುಗಳನ್ನು ಮಾರುವ ಅಂಗಡಿಗಳು ಮುಚ್ಚಲ್ಪಡಲು ಶಾಸನಮಾಡಿಸಬೇಕೆಂದು ಹರ್ಷ್‌ಮ್ಯಾಕ್ಸಿಮ್ ಎಂಬ ಒಬ್ಬ ಪ್ರಸಿದ್ಧ ರಸಾಯನಶಾಸ್ತ್ರಜ್ಞನು ಬಹಳವಾಗಿ ಪ್ರಯತ್ನಿಸುತ್ತಿರುವನು.

ರಷ್ಯಾ ಮತ್ತು ಚೀನಾ ಸರ್ಕಾರಗಳಿಗೆ ಇರುವ ಮನಸ್ತಾಪವು ಸಮಾಧಾನವನ್ನುಹೊಂದುವ ರೀತಿಯಲ್ಲಿಲ್ಲ. ರಷ್ಯಾದವರು ತಮ್ಮ ಸೈನ್ಯಗಳನ್ನು ಮಂಚೂರಿಯ ಎಲ್ಲೆಕಟ್ಟಿಗೆ ಸಾಗಿಸುತ್ತಿರುವರು. ಚೀನಾ ಸರ್ಕಾರದವರೂ ಸ್ಪೆಷಲ್ ಟ್ರೇನ್ಗಳಲ್ಲಿ ತಮ್ಮ ಸೈನ್ಯಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗುತ್ತಿದಾರೆ.

ಮೋಟಾರುಬಂಡಿಗಳ ಬೆಲೆಯನ್ನು 1500 ರೂಪಾಯಿಗಳಿಗೆ ಇಳಿಸಬೇಕೆಂದೂ ಇಷ್ಟು ಕಡಿಮೆ ಬೆಲೆಯಾದರೂ ಯಾವ ಭಾಗದಲ್ಲೂ ನ್ಯೂನತೆಯುಳ್ಳದ್ದಾಗಿರಕೂಡದೆಂದೂ, ಇಂಗ್ಲೆಂಡಿನ ಬರ್ಮಿಂಗ್ಹಾಂ ಕಂಪನಿಯೊಂದು ಕಳೆದ ಎರಡು ವರ್ಷಗಳಿಂದ ಪ್ರಯತ್ನಪಡುತ್ತಿರುವುದು. ಅದರ ಉದ್ದೇಶವು ಈಗ ನೆರವೇರುವುದಾಗಿ ಗೊತ್ತಾಗಿದೆ.

ಇಂಗ್ಲೆಂಡಿನಲ್ಲಿ ಲೇವಾದೇವಿ ಮಾಡುವವರಿಗೆ ಹೊಸತರಹ ತೊಂದರೆಯೊಂದು ಉಂಟಾಗಿದೆ. ಗೌರವಸ್ಥರ ಮನೆತನದವರಂತೆ ನಟಿಸುವ ಸ್ತ್ರೀಯರು ಪರಪುರುಷರುಗಳು ತಮ್ಮ ಗಂಡದಿರೆಂದು ಹೇಳಿ ತೋರಿಸಿ ಅವರ ಆಧಾರದಮೇಲೆ ಸಾಲಗಳನ್ನು ಪಡೆದು ಪಲಾಯನರಾಗುತ್ತಿರುವರು. ಇಂತಹವರಲ್ಲಿ ಮೂವರನ್ನು ಪೋಲೀಸಿನವರು ಸೆರೆಹಿಡಿದು ಕಠಿಣ ಕಾರಾಗೃಹವಾಸ ಶಿಕ್ಷೆಗೆ ಗುರಿಪಡಿಸಿರುವರು.

ಮೆಸಪಟೋಮಿಯಾಕ್ಕೆ ಸೇರಿದ ಉರ್ ಎಂಬಲ್ಲಿ ಭೂಗರ್ಭವು ಶೋಧಿಸಲ್ಪಡುತ್ತಿರುವಾಗ್ಗೆ 6500 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಒಂದು ಪುರಾತನ ಕಟ್ಟಡವು ದೊರಕಿರುವುದು. ಕ್ರಿಸ್ತನ ಜನನಕ್ಕೆ 4500 ವರ್ಷ ಪೂರ್ವ ಆಳುತ್ತಿದ್ದ ಎ. ಅಣ್-ನಿ-ಪದ್ದ ಎಂಬ ದೊರೆಯ ಹೆಸರೂ ಬರಹಗಳೂ ಆ ಕಟ್ಟಡದ ಮೇಲೆ ಕೆತ್ತಲ್ಪಟ್ಟಿರುವುದರಿಂದ ಅವನ ಕಾಲದಲ್ಲಿ ಆ ಕಟ್ಟಡವು ಕಟ್ಟಿಸಲ್ಪಟ್ಟಿರಬೇಕಾಗಿ ಭಾವಿಸಲ್ಪಟ್ಟಿದೆ.

ಅಫಘಾನಿಸ್ಥಾನದ ರಾಜ್ಯಾಡಳಿತದಲ್ಲಿ ಅಮೀರರು ಮಾಡುತ್ತಿರುವ ಸುಧಾರಣಾಕ್ರಮಗಳು ಷಾರಿಯತ್ ಧರ್ಮಕ್ಕೆ ವಿರುದ್ಧವಾಗಿರುತ್ತವಾದುದರಿಂದ ತಾವೊಪ್ಪುವುದಿಲ್ಲವೆಂದು ಕೋಹತ್ ವಾಸಿಗಳಾದ ಮಂಗಲಿ ವರ್ಗದ ಜನರು ಮುಷ್ಕರ ಹಿಡಿದು ಆಯುಧಪಾಣಿಗಳಾಗಿ ಅಧಿಕಾರಿಗಳ ಮೇಲೆ ಬಿದ್ದು ಅತ್ಯಾಚಾರವನ್ನು ನಡಿಸಲೆತ್ನಿಸಿದುದರ ಮೇಲೆ, ಅಧಿಕಾರಿಗಳು ಬಹಳ ಉಪಾಯದಿಂದ ದಂಗೆಯನ್ನು ಸಮಾಧಾನಪಡಿಸಿರುತ್ತಾರೆಂದು ತಿಳಿಯಬಂದಿದೆ.

ಗ್ರೀಸ್‌ದೇಶದಲ್ಲಿ ಪ್ರಜಾಪ್ರಭುತ್ವವೇರ್ಪಡುವ ಪ್ರಯತ್ನ ನಡಿಯುತ್ತಿರುವುದರಿಂದ, ಗ್ರೀಕ್‌ದೊರೆಯು ಕೆಲವು ಷರತ್ತುಗಳಿಗನುಸರಿಸಿ ತನ್ನ ಪ್ರಭುತ್ವಕ್ಕೆ ರಾಜೀನಾಮೆ ಕೊಡುವವನಾಗಿದ್ದಾನೆ. ಪ್ರಜಾಮುಖಂಡರೂ ರಾಜಪಕ್ಷದವರೂ ಕಲೆತು ಮಾತನಾಡಿ, ಮುಂದಿನ ರಾಜ್ಯಭಾರ ಕ್ರಮವನ್ನು ವ್ಯವಸ್ಥೆಗೊಳಿಸುತ್ತಿದಾರೆ. ರಿಪಬ್ಲಿಕ್ ಎಂದು ಪ್ರಕಟಮಾಡುವುದಕ್ಕೆ ಮುಂಚೆ, ಪ್ರಜೆಗಳ ಅಭಿಪ್ರಾಯವನ್ನು ಓಟುಗಳ ಮೂಲಕ ಪಡೆಯಬೇಕೆಂದು ಗೊತ್ತಾಗಿದೆ.

ಎಲ್ಲಾ ದೇಶಗಳ ಮಹಮ್ಮದೀಯರೂ ಕೈರೋ ರಾಜಧಾನಿಯಲ್ಲಿ ಸಭೆಸೇರಿ ಖಲೀಫತನವನ್ನು ಯಾರಿಗೆ ವಹಿಸಬೇಕೆಂದು ನಿರ್ಧರಿಸುವುದಕ್ಕೂ ಖಲೀಫರಾಗಿರಲು ಒಪ್ಪಿಕೊಳ್ಳುವುದಕ್ಕೂ, ಅವರ ಅಭಿಪ್ರಾಯವನ್ನು ತಿಳಿಯಬೇಕೆಂದು ಮಂತ್ರಿಯಾದ ಜಗುಲ್ ಪಾಷಾರವರು ಈಜಿಪ್ಟಿನ ರಾಜರಾದ ಫೂಯದ್‌ರವರನ್ನು ಕೇಳಿರುತ್ತಾರೆ. ಅಲ್ಲಿನ ಮತಬೋಧಕರೆಲ್ಲರೂ ಫೂಯದ್‌ರವರನ್ನೇ ಖಲೀಫರನ್ನಾಗಿ ಮಾಡಿಕೊಳ್ಳಬೇಕೆಂಬ ಅಭಿಪ್ರಾಯವುಳ್ಳವರಾಗಿರುವರು.

ಪೋರ್ಟ್‌ಸಿ ಎಂಬಲ್ಲಿ ಒಬ್ಬ 16 ವರ್ಷ ವಯಸ್ಸಿನ ಯುವತಿಯು ತನ್ನ ವಿಧವಾತಾಯಿಯನ್ನು ಕೊಂದಳೆಂದು ಪೋಲೀಸರಿಂದ ಸೆರೆಹಿಡಿಯಲ್ಪಟ್ಟು ವಿಚಾರಿಸಲ್ಪಡುವ ಕಾಲದಲ್ಲಿ, ತಾನು ರಾತ್ರಿವೇಳೆ 10 ಗಂಟೆಯ ಮೇಲೆ ಮನೆಗೆ ಬರುತ್ತಿದ್ದುದಕ್ಕಾಗಿ ತನ್ನ ಮೇಲೆ ತನ್ನ ತಾಯಿಯು ಆಗ್ರಹಮಾಡುತ್ತಿದ್ದುದಕ್ಕಾಗಿ ಕೋಪಿಸಿಕೊಂಡು ಆಕೆಗೆ ಪ್ರಾಪ್ತವಾಗಿದ್ದ ಇನ್‌ಫ್ಲೂಯಂಜಾ ರೋಗವು ಇನ್ನೂ ಪ್ರಬಲವಾಗಲೆಂದು ಆಕೆಯು ಸೇವಿಸುತ್ತಿದ್ದ ಔಷಧಿಯಲ್ಲಿ ವಿಷಪ್ರಯೋಗಮಾಡಿದೆನೆ ವಿನಾ ಆಕೆಯನ್ನು ಕೊಲ್ಲಬೇಕೆಂಬ ಅಭಿಪ್ರಾಯದಿಂದಲ್ಲವೆಂದು ಹೇಳಿದಳು.

ಜರ್ಮನಿಯ ರಸಾಯನ ಶಾಸ್ತ್ರಜ್ಞರು ಅತ್ಯಂತಪಾಯಕರವಾದ ವಿಷವಾಯುವನ್ನು ಬಹಳ ಕಾಲದಿಂದ ಬಹಳ ರಹಸ್ಯವಾಗಿ ಪ್ರಯಾಸಪಟ್ಟು ಈಗತಾನೆ ಕಂಡುಹಿಡಿದಿರುತ್ತಾರೆ. ಈ ವಿಷಯವು ಹೇಗೋ ಹೊರಪಟ್ಟಿತು. ಈ ವಾಯುವು ಒಂದು ದ್ರಾವಕದಿಂದ ನಿರ್ಮಿಸಲ್ಪಟ್ಟಿದೆ. ಇದು ಬಣ್ಣ, ವಾಸನೆ ಮತ್ತು ರುಚಿಯಿಲ್ಲದಿರುವುದಲ್ಲದೆ ಬೆಂಕಿಯಿಂದ ಹೊತ್ತುಕೊಳ್ಳುವುದಿಲ್ಲ. ಇದನ್ನು ಪರೀಕ್ಷಿಸಿ ನೋಡುತ್ತಿದ್ದ 7 ಜನ ಶಾಸ್ತ್ರಜ್ಞರು ಹೇಗೋ ಪಾನಮಾಡಿ ಸತ್ತುಹೋದರು. ಇನ್ನೆಂತೆಂತಹ ಪ್ರಾಣನಾಶಕಸಾಧನಗಳು ಜರ್ಮನಿಯ ಶಾಸ್ತ್ರಜ್ಞರಿಂದ ಕಂಡುಹಿಡಿಯಲ್ಪಡುವುವೋ ಹೇಳಲಿಕ್ಕಿಲ್ಲವು!

ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಲಕ್ಷಾಂತರ ಜನರು ಕುಷ್ಟರೋಗದಿಂದ ಪೀಡಿತರಾಗಿರುವರಲ್ಲದೆ ರೋಗವು ಹಬ್ಬುತ್ತಿರುವುದರಿಂದ ಈ ರೋಗವನ್ನು ಸಮೂಲವಾಗಿ ನಾಶಮಾಡತಕ್ಕ ಚಿಕಿತ್ಸಾವಿಧಾನವನ್ನು ಡಾಕ್ಟರ್ ರೋಜರ್ಸ್ ಎಂಬುವವರು ಕಂಡುಹಿಡಿದಿರುತ್ತಾರಂತೆ. ರೋಗವನ್ನು ಗುಣಪಡಿಸತಕ್ಕ ತೈಲಗಳು ಆರುತರಹವುಂಟೆಂದೂ, ಅವುಗಳಲ್ಲಿ ಯಾವುದಾದರೂ ಒಂದನ್ನು ರಕ್ತನಾಳದೊಳಕ್ಕೆ ಸೂಜಿಯಿಂದ ಸೇರಿಸಬೇಕೆಂದೂ ಒಂದು ವರ್ಷ ಕಾಲವಾದರೂ ಚಿಕಿತ್ಸೆಗೊಳಪಡಬೇಕೆಂದೂ ಗುಣಪಟ್ಟವರಿಂದ ಇತರರಿಗೆ ರೋಗ ವ್ಯಾಪಿಸುವುದೆಂಬ ಭಯವ್ಯಾವುದೂ ಇಲ್ಲವೆಂದೂ ಗೊತ್ತಾಗುತ್ತದೆ.

81ವರ್ಷದ ವೈಲ್ಡ್ ಎಂಬ ಆಂಗ್ಲೇಯನ ಒಂದು ಸಂಸಾರದಲ್ಲೇ 30 ಓಟುಗಳು ಪಾರ್ಲಿಮೆಂಟು ಮೆಂಬರಾಗಲು ಉಮೇದುವಾರರಾಗಿದ್ದ ಮೆ|| ಜಾಕ್ ಲಾರ್ಸ ಎಂಬುವರಿಗೆ ಕೊಡಲ್ಪಟ್ಟುವು. ವೈಲ್ಡ್ ಎಂಬಾತನು ಈತನೂ, ಆತನ ಹೆಂಡತಿಯೂ, ಏಳುಜನ ಗಂಡುಮಕ್ಕಳೂ, ಆರುಜನ ಸೊಸೆಯರೂ, ಮೂವರು ಹೆಣ್ಣುಮಕ್ಕಳೂ ಮತ್ತು ಅವರ ಗಂಡಂದಿರೂ, ಮೊಮ್ಮಕ್ಕಳೂ ಅವರ ಹೆಂಡತಿಯರೂ ಎಲ್ಲರೂ ಒಟ್ಟಿಗೆ 30 ಮಂದಿ ಓಟುಕೊಡಲು ಅರ್ಹರಾದವರೇ ಅವನ ಮನೆಯಲ್ಲಿರುವರು. ಇಂಗ್ಲೆಂಡಿನಲ್ಲಿ ಓಟುಗಳಿಗೆ ಎಷ್ಟು ಬೆಲೆಯುಂಟೆಂಬುದೂ, ಅವುಗಳಿಗೆ ಜನರು ಎಷ್ಟು ಗೌರವ ಕೊಡುತ್ತಾರೆಂಬುದೂ ಇದರಿಂದ ಗೊತ್ತಾಗುತ್ತದೆ.

ಜಪಾನ್ ರಾಜಕುಟುಂಬಕ್ಕೆ ಸೇರಿದ ಪ್ರಿನ್ಸ್‌ಮಟ್ಸುಕಾಟ ಎಂಬಾತನು ಬಹಳ ಅಸ್ವಸ್ಥನಾಗಿದ್ದು ಅವನ ನಾಡಿಯು ಚಲಿಸದೆ ಮತ್ತು ಉಸಿರಾಡದೆ ಇದ್ದುದರ ಮೇಲೆ ಸತ್ತುಹೋದನೆಂದು ಡಾಕ್ಟರುಗಳು ಆಚೆ ಶನಿವಾರ ಬೆಳಗ್ಗೆ 11 ಗಂಟೆಯಲ್ಲಿ ಪ್ರಕಟಿಸಿದರು. ಇದಾದ ಸ್ವಲ್ಪಕಾಲದಮೇಲೆ ಶರೀರವು ಕೊಂಚ ಕದಲಿಸಿದಂತೆ ಕಂಡುಬರಲು ಮಿಕಾಡೋ ಚಕ್ರವರ್ತಿಯ ರಾಯಭಾರಿಯು ಸತ್ತುಹೋದನೆಂದು ಭಾವಿಸಲ್ಪಟ್ಟಿದ್ದ ಪ್ರಿನ್ಸನ ಕೈಯನ್ನು ಹಿಡಿದು ಅದಿಮಿನೋಡುವಲ್ಲಿ ಅವನ ಕೈಯನ್ನು ಆ ಶವವು ಪ್ರತಿಯಾಗಿ ಅದುಮಿದ ಮೇಲೆ ಡಾಕ್ಟರನ್ನು ಕರೆಯಿಸಿ ಪರೀಕ್ಷಿಸಲಾಗಿ, ಪ್ರಿನ್ಸನು ಬದುಕುವ ಚಿನ್ಹೆ ಇದೆ ಎಂದು ಹೇಳಿದರು. ತರುವಾಯ ಸ್ವಲ್ಪ ಹೊತ್ತಿನಲ್ಲಿ ಮಟ್ಸುಕಾಟನು ಎಚ್ಚತ್ತು ಕೊಂಚ ಆಹಾರವನ್ನು ತೆಗೆದುಕೊಂಡು ನಿದ್ರಿಸಿದನು.

ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಒಂದು ಕಾನೂನು ಇಷ್ಟರಲ್ಲಿ ಜಾರಿಗೆ ಬರುವುದರಲ್ಲಿದೆ. ಇದರ ಪ್ರಕಾರ 16 ವರ್ಷಕ್ಕೆ ಕಡಿಮೆಯ ವಯಸ್ಸಿನವರು ಮದುವೆಯಾಗಕೂಡದು, ಈ ವಯಸ್ಸಿನೊಳಗಿರುವವರು ಸಂಪಾದನೆಗಾಗಿ ಪರದೇಶಗಳಿಗೆ ಕಳುಹಿಸಲ್ಪಡಕೂಡದು, ಮಕ್ಕಳು ಸಿಗರೇಟ್ ಚುಟ್ಟಾ ವಗೈರೆ ಸೇದಕೂಡದು, ಅಂಥವರಿಗೆ ನಿಷಾ ಪದಾರ್ಥಗಳನ್ನು ಕುಡಿಯಲಿಕ್ಕೆ ಕೊಡುವವರಿಗೆ ಅರ್ಥ ದಂಡ ವಿಧಿಸಲ್ಪಡುವುದು; ಮೈನರ್ ಬಾಲಕರನ್ನು ದುರಭ್ಯಾಸಕ್ಕೆಳೆಯುವ ಸ್ತ್ರೀಯರಿಗೆ ಕ್ರೂರವಾದ ಶಿಕ್ಷೆಗಳಾಗುವವು. ಗರ್ಭಪತನ ಮಾಡಿಸಿದರೂ ಖೂನಿ ಎಂದು ಭಾವಿಸಲ್ಪಟ್ಟು, ಅಂಥವರಿಗೆ 10 ವರ್ಷಗಳ ಸಜಾ ಶಿಕ್ಷೆಯಾಗುವುದು. ಹೆಣ್ಣು ಮಕ್ಕಳನ್ನು ವೇಶ್ಯೆಯರಿಗೆ ಮಾರುವುದೂ ಸಹ 10 ವರ್ಷಗಳ ವರೆಗೆ ಲಂಬಿಸಬಹುದಾದ ಸಜಾ ಶಿಕ್ಷೆಗೆ ಅರ್ಹವಾಗಿರುವುದು.

ಪ್ಯಾರಿಸ್ಸಿಗೆ ಸೇರಿದ ಆಗ್ನಿಯರ್ಸ್ ಎಂಬಲ್ಲಿ ಬಹಳ ಪ್ರೀತಿ ವಿಶ್ವಾಸದಿಂದಿದ್ದ ದಂಪತಿಗಳಲ್ಲಿ 33 ವರ್ಷ ವಯಸ್ಸಿನ ಹೆಂಡತಿಯು ಊಟದ ಸಮಯದಲ್ಲಿ ಒಂದು ಚಿಟಿಕೆ ನಶ್ಯವನ್ನು ಹಾಕಿಕೊಳ್ಳಲು, ಈ ವಯಸ್ಸಿನಲ್ಲಿ ಎಷ್ಟು ಧೈರ್ಯದಿಂದ ನಶ್ಯವನ್ನು ಉಪಯೋಗಿಸುತ್ತೀಯೆ? ಎಂದು ಗಂಡನು ಪ್ರಶ್ನೆಮಾಡಲು ಹೆಂಡತಿಯು ಸಿಟ್ಟುಗೊಂಡೆದ್ದು ಮಲಗುವ ಮನೆಗೆ ಹೋಗಿ ಮದ್ದು ಗುಂಡು ಹಾಕಿದ್ದ ತುಪಾಕಿಯನ್ನು ತೆಗೆದುಕೊಂಡು ಬಂದು ಗಂಡನ ಎದೆಗೆ ಗುರಿಕಟ್ಟಿ ಗುಂಡನ್ನು ಹಾರಿಸಿ ಕೊಂದುಬಿಟ್ಟಳು ಮತ್ತು ಆ ಕೂಡಲೆ ಪೋಲೀಸು ಠಾಣಾಕ್ಕೆ ಹೋಗಿ ಅಲ್ಪ ವಿಷಯಕ್ಕಾಗಿ ತನ್ನ ಪತಿಯನ್ನು ಕೊಂದುಬಿಟ್ಟೆನೆಂದೂ, ಆ ಕಾಲದಲ್ಲಿ ತನ್ನ ಬುದ್ಧಿಯು ಹೇಗೆ ವಿಕಲ್ಪವಾಗಿದ್ದಿತೆಂಬುದನ್ನು ಹೇಳಲಾರೆನೆಂದೂ ವರದಿಮಾಡಿದಳು. ''ವಲಿದರೆ ನಾರಿ ವಲಿಯದಿದ್ದರೆ ಹೆಮ್ಮಾರಿ'' ಎಂಬ ಗಾಥೆಯು ನಿಜವಲ್ಲವೆ?

ಗಂಡನು ಬಡವನಾಗಿದ್ದು ಹೆಂಡತಿಯು ಆಸ್ತಿವಂತಳಾಗಿದ್ದರೆ, ಹೆಂಡತಿಯ ಮನೆಯಲ್ಲಿ ಗಂಡನು ವಿಧೇಯನಾಗಿರಬೇಕೆಂಬುದಕ್ಕೆ ಒಂದು ಕೋರ್ಟ್ ತೀರ್ಮಾನವು ಈಗತಾನೆ ಹೊರಪಟ್ಟಿದೆ. ಪಿಪ್‌ಮಾರ್ ಎಂಬುವವನು ಕುಡುಕನೂ ದುರಾಚಾರಿಯೂ ಆಗಿದ್ದು, ಹೆಂಡತಿಯು ತನ್ನ ಸ್ವಂತ ಬಂಡವಾಳದಿಂದ ಏರ್ಪಡಿಸಿದ್ದ ವ್ಯಾಪಾರಗಳನ್ನೆಲ್ಲಾ ಮುಚ್ಚುವಂತೆ ಮಾಡಿದ್ದಲ್ಲದೆ, ಆಕೆಯನ್ನು ಅನೇಕಸಾರಿ ಹೊಡೆದದ್ದರಿಂದ, ಆಕೆಯು ತನ್ನ ಮನೆಯೊಳಕ್ಕೆ ಗಂಡನು ಕಾಲಿಡಕೂಡದೆಂದು ಅಪ್ಪಣೆಮಾಡಿದಳು. ಇದರಮೇಲೆ ಗಂಡನು ತನ್ನ ಹೆಂಡತಿ ಇದ್ದ ಕಡೆ ತಾನೂ ಇರಲು ಹಕ್ಕಿರುವುದೆಂದು ಕೋರ್ಟಿನಲ್ಲಿ ಸಾಧಿಸಿದನು. ಆಸ್ತಿಯು ಆಕೆಯ ಸ್ವಂತವಾದ್ದರಿಂದಲೂ, ಆತನ ಕೆಟ್ಟನಡತೆಯಿಂದಲೂ, ಆಕೆಯು ಇಷ್ಟಪಡುವಷ್ಟು ಕಾಲ ಗಂಡನು ಆಕೆಯ ಮನೆಯನ್ನು ಪ್ರವೇಶಿಸಕೂಡದೆಂದು ಜಡ್ಜಿಯು ಅಪ್ಪಣೆ ಮಾಡಿರುತ್ತಾನೆ.

ಪದಭ್ರಷ್ಟರಾದ ಕಲೀಫರು ಈಗ ಸ್ವಿಟ್ಸರ್ಲ್ಯಾಂಡಿನಲ್ಲಿರುವರು. ಇವರಿಂದ ಹೊರಟಿರುವ ಪ್ರಕಟನ ಪತ್ರಿಕೆಯೊಂದರಲ್ಲಿ ತಮ್ಮನ್ನು ಸ್ಥಾನಭ್ರಷ್ಟರನ್ನಾಗಿ ಮಾಡುವ ಅಧಿಕಾರವು ಅಂಗೋರ ಸರ್ಕಾರದವರಿಗಿರುವುದಿಲ್ಲವೆಂತಲೂ, ಪ್ರಪಂಚದ ಮಹಮ್ಮದೀಯರು ಕಲೆತು ಈ ವಿಚಾರವನ್ನು ತೀರ್ಮಾನಿಸಬೇಕೆಂತಲೂ ಹೇಳಿರುವರು. ಅಂಗೋರ ಸರ್ಕಾರದವರು ಇದರಿಂದ ಕೋಪಾವಿಷ್ಟರಾಗಿ, ಖಲೀಫರಿಗೆ ಇನ್ನೂ ಸಲ್ಲಬೇಕಾಗಿರುವ 10000 ಸವರ್ನ್‌ಗಳನ್ನು ಕೊಡುವುದಿಲ್ಲವೆಂತಲೂ ತುರ್ಕೀ ರಾಜ್ಯದಲ್ಲಿರುವ ಅವರ ಆಸ್ತಿಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತೇವೆಂತಲೂ ತಿಳಿಸಿರುತ್ತಾರೆ. ಈ ಮಧ್ಯೆ ಕಲೀಫ ಪದವಿಯನ್ನು ಅರಾಬ್ ದೇಶದ ಪೂರ್ತಾ ಹುಸೇನ್ ದೊರೆಯವರು ಒಪ್ಪಿಕೊಂಡಿರುವರು. ಈಜಿಪ್ಟಿನ ಫೂಯದ್ ದೊರೆಯವರು ಕಲೀಫರಾಗಿರಬೇಕೆಂದು ಕೆಲವರು ಆಶಿಸುತ್ತಿರುವರು. ಎಲ್ಲಾ ದೇಶದ ಮಹಮ್ಮದೀಯರೂ ಈಜಿಪ್ಟ್ ದೇಶದಲ್ಲಿ ಸಭೆಸೇರಿ ಈ ವಿಷಯವನ್ನು ತೀರ್ಮಾನಿಸಬೇಕೆಂದಿರುತ್ತಾರೆ.

ಸ್ಕಾಟ್‌ಲೆಂಡಿನಲ್ಲಿ ಪ್ರಸಿದ್ಧ ಮದ್ಯದ ವ್ಯಾಪಾರಿಯಾದ ಸರ್ ಜಾರ್ಜ್‌ಸ್ಟ್ಯುಯರ್ಟ್ ಎಂಬುವವನು ತಾನು ಸಂಪಾದಿಸಿದ್ದ ಅಪಾರವಾದ ಐಶ್ವರ್ಯದಲ್ಲಿ 12,00,000 ರೂ. ಗಳನ್ನು ರಬ್ಬರು, ಉಕ್ಕು, ಕೇಯಿಲೆ, ರೈಲ್ವೆ ಮೊದಲಾದ ಪ್ರಯತ್ನ ವಿಶೇಷದಲ್ಲೂ ಅಮೇರಿಕೆಗೆ ಮದ್ಯವನ್ನು ಒದಗಿಸಿಕೊಡಲು ಆ ಪಟ್ಟಣದ ಕಂಪನಿಯವರ ಕೂಡ ಮಾಡಿದ ಪಾಲುಗಾರಿ ಲ್ಲೂ 2,25,00,000 ರೂ. ಗಳನ್ನು ಹಾಳುಮಾಡಿಕೊ ಮತ್ತು ಬ್ಯಾರನೆಟ್ ಎಂಬ ಪ್ರಶಸ್ತಿಯನ್ನು ಸಂಪಾದಿ ಕೊಯಿಲಿಷನ್ ಪಕ್ಷದ ಧನರಾಶಿಗೆ 12,00,000 ರೂ. ಗ ಕೊಟ್ಟು ಬಹಳ ದುಡ್ಡಿನ ಮುಗ್ಗಟ್ಟಿಗೆ ಶಿಲ್ಕಿ ತನ್ನ ಮ ವ್ಯಾಪಾರದ ಆಧಾರದ ಮೇಲೆ ಅನೇಕ ಬ್ಯಾಂಕು 75,00,000 ರೂ. ವರೆಗೆ ಸಾಲಮಾಡಿ ಅದನ್ನು ತೀರಿ ಎತ್ನವಿಲ್ಲದೆ ಸಾಲಗಾರರ ಹಿಂಸೆಯು ಸಹಿಸಲಶಕ್ಯವಾದ ಮೇಲೆ ತನ್ನ ತಲೆಬುರುಡೆಯನ್ನು ಗುಂಡಿನಿಂದ ಹೊ ಕೊಂಡು ಆತ್ಮಹತ್ಯೆಯನ್ನು ಮಾಡಿಕೊಂಡನು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂ.

ಹೊಸದುರ್ಗಾ ತಾ|| ಸಾಣೆಹಳ್ಳಿ ಮಠ.

ಈ ಮಠದ ಚರಪಟ್ಟಾಧ್ಯಕ್ಷರಾದ ಶ್ರೀ ಚಂದ್ರಶೇಖರಸ್ವಾಮಿ ವರು ಅಧಿಕಾರಹೊಂದಿದಾರಭ್ಯದಿಂದಲೂ ಸದಾಚಾರ ಮೋಕ್ಷ ಶಿಷ್ಯಮಂಡಲಿಯವರಿಂದ ಗುರುಕಾಣಿಕೆಯನ್ನು ವಸೂಲ್‌ಮಾಡಿಕೊ ಮಠೋದ್ಧಾರಕಾರಗಳಲ್ಲಿ ಒಂದು ಪೈಯನ್ನೂ ಸಹ ಖರ್ಚುಮಾ ತಮ್ಮ ಪೂರ್ವಸಂಬಂಧಿಗಳ ಪೋಷಣೆಯಲ್ಲಿ ಆಸಕ್ತರಾಗಿರುವುದು ಶಿಷ್ಯ ಡಳಿಗೆಲ್ಲಾ ಅಪಾರವಾದ ಮನಃಖೇದವನ್ನು ಉಂಟುಮಾಡಿರುತ್ತದೆ. ರಿಂದ ಸದರಿ ಸ್ವಾಮಿಗಳವರು ಇತಃಪರ ಇಂಥಾ ಸ್ವಪ್ರಯೋಜನ ನ ಳನ್ನು ಸಂಪೂರ್ಣವಾಗಿ ವರ್ಜಿಸಿ ಸಮಾಜೋನ್ನತಿಯ ಕಾರ್ಯಗಳಲ್ಲಿ ಮನಸ್ಸನ್ನು ಮುಂದುವರಿಸಿ ಭಗವತ್ಪಾದರಾದ ಪಂಚಾಚಾರ್ಯರ ಉ ವೇನೆಂಬುದನ್ನು ತಿಳಿದು ಅದರಂತೆ ಆಚರಿಸಿ ತಮ್ಮ ಶಿಷ್ಯಮಂಡಲಿಗೆ ಸಂತೋಷವನ್ನುಂಟುಮಾಡಬೇಕಾಗಿ ಪ್ರಾರ್ಥಿಸುವ,

ಮಠದ ಒಬ್ಬ

ಬಡರೈತರ ಗೋಳಾಟ.

ಈ ಸಾಲಿನಲ್ಲಿ ಮಳೆ ಬೆಳೆ ಹೋಗಿ ಹೊಟ್ಟೆ ಬಟ್ಟೆಗೆ ಗತಿಯಿ ಒಂದು ಹೊತ್ತು ಉಂಡು ಮತ್ತೊಂದು ಹೊತ್ತು ಉಪವಾಸವಾ ಕುಡಿಯುವ ನೀರಿಗೂ ಸಹ ಅನುಕೂಲವಿಲ್ಲದೆ ಪಾಪಿಸರದೇಶಿಗಳಾದ ಗಳು ದುಃಖಿಸುತ್ತಿರುವುದು ಧರ್ಮಸರ್ಕಾರಕ್ಕೆ ವೇದ್ಯವೇ ಇರು ಇಂಥಾ ದುರ್ಭಿಕ್ಷಕಾಲದಲ್ಲಿ ಸರ್ಕಾರದವರು ಕೆಲವು ಕಡೆ ಏರ್ಪಡಿ ವಂತೆ ಕಡೂರು ತಾ|| ಬೆಳವಾಡಲ್ಲಿ ಒಂದು ದವಸದ ಸೊಸೈಟಿಯ ದನಕರುಗಳ ಮೇವಿನ ಡಿಪೋವನ್ನೂ ಏರ್ಪಡಿಸಿಕೊಟ್ಟು ತಮ್ಮ ಪ್ರಜೆಗಳ ನಮ್ಮ, ನಮ್ಮ ಮಕ್ಕಳುಗಳ ಮತ್ತು ದನಕರುಗಳ ಪ್ರಾಣಗಳನ್ನು ಕಾಪಾ ಬೇಕಾಗಿಯೂ ಸಾಲೀಸಾಲ್ 4 ಕಂತುಗಳಾಗಿ ವಸೂಲ್ ಮಾಡುತ್ತಿ ಕಂದಾಯವನ್ನು ಮೇಲ್ಕಂಡ ದುಸ್ಥಿತಿಗಳಿಂದ 8 ಕಂತುಗಳಾಗಿ ರೈತ ಯಾವ ವಿಧವಾದ ತೊಂದರೆಗಳನ್ನೂ ಕೊಡದೆ ವಸೂಲ್‌ಮಾಡಿಕೊಳ್ಳ ಯೂ ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದವರಲ್ಲಿ ನನ್ನ ಪ್ರಾರ್ಥ

ಬೆಳವಾಡದ ಒಬ್ಬ ಬಡರೈತ.

ಸ್ಕೂಲು ರೀಡಿಂಗ್ ರೂಮ್ ಆರಂಭೋತ್ಸವ.

ಕ್ಲೋಸ್‌ಪೇಟೆ ಸ|| ತಾ|| ಬಿಡದಿ ಹೊ|| ಬಾನಂದೂರು ಸ್ಕೂಲಿ ರೀಡಿಂಗ್ ರೂಂ ಆರಂಭೋತ್ಸವವು ಈ ತಾ|| 10 ರ ದಿವಸ ಚನ್ನಪಟ್ಟಣ ರೇಂಜ್ ಸ್ಕೂಲುಗಳ ಅ||ಇ||ಸಾ|| ಮ|| ಎಚ್.ಎನ್. ಲಕ್ಷ್ಮೀಪತ ನವರ ಅಧ್ಯಕ್ಷತೆಯಲ್ಲಿ ಬಹಳವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಲಿನಮುಂದೆ ಇದಕ್ಕಾಗಿ ಹಾಕಲ್ಪಟ್ಟಿದ್ದ ಅಂದವಾದ ಚಪ್ಪರವು ತಳಿರುತೋ ಣಗಳಿಂದ ಅಲಂಕರಿಸಲ್ಪಟ್ಟಿತ್ತು. ಈ ಮಹೋತ್ಸವಕ್ಕೆ ಬಿಡದಿ ಸ್ಕೂಲಿನ ಮಾಸ್ಟರು ಅ|| ಮಾಸ್ಟರುಗಳೊಡನೆ ದಯಮಾಡಿಸಿದ್ದರು. ಸ್ಕೂಲು ಬಾ ಬಾಲಕಿಯರು ದೇವತಾಪ್ರಾರ್ಥನೆ ಮಾಡಿದಮೇಲೆ ಪ|| ಹೊಟ್ಟಪ್ಪನವರ ಕ್ಕಳು ಬಿ. ಎಚ್. ಲಿಂಗಯ್ಯನವರು ಗ್ರಾಮಪಾಠಶಾಲೆಗಳ ಕುಂದುಕೊ ಗಳ ನಿವಾರಣೋಪಾಯಗಳನ್ನೂ ಮ|| ಬಿ. ಪಿ. ರೇವಣಸಿದ್ಧಪ್ಪನವರು ವಾ ನಾಲಯದ ಉಪಯೋಗವನ್ನೂ, ವೃತ್ತಪತ್ರಿಕೆಗಳನ್ನು ತರಿಸಿ ಓದುವುದ ಆಗುವ ಪ್ರಯೋಜನವನ್ನೂ ಕುರಿತು ಉಪನ್ಯಾಸಮಾಡಿದ ನಂತರ ಸಭಾ ಕ್ಷರು ಇವರುಗಳ ಉಪನ್ಯಾಸಗಳನ್ನು ಕೇಳಿ ಆನಂದದಿಂದ ತಮ್ಮ ಭಾ ವನ್ನು ಪ್ರಾರಂಭಿಸಿ ನೆರದಿದ್ದ ಮಹನೀಯರುಗಳೆಲ್ಲರಿಗೂ ಬಹಳ ಸ್ವಾ ವಾಗಿ ಸುಲಭ ಶೈಲಿಯಿಂದ ರೀಡಿಂಗ್ ರೂಮ್ ಮತ್ತು ಸ್ಕೂಲು ಅಭಿ ದ್ಧಿಗೆ ಬರುವುದಕ್ಕೆ ತಕ್ಕ ಸಲಹೆಗಳನ್ನು ಕೊಟ್ಟು ಈ ಸ್ಕೂಲಿಗೆ ಆವ ಶ್ಯಕವಾದ (ಫರ್ನಿಚರ್ಸ್) ಸಾಮಾನುಗಳನ್ನು ಮತ್ತು ರೀಡಿಂಗ್ ರೂ ಗೆ ಸರ್ಕಾರದ ಸಹಾಯವನ್ನು ಕೊಡಿಸಿಕೊಡುವಂತೆ ಅಪ್ಪಣೆಕೊಡಿಸಿದ ಶ್ರೀಮನ್ ಮಹಾರಾಜರ ಶ್ರೇಯಃಪ್ರಾರ್ಥನೆಯಿಂದ ಸಭೆಯು ವಿಸ ಸಲ್ಪಟ್ಟಿತು. ಸರ್ಕಾರದ ಸಹಾಯವನ್ನು ನಿರೀಕ್ಷಿಸುತ್ತಾ ಇದೆ.

ಓರ್ವ ಪ್ರತ್ಯಕ್ಷದರ್ಶಿ.

ಹೂಲಿ ಜ|| ವಿ|| ವಾಚನಾಲಯ.

ಶ್ರೀ ಜಗದ್ಗುರು ವಿಶ್ವಾರಾಧ್ಯ ವಾಚನಾಲಯಕ್ಕೆ ಈ ತಾ|| 10 ಪುರಪ್ರಮುಖರೊಂದಿಗೆ ಮೆ|| ಮಾಮಲೇದಾರಸಾಹೇಬ ಕುಲಕರ್ಣಿಯವ ಆಗಮಿಸಿದ್ದರು. ತೊಡಲೇ ವಾಚನಾಲಯದ ಮೆಂಬರವರು ಮೆ|| ರಾ ಸ್ವಾಗತಮಾಡಿದ ಮೇಲೆ ವಾಚನಾಲಯದ ರಿಪೋರ್ಟ ಓದಲ್ಪಟ್ಟಿತು. ವಾಚನಾಲಯವು ಸ್ಥಾಪನೆಯಾಗಿ ಇಲ್ಲಿಗೆ 9 ವರುಷ ಸಮಾಪ್ತಿಯಾಯಿ ಇಷ್ಟರಲ್ಲಿ ಈ ವಾಚನಾಲಯವು ಕೈಕೊಂಡ ಕಾರ್ಯವು ಅತಿ ಸ್ತುತ್ಯವ ದ್ದೆಂದು ಹೇಳಬಹುದು, ಈ ಸಂಘಕ್ಕೆ ಉದಾರಾಶ್ರಯಕೊಟ್ಟವರು ಹ್ಮಣ, ಲಿಂಗಾಯತ, ರಡ್ಡಿ, ವೈಶ್ಯ, ಹಾಲುಮತ, ಮಹಮ್ಮದಿ, ನಾಮ ಮತದವರೆಂದು ತಿಳಿದುಬರುತ್ತದೆ. ಈ ವಾಚನಾಲಯದ ಸಂಘ ಶಕ್ತಿ ಧರ್ಮಾರ್ಥಜೋತಿಷ ವೈದಿಕಪಾಠಶಾಲೆ ಸ್ಥಾಪನೆಯಾಗಲಿಕ್ಕೆ ಮುಖ್ಯ ಣವಾಗಿದೆ. ಈ ಪ್ರಕಾರದ ಸಂಘಶಕ್ತಿಯು ನಮ್ಮ ಕರ್ನಾಟಕದಲ್ಲಿ ಯೊಂದು ಗ್ರಾಮದಲ್ಲಿಯೂ ಸಹ ಸ್ಥಾಪಿಸುವದು ಅವಶ್ಯಕವೆಂದೂ ಸಂಘ ಚಾಲಕರಾದ ವೇ|| ಬ್ರ|| ಶ್ರೀ|| ಸಿದ್ಧಾಂತಿಗಳು ಬ್ರಹನ್ಮಠ ಸ್ವಯಂಸೇವಕತ್ವವೂ, ಮತ್ತು ಯಾವತ್ತು ಮತಗಳ ಐಕ್ಯತೆಯ ಯೂ ಅದರಂತೆ ಆಚರಣೆಯೂ ಇದ್ದುದ್ದು ಒಂದು ಬಗೆಯ ಭೂಷ ಎಂದು ಇದರಂತೆ ಯಾವತ್ತರೂ ತಮ್ಮ ತಮ್ಮ ಮತಮಾತ್ಸರ್ಯವ ಬಿಟ್ಟು ಐಕ್ಯತೆಯಿಂದಿರುವದು ನಮಗೆ ಭೂಷಣವೇ ಸರಿ ಎಂದೂ ತ್ತರಿಗೂ ತಿಳಿಯುವಂತೆ 1 ಗಂಟೆವರೆಗೆ ಮಾಮಲೇದಾರ ಸಾಹೇಬರ ಷಣಮಾಡಿದರು. ಮುಂದೆ ವಾಚನಾಲಯದ ಸೆಕ್ರೆಟರಿಯವರು ಮೆ|| ರ ಅಧಾರಮನ್ನಿಸಲು ಮಾಮಲೇದಾರ ಸಾಹೇಬರವರು ಈ ಸಂಘಕ್ಕೆ ತಮ್ಮ ಯಥಾನುಸಾರ ಸಹಾಯಮಾಡುವೆವೆಂದು ತಿಳಿಸಿದರು. ಮುಂದೆ ಸಂಜೆ 5 ಗಂಟೆಗೆ ಪಾಠಶಾಲೆಯ ವಿದ್ಯಾರ್ಥಿಗಳಿಂದ ಜಗದ್ಗುರು ವರ್ಯರ ಮಂಗಳಪದ್ಯವು ಪಠಿಸಲ್ಪಟ್ಟು ಹೂಲಿ ಸಭೆ ವಿಸರ್ಜನೆಯಾಯಿತು.

ಸೆಕ್ರೆಟರಿ.

ಓರ್ವ ಯತಿವರ್ಯರ ಮರಣ.

ಚಿತ್ರದುರ್ಗ ತಾಲ್ಲೂಕು ಚಿಕ್ಕವ್ವನಹಳ್ಳಿ ಗ್ರಾಮದ ಸಮೀಪದಲ್ಲಿನ ತೀರದಲ್ಲಿರುವ ಮಠದಲ್ಲಿ ತಪಶ್ಚರ್ಯೆಯಿಂ ವಾಸಿಸುತ್ತಿದ್ದ ಮಹಾಮಹಿಮ ಶ್ರೀ ಕೆಂಡದಾರ್ಯರವರು ಸುಮಾರು 30 ವರ್ಷಗಳಿಂದಲೂ ಇಲ್ಲಿ ವಾಸಮಾಡುತ್ತಿದ್ದು ಪ್ರತಿದಿನದಲ್ಲಿಯೂ ಸ್ನಾನ ಶಿವಪೂಜಾದಿ ನಿತ್ಯಕರ್ಮಗಳನ್ನು ತೀರಿಸಿಕೊಂಡು ಯಾವ ವಿಧವಾದ ಆಹಾರವನ್ನೂ ತೆಗೆದುಕೊಳ್ಳದೆ ಶಿವಧ್ಯಾನಾಸಕ್ತರಾಗಿದ್ದು ಸಮೀಪದ ಹೋಮಗುಂಡದಲ್ಲಿ ಪ್ರಜ್ವಲಿಸುತ್ತಿದ್ದ ಅಗ್ನಿಯನ್ನೇ ಆಹಾರಗೊಳ್ಳುತ್ತ, ಭಕ್ತಿತತ್ಪರರಾದ ಮಹನೀಯರಾದರೂ ಆಹಾರಗೊಳ್ಳಬೇಕೆಂದು ಪ್ರಾರ್ಥಿಸಿದರೆ ಭಕ್ತಮಾಹೇಶ್ವರರ ಪ್ರಕಾರ ಐದು ಮಂದಿ ಮಾಹೇಶ್ವರರಿಗೆ ಕಡಿಮೆ ಇಲ್ಲದಂತೆ ಗಣತೃಪ್ತಿಪಡಿಸಿ ಅವರ ಸಹಪಜ್ತ್ಯಲ್ಲಿ ಭೋಜನಮಾಡಿ ಭೂರಿದಕ್ಷಿಣೆಯಿಂದ ತೃಪ್ತಿಪಡಿಸಿ ಪುನಃ ಎಷ್ಟು ದಿನಗಳಾದರೂ ಸದ್ಭಕ್ತರು ಯಾರಾದರೂ ಗಣಸಂತರ್ಪಣೆಮಾಡಲು ಪ್ರಾರ್ಥಿಸಿದಾಗ ಇಷ್ಟವಿದ್ದಹೊರತು ಆಹಾರಭುಂಜಿಸದೆ ಸದಾಕಾಲದಲ್ಲಿಯೂ ಸಾಕ್ಷಾತ್ಪರಶಿವಮೂರ್ತಿಯಂತೆ ಜಡೆಯಂ ಸುತ್ತಿ ಭಸ್ಮ ರುದ್ರಾಕ್ಷಿಗಳಿಂದಶೋಭಿತರಾಗಿ ಸದಾಮುದಿಯನ್ನುಟ್ಟು ಅಗ್ನಿಯಾಹುತಿಗೊಳ್ಳುತ್ತಾ ಸಮಸ್ತ ಐಹಿಕಸುಖವಂ ದೂರಮಾಡಿ ಸ್ತ್ರೀಯರ ಮುಖವಂ ನೋಡದೆ ಘನತಪಶ್ಚರ್ಯೆಯಿಂದಿದ್ದು ಇದೇ ಮಾಘ ಬ|| ೧೦ ಶುಕ್ರವಾರ ಬೆಳಗ್ಗೆ 10 ಗಂಟೆಗೆ ಇಹವಂ ಬಿಟ್ಟು ಶಿವಸಾಯುಜ್ಯವಂ ಹೊಂದಿದರು. ಸುತ್ತುಮುತ್ತಣ ಸಮಸ್ತ ಭಕ್ತಾದಿಗಳೂ ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮಠದ ಏಜಂಟರೂ ಶ್ರೀಗಳೂ ಮತ್ತು ಸಾರಂಗಮಠದ ಚಿಕ್ಕಪ್ಪನಹಳ್ಳಿಸಾರಂಗಪ್ಪಯ್ಯನವರು ಇವರ ಅಧ್ಯಕ್ಷತೆಯಿಂದ ಶ್ರೀಯತಿವರರ ಕಳೇಬರವನ್ನು ಶೃಂಗರಿಸಿ ಅಂತ್ಯಾರಾಧನೆಯಂ ನೆರವೇರಿಸಿ ಇದೇ ಬ|| ೧೧ ಶನಿವಾರ ರಾತ್ರಿ 8 ಗಂಟೆಗೆ ಅನೇಕ ವೈಭವದಿಂದ ಕ್ರಿಯಾಸಮಾಧಿಯ ಕಾರ್ಯವು ಮಠದ ಮುಂಭಾಗದಲ್ಲಿ ನೆರವೇರಿತು. ಆ ದಿನದಾರಭ್ಯ 11 ದಿನದವರೆಗೆ ಶ್ರೀ ಮಠದಲ್ಲಿ ಪಾದಪೂಜೆ ವಗೈರೆ ಕಾರ್ಯಗಳು ನಡೆಯುತ್ತಿದ್ದು ಇದೇ ಫಾಲ್ಗುಣ ಶು|| ೬ ಮಂಗಳವಾರ ಕೈಲಾಸಗಣಾರಾಧನೆಯೂ, 2-3 ಸಹಸ್ರ ಜನಗಳವರೆಗೆ ಸಂತರ್ಪಣೆಯೂ, ಭೂರಿದಕ್ಷಿಣೆಯೂ ನಡೆದವು.

ಗುರುಭಕ್ತ.

ಕೈಲಾಸವಾಸಿ ವೇ|| ಸೋಸಲೆ ಸಿದ್ಧಲಿಂಗಮರಿದೇವರು.

ರುಧಿರೋದ್ಗಾರಿನಾಮಾಬ್ದೇ ಶುಕ್ಲಪಕ್ಷೇಚಫಾಲ್ಗುಣೇ |
ಷಷ್ಠೀತಿಥೌಭೌಮವಾರೇ ಸಿದ್ಧಲಿಂಗಾಭಿಧೋಮಹಾನ್ ||
ಸ್ವಗೃಹೇಸೋಸಲೇಗ್ರಾಮೇ ಸಾಂಬಸ್ಮರಣಪೂರ್ವಕಂ |
ದೇಹಂಭೌತಿಕಮುತ್ಸೃಜ್ಯ ಜಗಾಮೇಶ್ವರಸನ್ನಿಧಿಂ ||

ಸುಮಾರು ಮೂವತ್ತು ವರ್ಷಗಳ ಮೇಲ್ಪಟ್ಟಾಗಿನಿಂದಲೂ, ವೀರಶೈವ ಮತಪ್ರಚಾರಕರಾಗಿದ್ದ ವೇ|| ಸೋಸಲೆ ಸಿದ್ಧಲಿಂಗಮರಿದೇವರ ಮೃತಿಯನ್ನು ಕೇಳಿ, ನೋಡಿ, ನಿಖಿಲವೀರಶೈವ ಮಹಾಜನಗಳೆಲ್ಲರೂ ಅಪಾರವಾದ ದುಃಖಸಾಗರದಲ್ಲಿ ಮುಳುಗಿರುವರು. ಈ ಮಹಾಶಯರು ದಯಾಪರರೂ, ನಿರ್ವಶಿಖಾಮಣಿಗಳೂ, ಶಾಂತಸ್ವಭಾವದವರೂ, ಆಶ್ರಿತಜನಸಂರಕ್ಷಕರೂ, ಆಚಾರಶೀಲರೂ ಆಗಿದ್ದುದಲ್ಲದೆ, ಈ ಪ್ರಾಂತ್ಯದ ವೀರಶೈವ ಮತಾವಲಂಬಿಗಳೆಲ್ಲರೂ ತಮ್ಮ ಮತತತ್ವರಹಸ್ಯವನ್ನು ತಿಳಿದುಕೊಂಡು ಅನುಷ್ಠಾನಪರರಾಗಲೆಂಬ ಘನವಾದ ಉದ್ದೇಶದಿಂದ ಸರ್ವಜನೋಪಕಾರಾರ್ಥವಾಗಿ, ಈಗ್ಗೆ 20 ವರ್ಷಗಳಲ್ಲಿ ಶ್ರೀ ಮುದುಕುದೊರೆ ಕ್ಷೇತ್ರದಲ್ಲಿ ಶ್ರೀ ವೀರಶೈವ ಮತಸಂವರ್ಧಿನೀ ಎಂಬ ನಾಮದಿಂದ ಒಂದು ಸಭೆಯನ್ನು ವಿದ್ವಾಂಸರ ಸಹಾಯಪಡೆದು ಸ್ಥಾಪಿಸಿ, ಆ ಸಭಾಮೂಲಕವಾಗಿ ಅಲ್ಲಲ್ಲಿ ಸಂಚರಿಸಿ ತಮ್ಮ ಬೋಧನಾಪ್ರೌಢಿಮೆಯಿಂದ ಈ ಮತದ ನಿತ್ಯನೈಮಿತ್ತಿಕಾದಿ ಆಚಾರಕ್ರಿಯೆಗಳನ್ನು ಬೋಧಿಸಿ ಅಶಾಸ್ತ್ರೀಯವಾದ ಅನಾಚರಣೆಗಳನ್ನು ನಿವೃತ್ತಿಗೊಳಿಸಿ ಆಚಾರವಂತರೂ, ಕರ್ಮನಿಷ್ಠರೂ ಆಗುವಂತೆ ಮಾಡಿದುದಲ್ಲದೆ ತಾವೂ ಕೂಡ ತಮ್ಮ ನಡತೆಯಿಂದ ಮೇಲ್ಪಂಕ್ತಿಯನ್ನು ಹಾಕಿತೋರಿಸಿ ಈ ಮತಕ್ಕೆ ತುಂಬಾ ಉಪಕಾರಮಾಡಿದರು. ಈ ಮಹಾಶಯರು ಇನ್ನೂ ಕೆಲವುದಿವಸಗಳು ಭೂಲೋಕದಲ್ಲಿದ್ದದ್ದರೆ ವಿಶೇಷವಾಗಿ ಮತಕ್ಕೆ ಉಪಕಾರಮಾಡುತ್ತಿದ್ದರೆಂಬ ವಿಷಯದಲ್ಲಿ ಸಂಶಯವಿರಲಿಲ್ಲವು. ಈ ಮಹನೀಯರ ಗುಣಕಥನವನ್ನು ಎಷ್ಟುಮಾಡಿದರೂ ಸ್ವಲ್ಪವೇ ಆಗಿರುವುದು. ಇಂತಹ ಸದ್ಗುಣಶೀಲಸಂಪನ್ನರಾದ ಈ ಮಹಾಶಯರ ನಿಧನದಿಂದ ಈ ಪ್ರಾಂತ್ಯದ ಪ್ರತಿಯೊಬ್ಬ ವೀರಶೈವನಿಗೂ, ಇವರ ಸ್ವಭಾವರಹಸ್ಯವನ್ನು ತಿಳಿದ ಇತರ ಮಹನೀಯರಿಗೂ ಶೋಚನೀಯವಾಗದಿರಲಾರದು. ಆದರೆ "ಜಾತಸ್ಯಮರಣಂಧ್ರುವಂ" ಎಂಬ ಪ್ರಮಾಣದಮೇಲೆ ಮನಸ್ಸಮಾಧಾನ ಮಾಡಿಕೊಳ್ಳಬೇಕಾಗಿರುವುದು. ಇವರ ಆತ್ಮಕ್ಕೆ ನಿರಂತರವಾದ ಶಾಂತಿಯನ್ನೂ, ವಿಯೋಗದುಃಖಕ್ಕೀಡಾದ ಅವರ ಕುಟುಂಬಕ್ಕೆ ಮನೋದಾರ್ಢ್ಯವನ್ನೂ ಕೊಡಲೆಂದು ಶ್ರೀ ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ.

ಹೆಚ್. ಪರಶಿವಮೂರ್ತಿ.

ಮೈಸೂರು ವೀರಶೈವರು ನಡಿಸಿದ ಸಭೆ.

ಶ್ರೀ ಜಗದ್ಗುರು ರಂಭಾಪುರೀ ಪೀಠಾಧಿಕಾರ ವಿಚಾರದಲ್ಲಿ ಮೈಸೂರಿನ ಶೈವ ಸಮಾಜಬಾಂಧವರು ಕಳೆದ ತಾ|| 6-3-24 ನೆಯ ದಿನ ಸಭೆಸೇರಿ ರುವ ತೀರ್ಮಾನ ವಿಷಯದಲ್ಲಿ "ಆ ದಿನ ಸಭೆಯಲ್ಲಿದ್ದ ಒಬ್ಬ ವೀರ" ಎಂಬುವರು ಬರೆದಿರುವ ಲೇಖನದಲ್ಲಿ ಉಕ್ತವಾಗಿರುವ ಮೇಲ್ಕಂಡ ವರ ತೀರ್ಮಾನ ವಿಷಯಗಳು ಒಂದುಭಾಗದಲ್ಲಿ ಈ ಪೀಠಾಧಿಕಾರ ಕ್ಕೆ ಸಹಾಯಕಾರಿಗಳಾಗಬಹುದೆಂದು ಗಮನಿಸಲ್ಪಟ್ಟಿದ್ದರೂ ಕಾರ್ಯ ನಿರ್ವಿವಾದವಾಗಿ ಕೈಗೂಡುವುದಕ್ಕೆ ಮುಖ್ಯವಾದ ವಿಷಯವನ್ನೇ ರುವಂತೆ ಕಂಡುಬಂದಿರುವುದರಿಂದ ಅದನ್ನು ಈ ಕೆಳಗೆ ಉದಹರಿ ನೆ.

ಹೇಗೆಂದರೆ:—ಈ ಮಹಾಪೀಠದ ಉತ್ತರಾಧಿಕಾರ ವಿಷಯವಾಗಲಿ ಭಿವೃದ್ಧಿಯಲ್ಲಿ ಅಪೇಕ್ಷೆಯಾಗಲಿ ಮೇಲ್ಕಂಡ ಲೇಖನದಲ್ಲಿ ತೋರಿ ವಂತೆ ಕೇವಲ ಸಿಂಹಾಸನಾಧಿಪತಿಗಳಿಗಾಗಲಿ ಮೈಸೂರು ದೇಶೀಯ ಮಾತ್ರವೆ ಆಗಲಿ ಸಂಬಂಧಿಸಿಲ್ಲವು. ಈ ಮಹಸ್ಥಾಪನಾಚಾರ್ಯ ಪೀಠವು ದ್ಯಾರತ ಭೂಮಿಯ ಸಮಸ್ತ ವೀರಶೈವ ಸಮಾಜಕ್ಕೂ ಸಂಬಂಧ ವಾಗಿದೆ. ಹೀಗಿರುತ್ತ ಇತರ ಪ್ರದೇಶಗಳ (ಬ್ರಿಟಿಶಿಂಡಿಯ) ಮಹಾ ಕ್ರಮವಾದ ಪ್ರಾತಿನಿಧ್ಯವಿಲ್ಲದೆ ವಟುವನ್ನು ಆರಿಸಲ್ಪಡುವುದಾಗಲಿ, ಟ್ಟಾಭಿಷೇಕವಾಗಲಿ ನಡೆಯಿಸಲ್ಪಡುವುದಾದರೆ, ಅಭಿವೃದ್ಧಿ ಕಾರ್ಯವು ನಿರಾ ಕರಣವಾಗಿಯೂ, ನಿರಾತಂಕವಾಗಿಯೂ ಸಾಗಲು ಅನೇಕ ಪ್ರತಿಬಂಧಕಗ ವಾಗಿ, ತಿರುಗಿ ಮಹಾಕಾರ್ಯಕ್ಕೆ ಕುಂದು ಕಾರಣವಾಗಬಹುದೆಂದು ದನ್ನು ನಾನು ಮಾತ್ರವೆ ಅಲ್ಲದೆ, ಮುಂದಾಲೋಚನಾಪರರಾದವರೆಲ್ಲರೂ ಊಹಿಸಬಹುದಾಗಿದೆ. ಆದುದರಿಂದ ನಮ್ಮ ಸಮಾಜದ ಮುಂದಾಳುಗಳೂ, ಮೈಸೂರಿನ ಸಭೆಯಚಾಲಕರೂ ಮತ್ತು ಅಧ್ಯಕ್ಷರೂ ಸಹ ಇಷ್ಟಕ್ಕೆ ಅವಕಾಶವುಂಟಾಗದ ರೀತಿಯಲ್ಲಿ, ಮೈಸೂರುದೇಶದ ವಿಷಯದಲ್ಲಿ ಮಾತ್ರ ನಿರ್ಧರಿಸಿರುವಂತೆ ಬ್ರಿಟಿಷ್ ಇಂಡಿಯದ ಇತರ ಭಾಗಗಳ ಪ್ರತಿ ಡಿಸ್ಟ್ರಿಕ್ಟುಗಳಿಂದಲೂ ಆಯಾ ಪ್ರದೇಶಗಳಿಗೆ ಅನುಗುಣ್ಯರಾದ ಪ್ರತಿನಿಧಿಗಳನ್ನು ಬರಮಾಡಿಕೊಂಡು ಒಂದು ಸಭೆಯನ್ನು ಕೂಡಿಸಿ, ಕಾಲೋಚಿತವಾಗಿ ನ್ಯಾಯವಾದ ಚರ್ಚೆಗಳನ್ನು ನಡೆಯಿಸಿ, ತನ್ಮೂಲಕ ಸರ್ವಾನುಮತದಿಂದ ಆರಿಸಲ್ಪಡುವ ಈ ಜಗದ್ಗುರು ಪೀಠಾರೋಹಣಕ್ಕೆ ಇರಬೇಕಾದ ವಿದ್ಯಾದಿ ಸರ್ವಯೋಗ್ಯತಾಸಂಪನ್ನರೊಬ್ಬರಿಗೆ ಪಟ್ಟಗಟ್ಟುವಂತೆ ಏರ್ಪಡಿಸುವುದು ನಿರಾಕ್ಷೇಪಕರವಾದ ಮಾರ್ಗವಾಗಿದೆ ಎಂದು ಭಾವಿಸುತ್ತೇನೆ. ಪ್ರಯುಕ್ತ, ಶ್ರೀ ಜಗದ್ಗುರು ಸಿಂಹಾಸನಾಧಿಪತಿಗಳೂ, ಮೈಸೂರಿನಲ್ಲಿ ನಡೆಯಿಸಿದ ಆಲೋಚನಾಸಭೆಯವರೂ ಮತ್ತು ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರೇ ಮುಂತಾದ ಸ್ವಮತಾಭಿಮಾನಿಗಳೂ ಈ ನನ್ನ ಲೇಖನದ ನಿಜಾಭಿಪ್ರಾಯವನ್ನು ಗಮನಕ್ಕೆ ತಂದುಕೊಳ್ಳುವುದರ ಮೂಲಕ ಈ ಮಹಾಕಾರ್ಯವನ್ನು ಕೈಗೂಡಿಸಿದ ಪುಣ್ಯಕೀರ್ತಿಗಳಿಗೆ ಭಾಜನರಾಗಲೆಂದು ಈ ಮೂಲಕ ಕೋರುತ್ತೇನೆ.

ದಿ. ವೀ. ದೇವಪ್ಪಗೌಡ.

ಶ್ರೀ ಬಾಳೆಹೊನ್ನೂರು ಮಠದ ಪಟ್ಟಾಧಿಕಾರ.

ಶ್ರೀ ಉಜ್ಜಯಿನಿ ಸಂಸ್ಥಾನ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳವರ ಸನ್ನಿಧಿಯಲ್ಲಿ ಬಿನ್ನಹ.—

ತಾವು ಶ್ರೀಬಾಳೆಹೊನ್ನೂರು ಸಂಸ್ಥಾನದ ಪಟ್ಟಾಧಿಕಾರದ ವಿಷಯದಲ್ಲಿ ಮ|| ಯಡೆಹಳ್ಳಿ ಶಾಂತಪ್ಪ ಶೆಟ್ಟರನ್ನು ಮುಂದಿಟ್ಟುಕೊಂಡು ಕಾಶೀನಾಥಶಾಸ್ತ್ರಿಗಳ ಅವ್ಯಾಲೋಚನೆಯಂತೆ ಅಂತರಂಗದಲ್ಲಿ ಪಟ್ಟಾಧಿಕಾರವನ್ನು ಜರುಗಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಬಹುಜನರ ಸಮ್ಮತಿ ಇಲ್ಲದೆ ತಾವೇ ಸ್ವತಂತ್ರಿಸಿ ಪ್ರಸಿದ್ಧಪತ್ರಿಕೆಗಳನ್ನೂ ಲಗ್ನಪತ್ರಿಕೆಗಳನ್ನೂ ಹೊರಡಿಸಿದ್ದುದು ಸರಿಯಷ್ಟೆ. ಈ ತಮ್ಮ ಅಂತರಂಗಾಭಿಪ್ರಾಯವು ಬಹಿರಂಗವಾಗಿ ಅನೇಕ ಜನಗಳ ತಿಳವಳಿಕೆಗೆ ಬಂದು ಎಲ್ಲರೂ ಮೈಸೂರು ಸಂಸ್ಥಾನದ ಮುಜರಾಯಿ ಕಮಿಷನರ್‌ರವರಲ್ಲಿ ಅರ್ಜಿಗಳನ್ನು ಗುಜರಾಯಿಸಿಕೊಂಡದ್ದಕ್ಕೆ ಅವರು ಕಳೆದಫೆಬ್ರವರಿ ತಾ|| 29ಕ್ಕೆ ಹೀರಂಗನ್ನು ಇಟ್ಟು ನೋಟೀಸುಗಳನ್ನು ಕೊಟ್ಟದ್ದರಮೇಲೆ ಎಲ್ಲರೂ ಹಾಜರಾಗಿ ಸಂಗತಿಯನ್ನೆಲ್ಲಾ ವಿಶದವಾಗಿ ಹೇಳಿಕೊಳ್ಳಲಾಗಿ ತಮ್ಮ ಪರದವರಾದ ಶಾಂತಪ್ಪಶೆಟ್ಟರು ತಾವು ನಿಶ್ಚಯಮಾಡಿಕೊಂಡಿದ್ದ ಲಗ್ನದಲ್ಲಿ ಪಟ್ಟಾಧಿಕಾರವನ್ನು ನಡೆಸುವುದಿಲ್ಲವಾಗಿಯೂ, ಮುಂದೆ ಮಾಡುವುದಾದರೆ ಗೌರ್ನಮೆಂಟಿನವರ ಸ್ಯಾಂಕ್ಷನ್ ಪಡೆದು ಮಾಡುವುದಾಗಿಯೂ ಮುಚ್ಚಳಿಕೆಬರೆದುಕೊಟ್ಟರು. ಅಲ್ಲಿಗೆ ಬಂದಿದ್ದವರ ಪೈಕಿ ಶಾಂತಪ್ಪಶೆಟ್ಟರ ವಿನಹ ಮತ್ಯಾರೂ ತಮ್ಮ ಪರವಾಗಿರದೆ, ಎದುರು ಪಕ್ಷದವರಾದ ಸುಮಾರು 60-70 ಜನ ಪ್ರಮುಖರು ದಯಮಾಡಿಸಿದ್ದರು. ಈ ಜನಗಳು ಮ|| ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರ ಸಮುಖದಲ್ಲಿ ಸಭೆಸೇರಿ, ಬೆಳಗಾಂ ಡಿಸ್ಟ್ರಿಕ್ಟ್ ಗೋಕಾಕಿಗೆ ಸೇರಿದ ಕೊಣ್ಣೂರು ಶ್ರೀ ಪಟ್ಟಾಧ್ಯಕ್ಷಸ್ವಾಮಿಗಳವರನ್ನು ಚುನಾಯಿಸಿ ಈ ಸಂಗತಿಯನ್ನು ತಿಳಿಸಿ ಅವರನ್ನು ಕರೆತರುವ ಉದ್ದಿಶ್ಯ ಯಡೇಹಳ್ಳಿ ಶಾಂತಪ್ಪಶೆಟ್ಟರೂ, ಚಿಕ್ಕಮಗಳೂರು ಕಾಫಿಪ್ಲಾಂಟರ್ ಎಸ್. ಚನ್ನಬಸವಪ್ಪಶೆಟ್ಟರೂ, ಗುಬ್ಬಿ ಯಜಮಾನ್ ರೇವಣ್ಣನವರೂ, ಬೆಂಗಳೂರು ಮಲ್ಲೇಶ್ವರದಲ್ಲಿರುವ ಗುರುನಂಜೇವಡೆಯರವರೂ ಹೋಗಬೇಕೆಂತ ತೀರ್ಮಾನಿಸಿ ಅದರಂತೆ ನಾಲ್ಕು ಜನಗಳೂ ಸದರೀ ಕೊಣ್ಣೂರು ಶ್ರೀಗಳವರಲ್ಲಿಗೆ ಹೋಗಿ ಬಿನ್ನೈಸಿಕೊಂಡರು. ಸಂಗತಿಗಳು ಹೀಗಿದ್ದಾಗ್ಯೂಕೂಡ ತಾವು ಮಾತ್ರ ಸಮಾಜಹಿತದ ಕಡೆಗೆ ಮನಕೊಡದೆ ಸಮಾಜದ ಉನ್ನತಿಗೆ ಭಂಗತರುವ ಪ್ರಯತ್ನ ಕೈಗೊಂಡು ಅವರ ಮೇಲೆ ಇಲ್ಲದ ದೋಷಾರೋಪಣೆಯನ್ನು ಮಾಡಿ ಅವರು ವಿದ್ಯಾವಂತರಲ್ಲವೆಂತಲೂ, ಅವರ ವಿದ್ವತ್ ಪರೀಕ್ಷೆ ಆಗಬೇಕೆಂತಲೂ ವಗೈರೆ ತಮ್ಮ ಪಕ್ಷದವರಾದ ಶಾಂತಪ್ಪಶೆಟ್ಟರು ವಗೈರೆಯವರಿಗೆ ಬೋಧಿಸಿ ಇಲ್ಲದ ಚಳವಳಿಗೆ ಅವಕಾಶಕೊಡುತ್ತಿರುವದರ ಕಾರಣವು ಸಮಾಜಬಾಂಧವರಿಗೆ ಗೊತ್ತಾಗುವಂತಿಲ್ಲ. ತಮ್ಮಂಥಾ ಮಹಾತ್ಮರಿಗೆ ಈರೀತಿ ಬುದ್ಧಿಭ್ರಮಿಸಿರುವದು ಆಶ್ಚರ್ಯವೇಸರಿ. ಚಳವಳಿಗೆ ಕಾರಣಭೂತರಾದಂತ ಕಾಶೀನಾಥಶಾಸ್ತ್ರಿಗಳವರ ಮಾತನ್ನು ಅಂಗೀಕರಿಸದೆ ಅವರನ್ನು ದೂರೀಕರಿಸಿದರೆ ತಮ್ಮ ಭವಿಷ್ಯದ್ ನಡವಳಿಕೆಗೆ ಅನುಕೂಲವಾಗುತ್ತದೆ. ಹಾಗಲ್ಲವಿದ್ದಲ್ಲಿ ಮುಂದೆ ಯಾವ ರೀತಿ ಪರಿಣಮಿಸುತ್ತದೆಂಬದನ್ನು ಪೂರ್ವದಲ್ಲಿ ಕ್ರಿಶ್ಚಿಯನರಿಗೆ ಪರಮಗುರುಗಳಾಗಿದ್ದ ಪೋಪ್ ಎಂಬುವರು ಅನೇಕ ಜನಾಂಗದವರಿಂದ ದೂರೀಕರಿಸಲ್ಪಟ್ಟಿದ್ದನ್ನೂ ಈಗ 15 ದಿವಸಗಳ ಕೆಳಗೆ ತಾನೆ ಮುಸಲ್ಮಾನರ ಪರಮಗುರುವೆನಿಸಿಕೊಂಡಿದ್ದ ಕಲೀಫರವರನ್ನು ಆ ಮತದವರೆಲ್ಲಾ ದೂರೀಕರಿಸಿ ಪದಚ್ಯುತರಾಗಿ ಮಾಡಿರುವುದರ ಉದಾಹರಣೆಯ ಮೂಲಕ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇವೆ. ಮತ್ತು ಈ ಕಾಲದಲ್ಲಿ ಬಹುಜನಾಂಗದ ಅಭಿಪ್ರಾಯಕ್ಕೆ ಅನುಸಾರವಾಗಿದ್ದರೆನೆಯೇ ಯಶಸ್ಸೂ ಕೀರ್ತಿಯೂ ಬರುತ್ತದಲ್ಲದೆ ದುರ್ಜನರ ಆಲೋಚನೆಗಳಿಗೆ ಕಿವಿಗೊಟ್ಟು ಸಮಾಜಬಾಂಧವರ ಅವಿಶ್ವಾಸಕ್ಕೆ ಗುರಿಯಾದಲ್ಲಿ ಕಲೀಫರ ಪರಿಣಾಮವೇ ಪ್ರಾಪ್ತವಾಗುತ್ತದೆಂಬದನ್ನು ತಾವು ನಿಧಾನವಾಗಿ ಒಬ್ಬರೇ ಆಲೋಚಿಸಬೇಕಾಗಿ ಬೇಡುತ್ತೇನೆ. ನಾನು ತಮ್ಮ ಮೇಲಿನ ದುರಭಿಮಾನದಿಂದ ಈ ರೀತಿ ಹೇಳುತ್ತಾನೆಂತ ತಾವು ಭಾವಿಸಿ ಕೋಪಿಸಲಾಗದು. ತಮ್ಮಮುಂದಿನ ಶ್ರೇಯಸ್ಸಿಗೆ ಕುಂದಕ ಬಂದೀತಲ್ಲಾ ಎಂಬುವ ಸಂತಾಪದಿಂದ ಬರೆದುಕೊಂಡದ್ದಾಗಿರುತ್ತೆ. ತಾವು ಕೃಪೆಮಾಡಿ ಕೋಪಕ್ಕೆ ಮನಕೊಡದೆ ಭಾವಿಪರಿಣಾಮದ ಮೇಲೆ ಲಕ್ಷ್ಯವಿಟ್ಟು ಬಹುಜನರೊಪ್ಪುವ ವಟುವನ್ನು ಗೊತ್ತುಮಾಡಿ ಬಾಳೆಹೊನ್ನೂರು ಸಂಸ್ಥಾನಮಠಕ್ಕೆ ಪಟ್ಟಾಧಿಕಾರಮಾಡುವ ವಿಚಾರದಲ್ಲಿ ಸಹಾಯಕರಾಗಿದ್ದುಕೊಂಡು ಸಮಾಜದವರ ವಂದನೆ ಕೃತಜ್ಞತೆಗಳಿಗೆ ಪಾತ್ರರಾಗಬೇಕಾಗಿ ಬೇಡುವ,

ಸ್ವಾಮಿ ಪಾದಸೇವಕ.

ಸೀತಕಲ್ಲು ಜಾತ್ರೆ.

ಈ ಜಾತ್ರೆಯು ಇದೇ ಎಪ್ರೇಲ್ ತಿಂಗಳಿನ 19 ನೇ ತಾರೀಕಿನ ದಿವಸ ಪ್ರಾರಂಭವಾಗಿ ಎಂಟು ದಿನಗಳವರೆಗೂ ನಡೆಯುತ್ತದೆ. ಮೊದಲನೆಯ ದಿವಸ ಅರಸಿ ಅಗ್ನಿಕುಂಡವಾಗುತ್ತದೆ. ಆ ದಿನ ಸುತ್ತಮುತ್ತಿನ 33 ಗ್ರಾಮದ ಜನರು ಬರುತ್ತಾರೆ. ಅತಿ ಬಡವರಾದ ಹೊಲೆಯಮಾದಿಗರೂ ತಲೆಗೊಂದೊಂದು ಕೋಳಿಯನ್ನಾದರೂ ತಂದು ದೇವಿಗೆ ಬಲಿಕೊಡುತ್ತಾರೆ. ಇದೂ ಅಲ್ಲದೆ ಸ್ವಲ್ಪ ಅನುಕೂಲಸ್ಥರು ಕುರಿ, ಮೇಕೆ, ಕೋಣಗಳನ್ನು ಬಲಿಕೊಡುತ್ತಾರೆ. ಈ 33 ಹಳ್ಳಿಗಳಲ್ಲಿಯೂ ಒಂದೊಂದು ಕುರ್ಜು-ರಥವನ್ನು ಕಟ್ಟುತ್ತಾರೆ. ಪ್ರತಿಯೊಂದು ಮನೆಯಲ್ಲಿಯೂ ಆರತಿಗಳನ್ನು ಕಟ್ಟುತ್ತಾರೆ. ಪ್ರತಿಯೊಂದು ಆರತಿಯಮುಂದೂ, ಕುರ್ಜಿನಮುಂದೂ ಒಂದೊಂದು ಬಲಿಯನ್ನು ಕೊಡುತ್ತಾರೆ. ಅಯ್ಯೋ! 33 ಗ್ರಾಮಗಳಲ್ಲಿಯೂ ಇದೇ ಮೇರೆಗೆ ಸುಮಾರು 2-3 ಸಾವಿರ ಮೂಗ ಪ್ರಾಣಿಗಳು ಹತಮಾಡಲ್ಪಟ್ಟರೆ ಅವುಗಳ ಮರಣಕಾಲದಲ್ಲಿ ಅವು ಬಿಸಿಯುಸಿರುಬಿಟ್ಟ ಯಾವ ಪ್ರದೇಶವು ತಾನೆ ಶಾಂತಹೊಂದುವುದಿಲ್ಲ? ಇಂತಹ ರಾಕ್ಷಸ ಕೃತ್ಯದಿಂದ ಶಾಂತಿಯುಂಟಾಗುವುದೇ? ಇಂತಹ ಪಾಪಕೃತ್ಯಕ್ಕೆ ದೇವತೆಯು ಸಂತೋಷಪಡುವಳೇ? ಪಡುವಳೆಂದರೆ ದೇವತೆಯು ಅಂತಹ ಕ್ರೂರಳೇ? ಛೇ! ಎಂದಿಗೂ ಅಲ್ಲ. ಆಕೆಯು ಲೋಕಜನನಿಯಾಗಿರುವಾಗ್ಗೆ, ಪ್ರಪಂಚದ ಸಕಲ ಪ್ರಾಣಿಗಳೂ ಆಕೆಯ ಮಕ್ಕಳಾದಂತಾಯಿತು. ಹೀಗಿರುವಾಗ್ಗೆ ಆಕೆಯ ಬಲಿಷ್ಠರಾದ ಮಕ್ಕಳು ನಿರ್ಬಲರಾದ ಮಕ್ಕಳನ್ನು ಬಲಿಕೊಟ್ಟು ಆಕೆಯನ್ನು ಸಂತೋಷಪಡಿಸಲೆತ್ನಿಸಿದರೆ ಆಕೆಗೆ ಅಪಾರವಾದ ಹೊಟ್ಟೆ ಉರಿಯನ್ನು ತಂದಿಟ್ಟು ದುಃಖಿತಳನ್ನಾಗಿ ಮಾಡುತ್ತಾರೆಯೇ ಹೊರತು ಸಂತೋಷವನ್ನುಂಟುಮಾಡಿದಂತಾಗುವುದಿಲ್ಲ. ಕೆಲವರು "ಆ ದೇವತೆಯು ಬಲಿಕೊಟ್ಟ ಬಲಿಷ್ಠರನ್ನೇ ಶಿಕ್ಷಿಸಬಾರದೆಂದು" ಕೇಳಬಹುದು. ಆದರೆ ಆಕೆಯು ಬಹಳ ದಯಾಶಾಲಿನಿಯಾಗಿಯೂ, ವಿವೇಕವತಿಯಾಗಿಯೂ, ಜಗಜ್ಜನನಿಯಾಗಿಯೂ ಆಗಿರುವುದರಿಂದ, ಒಂದು ಮಗುವು ಮೂಢತ್ವದಿಂದ ಕತ್ತಿಯನ್ನು ಹಿಡಿದು ಪಕ್ಕದಲ್ಲಿಯೇ ನಿದ್ರಿಸುತ್ತಿರುವ ತನ್ನ ತಾಯಿಯ ಮೇಲೆ ಹಾಕಲು ನಿಂತಿರುವದನ್ನು ಆ ಮಗುವಿನ ತಾಯಿಯು ಕಣ್ತೆರೆದು ನೋಡಿ ಮನ್ನಿಸುವಂತೆ ತಪ್ಪುತಿಳುವಳಿಕೆಯಿಂದ ತನ್ನನ್ನು ಸಂತೋಷಪಡಿಸಲೆತ್ನಿಸಿರುವ ತನ್ನ ಮೂಢ ಪುತ್ರರ ಮೌಢ್ಯಕ್ಕೆ ಮರುಗಿ ಮುಂದೆಯಾದರೂ ತನ್ನ ಉತ್ತಮ ಪುತ್ರರ ಸಹವಾಸದಿಂದಲೂ, ಉಪದೇಶದಿಂದಲೂ, ಸನ್ಮಾರ್ಗಪ್ರವರ್ತಕರಾದಾರೆಂದು ಸುಮ್ಮನಿರುವಳು. ಎಲೈ ಸಹೋದರಿರಾ! ನಮ್ಮ ಮೂಢತ್ವದಿಂದ ನಮ್ಮ ಮಾತೆಗೆ ದುಃಖವನ್ನುಮಾಡಿದ ನಾವು ಆಕೆಯ ನಿಜವಾದ ಪುತ್ರರೇ? ಅಯೋ! ಎಂದಿಗೂ ಅಲ್ಲ. ಶತೃಗಳಾಗಿಪರಿಣಮಿಸಿದೆವಲ್ಲಾ!! ಸಹೋದರರೇ! ಇಂತಹ ಮೂಢತ್ವಕ್ಕೆಡೆಗೊಡದೆ ಪ್ರಪಂಚದ ಎಲ್ಲಾ ಪ್ರಾಣಿಗಳಿಗೂ ನಮ್ಮಂತೆಯೇ ಪ್ರಾಣವಿದೆ; ಅವುಗಳಿಗೂ ಸುಖ ದುಃಖವುಂಟೆಂದು ತಿಳಿದು ದಯಾಶೀಲರಾಗಿ ನಡೆದು ದೇವಿಯ ಪ್ರೀತಿಗೆ ಪಾತ್ರರಾಗಬೇಕು. ನಮ್ಮ ಜಾತ್ರೆಯಲ್ಲೇನೋ ಪ್ರಾಣಿಗಳನ್ನು ಬಲಿಕೊಡುವುದರಿಂದ ಶಾಂತಿಯಾಗುವುದೆಂದರೆ, ಸಿದ್ಧಗಂಗೆ, ಶಿವಗಂಗೆ, ಶ್ರವಣಬೆಳುಗೊಳ ಇವುಗಳಲ್ಲಿ ಬಲಿಕೊಡದೆ ಇರುತ್ತಾರಲ್ಲಾ! ಅಲ್ಲಿಯೇನು ಶಾಂತಿಯೇ ಇಲ್ಲವೋ? ಒಂದು ವೇಳೆ ನಾವು ಬಲಿಕೊಡದಿದ್ದರೆ "ನನಗೆ ಬಲಿಕೊಡಿ" ಎಂದು ಕೇಳತಕ್ಕ ನೀಚ ದೇವತೆಯು ತಾನೇ ಯಾವುದಿದೆ? ಹಾಗೇನಾದರೂ ಆ ದೇವತೆಗೆ ಶಕ್ತಿಯಿದ್ದ ಪಕ್ಷದಲ್ಲಿ ಊರಲ್ಲಿರುವ ಕೊಟ್ಟಿಗೆ, ರೊಪ್ಪಗಳಿಗೆ ನುಗ್ಗಿ ಏಕೆ ಪ್ರಾಣಿಗಳನ್ನು ಭಕ್ಷಿಸಬಾರದು? ಮನುಷ್ಯರಿಂದಲೇ ತೆಗೆದುಕೊಳ್ಳಬೇಕೆಂದರೆ ಆಕೆಗೆ ಶಕ್ತಿಯಿಲ್ಲವೆಂದಂತಾಯಿತು. ಹಾಗಾದರೆ ಅಂತಹ ಶಕ್ತಿಯಿಲ್ಲದ ದೇವತೆಯ ಆರಾಧನೆಯಿಂದ ಫಲವೇನು? ಮುಖ್ಯವಾಗಿ ದೇವಿಗೆ ಈ ಕುತ್ಸಿತವಾದ ಗುಣಗಳೊಂದೂ ಇಲ್ಲ. ಆ ಲೋಕಮಾತೆಗೆ ನಮ್ಮ ಮೂಢತ್ವದಿಂದಲೇ ಆ ಯಥಾರ್ಥವಲ್ಲದ ಗುಣಗಳನ್ನೆಲ್ಲಾ ಕಲ್ಪಿಸಿಕೊಂಡಿದ್ದೇವೆ. ಮೂಢಾತ್ಮರಾದ ನಾವುಗಳು ಈ ಪಾಪಕೃತ್ಯಗಳನ್ನೇನಾದರೂ ಕಲ್ಪಿಸಿಕೊಳ್ಳದಿದ್ದರೆ ಈ ನಮ್ಮ ಭೂಲೋಕವೇ ದೇವಲೋಕವಾಗುತ್ತಿದ್ದಿತು. ಅಂತಹ ಸೌಖ್ಯಸಮಾಧಾನಗಳನ್ನು ಹೊಂದಲಿಚ್ಛೆಯಿದ್ದರೆ ನಾವು ಈ ಪಾಪಕೃತ್ಯಗಳನ್ನು ತ್ಯಜಿಸಬೇಕು. ಆದರೆ ನಮ್ಮೂರಿನ ಕಡೆ ಕೆಲವರು ಈ ಕಿರಾತಕೃತ್ಯಗಳಿಗೆ ಮನಃಪೂರ್ವಕವಾಗಿ ಒಪ್ಪದಿದ್ದರೂ "ಪೂರ್ವದಿಂದ ನಡೆದು ಬಂದುದು, ಇದು ಬಿಡಲಶಕ್ಯವಾದುದು" ಎನ್ನುವರು. ನಾವು ಪೂರ್ವಚರಿತ್ರೆಗಳನ್ನು ಓದಿ ನೋಡಿದರೆ ಚಂಡಾಲರ ಹೊರತು ಯಾರೂ ಪ್ರಾಣಿಹಿಂಸೆಯನ್ನೂ, ಮಾಂಸಹಾರವನ್ನೂ ಮದ್ಯಪಾನವನ್ನೂ ಮಾಡುತ್ತಿರಲಿಲ್ಲವೆಂದೂ, ಅನೇಕ ಸತ್ಯಸಂಧರಾದ ರಾಜರು ತಮ್ಮ ದೇಶದಲ್ಲಿಯಾರೂ ಪ್ರಾಣಿಹಿಂಸೆಯನ್ನೂ, ಮಾಂಸ, ಮದ್ಯಸೇವನೆಯನ್ನೂ ಮಾಡಕೂಡದೆಂದು ಅನೇಕ ಕಾನೂನುಗಳನ್ನು ಮಾಡಿದ್ದಂತೆ ಗೊತ್ತಾಗುತ್ತದೆ. ನಮ್ಮ ಪೂರ್ವಿಕರು ಬಹಳ ಸತ್ಯಸಂಧರಾಗಿದ್ದರು. ಅವರ ಕಾಲದಲ್ಲಿ ಕಾಡುಜನರು ಮಾಡುತ್ತಿದ್ದ ಕೃತ್ಯಗಳನ್ನು ನಾವು ಮಾಡಿ, ಇವು ಪೂರ್ವಿಕರವು ಎಂದು ಅವರಿಗೊಂದು ಕುಂದಕವನ್ನು ತಂದಿಟ್ಟುದು ಬಹಳ ಶೋಚನೀಯವಾಗಿದೆ. ಇನ್ನು ಕೆಲವು ದೇವತೆಗಳಿಗೆ ಸಂತೋಷವನ್ನುಂಟುಮಾಡುತ್ತೇವೆಂದು ತಪ್ಪುತಿಳುವಳಿಕೆಯಿಂದ ಬಾಯಿಬೀಗಹಾಕಿಕೊಳ್ಳುವುದು, ಶಸ್ತ್ರಾಸ್ತ್ರಗಳನ್ನು ಬೆನ್ನಿಗೆ ಚುಚ್ಚಿಕೊಂಡು ಸಿಡಿಯಾಡುವುದು, ಕೈಬೆರಳನ್ನು ಕತ್ತರಿಸುವುದು, ಹೀಗೆಲ್ಲಾ ಮಾಡಿದರೆ ದೇವಿಯು ತೃಪ್ತಳಾಗುವಳೇ? ಎಂದಿಗೂ ಇಲ್ಲ. ಬೆಂಕಿಯನ್ನು ಮುಟ್ಟಿ ದುಃಖಿಸುತ್ತಿರುವ ಮಗುವಿನ ಮೌಢ್ಯಕ್ಕೆ ಮರುಗುವ ತಾಯಿಯಂತೆ ತನ್ನ ಸಂತೋಷಕ್ಕಾಗೆಂದು ತನ್ನ ಮಕ್ಕಳು ಮಾಡುವ ಹುಚ್ಚು ಕಾರ್ಯಗಳಿಗೆ ದುಃಖಿಸುವಳು. ಮುಖ್ಯವಾಗಿ ನಾವು ತಿಳಿಯಬೇಕಾದ್ದೇನೆಂದರೆ ಪ್ರಾಣಿಗಳ ಮೇಲೆ ದಯೆ ಇಡುವುದೇ ಧರ್ಮವಲ್ಲದೆ, ಹಿಂಸೆಯು ಎಂದಿಗೂ ಧರ್ಮವೆನಿಸುವುದಿಲ್ಲ. ಒಂದು ವೇಳೆ ಸೂರ್ಯನು ಪಶ್ಚಿಮದಲ್ಲಿ ಉದಯಿಸಿದರೂ ಉದಯಿಸಬಹುದು, ಅಗ್ನಿಯು ಶೀತಲವಾದರೂ ಆಗಬಹುದು, ಸರ್ಪದಬಾಯಲ್ಲಿ ಅಮೃತ ಉತ್ಪನ್ನವಾದರೂ ಆಗಬಹುದು, ಆದರೆ ಹಿಂಸೆಯಿಂದ ಎಂದಿಗೂ ಧರ್ಮಲಭಿಸುವುದಿಲ್ಲ. ಧಾರ್ಮಿಕ ಪ್ರಮುಖರಾದ ಸೀತ್ಕಲ್ ಮಹಾಜನಗಳೂ ಸುತ್ತಮುತ್ತಿನ 33 ಗ್ರಾಮದ ಜನರೂ, ಅನೇಕ ದಯಾಶೀಲರಾದ ಮಹನೀಯರೂ ಈ ವಿಚಾರಗಳನ್ನು ತಮ್ಮ ಘನಚಿತ್ತಕ್ಕೆ ತಂದುಕೊಂಡು ಆ ಲೋಕಮಾತೆಯನ್ನು ಹೂ, ಗಂಧ, ಧೂಪ, ದೀಪ, ಫಲಗಳಿಂದ ಪೂಜಿಸುವಂತೆ ಏರ್ಪಡಿಸಿ ಮೂಗ ಪ್ರಾಣಿಗಳ ಬೇಗೆಯನ್ನು ನಿಲ್ಲಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ. 17 ನೇ ತಾರೀಕಿನ ಸಂಪದಭ್ಯುದಯ 16 ನೇ ತಾರೀಕಿನ ಸ್ಟಾರ್‌ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಮ|| ರಾ|| ಶಾಸ್ತ್ರಿಗಳವರ ಶಾಸ್ತ್ರಾಧಾರವಾದ ಅಹಿಂಸ ಸತ್ಯೋಪದೇಶವನ್ನೂ, 23 ನೇ ತಾರೀಖು ಸ್ಟಾರ್ ಪತ್ರಿಕೆಯಲ್ಲಿನ ಮ|| ರಾ|| ತಿಬ್ಬೂರು ನಂಜಪ್ಪನವರ ಮ|| ರಾ|| ಕೆ. ಎಸ್. ಧರಣೇಂದ್ರಯ್ಯನವರ ನಿಷ್ಪಕ್ಷಪಾತವಾದ ಮತ್ತು ಯಥಾರ್ಥವಾದ ಲೇಖನಗಳನ್ನೂ ಓದಿ ಸ್ವಪ್ರಯೋಜನದೂರನಾಗಿ, ಕೇವಲ ಮೂಗಪ್ರಾಣಿಗಳ ಗೋಳನ್ನು ತಪ್ಪಿಸಲು ನಮ್ಮ ಗುರುಹಿರಿಯರು ಪ್ರಯತ್ನಪಟ್ಟಾರೆಂಬ ಅಭಿಲಾಷೆಯಿಂದ ಈರೀತಿ ಅರಿಕೆಮಾಡಿಕೊಂಡಿರುವ,

ಅಹಿಂಸಾಭಿಲಾಷಿ ಕೆ. ಎನ್. ಭುಜಬಲಯ್ಯ,
ಎಲೆಕ್ಯಾತನಹಳ್ಳಿ.

ನಂಜನಗೂಡು ವರ್ತಮಾನ.

ತಾ|| 22-3-24ರ ಸಂಪದಭ್ಯುದಯ ಸಂಚಿಕೆಯಲ್ಲಿ "ನಂಜನಗೂಡು ರಥೋತ್ಸವ" ಎಂಬ ಹೆಸರಿನಿಂದ ಅವರ ಸ್ವಂತ ಬಾತ್ಮೀದಾರರಿಂದ ಒಂದು ಲೇಖನವು ಬರೆಯಲ್ಪಟ್ಟಿದೆ. ಆ ಬಾತ್ಮೀದಾರರು ಇಲ್ಲಿನ ವಿದ್ಯಮಾನಗಳನ್ನು ತಿಳಿಯದವರಾದುದರಿಂದಲೂ ಅವರು ಇಲ್ಲಿ ಇದ್ದ ಸ್ವಲ್ಪಕಾಲದಲ್ಲಿ ಅವರ ಕಿವಿಗೆ ಬಿದ್ದದ್ದರ ನಿಜಾಂಶವನ್ನು ತಿಳಿಯಲು ಅವಕಾಶವೂ ಆಸಕ್ತಿಯೂ ಇಲ್ಲದ್ದರಿಂದಲೂ ಈರೀತಿ ತಪ್ಪು ಅಭಿಪ್ರಾಯವನ್ನು ತಿಳಿಸಿದ್ದಾರೆ. ಮತ್ತು ಅವರ ಲೇಖನದಲ್ಲಿ ಸರಿಯಾದ ಅಂಶಗಳನ್ನು ಬರೆಯದೆ ಇರುವದರಿಂದ ಜನರ ತಿಳುವಳಿಕೆಗೋಸ್ಕರ ಕೆಲವು ಅಂಶಗಳನ್ನು ಬರೆದಿದೇನೆ. ನ್ಯಾಷನಲ್ ಸರ್ವೀಸ್ ಎಂದು ಹೇಳುತ್ತಾ ನ್ಯಾಷನಲ್ ಎಜುಕೇಷನ್ ಪಡೆಯುವುದರ ಫಲಿತಾಂಶವು ಈ ರೀತಿಯಾಗಿ ಇರುವುದಾದರೆ ಶೋಚನೀಯವೇ ಸರಿ. ಈ ಊರಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರು ಎಂಬ ವಿವಾದವೇ ಇಲ್ಲ. ಎಲ್ಲಾ ಕೆಲಸಗಳಲ್ಲಿಯೂ ಬ್ರಾಹ್ಮಣೇತರರು ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ಗೌರವಿಸುತ್ತಿದ್ದಾರೆ. ಹೀಗಿದ್ದಾಗ್ಯೂ ಈ ಊರಿಗೆ ಮ|| ರಾ|| ಕೃಷ್ಣಸ್ವಾಮಿಪಿಳ್ಳೆ ಎಂಬುವವರು ಅಮಲ್ದಾರರಾಗಿ ಬಂದ ಒಡನೆಯೇ ಇಲ್ಲಿನ ಬ್ರಾಹ್ಮಣ ಮಂಡಲಿಯು ತಟಸ್ಥವಾಗಿದ್ದರೂ, ಕೆಲವು ಜನ ಬ್ರಾಹ್ಮಣ ದೊಡ್ಡ ಮನುಷ್ಯರು ಇಲ್ಲಿಗೆ ಬ್ರಾಹ್ಮಣೇತರ ಅಮಲ್ದಾರರು ಬರಕೂಡದೆಂದೂ ಇವರಿಗೆ ಸರ್ಕಾರಿ ಕೆಲಸವನ್ನು ಪಾಸಕ್ಕೆ ಕೊಡಕೂಡದೆಂದೂ ವೃಥಾ [illegible] [illegible]. ಬ್ರಾಹ್ಮಣ

ಅಮಲ್ದಾರರವರೇ ಇಲ್ಲಿಗೆ ಬಂದಿದ್ದಲ್ಲಿ ಬ್ರಾಹ್ಮಣ ಮಂಡಲಿಗೆ ಯೇನು ಅನುಕೂಲವಾಗುತ್ತಿದ್ದಿತೆಂಬುದನ್ನು ಇದಕ್ಕಾಗಿ ಪ್ರಯತ್ನಿಸಿದವರನ್ನೇ ಕೇಳಿ ತಿಳಿಯಬೇಕಾಗಿದೆ. ಈ ಅಮಲ್ದಾರರವರು ಇಲ್ಲೇ ಖಾಯಂ ಆದ ಮೇಲೆ ಈ ಊರಿನಲ್ಲಿ ಒಳ್ಳೆ ಹೆಸರು ಪಡೆಯಬೇಕೆಂಬ ಉದ್ದೇಶದಿಂದ ಈ ಊರಿಗೆ ಮುಖ್ಯವಾದ ದೇವಸ್ಥಾನದ ಕೆಲಸಗಳನ್ನು ಬಹಳ ಶ್ರದ್ಧೆಯಿಂದ ಮಾಡತೊಡಗಿದರು. ಮತ್ತು ಇಲ್ಲಿನ ಪಂಚರಥೋತ್ಸವಕ್ಕೆ ನಾಲ್ಕು ತಿಂಗಳು ಮುಂಚಿತವಾಗಿಯೇ ಸ್ಥಳೀಯರಾದ ಹಳಬರಿಂದ ರಥದ ತೊಂದುಕೊರತೆಗಳನ್ನು ತಿಳಿದುಕೊಂಡು ರಥದಚಕ್ರಗಳನ್ನೂ ಹುರುಜಿಯನ್ನೂ ರಿಪೇರಿಮಾಡಿಸಿದ್ದಲ್ಲದೆ ತಾವು ಖುದ್ದಾಗಿ ಎಲ್ಲಾ ಗ್ರಾಮಗಳಿಗೂ ಹೋಗಿ ಪ್ರತಿಗ್ರಾಮದಿಂದಲೂ 100-200 ಜನರು ರಥೋತ್ಸವದ ಕುಮ್ಮಕ್ಕಿಗಾಗಿ ಬರುವಂತೆ ತಕ್ಕ ಏರ್ಪಾಡುಮಾಡಿದ್ದರು, ಮತ್ತು ದೇವಸ್ಥಾನದ ಮುಂಭಾಗದ ಎರಡು ಮೂಲೆಗಳಲ್ಲೂ ರಥವು ಜಾಗ್ರತೆಯಾಗಿ ತಿರುಗುವುದಿಲ್ಲವೆಂಬ ಅಂಶವನ್ನು ತಿಳಿದು ರಥ ಚಲನೆಯಕಾಲದಲ್ಲಿ ಎರಡು ಮೂಲೆಗಳನ್ನೂ ತಪ್ಪಿಸಿ ರಥವನ್ನು ನಿಲ್ಲಿಸಿದುದು ಅಲ್ಲದೆ, ರಥೋತ್ಸವದ ಕೆಲಸಗಾರರಿಗೆ ತಕ್ಕ ಉತ್ತೇಜನವನ್ನು ಕೊಟ್ಟು ಶೀಘ್ರವಾಗಿಯೂ ಸುಲಭವಾಗಿಯೂ ರಥೋತ್ಸವವು ನಡೆಯುವಂತೆ ತಕ್ಕ ಏರ್ಪಾಡುಮಾಡಿದ್ದರು. ಹೀಗಿರುವಲ್ಲಿ ಈ ರಥೋತ್ಸವಕ್ಕೆ ಹತ್ತು ದಿನ ಮುಂಚಿತವಾಗಿ ಇವರಿಗೆ ವರ್ಗದ ಆರ್ಡರ್ ಬಂದಿದ್ದರಿಂದ ಹಿಂದೆ ಇದಕ್ಕಾಗಿ ಯತ್ನಿಸಿ ಭಗ್ನಮನೋರಥರಾಗಿದ್ದ ಮಹನೀಯರು ತಾವೇ ಇದಕ್ಕೆ ಕಾರಣರೆಂದು ಊರಲ್ಲೆಲ್ಲಾ ಆತ್ಮಪ್ರಶಂಸೆ ಮಾಡಿಕೊಂಡು ಬ್ರಾಹ್ಮಣೇತರರನ್ನು ಹೀಯಾಳಿಸತೊಡಗಿದರು. ಇದರಿಂದ ಬ್ರಾಹ್ಮಣೇತರರಿಗೆ ಬಹಳ ಅವಮಾನವೂ ವ್ಯಸನವೂ ಉಂಟಾಗಿ, ತಾವು ಬ್ರಾಹ್ಮಣರಲ್ಲಿ ಇಟ್ಟಿದ್ದ ಗೌರವಕ್ಕೂ ವಿಶ್ವಾಸಕ್ಕೂ ಇದೇ ಪ್ರತಿಫಲವೆಂದು ಚಿಂತಿಸಿ ಎಲ್ಲಾ ಕೋಮಿನವರೂ ಸೇರಿ ಒಂದು ದೊಡ್ಡ ಮೀಟಿಂಗ್ ನಡಿಸಿ ಸರ್ಕಾರದವರು ಈ ಅಮಲ್ದಾರರನ್ನು ರಥೋತ್ಸವವಾಗುವವರೆಗಾದರೂ ನಿಲ್ಲಿಸಿಕೊಡಲು ತಕ್ಕ ಏರ್ಪಾಡುಮಾಡಿದರು. ಮೊದಲೇ ದುಗ್ಧಪಡುತ್ತಿದ್ದ ಕೆಲವು ಮಹನೀಯರು ಮತ್ತಷ್ಟು ರೋಷಾವೇಶರಾಗಿ ಬ್ರಾಹ್ಮಣ ಬ್ರಾಹ್ಮಣೇತರರಿಗೆ ಇರುವ ವಿಶ್ವಾಸವನ್ನು ಹೋಗಲಾಡಿಸಲು ಇಲ್ಲದಸಲ್ಲದ ಸುಳ್ಳುವರ್ತಮಾನಗಳನ್ನು ಹುಟ್ಟಿಸುತ್ತಲೂ ಬ್ರಾಹ್ಮಣೇತರರಿಗೆ ಅನಿರೀಕ್ಷಣೀಯವಾದ ತೊಂದರೆಗಳನ್ನು ಕಲ್ಪಿಸುವುದರ ಮೂಲಕವೂ ಜನಗಳು ತಮ್ಮಲ್ಲಿ ಇಟ್ಟಿದ್ದ ನಂಬಿಕೆಯನ್ನೂ ಗೌರವವನ್ನೂ ಕಳೆದುಕೊಂಡರು. ಈ ವರ್ಷ ಜಾತ್ರೆಗೆ ಸಾಂಕ್ರಾಮಿಕರೋಗದ ಭಯದಿಂದ ಪರಸ್ಥಳದವರು ಬಹಳ ಕಡಮೆಯಾಗಿ ಬಂದಿದ್ದರು. ಹಿಂದೆ ಇದ್ದ ಅಮಲ್ದಾರ್ರವರು ಏರ್ಪಾಡುಮಾಡಿದ್ದಂತೆ ಸಕಾಲದಲ್ಲಿ ಗ್ರಾಮಾಂತರಗಳ ಎಲ್ಲಾ ರೈತರೂ ಏಕಮನಸ್ಸಿನಿಂದ ಸಹಾಯ ಮಾಡಿದ್ದರಿಂದಲೂ ಪೋಲೀಸು ಕುಮ್ಮಕ್ಕು ಚೆನ್ನಾಗಿದ್ದುದರಿಂದಲೂ ರಥೋತ್ಸವವು ಶೀಘ್ರವಾಗಿಯೂ ಸುಲಭವಾಗಿಯೂ ನಡೆಯಿತು. ಗ್ರಾಮಾಂತರದ ಜನರು ಈವರ್ಷ ತೋರಿಸಿದ ಉತ್ಸಾಹವು ತುಂಬಾ ಶ್ಲಾಘ್ಯವಾದುದಾಗಿದೆ. ಹಿಂದೆ ಇದ್ದ ಅಮಲ್ದಾರ್ರವರ ವರ್ಗಕ್ಕೆ ಸರಿಯಾದ ಕಾರಣವಾವುದನ್ನೂ ಸರ್ಕಾರದವರು ತಿಳಿಸದೆ ಆಕಸ್ಮಿಕವಾಗಿ ಒಳ್ಳೆ ಸಮಯದಲ್ಲಿ ವರ್ಗಮಾಡಿದ್ದರಿಂದ ಅನೇಕ ವಿಧವಾದ ವರ್ತಮಾನಗಳನ್ನು ಹುಟ್ಟಿಸಲು ಕೆಲವರಿಗೆ ಅವಕಾಶವುಂಟಾಯಿತು. ಆದಾಗ್ಯೂ ನಿಜಾಂಶವನ್ನು ತಿಳಿದು ನೋಡಿದರೆ, ಇವರು ದೇವಸ್ಥಾನದಲ್ಲೂ ಮ್ಯುನಿಸಿಪಲ್ ಕೌನ್ಸಿಲ್‌ನಲ್ಲೂ ನಿಷ್ಪಕ್ಷಪಾತತೆಯಿಂದ ಕೆಲಸಮಾಡಿದ್ದರಿಂದ ಅಲ್ಲಿನ ಸ್ವೇಚ್ಛಾಪ್ರವರ್ತನೆಗಳಿಗೆ ಕೊಂಚಮಟ್ಟಿಗೆ ತೊಂದರೆಯಾಗಿರುವಂತೆಯೂ ಇದರಿಂದ ಇವರನ್ನು ವರ್ಗಮಾಡಿಸಲು ಪ್ರಯತ್ನಗಳು ನಡೆದಂತೆಯೂ ತೋರುತ್ತೆ. ಮ್ಯುನಿಸಿಪಲ್ ಕೌನ್ಸಿಲರುಗಳೇ ದೇವಸ್ಥಾನದಲ್ಲೂ ಧರ್ಮದರ್ಶಿಗಳಾಗಿ ಇರುವುದೇ ಇಂಥಾ ತೊಂದರೆಗಳಿಗೆ ಕಾರಣವಾಗಿದೆ. ಮ|| ಕೃಷ್ಣಸ್ವಾಮಿ ಪಿಳ್ಳೆಯವರು ಹೈಸ್ಕೂಲ್ ಕಮಿಟಿಯ ಅಧ್ಯಕ್ಷತೆಯನ್ನು ವಹಿಸಿ ಮುತುವರ್ಜಿಯಿಂದ ಹೈಸ್ಕೂಲ್ ಫಂಡನ್ನು ಸೇರಿಸಲು ಪ್ರಯತ್ನಿಸಿದರು. ಈಗ ಹೈಸ್ಕೂಲಿನ ಪ್ರಸ್ತಾಪವಮಾಡುವವರೇ ಇಲ್ಲ. ಮ|| ಪಿಳ್ಳೆಯವರ ಸದ್ಗುಣಗಳಿಗೂ ಉದಾರವಾದ ಮನಸ್ಸಿಗೂ, ನಿಷ್ಪಕ್ಷಪಾತತೆಯಿಂದ ಕೆಲಸ ನಡೆಸುತ್ತಿದ್ದುದಕ್ಕೂ ಸಹ ಜನರು ಅವರ ವರ್ಗಕ್ಕಾಗಿ ಬಹಳ ಚಿಂತಿಸುತ್ತಾರೆ. ಇಲ್ಲಿ ಕಾಲರಾ ರೋಗವು ದಿನೇದಿನೇ ಹೆಚ್ಚುತ್ತಾ ಈಗಾಗಲೆ ಹತ್ತು ಮರಣಗಳಾದವು. ಇಷ್ಟಾದರೂ ನಮ್ಮ ವೈಸ್‌ಪ್ರೆಸಿಡೆಂಟರವರೂ ಸ್ಯಾನಿಟರಿ ಇನ್ಸ್‌ಪೆಕ್ಟರವರೂ ಬೀದಿಬೀದಿಗಳಲ್ಲಿ ನಿಂತಿರುವ ಬಚ್ಚಲನೀರನ್ನೂ ಮತ್ತು ಕಚರಾವನ್ನೂ ಸಾಗಿಸಲು ಏನೊಂದೂ ಏರ್ಪಾಡುಮಾಡದಿರುವುದು ತುಂಬಾ ವ್ಯಸನಕರವಾಗಿದೆ. ಈ ಊರಿನ ಪಬ್ಲಿಕ್ ಲೈಬ್ರರಿಯೂ ಮ್ಯುನ್ಸಿಪಾಲಿಟಿಯವರ ಸ್ವೇಚ್ಛಾಧಿಕಾರಕ್ಕೊಳಪಟ್ಟಿದೆ. ಇದರ ದುಸ್ಥಿತಿಯನ್ನು ಕೇಳುವವರೇ ಇಲ್ಲ. ಈಗ್ಯೆ ನಾಲ್ಕುವರ್ಷಗಳ ಹಿಂದೆ ಹೋದ ಪುಸ್ತಕಗಳು ಇನ್ನೂ ಬಂದಿಲ್ಲ. ಇದಕ್ಕೆ ಜವಾಬ್ದಾರರು ಯಾರೋ ಗೊತ್ತಿಲ್ಲ. ಆಡಿಟರುಗಳು ಈ ವಿಚಾರದಲ್ಲಿ ಏನು ಅಭಿಪ್ರಾಯಪಟ್ಟಿರುವರೋ ತಿಳಿಯದು. ಲೈಬ್ರರಿಯ ಸ್ವಂತದ ಕುರ್ಚಿಗಳು ಹಾಲಿ ಬಂದಿರುವ ತುಮಕೂರು ಸೀತಾಮನೋಹರ ಕಂಪನಿಯವರ ಸಹಾಯಕ್ಕಾಗಿ ಯಾವ ಪ್ರತಿಫಲಕ್ಕೋಸ್ಕರವೋ ಹೋಗಿಬರುತ್ತಿರುವಾಗ ಇತರ ವಿಚಾರಗಳು ಹೇಗಿರಬಹುದೆಂಬುದನ್ನು ವಾಚಕರೇ ಊಹಿಸಬಹುದು. ಹಾಲಿ ಬಂದಿರುವ ಅಮಲ್ದಾರ್ ಮ|| ಪೂರ್ಣಯ್ಯನವರು ತಮ್ಮ ಹೆಸರಿಗೂ ಮನೆತನಕ್ಕೂ ತಕ್ಕಂತೆ ಸದ್ಗುಣಿಗಳೆಂದು ಹೆಸರು ಪಡೆದಿರುವದರಿಂದ ಈ ಊರಿನಲ್ಲೂ ನಿಷ್ಪಕ್ಷಪಾತತೆಯಿಂದ ಕೆಲಸಮಾಡಿ ಎಲ್ಲಾ ಪ್ರಜೆಗಳ ಗೌರವಕ್ಕೂ ವಿಶ್ವಾಸಕ್ಕೂ ಪಾತ್ರರಾಗುತ್ತಾರೆಂದು ನಂಬಿದೆ. ಸಬ್ ಡಿ|| ಆಫೀಸರ್ ಮ|| ಗೋವಿಂದರಾಯರಿಗೆ ಶಿವಮೊಗ್ಗೆಗೆ ವರ್ಗವಾಗಿರುವದರಿಂದ ಇವರ ಆಶ್ರಿತರಾಗಿದ್ದ ಕೆಲವು ಜನರಿಗೆ ಬಹಳ ತೊಂದರೆಯಾಗಿದೆ. ಹೊಸದಾಗಿ ಬರುವ ಮ|| ಅಪ್ಪಣ್ಣಯ್ಯಂಗಾರ್ರವರೂ ಒಳ್ಳೇಯವರೆಂದು ಕೇಳಿ ಬಹಳ ಸಂತೋಷಪಡುತ್ತೇವೆ.

ಪ್ರಜಾಹಿತೈಷಿ.

ಶಿವಯೋಗಮಂದಿರ.

ಪ್ರತಿ ವರ್ಷದಂತೆ ಮಹಾಶಿವರಾತ್ರಿಯ ಕಾಲಕ್ಕೆ ಶಿವಯೋಗ ಮಂದಿರದಲ್ಲಿ ದೊಡ್ಡಜಾತ್ರೆಯು ಕೂಡಿತ್ತು. ಕರ್ನಾಟಕದ ಅನೇಕ ಭಾಗಗಳಿಂದ ಭಾವಿಕ ಜನರು ದಂಪತಿ ಕುಟುಂಬ ಸಹಿತ ಅನೇಕರು ಬಂದಿದ್ದರು. ದೊಡ್ಡದೊಡ್ಡ ಸರ್ಕಾರೀ ಆಫೀಸರರೂ, ಸರದಾರರೂ, ಸರನಾಯಿಕರೂ, ದೇಸಾಯರೂ, ಪೆನ್ಷನರರೂ, ಮಹಾ ಮಹಾಸ್ವಾಮಿಗಳೂ ಬಂದಿದ್ದರು. ಅವರಲ್ಲಿ ರಾ|| ಬಾ|| ಆರ್. ಎಸ್. ಹಿರೇಮಠ ಡಿ||ಡಿ|| ಕಲೆಕ್ಟರ್, ರೇವಣಸಿದ್ದಯ್ಯ ಕಿತ್ತೂರ ರಿಟೈರ್ಡ್ ಡಿ|| ಡಿ|| ಸಿ. ರಾ|| ಸಾ|| ಬಿ. ಎಂ. ಕ್ಯಾಲಕರ್ಣಿ ಮಾಮಲೇದಾರ್ ಬದಾಮಿ, ಬಿ. ಜಿ. ಗಿಲಗಂಜಿ ಮಾಮಲೇದಾರ ಬಾಗಲಕೋಟೆ, ಬಿ.ಕೆ. ಕರ್ಜಗಿ ಚಿಟ್ನಿಸ ವಿಜಾಪುರ, ವಾಲಿಹೆಡ್‌ಕ್ಲಾರ್ಕ ಪುರಾಣಿಕ ಕರಪಟ್ಟಿ ಮಾಮಲೇದಾರ, ಸೊನ್ನದ, ಎಡಹಳ್ಳಿ, ಇಟಗಿ, ಶಾಂತಗೇರಿ ದೇಸಾಯರೂ, ಹಲಗಲಿ ಸರನಾಯಿಕರೂ ಬಸವಯ್ಯಸ್ವಾಮಿ ಅಂಗಡಿ ಜಕನೂರ, ಚನ್ನಬಸವಯ್ಯ ಶಿರೋಳ, ದೊಡ್ಡಪ್ಪಾ ನಾಗರಾಳ, ಬಾಪುಗೌಡರು ಬೆನಕೊಪ್ಪ, ವ್ಹಿ. ವ್ಹಿ. ಅಂಗಡಿ ಹೈಕೋರ್ಟು ವಕೀಲ ಹಾಲಪ್ಪನವರು, ಬಸವಯ್ಯ ದಂಡಾವತಿ, ರಾ|| ಬ|| ದೇವಿಹೊಸೂರ ಶೆಟ್ಟರು, ಸವದತ್ತಿ ಮೂಗಪ್ಪನವರು, ಬುದ್ದಯನವರು, ಅಯಪ್ಪಾ ಬ್ಯಾಳಿ, ಸೋಮಪ್ಪಾ ಶಾಬಾದಿ, ಮುರಿಗೆಯ್ಯ ಜಂಗಿನ ಮುಂತಾದ ಪ್ರಮುಖ ವ್ಯಾಪಾರಿ ಜನರೂ, ಕೊಣ್ಣೂರ ಮರಡಿಮಠದ ಸ್ವಾಮಿಗಳೂ, ಹಾವೇರಿ ಸ್ವಾಮಿಗಳೂ, ನವಲಗುಂದ, ಇಳಕಲ್ಲ ಗುಳೇದಗುಡ್ಡ ಸಂಗಮದ ಸ್ವಾಮಿಗಳೂ, ಬೆಳಗಿ ಮುರಿಗೆಪ್ಪನವರೂ ಮುಂತಾದವರೂ ಆಗಮಿಸಿದ್ದರು. ರಾ|| ಸಾ|| ವೀರಪ್ಪಾ ಮಾನ್ವಿಯವರೂ ಬಂದಿದ್ದರು. ಈ ಭಾಗದಲ್ಲಿ ದುಷ್ಕಾಳವಿದ್ದಾಗ್ಯೂ ಭಾವಿಕಜನರು ಶಿವಯೋಗಿಗಳ ದರ್ಶನಕ್ಕಾಗಿಯೂ, ಶಿವಕಥಾ ಶಿವಪುರಾಣ ಶಿವಕೀರ್ತನ ಕಾಲಕ್ಷೇಪಕ್ಕಾಗಿಯೂ ಬಂದಿದ್ದರು. ಹಿರೇಹಾಳ ವೀರಯ್ಯನವರ ವ ಬಸವಲಿಂಗಶಾಸ್ತ್ರಿಗಳ ಶಿವಕೀರ್ತನೆಗಳು ಅಪ್ರತಿಮವಾದವು. ಮಹಿಳಾಪರಿಷತ್ತಿನವರು ಮೂರುದಿವಸ ತಪ್ಪದೇ ಸಭೆಯನ್ನು ಮಾಡಿ ಅನೇಕ ವಿಷಯಗಳನ್ನು ಪಾಸುಮಾಡಿದರು. ಅಧ್ಯಕ್ಷಸ್ಥಾನವನ್ನು ಎಡೆಹಳ್ಳಿ ದೇಸಾಯಿಣಿ ಬಾಯಿಯವರು ವಹಿಸಿದ್ದರು. ಕು|| ಸೌ|| ಶಾಂತಾಬಾಯಿ ಕಣಬರಗಿಮಠ, ಹಣ್ಮಖದೇವಿ ಕಣಬರಗಿಮಠ, ವೀರುಬಾಯಿ ಅಂಗಡಿ ವಗೈರೇರ ಭಾಷಣಗಳು ಪರಿಣಾಮಕಾರಕವಾದವು. ಶಿ. ಬುದ್ದ್ಯನವರು ಸದ್ಯದ ಸ್ಥಿತಿ ಈ ವಿಷಯದಮೇಲೆ ಉತ್ತಮ ಭಾಷಣಮಾಡಿದರು. ಇತ್ತ ಪುರುಷರ ಸಭೆಯಲ್ಲಿ ನವಲಗುಂದದ ಬಸವಲಿಂಗಸ್ವಾಮಿಗಳೂ, ಇಳಕಲ್ಲ ಮಹಾಂತಸ್ವಾಮಿಗಳೂ ಕೆಲವು ಶಿವಯೋಗಿಗಳೂ, ಲೌಕಿಕ, ಪಾರಮಾರ್ಥಿಕ ಮತ್ತು ಆತ್ಮಜ್ಞಾನ ಈ ವಿಷಯಗಳಮೇಲೆ ತಮ್ಮ ಅಧಿಕಾರವಾಣಿಯಿಂದ ಅತಿ ಪರಿಣಾಮಕಾರಕ ಭಾಷಣಮಾಡಿದರು. ಶ್ರೀ ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರು ಶಿವಯೋಗಮಂದಿರವು ಪ್ರಾರಂಭವಾದಾಗಿನಿಂದ ಇಂದಿನವರೆಗೆ ಇಲ್ಲಿನಡೆದ ಕೆಲಸ, ಶಿವಯೋಗಿಗಳ ಆತ್ಮತೇಜ, ಆತ್ಮಜ್ಞಾನ, ಅವರ ಬ್ರಹ್ಮಚರ್ಯ ವ್ರತ, ಅವರ ಆಚಾರ ವಿಚಾರ ಅವುಗಳಿಂದ ನಮ್ಮ ಸಮಾಜದಮೇಲೆ ಆದ ವ ಆಗುತ್ತಿರುವ ಸುಪರಿಣಾಮ ಇವುಗಳನ್ನು ಬಲುಸರಸಾಗಿ ವರ್ಣಿಸಿ ಈ ಮಂದಿರಕ್ಕೆ ಇರುವ ಉತ್ಪನ್ನ ಮತ್ತು ಖರ್ಚು ಇವುಗಳನ್ನು ಸವಿಸ್ತಾರವಾಗಿ ತಿಳಿಸಿದರು. ನಂತರ ಅವರ ಚಿರಂಜೀವ 8 ವರ್ಷ ವಯಸ್ಸಿನ ಬಾಲಕ ಶಿವಶಂಕರಸ್ವಾಮಿ ಕಣಬರಗಿಮಠ ಇವರು ಶಿವಯೋಗಮಂದಿರದ ರಚನೆ ಮತ್ತು ಅದರ ಕೆಲಸ ಈ ವಿಷಯದ ಮೇಲೆ ಬಲುಚಂದವಾದ ಚಿಕ್ಕ ಭಾಷಣಮಾಡಿದರು, ಏನಂದರೆ.—4 ನೇ ವೀರಶೈವ ಮಹಾಸಭೆಯು 1908 ರಲ್ಲಿ ಬಾಗಲಕೋಟೆಯಲ್ಲಿ ಶ್ರೀಮಂತ ಸರದಾರ ಲಖಮಗೌಡರು ಸರದೇಸಾಯಿ ವಂಟಮುರಿ ಇವರ ಅಧ್ಯಕ್ಷತೆಯ ಕೆಳಗೆ ನಡೆದು ಬದಾಮಿಹತ್ತರ ಮಲಪ್ರಭಾನದಿಯ ದಂಡಿಯಮೇಲೆ ಈ ಶಿವಯೋಗಮಂದಿರವು ಸ್ಥಾಪನವಾಗುವದು ಗೊತ್ತಾದಮೇರೆಗೆ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳು ಮಳೆ, ಛಳಿ, ಬಿಸಲುಗಾಲಗಳಲ್ಲಿ ಹುಲ್ಲಿನ ಪರ್ಣಕುಟೀರಗಳನ್ನು ಕಟ್ಟಿಕೊಂಡು ಅವಿಶ್ರಾಂತಶ್ರಮಪಟ್ಟು ನಮ್ಮೆಲ್ಲರ ಸಮ್ಮತಿಯಿಂದಲೂ ಸಹಾಯದಿಂದಲೂ ಪ್ರಾರಂಭಿಸಿ ಗುರುವರ್ಗವನ್ನು ಉತ್ತಮರೀತಿಯಿಂದ ತಯಾರುಮಾಡುವದಕ್ಕೆ ನಡಕಟ್ಟಿ ನಿಂತರು. ಸಂಗಮೇಶ್ವರನು ಶ್ರೀ ಬಸವೇಶ್ವರನಿಗೆ ಗುರುವಾಗಿ ಕಾಲಕಾಲಕ್ಕೆ ಉಪದೇಶಿಸಿ ಲಾಲನಪಾಲನ ಮಾಡಿದಂತೆ ಶ್ರೀಮನ್ನಿರಂಜನ ಮಹಾಸ್ವಾಮಿಗಳು ಗುರುಗಳ ಗುರುಗಳಾಗಿ ಬೋಧಿಸಿದರು, ಶಿಷ್ಯರ ಬೇನೆ ಬೇಸರಿಕೆಗಳನ್ನು ತಂದೆಯಂತೆ ಹೋಗಲಾಡಿಸಿದರು, ವಿದ್ಯಾರ್ಥಿಗಳ ಸ್ನಾನ, ಶಿವಪೂಜೆ, ಬ್ರಹ್ಮಚರ್ಯ, ಮತಗ್ರಂಥಾವಲೋಕನ, ಆಚಾರ, ವಿಚಾರ, ಲೋಕೋದ್ಧಾರದ ಕೆಲಸಗಳಕಡೆಗೆ ತನು ಮನ ಧನವನ್ನು ಅರ್ಪಿಸುವಂತೆ ವ್ಯವಸ್ಥೆ ಮಾಡಿದರು. ಮಂದಿರದೊಳಗಿನ ಈಗಿರುವ ವಿದ್ಯಾರ್ಥಿಗಳೂ, ಶಿವಯೋಗಿಗಳೂ, ಪಂಚಾಕ್ಷರಿ ಮುಂತಾದ ಗವಯಿಗಳೂ, ಹಿರೇಹಾಳ ವೀರಯ್ಯಾ, ದ್ಯಾಮಾಪುರ ಬಸವಲಿಂಗಶಾಸ್ತ್ರಿಗಳು ಮುಂತಾದವರು ಆ ಮಹಾಸ್ವಾಮಿಗಳ ಪರಿಶ್ರಮದ ಫಲವಾಗಿರುವದಾಗಿ ಪ್ರತಿಯೊಬ್ಬರಿಗೆ ತಿಳಿಯುವಂತಿದೆ. ಇಂಥ ಶಿವಯೋಗಮಂದಿರದ ಅಂತರಂಗದ ವ ಬಹಿರಂಗದ ರಚನೆಯನ್ನು ಅಲ್ಲಿರುವ ಸಾಧಕರೂ, ಶಿವಯೋಗಿಗಳೂ ಈಗ ಮಾಡುತ್ತಿರುವ ಸಮಾಜಕಾರ್ಯವನ್ನು ಕಣ್ಣಾರೆ ಕಂಡರೆ ಯಾವ ವೀರಶೈವನಿಗೆ ಆನಂದವಾಗಲಿಕ್ಕಿಲ್ಲಾ! ಶ್ರೀ ಕುಮಾರಸ್ವಾಮಿಗಳೇ ನೀವೇ ಧನ್ಯರು, ನಿಮ್ಮ ಶಿವಯೋಗ ಮಂದಿರವು ಧನ್ಯವು, ನಿಮ್ಮ ಸೋಲಿಲ್ಲದ ಪ್ರಯತ್ನಕ್ಕೆ ಶಂಭುಲಿಂಗನು ಮೆಚ್ಚಿದನು. ಈ ಮಂದಿರವು ಈ ಗಣಾಧೀಶ್ವರರಿಂದೊಡಗೂಡಿದ ಪರಶಿವನ ಸಭಾಮಂಟಪವಾಗಿದೆ. ಇದರ ಶಾಖೆಗಳು ಅನೇಕಕಡೆಗೆ ಆಗಲಿ, ಜನರು ಅವನ್ನು ಪ್ರೀತಿಸಲಿ, ಜನರು ರಾಜನಿಷ್ಠರಾಗಿರಲಿ, ನಡೆನುಡಿಗಳನ್ನು ಸುಧಾರಿಸಲಿ. ಈ ಸಂಸ್ಥೆಯು ಅದರ ಉತ್ಪಾದಕರೂ ಚಾಲಕರೂ ಸ್ಥಿರಜೀವಿಗಳಾಗಲಿ, ಈರೀತಿ ಭಾಷಣವನ್ನು ಈ ಚಿಕ್ಕಬಾಲಕನು ಮಾಡಿ ಜನರನ್ನು ಕ್ಷಣಹೊತ್ತು ಮೋಹಿತರನ್ನಾಗಿ ಮಾಡಿದನು. ಈತನ ಭಾಷಣ ಕೇಳಿ ಸ್ತ್ರೀ ಸಭೆಯವರು ತಮ್ಮಲ್ಲಿಗೆ ಕರಿಸಿ ಆತನ ಭಾಷಣಮಾಡಿಸಿದರು.

ಈರೀತಿ ಶಿವಯೋಗಮಂದಿರದ ಬೆಳವಣಿಗೆಯು ಬಿದಿಗೆಯ ಚಂದ್ರನಂತೆ ದಿನದಿನಕ್ಕೆ ಹೆಚ್ಚುತ್ತಿರುವುದು. ಮತ್ತೊಂದುಕಡೆಗೆ ಈ ಮಂದಿರ ಕೆಲಸ ನಿರಾಬಾಧಿತವಾಗಿ ನಡಿಯಬೇಕೆಂದು ಒಂದು ಶಿವಾನಂದ ಜಿನ್ನಪ್ರೆಸ್ ಫ್ಯಾಕ್ಟರಿಯನ್ನು ಬಾಗಲಕೋಟೆಯಲ್ಲಿ ಕಟ್ಟಿಸಿದ್ದು ಕೆಲವು ಗೈರಸಮಜೂತಿಯಿಂದ ಆ ಫ್ಯಾಕ್ಟರಿಯು ಒಬ್ಬಿಬ್ಬ ಪಾಲುಗಾರರು ಮುಳಿಸುಗೊಂಡು ವ್ಯಾಜ್ಯವಾಡುತ್ತಿರುವದಾಗಿ ಸುದ್ದಿಯಿದೆ. ಅದು ಕೋರ್ಟಿನಲ್ಲಿ ನಡದದ್ದೇ ನಿಜವಿದ್ದರೆ ಅದರಬಗ್ಗೆ ಹಿತಾಹಿತದ ಮಾತು ಈಗ ಬರೆಯುವದು ಯೋಗ್ಯವಲ್ಲದ ಕಾರಣ ಬಿಟ್ಟಿರುತ್ತದೆ. ಅದರಬಗ್ಗೆ ಖುಲಾಸಾ ಹಿಂದಿನಿಂದ ಮಾಡಲ್ಪಡುವದು. ಪಟ್ಟ ಚರಮೂರ್ತಿಗಳಲ್ಲಿಯೂ ವಿರಕ್ತರಲ್ಲಿಯೂ ಏನೂ ಕಾರಣವಿಲ್ಲದೆ ಮನಸ್ತಾಪವನ್ನು ಬೆಳಿಸಿದ ಪುಣ್ಯವಂತರು ಗಿಡದ ತುದಿಗೆ ಕೂತು ಬೊಡ್ಡಿಯನ್ನೇ ಕಡಿಯುವ ಪ್ರಯತ್ನಮಾಡಿದಂತೆ ಒಬ್ಬರಮೇಲೊಬ್ಬರು ನಾನುಹೆಚ್ಚು ನೀನುಹೆಚ್ಚು ಎಂಬ ಆವೇಶದಿಂದ ಯಾವ ಸಮಾಜದಲ್ಲಿ ಹುಟ್ಟಿರುವಿರಿ, ಯಾವ ಸಮಾಜವು ಅಖಿಲ ಜಗತ್ತಿಗೂ ಪೂಜ್ಯವಾಗಿರುವದೋ ಅದರ ಪೋಷಣದ ಭಾರವು ನಿಮ್ಮಮೇಲೆ ಇದ್ದದ್ದನ್ನು ಮರೆತು ಬಾಯಿಸುಮಿಹೊಂದಿ ಒಬ್ಬರನ್ನೊಬ್ಬರು ಹೀನೋಕ್ತಿಗಳಿಂದ ಹಳಿದಾಡದಿರಿ, ಅಂಥ ಘನವಂತ ಮಹಿಮರು ಶಿವಯೋಗಮಂದಿರದವರೆಗೆ ಬಂದು ನೋಡಿದರೆ ಅವರಿಗೆ ಆನಂದವಾಗದೇ ಇರಲಾರದು. ಕಾರಣ ನಿಮ್ಮನಿಮ್ಮ ಶುಷ್ಕವಾದಗಳನ್ನು ಮುಗಿಸಿರಿ; ಪ್ರೀತಿಯಿಂದ ನಡೆಯಿರಿ. ವಿರಕ್ತರು ಗುರುವರ್ಗದವರಿಂದ ತಮ್ಮ ಉತ್ಪತ್ತಿಯಾದ ಮೂಲಕ ಅವರಿಗೆ ಮನ್ನಣೆಮಾಡಲಿ, ಗುರುವರ್ಗದವರಗಿಂತ ವಿರಕ್ತರ ಆಶ್ರಮವೂ ಜಪವ್ರತವೂ ಬಹಳ ಕಠಿಣವಿರುವದರಿಂದ ಅದನ್ನು ಅಬಾಧಿತವಾಗಿ ಪಾಲಿಸಲಿಕ್ಕೆ ಸಹಾಯಮಾಡುವದಲ್ಲದೆ ಅವರ ಈ ಕಠಿಣತರವಾದ ಆಶ್ರಮಕ್ಕೆ ತಕ್ಕ ಮನ್ನಣೆಮಾಡಲಿ. ಗುರುವರ್ಗವು ಹನ್ನಕನ್ನ ಮುಂತಾದ ಲೌಕಿಕ ಕೆಲಸಗಳನ್ನು ಮಾಡಲಿ. ವಿರಕ್ತರು ಪಾರಮಾರ್ಥಿಕ ಕೆಲಸಗಳನ್ನು ಮಾಡಿ ಎಲ್ಲರನ್ನೂ ಉದ್ಧಾರಮಾಡಲಿ. ಈ ಉಭಯವರ್ಗದ ವಿಷಪ್ರಯೋಗಕರವಾದ ಜಗಳದಿಂದ ನಮ್ಮ ಸಮಾಜಕ್ಕೆ ಬಹಳ ಹಾನಿಯುಂಟಾಗಿದೆ. ಸೂಜ್ಞರು ಇದನ್ನೆಲ್ಲಾ ಲಕ್ಷ್ಯಕ್ಕೆ ತಂದು ಒಮ್ಮೆ ಮನ ಘಟ್ಟಿಮಾಡಿ ಶ್ರೀ ಬಸವೇಶ್ವರನು ಸಂಗಮನಾಥನಲ್ಲಿ ಐಕ್ಯನಾದಂತೆ ನಿಮ್ಮನಿಮ್ಮ ಅಸೂಯೆಯನ್ನು ಬಿಟ್ಟು ಉಭಯಪಕ್ಷದವರೂ ಕೂಡಿರಿ. ಮಹಾಸಭೆಗಳು ಮೂಲೆಗುಂಪಾಗಿ ಮಲಗಿವೆ. ಅವನ್ನು ನೀವು ಉಭಯತರೂ ಹೊಡೆದು ಎಬ್ಬಿಸಿರಿ. ಸಭೆಗಳಿಗೆ ನಿಮ್ಮ ಉಭಯತರ ಹೊರತು ಧಾರ್ಮಿಕ ಜೀವಕಳೆ ಬರಲಾರದು. ನಿಮ್ಮ ಉಭಯತರಿಗೂ ನಾನು ಇಡೀ ಸಮಾಜದಪತಿಯಿಂದ ಸೆರಗೊಡ್ಡಿ ಬೇಡುವೆನು, ನಿಮ್ಮ ಚರಣಕಮಲಕ್ಕೆ ಎರಗುವೆನು, ವಾದವನ್ನು ಬಿಡಿರಿ, ಪ್ರೀತಿಮಾಡಿರಿ, ಸಮಾಜದ ಉದ್ಧಾರಮಾಡಿರಿ, ಪರಮತಸ್ಥರ ಅವಹೇಳನೆಯನ್ನು ಹೋಗಲಾಡಿಸಿರಿ. ಇದರಿಂದ ಭಗವಂತನು ನಿಮ್ಮ ಕಲ್ಯಾಣಮಾಡುವನು. ಹೊರಗೆ ಏನು ನಡದದೆ ನೋಡಿರಿ. ಕಾಂಗ್ರೆಸ 3 ಆದವು, ಜೈನರ ವಾರ್ಷಿಕಸಭೆಗಳು 26 ಆದವು, ಮುಸಲ್ಮಾನರು ತಮ್ಮದೊಂದು ಹೊಸಕಾಲೇಜವನ್ನೇ ಸ್ಥಾಪಿಸಿ ರು. ಕುರುಬರು, ರಡ್ಡಿಯರು, ಕ್ಷತ್ರಿಯರು, ವಡ್ಡರು, ಹೊಲೆಯ ಸಹಾ ತಮ್ಮತಮ್ಮ ಸಮಾಜ ಸುಧಾರಿಸುವದಕ್ಕೆ ತನು ಮನ ಧನಗಳನ್ನು ಸೂರೆಮಾಡುತ್ತಿರುವರು. ಆದರೆ ಶಿವಶಿವಾ ಲಿಂಗಾಯತರು ತಮ್ಮತಮ್ಮೊಳಗೆ ಯಾದವರಂತೆ ನ್ಯಾಯಮಾಡುತ್ತ ಹಾಳಾಗುತ್ತಿರುವರು. ನಮ್ಮ ಮತತತ್ವಗಳು ಹ್ಯಾಗಿವೆ ನಾವು ಯಾರು ಇದನ್ನು ಮರೆತಿರುವೆವು, ಅಜ್ಞ ಗುತ್ತಿರುವೆವು. ಧರ್ಮಹಾನಿಯಿಂದ ಆತ್ಮತೇಜ ಕಡಿಮೆಯಾಗಹತ್ತಿದೆ, ದ ದ್ರತನ ಹೆಚ್ಚಾಗಹತ್ತಿದೆ; ಸಿಟ್ಟು, ದುಃಖ, ನಾಹೆಚ್ಚು, ಅವಿಶ್ವಾಸ, ಒ ಹೆಮ್ಮೆ ಇವು ಮನಕ್ಕೆ ಹೆಚ್ಚಾಗಿ ಬಾಧಿಸುತ್ತಿರುವವು. ನಮ್ಮ ಕಟ್ಟು ಮುರಿಯಿತು, ಶಕ್ತಿ ಹಾಳಾಯಿತು. ಈಶನು ಕೋಪಿಸಿ ಮಳೆಯನ್ನು ಬಿ ಹಿಡಿಯಹತ್ತಿದನು. ದುರ್ಭಿಕ್ಷೆಗಳು ಆಗಾಗ್ಯೆ ಬರಹತ್ತಿದವು. ಇದಕ್ಕೆ ಉಭಯಗುರುಗಳೇ ಕಾರಣರಾಗಿರುವಿರಿ. ಒಮ್ಮೆ ನೀವೀರ್ವರೂ ಕೂ ನಿಮ್ಮ ನ್ಯಾಯಮುಗಿಸಿ ಭಕ್ತರನ್ನು ಉದ್ಧಾರಮಾಡಿರಿ; ಈಶನನ್ನು ಮೆಚ್ಚಿಸಿರಿ.

ಸಮಾಜಸೇವಕ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರ ಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪ ವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ ಸಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇ ಔಷಧ ಒಂದು ಬಾಟ್ಲು ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅ ಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗು ಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರ ಕಸೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4 12 ಬಾಟ್ಲುಗಳಿಗೆ 2—6—0. 25 ಬಾಟ್ಲುಗಳಿಗೆ 4—8—0. ಅ ಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೆ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—28] ಮೈಸೂರು

೧೯೨೪ ನೆಯ ಇಸವಿ ಮಾರ್ಚಿ ತಾ|| ೩೦ ರಿಂದ ೧೯೨೪ ನೆಯ ಇಸವಿ ಏಪ್ರಿಲ್ ತಾ|| ೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ಫಾಲ್ಗುಣ ಬಹುಳ ದಶಮಿಯಿಂ ಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಚೈತ್ರಶುದ್ಧ ಪಾಡ್ಯ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
30	ಭಾನು	ದಶ	15-46	ಶ್ರವ	45-0
31	1ಸೋಮ	ಏಕಾ	13-5	ಧನಿ	44-37
1	ಮಂಗಳ	ದ್ವಾದ	11-30	ಶತ	45-10
2	ಬುಧ	ತ್ರಯೋ	10-5	ಪೂಭಾ	47-14
3	2ಗುರು	ಚತು	11-56	ಉಭಾ	50-22
4	ಶುಕ್ರ	ಅಮಾ	13-55	ರೇವ	54-28
5	3ಶನಿ	ಪಾಡ್ಯ	16-50	ಅಶ್ವಿ	59-24

(1) ಸರ್ವತ್ರಏಕಾದಶಿ. (2) ಸರ್ವತ್ರಅಮಾವಾಸ್ಯೆ. (3) ನಿಂಬ ಭಕ್ಷಣಂ, ಚಾಂದ್ರಸಂವತ್ಸರಾದಿಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮುಧಿಗತರಾಜಮಂಡಲಹಿತೈಷಾ | ನಪಥಕೃತಾವತಾರಾ ಪಕ್ಷಜ್ಞನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲೆಯಂಸದಾಪೊರೆಗೆ ಗೌರೀಕಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

[ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಏಪ್ರಿಲ್ ತಾರೀಖು ೧೩ ನೆಯ ಭಾನುವಾರ. [ಸಂಚಿಕೆ ೧೫

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಪಾಸ್ತ್ರೀಯರಿಗೂ ಕಳಿಸಿರಬೇಕಾದವರಿಗೂ ಬಾಣಂತಿಯರಿಗೂ ಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಕೈದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಗಳಿಗೆ ಪ್ರಾಣದಾತೃವಾಗಿದೆ. ಟ್ಟ ಮೊದಲನೇ ಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣ ಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣ ಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.
ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಭಕ್ರಯ! ಸುಲಭಕ್ರಯ!!

ಡಾ. ಜೆ. ಬಿ. ಯವರ ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯ ಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ವನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋ ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.
ಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.
ಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯು

ಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು.
—33]

ರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವ ಣಾವಿಧಿ:	೦—೧೨—೦	೧—೨—೦
ವ ವಿವಾಹವಿಧಿ:	೦—೮—೦	೦—೧೩—೦
[illegible]	೦—೪—೦	೦—೯—೦
[illegible]	೦—೫—೦	೦—೧೦—೦
[illegible]	೦—೪—೦	೦—೯—೦
[illegible]	೦—೪—೦	೦—೯—೦
ಪ್ರಕರಣ	೦—೧—೦	೦—೬—೦
[illegible]	೦—೮—೦	೦—೧೩—೦

ಉತ್ತಮವಾದ ವೀರಶೈವ ಮತಗ್ರಂಥಗಳು.

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಪ್ರ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—18] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಸಡಗೆ ನೋಡಿ ಕ್ಷೋಗಕಾಯ್ದುಕೆ ಲ್ಯಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ, ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಬಸರೋಣ, ವೀರ್ಯನಷ್ಟಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೆಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಕಪ್ಪೋಣ, ನಿದ್ರೆಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಶೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಟಕಂದ, ಶ್ರೇಷ್ಠಕಂದ, ತಾಳ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಕವಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ. ಬೀಜಬಂಧ, ಚಿಗರಿಗೊರಸು, ಜೊಂಗಲ್ ಬೇದಾಣ, ಮೈದಾಶಾಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಳೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಯಿಲ್ಲ. ೨೧ ದಿವಸ ಸಾಲುವ ೮೦ ತೊಲಿ ಪಾಕಿಗೆ ೫|| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣ ತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರಾ ಅಡ್ರೆಸ್ ಪೋಸ್ಟಾಫೀಸ್ ಸಹ ಬರೆಯಿರಿ.

[50—35] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮಣಿಯಾರ್ಡರ್ ಕಮಿಷನ್ ಸೇರಿ ೨—೪—೦.
ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.
ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.
ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.
ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.
ಪಂಚಶ್ಲೋಕೀ ಬೆಲೆ ೧—೦—೦.
ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.
ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[50—13] ಅಂಡ್ ಸನ್ಸ್, ಜಿ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಟಿನ್ನು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦
ಒಂದು ಟಿನ್ನು ಬಾಟ್ಲುಗಳ ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.
೨೪ ಟಿನ್ನು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—19] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀಭಾಷ್ಯಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢವಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಕೃತಾರ್ಥರಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಅಮಟಗಿ.

ಗ್ರಂಥಸಿಕ್ಕುವಸ್ಥಳ:—
ಹೊಸಮಠದ ಚನ್ನಯ್ಯನವರು ಹುಡಕ,
ಚಿತ್ರದುರ್ಗ ಜಿ||
24—1

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಏಪ್ರಿಲ್ ತಾ|| ೧೩ ನೆಯ ಭಾನುವಾರ.

THE NEW COUNCIL MEETING.

THE DEWAN'S SPEECH.

The reconstituted Legislative Council of Mysore met on the 4th April 1924 at the Council Chamber, Public Offices, Bangalore, with its new arrangement of seats dividing the Treasury Bench from the non-official members. The Dewan-President in his opening speech welcomed the members and placed before them an account of the activities of the Government during the past few months. It is no doubt commendable that the Government have been able to keep to their time-table in the matter of elections. But the same cannot be stated of the arrangements, a matter which the Dewan was himself conscious. There is a good deal of jobbery in the preparation of the voters' lists. Polling stations are far too few taking the number of voters concerned. The safeguards against the interference of polling officers are not sufficient in the taluks, as the candidates have no opportunities of keeping their agents along with the polling officers. Then again, the right of voters standing as candidates without making a deposit, resulted in the rush of an anarchical number as candidates, preventing healthy rivalry on the one hand and making the polling task extremely arduous on the other. The rules relating to the matters of procedurepublished in the two volumes as Manuals are altogether incomplete and require a great deal of modification. A greater portion of the Dewan's speech was taken away by the distressing economic situation the State has been passing through in recent months owing to famine on the one side and floods on the other. The Government have doubtless been most anxious to do all they could to adopt relief measures. But it is equally doubtful if a good portion of the amounts granted for reliefs, barring loans, has not been spent on travelling allowances and batta of officials rather than the actual supply of reliefs. One would like to know whether the idea of removing cattle from affected areas to a central camp and organising marching camps has really proved successful. The services of the well-boring party are indeed appreciated greatly and the cry is that they want the services more and more, which is at present not sufficiently heard. The Dewan would be pleased to see that the *mungar* rains are likely to be favourable. We are not sure whether "a considerable number" of aided primary schools have been converted into Government Schools, and the pace at which the orders on the Education Memorandum are given effect to is none too satisfactory. There is no pronouncement as to how and to what extent orders on the Miller Committee Report have been given effect to, and we may wait to get one at the next session of the Assembly. One thing seems to become evident. There does not seem to be great desire to give full effect to the orders, while there is at any rate plenty of it to guarantee 50 percent to the forward class and to see that it is never diminished. We will have to deal with this question separately. The public welcome the announcement that the dispute over the Krishnarajasagara Dam has been finally settled in an amicable manner. It looks as though the Ironworks at Bhadrvathi were conceived at an inauspicious hour, and the latest mischance is the pheonomenal decline of the price of pig iron during the past six months. We will have of course to wait for more auspicious days to come and let us hope they will come soon. We are not disappointed to see the termination of the Agency agreement between the Mysore Government and the Tatas. It is a very clear and interesting account of the work of Government that the Dewan has given us, and it shows that we are not yet out of the woods. To clear out of them it requires a great deal of resourcefulness and statesmanship, and we hope that the reconstituted Assemblies will respond to the appeal made to them by His Highness the Maharaja at the inanguration ceremony and repeated by the Dewan at the Legislative Council.

H. H. THE JUNIOR RANI OF TRAVANCORE.

Her Highness the Junior Rani of Travancore, with her son Elaya Raja, the Heir apparent to the throne of Travancore arrived at Bangalore on the morning of the 5th April 1924 when they were met at the City Station, which was tastefully decorated, by Mr. M. G. Krishnaswami Rao, the Commissioner for Bangalore City, Mr. Mrs. K. Chandy Mr. and Mrs. K. Mathan Mrs. J. Chandrashekhara Iyer, Mr. & Mrs. H. Chennaya, Mr. D'Souza and Miss L. D, Souza. Mr. & Mrs. G. K. Govinda Pillai and several other ladies and gentlemen. Her Highness was garlanded by Mrs. Chandrashekara Iyer who was introduced to Her Highness by Mrs. Govinda Pillai and Eloya Raja by Miss. Chennaya Krishnamma. Her Highness is a cultured and enlightened Rani who takes a keen interest in the progress of her countrymen and is specially interested in the welfare of the women and children of India. Her Highness is personally attending to the training given to her son who is now 11 years old and who promises to be a very capable prince.

ಸಂಸ್ಕೃತವಾದ ಮೈಸೂರು ನ್ಯಾಯವಿಧಾಯಕ ಸಭಾಧಿವೇಶನವು.

ದಿವಾನರ ಭಾಷಣವು.

ನೂತನ ರಾಜಕೀಯ ಸಂಸ್ಕರಣದಿಂದ ರೂಪುಗೊಂಡಿರುವ ನ್ಯಾಯವಿಧಾಯಕ ಸಭೆಯ ಪ್ರಥಮಾಧಿವೇಶನವು ಈ ತಾ|| 4 ರಲ್ಲಿ ಮಂತ್ರಿವರ್ಯರಾದ ಮ|| ಬಾನರ್ಜಿಯವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆದಿತು. ಉಭಯ ಕೌನ್ಸಿಲರುಗಳೂ, ಔದ್ಯೋಗಿಕ ಮತ್ತು ಅನೌದ್ಯೋಗಿಕ ಮೆಂಬರುಗಳೂ ಸಭೆಗೆ ದಯಮಾಡಿಸಿದ್ದರು. ಇದುವರೆಗೆ ಸಭಾ ಮೆಂಬರುಗಳೆಲ್ಲರೂ ಅಧ್ಯಕ್ಷರ ಮುಂಗಡೆ ಅರ್ಧಚಂದ್ರಾಕೃತಿಯಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಈ ವೇಳೆ ಇರದೆ ಸರ್ಕಾರಿ ಅಧಿಕಾರಿಗಳಾದ ಮೆಂಬರುಗಳು ಅಧ್ಯಕ್ಷರ ಬಲಪಾರ್ಶ್ವದಲ್ಲೂ ಇತರ ಮೆಂಬರುಗಳು ಎಡಪಾರ್ಶ್ವದಲ್ಲೂ ಕುಳಿತುಕೊಳ್ಳುವಂತೆ ಸ್ಥಾನಗಳೇರ್ಪಡಿಸಲ್ಪಟ್ಟಿದ್ದುವು. ದಿವಾನರು ಸಭಾರಂಭಕಾಲದಲ್ಲಿ ಮೆಂಬರುಗಳ ಸುಸ್ವಾಗತವನ್ನು ಮಾಡಿ ಅನಂತರ ತಮ್ಮ ಭಾಷಣವನ್ನು ಮಾಡಿದರು. ಇದರಲ್ಲಿ ಸರ್ಕಾರದವರು ಕಳೆದ ಕೆಲ ತಿಂಗಳುಗಳಿಂದಲೂ ಮಾಡಿರುವ ಕಾರ್ಯಕಲಾಪಗಳು ವಿವರಿಸಲ್ಪಟ್ಟಿರುವುವು. ಅವುಗಳಲ್ಲೂ ಒಂದು ಕಡೆ ಕ್ಷಾಮಪ್ರಾಪ್ತಿಯಿಂದಲೂ ಮತ್ತೊಂದು ಕಡೆ ನದಿಯ ಪ್ರವಾಹದಿಂದಲೂ ಪ್ರಜೆಗಳಿಗೆ ಸಂಭವಿಸಿರುವ ನಷ್ಟಕಷ್ಟಗಳ ನಿವಾರಣೆಗಾಗಿ ಸರ್ಕಾರದವರು ಮಾಡಿರುವ ಪ್ರಯತ್ನ ವಿಶೇಷವು ಬಹಳವಾಗಿ ಪ್ರಸ್ತಾಪಿಸಲ್ಪಟ್ಟಿರುವುದು. ಪ್ರಜೆಗಳ ಕಷ್ಟನಿವಾರಣೆಗಾಗಿ ಸರ್ಕಾರದವರು ತಮ್ಮ ಕೈಲಾದೇರ್ಪಾಟನ್ನು ಮಾಡಲು ಕುತೂಹಲವುಳ್ಳವರಾಗಿರುವರೆನ್ನುವುದರಲ್ಲಿ ಸಂಶಯವಿಲ್ಲವು. ಆದರೆ ಜನರ ಕಷ್ಟನಿವಾರಣೆಯ ಕೆಲಸಗಳಿಗಾಗಿ ವಿನಿಯೋಗಿಸಲು ಗೊತ್ತು ಮಾಡಿರುವ ಹಣದಲ್ಲಿ ಬಹುಭಾಗವು ಅಧಿಕಾರಿಗಳ ಊಟವುಪಚಾರಗಳಿಗಾಗಿಯೂ ಪ್ರಯಾಣಕ್ಕಾಗಿಯೂ ವೆಚ್ಚವಾಗುವುದರಿಂದ, ಸರ್ಕಾರದವರ ಉದ್ದೇಶದಂತೆ ಜನರ ಕಷ್ಟ ನಿವಾರಣಾಕಾರ್ಯಗಳಿಗೆ ಸಾಕಾದಷ್ಟು ಹಣವು ವಿನಿಯೋಗವಾಗುತ್ತದೆಂಬುದು ತಾನೇ ಅನುಮಾನವು. ನೀರಿಗೂ ಮೇವಿಗೂ ಅಭಾವವಾಗಿರತಕ್ಕ ಸ್ಥಳಗಳಿಂದ ದನಗಳನ್ನು ನೀರೂ ಮೇವೂ ದೊರಕುವ ಸ್ಥಳಗಳಿಗೆ ತೆಗೆದುಕೊಂಡು ಹೋಗುವಂತೆ ಮಾಡಲ್ಪಟ್ಟಿರುವ ಏರ್ಪಾಟಿನಿಂದೆಷ್ಟು ಪ್ರಯೋಜನವಾಗಿರುತ್ತದೆಂಬುದು ತಿಳಿಯಲ್ಪಡತಕ್ಕದಾಗಿದೆ. ನೀರಿಲ್ಲದ ಸ್ಥಳಗಳಲ್ಲಿ ಬಾವಿಗಳನ್ನು ತೋಡಲು ನಿಯೋಜಿಸಲ್ಪಟ್ಟಿರುವ ಜನರ ಕಾರ್ಯಕ್ರಮವು ಬಹಳವಾಗಿ ಪ್ರಶಂಸಿಸಲ್ಪಟ್ಟಿರುವುದಲ್ಲದೆ ಅಂತಹ ಕೆಲಸಗಾರರು ಇನ್ನೂ ವಿಶೇಷವಾಗಿ ಅಪೇಕ್ಷಿಸಲ್ಪಟ್ಟಿರುತ್ತಾರೆ. ದಿವಾನರು ಹೇಳುವಂತೆ ಅನೇಕ ಏಡೆಡ್ ಸ್ಕೂಲುಗಳು ಸರ್ಕಾರಿಯ ಸ್ಕೂಲುಗಳಾಗಿ ಮಾರ್ಪಡಿಸಲ್ಪಟ್ಟಿರುವುದೆಂದು ಹೇಳಲಿಕ್ಕೆ ಬರುವುದಿಲ್ಲವು ಮತ್ತು ವಿದ್ಯಾಭ್ಯಾಸದ ಮೆಮೊರಾಂಡಮ್ಮಿನಲ್ಲಿ ಕಂಡಪ್ರಕಾರ ವಿದ್ಯಾಭಿವೃದ್ಧಿ ನಡಿಸಲ್ಪಡುತ್ತಿರುವುದು ಅಷ್ಟು ತೃಪ್ತಿಕರವಾಗಿಲ್ಲವು. ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲೆ ಸರ್ಕಾರದವರು ಮಾಡಿರುವ ಆರ್ಡರು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತರಲ್ಪಟ್ಟಿರುವ ದೆಂಬುದು ಈ ಅಧಿವೇಶನದಲ್ಲಿ ಹೇಳಲ್ಪಟ್ಟಿಲ್ಲವಾದರೂ, ಮುಂದ ಣ ಅಧಿವೇಶನದಲ್ಲಿ ತಿಳುಹಲ್ಪಡುವುದೆಂದು ನಿರೀಕ್ಷಿಸುತ್ತೇವೆ. ಈ ಆರ್ಡರಿನ ಪ್ರಕಾರ ಕಾರ್ಯಭಾಗವು ಸಮಗ್ರವಾಗಿ ನಡಿಸಲ್ಪಡು ಕುತೂಹಲವಿಲ್ಲದಿರುವುದಾದರೂ, ಮುಂಬರಿದ ಜನವರ್ಗದವ ಶೇಕಡ 50 ರಂತೆ ಕಾದಿಡಲ್ಪಟ್ಟಿರುವ ಸ್ಥಾನಗಳಿಗೆ ಚ್ಯುತಿಬಾ ದಂತೆ ಮಾತ್ರ ಎಚ್ಚರಿಕೆಯಿಂದ ನೋಡಿಕೊಳ್ಳಲ್ಪಡುತ್ತಿರುವುದು. ಬಹಳ ಕಾಲದಿಂದ ಕೃಷ್ಣರಾಜಸಾಗರ ಕಟ್ಟೆಯನ್ನು ಹೆಚ್ ಸುವ ವಿಚಾರದಲ್ಲಿ ನಮ್ಮ ಸರ್ಕಾರಕ್ಕೂ ಮದ್ರಾಸು ಸರ್ಕಾ ಕ್ಕೂ ನಡಿಯುತ್ತಿದ್ದ ವಿವಾದವು ಅನುಕೂಲವಾಗಿ ಇತ್ಯರ್ಥ ವಾಗಿರುವುದೆಂಬ ವಿಚಾರವು ವಿಶೇಷ ಸಂತೋಷಪ್ರದವಾಗಿ ಆದರೆ ಸಂಸ್ಥಾನದ ಬೊಕ್ಕಸದ ಹಣವನ್ನು ಬಹಳವಾಗಿ ನುಂ ರುವ ಮತ್ತು ಆದಾಯಕರವಲ್ಲವೆಂದೂಹಿಸಲ್ಪಟ್ಟಿರುವ ಭದ್ರಾ ತಿಯ ಕಬ್ಬಿಣದ ಕಾರ್ಖಾಲಯದಲ್ಲಾಗುವ ಕಬ್ಬಿಣಕ್ಕೆ ಷ್ಟು ಬೆಲೆಯು ದೊರೆಯದೆ ಅಪಾರ ನಷ್ಟಸಂಭವಿಸಿರುತ್ತದೆಂ ಕೇಳಿ ವಿಷಾದಿಸುತ್ತೇವೆ, ಅಲ್ಲದೆ ಮುಂದೆ ಒಳ್ಳೆಯಕಾಲ ಪ್ರಾಪ್ತವಾಗಿ ಆದಾಯಕರವಾಗಿ ಪರಿಣಮಿಸಲೆಂದು ಅಪೇಕ್ಷಿ ಸುತ್ತೇವೆ. ಈ ಕಾರ್ಖಾಲಯದ ಆಡಳಿತವು ಟಾಟಾಕಂಪನಿಯ ರಿಗೆ ಕೊಡಲ್ಪಟ್ಟಿದ್ದುದು ತಪ್ಪಿಹೋಗಿ ಸರ್ಕಾರದವರ ಮೇಲ್ ಚಾರಣೆಯಲ್ಲಿರುವ ಅಂಶವು ಮಾತ್ರ ಕೊಂಚ ಸಂತೋಷಪ್ರ ವಾಗಿದೆ. ನಮ್ಮ ಸಂಸ್ಥಾನಕ್ಕೆ ದುಡ್ಡಿನ ಕೊರತೆಯು ಇನ ಬಹಳವಾಗಿರುವುದೆಂಬುದು ದಿವಾನರ ಭಾಷಣದಿಂದ ವ್ಯಕ್ತ ಗುತ್ತದೆ. ಈ ಕೊರತೆಯ ನಿವಾರಣೆಗೆ ವಿಶೇಷ ಉತ್ಪತ್ತಿ ನೋಪಾಯವೂ, ರಾಜನೀತಿ ಪ್ರೌಢಿಮೆಯೂ ಅತ್ಯಾವಶ್ಯ ಶ್ರೀಮನ್ ಮಹಾರಾಜರವರು ಉಭಯಸಭೆಗಳ ಆರಂಭಕಾ ದಲ್ಲಿ ಅಪ್ಪಣೆ ಕೊಡಿಸಿರುವಂತೆಯೂ, ದಿವಾನರು ಈ ನ್ಯಾ ವಿಧಾಯಕಸಭಾರಂಭ ಭಾಷಣದಲ್ಲಿ ಕೋರಿರುವ ಪ್ರಕಾರ ಉಭಯಸಭೆಗಳು ಸರ್ಕಾರದವರೊಡನೆ ಸಹಕಾರಸಾನುಭೂ ಯಿಂದ ವರ್ತಿಸುವುವೆಂದು ನಿರೀಕ್ಷಿಸುತ್ತೇವೆ.

ಬೆಂಗಳೂರು ಗೋರಕ್ಷಕ ಮಂಡಲಿ.

ಮೈಸೂರು ಸಂಸ್ಥಾನದಲ್ಲಿ ಗೋವಧೆಯನ್ನೂ, ಗೋಜ ಯನ್ನೂ ನಿಲ್ಲಿಸಿ ಅನಾಥ ಗೋರಕ್ಷಣೆಯನ್ನು ಮಾಡ ತಕ್ಕೇರ್ಪಾಟನ್ನು ಮಾಡುವುದಕ್ಕಾಗಿ ಬೆಂಗಳೂರು ಪಟ್ಟ ಣ್ಣೇರ್ಪಟ್ಟಿರುವ ಗೋರಕ್ಷಕ ಮಂಡಲಿಯವರು ಕಳೆದ 6 ನೆಯ ಭಾನುವಾರದ ದಿವಸ ದೊಡ್ಡಣ್ಣನವರ ಸ್ಕೂಲಿ ರಾಜಸಭಾಭೂಷಣ ಮ|| ಕರ್ಪೂರ ಶ್ರೀನಿವಾಸರಾಯರ ಕ್ಷತೆಯಲ್ಲಿ ಒಂದು ಮಹಾಸಭೆಯನ್ನು ನಡೆಯಿಸಿದರು. ಸಭೆಗೆ ಮ|| ಗಳಾದ ದಿವಾನ್ ಬಹದ್ದೂರ್ ರಾಜಸಭಾಭೂ ಕೆ. ಪಿ. ಪುಟ್ಟಣ್ಣಸೆಟ್ಟರು, ಸಬ್‌ಜಡ್ಜಿ ಜಿ. ಆರ್. ಸತ್ಯಾ ಯರು, ರಾವ್‌ಬಹದ್ದೂರ್ ರಾಜಶಿಲ್ಪವಿಶಾರದ ಬಿ. ಸುಬ್ ಯರು, ಎಂ. ಜಂಗಯ್ಯಸೆಟ್ಟರು, ಮೈಸೂರು ಗೋರಕ್ ಸಭಾ ಸೆಕ್ರೆಟರಿ ಬಿ. ದೇವರಾಜಅರಸಿನವರು, ಅಜ್ಮೀರಿನ ಸರ ಖಜಾಂಚಿ ಸಾ ಚಂದಮಲ್ ಮಗನ್ಮಲ್‌ರವರು, ಬೆಂಗಳ ಗೋರಕ್ಷಕ ಮಂಡಲಿಯ ಅಧ್ಯಕ್ಷರಾದ ಸಾ ಚಮನ ದಂಗೋಜಿಯವರು, ಎಲ್. ಎ. ಪೌಲ್ವಾಲ್‌ರವರು, ಸಾ ನ್ಮಲ್‌ರವರು, ಸಾ ದೇಶಾಯಿ ಅಮರಚಂದ್ ಜೇಶರಾಜ ರು, ಅಡ್ವೋಕೇಟ್ ಸಿ. ಕೃಷ್ಣಮೂರ್ತಿಯವರು, ಯಜಮಾನ್ ಬಸಪ್ಪನವರು, ಯಜಮಾನ್ ಸಿದ್ಧಬಸವಸೆ ಮೊದಲಾಗಿ ಅನೇಕ ದೊಡ್ಡಮನುಷ್ಯರು ಸೇರಿ ಒಂದುಸ ರದವರೆಗೆ ಜನರು ಬಂದಿದ್ದರು. ಉತ್ತರ ಹಿಂದೂಸ ದಲ್ಲೂ ಇತರ ದೇಶೀಯಸಂಸ್ಥಾನಗಳಲ್ಲೂ ಗೋರಕ್ಷಣೆಗ ನಡೆದಿರುವ ಕಾರ್ಯಗಳನ್ನೂ, ಈ ಸಂಸ್ಥಾನದಲ್ಲಿ ಗೋರಕ ಗಾಗಿ ಮಾಡಲ್ಪಡಬೇಕಾಗಿರುವ ಕಾರ್ಯಕ್ರಮವನ್ನೂ ಕ ಅಧ್ಯಕ್ಷರು ಸಂಕ್ಷೇಪವಾಗಿ ಭಾಷಣಮಾಡಿದಮೇಲೆ, ಈ ರದಲ್ಲಿ ಈವರೆಗೆ ಸಂಸ್ಥಾನದ ನಾನಾಕಡೆಗಳಲ್ಲಿ ನಡಿಸಲ್ಪಟ್ಟ ಕಾರ್ಯಗಳನ್ನೂ, ಮಾಡಲ್ಪಟ್ಟಿರುವ ನಿರ್ಧಾರಗಳನ್ನೂ ಕೊಂಡ ವರದಿಯನ್ನು ಬೆಂಗಳೂರು ಗೋರಕ್ಷಕ ಮಂಡಲಿ ಮ್ಯಾನೇಜರ್ ಮ|| ಗುಂಡೂರಾವ್ ಖಾದ್ರಿಯವರು ಓದಿದ ತರುವಾಯ ಮುಂದೆಹೇಳುವ ನಿರ್ಧಾರಗಳು ಮ|| ಸಿ. ಮೂರ್ತಿಯವರಿಂದ ಸೂಚಿಸಲ್ಪಟ್ಟು ಸರ್ವರಿಂದಲೂ ಅನು ದಿಸಲ್ಪಟ್ಟುವು.—

1. ಹಾಲನ್ನು ಕರೆಯುವ ಹಸುಗಳೂ, ಬೇಸಾಯ ಗಳಿಗುಪಯುಕ್ತಗಳಾದ ದನಗಳೂ ವಧಿಸಲ್ಪಡುವುದ ಮೈಸೂರು ಸಂಸ್ಥಾನದಲ್ಲಿ ಈ ಪಶುವರ್ಗಕ್ಕುಂಟಾ ಮಹಾಶೋಚನೀಯ ಸ್ಥಿತಿಯನ್ನು ತಪ್ಪಿಸುವುದಕ್ಕಾಗಿ ಸ ನದಲ್ಲಿ ಗೋವಧೆಯು ನಡೆಯದಂತೆ ಒಂದು ಶಾಸನವನ್ನ ಸಬೇಕಾಗಿ ಶ್ರೀಮನ್ ಮಹಾರಾಜರವರ ಘನಸರ್ಕಾರದವ ಪ್ರಾರ್ಥಿಸಿಕೊಳ್ಳಬೇಕು.

2. ಸಂಸ್ಥಾನದ ಕೆಲವೆಡೆಗಳಲ್ಲಿ ಹಸುಗಳನ್ನು ಉ ದಕ್ಕೂ, ಬಂಡಿಯನ್ನೆಳೆಯುವುದಕ್ಕೂ ಉಪಯೋಗಿಸುವ ತಪ್ಪಿಸಲು ಗೋರಕ್ಷಕ ಮಂಡಲಿಯವರು ತಕ್ಕ ಕಾರ್ಯ ವನ್ನು ಜರುಗಿಸತಕ್ಕದು.

[illegible] ದನಗಳ ಕುಡಿಯುವ ನೀರಿಗೂ ತಿನ್ನುವ ಮೇವಿಗೂ [illegible]ವುಂಟಾಗುತ್ತಲೇ ಇರುವುದರಿಂದ ಸ್ಟೇಟ್ ಫಾರೆಸ್ಟುಗಳ ವಿಶೇಷ ಸೌಲಭ್ಯರೀತಿಯಿಂದ ದನಗಳನ್ನು ಬಿಟ್ಟು ಮೇಯಿಲು ಅವಕಾಶಕಲ್ಪಿಸಿಕೊಡಬೇಕಾಗಿ ಸರ್ಕಾರದವರನ್ನು ಪ್ರಾರ್ಥಿ[illegible]ತಕ್ಕದು.

[illegible] 1, 2 ಮತ್ತು 3 ನೆಯ ನಿರ್ಧಾರಗಳಂತೆ ಕೂಡಲೆ ಕಾರ್ಯಕ್ರಮಗಳನ್ನು ನಡಿಸಲು ಮತ್ತು ಗೋವಧಾನಿರೋಧಕ ಶಾಸನವನ್ನು ಮಾಡುವಂತೆ ಶ್ರೀಮನ್ ಮಹಾರಾಜರವರನ್ನು ಪ್ರಾರ್ಥಿಸಿಕೊಳ್ಳುವುದಕ್ಕಾಗಿ ಒಂದು ರಾಯಭಾರವು ಕೂಡಲೆ ಕಳುಹಲ್ಪಡತಕ್ಕದು.

ಈ ನಿರ್ಧಾರಗಳೋದಲ್ಪಟ್ಟ ಮೇಲೆ ಗೋಸಂರಕ್ಷಣೆಯ ವಿಚಾರವಾಗಿ ಕನ್ನಡ ಭಾಷೆಯಲ್ಲಿ ಉತ್ತಮ ವ್ಯಾಸಗಳನ್ನು ಬರೆದ ಮ|| ಗಳಾದ ಕೆ. ಕೃಷ್ಣಮಾಚಾರ್ಯ ಬಿ.ಎ., ಯವರಿಗೂ, [illegible]ಚೋಳಿ ಜಯಪೂರ್ಣಾಚಾರ್ಯರಿಗೂ ಭಂಗಾರದ ಮತ್ತು ಬೆಳ್ಳಿಯ ಪದಕಗಳು ಬಹುಮಾನಿಸಲ್ಪಟ್ಟು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಸ್ವದೇಶದ ವೃತ್ತಾಂತಗಳು.

ಶ್ರೀ ಶೃಂಗಗಿರಿ ಸ್ವಾಮಿಗಳು ರಾಜಧಾನಿಯನ್ನು ಬಿಟ್ಟು ಮುಂದಕ್ಕೆ ತೆರಳುವ ಕಾಲಕ್ಕೆ ಶ್ರೀಮನ್ ಮಹಾರಾಜರವರು ಒಂದುದಿನದ ಮಟ್ಟಿಗೆ ರಾಜಧಾನಿಗೆ ದಯಮಾಡಿಸುವವರಾಗಿರುವರೆಂದು ಕೇಳುತ್ತೇವೆ.

ರಾಜಧಾನಿಯ ಈದಿಗಾದಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣಾ ರೈಸ್ ಮಿಲ್ಲಿನವರು ಬಹು ಅಂದವಾಗಿ ಮಾಡಿಸಿರುವ ಈ ವರ್ಷದ ಕ್ಯಾಲೆಂಡರನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.

ತುಮಕೂರು ಡಿಸ್ಟ್ರಿಕ್ಟಿನಲ್ಲಿ ಬಡವರಾದ ನೇಗೆಯವರಿಗೆ ಬಡ್ಡಿಯಿಲ್ಲದೆ ಹಣವನ್ನು ಸಾಲಾಕೊಟ್ಟು ಸಾಹಾಯ್ಯಮಾಡುವುದಕ್ಕಾಗಿ ಪರಸ್ಪರಸಹಾಯ ಸಂಘಗಳ ರೆಜಿಸ್ಟ್ರಾರ ವಶಕ್ಕೆ ಸರ್ಕಾರದಿಂದ 5000 ರೂ. ಕೊಡಲ್ಪಟ್ಟಿರುತ್ತದೆ.

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ 53 ಏಡೆಡ್ ಸ್ಕೂಲುಗಳು ಸರ್ಕಾರಿ ಸ್ಕೂಲುಗಳಾಗಿ ಮಾಡಲ್ಪಡುವುವು. ಇದರಿಂದ ಸರ್ಕಾರಕ್ಕೆ ಮೊಟ್ಟಮೊದಲು 18349 ರೂ. ವೆಚ್ಚವಾಗುವುದಾಗಿಯೂ ಅನಂತರ ಪ್ರತಿವರ್ಷದಲ್ಲೂ 9999 ರೂ. ವ್ಯಯವಾಗುವುದಾಗಿಯೂ ನಿರೀಕ್ಷಿಸಲ್ಪಟ್ಟಿದೆ.

ಪ್ರಥಮ ರಾಜಕುವರಿಯವರು ಅಸ್ವಸ್ಥರಾಗಿ ಬೆಂಗಳೂರಿನಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವುದರಿಂದ, ಮಹಾಮಾತೃಶ್ರೀಯವರೂ, ಶ್ರೀಮನ್ಮಹಾರಾಜರವರೂ ಯುಗಾದಿಹಬ್ಬಕ್ಕು ಸಹ ರಾಜಧಾನಿಗೆ ಚಿತ್ತೈಸದೆ ಬೆಂಗಳೂರಿನಲ್ಲೇ ಇರುವರು. ರಾಜಕುವರಿಯವರ ದೇಹಸ್ಥಿತಿಯು ದೇಶೀಯವೈದ್ಯರ ಚಿಕಿತ್ಸೆಯಿಂದ ಗುಣಮುಖಕ್ಕೆ ಬಂದಿರುವುದಾಗಿ ತಿಳಿಯುತ್ತೇವೆ.

ಮೈಸೂರು ರೈಲ್ವೆ ಟ್ರಾಫಿಕ್ ಮ್ಯಾನೇಜರಾದ ಮಿ|| ಎ. [illegible] ಶಾರ್ಪರವರ ಉದ್ಯೋಗದವಧಿಯು 1924 ನೆಯ ಮೇ ತಾ|| 31ಕ್ಕೆ ಪೂರೈಸುವುದರಿಂದ ಇನ್ನೂ ಮೂರುವರ್ಷಕಾಲ ಹೆಚ್ಚಿಸಲ್ಪಟ್ಟಿರುತ್ತದೆ. ಇವರು ತಮ್ಮ ಕೆಲಸವನ್ನು ಬಹಳ ಶ್ರದ್ಧೆಯಿಂದಲೂ, ದಕ್ಷತೆಯಿಂದಲೂ ನಿರ್ವಹಿಸಿ ಪ್ರಯಾಣಿಕರ ಸೌಕರ್ಯವಿಚಾರದಲ್ಲಿ ವಿಶೇಷ ಗಮನಕೊಡುತ್ತಿರುವುದರಿಂದ ಇಂತಹ ಉಪಯುಕ್ತರಾದ ಅಧಿಕಾರಿಗಳ ಸಾಹಾಯ್ಯವನ್ನು ಕಳೆದುಕೊಳ್ಳದಂತಾದುದಕ್ಕಾಗಿ ಸಂತೋಷಿಸುತ್ತೇವೆ.

ಶ್ರೀ ಶೃಂಗಗಿರಿಸ್ವಾಮಿಗಳು ಈ ತಾ|| 19 ರ ಸಾಯಂಕಾಲ ರಾಜಧಾನಿಯಿಂದ ಹೊರಟು ಆರಾತ್ರಿ ಹಾಲನಹಳ್ಳಿ ಬಂಗಲೆಯಲ್ಲಿ ತಂಗಿದ್ದು ಅಲ್ಲಿಂದ ಮಾರನೆಯ ಬೆಳಿಗ್ಗೆ ತಿರುಮಕೂಡ್ಲು ನರಸೀಪುರಕ್ಕೆ ಪ್ರಯಾಣಮಾಡಿ ಅಲ್ಲಿ 1-2 ದಿನಗಳವರೆಗಿದ್ದು ಅಲ್ಲಿಂದ ನಂಜನಗೂಡಿಗೆ ಪ್ರಯಾಣಮಾಡಿ ಅಲ್ಲಿ ಒಂದು ಮಂಡಲಕಾಲದವರೆಗೆ ಶ್ರೀ ಶ್ರೀಕಂಠೇಶ್ವರಸ್ವಾಮಿಯ ಸೇವೆಯನ್ನು ಮಾಡಿ ಅಲ್ಲಿಂದ ಕೋಣನೂರು ಚಾಮರಾಜನಗರದಮೇಲೆ ಕಣಿವೆಯ ಕೆಳಗಣ ಪ್ರಾಂತಕ್ಕೆ ದಯಮಾಡಿಸುವುದಾಗಿ ತಿಳಿಯಬರುತ್ತದೆ.

ಮೈಸೂರು ವಿಶ್ವವಿದ್ಯಾಲಯದಿಂದ ನಡಿಸಲ್ಪಟ್ಟ ಎಂಟ್ರೆನ್ಸ್ ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿಗಳಿಗೆ ಈ ತಾ|| 26 ರಲ್ಲಿ ಬೆಂಗಳೂರು ಮತ್ತು ಮೈಸೂರುಗಳಲ್ಲಿ ಮಾತ್ರ ಎಕನಾಮಿಕ್ಸ್ ಮತ್ತು ಕೆಮಿಸ್ಟ್ರಿ ಭಾಗಗಳಲ್ಲಿ ಪರೀಕ್ಷೆಯು ನಡಿಸಲ್ಪ[illegible]ದಾಗಿಯೂ, ಇದಕ್ಕಾಗಿ ಅಭ್ಯರ್ಥಿಗಳು ಪ್ರವೇಶಧನವನ್ನು [illegible]ಬೇಕಾದುದಿಲ್ಲವೆಂದೂ, ತಮ್ಮ ಹಿಂದಣ ಹಾಲ್ ಟಿಕೆ[illegible]ಗಲಿ ಹೆಡ್ಮಾಸ್ಟರುಗಳ ಸರ್ಟಿಫಿಕೇಟನ್ನಾಗಲಿ ತೋರಿಸಿ ಪರೀಕ್ಷೆಗೆ ಕುಳಿತುಕೊಳ್ಳಬಹುದೆಂದೂ ವಿಶ್ವವಿದ್ಯಾಲಯದ ರೆಜಿಸ್ಟ್ರಾರರವರು ತಿಳಿಸಿರುತ್ತಾರೆ.

ರಾಜಧಾನಿಯ ವಿದ್ಯುದ್ದೀಪಾಲಯದ ಕೆಲಸಗಾರನಾದ [illegible]ಣಿಗರಜಾತಿಯ ಲಕ್ಕಸೆಟ್ಟಿ ಎಂಬ 30 ವರ್ಷ ವಯಸ್ಸಿ[illegible] ಕಳೆದ ಗುರುವಾರ ಮಧ್ಯಾಹ್ನ ರಾಜಧಾನಿಯ ಲಕ್ಷ್ಮೀ[illegible] ದೀಪಸ್ತಂಭದಮೇಲೆ ಹತ್ತಿ ಕೆಲಸಮಾಡುತ್ತಿರುವಾಗ್ಗೆ [illegible] ತಂತಿಗಳಿಗೆ ಅವನ ಶರೀರವು ಸೋಂಕಿ ವಿದ್ಯುಚ್ಛಕ್ತಿಯ [illegible]ಗದಿಂದ ಹೊಟ್ಟೆಯು ಸುಟ್ಟುಹೋಗಿ ಮೃತನಾದನು. [illegible] ತಂತಿಗಳಿಗೆ ತಗುಲಿಕೊಂಡು ನೇತಾಡುತ್ತಿರುವಾಗ್ಗೆ [illegible] ಯಾತರಿಂದಲಾದರು ತಿವಿದು ಕೆಳಕ್ಕೆ ನೂಕಿಬಿಡಿ[illegible]ಕೊಳ್ಳುತ್ತೇನೆಂದು ಸಮೀಪದಲ್ಲಿದ್ದ ಜನರನ್ನು ಪ್ರಾರ್ಥಿಸಿ[illegible]ದಾಗ್ಯೂ ಅವರು ಹಾಗೆಮಾಡಲಿಲ್ಲವಾಗಿ ಮೃತನಾದನಂತೆ.

ರಾಜಧಾನಿಯಲ್ಲಿ ಆಚೆವಾರ ಮಳೆಯಾಗಿದ್ದು ಮೊನ್ನೆಯ ದಿನ ರಾತ್ರಿ ತಕ್ಕಮಟ್ಟಿಗೆ ಮಳೆಯಾಯಿತು. ಈ ಮಳೆಗಳಿಂದ ಸಂಪೂರ್ಣವಾಗಿ ಒಣಗಿಹೋಗಿದ್ದ ಕಾರಂಜಿಕೆರೆಗೂ ಗೊಬ್ಬಳಿಕಟ್ಟೆಗೂ ಕೊಂಚನೀರು ಬಂದಿರುತ್ತದೆ. ಕಪಡಿಜಾತ್ರೆಗೆ ಹೋಗಿದ್ದ ಕೆಲ ಅರಸುಮಕ್ಕಳಿಗೆ ವಾಂತಿಭೇದಿರೋಗವು ಪ್ರಾಪ್ತವಾದ್ದು ವೈದ್ಯರ ಚಿಕಿತ್ಸೆಯಿಂದ ಗುಣವಾಗಿರುತ್ತದೆಂದು ತಿಳುಹಲು ಹರ್ಷವಾಗುತ್ತದೆ. ಇತರ ಕಡೆಗಳಲ್ಲೂ ತಕ್ಕಮಟ್ಟಿಗೆ ಮಳೆಯಾಗಿ ಜೋಳದ ಬಿತ್ತನೆಯ ಕೆಲಸವು ನಡೆದಿರುವುದಾಗಿ ಕೇಳುತ್ತೇವೆ. ವರ್ಷಾದರಂಭದಲ್ಲಿಯೇ ಮಳೆಯಾಗಲುಪಕ್ರಮಿಸಿರುವುದರಿಂದ ಮುಂಗಾರುಮಳೆಯು ಅನುಕೂಲವಾಗಿ ಆಗಬಹುದೆಂದು ತೋರುತ್ತದೆ.

ಮೈಸೂರು ಸೆಷನ್ಸಿನಲ್ಲಿ ನಡಿಯುತ್ತಿದ್ದ ನಗರ್ಲೆಯ ಕೊಲೆಯ ವಿಚಾರಣೆಯು ಆಚೆ ಶನಿವಾರದದಿವಸ ಮುಗಿದು ಅಸೆಸರುಗಳ ಏಕಾಭಿಪ್ರಾಯದಿಂದ 1 ನೆಯ ಮತ್ತು 2ನೆಯ ಅಪರಾಧಿಗಳು ಕೊಲೆಮಾಡಲು ಸಹಾಯಕರಾಗಿದ್ದರೆಂದೂ 3 ನೆಯ ಅಪರಾಧಿಯು ಕೊಲೆಮಾಡಿದನೆಂದೂ ಸೆಷನ್ಸು ಜಡ್ಜರು ನಿರ್ಧರಿಸಿ ಕಳೆದ ಸೋಮವಾರದ ದಿವಸ ಈ ಮೂರುಜನ ಅಪರಾಧಿಗಳಿಗೂ ಮರಣದಂಡನೆಯನ್ನು ವಿಧಿಸಿದರು. ಇದರಮೇಲೆ ಚೀಫ್‌ಕೋರ್ಟಿಗೆ ಅಪೀಲುಮಾಡಲ್ಪಡುವುದಾಗಿ ವದಂತಿಯಿದೆ. ಈ ಕೊಲೆಯ ಸಂಗತಿಯನ್ನು ಕಂಡುಹಿಡಿದು ಸ್ಥಿರಪಡಿಸುವಲ್ಲಿ ಡಿಸ್ಟ್ರಿಕ್ಟ್ ಪೋಲೀಸು ಸೂಪರಿಂಟೆಂಡೆಂಟರು ಸ್ವತಃ ಬಹಳ ಶ್ರಮಪಟ್ಟಿರುವುದಾಗಿ ಕೇಳುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರೂ, ಟ್ರಸ್ಟ್ ಬೋರ್ಡಿನ ಚೇರ್ಮನ್ನರೂ ಆಗಿದ್ದ ದಿವಾನ್ ಬಹದ್ದೂರ್ ಶ್ರೀಕಂಠೇಶ್ವರ ಅಯ್ಯರ್‌ರವರ ನಿರಂಕುಶಾಧಿಕಾರವು ಕಳೆದ ಮಾರ್ಚಿ ತಾ|| 31ಕ್ಕೆ ಸಮಾಪ್ತಿಯಾಗಿ, ಹಾಸನದ ಡಿ|| ಡೆಪ್ಯುಟೀಕಮಿಷನರಾಗಿದ್ದು ನಿವೃತ್ತಿಯನ್ನು ಹೊಂದಿದ ಮ|| ಕೆ. ಮೈಲಾರಿರಾವ್, ಬಿ.ಎ., ಬಿ.ಎಲ್., ರವರು ಕೌನ್ಸಿಲಿನ ಪ್ರೆಸಿಡೆಂಟ್ ಮತ್ತು ಟ್ರಸ್ಟ್‌ಬೋರ್ಡಿನ ಚೇರ್ಮನ್ ಉದ್ಯೋಗಗಳನ್ನು ಈ ಏಪ್ರಿಲ್ ತಾ|| 1 ರಿಂದ ವಹಿಸಿಕೊಂಡು ಉಭಯ ಆಫೀಸುಗಳ ಲೆಖ್ಖಪತ್ರಗಳನ್ನೂ, ಕೆಲಸಗಾರರ ನಡೆನುಡಿಗಳನ್ನೂ ಬಹಳ ಎಚ್ಚರಿಕೆಯಿಂದ ವಿಮರ್ಶಿಸುತ ಮನದಟ್ಟುಮಾಡಿಕೊಳ್ಳುತ್ತಿರುವುದಾಗಿಯೂ, ಮೊಹಲ್ಲಾಗಳಮೇಲೆ ಹೊರಟು ಮಾರ್ಗಗಳ ಸ್ಥಿತಿಯನ್ನೂ ಜನಾರೋಗ್ಯದೇರ್ಪಾಟನ್ನೂ ಪರೀಕ್ಷಿಸುತ್ತಿರುವುದಾಗಿಯೂ ಕೇಳುತ್ತೇವೆ. ಇವರು ರಾಜಧಾನಿಯಲ್ಲಿ ಹುಟ್ಟಿಬೆಳೆದು ವಿದ್ಯಾವ್ಯಾಸಂಗಮಾಡಿ ಸರ್ಕಾರಿಯುದ್ಯೋಗಕ್ಕೆ ಸೇರಿ ನಿಸ್ಪೃಹತೆಯಿಂದಲೂ, ದಕ್ಷತೆಯಿಂದಲೂ ಕೆಲಸಮಾಡಿ ಸರ್ಕಾರದ ಮೆಚ್ಚುಗೆಯನ್ನೂ ಪ್ರಜಾನುರಾಗವನ್ನೂ ಸಂಪಾದಿಸಿಕೊಂಡು ತಮ್ಮ ಜನ್ಮಸ್ಥಲದಲ್ಲಿ ಸೋದರಪ್ರಜಾಸೇವೆಯನ್ನು ಉಚಿತವಾಗಿಮಾಡಲು ಕೈಕೊಂಡಿರುತ್ತಾರಾದುದರಿಂದ, ಇವರ ಕಾಲದಲ್ಲಿ ಸಾಂಕುಶಾಧಿಕಾರವೇರ್ಪಟ್ಟು ರೇಟುಪೇಯರುಗಳಿಗೆ ಅನುಕೂಲವಾದ ಕಾರ್ಯಗಳು ನಡಿಸಲ್ಪಡುವುವೆಂದು ನಿರೀಕ್ಷಿಸಲ್ಪಟ್ಟಿವೆ.

ರಾಜಧಾನಿಗೆ ದಯಮಾಡಿಸಿ ಶಿಷ್ಯಮಂಡಲಿಯಿಂದ ಪಾದಪೂಜೆ ಮತ್ತು ಭಿಕ್ಷೆಯನ್ನು ಸ್ವೀಕರಿಸುತ್ತಿರುವ ಶೃಂಗಗಿರಿ ಶ್ರೀ ಚಂದ್ರಶೇಖರ ಭಾರತೀಸ್ವಾಮಿಯವರ ಗುರುಗಳಾದ ಕೈ|| ಶ್ರೀ ಸಚ್ಚಿದಾನಂದಶಿವಾಭಿನವ ನೃಸಿಂಹಭಾರತಿ ಸ್ವಾಮಿಗಳು ರಾಜಧಾನಿಯ ದೊಡ್ಡಕೆರೆ ಕೆಳಗೆ ಉತ್ತರಾದಿಮಠದ ಪೂರ್ವಕ್ಕೆ ಮತ್ತು ಪಶುವೈದ್ಯಶಾಲೆಯ ದಕ್ಷಿಣಕ್ಕೆ ಇರುವ ಪ್ರದೇಶದಲ್ಲಿ ಜನ್ಮಿಸಿದ್ದರಾದುದರಿಂದ ಆ ಸ್ಥಲದ ಜ್ಞಾಪನಾರ್ಥವಾಗಿ ಶ್ರೀಗಳು ಒಂದು ಶಿಲಾಮಂಟಪವನ್ನು ಕಟ್ಟಿಸಿ ಅದರಲ್ಲಿ ತಮ್ಮ ಗುರುಗಳ ಅಮೃತಶಿಲಾಮೂರ್ತಿಯನ್ನು ಕಳೆದ ತಾ|| 31 ರಲ್ಲಿ ವಿಧ್ಯುಕ್ತವಾಗಿ ಪ್ರತಿಷ್ಠಾಪಿಸಿದರು. ಈ ಸಮಾರಂಭಕ್ಕೆ ಶ್ರೀಮನ್ ಮಹಾರಾಜರವರಾದಿಯಾಗಿ ಪುರಪ್ರಮುಖರು ಆಹ್ವಾನಿಸಲ್ಪಟ್ಟಿದ್ದರು. ಶಿಲಾಪ್ರತಿಷ್ಠಾಪನಕಾರ್ಯವು ಮುಗಿದಮೇಲೆ ಶ್ರೀಗಳು ದಿವಾನ್ ಬಹದ್ದೂರ್ ಸಿ. ಶ್ರೀಕಂಠೇಶ್ವರಅಯ್ಯರ್‌ರವರಿಗೆ ಭಂಗಾರದ ತಳಕುಗಳಿಂದ ಕೂಡಿದ ರುದ್ರಾಕ್ಷಿಮಾಲೆಯನ್ನು ಆಶೀರ್ವದಿಸಿ "ಗುರುಭಕ್ತಕೇಸರಿ" ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು. ಆದಿನ ಮಧ್ಯಾಹ್ನದಿಂದ 3 ದಿನಗಳವರೆಗೆ ಸಾವಿರಾರು ಬ್ರಾಹ್ಮಣರಿಗೆ ಸಂತರ್ಪಣೆಯು ನಡಿಸಲ್ಪಟ್ಟಿತು. ಕೈ|| ಶ್ರೀಗಳವರ ಶಿಲಾಮೂರ್ತಿ ಪ್ರತಿಷ್ಠೆಮಾಡಲ್ಪಟ್ಟ ಸ್ಥಳವನ್ನು ಬಹಳ ಚಾಕಚಕ್ಯದಿಂದ ಸಂಪಾದಿಸಿ ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ ತಿಂಗಳುಗಟ್ಟಲೆ ಪ್ರಯಾಸಪಟ್ಟರೂ ಸರ್ಕಾರದವರಿಗೂ ಸಾಧ್ಯವಲ್ಲದಿರುವ ಸ್ಥಳದ ಅಚ್ಚುಕಟ್ಟು, ದೇವಸ್ಥಾನ ನಿರ್ಮಾಣ, ಉದ್ಯಾನ ವಿದ್ಯುದ್ದೀಪಾದಿ ಅಲಂಕಾರ ಮೊದಲಾದ ಕಾರ್ಯಗಳನ್ನು ಉಪಾಯಾಂತರದಿಂದ ಮತ್ತು ತಮಗಿದ್ದ ಅಧಿಕಾರಗಳ ದರ್ಪದಿಂದ ಲೀಲಾಜಾಲವಾಗಿ ನೆರವೇರಿಸಿದ ಮ|| ಶ್ರೀಕಂಠೇಶ್ವರ ಅಯ್ಯರ್‌ರವರ ಸಾಹಸಕ್ಕೆ ಅವರಿಗೆ ಲಭ್ಯವಾಗಿರುವ ಗುರುಭಕ್ತಕೇಸರಿ ಎಂಬ ಪ್ರಶಸ್ತಿಯ ಬಹುಮಾನವು ದೊಡ್ಡದೇನೂ ಅಲ್ಲವು.

ರಾಜಧಾನಿಯಲ್ಲಿ ಎಕ್ಸೈಜ್ ಕಂಟ್ರಾಕ್ಟರಾಗಿದ್ದ ಮ|| ಎಂ. ರಂಗರಾಯರು ತಮ್ಮ ಸ್ನೇಹಿತರುಗಳಾದ ಮ|| ಜಿ. ಎಸ್. ಸುಬ್ಬರಾಯರು, ಮ|| ಬಿ. ನರಸಿಂಹಮೂರ್ತಿಯವರು ಮತ್ತು ಮ|| ಎಚ್. ಆರ್. ನಾರಾಯಣರಾಯರು ಇವರುಗಳೊಡನೆ ರಾಜಧಾನಿಯ ಲಷ್ಕರ್‌ಮೊಹಲ್ಲಾ ಗರುಡೀಕೇರಿಯಲ್ಲಿರುವ ಮ|| ಮುಲ್ತಾನಿ ಸವಾಲ್ದಾಸ್ ಸೇಟರ ಆಹ್ವಾನದ ಮೇಲೆ ಅವರಮನೆಗೆ ಕಳೆದ ತಾ|| 30ರ ರಾತ್ರಿ 12 ಗಂಟೆಯ ವೇಳೆಯಲ್ಲಿ ಹೋಗಿರುವಾಗ್ಗೆ ಪೋಗುಮಲ್ ಮತ್ತು ಸವಾಲ್ದಾಸ್ ಸೇಟ್ ಈ ಉಭಯರೂ ರಂಗರಾಯರು ತಮ್ಮಿಂದ ಸಾಲಾತೆಗೆದುಕೊಂಡಿದ್ದ ಹಣವನ್ನು ಕೊಡಬೇಕೆಂದು ಕೇಳಿ ರಾಯರು ಆ ಸಮಯದಲ್ಲಿ ತಮ್ಮಲ್ಲಿ ಹಣವಿಲ್ಲವೆಂದು ಹೇಳಿದರೂ ಕೇಳದೆ ಬಲವಂತಮಾಡಲುಪಕ್ರಮಿಸಲು ರಾಯರು ತಾವು ಕಿವಿಯಲ್ಲಿಟ್ಟಿದ್ದ ವಜ್ರದ ಕಡುಕುಗಳನ್ನೂ ಕೈಯಲ್ಲಿ ಕಟ್ಟಿದ್ದ ಭಂಗಾರದ ಗಡಿಯಾರವನ್ನೂ ಕಳೆದು ಕೊಟ್ಟುಬಿಟ್ಟರು. ಇವರ ಸ್ನೇಹಿತರುಗಳು ಮನೆಯ ಹೆಬ್ಬಾಗಲು ಭದ್ರಪಡಿಸಲ್ಪಟ್ಟಿದ್ದುದರಿಂದ ಹಿತ್ತಲಬಾಗಲಿನಿಂದ ತಪ್ಪಿಸಿಕೊಂಡು ಹೊರಗೆಬಂದು ಮ|| ರಂಗರಾಯರ ಬಂಗಲೆಯಲ್ಲಿ ವಾಸವಾಗಿದ್ದ ಅಡ್ವೋಕೇಟ್ ಮ|| ಎಂ. ವಿ. ವೆಂಕಟರಾಯರಿಗೆ ಈ ವಿಷಯವನ್ನು ತಿಳಿಸಲು ಅವರು ಆ ಕೂಡಲೆ ಸವಾಲ್ದಾಸ್ ಸೇಟರ ಮನೆಗೆಬಂದು ಬಾಗಿಲನ್ನು ತೆಗಿಸಿ ಒಳಗೆಹೋಗಿ ರಾಯರಿಂದ ನಡೆದ ಸಂಗತಿಯನ್ನು ತಿಳಿದುಕೊಂಡು ಅವರೊಡನೆ ಲಷ್ಕರ್ ಪೋಲೀಸು ಠಾಣಾಕ್ಕೆಹೋಗಿ ನಡೆದ ಸಂಗತಿಯೆಲ್ಲವನ್ನೂ ಡೈರಿಯಲ್ಲಿ ಬರೆಯಿಸಿ ಬಂದರು. ಮಾರನೆಯ ದಿನ ಪೋಲೀಸ್ ಇನ್ಸ್ಪೆಕ್ಟರು ಮ|| ಕೃಷ್ಣಯಂಗಾರರು ಎರಡನೆಯ ಅಪರಾಧಿಯಿಂದ ನಗಗಳನ್ನು ವಹಿಸಿಕೊಂಡು ಸಾವಾಲ್ದಾಸ್ ಸೇಟ್ ಪೋಗುಮಲ್‌ಸೇಟ್ ಮತ್ತು ಸವಾಲ್ದಾಸ್‌ಸೇಟರ ಇಬ್ಬರು ಆಳುಗಳನ್ನು ಸೆರೆಹಿಡಿದು ಸಿಟಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದುದರ ಮೇಲೆ ಕಳೆದ ಸೋಮವಾರ ಮಂಗಳವಾರಗಳಲ್ಲಿ ಮ|| ರಂಗರಾಯರ ಸಾಕ್ಷಿ ವಿಚಾರಣೆಯು ನಡೆದು ಉಳಿದವರ ವಿಚಾರಣೆಗಾಗಿ ಈ 18ಕ್ಕೆ ಹಿಯರಂಗು ಇಡಲ್ಪಟ್ಟಿರುತ್ತದೆ.

ಭರತಖಂಡದ ವೃತ್ತಾಂತಗಳು.

ಜಯತೋಗೆ ಕಳೆದ ಸೋಮವಾರ ಹೋದ 500 ಅಕಾಲಿಜನರು ಸೆರೆಹಿಡಿಯಲ್ಪಟ್ಟರು.

ಗುಜರಾತಿಗೆ ಸೇರಿದ ಪೋರಿಬಂದರ್ ಎಂಬ ರೇವೆ ಪಟ್ಟಣದಲ್ಲಿ ಎರಡು ಕೊಂಬುಗಳ ಸಮೇತ ಒಂದು ಹೆಣ್ಣುಮಗುವು ಜನಿಸಿರುವುದಂತೆ !

ಕುಂಭಕೋಣದಲ್ಲಿ ಒಬ್ಬ ವೈಶ್ಯ ಯುವಕನು ದೇವರ ರಥಕ್ಕೆ ಸಿಕ್ಕಿ ಹತಳಾಗುತ್ತಿದ್ದ ಹೆಂಗುಸನ್ನು ಬದುಕಿಸುವ ಪ್ರಯತ್ನದಲ್ಲಿ ತಾನೇ ಪ್ರಾಣಾಪಾಯವನ್ನು ಹೊಂದಿ ಮೃತನಾದನು.

ಬಳ್ಳಾರಿಯಲ್ಲಿ ಕುಡಿಯಲ್ಲಿಕ್ಕೆ ನೀರಿಲ್ಲದೆ ಜನಗಳ ಮತ್ತು ದನಕರುಗಳ ಹಾಹಾಕಾರವು ವಿಶೇಷವಾಗಿದೆ. ಬಿಸಿಲಿನ ತಾಪದಿಂದ ಸಿಡಿಬು ವಾಂತಿಭೇದಿ ರೋಗಗಳು ಪ್ರಬಲಿಸಿ ಜನರು ಬಹಳವಾಗಿ ಸಾಯುತ್ತಿರುವರು.

ನೀರಿಗೆ ಉಪ್ಪನ್ನು ಹಾಕಿ ಸೇವಿಸುವುದರಿಂದ ಜನರ ಮದ್ಯಸೇವನೆಯ ಮತ್ತು ಧೂಮಪಾನದ ದುರಭ್ಯಾಸವೂ ಇತರ ರೋಗಗಳೂ ನಿವಾರಣೆಯಾಗುವುವೆಂದು ಲವಣಾನಂದ ಜಿಸ್ವಾಮಿಯವರು ಸ್ವಾನುಭವದಿಂದ ತಿಳಿಸಿರುತ್ತಾರೆ.

ಭರತಖಂಡದ ಎಲ್ಲಾಸ್ಟೇಟ್ ರೈಲ್ವೆಗಳಿಂದಲೂ ಕಳೆದ ಮಾರ್ಚಿ ತಾ|| 22ಕ್ಕೆ ಕಡೆಯಾದ ಒಂದು ವಾರದಲ್ಲಿ 1 ಕೋಟಿ 90 ಲಕ್ಷ ರೂ. ಉತ್ಪನ್ನವಾಗಿರುವುದಾಗಿಯೂ ಕಳೆದ ವರ್ಷ ಇದೇ ಕಾಲದಲ್ಲಿ 2 ಕೋಟಿ ರೂ. ಉತ್ಪನ್ನವಾಗಿದ್ದುದಾಗಿಯೂ ಪ್ರಕಟವಾಗಿದೆ.

ಬರೋಡಾ ಪ್ರಭುತ್ವದವರು ತಮ್ಮ ಸಂಸ್ಥಾನದಲ್ಲಿ ಮದ್ಯಸೇವನೆಯ ದುರ್ವ್ಯಸನವನ್ನು ಕಡಿಮೆಮಾಡುವ ಉದ್ದೇಶದಿಂದ ಪ್ರಸಕ್ತ ವರ್ಷದಲ್ಲಿ 23 ಮದ್ಯದ ಅಂಗಡಿಗಳನ್ನು ಕಡಿಮೆ ಮಾಡುವುದಾಗಿ ಪ್ರಕಟಿಸಿರುತ್ತಾರೆ. ಇಂತಹ ದುರ್ವ್ಯಸನ ನಿವಾರಣಾ ಪ್ರಯತ್ನವು ಈ ಮೈಸೂರು ಸಂಸ್ಥಾನದಲ್ಲೂ ಮಾಡಲ್ಪಡಬಾರದೆ ?

ಉತ್ತರದೇಶದಲ್ಲಿ ಹಿಂದೂ ಮಹಮ್ಮದೀಯರಿಗುಂಟಾಗಿರುವ ಮನಸ್ತಾಪವನ್ನು ಬಗೆಹರಿಸಿ ಪರಸ್ಪರ ಪ್ರೀತಿವಿಶ್ವಾಸವನ್ನುಂಟುಮಾಡುವುದಕ್ಕಾಗಿ ಯಾವದ್ಭಾರತ ಹಿಂದೂ ಮಹಮ್ಮದೀಯ ಮಹಾಸಭೆಯು ಈ ತಾ|| 23 ರಲ್ಲಿ ಬೊಂಬಾಯಿನಲ್ಲಿ ನಡಿಸಲ್ಪಡಲು ನಿರ್ಧರಿಸಲ್ಪಟ್ಟು ಭರತಖಂಡದ ಮುಖಂಡರಿಗೆಲ್ಲಾ ಆಹ್ವಾನಪತ್ರಿಕೆಗಳು ಕಳುಹಲ್ಪಟ್ಟಿರುತ್ತವೆ.

ರಾಮನಾಡಿನ ರಾಜರಮೇಲೆ ಚೊಕ್ಕಲಿಂಗಸೆಟ್ಟರು ಮಾನನಷ್ಟಕ್ಕಾಗಿ 2 ಲಕ್ಷ ರೂಪಾಯಿಗಳು ಬರಬೇಕೆಂದು ದಾವಾಮಾಡಿ ವಿವಾದವು ನಡಿಯುತ್ತಿರುವಾಗ್ಗೆ ಮೃತರಾಗಲು, ಅವರ ಮಗ ತನ್ನ ತಂದೆಯ ಸ್ಥಾನದಲ್ಲಿ ತನ್ನನ್ನು ವಾದಿಯಾಗಿ ಸೇರಿಸಬೇಕೆಂದು ಅರ್ಜಿ ಕೊಟ್ಟಿದ್ದನು. ಅದರ ಮೇಲೆ ವಿಚಾರಣೆಯು ನಡೆದು ಮಾನನಷ್ಟದ ದ್ರವ್ಯವನ್ನು ಒರಮಾಡಿಕೊಳ್ಳಲು ಮಾಡಲ್ಪಟ್ಟ ವಿವಾದಕ್ಕೆ ವಾದಿಯ ಮಗನು ಹಕ್ಕುದಾರನಾಗಿರುವುದಿಲ್ಲವೆಂದು ತೀರ್ಮಾನಿಸಲ್ಪಟ್ಟಿತು.

ನಭಾ ಸಂಸ್ಥಾನದ ಮಹಾರಾಜರವರು ಪದಭ್ರಷ್ಟರಾದಮೇಲೆ ಅವರ ತಾಯಿಯವರಿಗೆ ಅಧಿಕಾರಗಳಿಂದ ಕೊಡಲ್ಪಡುತ್ತಿದ್ದ ಮಾಸಾಶನವು ಕಡಿಮೆ ಮಾಡಲ್ಪಟ್ಟಿತ್ತು. ಇದು ಅವರ ಊಟವುಪಚಾರಾದಿಗಳಿಗೆ ಸಹ ಸಾಕಾಗುವುದಿಲ್ಲವೆಂದು ದೂರುಮಾಡಲ್ಪಟ್ಟಿದ್ದುದರಮೇಲೆ ಮಹಾರಾಜರವರು ಸಂಸ್ಥಾನದಿಂದ ಹೊರಗಡೆಗೆ ಕಳುಹಲ್ಪಟ್ಟನಂತರ ಅವರ ತಾಯಿಯವರಿಗೆ ಸಲ್ಲುತ್ತಿರುವ ಮಾಸಾಶನವು ಹೆಚ್ಚಿಸಲ್ಪಟ್ಟಿರುವುದಾಗಿ ಶಿರೋಮಣಿ ಗುರುದ್ವಾರಪ್ರಬಂಧಕ ಸಂಘದವರಿಂದ ಪ್ರಕಟಿಸಲ್ಪಟ್ಟಿದೆ.

ಜೋಳದಕಡ್ಡಿಯ ಸೋಗನ್ನು ತುಂಡುತುಂಡಾಗಿ ಕತ್ತರಿಸಿ ಸೇಲದಲ್ಲಿ ಹೂಳಿಡುವುದರಿಂದ ಸೋಗು ಒಣಗಿ ವರಟಾಗದೆ ಯಾವಾಗಲೂ ಮೃದುವಾಗಿರುವುದರಿಂದ ದನಗಳ ಮೇವಿಗೆ ಅಭಾವವಾದ ಕಾಲದಲ್ಲಿ ಅದು ಒಳ್ಳೆಯ ಮೇವಾಗಿ

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಏಪ್ರಿಲ್ ತಾ|| ೧೩ ನೆಯ ಭಾನುವಾರ.

THE NEW COUNCIL MEETING.

THE DEWAN'S SPEECH.

The reconstituted Legislative Council of Mysore met on the 4th April 1924 at the Council Chamber, Public Offices, Bangalore, with its new arrangement of seats dividing the Treasury Bench from the non-official members. The Dewan-President in his opening speech welcomed• the members and placed before them an account of the activities of the Government during the past few months. It is no doubt commendable that the Government have been able to keep to their time-table in the matter of elections. But the same cannot be stated of the arrangements, a matter which the Dewan was himself conscious. There is a good deal of jobbery in the preparation of the voters' lists. Polling stations are far too few taking the number of voters concerned. The safeguards against the interference of polling officers are not sufficient in the taluks, as the candidates have no opportunities of keeping their agents along with the polling officers. Then again, the right of voters standing as candidates without making a deposit, resulted in the rush of an anarchical number as candidates, preventing healthy rivalry on the one hand and making the polling task extremely arduous on the other. The rules relating to the matters of procedurepublished in the two volumes as Manuals are altogether incomplete and require a great deal of modification. A greater portion of the Dewan's speech was taken away by the distressing economic situation the State has been passing through in recent months owing to famine on the one side and floods on the other. The Government have doubtless been most anxious to do all they could to adopt relief measures. But it is equally doubtful if a good portion of the amounts granted for reliefs, barring loans, has not been spent on travelling allowances and batta of officials rather than the actual supply of reliefs. One would like to know whether the idea of removing cattle from affected areas to a central camp and organising marching camps has really proved successful. The services of the well-boring party are indeed appreciated greatly and the cry is that they want the services more and more, which is at present not sufficiently heard. The Dewan would be pleased to see that the *mungar* rains are likely to be favourable. We are not sure whether "a considerable number" of aided primary schools have been converted into Government Schools, and the pace at which the orders on the Education Memorandum are given effect to is none too satisfactory. There is no pronouncement as to how and to what extent orders on the Miller Committee Report have been given effect to, and we may wait to get one at the next session of the Assembly. One thing seems to become evident. There does not seem to be great desire to give full effect to the orders, while there is at any rate plenty of it to guarantee 50 percent to the forward class and to see that it is never diminished. We will have to deal with this question separately. The public welcome the announcement that the dispute over the Krishnarajasagara Dam has been finally settled in an amicable manner. It looks as though the Ironworks at Bhadrvathi were conceived at an inauspicious hour, and the latest mischance is the pheonomenal decline of the price of pig iron during the past six months. We will have of course to wait for more auspicious days to come and let us hope they will come soon. We are not disappointed to see the termination of the Agency agreement between the Mysore Government and the Tatas. It is a very clear and interesting account of the work of Government that the Dewan has given us, and it shows that we are not yet out of the woods. To clear out of them it requires a great deal of resourcefulness and statesmanship, and we hope that the reconstituted Assemblies will respond to the appeal made to them by His Highness the Maharaja at the inauguration ceremony and repeated by the Dewan at the Legislative Council.

H. H. THE JUNIOR RANI OF TRAVANCORE.

Her Highness the Junior Rani of Travancore, with her son Elaya Raja, the Heir apparent to the throne of Travancore arrived at Bangalore on the morning of the 5th April 1924 when they were met at the City Station, which was tastefully decorated, by Mr. M. G. Krishnaswami Rao, the Commissioner for Bangalore City, Mr. Mrs. K. Chandy Mr. and Mrs. K. Mathan Mrs. J. Chandrashekhara Iyer, Mr. & Mrs. H. Chennaya, Mr. D'Souza and Miss L. D, Souza. Mr. & Mrs. G. K. Govinda Pillai and several other ladies and gentlemen. Her Highness was garlanded by Mrs. Chandrashekara Iyer who was introduced to Her Highness by Mrs. Govinda Pillai and Eloya Raja by Miss. Chennaya Krishnamma. Her Highness is a cultured and enlightened Rani who takes a keen interest in the progress of her countrymen and is specially interested in the welfare of the women and children of India. Her Highness is personally attending to the training given to her son who is now 11 years old and who promises to be a very capable prince.

ಸಂಸ್ಕೃತವಾದ ಮೈಸೂರು ನ್ಯಾಯವಿಧಾಯಕ ಸಭಾಧಿವೇಶನವು.

ದಿವಾನರ ಭಾಷಣವು.

ನೂತನ ರಾಜಕೀಯ ಸಂಸ್ಕರಣದಿಂದ ರೂಪುಗೊಂಡಿರುವ ನ್ಯಾಯವಿಧಾಯಕ ಸಭೆಯ ಪ್ರಥಮಾಧಿವೇಶನವು ಈ ತಾ|| 4 ರಲ್ಲಿ ಮಂತ್ರಿವರ್ಯರಾದ ಮ|| ಬಾನರ್ಜಿಯವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆದಿತು. ಉಭಯ ಕೌನ್ಸಿಲರುಗಳೂ, ಔದ್ಯೋಗಿಕ ಮತ್ತು ಅನೌದ್ಯೋಗಿಕ ಮೆಂಬರುಗಳೂ ಸಭೆಗೆ ದಯಮಾಡಿಸಿದ್ದರು. ಇದುವರೆಗೆ ಸಭಾ ಮೆಂಬರುಗಳೆಲ್ಲರೂ ಅಧ್ಯಕ್ಷರ ಮುಂಗಡೆ ಅರ್ಧಚಂದ್ರಾಕೃತಿಯಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಈ ವೇಳೆ ಇರದೆ ಸರ್ಕಾರಿ ಅಧಿಕಾರಿಗಳಾದ ಮೆಂಬರುಗಳು ಅಧ್ಯಕ್ಷರ ಬಲಪಾರ್ಶ್ವದಲ್ಲೂ ಇತರ ಮೆಂಬರುಗಳು ಎಡಪಾರ್ಶ್ವದಲ್ಲೂ ಕುಳಿತುಕೊಳ್ಳುವಂತೆ ಸ್ಥಾನಗಳೇರ್ಪಡಿಸಲ್ಪಟ್ಟಿದ್ದುವು. ದಿವಾನರು ಸಭಾರಂಭಕಾಲದಲ್ಲಿ ಮೆಂಬರುಗಳ ಸುಸ್ವಾಗತವನ್ನು ಮಾಡಿ ಅನಂತರ ತಮ್ಮ ಭಾಷಣವನ್ನು ಮಾಡಿದರು. ಇದರಲ್ಲಿ ಸರ್ಕಾರದವರು ಕಳೆದ ಕೆಲ ತಿಂಗಳುಗಳಿಂದಲೂ ಮಾಡಿರುವ ಕಾರ್ಯಕಲಾಪಗಳು ವಿವರಿಸಲ್ಪಟ್ಟಿರುವುವು. ಅವುಗಳಲ್ಲೂ ಒಂದು ಕಡೆ ಕ್ಷಾಮಪ್ರಾಪ್ತಿಯಿಂದಲೂ ಮತ್ತೊಂದು ಕಡೆ ನದಿಯ ಪ್ರವಾಹದಿಂದಲೂ ಪ್ರಜೆಗಳಿಗೆ ಸಂಭವಿಸಿರುವ ನಷ್ಟಕಷ್ಟಗಳ ನಿವಾರಣೆಗಾಗಿ ಸರ್ಕಾರದವರು ಮಾಡಿರುವ ಪ್ರಯತ್ನ ವಿಶೇಷವು ಬಹಳವಾಗಿ ಪ್ರಸ್ತಾಪಿಸಲ್ಪಟ್ಟಿರುವುದು. ಪ್ರಜೆಗಳ ಕಷ್ಟನಿವಾರಣೆಗಾಗಿ ಸರ್ಕಾರದವರು ತಮ್ಮ ಕೈಲಾದೇರ್ಪಾಟನ್ನು ಮಾಡಲು ಕುತೂಹಲವುಳ್ಳವರಾಗಿರುವರೆನ್ನುವುದರಲ್ಲಿ ಸಂಶಯವಿಲ್ಲವು. ಆದರೆ ಜನರ ಕಷ್ಟನಿವಾರಣೆಯ ಕೆಲಸಗಳಿಗಾಗಿ ವಿನಿಯೋಗಿಸಲು ಗೊತ್ತು ಮಾಡಿರುವ ಹಣದಲ್ಲಿ ಬಹುಭಾಗವು ಅಧಿಕಾರಿಗಳ ಊಟವುಪಚಾರಗಳಿಗಾಗಿಯೂ ಪ್ರಯಾಣಕ್ಕಾಗಿಯೂ ವೆಚ್ಚವಾಗುವುದರಿಂದ, ಸರ್ಕಾರದವರ ಉದ್ದೇಶದಂತೆ ಜನರ ಕಷ್ಟ ನಿವಾರಣಾಕಾರ್ಯಗಳಿಗೆ ಸಾಕಾದಷ್ಟು ಹಣವು ವಿನಿಯೋಗವಾಗುತ್ತದೆಂಬುದು ತಾನೇ ಅನುಮಾನವು. ನೀರಿಗೂ ಮೇವಿಗೂ ಅಭಾವವಾಗಿರತಕ್ಕ ಸ್ಥಳಗಳಿಂದ ದನಗಳನ್ನು ನೀರೂ ಮೇವೂ ದೊರಕುವ ಸ್ಥಳಗಳಿಗೆ ತೆಗೆದುಕೊಂಡು ಹೋಗುವಂತೆ ಮಾಡಲ್ಪಟ್ಟಿರುವ ಏರ್ಪಾಟಿನಿಂದೆಷ್ಟು ಪ್ರಯೋಜನವಾಗಿರುತ್ತದೆಂಬುದು ತಿಳಿಯಲ್ಪಡತಕ್ಕದಾಗಿದೆ. ನೀರಿಲ್ಲದ ಸ್ಥಳಗಳಲ್ಲಿ ಬಾವಿಗಳನ್ನು ತೋಡಲು ನಿಯೋಜಿಸಲ್ಪಟ್ಟಿರುವ ಜನರ ಕಾರ್ಯಕ್ರಮವು ಬಹಳವಾಗಿ ಪ್ರಶಂಸಿಸಲ್ಪಟ್ಟಿರುವುದಲ್ಲದೆ ಅಂತಹ ಕೆಲಸಗಾರರು ಇನ್ನೂ ವಿಶೇಷವಾಗಿ ಅಪೇಕ್ಷಿಸಲ್ಪಟ್ಟಿರುತ್ತಾರೆ. ದಿವಾನರು ಹೇಳುವಂತೆ ಅನೇಕ ಏಡೆಡ್ ಸ್ಕೂಲುಗಳು ಸರ್ಕಾರಿಯ ಸ್ಕೂಲುಗಳಾಗಿ ಮಾರ್ಪಡಿಸಲ್ಪಟ್ಟಿರುವುದೆಂದು ಹೇಳಲಿಕ್ಕೆ ಬರುವುದಿಲ್ಲವು ಮತ್ತು ವಿದ್ಯಾಭ್ಯಾಸದ ಮೆಮೊರಾಂಡಮ್ಮಿನಲ್ಲಿ ಕಂಡಪ್ರಕಾರ ವಿದ್ಯಾಭಿವೃದ್ಧಿ ನಡಿಸಲ್ಪಡುತ್ತಿರುವುದು ಅಷ್ಟು ತೃಪ್ತಿಕರವಾಗಿಲ್ಲವು. ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲೆ ಸರ್ಕಾರದವರು ಮಾಡಿರುವ ಆರ್ಡರು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತರಲ್ಪಟ್ಟಿರುವು ದೆಂಬುದು ಈ ಅಧಿವೇಶನದಲ್ಲಿ ಹೇಳಲ್ಪಟ್ಟಿಲ್ಲವಾದರೂ, ಮುಂದಿನ ಅಧಿವೇಶನದಲ್ಲಿ ತಿಳುಹಲ್ಪಡುವುದೆಂದು ನಿರೀಕ್ಷಿಸುತ್ತೇವೆ. ಈ ಆರ್ಡರಿನ ಪ್ರಕಾರ ಕಾರ್ಯಭಾಗವು ಸಮಗ್ರವಾಗಿ ನಡಿಸಲ್ಪಡು ಕುತೂಹಲವಿಲ್ಲದಿರುವುದಾದರೂ, ಮುಂಬರಿದ ಜನವರ್ಗದವ ಶೇಕಡ 50 ರಂತೆ ಕಾದಿಡಲ್ಪಟ್ಟಿರುವ ಸ್ಥಾನಗಳಿಗೆ ಚ್ಯುತಿಬಾ ದಂತೆ ಮಾತ್ರ ಎಚ್ಚರಿಕೆಯಿಂದ ನೋಡಿಕೊಳ್ಳಲ್ಪಡುತ್ತಿರುವುದು. ಬಹಳ ಕಾಲದಿಂದ ಕೃಷ್ಣರಾಜಸಾಗರ ಕಟ್ಟೆಯನ್ನು ಹೆಚ್ಚಿ ಸುವ ವಿಚಾರದಲ್ಲಿ ನಮ್ಮ ಸರ್ಕಾರಕ್ಕೂ ಮದ್ರಾಸು ಸರ್ಕಾರಕ್ಕೂ ನಡಿಯುತ್ತಿದ್ದ ವಿವಾದವು ಅನುಕೂಲವಾಗಿ ಇತ್ಯರ್ಥವಾಗಿರುವುದೆಂಬ ವಿಚಾರವು ವಿಶೇಷ ಸಂತೋಷಪ್ರದವಾಗಿ ಆದರೆ ಸಂಸ್ಥಾನದ ಬೊಕ್ಕಸದ ಹಣವನ್ನು ಬಹಳವಾಗಿ ನುಂ ರುವ ಮತ್ತು ಆದಾಯಕರವಲ್ಲವೆಂದೂಹಿಸಲ್ಪಟ್ಟಿರುವ ಭದ್ರಾ ತಿಯ ಕಬ್ಬುನದ ಕಾರ್ಖಾನೆಯಲ್ಲಾಗುವ ಕಬ್ಬುನಕ್ಕೆ ಷ್ಟು ಬೆಲೆಯು ದೊರೆಯದೆ ಅಪಾರ ನಷ್ಟಸಂಭವಿಸಿರುತ್ತದೆಂ ಕೇಳಿ ವಿಷಾದಿಸುತ್ತೇವೆ, ಅಲ್ಲದೆ ಮುಂದೆ ಒಳ್ಳೆಯಕಾಲ ಪ್ರಾಪ್ತವಾಗಿ ಆದಾಯಕರವಾಗಿ ಪರಿಣಮಿಸಲೆಂದು ಅಪೇಕ್ಷಿ ಸುತ್ತೇವೆ. ಈ ಕಾರ್ಖಾನೆಯ ಆಡಳಿತವು ಟಾಟಾಕಂಪನಿಯ ರಿಗೆ ಕೊಡಲ್ಪಟ್ಟಿದ್ದುದು ತಪ್ಪಿಹೋಗಿ ಸರ್ಕಾರದವರ ಮೇಲ್ ಚಾರಣೆಯಲ್ಲಿರುವ ಅಂಶವು ಮಾತ್ರ ಕೊಂಚ ಸಂತೋಷಪ್ರ ವಾಗಿದೆ. ನಮ್ಮ ಸಂಸ್ಥಾನಕ್ಕೆ ದುಡ್ಡಿನ ಕೊರತೆಯು ಇನ್ ಬಹಳವಾಗಿರುವುದೆಂಬುದು ದಿವಾನರ ಭಾಷಣದಿಂದ ವ್ಯಕ್ತವಾ ಗುತ್ತದೆ. ಈ ಕೊರತೆಯ ನಿವಾರಣೆಗೆ ವಿಶೇಷ ಉತ್ಪತ್ತಿ ನೋಪಾಯವೂ, ರಾಜನೀತಿ ಪ್ರೌಢಿಮೆಯೂ ಅತ್ಯಾವಶ್ಯ ಶ್ರೀಮತ್ ಮಹಾರಾಜರವರು ಉಭಯಸಭೆಗಳ ಆರಂಭಕಾ ದಲ್ಲಿ ಅಪ್ಪಣೆ ಕೊಡಿಸಿರುವಂತೆಯೂ, ದಿವಾನರು ಈ ನ್ಯಾಯ ವಿಧಾಯಕಸಭಾರಂಭ ಭಾಷಣದಲ್ಲಿ ಕೋರಿರುವ ಪ್ರಕಾರ ಉಭಯಸಭೆಗಳು ಸರ್ಕಾರದವರೊಡನೆ ಸಹಕಾರಸಾನುಭೂ ಯಿಂದ ವರ್ತಿಸುವುವೆಂದು ನಿರೀಕ್ಷಿಸುತ್ತೇವೆ.

ಬೆಂಗಳೂರು ಗೋರಕ್ಷಕ ಮಂಡಲಿ.

ಮೈಸೂರು ಸಂಸ್ಥಾನದಲ್ಲಿ ಗೋವಧೆಯನ್ನೂ, ಗೋ ಯನ್ನೂ ನಿಲ್ಲಿಸಿ ಅನಾಥ ಗೋರಕ್ಷಣೆಯನ್ನು ಮಾಡ ತಕ್ಕೇರ್ಪಾಟನ್ನು ಮಾಡುವುದಕ್ಕಾಗಿ ಬೆಂಗಳೂರು ಪಟ್ಟ ಲ್ಲೇರ್ಪಟ್ಟಿರುವ ಗೋರಕ್ಷಕ ಮಂಡಲಿಯವರು ಕಳೆದ 6 ನೆಯ ಭಾನುವಾರದ ದಿವಸ ದೊಡ್ಡಣ್ಣನವರ ಸ್ಕೂಲಿ ರಾಜಸಭಾಭೂಷಣ ಮ|| ಕರ್ಪೂರ ಶ್ರೀನಿವಾಸರಾಯರ ಕ್ಷತೆಯಲ್ಲಿ ಒಂದು ಮಹಾಸಭೆಯನ್ನು ನಡೆಯಿಸಿದರು. ಸಭೆಗೆ ಮ|| ಗಳಾದ ದಿವಾನ್ ಬಹದ್ದೂರ್ ರಾಜಸಭಾಭೂ ಕೆ. ಪಿ. ಪುಟ್ಟಣ್ಣಸೆಟ್ಟರು, ಸಬ್ ಜಡ್ಜಿ ಜಿ. ಆರ್. ಸತ್ಯಾ ಯರು, ರಾವ್ ಬಹದ್ದೂರ್ ರಾಜಶಿಲ್ಪವಿಶಾರದ ಬಿ. ಸುಬ್ ಯರು, ಎಂ. ಚಂಗಯ್ಯಸೆಟ್ಟರು, ಮೈಸೂರು ಗೋರಕ್ ಸಭಾ ಸೆಕ್ರೆಟರಿ ಬಿ. ದೇವರಾಜಅರಸಿನವರು, ಅಜ್ಮೀರಿನ ಸರ ಖಜಾಂಚಿ ಷಾ ಚಂದಮಲ್ ಮಗನ್ಮಲ್‌ರವರು, ಬೆಂಗಳ ಗೋರಕ್ಷಕ ಮಂಡಲಿಯ ಅಧ್ಯಕ್ಷರಾದ ಷಾ ಜಮನ ದಂಗೋಜಿಯವರು, ಎಲ್. ಎ. ಪೌರ್‍ವಾಲ್‌ರವರು, ಷಾ ನ್ಮಲ್‌ರವರು, ಷಾ ದೇಶಾಯಿ ಅಮರಚಂದ್ ಜೇಶರಾಜ ರು, ಅಡ್ವೊಕೇಟ್ ಸಿ. ಕೃಷ್ಣಮೂರ್ತಿಯವರು, ಯಜಮಾನ್ ಬಸಪ್ಪನವರು, ಯಜಮಾನ್ ಸಿದ್ದಬಸವಸೆ ಮೊದಲಾಗಿ ಅನೇಕ ದೊಡ್ಡಮನುಷ್ಯರು ಸೇರಿ ಒಂದು ರದವರೆಗೆ ಜನರು ಬಂದಿದ್ದರು. ಉತ್ತರ ಹಿಂದೂ ದಲ್ಲೂ ಇತರ ದೇಶೀಯಸಂಸ್ಥಾನಗಳಲ್ಲೂ ಗೋರಕ್ಷಣ ನಡೆದಿರುವ ಕಾರ್ಯಗಳನ್ನೂ, ಈ ಸಂಸ್ಥಾನದಲ್ಲಿ ಗೋರಕ್ ಗಾಗಿ ಮಾಡಲ್ಪಡಬೇಕಾಗಿರುವ ಕಾರ್ಯಕ್ರಮವನ್ನೂ ಅಧ್ಯಕ್ಷರು ಸಂಕ್ಷೇಪವಾಗಿ ಭಾಷಣಮಾಡಿದಮೇಲೆ, ಈ ರದಲ್ಲಿ ಈವರೆಗೆ ಸಂಸ್ಥಾನದ ನಾನಾಕಡೆಗಳಲ್ಲಿ ನಡಿಸಲ್ಪಟ್ಟ ಕಾರ್ಯಗಳನ್ನೂ, ಮಾಡಲ್ಪಟ್ಟಿರುವ ನಿರ್ಧಾರಗಳನ್ನೂ ಕೊಂಡ ವರದಿಯನ್ನು ಬೆಂಗಳೂರು ಗೋರಕ್ಷಕ ಮಂಡ ಮ್ಯಾನೇಜರ್ ಮ|| ಗುಂಡೂರಾವ್ ಶಾದ್ರಿಯವರು ಓದಿ ತರುವಾಯ ಮುಂದೆ ಹೇಳುವ ನಿರ್ಧಾರಗಳು ಮ|| ಸಿ. ಮೂರ್ತಿಯವರಿಂದ ಸೂಚಿಸಲ್ಪಟ್ಟು ಸರ್ವರಿಂದಲೂ ಅನು ದಿಸಲ್ಪಟ್ಟುವು.—

1. ಹಾಲನ್ನು ಕರೆಯುವ ಹಸುಗಳೂ, ಬೇಸಾಯ ಗಳಿಗುಪಯುಕ್ತಗಳಾದ ದನಗಳೂ ವಧಿಸಲ್ಪಡುವುದ ಮೈಸೂರು ಸಂಸ್ಥಾನದಲ್ಲಿ ಈ ಪಶುವರ್ಗಕ್ಕುಂಟಾ ಮಹಾಶೋಚನೀಯ ಸ್ಥಿತಿಯನ್ನು ತಪ್ಪಿಸುವುದಕ್ಕಾಗಿ ಸ ನದಲ್ಲಿ ಗೋವಧೆಯು ನಡೆಯದಂತೆ ಒಂದು ಶಾಸನವನ್ನ ಸಬೇಕಾಗಿ ಶ್ರೀಮತ್ ಮಹಾರಾಜರವರ ಘನಸರ್ಕಾರದ ಪ್ರಾರ್ಥಿಸಿಕೊಳ್ಳಬೇಕು.

2. ಸಂಸ್ಥಾನದ ಕೆಲವೆಡೆಗಳಲ್ಲಿ ಹಸುಗಳನ್ನು ಉ ದಕ್ಕೂ, ಬಂಡಿಯನ್ನೆಳೆಯುವುದಕ್ಕೂ ಉಪಯೋಗಿಸುವ ತಪ್ಪಿಸಲು ಗೋರಕ್ಷಕ ಮಂಡಲಿಯವರು ತಕ್ಕ ಕಾರ್ಯ ವನ್ನು ಜರುಗಿಸತಕ್ಕದು.

ದನಗಳ ಕುಡಿಯುವ ನೀರಿಗೂ ತಿನ್ನುವ ಮೇವಿಗೂ ಭಾವವುಂಟಾಗುತ್ತಲೇ ಇರುವುದರಿಂದ ಸ್ಟೇಟ್ ಫಾರೆಸ್ಟುಗಳ ವಿಶೇಷ ಸೌಲಭ್ಯರೀತಿಯಿಂದ ದನಗಳನ್ನು ಬಿಟ್ಟು ಮೇಯಿಲು ಅವಕಾಶಕಲ್ಪಿಸಿಕೊಡಬೇಕಾಗಿ ಸರ್ಕಾರದವರನ್ನು ಪ್ರಾರ್ಥಿಸತಕ್ಕದು.

4. 1, 2 ಮತ್ತು 3 ನೆಯ ನಿರ್ಧಾರಗಳಂತೆ ಕೂಡಲೆ ಕಾರ್ಯಕ್ರಮಗಳನ್ನು ನಡಿಸಲು ಮತ್ತು ಗೋವಧಾನಿರೋಧಕ ಶಾಸನವನ್ನು ಮಾಡುವಂತೆ ಶ್ರೀಮತ್ ಮಹಾರಾಜರವರನ್ನು ಪ್ರಾರ್ಥಿಸಿಕೊಳ್ಳುವುದಕ್ಕಾಗಿ ಒಂದು ರಾಯಭಾರವು ಕೂಡಲೆ ಕಳುಹಲ್ಪಡತಕ್ಕದು.

ಈ ನಿರ್ಧಾರಗಳೋದಲ್ಪಟ್ಟ ಮೇಲೆ ಗೋಸಂರಕ್ಷಣೆಯ ಚಾರವಾಗಿ ಕನ್ನಡ ಭಾಷೆಯಲ್ಲಿ ಉತ್ತಮ ವ್ಯಾಸಗಳನ್ನು ಬರೆದ ಮ|| ಗಳಾದ ಕೆ. ಕೃಷ್ಣಮಾಚಾರ್ಯ ಬಿ.ಎ., ಯವರಿಗೂ, ಸಿಂಹೋಳಿ ಜಯಪೂರ್ಣಾಚಾರ್ಯರಿಗೂ ಭಂಗಾರದ ಮತ್ತು ಬೆಳ್ಳಿಯ ಪದಕಗಳು ಬಹುಮಾನಿಸಲ್ಪಟ್ಟು ಶ್ರೀಮನ್ಮಹಾರಾಜರವರ ಶ್ರೀಯಃಪ್ರಾರ್ಥನೆಯಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಸ್ವದೇಶದ ವೃತ್ತಾಂತಗಳು.

ಶ್ರೀ ಶೃಂಗಗಿರಿ ಸ್ವಾಮಿಗಳು ರಾಜಧಾನಿಯನ್ನು ಬಿಟ್ಟು ಮುಂದಕ್ಕೆ ತೆರಳುವ ಕಾಲಕ್ಕೆ ಶ್ರೀಮತ್ ಮಹಾರಾಜರವರು ಒಂದುದಿನದ ಮಟ್ಟಿಗೆ ರಾಜಧಾನಿಗೆ ದಯಮಾಡಿಸುವವರಾಗಿರುವರೆಂದು ಕೇಳುತ್ತೇವೆ.

ರಾಜಧಾನಿಯ ಈದಿಗಾದಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಶ್ರೀ ಶ್ರೀಕಂಠೇಶ್ವರ ಚಿಕ್ಕವೀರಣ್ಣಾ ರೈಸ್ ಮಿಲ್ಲಿನವರು ಬಹು ಅಂದವಾಗಿ ಮಾಡಿಸಿರುವ ಈ ವರ್ಷದ ಕ್ಯಾಲೆಂಡರನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.

ತುಮಕೂರು ಡಿಸ್ಟ್ರಿಕ್ಟಿನಲ್ಲಿ ಬಡವರಾದ ನೇಗಿಯವರಿಗೆ ವೃದ್ಧಿಯಿಲ್ಲದೆ ಹಣವನ್ನು ಸಾಲಾಕೊಟ್ಟು ಸಹಾಯ್ಯಮಾಡುವುದಕ್ಕಾಗಿ ಪರಸ್ಪರಸಹಾಯ ಸಂಘಗಳ ರೆಜಿಸ್ಟ್ರಾರ್ ವಶಕ್ಕೆ ಸರ್ಕಾರದಿಂದ 5000 ರೂ. ಕೊಡಲ್ಪಟ್ಟಿರುತ್ತದೆ.

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ 53 ಏಡೆಡ್ ಸ್ಕೂಲುಗಳು ಸರ್ಕಾರಿ ಸ್ಕೂಲುಗಳಾಗಿ ಮಾಡಲ್ಪಡುವುವು. ಇದರಿಂದ ಸರ್ಕಾರಕ್ಕೆ ಮೊಟ್ಟಮೊದಲು 18349 ರೂ. ವೆಚ್ಚವಾಗುವುದಾಗಿಯೂ ಅನಂತರ ಪ್ರತಿವರ್ಷದಲ್ಲೂ 9999 ರೂ. ವ್ಯಯವಾಗುವುದಾಗಿಯೂ ನಿರೀಕ್ಷಿಸಲ್ಪಟ್ಟಿದೆ.

ಪ್ರಥಮ ರಾಜಕುಮರಿಯವರು ಅಸ್ವಸ್ಥರಾಗಿ ಬೆಂಗಳೂರಿನಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವುದರಿಂದ, ಮಹಾಮಾತೃಶ್ರೀಯವರೂ, ಶ್ರೀಮನ್ಮಹಾರಾಜರವರೂ ಯುಗಾದಿಹಬ್ಬಕ್ಕೂ ಸಹ ರಾಜಧಾನಿಗೆ ಚಿತ್ತೈಸದೆ ಬೆಂಗಳೂರಿನಲ್ಲೇ ಇರುವರು. ರಾಜಕುಮರಿಯವರ ದೇಹಸ್ಥಿತಿಯು ದೇಶೀಯವೈದ್ಯರ ಚಿಕಿತ್ಸೆಯಿಂದ ಗುಣಮುಖಕ್ಕೆ ಬಂದಿರುವುದಾಗಿ ತಿಳಿಯುತ್ತೇವೆ.

ಮೈಸೂರು ರೈಲ್ವೆ ಟ್ರಾಫಿಕ್ ಮ್ಯಾನೇಜರಾದ ಮಿ|| ಎ. ಎ. ಪಾರ್ಕರವರ ಉದ್ಯೋಗದವಧಿಯು 1924 ನೆಯ ಮೇ ತಾ|| 31ಕ್ಕೆ ಪೂರೈಸುವುದರಿಂದ ಇನ್ನೂ ಮೂರುವರ್ಷಕಾಲ ಹೆಚ್ಚಿಸಲ್ಪಟ್ಟಿರುತ್ತದೆ. ಇವರು ತಮ್ಮ ಕೆಲಸವನ್ನು ಬಹಳ ಶ್ರದ್ಧೆಯಿಂದಲೂ, ದಕ್ಷತೆಯಿಂದಲೂ ನಿರ್ವಹಿಸಿ ಪ್ರಯಾಣಿಕರ ಸೌಕರ್ಯವಿಚಾರದಲ್ಲಿ ವಿಶೇಷ ಗಮನಕೊಡುತ್ತಿರುವುದರಿಂದ ಇಂತಹ ಉಪಯುಕ್ತರಾದ ಅಧಿಕಾರಿಗಳ ಸಹಾಯ್ಯವನ್ನು ಕಳೆದುಕೊಳ್ಳದಂತಾದುದಕ್ಕಾಗಿ ಸಂತೋಷಿಸುತ್ತೇವೆ.

ಶ್ರೀ ಶೃಂಗಗಿರಿಸ್ವಾಮಿಗಳು ಈ ತಾ|| 19 ರ ಸಾಯಂಕಾಲ ರಾಜಧಾನಿಯಿಂದ ಹೊರಟು ಆರಾತ್ರಿ ಹಾಲನಹಳ್ಳಿ ಬಂಗಲೆಯಲ್ಲಿ ತಂಗಿದ್ದು ಅಲ್ಲಿಂದ ಮಾರನೆಯ ಬೆಳಿಗ್ಗೆ ತಿರುಮಕೂಡ್ಲು ನರಸೀಪುರಕ್ಕೆ ಪ್ರಯಾಣಮಾಡಿ ಅಲ್ಲಿ 1-2 ದಿನಗಳವರೆಗಿದ್ದು ಅಲ್ಲಿಂದ ನಂಜನಗೂಡಿಗೆ ಪ್ರಯಾಣಮಾಡಿ ಅಲ್ಲಿ ಒಂದು ಮಂಡಲಕಾಲದವರೆಗೆ ಶ್ರೀ ಶ್ರೀಕಂಠೇಶ್ವರಸ್ವಾಮಿಯ ಸೇವೆಯನ್ನು ಮಾಡಿ ಅಲ್ಲಿಂದ ಕೊಣನೂರು ಚಾಮರಾಜನಗರದಮೇಲೆ ಕಣಿವೆಯ ಕೆಳಗಣ ಪ್ರಾಂತಕ್ಕೆ ದಯಮಾಡಿಸುವುದಾಗಿ ತಿಳಿಯಬರುತ್ತದೆ.

ಮೈಸೂರು ವಿಶ್ವವಿದ್ಯಾಲಯದಿಂದ ನಡಿಸಲ್ಪಟ್ಟ ಎಂಟ್ರೆನ್ಸ್ ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿಗಳಿಗೆ ಈ ತಾ|| 26 ರಲ್ಲಿ ಬೆಂಗಳೂರು ಮತ್ತು ಮೈಸೂರುಗಳಲ್ಲಿ ಮಾತ್ರ ಎಕನಾಮಿಕ್ ಹಿಸ್ಟ್ರಿ ಮತ್ತು ಕೆಮಿಸ್ಟ್ರಿ ಭಾಗಗಳಲ್ಲಿ ಪರೀಕ್ಷೆಯು ನಡಿಸಲ್ಪಡುವದಾಗಿಯೂ, ಇದಕ್ಕಾಗಿ ಅಭ್ಯರ್ಥಿಗಳು ಪ್ರವೇಶಧನವನ್ನು ಕೊಡಬೇಕಾದುದಿಲ್ಲವೆಂದೂ, ತಮ್ಮ ಹಿಂದಣ ಹಾಲ್ ಟಿಕೆಟ್ಟನ್ನಾಗಲಿ ಹೆಡ್ಮಾಸ್ಟರುಗಳ ಸರ್ಟಿಫಿಕೇಟನ್ನಾಗಲಿ ತೋರಿಸಿ ಪರೀಕ್ಷೆಗೆ ಕುಳಿತುಕೊಳ್ಳಬಹುದೆಂದೂ ವಿಶ್ವವಿದ್ಯಾಲಯದ ರೆಜಿಸ್ಟ್ರಾರವರು ತಿಳಿಸಿರುತ್ತಾರೆ.

ರಾಜಧಾನಿಯ ವಿದ್ಯುದ್ದೀಪಾಲಯದ ಕೆಲಸಗಾರನಾದ ಣಿಗರಜಾತಿಯ ಲಕ್ಕಸೆಟ್ಟಿ ಎಂಬ 30 ವರ್ಷ ವಯಸ್ಸಿ ಕಳೆದ ಗುರುವಾರ ಮಧ್ಯಾಹ್ನ ರಾಜಧಾನಿಯ ಲಕ್ಷ್ಮೀ ದೀಪಸ್ತಂಭದಮೇಲೆ ಹತ್ತಿ ಕೆಲಸಮಾಡುತ್ತಿರುವಾಗ್ಗೆ ತಂತಿಗಳಿಗೆ ಅವನ ಶರೀರವು ಸೋಂಕಿ ವಿದ್ಯುಚ್ಛಕ್ತಿಯ ವೇಗದಿಂದ ಹೊಟ್ಟೆಯು ಸುಟ್ಟುಹೋಗಿ ಮೃತನಾದನು. ತಂತಿಗಳಿಗೆ ತಗುಲಿಕೊಂಡು ನೇತಾಡುತ್ತಿರುವಾಗ್ಗೆ ನ್ನು ಯಾತುಂದಲಾದರು ತಿವಿದು ಕೆಳಕ್ಕೆ ನೂಕಿಬಿಡಿ ಕೊಳ್ಳುತ್ತೇನೆಂದು ಸಮೀಪದಲ್ಲಿದ್ದ ಜನರನ್ನು ಪ್ರಾರ್ಥಿಸಿ ದಾಗ್ಯೂ ಅವರು ಹಾಗೆಮಾಡಲಿಲ್ಲವಾಗಿ ಮೃತನಾದನಂತೆ.

ರಾಜಧಾನಿಯಲ್ಲಿ ಆಜೆವಾರ ಮಳೆಯಾಗಿದ್ದು ಮೊನ್ನೆಯ ದಿನ ರಾತ್ರಿ ತಕ್ಕಮಟ್ಟಿಗೆ ಮಳೆಯಾಯಿತು. ಈ ಮಳೆಗಳಿಂದ ಸಂಪೂರ್ಣವಾಗಿ ಒಣಗಿಹೋಗಿದ್ದ ಕಾರಂಜಿಕೆರೆಗೂ ಗೊಬ್ಬಳಿ ಕಟ್ಟೆಗೂ ಕೊಂಚನೀರು ಬಂದಿರುತ್ತದೆ. ಕಪಿಡಿಜಾತ್ರೆಗೆ ಹೋಗಿದ್ದ ಕೆಲ ಅರಸುಮಕ್ಕಳಿಗೆ ವಾಂತಿಭೇದಿರೋಗವು ಪ್ರಾಪ್ತವಾದ್ದು ವೈದ್ಯರ ಚಿಕಿತ್ಸೆಯಿಂದ ಗುಣವಾಗಿರುತ್ತದೆಂದು ತಿಳುಹಲು ಹರ್ಷವಾಗುತ್ತದೆ. ಇತರ ಕಡೆಗಳಲ್ಲೂ ತಕ್ಕಮಟ್ಟಿಗೆ ಮಳೆಯಾಗಿ ಜೋಳದ ಬಿತ್ತನೆಯ ಕೆಲಸವು ನಡೆದಿರುವುದಾಗಿ ಕೇಳುತ್ತೇವೆ. ವರ್ಷಾದರಂಭದಲ್ಲಿಯೇ ಮಳೆಯಾಗಲುಪಕ್ರಮಿಸಿರುವುದರಿಂದ ಮುಂಗಾರುಮಳೆಯು ಅನುಕೂಲವಾಗಿ ಆಗಬಹುದೆಂದು ತೋರುತ್ತದೆ.

ಮೈಸೂರು ಸೆಷನ್ಸಿನಲ್ಲಿ ನಡಿಯುತ್ತಿದ್ದ ನಗರ್ಲೆಯ ಕೊಲೆಯ ವಿಚಾರಣೆಯು ಆಜೆ ಶನಿವಾರದದಿವಸ ಮುಗಿದು ಅಸೆಸರುಗಳ ಏಕಾಭಿಪ್ರಾಯದಿಂದ 1 ನೆಯ ಮತ್ತು 2ನೆಯ ಅಪರಾಧಿಗಳು ಕೊಲೆಮಾಡಲು ಸಹಾಯಕರಾಗಿದ್ದರೆಂದೂ 3 ನೆಯ ಅಪರಾಧಿಯು ಕೊಲೆಮಾಡಿದನೆಂದೂ ಸೆಷನ್ಸು ಜಡ್ಜರು ನಿರ್ಧರಿಸಿ ಕಳೆದ ಸೋಮವಾರದ ದಿವಸ ಈ ಮೂರುಜನ ಅಪರಾಧಿಗಳಿಗೂ ಮರಣದಂಡನೆಯನ್ನು ವಿಧಿಸಿದರು. ಇದರಮೇಲೆ ಚೀಫ್‌ಕೋರ್ಟಿಗೆ ಅಪೀಲುಮಾಡಲ್ಪಡುವುದಾಗಿ ವದಂತಿಯಿದೆ. ಈ ಕೊಲೆಯ ಸಂಗತಿಯನ್ನು ಕಂಡುಹಿಡಿದು ಸ್ಥಿರಪಡಿಸುವಲ್ಲಿ ಡಿಸ್ಟ್ರಿಕ್ಟ್ ಪೊಲೀಸು ಸೂಪರಿಂಟೆಂಡೆಂಟರು ಸ್ವತಃ ಬಹಳ ಶ್ರಮಪಟ್ಟಿರುವುದಾಗಿ ಕೇಳುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರೂ, ಟ್ರಸ್ಟ್ ಬೋರ್ಡಿನ ಚೇರ್ಮನ್ನರೂ ಆಗಿದ್ದ ದಿವಾನ್ ಬಹದ್ದೂರ್ ಶ್ರೀಕಂಠೇಶ್ವರ ಅಯ್ಯರ್‌ರವರ ನಿರಂಕುಶಾಧಿಕಾರವು ಕಳೆದ ಮಾರ್ಚಿ ತಾ|| 31ಕ್ಕೆ ಸಮಾಪ್ತಿಯಾಗಿ, ಹಾಸನದ ಡಿ|| ಡೆಪ್ಯುಟೀಕಮಿಷನರಾಗಿದ್ದು ನಿವೃತ್ತಿಯನ್ನು ಹೊಂದಿದ ಮ|| ಕೆ. ಮೈಲಾರಿರಾವ್, ಬಿ.ಎ., ಬಿ.ಎಲ್., ರವರು ಕೌನ್ಸಿಲಿನ ಪ್ರೆಸಿಡೆಂಟ್ ಮತ್ತು ಟ್ರಸ್ಟ್‌ಬೋರ್ಡಿನ ಚೇರ್ಮನ್ ಉದ್ಯೋಗಗಳನ್ನು ಈ ಏಪ್ರಿಲ್ ತಾ|| 1 ರಿಂದ ವಹಿಸಿಕೊಂಡು ಉಭಯ ಆಫೀಸುಗಳ ಲೆಖ್ಖಪತ್ರಗಳನ್ನೂ, ಕೆಲಸಗಾರರ ನಡೆನುಡಿಗಳನ್ನೂ ಬಹಳ ಎಚ್ಚರಿಕೆಯಿಂದ ವಿಮರ್ಶಿಸುತ ಮನದಟ್ಟುಮಾಡಿಕೊಳ್ಳುತ್ತಿರುವುದಾಗಿಯೂ, ಮೊಹಲ್ಲಾಗಳಮೇಲೆ ಹೊರಟು ಮಾರ್ಗಗಳ ಸ್ಥಿತಿಯನ್ನೂ ಜನಾರೋಗ್ಯದೇರ್ಪಾಟನ್ನೂ ಪರೀಕ್ಷಿಸುತ್ತಿರುವುದಾಗಿಯೂ ಕೇಳುತ್ತೇವೆ. ಇವರು ರಾಜಧಾನಿಯಲ್ಲಿ ಹುಟ್ಟಿಬೆಳೆದು ವಿದ್ಯಾಭ್ಯಾಸಂಗಮಾಡಿ ಸರ್ಕಾರಿಯುದ್ಯೋಗಕ್ಕೆ ಸೇರಿ ನಿಸ್ಪೃಹತೆಯಿಂದಲೂ, ದಕ್ಷತೆಯಿಂದಲೂ ಕೆಲಸಮಾಡಿ ಸರ್ಕಾರದ ಮೆಚ್ಚುಗೆಯನ್ನೂ ಪ್ರಜಾನುರಾಗವನ್ನೂ ಸಂಪಾದಿಸಿಕೊಂಡು ತಮ್ಮ ಜನ್ಮಸ್ಥಲದಲ್ಲಿ ಸೋದರಪ್ರಜಾಸೇವೆಯನ್ನು ಉಚಿತವಾಗಿಮಾಡಲು ಕೈಕೊಂಡಿರುತ್ತಾರಾದುದರಿಂದ, ಇವರ ಕಾಲದಲ್ಲಿ ಸಾಂಕುಶಾಧಿಕಾರವೇರ್ಪಟ್ಟು ರೇಟುಪೇಯರುಗಳಿಗೆ ಅನುಕೂಲವಾದ ಕಾರ್ಯಗಳು ನಡಿಸಲ್ಪಡುವುವೆಂದು ನಿರೀಕ್ಷಿಸಲ್ಪಟ್ಟಿವೆ.

ರಾಜಧಾನಿಗೆ ದಯಮಾಡಿಸಿ ಶಿಷ್ಯಮಂಡಲಿಯಿಂದ ಪಾದಪೂಜೆ ಮತ್ತು ಭಿಕ್ಷೆಯನ್ನು ಸ್ವೀಕರಿಸುತ್ತಿರುವ ಶೃಂಗಗಿರಿ ಶ್ರೀ ಚಂದ್ರಶೇಖರ ಭಾರತೀಸ್ವಾಮಿಯವರ ಗುರುಗಳಾದ ಕೈ|| ಶ್ರೀ ಸಚ್ಚಿದಾನಂದಶಿವಾಭಿನವ ನೃಸಿಂಹಭಾರತಿ ಸ್ವಾಮಿಗಳು ರಾಜಧಾನಿಯ ದೊಡ್ಡಕೆರೆ ಕೆಳಗೆ ಉತ್ತರಾದಿಮಠದ ಪೂರ್ವಕ್ಕೆ ಮತ್ತು ಪಶುವೈದ್ಯಶಾಲೆಯ ದಕ್ಷಿಣಕ್ಕೆ ಇರುವ ಪ್ರದೇಶದಲ್ಲಿ ಜನ್ಮಿಸಿದ್ದರಾದುದರಿಂದ ಆ ಸ್ಥಲದ ಜ್ಞಾಪನಾರ್ಥವಾಗಿ ಶ್ರೀಗಳು ಒಂದು ಶಿಲಾಮಂಟಪವನ್ನು ಕಟ್ಟಿಸಿ ಅದರಲ್ಲಿ ತಮ್ಮ ಗುರುಗಳ ಅನ್ಯತಶಿಲಾಮೂರ್ತಿಯನ್ನು ಕಳೆದ ತಾ|| 31 ರಲ್ಲಿ ವಿಧ್ಯುಕ್ತವಾಗಿ ಪ್ರತಿಷ್ಠಾಪಿಸಿದರು. ಈ ಸಮಾರಂಭಕ್ಕೆ ಶ್ರೀಮತ್ ಮಹಾರಾಜರವರಾದಿಯಾಗಿ ಪುರಪ್ರಮುಖರು ಆಹ್ವಾನಿಸಲ್ಪಟ್ಟಿದ್ದರು. ಶಿಲಾಪ್ರತಿಷ್ಠಾಪನಕಾರ್ಯವು ಮುಗಿದ ಮೇಲೆ ಶ್ರೀಗಳು ದಿವಾನ್ ಬಹದ್ದೂರ್ ಸಿ. ಶ್ರೀಕಂಠೇಶ್ವರಅಯ್ಯರ್‌ರವರಿಗೆ ಭಂಗಾರದ ತಳಕುಗಳಿಂದ ಕೂಡಿದ ರುದ್ರಾಕ್ಷಿಮಾಲೆಯನ್ನು ಆಶೀರ್ವದಿಸಿ "ಗುರುಭಕ್ತಕೇಸರಿ" ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು. ಆದಿನ ಮಧ್ಯಾಹ್ನದಿಂದ 3 ದಿನಗಳವರೆಗೆ ಸಾವಿರಾರು ಬ್ರಾಹ್ಮಣರಿಗೆ ಸಂತರ್ಪಣೆಯು ನಡಿಸಲ್ಪಟ್ಟಿತು. ಕೈ|| ಶ್ರೀಗಳವರ ಶಿಲಾಮೂರ್ತಿ ಪ್ರತಿಷ್ಠೆಮಾಡಲ್ಪಟ್ಟ ಸ್ಥಳವನ್ನು ಬಹಳ ಚಾಕಚಕ್ಯದಿಂದ ಸಂಪಾದಿಸಿ ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ ತಿಂಗಳುಗಟ್ಟಲೆ ಪ್ರಯಾಸಪಟ್ಟರೂ ಸರ್ಕಾರದವರಿಗೂ ಸಾಧ್ಯವಲ್ಲದಿರುವ ಸ್ಥಳದ ಅಚ್ಚುಕಟ್ಟು, ದೇವಸ್ಥಾನ ನಿರ್ಮಾಣ, ಉದ್ಯಾನ ವಿದ್ಯುದ್ದೀಪಾದಿ ಅಲಂಕಾರ ಮೊದಲಾದ ಕಾರ್ಯಗಳನ್ನು ಉಪಾಯಾಂತರದಿಂದ ಮತ್ತು ತಮಗಿದ್ದ ಅಧಿಕಾರಗಳ ದರ್ಪದಿಂದ ಲೀಲಾಜಾಲವಾಗಿ ನೆರವೇರಿಸಿದ ಮ|| ಶ್ರೀಕಂಠೇಶ್ವರ ಅಯ್ಯರ್‌ರವರ ಸಾಹಸಕ್ಕೆ ಅವರಿಗೆ ಲಭ್ಯವಾಗಿರುವ ಗುರುಭಕ್ತಕೇಸರಿ ಎಂಬ ಪ್ರಶಸ್ತಿಯ ಬಹುಮಾನವು ದೊಡ್ಡದೇನೂ ಅಲ್ಲವು.

ರಾಜಧಾನಿಯಲ್ಲಿ ಎಕ್ಸೈಸ್ ಕಂಟ್ರಾಕ್ಟರಾಗಿದ್ದ ಮ|| ಎಂ. ರಂಗರಾಯರು ತಮ್ಮ ಸ್ನೇಹಿತರುಗಳಾದ ಮ|| ಜಿ. ಎಸ್. ಸುಬ್ಬರಾಯರು, ಮ|| ಬಿ. ನರಸಿಂಹಮೂರ್ತಿಯವರು ಮತ್ತು ಮ|| ಎಚ್. ಆರ್. ನಾರಾಯಣರಾಯರು ಇವರುಗಳೊಡನೆ ರಾಜಧಾನಿಯ ಲಷ್ಕರ್ ಮೊಹಲ್ಲಾ ಗರುಡೀಕೇರಿಯಲ್ಲಿರುವ ಮ|| ಮುಲ್ತಾನಿ ಸವಾಲ್ದಾಸ್ ಸೇಟರ ಆಹ್ವಾನದ ಮೇಲೆ ಅವರಮನೆಗೆ ಕಳೆದ ತಾ|| 30ರ ರಾತ್ರಿ 12 ಗಂಟೆಯ ವೇಳೆಯಲ್ಲಿ ಹೋಗಿರುವಾಗ್ಗೆ ಪೋಗುಮಲ್ ಮತ್ತು ಸವಾಲ್ದಾಸ್ ಸೇಟ್ ಈ ಉಭಯರೂ ರಂಗರಾಯರು ತಮ್ಮಿಂದ ಸಾಲಾಶಿಗೆದುಕೊಂಡಿದ್ದ ಹಣವನ್ನು ಕೊಡಬೇಕೆಂದು ಕೇಳಿ ರಾಯರು ಆ ಸಮಯದಲ್ಲಿ ತಮ್ಮಲ್ಲಿ ಹಣವಿಲ್ಲವೆಂದು ಹೇಳಿದರೂ ಕೇಳದೆ ಬಲವಂತಮಾಡಲುಪಕ್ರಮಿಸಲು ರಾಯರು ತಾವು ಕಿವಿಯಲ್ಲಿಟ್ಟಿದ್ದ ವಜ್ರದ ಕಡುಕುಗಳನ್ನೂ ಕೈಯಲ್ಲಿ ಕಟ್ಟಿದ್ದ ಭಂಗಾರದ ಗಡಿಯಾರವನ್ನೂ ಕಳೆದು ಕೊಟ್ಟುಬಿಟ್ಟರು. ಇವರ ಸ್ನೇಹಿತರುಗಳು ಮನೆಯ ಹೆಬ್ಬಾಗಲು ಭದ್ರಪಡಿಸಲ್ಪಟ್ಟಿದ್ದುದರಿಂದ ಹಿತ್ತಲಬಾಗಲಿನಿಂದ ತಪ್ಪಿಸಿಕೊಂಡು ಹೊರಗೆಬಂದು ಮ|| ರಂಗರಾಯರ ಬಂಗಲೆಯಲ್ಲಿ ವಾಸವಾಗಿದ್ದ ಅಡ್ವೋಕೇಟ್ ಮ|| ಎಂ. ವಿ. ವೆಂಕಟರಾಯರಿಗೆ ಈ ವಿಷಯವನ್ನು ತಿಳಿಸಲು ಅವರು ಆ ಕೂಡಲೆ ಸವಾಲ್ದಾಸ್ ಸೇಟರ ಮನೆಗೆಬಂದು ಬಾಗಿಲನ್ನು ತೆಗಿಸಿ ಒಳಗೆಹೋಗಿ ರಾಯರಿಂದ ನಡೆದ ಸಂಗತಿಯನ್ನು ತಿಳಿದುಕೊಂಡು ಅವರೊಡನೆ ಲಷ್ಕರ್ ಪೊಲೀಸು ಠಾಣಾಕ್ಕೆಹೋಗಿ ನಡೆದ ಸಂಗತಿಯಲ್ಲವನ್ನೂ ಡೈರಿಯಲ್ಲಿ ಬರೆಯಿಸಿ ಬಂದರು. ಮಾರನೆಯ ದಿನ ಪೊಲೀಸ್ ಇನ್ಸ್‌ಪೆಕ್ಟರು ಮ|| ಕೃಷ್ಣಯಂಗಾರರು ಎರಡನೆಯ ಅಪರಾಧಿಯಿಂದ ನಗಗಳನ್ನು ವಹಿಸಿಕೊಂಡು ಸಾವಾಲ್ದಾಸ್ ಸೇಟ್ ಪೋಗುಮಲ್‌ಸೇಟ್ ಮತ್ತು ಸವಾಲ್ದಾಸ್‌ಸೇಟರ ಇಬ್ಬರು ಆಳುಗಳನ್ನು ಸೆರೆಹಿಡಿದು ಸಿಟಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದುದರ ಮೇಲೆ ಕಳೆದ ಸೋಮವಾರ ಮಂಗಳವಾರಗಳಲ್ಲಿ ಮ|| ರಂಗರಾಯರ ಸಾಕ್ಷಿ ವಿಚಾರಣೆಯು ನಡೆದು ಉಳಿದವರ ವಿಚಾರಣೆಗಾಗಿ ಈ 18ಕ್ಕೆ ಹಿಯರಂಗು ಇಡಲ್ಪಟ್ಟಿರುತ್ತದೆ.

ಭರತಖಂಡದ ವೃತ್ತಾಂತಗಳು.

ಜಯತೋಗೆ ಕಳೆದ ಸೋಮವಾರ ಹೋದ 500 ಅಕಾಲಿಜನರು ಸೆರೆಹಿಡಿಯಲ್ಪಟ್ಟರು.

ಗುಜರಾತಿಗೆ ಸೇರಿದ ಪೋರಿಬಂದರ್ ಎಂಬ ರೇವೆ ಪಟ್ಟಣದಲ್ಲಿ ಎರಡು ಕೊಂಬುಗಳ ಸಮೇತ ಒಂದು ಹೆಣ್ಣುಮಗುವು ಜನಿಸಿರುವುದಂತೆ!

ಕುಂಭಕೋಣದಲ್ಲಿ ಒಬ್ಬ ವೈಶ್ಯ ಯುವಕನು ದೇವರ ರಥಕ್ಕೆ ಸಿಕ್ಕಿ ಹತಳಾಗುತ್ತಿದ್ದ ಹೆಂಗುಸನ್ನು ಬದುಕಿಸುವ ಪ್ರಯತ್ನದಲ್ಲಿ ತಾನೇ ಪ್ರಾಣಾಪಾಯವನ್ನು ಹೊಂದಿ ಮೃತನಾದನು.

ಬಳ್ಳಾರಿಯಲ್ಲಿ ಕುಡಿಯಲ್ಲಿಕ್ಕೆ ನೀರಿಲ್ಲದೆ ಜನಗಳ ಮತ್ತು ದನಕರುಗಳ ಹಾಹಾಕಾರವು ವಿಶೇಷವಾಗಿದೆ. ಬಿಸಿಲಿನ ತಾಪದಿಂದ ಸಿಡಿಬು ವಾಂತಿಭೇದಿ ರೋಗಗಳು ಪ್ರಬಲಿಸಿ ಜನರು ಬಹಳವಾಗಿ ಸಾಯುತ್ತಿರುವರು.

ನೀರಿಗೆ ಉಪ್ಪನ್ನು ಹಾಕಿ ಸೇವಿಸುವುದರಿಂದ ಜನರ ಮದ್ಯಸೇವನೆಯ ಮತ್ತು ಧೂಮಪಾನದ ದುರಭ್ಯಾಸವೂ ಇತರ ರೋಗಗಳೂ ನಿವಾರಣೆಯಾಗುವುವೆಂದು ಲವಣಾನಂದ ಜೆಸ್ವಾಮಿಯವರು ಸ್ವಾನುಭವದಿಂದ ತಿಳಿಸಿರುತ್ತಾರೆ.

ಭರತಖಂಡದ ಎಲ್ಲಾ ಸ್ಟೇಟ್ ರೈಲ್ವೆಗಳಿಂದಲೂ ಕಳೆದ ಮಾರ್ಚಿ ತಾ|| 22ಕ್ಕೆ ಕಡೆಯಾದ ಒಂದು ವಾರದಲ್ಲಿ 1 ಕೋಟಿ 90 ಲಕ್ಷ ರೂ. ಉತ್ಪನ್ನವಾಗಿರುವುದಾಗಿಯೂ ಕಳೆದ ವರ್ಷ ಇದೇ ಕಾಲದಲ್ಲಿ 2 ಕೋಟಿ ರೂ. ಉತ್ಪನ್ನವಾಗಿದ್ದುದಾಗಿಯೂ ಪ್ರಕಟವಾಗಿದೆ.

ಬರೋಡಾ ಪ್ರಭುತ್ವದವರು ತಮ್ಮ ಸಂಸ್ಥಾನದಲ್ಲಿ ಮದ್ಯಸೇವನೆಯ ದುರ್ವ್ಯಸನವನ್ನು ಕಡಿಮೆಮಾಡುವ ಉದ್ದೇಶದಿಂದ ಪ್ರಸಕ್ತ ವರ್ಷದಲ್ಲಿ 23 ಮದ್ಯದ ಅಂಗಡಿಗಳನ್ನು ಕಡಿಮೆ ಮಾಡುವುದಾಗಿ ಪ್ರಕಟಿಸಿರುತ್ತಾರೆ. ಇಂತಹ ದುರ್ವ್ಯಸನ ನಿವಾರಣಾ ಪ್ರಯತ್ನವು ಈ ಮೈಸೂರು ಸಂಸ್ಥಾನದಲ್ಲೂ ಮಾಡಲ್ಪಡಬಾರದೆ?

ಉತ್ತರದೇಶದಲ್ಲಿ ಹಿಂದೂ ಮಹಮ್ಮದೀಯರಿಗುಂಟಾಗಿರುವ ಮನಸ್ತಾಪವನ್ನು ಬಗೆಹರಿಸಿ ಪರಸ್ಪರ ಪ್ರೀತಿವಿಶ್ವಾಸವನ್ನುಂಟುಮಾಡುವುದಕ್ಕಾಗಿ ಯಾವದ್ಭಾರತ ಹಿಂದೂ ಮಹಮ್ಮದೀಯ ಮಹಾಸಭೆಯು ಈ ತಾ|| 23 ರಲ್ಲಿ ಬೊಂಬಾಯಿನಲ್ಲಿ ನಡಿಸಲ್ಪಡಲು ನಿರ್ಧರಿಸಲ್ಪಟ್ಟು ಭರತಖಂಡದ ಮುಖಂಡರಿಗೆಲ್ಲಾ ಆಹ್ವಾನಪತ್ರಿಕೆಗಳು ಕಳುಹಲ್ಪಟ್ಟಿರುತ್ತವೆ.

ರಾಮನಾಡಿನ ರಾಜರಮೇಲೆ ಚೊಕ್ಕಲಿಂಗಸೆಟ್ಟರು ಮಾನನಷ್ಟಕ್ಕಾಗಿ 2 ಲಕ್ಷ ರೂಪಾಯಿಗಳು ಬರಬೇಕೆಂದು ದಾವಾಮಾಡಿ ವಿವಾದವು ನಡಿಯುತ್ತಿರುವಾಗ್ಗೆ ಮೃತರಾಗಲು, ಅವರ ಮಗ ತನ್ನ ತಂದೆಯ ಸ್ಥಾನದಲ್ಲಿ ತನ್ನನ್ನು ವಾದಿಯಾಗಿ ಸೇರಿಸಬೇಕೆಂದು ಅರ್ಜಿ ಕೊಟ್ಟಿದ್ದನು. ಅದರ ಮೇಲೆ ವಿಚಾರಣೆಯು ನಡೆದು ಮಾನನಷ್ಟದ ದ್ರವ್ಯವನ್ನು ಒರಮಾಡಿಕೊಳ್ಳಲು ಮಾಡಲ್ಪಟ್ಟ ವಿವಾದಕ್ಕೆ ವಾದಿಯ ಮಗನು ಹಕ್ಕುದಾರನಾಗಿರುವುದಿಲ್ಲವೆಂದು ತೀರ್ಮಾನಿಸಲ್ಪಟ್ಟಿತು.

ನಭಾ ಸಂಸ್ಥಾನದ ಮಹಾರಾಜರವರು ಪದಭ್ರಷ್ಟರಾದ ಮೇಲೆ ಅವರ ತಾಯಿಯವರಿಗೆ ಅಧಿಕಾರಗಳಿಂದ ಕೊಡಲ್ಪಡುತ್ತಿದ್ದ ಮಾಸಾಶನವು ಕಡಿಮೆ ಮಾಡಲ್ಪಟ್ಟಿತ್ತು. ಇದು ಅವರ ಊಟವುಪಚಾರಾದಿಗಳಿಗೆ ಸಹ ಸಾಕಾಗುವುದಿಲ್ಲವೆಂದು ದೂರು ಮಾಡಲ್ಪಟ್ಟಿದ್ದುದರಮೇಲೆ ಮಹಾರಾಜರವರು ಸಂಸ್ಥಾನದಿಂದ ಹೊರಗಡೆಗೆ ಕಳುಹಲ್ಪಟ್ಟನಂತರ ಅವರ ತಾಯಿಯವರಿಗೆ ಸಲ್ಲುತ್ತಿರುವ ಮಾಸಾಶನವು ಹೆಚ್ಚಿಸಲ್ಪಟ್ಟಿರುವುದಾಗಿ ಶಿರೋಮಣಿ ಗುರುದ್ವಾರಪ್ರಬಂಧಕ ಸಂಘದವರಿಂದ ಪ್ರಕಟಿಸಲ್ಪಟ್ಟಿದೆ.

ಜೋಳದಕಡ್ಡಿಯ ಸೋಗನ್ನು ತುಂಡುತುಂಡಾಗಿ ಕತ್ತರಿಸಿ ನೆಲದಲ್ಲಿ ಹೂಳಿಡುವುದರಿಂದ ಸೋಗು ಒಣಗಿ ಹರಟಾಗಿ ಗಿರದೆ ಯಾವಾಗಲೂ ಮೃದುವಾಗಿರುವುದರಿಂದ ದನಗಳ ಮೇವಿಗೆ ಅಭಾವವಾದ ಕಾಲದಲ್ಲಿ ಅದು ಒಳ್ಳೆಯ ಮೇವಾಗಿ

ರುವುದೆಂದು ಬೊಂಬಾಯಿನ ವ್ಯವಸಾಯ ಶಾಖೆಯವರು ಪರೀಕ್ಷಿಸಿರುತ್ತಾರೆ. ದನಗಳ ಮೇವಿಗೆ ಅಭಾವವಾಗಿರುವಕಡೆ ರೈತರು ಜೋಳದ ಕಡ್ಡಿಯ ಸೋಗನ್ನು ಭೂಮಿಯಲ್ಲಿ ಹೂಣಿಟ್ಟು ಸೋಗು ಮೃದುವಾದ ಮೇಲೆ ತಮ್ಮ ದನಕರುಗಳ ಮೇವಿಗುಪಯೋಗಿಸಬಹುದಲ್ಲವೆ!

ಬಂಗಾಳಾಕ್ಕೆ ಸೇರಿದ ನದಿಯಾ ಡಿಸ್ಟ್ರಿಕ್ಟಿನಲ್ಲಿ ಅಸ್ಪೃಶ್ಯತಾನಿವಾರಣಾ ಪ್ರಯತ್ನಶಾಲಿಗಳಾದ ಬ್ರಾಹ್ಮಣರು ಪಂಚಮರಾದಿಯಾಗಿ ಅಸ್ಪೃಶ್ಯಜನರಿಂದ ಕೂಡಿದ ಒಂದು ಸಭೆಯನ್ನ ನಡಿಸಿ ಪಂಚಮರ ಹಸ್ತದಿಂದ ನೀರನ್ನು ತರಿಸಿ ಪಾನಮಾಡಿ ತಮ್ಮ ಜಾತಿ ತಾರತಮ್ಯರಾಹಿತ್ಯ ಭಾವವನ್ನು ಪ್ರದರ್ಶಿಸಿದರಲ್ಲದೆ ಸಮಾಜಸುಧಾರಣಾಭಿಲಾಷಿಗಳೆಲ್ಲರೂ ಅಂತರಂಗ ಬಹಿರಂಗವಾಗಿ ತಮ್ಮ ನಿಜಮನೋಭಾವವನ್ನು ವ್ಯಕ್ತಗೊಳಿಸಬೇಕಾಗಿ ಬೋಧಿಸಿದರೆಂದು ಸಿ. ಆರ್. ದಾಸರಿಂದ ನಡಿಸಲ್ಪಡುವ ಮುಂಬಯಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸಮಾಜಸುಧಾರಕರೆಂದು ನಟಿಸುವ ಈ ದೇಶದ ಮಹನೀಯರು ನದಿಯಾದ ಬ್ರಾಹ್ಮಣರಂತೆ ಆಚರಿಸಿ ತಮ್ಮ ನಿಜಮನೋಭಾವವನ್ನು ವ್ಯಕ್ತಗೊಳಿಸುವವರಾಗಲಿ.

ವಿಶಾಖಾಪಟ್ಟಣದ ಡಿಸ್ಟ್ರಿಕ್ಟಿಗೆ ಸೇರಿದ ಪೆನುಗಾಕಂ ಎಂಬ ಗ್ರಾಮದಲ್ಲಿ ಒಂದು ಹೆಣ್ಣುಹಂದಿಯು ಒಂದು ಗಂಡು ಮತ್ತೊಂದು ಹೆಣ್ಣು ಹೀಗೆರಡು ಮಾನುಷ ಅವಳಿಜವಳಿ ಮಕ್ಕಳನ್ನು ಹೆತ್ತಿರುವುದಾಗಿಯೂ, ಅವು ಸಜೀವವಾಗಿರುವುದಾಗಿಯೂ ಜನರು ನಾನಾಕಡೆಯಿಂದ ತಂಡೋಪತಂಡವಾಗಿ ಬಂದು ನೋಡಿಕೊಂಡು ಹೋಗುತ್ತಿರುವುದಾಗಿಯೂ ಪ್ರಕಟವಾಗಿದೆ. ಕೆಲ ವರ್ಷಗಳಹಿಂದೆ ಮೈಸೂರು ಜೀವಣ್ಣರಾಯನ ಕಟ್ಟೆಯ ಏರಿಯ ಕೆಳಗೆ ಯಾವಳೋ ವಿಧವೆಯು ಆಗತಾನೆ ಪ್ರಸವಿಸಿ ಬಿಸಾಡಿದ್ದ ಮಗುವಿನ ಬಳಿ ಒಂದು ಹೆಣ್ಣುಕತ್ತೆಯು ಮೇಯುತ್ತಿರುವುದನ್ನು ಯಾವನೋ ಕಂಡು, ಒಂದು ಕತ್ತೆಯು ಒಂದು ಮನುಷ್ಯಮಗುವನ್ನು ಹೆತ್ತಿರುತ್ತದೆಂದು ಕುಚೋದ್ಯಕ್ಕೆ ಹೇಳಲು ಅದು ಊರಿನಲ್ಲೆಲ್ಲಾ ಪುಂಖಾನುಪುಂಖವಾಗಿ ಹರಡಿ ಜನರು ತಂಡತಂಡವಾಗಿ ಹೋಗಿ ನೋಡಿ ನಾಚಿಗೆಗೊಂಡು ಬಂದ ಅಂಶವು ಈ ಸಂದರ್ಭದಲ್ಲಿ ಸ್ಮರಣೆಗೆ ಬರುತ್ತದೆ.

ಈಗತಾನೆ ಆರಂಭಗೊಂಡಿರುವ ರಕ್ತಾಕ್ಷಿ ಸಂವತ್ಸರದಲ್ಲಿ ಉತ್ತರದೇಶದಕಡೆ ಮಳೆಯಧಿಕವಾಗಿ ಒಂದು ನದೀನದಗಳಲ್ಲೂ ಕೆರೆಕುಂಟೆಗಳಲ್ಲೂ ನೀರು ತುಂಬಿ ಹರಿಯುವುದು, ಆದರೆ ಪ್ರವಾಹದಿಂದ ನಷ್ಟವೇನೂ ಸಂಭವಿಸುವುದಿಲ್ಲ; ಹಣ್ಣು ಹಂಪಲಗಳು ಕೆಡುವುವು; ಪೂರ್ವ ದೇಶಗಳಲ್ಲಿ ಯುದ್ಧಾರಂಭವಾಗಿ ವಿಶೇಷ ಮರಣವಾಗುವುದು; ವಾಯು ಗುಣವು ಚೆನ್ನಾಗಿದ್ದು ಹೆಚ್ಚು ಬೆಳೆಯಾಗುವುದು; ದೇಶದ ಸಂಪದಭಿವೃದ್ಧಿಯಾಗುವುದು, ಆದರೆ ಆರ್ಥಿಕಸ್ಥಿತಿಯು ಮಾತ್ರ ತೃಪ್ತಿಕರವಾಗಿರುವುದಿಲ್ಲವು; ಪದಾರ್ಥಗಳ ಬೆಲೆಯಲ್ಲಿ ಬಹಳ ಬದಲಾವಣೆಯಾಗುವುದು; ದೇಶದ ವ್ಯಯವು ಅಧಿಕವಾಗುವುದು; ಘೋರಕೃತ್ಯಗಳು ಹೆಚ್ಚುವುವು; ಕಾರಾಗೃಹಗಳಲ್ಲಿ ಗೊಂದಲವು ಹೆಚ್ಚಿ ಬಂದಿಗಳು ತಪ್ಪಿಸಿಕೊಂಡುಹೋಗುವ ಪ್ರಯತ್ನ ನಡಿಯುವುದು; ದೇಶದ ಹೊರಗೂ ಒಳಗೂ ರಾಜಕೀಯ ಸಂಘಗಳು ನಡಿಯುವುವು; ವಾಂತಿಭೇದಿ ಮೊದಲಾಗಿ ಸಾಂಕ್ರಾಮಿಕ ಜಾಡ್ಯಗಳು ಪ್ರಬಲಿಸಿ ವಿಶೇಷ ಮರಣವಾಗುವುದು; ಭರತಖಂಡದ ಎಲ್ಲೆಕಟ್ಟು ಪ್ರದೇಶಗಳಲ್ಲಿ ಕಲಹ ಜರಗುವುದು; ಇಂಗ್ಲೆಂಡಿನ ಜನರಲ್ಲಿ ಅಸಮಾಧಾನ, ಪದಾರ್ಥಗಳ ಕೊರತೆ, ಜನರಿಗೆ ಉದ್ಯೋಗಾಭಾವ, ಕೆಲಸಗಾರರ ಮುಷ್ಕರ, ಸರ್ಕಾರಿಯಾಡಳಿತಗಳಿಗೆ ಪ್ರತಿಬಂಧಿಕ ಇತ್ಯಾದಿ ಕಾರ್ಯಗಳು ಜರಗುವುವು ಎಂದು ಒಬ್ಬ ಜ್ಯೋತಿಷ್ಯನು ಒಂದು ಆಂಗ್ಲಭಾಷಾ ಪತ್ರಿಕೆಯಲ್ಲಿ ಬರೆದಿರುತ್ತಾನೆ.

ವಿದೇಶದ ವೃತ್ತಾಂತಗಳು.

ತುರ್ಕಿ ಸುಲ್ತಾನ್ ಅಬ್ದುಲ್ ಹಾಮಿದ್‌ರವರ ಪತ್ನಿ ಸಮೇತವಾಗಿ ರಾಜಕುಟುಂಬಕ್ಕೆ ಸೇರಿದ 50 ರಾಜಕುಮಾರಕುಮಾರಿಯರುಗಳು ಕಾನಸ್ಟಾಂಟಿನೋಪಲಿನಿಂದ ಬೇರತ್ತಿಗೆ ಬಂದಿರುವುದಾಗಿ ವರ್ತಮಾನವಿದೆ.

ಅಮೇರಿಕೆಯ ಯನೈಟೆಡ್ ಸ್ಟೇಟ್ಸಿಗೆ ಸೇರಿದ ಒಂದೂರಿನಲ್ಲಿ 114 ವರ್ಷ ವಯಸ್ಸಿನ ಒಬ್ಬವೃದ್ಧಳು ಅರೋಗದೃಢಕಾಯಳಾದ ಸ್ತ್ರೀಯಿರುತ್ತಾಳೆ. ಈಕೆಗೆ 44 ಜನ ಮೊಮ್ಮಕ್ಕಳೂ, 50 ಜನ ಮುಮ್ಮಕ್ಕಳೂ ಇರುತ್ತಾರಂತೆ.

ಲಂಡನ್ ಪಟ್ಟಣದ ಬಳಿ ವೆಂಬ್ಲೆ ಎಂಬಲ್ಲಿ ಏರ್ಪಡಿಸಲ್ಪಟ್ಟಿರುವ ಬ್ರಿಟಿಷ್ ಸಾಮ್ರಾಜ್ಯ ಮಹಾವಸ್ತುಪ್ರದರ್ಶನದ ಆರಂಭೋತ್ಸವವು ಈ ತಾ|| 23 ರಲ್ಲಿ ಯುವರಾಜರಿಂದ ನಡಿಸಲ್ಪಡುವುದು. ಯುವರಾಜರ ಆರಂಭೋತ್ಸವ ಭಾಷಣವು ಇಂಗ್ಲೆಂಡಿನಲ್ಲೂ ಇತರ ದೇಶಗಳಲ್ಲೂ ಏಕಕಾಲದಲ್ಲಿ ತಂತಿಯಿಲ್ಲದೆ ಯಂತ್ರಗಳ ಮೂಲಕ ಕೇಳಲ್ಪಡುವಂತೆ ಏರ್ಪಡಿಸಲ್ಪಟ್ಟಿರುವುದು.

ವಿಯ್ಯಾನದಲ್ಲಿ ಪ್ರಾಣಿ ಮಾಂಸಕ್ಕೆ ಬದಲಾಗಿ ಗೋಧಿ ಮತ್ತು ಗೋಧಿಹಿಟ್ಟು ಇವುಗಳ ಮಿಶ್ರಣದಿಂದ ಮೇಸರ್ ಎಂಬ ಒಂದು ಪದಾರ್ಥವು ಹೊಸದಾಗಿ ಮಾಡಲ್ಪಡುತ್ತಿರುವುದು. ಇದು ಬೆಲೆಯಲ್ಲಿ ಮಾಂಸಕ್ಕಿಂತಲೂ ಬಹಳ ಸುಲಭವಾಗಿರುವುದಲ್ಲದೆ ಮಾಂಸದ ರುಚಿಯುಳ್ಳದಾಗಿರುವದಂತೆ. ಮತ್ತು ಪ್ರಾಣಿಮಾಂಸವನ್ನು ಮುಟ್ಟದೆ ಈ ಮೇಸರ್ ಮಾಂಸವನ್ನು ಬಿಡದೆ ಸೇವಿಸುತ ಬಂದಲ್ಲಿ ಅನೇಕ ರೋಗಗಳು ಗುಣವಾಗುವುವೆಂದು ವೈದ್ಯರು ಹೇಳುತ್ತಾರೆ.

ನ್ಯೂರಾಚೆಲ್ಲಿನಲ್ಲಿ ನಾರ್ತ್ ಏಮಿಸ್ಸ್ಯ ಬ್ಯಾಂಕಿನ ವೈಸ್ ಪ್ರೆಸಿಡೆಂಟಾದ ಥಿಯೋಡರ್‌ಉಲ್ಫ್ ಎಂಬಾತನು ಸೋಫಿಲೇಕ್ ಎಂಬಾತೆಯನ್ನು ಕ್ರೈಸ್ತ ದೇವಾಲಯದಲ್ಲಿ ವಿಧ್ಯುಕ್ತವಾಗಿ ವಿವಾಹಮಾಡಿಕೊಂಡು ದೇವಾಲಯದಿಂದ ಉತ್ಸವಪೂರ್ವಕವಾಗಿ ಬರುತ್ತಿರುವಾಗ್ಗೆ ಅವನ ಮಗನಾದ ಫಿಂಕ್ಲೀನ್‌ಪಿಯಡ್ ಉಲ್ಫ್ ಎಂಬುವವನು ತಂದೆಯನ್ನು ಕಂಡು ನೀನು ಈಗ ಲಗ್ನವಾಗಿರುವ ವಿಧವಾ ಹೆಂಡತಿಯ ಮಗಳನ್ನು ಕಳೆದವಾರ ನಾನು ವಿವಾಹಮಾಡಿಕೊಂಡೆನೆಂದುಹೇಳಿ ಎಲ್ಲರೂ ಒಟ್ಟುಗೂಡಿ ಮನೆಗೆ ಹೋಗಿ ತಮ್ಮ ಆಪ್ತೇಷ್ಟಮಿತ್ರಮಂಡಳಿಯನ್ನು ಬರಮಾಡಿಕೊಂಡು ಔತಣದಿಂದ ಸತ್ಕರಿಸಿ ಕಳುಹಿಕೊಟ್ಟು ತಾವು ದಂಪತಿಗಳು ವಿಹಾರಾರ್ಥವಾಗಿ ಪರಸ್ಥಳಗಳಿಗೆ ಪ್ರಯಾಣ ಮಾಡಿದರು.

ಗೂಳಿಗಳು ಕಾಳಗಮಾಡುವುದು ಸರ್ವಸಾಮಾನ್ಯವಾಗಿರುತ್ತದಷ್ಟೆ? ಆದರೆ ಸ್ವಿಟ್ಜರ್ಲೆಂಡಿನಲ್ಲಿ ಹಸುಗಳು ಗೂಳಿಗಳಂತೆಯೇ ಕಾಳಗಮಾಡುವುದರಲ್ಲಿ ಬಹಳ ಪ್ರಸಿದ್ಧವಾಗಿವೆ. ಇವುಗಳ ಬೆಲೆಯು ಬಹಳ ಹೆಚ್ಚು ಮತ್ತು ಇವು ಬಹಳ ಅಕ್ಕರೆಯಿಂದ ಸಾಕಲ್ಪಡುತ್ತವೆ. ಇವು ಕಾಳಗದಲ್ಲಿ ತಲೆಯನ್ನು ತಗ್ಗಿಸಿ ಬಾಲವನ್ನು ನೆಟ್ಟಗೆ ನಿಗುರಿಸಿಕೊಂಡು ಬಹು ಆಕ್ರೋಶದಿಂದ ಬುಸುಗುಟ್ಟುತ್ತ ನುಗ್ಗಿ ಕಾದಾಡುವುವು. ಈ ಕಾಳಗದ ಹೋರಾಟದಲ್ಲಿ ಕೆಲವಕ್ಕೆ ಕಣ್ಣುಗಳೂ ಕೊಂಬುಗಳೂ ಹೋಗುವವಲ್ಲದೆ ಮೈಮೇಲೆ ಗಾಯಗಳಾಗುವವು. ಕಾಳಗದಲ್ಲಿ ಗೆದ್ದ ಹಸುಗಳಿಗೆ ಮೊದಲನೆಯ ಬಹುಮಾನವು 12000 ರೂ. ವರೆಗೂ ಸಾಮಾನ್ಯವಾದವುಗಳಿಗೆ 4500 ರೂ. ವರೆಗೂ ಕೊಡಲ್ಪಡುವುವು.

ಪದಭ್ರಷ್ಟನಾದ ಕಲೀಫನು ತುರ್ಕಿ ಪ್ರಭುತ್ವದದೇರ್ಪಾರ್ಟಿಗೆ ವಿರುದ್ಧವಾಗಿ ಆಚರಿಸಲುದ್ಯುಕ್ತನಾಗಿರುವುದರಿಂದ, ಆತನಿಗೆ ಧನಸಹಾಯ ಮಾಡಕೂಡದೆಂಬ ಸಿದ್ಧಾಂತವನ್ನು ನ್ಯಾಷನಲ್ ಅಸೆಂಬ್ಲಿಯಲ್ಲಿ ಇಸ್ಮತ್ ಪಾಷಾಯವರು ತಿಳಿಸಿದರು. ತುರ್ಕಿ ಸ್ಥಾನದವರಲ್ಲದ ಆರ್ಮೇನಿಯನ್ನರು ಸಾಂಸೂನ್ ಮತ್ತು ಲೆಫ್ಕೆಗೆ ಮಧ್ಯೆ ಪೂರ್ವದಿಕ್ಕಿನಲ್ಲಿ ವಾಸಮಾಡಕೂಡದೆಂದೂ, ಅರಬ್ಬಿಯನ್ನರೂ ಜಾರ್ಜಿಯನ್ನರೂ ಸಿರಿಯಾ ಮತ್ತು ಜಾರ್ಜಿಯಾಗಳಿಂದ ಹೊರಗಡೆ ನೆಲಸಕೂಡದೆಂದೂ ಕಾನಸ್ಟಾಂಟಿನೋಪಲಿನಿಂದ ಹೊರಗಡೆ ಕುರ್ದು ಜನರ ವಿನಾ ತುರ್ಕಿ ದೇಶಸ್ಥರಲ್ಲದವರು ಒಟ್ಟು ಪ್ರಜಾಸಂಖ್ಯೆಯಲ್ಲಿ ಹತ್ತನೇ ಒಂದು ಭಾಗಕ್ಕೆ ಹೆಚ್ಚಾಗಿರಕೂಡದೆಂದೂ ನ್ಯಾಷನಲ್ ಅಸೆಂಬ್ಲಿಯಲ್ಲಿ ತಿರ್ಮಾನಿಸಲ್ಪಟ್ಟಿತು.

ಲಂಡನ್ ನಗರವಾಸಿಗಳಾಗಿದ್ದ ಇಬ್ಬರು ಸಹೋದರರು ಇಹಲೋಕ ಸುಖವನ್ನು ಪಡೆಯಲು ಬೇಕಾದ ಸಾಹಾಯ್ಯ ಸಂಪತ್ತುಗಳಿದ್ದರೂ ಅನುಭವಿಸದೆ ಪರಮಕೃಪಣರಾಗಿ ದ್ರವ್ಯಶೇಖರದಲ್ಲೇ ಆಯುಷ್ಯವನ್ನು ಕಳೆಯುತ್ತಿದ್ದು ಕೆಲ ದಿನಗಳ ಹಿಂದೆ ಮೃತರಾದರು. ಇವರಲ್ಲೊಬ್ಬನು 40–50 ವರ್ಷಗಳವರೆಗೂ ಸ್ನಾನಮಾಡದಿದ್ದು ಒಂದು ದಿವಸ ಸ್ನಾನಮಾಡಿ ಹೊರಗೆ ಬರುತಲೇ ಸತ್ತನು. ಇನ್ನೊಬ್ಬನು ರಕ್ತಜಲನೆಯಾಧಿಕ್ಯದಿಂದ ಮೃತನಾದನು. ಅರವತ್ತು ವರ್ಷ ವಯಸ್ಸಿನ ಬೇರೊಬ್ಬ ಕೃಪಣವೃದ್ಧನು ರೋಗದಿಂದ ನರಳುತ್ತಿದ್ದಾಗ್ಗೂ ವೈದ್ಯರ ಸಹಾಯವನ್ನಪೇಕ್ಷಿಸದೆ ಮತ್ತು ತನ್ನುಪಚಾರಕ್ಕೆ ಯಾರನ್ನೂ ಇಟ್ಟುಕೊಳ್ಳದೆ ಮಂಚದಿಂದ ನೆಲದಮೇಲೆ ಬಿದ್ದು ಮೃತನಾದನು. ಇಂತಹ ಕೃಪಣಾಗ್ರೇಸರರು ನಮ್ಮ ಸೀಮೆಯಲ್ಲೂ ಎಷ್ಟೋ ಜನರಿರುವರು.

ನೋಟೀಸ್.

ಮಂಡ್ಯದ ತಾ|| ಕೊಪ್ಪದ ಹೋಬಳಿ ಬೆಸಗರಹಳ್ಳಿಯಲ್ಲಿರುವ ಸಂಗಪ್ಪನವರ ಮೊದಲನೆಮಗ ಮರಿಬಸಪ್ಪ ಮತ್ತು ಎರಡನೆಮಗ ನಂಜಪ್ಪನ ಮಗ ಚಿಕ್ಕಬಸಪ್ಪ ಸಹ ಇದರಿಂದ ತಿಳಿಸುವದೇನಂದರೆ—ಮರಿಬಸಪ್ಪನಾದ ನನ್ನ ಕಿರಿತಮ್ಮ ಮತ್ತು ಚಿಕ್ಕಬಸಪ್ಪನಾದ ನನ್ನ ಚಿಕ್ಕಪ್ಪ ಪವತಿಯಾದ ಗುರಪ್ಪನ ಹೆಂಡತಿ ಚೆನ್ನಬಸಮ್ಮನಿಗೆ ಗಂಡುಹೆಣ್ಣು ಮಕ್ಕಳುಗಳಿಲ್ಲ ಮತ್ತು ಈಕೆಯ ಜೀವನಾಂಶಕ್ಕೆ ನಾವೇ ಕೊಟ್ಟುಕೊಂಡು ಬರುತ್ತಿದ್ದೇವೆ. ಹೀಗಿದ್ದರೂ ಸದರಿ ಚೆನ್ನಬಸಮ್ಮನು ದುಷ್ಟಜನರ ಪ್ರೇರಣೆಯಿಂದ 500-600 ರೂಪಾಯಿ ಬೆಲೆಬಾಳುವ ರಾಸುಗಳನ್ನೂ 500 ರೂ.ಗಳ ನಗಗಳನ್ನೂ ಪರಭಾರೆ ಮಾಡಿರುವುದಾಗಿಯೂ, ನಮಗೆ ತಿಳಿಯದ ಹಾಗೆ ಸ್ಥಿರಸ್ವತ್ತನ್ನು ಆಧಾರ ಭೋಗ್ಯ ಮೊದಲಾದ ಪರಭಾರೆ ಮಾಡುವ ದುರಾಲೋಚನೆಯಲ್ಲಿರುತ್ತಾಳೆಂದೂ ಕೇಳುತ್ತೇವೆ. ಪವತಿಯಾದ ಗುರಪ್ಪನ ಆಸ್ತಿಗೆ ನಾವೇ ಬಾಧ್ಯರಾಗಿರುವದರಿಂದ ನಾಹಕ್ಕುದಾರಳಾದ ಚನ್ನಮ್ಮನಿಂದ ಯಾರಾದರೂ ಸ್ವತ್ತುಗಳನ್ನು ಯಾವವಿಧದಿಂದಲಾದರೂ ಪರಭಾರೆ ಮಾಡಿಸಿಕೊಂಡಲ್ಲಿ ಅದು ಸ್ಥಿರವಾಗತಕ್ಕದ್ದಲ್ಲವೆಂದು ಈ ನೋಟೀಸಿನಿಂದ ತಿಳಿಸಿದೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ಲಗ್ನದ ಫಂಡು.

1. ಚಿತ್ರದುರ್ಗದ ತಾಲ್ಲೂಕು ಚಿಕ್ಕಣ್ಣನಹಳ್ಳಿಯ ಶ್ರೀ ಕೆಂಡದಾರ್ಯ ಶಿವಯೋಗಿಗಳ ಕೈಲಾಸಗಣಾರಾಧನೆಯ ಕಾಲದಲ್ಲಿ ತೆಗೆದದ್ದು ಗರ್ಲ್ ಸ್ಕೂಲ್ ಹೆಡಮಾಸ್ಟರಾದ ಮ|| ರಾ|| ಸಿ. ರಾಚೋಟಪ್ಪನವರ ಮೂಲಕ ಬಂದದ್ದು. ರೂ. 10-0-0
2. ಮಾಗಡಿ ತಾಲ್ಲೂಕು ದೊಳ್ಳೇನಹಳ್ಳಿ ಮ|| ರಾ|| ನಂಜಪ್ಪನವರ ಮಗನ ಲಗ್ನದಲ್ಲಿ ವಧೂವರರ ಕಡೆಯಿಂದ ವಸೂಲಾದದ್ದು ಶಿವಗಂಗೆ ಮ|| ರಾ|| ಸಾಹುಕಾರ್ ರೇವಣ್ಣನವರ ಮೂಲಕ. ರೂ. 2-0-0

ಜುಮ್ಲಾ ರೂ. 12-0-0

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ,
ಬೆಂಗಳೂರು ಸಿಟಿ.

ಅಧ್ಯಾಪಕರು ಬೇಕು.

ಬಳ್ಳಾರಿಯಲ್ಲಿ ಸ್ಥಾಪಿತವಾಗಿರುವ ವೀರಶೈವ ಪ್ರೈಮರಿ ಸ್ಕೂ ಸಂಸ್ಕೃತವನ್ನು ಎರಡನೇಭಾಷೆಯಾಗಿ ತೆಗೆದುಕೊಂಡು ಮೈಸೂರು ಕನ್ನ ಅಪ್ಪರ್‌ಸೆಕೆಂಡರಿ ಪಾಸುಮಾಡಿರುವ ಅಧ್ಯಾಪಕರೊಬ್ಬರೂ ಮದ್ರಾ ಲೋವರ್‌ಸೆಕೆಂಡರಿ ಟ್ರೈನಿಂಗ್ ಪಾಸುಮಾಡಿರುವ ಅಧ್ಯಾಪಕರೊಬ್ಬ ಬೇಕಾಗಿರುತ್ತಾರೆ. ಇಷ್ಟಪಟ್ಟವರು ವೇತನ ವಿಷಯವಾಗಿಯೂ ಉ ವಿಷಯವಾಗಿಯೂ ಕೆಳಗೆ ಸಹಿಮಾಡಿದವರೊಡನೆ ಪತ್ರವ್ಯವಹಾರವನ್ನು ಮಾ ವುದಲ್ಲದೆ, ತಮ್ಮ ವಯಸ್ಸು ಜಾತಿ, ಯೋಗ್ಯತಾಪತ್ರಿಕಾದಿ ವಿಷಯಗಳ ಮೇ ತಿಂಗಳ 15ನೇ ತೇದಿ ಒಳಗಾಗಿಯೇ ತಿಳಿಸತಕ್ಕದ್ದು.

ಪ್ರೆಸಿಡೆಂಟರು,
ಮದ್ರಾಸು ವೀರಶೈವ ವಿದ್ಯಾವರ್ಧಕಸಂಘ,
ಬಳ್ಳಾರಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉ ರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ಪತ್ರವ್ಯವಹಾರಕರಿಗೆ ಸೂಚನೆ

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವ ಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲ ವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ಮಾರುಮಾರುದ್ದ ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಪರಸ್ಪರ ಸಮಾಜಗಳಲ್ಲಿ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಷಮ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೂಅಲ್ಲದೆ ಕೆಲವರು ಸುಳ್ಳುಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರಃ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಾಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧದ ಲೇಖನಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕರೂ ಖಂಡಿತವಾಗಿ ಗಮನಿಸಬೇಕು.

—ಸಂಪಾದಕ.

ಸಿಡಗುಂದಿ ರುದ್ರಸ್ವಾಮಿಮಠದ ಯಾತ್ರಾಸಮಾರಂಭವು.

ಬಿಜಾಪೂರ ಡಿ|| ಬಾಗೇವಾಡಿ ತಾ|| ಪೈಕಿ ಸುಪ್ರಸಿದ್ಧವೂ ಪುಣ್ಯಸ್ಥಳವೂ ಆದ ಸಿಡಗುಂದಿ ರುದ್ರಸ್ವಾಮಿಮಠದ ಯಾತ್ರಾಸಮಾರಂಭವು ಪ್ರತಿವರ್ಷದಂತೆ ಈ ಸಾರೆಯಾದರೂ ತಾ|| 19-4-1924 ರಲ್ಲಿ ಬಹಳೇ ವಿಜೃಂಭಣೆಯಿಂದ ಜರಗತಕ್ಕದ್ದಿರುತ್ತದೆ. ರಥೋತ್ಸವದ ಹಿಂದೆ ಇಲ್ಲಿಯ ಪಟ್ಟದ ರುದ್ರಮಹಾಸ್ವಾಮಿಗಳವರ ಪಲ್ಲಕ್ಕಿಯುತ್ಸವವೂ ಅಲ್ಲದೆ ಹುಬ್ಬಳ್ಳಿ ತಾ|| ಉಮಚಗಿ ಮಳೇಮಠದ ಬಸವರಾಜಶಾಸ್ತ್ರಿಗಳವರ ಪುರಾಣಪಠಣವೂ ವ ಹಾಗಣಾರಾಧನೆಯೂ ನಡಿಯುತ್ತದೆ. ಈ ಶಾಸ್ತ್ರಿಗಳ ತಮ್ಮಂದಿರಾದ ಗವಾಯಿ ಶಿವಲಿಂಗಯ್ಯನವರ ಸಂಗೀತವೂ ಇಲ್ಲಿಯ ಮಠಾಧ್ಯಕ್ಷರಾದ ಶ್ರೀಗಳವರ ಧರ್ಮ ಮತ್ತು ಬ್ರಹ್ಮಚರ್ಯದ ಮೇಲೆ ಉಪನ್ಯಾಸವೂ ನಡಿಯುವವು ಮತ್ತು ತಾ|| 20-4-1924ರಲ್ಲಿ ಕುಸ್ತಿ ಕನಕಾಂಗಿ ಆಟ ವಗ್ಗೈರೆ ಆಗುತ್ತವೆ. ಆದಕಾರಣ ತಾವು ಇಷ್ಟಮಿತ್ರಸಮೇತ ಬಂದು ಇಲ್ಲಿ ಜರಗತಕ್ಕ ಧಾರ್ಮಿಕೋಪನ್ಯಾಸಗಳನ್ನು ಕೇಳಿ ಪುಣ್ಯಭಾಗಿಗಳಾಗಬೇಕಾಗಿ ಕೋರುವ,

ಓರ್ವ ಮಠದ ಶಿಷ್ಯ.

ಯಾತಗಿರಿ ವೀರಶೈವ ವಿದ್ಯಾವರ್ಧಕ ಫಂಡಿಗೆ ಧನ ಸಹಾಯ.

ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನ ಪೀಠಾಧ್ಯಕ್ಷ ನಾಗಲೂ ಭಿಕ್ಷಾವರ್ತಿ ಮಹಾಸ್ವಾಮಿಗಳವರ ಪ್ರತಿನಿಧಿಗಳು ತಾ|| 25-2-24 ರಲ್ಲಿ ಯಾತಗಿರಿ ಮುಕ್ಕಾಮಾಗಿ ಸಂಸ್ಥಾನದ ಕಾರ್ಯಕ್ರಮಗಳೆಲ್ಲ ಪೂರೈಸಿ ನಂತರ ತಾ|| 27-3-24 ರಲ್ಲಿ ಶ್ರೀಗಳವರ ಸನ್ನಿಧಿಯಲ್ಲಿ ಕಮಿಟಿಯುನಡೆದು ವೇ|| ಮುಸಿಗಿ ಬಸವಪ್ಪಶಾಸ್ತ್ರಿಗಳಿಂದ ಉಪನ್ಯಾಸವು ಜರಿಗಿ ನೈಜಾಂ ವೀರಶೈವ ವಿದ್ಯಾವರ್ಧಕಫಂಡಿಗೆ ಶ್ರೀಗಳವರು 650 ರೂಪಾಯಿಗಳನ್ನು ಫಂಡಿನ ಖಜಾನದಾರರಾದ ಮ|| ರಾ|| ಲಿಂಗೇರಿ ಕೋನಪ್ಪನವರ ಕಡಿಗೆ ಪಾವತಿ ಮಾಡಿಸಿ 350 ರೂ. ಗಳನ್ನು ಮತ್ತೆ ಪಾವತಿಮಾಡಿಸುವದಾಗಿ ಅಪ್ಪಣೆಮಾಡಿರುತ್ತಾರೆ. ಈ ತಾಲ್ಲೂಕಿನ ಪ್ರತಿಗ್ರಾಮಗಳ ವೀರಶೈವರು ಸಂಸ್ಥಾನದ ಕಾಣಿಕಾರೂಪವಾಗಿ ವರ್ಷಾಶನವನ್ನು ಮನೆ ಒಂದಕ್ಕೆ ಒಂದು ರೂಪಾಯಿ ನಾಲ್ಕಾಣೆ ಕೊಡುವಂತೆಯೂ, ಲಿಂಗಧಾರಣ, ದೀಕ್ಷೆ, ಲಗ್ನಾದಿ ಶುಭಕಾರ್ಯಗಳಲ್ಲಿ ಒಂದು ರೂಪಾಯಿಗೆ ಕಡಿಮೆ ಇಲ್ಲದಂತೆ ಅವರವರ ಯೋಗ್ಯತಾಪ್ರಕಾರ ಸದರಿ ಫಂಡಿಗೆ ಕೊಡುವಂತೆಯೂ, ಏರ್ಪಾಡುಮಾಡಿ ಈ ತಾಲ್ಲೂಕಿನ ಗ್ರಾಮಗಳ ವೀರಶೈವರಿಂದ ಒಡಂಬಡಿಕೆ ಸಹಿಗಳು ತೆಗೆದುಕೊಂಡು ಇರುತ್ತಾರೆ.

ಮಾಸ್ಟಿಗುಡಿ ಶಿದ್ಧಲಿಂಗಯ್ಯ.

ನಾಯಕ ಮಹಾಜನರಲ್ಲಿ ವಿಜ್ಞಾಪನೆ.

ತುಮಕೂರಲ್ಲಿ ನಾಯಕರ ಸಂಘವು 1923ನೇ ಫೆಬ್ರವರಿ ಮಾಹೆಯಲ್ಲಿ ಸ್ಥಾಪಿಸಲ್ಪಟ್ಟಿರುವುದು ಅನೇಕರಿಗೆ ತಿಳಿದಿರಬಹುದು. ಈ ಸಂಘದ ಉದ್ದಿಷ್ಟ ಕಾರ್ಯ ಫಲಗಳು ಮೈಸೂರು ಸಂಸ್ಥಾನದವರಿಗೇ ಅಲ್ಲದೆ ಸಂಸ್ಥಾನದ ಹೊರಗಣ ಪ್ರಾಂತದ ನಮ್ಮ ನಾಯಕ ಮಹಾಜನಗಳಿಗೂ ಲಭ್ಯವಾಗುವುದು ಯುಕ್ತವೆಂದೂ, ಇನ್ನು ಸಾವಕಾಶಮಾಡದೆ ಸಂಘದ ಕಾರ್ಯಗಳನ್ನು ನಡೆಯಿಸತಕ್ಕದೆಂದೂ ಬಹುಜನರ ಅಭಿಮತವಿರುವುದರಿಂದ ಕಾರ್ಯಕ್ರಮಗಳನ್ನು ಸಾಂಗವಾಗಿ ನಿರ್ಧರಿಸಲು ಸಾಧ್ಯವಾಗುವಂತೆ ಮತಾಭಿಮಾನಿಗಳಾದ ಅನೇಕ ಮಹನೀಯರನ್ನು ಮುಂದಣ ಮೇ ಮಾಹೆಯಲ್ಲಿ ನಡೆಯುವ ಜನರಲ್ ಮೀಟಿಂಗಿಗೆ ದಯಮಾಡಿಸಬೇಕೆಂದು ಕೇಳಿಕೊಳ್ಳಬೇಕಾಗಿರುವ ಪ್ರಯುಕ್ತ ನಾಯಕ ಮಹಾಶಯರೆಲ್ಲರೂ ತಮ್ಮ ಮತ್ತು ತಮ್ಮ ಬಂಧುವರ್ಗದವರ ಹೆಸರು ವಿಳಾಸಗಳನ್ನೂ ಸ್ಪಷ್ಟವಾಗಿ ಬರೆದು ತಾ|| 20-4-1924ರ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ತಲಪುವಂತೆ ದಯವಿಟ್ಟು ತಪ್ಪದೆ ಕಳುಹಿಸಿಕೊಡಬೇಕಾಗಿ ಪ್ರಾರ್ಥಿಸಿದೆ.

ತಮ್ಮ ವಿಧೇಯ,
ಟಿ. ಎಂ. ಪುಟ್ಟನಾಗಯ್ಯ, ಸೆಕ್ರೆಟರಿ, ನಾಯಕರ ಸಂಘ ತುಮಕೂರು.

ರೈತರ ಕಷ್ಟ.

ಸನ್ 1924 ನೇ ಮಾರ್ಚಿ ತಾ|| 12 ರಲ್ಲಿ ನಮ್ಮ ಶ್ರೀಮನ್ಮಹಾರಾಜರವರು ಪ್ರತಿನಿಧಿ ಮೆಂಬರುಗಳ ಸಭೆ ಸೇರಿಸಿ ಅಪ್ಪಣೆಕೊಡಿಸಿದ ವಿಷಯಗಳು ಮೈಸೂರು ಸ್ಟಾರಿನಲ್ಲಿ ಮುದ್ರಣವಾದದ್ದನ್ನು ನೋಡಿ ನಾವೆಲ್ಲರೂ ಸಂತೋಷಪಟ್ಟೆವು. ಮಹಸ್ವಾಮಿಯವರು ಸದಾಕಾಲದಲ್ಲಿಯೂ ರೈತರ ಕಷ್ಟವೇ ತಮ್ಮ ಕಷ್ಟ ರೈತರ ಸುಖವೇ ತಮ್ಮ ಸುಖವೆಂದು ಭಾವಿಸಿ ತಮ್ಮ ಔದಾರ್ಯಗುಣವನ್ನು ವ್ಯಕ್ತಗೊಳಿಸಿ ಪ್ರಜಾಪ್ರತಿನಿಧಿಸಭೆ ನ್ಯಾಯವಿಧಾಯಕಸಭೆಗಳನ್ನು ಏರ್ಪಡಿಸಿದಾಗ್ಯೂ, ಸರ್ಕಾರದ ನೌಕರರುಗಳೂ ಉಭಯ ಸಭೆಯ ಮೆಂಬರುಗಳೂ ಸಹ ದೇವರು ವರಕೊಟ್ಟರೂ ಪೂಜಾರಿ ವರಕೊಡ ಎಂಬ ಗಾದೆಗೆ ಅನುಸಾರವಾಗಿ ಬಡರೈತರ ಅಹವಾಲುಗಳನ್ನು ಲಕ್ಷ್ಯಕ್ಕೆ ತಾರದೆಯೂ ಗ್ರಾಮ ಗ್ರಾಮಾಂತರಗಳಲ್ಲಿ ಸಂಚಾರಮಾಡದೆಯೂ ಸ್ಥಳದ ಸ್ಥಿತಿಗತಿಗಳನ್ನ ವಿಚಾರಮಾಡದೆಯೂ ಅಧಿಕಾರಿಗಳಿಗೆ ಸಂಬಳ ಬಡ್ತಿ ಮತ್ತು ಮೆಂಬರುಗಳಿಗೆ ಖರ್ಚು ಕುರ್ಚಿ ಸಿಕ್ಕರೆಸಾಕು ಮುದವಣಿಗೆ ಸಾಯಲಿ ಮುದವಗಿತ್ತಿಯೇ ಸಾಯಲಿ ಪುರೋಹಿತರ ಸೌಖ್ಯ ಬಂದರೆ ಸರಿಯನ್ನುವಂತೆ ರೈತರಿಗೆ ಎಷ್ಟು ಕಷ್ಟ ನಷ್ಟಗಳಾದಾಗ್ಯೂ, ಸರ್ಕಾರಕ್ಕೆ ದುಡ್ಡಿನ ಅಭಾವ ಬಂದಾಗ್ಯೂ ಅಧಿಕಾರಿಗಳು ತಮ್ಮ ಕಾಲಕ್ಷೇಪ ಪ್ರಯೋಜನದ ಮೇಲೆ ತೊಡಗಿರುತ್ತಾರೆ. ಮಹಾಸ್ವಾಮಿಯವರು ರೈತರ ಶ್ರೇಯೋಭಿವೃದ್ಧಿಗಾಗಿ ಅಧಿಕಾರಿವರ್ಗದವರನ್ನು ನೇಮಿಸಿರುವರೇ ವಿನಹ ರೈತರ ಅಹಿತಕ್ಕಲ್ಲ. ಮೆಂಬರುಗಳ ಚುನಾವಣೆ ಕಾಲದಲ್ಲಿ ಹಳ್ಳಿ ರೈತರ ಮನೆಬಾಗಲಿಗೆ ಎಷ್ಟು ಕೊರಕಲ ದಾರಿಯಾಗಲಿ ಸಂದಿಗೊಂದಿಯಾಗಲಿ ಸರ್ರನೆ ಬರುತ್ತಿದ್ದ ವೋಟಾರುಗಳು ಈಗ ಯಾವಕಡೆ ಅಡಗಿಕೊಂಡವೊ ತಿಳಿಯದು. ಹೀಗೆ ಮಾಡುವದಕ್ಕಿಂತಲೂ ಕಷ್ಟ ನಷ್ಟಕ್ಕೆ ಗುರಿಯಾಗಿರತಕ್ಕ ರೈತರ ಕಂದಾಯ ಕಮ್ಮಿಮಾಡಿಸಿ [illegible] ಆಶ್ರಯವಿಲ್ಲದ ಜವಾನಿಗೆ ತಲಾಪ್‌ ಬಂದು ರೈಲ್ವೆ ಸೆಸ್ಸು ವಜಾಮಾಡಿಸಿ 250 ರೂಪಾಯಿ ಮೇಲ್ಪಟ್ಟು ಸಂಬಳ ಪಡೆಯುವ ನೌಕರರು ಈಗಿದ್ದ ಪಗಾರದಲ್ಲಿ ಅರ್ಧಭಾಗ ಯಾಕೆ ಕಮ್ಮಿಮಾಡಿಸಬಾರದು? ರೈತರು ವರ್ಷಾವಧಿ ಕಷ್ಟಪಟ್ಟರೂ ತಿಂಗಳಿಗೆ ಮೂರುಪೈ ಪಗಾರ ಬೀಳುವದಿಲ್ಲ. ಇದರಲ್ಲಿ ಹೊಸ ಹೊಸ ತೆರಿಗೆ ಕೊಡುವದೆಂದರೆ ಹ್ಯಾಗೆ? 1923ನೇ ಸಾಲಿನಲ್ಲಿ ವಿಶೇಷ ಮಳೆಯಿಂದ ಅನೇಕ ಜಮೀನುಗಳು ನೀರು ಮುಳುಗಿಹೋಗಿ ರೈತರು ಕಂದಾಯಕೊಟ್ಟು ಹೊಟ್ಟೆಹೊರೆದುಕೊಳ್ಳುವದು ಹ್ಯಾಗೆ? ಈ ವಿಷಯದಲ್ಲಿ ಈವರಿಗೆ ಎಷ್ಟು ಅರ್ಜಿ ಬರೆದುಕೊಂಡಾಗ್ಯೂ ಸ್ಥಳಾಧಿಕಾರಿಗಳ ಹುಜೂರ ಪರಂಬರಿಸಿದಾಗ್ಯೂ ರಿವಿಷನ್ ಬಗ್ಗೆ ಯಾವ ಏರ್ಪಾಡು ನಡದಂತೆ ರೈತರ ತಿಳುವಳಿಕೆಗೆ ಬಂದಿಲ್ಲ. ಈ ಭಾಗದಲ್ಲಿ ಯೋಗ್ಯ ವ್ಯವಸ್ಥೆ ನಡೆಸದೆ ಇದ್ದಲ್ಲಿ ರೈತರು ಬದುಕುವದು ಹ್ಯಾಗೆ? ಕಂದಾಯ ಬಾಕಿ ಬಂದ ಕೂಡಲೆ ಅಧಿಕಾರಿಗಳು ಜಪ್ತಿ ಆರ್ಡರು ಮಾಡುವರೇ ವಿನಹ ರೈತರ ಗತಿಯೇನೆಂದು ಕೇಳುವಹಾಗಿಲ್ಲ. ದಯಾಳು ಸರ್ಕಾರದವರು ಇದನ್ನೆಲ್ಲಾ ಪರ್ಯಾಲೋಚಿಸಿ ಮುಂದಿನ ಏರ್ಪಾಡು ನಡಿಸಾರೆಂದು ಪೂರ್ಣ ನಂಬಿರುವ,

ಓರ್ವ ಪ್ರಜಾಹಿತೈಷಿ.

ಮೆ|| ಅಬ್ದುಲ್ ರಹಿಮಾನ್ ಬಿ. ಎ. ಯವರು.

ಈ ದೊಡ್ಡ ಮನುಷ್ಯರು ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿ ಮಹಮ್ಮದೀಯ ಸಂಘಗಳಿಂದ ಆರಿಸಲ್ಪಡಲು ಒಬ್ಬ ಸದಸ್ಯರಾಗಿ ನಿಂತಿದ್ದು ಚುನಾಯಿಸಲ್ಪಟ್ಟಿರುವುದು ವಾಚಕಮಹಾಶಯರಿಗೆ ಬಹುಶಃ ಗೊತ್ತಿರಬಹುದು. ಆಸಮಯದಲ್ಲಿ ತಮ್ಮ ಮತಬಾಂಧವರಿಗೆ ಅವರು ಕಳುಹಿಸಿಕೊಟ್ಟಿರುವ ಹಿಂದುಸ್ತಾನಿ ಹಸ್ತಪತ್ರಿಕೆಯು (Manifesto) ಹಿಂದುಳಿದ ಜನಾಂಗದವರಿಗೆ ಜ್ಞಾನೋದಯವನ್ನುಂಟುಮಾಡತಕ್ಕದಾಗಿರುವುದರಿಂದ, ದೇಶದ ಮೇಲ್ಮೆಯನ್ನು ಬಯಸತಕ್ಕವರ ಅವಗಾಹನೆಗಾಗಿ ಅದರ ತರ್ಜುಮೆಯನ್ನು ಪ್ರಚಾರಪಡಿಸಲು ಅಪೇಕ್ಷಿಸುತ್ತೇನೆ. ಅದರಲ್ಲಿ ಅವರು ಹೇಳುವುದೇನೆಂದರೆ,—" …. …. …. …

ಈಚೆಗೆ ನಡೆದ ಚುನಾವಣೆಯಲ್ಲಿ ನಾನು ಬೆಂಗಳೂರು ಡಿಸ್ಟ್ರಿಕ್ಟಿನಿಂದ ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ ಮೆಂಬರಾಗಿ ಚುನಾಯಿಸಲ್ಪಟ್ಟಿರುತ್ತೇನೆ. ಇದೂ ಅಲ್ಲದೆ, ಇನ್ನೂ ಅನೇಕ ಕಮಿಟಿಗಳಲ್ಲಿ ನಾನು ಮೆಂಬರಾಗಿ ಇರುತ್ತೇನೆ. ಸ್ಥಳಸಂಕೋಚದಿಂದ ಅದನ್ನೆಲ್ಲಾ ಇಲ್ಲಿ ಬರೆಯಲು ಅವಕಾಶವಿಲ್ಲ. ನಾನು "ಹಿಲಾಲ್" ಪತ್ರಿಕೆಯ ಎಡಿಟರಾಗಿದ್ದು, ದೇಶ ಮತ್ತು ಸ್ವಮತಸೇವೆಯನ್ನು ಮಾಡಿರುವ ಸಂಗತಿ ತಮಗೆ ಗೋಚರವೆ ಇದೆ. ಮುಸಲ್ಮಾನರು ಬ್ರಾಹ್ಮಣೇತರರಲ್ಲಿ (Non Brahmins) ಸೇರಿಸಲ್ಪಟ್ಟದ್ದರಿಂದ ಸ್ವಮತದ ಹಕ್ಕುಬಾಧ್ಯತೆಗಳು ಇದುವರೆಗೆ ಎಷ್ಟರಮಟ್ಟಿಗೆ ತುಳಿಯಲ್ಪಟ್ಟವೆ ಎಂಬುದೂ, ಮತ್ತು ನಮ್ಮ ಕೋಮಿಗೆ ಅದರಿಂದ ಎಷ್ಟು ನಷ್ಟವಾಗುತ್ತಿರುವುದೆಂಬುದೂ ತಮ್ಮಗಳಿಗೆಲ್ಲಾ ಕರತಲಾಮಲಕವಾಗಿ ತಿಳಿದಂಥ ವಿಚಾರವಾಗಿದೆ. ನಾನು ಪ್ರಥಮದಿಂದಲೂ ಇದುವರೆಗೂ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಅಸೆಂಬ್ಲಿಗಳಲ್ಲಿ ಮುಸಲ್ಮಾನರ ವಿದ್ಯಾಭ್ಯಾಸದ ವಿಚಾರವಾಗಿಯೂ, ವಿದ್ಯಾರ್ಥಿ ವೇತನಗಳ ವಿಚಾರದಲ್ಲೂ ಮತ್ತು ಮುಸಲ್ಮಾನರನ್ನು ಬ್ರಾಹ್ಮಣೇತರರಿಂದ ಪ್ರತ್ಯೇಕಪಡಿಸುವ ವಿಚಾರದಲ್ಲೂ ಸಹಾ ಬರವಣಿಗೆಯ ಮೂಲಕವೂ, ಸಂಭಾಷಣೆಯ ಮೂಲಕವೂ ಸದಾ ಸ್ವಮತಸೇವೆಯನ್ನು ಮಾಡುತ್ತಲಿದೇನೆ. ಈ ವಿಚಾರಗಳಲ್ಲಿ ಮಾಡತಕ್ಕ ಕೆಲಸಗಳು ಇನ್ನೂ ಬಹಳ ಮಟ್ಟಿಗೆ ಬಾಕಿ ಇರುತ್ತೆ. ತಾವು ತಮ್ಮ ಅಮೌಲ್ಯವಾದ ಓಟನ್ನು ನನಗೆ ಕೊಟ್ಟು ನನ್ನನ್ನು ತಮ್ಮ ಪ್ರತಿನಿಧಿಯನ್ನಾಗಿ ಅಸೆಂಬ್ಲಿಗೆ ಕಳುಹಿಸುವುದಾದರೆ, ನಾನು ಶಕ್ತ್ಯಾನುಸಾರ ಸ್ವಮತಸೇವೆಯನ್ನು ಮಾಡುವುದರಲ್ಲಿ ಸಿದ್ಧನಾಗಿರುತ್ತೇನೆ."

ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟ್ ಪದವಿಯೂ, ನ್ಯಾಯವಿಧಾಯಕ ಸಭೆಯಲ್ಲಿ ತಮಗೆ ಈಗ ದೊರೆತಿರುವ ಸ್ಥಾನವೂ ಯಾರ ಸಹಾಯದಿಂದ ದೊರೆತಿರುವುದೆಂಬುದನ್ನು ಮೆ|| ಅಬ್ದುಲ್ ರಹಿಮಾನ್‌ರವರು ವಿಚಾರಮಾಡಿ ನೋಡಿದಲ್ಲಿ, ಮೇಲ್ಕಂಡಂತೆ ಬ್ರಾಹ್ಮಣೇತರರ ಜೊತೆಯಲ್ಲಿ ಸೇರಿದ್ದರಿಂದ ಮುಸಲ್ಮಾನರಿಗೆ ನಷ್ಟವಾಯಿತೆಂದು ಎಂದೂ ಹೇಳುತ್ತಿರಲಿಲ್ಲ. ಕಾರ್ಯಸಾಧನೆಯಾದನಂತರ, ಅದು ಏತರಿಂದಾಯಿತೆಂಬುದನ್ನು ಮರೆಯತಕ್ಕದ್ದು ಬಹಳಮಟ್ಟಿಗೆ ಸ್ವಭಾವಸಿದ್ಧವಾಗಿರುವುದು. ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಬಹು ಮತಗಳನ್ನುಳ್ಳವರು ಬ್ರಾಹ್ಮಣೇತರರು. ಅವರ ಸಹಾಯವಿಲ್ಲದೆಯೇ ತಮ್ಮ ಮುಸಲ್ಮಾನ್ ಸಹೋದರರ ಓಟನ್ನೇ ಕಾದುಕೊಂಡಿದ್ದಲ್ಲಿ, ಇವರು ಈ ಪದವಿಗೆ ಬರುತ್ತಿದ್ದರೆ? ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಶೇಕಡ [illegible] ಮೇಲ್ಪಟ್ಟು ಹಿಂದುಳಿದ ಜನಾಂಗಗಳಿಗೆ ಸೇರಿದ ಓಟರುಗಳೇ ಇರುವರು. ತಮ್ಮ ಮಹಮ್ಮದೀಯ ಸಹೋದರರಲ್ಲಿ ಇವರು ಹೇಳಿಕೊಂಡಿರುವ ಪ್ರತಾಪವನ್ನು ತಮಗೆ ನ್ಯಾಯವಿಧಾಯಕ ಸಭೆಗೆ ಚುನಾವಣೆಯಾಗುವುದಕ್ಕೆ ಮೊದಲು ಹೇಳಿದ್ದರೆ, ಇವರ ಚುನಾವಣೆಯ ಪರಿಣಾಮವು ಹೇಗೆ ಆಗುತ್ತಲಿತ್ತೆಂಬುದನ್ನು ಅವರು ಊಹೆಗೆ ತಂದುಕೊಳ್ಳಲಿ. ಅಲ್ಪಸಂಖ್ಯೆಯುಳ್ಳ ಮುಸಲ್ಮಾನ ಪ್ರಜೆಗಳು ಹಿಂದುಳಿದ ಜನಾಂಗದವರ ಸಹಾನುಭೂತಿಯಿಂದಲೇ ತಮ್ಮ ಕುಂದುಕೊರತೆಗಳನ್ನು ಪರಿಹಾರಮಾಡಿಕೊಳ್ಳಲು ಸಾಧ್ಯ. ಮುಂದುವರಿದಿರುವವರ್ಗದವರು ಮುಸಲ್ಮಾನರಲ್ಲಿ ಎಷ್ಟರಮಟ್ಟಿನ ಪ್ರೀತಿವಿಶ್ವಾಸವನ್ನಿಟ್ಟಿರುವರೆಂಬುದು ಜಗತ್ತಿಗೇ ಗೊತ್ತು. ಗತಿಸಿದ ಮ|| ರಾ|| ಬಸವಯ್ಯನವರು ಮ|| ರಾ|| ನವಾಬ್ ಗುಲಾಂ ಮಹಮ್ಮದ್ ಕಲಾಮಿಯವರನ್ನು, ಮ|| ರಾ|| ಅಬ್ಬಾಸ್‌ಖಾನ್‌ರವರನ್ನೂ ತಮ್ಮ ಜೊತೆಯಲ್ಲಿ ಸೇರಿಸಿಕೊಂಡು ಹೋರಾಡಿದ್ದರಿಂದ ಈಗ ಮುಸಲ್ಮಾನರಿಗೆ ಮೈಸೂರು ದೇಶದಲ್ಲಿ ಇರತಕ್ಕ ಅನುಕೂಲಗಳು ದೊರೆತಿರುವವು. ಇವನ್ನೆಲ್ಲಾ ಮರೆತು, ಮೆ|| ಅಬ್ದುಲ್ ರಹಿಮಾನ್‌ರವರು ಮೇಲ್ಕಂಡಂತೆ ಸಂಕುಚಿತಾಭಿಪ್ರಾಯವನ್ನು ತೋರ್ಪಡಿಸಿರುವುದನ್ನು ನೋಡಿದರೆ ಮುಸಲ್ಮಾನರ ಏಳ್ಗೆಯನ್ನು ಬಯಸತಕ್ಕ ಪ್ರತಿಯೊಬ್ಬನಿಗೂ ಆಶ್ಚರ್ಯವಾಗಿರುತ್ತದೆ. ಹಿಂದುಳಿದ ಜನಾಂಗದವರು ಮೆ|| ಅಬ್ದುಲ್ ರಹಿಮಾನ್‌ರವರು ಹೇಳಿರತಕ್ಕ ವಿಚಾರವು ಅವರೊಬ್ಬರ ಅಭಿಪ್ರಾಯವೆಂದು ಮಾತ್ರ ತಿಳಿದು, ಇದುವರೆಗಿನ ಸಹೋದರ ಭಾವನೆಯನ್ನು ಮುಂದೆಯೂ ಇಟ್ಟುಕೊಂಡು ಬರಬೇಕಾಗಿ ಕೋರುವ,

ಮಹಮ್ಮದೀಯರ ಕ್ಷೇಮಾಭಿಲಾಷಿ.

ವೀರಶೈವಸಮಾಜ ಬಂಧುಗಳಿಗೆ ವಿನಂತಿ.

ಅಯ್ಯಾ ಮಹನೀಯರೇ, ಈ ಮಾನವವರ್ಗದಲ್ಲಿ ಐಕ್ಯಮತ್ಯದಿಂದಲೂ ಅಹಿಂಸಾವ್ರತದಿಂದಲೂ ಇದ್ದು, ಆ ಪರಶಿವಮೂರ್ತಿಗೆ ಪ್ರಿಯತರವಾದ ಅಷ್ಟಾವರ್ಣನಿಷ್ಠಾಪರರಾಗಿ ಇದ್ದು, ನಿಜವಾದ ಕೈವಲ್ಯವನ್ನು ಹೊಂದಲಿಕ್ಕೆ ಮುಖ್ಯವೆನಿಸಿದ ಈ ನಮ್ಮ ವೀರಶೈವ ಸಮಾಜದ ಮೊದಲಿನ ಸ್ಥಿತಿಗೂ ಈಗಿನ ಸ್ಥಿತಿಗೂ ಇರುವ ಅಂತರವನ್ನು ಶೋಧಿಸಿದರೆ ಜ್ಞಾನಿಗಳಾದ ಸಮಾಜಸೇವಕರು ದುಃಖಿಸದೆ ಇರಲಾರರು. ಇನ್ನೂ ಬಸವಾದಿ ಪ್ರಮಥರಿಂದಾಚೆಗೆ ಇದ್ದ ನಮ್ಮ ಸಮಾಜದ ಸ್ಥಿತಿಯನ್ನು ನಮ್ಮ ಅಲ್ಪಮತಿಯಿಂದ ವಿಚಾರಮಾಡುತ್ತಿರಲಿಕ್ಕೆ ಜ್ಞಾನಾಂಶವಾದ ಈ ಶಿವಾಚಾರ ಸಮಾಜಕ್ಕೆ ಆದಿಯಿಂದಲೂ ಪಂಚಾಚಾರ್ಯರೇ ಮೂಲಕಾರಣರೆಂತಲೂ ಮತ್ತು ಷಡಾನನ ಮುಖೋದ್ಭವರೆಂತಲೂ ಶಿವಾಚಾರಕ್ಕೆ ಮೂಲಗುರುಗಳೆಂತಲೂ ಜಗತ್ಪ್ರಸಿದ್ಧವಾದ ನಂಬುಗೆ ಇರುವದು. ಆದರೆ ಆದಿ ಅನಾದಿಯಿಂದತ್ತ ಬಸವಣ್ಣನೇ ಭಕ್ತ ಪ್ರಭುದೇವರೇ ಜಂಗಮರಾಗಿ ಷಟ್ಸ್ಥಲವೆಂಬ ಮಹಾಜ್ಞಾನವು ಉದಯಿಸಿ ಸಮಾಜಸೇವಾಸಕ್ತರಾದ ಪಂಚಾಚಾರ್ಯರಿಗೆ ಷಟ್ಸ್ಥಲದವರಿಂದೆ ಮಹಾಜ್ಞಾನವನ್ನು ಬೋಧಿಸಿ ಅವರ ಅಂಗಕ್ಕೆ ಯಾವ ಕರ್ಮವೂ ಅಂಟದಂತೆ ನಿಜವಾದ ಕೈವಲ್ಯವನ್ನು ತೋರಿಸಿ ನಿರಂಜನ ಮಹಾಸ್ವಾಮಿಗಳನ್ನು ಕೂಡಿಕೊಂಡು ಪಂಚಾಚಾರ್ಯರು ನಮ್ಮ ಸಮಾಜವನ್ನು ಬಹಳೇ ಉನ್ನತಸ್ಥಿತಿಯಲ್ಲಿ (ಜೀವಭಾವವಿಲ್ಲದೆ ಸರ್ವರೂ ಮೋಕ್ಷಾವಲಂಬಿಗಳಾಗಿ) ಇರುವ ಕಾಲದಲ್ಲಿ ಕಾಲಗತಿಗೆ ಅನುಸರಿಸಿ ನಮ್ಮ ಸಮಾಜಕ್ಕೆ ಅಜ್ಞಾನವೆಂಬ ಗ್ರಹಣವು ಸ್ಪರ್ಶವಾದ ಸಂಧಿಯನ್ನು ಸಾಧಿಸಿ ಆ ಬಸವಾದಿಪ್ರಮಥರು (ದೇವಾಂಶಸಂಭೂತರು) ತಮ್ಮ ಕರ್ತವ್ಯಕ್ಕೆ ಅನುಸರಿಸಿ ಆ ನಿರಂಜನಮೂರ್ತಿಯಾದ ಪ್ರಭುದೇವರನ್ನು ಬೆಂಬಲವಾಗಿಟ್ಟುಕೊಂಡು ಈ ಭೂಲೋಕದಲ್ಲಿ ಅವತರಿಸಿ ನಮ್ಮ ಸಮಾಜವನ್ನು ಪ್ರಜ್ವಲಿಸಿ ಈ ಕಲ್ಯಾಣದಲ್ಲಿ ತಮ್ಮ ಲೀಲೆಯನ್ನು ಮುಗಿಸಿ ತಮ್ಮ ನಿಜಸ್ಥಾನವಾದ ಶಿವಸನ್ನಿಧಿಯಲ್ಲಿ ಸೇರತಕ್ಕವರಾದರು. ಅಂಥಾ ಸಮಯದಲ್ಲಿ ಬಸವಾದಿಪ್ರಮಥರು ಪ್ರಭುದೇವರಿಂದೆ ನಿತ್ಯದಲ್ಲೂ ಜ್ಞಾನಬೋಧಾಮೃತವನ್ನು ಸೇವಿಸಿ ಈ ಜಗತ್ತಿನ ಸುಖದುಃಖಗಳಿಗೆ ಶಿಲ್ಕದೆ ತಮ್ಮ ನಡೆನುಡಿಗಳಲ್ಲಿಯೇ ನಿಮಗ್ನರಾಗಿದ್ದು ತಮ್ಮ ಕರ್ಮದೇಹವನ್ನು ನೀಗತಕ್ಕವರಾದರು. ಅವರಂತೆ ಇತ್ತೀಚೆಗೆ ಕೆಲವು ದಿವಸಗಳ ಅನಂತರ ಷಟ್‌ಸ್ಥಲ ಗುರುಸ್ಥಲದವರು ಭಿನ್ನಭಾವಗಳಿಲ್ಲದೇ ಇದ್ದು ನಮ್ಮ ಸಮಾಜವನ್ನು ಸಂರಕ್ಷಿಸತಕ್ಕವರಾದರು. ಇನ್ನು ಈ ನವಯುಗದಲ್ಲಿ ನಮ್ಮ ಸಮಾಜದ ಸ್ಥಿತಿಯನ್ನು ವಿಚಾರಮಾಡಿ ನೋಡಿದರೆ ಅಭಿಮಾನವೆಂಬುವದೊಂದು ಹಿರಿಯಭೂತವು ಉದಯವಾಗಿ ನಾಹೆಚ್ಚು ನೀಹೆಚ್ಚು ಎಂದು ಬಡಿದಾಡುವ ಗುರುಸ್ಥಲ ಷಟ್‌ಸ್ಥಲದವರೂ ಹಾಗೂ ಭಕ್ತಮಂಡಳಿಯಲ್ಲಿ ಶೀಲವಂತ ದೀಕ್ಷವಂತ ಪಂಚಮಸಾಲ ಅಕ್ಕಸಾಲ ನಾಗಲಿಕ ಶಿವಶಿಂಪಿ ನೇಯಿಕಾರ ಹಟಕಾರ ಕುಂಬಾರ ಗಾಣಿಗ ಇವರೇ ಮೊದಲಾದ ಅಷ್ಟಾವರ್ಣ ನೀತನಡತೆಗಳನ್ನು ಕಂಡ ಮಹನೀಯರೇ ತಮ್ಮತಮ್ಮೊಳಗೆ ಜಗಳವಾಡಿ ತಮ್ಮತಮ್ಮವರಿಗೆಸೇ ಜಂಗಮದೀಕ್ಷೆಯನ್ನು ಕೊಡಿಸಿ ತಮ್ಮ ಆಚಾರ್ಯಮೂರ್ತಿಯನ್ನಾಗಿ ಮಾಡಿಟ್ಟುಕೊಂಡು ಕಲಹವೆಂಬರೆ ಕಾಲುಕೆದರುತಾ ಅನ್ಯರನ್ನು ಹಳಿಯುತ್ತಿರುವರು. ಇನ್ನು ಶಾಸ್ತ್ರವನ್ನು ಕಲಿತ ಮಹನೀಯರು ಇಂಥ ಕಲಹಗಳಿಗೆ ಸಹಾಯವನ್ನು ಮಾಡಲಿಕ್ಕೆ ಟೊಂಕವನ್ನು ಕಟ್ಟಿಕೊಂಡು ನಿಂತಿದ್ದರಿಂದಲೂ ಮತ್ತಿಷ್ಟು ಕಲಹಕ್ಕೆ ಕಾರಣವಾಗಿ ಅನಾಯಕ ಸಮಾಜವೆಂಬ ಹೆಸರಿನಿಂದೆ ಯಲ್ಲಕ್ಕೂ ಹಿಂದುಳಿದಿರುವದು. ಇದು ನಮ್ಮ ದುರ್ದೈವವೇಸರಿ. ಇನ್ನೂ ಆಚಾರ, ಮತ್ತು ಜ್ಞಾನ ಇವೆರಡರಲ್ಲಿ ಉಂಟಾದ ಕಲಹವು ಕುರುಡ ಕುಂಟರ ನ್ಯಾಯದಂತಿದೆ. ಒಂದು ಸ್ಥಲದಲ್ಲಿ ಓರ್ವ ಹುಟ್ಟುಕುರುಡನು, ಮತ್ತೋರ್ವ ಕಾಲಿಲ್ಲದ ಹೆಳವನು ಇವರೀರ್ವರೂ ಕುಳಿತಿದ್ದ ಸಮಯದಲ್ಲಿ ಒಂದು ಉತ್ತಮವಾದ ಗೃಹಕ್ಕೆ ಅಗ್ನಿಯು ಸೋಂಕಿ ಪ್ರಜ್ವಲಿಸುವದನ್ನು ಕಾಲಿಲ್ಲದವನು ಕಂಡು ಅನ್ನುತ್ತಾನೆ—ಅಣ್ಣಾ ಕುರುಡನೆ ಇಲ್ಲಿಯೇ ಸ್ವಲ್ಪ ದೂರದಲ್ಲಿ ಒಂದು ಮನೆಗೆ ಅಗ್ನಿಯು ಪ್ರವೇಶಿಸಿ ಪುಟವಾಗುತ್ತಲಿದೆ ಇದಕ್ಕೇನು ಉಪಾಯಮಾಡಬೇಕೆಂದು ಕೇಳೆ, ಆ ಕುರುಡನು ತಮ್ಮಾ, ನಾನೇನು ಕಣ್ಣುಗಳಿದ್ದವನೇ, ನಾನೇನುಮಾಡಲಿ, ನನ್ನಿಂದ ಆಗದ ಕಾರ್ಯವನ್ನು ಹೇಳಿದರೆ ಮಾಡುವದೇನು? ಆಗ ಕುಂಟನು ಅಣ್ಣಾ ನೀನು ನನ್ನಗಿಂತಲೂ ಶಕ್ತಿಯುಳ್ಳವನಿದ್ದೀಯೇ, ನನ್ನನ್ನು ನಿನ್ನ ಬೆನ್ನಮೇಲೆ ಕೂಡ್ರಿಸಿಕೊಂಡು ಅಲ್ಲಿಯವರೆಗೂ ನಡೆದರೆ ನಾವೀರ್ವರೂ ಕೂಡಿ ಆ ಅಗ್ನಿಯನ್ನು ಶಾಂತಮಾಡಬಹುದೆಂದು ಈರ್ವರೂ ಐಕ್ಯಭಾವವನ್ನು ಹೊಂದಿ ಅಲ್ಲಿಯವರೆಗೂ ತೆರಳಿ ಆ ಪ್ರಜ್ವಲಿಸುವ ಅಗ್ನಿಯನ್ನು ಶಾಂತಮಾಡತಕ್ಕವರಾದರು. ಇವರಂತೆ ಷಟ್‌ಸ್ಥಲ ಮತ್ತು ಗುರುಸ್ಥಲದ ಯಜಮಾನರು ತಾವು ಐಕ್ಯಮತ್ಯದಿಂದ ಇದ್ದು ಈ ನಮ್ಮ ಸಮಾಜವನ್ನು ಉದ್ಧರಿಸುವರೆಂದು ನಮ್ಮ ಪ್ರಾರ್ಥನೆ ಅದೆ. ವಿಚಾರಶೂನ್ಯನಾದ ಓರ್ವಮನುಷ್ಯನು ತನ್ನ ಬೆರಳನ್ನು ತನ್ನ ಕಣ್ಣಿನಲ್ಲಿ ಊರಿಕೊಂಡು ತನ್ನ ತಾನೇ ನಿಂದಿಸುತ್ತ ಕುಳಿತಹಾಗೆ ಸಮಾಜದವರು ಅಜ್ಞಾನಕ್ಕೆ ಬೀಳದೆ ಐಕ್ಯಭಾವವನ್ನು ಹೊಂದಿ ತಮ್ಮ ತಮ್ಮ ದುರಭಿಮಾನವನ್ನು ತ್ಯಾಗಮಾಡಿ, ನಮ್ಮ ಸಮಾಜೋನ್ನತಿಗೆ ಲಕ್ಷ್ಯವನ್ನು ಕೊಟ್ಟು ಮುಖ ಮರವೆನಿಸಿದ ರಂಭಾಪುರೀಪೀಠಕ್ಕೆ ಯೋಗ್ಯರಾದ ಗುರುಮೂರ್ತಿಯನ್ನು ಚುನಾಯಿಸಿ ಅಧಿಕಾರವನ್ನು ಕೊಟ್ಟು ಆ ಪರಶಿವಮೂರ್ತಿಗೆ ಪ್ರಿಯತರರಾಗಿ ನಿಜವಾದ ಕೈವಲ್ಯವನ್ನು ಪಡೆಯಲಿ ಎಂದು ನಾವೆಲ್ಲರೂ ಸರ್ವದಾ ಅಭಾರಿಯಾಗಿ ಬೇಡಿಕೊಳ್ಳುವ,

ಕಲ್ಯಾಣ ಗುರುವರ್ಗದವರು, ಜ್ಞಾನವರ್ಧಕ ಸಂಘ.

ಹೊಸ ಸ್ಕೂಲುಕಟ್ಟಡದ ಪ್ರವೇಶೋತ್ಸವ.

ತುಮಕೂರು ತಾ|| ಹೆಬ್ಬೂರಿನಲ್ಲಿ ಬಹುಕಾಲದಿಂದಲೂ ಒಂದು ಗೌರ್ನಮೆಂಟು ಸ್ಕೂಲು ಇಲ್ಲದೆ ವಿದ್ಯಾವಿಹೀನತೆಯಲ್ಲಿದ್ದು ಕಳೆದ ಹತ್ತು ವರ್ಷಗಳಲಾಗಾಯತು ಈ ಗ್ರಾಮಸ್ಥರ ಮತ್ತು ಕೆಲವು ಸ್ಥಳೀಯ ಉಪಾಧ್ಯಾಯರುಗಳ ಅಸಾಧಾರಣವಾದ ಮೆಹನತ್ತಿನಿಂದಲೂ ಶ್ರೀಮನ್ಮಹಾರಾಜ ಸರ್ಕಾರದವರ ಸಹಾಯದಿಂದಲೂ ಮೊದಲು ಇಂಗ್ಲಿಷ್ ಮತ್ತು ಕನ್ನಡ ಗ್ರಾಂಟ್ ಸ್ಕೂಲುಗಳು ಸ್ಥಾಪಿತವಾಗಿ ಅವು ಕ್ರಮವಾಗಿ ಗೌರ್ನಮೆಂಟ್ ವಿ.ಇ., ರೂರಲ್ ಎ.ವಿ., ಗೌರ್ನಮೆಂಟ್ ಎ.ವಿ., ಕೊನೆಗೆ ಗೌರ್ನಮೆಂಟ್ ಮಿಡಲ್ ಸ್ಕೂಲುಗಳಾಗಿ ನಡೆದು ಬಂದಿರುತ್ತವೆ. ಇವಕ್ಕೆ ಒಂದು ಕಟ್ಟಡವಿಲ್ಲದೆ ಆದಿಯಿಂದಲೂ ಬಾಡಿಗೆ ಕಟ್ಟಡದಲ್ಲಿ ಸ್ಕೂಲು ನಡೆಸಲ್ಪಡುತ್ತಾ ಕೊನೆಗೆ ಗ್ರಾಮಸ್ಥರು ಸರ್ಕಾರದವರನ್ನು ಬಹಳವಾಗಿ ಪ್ರಾರ್ಥಿಸಿಕೊಂಡದ್ದರ ಮೇಲೆ 5000 ರೂ. ಗಳ ಒಂದು ಕಟ್ಟಡವು ಮುಂಜೂರಾಗಿ ಸ್ಥಳೀಯ ಕಂಟ್ರಾಕ್ಟರಿಂದ ಅತಿ ಕ್ಷಿಪ್ರವಾಗಿ 1924 ನೆಯ ಜನವರಿ ಅಖೈರಿಗೆ ಕಟ್ಟಲ್ಪಟ್ಟಿತು. ಇದರ ಪ್ರವೇಶೋತ್ಸವವು ಮಾರ್ಚಿ 19ನೇ ತಾ|| ಬೆಳಗ್ಗೆ 10 ಗಂಟೆಗೆ ಸರಿಯಾಗಿ ಇನ್ಸ್‌ಪೆಕ್ಟರ್ ಜನರಲ್ ಮ|| ರಾ|| ಸಿ. ಯಸ್. ಬಾಲಸುಂದರಂ ಅಯ್ಯರ್‌ರವರಿಂದ ನಡಿಸಲ್ಪಟ್ಟಿತು. ತುಮಕೂರು ಡಿ|| ಡೆಪ್ಯುಟೀಕಮಿಷನರ್ ಮಿ|| ಮಹಮ್ಮದ್ ಜಹಿರುದ್ದೀನ್ ಮೆಕ್ಕೈಯವರೂ, ವಿದ್ಯಾ ಇಲಾಖೆಯ ಡಿ|| ಇನ್ಸ್‌ಪೆಕ್ಟರ್ ಮ|| ಶ್ರೀಧರಮೂರ್ತಿಗಳವರೂ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ|| ಕೆ. ಎಚ್. ರಾಮಯ್ಯನವರೂ, ಸ್ಕೌಟ್‌ಡೈರೆಕ್ಟರ್ ಮ|| ಸುಬ್ಬರಾಯರವರೂ, ತುಮಕೂರು ರೇಂಜು ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಮ|| ಮಾಧವರಾಯರವರೂ, ಗುಬ್ಬಿ ರೇಂಜು ಇನ್ಸ್‌ಪೆಕ್ಟರ್ ಮ|| ಪುಟ್ಟಣ್ಣನವರೂ ದಯಮಾಡಿಸಿದ್ದರು. ಮಂಟಪಪ್ರವೇಶ ಕಾಲದಲ್ಲಿ ಸ್ಕೌಟ್ ಬಾಲಕರಿಂದ ಸೆಲ್ಯೂಟ್ ಆದೊಡನೆಯೇ ಗರ್ಲ್ಸ್ ಸ್ಕೂಲು ಬಾಲಕಿಯರಿಂದ ಸ್ವಾಗತಪದ್ಯಗಳು ಹೇಳಲ್ಪಟ್ಟವು. ಆಮೇಲೆ ಇನ್ಸ್‌ಪೆಕ್ಟರ್ ಜನರಲ್ ಮ|| ರಾ|| ಸಿ. ಯಸ್. ಬಾಲಸುಂದರಂ ಅಯ್ಯರ್‌ರವರು ಅಧ್ಯಕ್ಷತೆಯನ್ನು ವಹಿಸಿದ ತರುವಾಯ ಈ ಗ್ರಾಮದ ಛೇರ್‌ಮೆನ್ ಮ|| ರಾಮಣ್ಣನವರು ಅಡ್ರಸ್ಸನ್ನು ಓದಿ ಒಪ್ಪಿಸಿದರು. ಅನಂತರ ಮ|| ರಾಮಕೃಷ್ಣಯ್ಯನವರು ಲಾಗಾಯತಿನಿಂದ ಈ ದಿವಸದ ವರೆಗೂ ಇರುವ ಸ್ಕೂಲು ಚರಿತ್ರೆಯನ್ನು ಓದಿದರು. ಇದಾದ ಮೇಲೆ ಸಂವಾದರೂಪವಾದ "ಅಂಗದನ ಫಿರ್ಯಾದು" ಎಂಬ ನಾಟಕವು ಮಿಡ್ಲ್ ಸ್ಕೂಲು ಬಾಲಕರಿಂದ ನೋಡುವವರ ಮನಸ್ಸನ್ನು ಆಕರ್ಷಿಸುವಂತೆ ಅಭಿನಯಿಸಲ್ಪಟ್ಟಿತು. ತರುವಾಯ ಅಭಿಜನ್ಮುಹೂರ್ತಕ್ಕೆ ಸರಿಯಾಗಿ ಮಿಡಲ್ ಸ್ಕೂಲು ಬಾಗಲಿಗೆ ಹಾಕಿದ್ದ ಬೀಗವನ್ನು ಇ|| ಜ|| ರವರು ಮುದ್ದಾಗಿ ತೆಗೆದು ಒಳಗೆ ರಚಿಸಿದ್ದ ಪ್ರದರ್ಶನವನ್ನು ಪರಾಂಬರಿಸಿ ಸ್ಕೂಲು ಹಿಂಭಾಗದಲ್ಲಿ ಏರ್ಪಡಿಸಿದ್ದ ಪಂಚಮರ ನೆಯಿಗೆ ಪ್ರದರ್ಶನವನ್ನು ಸಮಗ್ರವಾಗಿ ಪರಾಂಬರಿಸಿ ಅನಂತರ ಮಂಟಪಕ್ಕೆ ವಾಪಸು ಚಿತ್ತೈಸಿದರು. ಇಷ್ಟರೊಳಗೆ ಮಧ್ಯಾಹ್ನ 12½ ಗಂಟೆ ಯಾದುದರಿಂದ ಮುಂದಿನ ಕಾರ್ಯಕ್ರಮಗಳನ್ನು ಮಧ್ಯಾಹ್ನಾನಂತರ ಇಟ್ಟುಕೊಂಡು ಟ್ರಾವೆಲರ್ಸ್ ಬಂಗಲೆಗೆ ತೆರಳಿದರು. ಮಧ್ಯಾಹ್ನ ಭೋಜನ, ಗಂಧ, ಪುಷ್ಪ, ತಾಂಬೂಲವಾದ ಮೇಲೆ ಪುನಃ ಪ್ರಾರ್ಥಿಸಲ್ಪಟ್ಟು 3 ಗಂಟೆಗೆ ಮಂಟಪಕ್ಕೆ ದಯಮಾಡಿಸುವ ವೇಳೆ ಸ್ಕೌಟ್ ಬಾಲಕರ ಆಟ ಪಾಟಗಳನ್ನು ನೋಡಿ ಸಂತೋಷಪಟ್ಟು ಬರುವಾಗ ಮಿಡ್ಲ್ ಸ್ಕೂಲು ಮುಂಭಾಗದಲ್ಲಿಟ್ಟಿದ್ದ ಎರಡು ಕಲ್ಪವೃಕ್ಷಗಳ ಪೈಕಿ ಒಂದನ್ನು ಹಜರತ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರೂ ಮತ್ತೊಂದನ್ನು ತುಮಕೂರು ಡಿ|| ಡೆಪ್ಯುಟೀಕಮಿಷನರ್ ಸಾಹೇಬರವರೂ ತಮ್ಮ ತಮ್ಮ ಸ್ವಹಸ್ತಗಳಿಂದ ನಟ್ಟರು. ಅನಂತರ ಇ|| ಜ|| ರವರು ಅಧ್ಯಕ್ಷತೆಯನ್ನು ವಹಿಸಿದ ತರುವಾಯ ಮೈಸೂರು ಸೀಮೆಯ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ|| ಕೆ. ಎಚ್. ರಾಮಯ್ಯನವರ ಭಾಷಣವು ಮುಗಿದ ಮೇಲೆ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಪ್ರೈಮರಿ ವಿದ್ಯಾಭ್ಯಾಸದ ವಿಚಾರದಲ್ಲಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಆಮೇಲೆ ಈ ಊರು ಪ್ರೈಮರಿ ಸ್ಕೂಲು ಮಿಡ್ಲ್ ಸ್ಕೂಲು ಹಿಂದೂಸ್ತಾನಿ ಸ್ಕೂಲ್ ಗರ್ಲ್ಸ್ ಸ್ಕೂಲು ಪಂಚಮ ಸ್ಕೂಲ್ ಬಾಲಕ ಬಾಲಕಿಯರುಗಳಿಗೆ ಸ್ವಹಸ್ತದಿಂದ ಬಹುಮಾನಗಳನ್ನು ದಯಪಾಲಿಸಿದರು. ತುಮಕೂರು ಡಿ|| ಡೆಪ್ಯುಟೀಕಮಿಷನರ್ ಮಿ|| ಜಹಿರುದ್ದೀನ್ ಮೆಕ್ಕೈಯವರು ಸ್ವಾರಸ್ಯವಾದ ಭಾಷಣವನ್ನು ಮಾಡಿ ಈ ಮೀಟಿಂಗು ತುಮಕೂರು ಡಿಸ್ಟ್ರಿಕ್ಟ್‌ಗಳಲ್ಲಿ ನಡೆದ ಮೀಟಿಂಗುಗಳಲ್ಲಿ ಎರಡನೆಯದೆಂತಲೂ ಇದರ ಮೇಲ್ಪಂಗ್ತಿಯನ್ನನುಸರಿಸಬಹುದೆಂತಲೂ ಈ ಸ್ಕೂಲು ಇನ್ನು ಹತ್ತು ವರ್ಷಗಳಲ್ಲಿಯೇ ಹೈಸ್ಕೂಲಾಗಬಹುದೆಂತಲೂ ಭವಿಷ್ಯತ್ಸೂಚಕವಾದ ಮಾತುಗಳನ್ನಾಡಿ ಸಭೆಯವರನ್ನು ಸಂತೋಷಗೊಳಿಸಿದರು. ತರುವಾಯ ಶ್ರೀಮಾನ್ ಜಾರ್ಜ್ ಚಕ್ರವರ್ತಿಯವರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ಮಾಡಲ್ಪಟ್ಟು ಸಭಾಧ್ಯಕ್ಷರಿಗೆ ಹಾರ, ತುರಾಯಿಗಳು ಅರ್ಪಿಸಲ್ಪಟ್ಟು ಸರ್ವರ ಫೋಟೋ ತೆಗೆಯಲ್ಪಟ್ಟು ಸಭಿಕರಿಗೆ ಗಂಧ ಪುಷ್ಪ ತಾಂಬೂಲವಾದ ಮೇಲೆ ಜಯ ಜಯಧ್ವನಿಯಿಂದ ಮೀಟಿಂಗು ಬರಖಾಸ್ತು ಮಾಡಲ್ಪಟ್ಟಿತು. ಪುನಃ ತಾ|| 26-3-24ನೇ ಬುಧವಾರ ಈ ಊರು ಶ್ರೀ ವಿಘ್ನೇಶ್ವರ ಸ್ವಾಮಿಯವರನ್ನು ಉತ್ಸವಪೂರ್ವಕವಾಗಿ ಬಹಳ ವಿಜೃಂಭಣೆಯಿಂದ ಮಿಡಲ್ ಸ್ಕೂಲು ಕಟ್ಟಡಕ್ಕೆ ಬಿಜಯಮಾಡಿಸಿ ಎಲ್ಲಾ ಕೋಮಿನವರಿಗೂ ಅಂದರೆ ಸುಮಾರು 2000 ಜನಗಳಿಗೆ ಪಾನಕ ವಿನಿಯೋಗವು ಇಲ್ಲಿಗೆ ದಯಮಾಡಿಸಿದ್ದ ತುಮಕೂರು ರೇಂಜು ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಮ|| ಸಿ. ಆರ್. ಮಾಧವರಾಯರವರ ಮತ್ತು ತುಮಕೂರು ಡಿ|| ಅ|| ಇಂಜಿನಿಯರ್ ಮ|| ರಾಮಸ್ವಾಮಯ್ಯನವರ ಸಮಕ್ಷಮ ನಡೆಸಲ್ಪಟ್ಟಿತು. ಇಂತಹ ದುರ್ಭಿಕ್ಷ ಕಾಲದಲ್ಲಿಯೂ ಸಹ ಈರೀತಿ ಸುಮಾರು 500 ರೂಪಾಯಿಗಳ ವರೆಗೆ ಖರ್ಚುಮಾಡಿ ವಿದ್ಯಾಭ್ಯಾಸಕ್ಕೋಸ್ಕರ ಪ್ರೋತ್ಸಾಹ ಕೊಡುತ್ತಿರುವ ಈ ಗ್ರಾಮಸ್ಥರಿಗೆ ಭಗವಂತನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಸರ್ವದಾ ಕೊಟ್ಟು ಕಾಪಾಡಲೆಂದು ಹಾರೈಸುವ,

ಒಬ್ಬ ಗ್ರಾಮಸ್ಥ.

ಬ್ರಾಹ್ಮಣೇತರಸ್ವಭಾವ.

ಲೇಖಕ, ಸ್ವಾಮಿವಿರೂಪಾಕ್ಷ ಒಡೆಯರ್, ಪ್ರೊಫೆಸರ್, ಇಂದೋರ್.

ಬ್ರಹ್ಮಾಂಡದಲ್ಲಿರುವ ಮಾನವಪ್ರಾಣಿಗಳೆಲ್ಲಾ ಸರಿಸಮಾನ ಹಕ್ಕುದಾರಿಗಳೆಂಬುದಾಗಿ ವೇದಾದಿ ಸರ್ವಸತ್ಶಾಸ್ತ್ರಗಳು ಹೇಳುತ್ತ ಬಂದಿದ್ದು ಇಲೀಚೆಗೆ ಪೌರಾಣಿಕಕಾಲದಿಂದ ಸ್ವಾರ್ಥವೆಂಬ ದುರಭಿಮಾನದಿಂದ ಪ್ರೇರಿತವಾಗಿ ಬ್ರಾಹ್ಮಣಜಾತಿಯು ತಾನೇ ಶ್ರೇಷ್ಠವೆಂಬುದನ್ನು ತೋರಿಸುವುದಕ್ಕಾಗಿ ಜಾತಿದರ್ಪಣ, ಜಾತಿಕಲ್ಪಲತಾ, ಗೋವಿಂದಾರ್ಣವ, ಶೂದ್ರಕಮಲಾಕರ, ಧರ್ಮಸಿಂಧು, ನಿರ್ಣಯಸಿಂಧು ಮೊದಲಾದ ಅಬದ್ಧಗ್ರಂಥಗಳನ್ನು ರಚಿಸಿಕೊಂಡು ಸ್ವೇಚ್ಛಾಚಾರಿಯಾಗಿ ನಡಿಯಲಾರಂಭಿಸಿತು. ನಾವು ಮೇಲೆ ತೋರಿಸಿದ ಗ್ರಂಥಗಳಲ್ಲಿ ಬ್ರಾಹ್ಮಣೇತರ ಸಮಸ್ತಜಾತಿಯ ಉತ್ಪತ್ತಿವಿಷಯವಾಗಿ ಬರೆದಿರುವ ಬ್ರಾಹ್ಮಣೀ ಕುತ್ಸಿತಬುದ್ಧಿಯನ್ನು ವಿಚಾರಮಾಡಿ ನೋಡಿದರೆ ಇವರಲ್ಲಿ ಪರಜಾತಿಯ ವಿಷಯವಾಗಿ ಎಷ್ಟು ಮಾತ್ಸರ್ಯವಿರುವುದೆಂಬುವುದು ಸ್ಪಷ್ಟ ಕಂಡುಬರುವುದು. ಇಂತಹ ಬ್ರಾಹ್ಮಣರು ದೇಶೋನ್ನತಿಮಾಡುವವರಂತೆ! ಹಾಗೂ ಹಿಂದುಸ್ಥಾನವು ಐಕ್ಯದಿಂದಿರುವದೆಂದು ಮೇಲೆ ಹೇಳುತ್ತ ಸ್ವರಾಜ್ಯ ಬೇಡುತ್ತಿರುವರು. ಇವರು ನಿಂದಿಸಿರುವ ಸಮಸ್ತ ಜಾತಿಗಳಲ್ಲಿ ಲಿಂಗಾಯತ, ಪ್ರಭು, ಜೈನ, ಕಾಯಸ್ಥ, ಕುರುಬ, ಅಂಬಿಗ, ಮೊದಲಾದ ನಾಲ್ಕಾರು ಜಾತಿಗಳನ್ನು ಉದಾಹರಣಾರ್ಥವಾಗಿ ಈ ಲೇಖದಲ್ಲಿ ತೋರಿಸುವೆನು. ಇದರ ಮೇಲಿಂದ ಇವರ ಅಂತರಂಗಿಕ ರಹಸ್ಯವು ಸರ್ವಸಾಮಾನ್ಯ ಜನಾಂಗಕ್ಕೆಲ್ಲಾ ಗೊತ್ತಾಗುವುದು.

ಜಾತಿದರ್ಪಣವೆಂಬ ಸಂಸ್ಕೃತ ಗ್ರಂಥದ ೮ನೇ ಪಾನಿನಲ್ಲಿ—

"ಯೇಶೂದ್ರಾಃ ಪಾಶುಪತಾಸ್ತೇ ಧರ್ಮಪರಾಯಣಾಃ [illegible] ಆರೂಢಪತಿತಾಃ ಸ್ಮೃತಾ ಏವಶೂದ್ರಪಂಕ್ತ್ಯಾಂ [illegible] ಸಂಪಾತೋಯಃ [illegible] ಲಿಂಗಧಾರೀ ಶಿವಲಿಂಗಪ್ರತಿಷ್ಠಯೇತ್"

ತಪೋಧರ್ಮಾಸಕ್ತರಾದ ಪಾಶುಪತರೆನಿಸಿದ ಯಾವ ಶೂದ್ರರೋ ಅವರು ಆರೂಢಪತಿತರೆನ್ನು ಶೂದ್ರಪಂಕ್ತಿಯಲ್ಲಿ ಅನರ್ಹರಾಗುವರು. ಅಂಥವರಿಂದ ಆ ಶೂದ್ರಪಂಕ್ತಿಯಲ್ಲಿ ಹುಟ್ಟಿದವರು ಲಿಂಗವು

ರುವುದೆಂದು ಬೊಂಬಾಯಿನ ವ್ಯವಸಾಯ ಶಾಖೆಯವರು ಪರೀಕ್ಷಿಸಿರುತ್ತಾರೆ. ದನಗಳ ಮೇವಿಗೆ ಅಭಾವವಾಗಿರುವಕಡೆ ರೈತರು ಜೋಳದ ಕಡ್ಡಿಯ ಸೋಗನ್ನು ಭೂಮಿಯಲ್ಲಿ ಹೂಣಿಟ್ಟು ಸೋಗು ಮೃದುವಾದ ಮೇಲೆ ತಮ್ಮ ದನಕರುಗಳ ಮೇವಿಗುಪಯೋಗಿಸಬಹುದಲ್ಲವೆ!

ಬಂಗಾಳಾಕ್ಕೆ ಸೇರಿದ ನದಿಯಾ ಡಿಸ್ಟ್ರಿಕ್ಟಿನಲ್ಲಿ ಅಸ್ಪೃಶ್ಯತಾನಿವಾರಣಾ ಪ್ರಯತ್ನಶಾಲಿಗಳಾದ ಬ್ರಾಹ್ಮಣರು ಪಂಚಮರಾದಿಯಾಗಿ ಅಸ್ಪೃಶ್ಯಜನರಿಂದ ಕೂಡಿದ ಒಂದು ಸಭೆಯನ್ನ ನಡಿಸಿ ಪಂಚಮರ ಹಸ್ತದಿಂದ ನೀರನ್ನು ತರಿಸಿ ಪಾನಮಾಡಿ ತಮ್ಮ ಜಾತಿ ತಾರತಮ್ಯರಾಹಿತ್ಯ ಭಾವವನ್ನು ಪ್ರದರ್ಶಿಸಿದರಲ್ಲದೆ ಸಮಾಜಸುಧಾರಣಾಭಿಲಾಷಿಗಳೆಲ್ಲರೂ ಅಂತರಂಗ ಬಹಿರಂಗವಾಗಿ ತಮ್ಮ ನಿಜಮನೋಭಾವವನ್ನು ವ್ಯಕ್ತಗೊಳಿಸಬೇಕಾಗಿ ಬೋಧಿಸಿದರೆಂದು ಸಿ. ಆರ್. ದಾಸರಿಂದ ನಡಿಸಲ್ಪಡುವ ಮುಂಬಯಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸಮಾಜಸುಧಾರಕರೆಂದು ನಟಿಸುವ ಈ ದೇಶದ ಮಹನೀಯರು ನದಿಯಾದ ಬ್ರಾಹ್ಮಣರಂತೆ ಆಚರಿಸಿ ತಮ್ಮ ನಿಜಮನೋಭಾವವನ್ನು ವ್ಯಕ್ತಗೊಳಿಸುವವರಾಗಲಿ.

ವಿಶಾಖಾಪಟ್ಟಣದ ಡಿಸ್ಟ್ರಿಕ್ಟಿಗೆ ಸೇರಿದ ಪೆನುಪಾಕಂ ಎಂಬ ಗ್ರಾಮದಲ್ಲಿ ಒಂದು ಹೆಣ್ಣುಹಂದಿಯು ಒಂದು ಗಂಡು ಮತ್ತೊಂದು ಹೆಣ್ಣು ಹೀಗೆರಡು ಮಾನುಷ ಅವಳಿಜವಳಿ ಮಕ್ಕಳನ್ನು ಹೆತ್ತಿರುವುದಾಗಿಯೂ, ಅವು ಸಜೀವವಾಗಿರುವುದಾಗಿಯೂ ಜನರು ನಾನಾಕಡೆಯಿಂದ ತಂಡೋಪತಂಡವಾಗಿ ಬಂದು ನೋಡಿಕೊಂಡು ಹೋಗುತ್ತಿರುವುದಾಗಿಯೂ ಪ್ರಕಟವಾಗಿದೆ. ಕೆಲವರ್ಷಗಳಹಿಂದೆ ಮೈಸೂರು ಜೀವಣ್ಣರಾಯನ ಕಟ್ಟೆಯ ಏರಿಯ ಕೆಳಗೆ ಯಾವಳೋ ವಿಧವೆಯು ಆಗತಾನೆ ಪ್ರಸವಿಸಿ ಬಿಸಾಡಿದ್ದ ಮಗುವಿನ ಬಳಿ ಒಂದು ಹೆಣ್ಣುಕತ್ತೆಯು ಮೇಯುತ್ತಿರುವುದನ್ನು ಯಾವನೋ ಕಂಡು, ಒಂದು ಕತ್ತೆಯು ಒಂದು ಮನುಷ್ಯಮಗುವನ್ನು ಹೆತ್ತಿರುತ್ತದೆಂದು ಕುಚೋದ್ಯಕ್ಕೆ ಹೇಳಲು ಅದು ಊರನಲ್ಲೆಲ್ಲಾ ಪುಂಖಾನುಪುಂಖವಾಗಿ ಹರಡಿ ಜನರು ತಂಡತಂಡವಾಗಿ ಹೋಗಿ ನೋಡಿ ನಾಚುಗೆಗೊಂಡು ಬಂದ ಅಂಶವು ಈ ಸಂದರ್ಭದಲ್ಲಿ ಸ್ಮರಣೆಗೆ ಬರುತ್ತದೆ.

ಈಗತಾನೆ ಆರಂಭಗೊಂಡಿರುವ ರಕ್ತಾಕ್ಷಿ ಸಂವತ್ಸರದಲ್ಲಿ ಉತ್ತರದೇಶದಕಡೆ ಮಳೆಯಧಿಕವಾಗಿ ಬಂದು ನದೀನದಗಳಲ್ಲೂ ಕೆರೆಕುಂಟೆಗಳಲ್ಲೂ ನೀರು ತುಂಬಿ ಹರಿಯುವುದು, ಆದರೆ ಪ್ರವಾಹದಿಂದ ನಷ್ಟವೇನೂ ಸಂಭವಿಸುವುದಿಲ್ಲ; ಹಣ್ಣು ಹಂಪಲಗಳು ಕೆಡುವುವು; ಪೂರ್ವ ದೇಶಗಳಲ್ಲಿ ಯುದ್ಧಾರಂಭವಾಗಿ ವಿಶೇಷ ಮರಣವಾಗುವುದು; ವಾಯು ಗುಣವು ಚೆನ್ನಾಗಿದ್ದು ಹೆಚ್ಚು ಬೆಳಸಾಗುವುದು; ದೇಶದ ಸಂಪದಭಿವೃದ್ಧಿಯಾಗುವುದು, ಆದರೆ ಆರ್ಥಿಕಸ್ಥಿತಿಯು ಮಾತ್ರ ತೃಪ್ತಿಕರವಾಗಿರುವುದಿಲ್ಲವು; ಪದಾರ್ಥಗಳ ಬೆಲೆಯಲ್ಲಿ ಬಹಳ ಬದಲಾವಣೆಯಾಗುವುದು; ದೇಶದ ವ್ಯಯವು ಅಧಿಕವಾಗುವುದು; ಘೋರಕೃತ್ಯಗಳು ಹೆಚ್ಚುವುವು; ಕಾರಾಗೃಹಗಳಲ್ಲಿ ಗೊಂದಲವು ಹೆಚ್ಚಿ ಬಂದಿಗಳು ತಪ್ಪಿಸಿಕೊಂಡುಹೋಗುವ ಪ್ರಯತ್ನ ನಡಿಯುವುದು; ದೇಶದ ಹೊರಗೂ ಒಳಗೂ ರಾಜಕೀಯ ಸಂಚುಗಳು ನಡಿಯುವುವು; ವಾಂತಿಭೇದಿ ಮೊದಲಾಗಿ ಸಾಂಕ್ರಾಮಿಕ ಜಾಡ್ಯಗಳು ಪ್ರಬಲಿಸಿ ವಿಶೇಷ ಮರಣವಾಗುವುದು; ಭರತಖಂಡದ ಎಲ್ಲೆಕಟ್ಟು ಪ್ರದೇಶಗಳಲ್ಲಿ ಕಲಹ ಜರಗುವುದು; ಇಂಗ್ಲೆಂಡಿನ ಜನರಲ್ಲಿ ಅಸಮಾಧಾನ, ಪದಾರ್ಥಗಳ ಕೊರತೆ, ಜನರಿಗೆ ಉದ್ಯೋಗಾಭಾವ, ಕೆಲಸಗಾರರ ಮುಷ್ಕರ, ಸರ್ಕಾರಿಯಾಡಳಿತಗಳಿಗೆ ಪ್ರತಿಬಂಧಕ ಇತ್ಯಾದಿ ಕಾರ್ಯಗಳು ಜರಗುವುವು ಎಂದು ಒಬ್ಬ ಜ್ಯೋತಿಷ್ಕನು ಒಂದು ಆಂಗ್ಲಭಾಷಾ ಪತ್ರಿಕೆಯಲ್ಲಿ ಬರೆದಿರುತ್ತಾನೆ.

ವಿದೇಶದ ವೃತ್ತಾಂತಗಳು.

ತುರ್ಕಿ ಸುಲ್ತಾನ್ ಅಬ್ದುಲ್ ಹಾಮಿದ್‌ರವರ ಪತ್ನಿಸಮೇತವಾಗಿ ರಾಜಕುಟುಂಬಕ್ಕೆ ಸೇರಿದ 50 ರಾಜಕುಮಾರಕುಮಾರಿಯರುಗಳು ಕಾನಸ್ಟಾಂಟನೋಪಲಿನಿಂದ ಬೀರತ್ತಿಗೆ ಬಂದಿರುವುದಾಗಿ ವರ್ತಮಾನವಿದೆ.

ಅಮೇರಿಕೆಯ ಯುನೈಟೆಡ್ ಸ್ಟೇಟ್ಸಿಗೆ ಸೇರಿದ ಒಂದೂರಿನಲ್ಲಿ 114 ವರ್ಷ ವಯಸ್ಸಿನ ಒಬ್ಬವೃದ್ಧಳು ಆರೋಗ್ಯದೃಢಕಾಯಳಾದ ಸ್ತ್ರೀಯಿರುತ್ತಾಳೆ. ಈಕೆಗೆ 44 ಜನ ಮೊಮ್ಮಕ್ಕಳೂ, 50 ಜನ ಮುಮ್ಮಕ್ಕಳೂ ಇರುತ್ತಾರಂತೆ.

ಲಂಡನ್ ಪಟ್ಟಣದ ಬಳಿ ವೆಂಬ್ಲೆ ಎಂಬಲ್ಲಿ ಏರ್ಪಡಿಸಲ್ಪಟ್ಟಿರುವ ಬ್ರಿಟಿಷ್ ಸಾಮ್ರಾಜ್ಯ ಮಹಾವಸ್ತುಪ್ರದರ್ಶನದ ಆರಂಭೋತ್ಸವವು ಈ ತಾ|| 23 ರಲ್ಲಿ ಯುವರಾಜರವರಿಂದ ನಡಿಸಲ್ಪಡುವುದು. ಯುವರಾಜರ ಆರಂಭೋತ್ಸವ ಭಾಷಣವು ಇಂಗ್ಲೆಂಡಿನಲ್ಲೂ ಇತರ ದೇಶಗಳಲ್ಲೂ ಏಕಕಾಲದಲ್ಲಿ ತಂತಿಯಿಲ್ಲದೆ ಯಂತ್ರಗಳ ಮೂಲಕ ಕೇಳಲ್ಪಡುವಂತೆ ಏರ್ಪಡಿಸಲ್ಪಟ್ಟಿರುವುದು.

ವಿಯೆನ್ನಾದಲ್ಲಿ ಪ್ರಾಣಿ ಮಾಂಸಕ್ಕೆ ಬದಲಾಗಿ ಗೋಧಿ ಮತ್ತು ಗೋಧಿಹಿಟ್ಟು ಇವುಗಳ ಮಿಶ್ರಣದಿಂದ ಮೇಸರ್ ಎಂಬ ಒಂದು ಪದಾರ್ಥವು ಹೊಸದಾಗಿ ಮಾಡಲ್ಪಡುತ್ತಿರುವುದು. ಇದು ಬೆಲೆಯಲ್ಲಿ ಮಾಂಸಕ್ಕಿಂತಲೂ ಬಹಳ ಸುಲಭವಾಗಿರುವುದಲ್ಲದೆ ಮಾಂಸದ ರುಚಿಯುಳ್ಳದಾಗಿರುವದಂತೆ. ಮತ್ತು ಪ್ರಾಣಿಮಾಂಸವನ್ನು ಮುಟ್ಟದೆ ಈ ಮೇಸರ್ ಮಾಂಸವನ್ನು ಬಿಡದೆ ಸೇವಿಸುತ ಬಂದಲ್ಲಿ ಅನೇಕ ರೋಗಗಳು ಗುಣವಾಗುವುವೆಂದು ವೈದ್ಯರು ಹೇಳುತ್ತಾರೆ.

ನ್ಯೂರಾಚೆಲ್ಲಿನಲ್ಲಿ ನಾರ್ತ್ ಎಮಿರಿಕನ್ ಬ್ಯಾಂಕಿನ ವೈಸ್ ಪ್ರೆಸಿಡೆಂಟಾದ ಥಿಯೋಡರ್‌ಉಲ್ಫ್ ಎಂಬಾತನು ಸೋಫಿಲೇಕ್ ಎಂಬಾಕೆಯನ್ನು ಕ್ರೈಸ್ತ ದೇವಾಲಯದಲ್ಲಿ ವಿಧ್ಯುಕ್ತವಾಗಿ ವಿವಾಹಮಾಡಿಕೊಂಡು ದೇವಾಲಯದಿಂದ ಉತ್ಸವಪೂರ್ವಕವಾಗಿ ಬರುತ್ತಿರುವಾಗ್ಗೆ ಅವನ ಮಗನಾದ ಫಿಂಕ್ಲ್‌ಪಿಯರ್ಡ್‌ಉಲ್ಫ್ ಎಂಬುವವನು ತಂದೆಯನ್ನು ಕಂಡು ನೀನು ಈಗ ಲಗ್ನವಾಗಿರುವ ವಿಧವಾ ಹೆಂಡತಿಯ ಮಗಳನ್ನು ಕಳೆದವಾರ ನಾನು ವಿವಾಹಮಾಡಿಕೊಂಡೆನೆಂದುಹೇಳಿ ಎಲ್ಲರೂ ಒಟ್ಟುಗೂಡಿ ಮನೆಗೆ ಹೋಗಿ ತಮ್ಮ ಆಪ್ತೇಷ್ಟಮಿತ್ರಮಂಡಳಿಯನ್ನು ಬರಮಾಡಿಕೊಂಡು ಔತಣದಿಂದ ಸತ್ಕರಿಸಿ ಕಳುಹಿಕೊಟ್ಟು ತಾವು ದಂಪತಿಗಳು ವಿಹಾರಾರ್ಥವಾಗಿ ಪರಸ್ಥಳಗಳಿಗೆ ಪ್ರಯಾಣಮಾಡಿದರು.

ಗೂಳಿಗಳು ಕಾಳಗಮಾಡುವುದು ಸರ್ವಸಾಮಾನ್ಯವಾಗಿರುತ್ತದಷ್ಟೆ? ಆದರೆ ಸ್ವಿಟ್ಜರ್ಲೆಂಡಿನಲ್ಲಿ ಹಸುಗಳು ಗೂಳಿಗಳಂತೆಯೇ ಕಾಳಗಮಾಡುವುದರಲ್ಲಿ ಬಹಳ ಪ್ರಸಿದ್ಧವಾಗಿವೆ. ಇವುಗಳ ಬೆಲೆಯು ಬಹಳ ಹೆಚ್ಚು ಮತ್ತು ಇವು ಬಹಳ ಅಕ್ಕರೆಯಿಂದ ಸಾಕಲ್ಪಡುತ್ತವೆ. ಇವು ಕಾಳಗದಲ್ಲಿ ತಲೆಯನ್ನು ತಗ್ಗಿಸಿ ಬಾಲವನ್ನು ನೆಟ್ಟಗೆ ನಿಗುರಿಸಿಕೊಂಡು ಬಹು ಆಕ್ರೋಶದಿಂದ ಬುಸುಗುಟ್ಟುತ್ತ ನುಗ್ಗಿ ಕಾದಾಡುವುವು. ಈ ಕಾಳಗದ ಹೋರಾಟದಲ್ಲಿ ಕೆಲವಕ್ಕೆ ಕಣ್ಣುಗಳೂ ಕೊಂಬುಗಳೂ ಹೋಗುವವಲ್ಲದೆ ಮೈಮೇಲೆ ಗಾಯಗಳಾಗುವವು. ಕಾಳಗದಲ್ಲಿ ಗೆದ್ದ ಹಸುಗಳಿಗೆ ಮೊದಲನೆಯ ಬಹುಮಾನವು 12000 ರೂ. ವರೆಗೂ ಸಾಮಾನ್ಯವಾದವುಗಳಿಗೆ 4500 ರೂ. ವರೆಗೂ ಕೊಡಲ್ಪಡುವುವು.

ಪದಭ್ರಷ್ಟನಾದ ಕಲೀಫನು ತುರ್ಕಿ ಪ್ರಭುತ್ವದವೇರ್ಪಾಟಿಗೆ ವಿರುದ್ಧವಾಗಿ ಆಚರಿಸಲುದ್ಯುಕ್ತನಾಗಿರುವುದರಿಂದ, ಆತನಿಗೆ ಧನಸಹಾಯ ಮಾಡಕೂಡದೆಂಬ ನಿರ್ಧಾರವನ್ನು ನ್ಯಾಷನಲ್ ಅಸೆಂಬ್ಲಿಯಲ್ಲಿ ಇಸ್ಮತ್ ಪಾಷಾಯವರು ತಿಳಿಸಿದರು. ತುರ್ಕಿ ಸ್ಥಾನದವರಲ್ಲದ ಅರ್ಮೇನಿಯನ್ನರು ಸಾಂಸೂನ್ ಮತ್ತು ಲೆಫ್ಕೆಗೆ ಮಧ್ಯೆ ಪೂರ್ವದಿಕ್ಕಿನಲ್ಲಿ ವಾಸಮಾಡಕೂಡದೆಂದೂ, ಅರಬ್ಬಿಯನ್ನರೂ ಜಾರ್ಜಿಯನ್ನರೂ ಸಿರಿಯಾ ಮತ್ತು ಜಾರ್ಜಿಯಾಗಳಿಂದ ಹೊರಗಡೆ ನೆಲೆಸಿರಕೂಡದೆಂದೂ ಕಾನಸ್ಟಾಂಟಿನೋಪಲಿನಿಂದ ಹೊರಗಡೆ ಕುರ್ದು ಜನರ ವಿನಾ ತುರ್ಕಿದೇಶಸ್ಥರಲ್ಲದವರು ಒಟ್ಟು ಪ್ರಜಾಸಂಖ್ಯೆಯಲ್ಲಿ ಹತ್ತನೇ ಒಂದು ಭಾಗಕ್ಕೆ ಹೆಚ್ಚಾಗಿರಕೂಡದೆಂದೂ ನ್ಯಾಷನಲ್ ಅಸೆಂಬ್ಲಿಯಲ್ಲಿ ತಿರ್ಮಾನಿಸಲ್ಪಟ್ಟಿತು.

ಲಂಡನ್ ನಗರವಾಸಿಗಳಾಗಿದ್ದ ಇಬ್ಬರು ಸಹೋದರರು ಇಹಲೋಕ ಸುಖವನ್ನು ಪಡೆಯಲು ಬೇಕಾದ ಸಾಹಾಯ್ಯ ಸಂಪತ್ತುಗಳಿದ್ದರೂ ಅನುಭವಿಸದೆ ಪರಮಕೃಪಣರಾಗಿ ದ್ರವ್ಯಶೇಖರದಲ್ಲೇ ಆಯುಷ್ಯವನ್ನು ಕಳೆಯುತ್ತಿದ್ದು ಕೆಲ ದಿನಗಳ ಹಿಂದೆ ಮೃತರಾದರು. ಇವರಲ್ಲೊಬ್ಬನು 40-50 ವರ್ಷಗಳ ವರೆಗೂ ಸ್ನಾನಮಾಡದಿದ್ದು ಒಂದು ದಿವಸ ಸ್ನಾನಮಾಡಿ ಹೊರಗೆ ಬರುತಲೇ ಸತ್ತನು. ಇನ್ನೊಬ್ಬನು ರಕ್ತಚಲನೆಯಾಧಿಕ್ಯದಿಂದ ಮೃತನಾದನು. ಅರವತ್ತು ವರ್ಷ ವಯಸ್ಸಿನ ಬೇರೊಬ್ಬ ಕೃಪಣವೃದ್ಧನು ರೋಗದಿಂದ ನರಳುತ್ತಿದ್ದಾಗ್ಗೂ ವೈದ್ಯರ ಸಹಾಯವನ್ನಪೇಕ್ಷಿಸದೆ ಮತ್ತು ತನ್ನುಪಚಾರಕ್ಕೆ ಯಾರನ್ನೂ ಇಟ್ಟುಕೊಳ್ಳದೆ ಮಂಚದಿಂದ ನೆಲದಮೇಲೆ ಬಿದ್ದು ಮೃತನಾದನು. ಇಂತಹ ಕೃಪಣಾಗ್ರೇಸರರು ನಮ್ಮ ಸೀಮೆಯಲ್ಲೂ ಎಷ್ಟೋ ಜನರಿರುವರು.

ನೋಟೀಸ್.

ಮಂಡ್ಯದ ತಾ|| ಕೊಪ್ಪದ ಹೋಬಳಿ ಬೆಸಗರಹಳ್ಳಿಯಲ್ಲಿರುವ ಸಂಗಪ್ಪನವರ ಮೊದಲನೆಮಗ ಮರಿಬಸಪ್ಪ ಮತ್ತು ಎರಡನೆಮಗ ನಂಜಪ್ಪನ ಮಗ ಚಿಕ್ಕಬಸಪ್ಪ ಸಹ ಇದರಿಂದ ತಿಳಿಸುವದೇನಂದರೆ—ಮರಿಬಸಪ್ಪನಾದ ನನ್ನ ಕಿರೀತಮ್ಮ ಮತ್ತು ಚಿಕ್ಕಬಸಪ್ಪನಾದ ನನ್ನ ಚಿಕ್ಕಪ್ಪ ಪವತಿಯಾದ ಗುರಪ್ಪನ ಹೆಂಡತಿ ಚೆನ್ನಬಸಮ್ಮನಿಗೆ ಗಂಡುಹೆಣ್ಣು ಮಕ್ಕಳುಗಳಿಲ್ಲ ಮತ್ತು ಈಕೆಯ ಜೀವನಾಂಶಕ್ಕೆ ನಾವೇ ಕೊಟ್ಟುಕೊಂಡು ಬರುತಿದ್ದೇವೆ. ಹೀಗಿದ್ದರೂ ಸದರಿ ಚೆನ್ನಬಸಮ್ಮನು ದುಷ್ಟಜನರ ಪ್ರೇರಣೆಯಿಂದ 500-600 ರೂಪಾಯಿ ಬೆಲೆಬಾಳುವ ರಾಸುಗಳನ್ನೂ 500 ರೂ. ಗಳ ನಗಗಳನ್ನೂ ಪರಭಾರೆ ಮಾಡಿರುವುದಾಗಿಯೂ, ನಮಗೆ ತಿಳಿಯದ ಹಾಗೆ ಸ್ಥಿರಸ್ವತ್ತನ್ನು ಆಧಾರ ಭೋಗ್ಯ ಮೊದಲಾದ ಪರಭಾರೆ ಮಾಡುವ ದುರಾಲೋಚನೆಯಲ್ಲಿರುತಾಳೆಂದೂ ಕೇಳುತ್ತೇವೆ. ಪವತಿಯಾದ ಗುರಪ್ಪನ ಆಸ್ತಿಗೆ ನಾವೇ ಬಾಧ್ಯರಾಗಿರುವದರಿಂದ ನಾಹಕ್ಕುದಾರಳಾದ ಚೆನ್ನಮ್ಮನಿಂದ ಯಾರಾದರೂ ಸ್ವತ್ತುಗಳನ್ನು ಯಾವವಿಧದಿಂದಲಾದರೂ ಪರಭಾರೆ ಮಾಡಿಸಿಕೊಂಡಲ್ಲಿ ಅದು ಸ್ಥಿರವಾಗತಕ್ಕದ್ದಲ್ಲವೆಂದು ಈ ನೋಟೀಸಿನಿಂದ ತಿಳಿಸಿದೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ಲಗ್ನದ ಫಂಡು.

1. ಚಿತ್ರದುರ್ಗದ ತಾಲ್ಲೂಕು ಚಿಕ್ಕಣ್ಣನಹಳ್ಳಿಯ ಶ್ರೀ ಕೆಂಡದಾರ್ಯ ಶಿವಯೋಗಿಗಳ ಕೈಲಾಸಗಣಾರಾಧನೆಯ ಕಾಲದಲ್ಲಿ ತೆಗೆದದ್ದು ಗರ್ಲ್ ಸ್ಕೂಲ್ ಹೆಡಮಾಸ್ಟರಾದ ಮ|| ರಾ|| ಸಿ. ರಾಚೋಟಪ್ಪನವರ ಮೂಲಕ ಬಂದದ್ದು. ರೂ. 10-0-0
2. ಮಾಗಡಿ ತಾಲ್ಲೂಕು ದೊಳ್ಳೇನಹಳ್ಳಿ ಮ|| ರಾ|| ನಂಜಪ್ಪನವರ ಮಗನ ಲಗ್ನದಲ್ಲಿ ವಧೂವರರ ಕಡೆಯಿಂದ ವಸೂಲಾದದ್ದು ಶಿವಗಂಗೆ ಮ|| ರಾ|| ಸಾಹುಕಾರ್ ರೇವಣ್ಣನವರ ಮೂಲಕ. ರೂ. 2-0-0

ಜುಮ್ಲಾ ರೂ. 12-0-0

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ,
ಬೆಂಗಳೂರು ಸಿಟಿ.

ಅಧ್ಯಾಪಕರು ಬೇಕು.

ಬಳ್ಳಾರಿಯಲ್ಲಿ ಸ್ಥಾಪಿತವಾಗಿರುವ ವೀರಶೈವ ಪ್ರೈಮರಿ ಸ್ಕೂಲಿ ಸಂಸ್ಕೃತವನ್ನು ಎರಡನೇಭಾಷೆಯಾಗಿ ತೆಗೆದುಕೊಂಡು ಮೈಸೂರು ಕನ್ನ ಅಪ್ಪರ್‌ಸೆಕೆಂಡರಿ ಪಾಸುಮಾಡಿರುವ ಅಧ್ಯಾಪಕರೊಬ್ಬರೂ ಮದ್ರಾ ಲೋವರ್‌ಸೆಕೆಂಡರಿ ಟ್ರೈನಿಂಗ್ ಪಾಸುಮಾಡಿರುವ ಅಧ್ಯಾಪಕರೊಬ್ಬ ಬೇಕಾಗಿರುತ್ತಾರೆ. ಇಷ್ಟಪಟ್ಟವರು ವೇತನ ವಿಷಯವಾಗಿಯೂ ಉ ವಿಷಯವಾಗಿಯೂ ಕೆಳಗೆ ಸಹಿಮಾಡಿದವರೊಡನೆ ಪತ್ರವ್ಯವಹಾರವನ್ನು ಮಾ ವುದಲ್ಲದೆ, ತಮ್ಮ ವಯಸ್ಸು ಜಾತಿ, ಯೋಗ್ಯತಾಪತ್ರಿಕಾದಿ ವಿಷಯಗಳನ್ನ ಮೇ ತಿಂಗಳ 15ನೇ ತೇದಿ ಒಳಗಾಗಿಯೇ ತಿಳಿಸತಕ್ಕದ್ದು.

ಪ್ರೆಸಿಡೆಂಟರು,
ಮದ್ರಾಸು ವೀರಶೈವ ವಿದ್ಯಾವರ್ಧಕಸಂಘ,
ಬಳ್ಳಾರಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ಪತ್ರವ್ಯವಹಾರಕರಿಗೆ ಸೂಚನೆ

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವ ಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟಿದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ಮಾರುದ್ದಾರುದ್ದ ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಪರಸ್ಪರ ಸಮಾಜಗಳಲ್ಲಿ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಶಮ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೂ ಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರಃ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟ ವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧದ ಲೇಖನಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕರೂ ಖಂಡಿತವಾಗಿ ಗಮನಿಸಬೇಕು.

—ಸಂಪಾದಕ.

ಸಿಡಗುಂದಿ ರುದ್ರಸ್ವಾಮಿಮಠದ ಯಾತ್ರಾಸಮಾರಂಭವು.

ಬಿಜಾಪೂರ ಡಿ|| ಬಾಗೇವಾಡಿ ತಾ|| ಪೈಕಿ ಸುಪ್ರಸಿದ್ಧವೂ ಪುಣ್ಯಸ್ಥಳವೂ ಆದ ನಿಡಗುಂದಿ ರುದ್ರಸ್ವಾಮಿಮಠದ ಯಾತ್ರಾಸಮಾರಂಭವು ಪ್ರತಿವರ್ಷದಂತೆ ಈ ಸಾರೆಯಾದರೂ ತಾ|| 19-4-1924 ರಲ್ಲಿ ಒಳ್ಳೇ ವಿಜೃಂಭಣೆಯಿಂದ ಜರಗತಕ್ಕದ್ದಿರುತ್ತದೆ. ರಥೋತ್ಸವದ ಹಿಂದೆ ಇಲ್ಲಿಯ ಪಟ್ಟದ ರುದ್ರಮಹಾಸ್ವಾಮಿಗಳವರ ಪಲ್ಲಕ್ಕಿಯುತ್ಸವವೂ ಅಲ್ಲದೆ ಹುಬ್ಬಳ್ಳಿ ತಾ|| ಉಮಚಗಿ ಮಳೇಮಠದ ಬಸವರಾಜಶಾಸ್ತ್ರಿಗಳವರ ಪುರಾಣಪಠಣವೂ ಮಹಾಗಣಾರಾಧನೆಯೂ ನಡಿಯುತ್ತದೆ. ಈ ಶಾಸ್ತ್ರಿಗಳ ತಮ್ಮಂದಿರಾದ ಗವಾಯಿ ಶಿವಲಿಂಗಯ್ಯನವರ ಸಂಗೀತವೂ ಇಲ್ಲಿಯ ಮಠಾಧ್ಯಕ್ಷರಾದ ಶ್ರೀಗಳವರ ಧರ್ಮ ಮತ್ತು ಬ್ರಹ್ಮಚರ್ಯದ ಮೇಲೆ ಉಪನ್ಯಾಸವೂ ನಡಿಯುವವು ಮತ್ತು ತಾ|| 20-4-1924ರಲ್ಲಿ ಕುಸ್ತಿ ಕನಕಾಂಗಿ ಆಟ ವಗೈರೆ ಆಗುತ್ತವೆ. ಆದಕಾರಣ ತಾವು ಇಷ್ಟಮಿತ್ರಸಮೇತ ಬಂದು ಇಲ್ಲಿ ಜರಗತಕ್ಕ ಧಾರ್ಮಿಕೋಪನ್ಯಾಸಗಳನ್ನು ಕೇಳಿ ಪುಣ್ಯಭಾಗಿಗಳಾಗಬೇಕಾಗಿ ಕೋರುವ,

ಓರ್ವ ಮಠದ ಶಿಷ್ಯ.

ಯಾತಗಿರಿ ವೀರಶೈವ ವಿದ್ಯಾವರ್ಧಕ ಫಂಡಿಗೆ ಧನ ಸಹಾಯ.

ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನ ಪೀಠಾಧ್ಯಕ್ಷ ನಾಗಲಿಂಗಭಿಕ್ಷಾವರ್ತಿ ಮಹಾಸ್ವಾಮಿಗಳವರ ಪ್ರತಿನಿಧಿಗಳು ತಾ|| 25-2-24 ರಲ್ಲಿ ಯಾತಗಿರಿ ಮುಕ್ಕಾಮಾಗಿ ಸಂಸ್ಥಾನದ ಕಾರ್ಯಕ್ರಮಗಳೆಲ್ಲ ಪೂರೈಸಿದ ನಂತರ ತಾ|| 27-3-24 ರಲ್ಲಿ ಶ್ರೀಗಳವರ ಸನ್ನಿಧಿಯಲ್ಲಿ ಕಮಿಟಿಯುನಡೆದು ವೇ|| ಮಹಿಗಿ ಬಸವಪ್ಪಶಾಸ್ತ್ರಿಗಳಿಂದ ಉಪನ್ಯಾಸವು ಜರಗಿ ನೈಜಾಂ ವೀರಶೈವ ವಿದ್ಯಾವರ್ಧಕಫಂಡಿಗೆ ಶ್ರೀಗಳವರು 650 ರೂಪಾಯಿಗಳನ್ನು ಫಂಡಿನ ಖಜಾನದಾರರಾದ ಮ|| ರಾ|| ಲಿಂಗೇರಿ ಕೋನಪ್ಪನವರ ಕಡೆಗೆ ಪಾವತಿ ಮಾಡಿಸಿ 350 ರೂ. ಗಳನ್ನು ಮತ್ತೆ ಪಾವತಿಮಾಡಿಸುವದಾಗಿ ಅಪ್ಪಣೆಮಾಡಿರುತ್ತಾರೆ. ಈ ತಾಲ್ಲೂಕಿನ ಪ್ರತಿಗ್ರಾಮಗಳ ವೀರಶೈವರು ಸಂಸ್ಥಾನದ ಕಾಣಿಕೆರೂಪವಾಗಿ ವರ್ಷಾಶನವನ್ನು ಮನೆ ಒಂದಕ್ಕೆ ಒಂದು ರೂಪಾಯಿ ನಾಲ್ಕಾಣೆ ಕೊಡುವಂತೆಯೂ, ಲಿಂಗಧಾರಣ, ದೀಕ್ಷೆ, ಲಗ್ನಾದಿ ಶುಭಕಾರ್ಯಗಳಲ್ಲಿ ಒಂದು ರೂಪಾಯಿಗೆ ಕಡಿಮೆ ಇಲ್ಲದಂತೆ ಅವರವರ ಯೋಗ್ಯತಾಪ್ರಕಾರ ಸದರಿ ಫಂಡಿಗೆ ಕೊಡುವಂತೆಯೂ, ಏರ್ಪಾಡುಮಾಡಿ ಈ ತಾಲ್ಲೂಕಿನ ಗ್ರಾಮಗಳ ವೀರಶೈವರಿಂದ ವಡಂಬಡಿಕೆ ಸಹಿಗಳು ತೆಗೆದುಕೊಂಡು ಇರುತ್ತಾರೆ. ಮಾಸ್ತಿಗುಡಿ ಶಿದ್ಧಲಿಂಗಯ್ಯ.

ನಾಯಕ ಮಹಾಜನರಲ್ಲಿ ವಿಜ್ಞಾಪನೆ.

ತುಮಕೂರಲ್ಲಿ ನಾಯಕರ ಸಂಘವು 1923ನೇ ಫೆಬ್ರವರಿ ಮಾಹೆಯಲ್ಲಿ ಸ್ಥಾಪಿಸಲ್ಪಟ್ಟಿರುವುದು ಅನೇಕರಿಗೆ ತಿಳಿದಿರಬಹುದು. ಈ ಸಂಘದ ಉದ್ದಿಷ್ಟ ಕಾರ್ಯ ಫಲಗಳು ಮೈಸೂರು ಸಂಸ್ಥಾನದವರಿಗೇ ಅಲ್ಲದೆ ಸಂಸ್ಥಾನದ ಹೊರಗಣ ಪ್ರಾಂತದ ನಮ್ಮ ನಾಯಕ ಮಹಾಜನಗಳಿಗೂ ಲಭ್ಯವಾಗುವುದು ಯುಕ್ತವೆಂದೂ, ಇನ್ನು ಸಾವಕಾಶಮಾಡದೆ ಸಂಘದ ಕಾರ್ಯಗಳನ್ನು ನಡೆಯಿಸತಕ್ಕದೆಂದೂ ಬಹುಜನರ ಅಭಿಮತವಿರುವುದರಿಂದ ಕಾರ್ಯಕ್ರಮಗಳನ್ನು ಸಾಂಗವಾಗಿ ನಿರ್ಧರಿಸಲು ಸಾಧ್ಯವಾಗುವಂತೆ ಮತಾಭಿಮಾನಿಗಳಾದ ಅನೇಕ ಮಹನೀಯರನ್ನು ಮುಂದಣ ಮೇ ಮಾಹೆಯಲ್ಲಿ ನಡೆಯುವ ಜನರಲ್ ಮೀಟಿಂಗಿಗೆ ದಯೆಮಾಡಿಸಬೇಕೆಂದು ಕೇಳಿಕೊಳ್ಳಬೇಕಾಗಿರುವ ಪ್ರಯುಕ್ತ ನಾಯಕ ಮಹಾಶಯರೆಲ್ಲರೂ ತಮ್ಮ ಮತ್ತು ತಮ್ಮ ಬಂಧುವರ್ಗದವರ ಹೆಸರು ವಿಳಾಸಗಳನ್ನೂ ಸ್ಪಷ್ಟವಾಗಿ ಬರೆದು ತಾ|| 20-4-1924ರ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ತಲುಪುವಂತೆ ದಯವಿಟ್ಟು ತಪ್ಪದೆ ಕಳುಹಿಕೊಡಬೇಕಾಗಿ ಪ್ರಾರ್ಥಿಸಿದೆ.

ತಮ್ಮ ವಿಧೇಯ,
ಟಿ. ಎಂ. ಪುಟ್ಟನಾಗಯ್ಯ, ಸೆಕ್ರೆಟರಿ, ನಾಯಕರ ಸಂಘ ತುಮಕೂರು.

ರೈತರ ಕಷ್ಟ.

ಸನ್ 1924 ನೇ ಮಾರ್ಚಿ ತಾ|| 12 ರಲ್ಲಿ ನಮ್ಮ ಶ್ರೀಮನ್ಮಹಾರಾಜರವರು ಪ್ರತಿನಿಧಿ ಮೆಂಬರುಗಳ ಸಭೆ ಸೇರಿಸಿ ಅಪ್ಪಣೆಕೊಡಿಸಿದ ವಿಷಯಗಳು ಮೈಸೂರು ಸ್ಟಾರಿನಲ್ಲಿ ಮುದ್ರಣವಾದದ್ದನ್ನು ನೋಡಿ ನಾವೆಲ್ಲರೂ ಸಂತೋಷಪಟ್ಟೆವು. ಮಹಸ್ವಾಮಿಯವರು ಸದಾಕಾಲದಲ್ಲಿಯೂ ರೈತರ ಕಷ್ಟವೇ ತಮ್ಮ ಕಷ್ಟ ರೈತರ ಸುಖವೇ ತಮ್ಮ ಸುಖವೆಂದು ಭಾವಿಸಿ ತಮ್ಮ ಔದಾರ್ಯಗುಣವನ್ನು ವ್ಯಕ್ತಗೊಳಿಸಿ ಪ್ರಜಾಪ್ರತಿನಿಧಿಸಭೆ ನ್ಯಾಯವಿಧಾಯಕಸಭೆಗಳನ್ನು ಏರ್ಪಡಿಸಿದಾಗ್ಯೂ ಸರ್ಕಾರದ ನೌಕರರುಗಳೂ ಉಭಯ ಸಭೆಯ ಮೆಂಬರುಗಳೂ ಸಹ ದೇವರು ವರಕೊಟ್ಟರೂ ಪೂಜಾರಿ ವರಕೊಡ ಎಂಬ ಗಾದೆಗೆ ಅನುಸಾರವಾಗಿ ಬಡರೈತರ ಅಹವಾಲುಗಳನ್ನು ಲಕ್ಷ್ಯಕ್ಕೆ ತಾರದೆಯೂ ಗ್ರಾಮ ಗ್ರಾಮಾಂತರಗಳಲ್ಲಿ ಸಂಚಾರಮಾಡದೆಯೂ ಸ್ಥಳದ ಸ್ಥಿತಿಗತಿಗಳನ್ನ ವಿಚಾರಮಾಡದೆಯೂ ಅಧಿಕಾರಿಗಳಿಗೆ ಸಂಬಳ ಬಡ್ತಿ ಮತ್ತು ಮೆಂಬರುಗಳಿಗೆ ಖರ್ಚು ಕುರ್ಚಿ ಸಿಕ್ಕರೆಸಾಕು ಮದವಣಿಗನೆ ಸಾಯಲಿ ಮದವಣಗಿತಿಯೇ ಸಾಯಲಿ ಪುರೋಹಿತರ ಸೌಮ್ಯ ಬಂದರೆ ಸರಿಯನ್ನುವಂತೆ ರೈತರಿಗೆ ಎಷ್ಟು ಕಷ್ಟ ನಷ್ಟಗಳಾದಾಗ್ಯೂ, ಸರ್ಕಾರಕ್ಕೆ ದುಡ್ಡಿನ ಅಭಾವ ಬಂದಾಗ್ಯೂ, ಅಧಿಕಾರಿಗಳು ತಮ್ಮ ಕಾಲಕ್ಷೇಪ ಪ್ರಮೋಷನ್ನಿನ ಮೇಲೆ ತೊಡಗಿರುತ್ತಾರೆ. ಮಹಾಸ್ವಾಮಿಯವರು ರೈತರ ಶ್ರೇಯೋಭಿವೃದ್ಧಿಗಾಗಿ ಅಧಿಕಾರಿವರ್ಗದವರನ್ನು ನೇಮಿಸಿರುವರೇ ವಿನಹ ರೈತರ ಅಹಿತಕ್ಕಲ್ಲ. ಮೆಂಬರುಗಳ ಚುನಾವಣೆ ಕಾಲದಲ್ಲಿ ಹಳ್ಳಿ ರೈತರ ಮನೆಬಾಗಲಿಗೆ ಎಷ್ಟು ಕೊರಕಲದಾರಿಯಾಗಲಿ ಸಂದಿಗೊಂದಿಯಾಗಲಿ ಸರ್ರನೆ ಬರುತ್ತಿದ್ದ ಮೋಟಾರುಗಳು ಈಗ ಯಾವಕಡೆ ಅವಿತುಕೊಂಡವೂ ತಿಳಿಯದು. ಹೀಗೆ ಮಾಡುವದಕ್ಕಿಂತಲೂ ಕಷ್ಟ ನಷ್ಟಕ್ಕೆ ಗುರಿಯಾಗಿರತಕ್ಕ ರೈತರ ಕಂದಾಯ ಕಡಿಮೆಮಾಡಿಸಿ ನೀರಿನ ಆಶ್ರಯವಿಲ್ಲದ ಜಮೀನಿಗೆ ತಲಾವ್‌ಜಂದು ಠೈಬ್ಜೆ ಸೆಸ್ಸು ವಜಾಮಾಡಿಸಿ 250 ರೂಪಾಯಿ ಮೇಲ್ಪಟ್ಟು ಸಂಬಳ ಪಡಿಯುವ ನೌಕರರು ಈಗಿದ್ದ ಪಗಾರದಲ್ಲಿ ಅರ್ಧಭಾಗ ಯಾಕೆ ಕಡಿಮೆಮಾಡಿಸಬಾರದು? ರೈತರು ವರ್ಷಾವಧಿ ಕಷ್ಟಪಟ್ಟರೂ ತಿಂಗಳಿಗೆ ಮೂರುಪೈ ಪಗಾರ ಬೀಳುವದಿಲ್ಲ. ಇದರಲ್ಲಿ ಹೊಸ ಹೊಸ ತೆರಿಗೆ ಕೊಡುವದೆಂದರೆ ಹ್ಯಾಗೆ? 1923ನೇ ಸಾಲಿನಲ್ಲಿ ವಿಶೇಷ ಮಳೆಯಿಂದ ಅನೇಕ ಜಮೀನುಗಳು ನೀರು ಮುಳುಗಿ ರೈತರು ಕಂದಾಯಕೊಟ್ಟು ಹೊಟ್ಟೆಹೊರೆದುಕೊಳ್ಳುವದು ಹ್ಯಾಗೆ? ಈ ವಿಷಯದಲ್ಲಿ ಈವರಿಗೆ ಎಷ್ಟೋ ಅರ್ಜಿ ಬರೆದುಕೊಂಡಾಗ್ಯೂ ಸ್ಥಳಾಧಿಕಾರಿಗಳು [illegible] ಪರಾಂಬರಿಸಿದಾಗ್ಯೂ ರಿವಿಷನ್ ಬಗ್ಗೆ ಯಾವ ಏರ್ಪಾಡು ನಡದಂತೆ ರೈತರ ತಿಳುವಳಿಕೆಗೆ ಬಂದಿಲ್ಲ. ಈ ಭಾಗದಲ್ಲಿ ಯೋಗ್ಯ ವ್ಯವಸ್ಥೆ ನಡೆಸದೆ ಇದ್ದಲ್ಲಿ ರೈತರು ಬದುಕುವದು ಹ್ಯಾಗೆ? ಕಂದಾಯ ಬಾಕಿ ಬಂದ ಕೂಡಲೆ ಅಧಿಕಾರಿಗಳು ಜಪ್ತಿ ಆರ್ಡರು ಮಾಡುವರೇ ವಿನಹ ರೈತರ ಗತಿಯೇನೆಂದು ಕೇಳುವಹಾಗಿಲ್ಲ. ದಯಾಳು ಸರ್ಕಾರದವರು ಇದನ್ನೆಲ್ಲಾ ಪರ್ಯಾಲೋಚಿಸಿ ಮುಂದಿನ ಏರ್ಪಾಡು ನಡಿಸಾರೆಂದು ಪೂರ್ಣ ನಂಬಿರುವ,

ಓರ್ವ ಪ್ರಜಾಹಿತೈಷಿ.

ಮೆ|| ಅಬ್ದುಲ್ ರಹಿಮಾನ್ ಬಿ. ಎ. ಯವರು.

ಈ ದೊಡ್ಡ ಮನುಷ್ಯರು ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿ ಮಹಮ್ಮದೀಯ ಸಂಘಗಳಿಂದ ಆರಿಸಲ್ಪಡಲು ಒಬ್ಬ ಸದಸ್ಯರಾಗಿ ನಿಂತಿದ್ದು ಚುನಾಯಿಸಲ್ಪಟ್ಟಿರುವುದು ವಾಚಕಮಹಾಶಯರಿಗೆ ಬಹುಶಃ ಗೊತ್ತಿರಬಹುದು. ಆಸಮಯದಲ್ಲಿ ತಮ್ಮ ಮತಬಾಂಧವರಿಗೆ ಅವರು ಕಳುಹಿಸಿಕೊಟ್ಟಿರುವ ಹಿಂದುಸ್ತಾನಿ ಹಸ್ತಪತ್ರಿಕೆಯು (Manifesto) ಹಿಂದುಳಿದ ಜನಾಂಗದವರಿಗೆ ಜ್ಞಾನೋದಯವನ್ನುಂಟುಮಾಡತಕ್ಕುದಾಗಿರುವುದರಿಂದ, ದೇಶದ ಮೇಲ್ಮೆಯನ್ನು ಬಯಸತಕ್ಕವರ ಅವಗಾಹನೆಗಾಗಿ ಅದರ ತರ್ಜುಮೆಯನ್ನು ಪ್ರಚಾರಪಡಿಸಲು ಅಪೇಕ್ಷಿಸುತ್ತೇನೆ. ಅದರಲ್ಲಿ ಅವರು ಹೇಳುವುದೇನೆಂದರೆ,—“.... ....

ಈಚೆಗೆ ನಡೆದ ಚುನಾವಣೆಯಲ್ಲಿ ನಾನು ಬೆಂಗಳೂರು ಡಿಸ್ಟ್ರಿಕ್ಟಿನಿಂದ ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ ಮೆಂಬರಾಗಿ ಚುನಾಯಿಸಲ್ಪಟ್ಟಿರುತ್ತೇನೆ. ಇದೂ ಅಲ್ಲದೆ, ಇನ್ನೂ ಅನೇಕ ಕಮಿಟಿಗಳಲ್ಲಿ ನಾನು ಮೆಂಬರಾಗಿ ಇರುತ್ತೇನೆ. ಸ್ಥಳಸಂಕೋಚದಿಂದ ಅದನ್ನೆಲ್ಲಾ ಇಲ್ಲಿ ಬರೆಯಲು ಅವಕಾಶವಿಲ್ಲ. ನಾನು “ಹಿಲಾಲ್” ಪತ್ರಿಕೆಯ ಎಡಿಟರಾಗಿದ್ದು, ದೇಶ ಮತ್ತು ಸ್ವಮತಸೇವೆಯನ್ನು ಮಾಡಿರುವ ಸಂಗತಿ ತಮಗೆ ಗೋಚರವೆ ಇದೆ. ಮುಸಲ್ಮಾನರು ಬ್ರಾಹ್ಮಣೇತರರಲ್ಲಿ (Non Brahmins) ಸೇರಿಸಲ್ಪಟ್ಟದ್ದರಿಂದ ಸ್ವಮತದ ಹಕ್ಕುಬಾಧ್ಯತೆಗಳು ಇದುವರೆಗೆ ಎಷ್ಟರಮಟ್ಟಿಗೆ ತುಳಿಯಲ್ಪಟ್ಟವೆ ಎಂಬುದೂ, ಮತ್ತು ನಮ್ಮ ಕೋಮಿಗೆ ಅದರಿಂದ ಎಷ್ಟು ನಷ್ಟವಾಗುತ್ತಿರುವುದೆಂಬುದೂ ತಮಗೆಲ್ಲಾ ಕರತಲಾಮಲಕವಾಗಿ ತಿಳಿದಂಥ ವಿಚಾರವಾಗಿದೆ. ನಾನು ಪ್ರಥಮದಿಂದಲೂ ಇದುವರೆಗೂ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಅಸೆಂಬ್ಲಿಗಳಲ್ಲಿ ಮುಸಲ್ಮಾನರ ವಿದ್ಯಾಭ್ಯಾಸದ ವಿಚಾರವಾಗಿಯೂ, ವಿದ್ಯಾರ್ಥಿ ವೇತನಗಳ ವಿಚಾರದಲ್ಲೂ ಮತ್ತು ಮುಸಲ್ಮಾನರನ್ನು ಬ್ರಾಹ್ಮಣೇತರರಿಂದ ಪ್ರತ್ಯೇಕಪಡಿಸುವ ವಿಚಾರದಲ್ಲೂ ಸಹಾ ಬರವಣಿಗೆಯ ಮೂಲಕವೂ, ಸಂಭಾಷಣೆಯ ಮೂಲಕವೂ ಸಹಾ ಸ್ವಮತಸೇವೆಯನ್ನು ಮಾಡುತ್ತಲಿದೇನೆ. ಈ ವಿಚಾರಗಳಲ್ಲಿ ಮಾಡತಕ್ಕ ಕೆಲಸಗಳು ಇನ್ನೂ ಬಹಳ ಮಟ್ಟಿಗೆ ಬಾಕಿ ಇರುತ್ತೆ. ತಾವು ತಮ್ಮ ಅಮೌಲ್ಯವಾದ ಓಟನ್ನು ನನಗೆ ಕೊಟ್ಟು ನನ್ನನ್ನು ತಮ್ಮ ಪ್ರತಿನಿಧಿಯನ್ನಾಗಿ ಅಸೆಂಬ್ಲಿಗೆ ಕಳುಹಿಸುವುದಾದರೆ, ನಾನು ಶಕ್ತ್ಯಾನುಸಾರ ಸ್ವಮತಸೇವೆಯನ್ನು ಮಾಡುವುದರಲ್ಲಿ ಸಿದ್ಧನಾಗಿರುತ್ತೇನೆ.”

ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟ್ ಪದವಿಯೂ, ನ್ಯಾಯವಿಧಾಯಕ ಸಭೆಯಲ್ಲಿ ತಮಗೆ ಈಗ ದೊರೆತಿರುವ ಸ್ಥಾನವೂ ಯಾರ ಸಹಾಯದಿಂದ ದೊರೆತಿರುವುದೆಂಬುದನ್ನು ಮೆ|| ಅಬ್ದುಲ್ ರಹಿಮಾನ್ ಅವರು ವಿಚಾರಮಾಡಿ ನೋಡಿದಲ್ಲಿ, ಮೇಲ್ಕಂಡಂತೆ ಬ್ರಾಹ್ಮಣೇತರರ ಜೊತೆಯಲ್ಲಿ ಸೇರಿದ್ದರಿಂದ ಮುಸಲ್ಮಾನರಿಗೆ ನಷ್ಟವಾಯಿತೆಂದು ಎಂದೂ ಹೇಳುತ್ತಿರಲಿಲ್ಲ. ಕಾರ್ಯಸಾಧನೆಯಾದನಂತರ, ಅದು ಏತರಿಂದಾಯಿತೆಂಬುದನ್ನು ಮರೆಯತಕ್ಕದ್ದು ಬಹಳಮಟ್ಟಿಗೆ ಸ್ವಭಾವಸಿದ್ಧವಾಗಿರುವುದು. ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಬಹು ಮತಗಳನ್ನುಳ್ಳವರು ಬ್ರಾಹ್ಮಣೇತರರು. ಅವರ ಸಹಾಯವಿಲ್ಲದೆಯೇ ತಮ್ಮ ಮುಸಲ್ಮಾನ್ ಸಹೋದರರ ಓಟನ್ನೇ ಕಾದುಕೊಂಡಿದ್ದಲ್ಲಿ, ಇವರು ಈ ಪದವಿಗೆ ಬರುತ್ತಿದ್ದರೆ? ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಶೇಕಡ [illegible] ಮೇಲ್ಪಟ್ಟು ಹಿಂದುಳಿದ ಜನಾಂಗಗಳಿಗೆ ಸೇರಿದ ಓಟರುಗಳೇ ಇರುವರು. ತಮ್ಮ ಮಹಮ್ಮದೀಯ ಸಹೋದರರಲ್ಲಿ ಇವರು ಹೇಳಿಕೊಂಡಿರುವ ಪ್ರತಾಪವನ್ನು ತಮಗೆ ನ್ಯಾಯವಿಧಾಯಕ ಸಭೆಗೆ ಚುನಾವಣೆಯಾಗುವುದಕ್ಕೆ ಮೊದಲು ಹೇಳಿದ್ದರೆ, ಇವರ ಚುನಾವಣೆಯ ಪರಿಣಾಮವು ಹೇಗೆ ಆಗುತ್ತಲಿತ್ತೆಂಬುದನ್ನು ಅವರು [illegible] ತಂದುಕೊಳ್ಳಲಿ. ಅಲ್ಪಸಂಖ್ಯೆಯುಳ್ಳ ಮುಸಲ್ಮಾನ ಪ್ರಜೆಗಳು ಹಿಂದುಳಿದ ಜನಾಂಗದವರ ಸಹಾನುಭೂತಿಯಿಂದಲೇ ತಮ್ಮ ಕುಂದುಕೊರತೆಗಳನ್ನು ಪರಿಹಾರಮಾಡಿಕೊಳ್ಳಲು ಸಾಧ್ಯ. ಮುಂದುವರಿದಿರುವ [illegible]ದವರು ಮುಸಲ್ಮಾನರಲ್ಲಿ ಎಷ್ಟರಮಟ್ಟಿನ ಪ್ರೀತಿವಿಶ್ವಾಸವನ್ನಿಟ್ಟಿರುವರೆಂಬುದು ಜಗತ್ತಿಗೇ ಗೊತ್ತು. ಗತಿಸಿದ ಮ|| ರಾ|| ಬಸವಯ್ಯನವರು ಮ|| ರಾ|| ನವಾಬ್ ಗುಲಾಂ ಮಹಮ್ಮದ್ ಕಲಾಮಿಯವರನ್ನು, ಮ|| ರಾ|| ಅಬ್ಬಾಸ್‌ಖಾನ್‌ರವರನ್ನೂ ತಮ್ಮ ಜೊತೆಯಲ್ಲಿ ಸೇರಿಸಿಕೊಂಡು ಹೋರಾಡಿದ್ದರಿಂದ ಈಗ ಮುಸಲ್ಮಾನರಿಗೆ ಮೈಸೂರು ದೇಶದಲ್ಲಿ ಇರತಕ್ಕ ಅನುಕೂಲಗಳು ದೊರೆತಿರುವವು. ಇವನ್ನೆಲ್ಲಾ ಮರೆತು, ಮೆ|| ಅಬ್ದುಲ್ ರಹಿಮಾನ್‌ರವರು ಮೇಲ್ಕಂಡಂತೆ ಸಂಕುಚಿತಾಭಿಪ್ರಾಯವನ್ನು ತೋರ್ಪಡಿಸಿರುವುದನ್ನು ನೋಡಿದರೆ ಮುಸಲ್ಮಾನರ ಏಳ್ಗೆಯನ್ನು ಬಯಸತಕ್ಕ ಪ್ರತಿಯೊಬ್ಬನಿಗೂ ಆಶ್ಚರ್ಯವಾಗಿರುತ್ತದೆ. ಹಿಂದುಳಿದ ಜನಾಂಗದವರು ಮೆ|| ಅಬ್ದುಲ್ ರಹಿಮಾನ್‌ರವರು ಹೇಳಿರತಕ್ಕ ವಿಚಾರವು ಅವರೊಬ್ಬರ ಅಭಿಪ್ರಾಯವೆಂದು ಮಾತ್ರ ತಿಳಿದು, ಇದುವರೆಗಿನ ಸಹೋದರಭಾವನೆಯನ್ನು ಮುಂದೆಯೂ ಇಟ್ಟುಕೊಂಡು ಬರಬೇಕಾಗಿ ಕೋರುವ,

ಮಹಮ್ಮದೀಯರ ಕ್ಷೇಮಾಭಿಲಾಷಿ.

ವೀರಶೈವಸಮಾಜ ಬಂಧುಗಳಿಗೆ ವಿನಂತಿ.

ಅಯ್ಯಾ ಮಹನೀಯರೇ, ಈ ಮಾನವವರ್ಗದಲ್ಲಿ ಐಕ್ಯಮತ್ಯದಿಂದಲೂ ಅಹಿಂಸಾವ್ರತದಿಂದಲೂ ಇದ್ದು, ಆ ಪರಶಿವಮೂರ್ತಿಗೆ ಪ್ರಿಯತರವಾದ ಅಷ್ಟಾವರ್ಣನಿಷ್ಠಾಪರರಾಗಿ ಇದ್ದು, ನಿಜವಾದ ಕೈವಲ್ಯವನ್ನು ಹೊಂದಲಿಕ್ಕೆ ಮುಖ್ಯವೆನಿಸಿದ ಈ ನಮ್ಮ ವೀರಶೈವ ಸಮಾಜದ ಮೊದಲಿನ ಸ್ಥಿತಿಗೂ ಈಗಿನ ಸ್ಥಿತಿಗೂ ಇರುವ ಅಂತರವನ್ನು ಶೋಧಿಸಿದರೆ ಜ್ಞಾನಿಗಳಾದ ಸಮಾಜಸೇವಕರು ದುಃಖಿಸದೆ ಇರಲಾರರು. ಇನ್ನೂ ಬಸವಾದಿಪ್ರಮಥರಿಂದಾಚೆಗೆ ಇದ್ದ ನಮ್ಮ ಸಮಾಜದ ಸ್ಥಿತಿಯನ್ನು ನಮ್ಮ ಅಲ್ಪಮತಿಯಿಂದ ವಿಚಾರಮಾಡುತ್ತಲಿಕ್ಕೆ ಜ್ಞಾನಾಂಶವಾದ ಈ ಶಿವಾಚಾರ ಸಮಾಜಕ್ಕೆ ಆದಿಯಿಂದಲೂ ಪಂಚಾಚಾರ್ಯರೇ ಮೂಲಕಾರಣರೆಂತಲೂ ಮತ್ತು ಪಂಚಾನನ ಮುಖೋದ್ಭವರೆಂತಲೂ ಶಿವಾಚಾರಕ್ಕೆ ಮೂಲಗುರುಗಳೆಂತಲೂ ಜಗತ್ಪ್ರಸಿದ್ಧವಾದ ನಂಬುಗೆ ಇರುವದು. ಆದರೆ ಆದಿ ಅನಾದಿಯಿಂದತ್ತ ಬಸವಣ್ಣನೇ ಭಕ್ತ ಪ್ರಭುದೇವರೇ ಜಂಗಮರಾಗಿ ಷಟ್ಸ್ಥಲವೆಂಬ ಮಹಾಜ್ಞಾನವು ಉದಯಿಸಿ ಸಮಾಜಸೇವಾಸಕ್ತರಾದ ಪಂಚಾಚಾರ್ಯರಿಗೆ ಷಟ್ಸ್ಥಲದವರಿಂದೆ ಮಹಾಜ್ಞಾನವನ್ನು ಬೋಧಿಸಿ ಅವರ ಅಂಗಕ್ಕೆ ಯಾವ ಕರ್ಮವೂ ಅಂಟದಂತೆ ನಿಜವಾದ ಕೈವಲ್ಯವನ್ನು ತೋರಿದ ನಿರಂಜನ ಮಹಾಸ್ವಾಮಿಗಳನ್ನು ಕೂಡಿಕೊಂಡು ಪಂಚಾಚಾರ್ಯರು ನಮ್ಮ ಸಮಾಜವನ್ನು ಬಹಳೇ ಉನ್ನತಸ್ಥಿತಿಯಲ್ಲಿ (ಜೀವಭಾವವಿಲ್ಲದೆ ಸರ್ವರೂ ಮೋಕ್ಷಾವಲಂಬಿಗಳಾಗಿ) ಇರುವ ಕಾಲದಲ್ಲಿ ಕಾಲಗತಿಗೆ ಅನುಸರಿಸಿ ನಮ್ಮ ಸಮಾಜಕ್ಕೆ ಅಜ್ಞಾನವೆಂಬ ಗ್ರಹಣವು ಸ್ಪರ್ಶವಾದ ಸಂಧಿಯನ್ನು ಸಾಧಿಸಿ ಆ ಬಸವಾದಿಪ್ರಮಥರು (ದೇವಾಂಶಸಂಭೂತರು) ತಮ್ಮ ಕರ್ತವ್ಯಕ್ಕೆ ಅನುಸರಿಸಿ ಆ ನಿರಂಜನಮೂರ್ತಿಯಾದ ಪ್ರಭುದೇವರನ್ನು ಬೆಂಬಲವಾಗಿಟ್ಟುಕೊಂಡು ಈ ಭೂಲೋಕದಲ್ಲಿ ಅವತರಿಸಿ ನಮ್ಮ ಸಮಾಜವನ್ನು ಪ್ರಜ್ವಲಿಸಿ ಈ ಕಲ್ಯಾಣದಲ್ಲಿ ತಮ್ಮ ಲೀಲೆಯನ್ನು ಮುಗಿಸಿ ತಮ್ಮ ನಿಜಸ್ಥಾನವಾದ ಶಿವಸನ್ನಿಧಿಯಲ್ಲಿ ಸೇರತಕ್ಕವರಾದರು. ಅಂಥಾ ಸಮಯದಲ್ಲಿ ಬಸವಾದಿಪ್ರಮಥರು ಪ್ರಭುದೇವರಿಂದ ನಿತ್ಯದಲ್ಲೂ ಜ್ಞಾನಬೋಧಾಮೃತವನ್ನು ಸೇವಿಸಿ ಈ ಜಗತ್ತಿನ ಸುಖದುಃಖಗಳಿಗೆ ಶಿಲ್ಕದೆ ತಮ್ಮ ನಡೆನುಡಿಗಳಲ್ಲಿಯೇ ನಿಮಗ್ನರಾಗಿದ್ದು ತಮ್ಮ ಕರ್ಮದೇಹವನ್ನು ನೀಗತಕ್ಕವರಾದರು. ಅವರಂತೆ ಇತ್ತೀಚೆಗೆ ಕೆಲವು ದಿವಸಗಳ ಅನಂತರ ಷಟ್ಸ್ಥಲ ಗುರುಸ್ಥಲದವರು ಭಿನ್ನಭಾವಗಳಿಲ್ಲದೇ ಇದ್ದು ನಮ್ಮ ಸಮಾಜವನ್ನು ಸಂರಕ್ಷಿಸತಕ್ಕವರಾದರು. ಇನ್ನು ಈ ನವಯುಗದಲ್ಲಿ ನಮ್ಮ ಸಮಾಜದ ಸ್ಥಿತಿಯನ್ನು ವಿಚಾರಮಾಡಿ ನೋಡಿದರೆ ಅಭಿಮಾನವೆಂಬುವದೊಂದು ಹಿರಿಯಭೂತವು ಉದಯವಾಗಿ ನಾಹೆಚ್ಚು ನೀಹೆಚ್ಚು ಎಂದು ಬಡಿದಾಡುವ ಗುರುಸ್ಥಲ ಷಟ್ಸ್ಥಲದವರೂ ಹಾಗೂ ಭಕ್ತಮಂಡಳಿಯಲ್ಲಿ ಶೀಲವಂತ ದೀಕ್ಷವಂತ ಪಂಚಮಶಾಲ ಅಕ್ಕಸಾಲ ನಾಗಲಿಕ ಶಿವಶಿಂಪಿ ನೇಯಿಕಾರ ಹಟಿಕಾರ ಕುಂಬಾರ ಗಾಣಿಗ ಇವರೇ ಮೊದಲಾದ ಅಷ್ಟಾವರ್ಣ ನೀತನಡತೆಗಳನ್ನು ಕಂಡ ಮಹನೀಯರೇ ತಮ್ಮತಮ್ಮೊಳಗೆ ಜಗಳವಾಡಿ ತಮ್ಮತಮ್ಮವರಿಗೆನೇ ಜಂಗಮದೀಕ್ಷೆಯನ್ನು ಕೊಡಿಸಿ ತಮ್ಮ ಆಚಾರ್ಯಮೂರ್ತಿಯನ್ನಾಗಿ ಮಾಡಿಟ್ಟುಕೊಂಡು ಕಲಹವೆಂದರೆ ಕಾಲುಕೆದರುತ್ತಾ ಅನ್ಯರನ್ನು ಹಳಿಯುತ್ತಿರುವರು. ಇನ್ನು ಶಾಸ್ತ್ರವನ್ನು ಕಲಿತ ಮಹನೀಯರು ಇಂಥ ಕಲಹಗಳಿಗೆ ಸಹಾಯವನ್ನು ಮಾಡಲಿಕ್ಕೆ ಟೊಂಕವನ್ನು ಕಟ್ಟಿಕೊಂಡು ನಿಂತಿದ್ದರಿಂದಲೂ ಮತ್ತಿಷ್ಟು ಕಲಹಕ್ಕೆ ಕಾರಣವಾಗಿ ಅನಾಯಕ ಸಮಾಜವೆಂಬ ಹೆಸರಿನಿಂದೆಯಲ್ಲಕ್ಕೂ ಹಿಂದುಳಿದಿರುವದು. ಇದು ನಮ್ಮ ದುರ್ದೈವವೇಸರಿ. ಇನ್ನೂ ಆಚಾರ, ಮತ್ತು ಜ್ಞಾನ ಇವೆರಡರಲ್ಲಿ ಉಂಟಾದ ಕಲಹವು ಕುರುಡ ಕುಂಟರ ನ್ಯಾಯದಂತಿದೆ. ಒಂದು ಸ್ಥಳದಲ್ಲಿ ಓರ್ವ ಹುಟ್ಟುಕುರುಡನು, ಮತ್ತೋರ್ವ ಕಾಲಿಲ್ಲದ ಹೆಳವನು ಇವರೀರ್ವರೂ ಕುಳಿತಿದ್ದ ಸಮಯದಲ್ಲಿ ಒಂದು ಉತ್ತಮವಾದ ಗೃಹಕ್ಕೆ ಅಗ್ನಿಯು ಸೋಂಕಿ ಪ್ರಜ್ವಲಿಸುವದನ್ನು ಕಾಲಿಲ್ಲದವನು ಕಂಡು ಅನ್ನುತ್ತಾನೆ—ಅಣ್ಣಾ ಕುರುಡನೆ ಇಲ್ಲಿಯೇ ಸ್ವಲ್ಪ ದೂರದಲ್ಲಿ ಒಂದು ಮನೆಗೆ ಅಗ್ನಿಯು ಪ್ರವೇಶಿಸಿ ಪುಟವಾಗುತಲಿದೆ ಇದಕ್ಕೇನು ಉಪಾಯಮಾಡಬೇಕೆಂದು ಕೇಳಿ, ಆ ಕುರುಡನು ತಮ್ಮ, ನಾನೇನು ಕಣ್ಣುಗಳಿಲ್ಲದವನೇ, ನಾನೇನುಮಾಡಲಿ, ನನ್ನಿಂದ ಆಗದ ಕಾರ‍್ಯವನ್ನು ಹೇಳಿದರೆ ಮಾಡುವದೇನು? ಆಗ ಕುಂಟನು ಅಣ್ಣಾ ನೀನು ನನ್ನಗಿಂತಲೂ ಶಕ್ತಿಯುಳ್ಳವನಿದ್ದೀಯೇ, ನನ್ನನ್ನು ನಿನ್ನ ಬೆನ್ನಮೇಲೆ ಕೂಡ್ರಿಸಿಕೊಂಡು ಅಲ್ಲಿಯವರೆಗೂ ನಡೆದರೆ ನಾವೀರ್ವರೂ ಕೂಡಿ ಆ ಅಗ್ನಿಯನ್ನು ಶಾಂತಮಾಡಬಹುದೆಂದು ಈರ್ವರೂ ಏಕಭಾವವನ್ನು ಹೊಂದಿ ಅಲ್ಲಿಯವರೆಗೂ ತೆರಳಿ ಆ ಪ್ರಜ್ವಲಿಸುವ ಅಗ್ನಿಯನ್ನು ಶಾಂತಮಾಡತಕ್ಕವರಾದರು. ಇವರಂತೆ ಷಟ್ಸ್ಥಲ ಮತ್ತು ಗುರುಸ್ಥಲದ ಯಜಮಾನರು ತಾವು ಏಕಮತ್ಯದಿಂದ ಇದ್ದು ಈ ನಮ್ಮ ಸಮಾಜವನ್ನು ಉದ್ಧರಿಸುವರೆಂದು ನಮ್ಮ ಪ್ರಾರ್ಥನೆ ಅದೆ. ವಿಚಾರಶೂನ್ಯನಾದ ಓರ್ವಮನುಷ್ಯನು ತನ್ನ ಬೆರಳನ್ನು ತನ್ನ ಕಣ್ಣಿನಲ್ಲಿ ಊರಿಕೊಂಡು ತನ್ನ ತಾನೇ ನಿಂದಿಸುತ್ತ ಕುಳಿತಹಾಗೆ ಸಮಾಜದವರು ಅಜ್ಞಾನಕ್ಕೆ ಬೀಳದೆ ಏಕಭಾವವನ್ನು ಹೊಂದಿ ತಮ್ಮ ತಮ್ಮ ದುರಭಿಮಾನವನ್ನು ತ್ಯಾಗಮಾಡಿ, ನಮ್ಮ ಸಮಾಜೋನ್ನತಿಗೆ ಲಕ್ಷ್ಯವನ್ನು ಕೊಟ್ಟು ಮುಖ ಮರವೆನಿಸಿದ ರಂಭಾಪುರೀಪೀಠಕ್ಕೆ ಯೋಗ್ಯರಾದ ಗುರುಮೂರ್ತಿಯನ್ನು ಚುನಾಯಿಸಿ ಅಧಿಕಾರವನ್ನು ಕೊಟ್ಟು ಆ ಪರಶಿವಮೂರ್ತಿಗೆ ಪ್ರಿಯತರರಾಗಿ ನಿಜವಾದ ಕೈವಲ್ಯವನ್ನು ಪಡೆಯಲಿ ಎಂದು ನಾವೆಲ್ಲರೂ ಸರ್ವರ ಅಭಾರಿಯಾಗಿ ಬೇಡಿಕೊಳ್ಳುವ,

ಕಲ್ಯಾಣ ಗುರುವರ್ಗದವರು, ಜ್ಞಾನವರ್ಧಕ ಸಂಘ.

ಹೊಸ ಸ್ಕೂಲುಕಟ್ಟಡದ ಪ್ರವೇಶೋತ್ಸವ.

ತುಮಕೂರು ತಾ|| ಹೆಬ್ಬೂರಿನಲ್ಲಿ ಬಹುಕಾಲದಿಂದಲೂ ಒಂದು ಗೌರ್ನಮೆಂಟು ಸ್ಕೂಲು ಇಲ್ಲದೆ ವಿದ್ಯಾವಿಹೀನತೆಯಲ್ಲಿದ್ದು ಕಳೆದ ಹತ್ತು ವರ್ಷಗಳಲಾಗಾಯಿತು ಈ ಗ್ರಾಮಸ್ಥರ ಮತ್ತು ಕೆಲವು ಸ್ಥಳೀಯ ಉಪಾಧ್ಯಾಯರುಗಳ ಅಸಾಧಾರಣವಾದ ಮೆಹನತ್ತಿನಿಂದಲೂ ಶ್ರೀಮನ್ಮಹಾರಾಜ ಸರ್ಕಾರದವರ ಸಹಾಯದಿಂದಲೂ ಮೊದಲು ಇಂಗ್ಲಿಷ್ ಮತ್ತು ಕನ್ನಡ ಗ್ರಾಂಟ್ ಸ್ಕೂಲುಗಳು ಸ್ಥಾಪಿತವಾಗಿ ಅವು ಕ್ರಮವಾಗಿ ಗೌರ್ನಮೆಂಟ್ ವಿ.ಇ., ರೂರಲ್ ಎ.ವಿ., ಗೌರ್ನಮೆಂಟ್ ಎ.ವಿ., ಕೊನೆಗೆ ಗೌರ್ನಮೆಂಟ್ ಮಿಡಲ್ ಸ್ಕೂಲುಗಳಾಗಿ ನಡೆದು ಬಂದಿರುತ್ತವೆ. ಇವಕ್ಕೆ ಒಂದು ಕಟ್ಟಡವಿಲ್ಲದೆ ಆದಿಯಿಂದಲೂ ಬಾಡಿಗೆ ಕಟ್ಟಡದಲ್ಲಿ ಸ್ಕೂಲು ನಡೆಸಲ್ಪಡುತಾ ಕೊನೆಗೆ ಗ್ರಾಮಸ್ಥರು ಸರ್ಕಾರದವರನ್ನು ಬಹಳವಾಗಿ ಪ್ರಾರ್ಥಿಸಿಕೊಂಡದ್ದರ ಮೇಲೆ 5000 ರೂ. ಗಳ ಒಂದು ಕಟ್ಟಡವು ಮುಂಜೂರಾಗಿ ಸ್ಥಳೀಯ ಕಂಟ್ರಾಕ್ಟರಿಂದ ಅತಿ ಶೀಘ್ರವಾಗಿ 1924 ನೆಯ ಜನವರಿ ಅಖೈರಿಗೆ ಕಟ್ಟಲ್ಪಟ್ಟಿತು. ಇದರ ಪ್ರವೇಶೋತ್ಸವವು ಮಾರ್ಚಿ 19ನೇ ತಾ|| ಬೆಳಗ್ಗೆ 10 ಗಂಟೆಗೆ ಸರಿಯಾಗಿ ಇನ್ಸ್‌ಪೆಕ್ಟರ್ ಜನರಲ್ ಮ|| ರಾ|| ಸಿ. ಯಸ್. ಬಾಲಸುಂದರಂ ಅಯ್ಯರ್‌ರವರಿಂದ ನಡಿಸಲ್ಪಟ್ಟಿತು. ತುಮಕೂರು ಡಿ|| ಡೆಪ್ಯುಟೀಕಮಿಷನರ್ ಮಿ|| ಮಹಮ್ಮದ್ ಜಹಿರುದ್ದೀನ್ ಮೆಕ್ಕೆಯವರೂ, ವಿದ್ಯಾಇಲಾಖೆಯ ಡಿ|| ಇನ್ಸ್‌ಪೆಕ್ಟರ್ ಮ|| ಶ್ರೀಧರಮೂರ್ತಿಗಳವರೂ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ|| ಕೆ. ಎಚ್. ರಾಮಯ್ಯನವರೂ, ಸ್ಕೌಟ್‌ಡೈರೆಕ್ಟರ್ ಮ|| ಸುಬ್ಬರಾಯರವರೂ, ತುಮಕೂರು ರೇಂಜು ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಮ|| ಮಾಧವರಾಯರವರೂ, ಗುಬ್ಬಿ ರೇಂಜು ಇನ್ಸ್‌ಪೆಕ್ಟರ್ ಮ|| ಪುಟ್ಟಣ್ಣನವರೂ ದಯಮಾಡಿಸಿದ್ದರು. ಮಂಟಪಪ್ರವೇಶ ಕಾಲದಲ್ಲಿ ಸ್ಕೌಟ್ ಬಾಲಕರಿಂದ ಸೆಲ್ಯೂಟ್ ಆದೊಡನೆಯೇ ಗರ್ಲ್ಸ್ ಸ್ಕೂಲು ಬಾಲಕಿಯರಿಂದ ಸ್ವಾಗತಪದ್ಯಗಳು ಹೇಳಲ್ಪಟ್ಟವು. ಆಮೇಲೆ ಇನ್ಸ್‌ಪೆಕ್ಟರ್ ಜನರಲ್ ಮ|| ರಾ|| ಸಿ. ಯಸ್. ಬಾಲಸುಂದರಂ ಅಯ್ಯರ್‌ರವರು ಅಧ್ಯಕ್ಷತೆಯನ್ನು ವಹಿಸಿದ ತರುವಾಯ ಈ ಗ್ರಾಮದ ಛೇರ್‌ಮನ್ ಮ|| ರಾಮಣ್ಣನವರು ಅಡ್ರಸ್ಸನ್ನು ಓದಿ ಒಪ್ಪಿಸಿದರು. ಅನಂತರ ಮ|| ರಾಮಕೃಷ್ಣಯ್ಯನವರು ಲಾಗಾಯಿತಿನಿಂದ ಈ ದಿವಸದ ವರೆಗೂ ಇರುವ ಸ್ಕೂಲು ಚರಿತ್ರೆಯನ್ನು ಓದಿದರು. ಇದಾದ ಮೇಲೆ ಸಂವಾದರೂಪವಾದ “ಅಂಗಡನ ಫಿರ್ಯಾದು” ಎಂಬ ನಾಟಕವು ಮಿಡ್ಲ್ ಸ್ಕೂಲು ಬಾಲಕರಿಂದ ನೋಡುವವರ ಮನಸ್ಸನ್ನು ಆಕರ್ಷಿಸುವಂತೆ ಅಭಿನಯಿಸಲ್ಪಟ್ಟಿತು. ತರುವಾಯ ಅಭಿಜನ್ಮುಹೂರ್ತಕ್ಕೆ ಸರಿಯಾಗಿ ಮಿಡಲ್ ಸ್ಕೂಲು ಬಾಗಲಿಗೆ ಹಾಕಿದ್ದ ಬೀಗವನ್ನು ಇ|| ಜ|| ರವರು ಮುದ್ದಾಗಿ ತೆಗೆದು ಒಳಗೆ ರಚಿಸಿದ್ದ ಪ್ರದರ್ಶನವನ್ನು ಪರಾಂಬರಿಸಿ ಸ್ಕೂಲು ಹಿಂಭಾಗದಲ್ಲಿ ಏರ್ಪಡಿಸಿದ್ದ ಪಂಚಮರ ನೆಯಿಗೆ ಪ್ರದರ್ಶನವನ್ನು ಸಮಗ್ರವಾಗಿ ಪರಾಂಬರಿಸಿ ಅನಂತರ ಮಂಟಪಕ್ಕೆ ವಾಪಸು ಚಿತ್ತೈಸಿದರು. ಇಷ್ಟರೊಳಗೆ ಮಧ್ಯಾಹ್ನ 12½ ಗಂಟೆ ಯಾದುದರಿಂದ ಮುಂದಿನ ಕಾರ್ಯಕ್ರಮಗಳನ್ನು ಮಧ್ಯಾಹ್ನಾನಂತರ ಇಟ್ಟುಕೊಂಡು ಟ್ರಾವೆಲರ್ಸ್ ಬಂಗಲೆಗೆ ತೆರಳಿದರು. ಮಧ್ಯಾಹ್ನ ಭೋಜನ, ಗಂಧ, ಪುಷ್ಪ, ತಾಂಬೂಲವಾದ ಮೇಲೆ ಪುನಃ ಪ್ರಾರ್ಥಿಸಲ್ಪಟ್ಟು 3 ಗಂಟೆಗೆ ಮಂಟಪಕ್ಕೆ ದಯಮಾಡಿಸುವ ವೇಳೆ ಸ್ಕೌಟ್ ಬಾಲಕರ ಆಟ ಪಾಟಗಳನ್ನು ನೋಡಿ ಸಂತೋಷಪಟ್ಟು ಬರುವಾಗ ಮಿಡ್ಲ್ ಸ್ಕೂಲು ಮುಂಭಾಗದಲ್ಲಿಟ್ಟಿದ್ದ ಎರಡು ಕಲ್ಪವೃಕ್ಷಗಳ ಪೈಕಿ ಒಂದನ್ನು ಹುಜೂರ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರೂ ಮತ್ತೊಂದನ್ನು ತುಮಕೂರು ಡಿ|| ಡೆಪ್ಯುಟೀಕಮಿಷನರ್ ಸಾಹೇಬರವರೂ ತಮ್ಮ ತಮ್ಮ ಸ್ವಹಸ್ತಗಳಿಂದ ನಟ್ಟರು. ಅನಂತರ ಇ|| ಜ|| ರವರು ಅಧ್ಯಕ್ಷತೆಯನ್ನು ವಹಿಸಿದ ತರುವಾಯ ಮೈಸೂರು ಸೀಮೆಯ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ|| ಕೆ. ಎಚ್. ರಾಮಯ್ಯನವರ ಭಾಷಣವು ಮುಗಿದ ಮೇಲೆ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಪ್ರೈಮರಿ ವಿದ್ಯಾಭ್ಯಾಸದ ವಿಚಾರದಲ್ಲಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಆಮೇಲೆ ಈ ಊರು ಪ್ರೈಮರಿ ಸ್ಕೂಲು ಮಿಡ್ಲ್ ಸ್ಕೂಲು ಹಿಂದೂಸ್ಥಾನಿ ಸ್ಕೂಲ್ ಗರ್ಲ್ಸ್ ಸ್ಕೂಲು ಪಂಚಮಾ ಸ್ಕೂಲ್ ಬಾಲಕ ಬಾಲಕಿಯರುಗಳಿಗೆ ಸ್ವಹಸ್ತದಿಂದ ಬಹುಮಾನಗಳನ್ನು ದಯಪಾಲಿಸಿದರು. ತುಮಕೂರು ಡಿ|| ಡೆಪ್ಯುಟೀಕಮಿಷನರ್ ಮಿ|| ಜಹಿರುದ್ದೀನ್ ಮೆಕ್ಕೆಯವರು ಸ್ವಾರಸ್ಯವಾದ ಭಾಷಣವನ್ನು ಮಾಡಿ ಈ ಮೀಟಿಂಗು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ನಡೆದ ಮೀಟಿಂಗುಗಳಲ್ಲಿ ಎರಡನೆಯದೆಂತಲೂ ಇದರ ಮೇಲ್ಪಂಕ್ತಿಯನ್ನನುಸರಿಸಬಹುದೆಂತಲೂ ಈ ಸ್ಕೂಲು ಇನ್ನು ಹತ್ತು ವರ್ಷಗಳಲ್ಲಿಯೇ ಹೈಸ್ಕೂಲಾಗಬಹುದೆಂತಲೂ ಭವಿಷ್ಯತ್ಸೂಚಕವಾದ ಮಾತುಗಳನ್ನಾಡಿ ಸಭೆಯವರನ್ನು ಸಂತೋಷಗೊಳಿಸಿದರು. ತರುವಾಯ ಶ್ರೀಮಾನ್ ಜಾರ್ಜ್ ಚಕ್ರವರ್ತಿಯವರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ಮಾಡಲ್ಪಟ್ಟು ಸಭಾಧ್ಯಕ್ಷರಿಗೆ ಹಾರ, ತುರಾಯಿಗಳು ಅರ್ಪಿಸಲ್ಪಟ್ಟು ಸರ್ವರ ಫೋಟೋ ತೆಗೆಯಲ್ಪಟ್ಟು ಸಭಿಕರಿಗೆ ಗಂಧ ಪುಷ್ಪ ತಾಂಬೂಲವಾದ ಮೇಲೆ ಜಯ ಜಯಧ್ವನಿಯಿಂದ ಮೀಟಿಂಗು ಬರಖಾಸ್ತು ಮಾಡಲ್ಪಟ್ಟಿತು. ಪುನಃ ತಾ|| 26-3-24ನೇ ಬುಧವಾರ ಈ ಊರು ಶ್ರೀ ವಿಘ್ನೇಶ್ವರ ಸ್ವಾಮಿಯವರನ್ನು ಉತ್ಸವಪೂರ್ವಕವಾಗಿ ಬಹಳ ವಿಜೃಂಭಣೆಯಿಂದ ಮಿಡಲ್ ಸ್ಕೂಲು ಕಟ್ಟಡಕ್ಕೆ ಬಿಜಯಮಾಡಿಸಿ ಎಲ್ಲಾ ಕೋಮಿನವರಿಗೂ ಅಂದರೆ ಸುಮಾರು 2000 ಜನಗಳಿಗೆ ಪಾನಕ ವಿನಿಯೋಗವು ಇಲ್ಲಿಗೆ ದಯಮಾಡಿಸಿದ್ದ ತುಮಕೂರು ರೇಂಜು ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಮ|| ಸಿ. ಆರ್. ಮಾಧವರಾಯರವರ ಮತ್ತು ತುಮಕೂರು ಡಿ|| ಅ|| ಇಂಜನಿಯರ್ ಮ|| ರಾಮಸ್ವಾಮಯ್ಯನವರ ಸಮಕ್ಷಮಾ ನಡೆಸಲ್ಪಟ್ಟಿತು. ಇಂತಹ ದುರ್ಭಿಕ್ಷ ಕಾಲದಲ್ಲಿಯೂ ಸಹ ಈರೀತಿ ಸುಮಾರು 500 ರೂಪಾಯಿಗಳ ವರೆಗೆ ಖರ್ಚಿಟ್ಟು ವಿದ್ಯಾಭ್ಯಾಸಕ್ಕೋಸ್ಕರ ಪ್ರೋತ್ಸಾಹ ಕೊಡುತ್ತಿರುವ ಈ ಗ್ರಾಮಸ್ಥರಿಗೆ ಭಗವಂತನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಸರ್ವದಾ ಕೊಟ್ಟು ಕಾಪಾಡಲೆಂದು ಹಾರೈಸುವ,

ಒಬ್ಬ ಗ್ರಾಮಸ್ಥ.

ಬ್ರಾಹ್ಮಣಸ್ವಭಾವ.

ಲೇಖಕ, ಸ್ವಾಮಿವಿರೂಪಾಕ್ಷ ಒಡೆಯರ್, ಪ್ರೊಫೆಸರ್, ಇಂದೋರ್.

ಬ್ರಹ್ಮಾಂಡದಲ್ಲಿರುವ ಮಾನವೀಪ್ರಾಣಿಗಳೆಲ್ಲಾ ಸರಿಸಮಾನ ಹಕ್ಕುದಾರಿಗಳೆಂಬುದಾಗಿ ವೇದಾದಿ ಸರ್ವಸತ್ಶಾಸ್ತ್ರಗಳು ಹೇಳುತ್ತ ಬಂದಿದ್ದು ಇಲೀಕಡೆಗೆ ಪೌರಾಣಿಕಕಾಲದಿಂದ ಸ್ವಾರ್ಥವೆಂಬ ದುರಭಿಮಾನದಿಂದ ಪ್ರೇರಿತವಾಗಿ ಬ್ರಾಹ್ಮಣಜಾತಿಯು ತಾನೇ ಶ್ರೇಷ್ಠವೆಂಬುದನ್ನು ತೋರಿಸುವುದಕ್ಕಾಗಿ ಜಾತಿದರ್ಪಣ, ಜಾತಿಕಲ್ಪಲತಾ, ಗೋವಿಂದಾರ್ಣವ, ಶೂದ್ರಕಮಲಾಕರ, ಧರ್ಮಸಿಂಧು, ನಿರ್ಣಯಸಿಂಧು ಮೊದಲಾದ ಅಬದ್ಧಗ್ರಂಥಗಳನ್ನು ರಚಿಸಿಕೊಂಡು ಸ್ವೇಚ್ಛಾಚಾರಿಯಾಗಿ ನಡಿಯಲಾರಂಭಿಸಿತು. ನಾವು ಮೇಲೆ ತೋರಿಸಿದ ಗ್ರಂಥಗಳಲ್ಲಿ ಬ್ರಾಹ್ಮಣೇತರ ಸಮಸ್ತಜಾತಿಯ ಉತ್ಪತ್ತಿವಿಷಯವಾಗಿ ಬರೆದಿರುವ ಬ್ರಾಹ್ಮಣೇ ಕುತ್ಸಿತಬುದ್ಧಿಯನ್ನು ವಿಚಾರಮಾಡಿ ನೋಡಿದರೆ ಇವರಲ್ಲಿ ಪರಜಾತಿಯ ವಿಷಯವಾಗಿ ಎಷ್ಟು ಮಾತ್ಸರ್ಯವಿರುವುದೆಂಬುವುದು ಸ್ಪಷ್ಟ ಕಂಡುಬರುವುದು. ಇಂತಹ ಬ್ರಾಹ್ಮಣರು ದೇಶೋನ್ನತಿಮಾಡುವವರಂತೆ! ಹಾಗೂ ಹಿಂದುಸ್ಥಾನವು ಐಕ್ಯದಿಂದಿರುವದೆಂದು ಮೇಲೆ ಹೇಳುತ್ತ ಸ್ವರಾಜ್ಯ ಬೇಡುತ್ತಿರುವರು. ಇವರು ನಿಂದಿಸಿರುವ ಸಮಸ್ತ ಜಾತಿಗಳಲ್ಲಿ ಲಿಂಗಾಯತ, ಪ್ರಭು, ಜೈನ, ಕಾಯಸ್ಥ, ಕುರುಬ, ಅಂಬಿಗ, ಮೊದಲಾದ ನಾಲ್ಕಾರು ಜಾತಿಗಳನ್ನು ಉದಾಹರಣಾರ್ಥವಾಗಿ ಈ ಲೇಖದಲ್ಲಿ ತೋರಿಸುವೆನು. ಇದರ ಮೇಲಿಂದ ಇವರ ಅಂತರಂಗಿಕ ರಹಸ್ಯವು ಸರ್ವಸಾಮಾನ್ಯ ಜನಾಂಗಕ್ಕೆಲ್ಲಾ ಗೊತ್ತಾಗುವುದು.

ಜಾತಿದರ್ಪಣವೆಂಬ ಸಂಸ್ಕೃತ ಗ್ರಂಥದ ೮ನೇ ಪಾನಿನಲ್ಲಿ—

“ಯೇಶೂದ್ರಾಃ ಪಾಶುಪತಾಸ್ತಪೋಧರ್ಮಪರಾಯಣಾಃ [illegible] ಆರೂಢಪತಿತಾಸ್ಸ್ಯುಸ್ತ ಏವಶೂದ್ರಪಣ್ಯಾಂ [illegible] ಸಂಜಾತೋಯಃ ಸಕಲಸ್ಸಾಂಕರಃ ಸಜಡೋ [illegible] ಲಿಂಗಧಾರೀ ಶಿವಲಿಂಗಪ್ರಪೂಜಯೇತ್”

ತಪೋಧರ್ಮಾಸಕ್ತರಾದ ಪಾಶುಪತರೆನಿಸಿದ ಯಾವ ಶೂದ್ರರೋ ಅವರು ಆರೂಢಪತಿತರಾಗಿ ಶೂದ್ರಸ್ತ್ರೀಯರುಗಳಲ್ಲಿ ಆಸಕ್ತರಾದರು. ಅಂಥವರಿಂದ ಆ ಶೂದ್ರಸ್ತ್ರೀಯರಲ್ಲಿ ಹುಟ್ಟಿದವರೇ ಲಿಂಗಾಯ

ತರು (ಭಸ್ಮಾಂಕುರರು) ಇವರು ಜಟಾಭಸ್ಮಧಾರಿಗಳಾಗಿ ಶಿವಲಿಂಗವನ್ನು ಪೂಜಿಸುವರು.

ಇನ್ನು ಇದರಂತೆ ಗೋವಿಂದಾರ್ಣವವೆಂಬ ಪುಸ್ತಕದಲ್ಲಿ—

« ಶೂದ್ರಾತ್ವೈಶ್ಯಾಯಾಂ ವಣಿಕ್‌ಜಾತಃ | ಲೋಕೇವಾಣೀ ಶಿವಲಿಂಗ ಸ್ವಆಕ್ಷತತಾಂಬೂಲ ವಸ್ತ್ರ ಧನ ಧಾನ್ಯ ಕ್ಷೇತ್ರಾದಿಶಿವಾಯದತ್ತಾಂತಸ್ವ ವರ್ಣಂತೆನ್ಯೈವ ಶಿವನಿರ್ಮಾಲ್ಯಾದಿಭಸ್ಮಾಂಕುರೇಣಾಗ್ರಾಹ್ಯಂ ಶಿವಸ್ವಾಧಿಕಾರೀ || ಶಿವಭಸ್ಮಾಂಕುರೋಭೇದಾಃ || ಶೈವಾಃ ಪಾಶುಪತಾಶ್ಚೈವಮಹಾ ವ್ರತಧರಾಸ್ತಥಾ| ಕಾಲಮುಖಾಃ ಪ್ರೋಕ್ತಾ ಜಟಿಲಾಜಂಗಮಾದಯಃ| ಏತೇವಾಣಿಜಿನಃ ಪ್ರೋಕ್ತಾ ವಣಿಕ್ವೃತ್ಯಾನುಜೀವನಂ || ಗರ್ದಭಾರೋಹಣಂ ತೇಷಾಂಮೃತಾಶೌಚಂ ನಕುತ್ರಚಿತ್ || ಅಶೌಚೇಪಾಯಸಾದೀನಾಂ ಭಕ್ಷಣಂಪರಿಕೀರ್ತಿತಂ| ಶೈವಾಃ ಪಾಶುಪತಾಮಹಾವ್ರತಧರಾಃ ತುರ್ಯಾಃ ಕಾಲಮುಖೀಜಂಗಮಾದಯೋನಂದಿಕೇಶ್ವರೇಣೋಕ್ತಾಃ ಜ್ಞಾತವ್ಯಾಃ ವಿಸ್ತರಭಯಾನ್ನಾತ್ರಲಿಖಿತಾಃ | ತೇಸರ್ವೇಪಿಭಸ್ಮರುದ್ರಾಕ್ಷ ಧಾರಣತತ್ಪರಾಃ ಲೋಕೇಜಟಿಲಾಭಿಧಾಃ ಕಲೌದೃಶ್ಯಾಃ || ಭಸ್ಮಾಂಕುರೋಲೋಕೇ ಗುರವಸಂಜ್ಞಃ)

ಶೂದ್ರನಿಂದ ವೈಶ್ಯಸ್ತ್ರೀಯಲ್ಲಿ (ವಣಿಕ್ ಬಣಜಿಗ) ಹುಟ್ಟಿದನಂತೆ. ಇವನಿಗೆ ಲೋಕದಲ್ಲಿ ವಾಣೀಯೆಂದು ಕರೆಯುವರೆಂತಲೂ ಇವನು ಶಿವಲಿಂಗ ಪೂಜಕನಾಗಿ ಶಿವಮಂದಿರಗಳಲ್ಲಿ ಶಿವನಿಗೋಸ್ಕರ ಕೊಡಲ್ಪಟ್ಟ ಅಕ್ಷತೆ, ತಾಂಬೂಲ, ವಸ್ತ್ರ, ಧನ, ಧಾನ್ಯ, ಭೂಮಿ ಮೊದಲಾದವುಗಳನ್ನು ಸ್ವೀಕರಿಸಿ ಶಿವನಿರ್ಮಾಲ್ಯವನ್ನು ಇವನೇ ಸ್ವೀಕರಿಸತಕ್ಕದೆಂಬದಾಗಿಯೂ ಇವನಿಗೆ ಆ ಶಿವಸಂಬಂಧಿ ಸರ್ವ ಅಧಿಕಾರಯಿರುವದೆಂತಲೂ ಹೇಳಿ ಇವರ ಭೇದಗಳು ತೋರಿಸಲ್ಪಟ್ಟಿರುವವು. ಶೈವರು, ಪಾಶುಪತರು, ಮಹಾವ್ರತಧರರು, ಹಾಗೂ ಇವರಲ್ಲಿಯೇ ಕೆಲವರು ಕಾಲಮುಖರು, ಜಟಿಲರು, ಜಂಗಮರು, ಇತ್ಯಾದಿ ನಾಮಗಳನ್ನು ಧರಿಸಿರುವರು. ಇವರೆಲ್ಲರೂ ಪಾಷಂಡಿಗಳಿದ್ದು (ವೇದಶಾಸ್ತ್ರ ಭ್ರಷ್ಟರಿದ್ದು) ವ್ಯಾಪಾರದಿಂದ ಇವರ ಜೀವನವಿರುವದು. ಹಾಗೂ ಇವರು ಯಾವಾಗಲೂ ಗರ್ದಭಾರೋಹಣ (ಕತ್ತೆ ಹತ್ತುವದು) ಮಾಡಬೇಕೆಂತಲೂ ಇವರಿಗೆ ಮರಣಕಾಲದ ಅಶೌಚಾದಿಗಳಿಲ್ಲವೆಂತಲೂ ಇದಲ್ಲದೆ ಅಶೌಚಕಾಲದಲ್ಲಿ ಇವರಿಗೆ ಪಾಯಸಾನ್ನ (ಶ್ಯಾವಿಗೆ) ಊಟಮಾಡಬೇಕೆಂದು ಹೇಳಿರುವದೆಂತಲೂ ಬರದಿರುವರು. ಇನ್ನು ಇವರಲ್ಲಿ ಮೇಲೆ ತೋರಿಸಲ್ಪಟ್ಟ ಅವಾಂತರಜಾತಿಭೇದಗಳು ನಂದಿಕೇಶ್ವರನಿಂದ ವಿಸ್ತಾರವಾಗಿ ತೋರಿಸಲ್ಪಟ್ಟಿದ್ದು ಅವೆಲ್ಲವುಗಳನ್ನು ಇಲ್ಲಿ ತೋರಿಸುವದು ವಿಸ್ತಾರವಾಗುವದೆಂಬ ಭಯದಿಂದ ಹೇಳಲಿಲ್ಲ. ಆದರೆ ಭಸ್ಮರುದ್ರಾಕ್ಷಧಾರಿಗಳಾಗಿ ಕಲಿಯುಗದಲ್ಲಿ ಇವರು ಅಲ್ಲಲ್ಲಿ ಕಾಣಲ್ಪಡುವರೆಂತಲೂ ಇವರಿಗೆ ಲೋಕದಲ್ಲಿ "ಗುರವ" ಎಂಬ ಸಂಜ್ಞೆ ಇರುವದೆಂತಲೂ, ಮನಸೋಕ್ತ ಗ್ರಂಥಕಾರನು ಬರೆದಿರುವನು. ಇನ್ನು ಈ ಗ್ರಂಥಕಾರನ ವಿಚಾರದಂತೆ ಲಿಂಗಾಯತರೆಲ್ಲರೂ "ಗುರವ" ಸಂಜ್ಞೆಯುಳ್ಳವರು ಹೌದೆಂದು ಒಪ್ಪಿದಲ್ಲಿ, ಈ ಗುರವಸಂಜ್ಞೆಯು ಈಗ್ಗೂ ರತ್ನಗಿರಿಜಿಲ್ಲೆಯಲ್ಲಿ ಸೊನಾಯಿ (ವಾದ್ಯ) ಊದುವವರಿಗೆ ಅಂದರೆ ಉತ್ಸವಾದಿ ಸಮಸ್ತ ಕಾರ್ಯಗಳಲ್ಲಿ ಕೊಳಬೀ ಊದುವವರಿಗೆ "ಗುರವ" ಎನ್ನುವರು. ಅಂದಮೇಲೆ ಈ ಗುರವ ಶಬ್ದದಿಂದ ಪವಿತ್ರರಾದ ಜಂಗಮರನ್ನು ಹಾಗೂ ಲಿಂಗಾಯತಜಾತಿಯನ್ನೂ ಕೊಳಬೀ ಊದುವ ಜಾತಿಯೆಂದು ಗ್ರಂಥಕಾರನು ಎಷ್ಟು ತಿರಸ್ಕಾರದಿಂದ ತೋರಿಸಿರುವನು! ಇದಲ್ಲದೆ ಈ ಲಿಂಗಾಯತರು ಗರ್ದಭವನ್ನು ಹತ್ತಬೇಕೇ ಹೊರತು ಅಶ್ವಾರೋಹಣ ಇವರಿಗೆ ನಿಷೇಧ ತೋರಿಸಿರುವನು. ಇವೆಲ್ಲಾ ಈ ಗ್ರಂಥಕಾರನ ವಿಚಾರಗಳಿಂದ ಲಿಂಗಾಯತರು ಕೊರಗ ಜಾತಿಯವರೆಂದು ಅಭಿಪ್ರಾಯಪಟ್ಟಂತೆ ಕಂಡುಬರುತ್ತದೆ. ಅಯ್ಯೋ! ಯಾವ ಬ್ರಾಹ್ಮಣಜಾತಿಯ ಆದ್ಯಗುರುಗಳೆನಿಸಿದ ಶಂಕರಾಚಾರ್ಯ ಮೊದಲಾದವರು ಈ ಪವಿತ್ರಲಿಂಗಾಯತ ಜಾತಿಯ ಜಂಗಮಶ್ರೇಷ್ಠರ ಆಶೀರ್ವಾದಬಲದಿಂದ ಹುಟ್ಟಿದರೆಂದು ಆ ಬ್ರಾಹ್ಮಣರ ಗುರುಗಳಾದ ವಿದ್ಯಾರಣ್ಯ ಮೊದಲಾದವರು ಸ್ವಹಸ್ತದಿಂದ ಬರದಿರುವರೋ ಅಂಥಾ ಪವಿತ್ರಜಾತಿಗೆ ನಿಂದೆಮಾಡುವವರಾದಿವರು ಭಾರತಭೂಮಿಯನ್ನು ಉದ್ಧಾರಮಾಡುವರಂತೆ! ಹಾಗೂ ಇಂಥಾ ಕುತ್ಸಿತರಾದವರಿಗೆ ಸ್ವರಾಜ್ಯಬೇಕಂತೆ!! ಸ್ವರಾಜ್ಯಸಿಕ್ಕಿದರೆ ಏನುಮಾಡುವರೋ ದೇವರೇಬಲ್ಲ. ಇನ್ನು ಇದರಂತೆ ಪೃಥುಜಾತಿ ಮೊದಲಾದವರ ಉತ್ಪತ್ತಿ ತೋರಿಸಿದ್ದನ್ನು ನೋಡುವಾ—

« ಆರ್ಯಾವರ್ತೇತುಯಃ ಕಶ್ಚಿತ್‌ಸಾಹದೇವಾಭಿಧೋನೃಪಃ | ಚತುರಂಗಬಲೈರ್ಯುಕ್ತಃ ಸಾರ್ವಭೌಮಃ ಪ್ರತಾಪವಾನ್ || ಪರಚಕ್ರೇಣ ತದ್ರಾಷ್ಟ್ರಂವ್ಯಾಪಿತಂ ಸಕಲಂತಥಾ | ತತೋಯುದ್ಧಮತೀವೋಗ್ರಂಲೋಕನಾಶಂನಿಧನಪ್ರದಂ || ಚತುರಂಗಬಲೈರ್ಯುಕ್ತಃ ಸಾಹದೇವಾಭಿಧೋನೃಪಃ | ಸಂಗ್ರಾಮೇನಿಧನಂಪ್ರಾಪ್ತೋ ಭಾರ್ಯೈಕಾಚಾವಶಿಷ್ಯಕಾ || ಸ್ವದಾಲ್ಭೀನಾಮ್ನೀಕ್ಷತ್ರಿಯಸ್ಯಭರ್ತೃಹೀನಾಸಗರ್ಭಕಾ | ಯೋಷಿತಾಚಾಶ್ರಮೇಪ್ರಾಪ್ತಾ ದಾಲ್ಭ್ಯಸ್ಯನಿರಪತ್ರಕಾ|| ರಕ್ಷಿತಾತೇನಮುನಿನಾಕನ್ಯೇವಪರಿಪಾಲಿತಾ || ಪ್ರಸೂತಿರ್ದಶಮೇಮಾಸಿ ಅಭವದ ಯಮಳಂತದಾ | ಪುತ್ರಿಕಾಚೈವ ಪುತ್ರಶ್ಚವರ್ಧತೇಋಷಿವೇಶ್ಮನಿ || ಯಮಯೌವನೇಪ್ರಾಪ್ತಂ ಕ್ರೀಡಂತ್ಯನ್ಯೋನ್ಯಪಕ್ಷಿವತ್ | ತಸ್ಮಾದ್ವಂಶಸ್ಯವಿಸ್ತಾರೋಹ್ಯಭವತ್ ಸವಿಪಾತಃ ||........ ಪರಸ್ಪರಭಗಿನೀಯಸ್ಮಾತ್ ಸ್ಮಾತ್ತು ಪರಭಾಸ್ತ್ಮತಾಃ | ಏಕಗೋತ್ರಾತ್ಪ್ರಸ್ಥತೇ ಸರ್ವೇಜಾತಾಃ ಕರ್ಮಬಹಿಷ್ಕೃತಾಃ || ಶೂದ್ರವದ್ವ್ಯವಹಾರೋಪಿದತ್ತವಾನ್‌ಮುನಿಸತ್ತಮಃ ||

ಆರ್ಯಾವರ್ತದಲ್ಲಿ ಸಹದೇವನೆಂಬ ಮಹಾಪ್ರತಾಪಿಯಾದ ಸಾರ್ವಭೌಮರಾಜನಿದ್ದು ಅವನ ರಾಷ್ಟ್ರವು ಪರಚಕ್ರದಿಂದ ವ್ಯಾಪ್ತವಾಗಲು ಆತನು ತನ್ನ ಚತುರಂಗಸೇನಾಸಮೇತ ಯುದ್ಧಮಾಡಲು ಆ ಯುದ್ಧದಲ್ಲಿ ರಾಜನು ಸತ್ತುಹೋಗಿ ಅವನ ಹೆಂಡತಿಯಾದ ಸ್ವದಾಲ್ಭಿ ಎಂಬುವ ಗರ್ಭವತಿಯು ಉಳಿದು ದುಃಖಮಗ್ನಳಾಗಿ ದಾಲ್ಭ್ಯನೆಂಬ ಋಷಿಯ ಆಶ್ರಮಕ್ಕೆ ಹೋಗಿ ನಿಂತಳು. ಆ ದಾಲ್ಭ್ಯಋಷಿಯು ಆಕೆಯನ್ನು ಮಗಳಂತೆ ಪೋಷಣಮಾಡಲು ದಿನತುಂಬಿದ ಕೂಡಲೇ ಅವಳಿಜವಳಿ ಮಕ್ಕಳನ್ನು ಹಡೆದಳು. ಅದರಲ್ಲಿ ಒಂದು ಗಂಡು ಒಂದು ಹೆಣ್ಣು ಶಿಶುವಿದ್ದು ಉಭಯರೂ ಆ ಋಷ್ಯಾಶ್ರಮದಲ್ಲಿ ಬೆಳೆದು ಯೌವನಾವಸ್ಥೆಗೆ ಬರಲು ಉಭಯ ಅಣ್ಣ ತಂಗಿಯರು ಪಕ್ಷಿಗಳಂತೆ ಪರಸ್ಪರ ದಾಂಪತ್ಯಸುಖವನ್ನು ಅನುಭವಿಸ ಹತ್ತಿ ಅವರಿಗೆ ಮಕ್ಕಳಾಗಿ ವಂಶವು ಬೆಳೆಯುತ್ತ ಹೋಗಲು ಪರಸ್ಪರ ಅಣ್ಣ ತಂಗಿಯರಿಂದ ವಂಶವೃದ್ಧಿಯಾದ್ದರಿಂದ ಅದಕ್ಕೆ ಪರಭೂ ಎಂದು ಹೆಸರು ಬಂತೆಂತಲೂ, ಹಾಗೂ ಈ ಪಾಪದಿಂದ ಇವರು ಬಹಿಷ್ಕರಿಸಲ್ಪಟ್ಟಿರುವರಾದ್ದರಿಂದ ಸರ್ವಕರ್ಮಬಾಹ್ಯರೆಂತಲೂ ಇವರ ವ್ಯವಹಾರ ಆಚಾರವಿಚಾರಗಳೆಲ್ಲಾ ಶೂದ್ರರಂತೆ ಇರತಕ್ಕದ್ದೆಂತಲೂ ನಿರ್ಣಯ ಮಾಡಿರುವರು.

ಇನ್ನು ಇದೇ ರೀತಿಯಾಗಿ ಜೈನರ ವಿಷಯ ಹ್ಯಾಗಿರುವದೆಂಬುವದನ್ನ ನೋಡುವಾ—

« ಶುಕ್ಲದಂತಾಜಿನಾಖ್ಯಾಶ್ಚ ಮುಂಡಾಃಕಾಷಾಯವಾಸಸಃ | ಶೂದ್ರಾಧರ್ಮಂಚರಿಷ್ಯಂತಿಯುಗಾಂತೇಸಮುಪಸ್ಥಿತೆ | ತಾಡಯಂತ್ವಿಜೇಂದ್ರಾಂಶ್ಚ ಶೂದ್ರಾರಾಜೋಪಜೀವಿನಃ || »

(ಶೂದ್ರಕಮಲಾಕರ, ಅಧಿಕಾರಪ್ರಕರಣ)

ಕಲಿಯುಗದಲ್ಲಿ ತಲೆಬೋಳಿಸಿಕೊಂಡ ಬೆಳ್ಳನ ಹಲ್ಲುಳ್ಳ ಕಾಷಾಯವಸ್ತ್ರವನ್ನು ಧರಿಸಿದ ಜಿನ (ಜೈನ) ಎಂಬ ಹೆಸರುಳ್ಳ ಶೂದ್ರರು ಧರ್ಮವನ್ನು ಆಚರಿಸುವರು. ಇದಲ್ಲದೇ ಈ ಶೂದ್ರರಾದ ಜೈನರು ರಾಜೋಪಜೀವಿಗಳಾಗಿ ಬ್ರಾಹ್ಮಣರನ್ನು ಬಾಧಿಸುವರು. ಇತ್ಯಾದಿ ಬಹು ನೀಚತನದಿಂದ ತೋರಿಸಿರುವರು.

ಕಾಯಸ್ಥರ ವಿಷಯ.

ನಾನಾಲಿಪಿಲೇಖನಬೀಜಲೀಲಾವತ್ಯಾಗಣಿತಮಭ್ಯಸ್ಯಚಾತುರ್ವರ್ಣ್ಯಸೇವಾತತ್ಪರ್ಯಾಶೂದ್ರಾದಧಮಃ | ಅಸ್ಯಶಿಖಾಯಜ್ಞೋಪವೀತಂ ರಕ್ತವಸ್ತ್ರಧಾರಣಂ ದೇವತಾಸ್ಪರ್ಶಃ || ತೀರ್ಥೇಸೇವಾದೇವತಾರಾಧನಂ ನಕಾರ್ಯಂ | ಜ್ಞಾನಂಸನ್ಯಾಸೋಮಂತ್ರಸಾಧನಂ ಅಸ್ಯಸರ್ವಂಪಾಪಾವಹಂ ಭವತಿಕಾಯಸ್ಥೋಲೋಕೇಕಾಯಿತಪರಭೂ ಇತ್ಯುಚ್ಯತೇ ||

(ಜಾತಿದರ್ಪಣ, ಪಾನು ೫)

ಕಾಯಸ್ಥ ಜಾತಿಯವರು ಬರೇಲಿಪಿ ಲೇಖನ ಗಣಿತವನ್ನು ಅಭ್ಯಾಸ ಮಾಡಬೇಕೇ ಹೊರತು ವೇದಾಂಗವಾದ ಜ್ಯೋತಿಷ್ಯಾದಿ ಶಾಸ್ತ್ರಗಳನ್ನು ಅಭ್ಯಾಸಮಾಡಬಾರದು. ಯಾಕಂದರೆ ಇವರು ಶೂದ್ರರಿಗಿಂತಲೂ ನೀಚ ಜಾತಿಯವರು. ಆದ್ದರಿಂದ ಇವರು ನಾಲ್ಕು ಜಾತಿಯವರ ಸೇವಾಮಾಡುತ್ತ ಶಿಖಾ, ಯಜ್ಞೋಪವೀತ, ಕೆಂಪುವಸ್ತ್ರಾದಿಗಳನ್ನು ಧರಿಸುವುದು ದೇವರನ್ನು ಮುಟ್ಟುವದು, ತೀರ್ಥಗಳಲ್ಲಿ ಸ್ನಾನ, ಸೇವಾ, ದೇವರ ಪೂಜಾ ಮೊದಲಾದದ್ದನ್ನು ಎಂದೂ ಮಾಡಬಾರದು. ಹಾಗೂ ಜ್ಞಾನ ಸಂಪಾದನೆ, ಸನ್ಯಾಸಗ್ರಹಣ, ಇವೆಲ್ಲಾ ಇವರಿಗೆ ಮಹಾ ಪಾಪಕರಗಳಿದ್ದು ಇವರು ಇವುಗಳನ್ನು ಎಂದೂ ಆಚರಿಸಬಾರದು. ಇವರಿಗೆ ಲೋಕದಲ್ಲಿ ಕಾಯಿತರೆಂದು ಹೇಳುವರು.

ಕೋಳಿ, (ಅಂಬಿಗಜಾತಿ) ವಿಷಯ.

« ಶೂದ್ರಾತ್ಕನ್ಯಾಯಾಂಜಾತಃ ಸಪುಲ್ಕಸೋಂತ್ಯಜಾತಿಸಮೇತಃ | ಅರಣ್ಯಜೀವವಿಕಸನೇನತಸ್ಯಜೀವಿಕಾ || (ಪುಲ್ಕಸಃಕೋಲೀ ಇತಿಸಂಜ್ಞಾ)
ರಾಜ್ಞಾಂದೋಲಾವಾಹನಸ್ಕಂಧನಾನಾಂವಿಕ್ರಯಃ| ಲೋಕೇ ಪಿಷ್ಟಾಂ ಕಾಹಾರಭೋಯೀ ಇತ್ಯಾದಿಸಂಜ್ಞಾ ||

(ಜಾತಿದರ್ಪಣ, ಪಾನು ೬)

ಶೂದ್ರಸ್ತ್ರೀಯಲ್ಲಿ ಬ್ಯಾಡರ ಜಾತಿಯವರಿಂದ ಹುಟ್ಟಿದ ಮಿಶ್ರಜಾತಿಯ ಪುರುಷನಿಗೆ ಪುಲ್ಕಸ ಅಂದರೆ ಕೋಳಿ, ಭೋಯಿ, ಅಂಬಿಗ ಈ ಹೆಸರುಗಳು ಬಂದಿದ್ದು ಈ ಅಂಬಿಗಜಾತಿಯವರು ಅರಣ್ಯದಲ್ಲಿರುವ ಪಶು ಪಕ್ಷಿಗಳನ್ನು ಹೊಡೆದು ಅದರಿಂದಲೇ ಉಪಜೀವಿಸಬೇಕು. ಹಾಗೂ ಇವರು ರಾಜರ ಮೇಣಾ, ಪಾಲ್ಕಿ ಹೊರುವದೂ, ಕಟ್ಟಿಗೆ ಮಾರುವದು ಇವೇ ಮೊದಲಾದ ಉದ್ಯೋಗಗಳನ್ನು ಮಾಡಿಕೊಂಡು ಕಾಲಕ್ಷೇಪ ಮಾಡಬೇಕೆಂತ ಬರದಿರುವರು. ಇದಲ್ಲದೆ ಇವರು ಅಂತ್ಯಜಜಾತಿಯ ಅಂದರೆ ಹೊಲೆಯರ ಜಾತಿಯ ಸಮಾನರಿದ್ದು ಇವರಿಗೆ ಈ ಕೃತಿಗಳೇ ವಿಹಿತವಾಗಿರುವವೆಂದು ಬರದಿರುವರು. ಯಾಕಂದರೆ, ಲೋಕದಲ್ಲಿ ಶೂದ್ರರಿಗೆ ಪಾತಕವೇ ಇಲ್ಲದ್ದರಿಂದ ಇವರು ಬೇಕಾದಂಥಾ ಪಶುಹಿಂಸಾದಿಗಳನ್ನು ಮಾಡಿ ಅದರಿಂದ ಉಪಜೀವಿಸಲು ಅಡ್ಡಿ ಇಲ್ಲವಂತೆ. ಹ್ಯಾಗಂದರೆ,

« ನಶೂದ್ರೇಪಾತಕಂ ಕಿಂಚಿನ್ನಚಸಂಸ್ಕಾರಮರ್ಹತಿ | (ಮನುಸ್ಮೃತಿ)
ನಶೂದ್ರಾಯಮತಿಂದದ್ಯಾತ್ | ನಚಾಸ್ಯೋಪದಿಶೇದ್ಧರ್ಮಂನಚಾಸ್ಯ ವ್ರತಮಾದಿಶೇತ್ || (ಪದ್ಮಪುರಾಣದಲ್ಲಿ)
ನಶೂದ್ರಾಯಪರಿಜ್ಞಾನಂ ದದ್ಯಾದ್ವೇದಮುಖೇನತು| (ಪರಾಶರಸ್ಮೃತಿ)

ಈ ರೀತಿ ಮೇಲೆ ತೋರಿಸಿದಂತೆ ಶೂದ್ರನಿಗೆ ಪಾತಕಗಳೇ ಇಲ್ಲ, ಹಾಗೂ ಯಾವ ಸಂಸ್ಕಾರಗಳಿಗೂ ಇವನು ಅರ್ಹನಲ್ಲ ಮತ್ತು ಶೂದ್ರರಿಗೆ ಬುದ್ಧಿಯನ್ನು ಕಲಿಸಬಾರದು, ವ್ರತಧರ್ಮೋಪದೇಶಗಳನ್ನು ಹೇಳಬಾರದು. ಇವೇ ಮೊದಲಾದ ಕುತ್ಸಿತ ಶ್ಲೋಕಗಳನ್ನು ಋಷಿಗ್ರಂಥಗಳಲ್ಲಿ ಹಾಕಿ ಛಾಪಿಸಿಕೊಂಡು ಅವುಗಳನ್ನು ಸರ್ವತ್ರ ಆಧಾರವೆಂದು ತೋರಿಸುತ್ತ ಸ್ವಾರ್ಥೈಕಪರರಾಗಿ ಸಾಂಸಾರಿಕ ಪಾರಮಾರ್ಥಿಕ ಸರ್ವಸುಖಗಳಿಗೆ ಸಾಧನೀಭೂತಗಳಾದ ವಿದ್ಯಾ, ಬುದ್ಧಿ, ಧನ ಧರ್ಮಾದಿ ಸರ್ವವನ್ನೂ ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಗುತ್ತಿಗೆಯ ವ್ಯವಹಾರ ನಡಿಸುತ್ತ ಬಂದು, ಯಾವ ಭಾರತೀಯ ಸರ್ವಜನಾಂಗವು ಧರ್ಮವೇ ತನು ಪ್ರಾಣವೆಂದು ನಂಬಿ ಆಚರಿಸುತ್ತಿರುವದೋ ಅಂಥಾ ಧರ್ಮವನ್ನೇ ಇವರು ನಿಂದಿಸುತಾ ನಡದದ್ದರಿಂದ ದೇಶದಲ್ಲಿ ಅನೈಕ್ಯತೆಯಾಗಿ ಹಿಂದೂ ಭೂಮಿಯು ಪರಧರ್ಮಿಗಳ ಪ್ರವೇಶಕ್ಕೆ ಆಸ್ಪದವಾಗಿ ಪರಚಕ್ರದ ಅಧೀನವಾಯಿತು. ಹಿಂದು ಭೂಮಿಗೆ ಈ ರೀತಿಯಾದ ಅನಿಷ್ಟವನ್ನು ತರಲಿಕ್ಕೆ ಸ್ವಾರ್ಥಿಗಳಾದ ಈ ಬ್ರಾಹ್ಮಣರೇ ಕಾರಣರು ಮತ್ತು ಪರಧರ್ಮವನ್ನು ನಿಂದಿಸುವದು ಬ್ರಾಹ್ಮಣರಾದಿವರ ನೈಸರ್ಗಿಕಗುಣವಾದಂತಾಗಿರುವದು. ವಸ್ತುತಃ ವಿಚಾರಮಾಡಿದಲ್ಲಿ ಐದಿಕಡೆ ಸಾವಿರಾರು ವರ್ಷಗಳಿಂದ ಪ್ರಚಾರದಲ್ಲಿ ಬಂದಿರುವ ಬ್ರಾಹ್ಮಣಜಾತಿಯೆಂಬುವದು ಯಾವ ವೇದಗಳಲ್ಲಿಯೂ ನಿಯತವಾಗಿ ಹೇಳಲ್ಪಡದೆ ಇದು ಕೇವಲ ಮಿಶ್ರಜಾತಿಯೆಂದು ಅನೇಕ ಆರ್ಷಗ್ರಂಥಗಳ ಆಧಾರದಿಂದ ತೋರಿಸಲು ಸಾಧ್ಯವಿದ್ದು ಬ್ರಾಹ್ಮಣರು ಈ ರೀತಿ ಪರಧರ್ಮ ನಿಂದಿಸುವದನ್ನು ನೋಡಿದರೆ ಪರಮಾಶ್ಚರ್ಯವೆನಿಸುತ್ತದೆ. ಇನ್ನು

« ರಜಕಶ್ಚರ್ಮಕಾರಶ್ಚ ನಟೋಬುರುಡಏವಚ | ಕೈವರ್ತಭೇದಭಿಲ್ಲಾಶ್ಚ ಸಪ್ತೈತೇ ಅಂತ್ಯಜಾಸ್ಮೃತಾಃ | (ಜಾತಿಕಲ್ಪಲತಾದಲ್ಲಿ)

ಅಗಸ, ಮ್ಯಾದಾರ, ತಳವಾರ, ಭಿಲ್ಲ ಮೊದಲಾದ ಜಾತಿಯವರೆಲ್ಲಾ ಅಂತ್ಯಜರಂತೆ, ಮತ್ತು ಕೋಳಿ (ಅಂಬಿಗರೂ) ಅಂತ್ಯಜರ ಸಮರಂತೆ. ನೋಡಿರಿ ಈ ಬ್ರಾಹ್ಮಣವಾಕ್ಯಗಳನ್ನು! ಯಾವ ಅತ್ರೇಯ ವ್ಯಾಸ, ಭೀಷ್ಮ, ಕರ್ಣ, ಚೌಡಯ್ಯ, ವಿದುರ, ವಾಲ್ಮೀಕಿ, ಮೊದಲಾದ ಮಹಾಶ್ರೇಷ್ಠ ನರರತ್ನಗಳು ಯಾವೀ ಅಂಬಿಗ ಮೊದಲಾದ ಜಾತಿಗಳಲ್ಲಿ ಜನಿಸಿ ಜಗತ್ತನ್ನೇ ಪವಿತ್ರಮಾಡಿರುವವೋ ಹಾಗೂ ಅಂಥಾ ನರಶ್ರೇಷ್ಠರಿಂದ ಬರೆಯಲ್ಪಟ್ಟ ಬ್ರಹ್ಮಸೂತ್ರ, ಭಗವದ್ಗೀತಾ, ರಾಮಾಯಣ, ವಿದುರನೀತಿ, ಚೌಡಯ್ಯನ ವಚನಶಾಸ್ತ್ರ ಮೊದಲಾದ ಲೋಕಪೂಜ್ಯಗಳಾದ ಗ್ರಂಥಗಳನ್ನು ಅಧ್ಯಯನಮಾಡಿ ಯಾವೀಬ್ರಾಹ್ಮಣರು ಕೃತಾರ್ಥರಾಗುವರೆಂದು ತಿಳಿಯುವರೋ, ಹಾಗೂ ಇವರು ತೋರಿಸಿರುವ ಜ್ಞಾನ, ನೀತಿ, ಭಕ್ತಿಗಳನ್ನು ಆಚರಿಸಿ ಪುನೀತರಾಗುವರೆಂದು ಮನ್ನಿಸುವರೋ ಅಂಥಾ ಪುನೀತಪುರುಷರಿಂದ ಅಲಂಕರಿಸಲ್ಪಟ್ಟ ಜಾತಿಗಳಿಗೆ ಮನಸೋಕ್ತನಿಂದೆಯನ್ನು ಮಾಡುವರಾದೀ ಬ್ರಾಹ್ಮಣಂಮನ್ಯರ ಕುತ್ಸಿತಬುದ್ಧಿಯು ಎಂಥಾದ್ದಿರಬಹುದೆಂಬುವದನ್ನು ವಾಚಕರೇ ಊಹಿಸಲಿ. ಇನ್ನು ಈ ರೀತಿಯಾಗಿ ಉಚ್ಚನೀಚತ್ವದಿಂದ ಕೂಡಿರುವದೆಂದು ಜಾತಿವಾದವು ಯಾವ ವೇದಗಳಲ್ಲಿಯೂ ಹೇಳಲ್ಪಟ್ಟಿಲ್ಲ. ಇವೇ ಅಲ್ಲದೆ,

« ನಮೋದಾಸೋನಮೇತ್ಯಾರ್ಯೋಽನೃತಂ ವಿವಾಯಯದಹಂ ಧರಿಸ್ಯೇ ||. (ಅಥರ್ವಣವೇದದಲ್ಲಿ)

ಇತ್ಯಾದಿ ವೇದವಾಕ್ಯಗಳಿಂದ ಜನ್ಮತಃ ಉಚ್ಚನೀಚತ್ವಕಲ್ಪನೆಯು ನಿಷೇಧಿಸಲ್ಪಟ್ಟಿದ್ದು ಇದನ್ನೆಲ್ಲಾ ಮರೆಮಾಚಲಿಕ್ಕೆ ಬ್ರಾಹ್ಮಣಂಮನ್ಯರಾದವರು ವಿದ್ಯೆಯ ಗುತ್ತಿಗೆಯನ್ನು ಸ್ವಕಪೋಲದಿಂದ ಕಲ್ಪಿಸಿ ಬರಕೊಂಡಿರುವರು. ಹೀಗೆ ಅವರು ವಿದ್ಯೆಯ ಮಕ್ತೆಯನ್ನು ತಮ್ಮ ಕಡೆಗೆ ಮಾಡಿಕೊಳ್ಳದೇ ಇದ್ದಲ್ಲಿ ಇವರು ಮಾಡಿರುವ ಪರಧರ್ಮನಿಂದೆಯು ಆಯಾ ಧರ್ಮದವರಿಗೆ ಗೊತ್ತಾಗಿ ಇವರ ಕುಟಿಲತ್ವವು ಹೊರಬಿದ್ದು ಆ ಜನಾಂಗವೆಲ್ಲಾ ಈ ಬ್ರಾಹ್ಮಣರೊಡನೆ ಅಸಹಕಾರವನ್ನೆಬ್ಬಿಸ್ಯಾರೆಂಬ ಭಾವನೆಯಿಂದಲೂ ಹಾಗೂ ವೇದಗಳಲ್ಲಿರುವ ನಿಜಸ್ಥಿತಿಯು ಕಂಡುಬಂದೀತೆಂತಲೂ ಯೋಚಿಸಿ ಸಂಸ್ಕೃತವಿದ್ಯೆಯನ್ನು ಕಲಿಯಲು ಹಾಗೂ ಕಲಿಸಲಿಕ್ಕೂ ಬ್ರಾಹ್ಮಣೇತರರಾದ ಸಮಸ್ತ ಜನಾಂಗಕ್ಕೂ ಅಧಿಕಾರವಿರದೇ ಕೇವಲ ತಮ್ಮೊಬ್ಬರಿಗೇನೇ ಉಂಟೆಂದು ವಾದಿಸುತ್ತಾ ಬಂದಿರುವರು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ವಿಕರಿಮಾಡುತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದ್ದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿ ಇರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಊದಬತ್ತಿ ಷಾಪ್, ಎಸ್. ಕಳ್ಳಪ್ಪ,
9 ಬೆಂಗಳೂರು ಸಿಟಿ ದೊಡ್ಡಪ್ಯಾಟಿ

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

APPLY FOR SCORPION CURE
M.S.SIDDAPPA BROS
MYSORE.

ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0.8 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರ ಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪ ವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನ ಪಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳು ಬಂದವರು ನಗುತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅ ಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗು ಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4 12 ಬಾಟ್ಲುಗಳಿಗೆ 2—6—0. 25 ಬಾಟ್ಲುಗಳಿಗೆ 4—8—0. ಅ ಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲೆಂಡರ್ 0—14—0. ಮಾ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೆ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—29] ಮೈಸೂ

೧೯೨೪ ನೆಯ ಇಸವಿ ಏಪ್ರಿಲ್ ತಾ|| ೧೩ ರಿಂದ ೧೯೨೪ ನೆ ಇಸವಿ ಏಪ್ರಿಲ್ ತಾ|| ೧೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮ ನೆಯ ರಕ್ತಾಕ್ಷಿನಾಮ ಸಂವತ್ಸರದ ಚೈತ್ರಶುದ್ಧ ನವಮಿಯಿಂದ ಚೈತ್ರಶು ಪೌರ್ಣಿಮೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
13	[1]ಭಾನು	ನವ	48.10	ಪುಷ್ಯ	37.22
14	ಸೋಮ	ದಶ	48.38	ಆಶ್ಲೆ	39.43
15	[2]ಮಂಗಳ	ಏಕಾ	47.53	ಮಘಾ	40.47
16	[3]ಬುಧ	ದ್ವಾದ	45.48	ಪುಬ್ಬ	40.36
17	[4]ಗುರು	ತ್ರಯೋ	42.38	ಉತ್ತ	39.25
18	[5]ಶುಕ್ರ	ಚತು	38.30	ಹಸ್ತ	37.6
19	[6]ಶನಿ	ಪೌರ್ಣ	33.32	ಚಿತ್ತ	34.9

(1) ಸರ್ವತ್ರ ಶ್ರೀರಾಮನವಮಿ. (2) ಸರ್ವತ್ರ ಏಕಾದಶಿ. ಬೇಲೂರು ಕೇಶವಸ್ವಾಮಿರಥ, ಮಂಡ್ಯದ ಜನಾರ್ದನಸ್ವಾಮಿ (4) ಪ್ರದೋಷ, ಅನಂಗತ್ರಯೋದಶಿ, ಮಾಗಡಿ ರಂಗಸ್ವಾಮಿ (5) ಮೇಲೂರು ಅಪ್ರಮೇಯಸ್ವಾಮಿರಥ, ಕಂಚಿ ವರದರಾಜಸ್ವಾ ರಥ, ಗುಡ್‌ಫ್ರೈಡೆ. (6) ಚಿತ್ರಾಪೂರ್ಣಿಮಾ, ಬಿಳಿಗಿರಿ ರಂಗಸ್ವಾಮಿ

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಕೃತಾ | ಘನಪಥಕೃತಾವತಾರಾ ಪಕ್ಷ್ಮಜ ನಕ್ಷತ್ರ ಮೋಹರಾಜೀಯಾತ್
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [[illegible] ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಏಪ್ರಿಲ್ ತಾರೀಖು ೨೦ ನೆಯ ಭಾನುವಾರ. [ಸಂಚಿಕೆ ೧೬

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. ಆರಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಶಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ. ಹೊಟ್ಟೆಯುಬ್ಬರಿಸದ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
11 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆ ಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಶೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
೧೨ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.
ಯುಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—33] ಪೋ. ಬಾ. ೫೧೦, ಮದರಾಸು.

ೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ಶಿವಪೂಜಾವಿಧಿ।	೦—೧೨—೦	೧—೨—೦
ೀರಶೈವ ವಿವಾಹವಿಧಿ।	೦—೮—೦	೦—೧೩—೦
ವಿದ್ಯಾ	೦—೪—೦	೦—೭—೦
ೀಶತಂತ್ರ	೦—೫—೦	೦—೧೦—೦
	೦—೪—೦	೦—೭—೦
ೀಕ	೦—೪—೦	೦—೭—೦
ಂಕರೇಶ್ವರಶತಕ	೦—೧—೦	೦—೬—೦
ಪ್ರಕಾಶ	೦—೮—೦	೦—೧೩—೦

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್‌ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವತತ್ವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—19] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯಹಿದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.
ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಿಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಸಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರನಳ್ಳಿಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ಕೆಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಪ್ಪರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಅರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಸಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಕವಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತಿಪುರುಷ, ರೂಮಾಮಸ್ತಕಿ, ಕಮರಕಸ, ಕಫಲ್ಯಾಗೊಂದ, ಪಂಚಾಬಿ ಮಿಶ್ರಿ, ವಂಶಲೋಚನ, ಸಾಲಮಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ. ಬೀಜಬಂಧ, ಚಿಗರಿಗೊರಸು, ಮೋಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಬಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲೆ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲೆ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲೆ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲೆ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣ ತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರಾ ಅಡ್ರಸ್ ಮೊಕ್ಕಾಂ ಪೋಸ್ಟ ಸಹ ಬರೆಯಿರಿ.

[50—36] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್‌ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಗಿ.

ಗ್ರಂಥಸಿಕ್ಕುವಸ್ಥಳ :—
ಹೊಸಮಠದ ಚನ್ನಯ್ಯನವರು ಹರಿಹರ,
24—2 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[50—14] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಇಸುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೦ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಏಪ್ರಿಲ್ ತಾ॥ ೨೦ ನೆಯ ಭಾನುವಾರ.

MYSORE CITY VOTERS' LIST.

It is somewhat interesting to note how mysteriously things are going on in the Mysore City Municipality in the matter of the preparation of the voter's list for the coming Municipal elections. The questionable manner in which the voters' list for the Council and the Assembly elections was prepared has already become common knowledge. After that, we expected a more open and straightforward handling of this important question. But we are worse off than before. There has been no notification in the Mysore Gazette of the list of voters, and the ground on which it is not done is that it is not obligatory to do so. Nor has the list found any publicity in the local papers, and the only manner in which the voters and the candidates are to get at it is a manuscript list put up at the office. The large number of voters in the city are expected to make a pilgrimage to the Municipal office to find out whether their names are on the list, and if there are any ommisions, to put in their claims. The question is could anything be more absurd than this. Whether those responsible for this were ever fit to guide the municipal affairs is the next question. The third is whether this state of affairs is to continue or to end. The rule is that within 15 days of the publication or in this case, the posting up of the list claims from persons whose names are left out should reach the municipal office. What the day is on which the list was put up at the office was left to the voters to imagine, for there was no notification regarding it. It would appear that the municipal office issued some notices intimating the ratepayers that the list had been put up and that within 15 days the claimants should put in their applications. Nobody knows where and when these notices were circulated. At any rate there was a large number of Municipal Councillors who had not seen the notice at the time when the subject was discussed at a meeting of the Municipal Council on Tuesday the 15th instant. When questioned how many notices were printed there was no answer forthcoming. This is hardly a satisfactory way of dealing with important questions. The sister Municipality of Bangalore City went out of the way in calling upon the ratepayers to pay up their arrears before the preparation of the list itself. Here there seems to be hardly any such sympathetic and strong direction. The talk about Local Self-Government is always growing in volume, but the working of it is becoming increasingly unpopular. There is still time before the next elections to the Mysore City Municipal Council, and we hope that due publicity will be given to the voters' list, and the just cause of the complaint of the ratepayers removed.

ರಾಜಧಾನಿಯ ಓಟರುಗಳ ಲಿಸ್ಟು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳ 3 ವರ್ಷ ಕಾಲಾವಧಿಯು ಬರುವ ಸೆಪ್ಟಂಬರ್ ಆಗಸ್ಟ್ ತಿಂಗಳ ಕಡೆಯಲ್ಲಿ ಮುಗಿಯುವುದರಿಂದ ಅವರ ಸ್ಥಾನಗಳಲ್ಲಿ ಹೊಸ ಮ್ಯುನಿಸಿಪಲ್ ಕೌನ್ಸಿಲರುಗಳು ಜುಲೈ ತಿಂಗಳಲ್ಲಿ ಆರಿಸಲ್ಪಡಬೇಕಾಗಿರುವ ಪ್ರಯುಕ್ತ, ಕಂದಾಯವನ್ನು ಕೊಡುವವರಲ್ಲಿ ಓಟನ್ನು ಕೊಡಲು ಮತ್ತು ಕೌನ್ಸಿಲರಾಗಿ ಆರಿಸಲ್ಪಡಲು ಅರ್ಹರಾದ ಜನರ ಹೆಸರಿನ ಪಟ್ಟಿಯು ಮ್ಯುನಿಸಿಪಲ್ ಆಫೀಸಿನವರಿಂದ ಸಿದ್ಧಗೊಳಿಸಲ್ಪಟ್ಟು ಮ್ಯುನಿಸಿಪಲ್ ಆಫೀಸಿನ ಮುಂಗಡೆ ಒಂದು ಹಲಿಗೆಯಮೇಲೆ ಹಚ್ಚಲ್ಪಟ್ಟಿರುವುದು. ಇದುವರೆಗೆ ಇಂತಹ ಓಟರುಗಳ ಲಿಸ್ಟುಗಳು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿತವಾಗುತಲಿದ್ದಿತು. ಈವೇಳೆ ಮಾತ್ರ ಹಾಗೆ ಮಾಡಲ್ಪಡದಿರುವ ಪ್ರಯುಕ್ತ, ಜನರ ತಿಳಿವಿಕೆಗೆ ಬರಲು ಸಾಧ್ಯವಿಲ್ಲವಾಗಿದೆ. ಕೆಲ ತಿಂಗಳ ಕೆಳಗೆ ಪ್ರಜಾಪ್ರತಿನಿಧಿಸಭೆಗೂ ನ್ಯಾಯವಿಧಾಯಕ ಸಭೆಗೂ ಮೆಂಬರನ್ನು ಆರಿಸುವುದಕ್ಕಾಗಿ ರಾಜಧಾನಿಯ ಮ್ಯುನಿಸಿಪಾಲಿಟಿಯವರಿಂದ ಸಿದ್ಧಗೊಳಿಸಲ್ಪಟ್ಟಿದ್ದ ಓಟರುಗಳ ಲಿಸ್ಟು ಸಕ್ರಮವಾಗಿಯೂ ಸಮರ್ಪಕವಾಗಿಯೂ ಇಲ್ಲವೆಂದು ಕೆಲ ಮ್ಯುನಿಸಿಪಲ್ ಕೌನ್ಸಿಲರುಗಳು ಮತ್ತೆ ಕೆಲ ದೊಡ್ಡಮನುಷ್ಯರುಗಳು ಲೆಜಿಸ್ಲೇಟಿವ್ ಶಾಖೆಯ ಸೆಕ್ರೆಟರಿಯವರವರೆಗೂ ದೂರುಮಾಡಿದ್ದರೂ ಫಲಕಾರಿಯಾಗದೆ ಹೋದುದರಿಂದ ಜನರಿಗುಂಟಾದ ಅಸಮಾಧಾನವೂ ದುಷ್ಪರಿಣಾಮವೂ ಈ ಪತ್ರಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಈಗ ಸಿದ್ಧಗೊಳಿಸಲ್ಪಟ್ಟಿರುವ ಓಟರುಗಳಲಿಸ್ಟಿನಲ್ಲಿ ಕಂಡ ಸಂಖ್ಯೆಯು 3 ವರ್ಷಗಳ ಹಿಂದೆ ಇದ್ದ ಓಟರುಗಳ ಸಂಖ್ಯೆಗಿಂತಲೂ ಕಳೆದ ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಮೆಂಬರುಗಳ ಚುನಾವಣೆಯ ಕಾಲದಲ್ಲಿದ್ದ ಓಟರುಗಳ ಸಂಖ್ಯೆಗಿಂತಲೂ ಬಹಳ ಕಡಿಮೆಯಾಗಿ ಕಂಡುಬರುವುದರಿಂದ ಅದನ್ನು ಪರಿಶೀಲಿಸಿ ರೂಲ್ಸು ಪ್ರಕಾರ ಸರಿಪಡಿಸುವುದಕ್ಕಾಗಿ ಒಂದು ಸ್ಪೆಷಲ್ ಮೀಟಿಂಗನ್ನು ಮಾಡಬೇಕೆಂದು ರಾಜಧಾನಿಯ ಮ್ಯು॥ ಕೌನ್ಸಿಲರುಗಳಲ್ಲಿ ಕೆಲವರು ಪ್ರೆಸಿಡೆಂಟರನ್ನು ಕೋರಿದ್ದ ಪ್ರಕಾರ, ಕಳೆದ ತಾ॥ 15 ರಲ್ಲಿ ಮೀಟಿಂಗು ನಡೆಸಲ್ಪಟ್ಟು ಲಿಸ್ಟಿನ ವಿಚಾರದಲ್ಲಿ ಚರ್ಚೆಯು ಮಾಡಲ್ಪಟ್ಟಿತು. ಹೊಸದಾಗಿ ತಯಾರಿಸಲ್ಪಡುವ ಮ್ಯುನಿಸಿಪಲ್ ಕೌನ್ಸಿಲ್ ಓಟರುಗಳ ಲಿಸ್ಟಿಗೆ ಸೇರಿಸಲ್ಪಡಲಿಷ್ಟವುಳ್ಳವರು ತಮ್ಮ ಕಂದಾಯವನ್ನು ಇಷ್ಟುದಿವಸದಲ್ಲಿ ಸಲ್ಲಿಸಬೇಕೆಂದು ಬೆಂಗಳೂರು ಮ್ಯುನಿಸಿಪಾಲಿಟಿಯವರು ಡೇಲಿಪೋಸ್ಟ್ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಅದರಂತೆ ಇಲ್ಲಿಯೂ ಪ್ರಕಟಿಸಿದ್ದರೆ ಜನರಿಗೆ ಗೊತ್ತಾಗಿ ಅವರು ತಮ್ಮ ಕಂದಾಯದ ಬಾಕಿಯ ಹಣವನ್ನು ಸಲ್ಲಿಸಿ ಲಿಸ್ಟಿಗೆ ಸೇರಲವಕಾಶವಾಗುತ್ತಿದ್ದಿತು. ಆರೀತಿ ಮಾಡದೆ ಮತ್ತು ಓಟರುಗಳ ಲಿಸ್ಟು ಸಿದ್ಧಗೊಳಿಸಲ್ಪಟ್ಟಿರುವ ವಿಚಾರವು ಪ್ರಕಟಿಸಲ್ಪಡದೆ ಹೋದುದರಿಂದ ಬಹುಜನರಿಗೆ ಕೆಲ ಮ್ಯು॥ ಕೌನ್ಸಿಲರುಗಳಿಗೂ ಸಹ ಗೊತ್ತಾಗಲು ಮಾರ್ಗವಿಲ್ಲವಾಯಿತು ಎಂದು ಮೊದಲಾಗಿ ಕೆಲ ಕೌನ್ಸಿಲರುಗಳು ಅರಿಕೆ ಮಾಡಿದುದರ ಮೇಲೆ ಎಲ್ಲವೂ ರೂಲ್ಸು ಪ್ರಕಾರ ನಡಿಸಲ್ಪಟ್ಟಿರುತ್ತದೆ. ಯಾರ ಹೆಸರು ಬಿಟ್ಟುಹೋಗಿರುತ್ತದೋ ಅಂತಹವರು ಈ ತಾ॥ 15 ರೊಳಗೆ ಚೀಫ್ ಆಫೀಸರಿಗೆ ಬರೆದು ತಿಳಿಸಲವಕಾಶವಿದ್ದಿತು. ಈಗ ಈ ವಿಚಾರದಲ್ಲಿ ಏನನ್ನೂ ಮಾಡಲಾಗುವುದಿಲ್ಲವೆಂದು ಪ್ರೆಸಿಡೆಂಟರು ಉತ್ತರ ಕೊಟ್ಟರು. ಆದರೂ ಈ ನ್ಯೂನತೆಯನ್ನು ಸರಿಪಡಿಸಲು ಇನ್ನೂ ಅವಕಾಶವಿರುವುದರಿಂದ ಸರ್ಕಾರದವರಾದರೂ ಈ ವಿಚಾರದಲ್ಲಿ ಪ್ರವೇಶಿಸಿ ಲಿಸ್ಟು ಪುನರ್ವಿಮರ್ಶೆಯಿಂದ ಸರಿಪಡಿಸಲ್ಪಡುವಂತೇರ್ಪಡಿಸಬೇಕಾಗಿ ಸೂಚಿಸುತ್ತೇವೆ.

ಕಲಕತ್ತಾ ಮ್ಯುನಿಸಿಪಾಲಿಟಿ.

ಸಿ. ಆರ್. ದಾಸ್‌ರವರ ಅಧ್ಯಕ್ಷತೆ.

ಬೊಂಬಾಯಿ ಪಟ್ಟಣದ ಮ್ಯುನಿಸಿಪಾಲಿಟಿಯಂತೆ ಕಲಕತ್ತಾ ನಗರದ ಮ್ಯುನಿಸಿಪಾಲಿಟಿಯು ಬಹಳ ದೊಡ್ಡದು ಮತ್ತು ಉತ್ತರವಾದಿತ್ವವುಳ್ಳುದು. ಕಲಕತ್ತಾ ನಗರದ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ಕೆಲ ದಿನಗಳ ಕೆಳಗೆ ನಡೆದು ದೇಶಭಕ್ತ ಚಿತ್ತರಂಜನದಾಸ್‌ರವರು ಮೊದಲಾಗಿ ಸ್ವರಾಜ್ಯಪಕ್ಷದವರೇ ಹೆಚ್ಚಾಗಿ ಮೆಂಬರುಗಳಾಗಿ ಆರಿಸಲ್ಪಟ್ಟಿರುತ್ತಾರೆ. ಮತ್ತು ಈ ಕೌನ್ಸಿಲಿನ ಅಧ್ಯಕ್ಷಸ್ಥಾನಕ್ಕೆ ಸಿ. ಆರ್. ದಾಸರವರೂ ಎಲ್ಲಿಸ್ ಎಂಬ ಐರೋಪ್ಯರೂ ಅಭ್ಯರ್ಥಿಗಳಾಗಿ ನಿಂತಿರುವಲ್ಲಿ ದಾಸರವರಿಗೆ 59 ಓಟುಗಳೂ ಎಲ್ಲಿಸರಿಗೆ 13 ಓಟುಗಳೂ ಬಂದು ದಾಸರು ಉತ್ತೀರ್ಣರಾದರು. ಇದರಿಂದ ದೇಶಸೇವಕರ ಮೇಲೆ ಪ್ರಜಾಭಿಮಾನವು ಎಷ್ಟರಮಟ್ಟಿಗೆ ಹುಟ್ಟಿ ಹೆಚ್ಚುತ್ತಿರುವುದೆಂಬುದು ವ್ಯಕ್ತವಾಗುತ್ತದೆ. ನಿರ್ಮಾಣ ಕಾರ್ಯಕ್ರಮವನ್ನು ಕೊನೆಸಾಗಿಸುವುದೇ ತಮ್ಮ ಮುಖ್ಯೋದ್ದೇಶವೆಂದೂ, ಪ್ರಭುತ್ವದವರ ಕೂಡ ಹೋರಾಡುವ ಉದ್ದೇಶದಿಂದ ತಾವು ಕೌನ್ಸಿಲಿನಲ್ಲಿ ಪ್ರವೇಶಿಸಲಿಲ್ಲವೆಂದೂ, ಒಂದು ವೇಳೆ ಅಂತಹ ಸಂದರ್ಭವುಂಟಾದಲ್ಲಿ ಮಾತ್ರ ತಾವು ಬಿಟ್ಟು ಸರಿಯುವೆವೆಂದೂ ತಿಳಿಸಿದರಲ್ಲದೆ, ಐರೋಪ್ಯನಿವಾಸಿಗಳ ಕ್ಷೇಮಕ್ಕೆ ಕೌನ್ಸಿಲಿನಿಂದ ಭಂಗವುಂಟಾಗುವುದಿಲ್ಲವೆಂದು ಅಭಯವನ್ನಿತ್ತರು. ಐರೋಪ್ಯರ ಕ್ಷೇಮಚಿಂತನೆಯಲ್ಲಿ ಭಾರತೀಯರಭಿಪ್ರಾಯವು ಹೀಗಿರುವಾಗ್ಗೆ ಬ್ರಿಟಿಷ್ ಸ್ವಾಸ್ಥ್ಯಗಳಲ್ಲಿರುವ ಭಾರತೀಯರ ಕ್ಷೇಮಚಿಂತನೆಯು ಎಷ್ಟರಮಟ್ಟಿಗೆ ಅನುಕೂಲವಾಗಿರುವುದೆಂಬುದಕ್ಕೆ ಕೆನಿಯಾ ಮೊದಲಾದ ಸ್ಥಳಗಳೇ ನಿದರ್ಶನಗಳಾಗಿವೆ.

ಬಾಲವಿದ್ಯಾಭ್ಯಾಸವು ಉಚಿತವಾಗಿ ಮಾಡಿಸಲ್ಪಡುವುದಕ್ಕೂ, ನಿರ್ದುಷ್ಟವಾದ ಹಾಲು ದೊರಕುವುದಕ್ಕೂ, ವಾಸಕ್ಕೆ ಮನೆಯಿಲ್ಲದೆ ಅಲಿಯುವ ಬಡವರಿಗೆ ಗೃಹವಸತಿಯನ್ನು ಕಲ್ಪಿಸುವುದಕ್ಕೂ, ಪಟ್ಟಣಾರೋಗ್ಯಕ್ಕೂ, ಕುಡಿಯುವ ನೀರನ್ನೊದಗಿಸುವುದಕ್ಕೂ, ನಗರದ ಹೊರಭಾಗವು ಅಭಿವೃದ್ಧಿಯಾಗುವುದಕ್ಕೂ, ಮ್ಯುನಿಸಿಪಲ್ ಆಡಳಿತವು ಪೂರ್ವಕ್ಕಿಂತಲ ಕಡಿಮೆ ವೆಚ್ಚದಿಂದ ಅತ್ಯಂತ ಸಮರ್ಪಕವಾಗಿ ನಡಿಯುವು ಕ್ಕೂ ತಾವು ಪ್ರಯತ್ನಿಸುತ್ತೇವೆಂದು ಅಭಿವಚನವನ್ನಿತ್ತ ಪ್ರಜಾಸೇವೆಯು ದೇವರ ಸೇವೆಯೆಂದು ತ್ರಿಕರ್ಣಪೂರ್ವಕವಾ ತಿಳಿದು ತಮ್ಮ ವಕೀಲಿ ವೃತ್ತಿಯಿಂದ ತಿಂಗಳೊಂದಕ್ಕೆ 20- ಸಾವಿರ ರೂಪಾಯಿಗಳ ವರಮಾನವು ಬರುತ್ತಿದ್ದುದನ್ನು ಬಿಟ್ಟು ದೇಶಸೇವಾ ಕಾರ್ಯನಿರ್ವಾಹದಲ್ಲಿ ಕಾರಾಗೃಹವಾಸ ಶಿಕ್ಷೆ ನ್ನು ಸಹ ಅನುಭವಿಸಿ ತಮ್ಮ ಜನ್ಮಭೂಮಿಯ ಪರಾಧೀನತೆ ನಿವಾರಣೆಗಾಗಿ ತಮ್ಮ ಜನ್ಮವನ್ನೇ ಸಮರ್ಪಿಸಲು ಬದ್ಧಕಂಕ ರಾಗಿರುವ ಚಿತ್ತರಂಜನದಾಸರವರ ಕೋರಿಕೆಯು ನೆರವೇರು ದರಲ್ಲಿ ಸಂದೇಹವಿಲ್ಲವು.

ಅಮೇರಿಕೆಗೆ ಜಪಾನರು ಪ್ರವೇಶಿಸಲಾಗದು.

ಜಪಾನುರಾಜ್ಯವು ಸಮಸ್ತ ವಿಚಾರಗಳಲ್ಲೂ ಪಾಶ್ಚಾ ರಾಷ್ಟ್ರಗಳಿಗಿನ್ನ ಅಧಿಕವಾಗಿ ಮುಂಬರಿಯುತ ಬಂದು ಮೇಲೆ ಆ ರಾಷ್ಟ್ರಗಳು ಅದರ ಉಚ್ಛ್ರಾಯಸ್ಥಿತಿಯನ್ನು ನೋ ಸಹಿಸಲಾರದೆ ದ್ವೇಷಿಸಲಾರಂಭಿಸಿ ಅದನ್ನಡಗಿಸಲು ಸಮಯ ನಿರೀಕ್ಷಣೆಯಲ್ಲಿರುವುವಷ್ಟೆ ? ಅವುಗಳಲ್ಲಿ ಅಮೇರಿಕೆಯು ಪರ ಶತ್ರುವಾಗಿ ಪರಿಣಮಿಸಿ ಜಪಾನೀಯರು ತಮ್ಮ ರಾಜ್ಯ ಬರದಂತೆ ಮಾಡಿ ತನ್ಮೂಲಕ ಸೇಡನ್ನು ತೀರಿಸಿಕೊಳ್ಳ ಕೆಂಬ ಹೇತುವಿನಿಂದ ವಲಸೆಯ ಪ್ರತಿಬಂಧಕವಿಧಿಯ ಸೆನೇಟು ಸಭೆಯಲ್ಲಿ ಪ್ರವೇಶಗೊಳಿಸಿ ಅವರ ಅನುಮೋ ವನ್ನು ಪಡೆದುಕೊಂಡಿರುವುದು. ಇದರಿಂದ ಜಪಾನ್ ಪ್ರಭು ದವರು ಕುಪಿತರಾಗಿ ಈ ಪ್ರತಿಬಂಧಕವಿಧಿಯು ರದ್ದು ಲ್ಪಡದಿದ್ದಲ್ಲಿ ಪರಸ್ಪರ ದ್ವೇಷಾಗ್ನಿಯು ಉಜ್ವಲಿಸಿ ಅನರ್ಥ ಟಾಗುವುದೆಂದು ಒಂದು ಅಂತ್ಯಸಂದೇಶವನ್ನು ಕಳುಹಿಕೊ ರುವರು. ಅಮೇರಿಕೆಯ ವೃತ್ತಪತ್ರಿಕೆಗಳು ಸೆನೇಟು ಸಭೆಯ ಚರ್ಯವನ್ನು ಕುರಿತು ಬಗೆಬಗೆಯಾಗಿ ವ್ಯಾಖ್ಯಾನಮಾಡತೊ ಗಿರುವುವು. ಈ ಸೆನೇಟು ಸಭೆಯವರ ತೀರ್ಮಾನವು ಜಪಾ ಪ್ರಜೆಗಳಿಗೆ ಅವಮಾನಕರವಾಗಿರುವುದೆಂದು ನ್ಯೂಯಾ ಟೈಂಸ್ ಪತ್ರಿಕೆಯೂ, ಇದಕ್ಕಿನ್ನ ಕಠಿಣವಾಗಿ ನ್ಯೂಯಾ ವರ್ಲ್ಡ್ ಪತ್ರಿಕೆಯೂ ಖಂಡಿಸುತ್ತಿರುವುವು. ಈ ಹೊಸ ಪ್ರ ಬಂಧಕಶಾಸನವು ಅನವಸರವೂ, ಕ್ರೂರವೂ, ಅಪಾಯಕರ ಅವಿವೇಕಪ್ರದರ್ಶಕವೂ, ದೂಷ್ಯವೂ ಆಗಿರುವುದೆಂದು ಅಲ್ಲಿ ಪತ್ರಿಕೆಗಳು ಅಭಿಪ್ರಾಯಪಟ್ಟಿರುವುವಲ್ಲದೆ, ಪ್ರಜಾಭಿಪ್ರಾ ವು ಇದಕ್ಕನುಕೂಲವಾಗಿಲ್ಲವಾದುದರಿಂದ ಪ್ರೆಸಿಡೆಂಟರು ಶಾಸನವನ್ನು ನಿರಾಕರಿಸುವುದು ಅತ್ಯವಸರವೆಂದು ಸೂಚಿ ತ್ತಿರುವುವು. ಈ ಪತ್ರಿಕಾಭಿಪ್ರಾಯವನ್ನ ಲಕ್ಷಿಸಿ ಪ್ರೆಸಿ ಟರು ನೂತನಶಾಸನವನ್ನು ನಿರಾಕರಿಸಿಬಿಡಬಹುದು. ಆ ಜಪಾನು ಅಮೇರಿಕೆಯ ಮಧ್ಯೆ ಹುಟ್ಟಿರುವ ದ್ವೇಷಾಗ್ನಿ ಮಾ ಎಂದಿಗಾದರೂ ಪ್ರಜ್ವಲಿಸದೆ ಇರದು. ಅಮೇರಿಕಾ ಜಪಾ ಮಧ್ಯೆ ಹುಟ್ಟಿರುವ ವಿವಾದವು ಸಾಮಾನ್ಯವಾದುದಲ್ಲ ಇದರಿಂದ ಪ್ರಪಂಚಶಾಂತಿಗುಂಟಾಗುವ ಭಂಗಕ್ಕೆ ಅಮೇರಿ ಯೇ ಉತ್ತರವಾದಿಯಾಗಬೇಕಾಗುತ್ತದೆ. ಆದುಕಾ ಪ್ರಪಂಚಶಾಂತಿಯನ್ನು ಕೋರತಕ್ಕವರಾದ ಅಮೇರಿಕೆಯ ಜಪಾನಿಯರ ಮನಃಕ್ಲೇಶಕ್ಕೆ ಕಾರಣವಾದ ನೂತನ ವ ಪ್ರತಿಬಂಧಕವಿಧಿಯನ್ನು ರದ್ದುಪಡಿಸಿ ಮುಂದೆ ತಮ್ಮ ನಿಷ್ಠುರಬಾರದಂತೆ ಮಾಡಿಕೊಳ್ಳುವುದು ಅತ್ಯವಸರವು.

ಜರ್ಮನಿಯ ನಷ್ಟಪರಿಹಾರಸಮಸ್ಯೆ.

ಜರ್ಮನಿಯ ನಷ್ಟಪರಿಹಾರ ವಿಷಯವನ್ನು ಆರ್ಥಿಕ ವೇ ರುಗಳು ಪರ್ಯಾಲೋಚಿಸಿ ಮಾಡಿರುವ ತೀರ್ಮಾನವನ್ನು ಸಮ ರೂ ಅಂಗೀಕರಿಸಿರುತ್ತಾರಲ್ಲದೆ ಜರ್ಮನರು ಕೂಡ ಇ ತಮ್ಮ ಸಮ್ಮತವನ್ನು ಕೊಟ್ಟಿರುತ್ತಾರೆ. ಫ್ರಾನ್ಸು ಇದನ್ನು ಅಂಗೀಕರಿಸುವುದಾಗಿ ಭಾವಿಸಲ್ಪಟ್ಟಿದ್ದಿತಾದ ಪಾಂಚೇರವರು ಮಾತ್ರ ಎಂದಿನಂತೆ ತಮ್ಮ ಧೋರಣೆಯ ಬಿಟ್ಟಿಲ್ಲವು. ಫ್ರಾನ್ಸಿನವರು ಈಗ ತಾವು ಹಿಡಿದುಕೊಂಡಿ ರೂರು ಪ್ರಾಂತವನ್ನು ಬಿಟ್ಟುಕೊಡಬೇಕಾಗಿ ಆರ್ಥಿಕವೇತ್ತ ಗಳ ವರದಿಯಲ್ಲಿ ಸೂಚಿಸಲ್ಪಟ್ಟಿರತ್ತದೆ. ಆದರೆ ಫ್ರಾಂ ವರು ಈ ಸೂಚನೆಯನ್ನು ಅಂಗೀಕರಿಸದೆ ತಮಗೆ ಬರಬೇ ನಷ್ಟಪರಿಹಾರ ದ್ರವ್ಯವು ಬರುವವರೆಗೂ ರೂರು ಪ್ರಾಂತ ತಾವು ಬಿಟ್ಟುಕೊಡುವುದಿಲ್ಲವೆಂದು ಪ್ರಕಟಿಸಿರುತ್ತಾರೆ. ಫ್ರ ನ ರೂರು ಪ್ರಾಂತವನ್ನು ಬಿಟ್ಟುಕೊಟ್ಟಹೊರತು ಈ ಹಾರವು ಬಗೆಹರಿಯುವಸಂಭವವಿಲ್ಲವು ಮತ್ತು ಜರ್ಮ ಪುನಃ ತಲೆಯೆತ್ತಿಕೊಂಡವಿನಾ ನಷ್ಟ ಪರಿಹಾರವನ್ನು ಲು ಸಾಧ್ಯವಿಲ್ಲವು. ಈ ಸಂದರ್ಭವನ್ನು ಎಲ್ಲ ಜನಾಂಗದ ಪರ್ಯಾಲೋಚಿಸಿ ಪಾಂಕೇರವರಿಗೆ ಹಿತಬೋಧೆಯನ್ನು ದಾಗ್ಯೂ ಅವರು ಮಾತ್ರ ನಷ್ಟಪರಿಹಾರ ದ್ರವ್ಯವು ಸಂದಹೊರತು ರೂರು ಪ್ರಾಂತವನ್ನು ಬಿಟ್ಟು ಕೊಡು ವೆಂಬ ತಮ್ಮ ಪಟ್ಟನ್ನು ಬಿಡುವವರಾಗಿಲ್ಲವು.

ಸ್ವದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ಸ್ವಾರಿಯು ಬೆಂಗಳೂರಿ ದ ರಾಜಧಾನಿಗೆ ಕಳೆದ ಭಾನುವಾರ ಚಿತ್ತೈಸಿತು.

ಮ್ಮ ಸಂಸ್ಥಾನದ ದಿವಾನರಾಗಿದ್ದ ಸರ್ ಎಂ. ವಿಶ್ವೇ ರಯ್ಯನವರು ಬೊಂಬಾಯಿನಗರದ ಮ್ಯುನಿಸಿಪಾಲಿಟಿಯ ಟ್ರೆಂಚ್‌ಮೆಂಟ್ (ವೆಚ್ಚವನ್ನು ಮಿತಿಗೊಳಿಸುವ) ಆಫೀಸ ಗಿ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ಕಳೆದ ಗುರುವಾರ ರಾತ್ರಿ ಒಂದು ದ ಮಳೆಯಾಯಿತು. ಆದರೂ ದಗೆಯು ಮಾತ್ರ ಇನ್ನೂ ಡಿಮೆಯಾಗಿಲ್ಲವು ಮತ್ತು ಮಳೆಯು ಬರುವ ಚಿನ್ಹೆಯಿದೆ. ಮಳೆಯಿಂದ ಹಿಂದೆ ಬಿತ್ತಿದ್ದ ಮತ್ತು ಹೊಸದಾಗಿ ಬಿತ್ತು ಜೋಳದ ಬೆಳೆಗೆ ಬಹಳ ಅನುಕೂಲವಾಯಿತು.

ನ್ಯುಮೋನಿಯಾ ಜ್ವರಪೀಡಿತರಾಗಿದ್ದು ಕೃಷ್ಣರಾಜೇಂದ್ರ ಸ್ಪತ್ರೆಯ ಚಿಕಿತ್ಸೆಯಲ್ಲಿದ್ದ ಡಾಕ್ಟರ್ ಉಸ್ಮಾನ್‌ರವರು ಪೂರ್ಣಗುಣವನ್ನು ಹೊಂದಿ ಈ ತಾ॥ 18 ರಲ್ಲಿ ತಮ್ಮ ಂಗಲೆಗೆ ದಯಮಾಡಿಸಿದರೆಂದೂ, ಇಷ್ಟರಲ್ಲೇ ಉದಕಮಂಡ ಕ್ಕೆ ಪ್ರಯಾಣಮಾಡಿ ಅಲ್ಲಿ 1 ತಿಂಗಳವರೆಗಿದ್ದು ಬರುವ ಂದೂ ಕೇಳುತ್ತೇವೆ.

ರಾಜಧಾನಿಯ ಸಂತೇಪೇಟೆಯ ವರ್ತಕರುಗಳು ಶ್ರೀ ಂಗಗಿರಿ ಸ್ವಾಮಿಗಳನ್ನು ಕಳೆದ ತಾ॥ 17ರ ಪ್ರಾತಃಕಾಲ ಗಂಟೆಯ ಸಮಯದಲ್ಲಿ ಉತ್ಸವಪೂರ್ವಕವಾಗಿ ಸಂತೇಪೇಟೆ ಲ್ಲಿರುವ ಶ್ರೀ ಪ್ರಸನ್ನನಂಜುಂಡೇಶ್ವರಸ್ವಾಮಿ ದೇವಸ್ಥಾನ ಬಿಜಮಾಡಿಸಿಕೊಂಡು ಒಂದು ಪಾದಪೂಜೆಯನ್ನು ಮಾಡಿ 08 ರೂಪಾಯಿಗಳ ಕಾಣಿಕೆಯನ್ನೂ, ಹೆಚ್ಚುಬೆಲೆಯ ಜರ ರಿ ಕಾವಿವಸ್ತ್ರಗಳನ್ನೂ, ಬ್ರಾಹ್ಮಣರಸಂತರ್ಪಣೆಗಾಗಿ 1000 . ಗಳನ್ನೂ ಸಮರ್ಪಿಸಿ ತಮ್ಮ ಭಕ್ತಿಯನ್ನು ಪ್ರದರ್ಶಿಸಿದರು, ತ್ತು ಆದಿನ ರಾತ್ರಿ ಅತ್ಯಂತ ಮನೋಹರವಾಗಿ ಅಲಂಕರಿಸ ಟ್ಟಿದ್ದ ಹೂವಿನಪಾಲ್ಕಿಯಲ್ಲಿ ಶ್ರೀಗಳನ್ನು ಕುಳ್ಳಿರಿಸಿ ನೂರಾರು ಪಾವಳಿಗಳಿಂದಲೂ, ನಾನಾವಿಧ ವಾದ್ಯವಿಶೇಷಗಳಿಂದಲೂ ಾವಿರಾರು ಜನಸಂದಣಿಯಿಂದಲೂ 8½ ಗಂಟೆ ಸಮಯದಲ್ಲಿ ತ್ಸವಹೊರಟು ಸಯ್ಯಾಜಿರಾವ್ ಮಾರ್ಗವಾಗಿ ಕೃಷ್ಣರಾಜ ಸ್ಪತ್ರೆಯ ಸಮೀಪಕ್ಕೆ ಬರುವಷ್ಟರಲ್ಲಿ ಮಳೆಯು ಬಹಳ ವೇಗ ಾಗಿ ಬರಲು ಪಾಲ್ಕಿಯನ್ನು ಆಸ್ಪತ್ರೆಯೊಳಕ್ಕೆ ತಿರುಗಿಸಿ ಅಲ್ಲಿ ಳೆಯು ನಿಲ್ಲುವವರೆಗೂ ಶ್ರೀಗಳವರನ್ನು ತಂಗಿಸಿದ್ದು ಮಳೆಯು ತಮೇಲೆ ಅಂದರೆ 10 ಗಂಟೆ ಸಮಯದಲ್ಲಿ ಶ್ರೀಗಳನ್ನು ಹುವ್ವಿ ಪಾಲ್ಕಿಯಲ್ಲಿ ಕುಳ್ಳಿರಿಸಿ ಯಥಾಪ್ರಕಾರ ಉತ್ಸವದಿಂದ ಹೊರ ಕಾಳಮ್ಮನಗುಡಿಬೀದಿ, ಚರ್ಮಮತದ ಬೀದಿಗಳಮೇಲೆ ಡ್ಡಪೇಟೆಗೆ ತಿರುಗಿಕೊಂಡು ಕೋಟೆಯ ಉತ್ತರದ್ವಾರದಿಂದ ರಮನೆಯನ್ನು ತಲುಪುವಷ್ಟರಲ್ಲಿ ರಾತ್ರಿ 12 ಗಂಟೆಸಮಯ ಾಗಿದ್ದಿತು. ಶ್ರೀಗಳವರು ಅರಮನೆಯೊಳಕ್ಕೆ ಹೋಗಿ ಶ್ರೀಮ ಹಾರಾಜರವರಿಗೆ ದರ್ಶನಾಶೀರ್ವಾದವನ್ನಿತ್ತು ಅವರನುಮತಿ ಯನ್ನು ಪಡೆದು ಮಳೆಯು ಇನ್ನೂ ಹನಿಯುತ್ತಿದ್ದುದರಿಂದ ನ್ಯಾನಾದಲ್ಲಿ ಕುಳಿತು ಉತ್ಸವದಿಂದ ಮಠವನ್ನು 1 ಗಂಟೆ ಮಯದಲ್ಲಿ ತಲುಪಿದರು. ಆ ದಿವಸದ ಉತ್ಸವವು ಬಹು ಮಣೀಯವಾಗಿದ್ದಿತಲ್ಲದೆ ಶ್ರೀಮನ್ ಮಹಾರಾಜರವರ ಜಂ ಸವಾರಿಯುತ್ಸವವೈಭವವನ್ನು ಸ್ಮರಿಸುವಂತಿದ್ದಿತು. ಜನರು ಯ್ಯಾಜಿರಾವ್‌ರೋಡು ಮೊದಲಾದ ಬೀದಿಗಳ ಇಕ್ಕೆಲ ಳಲ್ಲೂ ನಿಂತು ಶ್ರೀಗಳ ದರ್ಶನಮಾಡಿ ಆನಂದಭರಿತರಾಗಿದ್ದರು. ದಿವಸದುತ್ಸವದ ವಿಜೃಂಭಣೆಗೆ ಸಂತೇಪೇಟೆಯ ವರ್ತಕಮಹಾಶಯರ ಉತ್ಸುಕತೆಯೇ ಮುಖ್ಯ ಕಾರಣವು. ಆ ರಾತ್ರಿ ಳೆಯು ಬಾರದಿದ್ದಲ್ಲಿ ಉತ್ಸವವು ಇನ್ನೂ ಅತಿಶಯವಾಗಿರು ದ್ದಿತು. ಶ್ರೀಗಳವರು ನೆನ್ನೆಯ ದಿವಸ ತಿರುಮಕೂಡ್ಲು ಪ್ರಯಾಣಮಾಡುವುದಾಗಿ ಗೊತ್ತಾಗಿದ್ದುದು ತಪ್ಪಿ 25 ರಲ್ಲಿ ಹೊರಡುವುದಾಗಿ ಕೇಳುತ್ತೇವೆ.

ಭರತಖಂಡದ ವೃತ್ತಾಂತಗಳು.

ಂಡಿತ ಮದನಮೋಹನ ಮಾಳವಿಯಾರವರು ತಮ್ಮ ಸ್ಯದಿಂದ ಇನ್ನು ಒಂದು ವಾರದವರೆಗೆ ಯಾವ ಸಾರ್ವಜನಿಕ ಕಾರ್ಯದಲ್ಲೂ ಭಾಗಿಯಾಗಲಾರೆನೆಂದು ಡಿಸಿರುತ್ತಾರೆ.

ಲಕತ್ತಾದಲ್ಲಿ ಒಬ್ಬ ಪೋಲೀಸಾಳು ರಾತ್ರಿವೇಳೆ ಗದಮೇಲಿದ್ದಾಗ್ಗೆ ನಿದ್ರಿಸುತ್ತಿದ್ದನೆಂಬ ಅಪರಾಧ ಕಾರಾಗೃಹವಾಸಶಿಕ್ಷೆಗೆ ಗುರಿಮಾಡಲ್ಪಟ್ಟನು. ಈ ಯಲ್ಲಿ ಈರೀತಿಯಾಗಿ ಆಲಸ್ಯ ಅಸಡ್ಡೆಯಿಂದ ಕೆಲಸ ಮಾಡುತ್ತಿರುವ ಪೋಲೀಸಾಳುಗಳು ಎಷ್ಟೋ ಜನರಿರುವರು, ಆದರೆ ಅವರನ್ನು ವಿಚಾರಿಸಿ ದಂಡಿಸುವವರು ಮಾತ್ರ ಇಲ್ಲದಿರುವುದು ಶೋಚನೀಯವು.

ಅಲ್ಬಿಯನ್ ಇಬ್ರಾಹಿಂ ಜಯಾನಿ ಎಂಬ ಮುತ್ತಿನ ವ್ಯಾಪಾರಿಯು ಪ್ಯಾರಿಸಿನಲ್ಲೂ ಬೊಂಬಾಯಿನಲ್ಲೂ ಮುತ್ತಿನ ವ್ಯಾಪಾರದಲ್ಲಿ ಬಹಳ ಪ್ರಸಿದ್ಧರಾದ ಲಿಯೋರ್ಡ್ ರೆಸೆಂತಾಲ್ ಬ್ರದರ್ಸ್‌ರವರಿಂದ ಮುತ್ತಿನ ವ್ಯಾಪಾರ ಸಂಬಧದಲ್ಲಿ 90 ಲಕ್ಷ ರೂಪಾಯಿ ದಳ್ಳಾಳಿ ಬರಬೇಕೆಂದು ಅವರಮೇಲೆ ಬೊಂಬಾಯಿ ಹೈಕೋರ್ಟಿನಲ್ಲಿ ದಾವಾಮಾಡಿರುತ್ತಾನೆ. ದಳ್ಳಾಳಿಯೇ ಪ್ರಾಯಶಃ 1 ಕೋಟಿಯವರೆಗೆ ಬರಬೇಕಾದಲ್ಲಿ ಇನ್ನು ಎಷ್ಟು ಕೋಟಿ ರೂಯಿನವರೆಗೆ ವಾದಿಯು ಪ್ರತಿವಾದಿಯರಕೂಡ ವ್ಯಾಪಾರ ನಡೆಸಿರಬೇಕು ?

ಕಾಥೆವಾಡದ ರಾಜಕೀಯ ಮಹಾಸಭೆಯವರು ಭಾವನಗರದಲ್ಲಿ ತಮ್ಮ ಸಭಾಧಿವೇಶನವನ್ನು ನಡಿಸಲು ಅನುಜ್ಞೆ ಕೊಡಬೇಕಾಗಿ ಅಬ್ಬಾಸ್‌ತಿಯಾಬ್ಜಿ ಮತ್ತು ವಲ್ಲಭಾಯಿ ಪಟೇಲ್‌ರವರು ಭಾವನಗರದ ಪ್ರಭುತ್ವದವರನ್ನು ಪ್ರಾರ್ಥಿಸಿಕೊಂಡಿರುವಲ್ಲಿ ಆ ರೀತಿ ರಾಜಕೀಯ ಮಹಾಸಭೆಯನ್ನು ನಡೆಯಿಸಕೂಡದೆಂದೂ ಉತ್ತರಕೊಟ್ಟುದರ ಮೇಲೆ, ಭಾವನಗರದಲ್ಲಿ ಸಭೆಯನ್ನು ನಡಿಸಲೇಬೇಕೆಂದು ಆ ಸಭಾಪ್ರಮುಖರೂ ಮೆಂಬರುಗಳೂ ಹಟತೊಟ್ಟಿದಾರೆ. ಇದರಿಂದ ಯಾವ ಅತ್ಯಾಚಾರವು ಜರುಗುವುದೋ ನಿರೀಕ್ಷಣೀಯವಾಗಿದೆ.

ಗುಜರಾತಿನಲ್ಲಿ ಅನೇಕ ಸುಲಗೆಗಳನ್ನೂ ಕೊಲೆಗಳನ್ನೂ ನಡೆಯಿಸಿ ಜನರಿಗೆ ಬಹಳ ಭೀತಿಯನ್ನುಂಟುಮಾಡಿದ್ದ ಬಬಾರದೇವ ಮತ್ತು ದಬ್ಬಲಜೀಭಾಯಿ ಎಂಬಿಬ್ಬರು ಪ್ರಾಣಕಂಟಕರು ಪೋಲೀಸರು ಎಷ್ಟು ಸಾಹಸಪಟ್ಟಾಗ್ಯೂ ಬಹಳ ದಿನದವರೆಗೆ ಸಿಕ್ಕದೆ ಕಡೆಯಲ್ಲಿ ಸಿಕ್ಕಿಬಿದ್ದು ಬರೋಡಾದ ಸ್ಪೆಷಲ್ ಮ್ಯಾಜಿಸ್ಟ್ರೇಟರ ವಿಚಾರಣೆಯಿಂದ ಮರಣದಂಡನೆ ವಿಧಿಸಲ್ಪಟ್ಟರು. ಅಪರಾಧಿಗಳು ಶಿಕ್ಷೆಯ ತೀರ್ಮಾನವು ಹೇಳಲ್ಪಟ್ಟಾಗ ಕೆಲ ನಿಮಿಷಗಳವರೆಗೆ ಕಂಪಿತರಾಗಿದ್ದು ಅನಂತರ ಚೇತರಿಸಿಕೊಂಡು ಹಸನ್ಮುಖಿಗಳಾದರು. ಈ ಶಿಕ್ಷೆಯು ಬರೋಡಾ ಹೈಕೋರ್ಟಿನವರಿಂದ ಸ್ಥಿರಗೊಳಿಸಲ್ಪಟ್ಟ ಮೇಲೆ ಅಪರಾಧಿಗಳು ವಧಿಸಲ್ಪಡುವವರಾಗಿರುವರು.

ಬಂಗಾಳದ ಗೌರ್ನರ್‌ರವರ ಸ್ಪೆಷಲ್ ಟ್ರೇನಿನ ಸಲೂನಿಗೆ ಕೆಲವು ಬದಲಾವಣೆಗಳನ್ನು ಮಾಡಲು ೧೧,೦೦೦ ರೂ. ಗಳನ್ನು ಬಜೆಟ್ಟಿನಲ್ಲಿ ಸ್ಯಾಂಕ್ಷನ್ ಮಾಡಬೇಕೆಂದು ಕೇಳಿರಲು, ಲೆಜಿಸ್ಲೇಟಿವ್ ಸಭಿಕರು ತಿರಸ್ಕಾರಮಾಡಿರುತ್ತಾರೆ. ಈ ಗೌರ್ನರ ಮೇಲ್ಪಟ್ಟ ಅಧಿಕಾರಿಗಳಾದ ವೈಸರಾಯಿಯವರು, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು, ಪ್ರಿವಿಕೌನ್ಸಿಲ್ ಸಭಿಕರು ಇವರುಗಳ ಮೇಲೆ ಇರುವ ಬ್ರಿಟಿಷ್ ಮುಖ್ಯಮಂತ್ರಿಗಳೇ ಮೂರನೇ ತರಗತಿಯಲ್ಲಿ ಪ್ರಯಾಣಮಾಡುವಾಗ, ಬಂಗಾಳದ ಗೌರ್ನರು ಸ್ಪೆಷಲ್ ಟ್ರೇನನ್ನು ಉಂಟಾಗಿದ್ದು, ಆದರಲ್ಲಿಯೂ ಬದಲಾವಣೆ ಮಾಡಬೇಕೆಂದು ಕೋರುವುದು ನ್ಯಾಯವಲ್ಲವೆಂದು ಕೆಲವುಮಂದಿ ಸಭಿಕರು ಅಭಿಪ್ರಾಯಪಟ್ಟಿರುತ್ತಾರೆ.

ಹೈದರಾಬಾದಿನ ಈಗಿನ ನೈಜಾಮರವರ ತಂದೆಯವರ ಆಡಳಿತದಲ್ಲಿದ್ದ ಬೀರಾರ್ ಪ್ರಾಂತವು ಬ್ರಿಟಿಷರ ಆಡಳಿತಕ್ಕೆ ವಹಿಸಲ್ಪಟ್ಟಿರುವುದಷ್ಟೆ. ಈಗಿನ ನೈಜಾಮರವರು ಕೈಬಿಟ್ಟುಹೋಗಿರುವ ಈ ಬೀರಾರನ್ನು ಮರಳಿ ಸಂಪಾದಿಸಿಕೊಳ್ಳಲು ಸರ್ ಅಲಿಇಮಾಂರವರ ಮೂಲಕ ಸಾಹಸಪಡುತ್ತಿದಾರೆ ಮತ್ತು ಅದು ತಮ್ಮ ಕೈವಶವಾದಲ್ಲಿ ಪ್ರಜಾಸತ್ತಾತ್ಮಕವಾಗಿ ಮಾಡಲ್ಪಡುವುದೆಂದು ಆಶ್ವಾಸವನ್ನು ಕೊಟ್ಟಿರುವರು. ಆದರೂ ಬೀರಾರಿನ ಪ್ರಜೆಗಳು ಹಿಂದೆ ನೈಜಾಮರವರ ಪ್ರಭುತ್ವದಲ್ಲಿ ತಮಗಿದ್ದ ಕಿರಕುಳವೆಲ್ಲವೂ ತಪ್ಪಿ ಬ್ರಿಟಿಷರ ಆಡಳಿತದಲ್ಲಿ ಸುಖವುಂಟಾಗಿರುತ್ತಾದಪ್ರಯುಕ್ತ ನೈಜಾಮರವರ ಪ್ರಜೆಗಳಾಗಿರಲು ಸಮ್ಮತಿಸದೆ ಅವರ ಪ್ರಯತ್ನಕ್ಕೆ ವಿಘ್ನಕಾರಿಗಳಾಗಿ ನಿಂತಿರುವರು.

ಮೆಟ್ಟುಪಾಳ್ಯಂ ಬಳಿ ಒಂದು ಹಳ್ಳಿಯಲ್ಲಿ ಜನರು ನಿಷಾಪದಾರ್ಥಗಳನ್ನು ಕುಡಿಯುವುದಿಲ್ಲವೆಂದು ತಮ್ಮಲ್ಲಿ ಕಟ್ಟುಮಾಡಿಕೊಳ್ಳಲು, ಅಲ್ಲಿನ ಶೇಂದಿಮಾರುವವರು ಅವರನ್ನು ಮತ್ತೆ ಕುಡುಕರನ್ನಾಗಿ ಮಾಡಬೇಕೆಂದು ಅರ್ಧಬೆಲೆಗೆ ಶೇಂದಿ ವಿಕರಿ ಮಾಡುವುದಾಗಿ ದಂಡೋರೆ ಹೊಡೆಸಿದರು. ಇದಕ್ಕೆ ಯಾರೂ ಬರದೆಹೋದ್ದರಿಂದ ಅವರೂ ಇಲಾಖಾ ನೌಕರನೊಬ್ಬನೂ ಮನೆಮನೆಗೂ ಹೋಗಿ ಉಚಿತವಾಗಿ ಬಂದು ಕುಡಿಯುವಂತೆ ಬೋಧಿಸಿದರಂತೆ ! ಇದರಿಂದ ಕೆಲವುಮಂದಿ ಒಡ್ಡರು ಮಾತ್ರ ಕುಡಿಯಲಿಕ್ಕೆ ಹೋಗುತ್ತಿದ್ದರೆಂದೂ, ಆ ಊರಿನ ಜಮೀನ್‌ದಾರರು ತಮ್ಮ ಹಿಡುವಳಿಯಲ್ಲಿರುವ ತೆಂಗು ತಾಳೇ ಬಗನಿ ಈಚಲು ಮರಗಳ್ಯಾವುವನ್ನು ಶೇಂದಿ ಇಳಿಸಲು ಕೊಡುವುದಿಲ್ಲವೆಂದು ಕಟ್ಟುಮಾಡಿಕೊಂಡಿರುತ್ತಾರೆಂದೂ ಪ್ರಕಟವಾಗಿದೆ.

ಕಲ್ಲಿಕೋಟೆಯ ವೃದ್ಧ ವರ್ತಕನೊಬ್ಬನು ಕಾಥ್ಯವಾಡದ ಚಿಕ್ಕ ವಯಸ್ಸಿನ ಹುಡುಗಿಯನ್ನು ಮದುವೆಯಾಗಿದ್ದು ನಾಲ್ಕು ತಿಂಗಳ ಹಿಂದೆ ಮೃತನಾದನು. ಸಾಯುವಾಗ್ಯೆ ಸುಮಾರು 60,000 ರೂಪಾಯಿ ಬಾಳುವ ತನ್ನ ಆಸ್ತಿ ಎಲ್ಲವನ್ನೂ ಹುಡುಗಿಯ ಹೆಸರಿಗೆ ವಿಲ್ ಬರೆದಿದ್ದನು. ಮೊದಲು ಈ ಮುದುಕನಿಗೆ ಈ ಹುಡುಗಿಯನ್ನು ಮದುವೆಮಾಡಿಕೊಡಲು ಸಹಾಯಮಾಡಿದ್ದ ಸ್ನೇಹಿತನು ಏನೂ ತಿಳಿಯದ ಆಕೆಯನ್ನು ಮರುಳುಮಾಡಿ ತಾನೇ ಮದುವೆಯಾಗಿ, ಆಕೆಯ ವಶಕ್ಕೆ 3000 ರೂಪಾಯಿಗಳನ್ನು ಕೊಟ್ಟು ಉಳಿದ ಆಸ್ತಿಯೆಲ್ಲವನ್ನು ತನ್ನ ಹೆಸರಿಗೆ ಬರೆಸಿಕೊಂಡನು. ಅನಂತರ ಅವಳು ಒಬ್ಬ ಮಾಪಿಳ್ಳೆಯವನೊಂದಿಗೆ ಓಡಿ ಹೋದಳೆಂದು ಹೇಳಿ ಆಕೆಯನ್ನು ಮಾಪಿಳ್ಳೆಯವನ ವಶಮಾಡಿದನು. ಹುಡುಗಿಯ ತಾಯಿ ತಂದೆಗಳು ಈ ವೃತ್ತಾಂತವನ್ನು ಕೇಳಿ ಸರ್ಕಾರಕ್ಕೆ ಫಿರ್ಯಾದ್ ಮಾಡಿಕೊಂಡಿರುವರು.

ಮದ್ರಾಸಿನ ಸ್ಮಾಲ್‌ಕಾಜ್ ಕೋರ್ಟಿನ ಸೇವಕನೊಬ್ಬನು ತನ್ನನ್ನು ಹೈಕೋರ್ಟು ವಕೀಲ್ ಮ॥ ವಿಜಯರಾಘವಾಚಾರ್ ಬಿ.ಎ., ಬಿ.ಎಲ್., ರವರು ಹೊಡೆದರೆಂದು ಅವರ ಮೇಲೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿವಾದಹೂಡಿದ್ದು ತನ್ನ ವಿಚಾರಣೆಯ ಕಾಲದಲ್ಲಿ ಕಟಕಟೆಯೊಳಗೆ ನಿಂತುಕೊಳ್ಳಲು ದೇಹಾಲಸ್ಯದಿಂದ ಆಗುವುದಿಲ್ಲವೆಂದು ನೆಲದ ಮೇಲೆ ಕುಳಿತುಬಿಡಲು ಮ್ಯಾಜಿಸ್ಟ್ರೇಟರು ಕೋರ್ಟಿನಾಜ್ಞೆಯನ್ನು ತಿರಸ್ಕರಿಸಿದನೆಂಬ ಅಪರಾಧಕ್ಕಾಗಿ 30 ರೂ. ದಂಡವನ್ನು ವಿಧಿಸಿ ಪೋಲೀಸು ಸೆರೆಮನೆಗೆ ಕರೆದುಕೊಂಡು ಹೋಗುವಂತೆ ಆಜ್ಞೆ ಮಾಡಿದರು. ಪೋಲೀಸರ ಕೂಡ ಹೋಗಲು ತಿರಸ್ಕರಿಸಲು ಬಲವಂತದಿಂದೆಳದುಕೊಂಡುಹೋಗಿ ಸೆರೆಮನೆಯಲ್ಲಿ ಕೂಡುವಾಗ್ಗೆ ತನ್ನನ್ನು ಹಿಡಿದುಕೊಂಡಿದ್ದ ಕಾನೆಸ್ಟೆಬಲಿನ ಕೈಯನ್ನು ಹಲ್ಲುಗಳಿಂದ ಚೆನ್ನಾಗಿಕಚ್ಚಿದನು. ಪೋಲೀಸಿನವನು ಅದಕ್ಕಾಗಿ ಅವನ ಮೇಲೆ ಪಿರ್ಯಾದುಮಾಡಿರುತ್ತಾನೆ.

ವಿದೇಶದ ವೃತ್ತಾಂತಗಳು.

ಪ್ರಿನ್ಸ್ ಆಫ್ ವೇಲ್ಸ್‌ರವರು ಪ್ಯಾರಿಸ್ ಪಟ್ಟಣಕ್ಕೆ ತಾ॥ 14 ರಲ್ಲಿ ಹೋಗಿ ಇಂದುನಾಳೆ ಹಿಂದಿರುಗುವವರಾಗಿರುವರು.

ಇಂಗ್ಲೆಂಡಿನಲ್ಲಿ ಸ್ತ್ರೀಯರಿಗೆ ಅವರ ಗಂಡಂದಿರು ತಮ್ಮ ಆದಾಯದಲ್ಲಿ ಶೇಕಡ ಇಷ್ಟರಂತೆ ಗೃಹಕೃತ್ಯ ನಿರ್ವಾಹದ ಪ್ರತಿಫಲವಾಗಿ ಕೊಡಬೇಕೆನ್ನುವ ವಿಧಾನಕ್ಕೆ ಒಂದು ಕಾನೂನಾಗುವುದರಲ್ಲಿದೆ. ಈ ಪ್ರತಿಫಲವನ್ನು ಆಕೆಯು ತನಗೆ ಮನಬಂದ ರೀತಿ ಉಪಯೋಗಿಸಬಹುದಂತೆ. ಆಕೆಯ ಮತ್ತು ಮಕ್ಕಳ ಜೀವವನ್ನು ಗಂಡನೇ ತನ್ನ ಉಳಿದ ಆದಾಯದಿಂದ ನಿರ್ವಹಿಸಬೇಕಾಗುವುದು.

ಎರ್ಗೋ ಎಂಬ ಇಟಲಿ ದೇಶಸ್ಥನ ಮೈಯಿಂದ ಸುಮಾರು ನೀಲಬಣ್ಣದಿಂದ ಕೂಡಿದ ಪ್ರಕಾಶವು ಹೊರಹೊರಟು, ಒಂದು ವೇಳೆ ಸುತ್ತಲೂ ಚಕ್ರಾಕಾರವಾಗಿಯೂ, ಇನ್ನೊಂದು ವೇಳೆ ಬೆಳಕಿನ ರಶ್ಮಿಯಂತೆಯೂ ಕಾಣಬರುವುದು. ಈ ಪ್ರಕಾಶವು ಮರ ಗೋಡೆ ಮುಂತಾದ ಘನವಸ್ತುಗಳ ಮೂಲಕವೂ ಪ್ರವೇಶಮಾಡುತ್ತದೆ. ಇದಕ್ಕೆ ಕಾರಣವೇನೆಂದು ಕಂಡುಹಿಡಿಯಲು ಪ್ರೊಫೆಸರ್ ಗ್ಯಾಲಿ ಎಂಬುವರು ಆತನನ್ನು ತಮ್ಮ ವಿಜ್ಞಾನಶಾಲೆಯಲ್ಲಿಟ್ಟುಕೊಂಡು ಪರೀಕ್ಷಿಸುತ್ತಿದಾರೆ.

ಲಂಡನ್ನಿನ ಗ್ರಿಂಡೆಲ್ ಮ್ಯಾಥ್ಯೂಸ್ ಎಂಬುವವನು ಒಂದು ತರಹ ಬೆಳಕಿನ ಸಹಾಯದಿಂದ ದೂರದಲ್ಲಿರುವ ಸೈನ್ಯವನ್ನು ನಾಶಮಾಡುವುದಲ್ಲದೆ ಮದ್ದಿನ ರಾಶಿಯಲ್ಲವೂ ಸಿಡಿದು ಹೋಗುವಹಾಗೂ, ಫಿರಂಗಿಗಳೂ ಮೋಟಾರುಗಾಡಿಗಳೂ, ವಿಮಾನಗಳೂ ಕೆಲಸಕ್ಕೆ ಬರದಂತೆ ಕೆಟ್ಟುಹೋಗುವಹಾಗೂ ಮಾಡಬಲ್ಲನೆಂದು ಪ್ರಕಟಪಡಿಸಿರುತ್ತಾನೆ. ಈತನ ಹೇಳಿಕೆಯನ್ನು ಪರೀಕ್ಷಿಸಿನೋಡಬೇಕೆಂದು ಫ್ರೆಂಚ್ ಜನರು ತುಂಬಾ ಉತ್ಸಾಹಶೀಲರಾಗಿರುತ್ತಾರೆ. ನಿಜವೆಂದು ಕಂಡುಬಂದರೆ, ಯುದ್ಧಗಳೇ ನಿಂತುಹೋಗುವವೆಂಬ ನಂಬಿಕೆಯಿದೆ.

ಜರ್ಮನಿಯಲ್ಲಿ ಒಬ್ಬ ಗೃಹನಿರ್ಮಾಣ ಶಿಲ್ಪಿಯು ಸುತ್ತಲೂ ತಿರುಗುವ ಜಗತಿಯಮೇಲೆ ಮೂರು ಕೊಠಡಿಗಳಿರುವ ಒಂದು ಮನೆಯನ್ನು ಕಟ್ಟಿರುವನು. ಒಂದು ಕೊಠಡಿಯ ಹೊರಗಡೆ ನಿಂತುಕೊಂಡು ಒಂದು ಗುಂಡಿಯನ್ನು ಅದಿಮಿದರೆ ಇದರ ಸ್ಥಾನದಲ್ಲಿ ಮತ್ತೊಂದು ಕೊಠಡಿಯು ಬರುವುದು ; ಆದರ ಮುಂದಿರುವ ಗುಂಡಿಯನ್ನು ಅದಿಮಿದರೆ ಮೂರನೆಯ ಕೊಠಡಿಯು ಬರುವುದು. ಇದರಿಂದ ಮನುಷ್ಯನು ಊಟ ಉಪಾಚಾರಾದಿಗಳಿಗೂ ಶಯನಕ್ಕೂ ಗ್ರಂಥಾಲೋಚನೆಗೂ ಸ್ಥಳವನ್ನು ಬದಲಾಯಿಸದೆ ಇದ್ದಲ್ಲಿಯೇ ಆ ಆ ಕೋಠಡಿಗಳು ಬಂದು ಸಿದ್ಧವಾಗುವಂತೆ !

ಮಾಸ್ಕೋ ಪಟ್ಟಣದಲ್ಲಿ ಕೆಲ ಶಾಸ್ತ್ರಪಂಡಿತರುಗಳೂ, ಪ್ರಖ್ಯಾತಸ್ತ್ರೀಯರೂ ರಾಜದ್ರೋಹಾಪರಾಧಕ್ಕೆ ಗುರಿಮಾಡಲ್ಪಟ್ಟು ಮರಣದಂಡನೆಗೂ, ಕಠಿಣ ಕಾರಾಗೃಹವಾಸಶಿಕ್ಷೆಗೂ ಗುರಿಮಾಡಲ್ಪಟ್ಟಿರುತ್ತಾರೆ. ಹೀಗೆ ಶಾಸ್ತ್ರಪಂಡಿತರುಗಳನ್ನು ಮರಣದಂಡನೆಗೆ ಗುರಿಮಾಡುವುದರಿಂದ ಪ್ರತಿಭಾಶಾಲಿಗಳ ಸಾಹಾಯ್ಯವನ್ನು ಕಳೆದುಕೊಂಡಂತಾಗುವುದರಿಂದ ಈಗ ವಿಧಿಸಲ್ಪಟ್ಟಿರುವ ದಂಡನೆಯನ್ನು ಮನ್ನಿಸಬೇಕೆಂದು ಫ್ರೆಂಚ್ ಸರ್ಕಾರದವರು ಮಾಸ್ಕೋ ಪ್ರಭುತ್ವದವರಿಗೆ ತಿಳಿಸಿರುವದಲ್ಲದೆ ತಮ್ಮಭಿಪ್ರಾಯವನ್ನು ಪುಷ್ಟೀಕರಿಸಿ ಆ ಸರ್ಕಾರದವರಿಗೆ ಬರಿಯಬೇಕೆಂದು ಆಂಗ್ಲ ಮತ್ತು ಇಟಲಿ ಪ್ರಭುತ್ವದವರನ್ನು ಪ್ರಾರ್ಥಿಸಿಕೊಂಡಿರುತ್ತಾರೆ.

ಸೂರ್ಯನ ರಶ್ಮಿಯು ಮನುಷ್ಯನಶರೀರದ ಮೇಲೆ ಬೀಳುವುದರಿಂದ ಪಚನಶಕ್ತಿಯು ಚೆನ್ನಾಗಿರುವುದಲ್ಲದೆ ಅನೇಕ ವ್ಯಾಧಿಗಳು ಪರಿಹರವಾಗುವುದಾದುದರಿಂದ ತಿಂದನ್ನವನ್ನು ಜೀರ್ಣಿಸಿಕೊಳ್ಳಲಾರದೆ ರೋಗಗ್ರಸ್ತರಾಗಿರುವವರು ಬಿಸಿಲಿನಲ್ಲಿ ಮೈಯನ್ನು ಕಾಯಿಸಬೇಕೆಂದೂ ಜಾಗ್ರತೆ ಜೀರ್ಣವಾಗದ ಮಾಂಸಾಹಾರವನ್ನು ತ್ಯಜಿಸುವುದುತ್ತಮವೆಂದೂ ಶರೀರಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಮತ್ತು ಭರತಖಂಡದ ರೈತರು

ಬಹುಸಾಮಾನ್ಯ ರೊಟ್ಟಿಯನ್ನು ತಿನ್ನುತ್ತಿರುವರಾದರೂ ಹೊಟ್ಟೆಯನ್ನು ಬಟ್ಟೆಯಿಂದ ಮುಚ್ಚಿ ಬಿಸಿಲಿನಲ್ಲಿ ಕಾಯಿಸುತ್ತಿರುವುದರಿಂದ ಆರೋಗ್ಯದೃಢಕಾಯರಾಗಿದ್ದು ಹೆಚ್ಚು ಕಾಲ ಬದುಕಿರುವರೆಂದು ಉದಾಹರಣೆಯಾಗಿ ಹೇಳಿರುತ್ತಾರೆ.

ಓಟುಗಳ ಬೆಲೆಯನ್ನು ಚನ್ನಾಗಿ ತಿಳಿದಿರುವ ಸ್ವಾರ್ಜುಆರ್ ದೇಶದ ಜನರು ಒಬ್ಬೊಬ್ಬರು ಎರಡಾವರ್ತಿ ಓಟುಕೊಡಲು ಯತ್ನಿಸುತ್ತಿದ್ದುದನ್ನು ತಪ್ಪಿಸಲು, ಅಲ್ಲಿನ ಸರ್ಕಾರದವರು ಒಂದು ತರಹ ಬಣ್ಣವನ್ನು ತಯಾರಿಸಿ ಓಟುಕೊಟ್ಟವರು ಆ ಬಣ್ಣದಲ್ಲಿ ತಮ್ಮ ಬೆರಳನ್ನು ಅದ್ದುವಂತೆ ಮಾಡಿದರು. ಬುದ್ಧಿವಂತರ್‍ಯಾರೋ ಬಣ್ಣವನ್ನು ಸಂಪೂರ್ಣವಾಗಿ ಹೋಗಲಾಡಿಸುವ ವಿಧಾನವನ್ನು ಕಂಡುಹಿಡಿದದ್ದರಿಂದ ಈಗ ಸರ್ಕಾರದವರು ಎಲೆಕ್ಷನ್ ಜಾಗಗಳಲ್ಲಿ ಹಜಾಮರನ್ನು ನಿಲ್ಲಿಸಿಕೊಂಡು ಓಟುಕೊಟ್ಟವರ ಕಿವಿಯ ಹಿಂದೆ ಸ್ವಲ್ಪ ಕೂದಲನ್ನು ತೆಗಿಸಿ ಕಳುಹಿಸುವರು.

ಅಮೆರಿಕೆಯ ನ್ಯೂಯಾರ್ಕಿನಲ್ಲಿ ವರ್ತಮಾನಪತ್ರಿಕೆಗಳನ್ನು ಮಾರಿ ಜೀವಿಸುತ್ತಿದ್ದ 18 ವರ್ಷ ವಯಸ್ಸಿನ ಕ್ಯಾಂಡಯಮೆಂಡ್ ಎಂಬ ಹುಡುಗನು ಕ್ಷಯರೋಗಗ್ರಸ್ತನಾಗಿದ್ದುದರ ಮೇಲೆ ಡಾಕ್ಟರುಗಳು ಪರೀಕ್ಷಿಸಿ ಅವನು ಒಂದು ವರ್ಷದ ಮೇಲೆ ಜೀವಿಸುವುದಿಲ್ಲವೆಂದು ಹೇಳಿದ್ದರು. ಆದರೆ ಆ ಹುಡುಗನು ಅಧೈರ್ಯಗೊಳ್ಳದೆ ಅಂದಿನಿಂದಲೂ ಪಾದಚಾರಿಯಾಗಿ ಊರೂರನ್ನು ತಿರುಗಿ ಸೀಸದಕಡ್ಡಿ ಪೋಸ್ಟ್ ಕಾರ್ಡು ಮೊದಲಾದ ಪದಾರ್ಥಗಳನ್ನು ವಿಕ್ರಯಿಸಿ ಜೀವಿಸಿಕೊಂಡು 16000 ಮೈಲಿ ದೂರ ಸಂಚರಿಸಿ ಈಗ ಡಾಕ್ಟರು ನಿರ್ಧರಿಸಿದ್ದುದಕ್ಕೆ ವ್ಯತಿರಿಕ್ತವಾಗಿ ಆರೋಗ್ಯವನ್ನು ಹೊಂದುತ್ತಿರುವನು. ಇದರಿಂದ ಕ್ಷಯರೋಗಗ್ರಸ್ತರು ಮೂಲೆಗೆಮುಟ್ಟಾಗಿ ಕುಳಿತುಕೊಂಡು ಮೃತ್ಯುವಿನ ಬಾಯಿಗೆ ತುತ್ತಾಗದೆ ಗಾಳಿ ಬೆಳಕಿನಲ್ಲಿ ಸಂಚರಿಸುವುದರ ಮೂಲಕ ರೋಗನಿವಾರಣೆ ಮಾಡಿಕೊಳ್ಳುವವರಾಗುವುದುತ್ತಮ.

ಶ್ರೀ ಗೋಮಟಗಿರಿಯ ಪರಿಚಯ.

ಮೈಸೂರು ಪಟ್ಟಣಕ್ಕೆ ಪಶ್ಚಿಮದಿಕ್ಕಿನಲ್ಲಿ ಸುಮಾರು 16 ಮೈಲುಗಳ ದೂರದಲ್ಲಿ ಜೈನರಪೂರ್ವದ ಕಲಾಕೌಶಲ್ಯವನ್ನು ತೋರಿಸುವ ಗೋಮಟಗಿರಿ ಎಂಬ ಒಂದು ಬೆಟ್ಟವಿದೆ. ಆ ಬೆಟ್ಟದ ತುದಿಯಲ್ಲಿ ಒಂದು ಉನ್ನತ ದೇವಾಲಯವೂ, ಅದರಲ್ಲಿ ಸುಮಾರು ಇಪ್ಪತ್ತು ಅಡಿಗಳ ಪ್ರಮಾಣವುಳ್ಳ ಶ್ರೀ ಗೋಮಟೇಶ್ವರಸ್ವಾಮಿಯ ದಿವ್ಯಮೂರ್ತಿಯೂ ಸ್ಥಾಪಿಸಲ್ಪಟ್ಟಿವೆ. ಬೆಟ್ಟಕ್ಕೆ ಎರಡು ಫರ್ಲಾಂಗುಗಳ ದೂರದಲ್ಲಿ ಹುಣಸೂರು ತಾಲ್ಲೂಕಿಗೆ ಸೇರಿದ ಬೆಟ್ಟದೂರು ಎಂಬ ಗ್ರಾಮವಿದೆ. ಬೆಟ್ಟಕ್ಕೆ ಹೋಗುವವರು ಮೋಟಾರಿನಲ್ಲಿಯೂ, ರೈಲಿನಲ್ಲಿಯೂ ಪ್ರಯಾಣಮಾಡಬಹುದು. ಮೈಸೂರು ಮತ್ತು ಹಾಸನ ರೈಲ್ವೆ ಲೈನಿನಲ್ಲಿರುವ ಸಾಗರಕಟ್ಟೆಸ್ಟೇಷನ್ನಿಗೆ ಈ ಬೆಟ್ಟವು ಸುಮಾರು ಎರಡು ಮೈಲು ದೂರದಲ್ಲಿದೆ. ಅಲ್ಲಿಯ ಜನರು ಈ ಬೆಟ್ಟವನ್ನು "ಶ್ರವಣ ಗುಡ್ಡ" ವೆಂದು ಕರೆಯುತ್ತಾರೆ. ಅದರ ಮೇಲಿರುವ ದೇವಾಲಯದ ಪೂರ್ವಚರಿತ್ರೆಯನ್ನು ಕಂಡುಹಿಡಿಯಲು ಪ್ರಯತ್ನವು ನಡೆಯುತ್ತಿದೆ.

ಈ ಬೆಟ್ಟವು ಒಂದು ಕಾಡಿನ ಮಧ್ಯದಲ್ಲಿದ್ದು ಇದರ ಸೌಂದರ್ಯವು ತುಂಬಿತುಳುಕುತ್ತಿರುವುದು. ಹಿಂದೆ ಮೋಕ್ಷಾಪೇಕ್ಷಿಗಳಾದ ಮುನೀಶ್ವರರು ಇಂತಹ ನಿರ್ಜನಪ್ರದೇಶಗಳಲ್ಲಿ ತಪಸ್ಸು ಮಾಡುತ್ತಿದ್ದಾಗ ಅವರು ತಪಸ್ಸು ಮಾಡುತ್ತಿದ್ದ ಸ್ಥಳದಲ್ಲಿ ಕೋಪ, ಹಿಂಸೆ ಮೊದಲಾದುವುಗಳು ಯಾವುವೂ ಇಲ್ಲದೆ ದುಷ್ಟಮೃಗಗಳು ಕೂಡ ಮೈತ್ರಿಭಾವದಿಂದ ಹೇಗೆ ಆಟವಾಡುತ್ತಿದ್ದುವೋ ಅಂತಹ ಪುಣ್ಯಭೂಮಿಯ ಮಹತ್ವವು ಇಲ್ಲಿಯೂ ಕಂಡುಬರುವುದು. ರಾಜಮಾರ್ಗದಲ್ಲಿ ಹೋಗುತ್ತಿರುವಾಗ ಸ್ವಲ್ಪ ದೂರದಲ್ಲಿಯೇ ಈ ಬೆಟ್ಟವು ದೃಷ್ಟಿಗೋಚರವಾಗುವುದು. ಅದರ ತಪ್ಪಲಿಗೆ ಹೋದಮೇಲೆ ಸುತ್ತಮುತ್ತಲಿರುವ ಪ್ರಕೃತಿಯಸೊಬಗನ್ನು ನಿಂತುನೋಡುವಲ್ಲಿ ಮೇಲೆ ಸ್ವಾಮಿಯುರುವ ಭಾವನೆಯು ಮನಸ್ಸಿನಲ್ಲುಂಟಾಗಿ ಅದು ಅನಿರ್ವಚನೀಯವಾದ ಭಕ್ತಿಯನ್ನು ಪ್ರೇರೇಪಿಸಿ ಪ್ರಕೃತಿಯಸೌಂದರ್ಯವನ್ನು ಇಮ್ಮಡಿಯಾಗಿ ಮಾಡುವುದು. ನಮ್ಮ ದೃಷ್ಟಿಯು ಎಲ್ಲಿಯವರೆಗೆ ಹೋಗುವುದೋ ಅಲ್ಲಿಯವರೆಗೂ ನದಿಗಳೂ, ಸರೋವರಗಳೂ, ಉನ್ನತವೃಕ್ಷಗಳೂ, ಸಂತೋಷದಿಂದ ಆ ವನದಲ್ಲಿ ಹುಲ್ಲುಮೇದು ಜೀವಿಸುವ ದನಕರುಹುಲ್ಲೆಗಳೂ ಕಣ್ಣಿಗೆ ಗೋಚರವಾಗಿ ನಮ್ಮಗಳ ಸಂತೋಷವನ್ನು ಇನ್ನೂ ಹೆಚ್ಚಿಸುವುವು. ನಮಗೆ ನಿಶ್ಚಯವಾದ ವಿಶ್ರಾಂತಿಯೂ, ಮನಶ್ಶಾಂತಿಯೂ ಇಂತಹ ಪವಿತ್ರ ಸ್ಥಳಗಳ ದರ್ಶನದಿಂದ ಸುಲಭಸಾಧ್ಯವಾಗುವುವು.

ಅನಂತರ ಮೇಲಕ್ಕೆ ಹತ್ತಿದರೆ ಶಾಂತಿಗೆ ಪ್ರಭುವಾದ ಮೋಕ್ಷಾಧೀಶನಾದ ಶ್ರೀ ಬಾಹುಬಲಿಸ್ವಾಮಿಯ ದರ್ಶನವಾಗುವುದು. ಭವ್ಯನು ಅಲ್ಲಿಯೇ ತನ್ನನ್ನು ಮರೆತು ಸ್ವಾಮಿಯಧ್ಯಾನದಲ್ಲಿ ಮಗ್ನನಾಗುವನು. ಸ್ವಾಮಿಯು ಧ್ಯಾನಮುದ್ರೆಯನ್ನು ತಾಳಿ ಬಹಳ ಗಾಂಭೀರ್ಯದಿಂದ ನಿಂತಿರುವರು. ಸ್ವಾಮಿಯ ಚಿರಕಾಲ ತಪಸ್ಸಿನ ಭಾವವನ್ನು ತೋರಿಸುವುದಕ್ಕೋಸ್ಕರ ಎರಡು ಬಾಹುಗಳ ಕೆಳಗಡೆಯಲ್ಲಿ ಎರಡು ಸರ್ಪಗಳೂ, ಎರಡು ತೋಳುಗಳ ಮೇಲೆ ಹಬ್ಬಿ ಫಲಪುಷ್ಪಗಳನ್ನು ಬಿಟ್ಟಿರುವಂತೆ ಮಾಲತೀಲತೆಗಳೂ ಶಿಲ್ಪಿಯಿಂದ ಕೆತ್ತಲ್ಪಟ್ಟಿವೆ. ಪಾದಗಳ ಕೆಳಗಡೆ ಅಭಿಷೇಕದ್ರವ್ಯಗಳು ಹರಿದುಹೋಗುವುದಕ್ಕಾಗಿ ಒಂದು ಪೀಠವೂ, ಅದರ ಕೆಳಗಡೆ ಇನ್ನೂ ಒಂದು ದೊಡ್ಡ ಪೀಠವೂ ಇವೆ. ಸ್ವಾಮಿಯನ್ನು ತಯಾರುಮಾಡಿ ಮೇಲಕ್ಕೆ ಸಾಗಿಸಿರುವ ಆ ಕೌಶಲವು ಊಹಿಸತಕ್ಕುದಾಗಿದೆ. ಯಾವ ಮಹನೀಯನು ಆ ಮೂರ್ತಿಯನ್ನು ಅಲ್ಲಿ ಸ್ಥಾಪಿಸಿದನೋ ಅದು ತಿಳಿದುಬಂದಿಲ್ಲ. ಸ್ವಾಮಿಗೆ ಬಿಸಿಲುಮಳೆಗಳು ತಾಗದಂತೆ ಮೇಲೆ ಗೋಪುರವಿದೆ. ಗೋಪುರದ ಒಳಗಡೆ ನಿಂತು ಅಭಿಷೇಕಮಾಡಲು ಬಹಳ ಅನುಕೂಲವಾಗಿ ಕಟ್ಟಡವು ಕಟ್ಟಲ್ಪಟ್ಟಿರುವುದು. ಮೇಲೆ ಸ್ಥಳವು ಚಿಕ್ಕದಾಗಿದ್ದರೂ ಸಾಧಾರಣವಾಗಿ ದೇವಸ್ಥಾನದಲ್ಲಿರಬೇಕಾದ ಪ್ರತಿಯೊಂದು ಭಾಗವು ಬಹಳ ಕುಶಲತೆಯಿಂದ ಕಟ್ಟಲ್ಪಟ್ಟಿರುವುದು. ಸ್ವಾಮಿಯ ಸುತ್ತಲು ಪ್ರದಕ್ಷಣೆ ಬರುವುದಕ್ಕೋಸ್ಕರ ಸಾಕಾದಷ್ಟು ಸ್ಥಳಬಿಟ್ಟು ಒಂದು ಭವ್ಯವಾದ ಪ್ರಾಕಾರವೂ, ಮುಂಭಾಗದಲ್ಲಿ ಗಾರೆಯಿಂದ ತಯಾರಿಸಿದ 24 ತೀರ್ಥಂಕರರ ಬಿಂಬಗಳೂ, ಸ್ವಾಮಿಯ ಪಾದಪೀಠದ ಮುಂದೆ ಶ್ರೀಬ್ರಹ್ಮಯಕ್ಷನ ವಾಹನಾಶ್ವವೂ, ಇನ್ನೂ ವಾದ್ಯ ಮುಂತಾದವುಗಳು ನಡೆಯುವುದಕ್ಕೆ ಮುಖಮಂಟಪವೂ ಇರುವುವು. ಸ್ವಾಮಿಯ ಪ್ರತಿಮೆಯನ್ನ ಮಾಡಿರುವ ಶಿಲ್ಪಿಯು ಅತಿಪ್ರೌಢನು. ಈ ಪ್ರತಿಮೆಯ ಭಾವಲಕ್ಷಣಗಳನ್ನು ಚನ್ನಾಗಿ ಪರೀಕ್ಷಿಸಿದರೆ ಅಲ್ಲಿಯ ಕಲಾಕೌಶಲ್ಯವನ್ನು ನೋಡಿ ಜೈನರೇ ಅಲ್ಲ, ಇಡೀ ಭರತ ಖಂಡವೇ ಅಹಂಕಾರಪಡಬೇಕು. ಲೋಕ ವಿಖ್ಯಾತರಾದ ಶ್ರವಣಬೆಳ್ಗುಳದ ಪ್ರತಿಮೆಯು ಇದಕ್ಕಿಂತಲೂ ಎಷ್ಟೋ ದೊಡ್ಡದೂ ಪ್ರಭಾವವುಳ್ಳದೂ ಆಗಿದ್ದರೂ ಮುಖದ ಶಾಂತಿಮುದ್ರೆಯಲ್ಲಿಯೂ, ಸ್ಥಾಪಿಸಲ್ಪಟ್ಟಿರುವ ಸ್ಥಳದ ತತ್ವದಲ್ಲಿಯೂ ಈ ಪ್ರತಿಮೆಯು ಅದಕ್ಕಿಂತಲೂ ಅತಿಶಯವುಳ್ಳದಾಗಿದೆ ಎಂದು ಹೇಳಬಹುದು. ಸುತ್ತುಮುತ್ತಲಿನ ಪ್ರಾಕೃತಿಕ ಸೌಂದರ್ಯವು ಸೇರಿ ಸ್ವಾಮಿಯ ಸೌಂದರ್ಯವನ್ನೂ ಗಾಂಭೀರ್ಯವನ್ನೂ ಮತ್ತಷ್ಟು ಹೆಚ್ಚಿಸಿರುವುದು. ಹತ್ತುವ ದಾರಿಯ ಮೇಲ್ಭಾಗದಲ್ಲಿ ಸಿಡಿಲುಹೊಡೆದು ಬೆಟ್ಟವನ್ನು ಎರಡು ಭಾಗಮಾಡಿ ಸಿಕ್ಕಿದವರೆಲ್ಲ ಸುಲಭವಾಗಿ ಮೇಲಕ್ಕೆ ಹೋಗಲು ಅವಕಾಶವಿಲ್ಲದಂತೆ ಮಾಡಿರುವುದು. ಮೇಲಿನ ದೇವಾಲಯಕ್ಕೆ ಸ್ವಲ್ಪವೂ ಅಪಾಯವಾಗದಂತೆ ಬೆಟ್ಟವನ್ನು ವಿಭಾಗಿಸಿರುವ ಈ ಸಿಡಿಲುಹೊಡೆತವು ಪ್ರಕೃತಿಯ ಏನೋ ಒಂದು ಉದ್ದೇಶವನ್ನು ನೆರವೇರಿಸಲು ಉಂಟಾಯಿತೆಂದು ಊಹಿಸಬಹುದಾಗಿದೆ.

ಈ ಪವಿತ್ರಸ್ಥಾನದಲ್ಲಿ ಇನ್ನೊಂದು ವಿಶೇಷವಿರುವುದು. ಒಬ್ಬ ಮುನಿವರ್ಯರು ಆ ಸ್ಥಳದ ಮಹತ್ತ್ವವನ್ನು ನೋಡಿ ಅಲ್ಲಿಯೇ ಬಹುಕಾಲ ತಪಸ್ಸುಮಾಡಿ ಆತ್ಮಕಲ್ಯಾಣವನ್ನು ಹೊಂದಿರುವಂತೆ ಕಾಣುತ್ತದೆ. ಅವರ ಪಾದದ್ವಯವು ಬೆಟ್ಟದ ಕೆಳಗಡೆ ಒಂದು ಬಂಡೆಯ ಮೇಲೆ ಕೆತ್ತಲ್ಪಟ್ಟಿದೆ. ಈ ಸ್ಥಾನದ ಮಹತ್ತ್ವವನ್ನು ತಿಳಿದು ಸ್ವಾಮಿಯ ಪ್ರತಿಷ್ಠೆಯಾದ ನಂತರ ಇವರು ತಪಸ್ಸು ಮಾಡಿದರೋ ಅಥವಾ ಅಲ್ಲಿ ತಪಸ್ಸು ಮಾಡುವುದಕ್ಕೆ ಹೋದಾಗ ಅಲ್ಲಿಯ ಸೌಂದರ್ಯವನ್ನು ನೋಡಿ ಅಲ್ಲಿ ಸ್ವಾಮಿಯನ್ನು ಪ್ರತಿಷ್ಠೆಮಾಡಬೇಕೆಂದು ಆಗಿನಕಾಲದ ರಾಜರನ್ನು ಪ್ರೇರೇಪಿಸಿದರೋ ತಿಳಿಯದು. ಅದು ಹೇಗಾದರೂ ಇರಲಿ, ದೇವಾಲಯವನ್ನು ಕಟ್ಟಿಸಿದ ಭವ್ಯಾತ್ಮನು ಅತ್ಯಂತ ಉತ್ಕೃಷ್ಟವಾದ ಸ್ಥಳವನ್ನು ಚುನಾಯಿಸಿರುವುದರಲ್ಲಿ ಸಂದೇಹವಿರುವುದಿಲ್ಲ.

ಬೆಟ್ಟದ ಮೇಲ್ಭಾಗದಲ್ಲಿ ನಿಂತು ಸುತ್ತಲೂ ನೋಡಿದರೆ ಅದಕ್ಕೆ ಉತ್ತರಭಾಗದಲ್ಲಿ ಕಾವೇರಿನದಿಯೂ, ಅಗಾಧವಾದ ಅದರ ಅಣಿಕಟ್ಟುಗಳೂ ಕಾಣಿಸುವುವು. ಅಲ್ಲದೆ ಅನೇಕ ಕೆರೆಗಳೂ, ತೋಟಗದ್ದೆಗಳೂ, ಕಾಡುಗಿಡಗಳೂ ಬಹಳ ದೂರದವರೆಗೂ ವ್ಯಾಪಿಸಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುವು. ಬೆಟ್ಟದ ತಪ್ಪಲಿನಲ್ಲಿಯೇ ಸಮೃದ್ಧಿಯಾದ ನೀರಿರುವುದು. ಅದು ಭೂಮಿಯ ಮಟ್ಟಕ್ಕೆ ಬಂದು ಕೊಡಗಳಲ್ಲಿ ತುಂಬಿಕೊಳ್ಳುವಷ್ಟು ಅನುಕೂಲವಾಗಿರುವುದು.

ಯಾವ ಮಹನೀಯನು ಮನಶ್ಶಾಂತಿಯನ್ನು ಹೊಂದಿ ಆನಂದಪಡಬೇಕೆಂದಿರುವನೋ, ಯಾವ ಭವ್ಯನು ಅನುತಾಪರಹಿತನಾಗಬೇಕೆಂದು ಕುತೂಹಲಪಡುವನೋ, ಯಾವ ಯೋಗಿಯು ಧ್ಯಾನಾಪೇಕ್ಷಿತನಾಗಿ ಸುಸ್ಥಳವನ್ನು ಹೊಂದಲಪೇಕ್ಷಿಸುವನೋ ಅವರೆಲ್ಲರೂ ತಮ್ಮ ಮನೋಭಿಷ್ಟವನ್ನು ಈಸುಸ್ಥಾನದಲ್ಲಿ ನೆರವೇರಿಸಿಕೊಳ್ಳಬಹುದು. ಇಂತಹ ಅಮೋಘವಾದ ಕಾರ್ಯಗಳನ್ನು ಈಗಿನಕಾಲದಲ್ಲಿ ಮಾಡುವುದಕ್ಕಂತೂ ಆಗುವುದಿಲ್ಲವೆಂದರೆ, ಪೂರ್ವಜರು ಮಾಡಿರುವುದನ್ನು ನೋಡಿಯಾದರೂ ಆನಂದಪಟ್ಟು ಪುಣ್ಯವನ್ನು ಸಂಪಾದಿಸದಿದ್ದರೆ ನಾವು ಜನ್ಮಧಾರಣೆಮಾಡಿದುದಕ್ಕೆ ಸಾರ್ಥಕವೇನಾಯಿತು ?

ಅನೇಕ ಕಾರಣಗಳಿಂದ ಜೈನಮತವು ಈಗ ಕ್ಷೀಣವಾಗಿದ್ದರೂ ಅದರ ಪುರಾತನ ವಿದ್ವಾಂಸರ ಖ್ಯಾತಿಯು ಮಾತ್ರ ಆಚಂದ್ರಾರ್ಕವಾಗಿರುವುದೆಂದು ಯಾರಿಗೆತಾನೇ ತಿಳಿಯದು ? ಪೂರ್ವದಲ್ಲಿದ್ದ ಜೈನರ ರಾಜ್ಯಭಾರ, ಐಶ್ವರ್ಯ, ವಿದ್ಯೆ, ವಾಣಿಜ್ಯ, ಶಿಲ್ಪಕಲಾಪ್ರೌಢತೆ, ಕಾವ್ಯಕೌಶಲ್ಯ, ನಾಗರೀಕತೆ, ಸತ್ಯ ಮತ್ತು ಪರೋಪಕಾರಶೀಲತೆಗಳು ಯಾರಿಗೆತಾನೇ ತಿಳಿಯದಿರುವ ವಿಷಯಗಳಾಗಿರುವುವು ? ಆದರೂ ಒಂದು ವಿಷಯ. ನಮ್ಮ ಪೂರ್ವಜರೇನೋ ದೊಡ್ಡವರೂ, ಖ್ಯಾತಿವಂತರೂ, ವಿದ್ಯಾವಂತರೂ ಆಗಿದ್ದರು. ಅದರಿಂದಲೇ ನಾವುಗಳೂ ದೊಡ್ಡವರೆಂದು ಹೇಳುವುದಕ್ಕಾಗದು. ನಮ್ಮ ಪಿತಾಮಹರು ಮಾಡಿಬಿಟ್ಟು ಹೋಗಿರುವುದನ್ನು ನಾವು ಉಳಿಸಿಕೊಂಡರೆ ಆಗ ನಾವು ಅವರ ವಂಶಜರೆನಿಸಿಕೊಳ್ಳಲು ಅರ್ಹರಾಗುತ್ತೇವೆ. ಈ ಗೋಮಟಗಿರಿಯಂತಹ ಅಮೋಘವಾದ ವಿಚಾರಗಳು ಇನ್ನೂ ಎಷ್ಟು ಲೋಕದ ಕಣ್ಣಿಗೆ ಗೋಚರವಾಗದೆ ಎಲ್ಲೆಲ್ಲಿ ಅಡಗಿರುವುವೋ ತಿಳಿಯದು. ಇಂತಹವಿಷಯಗಳಲ್ಲಿ ಜೈನಮಂಡಲಿಯವರೆಲ್ಲರೂ ಆಸಕ್ತರಾಗಿ ಅವುಗಳನ್ನು ಶೋಧಿಸಲು ಪ್ರಯತ್ನಪಟ್ಟು ಅಂತಹ ಅಮೋಘವಿಷಯಗಳು ಸಿಕ್ಕಿದರೆ ತಾವು ದರ್ಶನಮಾಡುವುದಲ್ಲದೆ ಅವುಗಳನ್ನು ಜೀರ್ಣೋದ್ಧಾರ ಮಾಡಿ ಅವುಗಳ ಪ್ರಭಾವವು ಎಲ್ಲೆಲ್ಲಿಯೂ ಹರಡುವಂತೆ ಮಾಡುವುದು ಅವರ ಕರ್ತವ್ಯವಾಗಿರುವುದು.

ಈ ಪವಿತ್ರವಾದ ಸ್ಥಾನವನ್ನು ಊರ್ಜಿತಸ್ಥಿತಿಗೆ ತರಬೇಕೆಂಬ ಮತ್ತು ಇಲ್ಲಿಯ ಪೂರ್ವಚರಿತ್ರೆಯ ವಿಷಯವಾಗಿ ಶೋಧನಪ್ರಯತ್ನಗಳನ್ನು ನಡೆಯಿಸಬೇಕೆಂಬ ಉದ್ದೇಶದಿಂದ ಮೈಸೂರಿನ ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್ನಿನವರು "ಶ್ರೀ ಗೋಮಟಗಿರಿ ಜೀರ್ಣೋದ್ಧಾರ ಫಂಡ್" ಎಂಬುದಾಗಿ ಒಂದು ಫಂಡನ್ನು ಏರ್ಪಡಿಸಿರುತ್ತಾರೆ. ಈ ಉದ್ದೇಶವು ಸಫಲವಾಗುವುದಕ್ಕೆ ಸಹಾಯ ಮಾಡಬೇಕೆಂದಪೇಕ್ಷಿಸುವ ಮಹಾಶಯರುಗಳೂ, ಈ ಸ್ಥಾನ ಮತ್ತು ಫಂಡಿನ ವಿಷಯವಾಗಿ ಹೆಚ್ಚು ತಿಳಿಯಗೆಬೇಕೆನ್ನುವವರೂ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಶ್ರೀ ಗೋಮಟಗಿರಿ ಜೀರ್ಣೋದ್ಧಾರ ಫಂಡ್,
C/o ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್,
ಎಂ. ಎಲ್. ಜೈನ್ ಬೋರ್ಡಿಂಗ್ ಹೌಸ್, ಮೈಸೂರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಸಂ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವ ಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ನೂರುಮಾರುದ್ದ ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಪರಸ್ಪರ ಸಮಾಜಗಳಲ್ಲಿ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಷಮ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೂಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರಃ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಾಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧದ ಲೇಖನಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕರೂ ಖಂಡಿತವಾಗಿ ಗಮನಿಸಬೇಕು.

—ಸಂಪಾದಕ.

To

THE EDITOR, MYSORE STAR, MYSOR
Dear sir,

I shall feel obliged if you would be pleas publish the following in your valuable new and oblige.

At the persuasions of Mr. R. Gopalswam of Chamarajpet, I became a member o Mysore Motor Mechanics Co-operative Union Bangalore City, of which Mr. Gopalswamy himself was the Secretary. He issued favour on the 20th January 1920 a Pass bearing No. 45 under his signature. A s Rs. 21 was collected from me in several ments. On hearing that the society had b defunct I approached Mr. Gopalswami Iy numerous occasions with a request to refund my amount. At first he promised to refu amount but he has postponed the payment inde ly. Now he is skulking. Numerous other drivers have been similarly treated. As I am man, being a motor driver by profession, I invoke your help and request you to kindly Mr. Gopalswamy Iyer through the colums of valuable paper to refund to me the amount me and take back the pass book which is i possession.

ABDUL JABB

ಅಡ್ಡಪಲ್ಲಕ್ಕಿಯುತ್ಸವ.

ಬಳ್ಳಾರಿ ಡಿ॥ ಆದ್ವಾನಿ ತಾಲ್ಲೂಕಿನಲ್ಲಿ ಸಂಚರಿಸುತ್ತಿರುವ ಶ್ರೀ ಸಿಂಹಾಸನಾಧೀಶ್ವರ ಚಿದ್ಘನ ಶಿವಲಿಂಗ ಶಿವಾಚಾರ್ಯ ಮಹಾಸ್ವಾ ವರ ಅಡ್ಡಪಲ್ಲಕ್ಕಿಯುತ್ಸವವು ಪ್ರಾಚೀನ ಕಾಲದಿಂದ ಸಂಸ್ಥಾನಕ್ಕೆ ಬಂದಿರುವ ವ್ಯಾಘನತೋಳು ಸಮೇತವಾದ ನಂದಿಧ್ವಜಾದಿಯಾಗಿ ದಾವಳಿಗಳೊಡನೆ ಆದ್ವಾನಿ ತಾ॥ ಯಮ್ಮಿಗನೂರಿನಲ್ಲಿ ಈ ತಾ॥ ಗ್ರಾಮದ ಭಕ್ತರ ಭಕ್ತಿನಿಮಿತ್ತದಿಂದ ನೆರವೇರಿಸಲ್ಪಟ್ಟಿತು. ಸ ಸ್ಟ್ರೇಟರು ಮೊದಲಾಗಿ ಸರ್ಕಾರಿಯಧಿಕಾರಿಗಳೂ, ಸ್ಥಳ ಪರಸ್ಥ ರಾರು ಭಕ್ತಜನರೂ ಇತರರೂ ಉತ್ಸವದಲ್ಲಿ ಭಾಗಿಗಳಾಗಿದ್ದರು. ಸೇವಾದಿ ಬಹಳ ಸಮರ್ಪಕವಾಗಿತ್ತು. ಶ್ರೀಗಳವರುತ್ಸವವು ತಲ್ಪಿದ ಮೇಲೆ ಮಹನೀಯರ ದರ್ಶನದಿಂದಾಗುವಫಲದ ಮೇಲೆ ಕ ಶರಣಪ್ಪಶಾಸ್ತ್ರಿಗಳ ಉಪನ್ಯಾಸ ನಡೆದು ಮಧ್ಯಾನ್ಹಾತ್ಪರ ಮಹಾ ಧನೆಯೂ ರಾತ್ರಿ ಯೇಳುಬೆಂಚಿಗ್ರಾಮದ ಎಂ. ವಿಡಬಸವ ಶಿವಕೀರ್ತನೆಯೂ ನಡೆದವು. ಶಾಸ್ತ್ರಿಗಳ ಕೀರ್ತನೆಗೂ ಪಾಂಡಿ ಶ್ರೀಗಳವರು ಮೆಚ್ಚಿ ಶಿವಕೀರ್ತನ ಕಲಾಕೋವಿದ ಎಂಬ ಪ್ರಶಸ್ತಿ ವಾದ ಭಂಗಾರದ ಪದಕವನ್ನು ಆಶೀರ್ವದಿಸಿದರು.

ಓರ್ವ ಪ್ರೇಕ್ಷ

ಸರಸ್ವತೀ ವಾಚನಾಲಯ ಸ್ಥಾಪನೆ.

ಇದೇ ಚೈತ್ರ ಶು॥ ೧ ಶುಭಮುಹೂರ್ತದಲ್ಲಿ ಪುನಸೀ ವರ ಪ್ರೆಸಿನಲ್ಲಿ ಶ್ರೀ ಆರ್. ಬಿ. ರಾಯಚೂರ ಇವರ ಅಧ್ಯಕ್ಷತೆ ಒಂದು ಸಭೆ ಸೇರಿ "ಶ್ರೀ ಸರಸ್ವತೀ" ವಾಚನಾಲಯದ ಸ್ಥಾಪನಾ ರಂಭೋತ್ಸವವು ಒಳ್ಳೇ ವಿಜೃಂಭಣೆಯಿಂದ ನೆರವೇರಲ್ಪಟ್ಟಿತು. ಯಲ್ಲಿ ಪುರದೊಳಗಿನ ಎಲ್ಲ ಪ್ರಮುಖ ಗೃಹಸ್ಥರೂ, ಸ್ಕೂಲ ಮಾಸ್ತ ವಿದ್ಯಾರ್ಥಿಗಳೂ ಮಿಲಿತರಾಗಿದ್ದರು. ಮೊದಲು ಇಲ್ಲಿಯ ಸ್ಕೂಲ ಮಾಸ್ತ ಮಿ॥ ಶಿವಲಿಂಗಪ್ಪಕೆರವಾದಿ ಇವರು ವಾಚನಾಲಯದ ಆವಶ್ಯಕತೆಯ ಯವಾಗಿ ಒಳ್ಳೇ ಸುಶ್ರಾವ್ಯವಾಗಿ ಭಾಷಣಮಾಡಿದ ಮೇಲೆ ಅ ಸಮಾರೋಪಣ ಭಾಷಣವಾಗಿ ವಾಚನಮಂದಿರ ಸ್ಥಾಪನಾಕಾರ್ಯವು ಕ್ಷರ ಹಸ್ತದಿಂದಲೇ ನೆರವೇರಿಸಲ್ಪಟ್ಟಿತು. ಈ ಸಂಸ್ಥೆಗೆ ಎಷ್ಟೋ ಕಾಯಂವರ್ಗಣೀ ಹಣ ಕೊಡಲಿಕ್ಕೆ ಒಪ್ಪಿಕೊಂಡರು ಮತ್ತು ಸುಪ್ರಸಿದ್ಧ ವ್ಯಾಪಾರಿಗಳೂ, ಉದಾರರೂ ಪುನಸೀ ಚೇತಸೀ ಕ ಮಾಲಿಕರೂ ಆದ ಶ್ರೀ ಜರುಶೆಟ ವೀರದೋರಶೆಟ ಯಲಿವಿಗಿ ತಮ್ಮ ಪ್ರೆಸ್ಸಿನೊಳಗಿನ ಒಂದು ಖೋಲಿಯನ್ನು ವಾಚನಮ ಪುಕ್ಕಟಿಯಾಗಿ ಕೊಟ್ಟದ್ದಲ್ಲದೆ ೧೨ ರೂಪಾಯಿ ವರ್ಗಣೀಹಣವ ಯಲ್ಲಿಯೇ ಕೊಟ್ಟರು. ಇನ್ನೂ ಈ ಸಂಸ್ಥೆಗೆ ತಮ್ಮಿಂದ ಆದಷ್ಟು ಯವನ್ನು ಮಾಡುತ್ತೇವೆಂದು ವಾಗ್ದಾನಮಾಡಿದರು. ಇಂಥ ಸಮ್ಮ ಸುಪುತ್ರರು ನಮ್ಮ ಭಾರತಮಾತೆಯ ಉದರದಲ್ಲಿ ಹೆಚ್ಚೆಚ್ಚು ಜನಿ ಅನುಗ್ರಹಿಸಲೆಂದು ವಿದ್ಯಾದಾಯಿನಿಯಾದ ಶ್ರೀ ಶಾರದಾಂಬೆ ಪ್ರಾರ್ಥಿಸುವ

ಸೆಕ್ರೆಟರಿ, ಸರಸ್ವತೀ ವಾಚನ

ಶ್ರೀ ಶಿವಾಲಯಪ್ರವೇಶೋತ್ಸವವು.

ಶಿವಮೊಗ್ಗ ಡಿ॥ ಭದ್ರಾವತಿ ಹೋಬಳಿ ಸಿದ್ದಾಪುರದಲ್ಲಿ ಅಲ್ಲಿಯ ಸಿಗಳು 1½ ಸಾವಿರ ರೂಪಾಯಿ ಮುಟ್ಟಿಸಿ ನೂತನವಾಗಿ ಕಟ್ಟಿ ಶ್ರೀ ಸಿದ್ಧೇಶ್ವರಾಲಯದ ಪ್ರವೇಶೋತ್ಸವವು ಮಾಘ ಶು॥ ೧೨ ಮಾಹೇಶ್ವರ ವಟುಗಳ ಶಿವದೀಕ್ಷಾಸಂಸ್ಕಾರವೂ ಮಹಾ ರುದ್ರಾಭಿಷೇ ಶು॥ ೧೩ ರಲ್ಲೂ ಕಲ್ಲಹಳ್ಳಿ ಮಠದ ವೇ॥ ವಿರಪ್ಪಯ ಶಾಸ್ತ್ರಿಗಳ ಹಿತದಿಂದ ವಿಧ್ಯುಕ್ತವಾಗಿ ನಡಿಸಲ್ಪಟ್ಟದಲ್ಲದೆ ಮಹಾಗಣಾರಾ ನಡೆದಿತು. ಶು॥ ೧೫ ಬುಧವಾರದ ದಿವಸ ಹೋಬಳಿ ಕಾರ್ಯ ಸಭೆಯು ಶಿವಮೊಗ್ಗ ಡಿಸ್ಟ್ರಿಕ್ ಸರ್ಜನ್ ಡಾಕ್ಟರ್ ಬಿ. ನ ಎಂ. ಬಿ., ಸಿ. ಎಂ., ರವರ ಅಧ್ಯಕ್ಷತೆಯಲ್ಲಿ ಜರುಗಿ ವಿದ್ಯಾ ಮತಸುಧಾರಣೆ ಮೊದಲಾದ ವಿಚಾರಗಳ ಮೇಲೆ ಲಿಜಿಸ್ಲೇಟಿವ್ ಮೆಂಬರ್ ಮ॥ ಎಚ್. ಜಿ. ಗಡಲ ಬಸಪ್ಪನವರಿಂದಲೂ, ವೀರಪ್ಪ ಶಾಸ್ತ್ರಿಗಳಿಂದಲೂ, ಹಿರಿಯೂರು ಅಂಗಡಿ ಮರಿಗೆಪ್ಪನವರಿಂದಲೂ ಉ ಸಗಳು ಬಹು ಶ್ಲಾಘ್ಯವಾಗಿ ಮಾಡಲ್ಪಟ್ಟವು. ಅನಂತರ ಅಧ್ಯ ಉಪಸಂಹಾರ ಭಾಷಣವನ್ನು ಬಹಳ ಯುಕ್ತಿಯುಕ್ತವಾಗಿಯೂ ಮನಸ್ಸಿನಲ್ಲಿ ನಾಟುವಂತೆಯೂ ಮಾಡಿದರು. ತರುವಾಯ ಶ್ರೀಮ ಚಕ್ರವರ್ತಿಯವರ ಮತ್ತು ನಮ್ಮನ್ನಾಳುವ ಶ್ರೀಮನ್ ಮಹಾರಾ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು ಗ್ರಾಮಸ್ಥರು ದೈವಭಕ್ತಿಯಿಂದ ಶಿವಾಲಯವನ್ನು ಕಟ್ಟಿಸಿದ್ದಲ್ಲದೆ ರೂಪಾಯವರೆಗೆ ಮುಟ್ಟಿಸಿ ಪ್ರವೇಶೋತ್ಸವವನ್ನು ಜರುಗಿಸಿದ್ದು ಸ್ತು ರ್ಹವಾಗಿದೆ. ಈ ದೈವಭಕ್ತರಿಗೆ ಪರಮೇಶ್ವರನು ಆಯುರಾರೋಗ್ಯ ಭ್ಯಾಭಿವೃದ್ಧಿಯನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ,

ಓರ್ವ ದೈವಭ

ಶ್ರೀ ಮುರುಘಾರಾಜೇಂದ್ರ ಬೋರ್ಡಿಂಗಿನ ಸುವ್ಯವಸ್ಥೆ.

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಧಾರವಾಡ ಪಾವಟೇಪೇಟೆ ಮುರುಘಾಮಠದ ಶ್ರೀ ಪಾಠಶಾಲೆಯ ಮತ್ತು ಬೋರ್ಡಿಂಗಿನ ಸಂಸ್ಥೆಯವರು [illegible] ವರ್ಷಗಳಂತೆ ಈ ವರ್ಷವೂ ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ [illegible]ದ ಸೌಲಭ್ಯವನ್ನು ಬಹಳ ಚನ್ನಾಗಿಮಾಡಿರುತ್ತಾರೆ. ಆ ಅನ್ನದಾನದ ಕಾರ್ಯದಲ್ಲಿ ಶ್ರೀ ಮಹಾತಪಸ್ವಿಗಳವರ ಆಶೀರ್ವಾದವೇ ಸತ್ಕಾರ್ಯಗಳ ಶ್ರೇಯಸ್ಸಿಗೆ ಕಾರಣವಾದದ್ದು. ಮುಲ್ಕೀಪರೀಕ್ಷೆಗೆ ಬಂದು, ಊಟವಾದ ವಿದ್ಯಾರ್ಥಿಗಳಲ್ಲಿ 136 ಲಿಂಗಾಯತ ವಿದ್ಯಾರ್ಥಿಗಳೂ 25 ಜನ ಇತರ ಮತೀಯರೂ ಒಟ್ಟು 161 ಜನರು ಈಪ್ರಕಾರ ಇದ್ದಾರೆ. ಕಮಿಟಿಯವರು ಸಮಾಜಸೇವೆ ಮಾಡುವದನ್ನು ನೋಡಿ ವಿದ್ಯಾವಂತರಾದ ಪದವೀಧರರೂ ಅವಿದ್ಯಾವಂತರೂ ಕೂಡಿ ಆನಂದಸಾಗರದಲ್ಲಿ ಮುಳಗಿರುವರು. ಇದು ಅಲ್ಲದೆ ಲಿಂಗಾಯತ ಸಮಾಜದ ತಳತಳೆಯುಳ್ಳ ಮತ್ತು ಸಮಾಜದ ಏಳಿಗೆಯ ಪಾಲುಗಾರರಾದ ಕೆಳಗೆ ಕಾಣಿಸಿದ ಗ್ರಾಮಗಳ ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳು ಸದರ ಶ್ರೀ ಬೋರ್ಡಿಂಗಿಗೆ ಸಹಾಯಮಾಡಿರುವದರ ವಿವರವು.—ಆಯಾ ಗ್ರಾಮಗಳ ವಿದ್ಯಾರ್ಥಿಗಳು, ಬಳಗಾನೂರ ರೂ. 4 ಅಂಗೆರಹಳ್ಳಿ ರೂ. 2, ಬ್ಯಾಡಗಿ ರೂ. 5, ಹಾವನೂರ ರೂ. 1, ಹಾಲಗೇರಿ ರೂ. 1, ನೆಗಳೂರ ರೂ. 4, ನರೇಗಲ್ಲ ರೂ. 1, ನರೇಗಲ್ಲ ರೂ. 1, ಆದೂರ ರೂ. 1, ಅಡ್ಮೂರ ರೂ. 2, 4 ಆಣೆ., ದೇವಿಹೊಸೂರ ರೂ. 1, ಕಂಚಿನೆಗಳೂರ ರೂ. 1, 8 ಆಣೆ., ಮೋಟೆಬೇನ್ನೂರ ರೂ. 6, ಹಲಗೇರಿ ರೂ. 1, ಮಲ್ಲಾಪುರ ರೂ. 1, ಹಿರೇಬೆಂಡಿಗೇರಿ ರೂ. 2, ಇಂಗಳಗಿ ರೂ. 5, ಹಿರೇಹಾಳ ರೂ. 2, ಮಾರನಬಸರಿ 8 ಆಣೆ., ಬನ್ನಿಕೊಪ್ಪ 8 ಆಣೆ., ಹೊಸಳ್ಳಿ ರೂ. 1, ಶಿಡೇನೂರ 8 ಆಣೆ., ಜುಮ್ಲಾ ರೂ 44, 4 ಆಣೆ ಈ ಪ್ರಕಾರ. ಯಾವತ್ತೂ ಸಮಾಜದವರಿಗೆ ನನ್ನ ವಿನಂತಿಯೇನಂದರೆ, ಸಮಾಜದಲ್ಲಿ ಶಾಂತತೆಯನ್ನುಂಟುಮಾಡಿ ಸಮಾಜವುದ್ಧಾರಮಾಡಲೆಂದು ಈ ಜಗನ್ನಿಯಾಮಕನನ್ನು ಕುರಿತು, ಹಗಲಿರುಳು ಪ್ರಾರ್ಥಿಸುತ್ತಲಿದ್ದೇನೆ.

ಓರ್ವ ಪ್ರತ್ಯಕ್ಷದರ್ಶಿ.

ಹಂಸಭಾವಿ ವೀರಶೈವ ವಿದ್ಯಾವರ್ಧಕಸಂಘ.

ಹಂಸಭಾವಿಯಲ್ಲಿ ಶ್ರೀ ಅಥಣಿ ಶಿವಯೋಗೀಶ್ವರರ ಕೃಪಾಪಾತ್ರರಾದ ಶ್ರೀ ಮೃತ್ಯುಂಜಯ ಸ್ವಾಮಿಗಳವರ ಆಶೀರ್ವಾದಬಲದಿಂದ ಒಂದು ವೀರಶೈವ ವಿದ್ಯಾವರ್ಧಕ ಸಂಘವು ಸ್ಥಾಪಿತವಾಗಿದ್ದು ಅದರ ನೇತೃತ್ವದ ಕೆಳಗೆ ಕಳೆದ 1919ನೇ ಇಸವಿಯಲ್ಲಿ ಒಂದು ಇಂಗ್ಲೀಷ್ ಸ್ಕೂಲು ಮತ್ತು ಒಂದು ಫ್ರೀ ಬೋರ್ಡಿಂಗು ಹೀಗೆ ಎರಡು ಉಪಸಂಸ್ಥೆಗಳು ಸ್ಥಾಪಿತವಾಗಿ ಅವು ಇಲ್ಲಿಯವರೆಗೆ ಸುವ್ಯವಸ್ಥೆಯಿಂದ ನಡೆಯುತ್ತಬಂದಿರುತ್ತವೆ. ಸ್ಕೂಲಿನಲ್ಲಿ ಇಂಗ್ಲೀಷ್ 5ನೇ ಇಯತ್ತೆಯವರೆಗೆ ಅಭ್ಯಾಸಹೇಳುತ್ತಿರುವ 5 ಮಂದಿ ಶಿಕ್ಷಕರು ಇದ್ದಾರೆ. ಅವರಲ್ಲಿ ಒಬ್ಬರು ಗ್ರ್ಯಾಜುಯೇಟರು ಇದ್ದಾರೆ. ಉಳಿದವರಲ್ಲಿ ಕೆಲವರು ವರ್ಷೆರಡುವರ್ಷ ಕಾಲೇಜದಲ್ಲಿ ಅಭ್ಯಾಸಿಸಿದವರಿದ್ದಾರೆ. ಡ್ರಾಯಿಂಗ್, ಸ್ಕೌಟ್ ವ ಕಸರತ್ತಿನ ಶಿಕ್ಷಣಗಳು ಕೊಡಲ್ಪಡುತ್ತವೆ. ಹೆಡ್ಮಾಸ್ತರರು ಬಿ.ಎ.ಜಿ. ಪರೀಕ್ಷೆಯವರಿದ್ದಾರೆ; ಸೈನ್ಸ್ ವ ಶೇತಕಿ ಶಿಕ್ಷಣವನ್ನು ಚನ್ನಾಗಿ ಹೇಳುತ್ತಾರೆ. ಸೈನ್ಸ್ ಸಾಮಾನುಗಳನ್ನು ತರಿಸಿದೆ. ಆ ಬಗ್ಗೆ ಪ್ರತ್ಯೇಕ ಇಮಾರತು ಏರ್ಪಾಡಮಾಡಿದೆ. ಒಟ್ಟಿನ ಮೇಲೆ ಇಲ್ಲಿ ಕಲಿಯುವ ಹುಡುಗರು ಪಟ್ಟಣದಲ್ಲಿ ಕಲಿಯುವ ಹುಡುಗರಿಗಿಂತ ವ್ಯವಹಾರ ಚತುರತನದಲ್ಲಿ ಅಷ್ಟು ಮುಂದುವರಿದಿರುವದಿಲ್ಲೆಂದು ಅನ್ನುವ ಅಭಿಪ್ರಾಯಕ್ಕೆ ಇಲ್ಲಿಯ ಸ್ಥಿತಿಯು ತೀರ ವಿರುದ್ಧವಾಗಿದೆ. ಯಾಕಂದರೆ, ಇಲ್ಲಿಯ ಹುಡುಗರು ಹೆಚ್ಚು ವ್ಯವಹಾರಚತುರರೂ ಜಾಣರೂ ಆಗಿದ್ದಾರೆ. ಇಲ್ಲಿ ಒಂದು ಲೈಬ್ರರಿಯು ಸಹಾ ಅದೆ. ಇಲ್ಲಿ ಸಾಧಾರಣವಾಗಿ ಯಾವತ್ತು ಜಿನಸುಗಳ ವ್ಯಾಪಾರವು ನಡೆಯುತ್ತದೆ. ಈ ಸ್ಕೂಲಿನಲ್ಲಿ ಯಾವತ್ತೂ ಜಾತಿಯ ವಿದ್ಯಾರ್ಥಿಗಳಿಗೆ ಸ್ಥಳದೊರೆಯುವದು. ಈ ಸ್ಕೂಲಿಗೆ ಹೊಂದಿ ಒಂದು ಫ್ರೀ ಬೋರ್ಡಿಂಗ್ ಸ್ಥಾಪಿತವಾಗಿ ಅದರಲ್ಲಿ ಈಗ ೨೪ ಹುಡುಗರು ಇದ್ದಾರೆ. ಅವರಿಗೆ ಇಲ್ಲಿ ಧಾರ್ಮಿಕ ಶಿಕ್ಷಣವು ಕೊಡಲ್ಪಡುವದು. ಈ ಬೋರ್ಡಿಂಗ್ ಮುಖ್ಯವಾಗಿ ಲಿಂಗಾಯತರಿಂದ ನಡೆಸಲ್ಪಡುತ್ತಿದ್ದಾಗ್ಯೂ ಇತರ ಜಾತಿಯ ವಿದ್ಯಾರ್ಥಿಗಳಿಗೂ ಸಹಾಯಮಾಡುತ್ತಲಿದೆ. ಈ ಬೋರ್ಡಿಂಗಿನ ಕೆಲಸವು ಇಲ್ಲಿಯವರೆಗೆ ಯಾವ ರೀತಿ ನಡೆದಿರುವದೆಂಬದನ್ನು ನಮ್ಮ ಸಮಾಜಬಂಧುಗಳು ಈ ಬೋರ್ಡಿಂಗಿನ ನಿಯಮಗಳನ್ನು ತರಿಸಿ ನೋಡಿದರೆ ವ್ಯಕ್ತವಾಗುತ್ತದೆ. ನಮ್ಮುದ್ದೇಶವು "ಹಿಂದುಳಿದ ಬಡಜನರಿಗೆ ವಿದ್ಯೆಯನ್ನು ಕಲಿಸಿ ಅವರನ್ನು ಮುಂದಕ್ಕೆ ತರಬೇಕೆಂಬುದು. ನಮ್ಮ ಉದ್ದೇಶಕ್ಕೆ ಯಾವತ್ತು ವಿದ್ಯಾಭಿಮಾನಿಗಳು ಯಥಾಶಕ್ತಿ ಸಹಾಯಮಾಡಬೇಕಾಗಿ ಸವಿನಯ ಪ್ರಾರ್ಥನೆ."

ತಮ್ಮ ಸಮಾಜಬಂಧುಗಳು,
ಚನ್ನವೀರಪ್ಪ, ಬಳಗಾನೂರ
ಸೋಮಪ್ಪ ಹುಚಗೊಂಡ್ರ
ಜನರಲ್ ಸೆಕ್ರೆಟರಿಗಳು ವೀರಶೈವ ವಿದ್ಯಾವರ್ಧಕ ಸಂಘ,
ಹಾಂಸಭಾವಿ.

ದೇವತಾಪ್ರತಿಷ್ಠೆ.

ಚಿಕ್ಕಮಗಳೂರು ತಾ॥ ವಸ್ತಾರ ಹೋ॥ ಅರೇನಹಳ್ಳಿಯು ಚಿಕ್ಕ ಗ್ರಾಮವಾಗಿಯೂ ಅಲ್ಪ ಜನಭರಿತವಾಗಿಯೂ ಇದೆ. ಈ ಗ್ರಾಮಸ್ಥರೆಲ್ಲರೂ ಒಕ್ಕಲಿಗಮತದವರಾಗಿಯೂ ಶ್ರೀ ಈಶ್ವರನ ಭಕ್ತರಾಗಿಯೂ ಜಂಗಮಸೇವಾಧುರೀಣರಾಗಿಯೂ ಇರುವರು. ಗ್ರಾಮದಲ್ಲಿರುವ ಶ್ರೀ ಈಶ್ವರದೇವರಿಗಾಗಿ [illegible] ಮುಲ್ಲೇಗೌಡರು, ಹ. ಮಂಜೇಗೌಡರು, ಉ. ದ್ಯಾವೇಗೌಡರು, ಬೈರೇಗೌಡರು, ಪುಟ್ಟೇಗೌಡರು ಇನ್ನೂ ಮುಂತಾದ ಗ್ರಾಮಸ್ಥರೆಲ್ಲರೂ ತಮ್ಮ ಉದಾರಮತಿಯಿಂದ ಕಲ್ಲುಕಟ್ಟಡದ ದೇವಸ್ಥಾನವನ್ನ ಸಹಸ್ರಾರು [illegible]ಯಿ ಮೇಲೆಯೆ ಖರ್ಚುಮುಟ್ಟಿಸಿ ತಯಾರ್ಮಾಡಿಸಿ ಈ ದೇವಸ್ಥಾ[illegible] ಶ್ರೀ ಗಣಪತಿ ಶ್ರೀ ರುದ್ರೇಶ್ವರ ಶ್ರೀ ಭೈರವೇಶ್ವರ ಮುಂತಾದ ನೂತನ [illegible]ಯಾರಿಸಿದ ಶ್ರೀ ದೇವರುಗಳನ್ನ ಈ ಗ್ರಾಮದ ಹಮ್ಮಿಕವಾದಿ ಮಠಾ[illegible]ದ ಶುಕ್ರವಾರಪೇಟೆ ಮಠದ ಎಸ್. ನಂಜಪ್ಪಯ್ಯನವರು ಮತ್ತು ನಂದೀಕೆರೆ ಮಠದ ಎನ್. ಮಹಂತಯ್ಯನವರು ನಂದೀಕೆರೆ ಪಟೇಲರು ಮಲ್ಲೇಗೌಡರು ಇನ್ನೂ ಮುಂತಾದವರ ಕಾರ್ಯನಿರ್ವಾಹದಿಂದ ಇದೇ ಮಾಘ ಬಹುಳ ೧೪ ಸೋಮವಾರ ದಿವಸದ ರಾತ್ರಿ ವಿಧ್ಯುಕ್ತಪ್ರಕಾರ ಶ್ರೀ [illegible]ಭಿಷೇಕಪೂರ್ವಕವಾಗಿ ಶ್ರೀ ರುದ್ರೇಶ್ವರ ಶ್ರೀ ಭೈರವೇಶ್ವರ ಮುಂ[illegible] ದೇವರುಗಳ ಸ್ಥಾಪನವನ್ನೂ ಮಂಗಳವಾರ ದಿವಸ ಹಗಲು [illegible]ಗಣಾರಾಧನೆಯನ್ನೂ ಭೂರೀದಕ್ಷಿಣೆಯನ್ನೂ ಮಹನಿಯರುಗಳಿಗೆ [illegible] ಭೋಜನವನ್ನೂ ನೆರವೇರಿಸಿ ಅನಂತರ ಸಭಾಸೇರಿಸಿ ಎನ್. [illegible]ತಯ್ಯನವರು ಈ ದಿವಸ ನೆರವೇರಿದ ಶ್ರೀ ಪರಶಿವನ ಪಾದಪೂಜಾ [illegible]ದಲ್ಲಿ ಭಾಷಣಮಾಡಿದ ಅನಂತರ ಎಸ್. ನಂಜಪ್ಪಯ್ಯನವರು ಈಗಿನ [illegible] ನವವಿದ್ಯಾಭ್ಯಾಸ ವಿಷಯದಲ್ಲಿ ಸುಶ್ರಾವ್ಯವಾಗಿ ಭಾಷಣಮಾಡಿ ಈ [illegible]ದ ಒಕ್ಕಲಿಗ ಜನಾಂಗದವರು ಆ ಪರಶಿವನ ಪ್ರೀಯ ಭಕ್ತರಾಗಿದ್ದು [illegible]ಕ್ಯದಿಂದಲೂ ಶ್ರೀ ಸ್ವಾಮಿಸೇವಾಸಕ್ತರಾಗಿರುವರಲ್ಲದೆ ನೂತನ ಶಿಲಾಮಯವಾದ ಶಿವಾಲಯ ದೇವಸ್ಥಾನ ದೇವತಾಪ್ರತಿಷ್ಠೆಗೂ ಸಹಸ್ರಾರು ಜನರುಗಳ ಮೃಷ್ಟಾನ್ನ ಭೋಜನಕ್ಕೂ ಸಾವಿರ ರೂಪಾಯಿಗಳ ಮೇಲೆಯೇ ಖರ್ಚುಮಾಡಿ ಶ್ರೀ ಜಗದೀಶನ ಕೃಪಾಶೀರ್ವಾದಕ್ಕೆ ಪಾತ್ರರಾದದ್ದಲ್ಲದೆ ಈ ಸಂತೋಷ ಸುಸಮಯದ ಜ್ಞಾಪಕಾರ್ಥವಾಗಿ ನಮ್ಮ ವೀರಶೈವ ವಿದ್ಯಾವರ್ಧಕ ಫಂಡಿಗೆ ಚಂದಾತೆಗಯಿಸಬೇಕಾಗಿ ಎಸ್. ನಂಜಪ್ಪಯ್ಯನವರು ಸೂಚಿಸಿದ್ದನ್ನು ಪಟೇಲರು ಮಲ್ಲೇಗೌಡರು ಅನುಮೋದಿಸಿದ್ದನ್ನು ಈ ಗ್ರಾಮಸ್ಥರು ಪ್ರೀತಿವಾತ್ಸಲ್ಯದಿಂದ ಒಪ್ಪಿಕೊಂಡು ಸದರಿ ಫಂಡಿಗಾಗಿ 2 ರೂಪಾಯಿಗಳನ್ನು ಈ ಗ್ರಾಮದ ಮಠಸ್ಥರವಶ ಪಾವತಿಮಾಡಿ ನೆರದಿದ್ದ ಸಮಸ್ತ ಮಹನೀಯರುಗಳೆಲ್ಲರಿಗೂ ತಾಂಬೂಲಸಮಾರಂಭಗೊಳಿಸಿ ಈ ಕಾರ್ಯಸಾಂಗೋಪಾಂಗವಾಗಿ ನೆರವೇರಿಸಿದರು. ಇದಕ್ಕಾಗಿ ಈ ಗ್ರಾಮಸ್ಥರೆಲ್ಲರ ಕುಟುಂಬಕ್ಕೂ ಶ್ರೀ ಜಗದೀಶನು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳನ್ನು ದಯಪಾಲಿಸಿ ಕಾಪಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಎಸ್. ನಂಜಪ್ಪಯ್ಯ.

ಜಯದೇವ ಹಾಸ್ಟಲ್ ಚಿತ್ರದುರ್ಗ.

ಈ ವರ್ಷ ಲೋವರ್‌ಸೆಕೆಂಡರಿ ಪರೀಕ್ಷೆಗೋಸ್ಕರ ಚಿತ್ರದುರ್ಗದ ಸೆಂಟರಿಗೆ ಬಂದಿದ್ದ ವೀರಶೈವ ವಿದ್ಯಾರ್ಥಿಗಳು ಮಾತ್ರವೇ ಅಲ್ಲದೆ, ಇತರ ಜಾತಿಯ ವಿದ್ಯಾರ್ಥಿಗಳು, ಪೋಷಕರು, ಉಪಾಧ್ಯಾಯರು ಸಹ ಸೇರಿ ಒಟ್ಟು 245 ಜನರಿಗೆ ಪದ್ಧತಿಯಂತೆ ಚಿತ್ರದುರ್ಗದ ಶ್ರೀ ಜಗದ್ಗುರು ಮಹಾಸಂಸ್ಥಾನದಿಂದ ತಾ॥ 1-4-24 ರಿಂದ ತಾ॥ 8-4-24 ರವರೆಗೆ ಶ್ರೀ ಜಗದ್ಗುರು ಜಯದೇವ ಹಾಸ್ಟಲಿನಲ್ಲಿ ಉಚಿತವಾದ ಭೋಜನವ್ಯವಸ್ಥೆಯು ಬಹು ವಿತರಣೆಯಿಂದ ಮಾಡಲ್ಪಟ್ಟಿತು. ಸಮಾಜದ ಐಕಮತ್ಯಕ್ಕೆ ಭಂಗವನ್ನು ತಂದು ಭೇದವನ್ನು ಹುಟ್ಟಿಸಿ ಸ್ವಾರ್ಥವನ್ನು ಸಂಪಾದಿಸುವ ದುರಭಿಪ್ರಾಯದಿಂದ ಯಾರೋ ಕುಹಕರು, ಶಿರಿಗೆರೆ ಮಠಕ್ಕೆ ನಡೆದುಕೊಳ್ಳುವ ಸಾದಲಿಂಗಾಯತರಿಗೆ ಈ ಹಾಸ್ಟಲಿನಲ್ಲಿ ಅವಕಾಶವು ದೊರೆಯಲಿಲ್ಲವೆಂಬ ಸುಳ್ಳುಸುದ್ದಿಯನ್ನು ಹುಟ್ಟಿಸಿದಂತೆ ತಿಳಿಯಬರುತ್ತದೆ. ಇದು ಶುದ್ಧ ಸುಳ್ಳು. ವೀರಶೈವರಲ್ಲಿ ಯಾವ ಯಾವ ಪಂಗಡಕ್ಕೆ ಸೇರಿದವರು ಮತ್ತು ಇತರರಲ್ಲಿ ಯಾವ ಯಾವ ಜಾತಿಯ ವಿದ್ಯಾರ್ಥಿಗಳು ಎಷ್ಟು ಜನರು ಈ ಬೋರ್ಡಿಂಗಿಗೆ ಬಂದಿದ್ದರೆಂಬುದನ್ನು ಈ ಮುಂದಣ ಪಟ್ಟಿಯಿಂದ ತಿಳಿಯಬಹುದು.—ಮಾಹೇಶ್ವರರು 34, ಪಂಚಾಚಾರ 22, ಸಾದಲಿಂಗಾಯತ 41, ಸಜ್ಜನರು 10, ನೊಣಬರು 2, ಜ್ಯೋತಿಷಣ 3, ನಾಗಲೀಕ 1, ನರೂಡಿರಡ್ಡಿ 8, ಪಾಕನಾಟಿರಡ್ಡಿ 4, ಕುಂಚಿಟಿಗರು 17, ಕುಂಬಾರರು 2, ಭಂಡಾರಿ 1, ಮೋಟ್‌ನಾಟಿ 1, ಶೆಟ್ಟಿಬಣಜಿಗ 9, ಉಪ್ಪಾರ 1, ಹಾಲುಮತ 8, ಗಂಗೆಮಕ್ಕಳು 2, ಒಕ್ಕಲಿಗ 1, ಗೊಲ್ಲರು 4, ದೇವಾಂಗ 5, ಮರಾಠಿ 2, ನಾಯಕರು 16, ಕಂರಡ್ಡಿ 37, ಮಹಮ್ಮದೀಯ 6, ಛಲವಾದಿ 4, ಬೇಗಾರ 4, ಈ ಮೇರಿಗೆ 245 ಜನರು ಸೇರಿದ್ದರು. ಶ್ಲೋ॥ "ಉದಾರಚರಿತಾನಾಂತು | ವಸುದೈವಕುಟುಂಬಕಂ" ಎಂಬ ನ್ಯಾಯವು ಈ ಶ್ರೀ ಜಗದ್ಗುರು ಮಹಾಸಂಸ್ಥಾನದಲ್ಲಿ ಅಕ್ಷರಶಃ ಪಾಲಿಸಲ್ಪಡುತ್ತಿರುವಾಗ ಈ ತೆರದ ಕ್ಷುಲ್ಲಕಾಭಿಪ್ರಾಯಕ್ಕೆ ಎಂದಿಗಾದರೂ ಅವಕಾಶಉಂಟಾದೀತೆ ? ಶ್ರೀ ಮಹಾ ॥ ॥ ಸಂಸ್ಥಾನದ ಅಪ್ಪಣೆಯ ಮೇರಿಗೆ ನಿಯಾಮಕವಾದ ಕಮಿಟಿಯ ಮ್ಯಾನೇಜರ್ ಮತ್ತು ಮೆಂಬರುಗಳು ಶ್ರದ್ಧೆಯನ್ನು ವಹಿಸಿ ಊಟದ ವ್ಯವಸ್ಥೆಯನ್ನು ಸರ್ವಸಮರ್ಪಕವಾಗಿ ಮಾಡಿದ್ದರು. ಇದರಂತೆ ಶ್ರೀ ಮಹಾ ॥ ॥ ಸಂಸ್ಥಾನದ ಅಧಿಕಾರಕ್ಕೊಳಪಟ್ಟ ದಾವಣಗೆರೆ ವಿರಕ್ತಮಠದಲ್ಲಿಯೂ 600 ಜನರಿಗೆ ಊಟದ ವ್ಯವಸ್ಥೆಯು ಶ್ಲಾಘನೀಯವಾಗಿ ಏರ್ಪಡಿಸಲ್ಪಟ್ಟಿತ್ತು. ಮೈಸೂರು ಸೀಮೆಯಲ್ಲಿ ಮಾತ್ರವಲ್ಲದೆ ಬೊಂಬಾಯಿ ಸೀಮೆಯೊಳಗೆ ಧಾರ್ವಾಡ ಮೊದಲಾದ ಪರೀಕ್ಷಾಸ್ಥಳಗಳಲ್ಲಿ ವಿದ್ಯಾರ್ಥಿಗಳಿಗೆ ನಿರುಪಾಧಿಕವಾಗಿ ಭೋಜನದ ಸೌಕರ್ಯಗಳನ್ನು ಕಲ್ಪಿಸಿ ವಿದ್ಯೆಗೆ ಪ್ರೋತ್ಸಾಹವನ್ನು ಕೊಡುತ್ತಿರುವ ಶ್ರೀ ಜಗದ್ಗುರು ಪೀಠದ ಪೂಜ್ಯಪಾದರ ವಿದ್ಯಾಭಿಮಾನವೂ, ದೇಶಹಿತೈಷಿತೆಯೂ ಅನ್ಯಾದೃಶವಾದುವೆಂದು ನಿಜವಾದ ಯಾವ ದೇಶಾಭಿಮಾನಿಯು ಮೆಚ್ಚಿ ಕೊಂಡಾಡದಿರಲಾರನು.

ಸ್ಥಳವಾಸಿ.

ಬಾಳೆಹೊನ್ನೂರು ಮಠದ ಪಟ್ಟಾಧಿಕಾರ.

ಶ್ರೀಮದ್ರಂಭಾಪುರೀಸಂಸ್ಥಾನ ಮಠದ ಪಟ್ಟಾಧಿಕಾರದ ವಿಷಯದಲ್ಲಿ ಮ॥ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರವರ ಸಮಕ್ಷಮ ಶ್ರೀ ಗೋಕಾಕಿನ ಕೊಣ್ಣೂರುಮಠದ ಶ್ರೀಗಳವರನ್ನು ಅಧಿಕಾರಿಗಳನ್ನಾಗಿ ಮಾಡಲು ಮ॥ ಇಂ॥ ನ॥ ಶಾಂತಪ್ಪಶೆಟ್ಟರೇ ಮೊದಲಾದ ಪ್ರಮುಖರು ಒಪ್ಪಿ ಸದರಿ ಶ್ರೀಗಳವರ ಒಪ್ಪಿಗೆಯನ್ನು ಪಡೆಯುವುದಕ್ಕೋಸ್ಕರವಾಗಿ ಎಲ್ಲಾ ದೇಶದ ಪ್ರಮುಖರೂ ಕೆಲವರನ್ನು ಗೊತ್ತುಮಾಡಿದ್ದುದರ ಮೇರೆ ಅವರು ಹೋಗಿ ಬಿನ್ನೈಸಿಕೊಂಡು ಅವರ ಒಪ್ಪಿಗೆಯನ್ನು ಪಡೆದುಕೊಂಡು ಬರಲಾಗಿ, ಮ॥ ಶಾಂತಪ್ಪಶೆಟ್ಟರು ತಮ್ಮಪರವಾದ ಶ್ರೀ ಉಜ್ಜಯಿನಿ ಚರಪಟ್ಟಾಧ್ಯಕ್ಷರು ಶ್ರೀ ಸಿದ್ಧಲಿಂಗಶಿವಾಚಾರ್ಯ ಸ್ವಾಮಿಗಳವರ ಒಪ್ಪಿಗೆಯನ್ನು ಪಡೆದುಕೊಂಡು ಬರುವುದಕ್ಕಾಗಿ ಹೋಗಿ ತಿಳಿಸಿದ್ದಕ್ಕೆ ಇವರುಗಳೆಲ್ಲಾ ಬಹಳ ದಿವಸಗಳಿಂದ ತಮ್ಮಪರವಾದ ಒಟುವಿಗೆ ಯಾರಿಗೂ ತಿಳವಳಿಕೆಯಿಲ್ಲದೆ ಪಟ್ಟಾಧಿಕಾರ ಕೊಡಿಸಬೇಕೆಂತ ಸಂಕಲ್ಪಪಟ್ಟವರಾದ ಕಾರಣ, ತಮ್ಮ ಸಂಕಲ್ಪಕ್ಕೆ ಭಂಗ ಒದಗಿರುವುದಕ್ಕಾಗಿ ಮನಸ್ಸಿನಲ್ಲಿ ಬಹಳ ಸಂಕಟಪಟ್ಟುಕೊಂಡು ಕೊಣ್ಣೂರುಮಠದವರು ಸರಿಯಾದ ವಿದ್ಯಾವಂತರಲ್ಲವೆಂತ ವಗೈರೆ ಇಲ್ಲದ ದೋಷಾರೋಪಣೆಮಾಡಿದ ಸಂಗತಿ ಮ॥ ದಿವಾನ್ ಬಹದ್ದೂರ್ ಪುಟ್ಟಣ್ಣಶೆಟ್ಟರು ತಿಳಿದು ಶ್ರೀ ಉಜ್ಜಯಿನಿ ಶ್ರೀಗಳವರು ಬಹು ಜನಾಭಿಪ್ರಾಯಕ್ಕೆ ವಿರೋಧವಾಗಿ ಹೋಗುವುದು ಬಹಳ ಅಪಾಯಕ್ಕೆ ಕಾರಣವಾದ್ದರಿಂದ ಒಪ್ಪಿಗೆಯನ್ನು ಕೊಟ್ಟು ಪಟ್ಟಾಧಿಕಾರವನ್ನು ನಡೆಸಲು ಏರ್ಪಾಡುಮಾಡಬೇಕಾಗಿ ವಗೈರೆ ಸೂಚಿಸಿ ಕಾಗದ ಬರೆಸಿದ್ದಕ್ಕೆ ಶ್ರೀಗಳವರು ಸ್ಥಿರಪಟ್ಟಾಧಿಕಾರವನ್ನೂ ಚರಪಟ್ಟಾಧಿಕಾರವನ್ನೂ ಎರಡನ್ನೂ ಮಾಡುವುದಕ್ಕೆ ಅನುಕೂಲಪಡಿಸಬೇಕಾಗಿ ಜವಾಬು ಕೊಡಲು ಮ॥ ದಿ॥ ಬ॥ ಪುಟ್ಟಣ್ಣಶೆಟ್ಟರವರು ಒಪ್ಪದೆ ಸ್ಥಿರಪಟ್ಟಾಧಿಕಾರ ಒಂದನ್ನೇ ಮಾಡಬೇಕಾಗಿ ಖಂಡಿತವಾದ ಅಭಿಪ್ರಾಯಪಟ್ಟದ್ದರ ಮೇಲೆ ಶ್ರೀಗಳವರು ಇದಕ್ಕೆ ಅನುಮೋದನವನ್ನು ಕೊಟ್ಟಿರುತ್ತಾರೆ. ಈರೀತಿ ಚಳವಳಿಗೆ ಅವಕಾಶವನ್ನು ಕೊಡದೆ ಅನುಮೋದನ ಕೊಟ್ಟದ್ದಕ್ಕೆ ಸಮಸ್ತ ವೀರಶೈವ ಜನಾಂಗದವರೂ ಬಹಳ ಸಂತುಷ್ಟರಾಗಿ ಶ್ರೀಗಳವರ ಈರೀತಿಯಾದ ವರ್ತನಕ್ಕೆ ತುಂಬಾ ಕೃತಜ್ಞರಾಗಿ ತುಂಬಾ ಸಂತೋಷಚಿತ್ತವುಳ್ಳವರಾಗಿರುತ್ತಾರೆ. ಈರೀತಿಯಾಗಿ ಸೌಮ್ಯವೃತ್ತಿಯಿಂದ ಅವರು ಒಪ್ಪಿಗೆ ಕೊಡದೇಹೋಗಿದ್ದರೆ ಎಷ್ಟು ಗಲಭೆಗೆ ಅವಕಾಶವಾಗುತ್ತಿತ್ತೆಂಬ ಅಂಶವನ್ನು ತಿಳಿಸಲು ಸಾಧ್ಯವಿಲ್ಲ. ಹೀಗೆ ಶ್ರೀಗಳವರು ಅನುಮೋದನಕೊಟ್ಟದ್ದಕ್ಕೆ ಸರ್ವರೂ ಈಗ ಸದರೀ ಶ್ರೀಗಳವರಿಂದಲೇ ಪಟ್ಟಾಧಿಕಾರವನ್ನು ಕೊಡಿಸಬೇಕಾಗಿ ತಕ್ಕ ತರದೂದು ನಡೆಸುತ್ತಾಯಿದ್ದಾರೆ. ಈ ಕಾರ್ಯಸಾಧನೆಗೆ ಬಹಳವಾಗಿ ಹೋರಾಡುತ್ತಿದ್ದ ಮ॥ ನರಸಿಂಹರಾಜಪುರದ ಶಾಂತಪ್ಪಶೆಟ್ಟರವರಿಗೆ ಈಗ ಕೊಂಚ ದೇಹಾಲಸ್ಯವಾಗಿರುವ ಕಾರಣ, ಕಾರ್ಯ ನೆರವೇರಲು ಸ್ವಲ್ಪ ಸಾವಕಾಶಕ್ಕೆ ಕಾರಣವಾಗಿರುತ್ತೆ. ಇಲ್ಲವಿದ್ದರೆ ಶೀಘ್ರವಾಗಿ ಕಾರ್ಯಸಾಧನೆಗೆ ಅನುಕೂಲವಾಗುತ್ತಿತ್ತು. ಶ್ರೀ ರಂಭಾಪುರೀಶನು ಜಾಗ್ರತೆಯಾಗಿ ಇವರಿಗೆ ಆರೋಗ್ಯಭಾಗ್ಯವನ್ನು ಕೊಟ್ಟು ಸದರಿ ಪಟ್ಟಾಧಿಕಾರವನ್ನು ಶೀಘ್ರವಾಗಿ ನೆರವೇರಿಸಿ ಕೀರ್ತಿಶೇಷರಾಗುವಂತೆ ಎಲ್ಲರೂ ಶ್ರೀಮದ್ರಂಭಾಪುರೀಶನನ್ನು ಪ್ರಾರ್ಥಿಸುತ್ತಾರೆ.

ಪೀಠಾಭಿಮಾನಿ.

ಸಾಗರದಲ್ಲಿ ಸ್ಥಾಪಿತವಾಗಿದ್ದ ವೀರಶೈವ ಬೋರ್ಡಿಂಗಿನ ಪುನರುದ್ಧಾರ.

ಮಹಾಶಯರೇ, ಸದರಿ ಬೋರ್ಡಿಂಗು ಆರಂಭದಲ್ಲಿ ಶ್ರೀಮನ್ನಹಾಹಾನಗಲ್ಲು ಕುಮಾರಮಹಾಸ್ವಾಮಿಗಳವರ ಮತ್ತು ಲಿಂಗೈಕ್ಯ ಕೆಳದಿ ಸಂಸ್ಥಾನ ಹಿರೇಮಠದ ಪಟ್ಟಾಧ್ಯಕ್ಷ ರೇವಣಸಿದ್ಧ ಮಹಾಸ್ವಾಮಿಗಳವರ ಆಶೀರ್ವಾದ ವಚನಪ್ರಭಾವದಿಂದ ಸ್ಥಾಪಿತವಾದ್ದು ಸರಿಯಷ್ಟೆ. ಈ ಸತ್ಕಾರ್ಯವು ಸುಮಾರು 2-3 ವರ್ಷಗಳ ಪರಿಯಂತರ ಅವಿಚ್ಛಿನ್ನವಾಗಿ ಶ್ರೀ ಕೆರೆಕೋಡಿಮಠದ ಗುರುಲಿಂಗಾರ್ಯರು, ಬರದವಳ್ಳಿ ಗುರಪ್ಪಗೌಡರು ಇವರುಗಳ ಉದಾರಾಶ್ರಯದಿಂದಲೂ ಸ್ಥಳದ ಶೆಟ್ಟರು ಯಜಮಾನರು, ವಯೋವೃದ್ಧರು ಈ ಮಹತ್ಕಾರ್ಯದ ಪುರೋಭಿವೃದ್ಧಿಗೆ ಏಕೀಭವಿಸಲಿ, ಏಕೀಭವಿಸದೇಇರಲಿ ನಡೆಯುತ್ತಾಬಂದಿತು. ಈಗ 1 ವರ್ಷದ ಈಚೆಗೆ ಅದರ ಉತ್ತೇಜನವೇ ಅಡಗಿಹೋಯಿತು. ನಮ್ಮಲ್ಲಿರುವ ಉಮೇದು ಆಕಾಶಪುರಣಕ್ಕೆ ಸಮಾನವಾಯಿತು. ಆರಂಭಶೂರತ್ವವು ಹೊರಬಿದ್ದಿತು. ಮಹನೀಯರೇ ತಮಗೆಲ್ಲಾ ವೇದ್ಯವಿರುವಂತೆ ಸಾಗರವು ಕೇವಲ ಪ್ರಸಿದ್ಧಸ್ಥಳವೂ, ಮಹನೀಯರನೇಕರ ಸಂಚಾರಸ್ಥಳವೂ ಆಗಿದೆ. ಇಂಥಾ ಅನುಕೂಲವಾದಸ್ಥಳದಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಒಂದು ಊಟ ಉಪಚಾರದ ಆವಾಸವು ಮುಖ್ಯವಾಗಿರಲೇಬೇಕಾಗಿದೆ. ಈಗ ವೀರಶೈವ ವಿದ್ಯಾರ್ಥಿಗಳಿಗಿರುವ ತೊಂದರೆಗಳನ್ನು ಈ ಮೂಲಕ ವರ್ಣಿಸಲು ಅತಿಶಯಸಂತಾಪವೂ, ಮನಃಕ್ಲೇಶವೂ ಉಂಟಾಗುತ್ತದೆ. ಈ ಹೋಮಿಗೆ ಶೆಟ್ಟರ ಪರವ್ವನವರು ತ್ರಿಕರಣಶುದ್ಧಿಯಾಗಿ ತಮ್ಮ ವಾಸದ ಮನೆಯನ್ನೂ, ಬಾಡಿಗೆಬರುತ್ತಿರುವ ವಖಾರಗಳನ್ನೂ ಒಪ್ಪಿಸಿ ಉಪಕಾರಮಾಡಿದ್ದು ಅವರ ಸಮಾಜೋನ್ನತಿಯ ಅಭಿಮಾನವನ್ನು ಪ್ರದರ್ಶಿಸುತ್ತದೆ. ಹಾಗೂ ಸೊರಬ ತಾಲ್ಲೂಕಿನ ಪೈಕಿ ಕೆರೆಕೊಪ್ಪದ ಬಸಪ್ಪಗೌಡರು ಯಜಮಾನರು, ತಮ್ಮ ಆಸ್ತಿಯ ಉತ್ಪನ್ನ ಸುಮಾರು 2000 ರೂಪಾಯಿ ದಾನಾದತ್ತವಾಗಿ ದಯಪಾಲಿಸಿ ಈ ಮೊತ್ತವನ್ನು ಚನ್ನಾಗಿ ಕಾಪಾಡಿಕೊಂಡು ಇದರ ಬಡ್ಡಿ ಅಂಶದಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಉದಾರಾಶ್ರಯದೊರೆದಿದೆ. ಇದನ್ನೆಲ್ಲಾ ಸದುಪಯೋಗಪಡಿಸಿಕೊಳ್ಳುವ ಬೋಜಾ ನಮ್ಮಲ್ಲಿ ಇಲ್ಲದಮೇಲೆ ನಮ್ಮ ಜನ್ಮದ ಸಾರ್ಥಕ್ಯವಾವುದು ? ಶೆಟ್ಟರ ಪರವ್ವನವರ ವಾಗ್ದಾನದ ಆಸ್ತಿಯ ಮೇಲೆ ಕೋರ್ಟು ಮೂಲಕ ವ್ಯಾಜ್ಯವೂ ನಡೆಯುತ್ತಲಿದೆ. ಹಾಗೂ ವೃದ್ಧಮಾತೆಯವರನ್ನು ಕೇಳತಕ್ಕವರೇ ಇಲ್ಲವಾಗಿದೆ. ಎಂಥಾದುರ್ಘಟಪ್ರಸಂಗವಿದು ! ಇನ್ನಾದರೂ ನಾವು ನಮ್ಮ ಕರ್ತವ್ಯ ಕರ್ಮಗಳನ್ನು ಪರ್ಯಾಲೋಚಿಸಿ ಬರುವ ಏಪ್ರಿಲ್ ತಿಂಗಳ ಅಖೈರೊಳಗೆ ಸ್ಥಳದ ಮತಾಭಿಮಾನಿಗಳು ವಿದ್ಯಾಭಿಮಾನಿಗಳ ಉದಾರಾಶ್ರಯದಿಂದ ಸಭೆಗೂಡಿ ಮುಂದಿನ ಅಭಿವೃದ್ಧಿಯ ಮಾರ್ಗವನ್ನು ಚಿರಸ್ಥಾಯಿಯಾಗುವಂತೆ ಆಲೋಚಿಸಬೇಕು. ಬರುವ ಜುನ್ ತಿಂಗಳಿಂದಲೇ ಪುನಃ ಹೋಮಿನ ಕಾರ್ಯಾರಂಭವಾಗಬೇಕಾಗುತ್ತದೆ. ಈ ಮಹತ್ಕಾರ್ಯದ ಸೇವಾಮಾಡಲು ಆಶೆಯುಳ್ಳ ನನ್ನನ್ನು ಸಹಾ ತಮ್ಮಗಳ ಮಧ್ಯೆ ಸೇರಿಸಿಕೊಂಡು ನಾನು ತಕ್ಕಷ್ಟು ಸಮಾಜಕಾರ್ಯದ ಸೇವಾನಡೆಯಿಸಲು ಮಾರ್ಗದರ್ಶಿಗಳಾಗಬೇಕಾಗಿ ದೈನ್ಯೋಕ್ತಿಯಿಂದ ಬೇಡುವೆನು. ಈ ಕಾರ್ಯವು ಅತಿಶಯ ಶ್ರದ್ಧೆಯಿಂದನಡೆದು ಮಹತ್ತರವಾದ ಕೀರ್ತಿಭಾಜನವಾಗಲು ಪ್ರತಿಯೊಬ್ಬ ವೀರಶೈವ ಬಂಧುವೂ ತನ್ನ ತನುಮನಧನಗಳನ್ನು ಒಪ್ಪಿಸಬೇಕಾಗಿದೆ. "ಶುಭಸ್ಯಶೀಘ್ರಂ" ಎಂಬ ವಚನೋಕ್ತಿಯಂತೆ ತಾಲ್ಲೂಕಾಮಲೆ ಮತಬಾಂಧವರೆಲ್ಲರೂ ತಮ್ಮ ತಮ್ಮ ಔದಾರ್ಯವನ್ನು ಫಂಡಿಗೆ ಸಹಾಯಮಾಡುವುದರ ಮೂಲಕ ವ್ಯಕ್ತಪಡಿಸುವುದಲ್ಲದೆ ತಮ್ಮ ತಮ್ಮ ಬಾಲಕರನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಿ ಹಿಂದುಳಿದ ಈ ಜನಾಂಗದ ಭಾಗ್ಯಲಕ್ಷ್ಮಿಯ ಪ್ರಭಾವವು ಎಲ್ಲೆಲ್ಲಿಯೂ ಪ್ರಕಾಶಗೊಂಡೀತೆಂಬ ಉತ್ಸಾಹದೊಂದಿಗೆ ಮಹಾಶಯರಾದ ತಮ್ಮಗಳಿಗೆಲ್ಲಾ ಶ್ರೀ ಭಗವಂತನು ಉದಾರಾಶ್ರಯದ ಬುದ್ಧಿ ಪ್ರೇರಣೆಯನ್ನು ದಯಪಾಲಿಸಲಿ ಎಂದು ಅನನ್ಯಭಾವದಿಂದ ಬೇಡುವ,

ತಮ್ಮ ಆಜ್ಞಾಧಾರಕ
ಕಾಗೋಡು ಶಿವಲಿಂಗಪ್ಪ.

ಪಶುಗಳ ವಧೆಯು.

(ಲೇ॥ ಚಂದ್ರಶೇಖರಶಾಸ್ತ್ರಿ, ಹಿರೇಮಠ, ಹೊಳಲು.)

ಪ್ರಿಯವಾಚಕರೆ, ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಮ॥ ಶಾಂತಿರಾಜಶಾಸ್ತ್ರಿಗಳವರ ಅಹಿಂಸಾಪರವಾದ ಲೇಖನವೂ ಮತ್ತು ಬೇರೆ ಎರಡು ಮೂರು ಲೇಖನಗಳೂ ಇದೇ ವಿಷಯಕವಾಗಿ ಪ್ರಕಟಿಸಲ್ಪಟ್ಟಿರುವವಷ್ಟೆ. ಆ ಲೇಖಕರ ಮುಖ್ಯವಾದ ಅಭಿಪ್ರಾಯವು ದೇವತೆಯ ಜಾತ್ರೆಯಲ್ಲಿ ಕೋಣ ಕುರಿಗಳನ್ನು ಕಡಿಯುವ ಪದ್ಧತಿಯನ್ನು ನಿಲ್ಲಿಸಬೇಕೆಂಬುವದೊಂದೆ. ವಿಷಯ ವಿಚಾರಮಾಡಿನೋಡಿದರೆ ಈ ಜಗತ್ತಿನಲ್ಲಿ ಎಲ್ಲ ಪ್ರಾಣಿಗಳಿಗೂ ಪ್ರಾಣಕ್ಕಿಂತ ಅಧಿಕವಾದ ವಸ್ತುವು ಮತ್ತೊಂದಿರುವುದಿಲ್ಲ. ಪ್ರಾಣವು ಸಣ್ಣ ದೊಡ್ಡ ಎಲ್ಲ ಪ್ರಾಣಿಗಳಿಗೂ ಸಮಾನವಾಗಿಯೇ ಇರುವದು. ನೋಡಿರಿ, ನಮಗೆ ಏನಾದರೂ ರೋಗಾದಿಗಳು ಬಂದರೆ ಅಯ್ಯೋ ದೇವರೇ ಇಂಥ ಕಷ್ಟವನ್ನು ಕೊಡಬೇಡ, ಶೀಘ್ರಗುಣಮಾಡೆಂದು ಬೇಡಿಕೊಳ್ಳುತ್ತೇವೆ. ಸಣ್ಣ ಪ್ರಾಣಿಗಳನ್ನು ಹೊಡಿಯಲಿಕ್ಕೆ ಹೋದರೆ ಅವುಗಳು, ಪ್ರಾಣದ ಆಶೆಯಿಂದ ತಪ್ಪಿಸಿಕೊಳ್ಳುತ್ತವೆ. ಇದೆಲ್ಲ ಜೀವದ ಆಶೆಯಿಂದಲ್ಲವೆ ? ಅಂಥ ಪ್ರಾಣಿಗಳನ್ನು ಬಲತ್ಕಾರದಿಂದ ಹಿಡಿದು ಕಡಿಯುವಾಗ ಆ ಮೂಕಪ್ರಾಣಿಗಳಿಗೆ ಎಷ್ಟು ದುಃಖವಾಗಬಹುದೆಂಬುವದನ್ನು ದಯಾರ್ದ್ರದೃಷ್ಟಿಯುಳ್ಳ ವಾಚಕರೇ ವಿಚಾರಮಾಡಿ ನೋಡಿರಿ. ನಿಮಗೆ ಒಂದು ಮುಳ್ಳು ನೆಟ್ಟರೆ ಎಷ್ಟು ದುಃಖಪಡುತ್ತೀರಿ. ಪ್ರತ್ಯಕ್ಷ ಪ್ರಾಣವಿಂದ ಬಿಡುಗಡೆಯಾದರೆ ಅವುಗಳಿಗೆ ಎಷ್ಟು ಕಷ್ಟವಾಗಬಹುದು? ತಮ್ಮಂತೆ ಆ ಮೂಕಪ್ರಾಣಿಗಳನ್ನು ಯಾಕೆ ತಿಳಿಯಬಾರದು? ತನ್ನಂತೆ ಪರರ ಬಗೆದೊಡೆ ಕೈಲಾಸಬಿನ್ನಣವಕ್ಕು ಎಂಬುವ ಮಹಜ್ಞೀಯರ ವಚನದಂತೆ, ನಡದರೆ ಇಹಲೋಕ ಪರಲೋಕಗಳೆರಡರಲ್ಲಿಯೂ ಸುಖವು ದೊರೆಯುವದಲ್ಲದೆ, ಕೀರ್ತಿಯು ಹೆಚ್ಚುವದು. ಪಶುಗಳನ್ನು ದೇವಿಗೆ ಬಲಿಕೊಟ್ಟರೆ ದೇವಿಯು ಸಂತುಷ್ಟಳಾಗುವಳೆಂಬುವ ಸಜ್ಜನರೇ, ಕೆಳಗಿನ ಉದಾಹರಣೆಯನ್ನು ನೋಡಿರಿ.

ಯಾವಂತಿಪಶುರೋಮಾಣಿ | ಪಶುಗಾತ್ರೇಷುಭಾರತ ||
ತಾವದ್ವರ್ಷಸಹಸ್ರಾಣಿ | ಪಚ್ಯಂತೆಪಶುಘಾತಕಾಃ ||

ರೀ ಸೆಟ್ಲಮೆಂಟಿನ ಕಂದಾಯದ ಹೊಸ ದರಗಳನ್ನು ಸಿದ್ಧಗೊಳಿಸುವುದರ ವಿಚಾರವೊಂದನ್ನು ಬಿಟ್ಟು ಉಳಿದ ವಿಚಾರಗಳಲ್ಲೆಲ್ಲಾ ಸ್ವಲ್ಪ ಹೆಚ್ಚು ಕಡಮೆಯಾಗಿ ಸರ್ಕಾರದವರೂ ಸಹ ಸರ್ವೆ ಸೂಪರಿಂಟೆಂಡೆಂಟರ ಸಲಹೆಗಳಿಗೆ ಅನುಕೂಲವಾಗಿಯೇ ಅಭಿಮತಪಡುತ್ತಾರೆ. ಸರ್ವೆ ಸೂಪರಿಂಟೆಂಡೆಂಟರ 2. ಮತ್ತು 3. ನೇ ಸಲಹೆಗಳಿಂದ ಈಗ ಕೇವಲ ಕ್ರಮವ್ಯವಹಾರಗಳಲ್ಲಿಯೇ ಕಳೆದುಹೋಗುತ್ತಿರುವ ಎಷ್ಟೋ ಕಾಲವು ಮಿಗುವಂತಾಗುತ್ತದೆ. ಅವರ 1 ಮತ್ತು 4 ನೇ ಸಲಹೆಯಿಂದ ರೀ ಸೆಟ್ಲಮೆಂಟಿನ ಏರ್ಪಾಡು ವಸ್ತುತಃ ತಾಲ್ಲೂ ಆಚರಣೆಗೆ ಬರುವುದಕ್ಕೆ ಮೊದಲೇ ರೈತರು ತಮ್ಮ ನ್ನು ಅರಿಕೆಮಾಡಿ ತಕ್ಕ ಪ್ರತಿಕ್ರಿಯೆಯನ್ನು ಹೊಂದ ವಾಗಿ ಅವರಿಗೆ ಅವಕಾಶವು ದೊರೆಯುವಂತಾಗುತ್ತದೆ. ಕಂದಾಯದ ಹೊಸ ದರಗಳನ್ನು ಸರ್ಕಾರದವರು ಅನುಮೋದಿಸಿ ವಿಧಾಯಕ ಮಾಡುವುದಕ್ಕೆ ಮುಂಚಿತವಾಗಿ ರೀ ಸೆಟ್ಲಮೆಂಟಿನ ಏರ್ಪಾಡಿನಿಂದ ತಮಗಿರುವ ಸಾ ಬಾಧಕಗಳನ್ನು ಅರಿಕೆಮಾಡಲು ರೈತರಿಗೆ ತಕ್ಕಷ್ಟು ಈಗ ಕೊಡಲ್ಪಟ್ಟಿದೆ. ಅದಪ್ರಯುಕ್ತ 1907ನೇ ವರಿ 28ನೇ ತಾರೀಖಿನ ಹುಕುಂ ಪ್ರಕಾರ ಅದೇ ತಮಗಿರುವ ಭಾಧಕಗಳನ್ನು ಅರಿಕೆಮಾಡಲು ಮತ್ತೊಮ್ಮೆ ಅವಕಾಶವನ್ನು ಕೊಡುವುದು ಅನಾ ಆದುದರಿಂದ ಇನ್ನುಮುಂದೆ ಸರ್ಕಾರದವರು ರೀ ಂಟ್ ಏರ್ಪಾಡಿನ ಪ್ರಕಾರ ಕಂದಾಯದ ಹೊಸ ನ್ನು ಅನುಮೋದಿಸಿ ವಿಧಾಯಕಮಾಡಿದ ಬಳಿಕ ಸರ್ವೇ ಸಾಧಾರಣವೆನಿಸುವ ಯಾವುದೊಂದು ಕಾರಣಕ್ಕಾಗಿಯೇ ಆಗಲೀ ಅಪೀಲು ತರಲಾಗದೆಂದೂ ಏನಿದ್ದರೂ ವ್ಯಕ್ತಿಕವಾಗಿ ಯಾರೊಬ್ಬರಿಗಾದರೂ ಇರಬಹುದಾದ ಕುಂದು ಕೊರತೆಗಳ ಮೇಲೆ ಮಾತ್ರವೇ ಅಪೀಲುಗಳುಂಟೆಂದೂ ಸರ್ಕಾರದವರು ವಿಧಿಸಿರುತ್ತಾರೆ. ಪುನರ್ವಿಮರ್ಶಿತವಾದ ಈ ನಡವಳಿಕೆಯ ಕ್ರಮವು ಕೂಡಲೇ ಆಚರಣೆಗೆ ಬರತಕ್ಕದು. ಮುಂದೆ ನಡೆಯುವ ಸೆಟ್ಲ್‌ಮೆಂಟ್ ಏರ್ಪಾಡಿನಲ್ಲಿ ಅದನ್ನೇ ಅನುಸರಿಸತಕ್ಕದ್ದು.

ರೀ ಸೆಟ್ಲ್‌ಮೆಂಟಿನ ಏರ್ಪಾಡುಗಳನ್ನು ಕಾಣಿಸಿ ಪ್ರಕಟಿಸಬೇಕಾದ ಇಸ್ತಿಹಾರ್ನಾಮೆಯ ಸರಿಯಾದ ನಮೂನೆಯು ಹೇಗಿರಬೇಕೆಂಬುದನ್ನು ಪರ್ಯಾಲೋಚಿಸಿ ಹೊಸ ವಿಧದ ನಮೂನೆಯನ್ನು ಸರ್ಕಾರದವರ ಪರಾಂಬರಿಕೆಯ ಬಗ್ಗೆ ಕಳುಹಿಸತಕ್ಕದ್ದೆಂದು ಸರ್ವೆ ಸೂಪರಿಂಟೆಂಡೆಂಟರಿಗೆ ಬರೆದಿರುತ್ತೆ. ಲ್ಯಾಂಡ್ ರೆವಿನ್ಯೂ ಕೋಡ್ 115 ಮತ್ತು 116ನೇ ಪ್ರಕರಣಗಳಲ್ಲಿನ ನಿಯಮಗಳನ್ನೊಳಗೊಂಡಿರುವಂತೆ ತಕ್ಕ ನಿಬಂಧನೆಗಳನ್ನು ಆಲೋಚಿಸಿ ನಕಲುಮಾಡಿ ಸರ್ಕಾರದವರ ಪರ್ಯಾಲೋಚನೆ ಬಗ್ಗೆ ಒಪ್ಪಿಸಬೇಕೆಂದೂ ಅವರನ್ನು ಕೇಳಲಾಗಿದೆ.

ಲ್ಯಾಂಡ್‌ರೆವಿನ್ಯೂ ಕೋಡು ತಿದ್ದುಪಾಟಾಗುವವರೆಗೂ ಕಂದಾಯದ ಹೊಸ ದರಗಳನ್ನು ಪ್ರಸಿದ್ಧಪಡಿಸುವ ವಿಚಾರದಲ್ಲಿ ಈಗಿರುವ ಆಚರಣಾಕ್ರಮವೇ ಇನ್ನು ಮುಂದೆಯೂ ಆಚರಣೆಯಲ್ಲಿರತಕ್ಕದ್ದು. ಈ ಪ್ರಕಟಣಾಕಾರ್ಯವು ಇದಕ್ಕೆ ಸಂಬಂಧಪಟ್ಟ ಆಯಾಯ ಗ್ರಾಮಗಳಲ್ಲಿ ಮುಂಚೆಯೇ ಸಕಾಲದಲ್ಲಿ ರೈತರಿಗೆ ತಿಳುವಳಿಕೆ ಕೊಟ್ಟ ಬಳಿಕ ಎಚ್ಚರಿಕೆಯಿಂದ ನೆರವೇರಿಸಲ್ಪಡತಕ್ಕದ್ದು. ಮತ್ತು ಕಂದಾಯದ ಹೊಸ ದರಗಳು ಯಾವ ವರುಷದಿಂದ ವಿಧಿಸಲ್ಪಡಬೇಕೋ ಆ ವರುಷವು ಆರಂಭವಾಗುವುದಕ್ಕೆ ಮೊದಲೇ ಈ ಪ್ರಕಟಣಾ ಕಾರ್ಯವು ಮುಗಿಸಲ್ಪಡತಕ್ಕದ್ದು.

ಸಾಕ್ಷಿ ಭತ್ತೆಗಳು.

ಸಿವಿಲ್ ಕೋರ್ಟುಗಳಿಗೆ ಹಾಜರಾಗುವ ಸಾಕ್ಷಿಗಳಿಗೆ ಈ ಕೆಳಗಿನಕಂಡ ಮೇರೆಗೆ ಭತ್ತೆಯು ಪಾವತಿಯಾಗತಕ್ಕದ್ದೆಂದು ಸರ್ಕಾರದವರು ಅಪ್ಪಣೆಮಾಡಿರುತ್ತಾರೆ.—

ಸಾಕ್ಷಿಗಳನ್ನು ನಾಲ್ಕು ಪಂಗಡವಾಗಿ ವಿಂಗಡಿಸಿರುತ್ತಾರೆ.—ಮಾಹೆಯಾನ ರೂ. 250 ಅಥವ ಮೇಲ್ಪಟ್ಟು ಉತ್ಪತ್ತಿಯುಳ್ಳವರು ಒಂದನೆ ದರ್ಜೆಯವರು; ಮಾಹೆಯಾನ ರೂ. 100 ಅಥವಾ ಮೇಲ್ಪಟ್ಟು ಆದರೆ 250 ರೂ. ಒಳಗೆ ಉತ್ಪತ್ತಿ ಇದ್ದರೆ ಎರಡನೆ ದರ್ಜೆಯವರು; ಮಾಹೆಯಾನ 50 ಅಥವ ಮೇಲ್ಪಟ್ಟು ಆದರೆ 100 ರೂ. ಒಳಗೆ ಉತ್ಪತ್ತಿ ಇದ್ದರೆ ಮೂರನೆ ದರ್ಜೆಯವರು; ಮಾಹೆಯಾನ 50 ರೂ. ಗಳಿಗೆ ಕಡಿಮೆ ಉತ್ಪತ್ತಿಯುಳ್ಳವರು ನಾಲ್ಕನೆ ದರ್ಜೆಯವರು.

ಒಂದನೆ ದರ್ಜೆಯವರಿಗೆ ರೈಲ್ ಯಾ ಮೋಟಾರ್ ಬಸ್ ನಲ್ಲಾದರೆ ಜಡ್ಜಿಯ ಇಷ್ಟಾನುಸಾರ ಸಿಂಗಲ್ ಫಸ್ಟ್‌ಕ್ಲಾಸ್ ಅಥವ ಸಿಂಗಲ್ ಸೆಕೆಂಡ್‌ಕ್ಲಾಸ್; ಬಾಡಿಗೆ ಅನುಕೂಲವಿಲ್ಲದಿರುವ ರಸ್ತೆಯಲ್ಲಿ ಮೈಲಿಗೆ 8 ಆಣೆಯಂತೆ ಬಾಡಿಗೆ; ದಿನಕ್ಕೆ ಒಂದೂವರೆ ರೂಪಾಯಿನಂತೆ ಊಟದ ಖರ್ಚು.

ಎರಡನೆ ದರ್ಜೆಯವರಿಗೆ—ರೈಲಿನಲ್ಲಿ ಸಿಂಗಲ್ ಸೆಕಂಡ್ ಕ್ಲಾಸ್; ಮೋಟಾರ್ ಬಸ್‌ನಲ್ಲಿ ಸಿಂಗಲ್ ಸೆಕಂಡ್‌ಕ್ಲಾಸ್ (ಎರಡೇ ತರಗತಿ ಇರುವುದಾದರೆ ಕಡೆ ತರಗತಿ); ರಸ್ತೆಯಲ್ಲಿ ಮೈಲಿಗೆ ನಾಲ್ಕಾಣೆಯಂತೆ ಬಾಡಿಗೆ; ದಿನಕ್ಕೆ 12 ಆಣೆಯಂತೆ ಊಟದ ಖರ್ಚು.

ಮೂರನೆ ದರ್ಜೆಯವರಿಗೂ ನಾಲ್ಕನೆಯ ದರ್ಜೆಯವರಿಗೂ ರೈಲಿನಲ್ಲಿ ಸಿಂಗಲ್ ಕಡೇತರಗತಿ ಛಾರ್ಜು, ಮೋಟಾರ್ ಬಸ್‌ನಲ್ಲಿ ಸಿಂಗಲ್ ಕಡೆ ತರಗತಿ ಛಾರ್ಜು; ರಸ್ತೆಯಲ್ಲಿ ಮೂರನೆ ದರ್ಜೆಯವರಿಗೆ ಮೈಲಿಗೆ 2 ಆಣೆ. ನಾಲ್ಕನೆ ದರ್ಜೆಯವರಿಗೆ ನಡೆಯಬಲ್ಲವರಿಗೆ ಮೈಲಿಗೆ ಅರ್ಧಆಣೆ; ನಡೆಯಲಾರದವರಿಗೆ ಮೈಲಿಗೆ ಒಂದಾಣೆ; ಎರಡು ದರ್ಜೆಯವರಿಗೂ ದಿನಕ್ಕೆಂಟಾಣೆಯಂತೆ ಊಟದ ಖರ್ಚು.

ಜಡ್ಜಿಗಳಿಗೆ ಯುಕ್ತತೋರಿದಾಗ ಮೇಲೆ ಗೊತ್ತುಮಾಡಿರುವುದಕ್ಕಿಂತ ಹೆಚ್ಚಾಗಿ ಕೊಡಿಸಬಹುದು. ವೈದ್ಯ. ಮತ್ತು ಲಾ ಮುಂತಾದವಕ್ಕೆ ಸಂಬಂಧಪಟ್ಟವರಿಗೆ ಅವರ ಗೈರ್ಹಾಜರಿಯಿಂದ ಉಂಟಾಗುವ ನಷ್ಟವನ್ನು ನೋಡಿ ಜಡ್ಜಿಗಳು ಸ್ಪೆಷಲ್ ಅಲೋಯನ್ಸನ್ನು ಕೊಡಿಸಬಹುದು. ಯೂರೋಪಿಯನ್ ಮತ್ತು ಈಸ್ಟ್ ಇಂಡಿಯನ್ ಜನರಿಗೆ ಮೇಲೆ ಹೇಳಿರುವುದರ ಎರಡರಷ್ಟು ಊಟದ ಖರ್ಚು ಕೊಡಲ್ಪಡುವುದು. ಸಾಕ್ಷಿಯು ಕೋರ್ಟ್ ಇರುವ ಸ್ಥಳದಲ್ಲಿಯೇ ಇದ್ದರೆ ಊಟದ ಖರ್ಚಿಗೆ ಬದಲಾಗಿ ಯುಕ್ತತೋರಿದ ಸವಾರಿ ಬಾಡಿಗೆಯನ್ನು ಜಡ್ಜಿಯು ಕೊಡಿಸಬಹುದು.

ನಾಲ್ಕನೆ ದರ್ಜೆಯ ಸಾಕ್ಷಿಗಳು ಕೋರ್ಟಿಗೆ ಐದು ಮೈಲಿಗಳೊಳಗಾಗಿ ಇದ್ದರೆ ಅವರಿಗೆ ಊಟದ ಖರ್ಚಿಂದಲ್ಲದೆ ಪ್ರಯಾಣದ ಖರ್ಚು ದೊರೆಯಲಾರದು. ಆದರೆ ಅನಾರೋಗ್ಯದಿಂದಲೂ, ವೃದ್ಧಾಪ್ಯದಿಂದಲೂ ನಡೆಯಲಾರದೆ ಬಂಡಿಯನ್ನು ಮಾಡಿಕೊಂಡು ಬಂದಿದ್ದರೆ, ಮೈಲೇಜು ಅಥವಾ ನ್ಯಾಯವಾದ ಖರ್ಚುಗಳಲ್ಲಿ ಯಾವದು ಕಡಿಮೆಯೋ ಅದನ್ನು ಕೊಡಲಾಗುವುದು.

ಭರತಖಂಡದ ವೃತ್ತಾಂತಗಳು.

ಪಂಜಾಬಿನಲ್ಲಿ ಪ್ಲೇಗುರೋಗ ಪ್ರಾಪ್ತವಾಗಿ ಸಾವಿರಾರು ಮರಣಗಳಾಗಿರುವುದರಿಂದ ಜನರು ದಿಗಿಲುಬಿದ್ದಿದ್ದಾರೆ.

ಕಲಕತ್ತಾ ವಿಶ್ವವಿದ್ಯಾಲಯದ ವೈಸ್‌ಚಾನ್ಸಲರ್ ಉದ್ಯೋಗವನ್ನು ವಹಿಸಿಕೊಳ್ಳಬೇಕಾಗಿ ಸರ್ ಸುರೇಂದ್ರನಾಥ ಬಾನರ್ಜಿಯವರು ಪ್ರಾರ್ಥಿಸಲ್ಪಟ್ಟಿರುತ್ತಾರೆ.

ಬೊಂಬಾಯಿನಗರವಾಸಿಗಳಾದ ಸ್ತ್ರೀಯರು ಒಂದು ಸಭೆ ಸೇರಿ ಸ್ತ್ರೀಯು ಪ್ರೆಸಿಡೆನ್ಸಿ ಆನರರಿ ಮ್ಯಾಜಿಸ್ಟ್ರೇಟಾಗಿ ನಿಯಮಿಸಲ್ಪಟ್ಟುದರಿಂದ ತಮಗುಂಟಾದ ಆನಂದವನ್ನು ಪ್ರದರ್ಶಿಸಿದರು.

ಕಾಶಿಯಲ್ಲಿ ಜರುಗಿದ ಹಿಂದೂ ಮಹಾಸಭೆಯಲ್ಲಿ, ಅಸ್ಪೃಶ್ಯರು ಸಕಲರೂ ಉಪಯೋಗಿಸುವ ಬಾವಿಗಳ ಬಳಿಗೂ, ಸಭೆಗಳಿಗೂ, ಪಾಠಶಾಲೆಗಳಿಗೂ, ದೇವಾಲಯಗಳಿಗೂ ಪ್ರವೇಶಿಸಲು ಅಡ್ಡಿಮಾಡಕೂಡದೆಂದು ಆಗಿರುವ ನಿರ್ಧಾರವು ಪ್ರಕಟಿಸಲ್ಪಟ್ಟಿರುವುದು.

ಬೊಂಬಾಯಿನ ಸರ್ ಇಬ್ರಾಹಿಂಭಾಯಿ ಕರೀಂ ಭಾಯಿಯವರು ತಮ್ಮ ಮಹಮ್ಮದೀಯರ ಪ್ರೌಢವಿದ್ಯಾಭ್ಯಾಸ ಪ್ರೋತ್ಸಾಹಕ್ಕಾಗಿ ಬೊಂಬಾಯಿನ ವಿಶ್ವವಿದ್ಯಾಲಯಕ್ಕೆ 10 ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು. ಇದರ ವೃದ್ಧ್ಯಂಶದಿಂದ ವಿದ್ಯಾರ್ಥಿಗಳಿಗೆ ವೇತನವು ಕೊಡಲ್ಪಡುವುದು.

ಪಂಡಿತ ಜವಹರಲಾಲ್‌ನೆಹರು ಇವರು ಅಲಹಾಬಾದು ಮುನ್ಸಿಪಲ್ ಬೋರ್ಡಿನ ಛೇರ್ಮನ್ ಉದ್ಯೋಗವನ್ನು ತ್ಯಜಿಸಿಬಿಟ್ಟುದಾಗಿ ತಿಳಿಯಬಂದಿದೆ. ಪ್ರಜಾಸೇವಾ ಕೆಲಸಗಳು ಹೆಚ್ಚುತ ಬಂದುದರ ಮೇಲೆ ಮ|| ನೆಹರುಯವರು ಈ ಛೇರ್ಮನ್ ಉದ್ಯೋಗವನ್ನು ತ್ಯಜಿಸಬೇಕೆಂದು ಕೆಲಕಾಲದಿಂದಲೂ ಅಭಿಪ್ರಾಯಪಟ್ಟಿದ್ದು ಈಚೆಗೆ ಆಕ್ಟ್ರಾಯಿ ಶಾಖೆಯ ಆಡಳಿತದೇರ್ಪಾಟು ಸರಿಬೀಳದೆಹೋಗಿ ಮನಸ್ಸಿಗೆ ಜುಗುಪ್ಸೆಯುಂಟಾದುದರ ಮೇಲೆ ಉದ್ಯೋಗವನ್ನು ಬಿಟ್ಟಿರುವುದಾಗಿ ಊಹಿಸಲ್ಪಟ್ಟಿದೆ.

ಟ್ರಿವ್ಯಾಂಡರಮ್ಮಿನಲ್ಲಿ ಈಶ್ವರದೇವಾಲಯದಲ್ಲಿ ಬ್ರಹ್ಮೋತ್ಸವವು ಬಹಳ ವೈಭವದಿಂದ ನಡೆದು ಆಚೆ ಶುಕ್ರವಾರ ರಥೋತ್ಸವವು ಜರುಗಿತು. ಮಹಾತ್ಮ ಗಾಂಧಿಯವರು ರಾಟೆಯಲ್ಲಿ ನೂಲನ್ನು ತೆಗೆಯುವ ರೀತಿಯಲ್ಲಿ ಮಾಡಲ್ಪಟ್ಟಿರುವ ಅವರ ಪ್ರತಿಮೆಯು ರಥದ ಮುಂಭಾಗದಲ್ಲಿರಿಸಲ್ಪಟ್ಟು ರಥವು ಮಹಾತ್ಮ ಗಾಂಧಿಕಿ ಜೈ ಎಂಬ ಕೋಲಾಹಲಧ್ವನಿಯಿಂದ ಎಳೆಯಲ್ಪಟ್ಟಿತು; ಮತ್ತು ರಥೋತ್ಸವಾನಂತರ ಪಂಚಮರಿಗೆ ಸ್ವಾಮಿಯ ಪ್ರಸಾದವು ಕೊಡಲ್ಪಟ್ಟಿತು. ಈ ಪ್ರಕಾರ ಇದಕ್ಕೆ ಮೊದಲು ಎಂದೂ ಕೊಡಲ್ಪಟ್ಟಿದ್ದುದಿಲ್ಲವು.

ಪಂಜಾಬಿನಲ್ಲಿ ಸ್ಥಾಪಿತವಾಗಿರುವ ವಿಧವಾವಿವಾಹ ಸಹಾಯಕ ಸಭೆಯವರ ಮತ್ತು ಭರತಖಂಡದ ಇತರ ಕಡೆಯಿರುವ ಶಾಖಾಸಭೆಗಳ ಪ್ರೋತ್ಸಾಹದಿಂದ ಕಳೆದ ಮಾರ್ಚಿ ತಿಂಗಳೊಂದರಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು 107 ವಿಧವಾವಿವಾಹಗಳು ಆಗಿರುತ್ತವೆ. ಮತ್ತು 1924 ನೇಯ ಜನವರಿ ತಾ|| 1 ರಿಂದ ಮಾರ್ಚಿ ತಿಂಗಳ ಕಡೆಯವರೆಗೆ ಬ್ರಾಹ್ಮಣರು 76, ಕ್ಷತ್ರಿಯರು 41, ಆರೊರ 59, ಅಗರ್ವಾಲ 35, ರಜಪೂತರು 26, ಕಾಯಸ್ತರು 6 ಇತರರು 38 ಒಟ್ಟು 281 ವಿಧವಾವಿವಾಹಗಳು ನಡೆದಿದ್ದುವು. ಇವುಗಳಲ್ಲಿ ಪಂಜಾಬಿನಲ್ಲಿ 157, ವಾಯವ್ಯದಿಕ್ಕಿನ ಎಲ್ಲೆಕಟ್ಟಿನಲ್ಲಿ 2, ದಿಲ್ಲಿಯಲ್ಲಿ 15, ಸಂಯುಕ್ತ ಪ್ರಾಂತಗಳಲ್ಲಿ 87, ಸಿಂದಿನಲ್ಲಿ 3, ಬಂಗಾಳಾದಲ್ಲಿ 4, ಬೊಂಬಾಯಿನಲ್ಲಿ 3, ಮಧ್ಯಹಿಂದೂ ಸ್ಥಾನದಲ್ಲಿ 8. ರಾಜಪುಟಾಣದಲ್ಲಿ 1 ಮದ್ರಾಸಿನಲ್ಲಿ 1 ಈ ಪ್ರಕಾರವಾಗಿರುತ್ತವೆ.

ವಿದೇಶದ ವೃತ್ತಾಂತಗಳು.

ದಕ್ಷಿಣಾಫ್ರಿಕಾದಲ್ಲಿ ಭಾರತೀಯರು ತಲೆಗಂದಾಯವನ್ನು ಕೊಡಲು ತಿರಸ್ಕರಿಸಿದುದರಿಂದ ಹಿಂದೆ ಶಾಸನಸಭಾಸ್ತರರಾಗಿದ್ದ ಮ|| ಜೋಷಿ ಮೊದಲಾದ ಮುಖಂಡರು ಕಾರಾಗೃಹಕ್ಕೆ ಕಳುಹಲ್ಪಟ್ಟು ಇತರರಆಸ್ತಿಯು ಜಪ್ತಿಮಾಡಲ್ಪಟ್ಟಿತು.

ಅಮೇರಿಕೆಯಲ್ಲಿ ಆಸ್ತಿಯ ಬೆಲೆಯು 1912 ರಲ್ಲಿ ರೂ. 6,49,87,50,00,000 ಇದ್ದುದು ಈಗ 11,19,07,50,00,000 ರೂ.ಗೆ ಹೆಚ್ಚಿರುತ್ತದೆ ಅಂದರೆ ಪ್ರತಿಯೊಬ್ಬ ಸ್ತ್ರೀ ಪುರುಷ ಮತ್ತು ಮಗುವಿನ ಆಸ್ತಿಯು ಸರಾಸರಿ 6750 ರೂ.ಯಿಂದ 10,050 ರೂ.ಗೇರಿರುತ್ತದೆ. ಈ ರೀತಿಯಾಗಿ ಎಲ್ಲಾ ವಸ್ತುವಿನ ಬೆಲೆಯೇರಿರುವುದಾದರೂ ದನಕರ, ಕುದುರೆ ಕುರಿ ಮೊದಲಾದವುಗಳ ಬೆಲೆಯು ಮಾತ್ರ 21,75,00,00,000 ರೂ. ಯಿಂದ 20,25,00,45,000 ರೂ.ಗೆ ಇಳಿದಿರುತ್ತದೆ. ಕೃಷಿಯ ಬೆಲೆಯು 56,32,50,00,000 ರೂ. ಯಿಂದ69,66,00,00,000 ರೂ.ಗಳಿದಿರುತ್ತದೆ ಎಂದು ವ್ಯಾಪಾರ ಶಾಖೆಯವರು ಪ್ರಕಟಿಸಿರುತ್ತಾರೆ.

ಹಡಗಿನಲ್ಲಿ ಬಾಣಸಿಗನಾಗಿದ್ದ ವಾಲ್ಟರ್ ನೀಲ್ಸನ್ ಎಂಬುವವನು ಸತ್ತುಹೋದುದರಿಂದ ಅವನ ಅಪ್ರಾಪ್ತವಯಸ್ಕರಾದ ಮಕ್ಕಳ ಪರವಾಗಿ ಆಸ್ತಿಯನ್ನು ರೂಢಿಸಲು ಮತ್ತೊಬ್ಬನಿಗೆ ನ್ಯೂಜಿಲ್ಯಾಂಡಿನ ಸುಪ್ರೀಂ ಕೋರ್ಟಿನವರು 15 ವರ್ಷಗಳ ಕೆಳಗೆ ಅಪ್ಪಣೆಕೊಟ್ಟಿದ್ದರು. ಈಗ ಆ ವಾಲ್ಟರ್‌ನೀಲ್ಸನ್ ಎಂಬುವವನು ಜೀವಿಸಿರುವುದಾಗಿಯೂ ಅವನೇ ಮೈನರುಮಕ್ಕಳ ಪೋಷಕನಾಗಿರಬೇಕಾಗಿಯೂ ಅದೇ ಕೋರ್ಟಿನವರು ನಿರ್ಧರಿಸುವರು.

ಇಂಗ್ಲೆಂಡಿನಲ್ಲಿ ಡೆವ್ಸಿ, ನಾಟ್ಸುಪ್ರದೇಶಗಳಲ್ಲಿ ಭೂಕಂಪನವಾಗಿ ಭವನಗಳಿಗೆ ಅಪಾಯವಾಯಿತು; ದೇವಾಲಯಗಳಕೆಲ ಶಿಖರಗಳು ಮುರಿದು ಕೆಳಗೆಬಿದ್ದುವು; ಜನರು ಓಡಿಹೋದರು.

ನೈಸಿನಲ್ಲಿ ಜೋಸ್ಸಿರ್ವಿಜೇಯುವರ ಸ್ಮಾರಕಚಿಹ್ನರೂಪವಾಗಿ ಮತಸಂಬಂಧ ಉತ್ಸವವು ಜರುಗುತ್ತಿರುವಾಗ್ಗೆ ವ್ಯಾಸಿಸ್ಟರಿಗೂ ಕಮ್ಯೂನಿಸ್ಟರಿಗೂ ಕಲಹ ವುಂಟಾಗಿ ಬಹಳ ಮಂದಿಗೆ ಪೆಟ್ಟುಬಿದ್ದುದರ ಮೇಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಪೊಲೀಸರು ದೊಂಬಿಯನ್ನು ಶಮನಮಾಡಿ ಕೆಲವರನ್ನು ಸೆರೆಹಿಡಿದರು.

ಸ್ಕಾಟ್‌ಲೆಂಡಿಗೆ ಸೇರಿದ ದಕ್ಷಿಣಭಾಗದ ಎರಡು ದ್ವೀಪದಲ್ಲೂ ಉತ್ತರಭಾಗದ ಒಂದು ದ್ವೀಪದಲ್ಲೂ ಒಬ್ಬೊಬ್ಬ ಮನುಷ್ಯ ಮಾತ್ರ ವಾಸವಾಗಿರುವುದಾಗಿಯೂ, ಇನ್ನು ಆರು ದ್ವೀಪಗಳಲ್ಲಿ ಇಬ್ಬರು ಮನುಷ್ಯರಂತೆ ವಾಸವಾಗಿರುವುದಾಗಿಯೂ ಸ್ಕಾಟ್‌ಲೆಂಡಿನ ಹೊಸ ಜನಗಣತಿಯ ವರದಿಯಿಂದ ವ್ಯಕ್ತವಾಗುತ್ತದೆ.

ನ್ಯೂಜಿಲೆಂಡಿನಲ್ಲಿ ಸಾವಿರಾರು ಜನ ರೈಲ್ವೆ ಕೆಲಸಗಾರರು ಹೆಚ್ಚು ಸಂಬಳವನ್ನು ಕೊಡಬೇಕೆಂದು ಮುಷ್ಕರಹಿಡಿದು ಕೆಲಸಕ್ಕೆ ಬಾರದೆ ನಿಂತುಹೋಗಿರುವುದರಿಂದ, ರೈಲ್ವೆಬಂಡಿಗಳ ಸಂಚಾರಕ್ಕೆ ಅವಕಾಶವಿಲ್ಲದೆ ಅಂಚೆಯು ಊರಿಂದ ಊರಿಗೆ ಮೋಟಾರುಬಂಡಿಗಳಲ್ಲಿ ಸಾಗಿಸಲ್ಪಡುತ್ತಿದೆ, ಮತ್ತು ಜನರು ಸಹ ಮೋಟಾರುಬಂಡಿಗಳಲ್ಲಿ ಪ್ರಯಾಣಮಾಡುತ್ತಿದಾರೆ. ಇದರಿಂದ ಅನೇಕ ಕೆಲಸಗಳಿಗೂ ಕಾರ್ಯಾಲಯಗಳಿಗೂ ಅಡಚಣೆಯಾಗಿ ಬಹಳ ನಷ್ಟ ಕಷ್ಟಗಳಿಗೆ ಕಾರಣವಾಗಿದೆ.

ರೇಸಿಸೆಗ್ಲಿ ಎಂಬ ಫ್ರೆಂಚ್ ಸೈನಿಕನು 1914ರಲ್ಲಿ ಯುದ್ಧಮಾಡುತ್ತಿರುವಾಗ್ಗೆ ಅಂಗಹೀನನಾಗಲು ಮುಂದೆ ಸೈನಿಕೋದ್ಯೋಗಕ್ಕೆ ಅನರ್ಹನೆಂದು ತೆಗೆದುಹಾಕಲ್ಪಟ್ಟುದರ ಮೇಲೆ ಅವನು ಅಂದಿನಿಂದ ರಣರಂಗಕ್ಕೆ ಬರಲಿಲ್ಲವು. ಆದರೆ ಕಳೆದ ತಾ|| 19 ರಲ್ಲಿ ಯಾವುದೋ ಒಂದು ಕೆಲಸಕ್ಕಾಗಿ ರೋಂಬರು ವಿಲ್ಲರ್ಸು ಎಂಬ ಪಟ್ಟಣಕ್ಕೆ ಹೋಗಿದ್ದು ಅಲ್ಲಿ ಯುದ್ಧದಲ್ಲಿ ಮಡಿದ 12ನೆ ಕಾಲ್ಬಲದ ಪಟಾಲಮ್ಮಿನವರ ಸಮಾಧಿಗಳನ್ನು ನೋಡಲು ಹೋಗಿ ಅಲ್ಲಿ ತನ್ನ ಹೆಸರು ಬರೆಯಲ್ಪಟ್ಟಿದ್ದ ಸಮಾಧಿಯನ್ನು ಕಂಡು ಆಶ್ಚರ್ಯಚಕಿತನಾದನು. ಆಗ ಅವನ ಹೆಸರಿನ ಸಮಾಧಿಯು ತೆಗೆದು ಹಾಕಲ್ಪಡತಕ್ಕದ್ದಾಗಿ ಪ್ರಭುತ್ವಾಧಿಕಾರಿಗಳಿಗೆ ತಿಳುಹಿದನಂತೆ.

ನ್ಯೂಫೌಂಡ್‌ಲೆಂಡಿನ ಮಂತ್ರಿಯಾಗಿದ್ದ ಸರ್ ರಿಚರ್ಡ್ ಸ್ವೈರ್ಸು 20000 ಡಾಲರು ಹಣವನ್ನು ಅಪಹರಿಸಿದನೆಂಬ ಅಪರಾಧದಮೇಲೆ ಸೆರೆಹಿಡಿಯಲ್ಪಟ್ಟಿರುವನಲ್ಲದೆ ಹಿಂದಣ ವ್ಯವಸಾಯ ಮಂತ್ರಿಯು 4000 ಡಾಲರುಗಳನ್ನೂ, ಮದದ್ರವಶಾಖಾಧಿಕಾರಿಯು 30000 ಡಾಲರುಗಳನ್ನೂ, ಸರ್ಕಾರಭೂಮಿಯ ಮೇಲ್ವಿಚಾರಣಾಧಿಕಾರಿಯು 40000 ಡಾಲರುಗಳನ್ನೂ ಅಪಹರಿಸಿದ್ದರೆಂದು ಸೆರೆಹಿಡಿಯಲ್ಪಟ್ಟಿದ್ದು ಹೊಣೆಯಮೇಲೆ ಬಿಡಲ್ಪಟ್ಟಿರುವರು. ಪೋಸ್ಟಾಫೀಸು ಅಕೌಂಟೆಂಟ್ ಜನರಲ್ಲು 3000 ಡಾಲರನ್ನು ದುರುಪಯೋಗಪಡಿಸಿ ಕನಡಾಕ್ಕೆ ಓಡಿಹೋದನು. ತಪ್ಪುಸಂಗತಿಯನ್ನು ಹೇಳಿ ಮೋಸದಿಂದ 12000 ಡಾಲರುಗಳನ್ನು ತೆಗೆದುಕೊಂಡಿರುತ್ತಾನೆಂದು ಹಿಂದಣ ದಂಡಾಧಿಕಾರಿಯು ಕೂಡ ಸೆರೆಹಿಡಿಯಲ್ಪಟ್ಟಿರುವನು.

ಕ್ವಿರ್ಕ್ ಎಂಬುವನ ಮೇಲೆ ಅವನ ಮೂವರು ಹೆಂಡತಿಯರು ತಮ್ಮನ್ನು ಅನಾಥರನ್ನಾಗಿಮಾಡಿ ಬಹಳ ದುರ್ದೆಸೆಗೆ ಗುರಿಮಾಡಿದನೆಂದು ಬರ್ಲಿನ್ ಕೋರ್ಟಿನಲ್ಲಿ ವಿವಾದವನ್ನು ಹೂಡಿದ್ದು ವಿಚಾರಣೆಯ ಕಾಲದಲ್ಲಿ ಹಹಳ ಕೃಶಳಾದ ಮೊದಲನೆಯವಳು ಕ್ವಿರನ್ನನ್ನು ರಷ್ಯಾದಲ್ಲಿ ವಿವಾಹಮಾಡಿಕೊಂಡು ಅಲ್ಲಿಂದ ಇಬ್ಬರೂ ಜರ್ಮನಿಗೆ ಬಂದೆವು, ಆ ಸಮಯದಲ್ಲಿ ಪ್ರಾರಂಭವಾದ ಯುದ್ಧಕ್ಕೆ ಹೋದವನು ಹಿಂದಿರುಗಿ ಬರಲಿಲ್ಲವೆಂದೂ, ಎರಡನೆಯವಳು ಅಪರಾಧಿಯಾದ ಕ್ವಿರನ್ನು ಬಹಳ ಸುಳ್ಳು ಮತ್ತು ದ್ರೋಹಿ ಅಲ್ಲದೆ ತನ್ನನ್ನು ಬಹಳ ನೀಚವಾಗಿ ಪರಿಗಣಿಸುತ್ತಿದ್ದುದರಿಂದ ತನ್ನಬಾಳು ನರಕಪ್ರಾಯವಾಗಿರುವಪ್ರಯುಕ್ತ ಅವನಿಂದ ಬಿಡುಗಡೆಯನ್ನು ಹೊಂದಬೇಕಾಗಿದೆ ಎಂದೂ, ಮೂರನೆಯವಳು ಕ್ವಿರನ್ನಿನ ಅಪರಾಧವು ಅಕ್ಷಮ್ಯವಾದುದೆಂದೂ ಹೇಳಿದರು, "ನೀನು ಈ ಮೂವರು ಸ್ತ್ರೀಯರನ್ನು ಬಹಳ ಕ್ರೂರವಾಗಿ ಕಂಡು ಅವರ ಬಾಳನ್ನು ಕೆಡಿಸಿದುದರಿಂದ ನಿನಗೆ ಕಠಿಣ ಕಾರಾಗೃಹವಾಸದ ಶಿಕ್ಷೆಗೆ ಗುರಿಮಾಡಿರುತ್ತೇನೆ" ಎಂದು ನ್ಯಾಯಾಧೀಶನು ಹೇಳಿದುದನ್ನು ಕೇಳಿ ಕ್ವಿರನ್ನು ಮೂರ್ಛಿತನಾಗಲು ಆ ಮೂವರು ಹೆಂಡಿರೂ ಅವನಬಳಿಗೆ ಪ್ರಜ್ಞೆಯಿಲ್ಲದೆ ನುಗ್ಗಿ ಅಯ್ಯೋ ನಮ್ಮ ಪ್ರಾಣಪದಕವೇ ನಿನ್ನನ್ನು ನಾವೆಲ್ಲರೂ ಪ್ರೀತಿಸುತ್ತಿದ್ದೆವಲ್ಲಾ ಎಂದು ಹೇಳುತ ರೋಧಿಸುತ್ತಿರಲು ಕೋರ್ಟಿನವರು ಅವರನ್ನು ಕೋರ್ಟಿನಿಂದ ಹೊರಗೆ ಕಳುಹಬೇಕಾಯಿತಂತೆ.

ಒಂದು ಸಂಕುಚಿತವ್ಯಕ್ತಿಯ ನೀಚಬುದ್ಧಿ.

ಇದೇ ತಿಂಗಳ ತಾ|| 13ನೆಯ ಸ್ಟಾರ್ ಪತ್ರಿಕೆಯಲ್ಲಿ "ಬ್ರಾಹ್ಮಣೇಸ್ವಭಾವ" ಎಂಬ ಶಿರೋಲೇಖದಿಂದ ಪ್ರೊಫೆಸರ್ ವಿರೂಪಾಕ್ಷ ಒಡೆಯರು ಒಂದು ಲೇಖವನ್ನು ಪ್ರಕಾಶಪಡಿಸಿರುವರು. ಅದರಲ್ಲಿ ಒಬ್ಬಬ್ರಾಹ್ಮಣವ್ಯಕ್ತಿಯು ಮತದ್ವೇಷದಿಂದ ಬರೆದಿರುವ "ಶೂದ್ರಕಮಲಾಕರ" ಎಂಬ ಗ್ರಂಥದ ಅಧಿಕಾರಪ್ರಕರಣದಲ್ಲಿ "ಶುಕ್ಲದಂತಾಜಿನಾಖ್ಯಾಕ್ಷ ಮುಂಡಾಃ ಕಾಷಾಯವಾಸಸಃ | ಶೂದ್ರಾಧರ್ಮಂಚರಿಷ್ಯಂತಿ ಯುಗಾಂತೇ ಸಮುಪಸ್ಥಿತೇ | ತಾಡಯಂತಿದ್ವಿಜೇಂದ್ರಾಂಶ್ಚ ಶೂದ್ರಾ ರಾಜೋಪಜೀವಿನಃ || ಅರ್ಥ—ಕಲಿಯುಗದಲ್ಲಿ ತಲೆಬೋಳಿಸಿಕೊಂಡ ಬೆಳ್ಳನಹಲ್ಲುಳ್ಳ ಕಾಷಾಯವಸ್ತ್ರವನ್ನು ಧರಿಸಿದ ಜಿನ (ಜೈನ) ಎಂಬ ಹೆಸರುಳ್ಳ ಶೂದ್ರರು ಧರ್ಮವನ್ನು ಆಚರಿಸುವರು. ಇದಲ್ಲದೆ ಈ ಶೂದ್ರರಾದ ಜೈನರು ರಾಜೋಪಜೀವಿಗಳಾಗಿ ಬ್ರಾಹ್ಮಣರನ್ನು ಬಾಧಿಸುವರು" ಇತ್ಯಾದಿ ಬಹುನೀಚತನದಿಂದ ಜೈನರನ್ನು ನಿಂದಿಸಿರುವನೆಂದು ಪ್ರೊಫೆಸರ್‌ರವರು ಕಂಡುಹಿಡಿದು ಅದನ್ನು ಪ್ರಕಾಶಪಡಿಸಿ ನಮಗೆ ತುಂಬಾ ಉಪಕಾರವನ್ನು ಮಾಡಿರುತ್ತಾರೆ.

ಜೈನಮತವು ಕಲಿಕಾಲದಲ್ಲಿ ಹುಟ್ಟಿದುದೋ ಸನಾತನವಾದುದೋ ಎನ್ನುವುದಕ್ಕೆ ಋಗ್ವೇದ, ಯಜುರ್ವೇದ, ದಕ್ಷಿಣಾಮೂರ್ತಿಸಹಸ್ರನಾಮ, ವೈಶಂಪಾಯನ ಸಹಸ್ರನಾಮ, ವ್ಯಾಸಕೃತಭಾಷ್ಯ, ಪ್ರಭಾಸಪುರಾಣ ಮೊದಲಾದ ಗ್ರಂಥಗಳಲ್ಲಿರುವ ಕೆಲವು ವಾಕ್ಯಗಳೇ ಪ್ರಮಾಣಗಳಾಗಿವೆ. ಆ ವಾಕ್ಯಗಳನ್ನು ಅವಶ್ಯಬಿದ್ದಾಗ ಪ್ರಕಾಶಪಡಿಸುವೆನು. ಈ ಮತದ ಸನಾತನತ್ವವನ್ನು ಕುರಿತು ಮೇಲೆ ಹೇಳಿದ ಗ್ರಂಥಗಳೇ ಸಾಕ್ಷಿಯಾಗಿರುವುದರಿಂದ ಅದನ್ನು ಸಿದ್ಧಮಾಡುವುದಕ್ಕೆ ನಾನು ಹೆಚ್ಚು ಶ್ರಮಪಡಬೇಕಾದುದಿಲ್ಲ. ಈಗ ಜೈನರು ಶೂದ್ರರೆಂದು ಹೇಳಿರುವ ಮಾತು ಎಷ್ಟರಮಟ್ಟಿಗೆ ನಿರಾಧಾರವಾದುದೆಂಬುದನ್ನು ವಾಚಕರಿಗೆ ತೋರಿಸಿಕೊಡುವುದೇ ಈ ಲೇಖದ ಮುಖ್ಯೋದ್ದೇಶವಾಗಿದೆ.

ಮೊಟ್ಟಮೊದಲು ಶೂದ್ರತ್ವಸೂಚಕವಾದ ಗುಣಗಳಾವುವೆಂಬುದನ್ನು ನಾವು ವಿಚಾರಮಾಡಿದರೆ ಪರೋತ್ಕರ್ಷಾಸಹನ, ಮೋಸಗಾರಿಕೆ, ವ್ಯಭಿಚಾರ, ನಿರ್ದಯೆ, ಯಾವುದೋ ನೆಪದಿಂದ ಅಭಕ್ಷ್ಯಭಕ್ಷಣ, ಅಪೇಯಪಾನ, ಅಗಮ್ಯಗಮನ, ಮೊದಲಾದುವುಗಳೆಂದು ವಿಚಾರಪರರಿಗೆ ಗೊತ್ತಾಗುವುದು. ಈ ಗುಣಗಳು ವಿಶೇಷವಾಗಿ ಯಾರಲ್ಲಿರುತ್ತವೆಂಬುದನ್ನು ಆ ಗ್ರಂಥಕರ್ತನೇ ವಿಚಾರಮಾಡಲಿ. ಈ ಗುಣಗಳು ಮಹಾಪಾಪಕರವಾದುವೆಂದು ಜೈನಸಿದ್ಧಾಂತವು ಹೇಳುತ್ತದೆ. ಸಪ್ತವ್ಯಸನಗಳನ್ನು ತ್ಯಜಿಸುವುದೂ, ಮದ್ಯಮಾಂಸಮಧುತ್ಯಾಗವೂ, ಅಹಿಂಸಾ, ಸತ್ಯ, ಅಚೌರ್ಯ, ಪರಸ್ತ್ರೀತ್ಯಾಗ, ಪರಿಮಿತಪರಿಗ್ರಹ ಈ ಗುಣಗಳನ್ನು ಜೈನನೆನಿಸುವವನು ಮೊಟ್ಟಮೊದಲು ಧಾರಣೆಮಾಡಬೇಕೆಂದು ಜೈನಸಿದ್ಧಾಂತವು ಪ್ರತಿಪಾದಿಸುತ್ತದೆ. ಜೈನರು ಪ್ರತಿದಿವಸವೂ ಸ್ನಾನ, ಸಂಧ್ಯಾವಂದನ, ಜಪ, ದೇವಪೂಜಾ ಮೊದಲಾದ ನಿತ್ಯಕರ್ಮಗಳನ್ನು ಆಚರಿಸುತ್ತಾರೆ. ಈ ಮೇಲೆ ಹೇಳಿದ ಸಂಕ್ಷೇಪವಿವರಣೆಯಿಂದ ಜೈನರ ಪರಿಶುದ್ಧತೆಯು ನಿಷ್ಪಕ್ಷಪಾತಿಗಳಾದ ವಾಚಕರಿಗೆ ಗೊತ್ತಾಗುವುದು. ಹೀಗಿದ್ದರೂ ಜೈನರು ಶೂದ್ರರೆಂದು ಗ್ರಂಥಕರ್ತನು ಹೇಳಿರುವುದು ಆತನ ನೀಚತನವನ್ನು ವ್ಯಕ್ತಪಡಿಸುತ್ತದೆ.

ಜೈನರು ಸಂಧ್ಯಾಕಾಲಗಳಲ್ಲಿ ಸಾಮಯಿಕವನ್ನು ಮಾಡಬೇಕೆಂದು ವಿಧಾನವಿದೆ. ಸಾಮಯಿಕವೆಂದರೆ "ಸಮತಾಸರ್ವಭೂತೇಷು ಸಂಯಮಃ ಶುಭಭಾವನಾ | ಆರ್ತರೌದ್ರಪರಿತ್ಯಾಗಸ್ತದ್ಧಿ ಸಾಮಯಿಕವ್ರತಂ ||—ಅರ್ಥ:-ಸರ್ವಪ್ರಾಣಿಗಳಲ್ಲಿ ಸಮತಾಭಾವ, ಇಂದ್ರಿಯನಿಗ್ರಹ, ಶುಭಪರಿಣಾಮ, ಆರ್ತರೌದ್ರಭಾವತ್ಯಾಗ ಇವುಸಾಮಯಿಕ ವ್ರತವು." ಎಂದೂ, "ಸಾಮ್ಯಂಮೇ ಸರ್ವಭೂತೇಷು ವೈರಂ ಮಮನಕೇನಚಿತ್ || ಬಂಧಾವರೌ ಸುಖೇದುಃಖೇ ಸರ್ವದಾ ಸಮತಾಮಮ ||— ಅರ್ಥ:—ನನಗೆ ಸಮಸ್ತಪ್ರಾಣಿಗಳಲ್ಲಿ ಸಾಮ್ಯಭಾವವು, ನನಗೆ ಯಾರೊಡನೆಯೂ ವೈರವಿಲ್ಲ—ನನಗೆ ಬಂಧುವಿನಲ್ಲಿಯೂ ಶತ್ರುವಿನಲ್ಲಿಯೂ ಸುಖದಲ್ಲಿಯೂ ದುಃಖದಲ್ಲಿಯೂ ಯಾವಾಗಲೂ ಸಮತಾಭಾವವು." ಎಂದೂ, "ಅಶರಣಮಶುಭಮನಿತ್ಯಂ ದುಃಖಮನಾತ್ಮಾನಮಾವಸಾಮಿಭವಂ | ಮೋಕ್ಷಸ್ತದ್ವಿಪರೀತಾತ್ಮೇತಿಧ್ಯಾಯಂತು ಸಾಮಯಿಕೇ ||— ಅರ್ಥ—ಅಶರಣವೂ, ಅಶುಭವೂ, ಅನಿತ್ಯವೂ, ದುಃಖಮಯವೂ, ಅನಾತ್ಮಸ್ವರೂಪವೂ ಆದ ಸಂಸಾರದಲ್ಲಿ ವಾಸಮಾಡುತ್ತೇನೆ. ಮೋಕ್ಷವು ಸಂಸಾರಕ್ಕೆ ವಿಪರೀತವಾದ ಲಕ್ಷಣವುಳ್ಳದು. ಅಂದರೆ ಶರಣ, ಶುಭ, ನಿತ್ಯ, ಸುಖಮಯ, ಆತ್ಮಸ್ವರೂಪ ಆದುದೆಂದು ಸಾಮಯಿಕದಲ್ಲಿ ಧ್ಯಾನಮಾಡಬೇಕು." ಎಂದೂ ಸಾಮಯಿಕದ ಲಕ್ಷಣವು ನಮ್ಮ ಆಚಾರಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಯಾವುದೊಂದು ಸೂಕ್ಷ್ಮಪ್ರಾಣಿಗೂ ಬಾಧೆಯನ್ನು ಕೊಡದೆ ದಯಾಭಾವವನ್ನಿಡಬೇಕೆಂಬುದು ಜೈನಸಿದ್ಧಾಂತದ ಮುಖ್ಯತತ್ತ್ವವಾಗಿದೆ. ಅಹಿಂಸಾರೂಪವಾದ ಪರಮಧರ್ಮವನ್ನು ಜೈನಮತವು ಎಷ್ಟರಮಟ್ಟಿಗೆ ಪ್ರತಿಪಾದಿಸುತ್ತದೆಂಬುದು ಲೋಕಪ್ರಸಿದ್ಧವೇ ಆಗಿದೆ. ಹೀಗಿರುವಾಗ "ಜೈನರು ರಾಜೋಪಜೀವಿಗಳಾಗಿ ಬ್ರಾಹ್ಮಣರನ್ನು ಬಾಧಿಸುವರು" ಎಂಬುದಾಗಿ ಹೇಳುವ ಆ ಗ್ರಂಥಕರ್ತನ ಮಾತು ಎಷ್ಟರಮಟ್ಟಿಗೆ ನಿಜವೆಂಬುದೂ, ಆತನ ಹೃದಯವು ಎಷ್ಟರಮಟ್ಟಿಗೆ ಮತದ್ವೇಷದಿಂದ ದುಷ್ಟವಾಗಿದೆಯೆಂಬುದೂ ವಿಚಾರಪರರಿಗೆ ಗೊತ್ತಾಗದಿರದು. ರಾಜೋಪಜೀವಿಗಳಾಗಿ ಬಾಧಿಸುವುದು ಜೈನರಲ್ಲವೇ?

ಜೈನರು ಸಮಸ್ತಪರಿಗ್ರಹರಹಿತರಾಗಿ ದಿಗಂಬರಮುದ್ರೆಯನ್ನು ಧರಿಸಿದ ಪರಮಶಾಂತಮೂರ್ತಿಗಳಾದ ಪರಮಹಂಸರು ಮುನಿಗಳೆಂದೂ ರಾಗದ್ವೇಷಮದಮಾತ್ಸರ್ಯಾದಿದೋಷಗಳಿಲ್ಲದವನೂ, ಸಕಲಕರ್ಮವಿಮುಕ್ತನೂ ಆದ ಭಗವಂತನು ದೇವನೆಂದೂ ನಂಬುತ್ತಾರೆ. ಹೀಗಿರುವಾಗ ಆ ಗ್ರಂಥಕಾರನು "ಕಾಷಾಯವಸ್ತ್ರವನ್ನು ಧರಿಸಿದವರು" ಎಂದು ಹೇಳುವ ಮಾತಿನಿಂದ ಆತನು ಜೈನಸಿದ್ಧಾಂತದಲ್ಲಿ ಎಷ್ಟರಮಟ್ಟಿಗೆ ಪರಿಚಯವುಳ್ಳವನೆಂಬುದು ವ್ಯಕ್ತವಾಗುತ್ತದೆ. ಜೈನರಲ್ಲಿ ಕಾಷಾಯವಸ್ತ್ರವನ್ನು ಧರಿಸುವವರಿಗೆ ಮುನಿಗಳೆಂದು ಹೆಸರಿಲ್ಲ. ಅಂಥಾವರು ಸಾಮಾನ್ಯವ್ರತಿಕರು.

ಗ್ರಂಥಕರ್ತನು "ಬೆಳ್ಳನ ಹಲ್ಲುಗಳುಳ್ಳ ಜೈ ಎಂದು ಬರೆದಿರುತ್ತಾನೆ. ಬೆಳ್ಳನ ಹಲ್ಲುಗಳಿರುವುದು ಶ ಸೂಚಕವೇ? ಗ್ರಂಥಕಾರನ ಹಲ್ಲುಗಳು ಕಪ್ಪಗಿರುವುವೇ ಹಲ್ಲುಗಳು ಬೆಳ್ಳಗಿದ್ದರೆ ಶೂದ್ರತ್ವವು ಅವನ ಮೇಲೆಯು ರಿಮಾಡುವುದು. ಗ್ರಂಥಕಾರನದು ಏನು ಬುದ್ಧಿ ಬೆಳ್ಳನ ಹಲ್ಲುಗಳಿರುವುದು ಏನು ಆಕ್ಷೇಪಣೀಯವೆಂ ದನೋ! ಇದರಿಂದಲೇ ಗ್ರಂಥಕಾರನ ವಿವೇಕವು ವಾ ಚೆನ್ನಾಗಿ ಗೊತ್ತಾಗುವುದು.

ಜೈನರಲ್ಲಿ ಬ್ರಾಹ್ಮಣಾದಿ ನಾಲ್ಕು ವರ್ಣಾಶ್ರ ಯೆಂಬ ವಿಚಾರವೂ ಆ ಗ್ರಂಥಕರ್ತನ ಗಮನಕ್ಕೆ ತೋರುವುದಿಲ್ಲ. ಹಾಗೆ ಬಂದಿದ್ದರೆ ನಿರಾಧಾರವಾಗಿ ಲ್ಲರೂ ಶೂದ್ರರೆಂದು ಹೇಳುವಷ್ಟು ನೀಚಬುದ್ಧಿಯು ತ್ತಿರಲಿಲ್ಲ. ಜೈನಸಿದ್ಧಾಂತದ ವಿಶಾಲವಾದ ತತ್ತ್ವ ಸಂಕುಚಿತಹೃದಯದಲ್ಲಿ ಅಡಕವಾಗದಿರುವುದು ಸ ಗಿದೆ. ನಿರಾಧಾರವಾಗಿ ಒಂದು ಮತವನ್ನು ನಿಂದಿಸು ಬೇಕಾದವರು ಬೇಕಾದ ಮತವನ್ನು ನಿಂದಿಸಬಹುದೆಂ ದಂತಾಯಿತು. ಆಗ ಆ ಗ್ರಂಥಕರ್ತನ ಪಾಡೇನಾಗ ವಿಚಾರಮಾಡಲಿ. ಆದರೆ ನಾವು ಅಂತಹ ನೀಚಕಾ ಪ್ರವರ್ತಿಸಬಾರದು. ಯಾವನೋ ಒಬ್ಬ ಬ್ರಾಹ್ಮ ಯು ಹೇಳಿದ ಮಾತ್ರಕ್ಕೆ ಬ್ರಾಹ್ಮಣರೆಲ್ಲರೂ ಹೇಳಿ ಲ್ಲಿಲ್ಲ. ಎಷ್ಟೋ ಬ್ರಾಹ್ಮಣಮಹಾಶಯರು ಗುಣಗ್ರಾ ದ್ದಾರೆ. ವ್ಯಕ್ತಿಗತವಾದ ತಪ್ಪನ್ನು ಸಂಪೂರ್ಣಸ ಮೇಲೆ ಹೊರಿಸುವುದು ನ್ಯಾಯವಲ್ಲ. ಅವರೆ ನಿಷ್ಕಾ ಬೇರೆಯವರನ್ನು ನಿಂದಿಸಿ ತಮ್ಮ ಬ್ರಾಹ್ಮಣಸ ಮೇಲೆ ಬೇರೆಯವರಿಗೆ ದ್ವೇಷವು ಹುಟ್ಟುವಂತೆ ಮಾ ರ್ಥವನ್ನು ಮಾಡುವ ವ್ಯಕ್ತಿಗಳಿಗೆ ಎಚ್ಚರಿಕೆಯನ್ನು ವುದು ಬ್ರಾಹ್ಮಣಸಮಾಜದವರ ಕರ್ತವ್ಯವಾಗಿದೆ ಪ್ರೇಮದಿಂದುಂಟಾಗುವ ಸುಖಸಂತೋಷವೂ, ಮವೂ, ಪರಸ್ಪರದ್ವೇಷದಿಂದ ಎಂದೂ ಉಂಟಾಗ ಒಂದು ಮತದ ಧರ್ಮವನ್ನು ದೂಷಿಸುವುದರಿಂದ ಆ ನುಯಾಯಿಗಳಿಗೆಲ್ಲರಿಗೂ ಅನುತಾಪ ಉಂಟಾಗುವುದು ವಾಗಿದೆ. ಎಂತಹವನಿಗಾದರೂ ತನ್ನ ಧರ್ಮವು ದೊ ಅದನ್ನು ಮೂಲೆಗೊತ್ತಿ ಅನಿತ್ಯಸ್ವಾರ್ಥವನ್ನು ಸಾ ಳ್ಳುವ ಅಜ್ಞಾನಿಗಳು ಯಾರೂ ಇರಲಾರರು.

"ಶೂದ್ರಕಮಲಾಕರ" ಗ್ರಂಥಕರ್ತನು ಜೈ ನಿಂದಿಸಿದುದು ಪ್ರಕಾಶಕ್ಕೆ ಬಂದುದರಿಂದ ಅದು ವ್ಯಕ್ತಿ ತಪ್ಪೆಂದು ಸುಮ್ಮನಿರುವುದಕ್ಕಾಗುವುದಿಲ್ಲ. ಹಾಗೆ ದ್ದರೆ ಸಾಮಾನ್ಯಜನರು ನಿಜಾಂಶವನ್ನು ತಿಳಿಯದೆ ಮಾತೇ ಸತ್ಯವೆಂದು ನಂಬುವರು. ಆದುದರಿಂದ ನಿಜಾಂ ಪ್ರಕಟಿಸಿ ಗ್ರಂಥಕರ್ತನ ಮಿಥ್ಯಾಲಾಪವನ್ನು ದಕ್ಕೆ ಬಾಧ್ಯನಾದೆನು. ಆ ಗ್ರಂಥಕರ್ತನೂ ಈ ಲೇ ವ್ಯಕ್ತಿಸ್ವಾತಂತ್ರ್ಯದಿಂದ ಗ್ರಂಥವನ್ನೂ ಲೇಖವನ್ನೂ ಶಪಡಿಸಿರುವುದರಿಂದ ಇದಕ್ಕೆ ಉಭಯಸಮಾಜಗಳು ಹೊಣೆಯಲ್ಲ. ಆ ಮೂಲಗ್ರಂಥವು ಸಿಕ್ಕಿದ ಮೇಲೆ ವಿಸ್ತಾರವಾಗಿ ಖಂಡಿಸಲಾಗುವುದು.

ಧರಣೇಂದ್ರಯ್ಯ

ನೋಟೀಸ್.

ಸೋಲಾಪೂರದಲ್ಲಿ ವಾರದ ಸಂಸ್ಕೃತ ಪಾಠಶಾಲೆಯು ನಿಮಿತ್ತದಿಂದ ತಾ|| 1—12—1923 ದಿವಸ ಬಂದಿಡಲ್ಪಟ್ಟ ರೋಗ ಉಪಶಮನವಾದ ಮೂಲಕ ತಾ|| 21—4—1924 ಭಸಲ್ಪಟ್ಟಿದೆ. ಮೊದಲಿದ್ದ ವಿದ್ಯಾರ್ಥಿಗಳು ಇದೇ ತಿಂಗಳ ಗಾಗಿ ಬರತಕ್ಕದ್ದು. ಹೊಸವಿದ್ಯಾರ್ಥಿಗಳು ಅಧ್ಯಾಪಕರಿಂದ ಬರಬೇಕು.

ವ್ಯವಸ

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಲಗ್ನದ ಫಂಡು.

1. ಶಿಡ್ಲಘಟ್ಟದ ತಾಲ್ಲೂಕು ಮೇಲೂರು ಗ್ರಾಮದ ಎ. ಸಿ. ಮಲ್ಲಿಕಾರ್ಜುನಪ್ಪನವರ ಮೂಲಕ ಡಿಟೋ ಗ್ರಾಮ ಚನ್ನವೀರಭದ್ರಪ್ಪನವರ ದ್ವಿತೀಯ ಪುತ್ರಿ ಚಿ|| ಸೌ|| ಶಂಕ ಹಿಂದೂಪುರದ ತಾಲ್ಲೂಕು ಗೋರಂಟ್ಲುಗಿರಾಕಿ ಭೋಗಪ್ಪ ಚಿ|| ಸಾ|| ಚನ್ನಬಸಪ್ಪನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ಹ 5 ರೂ. ಗಂಡಿನವರಿಂದ 5 ರೂ. ಜುಮ್ಲಾ 10 ರೂ. ಗಳೂ ಕಲ್ ತಾಲ್ಲೂಕು ದೊಮ್ಮಸಂದ್ರದಲ್ಲಿರುವ ಯಜಮಾನ್ ಚನ್ನ ಅಣ್ಣಂದಿರ ಕುಮಾರ ಚನ್ನವೀರಪ್ಪನವರಿಗೆ ಹಾಗಲ್ವಾಡಿ ಯ ನವರ ಪುತ್ರಿ ಚಿ|| ಸೌ|| ಪುಟ್ಟಮ್ಮನನ್ನು ಕೊಟ್ಟು ನಡಸಿದ ಲಗ್ನ ಜುಮ್ಲಾ 13 ರೂ. ಗಳು.

2. ಚಿಕ್ಕಮಗಳೂರು ತಾಲ್ಲೂಕು ವಸ್ತಾರ ಹೋಬಳಿ ಗ್ರಾಮಸ್ಥರು ಶಿವದೇವಸ್ಥಾನದಲ್ಲಿ ಶ್ರೀ ರುದ್ರೇಶ್ವರಸ್ವಾಮಿ ವಿಗ್ರ ರುಗಳ ಸ್ಥಾಪನವನ್ನು ಮಾಡಿಸಿದ ಕಾಲದಲ್ಲಿ ಫಂಡಿಗಾಗಿ ತೆಗೆ ರಾ|| ಕುಕ್ಕವಾಡವರಪೇಟೆ ಎಸ್. ನಂಜಪ್ಪಯ್ಯನವರ ಮೂಲಕ

3. ಕಾಸಕಾಸಹಳ್ಳಿಯಲ್ಲಿರುವ ಸುಬೇದಾರ್ ಮ|| ರಾ|| ನವರ ಮಕ್ಕಳು ಸಾಂಬಶಿವಯ್ಯನವರ ನಿಶೇಕ ಪ್ರಸ್ತದಲ್ಲಿ ಮ|| ರಾ|| ದೊಡ್ಡರಾಜಪ್ಪನವರ ಮೂಲಕ 3 ರೂ. ಜುಮ್ಲಾ

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿ

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆ
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂ
ಬೆಂಗಳೂರು ಸಿಟಿ.

ಪತ್ರವ್ಯವಹಾರ.

[illegible] ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತ [illegible] ವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂ.

REPLY TO THE COMMUNAL JEALOUSIES IN MYSORE.

It has caused not a little surprise to read the communication, the second of its kind about "Communal Jealousies in Mysore" which is hing but a fabricated one from the beginning to end containing inaccurate statements with an ensible object of imputing ulterior motives to "Backward Community" which is as alleged the author of the communication under a conleracy. It is but appropriate and quite opportune refute the allegations so levelled against the sses whose members are now returned to the epresentative Assembly in large numbers, as the ne are calculated to mislead the Public in as ch as it is likely to deliberately stirr up hatred ong the different communities or classes. ere is not even an element of truth in the comunication and the author being blind to real and e facts and also being animated by a spirit of lousy and animosity has given publicity to an count which is undoubtedly to be characterised nothing short of garbled one. No sane person dges one's publishing truth-solid truth and thing but bare truth. At the same time, nobody es not want mere laudations but welcomes even palatable criticism and not prejudicial represenion of facts which will undoubtedly aggravate lings already strained between the two comnities. There would have been some sanity or sdom on the part of the contributor of the mmunication if he had rushed into the lime-light newspapers with accurate facts and blessed nments on them. The author must congratulate nself upon his display propoundity and erudition employing epithets and terms such as "Conmated Skill and Non-brahmin Confederacy." rhaps this is the outcome of the discomfiture ey have tasted or experienced at the hands of majority of the Backward Class members on much vexed and burning proposition of elimiting the shanbhogues class from election. One nnot conceive of a better demonstration of a rit of vengeance than the one displayed by way sending to the press for publication of misleadand inaccurate statements.

The author of the communication seems to be the legend of sleepy-hollow when he ventures to te that it was Mr. N. Sanjeeviah who moved resolution to be sent up after selection to the presentative Assembly for further discussion rtaining to the exclusion of shanbhogues from ection to the Representative Assembly etc. It beyond one's comprehension how a resolution ich stands in my name can be moved by Mr. njeeviah, who as understood by the ill-informed thor of the communication, was supported by G. Paramasiviah seconded by Mr. B. L. [illegible] and aided by Mr. Abbaskhan. It is quite [illegible] that the author is illusioned under [illegible]. Let me, therefore, emphatically say ough this for the information of the misguided d mistaken author that it was I who moved such resolution which after surviving the animated [illegible], was selected. It is simply foolish on the t of anybody to shove off responsibility on the [illegible] of those who do not take initiative in the [illegible], but only second, support the mover's on as is the case with everybody, com- d so on. The author of the communica- [illegible] involved in personal prejudice and the oneous impression which it has created, is being ploited for his own benefit. I think I have done best to repudiate the slanders and unwarranted against the Backward Community and ers will lose no time in falsifying same batic force. I fervently hope that the f the Wealth of Mysore will not open the columns of the papers for the publication ss articles without having an insight or to of the allegations or ascertaining real the same are likely to sorely damage the n of the popularity of the paper.

B. L. BYANNA.

ಕಡೂರು ತಾ|| ಬಾಣೂರು ಸ್ಕೂಲು.

ಈ ವರ್ಷ ಹಿಂಗಾರುಮಳೆಯು ಸರಿಯಾಗಿ ನಡಸದೆ ಬೆಳೆಯು ಚನ್ನಾಗಲಿಲ್ಲ. ಸದ್ಯಕ್ಕೆ ಜನಗಳಿಗೂ ಮತ್ತು ಜಾನುವಾರುಗಳಿಗೂ, ನೀರಿಗೆ ಅನಾನುಕೂಲವಾಗಿರುತ್ತೆ. ಹಾಲಿ ಈ ಗ್ರಾಮದ ಸ್ಕೂಲಿಗೆ ಬಂದಿರುವ ಕಡಕಟ್ಟಿ ಎ. ಕೃಷ್ಣಪ್ಪನವರು ಸ್ಕೂಲಿನ ಕೆಲಸವನ್ನು ತೃಪ್ತಿಕರವಾಗಿ ನಡಸಿಕೊಂಡು ಪ್ರಜೆಗಳ ಪ್ರೀತಿಗೆ ಪಾತ್ರರಾಗಿರುವುದು ತುಂಬಾ ಸಂತೋಷವಾಗಿರುತ್ತೆ. ಹಾಲಿ ಸ್ಕೂಲಿನಲ್ಲಿ ಇವರು ಬರುವದಕ್ಕಿಂತ ಮೊದಲು 7-8 ಜನ ಬಾಲಕರು ಮಾತ್ರ ಓದುತ್ತಿದ್ದರು. ಇವರು ಬಂದಮೇಲೆ ಪ್ರಜೆಗಳಿಗೆಲ್ಲಾ ವಿದ್ಯಾಭ್ಯಾಸದ ವಿಷಯದಲ್ಲಿ ತುಂಬಾ ಪ್ರೋತ್ಸಾಹಿಸಿದ್ದರ ಮೇಲೆ ಈಗ 50 ಬಾಲಕರು ವ್ಯಾಸಂಗಮಾಡುತ್ತಿದ್ದಾರೆ. ಈ ಮಧ್ಯೆ ಹಾಲಿ ಸ್ಕೂಲಿಗೆ 20 ರೂ.ನ ಹೊಸ ಹ್ಯಾಂಡುಸ್ಯಾಂಕ್ಷನ್ ಆಗಿರುವದೆಂತಲೂ, ಇವರನ್ನು ಬೇರೆ ಕಡೆಗೆ ಕಳುಹಿಸುತ್ತಾರೆಂತಲೂ ವರ್ತಮಾನ ಕೇಳುತ್ತೇವೆ. ಇದು ತುಂಬ ಶೋಚನೀಯವಾದದ್ದಾಗಿದೆ. ಹಿಂದೆ ಅಂದರೆ 19-2-24 ರಲ್ಲಿ ಹಜರತ್ ಡಿಸ್ಟ್ರಿಕ್ಟು ಇನಸ್ಪೆಕ್ಟರ್‌ವರು ಮತ್ತು ಅಸಿಸ್ಟೆಂಟು ಇನಸ್ಪೆಕ್ಟರವರು ದಯಮಾಡಿಸಿದ್ದಾಗ ಗ್ರಾಮಸ್ತರೆಲ್ಲರೂ ಸೇರಿ ಹಾಲಿ ಮಾಸ್ಟರನ್ನೇ ಖಾಯಂಆಗಿ ಇಟ್ಟಿರಬೇಕೆಂದು ಕೇಳಿದ್ದರ ಮೇಲೆ ಹಾಗೆಯೇ ಮಾಡುತ್ತೇವೆಂದು ಹೇಳಿದರು. ಈಗ ಈರೀತಿ ವರ್ತಮಾನವಿರುತ್ತೆ. ಈಗಲಾದರೂ ಘನವನ್ನುಹೊಂದಿದ ಸರ್ಕಾರದವರು ಸದರಿ ಮಾಸ್ಟರನ್ನೇ ಖಾಯಂಆಗಿ ಇಡಿಸಿಕೊಟ್ಟು ನಮ್ಮಗಳ ಬಾಲಕರ ವಿದ್ಯಾಪ್ರೋತ್ಸಾಹಕ್ಕೆ ಸಹಾಯಮಾಡಬೇಕೆಂದು ಪ್ರಾರ್ಥಿಸುತ್ತೇವೆ. ಮ|| ರಾ|| ಪಟೇಲ್ ಮಲ್ಲೇಗೌಡರು ವಿದ್ಯಾಭ್ಯಾಸದ ವಿಷಯದಲ್ಲಿ ತುಂಬಾ ಶ್ರದ್ಧೆಯನ್ನು ವಹಿಸಿ, ಬಂದ ಮಾಸ್ಟರುಗಳಿಗೆ ವಸತಿಯನ್ನು ಅನುಕೂಲಪಡಿಸಿಕೊಟ್ಟು ಅವರ ಮತ್ತು ಪ್ರಜೆಗಳ ಪ್ರೀತಿಗೆ ಪಾತ್ರರಾಗಿರುವುದರಿಂದ ಸಂತೋಷಕರವಾಗಿದೆ

ಪ್ರಜಾಹಿತೈಷಿ.

ಗ್ರಾಂಟ್‌ಸ್ಕೂಲ್‌ಗಳ ಅಭಿವೃದ್ಧಿ.

ಸದರಿ ಸ್ಕೂಲ್‌ಗಳ ಕುಂದುಕೊರತೆಗಳನ್ನೂ, ಉಪಾಧ್ಯಾಯರಗೋಳುಕರೆಯನ್ನೂ ಧರ್ಮಸರ್ಕಾರದಲ್ಲಿ ಪ್ರಾರ್ಥಿಸಿಕೊಳ್ಳಬೇಕೆಂಬ ಉದ್ದೇಶದಿಂದ ಕಳೆದ 1921ನೇ ಸಾಲ್ ನವಂಬರ್ ತಾರೀಖು 27-28 ರಲ್ಲಿ ಗ್ರಾಂಟ್‌ಸ್ಕೂಲ್ ಉಪಾಧ್ಯಾಯರ ಸಂಘವನ್ನು ಕಡೂರು ತಾಲ್ಲೂಕು ಕಡೂರುಹಳ್ಳಿಯಲ್ಲಿ ಮಿ|| ಕೆ|| ಲಿಂಗೋಪಂತ್ ಬಾದಾಮಿ ಬಿ.ಎ., ಇವರ ಅಧ್ಯಕ್ಷತೆಯಲ್ಲಿ ನಡಸಿ ಈ ಸಂಘದ ಪ್ರೋಸಿಡಿಂಗ್ಸನ್ನು ಇಲಾಖಾ ಮೊಟ್ಟೀಸರ್‌ರವರಲ್ಲಿಗೆ ಕಳುಹಿಸಿಕೊಟ್ಟು ಯುವಸಾರ್ವಭೌಮರವರ ಸುಖಾಗಮನದ ಬಗ್ಗೆ ಪ್ರಸಿಡೆಂಟರವರ ಮೂಲಕ ರಿಪ್ಲಿಟೆಲಿಗ್ರಾಂ ಕೊಟ್ಟಿರುತ್ತಲ್ಲದೆ ಅನೇಕ ವಾರಾಪತ್ರಿಕೆಗಳಲ್ಲೂ ಸಹ ಪ್ರಕಟವಾಗಿರುತ್ತೆ. ಈ ಸಂಘಕ್ಕೆ ಪ್ರೋತ್ಸಾಹಕಾಲಿಗಳೂ ಮುಂದಾಳುಗಳೂ ಕಾರ್ಯದಕ್ಷರೂ ಆದ ಮಲ್ಲಿದೇವಿಹಳ್ಳಿ ಗ್ರಾಂಟ್‌ಸ್ಕೂಲ್ ಮಾಸ್ಟರ್ ಮ|| ಎ. ಚನ್ನಪ್ಪನವರು ವರುಷಂಪ್ರತಿಯಲ್ಲೂ ಈ ಸಂಘವನ್ನು ಯಾವುದಾದರೊಂದೊಂದು ಮುಖ್ಯ ಸ್ಥಳದಲ್ಲಿ ನಡಸುತ ಬರಬೇಕೆಂಬ ಇರಾದೆಯಿಂದ ಸ್ಕೂಲ್ ರಜಾಕಾಲದಲ್ಲಿ ಮಾರ್ಗಾಯಾಸವನ್ನೂ ದೇಹಶ್ರಮವನ್ನೂ ಮನಸ್ಸಿಗೆ ತಾರದೆ ಪರೋಪಕಾರವೆ ಮುಖ್ಯವೆಂದು ಭಾವಿಸಿ ಅನೇಕ ಗ್ರಾಮಾಂತರಗಳಿಗೆ ಹೋಗಿ ಆಯಾಯ ಗ್ರಾಮದ ಉಪಾಧ್ಯಾಯರುಗಳಿಂದಲೂ, ದೇಶಾಭಿಮಾನಿಗಳಾದ ಗ್ರಾಮಸ್ಥರುಗಳಿಂದಲೂ, ಸುಮಾರು 450-500 ರೂಪಾಯಿಗಳವರೆಗೆ ಚಂದಾವಾಗ್ದಾನಮಾಡಿಸಿಕೊಂಡು ಬಂದು ಈಗ್ಗೆ 2 ವರುಷವಾದಾಗ್ಯೂ ಸಂಘಾಭಿವೃದ್ಧಿಯ ಆಲೋಚನೆಯನ್ನು ಬಿಟ್ಟು ಮೌನರಾಗಿರವುದರಿಂದ ಸದರಿ ಚನ್ನಪ್ಪನವರು ಈಗಲಾದರೂ ದಯವಿಟ್ಟು ಮುಂದಿನ ಕಾರ್ಯದಲ್ಲಿ ಆಸಕ್ತರಾಗಬೇಕಾಗಿ ಪ್ರಾರ್ಥಿಸುವ,

ಒಬ್ಬ ಗ್ರಾಂಟ್‌ಸ್ಕೂಲ್ ಉಪಾಧ್ಯಾಯ.

---

7 ನೆಯ ವೀರಶೈವ ತರುಣರ ಸಮ್ಮೇಲನ ರಾಣೆಬೆನ್ನೂರು.

ಮೇಲ್ಕಾಣಿಸಿದ ಸಮ್ಮೇಲನವನ್ನು ಇದೇ ಬರುವ ಮೇ ತಿಂಗಳು ಸೋಮವಾರ-ಮಂಗಳವಾರ ದಿವಸ ಕೂಡಿಸಬೇಕೆಂದು ನಿರ್ಣಯಿಸಿದ್ದಾರೆ. ಈ ಸಾರೆಯ ಸಮ್ಮೇಲನದಲ್ಲಿ ಸಂಘದ ವಿಚಾರದಲ್ಲಿಯೂ ಸಮಾಜದ ವಿಚಾರದಲ್ಲಿಯೂ ಒಳ್ಳೇ ಮಹತ್ವದ ವಿಷಯಗಳ ವಿವೇಚನೆಯಾಗಿ ಮುಂದೆ ಪ್ರಚಾರದಲ್ಲಿ ತರುವ ಕಾರ್ಯಕ್ರಮವು ಗೊತ್ತುಪಡಿಸಲ್ಪಡುವದಿರುವದರಿಂದ ತರುಣ ಸಂಘದ ಸಭಾಸದರೂ ಹಿತಾಪೇಕ್ಷಿಗಳೂ ಸಮಾಜದ ಹಿತಚಿಂತಕರೂ ಈ ಸಮ್ಮೇಲನಕ್ಕೆ ಬಂದು ತರುಣರಿಂದ ಸಮಾಜಸೇವೆಯು ವಿಶೇಷವಾಗಿ ಆಗುವಂತೆ ಮಾಡುವಿರೆಂದು ಪ್ರಾರ್ಥಿಸುತ್ತೇವೆ.

ಈ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಶ್ರೀಯುತ ಪಂಡಿತ ರಾಯಪ್ಪ ಜಕ್ಕೋಡಿ ಬಿ. ಎ. ಬೆಳಗಾವ ಇವರು ವಹಿಸಲು ಅನುಮೋದಿಸಿರುತ್ತಾರೆಂದು ತಿಳುಹಿಸಲು ಅತ್ಯಾನಂದವಾಗುತ್ತದೆ.

ಸಮ್ಮೇಲನದಲ್ಲಿ ಚರ್ಚಿಸತಕ್ಕ ವಿಷಯಗಳು.

(1) ವೀರಶೈವ ತರುಣರ ಸಂಘದ ವಿಧಾಯಕಮಾರ್ಗ.
(2) ಸಂಘದಲ್ಲಿ ರಾಜಕಾರಣದ ಸಮಾವೇಶಮಾಡತಕ್ಕದ್ದರ ವಿಚಾರ.
(3) ಪ್ರಬೋಧ ಮಾಸಪತ್ರಿಕೆಯ ವ್ಯವಸ್ಥೆ.
(4) ಸಮಾಜಕ್ಕೆ ನಿಯಂತ್ರಣಾಧಿಕಾರವುಳ್ಳ (Controlling body) ಸಂಸ್ಥೆಯ ಅವಶ್ಯಕತೆ.
(5) ಸ್ವದೇಶ ವಸ್ತ್ರಪ್ರಸಾರ.
(6) ಅಖಿಲ ವೀರಶೈವ ವಾಚನಾಲಯದ ಏರ್ಪಾಟು.
(7) ಒತ್ತಾಯದ ಪ್ರಾಥಮಿಕ ಶಿಕ್ಷಣಕ್ಕೆ ಮನಮುಟ್ಟಿ ಸಹಾಯ ಮಾಡುವದು.
(8) ಧಾರ್ಮಿಕ ಶಿಕ್ಷಣದ ಅವಶ್ಯಕತೆ.

ಸೂಚನೆ—(1) ಪ್ರತಿನಿಧಿಗಳಿಗೆ ಫೀ ಒಂದು ರೂಪಾಯಿ. ಇವರು ತಮ್ಮ ಹೆಸರನ್ನು ಒಂದು ವಾರ ಮುಂಚಿತವಾಗಿ ದಯಮಾಡಿ ತಿಳುಹಿಸಬೇಕು. ಇವರಿಗೆ ಊಟಕ್ಕೂ, ವಾಸಕ್ಕೂ ಅನುಕೂಲಪಡಿಸುತ್ತದೆ. ಆದರೆ ತಮಗೆ ಅವಶ್ಯವಾಗಿ ಬೇಕಾಗುವ ಹಾಸಿಗೆ ತಂಬಿಗೆ ಮೊದಲಾದವುಗಳನ್ನು ಸಂಗಡ ತರಬೇಕು. (2) ಮೇಲಿನ ವಿಷಯಗಳನ್ನು ಕುರಿತು ಉಪನ್ಯಾಸ ಮಾಡುವವರು ತಮ್ಮ ಉಪನ್ಯಾಸವನ್ನು ಬರೆದು ಒಂದು ವಾರ ಮುಂಚಿತವಾಗಿ ಕಳುಹಿಸಬೇಕು. ಆಯಾ ವಿಷಯಗಳ ವಿಧಾಯಕ ಕಾರ್ಯಕ್ರಮದಲ್ಲಿ ಅಂಗವಹಿಸಿಕೊಳ್ಳಲು ಸಿದ್ಧರಿರುವ ಭಾಷಣಕಾರರಿಗೆ ಮೊದಲು ಅವಕಾಶ ಕೊಡಲ್ಪಡುವದು. (3) ಸಮ್ಮೇಲನದ ಸಂಬಂಧವಾದ ಎಲ್ಲಾ ಪತ್ರವ್ಯವಹಾರಗಳನ್ನು 'ಜನರಲ್ ಸೆಕ್ರೆಟರಿ' ಗಳ ಸಂಗಡ ಮಾಡಬೇಕು.

ಇಲ್ಲಿಗೆ ಬರುವ ಆಗಿಬಂಡಿಗಳ ಕಾಲ.

ಹುಬ್ಬಳ್ಳಿ ಮಾರ್ಗವಾಗಿ ಬರತಕ್ಕ ಮೇಲ್ ಸಾಯಂಕಾಲ ೬||| ಗಂಟೆ, ಎಕ್ಸ್‌ಪ್ರೆಸ್ ರಾತ್ರಿ ೧೦ ಗಂಟೆ, ಪ್ಯಾಸಿಂಜರ್ ರಾತ್ರಿ ೩ ಗಂಟೆ, ಬೆಂಗಳೂರ ಮಾರ್ಗವಾಗಿ ಬರತಕ್ಕ ಮೇಲ್ ಮುಂಜಾನೆ ೮|| ಗಂಟೆ ಪ್ಯಾಸಿಂಜರ್ ರಾತ್ರಿ ೧೦ ಗಂಟೆ ಎಕ್ಸ್‌ಪ್ರೆಸ್ ರಾತ್ರಿ ೪ ಗಂಟೆ.

ಜನರಲ್ ಸೆಕ್ರೆಟರಿ.

ಶ್ರೀ ಜಗದ್ಗುರು ಪರ್ವತಸಂಸ್ಥಾನದ ಮಹಾಸ್ವಾಮಿಗಳವರ ದಿವ್ಯಸನ್ನಿಧಿಯಲ್ಲಿ ನೆರದ ಬೇಲೂರು ತಾಲ್ಲೂಕಾಮಳೆ ವೀರಶೈವರ ಕಾನ್ಫರೆನ್ಸು.

ಮಹಾ ಸಂ|| ಮೊಕ್ಕಾಂ ಮಲ್ಲಾಪುರ ಮಠದಲ್ಲಿ ತಾ|| 12-4-1924 ರಲ್ಲಿ ಬೇಲೂರು ತಾಲ್ಲೂಕು ವೀರಶೈವರೆಲ್ಲಾ ಕೂಡಿ ತಾಲ್ಲೂಕು ಮುಖ್ಯಪಟ್ಟಣವಾದ ಬೇಲೂರಲ್ಲಿ ವೀರಶೈವ ಸ್ಟೂಡೆಂಟ್ಸ್ ಹೋಂ ಆಗಬೇಕೆಂದು ನಿರ್ಧರಿಸಿದ ಮೇರೆ ಈ ತಾಲ್ಲೂಕು ವೀರಶೈವ ಶ್ರೀಮಂತರಲ್ಲೆಲ್ಲಾ ಅಗ್ರಗಣ್ಯರೂ ದೊಡ್ಡ ಕಾಫಿಪ್ಲಾಂಟರೂ ಆದ ಬೆಳ್ಳಾವರದ ಕಾಫಿಪ್ಲಾಂಟರ್ ಶ್ರೀಯುತ ದೇವಪ್ಪಗೌಡ ಬಿ. ಪಿ. ಮಲ್ಲೇಗೌಡರು ತಾವು ಸ್ವತಃ 1 ಬಿಲ್ಡಿಂಗ್ ಕಟ್ಟಿಸಿಕೊಡುವದಾಗಿ ವಾಗ್ದಾನಮಾಡಿದ ಕೂಡಲೇ ಶ್ರೀ ಜಗದ್ಗುರು ಪರ್ವತಸಂಸ್ಥಾನದಿಂದ 3000 ಸಾವಿರ ರೂಪಾಯಿಗಳನ್ನೂ ಮಹಾಸಂಸ್ಥಾನದ ಸಂದರ್ಶನಾರ್ಥಿಗಳೂ ಗುರು ಮತ್ತು ಸಮಾಜಸೇವಾಧುರೀಣರೂ ಆದ ಮ|| ರಾ|| ಗಂಗಪ್ಪಾ ಅಣ್ಣಾ ರುದ್ರಪ್ಪ ಗಡಿಗಿ, ಶ್ರೀಮಂತ ಶಿದ್ದಾಪುರ ಇವರು 125 ರೂಪಾಯಿಗಳನ್ನೂ ಕೊಡಲೆ ವಾಗ್ದಾನಮಾಡಿದ ಅನಂತರ ನೆರದಿದ್ದ ವೀರಶೈವರು ಅವರ ಶಕ್ತ್ಯಾನುಸಾರದಂತೆ 5000 ಐದು ಸಹಸ್ರದವರಿವಿಗೂ ವಾಗ್ದಾನಮಾಡಿದರು, ಮೊದಲ 3 ಮೂರು ತಿಂಗಳಲ್ಲಿ ಮಹಾಸಂಸ್ಥಾನದ ವತಿಯಿಂದ ಸದರಿ ಮಠದಲ್ಲಿ ವಿಸಿಟಿಂಗು ಕೊಡಬೇಕಂತಲೂ ಆದಕ್ಕೆ ತಾಲ್ಲೂಕಾಮಳೆ ವೀರಶೈವರಿಂದ 20000 ಇಪ್ಪತ್ತು ಸಹಸ್ರದವರಿವಿಗೂ ಫಂಡು ಕೂಡಿಸಬೇಕೆಂತಲೂ, ಇದಕ್ಕೆ ಸಮಾಜಸೇವಾಧುರೀಣರಾದ ಶ್ರೀಮಂತ ಗಡಿಗಿ ಗಂಗಪ್ಪ ಅಣ್ಣನವರು 1-2 ಮಾಸ ದೇಹಶ್ರಮಕ್ಕೆ ಭಾಗಿಗಳಾಗಬೇಕೆಂತಲೂ ಮೊಕ್ತೆಸರ್ ಪಾಟೀಲ್ ಚಿನ್ನಗದ ದೇವಪ್ಪಗೌಡರು ಅಭಿಪ್ರಾಯಪಟ್ಟಂತೆ (1) ಬೆಳ್ಳಾವರದ ಕಾಫಿಪ್ಲಾಂಟರ್ ದೇವಪ್ಪಗೌಡ ಬಿ. ಪಿ. ಮಲ್ಲೇಗೌಡರವರು (2) ನಾಡುಪಾಟೀಲ ಶಿವೇಗೌಡರು (3) ಕೋಗೋಡು ಪಾಟೀಲ್ ಮಲ್ಲೇಗೌಡರು (4) ಚೀಕನಹಳ್ಳಿ ಪಾಟೀಲ್ ಬೀರಯಪ್ಪಗೌಡರು (5) ಕೆರಗೋಡು ಯಜಮಾನಗೌಡರು ಈ ಐದು ಜನರನ್ನು ಮೆಂಬರನ್ನಾಗಿ ಚುನಾಯಿಸಬೇಕೆಂದು ನಿರ್ಧರಿಸಿದ್ದಾಯಿತು. ಮಲೆನಾಡು ತಪ್ಪಿನಲ್ಲಿ 1 ಗ್ರಾಮಕ್ಕೆ 3-4 ಮನೆ ವೀರಶೈವರಿದ್ದು ಗೌನರ್‌ಮೆಂಟು ಸ್ಕೂಲುಗಳಿಲ್ಲದ್ದರಿಂದ ಬಡವರ ಮಕ್ಕಳಿಗೆ ವಿದ್ಯಾಭ್ಯಾಸದ ಸೊಂತು ಕೂಡ ಇಲ್ಲದೆ ಇತ್ತು. ಇಂಥಾ ಕೊಂದರೆಯನ್ನು ನೋಡಿ ಮಹಾಸಂಸ್ಥಾನದವರು ಬೆಳ್ಳಾವರದ ಕಾಫಿಪ್ಲಾಂಟರು ಶ್ರೀಮಂತ ಗಡಿಗಿ ಅಣ್ಣನವರೇ, ಈರೀತಿ ಘನತರ ಆಲೋಚನೆಮಾಡಿ ನಮ್ಮ ತಾಲ್ಲೂಕಿನ ವೀರಶೈವರ ಏಳಿಗೆಗೆ ದಾರಿಯನ್ನು ಮಾಡಿದುದಕ್ಕಾಗಿ ಎಷ್ಟು ಕೊಂಡಾಡಿದರೂ ತೀರದು ಎಂದು ಹೇಳಿದರು. ಸಭೆಯು ಬರಕಾಸ್ತು ಆಗುವ ಕಾಲದಲ್ಲಿ ಬೆಂಗಳೂರು ವಿದ್ಯಾವರ್ಧಕ ಸಂಘಕ್ಕೆ 3 ರೂಪಾಯಿಗಳನ್ನೂ ಮೈಸೂರು ಯಜಮಾನ್ ಕೈ|| ವೈ|| ವೀರಸಂಗಪ್ಪನವರ ಸ್ಮರಣಾರ್ಥ 2 ರೂಪಾಯಿಗಳನ್ನೂ ತೆಗೆಯಬೇಕೆಂದು ಶ್ರೀಯುತ ಗಂಗಪ್ಪ ಅಣ್ಣಾ ಗಡಿಗಿ ಶ್ರೀಮಂತ ಶಿದ್ದಾಪುರ ಇವರ ಸೂಚನೆಯಂತೆ ಕಾಫಿಪ್ಲಾಂಟರ್ ಶ್ರೀಯುತ ಬಿ. ಪಿ. ಮಲ್ಲೇಗೌಡರು ಬೆಳ್ಳಾವರದ ಇವರು ತಮ್ಮ ಹಸ್ತದಿಂದ ಕೂಡಲೆ ಕೋಗೋಡು ಪಾಟೀಲ್ ಮಲ್ಲೆಗೌಡರವಶಕ್ಕೆ ಮೇಲ್ಕಂಡವರಿಗೆ ತಲಪಿಸುವಂತೆ ಕೊಟ್ಟ ಅನಂತರ ಜಗದ್ಗುರು ಪಂಚಾಚಾರ್ಯರ ಹೆಸರಿನಿಂದ ಜಯಘೋಷಮಾಡಿ ಸಭೆಯು ಬರಕಾಸ್ತುಮಾಡಲ್ಪಟ್ಟಿತು.

ಪಟೇಲ್ ಮಲ್ಲೆಗೌಡ,
ಚಂದಾದಾರ ಕೋಗೋಡು.

[ಮೇಲ್ಕಂಡ 2 ರೂ. ಯನ್ನು ವಿಶ್ವಾಸದಿಂದ ಸ್ವೀಕರಿಸಿದೆ.—ಪ. ಪ್ರ.]

ಬಡವರ ವಿದ್ಯಾಭ್ಯಾಸಕ್ಕೆ ಮತ್ತು ಉದ್ಧಾರಕ್ಕೆ.

ಪ್ರಿಯಮಹನೀಯರೇ, ಹಂಸಭಾವಿ ವೀರಶೈವ ವಿದ್ಯಾವರ್ಧಕ ಸಂಘದ ನೇತೃತ್ವದ ಕೆಳಗೆ 1919ನೇ ಇಸವಿಯಲ್ಲಿ ಸ್ಥಾಪಿತವಾಗಿ ನಡೆದಿರುವ ಶ್ರೀ ಮೃತ್ಯುಂಜಯ ಇಂಗ್ಲೀಷ್ ಸ್ಕೂಲು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಾ ನಡೆದಿರುವದನ್ನು ತಿಳಿಸಲು ಅತ್ಯಾನಂದವಾಗುತ್ತದೆ. ಹಂಸಭಾವಿ ಎಂಬ ಎರಡು ಸಾವಿರಕ್ಕೆ ಮೇಲಿಲ್ಲದ ಜನಸಂಖ್ಯೆಯುಳ್ಳ ಸಣ್ಣ ಊರಲ್ಲಿ ಸ್ಥಾಪಿತವಾದ ಈ ಸಂಸ್ಥೆಯು ವರ್ಷಕ್ಕೊಂದು ಹೆಜ್ಜೆ ಮುಂದಿಡುತ್ತಾ ಸದ್ಯಕ್ಕೆ ಅತ್ಯಂತ ಊರ್ಜಿತಸ್ಥಿತಿಯಲ್ಲಿರುವದು ಹಳ್ಳಿವಾಡದ ಜನಗಳಲ್ಲಿ ಕೂಡಾ ಆಂಗ್ಲವಿದ್ಯೆಯ ಅಭಿರುಚಿ ಸಹ ಎಷ್ಟು ಹೆಚ್ಚಿದೆ ಎಂಬದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಈ ಸಂಸ್ಥೆಯು ತನ್ನ 5 ವರ್ಷಗಳ ಅವಧಿಯಲ್ಲಿ 5 ನೇ ಯತ್ತೆಯವರೆಗೆ ಅಭ್ಯಾಸಕ್ರಮವನ್ನು ಏರ್ಪಡಿಸಿರುತ್ತದೆ. ಶ್ರೀ ಮೃತ್ಯುಂಜಯ ಸ್ವಾಮಿಗಳವರ ನಮ್ಮ ಶಾಲೆಯಮೇಲಿನ ಕೃಪೆ ಮತ್ತು ಪ್ರತ್ಯಕ್ಷ ಶ್ರಮ! ಶ್ರೀಯುತ ಆರ್. ಎಸ್. ಪಾಟೀಲರ ಸಾಮಾನ್ಯ ಜನ ವರ್ಗದಲ್ಲಿ ವಿದ್ಯಾಭ್ಯಾಸ ಬೆಳಿಸಬೇಕೆಂಬ ಅನಾದೃಶ್ಯ ಆಕಾಂಕ್ಷೆ ಆದಕ್ಕೊಪ್ಪರ ಅವರ ಅವಿಶ್ರಾಂತ ಪ್ರಯತ್ನ ಹಂಸಭಾವಿಯ ವೀರಶೈವ ಮುಖಂಡರ ಶಾಲೆಯ ಮೇಲಣ ಅತ್ಯಂತ ಅಭಿಮಾನ! ಇವೆಲ್ಲವುಗಳಿಗೆ ಅನುರೂಪವಾಗಿ ಶಿಕ್ಷಕವರ್ಗದ ಕಳಕಳಿಯ ದುಡಿತ! ಹೀಗಾಗಿ ಶಾಲೆಯ ಬೆಳವಣಿಗೆಯೂ ಕೀರ್ತಿಯೂ ವರ್ಷಕ್ಕೊಂದು ಚಂದ ಹೆಚ್ಚುತ್ತ ಸುತ್ತುಮುತ್ತಿನ ಜನಗಳಲ್ಲಿ ಈ ಶಾಲೆಯ ಬಗ್ಗೆ ಪ್ರೇಮ, ಉದಾರತನವನ್ನು ದೃಢಪಡಿಸುತ್ತಿರುವವು. ಬಹಳೇನು, ನಮ್ಮ ಸಂಘದ ನಾಲ್ಕಾರು ವರ್ಷಗಳ ಅವಧಿಯ ಅನುಭವದಿಂದ ಹೀಗೆ ಹೇಳಲು ಸಮರ್ಥರಾಗಿದ್ದೇವೆ. 'ಕೇಳುವವರಿಲ್ಲ ಸಮಾಜಕ್ಕಾಗಿ ನಿಸ್ವಾರ್ಥವಾಗಿ ಕೆಲಸಮಾಡಲು ತಯಾರಿರುವ ವಿದ್ಯಾವಂತ ತರುಣರಿಲ್ಲ. ಇಷ್ಟೆ ಹೊರತು ನಮ್ಮ ದೇಶದಲ್ಲಿ ಕೊಡುವವರ ಕೊರತೆಯಿಲ್ಲ' ಯಾಕಂದರೆ—ನಮ್ಮ ಶಾಲೆಗೆ ಇಂಥ ಬರದ, ಇಂಥ ತಿಕ್ಕಷ್ಟ, ಇಂಥ ದುರ್ಧರ ಕಾಲದಲ್ಲಿಯೂ ಕೂಡಾ ದಾನಗಳೂ, ಸಹಾಯವೂ ಹಣದರೂಪದಿಂದ ಕಾಳಿನರೂಪದಿಂದ ಇನ್ನೂ ಅನೇಕ ಮುಖಗಳಿಂದ ದಿನ ದಿನಕ್ಕೆ ವರ್ಷ ವರ್ಷಕ್ಕೆ ಹೆಚ್ಚುತ್ತಲಿರುವವು. ನಮ್ಮ ಶಾಲೆಯಿಂದ 9 ಜನ ವಿದ್ಯಾರ್ಥಿಗಳು ಈಸಾರೆ 5ನೇ ಯತ್ತೆಲ್ಲಿ ಪಾಸಾಗಿ ಧಾರವಾಡ, ಹುಬ್ಬಳ್ಳಿ, ಬೆಳಗಾಂವ ಮುಂತಾದ ಹೈಸ್ಕೂಲುಗಳಿಗೆ ಹೋಗಿರುವರು. ಅವರ ಅಭ್ಯಾಸವು ಬಹಳೇ ಚನ್ನಾಗಿ ಆಗಿರುತ್ತದೆಂದು ಆ ಆ ಶಾಲೆಯ ಪ್ರಿನ್ಸಿಪಾಲರು ಅಭಿಪ್ರಾಯ ಕೊಟ್ಟಿರುತ್ತಾರೆ. ಅಂದಮೇಲೆ ಇಲ್ಲಿಯ ಅಭ್ಯಾಸವು ಎಷ್ಟು ಚನ್ನಾಗಿ ನಡೆದಿರುವದೆಂಬುವದು ಸರ್ವಜನಕ್ಕೆ ಸ್ಪಷ್ಟವಾಗಿ ವಿದಿತವಾಗಬಹುದು. ಹಳ್ಳಿವಾಡದ ವಿದ್ಯಾರ್ಥಿಗಳಿಗೆ ದೊಡ್ಡ ಪಟ್ಟಣಗಳಲ್ಲಿದ್ದು ಆಂಗ್ಲ ವಿದ್ಯಾಭ್ಯಾಸ ಮಾಡುವದು ಈಗಿನ ಕಾಲದಲ್ಲಿ ಬಹಳ ಖರ್ಚಿನ ಕೆಲಸವಾಗಿರುತ್ತದೆ. ಇಂಥ ಖರ್ಚನ್ನು ಅದಷ್ಟು ಕಡಿಮೆಮಾಡಿ ಹಳ್ಳಿವಾಡದ ವಿದ್ಯಾರ್ಥಿಗಳಿಗೆ ಆಂಗ್ಲ ವಿದ್ಯಾಭ್ಯಾಸದ ಸೌಲಭ್ಯವನ್ನು ಒದಗಿಸಿಕೊಡುವದೇ ಈ ಸಂಸ್ಥೆಯ ಮುಖ್ಯೋದ್ದೇಶವಾಗಿರುತ್ತದೆ. ಇಲ್ಲಿ ಬೋರ್ಡಿಂಗಿನಲ್ಲಿ ವಿದ್ಯಾರ್ಥಿಗಳಿಗೆ ಊಟದ ಏರ್ಪಾಡು ಸಹಾ ಮಾಡಿರುತ್ತದೆ. ಈ ಸಾರೆ 100ಕ್ಕೆ 50 ವಿದ್ಯಾರ್ಥಿಗಳನ್ನು ಫ್ರೀಯಾಗಿ ತೆಗೆದುಕೊಳ್ಳಲು ಠರಾಯಿಸಿರುತ್ತದೆ. ಊಟದವರಿಗೂ ತಿಂಗಳಿಗೆ 3 ರೂಪಾಯಿ ಅಂದರೆ ಅತ್ಯಂತ ಸೋವಿ ಖರ್ಚು ಆಗುತ್ತದೆ. ಅಲ್ಲದೆ ಈ ವರ್ಷ 4-5 ನೇ ಯತ್ತೆಯನ್ನು ಸೇರತಕ್ಕವರು ಎಷ್ಟು ವಿದ್ಯಾರ್ಥಿಗಳು ಬಂದರೂ ಅವರನ್ನು ಬೋರ್ಡಿಂಗಿನಲ್ಲಿ ಫ್ರೀಯಾಗಿ ತೆಗೆದುಕೊಳ್ಳುವುದು. [illegible]

ಅರ್ಜಿಗಳು ಬಂದಿರುತ್ತವೆ. ಬರುವ ಅಪೇಕ್ಷೆಯುಳ್ಳವರು ಕೆಳಗೆ ಸಹಿಮಾಡಿದವರ ಕಡೆಗೆ ಜೂನ್ 20ನೇ ತಾರೀಖಿನ ಒಳಗಾಗಿ ಅರ್ಜಿ ಕಳಿಸತಕ್ಕದ್ದು.

ತಮ್ಮ ಸಮಾಜ ಬಂಧುಗಳು.
ಚನವೀರಪ್ಪಾ, ಬಳಗಾನೂರ, ಸೋಮಪ್ಪಾ, ಹುಚಗೊಂಡ್ರ,
ಜಾಯಿಂಟ್ ಸೆಕ್ರೆಟರಿಗಳು ವೀರಶೈವ, ವಿದ್ಯಾವರ್ಧಕ ಸಂಘ.

ಹಿಂದುಸ್ಥಾನದ ಧಾರ್ಮಿಕ ಇತಿಹಾಸವು.

ಭಾರತದ ಧಾರ್ಮಿಕ ಇತಿಹಾಸವೆಂಬುವದೊಂದು ಗ್ರಂಥವನ್ನು ಕಲ್ಕತ್ತೆಯಲ್ಲಿ ಆರ್. ಡಿ. ವಾಹಿಣೀ ಅಂಡ್ ಕಂಪನಿಯವರು ಪ್ರಸಿದ್ಧಪಡಿಸಿರುವರು. ಆ ಗ್ರಂಥದ ಆಕಾರವು ದೊಡ್ಡದಿರುವದಲ್ಲದೆ ಅದರಲ್ಲಿ ಹಿಂದುಸ್ಥಾನದಲ್ಲಿರುವ ಎಲ್ಲ ಮತಗಳ ಅಂದರೆ ಬುದ್ಧ, ಮಾಧ್ವ, ರೇವಣಸಿದ್ಧ, ರಾಮಾನುಜ, ಕಬೀರ, ಆರ್ಯ ಮೊದಲಾದ 80-90 ಸಮಾಜಗಳ ಧರ್ಮಸಂಬಂಧ ವಿಷಯಗಳು ಬರೆಯಲ್ಪಟ್ಟಿರುವವು. ಅದರಲ್ಲಿ ವೀರಶೈವಮತದ ವಿಷಯವಾಗಿ ಬರೆದಿರುವದನ್ನು ನೋಡಿದರೆ ಪ್ರತಿಯೊಬ್ಬ ವೀರಶೈವನಿಗೆ ವ್ಯಸನವೂ ಆಶ್ಚರ್ಯವೂ ಉಂಟಾಗದೆ ಇರಲಾರದು. ಅದರಲ್ಲಿ ಆಮೂಲಾಗ್ರವಾಗಿ ನಿಂದೆಯು ಹೊರತು ಮತ್ತೊಂದಿರುವದಿಲ್ಲ. ಈ ಮತದಲ್ಲಿ ಅಸ್ಪೃಶ್ಯರೂ ಸಹ ಸೇರಬಹುದೆಂಬುವದೇ ಮೊದಲಾದ ಎಷ್ಟೋ ಅಸಹ್ಯ ಅಪಮಾನಜನಕಗಳಾದ ಶಬ್ದಗಳನ್ನಾಡಿರುವರು. ಈ ಗ್ರಂಥವು ವೀರಶೈವರ ವಸತಿಸ್ಥಳವಾದ ಕರ್ನಾಟಕಕ್ಕೆ ಅತಿದೂರದಲ್ಲಿರುವ ದೇಶದಲ್ಲಿ ಪ್ರಸಿದ್ಧಿಯಾಗಿರುವದರಿಂದ, ವೀರಶೈವರಿಗೆ ಆ ಗ್ರಂಥದ ಪರಿಚಯವು ಆಗಿರುವದಿಲ್ಲ. ಸಿ. ಪಿ. ಯೂ. ಪಿ., ಬಿಹಾರ, ಬೆಂಗಾಲ ಮೊದಲಾದ ಪ್ರಾಂತಗಳಲ್ಲಿ ಮಾತೃಭಾಷೆಯಾಗಿರುವ ಹಿಂದೀ ಭಾಷೆಯಲ್ಲಿ ಪ್ರಸಿದ್ಧಪಡಿಸಿರುವದರಿಂದ ಈ ಪ್ರಾಂತಗಳಲ್ಲಿ ಆ ಗ್ರಂಥದ ಪ್ರಚಾರವು ವಿಶೇಷವಾಗಿ ಆಗಿರುವದು. ಅನ್ಯಮತಸ್ಥರಿಂದ ಯಾವಾಗಲೂ ಇಂಥ ಸಂಭಾವನೆಗಳು ವೀರಶೈವರಿಗೆ ಆಗುತ್ತಲೇ ಇರುತ್ತವಷ್ಟೆ? ಅದರಂತೆ ಇದಾದರೂ ಒಂದು ಸಂಭಾವನೆಯಾಗಿರುವದು. ವೀರಶೈವರ ತತ್ವಗಳನ್ನೂ, ಆಚಾರವಿಚಾರಗಳನ್ನೂ, ನಡೆನುಡಿಗಳನ್ನೂ, ವೈದಿಕತ್ವವನ್ನೂ ತೋರಿಸುವಂಥ ಒಂದು ಗ್ರಂಥವು ಮುಖ್ಯಮುಖ್ಯ ಭಾಷೆಗಳಲ್ಲಿ ಎಲ್ಲಿಯವರೆಗೆ ಪ್ರಕಟವಾಗುವದಿಲ್ಲವೋ ಅಲ್ಲಿಯವರೆಗೆ ವೀರಶೈವರ ವಿಷಯಕ್ಕೆ ಅನ್ಯಸಮಾಜದವರ ತಪ್ಪು ತಿಳುವಳಿಕೆ ದೂರಾಗುವದಿಲ್ಲ. ವಾಚಕರೆ, ಮುಖ್ಯವಾಗಿ ನಮ್ಮ ಸಮಾಜದಲ್ಲಿಯೇ ಒಂದು ಸಿದ್ಧಾಂತವಿಲ್ಲ; ಒಂದೇ ಆಚಾರವಿಲ್ಲ. ಒಬ್ಬರು ಒಂದನ್ನು ಬರೆದರೆ ಮತ್ತೊಬ್ಬರು ಮತ್ತೊಂದನ್ನು ಬರೆಯುವರು. ಹೀಗೆ ಸಮಾಜದಲ್ಲಿಯೇ ಅಂಧಕಾರಮಯವಿರುವಾಗ, ಅನ್ಯಸಮಾಜದವರು ತಪ್ಪುತಿಳಿದುಕೊಳ್ಳುವದರಲ್ಲಿ ಏನು ಆಶ್ಚರ್ಯ? ಶ್ರೀಮತ್ಪಂಚಾಚಾರ್ಯರು ಪಂಚಮುಖಗಳಿಂದ ಹುಟ್ಟಿರುವರೆಂದು ಆಗಮಪ್ರಮಾಣಗಳಿರುತ್ತವಷ್ಟೆ? ಕೆಲವರು ಛೇ ಮುಖದಲ್ಲಿ ಎಲ್ಲಾದರೂ ಹುಟ್ಟುವದುಂಟೆ? ಎಂದು ಬರೆದು ತಮ್ಮ ಲಚಂಡತನದ ಪಾಂಡಿತ್ಯವನ್ನು ಪ್ರದರ್ಶನ ಮಾಡಿರುವರು. ಮಹಾತ್ಮರು ಜನಿಸಲಿಕ್ಕೆ ಇಂಥ ಸ್ಥಳವೆಂದು ನೇಮಕ ಉಂಟೆ? ಅಗಸ್ತ್ಯಮಹರ್ಷಿಗಳು ಕೊಡದಲ್ಲಿ ಯಾಕೆ ಹುಟ್ಟಿದರು? ನಾಶಿಕಮಹರ್ಷಿಗಳು ನಾಶಿಕದಲ್ಲಿ ಹೇಗೆ ಹುಟ್ಟಿದರು? ಬ್ರಹ್ಮನು ನಾಭಿಯಲ್ಲಿ ಯಾಕೆ ಉತ್ಪನ್ನನಾದನು? ಇರಲಿ. ಇದರಂತೆ ಸಮಾಜದ ಮುಖ್ಯಮುಖ್ಯ ವಿಷಯಗಳಲ್ಲಿ ಎಷ್ಟು ಭೇದಭಾವಗಳಿರುತ್ತವೆಂಬುವದು ಈಗಿನ ವಾತಾವರಣದಲ್ಲಿ ಎಲ್ಲರಿಗೂ ಗೊತ್ತೇ ಇದೆ. ಅಂದಮೇಲೆ ಅನ್ಯಸಮಾಜದವರು ಇವರ ವಿಷಯಕ್ಕೆ ತಪ್ಪು ತಿಳಿದುಕೊಳ್ಳುವದರಲ್ಲಿ ಏನು ಆಶ್ಚರ್ಯ? ಮುಖ್ಯವಾಗಿ ವೀರಶೈವರಲ್ಲಿಯ ಐಕಮತ್ಯವು ದೂರಾಗಿ ನಾವು ಮೇಲೆ ಹೇಳಿದಂಥ ಧಾರ್ಮಿಕಗ್ರಂಥ ಪ್ರಕಟನೆಯ ಆವಶ್ಯಕತೆಯು ಅತಿಶಯವಾಗಿರುವದು. ವಾಚಕವೃಂದವೇ, ಯಜಮಾನ್ ವೀರಸಂಗಪ್ಪನವರು ಮತ್ತು ವಾರದ ಅಪ್ಪಾಸಾಹೇಬರು ಗತಿಸಿಹೋದ ಮೇಲೆ ವೀರಶೈವರಲ್ಲಿ ಒಂದಾದರೂ ಧಾರ್ಮಿಕಗ್ರಂಥವು ಪ್ರಸಿದ್ಧಿಯಾಗಿರುವದಿಲ್ಲ. ಕೆಲವು ನೋಟೀಸುಗಳು ಮಾತ್ರ ಪ್ರಸಿದ್ಧಿಯಾಗಿರುವವೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಹತ್ತುಹನ್ನೆರಡು ವರ್ಷಗಳಲ್ಲಿ ಒಂದಾದರೂ ಧಾರ್ಮಿಕಗ್ರಂಥವು ಪ್ರಸಿದ್ಧಪಡಿಸಲ್ಪಡದಿರುವದು ಬಹು ಶೋಚನೀಯ ಸಂಗತಿಯಾಗಿರುವದು. ಸುಮ್ಮಸುಮ್ಮನೆ ಅಲ್ಲಿ ಇಂಥ ಸಭೆಯು ಕೂಡಿತ್ತು, ಇಲ್ಲಿ ಇಂಥ ದೊಡ್ಡದೊಡ್ಡ ಅಪ್ಪನವರು ಬಂದಿದ್ದರು, ಅಲ್ಲಿ ಶಿವಯೋಗಿಗಳ ವ್ಯಾಖ್ಯಾನವಾಯಿತು ಎಂಬು ಆಡಂಬರದಲ್ಲಿಯೇ ಕಾಲವು ಹೋಗುವದಲ್ಲದೆ ನಿಜವಾಗಿ ಸಮಾಜಕ್ಕೆ ಎಷ್ಟು ಉಪಕಾರವಾಗಲಾರದು. ಸಾಧಕಬಾಧಕಗಳಿಂದ ಶೋಧಿಸಿ ಇಂಥ ಗ್ರಂಥವನ್ನು ಬರೆಯಿಸಲಿಕ್ಕೆ ಬಹಳ ಖರ್ಚ ಶ್ರಮವೂ ಹಿಡಿಯಬಹುದು. ನಮ್ಮ ಸಮಾಜದಲ್ಲಿ ಬೇರೆ ಕಾರ್ಯರೂಪದಿಂದ ಎಷ್ಟೋ ದ್ರವ್ಯವು ಖರ್ಚಾಗಿಹೋಗುತ್ತದೆ. ಈಗಿನ ಕಾಲದಲ್ಲಿ ಪ್ರಮಾಣಗ್ರಂಥಗಳಿಲ್ಲದೆ ಯಾರೂ ನಂಬುವದಿಲ್ಲ. ಕೇವಲ ಮಡಿವಾಳಪ್ಪನವರ ವಚನದಿಂದಾಗಲೀ ಕಪೋತಪ್ಪನವರ ಚರಿತ್ರೆಯಿಂದಾಗಲಿ ಕಾರ್ಯವಾಗುವಂತಿರುವದಿಲ್ಲ (ನಿಂದೆಯೆಂದು ತಿಳಿಯಬಾರದು). ಅದ್ದರಿಂದ ಇಂಥ ಗ್ರಂಥದ ಆವಶ್ಯಕತೆಯು ಉಂಟೊ ಇಲ್ಲವೊ ಎನ್ನುವದನ್ನು ಬುದ್ಧಿಶಾಲಿಗಳಾದ ವಾಚಕರೇ ವಿಚಾರಮಾಡಲಿ.

ಚಂದ್ರಶೇಖರಶಾಸ್ತ್ರಿ, ಹಿರೇಮಠ, ಹೊಳಲು.

ದಾವಣಗೆರೆ ಶ್ರೀ ಬಕ್ಕೇಶ್ವರಸ್ವಾಮಿಯ ರಥೋತ್ಸವ.

ಮಹಾಸತ್ಪುರುಷರು ಜಗದುದ್ಧಾರಕರ್ತೃಗಳಾಗಿ ಆಗಾಗ್ಗೆ ಈ ಲೋಕದಲ್ಲಿ ಅವತರಿಸಿ ಜನರ ಅಜ್ಞಾನವನ್ನು ಹೋಗಲಾಡಿಸಿ, ಭಕ್ತಿ ಜ್ಞಾನಗಳುಂಟಾಗುವಂತೆ ಮಾಡಿ ತನ್ಮೂಲಕ ಮೋಕ್ಷಸಂಪಾದಿಸಲು ಯೋಗ್ಯರನ್ನಾಗಿ ಮಾಡಿರುವುದೂ, ಮಾಡುತ್ತಿರುವುದೂ ಸರಿಯಷ್ಟೆ. ಅಂಥ ಮಹಾಸತ್ಪುರುಷರ ನಾಮಾವಳಿಯಲ್ಲಿ ಶ್ರೀ ಬಕ್ಕೇಶ್ವರಸ್ವಾಮಿಯ ನಾಮವೂ ಒಂದಾಗಿ ಪ್ರಜ್ವಲಿಸುತ್ತಿದೆ. ಈ ವೀರಶೈವ ಯತಿಶ್ರೇಷ್ಠರು ಈಗ್ಗೆ ನೂರಾರು ವರ್ಷಗಳ ಹಿಂದೆ ನಮ್ಮ ಪವಿತ್ರವಾದ ಕರ್ನಾಟಕದಲ್ಲವತರಿಸಿ, ತಮ್ಮ ಯೋಗ ಮಹಿಮಾತಿಶಯದಿಂದ ಅನೇಕ ಜನರನ್ನುದ್ಧರಿಸಿ ಕೀರ್ತಿಶೇಷರಾಗಿ ಮೆರೆದು ಯೋಗಾನಂದದಲ್ಲಿ ಶಿವೈಕ್ಯರಾದರೆಂಬ ವಿಷಯವು ಜಗದ್ವಿಸ್ತಾರವಾಗಿದೆ. ಇಂಥ ಮಹಾತ್ಮರ ಗದ್ದಿಗೆಯು ಈ ಊರ ಜನರ ಪುಣ್ಯವಿಶೇಷದಿಂದ ಇದೇ ಊರಮಧ್ಯೆ ಪೇಟೆಯಲ್ಲಿ ವಿರಾಜಮಾನವಾಗಿ ಕಂಗೊಳಿಸುತ್ತಿರುವುದು. ಇಂದಿಗೂ ಈ ಮಹಾತ್ಮರ ಪವಾಡಗಳು ಆಗಾಗ್ಗೆ ನಡೆಯುತ್ತಿರುವುದರಿಂದ, ವೀರಶೈವರಷ್ಟೆ ಅಲ್ಲ, ಅನ್ಯಮತದವರೂ ಶ್ರೀ ಸ್ವಾಮಿಯ ಭಕ್ತರಾಗಿದ್ದಾರೆ. ಶ್ರೀ ಬಕ್ಕೇಶ್ವರಸ್ವಾಮಿಯ ರಥೋತ್ಸವ ಮಹಾಕಾರ್ಯವು ಪದ್ಧತಿಯಮೇರೆಗೆ ಇದೇ ಚೈತ್ರ ಶುದ್ಧ ೪ರ ಲಾಗಾಯಿತು ೬ರ ವರೆಗೆ ಮೂರು ದಿವಸ ಬಹು ವೈಭವದಿಂದ ನಡೆಯಿತು. ಸ್ಥಳ ಪರಸ್ಥಳದ ಸಾವಿರಾರು ಭಕ್ತರು ಬಂದಿದ್ದರು. ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಸಂಸ್ಥಾನದಿಂದ, ಆನೆ, ಒಂಟೆ, ಕುದುರೆಗಳು ಕಳುಹಿಸಲ್ಪಟ್ಟಿದ್ದರಿಂದ, ಉತ್ಸವವು ಬಹು ನೇತ್ರಾನಂದಕರವಾಗಿ ಕಾಣಿಸುತ್ತಿತ್ತು. ಅಲ್ಲದೆ, ಸಮಾಜಾಭಿವೃದ್ಧಿಯೇ ತಮ್ಮ ಶಿವಪೂಜೆ ಎಂದು ತಿಳಿದು ಅವಿಶ್ರಾಂತ ಶ್ರಮಪಡುತ್ತಿರುವ ಶ್ರೀ ಮೃತ್ಯುಂಜಯಸ್ವಾಮಿಗಳು ದಯಮಾಡಿಸಿದ್ದರಿಂದ, ಉತ್ಸವವು ಹೆಚ್ಚು ಶೋಭಾಯಮಾನವಾಗಿ ಕಂಗೊಳಿಸುವಂತಾಯಿತು. ಮೊದಲನೆಯ ದಿವಸ ಕಟ್ಟಿದ ಆನೆವಾಹನದ ಮೇಲೆ, 2 ನೆಯ ದಿವಸ ಅಂದವಾಗಿ ಶೃಂಗರಿಸಿ ಕಟ್ಟಲ್ಪಟ್ಟಿದ್ದ ರಥದ ಮೇಲೆ, 3 ನೆಯ ದಿವಸ ಮನೋಹರವಾದ ನಂದಿವಾಹನದ ಮೇಲೆ ಈ ರೀತಿ 3 ದಿವಸ ಶ್ರೀ ಸ್ವಾಮಿಯ ಉತ್ಸವವು ನೆರವೇರಿತು. ರಥೋತ್ಸವ ಸಮಯದಲ್ಲಿ ರಥ ನಿಶಾನೆಯೊಂದನ್ನು ಲೀಲಾವಿಗೆ ಹಿಡಿದಾಗ, ಒಬ್ಬ ಭಕ್ತ ಮಹಾಶಯರು 105 ರೂಪಾಯಿಗೆ ತೆಗೆದುಕೊಂಡು, ಅದನ್ನು ತಿರಿಗಿ ಶ್ರೀ ಸ್ವಾಮಿಗೆ ಸಮರ್ಪಿಸಿದರು. ನಾನಾತರದ ವಾದ್ಯ ವೈಭವಾದಿಗಳಿಂದ ರಥೋತ್ಸವವು ಸಾಗುತ್ತಿರುವಾಗ, ರಥ ಬೀದಿಯ ಇಕ್ಕೆಲಗಳಲ್ಲಿ ಕಿಕ್ಕಿರಿದು ನಿಂತಿದ್ದ ಜನರು ಇಷ್ಟು ವೈಭವದಿಂದ ಶ್ರೀ ಸ್ವಾಮಿಯ ರಥೋತ್ಸವವು ಹಿಂದೆ ಯಾವ ಸಂವತ್ಸರದಲ್ಲಿಯೂ ನಡೆದಿರಲಿಲ್ಲವೆಂದು ಜಯಘೋಷಮಾಡುತ್ತಿದ್ದರು. 3 ನೆಯ ದಿವಸ ನಡೆದ ನಂದಿವಾಹನದುತ್ಸವವು ಸಾಯಂಕಾಲ 5 ಗಂಟೆಗೆ ಶ್ರೀ ಸ್ವಾಮಿಯ ಮಠದಿಂದ ಹೊರಟು, ಎಲ್ಲಾ ಬೀದಿಗಳಲ್ಲಿ ಹೋಗಿ ತಿರುಗಿ ಮಠವನ್ನು ತಲುಪಲು ಮರುದಿವಸ ಪ್ರಾತಃಕಾಲ 6 ಗಂಟೆಯಾಯಿತು. ಕೊನೆಯದಿವಸ ಶ್ರೀ ಮಠದಲ್ಲಿ ಶಿವಕೀರ್ತನೆಯನ್ನು ಮಾಡಿಸಿ, ಮಹೋತ್ಸವಕಾರ್ಯವನ್ನು ಸಮಾಪ್ತಿಮಾಡಬೇಕೆಂದಿತ್ತು. ಆದರೆ, ಸಕಾಲಕ್ಕೆ ಸರಿಯಾದ ಕೀರ್ತನಕಾರರು ದೊರೆಯದೆ ಹೋದುದರಿಂದ ಈ ಕಾರ್ಯವು ನಡೆಯಲಿಲ್ಲ. ಆದಾಗ್ಯೂ ಮರುದಿವಸ ಸಾಯಂಕಾಲ ಸಂಗೀತಸಭೆ ಸೇರಿ, ಮೈಸೂರು ಆಸ್ಥಾನದ ಸಂಗೀತವಿದ್ವಾನರಾದ ಮ|| ರಾ|| ಬಿ. ರಾಚಪ್ಪನವರ ಮಂಜುಳವಾದ ಸಂಗೀತವೂ, ಪ್ರಸಿದ್ಧರಾದ ಮ|| ರಾ|| ಮುಳವಳ್ಳಿ ಸುಬ್ಬಣ್ಣನವರ ಪಿಟೀಲ್ ಬಾರಿಸುವಿಕೆಯೂ ಬಹು ಇಂಪಾಗಿ ನಡೆದವು. ದಾವಣಗೆರೆ ಸಬ್‌ಡಿವಿಜನ್ ಸಾಹೇಬರೇ ಮೊದಲಾದ ಅಧಿಕಾರಿಗಳೂ, ವಕೀಲಿಮಂಡಳಿಯವರೂ, ಶಾಸ್ತ್ರಿಗಳೂ, ಪುರಪ್ರಮುಖರೂ ಸಭೆಗೆ ಆಗಮಿಸಿ ತುಂಬಾ ಆನಂದಪಟ್ಟರು. ಹಲವು ಭಕ್ತರ ಇಷ್ಟದಮೇರೆಗೆ ಶ್ರೀ ಸ್ವಾಮಿಯ ಆಶೀರ್ವಾದಪೂರ್ವಕವಾದ ಕೈಗೆಕಟ್ಟುವ ಚಿನ್ನದಪದಕವು ರಾ|| ರಾಚಪ್ಪನವರಿಗೂ, ನಾಣ್ಯರೂಪವಾದ ಬಹುಮಾನವು ರಾ|| ಸುಬ್ಬಣ್ಣನವರಿಗೂ, ಸಬ್‌ಡಿವಿಜನ್ ಸಾಹೇಬರ ಹಸ್ತದಿಂದ ಕೊಡಲ್ಪಟ್ಟವು. ಶ್ರೀ ಸ್ವಾಮಿಗೆ ಮಂಗಳಾರತಿ ಮಾಡಿ, ಸಭಿಕರಿಗೆ ಗಂಧ, ಪುಷ್ಪಗಳನ್ನು ಕೊಟ್ಟನಂತರ ಸಭೆಯು ವಿಸರ್ಜನೆಯಾಯಿತು. ಶ್ರೀ ಬಕ್ಕೇಶ್ವರಸ್ವಾಮಿ ಮಠದ ಆಡಳಿತದ ವಿಷಯದಲ್ಲಿ ಹಲವು ಸನ್ನಿವಾತಿರಿಕ್ತರಗಳುಂಟಾಗಿ ಆ ಮೂಲಕ ಶ್ರೀ ಸ್ವಾಮಿಯ ಕಾರ್ಯಗಳು ಸುಲಲಿತವಾಗಿಯೂ, ಕ್ರಮವಾಗಿಯೂ ನಡೆಯಲವಕಾಶವಿಲ್ಲವೆಂದು ತಿಳಿದು, ರಥೋತ್ಸವಕ್ಕೆ ಮುಂಚೆ ಶ್ರೀ ಮಠದಲ್ಲಿ ಭಕ್ತಾದಿಜನರು ಸಭೆಸೇರಿ ಹಿಂದಿನ ಆಡಳಿತದ ಎಲ್ಲಾ ವಿಷಯಗಳನ್ನು ಚರ್ಚಿಸಿ, ಕೊನೆಗೆ ಶ್ರೀ ಮಠದ ಸಕಲಕಾರ್ಯಗಳು ಜವಾಬ್ದಾರಿಯಿಂದಲೂ, ಸಕ್ರಮದಿಂದಲೂ ನಡೆಯಬೇಕೆಂಬ ಉದ್ದೇಶದಿಂದ, "ಶ್ರೀ ಬಕ್ಕೇಶ್ವರಸ್ವಾಮಿ ಮಠದ ವ್ಯವಸ್ಥಾಪಕ ಕಮಿಟಿ" ಎಂಬುದೊಂದು ಸಂಘವನ್ನು ಸರ್ವಾನುಮತದಿಂದ ಸ್ಥಾಪಿಸಿ, ಅದಕ್ಕೆ ಯೋಗ್ಯರಾದ ಆಫೀಸ್ ಬೇರರ್ಸ್‌ಗಳನ್ನು ಚುನಾಯಿಸಿದ್ದಲ್ಲದೆ, ಸರಿಯಾದ ನಿಯಮಗಳನ್ನು ಮಾಡಿರುವರು. ಮತ್ತು "ಶ್ರೀ ಬಕ್ಕೇಶ್ವರಸ್ವಾಮಿ ಫಂಡ್" ಎಂಬುದೊಂದು ಧನನಿಧಿಯನ್ನೂ ಶೇಖರಿಸಲುಪಕ್ರಮವಾಯಿತು. ಈಸಾರೆ ಆದ ರಥೋತ್ಸವವು ಈ ಕಮಿಟಿಯವರ ಅಧಿಕಾರಕ್ಕೊಳಪಟ್ಟಿದ್ದರಿಂದಲೇ, ಅಷ್ಟು ವೈಭವದಿಂದಲೂ, ಉತ್ಸಾಹದಿಂದಲೂ ನಡೆಯಲು ಕಾರಣವಾಯಿತೆಂದು ಹೇಳಬಹುದು. ಈ ವರೆಗೂ ಆಡಳಿತವು ಸರಿಯಾಗಿರಲಿಲ್ಲವೆಂಬ ಶಂಕೆಯಿಂದ ಅನೇಕ ಭಕ್ತರು ಶ್ರೀ ಸ್ವಾಮಿಗೆ ತಮ್ಮ ಭಕ್ತಿಪೂರ್ವಕವಾದ ನಗ, ನಾಣ್ಯ, ಆಭರಣಾದಿ ಸಾಮಾನುಗಳನ್ನು ಅರ್ಪಿಸಲನುಮಾನಮಾಡಿ ನಿಲ್ಲಿಸಿರಬಹುದು. ಆದರೆ, ಈವಾಗ ತುಂಬಾ ಜವಾಬ್ದಾರಿಯಾದ ಒಂದು ಯೋಗ್ಯ ಕಮಿಟಿಯು ಇರುವಾಗ ಯಾರೂ ಯಾವ ವಿಧವಾದ ಅನುಮಾನಪಡಬೇಕಾದ ಅವಶ್ಯಕತೆಯಿಲ್ಲದೆ? ಅದ್ದರಿಂದ, ಭಕ್ತಾದಿ ಜನರು ಶ್ರೀ ಸ್ವಾಮಿ ಮಠದ ಕಾರ್ಯಾಭಿವೃದ್ಧಿಗೆ ಇನ್ನು ಮುಂದೆ ತುಂಬಾ ಸಹಾಯಮಾಡುತ್ತಾ ಶ್ರೀ ಸ್ವಾಮಿಯ ಮಹಾಕೃಪೆಗೆ ಪಾತ್ರರಾಗುವರೆಂದು ನಂಬಿದೆ. ಈವರೆಗೂ ಶ್ರೀ ಸ್ವಾಮಿ ಮಠದ ಆಡಳಿತವನ್ನು ನಡೆಯಿಸಿಕೊಂಡು ಬಂದಂಥ ಮತ್ತು ಇನ್ನು ಮುಂದೆ ಸಹಾಯಮಾಡುವಂಥ ಭಕ್ತಾದಿ ಜನರಿಗೆ ಶ್ರೀ ಬಕ್ಕೇಶ್ವರಸ್ವಾಮಿಯು ಆಯುರಾರೋಗ್ಯಾದಿ ಸಂಪತ್ತುಗಳನ್ನು ದಯಪಾಲಿಸಿ, ಕಾಪಾಡಲೆಂದು ಹಾರೈಸುತ್ತೇನೆ.

ಬಿ. ಎಸ್. ಕುರುವತ್ತಿ ಕಾರ್ಯದರ್ಶಿ,
ಶ್ರೀ ಬಕ್ಕೇಶ್ವರಸ್ವಾಮಿ ಮಠದ ವ್ಯವಸ್ಥಾಪಕ ಸಂಘ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ಸರ್ವೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪಯೋಗಿಸಿ ಕ್ಲ್ಪಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦ ಕ್ಕೂ ೦—೧೨—೦; ಬಿಳೀಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲ್ಪಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊ
ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ
ರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ
ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ
ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾ
ಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾ
ಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳಪ್ಪ, ಊದಬತ್ತಿ ಷಾಪ್,
11 ದೊಡ್ಡಪ್ಯಾಟೆ ಬೆಂಗಳೂರು

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂ



ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0
12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾ
ವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ
ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅ
ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ
ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ
ಕೊಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾ
ಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮ
ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4
12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0.
ಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿ
ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0.
ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು
ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು
ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ
ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ
ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದ
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗ
[50 31] ಮೈಸೂ

೧೯೨೪ ನೆಯ ಇಸವಿ ಏಪ್ರಿಲ್ ತಾ|| ೨೭ ರಿಂದ ೧೯೨೪ ನೆಯ ಇಸವಿ ಮೇ ತಾ|| ೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧ ನೆಯ ರಕ್ತಾಕ್ಷಿನಾಮ ಸಂವತ್ಸರದ ಚೈತ್ರಬಹುಳ ನವಮಿಯಿಂದ ಬಹುಳ ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
27	ಭಾನು	ನವ	46·1	ಶ್ರವ	5·56
28	ಸೋಮ	ದಶ	43·49	ಧನಿ	4·51
29	[1]ಮಂಗಳ	ಏಕಾ	42·23	ಶತ	4·50
30	ಬುಧ	ದ್ವಾದ	43·5	ಪುಭಾ	6·5
1	[2]ಗುರು	ತ್ರಯೋ	44·41	ಉಭಾ	8·30
2	ಶುಕ್ರ	ಚತು	47·14	ರೇವ	12·6
3	[3]ಶನಿ	ಅಮಾ	51·10	ಅಶ್ವಿ	16·55

(1) ಸರ್ವತ್ರೈಕಾದಶಿ. (2) ಪ್ರದೋಷಃ. (3) ಸರ್ವತ್ರಾಮಾವಾಸ್ಯ, ಕರಗವ್ರತಂ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರು ಸ್ಟಾರ್

REGSITERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಯಸಾ | ಘನಪಥಕೃತಾವತಾರಾ ಪಕ್ಕಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಮಾಳೀಕ್ಷ್ಯದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾಶೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಿಶಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಮೇ ತಾರೀಖು ೪ ನೆಯ ಭಾನುವಾರ. [ಸಂಚಿಕೆ ೧೮

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. [illegible] 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು. 13

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ ಸುಗಂಧ ನಶ್ಯದ ಪುಡಿ.



ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆ[illegible] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು [illegible]ಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು [illegible] ಗೃಹಸ್ಥರುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋ[illegible]. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು. [illegible] ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦. [illegible]ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ. [illegible] ಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯು[illegible]ರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—35] ಪೋ. ಬಾ. ೫೧೦, ಮದರಾಸು.

4 ನೆಯ ಹೊಸಮುದ್ರಣ.

[illegible]ನ್ನ ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ [illegible]ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು [illegible] ಯೂನಿವರ್ಸಿಟಿಯವರ ಸಹಾಯದಿಂದ ಈಗೀಗ ೪ನೆ ಮುದ್ರ[illegible]ಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ನಂತೆ [illegible]ಸಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
ಕೆಂಡಾಪುರ, ಅರಳಗೋಡು ಪಾರ್ಸ್ಟ್, ಹಾಸನ ಡಿ||
[illegible]ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಉತ್ತಮವಾದ ವೀರಶೈವ ಮತಗ್ರಂಥಗಳು.

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—21] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

೧೦೦೦ ರೂ. ಇನಾಮು.
ಮಿರಜದಲ್ಲಿಯ ಆಯುರ್ವೇದಿಕ
ಸುಪ್ರಸಿದ್ಧ ವೈದ್ಯ ಇವರ
ಸರ್ವೋತ್ಕೃಷ್ಟ.

ಧಿಕ್ಕಾರ ಮಾಡಿದರೆ ಕುಕ್ಕರಿಸಿ ಹೋದೀರಿ.

ವಜ್ರಾಂಗಸುಂದರಪಾಕ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ಕೆಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ತಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರನೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೇಶಿ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಥಲ್ಯಾಗೊಂಡ, ಪಂಚಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ, ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಅದನಂತರ ೨ ತೊಲಿ ವಡೆ. ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯುಲ್ಲ. ಸ್ತ್ರೀವರ್ಜ್ಯೆಯುಲ್ಲ. ೨೧ ದಿವಸ ಸಾಲುವ ೪೫ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಅರಜಾತ್ಯರಿಮಾಡಿರಿ.

ಕಾಗದ ಬರೆಯುವವರು ತಮ್ಮ ಪೂರ್ಣ ಅಡ್ರೆಸ್ ಮೋಕ್ಯಾಂ ಪೋಸ್ಟ್ ಸಹ ಬರೆಯಿರಿ.

[50—38] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಅದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಗಿ.

ಗ್ರಂಥಸಿಕ್ಕುವಸ್ಥಳ:—
ಹೊಸಮಠದ ಚನ್ನಯ್ಯನವರು ಹರಿಹರ,
24—4 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[50—16] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇಂಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯುಬ್ಬಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆನೋವು, ಕಟ್ಟಿ, ಕಳ್ಳಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೦ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[illegible] [illegible]

ಮೈಸೂರು ಸ್ಟಾರ್.

೧೯೨೫ ನೆಯ ಇಸವಿ ಮೇ ತಾ|| ೪ ನೆಯ ಭಾನುವಾರ.

ಶ್ರೀ ಬಸವೇಶ್ವರ ಜಯಂತಿ.

ಭೂಲೋಕದಲ್ಲಿ ಶಿವಭಕ್ತಿ ಶಿವಮತಾಚಾರಗಳು ವಿಲವಾಗಿದ್ದ ಕಾಲದಲ್ಲಿ ಅವನ್ನು ಪುನರುದ್ಧರಿಸುವುದಕ್ಕಾಗಿ ಶಿವನಾಜ್ಞೆಯಮೇರೆ ಭೂತಲದಲ್ಲಿ ಅವತರಿಸಿ ಕಲ್ಯಾಣಪಟ್ಟಣದ ಅರಸನಾಗಿದ್ದ ಬಿಜ್ಜಳನ ಮಂತ್ರೀಶನಾಗಿದ್ದ ಧರ್ಮಸ್ವರೂಪ ಶ್ರೀ ಬಸವೇಶ್ವರನ ಜಯಂತ್ಯುತ್ಸವವು ಈ ತಾ|| 6ನೆಯ ಮಂಗಳವಾರದ ದಿವಸ ಭರತಖಂಡದ ವೀರಶೈವಮಂಡಲಿಯವರಿಂದೆಲ್ಲಾ ಆಚರಿಸಲ್ಪಡತಕ್ಕದಾಗಿದೆ. ಈ ಮಹೋತ್ಸವ ಸಮಾರಂಭದಲ್ಲಿ ಭಾಗಿಗಳಾಗತಕ್ಕ ಮೈಸೂರು ಸರ್ಕಾರಿಯುದ್ಯೋಗದಲ್ಲಿರುವ ವೀರಶೈವರು ಮೊದಲಾದವರಿಗೆ ಆ ದಿವಸ ರಜವು ಕೊಡಲ್ಪಟ್ಟಿರುವುದಕ್ಕಾಗಿ ದಯಾಳು ಸರ್ಕಾರದವರನ್ನು ನಾವು ವಂದಿಸುತ್ತೇವೆ.

“ಜಯಂ ಪುಣ್ಯಂಚ ತನುತೇಜಯಂತೀಂ ತೇನತಾಂ ವಿದುಃ” ಎಂಬ ವಚನಪ್ರಕಾರ ಜಯವನ್ನೂ, ಪುಣ್ಯವನ್ನೂ ಉಂಟುಮಾಡುವ ಕಾರಣದಿಂದ ಈ ಉತ್ಸವಕ್ಕೆ ಜಯಂತೀ ಎಂಬ ಹೆಸರು ಬಂದಿರುವುದು. ಶ್ರೀ ಬಸವೇಶ್ವರನು ಯಾವರೀತಿಯಲ್ಲಿ ತನ್ನ ತನುಮನ ಧನಗಳನ್ನೆಲ್ಲಾ ಶಿವಮತೋದ್ಧಾರಕ್ಕಾಗಿ ಸಮರ್ಪಿಸಿ ಕೃತಕೃತ್ಯನಾದನೋ ಅದನ್ನು ಅವನ ಪವಿತ್ರತಮವಾದ ಚರಿತ್ರೆಯಿಂದ ತಿಳಿದುಕೊಂಡು ಪ್ರತಿಯೊಬ್ಬ ವೀರಶೈವನೂ ತನ್ನ ಶಕ್ತಿವಂಚನೆಯಿಲ್ಲದೆ ಸ್ವಮತಾಭ್ಯುದಯಕ್ಕಾಗಿ ಯಾವ ತೆರದ ಸೇವೆಯನ್ನಾದರೂ ಮಾಡಲು ಈ ಶುಭದಿವಸದಲ್ಲಿ ಸಂಕಲ್ಪಮಾಡುವುದೇ ಜಯವನ್ನೂ ಪುಣ್ಯವನ್ನೂ ಉಂಟುಮಾಡಲು ಸಾಧಕವಾದ ಜಯಂತ್ಯುತ್ಸವವೆನಿಸಿಕೊಳ್ಳುವುದು. ಇದನ್ನು ಸಕಲ ವೀರಶೈವರೂ ಶ್ರೀ ಬಸವೇಶ್ವರನ ಚರಿತಾದರ್ಶದಿಂದ ನೆರವೇರಿಸಿ ಕೃತಾರ್ಥರಾಗಲೆಂದು ಕೋರುವೆವು.

ಬ್ರಿಟಿಷ್ ಪ್ರಭುತ್ವಾಯವ್ಯಯ.

ಬ್ರಿಟಿಷ್ ಪ್ರಭುತ್ವದ ಕೋಶಾಧ್ಯಕ್ಷರಾದ ಮಿ|| ಫಿಲಿಪ್ ಸ್ನೋಡನ್ನರವರು ಪ್ರಭುತ್ವದ ಆಯವ್ಯಯಗಳ ಸ್ಥಿತಿಯನ್ನು ಕುರಿತ ತಮ್ಮ ಲೇಖನವನ್ನು ತಾ|| 29 ರಲ್ಲಿ ನೆರದಿದ್ದ ಕಾಮನ್ಸ್ ಸಭೆಯ ಮುಂದಿಟ್ಟರು. ಸಭೆಯು ಕಿಕ್ಕಿರಿಸಿದ್ದಿತು. ಪ್ರೇಕ್ಷಕರ ಸಂಖ್ಯೆಯು ಮಿತಿಮೀರಿದ್ದಿತು. ಆಸ್ಟ್ರೇಲಿಯಾ ಸೆನೇಟ್ ವಿಲ್ಸನ್, ಕುಕ್ಕು, ಭಾರತೀಯರು ಮೊದಲಾಗಿ ಅಧಿನಿವೇಶ ಪ್ರತಿನಿಧಿಗಳು ಬಂದಿದ್ದರು ಕೋಶಾಧ್ಯಕ್ಷ ಸ್ನೋಡನ್ನರವರು ಸಭಾಪ್ರವೇಶ ಮಾಡುತಲೇ ಸಭಿಕರು ಅವರನ್ನು ಸನ್ಮಾನಿಸಿದರು. ಅವರು ತಮಗೆ ಮಂತ್ರಿಮಂಡಲದನುಭವವು ಇಲ್ಲವಾದುದರಿಂದ ತಾವು ತಿಳಿಸುವ ಸಂಗತಿಗಳನ್ನು ಶ್ರದ್ಧೆಯಿಂದಲಾಲಿಸಿ ಲೋಪವಿದ್ದಲ್ಲಿ ಕ್ಷಮಿಸಬೇಕಾಗಿ ಕೇಳಿಕೊಂಡರು. 1924 ನೆಯ ಮೆ ತಾ|| 31ಕ್ಕೆ ಅಂತ್ಯವಾದ ವರ್ಷದಲ್ಲಿ ಒಟ್ಟು ಆದಾಯದಲ್ಲಿ 1,85,00,000 ಪೌನುಗಳು ಹೆಚ್ಚಿದುದೂ ವ್ಯಯದಲ್ಲಿ 2,77,50,000 ಪೌನುಗಳು ಕಡಿಮೆಯಾದುದೂ 22-23 ನೆಯ ವರ್ಷದಲ್ಲಿ 30,79 200 ಪೌನುಗಳು ಉಳಿದಿದ್ದುದೂ ಸೇರಿ ಒಟ್ಟು 4,93,29,200ಪೌನುಗಳು ಮಿಗತಾಯಿವಾಗಿರುವುದಾಗಿಯೂ, ಇದರಿಂದ ಕೊಂಚ ಋಣವನ್ನು ತೀರಿಸಿರುವುದಾಗಿಯೂ ತಿಳಿಸಿದರು. ಸುಂಕ ಮತ್ತು ಮದದ್ರವ್ಯಗಳಿಂದ 71,78,000 ಪೌನುಗಳು ಹೆಚ್ಚುತ್ಪನ್ನವಾಗಿರುತ್ತವೆ. ಈ ಮೊತ್ತವು ಸಾರಾಯಿ ಮತ್ತು ಹೊಗೆಸೊಪ್ಪು ಇವೆರಡರಿಂದಲೇ ಬಂದುದಾಗಿರುತ್ತದೆ. ಮೋಟಾರು ಬಂಡಿಗಳ ಸುಂಕಬಂದ 15,00,000 ಪೌನುಗಳೂ. ಮರಣದ ಸುಂಕದಿಂದ 58,00,000 ಪೌನುಗಳೂ, ಆದಾಯದ ಮೇಲಣ ತೆರಿಗೆಯಿಂದ 83,31,000 ಪೌನುಗಳೂ ನಿರೀಕ್ಷಿತವಾಗಿದ್ದುದಕ್ಕಿನ್ನ ಅಧಿಕವಾಗುತ್ಪನ್ನವಾಗಿವೆ. ಆದರೆ ಹೆಚ್ಚು ಲಾಭದ ಮೇಲಣ ತೆರುಗೆಯು ಮಾತ್ರ 1,20,00,000 ಪೌನುಗಳು ನಿರೀಕ್ಷಿತವಾಗಿದ್ದುದಕ್ಕಿನ್ನ ಕಡಿಮೆಯಾಗಿರುತ್ತವೆ. ಸಾರ್ವಜನಿಕ ಋಣಕ್ಕಾಗಿ 3,47,25,000 ಪೌನುಗಳೂ, ಸಪ್ಲೈಸರ್ವಿಸ್ಸಿಗಾಗಿ 40,50,00,00 ಪೌನುಗಳೂ, ಸೈನ್ಯಕ್ಕಾಗಿ 4,45,00,000 ಪೌನುಗಳೂ, ನೌಕಾದಳಕ್ಕಾಗಿ 52,50,000 ಪೌನುಗಳೂ, ವೈಮಾನಿಕ ದಳಕ್ಕಾಗಿ 93,333⅓ ಪೌನುಗಳೂ ವೆಚ್ಚವಾಗಿರುವುವು. ಬ್ರಿಟಿಷರಿಗೆ ಪ್ರಾಣಾಧಾರವಾಗಿರುವ ನಾಣ್ಯವ (ನಂಬಿಕೆಯ)ನ್ನು ಅಭಿವೃದ್ಧಿಗೊಳಿಸಿ ಅದನ್ನು ಉಳಿಸಿಕೊಂಡು ಬರುವುದು ಬಹಳ ಅವಶ್ಯಕವು. ಈಗಿರತಕ್ಕ 868,00,00,000 ಪೌನು ಸಾಲದಲ್ಲಿ 30,50,00,000 ಪೌನುಗಳ ಬಡ್ಡಿಯು ಸೇರಿರುತ್ತದೆ. 1919 ನೆ ಡಿಸೆಂಬರಿನಲ್ಲಿ 8,00,00,00,000 ಪೌನುಗಳ ಸಾಲವೂ, 34,50,00,000 ಪೌನುಗಳ ಬಡ್ಡಿಯೂ ಕೊಡಲ್ಪಡಬೇಕಾಗಿದ್ದಿತು. ಇದರಲ್ಲಿ ಯುನೈಟೆಡ್ ಸ್ಟೇಟ್ಸಿನವರಿಗೆ 9,40,12,00,000 ಪೌನುಗಳ ಮತ್ತು ಅಮೇರಿಕೆಯಲ್ಲಿ ಇತರರಿಗೆ 4,50,00,000 ಪೌನುಗಳ ಸಾಲವು ಕೊಡಬೇಕಾಗಿರುತ್ತದೆ. ಅಂತು ಸ್ವದೇಶ ಪರದೇಶದವರಿಗೆ ಕೊಡಬೇಕಾಗಿರುವ ಸಾಲದ ಮೊಬಲಗು 65,00,00,000 ಪೌನುಗಳಿಗೆ ತಗ್ಗಿರುವುದು. ನಮಗೆ ಇತರರು ಎಷ್ಟೋ ಹಣವನ್ನೂ ಬಡ್ಡಿಯನ್ನೂ ಕೊಡಬೇಕಾಗಿದೆ. ಇದೆಲ್ಲವೂ ಕಂದಾಯವನ್ನು ತೆರುವ ಪ್ರಜೆಗಳಿಗೆ ಭಾರವಾಗಿರುವುದು. ಈ ಋಣದಲ್ಲಿ ಕೊಂಚ ಮೊಬಲಗಿನ ಮೇಲೆ ನಮಗೆ ಬಡ್ಡಿಯು ಸಂದಾಯವಾದಲ್ಲಿ ನಾವು ಕೊಡಬೇಕಾಗಿರುವ ಋಣವನ್ನು ಕಡಿಮೆಮಾಡಿಕೊಳ್ಳುವುದಕ್ಕೂ, ಕಂದಾಯವನ್ನು ಇಳಿಸುವುದಕ್ಕೂ ಅವಕಾಶವಾಗುವುದು ಮತ್ತು ನಮ್ಮ ಸಾಧನಸಂಪತ್ತಿನಿಂದ ಕಡಿಮೆಮಾಡಲು ಪ್ರಯತ್ನಿಸುವುದಕ್ಕಿನ್ನ ಜಾಗ್ರತೆಯಲ್ಲಿ [illegible]ವುದು ಎಂದು ಕೋಶಾಧ್ಯಕ್ಷರು ಅಪ್ಪಣೆಕೊಡಿಸಿದರಲ್ಲದೆ ಟೀಯೆಲೆ, ಸಕ್ಕರೆ, ಕಾಫಿ ಮೊದಲಾದ ಪದಾರ್ಥಗಳಮೇಲಣ ಸುಂಕವು ಕಡಿಮೆ ಮಾಡಲ್ಪಡುವುದಾಗಿಯೂ, ಒಣಗಿದ ಹಣ್ಣುಗಳ ಮೇಲಿನ ಸುಂಕವೂ, ಮೆಕನ್ನಾಸುಂಕವೂ, ವಾಸವಿಲ್ಲದ ಮನೆಗಳ ತೆರಿಗೆಯೂ, ಲಾಭದಮೇಲಣ ತೆರಿಗೆಯೂ ತಪ್ಪಿಸಲ್ಪಡುವುದಾಗಿಯೂ, 1924-25 ರಲ್ಲಿ ಒಟ್ಟು 82,80,00,000 ಪೌನುಗಳ ಆದಾಯವೂ 79,00,00,000 ಪೌನುಗಳ ವ್ಯಯವೂ ಆಗಿ ಕಂದಾಯದಲ್ಲಿ ತಗ್ಗಿಸಲ್ಪಡುವುದು 3,40,00,000 ಪೌನುಗಳು ಹೋಗುತ 40,00,000 ಪೌನುಗಳು ಉಳಿಯುವುದಾಗಿ ನಿರೀಕ್ಷಿಸಲ್ಪಟ್ಟಿರುವುದಾಗಿಯೂ ತಿಳಿಸಿದರು.

ಕೋಶಾಧ್ಯಕ್ಷರಾದ ಫಿಲಿಫ್ ಸ್ನೋಡನ್ನರವರು ಸಿದ್ಧಗೊಳಿಸಿರುವ ಮೇಲೆಕಂಡ ಆಯವ್ಯಯ ಲೆಕ್ಕವನ್ನು ಪರಿಶೀಲಿಸುವುದರಿಂದ ಲೇಬರು ಪ್ರಭುತ್ವದ ಮೊದಲನೆಯ ಬಜ್ಜೆಟ್ಟು ಪ್ರೋತ್ಸಾಹಕರವಾಗಿರುವುದೆಂದು ಹೇಳಲಭ್ಯಂತರವಿಲ್ಲವು. ಅನೇಕ ಪದಾರ್ಥಗಳ ಮೇಲಿನ ಸುಂಕವು ತಪ್ಪಿಸಲ್ಪಟ್ಟ ಪ್ರಯುಕ್ತವಾಗಿ ವಾಣಿಜ್ಯಾಭಿವೃದ್ಧಿಗೆ ಬಹಳ ಅನುಕೂಲವಾಯಿತಲ್ಲದೆ ಸ್ವೇಚ್ಛಾವಾಣಿಜ್ಯಾಕಾಂಕ್ಷಿಗಳಾದ ಲಿಬರಲ್ ಪಕ್ಷದವರಿಗೆ ತೃಪ್ತಿಯುಂಟಾಯಿತೆಂದೂ, ಲಿಬರ್ ಪಕ್ಷದವರಿಗೆ ಲೇಬರ್‌ಪಕ್ಷದವರ ಮೇಲೆ ಉಂಟಾಗಿದ್ದ ಆಗ್ರಹವು ಕಡಿಮೆಯಾಗಲು ಅವಕಾಶವುಂಟಾಯಿತೆಂದೂ ಹೇಳಬಹುದಾಗಿದೆ. ಇಷ್ಟು ತೃಪ್ತಿಕರವಾಗಿ ಬಜ್ಜೆಟ್ಟನ್ನು ಸಿದ್ಧಗೊಳಿಸಿರುವುದಕ್ಕೋಸ್ಕರ ಲಿಬರಲು ಪಕ್ಷದ ನಾಯಕರುಗಳಾದ ಆಸ್ಕ್ವಿತ್ತು ಮತ್ತು ಲಾಯಿಡ್‌ಜಾರ್ಜ್‌ರವರು ಬಹಳ ಸಂತೋಷಪಟ್ಟು ಸ್ನೋಡನ್ನರವರನ್ನು ಅಭಿನಂದಿಸಿರುವರು; ಅಲ್ಲದೆ ಅನೇಕ ಪಕ್ಷಪರಪಕ್ಷದ ವೃತ್ತಪತ್ರಿಕೆಗಳು ಸ್ನೋಡನ್ನರವರ ಬುದ್ಧಿಶಕ್ತಿಯನ್ನು ಕೊಂಡಾಡಿ ವಂದಿಸಿರುವುವು.

ಶತ್ರುರಾಜ್ಯಗಳಿಂದ ಪರಿವೃತವಾಗಿರುವ ಗ್ರೇಟ್‌ಬ್ರಿಟನ್ನು ಆತ್ಮರಕ್ಷಣೆಗಾಗಿಯೂ, ತನ್ನ ಸಾಮ್ರಾಜ್ಯಕ್ಕೊಳಪಟ್ಟ ದೇಶಗಳ ರಕ್ಷಣೆಗಾಗಿಯೂ ಸೈನಿಕ ವೈಮಾನಿಕ ನೌಕಾದಳಗಳನ್ನು ಪ್ರಬಲಪಡಿಸಿಕೊಳ್ಳುವುದಾವಶ್ಯಕವಾಗಿರುವುದಾದರೂ, ಅದಕ್ಕಾಗಿ ಮಾಡಲ್ಪಡುತ್ತಿರುವ ವೆಚ್ಚಕ್ಕೂ ನೌಕಾದಳವಿಲ್ಲದೆ ಅತ್ಯಲ್ಪ ವೈಮಾನಿಕ ದಳವುಳ್ಳ ಭರತಖಂಡದ ಸೈನಿಕವೆಚ್ಚಕ್ಕೂ ದಾಮಾಷಾಪ್ರಕಾರ ಹೋಲಿಸಿ ನೋಡಿದರೆ ಭರತಖಂಡದ ಸೇನೆಗೆ ಹೆಚ್ಚು ವೆಚ್ಚವಾಗುತ್ತಿದೆಯೆಂದು ಗೊತ್ತಾಗುತ್ತದೆ. ಇದನ್ನು ಭಾರತ ಪ್ರಭುತ್ವದವರು ತಮ್ಮ ಬಜ್ಜೆಟ್ಟನ್ನು ತಯಾರಿಸುವಲ್ಲಿ ಈ ದೇಶದ ಪರಿಸ್ಥಿತಿಗನುಗುಣವಾಗಿ ಸೈನಿಕ ವೆಚ್ಚವನ್ನು ತಗ್ಗಿಸಿ ಭಾರತೀಯರ ವಂದನೆಗೆ ಪಾತ್ರರಾಗಲೆಂದು ಆಶಿಸುತ್ತೇವೆ.

ಕಾಶ್ಮೀರ ಮಹಾರಾಜರ ಬುದ್ಧಿವಾದ.

ಕಾಶ್ಮೀರ ಮಹಾರಾಜರವರು ಜಮ್ಮುನಲ್ಲಿರುವ ಪ್ರಿನ್ಸ್ ಆಫ್ ವೇಲ್ಸ್ ಕಾಲೇಜಿನ ವಿದ್ಯಾರ್ಥಿಗಳಿಗೆ ಪಾರಿತೋಷಿಕಗಳನ್ನು ಕೊಡುವ ವೇಳೆಯಲ್ಲಿ, ಮಹಮ್ಮದೀಯ ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಹಿಂದೆಬಿದ್ದಿರುವುದನ್ನು ಕುರಿತು “ಮಹಮ್ಮದೀಯ ವಿದ್ಯಾರ್ಥಿಗಳು ವ್ಯಾಸಂಗಮಾಡದಿರುವುದಕ್ಕಾಗಿ ತಮನ್ನ ತಾವೇ ನಿಂದಿಸಿಕೊಳ್ಳಬೇಕಾಗಿದೆ. ನಾನು ಪ್ರತಿಯೊಂದು ಜನಾಂಗದವರಿಗೂ ಒಂದೇತೆರನಾದ ಅನುಕೂಲವನ್ನು ಕಲ್ಪಿಸಿಕೊಟ್ಟಿರುತ್ತೇನಾದುದರಿಂದ, ಅವರಿಗೆ ವಿಶೇಷವಾದ ಅನುಕೂಲ್ಯಗಳನ್ನು ಕಲ್ಪಿಸಿಕೊಡಬೇಕಾದ ಅವಶ್ಯಕತೆಯಿಲ್ಲದಿರುವುದಾದರೂ, ನನ್ನ ಸರ್ಕಾರದವರು ಅವರಿಗೆ ಕಲ್ಪಿಸಿಕೊಟ್ಟಿರುತ್ತಾರೆ. ಆದಾಗ್ಗೂ ಅವರು ಮಾತ್ರ ಆ ಸೌಲಭ್ಯಗಳನ್ನು ಯುಕ್ತರೀತಿಯಲ್ಲಿ ಉಪಯೋಗಿಸಿಕೊಳ್ಳುವ ಕಾಂಕ್ಷೆಯುಳ್ಳವರಾಗಿಲ್ಲವು. ಪ್ರಾಯಶಃ ವಿದ್ಯಾವ್ಯಾಸಂಗವೊಂದರಿಂದಲೇ ತಮ್ಮ ಜೀವಿತದ ಪುರುಷಾರ್ಥವಾಗದೆ ವಿದ್ಯೆಯಲ್ಲೂ ಕಲಾಕೌಶಲ್ಯದಲ್ಲೂ ಪರಿಶ್ರಮವಿಲ್ಲದೆ ಇತರ ಮಾರ್ಗಗಳಿಂದ ತಮ್ಮ ಜೀವನಸಾಧನವಾಗುತ್ತದೆಂದು ಭಾವಿಸಿರಬಹುದು. ಆದರೆ ಜನರ ಯೋಗ್ಯತೆಯ ಮೇಲೆ ಸರ್ಕಾರಿಯುದ್ಯೋಗವು ಕೊಡಲ್ಪಡುವುದಲ್ಲದೆ ಜನಬಾಹುಳ್ಯದ ಮೇಲೆ ಕೊಡಲ್ಪಡುವುದಿಲ್ಲವೆಂದು, ವಿಧಾಯಕವಾಗಿರುವುದರಿಂದ, ಅವರು ನನ್ನ ಸಂಸ್ಥಾನದಲ್ಲಿ ಕೆಲಸಕ್ಕೆ ಸೇರಲಪೇಕ್ಷಿಸುವುದಾದರೆ, ಇತರರಂತೆ ತಾವೂ ಯೋಗ್ಯತೆಯನ್ನು ಸಂಪಾದಿಸಿದವರಾಗಿರಬೇಕೆಂಬುದನ್ನು ಮರೆಯಕೂಡದು. ನಾನು ಯಾವ ಜಾತಿಯ ಪಕ್ಷಪಾತಿಯಾಗಿಲ್ಲ. ಅದುಕಾರಣ ಪಂಜಾಬಿನ ಮಹಮ್ಮದೀಯ ವೃತ್ತಪತ್ರಿಕೆಗಳಲ್ಲಿ ಈ ವಿಚಾರವಾಗಿ ಮಾಡುತ್ತಿರುವ ಕಿಡಗೇಡಿ ಕೋಲಾಹಲವು ಕ್ರೂರವಾಗಿ ಖಂಡಿಸಲ್ಪಡುತಕ್ಕುದಾಗಿದೆ. ಎಲ್ಲ ಜನವರ್ಗದವರೂ ಪರಾವಲಂಬನವಿಲ್ಲದೆ ಸ್ವಾವಲಂಬನದಿಂದ ವರ್ತಿಸುವುದನ್ನು ಕಲಿಯುವುದು ಅತ್ಯಾವಶ್ಯಕವು” ಎಂದು ಬುದ್ಧಿವಾದವನ್ನು ಹೇಳಿದರು.

ಜಪಾನು ದಂಡೆತ್ತುವ ಭಯವು.

ಅಮೇರಿಕೆಗೆ ಜಪಾನರು ವಾಸಕ್ಕಾಗಿ ಬರದಂತೆ ನಿರ್ಬಂಧವಿಧಿಯನ್ನು ಅಮೆರಿಕಾ ಪ್ರಭುತ್ವದವರು ಕಲ್ಪಿಸಿರುವುದರಿಂದ ಜಪಾನು ಪ್ರಭುತ್ವದವರು ಕುಪಿತರಾಗಿ ಈ ನಿರ್ಬಂಧವನ್ನು ತಪ್ಪಿಸದ ವಿನಾ ತಾವು ಶಾಂತರಾಗುವುದಿಲ್ಲವೆಂದೂ, ಇದರಿಂ[illegible] ಮುಂದೆ ಅನರ್ಥವುಂಟಾಗುವುದೆಂದೂ ಒಂದು ಅಂತ್ಯಸಂದೇ[illegible]ನ್ನು ಅಮೆರಿಕಾಪ್ರಭುತ್ವದವರಿಗೆ ಕಳುಹಿಸಿಕೊಟ್ಟಿರುವುದರ ಮೇ[illegible] ಅಮೆರಿಕೆಯಲ್ಲಿ ಬಹಳ ಗಲಭೆಯುಂಟಾಗಿ ಚರ್ಚೆಯು ನಡಿಯ[illegible]ತ್ತಿದೆ. ಈ ರೀತಿಯಾಗಿ ಕೋಪೋದ್ರೇಕಗೊಂಡಿರುವ ಜಪಾನು ಉತ್ತರ ಅಮೇರಿಕಾ ತೀರದಲ್ಲಿರುವ ಕಲ್ಲಿದ್ದಲು ಗಣಿಗ[illegible]ನ್ನು ಸ್ವಾಧೀನಪಡಿಸಿಕೊಂಡು ಅನಂತರ ಯುನೈಟೆಡ್ ಸ್ಟೇಟ್[illegible] ತೀರದಲ್ಲಿರುವ ನಗರಗಳನ್ನು ಸ್ವಾಧೀನಮಾಡಿಕೊಳ್ಳಬಹುದ[illegible] ಕನಡಾದವರಿಗೆ ಕೋಪವುಂಟಾಗುತ್ತದೆಂದು ದಾಕ್ಷಿಣ್ಯವಿ[illegible] ಜಪಾನು ಉದ್ದೇಶಿಸಿದ ಕಾರ್ಯವನ್ನು ಸಾಧಿಸದೆ ಬಿಡ[illegible] ಕನಡಾದ ಕಲ್ಲಿದ್ದಲು ಗಣಿಗಳನ್ನು ಜಪಾನು ಸ್ವಾಧೀನಪ[illegible] ಕೊಂಡ ಮೇಲೆ ಅವನ್ನು ಪುನಃ ಬ್ರಿಟಿಷ್ ನೌಕಾದಳವು ಸ್ವಾಧೀನಪಡಿಸಿಕೊಳ್ಳಬಲ್ಲದು, ಆದರೆ ಪುನಃ ಸಾಧಿಸಲು ಬ[illegible] ಕಷ್ಟಪಡಬೇಕಾಗುವುದು. ಸಿಂಗಪೂರು ನೌಕಾದಳವೊಂ[illegible] ಅಲ್ಲದೆ ಪೆಸಿಫಿಕ್‌ಸಾಗರದಲ್ಲೂ ಭದ್ರಪಡಿಸಲ್ಪಡಬೇಕಾಗಿ[illegible] ದೊಡ್ಡ ನೌಕಾದಳ ರಕ್ಷಣೆಗೆ ಸಿಂಗಪೂರು ನೌಕಾಶಯವೊ[illegible] ಸಾಲದು. ವ್ಯಾಂಕೋವರು ದ್ವೀಪದಲ್ಲಿರುವ ಕಲ್ಲಿದ್ದಲು ಗ[illegible]ಗಳು ವಿದೇಶಾಂಗ ಪ್ರಭುತ್ವದವರ ಹಸ್ತಗತವಾಗದಂತೆ ಮಾ[illegible]ಲು ತಕ್ಷಣವೇ ನೌಕಾದಳಾಧಿಕಾರಿಗಳು ನೌಕಾಶಯಗಳ[illegible] ಭದ್ರಪಡಿಸಿಕೊಳ್ಳುವ ಪ್ರಯತ್ನಮಾಡಬೇಕಾಗಿದೆ ಎಂ[illegible] ಟೊರಂಟೋಯಿಂದ ಟೈಂಸ್‌ಪತ್ರಿಕೆಗೆ ಒಬ್ಬ ವಿಲೇಖಕ[illegible] ಬರೆದಿರುತ್ತಾನೆ.

ಮಹಾತ್ಮಾ ಗಾಂಧಿಯವರ ಆರೋಗ್ಯವು.

ಮಹಾತ್ಮಾ ಗಾಂಧಿಯವರು ಪೂನಾನಗರವನ್ನು ಬಿ[illegible] ಅಂಧೇರಿಗೆ ಹೋದಮೇಲೆ ಅತ್ಯಧಿಕವಾಗಿ ಆರೋಗ್ಯಾಭಿವೃ[illegible] ಯಾಗಿರುವುದು. ಅವರು ಈ ಮೇ ತಾ|| 15 ರಲ್ಲಿ ಸಬ[illegible] ಸತ್ಯಾಗ್ರಹಾಶ್ರಮಕ್ಕೆ ಹೋಗುವವರಾಗಿರುವರು.

ಸ್ವದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಬಿಸಿಲಿನ ತಾಪವು ಅತ್ಯಧಿಕವಾಗಿ[illegible] ಕಳೆದ 2-3 ದಿನಗಳಿಂದಲೂ ಸಾಯಂಕಾಲದ ವೇಳೆ[illegible] ಮೋಡವು ಮುಸುಕಿಕೊಂಡು ನಾಲ್ಕು ಹನಿಗಳು ಬಿದ್ದು [illegible]ಯೇ ಮಾಯವಾಗುತ್ತಿರುವುದು. ಜೋಳದಪೈರು ಒಣ[illegible]ದೆ. ಬೆಂಗಳೂರಿನ ವಾತಾವರ್ಣದಲ್ಲಿ ಔಷ್ಣ್ಯವು 101 ಡಿಗ್ರಿ[illegible]ಗೇರಿ ಸಹಿಸಲಶಕ್ಯವಾಗಿದೆ. ಮಳೆ ಇಲ್ಲದಿರುವುದರಿಂದ [illegible] ಕಡೆ ವಾಂತಿಭೇದಿರೋಗ ಪ್ರಾಪ್ತವಾಗಿ ಜನರು ಸಾಯು[illegible]ರುವರು.

ಮೈಸೂರು ಗವರ್ನಮೆಂಟ್ ಪ್ರೆಸ್ಸಿನ ಸೂಪರಿಂಟೆಂ[illegible] ಉದ್ಯೋಗದಿಂದ ನಿವೃತ್ತಿಯನ್ನು ಹೊಂದಿದ್ದ ಮ|| ಡಿ. ರಾಮಚಂದ್ರಮೊದಲಿಯಾರರು ಕಳೆದ ಮೂರು ತಿಂಗಳಿಂದ[illegible] ಅಸ್ವಸ್ಥರಾಗಿದ್ದು ವೈದ್ಯರ ಚಿಕಿತ್ಸೆಗಾಗಿ ಮದ್ರಾಸಿಗೆ ಹೋ[illegible] ಅಲ್ಲಿ ಗುಣವನ್ನು ಹೊಂದದೆ ಕಳೆದ ತಾ|| 27 ರಲ್ಲಿ ಕಾಲ[illegible]ನರಾದರೆಂದು ತಿಳುಹಲು ವಿಷಾದಿಸುತ್ತೇವೆ. ಇವರು 188[illegible] 20 ರೂ. ಸಂಬಳದಮೇಲೆ ಪ್ರೆಸ್ಸಿಗೆ ಸೇರಿ ತಮ್ಮ ಬುದ್ಧಿ[illegible] ವಿಶೇಷದಿಂದ ಮೇಲ್ಪಟ್ಟ ಅಧಿಕಾರಿಗಳ ಕಟಾಕ್ಷಕ್ಕೆ ಪಾತ್ರ[illegible] ಸೂಪರಿಂಟೆಂಡೆಂಟ್ ಉದ್ಯೋಗಕ್ಕೇರಿ ಕಳೆದ 10 ತಿ[illegible] ನಿವೃತ್ತಿಯನ್ನು ಹೊಂದಿದರು. ಇವರ ವಿಯೋಗ [illegible] ಪ್ರದರ್ಶನಾರ್ಥವಾಗಿ ಬೆಂಗಳೂರು ಮತ್ತು ಮೈಸೂರ[illegible]ರುವ ಸರ್ಕಾರಿ ಪ್ರೆಸ್ಸುಗಳು ಮುಚ್ಚಲ್ಪಟ್ಟಿದ್ದುವು.

ಶ್ರೀ ಶೃಂಗಗಿರಿ ಸ್ವಾಮಿಗಳು ಕಳೆದ ಭಾನುವಾರ [illegible] ಚಾಮುಂಡೇಶ್ವರಿಬೆಟ್ಟಕ್ಕೆ ಹೋಗಿ ಶ್ರೀ ಅಮ್ಮನವರ [illegible]ಯನ್ನು ಮಾಡಿಕೊಂಡು ಮಂಗಳವಾರ ರಾಜಧಾನಿಗೆ ದಯ[illegible]ಡಿಸಿದರು ಮತ್ತು ಕಳೆದ ಶುಕ್ರವಾರ ಮಧ್ಯಾಹ್ನ $3\frac{1}{2}$ ಗಂಟೆ[illegible] ಸಕಲ ಬಿರುದಾವಳಿಗಳಿಂದಲೂ ವಾದ್ಯ ವಿಶೇಷದಿಂದಲೂ [illegible] ಪ್ರಮುಖರ ಸಮೂಹದಿಂದಲೂ ರಾಜಧಾನಿಯ ಗಡಿಯ[illegible] ಉತ್ಸವಗೊಂಡು ನಂಜನಗೂಡಿಗೆ ಪ್ರಯಾಣಮಾ[illegible] ಶ್ರೀಗಳು ನಂಜನಗೂಡಿನಲ್ಲಿ 6 ದಿನಗಳ ವರೆಗಿದ್ದು ಶ್ರೀ ಶ್ರೀ[illegible]ಶ್ವರಸ್ವಾಮಿಯ ಸೇವೆಯನ್ನು ಮಾಡಿಕೊಂಡು ಚಾಮ[illegible] ನಗರ ಮಾರ್ಗವಾಗಿ ಕಣಿವೆಕೆಳಗಿನ ಪ್ರಾಂತಕ್ಕೆ ಚಿತ್ತೈ[illegible]ರಾಗಿರುವರು. ಶ್ರೀಗಳವರು ರಾಜಧಾನಿಗೆ ದಯಮಾಡಿ[illegible]ರಾಭ್ಯ ಅಂದರೆ ಕಳೆದ $1\frac{1}{2}$ ತಿಂಗಳಿಂದಲೂ ಅನೇಕ ಬ್ರಾ[illegible] ಕುಟುಂಬಗಳಿಗೆ ಮಠದಲ್ಲಿ ಭೋಜನವು ನಿರಾಯಾಸ[illegible] ನಡೆದುಹೋಗುತ್ತಿದ್ದಿತು.

ಶ್ರೀ ಬಸವೇಶ್ವರ ಜಯಂತಿ.

(ಬೆಂಗಳೂರು ಮ|| ಜೀರಗೆ ಬಸವಲಿಂಗಪ್ಪನವರಿಂದ.)

ಇದೇ ರಕ್ತಾಕ್ಷಿ ಸಂವತ್ಸರದ ವೈಶಾಖ ಶುದ್ಧ [illegible] ಮಂಗಳವಾರಕ್ಕೆ ಸರಿಯೊದ ೧೯೨೫ನೆ ಮೇ ೬ನೆ ತಾ[illegible] ದಿನ ನಮ್ಮ ಕಲ್ಯಾಣ ಕಟಕದ ಶ್ರೀ ಬಸವದಂಡಾಧೀಶನ [illegible]ತಿ ಮಹೋತ್ಸವವು ವೀರಶೈವ ರಾಷ್ಟ್ರದಲ್ಲೆಲ್ಲಿಯೂ [illegible]ತ್ತದೆ. ಶ್ರೀಮನ್ಮಹಾರಾಜಾ ಸರ್ಕಾರದವರು ವೀರಶೈವರ [illegible]ರ್ಥನೆಯ ಮೇರೆ ಬಸವೇಶ್ವರ ಜಯಂತಿಯನ್ನು ಸರ್ಕಾರದ [illegible]ವಾಗಿ ಪರಿಗಣಿಸಬೇಕೆಂದು ನಿಯಾಮಿಸಿ “ಕ್ಯಾಲೆಂಡ[illegible] ಪ್ರಕಟಮಾಡಿರುತ್ತಾರೆ. ಇದರಿಂದ ವೀರಶೈವ ಜಗತ್ತಿ[illegible]ಶಯವಾಗಿರುತ್ತದೆ. ಬುದ್ಧನು, ಕ್ರಿಸ್ತನು, ಮಹಮ್ಮ[illegible], ಶ್ರೀ ಶಂಕರಾಚಾರ್ಯರು ಮೊದಲಾದವರು ಒಂದೊಂದು[illegible]ದಲ್ಲಿ ಲೋಕೋಪಕಾರ ಮಾಡಿರುವಂತೆ ನಮ್ಮ ಬಸವದಂಡ[illegible] ಒಂದು ವಿಧದಲ್ಲಿ ಜಗದುದ್ಧರಣ ಕಾರ್ಯವನ್ನು [illegible]ತ್ತಾನೆ. ವಿಶ್ವದಲ್ಲಿ ಮಾನವಜಾತಿಯೊಳಗೆ ಕೀಳು ಮೇಲು [illegible] ಹೆಚ್ಚಾಗಿ—“ಇವನು ದುಡ್ಡುಳ್ಳವನು, ಇವನನ್ನು [illegible]ಬೇಕು. ಇವನು ಧನಹೀನನು, ಇವನನ್ನು ನಿಕೃಷ್ಟ[illegible] ಕಾಣಬೇಕು. ಅಧಿಕಾರ ಪ್ರಾಬಲ್ಯದಿಂದ ಇವನು ಮೇಲು[illegible]ವನು, ಇವನನ್ನು ಪೂಜಿಸಬೇಕು. ಅಧಿಕಾರ ಹೀನತೆ[illegible] ಇವನು ಕೀಳುಜಾತಿಯವನು, ಇವನನ್ನು ತುಚ್ಛವಾಗಿ [illegible]ಬೇಕು.” ಹೀಗೆಂದು ಜನರಲ್ಲಿ ದುರ್ವೃತ್ತಿಗಳು ಆಚರಣೆಗೆ[illegible]ದು ಮಾನವ ಜೀವಹಿಂಸೆಯು ನಡೆಯುತ್ತಿದ್ದಿತು. ಅದನ್ನು [illegible]ಸುವದಕ್ಕೆ ಬಸವದಂಡನಾಯಕನು ಕಂಕಣವನ್ನು ಧರಿಸಿ[illegible]. ಇದಕ್ಕೆ “ಅಪಿವಾಯಶ್ಚಂಡಾಲ || ಶ್ಶಿವೇತಿವಾಚಂವ[illegible]ತ್ರೇನ ಸಹಸಂವದೇತ್ರೇನ ಸಹಸಂವಿಶೆ ತ್ರೇನ ಸಹಸಂವಸೇತ್ರೇನ[illegible]ಭುಂಜತೆ ||” ಎಂಬ ಜಾಬಾಲೋಪನಿಷದ್ವಾಕ್ಯವನ್ನು[illegible] ಪಚೋಪಿಮುನಿಶ್ರೇಷ್ಠಾ ಶಿವಭಕ್ತ್ಯಾದ್ವಿಜಾಧಿಕಃ | ಶಿವಭ[illegible]ವಿಹೀನಸ್ತು ದ್ವಿಜೋಪಿಶ್ವಪಚಾಧಮಃ” ಎಂಬ ಶಿವರಹಸ್ಯ [illegible]ಕ್ಯವನ್ನು ಆಧಾರವಾಗಿಟ್ಟುಕೊಂಡು ಶ್ರೇಷ್ಠತ್ವಕ್ಕೆ ಶಿವಭಕ್ತಿ[illegible]ದಲಾದ ಸದ್ಗುಣಗಳೇ ಮುಖ್ಯವೆ ಹೊರತು ಐಶ್ವರ್ಯಮದ [illegible]ಲಮದಗಳು ಕಾರಣವಲ್ಲವೆಂದು ಬೋಧಿಸಿ ಅವನತರನ್ನು [illegible]ಲಕ್ಕೆತ್ತಿದನು. ಎಲ್ಲರನ್ನು ನಿರ್ಮಲರನ್ನಾಗಿ ಮಾಡಿದನು. [illegible]ಲವಾಗಿ ಹೋಗುತ್ತಿದ್ದ ವೀರಶೈವ ಮತವನ್ನು ಪುನರುನ್ನತಿಗೆ[illegible]ದನು. ಇಂತಪ್ಪ ನಮ್ಮ ಬಸವದಂಡನಾಯಕನ ಜ್ಞಾಪಕಾ[illegible]ವಾಗಿ ದಿನದಿನವೂ ಇಲ್ಲದಿದ್ದರೂ ವಾರವಾರವೂ ಇಲ್ಲದಿದ್ದರೂ [illegible]ಮಾಸಮಾಸವೂ ಇಲ್ಲದಿದ್ದರೂ ವರ್ಷಕ್ಕೊಂದು ಸಾರಿಯಾದರೂ [illegible]ತ್ಸವ ಮಾಡುವದು ಅವಶ್ಯಕವಲ್ಲವೆ? ಜಯಂತಿಯ ದಿನ[illegible]ಮಸ್ತ ವೀರಶೈವರೂ ಹಬ್ಬಗಳನ್ನಾಚರಿಸಬೇಕು. ಗಣಾರಾಧ[illegible]ಗಳನ್ನು ಮಾಡಿಸಬೇಕು. ನಂದಿಧ್ವಜೋತ್ಸವ ಶಿವಭಜನೋ[illegible]ವ, ಶಿವಪುರಾಣಪಾರಾಯಣ ಬಸವೇಶನ ಪ್ರತಿಮೆಯ ಮೆರವ[illegible]ಗೆ, ವೀರಶೈವ ಮತೋಪನ್ಯಾಸ ಮೊದಲಾದವುಗಳನ್ನು ನಡೆ[illegible]ಬೇಕು.

ಬಸವೇಶನ ಕಾರ್ಯಗಳು.

ಶ್ರೀ ಬಸವಪ್ರಭುವು ತಾನು ಕೈಕೊಂಡ ಕಾರ್ಯವನ್ನು [illegible]ನೇಕ ಶಿವಶರಣರ ಸಮೇತವಾಗಿ ದಿಗ್ವಿಜಯವಾಗುವಂತೆ ನಡೆ[illegible]ದನು. ವಚನಗಳೆಂಬ ಗ್ರಂಥಗಳನ್ನು ಸುಲಭ ಕನ್ನಡದಲ್ಲಿ ಬರೆ[illegible] ಜಗತ್ತಿನ ಮಾನವರೆಲ್ಲರಿಗೂ ಬೋಧಿಸಿ ಉದ್ಧಾರಮಾಡಿದನು [illegible]ತ್ತು ಪರಿವರ್ತಿಸಿದ್ದ ಶರಣರಿಂದಲೂ ಅನೇಕ ವಚನಗ್ರಂಥಗ[illegible]ನ್ನು ಬರೆಯಿಸಿ ಅವರಿಂದಲೂ ಮಾನವಕೋಟಿಗೆ ಬೋಧೆಯ[illegible] ಮಾಡಿಸಿದನು. ಅಲ್ಲದೆ ಅನೇಕ ಮಹಿಮೆಗಳಿಂದ ತನ್ನ [illegible]ತ್ತು ತನ್ನ ಶರಣರ ಪ್ರಭಾವಗಳನ್ನು ವಿಶ್ವಕ್ಕೆ ತೋರಿಸಿದನು. [illegible]ಸವೇಶ್ವರನ ಮತ್ತು ಇತರ ಶರಣರ ಕೆಲವು ವಾಕ್ಯಗಳನ್ನು ಇಲ್ಲಿ [illegible]ರೆಯುತ್ತೇನೆ. ಬಸವೇಶನು ಹೇಳಿದ್ದು :—

(1) “ಕಲ್ಲದೇವರು ದೇವರಲ್ಲ; ಮಣ್ಣದೇವರು ದೇವರಲ್ಲ; [illegible]ರದ ದೇವರು ದೇವರಲ್ಲ; ಪಂಚಲೋಹದಲ್ಲಿ ಮಾಡುವ ದೇವ[illegible] ದೇವರಲ್ಲ; ಸೇತು ರಾಮೇಶ್ವರ ಗೋಕರ್ಣ ಕಾಶಿ ಕೇದಾರ [illegible]ದಲಾದ ಅಷ್ಟಾಷಷ್ಟಿ ಕೋಟಿ ಪುಣ್ಯತೀರ್ಥಂಗಳು ಪುಣ್ಯಕ್ಷೇ[illegible]ಂಗಳಲ್ಲಿ ಇಹ ದೇವರು ದೇವರಲ್ಲ; ತನ್ನ ತಾನರಿದುತಾನಾ[illegible]ದು ತಿಳಿದಡೆ ತಾನೇ ದೇವನೋಡ ಅಪ್ರಮಾಣ ಕೂಡಲ [illegible]ಸಂಗಮದೇವಾ.”

(೨) “ಹಾಲ ತೊರೆಗೆ ಬೆಲ್ಲದಂತಹ ಕೆಸರು, ಸಕ್ಕರೆಯಂ[illegible]ಹ ಮಳಲು, ತವರಾಜದಂತಹ ನೊರೆತೊರೆಗಳು. ಇಂತಪ್ಪ [illegible]ದ್ಯರವಚನವಿರಲು ಬೇರೆ ಬಾವಿಯ ತೋಡಿ ಉಪ್ಪುನೀರ ಸವಿ[illegible]ಂತಾಯಿತ್ತಯ್ಯ ಎನ್ನಯುಕ್ತಿ. ನಿಮ್ಮ ವಚನಂಗಳ ಕೇಳದೆ [illegible]ಪುರಾಣಂಗಳ ಕೇಳಿ ಕೆಟ್ಟೆನಯ್ಯಾ ಕೂಡಲ ಸಂಗಮದೇವ.”

[illegible]ನ್ನಬಸವೇಶನು ಹೇಳಿದ್ದು :—“ಆನೆಯನೇರಿದ ಮಾವು[illegible]ಶ್ರೇಶ್ವರನಾಗಬಲ್ಲನೆ? ಅಯ್ಯ, ವೇದಶಾಸ್ತ್ರಾಗಮಪುರಾ[illegible]ಓದಿ ಕೇಳಿ ಹೇಳಿದವರೆಲ್ಲರೂ ನಡೆನುಡಿಪೂರಾಯವಾದ [illegible]ರಾಗಬಲ್ಲರೇ? ಅಯ್ಯ, ಕೂಡಲ ಚನ್ನಸಂಗಮದೇವ.”

ಪ್ರಭುದೇವರು ಹೇಳಿದ್ದು :—“ಸುತ್ತಿ ಸುತ್ತಿ ಬಂದಡಿಲ್ಲ; [illegible] ಗಂಗೆಯ ಮಿಂದೊಡಿಲ್ಲ; ತುಟ್ಟತುದಿಯ ಮೇರುಗಿರಿಯ [illegible] ಕೂಗಿದಡಿಲ್ಲ; ನಿತ್ಯನೇಮದಿಂದ ತನು ಮುಟ್ಟಿಕೊಂಡಡಿಲ್ಲ; [illegible] ಮನವನಂದಂದಿಗೆ ಅತ್ತಿತ್ತ ಹರಿಯಲೀಯದೆ ಚಿತ್ತದಲ್ಲಿ [illegible]ದೆ ಬಚ್ಚಬರಿಯ ಬೆಳಗು ಗುಹೇಶ್ವರ ಲಿಂಗವು.”

[illegible]ದ್ಧರಾಮರು ಹೇಳಿದ್ದು :—“ಸಂಸಾರವೆಂಬ ಸರ್ಪನ [illegible]ಗಿಹೆನಯ್ಯ. ಅವಾಗ ನುಂಗಿತೆಂದರಿಯೆ; ಅವಾಗ [illegible]ದರಿಯೆನಯ್ಯಾ. ಅದರ ಬಾಯಿಂದೆನ್ನ ತೆಗೆದು ಕಾಯ[illegible]ಯ್ಯ, ಕಪಿಲಸಿದ್ಧ ಮಲ್ಲಿಕಾರ್ಜುನ”

ಮಡಿವಾಳಮಾಚಯ್ಯನು ಹೇಳಿದ್ದು :—“ಹುಟ್ಟದ ಬೀಜ [illegible]ನಯ್ಯಾ ಧರೆಯೊಳಗೆ; ಅಟ್ಟುಣಬಾರದ ಮಡಕೆಯಿದ್ದ[illegible]ಯ್ಯಾ ಮನೆಯೊಳಗೆ; ಶಿವ ನಿಮ್ಮ ಮುಟ್ಟದ ಮನವಿದ್ದಡೇ[illegible] ತನುವಿನೊಳಗೆ; ಕೆಚ್ಚಲ ಕಚ್ಚಿದ ಉಂಣೆ ಬಲ್ಲುದೆ ಕ್ಷೀ[illegible]ಯನು? ಬಚ್ಚಲೊಳಗಣ ಬಾಲಹುಳ ಬಲ್ಲುದೆ ನಿಚ್ಚಳದ [illegible]ಖವನು? ನಿಚ್ಚ ನಿಚ್ಚಲೋದುವ ಗಿಳಿ ಬಲ್ಲುದೆ ತನಗೆ [illegible]ಕ್ಕನ ಬಾಧೆಯನು? ಹುಚ್ಚುಗೊಂಡ ನಾಯಿ ಬಲ್ಲುದೆ [illegible]ಡೆಯನನು? ಶಿವನೇ ನಿಮ್ಮನರಿಯದ ಮನುಜನ ಒಡ[illegible]ಮು ಹೊಲೆಯ ಜೋಗಿಯ ಕೈಯ್ಯ ಒಡೆದ ಸೊರೆಯಂತೆ [illegible] ಕಲಿದೇವರ ದೇವ.”

ನಿಜಗುಣದೇವರು ಹೇಳಿದ್ದು :—“ಅನುಳ್ಳನಕ ನೀನುಂಟೆಲೆ ಮಾಯೆ, ಅನಿಲ್ಲದಿರ್ದಡೆ ನೀನಿಲ್ಲ, ಆನ್ ನೀನೆಂಬು ಭಯವಳಿಯಲು ಆನಂದ ನಿಜಗುಣಯೋಗ.” ಹೀಗೆಯೇ ಅನೇಕ ಶರಣರು ಹೇಳಿದ್ದಾರೆ.

ಶಿವಪ್ಪ ಬಸಪ್ಪನವರ ಸಂಭಾಷಣೆ.

ಶಿವಪ್ಪ :—ಓಹೊ! ಏನು ಬಸವಪ್ಪನವರೆ! ಕುದುರೆ ಓಡಿಹೋಗುವಹಾಗೆ ಓಡುತ್ತಿದ್ದೀರಿ? ಏನು ಸಮಾಚಾರ? ಮಾತನಾಡುವದಿಲ್ಲವಲ್ಲ. ಬಸವಪ್ಪನವರೆ! ಬಸವಪ್ಪನವರೆ!

ಬಸವಪ್ಪ :—ಯಾರವರು! ಅಡ್ಡಬರಬೇಡಿ! ಅಡ್ಡಬರಬೇಡಿ! ಹು! ಹು! ಹು! (ಎಂದು ಹೆಚ್ಚಾಗಿ ಓಡಿಹೋಗುತ್ತಾನೆ.)

ಶಿವಪ್ಪ :—ಇದೇನು ಬಸವಪ್ಪನವರಿಗೆ ಹುಚ್ಚು ಹಿಡಿಯಿತೊ! ಉತ್ತರವನ್ನು ಕೊಡದೆ ಓಡಿಹೋಗುತ್ತಾರೆ. ಎನಿರಬಹುದು! (ಎಂದು ಕೈ ಹಿಡಿದು ನಿಲ್ಲಿಸುತ್ತಾನೆ.)

ಬಸಪ್ಪ :—ಛೆ! ಬಿಡಯ್ಯ ಅಂದರೆ ಹೊತ್ತು ಕಳೆದು ಹೋಗುತ್ತದೆ. ಬಸವಣ್ಣನವರ ಇದು. ಬಸವಣ್ಣನವರ ಇದು. (ಹೋಗುವದಕ್ಕೆ ಕೈಬಿಡಿಸಿಕೊಳ್ಳುತ್ತಾನೆ)

ಶಿವಪ್ಪ:—ಎನಿರಪ್ಪ ಹಾಗಂದರೆ? ನಿಂತುಕೊಂಡು ನಿಧಾನವಾಗಿ ಮಾತನಾಡಿರಿ. “ಬಸವಣ್ಣನವರ ಇದು” ಇದು ಬಸವಪ್ಪನವರದು ಎಂದು ಅಭಿಪ್ರಾಯವೊ? ಯಾವದು ಬಸಪ್ಪನವರದು? ನೀವೇನೊ ಬಸವಪ್ಪನವರು? ಹುಟ್ಟಿದಾಗ ನಿಮ್ಮನ್ನು ಹಿರಿಯರು ಹಾಗೆ ಕರೆದರು. ನಿಮ್ಮದು ಯಾವದು?

ಬಸವಪ್ಪ :—ಹೋಗಯ್ಯ | ಹೊತ್ತಿಲ್ಲ. ಹೊತ್ತಿಲ್ಲ. ನಮ್ಮದು ಯಾವದು ಎಂದು ಕೇಳುತ್ತಿ? ಈದಿನ ನಮ್ಮದು ನಿಮ್ಮದು ಯಾವದೂ ಇಲ್ಲ. ಎಲ್ಲಾ ಬಸವಣ್ಣನವರದೆ. ನಮ್ಮದು ನಿಮ್ಮದು ಎಂದವರಿಗೆಲ್ಲಾ ಬಿಮ್ಮನ ಏಟೆ. ಬಿಡಿರಿ. ಹೊತ್ತಾಯಿತು. ಕಾರ್ಯಗಳು ಬಹಳವಿರುವವು.

ಶಿವಪ್ಪ :—ಬಸವಣ್ಣನವರದು ಎಂದರೇನಯ್ಯ? ಏನು ಸಮಾಚಾರವಯ್ಯ?

ಬಸವಪ್ಪ :—ಇಗೊ! ನಾನು ಹೊಡೆದುಬಿಡುತ್ತೇನೆ! ಬಸವಣ್ಣನವರದೆಂಬ ವಿಚಾರದಲ್ಲಿ ಪ್ರಶ್ನೆಮಾಡುತ್ತೀರಾ? ಈ ದಿನ ಎಲ್ಲವೂ ಬಸವಣ್ಣನವರದೆಂದು ತಿಳಿಯಬೇಕು. ಬದಲು ಹೇಳಿದರೆ ನನ್ನ ಮೆದಳು ಕೆಡುತ್ತದೆ. ನೋಡಿಕೊಳ್ಳಿ.

ಶಿವಪ್ಪ :—ಹೊಡೆಯಬೇಡಿರಯ್ಯ! ಬಸಪ್ಪನವರೆ, ನೀವು ಯಾವಾಗಲು ಉತ್ಸಾಹಶಾಲಿಗಳು. ಈಗ ಯಾವ ದೊಡ್ಡ ಕಾರ್ಯಕ್ಕೆ ಹೋಗುತ್ತಲಿದ್ದೀರಿ?

ಬಸವಪ್ಪ :—ಎನಯ್ಯ! ಕಾರ್ಯ! ಕಾರ್ಯ! ಈ ದಿನ ಮಾಡತಕ್ಕದೊಂದು ಕಾರ್ಯವೆಂದು ತಿಳಿದೆಯೊ? ನಿಮ್ಮ ನಮ್ಮ ಮನೆಯಲ್ಲಿ ಗೋಧಿ ಬೀಸುವ ಕಾರ್ಯವೆಂದು ತಿಳಿದೆಯೋ? ಅಥವ ಬೆಳಿಗ್ಗೆ ಎದ್ದು ಮುಖ ತೊಳೆದು ಮಧ್ಯಾಹ್ನವಾದ ಮೇಲೆ ಸ್ನಾನ ಮಾಡಿ ಸಾಯಂಕಾಲವಾದ ಮೇಲೆ ಉಪಹಾರ ಮಂದಿರಕ್ಕೆ ಹೋಗಿ ತಿಂಡಿ ತಿಂದು, ಕೂಡಲೆ ಜೀವಚಿತ್ರ ಪ್ರದರ್ಶನ ಶಾಲೆಗಳಿಗೆ ಹೋಗುವ ಕಾರ್ಯವೆಂದು ತಿಳಿದೆಯೊ? ಇದು ಅಂತಹ ಕಾರ್ಯವಲ್ಲ. ಕಲ್ಯಾಣಪಟ್ಟಣದ ಬಸವದಂಡ ನಾಯಕನ ಜ್ಞಾಪಕಾರ್ಥವಾಗಿ ಭಕ್ತಿಪ್ರದರ್ಶನ ಮಾಡತಕ್ಕ ಮಹದ್ವಿಷಯವಾಗಿರುವುದು. ತಿಳಿಯಿತೊ?

ಶಿವಪ್ಪ :—ಓಹೊ! ಜ್ಞಾಪಕಕ್ಕೆ ಬಂತು. ಮರತೆ. ತಪ್ಪಾಯಿತು. ಇದೆ ವಿಚಾರವಾಗಿ ಈದಿನ ಉತ್ಸವಗಳು ನಡೆಯುತ್ತವೆ. ಉಪನ್ಯಾಸಗಳೂ ನಡೆಯುತ್ತವೆ. ನಾನೂ ಬರುತ್ತೇನೆ, ನಡೆಯಿರಿ.

ಬಸವಪ್ಪ :—ನಿಮ್ಮ ಮರವೆ ನನ್ನ ಕೆಲಸಕ್ಕೆ ಅರೆಗಲ್ಲಾಯಿತು. ಮರವೆ ಹರಿಯಿತು. ಈಗ ನಿಮಗೆ ಅರಿವು ದೊರೆಯಿತು. ಹರಹರ ಎಂದು ನಾವು ತ್ವರೆಯಾಗಿ ಹೋಗಿ ಉತ್ಸವ ಕಾರ್ಯಗಳಿಗೆ ಸಹಾಯರಾಗೋಣ.

ಶಿವಪ್ಪ :—ಹಾಗೆ ಆಗಲಿ, ನಡೆಯಿರಿ.

ವೀರಶೈವ ಮತ ವಿದ್ಯಾ ವಾರ್ಷಿಕ ಪರೀಕ್ಷೆ.

1. ವೀರಶೈವ ಶಬ್ದಕ್ಕೆ ವೀರಶೈವ ಗ್ರಂಥಗಳಲ್ಲಿ ಏನು ಅರ್ಥಬರದಿರುತ್ತದೆ?
2. ಶಿವಾಗಮಗಳ ಸಂಖ್ಯೆಯೆಷ್ಟು? ಯಾವ ಯಾವ ಆಗಮಗಳು ಶಿವನ ಯಾವ ಯಾವ ಮುಖಗಳಲ್ಲಿ ಹುಟ್ಟಿದವು?
3. ವ್ಯಾಸೋಕ್ತವಾದ ಹದಿನೆಂಟು ಪುರಾಣಗಳಲ್ಲಿ ಯಾವ ಯಾವ ಪುರಾಣಗಳು ವೀರಶೈವರಿಗೆ ಸಂಬಂಧಿಸುತ್ತವೆ?
4. ಪ್ರಸಿದ್ಧವಾದ ನಾಲ್ಕು ವೇದಗಳಲ್ಲಿ ಎಷ್ಟು ಎಷ್ಟು ಭಾಗಗಳು ವೀರಶೈವರಿಗೆ ಪ್ರಮಾಣಗಳಾಗಿರುತ್ತವೆ?
5. ಪುರಾತನ ಋಷಿಗಳಲ್ಲಿ ಕೆಲವರು ವೀರಶೈವರೆಂದು ಗಣಿಸಲ್ಪಟ್ಟಿರುತ್ತಾರೆ. ಅವರ ಹೆಸರುಗಳೇನು?
6. ವೀರಶೈವ ಪಂಡಿತರಲ್ಲಿ ಅನೇಕರು ಜೈನ ಚಾರ್ವಾಕಾದಿ ಅನ್ಯಮತದ ಪಂಡಿತರನ್ನು ವಾದದಲ್ಲಿ ಜಯಿಸಿರುತ್ತಾರೆ. ಇವರುಗಳಲ್ಲಿ ನಾಲ್ಕು ಜನರ ಚರಿತ್ರೆಯನ್ನು ಬರೆಯುವದು.
7. ವೀರಶೈವರು ಎಷ್ಟು ಭಾಷೆಗಳಲ್ಲಿ ಗ್ರಂಥಗಳನ್ನು ಬರೆದಿರುತ್ತಾರೆ?
8. ಹಂಪೆಯ ಹರೀಶ್ವರ ದೇವರು, ರಾಘವಾಂಕರು, ಕೆರೆಯ ಪದ್ಮರಸರು, ನೀಲಕಂಠಾಚಾರ್ಯರು, ಶ್ರೀಪತಿಪಂಡಿತರು, ಮಲ್ಲಿಕಾರ್ಜುನ ಪಂಡಿತರು, ಮೊಗ್ಗೆ ಮಾಯಿದೇವರು, ಲಕ್ಕಣ್ಣ ದಂಡೇಶರು, ಷಡಕ್ಷರಕವಿ, ವಿರೂಪಾಕ್ಷ ಪಂಡಿತರು, ಪೆಮ್ಮೆಶೆಟ್ಟಿಗಳು, ಚಂದ್ರಭೀಮ ಕವಿಗಳು ಇವರುಗಳು ಯಾವ ಗ್ರಂಥಗಳನ್ನು ಬರೆದಿರುತ್ತಾರೆ?

ಬಸವಸ್ತವನಂ.

ಬಸವೇಶನನ್ನೆಲ್ಲಸ್ತುತಿಗೆಯ್ವುದು | ಬಸವನನ ಸಮಾನನೆಂದು ತಿಳಿವುದು ||೧||
ಬಸವಂಕುಮಾರ್ಗಗಳ ತೊಲಗಿಸಿದಂ | ಬಸವಂ ಸುಮಾರ್ಗಮಂ ಸ್ಥಾಪಿಸಿದಂ ||೨||
ಬಸವಂ ಕುಲಮದಗಳ ಭಂಗಿಸಿದಂ | ಬಸವಂ ಧನಮದಗಳ ಮಗ್ಗಿಸಿದಂ ||೩||
ಬಸವಂ ಪತಿತರ್ಗಾಗುನ್ನತರೊಳ್ | ಒಸೆದತಿ ಧೀರತ್ವದಿನುರೆಪೊಣರ್ದಂ ||೪||
ಬಸವಂ ಶುಚಿತ್ವಮಂ ಭುವಿಜನರೊಳ್ | ಪಸರಿಸಿ ಸರ್ವಶ್ರೇಷ್ಠರಗೆಯ್ದಂ ||೫||
ಬಸವಂ ವಿಧವಿಧದುದ್ಯೋಗಗಳಂ | ಶಶಿಧರಮತದೊಳ್ಪ್ರಸರಂಗೆಯ್ದಂ ||೬||
ಬಸವಂ ಸಮಾಜ ಪರಿಷ್ಕರಣದಾ | ಎಸೆವುರು ಕಾರ್ಯವ ಚೆನ್ನಿಂಗೆಯ್ದಂ ||೭||
ಬಸವಂ ಪರಿಪರಿ ವಿಧದಿಂ ನಲಿಯುತೆ | ರಸೆಯುದ್ಧಾರದ ಕಾರ್ಯವ ಗೆಯ್ದಂ ||೮||
ಈಪರಿ ಘನಕಾರ್ಯಂಗಳಗೆಯ್ಬುರೆ | ಆ ಪರಶಿವಸಮನೆನಿಸಿದ ನೆಲೆಯೆಲೆ ||೯||
ಅದರಿಂದ್ವಿತೀಯೆ ಶಂಭುಸುನಾಮಂ | ಪಡೆದರಿಯಲ್ಬಸವಂಗನ್ವರ್ಥಂ ||೧೦||
ಬಸವಾ ಬಸವಾ ಎಂಬಕ್ಷರಗಳ | ಒಸದುಚ್ಚರಿಸಲ್ದುರಿತವಿನಾಶಂ ||೧೧||

ಭರತಖಂಡದ ವೃತ್ತಾಂತಗಳು.

ರಂಗೂನಿನಲ್ಲಿ ಅಕ್ಕಿಯನ್ನು ಕಳವುಮಾಡಲು ಸಂಚು ನಡೆಸುತ್ತಿದ್ದ 16 ಜನರನ್ನು ಪೋಲೀಸರು ಸೆರೆಹಿಡಿದಿರುವರು. ಇವರಲ್ಲಿ ಒಂದು ದೊಡ್ಡ ರೈಸ್ ಮಿಲ್ಲಿನ ಯಜಮಾನನು ಸೇರಿಕೊಂಡಿರುವನು.

ಭರತಖಂಡದ ಎಲ್ಲ ರೈಲ್ವೆಗಳಿಂದಲೂ ಕಳೆದ ಏಪ್ರಿಲ್ ತಾ|| 1ಕ್ಕೆ ಕಡೆಯಾದ ಒಂದು ವಾರದಲ್ಲಿ ಒಟ್ಟು 1·90 ಕೋಟಿ ರೂ. ಗಳುತ್ಪನ್ನವಾಗಿರುವುದು. ಕಳೆದ ವರ್ಷ ಇದೇ ಕಾಲದಲ್ಲಿ 1·91 ಲಕ್ಷ ರೂ. ಉತ್ಪನ್ನವಾಗಿದ್ದಿತು.

ಮಾಂಡಲಿಯೊಳಗೆ ಒಂದು ರೈಲು ಹೋಗುತ್ತಿರುವಾಗ್ಗೆ 5-3ನೆ ತರಗತಿಯ ಬಂಡಿಗಳೂ ಒಂದು ಎರಡನೆ ತರಗತಿಯ ಬಂಡಿಯೂ ಮಗುಚಿಕೊಂಡು ಪ್ರಯಾಣಿಕರಲ್ಲಿ ಒಬ್ಬ ಹೆಂಗುಸು ಮೃತಪಟ್ಟು ಕೆಲವರು ಪೆಟ್ಟನ್ನುತಿಂದರು.

ಸರ್ ಚಾರ್ಲೆಸ್‌ಟಾಡ್‌ಹಂಟರ ಬದಲು ಆನರಬಲ್ ಖಾನ್ ಬಹದ್ದೂರ್ ಸರ್ ಮಹಮದ್ ಹಬಿಬುಲ್ಲಾಸಾಹೆಬ್ ಬಹದ್ದೂರ್ ಕೆ ಟಿ., ಸಿ. ಐ. ಇ., ಯವರು ಗೌರ್ನರ ಎಕ್ಸೆಕ್ಯೂಟಿವ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಹನ್ನೆರಡು ಜನ ಕಿಲಾಫತ್ ಸ್ವಯಂಸೇವಕರು ಕಿಲಾಫತ್ ಫಂಡಿಗೆ ಚಂದಾಹಣ ಕೊಡಬೇಕೆಂದು ಜನರನ್ನು ಹಿಂಸಿಸಿದರೆಂಬ ಅಪರಾಧಕ್ಕಾಗಿ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಒಂದು ವರ್ಷಕಾಲ ಒಳ್ಳೆನಡತೆಯಲ್ಲಿರುವ ಬಗೆಗೆ ಹೊಣೆಯಮೇಲೆ ಬಿಡಲ್ಪಟ್ಟರು.

ಬಿಹಾರ್ ಒರಿಸ್ಸಾಗಳಿಗೆ ಸೇರಿದ ಚಂಪರಾನ್, ದರ್ಭಾಂಗ ಮುಜಫರ್ಪುರ ಮತ್ತು ಷಹಬಾದ್ ಈ ಸ್ಥಳಗಳಲ್ಲಿ ವಾಂತಿಭೇದಿ ರೋಗವು ಬಹಳ ಉಗ್ರಸ್ವರೂಪದಿಂದ ಪ್ರಾರಂಭವಾಗಿ ದಿನ ಒಂದಕ್ಕೆ 300 ರಂತೆ ಮರಣವಾಗಿರುವುದರಿಂದ ಆರೋಗ್ಯಶಾಖೆಯವರು ಅದರ ಶಮನಾರ್ಥವಾಗಿ ಬಹಳ ಪ್ರಯಾಸಪಡುತ್ತಿರುವರು.

ಆಗ್ರಾದಲ್ಲಿ ಹೆಸರುವಾಸಿ ಕಳ್ಳನಾಗಿದ್ದು ಪೋಲೀಸರು ತನ್ನನ್ನು ಹಿಡಿಯಲು ಪ್ರಯತ್ನಿಸಿದಾಗ 2 ಜನ ಪೋಲೀಸರನ್ನು ಕೊಂದು ತಲೆತಪ್ಪಿಸಿಕೊಂಡು ಹೋಗಿದ್ದ ರಜಾಕ್ ಎಂಬುವವನ್ನು ಹಿಡಿದವರಿಗೆ 1000 ರೂ. ಬಹುಮಾನಿಸಲ್ಪಡುವುದಾಗಿ ಪ್ರಕಟಿಸಲ್ಪಟ್ಟಿದ್ದಿತು. ಈಗ ಅವನನ್ನು ಆಗ್ರಾ ಪಟ್ಟಣದ ಒಬ್ಬ ಪೋಲೀಸು ಕುತ್ವಾಲನು ಲಕ್ನೋದಲ್ಲಿ ಹಿಡಿದು ವಿಚಾರಣೆಗೆ ಗುರಿಮಾಡಿರುವನು.

ವೈಸ್‌ರಾಯರು ಉಪ್ಪಿನಮೇಲಣ ಕಂದಾಯವನ್ನು ಹೆಚ್ಚಿಸಿ ಕ್ರೂರಾಧಿಕಾರಿಯಾಗಿ ಪರಿಣಮಿಸಿರುವರೆಂದು ಮೊದಲಾಗಿ ರಾಜದ್ರೋಹಕಾರಕ ಭಾಷಣವನ್ನು ಮಾಡಿರುವ ಅಪರಾಧಕ್ಕಾಗಿ ಮೊಟಾರುಬಂಡಿಯನ್ನು ನಡಿಸುವ ವೃತ್ತಿಯವನಾದ ಅಕಾಲಿ ಅರ್ಜುನಸಿಂಗ್ ಎಂಬ ಪಂಜಾಬ್ ದೇಶಸ್ಥನು ರಂಗೂನಿನ ಡಿ|| ಮ್ಯಾಜಿಸ್ಟ್ರೇಟರಿಂದ 18 ತಿಂಗಳ ಕಾಲ ಸಾಧಾರಣ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟನು.

ಬೊಂಬಾಯಿನ ಹೈಕೋರ್ಟು ಜಡ್ಜರಾಗಿದ್ದು ಗತಿಸಿದ ಮಹಾದೇವಗೋವಿಂದರಾನಡೆಯವರ ಧರ್ಮಪತ್ನಿಯವರು ಕೆಲ ಕಾಲದಿಂದ ಅಸ್ವಸ್ಥರಾಗಿದ್ದು ಕಳೆದ ತಾ|| 26 ರಲ್ಲಿ ವಿಧಿವಶರಾದರು. ಇವರು ತಮ್ಮ ಪತಿಯವರಂತೆ ಸಮಾಜಸುಧಾರಣಾಭಿಮಾನಿಗಳಾಗಿದ್ದರಲ್ಲದೆ ಭಾರತಮಹಿಳೆಯರ ದುಸ್ಥಿತಿಯನ್ನು ಹೋಗಲಾಡಿಸಲು ಬದ್ಧಕಂಕಣರಾಗಿ ಪೂನಾದಲ್ಲಿ ಸ್ತ್ರೀಯರಿಗಾಗಿ ಒಂದು ಸೇವಾಸದನವನ್ನೇರ್ಪಡಿಸಿ ತಮ್ಮ ಮರಣಾವಧಿ ಅದರ ಅಧ್ಯಕ್ಷೆಯಾಗಿದ್ದರು.

ಶ್ರೀವಿಲ್ಲಿಪುತ್ತೂರಿಗೆ 10 ಮೈಲಿ ದೂರದಲ್ಲಿರುವ ರಾಜಕುಲರಮಣಗ್ರಾಮದಲ್ಲಿ ಪುಣ್ಯವಂತನಾದ ಒಬ್ಬ ಬ್ರಾಹ್ಮಣನ ಮನೆಗೆ 25 ಜನ ಪಂಜಿನ ಕಳ್ಳರು ಕೆಲ ದಿನಗಳ ಕೆಳಗೆ ನುಗ್ಗಿ ಪದಾರ್ಥಗಳನ್ನು ದೋಚಿಕೊಳ್ಳುತ್ತಿರುವುದನ್ನು ಮನೆ ಯಜಮಾನನು ತಿಳಿದು ಕೂಗಿಕೊಂಡನು. ಆ ಕೂಗನ್ನು ಕೇಳಿ ನೆರೆ

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಮೇ ತಾ|| ೪ ನೆಯ ಭಾನುವಾರ.

ಶ್ರೀ ಬಸವೇಶ್ವರ ಜಯಂತಿ.

ಭೂಲೋಕದಲ್ಲಿ ಶಿವಭಕ್ತಿ ಶಿವಮತಾಚಾರಗಳು ವಿಲವಾಗಿದ್ದ ಕಾಲದಲ್ಲಿ ಅವನ್ನು ಪುನರುದ್ಧರಿಸುವುದಕ್ಕಾಗಿ ಶಿವನಾಜ್ಞೆಯಮೇರೆ ಭೂತಲದಲ್ಲಿ ಅವತರಿಸಿ ಕಲ್ಯಾಣಪಟ್ಟಣದ ಅರಸನಾಗಿದ್ದ ಬಿಜ್ಜಳನ ಮಂತ್ರೀಶನಾಗಿದ್ದ ಧರ್ಮಸ್ವರೂಪ ಶ್ರೀ ಬಸವೇಶ್ವರನ ಜಯಂತ್ಯುತ್ಸವವು ಈ ತಾ|| 6ನೆಯ ಮಂಗಳವಾರದ ದಿವಸ ಭರತಖಂಡದ ವೀರಶೈವಮಂಡಲಿಯವರಿಂದೆಲ್ಲಾ ಆಚರಿಸಲ್ಪಡತಕ್ಕದಾಗಿದೆ. ಈ ಮಹೋತ್ಸವ ಸಮಾರಂಭದಲ್ಲಿ ಭಾಗಿಗಳಾಗತಕ್ಕ ಮೈಸೂರು ಸರ್ಕಾರಿಯುದ್ಯೋಗದಲ್ಲಿರುವ ವೀರಶೈವರು ಮೊದಲಾದವರಿಗೆ ಆ ದಿವಸ ರಜವು ಕೊಡಲ್ಪಟ್ಟಿರುವುದಕ್ಕಾಗಿ ದಯಾಳು ಸರ್ಕಾರದವರನ್ನು ನಾವು ವಂದಿಸುತ್ತೇವೆ.

“ಜಯಂ ಪುಣ್ಯಂಚ ತನುತೇಜಯಂತೀಂ ತೇನತಾಂ ವಿದುಃ” ಎಂಬ ವಚನಪ್ರಕಾರ ಜಯವನ್ನೂ, ಪುಣ್ಯವನ್ನೂ ಉಂಟುಮಾಡುವ ಕಾರಣದಿಂದ ಈ ಉತ್ಸವಕ್ಕೆ ಜಯಂತೀ ಎಂಬ ಹೆಸರು ಬಂದಿರುವುದು. ಶ್ರೀ ಬಸವೇಶ್ವರನು ಯಾವರೀತಿಯಲ್ಲಿ ತನ್ನ ತನುಮನ ಧನಗಳನ್ನೆಲ್ಲಾ ಶಿವಮತೋದ್ಧಾರಕ್ಕಾಗಿ ಸಮರ್ಪಿಸಿ ಕೃತಕೃತ್ಯನಾದನೋ ಅದನ್ನು ಅವನ ಪವಿತ್ರತಮವಾದ ಚರಿತ್ರೆಯಿಂದ ತಿಳಿದುಕೊಂಡು ಪ್ರತಿಯೊಬ್ಬ ವೀರಶೈವನೂ ತನ್ನ ಶಕ್ತಿವಂಚನೆಯಿಲ್ಲದೆ ಸ್ವಮತಾಭ್ಯುದಯಕ್ಕಾಗಿ ಯಾವ ತೆರದ ಸೇವೆಯನ್ನಾದರೂ ಮಾಡಲು ಈ ಶುಭದಿವಸದಲ್ಲಿ ಸಂಕಲ್ಪಮಾಡುವುದೇ ಜಯವನ್ನೂ ಪುಣ್ಯವನ್ನೂ ಉಂಟುಮಾಡಲು ಸಾಧಕವಾದ ಜಯಂತ್ಯುತ್ಸವವೆನಿಸಿಕೊಳ್ಳುವುದು. ಇದನ್ನು ಸಕಲ ವೀರಶೈವರೂ ಶ್ರೀ ಬಸವೇಶ್ವರನ ಚರಿತಾದರ್ಶದಿಂದ ನೆರವೇರಿಸಿ ಕೃತಾರ್ಥರಾಗಲೆಂದು ಕೋರುವೆವು.

ಬ್ರಿಟಿಷ್ ಪ್ರಭುತ್ವಾಯವ್ಯಯ.

ಬ್ರಿಟಿಷ್ ಪ್ರಭುತ್ವದ ಕೋಶಾಧ್ಯಕ್ಷರಾದ ಮಿ|| ಫಿಲಿಪ್ ಸ್ನೋಡರ್‌ರವರು ಪ್ರಭುತ್ವದ ಆಯವ್ಯಯಗಳ ಸ್ಥಿತಿಯನ್ನು ಕುರಿತ ತಮ್ಮ ಲೇಖನವನ್ನು ತಾ|| 29 ರಲ್ಲಿ ನೆರದಿದ್ದ ಕಾಮನ್ಸ್ ಸಭೆಯ ಮುಂದಿಟ್ಟರು. ಸಭೆಯು ಕಿಕ್ಕಿರಿಸಿದ್ದಿತು. ಪ್ರೇಕ್ಷಕರ ಸಂಖ್ಯೆಯು ಮಿತಿಮೀರಿದ್ದಿತು. ಆಸ್ಟ್ರೇಲಿಯಾ ಸೆನೇಟ್ ವಿಲ್ಸನ್, ಕುಕ್ಕು, ಭಾರತೀಯರು ಮೊದಲಾಗಿ ಅಧಿನಿವೇಶ ಪ್ರತಿನಿಧಿಗಳು ಬಂದಿದ್ದರು ಕೋಶಾಧ್ಯಕ್ಷ ಸ್ನೋಡರ್‌ರವರು ಸಭಾಪ್ರವೇಶ ಮಾಡುತಲೇ ಸಭಿಕರು ಅವರನ್ನು ಸನ್ಮಾನಿಸಿದರು. ಅವರು ತಮಗೆ ಮಂತ್ರಿಮಂಡಲದನುಭವವು ಇಲ್ಲವಾದುದರಿಂದ ತಾವು ತಿಳಿಸುವ ಸಂಗತಿಗಳನ್ನು ಶ್ರದ್ಧೆಯಿಂದಲಾಲಿಸಿ ಲೋಪವಿದ್ದಲ್ಲಿ ಕ್ಷಮಿಸಬೇಕಾಗಿ ಕೇಳಿಕೊಂಡರು. 1924 ನೆಯ ಮೆ ತಾ|| 31ಕ್ಕೆ ಅಂತ್ಯವಾದ ವರ್ಷದಲ್ಲಿ ಒಟ್ಟು ಆದಾಯದಲ್ಲಿ 1,85,00,000 ಪೌನುಗಳು ಹೆಚ್ಚಿದುದೂ ವ್ಯಯದಲ್ಲಿ 2,77,50,000 ಪೌನುಗಳು ಕಡಿಮೆಯಾದುದೂ 22-23 ನೆಯ ವರ್ಷದಲ್ಲಿ 30,79,200 ಪೌನುಗಳು ಉಳಿದಿದ್ದುದೂ ಸೇರಿ ಒಟ್ಟು 4,93,29,200ಪೌನುಗಳು ಮಿಗತಾಯಿವಾಗಿರುವುದಾಗಿಯೂ, ಇದರಿಂದ ಕೊಂಚ ಋಣವನ್ನು ತೀರಿಸಿರುವುದಾಗಿಯೂ ತಿಳಿಸಿದರು. ಸುಂಕ ಮತ್ತು ಮದದ್ರವ್ಯಗಳಿಂದ 71,78,000 ಪೌನುಗಳು ಹೆಚ್ಚುತ್ಪನ್ನವಾಗಿರುತ್ತವೆ. ಈ ಮೊತ್ತವು ಸಾರಾಯಿ ಮತ್ತು ಹೊಗೆಸೊಪ್ಪು ಇವೆರಡರಿಂದಲೇ ಬಂದುದಾಗಿರುತ್ತದೆ. ಮೋಟಾರು ಬಂಡಿಗಳ ಸುಂಕದಿಂದ 15,00,000 ಪೌನುಗಳೂ. ಮರಣದ ಸುಂಕದಿಂದ 58,00,000 ಪೌನುಗಳೂ, ಆದಾಯದ ಮೇಲಣ ತೆರಿಗೆಯಿಂದ 83,31,000 ಪೌನುಗಳೂ ನಿರೀಕ್ಷಿತವಾಗಿದ್ದುದಕ್ಕಿನ್ನ ಅಧಿಕವಾಗುತ್ಪನ್ನವಾಗಿವೆ. ಆದರೆ ಹೆಚ್ಚು ಲಾಭದ ಮೇಲಣ ತೆರಿಗೆಯು ಮಾತ್ರ 1,20,00,000 ಪೌನುಗಳು ನಿರೀಕ್ಷಿತವಾಗಿದ್ದುದಕ್ಕಿನ್ನ ಕಡಿಮೆಯಾಗಿರುತ್ತವೆ. ಸಾರ್ವಜನಿಕ ಋಣಕ್ಕಾಗಿ 3,47,25,000 ಪೌನುಗಳೂ, ಸಪ್ಲೈಸರ್ವಿಸ್ಸಿಗಾಗಿ 40,50,00,00 ಪೌನುಗಳೂ, ಸೈನ್ಯಕ್ಕಾಗಿ 4,45,00,000 ಪೌನುಗಳೂ, ನೌಕಾದಳಕ್ಕಾಗಿ 52,50,000 ಪೌನುಗಳೂ, ವೈಮಾನಿಕ ದಳಕ್ಕಾಗಿ 93,333½ ಪೌನುಗಳೂ ವೆಚ್ಚವಾಗಿರುವುವು. ಬ್ರಿಟಿಷರಿಗೆ ಪ್ರಾಣಾಧಾರವಾಗಿರುವ ನಾಣ್ಯವ (ನಂಬಿಕೆಯ)ನ್ನು ಅಭಿವೃದ್ಧಿಗೊಳಿಸಿ ಅದನ್ನು ಉಳಿಸಿಕೊಂಡು ಬರುವುದು ಬಹಳ ಅವಶ್ಯಕವು. ಈಗಿರತಕ್ಕ 868,00,00,000 ಪೌನು ಸಾಲದಲ್ಲಿ 30,50,00,000 ಪೌನುಗಳ ಬಡ್ಡಿಯು ಸೇರಿರುತ್ತದೆ. 1919 ನೆ ಡಿಸೆಂಬರಿನಲ್ಲಿ 8,00,00,00,000 ಪೌನುಗಳ ಸಾಲವೂ, 34,50,00,000 ಪೌನುಗಳ ಬಡ್ಡಿಯೂ ಕೊಡಲ್ಪಡಬೇಕಾಗಿದ್ದಿತು. ಇದರಲ್ಲಿ ಯುನೈಟೆಡ್ ಸ್ಟೇಟ್ಸಿನವರಿಗೆ 9,40,12,00,000 ಪೌನುಗಳ ಮತ್ತು ಅಮೇರಿಕೆಯಲ್ಲಿ ಇತರರಿಗೆ 4,50,00,000 ಪೌನುಗಳ ಸಾಲವು ಕೊಡಬೇಕಾಗಿರುತ್ತದೆ. ಅಂತು ಸ್ವದೇಶ ಪರದೇಶದವರಿಗೆ ಕೊಡಬೇಕಾಗಿರುವ ಸಾಲದ ಮೊಬಲಗು 65,00,00,000 ಪೌನುಗಳಿಗೆ ತಗ್ಗಿರುವುದು. ನಮಗೆ ಇತರರು ಎಷ್ಟೋ ಹಣವನ್ನೂ ಬಡ್ಡಿಯನ್ನೂ ಕೊಡಬೇಕಾಗಿದೆ. ಇದೆಲ್ಲವೂ ಕಂದಾಯವನ್ನು ತೆರುವ ಪ್ರಜೆಗಳಿಗೆ ಭಾರವಾಗಿರುವುದು. ಈ ಋಣದಲ್ಲಿ ಕೊಂಚ ಮೊಬಲಗಿನ ಮೇಲೆ ನಮಗೆ ಬಡ್ಡಿಯು ಸಂದಾಯವಾದಲ್ಲಿ ನಾವು ಕೊಡಬೇಕಾಗಿರುವ ಋಣವನ್ನು ಕಡಿಮೆಮಾಡಿಕೊಳ್ಳುವುದಕ್ಕೂ, ಕಂದಾಯವನ್ನು ಇಳಿಸುವುದಕ್ಕೂ ಅವಕಾಶವಾಗುವುದು ಮತ್ತು ನಮ್ಮ ಸಾಧನಸಂಪತ್ತಿನಿಂದ ಕಡಿಮೆಮಾಡಲು ಪ್ರಯತ್ನಿಸುವುದಕ್ಕಿನ್ನ ಜಾಗ್ರತೆಯಲ್ಲಿ [illegible]ವುದು ಎಂದು ಕೋಶಾಧ್ಯಕ್ಷರು ಅಪ್ಪಣೆಕೊಡಿಸಿದರಲ್ಲದೆ ತೇಯೆಲೆ, ಸಕ್ಕರೆ, ಕಾಫಿ ಮೊದಲಾದ ಪದಾರ್ಥಗಳಮೇಲಣ ಸುಂಕವು ಕಡಿಮೆ ಮಾಡಲ್ಪಡುವುದಾಗಿಯೂ, ಒಣಗಿದ ಹಣ್ಣುಗಳ ಮೇಲಿನ ಸುಂಕವೂ, ಮೆಕನ್ನಾಸುಂಕವೂ, ವಾಸವಿಲ್ಲದ ಮನೆಗಳ ತೆರಿಗೆಯೂ, ಲಾಭದಮೇಲಣ ತೆರಿಗೆಯೂ ತಪ್ಪಿಸಲ್ಪಡುವುದಾಗಿಯೂ, 1924-25 ರಲ್ಲಿ ಒಟ್ಟು 82,80,00,000 ಪೌನುಗಳ ಆದಾಯವೂ 79,00,00,000 ಪೌನುಗಳ ವ್ಯಯವೂ ಆಗಿ ಕಂದಾಯದಲ್ಲಿ ತಗ್ಗಿಸಲ್ಪಡುವುದು 3,40,00,000 ಪೌನುಗಳು ಹೋಗುತ 40,00,000 ಪೌನುಗಳು ಉಳಿಯುವುದಾಗಿ ನಿರೀಕ್ಷಿಸಲ್ಪಟ್ಟಿರುವುದಾಗಿಯೂ ತಿಳಿಸಿದರು.

ಕೋಶಾಧ್ಯಕ್ಷರಾದ ಫಿಲಿಫ್ ಸ್ನೋಡರ್‌ರವರು ಸಿದ್ಧಗೊಳಿಸಿರುವ ಮೇಲೆಕಂಡ ಆಯವ್ಯಯ ಲೆಖ್ಖವನ್ನು ಪರಿಶೀಲಿಸುವುದರಿಂದ ಲೇಬರು ಪ್ರಭುತ್ವದ ಮೊದಲನೆಯ ಬಜೆಟ್ಟು ಪ್ರೋತ್ಸಾಹಕರವಾಗಿರುವುದೆಂದು ಹೇಳಲಭ್ಯಂತರವಿಲ್ಲವು. ಅನೇಕ ಪದಾರ್ಥಗಳ ಮೇಲಿನ ಸುಂಕವು ತಪ್ಪಿಸಲ್ಪಟ್ಟ ಪ್ರಯುಕ್ತವಾಗಿ ವಾಣಿಜ್ಯಾಭಿವೃದ್ಧಿಗೆ ಬಹಳ ಅನುಕೂಲವಾಯಿತಲ್ಲದೆ ಸ್ವೇಚ್ಛಾವಾಣಿಜ್ಯಾಕಾಂಕ್ಷಿಗಳಾದ ಲಿಬರಲ್ ಪಕ್ಷದವರಿಗೆ ತೃಪ್ತಿಯುಂಟಾಯಿತೆಂದೂ, ಲಿಬರ್ ಪಕ್ಷದವರಿಗೆ ಲೇಬರ್‌ಪಕ್ಷದವರ ಮೇಲೆ ಉಂಟಾಗಿದ್ದ ಆಗ್ರಹವು ಕಡಿಮೆಯಾಗಲು ಅವಕಾಶವುಂಟಾಯಿತೆಂದೂ ಹೇಳಬಹುದಾಗಿದೆ. ಇಷ್ಟು ತೃಪ್ತಿಕರವಾಗಿ ಬಜೆಟ್ಟನ್ನು ಸಿದ್ಧಗೊಳಿಸಿರುವುದಕ್ಕೋಸ್ಕರ ಲಿಬರಲು ಪಕ್ಷದ ನಾಯಕರುಗಳಾದ ಆಸ್ಕ್ವಿತ್ತು ಮತ್ತು ಲಾಯಿಡ್‌ಜಾರ್ಜ್‌ರವರು ಬಹಳ ಸಂತೋಷಪಟ್ಟು ಸ್ನೋಡರ್‌ರವರನ್ನು ಅಭಿನಂದಿಸಿರುವರು; ಅಲ್ಲದೆ ಅನೇಕ ಪಕ್ಷಪರಪಕ್ಷದ ವೃತ್ತಪತ್ರಿಕೆಗಳು ಸ್ನೋಡನ್ನರವರ ಬುದ್ಧಿಶಕ್ತಿಯನ್ನು ಕೊಂಡಾಡಿ ವಂದಿಸಿರುವುವು.

ಶತೃರಾಜ್ಯಗಳಿಂದ ಪರಿವೃತವಾಗಿರುವ ಗ್ರೇಟ್‌ಬ್ರಿಟನ್ನು ಆತ್ಮರಕ್ಷಣೆಗಾಗಿಯೂ, ತನ್ನ ಸಾಮ್ರಾಜ್ಯಕ್ಕೊಳಪಟ್ಟ ದೇಶಗಳ ರಕ್ಷಣೆಗಾಗಿಯೂ ಸೈನಿಕ ವೈಮಾನಿಕ ನೌಕಾದಳಗಳನ್ನು ಪ್ರಬಲಪಡಿಸಿಕೊಳ್ಳುವುದಾವಶ್ಯಕವಾಗಿರುವುದಾದರೂ, ಅದಕ್ಕಾಗಿ ಮಾಡಲ್ಪಡುತ್ತಿರುವ ವೆಚ್ಚಕ್ಕೂ ನೌಕಾದಳವಿಲ್ಲದೆ ಅತ್ಯಲ್ಪ ವೈಮಾನಿಕ ದಳವುಳ್ಳ ಭರತಖಂಡದ ಸೈನಿಕವೆಚ್ಚಕ್ಕೂ ದಾಮಾಷಾಪ್ರಕಾರ ಹೋಲಿಸಿ ನೋಡಿದರೆ ಭರತಖಂಡದ ಸೇನೆಗೆ ಹೆಚ್ಚು ವೆಚ್ಚವಾಗುತ್ತಿದೆಯೆಂದು ಗೊತ್ತಾಗುತ್ತದೆ. ಇದನ್ನು ಭಾರತ ಪ್ರಭುತ್ವದವರು ತಮ್ಮ ಬಜೆಟ್ಟನ್ನು ತಯಾರಿಸುವಲ್ಲಿ ಈ ದೇಶದ ಪರಿಸ್ಥಿತಿಗನುಗುಣವಾಗಿ ಸೈನಿಕ ವೆಚ್ಚವನ್ನು ತಗ್ಗಿಸಿ ಭಾರತೀಯರ ವಂದನೆಗೆ ಪಾತ್ರರಾಗಲೆಂದು ಆಶಿಸುತ್ತೇವೆ.

ಕಾಶ್ಮೀರ ಮಹಾರಾಜರ ಬುದ್ಧಿವಾದ.

ಕಾಶ್ಮೀರ ಮಹಾರಾಜರವರು ಜಮ್ಮುನಲ್ಲಿರುವ ಪ್ರಿನ್ಸ್ ಆಫ್ ವೇಲ್ಸ್ ಕಾಲೇಜಿನ ವಿದ್ಯಾರ್ಥಿಗಳಿಗೆ ಪಾರಿತೋಷಿಕಗಳನ್ನು ಕೊಡುವ ವೇಳೆಯಲ್ಲಿ, ಮಹಮ್ಮದೀಯ ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಹಿಂದೆಬಿದ್ದಿರುವುದನ್ನು ಕುರಿತು “ಮಹಮ್ಮದೀಯ ವಿದ್ಯಾರ್ಥಿಗಳು ವ್ಯಾಸಂಗಮಾಡದಿರುವುದಕ್ಕಾಗಿ ತಮನ್ನ ತಾವೇ ನಿಂದಿಸಿಕೊಳ್ಳಬೇಕಾಗಿದೆ. ನಾನು ಪ್ರತಿಯೊಂದು ಜನಾಂಗದವರಿಗೂ ಒಂದೇತೆರನಾದ ಅನುಕೂಲವನ್ನು ಕಲ್ಪಿಸಿಕೊಟ್ಟಿರುತ್ತೇನಾದುದರಿಂದ, ಅವರಿಗೆ ವಿಶೇಷವಾದ ಅನುಕೂಲ್ಯಗಳನ್ನು ಕಲ್ಪಿಸಿಕೊಡಬೇಕಾದ ಅವಶ್ಯಕತೆಯಿಲ್ಲದಿರುವುದಾದರೂ, ನನ್ನ ಸರ್ಕಾರದವರು ಅವರಿಗೆ ಕಲ್ಪಿಸಿಕೊಟ್ಟಿರುತ್ತಾರೆ. ಆದಾಗ್ಗೂ ಅವರು ಮಾತ್ರ ಆ ಸೌಲಭ್ಯಗಳನ್ನು ಯುಕ್ತರೀತಿಯಲ್ಲಿ ಉಪಯೋಗಿಸಿಕೊಳ್ಳುವ ಕಾಂಕ್ಷೆಯುಳ್ಳವರಾಗಿಲ್ಲವು. ಪ್ರಾಯಶಃ ವಿದ್ಯಾವ್ಯಾಸಂಗವೊಂದರಿಂದಲೇ ತಮ್ಮ ಜೀವಿತದ ಪುರುಷಾರ್ಥವಾಗದೆ ವಿದ್ಯೆಯಲ್ಲೂ ಕಲಾಕೌಶಲ್ಯದಲ್ಲೂ ಪರಿಶ್ರಮವಿಲ್ಲದೆ ಇತರ ಮಾರ್ಗಗಳಿಂದ ತಮ್ಮ ಜೀವನಸಾಧನವಾಗುತ್ತದೆಂದು ಭಾವಿಸಿರಬಹುದು. ಆದರೆ ಜನರ ಯೋಗ್ಯತೆಯ ಮೇಲೆ ಸರ್ಕಾರಿಯುದ್ಯೋಗವು ಕೊಡಲ್ಪಡುವುದಲ್ಲದೆ ಜನಬಾಹುಳ್ಯದ ಮೇಲೆ ಕೊಡಲ್ಪಡುವುದಿಲ್ಲವೆಂದು, ವಿಧಾಯಕವಾಗಿರುವುದರಿಂದ, ಅವರು ನನ್ನ ಸಂಸ್ಥಾನದಲ್ಲಿ ಕೆಲಸಕ್ಕೆ ಸೇರಲಪೇಕ್ಷಿಸುವುದಾದರೆ, ಇತರರಂತೆ ತಾವೂ ಯೋಗ್ಯತೆಯನ್ನು ಸಂಪಾದಿಸಿದವರಾಗಿರಬೇಕೆಂಬುದನ್ನು ಮರೆಯಕೂಡದು. ನಾನು ಯಾವ ಜಾತಿಯ ಪಕ್ಷಪಾತಿಯಾಗಿಲ್ಲ. ಅದುಕಾರಣ ಪಂಜಾಬಿನ ಮಹಮ್ಮದೀಯ ವೃತ್ತಪತ್ರಿಕೆಗಳಲ್ಲಿ ಈ ವಿಚಾರವಾಗಿ ಮಾಡುತ್ತಿರುವ ಕಡಗೇಡಿ ಕೋಲಾಹಲವು ಕ್ರೂರವಾಗಿ ಖಂಡಿಸಲ್ಪಡುತಕ್ಕದಾಗಿದೆ. ಎಲ್ಲ ಜನವರ್ಗದವರೂ ಪರಾವಲಂಬನವಿಲ್ಲದೆ ಸ್ವಾವಲಂಬನದಿಂದ ವರ್ತಿಸುವುದನ್ನು ಕಲಿಯುವುದು ಅತ್ಯಾವಶ್ಯಕವು” ಎಂದು ಬುದ್ಧಿವಾದವನ್ನು ಹೇಳಿದರು.

ಜಪಾನು ದಂಡೆತ್ತುವ ಭಯವು.

ಅಮೇರಿಕೆಗೆ ಜಪಾನರು ವಾಸಕ್ಕಾಗಿ ಬರದಂತೆ ನಿರ್ಬಂಧವಿಧಿಯನ್ನು ಅಮೆರಿಕಾ ಪ್ರಭುತ್ವದವರು ಕಲ್ಪಿಸಿರುವುದರಿಂದ ಜಪಾನು ಪ್ರಭುತ್ವದವರು ಕುಪಿತರಾಗಿ ಈ ನಿರ್ಬಂಧವನ್ನು ತಪ್ಪಿಸದ ವಿನಾ ತಾವು ಶಾಂತರಾಗುವುದಿಲ್ಲವೆಂದೂ, ಇದರಿಂದ ಮುಂದೆ ಅನರ್ಥವುಂಟಾಗುವುದೆಂದೂ ಒಂದು ಅಂತ್ಯಸಂದೇಶವನ್ನು ಅಮೆರಿಕಾಪ್ರಭುತ್ವದವರಿಗೆ ಕಳುಹಿಸಿಕೊಟ್ಟಿರುವುದರ ಮೇಲೆ ಅಮೆರಿಕೆಯಲ್ಲಿ ಬಹಳ ಗಲಭೆಯುಂಟಾಗಿ ಚರ್ಚೆಯು ನಡಿಯುತ್ತಿದೆ. ಈ ರೀತಿಯಾಗಿ ಕೋಪೋದ್ರೇಕಗೊಂಡಿರುವ ಜಪಾನು ಉತ್ತರ ಅಮೇರಿಕಾ ತೀರದಲ್ಲಿರುವ ಕಲ್ಲಿದ್ದಲು ಗಣಿಗಳನ್ನು ಸ್ವಾಧೀನಪಡಿಸಿಕೊಂಡು ಅನಂತರ ಯುನೈಟೆಡ್ ಸ್ಟೇಟ್ಸ್ ತೀರದಲ್ಲಿರುವ ನಗರಗಳನ್ನು ಸ್ವಾಧೀನಮಾಡಿಕೊಳ್ಳಬಹುದು. ಕನಡಾದವರಿಗೆ ಕೋಪವುಂಟಾಗುತ್ತದೆಂದು ದಾಕ್ಷಿಣ್ಯವಿಡದೆ ಜಪಾನು ಉದ್ದೇಶಿಸಿದ ಕಾರ್ಯವನ್ನು ಸಾಧಿಸದೆ ಬಿಡದು. ಕನಡಾದ ಕಲ್ಲಿದ್ದಲು ಗಣಿಗಳನ್ನು ಜಪಾನು ಸ್ವಾಧೀನಪಡಿಸಿಕೊಂಡ ಮೇಲೆ ಅವನ್ನು ಪುನಃ ಬ್ರಿಟಿಷ್ ನೌಕಾದಳವು ಸ್ವಾಧೀನಪಡಿಸಿಕೊಳ್ಳಬಲ್ಲದು, ಆದರೆ ಪುನಃ ಸಾಧಿಸಲು ಬಹಳ ಕಷ್ಟಪಡಬೇಕಾಗುವುದು. ಸಿಂಗಪೂರು ನೌಕಾದಳವೊಂದೇ ಅಲ್ಲದೆ ಪೆಸಫಿಕ್‌ಸಾಗರದಲ್ಲೂ ಭದ್ರಪಡಿಸಲ್ಪಡಬೇಕಾಗಿದೆ. ದೊಡ್ಡ ನೌಕಾದಳ ರಕ್ಷಣೆಗೆ ಸಿಂಗಪೂರು ನೌಕಾಶಯವೊಂದೇ ಸಾಲದು. ವ್ಯಾಂಕೋವರು ದ್ವೀಪದಲ್ಲಿರುವ ಕಲ್ಲಿದ್ದಲು ಗಣಿಗಳು ವಿದೇಶಾಂಗ ಪ್ರಭುತ್ವದವರ ಹಸ್ತಗತವಾಗದಂತೆ ಮಾಡಲು ತಕ್ಷಣವೇ ನೌಕಾದಳಾಧಿಕಾರಿಗಳು ನೌಕಾಶಯಗಳನ್ನು ಭದ್ರಪಡಿಸಿಕೊಳ್ಳುವ ಪ್ರಯತ್ನಮಾಡಬೇಕಾಗಿದೆ ಎಂದೂ ಟೊರಂಟೋಯಿಂದ ಟೈಂಸ್‌ಪತ್ರಿಕೆಗೆ ಒಬ್ಬ ವಿಲೇಖಕನು ಬರೆದಿರುತ್ತಾನೆ.

ಮಹಾತ್ಮಾ ಗಾಂಧಿಯವರ ಆರೋಗ್ಯವು.

ಮಹಾತ್ಮಾ ಗಾಂಧಿಯವರು ಪೂನಾನಗರವನ್ನು ಬಿಟ್ಟು ಅಂಧೇರಿಗೆ ಹೋದಮೇಲೆ ಅತ್ಯಧಿಕವಾಗಿ ಆರೋಗ್ಯಾಭಿವೃದ್ಧಿಯಾಗಿರುವುದು. ಅವರು ಈ ಮೇ ತಾ|| 15 ರಲ್ಲಿ ಸಬರ್ಮತಿ ಸತ್ಯಾಗೃಹಾಶ್ರಮಕ್ಕೆ ಹೋಗುವವರಾಗಿರುವರು.

ಸ್ವದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಬಿಸಿಲಿನ ತಾಪವು ಅತ್ಯಧಿಕವಾಗಿದೆ. ಕಳೆದ 2-3 ದಿನಗಳಿಂದಲೂ ಸಾಯಂಕಾಲದ ವೇಳೆಯಲ್ಲಿ ಮೊಡವು ಮುಸುಕಿಕೊಂಡು ನಾಲ್ಕು ಹನಿಗಳು ಬಿದ್ದು ಹಾಗೆಯೇ ಮಾಯವಾಗುತ್ತಿರುವುದು. ಜೋಳದಪೈರು ಒಣಗುತ್ತಿದೆ. ಬೆಂಗಳೂರಿನ ವಾತಾವರ್ಣದಲ್ಲಿ ಉಷ್ಣವು 101 ಡಿಗ್ರಿವರೆಗೇರಿ ಸಹಿಸಲಶಕ್ಯವಾಗಿದೆ. ಮಳೆ ಇಲ್ಲದಿರುವುದರಿಂದ ಅನೇಕ ಕಡೆ ವಾಂತಿಭೇದಿರೋಗ ಪ್ರಾಪ್ತವಾಗಿ ಜನರು ಸಾಯುತ್ತಿರುವರು.

ಮೈಸೂರು ಗವರ್ನಮೆಂಟ್ ಪ್ರೆಸ್ಸಿನ ಸೂಪರಿಂಟೆಂಡೆಂಟ್ ಉದ್ಯೋಗದಿಂದ ನಿವೃತ್ತಿಯನ್ನು ಹೊಂದಿದ್ದ ಮ|| ಡಿ. ಬಿ. ರಾಮಚಂದ್ರಮೊದಲಿಯಾರರು ಕಳೆದ ಮೂರು ತಿಂಗಳಿಂದಲೂ ಅಸ್ವಸ್ಥರಾಗಿದ್ದು ವೈದ್ಯರ ಚಿಕಿತ್ಸೆಗಾಗಿ ಮದ್ರಾಸಿಗೆ ಹೋಗಿ ಅಲ್ಲಿ ಗುಣವನ್ನು ಹೊಂದದೆ ಕಳೆದ ತಾ|| 27 ರಲ್ಲಿ ಕಾಲಾಧೀನರಾದರೆಂದು ತಿಳುಹಲು ವಿಷಾದಿಸುತ್ತೇವೆ. ಇವರು 1888 ರಲ್ಲಿ 20 ರೂ. ಸಂಬಳದಮೇಲೆ ಪ್ರೆಸ್ಸಿಗೆ ಸೇರಿ ತಮ್ಮ ಬುದ್ಧಿಶಕ್ತಿವಿಶೇಷದಿಂದ ಮೇಲ್ಪಟ್ಟ ಅಧಿಕಾರಿಗಳ ಕಟಾಕ್ಷಕ್ಕೆ ಪಾತ್ರರಾಗಿ ಸೂಪರಿಂಟೆಂಡೆಂಟ್ ಉದ್ಯೋಗಕ್ಕೇರಿ ಕಳೆದ 10 ತಿಂಗಳಲ್ಲಿ ನಿವೃತ್ತಿಯನ್ನು ಹೊಂದಿದರು. ಇವರ ವಿಯೋಗ ದುಃಖಪ್ರದರ್ಶನಾರ್ಥವಾಗಿ ಬೆಂಗಳೂರು ಮತ್ತು ಮೈಸೂರುಗಳಲ್ಲಿರುವ ಸರ್ಕಾರಿ ಪ್ರೆಸ್ಸುಗಳು ಮುಚ್ಚಲ್ಪಟ್ಟಿದ್ದುವು.

ಶ್ರೀ ಶೃಂಗಗಿರಿ ಸ್ವಾಮಿಗಳು ಕಳೆದ ಭಾನುವಾರ ಶ್ರೀ ಚಾಮುಂಡೇಶ್ವರೀಬೆಟ್ಟಕ್ಕೆ ಹೋಗಿ ಶ್ರೀ ಅಮ್ಮನವರ ಸೇವೆಯನ್ನು ಮಾಡಿಕೊಂಡು ಮಂಗಳವಾರ ರಾಜಧಾನಿಗೆ ದಯಮಾಡಿಸಿದರು ಮತ್ತು ಕಳೆದ ಶುಕ್ರವಾರ ಮಧ್ಯಾನ್ಹ 3½ ಗಂಟೆಯಲ್ಲಿ ಸಕಲ ಬಿರುದಾವಳಿಗಳಿಂದಲೂ ವಾದ್ಯ ವಿಶೇಷದಿಂದಲೂ ಪುರಪ್ರಮುಖರ ಸಮೂಹದಿಂದಲೂ ರಾಜಧಾನಿಯ ಗಡಿಯವರೆಗೆ ಉತ್ಸವಗೊಂಡು ನಂಜನಗೂಡಿಗೆ ಪ್ರಯಾಣಮಾಡಿದರು. ಶ್ರೀಗಳು ನಂಜನಗೂಡಿನಲ್ಲಿ 6 ದಿನಗಳ ವರೆಗಿದ್ದು ಶ್ರೀ ಶ್ರೀಕಂಠೇಶ್ವರಸ್ವಾಮಿಯ ಸೇವೆಯನ್ನು ಮಾಡಿಕೊಂಡು ಚಾಮರಾಜನಗರ ಮಾರ್ಗವಾಗಿ ಕಣಿವೆಕೆಳಗಿನ ಪ್ರಾಂತಕ್ಕೆ ಚಿತ್ತೈಸುವವರಾಗಿರುವರು. ಶ್ರೀಗಳವರು ರಾಜಧಾನಿಗೆ ದಯಮಾಡಿಸಿದಾರಾಭ್ಯ ಅಂದರೆ ಕಳೆದ 1½ ತಿಂಗಳಿಂದಲೂ ಅನೇಕ ಬ್ರಾಹ್ಮಣ ಕುಟುಂಬಗಳಿಗೆ ಮಠದಲ್ಲಿ ಭೋಜನವು ನಿರಾಯಾಸವಾಗಿ ನಡೆದುಹೋಗುತ್ತಿದ್ದಿತು.

ಶ್ರೀ ಬಸವೇಶ್ವರ ಜಯಂತಿ.

(ಬೆಂಗಳೂರು ಮ|| ಜೀರಗೆ ಬಸವಲಿಂಗಪ್ಪನವರಿಂದ.)

ಇದೇ ರಕ್ತಾಕ್ಷಿ ಸಂವತ್ಸರದ ವೈಶಾಖ ಶುದ್ಧ ಬಿದಿಗೆ ಮಂಗಳವಾರಕ್ಕೆ ಸರಿಯಾದ ೧೯೨೪ನೆ ಮೇ ೬ನೆ ತಾರೀಖಿನ ದಿನ ನಮ್ಮ ಕಲ್ಯಾಣ ಕಟಕದ ಶ್ರೀ ಬಸವದಂಡಾಧೀಶನ ಜಯಂತಿ ಮಹೋತ್ಸವವು ವೀರಶೈವ ರಾಷ್ಟ್ರದಲ್ಲೆಲ್ಲಿಯೂ ನಡೆಯುತ್ತದೆ. ಶ್ರೀಮನ್ಮಹಾರಾಜಾ ಸರ್ಕಾರದವರು ವೀರಶೈವರ ಪ್ರಾರ್ಥನೆಯ ಮೇರೆ ಬಸವೇಶ್ವರ ಜಯಂತಿಯನ್ನು ಸರ್ಕಾರದ ರಜಾವಾಗಿ ಪರಿಗಣಿಸಬೇಕೆಂದು ನಿಯಾಮಿಸಿ “ಕ್ಯಾಲಂಡರು” ನಲ್ಲಿ ಪ್ರಕಟಮಾಡಿರುತ್ತಾರೆ. ಇದರಿಂದ ವೀರಶೈವ ಜಗತ್ತೆಲ್ಲಕ್ಕೂ

ಂದಾತಿಶಯವಾಗಿರುತ್ತದೆ. ಬುದ್ಧನು, ಕ್ರಿಸ್ತನು, ಮಹಮ್ಮ ನು, ಶ್ರೀ ಶಂಕರಾಚಾರ್ಯರು ಮೊದಲಾದವರು ಒಂದೊಂದು ಧದಲ್ಲಿ ಲೋಕೋಪಕಾರ ಮಾಡಿರುವಂತೆ ನಮ್ಮ ಬಸವದಂಡ ಯಕನು ಒಂದು ವಿಧದಲ್ಲಿ ಜಗದುದ್ಧರಣ ಕಾರ್ಯವನ್ನು ಾಡಿರುತ್ತಾನೆ. ವಿಶ್ವದಲ್ಲಿ ಮಾನವಜಾತಿಯೊಳಗೆ ಕೀಳು ಮೇಲು ಾವಗಳು ಹೆಚ್ಚಾಗಿ—“ಇವನು ದುಡ್ಡುಳ್ಳವನು, ಇವನನ್ನು ಾರವಿಸಬೇಕು. ಇವನು ಧನಹೀನನು, ಇವನನ್ನು ನಿಕೃಷ್ಟ ಾಗಿ ಕಾಣಬೇಕು. ಅಧಿಕಾರ ಪ್ರಾಬಲ್ಯದಿಂದ ಇವನು ಮೇಲು ಾತಿಯವನು, ಇವನನ್ನು ಪೂಜಿಸಬೇಕು. ಅಧಿಕಾರ ಹೀನತೆ ಿಂದ ಇವನು ಕೀಳುಜಾತಿಯವನು, ಇವನನ್ನು ತುಚ್ಛವಾಗಿ ಾಣಬೇಕು.” ಹೀಗೆಂದು ಜನರಲ್ಲಿ ದುರ್ವೃತ್ತಿಗಳು ಆಚರಣೆಗೆ ಂದು ಮಾನವ ಜೀವಹಿಂಸೆಯು ನಡೆಯುತ್ತಿದ್ದಿತು. ಅದನ್ನು ಲ್ಲಿಸುವದಕ್ಕೆ ಬಸವದಂಡನಾಯಕನು ಕಂಕಣವನ್ನು ಧರಿಸಿ ನು. ಇದಕ್ಕೆ “ಅಪಿವಾಯಶ್ಚಂಡಾಲ || ಶ್ಶಿವೇತಿವಾಚಂವ ೀತ್ರೇನ ಸಹಸಂವದೇತ್ತೇನ ಸಹಸಂವಿಶೇತ್ತೇನ ಸಹಸಂವಸೇತ್ತೇನ ಸಹಭುಂಜತೆ ||” ಎಂಬ ಜಾಬಾಲೋಪನಿಷದ್ವಾಕ್ಯವನ್ನು “ಶ್ವಪಚೋಪಿಮುನಿಶ್ರೇಷ್ಠಾ ಶಿವಭಕ್ತ್ಯಾದ್ವಿಜಾಧಿಕಃ | ಶಿವಭಕ್ತಿವಿಹೀನಸ್ತು ದ್ವಿಜೋಪಿಶ್ವಪಚಾಧಮಃ” ಎಂಬ ಶಿವರಹಸ್ಯ ವಾಕ್ಯವನ್ನು ಆಧಾರವಾಗಿಟ್ಟುಕೊಂಡು ಶ್ರೇಷ್ಠತ್ವಕ್ಕೆ ಶಿವಭಕ್ತಿ ಮೊದಲಾದ ಸದ್ಗುಣಗಳೇ ಮುಖ್ಯವೆ ಹೊರತು ಐಶ್ವರ್ಯಮದ ಕುಲಮದಗಳು ಕಾರಣವಲ್ಲವೆಂದು ಬೋಧಿಸಿ ಅವನತರನ್ನು ಮೇಲಕ್ಕೆತ್ತಿದನು. ಎಲ್ಲರನ್ನು ನಿರ್ಮಲರನ್ನಾಗಿ ಮಾಡಿದನು. ಶಿಥಿಲವಾಗಿ ಹೋಗುತ್ತಿದ್ದ ವೀರಶೈವ ಮತವನ್ನು ಪುನರುನ್ನತಿಗೆ ತಂದನು. ಇಂತಪ್ಪ ನಮ್ಮ ಬಸವದಂಡನಾಯಕನ ಜ್ಞಾಪಕಾರ್ಥವಾಗಿ ದಿನದಿನವೂ ಇಲ್ಲದಿದ್ದರೂ ವಾರವಾರವೂ ಇಲ್ಲದಿದ್ದರೂ ಮಾಸಮಾಸವೂ ಇಲ್ಲದಿದ್ದರೂ ವರ್ಷಕ್ಕೊಂದು ಸಾರಿಯಾದರೂ ಉತ್ಸವ ಮಾಡುವದು ಅವಶ್ಯಕವಲ್ಲವೆ ? ಜಯಂತಿಯ ದಿನ ಸಮಸ್ತ ವೀರಶೈವರೂ ಹಬ್ಬಗಳನ್ನಾಚರಿಸಬೇಕು. ಗಣಾರಾಧನೆಗಳನ್ನು ಮಾಡಿಸಬೇಕು. ನಂದೀಧ್ವಜೋತ್ಸವ ಶಿವಭಜನೋತ್ಸವ, ಶಿವಪುರಾಣಪಾರಾಯಣ ಬಸವೇಶನ ಪ್ರತಿಮೆಯ ಮೆರವಣಿಗೆ, ವೀರಶೈವ ಮತೋಪನ್ಯಾಸ ಮೊದಲಾದವುಗಳನ್ನು ನಡೆಸಬೇಕು.

ಬಸವೇಶನ ಕಾರ್ಯಗಳು.

ಶ್ರೀ ಬಸವಪ್ರಭುವು ತಾನು ಕೈಕೊಂಡ ಕಾರ್ಯವನ್ನು ಅನೇಕ ಶಿವಶರಣರ ಸಮೇತವಾಗಿ ದಿಗ್ವಿಜಯವಾಗುವಂತೆ ನಡಸಿದನು. ವಚನಗಳೆಂಬ ಗ್ರಂಥಗಳನ್ನು ಸುಲಭ ಕನ್ನಡದಲ್ಲಿ ಬರೆದು ಜಗತ್ತಿನ ಮಾನವರೆಲ್ಲರಿಗೂ ಬೋಧಿಸಿ ಉದ್ಧಾರಮಾಡಿದನು ಮತ್ತು ಪರಿವರ್ತಿಸಿದ್ದ ಶರಣರಿಂದಲೂ ಅನೇಕ ವಚನಗ್ರಂಥಗಳನ್ನು ಬರೆಯಿಸಿ ಅವರಿಂದಲೂ ಮಾನವಕೋಟಿಗೆ ಬೋಧೆಯನ್ನು ಮಾಡಿಸಿದನು. ಅಲ್ಲದೆ ಅನೇಕ ಮಹಿಮೆಗಳಿಂದ ತನ್ನ ಮತ್ತು ತನ್ನ ಶರಣರ ಪ್ರಭಾವಗಳನ್ನು ವಿಶ್ವಕ್ಕೆ ತೋರಿಸಿದನು. ಬಸವೇಶ್ವರನ ಮತ್ತು ಇತರ ಶರಣರ ಕೆಲವು ವಾಕ್ಯಗಳನ್ನು ಇಲ್ಲಿ ಬರೆಯುತ್ತೇನೆ. ಬಸವೇಶನು ಹೇಳಿದ್ದು :—

(1) “ಕಲ್ಲದೇವರು ದೇವರಲ್ಲ; ಮಣ್ಣದೇವರು ದೇವರಲ್ಲ; ಮರದ ದೇವರು ದೇವರಲ್ಲ; ಪಂಚಲೋಹದಲ್ಲಿ ಮಾಡುವ ದೇವರು ದೇವರಲ್ಲ; ಸೇತು ರಾಮೇಶ್ವರ ಗೋಕರ್ಣ ಕಾಶಿ ಕೇದಾರ ಮೊದಲಾದ ಅಷ್ಟಾಷಷ್ಟಿ ಕೋಟಿ ಪುಣ್ಯತೀರ್ಥಂಗಳು ಪುಣ್ಯಕ್ಷೇತ್ರಂಗಳಲ್ಲಿ ಇಹ ದೇವರು ದೇವರಲ್ಲ; ತನ್ನ ತಾನರೆದುತಾನಾರೆಂದು ತಿಳಿದಡೆ ತಾನೇ ದೇವನೋಡ ಅಪ್ರಮಾಣ ಕೂಡಲ ಸಂಗಮದೇವಾ.”

(2) “ಹಾಲ ತೊರೆಗೆ ಬೆಲ್ಲದಂತಹ ಕೆಸರು, ಸಕ್ಕರೆಯಂತಹ ಮಳಲು, ತವರಾಜದಂತಹ ನೊರೆತೊರೆಗಳು. ಇಂತಪ್ಪ ಆದ್ಯರವಚನವಿರಲು ಬೇರೆ ಬಾವಿಯ ತೋಡಿ ಉಪ್ಪುನೀರ ಸವಿದಂತಾಯಿತ್ತಯ್ಯ ಎನ್ನಯುಕ್ತಿ. ನಿಮ್ಮ ವಚನಂಗಳ ಕೇಳದೆ ಅನ್ಯಪುರಾಣಂಗಳ ಕೇಳಿ ಕೆಟ್ಟೆನಯ್ಯಾ ಕೂಡಲ ಸಂಗಮದೇವ.”

ಚನ್ನಬಸವೇಶನು ಹೇಳಿದ್ದು :—“ಆನೆಯನೇರಿದ ಮಾವುತ ಚಕ್ರೇಶ್ವರನಾಗಬಲ್ಲನೆ ? ಅಯ್ಯ, ವೇದಶಾಸ್ತ್ರಾಗಮಪುರಾಣಂಗಳನೋದಿ ಕೇಳಿ ಹೇಳಿದವರೆಲ್ಲರೂ ನಡೆನುಡಿಪೂರಾಯವಾದ ಪುರಾತನರಾಗಬಲ್ಲರೇ ? ಅಯ್ಯ, ಕೂಡಲ ಚನ್ನಸಂಗಮದೇವ.”

ಪ್ರಭುದೇವರು ಹೇಳಿದ್ದು :—“ಸುತ್ತಿ ಸುತ್ತಿ ಬಂದಡಿಲ್ಲ; ಲಕ್ಷ ಗಂಗೆಯ ಮಿಂದೊಡಿಲ್ಲ; ತುಟ್ಟತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ; ನಿತ್ಯನೇಮದಿಂದ ತನು ಮುಟ್ಟಿಕೊಂಡಡಿಲ್ಲ; ನಿಚ್ಚಕ್ಕೆ ಮನವನಂದಂದಿಗೆ ಅತ್ತಿತ್ತ ಹರಿಯಲೀಯದೆ ಚಿತ್ತದಲ್ಲಿ ಧರಿಸಬಲ್ಲಡೆ ಬಚ್ಚಬರಿಯ ಬೆಳಗು ಗುಹೇಶ್ವರ ಲಿಂಗವು.”

ಸಿದ್ಧರಾಮರು ಹೇಳಿದ್ದು :—“ಸಂಸಾರವೆಂಬ ಸರ್ಪನ ಅಣಲೊಳಗಿಹೆನಯ್ಯ. ಆವಾಗ ನುಂಗಿತೆಂದರಿಯೆ, ಆವಾಗ ಉಗುಳಿತೆಂದರಿಯೆನಯ್ಯಾ. ಅದರ ಬಾಯಿಂದೆನ್ನ ತೆಗೆದು ಕಾಯಯ್ಯ, ಕಪಿಲಸಿದ್ಧ ಮಲ್ಲಿಕಾರ್ಜುನ”

ಮಡಿವಾಳಮಾಚಯ್ಯನು ಹೇಳಿದ್ದು :—“ಹುಟ್ಟದ ಬೀಜ ಇದ್ದಡೇನಯ್ಯಾ ಧರೆಯೊಳಗೆ; ಅಟ್ಟುಣಬಾರದ ಮಡಕೆಯಿದ್ದಡೇನಯ್ಯಾ ಮನೆಯೊಳಗೆ; ಶಿವ ನಿಮ್ಮ ಮುಟ್ಟದ ಮನವಿದ್ದಡೇನಯ್ಯಾ ತನುವಿನೊಳಗೆ; ಕೆಚ್ಚಲ ಕಚ್ಚಿದ ಉಣ್ಣೆ ಬಲ್ಲುದೆ ಕ್ಷೀರದ ರುಚಿಯನು ? ಬಚ್ಚಲೊಳಗಣ ಬಾಲಹುಳ ಬಲ್ಲುದೆ ನಿಚ್ಚಳದ ನೀರ ಸುಖವನು ? ನಿಚ್ಚ ನಿಚ್ಚಲೋದುವ ಗಿಳಿ ಬಲ್ಲುದೆ ತನಗೆ ಬಹ ಬೆಕ್ಕಿನ ಬಾಧೆಯನು ? ತುಚ್ಛಗೊಂಡ ನಾಯಿ ಬಲ್ಲುದೆ ಸಾಕಿದೊಡೆಯನನು ? ಶಿವನೇ ನಿಮ್ಮನರಿಯದ ಮನುಜನ ಒಡಲೆಂಬುದು ಹೊಲೆಯ ಜೋಗಿಯ ಕೈಯ್ಯ ಒಡೆದ ಸೊರೆಯಂತೆ ಕಾಣಾ ಕಲಿದೇವರ ದೇವ.”

ನಿಜಗುಣದೇವರು ಹೇಳಿದ್ದು :—“ಆನುಳ್ಳನಕ ನೀನುಂಟಿಲೆ ಮಾಯೆ, ಆನಿಲ್ಲದಿರ್ದಡೆ ನೀನಿಲ್ಲ, ಆನ್ ನೀನೆಂಬು ಭಯವಳಿಯಲು ಆನಂದ ನಿಜಗುಣಯೋಗ.” ಹೀಗೆಯೇ ಅನೇಕ ಶರಣರು ಹೇಳಿದ್ದಾರೆ.

ಶಿವಪ್ಪ ಬಸಪ್ಪನವರ ಸಂಭಾಷಣೆ.

ಶಿವಪ್ಪ :—ಓಹೊ ! ಏನು ಬಸವಪ್ಪನವರೆ ! ಕುದುರೆ ಓಡಿಹೋಗುವಹಾಗೆ ಓಡುತ್ತಿದ್ದೀರಿ ? ಏನು ಸಮಾಚಾರ ? ಮಾತನಾಡುವದಿಲ್ಲವಲ್ಲ. ಬಸವಪ್ಪನವರೆ ! ಬಸವಪ್ಪನವರೆ !

ಬಸವಪ್ಪ :—ಯಾರವರು ! ಅಡ್ಡಬರಬೇಡಿ ! ಅಡ್ಡಬರಬೇಡಿ ! ಹು ! ಹು ! ಹು ! (ಎಂದು ಹೆಚ್ಚಾಗಿ ಓಡಿಹೋಗುತ್ತಾನೆ.)

ಶಿವಪ್ಪ :—ಇದೇನು ಬಸವಪ್ಪನವರಿಗೆ ಹುಚ್ಚು ಹಿಡಿಯಿತೊ ! ಉತ್ತರವನ್ನು ಕೊಡದೆ ಓಡಿಹೋಗುತ್ತಾರೆ. ಏನಿರಬಹುದು ! (ಎಂದು ಕೈ ಹಿಡಿದು ನಿಲ್ಲಿಸುತ್ತಾನೆ.)

ಬಸಪ್ಪ :—ಛೆ ! ಬಿಡಯ್ಯ ಅಂದರೆ ಹೊತ್ತು ಕಳೆದು ಹೋಗುತ್ತದೆ. ಬಸವಣ್ಣನವರ ಇದು. ಬಸವಣ್ಣನವರ ಇದು. (ಹೋಗುವದಕ್ಕೆ ಕೈಬಿಡಿಸಿಕೊಳ್ಳುತ್ತಾನೆ)

ಶಿವಪ್ಪ:—ಏನಿರಪ್ಪ ಹಾಗಂದರೆ ? ನಿಂತುಕೊಂಡು ನಿಧಾನವಾಗಿ ಮಾತನಾಡಿರಿ. “ಬಸವಣ್ಣನವರ ಇದು” ಇದು ಬಸವಪ್ಪನವರದು ಎಂದು ಅಭಿಪ್ರಾಯವೊ ? ಯಾವದು ಬಸಪ್ಪನವರದು ? ನೀವೇನೊ ಬಸವಪ್ಪನವರು? ಹುಟ್ಟಿದಾಗ ನಿಮ್ಮನ್ನು ಹಿರಿಯರು ಹಾಗೆ ಕರೆದರು. ನಿಮ್ಮದು ಯಾವದು ?

ಬಸವಪ್ಪ :—ಹೋಗಯ್ಯ | ಹೊತ್ತಿಲ್ಲ. ಹೊತ್ತಿಲ್ಲ. ನಮ್ಮದು ಯಾವದು ಎಂದು ಕೇಳುತ್ತಿ ? ಈದಿನ ನಮ್ಮದು ನಿಮ್ಮದು ಯಾವದೂ ಇಲ್ಲ. ಎಲ್ಲಾ ಬಸವಣ್ಣನವರದೆ. ನಮ್ಮದು ನಿಮ್ಮದು ಎಂದವರಿಗೆಲ್ಲಾ ಬಿಮ್ಮನ ಏಟೆ. ಬಿಡಿರಿ. ಹೊತ್ತಾಯಿತು. ಕಾರ್ಯಗಳು ಬಹಳವಿರುವವು.

ಶಿವಪ್ಪ :—ಬಸವಣ್ಣನವರದು ಎಂದರೇನಯ್ಯ ? ಏನು ಸಮಾಚಾರವಯ್ಯ ?

ಬಸವಪ್ಪ :—ಇಗೊ ! ನಾನು ಹೊಡೆದುಬಿಡುತ್ತೇನೆ ! ಬಸವಣ್ಣನವರದೆಂಬ ವಿಚಾರದಲ್ಲಿ ಪ್ರಶ್ನೆಮಾಡುತ್ತೀರಾ ? ಈ ದಿನ ಎಲ್ಲವೂ ಬಸವಣ್ಣನವರದೆಂದು ತಿಳಿಯಬೇಕು. ಬದಲು ಹೇಳಿದರೆ ನನ್ನ ಮೆದಲು ಕೆಡುತ್ತದೆ. ನೋಡಿಕೊಳ್ಳಿ.

ಶಿವಪ್ಪ :—ಹೊಡೆಯಬೇಡಿರಯ್ಯ ! ಬಸಪ್ಪನವರೆ, ನೀವು ಯಾವಾಗಲು ಉತ್ಸಾಹಶಾಲಿಗಳು. ಈಗ ಯಾವ ದೊಡ್ಡ ಕಾರ್ಯಕ್ಕೆ ಹೋಗುತ್ತಲಿದ್ದೀರಿ ?

ಬಸವಪ್ಪ :—ಏನಯ್ಯ ! ಕಾರ್ಯ ! ಕಾರ್ಯ ! ಈ ದಿನ ಮಾಡತಕ್ಕದೊಂದು ಕಾರ್ಯವೆಂದು ತಿಳಿದೆಯೊ ? ನಿಮ್ಮ ನಮ್ಮ ಮನೆಯಲ್ಲಿ ಗೋಧಿ ಬೀಸುವ ಕಾರ್ಯವೆಂದು ತಿಳಿದೆಯೋ ? ಅಥವ ಬೆಳಿಗ್ಗೆ ಎದ್ದು ಮುಖ ತೊಳೆದು ಮಧ್ಯಾಹ್ನವಾದ ಮೇಲೆ ಸ್ನಾನ ಮಾಡಿ ಸಾಯಂಕಾಲವಾದ ಮೇಲೆ ಉಪಹಾರ ಮಂದಿರಕ್ಕೆ ಹೋಗಿ ತಿಂಡಿ ತಿಂದು, ಕೂಡಲೆ ಜೀವಚಿತ್ರ ಪ್ರದರ್ಶನ ಶಾಲೆಗಳಿಗೆ ಹೋಗುವ ಕಾರ್ಯವೆಂದು ತಿಳಿದೆಯೊ ? ಇದು ಅಂತಹ ಕಾರ್ಯವಲ್ಲ. ಕಲ್ಯಾಣಪಟ್ಟಣದ ಬಸವದಂಡ ನಾಯಕನ ಜ್ಞಾಪಕಾರ್ಥವಾಗಿ ಭಕ್ತಿಪ್ರದರ್ಶನ ಮಾಡತಕ್ಕ ಮಹದ್ವಿಷಯವಾಗಿರುವುದು. ತಿಳಿಯಿತೊ ?

ಶಿವಪ್ಪ :—ಓಹೊ ! ಜ್ಞಾಪಕಕ್ಕೆ ಬಂತು. ಮರತೆ. ತಪ್ಪಾಯಿತು. ಇದೆ ವಿಚಾರವಾಗಿ ಈದಿನ ಉತ್ಸವಗಳು ನಡೆಯುತ್ತವೆ. ಉಪನ್ಯಾಸಗಳೂ ನಡೆಯುತ್ತವೆ. ನಾನೂ ಬರುತ್ತೇನೆ, ನಡೆಯಿರಿ.

ಬಸವಪ್ಪ :—ನಿಮ್ಮ ಮರವೆ ನನ್ನ ಕೆಲಸಕ್ಕೆ ಅರೆಗಲ್ಲಾಯಿತು. ಮರವೆ ಹರಿಯಿತು. ಈಗ ನಿಮಗೆ ಅರಿವು ದೊರೆಯಿತು. ಹರಹರ ಎಂದು ನಾವು ತ್ವರೆಯಾಗಿ ಹೋಗಿ ಉತ್ಸವ ಕಾರ್ಯಗಳಿಗೆ ಸಹಾಯರಾಗೋಣ.

ಶಿವಪ್ಪ :—ಹಾಗೆ ಆಗಲಿ, ನಡೆಯಿರಿ.

ವೀರಶೈವ ಮತ ವಿದ್ಯಾ ವಾರ್ಷಿಕ ಪರೀಕ್ಷೆ.

1. ವೀರಶೈವ ಶಬ್ದಕ್ಕೆ ವೀರಶೈವ ಗ್ರಂಥಗಳಲ್ಲಿ ಏನು ಅರ್ಥಬರದಿರುತ್ತದೆ ?
2. ಶಿವಾಗಮಗಳ ಸಂಖ್ಯೆಯೆಷ್ಟು ? ಯಾವ ಯಾವ ಆಗಮಗಳು ಶಿವನ ಯಾವ ಯಾವ ಮುಖಗಳಲ್ಲಿ ಹುಟ್ಟಿದವು ?
3. ವ್ಯಾಸೋಕ್ತವಾದ ಹದಿನೆಂಟು ಪುರಾಣಗಳಲ್ಲಿ ಯಾವ ಯಾವ ಪುರಾಣಗಳು ವೀರಶೈವರಿಗೆ ಸಂಬಂಧಿಸುತ್ತವೆ ?
4. ಪ್ರಸಿದ್ಧವಾದ ನಾಲ್ಕು ವೇದಗಳಲ್ಲಿ ಎಷ್ಟು ಎಷ್ಟು ಭಾಗಗಳು ವೀರಶೈವರಿಗೆ ಪ್ರಮಾಣಗಳಾಗಿರುತ್ತವೆ ?
5. ಪುರಾತನ ಋಷಿಗಳಲ್ಲಿ ಕೆಲವರು ವೀರಶೈವರೆಂದು ಗಣಿಸಲ್ಪಟ್ಟಿರುತ್ತಾರೆ. ಅವರ ಹೆಸರುಗಳೇನು ?
6. ವೀರಶೈವ ಪಂಡಿತರಲ್ಲಿ ಅನೇಕರು ಜೈನ ಚಾರ್ವಾಕಾದಿ ಅನ್ಯಮತದ ಪಂಡಿತರನ್ನು ವಾದದಲ್ಲಿ ಜಯಿಸಿರುತ್ತಾರೆ. ಇವರುಗಳಲ್ಲಿ ನಾಲ್ಕು ಜನರ ಚರಿತ್ರೆಯನ್ನು ಬರೆಯುವದು.
7. ವೀರಶೈವರು ಎಷ್ಟು ಭಾಷೆಗಳಲ್ಲಿ ಗ್ರಂಥಗಳನ್ನು ಬರೆದಿರುತ್ತಾರೆ ?
8. ಹಂಪೆಯ ಹರೀಶ್ವರ ದೇವರು, ರಾಘವಾಂಕರು, ಕೆರೆಯ ಪದ್ಮರಸರು, ನೀಲಕಂಠಾಚಾರ್ಯರು, ಶ್ರೀಪತಿಪಂಡಿತರು, ಮಲ್ಲಿಕಾರ್ಜುನ ಪಂಡಿತರು, ಮೊಗ್ಗೆ ಮಾಯಿದೇವರು, ಲಕ್ಕಣ್ಣ ದಂಡೇಶರು, ಷಡಕ್ಷರಕವಿ, ವಿರೂಪಾಕ್ಷ ಪಂಡಿತರು, ಪೆಮ್ಮೆಶೆಟ್ಟಿಗಳು, ಚಂದ್ರಭೀಮ ಕವಿಗಳು. ಇವರುಗಳು ಯಾವ ಗ್ರಂಥಗಳನ್ನು ಬರೆದಿರುತ್ತಾರೆ ?

ಬಸವಸ್ತವನಂ.

ಬಸವೇಶನನ್ನೆಲ್ಲಸ್ತುತಿಗೆಯ್ವುದು | ಬಸವನನ ಸಮಾನ
ನೆಂದು ತಿಳಿವುದು ||೧||
ಬಸವಂಕುಮಾರ್ಗಗಳ ತೊಲಗಿಸಿದಂ | ಬಸವಂ ಸುಮಾ
ರ್ಗಮಂ ಸ್ಥಾಪಿಸಿದಂ ||೨||
ಬಸವಂ ಕುಲಮದಗಳ ಭಂಗಿಸಿದಂ | ಬಸವಂ ಧನಮದ
ಗಳ ಮಗ್ಗಿಸಿದಂ ||೩||
ಬಸವಂ ಪತಿತರ್ಗಾಗುನ್ನತರೊಳ್ | ಒಸೆದತಿ ಧೀರತ್ವದಿ
ನುರೆವೊಣರ್ದಂ ||೪||
ಬಸವಂ ಶುಚಿತ್ವಮಂ ಭುವಿಜನರೊಳ್ | ಪಸರಿಸಿ ಸರ್ವ
ಶ್ರೇಷ್ಠರಗೆಯ್ದಂ ||೫||
ಬಸವಂ ವಿಧವಿಧದುದ್ಯೋಗಗಳಂ | ಶಶಿಧರಮತದೊಳ್ಪ್ರಸ
ರಂಗೆಯ್ದಂ ||೬||
ಬಸವಂ ಸಮಾಜ ಪರಿಷ್ಕರಣದಾ | ಎಸೆವುರು ಕಾರ್ಯವ
ಚೆನ್ನಿಂಗೆಯ್ದಂ ||೭||
ಬಸವಂ ಪರಿಪರಿ ವಿಧದಿಂ ನಲಿಯುತೆ | ರಸೆಯುದ್ಧಾರದ
ಕಾರ್ಯವ ಗೆಯ್ದಂ ||೮||
ಈಪರಿ ಘನಕಾರ್ಯಂಗಳಗೆಯ್ದುರೆ | ಆ ಪರಶಿವಸಮನೆ
ನಿಸಿದ ನೆಲೆಯೆಲೆ ||೯||
ಆದರಿಂದ್ವಿತೀಯ ಶಂಭುಸುನಾಮಂ | ಪಡೆದರಿಯಲ್ಪಸ
ವಂಗನ್ವರ್ಥಂ ||೧೦||
ಬಸವಾ ಬಸವಾ ಎಂಬಕ್ಷರಗಳ | ಒಸದುಚ್ಚರಿಸಲ್ದುರಿತ
ವಿನಾಶಂ ||೧೧||

ಭರತಖಂಡದ ವೃತ್ತಾಂತಗಳು.

ರಂಗೂನಿನಲ್ಲಿ ಅಕ್ಕಿಯನ್ನು ಕಳವುಮಾಡಲು ಸಂಚು ನಡಿಸುತ್ತಿದ್ದ 16 ಜನರನ್ನು ಪೋಲೀಸರು ಸೆರೆಹಿಡಿದಿರುವರು. ಇವರಲ್ಲಿ ಒಂದು ದೊಡ್ಡ ರೈಸ್ ಮಿಲ್ಲಿನ ಯಜಮಾನನು ಸೇರಿಕೊಂಡಿರುವನು.

ಭರತಖಂಡದ ಎಲ್ಲ ರೈಲ್ವೆಗಳಿಂದಲೂ ಕಳೆದ ಏಪ್ರಿಲ್ ತಾ|| 1ಕ್ಕೆ ಕಡೆಯಾದ ಒಂದು ವಾರದಲ್ಲಿ ಒಟ್ಟು 1·90 ಕೋಟಿ ರೂ. ಗಳುತ್ಪನ್ನವಾಗಿರುವುದು. ಕಳೆದ ವರ್ಷ ಇದೇ ಕಾಲದಲ್ಲಿ 1·91 ಲಕ್ಷ ರೂ. ಉತ್ಪನ್ನವಾಗಿದ್ದತು.

ಮೊಂಡಲಿಯೊಳಗೆ ಒಂದು ರೈಲು ಹೋಗುತ್ತಿರುವಾಗ್ಗೆ 5-3ನೆ ತರಗತಿಯ ಬಂಡಿಗಳೂ ಒಂದು ಎರಡನೆ ತರಗತಿಯ ಬಂಡಿಯೂ ಮಗುಚಿಕೊಂಡು ಪ್ರಾಯಾಣಿಕರಲ್ಲಿ ಒಬ್ಬ ಹೆಂಗುಸು ಮೃತಪಟ್ಟು ಕೆಲವರು ಪೆಟ್ಟನ್ನುತಿಂದರು.

ಸರ್ ಚಾರ್ಲೆಸ್‌ಟಾಡ್‌ಹಂಟರ ಬದಲು ಆನರಬಲ್‌ಖಾನ್ ಬಹದ್ದೂರ್ ಸರ್ ಮಹಮದ್ ಹಬಿಬುಲ್ಲಾಸಾಹೆಬ್ ಬಹದ್ದೂರ್ ಕೆ ಟಿ., ಸಿ. ಐ. ಇ., ಯವರು ಗೌರ್ನರ ಎಕ್ಸೆಕ್ಯೂಟಿವ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಹನ್ನೆರಡು ಜನ ಕಿಲಾಫತ್ ಸ್ವಯಂಸೇವಕರು ಕಿಲಾಫತ್ ಫಂಡಿಗೆ ಚಂದಾಹಣ ಕೊಡಬೇಕೆಂದು ಜನರನ್ನು ಹಿಂಸಿಸಿದರೆಂಬ ಅಪರಾಧಕ್ಕಾಗಿ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಒಂದು ವರ್ಷಕಾಲ ಒಳ್ಳೆನಡತೆಯಲ್ಲಿರುವ ಬಗೆಗೆ ಹೊಣೆಯಮೇಲೆ ಬಿಡಲ್ಪಟ್ಟರು.

ಬಿಹಾರ್ ಒರಿಸ್ಸಾಗಳಿಗೆ ಸೇರಿದ ಚಂಪರಾಣ್, ದರ್ಭಾಂಗ ಮುಜಫರ್ಪುರ ಮತ್ತು ಷಹಬಾದ್ ಈ ಸ್ಥಳಗಳಲ್ಲಿ ವಾಂತಿಭೇದಿ ರೋಗವು ಬಹಳ ಉಗ್ರಸ್ವರೂಪದಿಂದ ಪ್ರಾರಂಭವಾಗಿ ದಿನ ಒಂದಕ್ಕೆ 300 ರಂತೆ ಮರಣವಾಗಿರುವುದರಿಂದ ಆರೋಗ್ಯಶಾಖೆಯವರು ಅದರ ಶಮನಾರ್ಥವಾಗಿ ಬಹಳ ಪ್ರಯಾಸಪಡುತ್ತಿರುವರು.

ಆಗ್ರಾದಲ್ಲಿ ಹೆಸರುವಾಸಿ ಕಳ್ಳನಾಗಿದ್ದು ಪೋಲೀಸರು ತನ್ನನ್ನು ಹಿಡಿಯಲು ಪ್ರಯತ್ನಿಸಿದಾಗ 2 ಜನ ಪೋಲೀಸರನ್ನು ಕೊಂದು ತಲೆತಪ್ಪಿಸಿಕೊಂಡು ಹೋಗಿದ್ದ ರಜಾಕ್ ಎಂಬುವವನ್ನು ಹಿಡಿದವರಿಗೆ 1000 ರೂ. ಬಹುಮಾನಿಸಲ್ಪಡುವುದಾಗಿ ಪ್ರಕಟಿಸಲ್ಪಟ್ಟಿದ್ದಿತು. ಈಗ ಅವನನ್ನು ಆಗ್ರಾ ಪಟ್ಟಣದ ಒಬ್ಬ ಪೋಲೀಸು ಕುತ್ವಾಲನು ಲಕ್ನೋದಲ್ಲಿ ಹಿಡಿದು ವಿಚಾರಣೆಗೆ ಗುರಿಮಾಡಿರುವನು.

ವೈಸ್‌ರಾಯರು ಉಪ್ಪಿನಮೇಲಣ ಕಂದಾಯವನ್ನು ಹೆಚ್ಚಿಸಿ ಕ್ರೂರಾಧಿಕಾರಿಯಾಗಿ ಪರಿಣಮಿಸಿರುವರೆಂದು ಮೊದಲಾಗಿ ರಾಜದ್ರೋಹಕಾರಕ ಭಾಷಣವನ್ನು ಮಾಡಿರುವ ಅಪರಾಧಕ್ಕಾಗಿ ಮೋಟಾರುಬಂಡಿಯನ್ನು ನಡಿಸುವ ವೃತ್ತಿಯವನಾದ ಅಕಾಲಿ ಅರ್ಜುನಸಿಂಗ್ ಎಂಬ ಪಂಜಾಬ್ ದೇಶಸ್ಥನು ರಂಗೂನಿನ ಡಿ|| ಮ್ಯಾಜಿಸ್ಟ್ರೇಟರಿಂದ 18 ತಿಂಗಳ ಕಾಲ ಸಾಧಾರಣ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟನು.

ಬೊಂಬಾಯಿನ ಹೈಕೋರ್ಟು ಜಡ್ಜರಾಗಿದ್ದು ಗತಿಸಿದ ಮಹಾದೇವಗೋವಿಂದರಾನಡೆಯವರ ಧರ್ಮಪತ್ನಿಯವರು ಕೆಲಕಾಲದಿಂದ ಅಸ್ವಸ್ಥರಾಗಿದ್ದು ಕಳೆದ ತಾ|| 26 ರಲ್ಲಿ ವಿಧಿವಶರಾದರು. ಇವರು ತಮ್ಮ ಪತಿಯವರಂತೆ ಸಮಾಜಸುಧಾರಣಾಭಿಮಾನಿಗಳಾಗಿದ್ದರಲ್ಲದೆ ಭಾರತಮಹಿಳೆಯರ ದುಸ್ಥಿತಿಯನ್ನು ಹೋಗಲಾಡಿಸಲು ಬದ್ಧಕಂಕಣರಾಗಿ ಪೂನಾದಲ್ಲಿ ಸ್ತ್ರೀಯರಿಗಾಗಿ ಒಂದು ಸೇವಾಸದನವನ್ನೇರ್ಪಡಿಸಿ ತಮ್ಮ ಮರಣಾವಧಿ ಅದರ ಅಧ್ಯಕ್ಷೆಯಾಗಿದ್ದರು.

ಶ್ರೀವಿಲ್ಲಿಪುತ್ತೂರಿಗೆ 10 ಮೈಲಿ ದೂರದಲ್ಲಿರುವ ರಾಜಕುಲರಮಣಗ್ರಾಮದಲ್ಲಿ ಪುಣ್ಯವಂತನಾದ ಒಬ್ಬ ಬ್ರಾಹ್ಮಣನ ಮನೆಗೆ 25 ಜನ ಪಂಜಿನ ಕಳ್ಳರು ಕೆಲ ದಿನಗಳ ಕೆಳಗೆ ನುಗ್ಗಿ ಪದಾರ್ಥಗಳನ್ನು ದೋಚಿಕೊಳ್ಳುತ್ತಿರುವುದನ್ನು ಮನೆ ಯಜಮಾನನು ತಿಳಿದು ಕೂಗಿಕೊಂಡನು. ಆ ಕಳ್ಳರನ್ನು [illegible]

ಮನೆಯವರು ಸಹಾಯಕ್ಕೋಡಿಬರಲು ಕಳ್ಳರಿಗೂ ಅವರಿಗೂ ಬಡಿದಾಟಕ್ಕಾರಂಭವಾಗಿ ಗ್ರಾಮಸ್ಥರು ಕಳ್ಳರ ಮುಖಂಡನನ್ನು ಹಿಡಿದು ಕಟ್ಟಿಹಾಕಿದರು. ಆದರೆ ಅವನು ತಿಂದಿದ್ದ ಪೆಟ್ಟಿನ ಬಾಧೆಯನ್ನು ತಡೆಯಲಾರದೆ ಮಾರನೆ ದಿನ ಮೃತನಾದನು. ಗಾಯವಡೆದಿದ್ದ ಕೆಲ ಗ್ರಾಮಸ್ಥರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಆ ಕಳ್ಳರ ಯಜಮಾನನ ಬಳಿ ಎರಡು ತೋಟಾಹಾರಿಸುವ ತುಪಾಕಿಯು ಇದ್ದಿತಾದರೂ ದೈವವಶಾತ್ ತೋಟಾಗಳು ತೀರಿಹೋಗಿದ್ದುವು. ಆದರೂ ಅವನು ಮಳಲನ್ನು ತುಂಬಿ ಹಾರಿಸುತ್ತಿದ್ದನಂತೆ. ಅದೇ ಬ್ರಾಹ್ಮಣನ ಮನೆಗೆ ಕೆಲ ತಿಂಗಳ ಕೆಳಗೆ ಕಳ್ಳರು ನುಗ್ಗಿ 2000 ರೂ. ವರೆಗೆ ಅಪಹರಿಸಿಕೊಂಡು ಹೋಗಿದ್ದರಂತೆ.

ಬಂಗಾಳಾ ಇಂಜನಿಯರಿಂಗ್ ಕಾಲೇಜಿನಲ್ಲಿ ಪ್ರಫೆಸರಾಗಿದ್ದು ಈಗ್ಗೆ 6 ವಾರಗಳ ಹಿಂದೆ ಕೆಲಸದಿಂದ ನಿವೃತ್ತಿಯನ್ನು ಹೊಂದಿ ಒಂದು ವ್ಯಾಪಾರದ ಕಂಪನಿಯ ಕೆಲಸಕ್ಕೆ ಸೇರಿರುವ ರಾಬರ್ಟ್‌ರವರು ಕಂಪನಿಯ ಸಂಬಂಧವಾಗಿ ಬಕೋರಾದ ಕಲ್ಲಿದ್ದಲು ಗಣಿಗಳನ್ನು ಪರೀಕ್ಷಿಸಲು ಹೋಗಿದ್ದು ಒಂದು ಬಂಡೆಯನ್ನು ಹಾರಿ ಕಣಿವೆಗಿಳಿಯುವಾಗ್ಗೆ ಒಂದು ಗುಹೆಯಲ್ಲಿ ಎರಡು ಮರಿಗಳ ಸಮೇತವಾಗಿದ್ದ ಒಂದು ಹೆಣ್ಣು ಕರಡಿಯು ಇದಿರಾಗಿ ಬಂದು ಅವರ ಮೇಲೆ ಬಿದ್ದು ಪರಚಲುಪಕ್ರಮಿಸಿತು. ಅವರು ತಮ್ಮ ಟೊಪ್ಪಿಗೆಯನ್ನು ಮುಖಕ್ಕೆ ಮರೆಮಾಡಿಕೊಂಡು ಕೈಯಲ್ಲಿ ಹಿಡಿದಿದ್ದ ಛತ್ರಿಯಿಂದ ಅದನ್ನು ಇದಿರಿಸಿದರಾದರೂ ಪ್ರಯೋಜನವಾಗಲಿಲ್ಲ. ಈ ಮಧ್ಯೆ ಒಂದು ಮರಿಯು ಎಲ್ಲಿಗೋ ಓಡಿ ಹೋಗುತ್ತಿರಲು ಅದರ ತಾಯಿಯು ಓಡಿಹೋಗಿ ಅದನ್ನು ಕರೆದುಕೊಂಡು ಬರುವಷ್ಟರಲ್ಲಿ ಇನ್ನೊಂದು ಮರಿಯು ಸಾಹೇಬರ ಪಾದವನ್ನು ಹಿಡಿದೆಳೆಯುತ್ತಿರುವಾಗ್ಗೆ ತಾಯಿಯು ಮರಿ ಸಮೇತ ಬಂದು ಸಾಹೇಬರ ತಲೆಯನ್ನು ತನ್ನ ಬಾಯಿಯಿಂದ ಹಿಡಿದು ಕಚ್ಚಿ ಕೂಡಲೆ ಬಿಟ್ಟು ಹೊರಟುಹೋಯಿತು. ಸಾಹೇಬರಕೂಡ ಇದ್ದ ಮುತ್ಸದ್ದಿಯು ಕರಡಿಯಿಂದ ಕಚ್ಚಲ್ಪಟ್ಟನಾದರೂ ಅಪಾಯವೇನೂ ಆಗಲಿಲ್ಲವು. ಮತ್ತು ಅವರ ಜತೆಯಲ್ಲಿ ಗುದ್ದಲಿಯನ್ನು ಹಿಡಿದುಕೊಂಡು ಬರುತ್ತಿದ್ದ ಆಳು ಮಾತ್ರ ತಪ್ಪಿಸಿಕೊಂಡು ಓಡಿಹೋದನು. ಸಾಹೇಬರು ತಮ್ಮ ತಲೆ ಕೈಕಾಲುಗಳಿಗೆ ವಿಶೇಷ ಅಪಾಯವಾಗಿದ್ದಾಗ್ಯೂ ಬಹಳ ಪ್ರಯಾಸಪಟ್ಟು ತಮ್ಮ ಡೇರಾದಬಳಿಗೆ ಬಂದು ಅಲ್ಲಿಂದ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಲಿರುವರು.

ವಿದೇಶದ ವೃತ್ತಾಂತಗಳು.

ಗ್ರೀಕು ಪ್ರಜಾಪ್ರಭುತ್ವವನ್ನು ಬ್ರಿಟಿಷು ಪ್ರಭುತ್ವದವರು ಅಂಗೀಕರಿಸಿರುವುದಾಗಿ ಬ್ರಿಟಿಷ್ ಮಂತ್ರಿಗಳು ತಿಳಿಸಿದರು.

ಕಳೆದ ಮಂಗಳವಾರ ಎಚ್. ಎಚ್. ಆಗಾಖಾನ್‌ರವರು ಯುವರಾಜರ ದರ್ಶನ ಭಾಷಣಗಳನ್ನು ಮಾಡಿಕೊಂಡು ಬಂದರು.

ವರ್ಜೀನಿಯಾದ ಒಂದು ಗಣಿಯಲ್ಲಿ ಕೂಲಿಯವರು ಕೆಲಸಮಾಡುತ್ತಿರುವಾಗ್ಗೆ ಕಲ್ಲು ಸಿಡಿದು ಮಣ್ಣು ಕುಸಿದುಬಿದ್ದು ಅನೇಕರು ಅದರ ಕೆಳಗೆ ಸಿಕ್ಕಿ ಸತ್ತರು. ಈ ವರೆಗೆ 45 ಶವಗಳು ಹೊರಗೆ ತೆಗೆಯಲ್ಪಟ್ಟಿವೆ; ಇನ್ನೂ 66 ಜನರವರೆಗೆ ಸಿಕ್ಕಿ ಬಿದ್ದಿರುವುದಾಗಿ ಊಹಿಸಲ್ಪಟ್ಟಿದೆ.

ಚಕ್ರವರ್ತಿಯವರು ಪತ್ನಿಸಮೇತ ಸ್ವಿಂಡನ್ನಿಗೆ ಕಳೆದ ತಾ|| 29ರಲ್ಲಿ ಹೋಗಿ ಬರುವಾಗ್ಗೆ ರೈಲ್ವೆ ಇಂಜನ್ನನ್ನು ಡ್ರೈವರ ಸಹಾಯದಿಂದ ೩ ಮೈಲಿ ದೂರ ತಾವೇ ನಡಿಸಿದರು. ಮತ್ತು ಆ ವೇಳೆಯಲ್ಲಿ ರಾಣಿಯವರು ಪತಿಯ ಪಕ್ಕದಲ್ಲಿ ಹಂತದಮೇಲೆ ನಿಂತಿದ್ದರು. ದಾರಿಯುದ್ದಕ್ಕೂ ಸಾವಿರಾರು ಕೆಲಸಗಾರರು ನಿಂತು ನೋಡುತ್ತಿದ್ದರು.

ಈಗ ಗ್ರೀನ್‌ಲ್ಯಾಂಡನ್ನು ಪರಿಶೋಧಿಸಿ ಅದರ ನಕ್ಷೆಯನ್ನು ತೆಗೆಯುತ್ತಿರುವ ಡೇನಿಷ್ ದೇಶದ ಡಾಕ್ಟರ್ ಲಾಗ್‌ಕೊಂಚ್‌ರವರೂ ಅವರ ಸಂಗಡಿಗರೂ ಹಿಮಾಧಿಕ್ಯದಿಂದ ಎರಡು ವಾರದ ವರೆಗೆ ಆಹಾರವನ್ನು ಸಂಪಾದಿಸಲು ಹೊರಗೆ ಹೋಗಲು ಎತ್ನವಾಗಲಿಲ್ಲವಾಗಿ ತಮ್ಮಲ್ಲಿದ್ದ ನಾಯಿಗಳನ್ನು ಕೊಂದು ತಿನ್ನಬೇಕಾಗಿ ಬಂದಿತೆಂದು ತಿಳಿಸಿರುತ್ತಾರೆ.

ಅಮೇರಿಕೆಯ ಯುನೈಟೆಡ್ ಸ್ಟೇಟ್ಸಿನ ಜನರು ಒಂದು ವರ್ಷದಲ್ಲಿ ಅಡುಗೆಗೂ ನೀರನ್ನು ಕಾಯಿಸಲಿಕ್ಕೂ ಮನೆಯ ಇತರ ಬಳಿಕೆಗೂ ಉಪಯೋಗಿಸುವ ಗ್ಯಾಸಿಗಾಗಿ ವೆಚ್ಚಮಾಡುವುದರ ಎರಡರಷ್ಟು ಹಣವನ್ನು ಚುಟ್ಟಾ ಸಿಗರೇಟುಗಳಿಗೆ ವೆಚ್ಚಮಾಡುತ್ತಾರಂತೆ. 1921 ನೆಯ ಇಸವಿಯಲ್ಲಿ ಚುಟ್ಟಾ ಸಿಗರೇಟುಗಳಿಗಾಗಿ 806,740805 ಡಾಲರುಗಳೂ, ಗ್ಯಾಸಿಗಾಗಿ 41,11,95,563 ಡಾಲರುಗಳೂ, ಆಹಾರಕ್ಕಾಗಿ 7,84,90,00,000 ಡಾಲರುಗಳೂ, ಬಟ್ಟೆಬರೆಗಾಗಿ 2,71,00,00,000 ಡಾಲರುಗಳೂ ಕುರ್ಚಿ ಮೇಜ ಮೊದಲಾದ ಪದಾರ್ಥಗಳಿಗಾಗಿ 1,99,99,14,000 ಡಾಲರುಗಳೂ, ಮುದ್ರಣವಾದ ಪುಸ್ತಕ ವರ್ತಮಾನಪತ್ರಿಕೆಗಳಿಗಾಗಿ 1,67,13,87,000 ಡಾಲರುಗಳೂ ಅಮೇರಿಕೆಯವರಿಂದ ವೆಚ್ಚಮಾಡಲ್ಪಟ್ಟಿರುವುದಾಗಿ ಆ ಇಸವಿಯ ಜನಗಣತಿಯ ಲೆಖ್ಖದಿಂದ ವ್ಯಕ್ತವಾಗುತ್ತದೆ.

ಪೋರ್ಚುಗೀಸರಿಗೆ ಸೇರಿದ ಪಶ್ಚಿಮ ಆಫ್ರಿಕಾದಲ್ಲಿರುವ ಬಕಾಕೋವರ್ಗದ ಜನರಲ್ಲಿ ಮದುವೆಯಾದ ಮೇಲೆ ಅತ್ತೆಯೂ ಅಳಿಯನೂ ಪರಸ್ಪರ ಮುಖದರ್ಶನ ಮಾಡಕೂಡದೆಂದೂ, ಒಂದು ವೇಳೆ ಸಂಧಿಸಿದರೆ ಮೊದಲು ಯಾರು ಮುಖನೋಡುತ್ತಾರೋ ಅವರು ಬೆಳ್ಳಿಯರೂಪದಲ್ಲಾಗಲಿ ಉಪ್ಪಿನರೂಪದಲ್ಲಾಗಲಿ ಹೆಚ್ಚು ಅರ್ಧದಂಡವನ್ನು ಕೊಡಬೇಕೆಂದೂ ಕಟ್ಟಳೆಯಿದೆ. "ಒಂದಾನೊಂದು ಬಕಾಕೋಗ್ರಾಮದಲ್ಲಿ ಒಬ್ಬ ಸೇವಕನ ತಲೆಯಮೇಲೆ ನನ್ನ ಪೆಟ್ಟಿಗೆಯನ್ನು ಹೊರಿಸಿಕೊಂಡು ಹೋಗುತ್ತಿರುವಾಗ್ಗೆ, ಆ ಸೇವಕನು ಗಟ್ಟಿಯಾಗಿ ಕೂಗಿಕೊಂಡು ದಾರಿಯನ್ನು ಬಿಟ್ಟು ಒಂದುಕಡೆಗೆ ಸರಿದು ತಾನು ಹೊತ್ತಿದ್ದ ಪೆಟ್ಟಿಗೆ ಮೊದಲಾದವುಗಳನ್ನು ಕೆಳಗೆ ಬಿಸಾಡಿ ತನ್ನ ಶಕ್ತಿಯನ್ನೆಲ್ಲಾ ಬಿಟ್ಟೋಡಿದನು. ನಾನು ದಿಗಿಲುಬಿದ್ದು ಅವನನ್ನು ಹಿಂಬಾಲಿಸಿ ಒಂದು ಮರದಹತ್ತಿರ ಹಿಡಿದು ನಿಲ್ಲಿಸಿ ಕೇಳುವಲ್ಲಿ 'ನನ್ನ ಅತ್ತೆಗಾಗಿ' ಎಂದು ಹೇಳಿದನು. ಅದು ನನಗೆ ಅರ್ಥವಾಗಲಿಲ್ಲವಾಗಿ ಪುನಹ ಕೇಳಲು ತಾನು ಸಾಮಾನುಗಳನ್ನು ಬಿಸಾಡಿದ ಸ್ಥಳದಿಂದ ಕೊಂಚದೂರದಲ್ಲಿ ತನ್ನ ಅತ್ತೆ ವಾಸಮಾಡುವ ಗುಡಿಸಲಿದ್ದಿತೆಂದೂ, ಆಕೆಯ ಮುಖದರ್ಶನವಾದಲ್ಲಿ ತಾನು ದಂಡವನ್ನು ತೆರಬೇಕಾಗುತ್ತಾದುದರಿಂದ ಆ ರೀತಿ ಓಡಿ ಬಂದೆನೆಂದೂ ಹೇಳಿದನು" ಎಂಬುದಾಗಿ ಆಪ್ರಾಂತ ವ್ಯಾಪಾರಕ್ಕಾಗಿ ಹೋಗಿದ್ದು ಬಂದ ಒಬ್ಬ ವಜ್ರವುಡಿ ವರ್ತಕನು ತಿಳಿಸಿರುತ್ತಾನೆ.

ಅಖಿಲಭಾರತ ಆಯುರ್ವೇದ ಮಹಾಸಭೆ.

ಸಿಂಹಳದ್ವೀಪದ ಪ್ರಧಾನನಗರವಾದ ಕೊಲಂಬೋದಲ್ಲಿ ಕಳೆದ ಏಪ್ರಿಲ್ ತಾ|| 14ರಲ್ಲಿ ಜರುಗಿದ ಅಖಿಲಭಾರತ ಆಯುರ್ವೇದ ಮಹಾಸಭೆಯ 14 ನೆಯಾಧಿವೇಶನವು ಕಲಕತ್ತಾದಲ್ಲಿ ಪ್ರಸಿದ್ಧರಾದ ವೈದ್ಯರತ್ನ ಪಂಡಿತ ಕವಿರಾಜಯೋಗೀಂದ್ರನಾಥ ಸೇನ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಆ ಕಾಲದಲ್ಲಿ ಅಧ್ಯಕ್ಷರು ಮಾಡಿದುಪನ್ಯಾಸವು ಆಯುರ್ವೇದ ವೈದ್ಯ ಮಹತ್ವವನ್ನು ಪ್ರಕಾಶಪಡಿಸುವುದಾದುದರಿಂದ, ಉಪನ್ಯಾಸದ ಮುಖ್ಯಭಾಗವು ಈ ಪತ್ರಿಕಾವಾಚಕರ ಅವಗಾಹನೆಗಾಗಿಲ್ಲಿ ಕೊಡಲ್ಪಟ್ಟಿರುತ್ತದೆ.

ಅಪ್ರತ್ಯಕ್ಷಫಲಾಃ ಪ್ರಮಾಣವಿಕಲಾ ವಾಗ್ವಿಸ್ತರೈರಾಕುಲಾಃ | ವೇದಾಃ ಪ್ರಾಪ್ತಪದಾ ಯದಾಪ್ತವಚನಪ್ರಾಮಾಣ್ಯಸಾಮಾನ್ಯತಃ | ಪ್ರತ್ಯಕ್ಷೈಕಫಲಂ ತ್ರಿಸೂತ್ರಮಮಲಂ, ಸ್ವಸ್ಥಾತುರಾಣಾಂ ಹಿತಂ | ತಂವಿದ್ಯಾಸ್ವಖಿಲಾಸು ಸತ್ತಮಮಹಂವೇದಂ ಭಜಾಮ್ಯಾಯುಷಃ ||

ಆಯುರ್ವೇದ ವೈದ್ಯ ತತ್ವವಿಚಾರವು.

ಕವಿರಾಜರು ಪ್ರಥಮತಃ ಪ್ರಪಂಚದಲ್ಲಿ ಆಯುರ್ವೇದ ಶಾಸ್ತ್ರವು ಯಾವ ರೀತಿಯಲ್ಲಿ ಹುಟ್ಟಿ ಪ್ರಸಾರಕ್ಕೆ ಬಂತೆಂಬ ವಿಷಯವನ್ನು ತಿಳಿಯಪಡಿಸಿ ಅನಂತರ ಆಯುರ್ವೇದತತ್ವವನ್ನು ಕುರಿತು ಈ ಪ್ರಕಾರವಾಗಿ ಭಾಷಣಮಾಡಿದರು.—

ಆಯುರ್ವೇದತತ್ವವು ಹೇಗಿದೆ, ಮತ್ತು ಎಲ್ಲಿಯವರೆಗೆ ಪ್ರಸಾರವಾಗಿರುವುದು ಎಂಬುದನ್ನು ವಿಚಾರಿಸುವ, ಆಯುರ್ವೇದವು ಚತುರ್ವಿಧ ಆಯುಸ್ಸನ್ನು ಕುರಿತೂ, ಜೀವಿತವನ್ನು ದೀರ್ಘಗೊಳಿಸುವ ಕ್ಲೃಪ್ತಪಡಿಸುವ ವಿಷಯವನ್ನು ಕುರಿತೂ ಚರ್ಚಿಸುವುದು, "ಆಯುರ್ವೇತ್ತೀತಿ ಆಯುರ್ವೇದಃ" ಎಂಬ ಧಾತುನಿಷ್ಪತ್ತಿಯಿಂದ, ಆರೋಗ್ಯಸಂರಕ್ಷಣೆಯೂ ರೋಗನಿವಾರಣೆಯೂ ಈ ಶಾಸ್ತ್ರದ ಪರಮಾರ್ಥವಾಗಿರುವುವು. "ಪ್ರಯೋಜನಂಚಾಸ್ಯ ಸ್ವಸ್ಥಸ್ಯ ಸ್ವಾಸ್ಥ್ಯರಕ್ಷಣಮಾತುರಸ್ಯ ವಿಕಾರಪ್ರಶಮನಂಚ" ಎಂದು ಚರಕಸಂಹಿತೆಯಲ್ಲಿ ಹೇಳಲ್ಪಟ್ಟಿದೆ ಮತ್ತು ಈ ಸಂದರ್ಭದಲ್ಲೇ "ಇಹಖಲು ಆಯುರ್ವೇದಪ್ರಯೋಜನಂ ವ್ಯಾಧ್ಯುಪಸೃಷ್ಟಾನಾಂ ವ್ಯಾಧಿಪರಿಮೋಕ್ಷಃ ಸ್ವಸ್ಥಸ್ಯ ರಕ್ಷಣಂಚ" ಎಂದು ಸುಶ್ರುತದಲ್ಲಿ ಹೇಳಲ್ಪಟ್ಟಿದೆ. ಇದಕ್ಕೆ ಪ್ರಮಾಣವಾಗಿ "ಮಂತ್ರಾಯುರ್ವೇದಪ್ರಾಮಾಣ್ಯವಚ್ಚ ತತ್ಪ್ರಾಮಾಣ್ಯಂ ಆಪ್ತಪ್ರಾಮಾಣ್ಯಾತ್" ಎಂದು ನ್ಯಾಯದರ್ಶನದಲ್ಲಿ ಹೇಳಲ್ಪಟ್ಟಿದೆ.

ಆಯುರ್ವೇದಕ್ಕೆ ಶಲ್ಯ, ಶಾಲಕ್ಯ, ಕಾಯಚಿಕಿತ್ಸ, ಭೂತವೈದ್ಯ, ಕೌಮಾರಭೃತ್ಯ, ಅಗದತಂತ್ರ, ರಸಾಯನ, ವಾಜಕರಣ ಎಂಬ ಎಂಟು ಶಾಖೆಗಳುಂಟು. ಆಯುರ್ವೇದತತ್ವವನ್ನು ಕುರಿತು ಸಭಿಕರೆಲ್ಲರಿಗೂ ತಿಳಿಯುವ ಹಾಗೆ ಹೇಳಲು ವೈದ್ಯರಲ್ಲದವರಿಗೆ ಇದರ ಪರಿಭಾಷೆಯು ಉತ್ಸಾಹಕರವಾಗಿರುವುದಿಲ್ಲವಾದುದರಿಂದ, ನಾನು ಅಷ್ಟು ವಿವರಿಸಿ ಹೇಳಬೇಕಾದುದಿಲ್ಲವಾದ ಪ್ರಯುಕ್ತ ತ್ರಿಧಾತುಸಿದ್ಧಾಂತವನ್ನು ಕುರಿತು ಪ್ರಸ್ತಾವಿಸುವೆನು. ಧಾತುವಿಚಾರದಲ್ಲಿ ಹುಟ್ಟಿರುವ ಅಪನಂಬಿಕೆಯನ್ನು ಹೋಗಲಾಡಿಸಲು ಎಷ್ಟರಮಟ್ಟಿಗೆ ಹೆಚ್ಚು ಪ್ರಯತ್ನ ನಡಿಸಲ್ಪಟ್ಟಿರುತ್ತದೆಂಬುದನ್ನು ತಕ್ಕಮಟ್ಟಿಗೆ ತಿಳಿಸುತ್ತೇನೆ. ಈ ರೀತಿಯಾಗಿ ಅಪನಂಬಿಕೆಯು ಹುಟ್ಟಿ ವ್ಯಾಪಿಸಲು ಆಯುರ್ವೇದ ಶಾಸ್ತ್ರದಲ್ಲಿರುವ ಪಾರಿಭಾಷಕವಚನಗಳನ್ನು ಭಾಷಾಂತರಿಸುವುದರಲ್ಲಿ ತಪ್ಪುಮಾಡಲ್ಪಡುವುದರಿಂದಲೂ, ಆಯುರ್ವೇದ ತತ್ವವನ್ನು ಪಾಶ್ಚಾತ್ಯಶಾಸ್ತ್ರರೀತ್ಯಾ ವಿವರಿಸುವುದರಲ್ಲಿ ಹಿಂದೂ ವೈದ್ಯಶಾಸ್ತ್ರದ ಒಂದು ಭಾಗಕ್ಕೆ ಸರಿಯಾಗಿ ಪಾಶ್ಚಾತ್ಯ ಶಾಸ್ತ್ರವು ಕೂಡ ಸಮಾನವಾಗುವುದಿಲ್ಲವಾದುದರಿಂದಲೂ ಅದು ದೂರೀಕರಿಸಲ್ಪಟ್ಟಿರುವುದಾಗಿ ತೋರುತ್ತದೆ.

ಹಿಂದೂ ವೈದ್ಯಶಾಸ್ತ್ರಜ್ಞರು ಮನುಷ್ಯರ ಭೌತಿಕ ಶರೀರವೂ ಮನಸ್ಸೂ ಆತ್ಮದಿಂದ ಕೂಡಿರುವುದೆಂದು ಹೇಳುವರು. ಮನಸ್ಸಿನಿಂದ ಕೂಡಿದ ಭೌತಿಕಶರೀರವೇ ವೈದ್ಯಚಿಕಿತ್ಸೆಗನುವಾಗುವುದು. ರೋಗಕ್ಕೆ ಮೂರುಕಾರಣಗಳುಂಟು. ಅನಾತ್ಮ್ಯೇಂದ್ರಿಯಾರ್ಥಸಂಯೋಗವು, ಪ್ರಜಾಪರಾಧವು, ಪರಿಣಾಮವು ಎಂದು ಮೂರು. ಈ ಮೂರು ಕಾರಣಗಳಿಂದ ಶರೀರದಲ್ಲಿ ವಾತ, ಪಿತ್ತ, ಕಫಗಳು ಉದ್ರೇಕಗೊಂಡು ರೋಗವನ್ನು ಹೊರಗೆಡುವುವು. ಈ ಮೂರು ಪಾರಿಭಾಷಿಕವಚನಗಳಿಗೆ ಆಂಗ್ಲಭಾಷೆಯಲ್ಲಿ ವಿಂಡು, ಬೈಲು, ಫ್ಲೆಮ್ಮು ಎಂದು ಅಪಾರ್ಥವು ಕಲ್ಪಿಸಲ್ಪಟ್ಟಿರುತ್ತದೆ. ಇವು ಈ ಆಯುರ್ವೇದಶಾಸ್ತ್ರವಚನಗಳಿಗೆ ಸರಿಯಾದ ಅರ್ಥವಲ್ಲವು. ಈ ಮೂರೂ "ಧಾರಣಾತ್ ಧಾತುಃ" ಎಂಬ ಧಾತುವಿನಿಂದ ಹುಟ್ಟಿದ ಧಾತುಗಳೆಂದು ತಿಳಿಯತಕ್ಕದಾಗಿವೆ. ಈ ಮೂರು ಧಾತುಗಳೂ ಸಮಸ್ಥಿತಿಯಲ್ಲಿರುವಾಗ್ಗೆ ದೇಹವು ಆರೋಗ್ಯದಿಂದಿರುವುದು. ಇವುಗಳ ಸ್ಥಿತಿಯು ಯಾವ ಕಾರಣದಿಂದಲಾದರೂ ವ್ಯತ್ಯಸ್ತವಾದರೆ ಅಸ್ವಾಸ್ಥ್ಯವುಂಟಾಗುವುದು. ಅದೇ ದೋಷವೆನ್ನಲ್ಪಡುವುದು. ಸಾರಂಗಧರದಲ್ಲಿ ಈರೀತಿಯಾಗಿ ಹೇಳಲ್ಪಟ್ಟಿದೆ—ಶ್ಲೋ|| "ಶರೀರದೂಷಣಾದ್ದೋಷಾ ಧಾತವೋ ದೇಹಧಾರಣಾತ್| ವಾತಪಿತ್ತಕಫಾ ಜ್ಞೇಯಾ ಮಲಿನೀಕರಣಾನ್ಮಲಾಃ" ಈ ಮೂರು ಸಮವಾಗಿರುವುದನ್ನು ಕುರಿತು ಚರಕದಲ್ಲಿ ಈರೀತಿಯಾಗಿ ಹೇಳಲ್ಪಟ್ಟಿದೆ—"ಸರ್ವಶರೀರಚರಾಸ್ತುಖಲು ವಾತಪಿತ್ತಶ್ಲೇಷ್ಮಾಣಃ ಸರ್ವಸ್ಮಿನ್ ಶರೀರೇ ಕುಪಿತಾಕುಪಿತಾಃ ಶುಭಾಶುಭಾನಿ ಕುರ್ವಂತಿ | ಪ್ರಕೃತಿಭೂತಾನಿಶುಭಾನಿಉಪಚಯಬಲವರ್ಣಪ್ರಸಾದಾದೀನಿ | ಅಶುಭಾನಿ ಪುನರ್ವಿಕೃತಿಮಾಪನ್ನವಿಕಾರಸರಾಜಕಾನಿ" || ಅದರ ಗುಣವನ್ನು ಕುರಿತು ವಾಗ್ಭಟನು ಹೇಳಿರುವುದೇನೆಂದರೆ—"ತತ್ರರೂಕ್ಷೋಲಘುಃಶೀತಃ ಸರ್ವಃ ಸೂಕ್ಷ್ಮಶ್ಚಲೋಽನಿಲಃ |ಪಿತ್ತಂಸಸ್ನೇಹತೀಕ್ಷ್ಣೋಷ್ಣಂ ಲಘುವಿಸ್ರಂ ಸರ್ವದ್ರವಂ| ಸ್ನಿಗ್ಧಃಶೀತೋ ಗುರುರ್ಮಂದಃ ಶ್ಲಕ್ಷ್ಣೋ ಮೃತ್ಸ್ನಃಸ್ಥಿರಃಕಫಃ" || ಈ ಗುಣಗಳು ಪಾಶ್ಚಾತ್ಯ ಶಾಸ್ತ್ರಭಾಷೆಯಲ್ಲಿ ವಿವರಿಸಿಹೇಳಲು ಬಹಳ ಕಷ್ಟವು. ಸಮಾನಗುಣವಿರುವವೇಳೆಯ ಈ ದೋಷವು ಉದ್ರೇಕವಾಗುವುದೆಂದೂ, ಅಸಮಾನವಾಗಿರುವ ವೇಳೆಯಲ್ಲಿ ತಗ್ಗಿಹೋಗುವುದೆಂದೂ ಸಾಮಾನ್ಯಸಿದ್ಧಾಂತವಿರುವುದು. ವಾಗ್ಭಟನು ಕೂಡ "ವೃದ್ಧಿಸಮಾನೈಃಸರ್ವೇಷಾಂ ವಿಪರೀತೈಃ ವಿಪರ್ಯಯಃ" || ಎಂದು ಹೇಳಿರುವನು.

ಈ ಮೂರು ಧಾತುಗಳಲ್ಲಿ ವಾತವು ಬಹಳ ಮುಖ್ಯವಾದುದು. ಅದುಕಾರಣವೇ ಶರೀರದಲ್ಲಿ ರಕ್ತವು ಚೆನ್ನಾಗಿ ಚಲಿಸಿ ಅಂತಶ್ಶುದ್ಧಿಯುಂಟಾಗಿ ಒಳ್ಳೇ ಶಕ್ತಿಯೂ, ಬಲವೂ, ವಾಗ್ಪಾಟಿಯೂ ಪ್ರಾಪ್ತವಾಗುವುವು. ಪಿತ್ತಶರೀರದ ಅಂತರುಷ್ಣವು ಚೆನ್ನಾಗಿದ್ದು ನೀರಡಿಕೆ, ತಿಳಿವಿಕೆ, ಜ್ಞಾಪಕಶಕ್ತಿ, ತಿರುಗಾಡುವಿಕೆ ಇವುಗಳು ಚೆನ್ನಾಗಿರುವುವು. ಕಫಶರೀರವು ಮಿಂಚುತಲಿದ್ದು ವೀರ್ಯಬಲವನ್ನು ಸಹನೆಮಾಡಬಲ್ಲುದು. ಈ ಮೂರುಧಾತುಗಳಲ್ಲಿ ವಾತಪ್ರಕೋಪವಾದಾಗ ಶರೀರವು ಕುಗ್ಗಿಹೋಗುವುದು, ಮುಖವಿಕಾಸ ಕಡಿಮೆಯಾಗುವುದು, ಅಜೀರ್ಣವೂ, ಬಲಹೀನವೂ, ಮಾಂದ್ಯವೂ, ಆಲಸಟಿಯೂ, ನಿದ್ರಾಭಂಗವೂ, ತಲೆದಿರುಗುವಿಕೆಯೂ ಉಂಟಾಗುವುವು. ಪಿತ್ತಪ್ರಕೋಪವಾದವೇಳೆಯಲ್ಲಿ ಕಣ್ಣೂ ಶರೀರವೂ ಹಳದೀಬಣ್ಣವಾಗಿರುವುವು, ಮನಸ್ಸು ರೇಗಿರುವುದು, ಹೊಟ್ಟೆನೋಯುವುದು ಮತ್ತು ನಿದ್ರೆಬರುವುದಿಲ್ಲವು. ಕಫವು ಹೆಚ್ಚಿದ ವೇಳೆಯಲ್ಲಿ ಮೈಯಂಟು ದುರ್ಬಲ್ಯ ಹೊಟ್ಟೆಯ ಭಾರ, ಆಯಾಸ, ನಿದ್ರಾಮಾಂದ್ಯ, ಕೀಲುಗಳ ಪಟುತ್ವ ತಪ್ಪುವುದು ಇತ್ಯಾದಿ ವಿಕಾರಗಳುಂಟಾಗುವುವು.

ಇವುಗಳೆಲ್ಲವನ್ನೂ ನೋಡುವಲ್ಲಿ ವಾತ ಪಿತ್ತ ಕಫ ಎಂಬ ಮಾತುಗಳಿಗೂ, ವಿಂಡು ಬೈಲು ಫ್ಲೆಮ್ಮು ಎಂಬ ಮಾತುಗಳಿಗೂ ಸಂಬಂಧವಿಲ್ಲವೆಂದು ತಿಳಿಯಬರುತ್ತದೆ. ಪಾಶ್ಚಾತ್ಯರು ತಮ್ಮ ಶಾಸ್ತ್ರದಲ್ಲಿ ಈ ಮೂರು ಧಾತುಗಳಿಗೆ ಸರಿಯಾದ ನಿರೂಪಣೆಮಾಡಲಾರರಾದುದರಿಂದ, ಮಾನವಶರೀರವನ್ನು ನಮ್ಮ ದೃಷ್ಟಿಯಿಂದ ಈಕ್ಷಿಸುವುದಿಲ್ಲವೆಂದು ತಿಳಿಯಬೇಕಾಗುತ್ತದೆ. ವೈದ್ಯಶಾಸ್ತ್ರದಲ್ಲಿ ಪರಮಾವಧಿ ಈ ತ್ರಿದೋಷಗಳು ಅಂದರೆ ಈ ಮೂರು ಧಾತುಗಳು ಹೆಚ್ಚುಕಡಿಮೆ ಯಿಲ್ಲದೆ ಸಮವಾಗಿರುತ್ತವೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. "ಧಾತುಸಾಮ್ಯಾ ಕ್ರಿಯಾ ಪ್ರೋಕ್ತಾ ತಂತ್ರಸ್ಯಾಸ್ಯಪ್ರಯೋಜನಂ" ಎಂದು ಚರಕದಲ್ಲಿ ಹೇಳಲ್ಪಟ್ಟಿದೆ.

ಆಯುರ್ವೇದವು ಪೂರ್ವದಲ್ಲಿ ಹೊಂದಿದ್ದ ಅಭಿವೃದ್ಧಿಯು.

ಬಹುಕಾಲದ ಹಿಂದೆ ಆಯುರ್ವೇದವು ಸುಪ್ರಸಿದ್ಧಿಯನ್ನು ಹೊಂದಿದ್ದಿತೆಂದು ನಿಸ್ಸಂಶಯವಾಗಿ ಚಾರಿತ್ರಕಪ್ರಮಾಣದಿಂದ ಹೇಳಬಹುದಾಗಿದೆ. ಭಾರತದೇಶದಲ್ಲಿ ಶಾಸ್ತ್ರಜ್ಞರಾರೂ ಈ ಪುರಾತನಭಾಗ್ಯವನ್ನು ವಿಚಾರಿಸದಿರುವುದು ವಿಷಾದಕರವು. ಅದುಕಾರಣವೇ ನಮ್ಮ ಪೂರ್ವಿಕರ ಅದ್ಭುತಶಕ್ತಿಯನ್ನು ತಿಳಿದುಕೊಳ್ಳುವುದಕ್ಕಾಗಿ ಇತರ ಸಾಹಾಯ್ಯವನ್ನಪೇಕ್ಷಿಸಬೇಕಾಗಿ ಬಂದಿರುವುದು. "ಪುರಾತನವೈದ್ಯವಿಧಾನದಲ್ಲಿ ಶಾಸ್ತ್ರಪಾರಿಭಾಷಿಕವಿಜ್ಞಾನಾತಿಶಯವು ವ್ಯಕ್ತವಾಗುವುದು. ಈ ದಿವಸವೂ ಕೂಡ ಎಷ್ಟು ತೀವ್ರವಾಗಿ ಅಭಿವೃದ್ಧಿಪಡಿಸಬೇಕಾಗಿದ್ದರೂ ಆ ಪುರಾತನಪದ್ಧತಿಯನ್ನು ಅಲಕ್ಷ್ಯಮಾಡಲಾಗದು" ಎಂದು ಕಲಕತ್ತಾ ವಿಶ್ವವಿದ್ಯಾಲಯದ ಕಮಿಷನ್ ವರದಿಯ ೫ನೆ ಸಂಪುಟದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಈ ವಿಷಯವಾಗಿ ಇನ್ನೂ ಕೆಲ ಭಾಗಗಳನ್ನು ವಿವರಿಸಿ ಹೇಳಬೇಕಾಗಿರುವುದರಿಂದ ತಮ್ಮ ಕ್ಷಮೆಯನ್ನು ಬೇಡುವೆನು. ಹಿಂದೂಗಳ ಶರೀರಾವಯವಜ್ಞಾನವನ್ನು ಕುರಿತು ಡಾ|| ಹೋರ್ನೆಲಿಯವರು "ಕ್ರಿಸ್ತಶಕೆಗೆ ಪೂರ್ವ 6ನೆ ಶತಮಾನದಲ್ಲಿ ಕೂಡ ಬಹಳ ವ್ಯಾಪಕವಾಗಿದ್ದುದು ವಿಶೇಷ ಆಶ್ಚರ್ಯಕರವಾಗಿರುವುದು" ಎಂದು ಬರೆದಿರುವರು. ಈವರೆಗೆ ಸರ್ಜನ್ ಜನರಲ್‌ರವರಾಗಿದ್ದ ಸರ್ ಪಾರ್ಡೀಲ್ಯೂಕಿಸುರವರು ಒಂದುವೇಳೆ ಉಪನ್ಯಾಸ ಮಾಡುವಾಗ್ಗೆ, "ಈಗ ಈ ದಿವಸ ಕೂಡ ಹೊಸದಾಗಿ ಕಂಡುಹಿಡಿಯಲ್ಪಟ್ಟು ಪ್ರಸಾರಕ್ಕೆ ತರಲ್ಪಡುತ್ತಿರುವ ಅನೇಕ ವಿಶೇಷವಿಷಯಗಳು ಎಷ್ಟೋ ಯುಗಗಳ ಹಿಂದೆಯೇ ಭಾರತ ದೇಶೀಯರ ಪೂರ್ವಿಕರುಗಳಿಗೆ ತಿಳಿದಿದ್ದುವೆಂಬುದರಲ್ಲಿ ಸಂಶಯವಿಲ್ಲವು. ಇದಕ್ಕೊಂದು ಉದಾಹರಣೆಯಾಗಿ, ನಂಜುವ್ಯಾಧಿಗ್ರಸ್ತನಾದ ರೋಗಿಗೆ ಉಪ್ಪು ಲೇಶಮಾತ್ರವೂ ಸೇರಿಸಲ್ಪಡದ ಸಪ್ಪೆ ಆಹಾರದಿಂದ ಬಹಳ ಪ್ರಯೋಜನವುಂಟೆಂದು ಪರೀಕ್ಷೆಯಿಂದ ನಮಗೆ ಈಗ ಗೊತ್ತಾಗಿರುವುದು ಎಷ್ಟೋ ಸಂವತ್ಸರದ ಹಿಂದೆಯೇ ಪೂರ್ವದೇಶದ ವೈದ್ಯರುಗಳಿಗೆ ತಿಳಿದಿದ್ದಿತು." ಎಂದು ಹೇಳಿರುವರು.

ಶಸ್ತ್ರಚಿಕಿತ್ಸೆಯು ಆಯುರ್ವೇದರೀತ್ಯಾ ಪೂರ್ವದಲ್ಲಿ ಅಭಿವೃದ್ಧಿಯನ್ನು ಹೊಂದಿದ್ದಿತು ಎಂಬ ವಿಚಾರವು 'ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ' ಎಂಬ ಗ್ರಂಥದಲ್ಲಿ ಈ ಪ್ರಕಾರವಾಗಿ ಹೇಳಲ್ಪಟ್ಟಿದೆ.—"ಸುಶ್ರುತದಲ್ಲಿ ಬಹಳ ಎಚ್ಚರಿಕೆಯಿಂದ ಶಸ್ತ್ರಚಿಕಿತ್ಸೆಯೂ, ಶರೀರದ ಕೆಟ್ಟುಹೋದ ಭಾಗವು ಸರಿಪಡಿಸಲ್ಪಡುವುದು ಮೊದಲಾದವುಗಳೂ ಈ ದೇಶದಲ್ಲಿ ನಡಿಸಲ್ಪಡುತ್ತಿರುವುದಾಗಿ ವರ್ಣಿಸಲ್ಪಟ್ಟಿರುತ್ತದೆ. ಈ ಶಾಸ್ತ್ರವಿಚಾರವಾಗಿ ಎಷ್ಟೋ ಸಂಗತಿಗಳು ಅದರಲ್ಲಿ ಹೇಳಲ್ಪಟ್ಟಿವೆ. ಔಷಧಿಯಲ್ಲಿ ಪಾಷಾಣ ರಸ ಮೊದಲಾದವುಗಳು ಪ್ರಯೋಗಿಸಲ್ಪಡುವುದು ಈ ದೇಶದಲ್ಲಿ ರೂಢಿಯಲ್ಲಿರುವುದಾಗಿ ತಿಳಿಸಲ್ಪಟ್ಟಿದೆ. ಶಸ್ತ್ರಚಿಕಿತ್ಸೆಗುಪಯೋಗಿಸಲ್ಪಡುವ ಮುಟ್ಟುಗಳು ಉಕ್ಕಿನಿಂದ ಮಾಡಲ್ಪಟ್ಟು ಒಂದುನೂರಕ್ಕೆ ಹೆಚ್ಚಾಗಿಯೇ ಇರುವುದಾಗಿ ಸುಶ್ರುತದಲ್ಲಿ ವರ್ಣಿಸಲ್ಪಟ್ಟಿದೆ. ಕಟ್ಟನ್ನು ಬಿಗಿಯಲು 14 ವಿಧಾನಗಳು ಹೇಳಲ್ಪಟ್ಟಿವೆ. ಮೂಳೆಯು ಜರುಗಿರುವಾಗ್ಗೆ ಅದನ್ನು ಕೂಡಿಸಿ ಪಟ್ಟಿಕಟ್ಟಲು ಬಿದರು ದಬ್ಬೆಗಳುಪಯೋಗಿಸಲ್ಪಡುವುವು. ಮೂಳೆಯು ಜರುಗಿರುವಾಗ್ಗೆ ಉಛ್ವಾಸ ನಿಶ್ವಾಸವನ್ನು ಪರೀಕ್ಷಿಸಿ ಎಲ್ಲಿ ಮೂಳೆಯು ಜಾರಿದೆಯೆಂಬುದು ಕಂಡುಹಿಡಿಯಲ್ಪಡುವುದು. ಯಾವ ನರವು ಕಿತ್ತುಹೋಗಿದೆಯೆಂಬುದು ಕಂಡು ಹಿಡಿಯಲ್ಪಟ್ಟು ಅದಕ್ಕೆ ತಕ್ಕ ಚಿಕಿತ್ಸೆಯು ನಡಿಸಲ್ಪಡುವುದು. ಗಾಯವಾದಾಗ್ಗೆ ಅದು ಕುಯಿದುಹೋಗಿ ಅಥವಾ ದಪ್ಪಿತಗುಲಿ ಆಗಿರುವುದೇ ಎಂಬುದು ಕಂಡು ಹಿಡಿಯಲ್ಪಟ್ಟು ಅದಕ್ಕೆ ತಕ್ಕ ಚಿಕಿತ್ಸೆಮಾಡಲ್ಪಡುವುವು. ತಲೆ ಮುಖಗಳು ಕುಯಿದುಹೋಗಿದ್ದಲ್ಲಿ ಹೊಲೆಯಲ್ಪಡುವುವು. ಶರೀರದೊಳಗೆ ಕಬ್ಬಿಣದ ಚೂರು ಮೊದಲಾದವುಗಳು ಹೊಕ್ಕಿದ್ದಲ್ಲಿ ಆಕರ್ಷಣ ಮಂತ್ರೋಚ್ಚಾರಣೆಯಿಂದ ಹೊರಗೆ ಬರಮಾಡಲ್ಪಡುವುವು. ವಿಷಯುಕ್ತ ರಕ್ತವನ್ನು ಹೊರಗೆ ತೆಗೆಯಲು ಯಾವ ಆಯುಧವೂ ಉಪಯೋಗಿಸಲ್ಪಡದೆ ಕೈಯಿಂದುಜ್ಜುವುದರಿಂದ ರಕ್ತವು ಹೊರಗೆ ಬರುವಂತೆ ಮಾಡಲ್ಪಡುವುದು. ಈಗಲೂ ಮುಲಾಮಿನ ಪ್ರಯೋಗವುಂಟು. ಅಂಡವಾಯು ಮೊದಲಾದ ರೋಗಕ್ಕೂ ಶಸ್ತ್ರಚಿಕಿತ್ಸೆಯು ಮಾಡಲ್ಪಡುತ್ತಿದ್ದಿತು. ಕಣ್ಣಿನಲ್ಲಿ ಹೂವು ಕುಳಿತಿದ್ದಲ್ಲಿ ಅದು ಶಸ್ತ್ರಚಿಕಿತ್ಸೆಯಿಂದ ಹೋಗಲಾಡಿಸಲ್ಪಡುತ್ತಿದ್ದಿತು."

ನಾನು ಬೇರೊಂದು ವಿಷಯವನ್ನು ತಿಳಿಸುವುದಕ್ಕೆ ಮೊದಲು ಇತರ ವೈದ್ಯಪದ್ಧತಿಯಲ್ಲಿ ಆಯುರ್ವೇದದಿಂದ ವಿಷಯಗಳು ಸಂಗ್ರಹಿಸಲ್ಪಟ್ಟಿವೆ ಎಂಬುದನ್ನು ತಿಳಿಸುತ್ತೇನೆ. "ಲೋಹಜಾತಗಳನ್ನು ಔಷಧವಾಗಿ ಶರೀರದೊಳಗೆ ಪ್ರಯೋಗಿಸುವುದನ್ನು ಮೊದಲು ಕಂಡುಹಿಡಿದವರು ಭಾರತದೇಶದವರು. ಅವರನ್ನು ನೋಡಿಯೇ ನಾವು ಪಾಷಾಣವನ್ನೂ ರಸವನ್ನೂ ಮದ್ದಾಗಿ ಪ್ರಯೋಗಿಸಲೆತ್ನಿಸಿದೆವು" ಎಂದು ಎಲ್ಫಿನ್ಸ್ಟನನು ಹಿಂದೂದೇಶದ ಚರಿತ್ರೆಯಲ್ಲಿ ಹೇಳಲ್ಪಟ್ಟಿರುವುದಾಗಿ ಡಾ|| ಜಿ. ಎನ್. ಮುಖರ್ಜಿಯವರು ಉದ್ಧರಿಸಿರುವರು. ಗೊಂಡಾಲ ಠಾಕೂರು ಸಾಹೇಬರು ತಾವು ರಚಿಸಿರುವ ಆರ್ಯವೈದ್ಯಶಾಸ್ತ್ರಚರಿತ್ರೆಯಲ್ಲಿ "ಚರಕ ಸುಶ್ರುತಗಳು ಏಳನೇ ಶತಮಾನದಲ್ಲಿ ಕಲಿಫ್ ಅಲ್ಮಾಯನ ಪೋಷಣೆಯಿಂದ ಅರಾಬಿಕು ಭಾಷೆಗೆ ಪರಿವರ್ತಿಸಲ್ಪಟ್ಟು ಅದರಿಂದ ಲ್ಯಾಟಿನ್ನು ಭಾಷೆಗೆ ಪರಿವರ್ತಿಸಲ್ಪಟ್ಟುವು. ಅವು ಯರೋಪ್ಯರವೈದ್ಯಕ್ಕೆ ಮೂಲವಾಗಿರುವುವು. ಅವರು 17 ನೆಯ ಶತಮಾನದವರೆಗೂ ಪ್ರಾಚ್ಯವೈದ್ಯಶಾಸ್ತ್ರವನ್ನೇ ಆಧಾರವಾಗಿಟ್ಟುಕೊಂಡಿದ್ದರು" ಎಂದು ಬರೆದಿರುವರು. ನಂಜುವ್ಯಾಧಿಗೆ ಉಪ್ಪಿಲ್ಲದ ಸಪ್ಪೆಯಾಹಾರವು ಕೊಡಲ್ಪಡಬೇಕೆಂದಿರುವ ವೈದ್ಯವಿಷಯವನ್ನು ಮೇಲೆ ತಿಳಿಸಿರುವೆನು. ಕ್ಷಯರೋಗಕ್ಕೆ ಪಾಶ್ಚಾತ್ಯರು ಈಗ ಮಾಡುತ್ತಿರುವ ಚಿಕಿತ್ಸಾಕ್ರಮವು ನಮ್ಮ ಪೂರ್ವಿಕರಿಗೆ ಮೊದಲೇ ತಿಳಿದಿದ್ದಿತು. "ಛಾಗಂಮಾಸಂ ಪಯಶ್ಛಾಗಂ ಛಾಗಂ ಸರ್ಪಿಃಸಶರ್ಕರಂ | ಛಾಗೋಪಸೇವಾ ಶಯನಂ ಛಾಗಮಧ್ಯೇತು ಯಕ್ಷ್ಮಣುತ್ ||" ಅಂದರೆ ಕ್ಷಯವ್ಯಾಧಿಯು ಮೇಕೆಯ ಮಾಂಸವನ್ನು ತಿನ್ನುವುದರಿಂದಲೂ, ಮೇಕೆಯ ಹಾಲನ್ನು ಕುಡಿಯುವುದರಿಂದಲೂ, ಮೇಕೆಯ ತುಪ್ಪವನ್ನು ಸೇವಿಸುವುದರಿಂದಲೂ, ಮೇಕೆಯನ್ನು ಸಾಕುವುದರಿಂದಲೂ, ಅದರ ಮಧ್ಯೆ ಮಲಗಿ ನಿದ್ರಿಸುವುದರಿಂದಲೂ ಗುಣವಾಗುವುದು.

(ಸಶೇಷ.)

ಮೆಯ್ಯೆಲುಬಿನ ಬೆಳವಳಿಕೆ.

ನಮ್ಮ ದೇಹದಲ್ಲಿ ಆಶ್ಚರ್ಯಕರವಾಗಿ ಜೋಡಿಸಲ್ಪಟ್ಟಿರುವ ಅಸ್ಥಿಪಂಜರವು ಬಹು ಮುಖ್ಯ ಭಾಗವಾಗಿದೆ. ನಮ್ಮ ದೇಹವು ಈ ಆಕಾರದಲ್ಲಿ ನಿಂತಿರುವದು ಆ ಅಸ್ಥಿಗಳ ಬಲದಿಂದಲೇ! ಈ ಆಧಾರವಿಲ್ಲದಿದ್ದರೆ, ದೇಹಕ್ಕೆ ಆಕೃತಿಯೇ ಇಲ್ಲದೆ ಒಂದು ಮಾಂಸದ ಮುದ್ದೆಯಂತಿರಬೇಕಾಗಿತ್ತು. ಅತಿ ಸೂಕ್ಷ್ಮವಾಗಿಯೂ, ಬಹು ಮೃದುವಾಗಿಯೂ ಇರುವ ಮಿದುಳು, ಬೆನ್ನುಹುರಿ, ಶ್ವಾಸಕೋಶ, ಹೃದಯ ಮುಂತಾದ ಭಾಗಗಳನ್ನು ಅಪಾಯವಿಲ್ಲದಂತೆ ರಕ್ಷಿಸುವುದಕ್ಕಾಗಿ ಅಲ್ಲಲ್ಲಿ ಅವುಗಳನ್ನು ಮುಚ್ಚುವದಕ್ಕೂ ದೃಢವಾದ ಎಲುಬಿನ ಗೂಡುಗಳಿವೆ. ಇಂತಹ ಉಪಯುಕ್ತವಾದ ಎಲುಬುಗಳು ದುರ್ಬಲವಾಗದೆ ದೃಢವಾಗಿರಬೇಕಾದರೆ, ಬಾಲ್ಯದಿಂದಲೇ ಮಕ್ಕಳಿಗೆ ಆಹಾರಕೊಡುವುದರಲ್ಲಿ ಬಹಳ ಎಚ್ಚರವಿರಬೇಕು. ಕೆಲವು ಮಕ್ಕಳಿಗೆ ಕೈಕಾಲುಗಳು ಸೊಟ್ಟಾಗಿ ಹಾಗೆಯೇ ನಿಂತು ಹೋಗುವದುಂಟು. ಅದು ಬಾಲ್ಯದಲ್ಲಿ ತಿನ್ನಿಸಿದ ಆಹಾರದೋಷದಿಂದಲೇ! ಈ ಆಹಾರದೋಷದಿಂದ ಮಕ್ಕಳಿಗೆ ಗ್ರಹಿಣಿಯೆಂಬ ಒಂದು ರೋಗವು [illegible], ಈ ಅಂಗವಿಕಾರಗಳನ್ನುಂಟುಮಾಡುವುದು. ಅಲ್ಲದೆ ಗರ್ಭದಶೆಯಲ್ಲಿ ತಾಯಿಯು ಬಲಹೀನಳಾಗಿ, ಅಥವಾ ರೋಗಪೀಡಿತಳಾಗಿದ್ದರೂ, ಹುಟ್ಟುವಾಗಲೇ ಮಕ್ಕಳಿಗೆ ಆ ವ್ಯಾಧಿಯು ತಗುಲಿರುವುದುಂಟು. ಆದುದರಿಂದ ತಾಯಿಯರು ಗರ್ಭಿಣಿಯರಾಗಿದ್ದಾಗ, ಒಳ್ಳೇ ಪುಷ್ಟಿಕರವಾದ ಆಹಾರಗಳನ್ನು ತೆಗೆದುಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳುತ್ತಿರಬೇಕು.

ಮಕ್ಕಳ ದೇಹದಲ್ಲಿರುವ ಎಲುಬಿನಲ್ಲಿ ಮೃದುತ್ವಾಂಶವು ಹೆಚ್ಚಾಗಿದ್ದರಿಂದ, ಅದು ಬಹು ಸುಲಭವಾಗಿ ಬಗ್ಗುವಂತಿರುವುದೇ ಹೊರತು ಗಾಜಿನಂತೆ ಬೇಗನೆ ಒಡೆಯುವಹಾಗಿಲ್ಲ. ಮಕ್ಕಳ ಮೈಮೂಳೆಯು ಹೀಗೆ ಸುಲಭವಾಗಿ ಬಗ್ಗಿ ಹೋಗುವ ಸ್ವಭಾವವುಳ್ಳದಾದುದರಿಂದ, ಅವುಗಳ ಕಾಲಿನಲ್ಲಿ ದೇಹದ ಭಾರವನ್ನು ತಡೆದು ನಿಲ್ಲುವ ಶಕ್ತಿಯು ತಾನಾಗಿ ಬರುವವರೆಗೆ, ಮಕ್ಕಳನ್ನು ಬಲಾತ್ಕಾರದಿಂದ ನಡೆಸುವುದಕ್ಕೆ ಪ್ರಯತ್ನಿಸಬಾರದು. ಸಣ್ಣ ಮಕ್ಕಳಮೇಲೆ ಹೆಚ್ಚು ಭಾರವನ್ನೂ ಹೊರಿಸಬಾರದು. ಹಾಗೆ ಮಾಡಿದರೆ ಬೆನ್ನುಮೂಳೆಯು ಬಗ್ಗಿ, ಜೀವಾವಧಿ ಗೂನುಬೆನ್ನು ಸ್ಥಿರವಾಗಿ ನಿಂತುಹೋಗುವುದು. ವಿದ್ಯಾರ್ಥಿಗಳು ಬರೆಯುವಾಗ ಅಥವಾ ಓದುವಾಗ, ಯಾವಾಗಲೂ ಮೈಯನ್ನು ಬಹಳವಾಗಿ ಬಗ್ಗಿಸುವುದಕ್ಕೆ ಅವಕಾಶಕೊಡಬಾರದು. ಇದರಿಂದಲೂ ಬೆನ್ನುಗೂನು ಬೀಳುವುದಕ್ಕೆ ಕಾರಣವಾಗುವುದು.

ಸತ್ತವರೊಡನೆ ಮಾತಾಡುವುದು.

ಅಲಹಾಬಾದಿನ ಮಾಡರ್ನ್ ಹೈಸ್ಕೂಲಿನ ಪ್ರಿನ್ಸಿಪಾಲರಾದ ಡಾಕ್ಟರ್ ಜೋಸಫ್ ಗೋಸ್ ಎಂ. ಎ. ಯವರ ಹೆಂಡತಿಯವರು ಹೋದವರ್ಷ ಏಪ್ರಿಲ್‌ನಲ್ಲಿ ತೀರಿಹೋದರು. ಇವರು ಅಲ್ಲಿಯ ಹೈಸ್ಕೂಲಿನ ಹೆಡ್ ಮಿಸ್ಟ್ರೆಸ್‌ರವರಾಗಿಯೂ ವಿದ್ಯಾವತಿಯಾಗಿಯೂ ಇದ್ದರು. ಈಗ ಇವರು ತ್ರಿಲೋಕನಾಥಸಿಂಹ ಎಂಬ ವಿದ್ಯಾರ್ಥಿಯ ಮೇಲೆ ಆವೇಶವಾಗಿ ಬಂದು ಪರಲೋಕದ ತನ್ನ ಅನುಭವದ ವಿಷಯವಾಗಿ ತನ್ನ ಪತಿಯೊಡನೆ ಸಂವಾದ ಮಾಡಿರುವರು. ಅದರ ಕೆಲವು ಭಾಗವನ್ನು ಇಲ್ಲಿ ಬರೆದಿರುವೆವು.

ಪ್ರಶ್ನೆ :—ನೀನು ಇಲ್ಲಿಂದ ತೆರಳುವಾಗ ಮತ್ತು ಅನಂತರ ನಿನಗೆ ಹೇಗಾಯಿತು ?

ಉತ್ತರ :—ನಿನ್ನ ಗಡಿಯಾರದಂತೆ ನಾಲ್ಕು ಗಂಟೆಗೆ ಸರಿಯಾಗಿ ನಾನು ಈ ದೇಹವನ್ನು ತ್ಯಜಿಸಬೇಕೆಂದು ಸಂಪೂರ್ಣವಾಗಿ ಅನುಭವವಾಯಿತು. ಐದು ಗಂಟೆಗೆ ಹೊರಗಿನ ಯಾವುದೋ ಒಂದು ಶಕ್ತಿಗೂ ನನ್ನ ಹೃದಯಚಲನೆಗೂ ಏನೋ ಒಂದು ವಿಧವಾದ ವಿವಾದವು ನಡೆಯುವಂತೆ ತೋರುತ್ತಿದ್ದುದಲ್ಲದೆ, ಯಾರೋ ನನ್ನನ್ನು ದೇಹವನ್ನು ಬಿಟ್ಟು ಬಂದುಬಿಡೆಂದು ಕರೆಯುತ್ತಿದ್ದಂತೆ ತೋರಿತು. ಕೂಡಲೆ ಕಾಲಿನ ಕಡೆಯಿಂದ ನನ್ನ ಶರೀರವು ತಣ್ಣಗಾಗುತ್ತಬಂದಿತು. ಕ್ರಮೇಣ ನನ್ನ ಗತಿಯು ಕಡೆಗಂಡಂತೆ ಬೋಧೆಯಾಯಿತು. ಕೂಡಲೆ ಯಾವುದೋ ಒಂದು ಶಕ್ತಿಯು ನನ್ನ ಹೃದಯವನ್ನು ಕಲಕಿ ದೈವಾಂಶವಾದ ಆತ್ಮವನ್ನು ಎಳೆದುಕೊಂಡಿತು. ಆಗ ಏನನ್ನು ಅನುಭವಿಸಿದೆನೋ ಅದನ್ನು ಆಗಲೇ ಹೇಳಬೇಕೆಂದಿದ್ದೆನು. ಆದರೆ ಅದು ನ್ಯಾಯವಾಗಿಯೂ ಇರಲಿಲ್ಲ. ತಕ್ಕ ಸಾಮರ್ಥ್ಯವೂ ನನಗೆ ದೊರೆಯದೇ ಹೋಯಿತು. ಕೂಡಲೆ - ಬಾ - ಎಂದಂತಾಗಿ ಹಾಗೆಯೇ ಮೂರ್ಛೆ ಹೋದೆನು. ಆಮೇಲೆ ಸುಮಾರು ಅರ್ಧಗಂಟೆಯ ಮೇಲೆ ನಾನು ಬೇರೊಂದು ಸ್ಥಿತಿಯಲ್ಲಿದ್ದಂತೆ ತೋರಿತು. ಹಿಂದಿನ ಸ್ಥಿತಿಯಾಗಲೀ ಕಳೆದು ಹೋದ ಯೋಚನೆಗಳಾಗಲೀ ನನಗಿರಲಿಲ್ಲ. ಕ್ರಮೇಣ ನನ್ನ ಹೊಸ ಜಾಗೆವು ಪತ್ತೆಯಾಗಿ ಅದು ಬಹಳ ಉತ್ತಮವಾದುದೆಂದು ಕಂಡುಕೊಂಡೆನು. ಅಲ್ಲಿ ನನ್ನ ಅಪೇಕ್ಷೆಗಳೆಲ್ಲವೂ ಕೂಡಲೇ ಸಿದ್ಧಿಯಾಗುವುವು. ಹಿಂದಿನ ಜನ್ಮದಲ್ಲಿ ಸ್ವಪ್ನದಲ್ಲಿಯೂ ಕಾಣದಂತಹ ಕೆಲವು ಹಣ್ಣುಗಳನ್ನು ತಿಂದೆನು. ಮತ್ತೇನಾದರೂ ಕೇಳುವುದಿದೆಯೇ ?

ಪ್ರಶ್ನೆ :—ಈ ಲೋಕದ ನಿನ್ನ ಪ್ರೀತಿಪಾತ್ರರನ್ನೂ ನಿನಗೆ ಅತ್ಯಂತ ಪ್ರಿಯವಾದ ಕಾರ್ಯಗಳನ್ನೂ ನೀನು ಬಿಟ್ಟು ಹೋಗುವಾಗ ನಿನಗೆ ಯಾವ ರೀತಿ ತೋರಿತು ?

ಉತ್ತರ :—ನಾನು ಇಲ್ಲಿಂದ ಹೊರಡುವಾಗ ನಾನು ಹಿಂದೆ ಬಿಟ್ಟು ಹೋಗುವ ಕೆಲಸ ಕಾರ್ಯಗಳಿಗಾಗಿಯೂ ನಾನು ಪುನಃ ನೋಡಲಾರೆನೆಂದು ಭಾವಿಸಿದ್ದ ನನ್ನ ಪ್ರೇಮಾಸ್ಪದರಾದ ಜನರಿಗಾಗಿಯೂ ವಿಶೇಷ ವ್ಯಥೆಪಟ್ಟೆನು. ಈಗ ನನಗೆ ಅಂತಹ ವ್ಯಥೆಯೇನೂ ಇಲ್ಲ. ಅತ್ಯಂತ ಸಂತೋಷವಾಗಿದ್ದೇನೆ. ಈಗಿನ ನನ್ನ ಕೆಲಸದ ವಿಷಯವಾಗಿ ಹಿಂದಿನಂತೆ ಕುಂದುಕೊರತೆಗಳೇನೂ ತೋರುವುದಿಲ್ಲ. ಆದರೂ ನಿಸ್ಸಂದೇಹವಾಗಿಯೂ ನನ್ನ ವಿಶೇಷ ಪ್ರೇಮಕ್ಕೆ ಪಾತ್ರವಾಗಿದ್ದ ಸ್ಕೂಲು—ಇದು ಒಂದೇ ಒಂದಕ್ಕಾಗಿ ನಾನು ಈ ಭೂಲೋಕಕ್ಕೆ ಕಟ್ಟುಬಿದ್ದಿದ್ದೇನೆ.

ಪ್ರಶ್ನೆ :—ಅಲ್ಲಿ ಎಂತಹ ದೇಹವನ್ನು ಧರಿಸಿರುವಿರಿ ? ನಿಮಗೂ ಹಸಿವುಂಟೆ ? ನಿಮ್ಮ ಆಹಾರ ಪದಾರ್ಥಗಳು ಎಲ್ಲಿಂದ ಬರುತ್ತವೆ ?

ಉತ್ತರ :—ನಿಮ್ಮ ಶರೀರವು ವಿಶೇಷವಾಗಿ ಸ್ಥೂಲ ವಸ್ತುಗಳಿಂದ ಮಾಡಿದೆ. ನಮ್ಮದು ಹೆಚ್ಚಾಗಿ ಸೂಕ್ಷ್ಮ ವಸ್ತುಗಳಿಂದ ಮಾಡಿದೆ. ಇನ್ನೂ ಹೆಚ್ಚು ಹೆಚ್ಚಾದ ಅಂತಸ್ತಿಗೆ ಏರಿದಂತೆಲ್ಲಾ ಹೆಚ್ಚು ಹೆಚ್ಚಾದ ಸೂಕ್ಷ್ಮ ವಸ್ತುಗಳಿಂದ ಮಾಡಲ್ಪಡುವುದು. ನಾವೂ ನಿಮ್ಮಂತೆಯೇ; ನಮಗೂ ಹಸಿವು ತೃಷೆಗಳುಂಟು. ನಮ್ಮಲ್ಲಿಯೂ ಹಣ್ಣು ಹಂಪಲುಗಳಿರುತ್ತವೆ. ನಾನು ಶರೀರವನ್ನು ಬಿಟ್ಟು ಬಂದಾಗ ಹಸಿವುಂಟಾಗಿ ಸುಧಾರಿಸಿಕೊಳ್ಳುವುದಕ್ಕೆ ಒಂದು ಜಾಗವೂ ಬೇಕಾಗಿದ್ದಿತು.

ಪ್ರಶ್ನೆ:—ದಯವಿಟ್ಟು ಸ್ವರ್ಗ ನರಕಗಳ ವಿಷಯವನ್ನು ಹೇಳುವಿರಾ?

ಉತ್ತರ :— ಮೊದಲು ಮನುಷ್ಯನು ಪಾಪವನ್ನು ಮಾಡಿದ ಕೂಡಲೆ ಶಿಕ್ಷೆಯನ್ನನುಭವಿಸಬೇಕಾಗುವುದು. ಕೆಲವು ಸಂದರ್ಭಗಳಲ್ಲಿ ಕೊಂಚ ತಡವಾಗುವುದು ಕಾರಣಾಂತರಗಳಿಂದ ಪಾಪಕ್ಕೆ ತಕ್ಕ ಶಿಕ್ಷೆಯು ಮಾನವಲೋಕದಲ್ಲಿ ಆಗದಿದ್ದರೆ ನಮ್ಮ ಲೋಕದಲ್ಲಿ ಅನುಭವಿಸಬೇಕಾಗುವುದು. ನಿಮ್ಮ ಲೋಕದಲ್ಲಿ ಪಾಪಾತ್ಮರೂ ಮಹಾತ್ಮರೂ ಇರುವಂತೆ ಇಲ್ಲಿಯೂ ಇರುವರು. ನಿಮ್ಮ ಲೋಕದ ಪಾಪಿಗಳನ್ನು ಇಲ್ಲಿಗೆ ಸೇರಿಸುವುದಿಲ್ಲ; ಅಲ್ಲಿಯೂ ಇರಗೊಡಿಸುವುದಿಲ್ಲ. ಅವರು ತಮ್ಮ ಕಾಲವನ್ನು ಅತ್ಯಂತ ಸಂಕಟದಿಂದ ಕಳೆದು ಇಲ್ಲಿಗೆ ಬಂದಮೇಲೆ ಬಹಳ ಕಾಲ ಒಂಟಿಯಾಗಿ ನರಳುವರು. ನಮ್ಮಲ್ಲಿ ಪ್ರತಿಯೊಬ್ಬರಿಗೂ ಪಾಪಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸದೇ ಹೋಗಲು ಸಾಧ್ಯವಿಲ್ಲ. ನಿಮ್ಮ ಲೋಕದವರು ಹೇಳುವಂತೆ ಚಡೀ ಹೊಡೆತ ಮುಂತಾದ ಶಿಕ್ಷೆಗಳೇನೂ ಇಲ್ಲ. ನರಕವೆಂದು ಗೊತ್ತಾದ ಜಾಗವೇನೂ ಇಲ್ಲಿಲ್ಲ. ವಿಶೇಷ ಉತ್ತಮ ಕಾರ್ಯಗಳನ್ನು ಮಾಡಿದವರ ಆತ್ಮವು ನಾನಿರುವ ಲೋಕದಲ್ಲಿಯೂ ಇರದೆ ಅತ್ಯಂತ ಸೂಕ್ಷ್ಮವಾದ ಲೋಕಗಳಿಗೆ ಹೊರಟುಹೋಗುತ್ತಿರುವುವು. ಪೂರ್ವದ ಋಷಿಶ್ರೇಷ್ಠರು ಇನ್ನೂ ಅಮೋಘವಾದ ಸ್ಥಾನಗಳಿಗೆ ಹೋಗಿರುವರು.

ಪ್ರಶ್ನೆ:—ನೀನು ಹಣ್ಣನ್ನು ತಿಂದು ವಿಶ್ರಾಂತಿಯನ್ನು ತೆಗೆದುಕೊಂಡ ಮೇಲೆ ಏನು ಮಾಡಿದೆ ?

ಉತ್ತರ:—ಅಲ್ಲಿ ಮತ್ತೇನೇನು ಇದೆಯೆಂಬುದನ್ನು ನೋಡಬೇಕೆಂದು ನನಗೆ ಆಸೆಯುಂಟಾಗಲು ಅಲ್ಲಿಂದ ಮುಂದಕ್ಕೆ ಹೊರಟೆನು. ಅಲ್ಲಿ ನನ್ನಂತೆಯೇ ಅನೇಕ ಸೂಕ್ಷ್ಮಜೀವಿಗಳಿದ್ದವು. ಅವುಗಳಲ್ಲಾವುವು ನನ್ನಂತೆ ವ್ಯಸನದಲ್ಲಿದ್ದಂತೆ ಕಂಡುಬರುವುದಿಲ್ಲ. ನಾನು ಹೊಸ ಜಾಗದಲ್ಲಿರುವುದನ್ನು ನೋಡಿ ತುಂಬಾ ಆಶ್ಚರ್ಯವಾಯಿತು. ನಾನು ಅವರನ್ನು ಅವರ ಲೋಕದ ವಿಷಯವಾಗಿ ಪ್ರಶ್ನೆಮಾಡಲು ಎಲ್ಲವನ್ನೂ ವಿಶದವಾಗಿ ಹೇಳಿದರು. ಈಗ ನಾನಿರುವ ಲೋಕವೇ ಕೊನೆಯ ಲೋಕವೆಂದು ಭಾವಿಸಬೇಡ. ಅಲ್ಲಿಂದ ಮುಂದಕ್ಕೆ ಅವರ ಕರ್ಮಾನುಸಾರವಾಗಿ ಮುಂದೆ ಮುಂದಿನ ಲೋಕಗಳಿಗೆ ಹೋಗುತ್ತಿರುತ್ತಾರೆ. ನಿಮ್ಮ ಲೋಕದಲ್ಲಿರುವಂತೆ ನಮ್ಮ ಲೋಕದಲ್ಲಿ ಶತ್ರುಗಳಾಗಲೀ ದುರ್ದೈವಗಳಾಗಲೀ ಇಲ್ಲ. ನಮಗೆ ಯಾವ ವಿಧವಾದ ಬಂಧಕವೂ ಇಲ್ಲದೆ ವೃದ್ಧಿಹೊಂದಲು ಬೇಕಾದಷ್ಟು ಸ್ವಾತಂತ್ರ್ಯವಿರುತ್ತದೆ.

ಪ್ರಶ್ನೆ:—ಅಲ್ಲಿ ಇಷ್ಟು ಕಾಲ ಏನು ಮಾಡುತ್ತಿದ್ದೆ ?

ಉತ್ತರ:—ಸರ್ವಲೋಕಗಳಿಗೂ ಒಡೆಯನಾದ ಭಗವಂತನನ್ನು ಸೇವಿಸುತ್ತಲೂ ಸಹಾಯಬೇಕಾದ ಅಲ್ಪಾತ್ಮರಿಗೆ ನನ್ನ ಕೈಲಾದ ಸಹಾಯವನ್ನು ಮಾಡುತ್ತಲೂ ಇದ್ದೆನು.

ಹೀಗೆಯೇ ಇನ್ನೂ ಅನೇಕ ಸಂವಾದಗಳು ನಡೆದಿವೆ. ಒ.ಸ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವ ಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ಮಾರುಮಾರುದ್ದ ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಪರಸ್ಪರ ಸಮಾಜಗಳಲ್ಲಿ ಏಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಷಮ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೊಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರಃ ಆಯ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧದ ಲೇಖನಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕರೂ ಖಂಡಿತವಾಗಿ ಗಮನಿಸಬೇಕು.

—ಸಂಪಾದಕ.

ತಿರಸ್ಕೃತಲೇಖನಗಳು.

(1) ಸಜ್ಜನಪಾದಸೇವಕರು ಎಂಬ ಹೆಸರಿನಿಂದ ಸ್ವಾಮಿಪಾದಸೇವಕನ ಧೂರ್ತವರ್ತಮಾನ ಎಂಬ ಲೇಖನವನ್ನು ಯಾರೋ ಒಬ್ಬ ಮನುಷ್ಯನು ನಮ್ಮ ನಿಯಮದಂತೆ ತನ್ನ ಹೆಸರು ವಿಳಾಸವನ್ನೂ, ಚಂದಾರಿಜಿಸ್ಟರ್ ನಂಬರನ್ನೂ ಕೊಡದೆ 6-7 ಜನರ ಹಸ್ತಾಕ್ಷರವನ್ನು ತಾನೇ ಕೊಂಚ ವ್ಯತ್ಯಾಸದಿಂದ ಬರೆದಿರುವ ಪ್ರಯುಕ್ತ ತಿರಸ್ಕರಿಸಿದೆ.

ಜಯಂತಿಗಳು.

ಅಯ್ಯಾಬಾಂಧವರೇ, ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ದಾರುಕಾಚಾರ್ಯ ಏಕೋರಾಮಾರಾಧ್ಯ, ಈ ಆಚಾರ್ಯರು ಕ್ರಮವಾಗಿ ವೈಶಾಖ ಶುದ್ಧ ಅಕ್ಷತೃತಿಯಾ ವೈಶಾಖ ಶುದ್ಧ ಪಂಚಮಿ ಈ ತಿಥಿಗಳಲ್ಲಿ ಅವತರಿಸಿದ್ದಾರೆ. ಕಾರಣ ಭರತಖಂಡದ ಎಲ್ಲ ವೀರಶೈವರು (ಲಿಂಗಾಯತರು) ಈ ದಿವಸಗಳನ್ನು ಸ್ವಮತದ ಪವಿತ್ರ ಹಬ್ಬಗಳೆಂದು ತಿಳಿದು ಅದರಂತೆ ಆಚರಿಸಿ ಸರ್ವತ್ರವಾಗಿ ಪೀಠಾಚಾರ್ಯರ ಜಾಗ್ರತೆಯನ್ನುಂಟುಮಾಡಬೇಕೆಂದು ಇಚ್ಛಿಸುತ್ತೇನೆ. ಸಿ. ವಿ. ಸಿಂಧೂರ,

ಚನ್ನವೀರೇಶ ವಾಚನಮಂದಿರ, ಸೆಕ್ರೆಟರಿ.

ಕರ್ನಾಟಕ ಸಾಹಿತ್ಯ ಸಮ್ಮೇಳನವು.

ಹತ್ತನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನವು ಕೋಲಾರದಲ್ಲಿ 1924 ನೆಯ ಇಸವಿ ಮೇ ತಿಂಗಳು 16, 17, 18, ನೆಯ ತಾರೀಖುಗಳಲ್ಲಿ ನಡೆಯುವುದು. ಇಂಡಿಯಾ ಸರ್ಕಾರದ ಶಾಸನ ಇಲಾಖಾಧ್ಯಕ್ಷರಾದ ರಾವ್‌ಬಹದೂರ್ ಎಚ್. ಕೃಷ್ಣಶಾಸ್ತ್ರಿ ಬಿ.ಎ., ಅವರು ಅಧ್ಯಕ್ಷತೆಯನ್ನು ವಹಿಸುವರು. ಕನ್ನಡಭಾಷಾಭಿಮಾನಿಗಳೆಲ್ಲರೂ ಸಮ್ಮೇಳನಕ್ಕೆ ದಯಮಾಡಿ ಬಂದು ಭಾಷಾಭಿವೃದ್ಧಿಗೆ ನೆರವಾಗಬೇಕೆಂದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಹಾರೈಕೆ. ಕೋಲಾರದಲ್ಲಿ ಸ್ಥಳವಸತಿ ಮೊದಲಾದುದನ್ನು ತಿಳಿಯಪೇಕ್ಷಿಸುವವರು ಸಮ್ಮೇಳನದ ಸ್ವಾಗತ ಮಂಡಲಿಯ ಕಾರ್ಯದರ್ಶಿ ಮ|| ರಾ|| ಟಿ. ಶ್ರೀನಿವಾಸಾಚಾರ್ಯರವರಿಗೆ ಬರೆಯಬೇಕು.

ಬೆಂಗಳೂರು,
ತಾ|| 29-4-1924.

ಬೆಳ್ಳಾವೆ ವೆಂಕಟನಾರಾಯಣಪ್ಪ ಎಂ. ಎ.
ಕಾರ್ಯದರ್ಶಿ, ಕೋಲಾರ ಸಾಹಿತ್ಯಪರಿಷತ್ತು.

ಶ್ರೀ ಬಸವೇಶ್ವರಜಯಂತಿ.

(ಬಂಡಿ ಬೇಸಾಯಗಳಿಗೆ ಬಸವಜಯಂತಿಯ ದಿನ ಬಸವನನ್ನು ಹೂಡಲಾಗದು.)

ಶ್ರೀ ಬಸವೇಶ್ವರಜಯಂತಿಯು ಇದೇ ವೈಶಾಖಶುದ್ಧ ಬಿದಿಗೆ ಮಂಗಳವಾರ ಇರುವುದರಿಂದ ಪದ್ಧತಿಪ್ರಕಾರ ಆ ಮಹಾತ್ಮನ ಜಯಂತ್ಯುತ್ಸವವನ್ನು ಆತನ ಭಜನ, ಕೀರ್ತನ, ಪುರಾಣಶ್ರವಣ, ಉಪನ್ಯಾಸ, ಸಮಾರಾಧನೆಗಳನ್ನು ಆ ದಿವಸ ಜರುಗಿಸುತ್ತಾ ತಮ್ಮ ತಮ್ಮ ಜನ್ಮಸಾರ್ಥಕ್ಯವನ್ನು ಮಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ. ಶ್ರೀ ಬಸವೇಶ್ವರನು, ವೀರಶೈವ ಮತೋದ್ಧಾರಕನೆಂದೂ, ವೀರಶೈವರೇ ಈ ಹಬ್ಬವನ್ನಾಚರಿಸಬೇಕೆಂದೂ ಅನ್ಯಸಮಾಜದವರು ಭಾವಿಸದೆ, ಬಸವೇಶ್ವರನಂಥ ಸಮಾಜಸುಧಾರಕರು ಈವರೆಗಿನ ಇತಿಹಾಸದಲ್ಲಿ ಅತಿವಿರಳರೆಂಬುದನ್ನು ಇತಿಹಾಸಜ್ಞರಿಗೆ ತಿಳಿಸಬೇಕಾದ್ದಿಲ್ಲ. ಕಾರಣ ಇಂಥಾ ಮಹಾನುಭಾವನ ಜನ್ಮಭೂಮಿಯಾದ ಕರ್ನಾಟಕವೇ ಧನ್ಯ. ಅದ್ದರಿಂದ ಕನ್ನಡಿಗರೇ ನಿಮ್ಮ ಕರ್ತವ್ಯವನ್ನು ನೀವಾದರೂ ಮರೆಯಬೇಡಿರಿ. ದಾವಣಗೆರೆಯ ವರ್ತಕಮಹಾಜನಗಳು ಈ ಜಯಂತಿಯ ಸುದಿನದಲ್ಲಿ ತಮ್ಮ ವ್ಯಾಪಾರವನ್ನು ನಿಲ್ಲಿಸುವುದಲ್ಲದೆ "ಬಂಡಿ ಬೇಸಾಯಗಳಿಗೆ ಬಸವನನ್ನು ಆ ದಿವಸ ಹೂಡಲಾಗದೆಂದು" ನಿರ್ಧರಿಸಿರುವುದು ತುಂಬಾ ಶ್ಲಾಘ್ಯಪ್ರದವಾಗಿರುವುದಲ್ಲದೆ ಅನುಕರಣೀಯವಾದದ್ದಾಗಿದೆ. ಇವರ ಮೇಲ್ಪಂಕ್ತಿಯನ್ನು ಉಳಿದ ಕನ್ನಡಿಗರು ಅನುಸರಿಸಿ ಆ ಮಹಾತ್ಮನ ಪುಣ್ಯದಿನದ ಮಹಾಫಲವನ್ನು ಹೊಂದಲೆಂದು ಕೋರುತ್ತೇನೆ.

[illegible]

ಬಾಳೆಹೊನ್ನೂರು ಮಠದ ಪೀಠಾಧಿಕಾರ.

(ವೀರಶೈವರು ಅವಶ್ಯ ಗಮನಿಸತಕ್ಕದ್ದು.)

ಮೇಲ್ಕಂಡ ಶ್ರೀಮದ್ರಂಭಾಪುರಿ ಪೀಠಾಧಿಕಾರಕ್ಕೆ ಶ್ರೀ ಕೊಣ್ಣೂರ ಶ್ರೀಗಳವರನ್ನು ಪಟ್ಟಾಧಿಕಾರ ಮಾಡಬೇಕೆಂಬ ಅಂಶವು ನಿಮ್ಮ ಪತ್ರಿಕೆಯಲ್ಲಿ ಪ್ರಕಟಪಡಿಸಿದ್ದು ಸರಿಯಷ್ಟೆ. ಅದರಂತೆ ಅವರಿಗೇನೇ ಪಟ್ಟಾಧಿಕಾರವಾಗುವದೆಂತ ವೀರಶೈವ ಜನಾಂಗದವರೆಲ್ಲಾ ಬಹಳ ಸಂತೋಷಚಿತ್ತರಾಗಿದ್ದರು. ತನ್ಮಧ್ಯೆ ಈ ಪೀಠಾಧಿಕಾರ ಮಾಡುವದಕ್ಕೆ ಬದ್ಧಕಂಕಣರಾಗಿದ್ದ ಯೆಡೆಹಳ್ಳಿ ಶಾಂತಪ್ಪಶೆಟ್ಟರು ತಮಗೆ ದೇಹಾಲಸ್ಯವಾಗಿರುವದರಿಂದ ಕೆಲವು ದಿವಸಗಳ ಪುರಸತ್ತುಕೊಡಿಸಬೇಕಾಗಿ ಸುಳ್ಳು ಲೇಖನಗಳನ್ನು ಬರಿಯುತ್ತಾಯಿದ್ದು ಸದರಿ ಸ್ವಾಮಿಗಳವರನ್ನ ತಾವೇ ನೋಡಿಕೊಂಡು ಬಂದವರಾದಾಗ್ಯೂ ತಮ್ಮ ಪರವಾದ ಮರಿಗಳ ಪಟ್ಟಾಧಿಕಾರಕ್ಕೆ ಅವಕಾಶವಾಗಲಿಲ್ಲವಲ್ಲಾ ನಾನು ಹಿಡಿದಪಟ್ಟು ತಪ್ಪಿಹೋಯಿತಲ್ಲಾ ಎಂದು ಸಂಕುಚಿತಮನಸ್ಸುಳ್ಳವರಾಗಿ ಒಳೊಳಗೇನೆ ಕೆಲಸಕ್ಕೆ ಬಾರದ ಕೆಲವು ಕಂಠಿಲುವಳಿಕೆ ಜನಗಳ ಕೈಯಿಂದ ಸದರಿ ಕೊಣ್ಣೂರ ಶ್ರೀಗಳವರನ್ನು ಪಟ್ಟಾಧಿಕಾರಮಾಡುವದಕ್ಕೆ ಆರ್ಡರು ಕೊಡಕೂಡದಾಗಿ ಬಾಳೆಹೊನ್ನೂರ ಸಂಸ್ಥಾನ ಮಠದಲ್ಲಿ ಮೀಟಿಂಗು ನಡಿಸಿ ಚುನಾವಣೆಮಾಡಿ ಓಟು ತೆಗೆಯಬೇಕಾಗಿ ಏಜಂಟ್ ರುದ್ರಾರಾಧ್ಯರಿಂದ ಮುಜರಾಯಿ ಕಮಿಷನರವರಲ್ಲಿ ಅರ್ಜಿ ಕೊಡಿಸಿ ಅದರಂತೆ ಆರ್ಡರ್‌ಮಾಡಿಸಲು ಪ್ರಯತ್ನಪಟ್ಟು ಅದು ಹೊರಬೀಳಲು ಪುನಃ ಹದಿನೈದು ಜನ ಕಮಿಟಿ ಮೆಂಬರುಗಳನ್ನು ಚುನಾಯಿಸಿ ಅವರ ಮೂಲಕ ಮರಿಗಳನ್ನು ಪುನಃ ಚುನಾಯಿಸಬೇಕಾಗಿ ಠರಾವು ಮಾಡಿಕೊಂಡಿರುವದಾಗಿ ಕೇಳುತ್ತೇನೆ. ಕೊಣ್ಣೂರು ಶ್ರೀಗಳವರನ್ನು ಚುನಾಯಿಸಲು ಕೇವಲ ಮುಖ್ಯ ಮನುಷ್ಯರಾಗಿರುವ ದಿವಾನ್ ಬಹದ್ದೂರ ಕೆ.ಪಿ ಪುಟ್ಟಣ್ಣಶೆಟ್ಟರವರ ರೂಬುರೂಬು ಠರಾವು ಮಾಡಲ್ಪಟ್ಟು ಸದರಿ ಶ್ರೀಗಳವರನ್ನು ನೋಡಿ ಅವರ ಅನುಮತಿಯನ್ನು ಪಡದುಕೊಂಡು ಬರಲು ಸಮಾಜಬಾಂಧವರಿಂದ ಚುನಾಯಿಸಲ್ಪಟ್ಟ ನಾಲ್ಕು ಜನ ದೊಡ್ಡ ಮನುಷ್ಯರು ಹೋಗಿ ಅವರ ಅನುಮತಿ ಪಡದುಕೊಂಡುಬಂದು ತಮ್ಮ ಪತ್ರಿಕೆಯಲ್ಲಿಯೇ ಸದರಿ ವಿಷಯಗಳೆಲ್ಲಾ ಪ್ರಕಟಪಡಿಸಲ್ಪಟ್ಟು ಎಲ್ಲಾ ಸಮಾಜಬಾಂಧವರು ಒಳ್ಳೇ ಸದ್ವಂಶದಲ್ಲಿ ಜನಿಸಿದವರೂ ಸಮಾಜ ಹಿತೈಷಿಗಳೂ ಕಾರ್ಯದಕ್ಷರೂ ಜಿತೇಂದ್ರಿಯರೂ, ವಿದ್ಯಾವಂತರೂ ಆದವರು ಮಹಾಸಂಸ್ಥಾನ ಪೀಠಕ್ಕೆ ಸಿಕ್ಕಿದರೆಂಬ ಬರವಸೆಯಿಂದ ಸಂತೋಷಚಿತ್ತರಾಗಿದ್ದರು. ಆದರೆ ಸದರಿ ಸಂಸ್ಥಾನದ ದುರ್ದೈವವನ್ನು ನಾವು ಎಷ್ಟು ಹೇಳಿದರೂ ಸ್ವಲ್ಪವೇಯಿರುತ್ತೆ. ಮ|| ಪುಟ್ಟಣ್ಣಶೆಟ್ಟರವರು ಕೂಡಾ ತಮ್ಮ ರೂಬುರೂಬು ನಡೆದ ವಿಚಾರವನ್ನ ಗಮನಕ್ಕೆ ತಂದುಕೊಳ್ಳದೆ ಬೇರೆತರಹ ಮನಸ್ಸು ಮಾಡಿದರೆ ಇನ್ನು ಉಳಿದವರ ಪಾಡೇನೆಂಬುವದನ್ನು ಸಮಾಜಬಾಂಧವರು ಯೋಚಿಸತಕ್ಕದ್ದಾಗಿರುತ್ತೆ. ಉಜ್ಜನಿ ಶ್ರೀಗಳವರು ಅವರನ್ನು ಪಟ್ಟಾಧಿಕಾರ ಮಾಡಕೂಡದೆಂತಾ ಗಲಭೆಮಾಡುವದಕ್ಕೆ ಪ್ರಯತ್ನಪಟ್ಟಾಗ ಸಮಾಜಬಾಂಧವರ ಅಭಿಪ್ರಾಯಕ್ಕೆ ಶ್ರೀಗಳು ವಿರೋಧವಾಗಿ ಹೋಗುವದು ಅಪಾಯಕ್ಕೆ ಕಾರಣವಾಗುತ್ತಾದ್ದರಿಂದ ಒಪ್ಪಿಗೆಕೊಟ್ಟು ಸದರಿ ಪಟ್ಟಾಧಿಕಾರವಾಗುವದಕ್ಕೆ ಅವರ ಅನುಜ್ಞೆಯನ್ನ ಕೊಡಬೇಕಾಗಿ ಮ|| ಪುಟ್ಟಣ್ಣಶೆಟ್ಟರೇ ಕಾಗದ ಬರದಿರಲಿಲ್ಲವೇ ? ಸದರಿ ಶ್ರೀಗಳವರು ಚರಪಟ್ಟಾಧಿಕಾರವನ್ನು ಸ್ಥಿರಪಟ್ಟಾಧಿಕಾರವನ್ನು ಎರಡನ್ನೂ ಮಾಡಬೇಕಾಗಿ ಸೂಚಿಸಿದ್ದಕ್ಕೆ ಮ|| ಪುಟ್ಟಣ್ಣಶೆಟ್ಟರೇ ಸ್ಥಿರಪಟ್ಟ ಒಂದನ್ನೇ ಮಾಡಬೇಕಾಗಿ ಖಂಡಿತವಾದ ಅಭಿಪ್ರಾಯಕೊಟ್ಟದ್ದಕ್ಕೆ ಸದರಿ ಶ್ರೀಗಳವರು ಒಪ್ಪಿಗೆ ಕೊಡಲಿಲ್ಲವೇ? ಹೀಗೆ ಸರ್ವಸಮ್ಮತವಾದ ಕೊಣ್ಣೂರು ಶ್ರೀಗಳವರನ್ನು ಪಟ್ಟಮಾಡಬೇಕೆಂಬ ಇರಾದೆ ಬಹುಜನಗಳಿಗೆ ಇರುವಲ್ಲಿ, ಮೇಲ್ಕಂಡಂತೆ ದೊಡ್ಡದೊಡ್ಡ ಮನುಷ್ಯರುಗಳೇ ಮಾತಿಗೆ ತಪ್ಪಿ ಬದಲಾಯಿಸುತ್ತಾ ಇದ್ದರೆ ಇದರ ಪರ್ಯವಸಾನವೆಲ್ಲಿಗೆ ಎಂಬುವದು ಸಮಾಜಬಾಂಧವರಿಗೆ ಗೊತ್ತಾಗುವದಿಲ್ಲ. ಈಗಲೂ ಮ|| ದಿವಾನ್‌ಬಹದ್ದೂರ್ ಕೆ. ಪಿ. ಪುಟ್ಟಣ್ಣಸೆಟ್ಟರವರು ತಮ್ಮ ಅಭಿಪ್ರಾಯಾನುಸಾರ ನಡೆದ ವಿಚಾರವನ್ನು ಮನಸ್ಸಿನಲ್ಲಿ ತಂದುಕೊಂಡು ಸದರಿ ಕೊಣ್ಣೂರ ಶ್ರೀಗಳವರನ್ನು ಪಟ್ಟಾಧಿಕಾರಮಾಡುವದಕ್ಕೆ ಏರ್ಪಾಡು ಮಾಡಿದರೆ ಅವರಿಗೆ ಕೀರ್ತಿವುಂಟಾಗುವಲ್ಲಿ ಸಂದೇಹವಿಲ್ಲ. ಸಮಾಜಬಾಂಧವರೆ, ನೀವು ಕೊಣ್ಣೂರು ಶ್ರೀಗಳವರಿಗೆ ಪಟ್ಟಾಧಿಕಾರವಾಗುತ್ತೆಂತ ತಿಳಿದು ಮೌನವಾಗಿದ್ದೀರಿ. ಮ|| ಶಾಂತಪ್ಪಶೆಟ್ಟರು ಒಳಗೊಳಗೆ ಏನೇನೋ ಕೃತ್ರಿಮಗಳನ್ನು ನಡಿಸಿ ಈ ಕಾರ್ಯವಿಘಾತಕ್ಕೆ ಪ್ರಯತ್ನಪಟ್ಟಿದ್ದಾರೆಂಬುವದನ್ನು ಕಣ್ಣುತೆರೆದು ನೋಡಿ ಸದರೀ ಪೀಠಾಧಿಕಾರಕ್ಕೆ ಕೊಣ್ಣೂರ ಶ್ರೀಗಳವರನ್ನ ಪ್ರಯತ್ನಪೂರ್ವಕವಾಗಿ ಪಟ್ಟಾಧಿಕಾರಿಗಳನ್ನಾಗಿ ಮಾಡಿಕೊಳ್ಳುವದರ ಮೂಲಕ ನಿಮ್ಮ ಸಮಾಜದ ಶ್ರೇಯಸ್ಸನ್ನುಂಟುಮಾಡಿಕೊಳ್ಳಿ. ಆಲಸಮನೃತಂವಿಷಂ ಎನ್ನುವಂತೆ ಸುಮ್ಮನೆ ಕೂತು ಮ|| ಶಾಂತಪ್ಪಶೆಟ್ಟರ ಪ್ರಯತ್ನಕ್ಕೆ ಅವಕಾಶಕೊಡಬೇಡಿ. ಸಮಾಜವು ಊರ್ಜಿತಸ್ಥಿತಿಗೆ ಬರುವಂತೆ ಪ್ರಯತ್ನಶೀಲರಾಗಿರೆಂದು ಪ್ರಾರ್ಥಿಸುತ್ತೇನೆ.

ಎಂ. ಮಹದೇವಯ್ಯ, ಹೊಳಲ್ಕೆರೆ.

ಕೊಣ್ಣೂರ ಮರಡೀಮಠದ ಯಾತ್ರಾಸಮಾರಂಭವು.

ಪದ್ಧತಿಯಂತೆ ಇದೇ ರಕ್ತಾಕ್ಷಿ ಸಂವತ್ಸರದ ಚೈ|| ಶು|| ೧೫ ಶನಿವಾರ ಮೊದಲ್ಗೊಂಡು ಬೆಳಗಾಂವಿ ಜಿಲ್ಲಾ ಗೋಕಾಕ ತಾಲ್ಲೂಕ ಪೈಕಿ ಕೊಣ್ಣೂರ ಮಠದ ಯಾತ್ರಾಸಮಾರಂಭವು ಒಳ್ಳೇ ವಿಜೃಂಭಣೆಯಿಂದಲೂ ಉತ್ಸಾಹದಿಂದಲೂ ಜರಗಿತು. ಯಾತ್ರೆಗೆ ಸುಮಾರು 30 ಸಾವಿರಕ್ಕೆ ಕಡಿಮೆ ಇಲ್ಲದಷ್ಟು ಜನವು ಸೇರಿತ್ತು. ಪಂಡಿತರೂ, ಸಂಗೀತಗವಾಯಿಗಳೂ, ಕರಡಿ ಹಲಗಿ ಸಂಮ್ಮೇಳ ಸುನಾದಿ ಮುಂತಾದ ವಾದ್ಯಗಳನ್ನು ಬಾರಿಸುವ ಕಲಾಕುಶಲರೂ, ನೀರಿನಲ್ಲಿ ಈಸುವ ಸೈಕಲ್ ನಡಿಸುವ ಮತ್ತು ಓಡುವ ಕುಸ್ತಿ ಆಡುವ ಮುಂತಾದ ಅಂಗಸಾಧಕರೂ ಪ್ರತಿವರ್ಷಕ್ಕಿಂತಲೂ ಈ ವರ್ಷ ಹೆಚ್ಚಾಗಿ ಸೇರಿದ್ದರು. ಇವರಲ್ಲಿ ಧಾರವಾಡದ ರಾ|| ಬಾ|| ಕಿತ್ತೂರ ಸಾಹೇಬರು, ಮ|| ರಾ|| ಶೆಟ್ಟಿ ಮಾಸ್ತರರೂ ಉಜ್ಜಯನಿ ಜಗದ್ಗುರು ಸಂಸ್ಥಾನದ ಆಸ್ಥಾನಪಂಡಿತರಾದ ಉಮಚಗಿ ಪಂ|| ಶಂಕರಶಾಸ್ತ್ರಿಗಳು, ವೇ|| ದ್ಯಾಮಾಪುರದ ಬಸವಲಿಂಗಶಾಸ್ತ್ರಿಗಳೂ ಶಿವಯೋಗಮಂದಿರದ ಪಂಚಾಕ್ಷರಿ ಗವಾಯಿಗಳು ಇವರೇ ಮೊದಲಾದ ಪ್ರಮುಖ ವಿದ್ವಾಂಸರು ಬಂದಿದ್ದರಿಂದ ಯಾತ್ರೆಗೆ ಮತ್ತಿಷ್ಟು ಕಳೆತುಂಬಿದಂತಾಗಿತ್ತು. ಪದ್ಧತಿಯಂತೆ ಚೈ|| ಶು|| ೧೫ ಶನಿವಾರ ಪ್ರಾತಃಕಾಲಕ್ಕೆ ಶ್ರೀ ಕಾಡಸಿದ್ಧೇಶ್ವರ ಕರ್ತೃವಿನ ಪಲ್ಲಕ್ಕಿ ಉತ್ಸವವು ಕೊಣ್ಣೂರಿಂದ ಮರಡೀಮಠಕ್ಕೆ ಬಂದನಂತರ ಮಹಾದಾಸೋಹಕ್ಕೆ ಪ್ರಾರಂಭವಾಯಿತು. ಆ ದಿವಸದ ಅನ್ನಸಂತರ್ಪಣೆಗೆ ಸುಮಾರು 50 ಸಾವಿರ ಜನರು ಕೂಡಿರಬಹುದು. ಅದೇ ದಿವಸ ಮಧ್ಯಾಹ್ನ ನಾಲ್ಕು ಗಂಟೆಗೆ ಉಮಚಗಿ ಪಂ|| ಶಂಕರಶಾಸ್ತ್ರಿಗಳೇ ಮುಂತಾದ ಕೆಲವು ಶಾಸ್ತ್ರಿಗಳಿಂದ ಮಠದ ಸಂಸ್ಕೃತ ಪಾಠಶಾಲೆಯ ಪರೀಕ್ಷೆಯು ತೆಗೆದುಕೊಳ್ಳಲ್ಪಟ್ಟಿತು. ಎಲ್ಲ ವಿದ್ಯಾರ್ಥಿಗಳ ಅಭ್ಯಾಸಕ್ರಮವು ಚನ್ನಾಗಿದ್ದು ಅಧ್ಯಾಪಕರಾದ ವೇ|| ಪಂ|| ಸದಾಶಿವಶಾಸ್ತ್ರಿಗಳ ಶಿಕ್ಷಣ ಪರಿಶ್ರಮವನ್ನು ವ್ಯಕ್ತಗೊಳಿಸುವಂಥಾದ್ದಾಗಿತ್ತು. ಮರುದಿವಸ ಅಂದರೆ ಚೈ|| ಬ|| ೧ ರವಿವಾರ ದಿವಸ ಪುನಃ ಪಲ್ಲಕ್ಕಿಯುತ್ಸವವು ವಾದ್ಯವೈಭವ ಸಿಬ್ಬಂದಿಯೊಂದಿಗೆ ಮರಡೀಮಠದಿಂದ ಪಾದಗಟ್ಟಿಯವರೆಗೂ ಹೋಗಿ ಪುನಃ ಮಠಕ್ಕೆ ಬಂದಿತು. ಆ ನಂತರ ಉಮಚಗಿ ಪಂ|| ಶಂಕರಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆಗೆ ಪ್ರಾರಂಭವಾಯಿತು. ಧರ್ಮ ಅಹಿಂಸಾ ಬ್ರಹ್ಮಚರ್ಯ ಸತ್ಯ ವ್ರತನಿಷ್ಠೆಗಳ ಅವಶ್ಯಕತೆ ಇತ್ಯಾದಿ ವಿಷಯಗಳ ಮೇಲೆ ಪಾಠಶಾಲಾ ವಿದ್ಯಾರ್ಥಿಗಳಾದ ವಾಮದೇವ, ಫಾಲಾಕ್ಷ, ಮತ್ತು ವೇ|| ಬಸವರಾಜಶಾಸ್ತ್ರಿಗಳ ವೇ|| ಶ್ರೀಶೈಲನಾಥಶಾಸ್ತ್ರಿ ದೇಶನೂರ ವೇ|| ವೀರಭದ್ರಶಾಸ್ತ್ರಿ ಕೊಂಗವಾಡ ಸಂಪಗಾವಿ ಶ್ರೀ ಚರಮೂರ್ತಿಗಳ ವ್ಯಾಖ್ಯಾನಗಳು ಜರಗಿ ಭೋಜನದ ಸಮಯವಾದ್ದರಿಂದ ಆ ದಿವಸ ಸಭಾಕಾರ್ಯವು ಅಷ್ಟಕ್ಕೆ ಬಂದು ಇಡಲ್ಪಟ್ಟಿತು. ಮಧ್ಯಾಹ್ನದಿಂದ ಸುಪ್ರಸಿದ್ಧ ಪೈಲವಾನರ ಕುಸ್ತಿಗಳು ೨-೩ ದಿವಸಗಳ ವರೆಗೆ ಜರಗಿ ಅವರವರ ಯೋಗ್ಯತೆಯಂತೆ ಪಾರಿತೋಷಿಕಗಳು ಹಂಚಲ್ಪಟ್ಟವು. ಮತ್ತು ಅದೇ ರವಿವಾರ ಸಾಯಂಕಾಲ ೭ ಗಂಟೆಗೆ ಸುಪ್ರಸಿದ್ಧ ಕೀರ್ತನಕಾರರಾದ ದ್ಯಾಮಾಪುರದ ಬಸವಲಿಂಗಶಾಸ್ತ್ರಿಗಳ ಕೀರ್ತನವು ಪಂಚಾಕ್ಷರಿ ಗವಾಯಿಗಳ ಗಾನದೊಡನೆ ಒಳ್ಳೇ ರಸವತ್ತಾಗಿ ನಡೆಯಿತು. ಕೀರ್ತನದಲ್ಲಿ ಸದರೀ ಗವಾಯಿಗಳ ಗಾಯನ ಪ್ರಾರಂಭವಾದರೆ ಕಡೆವರೆಗೆ ಗಾಯನವೇ ಸಾಗಲೆಂದೂ ಆ ನಂತರ ಬಸವಲಿಂಗಶಾಸ್ತ್ರಿಗಳ ಪರಿಶುದ್ಧವಾಣಿಯಿಂದ ಕಥಾ ಹೇಳುವಿಕೆಯು ಪ್ರಾರಂಭವಾದರೆ ಆ ರಸವತ್ತಾದ ವಾಣಿಯೇ ಸಾಗಲೆಂದೂ ಹೀಗೆ ಶ್ರೋತೃಗಳು ಎರಡು ಮೂರು ಗಂಟೆಗಳ ವರೆಗೆ ತಮ್ಮ ಚಿತ್ತದ ಸ್ಥಿರತ್ವವನ್ನು ಸಹ ಕಾಯ್ದುಕೊಳ್ಳಲು ಅಸಮರ್ಥರಾದರು. ರಾತ್ರಿ ಹತ್ತು ಗಂಟೆಗೆ ಕೀರ್ತನವು ಮುಗಿದು ಅದೇ ಸ್ಥಾನದಲ್ಲಿ ಹನ್ನೊಂದು ಗಂಟೆಗೆ ಮೈಸೂರು ಆಸ್ಥಾನ ವಿದ್ವಾನರಾದ ಬಿ. ರಾಚಪ್ಪನವರ ಸಂಗೀತಕಚೇರಿಯು ಸುಬ್ಬಯ್ಯ ಸನ್ಯಾಸಿಗಳ ಪಿಟೀಲವಾದ್ಯದೊಡನೆ ಜರಗಿಸಲ್ಪಟ್ಟಿತು. ಬ|| ೨ ಸೋಮವಾರ ಪ್ರಾತಃಕಾಲಕ್ಕೆ ಓಡುವ ಸೈಕಲ್ ನಡೆಸುವ ನದಿಯಲ್ಲಿ ಈಸುವ ಪಂದ್ಯಗಳು ಜರಗಿ ಉತ್ತೀರ್ಣರಾದವರಿಗೆ ನಿರ್ಣಯಿಸಲ್ಪಟ್ಟ ಪಾರಿತೋಷಿಕಗಳು ಹಂಚಲ್ಪಟ್ಟವು. ಅನಂತರ ಮಧ್ಯಾಹ್ನಕ್ಕೆ ಕೆಲವು ಸುನಾದಿಗಾರರ ಬಾರಿಸುವಿಕೆಯು ನಡೆದು ಸಾಯಂಕಾಲಕ್ಕೆ ಪುನಃ ಪಂ|| ಶಂಕರಶಾಸ್ತ್ರಿಗಳ ಅಧ್ಯಕ್ಷತೆಯ ಕೆಳಗೆ ಸಭೆಯು ಕೂಡಿತು. ಆ ಕಾಲಕ್ಕೆ ಸಂಪಗಾವಿ ಚರವರ್ಯರ ಮತ್ತು ಶೆಟ್ಟಿ ಮಾಸ್ತರರ ವ್ಯಾಖ್ಯಾನಗಳು ಒಳ್ಳೇ ಹೃದಯಂಗಮವಾಗಿ ಜರಗಿದವು. ಆ ವೇಳೆ ಅಧ್ಯಕ್ಷರ ಸಮಾರೋಪದ ಭಾಷಣವಾಗಿ ಆಭಾರ ಪ್ರದರ್ಶನವಾದ ನಂತರ ಸಭಾಕಾರ್ಯವು ಮುಗಿಸಲ್ಪಟ್ಟಿತು. ಮರುದಿವಸ ಅಂದರೆ ಬ|| ೩ ಮಂಗಳವಾರ ಬೇಗ್ಗೆ ಆನೆಯಂತೆ ಪುಷ್ಟಗಳಾಗಿ ಬೆಳೆದ ಎತ್ತುಗಳ ಕಲ್ಲುಎಳೆಯುವಿಕೆಯೇ ಮುಂತಾದ ಜಾನುವಾರುಗಳ ಪ್ರದರ್ಶನವಾಗಿ ಪಾರಿತೋಷಿಕಗಳು ಹಂಚಲ್ಪಟ್ಟವು. ಮಧ್ಯಾಹ್ನಕ್ಕೆ ಯಾತ್ರೆಗೆ ಬಂದ ಸಕಲ ಪಂಡಿತರಿಗೂ ಅಂಗಸಾಧಕರಿಗೂ ಕಲಾಕುಶಲರಿಗೂ ಉಚಿತ ಮರ್ಯಾದೆಗಳು ಕೊಡಲ್ಪಟ್ಟನಂತರ ಯಾತ್ರಾ ಕೆಲಸವು ಸಾಂಗಗೊಳಿಸಲ್ಪಟ್ಟಿತು. ವಾಚಕರೇ ನಾಲ್ಕು ವರ್ಷಗಳಹಿಂದೆ ಪ್ರಾರಂಭಿಸಲ್ಪಟ್ಟ ಈ ಮರಡೀಮಠದ ಯಾತ್ರೆಯು ಇಷ್ಟೊಂದು ಭರಭರಾಟಿಯಿಂದ ನಿರುತ್ತಾ ಸದ್ಯಕ್ಕೆ ಅಖಿಲ ಕರ್ನಾಟಕಕ್ಕಲ್ಲದೆ ಇತರ ಪ್ರಾಂತಗಳಿಗೂ ಕೂಡ ಮಾದರೀ ರೂಪವುಳ್ಳದ್ದಾಗಲಿಕ್ಕೆ ಮರಡೀಮಠದ ಈಗಿನ ಚಿಕ್ಕ ವಯಸ್ಸಿನವರಾದ ಶ್ರೀ ಪಟ್ಟಾಧ್ಯಕ್ಷ ಸ್ವಾಮಿಗಳಲ್ಲಿ ನೆಲೆಗೊಂಡಿರುವ ಶಾಂತಿ ಸದ್ಗುಣಗಳು, ಕಾರ್ಯೋತ್ಸಾಹಾದಿ ಚಟುವಟಿಕೆಗಳು, ಸಮಾಜಕಳಕಳಿಯು, ವಿದ್ಯಾಪಕ್ಷಪಾತವು ಮುಂತಾದ ಅನೇಕ ಸದ್ಗುಣಗಳು ಕಾರಣವಾಗಿರುತ್ತವೆ. ನಮ್ಮ ಸಮಾಜದಲ್ಲಿ ಸಾವಿರಗಟ್ಟಲೆ ಗುರುಗಳು ಉದಯಿಸುವದಕ್ಕಿಂತಲೂ ಈಶ್ವರನು ವೀರಶೈವ ಜಗತ್ತಿನ ನಾಲ್ಕು ದಿಕ್ಕುಗಳಿಗೆ ನಾಲ್ಕು ಸಂಖ್ಯಾಕರಾದ ಇಂಥ ಪವಿತ್ರ ವಿಭೂತಿಗಳನ್ನು ಪೂರ್ಣ ಆಯುಷ್ಯವುಳ್ಳವರನ್ನಾಗಿ ಹುಟ್ಟಿಸಿದರೆ ನಮ್ಮ ಸಮಾಜವು ಕ್ಷಿಪ್ರದಲ್ಲಿಯೇ ಉದ್ಧಾರವಾದೀತೆಂದು ನಂಬುತ್ತೇನೆ.

ಪ್ರತ್ಯಕ್ಷದರ್ಶಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦ ; ಅನಂತರ ಪ್ರತಿ ೧೦೦ಕ್ಕೂ ೦—೧೨—೦ ; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦ ಕ್ಕೂ ೦—೧೨—೦ ; ಬಿಳಿಗ್ಲೇಜ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸ ಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳಪ್ಪ, ಊದಬತ್ತಿ ಷಾಪ್,
12 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

APPLY FOR
SCORPION CURE.
M.S.SIDDAPPA BROS.
MYSORE.

ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8.0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50 — 32] ಮೈಸೂರು.

೧೯೨೪ ನೆಯ ಇಸವಿ ಮೇ ತಾ|| ೪ ರಿಂದ ೧೯೨೪ ನೆಯ ಇಸವಿ ಮೇ ತಾ|| ೧೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ವೈಶಾಖ ಶುದ್ಧ ಪಾಡ್ಯಮಿಯಿಂದ ವೈಶಾಖ ಶುದ್ಧ ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
4	ಭಾನು	ಪಾಡ್ಯ	55-56	ಭರ	22-37	22
5	ಸೋಮ	ಬಿದಿ	60	ಕೃತ್ತಿ	28-27	23
6	[1] ಮಂಗಳ	ಬಿದಿ	1-16	ರೋಹಿ	33-39	24
7	[2] ಬುಧ	ತದಿ	6-20	ಮೃಗ	42-3	25
8	ಗುರು	ಚೌತಿ	11-2	ಆರ್ದ್ರಾ	47-58	26
9	[3] ಶುಕ್ರ	ಪಂಚ	15-0	ಪುನ	52-58	27
10	ಶನಿ	ಷಷ್ಠಿ	17-50	ಪುಷ್ಯ	56-50	28

(1) ಶ್ರೀ ಬಸವೇಶ್ವರಜಯಂತಿ, ಅಕ್ಷಯತೃತೀಯ, ಪರಶುರಾಮ ಜಯಂತಿ. (2) ವಾರ್ತಾಳಗೌರೀವ್ರತಂ. (3) ಲಾವಣ್ಯಗೌರೀವ್ರತಂ, ಶಂಕರಜಯಂತಿ.

ಮೈಸೂರು : ಪೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M. 12

ಮೈಸೂರು ಸ್ಟಾರ್

ಪ್ರತಿ ಭಾನು[illegible] ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಾ | ಘನಪಥಕೃತಾವಕಾರಾ ಪಶ್ಯಜ್ಜ ನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ ಸುಧೀಸಂಗತ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತ ಮಾಲಾಕುಲಂ | ಪ್ರೇಮಂಚೇತ್ತಿಯಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಮೇ ತಾರೀಖು ೧೧ ನೆಯ ಭಾನುವಾರ. [ಸಂಚಿಕೆ ೧೯

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು.
ಲೋಕಾನುಮತರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವೆ,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನು ಅನೇಕ ರೋಗಗಳನ್ನು ಗುಣಪಡಿಸುತ್ತವೆ.
ಇಂಫ್ಲುಯೆಂಜಾ	
ಪ್ಲೇಗುಜ್ವರ	

ಗೋಷ್ಪಾಸ್ತ್ರೀಯರಿಗೂ ತುಳಿತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟಿದ, ಹೊಟ್ಟೆಯುಬ್ಬರಿಸದ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.

ಚಿಕ್ಕಸೀಸೆ 8 ಆಣೆ. ದೊಡ್ಡ ಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
14 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—36] ಪೋ. ಬಾ. ೫೧೦, ಮದರಾಸು.

4 ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗತಾನೆ ೪ನೆ ಮುದ್ರವು ಅಚ್ಚಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ಸಂತೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—3] ಕೆಂಗಾಪುರ, ಅರಕಲಗೂಡು ತಾಲ್ಲೋಕು, ಹಾಸನ ಡಿ||

ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಉತ್ತಮವಾದ ವೀರಶೈವ ಮತಗ್ರಂಥಗಳು.

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಪ್ರ. ಸ್ವ. ಸಹಿತ)	೦—೪—೦
ಶ್ರುತಿಸಾರಭಾಷ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—22] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.	ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ. ವಜ್ರಾಂಗಸುಂದರಪಾಕ.	ಧಿಕ್ಕಾರ ಮಾಡಿದರೆ ಕುತ್ತ್ತರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರೀಬಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶವಾಡಿದ ಕೂಡಲೆ ಧಾತು ಬಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡೆವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುಬಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮಧುಮೇಹ ಹಳೆಯ ಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಿಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಶಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಋತುಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೋಷ್ಟಿಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ಸಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಕಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತಿನಪುರುಷ, ರೂಮಾಮಸ್ತಕ, ಕಮರಕಸ, ಕಥಲ್ಯಾಗೊಂದ, ಪಂಜಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ. ಬೀಜಬಂಧ, ಚಿಗಂಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ನಾರೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯಯಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣತ್ವರೆಮಾಡಿರಿ.

ಕಾಗದ ಬರಿಯತಕ್ಕವರು ತಮ್ಮ ಪೂರ್ಣ ಅಡ್ರೆಸ್ ಮೊಕ್ಕಾಂ ಪೋಸ್ಟ ಸಹ ಬರೆಯಿರಿ.

[50—39] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ.	೧—೦—೦
ಕೇನೋಪನಿಷತ್ ಶಾಂಕರೀ	ರೂ.	೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ.	೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಿಗಿ.

ಗ್ರಂಥಸಿಕ್ಕುವಸ್ಥಲ :—
ಹೊಸಮಠದ ಚನ್ನಯ್ಯನವರು ಹರಿಹರ,
24—5 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿ
[50—17] ಅಂಡ್ ಸನ್ಸ್, ಜಿ.ಪಿ. ಮಂಡಲಿ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—38] [illegible]

ಬಾಳೆಹೊನ್ನೂರು ಮಠದ ಪೀಠಾಧಿಕಾರ.

(ವೀರಶೈವರು ಅವಶ್ಯ ಗಮನಿಸತಕ್ಕದ್ದು.)

ಮೇಲ್ಕಂಡ ಶ್ರೀಮದ್ರಂಭಾಪುರಿ ಪೀಠಾಧಿಕಾರಕ್ಕೆ ಶ್ರೀ ಕೊಣ್ಣೂರ ಶ್ರೀಗಳವರನ್ನು ಪಟ್ಟಾಧಿಕಾರ ಮಾಡಬೇಕೆಂಬ ಅಂಶವು ನಿಮ್ಮ ಪತ್ರಿಕೆಯಲ್ಲಿ ಪ್ರಕಟಪಡಿಸಿದ್ದು ಸರಿಯಷ್ಟೆ. ಅದರಂತೆ ಅವರಿಗೇನೇ ಪಟ್ಟಾಧಿಕಾರವಾಗುವದೆಂತ ವೀರಶೈವ ಜನಾಂಗದವರೆಲ್ಲಾ ಬಹಳ ಸಂತೋಷಚಿತ್ತರಾಗಿದ್ದರು. ತನ್ಮಧ್ಯೆ ಈ ಪೀಠಾಧಿಕಾರ ಮಾಡುವದಕ್ಕೆ ಬದ್ಧಕಂಕಣರಾಗಿದ್ದ ಯಡೆಹಳ್ಳಿ ಶಾಂತಪ್ಪಶೆಟ್ಟರು ತಮಗೆ ದೇಹಾಲಸ್ಯವಾಗಿರುವದರಿಂದ ಕೆಲವು ದಿವಸಗಳ ಪುರಸತ್ತುಕೊಡಿಸಬೇಕಾಗಿ ಸುಳ್ಳು ಲೇಖನಗಳನ್ನು ಬರಿಯುತ್ತಾಯಿದ್ದು ಸದರಿ ಸ್ವಾಮಿಗಳವರನ್ನ ತಾವೇ ನೋಡಿಕೊಂಡು ಬಂದವರಾದಾಗ್ಯೂ ತಮ್ಮ ಪರವಾದ ಮಠಿಗಳ ಪಟ್ಟಾಧಿಕಾರಕ್ಕೆ ಅವಕಾಶವಾಗಲಿಲ್ಲವಲ್ಲಾ ನಾನು ಹಿಡಿದಪಟ್ಟು ತಪ್ಪಿಹೋಯಿತಲ್ಲಾ ಎಂದು ಸಂಕುಚಿತಮನಸ್ಸುಳ್ಳವರಾಗಿ ಒಳೊಳಗೇನೆ ಕೆಲಸಕ್ಕೆ ಬಾರದ ಕೆಲವು ಕಂಠಿಲುವಳಿಕೆ ಜನಗಳ ಕೈಯಿಂದ ಸದರಿ ಕೊಣ್ಣೂರ ಶ್ರೀಗಳವರನ್ನು ಪಟ್ಟಾಧಿಕಾರಮಾಡುವದಕ್ಕೆ ಆರ್ಡರು ಕೊಡಕೂಡದಾಗಿ ಬಾಳೆಹೊನ್ನೂರ ಸಂಸ್ಥಾನ ಮಠದಲ್ಲಿ ಮೀಟಿಂಗು ನಡಿಸಿ ಚುನಾವಣೆಮಾಡಿ ಓಟು ತೆಗೆಯಿಸಬೇಕಾಗಿ ಏಜಂಟ್ ರುದ್ರಾರಾಧ್ಯರಿಂದ ಮುಜರಾಯಿ ಕಮಿಷನರವರಲ್ಲಿ ಅರ್ಜಿ ಕೊಡಿಸಿ ಅದರಂತೆ ಆರ್ಡರ್‌ಮಾಡಿಸಲು ಪ್ರಯತ್ನಪಟ್ಟು ಅದು ಹೊರಬೀಳಲು ಪುನಃ ಹನ್ನೆರಡು ಜನ ಕಮಿಟಿ ಮೆಂಬರುಗಳನ್ನು ಚುನಾಯಿಸಿ ಅವರ ಮೂಲಕ ಮಠಿಗಳನ್ನು ಪುನಃ ಚುನಾಯಿಸಬೇಕಾಗಿ ಠರಾವು ಮಾಡಿಕೊಂಡಿರುವದಾಗಿ ಕೇಳುತ್ತೇನೆ. ಕೊಣ್ಣೂರು ಶ್ರೀಗಳವರನ್ನು ಚುನಾಯಿಸಲು ಕೇವಲ ಮುಖ್ಯ ಮನುಷ್ಯರಾಗಿರುವ ದಿವಾನ್ ಬಹದ್ದೂರ ಕೆ.ಪಿ ಪುಟ್ಟಣ್ಣಶೆಟ್ಟರವರ ರೂಬುರೂಬು ಠರಾವು ಮಾಡಲ್ಪಟ್ಟು ಸದರಿ ಶ್ರೀಗಳವರನ್ನು ನೋಡಿ ಅವರ ಅನುಮತಿಯನ್ನು ಪಡದುಕೊಂಡು ಬರಲು ಸಮಾಜಬಾಂಧವರಿಂದ ಚುನಾಯಿಸಲ್ಪಟ್ಟ ನಾಲ್ಕು ಜನ ದೊಡ್ಡ ಮನುಷ್ಯರು ಹೋಗಿ ಅವರ ಅನುಮತಿ ಪಡದುಕೊಂಡುಬಂದು ತಮ್ಮ ಪತ್ರಿಕೆಯಲ್ಲಿಯೇ ಸದರಿ ವಿಷಯಗಳೆಲ್ಲಾ ಪ್ರಕಟಪಡಿಸಲ್ಪಟ್ಟು ಎಲ್ಲಾ ಸಮಾಜಬಾಂಧವರು ಒಳ್ಳೇ ಸದ್ವಂಶದಲ್ಲಿ ಜನಿಸಿದವರೂ ಸಮಾಜ ಹಿತೈಷಿಗಳೂ ಕಾರ್ಯದಕ್ಷರೂ ಜಿತೇಂದ್ರಿಯರೂ, ವಿದ್ಯಾವಂತರೂ ಆದವರು ಮಹಾಸಂಸ್ಥಾನ ಪೀಠಕ್ಕೆ ಸಿಕ್ಕಿದರೆಂಬ ಬರವಸೆಯಿಂದ ಸಂತೋಷಚಿತ್ತರಾಗಿದ್ದರು. ಆದರೆ ಸದರಿ ಸಂಸ್ಥಾನದ ದುರ್ದೈವವನ್ನು ನಾವು ಎಷ್ಟು ಹೇಳಿದರೂ ಸ್ವಲ್ಪವೇಯಿರುತ್ತೆ. ಮ|| ಪುಟ್ಟಣ್ಣಶೆಟ್ಟರವರು ಕೂಡಾ ತಮ್ಮ ರೂಬುರೂಬು ನಡೆದ ವಿಚಾರವನ್ನ ಗಮನಕ್ಕೆ ತಂದುಕೊಳ್ಳದೆ ಬೇರೆತರಹ ಮನಸ್ಸು ಮಾಡಿದರೆ ಇನ್ನು ಉಳಿದವರ ಪಾಡೇನೆಂಬುವದನ್ನು ಸಮಾಜಬಾಂಧವರು ಯೋಚಿಸತಕ್ಕದ್ದಾಗಿರುತ್ತೆ. ಉಜ್ಜನಿ ಶ್ರೀಗಳವರು ಅವರನ್ನು ಪಟ್ಟಾಧಿಕಾರ ಮಾಡಕೂಡದೆಂತಾ ಗಲಭೆಮಾಡುವದಕ್ಕೆ ಪ್ರಯತ್ನಪಟ್ಟಾಗ ಸಮಾಜಬಾಂಧವರ ಅಭಿಪ್ರಾಯಕ್ಕೆ ಶ್ರೀಗಳು ವಿರೋಧವಾಗಿ ಹೋಗುವದು ಅಪಾಯಕ್ಕೆ ಕಾರಣವಾಗುತ್ತಾದ್ದರಿಂದ ಒಪ್ಪಿಗೆಕೊಟ್ಟು ಸದರಿ ಪಟ್ಟಾಧಿಕಾರವಾಗುವದಕ್ಕೆ ಅವರ ಅನುಜ್ಞೆಯನ್ನ ಕೊಡಬೇಕಾಗಿ ಮ|| ಪುಟ್ಟಣ್ಣಶೆಟ್ಟರೇ ಕಾಗದ ಬರದಿರಲಿಲ್ಲವೇ? ಸದರಿ ಶ್ರೀಗಳವರು ಚರಪಟ್ಟಾಧಿಕಾರವನ್ನು ಸ್ಥಿರಪಟ್ಟಾಧಿಕಾರವನ್ನು ಎರಡನ್ನೂ ಮಾಡಬೇಕಾಗಿ ಸೂಚಿಸಿದ್ದಕ್ಕೆ ಮ|| ಪುಟ್ಟಣ್ಣಶೆಟ್ಟರೇ ಸ್ಥಿರಪಟ್ಟ ಒಂದನ್ನೇ ಮಾಡಬೇಕಾಗಿ ಖಂಡಿತವಾದ ಅಭಿಪ್ರಾಯಕೊಟ್ಟಿದ್ದಕ್ಕೆ ಸದರಿ ಶ್ರೀಗಳವರು ಒಪ್ಪಿಗೆ ಕೊಡಲಿಲ್ಲವೇ? ಹೀಗೆ ಸರ್ವಸಮ್ಮತವಾದ ಕೊಣ್ಣೂರು ಶ್ರೀಗಳವರನ್ನುಪಟ್ಟಮಾಡಬೇಕೆಂಬ ಇರಾದೆ ಬಹುಜನಗಳಿಗೆ ಇರುವಲ್ಲಿ, ಮೇಲ್ಕಂಡಂತೆ ದೊಡ್ಡದೊಡ್ಡ ಮನುಷ್ಯರುಗಳೇ ಮಾತಿಗೆ ತಪ್ಪಿ ಬದಲಾಯಿಸುತ್ತಾ ಇದ್ದರೆ ಇದರ ಪರ್ಯವಸಾನವೆಲ್ಲಿಗೆ ಎಂಬುವದು ಸಮಾಜಬಾಂಧವರಿಗೆ ಗೊತ್ತಾಗುವದಿಲ್ಲ. ಈಗಲೂ ಮ|| ದಿವಾನ್‌ಬಹದ್ದೂರ್ ಕೆ. ಪಿ. ಪುಟ್ಟಣ್ಣಸೆಟ್ಟರವರು ತಮ್ಮ ಅಭಿಪ್ರಾಯಾನುಸಾರ ನಡೆದ ವಿಚಾರವನ್ನು ಮನಸ್ಸಿನಲ್ಲಿ ತಂದುಕೊಂಡು ಸದರಿ ಕೊಣ್ಣೂರ ಶ್ರೀಗಳವರನ್ನು ಪಟ್ಟಾಧಿಕಾರಮಾಡುವದಕ್ಕೆ ಏರ್ಪಾಡು ಮಾಡಿದರೆ ಅವರಿಗೆ ಕೀರ್ತಿಯುಂಟಾಗುವಲ್ಲಿ ಸಂದೇಹವಿಲ್ಲ. ಸಮಾಜಬಾಂಧವರೆ, ನೀವು ಕೊಣ್ಣೂರು ಶ್ರೀಗಳವರಿಗೆ ಪಟ್ಟಾಧಿಕಾರವಾಗುತ್ತೆಂತ ತಿಳಿದು ಮೌನವಾಗಿದ್ದೀರಿ. ಮ|| ಶಾಂತಪ್ಪಶೆಟ್ಟರು ಒಳವಳಗೆ ಏನೇನೋ ಕೃತ್ರಿಮಗಳನ್ನು ನಡಿಸಿ ಈ ಕಾರ್ಯವಿಘಾತಕ್ಕೆ ಪ್ರಯತ್ನಪಟ್ಟಿದ್ದಾರೆಂಬುವದನ್ನು ಕಣ್ಣುತೆರೆದು ನೋಡಿ ಸದರೀ ಪೀಠಾಧಿಕಾರಕ್ಕೆ ಕೊಣ್ಣೂರ ಶ್ರೀಗಳವರನ್ನ ಪ್ರಯತ್ನಪೂರ್ವಕವಾಗಿ ಪಟ್ಟಾಧಿಕಾರಿಗಳನ್ನಾಗಿ ಮಾಡಿಕೊಳ್ಳುವದರ ಮೂಲಕ ನಿಮ್ಮ ಸಮಾಜದ ಶ್ರೇಯಸ್ಸನ್ನುಂಟುಮಾಡಿಕೊಳ್ಳಿ. ಆಲಸಮೃತಂವಿಷಂ ಎನ್ನುವಂತೆ ಸುಮ್ಮನೆ ಕೂತು ಮ|| ಶಾಂತಪ್ಪಶೆಟ್ಟರ ಪ್ರಯತ್ನಕ್ಕೆ ಅವಕಾಶಕೊಡಬೇಡಿ. ಸಮಾಜವು ಊರ್ಜಿತಸ್ಥಿತಿಗೆ ಬರುವಂತೆ ಪ್ರಯತ್ನಶೀಲರಾಗಿರೆಂದು ಪ್ರಾರ್ಥಿಸುತ್ತೇನೆ.

ಎಂ. ಮಹದೇವಯ್ಯ, ಹೊಳಲ್ಕೆರೆ.

ಕೊಣ್ಣೂರ ಮರಡೀಮಠದ ಯಾತ್ರಾಸಮಾರಂಭವು.

ಪದ್ಧತಿಯಂತೆ ಇದೇ ರಕ್ತಾಕ್ಷಿ ಸಂವತ್ಸರದ ಚೈ|| ಶು|| ೧೫ ಶನಿವಾರ ಮೊದಲ್ಗೊಂಡು ಬೆಳಗಾಂವಿ ಜಿಲ್ಲಾ ಗೋಕಾಕ ತಾಲ್ಲೂಕ ಪೈಕಿ ಕೊಣ್ಣೂರ ಮಠದ ಯಾತ್ರಾಸಮಾರಂಭವು ಒಳ್ಳೇ ವಿಜೃಂಭಣೆಯಿಂದಲೂ ಉತ್ಸಾಹದಿಂದಲೂ ಜರಗಿತು. ಯಾತ್ರೆಗೆ ಸುಮಾರು 30 ಸಾವಿರಕ್ಕೆ ಕಡಿಮೆ ಇಲ್ಲದಷ್ಟು ಜನವು ಸೇರಿತ್ತು. ಪಂಡಿತರೂ, ಸಂಗೀತಗವಾಯಿಗಳೂ, ಕರಡಿ ಹಲಗಿ ಸಂಮ್ಮೇಳ ಸುನಾದಿ ಮುಂತಾದ ವಾದ್ಯಗಳನ್ನು ಬಾರಿಸುವ ಕಲಾಕುಶಲರೂ, ನೀರಿನಲ್ಲಿ ಈಸುವ ಸೈಕಲ್ ನಡಿಸುವ ಮತ್ತು ಓಡುವ ಕುಸ್ತಿ ಆಡುವ ಮುಂತಾದ ಅಂಗಸಾಧಕರೂ ಪ್ರತಿವರ್ಷಕ್ಕಿಂತಲೂ ಈ ವರ್ಷ ಹೆಚ್ಚಾಗಿ ಸೇರಿದ್ದರು. ಇವರಲ್ಲಿ ಧಾರವಾಡದ ರಾ|| ಬಾ|| ಕಿತ್ತೂರ ಸಾಹೇಬರು, ಮ|| ರಾ|| ಶೆಟ್ಟಿ ಮಾಸ್ತರರೂ ಉಜ್ಜಯನಿ ಜಗದ್ಗುರು ಸಂಸ್ಥಾನದ ಆಸ್ಥಾನಪಂಡಿತರಾದ ಉಮಚಗಿ ಪಂ|| ಶಂಕರಶಾಸ್ತ್ರಿಗಳು, ವೇ|| ದ್ಯಾಮಾಪುರದ ಬಸವಲಿಂಗಶಾಸ್ತ್ರಿಗಳೂ ಶಿವಯೋಗಮಂದಿರದ ಪಂಚಾಕ್ಷರಿ ಗವಾಯಿಗಳು ಇವರೇ ಮೊದಲಾದ ಪ್ರಮುಖ ವಿದ್ವಾಂಸರು ಬಂದಿದ್ದರಿಂದ ಯಾತ್ರೆಗೆ ಮತ್ತಿಷ್ಟು ಕಳೆತುಂಬಿದಂತಾಗಿತ್ತು. ಪದ್ಧತಿಯಂತೆ ಚೈ|| ಶು|| ೧೫ ಶನಿವಾರ ಪ್ರಾತಃಕಾಲಕ್ಕೆ ಶ್ರೀ ಕಾಡಸಿದ್ಧೇಶ್ವರ ಕರ್ತೃವಿನ ಪಲ್ಲಕ್ಕಿ ಉತ್ಸವವು ಕೊಣ್ಣೂರಿಂದ ಮರಡೀಮಠಕ್ಕೆ ಬಂದನಂತರ ಮಹಾದಾಸೋಹಕ್ಕೆ ಪ್ರಾರಂಭವಾಯಿತು. ಆ ದಿವಸದ ಅನ್ನಸಂತರ್ಪಣೆಗೆ ಸುಮಾರು 50 ಸಾವಿರ ಜನರು ಕೂಡಿರಬಹುದು. ಅದೇ ದಿವಸ ಮಧ್ಯಾಹ್ನ ನಾಲ್ಕು ಗಂಟೆಗೆ ಉಮಚಗಿ ಪಂ|| ಶಂಕರಶಾಸ್ತ್ರಿಗಳೇ ಮುಂತಾದ ಕೆಲವು ಶಾಸ್ತ್ರಿಗಳಿಂದ ಮಠದ ಸಂಸ್ಕೃತ ಪಾಠಶಾಲೆಯ ಪರೀಕ್ಷೆಯು ತೆಗೆದುಕೊಳ್ಳಲ್ಪಟ್ಟಿತು. ಎಲ್ಲ ವಿದ್ಯಾರ್ಥಿಗಳ ಅಭ್ಯಾಸಕ್ರಮವು ಚನ್ನಾಗಿದ್ದು ಅಧ್ಯಾಪಕರಾದ ವೇ|| ಪಂ|| ಸದಾಶಿವಶಾಸ್ತ್ರಿಗಳ ಶಿಕ್ಷಣ ಪರಿಶ್ರಮವನ್ನು ವ್ಯಕ್ತಗೊಳಿಸುವಂಥಾದ್ದಾಗಿತ್ತು. ಮರುದಿವಸ ಅಂದರೆ ಚೈ|| ಬ|| ೧ ರವಿವಾರ ದಿವಸ ಪುನಃ ಪಲ್ಲಕ್ಕೀಯುತ್ಸವವು ವಾದ್ಯವೈಭವ ಸಿಬ್ಬಂದಿಯೊಂದಿಗೆ ಮರಡೀಮಠದಿಂದ ಪಾದಗಟ್ಟೆಯವರೆಗೂ ಹೋಗಿ ಪುನಃ ಮಠಕ್ಕೆ ಬಂದಿತು. ಆ ನಂತರ ಉಮಚಗಿ ಪಂ|| ಶಂಕರಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆಗೆ ಪ್ರಾರಂಭವಾಯಿತು. ಧರ್ಮ ಅಹಿಂಸಾ ಬ್ರಹ್ಮಚರ್ಯ ಸತ್ಯ ವ್ರತನಿಯಮಗಳ ಅವಶ್ಯಕತೆ ಇತ್ಯಾದಿ ವಿಷಯಗಳ ಮೇಲೆ ಪಾಠಶಾಲಾ ವಿದ್ಯಾರ್ಥಿಗಳಾದ ವಾಮದೇವ, ಫಾಲಾಕ್ಷ, ಮತ್ತು ವೇ|| ಬಸವರಾಜಶಾಸ್ತ್ರಿಗಳ ವೇ|| ಶ್ರೀಶೈಲನಾಥಶಾಸ್ತ್ರಿ ದೇಶನೂರ ವೇ|| ವೀರಭದ್ರಶಾಸ್ತ್ರಿ ಕೊಂಗವಾಡ ಸಂಪಗಾವಿ ಶ್ರೀ ಚರಮೂರ್ತಿಗಳ ವ್ಯಾಖ್ಯಾನಗಳು ಜರಗಿ ಭೋಜನದ ಸಮಯವಾದ್ದರಿಂದ ಆ ದಿವಸ ಸಭಾಕಾರ್ಯವು ಅಷ್ಟಕ್ಕೆ ಬಂದು ಇಡಲ್ಪಟ್ಟಿತು. ಮಧ್ಯಾಹ್ನದಿಂದ ಸುಪ್ರಸಿದ್ಧ ಪೈಲವಾನರ ಕುಸ್ತಿಗಳು ೨-೩ ದಿವಸಗಳ ವರೆಗೆ ಜರಗಿ ಅವರವರ ಯೋಗ್ಯತೆಯಂತೆ ಪಾರಿತೋಷಿಕಗಳು ಹಂಚಲ್ಪಟ್ಟವು. ಮತ್ತು ಅದೇ ರವಿವಾರ ಸಾಯಂಕಾಲ ೭ ಗಂಟೆಗೆ ಸುಪ್ರಸಿದ್ಧ ಕೀರ್ತನಕಾರರಾದ ದ್ಯಾಮಾಪುರದ ಬಸವಲಿಂಗಶಾಸ್ತ್ರಿಗಳ ಕೀರ್ತನವು ಪಂಚಾಕ್ಷರಿ ಗವಾಯಿಗಳ ಗಾನದೊಡನೆ ಒಳ್ಳೇ ರಸವತ್ತಾಗಿ ನಡೆಯಿತು. ಕೀರ್ತನದಲ್ಲಿ ಸದರೀ ಗವಾಯಿಗಳ ಗಾಯನ ಪ್ರಾರಂಭವಾದರೆ ಕಡೆವರೆಗೆ ಗಾಯನವೇ ಸಾಗಲೆಂದೂ ಆ ನಂತರ ಬಸವಲಿಂಗಶಾಸ್ತ್ರಿಗಳ ಪರಿಶುದ್ಧವಾಣಿಯಿಂದ ಕಥಾ ಹೇಳುವಿಕೆಯು ಪ್ರಾರಂಭವಾದರೆ ಆ ರಸವತ್ತಾದ ವಾಣಿಯೇ ಸಾಗಲೆಂದೂ ಹೀಗೆ ಶ್ರೋತೃಗಳು ಎರಡು ಮೂರು ಗಂಟೆಗಳ ವರೆಗೆ ತಮ್ಮ ಚಿತ್ತದ ಸ್ಥಿರತ್ವವನ್ನು ಸಹ ಕಾಯ್ದುಕೊಳ್ಳಲು ಅಸಮರ್ಥರಾದರು. ರಾತ್ರಿ ಹತ್ತು ಗಂಟೆಗೆ ಕೀರ್ತನವು ಮುಗಿದು ಅದೇ ಸ್ಥಾನದಲ್ಲಿ ಹನ್ನೊಂದು ಗಂಟೆಗೆ ಮೈಸೂರು ಆಸ್ಥಾನ ವಿದ್ವಾಂಸರಾದ ಬಿ. ರಾಚಪ್ಪನವರ ಸಂಗೀತಕಚೇರಿಯು ಸುಬ್ಬಯ್ಯ ಸನ್ಯಾಸಿಗಳ ಪಿಟೀಲವಾದ್ಯದೊಡನೆ ಜರಗಿಸಲ್ಪಟ್ಟಿತು. ಬ|| ೨ ಸೋಮವಾರ ಪ್ರಾತಃಕಾಲಕ್ಕೆ ಓಡುವ ಸೈಕಲ್ ನಡೆಸುವ ನದಿಯಲ್ಲಿ ಈಸುವ ಪಂದ್ಯಗಳು ಜರಗಿ ಉತ್ತೀರ್ಣರಾದವರಿಗೆ ನಿರ್ಣಯಿಸಲ್ಪಟ್ಟ ಪಾರಿತೋಷಿಕಗಳು ಹಂಚಲ್ಪಟ್ಟವು. ಅನಂತರ ಮಧ್ಯಾಹ್ನಕ್ಕೆ ಕೆಲವು ಸುನಾದಿಗಾರರ ಬಾರಿಸುವಿಕೆಯು ನಡೆದು ಸಾಯಂಕಾಲಕ್ಕೆ ಪುನಃ ಪಂ|| ಶಂಕರಶಾಸ್ತ್ರಿಗಳ ಅಧ್ಯಕ್ಷತೆಯ ಕೆಳಗೆ ಸಭೆಯು ಕೂಡಿತು. ಆ ಕಾಲಕ್ಕೆ ಸಂಪಗಾವಿ ಚರಮೂರ್ತಿ ಮತ್ತು ಶೆಟ್ಟಿ ಮಾಸ್ತರರ ವ್ಯಾಖ್ಯಾನಗಳು ಒಳ್ಳೇ ಹೃದಯಂಗಮವಾಗಿ ಜರಗಿದವು. ಆ ಮೇಲೆ ಅಧ್ಯಕ್ಷರ ಸಮಾರೋಪದ ಭಾಷಣವಾಗಿ ಆಭಾರ ಪ್ರದರ್ಶನವಾದ ನಂತರ ಸಭಾಕಾರ್ಯವು ಮುಗಿಸಲ್ಪಟ್ಟಿತು. ಮರುದಿವಸ ಅಂದರೆ ಬ|| ೩ ಮಂಗಳವಾರ ಬೆಳಿಗ್ಗೆ ಆನೆಯಂತೆ ಪುಷ್ಟಗಳಾಗಿ ಬೆಳೆದ ಎತ್ತುಗಳ ಕಲ್ಲುಎಳೆಯುವಿಕೆಯೇ ಮುಂತಾದ ಜಾನುವಾರುಗಳ ಪ್ರದರ್ಶನವಾಗಿ ಪಾರಿತೋಷಿಕಗಳು ಹಂಚಲ್ಪಟ್ಟವು. ಮಧ್ಯಾಹ್ನಕ್ಕೆ ಯಾತ್ರೆಗೆ ಬಂದ ಸಕಲ ಪಂಡಿತರಿಗೂ ಅಂಗಸಾಧಕರಿಗೂ ಕಲಾಕುಶಲರಿಗೂ ಉಚಿತ ಮರ್ಯಾದೆಗಳು ಕೊಡಲ್ಪಟ್ಟನಂತರ ಯಾತ್ರಾ ಕೆಲಸವು ಸಾಂಗಗೊಳಿಸಲ್ಪಟ್ಟಿತು. ವಾಚಕರೇ ನಾಲ್ಕು ವರ್ಷಗಳಹಿಂದೆ ಪ್ರಾರಂಭಿಸಲ್ಪಟ್ಟ ಈ ಮರಡೀಮಠದ ಯಾತ್ರೆಯು ಇಷ್ಟೊಂದು ಭರಭರಾಟಿಯಿಂದ ನಿರುತ್ತಾ ಸದ್ಯಕ್ಕೆ ಅಖಿಲ ಕರ್ನಾಟಕಕ್ಕಲ್ಲದೆ ಇತರ ಪ್ರಾಂತಗಳಿಗೂ ಕೂಡ ಮಾದರೀ ರೂಪವುಳ್ಳದ್ದಾಗಲಿಕ್ಕೆ ಮರಡೀಮಠದ ಈಗಿನ ಚಿಕ್ಕ ವಯಸ್ಸಿನವರಾದ ಶ್ರೀ ಪಟ್ಟಾಧ್ಯಕ್ಷ ಸ್ವಾಮಿಗಳಲ್ಲಿ ನೆಲೆಗೊಂಡಿರುವ ಶಾಂತಿ ಸದ್ಗುಣಗಳು, ಕಾರ್ಯೋತ್ಸಾಹಾದಿ ಚಟವಟಿಕೆಗಳು, ಸಮಾಜ ಕಳಕಳಿಯು, ವಿದ್ಯಾಪಕ್ಷಪಾತವು ಮುಂತಾದ ಅನೇಕ ಸದ್ಗುಣಗಳು ಕಾರಣವಾಗಿರುತ್ತವೆ. ನಮ್ಮ ಸಮಾಜದಲ್ಲಿ ಸಾವಿರಗಟ್ಟಲೆ ಗುರುಗಳು ಉದಯಿಸುವದಕ್ಕಿಂತಲೂ ಈಶ್ವರನು ವೀರಶೈವ ಜಗತ್ತಿನ ನಾಲ್ಕು ದಿಕ್ಕುಗಳಿಗೆ ನಾಲ್ಕು ಸಂಖ್ಯಾಕರಾದ ಇಂಥ ಪವಿತ್ರ ವಿಭೂತಿಗಳನ್ನು ಪೂರ್ಣ ಆಯುಷ್ಯವುಳ್ಳವರನ್ನಾಗಿ ಹುಟ್ಟಿಸಿದರೆ ನಮ್ಮ ಸಮಾಜವು ಕ್ಷಿಪ್ರದಲ್ಲಿಯೇ ಉದ್ಧಾರವಾದೀತೆಂದು ನಂಬುತ್ತೇನೆ.

ಪ್ರತ್ಯಕ್ಷದರ್ಶಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ವಿಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦ ಕ್ಕೂ ೦—೧೨—೦; ಬಿಳೀಗ್ಲೇಜ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸ ಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳಪ್ಪ, ಊದಬತ್ತಿ ಷಾಪ್,
12 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲು ನಿಮ್ಮಲ್ಲಿದ್ದರೆ ಅದರ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರವಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—32] ಮೈಸೂರು.

೧೯೨೪ ನೇಯ ಇಸವಿ ಮೇ ತಾ|| ೪ ರಿಂದ ೧೯೨೪ ನೇಯ ಇಸವಿ ಮೇ ತಾ|| ೧೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೇಯ ರಕ್ತಾಕ್ಷಿನಾಮ ಸಂವತ್ಸರದ ವೈಶಾಖ ಶುದ್ಧ ಪಾಡ್ಯಮಿಯಿಂದ ವೈಶಾಖ ಶುದ್ಧ ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
4	ಭಾನು	ಪಾಡ್ಯ	55.56	ಭರ	22.37	22
5	ಸೋಮ	ಬಿದಿ	60	ಕೃತ್ತಿ	28.27	23
6	¹ಮಂಗಳ	ಬಿದಿ	1.16	ರೋಹಿ	33.39	24
7	²ಬುಧ	ತದಿ	6.20	ಮೃಗ	42.3	25
8	ಗುರು	ಚೌತಿ	11.2	ಆದ್ರ್ರಾ	47.58	26
9	³ಶುಕ್ರ	ಪಂಚ	15.0	ಪುನ	52.58	27
10	ಶನಿ	ಷಷ್ಠಿ	17.50	ಪುಷ್ಯ	56.50	28

(1) ಶ್ರೀ ಬಸವೇಶ್ವರಜಯಂತಿ, ಅಕ್ಷಯತೃತೀಯ, ಪರಶುರಾಮ ಜಯಂತಿ. (2) ವಾರ್ತಾಳಗೌರೀವ್ರತಂ. (3) ಲಾವಣ್ಯಗೌರೀವ್ರತಂ, ಶಂಕರಜಯಂತಿ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ವಿಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 12

ಮೈಸೂರು ಸ್ಟಾರ್

ಪ್ರತಿ ಭಾನು ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಿ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂನ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ತಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೇಯ ಇಸವಿ ಮೇ ತಾರೀಖು ೧೧ ನೇಯ ಭಾನುವಾರ. [ಸಂಚಿಕೆ ೧೯

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು
ಲೋಕಾನುಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ತುಳಿತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
14 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾಕ್ಟರ್ ಜೇ ಬೀ ಯವರ ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—36] ಪೋ. ಬಾ. ೫೧೧, ಮದರಾಸು.

4 ನೇಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗಲಾನೆ 4ನೆ ಮುದ್ರಣವು ಅಚ್ಚಾಗಿ ವಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ನಂತೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—2] ಕೇಲಾಪುರ, ಅರಕಲಗೂಡು ತಾಲ್ಲೂಕು, ಹಾಸನ ಡಿ||

ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಉತ್ತಮವಾದ ವೀರಶೈವ ಮತಗ್ರಂಥಗಳು.

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦ ೩—೦
ಪರಮಾತ್ಮಪ್ರಕಾಶಿಕೆ (ಟೀ. ಸ್ವ. ಸಹಿತ)	೦—೪—೦
ಸ್ಮೃತಿಸಾರಭಾಷ್ಯ	೦—೫—೦
ಘಟಿಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—22] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.	ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ. ವಜ್ರಾಂಗಸುಂದರಪಾಕ.	ಧಿಕ್ಕಾರ ಮಾಡಿದರೆ ಕುತ್ತಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುಬಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಯುಣ್ಣು, ಎಲ್ಲ ಉಪ್ಪರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಿಗಾಪ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಶಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆಯುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೬೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ತಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೊಗಚಿ) ಕಂದ, ವ್ರಿಖಾಂತರವಟಾಕಂದ, ಕವಚಬೀಜ, ಮುದ್ರ ಕೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಕಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತಿನಪುರುಷ, ರೂಮಾಮಸ್ತಕ, ಅಮರಕಸ, ಕಫಲ್ಯಾಗೊಂದ, ಪಂಜಾಬಿ ಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ, ಬೀಜಬಂಧ, ಚಿಗಂಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ನಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಪಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ತಾರಣಾತ್ವರೆಮಾಡಿರಿ.

ಕಾಗದ ಬರೆಯುತಕ್ಕವರು ತಮ್ಮ ಪೂರ್ಣ ಅಡ್ರಸ್ ಮೊಕ್ಕಾಂ ಪೋಸ್ಟ ಸಹ ಬರೆಯಿರಿ.

[50—39] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಗಿ.

ಗ್ರಂಥಸಿಕ್ಕುವಸ್ಥಳ:—
ಹೊಸಮಠದ ಚನ್ನಯ್ಯನವರು ಹರಿಹರ,
24—5 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಕ್ಷೋಣೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿ
[50—17] ಅಂಡ್ ಸನ್ಸ್, ಜಿ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[illegible] [illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಮೇ ತಾ॥ ೧೧ ನೆಯ ಭಾನುವಾರ.

ಸಂಸ್ಥಾನದ ಪರಸ್ಪರ ಸಹಾಯಸಂಘಗಳು.

ಈ ಸಂಘಗಳ ಶಾಖೆಗೆ ಸಂಬಂಧಪಟ್ಟ 1922-23ನೆಯ ವರ್ಷದ ವರದಿಯು ನಮ್ಮ ಹಸ್ತಗತವಾಗಿದೆ. ವರದಿಗೆ ಸಂಬಂಧಪಟ್ಟ ವರ್ಷದಲ್ಲಿ ಸಂಘಗಳ ಮೇಲ್ವಿಚಾರಣೆಯು ತೃಪ್ತಿಕರವಾಗಿ ನಡೆಯಬೇಕೆಂಬ ಉದ್ದೇಶದಿಂದ ಅಸಿಸ್ಟೆಂಟ್ ರಿಜಿಸ್ಟ್ರಾರುಗಳ ಸಂಖ್ಯೆಯು 2 ರಿಂದ 4ಕ್ಕೆ ಹೆಚ್ಚಿಸಲ್ಪಟ್ಟಿತು. ಮತ್ತು ಈ ಶಾಖಾಧಿಕಾರಿಗಳು ತಮ್ಮಲ್ಲಿಗೆ ಬರುವ ವಿವಾದಗಳನ್ನು ಜಾಗ್ರತೆಯಲ್ಲಿ ಬಗೆಹರಿಸಿ ಡಿಕ್ರಿಗಳು ತತ್ಕ್ಷಣದಲ್ಲೆ ಜಾರಿಯಾಗುವಂತೆ ಮಾಡಲು ಕೆಲ ಸೂಚನೆಗಳು ಕೊಡಲ್ಪಟ್ಟುವು. ಪ್ರಸಕ್ತವರ್ಷದಲ್ಲಿ ಸಂಸ್ಥಾನದಲ್ಲೆಲ್ಲಾ ಈ ಸಂಘಗಳ ಒಟ್ಟು ಸಂಖ್ಯೆಯು 1541 ಇದ್ದುದರಿಂದ ಅದರ ಹಿಂದಣ ವರ್ಷಕ್ಕಿನ್ನ 19 ಹೆಚ್ಚಿದಂತಾಯಿತು. ಹಳೆಯವುಗಳಲ್ಲಿ 41 ಸಂಘಗಳು ತೆಗೆದುಹಾಕಲ್ಪಟ್ಟವು, ಮತ್ತು ದುರ್ದಶೆಯಲ್ಲಿದ್ದು ಚೇತರಿಸಿಕೊಳ್ಳಲಾರದಂತಹ 532 ಸಂಘಗಳು ಮುಚ್ಚಲ್ಪಡಲು ಪ್ರಯತ್ನ ನಡಿಸಲ್ಪಟ್ಟಿದ್ದಿತು. ಒಟ್ಟು ಸಂಘಗಳ ಮೂಲಧನವು ಹಿಂದಣವರ್ಷದಲ್ಲಿ 81,97,280 ರೂ. ಇದ್ದುದು ಈ ವರ್ಷದಲ್ಲಿ 84,09,478 ರೂ. ಗೆ ಹೆಚ್ಚಿತು. ಅವುಗಳಲ್ಲಿದ್ದ ಮೆಂಬರುಗಳ ಸಂಖ್ಯೆಯು ಮಾತ್ರ 96,912ರಿಂದ 95,135ಕ್ಕೆ ತಗ್ಗಿತು. ಎಲ್ಲ ಸಂಘಗಳಲ್ಲಿ ಒಟ್ಟು 2,54,27,796 ರೂ. ವರೆಗೆ ಲೇವಾದೇವಿ ವ್ಯಾಪಾರ ಮೊದಲಾದವು ನಡೆದು 4 ಲಕ್ಷ ರೂ. ಆದಾಯ ಬಂದಿರುತ್ತದೆ.

ಪ್ರಸಕ್ತ ವರ್ಷಾಂತ್ಯದಲ್ಲಿ 12,89,544 ರೂ. ಗಳು ಸೆಂಟ್ರಲ್ ಸಂಘಗಳಲ್ಲಿ ಡಿಪಾಜಿಟ್ ಮಾಡಲ್ಪಟ್ಟಿದ್ದುವು. ಇದರಲ್ಲಿ 11 ಲಕ್ಷ ರೂ. ವರೆಗೂ ಮೆಂಬರುಗಳಲ್ಲದವರಿಂದಲೇ ಇಡಲ್ಪಟ್ಟುದಾಗಿದೆ. ಎಲ್ಲ ಸೊಸೈಟಿಗಳಿಂದಲೂ ಕೊಡಲ್ಪಟ್ಟ ಒಟ್ಟು 53,20,091 ರೂ. ನ ಸಾಲದ ಹಣದಲ್ಲಿ ಉತ್ಪತ್ತಿಸಾಧನ ಕೆಲಸಗಳಿಗಾಗಿ 40,51,127 ರೂ. ಮತ್ತು ಮೆಂಬರುಗಳು ಹಿಂದಣ ಸಾಲತೀರಿಸಿಕೊಳ್ಳುವುದಕ್ಕಾಗಿ 10,16,098 ರೂ. ಆಗಿದ್ದುವು. ಎಲ್ಲ ಸಂಘಗಳಲ್ಲೂ ಪ್ರಸಕ್ತವರ್ಷದಲ್ಲಿ ರಿಜರ್ವ್ ಫಂಡು 8,49,532 ರೂ. ಇಂದ 10,16,357 ರೂ. ಗೆ ಹೆಚ್ಚಿತು. ಒಟ್ಟು ರಿಜರ್ವ್ ಫಂಡಿನಲ್ಲಿ ಪ್ರಾಯಶಃ 1 ಲಕ್ಷ ರೂ. ಮೈಸೂರು ಸರ್ಕಾರಿ ಬಾಂಡಿನಮೇಲೂ 2½ ಲಕ್ಷ ರೂ. ಕಟ್ಟಡದ ಕೆಲಸಗಳಿಗಾಗಿಯೂ, ನಿವೇಶನವನ್ನು ಕೊಳ್ಳುವುದಕ್ಕಾಗಿಯೂ ವಿನಿಯೋಗಿಸಲ್ಪಟ್ಟುವು. ಮಲೆನಾಡಿನಲ್ಲಿ 222 ಸಂಘಗಳಿದ್ದುವು. ಅಡಿಕೆ ವ್ಯವಸಾಯಗಾರರ ಸಾಹಾಯ್ಯಾರ್ಥವಾಗೇರ್ಪಡಿಸಿರುವ 2 ಸಂಘಗಳಲ್ಲಿ ಬಹಳ ತೃಪ್ತಿಕರವಾಗಿ ಕೆಲಸವು ನಡೆದಿರುತ್ತದೆ. ಇದೇ ಮಾದ್ರಿಯ ಮತ್ತೊಂದು ಸಂಘವು ಈ ವರ್ಷದಲ್ಲಿ ಹೊಸದಾಗಿ ಸ್ಥಾಪಿತವಾಯಿತು. ಈ ಮಲೆನಾಡಿನ ಸಂಘಗಳಲ್ಲಿ 5 ಸಂಘಗಳು ಪ್ರಾವಿನ್ಷಿಯಲ್ ಕೋ ಆಪರೇಟಿವ್ ಬ್ಯಾಂಕಿನಿಂದ 30,000 ರೂ. ಯನ್ನು ಸಾಲವಾಗಿ ತೆಗೆದುಕೊಂಡು ತಮ್ಮ ಮೆಂಬರುಗಳಿಗೆ ಅವರ ಹಳೇ ಸಾಲವನ್ನು ತೀರಿಸುವುದಕ್ಕಾಗಿ ಸಾಲ ಕೊಟ್ಟು ಸಾಹಾಯ್ಯಾಕರಿಸಿರುತ್ತವೆ. ಒಟ್ಟಿನ ಮೇಲೆ ಮಲೆನಾಡಿನ ಸ್ಥಿತಿಗತಿಯು ಮೈದಾನದ ಸ್ಥಿತಿಗತಿಯಂತಿಲ್ಲದಿರುವುದರಿಂದ ಪರಸ್ಪರಸಹಾಯ ಪ್ರಯತ್ನವು ಅಷ್ಟು ತೃಪ್ತಿಕರವಾಗಿ ನಡಿಯುತ್ತಿಲ್ಲವಾದ ಪ್ರಯುಕ್ತ ಇದರ ನಿವಾರಣೋಪಾಯವನ್ನು ಕೂಡಲೆ ಕಂಡುಹಿಡಿದು ತಮಗೆ ಬಿನ್ನವಿಸಬೇಕೆಂದೂ ಸಂಸ್ಥಾನದ ಎಲ್ಲ ಸಂಘಗಳ ಮೆಂಬರುಗಳ ಆರ್ಥಿಕಸ್ಥಿತಿಯನ್ನು ವಿಚಾರಿಸಿ ಅದರ ಫಲಿತಾಂಶವನ್ನು ವರದಿಮಾಡಬೇಕೆಂದೂ ಸರ್ಕಾರದವರು ಅಪೇಕ್ಷಿಸಿರುತ್ತಾರೆ. ಬೆಂಗಳೂರು ಸೆಂಟ್ರಲ್ ಮತ್ತು ಮೈಸೂರು ಪ್ರಾವಿನ್ಷಿಯಲ್ ಕೋ ಆಪರೇಟಿವ್ ಬ್ಯಾಂಕುಗಳು ಇತರ ಎಲ್ಲಾ ಸಂಘಗಳಿಗೂ ಹಣವನ್ನು ಒದಗಿಸುವುದರಿಂದ ಬೆಂಗಳೂರಿನದಕ್ಕೆ 58,900 ರೂ., ಮೈಸೂರಿನದಕ್ಕೆ 12,539 ರೂ. ಆದಾಯವಾಗಿರುತ್ತದೆ. ವ್ಯವಸಾಯಸಂಘಗಳ ಸಂಖ್ಯೆಯು 1233 ರಿಂದ 1249 ಕ್ಕೂ, ಮೂಲಧನವು 25,12,033 ರಿಂದ 26,41,342 ರೂ. ಗೂ, ರಿಜರ್ವ್ ಫಂಡು 2,70,445 ರೂ. ಯಿಂದ 3,36,460 ರೂ. ಗೂ ಹೆಚ್ಚಿರುತ್ತವೆ. ಪ್ರಸಕ್ತವರ್ಷದಲ್ಲಿ ನೇಗಿಯ ಪರಸ್ಪರಸಹಾಯ ಸಂಘಗಳೂ, ರೇಷ್ಮೆವ್ಯವಸಾಯ ಸಂಘಗಳೂ ಸಮರ್ಪಕವಾಗಿ ಕೆಲಸಮಾಡದಿದ್ದುದಕ್ಕಾಗಿ ಸರ್ಕಾರದವರು ತಮ್ಮ ಅಸಮಾಧಾನವನ್ನು ತಿಳಿಸಿ, ಇದರ ಕಾರಣವನ್ನೂ ನಿವಾರಣೋಪಾಯವನ್ನೂ ಬಿನ್ನವಿಸಬೇಕಾಗಿ ತಿಳಿಸಿರುತ್ತಾರೆ. ನಿಮ್ನ ಜಾತಿಯ ಜನರ ಸಾಹಾಯ್ಯಾರ್ಥವಾಗಿ 39 ಸಂಘಗಳಿದ್ದುವು. ಇವುಗಳ ಅಭಿವೃದ್ಧಿಗಾಗಿ ರಿಜಿಸ್ಟ್ರಾರರ ವಶಕ್ಕೆ ಸರ್ಕಾರದಿಂದ 2,000 ರೂ. ಕೊಡಲ್ಪಟ್ಟು ಅವುಗಳ ಅಭಿವೃದ್ಧಿವಿಚಾರವು ಅರಿಕೆಮಾಡಲ್ಪಡಬೇಕಾಗಿ ಕೋರಲ್ಪಟ್ಟಿದೆ. ಬಾಕಿ ಹಣಕ್ಕಾಗಿ ರಿಜಿಸ್ಟ್ರಾರರವರಿಂದ ಕೊಡಲ್ಪಟ್ಟ ಡಿಕ್ರಿಗಳನ್ನು ರೆವಿನ್ಯೂ ಶಾಖಾಧಿಕಾರಿಗಳು ಜಾಗ್ರತೆಯಲ್ಲಿ ಜಾರಿಮಾಡುವ ಬಗೆಗೆ ರೆವಿನ್ಯೂಕಮಿಷನರು ತಕ್ಕೇರ್ಪಾಟನ್ನು ಮಾಡಿ ಅದರ ಫಲಿತಾಂಶವನ್ನು ತಿಳಿಸಬೇಕಾಗಿ ಸರ್ಕಾರದವರು ಕೋರಿರುತ್ತಾರೆ.

ಈ ವಿವರಣವನ್ನೆಲ್ಲಾ ನೋಡಿದರೆ ಈ ಶಾಖೆಯಲ್ಲಿ ನಡೆದಿರುವ ಕಾರ್ಯವು ಸಮಾಧಾನಕರವಾಗಿರುವುದೆನ್ನುವುದರಲ್ಲಿ ಸಂದೇಹವಿಲ್ಲವು ಮತ್ತು ಸರ್ಕಾರದವರೂ ಅದೇ ಅಭಿಪ್ರಾಯಪಟ್ಟಿರುತ್ತಾರೆ. ಈ ಶಾಖೆಯು ಆರಂಭದಲ್ಲಿ ಮಂದವಾಗಿದ್ದು ಕೆಲ ವರ್ಷಗಳಿಂದಲೂ ಒಳ್ಳೇ ಅಭಿವೃದ್ಧಿ ಸ್ಥಿತಿಯಲ್ಲಿರುವುದು ಸಂತೋಷಪ್ರದವಾಗಿದೆ ಸಂಸ್ಥಾನದಲ್ಲಿರುವ ಸಂಘಗಳಲ್ಲಿ ಬಹು ಭಾಗವು ಲೇವಾದೇವಿ ಸಂಘಗಳೇ ಆಗಿರುವುದರಿಂದಲೂ ವ್ಯವಸಾಯ ಸಂಘಗಳು ಇತ್ತೀಚೆಗೇರ್ಪಟ್ಟಿರುವುದರಿಂದಲೂ ಬೇಸಾಯಗಾರರು, ವರ್ತಕರು, ಕಸಬುದಾರರು ಮೊದಲಾದ ಜನರು ಬಲುಮಟ್ಟಿಗೆ ಧನಪಿಶಾಚಗ್ರಸ್ತರಾದ ಸಾಹುಕಾರರ ಮಿತಿವಿಾರಿದ ಬಡ್ಡಿಯೆಂಬ ಇಕ್ಕಳದ ಹಿಡಿತದಿಂದ ತಪ್ಪಿಸಿಕೊಂಡು ಚೇತರಿಸಿಕೊಳ್ಳಲು ಅವಕಾಶವಾಯಿತು. ಈ ಸಂಘಗಳ ಮೂಲಕ ಕೈಗಾರಿಕೆಗಳು ಅಭಿವೃದ್ಧಿಗೊಳ್ಳುವುವೆಂಬ ನಿರೀಕ್ಷಣೆಯು ಮಾತ್ರ ಸಫಲವಾಗದಿರುವುದು ವ್ಯಸನಕರವಾಗಿದೆ. ಪ್ರಜೆಗಳಲ್ಲಿ ಪರಸ್ಪರ ಸಾಹಾಯ್ಯಫಲಜ್ಞಾನವು ತಕ್ಕಷ್ಟು ಇಲ್ಲದಿರುವುದೇ ಕೈಗಾರಿಕೆ ವ್ಯಾಪಾರ ಮೊದಲಾದವುಗಳಿಗೆ ಸಂಬಂಧಪಟ್ಟ ಸಂಘಗಳು ಹೆಚ್ಚಿರುವುದಕ್ಕೆ ಕಾರಣವಾಗಿದೆ. ಪ್ರಾಮಾಣಿಕತೆಯು ಜನರಲ್ಲಿ ಹೆಚ್ಚಿದ ಹೊರತು ಯಾವ ವಿಧವಾದ ಅಭಿವೃದ್ಧಿಗೂ ಅವಕಾಶವಿಲ್ಲವು. ಸಂಘಗಳ ಉದ್ಧಾರಕ್ಕೆ ಪ್ರಾಮಾಣಿಕತೆಯೇ ಮುಖ್ಯ ಚೈತನ್ಯ. ನಂಬುಗೆಯು ಬಲವಿಲ್ಲದುದರಿಂದಲೇ ವ್ಯಾಪಾರ ಶಿಲ್ಪ ಸಂಘಗಳ ಕಲ್ಪನೆಗೆ ಜನರು ಹೆದರು ಹಿಂಜರಿಯಬೇಕಾಗಿರುತ್ತದೆ. ಸರ್ಕಾರದವರಾದರೋ ಪರಸ್ಪರ ಸಹಾಯ ಸಂಘಗಳ ಮೂಲಕ ಪ್ರಜೆಗಳನ್ನು ಎಲ್ಲವಿಧವಾದ ಕಸಬುಗಳಲ್ಲೂ ಮುಂದುವರಿಸಿ ಉಪಪನ್ನರನ್ನಾಗಿ ಮಾಡಬೇಕೆಂಬ ಉದಾರಸಂಕಲ್ಪವುಳ್ಳವರಾಗಿದ್ದಾರೆ. ಆದರೆ ಪ್ರಜೆಗಳಲ್ಲಿ ಮಾತ್ರ ಪರಸ್ಪರವಿಶ್ವಾಸ, ಆತ್ಮೋದ್ಧಾರಕಾಂಕ್ಷೆ, ಕಾರ್ಯೋತ್ಸಾಹ, ಪ್ರಮಾಣಿಕತೆ ಇವುಗಳು ವೃದ್ಧಿಗೊಂಡ ಹೊರತು ಸರ್ಕಾರದವರ ಉದ್ದೇಶವು ಸಂಪೂರ್ಣವಾಗಿ ಸಫಲವಾಗುವಂತಿಲ್ಲವು. ಹತ್ತು ಜನರ ಮೆಹನತ್ತೂ ದುಡ್ಡೂ ಸೇರಿ ಸ್ಥಾಪಿಸಲ್ಪಡುವ ಕೆಲಸಗಳಲ್ಲಿ ಲಾಭವಾದರೆ ಸರ್ವರೂ ಸಮನಾಗಿ ಅನುಭವಿಸುವುದಕ್ಕೂ, ಒಂದುವೇಳೆ ನಷ್ಟವು ಸಂಭವಿಸಿದಲ್ಲಿ ಒಬ್ಬಾನೊಬ್ಬನೇ ಮುಳುಗಿಹೋಗದಿರುವುದಕ್ಕೂ ಅವಕಾಶವಿರುತ್ತದೆ. ''ಒಬ್ಬನಿಗೆ ಇಬ್ಬರು ಲೇಸು ...'' ಎಂಬ ಸರ್ವಜ್ಞನ ತತ್ವದ ಮಹಿಮೆಯನ್ನು ಅರಿತು ಕೆಲಸಮಾಡುವವರು ವಿರಳ. ಆತ್ಮಬುದ್ಧಿಯೂ, ಲೋಕಸಂಜ್ಞಾನವೂ ಪ್ರಜೆಗಳಲ್ಲಿ ದೃಢಮೂಲವಾಗುವವರೆಗೆ ಸರ್ಕಾರದವರೂ, ನಾಗರಕರಾದ ಪ್ರಜೆಗಳೂ ಪರಸ್ಪರ ಸಾಹಾಯ್ಯಲಾಭವನ್ನು ಸಾಮಾನ್ಯ ಪ್ರಜೆಗಳಿಗೆ ಚೆನ್ನಾಗಿ ಮನದಟ್ಟಾಗುವಂತೆ ಮಾಡುವಲ್ಲಿ ಹೀಗೆಯೇ ಕೆಲಸಮಾಡುತ್ತಬಂದರೆ ಕಾಲಕ್ರಮೇಣ ಕೃಷಿ ಶಿಲ್ಪವಾಣಿಜ್ಯಾದಿಗಳಿಗೆ ಸಂಬಂಧಪಟ್ಟ ಪರಸ್ಪರ ಸಹಾಯಸಂಘಗಳ ಸಂಖ್ಯೆಯು ದೇಶದಲ್ಲಿ ಹೆಚ್ಚದೆ ಇರಲಾರದು.

ಸ್ವದೇಶದ ವೃತ್ತಾಂತಗಳು.

ಕಳೆದ ತಾ॥ 2ರ ರಾತ್ರಿ ಬೆಂಗಳೂರಲ್ಲಿ ಒಂದು ಹದಮಳೆಯಾಯಿತು. ಇದರಿಂದ ದಂಡಿನಲ್ಲಿ ಅನೇಕ ಹಳೆ ಮನೆಗಳಿಗೆ ಅಪಾಯವಾಯಿತಲ್ಲದೆ ಎರಡು ಮರಗಳಿಗೆ ಸಿಡಿಲು ಬಡಿದಿತು. ಆದರೆ ಯಾರಿಗೂ ಅಪಾಯವಾಗಲಿಲ್ಲ

ಮೈಸೂರು ದೇಶದ ಬ್ರಿಟಿಷ್ ರೆಸಿಡೆಂಟರು ಈ ತಿಂಗಳು 7ನೇ ತಾರೀಖಿನ ಸಾಯಂಕಾಲ ನೀಲಗಿರಿಯಿಂದ ದಯಮಾಡಿಸಿ ಗೌರ್ನಮೆಂಟ್ ಹೌಸಿನಲ್ಲಿ ತಂಗಿದ್ದು ಮಾರನೇ ದಿವಸ ಬೆಂಗಳೂರಿಗೆ ಪ್ರಯಾಣಮಾಡಿದರು. ಈ ತಿಂಗಳು 14ನೇ ತಾರೀಖಿನ ದಿವಸ ರಾಜಧಾನಿಗೆ ಪುನಹ ದಯಮಾಡಿಸುವವರಾಗಿರುವರು.

ಎಕ್ಸೈಸ್ ಕಂಟ್ರಾಕ್ಟರು ಮ॥ ರಂಗರಾಯರಿಗೆ ಪ್ರಾಣಭಯವನ್ನುಂಟುಮಾಡಿ ಅವರ ಮೈಮೇಲಿದ್ದ ನಗಗಳನ್ನು ಕಿತ್ತುಕೊಂಡರೆಂಬ ಅಪರಾಧದಮೇಲೆ ಪೋಲೀಸಿನಿಂದ ಸಿಟಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಸವಾಲ್ ದಾಸ್‌ಸೇಟು ಮತ್ತಿಬ್ಬರು ಶಷನ್ಸಿನ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ತಾರೀಕು 6-5-1924 ನೆ ದಿವಸ ದಾವಣಗೆರೆ ಮುಕ್ಕಾಮಿಗೆ ಚಿತ್ತೈಸಿರೋಣಾಗಿದೆ. ಇನ್ನೊಂದಪ್ಪಣೆಯಾಗುವವರೆಗೆ ಟಪ್ಪಾಲ್‌ಗಳನ್ನು ದಾವಣಗೆರೆ ಪೋಸ್ಟಿಗೆ ಕಳುಹಿಸುವದು. ದಾವಣಗೆರೆಯಲ್ಲಿ ಟೆಲಿಗ್ರಾಂ ಆಫೀಸು ಇರುತ್ತೆ.

ಶಿವನಸಮುದ್ರದ ಕಾರ್ಯಾಲಯಲ್ಲಿ ಸರ್ಕಾರಿ ಹಣ ದುರ್ವಿನಿಯೋಗಪಡಿಸಿಕೊಂಡಿದ್ದ ಮೊಕದ್ದಮೆಯ ವಿಚಾರಣೆಯು ಪೂರೈಸುತ್ತಾ ಬಂದಿರುವುದು. ಮ್ಯಾಜಿಸ್ಟ್ರೇಟರು ಸ್ಥಳ ಅಜಮಾಯಿಷಿಗಾಗಿ ಗೌರ್ನಮೆಂಟ್ ಅಡ್ವೋಕೇಟರನ್ನು ಮತ್ತು ಅಪರಾಧಿಗಳ ಕಡೆ ಲಾಯರುಗಳನ್ನು ಈ ತಿಂಗಳು 13ನೇ ತಾರೀಖಿನ ದಿವಸ ಶಿವನಸಮುದ್ರಕ್ಕೆ ಕರೆದುಕೊಂಡು ಹೋಗುವವರಾಗಿರುವರು.

ಬೆಂಗಳೂರು ಹುಜೂರು ಟ್ರಿಜರಿ ಅಸಿಸ್ಟೆಂಟ್ ಕಂಟ್ರೋಲರ್ ಉದ್ಯೋಗದಲ್ಲಿದ್ದ ಮ॥ ಎಚ್. ಕೃಷ್ಣಸ್ವಾಮಿರಾವ್ ಬಿ.ಎ., ಬಿ.ಎಲ್. ಯವರು ಕಳೆದ ಶನಿವಾರದ ರಾತ್ರಿ ಬೆಂಗಳೂರಿನಿಂದ ಮದ್ರಾಸಿಗೆ ಪ್ರಯಾಣಮಾಡುತ್ತಿರುವಾಗ್ಗೆ ಬಂಡಿಯಲ್ಲೇ ಕಾಲರಾರೋಗಗ್ರಸ್ಥರಾಗಿ ಮಾರನೆ ದಿವಸ ಪ್ರಾತಃಕಾಲ ಮದ್ರಾಸಿನಲ್ಲಿ ದೈವಾಧೀನರಾದರೆಂದು ತಿಳುಹಲು ವಿಷಾದಿಸುತ್ತೇವೆ. ಇವರಿಗೆ 50 ವರ್ಷ ವಯಸ್ಸಾಗಿದ್ದಿತು.

ರಾಜಧಾನಿಯ ಮ॥ ಸಿಟ್ರಿ ಗುರುಕಾರ್ ಬಸಪ್ಪನವರು ತಮ್ಮ ಪುತ್ರಿಯನ್ನು ಡಾ॥ ಟಿ. ಎಸ್. ನಂಜಪ್ಪನವರ ಮಗ ರಾ॥ ಶಿವನಂಜಪ್ಪನವರಿಗೆ ಕೊಟ್ಟು ಕಳೆದ ಬುಧವಾರ ಬಹಳ ವಿಜೃಂಭಣೆಯಿಂದ ವಿವಾಹೋತ್ಸವವನ್ನು ನಡೆಯಿಸಿದರು. ಅನೇಕ ಅಧಿಕಾರಿಗಳು ಲಾಯರುಗಳು ಮ್ಯು॥ ಕಮಿಷನರುಗಳು ಮೊದಲಾದ ದೊಡ್ಡಮನುಷ್ಯರುಗಳನ್ನು ಆಹ್ವಾನಿಸಿ ಸಂಗೀತ ವಿದ್ವಾನ್ ಬಿ. ರಾಚಪ್ಪನವರ ಮಂಜುಳವಾದ ಗಾನದಿಂದಲೂ ಫಲತಾಂಬೂಲಗಳಿಂದಲೂ ಸತ್ಕರಿಸಿದರು.

ಕಳೆದ ವೈಶಾಖ ಶುದ್ಧ 2 (ತಾ॥ 6-5-24) ಮಂಗಳವಾರ ರೋಹಿಣಿ ನಕ್ಷತ್ರವು ಸಂಘಟಿಸಿದುದರಿಂದ ರಾಜಧಾನಿಯ ವೀರಶೈವರು ದೊಡ್ಡಪೇಟೆಯಲ್ಲಿರುವ ಶ್ರೀ ದೊಡ್ಡಬಸವೇಶ್ವರ ದೇವಾಲಯದಲ್ಲೂ ಹಳೇ ಅಗ್ರಹಾರದಲ್ಲಿರುವ ಶ್ರೀ ಚಿಕ್ಕಬಸವೇಶ್ವರ ದೇವಸ್ಥಾನದಲ್ಲೂ ರುದ್ರಾಭಿಷೇಕಪೂರ್ವಕ ಸಾಂಗಸಮರ್ಚನ ಶಿವಸಹಸ್ರ ಗಣಸಹಸ್ರ ಬಸವಸಹಸ್ರನಾಮ ಪಾರಾಯಣ ಪುರಾಣಪಠನೆ, ಶ್ರವಣ, ಬಸವೇಶ್ವರಾವತಾರ ಮಹತ್ವಕಥನಪೂರ್ವಕವಾದ ಉಪನ್ಯಾಸ ಗಣಾರಾಧನೆ, ಶಿವಕಥಾಶ್ರವಣ ಇತ್ಯಾದಿಗಳನ್ನು ನಡೆಯಿಸಿದರು.

ಬೆಂಗಳೂರು ಬಳೇಪೇಟೆ ವಾಸಸ್ಥನಾದ ಒಬ್ಬ ಬ್ರಾಹ್ಮಣ ದೊಡ್ಡಮನುಷ್ಯನು ಕಮಲಮ್ಮನೆಂಬ ತನ್ನ ಮಗಳನ್ನು ನಾಲ್ಕು ವರ್ಷಗಳ ಹಿಂದೆ ಒಬ್ಬ ಯೌವನಸ್ಥನಿಗೆ ಬೆಂಗಳೂರಿನಲ್ಲಿ ವಿವಾಹಮಾಡಿಕೊಟ್ಟು ಪುನಹ ಇದೇ ಹುಡುಗಿಯನ್ನು ಬರ್ಮಾ ದೇಶಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಇನ್ನೊಬ್ಬನಿಗೆ ಕೊಟ್ಟು ಮದುವೆ ಮಾಡಿರುವನಂತೆ. ಮೊದಲನೇ ಗಂಡನು ಈ ವರ್ತಮಾನವನ್ನು ತಿಳಿದು ಹುಡುಗಿಯ ತಂದೆಯ ಮೇಲೆ ವ್ಯಾಜ್ಯಹೂಡಬೇಕೆಂದು ಪ್ರಯತ್ನ ನಡೆಸುತ್ತಾ ಇರುವನೆಂದು ತಿಳಿಯಬರುತ್ತದೆ. ಹುಡುಗಿಯು ಈಗ ಬರ್ಮಾ ದೇಶದಲ್ಲಿ ತನ್ನ ಎರಡನೆ ಗಂಡನ ಮನೆಯಲ್ಲಿ ವಾಸಮಾಡಿಕೊಂಡಿರುತ್ತಾಳೆ.

ರಾಜಧಾನಿಯ ಮುನ್ಸಿಪಲ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟರ ಚುನಾವಣೆಯು ಕಳೆದ ತಾ॥ 7ರ ಸಾಯಂಕಾಲ ನಡೆದಿತು. 21 ಜನ ಮೆಂಬರುಗಳು ಬಂದಿದ್ದರು. ಉಮೇದುವಾರರಾಗಿ ನಿಂತಿದ್ದ ಮ॥ ಗಳಾದ ಪುರುಷೋತ್ತಮಾನಂದಗಿರಿ ಗೋಸ್ವಾಮಿಯವರು ಪಿ. ಎಸ್. ಅನಂತರಾಯರು, ವಾಸುದೇವಯ್ಯನವರು, ಟಿ. ಎಸ್. ಅಲ್ಲಿಖಾನ್‌ರವರು ಡಾ॥ ಟಿ. ಎಸ್. ಸಿದ್ದಪ್ಪನವರು ಈ ಐವರುಗಳಲ್ಲಿ ಗೌ॥ ಸಿದ್ದಪ್ಪನವರು ಉಮೇದುವಾರಿಯಿಂದ ನಿವೃತ್ತರಾಗುತ್ತ ಉಳಿದವರಲ್ಲಿ ಮಿ॥ ಅಲ್ಲಿಖಾನರವರಿಗೆ 11 ಓಟುಗಳೂ, ಮ॥ ಅನಂತರಾಯರಿಗೆ 10 ಓಟುಗಳೂ ಬರಲಾಗಿ ಮಿ॥ ಅಲ್ಲಿಖಾನರವರು ಉತ್ತೀರ್ಣರಾದರೆಂದು ಕೇಳುತ್ತೇವೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೊಲೆ ವಿಚಾರಣೆಯು ಸೆಷನ್ಸು ಜಡ್ಜರಿಂದ ನಡಿಸಲ್ಪಟ್ಟು ಕಳೆದ ತಾ॥ 3 ರಲ್ಲಿ ಅಪರಾಧಿ ಕೃಷ್ಣರಾಯನಿಗೆ ಕಳ್ಳತನಕ್ಕಾಗಿ 10 ವರ್ಷ ಕಠಿಣ ಕಾರಾಗೃಹವಾಸದ ಶಿಕ್ಷೆಯೂ ವಿಧಿಸಲ್ಪಟ್ಟಿತು. ಜಡ್ಜರು ತಮ್ಮ ಜಡ್ಜ್‌ಮೆಂಟಿನಲ್ಲಿ ಅಪರಾಧಿಯ ಮೇಲೆ ಆಪಾದಿಸಲ್ಪಟ್ಟಿರುವ ತಪ್ಪನ್ನು ನಡೆಸಿದುದುಂಟೆಂದು ನನ್ನ ಮನಸ್ಸಿಗೆ ದೃಢಪಟ್ಟಿರುತ್ತಾದುದರಿಂದ ಆವನ ಅತ್ಯಂತ ಹೇಯವಾದ ಕೃತ್ಯಕ್ಕೆ ಧರ್ಮಶಾಸ್ತ್ರ ಅಂದರೆ ಲಾದಲ್ಲಿ ಹೇಳಲ್ಪಟ್ಟಿರುವ ಅತ್ಯುತ್ಕಟವಾದ ಶಿಕ್ಷೆಯನ್ನು ವಿಧಿಸಿರುತ್ತೇನೆಂದು ತಿಳಿಸಿರುವರು. ಇದರ ಮೇಲೆ ಚೀಫ್ ಕೋರ್ಟಿಗೆ ಅಪೀಲು ಮಾಡಲ್ಪಡಬಹುದು. ಅಲ್ಲಿಯ ಪರ್ಯವಸಾನವು ನಿರೀಕ್ಷಣೀಯವಾಗಿದೆ.

ಕೃಷ್ಣರಾಜಸಾಗರ ಕಟ್ಟೆಯನ್ನು ಎತ್ತರಿಸುವ ವಿಚಾರದಲ್ಲಿ ಮದ್ರಾಸು ಸರ್ಕಾರದವರಿಗೂ ನಮ್ಮ ಪ್ರಭುತ್ವದವರಿಗೂ 1892 ನೆ ಇಸವಿಯಿಂದ ನಡೆಯುತ್ತಿದ್ದ ವಿವಾದಾಂಶವು ಪಂಚಾಯಿತರಿಂದ ಬಗೆಹರಿಸಲ್ಪಟ್ಟ ಪ್ರಕಾರ ಒಡಂಬಡಿಕೆಯ ಪತ್ರವು ಬರೆಯಲ್ಪಟ್ಟು ಅದಕ್ಕೆ ಮದ್ರಾಸು ಸರ್ಕಾರದ ಪರವಾಗಿ ಗೌರ್ನರಾಗಿದ್ದ ಲಾರ್ಡ್ ವೆಲಿಂಗ್‌ಡನ್‌ರವರ ಮತ್ತು ನೀರಾವರಿ ಶಾಖಾಮೆಂಬರಾದ ಆನರಬಲ್ ಮ॥ ಸಿ. ಪಿ. ರಾಮಸ್ವಾಮಯ್ಯರ್‌ರವರ ಹಸ್ತಾಕ್ಷರವೂ ನಮ್ಮ ಸಂಸ್ಥಾನದ ಪರವಾಗಿ ಶ್ರೀಮನ್ ಮಹಾರಾಜರವರ ಮತ್ತು ದಿವಾನ್ ಮ॥ ಬಾನರ್ಜಿಯವರ ಹಸ್ತಾಕ್ಷರಗಳೂ ಹಾಕಲ್ಪಟ್ಟಿವೆ. ಒಡಂಬಡಿಕೆಯ ವಿಷಯಗಳು ಮಾತ್ರ ಹೊರಬಿದ್ದಿಲ್ಲ.

ಹಳೇಬೀಡು ಮತ್ತು ಸೋಮನಾಥಪುರದ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ 27,000 ರೂ. ಗಳು ಬೇಕಾಗುತ್ತವೆಂದು ಮುಜರಾಯಿ ಸೆಕ್ರೆಟರಿಯವರು ಸರ್ಕಾರಕ್ಕೆ ತಿಳಿಸಿದ್ದುದರ ಮೇಲೆ, ಆ ಮೊಬಲಗು ಹೆಚ್ಚೆಂದೂ, ಅವುಗಳನ್ನು ರಿಪೇರಿಮಾಡಲು ತಗಲುವಷ್ಟು ಹಣವನ್ನು ಪರೀಕ್ಷೆಯಿಂದ ತಿಳುಹುವ ಬಗೆಗೆ ರೆವಿನ್ಯೂ ಮತ್ತು ಮುಜರಾಯಿ ಕಮಿಷನರೂ, ಚೀಫ್ ಇಂಜನೀಯರೂ, ಅಪ್ಯನ್ವೇಷಣ ಶಾಖಾಧಿಕಾರಿಗಳೂ, ಮೈಸೂರು ಮತ್ತು ಹಾಸನದ ಡೆಪ್ಯುಟಿ ಕಮಿಷನರುಗಳೂ ಇವರುಗಳಿಂದ ಕೂಡಿದ ಒಂದು ಸಂಘವು ಸರ್ಕಾರದಿಂದೇರ್ಪಡಿಸಲ್ಪಟ್ಟಿದ್ದಿತು. ಈ ಕಮಿಟಿಯ ಮೆಂಬರುಗಳು ಮೇಲ್ಕಂಡ ದೇವಸ್ಥಾನಗಳನ್ನು ಪರೀಕ್ಷಿಸಿ ಸರ್ಕಾರಕ್ಕೆ ವರದಿಯನ್ನು ಮಾಡಿರುವುದಾಗಿ ಕೇಳುತ್ತೇವೆ.

ಸ್ವೀಕಾರ.

(1) ರಾಜಧಾನಿಯ ಮ॥ ಗುರುಕಾರ್ ಮಲ್ಲಪ್ಪನವರ ಪುತ್ರಿಯ ಗರ್ಭಾಧಾನ ಮಹೋತ್ಸವದಲ್ಲಿ 1 ರೂ. (2) ತಿಪಟೂರು ತಾ॥ ಹಂದಗೆರೆಯಲ್ಲಿರುವ ಬೆಳಗುಂಬದ ಮಠದ ಮ॥ ಚನ್ನವೀರಯ್ಯನವರ ಮಗ ರುದ್ರಯ್ಯನವರ ವಿವಾಹದಲ್ಲಿ ತಿಪಟೂರು ಮ॥ ಗಿರಿಯಪ್ಪನವರ ಮೂಲಕ 1 ರೂ. ಶ್ರೈ॥ ವೈ॥ ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ಕಳುಹಲ್ಪಟ್ಟಿದನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.—ಪ. ಪ್ರ.

ವರ್ತಮಾನ ಸಂಗ್ರಹ

ಕಲ್ಕತ್ತಾ ಖಿಲಾಫತ್ ಆಫೀಸನ್ನು ಪರಿಶೋಧಿಸಿದಾಗ ಒಂದು ತಲೆದಿಂಬಿನೊಳಗೆ ಬಚ್ಚಿಟ್ಟಿದ್ದ ಒಂದು ಬಂದೂಕವು ಸಿಕ್ಕಿದುದರಿಂದ ಆ ಸಂಘದ ಸ್ವಯಂಸೇವಕರ ಮುಖ್ಯಸ್ಥನೊಬ್ಬನನ್ನು ಅರೆಸ್ಟ್ ಮಾಡಿರುತ್ತಾರೆ.

ಸಿಮ್ಲಾ ಪಟ್ಟಣದಲ್ಲಿ ನಡೆಯಬೇಕಾಗಿರುವ ಭರತಖಂಡದ ವಿಶ್ವವಿದ್ಯಾಲಯಗಳ ಸಮ್ಮೇಳನಕ್ಕೆ ಹದಿನೈದು ವಿಶ್ವವಿದ್ಯಾಲಯಗಳ ಪ್ರತಿನಿಧಿಗಳು ಬರುವರೆಂದು ತಿಳಿದುಬಂದಿದೆ. ನಮ್ಮ ಮೈಸೂರು ವಿಶ್ವವಿದ್ಯಾಲಯದ ಕಡೆಯಿಂದ ವೈಸ್ ಛಾನ್ಸಲರೂ ಮಹಾರಾಜಾಕಾಲೇಜು ಮತ್ತು ಬೆಂಗಳೂರು ಸೆಂಟ್ರಲ್ ಕಾಲೇಜ್‌ಗಳ ಪ್ರಿನ್ಸಿಪಾಲರೂ ಹೋಗುವರೆಂದು ತಿಳಿದುಬಂದಿದೆ.

ತಿರುವನಂತಪುರದಲ್ಲಿ ಪೋಲೀಸ್ ಕಮಿಷನರ ಆಫೀಸಿನಲ್ಲಿ ೪೦ ರೂಪಾಯಿ ವೇತನಬರುವ ಒಂದು ಗುಮಾಸ್ತನ ಸ್ಥಾನವು ಬಿಡುವಾಗಿರಲು ಆ ಸ್ಥಾನಕ್ಕೆ ಬಿ. ಎ. ಪ್ಯಾಸಾದವರು ಅರ್ಜಿ ಹಾಕಿಕೊಳ್ಳಬಹುದೆಂದು ಪ್ರಕಟವಾದೊಡನೆ ಬಿ.ಎ.ಬಿ.ಎಲ್ ಮತ್ತು ಎಂ. ಎ ಪ್ಯಾಸಾದವರೇ ಸುಮಾರು ನೂರು ಮಂದಿಗಳಿಗೆ ಹೆಚ್ಚಾಗಿ ಅರ್ಜಿಗಳನ್ನು ಹಾಕಿಕೊಂಡಿರುವರಂತೆ! ಇದೀಗ ಪರಾವಲಂಬನೆಯ ಪರಾಕಾಷ್ಠತೆಯೆಂಬುದು! ಕೇವಲ ನೌಕರಿಯಲ್ಲಿ ಗುರಿಯನ್ನಿಟ್ಟು ಅರ್ಥವ್ಯಯವನ್ನೂ ದೇಹಶ್ರಮವನ್ನೂ ಲಕ್ಷಿಸದೆ ವಿದ್ಯಾಭ್ಯಾಸಂಗಮಾಡುವವರಿಗೆ ಇದೊಂದು ನಿದರ್ಶನವಾಗಿದೆ.

ಹಿಂದೂಮಹಮ್ಮದೀಯ ಮುಖಂಡರ ಪ್ರಯತ್ನವಿಶೇಷದಿಂದ ಹಿಂದೂಮಹಮ್ಮದೀಯರಿಗಿರುವ ಅಂತರಂಗಿಕ ದ್ವೇಷವು ಕಡಿಮೆಯಾಗುತ್ತಿರುವುದೆಂದು ವಾರ್ತಾಪತ್ರಿಕೆಗಳು ಹೇಳುತ್ತಿರುವುವಾದರೂ ಕಳೆದ 22 ನೆಯ ತಾರೀಕಿನಲ್ಲಿ ಬರೋದ ಸಂಸ್ಥಾನಕ್ಕೆ ಸೇರಿದ ವಿಜಯನಗರದಲ್ಲಿ ಅನಾಮಧೇಯರಾದ ಮಹಮ್ಮದೀಯರು ಕೆಲರು ಮೂರುದನಗಳನ್ನೂ ಒಂದು ಎತ್ತನ್ನೂ ಹೊಡೆದು ಗಾಯಪಡಿಸಿದುದಲ್ಲದೆ ಕೆಲ ಹಿಂದೂ ಮುಖಂಡರ ಮನೆಗಳನ್ನು ಸುಟ್ಟುಬಿಟ್ಟರು. ಇದರಿಂದ ಪರಸ್ಪರ ಜಗಳವಾಗಬಹುದೆಂಬ ಸಂದೇಹದಿಂದ ಪೋಲೀಸಿನವರು ಸದಾ ಗಸ್ತುತಿರುಗುತ್ತಿರುವರು. ಭಾರತಮಾತೆಯ ಪುತ್ರರಾದ ಹಿಂದೂಮಹಮ್ಮದೀಯಸಹೋದರರಿಗೆ ಅಲ್ಲಲ್ಲಿ ಆಗಾಗ್ಯೆ ಇಂತಹ ಭಯಂಕರಕಲಹಗಳುಂಟಾಗುತ್ತಿರುವುದನ್ನು ನೋಡಿದರೆ ಇವರು ಸ್ವರಾಜ್ಯಕ್ಕೆ ಅರ್ಹರೇ ಅಲ್ಲವೆಂದು ಧಾರಾಳವಾಗಿ ಹೇಳಬಹುದು. ಸ್ವರಾಜ್ಯಪ್ರಾಪ್ತಿಗಿನ್ನ ಮೊದಲೇ ಇಂತಹ ಅಜ್ಞಾನಮೂಲಕವಾದ ಭಯಂಕರ ಪರಿಸ್ಥಿತಿಯು ನಮ್ಮಲ್ಲಿರುವಾಗ ಇನ್ನು ಸ್ವರಾಜ್ಯಪ್ರಾಪ್ತಿಯಾದರೆ ಸುಂದೋಪಸುಂದರಂತೆ ತಾವು ತಾವೇ ಬಡಿದಾಡಿಕೊಳ್ಳುವರೆಂದು ಕೆಲವು ದೂರದರ್ಶಿಗಳು ಹೇಳುತ್ತಿದ್ದಾರೆ. ಇದು ವಿಚಾರಣೀಯವಾದ ಅಂಶವಾಗಿದೆ.

ಕಳೆದ ಯುದ್ಧಕಾಲದಲ್ಲಿ ಲಂಡನ್ನಗರದ ಮೂರು ಪ್ರಸಿದ್ಧ ಹೋಟಲುಗಳನ್ನು ಸರ್ಕಾರದವರು ಯುದ್ಧಸಾಮಗ್ರಿಗಳನ್ನು ತಯಾರಿಸುವುದಕ್ಕೂ ಘಾಯಹೊಂದಿದವರ ಚಿಕಿತ್ಸೆಗೂ ಬಾಡಿಗೆಗೆ ತೆಗೆದುಕೊಂಡಿದ್ದು ಯುದ್ಧವು ಮುಗಿದಮೇಲೆ ವಾಪಸ್ ಬಿಟ್ಟುಕೊಟ್ಟರು. ಈ ಅವಧಿಯಲ್ಲಿ ವ್ಯಾಪಾರವಿಲ್ಲದಿದ್ದುದರಿಂದ ಭಾಗದಾರರಿಗೆ ವರಮಾನವನ್ನು ಹಂಚಿಕೊಡುವುದಕ್ಕಾಗಲಿಲ್ಲವಾಯ್ತು. ಯುದ್ಧವು ಮುಗಿದನಂತರವೂ ಮೂಲಧನವನ್ನು ಎರಡರಷ್ಟು ಮಾಡಿ ಕೆಲಸವನ್ನು ಮಾಡಿದರೂ ಹೆಚ್ಚುಸಮಯ ವ್ಯಾಪಾರವು ನಿಂತುಹೋಗಿದ್ದುದರಿಂದ ಪುನಹ ವ್ಯಾಪಾರವು ಸರಿಯಾಗಿ ಕುದುರಲಿಲ್ಲ. ಆದುದರಿಂದ ಇದರ ನಷ್ಟಪರಿಹಾರಾರ್ಥವಾಗಿ ಸರ್ಕಾರದವರು 5½ ಲಕ್ಷ ಪೌನುಗಳನ್ನು ತೆರಬೇಕೆಂದು ಹೋಟಲುಗಳ ಕಂಪನಿಯವರು ದಾವಾ ದಾಖಲುಮಾಡಿದುದರ ಮೇಲೆ ವಿಮರ್ಶೆಯಾಗಿ ಸರ್ಕಾರದವರು ಕಂಪನಿಗೆ 92,654 ಪೌನುಗಳನ್ನು ಕೊಡಬೇಕೆಂದು ತೀರ್ಮಾನವಾಯಿತು. ಆ ಹೋಟಲುಗಳನ್ನು ಸರ್ಕಾರದವರು ಉಪಯೋಗಿಸುತ್ತಿದ್ದಾಗ ಪ್ರತಿವರ್ಷವೂ ಕೊಟ್ಟ ಮೊಬಲಗು 1,08,158 ಪೌನುಗಳು. ಆ ಕಟ್ಟಡಗಳನ್ನು ಕಂಪನಿಯವರಿಗೆ ಬಿಟ್ಟುಕೊಟ್ಟಾಗ ಅವುಗಳ ರಿಪೇರಿಗಾಗಿ ಸರ್ಕಾರದವರು 1,10,000 ಪೌನುಗಳನ್ನು ಕೊಟ್ಟಿರುವರು.

ಕಳೆದ ತಿಂಗಳಿನ ಕೊನೆಭಾಗದಲ್ಲಿ ತೂತುಗುಡಿ ಎಂಬ ನಗರದಲ್ಲಿ ಸ್ತ್ರೀಯರ ಒಂದು ಮಹಾಸಭೆಯು ಸೇರಿದ್ದಿತು. ಆ ಸಭೆಯಲ್ಲಿ ಕಾಂಗ್ರೆಸ್ ಪರವಾಗಿ ಕಾರ್ಯವನ್ನು ಮಾಡುವ ಶ್ರೀ ಲಕ್ಷ್ಮೀಅಮ್ಮಾಳ್ ಎಂಬ ವಿದುಷಿಯು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದಳು. ಆಗ "ನಮ್ಮ ಭಾರತವರ್ಷೀಯರು ವಿದೇಶದ ಬಟ್ಟೆಗಳಿಗಾಗಿ ಪ್ರತಿವರ್ಷವೂ ತಮ್ಮ ಕಷ್ಟಾರ್ಜಿತವಾದ 60 ಕೋಟಿ ರೂಪಾಯಿಗಳನ್ನು ವೆಚ್ಚಮಾಡುತ್ತಿರುವರು. ಈಗಿನ ವಿದ್ಯಾಭ್ಯಾಸಕ್ರಮದಿಂದಂತು ಹೆಚ್ಚಾಗಿ ನಮ್ಮ ದೇಶದ ಯುವಕರು ಸರ್ಕಾರಿ ನೌಕರರಾಗುವುದಕ್ಕೆ ತಯಾರಾಗುತ್ತಾರೆ. ಸ್ವಾವಲಂಬನೆಯ ಭಾವವು ಸ್ವಪ್ನಪ್ರಾಯವಾಗಿದೆ. ನಮ್ಮ ದೇಶದ ಪ್ರತಿಯೊಬ್ಬ ಸ್ತ್ರೀಯೂ ಸ್ವಾತಂತ್ರ್ಯರಕ್ಷಣೆಗಾಗಿ ತನ್ನ ಪತಿಯನ್ನೂ ಪುತ್ರರನ್ನೂ ಅರ್ಪಿಸಲು ಸನ್ನದ್ಧಳಾಗಿರಬೇಕು. ವಿದೇಶವಸ್ತುಗಳಿಗೆ ಬಹಿಷ್ಕಾರವನ್ನು ಹಾಕಿ ತನ್ನ ಮಕ್ಕಳಲ್ಲಿ ಭಾರತಮಾತೆಯ ಸೇವೆಯನ್ನು ಮಾಡುವ ಜೋಷನ್ನುಂಟುಮಾಡಬೇಕು'' ಎಂದು ಹೇಳಿದಳು. ವಿದೇಶವಸ್ತುಗಳ ಥಾಳಥಳ್ಯಕ್ಕೆ ಮರುಳಾಗಿ ಪರದೇಶಕ್ಕೆ ಸ್ವಾಹಾವಾಗುತ್ತಿರುವ ಅಪಾರವಾದ ನಮ್ಮ ದೇಶದ ದ್ರವ್ಯವು ನಮ್ಮ ದೇಶದಲ್ಲೇ ನಿಲ್ಲಬೇಕಾದರೆ ನಮ್ಮ ದೇಶೀಯರಲ್ಲಿ ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಷೋಕುಮಾಡಬೇಕೆಂಬ ಈ ಅದ್ಭುತ ನವನಾಗರಿಕ ಭಾವವು ಹೋಗಬೇಕು. ಅಷ್ಟಾದ ಹೊರತು ನಮ್ಮ ದೇಶಕ್ಕೆ ದಾರಿದ್ರ್ಯವು ತಪ್ಪದು.

1924 ನೇ ಮೇ 1 ನೇ ತಾರೀಖಿಗೆ ಆಖೈರಾದ ವಾರಕ್ಕೆ ವರ್ತಮಾನ ಪತ್ರಿಕೆಗಳಿಗೆ ಕಳುಹಿಸುವ ಗೋಷ್ವಾರೆಗಳು.

1. ಬೆಂಗಳೂರು ಡಿಸ್ಟ್ರಿಕ್ಟಿನ ರೆವಿನ್ಯೂ ಆಫೀಸುಗಳ ಜವಾನರ ಶಿಬ್ಬಂದಿಯಲ್ಲಿ ಮಾಹೆಯಾನಾ ಇನ್ನೂ 35 ರೂಪಾಯಿಯ ವಿಗತೆಯಾಗುವಂತೆ ಖರ್ಚನ್ನು ಮತ್ತಷ್ಟು ಜೋತಾಮಾಡಿದೆ.

2. ರೆವಿನ್ಯೂ ಆಫೀಸರುಗಳು ಮಾಡುವ ಸಂಚಾರವನ್ನು ಕ್ರಮಪಡಿಸುವುದಕ್ಕೂ ಮತ್ತು ಒಂದಾವರ್ತಿಯ ಸಂಚಾರದಲ್ಲಿ ಎಲ್ಲಾ ಬಾಬುಗಳ ಕೆಲಸಕ್ಕೂ ಗಮನಕೊಡಲು ಸಾಧ್ಯವಾದಾಗ ಬೇರೆ ಬೇರೆ ಬಾಬುಗಳ ಕೆಲಸಕ್ಕಾಗಿ ಒಂದೇ ಸ್ಥಳಕ್ಕೆ ಬೇರೆ ಬೇರೆ ತಾರೀಖುಗಳಲ್ಲಿ ಪ್ರತ್ಯೇಕವಾಗಿ ಸಂಚಾರಮಾಡುವುದನ್ನು ತಪ್ಪಿಸುವುದಕ್ಕಾಗಿಯೂ, ರೆವಿನ್ಯೂ ಇಲಾಖೆಯ ಆಫೀಸರುಗಳು ತಮ್ಮ ತಮ್ಮ ಸಂಚಾರದ ಕಾರ್ಯಕ್ರಮಗಳನ್ನು ತಯಾರುಮಾಡುವ ವಿಷಯದಲ್ಲಿ ತಿಳುವಳಿಕೆಗಳನ್ನು ಕೊಟ್ಟು ಹುಕುಮನ್ನು ಸಾದರ್ಮಾಡಿದೆ.

3. ಸದ್ಯದಲ್ಲಿ ಬ್ರಹ್ಮಾದಾಯದ ಮತ್ತು ದೇವಾದಾಯದ ಇನಾಮತಿಗಳು ಒಂದೇ ಕಡೆ ಸೇರಿಕೊಂಡಿರುವುದರಿಂದ ಸ್ವಲ್ಪ ಕಷ್ಟವುಂಟಾಗಿರುವ ಪ್ರಯುಕ್ತ ಸದರಿ ಇನಾಮತಿಗಳನ್ನು ಅವುಗಳ ಅನುಭವಕ್ಕನುಸಾರವಾಗಿ ಪ್ರತ್ಯೇಕವಾಗಿ ನಿರ್ದೇಶಪಡಿಸಬೇಕೆಂದು 1922 ನೇ ಅಕ್ಟೋಬರ್ ತಿಂಗಳಿನಲ್ಲಿ ನಡೆದ ಪ್ರಜಾಪ್ರತಿನಿಧಿಸಭೆಯ ಅಧಿವೇಶನದಲ್ಲಿ ಅರಿಕೆಯಾಗಿತ್ತು. ಆಯಾ ಜಮೀನುಗಳ ಅನುಭವದಾರರು ತಮ್ಮ ತಮ್ಮ ಹಿಡುವಳಿಯಲ್ಲಿರುವ ಜಮೀನುಗಳ ವಿಸ್ತೀರ್ಣದ ವಿಷಯದಲ್ಲಿ ಒಪ್ಪಂದಮಾಡಿಕೊಂಡಿರುವ ಸಂದರ್ಭಗಳಲ್ಲಿ, ಹಾಗೆ ಸೇರಿಹೋಗಿರುವ ದೇವಾಲಯದ ಮತ್ತು ಬ್ರಹ್ಮಾದಾಯದ ಜಮೀನುಗಳನ್ನು ಬೇರೆ ಬೇರೆ ನಂಬರುಗಳನ್ನಾಗಿ ನಿರ್ದೇಶಪಡಿಸತಕ್ಕದೆಂದು ವಿಧಾಯಕಮಾಡಿ ಸರ್ಕಾರದವರು ಹುಕುಮನ್ನು ಸಾದರ್ಮಾಡಿದ್ದಾರೆ.

4. ವೈದಾಳ ಕೆರೆಯಿಂದ ತುಮಕೂರು ಟೌನಿಗೆ ನೀರು ಸರಬರಾಯಿಯ ಬಗ್ಗೆ 4,72,000 ರೂಪಾಯಿಯು ಖರ್ಚಾಗುವ ಒಂದು ಕಾಂಗಾರಿಯನ್ನು, ಸರ್ಕಾರದವರು ನೇಮಿಸುವ ಒಬ್ಬ ನಿಪುಣರು ಪರಿಶೋಧಿಸಬೇಕೆಂಬ ಷರತ್ತಿಗೆ ಒಳಪಡಿಸಿ, ಮಂಜೂರ್ಮಾಡಿದೆ. ಸದರಿ ಕಾಂಗಾರಿಯ ಖರ್ಚನ್ನು ಸರ್ಕಾರದವರೂ ಮತ್ತು ತುಮಕೂರು ಟೌನಿನ ಮ್ಯುನಿಸಿಪಲ್ ಕೌನ್ಸಿಲಿನವರೂ ಸಮಭಾಗವಾಗಿ ಕೊಡತಕ್ಕದ್ದು; ಸರ್ಕಾರದಿಂದ ಕೊಡುವ ಹಣವು ಕೆಲವು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

5. ತಂಗಡಿಚಕ್ಕೆ ಮತ್ತು ಇತರ ಚಿಲ್ಲರೆ ಫಾರೆಸ್ಟ್ ದಿನಸಿಗಳ ಹರಾಜುಗಳನ್ನು ನಡೆಸುವ ಕೆಲಸವನ್ನು ಇದುವರವಿಗೆ ಫಾರೆಸ್ಟ್ ಇಲಾಖೆಯ ಆಫೀಸರುಗಳಿಗೇನೇ ಪೂರ್ತಿಯಾಗಿ ವಹಿಸಿತ್ತು. ಅದನ್ನು ಇನ್ನು ಮುಂದೆ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರವರಾಗಲಿ ಅಥವಾ ಅವರು ಹೆಡ್ ಕ್ವಾರ್ಟರಿನಿಂದ ಗೈರ್‌ಹಾಜರಾದ ಸಂದರ್ಭದಲ್ಲಿ ಅವರಿಂದ ನೇಮಿಸಲ್ಪಡುವ ಒಬ್ಬ ಸೀನಿಯರ್ ಅಸಿಸ್ಟೆಂಟ್ ಕಮಿಷನರವರಾಗಲಿ ನಡೆಸತಕ್ಕದ್ದು. ಹರಾಜನ್ನು ನಡೆಸುವ ಆಫೀಸರಿಗೆ ಸಹಾಯಮಾಡಲು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಹರಾಜು ನಡೆಯುವ ಸ್ಥಳದಲ್ಲಿ ಹಾಜರಿರತಕ್ಕದ್ದು.

6. ಭೂಗರ್ಭಶೋಧನದ ಇಲಾಖೆಯ ಆಫಿಸಿಯೇಟಿಂಗ್ ಡೈರೆಕ್ಟರು ಕ್ರೋಂ ಅದುರನ್ನು ಗಣಿಯಿಂದ ತೆಗೆದು ರಫ್ತಿಸುವ ವಿಷಯದಲ್ಲಿದ್ದ ನಿರ್ಬಂಧಗಳನ್ನು ಈಚೆಗೆ ನಿವಾರಣೆಮಾಡಿರುವುದರಿಂದ ಅದುರನ್ನು ತೆಗೆದು ರಫ್ತಿಸಲು ಪ್ರಾಸ್ಪೆಕ್ಟಿಂಗ್ ಲೈಸೆನ್ಸ್‌ಗಳಿಗೋಸ್ಕರ ಬರತಕ್ಕ ದರಖಾಸ್ತುಗಳ ಸಂಖ್ಯೆಯು ಬಹಳವಾಗಿ ಹೆಚ್ಚಿರುತ್ತದೆ. ಎಂದು ಸರ್ಕಾರದವರ ಅವಗಾಹನೆಗೆ ತಂದು, ಬೇರೆ ಬೇರೆ ತರಗತಿಯ ದರಖಾಸ್ತುದಾರರಿಂದ ಬಂದಿರತಕ್ಕ ದರಖಾಸ್ತುಗಳಲ್ಲಿ ಯಾವುವು ಮೊದಲು ಬಂದಂತೆ ಭಾವಿಸಲ್ಪಡಬೇಕೆಂಬ ವಿಷಯದಲ್ಲಿ ಸರಿಯಾದ ತಿಳುವಳಿಕೆಗಳನ್ನು ಕೋರಿರುತ್ತಾರೆ. ಆದ ಪ್ರಯುಕ್ತ, ಸರ್ಕಾರದವರು ಇದರಡಿ ಕಂಡಂತೆ ಹುಕುಂಸಾದರ್ಮಾಡಿರುತ್ತಾರೆ.

1. ತಾವು ದರಖಾಸ್ತುಮಾಡುವ ಕಾಲದಲ್ಲಿ ಅರ್ಹತೆಯ ಸರಿಯಾದ ಸರ್ಟಿಫಿಕೇಟನ್ನು ಪಡೆದಿರುವವರಿಂದ ಬಂದ ದರಖಾಸ್ತುಗಳನ್ನು ಇತರ ದರಖಾಸ್ತುಗಳಿಗೆ ಮೊದಲು ತೆಗೆದುಕೊಳ್ಳತಕ್ಕದ್ದು.

2. ಸರ್ಕಾರದವರು ಮೇಲ್ಕಂಡ ಮೇರೆ ನಿರ್ಬಂಧಗಳನ್ನು ತೆಗೆದುಹಾಕಿದುದಕ್ಕಿನ್ನ ಮೊದಲೇ ಬಂದಿದ್ದ ದರಖಾಸ್ತುಗಳನ್ನು ರದ್ದಾದಂತೆ ಭಾವಿಸಬೇಕು. ಅವು ಮುಂಚಿತವಾಗಿ ಬಂದಂತೆ ಭಾವಿಸಲ್ಪಡಕೂಡದು.

3. ದರಖಾಸ್ತುದಾರನು ಬಂಡವಾಳವುಳ್ಳವನೇ ಎಂಬ ವಿಷಯದಲ್ಲೂ ಮತ್ತು ಅವನ ಸದುದ್ದೇಶದ ವಿಷಯದಲ್ಲೂ ಸರ್ಕಾರದವರಿಗೆ ತೃಪ್ತಿಕರವಾಗಿ ಕಂಡು ಬರದೇ ಇರುವಪಕ್ಷದಲ್ಲಿ ಅಂಥ ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸತಕ್ಕ ಅಂಶವನ್ನು ಸರ್ಕಾರದವರ ವಿವೇಚನೆಗೆ ಬಿಟ್ಟಿರತಕ್ಕದ್ದು.

4. ಅದುರನ್ನು ಬಿಕರಿಮಾಡದೆ ಅಥವಾ ರೈಲಿಗೆ ಹಾಕದೆ ಇದ್ದಾಗ್ಯೂ ಅದನ್ನು ಬ್ಲಾಕಿನಿಂದ ಸಾಗಿಸುವುದಕ್ಕೆ ಮೊದಲೇ ಅದರ ಮೇಲೆ ಕೊಡತಕ್ಕ ತೆರಿಗೆಯನ್ನು ವಸೂಲ್ಮಾಡತಕ್ಕದ್ದು.

ವಿದ್ಯಾಭ್ಯಾಸದ ಶಾಖೆ.

1924 ನೇ ಏಪ್ರಿಲ್ 29 ಕ್ಕೆ ಆಖೈರಾಗುವ ವಾರದ ವರ್ತಮಾನ ಪತ್ರಿಕೆಗಳಿಗೆ ಕಳುಹಿಸುವ ಗೋಷ್ವಾರೆಗಳು.

7. ತಾಲ್ಲೂಕಿನ ಪಹರೆ ಕೆಲಸದ ಮೇಲೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗವಾದ ಸೈನ್ಯದ ಇಲಾಖೆಗೆ ಸೇರಿದ ನಾನ್‌ಕಮಿಷನ್ಡ್ ಆಫೀಸರುಗಳ ಮತ್ತು ಇತರ ನೌಕರಮಾನೆಯರ ಮಕ್ಕಳು ಒಂದು ಮಿಡಲ್ ಸ್ಕೂಲಿನಿಂದ ಹೋಗಿ ಮತ್ತೊಂದು ಸ್ಕೂಲಿಗೆ ಸೇರುವಾಗ ಸೇರಿಸಿಕೊಳ್ಳುವ ಫೀಜನ್ನೂ (ಅಡ್ಮಿಷನ್‌ಫೀ) ಪುನಃ ಸೇರಿಸಿಕೊಳ್ಳುವ ಫೀಜನ್ನೂ ಕೊಡುವುದು ಅವಶ್ಯಕವಿಲ್ಲವೆಂದು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರ ಶಿಫಾರಸನ್ನು ಮಂಜೂರುಮಾಡಿ ಹುಕುಂ ಕೊಡಲಾಗಿದೆ. (ಹುಕುಂ ನಂ॥ ಇ 5338-4 ಎಜ್ಯುಕೇಷನ್ 288-23-2 ತಾರೀಖು 24-28 ನೆ ಏಪ್ರಿಲ್ 1924)

8. ಮಲೆನಾಡು ಪ್ರಾಂತ್ಯದಲ್ಲಿ ಬೇಸಿಗಾಲ ಮತ್ತು ಮಳೆಗಾಲಗಳಲ್ಲಿ ಪ್ರಾಥಮಿಕ ಪಾಠಶಾಲೆಗಳಲ್ಲಿ (ಪ್ರೈಮರಿ ಸ್ಕೂಲುಗಳಲ್ಲಿ) ಕೆಲಸಮಾಡುವ ಕಾಲವು ಅನಾನುಕೂಲವಾಗಿರುತ್ತೆಂದೂ ಪಾಠಶಾಲೆಗಳಲ್ಲಿ ಬೆಳಗ್ಗೆ 7-30 ರಿಂದ 10-30 ವರೆಗೆ ಕೆಲಸಮಾಡುವುದಕ್ಕೆ ಬದಲಾಗಿ ಬೆಳಗ್ಗೆ 8 ಗಂಟೆಯಿಂದ 11 ಗಂಟೆಯವರೆಗೆ ಕೆಲಸಮಾಡುವಂತೆ ಏರ್ಪಡಿಸಿದರೆ ಹುಡುಗರ ಹಾಜರಾತಿಯು ಹೆಚ್ಚುವುದೆಂದೂ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು ಮಾಡಿರುವ ಶಿಫಾರಸನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ. ಹುಕ್ಕುಂ ನಂ॥ ಇ 5472-3 ಎಜ್ಯುಕೇಷನ್ 126-23-8 ತಾರೀಖು 26 ನೆಯ ಏಪ್ರಿಲ್ 1924.

9. ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಶಿಫಾರಸಿನ ಮೇಲೆ ಬೆಂಗಳೂರು ಸೆಂಟ್ರಲ್ ಕಾಲೇಜ್ ಭೂಗರ್ಭಶಾಸ್ತ್ರದ ಪ್ರೊಫೆಸರಾದ ಮಿ॥ ಪಿ. ಸಂಪತ್ತೈಯ್ಯಂಗಾರ್ ಎಂ. ಎ. ಯವರು ಕಾಶಿಯಲ್ಲಿ 1925 ನೆ ಇಸವಿ ಜನವರಿ ತಿಂಗಳಲ್ಲಿ ನಡೆಯುವ "ಇಂಡಿಯನ್ ಸೈನ್ಸ್ ಕಾಂಗ್ರೆಸ್" ಯಾನೆ ವಿಜ್ಞಾನಶಾಸ್ತ್ರದ ಸಮ್ಮೇಳನಕ್ಕೆ ಸರ್ಕಾರದ ಪರವಾಗಿ ಹೋಗಿ ಬರಲು ಅಪ್ಪಣೆ ಕೊಡಲಾಗಿದೆ. (ಹುಕ್ಕುಂ ನಂ॥ ಇ 5620-1 ಎಜ್ಯುಕೇಷನ್ 39-23-27 ತಾರೀಖು 30ನೆ ಏಪ್ರಿಲ್ 1924.)

1924 ನೆಯ ಮೇ 1 ಕ್ಕೆ ಆಖೈರಾಗುವ ವಾರದಬಗ್ಗೆ ವರ್ತಮಾನಪತ್ರಿಕೆಗಳಿಗೆ ಕೊಡುವ ಗೋಷ್ವಾರೆಯ ವಿಷಯ.

10. ಸರ್ಕಾರಿ ಹುಕುಂ ನಂ. ಪೈ. 5992-4 ಎಸ್. ಎ. 108-23-1 ತಾ॥ 25-4-1924.

ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆಯ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳಿಗೆ ತೊಂದರೆಯನ್ನು ತಪ್ಪಿಸುವುದಕ್ಕಾಗಿಯೂ, ಸ್ವಲ್ಪವೂ ಸಾವಕಾಶಮಾಡದೆ ಅವರುಗಳ ಪ್ರಯಾಣದ ಭತ್ಯದ ಮೊಬಲಗನ್ನು ಪಾವತಿಮಾಡುವ ಬಗ್ಗೆ ಏರ್ಪಾಡುಮಾಡುವುದಕ್ಕಾಗಿಯೂ, ಸದರಿ ಮೊಬಲಗಿನ ವಿಚಾರವಾಗಿ ಬಂದ ಹಕ್ಕುಗಳನ್ನು ಅಂಗೀಕರಿಸಿ, ಆಯಾ ಅಧಿವೇಶನದ ಆಖೈರು ದಿನ ಮೊಬಲಗು ಪಾವತಿಮಾಡಲು ಏರ್ಪಾಡುಮಾಡಿದೆ.

11. ಸರ್ಕಾರಿ ಹುಕುಂ ನಂ. ಪೈ. 5996-6005 ಐ. ಟಿ. 35-23-5 ತಾ॥ 28-4-1925.

1923 ನೆಯ ಇಸವಿಯ ಪ್ರಜಾಪ್ರತಿನಿಧಿಸಭೆಯ ಅಕ್ಟೋಬರು ತಿಂಗಳ ಅಧಿವೇಶನದಲ್ಲಿ, ಮೈಸೂರು ವರಮಾನದ ತೆರಿಗೆ ರೆಗ್ಯುಲೇಷನನ್ನು ಜಾರಿಗೆ ತರುವುದರಲ್ಲಿಯೂ ವರಮಾನದ ತೆರಿಗೆಯನ್ನು ಹಾಕುವುದರಲ್ಲಿಯೂ ಇರುವ ಹಲವು ಅಕ್ರಮಗಳನ್ನು ಕುರಿತು ಕೆಲವು ಮೆಂಬರುಗಳು ಆಕ್ಷೇಪಣೆಮಾಡಿರುವುದರಿಂದ, ವರಮಾನದ ತೆರಿಗೆಯ ಕಮಿಷನರವರು ಕೆಲವು ವರಮಾನದ ತೆರಿಗೆಯ ಆಫೀಸುಗಳಲ್ಲಿ ಪರೀಕ್ಷಾರ್ಥವಾದ ಮೊಕಾಬಲೆ ಅಜಮಾಯಿಷಿ ನಡೆಸಿ ಆ ವಿಷಯದಲ್ಲಿ ರಿಪೋರ್ಟು ಕಳುಹಿಸುವಂತೆ ಸರ್ಕಾರದವರು ಅಪ್ಪಣೆಮಾಡಿದರು. ಕಮಿಷನರವರ ರಿಪೋರ್ಟನ್ನು ಪರಾಮರ್ಶಿಸಿದ ತರುವಾಯ ಮತ್ತು ಸರ್ಕಾರದವರಿಗೆ ಇರುವ ಪುನರ್ವಿಮರ್ಶೆಯ ಅಧಿಕಾರದ ಮೇರೆಗೆ ಅವರಲ್ಲಿಗೆ ಬಂದ ವಿಷಯಗಳಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಪರಿಶೋಧಿಸಿದ ನಂತರ ಈ ಕೆಳಗೆ ಕಂಡ ಹುಕುಮುಗಳನ್ನು ಸಾದರ್ಮಾಡಲಾಗಿದೆ.

1. ಹಾಜರ್ಮಾಡಿದ ಲೆಕ್ಕಗಳನ್ನು ಅಂಗೀಕರಿಸದಿರುವ ಸಂದರ್ಭಗಳಲ್ಲೆಲ್ಲಾ ಅವುಗಳನ್ನು ಅಂಗೀಕರಿಸದೆ ಇದ್ದುದಕ್ಕೆ ಕಾರಣವನ್ನು ತೋರಿಸಬೇಕು ಮತ್ತು ತಪ್ಪು ಯಾ ಲೆಕ್ಕಗಳನ್ನು ಹಾಜರ್ಮಾಡಿದ ಸಂದರ್ಭಗಳಲ್ಲಿ ಗೋಪ್ಯವಾಗಿ ವಿಚಾರಮಾಡುವುದರಮೂಲಕ ಪಡೆದ ವಾಸ್ತವವಾದ ಕೆಲವು ಸಂಗತಿಗಳ ಮೇಲೆ ತೆರಿಗೆದಾರನ ವರಮಾನವನ್ನು ಗೊತ್ತುಮಾಡಲಾಗಿದೆ ಎಂಬುದನ್ನು ತೆರಿಗೆ ವಿಧಿಸುವ ಆಫೀಸರುಗಳು ನೋಡಿಕೊಳ್ಳಬೇಕು ಮತ್ತು ಆ ವಿಚಾರಗಳ ಫಲಿತಾಂಶವನ್ನು ನಮೂದು ಮಾಡಬೇಕು. ಸದರಿ ಆಖೈರು ತೀರ್ಮಾನಗಳಿಗೆ ಆಧಾರವಾದ ಸಂಗತಿಗಳನ್ನು ಸಾಧ್ಯವಾದ ಮಟ್ಟಿಗೆ ಹುಕುಮಿನಲ್ಲಿ ನಮೂದುಮಾಡಬೇಕು. ಲೆಕ್ಕವನ್ನು ನಿರಾಕರಿಸಬಾರದು ಮತ್ತು ಲೆಕ್ಕಗಳು ನಂಬಿಕೆಗೆ ಅರ್ಹವಾಗಿಲ್ಲವೆಂದೂ, ಅಂಗೀಕರಿಸುವುದಕ್ಕೆ ಅನರ್ಹವಾಗಿವೆ ಯೆಂದೂ ಭಾವಿಸುವುದಕ್ಕೆ ಸರಿಯಾದ ಕಾರಣಗಳು (ಅವುಗಳನ್ನು ನಮೂದುಮಾಡಬೇಕು) ಇಲ್ಲದೆ ಇದ್ದಪಕ್ಷದಲ್ಲಿ ಅಂದಾಜಾದ ಒಟ್ಟು ವರಮಾನವನ್ನು ಅಂಗೀಕರಿಸಬೇಕು.

2. ವರಮಾನದ ತೆರಿಗೆಯ ಅಹವಾಲುಗಳನ್ನೂ ಅಪೀಲುಗಳನ್ನೂ ವಿಚಾರಣೆಮಾಡುವುದರಲ್ಲಿ, ಕಕ್ಷಿಗಾರರು ತಮ್ಮ ಅಹವಾಲುಗಳನ್ನು ಅರಿಕೆಮಾಡುವುದಕ್ಕೆ ಅವರಿಗೆ ಪ್ರತಿಯೊಂದು ಸೌಲಭ್ಯವನ್ನೂ ಕಲ್ಪಿಸಿಕೊಡಬೇಕು ಮತ್ತು ಅಪೀಲುಗಳನ್ನು ಪೂರ್ವಭಾವಿಯಾಗಿ ನೋಟೀಸು ಕೊಡದೆ ವ್ಯವಸ್ಥೆಮಾಡಬಾರದು.

ಅಖಿಲಭಾರತ ಆಯುರ್ವೇದ ಮಹಾಸಭೆ.

(ಕಳೆದವಾರದ ಶೇಷ.)

ಪುರಾತನ ವೈದ್ಯಧರ್ಮದಲ್ಲಿ ಅಲಕ್ಷ್ಯ. ಆಯುರ್ವೇದವು ಪರಮಾದ್ಭುತ ರೋಗಚಿಕಿತ್ಸಕವೆಂದೂ, ಆರೋಗ್ಯಸಂರಕ್ಷಕವೆಂದೂ ಈವರೆಗೆ ತಿಳಿಯಲ್ಪಟ್ಟಿದ್ದಿತು. ಈ ಮಧ್ಯೆ ಪ್ರಜಾಸಂಖ್ಯೆಯಲ್ಲಿ ನೋಡಿದಲ್ಲಿ ಈ ಕಾಲದ ಹಿಂದೂಗಳ ಆರೋಗ್ಯಸ್ಥಿತಿಯು ಎಷ್ಟೋ ಘೋರವಾಗಿದೆ ಎಂಬುದು ವ್ಯಕ್ತವಾಗುತದೆ. ಬಂಗಾಳಾದಲ್ಲಿ ಪ್ರಜಾರೋಗವು ಎಷ್ಟು ದುಸ್ಸಹವಾಗಿರುತ್ತದೆಂಬುದನ್ನು ಕೀ. ಶೇ॥ ಸಭಾರಾಮಗಣೇಶ ಜೋಕ್ಯರು ತಿಳಿಸಿದ್ದರು. ಅನಂತರ ಕರ್ನಲ್ ಯು. ಎನ್. ಮುಖರ್ಜಿಯವರು "ಮರಣ ಹೊಂದುತ್ತಿರುವ ಜಾತಿ" ಎಂದು ಬರೆದಿರುವ ಪುಸ್ತಕದಲ್ಲೂ, ರೇರುಲಾಲು ಸರ್ಕಾರದವರು "ಮರಣಹೊಂದುತ್ತಿರುವ ಜಾತಿಯು ಯಾವರೀತಿ ಮರಣಹೊಂದುವುದು" ಎಂದು ಬರೆದಿರುವ ಪುಸ್ತಕದಲ್ಲೂ ಈ ವಿಷಯಗಳೆಲ್ಲವೂ ಚರ್ಚಿಸಲ್ಪಟ್ಟಿವೆ. ಈ ಮಧ್ಯದಲ್ಲಿ ಡಕ್ಕಾ ಡಾ॥ ಕಾಮಾಕ್ಷಿಚರಣ ಬಾನರ್ಜಿಯವರು ಬಂಗಾಳಾದಲ್ಲಿ "ಹಿಂದೂಗಳ ಸ್ಥಿತಿ" ಎಂಬ ಪುಸ್ತಕವನ್ನು ಪ್ರಕಟಿಸಿರುವರು. ಅದರಲ್ಲಿ ನಮಗೆ ಉಪಯುಕ್ತವಾದ ಎಷ್ಟೋ ವಿಷಯಗಳು ತಿಳಿಸಲ್ಪಟ್ಟಿವೆ.

ಬಂಗಾಳಾದಲ್ಲಿ 1911 ನೆಯ ಸಂವತ್ಸರದಲ್ಲಿ ಹಿಂದೂ ಜನಸಂಖ್ಯೆಯು 20943309 ಇದ್ದುದು 1921 ರಲ್ಲಿ ಹೆಚ್ಚುವುದಕ್ಕೆ ಬದಲು 20809106 ಕ್ಕಿಳಿಯಿತು. ಮಹಮ್ಮದೀಯ ಜನಸಂಖ್ಯೆಯು ತಗ್ಗದೆ ಅಭಿವೃದ್ಧಿಯಾಗಿರುವುದು. ಈಗ ಅವರು ಬಂಗಾಳಾ ಜನ ಸಂಖ್ಯೆಯಲ್ಲಿ ಅರ್ಧ ಭಾಗಕ್ಕಿನ್ನ ಅಧಿಕವಾಗಿರುವರು. ಈ ನಾಶಕ್ಕೆ ಕಾರಣವು ಹಿಂದೂಗಳು ಆಯುರ್ವೇದದಲ್ಲಿ ವಿಧಿಸಲ್ಪಟ್ಟಿರುವ ಆರೋಗ್ಯ ಪದ್ಧತಿಯನ್ನು ಲಕ್ಷಿಸದೆ ಇರುವುದೆಂದು ತಿಳಿಯಬೇಕಾಗಿದೆ. ಪಾಶ್ಚಾತ್ಯ ನಾಗರಿಕತೆಯು ವ್ಯಾಪಿಸಿ, ಪಾಶ್ಚಾತ್ಯ ವೈದ್ಯ ಪದ್ಧತಿಯನ್ನನುಸರಿಸುತ್ತಿರುವುದರಿಂದ ಭಾರತದೇಶದಲ್ಲಿ ಮರಣ ಸಂಖ್ಯೆಯು ಮಿತಿವಿಾರುತ್ತಿರುವುದು. ಈಗಲೇ ತ್ವರೆಯನ್ನು [illegible] ಯವನ್ನು ಮಾಡಿಕೊಳ್ಳದಿದ್ದರೆ ಇಷ್ಟರಲ್ಲೇ ನಮ್ಮ ಜಾತಿಯು [illegible] ಹೋಗುವುದು. ಚರಕದಲ್ಲಿ ವಿಮಾನಸ್ಥಾನವನ್ನು [illegible] ವಾಯುವು ನೀರು ದೇಶ ಕಾಲ ಈ [illegible] ದೇಶವು ನಾಶವಾಗುವುದೆಂದು ಹೇಳಲ್ಪಟ್ಟಿರುವುದು. ಈ [illegible] [illegible] । [illegible]

ಸಿ॥ ಪ್ರಜ್ಞಾಪರಾಧ ಏವ ॥ " ಎಂಬಂತೆ. ಮೂಲವು ಪ್ರಜ್ಞಾಪರಾಧವೆಂದು ಕೂಡ ಸೂಚಿಸಲ್ಪಟ್ಟಿದೆ. ಇದೂ ಅಲ್ಲದೆ " ಯದಾವೈದೇಶನಗರಜನಪದಾಃ ಪ್ರಧಾನಧರ್ಮಂ ಉತ್ಕ್ರಮ್ಯ ಅಧರ್ಮೇಣಪ್ರಜಾಂ ಪ್ರವರ್ತಯಂತಿ ತದಾಶ್ರಿತೋಪಾಶ್ರಿತಾಃ ಪೌರಜಾನಪದಾವ್ಯವಹಾರೋಪಜೀವಿನಶ್ಚ ತಮಧರ್ಮಮಭಿವರ್ಧಯಂತಿ……ತಥಾಶಸ್ತ್ರಪ್ರಭವಸ್ಯಾಪಿಜನಪದಧ್ವಂಸಸ್ಯ ಅಧರ್ಮಏವಹೇತುರ್ಭವತಿ । ಯೇ ಅತಿಪ್ರವೃದ್ಧಲೋಭಕ್ರೋಧಮಾನಾಃ ತೇದುರ್ಬಲಾನವಮತ್ಯ ಆತ್ಮಸ್ವಜನಪರೋಪಘಾತಾಯ ಶಸ್ತ್ರೇಣಪರಸ್ಪರಂ ಅಭಿಕ್ರಾಮಂತಿ । ಪರಾಂಪರಾನ್ವಾ ಅಭಿಕ್ರಾಮಂತಿ । ಪರೈರ್ವಾಅಭಿಕ್ರಾಮ್ಯಂತೇ । ರಕ್ಷೋಗಣಾದಿಭಿಃ ವಿವಿಧೈರ್ಭೂತಸಂಘೈಸ್ತಮಧರ್ಮ ಮನ್ಯದ್ವಾಪ್ಯಪಚಾರಾಂತರಮುಪಲಭ್ಯ ಅಭಿಹನ್ಯಂತೇ " ಒಂದು ದೇಶ ಅಥವಾ ಒಂದು ಪಟ್ಟಣ ಅಥವಾ ಒಂದು ಗ್ರಾಮಪರಿಪಾಲಕರು ಧರ್ಮಮಾರ್ಗವನ್ನು ಬಿಟ್ಟಾಗ್ಗೆ ಅವರ ಅನುಚರರೂ, ಪರಿಜನರೂ ಅದೇ ದುರ್ಮಾರ್ಗವನ್ನು ಅನುಸರಿಸುವರು. ಈ ದುರ್ಮಾರ್ಗಾನುಸರಣದಿಂದ ಯುದ್ಧ ಪ್ರಾಪ್ತವಾಗುವುದು. ಬಲಿಷ್ಠರು ನುದಿಸಿ ದುರ್ಬಲರನ್ನು ಹಿಂಸಿಸಿ ಒಬ್ಬರಿಗೊಬ್ಬರು ಬಡಿದಾಡುವರು. ಇಲ್ಲದಿದ್ದರೆ ಅವರ ದುಷ್ಕಾರ್ಯದ ಫಲವಾಗಿ ಭೂತಾಧಿಕಾರಿಗಳ ಮೂಲಕ ನಾಶಪಡಿಸುವರು. ಚರಕದಲ್ಲಿ ಹೇಳಲ್ಪಟ್ಟಿರುವ ಈ ಮಾತು ಸತ್ಯವೆಂದು ಈ ದೇಶದ ಪ್ರಸ್ತುತ ಸ್ಥಿತಿಯನ್ನು ಪ್ರಜೆಗಳಲ್ಲುಂಟಾಗಿರುವ ಪರಿವರ್ತನದ ಕೂಡ ಹೋಲಿಸಿದರೆ ತಿಳಿಯುವುದು. ಇದೂ ಅಲ್ಲದೆ ಜೀವಿತವನ್ನು ಪಾಶ್ಚಾತ್ಯ ಪದ್ಧತಿಯನ್ನನುಸರಿಸಿ ಅವಲಂಬಿಸಿದುದರಿಂದ ಎಷ್ಟೋ ನಷ್ಟವು ಪ್ರಾಪ್ತವಾಗಿದೆ. ಈ ವಿಷಯವನ್ನು ಕುರಿತು ಇಲ್ಲಿ ವಿವರಿಸಿ ಹೇಳಲು ಸಾಧ್ಯವಿಲ್ಲದಿರುವುದರಿಂದ ಮುಖ್ಯ ವಿಷಯವನ್ನು ತಕ್ಕಮಟ್ಟಿಗೆ ತಿಳಿಸಿರುವೆನು.

ಪೂರ್ವಾಚಾರಪದ್ಧತಿಯಪ್ರಕಾರ ಜೀವನಯಾತ್ರೆ ಮಾಡುವುದನ್ನು ಬಿಟ್ಟಿರುವುದಲ್ಲದೆ ನಮ್ಮ ಪುರಾತನ ಮತವನ್ನೂ, ಆಚಾರವನ್ನೂ, ಆಹಾರವನ್ನೂ, ವಸ್ತ್ರಧಾರಣವನ್ನೂ ಬದಲಾಯಿಸಿ ಪಾಶ್ಚಾತ್ಯರನ್ನು ಅನುಕರಣ ಮಾಡಿರುವೆವು. ಈ ಪ್ರಕಾರ ಪೂರ್ತಿಯಾಗಿ ವ್ಯತ್ಯಾಸಹೊಂದುವುದರಿಂದಲೇ ನಮ್ಮ ಆರೋಗ್ಯವು ಕೆಡುವುದು ನಿಶ್ಚಯವು. ನಾವು ಅದನ್ನು ಈಗೀಗ ಅರಿತುಕೊಳ್ಳುತ್ತಿದ್ದೇವೆ. ನಮ್ಮ ಜೀವಿತವನ್ನು ಈರೀತಿಯಾಗಿ ಬದಲಾಯಿಸಿಕೊಂಡು ಪಾಶ್ಚಾತ್ಯರ ಆಚಾರಗಳನ್ನು ನಾವು ಅನುಸರಿಸುತ್ತಿದ್ದೇವೆ. ಆಯುರ್ವೇದದಲ್ಲಿ ವಿಧಿಸಲ್ಪಟ್ಟಿರುವ ಆರೋಗ್ಯಪದ್ಧತಿಯನ್ನು ನಮ್ಮ ಈಗಿನ ನಾಗರಿಕತೆಗೆ ಅನುಕೂಲವಾಗಿಲ್ಲದಿರುವ ಪ್ರಯುಕ್ತ ಅದನ್ನು ಉಲ್ಲಂಘಿಸುತ್ತಿದ್ದೇವೆ. ಇದಕ್ಕೆ ಕೆಲ ಕಾರಣಗಳನ್ನು ಕೊಡುವೆನು. ದಂತಕಾಷ್ಠ ಅಂದರೆ ಹಲ್ಲುಜ್ಜುವ ಕಡ್ಡಿಗೆ ಬದಲು ಯಾವ ಜಂತುವಿನ ಕೂದಲಿನಿಂದಲೋ ಮಾಡಿದ ಟೂತ್‌ಬ್ರಷ್‌ಗಳನ್ನು ಎಷ್ಟೋ ದುಡ್ಡುಕೊಟ್ಟು ಕೊಂಡು ಉಪಯೋಗಿಸುತ್ತಿದ್ದೇವೆ. ಅಂತಹ ಬ್ರಷ್‌ಗಳಲ್ಲಿರುವ ವಿಷವು ನಮ್ಮ ಶರೀರದಲ್ಲಿ ವ್ಯಾಪಿಸುವಂತಾಗುವುದು. ಅದು ಈ ದಿವಸವಲ್ಲದೆ ನಾಳೆಯ ದಿನವಾದರೂ ಆರೋಗ್ಯಕರವಲ್ಲವು.

ಅಡಿಕೆಯನ್ನೂ ಅಳಲೆಕಾಯಿಯನ್ನೂ ಪುಡಿಮಾಡಿ ಹಲ್ಲುಜ್ಜ ಉಪಯೋಗಿಸದೆ ಎಷ್ಟೋ ಬೆಲೆಯ ಟೂತ್‌ಪೋಸ್ಟನ್ನು ಕೊಂಡುಪಯೋಗಿಸುತ್ತೇವೆ. ಅದರೊಳಗೆ ಸಾಬೂನು ಮತ್ತು ಧೃತಿಯೂ ಮಿಶ್ರವಾಗಿರುತ್ತವೆ. ಇವು ಶರೀರಕ್ಕೆ ಬಹಳ ಅಪಾಯಕರವು. ಇದನ್ನು ಪರಿಶೋಧಿಸಿದಲ್ಲಿ ಇದರಿಂದ ಹಲ್ಲುಗಳಿಗೆ ಪ್ರಯೋಜನವಾಗುವುದಕ್ಕೆ ಬದಲು ನಷ್ಟವಾಗುವುದೆಂದು ತಿಳಿಯಬರುವುದು. ಕಣ್ಣಿಗೂ ಹಲ್ಲಿಗೂ ಹತ್ತಿರಸಂಬಂಧವಿರುವುದೆಂಬುದು ನಮ್ಮೆಲ್ಲರಿಗೂ ತಿಳಿದಿದೆ. ಹಲ್ಲು ಬಿದ್ದುಹೋದಲ್ಲಿ ನೇತ್ರದೃಷ್ಟಿಯು ಕೆಟ್ಟುಹೋಗುವುದು. ಆಹಾರದಲ್ಲು ಕೂಡ ನಮ್ಮ ಆರೋಗ್ಯಕ್ಕೆ ಭಂಗಕರವಾದ ಪದಾರ್ಥಗಳನ್ನು ತಿನ್ನುವ ಅಭ್ಯಾಸಮಾಡಿಕೊಂಡಿರುತ್ತೇವೆ. ಪೂರ್ವಾತ್ಯ ಋಷಿಗಳು ಹೇಳಿರುವುದಲ್ಲದೆ ಪಾಶ್ಚಾತ್ಯ ವೈದ್ಯರಾದ ಡಾಕ್ಟರ್ ಪಾರ್ಕರ್ ಎಂಬುವವರು ಕೂಡ ಉತ್ತೇಜಕಗಳಾದ ಪದಾರ್ಥಗಳನ್ನೂ ಅಂದರೆ ಈರುಳ್ಳಿ, ಸಾಸಿವೆ, ಮೆಣಸಿನಕಾಯಿ, ಕೊಬ್ಬರಿ ಉಪ್ಪಿನಕಾಯಿ ಮೊದಲಾದವುಗಳನ್ನು ತಿನ್ನಬಾರದು ಎಂದು ಹೇಳಿರುವರು. ಅಮೇರಿಕೆಯ ಡಾಕ್ಟರು ಡಿಯೊವೆಲಿಸರವರು " ಟೀ, ಕಾಫಿ ಮತ್ತು ತಾಂಬೂಲ ಇವು ನಿಷೇಧವು. ಟೀನೀರು ಹೆಚ್ಚಾಗಿ ಮತ್ತನ್ನುಂಟುಮಾಡಿ ನರಗಳನ್ನು ಸಡಿಲಪಡಿಸುವುದು. ಅದರಿಂದ ಮಂದವಾಗುವುದು. " ಎಂದು ಅಭಿಪ್ರಾಯಪಟ್ಟಿರುವರು. ಹಣ್ಣುಗಳೂ ಆರೋಗ್ಯಕ್ಕೆ ಬಹಳ ಅನುಕೂಲವೆಂದು ನಮ್ಮ ಪೂರ್ವಿಕರೂ ಪಾಶ್ಚಾತ್ಯ ಶಾಸ್ತ್ರಜ್ಞರೂ ಹೊಗಳಿರುವರು. ಆಧುನಿಕ ನಾಗರಿಕತೆಯನ್ನು ಅನುಸರಿಸಿರುವವರು ಎಂತಹ ದುರ್ದಶೆಗೆ ಗುರಿಯಾಗಿರುವರೆಂಬುದನ್ನು ನೆನಸಿಕೊಂಡರೆ ಎದೆಯು ಬಿರಿದುಹೋಗುವುದು. ಅಮೇರಿಕೆಯಂತಹ ಮಹಾ ನಾಗರಿಕ ದೇಶದಲ್ಲಿ ನೂರು ಸ್ತ್ರೀಯರೊಳಗೆ ಒಬ್ಬ ಸ್ತ್ರೀಗೆ ಮಾತ್ರ ಶರೀರ ಪುಟವಾಗಿ ಅವಯವಗಳೆಲ್ಲಾ ತಂತಮ್ಮ ಕೆಲಸಗಳನ್ನು ಮಾಡಲು ಸಮರ್ಥವಾಗಿರುವುವು, ಉಳಿದ 99 ಸ್ತ್ರೀಯರಿಗೆ ಯಾವುದಾದರೊಂದು ರೋಗವು ಪ್ರಾಪ್ತವಾಗಿರುವುದು.

ಡಾ॥ ಚೀವಾಸಿಯವರೂ ತಮ್ಮ ಧರ್ಮಪತ್ನಿಗೆ ವಿವೇಕವನ್ನು ಬೋಧಿಸುವಾಗ್ಗೆ " ಈ ಯುಗದಲ್ಲಿ ಭೋಗಾಪೇಕ್ಷೆಯು ವಿಶೇಷವಾಗಿದೆ. ಅದು ಅಸ್ವಭಾವಿಕವು. ರೋಗವೂ ದುರ್ಬಲವೂ ಮಕ್ಕಳಿಗೆ ಪ್ರಾಪ್ತವಾಗುವುದು ಯಾವಾಗಲೂ ಜರುಗುವಂತಹ ವಿಷಯೇ " ಎಂದು ಹೇಳಿದರು. ಮತ್ತೊಬ್ಬರು " ಈ ಕಾಲದಲ್ಲಿ ಯೌವನಸ್ತ್ರೀಯರ ಶರೀರವೂ ಕ್ಷಣಾತ್ಮನುವೂ ಬಹಳ ಅಪ್ರಶಸ್ತವಾಗಿದೆ. " ಎಂದು ಬರೆದಿರುವರು.

ಶರೀರಕ್ಕೆ ವಸ್ತ್ರಧಾರಣೆಮಾಡುವಲ್ಲಿ ಮುಖ್ಯವಾಗಿ ಗರ್ಭಿಣೀಸ್ತ್ರೀಯರು ಜಾಕೆಟ್ಟನ್ನು ತೊಡುವುದು ಎಷ್ಟು ಮಾತ್ರಕ್ಕೂ ಆಚಾರವೂ ಸರಿಯಾದದ್ದೂ ಅಲ್ಲವು ಈ ವಿಧವಾಗಿ ಅಸ್ವಾಭಾವಿಕವಾದ ಪದ್ಧತಿಯನ್ನು ಅನುಸರಿಸುವುದರಿಂದ ಬಂಗಾಳದಲ್ಲಿ ಒಂದು ವರ್ಷದ ಕೂಸುಗಳು ಸಾವಿರಕ್ಕೆ 226 ರಂತೆ ಸಾಯುತ್ತಿರುವುದರಲ್ಲಿ ಆಶ್ಚರ್ಯವೇನಿದೆ ? ಕಲಕತ್ತಾದಲ್ಲಿನೂ ಜಿಲೆಂಡಿಗಿನ್ನ 7 ರಷ್ಟು ಹೆಚ್ಚಾಗಿ ಸತ್ತುಹೋಗಿರುವುವು. ಇವೆಲ್ಲದರ ಕಾರಣವು ಜೀವನಾಹಾರದಲ್ಲಿ ವ್ಯತ್ಯಾಸವಾಗಿರುವುದೇ ಎಂದು ತಿಳಿಯತಕ್ಕದಾಗಿದೆ. ತಾಯಿ ತಂದೆಗಳು ಮಾಡಿದ ಪಾಪಕೃತ್ಯಕ್ಕೆ ಎಳೆಮಕ್ಕಳು ತಮ್ಮ ಪ್ರಾಣವನ್ನು ಅರ್ಪಿಸುತ್ತವೋ ಏನೋ ಯಾರಿಗೆ ಗೊತ್ತು ? ವಿವಾಹವು. ವಿಧವಾವಿವಾಹವು ಮೊದಲಾಗಿ ಮುಖ್ಯ ವಿಷಯಗಳಲ್ಲಿ ಯುರೋಪುಖಂಡವು ತಾನು ಮಾಡಿದ ತಪ್ಪನ್ನು ತಿಳಿದುಕೊಂಡು ನಮ್ಮ ಋಷಿಗಳು ವಿಧಿಸಿರುವ ಆಜ್ಞೆಯ ಔಚಿತ್ಯವನ್ನು ತಿಳಿದುಕೊಳ್ಳುತ್ತಿರುವದು. ಮಹಾಶಯರೆ, ನಾನು ಇದುವರೆಗೆ ಆಯುರ್ವೇದವು ರೋಗಬಂದಾಗ ಚಿಕಿತ್ಸೆಗುಪಯೋಗವಾಗುವುದಲ್ಲದೆ ಆರೋಗ್ಯಸಂರಕ್ಷಣೆಗೆ ಮಾರ್ಗದರ್ಶಕವಾಗಿರುವದೆಂದು ತಿಳಿಸಿರುತ್ತೇನೆ. ಇನ್ನು ಈ ವಿಷಯವನ್ನು ಇಲ್ಲಿಗೆ ವಿರಮಿಸುವೆನು.

ಆಯುರ್ವೇದಪತನಕ್ಕೆ ಕಾರಣವು.

ಪೂರ್ವದಲ್ಲಿ ಒಂದು ವೇಳೆ ಆಯುರ್ವೇದವು ಅಭಿವೃದ್ಧಿಯನ್ನು ಹೊಂದಿ ಬಹಳ ಪ್ರಖ್ಯಾತಿಗೆ ಬಂದಿದ್ದಿತೆಂದು ಹೇಳುತ್ತಿರುವ ನಾವು ಈಗ ನಮ್ಮ ಚಿಕಿತ್ಸಾಕ್ರಮವು ಎಷ್ಟು ಮಾತ್ರಕ್ಕೂ ತೃಪ್ತಿಕರವಾಗಿರುವುದಿಲ್ಲವೆಂದು ತಿಳಿದು ಆ ಲೋಪವನ್ನು ಪರಿಹರಿಸಿಕೊಳ್ಳಬೇಕಾಗಿದೆ. ರೋಗಕ್ಕೆ ಚಿಕಿತ್ಸೆಯನ್ನು ಮಾಡುವುದಕ್ಕೆ ಮೊದಲು ರೋಗದ ಕಾರಣವನ್ನೂ ಮೂಲವನ್ನೂ ಪರೀಕ್ಷಿಸಿ ತಿಳಿದುಕೊಳ್ಳಬೇಕು. ಆಯುರ್ವೇದವು ಅಷ್ಟೊಂದು ಪ್ರತಿಪತ್ತಿಯನ್ನು ಹೊಂದಿದ್ದರೂ ಏತಕ್ಕಾಗಿ ನಿರುಪಯೋಗವಾಗಿರುವುದೆಂಬುದನ್ನು ತಿಳಿದುಕೊಳ್ಳತಕ್ಕದಾಗಿದೆ. ಆಯುರ್ವೇದದಲ್ಲಿ ವೈದ್ಯ ಮತ್ತು ಶಸ್ತ್ರ ಎಂದು ಎರಡು ಚಿಕಿತ್ಸಾಭಾಗಗಳಿವೆ. ಇವುಗಳಲ್ಲಿ ಶಸ್ತ್ರಚಿಕಿತ್ಸೆಯು ನಷ್ಟವಾಗಿರುತ್ತದೆ. ಈ ವಿಚಾರವಾಗಿ ಮುಂದೆ ಪ್ರಸ್ತಾಪಿಸುವೆನು. ಹಿಂದೂಗಳು ಶವಗಳ ಶಸ್ತ್ರಚಿಕಿತ್ಸೆಮಾಡುವುದೂ ಧರ್ಮಾಚಾರಕ್ಕೆ ವಿರುದ್ಧವೆಂಬುದರ ಮೇಲೆ ಅದನ್ನು ಪರಿತ್ಯಜಿಸಿದರು. ಒಂದು ವೇಳೆ ಹಾಗೆಮಾಡಿದಲ್ಲಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುತ್ತದೆಂಬ ಭಯದಿಂದ ಅವರಿಗೆ ಅವಯವಜ್ಞಾನವು ಇಲ್ಲದಂತಾಗಿ ಶಸ್ತ್ರಚಿಕಿತ್ಸೆಯು ಮೂಲೆಪಾಲಾಯಿತು. ಡಾಕ್ಟರ್ ಮುಖರ್ಜೀಯವರು ಹಿಂದೂಗಳ ಶಸ್ತ್ರಚಿಕಿತ್ಸಾಯುಧಗಳನ್ನು ಕುರಿತು " ಮನುಸಂಹಿತೆಯಲ್ಲೂ ಹಿಂದೂಗಳ ಶಸ್ತ್ರಚಿಕಿತ್ಸೆಯು ಕಡಿಮೆಯಾಗಲು ಕಾರಣವನ್ನು ತಿಳಿದುಕೊಳ್ಳಬಹುದು. ಆ ಧರ್ಮದಪ್ರಕಾರ ಡಾಕ್ಟರು ಮುಟ್ಟಿದ ಅನ್ನವನ್ನು ತಿನ್ನಬಾರದೆಂದು ನಿಷೇಧಿಸಲ್ಪಟ್ಟಿರುವ ಮಾತ್ರದಿಂದ ಸರ್ಜನಿದೆನು " ಎಂದು ಬರೆದಿರುವರು. ಸುಶ್ರುತದಲ್ಲಿ ಶಸ್ತ್ರಚಿಕಿತ್ಸೆಯನ್ನು ಆಕಾರದ ಮೇಲೆ ಅಭ್ಯಾಸಿಸಬೇಕೆಂದು ಹೇಳಲ್ಪಟ್ಟಿದೆ. ಆ ಯೋಗ್ಯಸಲಹೆಯನ್ನು ಅನುಸರಿಸದೆ ಭಂಗಪಡಿಸಿ ಅಗೌರವವನ್ನುಂಟುಮಾಡಿದರು. ಇಷ್ಟು ಮಾತ್ರವಲ್ಲದೆ ದೇಹದೊಳಗೂ ಹೊರಗೂ ಔಷಧವುಪಯೋಗಿಸಲ್ಪಡುವುದು ತಪ್ಪಿಹೋಗಿ ಮಂತ್ರಪ್ರಯೋಗದಿಂದ ಚಿಕಿತ್ಸೆಮಾಡಲ್ಪಡುವುದೂ ಹೆಚ್ಚಿ ಮಧ್ಯಯುಗದಲ್ಲಿ ಶಸ್ತ್ರಚಿಕಿತ್ಸೆಯು ನಶಿಸಿಹೋಯಿತು. ಸರ್ಜನರು ಕತ್ತಿಗೆ ಬದಲು ಕಾಸ್ಟಿಕ್ಕು ಮೊದಲಾದವುಗಳನ್ನುಪಯೋಗಿಸಿ ಕೆಲಮಟ್ಟಿಗೆ ಕೆಲಸಮಾಡಿದರು. ಆಯುರ್ವೇದವು ಒಟ್ಟಿನಮೇಲೆ ವೈದ್ಯವೂ ಶಸ್ತ್ರವೂ ನಶಿಸಿಹೋಗಲು ದೇಶದಲ್ಲಿ ರಾಜಕೀಯ ಆರ್ಥಿಕಪರಿಸ್ಥಿತಿಯು ಕೊಂಚಮಟ್ಟಿಗೆ ಸಾಧಕವಾಯಿತೆಂದು ಹೇಳಬಹುದು.

ದೇಶೀಯ ವೈದ್ಯಪದ್ಧತಿ ವಿಚಾರಣಸಂಘದವರು ಭಾರತ ವೈದ್ಯಪದ್ಧತಿಯು ನಶಿಸಿದುದರ ಕಾರಣವನ್ನು ತಿಳಿಸುವಾಗ್ಗೆ " ಭಾರತ ವೈದ್ಯಪದ್ಧತಿಯು ಈಗ ನಾಶವಾಗುವ ಸ್ಥಿತಿಯಲ್ಲಿರಲು ಮುಂದೆ ಹೇಳುವ ಎರಡು ಕಾರಣಗಳು ಮುಖ್ಯವೆಂದು ನಮಗೆ ತೋರುತ್ತದೆ.—(1) ಪ್ರಭುತ್ವದವರು ಈ ವೈದ್ಯವನ್ನು ಪುರಸ್ಕರಿಸಿ ಕಾಪಾಡಿಕೊಂಡು ಬಾರದೆ ಹೋದುದರಿಂದಲೇ ಜಮೀನ್ದಾರರು, ಯುವರಾಜರುಗಳು, ಸ್ಥಾನಿಕಸಂಘಗಳು, ವಿಶ್ವವಿದ್ಯಾಲಯಗಳು ಮೊದಲಾದವುಗಳು ಅಲಕ್ಷಿಸುವಂತಾಯಿತು. ಇವರೆಲ್ಲರೂ ಮೊದಮೊದಲು ಪೋಷಕರಾಗಿದ್ದು ಈಗ ಕೈಬಿಟ್ಟಿರುವರು. (2) ಪಾಶ್ಚಾತ್ಯ ಪದ್ಧತಿಯನ್ನು ಪ್ರಭುತ್ವದವರು ಆಮೋದನದಿಂದ ಸ್ಥಾಪಿಸಿ ಪೋಷಿಸುತ್ತಿರುವರು. ……..ಪಾಶ್ಚಾತ್ಯ ವೈದ್ಯವಿದ್ಯಾಭ್ಯಾಸಮಾಡಿದವರಿಗೆ ಉದ್ಯೋಗವನ್ನು ಕೊಡುವರು. ದೇಶೀಯವೈದ್ಯವನ್ನು ಕಲಿಯುವವರಿಗೆ ಯಾವ ವಿಧವಾದ ಪ್ರೋತ್ಸಾಹವೂ ಇಲ್ಲ. ಪ್ರಭುತ್ವದೃಷ್ಟಿಯಲ್ಲೂ, ನ್ಯಾಯಪ್ರಕಾರದಲ್ಲೂ, ಅವರು ಅಪೇಕ್ಷಿಸಿದ ವೈದ್ಯವನ್ನು ಮಾಡುವವರಾದರು……..ಇಂತಹ ಪರಿಸ್ಥಿತಿಯಲ್ಲಿ ಭಾರತ ವೈದ್ಯ ಪದ್ಧತಿಯು ನಾಶಹೊಂದಿ ದೇಶದಲ್ಲಿ ವಿಜ್ಞಾನವಂತರಿಗೆ ಅದರ ಮೇಲಣ ಅಭಿಮಾನವು ತಪ್ಪಿರುವುದರಲ್ಲಿ ಆಶ್ಚರ್ಯವೇನಿದೆ ? " ಎಂದು ಹೇಳಿರುವರು. ಈ ಉಭಯ ಕಾರಣಗಳೂ ಆಯುರ್ವೇದ ಪತನಕ್ಕೆ ಮುಖ್ಯವೆನ್ನುವುದರಲ್ಲಿ ಸಂದೇಹವಿಲ್ಲವು.

ಪ್ರಭುತ್ವದವರು ನಮ್ಮ ದೇಶೀಯ ವೈದ್ಯ ಪದ್ಧತಿಯನ್ನು ಬಿಟ್ಟು ತಮ್ಮ ದೇಶದ ವೈದ್ಯವಿಧಾನವನ್ನು ಅದು ಹೆಚ್ಚುಬೆಲೆಯುಳ್ಳದಾದರೂ ಪ್ರವೇಶಗೊಳಿಸಿ ನಮ್ಮ ಆರೋಗ್ಯಸ್ವಭಾವಕ್ಕೂ ಪ್ರತಿಕೂಲವಾಗಿರುವ ಅದನ್ನು ಆಚರಣೆಗೆ ತಂದಿರುವುದರಲ್ಲಿ ಸಂದೇಹವಿಲ್ಲವು. ಇತರರು ನಿರ್ಲಕ್ಷ್ಯಮಾಡಿದುದನ್ನು ಖಂಡಿಸುವ ಭರದಲ್ಲಿ ನಾವು ಮಾಡಿದ ಪಾಪವು ಈ ದುರ್ಭರ ಸ್ಥಿತಿಯುಂಟಾಗಲು ಕಾರಣವೆಂಬುದನ್ನು ಮರೆಯಬಾರದು. ಯುನಾನಿ ಪದ್ಧತಿಯನ್ನು ಕುರಿತು ಪ್ರಸ್ತಾಪಿಸಲು ನಾನು ಸಮರ್ಥನಲ್ಲವಾದುದರಿಂದ ಈವರೆಗೂ ಆಯುರ್ವೇದ ವಿಷಯದಲ್ಲಿ ಮಾತ್ರ ಪ್ರಸ್ತಾಪಿಸಿರುತ್ತೇನೆ. ಆಯುರ್ವೇದವು ವಿನಾಶವಾಗಲು ಹಿಂದೂಗಳಿಗೆ ಅವರ ಋಷಿಗಳು ಬರೆದಿರುವ ಗ್ರಂಥಗಳಲ್ಲಿ ಗೌರವವಿಲ್ಲದಿರುವುದೇ ಕಾರಣವೆಂದು ಹೇಳಬಹುದು. ಇದರ ಫಲವಾಗಿ ವೈದ್ಯಶಾಸ್ತ್ರವು ಒಂದೇ ಮಾದರಿಯಾಯಿತು. ತರುವಾಯ ಬರೆದವರೆಲ್ಲರೂ ಎಲ್ಲೋ ಕೊಂಚ ಚರಕ ಮತ್ತು ಸುಶ್ರುತಗಳಲ್ಲಿ ಹೇಳಲ್ಪಟ್ಟಿರುವ ಭಾವವನ್ನೇ ಹೇಳುತ್ತಿದ್ದರು. ಆ ಕಾಲದಲ್ಲಿ ಮುದ್ರಣ ಸೌಕರ್ಯವಿಲ್ಲದುದರಿಂದ ಶಾಸ್ತ್ರವೆಲ್ಲವೂ ಒಂದು ಸಂತತಿಯವರಿಂದ ಮತ್ತೊಂದು ಸಂತತಿಯವರಿಗೆ ಹೇಳಿಕೊಡಲ್ಪಡುತ್ತಿದ್ದುದು ; ಮಧ್ಯ ಮಧ್ಯ ಓಲೆಪತ್ರದ ಮೇಲೆ ಬರೆಯಲ್ಪಡುತ್ತಿದ್ದಿತು. ಈ ರೀತಿಯಾಗಿ ಬಾಯಿಮಾತಿನಿಂದ ಹೇಳಲ್ಪಡುವಾಗ್ಗೆ ಮತ್ತು ಬರೆಯಲ್ಪಡುವಾಗ್ಗೆ ಮಾಡಲ್ಪಡುತ್ತಿದ್ದ ತಪ್ಪನ್ನು ತೆಗೆಯಿರೆಂದು ಅಷ್ಟು ಧೈರ್ಯವಾಗಲಿ ಅಥವಾ ಸರಿಪಡಿಸುವಷ್ಟು ಯೋಗ್ಯತೆಯಾಗಲಿ ಇರಲಿಲ್ಲವು. ಅದುಕಾರಣ ಆ ತಪ್ಪುಗಳು ಗೊತ್ತಾಗದೆ ಪದಾರ್ಥವು ಮಾಡಲ್ಪಡುತ್ತಿದ್ದಿತು. ಇದರಿಂದ ವೈದ್ಯಶಾಸ್ತ್ರವು ಯಾವ ಅಭಿವೃದ್ಧಿಯನ್ನೂ ಹೊಂದದೆ ಒಂದೇ ಮಾದರಿಯಾಗಿರುವುದಾದರೂ ನಮ್ಮ ಪೂರ್ವ ಋಷಿಗಳ ಗೌರವಮಾತ್ರ ಇಲ್ಲದಂತಾಗಲಿಲ್ಲವು. ಅಲ್ಲಿಗೆ ವೈದ್ಯಶಾಸ್ತ್ರವು ಕೆಲ ಯುಗಾನಂತರ ಸ್ವಲ್ಪ ವ್ಯತ್ಯಾಸವನ್ನು ಹೊಂದಿರುವುದಕ್ಕಾಗಿ ಸಂಪೂರ್ಣವಾಗಿ ನಶಿಸಿಹೋಯಿತೆಂದು ಹೇಳಲಾಗದು. ಚರಕ, ವಾಗ್ಭಟಗಳಲ್ಲಿ—

ವಿಕಾರನಾಮಾಕುಶಲೋನಜಿಹ್ರೀಯಾತ್ ಕದಾಚನ । ನಹಿಸರ್ವವಿಕಾರಾಣಾಂ ನಾಮತೋಸ್ತಿ ಧ್ರುವಾಸ್ಥಿತಿಃ।ಸಯೇನಕುಪಿತೋದೋಷಃ ಸಮುತ್ಥಾನವಿಶೇಷತಃ । ಸ್ಥಾನಾಂತರಾಣಿಚಪ್ರಾಪ್ಯವಿಕಾರಾನ್ ಕುರುತೇಬಹೂನ್ ತಸ್ಮಾದ್ವಿಕಾರಪ್ರಕೃತೀರಧಿಷ್ಠಾನಾಂತರಾಣಿಚ । ಬುದ್ಧ್ವಾಹೇತುವಿಶೇಷಾಂಶ್ಚ ಶೀಘ್ರಂ ಕುರ್ಯಾದುಪಕ್ರಮಂ ॥

" ವೈದ್ಯನು ರೋಗಿಗಿರುವ ರೋಗವನ್ನು ಕಂಡುಹಿಡಿದು ಅದಕ್ಕೆ ಸರಿಯಾದ ಹೆಸರು ವೈದ್ಯಗ್ರಂಥದಲ್ಲಿ ಕೊಡಲ್ಪಟ್ಟಿಲ್ಲವೆಂದು ನಿರಾಶನಾಗಕೂಡದು. ಯಾಕೆಂದರೆ ಪ್ರಪಂಚದಲ್ಲಿರತಕ್ಕ ರೋಗಗಳ ಹೆಸರುಗಳೆಲ್ಲವನ್ನು ವೈದ್ಯಗ್ರಂಥದಲ್ಲಿ ಬರೆಯುವುದು ಸಾಧ್ಯವಿಲ್ಲವು. ಒಂದು ದೋಷವೇ (ವಾತಪಿತ್ತಕಫ) ವಿವಿಧಕಾರಣಗಳಿಂದ ಉಂಟಾಗಿ ನಾನಾವಿಧ ರೋಗಗಳನ್ನು ಹುಟ್ಟಿಸುವುದು. ಅದುಕಾರಣ ರೋಗವನ್ನು ಚೆನ್ನಾಗಿ ಪರೀಕ್ಷಿಸಿ ಅದರ ಕಾರಣವನ್ನೂ ಸ್ವಭಾವಸ್ಥಾನವನ್ನೂ ಸರಿಯಾಗಿ ಕಂಡುಹಿಡಿದು ವೈದ್ಯನು ಚಿಕಿತ್ಸೆಗೆ ಆರಂಭಿಸಬೇಕು. " ಎಂದು ಹೇಳಲ್ಪಟ್ಟಿದೆ. ದುರದೃಷ್ಟವಶಾತ್ ಆಯುರ್ವೇದವು ಅಂಧತ್ವದಿಂದ ಅನುಸರಿಸಲ್ಪಡುತ್ತಿದೆಯೇ ವಿನಾ ಚೆನ್ನಾಗಿ ತಿಳಿದುಕೊಳ್ಳಲ್ಪಟ್ಟು ಉಪಯೋಗಿಸಲ್ಪಡುವ ವಾಡಿಕೆಯೂ ಇಲ್ಲ. ಅದರಿಂದಲೇ ಈ ವಿಧಾನದಲ್ಲಿ ಬಹಳ ತಪ್ಪು ಮಾಡಲ್ಪಡುತ್ತಿರುವುದು. ಚರಕವನ್ನು ಕುರಿತು ನಾನು ಸಂಸ್ಕೃತ ವಾಕ್ಯವನ್ನು ಬರೆಯುವಾಗ್ಗೆ ಸರಿಯಾದ ಗ್ರಂಥವು ದೊರೆಕುವುದು ಅತ್ಯಂತ ಪ್ರಯಾಸವಾಯಿತು. 15 ಪುರಾತನ ಓಲೆಗರಿಪ್ರತಿಗಳನ್ನು ಸಂಪಾದಿಸಿ ನನ್ನ ಕಾರ್ಯನಿರ್ವಾಹಮಾಡಿದೆನು. ಸಂಸ್ಕೃತ ಭಾಷೆಯು ಬಹಳ ಕಠಿಣವಾದುದರಿಂದ ಅದರ ವ್ಯಾಪ್ತಿ ಕಡಿಮೆಯಾಗಿರುವುದು. ಅದರಂತೆ ಈ ವೈದ್ಯಶಾಸ್ತ್ರವೂ ಕ್ಷೀಣಿಸುತ್ತಿರುವುದು. ಇದಕ್ಕೆ ರಾಜಾಶ್ರಯವಿಲ್ಲದಿರುವುದೂ ಒಂದು ಕಾರಣವು. ಅಶೋಕನ ಕಾಲದಲ್ಲಿ ಮನುಷ್ಯರಿಗೆ ಮಾತ್ರವಲ್ಲದೆ ಪಶುಗಳಿಗಂ ವೈದ್ಯಾಲಯಗಳು ವಿಧಿಸಲ್ಪಟ್ಟಿದ್ದುದಾಗಿ ಶಿಲಾಶಾಸನದಿಂದಲೇ ತಿಳಿಯಬರುತ್ತದೆ. ಹಿಂದೂ ದೇಶದಲ್ಲೆಲ್ಲಿ ನೋಡಿದರೂ ಧರ್ಮವೈದ್ಯಾಲಯಗಳು ಇದ್ದುದಾಗಿ ಪಾಹಿಯಾನು, ಹೊಯಾನತ್ಸಾಂಗು ಇವರುಗಳ ಲೇಖನದಿಂದ ವ್ಯಕ್ತವಾಗುತ್ತದೆ. ನಮ್ಮ ಮುಖ್ಯ ವೈದ್ಯಗ್ರಂಥವು 8 ನೆಯ ಶತಮಾನದಲ್ಲಿ ಅರಬಿ ಭಾಷೆಗೆ ಪರಿವರ್ತಿಸಲ್ಪಟ್ಟಿರುವುದು ನಿದರ್ಶನಕ್ಕೆ ಬಂದಿರುತ್ತದೆ.

ಸುಗಂಧದ್ರವ್ಯಗಳ ಕಾರ್ಖಾನಾ.

ಆಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳಪ್ಪ, ಊದಬತ್ತಿ ಷಾಪ್,
13 ದೊಡ್ಡಪ್ಯಾಟೆ, ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಸಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದರೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—33] ಮೈಸೂರು.

೧೯೨೪ ನೆಯ ಇಸವಿ ಮೇ ತಾ॥ ೧೧ ರಿಂದ ೧೯೨೪ ನೆಯ ಇಸವಿ ಮೇ ತಾ॥ ೧೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ವೈಶಾಖ ಶುದ್ಧ ಸಪ್ತಮಿಯಿಂದ ವೈಶಾಖ ಶುದ್ಧ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ವೃಷ
11	ಭಾನು	ಸಪ್ತ	19.35	ಆಶ್ಲೇ	59.26	22
12	ಸೋಮ	ಅಷ್ಟ	20.2	ಮಖಾ	60	23
13	ಮಂಗಳ	ನವ	19.10	ಮಖಾ	0.18	24
14	ಬುಧ	ದಶ	16.48	ಪುಬ್ಬ	0.26	25
15	ಗುರು	ಏಕಾ	14.0	ಹಸ್ತ	57.52	26
16	ಶುಕ್ರ	ದ್ವಾ	9.53	ಚಿತ್ತ	54.57	27
17	ಶನಿ	ತ್ರಯೋ	5.44	ಸ್ವಾತಿ	51.35	28

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

[illegible] ಪ್ರಕಟಿಸಲ್ಪಡುವದು.

ಮಹಿಶೂರಪುರೀವರಾ ಸಮಧಿಗತರಾಜ[illegible]ಕೃಪಾ । ಘನಸಪಕ್ಷತಾವಕಾರಾ ಪಕ್ಷಜ್ಞ ಸಹೃತ್ತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲಸುತ್ತಮತಲಾರೋ[illegible]ಪುಂಗವ । ಸ್ತೋಮಾಭೀಷ್ಟದಲೀಲ ಪಾಲಿತ ಸಾಧುಸ್ತ್ಯಾಲವಾಲಂವಲಂ ॥
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತಕಿಯಂಕವಾಪುರಿಗೆ ಗೌರೀಕಾನುಕಂಪೋಜ್ಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಮೇ ತಾರೀಖು ೧೮ ನೆಯ ಭಾನುವಾರ. [ಸಂಚಿಕೆ ೨೦

MAY 24
A.M

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHARAGHAVA

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎರವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈಬಿಟ್ಟವೇಳೆಯಲ್ಲಿಯೂ · ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟಿದ್ದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
15 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.



ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡೆ ಕಂಪನಿ ಲಿಮಿಟೆಡ್,
[50—37] . ಪ್ರೋ. ಬಾ. ೫೧೦, ಮದರಾಸು.

---

4 ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತಮಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗತಾನೆ ಪುನ ಮುದ್ರಿತವು ಅಚ್ಚಾಗಿ ವಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ಸಂತೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[13—3] ಕೋಲಾರ, ಅರಕಲಗೂಡು ತಾಲ್ಲೋಕು, ಹಾಸನ ಡಿ॥
ಈ ಪುಸ್ತಕವು ಮೈಸೂರು ಸ್ಟಾರ್ ಆಫೀಸಿನಲ್ಲೂ ದೊರೆಯುತ್ತದೆ.

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್‌ಸ್ಥಲಸಿದ್ಧಾಂತ	೦ ೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—23] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯವಿದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ

ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕೆ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ಕೆಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳಿಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ, ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ತಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೋಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಸಿತಾಪತ್ರ, ಕವಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕೆ, ಕಮರಕಸ, ಕಫಲ್ಯಾಗೊಂದ, ಪಂಜಾಬಿ ಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ಕಾಲೀಮುಖಾಸ. ಬೀಜಬಂಧ, ಚಿಗರಿಗೋರಸು, ಮೋಂಗಲ್ ಬೇದಾಣ, ಮೈದಾಇಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಅಲದ ಹಾಲು, ವಾಳೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಬಗೋಲ, ಒಣಸೆಲ್ಲಿಕಾಯಿ, ಶಿಲಾಜಿತ, ವರದಾಲಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯಯಿಲ್ಲ. ಸ್ತ್ರೀವರ್ಜ್ಯಯಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫॥ ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಅವಶ್ಯ ತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ತಿ ಅಡ್ರೆಸ್ ಪೋಸ್ಟಾಫೀಸ್ ಸಹ ಬರೆಯಿರಿ.

[50—40] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಗಿ.

ಗ್ರಂಥಸಿಕ್ಕುವಸ್ಥಳ :—
ಹೊಸಮಠದ ಚನ್ನಯ್ಯನವರು ಹರಿಹರ,
24—6 ಚಿತ್ರದುರ್ಗ ಡಿ॥

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[50—18] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ . ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಮತ್ತು ಕಂಪನಿ,
[illegible] [illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಮೇ ತಾ॥ ೧೮ ನೆಯ ಭಾನುವಾರ.

MAHARAJA'S COLLEGE ACTING PRINCIPALSHIP.

We learn that the present Principal of the Maharaja's College, Mysore, Mr. N. S. Subba Rao, M.A., will be going on a furlough during the coming year, and the filling up of the temporary vacancy is causing some difficulty. Of the two candidates for the place one is an Indian and the other a European. The former is senior in service, whose efficiency is unquestioned. But it would seem that the University Council, for reasons best known to themselves, are in favour of backing the junior in service. If this is a fact, as we are wont to believe, it raises some serious questions of principle, which the Government who are responsible for these appointments cannot overlook. If service, seniority and efficiency are to count in promotions there could hardly be any justification for such a recommendation of the University Council as above. One could well understand that if there could be any disqualification pointed out against the senior candidate, whether that disqualification is proved or not, there could be some show of reason for the attempt at supercession. But in the absence of any such disqualification supercession would only be an act of weakness and might not enhance the prestige of the administration. Our information is that the Indian candidate, apart from the professorial work, has been doing a lot of good work in other direction in the University as the President of the College Union and the editor of the University magazine. It is strange besides, that when all over India Indianisation of Services is going on so rapidly, here in Mysore there should be any hesitation in giving effect to the principle wherever it is just and possible. In this case Government need not have to show any special favour to an Indian. Enough if justice is done.

GREETINGS TO RAJKUMAR DESARAJ URS.

To-morrow His Highness the Maharaja of Mysore will celebrate the marriage of His Highness' nephew Rajkumar Desaraj Urs with Sowbhagyavati Laxmammanni, daughter of Sirdar M. Gopalraj Urs. The Rajkumar is the only son of late Colonel C. Desaraj Urs and is a keen sportsman. Arrangements for the wedding are completed, and it promises to be a brilliant function which will be graced by Princes and Princesses of some sister States and other notable persons. On this happy and auspicious occasion we offer our hearty congratulations to the bride and bridegroom and pray that the Almighty may bless them with a long, happy and prosperous life.

ಅಸ್ಪೃಶ್ಯತಾನಿವಾರಕ ಪಂಡಿತಮಹಾಸಭೆ.

ಭರತಖಂಡದಲ್ಲಿರುವ ಪಂಚಮರ ಜನಸಂಖ್ಯೆಯು ಒಟ್ಟು ಪ್ರಜಾಸಂಖ್ಯೆಯಲ್ಲಿ $\frac{1}{5}$ ಭಾಗವಿರಬಹುದು. ಇವರು ಅಸ್ಪೃಶ್ಯರೆಂದು ಯಾವಾಗಲೋ ಯಾವ ಕಾರಣದಿಂದಲೋ ಕಲ್ಪಿಸಲ್ಪಟ್ಟು ವಿದ್ಯಾರ್ಜನೆಗೂ, ಸಾರ್ವಜನಿಕಗಳಾದ ದೇವಾಲಯಗಳು, ಪಾಠಶಾಲೆಗಳು, ಕೋರ್ಟು ಕಚೇರಿಗಳು ಮೊದಲಾದ ಕಡೆಗಳ ಪ್ರವೇಶಕ್ಕೂ ಅವಕಾಶಹೊಂದದೆ ತಿರ್ಯಗ್ಜಂತುಗಳಿಗಿಂತಲೂ ಕೀಳಾಗಿ ಕಾಣಲ್ಪಡುತ್ತಿರುವರಷ್ಟೆ? ಕ್ರೈಸ್ತರು ಇವರುಗಳಿಗೆ ಸ್ವಲ್ಪ ಅವಲಂಬನೆಯನ್ನು ಕೊಟ್ಟುದರಿಂದ ಇವರಲ್ಲಿ ಹಲವರು ಸ್ವಮತ ಭ್ರಷ್ಟರಾಗಿ ಕ್ರೈಸ್ತಮತಸ್ವೀಕಾರದಿಂದ ಉನ್ನತಿ ಪಡೆದುಕೊಂಡರು. ಹೀಗೆ ಹಿಂದೂಮತದಲ್ಲಿ ಇವರಿಗೆ ತಕ್ಕಾಶ್ರಯವಿಲ್ಲದೆ ಹೋದುದರಿಂದ ಇವರು ಅನ್ಯಮತಾವಲಂಬಿಗಳಾಗುತ್ತಿರುವುದನ್ನು ತಪ್ಪಿಸುವುದು ಭಾರತೀಯರೆಲ್ಲರ ಮುಖ್ಯ ಕರ್ತವ್ಯವಾಗಿದೆ. ಹಾಗಲ್ಲದೆ ಎಂದಿನಂತೆ ಉದಾಸೀನರಾಗಿದ್ದಲ್ಲಿ 6 ಕೋಟಿ ಜನರನ್ನು ಕಳೆದುಕೊಂಡು ಹಿಂದೂಮತ ಶೈಥಿಲ್ಯಕ್ಕೆ ದಾರಿಮಾಡಿಕೊಟ್ಟಂತಾಗುವುದರಲ್ಲಿ ಸಂದೇಹವಿಲ್ಲವು. ಈ ಪತಿತಜನೋದ್ಧಾರಪ್ರಯತ್ನವು ಈಗ ಭರತಖಂಡದ ಮುಖ್ಯಚರ್ಚಾಸ್ಪದ ವಿಷಯಗಳಲ್ಲೊಂದಾಗಿ ನಿಂತಿರುವುದರಿಂದ, ಇದಕ್ಕಾಗಿ ಪ್ರಬಲತರವಾದ ಪ್ರಯತ್ನಗಳು ನಡೆದೇ ತೀರಬೇಕಾಗಿದೆ. ಭರತಖಂಡದ ಸಂಘಸಂಸ್ಕರಣ ಸಭೆಯವರು ಪ್ರತಿವರ್ಷದಲ್ಲೂ ಈ ವಿಚಾರದಲ್ಲಿ ತಕ್ಕ ಸೂಚನೆಗಳನ್ನು ಕೊಟ್ಟು ಪ್ರಜಾಪ್ರಮುಖರನ್ನು ಎಚ್ಚರಿಸುತ್ತಿದಾರೆ. ದೇಶದಲ್ಲಿ ಅಲ್ಲಿಗಲ್ಲಿಗೆ ಈ ಪ್ರಯತ್ನಸಾಧನಸಂಘಗಳು ಸ್ಥಾಪಿಸಲ್ಪಟ್ಟೂ ಪಡುತಲೂ ಇವೆ. ಪ್ರಭುತ್ವದವರು ಕೂಡ ಈ ಕಾರ್ಯಕ್ಕೆ ಉದಾರವಾಗಿ ಸಹಾಯ ಪ್ರೋತ್ಸಾಹಗಳನ್ನು ಮಾಡುತ್ತಿದಾರೆ. ಸ್ವರಾಜ್ಯಸಂಪಾದನೆಗೋಸ್ಕರ ಕಂಕಣಬದ್ಧರಾಗಿ ಆತ್ಮಾರ್ಪಣವನ್ನು ಸಹ ಮಾಡುತ್ತಿರುವ ಮಹಾತ್ಮಾಗಾಂಧಿಯವರು ಸಾಧನಗಳಲ್ಲಿ ನಿಮ್ನ ಜಾತಿ ಜನರ ಅಸ್ಪೃಶ್ಯತ್ವವನ್ನು ತೊಲಗಿಸಬೇಕಾದುದು ಮೊದಲನೆಯ ಸಾಧನವೆಂದೂ ಅದರವಿನಾ ಗತ್ಯಂತರವಿಲ್ಲವೆಂದೂ ಬೋಧಿಸುತ್ತ ಅದರಂತೆ ಆಚರಿಸುತ್ತಲೂ ಇದ್ದಾರೆ. ಅವರ ಅನುಯಾಯಿಗಳಾದ ಎಷ್ಟೋ ಸಭೆಗಳು ಕೂಡ ಆತೆರದ ನಿರ್ಧಾರವನ್ನು ಮಾಡಿ ಆಚರಿಸಲು ಪ್ರಯತ್ನಿಸುತ್ತಿವೆ.

ಈಗ್ಗೆ 6 ವರ್ಷಗಳ ಹಿಂದೆ ಬೊಂಬಾಯಿನಲ್ಲಿ ಅಸ್ಪೃಶ್ಯತಾನಿವಾರಕ ಸಭೆಯು ಬರೋಡಾ ಮಹಾರಾಜರವರ ಅಧ್ಯಕ್ಷತೆಯಲ್ಲಿ ಕೂಡಿದ್ದಾಗ್ಗೆ, ಸತ್ಕಾರಕಸಂಘಾಧ್ಯಕ್ಷರಾಗಿದ್ದ ಕೈ॥ ಸರ್ ನಾರಾಯಣಚಂದವಾರ್ಕರವರು ತಮ್ಮ ಭಾಷಣಮಾಡುವಲ್ಲಿ "ನಮ್ಮ ಹಿಂದೂ ಜನಾಂಗದಲ್ಲಿ ಹೊಲೆಯ ಮಾದಿಗರುಗಳು ಅಸ್ಪೃಶ್ಯರೆಂಬುದಾಗಿ ಉತ್ತಮವರ್ಣದವರಿಂದ ಎದುವರೆಗೆ ಭಾವಿಸಲ್ಪಟ್ಟಿರುವರೋ ಅದುವರೆಗೆ ಆ ಉತ್ತಮವರ್ಣದವರನ್ನು ಹೊಲೆಯ ಮಾದಿಗರನ್ನಾಗಿಯೇ ಈಶ್ವರನು ಅಣಗಿಸಿಬಿಡದೆ ಹೋಗುವುದಿಲ್ಲವು" ಎಂದೂ, ಸಭಾಧ್ಯಕ್ಷರಾದ ಬರೋಡಾಮಹಾರಾಜರವರು ತಮ್ಮ ಭಾಷಣದಲ್ಲಿ "ಈ ಹೊಲೆಯ ಮಾದಿಗರು ಮಾತ್ರವೇ ಅಲ್ಲದೆ ಶೂದ್ರರೆಂದು ಅಲಕ್ಷೀಕರಿಸಲ್ಪಟ್ಟಿರುವ ಇನ್ನೂ ಕೋಟ್ಯಂತರ ಜನರ ಸಾಂಘಿಕ ಸ್ಥಿತಿಯನ್ನೂ ಕೂಡ ಭಾರತೀಯರೆಲ್ಲಾ ಧೈರ್ಯದಿಂದಲೂ ಸಾಹಸದಿಂದಲೂ ಸುಧಾರಿಸಬೇಕು" ಎಂದೂ ಹೇಳಿದರು. ಅಲ್ಲದೆ ಈ ಮಹಾಸಭೆಗೆ ಬರಲು ಆಶ್ವಾಸನ ಕೊಟ್ಟಿದ್ದ ಕೊಲ್ಲಾಪುರದ ಶಂಕರಾಚಾರ್ಯ ಪೀಠಾಧೀಶರಾದ ಸ್ವಾಮಿಗಳು ಕಾರಣಾಂತರದಿಂದ ಸಭೆಗೆ ಬರಲೆತ್ನವಾಗಲಿಲ್ಲವಾಗಿ ಆ ಸಭಾಪ್ರಯತ್ನ ವಿಚಾರವಾಗಿ ತಮ್ಮ ಸಾನುಭೂತಿಯನ್ನು ತೋರಿಸಿ ಒಂದು ಪತ್ರವನ್ನು ಬರೆದು, ಅದರಲ್ಲಿ "ಆಧ್ಯಾತ್ಮಿಕೋನ್ನತ ಸೂತ್ರಗಳಿಂದ ನಮ್ಮ ಶಾಸ್ತ್ರಗಳು ನಿಬಿಡವಾಗಿವೆ. ಆದರೆ ಕಾಲಕ್ರಮದಲ್ಲಿ ಅನೇಕ ಮೂರ್ಖಾಚಾರಗಳು ಹುಟ್ಟಿ ಪ್ರಬಲಿಸಿವೆ. ಹಿಂದುಗಳಲ್ಲಿರುವ ನಿಮ್ನಜಾತಿ ಜನರನ್ನು ತುಚ್ಛಭಾವದಿಂದ ಕಾಣುವ ಲೌಕಿಕನು ಪಾಪಿಷ್ಠನು. ವಿಶ್ವಮಾನವ ಸಮತ್ವ ಸೂತ್ರವನ್ನು ಹಿಡಿದು ನನಗೆ ಅವರ ಮೇಲೆ ವಿಶೇಷ ಸಾನುಭೂತಿಯಿರುವುದು. ಅವರು ದುರಭ್ಯಾಸಗಳಿಗೊಳಗಾಗಿ ಹೀನಸ್ಥಿತಿಗೆ ಬಂದಿರುವರು. ಅವರ ಸ್ಥಿತಿಯನ್ನು ಸುಧಾರಿಸುವುದು ಉತ್ತಮವರ್ಣದವರ ಕರ್ತವ್ಯವಾಗಿದೆ. ಈ ನಿಮ್ನಜಾತಿಯವರಿಂದ ಅನೇಕ ಮಹರ್ಷಿಗಳುದ್ಧರಿಸಿರುವರು. ಈ ನಿಮ್ನಜಾತಿಯವರನ್ನು ಉತ್ತಮಜಾತಿಯವರ ಸ್ಥಿತಿಗೆ ತರಬೇಕು. ಅವರ ಪುರೋವೃದ್ಧಿಗೆ ಆತಂಕವಾಗಿರುವ ನಿಯಮಗಳನ್ನೆಲ್ಲಾ ತೊಲಗಿಸಬೇಕು. ಈ ಮಹಾ ಸಭಾಕಾರ್ಯಗಳು ಸಫಲವಾಗಬೇಕು. ಧಾರ್ಮಿಕ ವಿಷಯದಲ್ಲಿ ಏನಾದರೂ ಮಾರ್ಪನ್ನು ಮಾಡಬೇಕಾಗಿದ್ದರೆ ಅದನ್ನು ನನ್ನ ಸಹೋದರ ಪೀಠಾಧಿಪತಿಗಳ ಕೂಡ ಪರ್ಯಾಲೋಚಿಸುವೆನು" ಎಂದು ಅಭಿಪ್ರಾಯ ಕೊಟ್ಟಿದ್ದರು. ಸರ್ವಪ್ರಜೆಗಳ ಪ್ರಯೋಜನಾರ್ಥವಾಗಿ ಕಟ್ಟಲ್ಪಟ್ಟಿರುವ ದೇವಾಲಯಗಳಿಗೆ ಇತರ ಬ್ರಾಹ್ಮಣೇತರರಂತೆಯೇ ಪಂಚಮರೂ ಹೋಗಿ ದೇವತಾಸೇವೆಯನ್ನು ಮಾಡಿಕೊಂಡು ಬರುವ ಹಕ್ಕು ಅವರಿಗೂ ಇರುವುದರಿಂದ, ಕಾರ್ಯಸಾಧನೆಗಾಗಿ ಕಷ್ಟಗಳನ್ನು ಅನುಭವಿಸುವಲ್ಲಿ ಆತ್ಮನಿಗ್ರಹವನ್ನು ಮಾಡಬಹುದೆಂತಲೂ, ಆದರೆ ವರ್ಣಾಂತರ ಭೋಜನ ವಿವಾಹಸಂಬಂಧಗಳು ಆಧ್ಯಾತ್ಮಿಕ ಆರೋಗ್ಯವಿಷಯಗಳಮೇಲೆ ಆಧಾರಪಟ್ಟಿರುವ ಪ್ರಯುಕ್ತ ಅವನ್ನು ಬಿಟ್ಟು ಅಸ್ಪೃಶ್ಯತ್ವವನ್ನು ಮಾತ್ರ ಖಂಡಿತವಾಗಿ ದೂರೀಕರಿಸಬೇಕೆಂತಲೂ ಮಹಾತ್ಮಾಗಾಂಧಿಯವರು ಅಭಿಪ್ರಾಯಪಟ್ಟಿರುವರು. ಇವರ ಈತೆರದ ಅಭಿಪ್ರಾಯವನ್ನು ಕೆಲರು ನೋಡಿ ಗಾಂಧಿಯವರು ರಾಜಕೀಯ ಗುರುವೇ ಹೊರತು ಮತವಿಷಯದಲ್ಲಿ ಆದರ್ಶಪ್ರಾಯರಲ್ಲನೆಂತಲೂ, ಅದುಕಾರಣ ಅಸ್ಪೃಶ್ಯತ್ವ ವಿಷಯದಲ್ಲಿ ಅವರು ತಪ್ಪುದಾರಿಯಲ್ಲಿ ಹೋಗುತ್ತಿರುವರೆಂತಲೂ ಆಡುತ್ತಿದಾರೆ. ಆದರೆ ಕೇವಲ ಪಾರಮಾರ್ಥಿಕವಿಷಯದಲ್ಲೇ ಮಗ್ನರಾಗಿ ಸರ್ವಸಂಗಪರಿತ್ಯಾಗದಿಂದ ಬ್ರಹ್ಮಾನಂದಲೋಲುಪರಾಗಿ ಪರಮರ್ಷಿಗಳಂತಿರುವ ಅರವಿಂದ ಯೋಗಿವರ್ಯರು ಈ ಅಸ್ಪೃಶ್ಯತ್ವವಿಷಯದಲ್ಲಿ ಪ್ರಸ್ತಾಪಿಸುವಾಗ್ಗೆ ಅಸ್ಪೃಶ್ಯವೆಂಬುದು ತಿಳಿಗೇಡಿಮಾತೆಂತಲೂ, ಅಮಾನುಷವೆಂತಲೂ ಖಂಡಿಸಿದುದಲ್ಲದೆ, "ಅಮೇರಿಕೆಯಲ್ಲಿ ನೀಗ್ರೋಜನರನ್ನೂ, ದಕ್ಷಿಣಾಫ್ರಿಕಾದಲ್ಲಿ ಭಾರತೀಯರನ್ನೂ ಕಾಣುತ್ತಿರುವಂತೆ ನಾವು ಈ ದೇಶದ ಪಂಚಮಸೋದರರ ವಿಷಯದಲ್ಲಿ ಪ್ರವರ್ತಿಸಿ ಅವರನ್ನು ನಿಂದಿಸುತ ದೇಶಕ್ಕೆ ಸ್ವಾತಂತ್ರ್ಯವನ್ನು ಕೋರುತ್ತಿರುವುದು ಅತ್ಯಂತ ವಿಚಿತ್ರವು. ಅಸ್ಪೃಶ್ಯತ್ವವನ್ನು ಶಾಸ್ತ್ರೀಯವಾಗಿ ಸಾಧಿಸಲಾಗುವದಿಲ್ಲವು ಮತ್ತು ಶಾಸ್ತ್ರವಿಧಿಯೆಂಬುದು ಆಯಾ ಕಾಲಸ್ಥಿತಿಯನ್ನನುಸರಿಸಿ ಏರ್ಪಟ್ಟ ಸಂಘನಿಯಮವು. ಆ ನಿಯಮವು ನಿತ್ಯವಲ್ಲವು." ಎಂದು ತಿಳಿಸಿರುವರು.

ಮಹಾತ್ಮಾಗಾಂಧಿಯವರ, ಅವರ ಅನುಯಾಯಿಗಳ ಮತ್ತು ಸಮಾಜಸಂಸ್ಕರಣಧುರೀಣರ ಪ್ರೋದ್ಬಲದಿಂದ ಪಂಚಮರ ಅಸ್ಪೃಶ್ಯತಾನಿವಾರಣೆಗಾಗಿ ಅಲ್ಲಲ್ಲಿಗೆ ಚಳವಳಿಯು ನಡಿಸಲ್ಪಡುತ್ತಿರುವುದರಿಂದಲೂ, ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ವೈಕಂನಲ್ಲಿ ದೇವಸ್ಥಾನಗಳ ಮುಂಗಡೆಯ ಮಾರ್ಗಗಳಲ್ಲಿ ಅಸ್ಪೃಶ್ಯರು ತಿರುಗಾಡಕೂಡದೆಂದಿರುವ ನಿರ್ಬಂಧವಿಮೋಚನೆಗಾಗಿ ಪಂಚಮರು ಸತ್ಯಾಗ್ರಹವ್ರತಶೀಲರಾಗಿ ಅನೇಕ ಕಷ್ಟಗಳನ್ನು ಅನುಭವಿಸುವಲ್ಲಿ ಆತ್ಮಾರ್ಪಣೆಯನ್ನು ಮಾಡುತ್ತಿರುವುದರಿಂದಲೂ, ಈ ಜನರ ಸತ್ಸಂಕಲ್ಪಸಾಧನೆಯಲ್ಲಿ ಸ್ವರಾಜ್ಯಸಾಧಕರನೇಕರು ಸಾನುಭೂತಿಯುಳ್ಳವರಾಗಿ ಸಾಹಾಯ್ಯಮಾಡುತ್ತಿರುವುದರಿಂದಲೂ ಈ ಅಸ್ಪೃಶ್ಯತಾನಿವಾರಣಾಸಮಸ್ಯೆಯನ್ನು ಪರ್ಯಾಲೋಚಿಸಲು ಗೋದಾವರಿ ಡಿಸ್ಟ್ರಿಕ್ಟು ಆಲಮೂರಿನಲ್ಲಿ ಪಂಡಿತಮಹಾಸಭೆಯು ಪಂಡಿತಕಾವ್ಯಕಂಠ ಗಣಪತಿಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿದ್ದು, ಅಸ್ಪೃಶ್ಯತ್ವವು ಯಾವ ಶಾಸ್ತ್ರದಲ್ಲೂ ವಿಧಿಸಲ್ಪಟ್ಟಿಲ್ಲವಾದುದರಿಂದ, ಅದರ ನಿವಾರಣೆಯು ಅತ್ಯವಶ್ಯಕವೆಂದು ಅಧ್ಯಕ್ಷರು ಮತ್ತು ಆಹ್ವಾನಸಂಘಾಧ್ಯಕ್ಷರಾದ ಪೆಂಡ್ಯಾಲು ಸುಬ್ರಹ್ಮಣ್ಯಶಾಸ್ತ್ರಿಗಳು ಮೊದಲಾಗಿ ಮಹಾಪಂಡಿತರುಗಳಿಂದ ಪ್ರತಿಪಾದಿಸಲ್ಪಟ್ಟು "ವೈದಿಕಧರ್ಮಾನುಷ್ಠಾನವೇಳೆಯ ಹೊರತಾಗಿ ಇತರ ವೇಳೆಯಲ್ಲಿ ಅಸ್ಪೃಶ್ಯತಾನಿವಾರಣೆಯು ಅತ್ಯವಸರವೆಂದೂ; ಕ್ರೈಸ್ತರು, ಮಹಮ್ಮದೀಯರು, ಜೈನರು, ಬೌದ್ಧರುಗಳಂತೆ ಪಂಚಮಜಾತಿ ಸೋದರರುಗಳು ಕೂಡ ಅಗ್ರಜಾತಿಯವರಿಂದ ಆದರಿಸಲ್ಪಡಬೇಕೆಂದೂ; ರಾಜಮಾರ್ಗ, ಜಲಾಶಯ, ತೀರ್ಥಯಾತ್ರಾಸ್ಥಲ, ದೇವಾಲಯ, ಪಾಠಶಾಲೆ, ಲೌಕಿಕಸಭೆ ಇತ್ಯಾದಿ ಸಾರ್ವಜನಿಕ ಸ್ಥಳಗಳಿಗೆ ಅಸ್ಪೃಶ್ಯರ ಪ್ರವೇಶಕ್ಕೆ ಉತ್ತಮವರ್ಣದವರು ಅವಕಾಶವನ್ನು ಕಲ್ಪಿಸಿಕೊಡಬೇಕೆಂದೂ ಬಹುಜನಾನುಮೋದನದಿಂದ ತೀರ್ಮಾನಗಳು ಮಾಡಲ್ಪಟ್ಟುವು. ಪ್ರಾಚೀನ ಸಂಪ್ರದಾಯವನ್ನು ಸಮಗ್ರವಾಗಿ ಪರಿಶೀಲಿಸಿ ಶಾಸ್ತ್ರವಿಧಿಯನ್ನು ಚೆನ್ನಾಗಿ ಗ್ರಹಿಸಿಕೊಂಡು ಸಂಘಸಂಸ್ಕರಣವಿಚಾರದಲ್ಲಿ ಸದಭಿಪ್ರಾಯವನ್ನು ಕೊಡುವ ಯೋಗ್ಯತೆಯು ಪಂಡಿತರುಗಳಿಗಿರುವುದರಿಂದ, ಗೋದಾವರೀಮಂಡಲ ಪಂಡಿತರು ಬಹು ಚರ್ಚಾಸ್ಪದವಾಗಿರುವ ಮತ್ತು ಹಿಂದೂಗಳ ಏಕಮತ್ಯಕ್ಕೂ ಸ್ವರಾಜ್ಯಸಾಧನೆಗೂ ಪ್ರತಿಬಂಧಕವಾಗಿರುವ ಅಸ್ಪೃಶ್ಯತ್ವವನ್ನು ಶಾಸ್ತ್ರಾಧಾರದಿಂದ ಪರ್ಯಾಲೋಚಿಸಿ ಅದು ಅಶಾಸ್ತ್ರೀಯವೆಂದೂ, ಅದರ ನಿವಾರಣೆಯು ಅತ್ಯವಸರವೆಂದೂ ತಮ್ಮ ಸದಭಿಪ್ರಾಯವನ್ನು ಕೊಟ್ಟಿರುವುದು ಅವರ ನಿಷ್ಪಕ್ಷಪಾತ ಬುದ್ಧಿಯನ್ನು ಪ್ರದರ್ಶಿಸತಕ್ಕುದಾಗಿರುವುದಲ್ಲದೆ ಅಭಿನಂದನೀಯವೂ ಅವರ ಸೋದರಪಂಡಿತ ಮಹಾಶಯರುಗಳಿಂದ ಅನುಕರಣೀಯವೂ ಆಗಿರುವುದು.

ಅರಮನೆಯಲ್ಲಿ ನಡೆಯುವ ವಿವಾಹಮಹೋತ್ಸವವು.

ಶ್ರೀಮನ್ ಮಹಾರಾಜರವರು ತಮ್ಮ ಸೋದರಳಿಯಿಂದರೂ ಕೈ॥ ಕರ್ನಲ್ ದೇಶರಾಜ ಅರಸಿನವರ ಏಕಮಾತ್ರ ಪುತ್ರರೂ ಆದ ಸಾ॥ ರಾಜಕುಮಾರ ದೇಶರಾಜ ಅರಸಿನವರಿಗೆ ಮಹಾರಾಜಶ್ರೀ ಸರದಾರ್ ಗೋಪಾಲರಾಜ ಅರಸಿನವರ ಪ್ರಥಮ ಪುತ್ರಿ ಸೌಭಾಗ್ಯವತಿ ಹರಿದ್ರಾಕುಂಕುಮ ಶೋಭಿತೆಯರಾದ ಲಕ್ಷ್ಮಮ್ಮಣ್ಣಿಯವರನ್ನು ತಂದುಕೊಂಡು ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿ ಸಂವತ್ಸರದ ವೈಶಾಖ ಬಹುಳ ಪ್ರಥಮ ಸೋಮವಾರ (1924ನೆ ಇಸವಿ ಮೇ ತಾರೀಖು 19) ಈ ಶುಭದಿವಸ ಸೂರ್ಯೋದಯವಾದಮೇಲೆ ೨೩-೧೫ ಘಳಿಗೆ ಇಂದ ೨೫ ಘಳಿಗೆಯೊಳಗೆ (3-16 ಗಂಟೆ ಇಂದ 3-58 ಗಂಟೆಯೊಳಗೆ) ಕನ್ಯಾಲಗ್ನದಲ್ಲಿ ವಿವಾಹವನ್ನು ಬೆಳಸುವುದಾಗಿ ನಿಶ್ಚಯಿಸಿ ಆಹ್ವಾನಪತ್ರಿಕೆಗಳನ್ನು ಬಂಧು ಮಿತ್ರರುಗಳಿಗೂ, ದೊಡ್ಡದೊಡ್ಡ ಸರ್ಕಾರಿಯಧಿಕಾರಿಗಳಿಗೂ, ಅರಮನೆಯ ದರ್ಬಾರಿಗೆ ಬರುವವರಲ್ಲಿ ಖಾಸಾಹಾರದ ಮರ್ಯಾದೆಯುಳ್ಳವರಿಗೂ ದಯಪಾಲಿಸಿರುವರು. ಈ ಮಹೋತ್ಸವಕ್ಕಾಗಿ ಅರಮನೆಯ ಮುಂಗಡೆ ದಿವ್ಯವಾದ ಚಪ್ಪರವು ಹಾಕಲ್ಪಟ್ಟು ವಿವಾಹಮಂಟಪವು ಕಾಲೋಚಿತವಾಗಿ ಸಜ್ಜುಗೊಳಿಸಲ್ಪಟ್ಟಿರುತ್ತದೆ. ಪರಸ್ಥಳಗಳಿಂದ ಬರತಕ್ಕ ಅತಿಥಿ ದೊಡ್ಡಮನುಷ್ಯರುಗಳ ಸತ್ಕಾರಕ್ಕಾಗಿ ಸೆಕ್ರೆಟರಿಯಟ್ಟಿನ ರೆಜಿಸ್ಟ್ರಾರರಾದ ಮ॥ ರಾಮರಾಯರು ನಿಯಮಿಸಲ್ಪಟ್ಟು ಸರ್ಕಾರಿ ಕಟ್ಟಡ ಮೊದಲಾದೆಡೆಗಳಲ್ಲಿ ಬಿಡಾರಗಳೇರ್ಪಡಿಸಲ್ಪಟ್ಟಿವೆ. ಪರಸ್ಥಳದಿಂದ ದೊಡ್ಡ ದೊಡ್ಡ ವರ್ತಕರುಗಳು ಪಟ್ಟುಪಟ್ಟಾವಳಿಗಳನ್ನೂ ನವರತ್ನಾಭರಣಗಳನ್ನೂ ಅರಮನೆಗೆ ವಿಕ್ರಯಿಸಲು ತೆಗೆದುಕೊಂಡು ಬಂದಿರುವರು. ಈ ವಿವಾಹಮಹೋತ್ಸವವು ವೈಭವದಿಂದ ನೆರವೇರಿ ನೂತನ ದಂಪತಿಗಳಿಗೆ ಸಕಲ ಸನ್ಮಂಗಳವಾಗಲೆಂದು ಹರಸುವೆವು.

ಡಾಕ್ಟರ್ ಸನುಯೇಟಸೇನುರವರ ನಿಧನ.

ಚೀನಾರಾಜ್ಯದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಬಹುಕಾಲದಿಂದ ಪ್ರಯತ್ನಿಸುತಲಿದ್ದ ದೇಶಭಕ್ತರುಗಳಲ್ಲಿ ಅಗ್ರಗಣ್ಯರೂ, ಚೀನಾ ರಾಜನೀತಿಜ್ಞರಲ್ಲಿ ನಿರುಪಮಾನ ಪ್ರಜ್ಞಾಸಂಪನ್ನರೂ ಆಗಿದ್ದ ಡಾಕ್ಟರ್ ಸನುಯೇಟ್‌ಸೇನುಯವರು ಮೆದಳುಜ್ವರ ರೋಗಗ್ರಸ್ತರಾಗಿದ್ದು ವೈದ್ಯಚಿಕಿತ್ಸೆಯಿಂದ ಗುಣವನ್ನು ಹೊಂದದೆ ವಿಧಿವಶರಾದರು. ಇವರ ಮರಣದಿಂದ ಚೀನಾದೇಶಕ್ಕೇ ಅಪಾರ ನಷ್ಟಸಂಭವಿಸಿತೆನ್ನುವುದರಲ್ಲಿ ಸಂಶಯವಿಲ್ಲವು. ದೇಶಾಭಿಮಾನದಿಂದ ಇವರು ಅನೇಕವೇಳೆ ಪ್ರಾಣಾಪಾಯಕ್ಕೂ ಕೂಡ ಗುರಿಯಾಗಿದ್ದು ವಿದೇಶದಲ್ಲಿ

ಜ್ಞಾತವಾಸವಾಗಿದ್ದರಲ್ಲದೆ ಮರಣಾಂತ್ಯದವರೆಗೂ ದೇಶಸೇವೆಯಲ್ಲೇ ನಿರತರಾಗಿದ್ದರು

ಇವರು 1892ರಲ್ಲಿ ಚೀನಾರಾಜ್ಯದಲ್ಲಿ ವಿಪ್ಲವೋದ್ಯಮವನ್ನು ನಡಿಸುತ್ತಿದ್ದು ಪ್ರಜಾಪ್ರಭುತ್ವವಿಧಾನವನ್ನೇರ್ಪಡಿಸಿದ ನಾ ಚೀನಾದೇಶವು ಅಭಿವೃದ್ಧಿಯನ್ನು ಹೊಂದುವುದಿಲ್ಲವೆಂದು ತಿಳಿದು 1911ರಲ್ಲಿ ಮಂಚೂ ರಾಜಕುಟುಂಬವನ್ನು ಅಧಿಕಾರದಿಂದ ತೊಲಗಿಸಲು ತಕ್ಕ ಪ್ರಯತ್ನವನ್ನು ನಡೆಸಿದರು. ಅದರಿಂದಲೇ ಚೀನಾ ಪ್ರಜಾಪ್ರಭುತ್ವ ಸ್ಥಾಪನೆಗೆ ಕಾರಣಕರ್ತರೆಂದು ಅವರಿಗೆ ಹೆಸರುಬಂದಿತು. ಮೊದಲು ಸೇನುಯವರು ಪ್ರಜಾಪ್ರಭುತ್ವದ ಅಧ್ಯಕ್ಷರಾಗಿ ಆರಿಸಲ್ಪಟ್ಟರಾದರೂ ಸ್ವಾರ್ಥರಹಿತರಾಗಿ ದೇಶಾಭಿಮಾನದಿಂದ ಯೂಅನ್ಷಿಕಾಯವರೇ ಸರ್ವವಿಧದಿಂದಲೂ ಅಧ್ಯಕ್ಷಪದವಿಯನ್ನಲಂಕರಿಸಲು ಅರ್ಹರೆಂದು ತಿಳಿದು ಸೇನುರವರು ಅಧ್ಯಕ್ಷಪದವಿಯನ್ನು ತ್ಯಜಿಸಿಬಿಟ್ಟರಾದರೂ, ಯೂಅನ್ಷಿಕಾಯವರು ವ್ಯಾಧಿಗ್ರಸ್ತರಾಗಿ ಮೃತಿಯನ್ನು ಹೊಂದಿದುದರಿಂದ ಸೇನುಯವರ ಇಷ್ಟಾರ್ಥವು ಕೈಕೂಡದೆ ದೇಶವು ವಿಷಮಸ್ಥಿತಿಗೆ ಗುರಿಯಾಯಿತು. ರಾಷ್ಟ್ರಪಾಲಕರು ಪ್ರಜಾಪ್ರಭುತ್ವವನ್ನು ಲೆಕ್ಕಿಸದೆ ಸ್ವತಂತ್ರವಾಗಿ ರಾಜ್ಯಾಡಳಿತವನ್ನು ನಡೆಯಿಸುವವರಾದರು. ಹೇಗಾದರೂ ಚೀನಾರಾಜ್ಯದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕೆಂದು ಸೇನುರವರು ಸಂಕಲ್ಪಿಸಿ ದಕ್ಷಿಣರಾಷ್ಟ್ರಕ್ಕೆ ಅಧಿಪತಿಯಾಗಿ ಕಾಂಟನ್ನಿನಲ್ಲಿ ವಾಸಮಾಡಿಕೊಂಡಿದ್ದುದರ ಮೇಲೆ 1921 ರಲ್ಲಿ ಪ್ರಜಾಕಲಹವು ಶಾಂತವಾಯಿತು ಸೇನುಯವರು ಪಾಶ್ಚಾತ್ಯ ದೇಶಗಳಲ್ಲಿ ಬಹಳವಾಗಿ ಸಂಚರಿಸಿ ಪಾಶ್ಚಾತ್ಯ ವಿಜ್ಞಾನವನ್ನೂ ನಾಗರಕತೆಯನ್ನೂ ಚೆನ್ನಾಗಿ ಪರಿಚಯಮಾಡಿಕೊಂಡಿದ್ದರು. ವಿದೇಶೀಯರ ಸಹಾಯವಿಲ್ಲದಿದ್ದುದರಿಂದಲೇ ಚೀನಾದಲ್ಲಿ ಪ್ರಜಾಪ್ರಭುತ್ವವು ಸ್ಥಿರಪಡಲಿಲ್ಲವೆಂದು ಸೇನುರವರು ತಿಳಿದಿದ್ದರಾದರೂ ಹಾಗೆ ವಿದೇಶೀಯರ ಸಹಾಯವನ್ನು ಕೋರುವುದು ಎಷ್ಟುಮಾತ್ರಕ್ಕೂ ಅವರಿಗಿಷ್ಟವಿರಲಿಲ್ಲವು. 1923 ರಲ್ಲಿ ಸೇನುರವರು ಕ್ಯಾಂಟನ್ನನ್ನು ವಶಪಡಿಸಿಕೊಂಡರು. ಆಗಲೇ ಸೇನುರವರು ಗೌರ್ನರೆಂದು ಪ್ರಕಟಿತವಾಯಿತು.

ಸ್ವದೇಶದ ವೃತ್ತಾಂತಗಳು.

ಮೈಸೂರು ಸಂಪದಭಿವೃದ್ಧಿ ಸಮಾಜದ ಸಮಾವೇಶವು ಬರುವ ಜೂನ್ ತಾ॥ 14ನೆಯ ಶನಿವಾರ ಬೆಳಿಗ್ಗೆ 12 ಗಂಟೆಗೆ ಜಗನ್ಮೋಹನಪ್ರಾಸಾದದಲ್ಲಿ ಜರುಗುವುದು.

ಮೈಸೂರು ನ್ಯಾಯವಿಧಾಯಕಸಭಾಧಿವೇಶನವು ಜೂನ್ ತಾ॥ 17ನೆಯ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಬೆಂಗಳೂರು ಪಬ್ಲಿಕ್‌ಆಫೀಸ್ ಕಟ್ಟಡದಲ್ಲಿ ನಡೆಯುವುದು.

ನಮ್ಮ ಬ್ರಿಟಿಷ್ ರೆಸಿಡೆಂಟರು ಕಳೆದ ತಾ॥ 16ರಲ್ಲಿ ಉದಕಮಂಡಲದಿಂದ ರಾಜಧಾನಿಗೆ ಮೋಟಾರುಬಂಡಿಯಲ್ಲಿ ಬಂದು ಇಲ್ಲಿ 1-2 ಗಂಟೆಗಳ ಕಾಲವಿದ್ದು ಊಟವುಪಚಾರಾದಿಗಳನ್ನು ತೀರಿಸಿಕೊಂಡು ಕೊಡಗಿನ ಪ್ರಾಂತ ಪ್ರಯಾಣಮಾಡಿದರು.

ಬರುವ ಜ್ಯೇಷ್ಠಮಾಸದಲ್ಲಿ ಪ್ರಥಮರಾಜಕುಮಾರಿ ಶ್ರೀಮತಿಯರಾದ ಜಯಲಕ್ಷ್ಮಮ್ಮಣ್ಣಿಯವರ ಮತ್ತು ತೃತೀಯ ರಾಜಕುಮಾರಿ ಸೌಭಾಗ್ಯವತಿಯರಾದ ಚಲುವಾಜಮ್ಮಣ್ಣಿಯವರ ಇಬ್ಬರು ಪುತ್ರಿಯರುಗಳ ವಿವಾಹಮಹೋತ್ಸವಗಳು ಅರಮನೆಯಲ್ಲಿ ಜರುಗಿಸಲ್ಪಡುವುದಾಗಿ ಕೇಳುತ್ತೇವೆ

ಬೆಂಗಳೂರು ಮ್ಯುನಿಸಿಪಲ್ ಆಫೀಸಿನ ಕೊಲೆ ವಿಚಾರದಲ್ಲಿ ಅಪರಾಧಿ ಕೃಷ್ಣರಾಯನಿಗೆ ಮರಣದಂಡನೆಯೂ, ಕಳ್ಳತನಕ್ಕಾಗಿ 10 ವರ್ಷ ಕಠಿಣಕಾರಾಗೃಹವಾಸ ಶಿಕ್ಷೆಯೂ ವಿಧಿಸಲ್ಪಟ್ಟಿರುವುದೆಂದಿರಬೇಕಾದುದಕ್ಕೆ ಅಕ್ಷರ ಸಂಯೋಜಕರ ಅಜಾಗರೂಕತೆಯಿಂದ ಬರೇಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟಿತೆಂದು ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುವುದಕ್ಕಾಗಿ ವಿಷಾದಿಸುತ್ತೇವೆ.

ಬೆಂಗಳೂರಿನಲ್ಲಿದ್ದ ಮಹಾಮಾತೃಶ್ರೀ ವಾಣಿವಿಲಾಸ ಸನ್ನಿಧಿಯವರು ಕಳೆದವಾರ ರಾಜಧಾನಿಗೆ ಚಿತ್ತೈಸಿದ್ದು ರಾಜಕುಮಾರ ದೇಶರಾಜ ಅರಸಿನವರ ವಿವಾಹಲಗ್ನ ಪತ್ರಿಕಾಲೇಖನಾನಂತರ ಬೆಂಗಳೂರಿಗೆ ದಯಮಾಡಿಸಿ ಪ್ರಥಮ ರಾಜಕುಮಾರಿ ಜಯಲಕ್ಷ್ಮಮ್ಮಣ್ಣಿಯವರನ್ನು ಕರೆದುಕೊಂಡು ಮೊನ್ನೆಯದಿನ ಸ್ಪೆಷಲ್ ಟ್ರೈನಿನಲ್ಲಿ ರಾಜಧಾನಿಗೆ ದಯಮಾಡಿಸಿದರು. ರಾಜಕುಮಾರಿಯವರು ಬಹಳ ಮಟ್ಟಿಗೆ ಆರೋಗ್ಯವನ್ನು ಹೊಂದಿರುವರೆಂದು ತಿಳುಹಲು ಸಂತೋಷವಾಗುತ್ತದೆ.

ರಾಜಕುಮಾರ ದೇಶರಾಜ ಅರಸಿನವರ ವಿವಾಹಮಹೋತ್ಸವಕ್ಕಾಗಿ ಆಹೂತರಾಗಿರುವವರಲ್ಲಿ ಟ್ರಾವನ್ಕೂರಿನ ಯುವರಾಣಿಯವರು ನೆನ್ನೆಯದಿನ ಬೆಳಿಗ್ಗೆ ಬೆಂಗಳೂರಿಂದ ರಾಜಧಾನಿಗೆ ಬಂದು ವಸಂತಮಹಲಿನಲ್ಲಿಳಿದುಕೊಂಡಿರುವರು ಮತ್ತು ಉದಕಮಂಡಲದಲ್ಲಿರುವ ಕೂಚ್‌ಬಿಹಾರ್ ಮಹಾರಾಣಿ ರೀಜಂಟರವರೂ ಕುಮಾರ ಮಹಾರಾಜರವರೂ 40 ಜನ ಸೇವಕರೊಳಗೊಡನೆ ಈ ದಿವಸ ರಾಜಧಾನಿಗೆ ಬಂದು ವಸಂತಮಹಲಿನಲ್ಲಿ ಬಿಡಾರಮಾಡುವವರಾಗಿರುವರು. ಕಪೂರ್ಥಲಾ ಮಹಾರಾಜರವರೂ ಬರಬಹುದಾಗಿ ನಿರೀಕ್ಷಿಸಲ್ಪಟ್ಟಿದೆ.

ಕಳೆದ ತಾ॥ ೮ ರ ರಾತ್ರಿ ರಾಜಧಾನಿಯಲ್ಲಿ ಮಳೆಯಾದಾಗ್ಗೆ ಸಿಡಿಲು ಶ್ರೀ ಚಾಮುಂಡೇಶ್ವರೀ ದೇವಸ್ಥಾನದ ಗೋಪುರಶಿಖರದ ಮೇಲ್ಭಾಗದಲ್ಲಿ ಹಾಕಲ್ಪಟ್ಟಿದ್ದ ವಿದ್ಯುದ್ದೀಪಕ್ಕೆ ಬಿಡಿದುದರಿಂದ ದೀಪವು ನುಚ್ಚುನೂರಾಯಿತು. ಮತ್ತು ರಾಜಧಾನಿಯ ನಜರಬಾದಿನಲ್ಲಿರುವ ಜವಾಹಿರಿ ವರ್ತಕರಾದ ಮ॥ ಸಿದ್ದೋಜಿರಾಯರ ಸತ್ರದ ತಲಬಾಗಲಿಗೂ ಅದರ ಮೇಲಣ ಕಟ್ಟಡಕ್ಕೂ ಸಿಡಿಲು ತಗುಲಿ ಗೋಡೆಯೊಳಗೆ ಸಣ್ಣ ರಂಧ್ರ ಬಿದ್ದಿರುವುದಲ್ಲದೆ ಬಾಗಿಲು ಒಡೆದುಹೋಗಿರುವುದು. ಆದರೆ ದೈವಾಧೀನದಿಂದ ಪ್ರಾಣಿಗಳಿಗೆ ಅಪಾಯವೇನೂ ಆಗಲಿಲ್ಲವು.

ಶ್ರೀಮನ್ ಮಹಾರಾಜರವರ ವರ್ಧಂತಿಮಹೋತ್ಸವ ಸಮಯದಲ್ಲಿ ಸಂಸ್ಥಾನದ ಆಯವ್ಯಯ ಲೆಖ್ಖಪರಿಶೋಧನೆಗಾಗಿ ಸೇರುವ ಪ್ರಜಾಪ್ರತಿನಿಧಿ ಸಭಾಧಿವೇಶನವು ಬರುವ ಜೂನ್ ತಾ॥ 6 ನೆಯ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ರಾಜಧಾನಿಯ ಜಗನ್ಮೋಹನಪ್ರಾಸಾದದಲ್ಲಿ ನಡೆಯುವುದಾಗಿ ಗೊತ್ತಾಗಿರುತ್ತದೆ. ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವವು ಜೂನ್ ತಾ॥ 13 ನೆಯ ಶುಕ್ರವಾರ ಜರಗುವುದು. ಮತ್ತು ಕುದುರೆಯ ಪಂದ್ಯಗಳು ಜೂನ್ ತಾ॥ 12, 14, 17 ಮತ್ತು 19 ರಲ್ಲಿ ನಡಿಯುವುವು. ಈ ಪಂದ್ಯಕ್ಕೆ ಈವೇಳೆ ಕಲಕತ್ತಾ ಬೊಂಬಾಯಿ ಮದ್ರಾಸು ಮೊದಲಾದ ಕಡೆಗಳಿಂದ ಅನೇಕ ಜನರು ತಂತಮ್ಮ ಕುದುರೆಗಳನ್ನು ತೆಗೆದುಕೊಂಡು ಬರುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಮೈಸೂರು ಗೆಜೆಟ್ ಪತ್ರಿಕೆಯ ಆಂಗ್ಲ ಮತ್ತು ಕನ್ನಡ ಭಾಗಗಳೆರಡೂ ನಮ್ಮ ಸ್ಟಾರ್ ಪತ್ರಿಕೆಗೆ ಮುಯ್ಯಾಗಿ ಕಳೆದ 15-16 ವರ್ಷಗಳಿಂದಲೂ ಬರುತ್ತಿದ್ದು ಇತ್ತೀಚೆಗೆ ಕನ್ನಡ ಭಾಗ ಮಾತ್ರ ಕಳುಹಲ್ಪಡುತ್ತಿದ್ದಿತು. ಆದರೆ ಈ ಕನ್ನಡ ಭಾಗವೂ ಕಳೆದ ೨ ತಿಂಗಳ ಮೇಲ್ಪಟ್ಟು ನಿಲ್ಲಿಸಲ್ಪಟ್ಟಿರುವುದಲ್ಲದೆ ಇದರ ಕಾರಣವನ್ನು ತಿಳಿಯಲು ನಾವು ಚೀಫ್‌ಸೆಕ್ರೆಟರಿಯವರಿಗೂ ಗೆಜೆಟ್ ಕಂಪೈಲರಿಗೂ ಬರೆದಿದ್ದಾಗ್ಗೂ ಗೆಜೆಟ್ಟು ಕಳುಹಲ್ಪಡದಿರುವದೂ, ಅವರುಗಳಿಂದ ಯಾವುದೊಂದುತ್ತರವು ಕೊಡಲ್ಪಡದಿರುವುದೂ ಸಖೇದಾಶ್ಚರ್ಯಕರವಾಗಿವೆ. ಚೀಫ್ ಸೆಕ್ರೆಟರಿಯವರು ಈಗಲಾದರೂ ಗೆಜೆಟ್ ಪತ್ರಿಕೆಯು ಕ್ರಮವಾಗಿ ಕಳುಹಲ್ಪಡುವಂತೇರ್ಪಡಿಸುವರೆಂದೂ, ಒಂದು ವೇಳೆ ಕಳುಹಲ್ಪಡಲಾಗದಿದ್ದಲ್ಲಿ ಅದರ ಕಾರಣವನ್ನಾದರೂ ತಿಳುಹುವರೆಂದೂ ನಿರೀಕ್ಷಿಸುತ್ತೇವೆ.

ವರ್ತಮಾನ ಸಂಗ್ರಹ.

ಆಸ್ಯಾಟಿಕ್ ತುರ್ಕಿಯಲ್ಲಿ ಆರ್ಮೇನಿಯಾಕ್ಕೆ ಸೇರಿದ ಎರ್ಜೆರಾ ಎಂಬಲ್ಲಿ ಕಠಿಣವಾದ ಭೂಕಂಪವಾಗಿ ಅನೇಕ ಹಳ್ಳಿಗಳು ನಾಶವಾದವು, 50 ಜನದವರೆಗೆ ಸತ್ತರು ಮತ್ತು ಲೋಹಮಾರ್ಗವು ಬಹಳಮಟ್ಟಿಗೆ ನಷ್ಟವಾಗಿರುವುದು.

ಮದ್ರಾಸಿನಲ್ಲಿ ಪ್ರಸಿದ್ಧ ವರ್ತಕರೂ ಪ್ರಜಾಹಿತಚಿಂತಕರೂ ಆದ ಜನಾಬು ಸಿ. ಹಾಕೀ ಸಾಹೇಬರವರು ಮದ್ರಾಸಿನಲ್ಲಿರುವ ಮಹಮ್ಮದೀಯ ಪಾಠಶಾಲಾಭಿವೃದ್ಧಿಗಾಗಿ ಅದರ ಮೇಲ್ವಿಚಾರಕಸಂಘದವರ ವಶಕ್ಕೆ 50,000 ರೂ. ಗಳನ್ನು ಧರ್ಮಾರ್ಥವಾಗಿ ಕೊಟ್ಟಿರುವರು.

ಬೊಂಬಾಯಿನಲ್ಲಿ 10 ಜನ ಪಠಾಣರು ಕಳೆದ ಮಂಗಳವಾರ ರಾತ್ರಿ ಒಬ್ಬ ಹಿಂದೂ ಶ್ರೀಮಂತನ ಮನೆಗೆ ನುಗ್ಗಿ ತಮ್ಮನ್ನು ಪ್ರತಿಭಟಿಸಲು ಬಂದ ಮನೆಯವರನ್ನು ಪಿಸ್ತೂಲು, ಚಾಕು ಮೊದಲಾದ ಆಯುಧಗಳಿಂದ ಹೊಡೆದು ಒಬ್ಬನನ್ನು ಕೊಂದುಹಾಕಿ 2000 ರೂ. ಬೆಲೆಯವರೆಗಿನ ಆಭರಣಗಳನ್ನು ಅಪಹರಿಸಿಕೊಂಡು ಹೋದರು.

ಮದ್ರಾಸಿನ ಹಿಂದೂಪತ್ರಿಕೆಯಲ್ಲೂ ಇನ್ನೆರಡು ಮಹರಾಷ್ಟ್ರ ಪತ್ರಿಕೆಗಳಲ್ಲೂ ಹೈದರಾಬಾದು ಸಂಸ್ಥಾನದ ಪ್ರಭುತ್ವದ ವಿಚಾರವಾಗಿ ಆಕ್ಷೇಪಕರವಾದ ಲೇಖನಗಳು ಪ್ರಕಟಿಸಲ್ಪಡುತ್ತಿದ್ದುದರ ಮೇಲೆ ಆ ಪತ್ರಿಕೆಗಳು ಹೈದರಾಬಾದು ಸಂಸ್ಥಾನದೊಳಗೆ ತರಿಸಲ್ಪಡಕೂಡದೆಂದು ಆ ಪ್ರಭುತ್ವದವರಿಂದ ಕಲ್ಪಿಸಲ್ಪಟ್ಟಿದ್ದ ನಿರ್ಬಂಧವು ಈಗ ತಪ್ಪಿಸಲ್ಪಟ್ಟಿರುತ್ತದೆ.

ನಾರ್ತ್‌ವೆಸ್ಟರ್ನ್ ರೈಲ್ವೆಯ ಲೋಕೋ ಸೂಪ್ರೆಂಟೆಂಡೆಂಟ್ ಸಿ. ಬಿ. ಬ್ರೌನ್‌ರವರು ಒಂದು ಹೊಸ ಇಂಜನ್ನನ್ನು ಪರೀಕ್ಷಿಸುವುದಕ್ಕಾಗಿ ಅದರಲ್ಲಿ ಕುಳಿತು ಕೊಂಚದೂರ ಪ್ರಯಾಣ ಮಾಡುತ ಹಂತದ ಮೇಲೆ ನಿಂತುಕೊಂಡು ಅದರ ರಚನಾಕ್ರಮವನ್ನು ಬಗ್ಗಿ ನೋಡುತ್ತಿರುವಾಗ್ಗೆ ಅದರ ಪಕ್ಕದಲ್ಲಿ ಹೋಗುತ್ತಿದ್ದ ಮತ್ತೊಂದು ಇಂಜನ್ನಿನ ಕೊನೆಯು ಅವರ ಕಪಾಲಕ್ಕೆ ತಗುಲಿದುದರಿಂದ ಕೂಡಲೆ ಮೃತಪಟ್ಟರು.

ಸಿಂದ್ ಹೈದರಾಬಾದಿನ ಪೋಲೀಸ್ ಇನ್‌ಸ್ಪೆಕ್ಟರ್ ರಾಯಿಸಾಹೆಬ್ ಕರಂಚಂದ್‌ರವರು, ಸಬ್‌ಇನ್‌ಸ್ಪೆಕ್ಟರ್ ಛತ್ರೆಅಲ್ಲಿ ಮತ್ತು ಕಾನಸ್ಟೇಬಲ್ ರಜಾ ಇವರೊಡನೆ ಹೆಡ್‌ಕಾನಿಸ್ಟೆಬಲ್ ದೀನದಯಾಳನ ವಿಚಾರಣೆಗಾಗಿ ಲರ್ಕಾನಾ ಡಿಸ್ಟ್ರಿಕ್ಟ್ ಉಬಾರ್ಹ್ವೇಗೆ ಹೋಗಿದ್ದು ರಾತ್ರಿಯಲ್ಲಿ ಮಲಗಿಕೊಂಡು ನಿದ್ರಿಸುತ್ತಿರುವಾಗ್ಗೆ ದೀನದಯಾಳನು ಆ ಮೂವರನ್ನೂ ನಿರ್ಜನವಾದ ಪ್ರದೇಶಕ್ಕೆ ಸಾಗಿಸಿಕೊಂಡು ಹೋಗಿ ಗುಂಡಿನಿಂದ ಹೊಡೆದು ಕೊಂದುಬಿಟ್ಟನು.

ಕಲಕತ್ತಾದ ಸ್ವರಾಜ್ಯ ಪಕ್ಷದ ನಾಯಕರಾದ ದೇಶಭಕ್ತ ಸಿ. ಆರ್. ದಾಸ್‌ರವರೂ ಸ್ವದೇಶಪಕ್ಷದ ಮುಂದಾಳಾದ ಬಿ. ಚಕ್ರವರ್ತಿಯವರೂ ತಮ್ಮ ಶತ್ರುಪಕ್ಷದವರ ದೂರಿನ ಮೇಲೆ ಬಂಗಾಳಾ ನ್ಯಾಯವಿಧಾಯಕ ಸಭಾ ಸಭಿಕತ್ವವನ್ನು ಕಳೆದುಕೊಂಡುದರಿಂದ, ಹೊಸದಾಗಿ ನಡೆಯುವ ಚುನಾವಣೆಗೆ ಉಮೇದುವಾರರುಗಳಾಗಿ ನಿಂತಿರುವರು. ಓಟರುಗಳಲ್ಲಿ ಸ್ವರಾಜ್ಯಾಪೇಕ್ಷಿಗಳ ಸಂಖ್ಯೆಯೇ ಹೆಚ್ಚಾಗಿರುವುದರಿಂದ ದಾಸಚಕ್ರವರ್ತಿಗಳು ಈ ಪುನರಾವೃತ್ತಿಯ ಚುನಾವಣೆಯಲ್ಲಿ ಜಯಶಾಲಿಗಳಾಗಿ ಬರುವರೆಂದು ನಿರೀಕ್ಷಿಸಲ್ಪಟ್ಟಿದೆ.

ಕಲಕತ್ತಾದ ತಾರಕೇಶ್ವರ ದೇವಾಲಯದ ಆಡಳಿತವು ಮಹಂತನ ವಶವಾಗಿದ್ದು ಅದರುತ್ಪನ್ನವೆಲ್ಲವೂ ಆತನ ಪಾಲಾಗುತ್ತಿರುವುದರಿಂದ, ದೇವಸ್ಥಾನದ ಆಡಳಿತವು ಮಹಂತನ ಕೈಯಿಂದ ತಪ್ಪಿಸಲ್ಪಟ್ಟು ಧರ್ಮದರ್ಶಿಗಳ ವಶಮಾಡಲ್ಪಡಬೇಕೆಂದೂ, ಆಸ್ತಿಯು ಭಗವತ್ಪೂಜೆಗೂ ಯಾತ್ರಿಕರ ಕ್ಷೇಮಕ್ಕೂ ಉಪಯೋಗವಾಗುವಂತೆ ಏರ್ಪಡಿಸಲ್ಪಡಬೇಕೆಂಬ ಪ್ರಯತ್ನವು ಈವರೆಗೆ ಸಫಲವಾಗಲಿಲ್ಲವಾದುದರಿಂದ ಭಕ್ತಾದಿಗಳು ಸತ್ಯಾಗ್ರಹೋದ್ಯಮವನ್ನು ಆಚರಿಸಬೇಕೆಂದೂ ಸಿ. ಆರ್. ದಾಸರಿಂದ ಪ್ರಕಟಿತವಾಗುವ ಮುಂಬರಿ ಪತ್ರಿಕೆಯಲ್ಲಿ ಬರೆಯಲ್ಪಟ್ಟಿದೆ.

ಪಂಚಮರನ್ನು ಉತ್ತಮವರ್ಣದವರೊಂದಿಗೆ ಸೇರಿಸಿಕೊಂಡು ಅವರನ್ನು ಸಾಂಘಿಕವ್ಯವಹಾರಗಳಲ್ಲಿ ಸಮಾನರನ್ನಾಗಿ ಮಾಡಿಕೊಳ್ಳಬೇಕೆಂಬುದಕ್ಕೆ ಮೊದಲನೇ ಮೆಟ್ಟಲಾಗಿ ಪಂಚಮರು ಎಲ್ಲಾ ನಲ್ಲಿಗಳಲ್ಲಿಯೂ ಭಾವಿಗಳಲ್ಲಿಯೂ ನೀರು ಸೇದಿಕೊಳ್ಳುವುದಕ್ಕೂ, ಪಾಠಶಾಲೆಗಳಿಗೆ ಹೋಗಿ ಇತರ ಮಕ್ಕಳೊಂದಿಗೆ ಮಿಳಿತರಾಗುವುದಕ್ಕೂ ಅವಕಾಶಕೊಡಬೇಕೆಂದು ಪೂನಾ ಮ್ಯುನಿಸಿಪಾಲಿಟಿಯವರನ್ನು ಬೊಂಬಾಯಿ ಸರ್ಕಾರದವರು ಕೇಳಿದರು. ಮ್ಯುನಿಸಿಪಲ್ ವೋಟಿಂಗಿನಲ್ಲಿ ಹೆಚ್ಚುಮೆಂಬರುಗಳು ಇದಕ್ಕೆ ಒಪ್ಪಿದರು. ಆದರೂ ಈಗ ಆ ಮ್ಯುನಿಸಿಪಾಲಿಟಿಯಲ್ಲಿರುವ 20,000 ಜನ ಓಟರುಗಳ ಅಭಿಪ್ರಾಯವನ್ನು ತಿಳಿಯಬೇಕೆಂದು ಗೊತ್ತಾಗಿದೆ.

ಲಿವರ್ಪೂಲಿನ ಒಂದಾನೊಂದು ನೇತ್ರಚಿಕಿತ್ಸಾಲಯದಲ್ಲಿ ಒಂದು ಅಪೂರ್ವವೂ, ಚಮತ್ಕಾರವೂ ಆದ ಚಿಕಿತ್ಸೆಯು ಸ್ವಲ್ಪಕಾಲದ ಹಿಂದೆ ನಡಿಸಲ್ಪಟ್ಟಿತು. ಒಬ್ಬ ಮನುಷ್ಯನು ಸಲ್ಫ್ಯೂರಿಕ್ ಆಸಿಡ್ ಎಂದರೆ ಗಂಧಕದ್ರಾವಕವನ್ನು ಕುದಿಸುತ್ತಿದ್ದಾಗ ಅದು ಸಿಡಿದು ಅವನ ಕಣ್ಣಿನ ಎರಡುರೆಪ್ಪೆಗಳೂ ಹಾರಿಹೋದುವು. ಕಳೆದ ಆರುವರ್ಷಗಳಿಂದಲೂ ಆತನು ಕಣ್ಣುಗಳನ್ನು ಮುಚ್ಚಿಕೊಳ್ಳಲು ಅವಕಾಶವೇ ಇರಲಿಲ್ಲ. ನೇತ್ರವೈದ್ಯರು ಸಾಮಾನ್ಯವಾದ ಚರ್ಮದಿಂದ ಹೊಸರೆಪ್ಪೆಗಳನ್ನು ನಿರ್ಮಾಣಮಾಡಿ ಕಳೆದುಹೋದುವಕ್ಕೆ ಬದಲಾಗಿ ಸೇರಿಸಿ ಹೊಲಿದರು. ಇವು ಸಾಮಾನ್ಯ ಮನುಷ್ಯರ ರೆಪ್ಪೆಗಳಂತೆ ಕಣ್ಣುಗಳನ್ನು ಮುಚ್ಚಲೂ ತೆರೆಯಲೂ ತುಂಬಾ ಸಹಕಾರಿಯಾಗಿವೆ.

ವಿಮಾನಗಳಲ್ಲಿ ಪ್ರಯಾಣಮಾಡಿ ಪ್ರಪಂಚವನ್ನೇ ಬಳಸಿಕೊಂಡು ಬರಬೇಕೆಂದು ಹೊರಟ ಬ್ರಿಟಿಷ್, ಫ್ರೆಂಚ್ ಮತ್ತು ಪೋರ್ಚಗೀಸ್ ವೈಮಾನಿಕರ ಪೈಕಿ ಫ್ರೆಂಚ್ ವಿಮಾನಕಾರನು ನಿರ್ವಿಘ್ನವಾಗಿ ಇಂಡಿಯಾಕ್ಕೆ ಬಂದು ಅಲ್ಲಿಂದ ಮುಂದಕ್ಕೆ ಪ್ರಯಾಣಮಾಡಿರುತ್ತಾನೆ. ಬ್ರಿಟಿಷ್ ವೈಮಾನಿಕನು ಯಂತ್ರ ಕೆಟ್ಟಿದ್ದರಿಂದ ಕರಾಚಿಯಲ್ಲಿ ಅದನ್ನು ರಿಪೇರಿ ಮಾಡಿಸುತ್ತಿರುವನು. ಪೋರ್ಚಗೀಸಾನವರ ಯಂತ್ರವು ಈ ತಿಂಗಳು 8ರಲ್ಲಿ ಮಾರ್ವಾರ್ ಸಂಸ್ಥಾನದ ಮೇಲೆ ಹಾರಿಹೋಗುತ್ತಾ ಕೆಟ್ಟುಹೋದ್ದರಿಂದ ಕೆಳಗೆ ಬಿದ್ದು ಮುರಿದುಹೋಯಿತು. ದೈವವಶಾತ್ ಅದರಲ್ಲಿದ್ದವರಿಗೇನೂ ಅಪಾಯವಾಗಲಿಲ್ಲ. ಇವರು ಹಿಂತಿರುಗಿ ಸ್ವದೇಶವನ್ನು ಕುರಿತು ತೆರಳುವವರಾಗಿದ್ದಾರೆ.

ಯುವರಾಜ ಸಾರ್ವಭೌಮರವರು ಚಕ್ರಾಧಿಪತ್ಯದ ಸಿಂಹಾಸನಕ್ಕೆ ತಮ್ಮ ಹಕ್ಕನ್ನು ತಮ್ಮಂದಿರಾದ ಡ್ಯೂಕ್ ಆಫ್ ಯಾರ್ಕ್‌ರವರ ಪಕ್ಷದಲ್ಲಿ ತ್ಯಜಿಸಿಬಿಟ್ಟು ಸಾಮಾನ್ಯ ಪ್ರಜೆಯ ಸ್ವಾತಂತ್ರಗಳನ್ನು ಅನುಭವಿಸುವವರಾಗಿರುವರೆಂದೂ ಇದಕ್ಕೋಸ್ಕರವೇ ಕಾನಡ ದೇಶದಲ್ಲಿ ಒಂದಾನೊಂದು ಭಾರೀ ಜಮೀನನ್ನು ಕೊಂಡುಕೊಂಡಿರುತ್ತಾರೆಂದೂ ಅಮೇರಿಕಾದೇಶದ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ತಾವು ಮದುವೆಮಾಡಿಕೊಳ್ಳುವ ಸ್ತ್ರೀಯು ಮುಂದಕ್ಕೆ ಚಕ್ರಾಧಿಪತ್ಯದ ಮಹಾರಾಣಿಯಾಗುತ್ತೇನೆಂದು ತಿಳಿದಿದ್ದು ಅನಂತರ ಪ್ರಿನ್ಸ್‌ರವರ ಈ ನಡತೆಯಿಂದ ತುಂಬಾ ಮನೋಭಗ್ನರಾಗಬಹುದೆಂದು ಊಹಿಸಿಯೇ ಇನ್ನು ಮದುವೆಯಾಗಲು ಸಹಾ ಸಮ್ಮತಿಸಿಲ್ಲವೆಂದೂ ತಿಳಿಸಲಾಗಿದೆ. ಇಷ್ಟುದಿನದವರೆಗೂ ಸ್ವದೇಶೀಯರಿಗೇ ತಿಳಿಯದಿದ್ದ ಈ ವಿಷಯವು ಅಮೇರಿಕದವರಿಗೆ ಗೊತ್ತಾಗಿರುವುದು ಆಶ್ಚರ್ಯವಾಗಿದೆ. ಇದರ ನಿಜಾಂಶವು ಏನೆಂಬುದು ಗೊತ್ತಾಗಿಲ್ಲ.

ಕಲಕತ್ತಾದಲ್ಲಿ ಪ್ರಕಟವಾಗುವ ಭಾರತಮಿತ್ರ ಎಂಬ ವೃತ್ತಪತ್ರಿಕೆಯ ಒಬ್ಬ ವಿಲೇಖಕನು ಮಹಮ್ಮದೀಯ ಮಸೀದಿಗಳ ಮುಂಗಡೆ ಹಿಂದೂಗಳು ವಾದ್ಯಸಮೇತ ಉತ್ಸವಮಾಡುವ ವಿಚಾರದಲ್ಲಿ ತಮ್ಮ ಅಭಿಪ್ರಾಯವೇನೆಂದು ಮಿ॥ ಸೌಕತಾಲಿಯವರನ್ನು ಕೇಳುವಲ್ಲಿ "ಇತರರ ಪತ್ನಿಯರನ್ನೂ ಪುತ್ರಿಯರನ್ನೂ ಮಹಮ್ಮದೀಯರು ಕಂಡಲ್ಲಿ ತಮ್ಮ ತಲೆ ಬಗ್ಗಿಸಿಕೊಳ್ಳಬೇಕೆಂದು ಕೊರಾನಿನಲ್ಲಿ ವಿಧಿಸಲ್ಪಟ್ಟಿರುವ ಪ್ರಯುಕ್ತ ಹಿಂದೂಗಳ ಮನೆ ಮಠಗಳನ್ನು ಸೂರೆಮಾಡಿ ಅವರ ಹೆಂಡತಿ ಮಕ್ಕಳನ್ನು ಹಿಂಸಿಸಿ ಮಾನಭಂಗಮಾಡತಕ್ಕುದು ಶುದ್ಧ ಅಸಂಗತವು. ಮಸೀದಿಯ ಮುಂಗಡೆ ಓಡಾಡುವ ಟ್ರಾಂವೆ ಮೊದಲಾದ ಬಂಡಿಗಳ ರಭಸದಿಂದುಂಟಾಗುವ ಕರ್ಣಕಠೋರವಾದ ಶಬ್ದದಿಂದ ನಮಾಜುಮಾಡುವವರಿಗೆ ಆಗದಿರುವ ತೊಂದರೆಯು ಸೋದರ ಹಿಂದೂಗಳು ಮನೋಹರವಾದ ವಾದ್ಯಗಳನ್ನು ಮಾಡಿಸಿಕೊಂಡು ಮಸೀದಿ ಮುಂದೆ ಹಾದು ಹೋಗುವುದರಿಂದುಂಟಾಗುತ್ತದೆಂದು ಭಾವಿಸಿ ಪ್ರತ್ಯಕ್ಷವಾಗಿ ಅವರ ಕೂಡ ಕಲಹಮಾಡುವ ಮಹಮ್ಮದೀಯರ ನಡತೆಯಿಂದ ದೇವರು ಎಂದಿಗೂ ಸಂತುಷ್ಟನಾಗುವುದಿಲ್ಲವೆಂದು ಮುಚ್ಚುಮರೆಯಿಲ್ಲದೆ ಹೇಳುತ್ತೇನೆ. ತುರ್ಕಿಯಲ್ಲಿ ಮಸೀದಿಗಳ ಮುಂಗಡೆ ವಾದ್ಯವು ನಿಲ್ಲಿಸಲ್ಪಡಬೇಕಾದುದಿಲ್ಲವು. ಏಕೆಂದರೆ—ದೇಶ

ರನ್ನು ಆರಾಧಿಸತಕ್ಕದು ಮನೋಭಾವದಿಂದಲ್ಲದೆ ಬಾಹ್ಯಾಡಂಬರದಿಂದಲ್ಲವು. ಆ ಸ್ವರ್ಗಾಧಿಪತಿಯನ್ನು ಪ್ರೀತಿಸುತ್ತೇನಲ್ಲದೆ ಅವನ ವಾಸಸ್ಥಳವಾದ ಸ್ವರ್ಗವನ್ನು ಪ್ರೀತಿಸುವುದಿಲ್ಲವೆಂದು ಆ ದೂರದರ್ಶಿಯಾದ ಮಹಮ್ಮದನು ಅಪ್ಪಣೆಕೊಡಿಸಿರುವನು. ಅದುಕಾರಣ ದೇವರಲ್ಲಿ ವಿಶ್ವಾಸವುಳ್ಳವರು ಇಂಥ ಕಲಹಗಳಲ್ಲಿ ಸೇರದೆ ತಟಸ್ಥರಾಗಿರಬೇಕು'' ಎಂದು ತಿಳಿಸಿರುವುದಾಗಿ ಭಾರತಮಿತ್ರ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು. ಇದರ ಮೇಲೆ ತಾವು ಆರೀತಿ ಭಾರತಮಿತ್ರ ಪತ್ರಿಕಾವಿಲೇಖಕನ ಕೂಡ ಪ್ರಸ್ತಾಪಿಸಲಿಲ್ಲವೆಂದು ಮಿ|| ಸೌಕತಾಲಿಯವರು ಖಂಡಿಸಿ ಬರೆದಿರುವರು.

1924 ನೆ ಇಸ್ವಿ ಮೇ ತಾರೀಖು 8 ಕ್ಕೆ ಆಖೈರಾದ ವಾರಕ್ಕೆ ವರ್ತಮಾನ ಪತ್ರಿಕೆಗಳಿಗೆ ಕಳುಹಿಸುವ ಸರ್ಕಾರಿಯುಪ್ಪಣೆಯ ಗೋಷ್ವಾರೆ.

1. ಸರ್ಕಾರಿ ಜಮೀನುಗಳಲ್ಲಿರುವ ಹೊಂಗೆಮರಗಳ ಉತ್ಪತ್ತಿಯನ್ನು (ಅಂದರೆ ಎಲೆ ಮತ್ತು ಬೀಜಗಳನ್ನು) ಈಗಿರುವಂತೆ ಹರಾಜುಮಾಡುವ ಪದ್ಧತಿಯಿಂದ ರೈತರಿಗಿರುವ ಅನಾನುಕೂಲಗಳನ್ನು 1922 ನೆ ಇಸ್ವಿ ಆಗಸ್ಟು ತಿಂಗಳಲ್ಲಿ ದಿವಾನರವರಿಗೆ ಅವರ ಸರ್ಕೀಟಿನಲ್ಲಿ ತಿಳಿಯಪಡಿಸಿದರು ಮತ್ತು 1922 ಮತ್ತು 1923ನೆ ಅಕ್ಟೋಬರು ತಿಂಗಳಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಗಳಲ್ಲಿ ಈ ಉತ್ಪತ್ತಿಯನ್ನು ಪೂರ್ವದಲ್ಲಿದ್ದ ಹಾಗೆಯೇ ಗುತ್ತಿಗೆಗೆ ಕೊಡಬೇಕೆಂದು ಮೆಂಬರುಗಳು ಒತ್ತಿಒತ್ತಿ ಅಂಕೆಮಾಡಿಕೊಂಡರು. ಆದುದರಿಂದ ರೆವಿನ್ಯೂ ಕಮಿಷನರವರ ಶಿಫಾರಸನ್ನನುಸರಿಸಿ ಇನ್ನು ಮುಂದೆ ಮನ್ನಾಜಂಗಲಿಗಳಿಗೂ ಮತ್ತು "ವಿಲೇಜ್ ಫಾರೆಸ್ಟ್" ಯೆಂಬ ಗ್ರಾಮ ಜಂಗಲಿಗಳಿಗೂ ಸೇರದೆ ಇರುವ ಸರ್ಕಾರದ ಜಮೀನುಗಳಲ್ಲಿನ ಹೊಂಗೆಮರಗಳ ಫಸಲನ್ನು ಅನುಭವಿಸುವ ಹಕ್ಕು 100 ಮರಗಳಿಗೆ ರೂ. 2-8-0 ಯನ್ನು ಕೊಟ್ಟರೆ ಆಯಾಯ ಗ್ರಾಮಗಳ ರೈತರಿಗೆ ರಿಜರ್ವು ಮಾಡಲ್ಪಡುತ್ತದೆ. ಹಾಗೆ ಆಯಾಯ ಗ್ರಾಮದವರು ಈ ರಿಯಾಯಿತಿಯನ್ನು ಉಪಯೋಗಿಸಿಕೊಳ್ಳದೆ ಇದ್ದರೆ ಈ ಹಕ್ಕನ್ನು ಹರಾಜುಮಾಡುವುದಾಗಿ ಸರ್ಕಾರದ ಹುಕುಮಾಗಿರುತ್ತೆ.

2. ಮೈಸೂರು ತಾಲ್ಲೂಕು ರಿಸೆಟ್ಲ್‌ಮೆಂಟು ಮಂಜೂರಾಗಿ ಹುಕುಂ ಸಾದರಾಗಿದೆ. ಹೊಸದರಗಳು 1924 ನೆಯ ಜುಲೈ ಗುರ್ರೆ ಲಾಗಾಯಿತು ಪ್ರಚಾರಕ್ಕೆ ಬರುತ್ತವೆ. ರೂಢಿಯನ್ನು ಅನುಸರಿಸಿ ಎಂದಿನಂತೆ 30 ವರುಷಗಳ ಗ್ಯಾರಂಟಿ ಅವಧಿಯು ಕೊಡಲ್ಪಟ್ಟಿರುತ್ತದೆ.

3. ಇನಾಂ ಜಮೀನುಗಳಿಂದ ಸೌದೆಯನ್ನು ಸಾಗಿಸುವ ವಿಷಯದಲ್ಲಿ ಅಮಲ್ದಾರರುಗಳಿಂದ ರಹದಾರಿಗಳನ್ನು ಪಡೆಯದೆ ಸೌದೆಯನ್ನು ಸಾಗಿಸಕೂಡದೆಂದು ವಿಧಿಸಿರುವ ನಿರ್ಬಂಧವನ್ನು ತೆಗೆದುಹಾಕಬೇಕೆಂದು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು ಅಂಕೆಮಾಡಿಕೊಂಡದ್ದರ ಮೇಲೆ, ರಹದಾರಿಗಳನ್ನು ಕೊಡುವಂತೆ ಇನಾಂದಾರರುಗಳಿಗೇನೇ ಅಧಿಕಾರವನ್ನು ಕೊಡುವ ವಿಷಯದಲ್ಲಿ ಸರ್ಕಾರದವರು ಸಮ್ಮತಿಪಡದೆ ಸೌದೆಯನ್ನು ಸಾಗಿಸತಕ್ಕ ಬಗ್ಗೆ ಲೈಸೆನ್ಸುಗಳಿಗಾಗಿ ಬರುವ ಅರ್ಜಿಗಳನ್ನು ಅವು ತಲುಪಿದ ಒಂದು ತಿಂಗಳೊಳಗಾಗಿ ಅಮಲ್ದಾರರುಗಳು ಇತ್ಯರ್ಥಪಡಿಸಿ ಫಲಿತಾಂಶವನ್ನು ಇನಾಂದಾರರಿಗೆ ತಿಳಿಸತಕ್ಕದ್ದೆಂದು ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ.

4. 75 ಮತ್ತು ಅದಕ್ಕೆ ಮೇಲ್ಪಟ್ಟ ಕುದುರೆಗಳ ಶಕ್ತಿಯನ್ನುಳ್ಳ, ಎಲೆಕ್ಟ್ರಿಕ್ ವೈಂಡಿಂಗ್ ಇಂಜನ್ನುಗಳನ್ನು ಒಂದನೇ ತರಗತಿಯ ಸರ್ಟಿಫಿಕೇಟುಗಳನ್ನು ಪಡೆದ ಡ್ರೈವರುಗಳು ಮಾತ್ರ ನಡೆಸಲು ಅವಕಾಶಕೊಡಬೇಕೆಂದು ಸರ್ಕಾರದವರು ಗಣಿಗಳ ವಿಷಯಕವಾದ ನಿಬಂಧನೆಗಳನ್ನನುಸರಿಸಿ ಒಂದು ನಿಬಂಧನೆಯನ್ನು ಸಾದರ್ಮಾಡಿರುತ್ತಾರೆ.

5. ಮಿ|| ಇ. ಎಚ್. ಥಾಮ್ಸನ್ನರವರನ್ನು ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರ ಪರ್ಸನಲ್ ಅಸಿಸ್ಟೆಂಟರನ್ನಾಗಿ ನೇಮಕರ್ಮಾಡಿದೆ. ಇದರಿಂದ ಅವರನ್ನು ಗುಬ್ಬಿ ಸಬ್‌ಡಿವಿಜನ್ನಿಗೆ ನೇಮಕರ್ಮಾಡಿದ್ದ ಹುಕುಂ ರದ್ದಾಗಿದೆ.

6. ಮಿ|| ಕೆ. ಮತ್ತನ್ ಬಿ. ಎ. ಯವರು ರಜದಿಂದ ವಾಪಸು ಬಂದು ಸರ್ಕಾರದ ಚೀಫ್ ಸೆಕ್ರಿಟೆರಿಯವರ ಆಫೀಸಿನ ಚಾರ್ಜನ್ನು 1924ನೇ ಮೇ 6ನೇ ತಾರೀಖಿನ ದಿನ ಮಧ್ಯಾಹ್ನಾತ್ಪರ ತೆಗೆದುಕೊಂಡರು.

7. ಸರ್ಕಾರದ ಲೋಕಲ್ ಮತ್ತು ಲೆಜಿಸ್ಲೆಟಿವ್ ಇಲಾಖೆಗಳ ಸೆಕ್ರೆಟರಿಯವರಾದ ಮಿ|| ಬಿ. ನಾಗಪ್ಪ ಬಾರ್-ಅಟಲಾರವರಿಗೆ 1924 ನೇ ಮೇ 9 ನೇ ತಾರೀಖಿನ ಲಾಗಾಯಿತು 20 ದಿನಗಳ ಪ್ರಿವಿಲೆಜ್ ರಜವನ್ನು ಕೊಟ್ಟಿದೆ.

8. ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನ ರಿಜಿಸ್ಟ್ರಾರ್ ರಾದ ಮಿ|| ಸಿ. ಇ. ರಾಮರಾವ್ ಬಿ. ಎ. ಯವರನ್ನು ರಾಜಕುಮಾರ್ ಸಿ. ದೇಶರಾಜ ಅರ್ಸ್‌ರವರ ವಿವಾಹದ ಸಂಬಂಧದಲ್ಲಿ ಸ್ಪೆಷಲ್ ಡ್ಯೂಟಿಯ ಮೇಲೆ ನೇಮಿಸಿದೆ.

9. ಸರ್ಕಾರಿ ಛಾಪಾಖಾನೆಯಲ್ಲಿ ಹಾಲಿ ಇರತಕ್ಕ ಚೀಫ್ ಫೋರ್ ಮನ್ರವರು ಕೆಲಸದಿಂದ ರಿಟೈರ್ ಆದಾಗ ಅವರ ಕೆಲಸಗಳನ್ನು ಕೈಗೊಳ್ಳತಕ್ಕ ಬಗ್ಗೆ ತರಬೇತಾದ ಒಬ್ಬರು ಸಿದ್ಧವಾಗಿರುವುದಕ್ಕಾಗಿ, ಇಂಜನಿಯರಿಂಗ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಒಬ್ಬ ಗ್ರಾಜುಯೇಟರನ್ನು 1924ನೇ ಜುಲೈ ಗುರ್ರೆ ಲಾಗಾಯಿತು ನೇಮಿಸಲು ಮಂಜೂರಾತಿಯನ್ನು ಕೊಟ್ಟಿದೆ.

10. ಪ್ರಯಾಣಿಕರಿಗೆ ಉಂಟಾಗಿರುವ ಕೆಲವು ಕಷ್ಟಗಳನ್ನು ಪರಿಹರಿಸತಕ್ಕ ಬಗ್ಗೆ, ಟ್ರಾವೆಲರ್ಸ್ ಬಂಗಲೆಗಳಲ್ಲಿ ಪ್ರಯಾಣಿಕರು ಬಂದು ಇಳಿದ ಮೊದಲನೇ ದಿವಸದ ನಂತರ 24 ಗಂಟೆಗಳ ಕಾಲವಾಗಲಿ ಅಥವಾ ಅದರ ಯಾವದಾದರೂ ಅಂಶದಷ್ಟು ಕಾಲವಾಗಲಿ ಅಲ್ಲಿ ವಾಸವಿದ್ದದ್ದಕ್ಕಾಗಿ ಪೂರಾ ಫೀಜನ್ನು ಇದುವರೆಗೆ ಅವರಿಂದ ವಸೂಲ್ಮಾಡುತಿದ್ದುದಕ್ಕೆ ಬದಲಾಗಿ ಇನ್ನುಮುಂದೆ ಅವರು ಅರ್ಧ ಫೀಜನ್ನು ಮಾತ್ರ ಕೊಡುವಂತೆ ಟ್ರಾವಲರ್ಸ್ ಬಂಗಲೆಗಳಲ್ಲಿ ವಾಸಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು ತಿದ್ದುಪಾಟುಮಾಡಿದೆ. ಆದರೆ ಹಾಗೆ ಹೆಚ್ಚುಕಾಲ ವಾಸಮಾಡುವುದು 12 ಗಂಟೆಗಳಿಗೆ ಮೀರಕೂಡದು ಮತ್ತು ಪ್ರಾತಃಕಾಲ 6 ಗಂಟೆಗೂ ರಾತ್ರಿ 9 ಗಂಟೆಗೂ ಮಧ್ಯಕಾಲವಾಗಿರಬೇಕು. ಸೂರ್ಯೋದಯಕ್ಕೂ ಮತ್ತು ಸೂರ್ಯಾಸ್ತಮಾನಕ್ಕೂ ಮಧ್ಯೆ ಟ್ರಾವೆಲರ್ಸ್ ಬಂಗಲೆಗಳನ್ನು ಉಪಯೋಗಿಸುವುದಕ್ಕೆ ಬದಲಾಗಿ ಬೆಳಿಗ್ಗೆ 6 ಗಂಟೆಗೂ ರಾತ್ರಿ 9 ಗಂಟೆಗೂ ಮಧ್ಯೆ ಉಪಯೋಗಿಸಿದ ಪಕ್ಷದಲ್ಲೂ ಅರ್ಧ ಫೀಜನ್ನು ವಸೂಲ್ಮಾಡಲಾಗುವುದು.

11. ಸೆಂಟ್ರಲ್ ಅಬ್ಸರ್ವೇಟರಿಯಲ್ಲಿರುವ ಈಗಿನ ನೌಕರ್ರ್ನೆಯರಿಗೆ ಪ್ರೋತ್ಸಾಹವನ್ನುಂಟುಮಾಡುವುದಕ್ಕೂ, ಮೀಟಿಯರಲಾಜಿಕಲ್ ಇಲಾಖೆಗೆ ತಕ್ಕವರಾದ ಹೊಸಬರಿಗೆ ಅಲ್ಲಿ ಕೆಲಸಕ್ಕೆ ಸೇರಲು ಔತ್ಸುಕ್ಯ ಉಂಟಾಗುವಂತೆ ಮಾಡುವುದಕ್ಕೂ, 1924ನೆ ಇಸ್ವಿ ಜುಲೈ ಗುರ್ರೆ ತಾರೀಖು ಲಾಗಾಯಿತು ಈ ಕೆಳಗೆ ನಮೂದಿಸಿರುವಂತೆ ಸಿಬ್ಬಂದಿಯ ವಿಚಾರದಲ್ಲಿ ತಿದ್ದುಪಾಟುಗಳನ್ನು ಮಾಡಿ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ.

ಒಬ್ಬರು ಚೀಫ್ ಅಬ್ಸರ್‌ವರ್ ಇವರ ಸಂಬಳ ರೂ. 100-4-140.
ಮೂವರು ಸೀನಿಯರ್ ಅಬ್ಸರ್ವರುಗಳು ಇವರ ಸಂಬಳ ರೂ. 60-3-90.
ನಾಲ್ವರು ಜೂನಿಯರ್ ಅಬ್ಸರ್ವರುಗಳು ಇವರ ಸಂಬಳ ರೂ. 30-2-50.

ಶ್ರೀ ಬಸವೇಶ್ವರ ಜಯಂತ್ಯುತ್ಸವಗಳು.

ಕಾರ್ಕಾರ್ಹಳ್ಳಿ.

ಈ ಊರಿನ ಶ್ರೀ ವೀರಶೈವ ಸದ್ಬಾಲಕ ಸಂಘದವರು ತಾ|| 6ನೇ ಮಂಗಳವಾರ ದ್ವಿತೀಯ ಶಂಭುವಾದ ಶ್ರೀ ಬಸವೇಶ್ವರನ ಜನ್ಮ ದಿವಸವನ್ನು ಅತಿ ವೈಭವದಿಂದ ನೆರವೇರಿಸಿದರು. ಇಲ್ಲಿನ ಬಸವೇಶ್ವರ ದೇವಸ್ಥಾನದಲ್ಲಿ ಮಹಾರುದ್ರಾಭಿಷೇಕವೂ, ಶಿವಸಹಸ್ರ, ಗಣಸಹಸ್ರ, ಬಸವಸಹಸ್ರನಾಮ ಪಾರಾಯಣವೂ ಪುರಾಣಶ್ರವಣವೂ ಆ ಮಹನೀಯನ ಅವತಾರಮಹತ್ವದ ಉಪನ್ಯಾಸವೂ ರಾತ್ರಿ ದೀಪೋತ್ಸವ ವೈಭವವೂ ನಂದೀಧ್ವಜ ಇತ್ಯಾದಿ ಬಿರುದುಗಳೊಡನೆ ಉತ್ಸವವೂ ಗಣಾರಾಧನೆಯೂ ಸಹಾ ಅತಿ ಮನೋಹರವಾಗಿ ನಡೆಸಲ್ಪಟ್ಟವು.

ಹೊಳಲ್ಕೆರೆ ತಾ|| ದೊಗ್ಗನಹಾಳು.

ಈ ಗ್ರಾಮದಲ್ಲಿ ಶ್ರೀ ಬಸವೇಶ್ವರಜಯಂತಿ ಮಹೋತ್ಸವವನ್ನು ತಾ|| 6-5-1924 ನೆ ಮಂಗಳವಾರ ಸ್ಕೂಲಿನಲ್ಲಿ ಮ|| ಪಟೇಲ್ ನಂದಿ ಬಸಪ್ಪನವರೇ ಮೊದಲಾದ ಸ್ಕೂಲುಕಮಿಟಿ ಮೆಂಬರುಗಳೂ ಇತರ ಜನಾಂಗದವರೂ ನೆರೆದು ಶ್ರೀ ಬಸವೇಶ್ವರ, ಶ್ರೀ ಶಾರದಾ ಮೊದಲಾದ ದೇವರುಗಳ ಫೋಟೋಗಳನ್ನು ಅಲಂಕರಿಸಿ ಪೂಜೆ ಸ್ತೋತ್ರ ಮಂಗಳ ಮೊದಲಾದವುಗಳಿಂದ ಸೇವೆಮಾಡಿದ ಸ್ಕೂಲು ಬಾಲಕಬಾಲಕಿಯರಿಂದ ಮಂಗಳವನ್ನು ಪಾಡಿಸಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಂದಿಗೆ ನೆರೆದಿದ್ದ ಸಮಸ್ತರಿಗೂ ಫಲಪುಷ್ಪ ತಾಂಬೂಲಗಳು ಹಂಚಲ್ಪಟ್ಟು ತಂತಮ್ಮ ಸ್ವಗೃಹಗಳಿಗೆ ಶ್ರೀ ಬಸವೇಶ್ವರ ನಾಮವನ್ನು ಕೊಂಡಾಡುತ್ತಾ ಹೊರಟು ಹೋದರು.

ಕೃಷ್ಣರಾಜಸಾಗರ ನಾರ್ತ್ ಬ್ಯಾಂಕ್ ಚಿಕ್ಕಾಯರಹಳ್ಳಿ.

ವೈಶಾಖ ಶು|| 6 ಮಂಗಳವಾರ ಬೆಳಿಗ್ಗೆ ಗ್ರಾಮವು ತಳಿರುತೋರಣಗಳಿಂದಲೂ ಸಾರಣೆ ಕಾರಣೆಗಳಿಂದಲೂ ಶೃಂಗರಿಸಲ್ಪಟ್ಟು ಶ್ರೀ ಬಸವೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕ ಸಹಸ್ರನಾಮಾರ್ಚನೆಯು ನಡೆಯಿಸಲ್ಪಟ್ಟ ಮೇಲೆ ಭಕ್ತಾದಿಗಳು ಮಹಾಗಣಾರಾಧನೆಯಿಂದಲೂ, ಶ್ರೀ ಬಸವೇಶ್ವರ ಪುರಾಣಶ್ರವಣದಿಂದಲೂ ಸತ್ಕರಿಸಲ್ಪಟ್ಟರು. ಸಾಯಂಕಾಲ ಶ್ರೀ ಬಸವೇಶ್ವರಸ್ವಾಮಿಯುತ್ಸವವು ಸ್ವಮತ ಪರಮತ ಜನಸಮೋಹದಿಂದಲೂ ವಾದ್ಯವೈಭವದಿಂದಲೂ ನಡೆಯಿತು. ಆ ದಿವಸ ಗ್ರಾಮಸ್ಥರೆಲ್ಲರೂ ತಮ್ಮ ದನಕರುಗಳ ಮೈತೊಳೆದು ಅವುಗಳನ್ನು ಆಹಾರ ವಿಶೇಷದಿಂದ ಉಪಚರಿಸಿ ದೇವರ ಉತ್ಸವದಲ್ಲಿ ಮೆರೆಯಿಸಿದರು. ಈ ಜಯಂತ್ಯುತ್ಸವವು ಇಷ್ಟು ವೈಭವದಿಂದ ನಡೆಯಲು ಮ|| ಪಟೇಲ್ ಶಂಭುಗೌಡರ ಮತ್ತು ಸಾಹುಕಾರ್ ತಿಮ್ಮಪ್ಪನವರ ಉದಾರಸಹಾಯವೂ ಶ್ರದ್ಧೆಯೂ ಗ್ರಾಮಸ್ಥರ ಭಕ್ತಿ ವಿಶ್ವಾಸವೂ ಕಾರಣವಾಗಿವೆ. ಈ ಕಾರ್ಯವು ಮುಂದಣ ವರ್ಷ ಇನ್ನೂ ವೈಭವದಿಂದ ನಡೆಸಲ್ಪಡುವದಾಗಿ ನಿರೀಕ್ಷಿಸಲ್ಪಟ್ಟಿದೆ.

ಚನ್ನಗಿರಿ.

ಈ ಊರ ನಿವಾಸಿಗಳು ಶ್ರೀ ಬಸವೇಶ್ವರಸ್ವಾಮಿಯ ಪೂಜೆಯನ್ನು ತಾ|| 6ರಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿಸಿ ನಾಲ್ಕುಗಂಟೆ ಸಮಯದಲ್ಲಿ ಭಕ್ತಾದಿಗಳನ್ನು ಪಾನಕ ಪಣ್ಯಾರಗಳಿಂದ ಸತ್ಕರಿಸಿದರು. ಆ ಸಮಯದಲ್ಲಿ ರಿಟೈರ್ಡು ಅಮಲ್ದಾರ್ ಮ|| ಮುರುಡಪ್ಪನವರ ಮಕ್ಕಳು 3 ನೆಯ ಬಿ. ಎ. ತರಗತಿಯಲ್ಲೋದುವ ಮುರುಳಯ್ಯನವರು ಬಸವೇಶ್ವರನ ಚರಿತ್ರೆಯ ಮೇಲೆ ಬಹುಸ್ವಾರಸ್ಯವಾಗಿ ಉಪನ್ಯಾಸ ಮಾಡುವಾಗ್ಗೆ ಧಾರ್ಮಿಕ ಶಿಕ್ಷಣದ ಅವಶ್ಯಕತೆಯನ್ನು ಒತ್ತಿ ಹೇಳಿದರಲ್ಲದೆ ಸ್ವಧರ್ಮಾಭಿಮಾನವೂ, ಸ್ವಭಾಷಾ ಪ್ರೇಮವೂ, ಪ್ರತಿಯೊಬ್ಬರ ಮನಸ್ಸಿನಲ್ಲೂ ಧಾರ್ಮಿಕ ಶಿಕ್ಷಣದಿಂದಲೇ ಪ್ರತಿಬಿಂಬಿಸುತ್ತವೆ ಮತ್ತು ನಮ್ಮ ಸಮಾಜವೇ ಒಂದು ಹಡಗು, ಧರ್ಮವೇ ಧ್ರುವನಕ್ಷತ್ರವು, ಎನ್ನುವಹಾಗೆ ಆ ಧ್ರುವದ ಕಡೆ ಲಕ್ಷ್ಯವು ತಪ್ಪಿದರೆ ಸಮಾಜದ ಸ್ಥಿತಿಯು ಕಂಡ ಕಡೆಗೆ ಹರಿದ ಹಡಗಿನಂತೆ ಅನಿಷ್ಟಕಾರಕವಾಗುವದು ಎಂದು ಹೇಳಿದರು. ರಿಟೈರ್ಡು ಅಮಲ್ದಾರ್ ಮ|| ಮುರುಡಪ್ಪನವರೂ, ಗರ್ಲ್ಸ್ಕೂಲು ಟೀಚರ್ ಮ|| ನಂಜಪ್ಪನವರೂ ಈ ಸಮಾರಂಭವನ್ನು ಸಾಂಗವಾಗಿ ನೆರವೇರಿಸಲು ಬಹಳ ಮುತುವರ್ಜಿ ವಹಿಸಿದ್ದದ್ದು ಸ್ತೋತ್ರಾರ್ಹವಾಗಿದೆ.

ಬಾಗೇಪಲ್ಲಿ ತಾ|| ಮಾರುಗಾನಕುಂಟೆ.

ಈ ಗ್ರಾಮದ ವೀರಶೈವಮಂಡಲಿಯವರಿಂದ ಬಹಳ ವಿಜೃಂಭಣೆಯಿಂದ ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಾಲಯದಲ್ಲಿ ರುದ್ರಾಭಿಷೇಕವೂ ಶ್ರೀ ಬಸವಸಹಸ್ರನಾಮಾರ್ಚನೆಯೂ ನಡೆದು 10 ಘಂಟೆಗೆ ಶ್ರೀ ಬಸವಣ್ಣನವರ ಫೋಟೊ ದಿವ್ಯವಾಗಿ ಅಲಂಕರಿಸಿದ್ದ ರಥದಲ್ಲಿ ಬಿಜಯಂಗೈಸಿ ಛತ್ರಚಾಮರಗಳಿಂದಲೂ ಮಂಗಳಕರವಾದ ವಾದ್ಯಘೋಷಗಳಿಂದಲೂ ಅಲಂಕೃತವಾದ ವೃಷಭಗಳ ಸಮೇತ ಉತ್ಸವಗೊಂಡು ಯಥಾಸ್ಥಾನ ಸೇರಿ ಮಹಾಮಂಗಳಾರತಿ ಪಾನಕ ಪೂಜೆ ವಗೈರೆ ನಡೆದು ಸಾಯಂಕಾಲ $7\frac{1}{2}$ ಘಂಟೆಯಿಂದ ಮ|| ಅಪ್ಪಾಜಿ ನಂಜುಂಡಪ್ಪನವರು ಕದಳೀಸ್ತಂಭಗಳಿಂದಲೂ ಮಾವಿನತೋರಣಗಳಿಂದಲೂ ದಿವ್ಯವಾಗಿ ಅಲಂಕರಿಸಿದ್ದ ಚಪ್ಪರದಲ್ಲಿ ಶ್ರೀ ಬಸವಣ್ಣನವರ ಫೋಟೋವನ್ನು ಉತ್ಸವದಿಂ ತಂದು ಬಿಜಯಂಗೈಸಿ ಗ್ರಾಮದಲ್ಲಿನ ಎಲ್ಲಾ ಮತಸ್ಥರೂ ಸಹ ಸೇರಿ ಭಜನೆವಗೈರೆ ಸಾಂಗಗೊಳಿಸಿ ಪುಷ್ಪ ಗಂಧ ಫಲಹಾರವಿನಿಯೋಗದಿಂದ ಮುಕ್ತಾಯಗೊಳಿಸಿದ್ದಕ್ಕಾಗಿ ಶ್ರೀ ಬಸವೇಶ್ವರನು ಶ್ರೀ ವೀರಶೈವಮಂಡಲಿಯವರಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ಕೊಟ್ಟು ಕಾಪಾಡಲೆಂದೂ ಈಪ್ರಕಾರ ಈ ಪ್ರಾಂತದ ವೀರಶೈವರೆಲ್ಲರೂ ಈ ಹಬ್ಬವನ್ನು ಆಚರಿಸಲೆಂದೂ ಕೋರಲ್ಪಟ್ಟಿತು.

ಹೆಗ್ಗಡದೇವನಕೋಟೆ ತಾ|| ಅಂತರಸಂತೆ.

ಈ ಗ್ರಾಮದ ವೀರಶೈವ ಮಹಾಜನಗಳು ಶ್ರೀ ಬಸವೇಶ್ವರ ಜಯಂತಿ ಮಹೋತ್ಸವ ಕಾರ್ಯವನ್ನು ಈ ತಾ|| 6 ರಲ್ಲಿ ಇದೇ ಗ್ರಾಮದ ಪೋ|| ಮಾ|| ಮಿ|| ಎ. ಪಿ. ಶ್ರೀಕಂಠಯ್ಯನವರ ಧರ್ಮಶಾಲೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿಸಿದರು. ಇದಕ್ಕಾಗಿ ಅನೇಕ ಜನ ದೊಡ್ಡ ಮನುಷ್ಯರೇ ಆದಿಯಾಗಿ ನೂರಾರು ಜನಗಳು ಸೇರಿ, ಶ್ರೀ ಬಸವೇಶ್ವರರ ಭಾವಚಿತ್ರವನ್ನು ದಿವ್ಯವಾಗಿ ರಚಿಸಿದ ಪುಷ್ಪಮಂಟಪದಲ್ಲಿ ಅಲಂಕರಿಸಿ, ಹಾರ್ಮೋನಿಯಂ ಮುಂತಾಗಿ ತಾಳಮೇಳಗಳೊಡನೆ, ಭಜನೆಯಿಂದೊಡಗೂಡಿ ಪೂಜಿಸಿದರು. ಈ ಮಧ್ಯೆ ಪೋ|| ಮಾ|| ಮಿ|| ಎ. ಪಿ. ಶ್ರೀಕಂಠಯ್ಯನವರು, ಇಂಥಾ ಸುಯೋಗವು ವೀರಶೈವ ಮಹಾಜನಗಳಿಗೆ ಲಭ್ಯವಾದ ವಿಚಾರವಾಗಿಯೂ, ಶ್ರೀಮನ್ಮಹಾರಾಜ ಸರ್ಕಾರದವರು ಈ ಮೇಲ್ಕಂಡ ದಿವಸವನ್ನು ರಜಾದಿವಸವಾಗಿ ಏರ್ಪಡಿಸಿದ ವಿಚಾರವಾಗಿಯೂ, ಬಹು ಯುಕ್ತಿ ಯುಕ್ತವಾಗಿ ಒಂದು ಭಾಷಣವನ್ನು ಮಾಡಿದ್ದಲ್ಲದೆ, ನಮ್ಮ ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ, ಶ್ರೀ ಜಯಚಾಮರಾಜ ಒಡೆಯರವರ ಶ್ರೇಯಃ ಪ್ರಾರ್ಥನೆಯನ್ನು ಮಧುರವಾದ ಗಾನರೂಪವಾಗಿ ಹಾಡಿ ನೆರೆದಿದ್ದ ಸಭೆಯವರೆಲ್ಲರ ಮನಸ್ಸಿಗೆ ಆನಂದವನ್ನುಂಟುಮಾಡಿದರು. ಅನಂತರ ಮಂಗಳಾರತಿ ನಡೆದು ಸರ್ವರಿಗೂ ಫಲಾಹಾರ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ಭರಖಾಸ್ತಾಯಿತು.

ಲಾಳನಹಳ್ಳಿಗ್ರಾಮ.

ಈ ಗ್ರಾಮಸ್ಥರು ಮಂಗಳವಾರ ಬೆಳಿಗ್ಗೆ 8 ಗಂಟೆ ಲಾಗಾಯ್ತು ದೇವರಿಗೆ ರುದ್ರಾಭಿಷೇಕ ಬಸವಸಹಸ್ರನಾಮ ಪಾರಾಯಣ ಮುಂತಾದ ಪೂಜೆಯನ್ನು ಬಹಳ ಭಕ್ತಿಯಿಂದಲೂ ಶ್ರದ್ಧೆಯಿಂದಲೂ 12 ಗಂಟೆವರೆಗೆ ನಡೆಸಿ ಮಹಾಮಂಗಳಾರತಿ ಆದನಂತರ ಜಂಗಮರಿಗೂ ಭಕ್ತರಿಗೂ ಇತರರಿಗೂ ಮಹಾಗಣಾರಾಧನೆಯನ್ನು ಸಾಂಗವಾಗಿ ನಡಿಸಿದರು. ತರುವಾಯ ಪುರಾಣ ಪುಣ್ಯಕಥೆಗಳು ನಡೆಸಲ್ಪಟ್ಟು ಸಭಿಕರಿಗೆ ಫಲಹಾರ ಮಾಡಿಸಲ್ಪಟ್ಟಿತು ಶ್ರೀ ಬಸವೇಶ್ವರದೇವರ ಫೋಟೋವನ್ನು ಇಟ್ಟು ಅನೇಕ ದೀಪಾವಳಿಗಳೊಡನೆ ಭಜನೆ ಮೊದಲಾದ ವೇದಘೋಷಗಳಿಂದ ದೇವರ ಉತ್ಸವವನ್ನು ಹೊರಡಿಸಿ ರಂಗವಲ್ಲಿ ಮುಂತಾದ ಸಾರಣೆಗಳಿಂದಲೂ ತಳಿರುತೋರಣಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಎಲ್ಲಾ ಬೀದಿಗಳಲ್ಲೂ ಬಹಳ ವಿಜೃಂಭಣೆಯಿಂದ ಮದ್ದು ಮೊದಲಾದ ತಮಾಷೆಗಳೊಡನೆ ಉತ್ಸವವು ನಡಿಸಲ್ಪಟ್ಟಿತು. ಈ ಉತ್ಸವವನ್ನು ನೋಡಲು ಅಜುಬಾಜು ಗ್ರಾಮದ ಜನರು ಸುಮಾರು 700-800 ವರೆಗೆ ನೆರೆದಿದ್ದು, ಶ್ರೀಮನ್ಮಹಾರಾಜರವರಿಗೂ ರಾಜಕುಟುಂಬದವರಿಗೂ ಈ ಉತ್ಸವವನ್ನು ಬಹಳ ಶ್ರದ್ಧೆಯಿಂದಲೂ ಧನವ್ಯಯದಿಂದಲೂ ಸಾಂಗಗೊಳಿಸಿದ ಈ ಗ್ರಾಮದ ಮಠಸ್ಥರಾದ ಸಿದ್ಧಲಿಂಗದೇವರು, ಕೆಳಗಣಮನೆ ಮಲ್ಲಯ್ಯನವರು, ದಲ್ಲಾಳು ಮಲ್ಲಪ್ಪನವರು, ಪಟೇಲ್ ಬಸವಯ್ಯನವರು, ಚಿಕ್ಕಣ್ಣನವರು, ಭೋ|| ಮಲ್ಲಯ್ಯನವರು, ಲಿಂಗಣ್ಣನವರು, ಕೆಂಪೇಗೌಡ ಮೊದಲಾದವರಿಗೂ ಶ್ರೀ ಬಸವೇಶ್ವರನು ಸಮಸ್ತಸನ್ಮಂಗಳವನ್ನಿತ್ತು ಕಾಪಾಡಲೆಂದು ಶ್ರೇಯಃಪ್ರಾರ್ಥನೆಯನ್ನು ಮಾಡಿ ಅವರವರ ಮನೆಗಳಿಗೆ ತೆರಳಿದರು."

ದೊಡ್ಡಬಳ್ಳಾಪುರ ತಾ|| ಸರ್ವಮಾನ್ಯ ಗೊಲ್ಲಹಳ್ಳಿ.

ತಾ|| 6 ರಲ್ಲಿ ತಳಿರುತೋರಣಗಳಿಂದ ಅಲಂಕೃತವಾಗಿದ್ದ ಎಲ್ಲಾ ಬೀದಿಗಳಲ್ಲೂ ಶ್ರೀ ಬಸವೇಶ್ವರದೇವರ ಭಾವಚಿತ್ರಪಟವು ಬೆಳಗಿನ 8 ಗಂಟೆಯಿಂದ 11 ಗಂಟೆಯತನಕ ಮೆರಿಯಿಸಲ್ಪಟ್ಟು ಶ್ರೀ ಚೆನ್ನಮಲ್ಲೇಶ್ವರಸ್ವಾಮಿಯ ಸನ್ನಿಧಿಗೆ ತರಲ್ಪಟ್ಟಿತು. ಅಲ್ಲಿ ಮಹಾಸಭೆ ಸೇರಿ ಕಾರ್ಯದರ್ಶಿಗಳಾದ ದ್ಯಾ|| ಪರಪ್ಪನವರು, ಕಾ|| ನಂ|| ಶಿವನಂಜಪ್ಪನವರು, ಎ|| ಗಂ|| ಮಲ್ಲಪ್ಪನವರು, ಪ|| ನಂಜುಂಡಪ್ಪ ಇವರುಗಳಾದಿಯಾಗಿ ಭಕ್ತರುಗಳಿಂದ ಪೂಜೆ ನಡಿಸಲ್ಪಟ್ಟಿತು. ಸ್ವಮತೀಯರಲ್ಲದೆ ಗ್ರಾಮದ ಪರಮತೀಯರು ಸಹ ಶ್ರೀ ಬಸವೇಶ್ವರದೇವರ ಉತ್ಸವದಲ್ಲಿ ಭಾಗಿಗಳಾಗಿ ಆ ದಿವಸ ಬಸವನನ್ನು ಬಂಡಿ ಬೇಸಾಯಕ್ಕೆ ಹೂಡದೆ ತಮ್ಮ ವ್ಯವಸಾಯದ ಕಾರ್ಯವನ್ನು ನಿಲ್ಲಿಸಿ ಶ್ರೀ ಬಸವೇಶ್ವರದೇವರ ಕಾರ್ಯದಲ್ಲಿ ನಿರತರಾಗಿದ್ದರು. ನಂತರ ಮಹಾಸಭೆಯಲ್ಲಿ ಹು|| ಮಠದ ಕಪ್ಪಯ್ಯನವರು ಸಮಸ್ತರಿಗೂ ಶ್ರೀ ಬಸವೇಶ್ವರದೇವರ ಮಹಿಮೆಯನ್ನು ತಿಳಿಸಿದರು. ನಂತರ ಬಸವೇಶ್ವರ ಜನನವೆಂಬ ಗ್ರಂಥವು ಎ|| ಗಂ|| ಮಲ್ಲಪ್ಪನವರ ಸಹೋದರ ಕಪ್ಪಣ್ಣಶೆಟ್ಟರಿಂದ ಓದಲ್ಪಟ್ಟು ಅದರರ್ಥವು ಮಠದ ಕಪ್ಪಯ್ಯನವರಿಂದ ಹೇಳಲ್ಪಟ್ಟಿತು. ನಂತರ ನಮ್ಮ ವೀರಶೈವಮತಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಹೊಂದಿರುವ ಕೈಲಾಸವಾಸಿಗಳಾದ ಯಜಮಾನ್ ವೀರಸಂಗಪ್ಪನವರ ಸ್ಮರಣಾರ್ಥವಾಗಿ ಅಗ್ರತಾಂಬೂಲದ ಬಗ್ಗೆ 1 ರೂ. ಕಾರ್ಯದರ್ಶಿಗಳಿಂದ ತೆಗಿಯಲ್ಪಟ್ಟಿತು. ಇದೇಪ್ರಕಾರ ಈ ಉತ್ಸವಕಾರ್ಯವು ಪ್ರತಿವರ್ಷವೂ ದ್ವಿಗುಣವಾಗಿ ನಡಿಯುವಂತೆ ಅನುಗ್ರಹಿಸಲೆಂದು ಶ್ರೀ ಜಗದೀಶ್ವರನನ್ನು ಪ್ರಾರ್ಥಿಸಿ ಜಯಘೋಷದೊಡನೆ ಸಭಾ ವಿಸರ್ಜನೆಯಾಯಿತು.

[ಈ ಮೊಬಲಗು ನಮಗೆ ಬಂದಿಲ್ಲವು.—ಸ. ಪ್ರ.]

ಹೊಸಕೋಟೆ.

ಈ ಊರಿನ "ನವಸಾಲನಗರಾಭಿವೃದ್ಧಿ ಸಂಘ" ದವರು ಹಬ್ಬಕ್ಕೆ ಮುನ್ನ ಎರಡು ದಿನವೇ ಈ ಊರಿನ ಯಾವತ್ತೂ ವೀರಶೈವರ ಮನೆಗಳಿಗೆ ಹೋಗಿ ಶ್ರೀ ಬಸವಜಯಂತ್ಯುತ್ಸವದ ಮಹತ್ವವನ್ನು ಎಲ್ಲರಿಗೂ ತಿಳುಹಿಸಿ ಅದನ್ನು ಪ್ರತಿಯೊಬ್ಬರೂ ತಾ|| 6 ರಲ್ಲಿ ಆಚರಿಸಬೇಕೆಂದು ಹೇಳಿಬಂದರು. ಹಬ್ಬದ ದಿನ ಎಲ್ಲಾ ವೀರಶೈವರ ಗೃಹಗಳೂ ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿದ್ದು, ಎಲ್ಲ ಲಿಂಗಾಂಗಿಗಳೂ ಅವರವರ ಶಕ್ತ್ಯನುಸಾರ ಹಬ್ಬವನ್ನು ಆಚರಿಸಿದರು. ಆ ಮಹಾದಿನದ ಸಂಜೆಯಲ್ಲಿ ಸುಶೋಭಿತವಾಗಿ ಅಲಂಕರಿಸಲ್ಪಟ್ಟಿದ್ದ ಸಂಘದ ಕಟ್ಟಡದಲ್ಲಿ ಶ್ರೀ ಬಸವದಂಡಾಧೀಶನ ಭಾವಚಿತ್ರಪಟವು ವ್ಯಾಸಪೀಠದ ಮೇಲೆ ಮೂರ್ತಿಗೊಳಿಸಲ್ಪಟ್ಟಿತ್ತು. ಎಲ್ಲ ಕೋಮಿನವರೂ ನೆರೆದಿದ್ದರು. ಮ|| ಚಟ್ಟಿ ಬಸಪ್ಪನವರು ಮ|| ರುದ್ರಪ್ಪನವರು ಮ|| ಪು. ಮುನಿಶಾಮಪ್ಪ-ನಂಜುಂಡಪ್ಪನವರು. ಮ|| ಜ. ವಿ. ಚೆನ್ನಪ್ಪನವರು ಮ|| ಚಿಟ್ಟರ ವೆಂಕಟೇಶಯ್ಯನವರು ಮ|| ಗುರುಮೂರ್ತಪ್ಪನವರೇ ಮೊದಲಾದ ಪುರಪ್ರಮುಖರು ದಯಮಾಡಿಸಿದ್ದರು. ಮಿ|| ಜವಳಿ ಅಂಗಡಿ ಮಹಮದ್‌ಉಸ್ಮಾನ್‌ಸಾಬರೇ ಮೊದಲಾದ ಮಹಮದೀಯ ಬಂಧುಗಳು ಸಹ ದಯಮಾಡಿಸಿದ್ದುದು ಅತ್ಯಂತ ಸಂತೋಷಪ್ರದವಾಗಿತ್ತು. ಮೊದಲು ಸಭೆಯಲ್ಲಿ ಈ ಊರಿನ "ನವಸಾಲನಗರೀ ಭಜನಾಮಂದಿರ" ದವರ ಕೀರ್ತನೆಯು ನಡೆಯಿತು. ಅನಂತರ ಇಬ್ಬರು ವೀರಶೈವ ವಿದ್ಯಾರ್ಥಿಗಳಿಂದ ದೇವತಾಪ್ರಾರ್ಥನೆಯಾಯಿತು. ಬಳಿಕ ಈ ಊರಿನ ಹಾಗೂ ವೀರಶೈವ ಸಮಾಜದ ಹಿತೇಚ್ಛುಗಳೊಬ್ಬರಿಂದ ವೀರಶೈವ ಮತದ ಗತವೈಭವ ಮತ್ತು ಸದ್ಯಃಸ್ಥಿತಿ ಬಸವಣ್ಣನವರ ಮಹತ್ತು ನಮ್ಮೂರಿನ ಮಣ್ಣುಗೂಡಿ ಹೋಗಿರುವ ಮತ್ತು ಹೋಗಲಿಕ್ಕಿರುವ ವೀರಶೈವ ಮಠಗಳ ಶೋಚನೀಯಸ್ಥಿತಿ ಇವೆಲ್ಲನನ್ನೂ ಕುರಿತು ಸುರಸಭಾಷಣವಾಯಿತು. ಮಹಾಮಂಗಳಾರತಿ ಆದನಂತರ ಪ್ರಸಾದವು ಹಂಚಲ್ಪಟ್ಟು ಸಭೆಯು ಬಸವರಾಜ ಜಯಘೋಷದಿಂದ ಮುಕ್ತಾಯಗೊಳಿಸಲ್ಪಟ್ಟಿತು. ಆಮೇಲೆ ಬಸವೇಶ್ವರನ ಭಾವಪಟವು ಭಜನಾಕೂಟದೊಂದಿಗೆ ಊರಲ್ಲೆಲ್ಲಾ ಮೆರೆಯಿಸಲ್ಪಟ್ಟಿತು.

ಬೆಂಗಳೂರು ದಂಡಿಗೆ ಸೇರಿದ ಅಲಸೂರು.

ಇಲ್ಲಿನ ವೀರಶೈವ ಮುಖಂಡರೂ ಆನರರಿ ಮ್ಯಾಜಿಸ್ಟ್ರೇಟರೂ ಶ್ರೀಮಂತರೂ ಆದ ಯಜಮಾನ್ ಕಾಳಪ್ಪನವರ ಅಧ್ಯಕ್ಷತೆಯಲ್ಲಿ ಮ|| ಗಳಾದ ಜೆ. ನೀಲಕಂಠಾರಾಧ್ಯರು, ಮ|| ಸ್ಕೂಲ್ ಹೆಡ್‌ಮಾಸ್ಟರ್ . ಮಲ್ಲಪ್ಪನವರು, ದೇವಪ್ಪನವರು, ಸಾಹುಕಾರ್ ಎಂ. ರುದ್ರಪ್ಪನವರು, ಮೊದಲಾಗಿ ವೀರಶೈವ ಮಹನೀಯರುಗಳಿಂದ ಮಾಮೂಲ್ ಮೇರೆ ಶ್ರೀ ಬಸವೇಶ್ವರಸ್ವಾಮಿಯವರಿಗೆ ಅಭಿಷೇಕವೂ ಅರ್ಚನಾದಿಗಳೂ ನಡೆಸಲ್ಪಟ್ಟ ಬಳಿಕ ವೀರಶೈವ ವಾಚನಾಲಯದ ಸಕ್ರಿಟರಿ ಮ|| ಬಿ. ಎಸ್. ರುದ್ರಪ್ಪನವರು ನೆರೆದಿದ್ದ ಸಭೆಯಲ್ಲಿ ಕೆಳಗಡೆ ಕಂಡಪ್ರಕಾರ ಬಹು ಸ್ವಾರಸ್ಯವಾದ ಉಪನ್ಯಾಸಮಾಡಿದರು.—"ಈಶ್ವರಚಿದ್ಧರ್ಮಸ್ವರೂಪನಾದ ಶ್ರೀ ನಂದೀಶ್ವರನು ಶ್ರೀ ಪರಶಿವಾಜ್ಞಾ ಧಾರಕನಾಗಿ ಕ್ರಿ.ಶ. 1150 ರಲ್ಲಿ ಶ್ರೀಶೈಲದ ಪಶ್ಚಿಮಭಾಗದಲ್ಲಿ ಪ್ರಕಾಶಿಸುವ ಕರ್ನಾಟಕ ದೇಶದ ಬಾಗವಾಡಿಯಲ್ಲಿ ಭಕ್ತಾಗ್ರೇಸರನಾದ ಶಿವದ್ವಿಜ ಮಂಡಿಗೆಮಾದರಸರಿಗೆ ಮಾದಲಾಂಬಿಕೆಯ ಗರ್ಭಾಂಬುಧಿಯಲ್ಲಿ ಬಸವಾಭಿದಾನದಿಂದ ಜನಿಸಿ, ಕಲ್ಯಾಣವನ್ನಾಳುತ್ತಿದ್ದ ಬಿಜ್ಜಳಾಂಕನ ಸಚಿವಾಗ್ರಣಿಯಾಗಿ ಕಾರಣಾಂತರಗಳಿಂದ ಕ್ಷೀಣವಾಗುತ್ತಿದ್ದ ಅನಾದಿ ಹಾಗೂ ಅಪ್ರಾಕೃತವಾದ ಶಕ್ತಿವಿಶಿಷ್ಟಾದ್ವೈತವೆನಿಸುವ ವೀರಶೈವ ಮತವನ್ನು ಉದ್ಧರಿಸಲುದ್ಯುಕ್ತನಾಗಿ ತನ್ನ ಅಪ್ರತಿಮ ಮಹಿಮಾತಿಶಯಗಳಿಂದ ನಿತ್ಯಗಟ್ಟಲೆ ಲಕ್ಷದಮೇಲೆ ತೊಂಬತ್ತಾರುಸಾವಿರ ಜಂಗಮರಿಗೆ ಷಡ್ರಸಾದಿ ದಿವ್ಯ ಭಕ್ಷ್ಯಗಳಿಂದ ತೃಪ್ತಿಪಡಿಸಿ, ತನುಮನ ಧನಗಳನ್ನು ಅವರ ಸೇವೆಯಲ್ಲಿ ನಿವೇದನ ಮಾಡಿ, ಪರವಾದಿಗಳನ್ನು ಜಯಿಸಿ, ಈ ಮತದ ನಿಜತತ್ವವನ್ನು ಸುಲಲಿತವಾದ ಕನ್ನಡವಾಣಿಯಿಂದ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ಬೋಧಿಸಿ, ಜನರ ಅಜ್ಞಾನಾಂಧಕಾರಕ್ಕೆ ದಿನಕರನಂತೆ ತೋರಿ ತನ್ನ ಜೀವಿತ ಕಾಲವೆಲ್ಲಾ ದುಷ್ಟಶಿಕ್ಷಣ ಶಿಷ್ಟರಕ್ಷಣ ಕಾರ್ಯದಲ್ಲಿ ವಿನಿಯೋಗಮಾಡಿ ವೀರಶೈವ ಮತೋದ್ಧಾರಕನೆಂಬ ಬಿರುದನ್ನು ಪಡೆದು ಯಶೋಭಾಗಿಯಾದನು." "ಧರ್ಮಸಂಸ್ಥಾಪನಾರ್ಥವಾಗಿ ಜಗದೀಶ್ವರಾಜ್ಞೆಯಿಂದ ದಿವ್ಯ ಪುರುಷರು ಆಗಾಗ್ಗೆ ದೇಹಧಾರಣ ಮಾಡುತ್ತಿರುವರು" ಎಂಬ ಭಗವದ್ವಾಣಿಯ ರೀತ್ಯಾ ಪ್ರಸ್ತುತದಲ್ಲಿ ಭಾರತೀಯರ ಮೇಲ್ಮೆಗಾಗಿ ಸ್ವಾರ್ಥತ್ಯಾಗಮಾಡಿ ಸದಾ ಸ್ವದೇಶಹಿತಚಿಂತನೆಯಿಂದಿರುವಲ್ಲಿ ಸರ್ಕಾರದ ಅತ್ಯುಗ್ರ ದೀರ್ಘದಂಡನೆಗೆ ಗುರಿಯಾಗಿ ಸ್ವರಾಜ್ಯಾಶ್ರಮವೆಂಬ ನಿರ್ಬಂಧ ಗೃಹದಲ್ಲಿ ಸೇರಿ ವ್ಯಾಧಿಗ್ರಸ್ತರಾಗಿ ಚಿಕಿತ್ಸಾನಂತರ ಬಿಡುಗಡೆಯನ್ನು ಹೊಂದಿ, ಆರೋಗ್ಯಲಾಭಕ್ಕಾಗಿ ಈಗ ಕಡಲ ತೀರದಲ್ಲಿ ವಿಶ್ರಾಂತಿ ಸುಖವನ್ನು ಅನುಭವಿಸುತ್ತಿದ್ದರೂ ದೇಹಸುಖಕ್ಕಾಗಿ ಅಷ್ಟಾಗಿ ಮನವನ್ನಿಡದೆ ದೇಶಸೇವಾಸಕ್ತರಾಗಿರುವ ಯಾರ ಪವಿತ್ರನಾಮವನ್ನು ಇಡೀ ಪ್ರಪಂಚದಲ್ಲಿ ವಾಸಿಸುವ ಎಲ್ಲಾ ಜನಾಂಗದವಾಲಿಗಳು ದಿವಾರಾತ್ರಿಗಳಲ್ಲೂ ಜಪಿಸಿ ಧನ್ಯವಾಗುತ್ತಿರುವವೋ ಅಂಥಾ ಸುಗತವಂಶ ಸಂಭೂತರಾದ ಮಹಾತ್ಮಾ ಮೋಹನದಾಸ ಕರಮಚಂದ ಗಾಂಧಿಯವರಿಗೆ ಶ್ರೀ ಬಸವೇಶ್ವರನು ದೀರ್ಘಾಯುರಾರೋಗ್ಯಗಳನ್ನಿತ್ತು ಅವರ ಸತ್ಸಂಕಲ್ಪವನ್ನು ಶೀಘ್ರವಾಗಿ ನೆರವೇರಿಸಲಿ" ಎಂದು ಹೇಳಿದನಂತರ ಭಜನೆಗಳಾಗಿ ಶ್ರೀ ಸ್ವಾಮಿಯವರಿಗೆ ಮಂಗಳಾರತಿ ಬಳಿಕ ನೆರೆದಿದ್ದ ಎಲ್ಲಾ ಕೋಮಿನ ಜನರಿಗೆ ಗಂಧ ಪುಷ್ಪ ಫಲಹಾರ ತಾಂಬೂಲಗಳು ಕೊಡಲ್ಪಟ್ಟವು.

ಹರಪನಹಳ್ಳಿ.

ಇಲ್ಲಿ ಶ್ರೀ ಬಸವೇಶ್ವರ ಜಯಂತ್ಯುತ್ಸವವು ಪ್ರತಿವರ್ಷ ಜರುಗುವ ಹಾಗೆ ಈ ವರ್ಷವೂ ವೀರಶೈವ ತರುಣಸಂಘದ ವತಿಯಿಂದ ನಿರ್ವಿಘ್ನವಾಗಿಯೂ ಬಹು ಸಾಂಗವಾಗಿಯೂ ಜರಿಗಿತೆಂದು ತಿಳಿಸಲು ಹರ್ಷವಾಗುತ್ತದೆ. ಬಿ.ಎ., ಎಂ.ಎ., ಉನ್ನತ ಪದವೀಧರರಾದ ವೀರಶೈವತರುಣರು ಸ್ವಯಂಸೇವಕಾ ಚಿಹ್ನಗಳ ಉಡುಪುಗಳನ್ನು (Voluntary badges) ಧರಿಸಿ ಶ್ರೀ ಬಸವೇಶ್ವರ ಸೇವಾಧುರಂಧರರಾಗಿ ನಡುಕಟ್ಟಿ ನಿಂತು ಈ ಕಾರ್ಯವಂಗೈದು ತಮ್ಮ ಅಮೋಘವಾದ ಭಕ್ತಿಯನ್ನು ಪ್ರದರ್ಶಿಸಿರುವದು ಅಭಿನಂದನೀಯವು. ಶ್ರೀ ಬಸವೇಶ್ವರನ ಭಾವಚಿತ್ರಪಟವು ವಸ್ತ್ರಾಲಂಕೃತಗಳಿಂದ ಶೋಭಾಯಮಾನವಾಗಿದ್ದ ರಥದಲ್ಲಿ ಆರೂಢವಾಗಿ ಸುಭೂಷಿತವಾಗಿಯೂ, ಸುಸಜ್ಜಿತವಾಗಿಯೂ ಒಪ್ಪುತ್ತ ನೋಟಕರ ಮನವನ್ನು ಆಕರ್ಷಿಸಿ ಶ್ರೀ ಬಸವೇಶ್ವರಗೀತಾವಳಿಯ ಭಜನೆಕಾರರ ಸಮೂಹದೊಂದೊಡಗೂಡಿ ಶಿವಘೋಷದಿಂದ ಊರಲ್ಲೆಲ್ಲಾ ಉತ್ಸವಗೊಂಡು ಕೊಂಡಿಪೇಟೆಯ ಬಸವಣ್ಣನ ದೇವಾಲಯಕ್ಕೆ ಸಾಗಿತು. ಉತ್ಸವವು ಮುಗಿದ ಬಳಿಕ ಸಂಘದ ಉನ್ನತಪದವೀಧರರು ಶ್ರೀ ಬಸವೇಶ್ವರನ ವಿಷಯವಾಗಿ ಪುರಾಣೈತಿಹಾಸಿಕ ದೃಷ್ಟಿಯಿಂದ ಉಪನ್ಯಾಸಗಳನ್ನಿತ್ತರು. ಮಿ|| ಸದಾಶಿವಯ್ಯ, B.A. (Hons.) ಇವರು ಒಂದುಗಂಟೆಯವರೆಗೂ ಚಾರಿತ್ರಿಕದೃಷ್ಟಿಯಿಂದ ಬಸವೇಶ್ವರನನ್ನೆತ್ತಿಕೊಂಡು, ಆತನ ಸಂಘಸಂಸ್ಕರಣವನ್ನು (Social reforms) ಆರ್ಥಿಕ ಅಥವಾ ಸಾಂಪತ್ತಿಕ ಸುಧಾರಣೆಯನ್ನು (Economic reforms) ತತ್ತ್ವದೃಷ್ಟಿಯಿಂದ ಆತನ ಭಕ್ತಿವಿಷಯವನ್ನೆತ್ತಿಕೊಂಡು ಆತನ ದಾಸೋಹಂಭಾವದ ಘನತತ್ವ ಸಾರವನ್ನೂ ಮಹಾತ್ಮ ಗಾಂಧಿಯವರ ಕಿಂಕರತ್ವವೂ ಸಂಘ ಸಂಸ್ಕರಣೆಯೂ 12 ನೆಯ ಶತಮಾನದಲ್ಲಿ ಶ್ರೀ ಬಸವೇಶ್ವರನಲ್ಲೇ ಮೂರ್ತೀಭವಿಸಿದ್ದ ವಿಷಯವನ್ನೂ, ಅಧ್ಯಾತ್ಮಿಕ ವಿಷಯದಲ್ಲಿ ವೇದೋಪನಿಷತ್ತುಗಳ ಸಾರವನ್ನೇ ಘನಾಘಂಗುರವಾಗಿ ಸಾರುವ ಶ್ರೀ ಬಸವೇಶ್ವರನ ವಚನಸಾರವನ್ನೂ, ಸಂಶಯಾನ್ವಿತರ ಮನಸ್ಸು ಅದರ ದಂಗುಬಡಿಯುವಹಾಗೆ ಘಂಟಾಘೋಷವಾಗಿ ಉಪನ್ಯಾಸವನ್ನಮಾಡಿದರು. ಶ್ರೀಯುತ ಸುಬಸಪ್ಪನವರು (B. A. Nat) ನೈತಿಕವಿಷಯವಾಗಿ, ಶ್ರೀ ಬಸವೇಶ್ವರನನ್ನೆತ್ತಿಕೊಂಡು, ಆತನ ಸುಶೀಲತೆಯನ್ನೂ ಆತನ ಮಹಿಮೆಯನ್ನೂ ವ್ಯಕ್ತಪಡಿಸುವ ಪವಾಡಗಳನ್ನೂ, ಆತನ ಕೈಂಕರ್ಯಭಾವವನ್ನೂ ಬಹುಸರಳವಾಗಿ ತಿಳಿಯಪಡಿಸಿ, ಸಭೆಯಲ್ಲಿ ನೆರೆದಿದ್ದ ಜನರ ಮನಸ್ಸಿನ ಮೇಲೆ ತಮ್ಮ ವಾಗ್ವೈಖರಿಯಿಂದ ಒಳ್ಳೆಯ ಪರಿಣಾಮವನ್ನುಂಟುಮಾಡಿದರು. ಇವರ ಭಾಷಣದಲ್ಲಿ ಸದ್ಭಾವನೆಗಳು ತುಂಬಿತುಳುಕುತಲಿದ್ದುವು. ಮಿ|| ಚಂದ್ರಶೇಖರಯ್ಯನವರು (B. L. Class) ಎದ್ದು ನಿಂತು, ಇತರ ಮತಸ್ಥರಾದ ಬ್ರಾಹ್ಮಣರು ಮಹಮ್ಮದೀಯರು ಕ್ರೈಸ್ತರು ಮುಂತಾದವರಿಗೆ ಅವರವರ ಮತಸ್ಥಾಪಕರ, ಮತೋದ್ಧಾರಕರ ಜನ್ಮ ದಿವಸಗಳಲ್ಲಿ ಸರ್ಕಾರದವರು ರಜಾಕೊಟ್ಟಿರುವದರಿಂದ ನಾವೂ ಕೂಡ ಶ್ರೀ ಬಸವೇಶ್ವರ ಜಯಂತಿಯ ದಿವಸವು ರಜಾ ದಿವಸವಾಗಿ ಗಣಿಸಲ್ಪಡಬೇಕೆಂದು ಮದ್ರಾಸು ಸರ್ಕಾರವರಿಗೆ ವಿನಂತಿಮಾಡಿಕೊಳ್ಳುವದಾಗಿ ಠರಾವು ತಂದರು. ಆಮೇಲೆ ಮಿ|| ಸಿದ್ಧಯ್ಯನವರು (B. L. Class) ತಮ್ಮ ಅನುಮೋದನೆಯನ್ನು ಸೂಚಿಸುವ ಭಾಷಣವನ್ನು ಮಾಡಿದರು. ಈ ಠರಾವು ಸಭಾಸದರಿಂದ ಪುಷ್ಟೀಕರಿಸಲ್ಪಟ್ಟು ಮದ್ರಾಸು ಸರ್ಕಾರದವರಿಗೆ ಕಳುಹಿಸಲ್ಪಟ್ಟಿತು. ಉಪನ್ಯಾಸಗಳು ಮುಗಿದ ಮೇಲೆ ಸಭೆಯು ಮುಕ್ತಾಯವಾಗಲು ಬಸವಣ್ಣನು ಪೂಜಿಸಲ್ಪಟ್ಟು, ಚಿಕ್ಕ ಬಾಲಕರಿಗೆ ಪಣ್ಯಾರವು ಹಂಚಲ್ಪಟ್ಟಿತು. ಪೂಜಾನಂತರ ಉತ್ಸವವು ಹಿಂತಿರಿಗಿತು. ಆಮೇಲೆ ಸಂಘದ ಪರಿವಾರವು ಮೋಟಾರುಮೇಲೆ ಊರಿಗೆ $1\frac{1}{2}$ ಮೈಲಿ ದೂರವಾಗಿ ಘನಾರಣ್ಯದಲ್ಲಿ ವಿರಾಜಮಾನವಾಗೊಪ್ಪುವ ಶ್ರೀ ಬಸವೇಶ್ವರನ ದೇವಾಲಯಕ್ಕೆ ಹೋಗಿ ಅಲ್ಲಿ ಭಕ್ತಿಯಿಂದ ಪೂಜೆಯಂಗೈದು ಸುಮಾರು ರಾತ್ರಿ 11 ಗಂಟೆಗೆ ಊರಿಗೆ ಹಿಂತಿರಿಗಿಬಂದಿತು. ಈ ಪ್ರಕಾರ ಶ್ರೀ ಬಸವೇಶ್ವರ ಜಯಂತ್ಯುತ್ಸವವು ಬಹು ವಿಜೃಂಭಣೆಯಿಂದ ಜರಿಗಿತು. ಅನ್ಯಸಹಾಯವಿಲ್ಲದೆ ಕೇವಲ ತರುಣರಿಂದಲೇ ಈ ಉತ್ಸವವು 4-5 ವರ್ಷಗಳಿಂದ ಬಹು ಸಾಂಗವಾಗಿ ಜರುಗಿಸಲ್ಪಡುತ್ತಿರುವದು ಶ್ಲಾಘನೀಯವೇಸರಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವ ಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲ ವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ಸಿಗೆ ವರ್ಣಿಸಿ ಮಾರುಮಾರುದ್ದ ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಪರಸ್ಪರ ಸಮಾಜಗಳಲ್ಲಿ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಶಮ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೂಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರಃ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಾಥಾರ್ಥ್ಯವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲ ವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧದ ಲೇಖನಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕರೂ ಖಂಡಿತವಾಗಿ ಗಮನಿಸಬೇಕು.—ಸಂ.

ತಿರಸ್ಕೃತಲೇಖನಗಳು.

(1) ಓರ್ವ ಲಿಂಗಾಯತಭಕ್ತ ಮುನವಳ್ಳಿ—ಮುನವಳ್ಳಿ ವೀರಶೈವರಿಗೊಂದು ವಿನಂತಿ ಎಂಬ ನಿಮ್ಮ ಲೇಖನದಲ್ಲಿ ನಿಮ್ಮ ನಿಜನಾಮ ಮತ್ತು ಚಂದಾನಂಬರು ತಿಳುಹಲ್ಪಟ್ಟಿಲ್ಲವಾಗಿ ಅದು ತಿರಸ್ಕರಿಸಲ್ಪಟ್ಟಿದೆ—ಪ.ಪ್ರ.

ತಿಳಿವಳಿಕೆ.

1924ನೇ ಏಪ್ರಿಲ್ 21ನೇ ತಾರೀಖಿನ "ಮದ್ರಾಸ್ ಮೇಯಿಲ್" ಪತ್ರಿಕೆಯ 4ನೇ ಪೇಜಿನಲ್ಲಿ "ಎರಡನೇ ಪೊಲಿಟಿಕಲ್ ಕಾನ್ಫರೆನ್ಸು" ಸಿದ್ಧಗಂಗಾದಲ್ಲಿ ನಡೆಯುವಂತೆಯೂ ಇದಕ್ಕಾಗಿ ಮ|| ರಾ|| ತುಮಕೂರು ಅಡ್ವೋಕೇಟರಾದ ರಂಗಯ್ಯಂಗಾರರವರು ಪ್ರಯತ್ನಮಾಡುತ್ತಿರುವದಾಗಿಯೂ ಪ್ರಚುರಪಡಿಸಿತ್ತು. ಈಗ ಸದರಿ ಶ್ರೀ ಸಿದ್ಧಗಂಗಾದಲ್ಲಿ ನೀರಿನ ಅಭಾವ ಮುಂತಾದ ಕಾರಣಗಳಿಂದ ಅಲ್ಲಿ ಸಭೆ ನಡೆಯಲು ಅವಕಾಶವಿಲ್ಲವೆಂಬದಾಗಿ ಈ ಮೂಲಕ ತಿಳಿಸಿರುತ್ತೆ. ಈ ವಿಷಯವನ್ನು ಮ|| ರಾ|| ರಂಗಯ್ಯಂಗಾರರವರಿಗೆ ಮುಖತಃ ಮೊದಲೇ ಶ್ರೀ ಸಿದ್ಧಗಂಗಾ ಕ್ಷೇತ್ರದಿಂದ ತಿಳಿಸಿರುತ್ತೆ.

ಮರುಳಾರಾಧ್ಯಸ್ವಾಮಿಗಳು.

ತುಮಕೂರು ತಾ|| ಹರಳೂರು ಗ್ರಾಮದ ಸ್ಕೂಲು.

ಈ ಗ್ರಾಮದ ಸ್ಕೂಲು ಸ್ಥಾಪಿತವಾದ 13 ವರ್ಷಗಳಿಂದಲೂ ಗ್ರಾಮಸ್ಥರು ಕಟ್ಟಿಸಿಕೊಟ್ಟ ಒಂದು ಮಾಳಿಗೆ ಮನೆಯಲ್ಲಿ ನಡಿಯುತ್ತಿದೆ. ಈಗ ಓದುತ್ತಿರುವ ಹುಡುಗರ ಸಂಖ್ಯೆಯು 60-70ರ ವರೆಗಿದ್ದು ಇನ್ನೂ ಹೆಚ್ಚುವ ಸಂಭವವಿದೆ ಮತ್ತು ಈವರೆಗೆ 5-6 ಹುಡುಗರು ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಪ್ಯಾಸಾಗಿರುವರಲ್ಲದೆ ಈ ವರ್ಷ 3 ಜನ ಪರೀಕ್ಷೆಗೆ ಹೋಗಿರುತ್ತಾರೆ. ಈ ಸ್ಕೂಲು ಇಷ್ಟು ಅಭಿವೃದ್ಧಿಸ್ಥಿತಿಯಲ್ಲಿದ್ದರೂ ಇದು ಮಿಡಲ್ ಸ್ಕೂಲಾಗಿ ಆಗಲಿ ಅಥವಾ ಇನ್ಕಂಪ್ಲೀಟು ಮಿಡ್ಲ್‌ಸ್ಕೂಲಾಗಿ ಆಗಲಿ ಸರ್ಕಾರದವರಿಂದ ಮಾಡಲ್ಪಡದಿರುವದೂ ಹಿಂದಣ ಇ|| ಜನರಲ್‌ರವರು ಅಪ್ಪಣೆಕೊಡಿಸಿದ್ದಂತೆ ಗ್ರಾಮಸ್ಥರು 300 ರೂ. ಗಳ ಚಂದಾ ಹಣ ಕೊಟ್ಟಿದ್ದರೂ ಒಂದು ಕಟ್ಟಡವು ತಯಾರಿಸಲ್ಪಡದಿರುವದೂ ಬಹಳ ಶೋಚನೀಯವಾಗಿದೆ. ಈ ಮೊಬಲಗು ಗ್ರಾಮದ ಪಟೇಲರ ಮತ್ತು ಮ|| ದೊಡ್ಡಬಸಪ್ಪನವರ ವಶದಲ್ಲಿ ನಿಂತಿರುವುದಾಗಿ ತಿಳಿಯಬರುತ್ತದೆ. ಆದ್ದರಿಂದ ದಯಾಳು ಇ|| ಜನರಲ್‌ರವರು ಮತ್ತು ಸರ್ಕಲ್ ಇನ್ಸ್ಪೆಕ್ಟರು ಮೇಲ್ಕಂಡ ಮೊಬಲಗನ್ನು ತಮ್ಮ ವಶಕ್ಕೆ ತೆಗೆದುಕೊಂಡು ಜಾಗ್ರತೆಯಲ್ಲಿ ಸ್ಕೂಲು ಕಟ್ಟಡವನ್ನು ಕಟ್ಟಿಸಿಕೊಡಬೇಕಾಗಿ ಗ್ರಾಮವಾಸಿಗಳ ಪರವಾಗಿ ಪ್ರಾರ್ಥಿಸುವ,

ವಿದ್ಯಾಭಿಮಾನಿ.

ಪರೋಪಕಾರ.

ಹೊಳಲ್ಕೆರೆ ತಾಲ್ಲೂಕು ದುಮ್ಮಿಗ್ರಾಮವು ಮನೆಗಳ ಸಂಖ್ಯೆಯಲ್ಲಿಯೂ, ಜನಗಳ ಸಂಖ್ಯೆಯಲ್ಲಿಯೂ ಈ ತಾಲ್ಲೂಕು ಪೈಕಿ ದೊಡ್ಡದಾಗಿದೆ ಎಂಬುದನ್ನು ಮತ್ತು ಹೊಸ ಸ್ಕೂಲ್ ಪ್ರವೇಶೋತ್ಸವದ ವಿಷಯವನ್ನು ಈ ಮೊದಲೇ ಇದೇ ಸ್ಟಾರ್ ಪತ್ರಿಕೆಯ 1923 ನೇ ಡಿಶಂಬರ್ ತಾರೀಖು 2ನೇ ಭಾನುವಾರದ ಸಂಚಿಕೆಯಲ್ಲಿ ವ್ಯಕ್ತಪಡಿಸಿದ್ದಾಗಿರುತ್ತೆ. ಈ ಗ್ರಾಮದ ಸ್ಕೂಲಿನ ಬಾಲಕರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲೂ, ಹೆಚ್ಚುವುದರಲ್ಲಿಯೂ ಇರುತ್ತದೆ. ಇಲ್ಲಿನ ಮಾಸ್ತರುಗಳು ಬಹಳ ಉತ್ಸಾಹದಿಂದಲೂ ಶ್ರದ್ಧೆಯಿಂದಲೂ ಕೆಲಸಮಾಡುವುದಲ್ಲದೆ, ಜನಾನುರಾಗಕ್ಕೆ ಪಾತ್ರರಾಗಿರುತ್ತಾರೆ. ಮ|| ಶಾನುಭೋಗ(ನಾಡಿಗ)ತಿಮ್ಮಪ್ಪನವರು, ಮ|| ವಿಭೂತಿ ಬಸಪ್ಪನವರು, ಮ|| ಹೊನ್ನೆಮರದಹಳ್ಳಿ ಸಿದ್ದಪ್ಪನವರು ಈ ಮಹನೀಯರುಗಳು ಇಂಥಾ ದುರ್ಭಿಕ್ಷಕಾಲದಲ್ಲಿಯೂ ಉದಾರಮನಸ್ಕರಾಗಿ ತಮ್ಮ ತಮ್ಮ ಸ್ವಗೃಹಗಳಲ್ಲಿ ಸದರಿ 3 ಜನ ಮಾಸ್ತರುಗಳ ಊಟಕ್ಕೆ ಅನುಕೂಲಪಡಿಸಿಕೊಟ್ಟಿರುವುದು ತುಂಬಾ ಸ್ತೋತ್ರಾರ್ಹವಾಗಿರುತ್ತೆ. ಬಹುದೊಡ್ಡದಾಗಿ ಸೇರುತ್ತಲೂ, ಸೇರುವುದರಲ್ಲಿಯೂ ಇರುವ ಈ ಗ್ರಾಮದ ಸಂತೆಯಲ್ಲಿ ಜನಗಳಿಗೆ ಕುಡಿಯುವ ನೀರಿನತೊಂದರೆಯು ಅಪರಿಮಿತವಾಗಿರುತ್ತದೆ. ಈ ಸಂತೆಯ ಸುಂಕದಿಂದ ಪ್ರತಿವರ್ಷವೂ 700-800 ರೂಪಾಯಿಗಳು ಸರ್ಕಾರಕ್ಕೆ ಸಲ್ಲುತ್ತಿದ್ದರೂ ಕೂಡ ಕಳೆದ ಡಿಶಂಬರ್ ತಿಂಗಳಲ್ಲಿ ನಡೆದ ಹುಜೂರ್ ಜಮಾಬಂದಿ ಕಾಲದಲ್ಲಿ ದಾವಣಗೆರೆ ಸಬ್‌ಡಿವಿಜನ್ ಸಾಹೇಬರವರ ಮತ್ತು ತಾಲ್ಲೂಕ್ ಅಮಲ್ದಾರರವರ ಸನ್ನಿಧಿಯಲ್ಲಿ ಈ ಗ್ರಾಮದ ಮುಖಂಡರು ಸಂತೆಸ್ಥಳದ ಹತ್ತಿರ ಒಂದು ಬಾವಿ ತೆಗೆಯಿಸಲು ಏರ್ಪಾಡುಮಾಡಿಸಿಕೊಡಬೇಕಾಗಿ ಅರ್ಜಿ ಗುಜರಾಯಿಸಿದ್ದರ ಮೇಲೆ ಖಾವಂದರವರು ಚಿತ್ತಕ್ಕೆ ತಾರದಿರುವುದು ನಮ್ಮಗಳ ದುರ್ದೈವವೆಂದು ತಿಳಿಸಲು ವಿಷಾದಿಸುತ್ತೇನೆ. ಆದರೂ ಈ ಗ್ರಾಮದ ಕೇವಲ ಬಡವರಾಗಿಯೂ ಉದಾರಮನಸ್ಕರಾಗಿಯೂ ಇರುವ ಮ|| ಸಿದ್ಧನಮಠದ ಸಿದ್ದಪ್ಪ ಎಂಬ ಮಹನೀಯರು ಸುಮಾರು 500-600 ರೂಪಾಯಿಗಳ ಸ್ವಂತ ಖರ್ಚಿನಿಂದ ಚಿತ್ರದುರ್ಗ ಮತ್ತು ಚೆನ್ನಗಿರಿಗೆ ಹೋಗುವ ಬಂಡಿರಸ್ತೆಯ ಸಮೀಪದಲ್ಲಿ ನಡೆಯುವ ಸಂತೆಯ ಜನಗಳಿಗೆ ಅನುಕೂಲವಾಗಿ ಬಾವಿತೆಗೆಯಿಸುತ್ತಿರುವರು. ಶೀಘ್ರದಲ್ಲೇ ನೀರು ಬೀಳುವುದರಲ್ಲಿದೆ. ಇದರಿಂದ ಸಂತೆಯ ಜನಗಳಿಗೂ ಪ್ರಯಾಣಿಕರಿಗೂ ತುಂಬಾ ನೀರಿನ ಅನುಕೂಲವಾಗುವುದು. ಈ ಮೇಲ್ಕಂಡ ಮಹನೀಯರುಗಳಿಗೆ ದೇವರು ಆಯುರಾರೋಗ್ಯ ಐಶ್ವರ್ಯವನ್ನಿತ್ತು ಕಾಪಾಡಲೆಂದು ಬೇಡುತ್ತೇನೆ. ಈ ಗ್ರಾಮಕ್ಕೆ ಒಂದು ಪೋಸ್ಟ್ ಆಫೀಸು ಇಲ್ಲದಿರುವುದು ತುಂಬಾ ಅನಾನುಕೂಲವಾಗಿದೆ. ಈ ಗ್ರಾಮಕ್ಕೆ ಚನ್ನಗಿರಿ 10 ಮೈಲಿ ಹೊಳಲ್ಕೆರೆ 8 ಮೈಲಿಗಳು ಫಾಸಲೆ ಇರುವುದರಿಂದ ಇಲ್ಲಿ ಪೋಸ್ಟ್ ಆಫೀಸ್ ಆಗುವುದು ಅತ್ಯಾವಶ್ಯಕವಾಗಿದೆ. ಈ ಗ್ರಾಮದ ಸ್ಕೂಲ್ ಮಾಸ್ತರುಗಳು ಮೆಹನತ್ತಿನಿಂದ ಕೆಲಸಮಾಡುವುದರಿಂದಲೂ ಬಾಲಕರ ಸಂಖ್ಯೆಯನ್ನು ಹೆಚ್ಚಿಸುವುದರಿಂದಲೂ ಈ ಸ್ಕೂಲು ಕ್ರಮೇಣ ಇನ್ ಕಂಪ್ಲೀಟ್ ಯಾ ಮಿಡಲ್ ಸ್ಕೂಲ್ ಆಗುವುದರಲ್ಲಿ ಸಂಶಯವಿಲ್ಲ. ಈ ವಿಚಾರದಲ್ಲಿ ನಮ್ಮ ಘನಸರ್ಕಾರದವರೂ ಮತ್ತು ಗ್ರಾಮಮುಖಂಡರೂ ಸಹ ನಿಗಾವಹಿಸುತ್ತಾರೆಂದು ನಂಬಿರುತ್ತೇನೆ.

ಪ್ರಜಾಹಿತೈಷಿ.

ಪ್ರಸಿದ್ಧ ಮನೆತನಗಳಲ್ಲಿ ನಡೆದ ವಿವಾಹ ಮಹೋತ್ಸವಗಳು.

ಕೊಯಂಬತ್ತೂರು ಡಿಸ್ಟ್ರಿಕ್ಟು ಕೊಳ್ಳೇಗಾಲದಲ್ಲಿ ಭಾರೀಜಮೀನ್ದಾರರೂ, ಶ್ರೀಮಂತರೂ, ತಾಲ್ಲೂಕು ಬೋರ್ಡು ಪ್ರೆಸಿಡೆಂಟರೂ, ವೀರಶೈವ ಮತಸಂವರ್ಧಿನೀ ಸಭೆಯ ಉಪಾಧ್ಯಕ್ಷರೂ ಆದ ಮ|| ಜಿ. ಪಿ. ಮಲ್ಲಪ್ಪನವರು ತಮ್ಮ ದ್ವಿತೀಯ ಕುವರಿ ಚಿ|| ಸೌ|| ಪಾರ್ವತಮ್ಮನನ್ನು ಶೇಲಂ ಡಿಸ್ಟ್ರಿಕ್ಟು ಹೊಸೂರು ತಾಲ್ಲೂಕು ದೆಂಕಣಿಕೋಟೆಯಲ್ಲಿರುವ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ ಮ|| ಡಿ. ಎನ್. ನೀಲಕಂಠಪ್ಪನವರ ಜ್ಯೇಷ್ಠಪುತ್ರ ಬಿ. ಎ. ಪರೀಕ್ಷೆಗೆ ಹೋಗಿರುವ ಮ|| ಡಿ. ಎನ್. ಪ್ರಸನ್ನಯ್ಯನವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ಈ ಮೇ ತಾ|| 9 ರಲ್ಲಿ ಮೈಸೂರಿನ ವೇ|| ಸುತ್ತೂರು ಶಾಂತವೀರಶಾಸ್ತ್ರಿಗಳ, ಟಿ. ನರಸೀಪುರದ ವೇ|| ಹುಚ್ಚಪ್ಪಶಾಸ್ತ್ರಿಗಳ ಮತ್ತು ಇವರಮಕ್ಕಳ ಪೌರೋಹಿತ್ಯದಿಂದ ವಿಧ್ಯುಕ್ತವಾಗಿಯೂ ಸಾಂಗವಾಗಿಯೂ ನೆರವೇರಿಸಿದರು. ಧಾರಾಮುಹೂರ್ತಾನಂತರ ಪಂಚಾಚಾರ್ಯರ ಸಂಭಾವನೆಗಾಗಿ 3 ರೂ.ಗಳೂ ಕೈ|| ಯಜಮಾನ್ ವೀರಸಂಗಪ್ಪನವರ ಸಂಭಾವನೆಗಾಗಿ 2 ರೂ. ಗಳೂ ಮೈಸೂರಿನಿಂದ ಬಂದಿದ್ದ ಮ|| ವೈ. ವಿರೂಪಾಕ್ಷಯ್ಯನವರ ವಶಕ್ಕೂ ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿನ ಸಂಭಾವನೆಗಾಗಿ 10 ರೂ. ಗಳು ಬೆಂಗಳೂರಿನಿಂದ ದಯಮಾಡಿಸಿದ್ದ ಫಂಡಿನ ಸೆಕ್ರಟರಿ ಮ|| ಜಿ. ಪರಮಶಿವಯ್ಯನವರ ವಶಕ್ಕೂ ಮುದುಕತೊರೆ ವೀರಶೈವ ಮತಸಂವರ್ಧಿನಿ ಸಭೆಯ ಸಂಭಾವನೆಗಾಗಿ 5 ರೂ. ಗಳು ಸಭೆಯ ಸೆಕ್ರೆಟರಿಯವರ ವಶಕ್ಕೂ ಕೊಡಲ್ಪಟ್ಟು ಸಭಿಕರಿಗೆಲ್ಲಾ ಫಲತಾಂಬೂಲವು ಹಂಚಲ್ಪಟ್ಟಿತು. ಆ ದಿವಸ ಸಾಯಂಕಾಲ ವಧೂವರರ ಆರತ್ಯಕ್ಷತೆಗೆ ಡಿ|| ಕಲೆಕ್ಟರು, ತಾಸಿಲ್ದಾರರು, ಡಿ|| ಫಾರೆಸ್ಟಾಫೀಸರು, ಇಂಜನಿಯರು ಮೊದಲಾಗಿ ಸರ್ಕಾರಿಯಧಿಕಾರಿಗಳೂ, ವಕೀಲರುಗಳೂ, ಯೂನಿಯನ್ ಮೆಂಬರುಗಳೂ, ಸೆಟ್ಟಿವರ್ತಕರುಗಳು ಮೊದಲಾಗಿ ದೊಡ್ಡಮನುಷ್ಯರುಗಳೂ ಆಹ್ವಾನಿಸಲ್ಪಟ್ಟು ಮ|| ಜಿ. ಪಿ. ಮಲ್ಲಪ್ಪನವರ ಕುಮಾರ 10 ವರ್ಷ ವಯಸ್ಸಿನ ಚಿ|| ನಟರಾಜನ ಗಂಧರ್ವಗಾನಸದೃಶವಾದ ಮತ್ತು ಸಶಾಸ್ತ್ರೀಯವಾದ ಹಾಡುಗಾರಿಕೆಯಿಂದಲೂ ಗಂಧ ಪುಷ್ಪ ಫಲ ತಾಂಬೂಲವಿನಿಯೋಗದಿಂದಲೂ ಸತ್ಕರಿಸಲ್ಪಟ್ಟರು. ಚಿ|| ನಟರಾಜನ ಮನೋಹರವಾದ ರೂಪುಲಾವಣ್ಯಕ್ಕೂ ಕೋಕಿಲೆಯ ಸ್ವರವನ್ನು ಅಣಕಿಸುವ ಮೃದುಮಧುರವಾದ ಕಂಠಸ್ವರಕ್ಕೂ ಪೂರ್ವಜನ್ಮ ಸಂಸ್ಕಾರ ವಿಶೇಷದಿಂದ ಲಭ್ಯವಾಗಿರುವ ಅದ್ಭುತಗಾಯನಶಕ್ತಿಗೂ ಸಭಿಕರೆಲ್ಲರೂ ಮೆಚ್ಚಿ ಆನಂದಪರವಶರಾದುದರಲ್ಲದೆ ತಮ್ಮ ಅತುಳೈಶ್ವರ್ಯಕ್ಕೆ ಮಿಗಿಲಾದ ಮತ್ತು ಕುಲದೇವತೆಯಾದ ಶ್ರೀ ಭ್ರಮರಾಂಭೆಯ ವರಪ್ರಸಾದದಿಂದ ಲಭ್ಯವಾದ ಪುತ್ರರತ್ನವನ್ನು ಪಡೆದಿರುವ ಶ್ರೀಮಂತ ಜಿ.ಪಿ. ಮಲ್ಲಪ್ಪನವರ ಜನ್ಮಸಾರ್ಥಕ್ಯವನ್ನು ಕೊಂಡಾಡಿ ಚಿ|| ನಟರಾಜನಿಗೆ ದೀರ್ಘಾಯುರಾರೋಗ್ಯವನ್ನೂ ಅಪಾರವಾದ ಗಾಯನ ಪಾಂಡಿತ್ಯವನ್ನೂ ಜಗದಂಬೆಯು ಆಶೀರ್ವದಿಸಲೆಂದು ಕೋರಿದರು. ಈ ಮಹೋತ್ಸವಕ್ಕೆ ಕೊಲಾರ, ಬೆಂಗಳೂರು, ಮೈಸೂರು, ಕಾರ್ಕಾರ್ಹಳ್ಳಿ, ದೆಂಕಣಿಕೋಟೆ, ಅಗರ, ಮಾಂಬಳ್ಳಿ, ಮುಡಿಗುಂಡ, ಮಧುವಿನಹಳ್ಳಿ ಮೊದಲಾದ ಸ್ಥಳಗಳಿಂದ ಬಂಧುಮಿತ್ರರುಗಳು 300-400 ಜನರಿಗೆ ಮೇಲ್ಪಟ್ಟು ಬಂದಿದ್ದರು. ಅವರುಗಳೆಲ್ಲರನ್ನೂ ಮ|| ಜಿ. ಪಿ. ಮಲ್ಲಪ್ಪನವರು ಅತ್ಯಂತ ವಿನಯದಿಂದಲೂ ಪ್ರೀತಿವಿಶ್ವಾಸದಿಂದಲೂ ಸತ್ಕರಿಸಿದುದು ಶ್ಲಾಘ್ಯವೂ ಅನುಕರಣೀಯವೂ ಆಗಿದ್ದಿತು. ನೂತನ ದಂಪತಿಗಳಿಗೆ ಸಕಲ ಸನ್ಮಂಗಳವಾಗಲೆಂದು ಹರಸುವ,

ಓರ್ವ ಉತ್ಸವಭಾಗಿ.

ಈ ಮೇ ತಿಂಗಳು 7 ನೇ ತಾರೀಖು ಬುಧವಾರ ಪ್ರಾತಃಕಾಲದಲ್ಲಿ ಹಾಸನ ಡಿ|| ಆಲೂರಲ್ಲಿ ಶ್ರೀರಂಗಪಟ್ಟಣದ ಒಂದನೇ ಮುನಸೀಫ್ ಮೆ|| ಹೆಚ್. ಕೆ. ವೀರಬಸವಯ್ಯನವರ ಮಕ್ಕಳು ಹೆಚ್. ಕೆ. ರಾಜಶೇಖರಯ್ಯನವರಿಗೂ ಮತ್ತು ಇವರ ಅಣ್ಣಂದಿರು ಸಾಹುಕಾರ್ ಕೇಣಿ ಮೆ|| ಮಹದೇವಪ್ಪನವರ ಮಕ್ಕಳು ಹೆಚ್. ಕೆ. ಗಂಗಾಧರಯ್ಯನವರಿಗೂ ನಡೆದ ವಿವಾಹಗಳು ಈ ಪ್ರಾಂತದ ಅನೇಕ ಜನಾಂಗದವರಿಗೆ ಮಾರ್ಗದರ್ಶಕವಾಗಿದ್ದುವು. ಹಿಂದುಳಿದ ಈ ಮಲೆನಾಡುಪ್ರಾಂತ್ಯದಲ್ಲಿ ಸುಧಾರಿಸಿರುವ ಮನೆತನಗಳು ಬಹಳ ಕಡಿಮೆಯಾಗಿರುತ್ತವೆ. ಮತ್ತು ಸುಧಾರಿಸಿದವರು ದುಂದು ವೆಚ್ಚಗಳಿಗೆ ಮನಸೋತು ದುಡ್ಡು ವ್ಯಯಮಾಡದೆ ವಿವಾಹಕಾರ್ಯಗಳನ್ನು ವಿಧ್ಯುಕ್ತವಾಗಿ ಮಾಡಿಸುವುದು ಬಹಳ ವಿರಳ. ಈ ಮೇಲ್ಕಂಡ ಲಗ್ನಗಳು ಇಂಥಾ ನ್ಯೂನತೆಗಳಿಲ್ಲದೆ ತಿಪಟೂರು ವೇ|| ವಿರುಪಾಕ್ಷಶಾಸ್ತ್ರಿಗಳವರ ಪೌರೋಹಿತ್ಯದಲ್ಲಿ ವಿಧ್ಯುಕ್ತವಾಗಿ ನಡೆಸಲ್ಪಟ್ಟವು. ಬೆಂಗಳೂರು, ತುಮಕೂರು, ತಿಪಟೂರು, ಹಾಸನ, ಸಕಲೇಶಪುರ, ಹೊಳೆನರಸೀಪುರ, ಮೈಸೂರು ಮುಂತಾದ ಸ್ಥಳಗಳಿಂದ ಬಂದಿದ್ದ ಆಪ್ತೇಷ್ಟಬಂಧುಗಳಿಂದಲೂ, ಹಾಸನ ಮತ್ತು ಸ್ಥಳೀಯ ಅನೇಕ ಅಧಿಕಾರಿಗಳು, ಲಾಯರುಗಳು, ಮತ್ತು ವರ್ತಕ ಮಹಾಶಯರು ಮುಂತಾದವರಿಂದಲೂ ಸಭೆಯು ಅಲಂಕೃತವಾಗಿತ್ತು. ಪಾಣಿಗ್ರಹಣಮಹೋತ್ಸವಗಳಾದ ಕೂಡಲೆ ಸ್ಥಳ ಪರಸ್ಥಳಗಳಿಂದ ವಧೂವರರಿಗೆ ಆಶೀರ್ವಾದಪೂರ್ವಕವಾಗಿ ಬಂದಿದ್ದ ಅನೇಕ ಬಹುಮಾನಗಳೂ ಮುಯ್ಯಿಗಳೂ ವೇದಘೋಷದಿಂದ ಓದಿಸಲ್ಪಟ್ಟವು. ಬೆಂಗಳೂರಲ್ಲಿ ಸ್ಥಾಪಿತವಾಗಿರುವ ವಿದ್ಯಾವರ್ಧಕ ಫಂಡಿಗೆ ವರರುಗಳ ಪರವಾಗಿ 25 ರೂ. ಗಳೂ ವಧುಗಳ ಪರವಾಗಿ 8 ರೂ. ಗಳೂ ಮತ್ತು ತಿಪಟೂರಲ್ಲಿ ಸ್ಥಾಪಿತವಾಗಿರುವ ಶ್ರೀ ವೀರಶೈವಾನಂದಾಶ್ರಮದಲ್ಲಿ ಓದುವ ಈ ಪ್ರಾಂತದ ವಿದ್ಯಾರ್ಥಿಗಳ ಪುರೋಭಿವೃದ್ಧಿಗಾಗಿ ವರರುಗಳ ಪರವಾಗಿ 5 ರೂ. ಗಳು ವಧುಗಳ ಪರವಾಗಿ 3 ರೂ. ಗಳು ತೆಗೆಯಲ್ಪಟ್ಟವಲ್ಲದೆ ವೀರಶೈವ ಮತಸುಧಾರಕರಾಗಿದ್ದು ಕೀರ್ತಿಶೇಷರಾದ ಕೈ|| ವೀರಸಂಗಪ್ಪನವರ ಜ್ಞಾಪನಾರ್ಥವಾಗಿ ವಧೂವರರ ಕಡೆಯಿಂದ $3\frac{1}{2}$ ರೂ. ಗಳು ತೆಗೆಯಿಸಲ್ಪಟ್ಟಿತು. ವಿದ್ಯಾವರ್ಧಕ ಫಂಡಿಗೋಸ್ಕರ ತೆಗೆಯಲ್ಪಟ್ಟ ಮೊಬಲಗನ್ನು ಸಭೆಯಲ್ಲಿ ಹಾಜರಿದ್ದ ಬೆಂಗಳೂರಿನಲ್ಲಿ ಆನರರಿ ಮ್ಯಾಜಿಸ್ಟ್ರೇಟು ಮತ್ತು ಕಂಟ್ರಾಕ್ಟರು ಆಗಿರುವ ಮೆ|| ಹಿ. ರಾಚಪ್ಪನವರವಶಕ್ಕೂ, ಶ್ರೀ ಜಯದೇವ ವೀರಶೈವಾನಂದಾಶ್ರಮದ ಮೊಬಲಗನ್ನು ತಿಪಟೂರಲ್ಲಿರುವ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾದ ಮೆ|| ಡಿ.ಎಸ್. ಮಲ್ಲಪ್ಪನವರವಶಕ್ಕೂ, ಕೈ|| ಕೈ|| ವೀರಸಂಗಪ್ಪನವರ ಸ್ಮರಣಾರ್ಥವಾದ ಮೊಬಲಗನ್ನು ತುಮಕೂರಲ್ಲಿ ಮೈಸೂರು ಬ್ಯಾಂಕ್ ಮೇನೇಜರಾಗಿರುವ ಮೆ|| ಎ. ಎಸ್. ಮಲ್ಲಪ್ಪನವರವಶಕ್ಕೂ ಕೊಡಲ್ಪಟ್ಟವು. ಮುಹೂರ್ತಗಳು ನಡೆದನಂತರ ಸ್ಥಳ ಪರಸ್ಥಳಗಳಿಂದ ಬಂದಿದ್ದ ಎಲ್ಲಾ ವೀರಶೈವ ಮಹಾಜನಗಳೂ, ಮತ್ತು ಹಾಸನದಿಂದ ಬಂದಿದ್ದ ಡಿಸ್ಟ್ರಿಕ್ಟ್ ಮತ್ತು ಸ್ಥಳೀಯ ಆಫೀಸರು ಮತ್ತು ಲಾಯರುಗಳು [illegible] ಪರಮತೀಯರುಗಳೂ ದಿವ್ಯವಾದ [illegible] ಸತ್ಕರಿಸಲ್ಪಟ್ಟರು. [illegible]

ಪರವಾಗಿ ಮುಂದಾಳುಗಳಾಗಿನಿಂತು ಎಲ್ಲಾ ಕಾರ್ಯಗಳನ್ನೂ ಸಮರ್ಪಕವಾಗಿ ನಡೆಸಿದ ಮ॥ ರಾ॥ ಆಲೂರಲ್ಲಿರುವ ಕೈಸ್‌ಮಿಲು ಪ್ರೊಪ್ರೈಟರ್ ಮತ್ತು ರೆಪ್ರೆಜೆಂಟೇಟಿವ್ ಅಸೆಂಬ್ಲಿ ಮೆಂಬರಾದ ಮೆ॥ ಎ. ಎಸ್. ನಂಜುಂಡಪ್ಪನವರ ಮತ್ತು ಹಾಸನದ ಸಾಹುಕಾರ್ ಮಹದೇವಪ್ಪನವರ ವಿಚಕ್ಷಣೆಯೂ ಮುತವರ್ಜಿಯೂ ಬಹಳ ಸ್ತೋತ್ರಾರ್ಹಗಳಾಗಿದ್ದುವು.

ಪ್ರತ್ಯಕ್ಷದರ್ಶಿ.

ಮಂಡ್ಯದ ತಾ॥ ಮದ್ದೂರಿನಲ್ಲಿ ರಥೋತ್ಸವ ಮತ್ತು ಜಾತ್ರೆ.

ಪುರಾತನ ಕಾಲದಿಂದಲೂ ಬೇಸಿಗೆ ಕಾಲದಲ್ಲಿ ನರಸಿಂಹಸ್ವಾಮಿ ರಥೋತ್ಸವವೂ ಮದ್ದೂರಮ್ಮನೆಂಬ ಗ್ರಾಮದೇವತೆಯ ಜಾತ್ರೆಯೂ ನಡೆಯುವುದು ವಾಡಿಕೆ. 8-10 ವರುಷಗಳ ಹಿಂದೆ ರಥೋತ್ಸವವೂ ಜಾತ್ರೆಯೂ 15-20 ದಿವಸಗಳು ಹಿಂದು ಮುಂದು ನಡೆಯುತ್ತಲಿದ್ದುವು. ಆಗ್ಗೆ ಪ್ರತಿಯೊಂದಕ್ಕೂ 100-200 ರ ಮೇಲೇ ಪರಸ್ಥಳದ ಜನರು ಮಾತ್ರ ಸೇರುತ್ತಲಿದ್ದರು. ಸಂಪದಭಿವೃದ್ಧಿ ಕಾರ್ಯಗಳನ್ನು ಕೈಕೊಂಡು ನಮ್ಮ ಘನಸರ್ಕಾರದವರು ಪ್ರಜೆಗಳನ್ನು ಏಳಿಗೆಗೆ ತರಬೇಕೆಂದು ಪ್ರಯತ್ನಪಟ್ಟಮೇಲೆ ಸರ್ಕಾರ ಆಫೀಸರ ಅನುಮತಿಯ ಮೇರೆ ಮದ್ದೂರಿನಲ್ಲಿ ಒಂದು ದನಗಳ ಪ್ರದರ್ಶನವನ್ನು ಪ್ರತಿ ವರುಷದಲ್ಲೂ ನಡಿಸಬೇಕೆಂದೂ ಅದಕ್ಕಾಗಿ ಜಾತ್ರೆಯನ್ನೂ ರಥೋತ್ಸವವನ್ನೂ ಒಂದೇ ಕಾಲದಲ್ಲಿ ನಡಿಸಬೇಕೆಂದೂ ಗೊತ್ತಾಯಿತು. ಅದರಂತೆ ದನಗಳ ಪರಿಷೆಯು ಪ್ರತಿ ವರುಷವೂ ಹೆಚ್ಚುತ್ತಾ ಬಂದು ಸಾವಿರಾರು ಜತೆ ಎತ್ತುಗಳು ಸೇರುತ್ತ ಬಂದುವಲ್ಲದೆ ಅದಕ್ಕೆ ತಕ್ಕಂತೆ ಜನರೂ ಸೇರುತ್ತಾ ಬಂದರು. ಈ ವರುಷ ನೀರಿನ ಅಭಾವದಿಂದಲೂ ಮಳವಳ್ಳಿ ತಾ॥ ಕೆಲವು ಗ್ರಾಮಗಳಲ್ಲಿ ಕಾಲರಾ ವ್ಯಾಧಿಯು ಇದ್ದುದರಿಂದಲೂ ದನಗಳ ಪ್ರದರ್ಶನವನ್ನು ಮದ್ದೂರಿನಲ್ಲಿ ನಿಲ್ಲಿಸಬೇಕೆಂದು ತಾ॥ ಬೋರ್ಡು ಮತ್ತು ಮ್ಯುನಿಸಿಪಾಲಿಟಿಯ ಮಿಟಿಂಗ್‌ಗಳಲ್ಲಿ ತೀರ್ಮಾನವಾಯಿತು. ಡೆಪ್ಯುಟಿ ಕಮಿಷನರ್ ಸಾಹೇಬರೂ ಇದಕ್ಕೆ ಸಮ್ಮತಿಕೊಟ್ಟರು. ದನಗಳ ಪರಿಷೆ ಇಲ್ಲವೆಂತ ಮೊದಲನೆ ದಿವಸ ಅನೇಕರು ಭಾವಿಸಿದ್ದರು; ಅದರಂತೆ ಆ ದಿವಸ ದನಗಳೂ ಸೇರಲಿಲ್ಲ. ಬಂದಿದ್ದ ಹತ್ತು ಆರು ಜತೆ ದನಗಳನ್ನು ಪೋಲೀಸಿನವರು ವಾಪಸು ಕಳುಹಿಸಿದರು. ಎರಡನೆ ದಿವಸ ಬೇಕಾಗಿಯೋ ಪೋಲೀಸ್ ಕಾವಲು ತೆಗೆದುಹಾಕಲ್ಪಟ್ಟಿತು. 2 ಮತ್ತು 3 ನೇ ದಿನಗಳಲ್ಲಿ ದನಗಳು ಹೆಚ್ಚುಹೆಚ್ಚಾಗಿ ಸೇರಿದವು. ಯಾರ ಹೇಳಿಕೆಯ ಮೇಲೋ ಪೋಲೀಸಿನವರು ದನಗಳು ಸೇರಲು ಅವಕಾಶ ಕೊಟ್ಟುಬಿಟ್ಟರು. ದನಗಳ ಹಿಂದೆ ಜನರೂ ಸೇರಿದರು. ಈ ರೀತಿಯಾಗಿ ದನಗಳು ಸೇರಿಸಕೂಡದೆಂದು ಯಾರೂ ನಿರ್ಬಂಧಪಡಿಸದಂತೆ ಕಾಣುವುದಿಲ್ಲ. ಜಾತ್ರೆಯಲ್ಲಿ ಕಾಫಿ ದೋಸೆ ಮತ್ತು ಮಿಠಾಯಿ ಅಂಗಡಿಗಳ ಮಾರಾಟವು ಹೇರಳವಾಗಿ ನಡೆಯಿತು. ಅಂಟು ರೋಗದ ಊರಿನವರು ಬಂದು ರೋಗದ ಬೀಜವನ್ನು ಹೆಚ್ಚಾಗಿ ಮದ್ದೂರಿಗೂ ಸುತ್ತುಮುತ್ತಿನ ಗ್ರಾಮಗಳಿಗೂ ಹರಡಿದರು. ಜಾತ್ರೆಯೂ ರಥೋತ್ಸವವೂ ಮುಗಿದ 1-2 ದಿನಗಳಲ್ಲಿಯೇ ಅನೇಕರಿಗೆ ಕಾಲರಾ ರೋಗವು ಕಾಣಿಸಿಕೊಂಡಿತು. ಕೆಲವರು ಸತ್ತರು ಶಾಸ್ತ್ರೋಕ್ತ ಔಷಧೋಪಚಾರಗಳನ್ನು ಮಾಡಿಕೊಂಡವರಲ್ಲಿ ಅನೇಕರು ಬದುಕಿಕೊಂಡರು. ಅದರೆ ಇದು ಎಲ್ಲರಿಗೂ ಎಲ್ಲಿ ಸಾಧ್ಯ ? ಅನ್ನ ನೀರು ಇಲ್ಲದ ಕಾಲದಲ್ಲಿ ಈ ಸಾಂಕ್ರಾಮಿಕ ರೋಗವು ಪ್ರಾಪ್ತವಾದರೆ ವಿದ್ಯಾವಿಹೀನರಾದ ಬಡ ಪ್ರಜೆಗಳ ಗತಿಯೇನು ? ಈ ರೋಗವು ಇನ್ನೂ ನಿಂತಿಲ್ಲ. ಈಸಾರಿ ದನಗಳನ್ನು ಸೇರಿಸಲು ಅವಕಾಶಕೊಟ್ಟುದರಿಂದ ಮದ್ದೂರಿನ ಒಬ್ಬ ದೊಡ್ಡಮನುಷ್ಯರಿಗೆ ನೂರಾರು ಗಾಡಿ ಗೊಬ್ಬರ ದೊರಕಿದ ಒಂದು ಪ್ರಯೋಜನವಾದುದರ ವಿನಹ ಅನೇಕ ಪ್ರಜೆಗಳಿಗೆ ಒದಗಿದ ವಿಪತ್ತನ್ನೂ ಗಾಬರಿಯನ್ನೂ ಹೇಳತೀರದ್ದಾಗಿದೆ. ಇದಕ್ಕೆಲ್ಲಾ ಯಾರು ಜವಾಬ್‌ದಾರರು ? ಈ ಸಮಯದಲ್ಲಿ ತಾಲ್ಲೂಕು ಬೋರ್ಡಿನವರ ಮತ್ತು ಮ್ಯುನಿಸಿಪಾಲಿಟಿಯವರ ಅಭಿಪ್ರಾಯವನ್ನು ಅಮಲ್ದಾರ್‌ರವರು ಎಷ್ಟರಮಟ್ಟಿಗೆ ಗೌರವಿಸಿದರು ? ದನಗಳನ್ನು ಸೇರಿಸಕೂಡದೆಂಬ ಡೆಪ್ಯುಟಿ ಕಮಿಷನರ್ ಸಾಹೇಬರ ಆರ್ಡರಿಗೆ ಎಷ್ಟರಮಟ್ಟಿಗೆ ಅಮಲ್ದಾರ್‌ರವರು ವಿಧೇಯರಾಗಿ ನಡೆದುಕೊಂಡರು? ಪ್ರಜೆಗಳ ಪ್ರಾಣಹಾನಿ ಮತ್ತು ತೊಂದರೆಗಳಿಗೆ ಈ ಮಂಡ್ಯದ ತಾಲ್ಲೂಕಿನಲ್ಲಿ ಯಾವ ಅಫೀಸರು ಜವಾಬ್‌ದಾರರು? ಎಂಬ ಸಂಗತಿಯನ್ನು ಘನಸರ್ಕಾರದವರು ವಿಚಾರಿಸಿಕೊಳ್ಳಬೇಕಾಗಿರುತ್ತೆ. ಪ್ರತ್ಯಕ್ಷದರ್ಶಿ.

ಮಂಜರಾಬಾದ್ ತಾಲ್ಲೂಕು ಯಸಳೂರಿನ ಪ್ರೈಮರಿ ಪಾಠಶಾಲೆಯ ಪ್ರವೇಶೋತ್ಸವವು.

ಕಳೆದ ಏಪ್ರಿಲ್ ಮಾಹೆ ತಾ॥ 27ನೇ ಭಾನುವಾರ ಯಸಳೂರಿನ ಪ್ರೈಮರಿ ಪಾಠಶಾಲೆಯ ಪ್ರವೇಶೋತ್ಸವವು ಬಹಳ ವಿಜೃಂಭಣೆಯಿಂದ ಜರುಗಿತು. ಇಲ್ಲಿನ ವೀರಶೈವ ಜನಾಂಗದ ಪ್ರಮುಖರೂ, ಸ್ಥಳೀಯ ಸಾಹುಕಾರರೂ, ತಾಲ್ಲೂಕ್ ಬೋರ್ಡು ಮೆಂಬರೂ ಆಗಿರುವ ಮ॥ ರಾ॥ ಕೊಟಳ್ಳಿ ಮಲ್ಲಪ್ಪಶೆಟ್ಟರವರು ಈ ಪ್ರೈಮರಿ ಪಾಠಶಾಲೆಯನ್ನು ಬಾಲಕರ ಪ್ರಾಥಮಿಕ ವಿದ್ಯಾಭ್ಯಾಸದ ಉತ್ತೇಜನಕ್ಕಾಗಿ ಧರ್ಮಾರ್ಥವಾಗಿ ಕಟ್ಟಿಸಿ ಸರ್ಕಾರಕ್ಕೆ ಒಪ್ಪಿಸಿರುತ್ತಾರೆ. ಈ ಧರ್ಮಕರ್ತರ ಆಹ್ವಾನವನ್ನು ಗೌರವಿಸಿ, ಮೊದಲನೆಯ ಕೌನ್ಸಿಲರಾಗಿರುವ ಮುಷೀರ್-ಉಲ್-ಮುಲ್ಕ್ ಹಂಜಾಹುಸೇನ್ ಸಾಹೇಬರವರು ಈ ಮಹೋತ್ಸವದಲ್ಲಿ ಅಗ್ರಾಸನವನ್ನು ವಹಿಸಲು ಸಮ್ಮತಿಸಿದ್ದರು. ಮಧ್ಯಾಹ್ನ ಸುಮಾರು 1 ಗಂಟೆಗೆ ಕೌನ್ಸಿಲರವರು ಸಕಲೇಶಪುರದ ಮಾರ್ಗವಾಗಿ ಮೋಟಾರಿನಲ್ಲಿ ದಯಮಾಡಿಸಿದರು. ಹಾಸನ ಡಿಸ್ಟ್ರಿಕ್ಟಿನ ಮೆಡಿಕಲಾಫೀಸರವರೂ, ಫಾರೆಸ್ಟಾಫೀಸರವರೂ, ಇಂಜನೀಯರ್ರವರೂ, ಪೋಲೀಸ್ ಸೂಪರಿಂಟೆಂಡೆಂಟರವರೂ, ಸಕಲೇಶಪುರದ ಸಬ್‌ಡಿವಿಜನ್ ಆಫೀಸರವರೂ ತಾ॥ ಬೋ॥ ವೈಸ್‌ಪ್ರೆಸಿಡೆಂಟರಾದ ಮ॥ ರಾ॥ ಬೆಳ್ಳೂರು ಪುಟ್ಟೇಗೌಡರವರೂ, ಇವರೇ ಮೊದಲಾದ ಡಿಸ್ಟ್ರಿಕ್ಟ್ ಮೊಹ್ತೇಸರುಗಳೂ ಕೌನ್ಸಿಲರ್ರವರನ್ನು ಹಿಂಬಾಲಿಸಿದ್ದರು. ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರೂ, ಸರ್ಕಲ್ ಇನ್ಸ್‌ಪೆಕ್ಟರವರೂ, ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರವರೂ ಸಹ ದಯಮಾಡಿಸಿದ್ದರು. ಅಲ್ಲದೆ ಆಹ್ವಾನಗಳನ್ನಾಂಗೀಕರಿಸಿದ್ದ ಸ್ಥಳೀಯ ಪ್ಲಾಂಟರುಗಳೂ, ಇತರ ದೊಡ್ಡ ಮನುಷ್ಯರುಗಳೂ ದಯಮಾಡಿಸಿದ್ದರು. ಪುರಪ್ರವೇಶಮಾಡುತ್ತಲೇ ಅಲಂಕೃತವಾಗಿದ್ದ ಮಂಟಪದ ಸಮೀಪದಲ್ಲಿ ಪುರಪ್ರಮುಖರು ಕೌನ್ಸಿಲರವರ ಮತ್ತು ಅವರ ಪರಿವಾರದವರ ಸುಸ್ವಾಗತವನ್ನು ಬಯಸಿ ಫಲಪುಷ್ಪಗಳನ್ನೊಪ್ಪಿಸಿ ವಾದ್ಯಸಮೇತವಾಗಿ ಅವರುಗಳನ್ನು ಪಾಠಶಾಲೆಗೆ ಕರೆದುಕೊಂಡು ಬಂದರು. ಪಾಠಶಾಲೆಯ ಮುಂಭಾಗದಲ್ಲಿ ತಳಿರತೋರಣಗಳಿಂದಲಂಕೃತವಾಗಿಯೂ, ವಿಶಾಲವಾಗಿಯೂ, ನೇತ್ರಾನಂದಕರವಾಗಿಯೂ ನಿರ್ಮಿಸಲ್ಪಟ್ಟಿದ್ದ ಮಂಟಪಕ್ಕೆ ಈ ದಿವ್ಯಕೂಟವು ಚಿತ್ತೈಸುತ್ತಲೇ ಸಾಲಾಗಿ ನಿಂತಿದ್ದ ಬಾಲಕಬಾಲಕಿಯರು ಇಂಪಾದ ಗಾನಗಳಿಂದ ಸ್ವಾಗತವನ್ನು ಬಯಸಿದರು. ತರುವಾಯ ಕೌನ್ಸಿಲರವರು ಅಗ್ರಾಸನವನ್ನಲಂಕರಿಸಿದರು. ಇವರ ಪಾರ್ಶ್ವದಲ್ಲಿ ವಿದ್ಯಾಭ್ಯಾಸ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ಆಸನವನ್ನಲಂಕರಿಸಿದರು. ಉಭಯ ಪಾರ್ಶ್ವಗಳಲ್ಲಿಯೂ ಅಧಿಕಾರಿಗಳೂ, ಮಹಾಜನರೂ ಕುಳಿತಿದ್ದರು. ಮಂಟಪವು ಕಿಕ್ಕಿರಿದು ತುಂಬಿತುಳುಕುತ್ತಲಿತ್ತು. ನೋಟವು ಆಹ್ಲಾದಕರವಾಗಿತ್ತು. ದೇವರ ಪ್ರಾರ್ಥನೆಯೂ, ಶ್ರೇಯಃ ಪ್ರಾರ್ಥನೆಯೂ ಆದನಂತರ ಧರ್ಮಕರ್ತರು ತಮ್ಮ ಸದುದ್ದೇಶವನ್ನು ವ್ಯಕ್ತಗೊಳಿಸಿ, ಪಾಠಶಾಲೆಯ ಪ್ರವೇಶೋತ್ಸವವನ್ನು ಜರುಗಿಸಬೇಕಾಗಿ ಪ್ರಾರ್ಥಿಸಿದರು. ಕೌನ್ಸಿಲರವರು ಸಮ್ಮತಿಸಿ, ಬೆಳ್ಳಿಯ ಬೀಗದಿಂದ ಬಂಧಿಸಿದ್ದ ಶಾಲಾದ್ವಾರವನ್ನು ಬೆಳ್ಳಿಯ ಬೀಗದಕೈಮೂಲಕ ಸ್ವಹಸ್ತದಿಂದ ತೆಗೆಯಲು ಸರ್ವರೂ ತಮ್ಮ ಸಂತೋಷವನ್ನು ಕರತಾಡನದ ಮೂಲಕ ಸೂಚಿಸಿದರು. ತರುವಾಯ ದಿವ್ಯ ಚಿತ್ರಪಟಗಳಿಂದಲಂಕೃತವಾಗಿದ್ದ ಪಾಠಶಾಲೆಯನ್ನೂ, ಇದಕ್ಕೆ ಸೇರಿದ ಶ್ರೀ ಕೃಷ್ಣರಾಜೇಂದ್ರ ವಾಚನ ಶಾಲೆಯನ್ನೂ ಪರಾಂಬರಿಸಿದನಂತರ ತಮ್ಮ ಉಚಿತಾಸನವನ್ನಲಂಕರಿಸುತ್ತಲೇ ಸಭಾಕಾರ್ಯಗಳು ಕ್ರಮವಾಗಿ ಜರುಗಿದುವು. ಮ॥ ಹದಾಲ್ ಗುರುಶಾಂತಯ್ಯನವರು ಧರ್ಮಕರ್ತರ ಗುಣಕಥನವನ್ನು ಮಾಡಿ ಅವರನ್ನು ಪುರನಿವಾಸಿಗಳ ಪರವಾಗಿ ವಂದಿಸಿದರು. ಅನಂತರ ಕೌನ್ಸಿಲರವರು ತಮ್ಮ ಭಾಷಣವನ್ನು ಮಾಡುವಾಗ್ಗೆ ಮಲೆನಾಡಿನ ಪ್ರಜೆಗಳಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ಆರೋಗ್ಯ ಮತ್ತು ವಿದ್ಯಾಭ್ಯಾಸ ಇವುಗಳಿಗೆ ಅವರು ತಪ್ಪದೆ ಕೊಡುತ್ತಲಿರುವ ಗಮನವನ್ನು ಸೂಚಿಸಿದರು. ಅಲ್ಲದೆ ಸರ್ವ ವಸತಿಗಳಿಂದ ಅನುಕೂಲವಾಗಿರುವ ಈ ಗ್ರಾಮಕ್ಕೆ ಧರ್ಮಕರ್ತರ ಪ್ರಾರ್ಥನೆಯಂತೆ, ಮಿಡಲ್ ಸ್ಕೂಲನ್ನು, ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರಲ್ಲಿ ಪರ್ಯಾಲೋಚಿಸಿ, ಅತ್ಯವಶ್ಯಕವಾಗಿ ಕೊಡುವುವೆಂದು ವಾಗ್ದಾನಮಾಡಿದರು. ಅನಂತರ ಧರ್ಮಕರ್ತರ ಔದಾರ್ಯವನ್ನು ಶ್ಲಾಘಿಸಿ ತಮಗುಂಟಾದ ಆನಂದವನ್ನು ವ್ಯಕ್ತಗೊಳಿಸಿದರು. ತರುವಾಯ ವಿ॥ ಇ॥ ಜ॥ ಮ॥ ಸಿ. ಎಸ್. ಬಾಲಸುಂದರಂ ಅಯ್ಯರ್ರವರು, ಈಗಿರುವ ಪಾಠಶಾಲೆಯನ್ನು ಬಡಾವಣೆಮಾಡಿ ಮಿಡಲ್ ಸ್ಕೂಲನ್ನು ದಯಪಾಲಿಸುವುವೆಂದು ಅಪ್ಪಣೆಕೊಡಿಸಿದರು. ಅನಂತರ ಡಿ॥ ಬೋ॥ ಪ್ರೆಸಿಡೆಂಟರಾದ ಮ॥ ಎನ್. ಎಸ್. ನಂಜುಂಡಯ್ಯನವರು, ಈ ಗ್ರಾಮಕ್ಕೆ ಮಿಡಲ್ ಸ್ಕೂಲು ಅತ್ಯಾವಶ್ಯಕವಾಗಿ ಆಗಬೇಕೆಂದು ತಮ್ಮ ವಾಗ್ಝರಿಯಿಂದ ಬಹುಸೊಗಸಾಗಿ ಮಾತನಾಡಿದರು. ಅನಂತರ ಚಂಗಡಹಳ್ಳಿ ಮಠದ ಶ್ರೀಗಳವರು ವೈದೀಕ ಮತ್ತು ಲೌಕೀಕ ವಿದ್ಯಾ ಪ್ರಸಾರದ ವಿಚಾರವಾಗಿ ದೀರ್ಘವಾಗಿ ಭಾಷಣಮಾಡಿದರು. ತರುವಾಯ ಬಾಲಕಿಯರ ಸಂಗೀತವು ನಡೆಯುತ್ತಿರಲು, ಸಭಾಧ್ಯಕ್ಷರನ್ನೂ, ಸಭಿಕರನ್ನೂ, ಹಾರ, ತುರಾಯಿ, ಫಲ ಗಂಧ ತಾಂಬೂಲಗಳಿಂದ ಸತ್ಕರಿಸಿದರು. ಧರ್ಮಕರ್ತರ ಪರವಾಗಿ ಸಭಾಧ್ಯಕ್ಷರನ್ನೂ, ಮಹಾಜನರನ್ನೂ, ಮ॥ ವೈ॥ ಧರ್ಮಪ್ಪನವರು ವಂದಿಸಿ ಶ್ರೇಯಃಪ್ರಾರ್ಥನೆಯನ್ನು ಮಾಡಿದರು. ಅನಂತರ ಸರ್ವರೂ ಹೊಸ ಕಟ್ಟಡದಲ್ಲಿ ಉಪಾಹಾರವನ್ನೂ ತಾಂಬೂಲವನ್ನೂ ಸ್ವೀಕರಿಸಿದರು. ತರುವಾಯ ಮಂಗಳವಾದ್ಯಗಳೂ, ಜನರ ಕೋಲಾಹಲವೂ ಮೊಳಗುತ್ತಲಿರಲು ಸಭೆಯು ಮುಕ್ತಾಯವಾಯಿತು. ಈ ಗ್ರಾಮದ ಬಾಲಕ ಬಾಲಕಿಯರ ಪಾಠಶಾಲೆಗಳನ್ನೂ, ಆಸ್ಪತ್ರೆಯನ್ನೂ ಪರಾಂಬರಿಸಿ, ಪುರಶೋಧನೆಯಾದ ನಂತರ ಕೌನ್ಸಿಲರವರು ತಮ್ಮ ದಿವ್ಯ ಪರಿವಾರದೊಡನೆ ಸುಮಾರು 4 ಗಂಟೆಯ ಸಮಯಕ್ಕೆ ಅರಕಲಗೂಡು ಮಾರ್ಗವಾಗಿ ಚಿತ್ತೈಸಿದರು. ಧರ್ಮಕರ್ತರ ಉದ್ದೇಶದಂತೆ ಈ ಗ್ರಾಮಕ್ಕೆ ಘನಹೊಂದಿದ ಸರ್ಕಾರದವರು ಮಿಡಲ್‌ಸ್ಕೂಲು ದಯಪಾಲಿಸಲ್ಪಡುವುದೆಂದು ಸರ್ವರಿಗೂ ವ್ಯಕ್ತವಾಯಿತು. ಮಲೆನಾಡಿನಲ್ಲಿ ಇದುವರೆಗೆ ಇಂಥ ದಿವ್ಯವಾದ ಸಂತೋಷಕೂಟವು ನೆರೆದಿದ್ದು ಇದೇ ಪ್ರಥಮವೆಂದರೆ ಅತಿಶಯೋಕ್ತಿಯಾಗಲಾರದು. ಈ ಮಹೋತ್ಸವಕ್ಕೆ ಕಾರಣಭೂತರಾದ ಮ॥ ಸಾಹುಕಾರ್ ಕೊಟಳ್ಳಿ ಮಲ್ಲಪ್ಪಶೆಟ್ಟರವರಿಗೂ ಅವರ ಕುಟುಂಬದವರಿಗೂ ಭಗವಂತನು ಆಯುರಾರೋಗ್ಯ ಐಶ್ವರ್ಯಗಳನ್ನು ಸದಾಕೊಡಲೆಂದು ಪ್ರಾರ್ಥಿಸುತ್ತೇನೆ.

ಜಿ. ಎಸ್. ಬಸವರಾಜ್.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನುಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦ ; ಅನಂತರ ಪ್ರತಿ ೧೦೦ಕ್ಕೂ ೦—೧೨—೦ ; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦ ಕ್ಕೂ ೦—೧೨—೦ ; ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ॥ ಬಸವಪ್ಪ ಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದು ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತ ರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕನ್ನ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾ ಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾ ಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
14 ದೊಡ್ಡಪ್ಯಾಟೆ ಬೆಂಗಳೂರು ಸಿ

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು

APPLY FOR
SCORPION CURE.
M.S.SIDDAPPA BROS
MYSORE.

ಖಾತ್ರಿಯಾದ ಚೇಳಿನ ಔಷಧಿ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರ ಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪ ವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳು ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅ ಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗು ಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅ ಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾರಂಡರ್ 0—14—0. ಮಾ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೆ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—34] ಮೈಸೂ

೧೯೨೪ ನೆಯ ಇಸವಿ ಮೇ ತಾ॥ ೧೮ ರಿಂದ ೧೯೨೪ ನೆ ಇಸವಿ ಮೇ ತಾ॥ ೨೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪ ನೆಯ ರಕ್ತಾಕ್ಷಿನಾಮ ಸಂವತ್ಸರದ ವೈಶಾಖ ಶುದ್ಧ ಚತುರ್ದಶಿಯಿ ವೈಶಾಖ ಬಹುಳ ಷಷ್ಠಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವ
18	[1] ಭಾನು	ಚ-ಉ	0-15 54-35	ವಿಶಾ	47-38	5
19	ಸೋಮ	ಪಾಡ್ಯ	4-34	ಅನೂ	43-14	6
20	ಮಂಗಳ	ಬಿದಿ	41-19	ಜ್ಯೇಷ್ಠ	39-0	7
21	ಬುಧ	ತದಿ	35-16	ಮೂಲ	35-0	8
22	[2] ಗುರು	ಚೌತಿ	29-44	ಪೂಷಾ	31-21	9
23	ಶುಕ್ರ	ಪಂಚ	24-43	ಉಷಾ	28-20	10
24	[3] ಶನಿ	ಷಷ್ಠಿ	20-29	ಶ್ರವ	26-6	11

(1) ಅರ್ಧನಾರೀಶ್ವರವ್ರತಂ, ವ್ಯಾಸಪೂರ್ಣಿಮಾ. (2) ಕಂ ವರದರಾಜಸ್ವಾಮಿರಥಃ. (3) ಮೇಲುಕೋಟೆಯಲ್ಲಿ ಪಲ್ಲವೋತ್ಸವಾ ಭಃ, ಎಂಬೈರ್ದೇ.

ಮೈಸೂರು : ಕೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M. 124.

ಮೈಸೂರು ಸ್ಟಾರ್

ಪ್ರತಿಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲತ್ಕೃಪಾ | ಘನಪಥಕೃತಾವತಾರಾ ಪಕ್ಷಜ ನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸರ್ ೧೯೨೪ ನೆಯ ಇಸವಿ ಮೇ ತಾರೀಖು ೨೫ ನೆಯ ಭಾನುವಾರ. [ಸಂಚಿಕೆ ೨೧

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ಛಳಿತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ
ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.

ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
16 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—38] ಪೋ. ಬಾ. ೫೧೦, ಮದರಾಸು.

4ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗತಾನೆ ೪ನೆ ಮುದ್ರಣವು ಅಚ್ಚಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ಸಂತೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—4] ಕೇಶವಪುರ, ಅರಕಲಗೂಡು ತಾಲ್ಲೋಕು, ಹಾಸನ ಡಿ॥

ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಉತ್ತಮವಾದ ವೀರಶೈವ ಮತಗ್ರಂಥಗಳು.

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಶ್ರುತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—24] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

☞ ೧೦೦೦ ರೂ. ಇನಾಮು. ☜

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ವಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಿಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಕಪ್ಪೋಣ, ನಿದ್ರೆಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತುಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಕಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೋಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಠಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಥಲ್ಯಾಗೊಂದ, ಪಂಚಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ. ಬೀಜಬಂಧ, ಚಿಗರಿಗೋರಸು, ಮೋಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹಸ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ. ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ಣ ಅಡ್ರೆಸ್ ಮೊಕ್ಕಾಂ ಪೋಸ್ಟ್ ಸಹ ಬರೆಯಿರಿ.

[50—41] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೮ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್‌ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ.	೧—೦—೦
ಕೇನೋಪನಿಷತ್ ಶಾಂಕರೀ	ರೂ.	೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ.	೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಗಿ.

ಗ್ರಂಥಸಿಕ್ಕುವಸ್ಥಳ:—
ಹೊಸಮಠದ ಚನ್ನಯ್ಯನವರು ಹರಿಹರ,
24—7 ಚಿತ್ರದುರ್ಗ ಡಿ॥

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಸ್ತೋತ್ರೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೨—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ.ಆರ್. ಕರಿಬಸವಶಾಸ್ತ್ರಿ
[50—19] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ತಣ್ಣುಪುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦

೨೦ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
[50—35] [illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಮೇ ತಾ|| ೨೫ ನೆಯ ಭಾನುವಾರ.

THE PERSECUTION OF BRAHMINS.

Under the above striking title our local contemporary *The Wealth of Mysore* publishes a correspondence and a leader-both of which so far as that organ is considered-are often from the same source with reference to the dismissal of some Brahamin clerks appointed recently in the Hassan District. It is stated that the dismissals the consequent humiliation of the Brahmin Deputy Commissioner who appointed them, striking terror into the minds of the poor officials and a plethora of inspections, without attendent advantages are the benefits of the First Member's tour for two weeks in the district. Its general reference to the First Member's tour as being no more fruitful than the dissmissal of some clerks, we may pass over as being unworthy of answer. That will be treated with the contempt it deserves by the public. But when it says that it is a persecution of Brahmins and tries to create a sensation as usual it cannot be left unchallenged. It could have just examined the reason why these particular Brahmin clerks should have been dismissed out of thousands of others of the caste who are still thriving well in Public Service. The organ says that the ground for dismissal was that the officials concerned belonged to the Brahmin caste and that was their great sin. If all Brahmin clerks in the State were dismissed the remark of our contemporary may hold good. To suppress the real reasons, twist and turn the actual facts and mislead the public is a profession which was very paying in the past, which might even pay in these days at times with unthinking people, but it can no longer deceive the thinking section, and if our contemporary thinks that it can continue to do as it did in the past we can assure it it is very much mistaken. To say or to suggest that the First Member dismissed the officials because they were Brahmins is the grossest misrepresentation which none but 'the only Daily in the Capital' is capable of. There are the standing orders of the Government-orders which the organ is not unaware which lay down the rules of recruitment to Service and of measures to be adopted if appointments are made in voilation of those orders. The First Member, as head of the Recruitment Board was only giving effect to those orders, and very rightly too, when he dismissed the officials. The responsible heads of districts, think that they could afford to ignore the orders of the Government, and distribute favours to their kinsmen freely without being detected. We must congratulate the First Member on having taken proper steps in cancelling such appointments. Our only complaint is, as we have stated more than once before, that there is not sufficient vigilence exercised over the new appointments made, and that appointments are still being made contrary to the standing orders of the Government. As for sympathetically working out the orders on the Miller Committee Report we are seeing very little of it in the districts. If our contemporary thinks that the cancellation of such appointments is wrong it had better get the standing orders modified before blaming any Member of the Government. If it cannot do it, is it not cowardice and mean to write as it has done? The same paper talks of justice and purity of service being affected by such steps. Justice and purity from that quarter which held the monopoly all along has been tried for centuries and found woefully wanting. And it is with the object of reclaiming justice and purity that the doing away with the monopoly has been proposed, though to a very inadequate extent. The time has come for the extension of the principle and making the proportion more equitable in Service. We would call upon the members of the new councils to move in the matter early and to secure to the various peoples in the State their just claims.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಸಹಾಯ.

ಯಾವದ್ಭಾರತ ವೀರಶೈವ ಮಹಾಸಭೆಯು ಬೆಂಗಳೂರು ಪಟ್ಟಣದಲ್ಲಿ ನೆರೆದಿದ್ದಾಗ್ಗೆ ಮೈಸೂರು ಸೀಮೆಯ ವೀರಶೈವ ಬಡ ವಿದ್ಯಾರ್ಥಿಗಳಿಗೆ ವೇತನವನ್ನು ಕೊಟ್ಟು ವಿದ್ಯಾಭ್ಯಾಸ ಪ್ರೋತ್ಸಾಹಮಾಡಲಿಕ್ಕಾಗಿ ಏರ್ಪಟ್ಟ ಈ ವಿದ್ಯಾಭಿವೃದ್ಧಿ ಫಂಡಿಗೆ 10 ಸಾವಿರ ರೂಪಾಯಿಗಳು ಮೊದಲ್ಗೊಂಡು 10 ರೂಪಾಯಿಗಳವರೆಗೆ ಅನೇಕ ವೀರಶೈವ ಮಹನೀಯರುಗಳಿಂದ ವಾಗ್ದಾನಮಾಡಲ್ಪಟ್ಟದು 1 ಲಕ್ಷ ರೂ. ಮೇಲ್ಪಟ್ಟದಾಗಿದ್ದಿತು. ಆದರೆ ವಾಗ್ದಾನವಾದ ಹಣವನ್ನು ಆ ಕೂಡಲೆ ಬರಮಾಡಲು ತಕ್ಕ ಪ್ರಯತ್ನ ನಡಿಸಲ್ಪಡಲಿಲ್ಲವಾಗಿ ನಿರೀಕ್ಷಿತವಾಗಿದ್ದಷ್ಟು ಹಣವು ಶೇಖರವಾಗಲಿಕ್ಕೆ ಅವಕಾಶವಿಲ್ಲವಾಯಿತು. ಆದರೂ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರವರಿಂದ 5000 ರೂ. ಗಳೂ ಕೈ|| ಅತ್ತಿಬೆಲೆ ಸಾ|| ಸಿದ್ಧಬಸಪ್ಪನವರಿಂದ 10000 ರೂ. ಗಳೂ, ಬೆಂಗಳೂರು ಕೈ|| ಸೂಲಬೆಲೆ ಶ್ಯಾಮಣ್ಣನವರ ಚರಸ್ಥಿರಾಸ್ತಿಯ ವಿಕ್ರಯದಿಂದ 30–40 ಸಾವಿರ ರೂ. ಗಳೂ ಇನ್ನೂ ಕೆಲ ದೊಡ್ಡಮನುಷ್ಯರುಗಳಿಂದ ಬಂದುದೂ, ಶುಭಶೋಭನ ಕಾರ್ಯಗಳಲ್ಲಿ ಫಂಡಿನ ಸಂಭಾವನೆಗಾಗಿ ತೆಗೆದುಕಳುಹಲ್ಪಡುತ್ತಿರುವುದೂ ಸೇರಿ ಒಂದು ಲಕ್ಷ ರೂ. ವರೆಗೂ ಶೇಖರವಾಗಿ ಸರ್ಕಾರದ ಬೊಕ್ಕಸದಲ್ಲಿಡಲ್ಪಟ್ಟು ಅದರಿಂದ ಬರುವ ಬಡ್ಡಿಯನ್ನು ಮಾತ್ರ ವೇತನಗಳಿಗಾಗಿ ಉಪಯೋಗಿಸುವಂತೆ ಏರ್ಪಟ್ಟಿರುವುದು ಸರ್ವಶ್ರುತವಾಗಿದೆ. ಈ ಫಂಡಿನಿಂದ ಆಂಗ್ಲಭಾಷಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಸಂಸ್ಕೃತ ವಿದ್ಯಾರ್ಥಿಗಳಿಗೂ ವೇತನಗಳು ಕೊಡಲ್ಪಡುತ್ತಿರುವುದರಿಂದಲೂ, ವೇತನಾಪೇಕ್ಷಿಗಳಾದ ಬಡವಿದ್ಯಾರ್ಥಿಗಳ ಸಂಖ್ಯೆಯು ದಿನೇದಿನೆ ಹೆಚ್ಚುತ್ತಿರುವುದರಿಂದಲೂ ಅವರೆಲ್ಲರಿಗೂ ಸಾಹಾಯ್ಯಮಾಡಲು ಫಂಡು ಹಣದಿಂದ ಬರುವ ಬಡ್ಡಿಯು ಸಾಲುವುದಿಲ್ಲವಾದುದರಿಂದಲೂ ಪ್ರತಿಯೊಬ್ಬ ವೀರಶೈವನೂ ಈ ಫಂಡನ್ನು ವೃದ್ಧಿಗೊಳಿಸುವುದು ಧರ್ಮವಾಗಿದೆ. ಇದರಿಂದ ಬಡವಿದ್ಯಾರ್ಥಿಗಳಿಗೆ ಉದಾರವಾದ ಸಾಹಾಯ್ಯವು ದೊರಕಲು ಮಾರ್ಗವಾಗುತ್ತದೆಂಬುದನ್ನು ಹೇಳಬೇಕಾದುದಿಲ್ಲವು.

ವಿವಾಹಾದಿ ಶುಭಕಾರ್ಯಗಳಲ್ಲಿ ನೂರು ಸಾವಿರಗಟ್ಟಲೆ ರೂಪಾಯಿಗಳು ನಿರಾಯಾಸವಾಗಿ ವೆಚ್ಚವಾಗಿ ಹೋಗುತ್ತವೆಯಾದುದರಿಂದ ಪ್ರತಿಯೊಂದು ಲಗ್ನದ ಯಜಮಾನರುಗಳು ೫ ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ತೆಗೆದು ಅಥವಾ ಆಯಾ ಸ್ಥಳಗಳ ಶೆಟ್ಟಿ ಯಜಮಾನರುಗಳು ತೆಗೆಯಿಸಿ ಕೂಡಲೆ ಬೆಂಗಳೂರಿನಲ್ಲಿರುವ ಫಂಡಿನ ಸೆಕ್ರೆಟರಿಯವರಲ್ಲಿಗೆ ಕಳುಹಿಸುತ್ತ ಬಂದಲ್ಲಿ ಮತಕ್ಕೆ ಮಹೋಪಕಾರಮಾಡಿದಂತಾಗುವುದು ಮತ್ತು ಇದರಿಂದ ಅವರುಗಳಿಗೆ ಇಹಪರ ಸುಖಲಾಭವಾಗುವುದು ಎಂದು ನಾವು ಈ ಪತ್ರಿಕಾದ್ವಾರಾ ಅನೇಕವೇಳೆ ಸೂಚಿಸಿರುತ್ತೇವೆ. ಅದೇ ಪ್ರಕಾರ ಈವರೆಗೆ ಎಷ್ಟೋ ಮತಾಭಿಮಾನಿಗಳು ನೆರವೇರಿಸಿ ವಂದನೀಯರಾಗಿರುತ್ತಾರೆ. ಈಗ ಲಗ್ನಗಳ ಕಾಲವಾಗಿರುವುದರಿಂದ ಪ್ರತಿಯೊಂದು ಸ್ಥಳದ ಪ್ರಮುಖ ಮತಾಭಿಮಾನಿಗಳು ಇದನ್ನು ತಮ್ಮ ಸ್ವಂತ ಕಾರ್ಯವೆಂದು ತಿಳಿದು ಲಗ್ನದ ಮನೆಯ ಸಭೆಯಲ್ಲಿ ಈ ವಿಷಯವನ್ನು ಮರೆಯದೆ ಪ್ರಸ್ತಾವಿಸಿ ಸಭಿಕರಿಗೆ ತಾಂಬೂಲವನ್ನು ಹಂಚುವುದಕ್ಕೆ ಮೊದಲೇ ಮತ ಸಂಭಾವನೆಯ ಕಾಣಿಕೆಯಾಗಿ ವಧೂವರರ ಕಡೆಯಿಂದ ಈ ವಿದ್ಯಾಭಿವೃದ್ಧಿ ಫಂಡಿಗೆ ಯಥೋಚಿತವಾಗಿ ದ್ರವ್ಯವನ್ನು ತೆಗೆಯಿಸಿ ಆ ಕೂಡಲೆ ಬೆಂಗಳೂರಲ್ಲಿರುವ ಫಂಡಿನ ಸೆಕ್ರೆಟರಿಯವರಲ್ಲಿಗೆ ಮಣಿಯಾರ್ಡರು ಮೂಲಕ ಕಳುಹುತ್ತ ಬಂದರೆ ಮತಕ್ಕೆ ಮಹೋಪಕಾರ ಮಾಡಿದಂತಾಗುವುದರಲ್ಲಿ ಸಂದೇಹವಿಲ್ಲವು. ಈ ರೀತಿಯಾಗಿ ಕಳುಹಲ್ಪಟ್ಟ ಹಣವು ಫಂಡಿನ ಸೆಕ್ರೆಟರಿಯವರಿಂದ ಸಕಾಲದಲ್ಲಿ ಪ್ರಕಟಿಸಲ್ಪಡುವುದು. ಎಲ್ಲ ಪಟ್ಟಣ ಗ್ರಾಮವಾಸಿಗಳಾದ ವೀರಶೈವ ಮತಾಭಿಮಾನಿಗಳು ಈ ಕಾರ್ಯವನ್ನು ಅಗತ್ಯವಾಗಿ ಗಮನಿಸಿ ತಪ್ಪದೆ ನೆರವೇರಿಸುವವರಾಗಲೆಂದು ಕೋರುತ್ತೇವೆ.

ಪಾಂಕೇರವರ ರಾಜೀನಾಮೆ.

ಫ್ರಾನ್ಸಿನ ಪ್ರಧಾನ ಮಂತ್ರಿ ಪಾಂಕೇರವರು ತಮ್ಮ ಉದ್ಯೋಗವನ್ನು ಬಿಟ್ಟುಬಿಡಲು ನಿಶ್ಚಯಿಸಿರುವುದಾಗಿ ಪ್ರಕಟವಾಗಿದೆ. ಆ ರಾಜ್ಯದಲ್ಲಿ ಈಚೆಗೆ ನಡೆದ ಪ್ರಜಾಪ್ರತಿನಿಧಿಗಳ ಚುನಾವಣೆಯಲ್ಲಿ ಪಾಂಕೇರವರ ಪ್ರತಿಕೂಲರು ಬಹು ಸಂಖ್ಯಾಕರಾಗಿ ವಿಜಯವನ್ನು ಹೊಂದಿರುವುದರಿಂದ ಮುಂದೆ ರಾಜ್ಯಾಡಳಿತದಲ್ಲಿ ತಮ್ಮಾಟವು ಸಾಗುವುದಿಲ್ಲವೆಂಬ ಶಂಕೆಯಿಂದ ತಮ್ಮ ಮಂತ್ರಿಪದವಿಗೆ ರಾಜೀನಾಮೆ ಕೊಡುವವರಾಗಿರುವರೆಂದು ತೋರುತ್ತದೆ. ಇವರ ನಿರಂಕುಶಾಧಿಕಾರವು ಬಹಳ ಅನರ್ಥಕ್ಕೆ ಕಾರಣವಾಯಿತು. ಜರ್ಮನಿ ರಾಜ್ಯಕ್ಕೆ ಸೇರಿದ ರೂರು ಪ್ರಾಂತವನ್ನು ಇವರು ಬ್ರಿಟಿಷ್ ಅಮೇರಿಕೆ ಮೊದಲಾದ ಪ್ರಭುತ್ವದವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಆಕ್ರಮಿಸಿಕೊಂಡುದರಿಂದ ಯೂರೋಪು ಖಂಡದಲ್ಲಿ ಸಂಕಷ್ಟಸ್ಥಿತಿಯುಂಟಾಯಿತು. ಜರ್ಮನಿಯವರಿಂದ ನಷ್ಟಪರಿಹಾರದ್ರವ್ಯವನ್ನು ಬರಮಾಡಿಕೊಳ್ಳಲು ಅವಕಾಶವಾಗಲಿಲ್ಲವಾಗಿ ಜರ್ಮನಿಯನ್ನು ನಾಶಪಡಿಸುವ ಪ್ರಯತ್ನದಲ್ಲಿ ಫ್ರಾನ್ಸಿನ ವಿಚ್ಛಕ್ತಿಗೇ ಬಾಧೆಮಾಡಿಕೊಂಡರು; ಪ್ರಪಂಚಶಾಂತಿಗೆ ಮಹೋಪದ್ರವನ್ನುಂಟುಮಾಡಿದರು. ಇಷ್ಟಾದರೂ ಪಾಂಕೇರವರು ತಮ್ಮ ಹಟವನ್ನು ಬಿಡಲಿಲ್ಲವಾದುದರಿಂದ ಅವರ ಈ ಹಟವೇ ಇಂಗ್ಲೆಂಡಿಗೂ ಇಟಲಿಗೂ ಕಂಟಕವಾಗಿ ಪರಿಣಮಿಸಿತು; ಕಡೆಯಲ್ಲಿ ಬೆಲ್ಜಿಯಮ್ಮು ಕೂಡ ಫ್ರಾನ್ಸಿನಿಂದ ಪೃಥಕ್ಕಾಗಬೇಕಾಯಿತು. ಇಷ್ಟಾದರೂ ಪಾಂಕೇರವರ ಪಕ್ಷವು ಪ್ರಬಲವಾಗಿದ್ದುದರಿಂದಲೇ ಅವರು ಹಾಡಿದ್ದೆಲ್ಲಾ ರಾಗವಾಗಿದ್ದಿತು. ಆದರೆ ಈಗ ಅವರ ಪಕ್ಷವು ದುರ್ಬಲವಾಗಿ ಪ್ರತಿಪಕ್ಷವು ಪ್ರಬಲವಾದುದರಿಂದ ಅವರ ಪ್ರತಿಭೆಯು ಸಾಗುವುದಿಲ್ಲವೆಂಬುದನ್ನು ಅರಿತು ತಮ್ಮ ಮಂತ್ರಿಪದವಿಗೆ ರಾಜೀನಾಮೆಕೊಡಲು ನಿರ್ಧರಿಸಿರುವುದು ಸಹಜವೇ ಆಗಿದೆ. ಇವರು ಬಿಟ್ಟನಂತರ ಫ್ರಾನ್ಸಿನ ರಾಜ್ಯಾಡಳಿತಕ್ರಮವು ಕಾಲಸ್ಥಿತಿಗನುಗುಣವಾಗಿ ಬದಲಾಯಿಸಿ ಯೂರೋಪು ಖಂಡದಲ್ಲಿ ಶಾಂತಿಸ್ಥಾಪನವಾಗುವುದೋ ಏನೋ? ಮುಂದೆ ಫ್ರಾನ್ಸಿನ ಈ ಮುಖ್ಯಮಂತ್ರಿ ಪದವಿಗೆ ಎಂತಹವರು ಬರುತ್ತಾರೋ ಮತ್ತು ಅದರ ಪರಿಸ್ಥಿತಿಯು ಹೇಗೆ ಪರಿಣಮಿಸುವುದೋ ನೋಡಬೇಕಾಗಿದೆ.

ವೈಕಮ್ಮಿನ ಸತ್ಯಾಗ್ರಹಿಗಳಿಗೆ ಮಹಾತ್ಮರ ಉಪದೇಶ.

ವೈಕಮ್ಮಿನಲ್ಲಿ ದೇವಸ್ಥಾನಗಳ ಮುಂಗಡೆಯ ಮಾರ್ಗಗಳಲ್ಲಿ ಅಸ್ಪೃಶ್ಯರು ಸಂಚರಿಸಕೂಡದೆಂದಿರುವ ನಿರ್ಬಂಧ ನಿವಾರಣೆಗಾಗಿ ಅಂತ್ಯಜರಿಂದಲೂ, ಅವರಲ್ಲಿ ಸಾನುಭೂತಿಯುಳ್ಳವರಿಂದಲೂ ನಡಿಸಲ್ಪಡುತ್ತಿರುವ ಸತ್ಯಾಗ್ರಹ ವಿಚಾರದಲ್ಲಿ "ಕ್ರಿಮಿಕೀಟಗಳು ಯಾವ ನಿರ್ಬಂಧವಿಲ್ಲದೆಯೂ ಸಂಚರಿಸುವಂತಹ ಮಾರ್ಗಗಳಲ್ಲಿ ಮಾನವ ಸೋದರರಾದ ಅಂತ್ಯಜರು ಸಂಚರಿಸಕೂಡದೆಂಬ ನಿರ್ಬಂಧದಿಂದ ವಿಮುಕ್ತರಾಗಲು ಆ ವರ್ಗದವರು ಸತ್ಯಾಗ್ರಹವ್ರತಶೀಲರಾಗಿ ದೌರ್ಜನ್ಯರಹಿತವಾದ ಕಾರ್ಯಾಚರಣೆ ಮಾಡುವುದು ಧರ್ಮವೂ ಅತ್ಯವಶ್ಯಕವೂ ಆಗಿರುತ್ತದೆ. ಆದರೆ ಕ್ರೈಸ್ತರು, ಮಹಮ್ಮದೀಯರು ಮೊದಲಾದವರು ಈ ಸತ್ಯಾಗ್ರಹಾಚರಣೆಯಲ್ಲಿ ಭಾಗಿಗಳಾಗುವುದೂ, ವ್ರತಶೀಲರಿಗೆ ಧನ ದ್ರವ್ಯಗಳನ್ನು ಸಹಾಯಮಾಡುವುದೂ ಅಕಾಲೀಜನರಿಂದ ಅನ್ನೋದಕ ಸ್ವೀಕಾರಮಾಡುವುದೂ ಬಹಳ ಅನುಚಿತವು. ವ್ರತಶೀಲರಾದ ಅಸ್ಪೃಶ್ಯ ಸತ್ಯಾಗ್ರಹಿಗಳು ತಮ್ಮ ದೇಶದವರಿಂದಲ್ಲದೆ ಅನ್ಯ ದೇಶದವರಿಂದ ಸಹಾಯವನ್ನಪೇಕ್ಷಿಸತಕ್ಕುದಲ್ಲವು." ಎಂದು ಮೊದಲಾಗಿ ಉಪದೇಶಿಸಿರುವರು. ಹೊಟ್ಟೆನೋವನ್ನನುಭವಿಸುವವರು ಮದ್ದನ್ನು ತೆಗೆದುಕೊಳ್ಳಬೇಕಾಗಿರುವುದಲ್ಲದೆ ಆರೋಗ್ಯವಾಗಿರುವವರು ತೆಗೆದುಕೊಳ್ಳಬೇಕಾದ ಕಾರಣವಿಲ್ಲವಾದುದರಿಂದ ಅಸ್ಪೃಶ್ಯೇತರಜನರು ಮಹಾತ್ಮರ ಉಪದೇಶವನ್ನು ಲಾಲಿಸಿ ಅದರಂತೆ ಆಚರಿಸತಕ್ಕುದು ಯುಕ್ತವಾಗಿದೆ.

ರಾಜಕುಮಾರ ದೇಶರಾಜ ಅರಸಿನವರ ವಿವಾಹಮಹೋತ್ಸವ.

ಶ್ರೀಮನ್ ಮಹಾರಾಜರವರು ತಮ್ಮ ಸೋದರಳಿಯಂದಿರಾದ ರಾಜಕುಮಾರ ದೇಶರಾಜ ಅರಸಿನವರಿಗೆ ಸರದಾರ್ ಎಂ. ಗೋಪಾಲರಾಜ ಅರಸಿನವರ ಜ್ಯೇಷ್ಠ ಪುತ್ರಿ ಹ|| ಕುಂ|| ಶೋಭಿತೆಯರಾದ ಸೌ|| ಲಕ್ಷ್ಮಮ್ಮಣ್ಣಿಯವರನ್ನು ತಂದುಕೊಂಡು ಕಳೆದ ತಾ|| 19ರ ಮಧ್ಯಾಹ್ನ 3¼ ಗಂಟೆಯಿಂದ 3¾ ಗಂಟೆಯೊಳಗೆ ಸಲ್ಲುವ ಕನ್ಯಾಲಗ್ನದಲ್ಲಿ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದ ಅರಮನೆಯ ವಿವಾಹಮಂಟಪದಲ್ಲಿ ವಿಜೃಂಭಣೆಯಿಂದ ವಿವಾಹಮಹೋತ್ಸವವನ್ನು ಜರುಗಿಸಿದರು. ಬರೋಡಾ ಸಂಸ್ಥಾನದ ಪ್ರತಿನಿಧಿಗಳೂ, ಅನಂತಶಯನದ ಯುವರಾಣಿ ದಂಪತಿಗಳೂ, ಕೂಚ್‌ಬಿಹಾರ್ ಮಹಾರಾಣಿ ರೀಜಂಟರವರೂ ಬಾಲ ಮಹಾರಾಜರವರೂ, ರೆಸಿಡೆಂಟರು ಮೊದಲಾಗಿ ಐರೋಪ್ಯಾತಿಥಿಗಳೂ, ರಾಜಬಂಧುವರ್ಗದವರೂ ದಿವಾನರು, ಕೌನ್ಸಿಲರುಗಳು, ಚೀಫ್ ಸೆಕ್ರೆಟರಿ, ರೆವಿನ್ಯೂಸೆಕ್ರೆಟರಿ ಶಾಖಾಧಿಕಾರಿಗಳು ಮೊದಲಾಗಿ ಸರ್ಕಾರಿಯಾಧಿಕಾರಿಗಳೂ, ಲಾಯರುಗಳು ವರ್ತಕರುಗಳು ಮೊದಲಾಗಿ ಪುರಪ್ರಮುಖರುಗಳೂ ಬಂದಿದ್ದರು. ರಾಜಕುಮಾರರು ಆನೆಮೇಲಿನ ಅಂಬಾರಿಯಮೇಲೆ ಕುಳಿತು ಸಕಲ ಬಿರುದಾವಳಿಗಳೊಡನೆ ಅರಮನೆಯ ಪಶ್ಚಿಮ ಬಾಗಲಿಂದ ಹೊರಟು ಲ್ಯಾನ್ಸ್‌ಡೌನ್ ಬಜಾರಿನ ಪೂರ್ವದಿಕ್ಕಿನ ಮಾರ್ಗವಾಗಿ ಶ್ರೀಮನ್ಮಹಾರಾಜರವರ ಪ್ರತಿಮೆಯ ಪಕ್ಕದಲ್ಲಿ ಕೋಟೆಯ ಉತ್ತರ ದಿಕ್ಕಿನ ಮಹಾದ್ವಾರದಿಂದ ಉತ್ಸವಗೊಂಡು ವಿವಾಹಮಂಟಪಕ್ಕೆ ದಯಮಾಡಿಸಿದ ಕೊಂಚ ಹೊತ್ತಿನಮೇಲೆ ಶ್ರೀಮನ್ ಮಹಾರಾಜರವರು ಜರತಾರಿರುಮಾಲು ಅಂಗರೇಕ ಮತ್ತು ಪಂಚೆಗಳನ್ನು ಧರಿಸಿಕೊಂಡು ಚಿತ್ತೈಸಿ ವಿವಾಹಮಂಟಪದ ಬಲಗಡೆ ಕೊಂಚದೂರದಲ್ಲಿ ರಜತಾಸನದ ಮೇಲೆ ಮಂಡಿಸಿದರು. ಸಭಿಕರು ಪ್ರತ್ಯುತ್ಥಾನರಾಗಿ ಮರ್ಯಾದಿಸಿ ಕುಳಿತುಕೊಂಡರು. ಸರದಾರ್ ಗೋಪಾಲರಾಜ ಅರಸಿನವರೂ ಗೌಸಣಿಗೆಯಲ್ಲಿದ್ದ ಅವರ ಧರ್ಮಪತ್ನಿಯವರೂ ಅರಮನೆಯ ಪುರೋಹಿತರ ವಿಧ್ಯುಕ್ತವಾದ ಕರ್ಮಾಚರಣೆಯಿಂದ ತಮ್ಮ ಕುಮಾರಿಯವರನ್ನು ಶ್ರೀಮನ್ ಮಹಾರಾಜರವರ ಅನುಮತಿಯನ್ನು ಪಡೆದು ಧಾರೆಯೆರೆದುಕೊಟ್ಟರು. ಭಕ್ಷಿ ಮ|| ಎಚ್. ಲಿಂಗರಾಜ ಅರಸಿನವರು ವರನ ಕಡೆಯವರಾಗಿದ್ದುಕೊಂಡು ಧಾರೆಯೆರಿಸಿಕೊಂಡರು. ಆಸ್ಥಾನ ಸಂಗೀತ ವಿದ್ವಾಂಸರುಗಳಿಂದ ವೀಣೆ ಜಲತರಂಗು, ಹಾರ್ಮೋನಿಯಂ ಪಿಟೀಲು ತಬಲ ಮೊದಲಾದ ವಾದ್ಯಗಳಿಂದ ಕೂಡಿದ ಕಾನ್ಸರ್ಟ್ ಎಂಬ ಸುಗಾನವಾದ್ಯವು

ತರ ಚಿತ್ತಾಕರ್ಷಣಮಾಡುತ್ತಿದ್ದಿತು. ಮಹಾಮಾ ವಾಣಿವಿಲಾಸ ಸನ್ನಿಧಾನದವರು, ಮಹಾರಾಣಿ ರು, ರಾಜಕುಮಾರಿಯರುಗಳು ಮೊದಲಾಗಿ ರಾಣಿವಾಸ ರೂ, ಅನಂತಶಯನದ ರಾಣಿಯವರೂ, ಕೂಚ್‌ಬಿಹಾರ್ ಹಾರಾಣಿಯರೂ, ಐರೋಪ್ಯಾತಿಥಿಗಳೂ ವಿವಾಹಮಂಟಪದ ಭಾಗದಲ್ಲಿ ಕುಳಿತು ವಿವಾಹಕಾರ್ಯಕ್ರಮವನ್ನು ನೋಡಿ ತ್ತ ದಿವ್ಯವಾದ ವಾದ್ಯಗಳ ವಾದನವನ್ನು ಕೇಳಿ ಹಸನ್ಮುಖಿಗಳಿಂದ ಸಂತೋಷವನ್ನು ವ್ಯಕ್ತಗೊಳಿಸು ದ್ದರು. ಅರಸುಕುಲದ ಯಜಮಾನರಾದ ಮ|| ಎಂ. ಎಫ್. ರಾಜ ಅರಸಿನವರಿಗೂ ವಂಶಾವಳಿ ಕರ್ಣೀಕರಿಗೂ ಟ್ಯೋಡಿಯ ಕಿಲ್ಲತ್ತುಗಳು ಕೊಡಲ್ಪಟ್ಟ ಮೇಲೆ, ಶ್ರೀಮನ್ ಹಾರಾಜರವರು ಮತ್ತು ಮಾತೃಶ್ರೀಯವರಿಂದ ನೂತನ ಪತಿಗಳಿಗೆ ಆಶೀರ್ವದಿಸಲ್ಪಟ್ಟ ಅಮೋಘವಾದ ಖಿಲ್ಲತ್ತುಗಳು ಸಲ್ಪಟ್ಟ ತರುವಾಯ ಬರೋಡಾ, ಕೂಚ್‌ಬಿಹಾರ್ ಅನಂ ಯನ ರಾಜರುಗಳ ಕಡೆಯ ಖಿಲ್ಲತ್ತುಗಳು ಅವರವರ ಪ್ರತಿ ಗಳ ಮೂಲಕವೂ, ಸರದಾರರುಗಳಾದ ಕೈ|| ಕಾಂತರಾಜ ನವರ ಕುಮಾರರು, ಲಕ್ಷ್ಮೀಕಾಂತರಾಜ ಅರಸಿನವರು, ಗಳಾದ ದಳವಾಯಿ ನಂಜರಾಜ ಅರಸಿನವರು, ದರ್ಬಾರ್ ಕ್ಷಿ ಲಿಂಗರಾಜ ಅರಸಿನವರು ಮೊದಲಾಗಿ ರಾಜಬಂಧು ಂದಲೂ ವಸ್ತ್ರಾಭರಣಾದಿ ಉಡುಗೆರೆಗಳು ಓದಿಸಲ್ಪ ವು. ತರುವಾಯ ದಿವಾನರಾದಿಯಾಗಿ ಸಭಿಕರಿಗೆ ಕ್ರಮ ತು ಪುಷ್ಪಾಹಾರ ತಾಂಬೂಲಗಳೂ ಸುವರ್ಣದ ಕಾಸು ದಕ್ಷಿಣೆಯೂ ಕೊಡಲ್ಪಟ್ಟಮೇಲೆ ರಾಜಕುಮಾರ ದಂಪತಿ ಶ್ರೀಮನ್ಮಹಾರಾಜರವರೂ ಸಭೆಯಿಂದ ತೆರಳಿದ ಮೇಲೆ ಯು ವಿಸರ್ಜಿಸಲ್ಪಟ್ಟಿತು. ಈ ತಾ|| 19ರ ದಿವಸ ರಾಜ ನಿಯ ಸಮಸ್ತಜಾತಿಯ ಬಡಬಗ್ಗರಿಗೆ ಮೃಷ್ಟಾನ್ನಭೋಜ ಮಾಡಿಸಲ್ಪಟ್ಟು ವಸ್ತ್ರದಾನ ಮಾಡಲ್ಪಟ್ಟಿತು. ಬ್ರಾಹ್ಮಣ ಪುರುಷರುಗಳಿಗೆ ಕೋಟೆಯ ದೇವಸ್ಥಾನಗಳಲ್ಲಿ ದಕ್ಷಿಣೆ ಕೊಡಲ್ಪಟ್ಟಿತು. ಆ ದಿವಸರಾತ್ರಿ ಅರಮನೆಯ ಕೋಟೆ ಲುಗಳು, ಟವರ್‌ಹಾಲು, ಗಡಿಯಾರ ಇವುಗಳ ಮೇಲೆ ಪೋತ್ಸವ ನಡೆಯಿಸಲ್ಪಟ್ಟಿತು. ಮಂಗಳವಾರ ಸಾಯಂಕಾಲ ಮುಂಡಿ ಜಂಖಾನಾವಿಹಾರಸ್ಥಳಕ್ಕೆ ಆಂಗ್ಲ ಹಿಂದೂ ಅತಿಥಿ ಆಹ್ವಾನಿಸಲ್ಪಟ್ಟಿದ್ದು ಅಲ್ಪಾಹಾರದಿಂದಲೂ ವಾದ್ಯಶ್ರವ ದಿಂದಲೂ ಸತ್ಕರಿಸಲ್ಪಟ್ಟರು. ಬಂದಿದ್ದ ಅತಿಥಿಗಳೆಲ್ಲರೂ ಸ್ವ ಗಳಿಗೆ ತೆರಳಿದರು. ಈ ತಾ|| 28ನೆಯ ಬುಧವಾರ ರಾತ್ರಿ ತನ ದಂಪತಿಗಳು ಆನೆಯಮೇಲಣ ಅಂಬಾರಿಯಲ್ಲಿ ಕುಳಿತು ರಂಗಸೈನ್ಯದಿಂದಲೂ ವಾದ್ಯವೈಭವದಿಂದಲೂ ವಿದ್ಯು ದೀಪಾವಳಿಗಳಿಂದಲೂ, ಬಂಧುವರ್ಗದಿಂದಲೂ, ರಾಜಧಾನಿ ಮುಖ್ಯವೀಧಿಗಳಲ್ಲಿ ಉತ್ಸವಗೊಂಡು ವರನ ಗೃಹಪ್ರವೇಶ ಮಾಡುವುದಾಗಿ ತಿಳಿಯಬರುತ್ತದೆ.

ಸ್ವದೇಶದ ವೃತ್ತಾಂತಗಳು

ತುಮಕೂರು ತಾಲ್ಲೂಕು ಅಮಲ್ದಾರರಾದ ಮ|| ಬಿ. ಗಯ್ಯನವರಿಗೆ 3 ತಿಂಗಳು ಮತ್ತು 25 ದಿನಗಳ ಪ್ರಿವಿಲೇಜ್ ವೂ, ಅನಂತರ 2 ತಿಂಗಳು ಮತ್ತು 5 ದಿನಗಳವರೆಗೆ ಪೂರ್ತಿ ಬಳದ ಮೇಲೆ ಫರ್ಲೋರಜವೂ, ತರುವಾಯ 1½ ವರ್ಷ ವರೆಗೆ ಅರ್ಧಸಂಬಳದ ಮೇಲೆ ಫರ್ಲೋರಜವೂ ಕೊಡಲ್ಪ ರುತ್ತದೆ.

ಕೋಲಾರ ಡಿ|| ಮುಳಬಾಗಲು ತಾಲ್ಲೂಕಿನಲ್ಲಿ ನಡೆದಿನ ರೀಸೆಟ್ಲ್‌ಮೆಂಟು ಸರ್ಕಾರದವರಿಂದ ಅನುಮೋದಿತವಾಗಿ ನ್ನು 30 ವರ್ಷಗಳ ಕಾಲದವರೆಗೆ ಬದಲಾಯಿಸಲ್ಪಡುವದಿಲ್ಲ ಬ ಭರವಸೆಯಿಂದ ಈ ಜುಲೈ ತಾ|| 1 ರಿಂದ ಆಚರಣೆಗೆ ಲ್ಪಡುವುದು. ಈ ಹೊಸ ಸೆಟ್ಲ್‌ಮೆಂಟಿನ ಪ್ರಕಾರ ವಿಧಾ ಕವಾಗಿರುವ ಹೆಚ್ಚುದರದ ಕಂದಾಯದಿಂದ ಸರ್ಕಾರಕ್ಕೆ 18 ರೂಪಾಯಿಗಳು ಹೆಚ್ಚಾಗಿ ಉತ್ಪನ್ನವಾಗುವುದು.

ರಾಜಧಾನಿಯಲ್ಲಿ ಆಚೆ ಬುಧವಾರ ಮತ್ತು ಗುರುವಾರ ತ್ರಿ ತಕ್ಕಮಟ್ಟಿಗೆ ಮಳೆಯಾಯಿತು. ಅಲ್ಲಿಂದ ಪ್ರತಿದಿನ ತ್ರಿ ಜಿನುಗುಮಳೆಯಾಗುತ್ತಿದೆ ವಿನಾ ದೊಡ್ಡಮಳೆ ಬರಲಿ ಲ್ಲ. ಇದರಿಂದ ದಗೆಯು ಸ್ವಲ್ಪಮಟ್ಟಿಗೆ ಕಡಿಮೆಯಾಗಿರು ದೆ, ಮತ್ತು ವಾಂತಿಭೇದಿ ರೋಗವು ಶಮನವಾದಂತೆ ತೋ ರುತ್ತದೆ. ಗುಂಡ್ಲುಪೇಟೆ ಚಾಮರಾಜನಗರ ತಾಲ್ಲೂಕುಗಳಲ್ಲಿ ಳೆಯು ವಿಶೇಷವಾಗಿ ಬಂದು ಕೆರೆಕುಂಟೆಗಳೆಲ್ಲವೂ ತುಂಬಿರು ದಾಗಿಯೂ ಸಂಸ್ಥಾನದ ಇತರ ಕಡೆಗಳಲ್ಲೂ ಈಚೀಚೆಗೆ ಳೆಯಾಗಿ ನೀರಿನ ಕೊರತೆಯು ಕಡಿಮೆಯಾಗಿರುವುದಾಗಿ ಯೂ ಕೇಳುತ್ತೇವೆ. ಆಚೆವಾರದಲ್ಲಿ ಶ್ರೀರಂಗಪಟ್ಟಣ ತಾ|| ರಕೆರೆಯಲ್ಲಿ ಸಿಡಿಲುಬಡಿದು ಒಬ್ಬೊಬ್ಬ ಮನುಷ್ಯರು ಸತ್ತರೆಂದೂ 5 ಜನರು ಗಾಯವಡೆದಿರುವರೆಂದೂ ವರ್ತಮಾನವಿದೆ.

ರಾಜಧಾನಿಯಲ್ಲಿ ಪ್ರಸಿದ್ಧ ನೀಲಗಿರಿ ಮನೆತನದವರಾದ ಮಂತ ಮದ್ದಣ್ಣ ಉರುಫ್ ಮೊಗಣ್ಣನವರು ಕೆಲ ಕಾಲ ದಿಂದಲೂ ಮೂತ್ರವ್ಯಾಧಿಗ್ರಸ್ತರಾಗಿದ್ದು ಎಷ್ಟೋ ಔಷಧೋಪಚಾರವನ್ನು ಹೊಂದಿದಾಗ್ಯೂ ಗುಣವನ್ನು ಹೊಂದದೆ ಮೊನ್ನೆ ದಿವಸ ಸ್ವರ್ಗಸ್ಥರಾದರೆಂದು ತಿಳುಹಲು ಬಹಳವಾಗಿ ವಿಷಾ ಸುತ್ತೇವೆ. ಇವರು ಬಹಳ ನಿಗರ್ವಿಗಳೂ, ಉದಾರಿಗಳೂ, ತಪರರೂ ಸಾಧುಸ್ವಭಾವದವರೂ ಆಗಿದ್ದರು. ಇವರಿಗೆ ರಣಕಾಲದಲ್ಲಿ ಪ್ರಾಯಶಃ 61 ವರ್ಷ ವಯಸ್ಸಾಗಿದ್ದಿತು. ವರಿಗೆ ಒಬ್ಬ ಪುತ್ರನೂ, ನಾಲ್ವರು ಪುತ್ರೀಯರೂ ಇರು ರು. ಇವರ ಮರಣದಿಂದ ಕುಂಚಿಟಿಗರ ಸಮಾಜಕ್ಕೇ ದೊಡ್ಡ ನಷ್ಟವಾಯಿತೆಂದು ಹೇಳಬಹುದು. ಇವರ ಆತ್ಮಕ್ಕೆ ಶಾಂತಿಯೂ ವಿಯೋಗದುಃಖಭಾಜನರಾದ ಮಕ್ಕಳುಗಳಿಗೆ ದುಃಖ ಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ರಿಟೈರ್ಡ್ ಸಬ್‌ಜಡ್ಜಿಯರೂ, ಮೈಸೂರು ನ್ಯಾಯವಿಧಾಯಕಸಭಾ ಮೆಂಬರೂ ಒಕ್ಕಲಿಗರಸಂಘದ ಅಧ್ಯಕ್ಷರೂ ಆದ ರಾವ್‌ಸಾಹೇಬ್ ಚೆನ್ನಯ್ಯನವರ ಪುತ್ರಿ ಸೌಭಾಗ್ಯವತಿ ಸಿ. ಲಕ್ಷ್ಮಮ್ಮನವರು ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ರಸಾಯನಶಾಸ್ತ್ರವ (ಕೆಮಿಸ್ಟ್ರಿಯ)ನ್ನು ಐಚ್ಛಿಕಭಾಗವನ್ನಾಗಿ ತೆಗೆದುಕೊಂಡು ವ್ಯಾಸಂಗಮಾಡಿ ಮದ್ರಾಸು ವಿಶ್ವವಿದ್ಯಾಲಯದ ಬಿ. ಎ., ಪರೀಕ್ಷೆಯಲ್ಲಿ ಉತ್ತೀರ್ಣರಾದರೆಂದು ತಿಳುಹಲು ಬಹಳವಾಗಿ ಸಂತೋಷಿಸುತ್ತೇವೆ. ಬಿ. ಎ. ಪ್ರಶಸ್ತಿಯನ್ನು ಪಡೆದಿರುವ ನಮ್ಮ ಮೈಸೂರಿನ ಸ್ತ್ರೀಯರಾರೂ ಈ ರಸಾಯನ ಶಾಸ್ತ್ರಭಾಗವನ್ನು ತೆಗೆದುಕೊಂಡಿರಲಿಲ್ಲವು. ಸೌ|| ಲಕ್ಷ್ಮಮ್ಮನವರು ಆ ಶಾಸ್ತ್ರಭಾಗವನ್ನು ತೆಗೆದುಕೊಂಡು ಉತ್ತಮತರವಾಗಿ ಉತ್ತೀರ್ಣರಾಗಿರುವುದರಿಂದ ನಾವು ಅವರನ್ನು ಅಭಿನಂದಿಸಿ, ಈ ಶಾಸ್ತ್ರವು ವೈದ್ಯವಿದ್ಯಾಭ್ಯಾಸಕ್ಕೆ ವಿಶೇಷ ಸಹಾಯವಾಗಿರುವುದರಿಂದಲೂ, ಇನ್ನೂ ಚಿಕ್ಕವಯಸ್ಸಿನವರಾಗಿ ಅವಿವಾಹಿತರಾಗಿರುವುದರಿಂದಲೂ ಸೀಮೆಗೆ ಹೋಗಿ ವೈದ್ಯವಿದ್ಯೆಯನ್ನು ಅಭ್ಯಾಸಮಾಡಿ ಉಚ್ಚಪ್ರಶಸ್ತಿಯನ್ನು ಪಡೆದು ತಮ್ಮ ಮನೆತನಕ್ಕೂ ಕುಲಕ್ಕೂ ದೇಶಕ್ಕೂ ಕೀರ್ತಿಯನ್ನುಂಟುಮಾಡುವವರಾಗಲೆಂದು ಕೋರುತ್ತೇವೆ. ರಾ|| ಸಾ|| ಚೆನ್ನಯ್ಯನವರ ಜ್ಯೇಷ್ಠಪುತ್ರರಾದ ಮ|| ಜವರಯ್ಯನವರು ವನಶಾಖಾಧಿಕಾರಿಗಳಾದ ಮಿ|| ಕ್ರಂಬೀಗೆಲ್‌ರವರ ಅಸಿಸ್ಟೆಂಟಾಗಿರುವರಲ್ಲದೆ ಸೀಮೆಗೆಹೋಗಿ ಈ ವನಶಾಸ್ತ್ರವನ್ನು ಚೆನ್ನಾಗಿ ಪರಿಚಯಮಾಡಿಕೊಂಡು ಬಂದಿರುವರು. ತೃತೀಯಪುತ್ರರಾದ ಮ|| ಎಚ್. ಸಿ. ದಾಸಪ್ಪ, ಬಿ.ಎ., ಎಲ್.ಎಲ್.ಬಿ., ಯವರು ರಾಜಧಾನಿಯಲ್ಲಿ ವಕೀಲರಾಗಿರುವರು. ಮತ್ತು ಪುತ್ರಿಯರಾದ ಲಕ್ಷ್ಮಮ್ಮನವರು ಈಗತಾನೆ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಹೀಗೆ ಪುತ್ರಪುತ್ರೀರತ್ನತ್ರಯಗಳನ್ನುಳ್ಳ ರಾವ್ ಸಾಹೇಬರ ಜನ್ಮವೇ ಧನ್ಯವು.

ಭರತಖಂಡದ ವೃತ್ತಾಂತಗಳು.

ಒಬ್ಬ ಬೋರಾ ದೊಡ್ಡಮನುಷ್ಯನು ಮಹಾತ್ಮಾ ಗಾಂಧಿಯವರ ಮೂಲಕ ಮೋಪ್ಲಾ ಕಷ್ಟನಿವಾರಣಾಧನರಾಶಿಗೆ 500 ರೂ. ಗಳನ್ನು ಕಳುಹಿಸಿಕೊಟ್ಟಿರುತ್ತಾನೆ.

ಎಸ್. ವಿ. ರಾಜಗೋಪಾಲಾಚಾರ್ಯರು ಕುಂಭಕೋಣ ಮತ್ತು ಪಾಪನಾಶಿನಿ ತಾಲ್ಲೂಕುಗಳಲ್ಲಿ ಸಂಚರಿಸುತ್ತ ತಂಜಾವೂರಿನಲ್ಲಿ ಹೆಚ್ಚು ಕಂದಾಯವು ಕೊಡಲ್ಪಡದಿರುವುದರ ವಿಚಾರವಾಗಿ ನಡೆಯುತ್ತಿರುವ ಚಳವಳಿಯನ್ನು ಕುರಿತು ಜನರಿಗೆ ಬೋಧಿಸುತ್ತಿರುವರು.

100 ಜನ ವೈದಿಕರು ಇಂಗ್ಲೆಂಡನ್ನು ನೋಡಿಕೊಂಡು ಬರಲು ಹೊರಡುವುದಾದರೆ ಅಂಥವರ ಸಲುವಾಗಿಯೇ ಒಂದು ಪ್ರತ್ಯೇಕ ಹಡಗನ್ನು ಮುಂದಿನ ಜುಲೈ 15 ರೊಳಗಾಗಿ ಬೊಂಬಾಯಿನಿಂದ ಹೊರಡಿಸುವುದಾಗಿ ಏರ್ಪಾಡುಮಾಡಿರುತ್ತಾರೆ.

ದೇಶಭಕ್ತ ಸಿ. ಆರ್. ದಾಸ್‌ರವರು ತಮ್ಮ ಶತ್ರುಪಕ್ಷದವರ ಆಕ್ಷೇಪದ ಮೇಲೆ ಬಂಗಾಳಾ ನ್ಯಾಯವಿಧಾಯಕ ಸಭಾಸಭಿಕಸ್ಥಾನವನ್ನು ಕಳೆದುಕೊಂಡು ಪುನರಾವೃತ್ತಿಯ ಚುನಾವಣೆಗೆ ಅಭ್ಯರ್ಥಿಗಳಾಗಿ ನಿಂತಿದ್ದು ಬಹು ಮತಗಳನ್ನು ಪಡೆದು ಚುನಾವಣೆಗೊಂಡರು.

ಮಧುರೆಯಲ್ಲಿ ಕಳೆದ ತಾ|| 10ರ ಸಾಯಂಕಾಲ ಪ್ರಚಂಡಮಾರುತವೆದ್ದು ಅನೇಕ ಮರಗಳನ್ನೂ ತಂತಿಯ ಕಂಬಗಳನ್ನೂ ಬುಡಮೇಲಾಗಿ ಉರುಳಿಸಿಬಿಟ್ಟಿತು. ಅಲ್ಲದೆ ಕೆಲ ಬಡವರ ಮನೆಗಳು ಬಿದ್ದುಹೋದವು ಮತ್ತು ಮನೆಗಳ ಹಾಗೂ ಮದುವೆ ಚಪ್ಪರಗಳ ಮೇಲುಹೊದ್ದಿಕೆಗಳು ಹಾರಿಸಲ್ಪಟ್ಟುವು. ಇಷ್ಟಾದರೂ ಪ್ರಾಣಾಪಾಯವೇನೂ ಆಗಲಿಲ್ಲವು.

ಮನ್ನಾರುಗುಡಿಯಲ್ಲಿ ಜನರು ಸರ್ಕಾರಕ್ಕೆ ಕಂದಾಯವನ್ನು ಸಲ್ಲಿಸದಂತೆ ಬೋಧಿಸುತ್ತಿರುವ ಡಾ|| ಮುದ್ದುಕೃಷ್ಣ ಅಯ್ಯರ್‌ರವರು ಕಂದಾಯವನ್ನು ವಸೂಲ್ಮಾಡುತ್ತಿದ್ದ ಸರ್ಕಾರಿ ಮನುಷ್ಯನಿಗೆ ಆತಂಕಪಡಿಸಿದರೆಂದೂ ಅವನು ಕಂದಾಯದ ಬಾಕಿಗಾಗಿ ಹಿಡಿದುಕೊಂಡಿದ್ದ ಬೈಸಿಕಲ್ಲನ್ನು ಬಲವಂತದಿಂದ ಕಿತ್ತುಕೊಂಡರೆಂದೂ ದೋಷಾರೋಪಿಸಲ್ಪಟ್ಟು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಯಾಗಿ 100 ರೂ. ಅರ್ಥದಂಡ ವಿಧಿಸಲ್ಪಟ್ಟರು.

ಭೂಪಾಲ ಸಂಸ್ಥಾನವು ಮಹಮ್ಮದೀಯರಾದ ಬೇಗಂ ರಾಣಿಯವರ ಆಳ್ವಿಕೆಯಲ್ಲಿದೆ. ಆ ದೇಶದಲ್ಲಿ ಹಿಂದುಗಳಾಗಿದ್ದು ಮಹಮ್ಮದೀಯ ಮತಕ್ಕೆ ಸೇರಿಹೋದವರು ಪುನಃ ಹಿಂದೂ ಮತವನ್ನು ಅವಲಂಬಿಸುವುದಾದರೆ ಅಂಥವರು ಶಿಕ್ಷಾರ್ಹರಾಗುವರೆಂದು ಅಲ್ಲಿಯ ಸರ್ಕಾರದ ಅಪ್ಪಣೆಯಾಗಿರುವುದು. ಈ ಹುಕುಂ ಕೇವಲ ಅನ್ಯಾಯವಾದದ್ದೆಂದು ಅಲ್ಲಿನ ಹಿಂದೂ ಸಭೆಯವರು ಸ್ವಾಮಿ ಸಂಪೂರ್ಣಾನಂದರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ತೀರ್ಮಾನಮಾಡಿರುತ್ತಾರೆ.

ಗೈಬಂದ ಸಮೀಪಗ್ರಾಮವಾದ ಬಾಲೂ ಎಂಬಲ್ಲಿ ಸರ್ವತೀಮೈಕ್ಷವಿ ಎಂಬ ಹುಡುಗಿಯನ್ನು ನೆಂಟರಮನೆಗೆ ಕರೆದುಕೊಂಡು ಹೋಗುತ್ತೇನೆಂದು ಅವಳ ಸಮೀಪ ಬಂಧು ಒಬ್ಬನು ಆಶೆಹುಟ್ಟಿಸಿ ರಾತ್ರಿ ವೇಳೆಯಲ್ಲಿ ಮನೆಯಿಂದ ಹೊರಡಿಸಿಕೊಂಡುಬಂದು ಇಬ್ಬರು ಮಹಮ್ಮದೀಯರ ಸಹಾಯದಿಂದ ಆಕೆಯನ್ನು ಊರಹೊರಗಿನ ಹೊಲಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಆಕೆಯನ್ನು ಹಿಂಸಿಸಿ ಒಬ್ಬ ವ್ಯಭಿಚಾರಿಣಿಗೆ 30 ರೂ. ಕ್ರಯಕ್ಕೆ ಮಾರಿಬಿಟ್ಟರು. ಆ ಹುಡುಗಿಯು ಈಗ ಶಿಶುಸಹಾಯ ಸಂಘದವರ ಪೋಷಣೆಯಲ್ಲಿರುವಳು ಮತ್ತು ಅಪರಾಧಿಗಳು ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ವಿದೇಶದ ವೃತ್ತಾಂತಗಳು.

ಲಂಡನ್ನಿನ ಖಜಾನೆಯ ವ್ಯವಹಾರದಲ್ಲಿರುವ ನೋಟುಗಳಿಗಿಂತಲೂ ಬರ್ಲಿನ್ನಿನ ನೋಟುಗಳು ಬಹಳ ಕಶ್ಮಲವಾಗಿರುವುವೆಂತಲೂ ಈ ಕಶ್ಮಲವಾದ ನೋಟುಗಳಲ್ಲಿ 1,50,000 ವಿಷಮಶೀತಜ್ವರೋತ್ಪಾದಕಗಳಾದ ಕ್ರಿಮಿಗಳು ಸೇರಿಕೊಂಡಿರುವುವೆಂತಲೂ ಕ್ರಿಮಿಪರಿಶೋಧಕರಿಂದ ಕಂಡುಹಿಡಿಯಲ್ಪಟ್ಟಿರುತ್ತದೆ.

ಲಂಡನ್ ನಗರದಲ್ಲಿರುವ ಡಾಕ್ಟರ್ ಕ್ರಿಸ್ಟೊಫರ್‌ಸನ್ ಎಂಬ ವೈದ್ಯರು ಮನುಷ್ಯನ ರಕ್ತವನ್ನು ಪರೀಕ್ಷಿಸಿ, ಅದರ ಶಕ್ತಿಯನ್ನು ಕುಂದಿಸುವ ಕ್ರಿಮಿವರ್ಗಗಳು ರಕ್ತದಲ್ಲಿ ಸೇರದಂತೆ ನೋಡಿಕೊಂಡರೆ ಮನುಷ್ಯನ ಆಯಸ್ಸು ಸಾಮಾನ್ಯವಾಗಿ 300-400 ವರ್ಷಗಳಾಗಬಹುದೆಂದು, ಕೆಲವು ಸಂದರ್ಭಗಳಲ್ಲಿ 1000 ವರ್ಷದ ವರೆಗೂ ಜೀವಿಸಬಹುದೆಂದೂ ತಿಳಿಸಿರುತ್ತಾರೆ.

ಗ್ರೀಸದಲ್ಲಿ ಮಾನಾಚಿಲ್ ಎಂಬ ಊರಿಗೆ ಸಮೀಪವಾಗಿರುವ ಒಂದು ಬೆಟ್ಟವು ಅಲ್ಲಿ ಆದ ಅಪಾರವಾದ ಮಳೆಯಿಂದ ಎತ್ತರದಿಂದ ತಗ್ಗಾದ ಕಣಿವೆ ಪ್ರಾಂತಕ್ಕೆ ಮೆಲ್ಲಗೆ ಜರುಗುತ್ತಿದೆ. ದಾರಿಯಲ್ಲಿರುವ ಊರಿನವರು ಊರನ್ನು ಬಿಟ್ಟು ಹೋಗುತ್ತಿರುವರು. ಅಲ್ಲಲ್ಲಿ ಭೂಮಿಯು ಬಿರುಕುಬಿಟ್ಟು ಪ್ರವಾಹಗಳು ಹೊರಡುತ್ತಿರುವುವು. ಬೆಟ್ಟವು ಇನ್ನು ಮುಂದಕ್ಕೆ ಜರುಗಿ ಕಣಿವೆಯಲ್ಲಿ ಕುಳಿತುಬಿಟ್ಟರೆ ಅಲ್ಲಿ ಹರಿಯುವ ನದಿಗೆ ಪ್ರತಿಬಂಧಕವಾಗಿ ಒಂದು ದೊಡ್ಡ ಸರೋವರ ಹುಟ್ಟುವುದೆಂದೂ, ಮಾನಾಚಿಲ್ ಊರೂ, ಅದರ ನಾಲ್ಕಾರು ಕೈಗಾರಿಕೆ ಕಾರ್ಖಾನೆಗಳೂ ಮುಳುಗಿಹೋಗುವವೆಂದೂ ಊಹಿಸಲ್ಪಟ್ಟಿದೆ.

ಪೆಸಿಫಿಕ್ ಸಾಗರದಲ್ಲಿರುವ ಬೋರ್ನಿಯೋ ಎಂಬ ದ್ವೀಪದಲ್ಲಿ ದಟ್ಟವಾದ ಕಾಡಿನಿಂದ ಕೂಡಿದ ವಿಶಾಲವಾದ ಪ್ರಾಂತಗಳು ಇನ್ನೂ ಇರುವವು. ಅಲ್ಲಿ ಅನೇಕರಿಗೆ ಮೊಂಡಾದ ಬಾಲವಿರುವುದೆಂದು ದೇಶಶೋಧನೆಗಾಗಿ ಅಲ್ಲಿಗೆ ಹೋಗಿದ್ದವರೊಬ್ಬರು ತಿಳಿಸುತ್ತಾರೆ. ಬಾಲವು ನಾಲ್ಕು ಅಂಗುಲಗಳಷ್ಟು ಉದ್ದವಾಗಿರುವುದಾಗಿಯೂ, ಅವರು ಕುಳಿತುಕೊಳ್ಳುವಾಗ್ಯೆ ರಂಧ್ರವಿರುವ ಮಣೆಯನ್ನು ಹಾಕಿಕೊಳ್ಳುವರೆಂದೂ ಗೊತ್ತಾಗುತ್ತದೆ. ಈ ದ್ವೀಪವಾಸಿಗಳು ಕೆಲವು ಶತಮಾನಗಳ ಹಿಂದೆ ನೆರೆ ದ್ವೀಪವಾದ ನ್ಯೂಗಿನಿಯೆಂಬಲ್ಲಿ ಹೆಣ್ಣುಕೊಟ್ಟು ತರುವ ಬಳಕೆ ಇತ್ತೆಂದೂ, ಇವರ ಬೀಗರಲ್ಲಿ ದೀರ್ಘವಾದ ಬಾಲಗಳಿರುತ್ತವೆಂದೂ, ಅವರ ಮೈಮೇಲೆ ರೇಷ್ಮೆಯಂತೆ ಮೃದುವಾದ ಕೂದಲು ಇರುವುದಾಗಿಯೂ ತಿಳಿಸುತ್ತಾರೆ.

ಮನುಷ್ಯನ ತಲೆಬುರುಡೆಯು ದಪ್ಪವಾಗಿದ್ದಷ್ಟು ಮೇಧಾಶಕ್ತಿಯು ಹೆಚ್ಚೆಂದು ಸಾಮಾನ್ಯವಾಗಿ ಭಾವಿಸಲ್ಪಟ್ಟಿರುತ್ತದೆ. ಆದರೆ ಈಗ ಕೆಲ ಪಾಶ್ಚಾತ್ಯಶಾಸ್ತ್ರಜ್ಞರು ಚೆನ್ನಾಗಿ ಪರಿಶೋಧಿಸಿ ಬರೇ ತಲೆಬುರುಡೆಯು ದಪ್ಪನಾಗಿದ್ದ ಮಾತ್ರಕ್ಕೆ ಮೇಧಾವಿಯೆಂದು ಹೇಳಲಿಕ್ಕಾಗುವುದಿಲ್ಲ; ತಲೆಬುರುಡೆಯ ಒಳಗಡೆ ಕೆಲಭಾಗಗಳು ವಿಶಾಲವಾಗಿಯೂ ದೃಢವಾಗಿಯೂ ಬೆಳೆದಿದ್ದಲ್ಲಿ ಮೇಧಾಶಕ್ತಿಯು ಹೆಚ್ಚಾಗಿರುವುದೆಂದೂ ಲಾರ್ಡ್ ಬೈರನ್ ಮೊದಲಾದ ಪ್ರಖ್ಯಾತ ಪುರುಷರ ತಲೆಯು ಚಿಕ್ಕದಾಗಿದ್ದರೂ ಅವರ ಮೇಧಾಶಕ್ತಿಯು ಅದ್ಭುತವಾಗಿದ್ದಿತೆಂದೂ, ಇನ್ನೊಬ್ಬ ಮನುಷ್ಯನ ತಲೆಯು 70 ಪೌಂಡು ತೂಕವುಳ್ಳದಾಗಿದ್ದರೂ ಅವನು ಒಂದೆರಡು ಕೊಲೆಗಳನ್ನು ಮಾಡಿ ಮರಣದಂಡನೆಗೆ ಗುರಿಯಾದನು ಎಂದೂ ಹೇಳಿರುವರು.

ಸ್ತ್ರೀಪುರುಷರು ಪರಸ್ಪರ ಪ್ರೇಮಾತಿಶಯದಿಂದ ಚುಂಬನ ಮಾಡುವುದೂ, ತಂದೆತಾಯಿಗಳು ತಮ್ಮ ಮಕ್ಕಳಿಗೆ ಮುದ್ದಿಗಾಗಿ ಮುತ್ತಿಕ್ಕುವುದೂ ಸ್ವಾಭಾವಿಕವಾಗಿರುತ್ತದಷ್ಟೆ. ಈಚೆಗೆ ಡಾಕ್ಟರುಗಳು ಈ ಚುಂಬನದಿಂದುಂಟಾಗುವ ಗುಣಾವಗುಣವನ್ನು ಪರೀಕ್ಷಿಸಿ ಮಧ್ಯಾಹ್ನದ ಮತ್ತು ಸಂಜೆಯ ವೇಳೆಗಳಲ್ಲಿ ಚುಂಬನಮಾಡುವುದು ಸೌಖ್ಯಕರವೆಂದೂ, ರಾತ್ರಿವೇಳೆ ನಿದ್ರಿಸುವಾಗ್ಗೆ ಕ್ರಿಮಿಗಳು ಬಾಯಿಯಲ್ಲಿ ಸೇರಿರುತ್ತವಾದುದರಿಂದ ಬೆಳಗಿನ ವೇಳೆಯಲ್ಲಿ ಚುಂಬನಮಾಡುವುದು ಅಪಾಯಕರವೆಂದೂ ಕಂಡುಹಿಡಿದಿರುವರಾದುದರಿಂದ ನ್ಯೂಯಾರ್ಕಿನ ಜೀವವಿಮೆ ಕಂಪೆನಿಯವರು ಚುಂಬನಾಸಕ್ತರಾದವರು ಹೆಚ್ಚು ಮೊಬಲಗನ್ನು ಕೊಡಬೇಕೆಂದು ಏರ್ಪಡಿಸಿರುತ್ತಾರೆ ಮತ್ತು ಇತರ ಜೀವವಿಮೆ ಕಂಪೆನಿಯವರೂ ಅವರ ಅನುಕರಣ ಮಾಡುವವರಾಗಿರುತ್ತಾರೆ.

ಪ್ರಪಂಚದ ಮೇಲೆ ಬಹಳ ವಿಶೇಷವಾಗಿ ಉಪಯೋಗಿಸಲ್ಪಡುತ್ತಿರುವ ಮತ್ತು ಇತರ ಎಲ್ಲ ಮೋಟಾರುಬಂಡಿಗಳ ಬೆಲೆಗಿಂತಲೂ ಸುಲಭಬೆಲೆಯುಳ್ಳದಾಗಿರುವ ಫೋರ್ಡುಮೋಟಾರುಬಂಡಿ ನಿರ್ಮಾಣಕಂಪೆನಿಯು ಅಮೇರಿಕೆಯಲ್ಲಿ ಅತ್ಯಂತ ಪ್ರಖ್ಯಾತವೂ ದೊಡ್ಡವೂ ಆದ ಉಕ್ಕಿನ ಮತ್ತು ಸ್ಟ್ಯಾಂಡರ್ಡ್ ಕಲ್ಲೆಣ್ಣೆಯ ಕಂಪೆನಿಗಳಿಗೆ ಮೂರನೆಯದಾಗಿದೆ. ಇದರ 1923 ನೆಯ ವರ್ಷದ ಆರ್ಥಿಕಸ್ಥಿತಿಯ ಪ್ರಕಟನೆಯಿಂದ ಕಂಪನಿಯ ಒಟ್ಟು ಆಸ್ತಿಯು 56,80,00,000 ಡಾಲರುಗಳು, ಅದರ ಖ್ಯಾತಿಯ ಬೆಲೆಯು 2,05,17,000 ಡಾಲರು, ಆಸ್ತಿಯ ವಾಸ್ತವ್ಯವಾದ ಬೆಲೆಯು 9,20,00,000 ಡಾಲರು, ಯಂತ್ರಸಾಮಗ್ರಿಗಳ ಬೆಲೆ 8,76,89,000 ಡಾಲರು, ಸರಕಿನ ಬೆಲೆ 94,39,000 ಡಾಲರು ಎಂದೂ 1923 ರಿಂದೀಚೆಗೆ ಒಟ್ಟು ಆಸ್ತಿಯು

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಮೇ ತಾ|| ೨೫ ನೆಯ ಭಾನುವಾರ.

THE PERSECUTION OF BRAHMINS.

Under the above striking title our local contemporary *The Wealth of Mysore* publishes a correspondence and a leader-both of which so far as that organ is considered-are often from the same source with reference to the dismissal of some Brahamin clerks appointed recently in the Hassan District. It is stated that the dismissals the consequent humiliation of the Brahmin Deputy Commissioner who appointed them, striking terror into the minds of the poor officials and a plethora of inspections, without attendent advantages are the benefits of the First Member's tour for two weeks in the district. Its general reference to the First Member's tour as being no more fruitful than the dissmissal of some clerks, we may pass over as being unworthy of answer. That will be treated with the contempt it deserves by the public. But when it says that it is a persecution of Brahmins and tries to create a sensation as usual it cannot be left unchallenged. It could have just examined the reason why these particular Brahmin clerks should have been dismissed out of thousands of others of the caste who are still thriving well in Public Service. The organ says that the ground for dismissal was that the officials concerned belonged to the Brahmin caste and that was their great sin. If all Brahmin clerks in the State were dismissed the remark of our contemporary may hold good. To suppress the real reasons, twist and turn the actual facts and mislead the public is a profession which was very paying in the past, which might even pay in these days at times with unthinking people, but it can no longer deceive the thinking section, and if our contemporary thinks that it can continue to do as it did in the past we can assure it it is very much mistaken. To say or to suggest that the First Member dismissed the officials because they were Brahmins is the grossest misrepresentation which none but 'the only Daily in the Capital' is capable of. There are the standing orders of the Government-orders which the organ is not unaware which lay down the rules of recruitment to Service and of measures to be adopted if appointments are made in voilation of those orders. The First Member, as head of the Recruitment Board was only giving effect to those orders, and very rightly too, when he dismissed the officials. The responsible heads of districts, think that they could afford to ignore the orders of the Government, and distribute favours to their kinsmen freely without being detected. We must congratulate the First Member on having taken proper steps in cancelling such appointments. Our only complaint is, as we have stated more than once before, that there is not sufficient vigilence exercised over the new appointments made, and that appointments are still being made contrary to the standing orders of the Government. As for sympathetically working out the orders on the Miller Committee Report we are seeing very little of it in the districts. If our contemporary thinks that the cancellation of such appointments is wrong it had better get the standing orders modified before blaming any Member of the Government. If it cannot do it, is it not cowardice and mean to write as it has done? The same paper talks of justice and purity of service being affected by such steps. Justice and purity from that quarter which held the monopoly all along has been tried for centuries and found woefully wanting. And it is with the object of reclaiming justice and purity that the doing away with the monopoly has been proposed, though to a very inadequate extent. The time has come for the extension of the principle and making the proportion more equitable in Service. We would call upon the members of the new councils to move in the matter early and to secure to the various peoples in the State their just claims.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಸಹಾಯ.

ಯೂವದ್ವಾರತ ವೀರಶೈವ ಮಹಾಸಭೆಯು ಬೆಂಗಳೂರು ಪಟ್ಟಣದಲ್ಲಿ ನೆರೆದಿದ್ದಾಗ್ಗೆ ಮೈಸೂರು ಸೀಮೆಯ ವೀರಶೈವ ಬಡ ವಿದ್ಯಾರ್ಥಿಗಳಿಗೆ ವೇತನವನ್ನು ಕೊಟ್ಟು ವಿದ್ಯಾಭ್ಯಾಸ ಪ್ರೋತ್ಸಾಹಮಾಡಲಿಕ್ಕಾಗಿ ಏರ್ಪಟ್ಟ ಈ ವಿದ್ಯಾಭಿವೃದ್ಧಿ ಫಂಡಿಗೆ 10 ಸಾವಿರ ರೂಪಾಯಿಗಳು ಮೊದಲ್ಗೊಂಡು 10 ರೂಪಾಯಿಗಳವರೆಗೆ ಅನೇಕ ವೀರಶೈವ ಮಹನೀಯರುಗಳಿಂದ ವಾಗ್ದಾನಮಾಡಲ್ಪಟ್ಟದು 1 ಲಕ್ಷ ರೂ. ಮೇಲ್ಪಟ್ಟದಾಗಿದ್ದಿತು. ಆದರೆ ವಾಗ್ದಾನವಾದ ಹಣವನ್ನು ಆ ಕೂಡಲೆ ಬರಮಾಡಲು ತಕ್ಕ ಪ್ರಯತ್ನ ನಡಿಸಲ್ಪಡಲಿಲ್ಲವಾಗಿ ನಿರೀಕ್ಷಿತವಾಗಿದ್ದಷ್ಟು ಹಣವು ಶೇಖರವಾಗಲಿಕ್ಕೆ ಅವಕಾಶವಿಲ್ಲವಾಯಿತು. ಆದರೂ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರವರಿಂದ 5000 ರೂ. ಗಳೂ ಕೈ|| ಅತ್ತಿಬೆಲೆ ಸಾ|| ಸಿದ್ಧಬಸಪ್ಪನವರಿಂದ 10000 ರೂ. ಗಳೂ, ಬೆಂಗಳೂರು ಕೈ|| ಸೂಲಬೆಲೆ ಶ್ಯಾಮಣ್ಣನವರ ಚರಸ್ಥಿರಾಸ್ತಿಯ ವಿಕ್ರಯದಿಂದ 30–40 ಸಾವಿರ ರೂ. ಗಳೂ ಇನ್ನೂ ಕೆಲ ದೊಡ್ಡಮನುಷ್ಯರುಗಳಿಂದ ಬಂದುದೂ, ಶುಭಶೋಭನ ಕಾರ್ಯಗಳಲ್ಲಿ ಫಂಡಿನ ಸಂಭಾವನೆಗಾಗಿ ತೆಗೆದುಕಳುಹಲ್ಪಡುತ್ತಿರುವುದೂ ಸೇರಿ ಒಂದು ಲಕ್ಷ ರೂ. ವರೆಗೂ ಶೇಖರವಾಗಿ ಸರ್ಕಾರದ ಬೊಕ್ಕಸದಲ್ಲಿಡಲ್ಪಟ್ಟು ಅದರಿಂದ ಬರುವ ಬಡ್ಡಿಯನ್ನು ಮಾತ್ರ ವೇತನಗಳಿಗಾಗಿ ಉಪಯೋಗಿಸುವಂತೆ ಏರ್ಪಟ್ಟಿರುವುದು ಸರ್ವಶ್ರುತವಾಗಿದೆ. ಈ ಫಂಡಿನಿಂದ ಆಂಗ್ಲಭಾಷಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಸಂಸ್ಕೃತ ವಿದ್ಯಾರ್ಥಿಗಳಿಗೂ ವೇತನಗಳು ಕೊಡಲ್ಪಡುತ್ತಿರುವುದರಿಂದಲೂ, ವೇತನಾಪೇಕ್ಷಿಗಳಾದ ಬಡವಿದ್ಯಾರ್ಥಿಗಳ ಸಂಖ್ಯೆಯು ದಿನೇದಿನೆ ಹೆಚ್ಚುತ್ತಿರುವುದರಿಂದಲೂ ಅವರೆಲ್ಲರಿಗೂ ಸಾಹಾಯ್ಯಮಾಡಲು ಫಂಡು ಹಣದಿಂದ ಬರುವ ಬಡ್ಡಿಯು ಸಾಲುವುದಿಲ್ಲವಾದುದರಿಂದಲೂ ಪ್ರತಿಯೊಬ್ಬ ವೀರಶೈವನೂ ಈ ಫಂಡನ್ನು ವೃದ್ಧಿಗೊಳಿಸುವುದು ಧರ್ಮವಾಗಿದೆ. ಇದರಿಂದ ಬಡವಿದ್ಯಾರ್ಥಿಗಳಿಗೆ ಉದಾರವಾದ ಸಾಹಾಯ್ಯ[illegible]ದೊರಕಲು ಮಾರ್ಗವಾಗುತ್ತದೆಂಬುದನ್ನು ಹೇಳಬೇಕಾದುದಿಲ್ಲವು.

ವಿವಾಹಾದಿ ಶುಭಕಾರ್ಯಗಳಲ್ಲಿ ನೂರು ಸಾವಿರಗಟ್ಟಲೆ ರೂಪಾಯಿಗಳು ನಿರಾಯಾಸವಾಗಿ ವೆಚ್ಚವಾಗಿ ಹೋಗುತ್ತವೆಯಾದುದರಿಂದ ಪ್ರತಿಯೊಂದು ಲಗ್ನದ ಯಜಮಾನರುಗಳು ೫ ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ತೆಗೆದು ಅಥವಾ ಆಯಾಸ್ಥಳಗಳ ಶೆಟ್ಟಿ ಯಜಮಾನರುಗಳು ತೆಗೆಯಿಸಿ ಕೂಡಲೆ ಬೆಂಗಳೂರಿನಲ್ಲಿರುವ ಫಂಡಿನ ಸೆಕ್ರೆಟರಿಯವರಲ್ಲಿಗೆ ಕಳುಹಿಸುತ್ತ ಬಂದಲ್ಲಿ ಮತಕ್ಕೆ ಮಹೋಪಕಾರಮಾಡಿದಂತಾಗುವುದು ಮತ್ತು ಇದರಿಂದ ಅವರುಗಳಿಗೆ ಇಹಪರ ಸುಖಲಾಭವಾಗುವುದು ಎಂದು ನಾವು ಈ ಪತ್ರಿಕಾದ್ವಾರಾ ಅನೇಕವೇಳೆ ಸೂಚಿಸಿರುತ್ತೇವೆ. ಅದೇ ಪ್ರಕಾರ ಈವರೆಗೆ ಎಷ್ಟೋ ಮತಾಭಿಮಾನಿಗಳು ನೆರವೇರಿಸಿ ವಂದನೀಯರಾಗಿರುತ್ತಾರೆ. ಈಗ ಲಗ್ನಗಳ ಕಾಲವಾಗಿರುವುದರಿಂದ ಪ್ರತಿಯೊಂದು ಸ್ಥಳದ ಪ್ರಮುಖ ಮತಾಭಿಮಾನಿಗಳು ಇದನ್ನು ತಮ್ಮ ಸ್ವಂತ ಕಾರ್ಯವೆಂದು ತಿಳಿದು ಲಗ್ನದ ಮನೆಯ ಸಭೆಯಲ್ಲಿ ಈ ವಿಷಯವನ್ನು ಮರೆಯದೆ ಪ್ರಸ್ತಾವಿಸಿ ಸಭಿಕರಿಗೆ ತಾಂಬೂಲವನ್ನು ಹಂಚುವುದಕ್ಕೆ ಮೊದಲೇ ಮತಸಂಭಾವನೆಯ ಕಾಣಿಕೆಯಾಗಿ ವಧೂವರರ ಕಡೆಯಿಂದ ಈ ವಿದ್ಯಾಭಿವೃದ್ಧಿ ಫಂಡಿಗೆ ಯಥೋಚಿತವಾಗಿ ದ್ರವ್ಯವನ್ನು ತೆಗೆಯಿಸಿ ಆ ಕೂಡಲೆ ಬೆಂಗಳೂರಲ್ಲಿರುವ ಫಂಡಿನ ಸೆಕ್ರೆಟರಿಯವರಲ್ಲಿಗೆ ಮಣಿಯಾರ್ಡರು ಮೂಲಕ ಕಳುಹುತ್ತ ಬಂದರೆ ಮತಕ್ಕೆ ಮಹೋಪಕಾರ ಮಾಡಿದಂತಾಗುವುದರಲ್ಲಿ ಸಂದೇಹವಿಲ್ಲವು. ಈ ರೀತಿಯಾಗಿ ಕಳುಹಲ್ಪಟ್ಟ ಹಣವು ಫಂಡಿನ ಸೆಕ್ರೆಟರಿಯವರಿಂದ ಸಕಾಲದಲ್ಲಿ ಪ್ರಕಟಿಸಲ್ಪಡುವುದು. ಎಲ್ಲ ಪಟ್ಟಣ ಗ್ರಾಮವಾಸಿಗಳಾದ ವೀರಶೈವ ಮತಾಭಿಮಾನಿಗಳು ಈ ಕಾರ್ಯವನ್ನು ಅಗತ್ಯವಾಗಿ ಗಮನಿಸಿ ತಪ್ಪದೆ ನೆರವೇರಿಸುವವರಾಗಲೆಂದು ಕೋರುತ್ತೇವೆ.

ಪಾಂಕೇರವರ ರಾಜೀನಾಮೆ.

ಫ್ರಾನ್ಸಿನ ಪ್ರಧಾನ ಮಂತ್ರಿ ಪಾಂಕೇರವರು ತಮ್ಮ ಉದ್ಯೋಗವನ್ನು ಬಿಟ್ಟುಬಿಡಲು ನಿಶ್ಚಯಿಸಿರುವುದಾಗಿ ಪ್ರಕಟವಾಗಿದೆ. ಆ ರಾಜ್ಯದಲ್ಲಿ ಈಚೆಗೆ ನಡೆದ ಪ್ರಜಾಪ್ರತಿನಿಧಿಗಳ ಚುನಾವಣೆಯಲ್ಲಿ ಪಾಂಕೇರವರ ಪ್ರತಿಕೂಲರು ಬಹು ಸಂಖ್ಯಾಕರಾಗಿ ವಿಜಯವನ್ನು ಹೊಂದಿರುವುದರಿಂದ ಮುಂದೆ ರಾಜ್ಯಾಡಳಿತದಲ್ಲಿ ತಮ್ಮಾಟವು ಸಾಗುವುದಿಲ್ಲವೆಂಬ ಶಂಕೆಯಿಂದ ತಮ್ಮ ಮಂತ್ರಿಪದವಿಗೆ ರಾಜೀನಾಮೆ ಕೊಡುವವರಾಗಿರುವರೆಂದು ತೋರುತ್ತದೆ. ಇವರ ನಿರಂಕುಶಾಧಿಕಾರವು ಬಹಳ ಅನರ್ಥಕ್ಕೆ ಕಾರಣವಾಯಿತು. ಜರ್ಮನಿ ರಾಜ್ಯಕ್ಕೆ ಸೇರಿದ ರೂರು ಪ್ರಾಂತವನ್ನು ಇವರು ಬ್ರಿಟಿಷ್ ಅಮೇರಿಕೆ ಮೊದಲಾದ ಪ್ರಭುತ್ವದವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಆಕ್ರಮಿಸಿಕೊಂಡುದರಿಂದ ಯೂರೋಪು ಖಂಡದಲ್ಲಿ ಸಂಕಷ್ಟಸ್ಥಿತಿಯುಂಟಾಯಿತು. ಜರ್ಮನಿಯವರಿಂದ ನಷ್ಟಪರಿಹಾರದ್ರವ್ಯವನ್ನು ಬರಮಾಡಿಕೊಳ್ಳಲು ಅವಕಾಶವಾಗಲಿಲ್ಲವಾಗಿ ಜರ್ಮನಿಯನ್ನು ನಾಶಪಡಿಸುವ ಪ್ರಯತ್ನದಲ್ಲಿ ಫ್ರಾನ್ಸಿನ ಏಳ್ಗೆಗೆ ಧಾಳಿಮಾಡಿಕೊಂಡರು; ಪ್ರಪಂಚಶಾಂತಿಗೆ ಮಹೋಪದ್ರವನ್ನುಂಟುಮಾಡಿದರು. ಇಷ್ಟಾದರೂ ಪಾಂಕೇರವರು ತಮ್ಮ ಹಟವನ್ನು ಬಿಡಲಿಲ್ಲವಾದುದರಿಂದ ಅವರ ಈ ಹಟವೇ ಇಂಗ್ಲೆಂಡಿಗೂ ಇಟಲಿಗೂ ಕಂಟಕವಾಗಿ ಪರಿಣಮಿಸಿತು; ಕಡೆಯಲ್ಲಿ ಬೆಲ್ಜಿಯಮ್ಮು ಕೂಡ ಫ್ರಾನ್ಸಿನಿಂದ ಪೃಥಕ್ಕಾಗಬೇಕಾಯಿತು. ಇಷ್ಟಾದರೂ ಪಾಂಕೇರವರ ಪಕ್ಷವು ಪ್ರಬಲವಾಗಿದ್ದುದರಿಂದಲೇ ಅವರು ಹಾಡಿದ್ದೆಲ್ಲಾ ರಾಗವಾಗಿದ್ದಿತು. ಆದರೆ ಈಗ ಅವರ ಪಕ್ಷವು ದುರ್ಬಲವಾಗಿ ಪ್ರತಿಪಕ್ಷವು ಪ್ರಬಲವಾದುದರಿಂದ ಅವರ ಪ್ರತಿಭೆಯು ಸಾಗುವುದಿಲ್ಲವೆಂಬುದನ್ನು ಅರಿತು ತಮ್ಮ ಮಂತ್ರಿಪದವಿಗೆ ರಾಜೀನಾಮೆಕೊಡಲು ನಿರ್ಧರಿಸಿರುವುದು ಸಹಜವೇ ಆಗಿದೆ. ಇವರು ಬಿಟ್ಟನಂತರ ಫ್ರಾನ್ಸಿನ ರಾಜ್ಯಾಡಳಿತಕ್ರಮವು ಕಾಲಸ್ಥಿತಿಗನುಗುಣವಾಗಿ ಬದಲಾಯಿಸಿ ಯೂರೋಪು ಖಂಡದಲ್ಲಿ ಶಾಂತಿಸ್ಥಾಪನವಾಗುವುದೋ ಏನೋ? ಮುಂದೆ ಫ್ರಾನ್ಸಿನ ಈ ಮುಖ್ಯಮಂತ್ರಿ ಪದವಿಗೆ ಎಂತಹವರು ಬರುತ್ತಾರೋ ಮತ್ತು ಅದರ ಪರಿಸ್ಥಿತಿಯು ಹೇಗೆ ಪರಿಣಮಿಸುವುದೋ ನೋಡಬೇಕಾಗಿದೆ.

ವೈಕಮ್ಮಿನ ಸತ್ಯಾಗ್ರಹಿಗಳಿಗೆ ಮಹಾತ್ಮರ ಉಪದೇಶ.

ವೈಕಮ್ಮಿನಲ್ಲಿ ದೇವಸ್ಥಾನಗಳ ಮುಂಗಡೆಯ ಮಾರ್ಗಗಳಲ್ಲಿ ಅಸ್ಪೃಶ್ಯರು ಸಂಚರಿಸಕೂಡದೆಂದಿರುವ ನಿರ್ಬಂಧ ನಿವಾರಣೆಗಾಗಿ ಅಂತ್ಯಜರಿಂದಲೂ, ಅವರಲ್ಲಿ ಸಾನುಭೂತಿಯುಳ್ಳವರಿಂದಲೂ ನಡಿಸಲ್ಪಡುತ್ತಿರುವ ಸತ್ಯಾಗ್ರಹ ವಿಚಾರದಲ್ಲಿ "ಕ್ರಿಮಿಕೀಟಗಳು ಯಾವ ನಿರ್ಬಂಧವಿಲ್ಲದೆಯೂ ಸಂಚರಿಸುವಂತಹ ಮಾರ್ಗಗಳಲ್ಲಿ ಮಾನವ ಸೋದರರಾದ ಅಂತ್ಯಜರು ಸಂಚರಿಸಕೂಡದೆಂಬ ನಿರ್ಬಂಧದಿಂದ ವಿಮುಕ್ತರಾಗಲು ಆ ವರ್ಗದವರು ಸತ್ಯಾಗ್ರಹವ್ರತಶೀಲರಾಗಿ ದೌರ್ಜನ್ಯರಹಿತವಾದ ಕಾರ್ಯಾಚರಣೆ ಮಾಡುವುದು ಧರ್ಮವೂ ಅತ್ಯವಶ್ಯಕವೂ ಆಗಿರುತ್ತದೆ. ಆದರೆ ಕ್ರೈಸ್ತರು, ಮಹಮ್ಮದೀಯರು ಮೊದಲಾದವರು ಈ ಸತ್ಯಾಗ್ರಹಾಚರಣೆಯಲ್ಲಿ ಭಾಗಿಗಳಾಗುವುದೂ, ವ್ರತಶೀಲರಿಗೆ ಧನ ದ್ರವ್ಯಗಳನ್ನು ಸಹಾಯಮಾಡುವುದೂ ಅಕಾಲೀಜನರಿಂದ ಅನ್ನೋದಕ ಸ್ವೀಕಾರಮಾಡುವುದೂ ಬಹಳ ಅನುಚಿತವು. ವ್ರತಶೀಲರಾದ ಅಸ್ಪೃಶ್ಯ ಸತ್ಯಾಗ್ರಹಿಗಳು ತಮ್ಮ ದೇಶದವರಿಂದಲ್ಲದೆ ಅನ್ಯ ದೇಶದವರಿಂದ ಸಹಾಯವನ್ನಪೇಕ್ಷಿಸತಕ್ಕುದಲ್ಲವು." ಎಂದು ಮೊದಲಾಗಿ ಉಪದೇಶಿಸಿರುವರು. ಹೊಟ್ಟೆನೋವನ್ನನುಭವಿಸುವವರು ಮದ್ದನ್ನು ತೆಗೆದುಕೊಳ್ಳಬೇಕಾಗಿರುವುದಲ್ಲದೆ ಆರೋಗ್ಯವಾಗಿರುವವರು ತೆಗೆದುಕೊಳ್ಳಬೇಕಾದ ಕಾರಣವಿಲ್ಲವಾದುದರಿಂದ ಅಸ್ಪೃಶ್ಯೇತರಜನರು ಮಹಾತ್ಮರ ಉಪದೇಶವನ್ನು ಲಾಲಿಸಿ ಆದರಂತೆ ಆಚರಿಸತಕ್ಕುದು ಯುಕ್ತವಾಗಿದೆ.

ರಾಜಕುಮಾರ ದೇಶರಾಜ ಅರಸಿನವರ ವಿವಾಹಮಹೋತ್ಸವ.

ಶ್ರೀಮನ್ ಮಹಾರಾಜರವರು ತಮ್ಮ ಸೋದರಳಿಯಂದರಾದ ರಾಜಕುಮಾರ ದೇಶರಾಜ ಅರಸಿನವರಿಗೆ ಸರದಾರ್ ಎಂ. ಗೋಪಾಲರಾಜ ಅರಸಿನವರ ಜ್ಯೇಷ್ಠ ಪುತ್ರಿ ಸ|| ಕುಂ|| ಶೋಭಿತೆಯರಾದ ಸೌ|| ಲಕ್ಷ್ಮಮ್ಮಣ್ಣಿಯವರನ್ನು ತಂದುಕೊಂಡು ಕಳೆದ ತಾ|| 19ರ ಮಧ್ಯಾಹ್ನ 3¼ ಗಂಟೆಯಿಂದ 3¾ ಗಂಟೆಯೊಳಗೆ ಸಲ್ಲುವ ಕನ್ಯಾಲಗ್ನದಲ್ಲಿ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದ ಅರಮನೆಯ ವಿವಾಹಮಂಟಪದಲ್ಲಿ ವಿಜೃಂಭಣೆಯಿಂದ ವಿವಾಹಮಹೋತ್ಸವವನ್ನು ಜರುಗಿಸಿದರು. ಬರೋಡಾ ಸಂಸ್ಥಾನದ ಪ್ರತಿನಿಧಿಗಳೂ, ಅನಂತಶಯನದ ಯುವರಾಣಿ ದಂಪತಿಗಳೂ, ಕೂಚ್‌ಬಿಹಾರ್ ಮಹಾರಾಣಿ ರೀಜಂಟರವರೂ ಬಾಲ ಮಹಾರಾಜರವರೂ, ರೆಸಿಡೆಂಟರು ಮೊದಲಾಗಿ ವಿರೋಪ್ಯಾತಿಥಿಗಳೂ, ರಾಜಬಂಧುವರ್ಗದವರೂ ದಿವಾನರು, ಕೌನ್ಸಿಲರುಗಳು, ಚೀಫ್ ಸೆಕ್ರೆಟರಿ, ರೆವಿನ್ಯೂಸೆಕ್ರೆಟರಿ ಶಾಖಾಧಿಕಾರಿಗಳು ಮೊದಲಾಗಿ ಸರ್ಕಾರಿಯಾಧಿಕಾರಿಗಳೂ, ಲಾಯರುಗಳು ವರ್ತಕರುಗಳು ಮೊದಲಾಗಿ ಪುರಪ್ರಮುಖರುಗಳೂ ಬಂದಿದ್ದರು. ರಾಜಕುಮಾರರು ಆನೆಮೇಲಿನ ಅಂಬಾರಿಯಮೇಲೆ ಕುಳಿತು ಸಕಲ ಬಿರುದಾವಳಿಗಳೊಡನೆ ಅರಮನೆಯ ಪಶ್ಚಿಮಬಾಗಲಿಂದ ಹೊರಟು ಲ್ಯಾನ್ಸ್‌ಡೌನ್ ಬಜಾರಿನ ಪೂರ್ವದಿಕ್ಕಿನ ಮಾರ್ಗವಾಗಿ ಶ್ರೀಮನ್ಮಹಾರಾಜರವರ ಪ್ರತಿಮೆಯ ಪಕ್ಕದಲ್ಲಿ ಕೋಟೆಯ ಉತ್ತರ ದಿಕ್ಕಿನ ಮಹಾದ್ವಾರದಿಂದ ಉತ್ಸವಗೊಂಡು ವಿವಾಹಮಂಟಪಕ್ಕೆ ದಯಮಾಡಿಸಿದ ಕೊಂಚ ಹೊತ್ತಿನಮೇಲೆ ಶ್ರೀಮನ್ ಮಹಾರಾಜರವರು ಜರತಾರಿರುಮಾಲು ಅಂಗರೇಕ ಮತ್ತು ಪಂಚೆಗಳನ್ನು ಧರಿಸಿಕೊಂಡು ಚಿತ್ತೈಸಿ ವಿವಾಹಮಂಟಪದ ಬಲಗಡೆ ಕೊಂಚದೂರದಲ್ಲಿ ರಜತಾಸನದ ಮೇಲೆ ಮಂಡಿಸಿದರು. ಸಭಿಕರು ಪ್ರತ್ಯುತ್ಥಾನರಾಗಿ ಮರ್ಯಾದಿಸಿ ಕುಳಿತುಕೊಂಡರು. ಸರದಾರ್ ಗೋಪಾಲರಾಜ ಅರಸಿನವರೂ ಗೌಸಣಿಗೆಯಲ್ಲಿದ್ದ ಅವರ ಧರ್ಮಪತ್ನಿಯವರೂ ಅರಮನೆಯ ಪುರೋಹಿತರ ವಿಧ್ಯುಕ್ತವಾದ ಕರ್ಮಾಚರಣೆಯಿಂದ ತಮ್ಮ ಕುಮಾರಿಯವರನ್ನು ಶ್ರೀಮನ್ ಮಹಾರಾಜರವರ ಅನುಮತಿಯನ್ನು ಪಡೆದು ಧಾರೆಯೆರೆದುಕೊಟ್ಟರು. ಭಕ್ಷಿ ಮ|| ಎಚ್. ಲಿಂಗರಾಜ ಅರಸಿನವರು ವರನ ಕಡೆಯವರಾಗಿದ್ದುಕೊಂಡು ಧಾರೆಯೆರಸಿಕೊಂಡರು. ಆಸ್ಥಾನ ಸಂಗೀತ ವಿದ್ವಾಂಸರುಗಳಿಂದ ವೀಣೆ ಜಲತರಂಗು, ಹಾರ್ಮೋನಿಯಂ ಪಿಟೀಲು ತಬಲ ಮೊದಲಾದ ವಾದ್ಯಗಳಿಂದ ಕೂಡಿದ ಕಾನ್ಸರ್ಟ್ ಎಂಬ ಸಂಗೀತವಾದ್ಯ

ರ ಚಿತ್ತಾಕರ್ಷಣಮಾಡುತ್ತಿದ್ದಿತು. ಮಹಾಮಾ ವಾಣಿವಿಲಾಸ ಸನ್ನಿಧಾನದವರು, ಮಹಾರಾಣಿ ರು, ರಾಜಕುಮಾರಿಯರುಗಳು ಮೊದಲಾಗಿ ರಾಣಿವಾಸ ರೂ, ಅನಂತಶಯನದ ರಾಣಿಯವರೂ, ಕೂಚ್‌ಬಿಹಾರ್ ಹಾರಾಣಿಯರೂ, ವಿರೋಪ್ಯಾತಿಥಿಗಳೂ ವಿವಾಹಮಂಟಪದ ಲ್ಭಾಗದಲ್ಲಿ ಕುಳಿತು ವಿವಾಹಕಾರ್ಯಕ್ರಮವನ್ನು ನೋಡಿ ತ್ತ ದಿವ್ಯವಾದ ವಾದ್ಯಗಳ ವಾದನವನ್ನು ಕೇಳಿ ಹಸನ್ಮುಖಗಳಿಂದ ಸಂತೋಷವನ್ನು ವ್ಯಕ್ತಗೊಳಿಸು ದ್ದರು. ಅರಸುಕುಲದ ಯಜಮಾನರಾದ ಮ|| ಎಂ. ಎಫ್. ರಾಜ ಅರಸಿನವರಿಗೂ ವಂಶಾವಳಿ ಕರ್ಣೀಕರಿಗೂ ಜ್ಯೋಡಿಯ ಕಿಲ್ಲತ್ತುಗಳು ಕೊಡಲ್ಪಟ್ಟ ಮೇಲೆ, ಶ್ರೀಮನ್ ಹಾರಾಜರವರು ಮತ್ತು ಮಾತೃಶ್ರೀಯವರಿಂದ ನೂತನ ಪತಿಗಳಿಗೆ ಆಶೀರ್ವದಿಸಲ್ಪಟ್ಟ ಅಮೋಘವಾದ ಖಿಲ್ಲತ್ತುಗಳು ಸಲ್ಪಟ್ಟ ತರುವಾಯ ಬರೋಡಾ, ಕೂಚ್‌ಬಿಹಾರ್ ಅನಂ ಯನ ರಾಜರುಗಳ ಕಡೆಯ ಖಿಲ್ಲತ್ತುಗಳು ಅವರವರ ಪ್ರತಿ ಗಳ ಮೂಲಕವೂ, ಸರದಾರರುಗಳಾದ ಕೈ|| ಕಾಂತರಾಜ ನವರ ಕುಮಾರರು, ಲಕ್ಷ್ಮೀಕಾಂತರಾಜ ಅರಸಿನವರು, ಗಳಾದ ದಳವಾಯಿ ನಂಜರಾಜ ಅರಸಿನವರು, ದರ್ಬಾರ್ ಕ್ಷಿ ಲಿಂಗರಾಜ ಅರಸಿನವರು ಮೊದಲಾಗಿ ರಾಜಬಂಧು ಂದಲೂ ವಸ್ತ್ರಾಭರಣಾದಿ ಉಡುಗೆರೆಗಳು ಓದಿಸಲ್ಪ ವು. ತರುವಾಯ ದಿವಾನರಾದಿಯಾಗಿ ಸಭಿಕರಿಗೆ ಕ್ರಮ ತು ಪುಷ್ಪಾಹಾರ ತಾಂಬೂಲಗಳೂ ಸುವರ್ಣದ ಕಾಸು ದಕ್ಷಿಣೆಯೂ ಕೊಡಲ್ಪಟ್ಟಮೇಲೆ ರಾಜಕುಮಾರ ದಂಪತಿ ಶ್ರೀಮನ್ಮಹಾರಾಜರವರೂ ಸಭೆಯಿಂದ ತೆರಳಿದ ಮೇಲೆ ಯು ವಿಸರ್ಜಿಸಲ್ಪಟ್ಟಿತು. ಈ ತಾ|| 19ರ ದಿವಸ ರಾಜ ನಿಯ ಸಮಸ್ತಜಾತಿಯ ಬಡಬಗ್ಗರಿಗೆ ಮೃಷ್ಟಾನ್ನಭೋಜ ಮಾಡಿಸಲ್ಪಟ್ಟು ವಸ್ತ್ರದಾನ ಮಾಡಲ್ಪಟ್ಟಿತು. ಬ್ರಾಹ್ಮಣ ಪುರುಷರುಗಳಿಗೆ ಕೋಟೆಯ ದೇವಸ್ಥಾನಗಳಲ್ಲಿ ದಕ್ಷಿಣೆ ಕೊಡಲ್ಪಟ್ಟಿತು. ಆ ದಿವಸರಾತ್ರಿ ಅರಮನೆಯ ಕೋಟೆ ಗಲುಗಳು, ಟವರ್ ಹಾಲು, ಗಡಿಯಾರ ಇವುಗಳ ಮೇಲೆ ಪೋತ್ಸವ ನಡೆಯಿಸಲ್ಪಟ್ಟಿತು. ಮಂಗಳವಾರ ಸಾಯಂಕಾಲ ಮುಂಡಿ ಜಂಖಾನಾವಿಹಾರಸ್ಥಳಕ್ಕೆ ಆಂಗ್ಲ ಹಿಂದೂ ಅತಿಥಿ ಆಹ್ವಾನಿಸಲ್ಪಟ್ಟಿದ್ದು ಅಲ್ಪಾಹಾರದಿಂದಲೂ ವಾದ್ಯಶ್ರವ ದಿಂದಲೂ ಸತ್ಕರಿಸಲ್ಪಟ್ಟರು. ಬಂದಿದ್ದ ಅತಿಥಿಗಳೆಲ್ಲರೂ ಸ್ವ ಗಳಿಗೆ ತೆರಳಿದರು. ಈ ತಾ|| 28ನೆಯ ಬುಧವಾರ ರಾತ್ರಿ ತನ ದಂಪತಿಗಳು ಆನೆಯಮೇಲಣ ಅಂಬಾರಿಯಲ್ಲಿ ಕುಳಿತು ರಂಗಸೈನ್ಯದಿಂದಲೂ ವಾದ್ಯವೈಭವದಿಂದಲೂ ವಿದ್ಯು ಪಾವಳಿಗಳಿಂದಲೂ, ಬಂಧುವರ್ಗದಿಂದಲೂ, ರಾಜಧಾನಿ ಮುಖ್ಯವೀಧಿಗಳಲ್ಲಿ ಉತ್ಸವಗೊಂಡು ವರನ ಗೃಹಪ್ರವೇಶ ಡುವುದಾಗಿ ತಿಳಿಯಬರುತ್ತದೆ.

ಸ್ವದೇಶದ ವೃತ್ತಾಂತಗಳು

ತುಮಕೂರು ತಾಲ್ಲೂಕು ಅಮಲ್ದಾರರಾದ ಮ|| ಬಿ. ಗಯ್ಯನವರಿಗೆ 3 ತಿಂಗಳು ಮತ್ತು 25 ದಿನಗಳ ಪ್ರಿವಿಲೇಜ್ ವೂ, ಅನಂತರ 2 ತಿಂಗಳು ಮತ್ತು 5 ದಿನಗಳವರೆಗೆ ಪೂರ್ತಿ ಬಳದ ಮೇಲೆ ಫರ್ಲೋರಜವೂ, ತರುವಾಯ 1½ ವರ್ಷ ವರೆಗೆ ಅರ್ಧಸಂಬಳದ ಮೇಲೆ ಫರ್ಲೋರಜವೂ ಕೊಡಲ್ಪ ರುತ್ತದೆ.

ಕೋಲಾರ ಡಿ|| ಮುಳಬಾಗಲು ತಾಲ್ಲೂಕಿನಲ್ಲಿ ನಡೆದಿ ವ ರೀಸೆಟ್ಲ್‌ಮೆಂಟು ಸರ್ಕಾರದವರಿಂದ ಅನುಮೋದಿತವಾಗಿ ನ್ನು 30 ವರ್ಷಗಳ ಕಾಲದವರೆಗೆ ಬದಲಾಯಿಸಲ್ಪಡುವದಿಲ್ಲ ಬ ಭರವಸೆಯಿಂದ ಈ ಜುಲೈ ತಾ|| 1 ರಿಂದ ಆಚರಣೆಗೆ ಲ್ಪಡುವುದು. ಈ ಹೊಸ ಸೆಟ್ಲ್‌ಮೆಂಟಿನ ಪ್ರಕಾರ ವಿಧಾ ಕವಾಗಿರುವ ಹೆಚ್ಚುದರದ ಕಂದಾಯದಿಂದ ಸರ್ಕಾರಕ್ಕೆ 18 ರೂಪಾಯಿಗಳು ಹೆಚ್ಚಾಗಿ ಉತ್ಪನ್ನವಾಗುವುದು.

ರಾಜಧಾನಿಯಲ್ಲಿ ಆಚೆ ಬುಧವಾರ ಮತ್ತು ಗುರುವಾರ ತ್ರಿ ತಕ್ಕಮಟ್ಟಿಗೆ ಮಳೆಯಾಯಿತು. ಅಲ್ಲಿಂದ ಪ್ರತಿದಿನ ತ್ರಿ ಜಿನುಗುಮಳೆಯಾಗುತ್ತಿದೆ ವಿನಾ ದೊಡ್ಡಮಳೆ ಬರಲಿ ಲ್ಲ. ಇದರಿಂದ ದಗೆಯು ಸ್ವಲ್ಪಮಟ್ಟಿಗೆ ಕಡಿಮೆಯಾಗಿರು ದೆ, ಮತ್ತು ವಾಂತಿಭೇದಿ ರೋಗವು ಶಮನವಾದಂತೆ ತೋ ತ್ತದೆ. ಗುಂಡ್ಲುಪೇಟೆ ಚಾಮರಾಜನಗರ ತಾಲ್ಲೂಕುಗಳಲ್ಲಿ ಳೆಯು ವಿಶೇಷವಾಗಿ ಬಂದು ಕೆರೆಕುಂಟೆಗಳೆಲ್ಲವೂ ತುಂಬಿರು ದಾಗಿಯೂ ಸಂಸ್ಥಾನದ ಇತರ ಕಡೆಗಳಲ್ಲೂ ಈಚೀಚೆಗೆ ಳೆಯಾಗಿ ನೀರಿನ ಕೊರತೆಯು ಕಡಿಮೆಯಾಗಿರುವುದಾಗಿ ಯೂ ಕೇಳುತ್ತೇವೆ. ಆಚೆವಾರದಲ್ಲಿ ಶ್ರೀರಂಗಪಟ್ಟಣ ತಾ|| ರಕೆರೆಯಲ್ಲಿ ಸಿಡಿಲುತಗಲಿ ಒಬ್ಬಿಬ್ಬ ಮನುಷ್ಯರು ಸತ್ತರೆಂದೂ 5 ಜನರು ಗಾಯವಡೆದಿರುವರೆಂದೂ ವರ್ತಮಾನವಿದೆ.

ರಾಜಧಾನಿಯಲ್ಲಿ ಪ್ರಸಿದ್ಧ ನೀಲಗಿರಿ ಮನೆತನದವರಾದ ಶ್ರೀಮಂತ ಮದ್ದಣ್ಣ ಉರಫ್ ಮೊಗಣ್ಣನವರು ಕೆಲ ಕಾಲ ದಿಂದಲೂ ಮೂತ್ರವ್ಯಾಧಿಗ್ರಸ್ತರಾಗಿದ್ದು ಎಷ್ಟೋ ಔಷಧೋಪ ಚಾರವನ್ನು ಹೊಂದಿದಾಗ್ಯೂ ಗುಣವನ್ನು ಹೊಂದದೆ ಮೊನ್ನೆ ಯ ದಿವಸ ಸ್ವರ್ಗಸ್ಥರಾದರೆಂದು ತಿಳುಹಲು ಬಹಳವಾಗಿ ವಿಷಾ ದಿಸುತ್ತೇವೆ. ಇವರು ಬಹಳ ನಿಗರ್ವಿಗಳೂ, ಉದಾರಿಗಳೂ, ಸ್ನೇಹಪರರೂ ಸಾಧುಸ್ವಭಾವದವರೂ ಆಗಿದ್ದರು. ಇವರಿಗೆ ಮರಣಕಾಲದಲ್ಲಿ ಪ್ರಾಯಶಃ 61 ವರ್ಷ ವಯಸ್ಸಾಗಿದ್ದಿತು. ಇವರಿಗೆ ಒಬ್ಬ ಪುತ್ರನೂ, ನಾಲ್ವರು ಪುತ್ರಿಯರೂ ಇರುವರು. ಇವರ ಮರಣದಿಂದ ಕು[illegible]ಗರ ಸಮಾಜಕ್ಕೇ ದೊಡ್ಡ ನಷ್ಟವಾಯಿತೆಂದು ಹೇಳಬಹುದು. ಇವರ ಆತ್ಮಕ್ಕೆ ಶಾಂತಿಯೂ ವಿಯೋಗದುಃಖಭಾಜನರಾದ ಮಕ್ಕಳುಗಳಿಗೆ ದುಃಖಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ರಿಟೈರ್ಡ್ ಸಬ್‌ಜಡ್ಜಿಯರೂ, ಮೈಸೂರು ನ್ಯಾಯವಿಧಾಯಕಸಭಾ ಮೆಂಬರೂ ಒಕ್ಕಲಿಗರಸಂಘದ ಅಧ್ಯಕ್ಷರೂ ಆದ ರಾವ್‌ಸಾಹೇಬ್ ಚೆನ್ನಯ್ಯನವರ ಪುತ್ರಿ ಸೌಭಾಗ್ಯವತಿ ಸಿ. ಲಕ್ಷ್ಮಮ್ಮನವರು ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ರಸಾಯನಶಾಸ್ತ್ರವ (ಕೆಮಿಸ್ಟ್ರಿಯ)ನ್ನು ಐಚ್ಛಿಕಭಾಗವನ್ನಾಗಿ ತೆಗೆದುಕೊಂಡು ವ್ಯಾಸಂಗಮಾಡಿ ಮದ್ರಾಸು ವಿಶ್ವವಿದ್ಯಾಲಯದ ಬಿ.ಎ., ಪರೀಕ್ಷೆಯಲ್ಲಿ ಉತ್ತೀರ್ಣರಾದರೆಂದು ತಿಳುಹಲು ಬಹಳವಾಗಿ ಸಂತೋಷಿಸುತ್ತೇವೆ. ಬಿ.ಎ. ಪ್ರಶಸ್ತಿಯನ್ನು ಪಡೆದಿರುವ ನಮ್ಮ ಮೈಸೂರಿನ ಸ್ತ್ರೀಯರಾರೂ ಈ ರಸಾಯನ ಶಾಸ್ತ್ರಭಾಗವನ್ನು ತೆಗೆದುಕೊಂಡಿರಲಿಲ್ಲವು. ಸೌ|| ಲಕ್ಷ್ಮಮ್ಮನವರು ಆ ಶಾಸ್ತ್ರಭಾಗವನ್ನು ತೆಗೆದುಕೊಂಡು ಉತ್ತಮತರವಾಗಿ ಉತ್ತೀರ್ಣರಾಗಿರುವುದರಿಂದ ನಾವು ಅವರನ್ನು ಅಭಿನಂದಿಸಿ, ಈ ಶಾಸ್ತ್ರವು ವೈದ್ಯವಿದ್ಯಾಭ್ಯಾಸಕ್ಕೆ ವಿಶೇಷ ಸಹಾಯವಾಗಿರುವುದರಿಂದಲೂ, ಇನ್ನೂ ಚಿಕ್ಕವಯಸ್ಸಿನವರಾಗಿ ಅವಿವಾಹಿತರಾಗಿರುವುದರಿಂದಲೂ ಸೀಮೆಗೆ ಹೋಗಿ ವೈದ್ಯವಿದ್ಯೆಯನ್ನು ಅಭ್ಯಾಸಮಾಡಿ ಉಚ್ಚಪ್ರಶಸ್ತಿಯನ್ನು ಪಡೆದು ತಮ್ಮ ಮನೆತನಕ್ಕೂ ಕುಲಕ್ಕೂ ದೇಶಕ್ಕೂ ಕೀರ್ತಿಯನ್ನುಂಟುಮಾಡುವವರಾಗಲೆಂದು ಕೋರುತ್ತೇವೆ. ರಾ|| ಸಾ|| ಚೆನ್ನಯ್ಯನವರ ಜ್ಯೇಷ್ಠಪುತ್ರರಾದ ಮ|| ಜವರಯ್ಯನವರು ವನಶಾಖಾಧಿಕಾರಿಗಳಾದ ಮಿ|| ಕ್ರಂಬೀಗಲ್‌ರವರ ಅಸಿಸ್ಟೆಂಟಾಗಿರುವರಲ್ಲದೆ ಸೀಮೆಗೆಹೋಗಿ ಈ ವನಶಾಸ್ತ್ರವನ್ನು ಚೆನ್ನಾಗಿ ಪರಿಚಯಮಾಡಿಕೊಂಡು ಬಂದಿರುವರು. ತೃತೀಯಪುತ್ರರಾದ ಮ|| ಎಚ್. ಸಿ. ದಾಸಪ್ಪ, ಬಿ.ಎ., ಎಲ್‌ಎಲ್.ಬಿ., ಯವರು ರಾಜಧಾನಿಯಲ್ಲಿ ವಕೀಲರಾಗಿರುವರು. ಮತ್ತು ಪುತ್ರಿಯರಾದ ಲಕ್ಷ್ಮಮ್ಮನವರು ಈಗತಾನೆ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಹೀಗೆ ಪುತ್ರಪುತ್ರೀರತ್ನತ್ರಯಗಳನ್ನುಳ್ಳ ರಾವ್‌ಸಾಹೇಬರ ಜನ್ಮವೇ ಧನ್ಯವು.

ಭರತಖಂಡದ ವೃತ್ತಾಂತಗಳು.

ಒಬ್ಬ ಬೋರಾ ದೊಡ್ಡಮನುಷ್ಯನು ಮಹಾತ್ಮಾ ಗಾಂಧಿಯವರ ಮೂಲಕ ಮೋಪ್ಲಾ ಕಷ್ಟನಿವಾರಣಾಧನರಾಶಿಗೆ 500 ರೂ. ಗಳನ್ನು ಕಳುಹಿಸಿಕೊಟ್ಟಿರುತ್ತಾನೆ.

ಎಸ್. ವಿ. ರಾಜಗೋಪಾಲಾಚಾರ್ಯರು ಕುಂಭಕೋಣ ಮತ್ತು ಪಾಪನಾಶಿನಿ ತಾಲ್ಲೂಕುಗಳಲ್ಲಿ ಸಂಚರಿಸುತ್ತ ತಂಜಾವೂರಿನಲ್ಲಿ ಹೆಚ್ಚು ಕಂದಾಯವು ಕೊಡಲ್ಪಡದಿರುವುದರ ವಿಚಾರವಾಗಿ ನಡಿಯುತ್ತಿರುವ ಚಳವಳಿಯನ್ನು ಕುರಿತು ಜನರಿಗೆ ಬೋಧಿಸುತ್ತಿರುವರು.

100 ಜನ ವೈದಿಕರು ಇಂಗ್ಲೆಂಡನ್ನು ನೋಡಿಕೊಂಡು ಬರಲು ಹೊರಡುವುದಾದರೆ ಅಂಥವರ ಸಲುವಾಗಿಯೇ ಒಂದು ಪ್ರತ್ಯೇಕ ಹಡಗನ್ನು ಮುಂದಿನ ಜುಲೈ 15 ರೊಳಗಾಗಿ ಬೊಂಬಾಯಿನಿಂದ ಹೊರಡಿಸುವುದಾಗಿ ಏರ್ಪಾಡುಮಾಡಿರುತ್ತಾರೆ.

ದೇಶಭಕ್ತ ಸಿ. ಆರ್. ದಾಸ್‌ರವರು ತಮ್ಮ ಶತ್ರುಪಕ್ಷದವರ ಆಕ್ಷೇಪದ ಮೇಲೆ ಬಂಗಾಳಾ ನ್ಯಾಯವಿಧಾಯಕ ಸಭಾ ಸಭಿಕಸ್ಥಾನವನ್ನು ಕಳೆದುಕೊಂಡು ಪುನರಾವೃತ್ತಿಯ ಚುನಾವಣೆಗೆ ಅಭ್ಯರ್ಥಿಗಳಾಗಿ ನಿಂತಿದ್ದು ಬಹು ಮತಗಳನ್ನು ಪಡೆದು ಚುನಾವಣೆಗೊಂಡರು.

ಮಧುರೆಯಲ್ಲಿ ಕಳೆದ ತಾ|| 10ರ ಸಾಯಂಕಾಲ ಪ್ರಚಂಡಮಾರುತವೆದ್ದು ಅನೇಕ ಮರಗಳನ್ನೂ ತಂತಿಯ ಕಂಬಗಳನ್ನೂ ಬುಡಮೇಲಾಗಿ ಉರುಳಿಸಿಬಿಟ್ಟಿತು. ಅಲ್ಲದೆ ಕೆಲ ಬಡವರ ಮನೆಗಳು ಬಿದ್ದುಹೋದವು ಮತ್ತು ಮನೆಗಳ ಹಾಗೂ ಮದುವೆ ಚಪ್ಪರಗಳ ಮೇಲುಹೊದ್ದಿಕೆಗಳು ಹಾರಿಸಲ್ಪಟ್ಟುವು. ಇಷ್ಟಾದರೂ ಪ್ರಾಣಾಪಾಯವೇನೂ ಆಗಲಿಲ್ಲವು.

ಮನ್ನಾರುಗುಡಿಯಲ್ಲಿ ಜನರು ಸರ್ಕಾರಕ್ಕೆ ಕಂದಾಯವನ್ನು ಸಲ್ಲಿಸದಂತೆ ಬೋಧಿಸುತ್ತಿರುವ ಡಾ|| ಮುದ್ದುಕೃಷ್ಣ ಅಯ್ಯರ್‌ರವರು ಕಂದಾಯವನ್ನು ವಸೂಲ್ಮಾಡುತ್ತಿದ್ದ ಸರ್ಕಾರಿ ಮನುಷ್ಯನಿಗೆ ಆತಂಕಪಡಿಸಿದರೆಂದೂ ಅವನು ಕಂದಾಯದ ಬಾಕಿಗಾಗಿ ಹಿಡಿದುಕೊಂಡಿದ್ದ ಬೈಸಿಕಲ್ಲನ್ನು ಬಲವಂತದಿಂದ ಕಿತ್ತುಕೊಂಡರೆಂದೂ ದೋಷಾರೋಪಿಸಲ್ಪಟ್ಟು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಯಾಗಿ 100 ರೂ. ಅರ್ಥದಂಡ ವಿಧಿಸಲ್ಪಟ್ಟರು.

ಭೂಪಾಲ ಸಂಸ್ಥಾನವು ಮಹಮ್ಮದೀಯರಾದ ಬೇಗಂ ರಾಣಿಯವರ ಆಳ್ವಿಕೆಯಲ್ಲಿದೆ. ಆ ದೇಶದಲ್ಲಿ ಹಿಂದುಗಳಾಗಿದ್ದು ಮಹಮ್ಮದೀಯ ಮತಕ್ಕೆ ಸೇರಿಹೋದವರು ಪುನಃ ಹಿಂದೂ ಮತವನ್ನು ಅವಲಂಬಿಸುವುದಾದರೆ ಅಂಥವರು ಶಿಕ್ಷಾರ್ಹರಾಗುವರೆಂದು ಅಲ್ಲಿಯ ಸರ್ಕಾರದ ಅಪ್ಪಣೆಯಾಗಿರುವುದು. ಈ ಹುಕುಂ ಕೇವಲ ಅನ್ಯಾಯವಾದದ್ದೆಂದು ಅಲ್ಲಿನ ಹಿಂದೂ ಸಭೆಯವರು ಸ್ವಾಮಿ ಸಂಪೂರ್ಣಾನಂದರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ತೀರ್ಮಾನಮಾಡಿರುತ್ತಾರೆ.

ಗೈಬಂದ ಸಮೀಪಗ್ರಾಮವಾದ ಬಾಲೂ ಎಂಬಲ್ಲಿ ಸರ್ವತೀವೈಷ್ಣವಿ ಎಂಬ ಹುಡುಗಿಯನ್ನು ನೆಂಟರಮನೆಗೆ ಕರೆದುಕೊಂಡು ಹೋಗುತ್ತೇನೆಂದು ಅವಳ ಸಮೀಪ ಬಂಧು ಒಬ್ಬನು ಆಶೆಹುಟ್ಟಿಸಿ ರಾತ್ರಿ ವೇಳೆಯಲ್ಲಿ ಮನೆಯಿಂದ ಹೊರಡಿಸಿಕೊಂಡುಬಂದು ಇಬ್ಬರು ಮಹಮ್ಮದೀಯರ ಸಹಾಯದಿಂದ ಆಕೆಯನ್ನು ಊರಹೊರಗಿನ ಹೊಲಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಆಕೆಯನ್ನು ಹಿಂಸಿಸಿ ಒಬ್ಬ ವ್ಯಭಿಚಾರಿಣಿಗೆ 30 ರೂ. ಕ್ರಯಕ್ಕೆ ಮಾರಿಬಿಟ್ಟರು. ಆ ಹುಡುಗಿಯು ಈಗ ಶಿಶುಸಹಾಯ ಸಂಘದವರ ಪೋಷಣೆಯಲ್ಲಿರುವಳು ಮತ್ತು ಅಪರಾಧಿಗಳು ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ವಿದೇಶದ ವೃತ್ತಾಂತಗಳು.

ಲಂಡನ್ನಿನ ಖಜಾನೆಯ ವ್ಯವಹಾರದಲ್ಲಿರುವ ನೋಟುಗಳಿಗಿಂತಲೂ ಬರ್ಲಿನ್ನಿನ ನೋಟುಗಳು ಬಹಳ ಕಶ್ಮಲವಾಗಿರುವುವೆಂತಲೂ ಈ ಕಶ್ಮಲವಾದ ನೋಟುಗಳಲ್ಲಿ 1,50,000 ವಿಷಮಶೀತಜ್ವರೋತ್ಪಾದಕಗಳಾದ ಕ್ರಿಮಿಗಳು ಸೇರಿಕೊಂಡಿರುವುವೆಂತಲೂ ಕ್ರಿಮಿಪರಿಶೋಧಕರಿಂದ ಕಂಡುಹಿಡಿಯಲ್ಪಟ್ಟಿರುತ್ತದೆ.

ಲಂಡನ್ ನಗರದಲ್ಲಿರುವ ಡಾಕ್ಟರ್ ಕ್ರಿಸ್ಟೊಫರ್‌ಸನ್ ಎಂಬ ವೈದ್ಯರು ಮನುಷ್ಯನ ರಕ್ತವನ್ನು ಪರೀಕ್ಷಿಸಿ, ಅದರ ಶಕ್ತಿಯನ್ನು ಕುಂದಿಸುವ ಕ್ರಿಮಿವರ್ಗಗಳು ರಕ್ತದಲ್ಲಿ ಸೇರದಂತೆ ನೋಡಿಕೊಂಡರೆ ಮನುಷ್ಯನ ಆಯಸ್ಸು ಸಾಮಾನ್ಯವಾಗಿ 300-400 ವರ್ಷಗಳಾಗಬಹುದೆಂದು, ಕೆಲವು ಸಂದರ್ಭಗಳಲ್ಲಿ 1000 ವರ್ಷದ ವರೆಗೂ ಜೀವಿಸಬಹುದೆಂದೂ ತಿಳಿಸಿರುತ್ತಾರೆ.

ಗ್ರೀಸದಲ್ಲಿ ಮೂನಾಚಿಲ್ ಎಂಬ ಊರಿಗೆ ಸಮೀಪವಾಗಿರುವ ಒಂದು ಬೆಟ್ಟವು ಅಲ್ಲಿ ಆದ ಅಪಾರವಾದ ಮಳೆಯಿಂದ ಎತ್ತರದಿಂದ ತಗ್ಗಾದ ಕಣಿವೇ ಪ್ರಾಂತಕ್ಕೆ ಮೆಲ್ಲಗೆ ಜರುಗುತ್ತಿದೆ. ದಾರಿಯಲ್ಲಿರುವ ಊರಿನವರು ಊರನ್ನು ಬಿಟ್ಟು ಹೋಗುತ್ತಿರುವರು. ಅಲ್ಲಲ್ಲಿ ಭೂಮಿಯು ಬಿರುಕುಬಿಟ್ಟು ಪ್ರವಾಹಗಳು ಹೊರಡುತ್ತಿರುವವು. ಬೆಟ್ಟವು ಇನ್ನು ಮುಂದಕ್ಕೆ ಜರುಗಿ ಕಣಿವೆಯಲ್ಲಿ ಕುಳಿತುಬಿಟ್ಟರೆ ಅಲ್ಲಿ ಹರಿಯುವ ನದಿಗೆ ಪ್ರತಿಬಂಧಕವಾಗಿ ಒಂದು ದೊಡ್ಡ ಸರೋವರ ಹುಟ್ಟುವುದೆಂದೂ, ಮೂನಾಚಿಲ್ ಊರೂ, ಅದರ ನಾಲ್ಕಾರು ಕೈಗಾರಿಕೆ ಕಾರ್ಖಾನೆಗಳೂ ಮುಳುಗಿಹೋಗುವವೆಂದೂ ಊಹಿಸಲ್ಪಟ್ಟಿದೆ.

ಪೆಸಿಫಿಕ್ ಸಾಗರದಲ್ಲಿರುವ ಬೋರ್ನಿಯೋ ಎಂಬ ದ್ವೀಪದಲ್ಲಿ ದಟ್ಟವಾದ ಕಾಡಿನಿಂದ ಕೂಡಿದ ವಿಶಾಲವಾದ ಪ್ರಾಂತಗಳು ಇನ್ನೂ ಇರುವವು. ಅಲ್ಲಿ ಅನೇಕರಿಗೆ ಮೊಂಡಾದ ಬಾಲವಿರುವುದೆಂದು ದೇಶಶೋಧನೆಗಾಗಿ ಅಲ್ಲಿಗೆ ಹೋಗಿದ್ದವರೊಬ್ಬರು ತಿಳಿಸುತ್ತಾರೆ. ಬಾಲವು ನಾಲ್ಕು ಅಂಗುಲಗಳಷ್ಟು ಉದ್ದವಾಗಿರುವುದಾಗಿಯೂ, ಅವರು ಕುಳಿತುಕೊಳ್ಳುವಾಗ್ಯೆ ರಂಧ್ರವಿರುವ ಮಣೆಯನ್ನು ಹಾಕಿಕೊಳ್ಳುವರೆಂದೂ ಗೊತ್ತಾಗುತ್ತದೆ. ಈ ದ್ವೀಪವಾಸಿಗಳು ಕೆಲವು ಶತಮಾನಗಳ ಹಿಂದೆ ನೆರೆ ದ್ವೀಪವಾದ ನ್ಯೂಗಿನಿಯೆಂಬಲ್ಲಿ ಹೆಣ್ಣುಕೊಟ್ಟು ತರುವ ಬಳಕೆ ಇತ್ತೆಂದೂ, ಇವರ ಬೀಗರಲ್ಲಿ ದೀರ್ಘವಾದ ಬಾಲಗಳಿರುತ್ತವೆಂದೂ, ಅವರ ಮೈಮೇಲೆ ರೇಷ್ಮೆಯಂತೆ ಮೃದುವಾದ ಕೂದಲು ಇರುವುದಾಗಿಯೂ ತಿಳಿಸುತ್ತಾರೆ.

ಮನುಷ್ಯನ ತಲೆಬುರುಡೆಯು ದಪ್ಪವಾಗಿದ್ದಷ್ಟು ಮೇಧಾಶಕ್ತಿಯು ಹೆಚ್ಚೆಂದು ಸಾಮಾನ್ಯವಾಗಿ ಭಾವಿಸಲ್ಪಟ್ಟಿರುತ್ತದೆ. ಆದರೆ ಈಗ ಕೆಲ ಪಾಶ್ಚಾತ್ಯಶಾಸ್ತ್ರಜ್ಞರು ಚೆನ್ನಾಗಿ ಪರಿಶೋಧಿಸಿ ಬರೀ ತಲೆಬುರುಡೆಯು ದಪ್ಪನಾಗಿದ್ದ ಮಾತ್ರಕ್ಕೆ ಮೇಧಾವಿಯೆಂದು ಹೇಳಲಿಕ್ಕಾಗುವುದಿಲ್ಲ; ತಲೆಬುರುಡೆಯ ಒಳಗಡೆ ಕೆಲಭಾಗಗಳು ವಿಶಾಲವಾಗಿಯೂ ದೃಢವಾಗಿಯೂ ಬೆಳದಿದ್ದಲ್ಲಿ ಮೇಧಾಶಕ್ತಿಯು ಹೆಚ್ಚಾಗಿರುವುದೆಂದೂ ಲಾರ್ಡ್ ಬೈರನ್ ಮೊದಲಾದ ಪ್ರಖ್ಯಾತ ಪುರುಷರ ತಲೆಯು ಚಿಕ್ಕದಾಗಿದ್ದರೂ ಅವರ ಮೇಧಾಶಕ್ತಿಯು ಅದ್ಭುತವಾಗಿದ್ದಿತೆಂದೂ, ಇನ್ನೊಬ್ಬ ಮನುಷ್ಯನ ತಲೆಯು 70 ಪೌಂಡು ತೂಕವುಳ್ಳದಾಗಿದ್ದರೂ ಅವನು ಒಂದೆರಡು ಕೊಲೆಗಳನ್ನು ಮಾಡಿ ಮರಣದಂಡನೆಗೆ ಗುರಿಯಾದನು ಎಂದೂ ಹೇಳಿರುವರು.

ಸ್ತ್ರೀಪುರುಷರು ಪರಸ್ಪರ ಪ್ರೇಮಾತಿಶಯದಿಂದ ಚುಂಬನಮಾಡುವುದೂ, ತಂದೆತಾಯಿಗಳು ತಮ್ಮ ಮಕ್ಕಳಿಗೆ ಮುದ್ದಿಗಾಗಿ ಮುತ್ತಿಕ್ಕುವುದೂ ಸ್ವಾಭಾವಿಕವಾಗಿರುತ್ತದಷ್ಟೆ. ಈಚೆಗೆ ಡಾಕ್ಟರುಗಳು ಈ ಚುಂಬನದಿಂದುಂಟಾಗುವ ಗುಣಾವಗುಣವನ್ನು ಪರೀಕ್ಷಿಸಿ ಮಧ್ಯಾಹ್ನದ ಮತ್ತು ಸಂಜೆಯ ವೇಳೆಗಳಲ್ಲಿ ಚುಂಬನಮಾಡುವುದು ಸೌಖ್ಯಕರವೆಂದೂ, ರಾತ್ರಿವೇಳೆ ನಿದ್ರಿಸುವಾಗ್ಗೆ ಕ್ರಿಮಿಗಳು ಬಾಯಿಯಲ್ಲಿ ಸೇರಿರುತ್ತವಾದುದರಿಂದ ಬೆಳಗಿನ ವೇಳೆಯಲ್ಲಿ ಚುಂಬನಮಾಡುವುದು ಅಪಾಯಕರವೆಂದೂ ಕಂಡುಹಿಡಿದಿರುವರಾದುದರಿಂದ ನ್ಯೂಯಾರ್ಕಿನ ಜೀವವಿಮೆ ಕಂಪೆನಿಯವರು ಚುಂಬನಾಸಕ್ತರಾದವರು ಹೆಚ್ಚು ಮೊಬಲಗನ್ನು ಕೊಡಬೇಕೆಂದು ಏರ್ಪಡಿಸಿರುತ್ತಾರೆ ಮತ್ತು ಇತರ ಜೀವವಿಮೆ ಕಂಪೆನಿಯವರೂ ಅವರ ಅನುಕರಣ ಮಾಡುವವರಾಗಿರುತ್ತಾರೆ.

ಪ್ರಪಂಚದ ಮೇಲೆ ಬಹಳ ವಿಶೇಷವಾಗಿ ಉಪಯೋಗಿಸಲ್ಪಡುತ್ತಿರುವ ಮತ್ತು ಇತರ ಎಲ್ಲ ಮೋಟಾರುಬಂಡಿಗಳ ಬೆಲೆಗಿಂತಲೂ ಸುಲಭಬೆಲೆಯುಳ್ಳದಾಗಿರುವ ಫೋರ್ಡುಮೋಟಾರುಬಂಡಿ ನಿರ್ಮಾಣಕಂಪೆನಿಯು ಅಮೇರಿಕೆಯಲ್ಲಿ ಅತ್ಯಂತ ಪ್ರಖ್ಯಾತವೂ ದೊಡ್ಡವೂ ಆದ ಉಕ್ಕಿನ ಮತ್ತು ಸ್ಟ್ಯಾಂಡರ್ಡ್ ಕಲ್ಲೆಣ್ಣೆಯ ಕಂಪೆನಿಗಳಿಗೆ ಮೂರನೆಯದಾಗಿದೆ. ಇದರ 1923ನೆಯ ವರ್ಷದ ಆರ್ಥಿಕಸ್ಥಿತಿಯ ಪ್ರಕಟನೆಯಿಂದ ಕಂಪನಿಯ ಒಟ್ಟು ಆಸ್ತಿಯು 56,80,00,000 ಡಾಲರುಗಳು, ಅದರ ಖ್ಯಾತಿಯ ಬೆಲೆಯು 2,05,17,000 ಡಾಲರು, ಆಸ್ತಿಯ ವಾಸ್ತವ್ಯವಾದ ಬೆಲೆಯು 9,30,00,000 ಡಾಲರು, ಯಂತ್ರಸಾಮಗ್ರಿಗಳ ಬೆಲೆ 9,76,89,000 ಡಾಲರು, ಸರಕಿನ ಬೆಲೆ 94,32,000 ಡಾಲರು ಎಂದೂ 1922 ರಿಂದೀಚೆಗೆ ಒಟ್ಟು ಆಸ್ತಿಯು

30,00,00,000 ಡಾಲರುಗಳಷ್ಟು ಹೆಚ್ಚಿರುತ್ತದೆಂದೂ ತಿಳಿಯಬರುತ್ತದೆ.

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಅಟ್ಲಾಂಟಾದಲ್ಲಿ ಅಭೂತಪೂರ್ವವಾದ ಪ್ರಚಂಡ ವಾಯುವಿನಿಂದ ಕೂಡಿದ ಮಳೆಯು ಬಂದು ದಕ್ಷಿಣ ಮತ್ತು ಉತ್ತರ ಕಾಲೋನಿಯಾ, ಜಾರ್ಜಿಯಾ, ಅಲ್ಬಾಮಾ, ಲೂಸೇನಿಯಾ ಮತ್ತು ಆರ್ಕನಾಸ್ ಈ ದೇಶಗಳ ಮೇಲೆ ನುಗ್ಗಿ ಹಾಕ್ಮಾಡಿ ವರ್ಜೀನಿಯಾದವರೆಗೂ 1000 ಮೈಲಿ ವಿಸ್ತೀರ್ಣದಲ್ಲಿ ಮಹಾನರ್ಥವನ್ನುಂಟುಮಾಡಿರುವುದು. ಇದರ ಪ್ರಳಯದಿಂದ ವಿಶೇಷವಾಗಿ ಹೆಂಗುಸರೂ ಮಕ್ಕಳೂ ಸಹಿತ 108 ಜನರು ಸತ್ತು 500 ಜನರಿಗೆ ಅಪಾಯವಾಗಿರುವುದೆಂದೂ 10,00,000 ಡಾಲರವರೆಗೆ ನಷ್ಟವಾಗಿರುವುದೆಂದೂ ಊಹಿಸಲ್ಪಟ್ಟಿದೆ. ಮನೆಮಾರುಗಳನ್ನು ಕಳೆದುಕೊಂಡಿರುವ ಜನರು ತಿನ್ನುವುದಕ್ಕಿಲ್ಲದೆ ಕನ್ನಕಳುವನ್ನು ಮಾಡದಂತೆ ಆಯುಧಪಾಣಿಗಳಾದ ಸೈನಿಕರು ಕಾಯುತ್ತಿರುವರು. ವಿಪನ್ನರ ಸಹಾಯಾರ್ಥವಾಗಿ ಆಹಾರ ಬಟ್ಟೆಗಳು ನಾನಾಕಡೆಯಿಂದ ಕಳುಹಲ್ಪಡುತ್ತಿವೆ. ಈ ಮಳೆಯಾಧಿಕ್ಯದಿಂದ ಮಾರ್ಗಗಳೂ, ಸೇತುಗಳೂ ಜಲದಲ್ಲಿ ಮುಳುಗಿಹೋಗಿ ತಿರುಗಾಟವೂ ಕಟ್ಟಾಗಿಹೋಗಿದೆ.

ರಷ್ಯಾದಲ್ಲಿರುವ ಚೆಕಾ ಎಂಬ ರಹಸ್ಯಕೊಲೆ ಸಂಘವೊಂದು ಜರ್ಮನಿಯಲ್ಲಿರುವುದನ್ನು ಅಲ್ಲಿಯ ಪೋಲೀಸರು ಬಹಳ ಸಾಹಸದಿಂದ ಕಂಡುಹಿಡಿದಿರುವರು. ಜರ್ಮನಿರಾಜ್ಯದಲ್ಲಿ ಕಮ್ಯೂನಿಯನಿಸ್ಟ್ ಕೂಟದವರಿಗೆ ವಿರೋಧಿಗಳಾಗಿಯೂ ಅವಾಯಕಾರಕರಾಗಿಯೂ ಇರುವವರನ್ನು ಹಿಡಿದು ನಿರ್ಮೂಲಮಾಡತಕ್ಕುದೇ ಈ ಸಂಘದ ಕರ್ತವ್ಯಕರ್ಮವಾಗಿದೆ. ಈ ಸಂಘದ ಮುಖ್ಯನಾಯಕನಾದ ರಷ್ಯಾದೇಶದವನು ಸೆರೆಹಿಡಿಯಲ್ಪಟ್ಟಿರುವನು. ಪಟ್ಟಣಗಳನ್ನು ನಿರ್ಮೂಲಮಾಡುವುದಕ್ಕಾಗಿ ಈ ಸಂಘದ ಮೆಂಬರುಗಳಿಗೆ ಬೇಕಾದಷ್ಟು ದ್ರವ್ಯವೂ ಮದ್ದುಗುಂಡುಗಳೂ, ಸಿಡಿಮದ್ದುಗಳೂ, ರಕ್ತಭೇದಿ, ವಿಷಮಶೀತಜ್ವರ, ವಾಂತಿಭೇದಿ ಮೊದಲಾದ ಸಾಂಕ್ರಾಮಿಕ ರೋಗಗಳುತ್ಪತ್ತಿಗೆ ಕಾರಣಗಳಾದ ಕ್ರಿಮಿಗಳೂ ಒದಗಿಸಿಕೊಡಲ್ಪಟ್ಟಿರುವುವು. ಸೆರೆಹಿಡಿಯಲ್ಪಟ್ಟ ಜನರು ಮರಣದಂಡನೆಗೆ ಗುರಿಮಾಡಲ್ಪಟ್ಟಿರುವರಂತೆ. ವರ್ಟಂಬರ್ಗಿನಲ್ಲಿ ಸ್ವದೇಶಾಂಗಮಂತ್ರಿಯಾಗಿದ್ದ ಜನರಲ್ ವಾಗ್‌ಸ್ಟಿಕ್ ಎಂಬ ತಾನೂ ಮರಣದಂಡನೆಗೆ ಗುರಿಯಾಗಿರುವವರಲ್ಲಿ ಒಬ್ಬನಾಗಿರುತ್ತಾನೆ. ಜರ್ಮನರ ಅದ್ಭುತಮೇಧಾಶಕ್ತಿಯು ಪ್ರಪಂಚವಿನಾಶಕಾರಕವಾಗಿ ಪರಿಣಮಿಸಿರುವುದು ಶೋಚನೀಯವಾಗಿದೆ.

ಮಧ್ಯವಯಸ್ಕಳಾದ ಜೇಸ್ಟರ್ ಎಂಬ ಅಮೇರಿಕಾದೇಶದ ಲಾವಣ್ಯವತಿಯು 18,00,00,000 ರೂಪಾಯಿಗಳಿಗೆ ಮೋಸಮಾಡಿರುವಳೆಂಬ ಅಪರಾಧದಮೇಲೆ ಸೆರೆಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುವಳು. ಈಕೆಯು ಗಂಡನ ಸಮೇತ 1918 ರಲ್ಲಿ ಅಮೇರಿಕೆಯಿಂದ ಯೂರೋಪಿಗೆ ಬಂದು, ಜನರನ್ನು ಮೋಸದಿಂದ ಮುಳುಗಿಸಿ ಅವರ ಅಪಾರಧನವನ್ನೆಲ್ಲಾ ಸುಲಿದುಕೊಂಡು ಕೋಟ್ಯಾಧೀಶ್ವರರಂತೆ ಜೀವಿಸುವ ಜನರ ಗುಂಪನ್ನು ಸೇರಿದಳು. ಅನಂತರ 1920ರ ವರೆಗೆ ಪ್ಯಾರಿಸಿನ ಅನೇಕ ಹೋಟಲುಗಳನ್ನು ಸ್ವತಂತ್ರವಾಗಿಟ್ಟುಕೊಂಡು ಬ್ಯಾಂಕುಗಳಿಗೆ ಸುಳ್ಳುಚೆಕ್ಕುಗಳನ್ನು ಕೊಡುತ್ತಿದ್ದುದಕ್ಕಾಗಿ 6 ತಿಂಗಳ ಕಾಲ ಕಾರಾಗೃಹದಶಿಕ್ಷೆ ವಿಧಿಸಲ್ಪಟ್ಟಿದ್ದು ದೇಶಭ್ರಷ್ಟರಾಗಿ ಮಾಡಲ್ಪಟ್ಟರು. ತರುವಾಯ ಆಕೆಯ ಗಂಡನು ರೋಮ್ ಪಟ್ಟಣಕ್ಕೆ ಹೋಗಿ ಒಬ್ಬ ದೇಶಾಯಿನಿಯನ್ನು ಮದುವೆಮಾಡಿಕೊಳ್ಳಲು ನಿಷ್ಕರಿಸಿ ಆಕೆಯು ತನ್ನ ಐಶ್ವರ್ಯವನ್ನು ತೆಗೆದುಕೊಂಡು ಅಮೇರಿಕೆಗೆ ಹೊರಟುಬರುವಂತೆ ಬೋಧಿಸಿದನು. ಇತ್ತಲಾಗಿ ಅವನ ಹೆಂಡತಿ ಯೇಸ್ಟರಳು ಬ್ರಸಲ್ಸಿಗೆ ಹೋಗಿ ಒಂದುವರ್ಷಕಾಲದಲ್ಲಿ 15,00,000 ರೂಪಾಯಿಗಳ ವರೆಗೂ ಜನರಿಗೆ ಮೋಸಮಾಡಿ ಪಲಾಯನಳಾಗಲು ಮ್ಯೂನಿಚ್ ಎಂಬಲ್ಲಿ ಸೆರೆಹಿಡಿಯಲ್ಪಟ್ಟು ಬ್ರಸಲ್ಸಿಗೆ ಹಿಂದಿರುಗಿ ಕರೆತರಲ್ಪಟ್ಟು 12 ತಿಂಗಳು ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟಳು. ಅವಳು ಅಲ್ಲಿಂದ ಬಿಡುಗಡೆಯನ್ನು ಹೊಂದಿ ನೂರಾರು ಸೇವಕಾಳಿಗಳೊಡನೆ ಜ್ಯೂರಿಚ್ಚಿಗೆ ಹೋಗಿ ಅತ್ಯಂತ ಚಿತ್ತಾಕರ್ಷಕ ವಿಧದಂತೆಯೂ, ಒಂದು ದೊಡ್ಡ ಆಸ್ತಿಗೆ ಉತ್ತರವಾರಸುದಾರಳಂತೆಯೂ ನಟಿಸಿ ಬಹುದೊಡ್ಡ ಅಟ್ಟಹಾಸದಿಂದಲೂ ದುಂದುಗಾರಿಕೆಯಲ್ಲೂ ಇದ್ದುಕೊಂಡು ಅನೇಕರು ತನ್ನನ್ನು ಮೋಹಿಸಿ ತನ್ನ ಬಲೆಗೆ ಬೀಳುವಂತೆ ಮಾಡಿ ಅವರುಗಳಲ್ಲಿ ಮೂವರು ಪೂರ್ಣ ಶ್ರೀಮಂತರುಗಳಿಗೆ ಅವರನ್ನು ಲಗ್ನಮಾಡಿಕೊಳ್ಳುತ್ತೇನೆಂದು ಅಭಯವನ್ನು ಕೊಟ್ಟು ಅವರು ಲೆಕ್ಕವಿಲ್ಲದಷ್ಟು ವಸ್ತ್ರಾಭರಣಗಳನ್ನು ಬಹುಮಾನಿಸುತ್ತ ಆಕೆಯ ಅನುರಾಗಪ್ರಸಾದ ನಿರೀಕ್ಷಣೆಯಲ್ಲಿರುವಷ್ಟರಲ್ಲಿ ಆಕೆಯ ಮೋಸವು ಹೊರಬಿದ್ದಿತು. ತನ್ನ ಮೋಸವು ಬೈಲಾಗುವುದರೊಳಗಾಗಿ ತನ್ನ ಬಲೆಗೆ ಬಿದ್ದ ಆ ಮೂವರು ಶ್ರೀಮಂತರುಗಳು ಆಕೆಯ ಪ್ರಸಾದನಿರೀಕ್ಷಣೆಯಿಂದ ಲೆಕ್ಕವಿಲ್ಲದಷ್ಟು ವಸ್ತ್ರಾಭರಣಗಳನ್ನು ತಂದೊಪ್ಪಿಸುವಂತೆ ಮಾಡಿದ್ದಳು.

1924 ನೇ ಮೇ 15 ನೇ ಮರ್ಕುಮಿಗೆ ಆಖೈರಾದ ವಾರಕ್ಕೆ ವರ್ತಮಾನ ಪತ್ರಿಕೆಗಳಿಗೆ ಕಳುಹಿಸುವ ಸರ್ಕಾರಿಯುಪ್ಪಣೆಯ ಗೋಷ್ವಾರೆ.

1. ಅನೆಕಲ್ ತಾಲ್ಲೂಕಿನ ಅಮಲ್ದಾರರಾದ ಮಿ|| ಹೆಚ್. ಬಸವರಾಜ ಅರಸರವರನ್ನು ಬಿ. ಹೆಡ್ಡೂರಿನ ಅಸಿಸ್ಟೆಂಟ್ ಕಮಿಷನರಾಗಿ ಬದಲಿ ನೋಡಲು ನೇಮಿಸಿ, ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿನ ಬಗ್ಗೆ ಕಡೂರು ಡಿಸ್ಟ್ರಿಕ್ಟಿಗೆ ಜೋಕರೂರ್ಮಾಡಿದೆ. ಮಿ|| ಬಿ. ಎಸ್. ರಾಜಗೋಪಾಲಾಚಾರ್ಯರವರನ್ನು ಅಸಿಸ್ಟೆಂಟ್ ಕಮಿಷನರಂತೆ ಬದಲಿ ನೋಡುವಂತೆ ನೇಮಿಸಿ ಕಡೂರು ಡಿಸ್ಟ್ರಿಕ್ಟು ಖಜಾನೆಗೆ ಜೋಕರೂರ್ಮಾಡಿದ್ದುದು ಇದರಿಂದ ರದ್ದಾಗುತ್ತದೆ.

2. ಸರ್ಕಾರದ ಫೈನಾನ್ಸಿಯಲ್ ಸೆಕ್ರೆಟರಿಗಳಾದ ರಾಜಕಾರ್ಯಪ್ರಸಕ್ತ ಮಿ|| ಎಂ. ಎನ್. ಕೃಷ್ಣರಾವ್ ಬಿ.ಎ., ಯವರಿಗೆ 1924ನೇ ಮೇ 7ನೇ ತಾರೀಖಿನಲಾಗಾಯತು 20 ದಿನಗಳ ಪ್ರಿವಿಲೇಜು ರಜವನ್ನು ಮಂಜೂರ್ಮಾಡಿದೆ. ಈ ಕಾಲದಲ್ಲಿ (b) ಮೈಸೂರು ಸರ್ಕಾರದ ಕಂಟ್ರೋಲರವರಾದ ಮಿ|| ಟಿ. ಸತ್ಯರಾಜಚೆಟ್ಟಿ, ಬಿ.ಎ., ಯವರನ್ನು ಸರ್ಕಾರದ ಅಫಿಸಿಯೇಟಿಂಗ್ ಫೈನಾನ್ಸಿಯಲ್ ಸೆಕ್ರೆಟರಿಯವರನ್ನಾಗಿಯೂ, (a) ಮಿ|| ಎಲ್. ಬಿಸ್ಟೋಪಂತ್‌ಬಾದಾಮಿ ಬಿ.ಎ., ಯವರನ್ನು ಮೈಸೂರು ಸರ್ಕಾರದ ಅಫಿಸಿಯೇಟಿಂಗ್ ಕಂಟ್ರೋಲರವರನ್ನಾಗಿಯೂ, ನೇಮಿಸಿದೆ.

3. 1923ನೆ ವರ್ಷಕ್ಕೆ ಮೈಸೂರು ಸಂಸ್ಥಾನದಲ್ಲಿ ಮಳೆಯ ಲೆಕ್ಕಗಳ ರಿಪೋರ್ಟನ್ನು ಪರಿಶೀಲಿಸುವಲ್ಲಿ ಸರ್ಕಾರದವರು, 1922ನೆ ವರ್ಷದಲ್ಲಿ 199 ರೈನುಗೇಜುಗಳು (ಮಳೆಯನ್ನು ಅಳತೆಕೊಡುವ ಯಂತ್ರಗಳು) ತನಿಖೆಮಾಡಲ್ಪಟ್ಟದ್ದು ದರಿಂದಲೂ, ಪ್ರಸಕ್ತ ವರ್ಷದಲ್ಲಿ 207 ಗೇಜುಗಳು ತನಿಖೆಯಾಗಿರುವುದರಿಂದಲೂ, ತನಿಖೆಯ ಕೆಲಸವು ಗಣನೀಯವಾಗಿ ಉತ್ತಮಪಟ್ಟಿರುತ್ತೆಂದು, ಅಭಿಪ್ರಾಯಪಡುತ್ತಾರೆ. ಆದರೂ, ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ತನಿಖೆಯಾಗದೆ ಇರುವ ರೈನುಗೇಜುಗಳು ಅನೇಕವಾಗಿವೆ. ಈ ಡೆಪ್ಯುಟಿ ಕಮಿಷನರುಗಳು ತಮ್ಮ ತಮ್ಮ ಡಿಸ್ಟ್ರಿಕ್ಟುಗಳಲ್ಲಿರುವ ರೈನುಗೇಜುಗಳೆಲ್ಲವೂ ಚಾಲ್ತಿ ವರುಷದಲ್ಲಿ ಪೂರ್ತಿಯಾಗಿ ತನಿಖೆಯಾಗುವಂತೆ ನೋಡಿಕೊಳ್ಳುವರೆಂದು ಕೋರಿದೆ.

4. ಡಿಸ್ಟ್ರಿಕ್ಟು ಬೋರ್ಡುಗಳಿಗೆ ಫೈಸಲ್ಮಾಡುವುದಕ್ಕೆ ಅಧಿಕಾರವಿಲ್ಲದಿದ್ದು, ಅಭಿಪ್ರಾಯಕೊಡುವುದಕ್ಕಾಗಿ ಮಾತ್ರ ಅವುಗಳಿಗೆ ಕಳುಹಿಸಲ್ಪಡಬಹುದಾದ ಸ್ಥಳೀಯ ವಿಷಯಗಳ ಪರ್ಯಾಲೋಚನೆಯ ಬಗ್ಗೆ ನಿಬಂಧನೆಗಳನ್ನು ಏರ್ಪಡಿಸಿದೆ.

5. ಕೋಲಾರ ಡಿಸ್ಟ್ರಿಕ್ಟು ಮುಳಬಾಗಲು ತಾಲ್ಲೂಕಿನ ರೀಸೆಟಿಲ್ಮೆಂಟನ್ನು ಮಂಜೂರುಮಾಡಿ ಹುಕುಮುಗಳನ್ನು ಸಾದರ್ಮಾಡಿರುತ್ತದೆ ಸರ್ಕಾರದವರು ಮಂಜೂರ್ಮಾಡಿದ ಸಲಹೆಗಳಿಂದ ಸರ್ಕಾರಕ್ಕೆ ಹಾಲಿ ಇರತಕ್ಕ ಕಂದಾಯದಿಂದ ಹುಟ್ಟುವಳಿಯಾಗುವ ಮೊಬಲಗಿಗಿಂತ 5418 ರೂಪಾಯಿಗಳು ಹೆಚ್ಚಾಗಿ ಎಂದರೆ ಸೇಕಡ 3 ರಂತೆ ಹೆಚ್ಚಾಗಿ ಉತ್ಪತ್ತಿಯಾಗುವುದು ಈ ಹೊಸ ದರಗಳು ಮಾಮೂಲಿನಂತೆ 30 ವರುಷಗಳ ಖಾತರಿಯೊಂದಿಗೆ 1924ನೆ ಜುಲೈ 1ನೆ ತಾರೀಖಿನ ಲಾಗಾಯತು ಜಾರಿಗೆ ಬರತಕ್ಕದ್ದು.

6. 1923-24ನೆ ಸಾಲಿನ ಮೈಸೂರು ಪ್ರಜಾಪ್ರತಿನಿಧಿಸಭೆಯ ಬಡ್ಜೆಟ್ ಅಧಿವೇಶನವು ಮೈಸೂರಿನಲ್ಲಿ ಜಗನ್ಮೋಹನಬಂಗಲೆಯ ಸಭಾಮಂಟಪದಲ್ಲಿ 1924ನೆ ಜೂನ್ 6ನೆ ತಾರೀಖು ಶುಕ್ರವಾರದ ದಿನ ಮಧ್ಯಾಹ್ನ 12 ಗಂಟೆಗೆ ಪ್ರಾರಂಭಿಸಲ್ಪಟ್ಟು ನಡೆಯಿಸಲ್ಪಡುವುದು.

7. ಮೈಸೂರು ನ್ಯಾಯವಿಧಾಯಕಸಭೆಯ ಮೀಟಿಂಗು ಬೆಂಗಳೂರು ಪಬ್ಲಿಕ್ ಆಫೀಸುಗಳ ಕಟ್ಟಡದ ಸೆಂಟ್ರಲ್ ಹಾಲಿನಲ್ಲಿ 1924ನೆ ಜೂನ್ 17ನೇ ತಾರೀಖು ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಉಪಕ್ರಮವಾಗುವುದು.

8. ಮೈಸೂರು ಸಂಪದಭ್ಯುದಯ ಸಮಾಜದ ಸಮಾರಂಭೋತ್ಸವವು 1924ನೆ ಜೂನ್ 14ನೆ ಮರ್ಕುಂ ಶನಿವಾರದ ದಿನ ಮೈಸೂರಿನಲ್ಲಿ ಜಗನ್ಮೋಹನಬಂಗಲೆಯ ಸಭಾಮಂಟಪದಲ್ಲಿ ನಡೆಯುವುದು.

ಅದ್ಭುತಶೋಧ.

ಚಂದ್ರನ ಮೇಲೆ ಬಾಣಪ್ರಯೋಗ:-ಅನಾದಿಕಾಲದಿಂದಲೂ ಚಂದ್ರಲೋಕವನ್ನು ಕುರಿತು ಗಮನಮಾಡುವ ಪ್ರಯತ್ನವು ಮನುಷ್ಯಮಾತ್ರರಿಂದ ನಡೆದ ಮಾತಾಗಿರುತ್ತದೆ. ಚಂದ್ರನಲ್ಲಿರುವ ಅಪ್ರತಿಮ ಸೌಂದರ್ಯದ ಮೂಲಕವಾಗಿ ಕವಿಗಳೂ, ಕಾದಂಬರಿಕಾರರೂ ಇಂದಿನವರೆಗೆ ಅನೇಕಾವರ್ತಿ ಚಂದ್ರನ ಮೇಲೆ ಪರ್ಯಟನ ಮಾಡಿರುತ್ತಾರೆ. ಕವಿಗಳಾಗಲಿ, ಕಾದಂಬರಿಕಾರರಾಗಲಿ ತಮ್ಮ ಕಲ್ಪನೆಗೆ ಯೋಗ್ಯವೆಂದು ತೋಚಿದ ಯಾವದೊಂದು ಸಾಧನವನ್ನು ಕಲ್ಪಿಸಿಕೊಂಡು ಅದರ ಮೇಲೆ ಆರೂಢರಾಗಿ ಚಂದ್ರಲೋಕವನ್ನು ಮುಟ್ಟುವರು; ಹೇಗೆ ಕವಿಗಳೋ ಹಾಗೆ ಕಾದಂಬರಿಕಾರರು ಚಂದ್ರಲೋಕವನ್ನು ಮುಟ್ಟಿಬರುವ ಪ್ರಯತ್ನಮಾಡಿದರು. ಆದರೆ ಕಲ್ಪನೆಯಲ್ಲಿ ಹುಟ್ಟಿ ಆ ಮಾತು ಕಲ್ಪನೆಯಲ್ಲಿಯೇ ಉಳಿಯಿತು.

ಆದರೆ ಇತ್ತೀಚಿಗೆ ಇನ್ನೊಬ್ಬ ಪ್ರಚಂಡ ಶೋಧಕನು ಹುಟ್ಟಿರುವನು. ಈತನ ಪ್ರಯತ್ನವನ್ನು ನೋಡಿದರೆ ಚಂದ್ರಲೋಕವನ್ನೇ ಬಡಿದು ಬಾಯಲ್ಲಿ ಹಾಕಿಕೊಳ್ಳುವನೆಂದು ತೋರುತ್ತದೆ. ಈ ಶೋಧಕನಿಗೆ ಗೋಡಾರ್ಡನೆಂಬ ಹೆಸರು ಇರುತ್ತದೆ. ಇವನ ಕಲ್ಪನೆಯು ಕವಿಗಳ ಕಲ್ಪನೆಯಂತೆ ಹವೆಯೊಳಗಿನ ಕಲ್ಪನೆಯಲ್ಲ; ಇವನು ಒಂದು ಅದ್ಭುತಶಕ್ತಿಯ ಬಾಣವನ್ನು ತಯಾರಿಸಿರುತ್ತಾನೆ. ಈ ಬಾಣವು ಸೆಕಂಡಿಗೆ ೬|| ಮೈಲು ದೂರ ದಾರಿಯನ್ನು ಕ್ರಮಿಸುತ್ತದೆ. ಮತ್ತು ಇದು ಇಚ್ಚಿತ ಸ್ಥಳದವರೆಗೆ ಅವ್ಯಾಹತವಾಗಿ ಸಾಗುವಂತೆ ನಡೆನಡುವೆ ಸ್ಫೋಟವಾಗಿ ಹೊಸಗತಿಯನ್ನು ಹೊಂದುತ್ತದೆಯಂತೆ! ಈ ಬಾಣವನ್ನು ಪೃಥ್ವಿಯು ಆಕರ್ಷಿಸುವದಿಲ್ಲವಂತೆ. ಚಂದ್ರಲೋಕವನ್ನು ಮುಟ್ಟುವವರೆಗೆ ಸಾಲುವಷ್ಟು ಸ್ಫೋಟಕ ದ್ರವ್ಯವು ಇದರಲ್ಲಿ ತುಂಬಿರುತ್ತದೆ. ಒಮ್ಮೆ ಈ ಬಾಣವು ಚಂದ್ರನ ಕಕ್ಷೆಯೊಳಗೆ ಹೋಯಿತೆಂದರೆ ಚಂದ್ರನು ಅದನ್ನು ಆಕರ್ಷಿಸುವನು. ಆಗ ಆ ಬಾಣವೂ ಚಂದ್ರನಿಗೆ ತಗಲುವದು.

ಈ ಬಾಣವು ಚಂದ್ರಲೋಕವನ್ನು ಮುಟ್ಟಿದ್ದು ಸಹ ಕಾಣುವ ಯೋಜನೆಯನ್ನು ಆ ಶೋಧಕನು ಮಾಡಿರುತ್ತಾನೆ. ಮತ್ತು ಬಾಣವು ಪೃಥ್ವಿಯಿಂದ ಹೊರಟು ಚಂದ್ರಲೋಕಕ್ಕೆ ಎಷ್ಟೊತ್ತಿಗೆ ಹೋಗುವದೆಂಬದನ್ನು ಸಹ ಅದರ ಗತಿಯ ಮೇಲಿಂದ ಗೊತ್ತುಪಡಿಸಿರುತ್ತಾನೆ. ಆತನ ಈ ಪ್ರಯತ್ನವು ಯಶಸ್ವಿಯಾದರೆ ಮುಂದೇನಾಗುವದೋ ತಿಳಿಯದು

(ಸ. ಚಂ.)

ಗೋಕರ್ಣದಲ್ಲಿ ನಡೆದ ಕರ್ನಾಟಕಪರಿಷತ್ತಿನ ಅಧ್ಯಕ್ಷರಾಗಿದ್ದ ಶಾರದಾಪೀಠದ ಶ್ರೀ ಶಂಕರಾಚಾರ್ಯರು ಅಂತ್ಯಜರನ್ನು ಕುರಿತು ಮಾಡಿದ ಭಾಷಣದ ಮುಖ್ಯಾಂಶ—

ಅವರು ಹಿಂದೂ ಸಮಾಜದ ಒಂದು ಅಂಗವಾಗಿರುವರು. ಅಂಗಗಳೆಲ್ಲ ಸರಿಯಾಗಿದ್ದರೆ "ಅಂಗಿ" ಯು ನೆಟ್ಟಗಿರುವದು. ನಮ್ಮ ಹಿಂದೂ ಸಮಾಜದ ಅಂಗಭೂತರಾದ ಈ ಅಂತ್ಯಜರು ರೋಗಪೀಡಿತರಾಗಿರುವವರೆಗೆ ಹಿಂದೂ ಸಮಾಜವು ಎಂದೂ ನೆಟ್ಟನ ಸ್ಥಿತಿಯಲ್ಲಿರಲಾರದು. ಅದ್ದರಿಂದ ಸ್ವಾರ್ಥದೃಷ್ಟಿಯಿಂದಲೂ ಸಹ ಇವರ ಉದ್ಧಾರವು ಅವಶ್ಯವಿರುವದು. ಇನ್ನು ಪಾರಮಾರ್ಥದೃಷ್ಟಿಯಿಂದಲಾದರೂ ನಮ್ಮ ಧರ್ಮದಲ್ಲಿ "ಸರ್ವೇ ಜನಾಃ ಸುಖಿನೋಭವಂತು" ಎಂಬ ನಮ್ಮ ಧರ್ಮವಾಕ್ಯದಂತೆ ಎಲ್ಲವರ ಸುಖವನ್ನು ಬಯಸುವದು ನಮ್ಮ ಧರ್ಮವಿರುತ್ತದೆ. ಶತ್ರುವಿನ ವಿಷಯದಲ್ಲಿ ಸಹ ಶತ್ರುತ್ವವು ನಾಶವಾಗಬೇಕೆಂದು ಇಚ್ಛಿಸಬೇಕೇ ಹೊರತು ಶತ್ರುವು ನಾಶಹೊಂದಬೇಕೆಂದು ಇಚ್ಛಿಸುವದಲ್ಲ. ಹೀಗಿರುವದರಿಂದ ಅಂತ್ಯಜರ ಏಳಿಗೆಯ ಪ್ರಯತ್ನಮಾಡುವದು ನಮ್ಮ ಕರ್ತವ್ಯವಾಗಿರುವದು.

ನಮ್ಮ ಧರ್ಮದಲ್ಲಿ ಸ್ಪೃಶ್ಯ, ಅಸ್ಪೃಶ್ಯರೆಂದು ಜನ ಸಮಾಜದ ವಿಭಾಗಗಳನ್ನು ಮಾಡದೆ ಇಂಥ ಸಮಯದಲ್ಲಿ ಮಾತ್ರ ಸ್ಪೃಶ್ಯ ಅಸ್ಪೃಶ್ಯವೆಂಬ ನಿಯಮವನ್ನು ಮಾಡಿರುವರು. ರಾಷ್ಟ್ರವಿಪ್ಲವ ಕಾಲದಲ್ಲಿ ಸಭೆಗಳಲ್ಲಿ "ನಗರ ಗ್ರಾಮದ್ವಾರೇಷು" ಸ್ಪರ್ಶದೋಷವಿಲ್ಲವೆಂದು ನಮ್ಮ ಶಾಸ್ತ್ರದಲ್ಲಿ ಹೇಳಿರುತ್ತದೆ. ಸಾರ್ವಜನಿಕ ಬಾವಿ ಮೊದಲಾದವುಗಳ ವಿಷಯದಲ್ಲಾದರೂ "ವಿಸೃಷ್ಟಂ ಸರ್ವಭೂತೇಭ್ಯಃ" ಅಂದರೆ ಕೇವಲ ಮೇಲಿನವರ ಉಪಯೋಗಕ್ಕೆ ಮಾತ್ರ ಅಲ್ಲ. ಸರ್ವಭೂತ ಮಾತ್ರದ ವಿಷಯದಲ್ಲಿ ಕಟ್ಟಿದ ಬಾವಿ ಮೊದಲಾದ ವಿಷಯಗಳಲ್ಲಿ, ಅವರನ್ನು ನಿಷೇಧಿಸಿದಲ್ಲಿ ಕಟ್ಟಿಸಿದವರನ್ನು ಕುರಿತು ವಿಶ್ವಾಸಭಂಗ (Breach of trust) ವೆಂಬ ದೋಷಬರುವದು. ಅದ್ದರಿಂದ ಸರ್ವಸಾಧಾರಣ ಸಂಸ್ಥೆಗಳಿಂದ ಅಂತ್ಯಜರನ್ನು ಎಂದೂ ಬಹಿಷ್ಕೃತರನ್ನಾಗಿ ಇಡುವದು ನಿಷಿದ್ಧವು.

ಆದರೆ, ಹಿಂದೂ ಮಹಾಸಭೆಯೊಳಗೆ ಧರ್ಮಗುರುಗಳು ಹೇಳಿದ ಉಕ್ತಿಯ ಆಧಾರದ ದುರುಪಯೋಗ ಮಾಡಿ ಕೆಲವರು ಉತ್ತರ ಹಿಂದುಸ್ಥಾನದಲ್ಲಿ, ಇಲ್ಲಿಗೇ ನಿಲ್ಲದೆ ಸಹ ಭೋಜನ ಮುಂತಾದವುಗಳನ್ನು ಸಹ ಉಪದೇಶ ಮಾಡಲಿಕ್ಕೆ ಹತ್ತಿದರು. ಮತ್ತು ಅವರು ಹೀಗೆ ಮಾಡುತ್ತ "ಅಧಿಕಸ್ಯಾ ಅಧಿಕಮಷ್ಟಂ" ಎಂಬ ಉಕ್ತಿಗನುಸರಿಸಿ ಮೊದಲು ಅಂತ್ಯಜೋದ್ಧಾರದ ಬಗ್ಗೆ ಅನುಕೂಲವಿದ್ದವರೂ ಸಹ ವಿರುದ್ಧರಾದರು.

ಪ್ರಸ್ತುತ ಪ್ರಸಂಗದಲ್ಲಿಯಾದರೂ ನಾವು ಈ ವಿಷಯಕ ಠರಾವನ್ನು ಧರ್ಮಕ್ಕೆ ವಿರುದ್ಧವಾಗದಂತೆ ನಿರ್ಣಯಿಸಬೇಕು. "ಪತಿತೋದ್ಧಾರಕತ್ವಮೇವ ಪಾವನತ್ವಮ್" ಅಪವಿತ್ರರನ್ನು ಪವಿತ್ರಮಾಡುವವನೇ ಯಥಾರ್ಥ ಪವಿತ್ರನು. ಆದ್ದರಿಂದ ನಾವು ಪವಿತ್ರರೆಂಬ ದುರಭಿಮಾನದಿಂದ ಅಂತ್ಯಜರನ್ನು ದೂರಮಾಡದೆ, ಅವರ ಉದ್ಧಾರಕ್ಕೆ ಎಲ್ಲ ಬಗೆಯಿಂದ ಪ್ರಯತ್ನಿಸಬೇಕು.

ಕ. ವೃ.

ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್, ಮೈಸೂರು. ಪ್ರಕಟನೆ.

ಕಳೆದ ತಾ|| 5-9-1923 ರಲ್ಲಿ ನಡೆದ ಮ್ಯಾನೇಜಿಂಗ್ ಕಮಿಟಿ ಮೀಟಿಂಗಿನಲ್ಲಿ ತೀರ್ಮಾನಿಸಲ್ಪಟ್ಟ 3 ನೆಯ ಪ್ರಸ್ತಾವದ 6 ನೆಯ ಕಾಲಮಿನ "ತಾ|| 6-4-1921 ರಲ್ಲಿ ನಡೆದ ಮ್ಯಾನೇಜಿಂಗ್ ಕಮಿಟಿ ಮೀಟಿಂಗಿನ ತೀರ್ಮಾನವಾದ 5 ನೆಯ ಠರಾವು ಪುನಃ ಚರ್ಚಿಸಲ್ಪಟ್ಟು.

೧ ನೆಯ ವರ್ಷ ಹೋಮವಿಧಿ, ಪೂಜಾಸಾರಸಮುಚ್ಚಯ (೨ನೆ ಮುದ್ರಣ)

೨ ನೆಯ ವರ್ಷ ಶಾಂತಿಹೋಮ, ಮಹಾಭಿಷೇಕ.

೩ ನೆಯ ವರ್ಷ ತ್ರೈವರ್ಣಿಕಾಚಾರ, ೨೪ ತೀರ್ಥಕರ ಆರಾಧನೆ.

೪ ನೆಯ ವರ್ಷ ಶ್ರೀನೇಮಿಚಂದ್ರಕೃತಪ್ರತಿಷ್ಠಾತಿಲಕ.

ಈ ಗ್ರಂಥಗಳಲ್ಲಿ ಪರೀಕ್ಷಿಸಿ ಉತ್ತೀರ್ಣರಾದ ವೈದಿಕವಿದ್ಯಾರ್ಥಿಗಳಿಗೆ ಪಾರಿತೋಷಿಕವನ್ನು ಕೊಡುವುದಕ್ಕೋಸ್ಕರ ಪ್ರತಿವರ್ಷವೂ ನೂರು ರೂಪಾಯಿಗಳನ್ನು ಮಂಜೂರು ಮಾಡಿದೆ. ಮತ್ತು ಇದನ್ನು ಜಾರಿಗೆ ತರಲು ಕೆಳಗೆ ಕಂಡ ಮಹಾಶಯರಿಂದ ಕೂಡಿದ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿದೆ.

೧. ಮಹಾವಿದ್ವಾನ್ ವೇ|| ದೋರ್ಬಲಿಜಿನದಾಸಶಾಸ್ತ್ರಿಗಳು.

೨. ನ್ಯಾಯತೀರ್ಥ ವೇ|| ಶಾಂತರಾಜಶಾಸ್ತ್ರಿಗಳು

೩. ವೇ|| ಬಿ. ಚಂದಪ್ಪಪಂಡಿತರು, ಮೈಸೂರು"

ಮೇಲಿನ ಠರಾವಿನ ಪ್ರಕಾರ ಜ್ಯೇಷ್ಠ ಬಹುಳ ೧೦ ಗುರುವಾರ (ತಾ|| 26-6-1924) ಪ್ರಾತಃಕಾಲ ೮ ಗಂಟೆಯಿಂದ ಮೈಸೂರು ಎ. ಎಲ್. ಜೈನವಿದ್ಯಾರ್ಥಿನಿಲಯದಲ್ಲಿ ಮೇಲ್ಕಂಡ ಗ್ರಂಥಗಳಲ್ಲಿ ಪರೀಕ್ಷೆಯು ನಡೆಯುವುದರಿಂದ ಉಮೇದುವಾರರಾದ ವೈದಿಕರು ಬರುವ ಜೂನ್ ತಾ|| 12 ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಪರೀಕ್ಷಾ ಗ್ರಂಥಗಳನ್ನು ನಮೂದಿಸಿ ಅರ್ಜಿಗಳನ್ನು ಬರೆದುಕೊಳ್ಳಬೇಕು.

ಆಯಾ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾದವರಿಗೆ ಕ್ರಮವಾಗಿ ೧೫, ೨೦, ೩೦, ೩೫ ರೂಪಾಯಿಗಳು ಬಹುಮಾನ ಕೊಡಲ್ಪಡುವುವು.

ತಾ|| 20-5-24, ಮೈಸೂರು.

ಸೆಕ್ರೆಟರಿಗಳು,
ಜೈನ ಎಜ್ಯುಕೇಷನ್ ಫಂಡ್
ಅಸೋಸಿಯೇಷನ್, ಮೈಸೂರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.——ಸಂ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವ ಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದು ಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟಿದ್ದ ವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ಮಾರುಮಾರು ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಪರಸ್ಪರ ಸಮಾಜಗಳಲ್ಲಿ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಷಮ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೂ ಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟ ವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧದ ಲೇಖನಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕರೂ ಖಂಡಿತವಾಗಿ ಗಮನಿಸಬೇಕು.——ಸಂ.

ಪೀಠಾಚಾರ್ಯರ ಜಯಂತ್ಯುತ್ಸವ.

ಬಳ್ಳಾರಿ ಹೀರದ ಸೂಗನ್ಮಸವರ ಚೌಕಿಯಲ್ಲಿ ಕಳೆದ ವೈಶಾಖ ಶುದ್ಧ 5 ಶುಕ್ರವಾರ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಯು ಮಹೋತ್ಸವವು [illegible] ಸಂಸ್ಕೃತ [illegible]

ಎಸ್. ಯಂ. [illegible]

[illegible]

ಮಂಡ್ಯ.

ಈ ಮೇ ತಾ|| 18 ಮತ್ತು 19 ರಲ್ಲಿ ಎರಡು ಹದ ಮಳೆಯಾಯಿತು. ಆದರೂ ಕೆರೆಗೆ ನೀರು ಬರಲಿಲ್ಲ. ಮದ್ದೂರು ಕೆರೆಗೆ ಮಾತ್ರ ಅರ್ಧ ಬಂದಿದೆ. ಬಿಸಿಲಿನತಾಪ ಕಮ್ಮಿ ಆಗಿದೆ. ಜೋಳದ ಪಸಲು ಬಹಳ ಸೊಂಪಾಗಿದೆ. ಹಿಮವು ಬೀಳುವುದರಿಂದ ಬಾಯಿಲೆಯು ಜನಗಳಿಗೆ ಬರುತ್ತದೆಂದು ಜನಗಳು ಆಡಿಕೊಳ್ಳುತ್ತಾರೆ. ಈ ಊರಿನ ಸ್ಪೆಷಲ್ ಕೋರ್ಟಿನಲ್ಲಿ ನಾಗಮಂಗಲದ ಅಮಲ್ದಾರ್ ಮಿ|| ಶಂಕರಪ್ಪನವರನ್ನು ಮೈಲಾರಪಟ್ಟಣದ ಶಂಕರಲಿಂಗೇಗೌಡನು ಕಲ್ಲು ಕಟ್ಟಿದವನು ಎಂದು ಬೈದದ್ದಕ್ಕಾಗಿ ಮಾಡಲ್ಪಟ್ಟಿದ್ದ ಮೊಖದ್ದಮೆಯಲ್ಲಿ ಅಪರಾಧಿಗೆ 150 ರೂ. ಜುಲ್ಮಾನೆ ತಪ್ಪಿದಲ್ಲಿ 3 ತಿಂಗಳ ಸಜಾ ವಿಧಿಸಲ್ಪಟ್ಟಿತು. ರೈತರು ಸರ್ಕಾರದ ಮೇಲೆ ಬೀಳುವುದು ಸರ್ವಥಾ ತಪ್ಪು.

ಬಲ್ಲವ.

ದೇವಾಂಗ ಸಂಘ ಬೆಂಗಳೂರು.

ದೇವಾಂಗಮತಕ್ಕೆ ಸೇರಿದ ಬಾಲಕ ಬಾಲಕಿಯರ ವಿದ್ಯಾಭಿವೃದ್ಧಿಗೆ ಸೌಕರ್ಯಗಳನ್ನು ಕಲ್ಪಿಸುವ ಮುಖ್ಯ ಉದ್ದೇಶದಿಂದ "ದೇವಾಂಗ ಸಂಘ" ವೆಂಬ ಒಂದು ಸಮಾಜವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿರುವದು ಸರಿಯಷ್ಟೆ. ಮೈಸೂರು ದೇಶದಲ್ಲಿ ಈಗ ಲೋವರ್‌ಸೆಕೆಂಡರಿ ಮತ್ತು ಅದಕ್ಕೆ ಮೇಲ್ಪಟ್ಟ ತರಗತಿಗಳಲ್ಲಿ ವ್ಯಾಸಂಗಮಾಡುತ್ತಿರುವ ಬಾಲಕ ಬಾಲಕಿಯರೆಲ್ಲರೂ ತಮ್ಮ ಹೆಸರು ಮತ್ತು ವಿಳಾಸಗಳನ್ನೂ ಬೆಂಗಳೂರು ಸಿಟಿ ಮಾಮ್ಲಾಮಸೀದಿ ರೋಡಿನಲ್ಲಿರುವ ದೇವಾಂಗ ಸಂಘದ ಸೆಕ್ರೆಟರಿಯವರಿಗೆ ತಿಳಿಯಪಡಿಸಬೇಕೆಂದೂ ಅಲ್ಲದೆ ಈ ಸಂಘದ ವಿಚಾರಗಳನ್ನು ದೇವಾಂಗಮತಾಭಿಮಾನಿಗಳೆಲ್ಲರೂ ಮೇಲ್ಕಂಡ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಂಡು ಸಂಘಕ್ಕೆ ಮೆಂಬರುಗಳಾಗಿ ಸೇರಬೇಕೆಂದೂ ಪ್ರಾರ್ಥಿಸಲಾಗಿದೆ.

ಸಂಘದ ಸೆಕ್ರೆಟರಿ.

ಯಡತೊರೆ ವೀರಶೈವರ ಕರ್ತವ್ಯಪರಾಙ್ಮುಖತೆ.

ಪರಶಿವಮೂರ್ತಿಯ ಆಜ್ಞಾನುಸಾರ ಭೂಲೋಕದಲ್ಲಿ ಅವತರಿಸಿ ಬಿಲವಾಗಿದ್ದ ಅನಾದಿ ವೀರಶೈವ ಮತವನ್ನುದ್ಧರಿಸಿ ದ್ವಿತೀಯಶಂಭುವೆಂದು ಪ್ರಖ್ಯಾತಿಗೊಂಡ ಆ ಶ್ರೀ ಬಸವೇಶ್ವರನ ಜಯಂತ್ಯುತ್ಸವವನ್ನು ಭರತಖಂಡದ ಪ್ರತಿಯೊಬ್ಬ ವೀರಶೈವ ಮತಾಭಿಮಾನಿಯೂ ಆಚರಿಸಿ ಕೃತಕೃತ್ಯನಾಗಬೇಕೆಂದು ಈ ಸ್ಟಾರ್ ಪತ್ರಿಕಾಕರ್ತರು ಸೂಚಿಸಿದ್ದ ಪ್ರಕಾರ ಅನೇಕ ಕಡೆಯಲ್ಲಿ ಆಚರಿಸಲ್ಪಟ್ಟಿರುವ ವಿಚಾರವು ಕಳೆದವಾರದ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಆದರೆ ನಮ್ಮ ಯಡತೊರೆ ನಿವಾಸಿಗಳಾದ ವೀರಶೈವರು ಮಾತ್ರ ಈ ಪತ್ರಿಕಾಕರ್ತರ ಸೂಚನೆಯನ್ನು ತಮ್ಮ ಮನಸ್ಸಿಗೆ ತಂದುಕೊಂಡು ಕಳೆದ ತಾ|| 6ರಲ್ಲಿ ನಡೆಯಬೇಕಾಗಿದ್ದ ಜಯಂತ್ಯುತ್ಸವವನ್ನು ನೆರವೇರಿಸದೆ ಹೋದುದು ಶೋಚನೀಯವೂ ಲಜ್ಜಾಸ್ಪದವೂ ಆಗಿದೆ. ಮುಂದಾದರೂ ಈ ಮಹಾಕಾರ್ಯವನ್ನಾಗಮಾಡಿ ಕರ್ತವ್ಯಪರಾಙ್ಮುಖರೆಂದು ತಮಗೆ ಬಂದಿರುವ ಕೆಟ್ಟಹೆಸರನ್ನು ಹೋಗಲಾಡಿಸಿಕೊಂಡು ಈಶ್ವರ ಅಪರಾವತಾರನೆಂದೆನಿಸಿದ ಶ್ರೀ ಬಸವೇಶ್ವರನ ಪೂರ್ಣಾನುಗ್ರಹಕ್ಕೆ ಪಾತ್ರರಾಗುವರೆಂದು ನಿರೀಕ್ಷಿಸುವ,

ದೈವಭಕ್ತ.

ಶ್ರೀ ಬಸವೇಶ್ವರ ಜಯಂತ್ಯುತ್ಸವ, ಬೆಂಗಳೂರು.

ಬೆಂಗಳೂರು ಸಿಟಿಯ ವೀರಶೈವ ಮಹಾಜನರು ಮೇಲ್ಕಂಡ ಉತ್ಸವವನ್ನು ಮೇ ಮಾಹೆ 6ನೆ ಮಂಗಳವಾರ ಬಹಳ ವೈಭವದಿಂದ ನೆರವೇರಿಸಿದರು. ಆ ದಿನ ಬೆಳಿಗ್ಗೆ ಬೆಂಗಳೂರು ಸಿಟಿ ಅರಳೇಪೇಟೆಯಲ್ಲಿರುವ ಶ್ರೀ ರುದ್ರದೇವಸ್ಥಾನದಲ್ಲಿ ಮಹಾರುದ್ರಾಭಿಷೇಕವೂ, ಮಧ್ಯಾಹ್ನ ಚಿಕ್ಕಪೇಟೆಯಲ್ಲಿರುವ ಶ್ರೀ ಮಹಂತಿನಮಠದಲ್ಲಿ ಗಣಾರಾಧನೆಯೂ ನಡೆಸಲ್ಪಟ್ಟಿತು. ರಾತ್ರಿ 9 ಗಂಟೆಗೆ ಮಲ್ಲಿಗೆಮೊಗ್ಗಿನಿಂದಲೂ ವಿದ್ಯುಚ್ಛಕ್ತಿಯ ದೀಪಾವಳಿಗಳಿಂದಲೂ ದಿವ್ಯಾಲಂಕೃತವಾಗಿದ್ದ ಹುಮ್ಮಿನ ಅಡ್ಡಪಾಲಕಿಯನ್ನು ತೇರಿನಮೇಲಿಟ್ಟು ಅದರಲ್ಲಿ ಚಂದ್ರಮೌಳೇಶ್ವರನಸಹಿತ ನಂದೀಶ್ವರನ ವಿಗ್ರಹವನ್ನೂ ಶ್ರೀ ಕಲ್ಯಾಣಬಸವೇಶ್ವರನ ಭಾವಚಿತ್ರವನ್ನೂ ಇಟ್ಟು ನಂದಿಧ್ವಜದೊಡನೆ ಉತ್ಸವವು ಶ್ರೀ ಮಹಂತಿನಮಠದಿಂದ ಹೊರಟು ಪಟ್ಟಣದ ಮುಖ್ಯ ಬೀದಿಗಳಲ್ಲಿ ಹಗಲು 4 ಗಂಟೆವರೆಗೂ ನಡೆಯಿತು. ಮಾಮೂಲುಪೇಟೆಯ ಅಡಿಕೆ ಅಂಗಡಿಯ ವೀರಶೈವ ಮಹಾಜನರು ಇದರಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿದ್ದರಿಂದಲೂ ದೇಶದ ಸೆಟ್ಟರು ಯಜಮಾನರು ಮುಂದಾಳುಗಳಾಗಿ ನಿಂತುದರಿಂದಲೂ, ಮೇಲ್ಕಂಡ ಸಮಾರಂಭವು ಬಹಳ ವಿಜೃಂಭಣೆಯಿಂದ ನಡೆಯಲು ಅವಕಾಶವಾಯಿತೆಂದು ಕೇಳುತ್ತೇನೆ. ಈ ಉತ್ಸವದಲ್ಲಿ ಭಾಗಿಗಳಾದ ಪ್ರತಿಯೊಬ್ಬರಿಗೂ ಶ್ರೀಬಸವೇಶ್ವರನು ಇಹಪರ(?) ಮಂಗಳವನ್ನುಂಟುಮಾಡಲೆಂದು ಹರಿಸುವ,

ಒಬ್ಬ ಪ್ರೇಕ್ಷಕ.

ಮಳವಳ್ಳಿ ತಾಲ್ಲೂಕು ಮಡೇನಹಳ್ಳಿ.

ಈ ಊರು ತೋಂಟದಾರ್ಯ ಮಠದ ಮಹಾಂತಸ್ವಾಮಿಗಳ ಅಪ್ಪಣೆಯಂತೆ ಭಕ್ತರುಗಳು ಶ್ರೀ ಬಸವೇಶ್ವರನ ಜಯಂತ್ಯುತ್ಸವವನ್ನು ನಡೆಸುವುದಕ್ಕೆ ಪ್ರಾರಂಭಿಸಿ ಈಗ್ಗೆ ಎಂಟು ವರ್ಷಗಳಾಗುತ್ತಾ ಬಂದಿತು. ಎಂಟನೇ ವರ್ಷವಾದ ಈ ರಕ್ತಾಕ್ಷಿ ಸಂ|| ದ ಬಸವೇಶ್ವರ ಜಯಂತ್ಯುತ್ಸವವು ವೈಶಾಖ ಶು|| ೩ ಲಾಗಾಯತು ಪೌರ್ಣಿಮಾವರಿವಿಗೂ ಬಹು ಶ್ರದ್ಧಾಭಕ್ತಿಯಿಂದ ಜರಗಿತು. ತದಿಗೆಯಿಂದ ಪೌರ್ಣಿಮವರುವಿಗೆ ಪ್ರತಿನಿತ್ಯವೂ ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ಬಸವೇಶ್ವರ ಜಯಘೋಷದಿಂದ ಕೂಡಿದ ಶಿವಭಜನೆಯು ಬಸವೇಶ್ವರ ಮಂದಿರವಾದ ಶ್ರೀ ಸ್ವಾಮಿಗಳವರ ಮಠದಲ್ಲಿಯೂ ಪುರವೀದಿಗಳಲ್ಲಿಯೂ ನಡೆಯುತ್ತಿತ್ತು. ತದಿಗೆ ದಿವಸ ಭಕ್ತರುಗಳು ತಮ್ಮ ಮನೆಗಳಲ್ಲಿ ಅತ್ಯುತ್ಸಾಹದಿಂದ ಕೂಡಿದ ಹಬ್ಬವೂ ಜಂಗಮಾರ್ಚನೆಯೂ ನಡೆಸಲ್ಪಟ್ಟಿತು. ಅಲ್ಲದೆ ಅದೇ ಬಸವರಾಜ ಮಂದಿರದಲ್ಲಿ ಕಾನಕಾನಹಳ್ಳಿ ತಾ|| ಮರುಳೇ ಮಠದ ಚರಮೂರ್ತಿಗಳು ವೇ|| ಸೋಮಶೇಖರಸ್ವಾಮಿಗಳಿಂದ ಬಸವೇಶ್ವರ ಪುರಾಣಶ್ರವಣವೂ ಈ ಮಧ್ಯೆ ಸಪ್ತಮಿ ಶನಿವಾರ ಕೊಳ್ಳೇಗಾಲದ ತಾ|| ಕುಂತೂರು ಶಿವಕಥಾ ವೇ|| ಸಿದ್ದಯ್ಯಶಾಸ್ತ್ರಿಗಳಿಂದ ಅಷ್ಟಾವರಣಪರವಾದ ಉಪನ್ಯಾಸವೂ ಹೇಳಲ್ಪಟ್ಟು ಅದೇ ರಾತ್ರಿ ಮೇಲ್ಕಂಡ ಸಿದ್ದಯ್ಯಶಾಸ್ತ್ರಿಗಳಿಂದ ರಾಜಶೇಖರ ಕಥಾಶ್ರವಣ ಮಾಡಿಸಲ್ಪಟ್ಟಿತು. ದಶಮಿ ಮಂಗಳವಾರ ಬಸವೇಶ್ವರನಿಗೆ ಸಹಸ್ರ ಬಿಲ್ವಾರ್ಚನೆಯು ತ್ರಯೋದಶೀ ಶುಕ್ರವಾರ ರುದ್ರಾಭಿಷೇಕ ಮತ್ತು ಪ್ರಮಥ ಗಣಂಗಳ ಆರಾಧನೆಯೂ ಚತುರ್ದಶಿ ಶನಿವಾರ ಶ್ರೀ ಬಸವೇಶ್ವರಸ್ವಾಮಿಯನ್ನು ಹುಮ್ಮಿನ ಪಲ್ಲಕ್ಕಿಗೆ ಬಿಜಯಂಗೈಸಿ ಉತ್ಸವವು ಪುರದ ಬೀದಿಗಳಲ್ಲಿ ಬಹು ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ನಮ್ಮ ಶ್ರೀಗಳವರು ಕೇಳಿ ಈ ಸದುತ್ಸವಕ್ಕೆ ಪ್ರಾರಂಭಿಸಿದರು. ಬಸವೇಶ್ವರನ ಅನುಗ್ರಹದಿಂದ ಎಂಟು ವರ್ಷಗಳಿಂದಲೂ ನಮ್ಮೂರು ಶ್ರೀಗಳವರಪ್ಪಣೆಯಂತೆ ನಡೆಯುತ್ತಾ ಬಂದಿರುವ ಈ ಉತ್ಸವವು ಅಚಂದ್ರಾರ್ಕವಾಗಿ ನಡೆಯಬೇಕೆಂಬ ಶ್ರೀಗಳವರ ಪ್ರತಿಜ್ಞೆಗೆ ಭಂಗಬಾರದಂತೆ ಶ್ರೀ ಬಸವೇಶ್ವರನು [illegible] ಅನುಗ್ರಹಿಸಬೇಕು.

ಶಿವಭಕ್ತ ಪ್ರಮುಖರು.

ಶ್ರೀ ಜಗದ್ಗುರು ಮರುಳಾರಾಧ್ಯರ ಜಯಂತಿಯೂ ಶಿವದೀಕ್ಷಾ ಮಹೋತ್ಸವ ಸಮಾರಂಭವೂ.

ಬಳ್ಳಾರಿ ಡಿ|| ಹಿರೇಹಡಗಲಿ ಗ್ರಾಮದ ಪುರವರ್ಗ ಮಾನಿಹಳ್ಳಿ ಮಠಪಟ್ಟದ ಮಳೇಸ್ವಾಮಿಗಳವರ ಅಪ್ಪಣೆ ಪ್ರಕಾರ ಶ್ರೀಮದ್ವೀರಶೈವ ಮಹಾಮತಸಂಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಮೂರ್ತಿಗಳ ಪೈಕಿ ಉಜ್ಜಯಿನೀ ಪೀಠಾಧೀಶರಾದ ಶ್ರೀ ಜಗದ್ಗುರು ಮರುಳಾರಾಧ್ಯರ ಜಯಂತಿಯನ್ನು ಇದೇ ವೈಶಾಖ ಶು|| ೫ ದಿವಸ ಸಕಲ ಭಕ್ತಮಾಹೇಶ್ವರಾದಿ ಮಂಡಳಿಯು ಅತ್ಯಂತ ಸಂತೋಷಭರಿತರಾಗಿ ನೆರವೇರಿಸಿದರು. ಮತ್ತು ಇದೇ ಸುಮುಹೂರ್ತದಲ್ಲಿ ಮ|| ಹಂಪಿ ಗ್ರಾಮದ ತುಂಬಿನಕಟ್ಟಿ ರೇವಣಪ್ಪ ಕವಲೂರು ಶಿದ್ಲಿಂಗಪ್ಪ ಈ ಉಭಯರು ತಮ್ಮ ಸತ್ಸಂಕಲ್ಪದಂತೆ ಶ್ರೀಗಳವರ ಮಠದಲ್ಲಿ ಸ್ಥಳ ಪರಸ್ಥಳದ ಕೆಲವು ಸೀಕಮಹೇಶ್ವರ ವಟುಗಳಿಗೆ ಶಿವದೀಕ್ಷಾಸಂಸ್ಕಾರವನ್ನು ವೇ|| ಪುರಾಣಿಕ ಮಠದ ವಿರೂಪಾಕ್ಷಾರ್ಯರಿಂದ ವಿಧ್ಯುಕ್ತ ಪ್ರಕಾರ ನೆರವೇರಿಸಿದರು. ಮಾರನೆ ದಿವಸ ಉದಯ 10 ಗಂಟೆಯಿಂದಾ ಸಾಯಂಕಾಲ 4 ಗಂಟೆವರೆಗೂ ಮಹಾಗಣಸಮಾರಾಧನೆಯು ವ್ಯಾಖ್ಯಾನ್ನಪಾನಾದಿಗಳಿಂದ ಜರಗಲ್ಪಟ್ಟಿತು.. ಬಳಿಕ ಪುರಪ್ರಮುಖರಾದ ಮ|| ರಾ|| ಪಾಟೀಲ ಶಿವರುದ್ರಗೌಡರು (ಲ್ಯಾಂಡ್ ಲಾರ್ಡ್) ಮತ್ತು ಬಾಗಳಿ ಬಸಪ್ಪನವರು ಪುರಾಣಿಕಮಠದ ಪರಮೇಶ್ವರಯ್ಯನವರು ರಾಣಿಬೆನ್ನೂರು ಗುರುಪಾದಪ್ಪನವರು ದಳವಾಯಿ ಬಸಲಿಂಗಯ್ಯನವರೇ ಮುಂತಾದ ಮಂಡಳಿಯವರಿಂದ ಸಭೆ ಸೇರಿದ್ದು. ಪಾ|| ಶಿವರುದ್ರಗೌಡರು ಏಕಮತ ವಿದ್ಯಾಭಿವೃದ್ಧಿ ವಿಷಯವಾಗಿಯೂ ಪುರಾಣಿಕಮಠದ ವಿರೂಪಾಕ್ಷಾರ್ಯ ಇವರು ಸಮಾಜಸುಧಾರಣೆ ವಿಷಯವಾಗಿಯೂ ಉಪನ್ಯಾಸಮಾಡಿ ಬಹುಕಾಲದಿಂದಲೂ ಸಮಾಜಾಭಿವೃದ್ಧಿಯ ಸಲುವಾಗಿ ಹೋರಾಡುವಂಥ ಜನಪ್ರಿಯವಾದ ಮೈಸೂರು ಸ್ಟಾರ್‌ಪತ್ರಿಕೆಗೂ ಹಾಗೂ, ವಿಭಾಕರ, ಧರ್ಮತರಂಗಿಣಿ, ಪ್ರಬೋಧ, ಪತ್ರಿಕೆಗಳಿಗೂ ಸರ್ವರೂ ಶಕ್ತ್ಯಾನುಸಾರವಾಗಿ ಧನಸಹಾಯಮಾಡಬೇಕೆಂತಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನೂ ಶ್ರೀ ಬಸವೇಶ್ವರ ಜಯಂತಿಯನ್ನೂ ಪ್ರತಿಯೊಬ್ಬರೂ ತಪ್ಪದಂತೆ ವಿಜೃಂಭಣೆಯಿಂದ ಮಾಡಿ ಕೃತಾರ್ಥರಾಗಬೇಕೆಂದೂ ಬೋಧಿಸಿದರು. ಬಳಿಕ ಗಂಧ ಪುಷ್ಪಾದಿಗಳು ಸಮರ್ಪಿಸಿ ಜಯಘೋಷದೊಡನೆ ಸಭಾಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಬೆಳ್ಳಾವಾರದ ಎಸ್ಟೇಟಿಗೆ ಶ್ರೀ ಜಗದ್ಗುರುಗಳವರ ಆಗಮನವು.

ಶ್ರೀ ಗಿರಿರಾಜಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಚರಪಟ್ಟಾಧ್ಯಕ್ಷ ಮಹಾಸ್ವಾಮಿಗಳವರ ಸವಾರಿಯು ಬೆಳ್ಳಾವಾರದ ಶ್ರೀಮಂತ ಕಾಫಿಪ್ಲಾಂಟರ್ ಬಿ. ಯಂ. ದ್ಯಾವೇಗೌಡರ ಮತ್ತು ಬಿ. ಸಿ. ಮಲ್ಲೇಗೌಡರ ಕೋರಿಕೆಯಂತೆ ತಾರೀಖು 7-5-1924ನೆ ಬುಧವಾರ ಸಕಲ ಅಜಬಾಬು ಸಮೇತ ದಿವ್ಯವಾದ ಪಲ್ಲಕ್ಕಿಯಲ್ಲಿ ಮಲ್ಲಾಪುರದ ಮಠದಿಂದ ಹೊರಟು ಸಾಯಂಕಾಲ 6 ಗಂಟೆಗೆ ಬೆಳ್ಳಾವಾರದ ಎಸ್ಟೇಟಿಗೆ ಸವಾರಿಯು ದಯಮಾಡಿಸಿತು. ಬ್ಯಾಂಡು ವಾದ್ಯಗಳು ಭೋರ್ಗರೆಯುತ್ತಿದ್ದವು. ಆರುವರೆ ಗಂಟೆಗೆ ಸರಿಯಾಗಿ ಶ್ರೀಗಳು ಪೀಠಾರೋಹಣಮಾಡಿದ ಕೂಡ್ಲೆ ಸಂಸ್ಥಾನದ ಏಜಂಟರು ಜಗದ್ಗುರು ಪಂಚಾಚಾರ್ಯರ ಉತ್ಪತ್ತಿಯನ್ನು ಕುರಿತು ಭಾಷಣಮಾಡಿ ಮಾರ್ಗಾಯಾಸವಾಗಿದ್ದ ಕಾರಣ ಬೆಳಗಿನ 9 ಗಂಟೆಗೆ ದರ್ಶನಕ್ಕೆ ಭಾಗಿಗಳಾಗಬೇಕೆಂದು ಅಪ್ಪಣೆಯಾದಮೇಲೆ ಸರ್ವರೂ ಅಪ್ಪಣೆಪಡೆದು ತೆರಳಿದರು. ತಾ|| 8-5-24 ಗುರುವಾರ ಬೆಳಿಗ್ಗೆ 8 ಗಂಟೆಯಿಂದ 12 ಗಂಟೆವರೆಗೂ ಪಾದಪೂಜಾಸಮಾರಂಭವು ನಡೆಯಿತು. ಸಹೋದರರೀರ್ವರೂ ಶ್ರೀಶೈಲ ಧಾರ್ಮಿಕ ಫಂಡಿಗೆ ತಮ್ಮ ಶಕ್ತಿಮೀರಿ ಸಹಾಯಮಾಡಿದರು. ಶ್ರೀಗಳವರು 12 ಗಂಟೆ ಮೇಲೆ ದರ್ಬಾರಿಗೆ ದಯಮಾಡಿಸಿದ ಕೂಡಲೆ ೨ ಸಹಸ್ರದವರೆಗೂ ನೆರೆದಿದ್ದ ಸಮೂಹಕ್ಕೆಲ್ಲಾ ಮತಸಂಬಂಧವಾಗಿ ಅನೇಕ ಮತವಿಷಯಗಳನ್ನು ಬೋಧಿಸಿ ಶ್ರೀಯುತ ಬಿ. ಯಂ. ದ್ಯಾವೇಗೌಡರು, ಬಿ. ಸಿ. ಮಲ್ಲೇಗೌಡರು ಈ ಸಹೋದರರ ಭಕ್ತಿ ವಿಶ್ವಾಸಗಳಿಗೆ ತುಂಬಾ ಸಂತೋಷಪಟ್ಟು ಗುರುಭಕ್ತಕೇಸರಿ ಎಂಬ ಬಿರುದಾಂಕಿತದ ಸುವರ್ಣಪದಕದೊಡನೆ ಪುಷ್ಪಹಾರವನ್ನು ಹಾಕುವಂತೆ ಸಿದ್ಧಾಪುರದ ಶ್ರೀಮಂತ ಗಡಿಗೆ ಗಂಗಪ್ಪ ಅಣ್ಣ ಇವರಿಗೆ ಅಪ್ಪಣೆಕೊಡಿಸಲು ಶ್ರೀಮಂತ ಗಡಿಗೆಯವರು ತಮ್ಮ ಹಸ್ತದಿಂದ ಸಹೋದರರೀರ್ವರ ಕಂಠಗಳಿಗೆ ಹಾಕಿದರು. ಕೂಡಲೆ ಗಡಿಗೆಯವರು ಈ ದೇಶಕ್ಕೆ ದಯಮಾಡಿಸಿ ಸಮಾಜದ ಸೇವೆಮಾಡಿದುದಕ್ಕಾಗಿ ಸರ್ವರೂ ತುಂಬಾಸಂತೋಷಪಟ್ಟು ಅವರ ಗೌರವಾರ್ಥವಾಗಿ ಒಂದು ಶಾಲಾಪತ್ತಿನ ಕೈಬ್ಬವೂ ಒಂದು ಸುವರ್ಣಪದಕವೂ ಒಪ್ಪಿಸಲ್ಪಟ್ಟವು ತರುವಾಯ ಶ್ರೀ ಜಗದ್ಗುರುಗಳವರು ಸರ್ವರಿಗೂ ಫಲಾಶೀರ್ವಾದಗಳನ್ನಿತ್ತು ಮಲ್ಲಾಪುರದ ಮಠಕ್ಕೆ ದಿಗ್ವಿಜಯಮಾಡಿದರು. ನೆರೆದಿದ್ದ ಸಭೆಯಲ್ಲಿ ಮೈಸೂರು ಯಜಮಾನ್ ಕೈ|| ವೀರಸಂಗಪ್ಪನವರ ಹೆಸರಿನ ಮೇಲೆ ನಾಲ್ಕು ರೂಪಾಯಿಗಳನ್ನು ತೆಗೆಯುವಂತೆ ಶ್ರೀಮಂತ ಗಡಿಗೆಯವರು ಸೂಚಿಸಿದ್ದ ಮೇರೆ ಕಾಫಿಪ್ಲಾಂಟರ್ ಬಿ. ಯಂ. ದ್ಯಾವೇಗೌಡರವರು ಕೊಂಗೋಡು ಪಟೇಲ್ ಮಲ್ಲೇಗೌಡರವರಕ್ಕೆ ಕೊಟ್ಟರು.

ಪ್ರತ್ಯಕ್ಷದರ್ಶಿ.

[ಮೇಲ್ಕಂಡ 4 ರೂ. ಬಂದಿದೆ.——ಸ. ಪ್ರ.]

ಶ್ರೀ ಬಾಳೆಹೊನ್ನೂರು ಮಠದ ಪೀಠಾಧಿಕಾರ.

ಮೇಲ್ಕಂಡ ಸಂಸ್ಥಾನದ ಪೀಠಾಧಿಪತಿಗಳನ್ನು ಚುನಾಯಿಸುವ ವಿಚಾರದಲ್ಲಿ ಇದೇ ಮಾಹೆ 3ನೆ ತಾರೀಖಿನಲ್ಲಿ ಮೈಸೂರು ಸರ್ಕಾರದ ಮುಜರಾಯಿ ಕಮಿಷನರವರು ಈ ಕೆಳಗೆ ಕಂಡಂತೆ ಆರ್ಡರುಮಾಡಿರುವರು. ಈ ಮಠದ ಶಿಷ್ಯವರ್ಗದ ಮುಖಂಡರುಗಳು ಎಂದರೆ ಎಡೆಹಳ್ಳಿ ಶಾಂತಪ್ಪಶೆಟ್ಟರನ್ನು, ಎ. ಚಂದ್ರೇಗೌಡರನ್ನು ಮುಂದಾಳುಗಳನ್ನಾಗಿಟ್ಟುಕೊಂಡು ತೀರ್ಮಾನಿಸಿರುವುದೇನೆಂದರೆ——ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಿಂದ 14 ಮೆಂಬರುಗಳುಳ್ಳ ಒಂದು ಕಮಿಟಿಯು ಮಾಡಲ್ಪಡತಕ್ಕದ್ದು. ಅವರುಗಳಲ್ಲಿ ಮೈಸೂರು ದೇಶದ ಹೊರಗಿನವರು 4 ಜನ. ಈ ಕಮಿಟಿಯು ಬೆಂಗಳೂರಿನಲ್ಲಿ ಕೂಡಿ, ಉಭಯಪಾರ್ಟಿಗಳಿಂದಲೂ ಚೆನ್ನಾಗಿ ಯೋಗ ತಾಪರೀಕ್ಷೆಯನ್ನು ಮಾಡಿ ಸಮಭಾಗವಾಗಿ ಮೂರ್ತಿಗಳನ್ನು ಚುನಾಯಿಸತಕ್ಕದ್ದು. ಮೇ 28ನೆ ತಾರೀಖಿನವಿನ ಅಧ್ಯಕ್ಷರು ಕಡೂರು ಡಿ|| ಡೆಪ್ಯುಟಿ ಕಮಿಷನರವರನ್ನು ಇಟ್ಟುಕೊಂಡು ಅಲ್ಲಿ ಸೇರತಕ್ಕ ಇತರ ದೊಡ್ಡಮನುಷ್ಯರ ಸಮಕ್ಷಮ ಹಾಗೆ ಚುನಾಯಿಸಲ್ಪಟ್ಟ ಮೂರ್ತಿಗಳಲ್ಲಿ ಲಾಟರಿ ಮೂಲಕ ಬಾಳೆಹೊನ್ನೂರು ಮಠದಲ್ಲಿ ಒಬ್ಬಮೂರ್ತಿಯನ್ನು ಚುನಾಯಿಸತಕ್ಕದ್ದು. ಅನಂತರ 1924ನೆ ಇಸವಿ ಜೂನ್ ಮಾಹೆ 15ನೆ ತಾರೀಖಿನವಿನ ಹಾಗೆ ಚುನಾಯಿಸಲ್ಪಟ್ಟ ಮೂರ್ತಿಗೆ ಮೊದಲು ಸರ್ಕಾರದವರ ಒಪ್ಪಿಗೆಯನ್ನು ಪಡೆದು ಪೀಠಾಧಿಕಾರವನ್ನು ವಹಿಸತಕ್ಕದ್ದು. ಮೇಲ್ಕಂಡ ಆರ್ಡರು ಹುಟ್ಟಿ ಇಷ್ಟು ದಿವಸಗಳಾದಾಗ್ಗೂ ಅದು ಇದುವರೆಗೆ ಪ್ರಕಟಿಸಲ್ಪಡದನ್ನು ನೋಡಿದರೆ, ಅದರ ಮೂಲಕರ್ತರು ನಿಜವಾಗಿಯೂ ಪೀಠದ ಗೌರವವನ್ನು ಗಮನಕ್ಕೆ ತಂದುಕೊಂಡಂತೆ ಕಾಣುವುದಿಲ್ಲ. ವೀರಶೈವ ಸಮಾಜಕ್ಕೇ ಸಂಬಂಧಪಟ್ಟ ಈ ವಿಚಾರವನ್ನು ಪ್ರತಿಷ್ಠಾಕಾಂಕ್ಷಿಗಳೂ, ಸ್ವಾರ್ಥಪರರೂ ಆದ ಒಬ್ಬಿಬ್ಬರ ಮನೋಗತವನ್ನು ಮಾತ್ರ ನೆರವೇರಿಸಲು ಉದ್ಯುಕ್ತರಾಗಿರುವಂತೆ ಕಾಣುತ್ತದೆ. ಈ ನನ್ನ ಊಹೆಯು ನಿಜವಾಗಿದ್ದಲ್ಲಿ ವೀರಶೈವಸಮಾಜದ ದೌರ್ಭಾಗ್ಯಕ್ಕೆ ಎಣೆಯೇ ಇಲ್ಲ. ಅದರಲ್ಲೂ ವೀರಶೈವಪ್ರಮುಖರೊಬ್ಬರಾದ ದಿವಾನ್ ಬಹದ್ದೂರ್‌ರವರು ಈ ವಿಧವಾದ ಅವ್ಯವಸ್ಥೆಗೆ ಹೇಗೆ ಒಪ್ಪಿದರೆಂಬುದು ಮತ್ತೊಂದು ಸಂದೇಹಾಸ್ಪದವಾದ ಸಂಗತಿಯಾಗಿರುತ್ತೆ. ರಾಜತಂತ್ರ ವಿಶಾರದರೆಂದು ಘನತೆಯನ್ನು ಪಡೆದಿರುವ ದಿವಾನ್ ಬಹದ್ದೂರ್‌ರವರು ಈ ವಿಚಾರವು ಸಮಾಜದ ಬಹು ಜನರ ಸಮ್ಮತಿಯಂತೆ ನಡೆಯತಕ್ಕದ್ದು ಅತ್ಯವಶ್ಯಕವೆಂದು ಯೋಚಿಸದಿರಲು ಕಾರಣವೇನಿರಬಹುದು? ಬಹುಶಃ ತಮ್ಮಲ್ಲಿ ರಾತ್ರಿ ಹಗಲೆನ್ನದೆ ಬಂದು ಸಮಾಜಕ್ಕೆ ತಾವೇ ಮುಂದಾಳುಗಳೆಂದು ನಟನೆಯನ್ನು ಮಾಡುತ್ತಲಿರುವ ಕೆಲವು ದೊಡ್ಡ ಮನುಷ್ಯರ ಮಾತನ್ನು ಅವರು ನಂಬಿರಬಹುದು. ಇದು ಎಷ್ಟು ಮಾತ್ರವೂ ನಿಶ್ಚಯವಲ್ಲ. ಸಮಾಜದ ಬಹುಮಂದಿಗಳ ಅಭಿಪ್ರಾಯವನ್ನು ತಿಳಿಯದೆ ಮೇಲ್ಕಂಡ ಕಾರ್ಯವನ್ನು ಮಾಡಿದಲ್ಲಿ ಆ ಅಧಿಕಾರಿಗಳು ತಮ್ಮನ್ನು ಪೀಠಕ್ಕೆ ತರಲು ಪ್ರಯತ್ನಪಟ್ಟ ಕೆಲವರಿಂದ ಮಾತ್ರ ಅಂಗೀಕೃತವಾಗುವರೆ ಹೊರತು, ವೀರಶೈವ ಸಮಾಜದ ಮುಖ್ಯ ಪೀಠಾಧಿಕಾರಿಗಳಲ್ಲೊಬ್ಬರೆಂದು ಎಂದಿಗೂ ಗಣಿಸಲ್ಪಡುವುದಿಲ್ಲ.

ಒಬ್ಬ ಮತಾಭಿಮಾನಿ.

ಕರ್ಣಾಟಕ ಸಾಹಿತ್ಯಸಮ್ಮೇಳನದ ಹತ್ತನೆಯ ಕೂಟ.

ಕರ್ಣಾಟಕ ಸಾಹಿತ್ಯ ಸಮ್ಮೇಳನದ ಹತ್ತನೆಯ ಕೂಟವು ಇದೇ ಮೇ 16 ನೆಯ ತಾರೀಖು ಶುಕ್ರವಾರ ಪ್ರಾತಃಕಾಲ ಕೋಲಾರದ ಹೈಸ್ಕೂಲಿನ ಸಭಾಭವನದಲ್ಲಿ ಪ್ರಾರಂಭವಾಯಿತು. ಕರ್ಣಾಟಕದ ನಾನಾ ಭಾಗಗಳಿಂದ ಬಂದ ಸದಸ್ಯರುಗಳೂ, ಊರಿನ ಮುಖ್ಯಾಧಿಕಾರಿಗಳೂ, ಲಾಯರುಗಳೂ ವರ್ತಕರೂ ಮೊದಲಾದ ಪ್ರಮುಖ ಜನರು ಸಭಾಭವನದ ತುಂಬ ಉತ್ಸಾಹದಿಂದ ನೆರೆದಿದ್ದರು. ಭಗವತ್ಪ್ರಾರ್ಥನೆಯೂ, ಕರ್ಣಾಟಕ ದೇವಿಗೀತೆಯೂ ಆದ ಬಳಿಕ ಸ್ವಾಗತಮಂಡಲಿಯ ಅಧ್ಯಕ್ಷರೂ, ಜಿಲ್ಲೆಯ ಡೆಪ್ಯುಟಿ ಕಮಿಷನರವರೂ ಆದ ಮ|| ರಾ|| ಎಸ್. ಹಿರಣ್ಣಯ್ಯ, ಎಂ. ಎ. ಬಿ. ಎಲ್. ಅವರು ಒಂದು ಸ್ವಾರಸ್ಯವಾದ ಸಣ್ಣ ಭಾಷಣದಲ್ಲಿ ಸದಸ್ಯರಿಗೂ ಪ್ರೇಕ್ಷಕರಿಗೂ ಸುಸ್ವಾಗತವನ್ನು ಬಯಸಿ, ಕರ್ಣಾಟಕ ಸಾಹಿತ್ಯ ಪರಿಷತ್ತು ಅನೇಕ ವರ್ಷಗಳಿಂದ ಮಾಡುತ್ತಿರುವ ಕಾರ್ಯಸ್ವರೂಪವನ್ನು ವಿವರಿಸಿ, ಆ ಕಾರ್ಯಕ್ಕೆ ದೇಶಾಭಿಮಾನಿಗಳಾದ ಮಹಾಜನರ ಸಹಾಯ ಮನ್ನಣೆಗಳು ಅತ್ಯಾವಶ್ಯಕವಾಗಿ ಸಲ್ಲಬೇಕಾದುದೆಂದು ವಿಜ್ಞಾಪಿಸಿದರಲ್ಲದೆ ಸಮ್ಮೇಳನದ ಅಧ್ಯಕ್ಷಪದವಿಗೆ ಮೈಸೂರು ದೇಶೀಯರೂ, ಕೋಲಾರದಬಳಿಯ ಸ್ಥಳದವರೂ, ಪ್ರಖ್ಯಾತ ಪಂಡಿತರೂ ಇಂಡಿಯಾ ಸರ್ಕಾರದ ಪ್ರಾಚೀನ ಶಾಸನ ವಿಚಾರಾಧ್ಯಕ್ಷರೂ ಆಗಿರುವ ರಾವ್ ಬಹಾದೂರ್ ಮ|| ರಾ|| ಹೆಚ್. ಕೃಷ್ಣಶಾಸ್ತ್ರಿಗಳವರು ಚುನಾಯಿಸಲ್ಪಡಬೇಕೆಂದು ಸೂಚಿಸಿದರು. ಇದನ್ನು ರಾಜಸಭಾಭೂಷಣ ಮ|| ರಾ|| ಕರ್ಪೂರ ಶ್ರೀನಿವಾಸರಾಯರು ಅನುಮೋದಿಸಿ ಮ|| ರಾ|| ವಿ. ಬಿ. ಆಲೂರ್ ಅವರು ಪುಷ್ಟೀಕರಿಸಿ ಸಭಿಕರು ಅಂಗೀಕರಿಸಿದ ಬಳಿಕ ಸಭಾಧ್ಯಕ್ಷರವರು ತಮ್ಮ ಪ್ರೌಢವಾದ ಮತ್ತು ಬಹುವಿಷಯಗರ್ಭಿತವಾದ ಉಪನ್ಯಾಸವನ್ನು ಪಠಿಸಿದರು. ಅದರಲ್ಲಿ ಕನ್ನಡ ಭಾಷೆಯು ಪೂರ್ವಕಾಲಗಳಲ್ಲಿ ಎಷ್ಟು ದೂರವ್ಯಾಪಿಸಿತ್ತು, ಭರತಖಂಡದ ವಿದ್ಯಾವಿಭೂತಿಗಳ ಬಗೆಗೆ ಕರ್ಣಾಟಕ ರಾಜರುಗಳೂ, ಶೂರರುಗಳೂ, ಕವಿಗಳೂ, ಕಲಾನಿಪುಣರೂ, ಎಷ್ಟೆಷ್ಟು ಮಾತ್ರ ಉಪಕಾರಮಾಡಿರುವರು ಎಂಬ ವಿಷಯಗಳನ್ನೂ ಈಚೆಗೆ ಕನ್ನಡಿಗರಿಗೆ ಸಂಬಂಧಪಟ್ಟ ಶಾಸನಗಳು ಎಲ್ಲೆಲ್ಲಿ ದೊರಕಿವೆ ಎಂಬ ವಿಷಯಗಳನ್ನೂ ನಿರ್ದೇಶಿಸಿದ್ದಲ್ಲದೆ ಇಂಡಿಯಾದೇಶದಲ್ಲಿ ಈಗ ಕನ್ನಡವು ಪ್ರಚಾರದಲ್ಲಿಲ್ಲದ ಭಾಗಗಳಲ್ಲಿ ಕನ್ನಡಿಗರಿಗೆ ಸಂಬಂಧಪಟ್ಟ ಪ್ರಾಚೀನ ಲಿಪಿಗಳು ಸಿಕ್ಕುವುದನ್ನು ಕುರಿತು ಪ್ರಸ್ತಾಪಿಸಿ, ಹಾಗೆಯೇ ಲೋಕವಿಖ್ಯಾತ ಮಹಾಪುರುಷರಾದ ಮಾಧವ ವಿದ್ಯಾರಣ್ಯರು ಕನ್ನಡಿಗರೇ ಎಂದು ಮ|| ರಾ|| ಡಿ. ವಿ. ಗುಂಡಪ್ಪನವರು ಮಾಡಿರುವ ಸಿದ್ಧಾಂತವನ್ನು ಸಮರ್ಥಿಸಲು ಈಚೆಗೆ ಕಾಣಬಂದಿರುವ ಹೊಸ ಶಾಸನ ಒಂದರ ಆಧಾರವನ್ನು ಉದಾಹರಿಸಿದರು. ಕರ್ಣಾಟಕದ ಪೂರ್ವ ಚರಿತ್ರೆಗೆ ಬೇಕಾದ ಸಾಮಗ್ರಿ ಒದಗಿಸಲು ಬೇರೆ ಬೇರೆ ಸರ್ಕಾರಗಳ ಪ್ರಾಚೀನ ಲಿಪಿಯ ವಿಚಾರಾಧಿಕಾರಿಗಳು ಮಾಡುತ್ತಿರುವ ಕೆಲಸವನ್ನು ಪ್ರಶಂಸಿಸಿ, ಉಪನ್ಯಾಸದ ಉಪಸಂಹಾರಭಾಗದಲ್ಲಿ ಕನ್ನಡ ಭಾಷೆಯು ಪ್ರಕೃತ ಕಾಲದ ಉಪಯೋಗಗಳಿಗೆ ತಕ್ಕಂತೆ ಮಾರ್ಪಡಲು ವಿದ್ವಾಂಸರು ಯಾವ ಯಾವ ರೀತಿಗಳಲ್ಲಿ ಕೆಲಸಮಾಡಬೇಕೆಂಬುದನ್ನೂ ಭಾಷಾಪ್ರಾಬಲ್ಯಕ್ಕೆ ಏನೇನು ಆವಶ್ಯಕವೆಂಬುದನ್ನು ಸೂಚಿಸಿ ಸಕಲರೂ ಈ ದೇಶಭಾಷೆಗಳ ಸೇವಾಸಮಾರಂಭಕ್ಕೆ ತಮ್ಮ ಉತ್ಸಾಹಪೂರ್ವಕವಾದ ಮತ್ತು ಅವಿಚ್ಛಿನ್ನವಾದ ಸಹಾಯವನ್ನು ಕೊಡಬೇಕೆಂದು ಪ್ರಾರ್ಥಿಸಿದರು. ಅಧ್ಯಕ್ಷರ ಉಪನ್ಯಾಸವನ್ನು ಸಭೆಯವರು ಅತಿಕುತೂಹಲದಿಂದ ಕೇಳಿ ಸಂತೋಷಿಸಿದರು. ಬಳಿಕ ಈ ಕೆಳಗಿನ ಎರಡು ತೀರ್ಮಾನಗಳು ಅಂಗೀಕೃತಗಳಾಗಿ ಸಮ್ಮೇಳನವು ಬರಖಾಸ್ತಾಯಿತು. 1. ಕೋಲಾರದಲ್ಲಿ ಸೇರಿದ ಕರ್ಣಾಟಕ ಸಾಹಿತ್ಯ ಸಮ್ಮೇಳನದ ಹತ್ತನೆಯ ಕೂಟವು ಮೈಸೂರಿನ ಶ್ರೀಮನ್ಮಹಾರಾಜರವರಿಗೆ ತನ್ನ ಗೌರವಪೂರ್ವಕವಾದ ಅಭಿನಂದನಗಳನ್ನೂ ಕೃತಜ್ಞತಾಪುರಸ್ಸರವಾದ ವಂದನೆಯನ್ನೂ ಸಮರ್ಪಿಸಿ ಕನ್ನಡದ ವಿಚಾರಕ್ಕೆ ಅವರ ಕೃಪಾಪೂರ್ಣವಾದ ಪರಿಪೋಷಣೆಯು ಇತೋಪ್ಯಧಿಕವಾಗಿ ನಡೆಯಬೇಕೆಂದು ಪ್ರಾರ್ಥಿಸುತ್ತದೆ. 2. ಕೋಲಾರದಲ್ಲಿ ಸೇರಿರುವ ಕರ್ಣಾಟಕ ಸಾಹಿತ್ಯ ಸಮ್ಮೇಳನದ ಹತ್ತನೆಯ ಕೂಟವು ಮೈಸೂರಿನ ಶ್ರೀಮದ್ಯುವರಾಜರವರಿಗೆ ತನ್ನ ಗೌರವಪುರಸ್ಸರವಾದ ಅಭಿನಂದನವನ್ನು ಸಮರ್ಪಿಸಿ ಅವರು ದಯಮಾಡಿ ಪರಿಷತ್ತಿನ ಅಧ್ಯಕ್ಷತೆಯನ್ನು ಸ್ವೀಕರಿಸಿ ಪೋಷಣೆ ಕೊಟ್ಟಿರುವದಕ್ಕಾಗಿ ತನ್ನ ಮನಃಪೂರ್ವಕವಾದ ಕೃತಜ್ಞತೆಯನ್ನು ಅರಿಕೆಮಾಡಿಕೊಳ್ಳುತ್ತದೆ.

ಗೌ|| ಕಾರ್ಯದರ್ಶಿ.

ಶ್ರೀಮದುಜ್ಜಯಿನೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳ ವಕ್ರಬುದ್ಧಿ.

ನಾನು ಹಿಂದಿನ ಲೇಖನದಲ್ಲಿ ಶ್ರೀ ಉಜ್ಜಯಿನೀ ಸಿದ್ಧಲಿಂಗಶಿವಾಚಾರ್ಯಸ್ವಾಮಿಗಳವರ ಸನ್ನಿಧಿಗೆ ಸ್ವಾಮಿ ಪಾದಸೇವಕನೆಂಬ ನಾಮಧೇಯದ ಮೇಲೆ ಬಹಳ ಕೃತಜ್ಞತಾಪೂರ್ವಕವಾಗಿ ಸದರಿ ಶ್ರೀಗಳವರ ಮೇಲ್ಮೆಗಾಗಿಯೇ ಅರಿಕೆಮಾಡಿಕೊಂಡದ್ದು ಎಲ್ಲರಿಗೂ ತಿಳಿದ ವಿಷಯವೇ ಆಗಿರುತ್ತೆ. ಆದರೆ ನಾನು ಅಷ್ಟು ವಿನಯಪೂರ್ವಕವಾಗಿ ಕೋರಿಕೊಂಡದ್ದು ಅರಣ್ಯರೋದನವಾಗಿ ಪರಿಣಮಿಸಿತೇ ಶಿವಾಯಿ ಅದರಿಂದ ಪ್ರಯೋಜನವಾಗಲಿಲ್ಲ. ಸದರೀ ಶ್ರೀಗಳವರು ತಮ್ಮ ಮಂತ್ರಿಗಳಾದ ಕಾಶೀನಾಥಶಾಸ್ತ್ರಿ ವಗೈರೆ ಅಲ್ಪಮತಿಗಳ ದುರ್ಬೋಧನೆಗೆ ಕಿವಿಗೊಡುವುದನ್ನು ಇನ್ನೂ ಬಿಡದೆ ನಮ್ಮ ವೀರಶೈವ ಜನಾಂಗದಲ್ಲಿ ಅನೇಕ ಜಗಳಗಳನ್ನು ಪಡೆಸುತ್ತಾ ನಮ್ಮ ಜನಾಂಗದ ಅನೈಕಮತ್ಯಕ್ಕೆ ಕಾರಣಭೂತರಾಗಿರುತ್ತಾರೆ. ಇವರು ನಮ್ಮ ವೀರಶೈವ ಪಟ್ಟಾಚಾರ್ಯರ ಪೈಕಿ ಒಬ್ಬರಾಗಿ ಇಂಥಾ ಜಗಳಗಳಿಗೆ ಅವಕಾಶಕೊಡದೆ ಸಮಾಜದ ಮೇಲ್ಮೆಯನ್ನು ನೋಡಿ ಅದರ ಅಭಿವೃದ್ಧಿಗಾಗಿ ಪ್ರಯತ್ನಪಡುವುದರ ಬದಲು ಅಶಾಂತಿ [illegible] ಸಮಾಜದ ಅನೈಕ್ಯಮತ್ಯಕ್ಕೆ ಕಾರಣಭೂತವಾದ ಕೆಲಸಗಳನ್ನು ಮಾಡುತ್ತಾ ಬಂದಿರುವುದು ನಮ್ಮ ವೀರಶೈವಮತದ ದುರ್ದೈವವೆಂದೇ [illegible]

ರುತ್ತೆ. ನನ್ನ ವಿನಯಪೂರ್ವಕವಾದ ವಿಜ್ಞಾಪನೆಯನ್ನು ಅವರು ಅಂಗೀಕರಿಸಿ ಅದರಂತೆ ನಡೆದರೆ ಬಹಳ ಅನುಕೂಲವಿರುತ್ತಿತ್ತು. ಇದು ಅವರಿಗೂ ಮುಂದೆ ಕೆಟ್ಟದಾಗುವುದರಲ್ಲಿ ಯಾವ ಸಂದೇಹವೂ ನನಗೆ ತೋರುವುದಿಲ್ಲ. ಈ ಜನಾಂಗವು ಹಿಂದಿನಂತೆ ಅಂಧಕಾರದಲ್ಲಿರುವುದೆಂದು ಇವರು ತಿಳಿದುಕೊಂಡಿರುತ್ತಾರೆ. ಆದರೆ ಇದೇ ವೀರಶೈವ ಜನಾಂಗವೆಲ್ಲಾ ಕಣ್ಣುತೆರೆದು ನೋಡುತ್ತಾ ಇದೆ ಇವರು ಮಾಡತಕ್ಕ ಚರ್ಯೆಗಳೆಲ್ಲಾ ಹೊರಬಿದ್ದಿವೆ. ಇವುಗಳನ್ನು ಸಭ್ಯದಲ್ಲಿ ಬೈಲಿಗೆಹಾಕಿ ಖಂಡಿತವಾಗಿಯೂ ಇವರನ್ನು ಸಮಾಜದವರು ದೂರೀಕರಿಸುವುದರಲ್ಲಿರುತ್ತಾರೆ. ಹೇಳಿದ ಬುದ್ಧಿವಾಕ್ಯಗಳನ್ನು ಕೇಳದವರಿಗೆ ಇದೇ ಗತಿ ಪ್ರಾಪ್ತವಾಗುತ್ತೆ. ಯತ್ನವಿಲ್ಲಾ. ಇನ್ನಾದರೂ ಸದರೀ ಉಜ್ಜಯಿನೀ ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳವರು ನನ್ನ ವಿಜ್ಞಾಪನೆಯನ್ನು ಅಂಗೀಕರಿಸಿ ಅಧಿಕಪ್ರಸಂಗಿಗಳಾದ ಕಾಶೀನಾಥಶಾಸ್ತ್ರಿಗಳೇ ಮೊದಲಾದವರನ್ನು ದೂರೀಕರಿಸಿದರೆ ಸಮಾಜದವರೆಲ್ಲಾ ಅವರನ್ನು ಪಕ್ಷಿ ಪೂಜಿಸುವುದರಲ್ಲಿ ಅಡ್ಡಿಯಿರುವುದಿಲ್ಲ. ನಾನು ಅಡ್ಡಬಿದ್ದು ಕೇಳಿಕೊಳ್ಳುತ್ತೇನೆ. ಅವರನ್ನು ಮೊದಲು ದೂರೀಕರಿಸಿ ಇನ್ನು ಅವರಿಗೆ ಆಶ್ರಮವನ್ನು ಕೊಡಬ್ಯಾಡಿ. ಕೊಟ್ಟರೆ ನಿಮಗೆ ಅಪಯಶಸ್ಸು ತಪ್ಪುವುದಿಲ್ಲ. ಇದು ಸತ್ಯ, ಸತ್ಯ, ಸತ್ಯ, ನಾನು ಹೇಳುವುದನ್ನು ತಾವು ಚೆನ್ನಾಗಿ ಆಲೋಚನೆಮಾಡಿ. ತಮ್ಮ ಮೇಲಿನ ಆಕ್ರೋಶದಿಂದ ನಾನು ಹೇಳುವುದಿಲ್ಲ. ತಾವು ಕೇಳಿದರೆ ಕೇಳಿ ಇಲ್ಲವಾದರೆ ಬಿಡಿ. ಮುಂದೆ ಆಗುವುದನ್ನು ತಾವೇ ಅನುಭವಿಸಬೇಕಾಗುತ್ತೆ. ತಾವು ಭಕ್ತರುಗಳು ನಿಜವಾದ ವೀರಶೈವರಲ್ಲವೆಂತಲೂ, ಇವರಿಗೆ ವೇದಾಧಿಕಾರವಿಲ್ಲವೆಂತಲೂ, ಇವರು ವಿಧ್ಯುಕ್ತ ಪ್ರಕಾರ ಲಿಂಗಧಾರಣೆಗೆ ಅರ್ಹರಲ್ಲವೆಂತಲೂ, ಯಜ್ಞೋಪವೀತದಿಂದೊಡಗೂಡಿದ ಲಿಂಗಧಾರಣೆಯುಳ್ಳ ಮನುಷ್ಯನೇ ಸರಿಯಾದ ವೀರಶೈವನೆಂತಲೂ, ಭಕ್ತರ ಮನೆಯಲ್ಲಿ ಮಾಹೇಶ್ವರರು ಭೋಜನಮಾಡಕೂಡದೆಂತಲೂ, ಭಕ್ತರು ಈಚಿನ ಕಾಲದವರೆಂತಲೂ, ವೀರಶೈವರಲ್ಲಿ ವರ್ಣಾಶ್ರಮಗಳು ಉಂಟೆಂತಲೂ ವಗ್ಗೆರೆ ಮೇಲ್ಕಂಡ ಅಲ್ಪವಿದ್ಯಾವಂತರ ಮಾತುಗಳನ್ನು ಕೇಳಿಕೊಂಡು ಪ್ರತಿಪಾದಿಸುತ್ತಿರುವುದಾಗಿಯೂ ಎಲ್ಲಾ ಅಧಿಕಾರಕ್ಕೂ ಮಾಹೇಶ್ವರರೇ ಅರ್ಹತೆಯುಳ್ಳವರೆಂತಲೂ ಬಾಕಿಯವರೆಲ್ಲಾ ಅನಧಿಕಾರಿಗಳೆಂತಲೂ ಸಾರುತ್ತಿರುವುದಾಗಿಯೂ ವರ್ತಮಾನಕೇಳುತ್ತೇನೆ. ಹಾಗೆ ಇರುವ ಸಂದರ್ಭದಲ್ಲಿ ಈಗ ಅನೇಕ ಮುಖ್ಯ ಮಠಗಳಿಗೆ ಭಕ್ತರಿಂದುತ್ಪನ್ನರಾದ ವಟುಗಳನ್ನು ಪಟ್ಟಮಾಡುತ್ತಾ ಇರುವುದನ್ನೂ ಯಾಕೆ ತಪ್ಪಿಸಕೂಡದು? ನಿಮ್ಮ ಕೇವಲ ಆಪ್ತನೆಂದೆನಿಸಿಕೊಂಡಿರುವ ಕಾಶೀನಾಥಶಾಸ್ತ್ರಿಯು ಯಾವ ವಂಶದಲ್ಲಿ ಉತ್ಪನ್ನರಾದವನು? ಈಗ ಪೀಠಾಚಾರ್ಯರಾಗಿರುವ ಶ್ರೀ ಕಾಶೀ ಕೇದಾರ ಸಂಸ್ಥಾನ ಮಠಗಳವರು ಯಾವ ವಂಶೋತ್ಪನ್ನರು? ತಮ್ಮ ಪೂರ್ವಜರ್ಯಾರು? ಇವುಗಳನ್ನು ಶ್ರೀ ಸ್ವಾಮಿಯವರು ಕೂಲಂಕಷವಾಗಿ ಕಂಡುಹಿಡಿದು, ಸರಿಯಾದವರನ್ನು ಪಟ್ಟಮಾಡುವುದಕ್ಕೆ ಏರ್ಪಡಿಸಿದರೆ ಆಗ್ಯೆ ಸಮಾಜಬಾಂಧವರೆಲ್ಲಾ, ತಮ್ಮನ್ನು ಶಿರಸ್ಸಿನಲ್ಲಿಧರಿಸಿ ಪೂಜಿಸುತ್ತಾರೆ. ಇದನ್ನು ಬಿಟ್ಟು ಕೆಲಸಕ್ಕೆ ಬಾರದ ಚಳವಳಿಯನ್ನು ಹುಟ್ಟಿಸಿದರೆ ಸಮಾಜವು ಉನ್ನತಸ್ಥಿತಿಗೆ ಬರುವುದೇ ತಾವೇ ಯೋಚಿಸಿ. ಮಠಗಳಿಗೂ ಪೀಠಗಳಿಗೂ ಕೂಡ ಸರಿಯಾದ ಮಾಹೇಶ್ವರವಂಶದಲ್ಲಿ ಉತ್ಪನ್ನರಾದವರನ್ನು ಪಟ್ಟಮಾಡಲು ಪ್ರಯತ್ನಮಾಡಿದಲ್ಲಿ ನಿಮಗೆ ಯಶಸ್ಸೂ ಪುಣ್ಯವೂ ಲಭಿಸುತ್ತವೆ. ಅದು ಬಿಟ್ಟು ಕೆಲಸಕ್ಕೆ ಬಾರದ ಚಳವಳಿಯಲ್ಲಿ ಕಾಲಹರಣಮಾಡಬೇಡಿ. ಭಕ್ತರನ್ನ ತಾವು ಈರೀತಿಯಾಗಿ ದೂಷಿಸಿದರೆ ನಿಮಗೆ ಮಾನ್ಯ ದೊರಕೀತೆ? ತಾವೇ ಯೋಚಿಸಿ ಸಮಾಜದಲ್ಲಿ ಅನೈಕಮತ್ಯ ಉಂಟಾಗಿರುವುದನ್ನು ತಪ್ಪಿಸಿ ಐಕಮತ್ಯ ಉಂಟಾಗುವ ಕಾರ್ಯವನ್ನು ಸಾಧಿಸಿ. ಇದರಿಂದ ನಿಮ್ಮ ಹೆಸರು ಮುಂದಕ್ಕೆ ಬರುತ್ತದೆ.

ಶ್ರೀ ಸ್ವಾಮಿಯ ಪಾದಸೇವಕ.

ಬೆಳಗಾಂವದಲ್ಲಿಯ ಶ್ರೀ ಬಸವೇಶ್ವರ ಜಯಂತಿ.

ಪ್ರತಿವರ್ಷದ ಸಾಂಪ್ರದಾಯದಂತೆ ಶ್ರೀ ಬಸವೇಶ್ವರನ ಹುಟ್ಟಿದ ದಿವಸದ ಸಮಾರಂಭವು ಇಲ್ಲಿಯ ಹಿರೇಮಠದ ಶ್ರೀ ಸೋಮಶೇಖರಸ್ವಾಮಿಗಳು ಪಟ್ಟದ್ದೇವರು ಇವರ ನೇತೃತ್ವದ ಕೆಳಗೆ ಸಕಲ ವೀರಶೈವಬಂಧುಗಳು ಕೂಡಿಕೊಂಡು ಬಡಬಗ್ಗರಿಗೆ ಅನ್ನಸಂತರ್ಪಣೆಯನ್ನೂ, ದಾನಧರ್ಮವನ್ನು ಇದೇ ವೈಶಾಖ ಶುದ್ಧ 7 ದಿವಸ ಮಾಡಿ ಸಾಯಂಕಾಲಕ್ಕೆ ಮೆರವಣಿಗೆಯನ್ನು ತೆಗೆದರು. ಅದರಲ್ಲಿ ಯಾವ ಜಾತಿಭೇದವಿಲ್ಲದೆ ಎಲ್ಲ ಜನರು ಸೇರಿ ಆ ಮಹಿಮಾಶಾಲಿಯ ಉದಾತ್ತವಿಚಾರಗಳನ್ನೂ ಮತಸುಧಾರಣೆಯ ಬಗ್ಗೆ ಮಾಡಿದ ಪ್ರಯತ್ನಕ್ಕೆ ತಲೆದೂಗಿ ಸಾವಿರಾರು ಜನರು ಶ್ರೀ ಬಸವೇಶ್ವರನ ಭಾವಚಿತ್ರದ ಮೆರವಣಿಗೆಯ ಕಾಲಕ್ಕೆ ಅಲ್ಲಲ್ಲಿ ಓಣಿಯಲ್ಲಿ ಆರತಿ, ಟೆಂಗು ಕೇಳಿಯನ್ನು ನೀರನ್ನೂ ಅರ್ಪಿಸಿ ತಮ್ಮ ಕೃತಜ್ಞತೆಯನ್ನು ತೋರಿಸಿದರು. ಇದೇ ಜಯಂತಿಯ ಮುಖ್ಯಕಾರ್ಯವು. ಈಪ್ರಕಾರ ಮೆರವಣಿಗೆಯನ್ನು ಪುರಪ್ರಮುಖ ಓಣಿಗಳೊಳಗಿಂದ ಹಾಯಿಸಿಕೊಂಡು ಶ್ರೀ ಬಸವೇಶ್ವರನ ದೇವಾಲಯಕ್ಕೆ ಹೋಗಿ ಅಲ್ಲಿ ಆರತಿ ಕಾಯಿ ಕರ್ಪೂರ ಅರ್ಪಿಸಿ ಶ್ರೀ ಬಸವೇಶನ ಮಹಿಮೆಯನ್ನು ಭಕ್ತಿಯಿಂದ ಕೊಂಡಾಡಿಸಿ ಬಂದ ಸರ್ವಜನರಿಗೆ ತಾಂಬೂಲವನ್ನು ಅರ್ಪಿಸಿದರು. ಈರೀತಿ ಕರ್ನಾಟಕದಲ್ಲಿ ಎಲ್ಲಿ ನೋಡಿದಲ್ಲಿ ಆನಂದವೇ ಆನಂದವು ಆಗುವಂಥ ಸುಕಾಲದಲ್ಲಿ ನಮ್ಮ ವಿಜಾಪೂರ ಶಾಲೆಯಲ್ಲಿರುವ ಮಿ|| ಮುಗದಾಲ ಎಂಬ ಒಬ್ಬ ಬಿ.ಎ. ಪರೀಕ್ಷೆಯಲ್ಲಿ ಪಾಸಾದ ಶಿಕ್ಷಕರು ಶ್ರೀ ಬಸವೇಶ್ವರನ ಬಗ್ಗೆ ಅಸಹ್ಯವಾದ ಆಧಾರವಿಲ್ಲದ ಲಿಂಗಾಯತರ ಮನಸ್ಸಿಗೆ ನೋವಾಗುವಂಥ ನಿರಾಧಾರವಾದ ಲೇಖವನ್ನು ಅಂದರೆ ಚರಿತ್ರೆಯನ್ನು ಬರೆದಿರುವದನ್ನು ನೋಡಿದರೆ ಅವರ ಜ್ಞಾನಶೂನ್ಯತೆಯನ್ನೂ, ಜಾತಿದ್ವೇಷವನ್ನೂ, ಲಿಂಗಾಯತರ ಬಗ್ಗೆ ಇರುವ ಅವರ ಮತ್ಸರಬುದ್ಧಿಯನ್ನೂ ವ್ಯಕ್ತಪಡಿಸುತ್ತದೆ. ಇದರಕಡೆಗೆ ನಮ್ಮ ವೀರಶೈವಬಾಂಧವರು ಅದರಲ್ಲಿ ಮುಖ್ಯವಾಗಿ ತರುಣರು ಗಿಳಿಗಳಂತೆ ಪೋಷಿಸಿ ಇಂಗ್ಲೀಷದಲ್ಲಿ ಅಭ್ಯಾಸಮಾಡಿ ಧರ್ಮಜ್ಞಾನವಿಲ್ಲದೆ ಒಣಹೆಮ್ಮೆಯನ್ನು ತೋರಿಸುವ ಕೆಲವು ತರುಣ ಪದವೀಧರರು ಬುದ್ಧಿಗಲಿಯಬೇಕಾಗಿದೆ. ನಮ್ಮ ಕರ್ನಾಟಕದಲ್ಲಿ ಪರಮತಸ್ಥರು ಧರ್ಮದ್ವೇಷದಿಂದ ಯಾವಯಾವ ಬಗೆಯಿಂದ ಒಬ್ಬರ ಅಪಮಾನ ಒಬ್ಬರು ಮಾಡುವ ಪ್ರಯತ್ನ ಮಾಡುವರು ಕಣ್ಣುತೆರೆದು ನೋಡಲಿ. ಇಂಥ ಬ್ರಿಟಿಷರ ಆಳಿಕೆಯಲ್ಲಿ "ಡಿಫೆಂಡರ ಆಫ ಫೇತ" ಎಂಬ ಬಿರುದನ್ನು ತಾಳಿದ ಪಂಚಮ ಜಾರ್ಜ ಮಹಾರಾಜರ ಆಳಿಕೆಯಲ್ಲಿ ನಮ್ಮ ವೀರಶೈವರಿಗೆ ಅಲ್ಲದಸಲ್ಲದ ಹೀನೋಕ್ತಿಗಳನ್ನು ನಿರಾಧಾರವಾಗಿರುವ ವಿಷಯವನ್ನು ಕುಹಕರಾದ ಯಃಕಶ್ಚಿತ ಶಿಕ್ಷಕನು ನಮ್ಮ ಧರ್ಮಸುಧಾರಕನೂ, ದ್ವಿತೀಯಶಂಭುವಿನಂತೆ ಇರುವ ಶ್ರೀ ಬಸವನ ನಿಂದೆಯನ್ನು ನಾವು ಕೇಳಿ ಸುಮ್ಮನಿರಬೇಕೆ. ಶಿವಶಿವಾ ಇದೆಂತು ಸಾಧ್ಯವು. ನಮ್ಮ ಕಲಿತಬಾಂಧವರೆಲ್ಲ ಅಲ್ಲಲ್ಲಿ ಸಭೆಗಳನ್ನು ಮಾಡಿ ಆ ಮುಗದಾಲರ ಲೇಖವನ್ನು ತೀವ್ರವಾಗಿ ನಿಷೇಧಿಸಿ, ಸರ್ಕಾರಕ್ಕೆ ಅರ್ಜಿಗಳನ್ನು ಕಳಿಸಿ ಈ ಚರಿತ್ರೆಯನ್ನು ಶಾಲೆಯ ಉಪಯೋಗದ ಪುಸ್ತಕಗಳ ಮಧ್ಯದೊಳಗಿಂದ ತೆಗೆಸಿ ನಿಜವಾದಸಂಗತಿಯ ಪುಸ್ತಕವನ್ನು ಹುಡುಗರಿಗೆ ಓದಲಿಕ್ಕೆ ಬರುವಂತೆ ವ್ಯವಸ್ಥೆಮಾಡಬೇಕಾಗಿ ವಿನಂತಿ ಅದೆ. ಇದರ ಬಗ್ಗೆ ದೈನಿಕಪತ್ರಕಾರರೂ, ವಾರಪತ್ರಕಾರರೂ ಜೋರಿನಿಂದ ಅಗ್ರಲೇಖಗಳನ್ನು ಬರೆಯಬೇಕು. ಓರಿಯಂಟಲ್ ಟ್ರಾನ್ಸ್ಲೇಟರರು ಈ ವಿಷಯವನ್ನು ಡೈರೆಕ್ಟರ್ ಆಫ್ ಇನ್ಸ್ಟ್ರಕ್ಷನ್ ಇವರ ಮುಖಾಂತರ ಸರ್ಕಾರಕ್ಕೆ ವರ್ದಿಯನ್ನು ಕೊಡಬೇಕಾಗಿ ಸೂಚನೆಯುಂಟು. ಪರಮತದ ಪ್ರಮುಖರೆನಿಸಿಕೊಳ್ಳುವ ಸಭ್ಯಗೃಹಸ್ಥರು ಇದಕ್ಕೆ ಸಹಾಯಮಾಡುವರೆಂದು ನಂಬಿರುವೆನು. ಈ ಮಾತಿಗಾಗಿ ನಮ್ಮ ಮಹಾಮಹಾಸ್ವಾಮಿಗಳೂ ಸಿಂಹಾಸನಾಧೀಶ್ವರರೂ ಗಮನಿಸುವರೆಂದು ಆಶಿಸುವೆನು. ಬೆಳಗಾಂವ ಜಿಲ್ಲೆಯ ಮುಂಬಯಿ ಇಲಾಖೆಯ ಕೌನ್ಸಿಲ್ ಎಲಕ್ಷನ್ ರದ್ದಾಗಬೇಕೆಂಬ ಅರ್ಜಿ ಯೂನಿಕಾತೆ ಆಗಿ ರಾ|| ಷಣ್ಮುಖಪ್ಪಾ, ಬಿ.ಎ., ಎಲ್‌ಎಲ್.ಬಿ, ಹಾಗು ಮಿ|| ಭುಜಂಗರಾವ ದಳವಿ ಇವರೇ ಆರಿಸಿಬಂದದ್ದು ಯೋಗ್ಯವೆಂತಲೂ, ಕೋರ್ಟಿನ ಖರ್ಚನ್ನೂ ಈ ಉಭಯತರ ಖರ್ಚನ್ನೂ ವಾದಿಗಳೇ ಸಹಿಸಬೇಕೆಂದು ತೀರ್ಮಾನವಾಯಿತು. ಇನ್ನು ಶೀಘ್ರವಾಗಿಯೇ ಲೋಕಲ್ ಬೋರ್ಡಿನ ಹೊಸ ಕಾಯಿದೆಪ್ರಕಾರ ಮೆಂಬರರನ್ನು ಚುನಾಯಿಸುವ ಪ್ರಸಂಗ ಬರುವದಿದೆ. ಜನರು ಈಗಿನಿಂದಲೇ ತಮ್ಮ ತಮ್ಮ ತಯಾರಿಯಲ್ಲಿರುವರು. ಇಲ್ಲಿ ಮಳೆಯಿಲ್ಲದ್ದರಿಂದ ನೀರಿನಕೊರತೆ ಅತಿಶಯವಾಗಿದೆ. ಧಾನ್ಯಗಳ ಬೆಲೆ ಬಹಳ ತುಟ್ಟಿಯಾಗಿದೆ. ದನಗಳಿಗೆ ಮೇವು ಕಠಿಣವಾಗಿದೆ. ಇಲ್ಲಿ ಮೊದಲಿಗೆ ಕಲೆಕ್ಟರರ ಚಿಟನೀಸರಾಗಿದ್ದ ರಾ|| ಸಾ|| ಭೀಮರಡ್ಡಿ ಕುರ್ತಕೋಟಿ, ಬಿ.ಎ., ಯವರು ಕುಲಾಬಾಕ್ಕೆ ಡಿ|| ಕಲೆಕ್ಟರರಾಗಿ ಹೋದವರು ಇಲ್ಲಿಗೆ ಪುನಃ ಅಸಿಸ್ಟೆಂಟ್ ಕಮಿಷನರಾಗಿ ಬಂದಿರುವರು. ಈ ವರ್ಷದಲ್ಲಿ ಇಲ್ಲಿ ಕೂಡುವ ಕಾಂಗ್ರೆಸ್‌ಸಭೆಯ ಕೆಲಸವು ಯಶಸ್ವಿಯಾಗುವ ಕುರಿತು ರಾ|| ಗಂಗಾಧರರಾವ ದೇಶಪಾಂಡೆಯವರು ಅಹೋರಾತ್ರಿ ಪ್ರಯತ್ನಮಾಡುತ್ತಿರುವರು. ಬಿಸಲಿನ ತಾಪಕ್ಕಾಗಿ ಮಾಹಬಳೇಶ್ವರಕ್ಕೆ ಹೋಗಲಿಕ್ಕೆಯಿಲ್ಲದ ಧನವಂತರು ಅನೇಕ ಜನರು ವಿಜಾಪೂರ, ಸೊಲ್ಲಾಪೂರ, ನಾಶೀಕ, ಮುಂಬಯಿಕಡಿಂದ ಬಂದು ನಿಂತಿರುವದರಿಂದ ಇಲ್ಲಿಯ ಮನೆಗಳ ಮತ್ತು ಬಂಗಲೆಗಳ ಬಾಡಿಗೆ ಹೆಚ್ಚಾಗಿರುವದು. ಗಿಲಗಂಜಿ, ಅರಟಾಳ ಹೈಸ್ಕೂಲಿನ ಇಮಾರತಿಯನ್ನು ಕಟ್ಟಿಸುವ ಕುರಿತು ಫಂಡುಕೂಡಿಸುವ ಕೆಲಸಕ್ಕಾಗಿ ಬೆಳಗಾಂವ ಜಿಲ್ಲೆಯ ಪ್ರಮುಖರು, ಶಾಲೆಯ ಶಿಕ್ಷಕರು ಪ್ರಯತ್ನಮಾಡುತ್ತಿರುವರು, ಲ್ಯಾಫಲವೆಂಬ ನೇರಟ ತೆಗೆದಿರುವರು. ಅದಕ್ಕೆ ಎಲ್ಲರೂ ಸ್ವಹಸ್ತ ಪರಹಸ್ತ ಸಹಾಯಮಾಡಬೇಕು. ಶಿರಸಂಗಿ ದೇಶಾಯರ ಫಂಡಿನಿಂದ ಸದರೀ ಶಾಲೆಯನ್ನು ಕಟ್ಟಿಸುವದಕ್ಕೆ ಬೇಕಾದ ಜಾಗೆಗಾಗಿ 15000 ರೂ. ಸಿಕ್ಕವು. ಮೊನ್ನಿನ ಇಲ್ಲಿಯ ಸೈಕಲ್ ರೇಸಿನಲ್ಲಿ ಕೆಳಗೆಬರೆದ ತರುಣರಿಗೆ ಬಹುಮಾನದ ಪದಕಗಳು ಮೇ|| ಬ್ರ್ಯಾಫವೆಟ ಕಲೆಕ್ಟರ ಸಾಹೇಬರವರಿಂದ ಕೊಡಲ್ಪಟ್ಟವು. ಮೆಸರ್ಸ್. ಸದಾನಂದ ಆರಳಿಕಟ್ಟಿ, ಸ್ಕಾಂಡಿಜೇಮ್ಸ್, ಶಿದ್ದವೀರಸ್ವಾಮಿ ಕಣಬರಗಿಮಠ, ಕಾಯಿಟ್ಸ ಶೆಟ್ಟಿ ಮುಂತಾದವರಿಗೆ ಸಿಕ್ಕವು. ಬೆಳಗಾಂವ ಜಿಲ್ಲೆಯ ವರ್ನಾಕ್ಯುಲರ ಸ್ಕಾಲರ್ಷಿಪ್ ಪರೀಕ್ಷೆಯಲ್ಲಿ ಶಿವಶಂಕರಸ್ವಾಮಿ ಕಣಬರಗಿಮಠ ಇವರು ಮೊದಲನೇ ನಂಬರು ಮತ್ತು ಇಬ್ರಾಹಿಮ ಮೋಹದೀನಶೇಖಅಲ್ಲಿ ಇವರು ಎರಡನೇ ನಂಬರು ಬಂದಿರುವರು. ಮುಂಬಯಿ ಇಲಾಖೆಯ ಮಂತ್ರಿ ನಾಮದಾರ ದೇಹಳವಿಯವರು ಆಚೇವಾರದಲ್ಲಿ ಇಲ್ಲಿಗೆ ದಯಮಾಡಿಸಿ ಫಾತರಫೇಕರರ ಹೊಲವನ್ನೂ ಕೋಆಪರೇಟಿವ್ ಬ್ಯಾಂಕುಗಳನ್ನೂ, ಕೇತಕಿ ಸಂಘವನ್ನೂ ನೋಡಿ ಸಂತೋಷಪಟ್ಟರು. ಮೆಸಾನಿಕ್ಕಲಾಜಿನಲ್ಲಿ ಅವರಿಗೆ ಬೆಳಗಾಂವಿಯ ನಾಗರಿಕರು ತಾಂಬೂಲ ಸಮಾರಂಭವನ್ನು ಮಾಡಿದರು. ಹಿಂದುಸ್ಥಾನದ ರಿಫೋರ್ಮಸ್ಕೀಮು ಯಶಸ್ವಿಮಾಡುವ ಕುರಿತು ಒಮ್ಮನಸ್ಸಿನಿಂದ ಎಲ್ಲರೂ ಪ್ರಯತ್ನಮಾಡಿದರೆ ಕ್ಷಿಪ್ರದಲ್ಲಿಯೇ ಸ್ವರಾಜ್ಯವು ಹಸ್ತಗತವಾಗುವದೆಂದು ಬಲು ಕಳಕಳಿಯ ಭಾಷಣಮಾಡಿದರು.

ಸುದ್ದಿಗಾರ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦ ಕ್ಕೂ ೦—೧೨—೦; ಬಿಳಿಗ್ಲೇಜ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸ ಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹಂದಾಪಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ|| ಬಸವಪ್ಪ ಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗ್ಗೆರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟಪಟ್ಟವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
15 ದೊಡ್ಡಪ್ಯಾಟಿ ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 12 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದರೇ ಅದರಿಂದ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲೆಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—35] ಮೈಸೂರು.

೧೯೨೪ ನೆಯ ಇಸವಿ ಮೇ ತಾ|| ೨೫ ರಿಂದ ೧೯೨೪ ನೆಯ ಇಸವಿ ಮೇ ತಾ|| ೩೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ವೈಶಾಖ ಬಹುಳ ಸಪ್ತಮಿಯಿಂದ ವೈಶಾಖ ಬಹುಳ ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
25	ಭಾನು	ಸಪ್ತ	17·10	ಧನಿ	24·42	12
26	ಸೋಮ	ಅಷ್ಟ	14·54	ಶತ	24·30	13
27	ಮಂಗಳ	ನವ	13·50	ಪೂಭಾ	25·21	14
28	ಬುಧ	ದಶ	13·56	ಉಭಾ	27·32	15
29	[1]ಗುರು	ಏಕಾ	15·25	ರೇವ	30·56	16
30	[2]ಶುಕ್ರ	ದ್ವಾದ	18·4	ಅಶ್ವಿ	35·28	17
31	ಶನಿ	ತ್ರಯೋ	20·42	ಭರ	40·58	18

(1) ಸರ್ವೈಕಾದಶಿ, ಶ್ರೀಮನ್ಮಹಾರಾಜರವರ ವರ್ಧಂತಿ, ಅಗ್ನಿನಕ್ಷ[illegible]ಡೆ. (2) ಪ್ರದೋಷ.

ಮೈಸೂರು: ಶ್ರೀ. ವಿರೂಪಾಕ್ಷ[illegible]ರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾ[illegible] ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗಶರ[illegible]ಯಶ್ರೈಷಾ | ಘನಪಥಕೃತಾವತಾರಾ ಪಕ್ವಜನಹೃತ್ತಮೋಹರಾಜೀಯಾತ್
ಶ್ರೀಮತ್ಕೃಷ್ಣನೃಪಾಲನುತ್ತಮಕಲಾ[illegible]ಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂಮಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಿಲೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ

[ವಾರ್ಷಿಕಚಂದಾ ೧-೧೦-೦] [[illegible] ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಮೇ ತಾರೀಖು ೨೫ ನೆಯ ಭಾನುವಾರ. [ಸಂಚಿಕೆ ೨೧

[illegible]ಶಾಸ್ತ್ರಿ ಪುಸ್ತಕ ಭಂಡಾರ [illegible]

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHARAGHAVA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.
ಇಂಫ್ಲೂಯೆಂಜಾ	
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತ[illegible] ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.

ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
16 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾಕ್ಟರ್ ಜೇ ಬೀ ಯವರ ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರೀಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—38] ಪೋ. ಬಾ. ೫೧೧, ಮದರಾಸು.

4 ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗತಾನೆ ೪ನೆ ಮುದ್ರಣವು ಅಚ್ಚಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ನಂತೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—4] ಕೋಲಾರ, [illegible], ಹಾಸನ ಡಿ||

ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಸ್ಮೃತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—24] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯವಿದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕೆ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗು ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ [illegible] ಧಾತು ಒಸರೋಣ, ವೀರ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಕಮ್ಮೀಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆಪುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ತಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೊಗಟಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಂಪಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕೆ, ಕಮರಕಸ, ಕಥಲ್ಯಾಗೊಂದ, ಪಂಚಾಬಿ ಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ, ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಂಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಯಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣಾತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ಣ ಅಡ್ರೆಸ್ ಮೊಕ್ಕಾಂ ಪೋಸ್ಟ ಸಹ ಬರೆಯಿರಿ.

[50—41] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್‌ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಿಗಿ.

ಗ್ರಂಥಸಿಕ್ಕುವಸ್ಥಳ:—
ಹೊಸಮಠದ ಚನ್ನಯ್ಯನವರು ಹರಿಹರ,
24—7 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮಣಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿ
[50—19] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್‌ಫ್ಲೂಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ನಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಗಾಯ, ಚುಚುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೪—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೦ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—25] [illegible]

ರುತ್ತೇ. ನನ್ನ ವಿನಯಪೂರ್ವಕವಾದ ವಿಜ್ಞಾಪನೆಯನ್ನು ಅವರು ಅಂಗೀಕರಿಸಿ ಅದರಂತೆ ನಡೆಸಿದ್ದರೆ ಬಹಳ ಅನುಕೂಲವಿರುತ್ತಿತ್ತು. ಇದು ಅವರಿಗೂ ಮುಂದೆ ಕೆಟ್ಟದಾಗುವುದರಲ್ಲಿ ಯಾವ ಸಂದೇಹವೂ ನನಗೆ ತೋರುವುದಿಲ್ಲ. ಈ ಜನಾಂಗವು ಹಿಂದಿನಂತೆ ಅಂಧತ್ವದಲ್ಲಿರುವುದೆಂದು ಇವರು ತಿಳಿದುಕೊಂಡಿರುತ್ತಾರೆ. ಆದರೆ ಈಗ ವೀರಶೈವ ಜನಾಂಗವೆಲ್ಲಾ ಕಣ್ಣುತೆರೆದು ನೋಡುತ್ತಾ ಇದೆ ಇವರು ಮಾಡತಕ್ಕ ಚರ್ಯೆಗಳೆಲ್ಲಾ ಹೊರಬಿದ್ದವೆ. ಇವುಗಳನ್ನು ಸಭ್ಯದಲ್ಲಿ ಬೈಲಿಗೆಹಾಕಿ ಖಂಡಿತವಾಗಿಯೂ ಇವರನ್ನು ಸಮಾಜದವರು ದೂರೀಕರಿಸುವುದರಲ್ಲಿರುತ್ತಾರೆ. ಹೇಳಿದ ಬುದ್ಧಿವಾಕ್ಯಗಳನ್ನು ಕೇಳದವರಿಗೆ ಇದೇ ಗತಿ ಪ್ರಾಪ್ತವಾಗುತ್ತೆ. ಯತ್ನವಿಲ್ಲಾ. ಇನ್ನಾದರೂ ಸದರೀ ಉಜ್ಜಯಿನೀ ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳವರು ನನ್ನ ವಿಜ್ಞಾಪನೆಯನ್ನು ಅಂಗೀಕರಿಸಿ ಅಧಿಕಪ್ರಸಂಗಿಗಳಾದ ಕಾಶೀನಾಥಶಾಸ್ತ್ರಿಗಳೇ ಮೊದಲಾದವರನ್ನು ದೂರೀಕರಿಸಿದರೆ ಸಮಾಜದವರೆಲ್ಲಾ ಅವರನ್ನು ಸಹಿಸಿ ಪೂಜಿಸುವುದರಲ್ಲಿ ಅಡ್ಡಿಯಿರುವುದಿಲ್ಲ. ನಾನು ಅಡ್ಡಬಿದ್ದು ಕೇಳಿಕೊಳ್ಳುತ್ತೇನೆ. ಅವರನ್ನು ಮೊದಲು ದೂರೀಕರಿಸಿ ಇನ್ನು ಅವರಿಗೆ ಆಶ್ರಮವನ್ನು ಕೊಡಬ್ಯಾಡಿ. ಕೊಟ್ಟರೆ ನಿಮಗೆ ಅಪಯಶಸ್ಸು ತಪ್ಪುವುದಿಲ್ಲ. ಇದು ಸತ್ಯ, ಸತ್ಯ, ಸತ್ಯ, ನಾನು ಹೇಳುವುದನ್ನು ತಾವು ಚನ್ನಾಗಿ ಆಲೋಚನೆಮಾಡಿ. ತಮ್ಮ ಮೇಲಿನ ಆಕ್ರೋಶದಿಂದ ನಾನು ಹೇಳುವುದಿಲ್ಲ. ತಾವು ಕೇಳಿದರೆ ಕೇಳಿ ಇಲ್ಲವಾದರೆ ಬಿಡಿ. ಮುಂದೆ ಆಗುವುದನ್ನು ತಾವೇ ಅನುಭವಿಸಬೇಕಾಗುತ್ತೆ. ತಾವು ಭಕ್ತರುಗಳು ನಿಜವಾದ ವೀರಶೈವರಲ್ಲವೆಂತಲೂ, ಇವರಿಗೆ ವೇದಾಧಿಕಾರವಿಲ್ಲವೆಂತಲೂ, ಇವರು ವಿಧ್ಯುಕ್ತಪ್ರಕಾರ ಲಿಂಗಧಾರಣೆಗೆ ಅರ್ಹರಲ್ಲವೆಂತಲೂ, ಯಜ್ಞೋಪವೀತದಿಂದೊಡಗೂಡಿದ ಲಿಂಗಧಾರಣೆಯುಳ್ಳ ಮನುಷ್ಯನೇ ಸರಿಯಾದ ವೀರಶೈವನೆಂತಲೂ, ಭಕ್ತರ ಮನೆಯಲ್ಲಿ ಮಾಹೇಶ್ವರರು ಭೋಜನಮಾಡಕೂಡದೆಂತಲೂ, ಭಕ್ತರು ಈಚಿನ ಕಾಲದವರೆಂತಲೂ, ವೀರಶೈವರಲ್ಲಿ ವರ್ಣಾಶ್ರಮಗಳು ಉಂಟೆಂತಲೂ ವಗೈರೆ ಮೇಲ್ಕಂಡ ಅಲ್ಪವಿದ್ಯಾವಂತರ ಮಾತುಗಳನ್ನು ಕೇಳಿಕೊಂಡು ಪ್ರತಿಪಾದಿಸುತ್ತಿರುವುದಾಗಿಯೂ ಎಲ್ಲಾ ಅಧಿಕಾರಕ್ಕೂ ಮಾಹೇಶ್ವರರೇ ಅರ್ಹತೆಯುಳ್ಳವರೆಂತಲೂ ಬಾಕಿಯವರೆಲ್ಲಾ ಅನಧಿಕಾರಿಗಳೆಂತಲೂ ಸಾರುತ್ತಿರುವುದಾಗಿಯೂ ವರ್ತಮಾನಕೇಳುತ್ತೇನೆ. ಹಾಗೆ ಇರುವ ಸಂದರ್ಭದಲ್ಲಿ ಈಗ ಅನೇಕ ಮುಖ್ಯ ಮಠಗಳಿಗೆ ಭಕ್ತರಿಂದುತ್ಪನ್ನರಾದ ಪಟ್ಟಗಳನ್ನು ಪಟ್ಟಮಾಡುತ್ತಾ ಇರುವುದನ್ನೂ ಯಾಕೆ ತಪ್ಪಿಸಕೂಡದು ? ನಿಮ್ಮ ಕೇವಲ ಆಪ್ತನೆಂದೆನಿಸಿಕೊಂಡಿರುವ ಕಾಶೀನಾಥಶಾಸ್ತ್ರಿಯು ಯಾವ ವಂಶದಲ್ಲಿ ಉತ್ಪನ್ನರಾದವನು? ಈಗ ಪೀಠಾಚಾರರಾಗಿರುವ ಶ್ರೀ ಕಾಶೀ ಕೇದಾರ ಸಂಸ್ಥಾನ ಮಠಗಳವರು ಯಾವ ವಂಶೋತ್ಪನ್ನರು ? ತಮ್ಮ ಪೂರ್ವಜರ್‍ಯಾರು ? ಇವುಗಳನ್ನು ಶ್ರೀ ಸ್ವಾಮಿಯವರು ಕೂಲಂಕಷವಾಗಿ ಕಂಡು ಹಿಡಿದು, ಸರಿಯಾದವರನ್ನು ಪಟ್ಟಮಾಡುವುದಕ್ಕೆ ಏರ್ಪಡಿಸಿದರೆ ಆಗ್ಯೆ ಸಮಾಜಬಾಂಧವರೆಲ್ಲಾ, ತಮ್ಮನ್ನು ಶಿರಸ್ಸಿನಲ್ಲಿಧರಿಸಿ ಪೂಜಿಸುತ್ತಾರೆ. ಇದನ್ನು ಬಿಟ್ಟು ಕೆಲಸಕ್ಕೆ ಬಾರದ ಚಳವಳಿಯನ್ನು ಹುಟ್ಟಿಸಿದರೆ ಸಮಾಜವು ಉನ್ನತಸ್ಥಿತಿಗೆ ಬರುವುದೇ ತಾವೇ ಯೋಚಿಸಿ. ಮಠಗಳಿಗೂ ಪೀಠಗಳಿಗೂ ಕೂಡ ಸರಿಯಾದ ಮಾಹೇಶ್ವರವಂಶದಲ್ಲಿ ಉತ್ಪನ್ನರಾದವರನ್ನು ಪಟ್ಟಮಾಡಲು ಪ್ರಯತ್ನಮಾಡಿದಲ್ಲಿ ನಿಮಗೆ ಯಶಸ್ಸೂ ಪುಣ್ಯವೂ ಲಭಿಸುತ್ತವೆ. ಅದು ಬಿಟ್ಟು ಕೆಲಸಕ್ಕೆ ಬಾರದ ಚಳವಳಿಯಲ್ಲಿ ಕಾಲಹರಣಮಾಡಬೇಡಿರಿ. ಭಕ್ತರನ್ನ ತಾವು ಈರೀತಿಯಾಗಿ ದೂಷಿಸಿದರೆ ನಿಮಗೆ ಮಾನ್ಯ ದೊರಕೀತೆ ? ತಾವೇ ಯೋಚಿಸಿ ಸಮಾಜದಲ್ಲಿ ಅನೈಕಮತ್ಯ ಉಂಟಾಗಿರುವುದನ್ನು ತಪ್ಪಿಸಿ ಐಕಮತ್ಯ ಉಂಟಾಗುವ ಕಾರ್ಯವನ್ನು ಸಾಧಿಸಿ. ಇದರಿಂದ ನಿಮ್ಮ ಹೆಸರು ಮುಂದಕ್ಕೆ ಬರುತ್ತದೆ.

ಶ್ರೀ ಸ್ವಾಮಿಯ ಪಾದಸೇವಕ.

ಬೆಳಗಾಂವದಲ್ಲಿಯ ಶ್ರೀ ಬಸವೇಶ್ವರ ಜಯಂತಿ.

ಪ್ರತಿವರ್ಷದ ಸಾಂಪ್ರದಾಯದಂತೆ ಶ್ರೀ ಬಸವೇಶ್ವರನ ಹುಟ್ಟಿದ ದಿವಸದ ಸಮಾರಂಭವು ಇಲ್ಲಿಯ ಹಿರೇಮಠದ ಶ್ರೀ ಸೋಮಶೇಖರಸ್ವಾಮಿಗಳು ಪಟ್ಟದ್ದೇವರು ಇವರ ನೇತೃತ್ವದಕೆಳಗೆ ಸಕಲ ವೀರಶೈವಬಂಧುಗಳು ಕೂಡಿಕೊಂಡು ಬಡಬಗ್ಗರಿಗೆ ಅನ್ನಸಂತರ್ಪಣೆಯನ್ನೂ, ದಾನಧರ್ಮವನ್ನೂ ಇದೇ ವೈಶಾಖ ಶುದ್ಧ 7 ದಿವಸ ಮಾಡಿ ಸಾಯಂಕಾಲಕ್ಕೆ ಮೆರವಣಿಗೆಯನ್ನು ತೆಗೆದರು. ಅದರಲ್ಲಿ ಯಾವ ಜಾತಿಭೇದವಿಲ್ಲದೆ ಎಲ್ಲ ಜನರು ಸೇರಿ ಆ ಮಹಿಮಾಶಾಲಿಯ ಉದಾತ್ತವಿಚಾರಗಳನ್ನೂ ಮತಸುಧಾರಣೆಯ ಬಗ್ಗೆ ಮಾಡಿದ ಪ್ರಯತ್ನಕ್ಕೆ ತಲೆದೂಗಿ ಸಾವಿರಾರು ಜನರು ಶ್ರೀ ಬಸವೇಶ್ವರನ ಭಾವಚಿತ್ರದ ಮೆರವಣಿಗೆಯ ಕಾಲಕ್ಕೆ ಅಲ್ಲಲ್ಲಿ ಓಣಿಯಲ್ಲಿ ಆರತಿ, ಟೆಂಗು ಕೇಳಿಯನ್ನು ನೀರನ್ನೂ ಅರ್ಪಿಸಿ ತಮ್ಮ ಕೃತಜ್ಞತೆಯನ್ನು ತೋರಿಸಿದರು. ಇದೇ ಜಯಂತಿಯ ಮುಖ್ಯಕಾರ್ಯವು. ಈಪ್ರಕಾರ ಮೆರವಣಿಗೆಯನ್ನು ಪುರಪ್ರಮುಖ ಓಣಿಗಳೊಳಗಿಂದ ಹಾಯಿಸಿಕೊಂಡು ಶ್ರೀ ಬಸವೇಶ್ವರನ ದೇವಾಲಯಕ್ಕೆ ಹೋಗಿ ಅಲ್ಲಿ ಆರತಿ ಕಾಯಿ ಕರ್ಪೂರ ಅರ್ಪಿಸಿ ಶ್ರೀ ಬಸವೇಶನ ಮಹಿಮೆಯನ್ನು ಭಟರಿಂದ ಕೊಂಡಾಡಿಸಿ ಬಂದ ಸರ್ವಜನರಿಗೆ ತಾಂಬೂಲವನ್ನು ಅರ್ಪಿಸಿದರು. ಈರೀತಿ ಕರ್ನಾಟಕದಲ್ಲಿ ಎಲ್ಲಿ ನೋಡಿದಲ್ಲಿ ಆನಂದವೇ ಆನಂದವು ಆಗುವಂಥ ಸುಕಾಲದಲ್ಲಿ ನಮ್ಮ ವಿಜಾಪೂರ ಶಾಲೆಯಲ್ಲಿರುವ ಮಿ|| ಮುಗದಾಲ ಎಂಬ ಒಬ್ಬ ಬಿ.ಎ. ಪರೀಕ್ಷೆಯಲ್ಲಿ ಪಾಸಾದ ಶಿಕ್ಷಕರು ಶ್ರೀ ಬಸವೇಶ್ವರನ ಬಗ್ಗೆ ಅಸಹ್ಯವಾದ ಆಧಾರವಿಲ್ಲದ ಲಿಂಗಾಯತರ ಮನಸ್ಸಿಗೆ ನೋವಾಗುವಂಥ ನಿರಾಧಾರವಾದ ಲೇಖನವನ್ನು ಅಂದರೆ ಚರಿತ್ರೆಯನ್ನು ಬರೆದಿರುವದನ್ನು ನೋಡಿದರೆ ಅವರ ಜ್ಞಾನಶೂನ್ಯತೆಯನ್ನೂ, ಜಾತಿದ್ವೇಷವನ್ನೂ, ಲಿಂಗಾಯತರ ಬಗ್ಗೆ ಇರುವ ಅವರ ಮತ್ಸರಬುದ್ಧಿಯನ್ನೂ ವ್ಯಕ್ತಪಡಿಸುತ್ತದೆ. ಇದರಕಡೆಗೆ ನಮ್ಮ ವೀರಶೈವಬಾಂಧವರು ಅದರಲ್ಲಿ ಮುಖ್ಯವಾಗಿ ತರುಣರು ಗಿಳಿಗಳಂತೆ ಪೋಷಿಸಿ ಇಂಗ್ಲೀಷದಲ್ಲಿ ಅಭ್ಯಾಸಮಾಡಿ ಧರ್ಮಜ್ಞಾನವಿಲ್ಲದೆ ಒಣಹೆಮ್ಮೆಯನ್ನು ತೋರಿಸುವ ಕೆಲವು ತರುಣ ಪದವೀಧರರು ಬುದ್ಧಿಗಲಿಯಬೇಕಾಗಿದೆ. ನಮ್ಮ ಕರ್ನಾಟಕದಲ್ಲಿ ಪರಮತಸ್ಥರು ಧರ್ಮದ್ವೇಷದಿಂದ ಯಾವ ಯಾವ ಬಗೆಯಿಂದ ಒಬ್ಬರ ಅಪಮಾನ ಒಬ್ಬರು ಮಾಡುವ ಪ್ರಯತ್ನ ಮಾಡುವರು ಕಣ್ಣುತೆರೆದು ನೋಡಲಿ. ಇಂಥ ಬ್ರಿಟಿಷರ ಆಳಿಕೆಯಲ್ಲಿ "ಡಿಫೆಂಡರ ಅಫ ಫೇತ" ಎಂಬ ಬಿರುದನ್ನು ತಾಳಿದ ಪಂಚಮ ಜಾರ್ಜ ಮಹಾರಾಜರ ಆಳ್ವಿಕೆಯಲ್ಲಿ ನಮ್ಮ ವೀರಶೈವರಿಗೆ ಅಲ್ಲದಸಲ್ಲದ ಹೀನೋಕ್ತಿಗಳನ್ನು ನಿರಾಧಾರವಾಗಿರುವ ವಿಷಯವನ್ನು ಕುಹಕರಾದ ಯಃಕಶ್ಚಿತ ಶಿಕ್ಷಕನು ನಮ್ಮ ಧರ್ಮಸುಧಾರಕನೂ, ದ್ವಿತೀಯಶಂಭುವಿನಂತೆ ಇರುವ ಶ್ರೀ ಬಸವನ ನಿಂದೆಯನ್ನು ನಾವು ಕೇಳಿ ಸುಮ್ಮನಿರಬೇಕೆ. ಶಿವಶಿವಾ ಇದೆಂತು ಸಾಧ್ಯವು. ನಮ್ಮ ಕಲಿತಬಾಂಧವರೆಲ್ಲ ಅಲ್ಲಲ್ಲಿ ಸಭೆಗಳನ್ನು ಮಾಡಿ ಆ ಮುಗದಾಲರ ಲೇಖವನ್ನು ತೀವ್ರವಾಗಿ ನಿಷೇಧಿಸಿ, ಸರಕಾರಕ್ಕೆ ಅರ್ಜಿಗಳನ್ನು ಕಳಿಸಿ ಈ ಚರಿತ್ರೆಯನ್ನು ಶಾಲೆಯ ಉಪಯೋಗದ ಪುಸ್ತಕಗಳ ಮಾಲಿಯೊಳಗಿಂದ ತೆಗೆಸಿ ನಿಜವಾದಸಂಗತಿಯ ಪುಸ್ತಕವನ್ನು ಹುಡುಗರಿಗೆ ಓದಲಿಕ್ಕೆ ಬರುವಂತೆ ವ್ಯವಸ್ಥೆ ಮಾಡಬೇಕಾಗಿ ವಿನಂತಿ ಅದೆ. ಇದರ ಬಗ್ಗೆ ದೈನಿಕಪತ್ರಕಾರರೂ, ವಾರಪತ್ರಕಾರರೂ ಜೋರಿನಿಂದ ಅಗ್ರಲೇಖಗಳನ್ನು ಬರೆಯಬೇಕು. ಓರಿಯಂಟಲ್ ಟ್ರಾನ್ಸಲೇಟರರು ಈ ವಿಷಯವನ್ನು ಡೈರೆಕ್ಟರ್ ಅಫ್ ಇನ್ಸ್ಟ್ರಕ್ಷನ್ ಇವರ ಮುಖಾಂತರ ಸರ್ಕಾರಕ್ಕೆ ವರ್ದಿಯನ್ನು ಕೊಡಬೇಕಾಗಿ ಸೂಚನೆಯುಂಟು. ಪರಮತದ ಪ್ರಮುಖರೆನಿಸಿಕೊಳ್ಳುವ ಸದ್ಗೃಹಸ್ಥರು ಇದಕ್ಕೆ ಸಹಾಯಮಾಡುವರೆಂದು ನಂಬಿರುವೆನು. ಈ ವಾರ್ತೆಗಾಗಿ ನಮ್ಮ ಮಹಾಮಹಾಸ್ವಾಮಿಗಳೂ ಸಿಂಹಾಸನಾಧೀಶ್ವರರೂ ಗಮನಿಸುವರೆಂದು ಆಶಿಸುವೆನು. ಬೆಳಗಾಂವ ಜಿಲ್ಲೆಯ ಮುಂಬಯಿ ಇಲಾಖೆಯ ಕೌನ್ಸಿಲ್ ಎಲೆಕ್ಷನ್ ರದ್ದಾಗಬೇಕೆಂಬ ಅರ್ಜಿ ಯೂಸಕಾತ ಆಗಿ ರಾ|| ಷಣ್ಮುಖಪ್ಪಾ, ಬಿ.ಎ., ಎಲ್‌ಎಲ್.ಬಿ, ಹಾಗು ಮಿ|| ಭುಜಂಗರಾವ ದಳವಿ ಇವರೇ ಆರಿಸಿಬಂದದ್ದು ಯೋಗ್ಯವೆಂತಲೂ, ಕೋರ್ಟಿನ ಖರ್ಚನ್ನೂ ಈ ಉಭಯತರ ಖರ್ಚನ್ನೂ ವಾದಿಗಳೇ ಸಹಿಸಬೇಕೆಂದು ತೀರ್ಮಾನವಾಯಿತು. ಇನ್ನು ತೀವ್ರವಾಗಿಯೇ ಲೋಕಲ್ ಬೋರ್ಡಿನ ಹೊಸ ಕಾಯದೆಪ್ರಕಾರ ಮೆಂಬರರನ್ನು ಚುನಾಯಿಸುವ ಪ್ರಸಂಗ ಬರುವದಿದೆ. ಜನರು ಈಗಿನಿಂದಲೇ ತಮ್ಮ ತಮ್ಮ ತಯಾರಿಯಲ್ಲಿರುವರು. ಇಲ್ಲಿ ಮಳೆಯಿಲ್ಲದ್ದರಿಂದ ನೀರಿನಕೊರತೆ ಅತಿಶಯವಾಗಿದೆ. ಧಾನ್ಯಗಳ ಬೆಲೆ ಬಹಳ ತುಟ್ಟಿಯಾಗಿದೆ. ದನಗಳಿಗೆ ಮೇವು ಕಠಿಣವಾಗಿದೆ. ಇಲ್ಲಿ ಮೊದಲಿಗೆ ಕಲೆಕ್ಟರರ ಚಿಟನೀಸರಾಗಿದ್ದ ರಾ|| ಸಾ|| ಭೀಮರಡ್ಡಿ ಕುರ್ತಕೋಟಿ, ಬಿ.ಎ., ಯವರು ಕುಲಾಬಾಕ್ಕೆ ಡಿ|| ಕಲೆಕ್ಟರರಾಗಿ ಹೋದವರು ಇಲ್ಲಿಗೆ ಪುನಃ ಅಸಿಸ್ಟೆಂಟ್ ಕಮಿಷನರಾಗಿ ಬಂದಿರುವರು. ಈ ವರ್ಷದಲ್ಲಿ ಇಲ್ಲಿ ಕೂಡುವ ಕಾಂಗ್ರೆಸ್‌ಸಭೆಯ ಕೆಲಸವು ಯಶಸ್ವಿಯಾಗುವ ಕುರಿತು ರಾ|| ಗಂಗಾಧರರಾವ ದೇಶಪಾಂಡೆಯವರು ಅಹೋರಾತ್ರಿ ಪ್ರಯತ್ನಮಾಡುತ್ತಿರುವರು. ಬಿಸಲಿನ ತಾಪಕ್ಕಾಗಿ ಮಹಾಬಳೇಶ್ವರಕ್ಕೆ ಹೋಗಲಿಕ್ಕೆಯಿಲ್ಲದ ಘನವಂತರು ಅನೇಕ ಜನರು ವಿಜಾಪೂರ, ಸೊಲ್ಲಾಪೂರ, ನಾಶೀಕ, ಮುಂಬಯಿಕಡಿಂದ ಬಂದು ನಿಂತಿರುವದರಿಂದ ಇಲ್ಲಿಯ ಮನೆಗಳ ಮತ್ತು ಬಂಗಲೆಗಳ ಬಾಡಿಗೆ ಹೆಚ್ಚಾಗಿರುವದು. ಗಿಲಗಂಜಿ, ಅರಟಾಳ ಹೈಸ್ಕೂಲಿನ ಇಮಾರತಿಯನ್ನು ಕಟ್ಟಿಸುವ ಕುರಿತು ಫಂಡುಕೂಡಿಸುವ ಕೆಲಸಕ್ಕಾಗಿ ಬೆಳಗಾಂವ ಜಿಲ್ಲೆಯ ಪ್ರಮುಖರು, ಶಾಲೆಯ ಶಿಕ್ಷಕರು ಪ್ರಯತ್ನಮಾಡುತ್ತಿರುವರು, ಲ್ಯಾಫಲವೆಂಬ ಸೇರಟ ತೆಗೆದಿರುವರು. ಅದಕ್ಕೆ ಎಲ್ಲರೂ ಸ್ವಹಸ್ತ ಪರಹಸ್ತ ಸಹಾಯಮಾಡಬೇಕು. ಶಿರಸಂಗಿ ದೇಶಾಯರ ಫಂಡಿನಿಂದ ಸದರೀ ಶಾಲೆಯನ್ನು ಕಟ್ಟಿಸುವದಕ್ಕೆ ಬೇಕಾದ ಜಾಗೆಗಾಗಿ 15000 ರೂ. ಸಿಕ್ಕವು. ಮೊನ್ನಿನ ಇಲ್ಲಿಯ ಸೈಕಲ್ ರೇಸಿನಲ್ಲಿ ಕೆಳಗೆಬರೆದ ತರುಣರಿಗೆ ಬಹುಮಾನದ ಪದಕಗಳು ಮೇ|| ಬ್ರ್ಯಾಫವೆಟ ಕಲೆಕ್ಟರ ಸಾಹೇಬರವರಿಂದ ಕೊಡಲ್ಪಟ್ಟವು. ಮೆಸರ್ಸ. ಸದಾನಂದ ಅರಳೀಕಟ್ಟಿ, ಸ್ಯಾಂಡಿಜೇಮ್ಸ್, ಶಿದ್ಧವೀರಸ್ವಾಮಿ ಕಣಬರಗಿಮಠ, ಕಾಯಿಟ್ಟಿ ಶೆಟ್ಟಿ ಮುಂತಾದವರಿಗೆ ಸಿಕ್ಕವು. ಬೆಳಗಾಂವ ಜಿಲ್ಲೆಯ ವರ್ನಾಕ್ಯುಲರ ಸ್ಕಾಲರ್ಶಿಪ್ ಪರೀಕ್ಷೆಯಲ್ಲಿ ಶಿವಶಂಕರಸ್ವಾಮಿ ಕಣಬರಗಿಮಠ ಇವರು ಮೊದಲನೇ ನಂಬರು ಮತ್ತು ಇಬ್ರಾಹಿಮ ಮೋಹದೀನಶೇಖಅಲ್ಲಿ ಇವರು ಎರಡನೇ ನಂಬರು ಬಂದಿರುವರು. ಮುಂಬಯಿ ಇಲಾಖೆಯ ಮಂತ್ರಿ ನಾಮದಾರ ದೇಹಳವಿಯವರು ಆಚೇವಾರದಲ್ಲಿ ಇಲ್ಲಿಗೆ ದಯಮಾಡಿಸಿ ಘಾತರಘೇತರರ ಹೊಲವನ್ನೂ ಕೋಆಪರೇಟಿವ್ ಬ್ಯಾಂಕುಗಳನ್ನೂ, ಶೇತಕಿ ಸಂಘವನ್ನೂ ನೋಡಿ ಸಂತೋಷಪಟ್ಟರು. ಮೆಸಾನಿಕ್ಕಲಾಜಿನಲ್ಲಿ ಅವರಿಗೆ ಬೆಳಗಾಂವಿಯ ನಾಗರಿಕರು ತಾಂಬೂಲ ಸಮಾರಂಭವನ್ನು ಮಾಡಿದರು. ಹಿಂದುಸ್ಥಾನದ ರಿಫೋರ್ಮ್‌ಸ್ಕೀಮು ಯಶಸ್ವಿಮಾಡುವ ಕುರಿತು ಒಮ್ಮನಸ್ಸಿನಿಂದ ಎಲ್ಲರೂ ಪ್ರಯತ್ನಮಾಡಿದರೆ ಕ್ಷಿಪ್ರದಲ್ಲಿಯೇ ಸ್ವರಾಜ್ಯವು ಹಸ್ತಗತವಾಗುವದೆಂದು ಬಲು ತಳಮಳಿಯ ಭಾಷಣಮಾಡಿದರು.

ಸುದ್ದಿಗಾರ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦ ಕ್ಕೂ ೦—೧೨—೦; ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹಂದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ|| ಬಸವಪ್ಪ ಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ವಿಕ್ರಯಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟಪಟ್ಟವರು ಬೇಕಾದ ಸುಗಂಧ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದುಬತ್ತಿ ಷಾಪ್,
15 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧದ ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲು ನಿಮ್ಮಲ್ಲಿದ್ದರೆ ಅದರ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲು 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ವಿಕ್ರಯವಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನಿಮದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳುಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್ ಶಾಲುಗಳನ್ನು ಸುಲಭ ಬೆಲೆಯಿಂದ ವಿಕ್ರಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—35] ಮೈಸೂರು.

೧೯೨೪ ನೆಯ ಇಸವಿ ಮೇ ತಾ|| ೨೫ ರಿಂದ ೧೯೨೪ ನೆಯ ಇಸವಿ ಮೇ ತಾ|| ೩೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ವೈಶಾಖ ಬಹುಳ ಸಪ್ತಮಿಯಿಂದ ವೈಶಾಖ ಬಹುಳ ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಮಾಸ
25	ಭಾನು	ಸಪ್ತ	17-10	ಧನಿ	24-42	12
26	ಸೋಮ	ಅಷ್ಟ	14-54	ಶತ	24-30	13
27	ಮಂಗಳ	ನವ	13-50	ಪೂಭಾ	25-21	14
28	ಬುಧ	ದಶ	13-56	ಉಭಾ	27-32	15
29	[1]ಗುರು	ಏಕಾ	15-25	ರೇವ	30-56	16
30	[2]ಶುಕ್ರ	ದ್ವಾದ	18-4	ಅಶ್ವಿ	35-28	17
31	ಶನಿ	ತ್ರಯೋ	20-42	ಭರ	40-58	18

(1) ಸರ್ವತ್ರೈಕಾದಶಿ, ಶ್ರೀಮುಮ್ಮಡಿಕೃಷ್ಣರಾಜರವರ ವರ್ಧಂತಿ, ಅನ[illegible]ಷ್ಟಿ. (2) ಪ್ರದೋಷ.

ಮೈಸೂರು: ಶ್ರೀ. [illegible] ರವರಿಂದ ಕ್ರೌನ್ ಎಲೆಕ್ಟ್ರಿಕ್ [illegible] ಮುದ್ರಿಸಲ್ಪಟ್ಟಿತು.

REGSITERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾ[illegible] ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾ[illegible]ಯುಕ್ತಿತಾ | ಘನಪಥಕೃತಾವತಾರಾ ಪಕ್ಷಜನಸ್ತುತ ಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾ[illegible]ಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಳಿತ ಸಾದ್ಗುಣ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತ ಮಾಲಾಕುಲಂ | ಪ್ರೇಮಂಚಿತ್ರೀಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [[illegible] ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಮೇ ತಾರೀಖು ೨೫ ನೆಯ ಭಾನುವಾರ. [ಸಂಚಿಕೆ ೨೧

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHARAGHAVA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇನ್ಫ್ಲೂಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತನಾಗಿ[illegible] ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.
ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
16 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ಮರಣಶಕ್ತಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ನೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರೀಸೀಸೆ ಪುಗಸಟ್ಟೆ ಕಳುಹಿಸಲಾದೀತು.



ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ಗಳ್ಳೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—38] ಪೋ. ಬಾ. ೫೧೦, ಮದರಾಸು.

4ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗ ನಾಲ್ಕನೆ ಸಲ ಮುದ್ರಿತವಾಗಿ ಅಚ್ಚಾಗಿ ವಿಕ್ರಯಕ್ಕೆ ಸಿದ್ಧವಾಗಿರುತ್ತದೆ. ಕ್ರಯ 1—0—0 ಸಂಚೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—4] ಕೇರಾಫ್, ಅಭಿನವ ಕಾಳಿದಾಸ [illegible], ಜಾಸನ ಡಿ||
ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಉತ್ತಮವಾದ ವೀರಶೈವ ಮತಗ್ರಂಥಗಳು

	ಕ್ರಯ.
ವೀರಶೈವ ಷಟ್ಸ್ಥಲಸಿದ್ಧಾಂತ	೦—೩—೦
ಪರಮಾತ್ಮಪ್ರಕಾಶಿಕೆ (ಸ್ವ. ಪ್ರ. ಸಹಿತ)	೦—೪—೦
ಪ್ರತಿಸಾರಭಾಷ್ಯ	೦—೫—೦
ಪುರುಷಸೂಕ್ತ (ಸಟೀಕ)	೦—೨—೦
ಶಿವಸ್ತವಶಿರೋಮಣಿ (ಸಟಿಪ್ಪಣ)	೦—೨—೬

ಅಂಚೆ ವೆಚ್ಚವು ಬೇರೆ.

ಬಸವಲಿಂಗಸ್ವಾಮಿಗಳು,
[24—24] ಹೊಸಮಠ, ಮೈಸೂರು.

ಜಗತ್ತಿನ ನಿಜವಾದ] ಅಗತ್ಯವಿದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಿಕೆ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೆ, ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ [illegible] ದಾತು ಒಸರೋಣ, ವೀರ್ಯನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೆಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ಸೆಟ್ಟಿಗಾದ ಜ್ವರದ ಅಸಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಕ್ಷೀಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆಪುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಕಾಲ್ಕಿಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಂಪಳಪತ್ರ, ತಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಥಲ್ಯಾಗೊಂದ, ಪಂಜಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ. ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಕಹಾವಂ ಹತ್ತಿಕಾಳಿನ ಸತ್ವ (ವಂಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಯಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣಾತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ಣ ಅಡ್ರೆಸ್ ಪೋಸ್ಟಾಫೀಸ್ ಸಹ ಬರೆಯಿರಿ.

[50—41] ಪತ್ತಾ:—ವೈದ್ಯ ಎ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೮ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಗಿ.

ಗ್ರಂಥಸಿಕ್ಕುವಸ್ಥಳ:—
ಹೊಸಮಠದ ಚನ್ನಯ್ಯನವರು ಹರಿಹರ,
24—7 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚತಿಪ್ಪಣೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎಸ್.ಆರ್. ಕರಿಬಸವಶಾಸ್ತ್ರಿ
[50—19] ಅಂಡ್ ಸನ್ಸ್, ಚಿ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ನಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಬಾವು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೦ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ.
[50—35] [illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಮೇ ತಾ॥ ೨೫ ನೆಯ ಭಾನುವಾರ.

THE PERSECUTION OF BRAHMINS.

Under the above striking title our local contemporary *The Wealth of Mysore* publishes a correspondence and a leader–both of which so far as that organ is considered–are often from the same source with reference to the dismissal of some Brahamin clerks appointed recently in the Hassan District. It is stated that the dismissals the consequent humiliation of the Brahmin Deputy Commissioner who appointed them, striking terror into the minds of the poor officials and a plethora of inspections, without attendent advantages are the benefits of the First Member's tour for two weeks in the district. Its general reference to the First Member's tour as being no more fruitful than the dissmissal of some clerks, we may pass over as being unworthy of answer. That will be treated with the contempt it deserves by the public. But when it says that it is a persecution of Brahmins and tries to create a sensation as usual it cannot be left unchallenged. It could have just examined the reason why these particular Brahmin clerks should have been dismissed out of thousands of others of the caste who are still thriving well in Public Service. The organ says that the ground for dismissal was that the officials concerned belonged to the Brahmin caste and that was their great sin. If all Brahmin clerks in the State were dismissed the remark of our contemporary may hold good. To suppress the real reasons, twist and turn the actual facts and mislead the public is a profession which was very paying in the past, which might even pay in these days at times with unthinking people, but it can no longer deceive the thinking section, and if our contemporary thinks that it can continue to do as it did in the past we can assure it it is very much mistaken. To say or to suggest that the First Member dismissed the officials because they were Brahmins is the grossest misrepresentation which none but 'the only Daily in the Capital' is capable of. There are the standing orders of the Government–orders which the organ is not unaware which lay down the rules of recruitment to Service and of measures to be adopted if appointments are made in voilation of those orders. The First Member, as head of the Recruitment Board was only giving effect to those orders, and very rightly too, when he dismissed the officials. The responsible heads of districts, think that they could afford to ignore the orders of the Government, and distribute favours to their kinsmen freely without being detected. We must congratulate the First Member on having taken proper steps in cancelling such appointments. Our only complaint is, as we have stated more than once before, that there is not sufficient vigilence exercised over the new appointments made, and that appointments are still being made contrary to the standing orders of the Government. As for sympathetically working out the orders on the Miller Committee Report we are seeing very little of it in the districts. If our contemporary thinks that the cancellation of such appointments is wrong it had better get the standing orders modified before blaming any Member of the Government. If it cannot do it, is it not cowardice and mean to write as it has done? The same paper talks of justice and purity of service being affected by such steps. Justice and purity from that quarter which held the monopoly all along has been tried for centuries and found woefully wanting. And it is with the object of reclaiming justice and purity that the doing away with the monopoly has been proposed, though to a very inadequate extent. The time has come for the extension of the principle and making the proportion more equitable in Service. We would call upon the members of the new councils to move in the matter early and to secure to the various peoples in the State their just claims.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಸಹಾಯ.

ಯಾವದ್ಭಾರತ ವೀರಶೈವ ಮಹಾಸಭೆಯು ಬೆಂಗಳೂರು ಪಟ್ಟಣದಲ್ಲಿ ನೆರೆದಿದ್ದಾಗ್ಗೆ ಮೈಸೂರು ಸೀಮೆಯ ವೀರಶೈವ ಬಡ ವಿದ್ಯಾರ್ಥಿಗಳಿಗೆ ವೇತನವನ್ನು ಕೊಟ್ಟು ವಿದ್ಯಾಭ್ಯಾಸ ಪ್ರೋತ್ಸಾಹಮಾಡಲಿಕ್ಕಾಗಿ ಏರ್ಪಟ್ಟ ಈ ವಿದ್ಯಾಭಿವೃದ್ಧಿ ಫಂಡಿಗೆ 10 ಸಾವಿರ ರೂಪಾಯಿಗಳು ಮೊದಲ್ಗೊಂಡು 10 ರೂಪಾಯಿಗಳವರೆಗೆ ಅನೇಕ ವೀರಶೈವ ಮಹನೀಯರುಗಳಿಂದ ವಾಗ್ದಾನಮಾಡಲ್ಪಟ್ಟದು 1 ಲಕ್ಷ ರೂ. ಮೇಲ್ಪಟ್ಟದಾಗಿದ್ದಿತು. ಆದರೆ ವಾಗ್ದಾನವಾದ ಹಣವನ್ನು ಆ ಕೂಡಲೆ ಬರಮಾಡಲು ತಕ್ಕ ಪ್ರಯತ್ನ ನಡಿಸಲ್ಪಡಲಿಲ್ಲವಾಗಿ ನಿರೀಕ್ಷಿತವಾಗಿದ್ದಷ್ಟು ಹಣವು ಶೇಖರವಾಗಲಿಕ್ಕೆ ಅವಕಾಶವಿಲ್ಲವಾಯಿತು. ಆದರೂ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ ಪುಟ್ಟಣ್ಣ ಸೆಟ್ಟರವರಿಂದ 5000 ರೂ. ಗಳೂ ಕೈ॥ ಅತ್ತಿಬೆಲೆ ಸಾ॥ ಸಿದ್ಧಬಸಪ್ಪನವರಿಂದ 10000 ರೂ. ಗಳೂ, ಬೆಂಗಳೂರು ಕೈ॥ ಸೂಲಬೆಲೆ ಶ್ಯಾಮಣ್ಣನವರ ಚರಸ್ಥಿರಾಸ್ತಿಯ ವಿಕ್ರಯದಿಂದ 30–40 ಸಾವಿರ ರೂ. ಗಳೂ ಇನ್ನೂ ಕೆಲ ದೊಡ್ಡ ಮನುಷ್ಯರುಗಳಿಂದ ಬಂದುದೂ, ಶುಭಶೋಭನ ಕಾರ್ಯಗಳಲ್ಲಿ ಫಂಡಿನ ಸಂಭಾವನೆಗಾಗಿ ತೆಗೆದು ಕಳುಹಲ್ಪಡುತ್ತಿರುವುದೂ ಸೇರಿ ಒಂದು ಲಕ್ಷ ರೂ. ವರೆಗೂ ಶೇಖರವಾಗಿ ಸರ್ಕಾರದ ಬೊಕ್ಕಸದಲ್ಲಿಡಲ್ಪಟ್ಟು ಅದರಿಂದ ಬರುವ ಬಡ್ಡಿಯನ್ನು ಮಾತ್ರ ವೇತನಗಳಿಗಾಗಿ ಉಪಯೋಗಿಸುವಂತೆ ಏರ್ಪಟ್ಟಿರುವುದು ಸರ್ವಶ್ರುತವಾಗಿದೆ. ಈ ಫಂಡಿನಿಂದ ಆಂಗ್ಲಭಾಷಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಸಂಸ್ಕೃತ ವಿದ್ಯಾರ್ಥಿಗಳಿಗೂ ವೇತನಗಳು ಕೊಡಲ್ಪಡುತ್ತಿರುವುದರಿಂದಲೂ, ವೇತನಾಪೇಕ್ಷಿಗಳಾದ ಬಡವಿದ್ಯಾರ್ಥಿಗಳ ಸಂಖ್ಯೆಯು ದಿನೇದಿನೆ ಹೆಚ್ಚುತ್ತಿರುವುದರಿಂದಲೂ ಅವರೆಲ್ಲರಿಗೂ ಸಾಹಾಯ್ಯಮಾಡಲು ಫಂಡು ಹಣದಿಂದ ಬರುವ ಬಡ್ಡಿಯು ಸಾಲುವುದಿಲ್ಲವಾದುದರಿಂದಲೂ ಪ್ರತಿಯೊಬ್ಬ ವೀರಶೈವನೂ ಈ ಫಂಡನ್ನು ವೃದ್ಧಿಗೊಳಿಸುವುದು ಧರ್ಮವಾಗಿದೆ. ಇದರಿಂದ ಬಡವಿದ್ಯಾರ್ಥಿಗಳಿಗೆ ಉದಾರವಾದ ಸಾಹಾಯ್ಯವು ದೊರಕಲು ಮಾರ್ಗವಾಗುತ್ತದೆಂಬುದನ್ನು ಹೇಳಬೇಕಾದುದಿಲ್ಲವು.

ವಿವಾಹಾದಿ ಶುಭಕಾರ್ಯಗಳಲ್ಲಿ ನೂರು ಸಾವಿರಗಟ್ಟಲೆ ರೂಪಾಯಿಗಳು ನಿರಾಯಾಸವಾಗಿ ವೆಚ್ಚವಾಗಿ ಹೋಗುತ್ತವೆಯಾದುದರಿಂದ ಪ್ರತಿಯೊಂದು ಲಗ್ನದ ಯಜಮಾನರುಗಳು 6 ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ತೆಗೆದು ಅಥವಾ ಆಯಾ ಸ್ಥಳಗಳ ಶೆಟ್ಟಿ ಯಜಮಾನರುಗಳು ತೆಗೆಯಿಸಿ ಕೂಡಲೆ ಬೆಂಗಳೂರಿನಲ್ಲಿರುವ ಫಂಡಿನ ಸೆಕ್ರೆಟರಿಯವರಲ್ಲಿಗೆ ಕಳುಹಿಸುತ್ತ ಬಂದಲ್ಲಿ ಮತಕ್ಕೆ ಮಹೋಪಕಾರಮಾಡಿದಂತಾಗುವುದು ಮತ್ತು ಇದರಿಂದ ಅವರುಗಳಿಗೆ ಇಹಪರ ಸುಖಲಾಭವಾಗುವುದು ಎಂದು ನಾವು ಈ ಪತ್ರಿಕಾದ್ವಾರಾ ಅನೇಕವೇಳೆ ಸೂಚಿಸಿರುತ್ತೇವೆ. ಅದೇ ಪ್ರಕಾರ ಈವರೆಗೆ ಎಷ್ಟೋ ಮತಾಭಿಮಾನಿಗಳು ನೆರವೇರಿಸಿ ವಂದನೀಯರಾಗಿರುತ್ತಾರೆ. ಈಗ ಲಗ್ನಗಳ ಕಾಲವಾಗಿರುವುದರಿಂದ ಪ್ರತಿಯೊಂದು ಸ್ಥಳದ ಪ್ರಮುಖ ಮತಾಭಿಮಾನಿಗಳು ಇದನ್ನು ತಮ್ಮ ಸ್ವಂತ ಕಾರ್ಯವೆಂದು ತಿಳಿದು ಲಗ್ನದ ಮನೆಯ ಸಭೆಯಲ್ಲಿ ಈ ವಿಷಯವನ್ನು ಮರೆಯದೆ ಪ್ರಸ್ತಾವಿಸಿ ಸಭಿಕರಿಗೆ ತಾಂಬೂಲವನ್ನು ಹಂಚುವುದಕ್ಕೆ ಮೊದಲೇ ಮತಸಂಭಾವನೆಯ ಕಾಣಿಕೆಯಾಗಿ ವಧೂವರರ ಕಡೆಯಿಂದ ಈ ವಿದ್ಯಾಭಿವೃದ್ಧಿ ಫಂಡಿಗೆ ಯಥೋಚಿತವಾಗಿ ದ್ರವ್ಯವನ್ನು ತೆಗೆಯಿಸಿ ಆ ಕೂಡಲೆ ಬೆಂಗಳೂರಲ್ಲಿರುವ ಫಂಡಿನ ಸೆಕ್ರೆಟರಿಯವರಲ್ಲಿಗೆ ಮಣಿಯಾರ್ಡರು ಮೂಲಕ ಕಳುಹುತ್ತ ಬಂದರೆ ಮತಕ್ಕೆ ಮಹೋಪಕಾರ ಮಾಡಿದಂತಾಗುವುದರಲ್ಲಿ ಸಂದೇಹವಿಲ್ಲವು. ಈ ರೀತಿಯಾಗಿ ಕಳುಹಲ್ಪಟ್ಟ ಹಣವು ಫಂಡಿನ ಸೆಕ್ರೆಟರಿಯವರಿಂದ ಸಕಾಲದಲ್ಲಿ ಪ್ರಕಟಿಸಲ್ಪಡುವುದು. ಎಲ್ಲ ಪಟ್ಟಣ ಗ್ರಾಮವಾಸಿಗಳಾದ ವೀರಶೈವ ಮತಾಭಿಮಾನಿಗಳು ಈ ಕಾರ್ಯವನ್ನು ಅಗತ್ಯವಾಗಿ ಗಮನಿಸಿ ತಪ್ಪದೆ ನೆರವೇರಿಸುವವರಾಗಲೆಂದು ಕೋರುತ್ತೇವೆ.

ಪಾಂಕೇರವರ ರಾಜೇನಾಮೆ.

ಫ್ರಾನ್ಸಿನ ಪ್ರಧಾನ ಮಂತ್ರಿ ಪಾಂಕೇರವರು ತಮ್ಮ ಉದ್ಯೋಗವನ್ನು ಬಿಟ್ಟುಬಿಡಲು ನಿಶ್ಚಯಿಸಿರುವುದಾಗಿ ಪ್ರಕಟವಾಗಿದೆ. ಆ ರಾಜ್ಯದಲ್ಲಿ ಈಚೆಗೆ ನಡೆದ ಪ್ರಜಾಪ್ರತಿನಿಧಿಗಳ ಚುನಾವಣೆಯಲ್ಲಿ ಪಾಂಕೇರವರ ಪ್ರತಿಕೂಲರು ಬಹು ಸಂಖ್ಯಾಕರಾಗಿ ವಿಜಯವನ್ನು ಹೊಂದಿರುವುದರಿಂದ ಮುಂದೆ ರಾಜ್ಯಾಡಳಿತದಲ್ಲಿ ತಮ್ಮಾಟವು ಸಾಗುವುದಿಲ್ಲವೆಂಬ ಶಂಕೆಯಿಂದ ತಮ್ಮ ಮಂತ್ರಿಪದವಿಗೆ ರಾಜೇನಾಮೆ ಕೊಡುವವರಾಗಿರುವರೆಂದು ತೋರುತ್ತದೆ. ಇವರ ನಿರಂಕುಶಾಧಿಕಾರವು ಬಹಳ ಅನರ್ಥಕ್ಕೆ ಕಾರಣವಾಯಿತು. ಜರ್ಮನಿ ರಾಜ್ಯಕ್ಕೆ ಸೇರಿದ ರೂರು ಪ್ರಾಂತವನ್ನು ಇವರು ಬ್ರಿಟಿಷ್ ಅಮೇರಿಕೆ ಮೊದಲಾದ ಪ್ರಭುತ್ವದವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಆಕ್ರಮಿಸಿಕೊಂಡುದರಿಂದ ಯೂರೋಪು ಖಂಡದಲ್ಲಿ ಸಂಕಷ್ಟಸ್ಥಿತಿಯುಂಟಾಯಿತು. ಜರ್ಮನಿಯವರಿಂದ ನಷ್ಟಪರಿಹಾರದ್ರವ್ಯವನ್ನು ಬರಮಾಡಿಕೊಳ್ಳಲು ಅವಕಾಶವಾಗಲಿಲ್ಲವಾಗಿ ಜರ್ಮನಿಯನ್ನು ನಾಶಪಡಿಸುವ ಪ್ರಯತ್ನದಲ್ಲಿ ಫ್ರಾನ್ಸಿನ ವಿಚ್ಛಿತ್ತಿಗೇ ದಾರಿಮಾಡಿಕೊಂಡರು; ಪ್ರಪಂಚಶಾಂತಿಗೆ ಮಹೋಪದ್ರವನ್ನುಂಟುಮಾಡಿದರು. ಇಷ್ಟಾದರೂ ಪಾಂಕೇರವರು ತಮ್ಮ ಹಟವನ್ನು ಬಿಡಲಿಲ್ಲವಾದುದರಿಂದ ಅವರ ಈ ಹಟವೇ ಇಂಗ್ಲೆಂಡಿಗೂ ಇಟಲಿಗೂ ಕಂಟಕವಾಗಿ ಪರಿಣಮಿಸಿತು; ಕಡೆಯಲ್ಲಿ ಬೆಲ್ಜಿಯಮ್ಮು ಕೂಡ ಫ್ರಾನ್ಸಿನಿಂದ ಪೃಥಕ್ಕಾಗಬೇಕಾಯಿತು. ಇಷ್ಟಾದರೂ ಪಾಂಕೇರವರ ಪಕ್ಷವು ಪ್ರಬಲವಾಗಿದ್ದುದರಿಂದಲೇ ಅವರು ಹಾಡಿದ್ದೆಲ್ಲಾ ರಾಗವಾಗಿದ್ದಿತು. ಆದರೆ ಈಗ ಅವರ ಪಕ್ಷವು ದುರ್ಬಲವಾಗಿ ಪ್ರತಿಪಕ್ಷವು ಪ್ರಬಲವಾದುದರಿಂದ ಅವರ ಪ್ರತಿಭೆಯು ಸಾಗುವುದಿಲ್ಲವೆಂಬುದನ್ನು ಅರಿತು ತಮ್ಮ ಮಂತ್ರಿಪದವಿಗೆ ರಾಜೇನಾಮೆಕೊಡಲು ನಿರ್ಧರಿಸಿರುವುದು ಸಹಜವೇ ಆಗಿದೆ. ಇವರು ಬಿಟ್ಟನಂತರ ಫ್ರಾನ್ಸಿನ ರಾಜ್ಯಾಡಳಿತಕ್ರಮವು ಕಾಲಸ್ಥಿತಿಗನುಗುಣವಾಗಿ ಬದಲಾಯಿಸಿ ಯೂರೋಪು ಖಂಡದಲ್ಲಿ ಶಾಂತಿಸ್ಥಾಪನವಾಗುವುದೋ ಏನೋ? ಮುಂದೆ ಫ್ರಾನ್ಸಿನ ಈ ಮುಖ್ಯಮಂತ್ರಿ ಪದವಿಗೆ ಎಂತಹವರು ಬರುತ್ತಾರೋ ಮತ್ತು ಅದರ ಪರಿಸ್ಥಿತಿಯು ಹೇಗೆ ಪರಿಣಮಿಸುವುದೋ ನೋಡಬೇಕಾಗಿದೆ.

ವೈಕಮ್ಮಿನ ಸತ್ಯಾಗ್ರಹಿಗಳಿಗೆ ಮಹಾತ್ಮರ ಉಪದೇಶ.

ವೈಕಮ್ಮಿನಲ್ಲಿ ದೇವಸ್ಥಾನಗಳ ಮುಂಗಡೆಯ ಮಾರ್ಗಗಳಲ್ಲಿ ಅಸ್ಪೃಶ್ಯರು ಸಂಚರಿಸಕೂಡದೆಂದಿರುವ ನಿರ್ಬಂಧ ನಿವಾರಣೆಗಾಗಿ ಅಂತ್ಯಜರಿಂದಲೂ, ಅವರಲ್ಲಿ ಸಾನುಭೂತಿಯುಳ್ಳವರಿಂದಲೂ ನಡಿಸಲ್ಪಡುತ್ತಿರುವ ಸತ್ಯಾಗ್ರಹ ವಿಚಾರದಲ್ಲಿ "ಕ್ರಿಮಿಕೀಟಗಳು ಯಾವ ನಿರ್ಬಂಧವಿಲ್ಲದೆಯೂ ಸಂಚರಿಸುವಂತಹ ಮಾರ್ಗಗಳಲ್ಲಿ ಮಾನವ ಸೋದರರಾದ ಅಂತ್ಯಜರು ಸಂಚರಿಸಕೂಡದೆಂಬ ನಿರ್ಬಂಧದಿಂದ ವಿಮುಕ್ತರಾಗಲು ಆ ವರ್ಗದವರು ಸತ್ಯಾಗ್ರಹವ್ರತಶೀಲರಾಗಿ ದೌರ್ಜನ್ಯರಹಿತವಾದ ಕಾರ್ಯಾಚರಣೆ ಮಾಡುವುದು ಧರ್ಮವೂ ಅತ್ಯವಶ್ಯಕವೂ ಆಗಿರುತ್ತದೆ. ಆದರೆ ಕ್ರೈಸ್ತರು, ಮಹಮ್ಮದೀಯರು ಮೊದಲಾದವರು ಈ ಸತ್ಯಾಗ್ರಹಾಚರಣೆಯಲ್ಲಿ ಭಾಗಿಗಳಾಗುವುದೂ, ವ್ರತಶೀಲರಿಗೆ ಧನ ದ್ರವ್ಯಗಳನ್ನು ಸಹಾಯಮಾಡುವುದೂ ಅಕಾಲೀಜನರಿಂದ ಅನ್ನೋದಕ ಸ್ವೀಕಾರಮಾಡುವುದೂ ಬಹಳ ಅನುಚಿತವು. ವ್ರತಶೀಲರಾದ ಅಸ್ಪೃಶ್ಯ ಸತ್ಯಾಗ್ರಹಿಗಳು ತಮ್ಮ ದೇಶದವರಿಂದಲ್ಲದೆ ಅನ್ಯ ದೇಶದವರಿಂದ ಸಹಾಯವನ್ನಪೇಕ್ಷಿಸತಕ್ಕುದಲ್ಲವು." ಎಂದು ಮೊದಲಾಗಿ ಉಪದೇಶಿಸಿರುವರು. ಹೊಟ್ಟೆನೋವನ್ನನುಭವಿಸುವವರು ಮದ್ದನ್ನು ತೆಗೆದುಕೊಳ್ಳಬೇಕಾಗಿರುವುದಲ್ಲದೆ ಆರೋಗ್ಯವಾಗಿರುವವರು ತೆಗೆದುಕೊಳ್ಳಬೇಕಾದ ಕಾರಣವಿಲ್ಲವಾದುದರಿಂದ ಅಸ್ಪೃಶ್ಯೇತರಜನರು ಮಹಾತ್ಮರ ಉಪದೇಶವನ್ನು ಲಾಲಿಸಿ ಅದರಂತೆ ಆಚರಿಸತಕ್ಕುದು ಯುಕ್ತವಾಗಿದೆ.

ರಾಜಕುಮಾರ ದೇಶರಾಜ ಅರಸಿನವರ ವಿವಾಹಮಹೋತ್ಸವ.

ಶ್ರೀಮನ್ ಮಹಾರಾಜರವರು ತಮ್ಮ ಸೋದರಳಿಯಂದರಾದ ರಾಜಕುಮಾರ ದೇಶರಾಜ ಅರಸಿನವರಿಗೆ ಸರದಾರ್ ಎಂ. ಗೋಪಾಲರಾಜ ಅರಸಿನವರ ಜ್ಯೇಷ್ಠ ಪುತ್ರಿ ಹ॥ ಕುಂ॥ ಶೋಭಿತೆಯರಾದ ಸೌ॥ ಲಕ್ಷ್ಮಮ್ಮಣ್ಣಿಯವರನ್ನು ತಂದುಕೊಂಡು ಕಳೆದ ತಾ॥ 19ರ ಮಧ್ಯಾಹ್ನ 3¼ ಗಂಟೆಯಿಂದ 3¾ ಗಂಟೆಯೊಳಗೆ ಸಲ್ಲುವ ಕನ್ಯಾಲಗ್ನದಲ್ಲಿ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದ ಅರಮನೆಯ ವಿವಾಹಮಂಟಪದಲ್ಲಿ ವಿಜೃಂಭಣೆಯಿಂದ ವಿವಾಹಮಹೋತ್ಸವವನ್ನು ಜರುಗಿಸಿದರು. ಬರೋಡಾ ಸಂಸ್ಥಾನದ ಪ್ರತಿನಿಧಿಗಳೂ, ಅನಂತಶಯನದ ಯುವರಾಣಿ ದಂಪತಿಗಳೂ, ಕೂಚ್‌ಬಿಹಾರ್ ಮಹಾರಾಣಿ ರೀಜಂಟರವರೂ ಬಾಲ ಮಹಾರಾಜರವರೂ, ರೆಸಿಡೆಂಟರು ಮೊದಲಾಗಿ ಐರೋಪ್ಯಾತಿಥಿಗಳೂ, ರಾಜಬಂಧುವರ್ಗದವರೂ ದಿವಾನರು, ಕೌನ್ಸಿಲರುಗಳು, ಚೀಫ್‌ಸೆಕ್ರೆಟರಿ, ರೆವಿನ್ಯೂಸೆಕ್ರೆಟರಿ ಶಾಖಾಧಿಕಾರಿಗಳು ಮೊದಲಾಗಿ ಸರ್ಕಾರಿಯಾಧಿಕಾರಿಗಳೂ, ಲಾಯರುಗಳು ವರ್ತಕರುಗಳು ಮೊದಲಾಗಿ ಪುರಪ್ರಮುಖರುಗಳೂ ಬಂದಿದ್ದರು. ರಾಜಕುಮಾರರು ಆನೆಮೇಲಿನ ಅಂಬಾರಿಯಮೇಲೆ ಕುಳಿತು ಸಕಲ ಬಿರುದಾವಳಿಗಳೊಡನೆ ಅರಮನೆಯ ಪಶ್ಚಿಮಬಾಗಲಿಂದ ಹೊರಟು ಲ್ಯಾನ್ಸ್‌ಡೌನ್ ಬಜಾರಿನ ಪೂರ್ವದಿಕ್ಕಿನ ಮಾರ್ಗವಾಗಿ ಶ್ರೀಮನ್ಮಹಾರಾಜರವರ ಪ್ರತಿಮೆಯ ಪಕ್ಕದಲ್ಲಿ ಕೋಟೆಯ ಉತ್ತರ ದಿಕ್ಕಿನ ಮಹಾದ್ವಾರದಿಂದ ಉತ್ಸವಗೊಂಡು ವಿವಾಹಮಂಟಪಕ್ಕೆ ದಯಮಾಡಿಸಿದ ಕೊಂಚ ಹೊತ್ತಿನಮೇಲೆ ಶ್ರೀಮನ್ ಮಹಾರಾಜರವರು ಜರತಾರಿರುಮಾಲು ಅಂಗರೇಕ ಮತ್ತು ಪಂಚೆಗಳನ್ನು ಧರಿಸಿಕೊಂಡು ಚಿತ್ತೈಸಿ ವಿವಾಹಮಂಟಪದ ಬಲಗಡೆ ಕೊಂಚದೂರದಲ್ಲಿ ರಜತಾಸನದ ಮೇಲೆ ಮಂಡಿಸಿದರು. ಸಭಿಕರು ಪ್ರತ್ಯುತ್ಥಾನರಾಗಿ ಮರ್ಯಾದಿಸಿ ಕುಳಿತುಕೊಂಡರು. ಸರದಾರ್ ಗೋಪಾಲರಾಜ ಅರಸಿನವರೂ ಗೌಸಣಿಗೆಯಲ್ಲಿದ್ದ ಅವರ ಧರ್ಮಪತ್ನಿಯವರೂ ಅರಮನೆಯ ಪುರೋಹಿತರ ವಿಧ್ಯುಕ್ತವಾದ ಕರ್ಮಾಚರಣೆಯಿಂದ ತಮ್ಮ ಕುಮಾರಿಯವರನ್ನು ಶ್ರೀಮನ್ ಮಹಾರಾಜರವರ ಅನುಮತಿಯನ್ನು ಪಡೆದು ಧಾರೆಯೆರೆದುಕೊಟ್ಟರು. ಭಕ್ಷಿ ಮ॥ ಎಚ್. ಲಿಂಗರಾಜ ಅರಸಿನವರು ವರನ ಕಡೆಯವರಾಗಿದ್ದುಕೊಂಡು ಧಾರೆಯೆರಿಸಿಕೊಂಡರು. ಆಸ್ಥಾನ ಸಂಗೀತ ವಿದ್ವಾಂಸರುಗಳಿಂದ ವೀಣೆ ಜಲತರಂಗು, ಹಾರ್ಮೋನಿಯಂ ಪಿಟೀಲು ತಬಲ ಮೊದಲಾದ ವಾದ್ಯಗಳಿಂದ ಕೂಡಿದ ಕಾನ್ಸರ್ಟ್ ಎಂಬ ಸಗಾನವಾದ್ಯವ ಕರ ಚಿತ್ತಾಕರ್ಷಣಮಾಡುತ್ತಿದ್ದಿತು. ಮಹಾಮಾ ಶ್ರೀ ವಾಣೀವಿಲಾಸ ಸನ್ನಿಧಾನದವರು, ಮಹಾರಾಣಿ ವರು, ರಾಜಕುಮಾರಿಯರುಗಳು ಮೊದಲಾಗಿ ರಾಣೀವಾಸ ದರೂ, ಅನಂತಶಯನದ ರಾಣಿಯವರೂ, ಕೂಚ್‌ಬಿಹಾರ್ ಹಾರಾಣಿಯರೂ, ಐರೋಪ್ಯಾತಿಥಿಗಳೂ ವಿವಾಹಮಂಟಪದ ಲ್ಭಾಗದಲ್ಲಿ ಕುಳಿತು ವಿವಾಹಕಾರ್ಯಕ್ರಮವನ್ನು ನೋಡಿ ತ್ತು ದಿವ್ಯವಾದ ವಾದ್ಯಗಳ ವಾದನವನ್ನು ಕೇಳಿ ಮ್ಮ ಹಸನ್ಮುಖಗಳಿಂದ ಸಂತೋಷವನ್ನು ವ್ಯಕ್ತಗೊಳಿಸು ದ್ದರು. ಅರಸುಕುಲದ ಯಜಮಾನರಾದ ಮ॥ ಎಂ. ಎ. ಳರಾಜ ಅರಸಿನವರಿಗೂ ವಂಶಾವಳಿ ಕರ್ಣೀಕರಿಗೂ ಲ್ಜೋಡಿಯ ಕಿಲ್ಲತ್ತುಗಳು ಕೊಡಲ್ಪಟ್ಟ ಮೇಲೆ, ಶ್ರೀಮನ್ ಹಾರಾಜರವರು ಮತ್ತು ಮಾತೃಶ್ರೀಯವರಿಂದ ನೂತನ ಂಪತಿಗಳಿಗೆ ಆಶೀರ್ವದಿಸಲ್ಪಟ್ಟ ಅಮೋಘವಾದ ಖಿಲ್ಲತ್ತುಗಳು ದಿಸಲ್ಪಟ್ಟ ತರುವಾಯ ಬರೋಡಾ, ಕೂಚ್‌ಬಿಹಾರ್ ಅನಂತಶಯನ ರಾಜರುಗಳ ಕಡೆಯ ಖಿಲ್ಲತ್ತುಗಳು ಅವರವರ ಪ್ರತಿನಿಧಿಗಳ ಮೂಲಕವೂ, ಸರದಾರರುಗಳಾದ ಕೈ॥ ಕಾಂತರಾಜ ರಸಿನವರ ಕುಮಾರರು, ಲಕ್ಷ್ಮೀಕಾಂತರಾಜ ಅರಸಿನವರು, ॥ ಗಳಾದ ದಳವಾಯಿ ನಂಜರಾಜ ಅರಸಿನವರು, ದರ್ಬಾರ ಭಕ್ಷಿ ಲಿಂಗರಾಜ ಅರಸಿನವರು ಮೊದಲಾಗಿ ರಾಜಬಂಧುಗಳಿಂದಲೂ ವಸ್ತ್ರಾಭರಣಾದಿ ಉಡುಗೆರೆಗಳು ಓದಿಸಲ್ಪಟ್ಟುವು. ತರುವಾಯ ದಿವಾನರಾದಿಯಾಗಿ ಸಭಿಕರಿಗೆ ಕ್ರಮರಿತು ಪುಷ್ಪಾಹಾರ ತಾಂಬೂಲಗಳೂ ಸುವರ್ಣದ ಕಾಸುಗಳ ದಕ್ಷಿಣೆಯೂ ಕೊಡಲ್ಪಟ್ಟಮೇಲೆ ರಾಜಕುಮಾರ ದಂಪತಿಗಳೂ ಶ್ರೀಮನ್ಮಹಾರಾಜರವರೂ ಸಭೆಯಿಂದ ತೆರಳಿದ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ತಾ॥ 19ರ ದಿವಸ ರಾಜಧಾನಿಯ ಸಮಸ್ತಜಾತಿಯ ಬಡಬಗ್ಗರಿಗೆ ಮೃಷ್ಟಾನ್ನಭೋಜನಮಾಡಿಸಲ್ಪಟ್ಟು ವಸ್ತ್ರದಾನ ಮಾಡಲ್ಪಟ್ಟಿತು. ಬ್ರಾಹ್ಮಣ ಪುರುಷರುಗಳಿಗೆ ಕೋಟೆಯ ದೇವಸ್ಥಾನಗಳಲ್ಲಿ ದಕ್ಷಿಣೆಯು ಕೊಡಲ್ಪಟ್ಟಿತು. ಆ ದಿವಸರಾತ್ರಿ ಅರಮನೆಯ ಕೋಟೆ ಬಾಗಲುಗಳು, ಟವರ್‌ಹಾಲು, ಗಡಿಯಾರ ಇವುಗಳ ಮೇಲೆ ಪೋತ್ಸವ ನಡೆಯಿಸಲ್ಪಟ್ಟಿತು. ಮಂಗಳವಾರ ಸಾಯಂಕಾಲ ಾಮುಂಡಿ ಜಂಬೂನಾವಿಹಾರಸ್ಥಳಕ್ಕೆ ಆಂಗ್ಲ ಹಿಂದೂ ಅತಿಥಿಗಳು ಆಹ್ವಾನಿಸಲ್ಪಟ್ಟಿದ್ದು ಅಲ್ಪಾಹಾರದಿಂದಲೂ ವಾದ್ಯಶ್ರವಣದಿಂದಲೂ ಸತ್ಕರಿಸಲ್ಪಟ್ಟರು. ಬಂದಿದ್ದ ಅತಿಥಿಗಳೆಲ್ಲರೂ ಸ್ವಸ್ಥಳಗಳಿಗೆ ತೆರಳಿದರು. ಈ ತಾ॥ 21ನೆಯ ಬುಧವಾರ ರಾತ್ರಿ ನೂತನ ದಂಪತಿಗಳು ಆನೆಯಮೇಲಣ ಅಂಬಾರಿಯಲ್ಲಿ ಕುಳಿತು ಚತುರಂಗಸೈನ್ಯದಿಂದಲೂ ವಾದ್ಯವೈಭವದಿಂದಲೂ ವಿದ್ಯುದ್ದೀಪಾವಳಿಗಳಿಂದಲೂ, ಬಂಧುವರ್ಗದಿಂದಲೂ, ರಾಜಧಾನಿಯ ಮುಖ್ಯವೀಧಿಗಳಲ್ಲಿ ಉತ್ಸವಗೊಂಡು ವರನ ಗೃಹಪ್ರವೇಶ ಮಾಡುವುದಾಗಿ ತಿಳಿಯಬರುತ್ತದೆ.

ಸ್ವದೇಶದ ವೃತ್ತಾಂತಗಳು.

ತುಮಕೂರು ತಾಲ್ಲೂಕು ಅಮಲ್ದಾರರಾದ ಮ॥ ಬಿ. ಲಿಂಗಯ್ಯನವರಿಗೆ 3 ತಿಂಗಳು ಮತ್ತು 25 ದಿನಗಳ ಪ್ರಿವಿಲೇಜ್ ರಜವೂ, ಅನಂತರ 2 ತಿಂಗಳು ಮತ್ತು 5 ದಿನಗಳವರೆಗೆ ಪೂರ್ತಿ ಸಂಬಳದ ಮೇಲೆ ಫರ್ಲೋರಜವೂ, ತರುವಾಯ 1½ ವರ್ಷಗಳವರೆಗೆ ಅರ್ಧಸಂಬಳದ ಮೇಲೆ ಫರ್ಲೋರಜವೂ ಕೊಡಲ್ಪಟ್ಟಿರುತ್ತದೆ.

ಕೋಲಾರ ಡಿ॥ ಮುಳಬಾಗಲು ತಾಲ್ಲೂಕಿನಲ್ಲಿ ನಡೆದಿರುವ ರೀಸೆಟ್ಲ್‌ಮೆಂಟು ಸರ್ಕಾರದವರಿಂದ ಅನುಮೋದಿತವಾಗಿ ಇನ್ನು 30 ವರ್ಷಗಳ ಕಾಲದವರೆಗೆ ಬದಲಾಯಿಸಲ್ಪಡುವದಿಲ್ಲವೆಂಬ ಭರವಸೆಯಿಂದ ಈ ಜುಲೈ ತಾ॥ 1 ರಿಂದ ಆಚರಣೆಗೆ ತರಲ್ಪಡುವುದು. ಈ ಹೊಸ ಸೆಟ್ಲ್‌ಮೆಂಟಿನ ಪ್ರಕಾರ ವಿಧಾಯಕವಾಗಿರುವ ಹೆಚ್ಚುದರದ ಕಂದಾಯದಿಂದ ಸರ್ಕಾರಕ್ಕೆ 5418 ರೂಪಾಯಿಗಳು ಹೆಚ್ಚಾಗಿ ಉತ್ಪನ್ನವಾಗುವುದು.

ರಾಜಧಾನಿಯಲ್ಲಿ ಆಚೆ ಬುಧವಾರ ಮತ್ತು ಗುರುವಾರ ರಾತ್ರಿ ತಕ್ಕಮಟ್ಟಿಗೆ ಮಳೆಯಾಯಿತು. ಅಲ್ಲಿಂದ ಪ್ರತಿದಿನ ರಾತ್ರಿ ಜಿನುಗುವಮಳೆಯಾಗುತ್ತಿದೆ ವಿನಾ ದೊಡ್ಡಮಳೆ ಬರಲಿಲ್ಲವು. ಇದರಿಂದ ದಗೆಯು ಸ್ವಲ್ಪಮಟ್ಟಿಗೆ ಕಡಿಮೆಯಾಗಿರುತ್ತದೆ, ಮತ್ತು ವಾಂತಿಭೇದಿ ರೋಗವು ಶಮನವಾದಂತೆ ತೋರುತ್ತದೆ. ಗುಂಡ್ಲುಪೇಟೆ ಚಾಮರಾಜನಗರ ತಾಲ್ಲೂಕುಗಳಲ್ಲಿ ಮಳೆಯು ವಿಶೇಷವಾಗಿ ಬಂದು ಕೆರೆಕುಂಟೆಗಳೆಲ್ಲವೂ ತುಂಬಿರುವುದಾಗಿಯೂ ಸಂಸ್ಥಾನದ ಇತರ ಕಡೆಗಳಲ್ಲೂ ಈಚೀಚೆಗೆ ಮಳೆಯಾಗಿ ನೀರಿನ ಕೊರತೆಯು ಕಡಿಮೆಯಾಗಿರುವುದಾಗಿಯೂ ಕೇಳುತ್ತೇವೆ. ಆಚೆವಾರದಲ್ಲಿ ಶ್ರೀರಂಗಪಟ್ಟಣ ತಾ॥ ಅರಕೆರೆಯಲ್ಲಿ ಸಿಡಿಲುತಗಲಿ ಒಬ್ಬೊಬ್ಬ ಮನುಷ್ಯರು ಸತ್ತರೆಂದೂ 4–5 ಜನರು ಗಾಯವಡೆದಿರುವರೆಂದೂ ವರ್ತಮಾನವಿದೆ.

ರಾಜಧಾನಿಯಲ್ಲಿ ಪ್ರಸಿದ್ಧ ನೀಲಗಿರಿ ಮನೆತನದವರಾದ ಶ್ರೀಮಂತ ಮದ್ದಣ್ಣ ಉರಫ್ ಮೊಗಣ್ಣನವರು ಕೆಲ ಕಾಲದಿಂದಲೂ ಮೂತ್ರವ್ಯಾಧಿಗ್ರಸ್ತರಾಗಿದ್ದು ಎಷ್ಟೋ ಔಷಧೋಪಚಾರವನ್ನು ಹೊಂದಿದಾಗ್ಯೂ ಗುಣವನ್ನು ಹೊಂದದೆ ಮೊನ್ನೆಯದಿವಸ ಸ್ವರ್ಗಸ್ಥರಾದರೆಂದ ತಿಳುಹಲು ಬಹಳವಾಗಿ ವಿಷಾದಿಸುತ್ತೇವೆ. ಇವರು ಬಹಳ ನಿಗರ್ವಿಗಳೂ, ಉದಾರಿಗಳೂ, ಸ್ನೇಹಪರರೂ ಸಾಧುಸ್ವಭಾವದವರೂ ಆಗಿದ್ದರು. ಇವರಿಗೆ ಮರಣಕಾಲದಲ್ಲಿ ಪ್ರಾಯಶಃ 60 ವರ್ಷ ವಯಸ್ಸಾಗಿದ್ದಿತು. ಇವರಿಗೆ ಒಬ್ಬ ಪುತ್ರನೂ, ನಾಲ್ವರು ಪುತ್ರಿಯರೂ ಇರುವರು. ಇವರ ಮರಣದಿಂದ ಕುಂಚಿಟಿಗರ ಸಮಾಜಕ್ಕೇ ದೊಡ್ಡ ನಷ್ಟವಾಯಿತೆಂದು ಹೇಳಬಹುದು. ಇವರ ಆತ್ಮಕ್ಕೆ ಶಾಂತಿಯೂ ವಿಯೋಗದುಃಖಭಾಜನರಾದ ಮಕ್ಕಳುಗಳಿಗೆ ದುಃಖ ಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ರಿಟೈರ್ಡ್ ಸಬ್‌ಜಡ್ಜಿಯರೂ, ಮೈಸೂರು ನ್ಯಾಯವಿಧಾಯಕಸಭಾ ಮೆಂಬರೂ ಒಕ್ಕಲಿಗರಸಂಘದ ಅಧ್ಯಕ್ಷರೂ ಆದ ರಾವ್‌ಸಾಹೇಬ್ ಚೆನ್ನಯ್ಯನವರ ಪುತ್ರಿ ಸೌಭಾಗ್ಯವತಿ ಸಿ. ಲಕ್ಷ್ಮಮ್ಮನವರು ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ರಸಾಯನಶಾಸ್ತ್ರವ (ಕೆಮಿಸ್ಟ್ರಿಯ)ನ್ನು ಐಚ್ಛಿಕಭಾಗವನ್ನಾಗಿ ತೆಗೆದುಕೊಂಡು ವ್ಯಾಸಂಗಮಾಡಿ ಮದ್ರಾಸು ವಿಶ್ವವಿದ್ಯಾಲಯದ ಬಿ.ಎ., ಪರೀಕ್ಷೆಯಲ್ಲಿ ಉತ್ತೀರ್ಣರಾದರೆಂದು ತಿಳುಹಲು ಬಹಳವಾಗಿ ಸಂತೋಷಿಸುತ್ತೇವೆ. ಬಿ.ಎ. ಪ್ರಶಸ್ತಿಯನ್ನು ಪಡೆದಿರುವ ನಮ್ಮ ಮೈಸೂರಿನ ಸ್ತ್ರೀಯರಾರೂ ಈ ರಸಾಯನಶಾಸ್ತ್ರಭಾಗವನ್ನು ತೆಗೆದುಕೊಂಡಿರಲಿಲ್ಲವು. ಸೌ॥ ಲಕ್ಷ್ಮಮ್ಮನವರು ಆ ಶಾಸ್ತ್ರಭಾಗವನ್ನು ತೆಗೆದುಕೊಂಡು ಉತ್ತಮತರವಾಗಿ ಉತ್ತೀರ್ಣರಾಗಿರುವುದರಿಂದ ನಾವು ಅವರನ್ನು ಅಭಿನಂದಿಸಿ, ಈ ಶಾಸ್ತ್ರವು ವೈದ್ಯವಿದ್ಯಾಭ್ಯಾಸಕ್ಕೆ ವಿಶೇಷ ಸಹಾಯವಾಗಿರುವುದರಿಂದಲೂ, ಇನ್ನೂ ಚಿಕ್ಕವಯಸ್ಸಿನವರಾಗಿ ಅವಿವಾಹಿತರಾಗಿರುವುದರಿಂದಲೂ ಸೀಮೆಗೆ ಹೋಗಿ ವೈದ್ಯವಿದ್ಯೆಯನ್ನು ಅಭ್ಯಾಸಮಾಡಿ ಉಚ್ಚಪ್ರಶಸ್ತಿಯನ್ನು ಪಡೆದು ತಮ್ಮ ಮನೆತನಕ್ಕೂ, ಕುಲಕ್ಕೂ, ದೇಶಕ್ಕೂ ಕೀರ್ತಿಯನ್ನುಂಟುಮಾಡುವವರಾಗಲೆಂದು ಕೋರುತ್ತೇವೆ. ರಾ॥ ಸಾ॥ ಚೆನ್ನಯ್ಯನವರ ಜ್ಯೇಷ್ಠಪುತ್ರರಾದ ಮ॥ ಜವರಯ್ಯನವರು ವನಶಾಖಾಧಿಕಾರಿಗಳಾದ ಮಿ॥ ಕ್ರಂಬೀಗಲ್‌ರವರ ಅಸಿಸ್ಟೆಂಟಾಗಿರುವರಲ್ಲದೆ ಸೀಮೆಗೆಹೋಗಿ ಈ ವನಶಾಸ್ತ್ರವನ್ನು ಚೆನ್ನಾಗಿ ಪರಿಚಯಮಾಡಿಕೊಂಡು ಬಂದಿರುವರು. ತೃತೀಯಪುತ್ರರಾದ ಮ॥ ಎಚ್. ಸಿ. ದಾಸಪ್ಪ, ಬಿ.ಎ., ಎಲ್.ಎಲ್.ಬಿ., ಯವರು ರಾಜಧಾನಿಯಲ್ಲಿ ವಕೀಲರಾಗಿರುವರು. ಮತ್ತು ಪುತ್ರಿಯರಾದ ಲಕ್ಷ್ಮಮ್ಮನವರು ಈಗತಾನೆ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಹೀಗೆ ಪುತ್ರಪುತ್ರೀರತ್ನತ್ರಯಗಳನ್ನುಳ್ಳ ರಾವ್ ಸಾಹೇಬರ ಜನ್ಮವೇ ಧನ್ಯವು.

ಭರತಖಂಡದ ವೃತ್ತಾಂತಗಳು.

ಒಬ್ಬ ಬೋರಾ ದೊಡ್ಡಮನುಷ್ಯನು ಮಹಾತ್ಮಾ ಗಾಂಧಿಯವರ ಮೂಲಕ ಮೋಪ್ಲಾ ಕಷ್ಟನಿವಾರಣಾಧನರಾಶಿಗೆ 500 ರೂ. ಗಳನ್ನು ಕಳುಹಿಸಿಕೊಟ್ಟಿರುತ್ತಾನೆ.

ಎಸ್. ವಿ. ರಾಜಗೋಪಾಲಾಚಾರ್ಯರು ಕುಂಭಕೋಣ ಮತ್ತು ಪಾಪನಾಶಿನಿ ತಾಲ್ಲೂಕುಗಳಲ್ಲಿ ಸಂಚರಿಸುತ್ತ ತಂಜಾವೂರಿನಲ್ಲಿ ಹೆಚ್ಚು ಕಂದಾಯವು ಕೊಡಲ್ಪಡದಿರುವುದರ ವಿಚಾರವಾಗಿ ನಡಿಯುತ್ತಿರುವ ಚಳವಳಿಯನ್ನು ಕುರಿತು ಜನರಿಗೆ ಬೋಧಿಸುತ್ತಿರುವರು.

100 ಜನ ವೈದಿಕರು ಇಂಗ್ಲೆಂಡನ್ನು ನೋಡಿಕೊಂಡು ಬರಲು ಹೊರಡುವುದಾದರೆ ಅಂಥವರ ಸಲುವಾಗಿಯೇ ಒಂದು ಪ್ರತ್ಯೇಕ ಹಡಗಳನ್ನು ಮುಂದಿನ ಜುಲೈ 15 ರೊಳಗಾಗಿ ಬೊಂಬಾಯಿನಿಂದ ಹೊರಡಿಸುವುದಾಗಿ ಏರ್ಪಾಡುಮಾಡಿರುತ್ತಾರೆ.

ದೇಶಭಕ್ತ ಸಿ. ಆರ್. ದಾಸ್‌ರವರು ತಮ್ಮ ಶತ್ರುಪಕ್ಷದವರ ಆಕ್ಷೇಪದ ಮೇಲೆ ಬಂಗಾಳಾ ನ್ಯಾಯವಿಧಾಯಕ ಸಭಾಸಭಿಕಸ್ಥಾನವನ್ನು ಕಳೆದುಕೊಂಡು ಪುನರಾವೃತ್ತಿಯ ಚುನಾವಣೆಗೆ ಅಭ್ಯರ್ಥಿಗಳಾಗಿ ನಿಂತಿದ್ದು ಬಹು ಮತಗಳನ್ನು ಪಡೆದು ಚುನಾವಣೆಗೊಂಡರು.

ಮಧುರೆಯಲ್ಲಿ ಕಳೆದ ತಾ॥ 19ರ ಸಾಯಂಕಾಲ ಪ್ರಚಂಡಮಾರುತವೆದ್ದು ಅನೇಕ ಮರಗಳನ್ನೂ ತಂತಿಯ ಕಂಬಗಳನ್ನೂ ಬುಡಮೇಲಾಗಿ ಉರುಳಿಸಿಬಿಟ್ಟಿತು. ಅಲ್ಲದೆ ಕೆಲ ಬಡವರ ಮನೆಗಳು ಬಿದ್ದುಹೋದವು ಮತ್ತು ಮನೆಗಳ ಹಾಗೂ ಮದುವೆ ಚಪ್ಪರಗಳ ಮೇಲುಹೊದ್ದಿಕೆಗಳು ಹಾರಿಸಲ್ಪಟ್ಟುವು. ಇಷ್ಟಾದರೂ ಪ್ರಾಣಾಪಾಯವೇನೂ ಆಗಲಿಲ್ಲವು.

ಮನ್ನಾರುಗುಡಿಯಲ್ಲಿ ಜನರು ಸರ್ಕಾರಕ್ಕೆ ಕಂದಾಯವನ್ನು ಸಲ್ಲಿಸದಂತೆ ಬೋಧಿಸುತ್ತಿರುವ ಡಾ॥ ಮುದ್ದುಕೃಷ್ಣ ಅಯ್ಯರ್‌ರವರು ಕಂದಾಯವನ್ನು ವಸೂಲ್ಮಾಡುತ್ತಿದ್ದ ಸರ್ಕಾರಿ ಮನುಷ್ಯನಿಗೆ ಆತಂಕಪಡಿಸಿದರೆಂದೂ ಅವನು ಕಂದಾಯದ ಬಾಕಿಗಾಗಿ ಹಿಡಿದುಕೊಂಡಿದ್ದ ಬೈಸಿಕಲ್ಲನ್ನು ಬಲವಂತದಿಂದ ಕಿತ್ತುಕೊಂಡರೆಂದೂ ದೋಷಾರೋಪಿಸಲ್ಪಟ್ಟು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಯಾಗಿ 100 ರೂ. ಅರ್ಥದಂಡ ವಿಧಿಸಲ್ಪಟ್ಟರು.

ಭೂಪಾಲ ಸಂಸ್ಥಾನವು ಮಹಮ್ಮದೀಯರಾದ ಬೇಗಂ ರಾಣಿಯವರ ಆಳ್ವಿಕೆಯಲ್ಲಿದೆ. ಆ ದೇಶದಲ್ಲಿ ಹಿಂದುಗಳಾಗಿದ್ದು ಮಹಮ್ಮದೀಯ ಮತಕ್ಕೆ ಸೇರಿಹೋದವರು ಪುನಃ ಹಿಂದೂ ಮತವನ್ನು ಅವಲಂಬಿಸುವುದಾದರೆ ಅಂಥವರು ಶಿಕ್ಷಾರ್ಹರಾಗುವರೆಂದು ಅಲ್ಲಿಯ ಸರ್ಕಾರದ ಅಪ್ಪಣೆಯಾಗಿರುವುದು. ಈ ಹುಕುಂ ಕೇವಲ ಅನ್ಯಾಯವಾದದ್ದೆಂದು ಅಲ್ಲಿನ ಹಿಂದೂ ಸಭೆಯವರು ಸ್ವಾಮಿ ಸಂಪೂರ್ಣಾನಂದರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ತೀರ್ಮಾನಮಾಡಿರುತ್ತಾರೆ.

ಗೈಬಂದ ಸಮೀಪಗ್ರಾಮವಾದ ಬಾಲೂ ಎಂಬಲ್ಲಿ ಸರ್ವತೀವೈಷ್ಣವಿ ಎಂಬ ಹುಡುಗಿಯನ್ನು ನೆಂಟರಮನೆಗೆ ಕರೆದುಕೊಂಡು ಹೋಗುತ್ತೇನೆಂದು ಅವಳ ಸಮೀಪ ಬಂಧು ಒಬ್ಬನು ಆಶೆಹುಟ್ಟಿಸಿ ರಾತ್ರಿ ವೇಳೆಯಲ್ಲಿ ಮನೆಯಿಂದ ಹೊರಡಿಸಿಕೊಂಡುಬಂದು ಇಬ್ಬರು ಮಹಮ್ಮದೀಯರ ಸಹಾಯದಿಂದ ಆಕೆಯನ್ನು ಊರಹೊರಗಿನ ಹೊಲಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಆಕೆಯನ್ನು ಹಿಂಸಿಸಿ ಒಬ್ಬ ವ್ಯಭಿಚಾರಿಣಿಗೆ 30 ರೂ. ಕ್ರಯಕ್ಕೆ ಮಾರಿಬಿಟ್ಟರು. ಆ ಹುಡುಗಿಯು ಈಗ ಶಿಶುಸಹಾಯ ಸಂಘದವರ ಪೋಷಣೆಯಲ್ಲಿರುವಳು ಮತ್ತು ಅಪರಾಧಿಗಳು ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ವಿದೇಶದ ವೃತ್ತಾಂತಗಳು.

ಲಂಡನ್ನಿನ ಖಜಾನೆಯ ವ್ಯವಹಾರದಲ್ಲಿರುವ ನೋಟುಗಳಿಗಿಂತಲೂ ಬರ್ಲಿನ್ನಿನ ನೋಟುಗಳು ಬಹಳ ಕಶ್ಮಲವಾಗಿರುವುವೆಂತಲೂ ಈ ಕಶ್ಮಲವಾದ ನೋಟುಗಳಲ್ಲಿ 1,50,000 ವಿಷಮಶೀತಜ್ವರೋತ್ಪಾದಕಗಳಾದ ಕ್ರಿಮಿಗಳು ಸೇರಿಕೊಂಡಿರುವುವೆಂತಲೂ ಕ್ರಿಮಿಪರಿಶೋಧಕರಿಂದ ಕಂಡುಹಿಡಿಯಲ್ಪಟ್ಟಿರುತ್ತದೆ.

ಲಂಡನ್ ನಗರದಲ್ಲಿರುವ ಡಾಕ್ಟರ್ ಕ್ರಿಸ್ಟೋಫರ್‌ಸನ್ ಎಂಬ ವೈದ್ಯರು ಮನುಷ್ಯನ ರಕ್ತವನ್ನು ಪರೀಕ್ಷಿಸಿ, ಅದರ ಶಕ್ತಿಯನ್ನು ಕುಂದಿಸುವ ಕ್ರಿಮಿವರ್ಗಗಳು ರಕ್ತದಲ್ಲಿ ಸೇರದಂತೆ ನೋಡಿಕೊಂಡರೆ ಮನುಷ್ಯನ ಆಯುಸ್ಸು ಸಾಮಾನ್ಯವಾಗಿ 300–400 ವರ್ಷಗಳಾಗಬಹುದೆಂದು, ಕೆಲವು ಸಂದರ್ಭಗಳಲ್ಲಿ 1000 ವರ್ಷದ ವರೆಗೂ ಜೀವಿಸಬಹುದೆಂದೂ ತಿಳಿಸಿರುತ್ತಾರೆ.

ಗ್ರನಡದಲ್ಲಿ ಮಾನಾಚಿಲ್ ಎಂಬ ಊರಿಗೆ ಸಮೀಪವಾಗಿರುವ ಒಂದು ಬೆಟ್ಟವು ಅಲ್ಲಿ ಆದ ಅಪಾರವಾದ ಮಳೆಯಿಂದ ಎತ್ತರದಿಂದ ತಗ್ಗಾದ ಕಣಿವೇ ಪ್ರಾಂತಕ್ಕೆ ಮೆಲ್ಲಗೆ ಜರುಗುತ್ತಿದೆ. ದಾರಿಯಲ್ಲಿರುವ ಊರಿನವರು ಊರನ್ನು ಬಿಟ್ಟು ಹೋಗುತ್ತಿರುವರು. ಅಲ್ಲಲ್ಲಿ ಭೂಮಿಯು ಬಿರುಕುಬಿಟ್ಟು ಪ್ರವಾಹಗಳು ಹೊರಡುತ್ತಿರುವವು. ಬೆಟ್ಟವು ಇನ್ನು ಮುಂದಕ್ಕೆ ಜರುಗಿ ಕಣಿವೆಯಲ್ಲಿ ಕುಳಿತುಬಿಟ್ಟರೆ ಅಲ್ಲಿ ಹರಿಯುವ ನದಿಗೆ ಪ್ರತಿಬಂಧಕವಾಗಿ ಒಂದು ದೊಡ್ಡ ಸರೋವರ ಹುಟ್ಟುವುದೆಂದೂ, ಮಾನಾಚಿಲ್ ಊರೂ, ಅದರ ನಾಲ್ಕಾರು ಕೈಗಾರಿಕೆ ಕಾರ್ಖಾನೆಗಳೂ ಮುಳುಗಿಹೋಗುವವೆಂದೂ ಊಹಿಸಲ್ಪಟ್ಟಿದೆ.

ಪೆಸಿಫಿಕ್ ಸಾಗರದಲ್ಲಿರುವ ಬೋರ್ನಿಯೋ ಎಂಬ ದ್ವೀಪದಲ್ಲಿ ದಟ್ಟವಾದ ಕಾಡಿನಿಂದ ಕೂಡಿದ ವಿಶಾಲವಾದ ಪ್ರಾಂತಗಳು ಇನ್ನೂ ಇರುವವು. ಅಲ್ಲಿ ಅನೇಕರಿಗೆ ಮೊಂಡಾದ ಬಾಲವಿರುವುದೆಂದು ದೇಶಶೋಧನೆಗಾಗಿ ಅಲ್ಲಿಗೆ ಹೋಗಿದ್ದವರೊಬ್ಬರು ತಿಳಿಸುತ್ತಾರೆ. ಬಾಲವು ನಾಲ್ಕು ಅಂಗುಲಗಳಷ್ಟು ಉದ್ದವಾಗಿರುವುದಾಗಿಯೂ, ಅವರು ಕುಳಿತುಕೊಳ್ಳುವಾಗ್ಯೆ ರಂಧ್ರವಿರುವ ಮಣೆಯನ್ನು ಹಾಕಿಕೊಳ್ಳುವರೆಂದೂ ಗೊತ್ತಾಗುತ್ತದೆ. ಈ ದ್ವೀಪವಾಸಿಗಳು ಕೆಲವು ಶತಮಾನಗಳ ಹಿಂದೆ ನೆರೆ ದ್ವೀಪವಾದ ನ್ಯೂಗಿನಿಯೆಂಬಲ್ಲಿ ಹೆಣ್ಣುಕೊಟ್ಟು ತರುವ ಬಳಕೆ ಇತ್ತೆಂದೂ, ಇವರ ಬೀಗರಲ್ಲಿ ದೀರ್ಘವಾದ ಬಾಲಗಳಿರುತ್ತವೆಂದೂ, ಅವರ ಮೈಮೇಲೆ ರೇಷ್ಮೆಯಂತೆ ಮೃದುವಾದ ಕೂದಲು ಇರುವುದಾಗಿಯೂ ತಿಳಿಸುತ್ತಾರೆ.

ಮನುಷ್ಯನ ತಲೆಬುರುಡೆಯು ದಪ್ಪವಾಗಿದ್ದಷ್ಟು ಮೇಧಾಶಕ್ತಿಯು ಹೆಚ್ಚೆಂದು ಸಾಮಾನ್ಯವಾಗಿ ಭಾವಿಸಲ್ಪಟ್ಟಿರುತ್ತದೆ. ಆದರೆ ಈಗ ಕೆಲ ಪಾಶ್ಚಾತ್ಯಶಾಸ್ತ್ರಜ್ಞರು ಚೆನ್ನಾಗಿ ಪರಿಶೋಧಿಸಿ ಬರೇ ತಲೆಬುರುಡೆಯು ದಪ್ಪನಾಗಿದ್ದ ಮಾತ್ರಕ್ಕೆ ಮೇಧಾವಿಯೆಂದು ಹೇಳಲಿಕ್ಕಾಗುವುದಿಲ್ಲ; ತಲೆಬುರುಡೆಯ ಒಳಗಡೆ ಕೆಲಭಾಗಗಳು ವಿಶಾಲವಾಗಿಯೂ ದೃಢವಾಗಿಯೂ ಬೆಳೆದಿದ್ದಲ್ಲಿ ಮೇಧಾಶಕ್ತಿಯು ಹೆಚ್ಚಾಗಿರುವುದೆಂದೂ ಲಾರ್ಡ್ ಬೈರನ್ ಮೊದಲಾದ ಪ್ರಖ್ಯಾತ ಪುರುಷರ ತಲೆಯು ಚಿಕ್ಕದಾಗಿದ್ದರೂ ಅವರ ಮೇಧಾಶಕ್ತಿಯು ಅದ್ಭುತವಾಗಿದ್ದಿತೆಂದೂ, ಇನ್ನೊಬ್ಬಮನುಷ್ಯನ ತಲೆಯು 70 ಪೌಂಡು ತೂಕವುಳ್ಳದಾಗಿದ್ದರೂ ಅವನು ಒಂದೆರಡು ಕೊಲೆಗಳನ್ನು ಮಾಡಿ ಮರಣದಂಡನೆಗೆ ಗುರಿಯಾದನು ಎಂದೂ ಹೇಳಿರುವರು.

ಸ್ತ್ರೀಪುರುಷರು ಪರಸ್ಪರ ಪ್ರೇಮಾತಿಶಯದಿಂದ ಚುಂಬನ ಮಾಡುವುದೂ, ತಂದೆತಾಯಿಗಳು ತಮ್ಮ ಮಕ್ಕಳಿಗೆ ಮುದ್ದಿಗಾಗಿ ಮುತ್ತಿಕ್ಕುವುದೂ ಸ್ವಾಭಾವಿಕವಾಗಿರುತ್ತದಷ್ಟೆ. ಈಚೆಗೆ ಡಾಕ್ಟರುಗಳು ಈ ಚುಂಬನದಿಂದುಂಟಾಗುವ ಗುಣಾವಗುಣವನ್ನು ಪರೀಕ್ಷಿಸಿ ಮಧ್ಯಾಹ್ನದ ಮತ್ತು ಸಂಜೆಯ ವೇಳೆಗಳಲ್ಲಿ ಚುಂಬನಮಾಡುವುದು ಸೌಖ್ಯಕರವೆಂದೂ, ರಾತ್ರಿವೇಳೆ ನಿದ್ರಿಸುವಾಗ್ಗೆ ಕ್ರಿಮಿಗಳು ಬಾಯಿಯಲ್ಲಿ ಸೇರುತ್ತವಾದುದರಿಂದ ಬೆಳಗಿನ ವೇಳೆಯಲ್ಲಿ ಚುಂಬನಮಾಡುವುದು ಅಪಾಯಕರವೆಂದೂ ಕಂಡುಹಿಡಿದಿರುವರಾದುದರಿಂದ ನ್ಯೂಯಾರ್ಕಿನ ಜೀವವಿಮೆ ಕಂಪೆನಿಯವರು ಚುಂಬನಾಸಕ್ತರಾದವರು ಹೆಚ್ಚು ಮೊಬಲಗನ್ನು ಕೊಡಬೇಕೆಂದು ಏರ್ಪಡಿಸಿರುತ್ತಾರೆ ಮತ್ತು ಇತರ ಜೀವವಿಮೆ ಕಂಪೆನಿಯವರೂ ಅವರ ಅನುಕರಣ ಮಾಡುವವರಾಗಿರುತ್ತಾರೆ.

ಪ್ರಪಂಚದ ಮೇಲೆ ಬಹಳ ವಿಶೇಷವಾಗಿ ಉಪಯೋಗಿಸಲ್ಪಡುತ್ತಿರುವ ಮತ್ತು ಇತರ ಎಲ್ಲ ಮೋಟಾರುಬಂಡಿಗಳ ಬೆಲೆಗಿಂತಲೂ ಸುಲಭಬೆಲೆಯುಳ್ಳದಾಗಿರುವ ಫೋರ್ಡುಮೋಟಾರುಬಂಡಿ ನಿರ್ಮಾಣಕಂಪೆನಿಯು ಅಮೇರಿಕೆಯಲ್ಲಿ ಅತ್ಯಂತ ಪ್ರಖ್ಯಾತವೂ ದೊಡ್ಡವೂ ಆದ ಉಕ್ಕಿನ ಮತ್ತು ಸ್ಟ್ಯಾಂಡರ್ಡ್ ಕಲ್ಲೆಣ್ಣೆಯ ಕಂಪೆನಿಗಳಿಗೆ ಮೂರನೆಯದಾಗಿದೆ. ಇದರ 1923 ನೆಯ ವರ್ಷದ ಆರ್ಥಿಕಸ್ಥಿತಿಯ ಪ್ರಕಟನೆಯಿಂದ ಕಂಪನಿಯ ಒಟ್ಟು ಆಸ್ತಿಯು 56,80,00,000 ಡಾಲರುಗಳು, ಅದರ ಖ್ಯಾತಿಯ ಬೆಲೆಯು 2,05,17,000 ಡಾಲರು, ಆಸ್ತಿಯ ವಾಸ್ತವ್ಯವಾದ ಬೆಲೆಯು 9,30,00,000 ಡಾಲರು, ಯಂತ್ರಸಾಮಗ್ರಿಗಳ ಬೆಲೆ 8,76,39,000 ಡಾಲರು, ಸರಕಿನ ಬೆಲೆ 94,32,000 ಡಾಲರು ಎಂದೂ 1922 ರಿಂದೀಚೆಗೆ ಒಟ್ಟು ಆಸ್ತಿಯು

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಮೇ ತಾ|| ೨೫ ನೆಯ ಭಾನುವಾರ.

THE PERSECUTION OF BRAHMINS.

Under the above striking title our local contemporary *The Wealth of Mysore* publishes a correspondence and a leader-both of which so far as that organ is considered-are often from the same source with reference to the dismissal of some Brahamin clerks appointed recently in the Hassan District. It is stated that the dismissals the consequent humiliation of the Brahmin Deputy Commissioner who appointed them, striking terror into the minds of the poor officials and a plethora of inspections, without attendent advantages are the benefits of the First Member's tour for two weeks in the district. Its general reference to the First Member's tour as being no more fruitful than the dissmissal of some clerks, we may pass over as being unworthy of answer. That will be treated with the contempt it deserves by the public. But when it says that it is a persecution of Brahmins and tries to create a sensation as usual it cannot be left unchallenged. It could have just examined the reason why these particular Brahmin clerks should have been dismissed out of thousands of others of the caste who are still thriving well in Public Service. The organ says that the ground for dismissal was that the officials concerned belonged to the Brahmin caste and that was their great sin. If all Brahmin clerks in the State were dismissed the remark of our contemporary may hold good. To suppress the real reasons, twist and turn the actual facts and mislead the public is a profession which was very paying in the past, which might even pay in these days at times with unthinking people, but it can no longer deceive the thinking section, and if our contemporary thinks that it can continue to do as it did in the past we can assure it it is very much mistaken. To say or to suggest that the First Member dismissed the officials because they were Brahmins is the grossest misrepresentation which none but 'the only Daily in the Capital' is capable of. There are the standing orders of the Government-orders which the organ is not unaware which lay down the rules of recruitment to Service and of measures to be adopted if appointments are made in voilation of those orders. The First Member, as head of the Recruitment Board was only giving effect to those orders, and very rightly too, when he dismissed the officials. The responsible heads of districts, think that they could afford to ignore the orders of the Government, and distribute favours to their kinsmen freely without being detected. We must congratulate the First Member on having taken proper steps in cancelling such appointments. Our only complaint is, as we have stated more than once before, that there is not sufficient vigilence exercised over the new appointments made, and that appointments are still being made contrary to the standing orders of the Government. As for sympathetically working out the orders on the Miller Committee Report we are seeing very little of it in the districts. If our contemporary thinks that the cancellation of such appointments is wrong it had better get the standing orders modified before blaming any Member of the Government. If it cannot do it, is it not cowardice and mean to write as it has done? The same paper talks of justice and purity of service being affected by such steps. Justice and purity from that quarter which held the monopoly all along has been tried for centuries and found woefully wanting. And it is with the object of reclaiming justice and purity that the doing away with the monopoly has been proposed, though to a very inadequate extent. The time has come for the extension of the principle and making the proportion more equitable in Service. We would call upon the members of the new councils to move in the matter early and to secure to the various peoples in the State their just claims.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಸಹಾಯ.

ಯೂವತ್ಭಾರತ ವೀರಶೈವ ಮಹಾಸಭೆಯು ಬೆಂಗಳೂರು ಪಟ್ಟಣದಲ್ಲಿ ನೆರೆದಿದ್ದಾಗ್ಗೆ ಮೈಸೂರು ಸೀಮೆಯ ವೀರಶೈವ ಬಡ ವಿದ್ಯಾರ್ಥಿಗಳಿಗೆ ವೇತನವನ್ನು ಕೊಟ್ಟು ವಿದ್ಯಾಭ್ಯಾಸ ಪ್ರೋತ್ಸಾಹಮಾಡಲಿಕ್ಕಾಗಿ ಏರ್ಪಟ್ಟ ಈ ವಿದ್ಯಾಭಿವೃದ್ಧಿ ಫಂಡಿಗೆ 10 ಸಾವಿರ ರೂಪಾಯಿಗಳು ಮೊದಲ್ಗೊಂಡು 10 ರೂಪಾಯಿಗಳವರೆಗೆ ಅನೇಕ ವೀರಶೈವ ಮಹನೀಯರುಗಳಿಂದ ವಾಗ್ದಾನಮಾಡಲ್ಪಟ್ಟುದು 1 ಲಕ್ಷ ರೂ. ಮೇಲ್ಪಟ್ಟುದಾಗಿದ್ದಿತು. ಆದರೆ ವಾಗ್ದಾನವಾದ ಹಣವನ್ನು ಆ ಕೂಡಲೆ ಬರಮಾಡಲು ತಕ್ಕ ಪ್ರಯತ್ನ ನಡಿಸಲ್ಪಡಲಿಲ್ಲವಾಗಿ ನಿರೀಕ್ಷಿತವಾಗಿದ್ದಷ್ಟು ಹಣವು ಶೇಖರವಾಗಲಿಕ್ಕೆ ಅವಕಾಶವಿಲ್ಲವಾಯಿತು. ಆದರೂ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರವರಿಂದ 5000 ರೂ. ಗಳೂ ಕೈ|| ಅತ್ತಿಬೆಲೆ ಸಾ|| ಸಿದ್ಧಬಸಪ್ಪನವರಿಂದ 10000 ರೂ. ಗಳೂ, ಬೆಂಗಳೂರು ಕೈ|| ಸೂಲಬೆಲೆ ಶ್ಯಾಮಣ್ಣನವರ ಚರಸ್ಥಿರಾಸ್ತಿಯ ವಿಕ್ರಯದಿಂದ 30-40 ಸಾವಿರ ರೂ. ಗಳೂ ಇನ್ನೂ ಕೆಲ ದೊಡ್ಡ ಮನುಷ್ಯರುಗಳಿಂದ ಬಂದುದೂ, ಶುಭಶೋಭನ ಕಾರ್ಯಗಳಲ್ಲಿ ಫಂಡಿನ ಸಂಭಾವನೆಗಾಗಿ ತೆಗೆದುಕಳುಹಲ್ಪಡುತ್ತಿರುವುದೂ ಸೇರಿ ಒಂದು ಲಕ್ಷ ರೂ. ವರೆಗೂ ಶೇಖರವಾಗಿ ಸರ್ಕಾರದ ಬೊಕ್ಕಸದಲ್ಲಿ ಡಲ್ಪಟ್ಟು ಆದರಿಂದ ಬರುವ ಬಡ್ಡಿಯನ್ನು ಮಾತ್ರ ವೇತನಗಳಿಗಾಗಿ ಉಪಯೋಗಿಸುವಂತೆ ಏರ್ಪಟ್ಟಿರುವುದು ಸರ್ವಶ್ರುತವಾಗಿದೆ. ಈ ಫಂಡಿನಿಂದ ಆಂಗ್ಲಭಾಷಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಸಂಸ್ಕೃತ ವಿದ್ಯಾರ್ಥಿಗಳಿಗೂ ವೇತನಗಳು ಕೊಡಲ್ಪಡುತ್ತಿರುವುದರಿಂದಲೂ, ವೇತನಾಪೇಕ್ಷಿಗಳಾದ ಬಡವಿದ್ಯಾರ್ಥಿಗಳ ಸಂಖ್ಯೆಯು ದಿನೇದಿನೆ ಹೆಚ್ಚುತ್ತಿರುವುದರಿಂದಲೂ ಅವರೆಲ್ಲರಿಗೂ ಸಾಹಾಯ್ಯಮಾಡಲು ಫಂಡು ಹಣದಿಂದ ಬರುವ ಬಡ್ಡಿಯು ಸಾಲುವುದಿಲ್ಲವಾದುದರಿಂದಲೂ ಪ್ರತಿಯೊಬ್ಬ ವೀರಶೈವನೂ ಈ ಫಂಡನ್ನು ವೃದ್ಧಿಗೊಳಿಸುವುದು ಧರ್ಮವಾಗಿದೆ. ಇದರಿಂದ ಬಡವಿದ್ಯಾರ್ಥಿಗಳಿಗೆ ಉದಾರವಾದ ಸಾಹಾಯ್ಯವು ದೊರಕಲು ಮಾರ್ಗವಾಗುತ್ತದೆಂಬುದನ್ನು ಹೇಳಬೇಕಾದುದಿಲ್ಲವು.

ವಿವಾಹಾದಿ ಶುಭಕಾರ್ಯಗಳಲ್ಲಿ ನೂರು ಸಾವಿರಗಟ್ಟಲೆ ರೂಪಾಯಿಗಳು ನಿರಾಯಾಸವಾಗಿ ವೆಚ್ಚವಾಗಿ ಹೋಗುತ್ತವೆಯಾದುದರಿಂದ ಪ್ರತಿಯೊಂದು ಲಗ್ನದ ಯಜಮಾನರುಗಳು 6 ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ತೆಗೆದು ಅಥವಾ ಆಯಾ ಸ್ಥಳಗಳ ಶೆಟ್ಟಿ ಯಜಮಾನರುಗಳು ತೆಗೆಯಿಸಿ ಕೂಡಲೆ ಬೆಂಗಳೂರಿನಲ್ಲಿರುವ ಫಂಡಿನ ಸೆಕ್ರೆಟರಿಯವರಲ್ಲಿಗೆ ಕಳುಹಿಸುತ್ತ ಬಂದಲ್ಲಿ ಮತಕ್ಕೆ ಮಹೋಪಕಾರಮಾಡಿದಂತಾಗುವುದು ಮತ್ತು ಇದರಿಂದ ಅವರುಗಳಿಗೆ ಇಹಪರ ಸುಖಲಾಭವಾಗುವುದು ಎಂದು ನಾವು ಈ ಪತ್ರಿಕಾದ್ವಾರಾ ಅನೇಕವೇಳೆ ಸೂಚಿಸಿರುತ್ತೇವೆ. ಅದೇ ಪ್ರಕಾರ ಈವರೆಗೆ ಎಷ್ಟೋ ಮತಾಭಿಮಾನಿಗಳು ನೆರವೇರಿಸಿ ವಂದನೀಯರಾಗಿರುತ್ತಾರೆ. ಈಗ ಲಗ್ನಗಳ ಕಾಲವಾಗಿರುವುದರಿಂದ ಪ್ರತಿಯೊಂದು ಸ್ಥಳದ ಪ್ರಮುಖ ಮತಾಭಿಮಾನಿಗಳು ಇದನ್ನು ತಮ್ಮ ಸ್ವಂತ ಕಾರ್ಯವೆಂದು ತಿಳಿದು ಲಗ್ನದ ಮನೆಯ ಸಭೆಯಲ್ಲಿ ಈ ವಿಷಯವನ್ನು ಮರೆಯದೆ ಪ್ರಸ್ತಾಪಿಸಿ ಸಭಿಕರಿಗೆ ತಾಂಬೂಲವನ್ನು ಹಂಚುವುದಕ್ಕೆ ಮೊದಲೇ ಮತಸಂಭಾವನೆಯ ಕಾಣಿಕೆಯಾಗಿ ವಧೂವರರ ಕಡೆಯಿಂದ ಈ ವಿದ್ಯಾಭಿವೃದ್ಧಿ ಫಂಡಿಗೆ ಯಥೋಚಿತವಾಗಿ ದ್ರವ್ಯವನ್ನು ತೆಗೆಯಿಸಿ ಆ ಕೂಡಲೆ ಬೆಂಗಳೂರಲ್ಲಿರುವ ಫಂಡಿನ ಸೆಕ್ರೆಟರಿಯವರಲ್ಲಿಗೆ ಮಣಿಯಾರ್ಡರು ಮೂಲಕ ಕಳುಹುತ್ತ ಬಂದರೆ ಮತಕ್ಕೆ ಮಹೋಪಕಾರ ಮಾಡಿದಂತಾಗುವುದರಲ್ಲಿ ಸಂದೇಹವಿಲ್ಲವು. ಈ ರೀತಿಯಾಗಿ ಕಳುಹಲ್ಪಟ್ಟ ಹಣವು ಫಂಡಿನ ಸೆಕ್ರೆಟರಿಯವರಿಂದ ಸಕಾಲದಲ್ಲಿ ಪ್ರಕಟಿಸಲ್ಪಡುವುದು. ಎಲ್ಲ ಪಟ್ಟಣ ಗ್ರಾಮವಾಸಿಗಳಾದ ವೀರಶೈವ ಮತಾಭಿಮಾನಿಗಳು ಈ ಕಾರ್ಯವನ್ನು ಅಗತ್ಯವಾಗಿ ಗಮನಿಸಿ ತಪ್ಪದೆ ನೆರವೇರಿಸುವವರಾಗಲೆಂದು ಕೋರುತ್ತೇವೆ.

ಪಾಂಕೇರವರ ರಾಜೀನಾಮೆ.

ಫ್ರಾನ್ಸಿನ ಪ್ರಧಾನ ಮಂತ್ರಿ ಪಾಂಕೇರವರು ತಮ್ಮ ಉದ್ಯೋಗವನ್ನು ಬಿಟ್ಟುಬಿಡಲು ನಿಶ್ಚಯಿಸಿರುವುದಾಗಿ ಪ್ರಕಟವಾಗಿದೆ. ಆ ರಾಜ್ಯದಲ್ಲಿ ಈಚೆಗೆ ನಡೆದ ಪ್ರಜಾಪ್ರತಿನಿಧಿಗಳ ಚುನಾವಣೆಯಲ್ಲಿ ಪಾಂಕೇರವರ ಪ್ರತಿಕೂಲರು ಬಹು ಸಂಖ್ಯಾಕರಾಗಿ ವಿಜಯವನ್ನು ಹೊಂದಿರುವುದರಿಂದ ಮುಂದೆ ರಾಜ್ಯಾಡಳಿತದಲ್ಲಿ ತಮ್ಮಾಟವು ಸಾಗುವುದಿಲ್ಲವೆಂಬ ಶಂಕೆಯಿಂದ ತಮ್ಮ ಮಂತ್ರಿಪದವಿಗೆ ರಾಜೀನಾಮೆ ಕೊಡುವವರಾಗಿರುವರೆಂದು ತೋರುತ್ತದೆ. ಇವರ ನಿರಂಕುಶಾಧಿಕಾರವು ಬಹಳ ಅನರ್ಥಕ್ಕೆ ಕಾರಣವಾಯಿತು. ಜರ್ಮನಿ ರಾಜ್ಯಕ್ಕೆ ಸೇರಿದ ರೂರು ಪ್ರಾಂತವನ್ನು ಇವರು ಬ್ರಿಟಿಷ್ ಅಮೇರಿಕೆ ಮೊದಲಾದ ಪ್ರಭುತ್ವದವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಆಕ್ರಮಿಸಿಕೊಂಡುದರಿಂದ ಯೂರೋಪು ಖಂಡದಲ್ಲಿ ಸಂಕಷ್ಟಸ್ಥಿತಿಯುಂಟಾಯಿತು. ಜರ್ಮನಿಯವರಿಂದ ನಷ್ಟಪರಿಹಾರದ್ರವ್ಯವನ್ನು ಬರಮಾಡಿಕೊಳ್ಳಲು ಅವಕಾಶವಾಗಲಿಲ್ಲವಾಗಿ ಜರ್ಮನಿಯನ್ನು ನಾಶಪಡಿಸುವ ಪ್ರಯತ್ನದಲ್ಲಿ ಫ್ರಾನ್ಸಿನ ವಿಚ್ಛಿತ್ತಿಗೇ ದಾರಿಮಾಡಿಕೊಂಡರು; ಪ್ರಪಂಚಶಾಂತಿಗೆ ಮಹೋಪದ್ರವನ್ನುಂಟುಮಾಡಿದರು. ಇಷ್ಟಾದರೂ ಪಾಂಕೇರವರು ತಮ್ಮ ಹಟವನ್ನು ಬಿಡಲಿಲ್ಲವಾದುದರಿಂದ ಅವರ ಈ ಹಟವೇ ಇಂಗ್ಲೆಂಡಿಗೂ ಇಟಲಿಗೂ ಕಂಟಕವಾಗಿ ಪರಿಣಮಿಸಿತು; ಕಡೆಯಲ್ಲಿ ಬೆಲ್ಜಿಯಮ್ಮು ಕೂಡ ಫ್ರಾನ್ಸಿನಿಂದ ಪೃಥಕ್ಕಾಗಬೇಕಾಯಿತು. ಇಷ್ಟಾದರೂ ಪಾಂಕೇರವರ ಪಕ್ಷವು ಪ್ರಬಲವಾಗಿದ್ದುದರಿಂದಲೇ ಅವರು ಹಾಡಿದ್ದೆಲ್ಲಾ ರಾಗವಾಗಿದ್ದಿತು. ಆದರೆ ಈಗ ಅವರ ಪಕ್ಷವು ದುರ್ಬಲವಾಗಿ ಪ್ರತಿಪಕ್ಷವು ಪ್ರಬಲವಾದುದರಿಂದ ಅವರ ಪ್ರತಿಭೆಯು ಸಾಗುವುದಿಲ್ಲವೆಂಬುದನ್ನು ಅರಿತು ತಮ್ಮ ಮಂತ್ರಿಪದವಿಗೆ ರಾಜೀನಾಮೆಕೊಡಲು ನಿರ್ಧರಿಸಿರುವುದು ಸಹಜವೇ ಆಗಿದೆ. ಇವರು ಬಿಟ್ಟನಂತರ ಫ್ರಾನ್ಸಿನ ರಾಜ್ಯಾಡಳಿತಕ್ರಮವು ಕಾಲಸ್ಥಿತಿಗನುಗುಣವಾಗಿ ಬದಲಾಯಿಸಿ ಯೂರೋಪು ಖಂಡದಲ್ಲಿ ಶಾಂತಿಸ್ಥಾಪನವಾಗುವುದೋ ಏನೋ? ಮುಂದೆ ಫ್ರಾನ್ಸಿನ ಈ ಮುಖ್ಯಮಂತ್ರಿ ಪದವಿಗೆ ಎಂತಹವರು ಬರುತ್ತಾರೋ ಮತ್ತು ಅದರ ಪರಿಸ್ಥಿತಿಯು ಹೇಗೆ ಪರಿಣಮಿಸುವುದೋ ನೋಡಬೇಕಾಗಿದೆ.

ವೈಕಮ್ಮಿನ ಸತ್ಯಾಗ್ರಹಿಗಳಿಗೆ ಮಹಾತ್ಮರ ಉಪದೇಶ.

ವೈಕಮ್ಮಿನಲ್ಲಿ ದೇವಸ್ಥಾನಗಳ ಮುಂಗಡೆಯ ಮಾರ್ಗಗಳಲ್ಲಿ ಅಸ್ಪೃಶ್ಯರು ಸಂಚರಿಸಕೂಡದೆಂದಿರುವ ನಿರ್ಬಂಧ ನಿವಾರಣೆಗಾಗಿ ಅಂತ್ಯಜರಿಂದಲೂ, ಅವರಲ್ಲಿ ಸಾನುಭೂತಿಯುಳ್ಳವರಿಂದಲೂ ನಡಿಸಲ್ಪಡುತ್ತಿರುವ ಸತ್ಯಾಗ್ರಹ ವಿಚಾರದಲ್ಲಿ "ಕ್ರಿಮಿಕೀಟಗಳು ಯಾವ ನಿರ್ಬಂಧವಿಲ್ಲದೆಯೂ ಸಂಚರಿಸುವಂತಹ ಮಾರ್ಗಗಳಲ್ಲಿ ಮಾನವ ಸೋದರರಾದ ಅಂತ್ಯಜರು ಸಂಚರಿಸಕೂಡದೆಂಬ ನಿರ್ಬಂಧದಿಂದ ವಿಮುಕ್ತರಾಗಲು ಆ ವರ್ಗದವರು ಸತ್ಯಾಗ್ರಹವ್ರತಶೀಲರಾಗಿ ದೌರ್ಜನ್ಯರಹಿತವಾದ ಕಾರ್ಯಾಚರಣೆ ಮಾಡುವುದು ಧರ್ಮವೂ ಅತ್ಯವಶ್ಯಕವೂ ಆಗಿರುತ್ತದೆ. ಆದರೆ ಕ್ರೈಸ್ತರು, ಮಹಮ್ಮದೀಯರು ಮೊದಲಾದವರು ಈ ಸತ್ಯಾಗ್ರಹಾಚರಣೆಯಲ್ಲಿ ಭಾಗಿಗಳಾಗುವುದೂ, ವ್ರತಶೀಲರಿಗೆ ಧನ ದ್ರವ್ಯಗಳನ್ನು ಸಹಾಯಮಾಡುವುದೂ ಅಕಾಲೀಜನರಿಂದ ಅನ್ನೋದಕ ಸ್ವೀಕಾರಮಾಡುವುದೂ ಬಹಳ ಅನುಚಿತವು. ವ್ರತಶೀಲರಾದ ಅಸ್ಪೃಶ್ಯ ಸತ್ಯಾಗ್ರಹಿಗಳು ತಮ್ಮ ದೇಶದವರಿಂದಲ್ಲದೆ ಅನ್ಯ ದೇಶದವರಿಂದ ಸಹಾಯವನ್ನಪೇಕ್ಷಿಸತಕ್ಕುದಲ್ಲವು." ಎಂದು ಮೊದಲಾಗಿ ಉಪದೇಶಿಸಿರುವರು. ಹೊಟ್ಟೆನೋವನ್ನನುಭವಿಸುವವರು ಮದ್ದನ್ನು ತೆಗೆದುಕೊಳ್ಳಬೇಕಾಗಿರುವುದಲ್ಲದೆ ಆರೋಗ್ಯವಾಗಿರುವವರು ತೆಗೆದುಕೊಳ್ಳಬೇಕಾದ ಕಾರಣವಿಲ್ಲವಾದುದರಿಂದ ಅಸ್ಪೃಶ್ಯೇತರಜನರು ಮಹಾತ್ಮರ ಉಪದೇಶವನ್ನು ಲಾಲಿಸಿ ಅದರಂತೆ ಆಚರಿಸತಕ್ಕುದು ಯುಕ್ತವಾಗಿದೆ.

ರಾಜಕುಮಾರ ದೇಶರಾಜ ಅರಸಿನವರ ವಿವಾಹಮಹೋತ್ಸವ.

ಶ್ರೀಮನ್ ಮಹಾರಾಜರವರು ತಮ್ಮ ಸೋದರಳಿಯಂದರಾದ ರಾಜಕುಮಾರ ದೇಶರಾಜ ಅರಸಿನವರಿಗೆ ಸರದಾರ್ ಎಂ. ಗೋಪಾಲರಾಜ ಅರಸಿನವರ ಜ್ಯೇಷ್ಠ ಪುತ್ರಿ ಹ|| ಕುಂ|| ಶೋಭಿತೆಯರಾದ ಸೌ|| ಲಕ್ಷ್ಮಮ್ಮಣ್ಣಿಯವರನ್ನು ತಂದುಕೊಂಡು ಕಳೆದ ತಾ|| 19ರ ಮಧ್ಯಾಹ್ನ 3¼ ಗಂಟೆಯಿಂದ 3¾ ಗಂಟೆಯೊಳಗೆ ಸಲ್ಲುವ ಕನ್ಯಾಲಗ್ನದಲ್ಲಿ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದ ಅರಮನೆಯ ವಿವಾಹಮಂಟಪದಲ್ಲಿ ವಿಜೃಂಭಣೆಯಿಂದ ವಿವಾಹಮಹೋತ್ಸವವನ್ನು ಜರುಗಿಸಿದರು. ಬರೋಡಾ ಸಂಸ್ಥಾನದ ಪ್ರತಿನಿಧಿಗಳೂ, ಅನಂತಶಯನದ ಯುವರಾಣಿ ದಂಪತಿಗಳೂ, ಕೂಚ್‌ಬಿಹಾರ್ ಮಹಾರಾಣಿ ರೀಜಂಟರವರೂ ಬಾಲ ಮಹಾರಾಜರವರೂ, ರೆಸಿಡೆಂಟರು ಮೊದಲಾಗಿ ಐರೋಪ್ಯಾತಿಥಿಗಳೂ, ರಾಜಬಂಧುವರ್ಗದವರೂ ದಿವಾನರು, ಕೌನ್ಸಿಲರುಗಳು, ಚೀಫ್‌ಸೆಕ್ರೆಟರಿ, ರೆವಿನ್ಯೂಸೆಕ್ರೆಟರಿ ಶಾಖಾಧಿಕಾರಿಗಳು ಮೊದಲಾಗಿ ಸರ್ಕಾರಿಯಾಧಿಕಾರಿಗಳೂ, ಲಾಯರುಗಳು ವರ್ತಕರುಗಳು ಮೊದಲಾಗಿ ಪುರಪ್ರಮುಖರುಗಳೂ ಬಂದಿದ್ದರು. ರಾಜಕುಮಾರರು ಆನೆಮೇಲಿನ ಅಂಬಾರಿಯಮೇಲೆ ಕುಳಿತು ಸಕಲ ಬಿರುದಾವಳಿಗಳೊಡನೆ ಅರಮನೆಯ ಪಶ್ಚಿಮಬಾಗಿಲಿಂದ ಹೊರಟು ಲ್ಯಾನ್ಸ್‌ಡೌನ್ ಬಜಾರಿನ ಪೂರ್ವದಿಕ್ಕಿನ ಮಾರ್ಗವಾಗಿ ಶ್ರೀಮನ್ಮಹಾರಾಜರವರ ಪ್ರತಿಮೆಯ ಪಕ್ಕದಲ್ಲಿ ಕೋಟೆಯ ಉತ್ತರ ದಿಕ್ಕಿನ ಮಹಾದ್ವಾರದಿಂದ ಉತ್ಸವಗೊಂಡು ವಿವಾಹಮಂಟಪಕ್ಕೆ ದಯಮಾಡಿಸಿದ ಕೊಂಚ ಹೊತ್ತಿನಮೇಲೆ ಶ್ರೀಮನ್ ಮಹಾರಾಜರವರು ಜರತಾರಿರುಮಾಲು ಅಂಗರೇಕ ಮತ್ತು ಪಂಚೆಗಳನ್ನು ಧರಿಸಿಕೊಂಡು ಚಿತ್ತೈಸಿ ವಿವಾಹಮಂಟಪದ ಬಲಗಡೆ ಕೊಂಚದೂರದಲ್ಲಿ ರಜತಾಸನದ ಮೇಲೆ ಮಂಡಿಸಿದರು. ಸಭಿಕರು ಪ್ರತ್ಯುತ್ಥಾನರಾಗಿ ಮರ್ಯಾದಿಸಿ ಕುಳಿತುಕೊಂಡರು. ಸರದಾರ್ ಗೋಪಾಲರಾಜ ಅರಸಿನವರೂ ಗೌಸಣಿಗೆಯಲ್ಲಿದ್ದ ಅವರ ಧರ್ಮಪತ್ನಿಯವರೂ ಅರಮನೆಯ ಪುರೋಹಿತರ ವಿಧ್ಯುಕ್ತವಾದ ಕರ್ಮಾಚರಣೆಯಿಂದ ತಮ್ಮ ಕುಮಾರಿಯವರನ್ನು ಶ್ರೀಮನ್ ಮಹಾರಾಜರವರ ಅನುಮತಿಯನ್ನು ಪಡೆದು ಧಾರೆಯೆರೆದುಕೊಟ್ಟರು. ಭಕ್ಷಿ ಮ|| ಎಚ್. ಲಿಂಗರಾಜ ಅರಸಿನವರು ವರನ ಕಡೆಯವರಾಗಿದ್ದುಕೊಂಡು ಧಾರೆಯೆರಸಿಕೊಂಡರು. ಆಸ್ಥಾನ ಸಂಗೀತ ವಿದ್ವಾಂಸರುಗಳಿಂದ ವೀಣೆ ಜಲತರಂಗು, ಹಾರ್ಮೋನಿಯಂ ಪಿಟೀಲು ತಬಲ ಮೊದಲಾದ ವಾದ್ಯಗಳಿಂದ ಕೂಡಿದ ಕಾನ್ಸರ್ಟ್ ಎಂಬ ಸಗಾನವಾದ್ಯವು ಕರ ಚಿತ್ತಾಕರ್ಷಣಮಾಡುತ್ತಿದ್ದಿತು. ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನದವರು, ಮಹಾರಾಣಿಯವರು, ರಾಜಕುಮಾರಿಯರುಗಳು ಮೊದಲಾಗಿ ರಾಣೀವಾಸದವರೂ, ಅನಂತಶಯನದ ರಾಣಿಯವರೂ, ಕೂಚ್‌ಬಿಹಾರ್ ಮಹಾರಾಣಿಯವರೂ, ಐರೋಪ್ಯಾತಿಥಿಗಳೂ ವಿವಾಹಮಂಟಪದ ಮೇಲ್ಭಾಗದಲ್ಲಿ ಕುಳಿತು ವಿವಾಹಕಾರ್ಯಕ್ರಮವನ್ನು ನೋಡಿ ಮತ್ತು ದಿವ್ಯವಾದ ವಾದ್ಯಗಳ ವಾದನವನ್ನು ಕೇಳಿ ಮಂದಹಸನ್ಮುಖಗಳಿಂದ ಸಂತೋಷವನ್ನು ವ್ಯಕ್ತಗೊಳಿಸುತ್ತಿದ್ದರು. ಅರಸುಕುಲದ ಯಜಮಾನರಾದ ಮ|| ಎಂ. ಎನ್. ಳರಾಜ ಅರಸಿನವರಿಗೂ ವಂಶಾವಳಿ ಕರ್ಣೀಕರಿಗೂ ಲ್ಡೋಡಿಯ ಕಿಲ್ಲತ್ತುಗಳು ಕೊಡಲ್ಪಟ್ಟ ಮೇಲೆ, ಶ್ರೀಮನ್ ಮಹಾರಾಜರವರು ಮತ್ತು ಮಾತೃಶ್ರೀಯವರಿಂದ ನೂತನ ದಂಪತಿಗಳಿಗೆ ಆಶೀರ್ವದಿಸಲ್ಪಟ್ಟ ಅಮೋಘವಾದ ಖಿಲ್ಲತ್ತುಗಳು ದಿಸಲ್ಪಟ್ಟ ತರುವಾಯ ಬರೋಡಾ, ಕೂಚ್‌ಬಿಹಾರ್ ಅನಂತಶಯನ ರಾಜರುಗಳ ಕಡೆಯ ಖಿಲ್ಲತ್ತುಗಳು ಅವರವರ ಪ್ರತಿನಿಧಿಗಳ ಮೂಲಕವೂ, ಸರದಾರರುಗಳಾದ ಕೈ|| ಕಾಂತರಾಜ ಅರಸಿನವರ ಕುಮಾರರು, ಲಕ್ಷ್ಮೀಕಾಂತರಾಜ ಅರಸಿನವರು, || ಗಳಾದ ದಳವಾಯಿ ನಂಜರಾಜ ಅರಸಿನವರು, ದರ್ಬಾರ್ ಭಕ್ಷಿ ಲಿಂಗರಾಜ ಅರಸಿನವರು ಮೊದಲಾಗಿ ರಾಜಬಂಧುಗಳಿಂದಲೂ ವಸ್ತ್ರಾಭರಣಾದಿ ಉಡುಗೆರೆಗಳು ಓದಿಸಲ್ಪಟ್ಟುವು. ತರುವಾಯ ದಿವಾನರಾದಿಯಾಗಿ ಸಭಿಕರಿಗೆ ಕ್ರಮವರಿತು ಪುಷ್ಪಾಹಾರ ತಾಂಬೂಲಗಳೂ ಸುವರ್ಣದ ಕಾಸುಗಳ ದಕ್ಷಿಣೆಯೂ ಕೊಡಲ್ಪಟ್ಟಮೇಲೆ ರಾಜಕುಮಾರ ದಂಪತಿಗಳೂ ಶ್ರೀಮನ್ಮಹಾರಾಜರವರೂ ಸಭೆಯಿಂದ ತೆರಳಿದ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ತಾ|| 19ರ ದಿವಸ ರಾಜಧಾನಿಯ ಸಮಸ್ತಜಾತಿಯ ಬಡಬಗ್ಗರಿಗೆ ವೃಷ್ಟಾನ್ನಭೋಜನಮಾಡಿಸಲ್ಪಟ್ಟು ವಸ್ತ್ರದಾನ ಮಾಡಲ್ಪಟ್ಟಿತು. ಬ್ರಾಹ್ಮಣ ಸ್ತ್ರೀಪುರುಷರುಗಳಿಗೆ ಕೋಟೆಯ ದೇವಸ್ಥಾನಗಳಲ್ಲಿ ದಕ್ಷಿಣೆಯು ಕೊಡಲ್ಪಟ್ಟಿತು. ಆ ದಿವಸರಾತ್ರಿ ಅರಮನೆಯ ಕೋಟೆ ಬಾಗಲುಗಳು, ಟವರ್ ಹಾಲು, ಗಡಿಯಾರ ಇವುಗಳ ಮೇಲೆ ದೀಪೋತ್ಸವ ನಡೆಯಿಸಲ್ಪಟ್ಟಿತು. ಮಂಗಳವಾರ ಸಾಯಂಕಾಲ ಚಾಮುಂಡಿ ಜಂಬೂನಾವಿಹಾರಸ್ಥಳಕ್ಕೆ ಆಂಗ್ಲ ಹಿಂದೂ ಅತಿಥಿಗಳು ಆಹ್ವಾನಿಸಲ್ಪಟ್ಟಿದ್ದು ಅಲ್ಪಾಹಾರದಿಂದಲೂ ವಾದ್ಯಶ್ರವಣದಿಂದಲೂ ಸತ್ಕರಿಸಲ್ಪಟ್ಟರು. ಬಂದಿದ್ದ ಅತಿಥಿಗಳೆಲ್ಲರೂ ಸ್ವಸ್ಥಳಗಳಿಗೆ ತೆರಳಿದರು. ಈ ತಾ|| 28ನೆಯ ಬುಧವಾರ ರಾತ್ರಿ ನೂತನ ದಂಪತಿಗಳು ಆನೆಯಮೇಲಣ ಅಂಬಾರಿಯಲ್ಲಿ ಕುಳಿತು ಚತುರಂಗಸೈನ್ಯದಿಂದಲೂ ವಾದ್ಯವೈಭವದಿಂದಲೂ ವಿದ್ಯುದ್ದೀಪಾವಳಿಗಳಿಂದಲೂ, ಬಂಧುವರ್ಗದಿಂದಲೂ, ರಾಜಧಾನಿಯ ಮುಖ್ಯವೀಧಿಗಳಲ್ಲಿ ಉತ್ಸವಗೊಂಡು ವರನ ಗೃಹಪ್ರವೇಶ ಮಾಡುವುದಾಗಿ ತಿಳಿಯಬರುತ್ತದೆ.

ಸ್ವದೇಶದ ವೃತ್ತಾಂತಗಳು.

ತುಮಕೂರು ತಾಲ್ಲೂಕು ಅಮಲ್ದಾರರಾದ ಮ|| ಬಿ. ಲಿಂಗಯ್ಯನವರಿಗೆ 3 ತಿಂಗಳು ಮತ್ತು 25 ದಿನಗಳ ಪ್ರಿವಿಲೇಜ್ ರಜವೂ, ಅನಂತರ 2 ತಿಂಗಳು ಮತ್ತು 5 ದಿನಗಳವರೆಗೆ ಪೂರ್ತಿ ಸಂಬಳದ ಮೇಲೆ ಫರ್ಲೋರಜವೂ, ತರುವಾಯ 1½ ವರ್ಷಗಳವರೆಗೆ ಅರ್ಧಸಂಬಳದ ಮೇಲೆ ಫರ್ಲೋರಜವೂ ಕೊಡಲ್ಪಟ್ಟಿರುತ್ತದೆ.

ಕೋಲಾರ ಡಿ|| ಮುಳಬಾಗಲು ತಾಲ್ಲೂಕಿನಲ್ಲಿ ನಡೆದಿರುವ ರೀಸೆಟ್ಲ್‌ಮೆಂಟು ಸರ್ಕಾರದವರಿಂದ ಅನುಮೋದಿತವಾಗಿ ಇನ್ನು 30 ವರ್ಷಗಳ ಕಾಲದವರೆಗೆ ಬದಲಾಯಿಸಲ್ಪಡುವದಿಲ್ಲವೆಂಬ ಭರವಸೆಯಿಂದ ಈ ಜುಲೈ ತಾ|| 1 ರಿಂದ ಆಚರಣೆಗೆ ತರಲ್ಪಡುವುದು. ಈ ಹೊಸ ಸೆಟ್ಲ್‌ಮೆಂಟಿನ ಪ್ರಕಾರ ವಿಧಾಯಕವಾಗಿರುವ ಹೆಚ್ಚುದರದ ಕಂದಾಯದಿಂದ ಸರ್ಕಾರಕ್ಕೆ 5418 ರೂಪಾಯಿಗಳು ಹೆಚ್ಚಾಗಿ ಉತ್ಪನ್ನವಾಗುವುದು.

ರಾಜಧಾನಿಯಲ್ಲಿ ಆಚೆ ಬುಧವಾರ ಮತ್ತು ಗುರುವಾರ ರಾತ್ರಿ ತಕ್ಕಮಟ್ಟಿಗೆ ಮಳೆಯಾಯಿತು. ಅಲ್ಲಿಂದ ಪ್ರತಿದಿನ ರಾತ್ರಿ ಜಿನುಗುಮಳೆಯಾಗುತ್ತಿದೆ ವಿನಾ ದೊಡ್ಡಮಳೆ ಬರಲಿಲ್ಲವು. ಇದರಿಂದ ದಗೆಯು ಸ್ವಲ್ಪಮಟ್ಟಿಗೆ ಕಡಿಮೆಯಾಗಿರುತ್ತದೆ, ಮತ್ತು ವಾಂತಿಭೇದಿ ರೋಗವು ಶಮನವಾದಂತೆ ತೋರುತ್ತದೆ. ಗುಂಡ್ಲುಪೇಟೆ ಚಾಮರಾಜನಗರ ತಾಲ್ಲೂಕುಗಳಲ್ಲಿ ಮಳೆಯು ವಿಶೇಷವಾಗಿ ಬಂದು ಕೆರೆಕುಂಟೆಗಳೆಲ್ಲವೂ ತುಂಬಿರುವುದಾಗಿಯೂ ಸಂಸ್ಥಾನದ ಇತರ ಕಡೆಗಳಲ್ಲೂ ಈಚೀಚೆಗೆ ಮಳೆಯಾಗಿ ನೀರಿನ ಕೊರತೆಯು ಕಡಿಮೆಯಾಗಿರುವುದಾಗಿಯೂ ಕೇಳುತ್ತೇವೆ. ಆಚೆವಾರದಲ್ಲಿ ಶ್ರೀರಂಗಪಟ್ಟಣ ತಾ|| ಅರಕೆರೆಯಲ್ಲಿ ಸಿಡಿಲುತಗಲಿ ಒಬ್ಬೊಬ್ಬ ಮನುಷ್ಯರು ಸತ್ತರೆಂದೂ 4-5 ಜನರು ಗಾಯವಡೆದಿರುವರೆಂದೂ ವರ್ತಮಾನವಿದೆ.

ರಾಜಧಾನಿಯಲ್ಲಿ ಪ್ರಸಿದ್ಧ ನೀಲಗಿರಿ ಮನೆತನದವರಾದ ಶ್ರೀಮಂತ ಮದ್ದಣ್ಣ ಉರಫ್ ಮೊಗಣ್ಣನವರು ಕೆಲ ಕಾಲದಿಂದಲೂ ಮೂತ್ರವ್ಯಾಧಿಗ್ರಸ್ತರಾಗಿದ್ದು ಎಷ್ಟೋ ಔಷಧೋಪಚಾರವನ್ನು ಹೊಂದಿದಾಗ್ಗೂ ಗುಣವನ್ನು ಹೊಂದದೆ ಮೊನ್ನೆಯದಿವಸ ಸ್ವರ್ಗಸ್ಥರಾದರೆಂದು ತಿಳುಹಲು ಬಹಳವಾಗಿ ವಿಷಾದಿಸುತ್ತೇವೆ. ಇವರು ಬಹಳ ನಿಗರ್ವಿಗಳೂ, ಉದಾರಿಗಳೂ, ಸ್ನೇಹಪರರೂ ಸಾಧುಸ್ವಭಾವದವರೂ ಆಗಿದ್ದರು. ಇವರಿಗೆ ಮರಣಕಾಲದಲ್ಲಿ ಪ್ರಾಯಶಃ ೬೦ ವರ್ಷ ವಯಸ್ಸಾಗಿದ್ದಿತು. ಇವರಿಗೆ ಒಬ್ಬ ಪುತ್ರನೂ, ನಾಲ್ವರು ಪುತ್ರಿಯರೂ ಇರುವರು. ಇವರ ಮರಣದಿಂದ ಕುಂಚಿಟಿಗರ ಸಮಾಜಕ್ಕೇ ದೊಡ್ಡ ನಷ್ಟವಾಯಿತೆಂದು ಹೇಳಬಹುದು. ಇವರ ಆತ್ಮಕ್ಕೆ ಶಾಂತಿಯೂ ವಿಯೋಗದುಃಖಭಾಜನರಾದ ಮಕ್ಕಳುಗಳಿಗೆ ದುಃಖಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ರಿಟೈರ್ಡ್ ಸಬ್‌ಜಡ್ಜಿಯರೂ, ಮೈಸೂರು ನ್ಯಾಯವಿಧಾಯಕಸಭಾ ಮೆಂಬರೂ ಒಕ್ಕಲಿಗರಸಂಘದ ಅಧ್ಯಕ್ಷರೂ ಆದ ರಾವ್‌ಸಾಹೇಬ್ ಚೆನ್ನಯ್ಯನವರ ಪುತ್ರಿ ಸೌಭಾಗ್ಯವತಿ ಸಿ. ಲಕ್ಷ್ಮಮ್ಮನವರು ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ರಸಾಯನಶಾಸ್ತ್ರವ (ಕೆಮಿಸ್ಟ್ರಿಯ)ನ್ನು ಐಚ್ಛಿಕಭಾಗವನ್ನಾಗಿ ತೆಗೆದುಕೊಂಡು ವ್ಯಾಸಂಗಮಾಡಿ ಮದ್ರಾಸು ವಿಶ್ವವಿದ್ಯಾಲಯದ ಬಿ.ಎ., ಪರೀಕ್ಷೆಯಲ್ಲಿ ಉತ್ತೀರ್ಣರಾದರೆಂದು ತಿಳುಹಲು ಬಹಳವಾಗಿ ಸಂತೋಷಿಸುತ್ತೇವೆ. ಬಿ.ಎ. ಪ್ರಶಸ್ತಿಯನ್ನು ಪಡೆದಿರುವ ನಮ್ಮ ಮೈಸೂರಿನ ಸ್ತ್ರೀಯರಾರೂ ಈ ರಸಾಯನ ಶಾಸ್ತ್ರಭಾಗವನ್ನು ತೆಗೆದುಕೊಂಡಿರಲಿಲ್ಲವು. ಸೌ|| ಲಕ್ಷ್ಮಮ್ಮನವರು ಆ ಶಾಸ್ತ್ರಭಾಗವನ್ನು ತೆಗೆದುಕೊಂಡು ಉತ್ತಮತರವಾಗಿ ಉತ್ತೀರ್ಣರಾಗಿರುವುದರಿಂದ ನಾವು ಅವರನ್ನು ಅಭಿನಂದಿಸಿ, ಈ ಶಾಸ್ತ್ರವು ವೈದ್ಯವಿದ್ಯಾಭ್ಯಾಸಕ್ಕೆ ವಿಶೇಷ ಸಹಾಯವಾಗಿರುವುದರಿಂದಲೂ, ಇನ್ನೂ ಚಿಕ್ಕವಯಸ್ಸಿನವರಾಗಿ ಅವಿವಾಹಿತರಾಗಿರುವುದರಿಂದಲೂ ಸೀಮೆಗೆ ಹೋಗಿ ವೈದ್ಯವಿದ್ಯೆಯನ್ನು ಅಭ್ಯಾಸಮಾಡಿ ಉಚ್ಚಪ್ರಶಸ್ತಿಯನ್ನು ಪಡೆದು ತಮ್ಮ ಮನೆತನಕ್ಕೂ ಕುಲಕ್ಕೂ ದೇಶಕ್ಕೂ ಕೀರ್ತಿಯನ್ನುಂಟುಮಾಡುವವರಾಗಲೆಂದು ಕೋರುತ್ತೇವೆ. ರಾ|| ಸಾ|| ಚೆನ್ನಯ್ಯನವರ ಜ್ಯೇಷ್ಠಪುತ್ರರಾದ ಮ|| ಜವರಯ್ಯನವರು ವನಶಾಖಾಧಿಕಾರಿಗಳಾದ ಮಿ|| ಕ್ರಂಬೀಗಲ್‌ರವರ ಅಸಿಸ್ಟೆಂಟಾಗಿರುವರಲ್ಲದೆ ಸೀಮೆಗೆಹೋಗಿ ಈ ವನಶಾಸ್ತ್ರವನ್ನು ಚೆನ್ನಾಗಿ ಪರಿಚಯಮಾಡಿಕೊಂಡು ಬಂದಿರುವರು. ತೃತೀಯಪುತ್ರರಾದ ಮ|| ಎಚ್. ಸಿ. ದಾಸಪ್ಪ, ಬಿ.ಎ., ಎಲ್‌ಎಲ್.ಬಿ., ಯವರು ರಾಜಧಾನಿಯಲ್ಲಿ ವಕೀಲರಾಗಿರುವರು. ಮತ್ತು ಪುತ್ರಿಯರಾದ ಲಕ್ಷ್ಮಮ್ಮನವರು ಈಗತಾನೆ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಹೀಗೆ ಪುತ್ರಪುತ್ರೀರತ್ನತ್ರಯಗಳನ್ನುಳ್ಳ ರಾವ್‌ಸಾಹೇಬರ ಜನ್ಮವೇ ಧನ್ಯವು.

ಭರತಖಂಡದ ವೃತ್ತಾಂತಗಳು.

ಒಬ್ಬ ಬೋರಾ ದೊಡ್ಡಮನುಷ್ಯನು ಮಹಾತ್ಮಾ ಗಾಂಧಿಯವರ ಮೂಲಕ ಮೋಪ್ಲಾ ಕಷ್ಟನಿವಾರಣಾಧನರಾಶಿಗೆ 500 ರೂ. ಗಳನ್ನು ಕಳುಹಿಸಿಕೊಟ್ಟಿರುತ್ತಾನೆ.

ಎಸ್. ವಿ. ರಾಜಗೋಪಾಲಾಚಾರ್ಯರು ಕುಂಭಕೋಣ ಮತ್ತು ಪಾಪನಾಶಿನಿ ತಾಲ್ಲೂಕುಗಳಲ್ಲಿ ಸಂಚರಿಸುತ್ತ ತಂಜಾವೂರಿನಲ್ಲಿ ಹೆಚ್ಚು ಕಂದಾಯವು ಕೊಡಲ್ಪಡದಿರುವುದರ ವಿಚಾರವಾಗಿ ನಡಿಯುತ್ತಿರುವ ಚಳವಳಿಯನ್ನು ಕುರಿತು ಜನರಿಗೆ ಬೋಧಿಸುತ್ತಿರುವರು.

100 ಜನ ವೈದಿಕರು ಇಂಗ್ಲೆಂಡನ್ನು ನೋಡಿಕೊಂಡು ಬರಲು ಹೊರಡುವುದಾದರೆ ಅಂಥವರ ಸಲುವಾಗಿಯೇ ಒಂದು ಪ್ರತ್ಯೇಕ ಹಡಗಳನ್ನು ಮುಂದಿನ ಜುಲೈ 15 ರೊಳಗಾಗಿ ಬೊಂಬಾಯಿನಿಂದ ಹೊರಡಿಸುವುದಾಗಿ ಏರ್ಪಾಡುಮಾಡಿರುತ್ತಾರೆ.

ದೇಶಭಕ್ತ ಸಿ. ಆರ್. ದಾಸ್‌ರವರು ತಮ್ಮ ಶತ್ರುಪಕ್ಷದವರ ಆಕ್ಷೇಪದ ಮೇಲೆ ಬಂಗಾಳಾ ನ್ಯಾಯವಿಧಾಯಕ ಸಭಾ ಸಭಿಕಸ್ಥಾನವನ್ನು ಕಳೆದುಕೊಂಡು ಪುನರಾವೃತ್ತಿಯ ಚುನಾವಣೆಗೆ ಅಭ್ಯರ್ಥಿಗಳಾಗಿ ನಿಂತಿದ್ದು ಬಹು ಮತಗಳನ್ನು ಪಡೆದು ಚುನಾವಣೆಗೊಂಡರು.

ಮಧುರೆಯಲ್ಲಿ ಕಳೆದ ತಾ|| 19ರ ಸಾಯಂಕಾಲ ಪ್ರಚಂಡಮಾರುತನೆದ್ದು ಅನೇಕ ಮರಗಳನ್ನೂ ತಂತಿಯ ಕಂಬಗಳನ್ನೂ ಬುಡಮೇಲಾಗಿ ಉರುಳಿಸಿಬಿಟ್ಟಿತು. ಅಲ್ಲದೆ ಕೆಲ ಬಡವರ ಮನೆಗಳು ಬಿದ್ದುಹೋದವು ಮತ್ತು ಮನೆಗಳ ಹಾಗೂ ಮದುವೆ ಚಪ್ಪರಗಳ ಮೇಲುಹೊದ್ದಿಕೆಗಳು ಹಾರಿಸಲ್ಪಟ್ಟುವು. ಇಷ್ಟಾದರೂ ಪ್ರಾಣಾಪಾಯವೇನೂ ಆಗಲಿಲ್ಲವು.

ಮನ್ನಾರುಗುಡಿಯಲ್ಲಿ ಜನರು ಸರ್ಕಾರಕ್ಕೆ ಕಂದಾಯವನ್ನು ಸಲ್ಲಿಸದಂತೆ ಬೋಧಿಸುತ್ತಿರುವ ಡಾ|| ಮುದ್ದುಕೃಷ್ಣ ಅಯ್ಯರ್‌ರವರು ಕಂದಾಯವನ್ನು ವಸೂಲ್ಮಾಡುತ್ತಿದ್ದ ಸರ್ಕಾರಿ ಮನುಷ್ಯನಿಗೆ ಆತಂಕಪಡಿಸಿದರೆಂದೂ ಅವನು ಕಂದಾಯದ ಬಾಕಿಗಾಗಿ ಹಿಡಿದುಕೊಂಡಿದ್ದ ಬೈಸಿಕಲ್ಲನ್ನು ಬಲವಂತದಿಂದ ಕಿತ್ತುಕೊಂಡರೆಂದೂ ದೋಷಾರೋಪಿಸಲ್ಪಟ್ಟು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಯಾಗಿ 100 ರೂ. ಅರ್ಥದಂಡ ವಿಧಿಸಲ್ಪಟ್ಟರು.

ಭೂಪಾಲ ಸಂಸ್ಥಾನವು ಮಹಮ್ಮದೀಯರಾದ ಬೇಗಂ ರಾಣಿಯವರ ಆಳ್ವಿಕೆಯಲ್ಲಿದೆ. ಆ ದೇಶದಲ್ಲಿ ಹಿಂದುಗಳಾಗಿದ್ದು ಮಹಮ್ಮದೀಯ ಮತಕ್ಕೆ ಸೇರಿಹೋದವರು ಪುನಃ ಹಿಂದೂ ಮತವನ್ನು ಅವಲಂಬಿಸುವುದಾದರೆ ಅಂಥವರು ಶಿಕ್ಷಾರ್ಹರಾಗುವರೆಂದು ಅಲ್ಲಿಯ ಸರ್ಕಾರದ ಅಪ್ಪಣೆಯಾಗಿರುವುದು. ಈ ಹುಕುಂ ಕೇವಲ ಅನ್ಯಾಯವಾದದ್ದೆಂದು ಅಲ್ಲಿನ ಹಿಂದೂ ಸಭೆಯವರು ಸ್ವಾಮಿ ಸಂಪೂರ್ಣಾನಂದರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ತೀರ್ಮಾನಮಾಡಿರುತ್ತಾರೆ.

ಗೈಬಂದ ಸಮೀಪಗ್ರಾಮವಾದ ಬಾಲೂ ಎಂಬಲ್ಲಿ ಸರ್ವತೀವೈಷ್ಣವಿ ಎಂಬ ಹುಡುಗಿಯನ್ನು ನೆಂಟರಮನೆಗೆ ಕರೆದುಕೊಂಡು ಹೋಗುತ್ತೇನೆಂದು ಅವಳ ಸಮೀಪ ಬಂಧು ಒಬ್ಬನು ಆಶೆಹುಟ್ಟಿಸಿ ರಾತ್ರಿ ವೇಳೆಯಲ್ಲಿ ಮನೆಯಿಂದ ಹೊರಡಿಸಿಕೊಂಡುಬಂದು ಇಬ್ಬರು ಮಹಮ್ಮದೀಯರ ಸಹಾಯದಿಂದ ಆಕೆಯನ್ನು ಊರಹೊರಗಿನ ಹೊಲಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಆಕೆಯನ್ನು ಹಿಂಸಿಸಿ ಒಬ್ಬ ವ್ಯಭಿಚಾರಿಣಿಗೆ 30 ರೂ. ಕ್ರಯಕ್ಕೆ ಮಾರಿಬಿಟ್ಟರು. ಆ ಹುಡುಗಿಯು ಈಗ ಶಿಶುಸಹಾಯ ಸಂಘದವರ ಪೋಷಣೆಯಲ್ಲಿರುವಳು ಮತ್ತು ಅಪರಾಧಿಗಳು ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ವಿದೇಶದ ವೃತ್ತಾಂತಗಳು.

ಲಂಡನ್ನಿನ ಖಜಾನೆಯ ವ್ಯವಹಾರದಲ್ಲಿರುವ ನೋಟುಗಳಿಗಿಂತಲೂ ಬರ್ಲಿನ್ನಿನ ನೋಟುಗಳು ಬಹಳ ಕಶ್ಮಲವಾಗಿರುವುವೆಂತಲೂ ಈ ಕಶ್ಮಲವಾದ ನೋಟುಗಳಲ್ಲಿ 1,50,000 ವಿಷಮಶೀತಜ್ವರೋತ್ಪಾದಕಗಳಾದ ಕ್ರಿಮಿಗಳು ಸೇರಿಕೊಂಡಿರುವುವೆಂತಲೂ ಕ್ರಿಮಿಪರಿಶೋಧಕರಿಂದ ಕಂಡುಹಿಡಿಯಲ್ಪಟ್ಟಿರುತ್ತದೆ.

ಲಂಡನ್ ನಗರದಲ್ಲಿರುವ ಡಾಕ್ಟರ್ ಕ್ರಿಸ್ಟೊಫರ್‌ಸನ್ ಎಂಬ ವೈದ್ಯರು ಮನುಷ್ಯನ ರಕ್ತವನ್ನು ಪರೀಕ್ಷಿಸಿ, ಅದರ ಶಕ್ತಿಯನ್ನು ಕುಂದಿಸುವ ಕ್ರಿಮಿವರ್ಗಗಳು ರಕ್ತದಲ್ಲಿ ಸೇರದಂತೆ ನೋಡಿಕೊಂಡರೆ ಮನುಷ್ಯನಆಯಸ್ಸು ಸಾಮಾನ್ಯವಾಗಿ 300-400 ವರ್ಷಗಳಾಗಬಹುದೆಂದು, ಕೆಲವು ಸಂದರ್ಭಗಳಲ್ಲಿ 1000 ವರ್ಷದ ವರೆಗೂ ಜೀವಿಸಬಹುದೆಂದೂ ತಿಳಿಸಿರುತ್ತಾರೆ.

ಗ್ರನಡದಲ್ಲಿ ಮೂನಾಚಿಲ್ ಎಂಬ ಊರಿಗೆ ಸಮೀಪವಾಗಿರುವ ಒಂದು ಬೆಟ್ಟವು ಅಲ್ಲಿ ಆದ ಅಪಾರವಾದ ಮಳೆಯಿಂದ ಎತ್ತರದಿಂದ ತಗ್ಗಾದ ಕಣಿವೇ ಪ್ರಾಂತಕ್ಕೆ ಮೆಲ್ಲಗೆ ಜರುಗುತ್ತಿದೆ. ದಾರಿಯಲ್ಲಿರುವ ಊರಿನವರು ಊರನ್ನು ಬಿಟ್ಟು ಹೋಗುತ್ತಿರುವರು. ಅಲ್ಲಲ್ಲಿ ಭೂಮಿಯು ಬಿರುಕುಬಿಟ್ಟು ಪ್ರವಾಹಗಳು ಹೊರಡುತ್ತಿರುವವು. ಬೆಟ್ಟವು ಇನ್ನು ಮುಂದಕ್ಕೆ ಜರುಗಿ ಕಣಿವೆಯಲ್ಲಿ ಕುಳಿತುಬಿಟ್ಟರೆ ಅಲ್ಲಿ ಹರಿಯುವ ನದಿಗೆ ಪ್ರತಿಬಂಧಕವಾಗಿ ಒಂದು ದೊಡ್ಡ ಸರೋವರ ಹುಟ್ಟುವುದೆಂದೂ, ಮೂನಾಚಿಲ್ ಊರೂ, ಅದರ ನಾಲ್ಕಾರು ಕೈಗಾರಿಕೆ ಕಾರ್ಖಾನೆಗಳೂ ಮುಳುಗಿಹೋಗುವವೆಂದೂ ಊಹಿಸಲ್ಪಟ್ಟಿದೆ.

ಪೆಸಿಫಿಕ್ ಸಾಗರದಲ್ಲಿರುವ ಬೋರ್ನಿಯೋ ಎಂಬ ದ್ವೀಪದಲ್ಲಿ ದಟ್ಟವಾದ ಕಾಡಿನಿಂದ ಕೂಡಿದ ವಿಶಾಲವಾದ ಪ್ರಾಂತಗಳು ಇನ್ನೂ ಇರುವವು. ಅಲ್ಲಿ ಅನೇಕರಿಗೆ ಮೊಂಡಾದ ಬಾಲವಿರುವುದೆಂದು ದೇಶಶೋಧನೆಗಾಗಿ ಅಲ್ಲಿಗೆ ಹೋಗಿದ್ದವರೊಬ್ಬರು ತಿಳಿಸುತ್ತಾರೆ. ಬಾಲವು ನಾಲ್ಕು ಅಂಗುಲಗಳಷ್ಟು ಉದ್ದವಾಗಿರುವುದಾಗಿಯೂ, ಅವರು ಕುಳಿತುಕೊಳ್ಳುವಾಗ್ಯೆ ರಂಧ್ರವಿರುವ ಮಣೆಯನ್ನು ಹಾಕಿಕೊಳ್ಳುವರೆಂದೂ ಗೊತ್ತಾಗುತ್ತದೆ. ಈ ದ್ವೀಪವಾಸಿಗಳು ಕೆಲವು ಶತಮಾನಗಳ ಹಿಂದೆ ನೆರೆ ದ್ವೀಪವಾದ ನ್ಯೂಗಿನಿಯೆಂಬಲ್ಲಿ ಹೆಣ್ಣುಕೊಟ್ಟು ತರುವ ಬಳಕೆ ಇತ್ತೆಂದೂ, ಇವರ ಬೀಗರಲ್ಲಿ ದೀರ್ಘವಾದ ಬಾಲಗಳಿರುತ್ತವೆಂದೂ, ಅವರ ಮೈಮೇಲೆ ರೇಷ್ಮೆಯಂತೆ ಮೃದುವಾದ ಕೂದಲು ಇರುವುದಾಗಿಯೂ ತಿಳಿಸುತ್ತಾರೆ.

ಮನುಷ್ಯನ ತಲೆಬುರುಡೆಯು ದಪ್ಪವಾಗಿದ್ದಷ್ಟು ಮೇಧಾಶಕ್ತಿಯು ಹೆಚ್ಚೆಂದು ಸಾಮಾನ್ಯವಾಗಿ ಭಾವಿಸಲ್ಪಟ್ಟಿರುತ್ತದೆ. ಆದರೆ ಈಗ ಕೆಲ ಪಾಶ್ಚಾತ್ಯಶಾಸ್ತ್ರಜ್ಞರು ಚೆನ್ನಾಗಿ ಪರಿಶೋಧಿಸಿ ಒರೇ ತಲೆಬುರುಡೆಯು ದಪ್ಪನಾಗಿದ್ದ ಮಾತ್ರಕ್ಕೆ ಮೇಧಾವಿಯೆಂದು ಹೇಳಲಿಕ್ಕಾಗುವುದಿಲ್ಲ; ತಲೆಬುರುಡೆಯ ಒಳಗಡೆ ಕೆಲಭಾಗಗಳು ವಿಶಾಲವಾಗಿಯೂ ದೃಢವಾಗಿಯೂ ಬೆಳೆದಿದ್ದಲ್ಲಿ ಮೇಧಾಶಕ್ತಿಯು ಹೆಚ್ಚಾಗಿರುವುದೆಂದೂ ಲಾರ್ಡ್ ಬೈರನ್ ಮೊದಲಾದ ಪ್ರಖ್ಯಾತ ಪುರುಷರ ತಲೆಯು ಚಿಕ್ಕದಾಗಿದ್ದರೂ ಅವರ ಮೇಧಾಶಕ್ತಿಯು ಅದ್ಭುತವಾಗಿದ್ದಿತೆಂದೂ, ಇನ್ನೊಬ್ಬಮನುಷ್ಯನ ತಲೆಯು 70 ಪೌಂಡು ತೂಕವುಳ್ಳದಾಗಿದ್ದರೂ ಅವನು ಒಂದೆರಡು ಕೊಲೆಗಳನ್ನು ಮಾಡಿ ಮರಣದಂಡನೆಗೆ ಗುರಿಯಾದನು ಎಂದೂ ಹೇಳಿರುವರು.

ಸ್ತ್ರೀಪುರುಷರು ಪರಸ್ಪರ ಪ್ರೇಮಾತಿಶಯದಿಂದ ಚುಂಬನ ಮಾಡುವುದೂ, ತಂದೆತಾಯಿಗಳು ತಮ್ಮ ಮಕ್ಕಳಿಗೆ ಮುದ್ದಿಗಾಗಿ ಮುತ್ತಿಕ್ಕುವುದೂ ಸ್ವಾಭಾವಿಕವಾಗಿರುತ್ತದಷ್ಟೆ. ಈಚೆಗೆ ಡಾಕ್ಟರುಗಳು ಈ ಚುಂಬನದಿಂದುಂಟಾಗುವ ಗುಣಾವಗುಣವನ್ನು ಪರೀಕ್ಷಿಸಿ ಮಧ್ಯಾಹ್ನದ ಮತ್ತು ಸಂಜೆಯ ವೇಳೆಗಳಲ್ಲಿ ಚುಂಬನಮಾಡುವುದು ಸೌಖ್ಯಕರವೆಂದೂ, ರಾತ್ರಿವೇಳೆ ನಿದ್ರಿಸುವಾಗ್ಗೆ ಕ್ರಿಮಿಗಳು ಬಾಯಿಯಲ್ಲಿ ಸೇರುತ್ತವಾದುದರಿಂದ ಬೆಳಗಿನ ವೇಳೆಯಲ್ಲಿ ಚುಂಬನಮಾಡುವುದು ಅಪಾಯಕರವೆಂದೂ ಕಂಡುಹಿಡಿದಿರುವರಾದುದರಿಂದ ನ್ಯೂಯಾರ್ಕಿನ ಜೀವವಿಮೆ ಕಂಪೆನಿಯವರು ಚುಂಬನಾಸಕ್ತರಾದವರು ಹೆಚ್ಚು ಮೊಬಲಗನ್ನು ಕೊಡಬೇಕೆಂದು ಏರ್ಪಡಿಸಿರುತ್ತಾರೆ ಮತ್ತು ಇತರ ಜೀವವಿಮೆ ಕಂಪೆನಿಯವರೂ ಅವರ ಅನುಕರಣ ಮಾಡುವವರಾಗಿರುತ್ತಾರೆ.

ಪ್ರಪಂಚದ ಮೇಲೆ ಬಹಳ ವಿಶೇಷವಾಗಿ ಉಪಯೋಗಿಸಲ್ಪಡುತ್ತಿರುವ ಮತ್ತು ಇತರ ಎಲ್ಲ ಮೋಟಾರುಬಂಡಿಗಳ ಬೆಲೆಗಿಂತಲೂ ಸುಲಭಬೆಲೆಯುಳ್ಳದಾಗಿರುವ ಫೋರ್ಡ್‌ಮೋಟಾರುಬಂಡಿ ನಿರ್ಮಾಣಕಂಪೆನಿಯು ಅಮೇರಿಕೆಯಲ್ಲಿ ಅತ್ಯಂತ ಪ್ರಖ್ಯಾತವೂ ದೊಡ್ಡವೂ ಆದ ಉಕ್ಕಿನ ಮತ್ತು ಸ್ಟ್ಯಾಂಡರ್ಡ್ ಕಲ್ಲೆಣ್ಣೆಯ ಕಂಪೆನಿಗಳಿಗೆ ಮೂರನೆಯದಾಗಿದೆ. ಇದರ 1923ನೆಯ ವರ್ಷದ ಆರ್ಥಿಕಸ್ಥಿತಿಯ ಪ್ರಕಟನೆಯಿಂದ ಕಂಪನಿಯ ಒಟ್ಟು ಆಸ್ತಿಯು 56,80,00,000 ಡಾಲರುಗಳು, ಅದರ ಖ್ಯಾತಿಯ ಬೆಲೆಯು 2,05,17,000 ಡಾಲರು, ಆಸ್ತಿಯ ವಾಸ್ತವ್ಯವಾದ ಬೆಲೆಯು 9,30,00,000 ಡಾಲರು, ಯಂತ್ರಸಾಮಗ್ರಿಗಳ ಬೆಲೆ 8,76,39,000 ಡಾಲರು, ಸರಕಿನ ಬೆಲೆ 94,32,000 ಡಾಲರು ಎಂದೂ 1923 ರಿಂದೀಚೆಗೆ ಒಟ್ಟು ಆಸ್ತಿಯು

30,00,00,000 ಡಾಲರುಗಳಷ್ಟು ಹೆಚ್ಚಿರುತ್ತದೆಂದೂ ತಿಳಿಯಬರುತ್ತದೆ.

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಅಟ್ಲಾಂಟಾದಲ್ಲಿ ಅಭೂತಪೂರ್ವವಾದ ಪ್ರಚಂಡ ವಾಯುವಿನಿಂದ ಕೂಡಿದ ಮಳೆಯು ಬಂದು ದಕ್ಷಿಣ ಮತ್ತು ಉತ್ತರ ಕಾಲೋನಿಯಾ, ಜಾರ್ಜಿಯಾ, ಅಲ್ಬಾಮಾ, ಲೂಸೇನಿಯಾ ಮತ್ತು ಅರ್ಕನಾಸ್ ಈ ದೇಶಗಳ ಮೇಲೆ ನುಗ್ಗಿ ಪಾಲ್ಮಾಡಿ ವರ್ಜೀನಿಯಾದವರೆಗೂ 1000 ಮೈಲಿ ವಿಸ್ತೀರ್ಣದಲ್ಲಿ ಮಹಾನರ್ಥವನ್ನುಂಟುಮಾಡಿರುವುದು. ಇದರ ಪ್ರಳಯದಿಂದ ವಿಶೇಷವಾಗಿ ಹೆಂಗುಸರೂ ಮಕ್ಕಳೂ ಸಹಿತ 108 ಜನರು ಸತ್ತು 500 ಜನರಿಗೆ ಅಪಾಯವಾಗಿರುವುದೆಂದೂ 10,00,000 ಡಾಲರವರೆಗೆ ನಷ್ಟವಾಗಿರುವುದೆಂದೂ ಊಹಿಸಲ್ಪಟ್ಟಿದೆ. ಮನೆಮಾರುಗಳನ್ನು ಕಳೆದುಕೊಂಡಿರುವ ಜನರು ತಿನ್ನುವುದಕ್ಕಿಲ್ಲದೆ ಕನ್ನಕಳುವನ್ನು ಮಾಡದಂತೆ ಆಯುಧಪಾಣಿಗಳಾದ ಸೈನಿಕರು ಕಾಯುತ್ತಿರುವರು. ವಿಪನ್ನರ ಸಹಾಯಾರ್ಥವಾಗಿ ಅಪಾರ ಬಟ್ಟೆಗಳು ನಾನಾಕಡೆಯಿಂದ ಕಳುಹಲ್ಪಡುತ್ತಿವೆ. ಈ ಮಳೆಯಾಧಿಕ್ಯದಿಂದ ಮಾರ್ಗಗಳೂ, ಸೇತುಗಳೂ ಜಲದಲ್ಲಿ ಮುಳುಗಿಹೋಗಿ ತಿರುಗಾಟವೂ ಕಟ್ಟಾಗಿಹೋಗಿದೆ.

ರಷ್ಯಾದಲ್ಲಿರುವ ಚೆಕಾ ಎಂಬ ರಹಸ್ಯಕೊಲೆ ಸಂಘವೊಂದು ಜರ್ಮನಿಯಲ್ಲಿರುವುದನ್ನು ಅಲ್ಲಿಯ ಪೋಲೀಸರು ಬಹಳ ಸಾಹಸದಿಂದ ಕಂಡುಹಿಡಿದಿರುವರು. ಜರ್ಮನಿರಾಜ್ಯದಲ್ಲಿ ಕಮ್ಯೂನಿಯುನಿಸ್ಟ ಕೂಟದವರಿಗೆ ವಿರೋಧಿಗಳಾಗಿಯೂ ಅಪಾಯಕಾರಕರಾಗಿಯೂ ಇರುವವರನ್ನು ಹಿಡಿದು ನಿರ್ಮೂಲ ಮಾಡತಕ್ಕುದೇ ಈ ಸಂಘದ ಕರ್ತವ್ಯಕರ್ಮವಾಗಿದೆ. ಈ ಸಂಘದ ಮುಖ್ಯನಾಯಕನಾದ ರಷ್ಯಾದೇಶದವನು ಸೆರೆಹಿಡಿಯಲ್ಪಟ್ಟಿರುವನು. ಪಟ್ಟಣಗಳನ್ನು ನಿರ್ಮೂಲ ಮಾಡುವುದಕ್ಕಾಗಿ ಈ ಸಂಘದ ಮೆಂಬರುಗಳಿಗೆ ಬೇಕಾದಷ್ಟು ದ್ರವ್ಯವೂ ಮದ್ದುಗುಂಡುಗಳೂ, ಸಿಡಿಮದ್ದುಗಳೂ, ರಕ್ತಭೇದಿ, ವಿಷಮಶೀತಜ್ವರ, ವಾಂತಿಭೇದಿ ಮೊದಲಾದ ಸಾಂಕ್ರಾಮಿಕ ರೋಗಗಳುತ್ಪತ್ತಿಗೆ ಕಾರಣಗಳಾದ ಕ್ರಿಮಿಗಳೂ ಒದಗಿಸಿಕೊಡಲ್ಪಟ್ಟಿರುವುವು. ಸೆರೆಹಿಡಿಯಲ್ಪಟ್ಟ ಜನರು ಮರಣದಂಡನೆಗೆ ಗುರಿಮಾಡಲ್ಪಟ್ಟಿರುವರಂತೆ. ವರ್ಟಂಬರ್ಗಿನಲ್ಲಿ ಸ್ವದೇಶಾಂಗಮಂತ್ರಿಯಾಗಿದ್ದ ಜನರಲ್ ವಾಗ್‌ಸ್ಟಿಕ್ ಎಂಬ ತಾನೂ ಮರಣದಂಡನೆಗೆ ಗುರಿಯಾಗಿರುವವರಲ್ಲಿ ಒಬ್ಬನಾಗಿರುತ್ತಾನೆ. ಜರ್ಮನರ ಅದ್ಭುತಮೇಧಾಶಕ್ತಿಯು ಪ್ರಪಂಚವಿನಾಶಕಾರಕವಾಗಿ ಪರಿಣಮಿಸಿರುವುದು ಶೋಚನೀಯವಾಗಿದೆ.

ಮಧ್ಯವಯಸ್ಕಳಾದ ಟೇಸ್ಟರ್ ಎಂಬ ಅಮೇರಿಕಾದೇಶದ ಲಾವಣ್ಯವತಿಯು 18,00,00,000 ರೂಪಾಯಿಗಳಿಗೆ ಮೋಸಮಾಡಿರುವಳೆಂಬ ಅಪರಾಧದಮೇಲೆ ಸೆರೆಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುವಳು. ಈಕೆಯು ಗಂಡನ ಸಮೇತ 1918 ರಲ್ಲಿ ಅಮೇರಿಕೆಯಿಂದ ಯೂರೋಪಿಗೆ ಬಂದು, ಜನರನ್ನು ಮೋಸದಿಂದ ಮುಳುಗಿಸಿ ಅವರ ಅಪಾರಹಣವನ್ನೆಲ್ಲಾ ಸುಲಿದುಕೊಂಡು ಕೋಟ್ಯಾಧೀಶ್ವರರಂತೆ ಜೀವಿಸುವ ಜನರ ಗುಂಪನ್ನು ಸೇರಿದಳು. ಅನಂತರ 1920ರ ವರೆಗೆ ಪ್ಯಾರಿಸಿನ ಅನೇಕ ಹೋಟಲುಗಳನ್ನು ಸ್ವತಂತ್ರವಾಗಿಟ್ಟುಕೊಂಡು ಬ್ಯಾಂಕುಗಳಿಗೆ ಸುಳ್ಳುಹಕ್ಕುಗಳನ್ನು ಕೊಡುತ್ತಿದ್ದುದಕ್ಕಾಗಿ 6 ತಿಂಗಳ ಕಾಲ ಕಾರಾಗೃಹದಶಿಕ್ಷೆ ವಿಧಿಸಲ್ಪಟ್ಟಿದ್ದು ದೇಶಭ್ರಷ್ಟರಾಗಿ ಮಾಡಲ್ಪಟ್ಟರು. ತರುವಾಯ ಆಕೆಯ ಗಂಡನು ರೋಮ್ ಪಟ್ಟಣಕ್ಕೆ ಹೋಗಿ ಒಬ್ಬ ದೇಶಾಯಿನಿಯನ್ನು ಮದುವೆ ಮಾಡಿಕೊಳ್ಳಲು ನಿಷ್ಕರಿಸಿ ಆಕೆಯು ತನ್ನ ಐಶ್ವರ್ಯವನ್ನು ತೆಗೆದುಕೊಂಡು ಅಮೇರಿಕೆಗೆ ಹೊರಟುಬರುವಂತೆ ಬೋಧಿಸಿದನು. ಇತ್ತಲಾಗಿ ಅವನ ಹೆಂಡತಿ ಟೇಸ್ಟರಳು ಬ್ರಸಲ್ಸಿಗೆ ಹೋಗಿ ಒಂದುವರ್ಷಕಾಲದಲ್ಲಿ 15,00,000 ರೂಪಾಯಿಗಳವರೆಗೂ ಜನರಿಗೆ ಮೋಸಮಾಡಿ ಪಲಾಯನಳಾಗಲು ಮ್ಯೂನಿಚ್ ಎಂಬಲ್ಲಿ ಸೆರೆಹಿಡಿಯಲ್ಪಟ್ಟು ಬ್ರಸಲ್ಸಿಗೆ ಹಿಂದಿರುಗಿ ಕರೆತರಲ್ಪಟ್ಟು 12 ತಿಂಗಳು ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟಳು. ಅವಳು ಅಲ್ಲಿಂದ ಬಿಡುಗಡೆಯನ್ನು ಹೊಂದಿ ನೂರಾರು ಸೇವಕಾಳಿಗಳೊಡನೆ ಜ್ಯೂರಿಚ್ಚಿಗೆ ಹೋಗಿ ಅತ್ಯಂತ ಚಿತ್ತಾಕರ್ಷಕವಿಧದಂತೆಯೂ, ಒಂದು ದೊಡ್ಡ ಆಸ್ತಿಗೆ ಉತ್ತರವಾರಸುದಾರಳಂತೆಯೂ ನಟಿಸಿ ಬಹುದೊಡ್ಡ ಅಟ್ಟಹಾಸದಿಂದಲೂ ದುಂದುಗಾರಿಕೆಯಲ್ಲೂ ಇದ್ದುಕೊಂಡು ಅನೇಕರು ತನ್ನನ್ನು ಮೋಹಿಸಿ ತನ್ನ ಬಲೆಗೆ ಬೀಳುವಂತೆ ಮಾಡಿ ಅವರುಗಳಲ್ಲಿ ಮೂವರು ಪೂರ್ಣ ಶ್ರೀಮಂತರುಗಳಿಗೆ ಅವರನ್ನು ಲಗ್ನಮಾಡಿಕೊಳ್ಳುತ್ತೀನೆಂದು ಅಭಯವನ್ನು ಕೊಟ್ಟು ಅವರು ಲೆಕ್ಕವಿಲ್ಲದಷ್ಟು ವಸ್ತ್ರಾಭರಣಗಳನ್ನು ಬಹುಮಾನಿಸುತ್ತ ಆಕೆಯ ಅನುರಾಗಪ್ರಸಾದನಿರೀಕ್ಷಣೆಯಲ್ಲಿರುವಷ್ಟರಲ್ಲಿ ಆಕೆಯ ಮೋಸವು ಹೊರಬಿದ್ದಿತು. ತನ್ನ ಮೋಸವು ಬೈಲಾಗುವುದರೊಳಗಾಗಿ ತನ್ನ ಬಲೆಗೆ ಬಿದ್ದ ಆ ಮೂವರು ಶ್ರೀಮಂತರುಗಳು ಆಕೆಯ ಪ್ರಸಾದನಿರೀಕ್ಷಣೆಯಿಂದ ಲೆಕ್ಕವಿಲ್ಲದಷ್ಟು ವಸ್ತ್ರಾಭರಣಗಳನ್ನು ತಂದೊಪ್ಪಿಸುವಂತೆ ಮಾಡಿದ್ದಳು.

1924 ನೇ ಮೇ 15 ನೇ ಮರ್ಕ್ಯುರಿಗೆ ಅಖೈರಾದ ವಾರಕ್ಕೆ ವರ್ತಮಾನ ಪತ್ರಿಕೆಗಳಿಗೆ ಕಳುಹಿಸುವ ಸರ್ಕಾರಿಯಪ್ಪಣೆಯ ಗೋಷ್ವಾರೆ.

1. ಆನೇಕಲ್ ತಾಲ್ಲೂಕಿನ ಅಮಲ್ದಾರರಾದ ಮಿ|| ಹೆಚ್. ಬಸವರಾಜ ಅರಸರವರನ್ನು ಬಿ. ಹೆಡ್ಕ್ವಾಲಿನ ಅಸಿಸ್ಟೆಂಟ್ ಕಮಿಷನರಾಗಿ ಬದಲಿ ನೋಡಲು ನೇಮಿಸಿ, ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜಿನ ಬಗ್ಗೆ ಕಡೂರು ಡಿಸ್ಟ್ರಿಕ್ಟಿಗೆ ಮೊಕರರ್ಮಾಡಿದೆ. ಮಿ|| ವಿ. ಎಸ್. ರಾಜಗೋಪಾಲಾಚಾರ್ಯರವರನ್ನು ಅಸಿಸ್ಟೆಂಟ್ ಕಮಿಷನರಂತೆ ಬದಲಿ ನೋಡುವಂತೆ ನೇಮಿಸಿ ಕಡೂರು ಡಿಸ್ಟ್ರಿಕ್ಟ್ ಖಜಾನೆಗೆ ಮೊಕರರ್ಮಾಡಿದ್ದುದು ಇದರಿಂದ ರದ್ದಾಗುತ್ತದೆ.

2. ಸರ್ಕಾರದ ಫೈನಾನ್ಷಲ್ ಸೆಕ್ರಿಟರಿಗಳಾದ ರಾಜಕಾರ್ಯಪ್ರಸಕ್ತ ಮಿ|| ಎಂ. ಎನ್. ಕೃಷ್ಣರಾವ್ ಬಿ.ಎ., ಯವರಿಗೆ 1924ನೇ ಮೇ 7ನೇ ತಾರೀಖಿನಲಾಗಾಯತು 20 ದಿನಗಳ ಪ್ರಿವಿಲೇಜು ರಜವನ್ನು ಮಂಜೂರ್ಮಾಡಿದೆ. ಈ ಕಾಲದಲ್ಲಿ (b) ಮೈಸೂರು ಸರ್ಕಾರದ ಕಂಟ್ರೋಲರವರಾದ ಮಿ|| ಟಿ. ಸತ್ಯರಾಜಚೆಟ್ಟಿ, ಬಿ.ಎ., ಯವರನ್ನು ಸರ್ಕಾರದ ಅಫಿಸಿಯೇಟಿಂಗ್ ಫೈನಾನ್ಷಲ್ ಸೆಕ್ರಿಟರಿಯವರನ್ನಾಗಿಯೂ, (a) ಮಿ|| ಎಲ್. ಬಿಸ್ವೇಪಂತ್‌ಬಾದಾಮಿ ಬಿ.ಎ., ಯವರನ್ನು ಮೈಸೂರು ಸರ್ಕಾರದ ಅಫಿಸಿಯೇಟಿಂಗ್ ಕಂಟ್ರೋಲರವರನ್ನಾಗಿಯೂ, ನೇಮಿಸಿದೆ.

3. 1923ನೆ ವರ್ಷಕ್ಕೆ ಮೈಸೂರು ಸಂಸ್ಥಾನದಲ್ಲಿ ಮಳೆಯ ಲೆಕ್ಕಗಳ ರಿಪೋರ್ಟನ್ನು ಪರಿಶೀಲಿಸುವಲ್ಲಿ ಸರ್ಕಾರದವರು, 1922ನೆ ವರ್ಷದಲ್ಲಿ 199 ರೈನುಗೇಜುಗಳು (ಮಳೆಯನ್ನು ಅಳತೆಕೊಡುವ ಯಂತ್ರಗಳು) ತನಿಖೆಮಾಡಲ್ಪಟ್ಟದ್ದರಿಂದಲೂ, ಪ್ರಸಕ್ತವರ್ಷದಲ್ಲಿ 207 ಗೇಜುಗಳು ತನಿಖೆಯಾಗಿರುವುದರಿಂದಲೂ, ತನಿಖೆಯ ಕೆಲಸವು ಗಣನೀಯವಾಗಿ ಉತ್ತಮಪಟ್ಟಿರುತ್ತೆಂದು, ಅಭಿಪ್ರಾಯಪಡುತ್ತಾರೆ. ಆದರೂ, ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ತನಿಖೆಯಾಗದೆ ಇರುವ ರೈನುಗೇಜುಗಳು ಅನೇಕವಾಗಿವೆ. ಈ ಡೆಪ್ಯುಟಿಕಮಿಷನರುಗಳು ತಮ್ಮ ತಮ್ಮ ಡಿಸ್ಟ್ರಿಕ್ಟುಗಳಲ್ಲಿರುವ ರೈನುಗೇಜುಗಳೆಲ್ಲವೂ ಚಾಲ್ತಿವರುಷದಲ್ಲಿ ಪೂರ್ತಿಯಾಗಿ ತನಿಖೆಯಾಗುವಂತೆ ನೋಡಿಕೊಳ್ಳುವರೆಂದು ಕೋರಿದೆ.

4. ಡಿಸ್ಟ್ರಿಕ್ಟು ಬೋರ್ಡುಗಳಿಗೆ ಫೈಸಲ್ಮಾಡುವುದಕ್ಕೆ ಅಧಿಕಾರವಿಲ್ಲದಿದ್ದು, ಅಭಿಪ್ರಾಯಕೊಡುವುದಕ್ಕಾಗಿ ಮಾತ್ರ ಅವುಗಳಿಗೆ ಕಳುಹಿಸಲ್ಪಡಬಹುದಾದ ಸ್ಥಳೀಯ ವಿಷಯಗಳ ಪರ್ಯಾಲೋಚನೆಯ ಬಗ್ಗೆ ನಿಬಂಧನೆಗಳನ್ನು ಏರ್ಪಡಿಸಿದೆ.

5. ಕೋಲಾರ ಡಿಸ್ಟ್ರಿಕ್ಟು ಮುಳಬಾಗಲು ತಾಲ್ಲೂಕಿನ ರೀಸೆಟಲ್ಮೆಂಟನ್ನು ಮಂಜೂರುಮಾಡಿ ಹುಕುಮುಗಳನ್ನು ಸಾದರ್ಮಾಡಿರುತ್ತದೆ. ಸರ್ಕಾರದವರು ಮಂಜೂರ್ಮಾಡಿದ ಸಲಹೆಗಳಿಂದ ಸರ್ಕಾರಕ್ಕೆ ಹಾಲಿ ಇರತಕ್ಕ ಕಂದಾಯದಿಂದ ಹುಟ್ಟುವಳಿಯಾಗುವ ಮೊಬಲಗಿಗಿಂತ 5418 ರೂಪಾಯಿಗಳು ಹೆಚ್ಚಾಗಿ ಎಂದರೆ ಸೇಕಡ 3 ರಂತೆ ಹೆಚ್ಚಾಗಿ ಉತ್ಪತ್ತಿಯಾಗುವುದು ಈ ಹೊಸ ದರಗಳು ವಾಮೂಲಿನಂತೆ 30 ವರುಷಗಳ ಖಾತರಿಯೊಂದಿಗೆ 1924ನೆ ಜುಲೈ 1ನೆ ತಾರೀಖಿನ ಲಾಗಾಯತು ಜಾರಿಗೆ ಬರತಕ್ಕದ್ದು.

6. 1923-24ನೆ ಸಾಲಿನ ಮೈಸೂರು ಪ್ರಜಾಪ್ರತಿನಿಧಿಸಭೆಯ ಬಡ್ಜೆಟ್ ಅಧಿವೇಶನವು ಮೈಸೂರಿನಲ್ಲಿ ಜಗನ್ಮೋಹನಬಂಗಲೆಯ ಸಭಾಮಂಟಪದಲ್ಲಿ 1924ನೆ ಜೂನ್ 6ನೆ ತಾರೀಖು ಶುಕ್ರವಾರದ ದಿನ ಮಧ್ಯಾಹ್ನ 12 ಗಂಟೆಗೆ ಪ್ರಾರಂಭಿಸಲ್ಪಟ್ಟು ನಡೆಯಿಸಲ್ಪಡುವುದು.

7. ಮೈಸೂರು ನ್ಯಾಯವಿಧಾಯಕಸಭೆಯ ಮೀಟಿಂಗು ಬೆಂಗಳೂರು ಪಬ್ಲಿಕ್ ಆಫೀಸುಗಳ ಕಟ್ಟಡದ ಸೆಂಟ್ರಲ್ ಹಾಲಿನಲ್ಲಿ 1924ನೆ ಜೂನ್ 17ನೇ ತಾರೀಖು ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಉಪಕ್ರಮವಾಗುವುದು.

8. ಮೈಸೂರು ಸಂಪದಭ್ಯುದಯ ಸಮಾಜದ ಸಮಾರಂಭೋತ್ಸವವು 1924ನೆ ಜೂನ್ 14ನೆ ಮರ್ತ್ಯಂ ಶನಿವಾರದ ದಿನ ಮೈಸೂರಿನಲ್ಲಿ ಜಗನ್ಮೋಹನಬಂಗಲೆಯ ಸಭಾಮಂಟಪದಲ್ಲಿ ನಡೆಯುವುದು.

ಅದ್ಭುತಶೋಧ.

ಚಂದ್ರನ ಮೇಲೆ ಬಾಣಪ್ರಯೋಗ :-ಅನಾದಿಕಾಲದಿಂದಲೂ ಚಂದ್ರಲೋಕವನ್ನು ಕುರಿತು ಗಮನಮಾಡುವ ಪ್ರಯತ್ನವು ಮನುಷ್ಯಮಾತ್ರರಿಂದ ನಡೆದ ಮಾತಾಗಿರುತ್ತದೆ. ಚಂದ್ರನಲ್ಲಿರುವ ಅಪ್ರತಿಮ ಸೌಂದರ್ಯದ ಮೂಲಕವಾಗಿ ಕವಿಗಳೂ, ಕಾದಂಬರಿಕಾರರೂ ಇಂದಿನವರೆಗೆ ಅನೇಕಾವರ್ತಿ ಚಂದ್ರನ ಮೇಲೆ ಪರ್ಯಟನ ಮಾಡಿರುತ್ತಾರೆ. ಕವಿಗಳಾಗಲಿ, ಕಾದಂಬರಿಕಾರರಾಗಲಿ ತಮ್ಮ ಕಲ್ಪನೆಗೆ ಯೋಗ್ಯವೆಂದು ತೋಚಿದ ಯಾವದೊಂದು ಸಾಧನವನ್ನು ಕಲ್ಪಿಸಿಕೊಂಡು ಅದರ ಮೇಲೆ ಆರೂಢರಾಗಿ ಚಂದ್ರಲೋಕವನ್ನು ಮುಟ್ಟುವರು; ಹೇಗೆ ಕವಿಗಳೋ ಹಾಗೆ ಕಾದಂಬರಿಕಾರರು ಚಂದ್ರಲೋಕವನ್ನು ಮುಟ್ಟಬರುವ ಪ್ರಯತ್ನಮಾಡಿದರು. ಆದರೆ ಕಲ್ಪನೆಯಲ್ಲಿ ಹುಟ್ಟಿ ಆ ಮಾತು ಕಲ್ಪನೆಯಲ್ಲಿಯೇ ಉಳಿಯಿತು.

ಆದರೆ ಇತ್ತೀಚೆಗೆ ಇನ್ನೊಬ್ಬ ಪ್ರಚಂಡ ಶೋಧಕನು ಹುಟ್ಟಿರುವನು. ಈತನ ಪ್ರಯತ್ನವನ್ನು ನೋಡಿದರೆ ಚಂದ್ರಲೋಕವನ್ನೇ ಬಡಿದು ಬಾಯಲ್ಲಿ ಹಾಕಿಕೊಳ್ಳುವನೆಂದು ತೋರುತ್ತದೆ. ಈ ಶೋಧಕನಿಗೆ ಗೋಡಾರ್ಡನೆಂಬ ಹೆಸರು ಇರುತ್ತದೆ. ಇವನ ಕಲ್ಪನೆಯು ಕವಿಗಳ ಕಲ್ಪನೆಯಂತೆ ಹವೆಯೊಳಗಿನ ಕಲ್ಪನೆಯಲ್ಲ; ಇವನು ಒಂದು ಅದ್ಭುತಶಕ್ತಿಯ ಬಾಣವನ್ನು ತಯಾರಿಸಿರುತ್ತಾನೆ. ಈ ಬಾಣವು ಸೆಕಂಡಿಗೆ ೭|| ಮೈಲು ದೂರ ದಾರಿಯನ್ನು ಕ್ರಮಿಸುತ್ತದೆ. ಮತ್ತು ಇದು ಇಚ್ಛಿತ ಸ್ಥಳದವರೆಗೆ ಅವ್ಯಾಹತವಾಗಿ ಸಾಗುವಂತೆ ನಡನಡುವೆ ಸ್ಫೋಟವಾಗಿ ಹೊಸಗತಿಯನ್ನು ಹೊಂದುತ್ತದೆಯಂತೆ! ಈ ಬಾಣವನ್ನು ಪೃಥ್ವಿಯು ಆಕರ್ಷಿಸುವದಿಲ್ಲವಂತೆ. ಚಂದ್ರಲೋಕವನ್ನು ಮುಟ್ಟುವವರೆಗೆ ಸಾಲುವಷ್ಟು ಸ್ಫೋಟಕ ದ್ರವ್ಯವು ಇದರಲ್ಲಿ ತುಂಬಿರುತ್ತದೆ. ಒಮ್ಮೆ ಈ ಬಾಣವು ಚಂದ್ರನ ಕಕ್ಷೆಯೊಳಗೆ ಹೋಯಿತೆಂದರೆ ಚಂದ್ರನು ಅದನ್ನು ಆಕರ್ಷಿಸುವನು. ಆಗ ಆ ಬಾಣವು ಚಂದ್ರನಿಗೆ ತಗಲುವದು.

ಈ ಬಾಣವು ಚಂದ್ರಲೋಕವನ್ನು ಮುಟ್ಟಿದ್ದು ಸಹ ಕಾಣುವ ಯೋಜನೆಯನ್ನ ಆ ಶೋಧಕನು ಮಾಡಿರುತ್ತಾನೆ. ಮತ್ತು ಬಾಣವು ಪೃಥ್ವಿಯಿಂದ ಹೊರಟು ಚಂದ್ರಲೋಕಕ್ಕೆ ಎಷ್ಟೊತ್ತಿಗೆ ಹೋಗುವದೆಂಬದನ್ನು ಸಹ ಅದರ ಗತಿಯ ಮೇಲಿಂದ ಗೊತ್ತುಪಡಿಸಿರುತ್ತಾನೆ. ಆತನ ಈ ಪ್ರಯತ್ನವು ಯಶಸ್ವಿಯಾದರೆ ಮುಂದೇನಾಗುವದೋ ತಿಳಿಯದು

(ಸ. ಚಂ.)

ಗೋಕರ್ಣದಲ್ಲಿ ನಡೆದ ಕರ್ಣಾಟಕಪರಿಷತ್ತಿನ ಅಧ್ಯಕ್ಷರಾಗಿದ್ದ ಶಾರದಾಪೀಠದ ಶ್ರೀ ಶಂಕರಾಚಾರ್ಯರು ಅಂತ್ಯಜರನ್ನು ಕುರಿತು ಮಾಡಿದ ಭಾಷಣದ ಮುಖ್ಯಾಂಶ—

ಅವರು ಹಿಂದೂ ಸಮಾಜದ ಒಂದು ಅಂಗವಾಗಿರುವರು. ಅಂಗಗಳೆಲ್ಲ ಸರಿಯಾಗಿದ್ದರೆ "ಅಂಗಿ"ಯು ನೆಟ್ಟಗಿರುವದು. ನಮ್ಮ ಹಿಂದೂ ಸಮಾಜದ ಅಂಗಭೂತರಾದ ಈ ಅಂತ್ಯಜರು ರೋಗಪೀಡಿತರಾಗಿರುವವರೆಗೆ ಹಿಂದೂ ಸಮಾಜವು ಎಂದೂ ನೆಟ್ಟನ ಸ್ಥಿತಿಯಲ್ಲಿರಲಾರದು. ಅದ್ದರಿಂದ ಸ್ವಾರ್ಥದೃಷ್ಟಿಯಿಂದಲೂ ಸಹ ಇವರ ಉದ್ಧಾರವು ಅವಶ್ಯವಿರುವದು. ಇನ್ನು ಪಾರಮಾರ್ಥದೃಷ್ಟಿಯಿಂದಲಾದರೂ ನಮ್ಮ ಧರ್ಮದಲ್ಲಿ "ಸರ್ವೇ ಜನಾಃ ಸುಖಿನೋಭವಂತು" ಎಂಬ ನಮ್ಮ ಧರ್ಮವಾಕ್ಯದಂತೆ ಎಲ್ಲವರ ಸುಖವನ್ನು ಬಯಸುವದು ನಮ್ಮ ಧರ್ಮವಿರುತ್ತದೆ. ಶತ್ರುವಿನ ವಿಷಯದಲ್ಲಿ ಸಹ ಶತ್ರುತ್ವವು ನಾಶವಾಗಬೇಕೆಂದು ಇಚ್ಛಿಸಬೇಕೇ ಹೊರತು ಶತ್ರುವು ನಾಶಹೊಂದಬೇಕೆಂದು ಇಚ್ಛಿಸುವದಲ್ಲ. ಹೀಗಿರುವದರಿಂದ ಅಂ ಜರ ಏಳಿಗೆಯ ಪ್ರಯತ್ನಮಾಡುವದು ನಮ್ಮ ಕರ್ತವ್ಯವಾಗಿರುವದು.

ನಮ್ಮ ಧರ್ಮದಲ್ಲಿ ಸ್ಪೃಶ್ಯ, ಅಸ್ಪೃಶ್ಯರೆಂದು ಜನ ಸಮಾ ಇಬ್ಭಾಗಗಳನ್ನು ಮಾಡದೆ ಇಂಥ ಸಮಯದಲ್ಲಿ ಮಾತ್ರ ಸ್ಪೃಶ್ಯ ಅಸ್ಪೃಶ್ಯವೆಂಬ ನಿಯಮವನ್ನು ಮಾಡಿರುವರು. ರಾಷ್ಟ್ರವಿಪ್ಲವ ಕಾಲದ ಸಭೆಗಳಲ್ಲಿ "ನಗರ ಗ್ರಾಮದ್ವಾರೇಚ" ಸ್ಪರ್ಶದೋಷವಿಲ್ಲವೆಂದು ನಮ್ಮ ಶಾಸ್ತ್ರದಲ್ಲಿ ಹೇಳಿರುತ್ತದೆ. ಸಾರ್ವಜನಿಕ ಬಾವಿ ಮೊದಲಾದವುಗಳ ವಿಷಯದಲ್ಲಾದರೂ "ವಿಶ್ವಸೃಷ್ಟಂ ಸರ್ವಭೂತೇಭ್ಯಃ" ಅಂದರೆ ಕೇವಲ ಮಾನವರ ಉಪಯೋಗಕ್ಕೆ ಮಾತ್ರ ಅಲ್ಲ. ಸರ್ವಭೂತ ಮಾತ್ರದ ವಿಷಯಕ್ಕೆ ಕಟ್ಟಿದ ಬಾವಿ ಮೊದಲಾದ ವಿಷಯಗಳಲ್ಲಿ, ಅವರನ್ನು ನಿಷೇಧಿಸಿದಲ್ಲಿ ಕಟ್ಟಿಸಿದವರನ್ನು ಕುರಿತು ವಿಶ್ವಾಸಭಂಗ (Breach of trust) ವೆಂಬದ ದೋಷಬರುವದು. ಅದ್ದರಿಂದ ಸರ್ವಸಾಧಾರಣ ಸಂಸ್ಥೆಗಳಿಂದ ಅವರನ್ನು ಎಂದೂ ಬಹಿಷ್ಕೃತರನ್ನಾಗಿ ಇಡುವದು ನಿಷಿದ್ಧವು.

ಆದರೆ, ಹಿಂದೂ ಮಹಾಸಭೆಯೊಳಗೆ ಧರ್ಮಗುರುಗಳು ಹೇಳಿದ ಉಕ್ತಿಯ ಆಧಾರದ ದುರುಪಯೋಗ ಮಾಡಿ ಕೆಲವರು ಉತ್ತರ ಹಿಂದೂಸ್ಥಾನದಲ್ಲಿ, ಇಲ್ಲಿಗೇ ನಿಲ್ಲದೆ ಸಹ ಭೋಜನ ಮುಂತಾದವುಗಳನ್ನು ಸಹ ಉಪದೇಶ ಮಾಡಲಿಕ್ಕೆ ಹತ್ತಿದರು. ಮತ್ತು ಅವರು ಹೀಗೆ ಮಾಡುತ್ತ "ಅಧಿಕಾಶಾ ಅಧಿಕನಷ್ಟಂ" ಎಂಬ ಉಕ್ತಿಗನುಸರಿಸಿ ಮೊದಲು ಅಂತ್ಯಜೋದ್ಧಾರದ ಬಗ್ಗೆ ಅನುಕೂಲವಿದ್ದವರೂ ಸಹ ವಿರುದ್ಧರಾದರು.

ಪ್ರಸ್ತುತ ಪ್ರಸಂಗದಲ್ಲಿಯಾದರೂ ನಾವು ಈ ವಿಷಯಕ ಠರಾವನ್ನು ಧರ್ಮಕ್ಕೆ ವಿರುದ್ಧವಾಗದಂತೆ ನಿರ್ಣಯಿಸಬೇಕು. "ಪತಿತೋದ್ಧಾರಕತ್ವಮೇವ ಪಾವನತ್ವಮ್" ಅಪವಿತ್ರನನ್ನು ಪವಿತ್ರಮಾಡುವವನೇ ಯಥಾರ್ಥ ಪವಿತ್ರನು. ಅದ್ದರಿಂದ ನಾವು ಪವಿತ್ರರೆಂಬ ದುರಭಿಮಾನದಿಂದ ಅಂತ್ಯಜರನ್ನು ದೂರಮಾಡದೆ, ಅವರ ಉದ್ಧಾರಕ್ಕೆ ಎಲ್ಲ ಬಗೆಯಿಂದ ಪ್ರಯತ್ನಿಸಬೇಕು.

ಕ. ವೃ.

ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್, ಮೈಸೂರು.

ಪ್ರಕಟನೆ.

ಕಳೆದ ತಾ|| 5-9-1923 ರಲ್ಲಿ ನಡೆದ ಮ್ಯಾನೇಜಿಂಗ್ ಕಮಿಟಿ ಮೀಟಿಂಗಿನಲ್ಲಿ ತೀರ್ಮಾನಿಸಲ್ಪಟ್ಟ 3 ನೆಯ ಪ್ರಸ್ತಾವದ 6 ನೆಯ ಕಾಲಮಿನಲ್ಲಿ "ತಾ|| 6-4-1921 ರಲ್ಲಿ ನಡೆದ ಮ್ಯಾನೇಜಿಂಗ್ ಕಮಿಟಿ ಮೀಟಿಂಗಿನಲ್ಲಿ ತೀರ್ಮಾನವಾದ 5 ನೆಯ ಠರಾವು ಪುನಃ ಚರ್ಚಿಸಲ್ಪಟ್ಟು,

೧ ನೆಯ ವರ್ಷ ಹೋಮವಿಧಿ, ಪೂಜಾಸಾರಸಮುಚ್ಚಯ (೨ನೆ ಮುದ್ರ

೨ ನೆಯ ವರ್ಷ ಶಾಂತಿಹೋಮ, ಮಹಾಭಿಷೇಕ.

೩ ನೆಯ ವರ್ಷ ತ್ರೈವರ್ಣಿಕಾಚಾರ, ೨೪ ತೀರ್ಥಕರ ಆರಾಧನ

೪ ನೆಯ ವರ್ಷ ಶ್ರೀನೇಮಿಚಂದ್ರಕೃತಪ್ರತಿಷ್ಠಾ ತಿಲಕ.

ಈ ಗ್ರಂಥಗಳಲ್ಲಿ ಪರೀಕ್ಷಿಸಿ ಉತ್ತೀರ್ಣರಾದ ವೈದಿಕವಿದ್ಯಾರ್ಥಿಗಳಿ ಪಾರಿತೋಷಿಕವನ್ನು ಕೊಡುವುದಕ್ಕೋಸ್ಕರ ಪ್ರತಿವರ್ಷವೂ ನೂರು ರೂಪಾಯಿಗಳನ್ನು ಮಂಜೂರು ಮಾಡಿದೆ. ಮತ್ತು ಇದನ್ನು ಜಾರಿಗೆ ತರಲು ಕೆಳಗೆ ಕಂಡ ಮಹಾಶಯರಿಂದ ಕೂಡಿದ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿದೆ.

೧. ಮಹಾವಿದ್ವಾನ್ ವೇ|| ದೋರ್ಬಲಿಜಿನದಾಸಶಾಸ್ತ್ರಿಗಳು.

೨. ನ್ಯಾಯತೀರ್ಥ ವೇ|| ಶಾಂತರಾಜಶಾಸ್ತ್ರಿಗಳು.

೩. ವೇ|| ಬಿ. ಚಂದಪ್ಪಪಂಡಿತರು, ಮೈಸೂರು."

ಮೇಲಿನ ಠರಾವಿನ ಪ್ರಕಾರ ಜ್ಯೇಷ್ಠ ಬಹುಳ ೧೦ ಗುರುವಾರ (ತಾ|| 26-6-1924) ಪ್ರಾತಃಕಾಲ ೮ ಗಂಟೆಯಿಂದ ಮೈಸೂರು ಎಂ. ಎಲ್. ಜೈನವಿದ್ಯಾರ್ಥಿನಿಲಯದಲ್ಲಿ ಮೇಲ್ಕಂಡ ಗ್ರಂಥಗಳಲ್ಲಿ ಪರೀಕ್ಷೆಯು ನಡೆಯುವುದರಿಂದ ಉಮೇದುವಾರರಾದ ವೈದಿಕರು ಬರುವ ಜೂನ್ ತಾ|| 12 ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಪರೀಕ್ಷಾ ಗ್ರಂಥಗಳನ್ನು ನಮೂದಿಸಿ ಅರ್ಜಿಗಳನ್ನು ಬರೆದುಕೊಳ್ಳಬೇಕು.

ಆಯಾ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾದವರಿಗೆ ಕ್ರಮವಾಗಿ ೧೫, ೨೦, ೩೦, ೪೫ ರೂಪಾಯಿಗಳು ಬಹುಮಾನ ಕೊಡಲ್ಪಡುವುವು.

ಸೆಕ್ರಿಟರಿಗಳು,
ತಾ|| 20-5-24, ಮೈಸೂರು. } ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್, ಮೈಸೂರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಸ್ಸಿಗೂ ಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವ ಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ಮಾರುಮಾರುದ್ದ ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಪರಸ್ಪರ ಸಮಾಜಗಳಲ್ಲಿ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಷಮ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೂಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧದ ಲೇಖನಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕರೂ ಖಂಡಿತವಾಗಿ ಗಮನಿಸಬೇಕು.—ಸಂ.

ಪೀಠಾಚಾರ್ಯರ ಜಯಂತ್ಯುತ್ಸವ.

ಬಳ್ಳಾರಿ ಹೀರದ ಸೂಗಮ್ಮನವರ ಚೌಡಿಯಲ್ಲಿ ಕಳೆದ ವೈಶಾಖ ಶುದ್ಧ 5 ಶುಕ್ರವಾರ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಯ ಮಹೋತ್ಸವವು ವ್ಯಾಕರಣಭೂಷಣ ಪಂಡಿತ ವಿಶ್ವನಾಥಶಾಸ್ತ್ರಿಗಳಿಂದಲೂ ಅನೇಕ ಸಂಸ್ಕೃತ ವಿದ್ಯಾರ್ಥಿಗಳಿಂದಲೂ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಎಚ್. ಯಂ. ಹಾಲಯ್ಯ,
ಹೀರದ ಸೂಗಮ್ಮನ ಚೌಡಿ ಬಳ್ಳಾರಿ.

ಮಂಡ್ಯ.

ಈ ಮೇ ತಾ|| 18 ಮತ್ತು 19 ರಲ್ಲಿ ಎರಡು ಹದ ಮಳೆಯಾಯಿತು. ಆದರೂ ಕೆರೆಗೆ ನೀರು ಬರಲಿಲ್ಲ. ಮದ್ದೂರು ಕೆರೆಗೆ ಮಾತ್ರ ಅರ್ಧ ಬಂದಿದೆ. ಬಿಸಿಲಿನತಾಪ ಕಮ್ಮಿ ಆಗಿದೆ. ಜೋಳದ ಪಸಲು ಬಹಳ ಸೊಂಪಾಗಿದೆ. ಹಿಮವು ಬೀಳುವುದರಿಂದ ಖಾಯಿಲೆಯು ಜನಗಳಿಗೆ ಬರುತ್ತದೆಂದು ಜನಗಳು ಆಡಿಕೊಳ್ಳುತ್ತಾರೆ. ಈ ಊರಿನ ಸ್ಪೆಷಲ್ ಕೋರ್ಟಿನಲ್ಲಿ ನಾಗಮಂಗಲದ ಅಮಲ್ದಾರ್ ಮಿ|| ಶಂಕರಪ್ಪನವರನ್ನು ಮೈಲಾರಪಟ್ಟಣದ ಶಂಕರಲಿಂಗೇಗೌಡನು ಕಲ್ಲುಕಟ್ಟಿದವನು ಎಂದು ಬೈದದ್ದಕ್ಕಾಗಿ ಮಾಡಲ್ಪಟ್ಟಿದ್ದ ಮೊಖದ್ದಮೆಯಲ್ಲಿ ಅಪರಾಧಿಗೆ 150 ರೂ. ಜುಲ್ಮಾನೆ ತಪ್ಪಿದಲ್ಲಿ 3 ತಿಂಗಳ ಸಜಾ ವಿಧಿಸಲ್ಪಟ್ಟಿತು. ರೈತರು ಸರ್ಕಾರದ ಮೇಲೆ ಬೀಳುವುದು ಸರ್ವಥಾ ತಪ್ಪು.

ಬಲ್ಲವ.

ದೇವಾಂಗ ಸಂಘ ಬೆಂಗಳೂರು.

ದೇವಾಂಗಮತಕ್ಕೆ ಸೇರಿದ ಬಾಲಕ ಬಾಲಕಿಯರ ವಿದ್ಯಾಭಿವೃದ್ಧಿಗೆ ಸೌಕರ್ಯಗಳನ್ನು ಕಲ್ಪಿಸುವ ಮುಖ್ಯ ಉದ್ದೇಶದಿಂದ "ದೇವಾಂಗ ಸಂಘ" ವೆಂಬ ಒಂದು ಸಮಾಜವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿರುವದು ಸರಿಯಷ್ಟೆ. ಮೈಸೂರು ದೇಶದಲ್ಲಿ ಈಗ ಲೋವರ್‌ಸೆಕೆಂಡರಿ ಮತ್ತು ಅದಕ್ಕೆ ಮೇಲ್ಪಟ್ಟ ತರಗತಿಗಳಲ್ಲಿ ವ್ಯಾಸಂಗಮಾಡುತ್ತಿರುವ ಬಾಲಕ ಬಾಲಕಿಯರೆಲ್ಲರೂ ತಮ್ಮ ಹೆಸರು ಮತ್ತು ವಿಳಾಸಗಳನ್ನೂ ಬೆಂಗಳೂರು ಸಿಟಿ ಜುಮ್ಮಾಮಸೀದಿ ರೋಡಿನಲ್ಲಿರುವ ದೇವಾಂಗ ಸಂಘದ ಸೆಕ್ರೆಟರಿಯವರಿಗೆ ತಿಳಿಯಪಡಿಸಬೇಕೆಂದೂ ಅಲ್ಲದೆ ಈ ಸಂಘದ ವಿಚಾರಗಳನ್ನು ದೇವಾಂಗಮತಾಭಿಮಾನಿಗಳೆಲ್ಲರೂ ಮೇಲ್ಕಂಡ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಂಡು ಸಂಘಕ್ಕೆ ಮೆಂಬರುಗಳಾಗಿ ಸೇರಬೇಕೆಂದೂ ಪ್ರಾರ್ಥಿಸಲಾಗಿದೆ.

ಸಂಘದ ಸೆಕ್ರೆಟರಿ.

ಯಡತೊರೆ ವೀರಶೈವರ ಕರ್ತವ್ಯ ಪರಾಙ್ಮುಖತೆ.

ಪರಶಿವಮೂರ್ತಿಯ ಆಜ್ಞಾನುಸಾರ ಭೂಲೋಕದಲ್ಲಿ ಅವತರಿಸಿ ಖಿಲವಾಗಿದ್ದ ಅನಾದಿ ವೀರಶೈವ ಮತವನ್ನುದ್ಧಾರಮಾಡಿ ದ್ವಿತೀಯಶಂಭುವೆಂದು ಪ್ರಖ್ಯಾತಿಗೊಂಡ ಆ ಶ್ರೀ ಬಸವೇಶ್ವರನ ಜಯಂತ್ಯುತ್ಸವವನ್ನು ಭರತಖಂಡದ ಪ್ರತಿಯೊಬ್ಬ ವೀರಶೈವ ಮತಾಭಿಮಾನಿಯೂ ಆಚರಿಸಿ ಕೃತಕೃತ್ಯನಾಗಬೇಕೆಂದು ಈ ಸ್ಟಾರ್ ಪತ್ರಿಕಾಕರ್ತರು ಸೂಚಿಸಿದ್ದ ಪ್ರಕಾರ ಅನೇಕ ಕಡೆಯಲ್ಲಿ ಆಚರಿಸಲ್ಪಟ್ಟಿರುವ ವಿಚಾರವು ಕಳೆದವಾರದ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಆದರೆ ನಮ್ಮ ಯಡತೊರೆ ನಿವಾಸಿಗಳಾದ ವೀರಶೈವರು ಮಾತ್ರ ಈ ಪತ್ರಿಕಾಕರ್ತರ ಸೂಚನೆಯನ್ನು ತಮ್ಮ ಮನಸ್ಸಿಗೆ ತಂದುಕೊಂಡು ಕಳೆದ ತಾ|| 6ರಲ್ಲಿ ನಡೆಯಬೇಕಾಗಿದ್ದ ಜಯಂತ್ಯುತ್ಸವವನ್ನು ನೆರವೇರಿಸದೆ ಹೋದುದು ಶೋಚನೀಯವೂ ಲಜ್ಜಾಸ್ಪದವೂ ಆಗಿದೆ. ಮುಂದಾದರೂ ಈ ಮಹಾಕಾರ್ಯವನ್ನಾಗಮಾಡಿ ಕರ್ತವ್ಯ ಪರಾಙ್ಮುಖರೆಂದು ತಮಗೆ ಬಂದಿರುವ ಕೆಟ್ಟಹೆಸರನ್ನು ಹೋಗಲಾಡಿಸಿಕೊಂಡು ಈಶ್ವರ ಅಪರಾವತಾರನೆಂದೆನಿಸಿದ ಶ್ರೀ ಬಸವೇಶ್ವರನ ಪೂರ್ಣಾನುಗ್ರಹಕ್ಕೆ ಪಾತ್ರರಾಗುವರೆಂದು ನಿರೀಕ್ಷಿಸುವ,

ದೈವಭಕ್ತ.

ಶ್ರೀ ಬಸವೇಶ್ವರ ಜಯಂತ್ಯುತ್ಸವ, ಬೆಂಗಳೂರು.

ಬೆಂಗಳೂರು ಸಿಟಿಯ ವೀರಶೈವ ಮಹಾಜನರು ಮೇಲ್ಕಂಡ ಉತ್ಸವವನ್ನು ಮೇ ಮಾಹೆ 6ನೆ ಮಂಗಳವಾರ ಬಹಳ ವೈಭವದಿಂದ ನೆರವೇರಿಸಿದರು. ಆ ದಿನ ಬೆಳಿಗ್ಗೆ ಬೆಂಗಳೂರು ಸಿಟಿ ಅರಳೇಪೇಟೆಯಲ್ಲಿರುವ ಶ್ರೀ ರುದ್ರದೇವಸ್ಥಾನದಲ್ಲಿ ಮಹಾರುದ್ರಾಭಿಷೇಕವೂ, ಮಧ್ಯಾಹ್ನ ಚಿಕ್ಕಪೇಟೆಯಲ್ಲಿರುವ ಶ್ರೀ ಮಹಂತಿನಮಠದಲ್ಲಿ ಗಣಾರಾಧನೆಯೂ ನಡೆಸಲ್ಪಟ್ಟಿತು. ರಾತ್ರಿ 9 ಗಂಟೆಗೆ ಮಲ್ಲಿಗೆಮೊಗ್ಗಿನಿಂದಲೂ ವಿದ್ಯುಚ್ಛಕ್ತಿಯ ದೀಪಾವಳಿಗಳಿಂದಲೂ ದಿವ್ಯಾಲಂಕೃತವಾಗಿದ್ದ ಹುವ್ವಿನ ಅಡ್ಡಪಾಲಕಿಯನ್ನು ತೇರಿನಮೇಲಿಟ್ಟು ಅದರಲ್ಲಿ ಚಂದ್ರಮೌಳೇಶ್ವರನಸಹಿತ ನಂದೀಶ್ವರನ ವಿಗ್ರಹವನ್ನೂ ಶ್ರೀ ಕಲ್ಯಾಣಬಸವೇಶ್ವರನ ಭಾವಚಿತ್ರವನ್ನೂ ಇಟ್ಟು ನಂದಿಧ್ವಜದೊಡನೆ ಉತ್ಸವವು ಶ್ರೀ ಮಹಂತಿನಮಠದಿಂದ ಹೊರಟು ಪಟ್ಟಣದ ಮುಖ್ಯ ಬೀದಿಗಳಲ್ಲಿ ಹಗಲು 4 ಗಂಟೆವರೆಗೂ ನಡೆಯಿತು. ಮಾಮೂಲುಪೇಟೆಯ ಅಡಿಕೆ ಅಂಗಡಿಯ ವೀರಶೈವ ಮಹಾಜನರು ಇದರಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿದ್ದರಿಂದಲೂ ದೇಶದ ಸೆಟ್ಟರು ಯಜಮಾನರು ಮುಂದಾಳುಗಳಾಗಿ ನಿಂತುದರಿಂದಲೂ, ಮೇಲ್ಕಂಡ ಸಮಾರಂಭವು ಬಹಳ ವಿಜೃಂಭಣೆಯಿಂದ ನಡೆಯಲು ಅವಕಾಶವಾಯಿತೆಂದು ಕೇಳುತ್ತೇನೆ. ಈ ಉತ್ಸವದಲ್ಲಿ ಭಾಗಿಗಳಾದ ಪ್ರತಿಯೊಬ್ಬರಿಗೂ ಶ್ರೀಬಸವೇಶ್ವರನು ಇತೋಪ್ಯತಿಶಯವಾದ ಮಂಗಳವನ್ನುಂಟುಮಾಡಲೆಂದು ಹರಿಸುವ,

ಒಬ್ಬ ಪ್ರೇಕ್ಷಕ.

ಮಳವಳ್ಳಿ ತಾಲ್ಲೂಕು ಮಡೇನಹಳ್ಳಿ.

ಈ ಊರು ತೋಂಟದಾರ್ಯ ಮಠದ ಮಹಾಂತಸ್ವಾಮಿಗಳ ಅಪ್ಪಣೆಯಂತೆ ಭಕ್ತರುಗಳು ಶ್ರೀ ಬಸವೇಶ್ವರನ ಜಯಂತ್ಯುತ್ಸವವನ್ನು ನಡೆಸುವುದಕ್ಕೆ ಪ್ರಾರಂಭಿಸಿ ಈಗ್ಗೆ ಎಂಟು ವರ್ಷಗಳಾಗುತ್ತಾ ಬಂದಿತು. ಎಂಟನೇ ವರ್ಷವಾದ ಈ ರಕ್ತಾಕ್ಷಿ ಸಂ|| ದ ಬಸವೇಶ್ವರ ಜಯಂತ್ಯುತ್ಸವವು ವೈಶಾಖ ಶು|| ೩ ಲಾಗಾಯತು ಪೌರ್ಣಿಮಾವರಿವಿಗೂ ಬಹು ಶ್ರದ್ಧಾಭಕ್ತಿಯಿಂದ ಜರಗಿತು. ತದಿಗೆಯಿಂದ ಪೌರ್ಣಿಮಾವರುವಿಗೆ ಪ್ರತಿನಿತ್ಯವೂ ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ಬಸವೇಶ್ವರ ಜಯಘೋಷದಿಂದ ಕೂಡಿದ ಶಿವಭಜನೆಯು ಬಸವೇಶ್ವರ ಮಂದಿರವಾದ ಶ್ರೀ ಸ್ವಾಮಿಗಳವರ ಮಠದಲ್ಲಿಯೂ ಪುರವೀದಿಗಳಲ್ಲಿಯೂ ನಡೆಯುತ್ತಿತ್ತು. ತದಿಗೆ ದಿವಸ ಭಕ್ತರುಗಳು ತಮ್ಮ ಮನೆಗಳಲ್ಲಿ ಇಕ್ಷುಸ್ವಾದದಿಂದ ಕೂಡಿದ ಹಬ್ಬವೂ ಜಂಗಮಾರ್ಚನೆಯೂ ನಡೆಸಲ್ಪಟ್ಟಿತು. ಅಲ್ಲದೆ ಅದೇ ಬಸವರಾಜ ಮಂದಿರದಲ್ಲಿ ಕಾನಕಾನಳ್ಳಿ ತಾ|| ಮರುಳೇ ಮಠದ ಚರಮೂರ್ತಿಗಳು ವೇ|| ಸೋಮಪ್ಪಸ್ವಾಮಿಗಳಿಂದ ಬಸವೇಶ್ವರ ಪುರಾಣಶ್ರವಣವೂ ಈ ಮಧ್ಯೆ ಸಪ್ತಮಿ ಶನಿವಾರ ಕೊಳ್ಳೇಗಾಲದ ತಾ|| ಕುಂತೂರು ಶಿವಕಥಾ ವೇ|| ಸಿದ್ದಯ್ಯಶಾಸ್ತ್ರಿಗಳಿಂದ ಅಷ್ಟಾವರಣಪರವಾದ ಉಪನ್ಯಾಸವೂ ಹೇಳಲ್ಪಟ್ಟು ಅದೇ ರಾತ್ರಿ ಮೇಲ್ಕಂಡ ಸಿದ್ದಯ್ಯಶಾಸ್ತ್ರಿಗಳಿಂದ ರಾಜಶೇಖರ ಕಥಾಶ್ರವಣ ಮಾಡಿಸಲ್ಪಟ್ಟಿತು. ದಶಮಿ ಮಂಗಳವಾರ ಬಸವೇಶ್ವರನಿಗೆ ಸಹಸ್ರ ಬಿಲ್ವಾರ್ಚನೆಯು ತ್ರಯೋದಶೀ ಶುಕ್ರವಾರ ರುದ್ರಾಭಿಷೇಕ ಮತ್ತು ಪ್ರಮಥಗಣಂಗಳ ಆರಾಧನೆಯೂ ಚತುರ್ದಶಿ ಶನಿವಾರ ಶ್ರೀ ಬಸವೇಶ್ವರಸ್ವಾಮಿಯನ್ನು ಹುವ್ವಿನ ಪಲ್ಲಕ್ಕಿಗೆ ಬಿಜಯಂಗೈಸಿ ಉತ್ಸವವು ಪುರದ ಬೀದಿಗಳಲ್ಲಿ ಬಹು ವಿಜೃಂಭಣೆಯಿಂದ ನಡೆಸಲ್ಪಟ್ಟವು. ನಮ್ಮ ಶ್ರೀಗಳವರು ಕೇಳಿ ಈ ಸದುತ್ಸವಕ್ಕೆ ಪ್ರಾರಂಭಿಸಿದರು. ಬಸವೇಶ್ವರನ ಅನುಗ್ರಹದಿಂದ ಎಂಟು ವರ್ಷಗಳಿಂದಲೂ ನಮ್ಮೂರು ಶ್ರೀಗಳವರಿಷ್ಟದಂತೆ ನಡೆಯುತ್ತಾ ಬಂದಿರುವ ಈ ಉತ್ಸವವು ಆಚಂದ್ರಾರ್ಕವಾಗಿ ನಡೆಯಬೇಕೆಂಬ ಶ್ರೀಗಳವರ ಪ್ರತಿಜ್ಞೆಗೆ ಭಂಗಬಾರದಂತೆ ಶ್ರೀ ಬಸವೇಶ್ವರನೇ ಅನುಗ್ರಹಿಸಬೇಕು.

ವೀರಶೈವ ಪ್ರಮುಖರು.

ಶ್ರೀ ಜಗದ್ಗುರು ಮರುಳಾರಾಧ್ಯರ ಜಯಂತಿಯೂ ಶಿವದೀಕ್ಷಾಮಹೋತ್ಸವ ಸಮಾರಂಭವೂ.

ಬಳ್ಳಾರಿ ಡಿ|| ಹಿರೇಹಡಗಲಿ ಗ್ರಾಮದ ಪುರವರ್ಗ ಮಾನಿಹಳ್ಳಿ ಮಠಪಟ್ಟದ ಮಳೇಸ್ವಾಮಿಗಳವರ ಅಪ್ಪಣೆ ಪ್ರಕಾರ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಮೂರ್ತಿಗಳ ಪೈಕಿ ಉಜ್ಜಯಿನೀ ಪೀಠಾಧೀಶರಾದ ಶ್ರೀ ಜಗದ್ಗುರು ಮರುಳಾರಾಧ್ಯರ ಜಯಂತಿಯನ್ನು ಇದೇ ವೈಶಾಖ ಶು|| ೫ ದಿವಸ ಸಕಲ ಭಕ್ತಮಾಹೇಶ್ವರಾದಿ ಮಂಡಳಿಯು ಅತ್ಯಂತ ಸಂತೋಷಭರಿತರಾಗಿ ನೆರವೇರಿಸಿದರು. ಮತ್ತು ಇದೇ ಸುಮುಹೂರ್ತದಲ್ಲಿ ಮ|| ಹರವಿ ಗ್ರಾಮದ ತುಂಬಿನಕಟ್ಟಿ ರೇವಣಪ್ಪ ಕವಲೂರು ಶಿದ್ಲಿಂಗಪ್ಪ ಈ ಉಭಯರು ತಮ್ಮ ಸತ್ಸಂಕಲ್ಪದಂತೆ ಶ್ರೀಗಳವರ ಮಠದಲ್ಲಿ ಸ್ಥಲ ಪರಸ್ಥಳದ ಕೆಲವು ಪೀಠಮಹೇಶ್ವರ ವಟುಗಳಿಗೆ ಶಿವದೀಕ್ಷಾಸಂಸ್ಕಾರವನ್ನು ವೇ|| ಪುರಾಣಿಕ ಮಠದ ವಿರೂಪಾಕ್ಷಾರ್ಯರಿಂದ ವಿಧ್ಯುಕ್ತ ಪ್ರಕಾರ ನೆರವೇರಿಸಿದರು. ಮಾರನೆ ದಿವಸ ಉದಯ 10 ಗಂಟೆಯಿಂದಾ ಸಾಯಂಕಾಲ 4 ಗಂಟೆವರೆಗೂ ಮಹಾಗಣಸಮಾರಾಧನೆಯು ಮೃಷ್ಟಾನ್ನಪಾನಾದಿಗಳಿಂದ ಜರಗಲ್ಪಟ್ಟಿತು. ಬಳಿಕ ಪುರಪ್ರಮುಖರಾದ ಮ|| ರಾ|| ಪಾಟೀಲ ಶಿವರುದ್ರಗೌಡರು (ಲ್ಯಾಂಡ್ ಲಾರ್ಡ್) ಮತ್ತು ಬಾಗಳಿ ಬಸಪ್ಪನವರು ಪುರಾಣಿಕಮಠದ ಪರಮೇಶ್ವರಯ್ಯನವರು ರಾಣಿಬೆನ್ನೂರು ಗುರುಪಾದಪ್ಪನವರು ದಳವಾಯಿ ಬಸಲಿಂಗಯ್ಯನವರೇ ಮುಂತಾದ ಮಂಡಳಿಯವರಿಂದ ಸಭೆ ಸೇರಿದ್ದು. ಪಾ|| ಶಿವರುದ್ರಗೌಡರು ಐಕಮತ್ಯ ವಿದ್ಯಾಭಿವೃದ್ಧಿ ವಿಷಯವಾಗಿಯೂ ಪುರಾಣಿಕ ಮಠದ ವಿರೂಪಾಕ್ಷಾರ್ಯ ಇವರು ಸಮಾಜಸುಧಾರಣೆ ವಿಷಯವಾಗಿಯೂ ಉಪನ್ಯಾಸಮಾಡಿ ಬಹುಕಾಲದಿಂದಲೂ ಸಮಾಜಾಭಿವೃದ್ಧಿಯ ಸಲುವಾಗಿ ಹೋರಾಡುವಂಥ ಜನಪ್ರಿಯವಾದ ಮೈಸೂರು ಸ್ಟಾರ್‌ಪತ್ರಿಕೆಗೂ ಹಾಗೂ, ವಿಭಾಕರ, ಧರ್ಮತರಂಗಿಣಿ, ಪ್ರಬೋಧ, ಪತ್ರಿಕೆಗಳಿಗೂ ಸರ್ವರೂ ಶಕ್ತ್ಯಾನುಸಾರವಾಗಿ ಧನಸಹಾಯಮಾಡಬೇಕೆಂತಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನೂ ಶ್ರೀ ಬಸವೇಶ್ವರ ಜಯಂತಿಯನ್ನೂ ಪ್ರತಿಯೊಬ್ಬರೂ ತಪ್ಪದಂತೆ ವಿಜೃಂಭಣೆಯಿಂದ ಮಾಡಿ ಕೃತಾರ್ಥರಾಗಬೇಕೆಂದೂ ಬೋಧಿಸಿದರು. ಬಳಿಕ ಗಂಧ ಪುಷ್ಪಾದಿಗಳು ಸಮರ್ಪಿಸಿ ಜಯಘೋಷದೊಡನೆ ಸಭಾಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಬೆಳ್ಳಾವಾರದ ಎಸ್ಟೇಟಿಗೆ ಶ್ರೀ ಜಗದ್ಗುರುಗಳವರ ಆಗಮನವು.

ಶ್ರೀ ಗಿರಿರಾಜಪುರಸ್ಥಸಿಂಹಾಸನಾಧೀಶ್ವರ ಜಗದ್ಗುರು ಚರಪಟ್ಟಾಧ್ಯಕ್ಷ ಮಹಾಸ್ವಾಮಿಗಳವರ ಸವಾರಿಯು ಬೆಳ್ಳಾವಾರದ ಶ್ರೀಮಂತ ಕಾಫಿಪ್ಲಾಂಟರ್ ಬಿ. ಯಂ. ದ್ಯಾವೇಗೌಡರ ಮತ್ತು ಬಿ. ಪಿ. ಮಲ್ಲೇಗೌಡರ ಕೋರಿಕೆಯಂತೆ ತಾರೀಖು 7-5-1924ನೆ ಬುಧವಾರ ಸಕಲ ಅಬಾಬು ಸಮೇತ ದಿವ್ಯವಾದ ಪಲ್ಲಕ್ಕಿಯಲ್ಲಿ ಮಲ್ಲಾಪುರದ ಮಠದಿಂದ ಹೊರಟು ಸಾಯಂಕಾಲ 6 ಗಂಟೆಗೆ ಬೆಳ್ಳಾವಾರದ ಎಸ್ಟೇಟಿಗೆ ಸವಾರಿಯು ದಯಮಾಡಿಸಿತು. ಬ್ಯಾಂಡು ವಾದ್ಯಗಳು ಭೋರ್ಗರೆಯುತ್ತಿದ್ದವು. ಆರುವರೆ ಗಂಟೆಗೆ ಸರಿಯಾಗಿ ಶ್ರೀಗಳು ಪೀಠಾರೋಹಣಮಾಡಿದ ಕೂಡಲೆ ಸಂಸ್ಥಾನದ ಏಜಂಟರು ಜಗದ್ಗುರು ಪಂಚಾಚಾರ್ಯರ ಉತ್ಪತ್ತಿಯನ್ನು ಕುರಿತು ಭಾಷಣಮಾಡಿ ಮಾರ್ಗಾಯಾಸವಾಗಿದ್ದ ಕಾರಣ ಬೆಳಗಿನ 9 ಗಂಟೆಗೆ ದರ್ಶನಕ್ಕೆ ಭಾಗಿಗಳಾಗಬೇಕೆಂದು ಅಪ್ಪಣೆಯಾದಮೇಲೆ ಸರ್ವರೂ ಅಪ್ಪಣೆಪಡೆದು ತೆರಳಿದರು. ತಾ|| 8-5-24 ಗುರುವಾರ ಬೆಳಿಗ್ಗೆ 8 ಗಂಟೆಯಿಂದ 12 ಗಂಟೆವರೆಗೂ ಪಾದಪೂಜಾಸಮಾರಂಭವು ನಡೆಯಿತು. ಸಹೋದರರೀರ್ವರೂ ಶ್ರೀಶೈಲ ಧಾರ್ಮಿಕ ಫಂಡಿಗೆ ತಮ್ಮ ಶಕ್ತಿಮೀರಿ ಸಹಾಯಮಾಡಿದರು. ಶ್ರೀಗಳವರು 12 ಗಂಟೆ ಮೇಲೆ ದರ್ಬಾರಿಗೆ ದಯಮಾಡಿಸಿದ ಕೂಡಲೆ 2 ಸಹಸ್ರದವರೆಗೂ ನೆರದಿದ್ದ ಸಮೂಹಕ್ಕೆಲ್ಲಾ ಮತಸಂಬಂಧವಾಗಿ ಅನೇಕ ಮತವಿಷಯಗಳನ್ನು ಬೋಧಿಸಿ ಶ್ರೀಯುತ ಬಿ. ಯಂ. ದ್ಯಾವೇಗೌಡರು, ಬಿ. ಪಿ. ಮಲ್ಲೇಗೌಡರು ಈ ಸಹೋದರರ ಭಕ್ತಿ ವಿಶ್ವಾಸಗಳಿಗೆ ತುಂಬಾ ಸಂತೋಷಪಟ್ಟು ಗುರುಭಕ್ತಕೇಸರಿ ಎಂಬ ಬಿರುದಾಂಕಿತದ ಸುವರ್ಣಪದಕದೊಡನೆ ಪುಷ್ಪಹಾರವನ್ನು ಹಾಕುವಂತೆ ಸಿದ್ಧಾಪುರ ಶ್ರೀಮಂತ ಗಡಿಗೆ ಗಂಗಪ್ಪಅಣ್ಣ ಇವರಿಗೆ ಅಪ್ಪಣೆಕೊಡಿಸಲು ಶ್ರೀಮಂತ ಗಡಿಗೆಯವರು ತಮ್ಮ ಹಸ್ತದಿಂದ ಸಹೋದರರೀರ್ವರ ಕಂಠಗಳಿಗೆ ಹಾಕಿದರು. ಕೂಡಲೆ ಗಡಿಗೆಯವರು ಈ ದೇಶಕ್ಕೆ ದಯಮಾಡಿಸಿ ಸಮಾಜದ ಸೇವೆಮಾಡಿದುದಕ್ಕಾಗಿ ಸರ್ವರೂ ತುಂಬಾಸಂತೋಷಪಟ್ಟು ಅವರ ಗೌರವಾರ್ಥವಾಗಿ ಒಂದು ಕಲಾಘತ್ತಿನ ಶಲ್ಯವೂ ಒಂದು ಸುವರ್ಣಪದಕವೂ ಒಪ್ಪಿಸಲ್ಪಟ್ಟಿತು. ತರುವಾಯ ಶ್ರೀ ಜಗದ್ಗುರುಗಳವರು ಸರ್ವರಿಗೂ ಫಲಾಶೀರ್ವಾದಗಳನ್ನಿತ್ತು ಮಲ್ಲಾಪುರದ ಮಠಕ್ಕೆ ದಿಗ್ವಿಜಯಮಾಡಿದರು. ನೆರೆದಿದ್ದ ಸಭೆಯಲ್ಲಿ ಮೈಸೂರು ಯಜಮಾನ್ ಶ್ರೀ|| ವೀರಸಂಗಪ್ಪನವರ ಹೆಸರಿನ ಮೇಲೆ ನಾಲ್ಕು ರೂಪಾಯಿಗಳನ್ನು ತೆಗೆಯುವಂತೆ ಶ್ರೀಮಂತ ಗಡಿಗೆಯವರು ಸೂಚಿಸಿದ್ದ ಮೇರೆ ಕಾಫಿಪ್ಲಾಂಟರ್ ಬಿ. ಯಂ. ದ್ಯಾವೇಗೌಡರವರು ಕೋಗೋಡು ಪಟೇಲ್ ಮಲ್ಲೇಗೌಡರವಶಕ್ಕೆ ಕೊಟ್ಟರು.

ಪ್ರತ್ಯಕ್ಷದರ್ಶಿ.

[ಮೇಲ್ಕಂಡ 4 ರೂ. ಬಂದಿದೆ.—ಸ. ಪ್ರ.]

ಶ್ರೀ ಬಾಳೆಹೊನ್ನೂರು ಮಠದ ಪೀಠಾಧಿಕಾರ.

ಮೇಲ್ಕಂಡ ಸಂಸ್ಥಾನದ ಪೀಠಾಧಿಪತಿಗಳನ್ನು ಚುನಾಯಿಸುವ ವಿಚಾರದಲ್ಲಿ ಇದೇ ಮಾಹೇ 3ನೆ ತಾರೀಖಿನಲ್ಲಿ ಮೈಸೂರು ಸರ್ಕಾರದ ಮುಜರಾಯಿ ಕಮಿಷನರವರು ಈ ಕೆಳಗೆ ಕಂಡಂತೆ ಆರ್ಡರುಮಾಡಿರುವರು. ಈ ಮಠದ ಶಿಷ್ಯವರ್ಗದ ಮುಖಂಡರುಗಳು ಎಂದರೆ ಎಡೆಹಳ್ಳಿ ಶಾಂತಪ್ಪಶೆಟ್ಟರನ್ನು, ಎ. ಚಂದ್ರೇಗೌಡರನ್ನು ಮುಂದಾಳುಗಳನ್ನಾಗಿಟ್ಟುಕೊಂಡು ತೀರ್ಮಾನಿಸಿರುವುದೇನೆಂದರೆ—ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಿಂದ 14 ಮೆಂಬರುಗಳಿರತಕ್ಕ ಒಂದು ಕಮಿಟಿಯು ಮಾಡಲ್ಪಡತಕ್ಕದ್ದು. ಅವರುಗಳಲ್ಲಿ ಮೈಸೂರು ದೇಶದ ಹೊರಗಿನವರು 4 ಜನ. ಈ ಕಮಿಟಿಯು ಬೆಂಗಳೂರಿನಲ್ಲಿ ಕೂಡಿ, ಉಭಯಪಾರ್ಟಿಗಳಿಂದಲೂ ಚೆನ್ನಾಗಿ ಯೋಗ ತಾಪರೀಕ್ಷೆಯನ್ನು ಮಾಡಿ ಸಮಭಾಗವಾಗಿ ಮೂರ್ತಿಗಳನ್ನು ಚುನಾಯಿಸತಕ್ಕದ್ದು. ಮೇ 28ನೆ ತಾರೀಖಿನದಿನ ಅಧ್ಯಕ್ಷರು ಕಡೂರು ಡಿ|| ಡೆಪ್ಯುಟಿ ಕಮಿಷನರವರನ್ನು ಇಟ್ಟುಕೊಂಡು ಅಲ್ಲಿ ಸೇರತಕ್ಕ ಇತರ ದೊಡ್ಡಮನುಷ್ಯರ ಸಮಕ್ಷಮ ಹಾಗೆ ಚುನಾಯಿಸಲ್ಪಟ್ಟ ಮೂರ್ತಿಗಳಲ್ಲಿ ಲಾಟರಿ ಮೂಲಕ ಬಾಳೆಹೊನ್ನೂರು ಮಠದಲ್ಲಿ ಒಬ್ಬಮೂರ್ತಿಯನ್ನು ಚುನಾಯಿಸತಕ್ಕದ್ದು. ಅನಂತರ 1924ನೆ ಇಸವಿ ಜೂನ್ ಮಾಹೆ 15ನೆ ತಾರೀಖಿನದಿನ ಹಾಗೆ ಚುನಾಯಿಸಲ್ಪಟ್ಟ ಮೂರ್ತಿಗೆ ಮೊದಲು ಸರ್ಕಾರದವರ ಒಪ್ಪಿಗೆಯನ್ನು ಪಡೆದು ಪೀಠಾಧಿಕಾರವನ್ನು ವಹಿಸತಕ್ಕದ್ದು. ಮೇಲ್ಕಂಡ ಆರ್ಡರು ಹುಟ್ಟಿ ಇಷ್ಟು ದಿವಸಗಳಾದಾಗ್ಯೂ ಅದು ಇದುವರೆಗೆ ಪ್ರಕಟಿಸಲ್ಪಡದ್ದನ್ನು ನೋಡಿದರೆ, ಅದರ ಮೂಲಕರ್ತರು ನಿಜವಾಗಿಯೂ ಪೀಠದ ಗೌರವವನ್ನು ಗಮನಕ್ಕೆ ತಂದುಕೊಂಡಂತೆ ಕಾಣುವುದಿಲ್ಲ. ವೀರಶೈವ ಸಮಾಜಕ್ಕೇ ಸಂಬಂಧಪಟ್ಟ ಈ ವಿಚಾರವನ್ನು ಪ್ರತಿಷ್ಠಾಕಾಂಕ್ಷಿಗಳೂ, ಸ್ವಾರ್ಥಪರರೂ ಆದ ಒಬ್ಬಿಬ್ಬರ ಮನೋಗತವನ್ನು ಮಾತ್ರ ನೆರವೇರಿಸಲು ಉದ್ಯುಕ್ತರಾಗಿರುವಂತೆ ಕಾಣುತ್ತದೆ. ಈ ನನ್ನ ಊಹೆಯು ನಿಜವಾಗಿದ್ದಲ್ಲಿ ವೀರಶೈವಸಮಾಜದ ದೌರ್ಭಾಗ್ಯಕ್ಕೆ ಎಣೆಯೇ ಇಲ್ಲ. ಅದರಲ್ಲೂ ವೀರಶೈವಪ್ರಮುಖರೊಬ್ಬರಾದ ದಿವಾನ್ ಬಹದ್ದೂರ್‌ರವರು ಈ ವಿಧವಾದ ಅವ್ಯವಸ್ಥೆಗೆ ಹೇಗೆ ಒಪ್ಪಿದರೆಂಬುದು ಮತ್ತೊಂದು ಸಂದೇಹಾಸ್ಪದವಾದ ಸಂಗತಿಯಾಗಿರುತ್ತೆ. ರಾಜತಂತ್ರ ವಿಚಾರದವರೆಂದು ಘನತೆಯನ್ನು ಪಡೆದಿರುವ ದಿವಾನ್ ಬಹದ್ದೂರ್‌ರವರು ಈ ವಿಚಾರವು ಸಮಾಜದ ಬಹು ಜನರ ಸಮ್ಮತಿಯಂತೆ ನಡೆಯತಕ್ಕದ್ದು ಅತ್ಯವಶ್ಯಕವೆಂದು ಯೋಚಿಸದಿರಲು ಕಾರಣವೇನಿರಬಹುದು? ಬಹುಶಃ ತಮ್ಮಲ್ಲಿ ರಾತ್ರಿ ಹಗಲೆನ್ನದೆ ಬಂದು ಸಮಾಜಕ್ಕೆ ತಾವೇ ಮುಂದಾಳುಗಳೆಂದು ನಟನೆಯನ್ನು ಮಾಡುತ್ತಲಿರುವ ಕೆಲವು ದೊಡ್ಡ ಮನುಷ್ಯರ ಮಾತನ್ನು ಅವರು ನಂಬಿರಬಹುದು. ಇದು ಎಷ್ಟು ಮಾತ್ರವೂ ನಿಶ್ಚಯವಲ್ಲ. ಸಮಾಜದ ಬಹುಮಂದಿಗಳ ಅಭಿಪ್ರಾಯವನ್ನು ತಿಳಿಯದೆ ಮೇಲ್ಕಂಡ ಕಾರ್ಯವನ್ನು ಮಾಡಿದಲ್ಲಿ ಆ ಅಧಿಕಾರಿಗಳು ತಮ್ಮನ್ನು ಪೀಠಕ್ಕೆ ತರಲು ಪ್ರಯತ್ನಪಟ್ಟ ಕೆಲವರಿಂದ ಮಾತ್ರ ಅಂಗೀಕೃತವಾಗುವರೆ ಹೊರತು, ವೀರಶೈವ ಸಮಾಜದ ಮುಖ್ಯ ಪೀಠಾಧಿಕಾರಿಗಳಲ್ಲೊಬ್ಬರೆಂದು ಎಂದಿಗೂ ಗಣಿಸಲ್ಪಡುವುದಿಲ್ಲ.

ಒಬ್ಬ ಮತಾಭಿಮಾನಿ.

ಕರ್ಣಾಟಕ ಸಾಹಿತ್ಯಸಮ್ಮೇಳನದ ಹತ್ತನೆಯ ಕೂಟ.

ಕರ್ಣಾಟಕ ಸಾಹಿತ್ಯ ಸಮ್ಮೇಳನದ ಹತ್ತನೆಯ ಕೂಟವು ಇದೇ ಮೇ 16 ನೆಯ ತಾರೀಖು ಶುಕ್ರವಾರ ಪ್ರಾತಃಕಾಲ ಕೋಲಾರದ ಹೈಸ್ಕೂಲಿನ ಸಭಾಭವನದಲ್ಲಿ ಪ್ರಾರಂಭವಾಯಿತು. ಕರ್ಣಾಟಕದ ನಾನಾ ಭಾಗಗಳಿಂದ ಬಂದ ಸದಸ್ಯರುಗಳೂ, ಊರಿನ ಮುಖ್ಯಾಧಿಕಾರಿಗಳೂ, ಲಾಯರುಗಳೂ ವರ್ತಕರೂ ಮೊದಲಾದ ಪ್ರಮುಖ ಜನರು ಸಭಾಭವನದ ತುಂಬ ಅತ್ಯುತ್ಸಾಹದಿಂದ ನೆರೆದಿದ್ದರು. ಭಗವತ್ಪ್ರಾರ್ಥನೆಯೂ, ಕರ್ಣಾಟಕ ದೇವೀಗೀತೆಯೂ ಆದ ಬಳಿಕ ಸ್ವಾಗತಮಂಡಲಿಯ ಅಧ್ಯಕ್ಷರೂ, ಜಿಲ್ಲೆಯ ಡೆಪ್ಯುಟಿ ಕಮಿಷನರವರೂ ಆದ ಮ|| ರಾ|| ಎಸ್. ಹಿರಣ್ಣಯ್ಯ, ಎಂ. ಎ. ಬಿ. ಎಲ್. ಅವರು ಒಂದು ಸ್ವಾರಸ್ಯವಾದ ಸಣ್ಣ ಭಾಷಣದಲ್ಲಿ ಸದಸ್ಯರಿಗೂ ಪ್ರೇಕ್ಷಕರಿಗೂ ಸುಸ್ವಾಗತವನ್ನು ಬಯಸಿ, ಕರ್ಣಾಟಕ ಸಾಹಿತ್ಯ ಪರಿಷತ್ತು ಅನೇಕ ವರ್ಷಗಳಿಂದ ಮಾಡುತ್ತಿರುವ ಕಾರ್ಯಸ್ವರೂಪವನ್ನು ವಿವರಿಸಿ, ಆ ಕಾರ್ಯಕ್ಕೆ ದೇಶಾಭಿಮಾನಿಗಳಾದ ಮಹಾಜನರ ಸಹಾಯಮನ್ನಣೆಗಳು ಅತ್ಯಾವಶ್ಯಕವಾಗಿ ಸಲ್ಲಬೇಕಾದುವೆಂದು ವಿಜ್ಞಾಪಿಸಿದರಲ್ಲದೆ ಸಮ್ಮೇಳನದ ಅಧ್ಯಕ್ಷಪದವಿಗೆ ಮೈಸೂರು ದೇಶೀಯರೂ, ಕೋಲಾರದಬಳಿಯ ಸ್ಥಳದವರೂ, ಪ್ರಖ್ಯಾತ ಪಂಡಿತರೂ ಇಂಡಿಯಾ ಸರ್ಕಾರದ ಪ್ರಾಚೀನ ಶಾಸನ ವಿಚಾರಾಧ್ಯಕ್ಷರೂ ಆಗಿರುವ ರಾವ್‌ಬಹದೂರ್ ಮ|| ರಾ|| ಹೆಚ್. ಕೃಷ್ಣಶಾಸ್ತ್ರಿಗಳವರು ಚುನಾಯಿಸಲ್ಪಡಬೇಕೆಂದು ಸೂಚಿಸಿದರು. ಇದನ್ನು ರಾಜಸಭಾಭೂಷಣ ಮ|| ರಾ|| ಕರ್ಪೂರ ಶ್ರೀನಿವಾಸರಾಯರು ಅನುಮೋದಿಸಿ ಮ|| ರಾ|| ವಿ. ಬಿ. ಆಲೂರ್ ಅವರು ಪುಷ್ಟೀಕರಿಸಿ ಸಭಿಕರು ಅಂಗೀಕರಿಸಿದ ಬಳಿಕ ಸಭಾಧ್ಯಕ್ಷರವರು ತಮ್ಮ ಪ್ರೌಢವಾದ ಮತ್ತು ಬಹುವಿಷಯಗರ್ಭಿತವಾದ ಉಪನ್ಯಾಸವನ್ನು ಪಠಿಸಿದರು. ಅದರಲ್ಲಿ ಕನ್ನಡ ಭಾಷೆಯು ಪೂರ್ವಕಾಲಗಳಲ್ಲಿ ಎಷ್ಟು ದೂರವ್ಯಾಪಿಸಿತ್ತು, ಭರತಖಂಡದ ವಿದ್ಯಾವಿಭೂತಿಗಳ ಬಗೆಗೆ ಕರ್ಣಾಟಕ ರಾಜರುಗಳೂ, ಶೂರರುಗಳೂ, ಕವಿಗಳೂ, ಕಲಾನಿಪುಣರೂ, ಎಷ್ಟೆಷ್ಟು ಮಾತ್ರ ಉಪಕಾರಮಾಡಿರುವರು ಎಂಬ ವಿಷಯಗಳನ್ನೂ ಈಚೆಗೆ ಕನ್ನಡಿಗರಿಗೆ ಸಂಬಂಧಪಟ್ಟ ಶಾಸನಗಳು ಎಲ್ಲೆಲ್ಲಿ ದೊರಕಿವೆ ಎಂಬ ವಿಷಯಗಳನ್ನೂ ನಿರ್ದೇಶಿಸಿದ್ದಲ್ಲದೆ ಇಂಡಿಯಾದೇಶದಲ್ಲಿ ಈಗ ಕನ್ನಡವು ಪ್ರಚಾರದಲ್ಲಿಲ್ಲದ ಭಾಗಗಳಲ್ಲಿ ಕನ್ನಡಿಗರಿಗೆ ಸಂಬಂಧಪಟ್ಟ ಪ್ರಾಚೀನ ಲಿಪಿಗಳು ಸಿಕ್ಕುವುದನ್ನು ಕುರಿತು ಪ್ರಸ್ತಾಪಿಸಿ, ಹಾಗೆಯೇ ಲೋಕವಿಖ್ಯಾತ ಮಹಾಪುರುಷರಾದ ಮಾಧವವಿದ್ಯಾರಣ್ಯರು ಕನ್ನಡಿಗರೇ ಎಂದು ಮ|| ರಾ|| ಡಿ. ವಿ. ಗುಂಡಪ್ಪನವರು ಮಾಡಿರುವ ಸಿದ್ಧಾಂತವನ್ನು ಸಮರ್ಥಿಸಲು ಈಚೆಗೆ ಕಾಣಬಂದಿರುವ ಹೊಸ ಶಾಸನ ಒಂದರ ಆಧಾರವನ್ನು ಉದಾಹರಿಸಿದರು. ಕರ್ಣಾಟಕದ ಪೂರ್ವ ಚರಿತ್ರೆಗೆ ಬೇಕಾದ ಸಾಮಗ್ರಿ ಒದಗಿಸಲು ಬೇರೆ ಬೇರೆ ಸರ್ಕಾರಗಳ ಪ್ರಾಚೀನ ಲಿಪಿಯ ವಿಚಾರಾಧಿಕಾರಿಗಳು ಮಾಡುತ್ತಿರುವ ಕೆಲಸವನ್ನು ಪ್ರಶಂಸಿಸಿ, ಉಪನ್ಯಾಸದ ಉಪಸಂಹಾರಭಾಗದಲ್ಲಿ ಕನ್ನಡ ಭಾಷೆಯು ಪ್ರಕೃತ ಕಾಲದ ಉಪಯೋಗಗಳಿಗೆ ತಕ್ಕಂತೆ ಮಾರ್ಪಡಲು ವಿದ್ವಾಂಸರು ಯಾವ ಯಾವ ರೀತಿಗಳಲ್ಲಿ ಕೆಲಸಮಾಡಬೇಕೆಂಬುದನ್ನೂ ಭಾಷಾಪ್ರಾಬಲ್ಯಕ್ಕೆ ಏನೇನು ಆವಶ್ಯಕವೆಂಬುದನ್ನು ಸೂಚಿಸಿ ಸಕಲರೂ ಈ ದೇಶಭಾಷೆಗಳ ಸೇವಾಸಮಾರಂಭಕ್ಕೆ ತಮ್ಮ ಉತ್ಸಾಹ ಪೂರ್ವಕವಾದ ಮತ್ತು ಅವಿಚ್ಛಿನ್ನವಾದ ಸಹಾಯವನ್ನು ಕೊಡಬೇಕೆಂದು ಪ್ರಾರ್ಥಿಸಿದರು. ಅಧ್ಯಕ್ಷರ ಉಪನ್ಯಾಸವನ್ನು ಸಭೆಯವರು ಅತಿಕುತೂಹಲದಿಂದ ಕೇಳಿ ಸಂತೋಷಿಸಿದರು. ಬಳಿಕ ಈ ಕೆಳಗಿನ ಎರಡು ತೀರ್ಮಾನಗಳು ಅಂಗೀಕೃತಗಳಾಗಿ ಸಮ್ಮೇಳನವು ಬರಖಾಸ್ತಾಯಿತು. 1. ಕೋಲಾರದಲ್ಲಿ ಸೇರಿದ ಕರ್ಣಾಟಕ ಸಾಹಿತ್ಯ ಸಮ್ಮೇಳನದ ಹತ್ತನೆಯ ಕೂಟವು ಮೈಸೂರಿನ ಶ್ರೀಮನ್ಮಹಾರಾಜರವರಿಗೆ ತನ್ನ ಗೌರವಪೂರ್ವಕವಾದ ಅಭಿನಂದನೆಗಳನ್ನೂ ಕೃತಜ್ಞತಾಪುರಸ್ಸರವಾದ ವಂದನೆಯನ್ನೂ ಸಮರ್ಪಿಸಿ ಕನ್ನಡದ ವಿಚಾರಕ್ಕೆ ಅವರ ಕೃಪಾಪೂರ್ಣವಾದ ಪರಿಪೋಷಣೆಯು ಇತೋಪ್ಯಧಿಕವಾಗಿ ನಡೆಯಬೇಕೆಂದು ಪ್ರಾರ್ಥಿಸುತ್ತದೆ. 2. ಕೋಲಾರದಲ್ಲಿ ಸೇರಿರುವ ಕರ್ಣಾಟಕ ಸಾಹಿತ್ಯ ಸಮ್ಮೇಳನದ ಹತ್ತನೆಯ ಕೂಟವು ಮೈಸೂರಿನ ಶ್ರೀಮದ್ಯುವರಾಜರವರಿಗೆ ತನ್ನ ಗೌರವಪುರಸ್ಸರವಾದ ಅಭಿನಂದನವನ್ನು ಸಮರ್ಪಿಸಿ ಅವರು ದಯಮಾಡಿ ಪರಿಷತ್ತಿನ ಅಧ್ಯಕ್ಷತೆಯನ್ನು ಸ್ವೀಕರಿಸಿ ಪೋಷಣೆ ಕೊಟ್ಟಿರುವದಕ್ಕಾಗಿ ತನ್ನ ಮನಃ ಪೂರ್ವಕವಾದ ಕೃತಜ್ಞತೆಯನ್ನು ಅಂಕಿತಮಾಡಿಕೊಳ್ಳುತ್ತದೆ.

ಗೌ|| ಕಾರ್ಯದರ್ಶಿ.

ಶ್ರೀಮದುಜ್ಜಯಿನೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳ ವಕ್ರಬುದ್ಧಿ.

ನಾನು ಹಿಂದಿನ ಲೇಖನದಲ್ಲಿ ಶ್ರೀ ಉಜ್ಜಯಿನೀ ಸಿದ್ಧಲಿಂಗಶಿವಾಚಾರ್ಯಸ್ವಾಮಿಗಳವರ ಸನ್ನಿಧಿಗೆ ಸ್ವಾಮಿ ಪಾದಸೇವಕನೆಂಬ ನಾಮಧೇಯದ ಮೇಲೆ ಬಹಳ ಕೃತಜ್ಞತಾಪೂರ್ವಕವಾಗಿ ಸದರಿ ಶ್ರೀಗಳವರ ಮೇಲ್ಮೆಗಾಗಿಯೇ ಅಂಕಿತಮಾಡಿಕೊಂಡದ್ದು ಎಲ್ಲರಿಗೂ ತಿಳಿದ ವಿಷಯವೇ ಆಗಿರುತ್ತೆ. ಆದರೆ ನಾನು ಅಷ್ಟು ವಿನಯಪೂರ್ವಕವಾಗಿ ಕೋರಿಕೊಂಡದ್ದು ಅರಣ್ಯರೋದನವಾಗಿ ಪರಿಣಮಿಸಿತೆಂತಾಯಿತು ಅದರಿಂದ ಪ್ರಯೋಜನವಾಗಲಿಲ್ಲ. ಸದರೀ ಶ್ರೀಗಳವರು ತಮ್ಮ ಮಂತ್ರಿಗಳಾದ ಕಾಶೀನಾಥಶಾಸ್ತ್ರಿ ವಗೈರೆ ಅಲ್ಪಮತಿಗಳ ದುರ್ಬೋಧನೆಗೆ ಕಿವಿಗೊಡುವುದನ್ನು ಇನ್ನೂ ಬಿಡದೆ ನಮ್ಮ ವೀರಶೈವ ಜನಾಂಗದಲ್ಲಿ ಅನೇಕ ಜಗಳಗಳನ್ನು ನಡೆಸುತ್ತಾಯಿದ್ದು ನಮ್ಮ ಜನಾಂಗದ ಅನೈಕಮತ್ಯಕ್ಕೆ ಕಾರಣಭೂತರಾಗಿರುತ್ತಾರೆ. ಇವರು ನಮ್ಮ ವೀರಶೈವ ಪಟ್ಟಾಚಾರ್ಯರ ಪೈಕಿ ಒಬ್ಬರಾಗಿ ಇಂಥಾ ಜಗಳಗಳಿಗೆ ಅವಕಾಶಕೊಡದೆ ಸಮಾಜದ ಮೇಲ್ಮೆಯನ್ನು ನೋಡಿ ಅದರ ಅಭಿವೃದ್ಧಿಗಾಗಿ ಪ್ರಯತ್ನಪಡುವುದರ ಬದಲು [illegible] ಸಮಾಜದ ಅನೈಕಮತ್ಯಕ್ಕೆ ಕಾರಣಭೂತವಾದ ಕೆಲಸಗಳನ್ನು [illegible] ಬಂದಿರುವುದು ನಮ್ಮ ವೀರಶೈವಸಮಾಜದ [illegible]

30,00,00,000 ಡಾಲರುಗಳಷ್ಟು ಹೆಚ್ಚಿರುತ್ತದೆಂದೂ ತಿಳಿಯ ಬರುತ್ತದೆ.

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಅಟ್ಲಾಂಟಾದಲ್ಲಿ ಅಭೂತಪೂರ್ವವಾದ ಪ್ರಚಂಡ ವಾಯುವಿನಿಂದ ಕೂಡಿದ ಮಳೆಯು ಬಂದು ದಕ್ಷಿಣ ಮತ್ತು ಉತ್ತರ ಕಾಲೋನಿಯಾ, ಜಾರ್ಜಿಯಾ, ಆಲ್ಬಾಮಾ, ಲೂಸೇನಿಯಾ ಮತ್ತು ಆರ್ಕನಾಸ್ ಈ ದೇಶಗಳ ಮೇಲೆ ನುಗ್ಗಿ ಪಾಳ್ಮಾಡಿ ವರ್ಜೇನಿಯಾದವರೆಗೂ 1000 ಮೈಲಿ ವಿಸ್ತೀರ್ಣದಲ್ಲಿ ಮಹಾನರ್ಥವನ್ನುಂಟುಮಾಡಿರುವುದು. ಇದರ ಪ್ರಳಯದಿಂದ ವಿಶೇಷವಾಗಿ ಹೆಂಗುಸರೂ ಮಕ್ಕಳೂ ಸಹಿತ 108 ಜನರು ಸತ್ತು 500 ಜನರಿಗೆ ಅಪಾಯವಾಗಿರುವುದೆಂದೂ 10,00,000 ಡಾಲರವರೆಗೆ ನಷ್ಟವಾಗಿರುವುದೆಂದೂ ಊಹಿಸಲ್ಪಟ್ಟಿದೆ. ಮನೆಮಾರುಗಳನ್ನು ಕಳೆದುಕೊಂಡಿರುವ ಜನರು ತಿನ್ನುವುದಕ್ಕಿಲ್ಲದೆ ಕನ್ನ ಕಳುವನ್ನು ಮಾಡದಂತೆ ಆಯುಧಪಾಣಿಗಳಾದ ಸೈನಿಕರು ಕಾಯುತ್ತಿರುವರು. ವಿಪನ್ನರ ಸಹಾಯಾರ್ಥವಾಗಿ ಆಹಾರ ಬಟ್ಟೆಗಳು ನಾನಾಕಡೆಯಿಂದ ಕಳುಹಲ್ಪಡುತ್ತಿವೆ. ಈ ಮಳೆಯಾಧಿಕ್ಯದಿಂದ ಮಾರ್ಗಗಳೂ, ಸೇತುಗಳೂ ಜಲದಲ್ಲಿ ಮುಳುಗಿಹೋಗಿ ತಿರುಗಾಟವೂ ಕಟ್ಟಾಗಿಹೋಗಿದೆ.

ರಷ್ಯಾದಲ್ಲಿರುವ ಚೇಕಾ ಎಂಬ ರಹಸ್ಯಕೊಲೆ ಸಂಘವೊಂದು ಜರ್ಮನಿಯಲ್ಲಿರುವುದನ್ನು ಅಲ್ಲಿಯ ಪೋಲೀಸರು ಬಹಳ ಸಾಹಸದಿಂದ ಕಂಡುಹಿಡಿದಿರುವರು. ಜರ್ಮನಿರಾಜ್ಯದಲ್ಲಿ ಕಮ್ಯೂನಿಯನಿಸ್ಟ್ ಕೂಟದವರಿಗೆ ವಿರೋಧಿಗಳಾಗಿಯೂ ಅಪಾಯಕಾರಕರಾಗಿಯೂ ಇರುವವರನ್ನು ಹಿಡಿದು ನಿರ್ಮೂಲ ಮಾಡತಕ್ಕದ್ದೇ ಈ ಸಂಘದ ಕರ್ತವ್ಯಕರ್ಮವಾಗಿದೆ. ಈ ಸಂಘದ ಮುಖ್ಯನಾಯಕನಾದ ರಷ್ಯಾದೇಶದವನು ಸೆರೆಹಿಡಿಯಲ್ಪಟ್ಟಿರುವನು. ಪಟ್ಟಣಗಳನ್ನು ನಿರ್ಮೂಲ ಮಾಡುವುದಕ್ಕಾಗಿ ಈ ಸಂಘದ ಮೆಂಬರುಗಳಿಗೆ ಬೇಕಾದಷ್ಟು ದ್ರವ್ಯವೂ ಮದ್ದುಗುಂಡುಗಳೂ, ಸಿಡಿಮದ್ದುಗಳೂ, ರಕ್ತಭೇದಿ, ವಿಷಮಸೀತಜ್ವರ, ವಾಂತಿಭೇದಿ ಮೊದಲಾದ ಸಾಂಕ್ರಾಮಿಕ ರೋಗಗಳುತ್ಪತ್ತಿಗೆ ಕಾರಣಗಳಾದ ಕ್ರಿಮಿಗಳೂ ಒದಗಿಸಿಕೊಡಲ್ಪಟ್ಟಿರುವುವು. ಸೆರೆಹಿಡಿಯಲ್ಪಟ್ಟ ಜನರು ಮರಣದಂಡನೆಗೆ ಗುರಿಮಾಡಲ್ಪಟ್ಟಿರುವರಂತೆ. ವರ್ಟಂಬರ್ಗಿನಲ್ಲಿ ಸ್ವದೇಶಾಂಗಮಂತ್ರಿಯಾಗಿದ್ದ ಜನರಲ್ ವಾಗ್‌ಸ್ಟಿಕ್ ಎಂಬ ತಾನೂ ಮರಣದಂಡನೆಗೆ ಗುರಿಯಾಗಿರುವವರಲ್ಲಿ ಒಬ್ಬನಾಗಿರುತ್ತಾನೆ. ಜರ್ಮನರ ಅದ್ಭುತಮೇಧಾಶಕ್ತಿಯು ಪ್ರಪಂಚವಿನಾಶಕಾರಕವಾಗಿ ಪರಿಣಮಿಸಿರುವುದು ಶೋಚನೀಯವಾಗಿದೆ.

ಮಧ್ಯವಯಸ್ಕಳಾದ ಟೇಸ್ಟರ್ ಎಂಬ ಅಮೇರಿಕಾದೇಶದ ಲಾವಣ್ಯವತಿಯು 18,00,00,000 ರೂಪಾಯಿಗಳಿಗೆ ಮೋಸ ಮಾಡಿರುವಳೆಂಬ ಅಪರಾಧದಮೇಲೆ ಸೆರೆಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುವಳು. ಈಕೆಯು ಗಂಡನ ಸಮೇತ 1918 ರಲ್ಲಿ ಅಮೇರಿಕೆಯಿಂದ ಯೂರೋಪಿಗೆ ಬಂದು, ಜನರನ್ನು ಮೋಸದಿಂದ ಮುಳುಗಿಸಿ ಅವರ ಅಪಾರಹಣವನ್ನೆಲ್ಲಾ ಸುಲಿದುಕೊಂಡು ಕೋಟ್ಯಾಧೀಶ್ವರರಂತೆ ಜೀವಿಸುವ ಜನರ ಗುಂಪನ್ನು ಸೇರಿದಳು. ಅನಂತರ 1920ರ ವರೆಗೆ ಪ್ಯಾರಿಸಿನ ಅನೇಕ ಹೋಟಲುಗಳನ್ನು ಸ್ವತಂತ್ರವಾಗಿಟ್ಟುಕೊಂಡು ಬ್ಯಾಂಕುಗಳಿಗೆ ಸುಳ್ಳುಹಕ್ಕುಗಳನ್ನು ಕೊಡುತ್ತಿದ್ದುದಕ್ಕಾಗಿ 6 ತಿಂಗಳ ಕಾಲ ಕಾರಾಗೃಹದಶಿಕ್ಷೆ ವಿಧಿಸಲ್ಪಟ್ಟಿದ್ದು ದೇಶಭ್ರಷ್ಟರಾಗಿ ಮಾಡಲ್ಪಟ್ಟರು. ತರುವಾಯ ಆಕೆಯ ಗಂಡನು ರೋಮ್ ಪಟ್ಟಣಕ್ಕೆ ಹೋಗಿ ಒಬ್ಬ ದೇಶಾಯಿನಿಯನ್ನು ಮದುವೆ ಮಾಡಿಕೊಳ್ಳಲು ನಿಶ್ಚಯಿಸಿ ಆಕೆಯು ತನ್ನ ಐಶ್ವರ್ಯವನ್ನು ತೆಗೆದುಕೊಂಡು ಅಮೇರಿಕೆಗೆ ಹೊರಟುಬರುವಂತೆ ಬೋಧಿಸಿದನು. ಇತ್ತಲಾಗಿ ಅವನ ಹೆಂಡತಿ ಟೇಸ್ಟರಳು ಬ್ರಸಲ್ಸಿಗೆ ಹೋಗಿ ಒಂದುವರ್ಷಕಾಲದಲ್ಲಿ 15,00,000 ರೂಪಾಯಿಗಳವರೆಗೂ ಜನರಿಗೆ ಮೋಸಮಾಡಿ ಪಲಾಯನಳಾಗಲು ಮ್ಯೂನಿಚ್ ಎಂಬಲ್ಲಿ ಸೆರೆಹಿಡಿಯಲ್ಪಟ್ಟು ಬ್ರಸಲ್ಸಿಗೆ ಹಿಂದಿರುಗಿ ಕರೆತರಲ್ಪಟ್ಟು 12 ತಿಂಗಳು ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟಳು. ಅವಳು ಅಲ್ಲಿಂದ ಬಿಡುಗಡೆಯನ್ನು ಹೊಂದಿ ನೂರಾರು ಸೇವಕಾಳಿಗಳೊಡನೆ ಜ್ಯೂರಿಚ್ಚಿಗೆ ಹೋಗಿ ಅತ್ಯಂತ ಚಿತ್ತಾಕರ್ಷಕ ವಿಧದಂತೆಯೂ, ಒಂದು ದೊಡ್ಡ ಆಸ್ತಿಗೆ ಉತ್ತರವಾರಸುದಾರಳಂತೆಯೂ ನಟಿಸಿ ಬಹುದೊಡ್ಡ ಅಟ್ಟಹಾಸದಿಂದಲೂ ದುಂದುಗಾರಿಕೆಯಲ್ಲೂ ಇದ್ದುಕೊಂಡು ಅನೇಕರು ತನ್ನನ್ನು ಮೋಹಿಸಿ ತನ್ನ ಬಲೆಗೆ ಬೀಳುವಂತೆ ಮಾಡಿ ಅವರುಗಳಲ್ಲಿ ಮೂವರು ಪೂರ್ಣ ಶ್ರೀಮಂತರುಗಳಿಗೆ ಅವರನ್ನು ಲಗ್ನಮಾಡಿಕೊಳ್ಳುತ್ತೇನೆಂದು ಅಭಯವನ್ನು ಕೊಟ್ಟು ಅವರು ಲೆಕ್ಕವಿಲ್ಲದಷ್ಟು ವಸ್ತ್ರಾಭರಣಗಳನ್ನು ಬಹುಮಾನಿಸುತ್ತ ಆಕೆಯ ಅನುರಾಗಪ್ರಸಾದನಿರೀಕ್ಷಣೆಯುಲ್ಲಿರುವಷ್ಟರಲ್ಲಿ ಆಕೆಯ ಮೋಸವು ಹೊರಬಿದ್ದಿತು. ತನ್ನ ಮೋಸವು ಬೈಲಾಗುವುದರೊಳಗಾಗಿ ತನ್ನ ಬಲೆಗೆ ಬಿದ್ದ ಆ ಮೂವರು ಶ್ರೀಮಂತರುಗಳು ಆಕೆಯ ಪ್ರಸಾದನಿರೀಕ್ಷಣೆಯಿಂದ ಲೆಕ್ಕವಿಲ್ಲದಷ್ಟು ವಸ್ತ್ರಾಭರಣಗಳನ್ನು ತಂದೊಪ್ಪಿಸುವಂತೆ ಮಾಡಿದ್ದಳು.

1924 ನೇ ಮೇ 15 ನೇ ಮರ್ಸ್ಕುವಿಗೆ ಆಖೈರಾದ ವಾರಕ್ಕೆ ವರ್ತಮಾನ ಪತ್ರಿಕೆಗಳಿಗೆ ಕಳುಹಿಸುವ ಸರ್ಕಾರಿಯುಪ್ಪಣೆಯ ಗೋಷ್ವಾರೆ.

1. ಆನೇಕಲ್ ತಾಲ್ಲೂಕಿನ ಅಮಲ್ದಾರರಾದ ಮಿ|| ಹೆಚ್. ಬಸವರಾಜ ಅರಸರವರನ್ನು ಬಿ. ಹೆಡ್ಕ್ವಾಲಿನ ಅಸಿಸ್ಟೆಂಟ್ ಕಮಿಷನರಾಗಿ ಬದಲಿ ನೋಡಲು ನೇಮಿಸಿ, ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿನ ಬಗ್ಗೆ ಕಡೂರು ಡಿಸ್ಟ್ರಿಕ್ಟಿಗೆ ಮೊಕರೂರ್ಮಾಡಿದೆ. ಮಿ|| ವಿ. ಎಸ್. ರಾಜಗೋಪಾಲಾಚಾರ್ಯರವರನ್ನು ಅಸಿಸ್ಟೆಂಟ್ ಕಮಿಷನರಂತೆ ಬದಲಿ ನೋಡುವಂತೆ ನೇಮಿಸಿ ಕಡೂರು ಡಿಸ್ಟ್ರಿಕ್ಟು ಖಜಾನೆಗೆ ಮೊಕರೂರ್ಮಾಡಿದ್ದುದು ಇದರಿಂದ ರದ್ದಾಗುತ್ತದೆ.

2. ಸರ್ಕಾರದ ಫೈನಾನ್ಸಿಯಲ್ ಸೆಕ್ರಿಟರಿಗಳಾದ ರಾಜಕಾರ್ಯಪ್ರಸಕ್ತ ಮಿ|| ಎಂ. ಎನ್. ಕೃಷ್ಣರಾವ್ ಬಿ.ಎ., ಯವರಿಗೆ 1924ನೇ ಮೇ 7ನೇ ತಾರೀಖಿನಲಾಗಾಯತು 20 ದಿನಗಳ ಪ್ರಿವಿಲೇಜು ರಜವನ್ನು ಮಂಜೂರ್ಮಾಡಿದೆ. ಈ ಕಾಲದಲ್ಲಿ (b) ಮೈಸೂರು ಸರ್ಕಾರದ ಕಂಟ್ರೋಲರವರಾದ ಮಿ|| ಟಿ. ಸತ್ಯರಾಜಚೆಟ್ಟಿ, ಬಿ.ಎ., ಯವರನ್ನು ಸರ್ಕಾರದ ಅಫಿಸಿಯೇಟಿಂಗ್ ಫೈನಾನ್ಸಿಯಲ್ ಸೆಕ್ರೆಟರಿಯವರನ್ನಾಗಿಯೂ, (a) ಮಿ|| ಎಲ್. ಬಿಸ್ವೇಪಂತ್‌ಬಾದಾಮಿ ಬಿ.ಎ., ಯವರನ್ನು ಮೈಸೂರು ಸರ್ಕಾರದ ಅಫಿಸಿಯೇಟಿಂಗ್ ಕಂಟ್ರೋಲರವರನ್ನಾಗಿಯೂ, ನೇಮಿಸಿದೆ.

3. 1923ನೆ ವರ್ಷಕ್ಕೆ ಮೈಸೂರು ಸಂಸ್ಥಾನದಲ್ಲಿ ಮಳೆಯ ಲೆಕ್ಕಗಳ ರಿಪೋರ್ಟನ್ನು ಪರಿಶೀಲಿಸುವಲ್ಲಿ ಸರ್ಕಾರದವರು, 1922ನೆ ವರ್ಷದಲ್ಲಿ 199 ರೈನುಗೇಜುಗಳು (ಮಳೆಯನ್ನು ಅಳತೆಕೊಡುವ ಯಂತ್ರಗಳು) ತನಿಖೆಮಾಡಲ್ಪಟ್ಟದ್ದರಿಂದಲೂ, ಪ್ರಸಕ್ತವರ್ಷದಲ್ಲಿ 207 ಗೇಜುಗಳು ತನಿಖೆಯಾಗಿರುವುದರಿಂದಲೂ, ತನಿಖೆಯ ಕೆಲಸವು ಗಣನೀಯವಾಗಿ ಉತ್ತಮಪಟ್ಟಿರುತ್ತೆಂದು, ಅಭಿಪ್ರಾಯಪಡುತ್ತಾರೆ. ಆದರೂ, ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ತನಿಖೆಯಾಗದೆ ಇರುವ ರೈನುಗೇಜುಗಳು ಅನೇಕವಾಗಿವೆ. ಈ ಡೆಪ್ಯುಟಿಕಮಿಷನರುಗಳು ತಮ್ಮ ತಮ್ಮ ಡಿಸ್ಟ್ರಿಕ್ಟುಗಳಲ್ಲಿರುವ ರೈನುಗೇಜುಗಳೆಲ್ಲವೂ ಚಾಲ್ತಿವರುಷದಲ್ಲಿ ಪೂರ್ತಿಯಾಗಿ ತನಿಖೆಯಾಗುವಂತೆ ನೋಡಿಕೊಳ್ಳುವರೆಂದು ಕೋರಿದೆ.

4. ಡಿಸ್ಟ್ರಿಕ್ಟು ಬೋರ್ಡುಗಳಿಗೆ ಫೈಸಲ್ಮಾಡುವುದಕ್ಕೆ ಅಧಿಕಾರವಿಲ್ಲದಿದ್ದು, ಅಭಿಪ್ರಾಯಕೊಡುವುದಕ್ಕಾಗಿ ಮಾತ್ರ ಅವುಗಳಿಗೆ ಕಳುಹಿಸಲ್ಪಡಬಹುದಾದ ಸ್ಥಳೀಯ ವಿಷಯಗಳ ಪರ್ಯಾಲೋಚನೆಯ ಬಗ್ಗೆ ನಿಬಂಧನೆಗಳನ್ನು ಏರ್ಪಡಿಸಿದೆ.

5. ಕೋಲಾರ ಡಿಸ್ಟ್ರಿಕ್ಟು ಮುಳಬಾಗಲು ತಾಲ್ಲೂಕಿನ ರೀಸೆಟಲ್ಮೆಂಟನ್ನು ಮಂಜೂರುಮಾಡಿ ಹುಕುಮುಗಳನ್ನು ಸಾದರ್ಮಾಡಿರುತ್ತದೆ. ಸರ್ಕಾರದವರು ಮಂಜೂರ್ಮಾಡಿದ ಸಲಹೆಗಳಿಂದ ಸರ್ಕಾರಕ್ಕೆ ಹಾಲಿ ಇರತಕ್ಕ ಕಂದಾಯದಿಂದ ಹುಟ್ಟುವಳಿಯಾಗುವ ಮೊಬಲಗಿಗಿಂತ 5418 ರೂಪಾಯಿಗಳು ಹೆಚ್ಚಾಗಿ ಎಂದರೆ ಸೇಕಡ 3 ರಂತೆ ಹೆಚ್ಚಾಗಿ ಉತ್ಪತ್ತಿಯಾಗುವುದು ಈ ಹೊಸ ದರಗಳು ಮಾಮೂಲಿನಂತೆ 30 ವರುಷಗಳ ಬಾಬರಿಯೊಂದಿಗೆ 1924ನೆ ಜುಲೈ 1ನೆ ತಾರೀಖಿನ ಲಾಗಾಯತು ಜಾರಿಗೆ ಬರತಕ್ಕದ್ದು.

6. 1923-24ನೆ ಸಾಲಿನ ಮೈಸೂರು ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನವು ಮೈಸೂರಿನಲ್ಲಿ ಜಗನ್ಮೋಹನಬಂಗಲೆಯ ಸಭಾಮಂಟಪದಲ್ಲಿ 1924ನೆ ಜೂನ್ 6ನೆ ತಾರೀಖು ಶುಕ್ರವಾರದ ದಿನ ಮಧ್ಯಾಹ್ನ 12 ಗಂಟೆಗೆ ಪ್ರಾರಂಭಿಸಲ್ಪಟ್ಟು ನಡೆಯಿಸಲ್ಪಡುವುದು.

7. ಮೈಸೂರು ನ್ಯಾಯವಿಧಾಯಕಸಭೆಯ ಮೀಟಿಂಗು ಬೆಂಗಳೂರು ಪಬ್ಲಿಕ್ ಆಫೀಸುಗಳ ಕಟ್ಟಡದ ಸೆಂಟ್ರಲ್ ಹಾಲಿನಲ್ಲಿ 1924ನೆ ಜೂನ್ 17ನೇ ತಾರೀಖು ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಉಪಕ್ರಮವಾಗುವುದು.

8. ಮೈಸೂರು ಸಂಪದಭ್ಯುದಯ ಸಮಾಜದ ಸಮಾರಂಭೋತ್ಸವವು 1924ನೆ ಜೂನ್ 14ನೆ ಮುಮ್ಮಂ ಶನಿವಾರದ ದಿನ ಮೈಸೂರಿನಲ್ಲಿ ಜಗನ್ಮೋಹನಬಂಗಲೆಯ ಸಭಾಮಂಟಪದಲ್ಲಿ ನಡೆಯುವುದು.

ಅದ್ಭುತಶೋಧ.

ಚಂದ್ರನ ಮೇಲೆ ಬಾಣಪ್ರಯೋಗ :-ಅನಾದಿಕಾಲದಿಂದಲೂ ಚಂದ್ರಲೋಕವನ್ನು ಕುರಿತು ಗಮನಮಾಡುವ ಪ್ರಯತ್ನವು ಮನುಷ್ಯಮಾತ್ರರಿಂದ ನಡೆದ ಮಾತಾಗಿರುತ್ತದೆ. ಚಂದ್ರನಲ್ಲಿರುವ ಅಪ್ರತಿಮ ಸೌಂದರ್ಯದ ಮೂಲಕವಾಗಿ ಕವಿಗಳೂ, ಕಾದಂಬರಿಕಾರರೂ ಇಂದಿನವರೆಗೆ ಅನೇಕಾವರ್ತಿ ಚಂದ್ರನ ಮೇಲೆ ಪರ್ಯಟನ ಮಾಡಿರುತ್ತಾರೆ. ಕವಿಗಳಾಗಲಿ, ಕಾದಂಬರಿಕಾರರಾಗಲಿ ತಮ್ಮ ಕಲ್ಪನೆಗೆ ಯೋಗ್ಯವೆಂದು ತೋಚಿದ ಯಾವದೊಂದು ಸಾಧನವನ್ನು ಕಲ್ಪಿಸಿಕೊಂಡು ಅದರ ಮೇಲೆ ಆರೂಢರಾಗಿ ಚಂದ್ರಲೋಕವನ್ನು ಮುಟ್ಟುವರು; ಹೇಗೆ ಕವಿಗಳೋ ಹಾಗೆ ಕಾದಂಬರಿಕಾರರು ಚಂದ್ರಲೋಕವನ್ನು ಮುಟ್ಟಿಬರುವ ಪ್ರಯತ್ನಮಾಡಿದರು. ಆದರೆ ಕಲ್ಪನೆಯಲ್ಲಿ ಹುಟ್ಟಿ ಆ ಮಾತು ಕಲ್ಪನೆಯಲ್ಲಿಯೇ ಉಳಿಯಿತು.

ಆದರೆ ಇತ್ತೀಚೆಗೆ ಇನ್ನೊಬ್ಬ ಪ್ರಚಂಡ ಶೋಧಕನು ಹುಟ್ಟಿರುವನು. ಈತನ ಪ್ರಯತ್ನವನ್ನು ನೋಡಿದರೆ ಚಂದ್ರಲೋಕವನ್ನೇ ಬಡಿದು ಬಾಯಲ್ಲಿ ಹಾಕಿಕೊಳ್ಳುವನೆಂದು ತೋರುತ್ತದೆ. ಈ ಶೋಧಕನಿಗೆ ಗೋಡಾರ್ಡನೆಂಬ ಹೆಸರು ಇರುತ್ತದೆ. ಇವನ ಕಲ್ಪನೆಯು ಕವಿಗಳ ಕಲ್ಪನೆಯಂತೆ ಹವೆಯೊಳಗಿನ ಕಲ್ಪನೆಯಲ್ಲ; ಇವನು ಒಂದು ಅದ್ಭುತಶಕ್ತಿಯ ಬಾಣವನ್ನು ತಯಾರಿಸಿರುತ್ತಾನೆ. ಈ ಬಾಣವು ಸೆಕಂಡಿಗೆ ೭|| ಮೈಲು ದೂರ ದಾರಿಯನ್ನು ಕ್ರಮಿಸುತ್ತದೆ. ಮತ್ತು ಇದು ಇಚ್ಛಿತ ಸ್ಥಳದವರೆಗೆ ಅವ್ಯಾಹತವಾಗಿ ಸಾಗುವಂತೆ ನಡನಡುವೆ ಸ್ಫೋಟವಾಗಿ ಹೊಸಗತಿಯನ್ನು ಹೊಂದುತ್ತದೆಯಂತೆ ! ಈ ಬಾಣವನ್ನು ಪೃಥ್ವಿಯು ಆಕರ್ಷಿಸುವದಿಲ್ಲವಂತೆ. ಚಂದ್ರಲೋಕವನ್ನು ಮುಟ್ಟುವವರೆಗೆ ಸಾಲುವಷ್ಟು ಸ್ಫೋಟಕ ದ್ರವ್ಯವು ಇದರಲ್ಲಿ ತುಂಬಿರುತ್ತದೆ. ಒಮ್ಮೆ ಈ ಬಾಣವು ಚಂದ್ರನ ಕಕ್ಷೆಯೊಳಗೆ ಹೋಯಿತೆಂದರೆ ಚಂದ್ರನು ಅದನ್ನು ಆಕರ್ಷಿಸುವನು. ಆಗ ಆ ಬಾಣವು ಚಂದ್ರನಿಗೆ ತಗಲುವದು.

ಈ ಬಾಣವು ಚಂದ್ರಲೋಕವನ್ನು ಮುಟ್ಟಿದ್ದು ಸಹ ಕಾಣುವ ಯೋಜನೆಯನ್ನ ಆ ಶೋಧಕನು ಮಾಡಿರುತ್ತಾನೆ. ಮತ್ತು ಬಾಣವು ಪೃಥ್ವಿಯಿಂದ ಹೊರಟು ಚಂದ್ರಲೋಕಕ್ಕೆ ಎಷ್ಟೊತ್ತಿಗೆ ಹೋಗುವದೆಂಬದನ್ನು ಸಹ ಅದರ ಗತಿಯ ಮೇಲಿಂದ ಗೊತ್ತುಪಡಿಸಿರುತ್ತಾನೆ. ಆತನ ಈ ಪ್ರಯತ್ನವು ಯಶಸ್ವಿಯಾದರೆ ಮುಂದೇನಾಗುವದೋ ತಿಳಿಯದು

(ಸ. ಚಂ.)

ಗೋಕರ್ಣದಲ್ಲಿ ನಡೆದ ಕರ್ನಾಟಕಪರಿಷತ್ತಿನ ಅಧ್ಯಕ್ಷರಾಗಿದ್ದ ಶಾರದಾಪೀಠದ ಶ್ರೀ ಶಂಕರಾಚಾರ್ಯರು ಅಂತ್ಯಜರನ್ನು ಕುರಿತು ಮಾಡಿದ ಭಾಷಣದ ಮುಖ್ಯಾಂಶ.—

ಅವರು ಹಿಂದೂ ಸಮಾಜದ ಒಂದು ಅಂಗವಾಗಿರುವರು. ಅಂಗಗಳೆಲ್ಲ ಸರಿಯಾಗಿದ್ದರೆ « ಅಂಗಿ » ಯು ನೆಟ್ಟಗಿರುವದು. ನಮ್ಮ ಹಿಂದೂ ಸಮಾಜದ ಅಂಗಭೂತರಾದ ಈ ಅಂತ್ಯಜರು ರೋಗಪೀಡಿತರಾಗಿರುವವರೆಗೆ ಹಿಂದೂ ಸಮಾಜವು ಎಂದೂ ನೆಟ್ಟನ ಸ್ಥಿತಿಯಲ್ಲಿರಲಾರದು. ಅದ್ದರಿಂದ ಸ್ವಾರ್ಥದೃಷ್ಟಿಯಿಂದಲೂ ಸಹ ಇವರ ಉದ್ಧಾರವು ಅವಶ್ಯವಿರುವದು. ಇನ್ನು ಪಾರಮಾರ್ಥದೃಷ್ಟಿಯಿಂದಲಾದರೂ ನಮ್ಮ ಧರ್ಮದಲ್ಲಿ « ಸರ್ವೇ ಜನಾಃ ಸುಖಿನೋಭವಂತು » ಎಂಬ ನಮ್ಮ ಧರ್ಮವಾಕ್ಯದಂತೆ ಎಲ್ಲವರ ಸುಖವನ್ನು ಬಯಸುವದು ನಮ್ಮ ಧರ್ಮವಿರುತ್ತದೆ. ಅಸ್ಪೃಶ್ಯರ ವಿಷಯದಲ್ಲಿ ಸಹ ಅಸ್ಪೃಶ್ಯತೆ ನಾಶವಾಗಬೇಕೆಂದು ಇಚ್ಛಿಸಬೇಕೇ ಹೊರತು ಅಸ್ಪೃಶ್ಯರು ನಾಶಹೊಂದಬೇಕೆಂದು ಇಚ್ಛಿಸುವದಲ್ಲ. ಹೀಗಿರುವದರಿಂದ ಅಂತ್ಯಜರ ಏಳಿಗೆಯ ಪ್ರಯತ್ನಮಾಡುವದು ನಮ್ಮ ಕರ್ತವ್ಯವಾಗಿರುವದು.

ನಮ್ಮ ಧರ್ಮದಲ್ಲಿ ಸ್ಪೃಶ್ಯ, ಅಸ್ಪೃಶ್ಯರೆಂದು ಜನ ಸಮಾಜದ ವಿಭಾಗಗಳನ್ನು ಮಾಡದೆ ಇಂಥ ಸಮಯದಲ್ಲಿ ಮಾತ್ರ ಸ್ಪೃಶ್ಯ ಅಸ್ಪೃಶ್ಯವೆಂಬ ನಿಯಮವನ್ನು ಮಾಡಿರುವರು. ರಾಷ್ಟ್ರವಿಪ್ಲವ ಕಾಲದಲ್ಲಿ, ಸಭೆಗಳಲ್ಲಿ « ನಗರ ಗ್ರಾಮದ್ವಾರೇಷು » ಸ್ಪರ್ಶದೋಷವಿಲ್ಲವೆಂದು ನಮ್ಮ ಶಾಸ್ತ್ರದಲ್ಲಿ ಹೇಳಿರುತ್ತದೆ. ಸಾರ್ವಜನಿಕ ಬಾವಿ ಮೊದಲಾದವುಗಳ ವಿಷಯದಲ್ಲಾದರೂ « ವಿಸೃಷ್ಟಂ ಸರ್ವಭೂತೇಭ್ಯಃ » ಅಂದರೆ ಕೇವಲ ಮಾನವರ ಉಪಯೋಗಕ್ಕೆ ಮಾತ್ರ ಅಲ್ಲ. ಸರ್ವಭೂತ ಮಾತ್ರದ ವಿಷಯಕ್ಕೆ ಕಟ್ಟಿದ ಬಾವಿ ಮೊದಲಾದ ವಿಷಯಗಳಲ್ಲಿ, ಅವರನ್ನು ನಿಷೇಧಿಸಿದಲ್ಲಿ ಕಟ್ಟಿಸಿದವರನ್ನು ಕುರಿತು ವಿಶ್ವಾಸಭಂಗ (Breach of trust) ವೆಂಬ ದೋಷಬರುವದು. ಆದ್ದರಿಂದ ಸರ್ವಸಾಧಾರಣ ಸಂಸ್ಥೆಗಳಿಂದ ಅವರನ್ನು ಎಂದೂ ಬಹಿಷ್ಕೃತರನ್ನಾಗಿ ಇಡುವದು ನಿಷಿದ್ಧವು.

ಆದರೆ, ಹಿಂದೂ ಮಹಾಸಭೆಯೊಳಗೆ ಧರ್ಮಗುರುಗಳು ಹೇಳಿದ ಉಕ್ತಿಯ ಆಧಾರದ ದುರುಪಯೋಗ ಮಾಡಿ ಕೆಲವರು ಉತ್ತರ ಹಿಂದುಸ್ಥಾನದಲ್ಲಿ, ಇಲ್ಲಿಗೇ ನಿಲ್ಲದೆ ಸಹ ಭೋಜನ ಮುಂತಾದವುಗಳನ್ನು ಸಹ ಉಪದೇಶ ಮಾಡಲಿಕ್ಕೆ ಹತ್ತಿದರು. ಮತ್ತು ಅವರು ಹೀಗೆ ಮಾಡುತ್ತಲೇ « ಅಧಿಕಾಶಾ ಅಧಿಕನಷ್ಟಂ » ಎಂಬ ಉಕ್ತಿಗನುಸರಿಸಿ ಮೊದಲು ಅಂತ್ಯಜೋದ್ಧಾರದ ಬಗ್ಗೆ ಅನುಕೂಲವಿದ್ದವರೂ ಸಹ ವಿರುದ್ಧರಾದರು.

ಪ್ರಸ್ತುತ ಪ್ರಸಂಗದಲ್ಲಿಯಾದರೂ ನಾವು ಈ ವಿಷಯಕ ಠರಾವನ್ನು ಧರ್ಮಕ್ಕೆ ವಿರುದ್ಧವಾಗದಂತೆ ನಿರ್ಣಯಿಸಬೇಕು. « ಪತಿತೋದ್ಧಾರಕತ್ವಮೇವ ಪಾವನತ್ವಮ್ » ಅಪವಿತ್ರನನ್ನು ಪವಿತ್ರಮಾಡುವವನೇ ಯಥಾರ್ಥ ಪವಿತ್ರನು. ಆದ್ದರಿಂದ ನಾವು ಪವಿತ್ರರೆಂಬ ದುರಭಿಮಾನದಿಂದ ಅಂತ್ಯಜರನ್ನು ದೂರಮಾಡದೆ, ಅವರ ಉದ್ಧಾರಕ್ಕೆ ಎಲ್ಲ ಬಗೆಯಿಂದ ಪ್ರಯತ್ನಿಸಬೇಕು. ಕ. ವೃ.

ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್, ಮೈಸೂರು.

ಪ್ರಕಟನೆ.

ಕಳೆದ ತಾ|| 5-9-1923 ರಲ್ಲಿ ನಡೆದ ಮ್ಯಾನೇಜಿಂಗ್ ಕಮಿಟಿ ಮೀಟಿಂಗಿನಲ್ಲಿ ತೀರ್ಮಾನಿಸಲ್ಪಟ್ಟ 3 ನೆಯ ಪ್ರಸ್ತಾವದ 6 ನೆಯ ಕಾಲಮಿನಲ್ಲಿ « ತಾ|| 6-4-1921 ರಲ್ಲಿ ನಡೆದ ಮ್ಯಾನೇಜಿಂಗ್ ಕಮಿಟಿ ಮೀಟಿಂಗಿನಲ್ಲಿ ತೀರ್ಮಾನವಾದ 5 ನೆಯ ಠರಾವು ಪುನಃ ಚರ್ಚಿಸಲ್ಪಟ್ಟು,

೧ ನೆಯ ವರ್ಷ ಹೋಮವಿಧಿ, ಪೂಜಾಸಾರಸಮುಚ್ಚಯ (೨ನೆ ಮುದ್ರ

೨ ನೆಯ ವರ್ಷ ಶಾಂತಿಹೋಮ, ಮಹಾಭಿಷೇಕ.

೩ ನೆಯ ವರ್ಷ ತ್ರೈವರ್ಣಿಕಾಚಾರ, ೨೪ ತೀರ್ಥಂಕರ ಆರಾಧನಾ

೪ ನೆಯ ವರ್ಷ ಶ್ರೀನೇಮಿಚಂದ್ರಕೃತಪ್ರತಿಷ್ಠಾ ತಿಲಕ.

ಈ ಗ್ರಂಥಗಳಲ್ಲಿ ಪರೀಕ್ಷಿಸಿ ಉತ್ತೀರ್ಣರಾದ ವೈದಿಕವಿದ್ಯಾರ್ಥಿಗಳಿಗೆ ಪಾರಿತೋಷಿಕವನ್ನು ಕೊಡುವುದಕ್ಕೋಸ್ಕರ ಪ್ರತಿವರ್ಷವೂ ನೂರು ರೂಪಾಯಿಗಳನ್ನು ಮಂಜೂರು ಮಾಡಿದೆ. ಮತ್ತು ಇದನ್ನು ಜಾರಿಗೆ ತರಲು ಈ ಕೆಳಗೆ ಕಂಡ ಮಹಾಶಯರಿಂದ ಕೂಡಿದ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿದೆ.

೧. ಮಹಾವಿದ್ವಾನ್ ವೇ|| ದೋರ್ಬಲಿಜಿನದಾಸಶಾಸ್ತ್ರಿಗಳು.
೨. ನ್ಯಾಯತೀರ್ಥ ವೇ|| ಶಾಂತರಾಜಶಾಸ್ತ್ರಿಗಳು.
೩. ವೇ|| ಬಿ. ಚಂದಪ್ಪಪಂಡಿತರು, ಮೈಸೂರು.»

ಮೇಲಿನ ಠರಾವಿನ ಪ್ರಕಾರ ಜ್ಯೇಷ್ಠ ಬಹುಳ ೧೦ ಗುರುವಾರ (ತಾ|| 26-6-1924) ಪ್ರಾತಃಕಾಲ ೮ ಗಂಟೆಯಿಂದ ಮೈಸೂರು ಎಂ. ಎಲ್. ಜೈನವಿದ್ಯಾರ್ಥಿನಿಲಯದಲ್ಲಿ ಮೇಲ್ಕಂಡ ಗ್ರಂಥಗಳಲ್ಲಿ ಪರೀಕ್ಷೆಯು ನಡೆಯುವುದರಿಂದ ಉಮೇದುವಾರರಾದ ವೈದಿಕರು ಬರುವ ಜೂನ್ ತಾ|| 12 ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಪರೀಕ್ಷಾ ಗ್ರಂಥಗಳನ್ನು ನಮೂದಿಸಿ ಅರ್ಜಿಗಳನ್ನು ಬರೆದುಕೊಳ್ಳಬೇಕು.

ಆಯಾ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾದವರಿಗೆ ಕ್ರಮವಾಗಿ ೧೫, ೨೦, ೩೦, ೪೫ ರೂಪಾಯಿಗಳು ಬಹುಮಾನ ಕೊಡಲ್ಪಡುವುವು.

ಸೆಕ್ರೆಟರಿಗಳು,
ತಾ|| 20-5-24, ಮೈಸೂರು. } ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್, ಮೈಸೂರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಸ್ಸಿಗೂ ಆಕ್ಷೇಪಕ್ಕೂ ಅವಕಾಶವಿಲ್ಲದೆ ಸರ್ವ ಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟಿದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ಮಾರುಮಾರುದ್ದ ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಪರಸ್ಪರ ಸಮಾಜಗಳಲ್ಲಿ ಏಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಷಮ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೂಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧದ ಲೇಖನಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕರೂ ಖಂಡಿತವಾಗಿ ಗಮನಿಸಬೇಕು.—ಸಂ.

ಪೀಠಾಚಾರ್ಯರ ಜಯಂತ್ಯುತ್ಸವ.

ಬಳ್ಳಾರಿ ಹೀರದ ಸೂಗಮ್ಮನವರ ಚೌಕಿಯಲ್ಲಿ ಕಳೆದ ವೈಶಾಖ ಶುದ್ಧ 5 ಶುಕ್ರವಾರ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಯ ಮಹೋತ್ಸವವು ವ್ಯಾಕರಣಭೂಷಣ ಪಂಡಿತ ವಿಶ್ವನಾಥಶಾಸ್ತ್ರಿಗಳಿಂದಲೂ ಅನೇಕ ಸಂಸ್ಕೃತ ವಿದ್ಯಾರ್ಥಿಗಳಿಂದಲೂ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಎಸ್. ಯಂ. [illegible],
ಹೀರದ ಸೂಗಮ್ಮನ ಚೌಕಿ ಬಳ್ಳಾರಿ.

ಮಂಡ್ಯ.

ಈ ಮೇ ತಾ|| 18 ಮತ್ತು 19 ರಲ್ಲಿ ಎರಡು ಹದ ಮಳೆಯಾಯಿತು. ಆದರೂ ಕೆರೆಗೆ ನೀರು ಬರಲಿಲ್ಲ. ಮದ್ದೂರು ಕೆರೆಗೆ ಮಾತ್ರ ಅರ್ಧ ಬಂದಿದೆ. ಬಿಸಿಲಿನತಾಪ ಕಮ್ಮಿ ಆಗಿದೆ. ಜೋಳದ ಪಸಲು ಬಹಳ ಸೊಂಪಾಗಿದೆ. ಹಿಮವು ಬೀಳುವುದರಿಂದ ಚಾಯಿಲೆಯು ಜನಗಳಿಗೆ ಬರುತ್ತದೆಂದು ಜನಗಳು ಆಡಿಕೊಳ್ಳುತ್ತಾರೆ. ಈ ಊರಿನ ಸ್ಪೆಷಲ್ ಕೋರ್ಟಿನಲ್ಲಿ ನಾಗಮಂಗಲದ ಅಮಲ್ದಾರ್ ಮಿ|| ಶಂಕರಪ್ಪನವರನ್ನು ಮೈಲಾರಪಟ್ಟಣದ ಶಂಕರಲಿಂಗೇಗೌಡನು ಕಲ್ಲುಕಟ್ಟಿದವನು ಎಂದು ಬೈದದ್ದಕ್ಕಾಗಿ ಮಾಡಲ್ಪಟ್ಟದ್ದ ಮೊಖದ್ದಮೆಯಲ್ಲಿ ಅಪರಾಧಿಗೆ 150 ರೂ. ಜುಲ್ಮಾನೆ ತಪ್ಪಿದಲ್ಲಿ 3 ತಿಂಗಳ ಸಜಾ ವಿಧಿಸಲ್ಪಟ್ಟಿತು. ರೈತರು ಸರ್ಕಾರದ ಮೇಲೆ ಬೀಳುವುದು ಸರ್ವಥಾ ತಪ್ಪು. ಬಲ್ಲವ.

ದೇವಾಂಗ ಸಂಘ ಬೆಂಗಳೂರು.

ದೇವಾಂಗಮತಕ್ಕೆ ಸೇರಿದ ಬಾಲಕ ಬಾಲಕಿಯರ ವಿದ್ಯಾಭಿವೃದ್ಧಿಗೆ ಸೌಕರ್ಯಗಳನ್ನು ಕಲ್ಪಿಸುವ ಮುಖ್ಯ ಉದ್ದೇಶದಿಂದ « ದೇವಾಂಗ ಸಂಘ » ವೆಂಬ ಒಂದು ಸಮಾಜವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿರುವದು ಸರಿಯಷ್ಟೆ. ಮೈಸೂರು ದೇಶದಲ್ಲಿ ಈಗ ಲೋವರ್‌ಸೆಕೆಂಡರಿ ಮತ್ತು ಅದಕ್ಕೆ ಮೇಲ್ಪಟ್ಟ ತರಗತಿಗಳಲ್ಲಿ ವ್ಯಾಸಂಗಮಾಡುತ್ತಿರುವ ಬಾಲಕ ಬಾಲಕಿಯರೆಲ್ಲರೂ ತಮ್ಮ ಹೆಸರು ಮತ್ತು ವಿಳಾಸಗಳನ್ನೂ, ಬೆಂಗಳೂರು ಸಿಟಿ ಜುಮ್ಮಾಮಸೀದಿ ರೋಡಿನಲ್ಲಿರುವ ದೇವಾಂಗ ಸಂಘದ ಸೆಕ್ರೆಟರಿಯವರಿಗೆ ತಿಳಿಯಪಡಿಸಬೇಕೆಂದೂ ಅಲ್ಲದೆ ಈ ಸಂಘದ ವಿಚಾರಗಳನ್ನು ದೇವಾಂಗಮತಾಭಿಮಾನಿಗಳೆಲ್ಲರೂ ಮೇಲ್ಕಂಡ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಂಡು ಸಂಘಕ್ಕೆ ಮೆಂಬರುಗಳಾಗಿ ಸೇರಬೇಕೆಂದೂ ಪ್ರಾರ್ಥಿಸಲಾಗಿದೆ.

ಸಂಘದ ಸೆಕ್ರೆಟರಿ.

ಯಡತೊರೆ ವೀರಶೈವರ ಕರ್ತವ್ಯ ಪರಾಙ್ಮುಖತೆ.

ಪರಶಿವಮೂರ್ತಿಯ ಆಜ್ಞಾನುಸಾರ ಭೂಲೋಕದಲ್ಲಿ ಅವತರಿಸಿ ಖಿಲವಾಗಿದ್ದ ಅನಾದಿ ವೀರಶೈವ ಮತವನ್ನುದ್ಧಾರಮಾಡಿ ದ್ವಿತೀಯಶಂಭುವೆಂದು ಪ್ರಖ್ಯಾತಿಗೊಂಡ ಆ ಶ್ರೀ ಬಸವೇಶ್ವರನ ಜಯಂತ್ಯುತ್ಸವವನ್ನು ಭರತಖಂಡದ ಪ್ರತಿಯೊಬ್ಬ ವೀರಶೈವ ಮತಾಭಿಮಾನಿಯೂ ಆಚರಿಸಿ ಕೃತಕೃತ್ಯನಾಗಬೇಕೆಂದು ಈ ಸ್ಟಾರ್ ಪತ್ರಿಕಾಕರ್ತರು ಸೂಚಿಸಿದ್ದ ಪ್ರಕಾರ ಅನೇಕ ಕಡೆಯಲ್ಲಿ ಆಚರಿಸಲ್ಪಟ್ಟಿರುವ ವಿಚಾರವು ಕಳೆದವಾರದ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಆದರೆ ನಮ್ಮ ಯಡತೊರೆ ನಿವಾಸಿಗಳಾದ ವೀರಶೈವರು ಮಾತ್ರ ಈ ಪತ್ರಿಕಾಕರ್ತರ ಸೂಚನೆಯನ್ನು ತಮ್ಮ ಮನಸ್ಸಿಗೆ ತಂದುಕೊಂಡು ಕಳೆದ ತಾ|| 6ರಲ್ಲಿ ನಡೆಯಬೇಕಾಗಿದ್ದ ಜಯಂತ್ಯುತ್ಸವವನ್ನು ನೆರವೇರಿಸದೆ ಹೋದುದು ಶೋಚನೀಯವೂ ಲಜ್ಜಾಸ್ಪದವೂ ಆಗಿದೆ. ಮುಂದಾದರೂ ಈ ಮಹಾಕಾರ್ಯವನ್ನಾಗಮಾಡಿ ಕರ್ತವ್ಯಪರಾಙ್ಮುಖರೆಂದು ತಮಗೆ ಬಂದಿರುವ ಕೆಟ್ಟಹೆಸರನ್ನು ಹೋಗಲಾಡಿಸಿಕೊಂಡು ಈಶ್ವರ ಅವತಾರನೆಂದೆನಿಸಿದ ಶ್ರೀ ಬಸವೇಶ್ವರನ ಪೂರ್ಣಾನುಗ್ರಹಕ್ಕೆ ಪಾತ್ರರಾಗುವರೆಂದು ನಿರೀಕ್ಷಿಸುವ, ದೈವಭಕ್ತ.

ಶ್ರೀ ಬಸವೇಶ್ವರ ಜಯಂತ್ಯುತ್ಸವ, ಬೆಂಗಳೂರು.

ಬೆಂಗಳೂರು ಸಿಟಿಯ ವೀರಶೈವ ಮಹಾಜನರು ಮೇಲ್ಕಂಡ ಉತ್ಸವವನ್ನು ಮೇ ಮಾಹೆ 6ನೆ ಮಂಗಳವಾರ ಬಹಳ ವೈಭವದಿಂದ ನೆರವೇರಿಸಿದರು. ಆ ದಿನ ಬೆಳಿಗ್ಗೆ ಬೆಂಗಳೂರು ಸಿಟಿ ಅರಳೇಪೇಟೆಯಲ್ಲಿರುವ ಶ್ರೀ ರುದ್ರದೇವಸ್ಥಾನದಲ್ಲಿ ಮಹಾರುದ್ರಾಭಿಷೇಕವೂ, ಮಧ್ಯಾಹ್ನ ಚಿಕ್ಕಪೇಟೆಯಲ್ಲಿರುವ ಶ್ರೀ ಮಹಂತಿನಮಠದಲ್ಲಿ ಗಣಾರಾಧನೆಯೂ ನಡೆಸಲ್ಪಟ್ಟಿತು. ರಾತ್ರಿ 9 ಗಂಟೆಗೆ ಮಲ್ಲಿಗೆಮೊಗ್ಗಿನಿಂದಲೂ ವಿದ್ಯುಚ್ಛಕ್ತಿಯ ದೀಪಾವಳಿಗಳಿಂದಲೂ ದಿವ್ಯಾಲಂಕೃತವಾಗಿದ್ದ ಹುವ್ವಿನ ಅಡ್ಡಪಾಲಕಿಯನ್ನು ತೇರಿನಮೇಲಿಟ್ಟು ಅದರಲ್ಲಿ ಚಂದ್ರಮೌಳೀಶ್ವರನಸಹಿತ ನಂದೀಶ್ವರನ ವಿಗ್ರಹವನ್ನೂ ಶ್ರೀ ಕಲ್ಯಾಣಬಸವೇಶ್ವರನ ಭಾವಚಿತ್ರವನ್ನೂ ಇಟ್ಟು ನಂದಿಧ್ವಜದೊಡನೆ ಉತ್ಸವವು ಶ್ರೀ ಮಹಂತಿನಮಠದಿಂದ ಹೊರಟು ಪಟ್ಟಣದ ಮುಖ್ಯ ಬೀದಿಗಳಲ್ಲಿ ಹಗಲು 4 ಗಂಟೆವರೆಗೂ ನಡೆಯಿತು. ಮಾಮೂಲುಪೇಟೆಯ ಅಡಿಕೆ ಅಂಗಡಿಯ ವೀರಶೈವ ಮಹಾಜನರು ಇದರಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿದ್ದರಿಂದಲೂ ದೇಶದ ಸೆಟ್ಟರು ಯಜಮಾನರು ಮುಂದಾಳುಗಳಾಗಿ ನಿಂತುದರಿಂದಲೂ, ಮೇಲ್ಕಂಡ ಸಮಾರಂಭವು ಬಹಳ ವಿಜೃಂಭಣೆಯಿಂದ ನಡೆಯಲು ಅವಕಾಶವಾಯಿತೆಂದು ಕೇಳುತ್ತೇನೆ. ಈ ಉತ್ಸವದಲ್ಲಿ ಭಾಗಿಗಳಾದ ಪ್ರತಿಯೊಬ್ಬರಿಗೂ ಶ್ರೀಬಸವೇಶ್ವರನು ಇಹಪರಶ್ರೇಯಸ್ಕರವಾದ ಮಂಗಳವನ್ನುಂಟುಮಾಡಲೆಂದು ಹರಿಸುವ, ಒಬ್ಬ ಪ್ರೇಕ್ಷಕ.

ಮಳವಳ್ಳಿ ತಾಲ್ಲೂಕು ಮಡೇನಹಳ್ಳಿ.

ಈ ಊರು ತೋಂಟದಾರ್ಯ ಮಠದ ಮಹಾಂತಸ್ವಾಮಿಗಳ ಅಪ್ಪಣೆಯಂತೆ ಭಕ್ತರುಗಳು ಶ್ರೀ ಬಸವೇಶ್ವರನ ಜಯಂತ್ಯುತ್ಸವವನ್ನು ನಡೆಸುವುದಕ್ಕೆ ಪ್ರಾರಂಭಿಸಿ ಈಗ್ಗೆ ಎಂಟು ವರ್ಷಗಳಾಗುತ್ತಾ ಬಂದಿತು. ಎಂಟನೇ ವರ್ಷವಾದ ಈ ರಕ್ತಾಕ್ಷಿ ಸಂ|| ದ ಬಸವೇಶ್ವರ ಜಯಂತ್ಯುತ್ಸವವು ವೈಶಾಖ ಶು|| ೩ ಲಾಗಾಯಿತು ಪೌರ್ಣಮಿವರಿವಿಗೂ ಬಹು ಶ್ರದ್ಧಾಭಕ್ತಿಯಿಂದ ಜರಗಿತು. ತದಿಗೆಯಿಂದ ಪೌರ್ಣಮಿವರುವಿಗೆ ಪ್ರತಿನಿತ್ಯವೂ ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ಬಸವೇಶ್ವರ ಜಯಘೋಷದಿಂದ ಕೂಡಿದ ಶಿವಭಜನೆಯು ಬಸವೇಶ್ವರ ಮಂದಿರವಾದ ಶ್ರೀ ಸ್ವಾಮಿಗಳವರ ಮಠದಲ್ಲಿಯೂ ಪುರವೀದಿಗಳಲ್ಲಿಯೂ ನಡೆಯುತ್ತಿತ್ತು. ತದಿಗೆ ದಿವಸ ಭಕ್ತರುಗಳು ತಮ್ಮ ಮನೆಗಳಲ್ಲಿ ಅತ್ಯುತ್ಸಾಹದಿಂದ ಕೂಡಿದ ಹಬ್ಬವೂ ಜಂಗಮಾರ್ಚನೆಯೂ ನಡೆಸಲ್ಪಟ್ಟಿತು. ಅಲ್ಲದೆ ಅದೇ ಬಸವರಾಜ ಮಂದಿರದಲ್ಲಿ ಕಾನಕಾನಹಳ್ಳಿ ತಾ|| ಮರುಳೇ ಮಠದ ಚರಮೂರ್ತಿಗಳು ವೇ|| ಸೋಮಪ್ಪಸ್ವಾಮಿಗಳಿಂದ ಬಸವೇಶ್ವರ ಪುರಾಣಶ್ರವಣವೂ ಈ ಮಧ್ಯೆ ಸಪ್ತಮಿ ಶನಿವಾರ ಕೊಳ್ಳೇಗಾಲದ ತಾ|| ಕುಂತೂರು ಶಿವಕಥಾ ವೇ|| ಸಿದ್ಧಯ್ಯಶಾಸ್ತ್ರಿಗಳಿಂದ ಅಷ್ಟಾವರಣಪರವಾದ ಉಪನ್ಯಾಸವೂ ಹೇಳಲ್ಪಟ್ಟು, ಅದೇ ರಾತ್ರಿ ಮೇಲ್ಕಂಡ ಸಿದ್ಧಯ್ಯಶಾಸ್ತ್ರಿಗಳಿಂದ ರಾಜಶೇಖರ ಕಥಾಶ್ರವಣ ಮಾಡಿಸಲ್ಪಟ್ಟಿತು. ದಶಮಿ ಮಂಗಳವಾರ ಬಸವೇಶ್ವರನಿಗೆ ಸಹಸ್ರ ಬಿಲ್ವಾರ್ಚನೆಯು ತ್ರಯೋದಶೀ ಶುಕ್ರವಾರ ರುದ್ರಾಭಿಷೇಕ ಮತ್ತು ಪ್ರಮಥ ಗಣಂಗಳ ಆರಾಧನೆಯೂ ಚತುರ್ದಶಿ ಶನಿವಾರ ಶ್ರೀ ಬಸವೇಶ್ವರಸ್ವಾಮಿಯನ್ನು ಹುವ್ವಿನ ಪಲ್ಲಕ್ಕಿಗೆ ಬಿಜಯಂಗೈಸಿ ಉತ್ಸವವು ಪುರದ ಬೀದಿಗಳಲ್ಲಿ ಬಹು ವಿಜೃಂಭಣೆಯಿಂದ ನಡೆಸಲ್ಪಟ್ಟುವು. ನಮ್ಮ ಶ್ರೀಗಳವರು ಕೇಳಿ ಈ ಸದುತ್ಸವಕ್ಕೆ ಪ್ರಾರಂಭಿಸಿದರು. ಬಸವೇಶ್ವರನ ಅನುಗ್ರಹದಿಂದ ಎಂಟು ವರ್ಷಗಳಿಂದಲೂ ನಮ್ಮೂರು ಶ್ರೀಗಳವರಿಷ್ಟದಂತೆ ನಡೆಯುತ್ತಾ ಬಂದಿರುವ ಈ ಉತ್ಸವವು ಆಚಂದ್ರಾರ್ಕವಾಗಿ ನಡೆಸಬೇಕೆಂಬ ಶ್ರೀಗಳವರ ಪ್ರತಿಜ್ಞೆಗೆ ಭಂಗಬಾರದಂತೆ ಶ್ರೀ ಬಸವೇಶ್ವರನೇ ಅನುಗ್ರಹಿಸಬೇಕು.

ವೀರಶೈವ ಪ್ರಮುಖರು.

ಶ್ರೀ ಜಗದ್ಗುರು ಮರುಳಾರಾಧ್ಯರ ಜಯಂತಿಯೂ ಶಿವದೀಕ್ಷಾ ಮಹೋತ್ಸವ ಸಮಾರಂಭವೂ.

ಬಳ್ಳಾರಿ ಡಿ|| ಹಿರೇಹಡಗಲಿ ಗ್ರಾಮದ ಪುರವರ್ಗ ಮಾನಿಹಳ್ಳಿ ಮಠಪಟ್ಟದ ಮಳೇಸ್ವಾಮಿಗಳವರ ಅಪ್ಪಣೆ ಪ್ರಕಾರ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಮೂರ್ತಿಗಳ ಪೈಕಿ ಉಜ್ಜಯಿನೀ ಪೀಠಾಧೀಶರಾದ ಶ್ರೀ ಜಗದ್ಗುರು ಮರುಳಾರಾಧ್ಯರ ಜಯಂತಿಯನ್ನು ಇದೇ ವೈಶಾಖ ಶು|| ೫ ದಿವಸ ಸಕಲ ಭಕ್ತಮಾಹೇಶ್ವರಾದಿ ಮಂಡಳಿಯು ಅತ್ಯಂತ ಸಂತೋಷಭರಿತರಾಗಿ ನೆರವೇರಿಸಿದರು. ಮತ್ತು ಇದೇ ಸುಮುಹೂರ್ತದಲ್ಲಿ ಮ|| ಹರವಿ ಗ್ರಾಮದ ತುಂಬಿನಕಟ್ಟಿ ರೇವಣಪ್ಪ ಕವಲೂರು ಶಿವಲಿಂಗಪ್ಪ ಈ ಉಭಯರು ತಮ್ಮ ಸತ್ಸಂಕಲ್ಪದಂತೆ ಶ್ರೀಗಳವರ ಮಠದಲ್ಲಿ ಸ್ಥಲ ಪರಸ್ಥಳದ ಕೆಲವು ಪೀಠಮಹೇಶ್ವರ ವಟುಗಳಿಗೆ ಶಿವದೀಕ್ಷಾಸಂಸ್ಕಾರವನ್ನು ವೇ|| ಪುರಾಣಿಕ ಮಠದ ವಿರೂಪಾಕ್ಷಾರ್ಯರಿಂದ ವಿಧ್ಯುಕ್ತ ಪ್ರಕಾರ ನೆರವೇರಿಸಿದರು. ಮಾರನೆ ದಿವಸ ಉದಯ 10 ಗಂಟೆಯಿಂದಾ ಸಾಯಂಕಾಲ 4ಗಂಟೆವರೆಗೂ ಮಹಾಗಣಸಮಾರಾಧನೆಯು ವ್ಯಾಖ್ಯಾನ ಸ್ನಾನಾದಿಗಳಿಂದ ಜರಗಲ್ಪಟ್ಟಿತು. ಬಳಿಕ ಪುರಪ್ರಮುಖರಾದ ಮ|| ರಾ|| ಪಾಟೀಲ ಶಿವರುದ್ರಗೌಡರು (ಲ್ಯಾಂಡ್ ಲಾರ್ಡ್) ಮತ್ತು ಬಾಗಳಿ ಬಸಪ್ಪನವರು ಪುರಾಣಿಕಮಠದ ಪರಮೇಶ್ವರಯ್ಯನವರು ರಾಣಿಬೆನ್ನೂರು ಗುರುಪಾದಪ್ಪನವರು ದಳವಾಯಿ ಬಸಲಿಂಗಯ್ಯನವರೇ ಮುಂತಾದ ಮಂಡಳಿಯವರಿಂದ ಸಭೆ ಸೇರಿದ್ದು, ಪಾ|| ಶಿವರುದ್ರಗೌಡರು ಏಕಮತ, ವಿದ್ಯಾಭಿವೃದ್ಧಿ ವಿಷಯವಾಗಿಯೂ ಪುರಾಣಿಕ ಮಠದ ವಿರೂಪಾಕ್ಷಾರ್ಯ ಇವರು ಸಮಾಜಸುಧಾರಣೆ ವಿಷಯವಾಗಿಯೂ ಉಪನ್ಯಾಸಮಾಡಿ ಬಹುಕಾಲದಿಂದಲೂ ಸಮಾಜಾಭಿವೃದ್ಧಿಯ ಸಲುವಾಗಿ ಹೊರಡುವಂಥ ಜನಪ್ರಿಯವಾದ ಮೈಸೂರು ಸ್ಟಾರ್‌ಪತ್ರಿಕೆಯೂ, ಹಾಗೂ, ವಿಭಾಕರ, ಧರ್ಮತರಂಗಿಣಿ, ಪ್ರಬೋಧ, ಪತ್ರಿಕೆಗಳಿಗೂ ಸರ್ವರೂ ಶಕ್ತ್ಯಾನುಸಾರವಾಗಿ ಧನಸಹಾಯಮಾಡಬೇಕೆಂತಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನೂ ಶ್ರೀ ಬಸವೇಶ್ವರ ಜಯಂತಿಯನ್ನೂ ಪ್ರತಿಯೊಬ್ಬರೂ ತಪ್ಪದಂತೆ ವಿಜೃಂಭಣೆಯಿಂದ ಮಾಡಿ ಕೃತಾರ್ಥರಾಗಬೇಕೆಂದೂ ಬೋಧಿಸಿದರು. ಬಳಿಕ ಗಂಧ ಪುಷ್ಪಾದಿಗಳು ಸಮರ್ಪಿಸಿ ಜಯಘೋಷದೊಡನೆ ಸಭಾಮುಕ್ತಾಯವಾಯಿತು. ಪ್ರತ್ಯಕ್ಷದರ್ಶಿ.

ಬೆಳ್ಳಾವಾರದ ಎಸ್ಟೇಟಿಗೆ ಶ್ರೀ ಜಗದ್ಗುರುಗಳವರ ಆಗಮನವು.

ಶ್ರೀ ಗಿರಿರಾಜಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಚರಪಟ್ಟಾಧ್ಯಕ್ಷ ಮಹಾಸ್ವಾಮಿಗಳವರ ಸವಾರಿಯು ಬೆಳ್ಳಾವಾರದ ಶ್ರೀಮಂತ ಕಾಫಿಪ್ಲಾಂಟರ್ ಬಿ. ಯಂ. ದ್ಯಾವೇಗೌಡರ ಮತ್ತು ಬಿ. ಪಿ. ಮಲ್ಲೇಗೌಡರ ಕೋರಿಕೆಯಂತೆ ತಾರೀಖು 7-5-1924ನೆ ಬುಧವಾರ ಸಕಲ ಅಜಬಾಬು ಸಮೇತ ದಿವ್ಯವಾದ ಪಲ್ಲಕ್ಕಿಯಲ್ಲಿ ಮಲ್ಲಾಪುರದ ಮಠದಿಂದ ಹೊರಟು ಸಾಯಂಕಾಲ 6 ಗಂಟೆಗೆ ಬೆಳ್ಳಾವಾರದ ಯಸ್ಟೇಟಿಗೆ ಸವಾರಿಯು ದಯಮಾಡಿಸಿತು. ಬ್ಯಾಂಡು ವಾದ್ಯಗಳು ಭೋರ್ಗರೆಯುತ್ತಿದ್ದವು. ಆರುವರೆ ಗಂಟೆಗೆ ಸರಿಯಾಗಿ ಶ್ರೀಗಳು ಪೀಠಾರೋಹಣಮಾಡಿದ ಕೂಡಲೆ ಸಂಸ್ಥಾನದ ಏಜಂಟರು ಜಗದ್ಗುರು ಪಂಚಾಚಾರ್ಯರ ಉತ್ಪತ್ತಿಯನ್ನು ಕುರಿತು ಭಾಷಣಮಾಡಿ ಮಾರ್ಗಾಯಾಸವಾಗಿದ್ದ ಕಾರಣ ಬೆಳಗಿನ 9 ಗಂಟೆಗೆ ದರ್ಶನಕ್ಕೆ ಭಾಗಿಗಳಾಗಬೇಕೆಂದು ಅಪ್ಪಣೆಯಾದಮೇಲೆ ಸರ್ವರೂ ಅಪ್ಪಣೆಪಡೆದು ತೆರಳಿದರು. ತಾ|| 8-5-24 ಗುರುವಾರ ಬೆಳಿಗ್ಗೆ 8 ಗಂಟೆಯಿಂದ 12 ಗಂಟೆವರೆಗೂ ಪಾದಪೂಜಾಸಮಾರಂಭವು ನಡೆಯಿತು. ಸಹೋದರರೀರ್ವರೂ ಶ್ರೀಶೈಲ ಧಾರ್ಮಿಕ ಫಂಡಿಗೆ ತಮ್ಮ ಶಕ್ತಿಮೀರಿ ಸಹಾಯಮಾಡಿದರು. ಶ್ರೀಗಳವರು 12 ಗಂಟೆ ಮೇಲೆ ದರ್ಬಾರಿಗೆ ದಯಮಾಡಿಸಿದ ಕೂಡಲೆ 2 ಸಹಸ್ರದವರೆಗೂ ನೆರದಿದ್ದ ಸಮೂಹಕ್ಕೆಲ್ಲಾ ಮತಸಂಬಂಧವಾಗಿ ಅನೇಕ ಮತವಿಷಯಗಳನ್ನು ಬೋಧಿಸಿ ಶ್ರೀಯುತ ಬಿ. ಯಂ. ದ್ಯಾವೇಗೌಡರು, ಬಿ. ಪಿ. ಮಲ್ಲೇಗೌಡರು ಈ ಸಹೋದರರ ಭಕ್ತಿ ವಿಶ್ವಾಸಗಳಿಗೆ ತುಂಬಾ ಸಂತೋಷಪಟ್ಟು ಗುರುಭಕ್ತಕೇಸರಿ ಎಂಬ ಬಿರುದಾಂಕಿತದ ಸುವರ್ಣಪದಕದೊಡನೆ ಪುಷ್ಪಹಾರವನ್ನು ಹಾಕುವಂತೆ ಸಿದ್ಧಾಪುರ ಶ್ರೀಮಂತ ಗಡಿಗೆ ಗಂಗಪ್ಪ ಅಣ್ಣ ಇವರಿಗೆ ಅಪ್ಪಣೆಕೊಡಿಸಲು ಶ್ರೀಮಂತ ಗಡಿಗೆಯವರು ತಮ್ಮ ಹಸ್ತದಿಂದ ಸಹೋದರರೀರ್ವರ ಕಂಠಗಳಿಗೆ ಹಾಕಿದರು. ಕೂಡಲೆ ಗಡಿಗೆಯವರು ಈ ದೇಶಕ್ಕೆ ದಯಮಾಡಿಸಿ ಸಮಾಜದ ಸೇವೆಮಾಡಿದುದಕ್ಕಾಗಿ ಸರ್ವರೂ ತುಂಬಾಸಂತೋಷಪಟ್ಟು ಅವರ ಗೌರವಾರ್ಥವಾಗಿ ಒಂದು ಕಲಾಭಿತ್ತಿನ ಶಲ್ಯವೂ ಒಂದು ಸುವರ್ಣಪದಕವೂ ಒಪ್ಪಿಸಲ್ಪಟ್ಟ ತರುವಾಯ ಶ್ರೀ ಜಗದ್ಗುರುಗಳವರು ಸರ್ವರಿಗೂ ಫಲಾಶೀರ್ವಾದಗಳನ್ನಿತ್ತು ಮಲ್ಲಾಪುರದ ಮಠಕ್ಕೆ ದಿಗ್ವಿಜಯಮಾಡಿದರು. ನೆರೆದಿದ್ದ ಸಭೆಯಲ್ಲಿ ಮೈಸೂರು ಯಜಮಾನ್ ಕೈ|| ವೀರಸಂಗಪ್ಪನವರ ಹೆಸರಿನ ಮೇಲೆ ನಾಲ್ಕು ರೂಪಾಯಿಗಳನ್ನು ತೆಗೆಯುವಂತೆ ಶ್ರೀಮಂತ ಗಡಿಗೆಯವರು ಸೂಚಿಸಿದ್ದ ಮೇರೆ ಕಾಫಿಪ್ಲಾಂಟರ್ ಬಿ. ಯಂ. ದ್ಯಾವೇಗೌಡರವರು ಕೋಗೋಡು ಪಟೇಲ್ ಮಲ್ಲೇಗೌಡರವಶಕ್ಕೆ ಕೊಟ್ಟರು.

ಪ್ರತ್ಯಕ್ಷದರ್ಶಿ.

[ಮೇಲ್ಕಂಡ 4 ರೂ. ಬಂದಿದೆ.—ಸ. ಸ್ಟ.]

ಶ್ರೀ ಬಾಳೆಹೊನ್ನೂರು ಮಠದ ಪೀಠಾಧಿಕಾರ.

ಮೇಲ್ಕಂಡ ಸಂಸ್ಥಾನದ ಪೀಠಾಧಿಪತಿಗಳನ್ನು ಚುನಾಯಿಸುವ ವಿಚಾರದಲ್ಲಿ ಇದೇ ಮಾಹೆ 3ನೆ ತಾರೀಖಿನಲ್ಲಿ ಮೈಸೂರು ಸರ್ಕಾರದ ಮುಜರಾಯಿ ಕಮಿಷನರವರು ಈ ಕೆಳಗೆ ಕಂಡಂತೆ ಆರ್ಡರು ಮಾಡಿರುವರು. ಈ ಮಠದ ಶಿಷ್ಯವರ್ಗದ ಮುಖಂಡರುಗಳು ಎಂದರೆ ಎಡೆಹಳ್ಳಿ ಶಾಂತಪ್ಪಶೆಟ್ಟರನ್ನು, ಎ. ಚಂದ್ರೇಗೌಡರನ್ನು ಮುಂದಾಳುಗಳನ್ನಾಗಿಟ್ಟುಕೊಂಡು ತೀರ್ಮಾನಿಸಿರುವುದೇನೆಂದರೆ—ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಿಂದ 14 ಮೆಂಬರುಗಳಿರತಕ್ಕ ಒಂದು ಕಮಿಟಿಯು ಮಾಡಲ್ಪಡತಕ್ಕದ್ದು. ಅವರುಗಳಲ್ಲಿ ಮೈಸೂರು ದೇಶದ ಹೊರಗಿನವರು 4 ಜನ. ಈ ಕಮಿಟಿಯು ಬೆಂಗಳೂರಿನಲ್ಲಿ ಕೂಡಿ, ಉಭಯಪಾರ್ಟಿಗಳಿಂದಲೂ ಚೆನ್ನಾಗಿ ಯೋಗ್ಯತಾಪರೀಕ್ಷೆಯನ್ನು ಮಾಡಿ ಸಮಭಾಗವಾಗಿ ಮೂರ್ತಿಗಳನ್ನು ಚುನಾಯಿಸತಕ್ಕದ್ದು. ಮೇ 28ನೆ ತಾರೀಖಿನದಿನ ಅಧ್ಯಕ್ಷರು ಕಡೂರು ಡಿ|| ಡೆಪ್ಯುಟಿ ಕಮಿಷನರವರನ್ನು ಇಟ್ಟುಕೊಂಡು ಅಲ್ಲಿ ಸೇರತಕ್ಕ ಇತರ ದೊಡ್ಡಮನುಷ್ಯರ ಸಮಕ್ಷಮ ಹಾಗೆ ಚುನಾಯಿಸಲ್ಪಟ್ಟ ಮೂರ್ತಿಗಳಲ್ಲಿ ಲಾಟರಿ ಮೂಲಕ ಬಾಳೆಹೊನ್ನೂರು ಮಠದಲ್ಲಿ ಒಬ್ಬಮೂರ್ತಿಯನ್ನು ಚುನಾಯಿಸತಕ್ಕದ್ದು. ಅನಂತರ 1924ನೆ ಇಸವಿ ಜೂನ್ ಮಾಹೆ 15ನೆ ತಾರೀಖಿನದಿನ ಹಾಗೆ ಚುನಾಯಿಸಲ್ಪಟ್ಟ ಮೂರ್ತಿಗೆ ಮೊದಲು ಸರ್ಕಾರದವರ ಒಪ್ಪಿಗೆಯನ್ನು ಪಡೆದು ಪೀಠಾಧಿಕಾರವನ್ನು ವಹಿಸತಕ್ಕದ್ದು. ಮೇಲ್ಕಂಡ ಆರ್ಡರು ಹುಟ್ಟಿ ಇಷ್ಟು ದಿವಸಗಳಾದಾಗ್ಗೂ ಅದು ಇದುವರೆಗೆ ಪ್ರಕಟಿಸಲ್ಪಡದಿದ್ದನ್ನು ನೋಡಿದರೆ, ಅದರ ಮೂಲಕರ್ತರು ನಿಜವಾಗಿಯೂ ಪೀಠದ ಗೌರವವನ್ನು ಗಮನಕ್ಕೆ ತಂದುಕೊಂಡಂತೆ ಕಾಣುವುದಿಲ್ಲ. ವೀರಶೈವ ಸಮಾಜಕ್ಕೇ ಸಂಬಂಧಪಟ್ಟ ಈ ವಿಚಾರವನ್ನು ಪ್ರತಿಷ್ಠಾಕಾಂಕ್ಷಿಗಳೂ, ಸ್ವಾರ್ಥಪರರೂ ಆದ ಒಬ್ಬಿಬ್ಬರ ಮನೋಗತವನ್ನು ಮಾತ್ರ ನೆರವೇರಿಸಲು ಉದ್ಯುಕ್ತರಾಗಿರುವಂತೆ ಕಾಣುತ್ತದೆ. ಈ ನನ್ನ ಊಹೆಯು ನಿಜವಾಗಿದ್ದಲ್ಲಿ ವೀರಶೈವಸಮಾಜದ ದೌರ್ಭಾಗ್ಯಕ್ಕೆ ಎಣೆಯೇ ಇಲ್ಲ. ಅದರಲ್ಲೂ ವೀರಶೈವಪ್ರಮುಖರೊಬ್ಬರಾದ ದಿವಾನ್ ಬಹದ್ದೂರ್‌ರವರು ಈ ವಿಧವಾದ ಅವ್ಯವಸ್ಥೆಗೆ ಹೇಗೆ ಒಪ್ಪಿದರೆಂಬುದು ಮತ್ತೊಂದು ಸಂದೇಹಾಸ್ಪದವಾದ ಸಂಗತಿಯಾಗಿರುತ್ತೆ. ರಾಜತಂತ್ರ ವಿಶಾರದರೆಂದು ಘನತೆಯನ್ನು ಪಡೆದಿರುವ ದಿವಾನ್ ಬಹದ್ದೂರ್‌ರವರು ಈ ವಿಚಾರವು ಸಮಾಜದ ಬಹು ಜನರ ಸಮ್ಮತಿಯಂತೆ ನಡೆಯತಕ್ಕದ್ದು ಅತ್ಯವಶ್ಯಕವೆಂದು ಯೋಚಿಸದಿರಲು ಕಾರಣವೇನಿರಬಹುದು ? ಬಹುಶಃ ತಮ್ಮಲ್ಲಿ ರಾತ್ರಿ ಹಗಲೆನ್ನದೆ ಬಂದು ಸಮಾಜಕ್ಕೆ ತಾವೇ ಮುಂದಾಳುಗಳೆಂದು ನಟನೆಯನ್ನು ಮಾಡುತ್ತಲಿರುವ ಕೆಲವು ದೊಡ್ಡ ಮನುಷ್ಯರ ಮಾತನ್ನು ಅವರು ನಂಬಿರಬಹುದು. ಇದು ಎಷ್ಟು ಮಾತ್ರವೂ ನಿಶ್ಚಯವಲ್ಲ. ಸಮಾಜದ ಬಹುಮಂದಿಗಳ ಅಭಿಪ್ರಾಯವನ್ನು ತಿಳಿಯದೆ ಮೇಲ್ಕಂಡ ಕಾರ್ಯವನ್ನು ಮಾಡಿದಲ್ಲಿ ಆ ಅಧಿಕಾರಿಗಳು ತಮ್ಮನ್ನು ಪೀಠಕ್ಕೆತರಲು ಪ್ರಯತ್ನಪಟ್ಟ ಕೆಲವರಿಂದ ಮಾತ್ರ ಅಂಗೀಕೃತವಾಗುವರೆ ಹೊರತು, ವೀರಶೈವ ಸಮಾಜದ ಮುಖ್ಯ ಪೀಠಾಧಿಕಾರಿಗಳಲ್ಲೊಬ್ಬರೆಂದು ಎಂದಿಗೂ ಗಣಿಸಲ್ಪಡುವುದಿಲ್ಲ. ಒಬ್ಬ ಮತಾಭಿಮಾನಿ.

ಕರ್ನಾಟಕ ಸಾಹಿತ್ಯಸಮ್ಮೇಳನದ ಹತ್ತನೆಯ ಕೂಟ.

ಕರ್ನಾಟಕ ಸಾಹಿತ್ಯ ಸಮ್ಮೇಳನದ ಹತ್ತನೆಯ ಕೂಟವು ಇದೇ ಮೇ 16 ನೆಯ ತಾರೀಖು ಶುಕ್ರವಾರ ಪ್ರಾತಃಕಾಲ ಕೋಲಾರದ ಹೈಸ್ಕೂಲಿನ ಸಭಾಭವನದಲ್ಲಿ ಪ್ರಾರಂಭವಾಯಿತು. ಕರ್ನಾಟಕದ ನಾನಾ ಭಾಗಗಳಿಂದ ಬಂದ ಸದಸ್ಯರುಗಳೂ, ಊರಿನ ಮುಖ್ಯಾಧಿಕಾರಿಗಳೂ, ಲಾಯರುಗಳೂ ವರ್ತಕರೂ ಮೊದಲಾದ ಪ್ರಮುಖ ಜನರು ಸಭಾಭವನದ ತುಂಬ ಉತ್ಸಾಹದಿಂದ ನೆರೆದಿದ್ದರು. ಭಗವತ್ಪ್ರಾರ್ಥನೆಯೂ, ಕರ್ನಾಟಕ ದೇವಿಗೀತೆಯೂ ಆದ ಬಳಿಕ ಸ್ವಾಗತಮಂಡಲಿಯ ಅಧ್ಯಕ್ಷರೂ, ಜಿಲ್ಲೆಯ ಡೆಪ್ಯುಟಿ ಕಮಿಷನರವರೂ ಆದ ಮ|| ರಾ|| ಎಸ್. ಹಿರಣ್ಣಯ್ಯ, ಎಂ. ಎ. ಬಿ. ಎಲ್. ಅವರು ಒಂದು ಸ್ವಾರಸ್ಯವಾದ ಸಣ್ಣ ಭಾಷಣದಲ್ಲಿ ಸದಸ್ಯರಿಗೂ ಪ್ರೇಕ್ಷಕರಿಗೂ ಸುಖಾಗಮನವನ್ನು ಬಯಸಿ, ಕರ್ನಾಟಕ ಸಾಹಿತ್ಯ ಪರಿಷತ್ತು ಅನೇಕ ವರ್ಷಗಳಿಂದ ಮಾಡುತ್ತಿರುವ ಕಾರ್ಯಸ್ವರೂಪವನ್ನು ವಿವರಿಸಿ, ಆ ಕಾರ್ಯಕ್ಕೆ ದೇಶಾಭಿಮಾನಿಗಳಾದ ಮಹಾಜನರ ಸಹಾಯ ಮನ್ನಣೆಗಳು ಅತ್ಯಾವಶ್ಯಕವಾಗಿ ಸಲ್ಲಬೇಕಾದುದೆಂದು ವಿಜ್ಞಾಪಿಸಿದರಲ್ಲದೆ ಸಮ್ಮೇಳನದ ಅಧ್ಯಕ್ಷಪದವಿಗೆ ಮೈಸೂರು ದೇಶೀಯರೂ, ಕೋಲಾರದಬಳಿಯ ಸ್ಥಳದವರೂ, ಪ್ರಖ್ಯಾತ ಪಂಡಿತರೂ ಇಂಡಿಯಾ ಸರ್ಕಾರದ ಪ್ರಾಚೀನ ಶಾಸನ ವಿಚಾರಾಧ್ಯಕ್ಷರೂ ಆಗಿರುವ ರಾವ್ ಬಹಾದೂರ್ ಮ|| ರಾ|| ಹೆಚ್. ಕೃಷ್ಣಶಾಸ್ತ್ರಿಗಳವರು ಚುನಾಯಿಸಲ್ಪಡಬೇಕೆಂದು ಸೂಚಿಸಿದರು. ಇದನ್ನು ರಾಜಸಭಾಭೂಷಣ ಮ|| ರಾ|| ಕರ್ಪೂರ ಶ್ರೀನಿವಾಸರಾಯರು ಅನುಮೋದಿಸಿ ಮ|| ರಾ|| ವಿ. ಬಿ. ಆಲೂರ್ ಅವರು ಪುಷ್ಟೀಕರಿಸಿ ಸಭಿಕರು ಅಂಗೀಕರಿಸಿದ ಬಳಿಕ ಸಭಾಧ್ಯಕ್ಷರವರು ತಮ್ಮ ಪ್ರೌಢವಾದ ಮತ್ತು ಬಹುವಿಷಯಗರ್ಭಿತವಾದ ಉಪನ್ಯಾಸವನ್ನು ಪಠಿಸಿದರು. ಅದರಲ್ಲಿ ಕನ್ನಡ ಭಾಷೆಯು ಪೂರ್ವಕಾಲಗಳಲ್ಲಿ ಎಷ್ಟು ದೂರವ್ಯಾಪಿಸಿತ್ತು, ಭರತಖಂಡದ ವಿದ್ಯಾವಿಭೂತಿಗಳ ಬಗೆಗೆ ಕರ್ನಾಟಕ ರಾಜರುಗಳೂ, ಶೂರರುಗಳೂ, ಕವಿಗಳೂ, ಕಲಾನಿಪುಣರೂ, ಎಷ್ಟೆಷ್ಟು ಮಾತ್ರ ಉಪಕಾರಮಾಡಿರುವರು ಎಂಬ ವಿಷಯಗಳನ್ನೂ ಈಚೆಗೆ ಕನ್ನಡಿಗರಿಗೆ ಸಂಬಂಧಪಟ್ಟ ಶಾಸನಗಳು ಎಲ್ಲೆಲ್ಲಿ ದೊರೆಕಿವೆ ಎಂಬ ವಿಷಯಗಳನ್ನೂ ನಿರ್ದೇಶಿಸಿದ್ದಲ್ಲದೆ ಇಂಡಿಯಾದೇಶದಲ್ಲಿ ಈಗ ಕನ್ನಡವು ಪ್ರಚಾರದಲ್ಲಿಲ್ಲದ ಭಾಗಗಳಲ್ಲಿ ಕನ್ನಡಿಗರಿಗೆ ಸಂಬಂಧಪಟ್ಟ ಪ್ರಾಚೀನ ಲಿಪಿಗಳು ಸಿಕ್ಕುವುದನ್ನು ಕುರಿತು ಪ್ರಸ್ತಾಪಿಸಿ, ಹಾಗೆಯೇ ಲೋಕವಿಖ್ಯಾತ ಮಹಾಪುರುಷರಾದ ಮಾಧವ ವಿದ್ಯಾರಣ್ಯರು ಕನ್ನಡಿಗರೇ ಎಂದು ಮ|| ರಾ|| ಡಿ. ವಿ. ಗುಂಡಪ್ಪನವರು ಮಾಡಿರುವ ಸಿದ್ಧಾಂತವನ್ನು ಸಮರ್ಥಿಸಲು ಈಚೆಗೆ ಕಾಣಬಂದಿರುವ ಹೊಸ ಶಾಸನ ಒಂದರ ಆಧಾರವನ್ನು ಉದಾಹರಿಸಿದರು. ಕರ್ನಾಟಕದ ಪೂರ್ವ ಚರಿತ್ರೆಗೆ ಬೇಕಾದ ಸಾಮಗ್ರಿ ಒದಗಿಸಲು ಬೇರೆ ಬೇರೆ ಸರ್ಕಾರಗಳ ಪ್ರಾಚೀನ ಲಿಪಿಯ ವಿಚಾರಾಧಿಕಾರಿಗಳು ಮಾಡುತ್ತಿರುವ ಕೆಲಸವನ್ನು ಪ್ರಶಂಸಿಸಿ, ಉಪನ್ಯಾಸದ ಉಪಸಂಹಾರಭಾಗದಲ್ಲಿ ಕನ್ನಡ ಭಾಷೆಯು ಪ್ರಕೃತ ಕಾಲದ ಉಪಯೋಗಗಳಿಗೆ ತಕ್ಕಂತೆ ಮಾರ್ಪಡಲು ವಿದ್ವಾಂಸರು ಯಾವ ಯಾವ ರೀತಿಗಳಲ್ಲಿ ಕೆಲಸಮಾಡಬೇಕೆಂಬುದನ್ನೂ, ಭಾಷಾಪ್ರಾಬಲ್ಯಕ್ಕೆ ಏನೇನು ಆವಶ್ಯಕವೆಂಬುದನ್ನು ಸೂಚಿಸಿ ಸಕಲರೂ ಈ ದೇಶಭಾಷೆಗಳ ಸೇವಾಸಮಾರಂಭಕ್ಕೆ ತಮ್ಮ ಉತ್ಸಾಹ ಪೂರ್ವಕವಾದ ಮತ್ತು ಅವಿಚ್ಛಿನ್ನವಾದ ಸಹಾಯವನ್ನು ಕೊಡಬೇಕೆಂದು ಪ್ರಾರ್ಥಿಸಿದರು. ಅಧ್ಯಕ್ಷರ ಉಪನ್ಯಾಸವನ್ನು ಸಭೆಯವರು ಅತಿಕುತೂಹಲದಿಂದ ಕೇಳಿ ಸಂತೋಷಿಸಿದರು. ಬಳಿಕ ಈ ಕೆಳಗಿನ ಎರಡು ತೀರ್ಮಾನಗಳು ಅಂಗೀಕೃತಗಳಾಗಿ ಸಮ್ಮೇಳನವು ಬರಖಾಸ್ತಾಯಿತು. 1. ಕೋಲಾರದಲ್ಲಿ ಸೇರಿದ ಕರ್ನಾಟಕ ಸಾಹಿತ್ಯ ಸಮ್ಮೇಳನದ ಹತ್ತನೆಯ ಕೂಟವು ಮೈಸೂರಿನ ಶ್ರೀಮನ್ಮಹಾರಾಜರವರಿಗೆ ತನ್ನ ಗೌರವಪೂರ್ವಕವಾದ ಅಭಿನಂದನೆಗಳನ್ನೂ ಕೃತಜ್ಞತಾಪುರಸ್ಸರವಾದ ವಂದನೆಯನ್ನೂ ಸಮರ್ಪಿಸಿ ಕನ್ನಡದ ವಿಚಾರಕ್ಕೆ ಅವರ ಕೃಪಾಪೂರ್ಣವಾದ ಪರಿಪೋಷಣೆಯು ಇತೋಪ್ಯಧಿಕವಾಗಿ ನಡೆಯಬೇಕೆಂದು ಪ್ರಾರ್ಥಿಸುತ್ತದೆ. 2. ಕೋಲಾರದಲ್ಲಿ ಸೇರಿರುವ ಕರ್ನಾಟಕ ಸಾಹಿತ್ಯ ಸಮ್ಮೇಳನದ ಹತ್ತನೆಯ ಕೂಟವು ಮೈಸೂರಿನ ಶ್ರೀಮದ್ಯುವರಾಜರವರಿಗೆ ತನ್ನ ಗೌರವಪುರಸ್ಸರವಾದ ಅಭಿನಂದನವನ್ನು ಸಮರ್ಪಿಸಿ ಅವರು ದಯಮಾಡಿ ಪರಿಷತ್ತಿನ ಅಧ್ಯಕ್ಷತೆಯನ್ನು ಸ್ವೀಕರಿಸಿ ಪೋಷಣೆ ಕೊಟ್ಟಿರುವದಕ್ಕಾಗಿ ತನ್ನ ಮನಃ ಪೂರ್ವಕವಾದ ಕೃತಜ್ಞತೆಯನ್ನು ಅಂಕಿತಮಾಡಿಕೊಳ್ಳುತ್ತದೆ. ಗೌ|| ಕಾರ್ಯದರ್ಶಿ.

ಶ್ರೀಮದುಜ್ಜಯಿನೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳ ವಕ್ರಬುದ್ಧಿ.

ನಾನು ಹಿಂದಿನ ಲೇಖನದಲ್ಲಿ ಶ್ರೀ ಉಜ್ಜಯಿನೀ|ಸಿದ್ಧಲಿಂಗಶಿವಾಚಾರ್ಯಸ್ವಾಮಿಗಳವರ ಸನ್ನಿಧಿಗೆ ಸ್ವಾಮಿ ಪಾದಸೇವಕನೆಂಬ ನಾಮಧೇಯದ ಮೇಲೆ ಬಹಳ ಕೃತಜ್ಞತಾಪೂರ್ವಕವಾಗಿ ಸದರಿ ಶ್ರೀಗಳವರ ಮೇಲ್ಮೆಗಾಗಿಯೇ ಅಂಕಿತಮಾಡಿಕೊಂಡದ್ದು ಎಲ್ಲರಿಗೂ ತಿಳಿದ ವಿಷಯವೇ ಆಗಿರುತ್ತೆ. ಆದರೆ ನಾನು ಅಷ್ಟು ವಿನಯಪೂರ್ವಕವಾಗಿ ಕೋರಿಕೊಂಡದ್ದು ಅರಣ್ಯರೋದನವಾಗಿ ಪರಿಣಮಿಸಿತೆಂದಿದಾಯಿತು ಅದರಿಂದ ಪ್ರಯೋಜನವಾಗಲಿಲ್ಲ. ಸದರೀ ಶ್ರೀಗಳವರು ತಮ್ಮ ಮಂತ್ರಿಗಳಾದ ಕಾಶೀನಾಥಶಾಸ್ತ್ರಿ ವಗೈರೆ ಅಲ್ಪಮತಿಗಳ ದುರ್ಬೋಧನೆಗೆ ಕಿವಿಗೊಡುವುದನ್ನು ಇನ್ನೂ ಬಿಡದೆ ನಮ್ಮ ವೀರಶೈವ ಜನಾಂಗದಲ್ಲಿ ಅನೇಕ ಚಳವಳಿಗಳನ್ನು ನಡೆಸುತ್ತಾಯಿದ್ದು ನಮ್ಮ ಜನಾಂಗದ ಅನೈಕಮತ್ಯಕ್ಕೆ ಕಾರಣಭೂತರಾಗಿರುತ್ತಾರೆ. ಇವರು ನಮ್ಮ ವೀರಶೈವ ಪಟ್ಟಾಚಾರ್ಯರ ಪೈಕಿ ಒಬ್ಬರಾಗಿ ಇಂಥಾ ಚಳವಳಿಗೆ ಅವಕಾಶಕೊಡದೆ ಸಮಾಜದ ಮೇಲ್ಮೆಯನ್ನು ನೋಡಿ ಅದರ ಅಭಿವೃದ್ಧಿಗಾಗಿ ಪ್ರಯತ್ನಪಡುವುದರ ಬದಲು ಅತಿ [illegible] ಸಮಾಜದ ಅನೈಕ್ಯಮತ್ಯಕ್ಕೆ ಕಾರಣಭೂತವಾದ ಕೆಲಸಗಳನ್ನು ಮಾಡುತ್ತಾ ಬಂದಿರುವುದು ನಮ್ಮ ವೀರಶೈವಮತದ ದುರ್ದೈವದಿಂದ [illegible]

ರುತ್ತೆ. ನನ್ನ ವಿನಯಪೂರ್ವಕವಾದ ವಿಜ್ಞಾಪನೆಯನ್ನು ಅವರು ಅಂಗೀಕರಿಸಿ ಅದರಂತೆ ನಡೆದಿದ್ದರೆ ಬಹಳ ಅನುಕೂಲವಿರುತ್ತಿತ್ತು. ಇದು ಅವರಿಗೂ ಮುಂದೆ ಕೆಟ್ಟದಾಗುವುದರಲ್ಲಿ ಯಾವ ಸಂದೇಹವೂ ನನಗೆ ತೋರುವುದಿಲ್ಲ. ಈ ಜನಾಂಗವು ಹಿಂದಿನಂತೆ ಅಂಧತ್ವದಲ್ಲಿರುವುದೆಂದು ಇವರು ತಿಳಿದುಕೊಂಡಿರುತ್ತಾರೆ. ಆದರೆ ಈಗ ವೀರಶೈವ ಜನಾಂಗವೆಲ್ಲಾ ಕಣ್ಣುತೆರೆದು ನೋಡುತ್ತಾ ಇದೆ ಇವರು ಮಾಡತಕ್ಕ ಚರ್ಯೆಗಳೆಲ್ಲಾ ಹೊರಬಿದ್ದಿವೆ. ಇವುಗಳನ್ನು ಸದ್ಯದಲ್ಲಿ ಬೈಲಿಗೆಹಾಕಿ ಖಂಡಿತವಾಗಿಯೂ ಇವರನ್ನು ಸಮಾಜದವರು ದೂರೀಕರಿಸುವುದರಲ್ಲಿರುತ್ತಾರೆ. ಹೇಳಿದ ಬುದ್ಧಿವಾಕ್ಯಗಳನ್ನು ಕೇಳದವರಿಗೆ ಇದೇ ಗತಿ ಪ್ರಾಪ್ತವಾಗುತ್ತೆ. ಯತ್ನವಿಲ್ಲಾ. ಇನ್ನಾದರೂ ಸದರೀ ಉಜ್ಜಯಿನೀ ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳವರು ನಮ್ಮ ವಿಜ್ಞಾಪನೆಯನ್ನು ಅಂಗೀಕರಿಸಿ ಅಧಿಕಪ್ರಸಂಗಿಗಳಾದ ಕಾಶೀನಾಥಶಾಸ್ತ್ರಿಗಳೇ ಮೊದಲಾದವರನ್ನು ದೂರೀಕರಿಸಿದರೆ ಸಮಾಜದವರೆಲ್ಲಾ ಅವರನ್ನು ಸತಿಸಿ ಪೂಜಿಸುವುದರಲ್ಲಿ ಅಡ್ಡಿಯಿರುವುದಿಲ್ಲ. ನಾನು ಅಡ್ಡಬಿದ್ದು ಕೇಳಿಕೊಳ್ಳುತ್ತೇನೆ. ಅವರನ್ನು ಮೊದಲು ದೂರೀಕರಿಸಿ ಇನ್ನು ಅವರಿಗೆ ಆಶ್ರಮವನ್ನು ಕೊಡಬ್ಯಾಡಿ. ಕೊಟ್ಟರೆ ನಿಮಗೆ ಅಪಯಶಸ್ಸು ತಪ್ಪುವುದಿಲ್ಲ. ಇದು ಸತ್ಯ, ಸತ್ಯ, ಸತ್ಯ, ನಾನು ಹೇಳುವುದನ್ನು ತಾವು ಚನ್ನಾಗಿ ಆಲೋಚನೆಮಾಡಿ. ತಮ್ಮ ಮೇಲಿನ ಆಕ್ರೋಶದಿಂದ ನಾನು ಹೇಳುವುದಿಲ್ಲ. ತಾವು ಕೇಳಿದರೆ ಕೇಳಿ ಇಲ್ಲವಾದರೆ ಬಿಡಿ. ಮುಂದೆ ಆಗುವುದನ್ನು ತಾವೇ ಅನುಭವಿಸಬೇಕಾಗುತ್ತೆ. ತಾವು ಭಕ್ತರುಗಳು ನಿಜವಾದ ವೀರಶೈವರಲ್ಲವೆಂತಲೂ, ಇವರಿಗೆ ವೇದಾಧಿಕಾರವಿಲ್ಲವೆಂತಲೂ, ಇವರು ವಿಧ್ಯುಕ್ತಪ್ರಕಾರ ಲಿಂಗಧಾರಣೆಗೆ ಅರ್ಹರಲ್ಲವೆಂತಲೂ, ಯಜ್ಞೋಪವೀತದಿಂದೊಡಗೂಡಿದ ಲಿಂಗಧಾರಣೆಯುಳ್ಳ ಮನುಷ್ಯನೇ ಸರಿಯಾದ ವೀರಶೈವನೆಂತಲೂ, ಭಕ್ತರ ಮನೆಯಲ್ಲಿ ಮಾಹೇಶ್ವರರು ಭೋಜನಮಾಡತಕೂಡದೆಂತಲೂ, ಭಕ್ತರು ಈಚಿನ ಕಾಲದವರೆಂತಲೂ, ವೀರಶೈವರಲ್ಲಿ ವರ್ಣಾಶ್ರಮಗಳು ಉಂಟೆಂತಲೂ ವಗ್ಯೆರೆ ಮೇಲ್ಕಂಡ ಅಲ್ಪವಿದ್ಯಾವಂತರ ಮಾತುಗಳನ್ನು ಕೇಳಿಕೊಂಡು ಪ್ರತಿಪಾದಿಸುತ್ತಿರುವುದಾಗಿಯೂ ಎಲ್ಲಾ ಅಧಿಕಾರಕ್ಕೂ ಮಾಹೇಶ್ವರರೇ ಅರ್ಹತೆಯುಳ್ಳವರೆಂತಲೂ ಬಾಕಿಯವರೆಲ್ಲಾ ಅನಧಿಕಾರಿಗಳೆಂತಲೂ ಸಾರುತ್ತಿರುವುದಾಗಿಯೂ ವರ್ತಮಾನಕೇಳುತ್ತೇನೆ. ಹಾಗೆ ಇರುವ ಸಂದರ್ಭದಲ್ಲಿ ಈಗ ಅನೇಕ ಮುಖ್ಯ ಮಠಗಳಿಗೆ ಭಕ್ತರಿಂದುತ್ಪನ್ನರಾದ ವಟುಗಳನ್ನು ಪಟ್ಟಮಾಡುತ್ತಾ ಇರುವುದನ್ನು ಯಾಕೆ ತಪ್ಪಿಸಕೂಡದು ? ನಿಮ್ಮ ಕೇವಲ ಆಪ್ತನೆಂದೆನಿಸಿಕೊಂಡಿರುವ ಕಾಶೀನಾಥಶಾಸ್ತ್ರಿಯು ಯಾವ ವಂಶದಲ್ಲಿ ಉತ್ಪನ್ನರಾದವನು? ಈಗ ಪೀಠಾಚಾರರಾಗಿರುವ ಶ್ರೀ ಕಾಶೀ ಕೇದಾರ ಸಂಸ್ಥಾನ ಮಠಗಳವರು ಯಾವ ವಂಶೋತ್ಪನ್ನರು ? ತಮ್ಮ ಪೂರ್ವಜರ್‍ಯಾರು ? ಇವುಗಳನ್ನು ಶ್ರೀ ಸ್ವಾಮಿಯವರು ಕೂಲಂಕಷವಾಗಿ ಕಂಡುಹಿಡಿದು, ಸರಿಯಾದವರನ್ನು ಪಟ್ಟಮಾಡುವುದಕ್ಕೆ ಏರ್ಪಡಿಸಿದರೆ ಅಗ್ಗೆ ಸಮಾಜಬಾಂಧವರೆಲ್ಲಾ, ತಮ್ಮನ್ನು ಶಿರಸ್ಸಿನಲ್ಲಿಧರಿಸಿ ಪೂಜಿಸುತ್ತಾರೆ. ಇದನ್ನು ಬಿಟ್ಟು ಕೆಲಸಕ್ಕೆ ಬಾರದ ಚಳವಳಿಯನ್ನು ಹುಟ್ಟಿಸಿದರೆ ಸಮಾಜವು ಉನ್ನತಸ್ಥಿತಿಗೆ ಬರುವುದೇ ತಾವೇ ಯೋಚಿಸಿ. ಮಠಗಳಿಗೂ ಪೀಠಗಳಿಗೂ ಕೂಡ ಸರಿಯಾದ ಮಾಹೇಶ್ವರವಂಶದಲ್ಲಿ ಉತ್ಪನ್ನರಾದವರನ್ನು ಪಟ್ಟಮಾಡಲು ಪ್ರಯತ್ನಮಾಡಿದಲ್ಲಿ ನಿಮಗೆ ಯಶಸ್ಸೂ ಪುಣ್ಯವೂ ಲಭಿಸುತ್ತವೆ. ಅದು ಬಿಟ್ಟು ಕೆಲಸಕ್ಕೆ ಬಾರದ ಚಳವಳಿಯಲ್ಲಿ ಕಾಲಹರಣಮಾಡಬೇಡಿರಿ. ಭಕ್ತರನ್ನ ತಾವು ಈರೀತಿಯಾಗಿ ದೂಷಿಸಿದರೆ ನಿಮಗೆ ಮಾನ್ಯ ದೊರಕೀತೆ ? ತಾವೇ ಯೋಚಿಸಿ ಸಮಾಜದಲ್ಲಿ ಅನೈಕಮತ್ಯ ಉಂಟಾಗಿರುವುದನ್ನು ತಪ್ಪಿಸಿ ಏಕಮತ್ಯ ಉಂಟಾಗುವ ಕಾರ್ಯವನ್ನು ಸಾಧಿಸಿ. ಇದರಿಂದ ನಿಮ್ಮ ಹೆಸರು ಮುಂದಕ್ಕೆ ಬರುತ್ತದೆ.

ಶ್ರೀ ಸ್ವಾಮಿಯ ಪಾದಸೇವಕ.

ಬೆಳಗಾಂವದಲ್ಲಿಯ ಶ್ರೀ ಬಸವೇಶ್ವರ ಜಯಂತಿ.

ಪ್ರತಿವರ್ಷದ ಸಾಂಪ್ರದಾಯದಂತೆ ಶ್ರೀ ಬಸವೇಶ್ವರನ ಹುಟ್ಟಿದ ದಿವಸದ ಸಮಾರಂಭವು ಇಲ್ಲಿಯ ಹಿರೇಮಠದ ಶ್ರೀ ಸೋಮಶೇಖರಸ್ವಾಮಿಗಳು ಪಟ್ಟದ್ದೇವರು ಇವರ ನೇತೃತ್ವದಕೆಳಗೆ ಸಕಲ ವೀರಶೈವಬಂಧುಗಳು ಕೂಡಿಕೊಂಡು ಬಡಬಗ್ಗರಿಗೆ ಅನ್ನಸಂತರ್ಪಣೆಯನ್ನೂ, ದಾನಧರ್ಮವನ್ನೂ ಇದೇ ವೈಶಾಖ ಶುದ್ಧ 7 ದಿವಸ ಮಾಡಿ ಸಾಯಂಕಾಲಕ್ಕೆ ಮೆರವಣಿಗೆಯನ್ನು ತೆಗೆದರು. ಅದರಲ್ಲಿ ಯಾವ ಜಾತಿಭೇದವಿಲ್ಲದೆ ಎಲ್ಲ ಜನರು ಸೇರಿ ಆ ಮಹಿಮಾಶಾಲಿಯ ಉದಾತ್ತವಿಚಾರಗಳನ್ನೂ ಮತಸುಧಾರಣೆಯ ಬಗ್ಗೆ ಮಾಡಿದ ಪ್ರಯತ್ನಕ್ಕೆ ತಲೆದೂಗಿ ಸಾವಿರಾರು ಜನರು ಶ್ರೀ ಬಸವೇಶ್ವರನ ಭಾವಚಿತ್ರದ ಮೆರವಣಿಗೆಯ ಕಾಲಕ್ಕೆ ಅಲ್ಲಲ್ಲಿ ಓಣಿಯಲ್ಲಿ ಆರತಿ, ಟೆಂಗು ಕೇಳಿಯನ್ನು ನೀರನ್ನೂ ಅರ್ಪಿಸಿ ತಮ್ಮ ಕೃತಜ್ಞತೆಯನ್ನು ತೋರಿಸಿದರು. ಇದೇ ಜಯಂತಿಯ ಮುಖ್ಯಕಾರ್ಯವು. ಈಪ್ರಕಾರ ಮೆರವಣಿಗೆಯನ್ನು ಪುರಪ್ರಮುಖ ಓಣಿಗಳೊಳಗಿಂದ ಹಾಯಿಸಿಕೊಂಡು ಶ್ರೀ ಬಸವೇಶ್ವರನ ದೇವಾಲಯಕ್ಕೆ ಹೋಗಿ ಅಲ್ಲಿ ಆರತಿ ಕಾಯಿ ಕರ್ಪೂರ ಅರ್ಪಿಸಿ ಶ್ರೀ ಬಸವೇಶನ ಮಹಿಮೆಯನ್ನು ಭಟರಿಂದ ಕೊಂಡಾಡಿಸಿ ಬಂದ ಸರ್ವಜನರಿಗೆ ಕಾಂಟಾಲವನ್ನು ಅರ್ಪಿಸಿದರು. ಈರೀತಿ ಕರ್ನಾಟಕದಲ್ಲಿ ಎಲ್ಲಿ ನೋಡಿದಲ್ಲಿ ಆನಂದವೇ ಆನಂದವು ಆಗುವಂಥ ಸುಕಾಲದಲ್ಲಿ ನಮ್ಮ ವಿಜಾಪೂರ ಶಾಲೆಯಲ್ಲಿರುವ ಮಿ॥ ಮುಗದಾಲ ಎಂಬ ಒಬ್ಬ ಬಿ.ಎ. ಪರೀಕ್ಷೆಯಲ್ಲಿ ಪಾಸಾದ ಶಿಕ್ಷಕರು ಶ್ರೀ ಬಸವೇಶ್ವರನ ಬಗ್ಗೆ ಅಸಹ್ಯವಾದ ಆಧಾರವಿಲ್ಲದ ಲಿಂಗಾಯತರ ಮನಸ್ಸಿಗೆ ನೋವಾಗುವಂಥ ನಿರಾಧಾರವಾದ ಲೇಖವನ್ನು ಅಂದರೆ ಚರಿತ್ರೆಯನ್ನು ಬರೆದಿರುವದನ್ನು ನೋಡಿದರೆ ಅವರ ಜ್ಞಾನಶೂನ್ಯತೆಯನ್ನೂ, ಜಾತಿದ್ವೇಷವನ್ನೂ, ಲಿಂಗಾಯತರ ಬಗ್ಗೆ ಇರುವ ಅವರ ಮತ್ಸರಬುದ್ಧಿಯನ್ನೂ ವ್ಯಕ್ತಪಡಿಸುತ್ತದೆ. ಇದರಕಡೆಗೆ ನಮ್ಮ ವೀರಶೈವಬಾಂಧವರು ಅದರಲ್ಲಿ ಮುಖ್ಯವಾಗಿ ತರುಣರು ಗಿಳಿಗಳಂತೆ ಪೋಷಿಸಿ ಇಂಗ್ಲೀಷದಲ್ಲಿ ಅಭ್ಯಾಸಮಾಡಿ ಧರ್ಮಜ್ಞಾನವಿಲ್ಲದೆ ಒಣಹೆಮ್ಮೆಯನ್ನು ತೋರಿಸುವ ಕೆಲವು ತರುಣ ಪದವೀಧರರು ಬುದ್ಧಿಗಲಿಯಬೇಕಾಗಿದೆ. ನಮ್ಮ ಕರ್ನಾಟಕದಲ್ಲಿ ಪರಮತಸ್ಥರು ಧರ್ಮದ್ವೇಷದಿಂದ ಯಾವ ಯಾವ ಬಗೆಯಿಂದ ಒಬ್ಬರ ಅಪಮಾನ ಒಬ್ಬರು ಮಾಡುವ ಪ್ರಯತ್ನ ಮಾಡುವರು ಕಣ್ಣುತೆರೆದು ನೋಡಲಿ. ಇಂಥ ಬ್ರಿಟಿಷರ ಆಳಿಕೆಯಲ್ಲಿ “ ಡಿಫೆಂಡರ ಆಫ ಫೇತ ” ಎಂಬ ಬಿರುದನ್ನು ತಾಳಿದ ಪಂಚಮ ಜಾರ್ಜ ಮಹಾರಾಜರ ಆಳ್ವಿಕೆಯಲ್ಲಿ ನಮ್ಮ ವೀರಶೈವರಿಗೆ ಅಲ್ಲದಸಲ್ಲದ ಹೀನೋಕ್ತಿಗಳನ್ನು ನಿರಾಧಾರವಾಗಿರುವ ವಿಷಯವನ್ನು ಕುಹಕರಾದ ಯಃಕಶ್ಚಿತ ಶಿಕ್ಷಕನು ನಮ್ಮ ಧರ್ಮಸುಧಾರಕನೂ, ದ್ವಿತೀಯಶಂಭುವಿನಂತೆ ಇರುವ ಶ್ರೀ ಬಸವನ ನಿಂದೆಯನ್ನು ನಾವು ಕೇಳಿ ಸುಮ್ಮನಿರಬೇಕೆ. ಶಿವಶಿವಾ ಇದೆಂತು ಸಾಧ್ಯವು. ನಮ್ಮ ಲಿಂಗಾಯತಬಾಂಧವರೆಲ್ಲ ಅಲ್ಲಲ್ಲಿ ಸಭೆಗಳನ್ನು ಮಾಡಿ ಆ ಮುಗದಾಲರ ಲೇಖವನ್ನು ತೀವ್ರವಾಗಿ ನಿಷೇಧಿಸಿ, ಸರಕಾರಕ್ಕೆ ಅರ್ಜಿಗಳನ್ನು ಕಳಿಸಿ ಈ ಚರಿತ್ರೆಯನ್ನು ಶಾಲೆಯ ಉಪಯೋಗದ ಪುಸ್ತಕಗಳ ಮಾಲಿಯೊಳಗಿಂದ ತೆಗೆಸಿ ನಿಜವಾದಸಂಗತಿಯ ಪುಸ್ತಕವನ್ನು ಹುಡುಗರಿಗೆ ಓದಲಿಕ್ಕೆ ಬರುವಂತೆ ವ್ಯವಸ್ಥೆ ಮಾಡಬೇಕಾಗಿ ವಿನಂತಿ ಅದೆ. ಇದರ ಬಗ್ಗೆ ದೈನಿಕಪತ್ರಕಾರರೂ, ವಾರಪತ್ರಕಾರರೂ ಜೋರಿನಿಂದ ಅಗ್ರಲೇಖಗಳನ್ನು ಬರೆಯಬೇಕು. ಓರಿಯಂಟಲ್ ಟ್ರಾನ್ಸಲೇಟರರು ಈ ವಿಷಯವನ್ನು ಡೈರೆಕ್ಟರ್ ಆಫ್ ಇನ್ಸ್ಟ್ರಕ್ಷನ್ ಇವರ ಮುಖಾಂತರ ಸರ್ಕಾರಕ್ಕೆ ವರದಿಯನ್ನು ಕೊಡಬೇಕಾಗಿ ಸೂಚನೆಯುಂಟು. ಪರಮತದ ಪ್ರಮುಖರೆನಿಸಿಕೊಳ್ಳುವ ಸಭ್ಯಗೃಹಸ್ಥರು ಇದಕ್ಕೆ ಸಹಾಯಮಾಡುವರೆಂದು ನಂಬಿರುವೆನು. ಈ ಮಾತಿಗಾಗಿ ನಮ್ಮ ಮಹಾಮಹಾಸ್ವಾಮಿಗಳೂ ಸಿಂಹಾಸನಾಧೀಶ್ವರರೂ ಗಮನಿಸುವರೆಂದು ಆಶಿಸುವೆನು. ಬೆಳಗಾಂವ ಜಿಲ್ಲೆಯ ಮುಂಬಯಿ ಇಲಾಖೆಯ ಕೌನ್ಸಿಲ್ ಎಲಕ್ಷನ್ ರದ್ದಾಗಬೇಕೆಂಬ ಅರ್ಜಿ ಯೂನಿಕಾತೆ ಆಗಿ ರಾ॥ ಷಣ್ಮುಖಪ್ಪಾ, ಬಿ.ಎ., ಎಲ್.ಎಲ್.ಬಿ, ಹಾಗು ಮಿ॥ ಭುಜಂಗರಾವ ದಳವಿ ಇವರೇ ಆರಿಸಿಬಂದದ್ದು ಯೋಗ್ಯವೆಂತಲೂ, ಕೋರ್ಟಿನ ಖರ್ಚನ್ನೂ ಈ ಉಭಯತರ ಖರ್ಚನ್ನೂ ವಾದಿಗಳೇ ಸಹಿಸಬೇಕೆಂದು ತೀರ್ಮಾನವಾಯಿತು. ಇನ್ನು ತೀವ್ರವಾಗಿಯೇ ಲೋಕಲ್ ಬೋರ್ಡಿನ ಹೊಸ ಕಾಯದೆಪ್ರಕಾರ ಮೆಂಬರರನ್ನು ಚುನಾಯಿಸುವ ಪ್ರಸಂಗ ಬರುವದಿದೆ. ಜನರು ಈಗಿನಿಂದಲೇ ತಮ್ಮತಮ್ಮ ತಯಾರಿಯಲ್ಲಿರುವರು. ಇಲ್ಲಿ ಮಳೆಯಿಲ್ಲದ್ದರಿಂದ ನೀರಿನಕೊರತೆ ಅತಿಶಯವಾಗಿದೆ. ಧಾನ್ಯಗಳ ಬೆಲೆ ಬಹಳ ತುಟ್ಟಿಯಾಗಿದೆ. ದನಗಳಿಗೆ ಮೇವು ಕಠಿಣವಾಗಿದೆ. ಇಲ್ಲಿ ಮೊದಲಿಗೆ ಕಲೆಕ್ಟರರ ಚಿಟನೀಸರಾಗಿದ್ದ ರಾ॥ ಸಾ॥ ಭೀಮರಡ್ಡಿ ಕುರ್ತಕೋಟಿ, ಬಿ.ಎ., ಯವರು ಕುಲಾಬಾಕ್ಕೆ ಡಿ॥ ಕಲೆಕ್ಟರರಾಗಿ ಹೋದವರು ಇಲ್ಲಿಗೆ ಪುನಃ ಅಸಿಸ್ಟೆಂಟ್ ಕಮಿಷನರಾಗಿ ಬಂದಿರುವರು. ಈ ವರ್ಷದಲ್ಲಿ ಇಲ್ಲಿ ಕೂಡುವ ಕಾಂಗ್ರೆಸ್‌ಸಭೆಯ ಕೆಲಸವು ಯಶಸ್ವಿಯಾಗುವ ಕುರಿತು ರಾ॥ ಗಂಗಾಧರರಾವ ದೇಶಪಾಂಡೆಯವರು ಅಹೋರಾತ್ರಿ ಪ್ರಯತ್ನಮಾಡುತ್ತಿರುವರು. ಬಿಸಲಿನ ತಾಪಕ್ಕಾಗಿ ಮಾಹಬಲೇಶ್ವರಕ್ಕೆ ಹೋಗಲಿಕ್ಕೆಯಿಲ್ಲದ ಧನವಂತರು ಅನೇಕ ಜನರು ವಿಜಾಪೂರ, ಸೊಲ್ಲಾಪೂರ, ನಾಶೀಕ, ಮುಂಬಯಿಕಡಿಂದ ಬಂದು ನಿಂತಿರುವದರಿಂದ ಇಲ್ಲಿಯ ಮನೆಗಳ ಮತ್ತು ಬಂಗಲೆಗಳ ಬಾಡಿಗೆ ಹೆಚ್ಚಾಗಿರುವದು. ಗಿಲಗಂಜಿ, ಅರಟಾಳ ಹೈಸ್ಕೂಲಿನ ಇಮಾರತಿಯನ್ನು ಕಟ್ಟಿಸುವ ಕುರಿತು ಫಂಡುಕೂಡಿಸುವ ಕೆಲಸಕ್ಕಾಗಿ ಬೆಳಗಾಂವ ಜಿಲ್ಲೆಯ ಪ್ರಮುಖರು, ಶಾಲೆಯ ಶಿಕ್ಷಕರು ಪ್ರಯತ್ನಮಾಡುತ್ತಿರುವರು, ರ್‍ಯಾಫಲವೆಂಬ ಸೋರಟಿ ತೆಗೆದಿರುವರು. ಅದಕ್ಕೆ ಎಲ್ಲರೂ ಸ್ವಹಸ್ತ ಪರಹಸ್ತ ಸಹಾಯಮಾಡಬೇಕು. ಶಿರಸಂಗಿ ದೇಸಾಯರ ಫಂಡಿನಿಂದ ಸದರೀ ಶಾಲೆಯನ್ನು ಕಟ್ಟಿಸುವದಕ್ಕೆ ಬೇಕಾದ ಜಾಗೆಗಾಗಿ 15000 ರೂ. ಸಿಕ್ಕವು. ಮೊನ್ನಿನ ಇಲ್ಲಿಯ ಸೈಕಲ್ ರೇಸಿನಲ್ಲಿ ಕೆಳಗೆಬರೆದ ತರುಣರಿಗೆ ಬಹುಮಾನದ ಪದಕಗಳು ಮೇ॥ ಬ್ರ್ಯಾಫವೆಟ ಕಲೆಕ್ಟರ ಸಾಹೇಬರವರಿಂದ ಕೊಡಲ್ಪಟ್ಟವು. ಮೆಸರ್ಸ. ಸದಾನಂದ ಅರಳಿಕಟ್ಟಿ, ಸ್ವಾಂಡಿಜೇಮ್ಸ್, ಸಿದ್ಧವೀರಸ್ವಾಮಿ ಕಣಬರಗಿಮಠ, ಕಾಯಿಟ್ಸ, ಶೆಟ್ಟಿ ಮುಂತಾದವರಿಗೆ ಸಿಕ್ಕವು. ಬೆಳಗಾಂವ ಜಿಲ್ಲೆಯ ವರ್ನಾಕ್ಯುಲರ ಸ್ಕಾಲರ್ಶಿಪ್ ಪರೀಕ್ಷೆಯಲ್ಲಿ ಶಿವಶಂಕರಸ್ವಾಮಿ ಕಣಬರಗಿಮಠ ಇವರು ಮೊದಲನೇ ನಂಬರು ಮತ್ತು ಇಬ್ರಾಹಿಮ ಮೋಹದೀನಸೇಖಅಲ್ಲಿ ಇವರು ಎರಡನೇ ನಂಬರು ಬಂದಿರುವರು. ಮುಂಬಯಿ ಇಲಾಖೆಯ ಮಂತ್ರಿ ನಾಮದಾರ ದೇಹಳವಿಯವರು ಆಚೇವಾರದಲ್ಲಿ ಇಲ್ಲಿಗೆ ದಯಮಾಡಿಸಿ ಥಾತರಫೇಕರರ ಹೊಲವನ್ನೂ, ಕೋಆಪರೇಟಿವ್ ಬ್ಯಾಂಕುಗಳನ್ನೂ, ಶೇತಕಿ ಸಂಘವನ್ನೂ ನೋಡಿ ಸಂತೋಷಪಟ್ಟರು. ಮೆಸಾನಿಕ್ಕಲಾಜನಲ್ಲಿ ಅವರಿಗೆ ಬೆಳಗಾಂವಿಯ ನಾಗರಿಕರು ತಾಂಬೂಲ ಸಮಾರಂಭವನ್ನು ಮಾಡಿದರು. ಹಿಂದುಸ್ಥಾನದ ರಿಫೋರ್ಮ್‌ಸ್ಕೀಮು ಯಶಸ್ವಿಮಾಡುವ ಕುರಿತು ಒಮ್ಮನಸ್ಸಿನಿಂದ ಎಲ್ಲರೂ ಪ್ರಯತ್ನಮಾಡಿದರೆ ಕ್ಷಿಪ್ರದಲ್ಲಿಯೇ ಸ್ವರಾಜ್ಯವು ಹಸ್ತಗತವಾಗುವದೆಂದು ಬಲು ಕಳಕಳಿಯ ಭಾಷಣಮಾಡಿದರು.

ಸುದ್ದಿಗಾರ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೇಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦ ; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦.ಕ್ಕೂ ೦—೧೨—೦ ; ಬಿಳಿಗ್ಲೇಜ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೭—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರದಾಸಿ	೦—೭—೦	೦—೯—೦
ವ್ರತಪಂಚಕ	೦—೭—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೩—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೩—೦

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗ್ಯೆರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟಪಡುವವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳಪ್ಪ, ಊದಬತ್ತಿ ಷಾಪ್,
15 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 12 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲು ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲು 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲೆಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳುಗಟ್ಲೆ ಸುಲಭಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—35] ಮೈಸೂರು.

೧೯೨೪ ನೆಯ ಇಸವಿ ಮೇ ತಾ॥ ೨೫ ರಿಂದ ೧೯೨೪ ನೆಯ ಇಸವಿ ಮೇ ತಾ॥ ೩೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ವೈಶಾಖ ಬಹುಳ ಸಪ್ತಮಿಯಿಂದ ವೈಶಾಖ ಬಹುಳ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
25	ಭಾನು	ಸಪ್ತ	17-10	ಧನಿ	24-42	12
26	ಸೋಮ	ಅಷ್ಟ	14-54	ಶತ	24-30	13
27	ಮಂಗಳ	ನವ	13-50	ಪೂಭಾ	25-21	14
28	ಬುಧ	ದಶ	13-56	ಉಭಾ	27-32	15
29	[1]ಗುರು	ಏಕಾ	15-25	ರೇವ	30-56	16
30	[2]ಶುಕ್ರ	ದ್ವಾದ	18-4	ಅಶ್ವಿ	35-28	17
31	ಶನಿ	ತ್ರಯೋ	20-45	ಭರ	40-58	18

(1) ಸರ್ವತ್ರೈಕಾದಶಿ, ಶ್ರೀಮನ್ಮಹಾರಾಜರವರ ವರ್ಧಂತಿ, ಅಶೆಕ್ಟಡೆ. (2) ಪ್ರದೋಷ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಯಪಾ | ಭುವನಪಥಕೃತಾವತಾರಾ ಪಕ್ಷಜ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಬುಧಿ [illegible] ಜ್ಞದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾ [illegible] ತ್ರಿಲೋಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಜೂನ್ ತಾರೀಖು ೧ ನೆಯ ಭಾನುವಾರ. [ಸಂಚಿಕೆ ೨೨

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.



ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ
ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
17 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಕ್ಕಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.


(Registered Trade Mark)

ಬುದ್ದಿ ಒಂದಕ್ಕೆ ಕ್ರಯ ರೂ. ೦—೭—೦. ವಿ. ಪಿ. ೦—೭—೦.
ಡಜನ್ ಗಳ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—39] ಪೋ. ಬಾ. ೫೧೦, ಮದರಾಸು.

4ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗಲೀಗ 4ನೆ ಮುದ್ರವು ಅಚ್ಚಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ಸಂಕೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—8] [illegible], ಅರಕಲಗೂಡು ಹೈಸ್ಕೂಲು, ಹಾಸನ ಡಿ॥

ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೭—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರದಾಸಿ	೦—೭—೦	೦—೯—೦
ವ್ರತಪಂಚಕ	೦—೭—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೩—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೩—೦

ಜಗತ್ತಿನ ನಿಜವಾದ] ಅಗತ್ಯಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.	ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ. ವಜ್ರಾಂಗಸುಂದರಪಾಕ.	ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಿಕೆ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು. ಸಂತತಿ ಬಂಧ್ಯಆಗೋಣ, ಸಂದು ಬೆನ್ನು, ತೊಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಕಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೇಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವೃಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಕೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಕಮಿಪತ್ರ, ಚಾಯಪತ್ರ, ಚಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಫಲ್ಯಾಗೊಂದ, ಪಂಚಾಬಿ ಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ. ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜೀನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಅದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫॥ ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಆರಡಾತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ತಿ ಅಡ್ರೆಸ್ ಪೋಸ್ಟಾಫೀಸ್ ಸಹ ಬರೆಯಿರಿ.

[50—43] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಿಗಿ.

ಗ್ರಂಥಸಿಕ್ಕುವಸ್ಥಳ :—
ಹೊಸಮಠದ ಚನ್ನಯ್ಯನವರು ಹರಿಹರ,
24—8 ಚಿತ್ರದುರ್ಗ ಡಿ॥

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೭—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೭-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೭—೦ ವಿ.ಪಿ. ಮೂಲಕ ೧—೭—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೭—೦ ವಿ.ಪಿ. ಮೂಲಕ ೧-೭-೦.

ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿ
[50—20] ಅಂಡ್ ಸನ್ಸ್, ಜೆ.ಸಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಚಳುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—26] [illegible]

ರುತ್ತೆ. ನನ್ನ ವಿನಯಪೂರ್ವಕವಾದ ವಿಜ್ಞಾಪನೆಯನ್ನು ಅವರು ಅಂಗೀಕರಿಸಿ ಅದರಂತೆ ನಡೆಸಿದ್ದರೆ ಬಹಳ ಅನುಕೂಲವಿರುತ್ತಿತ್ತು. ಇದು ಅವರಿಗೂ ಮುಂದೆ ಕೆಟ್ಟದಾಗುವುದರಲ್ಲಿ ಯಾವ ಸಂದೇಹವೂ ನನಗೆ ತೋರುವುದಿಲ್ಲ. ಈ ಜನಾಂಗವು ಹಿಂದಿನಂತೆ ಅಂಧತ್ವದಲ್ಲಿರುವುದೆಂದು ಇವರು ತಿಳಿದುಕೊಂಡಿರುತ್ತಾರೆ. ಆದರೆ ಈಗ ವೀರಶೈವ ಜನಾಂಗವೆಲ್ಲಾ ಕಣ್ಣು ತೆರೆದು ನೋಡುತ್ತಾ ಇದೆ ಇವರು ಮಾಡತಕ್ಕ ಚರ್ಯೆಗಳೆಲ್ಲಾ ಹೊರಬಿದ್ದಿವೆ. ಇವುಗಳನ್ನು ಸಧ್ಯದಲ್ಲಿ ಬೈಲಿಗೆಹಾಕಿ ಖಂಡಿತವಾಗಿಯೂ ಇವರನ್ನು ಸಮಾಜದವರು ದೂರೀಕರಿಸುವುದರಲ್ಲಿರುತ್ತಾರೆ. ಹೇಳಿದ ಬುದ್ಧಿವಾಕ್ಯಗಳನ್ನು ಕೇಳದವರಿಗೆ ಇದೇ ಗತಿ ಪ್ರಾಪ್ತವಾಗುತ್ತೆ. ಯತ್ನವಿಲ್ಲಾ. ಇನ್ನಾದರೂ ಸದರೀ ಉಜ್ಜಯಿನೀ ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳವರು ನಮ್ಮ ವಿಜ್ಞಾಪನೆಯನ್ನು ಅಂಗೀಕರಿಸಿ ಅಧಿಕಪ್ರಸಂಗಿಗಳಾದ ಕಾಶೀನಾಥಶಾಸ್ತ್ರಿಗಳೇ ಮೊದಲಾದವರನ್ನು ದೂರೀಕರಿಸಿದರೆ ಸಮಾಜದವರೆಲ್ಲಾ ಅವರನ್ನು ಪಡಿಸಿ ಪೂಜಿಸುವುದರಲ್ಲಿ ಅಡ್ಡಿಯಿರುವುದಿಲ್ಲ. ನಾನು ಅಡ್ಡಬಿದ್ದು ಕೇಳಿಕೊಳ್ಳುತ್ತೇನೆ. ಅವರನ್ನು ಮೊದಲು ದೂರೀಕರಿಸಿ ಇನ್ನು ಅವರಿಗೆ ಆಶ್ರಮವನ್ನು ಕೊಡಬ್ಯಾಡಿ. ಕೊಟ್ಟರೆ ನಿಮಗೆ ಅಪಯಶಸ್ಸು ತಪ್ಪುವುದಿಲ್ಲ. ಇದು ಸತ್ಯ, ಸತ್ಯ, ಸತ್ಯ, ನಾನು ಹೇಳುವುದನ್ನು ತಾವು ಚನ್ನಾಗಿ ಆಲೋಚನೆಮಾಡಿ. ತಮ್ಮ ಮೇಲಿನ ಆಕ್ರೋಶದಿಂದ ನಾನು ಹೇಳುವುದಿಲ್ಲ. ತಾವು ಕೇಳಿದರೆ ಕೇಳಿ ಇಲ್ಲವಾದರೆ ಬಿಡಿ. ಮುಂದೆ ಆಗುವುದನ್ನು ತಾವೇ ಅನುಭವಿಸಬೇಕಾಗುತ್ತೆ. ತಾವು ಭಕ್ತರುಗಳು ನಿಜವಾದ ವೀರಶೈವರಲ್ಲವೆಂತಲೂ, ಇವರಿಗೆ ವೇದಾಧಿಕಾರವಿಲ್ಲವೆಂತಲೂ, ಇವರು ವಿಧ್ಯುಕ್ತಪ್ರಕಾರ ಲಿಂಗಧಾರಣೆಗೆ ಅರ್ಹರಲ್ಲವೆಂತಲೂ, ಯಜ್ಞೋಪವೀತದಿಂದೊಡಗೂಡಿದ ಲಿಂಗಧಾರಣೆಯುಳ್ಳ ಮನುಷ್ಯನೇ ಸರಿಯಾದ ವೀರಶೈವನೆಂತಲೂ, ಭಕ್ತರ ಮನೆಯಲ್ಲಿ ಮಾಹೇಶ್ವರರು ಭೋಜನಮಾಡತಕೂಡದೆಂತಲೂ, ಭಕ್ತರು ಈಚಿನ ಕಾಲದವರೆಂತಲೂ, ವೀರಶೈವರಲ್ಲಿ ವರ್ಣಾಶ್ರಮಗಳು ಉಂಟೆಂತಲೂ ವಗೈರೆ ಮೇಲ್ಕಂಡ ಅಲ್ಪವಿದ್ಯಾವಂತರ ಮಾತುಗಳನ್ನು ಕೇಳಿಕೊಂಡು ಪ್ರತಿಪಾದಿಸುತ್ತಿರುವುದಾಗಿಯೂ ಎಲ್ಲಾ ಅಧಿಕಾರಕ್ಕೂ ಮಾಹೇಶ್ವರರೇ ಅರ್ಹತೆಯುಳ್ಳವರೆಂತಲೂ ಬಾಕಿಯವರೆಲ್ಲಾ ಅನಧಿಕಾರಿಗಳೆಂತಲೂ ಸಾರುತ್ತಿರುವುದಾಗಿಯೂ ವರ್ತಮಾನಕೇಳುತ್ತೇನೆ. ಹಾಗೆ ಇರುವ ಸಂದರ್ಭದಲ್ಲಿ ಈಗ ಅನೇಕ ಮುಖ್ಯ ಮಠಗಳಿಗೆ ಭಕ್ತರಿಂದುತ್ಪನ್ನರಾದ ವಟುಗಳನ್ನು ಪಟ್ಟಮಾಡುತ್ತಾ ಇರುವುದನ್ನೂ ಯಾಕೆ ತಪ್ಪಿಸಕೂಡದು ? ನಿಮ್ಮ ಕೇವಲ ಆಪ್ತನೆಂದೆನಿಸಿಕೊಂಡಿರುವ ಕಾಶೀನಾಥಶಾಸ್ತ್ರಿಯು ಯಾವ ವಂಶದಲ್ಲಿ ಉತ್ಪನ್ನರಾದವನು? ಈಗ ಪೀಠಾಚಾರರಾಗಿರುವ ಶ್ರೀ ಕಾಶೀ ಕೇದಾರ ಸಂಸ್ಥಾನ ಮಠಗಳವರು ಯಾವ ವಂಶೋತ್ಪನ್ನರು ? ತಮ್ಮ ಪೂರ್ವಜರ್ಯಾರು ? ಇವುಗಳನ್ನು ಶ್ರೀ ಸ್ವಾಮಿಯವರು ಕೂಲಂಕಷವಾಗಿ ಕಂಡುಹಿಡಿದು, ಸರಿಯಾದವರನ್ನು ಪಟ್ಟಮಾಡುವುದಕ್ಕೆ ಏರ್ಪಡಿಸಿದರೆ ಆಗ್ಯೆ ಸಮಾಜಬಾಂಧವರೆಲ್ಲಾ, ತಮ್ಮನ್ನು ಶಿರಸ್ಸಿನಲ್ಲಿಧರಿಸಿ ಪೂಜಿಸುತ್ತಾರೆ. ಇದನ್ನು ಬಿಟ್ಟು ಕೆಲಸಕ್ಕೆ ಬಾರದ ಚಳವಳಿಯನ್ನು ಹುಟ್ಟಿಸಿದರೆ ಸಮಾಜವು ಉನ್ನತಸ್ಥಿತಿಗೆ ಬರುವುದೇ ತಾವೇ ಯೋಚಿಸಿ. ಮಠಗಳಿಗೂ ಪೀಠಗಳಿಗೂ ಕೂಡ ಸರಿಯಾದ ಮಾಹೇಶ್ವರವಂಶದಲ್ಲಿ ಉತ್ಪನ್ನರಾದವರನ್ನು ಪಟ್ಟಮಾಡಲು ಪ್ರಯತ್ನಮಾಡಿದಲ್ಲಿ ನಿಮಗೆ ಯಶಸ್ಸೂ ಪುಣ್ಯವೂ ಲಭಿಸುತ್ತವೆ. ಅದು ಬಿಟ್ಟು ಕೆಲಸಕ್ಕೆ ಬಾರದ ಚಳವಳಿಯಲ್ಲಿ ಕಾಲಹರಣಮಾಡಬೇಡಿರಿ. ಭಕ್ತರನ್ನ ತಾವು ಈರೀತಿಯಾಗಿ ದೂಷಿಸಿದರೆ ನಿಮಗೆ ಮಾನ್ಯ ದೊರಕೀತೆ ? ತಾವೇ ಯೋಚಿಸಿ ಸಮಾಜದಲ್ಲಿ ಅನೈಕಮತ್ಯ ಉಂಟಾಗಿರುವುದನ್ನು ತಪ್ಪಿಸಿ ಏಕಮತ್ಯ ಉಂಟಾಗುವ ಕಾರ್ಯವನ್ನು ಸಾಧಿಸಿ. ಇದರಿಂದ ನಿಮ್ಮ ಹೆಸರು ಮುಂದಕ್ಕೆ ಬರುತ್ತದೆ.

ಶ್ರೀ ಸ್ವಾಮಿಯ ಪಾದಸೇವಕ.

ಬೆಳಗಾಂವದಲ್ಲಿಯ ಶ್ರೀ ಬಸವೇಶ್ವರ ಜಯಂತಿ.

ಪ್ರತಿವರ್ಷದ ಸಾಂಪ್ರದಾಯದಂತೆ ಶ್ರೀ ಬಸವೇಶ್ವರನ ಹುಟ್ಟಿದ ದಿವಸದ ಸಮಾರಂಭವು ಇಲ್ಲಿಯ ಹಿರೇಮಠದ ಶ್ರೀ ಸೋಮಶೇಖರಸ್ವಾಮಿಗಳು ಪಟ್ಟದ್ದೇವರು ಇವರ ನೇತೃತ್ವದಕೆಳಗೆ ಸಕಲ ವೀರಶೈವಬಂಧುಗಳು ಕೂಡಿಕೊಂಡು ಬಡಬಗ್ಗರಿಗೆ ಅನ್ನಸಂತರ್ಪಣೆಯನ್ನೂ, ದಾನಧರ್ಮವನ್ನೂ ಇದೇ ವೈಶಾಖ ಶುದ್ಧ 7 ದಿವಸ ಮಾಡಿ ಸಾಯಂಕಾಲಕ್ಕೆ ಮೆರವಣಿಗೆಯನ್ನು ತೆಗೆದರು. ಅದರಲ್ಲಿ ಯಾವ ಜಾತಿಭೇದವಿಲ್ಲದೆ ಎಲ್ಲ ಜನರು ಸೇರಿ ಆ ಮಹಿಮಶಾಲಿಯ ಉದಾತ್ತವಿಚಾರಗಳನ್ನೂ ಮತಸುಧಾರಣೆಯ ಬಗ್ಗೆ ಮಾಡಿದ ಪ್ರಯತ್ನಕ್ಕೆ ತಲೆದೂಗಿ ಸಾವಿರಾರು ಜನರು ಶ್ರೀ ಬಸವೇಶ್ವರನ ಭಾವಚಿತ್ರದ ಮೆರವಣಿಗೆಯ ಕಾಲಕ್ಕೆ ಅಲ್ಲಲ್ಲಿ ಓಣಿಯಲ್ಲಿ ಆರತಿ, ಟೆಂಗು ಕೇಳಿಯನ್ನು ನೀರನ್ನೂ ಅರ್ಪಿಸಿ ತಮ್ಮ ಕೃತಜ್ಞತೆಯನ್ನು ತೋರಿಸಿದರು. ಇದೇ ಜಯಂತಿಯ ಮುಖ್ಯಕಾರ್ಯವು. ಈಪ್ರಕಾರ ಮೆರವಣಿಗೆಯನ್ನು ಪುರಪ್ರಮುಖ ಓಣಿಗಳೊಳಗಿಂದ ಹಾಯಿಸಿಕೊಂಡು ಶ್ರೀ ಬಸವೇಶ್ವರನ ದೇವಾಲಯಕ್ಕೆ ಹೋಗಿ ಅಲ್ಲಿ ಆರತಿ ಕಾಯಿ ಕರ್ಪೂರ ಅರ್ಪಿಸಿ ಶ್ರೀ ಬಸವೇಶನ ಮಹಿಮೆಯನ್ನು ಭಟರಿಂದ ಕೊಂಡಾಡಿಸಿ ಬಂದ ಸರ್ವಜನರಿಗೆ ತಾಂಬೂಲವನ್ನು ಅರ್ಪಿಸಿದರು. ಈರೀತಿ ಕರ್ನಾಟಕದಲ್ಲಿ ಎಲ್ಲಿ ನೋಡಿದಲ್ಲಿ ಆನಂದವೇ ಆನಂದವು ಆಗುವಂಥ ಸುಕಾಲದಲ್ಲಿ ನಮ್ಮ ವಿಜಾಪೂರ ಶಾಲೆಯಲ್ಲಿರುವ ಮಿ॥ ಮುಗದಾಲ ಎಂಬ ಒಬ್ಬ ಬಿ.ಎ. ಪರೀಕ್ಷೆಯಲ್ಲಿ ಪಾಸಾದ ಶಿಕ್ಷಕರು ಶ್ರೀ ಬಸವೇಶ್ವರನ ಬಗ್ಗೆ ಅಸಹ್ಯವಾದ ಆಧಾರವಿಲ್ಲದ ಲಿಂಗಾಯತರ ಮನಸ್ಸಿಗೆ ನೋವಾಗುವಂಥ ನಿರಾಧಾರವಾದ ಲೇಖನವನ್ನು ಅಂದರೆ ಚರಿತ್ರೆಯನ್ನು ಬರೆದಿರುವದನ್ನು ನೋಡಿದರೆ ಅವರ ಜ್ಞಾನಶೂನ್ಯತೆಯನ್ನೂ, ಜಾತಿದ್ವೇಷವನ್ನೂ, ಲಿಂಗಾಯತರ ಬಗ್ಗೆ ಇರುವ ಅವರ ಮತ್ಸರಬುದ್ಧಿಯನ್ನೂ ವ್ಯಕ್ತಪಡಿಸುತ್ತದೆ. ಇದರಕಡೆಗೆ ನಮ್ಮ ವೀರಶೈವಬಾಂಧವರು ಅದರಲ್ಲಿ ಮುಖ್ಯವಾಗಿ ತರುಣರು ಗಿಳಿಗಳಂತೆ ಪೋಷಿಸಿ ಇಂಗ್ಲೀಷದಲ್ಲಿ ಅಭ್ಯಾಸಮಾಡಿ ಧರ್ಮಜ್ಞಾನವಿಲ್ಲದೆ ಒಣಹೆಮ್ಮೆಯನ್ನು ತೋರಿಸುವ ಕೆಲವು ತರುಣ ಪದವೀಧರರು ಬುದ್ಧಿಗಲಿಯಬೇಕಾಗಿದೆ. ನಮ್ಮ ಕರ್ನಾಟಕದಲ್ಲಿ ಪರಮತಸ್ಥರು ಧರ್ಮದ್ವೇಷದಿಂದ ಯಾವ ಯಾವ ಬಗೆಯಿಂದ ಒಬ್ಬರ ಅಪಮಾನ ಒಬ್ಬರು ಮಾಡುವ ಪ್ರಯತ್ನ ಮಾಡುವರು ಕಣ್ಣುತೆರೆದು ನೋಡಲಿ. ಇಂಥ ಬ್ರಿಟಿಷರ ಆಳಿಕೆಯಲ್ಲಿ "ಡಿಫೆಂಡರ ಆಫ ಫೇತ" ಎಂಬ ಬಿರುದನ್ನು ತಾಳಿದ ಪಂಚಮ ಜಾರ್ಜ ಮಹಾರಾಜರ ಆಳಿಕೆಯಲ್ಲಿ ನಮ್ಮ ವೀರಶೈವರಿಗೆ ಅಲ್ಲದಸಲ್ಲದ ಹೀನೋಕ್ತಿಗಳನ್ನು ನಿರಾಧಾರವಾಗಿರುವ ವಿಷಯವನ್ನು ಕುಹಕರಾದ ಯಃಶ್ಚಿತ ಶಿಕ್ಷಕನು ನಮ್ಮ ಧರ್ಮಸುಧಾರಕನೂ, ದ್ವಿತೀಯಶಂಭುವಿನಂತೆ ಇರುವ ಶ್ರೀ ಬಸವನ ನಿಂದೆಯನ್ನು ನಾವು ಕೇಳಿ ಸುಮ್ಮನಿರಬೇಕೆ. ಶಿವಶಿವಾ ಇದೆಂತು ಸಾಧ್ಯವು. ನಮ್ಮ ಕಲಿತಬಾಂಧವರೆಲ್ಲ ಅಲ್ಲಲ್ಲಿ ಸಭೆಗಳನ್ನು ಮಾಡಿ ಆ ಮುಗದಾಲರ ಲೇಖನವನ್ನು ತೀವ್ರವಾಗಿ ನಿಷೇಧಿಸಿ, ಸರ್ಕಾರಕ್ಕೆ ಅರ್ಜಿಗಳನ್ನು ಕಳಿಸಿ ಆ ಚರಿತ್ರೆಯನ್ನು ಶಾಲೆಯ ಉಪಯೋಗದ ಪುಸ್ತಕಗಳ ಮಾಲಿಯೊಳಗಿಂದ ತೆಗೆಸಿ ನಿಜವಾದಸಂಗತಿಯ ಪುಸ್ತಕವನ್ನು ಹುಡುಗರಿಗೆ ಓದಲಿಕ್ಕೆ ಬರುವಂತೆ ವ್ಯವಸ್ಥೆಮಾಡಬೇಕಾಗಿ ವಿನಂತಿ ಅದೆ. ಇದರ ಬಗ್ಗೆ ದೈನಿಕಪತ್ರಕಾರರೂ, ವಾರಪತ್ರಕಾರರೂ ಜೋರಿನಿಂದ ಅಗ್ರಲೇಖಗಳನ್ನು ಬರೆಯಬೇಕು. ಓರಿಯಂಟಲ್ ಟ್ರಾನ್ಸಲೇಟರರು ಈ ವಿಷಯವನ್ನು ಡೈರೆಕ್ಟರ್ ಆಫ್ ಇನ್‌ಸ್ಟ್ರಕ್ಷನ್ ಇವರ ಮುಖಾಂತರ ಸರ್ಕಾರಕ್ಕೆ ವರದಿಯನ್ನು ಕೊಡಬೇಕಾಗಿ ಸೂಚನೆಯುಂಟು. ಪರಮತದ

ಪ್ರಮುಖರೆನಿಸಿಕೊಳ್ಳುವ ಸದ್ಗೃಹಸ್ಥರು ಇದಕ್ಕೆ ಸಹಾಯಮಾಡುವರೆಂದು ನಂಬಿರುವೆನು. ಈ ಮಾತಿಗಾಗಿ ನಮ್ಮ ಮಹಾಮಹಾಸ್ವಾಮಿಗಳೂ ಸಿಂಹಾಸನಾಧೀಶ್ವರರೂ ಗಮನಿಸುವರೆಂದು ಆಶಿಸುವೆನು. ಬೆಳಗಾಂವ ಜಿಲ್ಲೆಯ ಮುಂಬಯಿ ಇಲಾಖೆಯ ಕೌನ್ಸಿಲ್ ಎಲೆಕ್ಷನ್ ರದ್ದಾಗಬೇಕೆಂಬ ಅರ್ಜಿ ಯೂನಿಕಾತ ಆಗಿ ರಾ॥ ಷಣ್ಮುಖಪ್ಪಾ, ಬಿ.ಎ., ಎಲ್‌ಎಲ್.ಬಿ, ಹಾಗು ಮಿ॥ ಭುಜಂಗರಾವ ದಳವಿ ಇವರೇ ಆರಿಸಿಬಂದದ್ದು ಯೋಗ್ಯವೆಂತಲೂ, ಕೋರ್ಟಿನ ಖರ್ಚನ್ನೂ ಈ ಉಭಯತರ ಖರ್ಚನ್ನೂ ವಾದಿಗಳೇ ಸಹಿಸಬೇಕೆಂದು ತೀರ್ಮಾನವಾಯಿತು. ಇನ್ನು ಶೀಘ್ರವಾಗಿಯೇ ಲೋಕಲ್ ಬೋರ್ಡಿನ ಹೊಸ ಕಾಯದೆಪ್ರಕಾರ ಮೆಂಬರರನ್ನು ಚುನಾಯಿಸುವ ಪ್ರಸಂಗ ಬರುವದಿದೆ. ಜನರು ಈಗಿನಿಂದಲೇ ತಮ್ಮತಮ್ಮ ತಯಾರಿಯಲ್ಲಿರುವರು. ಇಲ್ಲಿ ಮಳೆಯಿಲ್ಲದ್ದರಿಂದ ನೀರಿನಕೊರತೆ ಅತಿಶಯವಾಗಿದೆ. ಧಾನ್ಯಗಳ ಬೆಲೆ ಬಹಳ ತುಟ್ಟಿಯಾಗಿದೆ. ದನಗಳಿಗೆ ಮೇವು ಕಠಿಣವಾಗಿದೆ. ಇಲ್ಲಿ ಮೊದಲಿಗೆ ಕಲೆಕ್ಟರರ ಚಿಟನೀಸರಾಗಿದ್ದ ರಾ॥ ಸಾ॥ ಭೀಮರಡ್ಡಿ ಕುರ್ತಕೋಟಿ, ಬಿ.ಎ., ಯವರು ಕುಲಾಬಾಕ್ಕೆ ಡಿ॥ ಕಲೆಕ್ಟರರಾಗಿ ಹೋದವರು ಇಲ್ಲಿಗೆ ಪುನಃ ಅಸಿಸ್ಟೆಂಟ್ ಕಮಿಷನರಾಗಿ ಬಂದಿರುವರು. ಈ ವರ್ಷದಲ್ಲಿ ಇಲ್ಲಿ ಕೂಡುವ ಕಾಂಗ್ರೆಸ್‌ಸಭೆಯ ಕೆಲಸವು ಯಶಸ್ವಿಯಾಗುವ ಕುರಿತು ರಾ॥ ಗಂಗಾಧರರಾವ ದೇಶಪಾಂಡೆಯವರು ಅಹೋರಾತ್ರಿ ಪ್ರಯತ್ನಮಾಡುತ್ತಿರುವರು. ಬಿಸಲಿನ ತಾಪಕ್ಕಾಗಿ ಮಹಾಬಳೇಶ್ವರಕ್ಕೆ ಹೋಗಲಿಕ್ಕೆಯಿಲ್ಲದ ಧನಿಕರು ಅನೇಕ ಜನರು ವಿಜಾಪೂರ, ಸೋಲಾಪೂರ, ನಾಶೀಕ, ಮುಂಬಯಿಕಡೆಯಿಂದ ಬಂದು ನಿಂತಿರುವದರಿಂದ ಇಲ್ಲಿಯ ಮನೆಗಳ ಮತ್ತು ಬಂಗಲೆಗಳ ಬಾಡಿಗೆ ಹೆಚ್ಚಾಗಿರುವದು. ಗೀಗಂಜಿ, ಆರಟಾಳ ಹೈಸ್ಕೂಲಿನ ಇಮಾರತಿಯನ್ನು ಕಟ್ಟಿಸುವ ಕುರಿತು ಫಂಡುಕೂಡಿಸುವ ಕೆಲಸಕ್ಕಾಗಿ ಬೆಳಗಾಂವ ಜಿಲ್ಲೆಯ ಪ್ರಮುಖರು, ಶಾಲೆಯ ಶಿಕ್ಷಕರು ಪ್ರಯತ್ನಮಾಡುತ್ತಿರುವರು, ಲ್ಯಾಫಲವೆಂಬ ಸೀರಟ ತೆಗೆದಿರುವರು. ಅದಕ್ಕೆ ಎಲ್ಲರೂ ಸ್ವಹಸ್ತ ಪರಹಸ್ತ ಸಹಾಯಮಾಡಬೇಕು. ಶಿರಸಂಗಿ ದೇಸಾಯರ ಫಂಡಿನಿಂದ ಸದರೀ ಶಾಲೆಯನ್ನು ಕಟ್ಟಿಸುವದಕ್ಕೆ ಬೇಕಾದ ಜಾಗೆಗಾಗಿ 15000 ರೂ. ಸಿಕ್ಕವು. ಮೊನ್ನಿನ ಇಲ್ಲಿಯ ಸೈಕಲ್ ರೇಸಿನಲ್ಲಿ ಕೆಳಗೆಬರೆದ ತರುಣರಿಗೆ ಬಹುಮಾನದ ಪದಕಗಳು ಮೇ॥ ಬ್ರ್ಯಾಫವೆಟ ಕಲೆಕ್ಟರ ಸಾಹೇಬರವರಿಂದ ಕೊಡಲ್ಪಟ್ಟವು. ಮೆಸರ್ಸ. ಸದಾನಂದ ಅರಳಿಕಟ್ಟಿ, ಸ್ಯಾಂಡಿಜೇಮ್ಸ್, ಸಿದ್ಧವೀರಸ್ವಾಮಿ ಕಣಬರಗಿಮಠ, ಕಾಯಿಟ್ಲ. ಶೆಟ್ಟಿ ಮುಂತಾದವರಿಗೆ ಸಿಕ್ಕವು. ಬೆಳಗಾಂವ ಜಿಲ್ಲೆಯ ವರ್ನಾಕ್ಯುಲರ ಸ್ಕಾಲರ್‌ಶಿಪ್ ಪರೀಕ್ಷೆಯಲ್ಲಿ ಶಿವಶಂಕರಸ್ವಾಮಿ ಕಣಬರಗಿಮಠ ಇವರು ಮೊದಲನೇ ನಂಬರು ಮತ್ತು ಇಬ್ರಾಹಿಮ ಮೋಹದೀನಶೇಖಅಲ್ಲಿ ಇವರು ಎರಡನೇ ನಂಬರು ಬಂದಿರುವರು. ಮುಂಬಯಿ ಇಲಾಖೆಯ ಮಂತ್ರಿ ನಾಮದಾರ ದೇಹಳವಿಯವರು ಆಚೇವಾರದಲ್ಲಿ ಇಲ್ಲಿಗೆ ದಯಮಾಡಿಸಿ ಥಾತರಫೇಕರರ ಹೊಲವನ್ನೂ ಕೋಆಪರೇಟಿವ್ ಬ್ಯಾಂಕುಗಳನ್ನೂ, ಶೇತಕಿ ಸಂಘವನ್ನೂ ನೋಡಿ ಸಂತೋಷಪಟ್ಟರು. ಮೆಸಾನಿಕ್ಕಲಾಜಿನಲ್ಲಿ ಅವರಿಗೆ ಬೆಳಗಾಂವಿಯ ನಾಗರಿಕರು ತಾಂಬೂಲ ಸಮಾರಂಭವನ್ನು ಮಾಡಿದರು. ಹಿಂದುಸ್ಥಾನದ ರಿಫೋರ್ಮಸ್ಕೀಮು ಯಶಸ್ವಿಮಾಡುವ ಕುರಿತು ಒಮ್ಮನಸ್ಸಿನಿಂದ ಎಲ್ಲರೂ ಪ್ರಯತ್ನಪಡಿದರೆ ಕ್ಷಿಪ್ರದಲ್ಲಿಯೇ ಸ್ವರಾಜ್ಯವು ಹಸ್ತಗತವಾಗುವದೆಂದು ಬಲು ತಳಮಳಿಯ ಭಾಷಣಮಾಡಿದರು.

ಸುದ್ದಿಗಾರ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲಾಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳಿಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦ ; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦.ಕ್ಕೂ ೦—೧೨—೦ ; ಬಿಳಿಗ್ಲೇಜ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸ ಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿಃ	೦— ೮—೦	೦—೧೩—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರಜನನ	೦— ೮—೦	೦—೧೩—೦
ಅಭಿನವ ಕಾಳಿದಾಸ ಕೈ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧— ೦—೦	೧— ೬—೦

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು ೪೦ ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟಪಟ್ಟವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
15 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 12 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲು ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲು 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—35] ಮೈಸೂರು.

೧೯೨೪ ನೆಯ ಇಸವಿ ಮೇ ತಾ॥ ೨೫ ರಿಂದ ೧೯೨೪ ನೆಯ ಇಸವಿ ಮೇ ತಾ॥ ೩೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ವೈಶಾಖ ಬಹುಳ ಸಪ್ತಮಿಯಿಂದ ವೈಶಾಖ ಬಹುಳ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
25	ಭಾನು	ಸಪ್ತ	17-10	ಧನಿ	24-42	12
26	ಸೋಮ	ಅಷ್ಟ	14-54	ಶತ	24-30	13
27	ಮಂಗಳ	ನವ	13-50	ಪೂಭಾ	25-21	14
28	ಬುಧ	ದಶ	13-56	ಉಭಾ	27-32	15
29	1 ಗುರು	ಏಕಾ	15-25	ರೇವ	30-56	16
30	2 ಶುಕ್ರ	ದ್ವಾದ	18-4	ಅಶ್ವಿ	35-28	17
31	ಶನಿ	ತ್ರಯೋ	20-45	ಭರ	40-58	18

(1) ಸರ್ವತ್ರೈಕಾದಶಿ, ಶ್ರೀಮನ್ಮಹಾರಾಜರವರ ವರ್ಧಂತಿ, ಅರ್ಕಷಡೆ. (2) ಪ್ರದೋಷ.

ಮೈಸೂರು : ಕೈ. ವಿರೂಪಾಕ್ಷಯ್ಯನವರಿಂದ ಕ್ಲಾಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧಿ [illegible]ೀಷ್ಟದಶೀಲ ನಾಕಲಿತ ಸಾಧ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲ[illegible] [illegible]ತ್ರೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ನೆಯ ಇಸವಿ ಜೂನ್ ತಾರೀಖು ೧ ನೆಯ ಭಾನುವಾರ. [ಸಂಚಿಕೆ ೨೨

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಪ್ಲೂಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ತಳಿಸಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬಂತಹ ರೋಗವು ಗುಣವಾಗುತ್ತದೆ. ಶೀತ ಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.

ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
17 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಕ್ಕಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ಗಳಿಗೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—39] ಪೋ. ಬಾ. ೫೧೧, ಮದರಾಸು.

4 ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗಾಗಲೆ 4ನೆ ಮುದ್ರಣವು ಅಚ್ಚಾಗಿ ಬೆಳಗಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ಸಂತೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—8] ಲೇಖರಾಭ್ರಿ, ಅರಳುಗೋಡು ಹಾಲ್ಲೋಳು, ಹಾಸನ ಡಿ॥

ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿಃ	೦— ೮—೦	೦—೧೩—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರಜನನ	೦— ೮—೦	೦—೧೩—೦
ಅಭಿನವ ಕಾಳಿದಾಸ ಕೈ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧— ೦—೦	೧— ೬—೦

ಜಗತ್ತಿನ ನಿಜವಾದ] ಅಗತ್ಯಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

☞ ೧೦೦೦ ರೂ. ಇನಾಮು. ☜

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿಹೋದಿರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಿತ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು. ಸಂತತಿ ಬಂಧುಆಗೋಣ, ಸಂದು ಬೆನ್ನು, ಸೆಡುವು, ಕಾಲು ಮೊದಲಾದವುಗಳು ಸೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಆಶಕ್ತತೆ, ಜಾಗರನೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣೆ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೇಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇದರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮುಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಕೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರೆಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಿ ಮಿಶ್ರ, ವಂಶಲೋಚನ, ಸಾಲಮುಮಿಶ್ರ, ಸಫೇತಮಿಶ್ರ, ಶಾಲೀಮುಖಾನಾ. ಬೀಜಬಂಧ, ಚಿಗರಿಗೋರಸು, ಮೊಂಗಲ್ ಬೇದಾಣ, ಮೈದಾಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯುಲ್ಲ. ಸ್ತ್ರೀವರ್ಜ್ಯೆಯುಲ್ಲ. ೨೧ ದಿವಸ ಸಾಲುವ ೪೨ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಲಾಭಪಡೆಯಿರಿ. ಕಾಗದ ಬರೆಯುವವರು ತಮ್ಮ ಪೂರ್ಣ ಅಡ್ರೆಸ್ ಪೋಷ್ಟ ಸಹ ಬರೆಯಿರಿ.

[50—43] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಿಗಿ.

ಗ್ರಂಥಸಿಕ್ಕುವಸ್ಥಳ :—
ಹೊಸಮಠದ ಚನ್ನಯ್ಯನವರು ಹರಿಹರ,
24—8 ಚಿತ್ರದುರ್ಗ ಡಿ॥

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿ
[50—20] ಅಂಡ್ ಸನ್ಸ್, ಜೆ.ಸಿ. ಮಂಡಲಿ, ಮೈಸೂರು.

ಇನ್ಫ್ಲೂಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ನಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಚಳಿಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[80—38] [illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜೂನ್ ತಾ|| ೧ ನೆಯ ಭಾನುವಾರ.

THE S. S. L. C. SCHEME.

The Government have not yet issued any orders on the Report of the Committee appointed to revise the S.S.L.C. courses and curricula. Even if any revision of the existing system is contemplated, we believe it is too late for introduction in the coming year as it needs a general overhauling of teaching staff and the equipment of proper laboratories where there not such. But we hope it is not too late to say once again something of the merits of the revised scheme itself, which evidently has received support in some quarters. We would draw the attention of the Government to our remarks in the issue of this paper dated 23rd September 1923, where we have stated that after the detailed revision of the entire Lower Secondary and the High School courses adumberated in the Educational Memorandum, which met with practically the unanimous approval of the public there was hardly any necessity to appoint another committee to go into the question again. The revised scheme is a return to the old matriculation with all its horrors of grinding students through all the different courses in all subjects which they may like or detest, with the noble object of giving pupils a "thorough grounding in general subjects before they are required to specialise in any of them or to take up any industrial or technical subject. It is unnecessary here to traverse the same grounds as we have already done. It is a pity that the learned experts who have enunciated the above principle have been more obsessed with the cultural aspect of modern education rather than the practical needs of the country or the aptitudes of the students. They evidently have been influenced by the idea that the standard of material going up to the B.A. has deteriorated, an idea for which there may not be sufficient proof. Even if the deterioration is true it is more likely to have been due to the increase of students and the unwieldy classes and the lower standard of teaching capacity, than to the present S.S.L.C. system. There could be nothing so irrational than to compel a student to study subjects for which he has no special taste and which would be of no use to him in his after life. Even as the courses stand at present there is nothing to prevent the authorities to give the History students some grounding in elementary Mathematics and Science and the Mathematics students in History and Geography without holding public examination in them. If it is alleged that the students would be indifferent in these non-examination courses and the teachers would be equally so, it can be mended by proper supervision. Our neighbouring Province, Madras adopted the S.S.L.C. course earlier than Mysore and it has not thought it desirable to change it in favour of the Matriculation and it is astounding that we in Mysore so soon after the introduction of the S.S.L.C. should resort to another experiment. We would not wonder if the old slaughter of students should recommence with the reversion to the Matriculation. It would only mean a set back to the progress of the Education of the youth of the State. We do hope that the Government will give their utmost consideration to this important question and act cautiously. Let the S.S.L.C. be given a fair trial before it is condemned, for, as yet it has not been given that.

ಲಂಚದ ಹಾವಳಿಯು.

ಲಂಚದ ಹಾವಳಿಯು ನಮ್ಮ ಸೀಮೆಯಲ್ಲಿ ದಿನ ದಿನಕ್ಕೆ ಪ್ರಬಲವಾಗುತ್ತಿದೆ. ಎತ್ತತಿರುಗಿದರೂ ಆ ಸುದ್ದಿಯೇ ಕಿವಿಯನ್ನು ಕಿವುಡುಮಾಡುತ್ತಿದೆ. ಇದರ ಹಾವಳಿಯನ್ನು ಕೇಳದವರೇ ವಿರಳ. ಆದರೂ ಇದು ಬಟ್ಟಬಯಲಾದ ಗುಟ್ಟಿನಂತೆ ಪರಿಣಮಿಸಿದೆ. ರಾಜ್ಯವನ್ನು ಒಂದು ದೇಹವನ್ನಾಗಿ ಪರಿಗಣಿಸಿದರೆ, ಅದರ ಪ್ರಭುತ್ವವನ್ನು ಅಂಗಾಂಗಗಳನ್ನೆಲ್ಲಾ ವ್ಯಾಪಿಸಿ ದೇಹಪೋಷಣೆಯನ್ನು ಮಾಡುವ ರಕ್ತವಾಹಿನಿಯೆಂದು ಹೇಳಬಹುದು. ಇಂತಹ ಪ್ರಭುತ್ವದಲ್ಲಿ ಲಂಚವು ಬೆಳೆಯುತ್ತ ಬಂದರೆ ನಿರ್ಮಲವಾದ ರಕ್ತದಲ್ಲಿ ವಿಷಕ್ರಿಮಿಗಳು ಸುರಿದಂತಾಗುವುದು. ಆ ವಿಷಕ್ರಿಮಿಯ ನಿವಾರಣೆಗೆ ಕೂಡಲೆ ತಕ್ಕ ಚಿಕಿತ್ಸೆಯನ್ನು ಮಾಡದಿದ್ದಲ್ಲಿ ದೇಹದ ರಕ್ತವೆಲ್ಲಾ ಕೆಟ್ಟು, ಅದರಿಂದ ದೇಹವು ಕೊಳತು ಮುಳಿತು ವಿನಾಶಗೊಳ್ಳುವುದಕ್ಕೆ ಕಾರಣವಾಗುವುದು. ದೇಹಾರೋಗ್ಯಕ್ಕೆ ರಕ್ತಶುದ್ಧಿಯು ಅವಶ್ಯವಾಗಿರುವಂತೆ ಪ್ರಭುತ್ವವು ಸಮೀಚೀನವಾಗಿಯೂ, ನ್ಯಾಯವಾಗಿಯೂ, ಅಭಿವೃದ್ಧಿಗಾಸ್ಪದವಾಗಿಯೂ ನಡೆದುಕೊಂಡು ಹೋಗಬೇಕಾಗಿದ್ದರೆ, ಅದರಲ್ಲಿರುವ ಉದ್ಯೋಗಿಗಳೆಲ್ಲಾ ಸತ್ಯಸಂಧರೂ, ಪಾಪಭೀತರುಗಳೂ, ಸನ್ಮಾರ್ಗಪ್ರವರ್ತಕರೂ ಆಗಿರಬೇಕಾದುದು ಅತ್ಯಾವಶ್ಯಕ. ಸರಕಾರವೂ ಸರ್ಕಾರದ ಉನ್ನತೋದ್ಯೋಗಿಗಳೂ ಎಷ್ಟು ನ್ಯಾಯಪರರೂ ಸತ್ಯಸಂಧರೂ ಆಗಿದ್ದರೂ, ಅವರ ಕೈಕೆಳಗಣ ಸಣ್ಣ ಉದ್ಯೋಗಿಗಳ ದುಶ್ಶೀಲಗಳಿಂದಲೂ, ಅಕ್ರಮಗಳಿಂದಲೂ ಸರ್ಕಾರದವರ ಪ್ರಯತ್ನಗಳೆಲ್ಲವೂ ನಿಷ್ಫಲವಾಗುವುವಲ್ಲದೆ ಪ್ರಜೆಗಳೂ ಸಹ ಸುಖಕ್ಕೆ ಬದಲಾಗಿ ನಾನಾವಿಧದ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಪ್ರಜೆಗಳಿಗೆ ವಿಶೇಷವಾಗಿ ಸರ್ಕಾರದ ಸಣ್ಣ ಉದ್ಯೋಗಿಗಳ ಸಂಸ್ಕಾರವಿರುವುದೇ ಹೊರತು ದೊಡ್ಡ ದೊಡ್ಡ ಅಧಿಕಾರಿಗಳ ಸಂಬಂಧವು ಹೆಚ್ಚಾಗಿರುವುದಿಲ್ಲವು. ಪ್ರಜಾಸಾಮಾನ್ಯದಲ್ಲಿ ವಿದ್ಯಾಗಂಧವಿಲ್ಲ. ಶಾಸನಗಳ ಕ್ರಮವನ್ನು ಅವರು ಸ್ವಪ್ನದಲ್ಲೂ ಅರಿಯರು. ಇಂತಹ ಪ್ರಜೆಗಳನ್ನು ಸರ್ಕಾರದ ಕೀಳು ಉದ್ಯೋಗಿಗಳು ಎಷ್ಟು ತೆರದಲ್ಲಿ ಸುಲಿದುಕೊಳ್ಳುತ್ತಿರುವರೆಂಬುದನ್ನು ಬರೆಯಲೆತ್ನಿಸಿದರೆ ಲಕ್ಷ ಗ್ರಂಥವಾಗಬಹುದು. ಮಾಮೂಲು, ಮಿರಾಸೆ ಎಂಬಿವೆರಡನ್ನು ಸರ್ಕಾರದ ಪ್ರತಿಯೊಂದು ಶಾಖೆಯ ಕೀಳುದ್ಯೋಗಿಗಳೂ ತಮ್ಮ ಕಿಸೆಯಲ್ಲಿ ಯಾವಾಗಲೂ ಇಟ್ಟುಕೊಂಡು ತೋರಿಸುತ್ತಿರುವರು. ಇವು ಹಾವು ಚೇಳುಗಳಂತೆಯೂ, ಪ್ಲೇಗು ಕಾಲರಾಗಳಂತೆಯೂ ಪ್ರಜೆಗಳನ್ನು ಹಿಂಸಿಸುತ್ತಿರುವುವು. ಪಟೇಲು ಶ್ಯಾನುಭೋಗ ಶೇಕದಾರ ಮುತ್ಸದ್ದಿಗಳೂ ಕೈನೀಡಿದಾಗ ಗುಮಾಸ್ತರು ಏನನ್ನಾದರೂ ದಾನಮಾಡದಿದ್ದರೆ ಬೆಳಕು ಹರಿಯಿತೆಂದರೆ ಅವರ ಮೇಲೇನಾದರೂ ಪೀಡೆಗಳು ತಾವೇ ಇರುವುವು. ಕಾಲ್ವೆಯ ನೀರುಗಂಟಿ ಓವರ್ಸಿ ಮೊದಲಾದವರಿಗೆ ಕೈಬೆಚ್ಚಗಾಗದಿದ್ದರೆ ರೈತನ ಗದ್ದೆಗೆ ನೀರೇ ಇಲ್ಲ. ಸಿವಿಲ್ ಕೋರ್ಟಿನ ಸಮನ್ ಜವಾನ ಅಮೀನ ಮೊದಲಾದವರಿಗೆ ಶಾಕಾಯಲವಣಾಯ ಆಗದಿದ್ದರೆ ಸಮನ್ ಜಾರಿಯೇ ಆಗುವುದಿಲ್ಲ; ವಾರಂಟಿಗೆ ಆಸಾಮಿಯೇ ಸಿಗುವುದಿಲ್ಲ ಮತ್ತು ಸ್ವತ್ತೂ ಪರಾರಿಯಾಗುವುದು. ಈರೀತಿಯಾಗಿ ವ್ಯಾಜ್ಯವೆಲ್ಲಾ ಹಾಳಾಗುವುದು. ಕೆಲಸಂದರ್ಭಗಳಲ್ಲಿ ಈ ಅಮೀನರುಗಳು ತಾವು ಕೇಳಿದಷ್ಟು ಲಂಚವನ್ನು ಕೊಡದಿದ್ದಲ್ಲಿ 12 ವರ್ಷಗಳಾದರೂ ಸ್ವತ್ತು ಸ್ವಾಧೀನವಾಗದರೀತಿಯಲ್ಲಿ ಲಿಖಾವಟ್ಟು ಮಾಡುತ್ತೇನೆಂದು ಹೆದರಿಸಿ ಡಿಕ್ರಿಪಡೆದುಕೊಂಡಿರುವವರಿಂದ 40-50 ರೂಪಾಯಿಗಳನ್ನು ಸುಲಿಗೆಮಾಡಿಕೊಳ್ಳುತ್ತಿರುವರು ಮತ್ತು ತಾವು ಕೇಳಿದಷ್ಟು ಹಣವನ್ನು ಕೊಡದಿದ್ದರೆ ಆಸಾಮಿಯನ್ನು ತೋರಿಸಿದವರೂ ವಾರಂಟಿನಲ್ಲಿ ಹಿಡಿಯುವುದಿಲ್ಲವು, ಒಂದು ವೇಳೆ ಹಿಡಿದರೂ ಏನಾದರೂ ತಕರಾರನ್ನು ತಾವೇ ಒಡ್ಡಿ ಬಿಟ್ಟುಬಿಡುವರು. ಸ್ವತ್ತನ್ನು ಕಳೆದುಕೊಂಡವನು ಪೋಲೀಸಿಗೆ ಹೋಗಿ ದೂರುಹೇಳಿಕೊಂಡಾಗ ದಕ್ಷಿಣಾಸಮರ್ಪಣೆಯಿಲ್ಲದಿದ್ದರೆ ಆಸಾಮಿಯನ್ನೂ ಮಾಲನ್ನೂ ತೋರಿಸಿಕೊಟ್ಟಲ್ಲಿ ಹಿಡಿಯುತ್ತೇವೆಂದು ಗದ್ದರಿಸಿ ಕಳುಹಿಸುವರು. ಕೆಲವೇಳೆ ನಮಾಜುಮಾಡುವುದಕ್ಕೆ ಹೋಗಿ ಮಸೀದಿಯನ್ನು ಮೇಲೆ ಕೆಡಹಿಕೊಂಡಂತೆಯೂ ಆಗುವುದು, ರಿಜಿಸ್ಟ್ರೇಷನ್ ಶಾಖೆಯಲ್ಲಂತೂ ಹೇಳಬೇಕಾದುದೇ ಇಲ್ಲ. ಇದು ಮೊಸಳೆಗಳು ಸೇರಿರುವ ಹಾಳ್ಮಡುವಿನಂತಾಗಿರುವುದು. ಇಲ್ಲಿಯ ಸಣ್ಣ ಉದ್ಯೋಗಿಗಳು ಸುಲಿದು ತಿನ್ನುವ ಲಂಚವನ್ನು ಹೇಳಿತೀರದುದಾಗಿದೆ. ಇದಕ್ಕೆ ಮುಚ್ಚುಮರೆಯೇ ಇಲ್ಲ. ಸಂಬಳಕ್ಕೆ 10-20 ರಷ್ಟರವರಮೇಲಣ ಸಂಪಾದನೆಯೂ ಇವರಿಗಿರುವುದು. ಮೊದಲು ಗುಮಾಸ್ತನ ಬಳಿಗೆ ಹೋಗಿ ಮಂತ್ರಹಾಕಿ ಬರದಿದ್ದ ಪತ್ರಗಳ ವಿಷಯವಾಗಿ ಸಬ್‌ರಿಜಿಸ್ಟ್ರಾರವರು ನೂರಾರು ತಪ್ಪಿತಗಳನ್ನು ಕ್ಷಣಮಾತ್ರದಲ್ಲಿ ಹೇಳಿಬಿಡುವರು. ಆದರೆ ಅದೇ ಪತ್ರಕ್ಕೆ ಗುಮಾಸ್ತರ ಸೀಸದಕಡ್ಡಿಯ ಗುರ್ತಿನ ಸಂಪ್ರೋಕ್ಷಣೆಯಾಗಿ ಬಂದರೆ ಸಬ್ ರಿಜಿಸ್ಟ್ರಾರರೂ ಸದ್ದಿಲ್ಲದೆ ರಿಜಿಸ್ಟರ್ಮಾಡಿಕಳುಹಿಸಿಕೊಡುವರು. ಒಂದು ವೇಳೆ ಯಾರಾದರೂ ಬುದ್ಧಿವಂತರಾದ ಲಾಯರಿಂದ ಪತ್ರವು ಬರೆಯಿಸಲ್ಪಟ್ಟಿರುತ್ತದೆಂದು ವಾದಿಸಿ ರಿಜಿಸ್ಟರು ಮಾಡಬೇಕೆಂದು ಹಟಮಾಡಿದರೆ ಭೂತಕನ್ನಡಿಯನ್ನು ಹಾಕಿಕೊಂಡು ತಪ್ಪುಗಳನ್ನು ಶೋಧಿಸಿ ರಿಜಿಸ್ಟ್ರಾರವರಿಗೆ ಬರೆದು ದಶಗುಣ ದಂಡವನ್ನು ಹಾಕಿಸುವರು. ಇದನ್ನು ಅರಿಯದಿದ್ದವರೇ ಇಲ್ಲ. ಒಬ್ಬ ದೊಡ್ಡ ಉದ್ಯೋಗಿಯನ್ನು ಕಾಣಲು ಹೋಗಬೇಕಾದರೆ ದ್ವಾರಪಾಲಕನಿಗೆ ತೃಪ್ತಿಯನ್ನು ಮೊದಲು ಮಾಡಿದ ಹೊರತು ಅದು ಸಾಧ್ಯವಲ್ಲವು. ದರ್ಬಾರು ಮೊದಲಾದವುಗಳಿಗೆ ಆಹ್ವಾನ ಪತ್ರಿಕೆಯನ್ನು ತರುವವರಿಗೆ ಮರ್ಯಾದೆಮಾಡದಿದ್ದರೆ ಪ್ರವೇಶಕಾಲದಲ್ಲಿ ಮೋರೆಯನ್ನೂ ಕೆಳಗೆ ಮಾಡಿಕೊಳ್ಳಬೇಕಾಗುವುದು. ಈ ರೀತಿಯಾಗಿ ಸಣ್ಣ ಉದ್ಯೋಗಿಗಳು ಮಾತ್ರವಲ್ಲದೆ ದೊಡ್ಡ ಉದ್ಯೋಗಿಗಳಲ್ಲೂ ಈ ಲಂಚದ ದುಶ್ಶೀಲಕ್ಕೆ ಒಪ್ಪಿದವರು ಕೆಲವರಿರುವರು. ಸಣ್ಣ ಉದ್ಯೋಗಿಗಳು ಊಬುತಿಗಳಂತೆ ಪ್ರಜೆಗಳ ರಕ್ತವನ್ನು ಹೀರುತ್ತಿದ್ದರೆ, ಲಂಚಗುಳಿಗಳಾದ ದೊಡ್ಡ ಉದ್ಯೋಗಿಗಳು ಕ್ರೂರರಾಕ್ಷಸರಾಗಿಯೇ ಪೀಡಿಸುತ್ತಿರುವರು. ಪ್ರಜೆಗಳು ಸರ್ಕಾರಕ್ಕೆ ನ್ಯಾಯವಾದ ತೆರಿಗೆ ಕಂದಾಯಗಳನ್ನು ಒಂದುಪಾಲು ತೆರುತ್ತಿದ್ದರೆ, ಈ ಲಂಚಗಾರರ ಹಾವಳಿಗೆ ಸಿಕ್ಕಿ 2 ಭಾಗವನ್ನು ತೆರುತ್ತಿರುವರು. ಆದರೆ ಸರ್ಕಾರದ ಪ್ರತಿಯೊಬ್ಬ ಉದ್ಯೋಗಿಯೂ ಹೀಗೆಯೇ ಲಂಚದ ಗುಳಿಯಾಗಿರುವನೆಂಬುದು ನಮ್ಮ ತಾತ್ಪರ್ಯವಲ್ಲ. ಎಷ್ಟೋ ಮಂದಿ ಪ್ರಾಮಾಣಿಕರೂ, ಸಚ್ಛೀಲರೂ, ಸ್ವಾಮಿಭಕ್ತರೂ, ಪಾಪಭೀತರೂ ಆಗಿರುವವರುದ್ದೇ ಇರುವರು. ಅವರೆಲ್ಲರೂ ವಂದ್ಯರು. ಆದರೆ ಅಂತಹ ಸಜ್ಜನರಿಗಿಂತ ದುರ್ಜನರಿರುವುದೇ ಬಹಳ ಹೆಚ್ಚು.

ಪ್ರಜೆಗಳೂ ಈ ಲಂಚಗುಳಿಗಳಿಂದ ತಮಗೆ ಇಷ್ಟೊಂದು ಇತಿಬಾಧೆಗಳಿದ್ದಾಗ್ಯೂ, ಲಂಚವನ್ನು ಕೊಡುವುದು ತೆಗೆದುಕೊಳ್ಳುವುದು ಇವೆರಡೂ ಅಪರಾಧ ಕೃತ್ಯಗಳಾಗಿ ಪರಿಗಣಿಸಲ್ಪಟ್ಟಿರುವುದರಿಂದ ಈ ಪಾಪಾಚರಣೆಯನ್ನು ರುಜುವಾತು ಮಾಡಿಕೊಡುವುದು ಕಷ್ಟವಾಗಿರುತ್ತದೆ. ಪ್ರಜೆಗಳಲ್ಲಿ ಶಾಸನದ ಜ್ಞಾನವೂ, ಏಕಮತ್ಯವೂ ಇಲ್ಲದಿರುವುದರಿಂದ ಲಂಚಗುಳಿಗಳ ಸ್ವಚ್ಛಂದವೃತ್ತಿಯೂ ನಿರರ್ಗಳವಾಗಿ ನಡೆಯುತ್ತಿದೆ. ಪ್ರಜೆಗಳಲ್ಲಿ ವಿದ್ಯಾವ್ಯಾಪನೆಯೂ ಹೆಚ್ಚಿದಂತೆ ಲಂಚದ ಹಾವಳಿಯೂ ಸ್ವಲ್ಪಮಟ್ಟಿಗೆ ಕಡಿಮೆಯಾಗಬಹುದಾಗಿದ್ದರೂ, ಪ್ರಭುತ್ವದವರು ಈ ವಿಷಯದಲ್ಲಿ ಉದಾಸೀನರಾಗಿರುವುದು ಉಚಿತವಲ್ಲ ಮತ್ತು ತಮ್ಮ ಉದ್ಯೋಗಿಗಳು ಮಾಡುವುದೆಲ್ಲವೂ ಸದ್ಧರ್ಮವೆಂದು ನಂಬಿ ಮೌನರಾಗಿ ಕುಳಿತುಕೊಳ್ಳತಕ್ಕದ್ದೂ ಅಲ್ಲ. ಅದು ಕಾರಣ ನಮ್ಮ ಸರ್ಕಾರದವರು ನೆರೆದೇಶೀಯ ಸಂಸ್ಥಾನಧೀಶ್ವರರಾದ ಹೈದರಾಬಾದು ನೈಜಾಮರವರು ಲಂಚದ ಸಂಬಂಧವಾಗಿ ಬರುವ ಅರ್ಜಿಗಳನ್ನು ವಿಚಾರಿಸಿ ಲಂಚಗುಳಿಗಳಿಗೂ ಸುಳ್ಳು ಅರ್ಜಿಬರೆದವರಿಗೂ ಶಿಕ್ಷೆಯನ್ನು ವಿಧಿಸಲು ತಮ್ಮ ಕೌನ್ಸಿಲಿನ ಪ್ರೆಸಿಡೆಂಟರು ಮತ್ತು ಇಬ್ಬರು ಮೆಂಬರುಗಳಿಂದ ಕೂಡಿದ ಒಂದು ಕಮಿಟಿಯನ್ನೇರ್ಪಡಿಸಿರುವಂತೆ ನಮ್ಮ ಸಂಸ್ಥಾನದಲ್ಲೂ ದಿವಾನರು ಇಬ್ಬರು ಕೌನ್ಸಿಲರುಗಳು ಮತ್ತು ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು ಸಿ. ಐ. ಇ., ಯವರಂತಹ ಒಬ್ಬಿಬ್ಬ ಅನೌದ್ಯೋಗಿಕ ದೊಡ್ಡಮನುಷ್ಯರುಗಳಿಂದ ಕೂಡಿದ ಒಂದು ಕಮಿಟಿಯನ್ನೇರ್ಪಡಿಸಿ ಅವರಿಂದ ಲಂಚಗುಳಿಗಳೆಂದು ನಿರ್ಧರಿಸಲ್ಪಟ್ಟವರನ್ನು ನಿರ್ದಾಕ್ಷಿಣ್ಯದಿಂದ ಕಠಿಣತರವಾದ ಶಿಕ್ಷೆಗೆ ಗುರಿಮಾಡಿ ತನ್ಮೂಲಕ ಪ್ರಜಾಹಿಂಸಾಕರವಾದ ಲಂಚದಹಾವಳಿಯು ತಪ್ಪುವಂತೆ ಮಾಡಬೇಕೆಂದು ನಾವು ಪದೇ ಪದೇ ಒತ್ತಿಹೇಳುತ್ತಿರುವೆವಾದರೂ, ಲಂಚಕೊಟ್ಟವರೂ ಶಿಕ್ಷೆಗೆ ಗುರಿಯಾಗುವರೆಂಬ ವಿಧಿಗೆ ಅಂಜಿ ಮೌನವಾಗಿರದೆ ನಿಜವಾದ ಸಂಗತಿಯನ್ನು ಸರ್ಕಾರದ ಗಮನಕ್ಕೆ ತಂದು ನಿರ್ಧರಪಡಿಸಿಕೊಟ್ಟಲ್ಲಿ ಲಂಚವನ್ನು ತೆಗೆದುಕೊಂಡವರು ಯಾರೇ ಆಗಿರಲಿ "Out he goes" ಅಂದರೆ ನಿರ್ದಾಕ್ಷಿಣ್ಯದಿಂದ ಕೆಲಸದಿಂದ ದಾಟಲ್ಪಡುವನು ಎಂದು ಮ|| ಬಾನರ್ಜಿಯವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಬಹಳ ಆವೇಶದಿಂದ ಅಪ್ಪಣೆಕೊಡಿಸಿದ್ದರಾದರೂ ಈವರೆಗೆ ಯಾವುದೊಂದು ಪ್ರಯತ್ನವೂ ನಡೆಸಲ್ಪಡದಿಲ್ಲವಾದ ಪ್ರಯುಕ್ತ, ಲಂಚಗುಳಿಗಳು ಮತ್ತಷ್ಟು ಹೆಚ್ಚಾಗಿ ನಿರ್ಭೀತಿಯಿಂದ ವರ್ತಿಸಲವಕಾಶವಾಯಿತು. ಈ ಲಂಚದ ಹಾವಳಿಯನ್ನು ಬಡಪಾಯಿಗಳಿಂದ ಪ್ರಜೆಗಳು ಸಹಿಸುವುದು ಕಡುಕಷ್ಟವಾಗಿರುವ ಪ್ರಯುಕ್ತ ಅಹೋರಾತ್ರಿ ಸ್ವಪ್ರಜಾಕ್ಷೇಮಚಿಂತನೆಯಲ್ಲೇ ಮಗ್ನರಾಗಿರುವ ಮತ್ತು ಪ್ರಜಾಸರ್ವಸ್ವವಾದ ಮಹಾಪ್ರಭುಗಳು ನಾವು ಮೇಲೆ ಸೂಚಿಸಿರುವಂತಹ ಒಂದು ಕಮಿಟಿಯನ್ನೇರ್ಪಡಿಸಿಯಾಗಲಿ ಅಥವಾ ಮತ್ತಾವ ವಿಧದಿಂದಾಗಲಿ ಲಂಚದ ಹಾವಳಿಯು ಹುಟ್ಟು ಅಡಗಿ ಪ್ರಜಾನೆಮ್ಮದಿಯುಂಟಾಗುವಂತೆ ಮಾಡಿಸಬೇಕಾಗಿ ಪ್ರಾರ್ಥಿಸುತ್ತೇವೆ, ಅಲ್ಲದೆ ಈ ವರ್ಧಂತ್ಯುತ್ಸವದಲ್ಲಿ ಜರಗುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಈ ವಿಚಾರವನ್ನೂ ಒಂದು ಸ್ಪೆಷಲ್ ಸಬ್ಜೆಕ್ಟನ್ನಾಗಿಯಾದರೂ ತಂದು ಚರ್ಚಿಸಿ ಲಂಚದ ಹಾವಳಿಯ ನಿವಾರಣೆಗೇನಾದರೊಂದೇರ್ಪಾಟನ್ನು ಖಂಡಿತವಾಗಿ ಮಾಡಲ್ಪಡುವಂತೆ ಪ್ರಯತ್ನಿಸಬೇಕಾಗಿ ಸೂಚಿಸುತ್ತೇವೆ.

ತಲೆನೋವಿಗೆ ಕಾರಣ.

ಸಾಮಾನ್ಯವಾಗಿ ತಲೆನೋವು ಬರುವುದಕ್ಕೆ ಅನೇಕ ಕಾರಣಗಳುಂಟು. ಉಷ್ಣದಿಂದ ತಲೆನೋವು ಬರುವುದು. ಶೀತದಿಂದಲೂ ಅದು ಬರುವುದು. ಚಿಂತೆಯಿಂದಲೂ ಅದು ಬರಬಹುದು. ಆದರೆ ಇವೆಲ್ಲ ಕಾರಣಗಳಿಗಿಂತಲೂ ಹೆಚ್ಚಾಗಿ ಅಜೀರ್ಣದಿಂದ ತಲೆನೋವು ಬರುವುದು ಹೆಚ್ಚು. ಜೀರ್ಣವಾಗಿ ಆಹಾರ್ಯ ಪದಾರ್ಥಗಳನ್ನು ವಿಶೇಷವಾಗಿ ಹೊಟ್ಟೆಗೆ ತುಂಬುವುದರಿಂದ ತಲೆನೋವು ಬರುವುದು. ಯಾವದೇಕಾರಣದಿಂದ ತಲೆನೋವು ಬಂದಿದ್ದರೂ ಚೆನ್ನಾಗಿ ನಿದ್ದೆಮಾಡುವುದೂ, ಬಿಸಿನೀರಿಂದ ತಲೆಯನ್ನು ತೊಳೆಯುವುದೂ, ಭೇದಿಗೆ ಔಷಧವನ್ನು ತೆಗೆದುಕೊಳ್ಳುವುದೂ ತಕ್ಕ ಪರಿಹಾರೋಪಾಯಗಳು. ಮುಂದಕ್ಕೆ ಕೆಲ ಅಡಿಗಳ ದೂರ ನಡೆದುಹೋಗಿ ಮತ್ತೆ ಹಾಗೆಯೇ ಮುಖವನ್ನು ಹಿಂದಕ್ಕೆ ತಿರುಗಿಸದೆ ಹಿಂಗಡೆಗೆ ನಡೆದು ಬರುವುದರಿಂದ ಕೆಲ ತಲೆನೋವುಗಳು ಗುಣವಾಗುವುವೆಂದು ಕೆಲ ವೈದ್ಯರು ಹೇಳುತ್ತಾರೆ. ತಲೆಯಕಡೆಗೆ ವಿಶೇಷವಾಗಿ ರಕ್ತವು ಪ್ರವಹಿಸುವುದರಿಂದ ತಲೆಯು ಕಾದು ನೋವು ವಿಶೇಷವಾಗಿರುವುದು. ಅಂತಹ ಕಾಲದಲ್ಲಿ ಮೊಣಕಾಲಿನವರೆಗೆ ಬಿಸಿನೀರಿನಲ್ಲಿ ಎರಡು ಕಾಲುಗಳನ್ನೂ ಮುಳುಗಿಸಿ ಸ್ವಲ್ಪ ಕಾಲ ಕುಳಿತುಕೊಳ್ಳುವುದರಿಂದಲೂ ತಲೆನೋವು ಗುಣವಾಗುವುದುಂಟು.

ಹರ್ ಎಕ್ಸಿಲೆನ್ಸಿ.

ಇದುವರೆಗೆ ವೈಸ್‌ರಾಯರ ಪತ್ನಿಯವರು ಅಲ್ಲದೆ ಗೌರ್ನರ ಪತ್ನಿಯರುಗಳು ಕೂಡ "ಹರ್ ಎಕ್ಸಿಲೆನ್ಸಿ" ಎಂಬ ಗೌರವ ಶಬ್ದದಿಂದ ಸಂಬೋಧಿಸಲ್ಪಡುತ್ತಿದ್ದರು. ಈ ವಿಚಾರದಲ್ಲಿ ಚರ್ಚೆಯು ನಡೆದು ಇನ್ನುಮೇಲೆ ವೈಸ್‌ರಾಯರ ಪತ್ನಿಯವರಿಗೆ ಮಾತ್ರ ಈ ಬಿರುದು ಸಲ್ಲತಕ್ಕುದಲ್ಲದೆ ಇತರರಿಗೆ ಕೂಡದೆಂದು ಚಕ್ರವರ್ತಿಯವರ ಅಪ್ಪಣೆಯಾಗಿರುವುದಾಗಿ ಪ್ರಕಟವಾಗಿದೆ.

ಆಶುತೋಷ ಚೌದರಿಯವರ ಮರಣವು.

ಕಲಕತ್ತಾ ಹೈಕೋರ್ಟಿನ ಜಡ್ಜಿಯಾಗಿದ್ದು ವಿಶ್ರಾಂತಿ ಸುಖವನ್ನನುಭವಿಸುತ್ತಿದ್ದ ಸರ್ ಆಶುತೋಷ ಚೌದರಿಯವರು ಜ್ವರರೋಗಪೀಡಿತರಾಗಿ ಕಳೆದ ತಾ|| 22 ರಲ್ಲಿ ಸ್ವರ್ಗಸ್ಥರಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರು ಮಿತವಾದಿಗಳಾಗಿದ್ದು ಪ್ರಜಾಹಿತಕಾರ್ಯದಲ್ಲಿ ನಿರತರಾಗಿದ್ದರು. ತಮ್ಮ ನ್ಯಾಯಸ್ಥಾನ ಉದ್ಯೋಗನಿರ್ವಹಣದಲ್ಲಿ ಸ್ವಸಾಮರ್ಥ್ಯವನ್ನು ಪ್ರದರ್ಶಿಸಿ ಪ್ರಖ್ಯಾತರಾಗಿದ್ದರು. ಸಾಂಘಿಕ, ವಿದ್ಯಾ, ಸಾಹಿತ್ಯಾದಿ ಉದ್ಯಮಗಳಲ್ಲಿ ಇವರು ಬಹಳ ಶ್ರದ್ಧೆವಹಿಸಿ ಪಾಟುಪಡುತ್ತಿದ್ದರು.

1924 ನೇ ಮೇ 15 ನೇ ಮರ್ಕ್ಕುಮಿಗೆ ಅಖೈರಾದ ವಾರಕ್ಕೆ ವರ್ತಮಾನ ಪತ್ರಿಕೆಗಳಿಗೆ ಕಳುಹಿಸುವ ಸರ್ಕಾರಿಯಪ್ಪಣೆಯ ಗೋಷ್ವಾರೆ.

1. ಸೈನ್ಯದ ಯುದ್ಧಕ್ರಮದ ಅಭ್ಯಾಸಗಳು ನಡೆಯುವ ಕಾಲದಲ್ಲಿ ಗ್ರಾಮಗಳನ್ನು ಖಾಲಿಮಾಡುವುದಕ್ಕಾಗಿ ಹಿಂದುಗಳಿಗೂ, ಮುಸಲ್ಮಾನರಿಗೂ ಇತರರಿಗೂ ಕೊಡತಕ್ಕ ಪರಿಹಾರದ್ರವ್ಯದ ದರಗಳನ್ನು ಇದರಡಿ ಕಂಡಂತೆ ತಿದ್ದುಪಾಟುಮಾಡಿರುತ್ತದೆ.

ಹಾಲಿಜಾರಿಯಲ್ಲಿರುವ ದರಗಳು —ವಯಸ್ಕರಿಗೆ ತಲೆಯೊಂದಕ್ಕೆ ನಾಲ್ಕಾಣೆಯಂತೆ.

ತಿದ್ದುಪಾಟಾದ ದರಗಳು—ಗಂಡಸರಿಗೆ ತಲೆಗೆ ದಿನಕ್ಕೆ 6 ಆಣೆ. ಹೆಂಗಸರಿಗೆ ತಲೆಗೆ ದಿನಕ್ಕೆ 4 ಆಣೆ. (10 ಕ್ಕೆ ಮೇಲ್ಪಟ್ಟ 14 ವರ್ಷಕ್ಕೆ ಕಡಮೆಯಾದ ವಯಸ್ಸುಳ್ಳ) ಮಕ್ಕಳಿಗೆ ಮೇಲ್ಕಂಡ ದರದಲ್ಲಿ ಅರ್ಧದಂತೆ.

2. ಮೈಸೂರು ನ್ಯಾಯವಿಧಾಯಕ ಸಭೆಯ ಮೀಟಿಂಗು ಈ ಮೊದಲು ಪ್ರಕಟಿಸಿದಂತೆ 1924ನೇ ಜೂನ್ 17ನೆ ತಾರೀಖಿಗೆ ಬದಲಾಗಿ ಅದೇ ಮಾಹೆ 18ನೇ ತಾರೀಖು ಬುಧವಾರದ ದಿನ ಮಧ್ಯಾಹ್ನ 12 ಗಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡಗಳ ಸೆಂಟ್ರಲ್ ಹಾಲಿನಲ್ಲಿ ಉಪಕ್ರಮವಾಗತಕ್ಕದ್ದು.

3. ಶ್ರೀ ಕನಕಲಕ್ಷ್ಮಮ್ಮನವರನ್ನು ಬಾಲಿಕಾಪಾಠಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟ್ರೆಸ್ಸರನ್ನಾಗಿ ನೇಮಕಮಾಡಿದ ಪ್ರಯುಕ್ತ ಬಾಲಿಕಾಪಾಠಶಾಲೆಗಳನ್ನು ತನಿಖೆಮಾಡತಕ್ಕ ನಾನಾ ಆಫೀಸರರಿಗೆ ಹಂಚಿರುವ ರೇಂಜುಗಳನ್ನೂ ಛಾರ್ಜುಗಳನ್ನೂ ತಿದ್ದುಪಾಟು ಮಾಡಿರುತ್ತದೆ, ಅಲ್ಲದೆ ಬಾಲಿಕಾಪಾಠಶಾಲೆಗಳ ಇನ್ಸ್‌ಪೆಕ್ಟ್ರೆಸ್‌ರವರ ಮತ್ತು ಡೆಪ್ಯುಟಿ ಇನ್ಸ್‌ಪೆಕ್ಟ್ರೆಸ್‌ರವರ ಅಧಿಕಾರಗಳನ್ನೂ ಕರ್ತವ್ಯಗಳನ್ನೂ ಗೊತ್ತುಮಾಡಿದೆ.

4. ನ್ಯಾಯವಿಧಾಯಕ ಸಭೆಯ ಮೆಂಬರುಗಳಿಗೂ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಿಗೂ, ಅವರ ಮೆಂಬರುತನದ ಕಾಲದಲ್ಲಿ ಈ ಕೆಳಗೆ ಕಂಡ ಸೌಕರ್ಯಗಳನ್ನೊದಗಿಸಿದೆ.

1. ಸರ್ಕಾರಿ ಕೆಲಸಕಾರ್ಯಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಸರ್ಕಾರಿ ಆಫೀಸರರ ವಿಳಾಸಕ್ಕೆ ಕಳುಹಿಸಿ ಕೊಡತಕ್ಕ ಕಾಗದಪತ್ರಗಳನ್ನು ಲಕೋಟೆಯ ಮೇಲ್ಭಾಗದ ತುದಿಯಲ್ಲಿ "ಸರ್ಕಾರಿ ಕೆಲಸದ ಮೇಲೆ ಹಾಸಲಿಲ್ಲದೆ" ಎಂದು ಬರೆದು ಅಡಿಯಲ್ಲಿ ಕಳುಹಿಸುವವರ ರುಜುವನ್ನು ಹಾಕಿ ಅಂಚೆಯ ಹಾಸಲಿಲ್ಲದೆ ಕಾಗದ ಪತ್ರಗಳನ್ನು ಕಳುಹಿಸಿಕೊಡತಕ್ಕದ್ದು. ಪರಂತು ಅಂಥ ಪತ್ರಗಳನ್ನು ಟಪಾಲಿನ ಮೇಲೆ ಕಳುಹಿಸತಕ್ಕ ಸ್ಥಳವೂ ವಿಳಾಸದಾರರಿಗೆ ಕೊಡಲ್ಪಡತಕ್ಕ ಸ್ಥಳವೂ, ಈ ಎರಡೂ ಮೈಸೂರು ಸಂಸ್ಥಾನದ ಸರಹದ್ದುಗಳೊಳಗಾಗಿ ಇರುವ ಸ್ಥಳಗಳಾಗಿರಬೇಕು.

2. (a) ಮೈಸೂರು ಗೆಜೆಟ್ಟಿನ ಪ್ರತಿಗಳು ಮತ್ತು ಸರ್ಕಾರದವರ ಪುನರ್ವಿಮರ್ಶೆಯೊಂದಿಗೆ ಅಡ್ಮಿನಿಸ್ಟ್ರೇಷನ್ ರಿಪೋರ್ಟುಗಳ ಪ್ರತಿಗಳು, (b) ನ್ಯಾಯವಿಧಾಯಕ ಸಭೆಯ ಮತ್ತು ಪ್ರಜಾಪ್ರತಿನಿಧಿ ಸಭೆಯ ನಡವಳಿಕೆಗಳು ಮತ್ತು (c) ಬ್ಲೂಬುಕ್ ಮತ್ತು ಪಬ್ಲಿಸಿಟಿ ಜರ್ನಲಿನ ಪ್ರತಿಗಳು, ಇವುಗಳನ್ನು ಅರ್ಧದರಗಳಿಗೆ ಕೊಡುವುದು.

5. ಮೈಸೂರು ಸರ್ಕಾರದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರವರಾದ ಮಿ|| ಎಸ್. ಜಿ. ಫೋರ್ಬ್ಸ್ ಬಿ. ಎಸ್. ಸಿ. ಯವರಿಗೆ 1924ನೆ ಮೇ 15 ನೆ ಮುಕ್ಕಾಂ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನ ಲಾಗಾಯಿತು 15 ದಿನಗಳ ಪ್ರಿವಿಲೇಜ್ ರಜವನ್ನು ಮಂಜೂರ್ಮಾಡಿದೆ ಈ ಕಾಲದಲ್ಲಿ ಅಸಿಸ್ಟೆಂಟ್ ಚೀಫ್ ಎಲೆಕ್ಟ್ರಿಕಲ್ ಇಂಜನಿಯರವರಾದ ಮಿ|| ಬಿ. ಡಿ. ನಾಕ್‌ರವರು ಚೀಫ್ ಎಲೆಕ್ಟ್ರಿಕಲ್ ಇಂಜನಿಯರವರ ಆಫೀಸಿನ ಚಾಲ್ತಿ ಕೆಲಸಗಳನ್ನು ನೋಡಿಕೊಳ್ಳತಕ್ಕದ್ದು ಮತ್ತು ಶಿವಸಮುದ್ರದಲ್ಲಿ ಜನರಲ್ ಸೂಪರಿಂಟೆಂಡೆಂಟರವರಾಗಿರುವ ಮಿ|| ಎಲ್. ಆರ್. ವೆತ್‌ಹಾರ್‌ರವರು ವುಡ್‌ಹಾಕ್‌ರವರ ಕೆಲಸ ಚಲಾವಣೆಯ ಮತ್ತು ಸ್ವಂತದ ಚಾರ್ಜಿನಲ್ಲಿ ಇರತಕ್ಕದ್ದು.

6. 1924 ನೇ ಜೂನ್ ತಿಂಗಳಲ್ಲಿ ನಡೆಯತಕ್ಕ ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವಗಳ ಸಂಬಂಧದಲ್ಲಿ ದಯಮಾಡಿಸುವ ಇಂಡಿಯನ್ ಅತಿಥಿಗಳ ಸ್ವಾಗತ ಮತ್ತು ಸತ್ಕಾರಗಳ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡಲು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನ ರಿಜಿಸ್ಟ್ರಾರರಾದ ಮಿ|| ಸಿ. ಇ. ರಾಮರಾವ್, ಬಿ. ಎ., ಯವರನ್ನು 1924 ನೇ ಮೇ 30 ನೇ ತಾರೀಖಿನ ಲಾಗಾಯಿತು ಸ್ಪೆಷಲ್ ಡ್ಯೂಟಿಗೆ ನೇಮಿಸಿದೆ.

7. ಸಾಲಗಳಿಗಾಗಿ ಬರುವ ಅರ್ಜಿಗಳ ಫೈಸಲಾತಿಯಲ್ಲಿ ವಿಶೇಷ ಸುಸ್ತಿಯಾಗುತ್ತಿರುವುದೆಂದೂ, ಅದರಿಂದ ರೈತರಿಗೆ ಅನನುಕೂಲವೂ ತೊಂದರೆಯೂ ಉಂಟಾಗುವುದರಿಂದ ಅಂಥ ಅರ್ಜಿಗಳನ್ನು ವ್ಯವಸ್ಥೆಮಾಡುವುದಕ್ಕೆ ಒಂದು ಕಾಲಪರಿಮಿತಿಯನ್ನು ಗೊತ್ತುಮಾಡಬೇಕೆಂದೂ, 1922 ನೇ ಅಕ್ಟೋಬರು ತಿಂಗಳಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಅಂಕಿತಮಾಡಲ್ಪಟ್ಟಿತು. ಈ ಅರ್ಜಿಗಳು ಜಾಗ್ರತೆಯಾಗಿ ವಿಲೇವಾರಿಯಾಗುತ್ತಿಲ್ಲವೆಂಬ ಆಕ್ಷೇಪಣೆಗೆ ಸ್ವಲ್ಪ ಮಟ್ಟಿಗೆ ಆಧಾರವಿರುವುದಾಗಿ ಕಂಡುಬಂದಿದೆ; ಆದರೆ ಸಾಲಕ್ಕಾಗಿ ಬರುವ ಅರ್ಜಿಗಳನ್ನು ಫೈಸಲ್ಮಾಡುವುದಕ್ಕಾಗಿ ಒಂದು ಕಾಲಾವಧಿಯನ್ನು ಗೊತ್ತುಮಾಡುವುದರಿಂದ, ವಿಚಾರಣೆಯಿಲ್ಲದೆಯೇ ಅವುಗಳನ್ನು ತಿರಸ್ಕರಿಸುವುದಕ್ಕೆ ಸಲವಾಗಬಹುದಲ್ಲದೆ, ಎಲ್ಲಾ ಸಂದರ್ಭಗಳಲ್ಲಿಯೂ ಸದರಿ ಅವಧಿಯಲ್ಲಿ ಪೂರ್ತಿಯಾದ ವಿವರಗಳನ್ನು ಪಡೆಯುವುದು ಅಸಾಧ್ಯವಾಗಬಹುದು. ಆದರೂ, ಅಂಥ ಅರ್ಜಿಗಳನ್ನು ಜರೂರಾದವುಗಳಂತೆ ಭಾವಿಸಿ, ವಿಧಾಯಕವಾಗಿರುವ ಕ್ರಮಗಳನ್ನೆಲ್ಲಾ ಕೂಡಿದಮಟ್ಟಿಗೂ, ಜಾಗ್ರತೆಯಾಗಿ ನಡಿಸುವಂತೆ ಸರ್ಕಾರದವರು ರೆವಿನ್ಯೂ ಆಫೀಸರುಗಳಿಗೆ ಹುಕುಂ ಕೊಟ್ಟಿರುತ್ತಾರೆ.

ನಮ್ಮ ಮೈಸೂರುಸಂಸ್ಥಾನದಿಂದ ಲಂಡನ್ನಿನಲ್ಲಿ ಜರುಗುತ್ತಿರುವ ಬ್ರಿಟಿಷ್‌ಸಾಮ್ರಾಜ್ಯ ಮಹಾವಸ್ತುಪ್ರದರ್ಶನಕ್ಕೆ ಕಳುಹಲ್ಪಟ್ಟಿರುವ ವಸ್ತುಗಳನ್ನು ತತ್ರಾಪಿ ಚಿತ್ರವಿಚಿತ್ರ ಕೆಲಸಮಾಡಲ್ಪಟ್ಟಿರುವ ಗಂಧದಮರದ ಮತ್ತು ದಂತದ ಹಾಗೂ ಬಣ್ಣದ ವಸ್ತುಗಳನ್ನು ಬ್ರಿಟಿಷ್ ಚಕ್ರವರ್ತಿ ದಂಪತಿಗಳು ರೊಮೇನಿಯಾದೇಶದ ರಾಜದಂಪತಿಗಳ ಕೂಡ ಕಳೆದ ತಾ|| 15 ರಲ್ಲಿ ಪರಾಮರ್ಶಿಸಿ ಬಹಳ ಸಂತೋಷಪಟ್ಟು ಕೆಲ ಅಪೂರ್ವವೂ ಆಶ್ಚರ್ಯಕರವೂ ಆದ ಪದಾರ್ಥಗಳನ್ನು ತಮ್ಮಗಳಿಗೆ ವಿಕ್ರಯಿಸಬೇಕಾಗಿ ತಿಳಿಸಿದರೆಂದು ವರ್ತಮಾನಬಂದಿದೆ. ಇದರಿಂದ ನಮ್ಮ ಸರ್ಕಾರದವರು ಪದಾರ್ಥಗಳನ್ನು ಸಂಗ್ರಹಿಸಿ ಅವನ್ನು ಪ್ರದರ್ಶನಕ್ಕೆ ಕಳುಹಿಕೊಡಲು ವಿಶೇಷವಾಗಿಮಾಡಿದ ಹಣವ್ಯಯವು ತಕ್ಕಮಟ್ಟಿಗೆ ಸಾರ್ಥಕವಾಯಿತೆಂದು ಹೇಳಬಹುದಾಗಿದೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ಲಗ್ನದ ಫಂಡು.

1. ಮೈಸೂರಲ್ಲಿರುವ ಮ|| ರಾ|| ನಟ್ರಿಬಸಪ್ಪನವರ ಪುತ್ರಿ ಚಿ|| ಸೌ|| ಚೆನ್ನಮ್ಮನನ್ನು ಮ|| ರಾ|| ಡಾಕ್ಟರ್ ಟಿ. ಯಸ್. ನಂಜಪ್ಪನವರ ಪುತ್ರ ಚಿ|| ರಾ|| ಶಿವನಂಜಪ್ಪನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ವಧುವಿನ ಕಡೆಯಿಂದ ಬಂದದ್ದು. 10-0-0.

2. ಕೊಳ್ಳೇಗಾಲದ ಮ|| ರಾ|| ಜಿ. ಪಿ. ಮಲ್ಲಪ್ಪನವರ ಪುತ್ರಿ ಚಿ|| ಸೌ|| ಪಾರ್ವತಮ್ಮನನ್ನು ದೆಂಕಣಿಕೋಟೆ ಮ|| ರಾ|| ಡಿ. ಎನ್. ನೀಲಕಂಠಪ್ಪನವರ ಪುತ್ರ ಪ್ರಸನ್ನಯ್ಯನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ವಧೂವರರ ಕಡೆಯಿಂದ ಬಂದದ್ದು. 10-0-0.

3. ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿರುವ ಫಾರೆಸ್ಟು ಇಲಾಖೆ ಅಸಿಸ್ಟೆಂಟ್ ಕನ್ಸರ್‌ವೇಟರ್ ಮ|| ರಾ|| ಕೆ. ರೇವಣ್ಣನವರ ಪುತ್ರಿ ಚಿ|| ಸೌ|| ಗೌರಮ್ಮನನ್ನು ಮುಳಬಾಗಲು ಮ|| ರಾ|| ಬಸೆಟ್ಟಪ್ಪನವರ ಪುತ್ರ ಚಿ|| ರಾ|| ಬಸಪ್ಪನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ಬಂದದ್ದು. 25-0-0.

4. ಮೈಸೂರು ಹಳೇ ಅಗ್ರಹಾರದಲ್ಲಿರುವ ಚಿಲ್ಲರೆಮಳಿಗೆ ಮ|| ಸಿ. ದಾಸಪ್ಪನವರ ಪುತ್ರಿ ಚಿ|| ಸೌ|| ಯಲ್ಲಮ್ಮನನ್ನು ಇದೇ ಹಳೇ ಅಗ್ರಹಾರದಲ್ಲಿರುವ ಚಿಲ್ಲರೆಮಳಿಗೆ ಮ|| ಬೆಂಗಳೂರು ರುದ್ರಪ್ಪನವರ ಪುತ್ರ ರಾ|| ನಾಗಪ್ಪನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ಮ|| ವೈ. ವಿರೂಪಾಕ್ಷಯ್ಯನವರ ಮೂಲಕ, 3-0-0.

5. ಮೈಸೂರು ಗುರುಕಾರ್ ಮಲ್ಲಪ್ಪನವರ ಪುತ್ರಿಯ ನಿಷೇಕಪ್ರಸ್ತದಲ್ಲಿ ಮ|| ವೈ. ವಿರೂಪಾಕ್ಷಯ್ಯನವರ ಮೂಲಕ ಬಂದದ್ದು. 2-0-0.

6. ಚನ್ನಪಟ್ಟಣದ ತಾ|| ಯಲೆಕೋಟೆದಹಳ್ಳಿ ಮ|| ರಾಚಪ್ಪನವರ ಪುತ್ರಿ ಸೌ|| ಗಂಗಮ್ಮಣ್ಣಿಯನ್ನು ಚನ್ನಪಟ್ಟಣದ ಯಜಮಾನರು ಮ|| ಮಲ್ಲಿಕಾರ್ಜುನಯ್ಯನವರ ಪುತ್ರ ರಾ|| ಬಸವರಾಜಯ್ಯನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ವಧೂವರರ ಕಡೆಯಿಂದ ಮ|| ವೈ. ವಿರೂಪಾಕ್ಷಯ್ಯನವರ ಮೂಲಕಬಂದದ್ದು. 5-0-0.

7. ಬೇಲೂರು ತಾಲ್ಲೂಕಿನ ವೀರಶೈವರೆಲ್ಲರೂ ಮಲ್ಲಾಪುರಮಠದಲ್ಲಿ ಸಭೆ ಸೇರಿದ್ದ ಕಾಲದಲ್ಲಿ ಕೋಗೋಡು ಪಟೇಲ್ ಮ|| ಮಲ್ಲೇಗೌಡರ ಮೂಲಕ ಬಂದದ್ದು. 2-14-0.

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ,
ಬೆಂಗಳೂರು ಸಿಟಿ.

ನೋಟೀಸ್.

ದಾವಣಗೆರೆ ವೀರಶೈವ ವಿದ್ಯಾವರ್ಧಕ ಫಂಡು ಸಂಘ.

ಈ ಸಂಘದಿಂದ ಸಹಾಯ ಹೊಂದಿದ ವಿದ್ಯಾರ್ಥಿಗಳ ಪೈಕಿ ಲೋವರ್ ಸೆಕೆಂಡರಿ, ಮೆಟ್ರಿಕ್ಯುಲೇಷನ್, ಎಂಟ್ರೆನ್ಸ್, ಯೂನಿವರ್ಸಿಟಿ, ಲಾ, ಕಾಲೇಜುಗಳಲ್ಲಿಯೂ 1923—1924 ನೇ ಸಾಲಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರ ಹೆಸರನ್ನು ನಮ್ಮ ಫಂಡಿನ ವಾರ್ಷಿಕ ರಿಪೋರ್ಟಿನಲ್ಲಿ ನಮೂದಿಸಿ ಪಬ್ಲಿಷ್ ಮಾಡಬೇಕಾಗಿರುವದರಿಂದ ಸದರಿ ವಿದ್ಯಾರ್ಥಿಗಳು ತಮ್ಮ ಪರೀಕ್ಷೆಯ ರಿಜಲ್ಟನ್ನು ಬರುವ ಜೂನ್ ತಾ|| 15 ರ ವರಗಾಗಿ ತಿಳಿಸಬೇಕು. ಹಾಗೆ ತಿಳಿಸದೆ ಇರುವ ವಿದ್ಯಾರ್ಥಿಗಳನ್ನು ಮುಂದೆ ವಿಚಾರಮಾಡಲಾಗುವದು.

M. Channaveeraiah,
For, President,
Veerasiva Vidyavardhaka Fund Sangha.

ಸ್ವೀಕಾರ.

ಕೈ|| ವೈ|| ವೀರಸಂಗಪ್ಪನವರ ಅಗ್ರತಾಂಬೂಲಕಾಣಿಕೆಗಾಗಿ ಈ ಕೆಳಗೆ ಕಂಡ ವಿವಾಹಗಳಲ್ಲಿ ತೆಗೆದು ಕಳುಹಿಸಲ್ಪಟ್ಟ ಮೊಬಲಗನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇನೆ.

(1) ಚನ್ನಪಟ್ಟಣದ ತಾ|| ಯಲೆಕೋಟೆದಹಳ್ಳಿಯಲ್ಲಿ ಮ|| ರಾಚಪ್ಪನವರ ಪುತ್ರಿಗೂ ಚನ್ನಪಟ್ಟಣದ ಮ|| ಯಜಮಾನರ ಮಲ್ಲಿಕಾರ್ಜುನಯ್ಯನವರ ಪುತ್ರನಿಗೂ ನಡೆದ ಲಗ್ನದಲ್ಲಿ ವಧೂವರರ ಕಡೆಯಿಂದ 2 ರೂ. (2) ಬೆಂಗಳೂರಲ್ಲಿರುವ ಫಾರೆಸ್ಟ್ ಅಸಿಸ್ಟೆಂಟ್ ರೇಂಜರ್ ಮ|| ಕೆ. ರೇವಣ್ಣನವರಿಂದ ಅವರ ಪುತ್ರಿಯ ಲಗ್ನದಲ್ಲಿ 1 ರೂ. (3) ಮೈಸೂರಲ್ಲಿರುವ ಮ|| ಪಂಡಿತ ವೀರಭದ್ರಪ್ಪನವರ ಪುತ್ರಿಗೂ ದ್ಯಾವನೂರು ಬಸಪ್ಪನವರಿಗೂ ನಡೆದ ಲಗ್ನದಲ್ಲಿ 1 ರೂ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ಹೊಸೂರು ತಾ|| ದೆಂಕಣಿಕೋಟೆ.

ಕಳೆದ ಎರಡು ವರ್ಷಗಳಿಂದಲೂ ಈ ಪ್ರಾಂತ್ಯ ಮಳೆಯು ಸರಿಯಾಗಿ ಬರದೆ ಬೆಳೆಯು ಕೆಟ್ಟುಹೋಗಿ ಬಡವರು ಜೀವನಕ್ಕಿಲ್ಲದೆ ಬಹಳವಾಗಿ ಕೇಡಾಡುತ್ತಿರುವರು ಮತ್ತು ಬೇಸಿಗೆಯ ಝಳವು ಬಹಳವಾಗಿದ್ದು ಕೆರೆಕುಂಟೆಗಳಲ್ಲಿ ಅಷ್ಟು ಇಷ್ಟು ನಿಂತಿದ್ದ ನೀರೂ ಪಕ್ಷಿಗಳಿಗೂ ದನಕರುಗಳಿಗೂ ಕುಡಿಯುವದಕ್ಕೆ ಸಹ ಇಲ್ಲದಂತೆ ಒಣಗಿಹೋಗಿತ್ತು. ಅಲ್ಲದೆ ಕಾಲರ ಜಾಡ್ಯವು ತಲೆದೋರಿ ಬಹಳ ಜನಗಳನ್ನು ಆಹುತಿಗೊಂಡಿತು. ಕೊಂಚ ದಿವಸಗಳಲ್ಲಿ ಮಳೆಯು ಬರದಿದ್ದರೆ ದನಕರುಗಳೂ ಜನರೂ ಕುಡಿಯಲು ನೀರಿಲ್ಲದೆ ಸತ್ತುಹೋಗಬಹುದೆಂದು ಭಯಪಟ್ಟುಕೊಂಡಿರುವಲ್ಲಿ ಮೇಘರಾಜನು ನಮ್ಮ ದೀನಪ್ರಾರ್ಥನೆಯನ್ನು ಲಾಲಿಸಿ ದಯವಿಟ್ಟು 3-4 ಹದ ಮಳೆಯನ್ನು ಸುರಿಸಿದ್ದರಿಂದ ಕೆರೆಕಟ್ಟೆಗಳೂ ತುಂಬಿತುಳುಕುವಂತಾದವೋಲೆ ಕಂಡು ಹೋಗಿದ್ದ ಜನರ ಮುಖವು ನಗುವಂತಾಗಿರುವುದು. ರೈತರು ಸಂತೋಷದಿಂದುಬ್ಬಿ ತಮ್ಮ ವ್ಯವಸಾಯ ಕಾರ್ಯಕ್ಕುಪಕ್ರಮಿಸಿರುವರು. ಈ ದೆಂಕಣಿಕೋಟೆಯ ವಾಸಸ್ಥರಾದ ಮ|| ಮಾವರಡಹಳ್ಳಿ ವೀರಭದ್ರಪ್ಪನವರ ಮಗ ಮ|| ನಂಜುಂಡಪ್ಪನವರು ಮದ್ರಾಸು ಯೂನಿವರ್ಸಿಟಿಯ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಸಲು ಸಂತೋಷವಾಗುತ್ತದೆ. ಇದೇ ಊರಿನ ಡಿ|| ಬೋರ್ಡ್ ಮೆಂಬರು ಮ|| ಡಿ. ನೀಲಕಂಠಪ್ಪನವರ ಮಗ ಮ|| ಡಿ. ಎನ್. ಪ್ರಸನ್ನಯ್ಯನವರು ಮೈಸೂರು ಯೂನಿವರ್ಸಿಟಿಯ ಬಿ. ಎ. ಪರೀಕ್ಷೆಗೆ ಹೋಗಿರುವರು. ಇವರ ರಿಜಲ್ಟು ಇನ್ನೂ ಗೊತ್ತಾಗಿಲ್ಲವು. ಇವರಿಗೂ ಪ್ಯಾಸಾಗಲೆಂದು ನಾವೆಲ್ಲರೂ ಕೋರುತ್ತೇವೆ. ಹಾಗೆಯೇ ನಮ್ಮ ಊರಿನ ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ ಬಿ. ಎ., ಮೊದಲಾದ ದೊಡ್ಡ ಪರೀಕ್ಷೆಗಳಲ್ಲಿ ಪ್ಯಾಸಾಗಿ ದೊಡ್ಡ ದೊಡ್ಡ ಉದ್ಯೋಗಕ್ಕೂ ವಕೀಲು ಕೆಲಸಕ್ಕೂ ಸೇರಿ ಪ್ರವೃದ್ಧಮಾನರಾಗಿ ತಮ್ಮ ಮನೆತನಗಳಿಗೂ ಈ ಊರಿಗೂ ಒಳ್ಳೇ ಹೆಸರನ್ನು ತರುವವರಾಗಲೆಂದು ಕೋರುವ,

ಸ್ಥಳವಾಸಿ.

ಗೋಕರ್ಣಪರಿಷದದ ಗಿಲೀಟು.

ಬಾಂಧವರೆ! ಗೋಕರ್ಣ ಕ್ಷೇತ್ರದಲ್ಲಿ ನಡೆದ ಕರ್ನಾಟಕ ಪರಿಷತ್ತು ಯಶಸ್ವಿಯಾಗಿ ಪರಿಣಮಿಸಿತೆನ್ನುವದು ಒಳ್ಳೇ ಸಂಗತಿ ಸರಿ. ಪರಿಷತ್ತಿನಲ್ಲಿ ಸ್ವಾಗತ ಸಂಘಾಧ್ಯಕ್ಷರೂ, ಸಭಾಧ್ಯಕ್ಷರೂ ಮೊದಲಾದವರು ಅನೇಕ ವಿಷಯಗಳ ಬಗ್ಗೆ ಬಹುಸೊಗಸಾಗಿ ಮಾತಾಡಿರಬಹುದು. ಆದರೂ ಇವರು ಇನ್ನೂ ಸ್ವಲ್ಪ ಹೆಚ್ಚು ವಿಶಾಲಹೃದಯರಾಗಿ ಮಾತಾಡಿದ್ದರೆ ಹೆಚ್ಚು ಶ್ಲಾಘನೀಯವಾಗುತ್ತಿದ್ದಿಲ್ಲವೇ?

ಸ್ವಾಗತ ಸಂಘಾಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಕಾನಡಾ ಜಿಲ್ಲೆಯು 3 ಶತಮಾನಗಳವರೆಗೆ ಚಾಲುಕ್ಯ, ಯಾದವ ಮೊದಲಾದ ಬೇರೆ ಬೇರೆ ರಾಜವಂಶೀಯರಾಳಿಕೆಯಲ್ಲಿತ್ತೆನ್ನುವದರ ಕೂಡ "ಲಿಂಗಾಯತರಾದ ಸೋಂದಾ ಮಹಾರಾಜರಾಳಿಕೆಯಲ್ಲಿತ್ತು," ಯೆಂದಿದ್ದರೆ ಎಷ್ಟು ಹೆಚ್ಚು ಸ್ಪಷ್ಟವಾಗಿ ವಪ್ಪುತ್ತಿತ್ತು. ಯಾಕಂದರೆ ಈ ಕಾನಡಾ ಜಿಲ್ಲೆಯಲ್ಲಿ ಈ ಸೋಂದಾ ರಾಜರು 200 ವರ್ಷಗಳ ಮೇಲ್ಪಟ್ಟು ಅವಿಚ್ಛಿನ್ನವಾಗಿ ಎಂಟು ತಲೆಗಳವರೆಗೂ ಆಳಿ ಕಡೆಗೆ ಈ ಸೋಂದಾ ರಾಜರ ಕಡೆಯ ಅರಸನಾದ ಸದಾಶಿವರಾಜರ ಕಾಲದಲ್ಲಿಯೇ ಇದು ಬ್ರಿಟಿಷರ ಕೈಸೇರಿತೆನ್ನುವದು ಸರ್ವಶ್ರುತವಿರುವದಲ್ಲವೇ. ಈ ಸೋಂದಾರಾಜರಾಳಿಕೆಯಲ್ಲಿ ಈ ಕಾನಡಾ ಜಿಲ್ಲೆಯು ವಿದ್ಯಾಕಲಾಕೌಶಲ್ಯ, ವಾಣಿಜ್ಯ, ಒಕ್ಕಲತನ ಮೊದಲಾದ ಸಕಲೈಶ್ವರ್ಯದಿಂದ ತುಂಬಿ ತುಳುಕುತ್ತಿದ್ದಿಲ್ಲವೇ? ಈ ಸೋಂದಾ ಮಹಾರಾಜರುಗಳು ಸ್ವತಃ ಲಿಂಗವಂತರಿದ್ದರೂ ಸ್ಮಾರ್ತ, ವೈಷ್ಣವ, ಸಾರಸ್ವತ, ಮಹಮ್ಮದೀಯ. ಕ್ರಿಶ್ಚನ ಮೊದಲಾದ ಸರ್ವಮತೀಯರನ್ನೂ ಸಮದೃಷ್ಟಿಯಿಂದ ನೋಡುತ್ತ ಅವರವರ ದೇವಾಲಯ ಗುರುಪೀಠಾದಿಗಳಿಗೆಷ್ಟೋ ಉಂಬಳಿಗಳನ್ನು ಕಲ್ಪಿಸಿಕೊಟ್ಟು ಅವರೆಲ್ಲರಂ ಸನ್ಮಾನದಿಂದ ತಮ್ಮ ರಾಜಧಾನಿಯಲ್ಲಿಟ್ಟುಕೊಂಡಿದ್ದಿಲ್ಲವೇ? ಇಂಥಾ ಅಹಿಂಸಾತ್ಮಕ ಸರ್ವತೋಮುಖ ಶ್ಲಾಘನೀಯವಾದ ರಾಜರಾಳಿಕೆಗಿಷ್ಟು ಉಪೇಕ್ಷೆಯೇ? ಇವರ ಸಚ್ಚರಿತ್ರೆಯನ್ನೆಲ್ಲಾ ವರ್ಣಿಸುತ್ತ ಹೋಗುವದು ಪರಿಷತ್ತಿನಂಥಾ ಸಭೆಯಲ್ಲಿ ಅಪ್ರಾಸಂಗಿಕವಾದರೂ "ಈ ಕಾನಡಾ ಜಿಲ್ಲೆಯು ಮುಖ್ಯವಾಗಿ ಈ ಗೋಕರ್ಣಕ್ಷೇತ್ರವು ಬಹುಕಾಲದಿಂದಲೂ ಬ್ರಿಟಿಷರ ಕೈಸೇರುವವರೆಗೆ ಲಿಂಗವಂತ ಸೋಂದಾ ಮಹಾರಾಜರಾಳಿಕೆಯಲ್ಲಿತ್ತು," ಎಂದು ಹೇಳಿದ್ದರೆ, ನಿಮಗಾಗಲೀ, ಸಭೆಯವರಿಗಾಗಲೀ ಯೇನು ಕುಂದು ಬರುತ್ತಿತ್ತು? ಅಷ್ಟು ಅಂದಿದ್ದರೆ ಸದ್ಯದಲ್ಲಿ ಗೋವಾಸೀಮೆಯಲ್ಲಿ ಗೋವಾಸರಕಾರದಿಂದ ಈಗಲೂ ತೋಫಿನ ಸಲಾಮು ಪೆನಶನ್ ಮೊದಲಾದ ಸನ್ಮಾನಗಳಿಂಭೂಷಿತರಾಗಿ ಬಾಂದೇವಾಡಿಯಲ್ಲಿರುವ ಈ ಸೋಂದಾ ಮಹಾರಾಜರ ವಂಶೀಕರಿಗೆಷ್ಟು ಆನಂದವಾಗುತ್ತಿತ್ತು? ಮತ್ತು ಈ ಬನವಾಸೀ ಹನ್ನೆರಡುಸಾವಿರ ನಾಡಾಧಿಪತಿಗಳಾಗಿದ್ದ ಕೆಲವು ಮಹಾರಾಜರ ರಾಜಗುರುಪೀಠವಾಗಿದ್ದ ಚವುಡಯ್ಯದಾನಪುರ ಸಂಸ್ಥಾನದ ಪೀಠದವರಿಗೆಷ್ಟು ಸಂತೋಷವಾಗುತ್ತಿತ್ತು? ಈ ಬಗ್ಗೆ ಸೋಂದಾ, ಬನವಾಸಿ, ಗೋಕರ್ಣ, ಚವುಡದಾನಪುರ ಮೊದಲಾದ ಸ್ಥಳಗಳಲ್ಲಿ ಈಗೂ, ಶಿಲಾ ಶಾಸನಗಳಿರುವದಿಲ್ಲವೇ? ಇಷ್ಟೇ ಅಲ್ಲ ಇಡೀ ಕರ್ನಾಟಕದಲ್ಲಿರುವ ಲಕ್ಷಾವಧಿ ಜನಸಮುದಾಯವುಳ್ಳ ಲಿಂಗಾಯತ ಸಮೂಹಕ್ಕೆಷ್ಟು ಗೌರವವೆನಿಸುತ್ತಿತ್ತು? ಇಂಥಾ ಮಹತ್ವ ಸಂಗತಿಯನ್ನು ಸಾಮಾನ್ಯವೆಂದೂಹಿಸಿಬಿಟ್ಟಿರಬಹುದೇ ವಿನಹಾ ಮತ್ಯಾವ ಭಾವಗರ್ಭಿತವಾಗಿ ಬಿಟ್ಟಿರಲಿಕ್ಕಿಲ್ಲವೋ? ಇರಲಿ, ಇವರ ಭಾಷಣದ ಇನ್ನೂ ಮುಂದೆ ಸಾಗುವಾ.

ಇವರ ಭಾಷಣದಲ್ಲಿ "ಬ್ರಾಹ್ಮಣ ಬ್ರಾಹ್ಮಣೇತರರ ಕಲಹದ ಸ್ಥಿತಿಯೇ ಬೇರೆ ಇದಕ್ಕೆ ಧಾರ್ಮಿಕ ಸಂಪರ್ಕವಿಲ್ಲ" ವೆಂತಾ ವಗೈರೆ ಹೇಳುತ್ತಾರೆ. ಈ ಕಲಹದ ಇತಿ ಕರ್ತವ್ಯವೇ ಧಾರ್ಮಿಕವಿದ್ದು ಇದನ್ನು ಹೀಗ್ಯಾಕೆ ಮಾರ್ಪಡಿಸಿದರೋ? ಯಾಕಂದರೆ ಬ್ರಾಹ್ಮಣೇತರರ ಗುರುಗಳಾದಿಯಾಗಿ ಉತ್ಸವದಿಂದಾ ಬಂದರೆ ಈ ಬ್ರಾಹ್ಮಣರಿಗೆ ಸಂಕಟ. ಅವರು ತಮ್ಮ ತಮ್ಮ ದೇವರ ಪೂಜಾಲಗ್ನಾದಿಕಾರ್ಯಗಳನ್ನು ತಮ್ಮ ಗುರುಗಳಿಂದ ಮಾಡಿಸಿಕೊಂಡರೆ ಈ ಬ್ರಾಹ್ಮಣರಿಗೆ ಸಂಕಟ. ಇವುಗಳಿಗೆಷ್ಟೋ ಉದಾಹರಣೆ ಕೊಡಬಹುದು. ಇದೇ ಕಾನಡಾ ಜಿಲ್ಲೆಯಲ್ಲಿ ಸಿದ್ದಾಪುರದ ವಾಸನ ತೋಳಿನ ವ್ಯಾಜ್ಯ. ಬಾಗಲಕೋಟೆಯಲ್ಲಿ ಜಗದ್ಗುರು ಶ್ರೀ ಮುರುಘಸ್ವಾಮಿಗಳ ಅಡ್ಡಪಾಲಕೀ ಉತ್ಸವದಲ್ಲಾದ ಕೋಲಾಹಲವನ್ನು ಬ್ರಾಹ್ಮಣರೆಂಬುವವರೆಲ್ಲರೂ ನೆನಪಿನಲ್ಲಿಟ್ಟಿರಬಹುದೇನು? ಇನ್ನು ಬಳ್ಳಾರಿಜಿಲ್ಲಾ ಹಡಗಲೀ ತಾಲ್ಲೂಕ ಹೊಳಲಗ್ರಾಮದಲ್ಲಿ ಚವಡಯ್ಯದಾನಪುರ ಸಂಸ್ಥಾನದ ಶ್ರೀ ಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವವಾದದ್ದಕ್ಕೆ ಈ ಬ್ರಾಹ್ಮಣರೆಷ್ಟು ತೊಂದರೆಕೊಟ್ಟರು? ಹರಪನಹಳ್ಳಿ, ಹಾನಗಲ್ಲ ಮೊದಲಾದ ಗ್ರಾಮಗಳಲ್ಲೂ ಇದೇ ರೀತಿ ಮೊದಲು ಜಗಳಾ ತೆಗೆಯುವವರು ಬ್ರಾಹ್ಮಣರೇ ಬೇಕಾದ ಧಾರ್ಮಿಕವ್ಯಾಜ್ಯನೋಡಿರಿ. ಈ ಬಗ್ಗೆ ಲಕ್ಷಾಂತರ ರೂಪಾಯಿಗಳು ಈ ನಾಲ್ಕಾರು ವರ್ಷಗಳಲ್ಲಿ ಸಮಾಜದವರಿಂದ ಖರ್ಚಾಗಲಿಲ್ಲವೇ. ಈ ಭಾಷಣದ ಇನ್ನಿಷ್ಟು ಮುಂದಕ್ಕೆ ಹೋಗುವಾ.

"ವೀರಶೈವ ಬ್ರಾಹ್ಮಣ ಎಂಬ ಗೌರವದ ನಾಮಧೇಯವುಳ್ಳ ಈ ವರ್ಗವು ಎಂದು ಹೇಳಿದ್ದಾರೆ. ನಾಮವುಳ್ಳ ಎನ್ನುವದರ ಬದಲು ನಾಮಧೇಯವುಳ್ಳಯೆಂದು ಸಂಬೋಧಿಸಿರುವದರ ಭಾವಗರ್ಭಿತ [illegible] ಹುದೋ ಅವರಿಗೇನೇಗೊತ್ತು. ಇನ್ನು "ವೀರಶೈವ ಬ್ರಾಹ್ಮಣ ಎಂಬ ಗೌರವದ" ಅನ್ನುವದರಲ್ಲಿ ಇವರು ಅವರಿಗೆಷ್ಟು ಗೌರವವನ್ನು ಕೊಡುತ್ತಿರುವರು ನೋಡಿದಿರಾ: ಈ ಪವಿತ್ರಲಿಂಗಾಯತ [illegible] ಅನಾದಿ ಕಾಲದಿಂದಲೇ ಆದಿ ಶ್ರೀ ಶಂಕರಾಚಾರ್ಯರು [illegible] ಶ್ರೀ ವಿದ್ಯಾರಣ್ಯರೇ ಮೊದಲಾದವರು ಹೇಳಿದ್ದು ಅಂಥಾ ಪವಿತ್ರ [illegible] ಸಾರ್ವಜನಿಕ ಸಂಸ್ಕೃತ ಗ್ರಂಥಕಾರರಿಂದ ಪ್ರತಿಪಾದಿಸಲ್ಪಟ್ಟಿದ್ದು. [illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜೂನ್ ತಾ|| ೧ ನೆಯ ಭಾನುವಾರ.

THE S. S. L. C. SCHEME.

The Government have not yet issued any orders on the Report of the Committee appointed to revise the S.S.L.C. courses and curricula. Even if any revision of the existing system is contemplated, we believe it is too late for introduction in the coming year as it needs a general overhauling of teaching staff and the equipment of proper laboratories where there not such. But we hope it is not too late to say once again something of the merits of the revised scheme itself, which evidently has received support in some quarters. We would draw the attention of the Government to our remarks in the issue of this paper dated 23rd September 1923, where we have stated that after the detailed revision of the entire Lower Secondary and the High School courses adumberated in the Educational Memorandum, which met with practically the unanimous approval of the public there was hardly any necessity to appoint another committee to go into the question again. The revised scheme is a return to the old matriculation with all its horrors of grinding students through all the different courses in all subjects which they may like or detest, with the noble object of giving pupils a "thorough grounding in general subjects before they are required to specialise in any of them or to take up any industrial or technical subject. It is unnecessary here to traverse the same grounds as we have already done. It is a pity that the learned experts who have enunciated the above principle have been more obsessed with the cultural aspect of modern education rather than the practical needs of the country or the aptitudes of the students. They evidently have been influenced by the idea that the standard of material going up to the B.A. has deteriorated, an idea for which there may not be sufficient proof. Even if the deterioration is true it is more likely to have been due to the increase of students and the unwieldy classes and the lower standard of teaching capacity, than to the present S.S.L.C. system. There could be nothing so irrational than to compel a student to study subjects for which he has no special taste and which would be of no use to him in his after life. Even as the courses stand at present there is nothing to prevent the authorities to give the History students some grounding in elementary Mathematics and Science and the Mathematics students in History and Geography without holding public examination in them. If it is alleged that the students would be indifferent in these non-examination courses and the teachers would be equally so, it can be mended by proper supervision. Our neighbouring Province, Madras adopted the S.S.L.C. course earlier than Mysore and it has not thought it desirable to change it in favour of the Matriculation and it is astounding that we in Mysore so soon after the introduction of the S.S.L.C. should resort to another experiment. We would not wonder if the old slaughter of students should recommence with the reversion to the Matriculation. It would only mean a set back to the progress of the Education of the youth of the State. We do hope that the Government will give their utmost consideration to this important question and act cautiously. Let the S.S.L.C. be given a fair trial before it is condemned, for, as yet it has not been given that.

ಲಂಚದ ಹಾವಳಿಯು.

ಲಂಚದ ಹಾವಳಿಯು ನಮ್ಮ ಸೀಮೆಯಲ್ಲಿ ದಿನ ದಿನಕ್ಕೆ ಪ್ರಬಲವಾಗುತ್ತಿದೆ. ಎತ್ತ ತಿರುಗಿದರೂ ಆ ಸುದ್ದಿಯೇ ಕಿವಿಯನ್ನು ಕಿವುಡುಮಾಡುತ್ತಿದೆ. ಇದರ ಹಾವಳಿಯನ್ನು ಕೇಳದವರೇ ವಿರಳ. ಆದರೂ ಇದು ಬಟ್ಟಬಯಲಾದ ಗುಟ್ಟಿನಂತೆ ಪರಿಣಮಿಸಿದೆ. ರಾಜ್ಯವನ್ನು ಒಂದು ದೇಹವನ್ನಾಗಿ ಪರಿಗಣಿಸಿದರೆ, ಅದರ ಪ್ರಭುತ್ವವನ್ನು ಅಂಗಾಂಗಗಳನ್ನೆಲ್ಲಾ ವ್ಯಾಪಿಸಿ ದೇಹಪೋಷಣೆಯನ್ನು ಮಾಡುವ ರಕ್ತವಾಹಿನಿಯೆಂದು ಹೇಳಬಹುದು. ಇಂತಹ ಪ್ರಭುತ್ವದಲ್ಲಿ ಲಂಚವು ಬೆಳೆಯುತ್ತ ಬಂದರೆ ನಿರ್ಮಲವಾದ ರಕ್ತದಲ್ಲಿ ವಿಷಕ್ರಿಮಿಗಳು ಸುರಿದಂತಾಗುವುದು. ಆ ವಿಷಕ್ರಿಮಿಯ ನಿವಾರಣೆಗೆ ಕೂಡಲೆ ತಕ್ಕ ಚಿಕಿತ್ಸೆಯನ್ನು ಮಾಡದಿದ್ದಲ್ಲಿ ದೇಹದ ರಕ್ತವೆಲ್ಲಾ ಕೆಟ್ಟು, ಅದರಿಂದ ದೇಹವು ಕೊಳೆತು ಮಳಿತು ವಿನಾಶಗೊಳ್ಳುವುದಕ್ಕೆ ಕಾರಣವಾಗುವುದು. ದೇಹಾರೋಗ್ಯಕ್ಕೆ ರಕ್ತಶುದ್ಧಿಯು ಅವಶ್ಯವಾಗಿರುವಂತೆ ಪ್ರಭುತ್ವವು ಸಮಿಾಚೀನವಾಗಿಯೂ, ನ್ಯಾಯವಾಗಿಯೂ, ಅಭಿವೃದ್ಧಿಗಾಸ್ಪದವಾಗಿಯೂ ನಡೆದುಕೊಂಡು ಹೋಗಬೇಕಾಗಿದ್ದರೆ, ಅದರಲ್ಲಿರುವ ಉದ್ಯೋಗಿಗಳೆಲ್ಲಾ ಸತ್ಯಸಂಧರೂ, ಪಾಪಭೀತರುಗಳೂ, ಸನ್ಮಾರ್ಗಪ್ರವರ್ತಕರೂ ಆಗಿರಬೇಕಾದುದು ಅತ್ಯಾವಶ್ಯಕ. ಸರಕಾರವೂ ಸರ್ಕಾರದ ಉನ್ನತೋದ್ಯೋಗಿಗಳೂ ಎಷ್ಟು ನ್ಯಾಯಪರರೂ ಸತ್ಯಸಂಧರೂ ಆಗಿದ್ದರೂ, ಅವರ ಕೈಕೆಳಗಣ ಸಣ್ಣ ಉದ್ಯೋಗಿಗಳ ದುಶ್ಶೀಲಗಳಿಂದಲೂ, ಅಕ್ರಮಗಳಿಂದಲೂ ಸರ್ಕಾರದವರ ಪ್ರಯತ್ನಗಳೆಲ್ಲವೂ ನಿಷ್ಫಲವಾಗುವುವಲ್ಲದೆ ಪ್ರಜೆಗಳೂ ಸಹ ಸುಖಕ್ಕೆ ಬದಲಾಗಿ ನಾನಾವಿಧದ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಪ್ರಜೆಗಳಿಗೆ ವಿಶೇಷವಾಗಿ ಸರ್ಕಾರದ ಸಣ್ಣ ಉದ್ಯೋಗಿಗಳ ಸಂಸ್ಕಾರವಿರುವುದೇ ಹೊರತು ದೊಡ್ಡ ದೊಡ್ಡ ಅಧಿಕಾರಿಗಳ ಸಂಬಂಧವು ಹೆಚ್ಚಾಗಿರುವುದಿಲ್ಲವು. ಪ್ರಜಾಸಾಮಾನ್ಯದಲ್ಲಿ ವಿದ್ಯಾಗಂಧವಿಲ್ಲ. ಶಾಸನಗಳ ಕ್ರಮವನ್ನು ಅವರು ಸ್ವಪ್ನದಲ್ಲೂ ಅರಿಯರು. ಇಂತಹ ಪ್ರಜೆಗಳನ್ನು ಸರ್ಕಾರದ ಕೀಳು ಉದ್ಯೋಗಿಗಳು ಎಷ್ಟು ತೆರದಲ್ಲಿ ಸುಲಿದುಕೊಳ್ಳುತ್ತಿರುವರೆಂಬುದನ್ನು ಬರೆಯಲೆತ್ನಿಸಿದರೆ ಲಕ್ಷ ಗ್ರಂಥವಾಗಬಹುದು. ಮಾಮೂಲು, ಮಿರಾಸೆ ಎಂಬಿವೆರಡನ್ನು ಸರ್ಕಾರದ ಪ್ರತಿಯೊಂದು ಶಾಖೆಯ ಕೀಳುದ್ಯೋಗಿಗಳೂ ತಮ್ಮ ಕಿಸೆಯಲ್ಲಿ ಯಾವಾಗಲೂ ಇಟ್ಟುಕೊಂಡು ತೋರಿಸುತ್ತಿರುವರು. ಇವು ಹಾವು ಚೇಳುಗಳಂತೆಯೂ, ಪ್ಲೇಗು ಕಾಲರಾಗಳಂತೆಯೂ ಪ್ರಜೆಗಳನ್ನು ಹಿಂಸಿಸುತ್ತಿರುವುವು. ಪಟೇಲು ಶ್ಯಾನುಭೋಗ ಶೇಕದಾರ ಮುತ್ಸದ್ದಿಗಳೂ ಕೈನೀಡಿದಾಗ ಗುಮಾಸ್ತರು ಏನನ್ನಾದರೂ ದಾನಮಾಡದಿದ್ದರೆ ಬೆಳಕು ಹರಿಯಿತೆಂದರೆ ಅವರ ಮೇಲೇನಾದರೂ ಪೀಡೆಗಳು ಕಾದೇ ಇರುವುವು. ಕಾಲ್ವೆಯ ನೀರುಗಂಟಿ ಓವರ್ಸಿಯರ್ ಮೊದಲಾದವರಿಗೆ ಕೈಬೆಚ್ಚಗಾಗದಿದ್ದರೆ ರೈತನ ಗದ್ದೆಗೆ ನೀರೇ ಇಲ್ಲ. ಸಿವಿಲ್ ಕೋರ್ಟಿನ ಸಮನ್ ಜವಾನ ಅಮಿಾನ ಮೊದಲಾದವರಿಗೆ ಶಾಕಾಯಲವಣಾಯ ಆಗದಿದ್ದರೆ ಸಮನ್‌ಜಾರಿಯೇ ಆಗುವುದಿಲ್ಲ; ವಾರಂಟಿಗೆ ಆಸಾಮಿಯೇ ಸಿಗುವುದಿಲ್ಲ ಮತ್ತು ಸ್ವತ್ತೂ ಪರಾರಿಯಾಗುವುದು. ಈರೀತಿಯಾಗಿ ವ್ಯಾಜ್ಯವೆಲ್ಲಾ ಹಾಳಾಗುವುದು. ಕೆಲಸಂದರ್ಭಗಳಲ್ಲಿ ಈ ಅಮಿಾನರುಗಳು ತಾವು ಕೇಳಿದಷ್ಟು ಲಂಚವನ್ನು ಕೊಡದಿದ್ದಲ್ಲಿ 12 ವರ್ಷಗಳಾದರೂ ಸ್ವತ್ತು ಸ್ವಾಧೀನವಾಗದರೀತಿಯಲ್ಲಿ ಲಿಖಾವಟ್ಟು ಮಾಡುತ್ತೇನೆಂದು ಹೆದರಿಸಿ ಡಿಕ್ರಿಪಡೆದುಕೊಂಡಿರುವವರಿಂದ 40–50 ರೂಪಾಯಿಗಳನ್ನು ಸುಲಿಗೆಮಾಡಿಕೊಳ್ಳುತ್ತಿರುವರು ಮತ್ತು ತಾವು ಕೇಳಿದಷ್ಟು ಹಣವನ್ನು ಕೊಡದಿದ್ದರೆ ಆಸಾಮಿಯನ್ನು ತೋರಿಸಿದವರೂ ವಾರಂಟಿನಲ್ಲಿ ಹಿಡಿಯುವುದಿಲ್ಲವು, ಒಂದು ವೇಳೆ ಹಿಡಿದರೂ ಏನಾದರೂ ತಕರಾರನ್ನು ತಾವೇ ಒಡ್ಡಿ ಬಿಟ್ಟುಬಿಡುವರು. ಸ್ವತ್ತನ್ನು ಕಳೆದುಕೊಂಡವನು ಪೊಲೀಸಿಗೆ ಹೋಗಿ ದೂರುಹೇಳಿಕೊಂಡಾಗ ದಕ್ಷಿಣಾಸಮರ್ಪಣೆಯಿಲ್ಲದಿದ್ದರೆ ಆಸಾಮಿಯನ್ನೂ ಮಾಲನ್ನೂ ತೋರಿಸಿಕೊಟ್ಟಲ್ಲಿ ಹಿಡಿಯುತ್ತೇವೆಂದು ಗದ್ದರಿಸಿ ಕಳುಹಿಸುವರು. ಕೆಲವೇಳೆ ಸಮಾಜುಮಾಡುವುದಕ್ಕೆ ಹೋಗಿ ಮಸೀದಿಯನ್ನು ಮೇಲೆ ಕೆಡಹಿಕೊಂಡಂತೆಯೂ ಆಗುವುದು, ರಿಜಿಸ್ಟ್ರೇಷನ್ ಶಾಖೆಯಲ್ಲಂತೂ ಹೇಳಬೇಕಾದುದೇ ಇಲ್ಲ. ಇದು ಮೊಸಳೆಗಳು ಸೇರಿರುವ ಹಾಳ್ಮಡುವಿನಂತಾಗಿರುವುದು. ಇಲ್ಲಿಯ ಸಣ್ಣ ಉದ್ಯೋಗಿಗಳು ಸುಲಿದು ತಿನ್ನುವ ಲಂಚವನ್ನು ಹೇಳಿತೀರದುದಾಗಿದೆ. ಇದಕ್ಕೆ ಮುಚ್ಚು ಮರೆಯೇ ಇಲ್ಲ. ಸಂಬಳಕ್ಕೆ 10–20 ರಷ್ಟರವರಮೇಲಣ ಸಂಪಾದನೆಯೂ ಇವರಿಗಿರುವುದು. ಮೊದಲು ಗುಮಾಸ್ತನ ಬಳಿಗೆ ಹೋಗಿ ಮಂತ್ರಹಾಕಿ ಬರದಿದ್ದ ಪತ್ರಗಳ ವಿಷಯವಾಗಿ ಸಬ್‌ರಿಜಿಸ್ಟ್ರಾರವರು ನೂರಾರು ತಪ್ಪಿತಗಳನ್ನು ಕ್ಷಣಮಾತ್ರದಲ್ಲಿ ಹೇಳಿಬಿಡುವರು. ಆದರೆ ಅದೇ ಪತ್ರಕ್ಕೆ ಗುಮಾಸ್ತರ ಸೀಸದಕಡ್ಡಿಯ ಗುರ್ತಿನ ಸಂಪ್ರೋಕ್ಷಣೆಯಾಗಿ ಬಂದರೆ ಸಬ್ ರಿಜಿಸ್ಟ್ರಾರರೂ ಸದ್ದಿಲ್ಲದೆ ರಿಜಿಸ್ಟರ್ಮಾಡಿಕಳುಹಿಸಿಕೊಡುವರು. ಒಂದು ವೇಳೆ ಯಾರಾದರೂ ಬುದ್ಧಿವಂತರಾದ ಲಾಯರಿಂದ ಪತ್ರವು ಬರೆಯಿಸಲ್ಪಟ್ಟಿರುತ್ತದೆಂದು ವಾದಿಸಿ ರಿಜಿಸ್ಟರು ಮಾಡಬೇಕೆಂದು ಹಟಮಾಡಿದರೆ ಬೂತಕನ್ನಡಿಯನ್ನು ಹಾಕಿಕೊಂಡು ತಪ್ಪುಗಳನ್ನು ಶೋಧಿಸಿ ರಿಜಿಸ್ಟ್ರಾರವರಿಗೆ ಬರೆದು ದಶಗುಣ ದಂಡವನ್ನು ಹಾಕಿಸುವರು. ಇದನ್ನು ಅರಿಯದಿದ್ದವರೇ ಇಲ್ಲ. ಒಬ್ಬ ದೊಡ್ಡ ಉದ್ಯೋಗಿಯನ್ನು ಕಾಣಲು ಹೋಗಬೇಕಾದರೆ ದ್ವಾರಪಾಲಕನಿಗೆ ತೃಪ್ತಿಯನ್ನು ಮೊದಲು ಮಾಡಿದ ಹೊರತು ಅದು ಸಾಧ್ಯವಲ್ಲವು. ದರ್ಬಾರು ಮೊದಲಾದವುಗಳಿಗೆ ಆಹ್ವಾನ ಪತ್ರಿಕೆಯನ್ನು ತರುವವರಿಗೆ ಮರ್ಯಾದೆಮಾಡದಿದ್ದರೆ ಪ್ರವೇಶಕಾಲದಲ್ಲಿ ಮೋರೆಯನ್ನೂ ಕೆಳಗೆ ಮಾಡಿಕೊಳ್ಳಬೇಕಾಗುವುದು. ಈ ರೀತಿಯಾಗಿ ಸಣ್ಣ ಉದ್ಯೋಗಿಗಳು ಮಾತ್ರವಲ್ಲದೆ ದೊಡ್ಡ ಉದ್ಯೋಗಿಗಳಲ್ಲೂ ಈ ಲಂಚದ ದುಶ್ಶೀಲಕ್ಕೆ ಒಪ್ಪಿದವರು ಕೆಲವರಿರುವರು. ಸಣ್ಣ ಉದ್ಯೋಗಿಗಳು ಊಬುತಿಗಳಂತೆ ಪ್ರಜೆಗಳ ರಕ್ತವನ್ನು ಹೀರುತ್ತಿದ್ದರೆ, ಲಂಚಗುಳಿಗಳಾದ ದೊಡ್ಡ ಉದ್ಯೋಗಿಗಳು ಕ್ರೂರರಾಕ್ಷಸರಾಗಿಯೇ ಪೀಡಿಸುತ್ತಿರುವರು. ಪ್ರಜೆಗಳು ಸರ್ಕಾರಕ್ಕೆ ನ್ಯಾಯವಾದ ತೆರುಗೆ ಕಂದಾಯಗಳನ್ನು ಒಂದುಪಾಲು ತೆರುತ್ತಿದ್ದರೆ, ಈ ಲಂಚಗಾರರ ಹಾವಳಿಗೆ ಸಿಕ್ಕ 2 ಭಾಗವನ್ನು ತೆರುತ್ತಿರುವರು. ಆದರೆ ಸರ್ಕಾರದ ಪ್ರತಿಯೊಬ್ಬ ಉದ್ಯೋಗಿಯೂ ಹೀಗೆಯೇ ಲಂಚದ ಗುಳಿಯಾಗಿರುವನೆಂಬುದು ನಮ್ಮ ತಾತ್ಪರ್ಯವಲ್ಲ. ಎಷ್ಟೋ ಮಂದಿ ಪ್ರಾಮಾಣಿಕರೂ, ಸಚ್ಛೀಲರೂ, ಸ್ವಾಮಿಭಕ್ತರೂ, ಪಾಪಭೀತರೂ ಆಗಿರುವವರುದ್ದೇ ಇರುವರು. ಅವರೆಲ್ಲರೂ ವಂದ್ಯರು. ಆದರೆ ಅಂತಹ ಸಜ್ಜನರಿಗಿಂತ ದುರ್ಜನರಿರುವುದೇ ಬಹಳ ಹೆಚ್ಚು.

ಪ್ರಜೆಗಳೂ ಈ ಲಂಚಗುಳಿಗಳಿಂದ ತಮಗೆ ಇಷ್ಟೊಂದು ಈತಿಬಾಧೆಗಳಿದ್ದಾಗ್ಯೂ, ಲಂಚವನ್ನು ಕೊಡುವುದು ತೆಗೆದುಕೊಳ್ಳುವುದು ಇವೆರಡೂ ಅಪರಾಧ ಕೃತ್ಯಗಳಾಗಿ ಪರಿಗಣಿಸಲ್ಪಟ್ಟಿರುವುದರಿಂದ ಈ ಪಾಪಾಚರಣೆಯನ್ನು ರುಜುವಾತು ಮಾಡಿಕೊಡುವುದು ಕಷ್ಟವಾಗಿರುತ್ತದೆ. ಪ್ರಜೆಗಳಲ್ಲಿ ಶಾಸನದ ಜ್ಞಾನವೂ, ಐಕಮತ್ಯವೂ ಇಲ್ಲದಿರುವುದರಿಂದ ಲಂಚಗುಳಿಗಳ ಸ್ವಚ್ಛಂದವೃತ್ತಿಯೂ ನಿರರ್ಗಳವಾಗಿ ನಡೆಯುತ್ತಿದೆ. ಪ್ರಜೆಗಳಲ್ಲಿ ವಿದ್ಯಾವ್ಯಾಪನೆಯೂ ಹೆಚ್ಚಿದಂತೆ ಲಂಚದ ಹಾವಳಿಯೂ ಸ್ವಲ್ಪಮಟ್ಟಿಗೆ ಕಡಿಮೆಯಾಗಬಹುದಾಗಿದ್ದರೂ, ಪ್ರಭುತ್ವದವರು ಈ ವಿಷಯದಲ್ಲಿ ಉದಾಸೀನರಾಗಿರುವುದು ಉಚಿತವಲ್ಲ ಮತ್ತು ತಮ್ಮ ಉದ್ಯೋಗಿಗಳು ಮಾಡುವುದೆಲ್ಲವೂ ಸದ್ಧರ್ಮವೆಂದು ನಂಬಿ ಮೌನರಾಗಿ ಕುಳಿತುಕೊಳ್ಳತಕ್ಕುದೂ ಅಲ್ಲ. ಅದು ಕಾರಣ ನಮ್ಮ ಸರ್ಕಾರದವರು ನೆರೆದೇಶೀಯ ಸಂಸ್ಥಾನಧೀಶ್ವರರಾದ ಹೈದರಾಬಾದು ನೈಜಾಮರವರು ಲಂಚದ ಸಂಬಂಧವಾಗಿ ಬರುವ ಅರ್ಜಿಗಳನ್ನು ವಿಚಾರಿಸಿ ಲಂಚಗುಳಿಗಳಿಗೂ ಸುಳ್ಳು ಅರ್ಜಿಬರೆದವರಿಗೂ ಶಿಕ್ಷೆಯನ್ನು ವಿಧಿಸಲು ತಮ್ಮ ಕೌನ್ಸಿಲಿನ ಪ್ರೆಸಿಡೆಂಟರು ಮತ್ತು ಇಬ್ಬರು ಮೆಂಬರುಗಳಿಂದ ಕೂಡಿದ ಒಂದು ಕಮಿಟಿಯನ್ನೇರ್ಪಡಿಸಿರುವಂತೆ ನಮ್ಮ ಸಂಸ್ಥಾನದಲ್ಲೂ ದಿವಾನರು ಇಬ್ಬರು ಕೌನ್ಸಿಲರುಗಳು ಮತ್ತು ದಿವಾನ್‌ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು ಸಿ. ಐ. ಇ., ಯವರಂತಹ ಒಬ್ಬಿಬ್ಬ ಅನುದ್ಯೋಗಿಕ ದೊಡ್ಡಮನುಷ್ಯರುಗಳಿಂದ ಕೂಡಿದ ಒಂದು ಕಮಿಟಿಯನ್ನೇರ್ಪಡಿಸಿ ಅವರಿಂದ ಲಂಚಗುಳಿಗಳೆಂದು ನಿರ್ಧರಿಸಲ್ಪಟ್ಟವರನ್ನು ನಿರ್ದಾಕ್ಷಿಣ್ಯದಿಂದ ಕಠಿಣತರವಾದ ಶಿಕ್ಷೆಗೆ ಗುರಿಮಾಡಿ ತನ್ಮೂಲಕ ಪ್ರಜಾಹಿಂಸಾಕರವಾದ ಲಂಚದಹಾವಳಿಯು ತಪ್ಪುವಂತೆ ಮಾಡಬೇಕೆಂದು ನಾವು ಪದೇ ಪದೇ ಒತ್ತಿಹೇಳುತ್ತಿರುವೆವಾದರೂ, ಲಂಚಕೊಟ್ಟವರೂ ಶಿಕ್ಷೆಗೆ ಗುರಿಯಾಗುವರೆಂಬ ವಿಧಿಗೆ ಅಂಜಿ ಮೌನವಾಗಿರದೆ ನಿಜವಾದ ಸಂಗತಿಯನ್ನು ಸರ್ಕಾರದ ಗಮನಕ್ಕೆ ತಂದು ನಿರ್ಧರಪಡಿಸಿಕೊಟ್ಟಲ್ಲಿ ಲಂಚವನ್ನು ತೆಗೆದುಕೊಂಡವರು ಯಾರೇ ಆಗಿರಲಿ "Out he goes" ಅಂದರೆ ನಿರ್ದಾಕ್ಷಿಣ್ಯದಿಂದ ಕೆಲಸದಿಂದ ದಾಟಲ್ಪಡುವನು ಎಂದು ಮ|| ಬಾನರ್ಜಿಯವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಬಹಳ ಆವೇಶದಿಂದ ಅಪ್ಪಣೆಕೊಡಿಸಿದ್ದರಾದರೂ ಈವರೆಗೆ ಯಾವುದೊಂದು ಪ್ರಯತ್ನವೂ ನಡೆಸಲ್ಪಡಲಿಲ್ಲವಾದ ಪ್ರಯುಕ್ತ, ಲಂಚಗುಳಿಗಳು ಮತ್ತಷ್ಟು ಹೆಚ್ಚಾಗಿ ನಿರ್ಭೀತಿಯಿಂದ ವರ್ತಿಸಲವಕಾಶವಾಯಿತು. ಈ ಲಂಚದ ಹಾವಳಿಯನ್ನು ಬಡಪಾಯಿಗಳಿಂದ ಪ್ರಜೆಗಳು ಸಹಿಸುವುದು ಕಡುಕಷ್ಟವಾಗಿರುವ ಪ್ರಯುಕ್ತ ಅಹೋರಾತ್ರಿ ಸ್ವಪ್ರಜಾಕ್ಷೇಮಚಿಂತನೆಯಲ್ಲೇ ಮಗ್ನರಾಗಿರುವ ಮತ್ತು ಪ್ರಜಾಸರ್ವಸ್ವವಾದ ಮಹಾಪ್ರಭುಗಳು ನಾವು ಮೇಲೆ ಸೂಚಿಸಿರುವಂತಹ ಒಂದು ಕಮಿಟಿಯನ್ನೇರ್ಪಡಿಸಿಯಾಗಲಿ ಅಥವಾ ಮತ್ತಾವ ವಿಧದಿಂದಾಗಲಿ ಲಂಚದ ಹಾವಳಿಯು ಹುಟ್ಟು ಅಡಗಿ ಪ್ರಜಾನೆಮ್ಮದಿಯುಂಟಾಗುವಂತೆ ಮಾಡಿಸಬೇಕಾಗಿ ಪ್ರಾರ್ಥಿಸುತ್ತೇವೆ, ಅಲ್ಲದೆ ಈ ವರ್ಧಂತ್ಯುತ್ಸವದಲ್ಲಿ ಜರಗುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಈ ವಿಚಾರವನ್ನೂ ಒಂದು ಸ್ಪೆಷಲ್ ಸಬ್ಜೆಕ್ಟನ್ನಾಗಿಯಾದರೂ ತಂದು ಚರ್ಚಿಸಿ ಲಂಚದ ಹಾವಳಿಯ ನಿವಾರಣೆಗೇನಾದರೊಂದೇರ್ಪಾಟನ್ನು ಖಂಡಿತವಾಗಿ ಮಾಡಲ್ಪಡುವಂತೆ ಪ್ರಯತ್ನಿಸಬೇಕಾಗಿ ಸೂಚಿಸುತ್ತೇವೆ.

ತಲೆನೋವಿಗೆ ಕಾರಣ.

ಸಾಮಾನ್ಯವಾಗಿ ತಲೆನೋವು ಬರುವುದಕ್ಕೆ ಅನೇಕ ಕಾರಣಗಳುಂಟು. ಉಷ್ಣದಿಂದ ತಲೆನೋವು ಬರುವುದು. ಶೀತದಿಂದಲೂ ಅದು ಬರುವುದು. ಚಿಂತೆಯಿಂದಲೂ ಅದು ಬರಬಹುದು. ಆದರೆ ಇವೆಲ್ಲ ಕಾರಣಗಳಿಗಿಂತಲೂ ಹೆಚ್ಚಾಗಿ ಅಜೀರ್ಣದಿಂದ ತಲೆನೋವು ಬರುವುದು ಹೆಚ್ಚು. ಜೀರ್ಣವಾಗಿ ಆಹಾರ್ಯ ಪದಾರ್ಥಗಳನ್ನು ವಿಶೇಷವಾಗಿ ಹೊಟ್ಟೆಗೆ ತುಂಬುವುದರಿಂದ ತಲೆನೋವು ಬರುವುದು. ಯಾವದೇಕಾರಣದಿಂದ ತಲೆನೋವು ಬಂದಿದ್ದರೂ ಚೆನ್ನಾಗಿ ನಿದ್ದೆಮಾಡುವುದೂ, ಬಿಸಿನೀರಿಂನ ತಲೆಯನ್ನು ತೊಳೆಯುವುದೂ, ಭೇದಿಗೆ ಔಷಧವನ್ನು ತೆಗೆದುಕೊಳ್ಳುವುದೂ ತಕ್ಕ ಪರಿಹಾರೋಪಾಯಗಳು. ಮುಂದಕ್ಕೆ ಕೆಲ ಅಡಿಗಳ ದೂರ ನಡೆದುಹೋಗಿ ಮತ್ತೆ ಹಾಗೆಯೇ ಮುಖವನ್ನು ಹಿಂದಕ್ಕೆ ತಿರುಗಿಸದೆ ಹಿಂಗಡೆಗೆ ನಡೆದು ಬರುವುದರಿಂದ ಕೆಲ ತಲೆನೋವುಗಳು ಗುಣವಾಗುವುವೆಂದು ಕೆಲ ವೈದ್ಯರು ಹೇಳುತ್ತಾರೆ. ತಲೆಯಕಡೆಗೆ ವಿಶೇಷವಾಗಿ ರಕ್ತವು ಪ್ರವಹಿಸುವುದರಿಂದ ತಲೆಯು ಕಾದು ನೋವು ವಿಶೇಷವಾಗಿರುವುದು. ಅಂತಹ ಕಾಲದಲ್ಲಿ ಮೊಣಕಾಲಿನವರೆಗೆ ಬಿಸಿನೀರಿನಲ್ಲಿ ಎರಡು ಕಾಲುಗಳನ್ನೂ ಮುಳುಗಿಸಿ ಸ್ವಲ್ಪ ಕಾಲ ಕುಳಿತುಕೊಳ್ಳುವುದರಿಂದಲೂ ತಲೆನೋವು ಗುಣವಾಗುವುದುಂಟು.

ಹರ್ ಎಕ್ಸಿಲೆನ್ಸಿ.

ಇದುವರೆಗೆ ವೈಸ್‌ರಾಯರ ಪತ್ನಿಯವರು ಅಲ್ಲದೆ ಗೌರ್ನರ ಪತ್ನಿಯರುಗಳು ಕೂಡ "ಹರ್ ಎಕ್ಸೆಲೆನ್ಸಿ" ಎಂಬ ಗೌರವ ಶಬ್ದದಿಂದ ಸಂಬೋಧಿಸಲ್ಪಡುತ್ತಿದ್ದರು. ಈ ವಿಚಾರದಲ್ಲಿ ಚರ್ಚೆಯು ನಡೆದು ಇನ್ನುಮೇಲೆ ವೈಸ್‌ರಾಯರ ಪತ್ನಿಯವರಿಗೆ ಮಾತ್ರ ಈ ಬಿರುದು ಸಲ್ಲತಕ್ಕುದಲ್ಲದೆ ಇತರರಿಗೆ ಕೂಡದೆಂದು ಚಕ್ರವರ್ತಿಯವರ ಅಪ್ಪಣೆಯಾಗಿರುವುದಾಗಿ ಪ್ರಕಟವಾಗಿದೆ.

ಆಶುತೋಷ ಚೌದರಿಯವರ ಮರಣವು.

ಕಲಕತ್ತಾ ಹೈಕೋರ್ಟಿನ ಜಡ್ಜಿಯಾಗಿದ್ದು ವಿಶ್ರಾಂತಿಸುಖವನ್ನನುಭವಿಸುತ್ತಿದ್ದ ಸರ್ ಆಶುತೋಷ ಚೌದರಿಯವರು ಜ್ವರರೋಗಪೀಡಿತರಾಗಿ ಕಳೆದ ತಾ|| 22 ರಲ್ಲಿ ಸ್ವರ್ಗಸ್ಥರಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರು ಮಿತವಾದಿಗಳಾಗಿದ್ದು ಪ್ರಜಾಹಿತಕಾರ್ಯದಲ್ಲಿ ನಿರತರಾಗಿದ್ದರು. ತಮ್ಮ ನ್ಯಾಯಸ್ಥಾನ ಉದ್ಯೋಗನಿರ್ವಹಣದಲ್ಲಿ ಸ್ವಸಾಮರ್ಥ್ಯವನ್ನು ಪ್ರದರ್ಶಿಸಿ ಪ್ರಖ್ಯಾತರಾಗಿದ್ದರು. ಸಾಂಘಿಕ, ವಿದ್ಯಾ, ಸಾಹಿತ್ಯಾದಿ ಉದ್ಯಮಗಳಲ್ಲಿ ಇವರು ಬಹಳ ಶ್ರದ್ಧೆವಹಿಸಿ ಪಾಟುಪಡುತ್ತಿದ್ದರು.

1924 ನೇ ಮೇ 15 ನೇ ಮರ್ಕ್ಯುಮಿಗೆ ಆಖೈರಾದ ವಾರಕ್ಕೆ ವರ್ತಮಾನ ಪತ್ರಿಕೆಗಳಿಗೆ ಕಳುಹಿಸುವ ಸರ್ಕಾರಿಯಪ್ಪಣೆಯ ಗೋಷ್ವಾರೆ.

1. ಸೈನ್ಯದ ಯುದ್ಧಕ್ರಮದ ಅಭ್ಯಾಸಗಳು ನಡೆಯುವ ಕಾಲದಲ್ಲಿ ಗ್ರಾಮಗಳನ್ನು ಖಾಲಿಮಾಡುವುದಕ್ಕಾಗಿ ಹಿಂದುಗಳಿಗೂ, ಮುಸಲ್ಮಾನರಿಗೂ ಇತರರಿಗೂ ಕೊಡತಕ್ಕ ಪರಿಹಾರದ್ರವ್ಯದ ದರಗಳನ್ನು ಇದರಡಿ ಕಂಡಂತೆ ತಿದ್ದುಪಾಟುಮಾಡಿರುತ್ತದೆ.

ಹಾಲಿಜಾರಿಯಲ್ಲಿರುವ ದರಗಳು -- ವಯಸ್ಕರಿಗೆ ತಲೆಯೊಂದಕ್ಕೆ ನಾಲ್ಕಾಣೆಯಂತೆ.

ತಿದ್ದುಪಾಟಾದ ದರಗಳು—ಗಂಡಸರಿಗೆ ತಲೆಗೆ ದಿನಕ್ಕೆ 6 ಆಣೆ. ಹೆಂಗಸರಿಗೆ ತಲೆಗೆ ದಿನಕ್ಕೆ 4 ಆಣೆ. (10 ಕ್ಕೆ ಮೇಲ್ಪಟ್ಟ 14 ವರ್ಷಕ್ಕೆ ಕಡಮೆಯಾದ ವಯಸ್ಸುಳ್ಳ) ಮಕ್ಕಳಿಗೆ ಮೇಲ್ಕಂಡ ದರದಲ್ಲಿ ಅರ್ಧದಂತೆ.

2. ಮೈಸೂರು ನ್ಯಾಯವಿಧಾಯಕ ಸಭೆಯ ಮಿಾಟಿಂಗು ಈ ಮೊದಲು ಪ್ರಕಟಿಸಿದಂತೆ 1924ನೇ ಜೂನ್ 17ನೆ ತಾರೀಖಿಗೆ ಬದಲಾಗಿ ಅದೇ ಮಾಹೆ 18ನೇ ತಾರೀಖು ಬುಧವಾರದ ದಿನ ಮಧ್ಯಾಹ್ನ 12 ಗಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡಗಳ ಸೆಂಟ್ರಲ್ ಹಾಲಿನಲ್ಲಿ ಉಪಕ್ರಮವಾಗತಕ್ಕದ್ದು.

3. ಶ್ರೀ ಕನಕಲಕ್ಷ್ಮಮ್ಮನವರನ್ನು ಬಾಲಿಕಾಪಾಠಶಾಲೆಗಳ ಡೆಪ್ಯುಟಿ ಇನ್‌ಸ್ಪೆಕ್ಟ್ರೆಸ್ಸರನ್ನಾಗಿ ನೇಮಕಮಾಡಿದ ಪ್ರಯುಕ್ತ ಬಾಲಿಕಾಪಾಠಶಾಲೆಗಳನ್ನು ತನಿಖೆಮಾಡತಕ್ಕ ನಾನಾ ಆಫೀಸರರಿಗೆ ಹಂಚಿರುವ ರೇಂಜುಗಳನ್ನೂ ಛಾರ್ಜುಗಳನ್ನೂ ತಿದ್ದುಪಾಟು ಮಾಡಿರುತ್ತದೆ, ಅಲ್ಲದೆ ಬಾಲಿಕಾಪಾಠಶಾಲೆಗಳ ಇನ್‌ಸ್ಪೆಕ್ಟ್ರೆಸ್‌ರವರ ಮತ್ತು ಡೆಪ್ಯುಟಿ ಇನ್‌ಸ್ಪೆಕ್ಟ್ರೆಸ್‌ರವರ ಅಧಿಕಾರಗಳನ್ನೂ ಕರ್ತವ್ಯಗಳನ್ನೂ ಗೊತ್ತುಮಾಡಿದೆ.

4. ನ್ಯಾಯವಿಧಾಯಕ ಸಭೆಯ ಮೆಂಬರುಗಳಿಗೂ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಿಗೂ, ಅವರ ಮೆಂಬರುತನದ ಕಾಲದಲ್ಲಿ ಈ ಕೆಳಗೆ ಕಂಡ ಸೌಕರ್ಯಗಳನ್ನೊದಗಿಸಿದೆ.

1. ಸರ್ಕಾರಿ ಕೆಲಸಕಾರ್ಯಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಸರ್ಕಾರಿ ಆಫೀಸರರ ವಿಳಾಸಕ್ಕೆ ಕಳುಹಿಸಿ ಕೊಡತಕ್ಕ ಕಾಗದಪತ್ರಗಳನ್ನು ಲಕೋಟೆಯ ಮೇಲ್ಭಾಗದ ತುದಿಯಲ್ಲಿ "ಸರ್ಕಾರಿ ಕೆಲಸದ ಮೇಲೆ ಹಾಸಲಿಲ್ಲದೆ" ಎಂದು ಬರೆದು ಅಡಿಯಲ್ಲಿ ಕಳುಹಿಸುವವರ ರುಜುವನ್ನು ಹಾಕಿ ಅಂಚೆಯ ಹಾಸಲಿಲ್ಲದೆ ಕಾಗದ ಪತ್ರಗಳನ್ನು ಕಳುಹಿಸಿಕೊಡತಕ್ಕದ್ದು. ಪರಂತು ಅಂಥ ಪತ್ರಗಳನ್ನು ಟಪಾಲಿನ ಮೇಲೆ ಕಳುಹಿಸತಕ್ಕ ಸ್ಥಳವೂ ವಿಳಾಸದಾರರಿಗೆ ಕೊಡಲ್ಪಡತಕ್ಕ ಸ್ಥಳವೂ, ಈ ಎರಡೂ ಮೈಸೂರು ಸಂಸ್ಥಾನದ ಸರಹದ್ದುಗಳೊಳಗಾಗಿ ಇರುವ ಸ್ಥಳಗಳಾಗಿರಬೇಕು.

2. (a) ಮೈಸೂರು ಗೆಜೆಟ್ಟಿನ ಪ್ರತಿಗಳು ಮತ್ತು ಸರ್ಕಾರದವರ ಪುನರ್ವಿಮರ್ಶೆಯೊಂದಿಗೆ ಅಡ್ಮಿನಿಸ್ಟ್ರೇಷನ್ ರಿಪೋರ್ಟುಗಳ ಪ್ರತಿಗಳು, (b) ನ್ಯಾಯವಿಧಾಯಕ ಸಭೆಯ ಮತ್ತು ಪ್ರಜಾಪ್ರತಿನಿಧಿ ಸಭೆಯ ನಡವಳಿಕೆಗಳು ಮತ್ತು (c) ಬ್ಲೂಬುಕ್ ಮತ್ತು ಪಬ್ಲಿಸಿಟಿ ಜರ್ನಲಿನ ಪ್ರತಿಗಳು, ಇವುಗಳನ್ನು ಅರ್ಧದರಗಳಿಗೆ ಕೊಡುವುದು.

5. ಮೈಸೂರು ಸರ್ಕಾರದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರವರಾದ ಮಿ|| ಎಸ್. ಜಿ. ಫೋರ್ಬ್ಸ್ ಬಿ. ಎಸ್. ಸಿ. ಯವರಿಗೆ 1924ನೆ ಮೇ 15 ನೆ ಮಕ್ಕಾಂ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನ ಲಾಗಾಯತು 15 ದಿನಗಳ ಪ್ರಿವಿಲೇಜ್ ರಜವನ್ನು ಮಂಜೂರ್ಮಾಡಿದೆ ಈ ಕಾಲದಲ್ಲಿ ಅಸಿಸ್ಟೆಂಟ್ ಚೀಫ್ ಎಲೆಕ್ಟ್ರಿಕಲ್ ಇಂಜನಿಯರವರಾದ ಮಿ|| ಬಿ. ಡಿ. ನಾಕ್‌ರವರು ಚೀಫ್ ಎಲೆಕ್ಟ್ರಿಕಲ್ ಇಂಜನಿಯರವರ ಆಫೀಸಿನ ಚಾಲ್ತಿ ಕೆಲಸಗಳನ್ನು ನೋಡಿಕೊಳ್ಳತಕ್ಕದ್ದು ಮತ್ತು ಶಿವಸಮುದ್ರದಲ್ಲಿ ಜನರಲ್ ಸೂಪರಿಂಟೆಂಡೆಂಟರವರಾಗಿರುವ ಮಿ|| ಎಲ್. ಆರ್. ರಿಡ್‌ತಾರ್‌ರವರು ವುಡ್‌ಶಾಕ್‌ರವರ ಕೆಲಸ ಚಲಾವಣೆಯ ಮತ್ತು ಸ್ವಾಧೀನದ ಚಾರ್ಜಿನಲ್ಲಿ ಇರತಕ್ಕದ್ದು.

6. 1924 ನೇ ಜೂನ್ ತಿಂಗಳಲ್ಲಿ ನಡೆಯತಕ್ಕ ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವಗಳ ಸಂಬಂಧದಲ್ಲಿ ದಯಮಾಡಿಸುವ ಇಂಡಿಯನ್ ಅತಿಥಿಗಳ ಸ್ವಾಗತ ಮತ್ತು ಸತ್ಕಾರಗಳ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡಲು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನ ರಿಜಿಸ್ಟ್ರಾರರಾದ ಮಿ|| ಸಿ. ಇ. ರಾಮರಾವ್, ಬಿ. ಎ., ಯವರನ್ನು 1924 ನೇ ಮೇ 30 ನೇ ತಾರೀಖಿನ ಲಾಗಾಯತು ಸ್ಪೆಷಲ್ ಡ್ಯೂಟಿಗೆ ನೇಮಿಸಿದೆ.

7. ಸಾಲಗಳಿಗಾಗಿ ಬರುವ ಅರ್ಜಿಗಳ ಫೈಸಲಾತಿಯಲ್ಲಿ ವಿಶೇಷ ಸುಸ್ತಿಯಾಗುತ್ತಿರುವುದೆಂದೂ, ಅದರಿಂದ ರೈತರಿಗೆ ಅನನುಕೂಲವೂ ತೊಂದರೆಯೂ ಉಂಟಾಗುವುದರಿಂದ ಅಂಥ ಅರ್ಜಿಗಳನ್ನು ವ್ಯವಸ್ಥೆಮಾಡುವುದಕ್ಕೆ ಒಂದು ಕಾಲಪರಿಮಿತಿಯನ್ನು ಗೊತ್ತುಮಾಡಬೇಕೆಂದೂ, 1922 ನೇ ಅಕ್ಟೋಬರು ತಿಂಗಳಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಅಂಗೀಕಾರಮಾಡಲ್ಪಟ್ಟಿತು. ಈ ಅರ್ಜಿಗಳು ಜಾಗ್ರತೆಯಾಗಿ ವಿಲೆವಾರಿಯಾಗುತ್ತಿಲ್ಲವೆಂಬ ಆಕ್ಷೇಪಣೆಗೆ ಸ್ವಲ್ಪ ಮಟ್ಟಿಗೆ ಆಧಾರವಿರುವುದಾಗಿ ಕಂಡುಬಂದಿದೆ; ಆದರೆ ಸಾಲಕ್ಕಾಗಿ ಬರುವ ಅರ್ಜಿಗಳನ್ನು ಫೈಸಲ್ಮಾಡುವುದಕ್ಕಾಗಿ ಒಂದು ಕಾಲಾವಧಿಯನ್ನು ಗೊತ್ತುಮಾಡುವುದರಿಂದ, ವಿಚಾರಣೆಯಿಲ್ಲದೆಯೇ ಅವುಗಳನ್ನು ತಿರಸ್ಕರಿಸುವುದಕ್ಕೆ ಸಲವಾಗಬಹುದಲ್ಲದೆ, ಎಲ್ಲಾ ಸಂದರ್ಭಗಳಲ್ಲಿಯೂ ಸದರಿ ಅವಧಿಯಲ್ಲಿ ಪೂರ್ತಿಯಾದ ವಿವರಗಳನ್ನು ಪಡೆಯುವುದು ಅಸಾಧ್ಯವಾಗಬಹುದು. ಆದರೂ, ಅಂಥ ಅರ್ಜಿಗಳನ್ನು ಜರೂರಾದವುಗಳಂತೆ ಭಾವಿಸಿ, ವಿಧಾಯಕವಾಗಿರುವ ಕ್ರಮಗಳನ್ನೆಲ್ಲಾ ಕೂಡಿದಮಟ್ಟಿಗೂ, ಜಾಗ್ರತೆಯಾಗಿ ನಡಸುವಂತೆ ಸರ್ಕಾರದವರು ರೆವಿನ್ಯೂ ಆಫೀಸರುಗಳಿಗೆ ಹುಕುಂ ಕೊಟ್ಟಿರುತ್ತಾರೆ.

ನಮ್ಮ ಮೈಸೂರುಸಂಸ್ಥಾನದಿಂದ ಲಂಡನ್ನಿನಲ್ಲಿ ಜರುಗುತ್ತಿರುವ ಬ್ರಿಟಿಷ್‌ಸಾಮ್ರಾಜ್ಯ ಮಹಾವಸ್ತುಪ್ರದರ್ಶನಕ್ಕೆ ಕಳುಹಲ್ಪಟ್ಟಿರುವ ವಸ್ತುಗಳನ್ನು ತತ್ರಾಪಿ ಚಿತ್ರವಿಚಿತ್ರ ಕೆಲಸಮಾಡಲ್ಪಟ್ಟಿರುವ ಗಂಧದಮರದ ಮತ್ತು ದಂತದ ಹಾಗೂ ಬಣ್ಣದ ವಸ್ತುಗಳನ್ನು ಬ್ರಿಟಿಷ್ ಚಕ್ರವರ್ತಿ ದಂಪತಿಗಳು ರೊಮೇನಿಯಾದೇಶದ ರಾಜದಂಪತಿಗಳ ಕೂಡ ಕಳೆದ ತಾ|| 15 ರಲ್ಲಿ ಪರಾಮರ್ಶಿಸಿ ಬಹಳ ಸಂತೋಷಪಟ್ಟು ಕೆಲ ಅಪೂರ್ವವೂ ಆಶ್ಚರ್ಯಕರವೂ ಆದ ಪದಾರ್ಥಗಳನ್ನು ತಮ್ಮಗಳಿಗೆ ವಿಕ್ರಯಿಸಬೇಕಾಗಿ ತಿಳಿಸಿದರೆಂದು ವರ್ತಮಾನಬಂದಿದೆ. ಇದರಿಂದ ನಮ್ಮ ಸರ್ಕಾರದವರು ಪದಾರ್ಥಗಳನ್ನು ಸಂಗ್ರಹಿಸಿ ಅವನ್ನು ಪ್ರದರ್ಶನಕ್ಕೆ ಕಳುಹಿಕೊಡಲು ವಿಶೇಷವಾಗಿಮಾಡಿದ ಹಣವ್ಯಯವು ತಕ್ಕಮಟ್ಟಿಗೆ ಸಾರ್ಥಕವಾಯಿತೆಂದು ಹೇಳಬಹುದಾಗಿದೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ಲಗ್ನದ ಫಂಡು.

1. ಮೈಸೂರಲ್ಲಿರುವ ಮ|| ರಾ|| ನಿಟ್ಟೂರುಬಸಪ್ಪನವರ ಪುತ್ರಿ ಚಿ|| ಸೌ|| ಚೆನ್ನಮ್ಮನವರನ್ನು ಮ|| ರಾ|| ಡಾಕ್ಟರ್ ಟಿ. ಯಸ್. ನಂಜಪ್ಪನವರ ಪುತ್ರ ಚಿ|| ರಾ|| ಶಿವನಂಜಪ್ಪನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ವಧುವಿನ ಕಡೆಯಿಂದ ಬಂದದ್ದು. 10-0-0.

2. ಕೊಳ್ಳೇಗಾಲದ ಮ|| ರಾ|| ಜಿ. ಪಿ. ಮಲ್ಲಪ್ಪನವರ ಪುತ್ರಿ ಚಿ|| ಸೌ|| ಪಾರ್ವತಮ್ಮನವರನ್ನು ದೇಂಕಣಿಕೋಟೆ ಮ|| ರಾ|| ಡಿ. ಎನ್. ನೀಲಕಂಠಪ್ಪನವರ ಪುತ್ರ ಪ್ರಸನ್ನಯ್ಯನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ವಧೂವರರ ಕಡೆಯಿಂದ ಬಂದದ್ದು. 10-0-0.

3. ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿರುವ ಫಾರೆಸ್ಟ್ ಇಲಾಖೆ ಅಸಿಸ್ಟೆಂಟ್ ಕನ್ಸರ್ವೇಟರ್ ಮ|| ರಾ|| ಕೆ. ರೇವಣ್ಣನವರ ಪುತ್ರಿ ಚಿ|| ಸೌ|| ಗೌರಮ್ಮನವರನ್ನು ಮುಳಬಾಗಲು ಮ|| ರಾ|| ಬಸೆಟ್ಟಪ್ಪನವರ ಪುತ್ರ ಚಿ|| ರಾ|| ಬಸಪ್ಪನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ಬಂದದ್ದು. 25-0-0.

4. ಮೈಸೂರು ಹಳೇ ಅಗ್ರಹಾರದಲ್ಲಿರುವ ಚಿಲ್ಲರೆಮಳಿಗೆ ಮ|| ಸಿ. ದಾಸಪ್ಪನವರ ಪುತ್ರಿ ಚಿ|| ಸೌ|| ಯಲ್ಲಮ್ಮನವರನ್ನು ಇದೇ ಹಳೇ ಅಗ್ರಹಾರದಲ್ಲಿರುವ ಚಿಲ್ಲರೆಮಳಿಗೆ ಮ|| ಬೆಂಗಳೂರು ರುದ್ರಪ್ಪನವರ ಪುತ್ರ ರಾ|| ನಾಗಪ್ಪನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ಮ|| ವೈ. ವಿರೂಪಾಕ್ಷಯ್ಯನವರ ಮೂಲಕ, 3-0-0.

5. ಮೈಸೂರು ಗುರುಕಾರ್ ಮಲ್ಲಪ್ಪನವರ ಪುತ್ರಿಯ ನಿಷೇಕಪ್ರಸ್ತದಲ್ಲಿ ಮ|| ವೈ. ವಿರೂಪಾಕ್ಷಯ್ಯನವರ ಮೂಲಕ ಬಂದದ್ದು. 2-0-0.

6. ಚನ್ನಪಟ್ಟಣದ ತಾ|| ಯಲೆತೋಟದಹಳ್ಳಿ ಮ|| ರಾಚಪ್ಪನವರ ಪುತ್ರಿ ಸೌ|| ಗಂಗಮ್ಮಣ್ಣಿಯನ್ನು ಚನ್ನಪಟ್ಟಣದ ಯಜಮಾನರು ಮ|| ಮಲ್ಲಿಕಾರ್ಜುನಯ್ಯನವರ ಪುತ್ರ ರಾ|| ಬಸವರಾಜಯ್ಯನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ವಧೂವರರ ಕಡೆಯಿಂದ ಮ|| ವೈ. ವಿರೂಪಾಕ್ಷಯ್ಯನವರ ಮೂಲಕಬಂದದ್ದು. 5-0-0.

7. ಬೇಲೂರು ತಾಲ್ಲೂಕಿನ ವೀರಶೈವರೆಲ್ಲರೂ ಮುಲ್ಲಾವೀರಮಠದಲ್ಲಿ ಸಭೆ ಸೇರಿದ್ದ ಕಾಲದಲ್ಲಿ ಕೋಗೋಡು ಪಟೇಲ್ ಮ|| ಮಲ್ಲೇಗೌಡರ ಮೂಲಕ ಬಂದದ್ದು. 2-14-0.

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ,
ಬೆಂಗಳೂರು ಸಿಟಿ.

ನೋಟೀಸ್.

ದಾವಣಗೆರೆ ವೀರಶೈವ ವಿದ್ಯಾವರ್ಧಕ ಫಂಡು ಸಂಘ.

ಈ ಸಂಘದಿಂದ ಸಹಾಯ ಹೊಂದಿದ ವಿದ್ಯಾರ್ಥಿಗಳ ಪೈಕಿ ಲೋವರ್ ಸೆಕೆಂಡರಿ, ಮೆಟ್ರಿಕ್ಯುಲೇಷನ್, ಎಂಟ್ರನ್ಸು, ಯೂನಿವರ್‌ಸಿಟಿ, ಲಾ, ಕಾಲೇಜುಗಳಲ್ಲಿಯೂ 1923—1924 ನೇ ಸಾಲಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರ ಹೆಸರನ್ನು ನಮ್ಮ ಫಂಡಿನ ವಾರ್ಷಿಕ ರಿಪೋರ್ಟಿನಲ್ಲಿ ನಮೂದಿಸಿ ಪಬ್ಲಿಷ್ ಮಾಡಬೇಕಾಗಿರುವದರಿಂದ ಸದರಿ ವಿದ್ಯಾರ್ಥಿಗಳು ತಮ್ಮ ಪರೀಕ್ಷೆಯ ರಿಜಲ್ಟನ್ನು ಬರುವ ಜೂನ್ ತಾ|| 15 ರ ವರೆಗಾಗಿ ತಿಳಿಸಬೇಕು. ಹಾಗೆ ತಿಳಿಸದೆ ಇರುವ ವಿದ್ಯಾರ್ಥಿಗಳನ್ನು ಮುಂದೆ ವಿಚಾರಮಾಡಲಾಗುವದು.

M. Channaveeraiah,
For, President,
Veerasiva Vidyavardhaka Fund Sangha.

ಸ್ವೀಕಾರ.

ಕೈ|| ವೈ|| ವೀರಸಂಗಪ್ಪನವರ ಅಗ್ರತಾಂಬೂಲಕಾಣಿಕೆಗಾಗಿ ಈ ಕೆಳಗೆ ಕಂಡ ವಿವಾಹಗಳಲ್ಲಿ ತೆಗೆದು ಕಳುಹಿಸಲ್ಪಟ್ಟ ಮೊಬಲಗನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.

(1) ಚನ್ನಪಟ್ಟಣದ ತಾ|| ಯಲೆತೋಟದಹಳ್ಳಿಯಲ್ಲಿ ಮ|| ರಾಚಪ್ಪನವರ ಪುತ್ರಿಗೂ ಚನ್ನಪಟ್ಟಣದ ಮ|| ಯಜಮಾನರ ಮಲ್ಲಿಕಾರ್ಜುನಯ್ಯನವರ ಪುತ್ರನಿಗೂ ನಡೆದ ಲಗ್ನದಲ್ಲಿ ವಧೂವರರ ಕಡೆಯಿಂದ 2 ರೂ. (2) ಬೆಂಗಳೂರಲ್ಲಿರುವ ಫಾರೆಸ್ಟ್ ಅಸಿಸ್ಟೆಂಟ್ ರೇಂಜರ್ ಮ|| ಕೆ. ರೇವಣ್ಣನವರಿಂದ ಅವರ ಪುತ್ರಿಯ ಲಗ್ನದಲ್ಲಿ 1 ರೂ. (3) ಮೈಸೂರಲ್ಲಿರುವ ಮ|| ಪಂಡಿತ ವೀರಭದ್ರಪ್ಪನವರ ಪುತ್ರಿಗೂ ದ್ಯಾವನೂರು ಬಸಪ್ಪನವರಿಗೂ ನಡೆದ ಲಗ್ನದಲ್ಲಿ 1 ರೂ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಸಂ.

ಹೊಸೂರು ತಾ|| ದೇಂಕಣಿಕೋಟೆ.

ಕಳೆದ ಎರಡು ವರ್ಷಗಳಿಂದಲೂ ಈ ಪ್ರಾಂತ್ಯ ಮಳೆಯು ಸರಿಯಾಗಿ ಬರದೆ ಬೆಳೆಯು ಕೆಟ್ಟುಹೋಗಿ ಬಡವರು ಜೀವನಕ್ಕಿಲ್ಲದೆ ಬಹಳವಾಗಿ ಕೇಡಾಡುತ್ತಿರುವರು ಮತ್ತು ಬಿಸಿಲಿನ ಝಳವು ಬಹಳವಾಗಿದ್ದು ಕೆರೆಕುಂಟೆಗಳಲ್ಲಿ ಅಷ್ಟು ಇಷ್ಟು ನಿಂತಿದ್ದ ನೀರೂ ಪಕ್ಷಿಗಳಿಗೂ ದನಕರುಗಳಿಗೂ ಕುಡಿಯುವದಕ್ಕೆ ಸಹ ಇಲ್ಲದಂತೆ ಒಣಗಿಹೋಗಿತ್ತು. ಅಲ್ಲದೆ ಕಾಲರ ಜಾಡ್ಯವು ತಲೆದೋರಿ ಬಹಳ ಜನಗಳನ್ನು ಆಹುತಿಗೊಂಡಿತು. ಕೊಂಚ ದಿವಸಗಳಲ್ಲಿ ಮಳೆಯು ಬರದಿದ್ದರೆ ದನಕರುಗಳೂ ಜನರೂ ಕುಡಿಯಲು ನೀರಿಲ್ಲದೆ ಸತ್ತುಹೋಗಬಹುದೆಂದು ಭಯಪಟ್ಟುಕೊಂಡಿರುವಲ್ಲಿ ಮೇಘರಾಜನು ನಮ್ಮ ದೀನಪ್ರಾರ್ಥನೆಯನ್ನು ಲಾಲಿಸಿ ದಯವಿಟ್ಟು 3-4 ಹದ ಮಳೆಯನ್ನು ಸುರಿಸಿದ್ದರಿಂದ ಕೆರೆಕಟ್ಟೆಗಳೂ ತುಂಬಿತುಳುಕುವಂತಾದಮೇಲೆ ಕಂದು ಹೋಗಿದ್ದ ಜನರ ಮುಖವು ನಗುವಂತಾಗಿರುವುದು. ರೈತರು ಸಂತೋಷದಿಂದುಬ್ಬಿ ತಮ್ಮ ವ್ಯವಸಾಯ ಕಾರ್ಯಕ್ಕುಪಕ್ರಮಿಸಿರುವರು. ಈ ದೇಂಕಣಿಕೋಟೆಯ ವಾಸಸ್ಥರಾದ ಮ|| ಮಾವರದಹಳ್ಳಿ ವೀರಭದ್ರಪ್ಪನವರ ಮಗ ಮ|| ನಂಜುಂಡಪ್ಪನವರು ಮದ್ರಾಸು ಯೂನಿವರ್ಸಿಟಿಯ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಸಲು ಸಂತೋಷವಾಗುತ್ತದೆ. ಇದೇ ಊರಿನ ಡಿ|| ಬೋರ್ಡು ಮೆಂಬರು ಮ|| ಡಿ. ನೀಲಕಂಠಪ್ಪನವರ ಮಗ ಮ|| ಡಿ. ಎನ್. ಪ್ರಸನ್ನಯ್ಯನವರು ಮೈಸೂರು ಯೂನಿವರ್ಸಿಟಿಯ ಬಿ. ಎ. ಪರೀಕ್ಷೆಗೆ ಹೋಗಿರುವರು. ಇವರ ರಿಜಲ್ಟು ಇನ್ನೂ ಗೊತ್ತಾಗಿಲ್ಲವು. ಇವರಿಗೂ ಪ್ಯಾಸಾಗಲೆಂದು ನಾವೆಲ್ಲರೂ ಕೋರುತ್ತೇವೆ. ಹಾಗೆಯೇ ನಮ್ಮ ಊರಿನ ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ ಬಿ. ಎ., ಮೊದಲಾದ ದೊಡ್ಡ ಪರೀಕ್ಷೆಗಳಲ್ಲಿ ಪ್ಯಾಸಾಗಿ ದೊಡ್ಡ ದೊಡ್ಡ ಉದ್ಯೋಗಕ್ಕೂ ವಕೀಲು ಕೆಲಸಕ್ಕೂ ಸೇರಿ ಪ್ರವೃದ್ಧಮಾನರಾಗಿ ತಮ್ಮ ಮನೆತನಗಳಿಗೂ ಈ ಊರಿಗೂ ಒಳ್ಳೇ ಹೆಸರನ್ನು ತರುವವರಾಗಲೆಂದು ಕೋರುವ,

ಸ್ಥಳವಾಸಿ.

ಗೋಕರ್ಣಪರಿಷದದ ಗಿಲೀಟು.

ಬಾಂಧವರೆ! ಗೋಕರ್ಣ ಕ್ಷೇತ್ರದಲ್ಲಿ ನಡೆದ ಕರ್ನಾಟಕ ಪರಿಷತ್ತು ಯಶಸ್ವಿಯಾಗಿ ಪರಿಣಮಿಸಿತೆನ್ನುವದು ಒಳ್ಳೇ ಸಂಗತಿ ಸರಿ. ಪರಿಷತ್ತಿನಲ್ಲಿ ಸ್ವಾಗತ ಸಂಘಾಧ್ಯಕ್ಷರೂ, ಸಭಾಧ್ಯಕ್ಷರೂ ಮೊದಲಾದವರು ಅನೇಕ ವಿಷಯಗಳ ಬಗ್ಗೆ ಬಹುಸೊಗಸಾಗಿ ಮಾತಾಡಿರಬಹುದು. ಆದರೂ ಇವರು ಇನ್ನೂ ಸ್ವಲ್ಪ ಹೆಚ್ಚು ವಿಶಾಲಹೃದಯರಾಗಿ ಮಾತಾಡಿದ್ದರೆ ಹೆಚ್ಚು ಶ್ಲಾಘನೀಯವಾಗುತ್ತಿದ್ದಿಲ್ಲವೇ?

ಸ್ವಾಗತ ಸಂಘಾಧ್ಯಕ್ಷರು ತಮ್ಮ ಭಾಷಣದಲ್ಲಿ "ಈ ಕಾನಡಾ ಜಿಲ್ಹೆಯು 3 ಶತಮಾನಗಳವರೆಗೆ ಚಾಲುಕ್ಯ, ಯಾದವ ಮೊದಲಾದ ಬೇರೆ ಬೇರೆ ರಾಜವಂಶೀಯರಾಳಿಕೆಯಲ್ಲಿತ್ತೆನ್ನುವದರ ಕೂಡ "ಲಿಂಗಾಯತರಾದ ಸೊಂಡಾ ಮಹಾರಾಜರಾಳಿಕೆಯಲ್ಲಿತ್ತು," ಯೆಂದಿದ್ದರೆ ಎಷ್ಟು ಹೆಚ್ಚು ಸ್ಪಷ್ಟವಾಗಿ ವಕ್ತ್ರವಾಗುತ್ತಿತ್ತು. ಯಾಕೆಂದರೆ ಈ ಕಾನಡಾ ಜಿಲ್ಹೆಯಲ್ಲಿ ಈ ಸೊಂಡಾ ರಾಜರು 200 ವರ್ಷಗಳ ಮೇಲ್ಪಟ್ಟು ಅವಿಚ್ಛಿನ್ನವಾಗಿ ಎಂಟು ತಲೆಗಳವರೆಗೂ ಆಳಿ ಕಡೆಗೆ ಈ ಸೊಂಡಾ ರಾಜರ ಕಡೆಯ ಅರಸನಾದ ಸದಾಶಿವರಾಜರ ಕಾಲದಲ್ಲಿಯೇ ಇದು ಬ್ರಿಟಿಷರ ಕೈಸೇರಿತೆನ್ನುವದು ಸರ್ವಶ್ರುತವಿರುವದಲ್ಲವೇ. ಈ ಸೊಂಡಾರಾಜರಾಳಿಕೆಯಲ್ಲಿ ಈ ಕಾನಡಾ ಜಿಲ್ಹೆಯು ವಿದ್ಯಾಕಲಾಕೌಶಲ್ಯ, ವಾಣಿಜ್ಯ, ಒಕ್ಕಲತನ ಮೊದಲಾದ ಸಕಲೈಶ್ವರ್ಯದಿಂದ ತುಂಬಿ ತುಳುಕುತ್ತಿದ್ದಿಲ್ಲವೇ? ಈ ಸೊಂಡಾ ಮಹಾರಾಜರುಗಳು ಸ್ವತಃ ಲಿಂಗವಂತರಿದ್ದರೂ ಸ್ಮಾರ್ತ, ವೈಷ್ಣವ, ಸಾರಸ್ವತ, ಮಹಮ್ಮದೀಯ. ಕ್ರಿಶ್ಚನ ಮೊದಲಾದ ಸರ್ವಮತೀಯರನ್ನೂ ಸಮದೃಷ್ಟಿಯಿಂದ ನೋಡುತ್ತ ಅವರವರ ದೇವಾಲಯ ಗುರುಪೀಠಾದಿಗಳಿಗೆಷ್ಟೋ ಉಂಬಳಿಗಳನ್ನು ಕಲ್ಪಿಸಿಕೊಟ್ಟು ಅವರೆಲ್ಲರಂ ಸನ್ಮಾನದಿಂದ ತಮ್ಮ ರಾಜಧಾನಿಯಲ್ಲಿಟ್ಟುಕೊಂಡಿದ್ದಿಲ್ಲವೇ? ಇಂಥಾ ಅಹಿಂಸಾತ್ಮಕ ಸರ್ವತೋಮುಖ ಶ್ಲಾಘನೀಯವಾದ ರಾಜರಾಳಿಕೆಗಿಷ್ಟು ಉಪೇಕ್ಷೆಯೇ? ಇವರ ಸಚ್ಚರಿತ್ರೆಯನ್ನೆಲ್ಲಾ ವರ್ಣಿಸುತ್ತ ಹೋಗುವದು ಪರಿಷತ್ತಿನಂಥಾ ಸಭೆಯಲ್ಲಿ ಅಪ್ರಾಸಂಗಿಕವಾದರೂ "ಈ ಕಾನಡಾ ಜಿಲ್ಹೆಯು ಮುಖ್ಯವಾಗಿ ಈ ಗೋಕರ್ಣಕ್ಷೇತ್ರವು ಬಹುಕಾಲದಿಂದಲೂ ಬ್ರಿಟಿಷರ ಕೈಸೇರುವವರೆಗೆ ಲಿಂಗವಂತ ಸೊಂಡಾ ಮಹಾರಾಜರಾಳಿಕೆಯಲ್ಲಿತ್ತು," ಎಂದು ಹೇಳಿದ್ದರೆ, ನಿಮಗಾಗಲೀ, ಸಭೆಯವರಿಗಾಗಲೀ ಯೇನು ಕುಂದು ಬರುತ್ತಿತ್ತು? ಅಷ್ಟು ಅಂದಿದ್ದರೆ ಸದ್ಯದಲ್ಲಿ ಗೋವಾಸೀಮೆಯಲ್ಲಿ ಗೋವಾಸರಕಾರರಿಂದ ಈಗಲೂ ತೋಫಿನ ಸಲಾಮು ಪೆನಶನ್ ಮೊದಲಾದ ಸನ್ಮಾನಗಳಿಂಭೂಷಿತರಾಗಿ ಬಾಂದೇವಾಡಿಯಲ್ಲಿರುವ ಈ ಸೊಂಡಾ ಮಹಾರಾಜರ ವಂಶೀಕರಿಗೆಷ್ಟು ಆನಂದವಾಗುತ್ತಿತ್ತು? ಮತ್ತು ಈ ಬನವಾಸೀ ಹನ್ನೆರಡುಸಾವಿರ ನಾಡಾಧಿಪತಿಗಳಾಗಿದ್ದ ಕೆಳದಿ ಮಹಾರಾಜರ ರಾಜಗುರುಪೀಠವಾಗಿದ್ದ ಚವುಡಯ್ಯದಾನಪುರ ಸಂಸ್ಥಾನದ ಪೀಠದವರಿಗೆಷ್ಟು ಸಂತೋಷವಾಗುತ್ತಿತ್ತು? ಈ ಬಗ್ಗೆ ಸೊಂಡಾ, ಬನವಾಸಿ, ಗೋಕರ್ಣ, ಚವುಡದಾನಪುರ ಮೊದಲಾದ ಸ್ಥಳಗಳಲ್ಲಿ ಈಗ್ಯೂ ಶಿಲಾಶಾಸನಗಳಿರುವದಿಲ್ಲವೇ? ಇಷ್ಟೇ ಅಲ್ಲ ಇಡೀ ಕರ್ನಾಟಕದಲ್ಲಿರುವ ಲಕ್ಷಾವಧಿ ಜನಸಮುದಾಯವುಳ್ಳ ಲಿಂಗಾಯತ ಸಮೂಹಕ್ಕೆಷ್ಟು ಗೌರವವೆನಿಸುತ್ತಿತ್ತು? ಇಂಥಾ ಮಹತ್ವ ಸಂಗತಿಯನ್ನು ಸಾಮಾನ್ಯವೆಂದೂಹಿಸಿಬಿಟ್ಟಿರಬಹುದೇ ವಿನಹಾ ಮತ್ಯಾವ ಭಾವಗರ್ಭಿತವಾಗಿ ಬಿಟ್ಟಿರಲಿಕ್ಕಿಲ್ಲವೋ? ಇರಲಿ, ಇವರ ಭಾಷಣದ ಇನ್ನೂ ಮುಂದೆ ಸಾಗುವಾ.

ಇವರ ಭಾಷಣದಲ್ಲಿ "ಬ್ರಾಹ್ಮಣ ಬ್ರಾಹ್ಮಣೇತರರ ಕಲಹದ ಸ್ಥಿತಿಯೇ ಬೇರೆ ಇದಕ್ಕೆ ಧಾರ್ಮಿಕ ಸಂಪರ್ಕವಿಲ್ಲ" ವೆಂತಾ ವಗೈರೆ ಹೇಳುತ್ತಾರೆ. ಈ ಕಲಹದ ಇತಿ ಕರ್ತವ್ಯವೇ ಧಾರ್ಮಿಕವಿದ್ದು ಇದನ್ನು ಹೀಗ್ಯಾಕೆ ಮಾರ್ಪಡಿಸಿದರೋ? ಯಾಕೆಂದರೆ ಬ್ರಾಹ್ಮಣೇತರರ ಗುರುಗಳಾದಿಯಾಗಿ ಉತ್ಸವದಿಂದಾ ಬಂದರೆ ಈ ಬ್ರಾಹ್ಮಣರಿಗೆ ಸಂಕಟ. ಅವರು ತಮ್ಮ ತಮ್ಮ ದೇವರ ಪೂಜಾಲಗ್ನಾದಿಕಾರ್ಯಗಳನ್ನು ತಮ್ಮ ಗುರುಗಳಿಂದ ಮಾಡಿಸಿಕೊಂಡರೆ ಈ ಬ್ರಾಹ್ಮಣರಿಗೆ ಸಂಕಟ. ಇವುಗಳಿಗೆಷ್ಟೋ ಉದಾಹರಣೆ ಕೊಡಬಹುದು. ಇದೇ ಕಾನಡಾ ಜಿಲ್ಹೆಯಲ್ಲಿ ಸಿದ್ಧಾಪುರದ ವಾಸನತೋಳಿನ ವ್ಯಾಜ್ಯ. ಬಾಗಲಕೋಟೆಯಲ್ಲಿ ಜಗದ್ಗುರು ಶ್ರೀ ಮುರುಘಸ್ವಾಮಿಗಳ ಅಡ್ಡಪಾಲಕೀ ಉತ್ಸವದಲ್ಲಾದ ಕೋಲಾಹಲವನ್ನು ಬ್ರಾಹ್ಮಣರೆಂಬುವವರೆಲ್ಲರೂ ನೆನಪಿನಲ್ಲಿಟ್ಟಿರಬಹುದೇನು? ಇನ್ನು ಬಳ್ಳಾರಿಜಿಲ್ಲಾ ಹಡಗಲೀ ತಾಲ್ಲೂಕ ಹೊಳಲಗ್ರಾಮದಲ್ಲಿ ಚವಡಯ್ಯದಾನಪುರ ಸಂಸ್ಥಾನದ ಶ್ರೀ ಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವವಾದದ್ದಕ್ಕೆ ಈ ಬ್ರಾಹ್ಮಣರೆಷ್ಟು ತೊಂದರೆಕೊಟ್ಟರು? ಹರಪನಹಳ್ಳಿ, ಹಾನಗಲ್ಲ ಮೊದಲಾದ ಗ್ರಾಮಗಳಲ್ಲೂ ಇದೇ ರೀತಿ ಮೊದಲು ಜಗಳಾ ತೆಗೆಯುವವರು ಬ್ರಾಹ್ಮಣರೇ ಬೇಕಾದ ಧಾರ್ಮಿಕವ್ಯಾಜ್ಯನೋಡಿರಿ. ಈ ಬಗ್ಗೆ ಲಕ್ಷಾಂತರ ರೂಪಾಯಿಗಳು ಈ ನಾಲ್ಕಾರು ವರ್ಷಗಳಲ್ಲಿ ಸಮಾಜದವರಿಂದ ಖರ್ಚಾಗಲಿಲ್ಲವೇ. ಈ ಭಾಷಣದ ಇನ್ನಿಷ್ಟು ಮುಂದಕ್ಕೆ ಹೋಗುವಾ.

"ವೀರಶೈವ ಬ್ರಾಹ್ಮಣ ಎಂಬ ಗೌರವದ ನಾಮಧೇಯವುಳ್ಳ ಈ ವರ್ಗವು ಎಂದು ಹೇಳಿದ್ದಾರೆ. ನಾಮವುಳ್ಳ ಎನ್ನುವದರ ಬದಲು ನಾಮಧೇಯವುಳ್ಳಯೆಂದು ಸಂಬೋಧಿಸಿರುವದರ ಭಾವಗರ್ಭಿತಗೂಢವೇನಿರಬಹುದೋ ಅವರಿಗೇನೇಗೊತ್ತು. ಇನ್ನು "ವೀರಶೈವ ಬ್ರಾಹ್ಮಣ ಎಂಬ ಗೌರವದ" ಅನ್ನುವದರಲ್ಲಿ ಇವರು ಅವರಿಗೆಷ್ಟು ಗೌರವವನ್ನು ಕೊಡುತ್ತಿರುವರು ನೋಡಿರಿ: ಈ ಪವಿತ್ರಲಿಂಗಾಯತ [illegible] ಅನಾದಿಕಾಲದಿಂದಲೇ ಆದಿ ಶ್ರೀ ಶಂಕರಾಚಾರ್ಯರು [illegible] ಶ್ರೀ ವಿದ್ಯಾರಣ್ಯರೇ ಮೊದಲಾದವರು ಹೇಳಿದ್ದು ಅಂಥಾ ಪವಿತ್ರ ಲಿಂಗಾಯತರನ್ನು ಸಾರ್ವಜನಿಕ ಸಂಸ್ಕೃತ ಪಾಠಶಾಲೆಗಳಲ್ಲಿ [illegible]. ನಾ

ವರ್ಜಣೀಕ ದೇವಸ್ಥಾನಗಳಲ್ಲಿ ಪ್ರವೇಶಿಸಿದರೆ ದೇವರ ಅಪವಿತ್ರತೆ ಇವುಗಳಿಗೆಲ್ಲ ಒಂದೋ ಎರಡೋ ಸಾವಿರಗಟ್ಲೆ ಉದಾಹರಣೆ ಕೊಡಬಹುದು. ಇರಲಿ. ಇವರ ಭಾಷಣದ ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗೋಣ.

ಈ ಸತ್ಯವಾದಿಗಳು ಅದೇ ಪ್ಯಾರಾದ ಕಡೇ ಸಾಲಿನಲ್ಲಿ "ನಮ್ಮ ಜಿಲ್ಲೆಯಲ್ಲಿ ಈ ಮಟ್ಟಿಗೆ ಅಂಥಾ ಕಲಹವಿಲ್ಲದಿರುವದು ಸುದೈವವು" ಎಂದು ಹೇಳುತ್ತಾರೆ. ಅಯ್ಯೋ! ವಪ್ಪಗಾರರೇ ಈರೀತಿ ಗಲೀಟವಾದ ಹೇಳುವ ಕಾರಣವೇನಿತ್ತು? ಸತ್ಯವಾದವನ್ನು ನುಡಿದಿದ್ದರೆ ನಿಮ್ಮನ್ಯಾರೇನು ಮಾಡುತ್ತಿದ್ದರು? ಬನವಾಸಿಯು ಕಾನಡಾ ಜಿಲ್ಲೆಯೊಳಗಿನದಲ್ಲವೇ. ಅಲ್ಲಿ ಈ ಬ್ರಾಹ್ಮಣವಾದಿಗಳು ಮೆ|| ವಡಿಯರರನ್ನು ತಾವಾಗಿ ಕರಕೊಂಡು ಹೋಗಿ ಅಗಲಿ ಇಲ್ಲವೆ ಅವರಾಗಿಯೇ ಆಗಲಿ ಅದರ ಚರ್ಚವು ನಮಗೆ ಬೇಡ ಸತ್ಯವು ಹ್ಯಾಗೂ ಎಂದಾದರೂ ಹೊರಬೀಳುವದು. ಅದು ಹ್ಯಾಗೆ ಇರಲಿ ಮೆ|| ವಡಿಯರರು ಬನವಾಸಿ ಶ್ರೀ ಮಧುಕೇಶ್ವರ ದೇವರಿರುವ ಜೋಲಿ ಬಿಟ್ಟು ಮುಂದಿನ ಗರ್ಭಗುಡಿಯಲ್ಲಿ ನಿಂತು ಕಾಯಿ ಕರ್ಪೂರಾರತಿ ಮಾಡಿಸಿದ್ದರಿಂದಲೇ ದೇವರು ಅಪವಿತ್ರವಾಯಿತೆಂದು ಈ ಬ್ರಾಹ್ಮಣ ನಾಮಧೇಯರು ಕಾನಡಾ ಲೀಡರದಲ್ಲಿ ನೋಟೀಸಕೊಟ್ಟರು. ನಂತರ ದಾವಾದಾಖಿಲಾಯಿತು. ಈ ಪ್ರಕರಣವು ಹಾಲೀ ಕೋರ್ಟಿನಲ್ಲಿ ನಡೆದದೆ. ಈ ವಿಷಯದ ದಾವಾದಲ್ಲಿ ವಾದೀ ತರ್ಫೇ ವಕೀಲರು ನಮ್ಮ ಸಭೆಯ ಉಪಾಧ್ಯಕ್ಷರಾದ ಮಿ|| ತಲ್ಲೋಳ್ಳಿಯವರೇ ಆಗಿರುವರು. ಇದು ಬಹಳ ದಿವಸಗಳ ಮಾತಲ್ಲ. ಗೋಕರ್ಣ ಸಭೆಯು ಮುನ್ನಾ 2—3 ದಿವಸಗಳ ಹಿಂದಿನ ಕೆನರಾ ಲೀಡರದಲ್ಲಿ ಯಾರೋ ಒಬ್ಬರು ಈ ವಿಷಯದ ವಿವೇಚನೆಗಾಗಿ ಸಭಿಕರನ್ನು ಎಚ್ಚರಿಸಿರುವರು. ಇಷ್ಟೆಲ್ಲ ನಡೆದಿರುವದು ನಿಮಗೆ ಗೊತ್ತಿರಲಿಕ್ಕಿಲ್ಲವೋ? ಹೋಗಲಿ. ಸಭೆ ನಿಮ್ಮದು ಸ್ವಾಗತ ಸಂಘಾಧ್ಯಕ್ಷರೂ, ಉಪಾಧ್ಯಕ್ಷರೂ ನೀವೆ, ಭಾಷಣಕಾರರೂ ನೀವೇ, ಪ್ರಿಂಟರರೂ ನೀವೇ ಅಂದಮೇಲೆ ಕೇಳುವದೇನು? ನಿಮ್ಮ ವಾಕ್ಯವೇ ರಾಮವಾಕ್ಯ. ಲಿಂಗಾಯತರು ಭಕ್ತಿಪುರಸ್ಸರವಾಗಿ ದೇವರ ಗುಡಿಯಲ್ಲಿ ಹೊಕ್ಕಕೂಡಲೇ ದೇವರು ಅಪವಿತ್ರವಾಯಿತೆನ್ನುವಷ್ಟು ನಿಮ್ಮ ಸನಾತನ ಧರ್ಮವು ತೇಜೋಹೀನವಾಗಿರುವದೋ? ಅಂಥಾ ದೇವರನ್ನು ಈ ಬ್ರಾಹ್ಮಣನಾಮಧೇಯರು 380 ರೂಪಾಯಿ ಖರ್ಚುಮಾಡಿ ಪಾವನ ಮಾಡಿದರೋ? ಇದೇ ಪರಿಷದದಲ್ಲಿ ನಿಮ್ಮ ಗುರುಗಳಾದ ಶ್ರೀ ಶಂಕರರು ಸನಾತನ ಧರ್ಮದ ವ್ಯಾಖ್ಯಾನ ಮಾಡಿರುವದನ್ನು ನೋಡಿರಿ. ಇವರು ಸನಾತನಧರ್ಮಿಗಳೋ ಅಥವಾ ಸೈತಾನ ಪಂಥಿಗಳೋ ಇಂಥಾ ಮಹತ್ವ ವಿಷಯವು ಇಡೀ ಕರ್ನಾಟಕದಲ್ಲಿ ದಗದಗ ಉರಿಯುತ್ತಿದ್ದು ನಿಮಗೆ ಹ್ಯಾಗೆ ತಿಳಿಯಲಿಲ್ಲ? ಇಷ್ಟೆಲ್ಲ ವಿಷಯಗಳನ್ನೊಳಕೊಂಡಿರುವ ಮಹತ್ವದ ಪ್ರಶ್ನೆಗೆ ಎಷ್ಟು ಸುಲಭವಾಗಿ ಒಂದೇ ವಾಕ್ಯದಲ್ಲಿ ಉತ್ತರವನ್ನು ಮುಗಿಸಿರುವಿರಿ. ಇನ್ನು "ಸ್ವರಾಜ್ಯಕ್ಕರೆ ಅದು ಬ್ರಾಹ್ಮಣರದಾಗದೆ ಸರ್ವರದೂ ಅಂತಾ ಜನರಿಗೆ ತಿಳಿವದು" ವಗೈರೆ ಬೋಧಾಮೃತ ಸುರಿಸಿರುವಿರಿ. ನೀವು ತಿಳಿಸಿ ಹೇಳುವದು ಬೇಡ. ನೀವು ತಿಳಿವದಕ್ಕಿಂತಲೂ ಮೊದಲೇ ಅದು ಖಂಡಿತ ಬ್ರಾಹ್ಮಣರದಾಗುವದೆಂದು ದೃಢವಾಗಿ ತಿಳಕೊಂಡಿದ್ದೇವೆ. ಅದರ ಸಮುವೇದನ ಮಾಡಿ ಸ್ಪಷ್ಟೀಕರಿಸುವದು ಬೇಡ, ಹಿಂದುತಿಳಿದವರೇನೂ ಭಂಗೀತಿನ್ನುತಿರುವದಿಲ್ಲ. ಅವರೂ ಎಚ್ಚರಾಗಿರುವರು. "ಸಾಂಗಿಕ ಏಕೀಕರಣ ವಿಷಯವೇನೂ ವಿಶೇಷ ಕಷ್ಟವಿಲ್ಲ" ಯಂತಾ ಬರೆದಿರುವಿರಿ. ಇದು ಇಷ್ಟು ಸುಲಭವಾಗಿದ್ದರೆ ಇಷ್ಟರಲ್ಲಿ ಮಾಡಿಕೊಂಡು ಸ್ವರಾಜ್ಯ ಸಂಪಾದಿಸಬಹುದಾಗಿತ್ತು. ಈ ವಿಷಯವೇ ರಾಷ್ಟ್ರದ ಮುಖ್ಯಸಾಧನವಾಗಿದ್ದು ಬ್ರಾಹ್ಮಣನಾಮಧೇಯವುಳ್ಳವರೆಲ್ಲರೂ ಸಂಪೂರ್ಣ ಸ್ವಾರ್ಥತ್ಯಾಗಿಗಳಾಗಿ ಮೂಲಿಗೆ ಕೂಡ್ರದ ಹೊರತು ಇಂಥಾ ಏಕೀಕರಣಕ್ಕೊಂದಾದರೂ ಆಶೆಯುಂಟೋ?

ನಿಷ್ಕಾರಣವಾಗಿ ಬ್ಯುರಾಕ್ರಸಿಯು ಬ್ರಾಹ್ಮಣ ಬ್ರಾಹ್ಮಣೇತರರನ್ನು ಎಬ್ಬಿಸಿರುವ ಬಗ್ಗೆ ಅದನ್ನು ಹಳಿಯುತ್ತೀರಿ. ಬ್ಯುರಾಕ್ರಸಿಯು ಯಾರನ್ನು ಎಬ್ಬಿಸಿಲ್ಲಾ. ಈ ಬ್ರಾಹ್ಮಣರೇ ಸರ್ವಕಲಹದ ಮೂಲಕಾರಣರು. ಇವರೇ ಹಿಂದುಸ್ಥಾನದ ಅವನತಿಗೆ ಮೂಲರು. ವಿಜಯನಗರದ ರಾಜ್ಯಾರಂಭದಿಂದೀಚೆಗೆ ಸರ್ವತ್ರ ಇವರು ಮಾರಿಯೋಪಾದಿ ವ್ಯಾಪಿಸಿ ಸರ್ವರನ್ನು ನಾಶಮಾಡಿ ಪರಾವಲಂಬಿಗಳನ್ನಾಗಮಾಡಿ ಈಗ ತಾವೂ ನಾಶ ದೇಶವೂ ನಾಶವಾಗುವ ಸ್ಥಿತಿ ತಂದುಕೊಂಡಿರುವದು ಯಾರಿಗೆಗೊತ್ತಿಲ್ಲ? ಕಾರಣ ರಾಷ್ಟ್ರೋನ್ನತಿ ಬಯಸುವ ಮಹಾತ್ಮಾಜಿಯರೇ ಮೊದಲಾದವರು ಈ ಡೊಂಕಬ್ರಾಹ್ಮಣ ನಾಮಧೇಯವನ್ನು ತಿದ್ದಿದರೆ ಸರ್ವವೂ ಸಿದ್ಧಿಸುವದು.

ಶ್ರೀ ಶಂಕರಾಚಾರ್ಯರು ತಮ್ಮ ಉಪನ್ಯಾಸದಲ್ಲಿ ಹೇಳಿರುವಂತೆ (ಸ್ವಧರ್ಮೇ ನಿಧನಃ ಶ್ರೇಯಃ) ನಡೆಯದೆ ಧರ್ಮದ ವಿರುದ್ಧ ನಡೆದು ಗುಲಾಮಗಿರಿ ಸೇವಕಾವೃತ್ತಿಯಲ್ಲಿ ಸೇರಿ ಈಗ ಐದಾರುನೂರು ವರ್ಷಗಳವರೆಗೆ ಇವರು ಮಾಡಿರುವ ಹಾವಳಿಯೇ ಸಾಕು. ಈ ಬ್ರಾಹ್ಮಣೇಯರೆಂಬ ಬ್ರಹ್ಮಪಿಶಾಚವು ಆಗಾಗ್ಗೆ ಸರ್ವತ್ರಪ್ರಸರಿಸಿ ಕೋರಿಯೂಳದಂತೆ ದೇಶೋನ್ನತಿಯನ್ನು ಕೊರಿಯುತ್ತಿರುವದು. ಇನ್ನು ಸಹನಮಾಡಲು ಸಾಧ್ಯವಿಲ್ಲದಾಗಿದೆ.

ಒಬ್ಬ ಹಿತಚಿಂತಕ.

ಬ್ರಾಹ್ಮಣೇ ಕೌಟಿಲ್ಯ.

ಲೇಖಕ, ಸ್ವಾಮಿ ವಿರೂಪಾಕ್ಷ ವಡೆಯರ್ ಪ್ರೊಫೇಸರ್, ಸಂಸ್ಕೃತ ಕಾಲೇಜ, ಇಂದೋರ್.

ಈಶ್ವರ ನಿಯಂತ್ರಿತವಾದೀ ಸೃಷ್ಟಿಯಲ್ಲಿ ಪರರಿಗೆ ಅಹಿತವಾಗದಂತೆ ಉತ್ತರೋತ್ತರ ಉನ್ನತಿಯನ್ನಪೇಕ್ಷೆಮಾಡುವದು ಮನುಷ್ಯಧರ್ಮವಾಗಿದ್ದು ಇಂಥಾ ಉನ್ನತಿಯನ್ನು ವಿಘಾತಮಾಡಲುದ್ದಿಶ್ಯ ಎಷ್ಟೋ ಕುಹಕಪ್ರಾಣಿಗಳು ಪ್ರಯತ್ನಪಡುತ್ತಿರುವದು ಪೂರ್ವೇತಿಹಾಸದಿಂದಲೂ ಹಾಗೂ ಈಗಿನ ಪ್ರತ್ಯಕ್ಷ ಕೃತಿಯಿಂದಲೂ ಕಂಡುಬರುವದು.

ಆದರೆ ಸೃಷ್ಟಿಯು ಯಾವಾಗಲೂ ಕಾಲಗತಿಯಿಂದ ಪ್ರಗತಿಮಯವಾಗಿದ್ದು ಆ ಪ್ರಗತಿಯನ್ನು ಪ್ರತಿಬಂಧಿಸಲು ಯಾವ ಸಮಾಜದಿಂದಲೂ ಅಥವಾ ಯಾವ ವ್ಯಕ್ತಿಯಿಂದಲೂ, ಯಾವ ರಾಜಕೀಯ ಶಾಸನದಿಂದಲೂ ಸಾಧ್ಯವಿಲ್ಲದಿದ್ದು ಆಪ್ರಗತಿಗನುಸಾರವಾಗಿಯೇ ಎಲ್ಲಾ ಸಮಾಜಗಳಲ್ಲಿ ತಮ್ಮ ತಮ್ಮ ತಿದ್ದುಪಾಟುಗಳನ್ನು ಮಾಡುತ್ತಾ ಆಪ್ರಗತಿಯನ್ನೇ ಹಿಂಬಾಲಿಸುತ್ತ ಹೋಗಬೇಕಾಗಿರುವದು. ಇದರಂತೆ ಸೃಷ್ಟಿಕ್ರಮದ ನೈಸರ್ಗಿಕ ಗುಣವಿದ್ದು ಇದಕ್ಕೆ ಅಡ್ಡಿಮಾಡುವ ಪ್ರಾಣಿಗಳೇ ಮೂರ್ಖರೆನಿಸಿಕೊಳ್ಳುವರು, ಆದ್ದರಿಂದ ವಿಘಾತಕ್ಕೆ ಮನಸ್ಸುಕೊಡದೇ ಪ್ರಗತಿಗನುಕೂಲಿಗಳಾಗಿ ವರ್ತಿಸುವರೆಂದು ನಂಬುವೆನು.

ಇನ್ನು ನಮ್ಮ ಪುರಾತನರ ಪರಿಸ್ಥಿತಿಯನ್ನು ಹಾಗೂ ಸುಖದುಃಖಮಯವಾದ ಅವರ ವಿಚಾರಗಳನ್ನು ಗೊತ್ತುಹಿಡಿಯಲಿಕ್ಕೆ ಮೂಲಸಾಧನಗಳೆಂದರೆ ವೇದಗಳೇ ಆಗಿದ್ದು ಅವುಗಳಲ್ಲಿ ಐಹಿಕಾಮುಷ್ಮಿಕ ಸುಖಸಂಪಾದನೆಯ ಚಾರವು ಬಹು ಸೊಗಸಾಗಿ ವಿವರಿಸಲ್ಪಟ್ಟಿರುವದು. ಇದಲ್ಲದೆ ಮನುಷ್ಯ ಸಮಾಜರಚನಾಪದ್ಧತಿಯೂ ಬಹುವಿಶದವಾಗಿ ತೋರಿಸಲ್ಪಟ್ಟಿದ್ದು ವಸ್ತುತಃ ವಿಚಾರಮಾಡಿದರೆ ಆ ವೇದಗಳಲ್ಲಿ ಎಲ್ಲಿಯೂ ಯಾವ ರೀತಿಯಿಂದಲೂ ಜಾತಿಭೇದವು ತೋರಿಸಲ್ಪಟ್ಟಿಲ್ಲ. ಆದರೆ ಕೇವಲ ಮಾನವ ಪ್ರಾಣಿಗಳು ಪರಸ್ಪರ ಪ್ರೇಮ ಹಾಗೂ ಐಕ್ಯದಿಂದಿರಬೇಕೆಂದು ಬೋಧಿಸಿರುವದು. ಹ್ಯಾಗಂದರೆ,

"ಅಸುನೀತೆಪುನರಸ್ಮಾಸುಚಕ್ಷುಃ ಪುನಃ ಪ್ರಾಣಮಿಹನೋಧೇಹಿಭೋಗಂ|
ಜ್ಯೋಕ್‌ಪಶ್ಯೇಮಸೂರ್ಯಮುಚ್ಚರಂತ ಮನುಮತೇಮೃಳಯಾನಃ ಸ್ವಸ್ತಿ||

(ಋಗ್ವೇದ, ೮—೧—೧೩) ಸುಮಿತ್ರಿಯಾನ ಆಪಓಷಧಯಃಸಂತು|| (ಯಜು—೬—೨೨) ಸಾನ ಆಯುಷ್ಮತೀಂ ಪ್ರಜಾಂ ರಾಯಸ್ಪೋಷೇಣ ಸಂಸೃಜ || (ಅಥರ್ವ ೩—೧೦—೩) ಮನೋವಧೀಃ ಪಿತರಂ ಮೋತ ಮಾತರಂ ಮಾನಃ ಪ್ರಿಯಾಸ್ತನ್ವೋರುದ್ರರೀರಿಷಃ (ಯಜುರ್ವೇದ) ಮಾನಃ ಸಮಾನೀವ ಆಕೂತಿಃ ಸಮಾನಾಹೃದಯಾನಿವಃ || ಸಮಾನಮಸ್ತುವೋಮನೋಯಥಾವಃಸುಸಹಾಸತಿ || ಋಗ್ವೇದ (೮—೪—೪೯) ಹೇ ಈಶ್ವರನೆ ನಮ್ಮಲ್ಲಿ ಪ್ರಾಣನೇತ್ರಾದೀಂದ್ರಿಯಗಳನ್ನು ನಿಯತವಾಗಿದ್ದು ನಮ್ಮ ಭೋಗೈಶ್ವರ್ಯಗಳಿಗೆ ಕೊರತೆಬಾರದಂತೆ ನಮ್ಮನ್ನು ಸುಖಿಗಳನ್ನಾಗಿ ಮಾಡಿ ಕಾಪಾಡೆಂಬದಾಗಿಯೂ, ನಾವೂ ಹಾಗೂ ನಮ್ಮ ಪ್ರಜೆಗಳು ದೀರ್ಘಾಯುಷ್ಯರನ್ನಾಗಿಯೂ ಹಾಗೂ ಧನಧಾನ್ಯಾದಿಗಳಿಂದ ಯುಕ್ತರನ್ನು ಮಾಡೆಂತಲೂ, ಒಂದೇ ಭೂಮಿಯಲ್ಲಿ ಜನಿಸಿದವರಾದ ನಮ್ಮಗಳ ವಿಚಾರ, ಆಚಾರ, ಮನಸ್ಸುಗಳು ಭಿನ್ನವಾಗದಂತೆ ಮಾಡಿ ಏಕೀಭಾವದಿಂದ ಸಂರಕ್ಷಿಸೆಂಬದಾಗಿ ಸರ್ವತ್ರಸಮಾನತ್ವವನ್ನು ಬೋಧಿಸುವ ವೇದಾಜ್ಞೆಯನ್ನುಲ್ಲಂಘಿಸಿ ಕೆಲವರು ವಿಶಿಷ್ಟಜಾತಿತ್ವವನ್ನು ಕಲ್ಪಿಸಿಕೊಂಡು "ವರ್ಣಾನಾಂ ಬ್ರಾಹ್ಮಣೋಗುರುಃ" ಎಂಬುವದನ್ನು ತಮ್ಮ ಪಿತೃವಾಕ್ಯವನ್ನಾಗಿಟ್ಟುಕೊಂಡು ತಮ್ಮಿಂದಾಗುವ ಪರನಿಂದೆ, ಪರಪೀಡಾದಿಗಳನ್ನು ಸ್ವಪ್ನದಲ್ಲಿಯೂ ಲಕ್ಷಿಸದೇ ಮದಾಂಧರಾಗಿ ವರ್ತಿಸಿ ಭರತಭೂಮಿಯನ್ನು ದುರ್ದಶೆಗೆ ಈಡುಮಾಡಿದರು. ಆದರೆ ಇದ್ಯಾವದೂ ಇವರ ಲಕ್ಷಕ್ಕೆ ಬರದೇ ತಾವೂ ಬರಿಗೈಯ್ಯವರಾದರಲ್ಲದೇ ತಮ್ಮೊಡನೆ ಇದ್ದ ಸ್ವದೇಶಬಾಂಧವರನ್ನೂ ಬರಿಗೈಯ್ಯವರನ್ನಾಗಿ ಮಾಡಿಬಿಟ್ಟರು. ಪರರನ್ನು ದಾಸರನ್ನಾಗಿ ಮಾಡಿಕೊಳ್ಳಲಿಕ್ಕೆ ಹೋದವರಾದ ತಾವೇ ಮತ್ತೊಬ್ಬರ ದಾಸರಾಗುವ ಪ್ರಸಂಗಬಂದೊದಗಲು ಏನಾದರು ಮಾಡಿ ಯಾರನ್ನಾದರೂ ಬಲಿಕೊಟ್ಟು ತಮ್ಮ ಕಾರ್ಯಸಾಧಿಸಿಕೊಳ್ಳಬೇಕೆಂಬ ಸ್ವಾರ್ಥೈಕಸಾಧನೆಯ ಕುಟಿಲಕುಯುಕ್ತಿಯಿಂದ ಮೇಲೆ ಮೇಲೆ ಸವಿಮಾತುಗಳನ್ನಾಡಿ ರಾಷ್ಟ್ರೋನ್ನತಿಕಾರ್ಯಮಾಡುತ್ತೇವೆಂದು ಹೇಳುತ್ತಾ ನಡದಿರುವರು. ಆದರೆ ಮುಂದಿನ ಈ ಲೇಖದಿಂದ ಇವರ ನಿಜವಾದ ರಾಷ್ಟ್ರಹಿತಕಾರ್ಯವು ಎಷ್ಟರಮಟ್ಟಿಗಿರುವದೆಂಬುವದನ್ನು ವಾಚಕರೇ ಊಹಿಸಲಿ.

ಈ ಬ್ರಾಹ್ಮಣಂಮನ್ಯರು "ವಿವಾದ ರತ್ನಾಕರ, ವಿವಾದಾರ್ಣವ ಸೇತು, ಪ್ರಾಯಶ್ಚಿತ್ತೇಂದು ಶೇಖರ (ಸಂಸ್ಕೃತ ಪುಸ್ತಕಗಳು) ಗೀತಾರಹಸ್ಯ, ಮಾಹೇಶ್ವರದರ್ಶನಸಾರ, ಜೈನದರ್ಶನಸಾರ, ಆರ್ಯಾಂಚಾಸಣಾಚಾ ಪ್ರಾಚೀನ ಅರ್ವಾಚೀನ ಇತಿಹಾಸ, ಹಿಂದುಸ್ಥಾನಾಚಾ ಅರ್ವಾಚೀನ ಇತಿಹಾಸ, (ಮರಾಠಿ ಪುಸ್ತಕಗಳು) ಇವೇ ಮೊದಲಾದ ಗ್ರಂಥಗಳಲ್ಲಿ ಬರದಿರುವದನ್ನು ವಿವೇಚಿಸೋಣ.

ವಿವಾದ ರತ್ನಾಕರವೆಂಬ ಗ್ರಂಥದಲ್ಲಿ ಲಿಂಗಾಯತರು ಶೂದ್ರರಾದ್ದರಿಂದ ಅವರ ಜಂಗಮರು ಅಂಗೀಕರಿಸುವ ಸನ್ಯಾಸಾಶ್ರಮವು ಶಾಸ್ತ್ರವಿರುದ್ಧವಿದ್ದು ಅವರಿಗೆ ಸನ್ಯಾಸದ ಅಧಿಕಾರವಿಲ್ಲವೆಂತಲೂ, ಆದರೂ ಅಪ್ರಮಾಣಗಳಾದ ಶೈವಾಗಮಗಳಲ್ಲಿ ಹೇಳಿರುವದೆಂದು ಆ ಜಂಗಮರು ಅಂಗೀಕರಿಸುತ್ತಿರುವರೆಂತಲೂ ಮನಸೋಕ್ತ ಬರದಿರುವನು. ಇದನ್ನೇ "ವಿವಾದಾರ್ಣವಸೇತು" ಎಂಬ ಗ್ರಂಥಕಾರನು ಆಧಾರವನ್ನಾಗಿಟ್ಟುಕೊಂಡು "ಪ್ರವ್ರಜ್ಯಾವಸಿತಂ ಶೂದ್ರಂ ಜಪಹೋಮಪರಂ ತಥಾ | ವಧೇನ ಶಾಸಯೇತ್ ಪಾಪಂದಾಪ್ಯೋವಾದ್ವಿಗುಣಂ ದಮಂ || (ಪ್ರವ್ರಜ್ಯಾ + ಸನ್ಯಾಸಃ) "ನಚಶ್ರುತಿಸ್ಮೃತಿಭ್ಯಾಂಶೂದ್ರಸ್ಯ ಪ್ರವ್ರಜ್ಯಾಯಾ ಅವಿಧಾನಾತ್‌ತಸ್ಯ ಪ್ರವ್ರಜ್ಯಾವಸಿತತ್ವಮುನ್ಮತ್ತಪ್ರಲಪಿತಂಸ್ಯಾದಿತಿವಾಚ್ಯಂ | ಶೂದ್ರಸ್ಯಪ್ರವ್ರಜ್ಯಾಯಾಃ ಶೈವಾಗಮೋಕ್ತತ್ವೇನ ತಸ್ಯತದ್ದುಷ್ಟತಾಯಾ ಅಪಿಸಂಭವಾತ್ ಚಂಡೇಶ್ವರೇಣ ವಿವಾದರತ್ನಾಕರೆಯದ್ಯಪಿ ಇತ್ಯಾದಿನಾಪೂರ್ವಪಕ್ಷಯಿತ್ವಾತಥಾಪಿ ಇತ್ಯಾದಿನಾಏವಮೇವ ಸಮಾಹಿತಂ || (ವಿವಾದಾರ್ಣವಸೇತು, ಅ. ೧೯, ೨೪೮ ಪಾನು. ಇತ್ಯಾದಿ ವಾಕ್ಯಗಳಲ್ಲಿ ಲಿಂಗಾಯತ ಮೊದಲಾದವರು ಶೂದ್ರಜಾತಿಯವರಿದ್ದು ಇವರು ಸನ್ಯಾಸವನ್ನಂಗೀಕರಿಸಿದರೆ ಅಥವಾ ಜಪ, ತಪ, ಹೋಮಾದ್ಯನುಷ್ಠಾನಪರರಾದರೆ ಅವರಿಗೆ ಮರಣದಂಡನೆಯನ್ನು ವಿಧಿಸುವದಲ್ಲದೇ ಎಲ್ಲಕ್ಕಿಂತಲೂ ಹೆಚ್ಚಿನ ದ್ವಿಗುಣದಂಡವನ್ನು ದಂಡಿಸಬೇಕೆಂದು ಹೇಳಿರುವನು. ನೋಡಿದಿರಾ. ಸನ್ಯಾಸ ಜಪತಪ ಈಶ್ವರಧ್ಯಾನಾದಿಗಳೂ ಈ ಬ್ರಾಹ್ಮಣಂಮನ್ಯರಾದವರಿಗೆ ಗುತ್ತಿಗೆಯಾಗಿರುವವಂತೆ. ಇಂಥಾ ನೀಚಾತ್ಮರಿಂದ ಲೋಕಕಲ್ಯಾಣವಾಗುವದಂತೆ.

ಇನ್ನು "ಚಂಡಾಲಸಂತ್ಯತ್ರಪಾಖಂಡಾ ಲಿಂಗಾಲಿಂಗಿತವಕ್ಷಸಃ" ಎಂಬಿವೇ ಮೊದಲಾದ ವಿಶ್ವಗುಣಾದರ್ಶಚಂಪುವಿನ ಶ್ಲೋಕಗಳಲ್ಲಿ ಲಿಂಗಾಯತರು ಚಂಡಾಲರೆಂತಲೂ, ಪಾಖಂಡರೆಂತಲೂ, ಶೂದ್ರರೆಂತಲೂ ಬರದಿದ್ದು, ಈ ಬಗ್ಗೆ ನಾವು ಹಿಂದಕ್ಕೆ "ಬ್ರಾಹ್ಮಣೇವೈಚಿತ್ರ್ಯ" ವೆಂಬ ಲೇಖದಲ್ಲಿ ಇದನ್ನು ತುಚ್ಛೀಕರಿಸಿದ್ದು ಇದರಂತೆ ಲಿಂಗಾಯತರು ಚಂಡಾಲರೆಂಬ ವಿಚಾರದದಿಂದ "ಪ್ರಾಯಶ್ಚಿತ್ತೇಂದು ಶೇಖರ," ವೆಂಬ ಗ್ರಂಥಕಾರನಾದ ನಾಗೋಜಿಭಟ್ಟನೆಂಬುವನು "ಚಾಂಡಾಲಾದಿ ಪುಲ್ಕಸಮ್ಲೇಚ್ಛಭಿಲ್ಲಪಾರಸೀಕ ಮಹಾಪಾತಕಿ ಬೌದ್ಧಶೈವ ಪಾಶುಪತಲೋಕಾಯತಿಕ ನಾಸ್ತಿಕೋನ್ಮತ್ತಾಂತ್ಯಜನಾಪಿತಾದೀನಾಂ ಸ್ಪರ್ಶೇಸಚೈಲಂ ಸ್ನಾನಂ | (ಅತ್ರಶೈವ ಪಾಶುಪತೌವೇದವಿರುದ್ಧ ತದಾಗಮೋಕ್ತಾನುಷ್ಠಾತಾರೌ) ಏತೇಷಾಂ ಕಾಮತಃ ಸ್ಪರ್ಶೇ ಅಗ್ನಿಸ್ಪರ್ಶನಂ ಘೃತಪ್ರಾಶನಮಾದಿಕಂ|| (ಪ್ರಾಯಶ್ಚಿತ್ತೇಂದು ಶೇಖರ ಪಾನು ೧೭) ಚಂಡಾಲರೇ ಆದಿಯಾಗಿ ಮುಸಲ್ಮಾನರು, ಭಿಲ್ಲರು, ಪಾಖಂಡ, ಕುರುಬ, ಅಗಸ, ತಳವಾರ, ಬೌದ್ಧ, ಶೈವ, ಪಾಶುಪತ, ಕ್ರಿರಿಕ, ಮೊದಲಾದವರನ್ನು ಬುದ್ಧಿಪೂರ್ವಕವಲ್ಲದೇ ತಪ್ಪಿ ಅಕಸ್ಮಾತ್ ಮುಟ್ಟದಲ್ಲಿ ಉಟ್ಟವಸ್ತ್ರ ಸಹಿತ ಸ್ನಾನಮಾಡಬೇಕೆಂತಲೂ, ಇನ್ನೂ ಬುದ್ಧಿಪೂರ್ವಕ ಮುಟ್ಟದಲ್ಲಿ ಸಚೇಲಸ್ನಾನ, ಅಗ್ನಿಸ್ಪರ್ಶ, ಘೃತಪ್ರಾಶನಾದಿಗಳು ಹೆಚ್ಚಿಗೆ ಮಾಡಬೇಕೆಂದು ಹೇಳಲ್ಪಟ್ಟಿರುವವು.

ಇನ್ನು ಮುಸಲ್ಮಾನರ ವಿಷಯಕ್ಕಿಂತೂ ವಿಶ್ವಗುಣಾದರ್ಶಚಂಪೂಗ್ರಂಥಕಾರನು ಸಹಿಸಲಾರದಂತೆ ನಿಂದಿಸಿರುವನು, ಹ್ಯಾಗೆಂದರೆ—"ಉಚ್ಛಿಷ್ಟಾನ್ನಬಭೇತಿಯಾತಿಯವನೈರುಚ್ಛಾ ವಚ್ಚೈಃಸಂಗತಿಂ || ಗತ್ವಾಮ್ಲೇಚ್ಛಮುಖಾಶುಚೀನ್‌ಸ್ಪಶತಿಚಸ್ಪೃಷ್ಟ್ವಾಪಿನಸ್ನಾತ್ಯಹೋ | ನಸ್ನಾತೋಪ್ಯಥಭುಂಕ್ತ ಏಷಚಪಲೋಭುಕ್ತ್ವಾಪಿನವ್ರೀಡತಿ || ನೀಚೈರ್ದುರ್ಯವನೈಃಶುನೀಭಿರಪಿವಾಃ ಶಂಕಮಾಲೋಕಿತಂ| ಭುಂಕ್ತೆಪಂಕ್ತಿವಿದೂಷಕೈಃಸಹತೇಯತ್ವಾದನುಸೃತ್ಯನಿರ್ದಯತಯಾತುಷ್ಕಾನ್‌ತುರುಷ್ಕಾಧಿಪಾನ್ ||

(ವಿಶ್ವಗುಣಾದರ್ಶಚಂಪುವಿನ ಪಾನು ೫೫ ೬೦—೬೧) ನಿರ್ದಯತಯಾದಯಾರಾಹಿತ್ಯೇನ ತುಷ್ಕಾನ್ ದಯಾರಹಿತಾನ್, ಕೇವಲಂ ಸ್ವಾರ್ಥಸಾಧನ ತತ್ಪರಾನ್ ತುರುಷ್ಕಾಧಿಪಾನ್ ತುರುಷ್ಕ (ಮಹಾರಾಷ್ಟ್ರ ಭಾಷಯೂ ತುರ್ಕ) ದೇಶೀಯ ಯವನಭೂಪತೀನ್ ಅನುಸೃತ್ಯ ಸೇವಾಧರ್ಮೇಣಾನುಗಮ್ಯ ಇತ್ಯಾದಿ ಟೀಕಾಕಾರಃ

ಬ್ರಾಹ್ಮಣರು ಮುಸಲ್ಮಾನರೊಡನೆ ಊಚನೀಚಭಾವವನ್ನು ಲಕ್ಷಕ್ಕೆ ತಂದು ದರ್ಶನ, ಸ್ಪರ್ಶನ, ಸಂಭಾಷಣೆ ಮೊದಲಾದದ್ದನ್ನು ಮಾಡಬಾರದೆಂತಲೂ, ಅವರನ್ನು ಮುಟ್ಟದರೆ ಸ್ನಾನಮಾಡಬೇಕೆಂತಲೂ, ಸ್ನಾನಮಾಡದೇ ಇದ್ದವರು ನಿರ್ಲಜ್ಜೆಯುಳ್ಳವರೆಂತಲೂ, ಮುಸಲ್ಮಾನಹಾಗೂ ನಾಯಿಯಿಂದ ನೋಡಲ್ಪಟ್ಟ ಅನ್ನವನ್ನು ಉಣ್ಣಬಾರದೆಂತಲೂ ತುರ್ಕಸ್ಥಾನದವರಾದವರು ಮಹಾನಿರ್ದಯರಾದ್ದರಿಂದ ಅವರಲ್ಲಿ ನೌಕರಿಮಾಡುವದು ಬಹು ನಿಂದ್ಯಾವಾದದ್ದೆಂತಲೂ ಅನೇಕ ರೀತಿ ಹೀಯಾಳಿಸಿರುವನು.

ಇನ್ನು ರಾ|| ಬಾಳಗಂಗಾಧರ ತಿಳಕರೆಂಬುವರು ತಮ್ಮ ಗೀತಾರಹಸ್ಯದಲ್ಲಿ ಬುದ್ಧ, ಜೈನ, ಲಿಂಗಾಯತ, ಮಹಾಳ ವಿಷಯವಾಗಿ ವಿವೇಚನ ಮಾಡಿರುವದನ್ನು ನೋಡಿದರೆ ಬ್ರಾಹ್ಮಣಂ ಮನ್ಯರಾದಿವರು "ದ್ವಿಜ" ನಾಮಕ್ಕರ್ಹರಾಗಿರದೆ "ದ್ವಿಜಿಹ್ವ" ಎಂಬ ನಾಮಕ್ಕೆ ಸಾರ್ಥಕರಾಗಿರುವರು. ಯಾಕೆಂದರೆ ಇವರಲ್ಲಿ ಒಳಗೊಂದು ಹೊರಗೊಂದು ಕೃತಿಯುದ್ದು ಸರಳತನವೆಂಬುವದಿಲ್ಲೇ ಇಲ್ಲ.

ಗೀತಾರಹಸ್ಯದ ವಿಷಯಪ್ರವೇಶದ ನಾಲ್ಕನೇ ಪಾನಿನಲ್ಲಿ "ಜೈನ, ಜಂಗಮ (ಲಿಂಗಾಯತ) ಸೋಫೀ (ಮುಸಲ್ಮಾನ ಸಾಧು) ಇವರುಗಳ ವರ್ಣನೆಯು ಕಪಿಲಗೀತೆಯು ೪/೭ ದರಲ್ಲಿ ಬಂದಿರುವದರಿಂದ ಈ ಕಪಿಲಗೀತೆಯು ಪದ್ಮಪುರಾಣದೊಳಗಿಂದಲ್ಲವಂತೆ, ಯಾಕಂದರೆ ಮೇಲೆ ತೋರಿಸಿದ ಜೈನ, ಲಿಂಗಾಯತಾದಿ ಧರ್ಮಗಳು ಅರ್ವಾಚೀನವಿದ್ದು ಇವುಗಳ ವರ್ಣನೆಯು ಅದರಲ್ಲಿ ಬಂದಿರುವದರಿಂದ ಆ ಕಪಿಲಗೀತೆಯು ಅರ್ವಾಚೀನವಿದ್ದು ಇವರ ಪದ್ಮಪುರಾಣವೆಂಬ ಪೋತಾಂಡಗ್ರಂಥವು ಈ ಧರ್ಮಗಳಿಗಿಂತ ಅತಿ ಪ್ರಾಚೀನವಾದದ್ದಂತೆ ಇದಲ್ಲದೇ ಭಗವಂತನಾದ ಬುದ್ಧದೇವನು ಹಂದಿಮಾಂಸವನ್ನು ತಿಂದು ಅದನ್ನು ಕರಗಿಸಲು ಸಾಮರ್ಥ್ಯವಿಲ್ಲದೇ ಸತ್ತನೆಂದು ಬರದಿರುವರು. ಅಯ್ಯೋ! ಯಾವ ಬುದ್ಧದೇವನು ಲೋಕಕಲ್ಯಾಣಾರ್ಥವಾಗಿ ರಾಜಾಧಿರಾಜತ್ವವನ್ನು ಬಿಟ್ಟುಭಿಕ್ಷಾಂದೇಹಿಯಾಗಿ ಕೇವಲ ವೈರಾಗ್ಯಮೂರ್ತಿಯೆನಿಸಿ ಸರ್ವತ್ರ ಆತ್ಮಭಾವವನ್ನು ತಾಳಿ ಪ್ರಾಣಿಗಳನ್ನು ಉದ್ಧರಿಸಿದನೋ ಮತ್ತು ಇವತ್ತಿಗೂ ಯಾವಾತನನ್ನುಳಿಸಿ ಕೋಟಿ ಜನರು ಪರಮದೈವವೆಂದು ಭಾವಿಸಿ ಮನ್ನಿಸುವರೋ ಅಂಥಾ ಪರಮದಯಾ ಮೂರ್ತಿಯಾದ ಬುದ್ಧನು ಲೋಕಮಾನ್ಯನೋ? ಅಥವಾ ಕೆಲವು ಬಡಜೀಜನರಿಂದ ಸ್ತುತಿಗೊಳ್ಳಲ್ಪಟ್ಟ ತಿಳಕನು ಲೋಕಮಾನ್ಯನಾದನೋ ಎಂಬುವದನ್ನು ವಾಚಕರೇ ಊಹಿಸಲಿ.

ಇನ್ನು ವಿಷ್ಣುವಾಮನ ಬಾವಟಿ ಎಂಬ ಮಾಹೇಶ್ವರ ದರ್ಶನ ಗ್ರಂಥಕಾರನು "ಯಾವ ಜಾತಿಯಲ್ಲಿ ವಿದ್ವಾನ ಜನರ ಭರ್ತಿಯಿಲ್ಲವೋ ಅದು ಧರ್ಮವೇ ಎನಿಸಲಾರದೆಂತಲೂ, ಆ ಧರ್ಮವು ಕೇವಲ ಅಜ್ಞಜನರಲ್ಲಿ ಗತಾನುಗತಿಕತ್ವದಿಂದಿರುವದೆಂತಲೂ, ಆ ಧರ್ಮವು ಇದ್ದರೂ ಇಲ್ಲದಂತೆ ತಿಳಿಯಬೇಕೆಂತಲೂ, ಲಿಂಗಾಯತ ಧರ್ಮದ ಪರಿಸ್ಥಿತಿಯಾದರೂ ಇದರಂತೆಯೇ ಇದ್ದು ಇಂಥವರಿಂದಲೇ ವ್ಯಾಸನಕೋಳಿನಂಥ ಕೃತಿಗಳಾಗುವವು.

(ಸಶೇಷ.)

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪಯೋಗಿಸಿ ಕ್ಲೃಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦ ಕ್ಕೂ ೦—೧೨—೦; ಬಿಳಿಗ್ಲೇಜ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲೃಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸ ಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

೧೯೨೪ ನೆಯ ಇಸವಿ ಜೂನ್ ತಾ|| ೧ ರಿಂದ ೧೯೨೪ ನೆಯ ಇಸವಿ ಜೂನ್ ತಾ|| ೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ವೈಶಾಖ ಬಹುಳ ಚತುರ್ದಶಿಯಿಂದ ಜ್ಯೇಷ್ಠ ಶುದ್ಧ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
1	ಭಾನು	ಚತು	26-13	ಕೃತ್ತಿ	47-13	19
2	[1]ಸೋಮ	ಅಮಾ	31-15	ರೋಹಿ	53-49	20
3	[2]ಮಂಗಳ	ಪಾಡ್ಯ	36-22	ಮೃಗ	60	21
4	ಬುಧ	ಬಿದಿ	41-5	ಮೃಗ	0-23	22
5	[3]ಗುರು	ತದಿ	45-5	ಆರ್ದ್ರಾ	6-31	23
6	ಶುಕ್ರ	ಚೌತಿ	48-6	ಪುನ	11-27	24
7	ಶನಿ	ಪಂಚ	49-53	ಪುಷ್ಯ	15-31	25

(1) ಸರ್ವತ್ರಾಮಾವಾಸ್ಯ. (2) [illegible]ಗೌರೀವ್ರತಂ, ಚಕ್ರವರ್ತಿಗಳವರ ವರ್ಧಂತಿ. (3) ಕದಳೀಗೌರೀವ್ರತಂ.

ಮೈಸೂರು: ಕೈ. [illegible]ನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಸಚಕ್ರಕಾವತಾರಾ ಪಕ್ಷ್ಮಜ್ಞನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮತಲಾಲೋಲಂಸುಧೀಭೂಃ ವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕ ಲಂ | ಪ್ರೇಮುಂಚಿತ್ತ ಳೆಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಜೂನ್ ತಾರೀಖು ೮ ನೆಯ ಭಾನುವಾರ. [ಸಂಚಿಕೆ ೨೩

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.
ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲೂಯೆಂಜಾ
ಪ್ಲೇಗುಜ್ವರ

SITHARAGHAVA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಪಾಸ್ತ್ರೀಯರಿಗೂ ಕಾಲಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.
ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತ ಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.

ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
18 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!
ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುದ್ದಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—40] ಪೋ. ಬಾ. ೫೧೧, ಮದರಾಸು.

4 ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗಾಗಲೆ 4ನೆ ಮುದ್ರಣವು ಅಚ್ಚಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ನಂತೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—6] ಕೆಲ್ಲಾಪುರ, ಅರಕಲಗೂಡು ತಾಲ್ಲೋಕು, ಹಾಸನ ಡಿ||

ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹಂದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಜಗತ್ತಿನ ನಿಜವಾದ] ಆಗತ್ಯಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

☞ ೧೦೦೦ ರೂ. ಇನಾಮು. ☜

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.
ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಿಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ಕೆಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಶಪ್ತೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವಂಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಕ್ರೌಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೋಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶಣಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ಸಿವಳಬೀಜ, ಚಿತ್ರಕದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಠಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಿ ಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ. ಬೀಜಬಂಧ, ಚಿಗರಿಗೊರಸು, ಮೋಂಗಲ್ ಬೇದಾಣ, ಮೈದಾಡಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಳೇರಿಭಾತ, ಗೋಖರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ.

ಈ ಪ್ರಕಾರ ಮೇಲೆ ಕೊಟ್ಟ ಜೀನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣಾತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ಣ ಅಡ್ರೆಸ್ ಪೋಸ್ಟಾಫೀಸ್ ಸಹ ಬರೆಯಿರಿ.

[50—43] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯೂರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.
ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ ರೂ. ೧—೦—೦
ಕೇನೋಪನಿಷತ್ ಶಾಂಕರೀ ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಿಗಿ.

ಗ್ರಂಥಸಿಕ್ಕುವಸ್ಥಲ:—
ಹೊಸಮಠದ ಚನ್ನಯ್ಯನವರು ಹರಿಹರ,
24—9 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿ
[50—21] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.
ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,
(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಚಳುವು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜ್ ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜ್ ೦—೧೨—೦.

೨೦ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜ್ ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಮತ್ತು ಕಂಪನಿ,
[50—37] [illegible] ಮೈಸೂರು.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜೂನ್ ತಾ|| ೮ ನೆಯ ಭಾನುವಾರ.

AMIN-UL-MULK
MIRZA M. ISMAIL, ESQ., C.I.E.

We have great pleasure in offering our hearty congratulations to Amin-ul-Mulk Mirza M. Ismail, Esq., on his being the recipient of the distinguished title, Companion of the Order of the Indian Empire. It is a fitting recognition by His Majesty the King Emperor of his valued services to the State. Just three years ago His Highness was graciously pleased to confer on him the fitting title of Amin-ul-Mulk or Trusted of the State, and last year His Majesty bestowed on him the Honour of O.B.E. There was a time when a non-European Private Secretary to His Highness the Maharaja was viewed with some concern at some quarters. It is a matter of pride that Mr. Mirza has filled the place as worthily as any of his European predecessors, and we cannot think of any other who has discharged the very arduous duties of the Private Secretary more successfully. In few men is there such a happy combination of patience and hard work, courtesy and descipline, sympathy and judgment as in Mr. Mirza. His has been a bright career and we wish that he may live long to enjoy the unique honour recently conferred on him, to gain the increasing affections of the people and to win yet greater honours.

JUSTICE AND PURITY.

The controrersy over the settled fact of establishing a proper representation of all communities, which could supply the proper candidates, in Public Service is again taken up by our local die-hard journal *The Sampadabhyudaya* and it is lending its columns to irresponsible articles. There is the cry that reduction of the Brahmin element in service would mean the destruction of justice and purity. It is something that now there is not so much the cry of efficiency which used to be trotted up so often before; perhaps because that has fizzed. Words are never wanting for them to abuse the men responsible for giving effect to the Orders on the Miller Committee Report. We do not know how long it will take our contemporary to learn that vilification is hardly the purpose of a journal, is least likely to carry weight, and that there is a constitutional way open now to get things remedied if they are bad or wrong. Incidentally it gives an idea how far the men are prepared to go if their interests are in the slightest affected. After all, what the Government have conceded is so little to the non-Brahmin communities who though form more than 96 percent of the population are yet far from getting 50 per cent of the assured appointments, and so favourable to the small community of Brahmins. If justice and purity are not obtaining to the degree that is expected in Service it is because of the monopoly and class combination that has been existing all these years. Why talk of justice and purity then? There is no chance for either until there is a proper proportion and admixture of all communities in Service. Our contemporay suggests a committee of retired officers to scrutinize appointments, because they would be disinterested and free from communal jealosies. We are doubtful if the virtue of disinterstedness goes with age and there is any special relationship between both. There is more harm than good done by such irresponsible writings. May we hope that they will cease, and the columns of our contemporary will be employed to some better purpose.

ಶ್ರೀರಂಭಾಪುರೀಜಗದ್ಗುರುಪೀಠಾಧಿಕಾರ.

ವೀರಶೈವಮತಸ್ಥಾಪಕರುಗಳಾದ ಪಂಚಾಚಾರ್ಯರ ಪೀಠಗಳಲ್ಲಿ ಪ್ರಖ್ಯಾತವಾದ ಶ್ರೀರಂಭಾಪುರೀ (ಬಾಳೆಹೊನ್ನೂರು) ಪೀಠಾಧಿಕಾರಿಗಳಾಗಿದ್ದ ಶ್ರೀ ಪಂಚಾಕ್ಷರೀರಾಜದೇಶಿಕೇಂದ್ರ ಮಹಾಸ್ವಾಮಿಗಳು ಈಗ್ಗೆ ೨ ವರ್ಷಗಳಕೆಳಗೆ ಶಿವೈಕ್ಯರಾದುದರಿಂದ, ಬಿಡುವಾಗಿರುವ ಈ ಮಹಾಪೀಠಾಧಿಕಾರ ಸ್ಥಾನಕ್ಕೆ ವಿದ್ಯಾಕುಲಶೀಲಗುಣಸಂಪನ್ನರಾದ ವಟುವನ್ನು ಆರಿಸುವ ವಿಚಾರವಾಗಿ ಈ ಪೀಠದ ಶಿಷ್ಯರುಗಳಲ್ಲಿ ಅನೈಕಮತ್ಯವೂ, ಭಿನ್ನಾಭಿಪ್ರಾಯವೂ ಹುಟ್ಟಿ ವಾದಾನುವಾದಗಳೂ, ಲೇಖಪ್ರತಿಲೇಖಗಳೂ ವಾಚಾಮಗೋಚರವಾಗಿ ನಡೆಯುತ್ತಿರುವುದು ಈ ಸ್ಟಾರ್ ಪತ್ರಿಕಾವಾಚಕರೆಲ್ಲರಿಗೂ ವಿದಿತವಾಗಿರುವುದಷ್ಟೆ? ಈ ವಿಚಾರದಲ್ಲಿ ಉಭಯಪಕ್ಷದವರಿಂದಲೂ ಶ್ರೀಮನ್ಮಹಾರಾಜಾ ಸರ್ಕಾರದ ಮುಜರಾಯಿ ಕಮಿಷನರಿಗೂ ಈ ಶಾಖಾ ಮೇಲ್ವಿಚಾರಣಕರ್ತರಾದ ಎರಡನೆಯ ಕೌನ್ಸಿಲರಿಗೂ ದೂರು ಹೋದುದರ ಮೇಲೆ, ಉಭಯಪಕ್ಷದ ಮುಖಂಡರೂ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಚುನಾಯಿಸುವ ವಟುವನ್ನು ಪಟ್ಟಕಟ್ಟಲು ಸರ್ಕಾರದನುಮತಿಯು ಕೊಡಲ್ಪಡುವುದೆಂದು ಮು|| ಕಮಿಷನರು ಅಪ್ಪಣೆಕೊಡಿಸಿದ ಪ್ರಕಾರ ಈ ಜಗದ್ಗುರು ರೇಣುಕಾಪೀಠದ ಮುಖ್ಯಾಭಿಮಾನಶಾಲಿಗಳಾದ ಎಡೆಹಳ್ಳಿ ಮ|| ಇಂ. ಶಾಂತಪ್ಪಶೆಟ್ಟರು, ಚಿಕ್ಕಮಗಳೂರಿನ ಕಾಫಿಪ್ಲಾಂಟರ್ ಮ|| ಹಂಪ್ರೇಗೌಡರು ಮೊದಲಾಗಿ ವೀರಶೈವ ದೊಡ್ಡಮನುಷ್ಯರುಗಳು ಕಳೆದ ಮೇ ತಾ|| 28 ರಲ್ಲಿ ಬೆಂಗಳೂರಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ವಟುವನ್ನು ಆರಿಸುವ ವಿಚಾರದಲ್ಲಿ ದೀರ್ಘವಾಗಿ ಚರ್ಚಿಸಿ ಕಡೆಯಲ್ಲಿ ಒಂದೊಂದು ಪಕ್ಷದಿಂದ 12-12 ರಂತೆ 24 ಜನ ದೊಡ್ಡಮನುಷ್ಯರುಗಳನ್ನೊಳಗೊಂಡ ಒಂದು ಕಮಿಟಿಯನ್ನೇರ್ಪಡಿಸಿ, ಈ ಕಮಿಟಿಯವರು ಉಭಯಪಕ್ಷದವರಪೇಕ್ಷಿಸುವ ವಟುಗಳನ್ನು ಬೆಂಗಳೂರಿಗೆ ಬರಮಾಡಿಕೊಂಡು ಇದೇ ಜೂನ್ ತಾ|| 4ನೆಯ ಬುಧವಾರದ ದಿವಸ ದಿ|| ಬ|| ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆಸೇರಿ ವಟುಗಳ ಕುಲಶೀಲವಿದ್ಯಾಪಾಂಡಿತ್ಯಾದಿಗುಣಗಳನ್ನು ಪರಿಶೀಲಿಸಿ ಓಟುಗಳನ್ನು ಕೊಡಬೇಕೆಂತಲೂ, ಓಟುಗಳು ಸಮವಾಗಿ ಬಂದಲ್ಲಿ ಅಧ್ಯಕ್ಷರಾದ ದಿ|| ಬ|| ಸೆಟ್ಟರು ಒಂದು ಕ್ಯಾಸ್ಟಿಂಗ್ ಓಟನ್ನು ಕೊಡಬಹುದೆಂತಲೂ, ಇದರಿಂದ ಹೆಚ್ಚು ಓಟನ್ನು ಪಡೆಯುವ ವಟುವಿಗೆ ಪಟ್ಟಕಟ್ಟುವಂತೆ ಗೊತ್ತುಮಾಡಿ ಸರ್ಕಾರಕ್ಕೆ ಬಿನ್ನೈಸಿಕೊಳ್ಳಬೇಕೆಂತಲೂ ನಿರ್ಧಾರಮಾಡಿದ್ದರು.

ಆದರೆ ಆರೀತಿ ಕಮಿಟಿಯ ಮೀಟಿಂಗು ಈ ತಾ|| 4 ರಲ್ಲಿ ನಡೆಯಲಿಲ್ಲವೆಂದು ದಿ|| ಬ|| ಪುಟ್ಟಣ್ಣಸೆಟ್ಟರು ಮುಜರಾಯಿ ಕಮಿಷನರ್ ಮಿ|| ಕೆ. ಚಾಂಡಿಯವರಿಗೆ ಬರೆದಿರುವ ಪತ್ರದಿಂದ ತಿಳಿಯಬರುತ್ತದೆ. ಆ ಪತ್ರದಲ್ಲಿ ಮ|| ಸೆಟ್ಟರು ಮುಖ್ಯವಾಗಿ ಲಿಖಿಸಿರುವುದೇನೆಂದರೆ—ಬಾಳೆಹೊನ್ನೂರು (ರಂಭಾಪುರಿ) ಪೀಠಾಧಿಕಾರಕ್ಕೆ ಒಬ್ಬ ವಟುವನ್ನು ಚುನಾಯಿಸಲು ಪೀಠದ ಶಿಷ್ಯರುಗಳ ಕೆಲ ಪ್ರತಿನಿಧಿ ದೊಡ್ಡಮನುಷ್ಯರುಗಳಿಂದ ಗೊತ್ತುಮಾಡಲ್ಪಟ್ಟಿದ್ದ ಕಮಿಟಿಯ ಮೆಂಬರುಗಳಲ್ಲಿ ಒಂದು ಪಕ್ಷದವರು ಕಮಿಟಿಯಲ್ಲಿರಲು ಸಮಾಧಾನಪಡಲಿಲ್ಲವಾಗಿ, ಈ ತಾ|| 4 ರಲ್ಲಿ ಮೀಟಿಂಗು ನಡಿಸಲ್ಪಡಲಾಗಲಿಲ್ಲವು. ಉಭಯಪಕ್ಷದ ಕೆಲ ದೊಡ್ಡಮನುಷ್ಯರುಗಳು ನನ್ನನ್ನು ಕಂಡು ಪ್ರಸ್ತಾಪಿಸಿದುದರಲ್ಲಿ, ಪರಸ್ಪರ ವೈಷಮ್ಯವೂ ಭಿನ್ನಾಭಿಪ್ರಾಯವೂ ಇರುವುದಾಗಿ ವ್ಯಕ್ತವಾಯಿತು. ಒಂದುವೇಳೆ ಮೀಟಿಂಗನ್ನು ನಡಿಸಿ ಓಟನ್ನು ತೆಗೆದುಕೊಂಡಲ್ಲಿ ಅದರ ಪರಿಣಾಮವು ನನ್ನ ಕ್ಯಾಸ್ಟಿಂಗ್ ಓಟಿನ ಮೇಲೆಯೇ ಅವಲಂಬಿಸಿರುತ್ತದೆ (ಉಭಯಪಕ್ಷದ ಮೆಂಬರುಗಳು ಸಮಸಂಖ್ಯಾಕರಾಗಿರುವುದರಿಂದ ಅವರು ಸ್ವಪಕ್ಷಾಭಿಮಾನದಿಂದ ಕೊಡುವ ಓಟುಗಳು ಸಮಸಂಖ್ಯಾಕವಾಗಿಯೇ ಇರುತ್ತವೆ. ಆಗ್ಗೆ ಪ್ರೆಸಿಡೆಂಟರಾದ ಮ|| ಸೆಟ್ಟರು ತಮ್ಮ ಕ್ಯಾಸ್ಟಿಂಗ್ ಓಟನ್ನು ಯಾವ ಪಕ್ಷವಾಗಿ ಕೊಡುವರೋ ಆಪಕ್ಷಕ್ಕೆ ಜಯವುಂಟಾಗುವುದೂ, ಮ|| ಸೆಟ್ಟರಿಗೆ ಪ್ರತಿಪಕ್ಷದವರಿಂದ ದೂರು ಬರುವುದೂ ಸಿದ್ಧವು. ಸಂಪಾದಕ). ಈ ಕಾರಣಗಳಿಂದಲೂ, ಮೇಲ್ಕಂಡ ಪರಿಸ್ಥಿತಿಯಲ್ಲಿ ಕಮಿಟಿಯವರು ಮಾಡುವ ತೀರ್ಮಾನವು, 1924 ನೆಯ ಮೇ ತಾ|| 31 ರಲ್ಲಿ ಮುಜರಾಯಿ ಕಮಿಷನರಿಂದ ಕೊಡಲ್ಪಟ್ಟಿರುವ ಇಂಡಾರ್ಸ್‌ಮೆಂಟಿನಲ್ಲಿ ಕಂಡ ಷರತ್ತುಗಳ ಪ್ರಕಾರ ಸರ್ಕಾರದವರಿಂದ ಅನುಮೋದಿಸಲ್ಪಡುವ ಸಂಭವವಿಲ್ಲವಾದುದರಿಂದಲೂ ಮೀಟಿಂಗನ್ನು ನಡಿಸುವುದು ಉಚಿತವಾಗಿತೋರಲಿಲ್ಲವು.

ರಾಜತಂತ್ರವಿಶಾರದರೂ, ಅದ್ವಿತೀಯಲೋಕಾನುಭವಿಗಳೂ, ದೂರದರ್ಶಿಗಳೂ, ವೀರಶೈವಸಮಾಜಕ್ಕೆ ತಿಲಕಪ್ರಾಯರೂ ಆದ ದಿವಾನ್‌ಬಹದ್ದೂರ್ ಕೆ. ಪಿ. ಪುಟ್ಟಣ್ಣಸೆಟ್ಟರ ಮಧ್ಯಸ್ಥಿಕೆಯಲ್ಲಿ ಬಗೆಹರಿಯದಿದ್ದ ಈ ವಿಚಾರವು ಮತ್ತಾರಿಂದ ಬಗೆಹರಿಸಲ್ಪಡಲು ಸಾಧ್ಯವಾದೀತು? ಹೀಗಾದುದು ಈ ಸಮಾಜದ ದುರ್ದೈವವೆಂದೇ ಹೇಳಬೇಕಾಗಿದೆ. ಮುಖ್ಯಾಚಾರ್ಯಪೀಠಾಭಿವೃದ್ಧಿಯ ಮೇಲೆ ದೃಷ್ಟಿಯಿಟ್ಟು ಸ್ವಪಕ್ಷಾಭಿಮಾನ ಸ್ವಪ್ರತಿಷ್ಠೆಗಳನ್ನು ಬಿಟ್ಟು ಎಲ್ಲರೂ ಒಕ್ಕಟ್ಟಿನಿಂದಲೂ ಏಕಾಭಿಪ್ರಾಯದಿಂದಲೂ ವರ್ತಿಸಿ ಈಗ ಸಮಾಜದಲ್ಲುಂಟಾಗಿರುವ ಅನೈಕಮತ್ಯದ್ವೇಷಾಸೂಯಾದಿಗಳನ್ನು ಹೋಗಲಾಡಿಸಿ ಧರ್ಮಜಾಗ್ರತೆಯೂ, ವಿದ್ಯಾಭಿವೃದ್ಧಿಯೂ ಆಗುವಂತೆ ಮಾಡಲು ಸಮರ್ಥರೂ, ಆಚಾರಶೀಲರೂ ಜಿತೇಂದ್ರಿಯರೂ ಸತ್ಕುಲೋತ್ಪನ್ನರೂ ಆದ ವಟುವನ್ನು ಚುನಾಯಿಸಿ ಸರ್ಕಾರದ ಸುಮತಿಯನ್ನು ಪಡೆದು ಜಾಗ್ರತೆಯಲ್ಲಿ ಅವರಿಗೆ ಪಟ್ಟಕಟ್ಟಿ ಶ್ರೀರೇಣುಕರ ಅನುಗ್ರಹಕ್ಕೂ ಸಮಾಜದವರ ಕೃತಜ್ಞತೆಗೂ ಪಾತ್ರರಾಗಲೆಂದು ಆಶಿಸುತ್ತೇವೆ. ಹಾಗಲ್ಲದೆ ಈಗಿನಂತೆ ಪಕ್ಷಾಭಿಮಾನದಿಂದ ಒಬ್ಬರು ಬೇಕೆಂಬುದನ್ನು ಮತ್ತೊಬ್ಬರು ಬೇಡವೆಂದು ಹೋರಾಡುವುದಾದರೆ, ಅನಾಯಕವಾಗಿರುವ ಮುಖ್ಯಾಚಾರ್ಯಪೀಠವು ಕ್ಷೀಣಿಸುವುದು ಮತ್ತು ಅದರಿಂದ ಅವರುಗಳಿಗೆ ಅಪಮಾನವೂ ಕೆಡಕೂ ಆಗದೆ ತಪ್ಪದು. ಅದು ಕಾರಣ ಸಮಾಜಬಾಂಧವರು ಅತ್ಯವಸರಕಾರ್ಯಸಾಧನೆಯಲ್ಲಿ ಜಾಗೃತರಾಗಿರಲೆಂದು ಕೋರುತ್ತೇವೆ.

ಮಿ|| ಮಿರ್ಜಾಯವರಿಗೆ ನೂತನಬಿರುದು.

ಭರತಖಂಡದ ಸಾರ್ವಭೌಮರು ತಮ್ಮ ವರ್ಧಂತ್ಯುತ್ಸವದ ದಿವಸ ಪದ್ಧತಿಯಾಗಿ ಕೊಡುತ್ತಬರುವ ಬಿರುದಾವಳಿಗಳೊಳಗೆ ಈಸಲ ನಮ್ಮ ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಅಮೀನ್-ಉಲ್-ಮುಲ್ಕ್ ಮಿ|| ಮಿರ್ಜಾಮಹಮಹಮ್ಮದ್ ಇಸ್ಮಾಯಿಲ್, ಬಿ. ಎ., ಒ. ಬಿ. ಇ., ಯವರಿಗೆ ಸಿ. ಐ. ಇ., (ಕಂಪ್ಯಾನಿಯನ್ ಆಫ್ ದಿ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್) ಎಂಬ ಘನವಾದ ಬಿರುದು ಅನುಗ್ರಹಿಸಲ್ಪಟ್ಟಿರುವುದೆಂಬುದನ್ನು ತಿಳುಹಲು ಬಹಳವಾಗಿ ಸಂತೋಷಿಸುತ್ತೇವಲ್ಲದೆ ಇದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ. ಪ್ರಭುಪ್ರಜಾವಿಶ್ವಾಸಪಾತ್ರರಾದ ಇವರಿಗೆ ಈ ಗೌರವವು ಲಭ್ಯವಾದುದಕ್ಕಾಗಿ ದೇಶೀಯರೆಲ್ಲಾ ವಿಶೇಷವಾಗಿ ಸಂತೋಷಿಸುತ್ತಾರೆಂಬುದಕ್ಕೆ ಸಂಶಯವಿಲ್ಲವು. ನಮ್ಮ ಸೀಮೆಯ ಮಹಮ್ಮದೀಯಾಧಿಕಾರಿಗಳಲ್ಲಿ ಇಂತಹ ದೊಡ್ಡ ಪ್ರಶಸ್ತಿಯನ್ನು ಪಡೆದವರು ಮಿ|| ಮಿರ್ಜಾಯವರ ವಿನಾ ಬೇರೊಬ್ಬರಿಲ್ಲ.

ತಮ್ಮಂತೆಯೇ ಪರಿಶುದ್ಧಾತ್ಮರೂ ನಿರ್ಮಲಚಿತ್ತರೂ ಆದವರನ್ನೇ ತಮ್ಮ ಸಮೀಪಸ್ಥರನ್ನಾಗಿ ಆರಿಸುವರಲ್ಲದೆ ಸ್ವಲ್ಪ ಸಂಶಯಕ್ಕೆ ಆಸ್ಪದರಾದವರನ್ನು ಕ್ಷಣಮಾತ್ರವೂ ಹತ್ತಿರಕ್ಕೆ ಸೇರಗೊಡಲೊಲ್ಲರಾದ ಮಹಾಪ್ರಭುವರ್ಯರು ತಮ್ಮ ಬಳಿಯಲ್ಲಿ 10-15 ವರ್ಷಗಳಿಂದ ಅಖಂಡವಾಗಿ ಉದ್ಯೋಗಮಾಡಿಕೊಂಡಿರುವ ಮಿ|| ಮಿರ್ಜಾಯವರ ಸ್ವಾಮಿಭಕ್ತಿ, ನಿಸ್ಪೃಹತೆ, ಕಾರ್ಯದಕ್ಷತೆ, ಪ್ರಜಾಭಿಮಾನ, ಸಚ್ಛೀಲ, ಶಾಂತಿ, ಸಮವರ್ತನೆ ಮೊದಲಾದ ಸದ್ಗುಣಗಳಿಗೆ ಮೆಚ್ಚಿ 'ಅಮೀನ್ ಉಲ್ ಮುಲ್ಕ್' ಅಂದರೆ 'ನಂಬುಗೆಗೆ ಪಾತ್ರ' ಎಂಬ ಅನ್ವರ್ಥವುಳ್ಳ ಬಿರುದನ್ನು ಅವರಿಗೆ ದಯಪಾಲಿಸಿದರಲ್ಲದೆ, ಹಿಂದೆ ಯಾವಾಗಲೂ ಆಂಗ್ಲೇಯರು ವಿನಾ ಮತ್ತಾರಿಗೂ ಲಭ್ಯವಾಗದಿದ್ದ ತಮ್ಮ ಪ್ರೈವೇಟ್ ಸೆಕ್ರೆಟರಿಯ ಉದ್ಯೋಗಕ್ಕೆ ಇವರನ್ನು ನೇಮಿಸಿಕೊಂಡಿರುವರು. ಇದರಿಂದ ಮಿ|| ಮಿರ್ಜಾಯವರು ಶ್ರೀಮನ್ ಮಹಾರಾಜರವರ ಛಾಯಾನುವರ್ತಿಗಳಾಗಿ ಅವರ ಪೂರ್ಣಾನುಗ್ರಹಕ್ಕೆ ಎಷ್ಟರಮಟ್ಟಿಗೆ ಪಾತ್ರರಾಗಿರುವರೆಂಬುದು ವ್ಯಕ್ತವಾಗುತ್ತದೆ. ಇವರು ಶ್ರೀಮನ್ ಮಹಾರಾಜರವರ ಮಂತ್ರಾಲೋಚಕರಾಗಿದ್ದುಕೊಂಡು ಯಾವ ಪಕ್ಷಪಾತಾದಿಗಳಿಗೂ ಎಡೆಗೊಡದೆ ಎಲ್ಲಾ ಪ್ರಜೆಗಳಲ್ಲೂ ಸಮದೃಷ್ಟಿಯಿಂದ ಪ್ರವರ್ತಿಸಿ ಸಮಸ್ತರ ಕೃತಜ್ಞತೆಗೂ ಮನ್ನಣೆಗೂ ಪಾತ್ರರಾಗಿರುತ್ತಾರೆ, ಮತ್ತು ಮೈಸೂರು ಟ್ರಸ್ಟ್‌ಬೋರ್ಡಿನಲ್ಲಿ ಬಹುಕಾಲದಿಂದ ಮೆಂಬರಾಗಿದ್ದುಕೊಂಡು ಪ್ರಭುಗಳ ಆಶಯದಂತೆ ರಾಜಧಾನಿಯನ್ನು ರಮಣೀಯಗೊಳಿಸುವುದರಲ್ಲಿ ಕಾಲೋಚಿತವಾದ ಸೂಚನೆಗಳನ್ನು ಕೊಡುತ್ತ ಶ್ರೀಮನ್ ಮಹಾರಾಜರವರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಹೀಗೆ ಪ್ರಭುಪ್ರಜಾಸನ್ಮಾನಿತರಾದ ಮಿ|| ಮಿರ್ಜಾರವರಿಗೆ ಸಾರ್ವಭೌಮರವರು ಕಳೆದವರ್ಷ ಅನುಗ್ರಹಿಸಿದ ಒ. ಬಿ. ಇ. ಬಿರುದಲ್ಲದೆ ಈ ವರ್ಷ ಈ ಘನವಾದ ಬಿರುದನ್ನು ದಯಪಾಲಿಸಿದುದು ಯುಕ್ತವಾಗಿರುತ್ತದೆ. ಜಗದೀಶನು ಮಿ|| ಮಿರ್ಜಾ ಮಹಮ್ಮದ್ ಇಸ್ಮಾಯಿಲ್ ಬಿ. ಎ., ಒ. ಬಿ. ಇ., ಸಿ. ಐ. ಇ., ರವರಿಗೆ ಇತೋಪ್ಯತಿಶಯವಾದ ಪದವಿಗಳನ್ನೂ, ಪ್ರಶಸ್ತಿಗಳನ್ನೂ, ದೀರ್ಘಾಯುರಾರೋಗ್ಯಗಳನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಅಮೀನ್ ಉಲ್‌ಮುಲ್ಕ್ ಮಿ|| ಮಿರ್ಜಾ ಮಹಮ್ಮದ್ ಇಸ್ಮಾಯಿಲ್,
ಬಿ. ಎ., ಒ. ಬಿ. ಇ., ಸಿ. ಐ. ಇ.

ಪತಿತಸ್ತ್ರೀಯರುದ್ಧಾರ.

ಸ್ತ್ರೀಯರಿಗಾಗಿ ಒಂದು ಕೈಗಾರಿಕೆಯ ಶಾಲೆಯನ್ನೇರ್ಪಡಿಸುವುದಕ್ಕಾಗಿಯೂ ದೇವದಾಸಿಯರನ್ನು ಗೃಹಿಣಿಯರನ್ನಾಗಿಮಾಡುವುದಕ್ಕಾಗಿಯೂ ಮದ್ರಾಸಿನಲ್ಲಿ ಒಂದು ಸಂಘವನ್ನೇರ್ಪಡಿಸುವ ಉದ್ದೇಶದಿಂದ ಕಳೆದ ತಾ|| 30ರ ಬೆಳಿಗ್ಗೆ ಮದ್ರಾಸಿನ ಸೌಂದರ್ಯಮಹಲಿನಲ್ಲಿ ಸ್ವಾಮಿ ಶ್ರದ್ಧಾನಂದರವರ ಅಧ್ಯಕ್ಷತೆಯಲ್ಲಿ ಪುರಜನರ ಸಭೆಯೊಂದು ಸೇರಿದ್ದಿತು. ಆಗ ದಿವಾನ್ ಬಹದ್ದೂರ್ ಎಸ್. ಗುರುಸ್ವಾಮಿಸೆಟ್ಟರು, "ದೇವದಾಸಿಯರು ಮೊದಲಾಗಿ ನಮ್ಮ ಹಿಂದೂ ಪತಿತಸ್ತ್ರೀಯರನ್ನು ಸನ್ಮಾರ್ಗಿಗಳನ್ನಾಗಿ ಮಾಡಲು ತಕ್ಕುಪಾಯಗಳನ್ನು ಕಂಡುಹಿಡಿಯುವುದೂ, ಆ ಜನರು ಆತ್ಮೋದ್ಧಾರಕ್ಕಾಗಿ ಪ್ರಯತ್ನಪಡುವಂತೆ ವೃತ್ತಪತ್ರಿಕೆಗಳ ಮತ್ತು ಉಪನ್ಯಾಸಗಳ ಮೂಲಕ ಬೋಧಿಸುವುದಲ್ಲದೆ ಈ ಪತಿತಸ್ತ್ರೀಯರುದ್ಧಾರಕ್ಕಾಗಿ ಧನವನ್ನೂ ಕಾರ್ಯಸಾಧಕ ಜನರನ್ನೂ ಒದಗಿಸಿಕೊಡುವಂತೆ ಹಿಂದೂ ಜನಾಂಗದವರನ್ನು ಪ್ರಾರ್ಥಿಸುವುದೂ, ಈ ಕಾರ್ಯಗಳ ಸಾಧನೆಗಾಗಿ ಒಂದು ಕಾರ್ಯಕಾರಿ ಮಂಡಲಿಯನ್ನು ಕೂಡಲೆ ನೇಮಿಸುವುದೂ ಅತ್ಯಾವಶ್ಯಕವು" ಎಂಬ ಬಗೆಗೆ ಒಂದು ನಿರ್ಧಾರವನ್ನು ಸಭೆಯ ಅನುಮೋದನೆಗಾಗಿಟ್ಟು ಅದರ ಪುಷ್ಟೀಕರಣ ಭಾಷಣಮಾಡುವಾಗ್ಗೆ ದೇವದಾಸಿಯರುತ್ಪನ್ನದ ಕಾರಣವನ್ನು ತಿಳಿಸಿ ಅವರು ಮೂಲೋದ್ದೇಶದಂತೆ ಕೆಲಕಾಲದವರೆಗೆ ನಡೆದುಕೊಂಡುಬಂದು ಆ ನಂತರ ಈಗಿನ ದುರ್ಗತಿಗೆ ಇಳಿದರೆಂಬುದನ್ನು ವಿಶದೀಕರಿಸಿದರಲ್ಲದೆ ದಕ್ಷಿಣ ಇಂಡಿಯಾದಲ್ಲೂ ಆಂಧ್ರದೇಶದಲ್ಲೂ ಆಚರಣೆಯಲ್ಲಿರುವ ಅವರ ಪದ್ಧತಿಯನ್ನು ಕುರಿತು ಪ್ರಸ್ತಾಪಿಸಿ ದೇವದಾಸಿಯರ ಉದ್ಧಾರಕ್ಕಾಗಿ ಈ ಕೆಳಗೆ ಕಂಡ ಮಾರ್ಗಗಳನ್ನು ಸೂಚಿಸಿದರು.—(1) ಈ ದೇವದಾಸಿಯರ ಅವನತಿಗೆ ಮೂಲಕಾರಣವಾದ ವ್ಯಭಿಚಾರವೃತ್ತಿಯನ್ನು ನಿರ್ಮೂಲನಮಾಡುವುದು (2) ಈ ಪಂಗಡದವರು ಇತರ ಪಂಗಡದವರ ಹುಡುಗಿಯರನ್ನು ದತ್ತಕಮಾಡಿಕೊಂಡು ಅವರಿಗೆ ಗಾಯನ ನರ್ತನಗಳನ್ನು ಕಲಿಸಿ ಕಡೆಯಲ್ಲಿ ವ್ಯಭಿಚಾರವೃತ್ತಿಗೆ ಗುರಿಮಾಡುವ ಪದ್ಧತಿಯನ್ನು ನಿಲ್ಲಿಸುವುದು. (3) ಈ ಪಂಗಡದವರು ತಮ್ಮ ಹೆಣ್ಣುಮಕ್ಕಳಿಗೆ ವಿವಾಹವನ್ನು ಮಾಡುವಂತೆ ಕಡ್ಡಾಯಪಡಿಸುವುದು, ಮತ್ತು ಅವರು ತಮ್ಮ ಪಂಗಡದ ಜನರಲ್ಲೇ ಹೆಣ್ಣುಕೊಟ್ಟು ತರುವಂತೆ ಪ್ರೋತ್ಸಾಹಿಸಲು ವೈವಾಹಿಕ ಸಂಘಗಳನ್ನೇರ್ಪಡಿಸುವುದು. (4) ಇಂಡಿಯನ್ ಪಿನಲ್ ಕೋಡಿನ 372 ಮತ್ತು 373ನೇ ಸೆಕ್ಷನ್ನುಗಳಲ್ಲಿ ಹೇಳಲ್ಪಟ್ಟಿರುವ ಅಂಶಗಳು ಈ ಮುಂದೆ ಹೇಳುವ ರೀತಿ ವಿಶೇಷ ಹುರುಳುಳ್ಳವಾಗಿಯೂ ಕಾರ್ಯಸಾಧಕವಾಗಿಯೂ ಇರುವಂತೆ ಬದಲಾಯಿಸಲ್ಪಡಬೇಕು—(*a*) ದತ್ತಪುತ್ರಿಯನ್ನಾಗಲಿ ಅಥವಾ ಔರಸಪುತ್ರಿಯನ್ನಾಗಲಿ ವ್ಯಭಿಚಾರಿಣಿಯನ್ನಾಗಿ ಮಾಡುವುದು ಅಪರಾಧವೆಂದು ವಿಧಿಸುವುದು (*b*) 15 ವರ್ಷ ವಯಸ್ಸಿನೊಳಗಿರುವ ಬಾಲೆಯರು ದೇವಸ್ಥಾನಗಳಲ್ಲಾಗಲಿ ವಿವಾಹಗೃಹಗಳಲ್ಲಾಗಲಿ ಗಾನಮಾಡುವುದು ಅಥವಾ ನಾಟ್ಯವಾಡುವುದು ಅಪರಾಧವೆಂದು ವಿಧಿಸುವುದು (*c*) ತಂದೆ ತಾಯಿಗಳು ಅಥವಾ ಪೋಷಕರುಗಳು ತಮ್ಮ ಹುಡುಗಿಯನ್ನು ವ್ಯಭಿಚಾರವೃತ್ತಿಗಾಗಿ ಸಾಕುತ್ತಾರೆಂದು ಸಕಾರಣದಿಂದ ತಿಳಿದುಬಂದಲ್ಲಿ ಅಂತಹ ಹುಡುಗಿಯರು ಅವರ ವಶದಿಂದ ತಪ್ಪಿಸಲ್ಪಟ್ಟು ಎಸ್. ಪಿ. ಎಸ್. ನಂತಹ ಶರಣಾಲಯಗಳಿಗೆ ಕಳುಹಲ್ಪಡುವುದು. (5) 18 ವರ್ಷಗಳಿಗೆ ಕಡಿಮೆಯಿರುವ ಹುಡುಗಿಯರು ಯಾವರೀತಿಯಲ್ಲಿ ಸಾಕಲ್ಪಡುತ್ತಿರುವರು ಅಥವಾ ನಿಯೋಜಿಸಲ್ಪಡುತ್ತಿರುವರೆಂಬುದು ವಿಚಾರಿಸಲ್ಪಡುವುದು (6) ಇಂಡಿಯನ್ ಪಿನಲ್ ಕೋಡಿನ 372-373ನೇ ಸೆಕ್ಷನ್ನುಗಳ ಪ್ರಕಾರ ಎಷ್ಟು ಜನರು ಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟರೆಂಬುದನ್ನು ಪೋಲೀಸರು ಸರ್ಕಾರಕ್ಕೆ ವರದಿಮಾಡುವಂತೆ ಏರ್ಪಡಿಸುವುದು (7) ದೇವಸ್ಥಾನಗಳ ಮತ್ತು ಮಠಗಳ ಧರ್ಮದರ್ಶಿಗಳು ದೇವದಾಸಿಯರನ್ನು ನೇಮಿಸಿಕೊಳ್ಳದಂತೆ ಮಾಡುವುದು ಮತ್ತು ದೇವದಾಸಿಯರಿಗೆ ಇನಾಂ ಭೂಮಿಗಳಿದ್ದರೆ ಅವುಗಳನ್ನು ಅವರ ಹೆಸರಿಗೆ ಪಟ್ಟಿಮಾಡಿಕೊಡುವುದು (8) ದೇವದಾಸಿಯರ ಆಸ್ತಿಯು ಅವರ ದತ್ತಪುತ್ರಿಯರಿಗೆ ಸಲ್ಲತಕ್ಕದ್ದಲ್ಲವೆಂದು ವಿಧಿಸುವುದು. (9) ಲಗ್ನದ ಮನೆಗಳಲ್ಲಿ ಹಾಡುವುದನ್ನೂ ನರ್ತನಮಾಡುವುದನ್ನೂ ನಿರೋಧಿಸುವುದು (10) ಬಾಲೆಯರಿಗೂ ಪ್ರೌಢಸ್ತ್ರೀಯರಿಗೂ ನೂಲನ್ನು ತೆಗೆಯುವುದು ನೇಯುವುದು ಹೊಲೆಯುವುದು ಚಿತ್ರಹೆಣೆಯುವುದು ಹೆರಿಗೆಮಾಡಿಸುವುದು ವೈದ್ಯಮಾಡುವುದು ಮೊದಲಾದ ಮನೆಯ ಕಸುಬುಗಳನ್ನು ಕಲಿಸುವುದು (11) ಈ ಪಂಗಡದ ಸ್ತ್ರೀಯರು ಆಡಂಬರವಿಲ್ಲದೆ ಬಹಳ ಸಾಧಾರಣ ಜೀವನಮಾಡುವಂತೆಯೂ ಮದ್ಯಪಾನಮಾಡದಂತೆಯೂ ಬೋಧಿಸುವುದು. (12) ಈ ಜನರಲ್ಲಾಗುವ ವಿವಾಹವನ್ನು ಸಿವಿಲ್ ಮ್ಯಾರಿಯೆಜ್ ಆಕ್ಟ್‌ಪ್ರಕಾರ ಅಂದರೆ ಧರ್ಮಶಾಸ್ತ್ರರೀತ್ಯಾ ಆದಂತೆ ಪರಿಗಣಿಸುವುದು.

ಹಿಂದೂ ಮಹಮ್ಮದೀಯರ ಸಖ್ಯವು.

ಲಾಹೋರಿನಲ್ಲಿ ಜೆನ್ನಾರವರ ಅಧ್ಯಕ್ಷತೆಯಲ್ಲಿ ಜರುಗಿದ ಅಖಿಲಭಾರತ ಮಹಮ್ಮದೀಯ ಮಹಾಸಭೆಯಲ್ಲಿ ಹಿಂದೂ ಮಹಮ್ಮದಿಯರ ಸಖ್ಯದ ವಿಚಾರದಲ್ಲಿ ಉಪನ್ಯಾಸಗಳೂ ದೀರ್ಘಾಲೋಚನೆಯೂ ನಡೆದುವು. "ಯಾವ ಮತವೂ ಆತ್ಮಸಂಯಮನವನ್ನೂ ಸಹನಭಾವವನ್ನೂ ಬೋಧಿಸುತ್ತಿದೆಯೆಂದು ಗ್ರಹಿಸದರೆ, ಹಿಂದೂ ಮಹಮ್ಮದೀಯ ಕಲಹವುಂಟಾಗುವುದಿಲ್ಲ" ಎಂದು ಸತ್ಕಾರ ಸಂಘಾಧ್ಯಕ್ಷರಾಗಿದ್ದ ಆಗಾ ಮಹಮ್ಮದ್ ಸಫ್‌ದಾರ್‌ರವರು ಹೇಳಿದರು. ಇದೇ ವಿಷಯವನ್ನು ಅಧ್ಯಕ್ಷರಾಗಿದ್ದ ಜೆನ್ನಾಯವರು ಪುಷ್ಟೀಕರಿಸಿ ಪ್ರಸ್ತಾಪಿಸಿದರಲ್ಲದೆ, ಸ್ವರಾಜ್ಯಸಿದ್ಧಿಗೆ ಹಿಂದೂಗಳೂ ಮಹಮ್ಮದೀಯರೂ ಯಾವ ದಿವಸ ಸ್ನೇಹದಿಂದಿರುವರೋ ಆ ದಿವಸವೇ ಸ್ವರಾಜ್ಯವು ಲಭಿಸುವುದೆಂದೂ, ಹಿಂದೂ ಮಹಮ್ಮದೀಯರ ಸಖ್ಯವೂ ಸ್ವರಾಜ್ಯವೂ ಪರ್ಯಾಯಶಬ್ದಗಳೆಂದೂ ತಿಳಿಸಿದರು. ಜೆನ್ನಾಯವರು ಅಸಹಾಯವಾದಿಗಳಾಗಿದ್ದರೂ, ಜಾತ್ಯೈಕ್ಯಕ್ಕೂ ಸ್ವರಾಜ್ಯಕ್ಕೂ ಅವಿನಾಭಾವ ಸಂಬಂಧವಿರುವುದೆಂದು ತಿಳಿದಿರುವರು. ಹಿಂದೂಗಳಿಗೂ ಮಹಮ್ಮದೀಯರಿಗೂ ಸಂದೇಹವುಂಟಾಗಲು ಪ್ರಯತ್ನಿಸಬೇಕೆಂದು ಈ ಸಭಾಧ್ಯಕ್ಷರಿಗೆ ಮಹಾತ್ಮಾ ಗಾಂಧಿಯವರು ತಂತ್ರಿವಾರ್ತೆಯ ಮೂಲಕ ತಿಳಿಸಿದ್ದರು. ಮಹಾತ್ಮರ ಕೋರಿಕೆಯ ಪ್ರಕಾರದಿಂದಲೂ ಅಖಿಲಭಾರತ ಮಹಮ್ಮದಿಯ ಮಹಾಸಭೆಯವರ ಪ್ರಯತ್ನ ವಿಶೇಷದಿಂದಲೂ ಹಿಂದೂ ಮಹಮ್ಮದೀಯರ ಸಖ್ಯವು ಕುದುರುವುದಾದರೆ ಸ್ವರಾಜ್ಯವು ಪ್ರಾಪ್ತವಾಗುವುದಲ್ಲದೆ, ಗೋವಧಾ ವಿಚಾರದಲ್ಲೂ ಮಸೀದಿಗಳ ಮುಂಗಡೆ ಹಿಂದೂ ದೇವತೋತ್ಸವಾದಿಗಳು ವಾದ್ಯಸಮೇತ ನಡಿಯುವುದರಲ್ಲೂ ಸಂಭವಿಸುತ್ತಿರುವ ಮಹಾನರ್ಥವು ನಿವಾರಿತವಾಗಿ ಉಭಯತ್ರರಿಗೂ ಮಹೋಪಕಾರವಾಗುವುದರಲ್ಲಿ ಸಂದೇಹವಿಲ್ಲವು.

ಜಪಾನು ಅಮೇರಿಕೆ.

ಅಮೇರಿಕೆಯನ್ನು ಜಪಾನರು ಪ್ರವೇಶಿಸಕೂಡದೆಂದು ಅಮೇರಿಕೆಯ ಪ್ರಭುತ್ವದವರು ನಿರ್ಮಿಸಿರುವ ಬಹಿಷ್ಕಾರ ಚಟ್ಟವು ಜಪಾನಿನಲ್ಲಿ ಬಹಳ ಕಲವರಿಕೆಯನ್ನುಂಟುಮಾಡಿದೆ. ಈ ಬಹಿಷ್ಕಾರ ಚಟ್ಟದ ವಿಷಯವಾಗಿ ತಮ್ಮ ಸ್ವಮಾಧಾನವನ್ನು ತಿಳಿಸಬೇಕಾಗಿಯೂ, ಅಮೇರಿಕೆಯಲ್ಲಿರುವ ತಮ್ಮ ರಾಯಭಾರಿಯನ್ನು ಹಿಂದಿರುಗಿ ಕರಿಸಿಕೊಳ್ಳಬೇಕಾಗಿಯೂ ಜಪಾನಿನ ಮಂತ್ರಿಮಂಡಲದವರು ತೀರ್ಮಾನಿಸಿಕೊಂಡಿರುವರು. ಇದೂ ಅಲ್ಲದೆ ಜಪಾನು ಪಾರ್ಲಿಮೆಂಟ್ ಸಭೆಯವರೂ ಅಮೇರಿಕೆಯ ಬಹಿಷ್ಕಾರ ಶಾಸನವನ್ನು ಖಂಡಿಸಬೇಕಾಗಿ ತೀರ್ಮಾನಿಸಿರುವರು. ಅಮೇರಿಕೆಯ ವೈಮಾನಿಕರನ್ನು ಜಪಾನು ಆತಿಥ್ಯಸತ್ಕಾರಗಳಿಂದ ಎಷ್ಟೋ ಗೌರವಿಸಿದ್ದಾಗ್ಗೂ ಜಪಾನೀಯರು ಅಮೇರಿಕೆಯನ್ನು ಪ್ರವೇಶಿಸಕೂಡದೆಂದು ಶಾಸನವನ್ನು ಮಾಡಿರುವುದು ಬಹಳ ಅಸಭ್ಯವಾಗಿರುವುದರಿಂದ ಜಪಾನು ತನ್ನ ಆತ್ಮಗೌರವವನ್ನು ಈ ಸಮಯದಲ್ಲಿ ಉಳಿಸಿಕೊಂಡು ಪೂರ್ವಖಂಡದ ಗೌರವವನ್ನೂ ಸಹ ಕಾಪಾಡುವುದು ಅತ್ಯಾವಶ್ಯಕವೆಂದು ಹೇಳಬೇಕಾದುದಿಲ್ಲವು.

ಜೆನ್ನಾ ಮಹಮ್ಮದಾಲಿಯವರು.

ಲಾಹೋರಿನಲ್ಲಿ ಉಪನ್ಯಾಸಮಾಡುವಾಗ್ಗೆ, ಕೌನ್ಸಿಲು ದ್ವಾರಾ ಅಧಿಕಾರಿ ವರ್ಗದವರೊಡನೆ ಹೋರಾಡುವುದು ಅತ್ಯವಸರವೆಂದು ಜೆನ್ನಾರವರು ಪ್ರತಿಪಾದಿಸಿದರಲ್ಲದೆ, ಸಕ್ರಮಾಂದೋಳನವು ವ್ಯರ್ಥವಾದುದರಿಂದ ಅಧಿಕಾರಿಗಳ ಕಾರ್ಯಸ್ತಂಭನ ಪ್ರಯತ್ನವನ್ನು ತಾವು ಅನುಮೋದಿಸುತ್ತೇವೆಂದು ತಿಳಿಸಿದರು. ತರುವಾಯ ಮಹಮ್ಮದಾಲಿಯವರು ಉಪನ್ಯಸಿಸುವಾಗ್ಗೆ ಅಸಹಾಯೋದ್ಯಮ ಮಾತ್ರ ವಿಫಲವಾಗುವುದಿಲ್ಲವೆಂದೂ, ಮಹಾತ್ಮಾ ಗಾಂಧಿಯವರನ್ನು ಅನುಕರಿಸದೆ ಇರುವುದರಿಂದ ಪ್ರಜೆಗಳಿಗೆ ಅಪಜಯವಾಗುತ್ತಿರುವುದೆಂದೂ ಸ್ಪಷ್ಟೀಕರಿಸಿದರಲ್ಲದೆ, ತಾವು ಶಾಸನಸಭೆಯನ್ನು ಪ್ರವೇಶಿಸುವುದಿಲ್ಲವೆಂದೂ, ಸ್ವರಾಜ್ಯಪಕ್ಷದವರು ಭ್ರಮಾರಹಿತರಾಗಿ ಶಾಸನಸಭೆಯನ್ನು ಬಿಟ್ಟು ಮಹಾತ್ಮರ ನಾಯಕತ್ವದಿಂದ ಶಾಸನೋಲ್ಲಂಘನವನ್ನು ತ್ವರೆಯಿಂದ ಅವಲಂಬಿಸಬೇಕಾಗಿ ಕೋರುತ್ತೇವೆಂದೂ ತಿಳಿಸಿದರು.

ಶ್ರೀಯುತ ಶಂಕರಣ್ಣನವರ ಧರ್ಮೌದಾರ್ಯ.

ಹೈದರಾಬಾದು ಸಂಸ್ಥಾನಕ್ಕೆ ಸೇರಿದ ಗುಲ್ಬರ್ಗಾ ಡಿ|| ಯಾದ್ಗಿರಿ ವಾಸಿಗಳಾದ ಶ್ರೀಮಂತ ಸಜ್ಜನಶೆಟ್ಟಿ ಶಂಕರಣ್ಣನವರು ತಮ್ಮ ವೀರಶೈವಮತಸ್ಥರ ಸಂಸ್ಕೃತವಿದ್ಯಾಭಿವೃದ್ಧಿಗಾಗಿ ಒಂದು ಸಂಸ್ಕೃತಮಹಾಪಾಠಶಾಲೆಯನ್ನು ತಮ್ಮ ಹೆಸರಿನಿಂದ ಸ್ಥಾಪಿಸಲು ಒಂದು ಲಕ್ಷರೂಪಾಯಿಗಳನ್ನು ಅರ್ಪಿಸಿರುವ ಸಂಗತಿಯನ್ನು ಕುರಿತ ಪತ್ರವ್ಯವಹಾರವು ಈ ಪತ್ರಿಕೆಯ ಬೇರೊಂದು ಕಡೆಯಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಸ್ವಧರ್ಮಜ್ಞಾನಾರ್ಜನೆಗೆ ಮುಖ್ಯಸಾಧಕವಾದ ಸಂಸ್ಕೃತವಿದ್ಯಾಭ್ಯಾಸಕ್ಕಾಗಿ ಒಂದು ಮಹಾಪಾಠಶಾಲೆಯನ್ನು ಸ್ಥಾಪಿಸಲು ಮಹೌದಾರ್ಯದಿಂದ 1 ಲಕ್ಷ ರೂ. ಗಳನ್ನು ದಾನಮಾಡಿ ಸಮಾಜದ ಚಿರಕೃತಜ್ಞತೆಗೂ ಈಶ್ವರನ ಕೃಪೆಗೂ ಪಾತ್ರರಾದುದಕ್ಕಾಗಿ ನಾವು ಅವರನ್ನು ಸಮಾಜದವರ ಪರವಾಗಿ ಅಭಿನಂದಿಸುತ್ತೇವೆ.

ಎತ್ತು ಹಾಲನ್ನು ಕರೆಯುವುದು.

ಬೊಂಬಾಯಿ ಮ್ಯುನಿಸಿಪಾಲಿಟಿಗೆ ಸೇರಿದ ಮಲ್ಪಿಹುಟ್ಟಿನ ಒಂದು ಎತ್ತು ಹಾಲನ್ನು ಕರೆಯುತ್ತಿರುವುದರಮೇಲೆ 1923 ನೆಯ ಡಿಸಂಬರ್ ತಿಂಗಳಲ್ಲಿ ಬೊಂಬಾಯಿನ ಪಶುವೈದ್ಯ ಪ್ರೌಢವಿದ್ಯಾಲಯಕ್ಕೆ ಪರೀಕ್ಷೆಗಾಗಿ ತರಲ್ಪಟ್ಟಿದ್ದಿತು. ಈ ಎತ್ತಿಗೆ ಸ್ತ್ರೀಲಕ್ಷಣವ್ಯಾವುದೂ ಇಲ್ಲದೆ ಪುರುಷಲಕ್ಷಣವೇ ಇರುವುದು. ಆದರೆ 4 ಮೊಲೆಗಳುಳ್ಳ ಒಂದು ದಪ್ಪನಾದ ಕೆಚ್ಚಲು ಇದ್ದು ಪ್ರತಿನಿತ್ಯದಲ್ಲೂ 2 ಔನ್ಸುಗಳಿಂದ 4 ಔನ್ಸುಗಳವರೆಗೆ ಎಲ್ಲಾ ಮೊಲೆಗಳಿಂದಲೂ ವರ್ಷಕಾಲ ಹಾಲನ್ನು ಕೊಡುವುದು. ಕೆಚ್ಚಲೂ ಮೊಲೆಗಳೂ ಹಸುವಿಗಿರುವಂತೆ ದೃಢವಾಗಿರುವುವು. ಆದರೆ ಹಸುವಿನಲಕ್ಷಣವ್ಯಾವುದೂ ಇಲ್ಲದೆ ಈರೀತಿ ಹಾಲನ್ನು ಕೊಡುತ್ತಿರುವುದು ಆಶ್ಚರ್ಯಕರವೇಸರಿ.

ಸ್ವದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವಕ್ಕೆ ಆಹೂತರಾಗಿರುವ ಮದ್ರಾಸ್ ಗೌರ್ನರ್‌ರಾದ ಗಾಷೆನ್ ದಂಪತಿಗಳು ಉದಕಮಂಡಲದಿಂದ ಈ ತಾ|| 13ರಲ್ಲಿ ರಾಜಧಾನಿಗೆ ಬಂದು ತಾ|| 16ರ ವರೆಗಿದ್ದು ಪುನಃ ಉದಕಮಂಡಲಕ್ಕೇ ಹಿಂದಿರುಗಿ ಹೋಗುವವರಾಗಿರುವರು.

ತೃತೀಯರಾಜಕುಮಾರಿ ಸೌ|| ಚಲುವಾಜಮ್ಮಣ್ಣಿಯವರ ಪುತ್ರಿಯು ಕೈ|| ದಳವಾಯಿ ದೇವರಾಜ ಅರಸಿನವರ ದ್ವಿತೀಯ ಪುತ್ರ ಮ|| ಡಿ. ಮದನಗೋಪಾಲರಾಜ ಅರಸಿನವರಿಗೆ ಕೊಡಲ್ಪಟ್ಟು ವಿವಾಹಮಹೋತ್ಸವವು ಈ ತಾ|| 19ರಲ್ಲಿ ಶ್ರೀಮನ್ ಮಹಾರಾಜರವರಿಂದ ಅರಮನೆಯಲ್ಲಿ ನಡೆಯಿಸಲ್ಪಡುವುದಾಗಿ ತಿಳಿಯಬರುತ್ತದೆ.

ರಾಜಧಾನಿಯಲ್ಲಿ ಈ ವಾರದಲ್ಲೆಲ್ಲಾ ಪ್ರತಿದಿನವೂ ಆಗಾಗ್ಗೆ ಮೋಡ ಮುಸುಕಿಕೊಂಡು ತುಂತುರು ಮಳೆಯಾಗುತ್ತಲೂ ಕೆಲವೇಳೆ ತಕ್ಕಮಟ್ಟಿಗೆ ಗಟ್ಟಿಯಾಗಿ ಬರುತ್ತಲೂ ಇದೆ. ಇದರಿಂದ ವಾತಾವರಣವು ತಕ್ಕಮಟ್ಟಿಗೆ ತಂಪಾಗಿ ಮನೋಹರವಾಗಿದೆ; ವಾಂತಿಭೇದಿ ರೋಗವು ಶಮನವಾಗಿದೆ. ಆದರೆ ಇನ್‌ಫ್ಲೂಯಂಜಾ ರೋಗವು ಮಾತ್ರ ಸಂಪೂರ್ಣವಾಗಿ ನಿಂತಿಲ್ಲ.

ಈ ವರ್ಷ ನಡೆದ ಬಿ. ಎ. ಮೊದಲಾಗಿ ಮೈಸೂರು ಮತ್ತು ಮದ್ರಾಸು ವಿಶ್ವವಿದ್ಯಾಲಯ (ಯೂನಿವರ್ಸಿಟಿ) ಗಳ ಪರೀಕ್ಷೆಗಳಲ್ಲೂ, ಲೋವರ್ ಸೆಕೆಂಡರಿ ಮತ್ತು ಎಸ್. ಎಸ್. ಎಲ್. ಸಿ. ಪರೀಕ್ಷೆಗಳಲ್ಲೂ ತೇರ್ಗಡೆಯನ್ನು ಹೊಂದಿರುವ ವೀರಶೈವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಗಳು ತಂತಮ್ಮ ಹೆಸರುಗಳನ್ನೂ ತಾವು ಮಾಡಿರುವ ಪರೀಕ್ಷೆಯ ಹೆಸರುಗಳನ್ನೂ ತಿಳಿಸಿದಲ್ಲಿ ಸಮಾಜದವರ ತಿಳಿವಿಕೆಗಾಗಿ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿಶೇಖರಾಲಯದ ಮುಖ್ಯಾಧಿಕಾರಿಗಳಾಗಿದ್ದ ಮ|| ಶೇಷಾದ್ರಿ ಅಯ್ಯಂಗಾರರೂ ಅವರ ಕೈಕೆಳಗೆ ಉದ್ಯೋಗಿಯಾಗಿದ್ದ ರಾಮಕೃಷ್ಣಯ್ಯಂಗಾರರೂ ಸಾವಿರಾರು ರೂಪಾಯಿಗಳನ್ನು ದುರುಪಯೋಗಪಡಿಸಿದರೆಂಬ ಅಪರಾಧಕ್ಕಾಗಿ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ಅವರ ಅಪರಾಧವು ನಿದರ್ಶನಕ್ಕೆ ಬಂದುದರ ಮೇಲೆ ಬೆಂಗಳೂರು ಸೆಷನ್ಸ್ ಜಡ್ಜರ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ಪ್ರಜಾಪ್ರತಿನಿಧಿಸಭೆಯ ಬಡ್ಜೆಟ್ ಅಧಿವೇಶನವು ನಾಳೆಯದಿನ ಮಧ್ಯಾಹ್ನ 12 ಗಂಟೆಗೆ ರಾಜಧಾನಿಯ ಜಗನ್ಮೋಹನಪ್ರಾಸಾದದ ಸಭಾಂಗಣದಲ್ಲಿ ಆರಂಭವಾಗುವುದು. ಇದಕ್ಕಾಗಿ ದಿವಾನರು ಕೌನ್ಸಿಲರುಗಳು, ಸೆಕ್ರೆಟರಿಗಳು, ಶಾಖಾಧಿಕಾರಿಗಳು, ಡಿ|| ಕಮಿಷನರುಗಳು ಮತ್ತು ಪ್ರಜಾಪ್ರತಿನಿಧಿಗಳು ಬಂದಿರುವರು. ಸ್ಪೆಷಲ್ ಡ್ಯೂಟಿ ಆಫೀಸರಿಂದ ಟಿಕೆಟ್ಟುಗಳನ್ನು ಪಡೆದುಕೊಂಡು ಯಾರುಬೇಕಾದರೂ ಪ್ರೇಕ್ಷಕರಾಗಿ ಸಭೆಗೆ ಬರಬಹುದೆಂದು ಪ್ರಕಟವಾಗಿದೆ.

ರಾಜಧಾನಿಯ ಮ್ಯುನಿಸಿಪಾಲಿಟಿಯವರು ಪ್ರಜೆಗಳಿಂದ ಬರಬೇಕಾದ ಕಂದಾಯದ ಬಾಕಿಗಾಗಿ ಕೊಡುವ ನೋಟೀಸಿನಲ್ಲಿ ಯಾವ್ಯಾವ ವರ್ಷಕ್ಕೆ ಎಷ್ಟೆಷ್ಟು ಮೊಬಲಗು ಸಲ್ಲಬೇಕಾಗಿದೆ ಎಂಬುದರ ವಿವರವು ಕೊಡಲ್ಪಡದಿರುವುದರಿಂದ ಅದನ್ನು ತಿಳಿದುಕೊಳ್ಳಲಪೇಕ್ಷಿಸಿ ಬರೆದುಕೊಂಡಾಗ್ಗೂ ಮ್ಯುನ್ಸಿಪಾಲಿಟಿಯವರು ಗಮನಿಸದೆ ಬಾಕಿ ವಸೂಲಿಗೆ ಸಖತ್ ತಗಾದೆಕೊಟ್ಟು ವೃಥಾ ತೊಂದರೆಪಡಿಸುತ್ತಿರುವುದಾಗಿ ಅನೇಕರು ನಮಗೆ ತಿಳಿಸಿರುತ್ತಾರೆ. ಆದುದರಿಂದ ಮ್ಯುನ್ಸಿಪಲ್ ಅಧಿಕಾರಿಗಳು ಹಾಗೆ ಮಾಡದೆ ಬಾಕಿದಾರರು ಅಪೇಕ್ಷಿಸುವಂತೆ ಲೆಖ್ಖದ ಸಮಾಧಾನವನ್ನು ಕೊಟ್ಟು ಉಚಿತರೀತಿಯಿಂದ ಕಂದಾಯದ ಹಣವನ್ನು ಬರಮಾಡಿಕೊಳ್ಳುವವರಾಗಬೇಕಾಗಿ ಸೂಚಿಸುತ್ತೇವೆ.

ಗೌರ್ನಮೆಂಟ್ ಪ್ರೆಸ್ಸಿನ ಸೂಪ್ರಿಂಟೆಂಡೆಂಟರಾದ ಮ|| ಬಿ. ಪುಟ್ಟಯ್ಯ, ಬಿ. ಎ., ಯವರ ಸಹೋದರಿಯೂ ಮಹಾರಾಣೀ ಕಾಲೇಜಿನ ವಿದ್ಯಾರ್ಥಿನಿಯೂ ಆದ ಸೌ|| ಇಂದಿರಮ್ಮನವರು ಮೈಸೂರು ವಿಶ್ವವಿದ್ಯಾಲಯದ ಬಿ. ಎ., ಪರೀಕ್ಷೆಯಲ್ಲಿ ಚರಿತ್ರೆಯನ್ನು ಐಚ್ಛಿಕಭಾಗವಾಗಿ ತೆಗೆದುಕೊಂಡು ಉತ್ತೀರ್ಣರಾಗಿರುವರೆಂದು ತಿಳುಹಲು ಬಹಳವಾಗಿ ಹರ್ಷಿಸುತ್ತೇವೆ ಮತ್ತು ಇದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ. ಇವರೂ ಸೌ|| ಲಕ್ಷ್ಮಮ್ಮನವರೂ ಸೇರಿ ಏಕಕಾಲದಲ್ಲಿ ಬಿ. ಎ., ಪ್ರಶಸ್ತಿಯನ್ನು ಪಡೆದುದು ಒಕ್ಕಲಿಗಸಮಾಜಕ್ಕೆ ಅಭೂತಪೂರ್ವವಾಗಿರುವುದಲ್ಲದೆ ವಿಶೇಷಭೂಷಣವಾಗಿರುವುದು. ಈ ಹಿಂದುಳಿದ ವರ್ಗದ ಉಭಯಸ್ತ್ರೀಗ್ರಾಜ್ಯುಏಟುಗಳು ತಮ್ಮ ವಿದ್ಯಾರ್ಜನೆಯ ಮಹಾಫಲವನ್ನು ಅನುಭವಿಸುತ ಸುಖಿಗಳಾಗಿರಲೆಂದು ಕೋರುವೆವು.

1924 ನೇ ಮೇ 28ನೇ ತಾರೀಖಿಗೆ ಆಖೈರಾದ ವಾರದಲ್ಲಿ ಆದ ಸರ್ಕಾರಿಯಪ್ಪಣೆಗಳು.

1. ಶಿವಮೊಗ್ಗಾ ಡಿಸ್ಟ್ರಿಕ್ಟಿನ ವಿದ್ಯಾಭ್ಯಾಸದ ಸೆಸ್ಸನ್ನು ಉಪಯೋಗಿಸುವ ವಿಷಯದಲ್ಲಿ ಅಲ್ಲಿನ ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪಿರುವಂತೆ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರು ಕಳುಹಿಸಿದ ಸಲಹೆಗಳನ್ನು ಮಂಜೂರ್ಮಾಡಿ ಸರ್ಕಾರದವರು ಹುಕುಂ ಮಾಡಿರುತ್ತಾರೆ. ಮಂಜೂರಾದ ಸಲಹೆಗಳು ವರ್ಷಂಪ್ರತಿ ತಗಲುವ 51,785 ರೂಪಾಯಿಗಳ ಖರ್ಚನ್ನೂ ಮತ್ತು ಒಂದೇ ಆವರ್ತಿ ತಗಲುವ 36,150 ರೂಪಾಯಿಗಳ ಖರ್ಚನ್ನೂ ಒಳಗೊಂಡಿವೆ ಮತ್ತು ಸದರಿ ಸಲಹೆಗಳ ಪ್ರಕಾರ ಸದರಿ ಡಿಸ್ಟ್ರಿಕ್ಟಿನ ವಿದ್ಯಾಭ್ಯಾಸದ ಸೌಕರ್ಯಗಳನ್ನು ಮೇಲ್ಪಡಿಸುವ ಬಗ್ಗೆ ಅವಕಾಶವನ್ನು ಮಾಡಿದೆ.

೨. ಮೈಸೂರು ಯೂನಿವರ್ಸಿಟಿಯವರು ನಡೆಸುವ ಎಲ್ಲಾ ಪರೀಕ್ಷೆಗಳಿಗೂ, ಗೊತ್ತುಮಾಡಿರುವ ಫೀಜಿನಲ್ಲಿ ಅರ್ಧವನ್ನು ಮಾತ್ರವೇ ಕೊಟ್ಟು

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜೂನ್ ತಾ|| ೮ ನೆಯ ಭಾನುವಾರ.

AMIN-UL-MULK
MIRZA M. ISMAIL, ESQ., C.I.E.

We have great pleasure in offering our hearty congratulations to Amin-ul-Mulk Mirza M. Ismail, Esq., on his being the recipient of the distinguished title, Companion of the Order of the Indian Empire. It is a fitting recognition by His Majesty the King Emperor of his valued services to the State. Just three years ago His Highness was graciously pleased to confer on him the fitting title of Amin-ul-Mulk or Trusted of the State, and last year His Majesty bestowed on him the Honour of O.B.E. There was a time when a non-European Private Secretary to His Highness the Maharaja was viewed with some concern at some quarters. It is a matter of pride that Mr. Mirza has filled the place as worthily as any of his European predecessors, and we cannot think of any other who has discharged the very arduous duties of the Private Secretary more successfully. In few men is there such a happy combination of patience and hard work, courtesy and descipline, sympathy and judgment as in Mr. Mirza. His has been a bright career and we wish that he may live long to enjoy the unique honour recently conferred on him, to gain the increasing affections of the people and to win yet greater honours.

JUSTICE AND PURITY.

The controrersy over the settled fact of establishing a proper representation of all communities, which could supply the proper candidates, in Public Service is again taken up by our local die-hard journal *The Sampadabhyudaya* and it is lending its columns to irresponsible articles. There is the cry that reduction of the Brahmin element in service would mean the destruction of justice and purity. It is something that now there is not so much the cry of efficiency which used to be trotted up so often before; perhaps because that has fizzed. Words are never wanting for them to abuse the men responsible for giving effect to the Orders on the Miller Committee Report. We do not know how long it will take our contemporary to learn that vilification is hardly the purpose of a journal, is least likely to carry weight, and that there is a constitutional way open now to get things remedied if they are bad or wrong. Incidentally it gives an idea how far the men are prepared to go if their interests are in the slightest affected. After all, what the Government have conceded is so little to the non-Brahmin communities who though form more than 96 percent of the population are yet far from getting 50 per cent of the assured appointments, and so favourable to the small community of Brahmins. If justice and purity are not obtaining to the degree that is expected in Service it is because of the monopoly and class combination that has been existing all these years. Why talk of justice and purity then? There is no chance for either until there is a proper proportion and admixture of all communities in Service. Our contemporay suggests a committee of retired officers to scrutinize appointments, because they would be disinterested and free from communal jealosies. We are doubtful if the virtue of disinterstedness goes with age and there is any special relationship between both. There is more harm than good done by such irrasponsible writings. May we hope that they will cease, and the columns of our contemporary will be employed to some better purpose.

ಶ್ರೀರಂಭಾಪುರೀಜಗದ್ಗುರುಪೀಠಾಧಿಕಾರ.

ವೀರಶೈವಮತಸ್ಥಾಪಕರುಗಳಾದ ಪಂಚಾಚಾರ್ಯರ ಪೀಠಗಳಲ್ಲಿ ಪ್ರಖ್ಯಾತವಾದ ಶ್ರೀರಂಭಾಪುರೀ (ಬಾಳೆಹೊನ್ನೂರು) ಪೀಠಾಧಿಕಾರಿಗಳಾಗಿದ್ದ ಶ್ರೀ ಪಂಚಾಕ್ಷರೀರಾಜದೇಶಿಕೇಂದ್ರ ಮಹಾಸ್ವಾಮಿಗಳು ಈಗ್ಗೆ ೨ ವರ್ಷಗಳಕೆಳಗೆ ಶಿವೈಕ್ಯರಾದುದರಿಂದ, ಬಿಡುವಾಗಿರುವ ಈ ಮಹಾಪೀಠಾಧಿಕಾರ ಸ್ಥಾನಕ್ಕೆ ವಿದ್ಯಾಕುಲಶೀಲಗುಣಸಂಪನ್ನರಾದ ವಟುವನ್ನು ಆರಿಸುವ ವಿಚಾರವಾಗಿ ಈ ಪೀಠದ ಶಿಷ್ಯರುಗಳಲ್ಲಿ ಅನೈಕಮತ್ಯವೂ, ಭಿನ್ನಾಭಿಪ್ರಾಯವೂ ಹುಟ್ಟಿ ವಾದಾನುವಾದಗಳೂ, ಲೇಖಪ್ರತಿಲೇಖಗಳೂ ವಾಚಾಮಗೋಚರವಾಗಿ ನಡೆಯುತ್ತಿರುವುದು ಈ ಸ್ಟಾರ್ ಪತ್ರಿಕಾವಾಚಕರೆಲ್ಲರಿಗೂ ವಿದಿತವಾಗಿರುವುದಷ್ಟೆ? ಈ ವಿಚಾರದಲ್ಲಿ ಉಭಯಪಕ್ಷದವರಿಂದಲೂ ಶ್ರೀಮನ್ಮಹಾರಾಜಾ ಸರ್ಕಾರದ ಮುಜರಾಯಿ ಕಮಿಷನರಿಗೂ ಈ ಶಾಖಾ ಮೇಲ್ವಿಚಾರಣಕರ್ತರಾದ ಎರಡನೆಯ ಕೌನ್ಸಿಲರಿಗೂ ದೂರು ಹೋದುದರ ಮೇಲೆ, ಉಭಯಪಕ್ಷದ ಮುಖಂಡರೂ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಚುನಾಯಿಸುವ ವಟುವನ್ನು ಪಟ್ಟಕಟ್ಟಲು ಸರ್ಕಾರದನುಮತಿಯು ಕೊಡಲ್ಪಡುವುದೆಂದು ಮು|| ಕಮಿಷನರು ಅಪ್ಪಣೆಕೊಡಿಸಿದ ಪ್ರಕಾರ ಈ ಜಗದ್ಗುರು ರೇಣುಕಾಪೀಠದ ಮುಖ್ಯಾಭಿಮಾನಶಾಲಿಗಳಾದ ಎಡೆಹಳ್ಳಿ ಮ|| ಇಂ. ಶಾಂತಪ್ಪಶೆಟ್ಟರು, ಚಿಕ್ಕಮಗಳೂರಿನ ಕಾಫಿಪ್ಲಾಂಟರ್ ಮ|| ಹಂದ್ರೇಗೌಡರು ಮೊದಲಾಗಿ ವೀರಶೈವ ದೊಡ್ಡಮನುಷ್ಯರುಗಳು ಕಳೆದ ಮೇ ತಾ|| 28 ರಲ್ಲಿ ಬೆಂಗಳೂರಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ವಟುವನ್ನು ಆರಿಸುವ ವಿಚಾರದಲ್ಲಿ ದೀರ್ಘವಾಗಿ ಚರ್ಚಿಸಿ ಕಡೆಯಲ್ಲಿ ಒಂದೊಂದು ಪಕ್ಷದಿಂದ 12-12 ರಂತೆ 24 ಜನ ದೊಡ್ಡಮನುಷ್ಯರುಗಳನ್ನೊಳಗೊಂಡ ಒಂದು ಕಮಿಟಿಯನ್ನೇರ್ಪಡಿಸಿ, ಈ ಕಮಿಟಿಯವರು ಉಭಯಪಕ್ಷದವರಪೇಕ್ಷಿಸುವ ವಟುಗಳನ್ನು ಬೆಂಗಳೂರಿಗೆ ಬರಮಾಡಿಕೊಂಡು ಇದೇ ಜೂನ್ ತಾ|| 4ನೆಯ ಬುಧವಾರದ ದಿವಸ ದಿ|| ಬ|| ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆಸೇರಿ ವಟುಗಳ ಕುಲಶೀಲವಿದ್ಯಾಪಾಂಡಿತ್ಯಾದಿಗುಣಗಳನ್ನು ಪರಿಶೀಲಿಸಿ ಓಟುಗಳನ್ನು ಕೊಡಬೇಕೆಂತಲೂ, ಓಟುಗಳು ಸಮವಾಗಿ ಬಂದಲ್ಲಿ ಅಧ್ಯಕ್ಷರಾದ ದಿ|| ಬ|| ಸೆಟ್ಟರು ಒಂದು ಕ್ಯಾಸ್ಟಿಂಗ್ ಓಟನ್ನು ಕೊಡಬಹುದೆಂತಲೂ, ಇದರಿಂದ ಹೆಚ್ಚು ಓಟನ್ನು ಪಡೆಯುವ ವಟುವಿಗೆ ಪಟ್ಟಕಟ್ಟುವಂತೆ ಗೊತ್ತುಮಾಡಿ ಸರ್ಕಾರಕ್ಕೆ ಬಿನ್ನೈಸಿಕೊಳ್ಳಬೇಕೆಂತಲೂ ನಿರ್ಧಾರಮಾಡಿದ್ದರು.

ಆದರೆ ಆರೀತಿ ಕಮಿಟಿಯ ಮೀಟಿಂಗು ಈ ತಾ|| 4 ರಲ್ಲಿ ನಡೆಯಲಿಲ್ಲವೆಂದು ದಿ|| ಬ|| ಪುಟ್ಟಣ್ಣಸೆಟ್ಟರು ಮುಜರಾಯಿ ಕಮಿಷನರ್ ಮಿ|| ಕೆ. ಚಾಂಡಿಯವರಿಗೆ ಬರೆದಿರುವ ಪತ್ರದಿಂದ ತಿಳಿಯಬರುತ್ತದೆ. ಆ ಪತ್ರದಲ್ಲಿ ಮ|| ಸೆಟ್ಟರು ಮುಖ್ಯವಾಗಿ ಲಿಖಿಸಿರುವುದೇನೆಂದರೆ—ಬಾಳೆಹೊನ್ನೂರು (ರಂಭಾಪುರಿ) ಪೀಠಾಧಿಕಾರಕ್ಕೆ ಒಬ್ಬ ವಟುವನ್ನು ಚುನಾಯಿಸಲು ಪೀಠದ ಶಿಷ್ಯರುಗಳ ಕೆಲ ಪ್ರತಿನಿಧಿ ದೊಡ್ಡಮನುಷ್ಯರುಗಳಿಂದ ಗೊತ್ತುಮಾಡಲ್ಪಟ್ಟಿದ್ದ ಕಮಿಟಿಯ ಮೆಂಬರುಗಳಲ್ಲಿ ಒಂದು ಪಕ್ಷದವರು ಕಮಿಟಿಯಲ್ಲಿರಲು ಸಮಾಧಾನಪಡಲಿಲ್ಲವಾಗಿ, ಈ ತಾ|| 4 ರಲ್ಲಿ ಮೀಟಿಂಗು ನಡಿಸಲ್ಪಡಲಾಗಲಿಲ್ಲವು. ಉಭಯಪಕ್ಷದ ಕೆಲ ದೊಡ್ಡಮನುಷ್ಯರುಗಳು ನನ್ನನ್ನು ಕಂಡು ಪ್ರಸ್ತಾಪಿಸಿದುದರಲ್ಲಿ, ಪರಸ್ಪರ ವೈಷಮ್ಯವೂ ಭಿನ್ನಾಭಿಪ್ರಾಯವೂ ಇರುವುದಾಗಿ ವ್ಯಕ್ತವಾಯಿತು. ಒಂದುವೇಳೆ ಮೀಟಿಂಗನ್ನು ನಡಿಸಿ ಓಟನ್ನು ತೆಗೆದುಕೊಂಡಲ್ಲಿ ಅದರ ಪರಿಣಾಮವು ನನ್ನ ಕ್ಯಾಸ್ಟಿಂಗ್ ಓಟಿನ ಮೇಲೆಯೇ ಅವಲಂಬಿಸಿರುತ್ತದೆ (ಉಭಯಪಕ್ಷದ ಮೆಂಬರುಗಳು ಸಮಸಂಖ್ಯಾಕರಾಗಿರುವುದರಿಂದ ಅವರು ಸ್ವಪಕ್ಷಾಭಿಮಾನದಿಂದ ಕೊಡುವ ಓಟುಗಳು ಸಮಸಂಖ್ಯಾಕವಾಗಿಯೇ ಇರುತ್ತವೆ. ಆಗ್ಗೆ ಪ್ರೆಸಿಡೆಂಟರಾದ ಮ|| ಸೆಟ್ಟರು ತಮ್ಮ ಕ್ಯಾಸ್ಟಿಂಗ್ ಓಟನ್ನು ಯಾವ ಪಕ್ಷವಾಗಿ ಕೊಡುವರೋ ಆಪಕ್ಷಕ್ಕೆ ಜಯವುಂಟಾಗುವುದೂ, ಮ|| ಸೆಟ್ಟರಿಗೆ ಪ್ರತಿಪಕ್ಷದವರಿಂದ ದೂರು ಬರುವುದೂ ಸಿದ್ಧವು. ಸಂಪಾದಕ). ಈ ಕಾರಣಗಳಿಂದಲೂ, ಮೇಲ್ಕಂಡ ಪರಿಸ್ಥಿತಿಯಲ್ಲಿ ಕಮಿಟಿಯವರು ಮಾಡುವ ತೀರ್ಮಾನವು, 1924 ನೆಯ ಮೇ ತಾ|| 31 ರಲ್ಲಿ ಮುಜರಾಯಿ ಕಮಿಷನರಿಂದ ಕೊಡಲ್ಪಟ್ಟಿರುವ ಇಂಡಾರ್ಸ್ಮೆಂಟಿನಲ್ಲಿ ಕಂಡ ಷರತ್ತುಗಳ ಪ್ರಕಾರ ಸರ್ಕಾರದವರಿಂದ ಅನುಮೋದಿಸಲ್ಪಡುವ ಸಂಭವವಿಲ್ಲವಾದುದರಿಂದಲೂ ಮೀಟಿಂಗನ್ನು ನಡಿಸುವುದು ಉಚಿತವಾಗಿತೋರಲಿಲ್ಲವು.

ರಾಜತಂತ್ರವಿಶಾರದರೂ, ಅದ್ವಿತೀಯಲೋಕಾನುಭವಿಗಳೂ, ದೂರದರ್ಶಿಗಳೂ, ವೀರಶೈವಸಮಾಜಕ್ಕೆ ತಿಲಕಪ್ರಾಯರೂ ಆದ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಸೆಟ್ಟರ ಮಧ್ಯಸ್ಥಿಕೆಯಲ್ಲಿ ಬಗೆಹರಿಯದಿದ್ದ ಈ ವಿಚಾರವು ಮತ್ತಾರಿಂದ ಬಗೆಹರಿಸಲ್ಪಡಲು ಸಾಧ್ಯವಾದೀತು? ಹೀಗಾದುದು ಈ ಸಮಾಜದ ದುರ್ದೈವವೆಂದೇ ಹೇಳಬೇಕಾಗಿದೆ. ಮುಖ್ಯಾಚಾರ್ಯಪೀಠಾಭಿವೃದ್ಧಿಯ ಮೇಲೆ ದೃಷ್ಟಿಯಿಟ್ಟು ಸ್ವಪಕ್ಷಾಭಿಮಾನ ಸ್ವಪ್ರತಿಷ್ಠೆಗಳನ್ನು ಬಿಟ್ಟು ಎಲ್ಲರೂ ಒಕ್ಕಟ್ಟಿನಿಂದಲೂ ಏಕಾಭಿಪ್ರಾಯದಿಂದಲೂ ವರ್ತಿಸಿ ಈಗ ಸಮಾಜದಲ್ಲುಂಟಾಗಿರುವ ಅನೈಕಮತ್ಯದ್ವೇಷಾಸೂಯಾದಿಗಳನ್ನು ಹೋಗಲಾಡಿಸಿ ಧರ್ಮಜಾಗ್ರತೆಯೂ, ವಿದ್ಯಾಭಿವೃದ್ಧಿಯೂ ಆಗುವಂತೆ ಮಾಡಲು ಸಮರ್ಥರೂ, ಆಚಾರಶೀಲರೂ ಜಿತೇಂದ್ರಿಯರೂ ಸತ್ಕುಲೋತ್ಪನ್ನರೂ ಆದ ವಟುವನ್ನು ಚುನಾಯಿಸಿ ಸರ್ಕಾರದನುಮತಿಯನ್ನು ಪಡೆದು ಜಾಗ್ರತೆಯಲ್ಲಿ ಅವರಿಗೆ ಪಟ್ಟಕಟ್ಟಿ ಶ್ರೀರೇಣುಕರ ಅನುಗ್ರಹಕ್ಕೂ ಸಮಾಜದವರ ಕೃತಜ್ಞತೆಗೂ ಪಾತ್ರರಾಗಲೆಂದು ಆಶಿಸುತ್ತೇವೆ. ಹಾಗಲ್ಲದೆ ಈಗಿನಂತೆ ಪಕ್ಷಾಭಿಮಾನದಿಂದ ಒಬ್ಬರು ಬೇಕೆಂಬುದನ್ನು ಮತ್ತೊಬ್ಬರು ಬೇಡವೆಂದು ಹೋರಾಡುವುದಾದರೆ, ಅನಾಯಕವಾಗಿರುವ ಮುಖ್ಯಾಚಾರ್ಯಪೀಠವು ಕ್ಷೀಣಿಸುವುದು ಮತ್ತು ಅದರಿಂದ ಅವರುಗಳಿಗೆ ಅಪಮಾನವೂ ಕೆಡಕೂ ಆಗದೆ ತಪ್ಪದು. ಅದು ಕಾರಣ ಸಮಾಜಬಾಂಧವರು ಅತ್ಯವಸರಕಾರ್ಯಸಾಧನೆಯಲ್ಲಿ ಜಾಗ್ರತರಾಗಿರಲೆಂದು ಕೋರುತ್ತೇವೆ.

ಮಿ|| ಮಿರ್ಜಾಯವರಿಗೆ ನೂತನಬಿರುದು.

ಭರತಖಂಡದ ಸಾರ್ವಭೌಮರು ತಮ್ಮ ವರ್ಧಂತ್ಯುತ್ಸವದ ದಿವಸ ಪದ್ಧತಿಯಾಗಿ ಕೊಡುತ್ತಬರುವ ಬಿರುದಾವಳಿಗಳೊಳಗೆ ಈಸಲ ನಮ್ಮ ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಅಮೀನ್-ಉಲ್-ಮುಲ್ಕ್ ಮಿ|| ಮಿರ್ಜಾಮಹಮಹಮ್ಮದ್ ಇಸ್ಮಾಯಲ್, ಬಿ. ಎ., ಒ. ಬಿ. ಇ., ಯವರಿಗೆ ಸಿ. ಐ. ಇ., (ಕಂಪ್ಯಾನಿಯನ್ ಆಫ್ ದಿ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್) ಎಂಬ ಘನವಾದ ಬಿರುದು ಅನುಗ್ರಹಿಸಲ್ಪಟ್ಟಿರುವುದೆಂಬುದನ್ನು ತಿಳುಹಲು ಬಹಳವಾಗಿ ಸಂತೋಷಿಸುತ್ತೇವಲ್ಲದೆ ಇದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ. ಪ್ರಭುಪ್ರಜಾವಿಶ್ವಾಸಪಾತ್ರರಾದ ಇವರಿಗೆ ಈ ಗೌರವವು ಲಭ್ಯವಾದುದಕ್ಕಾಗಿ ದೇಶೀಯರೆಲ್ಲಾ ವಿಶೇಷವಾಗಿ ಸಂತೋಷಿಸುತ್ತಾರೆಂಬುದಕ್ಕೆ ಸಂಶಯವಿಲ್ಲವು. ನಮ್ಮ ಸೀಮೆಯ ಮಹಮ್ಮದೀಯಾಧಿಕಾರಿಗಳಲ್ಲಿ ಇಂತಹ ದೊಡ್ಡ ಪ್ರಶಸ್ತಿಯನ್ನು ಪಡೆದವರು ಮಿ|| ಮಿರ್ಜಾಯವರ ವಿನಾ ಬೇರೊಬ್ಬರಿಲ್ಲ.

ತಮ್ಮಂತೆಯೇ ಪರಿಶುದ್ಧಾತ್ಮರೂ ನಿರ್ಮಲಚಿತ್ತರೂ ಆದವರನ್ನೇ ತಮ್ಮ ಸಮೀಪಸ್ಥರನ್ನಾಗಿ ಆರಿಸುವರಲ್ಲದೆ ಸ್ವಲ್ಪ ಸಂಶಯಕ್ಕೆ ಆಸ್ಪದರಾದವರನ್ನು ಕ್ಷಣಮಾತ್ರವೂ ಹತ್ತಿರಕ್ಕೆ ಸೇರಗೊಡಲೊಲ್ಲರಾದ ಮಹಾಪ್ರಭುವರ್ಯರು ತಮ್ಮ ಬಳಿಯಲ್ಲಿ 10-15 ವರ್ಷಗಳಿಂದ ಅಖಂಡವಾಗಿ ಉದ್ಯೋಗಮಾಡಿಕೊಂಡಿರುವ ಮಿ|| ಮಿರ್ಜಾಯವರ ಸ್ವಾಮಿಭಕ್ತಿ, ನಿಸ್ಪೃಹತೆ, ಕಾರ್ಯದಕ್ಷತೆ, ಪ್ರಜಾಭಿಮಾನ, ಸಚ್ಛೀಲ, ಶಾಂತಿ, ಸಮವರ್ತನೆ ಮೊದಲಾದ ಸದ್ಗುಣಗಳಿಗೆ ಮೆಚ್ಚಿ 'ಅಮೀನ್ ಉಲ್ ಮುಲ್ಕ್' ಅಂದರೆ 'ನಂಬುಗೆಗೆ ಪಾತ್ರ' ಎಂಬ ಅನ್ವರ್ಥವುಳ್ಳ ಬಿರುದನ್ನು ಅವರಿಗೆ ದಯಪಾಲಿಸಿದರಲ್ಲದೆ, ಹಿಂದೆ ಯಾವಾಗಲೂ ಆಂಗ್ಲೇಯರು ವಿನಾ ಮತ್ತಾರಿಗೂ ಲಭ್ಯವಾಗದಿದ್ದ ತಮ್ಮ ಪ್ರೈವೇಟ್ ಸೆಕ್ರೆಟರಿಯ ಉದ್ಯೋಗಕ್ಕೆ ಇವರನ್ನು ನೇಮಿಸಿಕೊಂಡಿರುವರು. ಇದರಿಂದ ಮಿ|| ಮಿರ್ಜಾಯವರು ಶ್ರೀಮನ್ ಮಹಾರಾಜರವರ ಛಾಯಾನುವರ್ತಿಗಳಾಗಿ ಅವರ ಪೂರ್ಣಾನುಗ್ರಹಕ್ಕೆ ಎಷ್ಟರಮಟ್ಟಿಗೆ ಪಾತ್ರರಾಗಿರುವರೆಂಬುದು ವ್ಯಕ್ತವಾಗುತ್ತದೆ. ಇವರು ಶ್ರೀಮನ್ ಮಹಾರಾಜರವರ ಮಂತ್ರಾಲೋಚಕರಾಗಿದ್ದುಕೊಂಡು ಯಾವ ಪಕ್ಷಪಾತಾದಿಗಳಿಗೂ ಎಡೆಗೊಡದೆ ಎಲ್ಲಾ ಪ್ರಜೆಗಳಲ್ಲೂ ಸಮದೃಷ್ಟಿಯಿಂದ ಪ್ರವರ್ತಿಸಿ ಸಮಸ್ತರ ಕೃತಜ್ಞತೆಗೂ ಮನ್ನಣೆಗೂ ಪಾತ್ರರಾಗಿರುತ್ತಾರೆ, ಮತ್ತು ಮೈಸೂರು ಟ್ರಸ್ಟ್‌ಬೋರ್ಡಿನಲ್ಲಿ ಬಹುಕಾಲದಿಂದ ಮೆಂಬರಾಗಿದ್ದುಕೊಂಡು ಪ್ರಭುಗಳ ಆಶಯದಂತೆ ರಾಜಧಾನಿಯನ್ನು ರಮಣೀಯಗೊಳಿಸುವುದರಲ್ಲಿ ಕಾಲೋಚಿತವಾದ ಸೂಚನೆಗಳನ್ನು ಕೊಡುತ್ತ ಶ್ರೀಮನ್ ಮಹಾರಾಜರವರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಹೀಗೆ ಪ್ರಭುಪ್ರಜಾಸನ್ಮಾನಿತರಾದ ಮಿ|| ಮಿರ್ಜಾರವರಿಗೆ ಸಾರ್ವಭೌಮರವರು ಕಳೆದವರ್ಷ ಅನುಗ್ರಹಿಸಿದ ಒ. ಬಿ. ಇ. ಬಿರುದಲ್ಲದೆ ಈ ವರ್ಷ ಈ ಘನವಾದ ಬಿರುದನ್ನು ದಯಪಾಲಿಸಿದುದು ಯುಕ್ತವಾಗಿರುತ್ತದೆ. ಜಗದೀಶನು ಮಿ|| ಮಿರ್ಜಾ ಮಹಮ್ಮದ್ ಇಸ್ಮಾಯಲ್ ಬಿ. ಎ, ಒ. ಬಿ. ಇ., ಸಿ. ಐ. ಇ., ರವರಿಗೆ ಇತೋಪ್ಯತಿಶಯವಾದ ಪದವಿಗಳನ್ನೂ, ಪ್ರಶಸ್ತಿಗಳನ್ನೂ, ದೀರ್ಘಾಯುರಾರೋಗ್ಯಗಳನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಅಮೀನ್ ಉಲ್‌ಮುಲ್ಕ್ ಮಿ|| ಮಿರ್ಜಾ ಮಹಮ್ಮದ್ ಇಸ್ಮಾಯಿಲ್, ಬಿ. ಎ, ಒ. ಬಿ. ಇ., ಸಿ. ಐ. ಇ.

ಪತಿತಸ್ತ್ರೀಯರುದ್ಧಾರ.

ಸ್ತ್ರೀಯರಿಗಾಗಿ ಒಂದು ಕೈಗಾರಿಕೆಯ ಶಾಲೆಯನ್ನೇರ್ಪಡಿಸುವುದಕ್ಕಾಗಿಯೂ ದೇವದಾಸಿಯರನ್ನು ಗೃಹಿಣಿಯರನ್ನಾಗಿಮಾಡುವುದಕ್ಕಾಗಿಯೂ ಮದ್ರಾಸಿನಲ್ಲಿ ಒಂದು ಸಂಘವನ್ನೇರ್ಪಡಿಸುವ ಉದ್ದೇಶದಿಂದ ಕಳೆದ ತಾ|| 30ರ ಬೆಳಿಗ್ಗೆ ಮದ್ರಾಸಿನ ಸೌಂದರ್ಯಮಹಲಿನಲ್ಲಿ ಸ್ವಾಮಿ ಶ್ರದ್ಧಾನಂದರವರ ಅಧ್ಯಕ್ಷತೆಯಲ್ಲಿ ಪುರಜನರ ಸಭೆಯೊಂದು ಸೇರಿದ್ದಿತು. ಆಗ ದಿವಾನ್ ಬಹದ್ದೂರ್ ಎಸ್. ಗುರುಸ್ವಾಮಿಸೆಟ್ಟರು, "ದೇವದಾಸಿಯರು ಮೊದಲಾಗಿ ನಮ್ಮ ಹಿಂದೂ ಪತಿತಸ್ತ್ರೀಯರನ್ನು ಸನ್ಮಾರ್ಗಿಗಳನ್ನಾಗಿ ಮಾಡಲು ತಕ್ಕುಪಾಯಗಳನ್ನು ಕಂಡುಹಿಡಿಯುವುದೂ, ಆ ಜನರು ಆತ್ಮೋದ್ಧಾರಕ್ಕಾಗಿ ಪ್ರಯತ್ನಪಡುವಂತೆ ವೃತ್ತಪತ್ರಿಕೆಗಳ ಮತ್ತು ಉಪನ್ಯಾಸಗಳ ಮೂಲಕ ಬೋಧಿಸುವುದಲ್ಲದೆ ಈ ಪತಿತಸ್ತ್ರೀಯರುದ್ಧಾರಕ್ಕಾಗಿ ಧನವನ್ನೂ ಕಾರ್ಯಸಾಧಕ ಜನರನ್ನೂ ಒದಗಿಸಿಕೊಡುವಂತೆ ಹಿಂದೂ ಜನಾಂಗದವರನ್ನು ಪ್ರಾರ್ಥಿಸುವುದೂ, ಈ ಕಾರ್ಯಗಳ ಸಾಧನೆಗಾಗಿ ಒಂದು ಕಾರ್ಯಕಾರಿ ಮಂಡಲಿಯನ್ನು ಕೂಡಲೆ ನೇಮಿಸುವುದೂ ಅತ್ಯಾವಶ್ಯಕವು" ಎಂಬ ಬಗೆಗೆ ಒಂದು ನಿರ್ಧಾರವನ್ನು ಸಭೆಯ ಅನುಮೋದನೆಗಾಗಿಟ್ಟು ಅದರ ಪುಷ್ಟೀಕರಣ ಭಾಷಣಮಾಡುವಾಗ್ಗೆ ದೇವದಾಸಿಯರುತ್ಪನ್ನದ ಕಾರಣವನ್ನು ತಿಳಿಸಿ ಅವರು ಮೂಲೋದ್ದೇಶದಂತೆ ಕೆಲಕಾಲದವರೆಗೆ ನಡೆದುಕೊಂಡುಬಂದು ಆ ನಂತರ ಈಗಿನ ದುರ್ಗತಿಗೆ ಇಳಿದರೆಂಬುದನ್ನು ವಿಶದೀಕರಿಸಿದರಲ್ಲದೆ ದಕ್ಷಿಣ ಇಂಡಿಯಾದಲ್ಲೂ ಆಂಧ್ರದೇಶದಲ್ಲೂ ಆಚರಣೆಯಲ್ಲಿರುವ ಅವರ ಪದ್ಧತಿಯನ್ನು ಕುರಿತು ಪ್ರಸ್ತಾಪಿಸಿ ದೇವದಾಸಿಯರ ಉದ್ಧಾರಕ್ಕಾಗಿ ಈ ಕೆಳಗೆ ಕಂಡ ಮಾರ್ಗಗಳನ್ನು ಸೂಚಿಸಿದರು.—(1) ಈ ದೇವದಾಸಿಯರ ಅವನತಿಗೆ ಮೂಲಕಾರಣವಾದ ವ್ಯಭಿಚಾರವೃತ್ತಿಯನ್ನು ನಿರ್ಮೂಲನಮಾಡುವುದು (2) ಈ ಪಂಗಡದವರು ಇತರ ಪಂಗಡದವರ ಹುಡುಗಿಯರನ್ನು ದತ್ತಕಮಾಡಿಕೊಂಡು ಅವರಿಗೆ ಗಾಯನ ನರ್ತನಗಳನ್ನು ಕಲಿಸಿ ಕಡೆಯಲ್ಲಿ ವ್ಯಭಿಚಾರವೃತ್ತಿಗೆ ಗುರಿಮಾಡುವ ಪದ್ಧತಿಯನ್ನು ನಿಲ್ಲಿಸುವುದು. (3) ಈ ಪಂಗಡದವರು ತಮ್ಮ ಹೆಣ್ಣುಮಕ್ಕಳಿಗೆ ವಿವಾಹವನ್ನು ಮಾಡುವಂತೆ ಕಡ್ಡಾಯಪಡಿಸುವುದು, ಮತ್ತು ಅವರು ತಮ್ಮ ಪಂಗಡದ ಜನರಲ್ಲೇ ಹೆಣ್ಣುಕೊಟ್ಟು ತರುವಂತೆ ಪ್ರೋತ್ಸಾಹಿಸಲು ವೈವಾಹಿಕ ಸಂಘಗಳನ್ನೇರ್ಪಡಿಸುವುದು. (4) ಇಂಡಿಯನ್ ಪಿನಲ್ ಕೋಡಿನ 372 ಮತ್ತು 373ನೇ ಸೆಕ್ಷನ್ನುಗಳಲ್ಲಿ ಹೇಳಲ್ಪಟ್ಟಿರುವ ಅಂಶಗಳು ಈ ಮುಂದೆ ಹೇಳುವ ರೀತಿ ವಿಶೇಷ ಹುರುಳುಳ್ಳವಾಗಿಯೂ ಕಾರ್ಯಸಾಧಕವಾಗಿಯೂ ಇರುವಂತೆ ಬದಲಾಯಿಸಲ್ಪಡಬೇಕು—(*a*) ದತ್ತಪುತ್ರಿಯನ್ನಾಗಲಿ ಅಥವಾ ಔರಸಪುತ್ರಿಯನ್ನಾಗಲಿ ವ್ಯಭಿಚಾರಿಣಿಯನ್ನಾಗಿ ಮಾಡುವುದು ಅಪರಾಧವೆಂದು ವಿಧಿಸುವುದು (*b*) 15 ವರ್ಷ ವಯಸ್ಸಿನೊಳಗಿರುವ ಬಾಲೆಯರು ದೇವಸ್ಥಾನಗಳಲ್ಲಾಗಲಿ ವಿವಾಹಗೃಹಗಳಲ್ಲಾಗಲಿ ಗಾನಮಾಡುವುದು ಅಥವಾ ನಾಟ್ಯವಾಡುವುದು ಅಪರಾಧವೆಂದು ವಿಧಿಸುವುದು (*c*) ತಂದೆ ತಾಯಿಗಳು ಅಥವಾ ಪೋಷಕರುಗಳು ತಮ್ಮ ಹುಡುಗಿಯನ್ನು ವ್ಯಭಿಚಾರವೃತ್ತಿಗಾಗಿ ಸಾಕುತ್ತಾರೆಂದು ಸಕಾರಣದಿಂದ ತಿಳಿದುಬಂದಲ್ಲಿ ಅಂತಹ ಹುಡುಗಿಯರು ಅವರ ವಶದಿಂದ ತಪ್ಪಿಸಲ್ಪಟ್ಟು ಎಸ್. ಪಿ. ಎಸ್. ನಂತಹ ಶರಣಾಲಯಗಳಿಗೆ ಕಳುಹಲ್ಪಡುವುದು. (5) 18 ವರ್ಷಗಳಿಗೆ ಕಡಿಮೆಯಿರುವ ಹುಡುಗಿಯರು ಯಾವರೀತಿಯಲ್ಲಿ ಸಾಕಲ್ಪಡುತ್ತಿರುವರು ಅಥವಾ ನಿಯೋಜಿಸಲ್ಪಡುತ್ತಿರುವರೆಂಬುದು ವಿಚಾರಿಸಲ್ಪಡುವುದು (6) ಇಂಡಿಯನ್ ಪಿನಲ್ ಕೋಡಿನ 372-373ನೇ ಸೆಕ್ಷನ್ನುಗಳ ಪ್ರಕಾರ ಎಷ್ಟು ಜನರು ಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟರೆಂಬುದನ್ನು ಪೋಲೀಸರು ಸರ್ಕಾರಕ್ಕೆ ವರದಿಮಾಡುವಂತೆ ಏರ್ಪಡಿಸುವುದು (7) ದೇವಸ್ಥಾನಗಳ ಮತ್ತು ಮಠಗಳ ಧರ್ಮದರ್ಶಿಗಳು ದೇವದಾಸಿಯರನ್ನು ನೇಮಿಸಿಕೊಳ್ಳದಂತೆ ಮಾಡುವುದು ಮತ್ತು ದೇವದಾಸಿಯರಿಗೆ ಇನಾಂ ಭೂಮಿಗಳಿದ್ದರೆ ಅವುಗಳನ್ನು ಅವರ ಹೆಸರಿಗೆ ಪಟ್ಟಮಾಡಿಕೊಡುವುದು (8) ದೇವದಾಸಿಯರ ಆಸ್ತಿಯು ಅವರ ದತ್ತಪುತ್ರಿಯರಿಗೆ ಸಲ್ಲತಕ್ಕುದಲ್ಲವೆಂದು ವಿಧಿಸುವುದು. (9) ಲಗ್ನದ ಮನೆಗಳಲ್ಲಿ ಹಾಡುವುದನ್ನೂ ನರ್ತನಮಾಡುವುದನ್ನೂ ನಿರೋಧಿಸುವುದು (10) ಬಾಲೆಯರಿಗೂ ಪ್ರೌಢಸ್ತ್ರೀಯರಿಗೂ ನೂಲನ್ನು ತೆಗೆಯುವುದು ನೇಯುವುದು ಹೊಲೆಯುವುದು ಚಿತ್ತಹೆಣೆಯುವುದು ಹೆರಿಗೆಮಾಡಿಸುವುದು ವೈದ್ಯಮಾಡುವುದು ಮೊದಲಾದ ಮನೆಯ ಕಸುಬುಗಳನ್ನು ಕಲಿಸುವುದು (11) ಈ ಪಂಗಡದ ಸ್ತ್ರೀಯರು ಆಡಂಬರವಿಲ್ಲದೆ ಬಹಳ ಸಾಧಾರಣ ಜೀವನಮಾಡುವಂತೆಯೂ ಮದ್ಯಪಾನಮಾಡದಂತೆಯೂ ಬೋಧಿಸುವುದು. (12) ಈ ಜನರಲ್ಲಾಗುವ ವಿವಾಹವನ್ನು ಸಿವಿಲ್ ಮ್ಯಾರಿಯೆಜ್ ಆಕ್ಟ್‌ಪ್ರಕಾರ ಅಂದರೆ ಧರ್ಮಶಾಸ್ತ್ರರೀತ್ಯಾ ಆದಂತೆ ಪರಿಗಣಿಸುವುದು.

ಹಿಂದೂ ಮಹಮ್ಮದೀಯರ ಸಖ್ಯವು.

ಲಾಹೋರಿನಲ್ಲಿ ಜಿನ್ನಾರವರ ಅಧ್ಯಕ್ಷತೆಯಲ್ಲಿ ಜರುಗಿದ ಅಖಿಲಭಾರತ ಮಹಮ್ಮದೀಯ ಮಹಾಸಭೆಯಲ್ಲಿ ಹಿಂದೂ ಮಹಮ್ಮದಿಯರ ಸಖ್ಯದ ವಿಚಾರದಲ್ಲಿ ಉಪನ್ಯಾಸಗಳೂ ದೀರ್ಘಾಲೋಚನೆಯೂ ನಡೆದುವು. "ಯಾವ ಮತವೂ ಆತ್ಮಸಂಯಮನವನ್ನೂ ಸಹನಭಾವವನ್ನೂ ಬೋಧಿಸುತ್ತಿದೆಯೆಂದು ಗ್ರಹಿಸದರೆ, ಹಿಂದೂ ಮಹಮ್ಮದೀಯ ಕಲಹವುಂಟಾಗುವುದಿಲ್ಲ" ಎಂದು ಸತ್ಕಾರ ಸಂಘಾಧ್ಯಕ್ಷರಾಗಿದ್ದ ಆಗಾ ಮಹಮ್ಮದ್ ಸಫ್‌ದಾರ್‌ರವರು ಹೇಳಿದರು. ಇದೇ ವಿಷಯವನ್ನು ಅಧ್ಯಕ್ಷರಾಗಿದ್ದ ಜಿನ್ನಾಯವರು ಪುಷ್ಟೀಕರಿಸಿ ಪ್ರಸ್ತಾಪಿಸಿದರಲ್ಲದೆ, ಸ್ವರಾಜ್ಯಸಿದ್ಧಿಗೆ ಹಿಂದೂಗಳೂ ಮಹಮ್ಮದೀಯರೂ ಯಾವ ದಿವಸ ಸ್ನೇಹದಿಂದರುವರೋ ಆ ದಿವಸವೇ ಸ್ವರಾಜ್ಯವು ಲಭಿಸುವುದೆಂದೂ, ಹಿಂದೂ ಮಹಮ್ಮದೀಯರ ಸಖ್ಯವೂ ಸ್ವರಾಜ್ಯವೂ ಪರ್ಯಾಯಶಬ್ದಗಳೆಂದೂ ತಿಳಿಸಿದರು. ಜಿನ್ನಾಯವರು ಅಸಹಾಯವಾದಿಗಳಾಗಿದ್ದರೂ, ಜಾತ್ಯೈಕ್ಯಕ್ಕೂ ಸ್ವರಾಜ್ಯಕ್ಕೂ ಅವಿನಾಭಾವ ಸಂಬಂಧವಿರುವುದೆಂದು ತಿಳಿದಿರುವರು. ಹಿಂದೂಗಳಿಗೂ ಮಹಮ್ಮದೀಯರಿಗೂ ಸಂದೇಹವುಂಟಾಗಲು ಪ್ರಯತ್ನಿಸಬೇಕೆಂದು ಈ ಸಭಾಧ್ಯಕ್ಷರಿಗೆ ಮಹಾತ್ಮಾ ಗಾಂಧಿಯವರು ತಂತ್ರಿವಾರ್ತೆಯ ಮೂಲಕ ತಿಳಿಸಿದ್ದರು. ಮಹಾತ್ಮರ ಕೋರಿಕೆಯ ಪ್ರಕಾರದಿಂದಲೂ ಅಖಿಲಭಾರತ ಮಹಮ್ಮದಿಯ ಮಹಾಸಭೆಯವರ ಪ್ರಯತ್ನ ವಿಶೇಷದಿಂದಲೂ ಹಿಂದೂ ಮಹಮ್ಮದೀಯರ ಸಖ್ಯವು ಕುದುರುವುದಾದರೆ ಸ್ವರಾಜ್ಯವು ಪ್ರಾಪ್ತವಾಗುವುದಲ್ಲದೆ, ಗೋವಧಾ ವಿಚಾರದಲ್ಲೂ ಮಸೀದಿಗಳ ಮುಂಗಡೆ ಹಿಂದೂ ದೇವತೋತ್ಸವಾದಿಗಳು ವಾದ್ಯಸಮೇತ ನಡಿಯುವುದರಲ್ಲೂ ಸಂಭವಿಸುತ್ತಿರುವ ಮಹಾನರ್ಥವು ನಿವಾರಿತವಾಗಿ ಉಭಯತ್ರರಿಗೂ ಮಹೋಪಕಾರವಾಗುವುದರಲ್ಲಿ ಸಂದೇಹವಿಲ್ಲವು.

ಜಪಾನು ಅಮೇರಿಕೆ.

ಅಮೇರಿಕೆಯನ್ನು ಜಪಾನರು ಪ್ರವೇಶಿಸಕೂಡದೆಂದು ಅಮೇರಿಕೆಯ ಪ್ರಭುತ್ವದವರು ನಿರ್ಮಿಸಿರುವ ಬಹಿಷ್ಕಾರ ಚಟ್ಟವು ಜಪಾನಿನಲ್ಲಿ ಬಹಳ ಕಲವರಿಕೆಯನ್ನುಂಟುಮಾಡಿದೆ. ಈ ಬಹಿಷ್ಕಾರ ಚಟ್ಟದ ವಿಷಯವಾಗಿ ತಮ್ಮ ಸಮಾಧಾನವನ್ನು ತಿಳಿಸಬೇಕಾಗಿಯೂ, ಅಮೇರಿಕೆಯಲ್ಲಿರುವ ತಮ್ಮ ರಾಯಭಾರಿಯನ್ನು ಹಿಂದಿರುಗಿ ಕರಿಸಿಕೊಳ್ಳಬೇಕಾಗಿಯೂ ಜಪಾನಿನ ಮಂತ್ರಿಮಂಡಲದವರು ತೀರ್ಮಾನಿಸಿಕೊಂಡಿರುವರು. ಇದೂ ಅಲ್ಲದೆ ಜಪಾನು ಪಾರ್ಲಿಮೆಂಟ್ ಸಭೆಯವರೂ ಅಮೇರಿಕೆಯ ಬಹಿಷ್ಕಾರ ಶಾಸನವನ್ನು ಖಂಡಿಸಬೇಕಾಗಿ ತೀರ್ಮಾನಿಸಿರುವರು. ಅಮೇರಿಕೆಯ ವೈಮಾನಿಕರನ್ನು ಜಪಾನು ಆತಿಥ್ಯಸತ್ಕಾರಗಳಿಂದ ಎಷ್ಟೋ ಗೌರವಿಸಿದ್ದಾಗ್ಗೂ ಜಪಾನೀಯರು ಅಮೇರಿಕೆಯನ್ನು ಪ್ರವೇಶಿಸಕೂಡದೆಂದು ಶಾಸನವನ್ನು ಮಾಡಿರುವುದು ಬಹಳ ಅಸಹ್ಯವಾಗಿರುವುದರಿಂದ ಜಪಾನು ತನ್ನ ಆತ್ಮಗೌರವವನ್ನು ಈ ಸಮಯದಲ್ಲಿ ಉಳಿಸಿಕೊಂಡು ಪೂರ್ವಖಂಡದ ಗೌರವವನ್ನೂ ಸಹ ಕಾಪಾಡುವುದು ಅತ್ಯಾವಶ್ಯಕವೆಂದು ಹೇಳಬೇಕಾದುದಿಲ್ಲವು.

ಜಿನ್ನಾ ಮಹಮ್ಮದಾಲಿಯವರು.

ಲಾಹೋರಿನಲ್ಲಿ ಉಪನ್ಯಾಸಮಾಡುವಾಗ್ಗೆ, ಕೌನ್ಸಿಲು ದ್ವಾರಾ ಅಧಿಕಾರಿ ವರ್ಗದವರೊಡನೆ ಹೋರಾಡುವುದು ಅತ್ಯವಸರವೆಂದು ಜಿನ್ನಾರವರು ಪ್ರತಿಪಾದಿಸಿದರಲ್ಲದೆ, ಸಕ್ರಮಾಂದೋಳನವು ವ್ಯರ್ಥವಾದುದರಿಂದ ಅಧಿಕಾರಿಗಳ ಕಾರ್ಯಸ್ತಂಭನ ಪ್ರಯತ್ನವನ್ನು ತಾವು ಅನುಮೋದಿಸುತ್ತೇವೆಂದು ತಿಳಿಸಿದರು. ತರುವಾಯ ಮಹಮ್ಮದಾಲಿಯವರು ಉಪನ್ಯಸಿಸುವಾಗ್ಗೆ ಅಸಹಾಯೋದ್ಯಮ ಮಾತ್ರ ವಿಫಲವಾಗುವುದಿಲ್ಲವೆಂದೂ, ಮಹಾತ್ಮಾಗಾಂಧಿಯವರನ್ನು ಅನುಕರಿಸದೆ ಇರುವುದರಿಂದ ಪ್ರಜೆಗಳಿಗೆ ಅಪಜಯವಾಗುತ್ತಿರುವುದೆಂದೂ ಸ್ಪಷ್ಟೀಕರಿಸಿದರಲ್ಲದೆ, ತಾವು ಶಾಸನಸಭೆಯನ್ನು ಪ್ರವೇಶಿಸುವುದಿಲ್ಲವೆಂದೂ, ಸ್ವರಾಜ್ಯಪಕ್ಷದವರು ಭ್ರಮಾರಹಿತರಾಗಿ ಶಾಸನಸಭೆಯನ್ನು ಬಿಟ್ಟು ಮಹಾತ್ಮರ ನಾಯಕತ್ವದಿಂದ ಶಾಸನೋಲ್ಲಂಘನವನ್ನು ತ್ವರೆಯಿಂದ ಅವಲಂಬಿಸಬೇಕಾಗಿ ಕೋರುತ್ತೇವೆಂದೂ ತಿಳಿಸಿದರು.

ಶ್ರೀಯುತ ಶಂಕರಣ್ಣನವರ ಧರ್ಮೌದಾರ್ಯ.

ಹೈದರಾಬಾದು ಸಂಸ್ಥಾನಕ್ಕೆ ಸೇರಿದ ಗುಲ್ಬರ್ಗಾ ಡಿ|| ಯಾದ್ಗಿರಿ ವಾಸಿಗಳಾದ ಶ್ರೀಮಂತ ಸಜ್ಜನಶೆಟ್ಟಿ ಶಂಕರಣ್ಣನವರು ತಮ್ಮ ವೀರಶೈವಮತಸ್ಥರ ಸಂಸ್ಕೃತವಿದ್ಯಾಭಿವೃದ್ಧಿಗಾಗಿ ಒಂದು ಸಂಸ್ಕೃತಮಹಾಪಾಠಶಾಲೆಯನ್ನು ತಮ್ಮ ಹೆಸರಿನಿಂದ ಸ್ಥಾಪಿಸಲು ಒಂದು ಲಕ್ಷರೂಪಾಯಿಗಳನ್ನು ಅರ್ಪಿಸಿರುವ ಸಂಗತಿಯನ್ನು ಕುರಿತ ಪತ್ರವ್ಯವಹಾರವು ಈ ಪತ್ರಿಕೆಯ ಬೇರೊಂದು ಕಡೆಯಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಸ್ವಧರ್ಮಜ್ಞಾನಾರ್ಜನೆಗೆ ಮುಖ್ಯಸಾಧಕವಾದ ಸಂಸ್ಕೃತವಿದ್ಯಾಭ್ಯಾಸಕ್ಕಾಗಿ ಒಂದು ಮಹಾಪಾಠಶಾಲೆಯನ್ನು ಸ್ಥಾಪಿಸಲು ಮಹೌದಾರ್ಯದಿಂದ 1 ಲಕ್ಷ ರೂ. ಗಳನ್ನು ದಾನಮಾಡಿ ಸಮಾಜದ ಚಿರಕೃತಜ್ಞತೆಗೂ ಈಶ್ವರನ ಕೃಪೆಗೂ ಪಾತ್ರರಾದುದಕ್ಕಾಗಿ ನಾವು ಅವರನ್ನು ಸಮಾಜದವರ ಪರವಾಗಿ ಅಭಿನಂದಿಸುತ್ತೇವೆ.

ಎತ್ತು ಹಾಲನ್ನು ಕರೆಯುವುದು.

ಬೊಂಬಾಯಿ ಮ್ಯುನಿಸಿಪಾಲಿಟಿಗೆ ಸೇರಿದ ಮರ್ರೈಹುಟ್ಟಿನ ಒಂದು ಎತ್ತು ಹಾಲನ್ನು ಕರೆಯುತ್ತಿರುವುದರಮೇಲೆ 1923 ನೆಯ ಡಿಸಂಬರ್ ತಿಂಗಳಲ್ಲಿ ಬೊಂಬಾಯಿನ ಪಶುವೈದ್ಯ ಪ್ರೌಢವಿದ್ಯಾಲಯಕ್ಕೆ ಪರೀಕ್ಷೆಗಾಗಿ ತರಲ್ಪಟ್ಟಿದ್ದಿತು. ಈ ಎತ್ತಿಗೆ ಸ್ತ್ರೀಲಕ್ಷಣವ್ಯಾವುದೂ ಇಲ್ಲದೆ ಪುರುಷಲಕ್ಷಣವೇ ಇರುವುದು. ಆದರೆ 4 ಮೊಲೆಗಳುಳ್ಳ ಒಂದು ದಪ್ಪನಾದ ಕೆಚ್ಚಲು ಇದ್ದು ಪ್ರತಿನಿತ್ಯದಲ್ಲೂ 2 ಔನ್ಸುಗಳಿಂದ 4 ಔನ್ಸುಗಳವರೆಗೆ ಎಲ್ಲಾ ಮೊಲೆಗಳಿಂದಲೂ ವರ್ಷಕಾಲ ಹಾಲನ್ನು ಕೊಡುವುದು. ಕೆಚ್ಚಲೂ ಮೊಲೆಗಳೂ ಹಸುವಿಗಿರುವಂತೆ ದೃಢವಾಗಿರುವುವು. ಆದರೆ ಹಸುವಿನಲಕ್ಷಣವ್ಯಾವುದೂ ಇಲ್ಲದೆ ಈರೀತಿ ಹಾಲನ್ನು ಕೊಡುತ್ತಿರುವುದು ಆಶ್ಚರ್ಯಕರವೇಸರಿ.

ಸ್ವದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ವರ್ಧಂತಿ ಮಹೋತ್ಸವಕ್ಕೆ ಆಹೂತರಾಗಿರುವ ಮದ್ರಾಸ್ ಗೌರ್ನರ್‌ರಾದ ಗಾಷನ್ ದಂಪತಿಗಳು ಉದಕಮಂಡಲದಿಂದ ಈ ತಾ|| 13ರಲ್ಲಿ ರಾಜಧಾನಿಗೆ ಬಂದು ತಾ|| 16ರ ವರೆಗಿದ್ದು ಪುನಃ ಉದಕಮಂಡಲಕ್ಕೇ ಹಿಂದಿರುಗಿ ಹೋಗುವವರಾಗಿರುವರು.

ತೃತೀಯರಾಜಕುಮಾರಿ ಸೌ|| ಚಲುವಾಜಮ್ಮಣ್ಣಿಯವರ ಪುತ್ರಿಯು ಕೈ|| ದಳವಾಯಿ ದೇವರಾಜ ಅರಸಿನವರ ದ್ವಿತೀಯ ಪುತ್ರ ಮ|| ಡಿ. ಮದನಗೋಪಾಲರಾಜ ಅರಸಿನವರಿಗೆ ಕೊಡಲ್ಪಟ್ಟು ವಿವಾಹಮಹೋತ್ಸವವು ಈ ತಾ|| 19ರಲ್ಲಿ ಶ್ರೀಮನ್ ಮಹಾರಾಜರವರಿಂದ ಅರಮನೆಯಲ್ಲಿ ನಡೆಯಿಸಲ್ಪಡುವುದಾಗಿ ತಿಳಿಯಬರುತ್ತದೆ.

ರಾಜಧಾನಿಯಲ್ಲಿ ಈ ವಾರದಲ್ಲೆಲ್ಲಾ ಪ್ರತಿದಿನವೂ ಆಗಾಗ್ಗೆ ಮೋಡ ಮುಸುಕಿಕೊಂಡು ತುಂತುರು ಮಳೆಯಾಗುತ್ತಲೂ ಕೆಲವೇಳೆ ತಕ್ಕಮಟ್ಟಿಗೆ ಗಟ್ಟಿಯಾಗಿ ಬರುತ್ತಲೂ ಇದೆ. ಇದರಿಂದ ವಾತಾವರಣವು ತಕ್ಕಮಟ್ಟಿಗೆ ತಂಪಾಗಿ ಮನೋಹರವಾಗಿದೆ; ವಾಂತಿಭೇದಿ ರೋಗವು ಶಮನವಾಗಿದೆ. ಆದರೆ ಇನ್‌ಫ್ಲೂಯಂಜಾ ರೋಗವು ಮಾತ್ರ ಸಂಪೂರ್ಣವಾಗಿ ನಿಂತಿಲ್ಲ.

ಈ ವರ್ಷ ನಡೆದ ಬಿ. ಎ. ಮೊದಲಾಗಿ ಮೈಸೂರು ಮತ್ತು ಮದ್ರಾಸು ವಿಶ್ವವಿದ್ಯಾಲಯ (ಯೂನಿವರ್ಸಿಟಿ) ಗಳ ಪರೀಕ್ಷೆಗಳಲ್ಲೂ, ಲೋವರ್ ಸೆಕೆಂಡರಿ ಮತ್ತು ಎಸ್. ಎಸ್. ಎಲ್. ಸಿ. ಪರೀಕ್ಷೆಗಳಲ್ಲೂ ತೇರ್ಗಡೆಯನ್ನು ಹೊಂದಿರುವ ವೀರಶೈವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಗಳು ತಂತಮ್ಮ ಹೆಸರುಗಳನ್ನೂ ತಾವು ಮಾಡಿರುವ ಪರೀಕ್ಷೆಯ ಹೆಸರುಗಳನ್ನೂ ತಿಳಿಸಿದಲ್ಲಿ ಸಮಾಜದವರ ತಿಳಿವಿಕೆಗಾಗಿ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿಶೇಖರಾಲಯದ ಮುಖ್ಯಾಧಿಕಾರಿಗಳಾಗಿದ್ದ ಮ|| ಶೇಷಾದ್ರಿ ಅಯ್ಯಂಗಾರರೂ ಅವರ ಕೈಕೆಳಗೆ ಉದ್ಯೋಗಿಯಾಗಿದ್ದ ರಾಮಕೃಷ್ಣಯ್ಯಂಗಾರರೂ ಸಾವಿರಾರು ರೂಪಾಯಿಗಳನ್ನು ದುರುಪಯೋಗಪಡಿಸಿದರೆಂಬ ಅಪರಾಧಕ್ಕಾಗಿ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ಅವರ ಅಪರಾಧವು ನಿದರ್ಶನಕ್ಕೆ ಬಂದುದರ ಮೇಲೆ ಬೆಂಗಳೂರು ಸೆಷನ್ಸ್ ಜಡ್ಜರ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನವು ನಾಳೆಯದಿನ ಮಧ್ಯಾಹ್ನ 12 ಗಂಟೆಗೆ ರಾಜಧಾನಿಯ ಜಗನ್ಮೋಹನಪ್ರಾಸಾದದ ಸಭಾಂಗಣದಲ್ಲಿ ಆರಂಭವಾಗುವುದು. ಇದಕ್ಕಾಗಿ ದಿವಾನರು ಕೌನ್ಸಿಲರುಗಳು, ಸೆಕ್ರೆಟರಿಗಳು, ಶಾಖಾಧಿಕಾರಿಗಳು, ಡಿ|| ಕಮಿಷನರುಗಳು ಮತ್ತು ಪ್ರಜಾಪ್ರತಿನಿಧಿಗಳು ಬಂದಿರುವರು. ಸ್ಪೆಷಲ್ ಡ್ಯೂಟಿ ಆಫೀಸರಿಂದ ಟಿಕೆಟ್ಟುಗಳನ್ನು ಪಡೆದುಕೊಂಡು ಯಾರುಬೇಕಾದರೂ ಪ್ರೇಕ್ಷಕರಾಗಿ ಸಭೆಗೆ ಬರಬಹುದೆಂದು ಪ್ರಕಟವಾಗಿದೆ.

ರಾಜಧಾನಿಯ ಮ್ಯುನಿಸಿಪಾಲಿಟಿಯವರು ಪ್ರಜೆಗಳಿಂದ ಬರಬೇಕಾದ ಕಂದಾಯದ ಬಾಕಿಗಾಗಿ ಕೊಡುವ ನೋಟೀಸಿನಲ್ಲಿ ಯಾವ್ಯಾವ ವರ್ಷಕ್ಕೆ ಎಷ್ಟೆಷ್ಟು ಮೊಬಲಗು ಸಲ್ಲಬೇಕಾಗಿದೆ ಎಂಬುದರ ವಿವರವು ಕೊಡಲ್ಪಡದಿರುವುದರಿಂದ ಅದನ್ನು ತಿಳಿದುಕೊಳ್ಳಲಪೇಕ್ಷಿಸಿ ಬರೆದುಕೊಂಡಾಗ್ಗೂ ಮ್ಯುನ್ಸಿಪಾಲಿಟಿಯವರು ಗಮನಿಸದೆ ಬಾಕಿ ವಸೂಲಿಗೆ ಸಖತ್ ತಗಾದೆಕೊಟ್ಟು ವೃಥಾ ತೊಂದರೆಪಡಿಸುತ್ತಿರುವುದಾಗಿ ಅನೇಕರು ನಮಗೆ ತಿಳಿಸಿರುತ್ತಾರೆ. ಆದುದರಿಂದ ಮ್ಯುನ್ಸಿಪಲ್ ಅಧಿಕಾರಿಗಳು ಹಾಗೆ ಮಾಡದೆ ಬಾಕಿದಾರರು ಅಪೇಕ್ಷಿಸುವಂತೆ ಲೆಖ್ಖದ ಸಮಾಧಾನವನ್ನು ಕೊಟ್ಟು ಉಚಿತರೀತಿಯಿಂದ ಕಂದಾಯದ ಹಣವನ್ನು ಬರಮಾಡಿಕೊಳ್ಳುವವರಾಗಬೇಕಾಗಿ ಸೂಚಿಸುತ್ತೇವೆ.

ಗೌರ್ನಮೆಂಟ್ ಪ್ರೆಸ್ಸಿನ ಸೂಪ್ರಿಂಟೆಂಡೆಂಟರಾದ ಮ|| ಬಿ. ಪುಟ್ಟಯ್ಯ, ಬಿ. ಎ, ಯವರ ಸಹೋದರಿಯೂ ಮಹಾರಾಣೀ ಕಾಲೇಜಿನ ವಿದ್ಯಾರ್ಥಿನಿಯೂ ಆದ ಸೌ|| ಇಂದಿರಮ್ಮನವರು ಮೈಸೂರು ವಿಶ್ವವಿದ್ಯಾಲಯದ ಬಿ. ಎ., ಪರೀಕ್ಷೆಯಲ್ಲಿ ಚರಿತ್ರೆಯನ್ನು ಐಚ್ಛಿಕಭಾಗವಾಗಿ ತೆಗೆದುಕೊಂಡು ಉತ್ತೀರ್ಣರಾಗಿರುವರೆಂದು ತಿಳುಹಲು ಬಹಳವಾಗಿ ಹರ್ಷಿಸುತ್ತೇವೆ ಮತ್ತು ಇದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ. ಇವರೂ ಸೌ|| ಲಕ್ಷ್ಮಮ್ಮನವರೂ ಸೇರಿ ಏಕಕಾಲದಲ್ಲಿ ಬಿ. ಎ., ಪ್ರಶಸ್ತಿಯನ್ನು ಪಡೆದುದು ಒಕ್ಕಲಿಗಸಮಾಜಕ್ಕೆ ಅಭೂತಪೂರ್ವವಾಗಿರುವುದಲ್ಲದೆ ವಿಶೇಷಭೂಷಣವಾಗಿರುವುದು. ಈ ಹಿಂದುಳಿದ ವರ್ಗದ ಉಭಯಸ್ತ್ರೀಗ್ರಾಜ್ಯುವೆಟುಗಳು ತಮ್ಮ ವಿದ್ಯಾರ್ಜನೆಯ ಮಹಾಫಲವನ್ನು ಅನುಭವಿಸುತ ಸುಖಿಗಳಾಗಿರಲೆಂದು ಕೋರುವೆವು.

1924 ನೇ ಮೇ 28ನೇ ತಾರೀಖಿಗೆ ಆಖೈರಾದ ವಾರದಲ್ಲಿ ಆದ ಸರ್ಕಾರಿಯುಪ್ಪಣೆಗಳು.

1. ಶಿವಮೊಗ್ಗಾ ಡಿಸ್ಟ್ರಿಕ್ಟಿನ ವಿದ್ಯಾಭ್ಯಾಸದ ಸೆಸ್ಸನ್ನು ಉಪಯೋಗಿಸುವ ವಿಷಯದಲ್ಲಿ ಅಲ್ಲಿನ ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪಿರುವಂತೆ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರು ಕಳುಹಿಸಿದ ಸಲಹೆಗಳನ್ನು ಮಂಜೂರ್ಮಾಡಿ ಸರ್ಕಾರದವರು ಹುಕುಂ ಮಾಡಿರುತ್ತಾರೆ. ಮಂಜೂರಾದ ಸಲಹೆಗಳು ವರ್ಷಂಪ್ರತಿ ತಗಲುವ 51,785 ರೂಪಾಯಿಗಳ ಖರ್ಚನ್ನೂ ಮತ್ತು ಒಂದೇ ಆವರ್ತಿ ತಗಲುವ 36,150 ರೂಪಾಯಿಗಳ ಖರ್ಚನ್ನೂ ಒಳಗೊಂಡಿವೆ ಮತ್ತು ಸದರಿ ಸಲಹೆಗಳ ಪ್ರಕಾರ ಸದರಿ ಡಿಸ್ಟ್ರಿಕ್ಟಿನ ವಿದ್ಯಾಭ್ಯಾಸದ ಸೌಕರ್ಯಗಳನ್ನು ಮೇಲ್ಪಡಿಸುವ ಬಗ್ಗೆ ಅವಕಾಶವನ್ನು ಮಾಡಿದೆ.

2. ಮೈಸೂರು ಯೂನಿವರ್ಸಿಟಿಯವರು ನಡೆಸುವ ಎಲ್ಲಾ ಪರೀಕ್ಷೆಗಳಿಗೂ, ಗೊತ್ತುಮಾಡಿರುವ ಫೀಜಿನಲ್ಲಿ ಅರ್ಧವನ್ನು ಮಾತ್ರವೇ ಕೊಟ್ಟು

ವಿದ್ಯಾರ್ಥಿನಿಯರು ಪರೀಕ್ಷೆಗೆ ಹೋಗುವುದಕ್ಕೆ ಅವಕಾಶವನ್ನು ಕೊಡಲಾಗುವಂತೆ ಯೂನಿವರ್ಸಿಟಿಯ ಕಾನೂನನ್ನು ತಿದ್ದುಪಾಟುಮಾಡುವ ವಿಷಯದಲ್ಲಿ ಯೂನಿವರ್ಸಿಟಿಯ ಸೆನೇಟಿನವರು ಮಾಡಿದ ನಿರ್ಣಯವನ್ನು ಮಂಜೂರ್ಮಾಡಿದೆ.

3. ವಿದ್ಯಾಭ್ಯಾಸದ ಇನ್ಸ್‌ಪೆಕ್ಟರುಗಳಿಗೆ ಹಾಲಿ ಹಂಚಿರತಕ್ಕ ಕೆಲಸದ ಅಧಿಕಾರ ವ್ಯಾಪ್ತಿಯನ್ನು ಕೋಲಾರ ಡಿಸ್ಟ್ರಿಕ್ಟಿನ ವಿಷಯದಲ್ಲಿ ತಿದ್ದುಪಾಟುಮಾಡಿದೆ.

4. ಮೈಸೂರು ನ್ಯಾಯವಿಧಾಯಕಸಭೆಯು ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡಗಳ ಸೆಂಟ್ರಲ್ ಹಾಲಿನಲ್ಲಿ 1924 ನೇ ಜೂನ್ 18 ನೇ ತಾರೀಖು ಬುಧವಾರದ ದಿನ ಸೇರುವುದಕ್ಕೆ ಬದಲಾಗಿ ಅದೇ ತಿಂಗಳು 23 ನೇ ತಾರೀಖು ಸೋಮವಾರದ ದಿನ ಮಧ್ಯಾಹ್ನ 12 ಗಂಟೆಗೆ ಸಭೆ ಸೇರುವುದು.

5. ಮೈಸೂರು ಪ್ರಜಾಪ್ರತಿನಿಧಿ ಸಭೆಯ 1923—24 ನೇ ವರ್ಷದ ಬಡ್ಜೆಟ್ ಅಧಿವೇಶನವು ಮೈಸೂರು ಜಗನ್ಮೋಹನ ಪ್ಯಾಲೆಸ್ಸಿನ ಸಭಾಮಂಟಪದಲ್ಲಿ 1924 ನೇ ಜೂನ್ 6 ನೇ ತಾರೀಖು ಶುಕ್ರವಾರದ ದಿನ ಪ್ರಾರಂಭವಾಗುವುದಕ್ಕೆ ಬದಲಾಗಿ ಅದೇ ತಿಂಗಳು 9 ನೇ ತಾರೀಖು ಸೋಮವಾರದ ದಿನ ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಗಿ ನಡೆಯುವುದು.

6. ಮೈಸೂರು ಸಂಪದಭ್ಯುದಯ ಸಮಾಜದ ಸಮಾರಂಭೋತ್ಸವವು ಮೈಸೂರು ಜಗನ್ಮೋಹನ ಪ್ಯಾಲೆಸ್ಸಿನ ಸಭಾಮಂಟಪದಲ್ಲಿ 1924 ನೇ ಜೂನ್ 14 ನೇ ತಾರೀಖು ಶನಿವಾರದ ದಿನ ನಡೆಯುವುದಕ್ಕೆ ಬದಲಾಗಿ ಅದೇ ತಿಂಗಳು 18 ನೇ ತಾರೀಖು ಬುಧವಾರದ ದಿನ ನಡೆಯುವುದು.

7. ಪೋಲೀಸ್ ಇನ್ಸ್‌ಪೆಕ್ಟರುಗಳ ಮತ್ತು ಸಬ್ ಇನ್ಸ್‌ಪೆಕ್ಟರುಗಳ ಒಂದು ಪ್ರಾವಿನ್ಷಲ್ ಕಾನ್ಫರೆನ್ಸನ್ನು ನಡೆಸಲು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಮಾಡಿದ ಸಲಹೆಯನ್ನು ಸರ್ಕಾರದವರು ಮಂಜೂರ್ಮಾಡಿದ್ದಾರೆ. ಈ ಕಾನ್ಫರೆನ್ಸಿಗೆ ಹಾಜರಾಗುವ ಆಫೀಸರುಗಳು ತಮ್ಮ ತಮ್ಮ ಪ್ರಯಾಣದ ಖರ್ಚನ್ನು ತಾವೇ ವಹಿಸತಕ್ಕದ್ದು. ಇದರ ಸಂಬಂಧದಲ್ಲಿ ಅವರು ತಮ್ಮ ತಮ್ಮ ಹೆಡ್‌ಕ್ವಾರ್ಟರುಗಳಿಂದ ಗೈರ್ ಹಾಜರಾಗುವ ಅವಧಿಯನ್ನು ಕೆಲಸದಮೇಲೆ ಹಾಜರಿದ್ದಂತೆ ಭಾವಿಸತಕ್ಕದ್ದು.

8. ಇನಾಂ ಜಮೀನುಗಳಿಂದ ತಂಗಡಿಚಕ್ಕೆಯನ್ನು ಜಮಾಯಿಸತಕ್ಕ ಬಗ್ಗೆ ಅಥವಾ ಸಾಗಿಸತಕ್ಕ ಬಗ್ಗೆ ಇನಾಂದಾರರು, ಹಾಲಿ ಇರತಕ್ಕ ನಿಬಂಧನೆಗಳಮೇರೆಗೆ, ಒಂದು ರಹದಾರಿಯನ್ನು ತಾಲ್ಲೂಕಿನ ಅಮಲ್ದಾರರಿಂದ ಪಡೆಯಬೇಕಾಗಿದೆ. ಅಂಥಾರಹದಾರಿಗಳಿಗಾಗಿ ಬರುವ ಅರ್ಜಿಗಳನ್ನು ಫೈಸಲ್ಮಾಡುವುದರಲ್ಲಿ ಬಹುಸಾವಕಾಶವಾಗುತ್ತಿರುವುದಾಗಿ ಇನಾಂದಾರರುಗಳು ಫಿರ್ಯಾದುಮಾಡಿ, ತಮ್ಮ ತಮ್ಮ ಜಮೀನುಗಳಲ್ಲಿ ಬೆಳೆಯುವ ಚಕ್ಕೆಯನ್ನು ರಹದಾರಿಗಳಿಲ್ಲದೆ ವಿಲೆಮಾಡಲು ಮತ್ತು ಸಾಗಿಸಲು ಅಪ್ಪಣೆಯನ್ನು ಕೇಳಿದರು. ಈ ವಿಷಯವನ್ನು ಜಾಗರೂಕತೆಯಿಂದ ಪರೀಶಿಲಿಸಿ, ಸರ್ಕಾರದವರು ಹಾಲಿ ಇರತಕ್ಕ ನಿಬಂಧನೆಗಳನ್ನು ಬದಲಾಯಿಸಬೇಕಾದ ಆಗತ್ಯವಿಲ್ಲವೆಂದು ಹುಕುಂ ಮಾಡಿರುತ್ತಾರೆ. ಆದರೆ ರಹದಾರಿಗಳಿಗಾಗಿ ಬರುವ ಅರ್ಜಿಗಳನ್ನು ಫೈಸಲ್ಮಾಡತಕ್ಕ ಬಗ್ಗೆ ಗೊತ್ತುಮಾಡಿರುವ ಒಂದು ತಿಂಗಳ ಅವಧಿಯನ್ನು ಅಮಲ್ದಾರರುಗಳು ಮೀರದೆ ಕಡ್ಡಾಯವಾಗಿ ಅನುಸರಿಸಬೇಕೆಂದು ಸರ್ಕಾರದವರು ಅವರಿಗೆ ಅಪ್ಪಣೆಮಾಡಿದರು.

9. ಸರ್ಕಾರಿ ನೀರಾವರಿಯ ಕಾಂಗಾರಿಗಳಿಂದ ನೀರಾವರಿಮಾಡಲ್ಪಟ್ಟ ಇನಾಂ ಜಮೀನುಗಳ ಮೇಲೆ ನೀರು ಸರದಿಯನ್ನು ವಸೂಲ್ಮಾಡತಕ್ಕ ವಿಷಯದಲ್ಲಿ ಇರತಕ್ಕ ನಡವಳಿಕೆಗಳನ್ನು ಕ್ರಮಗೊಳಿಸತಕ್ಕ ಬಗ್ಗೆ ತಿಳುವಳಿಕೆಗಳನ್ನು 1923 ನೇ ಏಪ್ರೆಲ್ ತಿಂಗಳಲ್ಲಿ ಸಾದರ್ಪಡಿಸಲಾಯಿತು ಮತ್ತು ಸದರಿ ನೀರು ಸರದಿಯನ್ನು ವಸೂಲ್ಮಾಡತಕ್ಕ ಬಗ್ಗೆ ಬಿಲ್ಲುಗಳನ್ನು ಮಂಜೂರ್ಮಾಡತಕ್ಕ ಅಧಿಕಾರವು ಯಾರಿಗೆ ಇರಬೇಕೆಂಬ ವಿಷಯದಲ್ಲಿ ಸಲಹೆಗಳನ್ನು ಕಳುಹಿಸಬೇಕೆಂದು ರೆವಿನ್ಯೂ ಕಮೀಷನರವರನ್ನು ಕೇಳಲಾಯಿತು. ಈ ಸಲಹೆಗಳನ್ನು ಪರ್ಯಾಲೋಚಿಸಿದನಂತರ ಸರ್ಕಾರದವರು, ಜಮಾಬಂದಿ ಆಫೀಸರುಗಳು ಇನಾಂದಾರರಿಂದ ವಸೂಲ್ಮಾಡಬೇಕಾದ ನೀರು ಸರದಿಯನ್ನು ಗೊತ್ತುಮಾಡಬಹುದೆಂದೂ ಮತ್ತು ಅವರಿಗೆ ಸಲ್ಲಬೇಕಾದ ತಖೀಸ್ತಿಗಾಗಿ ಬಿಲ್ಲುಗಳನ್ನು ಸಹ ಮಂಜೂರ್ಮಾಡಬಹುದೆಂದೂ ಹುಕುಂಮಾಡಿದ್ದಾರೆ. ಡೆಪ್ಯೂಟಿಕಮೀಷನರವರೆಲ್ಲ ಇತರ ಜಮಾಬಂದಿ ಆಫೀಸರು ಗೊತ್ತುಮಾಡಿದ ನೀರು ಸರದಿಯ ಮೊಬಲಗಿನ ವಿಷಯದಲ್ಲಿ ಇನಾಂದಾರರು ಅಸಮಾಧಾನವನ್ನು ತೋರ್ಪಡಿಸುವ ಸಂದರ್ಭಗಳಲ್ಲಿ ಅವರು ಡೆಪ್ಯೂಟಿಕಮೀಷನರವರಿಗೆ ಅಪೀಲುಮಾಡಬಹುದೆಂದು ಅವಕಾಶಮಾಡಿದೆ.

10. ಮುಂದಿನ ಅಕ್ಟೋಬರ್ ಮಾಹೆಯಲ್ಲಿ ನಡೆಯತಕ್ಕ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಸೇರಿಸತಕ್ಕ ಬಗ್ಗೆ ಶ್ರೀಮನ್ಮಹಾರಾಜರವರಿಂದ ಅಂಗೀಕೃತವಾದ 42 ಜನ ಉಮೇದುವಾರರುಗಳ ಪ್ರಥಮ ಪಟ್ಟಿಯನ್ನು ಪ್ರಸಿದ್ಧಪಡಿಸಿರುತ್ತದೆ.

11. ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ|| ಸಿ. ಎಸ್. ಬಾಲಸುಂದರಮೈಯ್ಯರ್, ಬಿ. ಎ., ಯವರಿಗೆ 1924 ನೆಯ ಮೇ 16 ನೇ ತಾರೀಖು ಲಾಗಾಯಿತು 3 ವಾರಗಳ ಪ್ರಿವಿಲೇಜ್ ರಜಾವನ್ನು ಕೊಟ್ಟು, ಈ ಕೆಳಗೆ ಕಂಡ ಮೇರೆಗೆ ಬದಲಿ ಕೆಲಸ ನಡೆಸತಕ್ಕ ಏರ್ಪಾಡು ಮಾಡಿರುತ್ತದೆ:—

1 ಬೆಂಗಳೂರು, ವಿದ್ಯಾಭ್ಯಾಸದ ಸರ್ಕಲ್ ಇನ್ಸ್‌ಪೆಕ್ಟರವರಾದ ಮಿ|| ಡಿ. ವೆಂಕಟರಾಮಯ್ಯನವರು, ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರಾಗಿ ಬದಲಿಯಾಗಿ ಕೆಲಸಮಾಡತಕ್ಕದ್ದು.

2. ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಹಂಗಾಮಿ ಎಕ್ಸ್ಟ್ರಾ ಅಸಿಸ್ಟೆಂಟರಾಗಿರುವ ಮಿ|| ಕೆ. ಶ್ರೀನರಸಿಂಹಯ್ಯನವರು ಬೆಂಗಳೂರು ವಿದ್ಯಾಭ್ಯಾಸದ ಸರ್ಕಲ್ ಇನ್ಸ್‌ಪೆಕ್ಟರವರಾಗಿ ಬದಲಿಯಾಗಿ ಕೆಲಸಮಾಡತಕ್ಕದ್ದು.

12. ದೊಡ್ಡಬಳ್ಳಾಪುರದ ಸಬ್‌ಡಿವಿಜನ್ನಿನ ಛಾರ್ಜಿನಲ್ಲಿರತಕ್ಕ ಅಸಿಸ್ಟೆಂಟ್ ಕಮೀಷನರಾದ ಮಿ|| ಎಂ. ಪಿ. ವಿಶ್ವನಾಥರಾಯರಿಗೆ 1924 ನೇ ಮೇ 20 ನೇ ತಾರೀಖು ಲಾಗಾಯಿತು 15 ದಿನಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ. ಈ ಕಾಲದಲ್ಲಿ ಬೆಂಗಳೂರು ಡೆಪ್ಯುಟಿಕಮೀಷನರಿಗೆ ಪರ್ಸನಲ್ ಅಸಿಸ್ಟೆಂಟರಾದ ಮಿ|| ಚಾಲ್ಸ್ ನರೋನರವರು ತಮ್ಮ ಸ್ವಂತ ಕೆಲಸದ ಜತೆಗೆ ದೊಡ್ಡಬಳ್ಳಾಪುರದ ಸಬ್ ಡಿವಿಜನ್ನಿನ ಛಾರ್ಜಿನಲ್ಲಿರುವರು.

13. ಅಸಿಸ್ಟೆಂಟ್ ಕಮೀಷನರಾದ ಮಿ|| ಎಂ. ಎನ್. ಬಾಳರಾಜ ಅರಸ್ ಬಿ. ಎ. ಯವರ ಅರಮನೆಯಲ್ಲಿನ ಸ್ಪೆಷಲ್ ಡ್ಯೂಟಿಯ ಕಾಲ ಪರಿಮಿತಿಯನ್ನು 1924 ನೇ ಜುಲೈ 23 ನೇ ತಾರೀಖಿನವರೆಗೆ ಹೆಚ್ಚಿಸಿರುತ್ತದೆ.

14. ನರಸಿಂಹರಾಜಪುರ ಮ್ಯುನಿಸಿಪಾಲಿಟಿಯ ಸರಹದ್ದಿನಲ್ಲಿ 1924 ನೇ ಜುಲೈ 15 ನೇ ತಾರೀಖು ಲಾಗಾಯಿತು ಇನ್ನೂ 3 ವರುಷಗಳ ಕಾಲದವರೆಗೆ ದೇವಿಹಾಕತಕ್ಕದ್ದನ್ನು ನಿರ್ಬಂಧಗೊಳಿಸಿರುವುದಾಗಿ ಪ್ರಕಟಿಸಿರುತ್ತದೆ.

15. ಈ ಸಾಲಿನಲ್ಲಿ ಕಳೆದುಹೋಗದೆ ಉಳಿದಿರುವ ಭಾಗಕ್ಕೂ ಮತ್ತು 1924-25ನೇ ಸಾಲಿಗೂ ಸಹ ರೈಲ್ವೆ, ವಿದ್ಯುಚ್ಛಕ್ತಿ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳ ಪರವಾಗಿ ಒಂದು ಸ್ಥಳೀಯ ಪ್ರಜಾಧಿಕಾರ ಮತ್ತು ವೈದ್ಯದ ಇಲಾಖೆ, ಸ್ಥಳಾರೋಗ್ಯ ಮತ್ತು ಜನಾರೋಗ್ಯ ಈ ಇಲಾಖೆಗಳ ಪರವಾಗಿ ಒಂದು; ಫೈನಾನ್ಸ್ ಮತ್ತು ತೆರಿಗೆಯ ಪರವಾಗಿ ಮತ್ತೊಂದು; ಈ ರೀತಿಯಾಗಿ ಮೂರು ಸ್ಟ್ಯಾಂಡಿಂಗ್ ಕಮಿಟಿಗಳನ್ನು ಏರ್ಪಡಿಸಿರುತ್ತದೆ. ಅಲ್ಲದೆ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ ಇವುಗಳಿಂದ ಚುನಾಯಿಸಲ್ಪಟ್ಟ ಪ್ಯಾನಲ್ಸ್ ಎಂದರೆ ಮಂಡಲಿಗಳ ಪೈಕಿ ತೆಗೆದುಕೊಳ್ಳಲ್ಪಟ್ಟ ಸದರಿ ಕಮಿಟಿಗಳ ಮೆಂಬರುಗಳ ಹೆಸರುಗಳು ಈ ಕೆಳಗೆ ನಮೂದಿಸಿರುವಂತೆ ಪ್ರಕಟಿಸಲ್ಪಟ್ಟಿರುತ್ತವೆ.

ರೈಲ್ವೆ ವಗೈರೆ ಇಲಾಖೆಗಳ ಪರವಾದ ಸ್ಟ್ಯಾಂಡಿಂಗ್ ಕಮಿಟಿ ಮಿ|| ಸಿ. ನಾರಾಯಣಸ್ವಾಮಿಶೆಟ್ಟರು, ಮಿ|| ಬಿ. ಉಸ್ಮಾನ್ ಖಾನ್‌ರವರು, ಮಿ|| ಬಿ. ಎಲ್. ಬೈಯಣ್ಣನವರು, ಮಿ|| ಸಿ. ಸುಬ್ಬರಾಯರು, ಮಿ|| ಬಿ. ಕೆ. ಗರುಡಾಚಾರ್ಯರು, ಮತ್ತು ದಿವಾನ್ ಬಹದೂರು ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರು.

ಸ್ಥಳೀಯ ಪ್ರಜಾಧಿಕಾರ ವಗೈರೆ ಇಲಾಖೆಗಳ ಪರವಾದ ಸ್ಟ್ಯಾಂಡಿಂಗ್ ಕಮಿಟಿ.

ಮಿ|| ಕರಣೀಕ ಕೃಷ್ಣಮೂರ್ತಿರಾಯರು, ಮಿ|| ಮಿರ್ ಮಹಮುದ್ ಸಾಹೇಬರವರು, ಮಿ|| ಜಿ. ಆರ್. ಐಸಕ್‌ರವರು, ಮಿ|| ಬಿ. ನರಸಿಂಗರಾಯರವರು, ಮಿ|| ಬಿ. ಅಬ್ದುಲ್ ರಹ್ಮಾನ್‌ರವರು, ಮತ್ತು ಮಿ|| ಎನ್. ಎಸ್. ನಂಜುಂಡಯ್ಯನವರು.

ಫೈನಾನ್ಸ್ ಮತ್ತು ತೆರಿಗೆಯ ಪರವಾದ ಸ್ಟ್ಯಾಂಡಿಂಗ್ ಕಮಿಟಿ.

ಮಿ|| ಬಿ. ನರಸಿಂಗರಾಯರವರು, ಮಿ|| ಡಿ. ಎಸ್. ಮಲ್ಲಪ್ಪನವರು ಮಿ|| ಜಿ. ಪರಮಶಿವಯ್ಯನವರು, ಮಿ|| ಟಿ. ಎಲ್. ಬೈಯಣ್ಣನವರು, ಮಿ|| ಸಿ. ನರಸಿಂಹಯ್ಯನವರು ಮತ್ತು ಮಿ|| ಮಹಮುದ್ ಅಬ್ಬಾಸ್ ಖಾನ್‌ರವರು.

ಕೌನ್ಸಿಲಿನ ಮೊದಲನೆಯ ಮೆಂಬರವರು, ಸ್ಥಳೀಯ ಪ್ರಜಾಧಿಕಾರ ವಗೈರೆ ಇಲಾಖೆಗಳ ಪರವಾದ ಸ್ಟ್ಯಾಂಡಿಂಗ್ ಕಮಿಟಿಗೂ ಮತ್ತು ಫೈನಾನ್ಸ್ ಮತ್ತು ತೆರಿಗೆಯ ಪರವಾದ ಸ್ಟ್ಯಾಂಡಿಂಗ್ ಕಮಿಟಿಗೂ ಅಧ್ಯಕ್ಷರಾಗಿರುವರು. ಕೌನ್ಸಿಲಿನ ಎರಡನೆಯ ಮೆಂಬರವರು ರೈಲ್ವೆ ವಿದ್ಯುಚ್ಛಕ್ತಿ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳ ಪರವಾದ ಸ್ಟ್ಯಾಂಡಿಂಗ್ ಕಮಿಟಿಗೆ ಅಧ್ಯಕ್ಷರಾಗಿರುವರು.

16. ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆ, ಮತ್ತು ವಾಣಿಜ್ಯ ಇವುಗಳಿಗೆ ಸಂಬಂಧಪಟ್ಟ ಬೋರ್ಡುಗಳ, ಅಧ್ಯಕ್ಷರುಗಳ, ಸೆಕ್ರಿಟರಿಗಳ ಮತ್ತು ಮೆಂಬರುಗಳ ಹೆಸರುಗಳನ್ನು ಸರ್ಕಾರದವರು ಪ್ರಕಟಿಸಿರುತ್ತಾರೆ.

17. ಸರ್ಕಾರದವರು ಸ್ಟ್ಯಾಂಡಿಂಗ್ ಕಮಿಟಿಗಳ ಕೆಲಸ ನಡೆಸುವ ವಿಚಾರವಾಗಿ ನಿಬಂಧನೆಗಳನ್ನು ಜಾರಿಯಲ್ಲಿ ತಂದಿರುತ್ತಾರೆ. ಅಲ್ಲದೆ ಕಮಿಟಿಗಳ ಆಲೋಚನೆಯನ್ನು ಕೇಳತಕ್ಕ ವಿಷಯಗಳನ್ನು ಸಹ ನಮೂದಿಸಿರುತ್ತಾರೆ.

18. ಕೃಷ್ಣರಾಜಸಾಗರ ಜಲಾಶಯದ ಕಲ್ಲುಕೆಲಸದ ಆಣೆಯ ವಿಷಯಕವಾದ ಪರಿಸ್ಥಿತಿಯು ಅಷ್ಟೇನೂ ಭರವಸಾಪೂರ್ವಕವಾದುದಲ್ಲವೆಂಬದಾಗಿ ಮದ್ರಾಸು ಮೆಯಿಲ್ ಪತ್ರಿಕೆಯ 15ನೇ ತಾರೀಖಿನ ಸಂಚಿಕೆಯಲ್ಲಿ ಪ್ರಕಟಿಸಿರುವ ಒಬ್ಬ ಬಾತ್ಮೀದಾರರ ಲೇಖನದಲ್ಲಿ ಒಳಗೊಂಡಿರುವ ಕೆಲವು ತಪ್ಪು ಹೇಳಿಕೆಗಳನ್ನು ಖಂಡಿಸಿ ಒಂದು ಪ್ರಸಿದ್ಧ ಪತ್ರಿಕೆಯನ್ನು ಸಾದರ್ಮಾಡಿಸಿದೆ. ಸದರಿ ಆಣೆಯಲ್ಲಿ 118 ಅಡಿ ನೀರು ನಿಲ್ಲಲು ಮೊದಲು ಅಂದಾಜುಮಾಡಿತ್ತೆಂದೂ, ಆದುದರಿಂದ ಮದ್ರಾಸು ಸರ್ಕಾರದವರೊಡನೆ ಈಚೆಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಈಗ ಸದರಿ ಆಣೆಯಲ್ಲಿ ತಡದಿರಬೇಕೆಂದಿರುವ 124 ಅಡಿ ನೀರಿನ ಒತ್ತಡವನ್ನು ಅದು ತಡೆಯಲಾರದೆಂದೂ ಸಹ ಬಾತ್ಮೀದಾರರು ಮಾಡುವ ವಾದವು ಸಮಂಜಸವಾಗಿಲ್ಲ. ಏಕೆಂದರೆ, ಈ ಆಣೆಯಲ್ಲಿ 224 ಅಡಿ ನೀರು ನಿಲ್ಲುವಂತೆ ವಸ್ತುತಃ ಅಂದಾಜುಮಾಡಿದೆ. ಕಟ್ಟೆಯ ತಳಪಾಯವು ನೀರು ನುಗ್ಗುವಂತೆ ಭದ್ರವಾಗಿಲ್ಲವೆಂದೂ, ಆದರ ಮಧ್ಯಭಾಗದಲ್ಲಿ ಕಲ್ಲುಗಳು ಕಿತ್ತುಹೋದುದರಿಂದ ಕಟ್ಟೆಯ ಹಿಂಭಾಗದಲ್ಲಿ ಮಟ್ಟ ಕಾಂಗಾರಿಯನ್ನು ಮಾಡಿಸಬೇಕಾಯಿತೆಂದೂ ಸಹ ಅವರು ಹೇಳುವ ಮಾತಿಗೆ ಆಧಾರವೇ ಇಲ್ಲ. ಕಟ್ಟೆಯ ತಳಪಾಯಕ್ಕೆ ಆಳವಾದ ಬಂಡೆಯು ಅಸ್ತಿಭಾರವಿದೆಯಾಗಿ ಅದು ನೀರು ನುಗ್ಗದಂತೆ ಬಹಳ ಭದ್ರವಾಗಿದೆ ಮತ್ತು ಬಾತ್ಮೀದಾರರು ಹೇಳುವಂತೆ ಕಟ್ಟೆಯ ಹಿಂಭಾಗದಲ್ಲಿ ಯಾವ ಮಟ್ಟ ಕಾಂಗಾರಿಯನ್ನೂ ಮಾಡಿಸಿಲ್ಲ.

19. ಪ್ರಜಾಪ್ರತಿನಿಧಿ ಸಭೆಯ ಬಡ್ಜೆಟ್ ಅಧಿವೇಶನಕ್ಕಾಗಿಯೂ ಮತ್ತು ಮೈಸೂರು ಸಂಪದಭಿವೃದ್ಧಿ ಸಮಾಜದ ಸಮಾರಂಭೋತ್ಸವಕ್ಕಾಗಿಯೂ ಮೈಸೂರಿಗೆ ಹೋಗತಕ್ಕ ವರ್ತಮಾನ ಪತ್ರಿಕೆಗಳ ಸಂಪಾದಕರ ಪ್ರತಿನಿಧಿಗಳಿಗೆ ಕೊಡತಕ್ಕ ಸೌಕರ್ಯಗಳ ವಿಚಾರವಾಗಿ ಪ್ರಜಾಪ್ರತಿನಿಧಿ ಸಭೆಯ ಸೆಕ್ರೆಟರಿಯವರು ಒಂದು ಅಫಿಷಿಯಲ್ ಮೆಮೊರಾಂಡಮ್ಮನ್ನು ಪ್ರಕಟಪಡಿಸಿರುತ್ತಾರೆ.

20. ಸರ್ಕಾರಿ ನೌಕರರಾಗಿರತಕ್ಕ ಮೈಸೂರು ಇಂಜನೀಯರುಗಳ ಅಸೋಸಿಯೇಷನ್ನಿನ ಮೆಂಬರುಗಳಿಗೆ ಅವರು ಕಾನ್ಫರೆನ್ಸ್ ಮೀಟಿಂಗುಗಳಲ್ಲಿ ಪ್ರಯಾಣದ ಭತ್ಯವನ್ನು ಅಂದರೆ ರೈಲ್ವೆ ಛಾರ್ಜು ಒಂದನ್ನು ಮತ್ತು ರೋಡ್ ಮೈಲೇಜನ್ನು ಕೊಡುವುದಾಗಿ ಮಂಜೂರ್ಮಾಡಿರುತ್ತಾರೆ.

ಹರಾಜಿನ ಇಸ್ತಿಹಾರು.

ಮೈಸೂರು ಹಳೇ ಅಗ್ರಹಾರದಲ್ಲಿ ಹಸುವಿನ ಕರೋಹಟ್ಟಿ ರೋಡಿನಲ್ಲಿರುವ ಸರ್ ಯಂ. ಕಾಂತರಾಜೇ ಅರಸಿನವರ ಈಶ್ವರ ದೇವಸ್ಥಾನದ ಕಾಂಪೌಂಡಿನಲ್ಲಿರುವ ತೋಟದ ಫಸಲು 1924 ನೇ ಜುಲೈ 1 ರ ಲಾಗಾಯಿತು 3 ವರ್ಷಕ್ಕೆ ಗುತ್ತಿಗೆಗೆ ಕೊಡಲ್ಪಡುವದು. ಇಷ್ಟವುಳ್ಳವರು 1924 ನೇ ಜೂನ್ 16 ನೇ ಸೋಮವಾರ ಪ್ರಾತಃಕಾಲ 9 ಗಂಟೆಗೆ ಮೇಲ್ಕಂಡ ದೇವಸ್ಥಾನದಲ್ಲಿ ನಡೆಯುವ ಹರಾಜಿನಲ್ಲಿ ಪಡೆಯಬಹುದು.

ಹರಾಜಿನಲ್ಲಿ ತೋಟವನ್ನು ಗುತ್ತಿಗೆಗೆ ಪಡೆಯತಕ್ಕವರು ಹರಾಜಿನಲ್ಲಿ ತರಾವಾಗುವ ಒಂದು ವರ್ಷದ ಗುತ್ತಿಗೆ ಮೊಬಲಗಿನಲ್ಲಿ ಕಾಲುಭಾಗವನ್ನು ಹರಾಜು ಮುಗಿದ ಕೂಡಲೆ ಡಿಪಾಜಿಟ್ ಮಾಡಬೇಕು. ಬಾಕಿ ಪೂರಾ ಮೊಬಲಗನ್ನು ಒಂದು ವಾರದೊಳಗಾಗಿ ಪಾವತಿಮಾಡಿ ಕ್ರಮವಾಗಿ ಗುತ್ತಿಗೆಕರಾರು ಬರೆಸಿಕೊಡಬೇಕು. ತಪ್ಪಿದರೆ ದುಸರಾಹರಾಜು ಮಾಡಲ್ಪಡುತ್ತೆ.

ಗುತ್ತಿಗೆದಾರರು ಪ್ರತಿ ಸಾಲು ಗುತ್ತಿಗೆಯನ್ನು ಆಯಾ ಸಾಲು ಪ್ರಾರಂಭದಲ್ಲಿ ಮುಂಗಡವಾಗಿ ಪಾವತಿಮಾಡಬೇಕು.

M. S. KRISHNAMACHARI,
Superintendent,
Jayalakshmi Vilas, Mysore.

ತಾ|| 27-5-24,

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ವೈದ್ಯ ವಿದ್ಯಾರ್ಥಿಗಳಿಗೆ ಸೂಚನೆ.

1 ಬೆಂಗಳೂರು ಶ್ರೀ ಜಯದೇವ ಮೆಡಿಕಲ್ ಹಾಲ್ ಪ್ರೊಪ್ರೈಟರಾದ ಕ್ಯಾಪ್ಟನ್, ವೈ. ವಿಶ್ವನಾಥಯ್ಯನವರು, ಯುವಸಾರ್ವಭೌಮ (ಪ್ರಿನ್ಸ್ ಆಫ್ ವೇಲ್ಸ್)ರವರು ಮೈಸೂರು ದೇಶಕ್ಕೆ ದಯಮಾಡಿಸಿದುದರ ಜ್ಞಾಪನಾರ್ಥವಾಗಿ ಐದುಸಹಸ್ರರೂಪಾಯಿಗಳನ್ನು ಮೇಲ್ಕಂಡ ಫಂಡಿನ ಮೂಲಧನಕ್ಕೆಕೊಟ್ಟು, ಸದರಿ ಮೊಬಲಗಿನ ವೃದ್ಧ್ಯಂಶವನ್ನು ವೈದ್ಯವಿದ್ಯಾಭ್ಯಾಸಮಾಡಲಿಚ್ಛಿಸುವ ಮೈಸೂರು ದೇಶದ ವೀರಶೈವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡುವಂತೆ ಉದ್ದೇಶಿಸಿರುತ್ತಾರೆ.

2 ಧರ್ಮಕರ್ತರ ಉದ್ದೇಶದಂತೆ ಇದೇ ಜೂನ್ ಲಾಗಾಯಿತು ಮಾಹೆಯಾನ ರೂ. 25 ನಂತೆ ವೇತನವು ಮದರಾಸು ಅಥವಾ ಬೊಂಬಾಯಿ ಸರ್ಕಾರದ ಮೆಡಿಕಲ್ ಕಾಲೇಜಿನಲ್ಲಿ ಓದಲಪೇಕ್ಷಿಸುವ ಮೈಸೂರು ದೇಶದ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡಲ್ಪಡುತ್ತೆ. ಸಹಾಯವನ್ನು ಹೊಂದಲಪೇಕ್ಷಿಸುವವರು ಕೂಡಲೇ ಫಂಡಿನ ಸೆಕ್ರೆಟರಿಯವರಿಗೆ ಅರ್ಜಿ ಬರದುಕೊಳ್ಳತಕ್ಕದ್ದು.

ಬಡವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜು, ಹೈಸ್ಕೂಲ್ ಮತ್ತು ಟೆಕ್ನಿಕಲ್ ಸ್ಕೂಲುಗಳಲ್ಲಿ ಅಭ್ಯಾಸಮಾಡುತ್ತಿರುವ ಬಡವೀರಶೈವ ವಿದ್ಯಾರ್ಥಿಗಳು ಜುಲೈ ತಾ|| 15 ರ ವಳಗಾಗಿ ಸೆಕ್ರೆಟರಿಯವರಿಗೆ ತಲಪುವಂತೆ (Printed Prescribed Form) ನಲ್ಲಿ ಅರ್ಜಿ ಬರದುಕೊಳ್ಳತಕ್ಕದ್ದು. ಅರ್ಜಿ ಫಾರಂಗಳು ಬೇಕಾದಲ್ಲಿ ಒಂದಾಣೆ ಸ್ಟ್ಯಾಂಪು ಕಳುಹಿಸಿ ಅಡ್ರಸ್ ತಿಳಿಸಿದಲ್ಲಿ ಕಳುಹಿಸಲ್ಪಡುತ್ತೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅರ್ಜಿ ಜೊತೆಯಲ್ಲಿ ಸರ್ಟಿಫಿಕೇಟುಗಳನ್ನು ಕಳುಹಿಸತಕ್ಕದ್ದು. ಸರ್ಟಿಫಿಕೇಟುಗಳು ಇಲ್ಲದೆಯೂ ಮತ್ತು ವಾಯಿದೆ ಮೀರಿಯೂ ಬರತಕ್ಕ ಅರ್ಜಿಗಳು ಅಂಗೀಕರಿಸಲ್ಪಡಲಾರವು.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ,
ಬೆಂಗಳೂರು ಸಿಟಿ.

ಸ್ವೀಕಾರ.

ಕೈ|| ವೈ. ವೀರಸಂಗಪ್ಪನವರ ಅಗ್ರತಾಂಬೂಲ ಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.

ಪ. ಪ್ರ.

(1)ಯಾದ್ಗಿರಿಯಲ್ಲಿ ನೈಜಾಂ ವೀರಶೈವ ಶಂಕರ ಸಂಸ್ಕೃತ ಕಾಲೇಜು ಸ್ಥಾಪನಾಮಹೋತ್ಸವದಲ್ಲಿ ಮ|| ವಕೀಲ ರುದ್ರಪ್ಪನವರ ಮೂಲಕ ರೂ 2, (2) ಬೆಂಗಳೂರು ಡಿ|| ನೆಲಮಂಗಲದ ಮ|| ಶೆಟ್ಟರುಚನ್ನಬಸಪ್ಪನವರ ಲಗ್ನದಲ್ಲಿ ರೂ. 1 ಮತ್ತು ಮ|| ಪ್ರಥಯ್ಯನವರ ಹೊನ್ನಶೆಟ್ಟಪ್ಪನವರ ಲಗ್ನದಲ್ಲಿ ರೂ. 1 ಒಟ್ಟು ರೂ 2 ನೆಲಮಂಗಲದ ಶೆಟ್ಟರು ಮ|| ಸುಬ್ಬರಾಯಪ್ಪನವರ ಮೂಲಕ. (3) ದೊಡ್ಡಬಳ್ಳಾಪುರ ತಾ|| ಸರ್ವಮಾನ್ಯ ಗೊಲ್ಲಹಳ್ಳಿ ಶ್ರೀ ಬಸವೇಶ್ವರ ಜಯಂತಿಮಹೋತ್ಸವದಲ್ಲಿ ಕಾರ್ಯದರ್ಶಿಗಳಾದ ವಿಶಾಶೀಪುರದ ಮ|| ಎಸ್. ಎನ್. ಮಲ್ಲಪ್ಪಶೆಟ್ಟರ ಮೂಲಕ ರೂ. 1 (4) ದಾವಣಗೆರೆಯಲ್ಲಿರುವ ಮ|| ಹಾವೇರಿ ಮಹಾಲಿಂಗಪ್ಪನವರ ಲಗ್ನಕಾರ್ಯದಲ್ಲಿ ಮೈಸೂರು ಮಠದ ವೇ|| ಚನ್ನವೀರಪ್ಪಯ್ಯನವರ ಮೂಲಕ ರೂ 1. (5) ಬೆಂಗಳೂರು ಗ್ರಂದಿಗೆ ಅಂಗಡಿ ಆರ್. ಪಾಪಣ್ಣನವರ ಕುಮಾರರು ಮ|| ಆರ್. ಪಿ. ವೀರಭದ್ರಪ್ಪನವರಿಂದ ಅವರ ಸಹೋದರಿಯ ಲಗ್ನದಲ್ಲಿ ರೂ. 5 (6) ಮೈಸೂರು ಗುರುಕಾರ್ ಮ|| ಬಸವರಾಜಯ್ಯನವರ ಮತ್ತು ಅವರ ಪುತ್ರಿಯ ಲಗ್ನಗಳಲ್ಲಿ ರೂ. 2.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ಮಳೆಯನ್ನಳೆಯುವ ಸುಲಭರೀತಿ.

ಸೀಮೆಎಣ್ಣೆ ಖಾಲಿಡಬ್ಬಾ ಸೋರದೆ ಇರತಕ್ಕದ್ದನ್ನು ತೆಗೆದುಕೊಂಡು ಮೇಲ್ಭಾಗ ಮುಚ್ಚಳವನ್ನು ತೆಗೆದುಹಾಕಿ ಬೈಲುಜಾಗದಲ್ಲಾಗಲಿ, ಮನೆಯ ಮಾಳಿಗೆಯ ಮೇಲಾಗಲಿ, ಮರಗಳು, ಗೋಡೆಗಳೂ ಇವಕ್ಕೆ ದೂರವಾಗಿ (ಡಬ್ಬಾದಲ್ಲಿ ಬೀಳುವ ಮಳೆಹನಿಗಳಿಗೆ ತೊಂದರೆಯಾಗದಂತೆ) ಇಟ್ಟಿರಬೇಕು. ಮಳೆ ಬಂದು ನಿಂತನಂತರ ಡಬ್ಬಾದಲ್ಲಿ ಬಿದ್ದಿರತಕ್ಕ ನೀರನ್ನೂ ಧಾನ್ಯ ಅಳೆಯುವ ಸೇರು (47 ಔನ್ಸ್) ನಿಂದಾ ಅಳೆಯಬೇಕು. ಎಷ್ಟು ಸೇರು ನೀರಾಗುತ್ತೋ ಅಷ್ಟು ಇಂಚ್ ಮಳೆಯಾಗಿದೆ ಎಂದು ತಿಳಿಯತಕ್ಕದ್ದು. $\frac{1}{2}$ ಸೇರು ನೀರಿದ್ದರೆ $\frac{1}{2}$ ಇಂಚ್ (50 ಸೆಂಟ್ಸ್) ಮಳೆ ಎಂದೂ $\frac{1}{4}$ ಸೇರು ನೀರಿದ್ದರೆ $\frac{1}{4}$ ಇಂಚ್ (25 ಸೆಂಟ್ಸ್) ಮಳೆ ಎಂದೂ ಹೀಗೆಯೇ ತಿಳಿದುಕೊಳ್ಳಬೇಕು. ಗ್ರಾಮಾಂತರಗಳವರಿಗೆ ಅವರವರ ಗ್ರಾಮದಲ್ಲಿ ಬೀಳುವ ಮಳೆಯನ್ನಳೆಯಲು (ಸರ್ಕಾರಿ ಮಳೆ ಅಳೆಯುವ ಸಾಧನಗಳೂ ಜಾಸ್ತಿ ಕ್ರಯವಾದ್ದರಿಂದ) ಈ ಉಪಾಯದಿಂದ ಬಹಳ ಸುಲಭವಾಗಿ ಅಳೆದು ಮಳೆಯ ಪ್ರಮಾಣವನ್ನು ತಿಳಿದುಕೊಳ್ಳಬಹುದು.

ಎಂ. ಎ. ಸಿದ್ದಪ್ಪ, ಮೊಳಕಾಲ್ಮುರು.

ದೇವಸ್ಥಾನದ ಜೀರ್ಣೋದ್ಧಾರ.

ಜಹಗೀರ್ ಯಳಂದೂರು ತಾಲ್ಲೂಕು ಯಳಂದೂರು ಕಸಬಾದಲ್ಲಿರುವ ಮಹಾಕಾಳೀ-ಕಮಲೇಶ್ವರರ ದೇವಸ್ಥಾನವು ಬಹಳಪುರಾತನವಾದದ್ದು ಮತ್ತು ಗೌತಮಋಷಿಗಳಿಂದ ಆರಾಧಿತವಾದದ್ದು. ಬಹಳ ದಿವಸಗಳಿಂದಲೂ ಕ್ರಮವಾಗಿ ಪೂಜೆ ವಗೈರೆ ಸೇವಾಕಾರ್ಯಗಳು ನಡಿಯುತ್ತಿದ್ದು, ಈಚೆಗೆ 10.12 ವರ್ಷಗಳಿಂದ ಶಿಥಿಲವಾಗಿ ಶೋಚನೀಯವಾದ ಸ್ಥಿತಿಗೆ ಬಂದಿರುತ್ತೆ. ಅಷ್ಟಬಂಧನ ವಗೈರೆ ಎಲ್ಲವೂ ಹೋಗಿರುತ್ತೆ. ಅಲ್ಲದೆ ಬರತಕ್ಕ ಭಕ್ತಾದಿಗಳಿಗೆ ಇಳಿದುಕೊಳ್ಳಲು ಸಹ ಸ್ಥಳವಿಲ್ಲದೆ ತೊಂದರೆಯಾಗಿರುತ್ತೆ. ಆದ್ದರಿಂದ ಈ ಮಹಾಕಾಳಿಯ ಭಕ್ತರಾದ ಮಹನೀಯರೂ ಮತ್ತು ಪಂಚಾನನದ ಭಕ್ತರೂ ಸಹ ಸಹಾಯಮಾಡಿ ಈ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿದ ಪುಣ್ಯಕ್ಕೆ ಪಾತ್ರರಾಗಿ ಆದಿಶಕ್ತಿ ಸ್ವರೂಪಿಣಿಯಾದ ಮಹಾಕಾಳಿಕಾಂಬಾಕಮಲೇಶ್ವರರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥನೆ. ಈ ಕಾರ್ಯಕ್ಕಾಗಿ ಐದಾಯದ ಯಜಮಾನ ಗಿರಿಮಲ್ಲಪ್ಪಾಚಾರಿಯವರು ಈ ದೇವರ ಸೇವಾಸಂಘದ ಕೆಲವು ಮೆಂಬರುಗಳೊಡನೆ ಈ ಕಾರ್ಯವನ್ನು ಭಕ್ತಮಹನೀಯರಿಂದ ಸಹಾಯವನ್ನುಪಡೆದು ನೆರವೇರಿಸಲು ಸಂಚಾರ ಹೊರಟಿರುತ್ತಾರೆ.

ಮಹಾಕಾಳೀಭಕ್ತ.

ತಿಪಟೂರು ಹೈಸ್ಕೂಲು.

ನಮ್ಮ ಘನವಾದ ಮೈಸೂರು ಮಹಾರಾಜ ಸರ್ಕಾರದವರು ತಿಪಟೂರು ಟೌನ್‌ನಲ್ಲಿ 1924ನೇ ಜೂನ್ 9ನೇ ತಾರೀಖುಲಾಗಾಯಿತು ಒಂದು ಹೈಸ್ಕೂಲು ಸ್ಥಾಪಿಸಿ ಪ್ರಕೃತದಲ್ಲಿ IV ಫಾರಂ ಇರುವಂತೆ ಏರ್ಪಡಿಸಿರುತ್ತಾರೆ. ಈ ಮಾಹೆ 28ನೇ ತಾರೀಖು ವಿದ್ಯಾಭ್ಯಾಸದ ಇಲಾಖೆ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ತಿಪಟೂರಿಗೆ ದಯಮಾಡಿಸಿ ಹೈಸ್ಕೂಲು ಸ್ಥಾಪಿಸಲು ಅನುಕೂಲವಾದ ಇಲ್ಲಿಯ ಪ್ರಶಸ್ತವಾದ ಶ್ರೀ ವೀರಶೈವಾಶ್ರಮವನ್ನು ಪರಾಂಬರಿಸಿ ವಿದ್ಯಾಭ್ಯಾಸದ ಇಲಾಖೆಯ ಸುಪರ್ದಿಗೆ ತೆಗೆದುಕೊಂಡಿರುತ್ತಾರೆ. ಸದರೀ ಕಟ್ಟಡವನ್ನು ಎರಡು ವರ್ಷಗಳ ಕಾಲ ಹೈಸ್ಕೂಲಿಗೋಸ್ಕರ ಉಚಿತವಾಗಿ ಕೊಟ್ಟಿರುವದು ತುಂಬಾ ಶ್ಲಾಘನೀಯವಾಗಿದೆ. ಎಲ್ಲಾ ಕೋಲಿ ವಿದ್ಯಾರ್ಥಿಗಳ ವಾಸಕ್ಕೂ ಭೋಜನಕ್ಕೂ ಸುಲಭವಾದ ಸೌಕರ್ಯಗಳನ್ನು ಕಲ್ಪಿಸಲು ಏರ್ಪಾಡುಗಳು ನಡೆಯುತ್ತಾ ಇವೆ. ನವೀನವಾಗಿ ಸ್ಥಾಪಿಸಲ್ಪಡುವ ಈ ಹೈಸ್ಕೂಲಿಗೆ ಎಲ್ಲಾ ಕಡೆಯಿಂದಲೂ ವಿದ್ಯಾರ್ಥಿಗಳು ಬರಬೇಕೆಂದು ಕೋರಿದೆ. ತಿಪಟೂರಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಒಂದು ಉಚಿತವಾದ ಭೋಜನಶಾಲೆ ಇರುತ್ತೆ. ಅಲ್ಲಿ ಕೆಲವು ಮಂದಿ ಬಡವಿದ್ಯಾರ್ಥಿಗಳಿಗೆ ಫ್ರೀಬೋರ್ಡಿಂಗ್ ದೊರೆಯುತ್ತದೆ. ಇಷ್ಟ ಉಳ್ಳವರು ಈ ಜೂನ್ ಮಾಹೇ 12ನೇ ತಾರೀಖು ಒಳಗಾಗಿ ಶ್ರೀ ವೀರಶೈವಾಶ್ರಮ ಸೆಕ್ರೆಟರಿಯವರಿಗೆ ಅಪ್ಲಿಕೇಷನ್ ಹಾಕಿಕೊಳ್ಳಬಹುದು.

ವ್ಯವಸ್ಥಾಪಕ

ಜಯಂತಿಯೂ ಇಂಗ್ಲಿಷ್ ಶಾಲಾಸ್ಥಾಪನೆಯೂ.

ಈ ವರ್ಷ ಶ್ರೀ ಬಸವಜಯಂತಿಯು ಹಾವೇರಿ ತಾಲೂಕ ಹೊಸರಿತ್ತಿಯಲ್ಲಿ ಬಹು ವಿಜೃಂಭಣೆಯಿಂದ ಜರುಗಿದ್ದಲ್ಲದೆ ಅದೇ ದಿವಸ ಶ್ರೀ ಗುದ್ಲೀಸ್ವಾಮಿಗಳವರ ಆಶೀರ್ವಾದದಿಂದ ಮತ್ತು ಸರದಾರ ಬಿ. ಬಿ. ಮಾಮಲೇದೇಸಾಯಿ ಹಂದಿಗನೂರು ಇವರ ಸ್ವಹಸ್ತದಿಂದ ಒಂದು ಎ. ವಿ. ಸ್ಕೂಲು ಸ್ಥಾಪಿಸಲ್ಪಟ್ಟಿತು. ಈ ಭಾಗವು ವಿದ್ಯೆಯಲ್ಲಿ ಬಹಳ ಹಿಂದುಳಿದಿರುವದೆಂದು ಇಲ್ಲಿಯ ಜನರು ಮತ್ತು ಮ|| ಕಲಕೋಟಿ ದೊಡ್ಡ ವಿರೂಪಾಕ್ಷಪ್ಪನವರು ಮತ್ತು ಸಣ್ಣ ವಿರೂಪಾಕ್ಷಪ್ಪನವರು ವಿಶೇಷ ಪ್ರಯತ್ನದಿಂದ 8 ಸಾವಿರ ರೂಪಾಯಿಗಳನ್ನು ಎರಡು ಗ್ರಾಮಗಳಿಂದ ಮಾತ್ರವೇ ಕೂಡಿಸಿ ಆ ಫಂಡಿನ ಉತ್ಪನ್ನದಿಂದ ಈ ಸಂಸ್ಥೆಯನ್ನು ನಡೆಯಿಸುವವರಾಗಿದ್ದಾರೆ. ಈ ಫಂಡನ್ನು ದೊಡ್ಡ ನಿಧಿಯಾಗಿ ಬೆಳೆಸಬೇಕೆಂಬ ಉದ್ದೇಶವಿರುವದಲ್ಲದೆ ಬಡವಿದ್ಯಾರ್ಥಿಗಳ ಹಿತಕ್ಕಾಗಿ ಶೀಘ್ರದಲ್ಲಿಯೇ ಒಂದು ಫ್ರೀ ಬೋರ್ಡಿಂಗನ್ನು ಪ್ರಾರಂಭಿಸುವ ಆಲೋಚನೆ ಇರುವದು. ಅದೇ ದಿವಸ ಸಾಯಂಕಾಲ ಸರದಾರರವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ಒಂದು ಸಂಘವು ಸ್ಥಾಪಿಸಲ್ಪಟ್ಟ ಮೇಲೆ ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ವೇ|| ಗುದ್ಲೆಪ್ಪಶಾಸ್ತ್ರಿಗಳು ಬಸವೇಶ್ವರನ ಚರಿತ್ರೆಯನ್ನು ಪೌರಾಣಿಕ ದೃಷ್ಟಿಯಿಂದಲೂ ಮ|| ವಿ. ಸಿ. ಯಗಟಿ ಇವರು ಐತಿಹಾಸಿಕ ದೃಷ್ಟಿಯಿಂದಲೂ ಭಾಷಣಮಾಡಿದ ನಂತರ ಅದೇ ವಿಷಯದ ಮೇಲೆ ಮರಡೂರ ಮಾಸ್ತರರು ಬಿ. ಎ. ಕುಲಕರ್ಣಿ ಮಿ|| ಹೊಟ್ಟಿ ಬಿ. ಎ. ಎಲ್‌ಎಲ್. ಬಿ. ಮತ್ತು ಶಿ|| ಮಾಸ್ತರ ಮಲ್ಲಯ್ಯನವರು ಮೊದಲಾದವರ ಸ್ಫೂರ್ತಿದಾಯಕ ಭಾಷಣಗಳಾದ ಮೇಲೆ ಜಯಘೋಷದಿಂದ ಸಭೆಯು ವಿಸರ್ಜನೆಯಾಯಿತು. ಈ ಫಂಡಿಗೆ ಸಿದ್ದಪ್ಪ ಚೂರಮರಿ ಇವರು ತಮ್ಮ ಲಗ್ನದಲ್ಲಿ ತೆಗೆದಿಟ್ಟ 10 ರೂಪಾಯಿಗಳನ್ನು ಈ ಸಂಸ್ಥೆಗೆ ಕೊಟ್ಟು ಮೊದಲು ಮಾರ್ಗದರ್ಶಕರಾದ್ದರಿಂದ ನಮಗೆ ಪರಮಾನಂದವಾಗುತ್ತದೆ.

ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಜಯದೇವ ವೀರಶೈವ ಸಂಘ ತುಂಕೂರು.

ವೀರಶೈವ ವಿದ್ಯಾರ್ಥಿಗಳ ವಿದ್ಯಾಪ್ರೋತ್ಸಾಹಕ್ಕೂ ವಿದ್ಯಾರ್ಥಿನಿಲಯದ ಪುರೋವೃದ್ಧಿಗಾಗಿಯೂ ವೀರಶೈವ ಧರ್ಮಗ್ರಂಥಗಳ ಪುನರುಜ್ಜೀವನಕ್ಕೂ ಮತ್ತು ಧಾರ್ಮಿಕ ಸಾಮಾಜಿಕ ವಿಷಯಗಳಲ್ಲಿ ಮತಸುಧಾರಣೆಮಾಡುವುದಕ್ಕೂ ಈ ಸಂಘವು ಏರ್ಪಟ್ಟು ಮೈಸೂರು ಸರ್ಕಾರದ ಸೊಸೈಟಿ ರೆಗ್ಯುಲೇಷನ್ ಪ್ರಕಾರ ರಿಜಿಸ್ಟರುಮಾಡಿಸಲ್ಪಟ್ಟಿದೆ. ಈ ಸಂಘದಾಡಳಿತಕ್ಕೊಳಪಟ್ಟು ತುಂಕೂರಲ್ಲಿ ಶ್ರೀಮನ್ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಕೃಪಾಬಲದಿಂದ ಕಟ್ಟಲ್ಪಡುತ್ತಿರುವ ವಿದ್ಯಾರ್ಥಿನಿಲಯದ ಕಟ್ಟಡದ ಕೆಳಗಿನ ಅಂತಸ್ತೆಲ್ಲವೂ ಪೂರ್ತಿಯಾಗಿ ಅರ್ಧಭಾಗಕ್ಕಿಂತಲೂ ಹೆಚ್ಚಾದ ಕೆಲಸವು ನಡೆದು ಇನ್ನು 6-8 ತಿಂಗಳಲ್ಲಿ ಕಟ್ಟಡವು ಪೂರೈಸುವ ಸಂಭವವಿದೆ. ತುಂಕೂರಲ್ಲಿದ್ದ ಕೈ|| ಸಾಹುಕಾರ್ ಷಾಪಂಗಡಿ ಗುಬ್ಬಿ ಹುಚ್ಚಯ್ಯನವರು ಜೀವಂತರಾಗಿದ್ದಾಗ್ಗೆ ಇಲ್ಲಿ ಸ್ಥಾಪಿಸಲ್ಪಡಲಿಕ್ಕಿದ್ದ ವೀರಶೈವ ವಿದ್ಯಾರ್ಥಿನಿಲಯದಲ್ಲಿರಬಹುದಾದ ಬಡವೀರಶೈವ ವಿದ್ಯಾರ್ಥಿಗಳಿಗೆ ಅನ್ನವಸತಿಗಳನ್ನು ಕಲ್ಪಿಸಬೇಕೆಂಬ ಸದುದ್ದೇಶದಿಂದ ಹತ್ತು ಸಾವಿರ ರೂಪಾಯಿಗಳ ಸಾಲವನ್ನು ಪ್ರತ್ಯೇಕಿಸಿ ತೆಗೆದಿಟ್ಟು ತಾವೇ ಈ ಧರ್ಮಕಾರ್ಯವನ್ನು ನೆರವೇರಿಸುವುದರೊಳಗಾಗಿ ಸ್ವರ್ಗಸ್ಥರಾದುದರಿಂದ ಸಾಧ್ಯವಿಲ್ಲದೆ ಹೋಯಿತು. ಆದರೆ ಅವರ ವಾರಸದಾರರು, ಮತ್ತು ಸಮೀಪಬಂಧುಗಳಲ್ಲಿ ಕೆಲವರು ಒಮ್ಮನಸ್ಸಿನಿಂದಲೂ ಉದಾರ ಬುದ್ಧಿಯಿಂದಲೂ ಮೃತರ ಸಂಕಲ್ಪವನ್ನು ನೆರವೇರಿಸಬೇಕೆಂಬ ಇಚ್ಛೆಯಿಂದ ನಿರ್ದೇಶಿಸಿದ್ದ ಸಾಲಗಳನ್ನು ವಸೂಲ್ಮಾಡಿ ವಿನಿಯೋಗಿಸಲು ಈ ಸಂಘದ ಪ್ರೆಸಿಡೆಂಟರಿಗೆ ಅಧಿಕಾರಕೊಟ್ಟದರ ಮೇಲೆ ಸಾಲಗಾರರಿಂದ ಕೋರ್ಟಿಗೆ ಹೋಗದೆ ಸುಸೂತ್ರವಾಗಿ 7483-2-3 ರೂ. ಗಳನ್ನು ಬರಮಾಡಿಕೊಂಡು ಧರ್ಮಕರ್ತರ ಉದ್ದೇಶವನ್ನು ನೆರವೇರಿಸುವುದಕ್ಕೋಸ್ಕರ ಈ ಸಂಘದವರು ಮೈಸೂರು ಬ್ಯಾಂಕಿನಲ್ಲಿ ಡಿಪಾಜಿಟ್ಟುಮಾಡಿರುತ್ತಾರೆ. ವೀರಶೈವ ವಿದ್ಯಾರ್ಥಿನಿಲಯವು ಪೂರ್ತಿಯಾದ ಅನಂತರ ಅದರಲ್ಲಿರಬಹುದಾದ ಬಡವಿದ್ಯಾರ್ಥಿಗಳಿಗಾಗಿ ಸದರಿ ಹಣದ ಬಡ್ಡಿಯು ವಿನಿಯೋಗಿಸಲ್ಪಡುವುದು. ಸಾಹುಕಾರ್ ಗುಬ್ಬಿ ಹುಚ್ಚಯ್ಯನವರ ಸಂಕಲ್ಪವನ್ನು ಪೂರ್ತಿಗೊಳಿಸುವುದು ಅವರ ವಾರಸುದಾರರ ಮತ್ತು ಸಮೀಪಬಂಧುಗಳ ಕೈಯಲ್ಲಿದೆ. ಅವರು ಇದುವರೆಗೂ ಉದಾರಮತಿಯಿಂದ ವರ್ತಿಸಿದಂತೆ ಮುಂದೆಯೂ ನಡೆದು ಮೃತರ ಪೂರ್ಣಸಂಕಲ್ಪವನ್ನು ನೆರವೇರಿಸುತ್ತಾರೆಂದು ನಿರೀಕ್ಷಿಸಿದೆ. ಈ ವಿಷಯದಲ್ಲಿ ಸಹಾಯಮಾಡಿದ ಕೆಲ ಮಹನೀಯರುಗಳು ತಮ್ಮ ಹೆಸರನ್ನು ಪ್ರಕಟಿಸಕೂಡದೆಂದು ಹೇಳಿದ್ದರಮೇಲೆ ಯಾರ ಹೆಸರನ್ನೂ ಇದರಲ್ಲಿ ನಮೂದಿಸಿಲ್ಲ. ಆದರೆ ಇದರಲ್ಲಿ ಭಾಗಿಗಳಾಗಿ ಸಹಾಯವನ್ನು ಮಾಡಿದವರೆಲ್ಲರಿಗೂ ಈ ಸಂಘದವರು ಆಭಾರವುಳ್ಳವರಾಗಿರುತ್ತಾರೆ. ಇವರ ಮೇಲ್ಪಂಕ್ತಿಯನ್ನನುಸರಿಸಿ ಇದೇ ರೀತಿಯಲ್ಲಿ ವೀರಶೈವ ಮತಾಭಿಮಾನಿಗಳು ಯಥಾಶಕ್ತಿ ಸಹಾಯಮಾಡಿ ಶಿವಪ್ರೀತಿಗೆ ಪಾತ್ರರಾಗಬೇಕೆಂದು ಈ ಸಂಘದವರು ನಂಬಿ ನಿರೀಕ್ಷಿಸುತ್ತಾರೆ.

ಜಿ. ರುದ್ರಪ್ಪ, ಎಂ. ಎ., ಎಲ್‌ಎಲ್.ಬಿ., ಪ್ರೆಸಿಡೆಂಟ್,
ಶ್ರೀ ಜಗದ್ಗುರು ಜಯದೇವ ವೀರಶೈವ ಸಂಘ, ತುಂಕೂರು.

ಶೋಚನೀಯ ಮೃತ್ಯು.

ಸೋಲಾಪುರದಲ್ಲಿ ಬೋರಾಮಣಿಯೆಂಬ ಸುಪ್ರಸಿದ್ಧ ವೀರಮಾಹೇಶ್ವರ ಮನೆತನದಲ್ಲಿ ಸುಶಿಕ್ಷಿತರೂ ಸುಶೀಲರೂ ವಿದುಷಿಯರೂ ಆದ ಶ್ರೀ|| ಸಾ|| ನೀಲವ್ವ ಪತ್ರಿದ ಇವರು ಕ್ಷಯಮಹಾವ್ಯಾಧಿಯಿಂದ ಎರಡು ವರ್ಷಗಳ ವರೆಗೂ ಪೀಡಿತರಾಗಿದ್ದು 4—5 ಸಾವಿರ ರೂಪಾಯಿಗಳ ವ್ಯಯದಿಂದ ಇಲ್ಲಿಯ ಮತ್ತು ಪುಣೆಯ ಪ್ರಸಿದ್ಧ ಡಾಕ್ಟರರ ಔಷಧಗಳ, ದಾದಿಯರ ಉಪಚಾರಗಳ, ಮಹಾಬಳೇಶ್ವರ ಸಮೀಪದಲ್ಲಿರುವ ಪಾಟಗಣಿ ಮೊದಲಾದ ಸ್ಥಳಗಳ, ಉತ್ತಮಹವೆಯ, ಜಪತಪಾದಿಗಳ ಉಪಯೋಗವು ಏನೂ ಆಗದೆ ತಾ|| 11-5-1924 ರವಿವಾರ ಪ್ರಾತಃ ೮||| ಗಂಟೆಯಲ್ಲಿ ಜಡಭೌತಿಕ ಶರೀರವನ್ನು ಬಿಟ್ಟು ಶಿವಸಾಯುಜ್ಯವನ್ನೈದಿದರು ಎಂದು ತಿಳುಹಿಸುವದಕ್ಕೆ ಅತ್ಯಂತ ದುಃಖವೆನಿಸುತ್ತದೆ.

ನೀಲವ್ವನವರು ಸೋಲಾಪುರದಲ್ಲಿಯ "ಮಹಿಲಾಜ್ಞಾನಮಂದಿರ" ಎಂಬ ಸ್ತ್ರೀ ಸಂಸ್ಥೆಯ ಚಿಟಣೀಸರಿದ್ದರು. ಹಿಂದುಳಿದ ವೀರಶೈವ ಸ್ತ್ರೀಯರ ಉನ್ನತಿಯ ವಿಷಯದಲ್ಲಿ ನಿರಾಲಸತನದಿಂದ ಅಹೋರಾತ್ರಿ ಪ್ರಯತ್ನಿಸುತ್ತಿದ್ದರು. ಮರಾಠೀಭಾಷೆಯಲ್ಲಿ 5—6 ಇಯತ್ತೆಯವರಿಗೂ ಅಭ್ಯಾಸವಾಗಿದ್ದು ಕನ್ನಡದ ಅಭ್ಯಾಸವಾದರೂ ಇವರಿಗೆ ಚನ್ನಾಗಿದ್ದಿತು. ಇಂಗ್ಲೀಷವನ್ನಾದರೂ ಮಹಿಲಾಜ್ಞಾನಮಂದಿರದಲ್ಲಿ 3—4 ಪುಸ್ತಕಗಳವರೆಗೂ ಓದಿದ್ದರು. ಮರಾಠೀ ಮತ್ತು ಕನ್ನಡ ಭಾಷೆಯಲ್ಲಿ ಕವಿತ್ವವನ್ನು ಹೃದಯಂಗಮವಾಗಿ ರಚಿಸುತ್ತಿದ್ದರು. ಇತ್ತಿತ್ತ ಸ್ವಧರ್ಮವಿಚಾರದಲ್ಲೂ ವೇದಾಂತದಲ್ಲಿಯೂ ಅಭಿರುಚಿಯು ಹುಟ್ಟಿ ತಕ್ಕಮಟ್ಟಿಗೆ ಸಂಸ್ಕೃತಭಾಷಾಜ್ಞಾನವನ್ನು ಮಾಡಿಕೊಂಡು ಪಂಚೀಕರಣ, ವೇದಾಂತಸಾರ ಮೊದಲಾದ ಸಟೀಕ ವೇದಾಂತಗ್ರಂಥಗಳನ್ನೂ, ಸಟೀಕ ಸಿದ್ಧಾಂತ ಶಿಖಾಮಣಿ, ಅನುಭವಸೂತ್ರ ಮುಂತಾದ ಸಿದ್ಧಾಂತಗ್ರಂಥಗಳನ್ನೂ ಅಭ್ಯಾಸಿಸಿ ಪರಾಮರ್ಶಿಸುತ್ತಿದ್ದರು. ಧಾರ್ಮಿಕ, ನೈತಿಕ, ಶೈಕ್ಷಣಿಕ ಮೊದಲಾದ ವಿಷಯಗಳಲ್ಲಿ ಉಪನ್ಯಾಸವನ್ನು ಕೊಡುವಲ್ಲಿ ಹೆಸರಾಂತಿದ್ದರು. ನಾನಾವಿಧ ಪಕ್ವಾನ್ನಗಳನ್ನು ಮಾಡುವಲ್ಲಿ ನಿಪುಣರಿದ್ದು ಕಟ್ಟಿಗಿಯ ಚೂರ್ಣ ಮೊದಲಾದ ಒಣಪದಾರ್ಥಗಳ ಪಾಕಮಾಡುತ್ತಿದ್ದರು. ಇಲ್ಲಿ ಜರುಗಿದ 1—2 ಪ್ರದರ್ಶನಗಳಲ್ಲಿ ಇವರಿಗೆ ಬಹುಮಾನ ದೊರೆಕಿದ್ದಿತು. ಝಿಂಕಿ, ಕಸೂ, ಹೆಣಿಯುವದು ಮೊದಲಾದ ಹಸ್ತಕಲೆಗಳಲ್ಲಿ ಇವರು ಜಾಣರಿದ್ದು ಪ್ರದರ್ಶನಗಳಲ್ಲಿ ಇವರಿಗೆ ಸರಟೀಫಿಕೀಟಗಳೂ ಮೆಡಲಗಳೂ ದೊರೆದಿದ್ದವು. ನೀಲವ್ವನವರು ೧|| ವರ್ಷದವರಿರುವಾಗ ಅವರ ಜನನೀ ಜನಕರು ದಿವಂಗತರಾದರು. ಆ ಮೊದಲು ನೀಲವ್ವನವರ ಲಾಲನ ಪಾಲನ ಶಿಕ್ಷಣ ಮೊದಲಾದುದನ್ನು ಇಲ್ಲಿಯ ಪ್ರಸಿದ್ಧ ಶ್ರೀ ಕಂಟಿಮಠದ ನಿಜಗುಣಸ್ವಾಮಿಗಳು ನಿಜಪಿತೃವಿನಗಿಂತಲೂ ಮಿಗಿಲಾದ ತಳಕಳಿಯಿಂದಲೂ, ಅಭಿಮಾನದಿಂದಲೂ ಮಾಡಿಸಿದ್ದರು. ಮಹಾವ್ಯಾಧಿಪೀಡಿತರಾದಾಗ್ಯೂ ಶರೀರದಲ್ಲಿ ನಡಿಯುವ ಮತ್ತು ಟಾಂಗಾದಲ್ಲಿ ಕುಳಿತು ಹೋಗುವ ಶಕ್ತಿಯಿರುವವರೆಗೂ ಮಹಿಲಾಜ್ಞಾನಮಂದಿರಕ್ಕೆ ಹೋಗಿ ಸೋದರಿಯರಿಗೆ ಉಪದೇಶ ಮತ್ತು ಉತ್ಸಾಹ ಕೊಡುವದನ್ನು ಬಿಡಲಿಲ್ಲ. ಹಾಸಿಗೆಯಲ್ಲಿ ಒರಗಿದ್ದರೂ ತಾನು ಬದುಕುವದಿಲ್ಲೆಂದು ತಿಳಿದಿದ್ದರೂ ಸ್ಮೃತಿಯಿರುವವರೆಗೂ ಶಿವಚಿಂತನೆಯಗಿಂತಲೂ ಮಹಿಲಾಜ್ಞಾನಮಂದಿರದ ಚಿಂತನವೇ ಹೆಚ್ಚು ತೋರುತ್ತಿದ್ದಿತು. ಇಂಥ ಸ್ವಸಮಾಜಹಿತೈಷಿಗಳೂ ಪ್ರಯತ್ನ ಪುರೋಭಾಗಿಗಳೂ ವಿದುಷಿಯರೂ ಆದ ನೀಲವ್ವನವರ ವಿಯೋಗದಿಂದ ಇಲ್ಲಿಯ ವೀರಶೈವಸಮಾಜಕ್ಕೆ ಅದರಲ್ಲಿ ಮಹಿಲಾಸಮಾಜಕ್ಕೆ ಬಹು ದೊಡ್ಡ ಹಾನಿಯುಂಟಾಯಿತು. ನೀಲವ್ವನವರ ಮೃತಿಯಿಂದ ಶ್ರೀ ನಿಜಗುಣಸ್ವಾಮಿಗಳಿಗೂ ಬೋರಾಮಣಿಯ ಮನೆತನದವರಿಗೂ ಉಂಟಾಗಿರುವ ಅಪಾರದುಃಖದಲ್ಲಿ ಇಲ್ಲಿಯ ವೀರಶೈವ ಸ್ತ್ರೀ ಪುರುಷರುಗಳು ಸಮಭಾಗಿಗಳಾಗಿರುವರು. ಶ್ರೀ ಸ್ವಾಮಿಗಳ ಆ ಮನೆತನದವರ ದುರ್ಧರ ದುಃಖವು ಕಮ್ಮಿಯಾಗಲೆಂತಲೂ ಮೃತರ ಆತ್ಮನಿಗೆ ಪರಶಿವನು ಶಾಂತಿಯನ್ನೀಯಲೆಂತಲೂ ಹಾರೈಸುತ್ತೇವೆ.

ಗುಣೈಕಪಕ್ಷಪಾತಿ.

ವಿವಾಹ ಮಹೋತ್ಸವಗಳು.

ಬೆಂಗಳೂರು ಪೇಟೆಯಲ್ಲಿ ಪ್ರಸಿದ್ಧ ಫಲಸರಕು ವ್ಯಾಪಾರಿಗಳಾದ ಆರ್. ಪಾಪಣ್ಣ ಅಂಡ್ ಸನ್ಸ್‌ರಲ್ಲೊಬ್ಬರಾದ ಮ|| ಆರ್. ಪಿ. ವೀರಭದ್ರಪ್ಪನವರು ತಮ್ಮ ಸಹೋದರಿ ಸೌ|| ಗೌರಮ್ಮನನ್ನು ಕೋಲಾರದಲ್ಲಿ ಎಕ್ಸೈಸ್ ಕಂಟ್ರಾಕ್ಟರು, ಮ್ಯುನಿಸಿಪಲ್ ಕೌನ್ಸಿಲರು ಮತ್ತು ರೆಪ್ರೆಜೆಂಟೇಟಿವ್ ಮೆಂಬರು ಆದ ಸಾಹುಕಾರ್ ಮ|| ಎ. ಆರ್. ಚಿಕ್ಕಚನ್ನಂಜಪ್ಪನವರ ಅಣ್ಣನವರು ಮ|| ಹೊನ್ನಗಂಗಪ್ಪನವರ ಪುತ್ರ ಮ|| ಚಿಕ್ಕಗಂಗಾಧರಪ್ಪನವರಿಗೆ ಕೊಟ್ಟು ಕಳೆದ ತಾ|| 28 ರಲ್ಲಿ ವಿವಾಹಮಹೋತ್ಸವವನ್ನು ಬಹಳ ವೈಭವದಿಂದ ನೆರವೇರಿಸಿದರು. ಇದಕ್ಕಾಗಿ ಅವರ ವಾಸಸ್ಥಳವಾದ ಆತ್ಮವಿಲಾಸವೆಂಬ ಬಂಗಲೆಯು ನಾನಾ ಬಣ್ಣದ ತೋರಣಗಳಿಂದಲೂ ಎಲೆಕ್ಟ್ರಿಕ್ ದೀಪಗಳಿಂದಲೂ ಬಾಳೆಕಂಭಗಳಿಂದಲೂ ಅಲಂಕರಿಸಲ್ಪಟ್ಟಿತ್ತು ಮತ್ತು ಸುಂದರವಾದ ವಿವಾಹ ಮಂಟಪವು ರಚಿಸಲ್ಪಟ್ಟು ಎಲೆಕ್ಟ್ರಿಕ್ ದೀಪಾವಳಿಗಳಿಂದ ಶೃಂಗರಿಸಲ್ಪಟ್ಟಿದ್ದಿತು. ಸೋಮವಾರ ವರನು ದಿವ್ಯಪೀತಾಂಬರದಿಂದಲೂ ಪುಷ್ಪಮಾಲೆಗಳಿಂದಲೂ ಅಲಂಕೃತವಾದ ಮೋಟಾರು ಬಂಡಿಯಲ್ಲಿ ಕುಳ್ಳಿರಿಸಲ್ಪಟ್ಟು ವಾದ್ಯಗಳ ವೈಭವದಿಂದಲೂ, ಮದ್ದಿನ ವಿನೋದದಿಂದಲೂ ಜನಸ್ತೋಮದಿಂದಲೂ ಚಿಕ್ಕಪೇಟೆ, ದೊಡ್ಡಪೇಟೆ, ಚಾಮರಾಜಪೇಟೆಗಳಲ್ಲಿ ಉತ್ಸವ ಪೂರ್ವಕವಾಗಿ ಕರೆತರಲ್ಪಟ್ಟರು. ಬುಧವಾರ ಬೆಳಿಗ್ಗೆ 12 ಗಂಟೆಯೊಳಗೆ ವೇ|| ಗುರುಲಿಂಗಶಾಸ್ತ್ರಿಗಳು, ವೇ|| ನಂಜಯ್ಯಶಾಸ್ತ್ರಿಗಳು ಈ ಉಭಯರ ಪೌರೋಹಿತ್ಯದಿಂದ ಧಾರಾಮುಹೂರ್ತವು ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು. ಸ್ಥಳದ ಶೆಟ್ಟಿಯಜಮಾನರು ಮೊದಲಾಗಿ ಎಲ್ಲಾ ಮತಸ್ಥರೂ ಬಂಧುಬಳಗದವರೂ, ಮೈಸೂರು, ವೆಂಕಟಕೋಟೆ, ಕೋಲಾರ, ಕೊಳ್ಳೇಗಾಲ, ಚೆನ್ನಪಟ್ಟಣ, ಸಾಗರ, ಕಾನಕಾನಹಳ್ಳಿ ಮೊದಲಾದ ಸ್ಥಳಗಳಿಂದ ಬಂಧುಗಳೂ ಸ್ನೇಹಿತರುಗಳೂ ಬಂದಿದ್ದರು. ಧಾರಾಮುಹೂರ್ತ ಮಾಂಗಲ್ಯಧಾರಣ ಸಪ್ತಪದಿ ಮೊದಲಾದ ಕಾರ್ಯಗಳು ನಡೆದಮೇಲೆ ಮಠಪತಿಗಳಿಗೂ ಪುರೋಹಿತರುಗಳಿಗೂ ಸದಕ್ಷಿಣ ತಾಂಬೂಲ ಕೊಡಲ್ಪಟ್ಟ ಮೇಲೆ ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿಗೆ ವಧೂವರರ ಕಡೆಯಿಂದ 50 ರೂಪಾಯಿಗಳ ಮತ್ತು ಕೈ|| ವೀರಸಂಗಪ್ಪನವರ ಸ್ಮರಣಾರ್ಥವಾಗಿ 5 ರೂಪಾಯಿಗಳ ಸಂಭಾವನೆಗಳು ಕೊಡಲ್ಪಟ್ಟು ಸಭಿಕರಿಗೆ ಸದಕ್ಷಿಣ ಫಲತಾಂಬೂಲವು ಹಂಚಲ್ಪಟ್ಟಿತು. ವಿವಾಹ ಕಾರ್ಯಕರ್ತರಾದ ಮ|| ಆರ್. ಪಿ. ವೀರಭದ್ರಪ್ಪನವರು ಸ್ಥಳ ಪರಸ್ಥಳದ ಬಂಧುಮಿತ್ರರುಗಳನ್ನೂ ಸಾವಿರಾರು ಜನ ಭೂರಿಯವರನ್ನೂ ಭಕ್ಷ್ಯಭೋಜ್ಯಾದಿಗಳಿಂದ ಸಂತೃಪ್ತಿಗೊಳಿಸಿ ಬಡವರೆಲ್ಲರಿಗೂ ದಕ್ಷಿಣೆಯನ್ನು ಕೊಟ್ಟರು. ಬುಧವಾರ ಸಾಯಂಕಾಲ ಆರತ್ಕಕ್ಷತೆಗೆ ಒಂದನೆಯ ಕೌನ್ಸಿಲರು ಮಿರ್ ಹಂಸಾಹುಸೇನ್‌ಸಾಹೇಬರು, ಚೀಫ್‌ಜಡ್ಜ್ ಮ|| ಕೆ. ಚಂದ್ರಶೇಖರಯ್ಯರ್‌ರವರು, ದಿವಾನ್‌ಬಹದ್ದೂರ್ ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ. ಐ. ಇ., ಯವರು, ರೆವಿನ್ಯೂ ಕಮೀಷನರ್ ಮಿ|| ಕೆ. ಚಾಂಡಿಯವರು, ಚೀಫ್ ಸೆಕ್ರೆಟರಿ ಮಿ|| ಕೆ. ಮೆಥಾನ್‌ರವರು ಮೊದಲಾಗಿ ಸರ್ಕಾರಿ ಅಧಿಕಾರಿಗಳೂ ಮ|| ಗಳಾದ ಮ್ಯುನಿಸಿಪಲ್ ಪ್ರೆಸಿಡೆಂಟ್ ಗರುಡಾಚಾರ್ಯರು, ಮಂಡಿ ಹರಿಯಣ್ಣನವರು, ಸಜ್ಜನರಾಯರು ಮುದಲಾಗಿ ವರ್ತಕರುಗಳೂ, ಲಾಯರುಗಳೂ ಇತರದೊಡ್ಡ ಮನುಷ್ಯರೂ ದಯಮಾಡಿಸಿದ್ದು ಕೊಳ್ಳೆಗಾಲದ ತಾಲ್ಲೋಕು ಬೋರ್ಡು ಪ್ರೆಸಿಡೆಂಟರೂ ಶ್ರೀಮಂತರೂ ಆದ ಮ|| ಜಿ. ಪಿ. ಮಲ್ಲಪ್ಪನವರ ಕುಮಾರ 11 ವರ್ಷ ವಯಸ್ಸಿನ ನಟರಾಜನ ಹಾಡುಗಾರಿಕೆಯನ್ನು ಕೇಳಿ ಮಹಾನಂದವನ್ನು ಹೊಂದಿ ಕೌನ್ಸಿಲರೂ, ಚೀಫ್‌ಜಡ್ಜರೂ, ದಿ|| ಬ|| ಸೆಟ್ಟರೂ ನಟರಾಜನ ತಂದೆಯವರಾದ ಮ|| ಜಿ. ಪಿ. ಮಲ್ಲಪ್ಪನವರ ಕುರಿತು ಅವರ ಮಗನಿಗೆ ಅಷ್ಟು ಚಿಕ್ಕವಯಸ್ಸಿನಲ್ಲಿ ಸಂಗೀತಾಭಿರುಚಿಯಿರುವುದು ಅಪೂರ್ವವಾದುದರಿಂದ ಆತನಿಗೆ ಪೂರ್ಣಪಾಂಡಿತ್ಯವನ್ನುಂಟುಮಾಡಬೇಕೆಂದೂ ಆತನ ಮುಂಜಳಸ್ವರದಿಂದ ತಮ್ಮಗಳಿಗೆ ಪರಮಾನಂದ ಉಂಟಾಯಿತೆಂದೂ ಹೇಳಿದರು. ಸಭಿಕರೆಲ್ಲರೂ ಆ ಬಾಲ ಸಂಗೀತಗಾರನು ಕೊಂಚವೂ ಆಯಾಸವಿಲ್ಲದೆ ಲೀಲಾಜಾಲವಾಗಿ ಹಾಡುವುದನ್ನು ಕೇಳಿ ಬಹಳವಾಗಿ ಸಂತೋಷಪಟ್ಟು ಆತನಿಗೆ ಭಗವಂತನು ದೀರ್ಘಾಯುರಾರೋಗ್ಯವನ್ನೂ ಪೂರ್ಣಪಾಂಡಿತ್ಯವನ್ನೂ ಕೊಡಲೆಂದು ಕೋರಿದರು. ಬಂದಿದ್ದ ಸಭಿಕರೆಲ್ಲರೂ ಮ|| ವೀರಭದ್ರಪ್ಪನವರಿಂದ ಯಥೋಚಿತವಾಗಿ ಸತ್ಕರಿಸಲ್ಪಟ್ಟು ನೂತನ ದಂಪತಿಗಳಿಗೆ ಆಯುರಾರೋಗ್ಯಾಭಿವೃದ್ಧಿರಸ್ತು ಎಂದು ಹರಸಿ ತೆರಳಿದರು. ಮ|| ವೀರಭದ್ರಪ್ಪನವರ ಅತಿಥಿ ಸತ್ಕಾರವೂ ವಿತರಣೆಯೂ ಔದಾರ್ಯವೂ ಶ್ಲಾಘ್ಯವಾಗಿದ್ದುವು. ಓರ್ವ ಉತ್ಸವಭಾಗಿ.

ಶಿವಮೊಗ್ಗಾ ಜಿಲ್ಲಾ, ತೀರ್ಥಹಳ್ಳಿ ತಾಲ್ಲೂಕು ಆರಗದ ಪ್ರಭುದೇವರ ಮಠದಲ್ಲಿ ಇದೇ ರಕ್ತಾಕ್ಷಿ ಸಂ|| ವೈಶಾಖ ಬ|| ೫ ಶುಕ್ರವಾರ ಮಧ್ಯಾಹ್ನ 2 ಗಂಟೆ ಶುಭಲಗ್ನದಲ್ಲಿ ಬಳ್ಳಾರಿ ಜಿಲ್ಲಾ ಹರಪನಹಳ್ಳಿ ಗ್ರಾಮದ ತೆಲಗಿ ಹರಪನಹಳ್ಳಿ ಮಠದ ಬ್ರ|| ಶ್ರೀ ಸಿದ್ಧಾಂತ ಹೊಳೆ ಬಸವಶಾಸ್ತ್ರಿಗಳವರ ಸುಪುತ್ರ ಚಿ|| ಷಡಕ್ಷರಪ್ಪಯ್ಯ ಎಂ. ಎ. ಯವರಿಗೆ ಆರಗದ ಪ್ರಭುದೇವರ ಮಠದ ಮ|| ವೇ|| ಪರ್ವತಪ್ಪಯ್ಯನವರ ಸುಪುತ್ರಿ ಚಿ|| ಸೌ|| ಗಂಗಮ್ಮನನ್ನು ಕೊಟ್ಟು ಅತ್ಯಂತ ವೈಭವದೊಡನೆ ವಿವಾಹಕಾರ್ಯವು ದಾವಣಗೇರಿ ತಾಲ್ಲೂಕು ಕಂಚಿನಹಳ್ಳಿ ಮಠದ ವೇ|| ಗಂಗಾಧರಶಾಸ್ತ್ರಿಗಳಿಂದ ವಿಧ್ಯುಕ್ತಪ್ರಕಾರ ಸಾಂಗವಾಗಿ ನೆರವೇರಲ್ಪಟ್ಟಿತು. ಈ ವಿವಾಹ ಮಂಗಲಕಾರ್ಯಕ್ಕೆ ಪ್ರಣವಸ್ವರೂಪಿಗಳಾದ ಶ್ರೀ ಹಾಲಸ್ವಾಮಿಗಳವರು ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರರವರು ಮೊದಲಾದ ಅನೇಕ ದೊಡ್ಡ ಮನುಷ್ಯರೂ, ಹೊಳಲ್ಕೆರೆ, ಬೀರೂರು, ಮುಂತಾದ ಕಡೆಯಿಂದ ಬಂಧುವರ್ಗದವರೂ, ಶಿವಮೊಗ್ಗಾದಿಂದ ಮ|| ರಾ|| ಎ.ಪಿ. ಹಾಲಪ್ಪನವರು, ಬಿ.ಎ., ಹರಪನಹಳ್ಳಿ ನೆಲ್ಕುದುರಿ ಬಿನ್ ರಂಗಣ್ಣನವರ ಶ್ರೀಮಂತ ಗುರುಬಸಪ್ಪ ಬಿ. ಎ., ಯವರು ಇನ್ನು ಅನೇಕ ಸ್ಥಲ ಪರಸ್ಥಲದ ದೊಡ್ಡ ಮನುಷ್ಯರುಗಳೂ ಆಗಮಿಸಿದ್ದರು. ಮರುದಿವಸ ಮೇಲ್ಕಂಡ ಷಡಕ್ಷರಪ್ಪಯ್ಯನವರು ಎಂ.ಎ. ಪರೀಕ್ಷೆಯಲ್ಲಿ ಪಾಸಾದರೆಂದು ಮದ್ರಾಸಿನಿಂದ ಅತ್ಯಂತ ಶುಭವಾರ್ತೆಯು ಬಂದಿದ್ದರಿಂದಲೂ ಇವರ ಖಾಸಾ ತಮ್ಮಂದಿರಾದ ಸದಾಶಿವಯ್ಯನವರು ಲಿಟರೇಚರ್ ಎಂ. ಎ. ಪರೀಕ್ಷೆಯೊಳು ಉತ್ತಮತರಗತಿಯಲ್ಲಿ ಪಾಸಾದರೆಂಬ ವಾರ್ತೆಯು ಇವರ ಚಿಕ್ಕನವರ ಪುತ್ರರಾದ ಪಂಚಾಕ್ಷರೈಯ್ಯನವರು ಎಫ್. ಎ. ಪರೀಕ್ಷೆಯಲ್ಲಿ ಪಾಸಾದರೆಂಬ ಶುಭವಾರ್ತೆಗಳು ಬಂದದ್ದನ್ನು ಬಂಧುವರ್ಗದವರೂ ಪುರಜನರೂ ಕೇಳಿ ಪರಮಾನಂದಭರಿತರಾದರು. ಮರುದಿವಸ ವಿವಾಹಮಂಟಪದಲ್ಲಿ ಮೇಲ್ಕಂಡ ಗಂಗಾಧರಶಾಸ್ತ್ರಿಗಳಿಂದ ಶಿವಕಥಾಕಾಲಕ್ಷೇಪವು ಬಹುಯಿಂಪಾಗಿ ಜರುಗಿತು. ನಂತರ ಮೇಲ್ಕಂಡ ಸದಾಶಿವಯ್ಯ ಎಂ. ಎ. ಯವರು ಸ್ತ್ರೀಧರ್ಮ, ಪಾತಿವ್ರತ್ಯ ವಿಷಯದಲ್ಲಿ ಸರಸವಾಗಿ ಭಾಷಣಮಾಡಿದರು. ಈ ವಿವಾಹಸಮಾರಂಭದಲ್ಲಿ ಸದರಿ ಪ್ರಭುದೇವರ ಮಠದ ಯಜಮಾನರಾದ ಮಾದಮ್ಮನವರೂ, ಅವರ ಚಿ|| ಮುರಿಗೈಯ್ಯನವರೂ ಒಳ್ಳೆವುದಾರಮನಸ್ಸಿನಿಂದ 4-5 ಸಾವಿರ ಜನಗಳಿಗೆ ಮೃಷ್ಟಾನ್ನಭೋಜನದಿಂದ ತೃಪ್ತಿಪಡಿಸಿ ಕಾರ್ಯಭಾಗವನ್ನು ಯಾವ ನ್ಯೂನತೆ ಇಲ್ಲದೆ ನೆರವೇರಿಸಿ ಕೀರ್ತಿಭಾಜನರಾದರು. ಮಾದಮ್ಮನವರು ತಮ್ಮ ಅಳಿಯಂದರಾದ ಷಡಕ್ಷರಪ್ಪಯ್ಯನವರನ್ನು 3ನೇ ವರುಷದ ಪರೀಕ್ಷೆಯಲ್ಲಿ ಅಭ್ಯಾಸಮಾಡಿಸಿ ಬಿ. ಎ. ಪರೀಕ್ಷೆಯನ್ನು ಪಾಸುಮಾಡಿಸಿ ಕೀರ್ತಿವಂತರಾದರು. ಮುಂದೆ ಎಂ. ಎ. ಬಿ. ಎಲ್. ಪರೀಕ್ಷೆಯನ್ನು ಪಾಸುಮಾಡಿಸುವದಕ್ಕೆ ಹಿಡಿದಷ್ಟು ದ್ರವ್ಯ ಸಹಾಯಮಾಡುವದಕ್ಕೆ ಒಪ್ಪಿಕೊಂಡರು. ಇವರ ಉದಾರತ್ವಕ್ಕೆ ಎಷ್ಟು ಸಂತೋಷಪಟ್ಟರೂ ತೀರದು. ಈ ವಿವಾಹಕಾರ್ಯದಲ್ಲಿ ನಮ್ಮ ವೀರಶೈವ ಸಮಾಜಕ್ಕೆ ತನುಮನ ಧನವನ್ನು ಸೂರೆಮಾಡಿ ಆಚಂದ್ರಾರ್ಕ ಪರ್ಯಂತರ ಕೀರ್ತಿಹೊಂದಿದ, ನ್ಯಾಸೂರು ಕೈ|| ಯಜಮಾನ್ ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ 2 ರೂಪಾಯಿಗಳನ್ನು ಸ್ಟಾರ್ ಪತ್ರಿಕಾಕರ್ತರಿಗೆ ಮನಿಆರ್ಡರ ಮೂಲಕ ರವಾನಿಸಿರುತ್ತೆ.

ಪ್ರತ್ಯಕ್ಷದರ್ಶಿ.

ನೈಜಾಂವೀರಶೈವ ಶಂಕರಸಂಸ್ಕೃತ ಕಾಲೇಜಸ್ಥಾಪನಾ ಯಾದಗಿರಿ.

ನಮ್ಮ ವೀರಶೈವ ಜನಾಂಗದ ಅವನತಿಯನ್ನು ನೋಡಿದರೆ ಕೇವಲ ಧರ್ಮಾಭಾವದಿಂದಲೆಂಬುವದು ಸಿದ್ಧವಾಗುವದು. ಯಾಕೆಂದರೆ, ಧರ್ಮೋವಿಶ್ವಸ್ಯಜಗತಃಪ್ರತಿಷ್ಠಾ | ಲೋಕೇಧರ್ಮಿಷ್ಠಂಪ್ರಜಾಉಪಸರ್ಪಂತಿ || ಧರ್ಮೇಣಪಾಪಮುಪನುದತಿ | ತಸ್ಮಾದ್ಧರ್ಮಂಪರಮಂವದಂತಿ || ಎಂಬುಕ್ತಿಯಂತೆ ಧರ್ಮವೇ ಜಗದುತ್ಪತ್ತಿಗೆ ಮೂಲಕಾರಣವಾಯಿತೆಂತಲೂ ಲೋಕದಲ್ಲಿ ಸರ್ವರೂ ಧರ್ಮಿಷ್ಠರನ್ನೇ ಆಶ್ರೈಸುವರೆಂತಲೂ ಅಂಥಾ ಧರ್ಮವೇ ಸರ್ವಪಾಪಗಳನ್ನು ನಾಶಮಾಡುವದೆಂತಲೂ ಅನೇಕಾರ್ಯೋಕ್ತಿಗಳಿಂದ ಸಿದ್ಧವಾಗುವದು. ಯಾವ ದೇಶದಲ್ಲಿ ಜನರು ದುಸ್ಸಂಗತಿಯಿಂದ ಧರ್ಮವನ್ನು ನಿರ್ಲಕ್ಷ್ಯಮಾಡುವರೋ ಆ ದೇಶದಲ್ಲಿ ಹಿಂಸೆ, ಅಸತ್ಯ, ನಾಸ್ತಿಕ್ಯ, ಚೋರತನ, ನಿರ್ದಯ ಅನಾಚಾರ, ಘಾತಕತನ, ಇನೇ ಮೊದಲಾದವುಗಳು ಹೆಚ್ಚಾಗಿ ದೇಶವೇ ಕಡೆಗೆ ದುಃಖಕ್ಕೀಡಾಗುವದು. ಆದ್ದರಿಂದ ಇಂಥಾ ವಿಪತ್ತುಗಳನ್ನು ಹೋಗಲಾಡಿಸುವದಕ್ಕಾಗಿಯೇ ವೇದಾಗಮೋಪನಿಷತ್ತುಗಳೂ ಪುರಾಣಾದಿಗಳೂ ನಮ್ಮ ಕಡಿಗೆ ತಿಂಗಿರೆಂದು ನಿರೀಕ್ಷಿಸುತ್ತಿರುವವು. ಆದರೆ ವೇದಾದಿಗಳಾದರೂ ಕೇವಲ ಸಂಸ್ಕೃತ ಮಯವಾಗಿರುವದರಿಂದಲೂ ಸಾಮಾನ್ಯ ಜನರಿಗೆ ಬೋಧವಾಗದೆ ಇದ್ದದ್ದರಿಂದಲೂ ಅವಿದ್ಯೆಯೆಂಬ ರೋಗದಿಂದ ಧರ್ಮಕ್ಕೆ ಮಹತ್ತರವಾದ ಕ್ಷಯರೋಗವು ಪ್ರಾಪ್ತವಾದದ್ದು ಜನಜನಿತವಾಗಿರುವದು. ಅಂದಮೇಲೆ ಧರ್ಮಸಾಧನಿಗೆ ಸಂಸ್ಕೃತಭಾಷಾಜ್ಞಾನವೇ ಮುಖ್ಯ ಕಾರಣವಾದಂತಾಯಿತು. ಈ ತತ್ವವನ್ನರಿತ ಕೆಲವು ಮತಾಭಿಮಾನಿಗಳು ಪಾಠಶಾಲೆಗಳನ್ನು ಸ್ಥಾಪಿಸಿಕೊಂಡಿರುವಷ್ಟರಲ್ಲಿ ಗ್ರಾಮದೊಳಗಣ ಕಂಟಕರು ಹಣಕೊಡಲಾರದೆ ತಮ್ಮ ತಮ್ಮೊಳಗಿನ ಕಲಹಗಳನ್ನು ಪಾಠಶಾಲೆಗಳಮೇಲೆ ಹಾಕಿ ಸ್ವಲ್ಪ ದಿವಸಗಳಲ್ಲಿಯೇ ನಿರ್ನಾಮಮಾಡುವ ಎಷ್ಟೋ ಜನ ವೀರಶೈವರೂ ಹಲವು ಪಾಠಶಾಲೆಗಳೂ ಕೂಡಾ ಅಲ್ಲಲ್ಲಿಗೆ ದೃಷ್ಟಿಗೆ ಬೀಳಬಹುದು. ಸ್ಥಿರಸ್ಥಾಯಿಫಂಡಿಲ್ಲದೆ ಹೀಗೆ ಮಾಡುವದರಿಂದ ಫಲವಾಗದೆ ದ್ರವ್ಯವ್ಯಯವು ಮಾತ್ರ ಆಗುತ್ತಿರುವದನ್ನು ನೋಡಿದರೆ ಮತಾಭಿಮಾನಿಗಳಿಗೆ ಖೇದವೆನಿಸದಿರಲಾರದು. ಧಾರ್ಮಿಕಾಭಿವೃದ್ಧಿಯ ಕಾರ್ಯಕ್ಕೆ ಇಂಥ ವಿಪತ್ತುಗಳು ಬಂದೊದಗುವ ಸಮಯದಲ್ಲಿ ಆ ಜಗಚ್ಚಾಲಕನೇ ಮಾನವರೂಪದಿಂದ ಅವತರಿಸಿ ಜಗದುದ್ಧಾರವನ್ನು ಮಾಡುವನೆಂಬ ಪ್ರಮಾಣದಂತೆ ಸೃಷ್ಟಿಯ ಆದಿಯಿಂದಲೂ ಪರಂಪರೆಯಾಗಿ ಬಂದಿರುವ ಜಗದೀಶನ ನೈಸರ್ಗಿಕ ಕಾರ್ಯಕ್ಕೆ ಬದ್ಧರಾದ ಎಷ್ಟೋ ಜನ ಮಹನೀಯರು ಅದ್ಭುತಸಾಮರ್ಥ್ಯವನ್ನು ತೋರಿಸಿ ಅಸ್ತರಾಗಿರುವರು, ಮತ್ತು ಉದಯಿಸುತ್ತಲಿರುವರು. ಇಂಥಾ ಸಮರ್ಥರ ಮಾಲೆಯಲ್ಲಿ ಸೇರಿಸಲು ಯೋಗ್ಯರಾದ ಉದ್ಧಾರಕರು ನಮ್ಮ ನೈಜಾಮಿಲಾಖೆಯಲ್ಲಿ ಉದಯಿಸಿರುವರೆಂದು ತಿಳಿಸಲು ಪ್ರತಿಯೊಬ್ಬ ಮತಾಭಿಮಾನಿಗೂ ಆನಂದೋಲ್ಲಾಸಗಳು ಆಗದಿರವು. ಆ ಉದ್ಧಾರಕರ ನಾಮವನ್ನು ತಿಳಿಯಲು ಹಂಬಲಿಸುತ್ತಿರುವ ಪಾಠಕರೇ ನೈಜಾಮು ಇಲಾಖೆಯಲ್ಲಿ [illegible] ಧರ್ಮಾಧಿಕಾರಿ

ವಿದ್ಯಾರ್ಥಿನಿಯರು ಪರೀಕ್ಷೆಗೆ ಹೋಗುವುದಕ್ಕೆ ಅವಕಾಶವನ್ನು ಕೊಡಲಾಗುವಂತೆ ಯೂನಿವರ್ಸಿಟಿಯ ಕಾನೂನನ್ನು ತಿದ್ದುಪಾಟುಮಾಡುವ ವಿಷಯದಲ್ಲಿ ಯೂನಿವರ್ಸಿಟಿಯ ಸೆನೇಟಿನವರು ಮಾಡಿದ ನಿರ್ಣಯವನ್ನು ಮಂಜೂರ್ಮಾಡಿದೆ.

3. ವಿದ್ಯಾಭ್ಯಾಸದ ಇನ್‌ಸ್ಪೆಕ್ಟರುಗಳಿಗೆ ಹಾಲಿ ಹಂಚಿರತಕ್ಕ ಕೆಲಸದ ಅಧಿಕಾರ ವ್ಯಾಪ್ತಿಯನ್ನು ಕೋಲಾರ ಡಿಸ್ಟ್ರಿಕ್ಟಿನ ವಿಷಯದಲ್ಲಿ ತಿದ್ದುಪಾಟುಮಾಡಿದೆ.

4. ಮೈಸೂರು ನ್ಯಾಯವಿಧಾಯಕಸಭೆಯು ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡಗಳ ಸೆಂಟ್ರಲ್ ಹಾಲಿನಲ್ಲಿ 1924 ನೇ ಜೂನ್ 18 ನೇ ತಾರೀಖು ಬುಧವಾರದ ದಿನ ಸೇರುವುದಕ್ಕೆ ಬದಲಾಗಿ ಅದೇ ತಿಂಗಳು 23 ನೇ ತಾರೀಖು ಸೋಮವಾರದ ದಿನ ಮಧ್ಯಾಹ್ನ 12 ಗಂಟೆಗೆ ಸಭೆ ಸೇರುವುದು.

5. ಮೈಸೂರು ಪ್ರಜಾಪ್ರತಿನಿಧಿ ಸಭೆಯ 1923—24 ನೇ ವರ್ಷದ ಬಡ್ಜೆಟ್ ಅಧಿವೇಶನವು ಮೈಸೂರು ಜಗನ್ಮೋಹನ ಪ್ಯಾಲೆಸ್ಸಿನ ಸಭಾಮಂಟಪದಲ್ಲಿ 1924 ನೇ ಜೂನ್ 6 ನೇ ತಾರೀಖು ಶುಕ್ರವಾರದ ದಿನ ಪ್ರಾರಂಭವಾಗುವುದಕ್ಕೆ ಬದಲಾಗಿ ಅದೇ ತಿಂಗಳು 9 ನೇ ತಾರೀಖು ಸೋಮವಾರದ ದಿನ ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಗಿ ನಡೆಯುವುದು.

6. ಮೈಸೂರು ಸಂಪದಭ್ಯುದಯ ಸಮಾಜದ ಸಮಾರಂಭೋತ್ಸವವು ಮೈಸೂರು ಜಗನ್ಮೋಹನ ಪ್ಯಾಲೆಸ್ಸಿನ ಸಭಾಮಂಟಪದಲ್ಲಿ 1924 ನೇ ಜೂನ್ 14 ನೇ ತಾರೀಖು ಶನಿವಾರದ ದಿನ ನಡೆಯುವುದಕ್ಕೆ ಬದಲಾಗಿ ಅದೇ ತಿಂಗಳು 18 ನೇ ತಾರೀಖು ಬುಧವಾರದ ದಿನ ನಡೆಯುವುದು.

7. ಪೋಲೀಸ್ ಇನ್‌ಸ್ಪೆಕ್ಟರುಗಳ ಮತ್ತು ಸಬ್ ಇನ್‌ಸ್ಪೆಕ್ಟರುಗಳ ಒಂದು ಪ್ರಾವಿನ್ಷಲ್ ಕಾನ್ಫರೆನ್ಸನ್ನು ನಡೆಸಲು ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರು ಮಾಡಿದ ಸಲಹೆಯನ್ನು ಸರ್ಕಾರದವರು ಮಂಜೂರ್ಮಾಡಿದ್ದಾರೆ. ಈ ಕಾನ್ಫರೆನ್ಸಿಗೆ ಹಾಜರಾಗುವ ಆಫೀಸರುಗಳು ತಮ್ಮ ತಮ್ಮ ಪ್ರಯಾಣದ ಖರ್ಚನ್ನು ತಾವೇ ವಹಿಸತಕ್ಕದ್ದು. ಇದರ ಸಂಬಂಧದಲ್ಲಿ ಅವರು ತಮ್ಮ ತಮ್ಮ ಹೆಡ್‌ಕ್ವಾರ್ಟರುಗಳಿಂದ ಗೈರ್ ಹಾಜರಾಗುವ ಅವಧಿಯನ್ನು ಕೆಲಸದಮೇಲೆ ಹಾಜರಿದ್ದಂತೆ ಭಾವಿಸತಕ್ಕದ್ದು.

8. ಇನಾಂ ಜಮೀನುಗಳಿಂದ ತಂಗಡಿಚೆಕ್ಕೆಯನ್ನು ಜಮಾಯಿಸತಕ್ಕ ಬಗ್ಗೆ ಅಥವಾ ಸಾಗಿಸತಕ್ಕ ಬಗ್ಗೆ ಇನಾಂದಾರರು, ಹಾಲಿ ಇರತಕ್ಕ ನಿಬಂಧನೆಗಳಮೇರೆಗೆ, ಒಂದು ರಹದಾರಿಯನ್ನು ತಾಲ್ಲೂಕಿನ ಅಮಲ್ದಾರ್ರವರಿಂದ ಪಡೆಯಬೇಕಾಗಿದೆ. ಅಂಥಾರಹದಾರಿಗಳಿಗಾಗಿ ಬರುವ ಅರ್ಜಿಗಳನ್ನು ಫೈಸಲ್ಮಾಡುವುದರಲ್ಲಿ ಬಹುಸಾವಕಾಶವಾಗುತ್ತಿರುವುದಾಗಿ ಇನಾಂದಾರರುಗಳು ಫಿರ್ಯಾದುಮಾಡಿ, ತಮ್ಮ ತಮ್ಮ ಜಮೀನುಗಳಲ್ಲಿ ಬೆಳೆಯುವ ಚೆಕ್ಕೆಯನ್ನು ರಹದಾರಿಗಳಿಲ್ಲದೆ ವಿಲೆಮಾಡಲು ಮತ್ತು ಸಾಗಿಸಲು ಅಪ್ಪಣೆಯನ್ನು ಕೇಳಿದರು. ಈ ವಿಷಯವನ್ನು ಜಾಗರೂಕತೆಯಿಂದ ಪರಿಶೀಲಿಸಿ, ಸರ್ಕಾರದವರು ಹಾಲಿ ಇರತಕ್ಕ ನಿಬಂಧನೆಗಳನ್ನು ಬದಲಾಯಿಸಬೇಕಾದ ಆಗತ್ಯವಿಲ್ಲವೆಂದು ಹುಕುಂ ಮಾಡಿರುತ್ತಾರೆ. ಆದರೆ ರಹದಾರಿಗಳಿಗಾಗಿ ಬರುವ ಅರ್ಜಿಗಳನ್ನು ಫೈಸಲ್ಮಾಡತಕ್ಕ ಬಗ್ಗೆ ಗೊತ್ತುಮಾಡಿರುವ ಒಂದು ತಿಂಗಳ ಅವಧಿಯನ್ನು ಅಮಲ್ದಾರರುಗಳು ಮೀರದೆ ಕಡ್ಡಾಯವಾಗಿ ಅನುಸರಿಸಬೇಕೆಂದು ಸರ್ಕಾರದವರು ಅವರಿಗೆ ಅಪ್ಪಣೆಮಾಡಿದರು.

9. ಸರ್ಕಾರಿ ನೀರಾವರಿಯ ಕಾಂಗಾರಿಗಳಿಂದ ನೀರಾವರಿಮಾಡಲ್ಪಟ್ಟ ಇನಾಂ ಜಮೀನುಗಳ ಮೇಲೆ ನೀರು ಸರದಿಯನ್ನು ವಸೂಲ್ಮಾಡತಕ್ಕ ವಿಷಯದಲ್ಲಿ ಇರತಕ್ಕ ನಡವಳಿಕೆಗಳನ್ನು ಕ್ರಮಗೊಳಿಸತಕ್ಕ ಬಗ್ಗೆ ತಿಳಿವಳಿಕೆಗಳನ್ನು 1923 ನೇ ಏಪ್ರಿಲ್ ತಿಂಗಳಲ್ಲಿ ಸಾದರ್ಮಾಡಲಾಯಿತು ಮತ್ತು ಸದರಿ ನೀರು ಸರದಿಯನ್ನು ವಸೂಲ್ಮಾಡತಕ್ಕ ಬಗ್ಗೆ ಬಿಲ್ಲುಗಳನ್ನು ಮಂಜೂರ್ಮಾಡತಕ್ಕ ಅಧಿಕಾರವು ಯಾರಿಗೆ ಇರಬೇಕೆಂಬ ವಿಷಯದಲ್ಲಿ ಸಲಹೆಗಳನ್ನು ಕಳುಹಿಸಬೇಕೆಂದು ರೆವಿನ್ಯೂ ಕಮಿಷನರವರನ್ನು ಕೇಳಲಾಯಿತು. ಈ ಸಲಹೆಗಳನ್ನು ಪರ್ಯಾಲೋಚಿಸಿದನಂತರ ಸರ್ಕಾರದವರು, ಜಮಾಬಂದಿ ಆಫೀಸರುಗಳು ಇನಾಂದಾರರಿಂದ ವಸೂಲ್ಮಾಡಬೇಕಾದ ನೀರು ಸರದಿಯನ್ನು ಗೊತ್ತುಮಾಡಬಹುದೆಂದೂ ಮತ್ತು ಅವರಿಗೆ ಸಲ್ಲಬೇಕಾದ ತವೀಜಿಪಣಗಾಗಿ ಬಿಲ್ಲುಗಳನ್ನು ಸಹ ಮಂಜೂರ್ಮಾಡಬಹುದೆಂದೂ ಹುಕುಂಮಾಡಿದ್ದಾರೆ. ಡೆಪ್ಯೂಟಿಕಮಿಷನರವರಲ್ಲದ ಇತರ ಜಮಾಬಂದಿ ಆಫೀಸರು ಗೊತ್ತುಮಾಡಿದ ನೀರು ಸರದಿಯ ಮೊಬಲಗಿನ ವಿಷಯದಲ್ಲಿ ಇನಾಂದಾರರು ಅಸಮಾಧಾನವನ್ನು ತೋರ್ಪಡಿಸುವ ಸಂದರ್ಭಗಳಲ್ಲಿ ಅವರು ಡೆಪ್ಯೂಟಿಕಮಿಷನರವರಿಗೆ ಅಪೀಲುಮಾಡಬಹುದೆಂದು ಅವಕಾಶಮಾಡಿದೆ.

10. ಮುಂದಿನ ಅಕ್ಟೋಬರ್ ಮಾಹೆಯಲ್ಲಿ ನಡೆಯತಕ್ಕ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಸೇರಿಸತಕ್ಕ ಬಗ್ಗೆ ಶ್ರೀಮನ್ಮಹಾರಾಜರವರಿಂದ ಅಂಗೀಕೃತವಾದ 42 ಜನ ಉಮೇದುವಾರರುಗಳ ಪ್ರಥಮ ಪಟ್ಟಿಯನ್ನು ಪ್ರಸಿದ್ಧಪಡಿಸಿರುತ್ತದೆ.

11. ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರವರಾದ ಮಿ॥ ಸಿ. ಎಸ್. ಬಾಲಸುಂದರಮೈಯ್ಯರ್, ಬಿ. ಎ., ಯವರಿಗೆ 1924 ನೆಯ ಮೇ 16 ನೇ ತಾರೀಖು ಲಾಗಾಯಿತು 3 ವಾರಗಳ ಪ್ರಿವಿಲೇಜ್ ರಜಾವನ್ನು ಕೊಟ್ಟು, ಈ ಕೆಳಗೆ ಕಂಡ ಮೇರೆಗೆ ಬದಲಿ ಕೆಲಸ ನಡೆಸತಕ್ಕ ಏರ್ಪಾಡು ಮಾಡಿರುತ್ತದೆ:—

1 ಬೆಂಗಳೂರು, ವಿದ್ಯಾಭ್ಯಾಸದ ಸರ್ಕಲ್ ಇನ್‌ಸ್ಪೆಕ್ಟರವರಾದ ಮಿ॥ ಡಿ. ವೆಂಕಟರಾಮಯ್ಯನವರು, ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರಾಗಿ ಬದಲಿಯಾಗಿ ಕೆಲಸಮಾಡತಕ್ಕದ್ದು.

2. ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ಹಂಗಾಮಿ ಎಕ್ಸ್‌ಟ್ರಾ ಅಸಿಸ್ಟೆಂಟರಾಗಿರುವ ಮಿ॥ ಕೆ. ಶ್ರೀನರಸಿಂಹಯ್ಯನವರು ಬೆಂಗಳೂರು ವಿದ್ಯಾಭ್ಯಾಸದ ಸರ್ಕಲ್ ಇನ್‌ಸ್ಪೆಕ್ಟರವರಾಗಿ ಬದಲಿಯಾಗಿ ಕೆಲಸಮಾಡತಕ್ಕದ್ದು.

12. ದೊಡ್ಡಬಳ್ಳಾಪುರದ ಸಬ್‌ಡಿವಿಜನ್ನಿನ ಛಾರ್ಜಿನಲ್ಲಿರತಕ್ಕ ಅಸಿಸ್ಟೆಂಟ್ ಕಮಿಷನರಾದ ಮಿ॥ ಎಂ. ಪಿ. ವಿಶ್ವನಾಥರಾಯರಿಗೆ 1924 ನೇ ಮೇ 20 ನೇ ತಾರೀಖು ಲಾಗಾಯಿತು 15 ದಿನಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ. ಈ ಕಾಲದಲ್ಲಿ ಬೆಂಗಳೂರು ಡೆಪ್ಯೂಟಿಕಮಿಷನರಿಗೆ ಪರ್ಸನಲ್ ಅಸಿಸ್ಟೆಂಟರಾದ ಮಿ॥ ಚಾರ್ಲ್ಸ್‌ನರೋನರವರು ತಮ್ಮ ಸ್ವಂತ ಕೆಲಸದ ಜತೆಗೆ ದೊಡ್ಡಬಳ್ಳಾಪುರದ ಸಬ್ ಡಿವಿಜನ್ನಿನ ಛಾರ್ಜಿನಲ್ಲಿರುವರು.

13. ಅಸಿಸ್ಟೆಂಟ್ ಕಮಿಷನರಾದ ಮಿ॥ ಎಂ. ಎನ್. ಬಾಳರಾಜ ಅರಸ್ ಬಿ. ಎ. ಯವರ ಅರಮನೆಯಲ್ಲಿನ ಸ್ಪೆಷಲ್ ಡ್ಯೂಟಿಯ ಕಾಲಪರಿಮಿತಿಯನ್ನು 1924 ನೇ ಜುಲೈ 23 ನೇ ತಾರೀಖಿನವರೆಗೆ ಹೆಚ್ಚಿಸಿರುತ್ತದೆ.

14. ನರಸಿಂಹರಾಜಪುರ ಮ್ಯುನಿಸಿಪಾಲಿಟಿಯ ಸರಹದ್ದಿನಲ್ಲಿ 1924 ನೇ ಜುಲೈ 15 ನೇ ತಾರೀಖು ಲಾಗಾಯಿತು ಇನ್ನೂ 3 ವರುಷಗಳ ಕಾಲದವರೆಗೆ ದೇವಿಹಾಕತಕ್ಕದ್ದನ್ನು ನಿರ್ಬಂಧಗೊಳಿಸಿರುವುದಾಗಿ ಪ್ರಕಟಿಸಿರುತ್ತದೆ.

15. ಈ ಸಾಲಿನಲ್ಲಿ ಕಳೆದುಹೋಗದೆ ಉಳಿದಿರುವ ಭಾಗಕ್ಕೂ ಮತ್ತು 1924-25ನೇ ಸಾಲಿಗೂ ಸಹ ರೈಲ್ವೆ, ವಿದ್ಯುಚ್ಛಕ್ತಿ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳ ಪರವಾಗಿ ಒಂದು ಸ್ಥಳೀಯ ಪ್ರಜಾಧಿಕಾರ ಮತ್ತು ವೈದ್ಯದ ಇಲಾಖೆ, ಸ್ಥಳಾರೋಗ್ಯ ಮತ್ತು ಜನಾರೋಗ್ಯ ಈ ಇಲಾಖೆಗಳ ಪರವಾಗಿ ಒಂದು; ಫೈನಾನ್ಸ್ ಮತ್ತು ತೆರಿಗೆಯ ಪರವಾಗಿ ಮತ್ತೊಂದು; ಈ ರೀತಿಯಾಗಿ ಮೂರು ಸ್ಟಾಂಡಿಂಗ್ ಕಮಿಟಿಗಳನ್ನು ಏರ್ಪಡಿಸಿರುತ್ತದೆ. ಅಲ್ಲದೆ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ ಇವುಗಳಿಂದ ಚುನಾಯಿಸಲ್ಪಟ್ಟ ಪ್ಯಾನಲ್ಸ್ ಎಂದರೆ ಮಂಡಲಿಗಳ ಪೈಕಿ ತೆಗೆದುಕೊಳ್ಳಲ್ಪಟ್ಟ ಸದರಿ ಕಮಿಟಿಗಳ ಮೆಂಬರುಗಳ ಹೆಸರುಗಳು ಈ ಕೆಳಗೆ ನಮೂದಿಸಿರುವಂತೆ ಪ್ರಕಟಿಸಲ್ಪಟ್ಟಿರುತ್ತವೆ.

ರೈಲ್ವೆ ವಗೈರೆ ಇಲಾಖೆಗಳ ಪರವಾದ ಸ್ಟಾಂಡಿಂಗ್ ಕಮಿಟಿ ಮಿ॥ ಸಿ. ನಾರಾಯಣಸ್ವಾಮಿಶೆಟ್ಟರು, ಮಿ॥ ಬಿ. ಉಸ್ಮಾನ್‌ಖಾನ್‌ರವರು, ಮಿ॥ ಬಿ. ಎಲ್. ಬೈಯಣ್ಣನವರು, ಮಿ॥ ಸಿ. ಸುಬ್ಬರಾಯರು, ಮಿ॥ ಬಿ. ಕೆ. ಗರುಡಾಚಾರ್ಯರು, ಮತ್ತು ದಿವಾನ್ ಬಹದೂರು ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರು.

ಸ್ಥಳೀಯ ಪ್ರಜಾಧಿಕಾರ ವಗೈರೆ ಇಲಾಖೆಗಳ ಪರವಾದ ಸ್ಟಾಂಡಿಂಗ್ ಕಮಿಟಿ.

ಮಿ॥ ತರಣೀಕೃಷ್ಣಮೂರ್ತಿರಾಯರು, ಮಿ॥ ಮೀರ್ ಮಹಮುದ್ ಸಾಹೇಬರವರು, ಮಿ॥ ಜೆ. ಆರ್. ಏಸಕ್‌ರವರು, ಮಿ॥ ಬಿ. ನರಸಿಂಗರಾಯರವರು, ಮಿ॥ ಬಿ. ಅಬ್ದುಲ್ ರಹ್ಮಾನ್‌ರವರು, ಮತ್ತು ಮಿ॥ ಎನ್. ಎಸ್. ನಂಜುಂಡಯ್ಯನವರು.

ಫೈನಾನ್ಸ್ ಮತ್ತು ತೆರಿಗೆಯ ಪರವಾದ ಸ್ಟಾಂಡಿಂಗ್ ಕಮಿಟಿ.

ಮಿ॥ ಬಿ. ನರಸಿಂಗರಾಯರವರು, ಮಿ॥ ಡಿ. ಎಸ್. ಮಲ್ಲಪ್ಪನವರು ಮಿ॥ ಜಿ. ಪರಮಶಿವಯ್ಯನವರು, ಮಿ॥ ಟಿ. ಎಲ್. ಬೈಯ್ಯಣ್ಣನವರು, ಮಿ॥ ಸಿ. ನರಸಿಂಹಯ್ಯನವರು ಮತ್ತು ಮಿ॥ ಮಹಮುದ್ ಅಬ್ಬಾಸ್ ಖಾನ್‌ರವರು.

ಕೌನ್ಸಿಲಿನ ಮೊದಲನೆಯ ಮೆಂಬರವರು, ಸ್ಥಳೀಯ ಪ್ರಜಾಧಿಕಾರ ವಗೈರೆ ಇಲಾಖೆಗಳ ಪರವಾದ ಸ್ಟಾಂಡಿಂಗ್ ಕಮಿಟಿಗೂ ಮತ್ತು ಫೈನಾನ್ಸ್ ಮತ್ತು ತೆರಿಗೆಯ ಪರವಾದ ಸ್ಟಾಂಡಿಂಗ್ ಕಮಿಟಿಗೂ ಅಧ್ಯಕ್ಷರಾಗಿರುವರು. ಕೌನ್ಸಿಲಿನ ಎರಡನೆಯ ಮೆಂಬರವರು ರೈಲ್ವೆ, ವಿದ್ಯುಚ್ಛಕ್ತಿ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳ ಪರವಾದ ಸ್ಟಾಂಡಿಂಗ್ ಕಮಿಟಿಗೆ ಅಧ್ಯಕ್ಷರಾಗಿರುವರು.

16. ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆ, ಮತ್ತು ವಾಣಿಜ್ಯ ಇವುಗಳಿಗೆ ಸಂಬಂಧಪಟ್ಟ ಬೋರ್ಡುಗಳ, ಅಧ್ಯಕ್ಷರುಗಳ, ಸೆಕ್ರಿಟರಿಗಳ ಮತ್ತು ಮೆಂಬರುಗಳ ಹೆಸರುಗಳನ್ನು ಸರ್ಕಾರದವರು ಪ್ರಕಟಿಸಿರುತ್ತಾರೆ.

17. ಸರ್ಕಾರದವರು ಸ್ಟಾಂಡಿಂಗ್ ಕಮಿಟಿಗಳ ಕೆಲಸ ನಡೆಸುವ ವಿಚಾರವಾಗಿ ನಿಬಂಧನೆಗಳನ್ನು ಜಾರಿಯಲ್ಲಿ ತಂದಿರುತ್ತಾರೆ. ಅಲ್ಲದೆ ಕಮಿಟಿಗಳ ಆಲೋಚನೆಯನ್ನು ಕೇಳತಕ್ಕ ವಿಷಯಗಳನ್ನು ಸಹ ನಮೂದಿಸಿರುತ್ತಾರೆ.

18. ಕೃಷ್ಣರಾಜಸಾಗರ ಜಲಾಶಯದ ಕಲ್ಲುಕೆಲಸದ ಆಣೆಯ ವಿಷಯಕವಾದ ಪರಿಸ್ಥಿತಿಯು ಅಷ್ಟೇನೂ ಭರವಸಾಪೂರ್ವಕವಾದುದಲ್ಲವೆಂಬದಾಗಿ ಮದ್ರಾಸು ಮೆಯಿಲ್ ಪತ್ರಿಕೆಯ 15ನೇ ತಾರೀಖಿನ ಸಂಚಿಕೆಯಲ್ಲಿ ಪ್ರಕಟಿಸಿರುವ ಒಬ್ಬ ಬಾತ್ಮೀದಾರರ ಲೇಖನದಲ್ಲಿ ಒಳಗೊಂಡಿರುವ ಕೆಲವು ತಪ್ಪು ಹೇಳಿಕೆಗಳನ್ನು ಖಂಡಿಸಿ ಒಂದು ಪ್ರಸಿದ್ಧ ಪತ್ರಿಕೆಯನ್ನು ಸಾದರ್ಮಾಡಿಸಿದೆ. ಸದರಿ ಆಣೆಯಲ್ಲಿ 118 ಅಡಿ ನೀರು ನಿಲ್ಲಲು ಮೊದಲು ಅಂದಾಜುಮಾಡಿತ್ತೆಂದೂ, ಆದುದರಿಂದ ಮದ್ರಾಸು ಸರ್ಕಾರದವರೊಡನೆ ಈಚೆಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಈಗ ಸದರಿ ಆಣೆಯಲ್ಲಿ ತಡೆದಿರಬೇಕೆಂದಿರುವ 124 ಅಡಿ ನೀರಿನ ಒತ್ತಡವನ್ನು ಅದು ತಡೆಯಲಾರದೆಂದೂ ಸಹ ಬಾತ್ಮೀದಾರರು ಮಾಡುವ ವಾದವು ಸಮಂಜಸವಾಗಿಲ್ಲ. ಏಕೆಂದರೆ, ಈ ಆಣೆಯಲ್ಲಿ 224 ಅಡಿ ನೀರು ನಿಲ್ಲುವಂತೆ ವಸ್ತುತಃ ಅಂದಾಜುಮಾಡಿದೆ. ಕಟ್ಟೆಯ ತಳಪಾಯವು ನೀರು ನುಗ್ಗುವಂತೆ ಭದ್ರವಾಗಿಲ್ಲವೆಂದೂ, ಅದರ ಮಧ್ಯಭಾಗದಲ್ಲಿ ಕಲ್ಲುಗಳು ಕಿತ್ತುಹೋದುದರಿಂದ ಕಟ್ಟೆಯ ಹಿಂಭಾಗದಲ್ಲಿ ಮಟ್ಟಿ ಕಾಂಗಾರಿಯನ್ನು ಮಾಡಿಸಬೇಕಾಯಿತೆಂದೂ ಸಹ ಅವರು ಹೇಳುವ ಮಾತಿಗೆ ಆಧಾರವೇ ಇಲ್ಲ. ಕಟ್ಟೆಯ ತಳಪಾಯಕ್ಕೆ ಆಳವಾದ ಬಂಡೆಯ ಅಸ್ತಿಭಾರ ಇದೆಯಾಗಿ ಅದು ನೀರು ನುಗ್ಗದಂತೆ ಬಹಳ ಭದ್ರವಾಗಿದೆ ಮತ್ತು ಬಾತ್ಮೀದಾರರು ಹೇಳುವಂತೆ ಕಟ್ಟೆಯ ಹಿಂಭಾಗದಲ್ಲಿ ಯಾವ ಮಟ್ಟಿ ಕಾಂಗಾರಿಯನ್ನೂ ಮಾಡಿಸಿಲ್ಲ.

19. ಪ್ರಜಾಪ್ರತಿನಿಧಿ ಸಭೆಯ ಬಡ್ಜೆಟ್ ಅಧಿವೇಶನಕ್ಕಾಗಿಯೂ ಮತ್ತು ಮೈಸೂರು ಸಂಪದಭಿವೃದ್ಧಿ ಸಮಾಜದ ಸಮಾರಂಭೋತ್ಸವಕ್ಕಾಗಿಯೂ ಮೈಸೂರಿಗೆ ಹೋಗತಕ್ಕ ವರ್ತಮಾನ ಪತ್ರಿಕೆಗಳ ಸಂಪಾದಕರ ಪ್ರತಿನಿಧಿಗಳಿಗೆ ಕೊಡತಕ್ಕ ಸೌಕರ್ಯಗಳ ವಿಚಾರವಾಗಿ ಪ್ರಜಾಪ್ರತಿನಿಧಿ ಸಭೆಯ ಸಕ್ರೆಟರಿಯವರು ಒಂದು ಅಫಿಷಿಯಲ್ ಮೆಮೊರಾಂಡಮ್ಮನ್ನು ಪ್ರಕಟಪಡಿಸಿರುತ್ತಾರೆ.

20. ಸರ್ಕಾರಿ ನೌಕರರಾಗಿರತಕ್ಕ ಮೈಸೂರು ಇಂಜನೀಯರುಗಳ ಅಸೋಸಿಯೇಷನ್ನಿನ ಮೆಂಬರುಗಳಿಗೆ ಅವರು ಕಾನ್ಫರೆನ್ಸ್ ಮೀಟಿಂಗುಗಳಲ್ಲಿ ಪ್ರಯಾಣದ ಭತ್ಯವನ್ನು ಅಂದರೆ ರೈಲ್ವೆ ಛಾರ್ಜು ಒಂದನ್ನು ಮತ್ತು ರೋಡ್ ಮೈಲೇಜನ್ನು ಕೊಡುವುದಾಗಿ ಮಂಜೂರ್ಮಾಡಿರುತ್ತಾರೆ.

ಹರಾಜಿನ ಇಸ್ತಿಹಾರು.

ಮೈಸೂರು ಹಳೇ ಅಗ್ರಹಾರದಲ್ಲಿ ಹಸುವಿನ ಕಠೋಹಟ್ಟಿ ರೋಡಿನಲ್ಲಿರುವ ಸರ್ ಯಂ. ಕಾಂತರಾಜೇ ಅರಸಿನವರ ಈಶ್ವರ ದೇವಸ್ಥಾನದ ಕಾಂಪೌಂಡಿನಲ್ಲಿರುವ ತೋಟದ ಫಸಲು 1924 ನೇ ಜುಲೈ 1 ರ ಲಾಗಾಯಿತು 3 ವರ್ಷಕ್ಕೆ ಗುತ್ತಿಗೆಗೆ ಕೊಡಲ್ಪಡುವದು. ಇಷ್ಟವುಳ್ಳವರು 1924 ನೇ ಜೂನ್ 16 ನೇ ಸೋಮವಾರ ಪ್ರಾತಃಕಾಲ 9 ಗಂಟೆಗೆ ಮೇಲ್ಕಂಡ ದೇವಸ್ಥಾನದಲ್ಲಿ ನಡೆಯುವ ಹರಾಜಿನಲ್ಲಿ ಪಡೆಯಬಹುದು.

ಹರಾಜಿನಲ್ಲಿ ತೋಟವನ್ನು ಗುತ್ತಿಗೆಗೆ ಪಡೆಯತಕ್ಕವರು ಹರಾಜಿನಲ್ಲಿ ತರಾವಾಗುವ ಒಂದು ವರ್ಷದ ಗುತ್ತಿಗೆ ಮೊಬಲಗಿನಲ್ಲಿ ಕಾಲುಭಾಗವನ್ನು ಹರಾಜು ಮುಗಿದ ಕೂಡಲೆ ಡಿಪಾಜಿಟ್ ಮಾಡಬೇಕು. ಬಾಕಿ ಪೂರ್ತಾಮೊಬಲಗನ್ನು ಒಂದು ವಾರದೊಳಗಾಗಿ ಪಾವತಿಮಾಡಿ ಕ್ರಮವಾಗಿ ಗುತ್ತಿಗೆಕರಾರು ಬರೆಸಿಕೊಡಬೇಕು. ತಪ್ಪಿದರೆ ದುಸರಾಹರಾಜು ಮಾಡಲ್ಪಡುತ್ತೆ.

ಗುತ್ತಿಗೆದಾರರು ಪ್ರತಿ ಸಾಲು ಗುತ್ತಿಗೆಯನ್ನು ಆಯಾ ಸಾಲು ಪ್ರಾರಂಭದಲ್ಲಿ ಮುಂಗಡವಾಗಿ ಪಾವತಿಮಾಡಬೇಕು.

M. S. KRISHNAMACHARI,
Superintendent,
Jayalakshmi Vilas, Mysore.

ತಾ॥ 27-5-24.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ವೈದ್ಯ ವಿದ್ಯಾರ್ಥಿಗಳಿಗೆ ಸೂಚನೆ.

1 ಬೆಂಗಳೂರು ಶ್ರೀ ಜಯದೇವ ಮೆಡಿಕಲ್ ಹಾಲ್ ಪ್ರೊಪ್ರೈಟರಾದ ಕ್ಯಾಪ್ಟನ್, ವೈ. ವಿಶ್ವನಾಥಯ್ಯನವರು, ಯುವಸಾರ್ವಭೌಮ (ಪ್ರಿನ್ಸ್ ಆಫ್ ವೇಲ್ಸ್)ರವರು ಮೈಸೂರು ದೇಶಕ್ಕೆ ದಯಮಾಡಿಸಿದುದರ ಜ್ಞಾಪನಾರ್ಥವಾಗಿ ಐದುಸಹಸ್ರರೂಪಾಯಿಗಳನ್ನು ಮೇಲ್ಕಂಡ ಫಂಡಿನ ಮೂಲಧನಕ್ಕೆಕೊಟ್ಟು, ಸದರಿ ಮೊಬಲಗಿನ ವೃದ್ಧ್ಯಂಶವನ್ನು ವೈದ್ಯವಿದ್ಯಾಭ್ಯಾಸಮಾಡಲಿಚ್ಛಿಸುವ ಮೈಸೂರು ದೇಶದ ವೀರಶೈವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡುವಂತೆ ಉದ್ದೇಶಿಸಿರುತ್ತಾರೆ.

2 ಧರ್ಮಕರ್ತರ ಉದ್ದೇಶದಂತೆ ಇದೇ ಜೂನ್ ಲಾಗಾಯಿತು ಮಾಹೆಯಾನ ರೂ. 25 ನಂತೆ ವೇತನವು ಮದರಾಸು ಅಥವಾ ಬೊಂಬಾಯಿ ಸರ್ಕಾರದ ಮೆಡಿಕಲ್ ಕಾಲೇಜಿನಲ್ಲಿ ಓದಲಪೇಕ್ಷಿಸುವ ಮೈಸೂರು ದೇಶದ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡಲ್ಪಡುತ್ತೆ. ಸಹಾಯವನ್ನು ಹೊಂದಲಪೇಕ್ಷಿಸುವವರು ಕೂಡಲೇ ಫಂಡಿನ ಸೆಕ್ರೆಟರಿಯವರಿಗೆ ಅರ್ಜಿ ಬರೆದುಕೊಳ್ಳತಕ್ಕದ್ದು.

ಬಡವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜು, ಹೈಸ್ಕೂಲ್ ಮತ್ತು ಟೆಕ್ನಿಕಲ್ ಸ್ಕೂಲುಗಳಲ್ಲಿ ಅಭ್ಯಾಸಮಾಡುತ್ತಿರುವ ಬಡವೀರಶೈವ ವಿದ್ಯಾರ್ಥಿಗಳು ಜುಲೈ ತಾ॥ 15 ರ ವಳಗಾಗಿ ಸೆಕ್ರೆಟರಿಯವರಿಗೆ ತಲಪುವಂತೆ (Printed Prescribed Form) ನಲ್ಲಿ ಅರ್ಜಿ ಬರೆದುಕೊಳ್ಳತಕ್ಕದ್ದು. ಅರ್ಜಿ ಫಾರಂಗಳು ಬೇಕಾದಲ್ಲಿ ಒಂದಾಣೆ ಸ್ಟಾಂಪು ಕಳುಹಿಸಿ ಅಡ್ರಸ್ ತಿಳಿಸಿದಲ್ಲಿ ಕಳುಹಿಸಲ್ಪಡುತ್ತೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅರ್ಜಿ ಜೊತೆಯಲ್ಲಿ ಸರ್ಟಿಫಿಕೇಟುಗಳನ್ನು ಕಳುಹಿಸತಕ್ಕದ್ದು. ಸರ್ಟಿಫಿಕೇಟುಗಳು ಇಲ್ಲದೆಯೂ ಮತ್ತು ಮಾಯಿದೆ ಮೀರಿಯೂ ಬರತಕ್ಕ ಅರ್ಜಿಗಳು ಅಂಗೀಕರಿಸಲ್ಪಡಲಾರವು.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ,
ಬೆಂಗಳೂರು ಸಿಟಿ.

ಸ್ವೀಕಾರ.

ಕೈ॥ ವೈ. ವೀರಸಂಗಪ್ಪನವರ ಅಗ್ರತಾಂಬೂಲ ಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.

ಪ. ಪ್ರ.

(1)ಯಾದ್ಗಿರಿಯಲ್ಲಿ ನೈಜಾಂ ವೀರಶೈವ ಶಂಕರ ಸಂಸ್ಕೃತ ಕಾಲೇಜು ಸ್ಥಾಪನಾಮಹೋತ್ಸವದಲ್ಲಿ ಮ॥ ವಕೀಲ ರುದ್ರಪ್ಪನವರ ಮೂಲಕ ರೂ 2. (2) ಬೆಂಗಳೂರು ಡಿ॥ ನೆಲಮಂಗಲದ ಮ॥ ಶೆಟ್ಟರುಚನ್ನಬಸಪ್ಪನವರ ಲಗ್ನದಲ್ಲಿ ರೂ. 1 ಮತ್ತು ಮ॥ ಪ್ರಭಯ್ಯನವರ ಹೊನ್ನಶೆಟ್ಟಪ್ಪನವರ ಲಗ್ನದಲ್ಲಿ ರೂ. 1 ಒಟ್ಟು ರೂ 2 ನೆಲಮಂಗಲದ ಶೆಟ್ಟರು ಮ॥ ಸುಬ್ಬರಾಯಪ್ಪನವರ ಮೂಲಕ. (3) ದೊಡ್ಡಬಳ್ಳಾಪುರ ತಾ॥ ಸರ್ವಮಾನ್ಯ ಗೊಲ್ಲಹಳ್ಳಿ ಶ್ರೀ ಬಸವೇಶ್ವರ ಜಯಂತಿಮಹೋತ್ಸವದಲ್ಲಿ ಕಾರ್ಯದರ್ಶಿಗಳಾದ ಏಕಾಶೀಪುರದ ಮ॥ ಎಸ್. ಎನ್. ಮಲ್ಲಪ್ಪಶೆಟ್ಟರ ಮೂಲಕ ರೂ. 1 (4) ದಾವಣಗೆರೆಯಲ್ಲಿರುವ ಮ॥ ಹಾವೇರಿ ಮಹಾಲಿಂಗಪ್ಪನವರ ಲಗ್ನಕಾರ್ಯದಲ್ಲಿ ಮೈಸೂರು ಮಠದ ವೇ॥ ಚನ್ನವೀರಪ್ಪಯ್ಯನವರ ಮೂಲಕ ರೂ 1. (5) ಬೆಂಗಳೂರು ಗ್ರಂದಿಗೆ ಅಂಗಡಿ ಆರ್. ಪಾಪಣ್ಣನವರ ಕುಮಾರರು ಮ॥ ಆರ್. ಪಿ. ವೀರಭದ್ರಪ್ಪನವರಿಂದ ಅವರ ಸಹೋದರಿಯ ಲಗ್ನದಲ್ಲಿ ರೂ. 5 (6) ಮೈಸೂರು ಗುರುಕಾರ್ ಮ॥ ಬಸವರಾಜಯ್ಯನವರ ಮತ್ತು ಅವರ ಪುತ್ರಿಯ ಲಗ್ನಗಳಲ್ಲಿ ರೂ. 2.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ಮಳೆಯನ್ನಳೆಯುವ ಸುಲಭರೀತಿ.

ಸೀಮೆಎಣ್ಣೆ ಖಾಲಿಡಬ್ಬಾ ಸೋರದೆ ಇರತಕ್ಕದ್ದನ್ನು ತೆಗೆದುಕೊಂಡು ಮೇಲ್ಭಾಗ ಮುಚ್ಚಳವನ್ನು ತೆಗೆದುಹಾಕಿ ಬೈಲುಜಾಗದಲ್ಲಾಗಲಿ, ಮನೆಯ ಮಾಳಿಗೆಯ ಮೇಲಾಗಲಿ, ಮರಗಳು, ಗೋಡೆಗಳೂ ಇವಕ್ಕೆ ದೂರವಾಗಿ (ಡಬ್ಬಾದಲ್ಲಿ ಬೀಳುವ ಮಳೆಹನಿಗಳಿಗೆ ತೊಂದರೆಯಾಗದಂತೆ) ಇಟ್ಟಿರಬೇಕು. ಮಳೆ ಬಂದು ನಿಂತನಂತರ ಡಬ್ಬಾದಲ್ಲಿ ಬಿದ್ದಿರತಕ್ಕ ನೀರನ್ನೂ ಧಾನ್ಯ ಅಳೆಯುವ ಸೇರು (47 ಟಿನ್ಸ್) ನಿಂದಾ ಅಳೆಯಬೇಕು. ಎಷ್ಟು ಸೇರು ನೀರಾಗುತ್ತೋ ಅಷ್ಟು ಇಂಚ್ ಮಳೆಯಾಗಿದೆ ಎಂದು ತಿಳಿಯತಕ್ಕದ್ದು. $\frac{1}{2}$ ಸೇರು ನೀರಿದ್ದರೆ $\frac{1}{2}$ ಇಂಚ್ (50 ಸೆಂಟ್ಸ್) ಮಳೆ ಎಂದೂ $\frac{1}{4}$ ಸೇರು ನೀರಿದ್ದರೆ $\frac{1}{4}$ ಇಂಚ್ (25 ಸೆಂಟ್ಸ್) ಮಳೆ ಎಂದೂ ಹೀಗೆಯೇ ತಿಳಿದುಕೊಳ್ಳಬೇಕು. ಗ್ರಾಮಾಂತರಗಳವರಿಗೆ ಅವರವರ ಗ್ರಾಮದಲ್ಲಿ ಬೀಳುವ ಮಳೆಯನ್ನಳೆಯಲು (ಸರ್ಕಾರಿ ಮಳೆ ಅಳೆಯುವ ಸಾಧನಗಳೂ ಜಾಸ್ತಿಕ್ರಯವಾದ್ದರಿಂದ) ಈ ಉಪಾಯದಿಂದ ಬಹಳ ಸುಲಭವಾಗಿ ಅಳೆದು ಮಳೆಯ ಪ್ರಮಾಣವನ್ನು ತಿಳಿದುಕೊಳ್ಳಬಹುದು.

ಎಂ. ಎ. ಸಿದ್ಧಪ್ಪ, ಮೊಳಕಾಲ್ಮುರು.

ದೇವಸ್ಥಾನದ ಜೀರ್ಣೋದ್ಧಾರ.

ಜಹಗೀರ್ ಯಳಂದೂರು ತಾಲ್ಲೂಕು ಯಳಂದೂರು ಕಸಬಾದಲ್ಲಿರುವ ಮಹಾಕಾಳಿ-ಕಮಲೇಶ್ವರರ ದೇವಸ್ಥಾನವು ಬಹಳಪುರಾತನವಾದದ್ದು ಮತ್ತು ಗೌತಮಋಷಿಗಳಿಂದ ಆರಾಧಿತವಾದದ್ದು. ಬಹಳ ದಿವಸಗಳಿಂದಲೂ ಕ್ರಮವಾಗಿ ಪೂಜೆ ವಗೈರೆ ಸೇವಾಕಾರ್ಯಗಳು ನಡಿಯುತ್ತಿದ್ದು, ಈಚೆಗೆ 10.12 ವರ್ಷಗಳಿಂದ ಶಿಥಿಲವಾಗಿ ಶೋಚನೀಯವಾದ ಸ್ಥಿತಿಗೆ ಬಂದಿರುತ್ತೆ. ಅಷ್ಟಬಂಧನ ವಗೈರೆ ಎಲ್ಲವೂ ಹೋಗಿರುತ್ತೆ. ಅಲ್ಲದೆ ಬರತಕ್ಕ ಭಕ್ತಾದಿಗಳಿಗೆ ಇಳಿದುಕೊಳ್ಳಲು ಸಹ ಸ್ಥಳವಿಲ್ಲದೆ ತೊಂದರೆಯಾಗಿರುತ್ತೆ. ಆದ್ದರಿಂದ ಈ ಮಹಾಕಾಳಿಯ ಭಕ್ತರಾದ ಮಹನೀಯರೂ ಮತ್ತು ಪಂಚಾನನದ ಭಕ್ತರೂ ಸಹ ಸಹಾಯಮಾಡಿ ಈ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿದ ಪುಣ್ಯಕ್ಕೆ ಪಾತ್ರರಾಗಿ ಆದಿಶಕ್ತಿ ಸ್ವರೂಪಿಣಿಯಾದ ಮಹಾಕಾಳೀ ಕಾಂಬಾಕಮಲೇಶ್ವರರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥಿಸಿ. ಈ ಕಾರ್ಯಕ್ಕಾಗಿ ಐದಾಯದ ಯಜಮಾನ ಗಿರಿಮಲ್ಲಪ್ಪಾಚಾರಿಯವರು ಈ ದೇವರ ಸೇವಾಸಂಘದ ಕೆಲವು ಮೆಂಬರುಗಳೊಡನೆ ಈ ಕಾರ್ಯವನ್ನು ಭಕ್ತಮಹನೀಯರಿಂದ ಸಹಾಯವನ್ನು ಪಡೆದು ನೆರವೇರಿಸಲು ಸಂಚಾರ ಹೊರಟಿರುತ್ತಾರೆ.

ಮಹಾಕಾಳೀಭಕ್ತ.

ತಿಪಟೂರು ಹೈಸ್ಕೂಲು.

ನಮ್ಮ ಘನವಾದ ಮೈಸೂರು ಮಹಾರಾಜ ಸರ್ಕಾರದವರು ತಿಪಟೂರು ಟೌನ್‌ನಲ್ಲಿ 1924ನೇ ಜೂನ್ 9ನೇ ತಾರೀಖುಲಾಗಾಯಿತು ಒಂದು ಹೈಸ್ಕೂಲು ಸ್ಥಾಪಿಸಿ ಪ್ರಕೃತದಲ್ಲಿ IV ಫಾರಂ ಇಡುವಂತೆ ಏರ್ಪಡಿಸಿರುತ್ತಾರೆ. ಈ ಮಾಹೆ 28ನೇ ತಾರೀಖು ವಿದ್ಯಾಭ್ಯಾಸದ ಇಲಾಖೆ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ತಿಪಟೂರಿಗೆ ದಯಮಾಡಿಸಿ ಹೈಸ್ಕೂಲು ಸ್ಥಾಪಿಸಲು ಅನುಕೂಲವಾದ ಇಲ್ಲಿಯ ಪ್ರಶಸ್ತವಾದ ಶ್ರೀ ವೀರಶೈವಾಶ್ರಮವನ್ನು ಪರಾಂಬರಿಸಿ ವಿದ್ಯಾಭ್ಯಾಸದ ಇಲಾಖೆಯ ಸುಫರ್ದಿಗೆ ತೆಗೆದುಕೊಂಡಿರುತ್ತಾರೆ. ಸದರೀ ಕಟ್ಟಡವನ್ನು ಎರಡು ವರ್ಷಗಳ ಕಾಲ ಹೈಸ್ಕೂಲಿಗೋಸ್ಕರ ಉಚಿತವಾಗಿ ಕೊಟ್ಟಿರುವದು ತುಂಬಾ ಶ್ಲಾಘನೀಯವಾಗಿದೆ. ಎಲ್ಲಾ ಕೋಮಿ ವಿದ್ಯಾರ್ಥಿಗಳ ವಾಸಕ್ಕೂ ಭೋಜನಕ್ಕೂ ಸುಲಭವಾದ ಸೌಕರ್ಯಗಳನ್ನು ಕಲ್ಪಿಸಲು ಏರ್ಪಾಡುಗಳು ನಡೆಯುತ್ತಾ ಇವೆ. ನವೀನವಾಗಿ ಸ್ಥಾಪಿಸಲ್ಪಡುವ ಈ ಹೈಸ್ಕೂಲಿಗೆ ಎಲ್ಲಾ ಕಡೆಯಿಂದಲೂ ವಿದ್ಯಾರ್ಥಿಗಳು ಬರಬೇಕೆಂದು ಕೋರಿದೆ. ತಿಪಟೂರಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಒಂದು ಉಚಿತವಾದ ಭೋಜನಶಾಲೆ ಇರುತ್ತೆ. ಅಲ್ಲಿ ಕೆಲವು ಮಂದಿ ಬಡವಿದ್ಯಾರ್ಥಿಗಳಿಗೆ ಫ್ರೀಬೋರ್ಡಿಂಗ್ ದೊರೆಯುತ್ತದೆ. ಇಷ್ಟವುಳ್ಳವರು ಈ ಜೂನ್ ಮಾಹೇ 12ನೇ ತಾರೀಖು ಒಳಗಾಗಿ ಶ್ರೀ ವೀರಶೈವಾಶ್ರಮ ಸೆಕ್ರೆಟರಿಯವರಿಗೆ ಅಪ್ಲಿಕೇಷನ್ ಹಾಕಿಕೊಳ್ಳಬಹುದು.

ವ್ಯವಸ್ಥಾಪಕ

ಜಯಂತಿಯೂ ಇಂಗ್ಲಿಷ್ ಶಾಲಾಸ್ಥಾಪನೆಯೂ.

ಈ ವರ್ಷ ಶ್ರೀ ಬಸವಜಯಂತಿಯು ಹಾವೇರಿ ತಾಲೂಕ ಹೊಸರಿತ್ತಿಯಲ್ಲಿ ಬಹು ವಿಜೃಂಭಣೆಯಿಂದ ಜರುಗಿದ್ದಲ್ಲದೆ ಅದೇ ದಿವಸ ಶ್ರೀ ಗುದ್ದಲೀಸ್ವಾಮಿಗಳವರ ಆಶೀರ್ವಾದದಿಂದ ಮತ್ತು ಸರದಾರ ಬಿ. ಬಿ. ಮಾಮಲೇದೇಸಾಯಿ ಹಂದಿಗನೂರು ಇವರ ಸ್ವಹಸ್ತದಿಂದ ಒಂದು ಎ. ವಿ. ಸ್ಕೂಲು ಸ್ಥಾಪಿಸಲ್ಪಟ್ಟಿತು. ಈ ಭಾಗವು ವಿದ್ಯೆಯಲ್ಲಿ ಬಹಳ ಹಿಂದುಳಿದಿರುವದೆಂದು ಇಲ್ಲಿಯ ಜನರು ಮತ್ತು ಮ॥ ಕಲಕೋಟಿ ದೊಡ್ಡ ವಿರೂಪಾಕ್ಷಪ್ಪನವರು ಮತ್ತು ಸಣ್ಣವಿರೂಪಾಕ್ಷಪ್ಪನವರು ವಿಶೇಷಪ್ರಯತ್ನದಿಂದ 8 ಸಾವಿರ ರೂಪಾಯಿಗಳನ್ನು ಎರಡು ಗ್ರಾಮಗಳಿಂದ ಮಾತ್ರವೇ ಕೂಡಿಸಿ ಆ ಫಂಡಿನ ಉತ್ಪನ್ನದಿಂದ ಈ ಸಂಸ್ಥೆಯನ್ನು ನಡೆಯಿಸುವವರಾಗಿದ್ದಾರೆ. ಈ ಫಂಡನ್ನು ದೊಡ್ಡನಿಧಿಯಾಗಿ ಬೆಳಿಸಬೇಕೆಂಬ ಉದ್ದೇಶವಿರುವದಲ್ಲದೆ ಬಡವಿದ್ಯಾರ್ಥಿಗಳ ಹಿತಕ್ಕಾಗಿ ಶೀಘ್ರದಲ್ಲಿಯೇ ಒಂದು ಫ್ರೀ ಬೋರ್ಡಿಂಗನ್ನು ಪ್ರಾರಂಭಿಸುವ ಆಲೋಚನೆ ಇರುವದು. ಅದೇ ದಿವಸ ಸಾಯಂಕಾಲ ಸರದಾರರವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ಒಂದು ಸಂಘವು ಸ್ಥಾಪಿಸಲ್ಪಟ್ಟ ಮೇಲೆ ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ವೇ॥ ಗುದ್ಲೆಪ್ಪಶಾಸ್ತ್ರಿಗಳು ಬಸವೇಶ್ವರನ ಚರಿತ್ರೆಯನ್ನು ಪೌರಾಣಿಕ ದೃಷ್ಟಿಯಿಂದಲೂ ಮ॥ ವಿ. ಸಿ. ಯಗಟಿ ಇವರು ಐತಿಹಾಸಿಕ ದೃಷ್ಟಿಯಿಂದಲೂ ಭಾಷಣಮಾಡಿದ ನಂತರ ಅದೇ ವಿಷಯದ ಮೇಲೆ ಮರಡೂರ ಮಾಸ್ತರರು ಬಿ. ಎ. ಕುಲಕರ್ಣಿ ಮಿ॥ ಹೊಟ್ಟಿ ಬಿ. ಎ. ಎಲ್‌ಎಲ್. ಬಿ. ಮತ್ತು ಶಿ॥ ಮಾಸ್ತರ ಮಲ್ಲಯ್ಯನವರು ಮೊದಲಾದವರ ಸ್ಫೂರ್ತಿದಾಯಕ ಭಾಷಣಗಳಾದ ಮೇಲೆ ಜಯಘೋಷದಿಂದ ಸಭೆಯು ವಿಸರ್ಜನೆಯಾಯಿತು. ಈ ಫಂಡಿಗೆ ಸಿದ್ದಪ್ಪ ಚೂರಮರಿ ಇವರು ತಮ್ಮ ಲಗ್ನದಲ್ಲಿ ತೆಗೆದಿಟ್ಟ 10 ರೂಪಾಯಿಗಳನ್ನು ಈ ಸಂಸ್ಥೆಗೆ ಕೊಟ್ಟು ಮೊದಲು ಮಾರ್ಗದರ್ಶಿಕರಾದ್ದರಿಂದ ನಮಗೆ ಪರಮಾನಂದವಾಗುತ್ತದೆ.

ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಜಯದೇವ ವೀರಶೈವ ಸಂಘ ತುಂಕೂರು.

ವೀರಶೈವ ವಿದ್ಯಾರ್ಥಿಗಳ ವಿದ್ಯಾಪ್ರೋತ್ಸಾಹಕ್ಕೂ ವಿದ್ಯಾರ್ಥಿನಿಲಯದ ಪುರೋವೃದ್ಧಿಗಾಗಿಯೂ ವೀರಶೈವ ಧರ್ಮಗ್ರಂಥಗಳ ಪುನರುಜ್ಜೀವನಕ್ಕೂ ಮತ್ತು ಧಾರ್ಮಿಕ ಸಾಮಾಜಿಕ ವಿಷಯಗಳಲ್ಲಿ ಮತಸುಧಾರಣೆಮಾಡುವುದಕ್ಕೂ ಈ ಸಂಘವು ಏರ್ಪಟ್ಟು ಮೈಸೂರು ಸರ್ಕಾರದ ಸೊಸೈಟಿ ರೆಗ್ಯುಲೇಷನ್ ಪ್ರಕಾರ ರಿಜಿಸ್ಟರುಮಾಡಿಸಲ್ಪಟ್ಟಿದೆ. ಈ ಸಂಘದಾಡಳಿತಕ್ಕೊಳಪಟ್ಟು ತುಂಕೂರಲ್ಲಿ ಶ್ರೀಮನ್ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಕೃಪಾಬಲದಿಂದ ಕಟ್ಟಲ್ಪಡುತ್ತಿರುವ ವಿದ್ಯಾರ್ಥಿನಿಲಯದ ಕಟ್ಟಡದ ಕೆಳಗಿನ ಅಂತಸ್ತೆಲ್ಲವೂ ಪೂರ್ತಿಯಾಗಿ ಅರ್ಧಭಾಗಕ್ಕಿಂತಲೂ ಹೆಚ್ಚಾದ ಕೆಲಸವು ನಡೆದು ಇನ್ನು 6-8 ತಿಂಗಳಲ್ಲಿ ಕಟ್ಟಡವು ಪೂರೈಸುವ ಸಂಭವವಿದೆ. ತುಂಕೂರಲ್ಲಿದ್ದ ಕೈ॥ ಸಾಹುಕಾರ್ ಪಾಪಂಗಡಿ ಗುಬ್ಬಿ ಹುಚ್ಚಯ್ಯನವರು ಜೀವಂತರಾಗಿದ್ದಾಗ್ಗೆ ಇಲ್ಲಿ ಸ್ಥಾಪಿಸಲ್ಪಡಲಿಕ್ಕಿದ್ದ ವೀರಶೈವ ವಿದ್ಯಾರ್ಥಿನಿಲಯದಲ್ಲಿರಬಹುದಾದ ಬಡವೀರಶೈವ ವಿದ್ಯಾರ್ಥಿಗಳಿಗೆ ಅನ್ನವಸತಿಗಳನ್ನು ಕಲ್ಪಿಸಬೇಕೆಂಬ ಸದುದ್ದೇಶದಿಂದ ಹತ್ತು ಸಾವಿರ ರೂಪಾಯಿಗಳ ಸಾಲವನ್ನು ಪ್ರತ್ಯೇಕಿಸಿ ತೆಗೆದಿಟ್ಟು ತಾವೇ ಈ ಧರ್ಮಕಾರ್ಯವನ್ನು ನೆರವೇರಿಸುವುದರೊಳಗಾಗಿ ಸ್ವರ್ಗಸ್ಥರಾದುದರಿಂದ ಸಾಧ್ಯವಿಲ್ಲದೆ ಹೋಯಿತು. ಆದರೆ ಅವರ ವಾರಸದಾರರು, ಮತ್ತು ಸಮೀಪಬಂಧುಗಳಲ್ಲಿ ಕೆಲವರು ಒಮ್ಮನಸ್ಸಿನಿಂದಲೂ ಉದಾರ ಬುದ್ಧಿಯಿಂದಲೂ ಮೃತರ ಸಂಕಲ್ಪವನ್ನು ನೆರವೇರಿಸಬೇಕೆಂಬ ಇಚ್ಛೆಯಿಂದ ನಿರ್ದೇಶಿಸಿದ್ದ ಸಾಲಗಳನ್ನು ವಸೂಲ್ಮಾಡಿ ವಿನಿಯೋಗಿಸಲು ಈ ಸಂಘದ ಪ್ರೆಸಿಡೆಂಟರಿಗೆ ಅಧಿಕಾರಕೊಟ್ಟುದರ ಮೇಲೆ ಸಾಲಗಾರರಿಂದ ಕೋರ್ಟಿಗೆ ಹೋಗದೆ ಸುಸೂತ್ರವಾಗಿ 7483-2-3 ರೂ. ಗಳನ್ನು ಬರಮಾಡಿಕೊಂಡು ಧರ್ಮಕರ್ತರ ಉದ್ದೇಶವನ್ನು ನೆರವೇರಿಸುವುದಕ್ಕೋಸ್ಕರ ಈ ಸಂಘದವರು ಮೈಸೂರು ಬ್ಯಾಂಕಿನಲ್ಲಿ ಡಿಪಾಜಿಟ್ಟುಮಾಡಿರುತ್ತಾರೆ. ವೀರಶೈವ ವಿದ್ಯಾರ್ಥಿನಿಲಯವು ಪೂರ್ತಿಯಾದ ಅನಂತರ ಅದರಲ್ಲಿರಬಹುದಾದ ಬಡವಿದ್ಯಾರ್ಥಿಗಳಿಗಾಗಿ ಸದರಿ ಹಣದ ಬಡ್ಡಿಯು ವಿನಿಯೋಗಿಸಲ್ಪಡುವುದು. ಸಾಹುಕಾರ್ ಗುಬ್ಬಿ ಹುಚ್ಚಯ್ಯನವರ ಸಂಕಲ್ಪವನ್ನು ಪೂರ್ತಿಗೊಳಿಸುವುದು ಅವರ ವಾರಸುದಾರರ ಮತ್ತು ಸಮೀಪಬಂಧುಗಳ ಕೈಯಲ್ಲಿದೆ. ಅವರು ಇದುವರೆಗೂ ಉದಾರಮತಿಯಿಂದ ವರ್ತಿಸಿದಂತೆ ಮುಂದೆಯೂ ನಡೆದು ಮೃತರ ಪೂರ್ಣಸಂಕಲ್ಪವನ್ನು ನೆರವೇರಿಸುತ್ತಾರೆಂದು ನಿರೀಕ್ಷಿಸಿದೆ. ಈ ವಿಷಯದಲ್ಲಿ ಸಹಾಯಮಾಡಿದ ಕೆಲ ಮಹನೀಯರುಗಳು ತಮ್ಮ ಹೆಸರನ್ನು ಪ್ರಕಟಿಸಕೂಡದೆಂದು ಹೇಳಿದ್ದರಮೇಲೆ ಯಾರ ಹೆಸರನ್ನೂ ಇದರಲ್ಲಿ ನಮೂದಿಸಿಲ್ಲ. ಆದರೆ ಇದರಲ್ಲಿ ಭಾಗಿಗಳಾಗಿ ಸಹಾಯವನ್ನು ಮಾಡಿದವರೆಲ್ಲರಿಗೂ ಈ ಸಂಘದವರು ಆಭಾರವುಳ್ಳವರಾಗಿರುತ್ತಾರೆ. ಇವರ ಮೇಲ್ಪಂಕ್ತಿಯನ್ನನುಸರಿಸಿ ಇದೇ ರೀತಿಯಲ್ಲಿ ವೀರಶೈವ ಮಹಾಭಿಮಾನಿಗಳು ಯಥಾಶಕ್ತಿ ಸಹಾಯಮಾಡಿ ಶಿವಪ್ರೀತಿಗೆ ಪಾತ್ರರಾಗಬೇಕೆಂದು ಈ ಸಂಘದವರು ನಂಬಿ ನಿರೀಕ್ಷಿಸುತ್ತಾರೆ.

ಜೆ. ರುದ್ರಪ್ಪ, ಎಂ. ಎ., ಎಲ್‌ಎಲ್.ಬಿ., ಪ್ರೆಸಿಡೆಂಟ್,
ಶ್ರೀ ಜಗದ್ಗುರು ಜಯದೇವ ವೀರಶೈವ ಸಂಘ, ತುಂಕೂರು.

ಶೋಚನೀಯ ಮೃತ್ಯು.

ಸೋಲಾಪುರದಲ್ಲಿ ಬೋರಾಮಣಿಯೆಂಬ ಸುಪ್ರಸಿದ್ಧ ವೀರಮಾಹೇಶ್ವರ ಮನೆತನದಲ್ಲಿ ಸುಶಿಕ್ಷಿತರೂ ಸುಶೀಲರೂ ವಿದುಷಿಯರೂ ಆದ ಶ್ರೀ॥ ಸೌ॥ ನೀಲಮ್ಮ ವಸ್ತ್ರದ ಇವರು ಕ್ಷಯರೋಗವ್ಯಾಧಿಯಿಂದ ಎರಡು ವರ್ಷಗಳ ವರೆಗೂ ಪೀಡಿತರಾಗಿದ್ದು 4—5 ಸಾವಿರ ರೂಪಾಯಿಗಳ ವ್ಯಯದಿಂದ ಇಲ್ಲಿಯ ಮತ್ತು ಪುಣೆಯ ಪ್ರಸಿದ್ಧ ಡಾಕ್ಟರರ ಔಷಧಗಳ, ವಾದಿಯರ ಉಪಚಾರಗಳ, ಮಹಾಬಲೇಶ್ವರ ಸಮೀಪದಲ್ಲಿರುವ ಪಾಚಗಣಿ ಮೊದಲಾದ ಸ್ಥಳಗಳ, ಉತ್ತಮಹವೆಯ, ಜಪತಪಾದಿಗಳ ಉಪಯೋಗವು ಏನೂ ಆಗದೆ ತಾ॥ 11-5-1924 ರವಿವಾರ ಪ್ರಾತಃ ೮||| ಗಂಟೆಯಲ್ಲಿ ಜಡಭೌತಿಕ ಶರೀರವನ್ನು ಬಿಟ್ಟು ಶಿವಸಾಯುಜ್ಯವನ್ನೈದಿದರು ಎಂದು ತಿಳಿಸುವದಕ್ಕೆ ಅತ್ಯಂತ ದುಃಖವೆನಿಸುತ್ತದೆ.

ನೀಲಮ್ಮನವರು ಸೋಲಾಪುರದಲ್ಲಿಯ «ಮಹಿಲಾಜ್ಞಾನಮಂದಿರ» ಎಂಬ ಸ್ತ್ರೀ ಸಂಸ್ಥೆಯ ಚಿಟಣೀಸರಿದ್ದರು. ಹಿಂದುಳಿದ ವೀರಶೈವ ಸ್ತ್ರೀಯರ ಉನ್ನತಿಯ ವಿಷಯದಲ್ಲಿ ನಿರಾಲಸತನದಿಂದ ಅಹೋರಾತ್ರಿ ಪ್ರಯತ್ನಿಸುತ್ತಿದ್ದರು. ಮರಾಠಿಭಾಷೆಯಲ್ಲಿ 5—6 ಇಯತ್ತೆಯವರಿಗೂ ಅಭ್ಯಾಸವಾಗಿದ್ದು ಕನ್ನಡದ ಅಭ್ಯಾಸವಾದರೂ ಇವರಿಗೆ ಚನ್ನಾಗಿದ್ದಿತು. ಇಂಗ್ಲೀಷವನ್ನಾದರೂ ಮಹಿಲಾಜ್ಞಾನಮಂದಿರದಲ್ಲಿ 3—4 ಪುಸ್ತಕಗಳವರೆಗೂ ಓದಿದ್ದರು. ಮರಾಠೀ ಮತ್ತು ಕನ್ನಡ ಭಾಷೆಯಲ್ಲಿ ಕವಿತ್ವವನ್ನು ಹೃದಯಂಗಮವಾಗಿ ರಚಿಸುತ್ತಿದ್ದರು. ಇತ್ತಿತ್ತ ಸ್ವಧರ್ಮವಿಚಾರದಲ್ಲೂ ವೇದಾಂತದಲ್ಲಿಯೂ ಅಭಿರುಚಿಯು ಹುಟ್ಟಿ ತಕ್ಕಮಟ್ಟಿಗೆ ಸಂಸ್ಕೃತಭಾಷಾ ಜ್ಞಾನವನ್ನೂ ಮಾಡಿಕೊಂಡು ಪಂಚೀಕರಣ, ವೇದಾಂತಸಾರ ಮೊದಲಾದ ಸಟೀಕ ವೇದಾಂತಗ್ರಂಥಗಳನ್ನೂ ಸಟೀಕ ಸಿದ್ಧಾಂತ ಶಿಖಾಮಣಿ, ಅನುಭವಸೂತ್ರ ಮುಂತಾದ ಸಿದ್ಧಾಂತಗ್ರಂಥಗಳನ್ನೂ ಅಭ್ಯಾಸಿಸಿ ಪರಾಮರ್ಶಿಸುತ್ತಿದ್ದರು. ಧಾರ್ಮಿಕ, ನೈತಿಕ, ಶೈಕ್ಷಣಿಕ ಮೊದಲಾದ ವಿಷಯಗಳಲ್ಲಿ ಉಪನ್ಯಾಸವನ್ನು ಕೊಡುವಲ್ಲಿ ಹೆಸರಾಂತಿದ್ದರು. ನಾನಾವಿಧ ಪಕ್ವಾನ್ನಗಳನ್ನು ಮಾಡುವಲ್ಲಿ ನಿಪುಣರಿದ್ದು ಕಟ್ಟಿಗೆಯ ಚೂರ್ಣ ಮೊದಲಾದ ಔಷಧದಾರ್ಥಗಳ ಪಾಕಮಾಡುತ್ತಿದ್ದರು. ಇಲ್ಲಿ ಜರುಗಿದ 1—2 ಪ್ರದರ್ಶನಗಳಲ್ಲಿ ಇವರಿಗೆ ಬಹುಮಾನ ದೊರೆಕಿದ್ದಿತು. ಝಿಂಕಲೂ, ಕಸೂ, ಹೆಣೆಯುವದು ಮೊದಲಾದ ಹಸ್ತಕಲೆಗಳಲ್ಲಿ ಇವರು ಜಾಣರಿದ್ದು ಪ್ರದರ್ಶನಗಳಲ್ಲಿ ಇವರಿಗೆ ಸರ್ಟಿಫಿಕೇಟುಗಳೂ ಮೆಡಲುಗಳೂ ದೊರೆದಿದ್ದವು. ನೀಲಮ್ಮನವರು ೧॥ ವರ್ಷವಯಸ್ಕರಾಗಿರುವಾಗ ಅವರ ಜನನೀ ಜನಕರು ದಿವಂಗತರಾದರು. ಆ ಮೊದಲು ನೀಲಮ್ಮನವರ ಲಾಲನ ಪಾಲನ ಶಿಕ್ಷಣ ಮೊದಲಾದುದನ್ನು ಇಲ್ಲಿಯ ಪ್ರಸಿದ್ಧ ಶ್ರೀ ಕಿಂಟಿಮಠದ ನಿಜಗುಣಸ್ವಾಮಿಗಳು ನಿಜಪಿತೃವಿಗಿಂತಲೂ ಮಿಗಿಲಾದ ತಳಮಳಿಯಿಂದಲೂ, ಅಭಿಮಾನದಿಂದಲೂ ಮಾಡಿಸಿದ್ದರು. ಮಹಾವ್ಯಾಧಿಪೀಡಿತರಾದಾಗ್ಯೂ ಶರೀರದಲ್ಲಿ ನಡಿಯುವ ಮತ್ತು ಟಾಂಗಾದಲ್ಲಿ ಕುಳಿತು ಹೋಗುವ ಶಕ್ತಿಯಿರುವವರೆಗೂ ಮಹಿಲಾಜ್ಞಾನಮಂದಿರಕ್ಕೆ ಹೋಗಿ ಸೋದರಿಯರಿಗೆ ಉಪದೇಶ ಮತ್ತು ಉತ್ಸಾಹ ಕೊಡುವದನ್ನು ಬಿಡಲಿಲ್ಲ. ಹಾಸಿಗೆಯಲ್ಲಿ ಒರಗಿದ್ದರೂ ತಾನು ಬದುಕುವದಿಲ್ಲೆಂದು ತಿಳಿದಿದ್ದರೂ ಸ್ಮೃತಿಯಿರುವವರೆಗೂ ಶಿವಚಿಂತನೆಯಗಿಂತಲೂ ಮಹಿಲಾಜ್ಞಾನಮಂದಿರದ ಚಿಂತನವೇ ಹೆಚ್ಚು ತೋರುತ್ತಿದ್ದಿತು. ಇಂಥ ಸ್ವಸಮಾಜ ಹಿತೈಷಿಗಳೂ ಪ್ರಯತ್ನಪುರೋಭಾಗಿಗಳೂ ವಿದುಷಿಯರೂ ಆದ ನೀಲಮ್ಮನವರ ವಿಯೋಗದಿಂದ ಇಲ್ಲಿಯ ವೀರಶೈವಸಮಾಜಕ್ಕೆ ಅದರಲ್ಲಿ ಮಹಿಲಾಸಮಾಜಕ್ಕೆ ಬಹು ದೊಡ್ಡ ಹಾನಿಯುಂಟಾಯಿತು. ನೀಲಮ್ಮನವರ ಮೃತಿಯಿಂದ ಶ್ರೀ ನಿಜಗುಣಸ್ವಾಮಿಗಳಿಗೂ ಬೋರಾಮಣಿಯ ಮನೆತನದವರಿಗೂ ಉಂಟಾಗಿರುವ ಅಪಾರದುಃಖದಲ್ಲಿ ಇಲ್ಲಿಯ ವೀರಶೈವ ಸ್ತ್ರೀ ಪುರುಷರುಗಳು ಸಮಭಾಗಿಗಳಾಗಿರುವರು. ಶ್ರೀ ಸ್ವಾಮಿಗಳ ಆ ಮನೆತನದವರ ದುರ್ಧರ ದುಃಖವು ಕಮ್ಮಿಯಾಗಲೆಂತಲೂ ಮೃತರ ಆತ್ಮನಿಗೆ ಪರಶಿವನು ಶಾಂತಿಯನ್ನೀಯಲೆಂತಲೂ ಹಾರೈಸುತ್ತೇವೆ.

ಗುಣೈಕಪಕ್ಷಪಾತಿ.

ವಿವಾಹ ಮಹೋತ್ಸವಗಳು.

ಬೆಂಗಳೂರು ಪೇಟೆಯಲ್ಲಿ ಪ್ರಸಿದ್ಧ ಫಲಸರಕ್ಕು ವ್ಯಾಪಾರಿಗಳಾದ ಆರ್. ಪಾಪಣ್ಣ ಅಂಡ್‌ಸನ್ಸ್‌ರಲ್ಲೊಬ್ಬರಾದ ಮ॥ ಆರ್. ಪಿ. ವೀರಭದ್ರಪ್ಪನವರು ತಮ್ಮ ಸಹೋದರಿ ಸೌ॥ ಗೌರಮ್ಮನನ್ನು ಕೋಲಾರದಲ್ಲಿ ಎಕ್ಸೈಸ್ ಕಂಟ್ರಾಕ್ಟರು, ಮ್ಯುನಿಸಿಪಲ್ ಕೌನ್ಸಿಲರು ಮತ್ತು ರೆಪ್ರೆಜೆಂಟೇಟಿವ್ ಮೆಂಬರು ಆದ ಸಾಹುಕಾರ್ ಮ॥ ಐ. ಆರ್. ಚಿಕ್ಕಚನ್ನಂಜಪ್ಪನವರ ಅಣ್ಣನವರು ಮ॥ ಹೊನ್ನಗಂಗಪ್ಪನವರ ಪುತ್ರ ಮ॥ ಚಿಕ್ಕಗಂಗಾಧರಪ್ಪನವರಿಗೆ ಕೊಟ್ಟು ಕಳೆದ ತಾ॥ 28 ರಲ್ಲಿ ವಿವಾಹಮಹೋತ್ಸವವನ್ನು ಬಹಳ ವೈಭವದಿಂದ ನೆರವೇರಿಸಿದರು. ಇದಕ್ಕಾಗಿ ಅವರ ವಾಸಸ್ಥಳವಾದ ಆತ್ಮವಿಲಾಸವೆಂಬ ಬಂಗಲೆಯು ನಾನಾ ಬಣ್ಣದ ತೋರಣಗಳಿಂದಲೂ ಎಲೆಕ್ಟ್ರಿಕ್ ದೀಪಗಳಿಂದಲೂ ಬಾಳೆಕಂಭಗಳಿಂದಲೂ ಅಲಂಕರಿಸಲ್ಪಟ್ಟಿತ್ತು ಮತ್ತು ಸುಂದರವಾದ ವಿವಾಹ ಮಂಟಪವು ರಚಿಸಲ್ಪಟ್ಟು ಎಲೆಕ್ಟ್ರಿಕ್ ದೀಪಾವಳಿಗಳಿಂದ ಶೃಂಗರಿಸಲ್ಪಟ್ಟಿದ್ದಿತು. ಸೋಮವಾರ ವರನು ದಿವ್ಯಪೀತಾಂಬರದಿಂದಲೂ ಪುಷ್ಪಮಾಲೆಗಳಿಂದಲೂ ಅಲಂಕೃತವಾದ ಮೋಟಾರು ಬಂಡಿಯಲ್ಲಿ ಕುಳ್ಳಿರಿಸಲ್ಪಟ್ಟು ವಾದ್ಯಗಳ ವೈಭವದಿಂದಲೂ, ಮದ್ದಿನ ವಿನೋದದಿಂದಲೂ ಜನಸ್ತೋಮದಿಂದಲೂ ಚಿಕ್ಕಪೇಟೆ, ದೊಡ್ಡಪೇಟೆ, ಚಾಮರಾಜಪೇಟೆಗಳಲ್ಲಿ ಉತ್ಸವ ಪೂರ್ವಕವಾಗಿ ಕರೆತರಲ್ಪಟ್ಟರು. ಬುಧವಾರ ಬೆಳಿಗ್ಗೆ 12 ಗಂಟೆಯೊಳಗೆ ವೇ॥ ಗುರುಲಿಂಗಶಾಸ್ತ್ರಿಗಳು, ವೇ॥ ನಂಜಯ್ಯಶಾಸ್ತ್ರಿಗಳು ಈ ಉಭಯರ ಪೌರೋಹಿತ್ಯದಿಂದ ಧಾರಾಮುಹೂರ್ತವು ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು. ಸ್ಥಳದ ಶೆಟ್ಟಿ ಯಜಮಾನರು ಮೊದಲಾಗಿ ಎಲ್ಲಾ ಮತಸ್ಥರೂ ಬಂಧುಬಾಂಧವರೂ, ಮೈಸೂರು, ಡೆಂಕಣಿಕೋಟೆ, ಕೋಲಾರ, ಕೊಳ್ಳೇಗಾಲ, ಚೆನ್ನಪಟ್ಟಣ, ಸಾಗರ, ಕಾನಕಾನಹಳ್ಳಿ ಮೊದಲಾದ ಸ್ಥಳಗಳಿಂದ ಬಂಧುಗಳೂ ಸ್ನೇಹಿತರುಗಳೂ ಬಂದಿದ್ದರು. ಧಾರಾಮುಹೂರ್ತ ಮಾಂಗಲ್ಯಧಾರಣ ಸಪ್ತಪದಿ ಮೊದಲಾದ ಕಾರ್ಯಗಳು ನಡೆದಮೇಲೆ ಮಠಪತಿಗಳಿಗೂ ಪುರೋಹಿತರುಗಳಿಗೂ ಸದಕ್ಷಿಣ ತಾಂಬೂಲ ಕೊಡಲ್ಪಟ್ಟ ಮೇಲೆ ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿಗೆ ವಧೂವರರ ಕಡೆಯಿಂದ 50 ರೂಪಾಯಿಗಳ ಮತ್ತು ಕೈ॥ ವೀರಸಂಗಪ್ಪನವರ ಸ್ಮರಣಾರ್ಥವಾಗಿ 5 ರೂಪಾಯಿಗಳ ಸಂಭಾವನೆಗಳು ಕೊಡಲ್ಪಟ್ಟು ಸಭಿಕರಿಗೆ ಸದಕ್ಷಿಣ ಫಲತಾಂಬೂಲವು ಹಂಚಲ್ಪಟ್ಟಿತು. ವಿವಾಹ ಕಾರ್ಯಕರ್ತರಾದ ಮ॥ ಆರ್. ಪಿ. ವೀರಭದ್ರಪ್ಪನವರು ಸ್ಥಳ ಪರಸ್ಥಳದ ಬಂಧುಮಿತ್ರರುಗಳನ್ನೂ ಸಾವಿರಾರು ಜನ ಭೂರಿಯವರನ್ನೂ ಭಕ್ಷ್ಯಭೋಜ್ಯಾದಿಗಳಿಂದ ಸಂತೃಪ್ತಿಗೊಳಿಸಿ ಬಡವರೆಲ್ಲರಿಗೂ ದಕ್ಷಿಣೆಯನ್ನು ಕೊಟ್ಟರು. ಬುಧವಾರ ಸಾಯಂಕಾಲ ಆರತಕ್ಷತೆಗೆ ಒಂದನೆಯ ಕೌನ್ಸಿಲರು ಮಿರ್ ಹಂಸಾಹುಸೇನ್‌ಸಾಹೇಬರು, ಚೀಫ್‌ಜಡ್ಜ್ ಮ॥ ಕೆ. ಚಂದ್ರಶೇಖರಯ್ಯರ್‌ರವರು, ದಿವಾನ್‌ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಇ., ಯವರು, ರೆವಿನ್ಯೂ ಕಮಿಷನರ್ ಮಿ॥ ಕೆ. ಚಾಂಡಿಯವರು, ಚೀಫ್ ಸೆಕ್ರೆಟರಿ ಮಿ॥ ಕೆ. ಮೆಥಾನ್‌ರವರು ಮೊದಲಾಗಿ ಸರ್ಕಾರಿ ಅಧಿಕಾರಿಗಳೂ ಮ॥ ಗಳಾದ ಮ್ಯುನಿಸಿಪಲ್ ಪ್ರೆಸಿಡೆಂಟ್ ಗರುಡಾಚಾರ್ಯರು, ಮಂಡಿ ಹರಿಯಣ್ಣನವರು, ಸಜ್ಜನರಾಯರು ಮೊದಲಾಗಿ ವರ್ತಕರುಗಳೂ, ಲಾಯರುಗಳೂ ಇತರ ದೊಡ್ಡಮನುಷ್ಯರೂ ದಯಮಾಡಿಸಿದ್ದು ಕೊಳ್ಳೆಗಾಲದ ತಾಲ್ಲೋಕು ಬೋರ್ಡು ಪ್ರೆಸಿಡೆಂಟರೂ ಶ್ರೀಮಂತರೂ ಆದ ಮ॥ ಜಿ. ಪಿ. ಮಲ್ಲಪ್ಪನವರ ಕುಮಾರ 11 ವರ್ಷ ವಯಸ್ಸಿನ ನಟರಾಜನ ಹಾಡುಗಾರಿಕೆಯನ್ನು ಕೇಳಿ ಮಹಾನಂದವನ್ನು ಹೊಂದಿ ಕೌನ್ಸಿಲರೂ, ಚೀಫ್‌ಜಡ್ಜರೂ, ದಿ॥ ಬ॥ ಶೆಟ್ಟರೂ ನಟರಾಜನ ತಂದೆಯವರಾದ ಮ॥ ಜಿ. ಪಿ. ಮಲ್ಲಪ್ಪನವರ ಕುರಿತು ಅವರ ಮಗನಿಗೆ ಅಷ್ಟು ಚಿಕ್ಕವಯಸ್ಸಿನಲ್ಲಿ ಸಂಗೀತಾಭಿರುಚಿಯಿರುವುದು ಅಪೂರ್ವವಾದುದರಿಂದ ಆತನಿಗೆ ಪೂರ್ಣಪಾಂಡಿತ್ಯವನ್ನುಂಟುಮಾಡಬೇಕೆಂದೂ ಆತನ ಮಂಜುಳಸ್ವರದಿಂದ ತಮ್ಮಗಳಿಗೆ ಪರಮಾನಂದ ಉಂಟಾಯಿತೆಂದೂ ಹೇಳಿದರು. ಸಭಿಕರೆಲ್ಲರೂ ಆ ಬಾಲ ಸಂಗೀತಗಾರನು ಕೊಂಚವೂ ಆಯಾಸವಿಲ್ಲದೆ ಲೀಲಾಜಾಲವಾಗಿ ಹಾಡುವುದನ್ನು ಕೇಳಿ ಬಹಳವಾಗಿ ಸಂತೋಷಪಟ್ಟು ಆತನಿಗೆ ಭಗವಂತನು ದೀರ್ಘಾಯುರಾರೋಗ್ಯವನ್ನೂ ಪೂರ್ಣಪಾಂಡಿತ್ಯವನ್ನೂ ಕೊಡಲೆಂದು ಕೋರಿದರು. ಬಂದಿದ್ದ ಸಭಿಕರೆಲ್ಲರೂ ಮ॥ ವೀರಭದ್ರಪ್ಪನವರಿಂದ ಯಥೋಚಿತವಾಗಿ ಸತ್ಕರಿಸಲ್ಪಟ್ಟು ನೂತನ ದಂಪತಿಗಳಿಗೆ ಆಯುರಾರೋಗ್ಯಾಭಿವೃದ್ಧಿರಸ್ತು ಎಂದು ಹರಸಿ ತೆರಳಿದರು. ಮ॥ ವೀರಭದ್ರಪ್ಪನವರ ಆತಿಥಿ ಸತ್ಕಾರವೂ ವಿತರಣೆಯೂ ಔದಾರ್ಯವೂ ಶ್ಲಾಘ್ಯವಾಗಿದ್ದುವು.

ಓರ್ವ ಉತ್ಸವಭಾಗಿ.

ಶಿವಮೊಗ್ಗಾ ಜಿಲ್ಲಾ, ತೀರ್ಥಹಳ್ಳಿ ತಾಲ್ಲೂಕು ಆರಗದ ಪ್ರಭುದೇವರ ಮಠದಲ್ಲಿ ಇದೇ ರಕ್ತಾಕ್ಷಿ ಸಂ॥ ವೈಶಾಖ ಬ॥ ೫ ಶುಕ್ರವಾರ ಮಧ್ಯಾಹ್ನ 2 ಗಂಟೆ ಶುಭಲಗ್ನದಲ್ಲಿ ಬಳ್ಳಾರಿ ಜಿಲ್ಲಾ ಹರಪನಹಳ್ಳಿ ಗ್ರಾಮದ ತೆಲಗಿ ಹರಪನಹಳ್ಳಿ ಮಠದ ಬ್ರ॥ ಶ್ರೀ ಸಿದ್ಧಾಂತಿ ಹೊಳೆ ಬಸವಶಾಸ್ತ್ರಿಗಳವರ ಸುಪುತ್ರ ಚಿ॥ ಷಡಕ್ಷರಪ್ಪಯ್ಯ ಎಂ. ಎ. ಯವರಿಗೆ ಆರಗದ ಪ್ರಭುದೇವರ ಮಠದ ಮ॥ ವೇ॥ ಪರ್ವತಪ್ಪಯ್ಯನವರ ಸುಪುತ್ರಿ ಚಿ॥ ಸೌ॥ ಗಂಗಮ್ಮನನ್ನು ಕೊಟ್ಟು ಅತ್ಯಂತ ವೈಭವದೊಡನೆ ವಿವಾಹಕಾರ್ಯವು ದಾವಣಗೇರಿ ತಾಲ್ಲೂಕು ಕಂಚಿನಹಳ್ಳಿ ಮಠದ ವೇ॥ ಗಂಗಾಧರಶಾಸ್ತ್ರಿಗಳಿಂದ ವಿಧ್ಯುಕ್ತಪ್ರಕಾರ ಸಾಂಗವಾಗಿ ನೆರವೇರಲ್ಪಟ್ಟಿತು. ಈ ವಿವಾಹ ಮಂಗಲಕಾರ್ಯಕ್ಕೆ ಪ್ರಣವಸ್ವರೂಪಿಗಳಾದ ಶ್ರೀ ಹಾಲಸ್ವಾಮಿಗಳವರು ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರವರು ಮೊದಲಾದ ಅನೇಕ ದೊಡ್ಡ ಮನುಷ್ಯರೂ, ಹೊಳಲ್ಕೆರೆ, ಬೀರೂರು, ಮುಂತಾದ ಕಡೆಯಿಂದ ಬಂಧುವರ್ಗದವರೂ, ಶಿವಮೊಗ್ಗಾದಿಂದ ಮ॥ ರಾ॥ ಎ.ಪಿ. ಹಾಲಪ್ಪನವರು, ಬಿ.ಎ., ಹರಪನಹಳ್ಳಿ ನೆಲ್ಕುದರಿ ಬಿನ್ ರಂಗಣ್ಣನವರ ಶ್ರೀಮಂತ ಗುರುಬಸಪ್ಪ ಬಿ. ಎ., ಯವರು ಇನ್ನು ಅನೇಕ ಸ್ಥಳ ಪರಸ್ಥಳದ ದೊಡ್ಡಮನುಷ್ಯರುಗಳೂ ಆಗಮಿಸಿದ್ದರು. ಮರುದಿವಸ ಮೇಲ್ಕಂಡ ಷಡಕ್ಷರಪ್ಪಯ್ಯನವರು ಎಂ.ಎ. ಪರೀಕ್ಷೆಯಲ್ಲಿ ಪಾಸಾದರೆಂದು ಮದ್ರಾಸಿನಿಂದ ಅತ್ಯಂತ ಶುಭವಾರ್ತೆಯು ಬಂದಿದ್ದರಿಂದಲೂ ಇವರ ಖಾಸಾ ತಮ್ಮಂದಿರಾದ ಸದಾಶಿವಯ್ಯನವರು ಲಿಟರೇಚರ್ ಎಂ. ಎ. ಪರೀಕ್ಷೆಯೊಳು ಉತ್ತಮತರಗತಿಯಲ್ಲಿ ಪಾಸಾದರೆಂಬ ವಾರ್ತೆಯು ಇವರ ಚಿಕ್ಕನವರ ಪುತ್ರರಾದ ಪಂಚಾಕ್ಷರೈಯ್ಯನವರು ಎಫ್. ಎ. ಪರೀಕ್ಷೆಯಲ್ಲಿ ಪಾಸಾದರೆಂಬ ಶುಭವಾರ್ತೆಗಳು ಬಂದದ್ದನ್ನು ಬಂಧುವರ್ಗದವರೂ ಪುರಜನರೂ ಕೇಳಿ ಪರಮಾನಂದಭರಿತರಾದರು. ಮರುದಿವಸ ವಿವಾಹಮಂಟಪದಲ್ಲಿ ಮೇಲ್ಕಂಡ ಗಂಗಾಧರಶಾಸ್ತ್ರಿಗಳಿಂದ ಶಿವಕಥಾ ಕಾಲಕ್ಷೇಪವು ಬಹುಯಿಂಪಾಗಿ ಜರುಗಿತು. ನಂತರ ಮೇಲ್ಕಂಡ ಸದಾಶಿವಯ್ಯ ಎಂ. ಎ. ಯವರು ಸ್ತ್ರೀಧರ್ಮ, ಪಾತಿವ್ರತ್ಯ ವಿಷಯದಲ್ಲಿ ಸರಸವಾಗಿ ಭಾಷಣಮಾಡಿದರು. ಈ ವಿವಾಹಸಮಾರಂಭದಲ್ಲಿ ಸದರಿ ಪ್ರಭುದೇವರ ಮಠದ ಯಜಮಾನರಾದ ಮಾದಮ್ಮನವರೂ, ಅವರ ಚಿ॥ ಮುರಿಗೆಯ್ಯನವರೂ ಒಳ್ಳೆಉದಾರಮನಸ್ಸಿನಿಂದ 4-5 ಸಾವಿರ ಜನಗಳಿಗೆ ಮೃಷ್ಟಾನ್ನಭೋಜನದಿಂದ ತೃಪ್ತಿಪಡಿಸಿ ಕಾರ್ಯಭಾಗವನ್ನು ಯಾವ ನ್ಯೂನತೆ ಇಲ್ಲದೆ ನೆರವೇರಿಸಿ ಕೀರ್ತಿಭಾಜನರಾದರು. ಮಾದಮ್ಮನವರು ತಮ್ಮ ಅಳಿಯಂದರಾದ ಷಡಕ್ಷರಪ್ಪಯ್ಯನವರನ್ನು 3ನೇ ವರುಷದ ಪರೀಕ್ಷೆಯಲ್ಲಿ ಅಭ್ಯಾಸಮಾಡಿಸಿ ಬಿ. ಎ. ಪರೀಕ್ಷೆಯನ್ನು ಪಾಸುಮಾಡಿಸಿ ಕೀರ್ತಿವಂತರಾದರು. ಮುಂದೆ ಎಂ. ಎ. ಬಿ. ಎಲ್. ಪರೀಕ್ಷೆಯನ್ನು ಪಾಸುಮಾಡಿಸುವದಕ್ಕೆ ಹಿಡಿದಷ್ಟು ದ್ರವ್ಯ ಸಹಾಯಮಾಡುವದಕ್ಕೆ ಒಪ್ಪಿಕೊಂಡರು. ಇವರ ಉದಾರತ್ವಕ್ಕೆ ಎಷ್ಟು ಸಂತೋಷಪಟ್ಟರೂ ತೀರದು. ಈ ವಿವಾಹಕಾರ್ಯದಲ್ಲಿ ನಮ್ಮ ವೀರಶೈವ ಸಮಾಜಕ್ಕೆ ತನುಮನ ಧನವನ್ನು ಸೂರೆಮಾಡಿ ಆಚಂದ್ರಾರ್ಕ ಪರ್ಯಂತರ ಕೀರ್ತಿಹೊಂದಿದ, ಮೈಸೂರು ಕೈ॥ ಯಜಮಾನ್ ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ 2 ರೂಪಾಯಿಗಳನ್ನು ಸ್ಟಾರ್ ಪತ್ರಿಕಾಕರ್ತರಿಗೆ ಮನಿಆರ್ಡರ ಮೂಲಕ ರವಾನಿಸಿರುತ್ತೆ.

ಪ್ರತ್ಯಕ್ಷದರ್ಶಿ.

ನೈಜಾಂವೀರಶೈವ ಶಂಕರಸಂಸ್ಕೃತ ಕಾಲೇಜಸ್ಥಾಪನಾ ಯಾದಗಿರಿ.

ನಮ್ಮ ವೀರಶೈವ ಜನಾಂಗದ ಅವನತೆಯನ್ನು ನೋಡಿದರೆ ಕೇವಲ ಧರ್ಮಾಭಾವದಿಂದಲೆಂಬುವದು ಸಿದ್ಧವಾಗುವದು. ಯಾಕೆಂದರೆ, ಧರ್ಮೋವಿಶ್ವಸ್ಯಜಗತಃಪ್ರತಿಷ್ಠಾ । ಲೋಕೇಧರ್ಮಿಷ್ಠಂಪ್ರಜಾಉಪಸರ್ಪಂತಿ ॥ ಧರ್ಮೇಣಪಾಪಮಪನುದತಿ । ತಸ್ಮಾದ್ಧರ್ಮಂಪರಮಂವದಂತಿ ॥ ಎಂಬುಕ್ತಿಯಂತೆ ಧರ್ಮವೇ ಜಗದುತ್ಪತ್ತಿಗೆ ಮೂಲಕಾರಣವಾಯಿತೆಂತಲೂ ಲೋಕದಲ್ಲಿ ಸರ್ವರೂ ಧರ್ಮಿಷ್ಠರನ್ನೇ ಆಶ್ರೈಸುವರೆಂತಲೂ ಅಂಥಾ ಧರ್ಮವೇ ಸರ್ವಪಾಪಗಳನ್ನು ನಾಶಮಾಡುವದೆಂತಲೂ ಅನೇಕಾರ್ಯೋಕ್ತಿಗಳಿಂದ ಸಿದ್ಧವಾಗುವದು. ಯಾವ ದೇಶದಲ್ಲಿ ಜನರು ದುಸ್ಸಂಗತಿಯಿಂದ ಧರ್ಮವನ್ನು ನಿರ್ಲಕ್ಷ್ಯಮಾಡುವರೋ ಆ ದೇಶದಲ್ಲಿ ಹಿಂಸೆ, ಅಸತ್ಯ, ನಾಸ್ತಿಕ್ಯ, ಚೋರತನ, ನಿರ್ದಯ ಅನಾಚಾರ, ಘಾತಕತನ, ಇವೇ ಮೊದಲಾದವುಗಳು ಹೆಚ್ಚಾಗಿ ದೇಶವೇ ಕಡೆಗೆ ದುಃಖಕ್ಕೀಡಾಗುವದು. ಆದ್ದರಿಂದ ಇಂಥಾ ವಿಪತ್ತುಗಳನ್ನು ಹೋಗಲಾಡಿಸುವದಕ್ಕಾಗಿಯೇ ವೇದಾಗಮೋಪನಿಷತ್ತುಗಳೂ ಪುರಾಣಾದಿಗಳೂ ನಮ್ಮ ಕಡೆಗೆ ತಿಂಗಿರೆಂದು ನಿರೀಕ್ಷಿಸುತ್ತಿರುವವು. ಆದರೆ ವೇದಾದಿಗಳಾದರೂ ಕೇವಲ ಸಂಸ್ಕೃತ ಮಯವಾಗಿರುವದರಿಂದಲೂ ಸಾಮಾನ್ಯ ಜನರಿಗೆ ಬೋಧವಾಗದೆ ಇದ್ದದ್ದರಿಂದಲೂ ಅವಿದ್ಯೆಯೆಂಬ ರೋಗದಿಂದ ಧರ್ಮಕ್ಕೆ ಮಹತ್ತರವಾದ ಕ್ಷಯರೋಗವು ಪ್ರಾಪ್ತವಾದದ್ದು ಜನಜನಿತವಾಗಿರುವದು. ಅಂದಮೇಲೆ ಧರ್ಮಸಾಧನೆಗೆ ಸಂಸ್ಕೃತಭಾಷಾಜ್ಞಾನವೇ ಮುಖ್ಯ ಕಾರಣವಾದಂತಾಯಿತು. ಈ ತತ್ವವನ್ನರಿತ ಕೆಲವು ಮತಾಭಿಮಾನಿಗಳು ಪಾಠಶಾಲೆಗಳನ್ನು ಸ್ಥಾಪಿಸಿಕೊಂಡಿರುವಷ್ಟರಲ್ಲಿ ಗ್ರಾಮದೊಳಗಣ ಕಂಟಕರು ಹಣಕೊಡಲಾರದೆ ತಮ್ಮ ತಮ್ಮೊಳಗಿನ ಕಲಹಗಳನ್ನು ಪಾಠಶಾಲೆಗಳಮೇಲೆ ಹಾಕಿ ಸ್ವಲ್ಪ ದಿವಸಗಳಲ್ಲಿಯೇ ನಿರ್ನಾಮಮಾಡುವ ಎಷ್ಟೋ ಜನ ವೀರಶೈವರೂ ಹಲವು ಪಾಠಶಾಲೆಗಳೂ ಕೂಡಾ ಅಲ್ಲಲ್ಲಿಗೆ ದೃಷ್ಟಿಗೆ ಬೀಳಬಹುದು. ಸ್ಥಿರಸ್ಥಾಯಿಫಂಡಿಲ್ಲದೆ ಹೀಗೆ ಮಾಡುವದರಿಂದ ಫಲವಾಗದೆ ದ್ರವ್ಯವ್ಯಯವು ಮಾತ್ರ ಆಗುತ್ತಿರುವದನ್ನು ನೋಡಿದರೆ ಮತಾಭಿಮಾನಿಗಳಿಗೆ ಖೇದವೆನಿಸದಿರಲಾರದು. ಧಾರ್ಮಿಕಾಭಿವೃದ್ಧಿಯ ಕಾರ್ಯಕ್ಕೆ ಇಂಥ ವಿಪತ್ತುಗಳು ಬಂದೊದಗುವ ಸಮಯದಲ್ಲಿ ಆ ಜಗಜ್ಜಾಲಕನೇ ಮಾನವರೂಪದಿಂದ ಅವತರಿಸಿ ಜಗದುದ್ಧಾರವನ್ನು ಮಾಡುವನೆಂಬ ಪ್ರಮಾಣದಂತೆ ಸೃಷ್ಟಿಯ ಆದಿಯಿಂದಲೂ ಪರಂಪರೆಯಾಗಿ ಬಂದಿರುವ ಜಗದೀಶನ ಕೈಂಕರ್ಯಕ್ಕೆ ಬದ್ಧರಾದ ಎಷ್ಟೋ ಜನ ಮಹನೀಯರು ಅದ್ಭುತಾಮೂರ್ತ್ಯವನ್ನು ತೋರಿಸಿ ಅಸ್ತರಾಗಿರುವರು, ಮತ್ತು ಉದಯವಾಗುತ್ತಲಿರುವರು. ಇಂಥಾ ಸಮರ್ಥರ ಮಾಲೆಯಲ್ಲಿ ಸೇರಿಸಲು ಯೋಗ್ಯರಾದ ಉದ್ಧಾರಕರು ನಮ್ಮ ನೈಜಾಮಿರಾಷ್ಟ್ರದಲ್ಲಿ ಉದಯಿಸಿರುವರೆಂದು ತಿಳಿಸಲು ಪ್ರತಿಯೊಬ್ಬ ಮತಾಭಿಮಾನಿಗೂ ಆನಂದೋತ್ಸಾಹಗಳು ಆಗದಿರವು. ಆ ಉದ್ಧಾರಕರ ನಾಮವನ್ನು ತಿಳಿಯಲು ಸಂಭ್ರಮಿಸುತ್ತಿರುವ ವಾಚಕರೇ! ನೈಜಾಮ ಇಲಾಖೆಯಲ್ಲಿ [illegible] ಧರ್ಮಾಧಿಕಾರಿ

ನೋಡಿರಿ. ಜಿಲ್ಲಾ ಗುಲ್ಬರ್ಗಾ ತಾಲ್ಲೂಕ ಯಾದಗಿರಿ ನಿವಾಸಿಗಳಾದ ಮ|| ರಾ|| ಸಜ್ಜನಶೆಟ್ಟಿ ಶಂಕ್ರಣ್ಣನವರು ಮತ್ತು ಇವರ ಧರ್ಮಪತ್ನಿಯವರಾದ ಗಂಗಮ್ಮನವರು ಈ ಉಭಯದಂಪತಿಗಳು ಸ್ವಾರ್ಥತ್ಯಾಗಬುದ್ಧಿಯಿಂದಲೂ ಸ್ವಧರ್ಮೋದ್ಧಾರದ ತಳಮಳಿಯಿಂದಲೂ ಶುದ್ಧವಾದ ಮನಸ್ಸಿನಿಂದಲೂ ನಮಗೆ ಸಂತತಿಯು ಇಲ್ಲದಿದ್ದರೂ ನಾವು ದಾನಮಾಡುವ ಹಣದಿಂದ ಓದುವ ವಿದ್ಯಾರ್ಥಿಗಳೇ ನಮ್ಮ ಮಕ್ಕಳೆಂಬ ಶ್ರೇಷ್ಠತರವಾದ ಭಾವನೆಯಿಂದಲೂ ಇದೆ ಮೈ|| ಕೃ|| ೫ ಶುಕ್ರವಾರ ದಿವಸ ಕೋಡಗಲ್ಲು ಮ|| ವಿರೂಪಾಕ್ಷಪ್ಪನವರ ಅಧ್ಯಕ್ಷತೆಯಿಂದ ನಡೆದ ಸಭೆಯಲ್ಲಿ ಸದರಿ ದಂಪತಿಗಳು ಸಂಸ್ಕೃತಭಾಷಾಭಿವೃದ್ಧಿಗೋಸ್ಕರ ಒಂದು ಲಕ್ಷ ರೂಪಾಯಿಗಳನ್ನು ಮುಖಂದರ ಸ್ವಾಧೀನಮಾಡಿದರು. ಒಡನೆಯೇ ಮ|| ರಾ|| ಶಂಕ್ರಣ್ಣನವರನ್ನು ಉಚ್ಚಾಸನದಮೇಲೆ ಕುಳ್ಳಿಸಿರಿ ಹೈದ್ರಾಬಾದು ಹೈಕೋರ್ಟು ವಕೀಲ ಬಾಪೂರಾವ ಸಾಹೇಬರು ಶ್ರೇಯಃಪ್ರಾರ್ಥನೆಯೊಡನೆ ಪುಷ್ಪಮಾಲೆಯನ್ನು ಹಾಕುವ ಸಮಯದಲ್ಲಿ ಈ ಮಹನೀಯರ ಔದಾರ್ಯವನ್ನು ಕಂಡು ಸಭಿಕರೆಲ್ಲರೂ ಪುಷ್ಪವೃಷ್ಟಿಯಿಂದಲೂ ಕೈಚಪ್ಪಾಳಿಯಿಂದಲೂ ತಮ್ಮ ಆನಂದೋದ್ಗಾರಗಳನ್ನು ಪ್ರದರ್ಶಿಸುತ್ತಿದ್ದರು. ಅಹೋರಾತ್ರಿ ಕನ್ನಡನಾಡಿನಲ್ಲಿ ಸಂಸ್ಕೃತ ಕಾಲೇಜನ್ನು ಸ್ಥಾಪಿಸಲು ಚಿಂತಿಸುತ್ತಿದ್ದ ಕರ್ನಾಟಕಮಾತೆಯು ಕಾಲಕ್ಕನುಗುಣನಾದ ಸುಪುತ್ರನು ಜನಿಸಿದ್ದರಿಂದ, ಆನಂದಪರವಶಳಾಗಿ ಪ್ರತಿಯೊಬ್ಬ ವೀರಶೈವನ ಮುಖದಲ್ಲಿ ವಾಣಿಯರೂಪದಿಂದ ನರ್ತನಮಾಡುತ್ತಿರುವಳೋ ಎಂಬಂತೆ ಭಾಸವಾಗುತ್ತಿತ್ತು. ಸದರಿ ಕಾಲೇಜಿಗೆ ಸರ್ವಾನುಮತದಿಂದ ಪಾಸಾದಮೇರಿಗೆ ನೈಜಾಂ ವೀರಶೈವ ಶಂಕರಸಂಸ್ಕೃತ ಕಾಲೇಜ ಎಂಬದಾಗಿ ನಾಮಕರಣಮಾಡಲ್ಪಟ್ಟಿತು. ನಮ್ಮ ಸಮಾಜದಲ್ಲಿ ಆಗಿಹೋದ ಮತ್ತು ಈಗಿರುವ ಮಹನೀಯರು ರಾಜಕೀಯವಿದೆಗೆ ಹೆಚ್ಚಿನ ಪ್ರೋತ್ಸಾಹಕೊಟ್ಟಿರುವರೇ ವಿನಃ ಸಂಸ್ಕೃತ ಭಾಷೆಯನ್ನು ಯಡಗಣ್ಣಿನಿಂದಲೂ ನೋಡುತ್ತಿಲ್ಲವೆಂಬುವದಕ್ಕೆ ಈಗಿನ ಸಂಸ್ಕೃತ ಭಾಷೆಯು ಅವನತಿಸ್ಥಿತಿಯೇ ನಿದರ್ಶನವಾಗಿರುವುದು. ಈಗ್ಲಾನಿಯನ್ನು ದೂರಮಾಡಲು ಶಂಕರಣ್ಣನವರು ಮಾಡಿದ ಅಸಾಧಾರಣವಾದ ದಾನವು, ನಮ್ಮ ಸಮಾಜವನ್ನೇ ವಿಕಾಸಗೊಳಿಸಿತೆಂದು ಕೈಯುತ್ತ ಹೇಳಬಹುದು. ಇದೇ ವಿದ್ಯಾದಾನದ ವಿಷಯದಲ್ಲಿ ಅಧ್ಯಕ್ಷರ ಭಾಷಣವಾದ ನಂತರ ಹೈದ್ರಾಬಾದು ಹೈಕೋರ್ಟು ವಕೀಲ ಬಾಪೂರಾವ ಸಾಹೇಬರು ಧರ್ಮಸುಧಾರಣಾ ವಿಷಯದಲ್ಲಿ ಹೃದಯಂಗಮವಾಗುವಂತೆ ಮಾತನಾಡಿದರು. ವೇ|| ಯಲೇರಿ ಬಸವರಾಜಶಾಸ್ತ್ರಿಗಳು ಇದೇ ವಿಷಯವನ್ನೇ ಪುಷ್ಟೀಕರಿಸಿ ಸಮಯೋಚಿತ ಭಾಷಣಮಾಡಿದ ಮೇಲೆ ವೇ|| ಶಿವನಯ್ಯಶಾಸ್ತ್ರಿಗಳು ವಿದ್ಯೆಯ ಅವಶ್ಯಕತೆಯನ್ನು ಹೇಳಿದರಲ್ಲದೆ ಎನ್. ರುದ್ರಪ್ಪ ವಕೀಲ ಹೈಕೋರ್ಟು ಯಾದಗಿರಿ ಇವರು ಶಂಕರಣ್ಣನವರು ಬರೆದುಕೊಟ್ಟ ದಾನಪತ್ರಿಕೆಯನ್ನು ಓದಿ ಹೇಳಿದರು. ಅದರ ಸಾರಾಂಶವನ್ನು ಕೆಳಗಡೆಯಲ್ಲಿ ಮುದ್ರಿಸಿದೆ. ಮ|| ಬಾಪೂರಾವ್ ಸಾಹೇಬರ ಸೂಚನೆಯ ಮೇರಿಗೆ ಮುಂದೆ ಕಂಡ ವ್ಯವಸ್ಥಾಪಕರು ಚುನಾಯಿಸಲ್ಪಟ್ಟರು:— 1. ಶ್ರೀಮನ್ನಿರಂಜನ ಶಾಂತವೀರಸ್ವಾಮಿಗಳು ಗುರುಮಠಕಲ್ಲಗಳವರು 2. ಶ್ರೀಮಂತ ಪಂಡಿತ ಬಾಪೂರಾವ್ ಸಾ|| ವಕೀಲ ಹೈಕೋರ್ಟು ಹೈದರಾಬಾದು 3. ಶ್ರೀಯುತ ಎನ್. ರುದ್ರಪ್ಪ ವಕೀಲ ಹೈಕೋರ್ಟು ಯಾದಗಿರಿ 4. ಶ್ರೀಯುತ ಮ|| ರಾ|| ಫಕೀರಪ್ಪ ಶೃಂಗೇರಿ ಯಾದಗಿರಿ 5. ಕೋನಪ್ಪ ಲಿಂಗೇರಿ ಯಾದಗಿರಿ 6. ಶರಣಪ್ಪ ರೊಟ್ಟಿಡಗಿ ಯಾದಗಿರಿ 7. ಚನ್ನಬಸವಪ್ಪ ಓಂಡೇಕಾರ ಯಾದಗಿರಿ 8. ವೀರನಗೌಡ ಬಿ|| ಪಾ|| ಯಾದಗಿರಿ 9. ಶರಮಣ್ಣ ಸಾ|| ಕಾನಾಗಡ್ಡಿ 10. ಹಂಪಣ್ಣ ವಂಕಸಮುದ್ರ ಯಾದಗಿರಿ 11. ವೀರಣ್ಣನವರು ಸಜ್ಜನಶೆಟ್ಟಿ ಪೆದ್ದೇಮಲ 12. ಶಂಕರಣ್ಣ ಸಜ್ಜನಶೆಟ್ಟಿ ಯಾದಗಿರಿ ಈ ರೀತಿಯಾಗಿ ನೇಮಿಸಲ್ಪಟ್ಟ ನಂತರ ಗಂಧಪುಷ್ಪ ತಾಂಬೂಲಾದಿಗಳನ್ನು ಹಂಚಿ ಪಾರ್ವತೀಪತಿಯ ಮಂಗಲದೊಡನೆಯೂ ನಮ್ಮ ಸಾರ್ವಭೌಮ ಚಕ್ರವರ್ತಿಗಳವರ ಮತ್ತು ಉಸ್ಮಾನ್ಪಾದಶಹರವರ ಶ್ರೇಯಃಪ್ರಾರ್ಥನೆಯೊಡನೆಯೂ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ದಾನಪತ್ರ.

ನಾನು ಶಂಕ್ರಣ್ಣ ಮ|| ಹಂಪಣ್ಣ ಸಜ್ಜನಶೆಟ್ಟಿ ಸಾ|| ಯಾದಗಿರಿ ಈ ದಿವಸ ತಾ|| 18 ಮಾಹೆಶೀರ ಸನ್ 1333 ಫಸಲಿ ಅಂದರೆ ತಾ|| 23-5-24 ರೋಜ ಶುಕ್ರವಾರ ಬರಸಿಕೊಡುವ ದಾನಪತ್ರಿಕೆ ಏನಂದರೆ—

1. ನನ್ನ ಸ್ವಂತ ಅರ್ಜಿತವಾದ ನನ್ನ ಸ್ವಾಧೀನದಲ್ಲಿರುವ ಆಸ್ತಿಯಲ್ಲಿ ಒಂದು ಲಕ್ಷ(100000) ರೂ. ಗಳು ಮತ್ತು ಮುಂದೆ ಬರತಕ್ಕ ಲಾಭಸಹಿತ ವಿವರಿಸುವ ಪ್ರಕಾರ ಆಸ್ತಿಯನ್ನು ನನಗೆ ಸ್ವರ್ಗಸುಖಉಂಟಾಗಲೋಸುಗ ಮತ್ತು ನನ್ನ ಸಮಾಜದವರು ಧಾರ್ಮಿಕ ವಿದ್ಯೆಯಲ್ಲಿ ಉತ್ತೇಜನ ಹೊಂದಲೋಸುಗ ವೀರಶೈವ ಬಡವಿದ್ಯಾರ್ಥಿಗಳಿಗೋಸ್ಕರ ವೀರಶೈವ ಸಂಸ್ಕೃತ ಕಾಲೇಜ ಸ್ಥಾಪನೆಗಾಗಿ ಕೆಳಗೆ ವಿವರಿಸುವ ವ್ಯವಸ್ಥಾಪಕರ ಸ್ವಾಧೀನ ಮಾಡಿರುತ್ತೇನೆ.

2. ನಾನಲ್ಲದೆ ಮತ್ತೂ 11 ಜನ ವ್ಯವಸ್ಥಾಪಕರ ವಿವರವು.— 1 ಶ್ರೀಮನ್ನಿರಂಜನ ಶಾಂತವೀರಸ್ವಾಮಿ ಗುರುಮಠಕಲ್‌ಗಳವರು 2 ಶ್ರೀಮಂತ ಪಂಡಿತ ಬಾಪೂರಾವಜಿ ಸಾ|| ವಕೀಲ ಹಾಯಕೋರ್ಟು ಹೈದ್ರಾಬಾದ್, 3 ಶ್ರೀಯುತ ಎನ್. ರುದ್ರಪ್ಪ ವಕೀಲ ಹಾಯಕೋರ್ಟು ಯಾದಗಿರಿ, 4 ಮ|| ಫಕೀರಪ್ಪ ಶೃಂಗೇರಿ ಯಾದಗಿರಿ, 5 ಮ|| ಕೋನಪ್ಪ ಲಿಂಗೇರಿ ಯಾದಗಿರಿ, 6 ಮ|| ಶರಣಪ್ಪ ರೊಟ್ಟಿಡಗಿ ಯಾದಗಿರಿ, 7 ಮ|| ಚನ್ನಬಸವಪ್ಪ ಹುಂಡೇಕಾರ ಯಾದಗಿರಿ, 8 ಮ|| ವೀರನಗೌಡ ಬಿ. ಪಾ|| ಯಾದಗಿರಿ, 9 ಮ|| ಪರಮಣ್ಣ ಸಾ|| ಕಾನಾಗಡ್ಡಿ, 10 ಮ|| ವೀರಣ್ಣನವರು ಸಜ್ಜನಶೆಟ್ಟಿ ಪೆದ್ದೇಮಲ, 11 ಹಂಪಣ್ಣ ವಂಕಸಮುದ್ರ ಯಾದಗಿರಿ.

3. ಸದರಿ ವ್ಯವಸ್ಥಾಪಕರು ಲೈಫ್ ಮೆಂಬರರೆಂಬದಾಗಿ ತಿಳಿಯಲ್ಪಡಬೇಕು. ಅವರು ಸದರಿ ಧರ್ಮಕಾರ್ಯವನ್ನು ನಡಿಯಿಸಲೋಸುಗ ಯೋಗ್ಯವಾದ ನೇಮಗಳನ್ನು ರಚಿಸಿಕೊಂಡು ಅವುಗಳಂತೆ ಈ ಧರ್ಮಕಾರ್ಯಕ್ರಮವನ್ನು ನಡೆಸಬೇಕು. ನೇಮಗಳು ಮೇಲೆ ಕಾಣಿಸಿರುವ ನನ್ನ ಮುಖ್ಯ ಸಂಕಲ್ಪದ ವಿರುದ್ಧ ಇರಕೂಡದು.

4. ಸದರಿ ವ್ಯವಸ್ಥಾಪಕರಲ್ಲಿ ನಾನು ಶ್ರೀಮನ್ನಿರಂಜನ ಶಾಂತವೀರಸ್ವಾಮಿಗಳವರನ್ನು ಪ್ರಸಿಡೆಂಟರನ್ನಾಗಿ ನೇಮಿಸಿರುತ್ತೇನೆ. ಬಹುಮತಾನುಸಾರ ಕಾರ್ಯಕ್ರಮವನ್ನು ಜರಗಿಸಬೇಕು. ನನ್ನ ಪಶ್ಚಾತ್ ನನ್ನ ತಮ್ಮ ಚನ್ನಪ್ಪ ಈತನನ್ನು ನನ್ನ ಸ್ಥಳದಲ್ಲಿ ಲೈಫ್ ಮೆಂಬರರೆಂಬದಾಗಿ ನೇಮಿಸಿಕೊಳ್ಳಬೇಕು.

5. ವ್ಯವಸ್ಥಾಪಕರಲ್ಲಿ ಯಾರಾದರೂ ಯಾವ ಕಾರಣದಿಂದಾದರೂ ವ್ಯವಸ್ಥೆಯ ಕೆಲಸದಿಂದ ನಿವೃತ್ತರಾದರೆ ಉಳಿದ ವ್ಯವಸ್ಥಾಪಕರು ಅವರ ಸ್ಥಳದಲ್ಲಿ ತಾವು ಒಪ್ಪುವ ಬೇರೊಬ್ಬ ಯೋಗ್ಯ ವೀರಶೈವರಾದವರನ್ನು ನೇಮಿಸಿಕೊಳ್ಳಬೇಕು. ಅವರನ್ನಾದರೂ ಲೈಫ್ ಮೆಂಬರರೆಂಬದಾಗಿ ತಿಳಿಯಬೇಕು.

6. ದಾನವಾಗಿ ಕೊಟ್ಟಿರುವ ಆಸ್ತಿಯ ವಿವರವು—18300 ರೂ. ಕಲ್ಬುರಗಿಯ ಪ್ರೇಸ್‌ಪ್ಯಾಕ್ಟರಿ ಮತ್ತು ಜಿನ್ ಅಂಡ್‌ಪ್ರೇಸ್‌ಪ್ಯಾಕ್ಟರಿಯಲ್ಲಿರತಕ್ಕ ಶೇರುಗಳು 12 ಮತ್ತು ಮುಂದೆಬರುವ ಮುನಾಫಾಸಹಿತ. 20000 ರೂ. ಗಳ ಬೆಲೆಬಾಳುವ ರಾಯಲಿ ಕಂಪನಿಯವರಿಗೆ ಮತ್ತು ಬ್ರಿಟಿಷ್ ಪೋಸ್ಟಿನವರಿಗೆ ಬಾಡಿಗೆಯಿಂದ ಕೊಟ್ಟಿರುವ ಬಿಲ್ಡಿಂಗ್ ಮತ್ತು ಗೋದಾಮು ಮತ್ತು ಅವಕ್ಕೆ ಸಂಬಂಧಿಸಿದ ಸ್ಥಳ ಹಾಗು ಮುಂದೆಬರುವ ಬಾಡಿಗೆ ಸಹಿತ. 10000 ರೂ. ಗಳ ಬೆಲೆಬಾಳುವ ಸದರಿ ಬಿಲ್ಡಿಂಗ್ ಮತ್ತು ಗೋದಾಮಿನ ಹಿಂದೆ ಹೊಸದಾಗಿ ಕಟ್ಟಿಸಿರುವ ಬಿಲ್ಡಿಂಗು ಮತ್ತು ಅದಕ್ಕೆ ಸಂಬಂಧಪಟ್ಟ ಸ್ಥಳ. 8000 ರೂ. ಗಳು ಸರಕಾರಿ ಆಲಯ ಪ್ರಾಮಿಸರಿ ನೋಟುಗಳು ಮತ್ತು ಮುಂದೆಬರುವ ಬಡ್ಡಿಯು. 2500 ರೂ. ಕಲ್ಬುರಗಳ ವಾರಲೋನ ನೋಟುಗಳು. 31556 ರೂ. ಗಳು ನಗದು ಸೇರಿ 95356 ರೂ. ಗಳು ಮತ್ತು 4644 ರೂ. ಕಲ್ಬುರಗ ಬಟಾವನ್ ದರ, ಶೇ|| 18 ರೂ. ಪ್ರಕಾರ ಹಾಲಿ 100000 ರೂ. ಜುಮ್ಲಾ ದಾನಕೊಟ್ಟಿರುವ ಆಸ್ತಿಯು.

7. ಇನ್ನು ಮೇಲೆ ಸದರಿ ಸ್ವತ್ತಿನ ಲಾಭದಿಂದ ಸದರಿ ಕಾಲೇಜಿನ ದಿವ್ಯವ್ಯವಸ್ಥಾ ಮಾಡಬೇಕು, ಲಾಭದ ವ್ಯವಸ್ಥಾ ಯಾವರೀತಿಯಿಂದ ಮಾಡಬೇಕು, ಮತ್ತು ಕಾಲೇಜಿನ ವ್ಯವಸ್ಥಾ ಯಾವರೀತಿಯಿಂದ ಮಾಡಬೇಕು ಎಂಬಿವೇ ಮೊದಲಾದ ವಿಷಯಗಳನ್ನು ನಿರ್ಧರಿಸಿ ಕೆಲಸ ನಡೆಸಲು ಸದರಿ ವ್ಯವಸ್ಥಾಪಕರು ಸ್ವತಂತ್ರರಿರುತ್ತಾರೆ. ವ್ಯವಸ್ಥಾಪಕರು ಲಾಭ ಹೆಚ್ಚಾಗುವ ಯೋಗ್ಯ ಪ್ರಯತ್ನಮಾಡಬೇಕು. ಮೂಲ ಆಸ್ತಿಯನ್ನು ಲುಕ್ಸಾನು ಆಗದಂತೆ ಕಾಪಾಡಿಕೊಂಡಿರಬೇಕು. ಮೂಲ ಆಸ್ತಿಗೆ ಲುಕ್ಸಾನು ಆಗುವ ಯಾವ ಕಾರ್ಯವನ್ನು ಮಾಡಕೂಡದು.

9. ಸದರಿ ಆಸ್ತಿಯ ಲಾಭದಲ್ಲಿ ಕಾಲೇಜಿಗೆ ಸಂಬಂಧಿಸಿದ ಖರ್ಚು ಹೋಗಲಾಗಿ ಲಾಭದ ರಕಮು ಹೆಚ್ಚಾಗಿ ಉಳಿದರೆ, ಹೆಚ್ಚಾದ ಲಾಭದ ರಕಮನ್ನು ಮೂಲ ಆಸ್ತಿಯಲ್ಲಿ ಸೇರಿಸಿ ಅದನ್ನಾದರೂ ಲಾಭದಾಯಕ ಕಾರ್ಯಗಳಲ್ಲಿ ಹಚ್ಚಬೇಕು, ಅಥವಾ ಹೆಚ್ಚಾದ ಲಾಭದ ರಕಮಿನಿಂದ ಸಮಾಜೋನ್ನತಿಯ ಮತ್ತಾವ ಕಾರ್ಯವನ್ನಾದರೂ ವ್ಯವಸ್ಥಾಪಕರು ಮಾಡಿದರೆ ಸಂತೋಷವು.

10. ಈ ಧರ್ಮ ಸಂಸ್ಥೆಯ ಹೆಸರು ನೈಜಾಂ ವೀರಶೈವ ಶಂಕರ ಸಂಸ್ಕೃತ ಕಾಲೇಜು ಎಂಬದಾಗಿ ಇಡಬೇಕು. ಇದರ ದಫ್ತರ ಯಾವಾಗ್ಯೂ ಮುಕ್ಕಾಂ ಯಾದಗಿರಿ ಜಿಲ್ಲಾ ಗುಲ್ಬರ್ಗಾದಲ್ಲಿರತಕ್ಕದ್ದು.

11. ದಾನವಾಗಿ ಕೊಟ್ಟಿರುವ ಸದರಿ ಆಸ್ತಿಯ ಪರಿವರ್ತನೆಯಿಂದ ಲಾಭವು ಹೆಚ್ಚಾಗಿ ಬರುವದಾದರೆ, ಯೋಗ್ಯರೀತಿಯಿಂದ ಪರಿವರ್ತಿಸಲು ಕೂಡಾ ವ್ಯವಸ್ಥಾಪಕರಿಗೆ ಅಧಿಕಾರವಿರುತ್ತದೆ.

12. ಈ ಧರ್ಮ ಸಂಸ್ಥೆಯಿಂದ ನೈಜಾಮಿಲಾಖೆಯ ವೀರಶೈವ ಬಡ ವಿದ್ಯಾರ್ಥಿಗಳಿಗೆ ಮುಂಚೆ ಸಹಾಯಮಾಡಬೇಕು ನಂತರ ಗುಂಜಾಷ್ ಪ್ರಕಾರ ಇತರ ಇಲಾಖೆಯ ವೀರಶೈವ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡತಕ್ಕದ್ದು. ಸ್ವಂತ ಖರ್ಚಿನಿಂದ ಅಭ್ಯಾಸಮಾಡಬೇಕೆನ್ನುವ ವೀರಶೈವ ವಿದ್ಯಾರ್ಥಿಗಳಿಗೂ ಕೂಡಾ ಅನುಕೂಲಮಾಡಬೇಕು. ವಿದ್ಯಾರ್ಥಿಗಳ ನಡತೆ ಮತ್ತು ಅಭ್ಯಾಸದ ಬಗ್ಗೆ ವ್ಯವಸ್ಥಾಪಕರು ಚೆನ್ನಾಗಿ ಲಕ್ಷ್ಯಕೊಡಬೇಕು. ಸಂಸ್ಥೆಯ ಕಾರ್ಯದ ಬಗ್ಗೆ ಒಳ್ಳೇ ಜನರನ್ನು ಯೋಗ್ಯಪಗಾರದ ಮೇಲೆ ನೇಮಿಸಿಕೊಳ್ಳಬೇಕು.

13. ಸದರಿ ಧರ್ಮಕಾರ್ಯಕ್ಕೆ ಲೋಪಬಾರದಂತೆಯೂ ಆಚಂದ್ರಾರ್ಕವಾಗಿ ನಡೆಯುವಂತೆಯೂ ವ್ಯವಸ್ಥಾಪಕರು ಸಂಸ್ಥೆಯ ಕಾರ್ಯವನ್ನು ನಡೆಸಬೇಕು.

14. ಸದರಿ ಆಸ್ತಿಯಲ್ಲಿ ಸ್ಥಿರಾಸ್ತಿಯ ಚತುಸ್ಸೀಮಾ ಕೆಳಗಿನಂತೆ ಇರುತ್ತದೆ. ಅವುಗಳನಕಾಶಗಳು ಸಹ ಇದರ ಲಗತ ಇರುತ್ತವೆ (ಅ) ಬಾಡಿಗೆಗೆ ಕೊಟ್ಟಿರುವ ಬಿಲ್ಡಿಂಗ್ ಮತ್ತು ಗೋದಾಮಿನ ಚತುಸ್ಸೀಮೆಯು. ಪೂರ್ವ ಸಗರಿ ಹಾಜಿ ಅಬ್ದುಲ್‌ಖಾದರ ಇವರ ಅಂಗಡಿ, ಪಶ್ಚಿಮ ಅಬ್ದುಲ್ ಸಾ|| ಬದಲಿ ಇವರ ಅಂಗಡಿ, ಉತ್ತರ ಸರಕಾರಿ ದೊಡ್ಡರೋಡ್, ದಕ್ಷಿಣ ಕಾಲೇಜಿನ ಸಲುವಾಗಿ ಕೊಟ್ಟಿರುವ ಬಿಲ್ಡಿಂಗು ಮತ್ತು ಸ್ಥಳ (ಬ) ಹೊಸದಾಗಿ ಕಟ್ಟಿಸಿರುವ ಬಿಲ್ಡಿಂಗು ಮತ್ತು ಅದಕ್ಕೆ ಸಂಬಂಧಿಸಿದ ಸ್ಥಳದ ಚತುಸ್ಸೀಮವು. ಪೂರ್ವ ಸರಕಾರಿ ರಸ್ತೆ ವ ಮೈದಾನ, ಪಶ್ಚಿಮ ಹಂಪಣ್ಣ ವಂಕಸಮುದ್ರ ಇವರ ದೊಡ್ಡಿ, ಉತ್ತರ (ಅ) ಪ್ರಕರಣದಲ್ಲಿ ತೋರಿಸಿದ ಬಿಲ್ಡಿಂಗು ಮತ್ತು ಗೋದಾವ್, ದಕ್ಷಿಣ ಖುಲ್ಲಾ ಜಾಗಾ ಸರಕಾರಿ.

15. ಸದರಿ ಧರ್ಮಕಾರ್ಯಕ್ಕೆ ಕೊಟ್ಟಿರುವ ಎಲ್ಲಾ ಆಸ್ತಿಯನ್ನು ನನ್ನ ಆತ್ಮ ಸಂತೋಷದಿಂದ ಕೊಟ್ಟಿರುತ್ತೇನೆ. ಇದರಲ್ಲಿ ನನ್ನ ಮತ್ತು ನನ್ನ ವಾರಸದಾರರ ಏನೂ ಹಕ್ಕು ಇರುವದಿಲ್ಲ ಹೀಗೆಂದು ನನ್ನ ಆತ್ಮ ಸಂತೋಷದಿಂದ ಮತ್ತು ಅಕ್ಕಲ್ ಹುಷಾರಿಯಿಂದ 15 ಕಲಮುಗಳಲ್ಲಿ ಬರಿಸಿಕೊಡುವ ದಾನಪತ್ರ ಸಹಿ ಫಕ್ತ ದಸ್ತೂರಿ ಬಸವರಾಜಶಾಸ್ತ್ರಿ ಯಲೇರಿ.

ಸಾಕ್ಷಿಗಳು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಚ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦ ಕ್ಕೂ ೦—೧೨—೦; ಬಿಳಿಗ್ಲೇಜ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸ ಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಕಡ್ಡಿ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿ ವಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
16 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಟಿ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ವಿಕರಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50 — 36] ಮೈಸೂರು.

೧೯೨೪ ನೆಯ ಇಸವಿ ಜೂನ್ ತಾ|| ೮ ರಿಂದ ೧೯೨೪ ನೆಯ ಇಸವಿ ಜೂನ್ ತಾ|| ೧೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಜ್ಯೇಷ್ಠ ಶುದ್ಧ ಷಷ್ಠಿಯಿಂದ ಜ್ಯೇಷ್ಠ ಶುದ್ಧ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
8	ಭಾನು	ಷಷ್ಠಿ	50-23	ಆಶ್ಲೇ	18-23	26
9	ಸೋಮ	ಸಪ್ತ	49-52	ಮಖಾ	20-0	27
10	ಮಂಗಳ	ಅಷ್ಟ	47-25	ಪುಬ್ಬ	20-20	28
11	ಬುಧ	ನವ	44-16	ಉತ್ತ	19 36	29
12	[1]ಗುರು	ದಶ	40-3	ಹಸ್ತ	17-48	30
13	[2]ಶುಕ್ರ	ಏಕಾ	35-7	ಚಿತ್ತ	15-9	31
14	[3]ಶನಿ	ದ್ವಾದ	29-32	ಸ್ವಾತಿ	11-50	1

(1) ದಶಹರದಶಮಿ. (2) ಸರ್ವತ್ರನಿರ್ಜಲೈಕಾದಶಿ, ಶ್ರೀಮನ್ಮಹಾರಾಜರವರ ವರ್ಧಂತಿ. (3) ಶನಿಪ್ರದೋಷ.

ಮೈಸೂರು: ಶ್ರೀ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M. 134.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮುಂಶೂರಪುರೀತಾರಾ ವರಮಧಿಗತರಾಜ[illegible]ಕೃಪಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋ[illegible]ಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾತೀತಯಶಃಪ್ರತಾಪವಿಪುಲಂ ಸದ್ವ[illegible]ಂ | ಪ್ರೇಮಂಬೆತ್ತೆಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಜೂನ್ ತಾರೀಖು ೧೫ ನೆಯ ಭಾನುವಾರ. [ಸಂಚಿಕೆ ೨೪

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SITHARAGHAVA
VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗರ್ಭಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಅಮಶಂಕೆಗಳಿಗೆ ಕೂಡ ದಿವ್ಯೌಷಧಿ.

ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
19 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—41] ಪ್ರೋ. ಬಾ. ೫೧೧, ಮದರಾಸು.

4 ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗತಾನೆ 4ನೆ ಮುದ್ರವು ಅಚ್ಚಾಗಿ ವಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ನಂತೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[13—7] ಕೆರ್ಲಾಪುರ, ಅರಕಲಗೂಡು ತಾಲ್ಲೋಕು, ಹಾಸನ ಡಿ||

ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ

ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಠಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಶಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉಂ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಿಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆಪುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೋಚ್ಚೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಸಕಂದ, ಶ್ರೇಷ್ಠಕಂದ, ತಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೊಗಚಿ) ಕಂದ, ದ್ವಿಪಾಂತರವಜ್ರಾಕಂದ, ಕವಚಬೀಜ, ಸಮುದ್ರಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಕವಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ. ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ.

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಅದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯೆಯಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣಾತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ಣ ಅಡ್ರೆಸ್ ಮೊಕ್ಕಾಂ ಪೋಸ್ಟ ಸಹ ಬರೆಯಿರಿ.

[50—44] ಪತ್ತಾ:—ವೈದ್ಯ ಎ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೪-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಬೇಡುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಿಗಿ.

ಗ್ರಂಥಸಿಕ್ಕುವಸ್ಥಳ:—
ಹೊಸಮಠದ ಚನ್ನಯ್ಯನವರು ಹರಿಹರ,
24—10 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಸ್ತೋತ್ರೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿ
[50—22] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—39] ಪೋಸ್ಟು ಬಾಕ್ಸು ನಂಬರು [illegible], ಮದರಾಸು.

ನೋಡಿರಿ. ಜಿಲ್ಲಾ ಗುಲ್ಬರ್ಗಾ ತಾಲ್ಲೂಕ ಯಾದಗಿರಿ ನಿವಾಸಿಗಳಾದ ಮ॥ ರಾ॥ ಸಜ್ಜನ ಶೆಟ್ಟಿ ಶಂಕ್ರಣ್ಣನವರು ಮತ್ತು ಇವರ ಧರ್ಮಪತ್ನಿಯವರಾದ ಗಂಗಮ್ಮನವರು ಈ ಉಭಯದಂಪತಿಗಳು ಸ್ವಾರ್ಥತ್ಯಾಗಬುದ್ಧಿಯಿಂದಲೂ ಸ್ವಧರ್ಮೋದ್ಧಾರದ ತಳಮಳಿಯಿಂದಲೂ ಶುದ್ಧವಾದ ಮನಸ್ಸಿನಿಂದಲೂ ನಮಗೆ ಸಂತತಿಯು ಇಲ್ಲದಿದ್ದರೂ ನಾವು ದಾನಮಾಡುವ ಹಣದಿಂದ ಓದುವ ವಿದ್ಯಾರ್ಥಿಗಳೇ ನಮ್ಮ ಮಕ್ಕಳೆಂಬ ಶ್ರೇಷ್ಠತರವಾದ ಭಾವನೆಯಿಂದಲೂ ಇದೇ ವೈ॥ ಕೃ॥ ೫ ಶುಕ್ರವಾರ ದಿವಸ ಕೋಡಗಲ್ಲು ಮ॥ ವಿರೂಪಾಕ್ಷಪ್ಪನವರ ಅಧ್ಯಕ್ಷತೆಯಿಂದ ನಡೆದ ಸಭೆಯಲ್ಲಿ ಸದರಿ ದಂಪತಿಗಳು ಸಂಸ್ಕೃತಭಾಷಾಭಿವೃದ್ಧಿಗೋಸ್ಕರ ಒಂದು ಲಕ್ಷ ರೂಪಾಯಿಗಳನ್ನು ಮುಖಂಡರ ಸ್ವಾಧೀನಮಾಡಿದರು. ಒಡನೆಯೇ ಮ॥ ರಾ॥ ಶಂಕ್ರಣ್ಣನವರನ್ನು ಉಚ್ಚಾಸನದಮೇಲೆ ಕುಳ್ಳಿಸಿರಿ ಹೈದ್ರಾಬಾದು ಹೈಕೋರ್ಟ ವಕೀಲ ಬಾಪುರಾವ ಸಾಹೇಬರು ಶ್ರೀಯುಃಪ್ರಾರ್ಥನೆಯೊಡನೆ ಪುಷ್ಪಮಾಲೆಯನ್ನು ಹಾಕುವ ಸಮಯದಲ್ಲಿ ಈ ಮಹನೀಯರ ಔದಾರ್ಯವನ್ನು ಕಂಡು ಸಭಿಕರೆಲ್ಲರೂ ಪುಷ್ಪವೃಷ್ಟಿಯಿಂದಲೂ ಕೈಚಪ್ಪಾಳಿಯಿಂದಲೂ ತಮ್ಮ ಆನಂದೋದ್ಗಾರಗಳನ್ನು ಪ್ರದರ್ಶಿಸುತ್ತಿದ್ದರು. ಅಹೋರಾತ್ರಿ ಕನ್ನಡನಾಡಿನಲ್ಲಿ ಸಂಸ್ಕೃತ ಕಾಲೇಜನ್ನು ಸ್ಥಾಪಿಸಲು ಚಿಂತಿಸುತ್ತಿದ್ದ ಕರ್ನಾಟಕಮಾತೆಯು ಕಾಲಕ್ಕನುಗುಣನಾದ ಸುಪುತ್ರನು ಜನಿಸಿದ್ದರಿಂದ, ಆನಂದಪರವಶಳಾಗಿ ಪ್ರತಿಯೊಬ್ಬ ವೀರಶೈವನ ಮುಖದಲ್ಲಿ ವಾಣಿಯರೂಪದಿಂದ ನರ್ತನಮಾಡುತ್ತಿರುವಳೋ ಎಂಬಂತೆ ಭಾಸವಾಗುತ್ತಿತ್ತು. ಸದರಿ ಕಾಲೇಜಿಗೆ ಸರ್ವಾನುಮತದಿಂದ ಪಾಸಾದಮೇರೆಗೆ ನೈಜಾಂ ವೀರಶೈವ ಶಂಕರಸಂಸ್ಕೃತ ಕಾಲೇಜ ಎಂಬದಾಗಿ ನಾಮಕರಣಮಾಡಲ್ಪಟ್ಟಿತು. ನಮ್ಮ ಸಮಾಜದಲ್ಲಿ ಆಗಿಹೋದ ಮತ್ತು ಈಗಿರುವ ಮಹನೀಯರು ರಾಜಕೀಯ ವಿದ್ಯೆಗೆ ಹೆಚ್ಚಿನ ಪ್ರೋತ್ಸಾಹಕೊಟ್ಟಿರುವರೇ ವಿನಃ ಸಂಸ್ಕೃತ ಭಾಷೆಯನ್ನು ಯಡಗಣ್ಣಿನಿಂದಲೂ ನೋಡುತ್ತಿಲ್ಲವೆಂಬುವದಕ್ಕೆ ಈಗಿನ ಸಂಸ್ಕೃತ ಭಾಷೆಯ ಅವನತಿಸ್ಥಿತಿಯೇ ನಿದರ್ಶನವಾಗಿರುವುದು. ಈಗ್ಲಾನಿಯನ್ನು ದೂರಮಾಡಲು ಶಂಕರಣ್ಣನವರು ಮಾಡಿದ ಅಸಾಧಾರಣವಾದ ದಾನವು, ನಮ್ಮ ಸಮಾಜವನ್ನೇ ವಿಕಾಸಗೊಳಿಸಿತೆಂದು ಕೈಯೆತ್ತಿ ಹೇಳಬಹುದು. ಇದೇ ವಿದ್ಯಾದಾನದ ವಿಷಯದಲ್ಲಿ ಅಧ್ಯಕ್ಷರ ಭಾಷಣವಾದ ನಂತರ ಹೈದ್ರಾಬಾದು ಹೈಕೋರ್ಟ ವಕೀಲ ಬಾಪೂರಾವ ಸಾಹೇಬರು ಧರ್ಮಸುಧಾರಣಾ ವಿಷಯದಲ್ಲಿ ಹೃದಯಂಗಮವಾಗುವಂತೆ ಮಾತನಾಡಿದರು. ವೇ॥ ಯಲೇರಿ ಬಸವರಾಜಶಾಸ್ತ್ರಿಗಳು ಇದೇ ವಿಷಯವನ್ನೇ ಪುಷ್ಟೀಕರಿಸಿ ಸಮಯೋಚಿತ ಭಾಷಣಮಾಡಿದ ಮೇಲೆ ವೇ॥ ಶಿವನಯ್ಯಶಾಸ್ತ್ರಿಗಳು ವಿದ್ಯೆಯ ಅವಶ್ಯಕತೆಯನ್ನು ಹೇಳಿದರಲ್ಲದೆ ಎನ್. ರುದ್ರಪ್ಪ ವಕೀಲ ಹೈಕೋರ್ಟ ಯಾದಗಿರಿ ಇವರು ಶಂಕರಣ್ಣನವರು ಬರೆದುಕೊಟ್ಟ ದಾನಪತ್ರಿಕೆಯನ್ನು ಓದಿ ಹೇಳಿದರು. ಅದರ ಸಾರಾಂಶವನ್ನು ಕಳಗೆ ಡೆಯಲ್ಲಿ ಮುದ್ರಿಸಿದೆ. ಮ॥ ಬಾಪುರಾವ್ ಸಾಹೇಬರ ಸೂಚನೆಯ ಮೇರೆಗೆ ಮುಂದೆ ಕಂಡ ವ್ಯವಸ್ಥಾಪಕರು ಚುನಾಯಿಸಲ್ಪಟ್ಟರು:— 1. ಶ್ರೀಮನ್ನಿರಂಜನ ಶಾಂತವೀರಸ್ವಾಮಿಗಳು ಗುರುಮಠಕಲ್ಲಗಳವರು 2. ಶ್ರೀಮಂತ ಪಂಡಿತ ಬಾಪುರಾವ್ ಸಾ॥ ವಕೀಲ ಹೈಕೋರ್ಟ ಹೈದರಾಬಾದು 3. ಶ್ರೀಯುತ ಎನ್. ರುದ್ರಪ್ಪ ವಕೀಲ ಹೈಕೋರ್ಟ ಯಾದಗಿರಿ 4. ಶ್ರೀಯುತ ಮ॥ ರಾ॥ ಫಕೀರಪ್ಪ ಶೃಂಗೇರಿ ಯಾದಗಿರಿ 5. ಕೋನಪ್ಪ ಲಿಂಗೇರಿ ಯಾದಗಿರಿ 6. ಶರಣಪ್ಪ ರೊಟ್ಟಿಡಗಿ ಯಾದಗಿರಿ 7. ಚನ್ನಬಸವಪ್ಪ ಓಂಡೇಕಾರ ಯಾದಗಿರಿ 8. ವೀರನಗೌಡ ಬಿ॥ ಪಾ॥ ಯಾದಗಿರಿ 9. ಪರಮಣ್ಣ ಸಾ॥ ಕಾನಾಗಡ್ಡಿ 10. ಹಂಪಣ್ಣ ವಂಕಸಮುದ್ರ ಯಾದಗಿರಿ 11. ವೀರಣ್ಣನವರು ಸಜ್ಜನ ಶೆಟ್ಟಿ ಪೆದ್ದೇಮುಲ 12. ಶಂಕರಣ್ಣ ಸಜ್ಜನ ಶೆಟ್ಟಿ ಯಾದಗಿರಿ ಈ ರೀತಿಯಾಗಿ ನೇಮಿಸಲ್ಪಟ್ಟ ನಂತರ ಗಂಧ ಪುಷ್ಪ ತಾಂಬೂಲಾದಿಗಳನ್ನು ಹಂಚಿ ಪಾರ್ವತೀಪತಿಯ ಮಂಗಲದೊಡನೆಯೂ ನಮ್ಮ ಸಾರ್ವಭೌಮ ಚಕ್ರವರ್ತಿಗಳವರ ಮತ್ತು ಉಸ್ಮಾನ್ಯಾದ ಶಹರವರ ಶ್ರೀಯುಃಪ್ರಾರ್ಥನೆಯೊಡನೆಯೂ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ದಾನಪತ್ರ.

ನಾನು ಶಂಕ್ರಣ್ಣ ಮ॥ ಹಂಪಣ್ಣ ಸಜ್ಜನಶೆಟ್ಟಿ ಸಾ॥ ಯಾದಗಿರಿ ಈ ದಿವಸ ತಾ॥ 18 ಮಾಹೆಶೀರ ಸನ್ 1333 ಫಸಲಿ ಅಂದರೆ ತಾ॥ 23-5-24 ರೋಜ ಶುಕ್ರವಾರ ಬರಸಿಕೊಡುವ ದಾನಪತ್ರಿಕೆ ಏನಂದರೆ—

1. ನನ್ನಸ್ವಂತ ಆರ್ಜಿತವಾದ ನನ್ನ ಸ್ವಾಧೀನದಲ್ಲಿರುವ ಆಸ್ತಿಯಲ್ಲಿ ಒಂದು ಲಕ್ಷ(100000) ರೂ. ಗಳು ಮತ್ತು ಮುಂದೆ ಬರತಕ್ಕ ಲಾಭಸಹಿತ ವಿವರಿಸುವ ಪ್ರಕಾರ ಆಸ್ತಿಯನ್ನು ನನಗೆ ಸ್ವರ್ಗಸುಖಉಂಟಾಗಲೋಸುಗ ಮತ್ತು ನನ್ನ ಸಮಾಜದವರು ಧಾರ್ಮಿಕ ವಿದ್ಯೆಯಲ್ಲಿ ಉತ್ತೇಜನ ಹೊಂದಲೋಸುಗ ವೀರಶೈವ ಬಡವಿದ್ಯಾರ್ಥಿಗಳಿಗೋಸ್ಕರ ವೀರಶೈವ ಸಂಸ್ಕೃತ ಕಾಲೇಜ ಸ್ಥಾಪನೆಗಾಗಿ ಕೆಳಗೆ ವಿವರಿಸುವ ವ್ಯವಸ್ಥಾಪಕರ ಸ್ವಾಧೀನ ಮಾಡಿರುತ್ತೇನೆ.

2. ನಾನಲ್ಲದೆ ಮತ್ತೂ 11 ಜನ ವ್ಯವಸ್ಥಾಪಕರ ವಿವರವು.— 1 ಶ್ರೀಮನ್ನಿರಂಜನ ಶಾಂತವೀರಸ್ವಾಮಿ ಗುರುಮಠಕಲ್‌ಗಳವರು 2 ಶ್ರೀಮಂತ ಪಂಡಿತ ಬಾಪುರಾವಜ ಸಾ॥ ವಕೀಲ ಹಾಯಕೋರ್ಟ ಹೈದ್ರಾಬಾದ್, 3 ಶ್ರೀಯುತ ಎನ್. ರುದ್ರಪ್ಪ ವಕೀಲ ಹಾಯಕೋರ್ಟ ಯಾದಗಿರಿ, 4 ಮ॥ ಫಕೀರಪ್ಪ ಶ್ರಿಂಗೇರಿ ಯಾದಗಿರಿ, 5 ಮ॥ ಕೋನಪ್ಪ ಲಿಂಗೇರಿ ಯಾದಗಿರಿ, 6 ಮ॥ ಶರಣಪ್ಪ ರೊಟ್ಟಿಡಗಿ ಯಾದಗಿರಿ, 7 ಮ॥ ಚನ್ನಬಸವಪ್ಪ ಹುಂಡೇಕಾರ ಯಾದಗಿರಿ, 8 ಮ॥ ವೀರನಗೌಡ ಬಿ. ಪಾ॥ ಯಾದಗಿರಿ, 9 ಮ॥ ಪರಮಣ್ಣ ಸಾ॥ ಕಾನಾಗಡ್ಡಿ, 10 ಮ॥ ವೀರಣ್ಣನವರು ಸಜ್ಜನೆಶೆಟ್ಟಿ ಪೆದ್ದೇಮುಲ, 11 ಹಂಪಣ್ಣಾ ವಂಕಸಮುದ್ರ ಯಾತಗಿರಿ.

3. ಸದರಿ ವ್ಯವಸ್ಥಾಪಕರು ಲೈಫ್ ಮೆಂಬರರೆಂಬದಾಗಿ ತಿಳಿಯಲ್ಪಡಬೇಕು. ಅವರು ಸದರಿ ಧರ್ಮಕಾರ್ಯವನ್ನು ನಡಿಯಿಸಲೋಸುಗ ಯೋಗ್ಯವಾದ ನೇಮುಗಳನ್ನು ರಚಿಸಿಕೊಂಡು ಅವುಗಳಂತೆ ಈ ಧರ್ಮಕಾರ್ಯಕ್ರಮವನ್ನು ನಡೆಸಬೇಕು. ನೇಮುಗಳು ಮೇಲೆ ಕಾಣಿಸಿರುವ ನನ್ನ ಮುಖ್ಯ ಸಂಕಲ್ಪದ ವಿರುದ್ಧ ಇರಕೂಡದು.

4. ಸದರಿ ವ್ಯವಸ್ಥಾಪಕರಲ್ಲಿ ನಾನು ಶ್ರೀಮನ್ನಿರಂಜನ ಶಾಂತವೀರ ಸ್ವಾಮಿಗಳವರನ್ನು ಪ್ರೆಸಿಡೆಂಟರನ್ನಾಗಿ ನೇಮಿಸಿರುತ್ತೇನೆ. ಬಹುಮತಾನುಸಾರ ಕಾರ್ಯಕ್ರಮವನ್ನು ಜರಗಿಸಬೇಕು. ನನ್ನ ಪಶ್ಚಾತ್ ನನ್ನ ತಮ್ಮ ಚನ್ನಪ್ಪ ಈತನನ್ನು ನನ್ನ ಸ್ಥಳದಲ್ಲಿ ಲೈಫ್ ಮೆಂಬರರೆಂಬದಾಗಿ ನೇಮಿಸಿಕೊಳ್ಳಬೇಕು.

5. ವ್ಯವಸ್ಥಾಪಕರಲ್ಲಿ ಯಾರಾದರೂ ಯಾವ ಕಾರಣದಿಂದಾದರೂ ವ್ಯವಸ್ಥೆಯ ಕೆಲಸದಿಂದ ನಿವೃತ್ತರಾದರೆ ಉಳಿದ ವ್ಯವಸ್ಥಾಪಕರು ಅವರ ಸ್ಥಳದಲ್ಲಿ ತಾವು ಒಪ್ಪುವ ಬೇರೊಬ್ಬ ಯೋಗ್ಯ ವೀರಶೈವರಾದವರನ್ನು ನೇಮಿಸಿಕೊಳ್ಳಬೇಕು. ಅವರನ್ನಾದರೂ ಲೈಫ್ ಮೆಂಬರರೆಂಬದಾಗಿ ತಿಳಿಯಬೇಕು.

6. ದಾನವಾಗಿ ಕೊಟ್ಟಿರುವ ಆಸ್ತಿಯ ವಿವರವು—18300 ರೂ. ಕಿಲ್ಲಾರಗಳ ಪ್ರೆಸ್‌ಫ್ಯಾಕ್ಟರಿ ಮತ್ತು ಜಿನ್ ಅಂಡ್‌ಪ್ರೆಸ್‌ಫ್ಯಾಕ್ಟರಿಯ ಲ್ಲಿರತಕ್ಕ ಶೇರುಗಳು 12 ಮತ್ತು ಮುಂದೆಬರುವ ಮುನಾಫಾಸಹಿತ. 20000 ರೂ. ಗಳ ಬೆಲೆಬಾಳುವ ರಾಯಿಲಿ ಕಂಪನಿಯವರಿಗೆ ಮತ್ತು ಬ್ರಿಟಿಷ್ ಪೋಸ್ಟಾಪೀಸವರಿಗೆ ಬಾಡಿಗೆಯಿಂದ ಕೊಟ್ಟಿರುವ ಬಿಲ್ಡಿಂಗ್ ಮತ್ತು ಗೋದಾಮು ಮತ್ತು ಅವಕ್ಕೆ ಸಂಬಂಧಿಸಿದ ಸ್ಥಳ ಹಾಗು ಮುಂದೆಬರುವ ಬಾಡಿಗೆ ಸಹಿತ. 10000 ರೂ. ಗಳ ಬೆಲೆಬಾಳುವ ಸದರಿ ಬಿಲ್ಡಿಂಗ್ ಮತ್ತು ಗೋದಾಮಿನ ಹಿಂದೆ ಹೊಸದಾಗಿ ಕಟ್ಟಿಸಿರುವ ಬಿಲ್ಡಿಂಗು ಮತ್ತು ಅದಕ್ಕೆ ಸಂಬಂಧಪಟ್ಟ ಸ್ಥಳ. 8000 ರೂ. ಗಳು ಸರಕಾರಿ ಅಲಯ ಪ್ರಾಮಿಸರಿ ನೋಟುಗಳು ಮತ್ತು ಮುಂದೆಬರುವ ಬಡ್ಡಿಯು. 2500 ರೂ. ಕಿಲ್ಲಾರಗಳ ವಾರಲೋನ ನೋಟುಗಳು. 31556 ರೂ. ಗಳು ನಗದು ಸೇರಿ 95356 ರೂ. ಗಳು ಮತ್ತು 4644 ರೂ. ಕಿಲ್ಲಾರಗೆ ಬಟಾವನ್ ದರ, ಶೇ॥ 18 ರೂ. ಪ್ರಕಾರ ಪಾಲಿ 100000 ರೂ. ಜುಮ್ಲಾ ದಾನಕೊಟ್ಟಿರುವ ಆಸ್ತಿಯು.

7. ಇನ್ನು ಮೇಲೆ ಸದರಿ ಸ್ವತ್ತಿನ ಲಾಭದಿಂದ ಸದರಿ ಕಾಲೇಜಿನ ದಿವ್ಯವ್ಯವಸ್ಥಾ ಮಾಡಬೇಕು, ಲಾಭದ ವ್ಯವಸ್ಥಾ ಯಾವರೀತಿಯಿಂದ ಮಾಡಬೇಕು, ಮತ್ತು ಕಾಲೇಜಿನ ವ್ಯವಸ್ಥಾ ಯಾವರೀತಿಯಿಂದ ಮಾಡಬೇಕು ಎಂಬಿವೇ ಮೊದಲಾದ ವಿಷಯಗಳನ್ನು ಸ್ಥಿರಪಡಿಸಿ ಕೆಲಸ ನಡೆಸಲು ಸದರಿ ವ್ಯವಸ್ಥಾಪಕರು ಸ್ವತಂತ್ರರಿರುತ್ತಾರೆ. ವ್ಯವಸ್ಥಾಪಕರು ಲಾಭ ಹೆಚ್ಚಾಗುವ ಯೋಗ್ಯ ಪ್ರಯತ್ನಮಾಡಬೇಕು. ಮೂಲ ಆಸ್ತಿಯನ್ನು ಲುಕ್ಸಾನು ಆಗದಂತೆ ಕಾಪಾಡಿಕೊಂಡಿರಬೇಕು. ಮೂಲ ಆಸ್ತಿಗೆ ಲುಕ್ಸಾನು ಆಗುವ ಯಾವ ಕಾರ್ಯವನ್ನು ಮಾಡಕೂಡದು.

9. ಸದರಿ ಆಸ್ತಿಯ ಲಾಭದಲ್ಲಿ ಕಾಲೇಜಿಗೆ ಸಂಬಂಧಿಸಿದ ಖರ್ಚು ಹೋಗಲಾಗಿ ಲಾಭದ ರಕಮು ಹೆಚ್ಚಾಗಿ ಉಳಿದರೆ, ಹೆಚ್ಚಾದ ಲಾಭದ ರಕಮನ್ನು ಮೂಲ ಆಸ್ತಿಯಲ್ಲಿ ಸೇರಿಸಿ ಅದನ್ನಾದರೂ ಲಾಭದಾಯಕ ಕಾರ್ಯಗಳಲ್ಲಿ ಹಚ್ಚಬೇಕು, ಅಥವಾ ಹೆಚ್ಚಾದ ಲಾಭದ ರಕಮಿನಿಂದ ಸಮಾಜೋನ್ನತಿಯ ಮತ್ತಾವ ಕಾರ್ಯವನ್ನಾದರೂ ವ್ಯವಸ್ಥಾಪಕರು ಮಾಡಿದರೆ ಸಂತೋಷವು.

10. ಈ ಧರ್ಮ ಸಂಸ್ಥೆಯ ಹೆಸರು ನೈಜಾಂ ವೀರಶೈವ ಶಂಕರ ಸಂಸ್ಕೃತ ಕಾಲೇಜು ಎಂಬದಾಗಿ ಇಡಬೇಕು. ಇದರ ದಪ್ತರ ಯಾವಾಗ್ಯೂ ಮುಕ್ಕಾಂ ಯಾದಗಿರಿ ಜಿಲ್ಲಾ ಗುಲ್ಬರ್ಗಾದಲ್ಲಿರತಕ್ಕದ್ದು.

11. ದಾನವಾಗಿ ಕೊಟ್ಟಿರುವ ಸದರಿ ಆಸ್ತಿಯ ಪರಿವರ್ತನೆಯಿಂದ ಲಾಭವು ಹೆಚ್ಚಾಗಿ ಬರುವದಾದರೆ, ಯೋಗ್ಯರೀತಿಯಿಂದ ಪರಿವರ್ತಿಸಲು ಕೂಡಾ ವ್ಯವಸ್ಥಾಪಕರಿಗೆ ಅಧಿಕಾರವಿರುತ್ತದೆ.

12. ಈ ಧರ್ಮ ಸಂಸ್ಥೆಯಿಂದ ನೈಜಾಮಿಲಾಖೆಯ ವೀರಶೈವ ಬಡ ವಿದ್ಯಾರ್ಥಿಗಳಿಗೆ ಮುಂಚೆ ಸಹಾಯಮಾಡಬೇಕು ನಂತರ ಗುಂಜಾಪ್ ಪ್ರಕಾರ ಇತರ ಇಲಾಖೆಯ ವೀರಶೈವ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡತಕ್ಕದ್ದು. ಸ್ವಂತ ಖರ್ಚಿನಿಂದ ಅಭ್ಯಾಸಮಾಡಬೇಕೆನ್ನುವ ವೀರಶೈವ ವಿದ್ಯಾರ್ಥಿಗಳಿಗೂ ಕೂಡಾ ಅನುಕೂಲಮಾಡಬೇಕು. ವಿದ್ಯಾರ್ಥಿಗಳ ನಡತೆ ಮತ್ತು ಅಭ್ಯಾಸದ ಬಗ್ಗೆ ವ್ಯವಸ್ಥಾಪಕರು ಚನ್ನಾಗಿ ಲಕ್ಷ್ಯ ಕೊಡಬೇಕು. ಸಂಸ್ಥೆಯ ಕಾರ್ಯದ ಬಗ್ಗೆ ಒಳ್ಳೇ ಜನರನ್ನು ಯೋಗ್ಯಪಗಾರದ ಮೇಲೆ ನೇಮಿಸಿಕೊಳ್ಳಬೇಕು.

13. ಸದರಿ ಧರ್ಮಕಾರ್ಯಕ್ಕೆ ಲೋಪಬಾರದಂತೆಯೂ ಆಚಂದ್ರಾರ್ಕವಾಗಿ ನಡೆಯುವಂತೆಯೂ ವ್ಯವಸ್ಥಾಪಕರು ಸಂಸ್ಥೆಯ ಕಾರ್ಯವನ್ನು ನಡೆಸಬೇಕು.

14. ಸದರಿ ಆಸ್ತಿಯಲ್ಲಿ ಸ್ಥಿರಾಸ್ತಿಯ ಚತುಸ್ಸೀಮಾ ಕೆಳಗಿನಂತೆ ಇರುತ್ತದೆ. ಅವುಗಳನಕಾಶಗಳು ಸಹ ಇದರ ಲಗತ ಇರುತ್ತವೆ (ಅ) ಬಾಡಿಗೆಗೆ ಕೊಟ್ಟಿರುವ ಬಿಲ್ಡಿಂಗ್ ಮತ್ತು ಗೋದಾಮಿನ ಚತುಸ್ಸೀಮೆಯು. ಪೂರ್ವ ಸಗರಿ ಹಾಜಿ ಅಬ್ದುಲ್‌ಖಾದರ ಇವರ ಅಂಗಡಿ, ಪಶ್ಚಿಮ ಅಬ್ದುಲ್ ಸಾ॥ ಬದಲಿ ಇವರ ಅಂಗಡಿ, ಉತ್ತರ ಸರಕಾರಿ ದೊಡ್ಡರೋಡ್, ದಕ್ಷಿಣ ಕಾಲೇಜಿನ ಸಲುವಾಗಿ ಕೊಟ್ಟಿರುವ ಬಿಲ್ಡಿಂಗು ಮತ್ತು ಸ್ಥಳ (ಬ) ಹೊಸದಾಗಿ ಕಟ್ಟಿಸಿರುವ ಬಿಲ್ಡಿಂಗು ಮತ್ತು ಅದಕ್ಕೆ ಸಂಬಂಧಿಸಿದ ಸ್ಥಳದ ಚತುಸ್ಸೀಮೆಯು. ಪೂರ್ವ ಸರಕಾರಿ ರಸ್ತೆ ವ ಮೈದಾನ, ಪಶ್ಚಿಮ ಹಂಪಣ್ಣ ವಂಕಸಮುದ್ರ ಇವರ ದೊಡ್ಡಿ, ಉತ್ತರ (ಅ) ಪ್ರಕರಣದಲ್ಲಿ ತೋರಿಸಿದ ಬಿಲ್ಡಿಂಗು ಮತ್ತು ಗೋದಾವ್, ದಕ್ಷಿಣ ಖುಲ್ಲಾ ಜಾಗಾ ಸರಕಾರಿ.

15. ಸದರಿ ಧರ್ಮಕಾರ್ಯಕ್ಕೆ ಕೊಟ್ಟಿರುವ ಎಲ್ಲಾ ಆಸ್ತಿಯನ್ನು ನನ್ನ ಆತ್ಮ ಸಂತೋಷದಿಂದ ಕೊಟ್ಟಿರುತ್ತೇನೆ. ಇದರಲ್ಲಿ ನನ್ನ ಮತ್ತು ನನ್ನ ವಾರಸದಾರರ ಏನೂ ಹಕ್ಕು ಇರುವದಿಲ್ಲ ಹೀಗೆಂದು ನನ್ನ ಆತ್ಮ ಸಂತೋಷದಿಂದ ಮತ್ತು ಅಕ್ಕಲ್ ಹುಷಾರಿಯಿಂದ 15 ಕಲಮುಗಳಲ್ಲಿ ಬರಸಿಕೊಡುವ ದಾನಪತ್ರ ಸಹಿ ಫಕ್ತ ದಸ್ತೂರಿ ಬಸವರಾಜಶಾಸ್ತ್ರಿ ಯಲೇರಿ.

ಸಾಕ್ಷಿಗಳು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦ ಕ್ಕೂ ೦—೧೨—೦; ಬಿಳಿಗ್ಲೇಜ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚು ಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸ ಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
16 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

APPLY FOR
SCORPION CURE.
M.S. SIDDAPPA BROS
MYSORE.

ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತಾ ಬಂದವರು ನಗುತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದದ್ದೇ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲೆಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಟಿ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—36] ಮೈಸೂರು.

೧೯೨೪ ನೆಯ ಇಸವಿ ಜೂನ್ ತಾ॥ ೮ ರಿಂದ ೧೯೨೪ ನೆಯ ಇಸವಿ ಜೂನ್ ತಾ॥ ೧೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಜ್ಯೇಷ್ಠ ಶುದ್ಧ ಷಷ್ಠಿಯಿಂದ ಜ್ಯೇಷ್ಠ ಶುದ್ಧ ದ್ವಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
8	ಭಾನು	ಷಷ್ಠಿ	50-23	ಆಶ್ಲೇ	18-23	26
9	ಸೋಮ	ಸಪ್ತ	49-52	ಮಘಾ	20-0	27
10	ಮಂಗಳ	ಅಷ್ಟ	47-25	ಪುಬ್ಬ	20-20	28
11	ಬುಧ	ನವ	44-16	ಉತ್ತ	19-36	29
12	[1]ಗುರು	ದಶ	40-3	ಹಸ್ತ	17-48	30
13	[2]ಶುಕ್ರ	ಏಕಾ	35-7	ಚಿತ್ತ	15-9	31
14	[3]ಶನಿ	ದ್ವಾದ	29-32	ಸ್ವಾತಿ	11-50	1

(1) ದಶಹರದಶಮಿ. (2) ಸರ್ವತ್ರನಿರ್ಜಲೈಕಾದಶಿ, ಶ್ರೀಮನ್ಮಹಾರಾಜರವರ ವರ್ಧಂತಿ. (3) ಶನಿಪ್ರದೋಷಃ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜ[illegible]ಕೃಷಾ । ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋ[illegible]ಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವ[illegible]ಲಂ । ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಜೂನ್ ತಾರೀಖು ೧೫ ನೆಯ ಭಾನುವಾರ. [ಸಂಚಿಕೆ ೨೪

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHARACHAVA VAIDYASALA

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯೆಂಜಾ ಪ್ಲೇಗುಜ್ವರ

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.

ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
19 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೀ ಬೀ ಯವರ ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೭೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦. ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—41] ಪೋ॥. ಬಾ. ೫೧೧, ಮದರಾಸು.

4ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗತಾನೆ 4ನೆ ಮುದ್ರಣವು ಅಚ್ಚಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ನಂತೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—7] ಕೆರೋಡಿ, ಅರಕಲಗೂಡು ತಾಲ್ಲೋಕು, ಹಾಸನ ಡಿ॥

ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಜಗತ್ತಿನ ನಿಜವಾದ] ಆಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ಧಿಕ್ಕಾರ ಮಾಡಿದರೆ ಕುಕ್ಕರಿಸಿ ಹೋದೀರಿ.

ವಜ್ರಾಂಗಸುಂದರಪಾಕ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಬಿಸರೋಣ, ವೀರ್ಯನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೆಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಿಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಶಪ್ಪೋಣ, ನಿದ್ರೆಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವಬಂದು ಕಾಮವಾಸನೆಪುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು.

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೩ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರೆಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಿ ಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ, ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ನಾರೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ.

ಈ ಪ್ರಕಾರ ಮೇಲೆ ಕೊಟ್ಟ ಜೀನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫। ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ಣ ಅಡ್ರೆಸ್ ಮೊಕ್ಕಾಂ ಪೋಸ್ಟ ಸಹ ಬರೆಯಿರಿ.

[50—44] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ.	೧—೦—೦
ಕೇನೋಪನಿಷತ್ ಶಾಂಕರೀ	ರೂ.	೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ.	೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಿಗಿ.

ಗ್ರಂಥಸಿಕ್ಕುವಸ್ಥಳ :—
ಹೊಸಮಠದ ಚನ್ನಯ್ಯನವರು ಹರಿಹರ,
24—10 ಚಿತ್ರದುರ್ಗ ಡಿ॥

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿ
[50—22] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—38] ಪೋಸ್ಟ್ ಬಾಕ್ಸ್ ನಂಬರು [illegible], ಮದರಾಸು.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜೂನ್ ತಾ|| ೧೫ ನೆಯ ಭಾನುವಾರ.

THE REPRESENTATIVE ASSEMBLY BIRTHDAY SESSION.

The newly constituted Mysore Representative Assembly commenced its session on the 9th June 1924 at the Jaganmohan Palace, when the Dewan President delivered his address. The address confined itself mainly to financial matters affecting the budget. It was a sound principle that the Dewan enunciated two years ago when he stated that the different kinds of resources should be classified according to their nature, so that each class of revenue might provide for all reasonable demands against it, that items of revenue occasionally received should not be mixed up with the normal revenues of the State and uncertain revenues should only be used for nonrecurring charges, while the group of productive should have financial autonomy so that the ordinary revenues of the State might be able to support fully the normal administration, and capital works, finance might be gradually separated from administrative finance. During the year 1922-23 the receipt of Rs. 23¾ lakhs towards the surplus revenue of the Assigned Tract, improved the financial position which showed according to the budget estimate of the year a deficit of Rs. 5¼ lakhs. But the year 1923-24 for which there was a provision of a surplus of Rs. 63,000, according to the budget estimates had to pass through very disappointing seasonal conditions, which resulted in a reduction of Rs. 5½ lakhs under Land Revenue alone. According to the Revised Estimate however the total revenue is only less than the Budget Estimated by Rs. 2,48,000. In the next year's Budget a total revenue of Rs. 3,35,84,000 is anticipated while the total expenditure is expected to be Rs. 3,35,15,000 resulting in a surplus of Rs. 69,000. It is evident from the Dewan's address that it has not been possible to keep to the financial policy of classifying the different kinds of revenue and one could appreciate his difficulties, having regard to the costly legacy left to him in the shape of capital works to be carried on at all costs.

There is an increase of Rs. 6'03 lakhs in expenditure for the coming year over the revised for the current, of which Rs. 3 lakhs is added to His Highness' civil list. It is when the allotments are made to Education, lower and middle, that the disappointment commences. Out of enhanced grant of Rs. 2'74 lakhs to Education 1'44 is taken away by the University leaving Rs. 1'30 lakhs only to Primary and Secondary Education. We have been protesting from the start against the preferential treatment to the University in Mysore. Elsewhere the higher Education is less of a concern to the Government than the Primary and Secondary Education, and Universities are often left in the hands of private bodies and the Government come in only to supplement the grants of private men. The University was itself premature for Mysore, but having been started one would not grudge to keep it going. But there could be no meaning in increasing the faculties merely and enhancing the grants, when the State cannot absorb the graduates into its service and they could find no profit outside service, and especially when Primary Education is being starved. The Government is committing a blunder in the policy it has adopted. The Representative Assembly we are sure has expressed itself fully when a number of members condemned this top heavy policy in education as only a means of benefittings a few and as being least conducive to the State's progress. We thought the Government had sufficient experience before it to dissuade it from opening a new Faculty like Medicine or give a fresh lease of life because it is nothing else to commerce. It is greatly deplored that Government are lacking a proper sense of proportion when looking to the educational needs of the State. Witness also the nomination by Government of a representative of Backward classes to the Education Board of the Economic Conference. Could they not in the whole range of non-officials representing the Backward one more advanced and interested in their education than Mr. Kongadiappa of Dodballapur. The result of such a policy will only be the postponement of the enlightenment of the people to an indefinite period. The Government do not seem to be alive to the difficulties experienced in obtaining proper medical relief in the mofussils, which are more due to the insufficient stock of medicines and want of surgical instruments than any thing else. In the enhanced grant of about Rs. 37,000 under medicine no provision is made for suppling this great need.

We have to be thankful that a non-deficit budget has been presented. When the surplus so little it is somewhat surprising that there are certain members of the Assembly who are demanding additional grants without showing the wherewithal to meet them. To all such, the President has got only one reply "Find out the money." We must say that on the whole the level of discussions is high and many of the members present their view points very well. Exceptions there are. It was surprising to note that a pleader from Maddagiri demanding a High School for Maddagiri and trying to extract a promise from the Dewan before the House. It is hardly a way of addressing on the Budget. The same member coverted the Assembly into a District Board meeting when he talked of wells for Maddagiri Taluk. There is ample scope for the people to make their voice felt in the Assembly and the people doubtless will appreciate the increased opportunities given to them to influence the Government. The Dewan has promised a response to public opinion and appealed for their co-operation in return. We only hope that neither will be wanting.

ಸಂಸ್ಕೃತ ಮಹಾಪಾಠಶಾಲೆಗಳಿಗೆ ಬ್ರಾಹ್ಮಣೇತರರ ಪ್ರವೇಶವು.

ಈ ಸಂಸ್ಕೃತ ವಿದ್ಯಾಭ್ಯಾಸ ಸಮಸ್ಯೆಯು ನೆನ್ನೆ ಮೊನ್ನೆಗೆ ಉಪಸ್ಥಿತವಾಗಿರದೆ ಗತಿಸಿದ ದಿವಾನ್ ಸರ್ ಕೆ. ಶೇಷಾದ್ರಿಅಯ್ಯರ್‌ರವರ ಕಾಲದಿಂದಲೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಡುತ ಬಂದುದಾಗಿದೆ. ಇದನ್ನು ಪ್ರಥಮತಃ ಎತ್ತಿದವರು ವೀರಶೈವರು. ಈಚೀಚೆಗೆ ಸಂಸ್ಕೃತ ವಿದ್ಯೆಯ ಮಹತ್ವವನ್ನರಿತು ಇತರರೂ ಇದನ್ನಪೇಕ್ಷಿಸಲು ಸಭೆಯಲ್ಲಿ ಆರಂಭಿಸಿದರು. ಈ ಚರ್ಚಾಸ್ಪದವಾದ ವಿಷಯದಲ್ಲಿ ಅಂದರೆ ತ್ರಿಮತ ಬ್ರಾಹ್ಮಣರಿಗೆ ಭಿನ್ನರಾದ ಉತ್ತಮ ಹಿಂದೂ ವಿದ್ಯಾರ್ಥಿಗಳನ್ನು ಸಂಸ್ಕೃತ ಮಹಾಪಾಠಶಾಲೆಗಳಿಗೆ ವಿದ್ಯಾಭ್ಯಾಸಕ್ಕಾಗಿ ಸೇರಿಸುವ ವಿಷಯದಲ್ಲಿ ಅಭಿಪ್ರಾಯವನ್ನು ತಿಳಿಸುವುದಕ್ಕಾಗಿ ಪ್ರಭುತ್ವದವರಿಂದ ನಿಯುಕ್ತರಾಗಿದ್ದ ಸ್ಪೆಷಲ್‌ಕಮಿಟಿಯವರು "ಮೈಸೂರು ಕಾಲೇಜು ಮೊದಲಿನಂತೆಯೇ ವೇದಾಂಗ ಶಾಸ್ತ್ರಾಭ್ಯಾಸಕ್ಕೆ ಮುಖ್ಯಪೀಠವಾಗಿ ನಡೆಸಿಕೊಂಡು ಬರಲ್ಪಡತಕ್ಕುದೆಂದೂ, ಬೆಂಗಳೂರು ಕಾಲೇಜಿನಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಮಾತ್ರ ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ಹಿಂದೆ ಅವಕಾಶ ಕಲ್ಪಿಸಲ್ಪಟ್ಟಿದ್ದಿತೆಂಬುದು ಆ ಕಾಲೇಜಿನ ಮೇಲ್ವಿಚಾರಕ ಕಮಿಟಿಯ ಪ್ರೆಸಿಡೆಂಟರ ಹೇಳಿಕೆಯಿಂದ ತಿಳಿಯಬರುವಪ್ರಯುಕ್ತ ಈಗಲೂ ವೇದ, ವೇದಾಂತ ಮತ್ತು ವೇದಾಂಗಗಳ ಅಭ್ಯಾಸವನ್ನು ಬಿಟ್ಟು, ಸಂಸ್ಕೃತವಿದ್ಯಾಭ್ಯಾಸ ಮಾಡಲು ಉತ್ತಮ ಹಿಂದೂ ವರ್ಣಗಳಿಗೆ ಸೇರಿದ ಎಲ್ಲ ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ಬೆಂಗಳೂರು ಕಾಲೇಜಿನಲ್ಲಿ ಮಾತ್ರ ಅವಕಾಶಕೊಡಲ್ಪಡಬಹುದೆಂದೂ, ಹಾಗೆ ಕಾಲೇಜು ತರಗತಿಗಳಲ್ಲಿ ಬ್ರಾಹ್ಮಣೇತರ ವಿದ್ಯಾರ್ಥಿಗಳು ವ್ಯಾಸಂಗಮಾಡಲು ಅವಕಾಶವನ್ನು ಕಲ್ಪಿಸಿಕೊಡುವುದರಲ್ಲಿ, ಕಾಶಿಯಲ್ಲಿ ಇಂಡ್ಯಾ ಸರ್ಕಾರದವರಿಂದ ನಡಿಸಲ್ಪಡುತ್ತಿರುವ ಕಾಲೇಜಿನಲ್ಲಿ ಪಂಡಿತರು ತಾವಿಷ್ಟಪಡುವ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೆ ಅವರಿಗೆ ಸರ್ವಸ್ವಾತಂತ್ರ್ಯವು ಕೊಡಲ್ಪಟ್ಟಿರುವಂತೆ ಬೆಂಗಳೂರು ಕಾಲೇಜಿನಲ್ಲೂ ಅಧ್ಯಾಪಕರಿಗೆ ಸ್ವಾತಂತ್ರ್ಯವನ್ನು ಕೊಡಬೇಕಲ್ಲದೆ, ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ಪಾಠಹೇಳಲಿಷ್ಟಪಡದ ಪಂಡಿತರುಗಳನ್ನು ನಿರ್ಬಂಧಪಡಿಸದೆ ಅವರು ಕಾಲೇಜಿನಿಂದ ಬೇರೆಕಡೆ ವರ್ಗಪಟ್ಟು ಹೋಗಲು ಅವಕಾಶವನ್ನು ಕೊಡಬೇಕೆಂದೂ". ತಾವು ಅಭಿಪ್ರಾಯಪಡುವುದಾಗಿ ತಮ್ಮ ನಿವೇದಿಕೆಯಲ್ಲಿ ತಿಳಿಸಿದ್ದರು. ಈ ವಿಚಾರದಲ್ಲಿ ಜನರು ತಮ್ಮ ಅಭಿಪ್ರಾಯವನ್ನು ಕೊಡುವುದಾಗಿದ್ದಲ್ಲಿ ಬರೆದು ತಿಳಿಸಬಹುದೆಂದು ಸರ್ಕಾರದವರು ಪ್ರಕಟಿಸಿದ್ದುದರ ಮೇಲೆ, ಮೈಸೂರು, ಬೆಂಗಳೂರುಗಳಲ್ಲಿರುವ ಸಂಸ್ಕೃತ ಮಹಾಪಾಠಶಾಲೆಗಳೆರಡರಲ್ಲೂ ವೀರಶೈವ ವಿದ್ಯಾರ್ಥಿಗಳಿಗೆ ಶಾಸ್ತ್ರಾದಿ ಅಭ್ಯಾಸಗಳಿಗೆಲ್ಲಾ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವ ಬಗೆಗೆ ಸಂಸ್ಥಾನದ ನಾನಾ ಕಡೆಯ ವೀರಶೈವರು ಸಭೆಗಳನ್ನು ನಡಿಯಿಸಿ ನಿರ್ಧಾರಗಳನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟುದಲ್ಲದೆ ದಿವಾನ್ ಬಹದ್ದೂರು ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ. ಐ. ಇ., ಯವರ ಯಾಜಮಾನ್ಯದಲ್ಲಿ ಒಂದು ರಾಯಭಾರವನ್ನು ದಿವಾನರಲ್ಲಿಗೆ ಕಳುಹಿಸಿಕೊಟ್ಟು ತನ್ಮೂಲಕ ಬಿನ್ನವಿಸಿಕೊಂಡಿರುವರು. ಇವರಂತೆಯೇ ಜೈನರು ಮೊದಲಾಗಿ ಇತರ ಬ್ರಾಹ್ಮಣೇತರರು ತಂತಮ್ಮ ಅಭಿಪ್ರಾಯಗಳನ್ನು ವಿಜ್ಞಾಪನ ಪತ್ರಿಕೆಗಳ ಮೂಲಕವೂ ಪ್ರತಿನಿಧಿ ಸಭೆಯಲ್ಲಿ ಪ್ರಜಾಪ್ರತಿನಿಧಿಗಳ ಮೂಲಕವೂ ಬಿನ್ನವಿಸಿರುವರು. ಅತ್ತಲಾಗಿ ಬ್ರಾಹ್ಮಣರು ತಮ್ಮ ವರ್ಗದವರ ವಿದ್ಯಾಭ್ಯಾಸಕ್ಕಾಗೇರ್ಪಟ್ಟಿರುವ ಸಂಸ್ಕೃತ ಮಹಾಪಾಠಶಾಲೆಗಳಿಗೆ ಬ್ರಾಹ್ಮಣೇತರ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವನ್ನು ಕೊಡಕೂಡದೆಂದೂ, ಒಂದು ವೇಳೆ ಸರ್ಕಾರದವರು ಅವರ ಪ್ರವೇಶಕ್ಕೆ ಅವಕಾಶವನ್ನು ಕಲ್ಪಿಸಿ ಅವರುಗಳಿಗೆ ಪಾಠ ಹೇಳುವಂತೆ ಬ್ರಾಹ್ಮಣ ಪಂಡಿತರುಗಳನ್ನು ನಿರ್ಬಂಧಪಡಿಸಿದಲ್ಲಿ ಅನರ್ಥವಾಗುತ್ತದೆಂದೂ ಹೆದರಿಸಿರುವರು. "ಎಲ್ಲ ವಿಚಾರಗಳನ್ನೂ ಬಹಳ ಎಚ್ಚರಿಕೆಯಿಂದ ಪರಿಶೀಲಿಸಿದುದಾಗಿದೆ. ಹಿಂದೂಗಳ ಪ್ರಾಚೀನವೂ, ಪವಿತ್ರವೂ ಆದ ಸಂಸ್ಕೃತ ಮಹಾವಿದ್ಯೋದ್ಧಾರ ವಿಚಾರದಲ್ಲೂ ಅದರ ಅಭ್ಯಾಸದ ವಿಚಾರದಲ್ಲೂ ಪೂರ್ಣ ಗಮನ ಕೊಟ್ಟು ಸಂಸ್ಥಾನದಲ್ಲಿ ಪಾಠಶಾಲೆಗಳ ಮತ್ತು ಕಾಲೇಜುಗಳ ಸ್ಥಾಪನೆಗಾಗಿ ತಕ್ಕೇರ್ಪಾಟು ಮಾಡಿರುವುದಾಗಿರುತ್ತದೆ. ರಾಜಧಾನಿಯ ಸಂಸ್ಕೃತಮಹಾಪಾಠಶಾಲೆ ಅಂದರೆ ಕಾಲೇಜು ಬಹುಕಾಲದಿಂದಲೂ ಸಂಸ್ಕೃತ ಮಹಾವಿದ್ಯಾಪೀಠವಾಗಿದ್ದು ಅದರಲ್ಲಿ ವೈದಿಕಧರ್ಮಶಾಸ್ತ್ರಬೋಧೆಯು ನಡೆದುಕೊಂಡು ಬರುತ್ತಿರುವುದರಿಂದ, ಅದರಲ್ಲಿ ಯಾವುದೊಂದು ವ್ಯತ್ಯಾಸವೂ ಮಾಡಲ್ಪಡತಕ್ಕುದುಯುಕ್ತವಾಗಿ ಕಂಡುಬರುವುದಿಲ್ಲವಾದಪ್ರಯುಕ್ತ, ಅದು ಈವರೆಗೂ ಇರುವಂತೆ ನಡೆದುಕೊಂಡು ಬರತಕ್ಕುದು ಮತ್ತು ವೈದಿಕಬ್ರಾಹ್ಮಣರ ವಿನಾ ಇತರರಿಗೆ ಅದರಲ್ಲಿ ಪ್ರವೇಶಕ್ಕೆ ಅವಕಾಶವಿಲ್ಲವು. ಬೆಂಗಳೂರಲ್ಲಿರುವ ಸಂಸ್ಕೃತಕಾಲೇಜಿನಲ್ಲಿ ಬಾಲತರಗತಿಗಳು ತಪ್ಪಿಸಲ್ಪಟ್ಟು ಯಾವ ಜಾತಿಮತಗಳ ತಾರತಮ್ಯವಿಲ್ಲದೆ ಎಲ್ಲಜನರೂ ಸಂಸ್ಕೃತ ಪ್ರೌಢವಿದ್ಯಾಭ್ಯಾಸ ಮಾಡಲು ಅವಕಾಶ ಕಲ್ಪಿಸಲ್ಪಟ್ಟಿರುತ್ತದೆ" ಎಂದು ಸರ್ಕಾರದವರು 1924ನೆ ಜೂನ್ ತಾ|| 10ರಲ್ಲಿ ಅಪ್ಪಣೆಮಾಡಿರುವರಲ್ಲದೆ ಈ ಬೆಂಗಳೂರುಪಾಠಶಾಲೆಯ ಪಾಠಪ್ರವಚನಕ್ರಮವನ್ನು ಗೊತ್ತುಮಾಡಿ ತಿಳಿಸುವುದಕ್ಕಾಗಿ ವಿದ್ಯಾಭ್ಯಾಸದ ಇ|| ಜನರಲ್‌ರವರ ಅಧ್ಯಕ್ಷತೆಯಲ್ಲಿ (1) ಮೈಸೂರು ಮಹಾರಾಜಾಕಾಲೇಜಿನ ಪ್ರೊಫೆಸರ್ ಮ|| ಹಿರಿಯಣ್ಣನವರು (2) ಓರಿಯಂಟಲ್ ಲೈಬ್ರರಿ ಕ್ಯೂರೇಟರ್ ಡಾ|| ಆರ್. ಶಾಮಶಾಸ್ತ್ರಿಗಳು (3) ಬೆಂಗಳೂರು ಮಹಾಪಾಠಶಾಲೆಯ ಪ್ರಿನ್ಸಿಪಾಲರು (4) ಮೈಸೂರು ಆಸ್ಥಾನವಿದ್ವಾನ್ ವೇ|| ಶಿರ್ಶಿ ಗುರುಶಾಂತಶಾಸ್ತ್ರಿಗಳು (5) ಶ್ರವಣಬೆಳಗೊಳದ ವೇ|| ದೋರ್ಬಲಜಿನದಾಸಶಾಸ್ತ್ರಿಗಳು ಇವರುಗಳಿಂದ ಕೂಡಿದ ಒಂದು ಸಂಘವನ್ನು ಗೊತ್ತುಮಾಡಿರುವರು. ಸಂಸ್ಥಾನದುತ್ಪನ್ನದಿಂದ ಪೋಷಿಸಲ್ಪಡುತ್ತಿರುವ ಮೈಸೂರಿನ ಮಹಾಪಾಠಶಾಲೆಯು ಬ್ರಾಹ್ಮಣರುಪಯೋಗಾರ್ಥಕ್ಕಾಗಿ ಕಾದಿಡಲ್ಪಟ್ಟಿರುವುದೂ, ಬೆಂಗಳೂರು ಪಾಠಶಾಲೆಯಲ್ಲಿ ಸಂಸ್ಕೃತವಿದ್ಯಾಭ್ಯಾಸ ಮಾತ್ರ ನಡೆಯುವಂತೇರ್ಪಡಿಸಲ್ಪಟ್ಟಿರುವುದೂ ಸಖೇದಾಶ್ಚರ್ಯಕರವಾಗಿದೆ. ಈ ವಿಚಾರದಲ್ಲಿ ನಮ್ಮಭಿಪ್ರಾಯವನ್ನು ಮುಂದೆ ತಿಳಿಸುವವರಾಗಿರುವೆವು.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು.

ಕಳೆದ ತಾ|| 13 ನೆಯ ಶುಕ್ರವಾರ ದಿವಸಕ್ಕೆ ಆಳುವ ನಮ್ಮ ಶ್ರೀಮನ್ ಮಹಾರಾಜರವರಿಗೆ 40 ನೆಯ ವರ್ಷ ವಯಸ್ಸು ತುಂಬಿ 41. ಕ್ಕೆ ಆರಂಭವಾಯಿತು. ಆ ದಿವಸ ಬೆಳಿಗ್ಗೆ ಮಂಗಳಸ್ನಾನವಾಗುವ ವೇಳೆಯಲ್ಲಿ 41 ಗುಂಡುಗಳು ಹಾರಿಸಲ್ಪಟ್ಟುವು. ಶ್ರೀಮನ್ ಮಹಾರಾಜರವರು ಆಹ್ನಿಕವನ್ನೂ, ಗುರುಪಾದಪೂಜೆಯನ್ನೂ ನೆರವೇರಿಸಿಕೊಂಡು ದಿವ್ಯವಸ್ತ್ರಾಭರಣಾಲಂಕೃತರಾಗಿ 10 ಗಂಟೆಗೆ ವಿವಾಹಮಂಟಪಸ್ಥಲವಾದ ಸಭಾಂಗಣಕ್ಕೆ ಚಿತ್ತೈಸಿ ಭದ್ರಾಸನವನ್ನಲಂಕರಿಸಿದರು. ದಿವಾನರು, ಅಳಿಯಂದಿರು, ಚೀಫ್ ಜಡ್ಜಿಯವರು, ಕೌನ್ಸಿಲರುಗಳು, ಶಾಖಾಧಿಕಾರಿಗಳು, ಡೆ|| ಕಮಿಷನರುಗಳು, ಪುರಪ್ರಮುಖರು ಮೊದಲಾದವರೆಲ್ಲರೂ ಗೊತ್ತಾಗಿದ್ದ ಸ್ಥಲಗಳನ್ನಲಂಕರಿಸಿದ್ದರು. ಅರಮನೆಯ ಹೊರಭಾಗದಲ್ಲಿ ಸೈನ್ಯಗಳು ನಿಂತಿದ್ದುವು. ಮತ್ತು ಮನೋಹರವಾದ ವಾದ್ಯವಾದನಗಳು ಜರುಗುತ್ತಿದ್ದುವು. ಗಾನ ನರ್ತನಾದಿಗಳು ನಡಿಯುತ್ತಿರುವಾಗ್ಗೆ ಸಭಿಕರ ಮುಜರೆಯು ಆದಮೇಲೆ ದೇವಸ್ಥಾನಗಳಿಂದಲೂ, ಮಠಗಳಿಂದಲೂ ಬಂದಿದ್ದ ಫಲಮಂತ್ರಾಕ್ಷತೆಗಳೂ, ಕಿಲ್ಲತ್ತುಗಳೂ ಸಮರ್ಪಿಸಲ್ಪಟ್ಟು ಮುತ್ತೈದೆಯರ ಸೇಸೆಯೂ ವೈದಿಕ ಮಂಡಲಿಯ ಆಶೀರ್ವಾದಗಳೂ ನಡೆದನಂತರ ಸಭಿಕರಿಗೆ ಪುಷ್ಪಾಹಾರ ತಾಂಬೂಲಗಳ ವಿನಿಯೋಗವಾಗಿ ದರ್ಬಾರು ಮುಗಿದಿತು. ಸಾಯಂಕಾಲ 5 ಗಂಟೆಯಿಂದ 7 ಗಂಟೆಯವರೆಗೂ ಮಳೆಯು ಸುರಿಯುತ್ತಿದ್ದುದರಿಂದ, 7 ಗಂಟೆಯಮೇಲೆ ಶ್ರೀಮನ್ಮಹಾರಾಜರವರು ಅಮೋಘವಾದ ವಸ್ತ್ರಾಭರಣಾಲಂಕಾರದಿಂದ ದಿವ್ಯಾಶ್ವವನ್ನೇರಿ ಚತುರಂಗಬಲಪರಿವೃತರಾಗಿ ನಾನಾವಿಧ ವಾದ್ಯವೈಭವಗಳೊಡನೆ ಕೋಟೆಯ ಉತ್ತರದ್ವಾರದಿಂದ ಉತ್ಸವಗೊಂಡು ದೊಡ್ಡಪೇಟೆ ವೆಲ್ಲಿಂಗ್ಟನ್ ಲಾಡ್ಜ್ ಮಾರ್ಗವಾಗಿ ರೆಸಿಡೆನ್ಸಿ ಬಂಗಲೆಗೆ ದಯಮಾಡಿಸಿದರು. ಮ್ಯುನಿಸಿಪಾಲಿಟಿಯವರಿಂದಲೂ, ಪ್ರಜೆಗಳಿಂದಲೂ ಧ್ವಜಪತಾಕವಿತಾನ ಕದಳೀಸ್ತಂಭ ತೋರಣಾದಿಗಳಿಂದ ರಾಜವೀಧಿಯು ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದಿತು. ಮಾರ್ಗದಲ್ಲಿ ಅಲ್ಲಲ್ಲಿಗೆ ದೊಡ್ಡ ಮನುಷ್ಯರುಗಳು ತಂತಮ್ಮ ಮನೆಯ ಮುಂಗಡೆಯಲ್ಲೂ ಮ್ಯು|| ಕೌನ್ಸಿಲರುಗಳು ಸೆಂಟ್ರಲ್‌ಪೊಲೀಸುಸ್ಟೇಷನ್ನಿನ ಮುಂಗಡೆ ಹಾಕಿಸಿದ್ದ ಚಪ್ಪರದಲ್ಲೂ ಶ್ರೀಮನ್ಮಹಾರಾಜರವರಿಗೆ ಫಲಪುಷ್ಪಗಳನ್ನು ಸಮರ್ಪಿಸಿದರು. ಕೋಟೆಯಿಂದ ರೆಸಿಡೆನ್ಸಿ ಬಂಗಲೆಯವರೆಗೂ ದಾರಿಯ ಇಕ್ಕೆಲದಲ್ಲೂ ಮನೆಗಳ ಮಾಡದ ಮೇಲೂ ಸಹಸ್ರಾರು ಪ್ರಜೆಗಳು ಅಲಂಕೃತರಾಗಿ ನಿಂತು ಉತ್ಸವವನ್ನು ನೋಡಿ ಆನಂದಪಟ್ಟು ಕರತಾಡನಗಳನ್ನು ಮಾಡುತ್ತಿದ್ದರು. ಪರಸ್ಥಳಗಳಿಂದ ಜನರು ತಕ್ಕ ಮಟ್ಟಿಗೆ ಬಂದಿದ್ದರು. ಮಹಾಸ್ವಾಮಿಯವರು ರೆಸಿಡೆನ್ಸಿಬಂಗಲೆಯನ್ನು ತಲುಪುತಲೆ ಸ್ವಲ್ಪ ವಿಶ್ರಮಿಸಿಕೊಂಡು ಸೇನಾಪಂಙ್ತಿಗಳು ನಿಂತಿದ್ದ ಬೈಲುಪ್ರದೇಶಕ್ಕೆ ಅಶ್ವಾರೂಢರಾಗಿ ಚಿತ್ತೈಸಿ ಅಲ್ಲಿ ನಡೆಯಿಸಲ್ಪಟ್ಟಸೇನಾವಿನ್ಯಾಸವನ್ನು ಪರಾಮರಿಸಿ ಅಲ್ಲಿಂದ ಬಂಗಲೆಗೆ ತೆರಳಿ ಸ್ವಲ್ಪಕಾಲವಿದ್ದು ರೆಸಿಡೆನ್ಸಿಯ ಪಶ್ಚಿಮದ್ವಾರವಾದ ವೆಲ್ಲಿಂಗ್ಟನ್ ರೋಡಿನಿಂದ ಅನೇಕದೀಪಾವಳಿಗಳಿಂದಲೂ ಗ್ಯಾಸ್‌ದೀಪಪಂಙ್ತಿಗಳಿಂದಲೂ ಪರಿವೃತರಾಗಿ ನೋಟಕರ ಕಣ್ಣಿಗೆ ಹಬ್ಬವನ್ನುಂಟುಮಾಡುತ ದೀಪೋತ್ಸವದಿಂದ ಝಗಝಗಿಸುತ್ತಿದ್ದ ವೆಲ್ಲಿಂಗ್ಟನ್ ಬಂಗಲೆರೋಡು ದೊಡ್ಡಬೀದಿ ಸ್ಟಾಚ್ಯೂಸ್ಕ್ವೇರು ಇವುಗಳಮೂಲಕ ಕೋಟೆಯನ್ನು ಪ್ರವೇಶಿಸಿ ದೇವರುಗಳ ದರ್ಶನಾನಂತರ ಅರಮನೆಯನ್ನು ಸೇರುವಾಗ್ಯೆ ರಾತ್ರಿ 10½ ಗಂಟೆಯಾಗಿದ್ದಿತು. ನೆನ್ನೆಯದಿನ ರಾತ್ರಿ ಮತ್ತು ಈದಿನ ರಾತ್ರಿ ನಡಿಯಬೇಕಾಗಿದ್ದ ದರ್ಬಾರು ಜರುಗಲಿಲ್ಲವು. ಕೆಲ ದಿವಸಗಳ ಹಿಂದೆ ಕಳವಳಕ್ಕೆ ಅವಕಾಶವನ್ನುಂಟುಮಾಡಿದ್ದ ಕಾಲಸ್ಥಿತಿಯು ಸಂಸ್ಥಾನದ ಬಹುಕಡೆ ಈಚೆಗಾದ ಮಳೆಯಿಂದ ಸುಮುಖವಾಗಿ ಜನರಲ್ಲಿ ತಕ್ಕಮಟ್ಟಿಗೆ ವಿಕಾಸವನ್ನುಂಟುಮಾಡಿರುವುದರಮೇಲೆ ವರ್ಧಂತ್ಯುತ್ಸವದ ವೈಭವವು ಚೆನ್ನಾಗಿ ಸಾಗಿತು. ಪ್ರಜಾಪ್ರತಿನಿಧಿ ಸಭೆಯು ಮತ್ತು ಸಂಪದಭಿವೃದ್ಧಿ ಸಮಾಜದ ಅಧಿವೇಶಗಳೂ ಕುದುರೆಯ ಪಂದ್ಯವೂ ನಡೆಯುತ್ತಿರುವುದರಿಂದ ಈ ವಾರವೂ ಮುಂದಣ ವಾರವೂ ರಾಜಧಾನಿಯು ಸಂಭ್ರಮದಿಂದ ನಲಿಯುತ್ತಿರುವುದು. ದೇಶದ ಸಕಲ ಪ್ರಜೆಗಳ ಅಭಿವೃದ್ಧಿಸುಖಶಾಂತಿಗಳಿಗೆಲ್ಲಾ ಮೂಲಭೂತರಾಗಿ ಅವರ ಶ್ರೇಯಸ್ಸನ್ನೇ ಅಹರ್ನಿಶಿಯೂ ಚಿಂತಿಸುತ್ತಿರುವ ನಮ್ಮ ಮಹಾಪ್ರಭುವರ್ಯರಿಗೆ ಇಂತಹ ವರ್ಧಂತ್ಯುತ್ಸವಗಳು ಅನೇಕವಾಗಿ ನಡೆಯುತ್ತಿರುವಂತೆ ಜಗನ್ಮಾತೆಯು ಅನುಗ್ರಹಿಸಲಿ.

ಓಡ್ವಯರು—ನಾಯರು ವಿವಾದದ ಫಲಿತಾಂಶ.

ಜಲಿಯನ್‌ವಾಲಾಬಾಗಿನಲ್ಲಿ ಆದ ಭಾರತೀಯರ ವಧೆಯನ್ನು ಕುರಿತು ಸರ್ ಶಂಕರನ್‌ನಾಯರು ಚೆನ್ನಾಗಿ ನಿರಸನ ಮಾಡಿ ಬರೆದಿದ್ದುದಕ್ಕಾಗಿ ಅವರಮೇಲೆ ಇಂಗ್ಲೆಂಡಿನಲ್ಲಿ ಮಾನನಷ್ಟಕ್ಕಾಗಿ ವಿವಾದವು ತರಲ್ಪಟ್ಟಿದ್ದು, ನಾಯರು ತಮ್ಮ ಲೇಖನಾಭಿಪ್ರಾಯಸಮರ್ಥನಕ್ಕಾಗಿ ಭರತಖಂಡದಲ್ಲೂ ಅನೇಕ ದೊಡ್ಡಮನುಷ್ಯರುಗಳ ಸಾಕ್ಷ್ಯಗಳನ್ನು ಹೇಳಿಸಿ ದೋಷಮುಕ್ತರಾಗಲು ಬಹಳ ಸಾಹಸಪಟ್ಟಾಗ್ಯೂ ಆಂಗ್ಲನ್ಯಾಯಾಧಿಪತಿಯಾದ ಮಾಕರ್ಡಿಯವರು, ಜಲಿಯನ್‌ವಾಲಾಬಾಗಿನ ವಧೆನಡೆಸಿದ ಡಾಯರುಸೇನಾನಿಯು ಸಾಮ್ರಾಜ್ಯರಕ್ಷಕನೆಂದೂ, ಓಡ್ವಯರು ನಿರ್ದೋಷಿಯೆಂದೂ ಸ್ವಜಾತ್ಯಭಿಮಾನದಿಂದ ತೀರ್ಮಾನಿಸಿ ವಾದಿಗಾದ ಮಾನನಷ್ಟಕ್ಕಾಗಿ 7,500 ರೂಪಾಯಿಗಳನ್ನೂ, ವೆಚ್ಚಕ್ಕಾಗಿ 3,00,000 ರೂ ಗಳನ್ನೂ ನಾಯರು ಕೊಡಬೇಕೆಂದು ವಿಧಿಸಿರುವರು. ಜಲಿಯನ್‌ವಾಲಾಬಾಗಿನಲ್ಲಿ ಡಾಯರಿಂದ ನಡಿಸಲ್ಪಟ್ಟ ಘೋರಕೃತ್ಯವನ್ನು ಈಗಲೂ ನೆನಸಿಕೊಂಡರೆ ಎಂತಹವರಿಗಾದರೂ ಎದೆಯು ಬಿರಿದುಹೋಗುತ್ತದೆ. ಇಂತಹ ಅಮಾನುಷಕೃತ್ಯವನ್ನು ನಡಿಸಿ ಆಂಗ್ಲಚಕ್ರಾಧಿಪತ್ಯಕ್ಕೆ ಕಳಂಕವನ್ನುಂಟುಮಾಡಿದುದನ್ನು ಖಂಡಿಸಿ ಸರ್ ನಾಯರು ನಿರ್ಮತ್ಸರಬುದ್ಧಿಯಿಂದಲೂ, ಪಶ್ಚಾತ್ತಾಪದಿಂದಲೂ ಬರೆದಿರುವುದು ಸತ್ಯಸಂಧರೆಂದೆನಿಸಿಕೊಂಡಿರುವ ಆಂಗ್ಲನ್ಯಾಯಮೂರ್ತಿಗಳು ಈ ರೀತಿ ಸರ್ ನಾಯರು ದೋಷಿಗಳೆಂದು ತೀರ್ಮಾನಿಸಿರುವುದರಲ್ಲಿ ಸ್ವಜಾತ್ಯಾಭಿಮಾನವು ನ್ಯಾಯರಕ್ಷಾಭಿಮಾನಕ್ಕಿನ್ನ ದೊಡ್ಡದೆಂಬುದು ಒಡೆದುತೋರುತ್ತದೆ. ಸರ್ ನಾಯರವರಿಗೆ ಈ ವಿವಾದದಿಂದ ಐದುಲಕ್ಷ ರೂಪಾಯಿವರೆಗೆ ವ್ಯಯವಾಗಿರುತ್ತದೆಂದು ಹೇಳಬಹುದಾಗಿದೆ.

ವರ್ಧಂತ್ಯುತ್ಸವದ ಪ್ರಜಾಪ್ರತಿನಿಧಿಸಭಾಧಿವೇಶನವು.

ಶ್ರೀಮನ್ ಮಹಾರಾಜರವರ ನೂತನ ಶಾಸನಪ್ರಕಾರ ಸಂಸ್ಕೃತಿಗೊಂಡು ಉದ್ಭವಿಸಿರುವ ಪ್ರಜಾಪ್ರತಿನಿಧಿ ಸಭೆಯ ಬಡ್ಜೆಟ್ ಅಧಿವೇಶನವು ಕಳೆದ ಸೋಮವಾರ ಮಧ್ಯಾಹ್ನ 12 ಗಂಟೆಗೆ ರಾಜಧಾನಿಯ ಜಗನ್ಮೋಹನ ಪ್ರಾಸಾದದ ಸಭಾಂಗಣದಲ್ಲಿ ದಿವಾನ್ ಮಿ|| ಬಾನರ್ಜಿಯವರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ನಡಿಯುತ್ತಿರುವುದು. ಆರಂಭದ ದಿವಸ ಸಭೆಗೆ ನೇಪಾಳದ ರಾಜಪುತ್ರರೂ, ಮದ್ರಾಸು ನ್ಯಾಯವಿಧಾಯಕ ಸಭಾಧ್ಯಕ್ಷರೂ, ಪ್ರೊಫೆಸರ್ ರಂಗನಾಥಂರವರೂ ಬಂದಿದ್ದರು. ಪ್ರತಿನಿಧಿಗಳ ಸಂಖ್ಯೆಯು 200ಕ್ಕೆ ಮೇಲ್ಪಟ್ಟಿದ್ದಿತು. ದಿವಾನರು ತಮ್ಮ ಭಾಷಣವನ್ನು ಆಂಗ್ಲಭಾಷೆಯಲ್ಲಿ ಓದಿದನಂತರ ಅದರ ಕನ್ನಡ ಪರಿವರ್ತನೆಯನ್ನು ಮ|| ಕೆ. ಎಚ್. ರಾಮಯ್ಯನವರು ಹೆದ್ದನಿಯಿಂದ ಬಹಳ ಸ್ಫುಟವಾಗಿ ಓದಿದರು. ಇದರ ಮುಖ್ಯಭಾಗವು ಈ ಪತ್ರಿಕೆಯ ಬೇರೊಂದುಕಡೆ ಮುದ್ರಿಸಲ್ಪಟ್ಟಿರುತ್ತದೆ. ಇದರ ಮೇಲಣ ನಮ್ಮಭಿಪ್ರಾಯವನ್ನು ಮುಂದೆ ತಿಳಿಸುವೆವು. ಭಾಷಣವೋದಲ್ಪಟ್ಟಮೇಲೆ ಕೆಲ ಶಾಸನಗಳೋದಲ್ಪಟ್ಟು ಮೆಂಬರುಗಳಿಂದಂಗೀಕರಿಸಲ್ಪಟ್ಟುವು. ಮಾರನೆಯದಿನ ಮೆಂಬರುಗಳಿಂದ ಕೇಳಲ್ಪಟ್ಟಿದ್ದ ಪ್ರಶ್ನಾಂಶಗಳಿಗೆ ಸರ್ಕಾರಿಯುತ್ತರಗಳು ಕೊಡಲ್ಪಟ್ಟು ಬಡ್ಜೆಟ್ ಚರ್ಚೆಗೆ ಆರಂಭವಾಗಿ ನಡಿಯುತ್ತಿರುವುದು.

ಮದ್ರಾಸು ಮತ್ತು ಮೈಸೂರು ವಿಶ್ವವಿದ್ಯಾಲಯಗಳ ಹಾಗೂ ಎಸ್. ಎಸ್. ಎಲ್. ಸಿ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ವೀರಶೈವ ವಿದ್ಯಾರ್ಥಿಗಳು :—

ಮದ್ರಾಸು ವಿಶ್ವವಿದ್ಯಾಲಯದ ಬಿ.ಎಲ್. ಪರೀಕ್ಷೆಯಲ್ಲಿ

ಮ|| ಗಳಾದ 1. ಎಂ.ಎಸ್. ಬಸವಲಿಂಗಯ್ಯ, ಬಿ. ಎ., 2. ಜಿ. ಎಚ್. ಚನ್ನಬಸಪ್ಪ, ಬಿ. ಎ.

ಎಫ್. ಎಲ್. ಪರೀಕ್ಷೆಯಲ್ಲಿ—

ಮ|| ಗಳಾದ 1. ಟಿ.ವಿ. ರುದ್ರಪ್ಪ, ಬಿ.ಎ., 2. ಮುದ್ದಪ್ಪ, ಬಿ.ಎ., 3. ಪ್ರಸಾದ್, ಬಿ.ಎ., 4. ಎನ್. ಚನ್ನಪ್ಪ, ಬಿ.ಎ.

ಬಿ. ಎ. ಪರೀಕ್ಷೆಯಲ್ಲಿ,

1. ಡಿ. ನಂಜುಂಡಸೆಟ್ಟರು.

ಮೈಸೂರು ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ

ಮ|| ಗಳಾದ 1. ಎಂ. ಬಸಪ್ಪನವರು, 2. ಟಿ. ವಿ. ರಾಚಪ್ಪನವರು, 3. ಡಿ. ಎನ್. ಪ್ರಸನ್ನಯ್ಯನವರು, 4. ಎಸ್. ಸಿ. ಮಲ್ಲಪ್ಪನವರು, 5. ಎಂ. ಸಿ. ಗುರುಬಸವಯ್ಯನವರು, 6. ಮಹಂತದೇವರು, 7. ಕುಮಾರಾರಾಧ್ಯರು, 8. ಡಿ.ಎಸ್. ರುದ್ರಪ್ಪನವರು, 9. ನಾಗಯ್ಯನವರು, 10. ನಿಜಲಿಂಗಪ್ಪನವರು, 11. ಟಿ. ಚನ್ನಬಸಪ್ಪವನವರು.

ಇಂಜನಿಯರಿಂಗ್ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ—

ಮ|| ಹುಚ್ಚಪ್ಪನವರು.

ದಾವಣಗೆರೆಯಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ—

ಮ|| ಗಳಾದ 1. ಎಂ. ಭಂಗಾರಯ್ಯ, 2. ಬಿ. ಎಸ್. ವೀರಪ್ಪ, 3. ಎಂ. ಎಸ್. ಧುಂಡಪ್ಪ, 4. ಒ. ವೀರಬಸಪ್ಪ, 5. ಎಂ. ಬಿ. ವೀರಬಸಪ್ಪ, 6. ಎಸ್. ವೀರಭದ್ರಪ್ಪ, 7. ಎಂ. ಕರಿಬಸವಪ್ಪ, 8. ಎಚ್. ಕೊಟ್ರಬಸಪ್ಪ, 9. ಡಿ. ಗಂಗಾಧರನ್, 10. ಎಚ್. ಎನ್. ಚಂದ್ರಶೇಖರಯ್ಯ, 11. ಡಿ. ಎಚ್. ಶಂಕರಯ್ಯ, 12. ಪಿ. ಪರಪ್ಪನಾಯಕ್.

ಸ್ವದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಕಳೆದ ಮೂರು ದಿವಸಗಳಿಂದಲೂ ಮೋಡಮುಸುಕಿಕೊಂಡಿದ್ದು ಪದೇಪದೇ ಜಿಡಿಮಳೆಯಾಗುತ್ತಿರುವುದರಿಂದ ವಾತಾವರಣವು ಬಹಳ ತಂಪಾಗಿಯೂ ಉಲ್ಲಾಸಕರವಾಗಿಯೂ ಇರುತ್ತದೆ. ಬೆಂಗಳೂರಿನಲ್ಲೂ ಮಳೆಯು ಚೆನ್ನಾಗಿ ಆಗುತ್ತಿರುವುದಾಗಿ ಕೇಳುತ್ತೇವೆ.

ಕಳೆದ ಸೋಮವಾರ ಬೆಂಗಳೂರಿಂದ ರಾಜಧಾನಿಗೆ ಬರುತ್ತಿದ್ದ ಮೋಟಾರುಬಂಡಿಯು ಊರಹೊರಗಡೆ ಒಬ್ಬ 12 ವರ್ಷ ವಯಸ್ಸಿನ ಬಾಲಕನಿಗೆ ತಾಕಬಡಿದುದರಿಂದ, ಆ ಬಾಲಕನು ಪ್ರಾಣಾಪಾಯವನ್ನು ಹೊಂದಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಸ್ವಲ್ಪಹೊತ್ತಿನಮೇಲೆ ಮೃತನಾದನು.

ಅರಮನೆಯಲ್ಲಿ ಈ ತಾ|| 19 ರಲ್ಲಿ ನಡಿಯಬೇಕಾಗಿರುವ ಸರ್‌ದಾರ್ ಲಕ್ಷ್ಮೀಕಾಂತರಾಜ ಅರಸಿನವರ ಪುತ್ರಿಯ ವಿವಾಹ ಮಹೋತ್ಸವದ ಪೂರ್ವಾಂಗ ಕಾರ್ಯಗಳು ನಾಳೆಯ ದಿನದಿಂದಲೇ ಆರಂಭವಾಗುವ ಪ್ರಯುಕ್ತ ನೆನ್ನೆ ಮತ್ತು ಈದಿನ ರಾತ್ರಿಗಳಲ್ಲಿ ನಡಿಯಬೇಕಾಗಿದ್ದ ಶ್ರೀಮನ್ ಮಹಾರಾಜರವರ ದರ್ಬಾರು ನಿಲ್ಲಿಸಲ್ಪಟ್ಟುದಾಗಿ ಕೇಳುತ್ತೇವೆ.

ರಾಜಧಾನಿಯ ಮ್ಯು|| ಕೌನ್ಸಿಲರು ಮತ್ತು ಕಬ್ಬಿಣದ ವ್ಯಾಪಾರಿಗಳು ಆದ ಮ|| ಟಿ. ತಿರುವೆಂಗಡಮೊದಲಿಯಾರರು ತಮ್ಮ ಜ್ಯೇಷ್ಠಪುತ್ರರ ವಿವಾಹಮಹೋತ್ಸವವನ್ನು ಕಳೆದ ಗುರುವಾರದ ದಿವಸ ಬಹಳ ವಿಜೃಂಭಣೆಯಿಂದ ನೆರವೇರಿಸಿ, ಅಧಿಕಾರಿಗಳು, ಮ್ಯು|| ಕೌನ್ಸಿಲರುಗಳು, ಲಾಯರುಗಳು ವರ್ತಕರು ಮೊದಲಾಗಿ ದೊಡ್ಡಮನುಷ್ಯರುಗಳನ್ನು ಬರಮಾಡಿಕೊಂಡು ಸಂಗೀತಶ್ರವಣದಿಂದಲೂ ಫಲತಾಂಬೂಲಗಳಿಂದಲೂ ಸತ್ಕರಿಸಿದರು.

ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವಕ್ಕಾಗಿ ರಾಜಧಾನಿಗೆ ದಯಮಾಡಿಸಿರುವ ಮದ್ರಾಸ್ ಗೌನರ್‌ದಂಪತಿಗಳು ಖಾಸಬಂಗಲೆಯಲ್ಲೂ, ಬೊಬ್ಬಿಲಿಮಹಾರಾಜರು ವಸಂತಮಹಲಿನಲ್ಲೂ, ಮದ್ರಾಸಿನ ಚೀಫ್‌ಮಿನಿಸ್ಟರಾದ ಆ|| ಪನಗಲ್ ರಾಜರು ಸ್ಟಾಫ್‌ಕ್ವಾರ್ಟರಿನಲ್ಲೂ, ಮದ್ರಾಸ್ ಹೈಕೋರ್ಟು ನ್ಯಾಯಮೂರ್ತಿಗಳಾಗಿದ್ದ ಆ|| ಟಿ. ಎ. ಶೇಷಗಿರಿ ಅಯ್ಯರ್‌ರವರು ರಾಮಮಂದಿರದಲ್ಲೂ ಇಳಿದುಕೊಂಡು ಅರಮನೆಯ ಆತಿಥ್ಯದಲ್ಲಿರುವರು.

ರಾಜಧಾನಿಯ ಶ್ರೀಮಂತ ಮೋತಿಖಾನೆ ಅನಂತರಾಜಯ್ಯನವರು ತಮ್ಮ ಪುತ್ರಿಯ ಲಗ್ನವನ್ನು ಕಳೆದ ಸೋಮವಾರ ಬಹಳ ವೈಭವದಿಂದ ನಡೆಯಿಸಿದರು. ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಅಮೀನ್ ಉಲ್ ಮುಲ್ಕ್ ಮಿ|| ಮಿರ್ಜಾ ಸಿ. ಐ. ಇ., ಯವರು ಅ|| ಪ್ರೈವೇಟ್ ಸೆಕ್ರೆಟರಿ ಮ|| ಎಸ್. ವಿ. ರಾಜಗೋಪಾಲಚಾರ್ಯರು ಮೊದಲಾಗಿ ಸರ್ಕಾರಿಯುದ್ಯೋಗಸ್ಥರುಗಳೂ, ಲಾಯರುಗಳು, ಮ್ಯುನಿಸಿಪಲ್ ಕೌನ್ಸಿಲರುಗಳು, ವರ್ತಕರು ಮೊದಲಾಗಿ ಪುರಪ್ರಮುಖರುಗಳೂ ಸೋಮವಾರ ಸಾಯಂಕಾಲ ವಧೂವರರ ಆರತ್ಯಕ್ಷತೆಗೆ ಆಹ್ವಾನಿಸಲ್ಪಟ್ಟು ಮ|| ಭಕ್ಷಿ ಸುಬ್ಬಣ್ಣನವರ ವೀಣಾವಾದನದಿಂದಲೂ ಫಲತಾಂಬೂಲಗಳಿಂದಲೂ ಸತ್ಕರಿಸಲ್ಪಟ್ಟರು.

ಪ್ರಜಾಪ್ರತಿನಿಧಿಸಭೆಯಿಂದ ನ್ಯಾಯವಿಧಾಯಕಸಭೆಗೆ 8 ಜನ ಮೆಂಬರುಗಳನ್ನು ಚುನಾಯಿಸಿದ ಕಾಲದಲ್ಲಿ ಸರ್ಕಾರಿಯೇರ್ಪಾಟು ವಿಧಿಬದ್ಧವಾಗಿರಲಿಲ್ಲವಾದುದರಿಂದಲೂ ಉಮೇದುವಾರರುಗಳಿಂದ ಅನ್ಯಾಯಾಚರಣೆ ನಡಿಸಲ್ಪಟ್ಟಿತಾದುದರಿಂದಲೂ, ಆ ಚುನಾವಣೆಯನ್ನು ರದ್ದುಪಡಿಸಬೇಕೆಂದು ಬೆಂಗಳೂರು ಮ|| ಚರ್ಲೀಕೆ ಕೃಷ್ಣಮೂರ್ತಿರಾಯರು ಮೈಸೂರು ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ ಮಾಡಿರುವ ವಿವಾದವು ಕಳೆದ ತಾ|| 9 ರಲ್ಲಿ ಆರಂಭವಾಗಿ ನಡಿಯುತ್ತಿರುವುದು. ಫಿರ್ಯಾದಿಕಡೆ ಮ|| ಎ. ಕೃಷ್ಣರಾಯರೂ ಇದಿರು ಪಕ್ಷಿಗಳಕಡೆ ಅಂದರೆ ಉತ್ತೀರ್ಣರಾಗಿರುವ 8 ಮೆಂಬರುಗಳ ಕಡೆ ಮೈಸೂರು ಅಡ್ವೋಕೇಟ್ ಮ|| ಎಚ್. ಸಿ. ದಾಸಪ್ಪನವರೂ ಬೆಂಗಳೂರು ಅಡ್ವೋಕೇಟ್ ಮಿ|| ಜೇಮಿಯರ್‌ರವರೂ ವಕೀಲಿಯನ್ನು ವಹಿಸಿಕೊಂಡು ನಡಿಸುತ್ತಿರುವರು. ಉಭಯ ಪಕ್ಷಿಗಳ ಕಡೆಯ ಸಾಕ್ಷಿಗಳ ವಿಚಾರಣೆಯು ಪೂರೈಸಿದುದರಿಂದ ನಾಳೆಯ ದಿನ ಆರ್ಗ್ಯುಮೆಂಟು ನಡಿಸಲ್ಪಡುವುದು. ಇದರ ಫಲಿತಾಂಶವು ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿದೆ.

1924ನೇ ಜೂನ್ 4ನೇ ತಾರೀಖಿಗೆ ಆಖೈರಾದ ವಾರದಲ್ಲಿ ಆದ ಸರ್ಕಾರಿಯಪ್ಪಣೆಗಳು.

1. ಅಸಿಸ್ಟೆಂಟ್ ಕಮಿಷನರಾದ ಮಿ|| ಟಿ. ಹನುಮಂತರಾಯರನ್ನು, ಅವರು ರಜಾದಿಂದ ವಾಪಸು ಬಂದನಂತರ ಗತಿಸಿದ ಮಿ|| ಎನ್. ಕೃಷ್ಣಸ್ವಾಮಿರಾಯರ ಐವಜಿನಲ್ಲಿ ಅಸಿಸ್ಟೆಂಟ್ ಕಂಟ್ರೋಲರನ್ನಾಗಿ ನೇಮಿಸಿ ಕಂಟ್ರೋಲರವರ ಆಫೀಸಿಗೆ ಮೊಕರೂರ್ಮಾಡಿದೆ.

2. ಅಸಿಸ್ಟೆಂಟ್ ಇಂಜನೀಯರಾದ ಮಿ|| ಎಸ್. ಮುತ್ತುಸಾಮಿ ಅಯ್ಯರ್ ಸಿ.ಇ. ಯವರನ್ನು, ಕಂಬೈನ್ಡ್ ಫರ್ಲೋ ರಜದಮೇಲಿರುವ ಮಿ|| ಎಸ್. ಶ್ರೀನಿವಾಸ ಅಯ್ಯರ್‌ರವರ ಐವಜಿನಲ್ಲಿ ಅವರು ಭದ್ರಾ ಅಣೆಕಟ್ಟು ರೇಂಜಿನ ಚಾರ್ಜನ್ನು ವಹಿಸಿದ ತಾರೀಖಿನಲಾಗಾಯಿತು ಅಫಿಷಿಯೇಟಿಂಗ್ ಎಗ್ಸಿಕ್ಯುಟಿವ್ ಇಂಜನೀಯರನ್ನಾಗಿ ನೇಮಿಸಿದೆ.

3. ಮಿ|| ಡಿ. ಎಸ್. ವೆಂಕಣ್ಣ ಬಿ. ಎಸ್. ಸಿ. ಯವರನ್ನೂ ಮತ್ತು ಮಿ|| ಎಂ. ಹಯಾತ್‌ರವರನ್ನೂ 150-10-200 ರೂಪಾಯಿಗಳ ಗ್ರೇಡಿನಲ್ಲಿ ಮಾಹೆಯಾನಾ 150 ರೂಪಾಯಿಯ ತಲಬಿನಮೇಲೆ ಹಂಗಾಮಿ ಸಬ್ ಇಂಜನಿಯರುಗಳನ್ನಾಗಿ ನೇಮಿಸಿರುವುದನ್ನು ಸರ್ಕಾರದವರು ಮಂಜೂರ್ಮಾಡಿರುತ್ತಾರೆ.

4. ಇದರಡಿ ಕಂಡ ಆಫೀಸರುಗಳನ್ನು ಅವರವರ ಹುದ್ದೆಗೆ ಎದುರಾಗಿ ನಮೂದಿಸಿರುವ ಸ್ಟಾಂಡಿಂಗ್ ಕಮಿಟಿಗಳಿಗೆ ಸೆಕ್ರೆಟರಿಗಳನ್ನಾಗಿ ನೇಮಿಸಿರುವುದನ್ನು ಸರ್ಕಾರದವರು ಪ್ರಕಟಪಡಿಸಿರುತ್ತಾರೆ.

1. ಫೈನಾನ್ಷಿಯಲ್ ಸೆಕ್ರೆಟರಿಯವರು	ಫೈನಾನ್ಸ್ ಮತ್ತು ತೆರಿಗೆಗಳಿಗಾಗಿ ಇರುವ ಸ್ಟಾಂಡಿಂಗ್ ಕಮಿಟಿ.
2. ಲೋಕಲ್ ಮತ್ತು ಲೆಜಿಸ್ಲೆಟಿವ್ ಸೆಕ್ರೆಟರಿಯವರು	ಸ್ಥಳೀಯ ಪ್ರಜಾಧಿಕಾರ ಮತ್ತು ವೈದ್ಯ, ಜನಾರೋಗ್ಯ ಮತ್ತು ಸ್ಥಳಾರೋಗ್ಯದ ಇಲಾಖೆಗಳು, ಇವುಗಳಿಗಾಗಿ ಇರುವ ಸ್ಟಾಂಡಿಂಗ್ ಕಮಿಟಿ.
3. ಪಬ್ಲಿಕ್ ವರ್ಕ್ಸ್ ಇಲಾಖೆಯ ಸೆಕ್ರೆಟರಿಯವರು	ರೈಲ್ವೆ, ವಿದ್ಯುಚ್ಛಕ್ತಿ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳಿಗಾಗಿ ಇರುವ ಸ್ಟಾಂಡಿಂಗ್ ಕಮಿಟಿ.

5. ಸಂಸ್ಥಾನದಲ್ಲಿ ಮಳೆ ಬೆಳೆ ಇಲ್ಲದೆ ಕಷ್ಟವು ಪ್ರಾಪ್ತವಾದ ಪ್ರದೇಶಗಳಲ್ಲಿ ಸಾಲಗಳನ್ನು ಕೊಡತಕ್ಕ ಬಗ್ಗೆ ಇನ್ನೂ ಒಂದು ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಕೊಡುವಂತೆ ಸರ್ಕಾರದವರು ಮಂಜೂರಾತಿಯನ್ನು ಕೊಟ್ಟಿರುತ್ತಾರೆ. ಶಿವಮೊಗ್ಗ ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿ ಅದೇ ಉದ್ದೇಶಕ್ಕಾಗಿ ಉಪಯೋಗಿಸಲು ಇನ್ನೂ 15,000 ರೂಪಾಯಿಗಳನ್ನು ಮಂಜೂರ್ಮಾಡಿರುತ್ತಾರೆ.

6. ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕಿನ ರೀಸೆಟಲ್‌ಮೆಂಟ್ ವಿಷಯಕವಾದ ಸಲಹೆಗಳನ್ನು ಮಂಜೂರ್ಮಾಡಿ ಹುಕುಮನ್ನು ಸಾದರ್ಮಾಡಿದೆ. ಇದರಿಂದ ಕಂದಾಯದಲ್ಲಿ 24,610 ರೂಪಾಯಿ ಹೆಚ್ಚಾಗಿ ಬರುವುದು. ಹೊಸದರಗಳನ್ನು ಮಾಮೂಲ್ ಮೇರೆ ಮೂವತ್ತು ವರುಷಗಳ ಖಾತರಿಯೊಡನೆ 1924—25ನೇ ಇಸವಿಯಲಾಗಾಯಿತು ಜಾರಿಗೆ ತರಲಾಗುವುದು.

7. ಸೆಂಟ್ರಲ್‌ರಿಕ್ರೂಟ್‌ಮೆಂಟ್ ಬೋರ್ಡಿನ 16ನೇ ಮೀಟಿಂಗಿನಲ್ಲಿ ಮಾಡಿದ ಸಲಹೆಗಳಿಗನುಸಾರವಾಗಿ, ಡಿಸ್ಟ್ರಿಕ್ಟುಟ್ರೆಜರಿಗಳ ಹೆಡ್ ಅಕೌಂಟೆಂಟರುಗಳು ಕಂಟ್ರೋಲರವರ ಆಫೀಸಿನ ಅಕೌಂಟ್ಸ್ ಪರೀಕ್ಷೆಗೆ ಬದಲಾಗಿ ತೇರ್ಗಡೆಹೊಂದಬೇಕಾದ ವಿಷಯಗಳನ್ನು ಗೊತ್ತುಮಾಡಿ ಹುಕುಮನ್ನು ಸಾದರ್ಮಾಡಿದೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂ.

39 ನೆಯ ಹಿಂದೀರಾಷ್ಟ್ರೀಯ ಸಭೆಯ ಸ್ವಾಗತ ಮಂಡಳ.

ಸ್ವಾಗತ ಮಂಡಳಿಯ ಮಹಾಸಭೆಯು ಬರುವ ಜುಲೈ ತಿಂಗಳ ತಾರೀಖು 12 ನೆಯ ಶನಿವಾರದ ದಿವಸ ಬೆಳಿಗೆ 8 ಗಂಟೆಗೆ ಸ್ವಾಗತ ಮಂಡಳದ ಕಾರ್ಯಾಲಯದಲ್ಲಿ ಈಕೆಳಗಿನ ವಿಷಯವನ್ನು ವಿಚಾರಮಾಡುವದರ ಸಲುವಾಗಿ ಕೂಡತಕ್ಕದ್ದಿರುವದು.

ಅವಶ್ಯವಿದ್ದಲ್ಲಿ ಮರುದಿನವೂ (13-7-1924 ಸಭೆಯು) ನಡೆಯುವದು. ಸಭಾಸದರೆಲ್ಲರೂ ದಯಮಾಡಿ ಬರಬೇಕೆಂದು ವಿನಂತಿ ಅದೆ. ಸಭೆಯ ಮುಂದೆ ಬರತಕ್ಕ ವಿಷಯಗಳು :—

(1) ಕಾರ್ಯಕಾರಿ ಮಂಡಳಿಯವರು ತಯಾರಿಸಿರುವ ತಾತ್ಪೂರ್ತಿಕ ಅಂದಾಜಪಟ್ಟಿ (ಬಜೇಟ)ಯನ್ನು ಆಲೋಚಿಸುವದು.

(2) ಸಭೆಯ ಅಧಿಕಾರಿಗಳನ್ನು ಎಂದರೆ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಕೋಶಾಧ್ಯಕ್ಷ ಮತ್ತು ಲೆಖ್ಖ ಪರಿಶೋಧಕರನ್ನು ನೇಮಿಸುವದು.

(3) ವಿವಿಧ ಕೆಲಸಗಳ ಖಾತೆಗಳನ್ನು ಮಾಡಿ ಅವುಗಳ ಕಮಿಟಿಗಳನ್ನು ನೇಮಕಮಾಡುವದು. (ಉದಾಹರಣೆಗಾಗಿ, ಸ್ವಯಂಸೇವಕರಖಾತೆ, ಗುಡಿಸಲು ಛಪ್ಪರಗಳಖಾತೆ, ರೈಲ್ವೆ ಮತ್ತು ವಾಹನಗಳ, ನೀರಿನಖಾತೆ, ಕಾಂಗ್ರೆಸವಾರ್ತಾಪ್ರಚಾರಕ ಖಾತೆ, ಮೆರವಣಿಗೆ, ಧನಸಂಗ್ರಹ, ಪ್ರದರ್ಶನ, ದೀಪಗಳು, ಟಿಕೀಟುಗಳು, ಆರೋಗ್ಯವಿಚಾರಕ, ವೈದ ಕೀಯ, ಗಾಯನ, ಇತ್ಯಾದಿ ಅವಶ್ಯಕ ಖಾತೆಗಳನ್ನು ನಿರ್ಮಿಸಬಹುದು. ಅವುಗಳಲ್ಲಿ ಸಭೆಯವರಿಗೆ ಅವಶ್ಯವಿಲ್ಲದ್ದನ್ನು ತೆಗೆದುಹಾಕಬಹುದು.

(4) ನಿಯಮಗಳನ್ನು ಮಾಡುವದು.

(5) ಅ. ಭಾ. ರಾ. ಸಭೆಯ 16 ನೆಯ ನಿಯಮದ ಪ್ರಕಾರ ಅಧ್ಯಕ್ಷಪದವಿಗೆ ಬಂದ ಹೆಸರುಗಳನ್ನು ಪ್ರಾಂತಿಕ ಸಭೆಗಳಿಗೆ ತಿಳಿಸುವ ವಿಚಾರ.

ಕಾರ್ಯದರ್ಶಿ.

ಜೈನ ಎಜ್ಯುಕೇಷನ್ ಫಂಡು ಅಸೋಸಿಯೇಷನ್, ಮೈಸೂರು.

ಜೈನ ಎಜುಕೇಷನ್ ಫಂಡು ಅಸೋಸಿಯೇಷನ್ನಿನಿಂದ 1924-25ನೇ ಸಾಲಿಗೆ ವಿದ್ಯಾರ್ಥಿವೇತನಗಳನ್ನು ಅಪೇಕ್ಷಿಸತಕ್ಕ ಜೈನವಿದ್ಯಾರ್ಥಿಗಳು ಮೇಲ್ಕಂಡ ಅಸೋಸಿಯೇಷನ್ನಿಗೆ ಜುಲೈ ತಿಂಗಳು 15ನೇ ತಾರೀಖಿನೊಳಗಾಗಿ ಅಸೋಸಿಯೇಷನ್ನಿನಿಂದ ಗೊತ್ತುಮಾಡಲ್ಪಟ್ಟಿರುವ ಫಾರಂನಲ್ಲಿಯೇ ಅಪ್ಲಿಕೇಷನ್ ಬರೆದುಕೊಳ್ಳಬೇಕಾಗಿ ಸೂಚನೆ.

ಸೆಕ್ರೆಟರಿಗಳು, ಜೈನಎಜ್ಯುಕೇಷನ್ ಫಂಡ್ ಅಸೋಸಿಯೇಷನ್.

ನೋಟೀಸು.

ಬೆಂಗಳೂರಿನಲ್ಲಿರುವ ಶ್ರೀ ಜಯದೇವ ಮುರುಘರಾಜೇಂದ್ರ ವೀರಶೈವಾಶ್ರಮಕ್ಕೆ ಸೇರಿ ವಿದ್ಯಾಭ್ಯಾಸಮಾಡಲು ಅಪೇಕ್ಷಿಸುವ ವಿದ್ಯಾರ್ಥಿಗಳು ಈ ಮಾಹೆ 20ನೇ ತಾರೀಖಿನೊಳಗಾಗಿ ವಿಧಾಯಕವಾದಿರುವ ಅಪ್ಲಿಕೇಷನ್ ಫಾರಂನಲ್ಲಿ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು. ಇದರೊಂದಿಗೆ 25 ರೂ. ಅಡ್ವಾನ್ಸ್ ಫೀಯನ್ನೂ, ಹೊಸದಾಗಿ ಸೇರತಕ್ಕವರು ಅಡ್ವಾನ್ಸ್ ಫೀ ಸಂಗಡ 1 ರೂ. ಅಡ್ಮಿಷನ್ ಫೀಯನ್ನೂ ಸಹ ಕೊಡಬೇಕು. 1 ಆಣೆ ಸ್ಟಾಂಪ್ ಸಹಿತ ಈಕೆಳಗಿನ ವಿಳಾಸಕ್ಕೆ ಬರೆದುಕೊಂಡಲ್ಲಿ ಅಪ್ಲಿಕೇಷನ್ ಫಾರಂ ಕಳುಹಿಸಲ್ಪಡುವುದು. ಹೆಚ್ಚು ಸಂಗತಿಗಳನ್ನು ತಿಳಿಯಲಪೇಕ್ಷೆಯುಳ್ಳವರು - ಬೆಂಗಳೂರಿನಲ್ಲಿರುವ ಶ್ರೀ ಜಯದೇವ ಮುರುಘರಾಜೇಂದ್ರ ಹಾಸ್ಟಲಿನ ಸೆಕ್ರೆಟರಿಯವರಿಗೆ • ಬರೆದುಕೊಳ್ಳುವುದು.

ಆರ್. ಶಾಂತಯ್ಯ, ಮ್ಯಾನೇಜರ್.

ಶ್ರೀ ಜಯದೇವ ವೀರಶೈವ ಹಾಸ್ಟಲ್, ಶೇಷಾದ್ರಿರೋಡ್, ಬೆಂಗಳೂರು.

ಪ್ರಜಾಪ್ರತಿನಿಧಿಸಭೆಯ ವರ್ಷಾಂತ್ಯೋತ್ಸವದ ಅಧಿವೇಶನದಲ್ಲಿ ದಿವಾನರವರು ಮಾಡಿದ ಭಾಷಣದ ಮುಖ್ಯಾಂಶ.

೯ ನೆಯ ಜೂನ್ ೧೯೨೪.

ಮಹನೀಯರೇ:—

ಆಳುತ್ತಿರುವ ಮಹಾಸ್ವಾಮಿಯವರಾದ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರು ಕಳೆದ ಅಕ್ಟೋಬರ್ ತಿಂಗಳಲ್ಲಿ ಕರುಣಿಸಿದ ರಾಜಶಾಸನ ಪತ್ರಿಕೆಯಿಂದ ಸಮಾರಂಭಗೊಳಿಸಲ್ಪಟ್ಟ ರಾಜಕೀಯ ಸುಧಾರಣೆಗಳ ಪ್ರಕಾರ, ಪ್ರಜೆಗಳಿಗೆ ಉಪಯುಕ್ತವಾದ ಕೆಲಸಗಳನ್ನು ನೆರವೇರಿಸುವುದಕ್ಕಾಗಿ ಹೊಸದಾಗಿ ವ್ಯವಸ್ಥೆಗೊಂಡ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳೆಲ್ಲಾ ಮೊಟ್ಟಮೊದಲು ಸಭೆ ಸೇರಿರುವ ಈ ಪ್ರಾಮುಖ್ಯ ಸಮಯದಲ್ಲಿ, ಶ್ರೀಮನ್ ಮಹಾರಾಜರವರ ವರಪ್ರದಾನದಿಂದ ಯಾರ ಯೋಗಕ್ಷೇಮವೂ, ಮತ್ತು ಶ್ರೇಯಸ್ಸಾಧನೆಯೂ, ಬಹುಮಟ್ಟಿಗೆ ನಮ್ಮ ವಶಕ್ಕೆ ಒಪ್ಪಿಸಲ್ಪಟ್ಟಿವೆಯೋ, ಆ ಮೈಸೂರು ಸಂಸ್ಥಾನದ ನಿಖಿಲ ಪ್ರಜೆಗಳಿಗೂ ಮತ್ತು ದಯಾಮಯರಾದ ನಮ್ಮ ಪ್ರಭುಗಳಿಗೂ, ವಿಶ್ವಾಸಯೋಗ್ಯವಾದ ರೀತಿಯಲ್ಲಿ, ಆತ್ಮಸಾಕ್ಷಿಯಾಗಿಯೂ, ನಿರ್ವಂಚನೆಯಿಂದಲೂ, ನಮ್ಮ ಮಹತ್ತರವಾದ ಕಾರ್ಯಭಾರವನ್ನು ನೆರವೇರಿಸುವುದಕ್ಕೆ ತಕ್ಕ ಶಕ್ತಿಯನ್ನೂ, ಧೈರ್ಯವನ್ನೂ, ಕರುಣಿಸಿ ಆಶೀರ್ವದಿಸುವಂತೆ ಭಗವಂತನನ್ನು ಪ್ರಾರ್ಥಿಸುವುದು ಯುಕ್ತವಾಗಿರುತ್ತದೆ.

ಸಾಮಾನ್ಯ ವಿಚಾರ.

ತಮ್ಮಗಳೆಲ್ಲರಿಗೂ ಅತ್ಯಂತ ಆದರಪೂರ್ವಕವಾದ ಸುಸ್ವಾಗತವನ್ನು ಬಯಸುವ ಅಧಿಕಾರವನ್ನು ಪಡೆದಿರುವುದು ವಿಶೇಷವಾದೊಂದು ಗೌರವವೆಂದು ಭಾವಿಸಿರುತ್ತೇವೆ. ಕಳೆದ ಎಂಟು ವರುಷಗಳಿಂದಲೂ ಮೊದಲಿನಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದ ಕೌನ್ಸಿಲ್ ಮೆಂಬರಾಗಿಯೂ ಈಚೆಗೆ ಅದರ ದಿವಾನ್—ಪ್ರೆಸಿಡೆಂಟರಾಗಿಯೂ, ಮೈಸೂರು ಪ್ರಜಾಪ್ರತಿನಿಧಿಸಭೆಯೊಡನೆ ಸಂಸರ್ಗವನ್ನು ಪಡೆದಿರುವುದಕ್ಕಾಗಿ ನಿರಂತರವೂ ಅಭಿಮಾನದಿಂದ ನಲಿಯುತ್ತಿದ್ದೇವೆ. ಪ್ರಜಾಪ್ರತಿನಿಧಿಸಭೆಯು ಈಗ್ಗೆ 40 ವರ್ಷಗಳಿಗೆ ಮೇಲ್ಪಟ್ಟ ಕಾಲದಿಂದಲೂ, ಶ್ಲಾಘನೀಯವಾದ ರೀತಿಯಲ್ಲಿ ಕೆಲಸ ಮಾಡುತ್ತಾ ಬಂದು, ಈಗ ತನ್ನ ಹಿಂದಣ ರೂಪದಿಂದ ಮಾರ್ಪಟ್ಟು ಮೊದಲಿಗಿಂತ ಹೆಚ್ಚಿನ ಅಧಿಕಾರವುಳ್ಳ, ಮತ್ತು ಸರಿಯಾಗಿ ನಿರ್ದಿಷ್ಟವಾದ, ಅಲ್ಲದೆ ನಮ್ಮ ಸಂಸ್ಥಾನದ ಸಂಪ್ರದಾಯಕ್ಕೂ, ಮತ್ತು ನಮ್ಮ ಜನರ ಮನೋಭಾವಗಳಿಗೂ, ಪ್ರಕೃತಿಗೂ, ಅನುಗುಣವಾದ ರಾಜಕೀಯ ಸಂಸ್ಥೆಯಾಗಿ ಪರಿಣಮಿಸಿರುತ್ತದೆ. ಸಂಸ್ಥಾನದ ರಾಜಕೀಯ ವ್ಯವಸ್ಥೆಯಲ್ಲಿ ಈಗ ಈ ಸಭೆಗೆ ನಿಶ್ಚಿತವಾದ ಮತ್ತು ಬಹಳ ಪ್ರಾಮುಖ್ಯವಾದ, ಸ್ಥಾನವು ದೊರಕಿರುತ್ತದೆ; ಇದಕ್ಕೆ ಸಭೆಯ ವ್ಯವಸ್ಥೆಯು ಕಾನೂನಿನ ಆಧಾರದ ಮೇಲೆ ನಿಂತಿರುವುದು ಮಾತ್ರವೇ ಕಾರಣವಲ್ಲದೆ ಅದರ ಕಾರ್ಯಕಲಾಪಗಳೂ, ಅಧಿಕಾರಗಳೂ ಮತ್ತು ಜವಾಬ್ದಾರಿಗಳೂ ಹೆಚ್ಚಿರುವುದೂ ಕಾರಣವಾಗಿದೆ; ಈ ಸಭೆಯ ಮೆಂಬರುಗಳು ಮೊದಲಿಗಿಂತ ನಾಲ್ಕರಷ್ಟು ದೊಡ್ಡದಾದ ಚುನಾವಣೆ ಸ್ಥಾನದಿಂದ ನೇರವಾಗಿ ಚುನಾಯಿಸಲ್ಪಟ್ಟು ಪ್ರತಿನಿಧಿಗಳಾಗಿ ಬರುವಂತಾಗಿದೆ; ಮೆಂಬರುಗಳಲ್ಲಿ ಬಹುಮಂದಿ ಸಂಸ್ಥಾನದ ಹಲವು ಪ್ರದೇಶಗಳ ಪ್ರತಿನಿಧಿಗಳಾಗಿ ಬರುವವರಾಗಿದ್ದಾರೆ; ಅಲ್ಲದೆ ಈಗ ಅಲ್ಪಸಂಖ್ಯಾತ ಪಂಗಡಗಳ ಮತ್ತು ವಿಶೇಷೋದ್ದೇಶಗಳಿಗೆ ಸಂಬಂಧಪಟ್ಟ ಪಂಗಡಗಳ ಪ್ರತಿನಿಧಿಗಳೂ ಅಂಗೀಕೃತವಾದ ಸಂಘಗಳಿಂದ ಕ್ರಮವರಿತು ಸರಿಯಾಗಿ ಚುನಾವಣೆ ಹೊಂದಿ ಬರುವಂತಾಗಿದೆ. ಸಭೆಯ ವ್ಯವಸ್ಥೆಯಲ್ಲಿ, ವಾಣಿಜ್ಯ ಮತ್ತು ವ್ಯಾಪಾರಗಳಿಗೆ ಸಂಬಂಧಪಟ್ಟ ಪಂಗಡಗಳಿಗೂ, ಪ್ಲಾಂಟರುಗಳ ಮತ್ತು ಕೂಲಿಯವರ ಪಂಗಡಗಳಿಗೂ ತಕ್ಕ ಸ್ಥಾನಗಳು ದೊರೆತಿವೆ. ಮಹನೀಯರೆ, ಈ ಹೊಸರೀತಿಯ ಸಭೆಯಲ್ಲಿ ನೀವುಗಳೆಲ್ಲರೂ ಅಂಗಭೂತರೆನಿಸಿ ಸೇರಿರುವುದನ್ನು ಪರ್ಯಾಲೋಚಿಸಿ ನೋಡಿದರೆ, ಈ ಬದಲಾವಣೆಗಳ ಪರಿಣಾಮವು ಅತ್ಯಂತ ತೃಪ್ತಿಕರವಾಗಿರುವಂತೆ ನಮಗೆ ತೋರುತ್ತದೆ, ಮತ್ತು ಸಮಾರಂಭೋತ್ಸವದಲ್ಲಿ ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡಿಸಿದ ಉತ್ತೇಜಕವಾದ ಸಂದೇಶಕ್ಕನುಸಾರವಾಗಿ ನೀವುಗಳೆಲ್ಲರೂ • ಊಹಾಪೋಹ ವಿಚಾರದ ಸಾಮಾನ್ಯ ನಿಯಮದಿಂದಲೂ, ಸದುದ್ದೇಶದಿಂದಲೂ, ವಿಷಯವಿಮರ್ಶೆ ಮತ್ತು ಅನುಭವ ಪರಿಶೀಲನೆಗಳಿಂದಲೂ, ಕೂಡಿ ವರ್ತಿಸಿ ನಿಮಗೆ ಹೊಸದಾಗಿ ದೊರೆತಿರುವ ಅಧಿಕಾರಗಳನ್ನು ಜನಸಾಮಾನ್ಯದ ಉಪಯೋಗಕ್ಕಾಗಿ ಮಾತ್ರ • ವಿನಿಯೋಗಿಸುವಿರೆಂದು ಶ್ರೀಮನ್ ಮಹಾರಾಜರವರ ಸರ್ಕಾರದವರು ನಂಬುವುದಕ್ಕೆ ಸಂಪೂರ್ಣವಾಗಿ ಅವಕಾಶವಿರುತ್ತದೆ. ಈಗ ನಿಮ್ಮ ಮೇಲೆ ಹೊತ್ತಿರುವ ಕರ್ತವ್ಯಗಳನ್ನು ಪರಿಪಾಲಿಸುವುದರಲ್ಲಿ ನೀವು ಉದಾರಭಾವದಿಂದ ವರ್ತಿಸಬೇಕಾಗಿದೆ. ನೀವುಗಳು ಇನ್ನು ಮುಂದೆ ಕೇವಲ ಟೀಕೆಗಳಲ್ಲಿ ಮಾತ್ರವೇ ತೃಪ್ತರಾಗದೆ ನಿಯಮನಿರ್ಮಾಣ, ರಾಜ್ಯಾಡಳಿತ, ಮತ್ತು ಸಂಸ್ಥಾನದ ಆಯವ್ಯಯ, ಇವುಗಳ ವಿಚಾರದಲ್ಲಿಯೂ, ಸೂಕ್ತವಾದ ಕಾರ್ಯಕಲಾಪಗಳನ್ನು ಕೈಗೊಳ್ಳುವವರಾಗಬೇಕು. ರಾಜಕೀಯ ವಿಚಾರದಲ್ಲಿ ನಿಮ್ಮ ಮುಂದಣ ಅಭ್ಯುದಯವು, ದೇಶದ ಪ್ರಧಾನಹಿತಸಾಧನೆಗೆ ತಕ್ಕಂತೆ ನಿಷ್ಕಪಟವಾಗಿ ನೀವು ಎಷ್ಟರಮಟ್ಟಿಗೆ ನಿಮ್ಮ ಕರ್ತವ್ಯಗಳನ್ನು ಪರಿಪಾಲಿಸುವಿರೆಂಬುದನ್ನು ಅನುಸರಿಸಿರುತ್ತದೆ.

ಹೊಸದಾಗಿ ದೊರೆತಿರುವ ರಾಜಕೀಯ ಸುಧಾರಣೆಗಳನ್ನು ಆಚರಣೆಗೆ ತರುವುದರಲ್ಲಿ ದೇಶಾಭಿವೃದ್ಧಿಯನ್ನು ಮುಖ್ಯ ಗುರಿಯಾಗಿಟ್ಟುಕೊಂಡು ಉದಾರಭಾವದಿಂದ ವರ್ತಿಸಲು ಪ್ರಯತ್ನಿಸುವುದಾಗಿ ನ್ಯಾಯವಿಧಾಯಕ ಸಭೆಯವರಿಗೆ ಶ್ರೀಮನ್ ಮಹಾರಾಜರವರ ಸರ್ಕಾರದ ಪರವಾಗಿ ನಾವು ವಾಗ್ದಾನಮಾಡಿದ್ದೆವು. ಕಳೆದ ಅಕ್ಟೋಬರ್ ತಿಂಗಳಲ್ಲಿ ಶ್ರೀಮನ್ ಮಹಾರಾಜರವರ ರಾಜಶಾಸನ ಪತ್ರಿಕೆಯನ್ನು ಹಿಂದಿನ ಪ್ರಜಾಪ್ರತಿನಿಧಿ ಸಭೆಯವರಿಗೆ ಓದಿ ಹೇಳುವುದಕ್ಕೆ ಸ್ವಲ್ಪ ಮುಂಚೆ, ಬದಲಾವಣೆಗಳಲ್ಲಡಗಿರುವ ನಿಯಮಗಳಿಗೆ ಉದಾರವಾದ ವ್ಯಾಖ್ಯಾನವನ್ನು ಕೊಟ್ಟುಕೊಂಡು ಕೆಲಸ ನಡಿಸಲು ರಾಜ್ಯಾಡಳಿತದ ಮುಖ್ಯಸ್ಥರಾಗಿರುವ ಕಾರಣದಿಂದ ನಮಗೆ ದೊರೆಯುವ ಪ್ರತಿಯೊಂದು ಸಮಯವನ್ನೂ ನಮ್ಮ ಶಕ್ತಿಮೀರಿ ಸರಿಯಾಗಿ ವಿನಿಯೋಗಿಸುವುದಾಗಿ ವಾಗ್ದಾನಕೊಟ್ಟಿದ್ದೆವು. ಈ ಸಭೆಯವರಿಗೆ ಕೂಡ, ಅದೇ ವಾಗ್ದಾನಗಳನ್ನು ನಡೆಸಿಕೊಂಡು ಬರುವೆವೆಂದು ಒತ್ತಿ ಹೇಳುತ್ತೇವೆ; ಮತ್ತು ನಮಗಿಂತ ಸ್ವಲ್ಪ ಹಿಂದೆ ಈ ಸ್ಥಾನವನ್ನು ಅಲಂಕರಿಸಿದ್ದವರು ನಮ್ಮಲ್ಲಿ ಯಾವಾಗಲೂ ಸ್ನೇಹದಿಂದಲೂ, ದಯಾದ್ರ್ರತೆಯಿಂದಲೂ ಕೂಡಿ ಸ್ಮರಣೆಯಿಂದ ವರ್ತಿಸಿದುದು ನಮ್ಮ ಭಾಗ್ಯೋದಯವೇಸರಿ; ನೀವುಗಳು ಕೂಡ ನಿಮ್ಮ ಪ್ರೆಸಿಡೆಂಟರಾದ ನಮ್ಮಲ್ಲಿ ಅದೇ ರೀತಿಯಲ್ಲಿ ನಡೆದುಕೊಳ್ಳುತ್ತಾ ಬರಬೇಕೆಂದು ಇಲ್ಲಿರುವ ಎಲ್ಲಾ ಮೆಂಬರುಗಳನ್ನೂ ಅಪೇಕ್ಷಿಸುತ್ತೇವೆ. ನಾವುಗಳೆಲ್ಲರೂ ಹೊಸ ಕ್ರಮಕ್ಕನುಸಾರವಾಗಿ ಹೊಂದಿಕೊಂಡು ನಡೆಯಬೇಕಾಗಿದೆ; ರಾಜ್ಯಾಡಳಿತಗಳ ಮೇಲೆ ಪ್ರಜೆಗಳೇ ಹೆಚ್ಚಾಗಿ ಅಧಿಕಾರವನ್ನು ಚಲಾಯಿಸುವುದೆಂದರೆ, ಮುಂದೆ ಹೇಳುವ ಎರಡು ವಿಧದ ಸಂಗತಿಗಳೂ ನೆರವೇರಲೇ ಬೇಕು; ಸರ್ಕಾರದವರಿಗೆ ಸಹನವೂ ಮತ್ತು ಜನರ ಕೋರಿಕೆಯನ್ನು ಈಡೇರಿಸುವ ಆಸಕ್ತಿಯೂ ಅತ್ಯಂತ ಹೆಚ್ಚಾಗಿರಬೇಕು. ಜನರ ಪ್ರತಿನಿಧಿಗಳಿಗೆ ಮಿತಾಭಿಪ್ರಾಯವುಳ್ಳ ಮನೋಭಾವಗಳೂ ಜನಗಳ ಅಭ್ಯುದಯಕ್ಕೆ ಸಾಧಕವಾದ ವಿಚಾರಗಳಲ್ಲಿ ಸ್ವಾರ್ಥರಹಿತವಾದ ಮತ್ತು ಕೂಲಂಕಷವಾದ ಪರಿಶೀಲನೆಯೂ, ಒಟ್ಟು ದೇಶಕ್ಕೆ ಸಾಧ್ಯವಾದಷ್ಟು ಹೆಚ್ಚಾಗಿ ಸರ್ಕಾರದವರ ಸಹಾಯದಿಂದ ಮೇಲ್ಮೆಯನ್ನು ಒದಗಿಸಿಕೊಳ್ಳಬೇಕೆಂಬ ದೃಢಪ್ರತಿಜ್ಞೆಯೂ, ಇರಬೇಕು. ಮೊದಲಿದ್ದುದಕ್ಕಿಂತಲೂ ಹೆಚ್ಚು ಪರಿಮಾಣದಲ್ಲಿ ಕೆಲಸಗಳನ್ನು ನೆರವೇರಿಸಬೇಕಾಗಿರುವುದರಿಂದ ನಿಮ್ಮ ಕಾಲದ ಒಂದೊಂದು ಕ್ಷಣವೂ ಅನರ್ಘ್ಯವಾದುದು ಮತ್ತು ಜಾಗರೂಕತೆಯಿಂದಲೂ, ವಿವೇಚನೆಯಿಂದಲೂ, ಹದ್ದುಮೀರದಂತೆ ಸರಿಯಾದ ರೀತಿಯಲ್ಲಿ ವಿನಿಯೋಗಿಸಲ್ಪಡತಕ್ಕದು. ನಮ್ಮ ಕೆಲಸಗಳು ಅತ್ಯಂತ ದಕ್ಷತೆಯಿಂದ ನಡೆದು ಗಣನೀಯವಾದ ಸತ್ಫಲಗಳು ದೊರಕುವಂತೆ ಮಾಡಲು ನಾವು ಪ್ರಯತ್ನಿಸಬೇಕು. ಈ ಸಭೆಗೆ ಸಂಬಂಧಪಟ್ಟಷ್ಟುಮಟ್ಟಿಗೆ ಈ ಅಂಶವು ನೆರವೇರಲು ಅತ್ಯುತ್ತಮ ಮಾರ್ಗವಾವುದೆಂಬುದನ್ನು ವಿವೇಚನೆಮಾಡಿ ನಿರ್ಧರಿಸುವ ಕೆಲಸವು ನಿಮ್ಮನ್ನೇ ಸೇರಿರುತ್ತದೆ. ಸಭಾಕಾರ್ಯಗಳನ್ನು ನೆರವೇರಿಸುವುದರಲ್ಲಿ ನಮಗೆ ನಿಮ್ಮಗಳ ಸುಸಿದ್ಧವಾದ ಮತ್ತು ಮನಃಪೂರ್ವಕವಾದ ಸಹಾಯವು ದೊರೆಯಲನುಕೂಲಿಸುವಂತೆ ನೀವುಗಳೆಲ್ಲರೂ ಖಾಯಂ ಹುಕುಮ್ಮುಗಳನ್ನೂ ಮತ್ತು ಕೆಲಸವು ಸುಸೂತ್ರವಾಗಿ ಜರುಗಲು ಮಾಡಿರುವ ಆಚರಣಾಕ್ರಮಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನೂ ಸಾವಧಾನದಿಂದ ಓದಿ ಮುಂದಿಟ್ಟು ಮಾಡಿಕೊಳ್ಳಬೇಕೆಂದು ನಿಮಗೆ ಸಲಹೆ ಮಾಡಬಹುದಾಗಿದೆಯಲ್ಲವೆ? ಶ್ರೀಮನ್ ಮಹಾರಾಜರವರು ಸಮಾರಂಭೋತ್ಸವದ ದಿವಸ ನಿಮ್ಮಗಳಿಗೆ ಕರುಣಿಸಿದ ಕೃಪಾಮಯವಾದ ಸಂದೇಶದಲ್ಲಿ ಅಪ್ಪಣೆಕೊಡಿಸಿದಂತೆ ಸರ್ಕಾರದವರಿಂದ ನೀವುಗಳು ಸದುದ್ದೇಶವನ್ನು ಅದರ ಪುರಸ್ಸರವಾದ ಅನುಗ್ರಹವನ್ನೂ ನಿರೀಕ್ಷಿಸಬಹುದೆಂದು ನಮ್ಮ ಪರವಾಗಿಯೂ, ನಮ್ಮ ಸಹೋದ್ಯೋಗಿಗಳಾದ ಕೌನ್ಸಿಲು ಮೆಂಬರುಗಳ ಪರವಾಗಿಯೂ ಮತ್ತು ಇಲಾಖಾ ಮೊಖ್ತೇಸರರುಗಳ ಪರವಾಗಿಯೂ, ನಾವು ವಾಗ್ದಾನಕೊಡುತ್ತೇವೆ; ಮತ್ತು ನಾವು ನಿಮ್ಮಗಳಿಂದಲೂ ಇವುಗಳನ್ನೇ ನಿರೀಕ್ಷಿಸಬಹುದೆಂಬ ಭರವಸೆಯಿಂದ ಕೂಡಿರುತ್ತೇವೆ. ನಮ್ಮ ಕೋರಿಕೆಗಳೂ ಮತ್ತು ಅಕೋತ್ತರಗಳೂ ಭೇದವಿಲ್ಲದೆ ಒಂದೇ ಆಗಿರುತ್ತವೆ. ಪರಸ್ಪರ ವಿರೋಧಭಾವವನ್ನಾಗಲಿ ಅಥವಾ ಸ್ವಪ್ರಯೋಜನವನ್ನಾಗಲೀ, ಯಾವುದನ್ನೂ ಸಾಧಿಸಬೇಕಾದುದಿಲ್ಲ. ಸಂಸ್ಥಾನದ ಅಧಿಕಾರಿಗಳೆನಿಸಿದ ನಾವುಗಳೆಲ್ಲರೂ ಕೆಲಸಮಾಡುವುದರಲ್ಲಿ ನೀವುಗಳೆಲ್ಲಾ ಆದರ ಭಾವದಿಂದ ಕೂಡಿದ ನಮ್ಮ ಸಮಭಾಗಿಗಳೆಂದು ಬಗೆದು ನಿಮ್ಮ ಸಹಾಯವನ್ನೂ, ಸಹಕಾರವನ್ನೂ, ಆದರಪೂರ್ವಕವಾಗಿ ಎದುರುನೋಡುವೆವು.

1924-25 ನೇ ವರ್ಷದ ಬಡ್ಜೆಟ್ ಅಂದಾಜುಗಳು.

ಚಾಲ್ತಿ ವರುಷದ ತಿದ್ದುಪಡಿಯಾದ ಅಂದಾಜಿನ ಪ್ರಕಾರ ಒಟ್ಟು ಹುಟ್ಟುವಳಿಯು 3,24,02,000 ರೂಪಾಯಿಗಳಾದುದಕ್ಕೆ ಪ್ರತಿಯಾಗಿ, ಮುಂದಣ ವರ್ಷದ ಬಡ್ಜೆಟ್ಟಿನ ಮೇರೆಗೆ 3,35,84,000 ರೂಪಾಯಿಗಳ ಒಟ್ಟು ಹುಟ್ಟುವಳಿಯು ಬರುವುದೆಂದು ನಿರೀಕ್ಷಿಸಿದೆ ಮತ್ತು ಈ ಹುಟ್ಟುವಳಿಯಿಂದ ವಹಿಸಬೇಕಾಗಿರುವ ಒಟ್ಟು ವೆಚ್ಚವು 3,35,15,000 ರೂಪಾಯಿಗಳಾಗುವುದೆಂದೂ, ವೆಚ್ಚವು ಕಳೆದು 69,000 ರೂಪಾಯಿ ಮಿಗುತಾಯವಾಗುವುದೆಂತಲೂ ಅಂದಾಜುಮಾಡಿದೆ. ಮುಂದಿನ ವರ್ಷದ ಕಾರ್ಯಕ್ರಮವನ್ನು ಗೊತ್ತುಮಾಡುವುದರಲ್ಲಿ, ಏನಾದರೂ ಮಾಡಿ ಮೂರುವರುಷಗಳೊಳಗೆ ಬಡ್ಜೆಟ್ಟನ್ನು ಸಮತೂಕಕ್ಕೆ ತರಬೇಕೆಂದು ಮಾಡಿಕೊಂಡಿದ್ದ ಆದಾಯವ್ಯಯದ ಮುಖ್ಯೋದ್ದೇಶಕ್ಕೆ ಸ್ವಲ್ಪವೂ ಚ್ಯುತಿಯಿಲ್ಲದಂತೆ ಗಮನಕೊಟ್ಟಿದೆ. ಅಲ್ಲದೆ ಸಾಲಗಳನ್ನು ತೀರಿಸುವ ಬಗ್ಗೆ ಏರ್ಪಡಿಸಿರುವ ಸಿಂಕಿಂಗ್ ಫಂಡುಗಳಿಗೆ ಕೊಡಬೇಕಾದುದಕ್ಕೂ ಸಹ ಚಾಲ್ತಿ ಹುಟ್ಟುವಳಿಯಿಂದ ಸಂಪೂರ್ಣವಾಗಿ ಹಣವನ್ನು ಒದಗಿಸಿದೆ. ಚಾಲ್ತಿ ವರ್ಷದ ತಿದ್ದುಪಾಟಾದ ಬಡ್ಜೆಟ್ಟಿನೊಡನೆ ಹೋಲಿಸಿದಲ್ಲಿ ಕಂಡುಬರುವ ಆಯವ್ಯಯಗಳ ವ್ಯತ್ಯಾಸಗಳನ್ನು ಬಡ್ಜೆಟ್ಟಿಗೆ ಲಗತ್ತಿಸಿರುವ ಮೆಮೊರಾಂಡಮಿನಲ್ಲಿ ವಿವರಿಸಿದೆ. ಇನ್ನು, ಈಗ ಮುಂದಿನ ವರ್ಷದ ಆದಾಯವೆಚ್ಚದಲ್ಲಿ ಮುಖ್ಯವಾದುವುಗಳನ್ನು ಮಾತ್ರ ತಿಳಿಸಬೇಕಾಗಿದೆ.

ಹುಟ್ಟುವಳಿಯ ವಿಚಾರದಲ್ಲಿ ಬೆಂಗಳೂರು ದಂಡಿನಿಂದ 6 ಲಕ್ಷ ರೂಪಾಯಿ ಹುಟ್ಟುವಳಿಯನ್ನು ನಿರೀಕ್ಷಿಸಿದೆ. ಕಾಲಸ್ಥಿತಿಯು ಎಂದಿನಂತೆಯೇ ಇರುವುದೆಂದು ಭಾವಿಸಿಕೊಂಡು, ದುಷ್ಕಾಲದ ದೆಸೆಯಿಂದ ಚಾಲ್ತಿ ಸಾಲಿನ ಆಖೈರಿನಲ್ಲಿ ಜಮಿನಾನು ಹುಟ್ಟುವಳಿ ಬಾಬಿನಲ್ಲಿ ವಸೂಲಾಗದೆ ಬಾಕಿ ನಿಲ್ಲಬಹುದಾದ ಒಟ್ಟು ಹಣವು ಮುಂದಿನ ಸಾಲಿನಲ್ಲಿ ವಸೂಲಾಗುವುದೆಂದೂ, ಮತ್ತು ಈ ಬಾಬಿನಲ್ಲಿ ಮಾಮೂಲಿನಂತೆ ಹುಟ್ಟುವಳಿಯು ಹೆಚ್ಚುವುದೆಂದೂ, ಮುಂದಿನ ವರ್ಷ ಜಾರಿಗೆ ಬರುವ ರೀಸೆಟ್ಲಮೆಂಟುಗಳ ಪ್ರಯುಕ್ತ ಸ್ವಲ್ಪಮಟ್ಟಿಗೆ ಹೆಚ್ಚು ಹುಟ್ಟುವಳಿಯು ಬರುವುದೆಂದೂ, ಭರವಸೆಗೊಂಡು ತಕ್ಕ ಲೆಕ್ಕಾಚಾರ ಮಾಡಿ ಜಮಿನಾನು ಹುಟ್ಟುವಳಿ ಬಾಬಿನಲ್ಲಿ 121.75 ಲಕ್ಷ ರೂಪಾಯಿಗಳು ಆದಾಯ ಬರಬಹುದೆಂದು ಅಂದಾಜುಮಾಡಿದೆ. ಅಬ್ಕಾರಿ (ಎಕ್ಸೈಜು) ಹುಟ್ಟುವಳಿಗೆ ಚಾಲ್ತಿ ವರ್ಷದ ತಿದ್ದುಪಾಟಾದ ಅಂದಾಜಿನ ಸದರಿ ಬಾಬಿನ ಹುಟ್ಟುವಳಿಯಷ್ಟನ್ನೇ ಅಂದಾಜುಮಾಡಿದೆ. ತಿದ್ದುಪಾಟಾದ ಬಡ್ಜೆಟ್ಟಿನ ಫಾರೆಸ್ಟ್ ಬಾಬಿನಲ್ಲಿ ಕಬ್ಬಿಣದ ಕಾರ್ಖಾನೆಗೆ ಸರಬರಾಯಿ ಮಾಡಿದ ಸೌದೆ ಬಗ್ಗೆ 4 ಲಕ್ಷ ರೂಪಾಯಿ ಆದಾಯವೂ ಸೇರಿದೆ. ಆದರೆ ಈ ಹಣವು ಜಮಾಖರ್ಚು ಎರಡರಲ್ಲಿಯೂ ಸೇರಿ ಲೆಕ್ಕವನ್ನು ಹೆಚ್ಚಾಗಿ ತೋರಿಸುವುದರಿಂದ, ಅದನ್ನು, ಫಾರೆಸ್ಟ್ ಬಾಬಿನಲ್ಲಿ ಸೇರಿಸದೆ ಕಬ್ಬಿಣದ ಕಾರ್ಖಾನೆಯ ಲೆಕ್ಕದಲ್ಲಿ ಮಾತ್ರ ಸೇರಿಸಬೇಕೆಂದು ತೀರ್ಮಾನಿಸಿದೆ. ತಿದ್ದುಪಾಟಾದ ಅಂದಾಜಿನೊಡನೆ ಹೋಲಿಸಿದಲ್ಲಿ ಗಂಧದ ಎಣ್ಣೆಯಿಂದ 4 ಲಕ್ಷ ರೂಪಾಯಿ ಹೆಚ್ಚು ಆದಾಯವು ಕಂಡುಬರುತ್ತದೆ; ಗಂಧದ ಎಣ್ಣೆ ಕಾರ್ಖಾನೆಯಿಂದ ಫಾರೆಸ್ಟ್ ಇಲಾಖೆಗೆ ಹಿಂದಿನ ವರ್ಷಗಳಲ್ಲಿ ಗಂಧದ ಮರಕ್ಕಾಗಿ ಹೆಚ್ಚು ಹೆಚ್ಚಾಗಿ ಕೊಟ್ಟಿರುವ ಹಣದ ಜಮಾಖರ್ಚೆಲ್ಲಾ ಚಾಲ್ತಿ ವರ್ಷದಲ್ಲಿ ಮುಗಿದು, ಮುಂದಿನ ವರ್ಷದಿಂದ ಮಾರಾಟವಾದ ಎಣ್ಣೆಯಿಂದ ಗೊತ್ತುಮಾಡುವ ಗಂಧದ ಪೂರಾ ಹುಟ್ಟುವಳಿಯೂ ಫಾರೆಸ್ಟ್ ಬಾಬಿನ ಆದಾಯಕ್ಕೆ ಸೇರುವುದು ಇದಕ್ಕೆ ಕಾರಣವಾಗಿದೆ. ಒಟ್ಟು ಹುಟ್ಟುವಳಿಯು ಹೆಚ್ಚಾಗಿ ಅದೇ ಖರ್ಚು ಕಡಮೆಯಾದುದರಿಂದ ರೈಲ್ವೆ ನಿವ್ವಳ ಹುಟ್ಟುವಳಿಯು ಹೆಚ್ಚು ಸಂಸ್ಥಾನದಿಂದ ನಡೆಸುತ್ತಿರುವ ಲೈನುಗಳ ಖಾಯಂ ಮಾರ್ಗಗಳಲ್ಲಿ ಕಂಬಿಗಳನ್ನು ಹಾಕುವುದು, ಹೊಸ ಗಾಡಿ ವಗೈರೆಗಳನ್ನು ಕೊಂಡುಕೊಳ್ಳುವುದು, ಈ ಕೆಲಸಗಳು ಕೆಲವು ವರ್ಷಗಳಿಂದ ಬಾಕಿ ಇದೆಯ ಇದಕ್ಕಾಗಿ 6.87 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. 1925-26 ನೇ ಸಾಲಿನಿಂದ ಈ ಬಾಬಿನಖರ್ಚು, ಕಂಡಹಾಗೆ ಕಡಮೆಯಾಗುತ್ತದೆ. ನಿವ್ವಳ ಹುಟ್ಟುವಳಿಯನ್ನೆಲ್ಲಾ ಸಂಸ್ಥಾನದ ಖರ್ಚಿಗೇ ಉಪಯೋಗಿಸಿಕೊಳ್ಳ ಇನ್ನು ಮುಂದೆ ಮೇಲ್ಕಂಡಂಥ ನವೀಕರಣಗಳಿಗೋಸ್ಕರ ಮಾಡುವುದ ಡಿಪ್ರೀಸಿಯೇಷನ್ ಫಂಡೊಂದನ್ನು ಏರ್ಪಡಿಸಿ ಆ ವಿಚಾರದಲ್ಲಿ ಗೊ ಮಾಡುವ ಕಾರ್ಯಕ್ರಮದ ಮೇರೆಗೆ, ಅವಶ ಬಿದ್ದಂತೆ, ಮುಂದೆ ಹೆಚ್ಚು ನಿವ್ವಳ ಆದಾಯವನ್ನು ಅಥವಾ ಆ ಪೈಕಿ ಒಂದು ಭಾಗವನ್ನು ತೆಗೆ ಬೇಕೆಂದು ಉದ್ದೇಶಿಸಿದೆ. ಚಿನ್ನದ ಗಣಿಗಳ ಕಂಪೆನಿಗಳಿಗೆ ವಿದ್ಯುಚ್ಛ ಯನ್ನು ಒದಗಿಸಿದುದರಿಂದ ಹೆಚ್ಚು ಉತ್ಪತ್ತಿಯು ಬರುವುದಾಗಿ ನಿರೀ ಸಿರುವುದರಿಂದಲೂ, ಮತ್ತು ಕೃಷ್ಣರಾಜಸಾಗರದ ಅಣೆಕಟ್ಟಿಗೆ ಪ್ರವಾ ದಿಂದ ಉಂಟಾದ ನಷ್ಟವನ್ನು ಸರಿಪಡಿಸತಕ್ಕ ಬಗ್ಗೆ ಈ ವರುಷ ಹೆ ಗ್ರಾಂಟನ್ನು ಮಂಜೂರ್ಮಾಡಬೇಕಾಗಿಬಂದಂತೆ ಮುಂದೆ ಪ್ರತ್ಯೇಕವ ಯಾವ ವೆಚ್ಚವೂ ಬೀಳದಿರುವುದರಿಂದಲೂ, ಕೃಷ್ಣರಾಜಸಾಗರ ಕಾಂ ಗಳ ಬಾಬುಗಳಲ್ಲಿ ಆದಾಯವು ಹೆಚ್ಚುವುದಕ್ಕೆ ಈ ಅಂಶಗಳು ಮುಖ್ಯ ರಣಗಳಾಗಿವೆ.

ಬಡ್ಜೆಟ್ಟಿನಲ್ಲಿ ಒದಗಿಸಿರುವ ಒಟ್ಟು ಖರ್ಚು 335.15 ಲಕ್ಷ ರೂ ಯಿಗಳಾಗುತ್ತವೆ. ಅದು ಚಾಲ್ತಿ ವರ್ಷದ ತಿದ್ದುಪಾಟಾದ ಅಂದಾಜಿನ 329.12 ಲಕ್ಷ ರೂಪಾಯಿಗಳಾಗಿರುತ್ತದೆ. ಆದುದರಿಂದ ಅದು ತಿದ್ದು ಪಾಟಾದ ಅಂದಾಜಿನಲ್ಲಿ ಗೊತ್ತುಮಾಡಿದ್ದ ಪ್ರಮಾಣಕ್ಕಿಂತ 6.03 ಲ ರೂಪಾಯಿಗಳು ಜಾಸ್ತಿಯಾಗಿದೆ. ಶ್ರೀಮನ್ಮಹಾರಾಜರವರ ಸಿವಿಲ್ ಲಿ 3 ಲಕ್ಷ ರೂಪಾಯಿಯನ್ನು ಸೇರಿಸಿದೆ. ಈ ಮೊದಲೇ ಮಂಜೂರ್ಮಾಡಿರು ಏರ್ಪಾಡುಗಳಿಗಾಗಿ, ವಿದ್ಯಾಭ್ಯಾಸಕ್ಕಾಗಿ ಕೊಟ್ಟಿರುವ ಗ್ರಾಂಟನ್ನು 1 ಲಕ್ಷ ರೂಪಾಯಿನಷ್ಟು ಜಾಸ್ತಿಮಾಡಬೇಕಾದುದು ಆವಶ್ಯಕವಾಗಿ ಕಂ ಬಂದಿದೆ. ಮೈಸೂರು ಯೂನಿವರ್ಸಿಟಿಗಾಗಿ ಕೊಟ್ಟಿರುವ ಗ್ರಾಂಟ 6 ಲಕ್ಷ ರೂಪಾಯಿನಿಂದ 7.44 ಲಕ್ಷ ರೂಪಾಯಿಗೆ ಹೆಚ್ಚಿಸಿದೆ. ಆದು ರಿಂದ ಯೂನಿವರ್ಸಿಟಿಯೂ ಸೇರಿ ವಿದ್ಯಾಭ್ಯಾಸದ ಬಾಬಿನಲ್ಲಿ ಚಾಲ್ತಿ ವ ದಲ್ಲಿದ್ದ ಬಡ್ಜೆಟ್ ಗ್ರಾಂಟಿಗಿಂತ ಒಟ್ಟು 2.74 ಲಕ್ಷ ರೂಪಾಯಿ ಯಾಗಿದೆ. ಮೈಸೂರು ಸಿಟಿಯ ಅಭಿವೃದ್ಧಿಗಾಗಿ ಅರ್ಧ ಲಕ್ಷ ರೂಪಾಯ ಹೆಚ್ಚು ಗ್ರಾಂಟನ್ನೂ ಮಲೆನಾಡಿನ ಅಭಿವೃದ್ಧಿ ಕಾರ್ಯಗಳಿಗಾಗಿ ಲಕ್ಷ ರೂಪಾಯಿಗಳ ಹೆಚ್ಚು ದ್ರವ್ಯವನ್ನೂ ಮತ್ತು ರಾಜಕೀಯ ಸುಧ ಣೆಗಳನ್ನು ಜಾರಿಗೆ ತಂದುದರ ಪ್ರಯುಕ್ತ ಆಗಿರುವ ಹೆಚ್ಚು ಖರ್ಚನ ನಿರ್ವಹಿಸಲು 1,08,000 ರೂಪಾಯಿಗಳನ್ನೂ, ಒದಗಿಸಿದೆ. ಈ ಗ್ರಾಂ ಗಳ ಜೊತೆಗೆ, ಆಡಳಿತದ ಕಾರ್ಯವನ್ನು ಅಭಿವೃದ್ಧಿಪಡಿಸಿ ವಿಸ್ತರಿಸ ಬಗ್ಗೆ ದೊರೆತಷ್ಟು ಹಣಕ್ಕನುಗುಣವಾಗಿ ಏರ್ಪಾಡುಮಾಡಿದೆ. ಹೊ ಬಾಬುಗಳ ಪೈಕಿ ಕೆಲವು ಯಾವುವೆಂದರೆ:—

	ರೂಪಾಯಿಗಳ
12. ಸಾಮಾನ್ಯಾಡಳಿತ, ಸಂಪದಭಿವೃದ್ಧಿ ಸಮಾಜ, ವಿಶೇಷ ಖರ್ಚುಗಳು	10,0
13. ಮುಜರಾಯಿ, ಕಟ್ಟಡ ಮತ್ತು ದುರಸ್ತಿ	5,0
17. ವಿವಿಧ ಬಾಬುಗಳು, ಹೊಸ ಟೆಲಿಗ್ರಾಫ್ ಸ್ಟೇಷನ್ನುಗಳು	7,5
18. ನ್ಯಾಯಸ್ಥಾನಗಳು—	
(i) ಒಂದು ಹೊಸ ಸಬ್ ಕೋರ್ಟು	5,0
(ii) ಜುಡಿಷಿಯಲ್ ಮತ್ತು ಎಗ್ಜಿಕ್ಯುಟಿವ್ ಅಧಿಕಾರಿಗಳನ್ನು ಪ್ರತ್ಯೇಕಿಸುವ ಏರ್ಪಾಡಿನ ಮೇರೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಹೆಚ್ಚು ಕ್ರಿಮಿನಲ್ ಕೋರ್ಟುಗಳು	12,0
21. ಮೆಡಿಕಲ್—	
(i) ಮೈಸೂರಿನ ವಿದ್ಯಾರ್ಥಿಗಳನ್ನು ತರಬೇತು ಮಾಡುವುದು	15,0
(ii) ಕೆಲವು ಆಸ್ಪತ್ರೆಗಳ ಸಿಬಂದಿಗಳನ್ನು ತಿದ್ದುಪಾಟು ಮಾಡುವುದು ಮತ್ತು ಹೊಸ ಡಿಸ್ಪೆನ್ಸರಿಗಳನ್ನು ಸ್ಥಾಪಿಸುವುದು	16,0
(iii) ಆಯುರ್ವೇದ ಕಾಲೇಜನ್ನು ಪುನರ್ವ್ಯವಸ್ಥೆ ಮಾಡುವುದು ಮತ್ತು ಹೊಸ ಡಿಸ್ಪೆನ್ಸರಿಗಳನ್ನು ಸ್ಥಾಪಿಸುವುದು	6,3
27. ವ್ಯವಸಾಯ—	
(1) ಸೀರಂ	200
(ii) ನೀರಾವರಿಯ ಬಾವಿಗಳನ್ನು ತೋಡಿಸತಕ್ಕ ಬಗ್ಗೆ ಪ್ರತ್ಯೇಕ ಸಿಬ್ಬಂದಿ ಮತ್ತು ಸಲಕರಣೆಗಳು	25,0
(iii) ಪಶುವೈದ್ಯದ ಹೊಸ ಡಿಸ್ಪೆನ್ಸರಿಗಳು	5,0
(vi) ಮುಕ್ತೇಸರಿನಲ್ಲಿ ಪಶುವೈದ್ಯದ ಇನ್ಸ್ಪೆಕ್ಟರುಗಳನ್ನು ತರಬೇತು ಮಾಡುವುದು	3,0
(v) ಮತ್ತೂರು ವ್ಯವಸಾಯ ಕ್ಷೇತ್ರವನ್ನು ಅಭಿವೃದ್ಧಿಗೆ ತರುವುದು	10,
30. ಜನೋಪಯುಕ್ತವಾದ ಅಭಿವೃದ್ಧಿ ಕಾರ್ಯಗಳಿಗಾಗಿ ಗ್ರಾಂಟುಗಳು ಸ್ಥಳೀಯ ಪ್ರಭಾಧಿಕಾರದ ಏರ್ಪಾಡಿನ ಮೇರೆ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಸಹಾಯದ್ರವ್ಯ	5,0

ಆಯವ್ಯಯಗಳ ಸನ್ನಿವೇಶದ ಸಾಮಾನ್ಯ ವಿಮರ್ಶೆ.

ನಿಮ್ಮಗಳಿಗೆ ಈಗ ಒಪ್ಪಿಸಿರುವ ವಿವರಗಳಿಗನುಸಾರವಾಗಿಯೂ ಮತ್ತು ಅವುಗಳ ಮುಖ್ಯ ಲಕ್ಷಣಗಳ ವಿಚಾರವಾಗಿ ನಾವು ಮಾಡಿರು ವಿವರಣೆಗನುಸಾರವಾಗಿಯೂ, ಕಂಡುಬರುವ ಅಂಶಗಳನ್ನು ನೋಡಿದ ಆಯವ್ಯಯಗಳ ಸ್ಥಿತಿಯು ಒಟ್ಟಿನಲ್ಲಿ ಸಮರ್ಪಕವಾಗಿರುವಂತೆ ತೋ ತ್ತದೆ. 1918-19 ನೇ ಸಾಲಿನಿಂದ ಸಾಲಿಯಾನಾ ಹುಟ್ಟುವಳಿಗಿಂತಲೂ ವೆಚ್ಚವೇ ಹೆಚ್ಚಾಗಲುಪಕ್ರಮವಾಯಿತು; ಆಗ್ಗೆ ಪ್ರಾರಂಭವಾಗಿ ಅನು ರಿಸಿ ಬರುತ್ತಿರುವ ವಿಷಮಾವಸ್ಥೆಯಿಂದ ನಾವು ಇನ್ನೂ ಸಂಪೂರ್ಣವಾ ಪಾರಾಗಿರುವುದಿಲ್ಲವೆಂದೂ, ಮತ್ತು ಆಯವ್ಯಯಗಳನ್ನು ಕ್ರಮಕ್ಕೆ ತರು ವಿಚಾರದಲ್ಲಿ ಅತ್ಯಂತ ಜಾಗರೂಕತೆಯಿಂದ ವರ್ತಿಸಬೇಕಾಗಿದೆಯೆಂದ ಹೊಸದಾಗಿ ತಿಳಿಸತಕ್ಕ ಅವಶ್ಯಕವೇನೂ ಇಲ್ಲ. ಆಯವ್ಯಯಗಳ ವಿಚಾ ದಲ್ಲಿ ಹೊಸ ಕ್ರಮವನ್ನು ಅನುಸರಿಸಿ ಅವುಗಳನ್ನು ಪೂರ್ವದಂತೆ ತಹ ದಿಗೆ ತರಲು ಆರಂಭಿಸಿ ಎರಡು ವರುಷಕ್ಕೆ ಹೆಚ್ಚಾದ ಕಾಲದಿಂದಲೂ ವಿಶೇಷವಾಗಿ ವೆಚ್ಚವನ್ನು ತಗ್ಗಿಸುತ್ತಾ ಬಂದುದರಿಂದಲೂ, ಮತ್ತು ಚು ಕಾಗಿ ಕೆಲಸಮಾಡದೆ ನಿಲೆ ನಿಂತಂತೆ ತೋರಿಬರುತ್ತಿರುವ ರಾಜ್ಯಾಡಳ ಕೆಲವು ಬಡಾವಣೆಯ ಇಲಾಖೆಗಳಿಗೆ ವೆಚ್ಚಕ್ಕೆ ಹೆಚ್ಚು ಹಣವನ್ನು ಕೊ ತಗ್ಗಿಸಿದುದರಿಂದಲೂ ಇನ್ನು ಮುಂದೆ ವರ್ಷಂ ಪ್ರತಿಯೊಳ್ಳಿಯೂ ವೆಚ್ಚ ಕಳೆದು ಸ್ವಲ್ಪ ಹಣವು ಮಿಗುವ ಮಾರ್ಗವನ್ನು ನಾವು ಅನುಸರಿಸಿ

ದ್ದೇವೆ. ಆದಾಗ್ಯೂ ನಮಗೆ ತೊಂದರೆ ಕೊಡುತ್ತಿರುವ ಕೆಲವು ವಿಚಾರಗಳನ್ನು ಎದುರಿಸಬೇಕಾಗಿರುತ್ತದೆ ಮತ್ತು ಈ ವಿಷಯದಲ್ಲಿ ಬಹಳ ಜಾಗರೂಕತೆಯಿಂದ ವರ್ತಿಸಬೇಕಾಗಿದೆ. ದೇಶೀಯ ಸಂಸ್ಥಾನಗಳ ಹುಟ್ಟುವಳಿಗಳು ಸಂಕುಚಿತಸ್ವಭಾವವುಳ್ಳವುಗಳೆಂಬುದು ನಿಮ್ಮೆಲ್ಲರಿಗೂ ತಿಳಿದೇ ಇದೆ. ವರ್ಷಂಪ್ರತಿ ಯಥಾರೀತಿಯಲ್ಲಿ ಬರುವ ಹುಟ್ಟುವಳಿಯನ್ನು ಹೆಚ್ಚಿಸಿಕೊಳ್ಳುವದಕ್ಕೂ ಹುಟ್ಟುವಳಿಯ ಹೊಸ ಮಾರ್ಗಗಳನ್ನು ಕಲ್ಪಿಸಿಕೊಳ್ಳುವುದಕ್ಕೂ ಅವಕಾಶವು ತೀರ ಕಡಮೆಯಾಗಿದೆ. ಹೀಗಿರುವುದಲ್ಲದೆ ಈಗ ಮೈಸೂರಿನ ರಾಜ್ಯಾಡಳಿತದಲ್ಲಿರುವ ಒಂದು ದೊಡ್ಡ ಕೊರತೆಯ ದೆಸೆಯಿಂದ ಬಹಳ ಕಷ್ಟಪಡಬೇಕಾಗಿದೆ. ಅದಾವುದೆಂದರೆ:—ಭಾರೀ ಕಾಂಗಾರಿಗಳೇ ಮುಂತಾದವುಗಳ ದೆಸೆಯಿಂದ ಸರ್ಕಾರದವರು ಬಹಳ ಹೆಚ್ಚಾಗಿ ಸಾಲವನ್ನು ತೆಗೆಯಬೇಕಾಯಿತು. ಅವುಗಳೆಲ್ಲಾ ಹುಟ್ಟುವಳಿಯನ್ನು ಕೊಡುವ ಸ್ಥಿತಿಗೆ ಇನ್ನೂ ಬಂದಿಲ್ಲ; ಮತ್ತು ವರ್ಷಂಪ್ರತಿಯಲ್ಲಿಯೂ ಈ ಕಾರಣಗಳಿಂದ ಹುಟ್ಟುವಳಿಯನ್ನು ಸುಮಾರು 42 ಲಕ್ಷ ರೂಪಾಯಿಗಳ ವೆಚ್ಚವನ್ನು ವಹಿಸಬೇಕಾಗಿದೆ; ದೊಡ್ಡ ದೊಡ್ಡ ಕಾಂಗಾರಿಗಳನ್ನೂ, ಸ್ಕೀಮುಗಳನ್ನೂ ಕೈಗೊಂಡಿರುವ ಕಾರಣ ಬಹಳ ಹಣವು ವೆಚ್ಚವಾಗುತ್ತಿದೆ. ಅವುಗಳನ್ನು ಪೂರೈಸಬೇಕಾದರೆ ಸರ್ಕಾರದವರು ಮತ್ತೆ ಸಾಲವನ್ನು ತೆಗೆಯದೆ ಇತರ ಇನ್ನಾವ ಮಾರ್ಗಗಳಿಂದಲೂ, ಮತ್ತು ಇತರ ಇನ್ನಾವ ಸಾಧನಗಳಿಂದಲೂ, ವೆಚ್ಚಕ್ಕೆ ಹಣವನ್ನೊದಗಿಸಬೇಕೆಂಬ ವಿಚಾರವು ಬಹಳ ಕಠಿಣ ಸಮಸ್ಯೆಯಾಗಿದೆ. ಈ ಬಾಬುಗಳಲ್ಲಿ ಬಂಡವಾಳರೂಪದಲ್ಲಿ ವೆಚ್ಚಮಾಡಬೇಕಾದ ಮೊಬಲಗನ್ನು ಸುಮಾರಾಗಿ ಅಂದಾಜು ಕಟ್ಟಿದರೆ ಅದು, ಇನ್ನು ಮುಂದೆ ಕೆಲವು ವರ್ಷಗಳವರೆಗೆ ವರ್ಷಂಪ್ರತಿ 50 ಲಕ್ಷ ರೂಪಾಯಿಗಳಿಗೆ ಏನೇನೂ ಕಡಮೆಯಾಗಲಾರದೆಂದು ಹೇಳಬಹುದಾಗಿದೆ. ಒಂದುವೇಳೆ ಇದಕ್ಕಾಗಿ ಸಾಲವನ್ನು ತೆಗೆದು ಮೊಬಲಗನ್ನು ಒದಗಿಸುವುದಾದರೆ ಅದರ ಸಂಗಡಲೆ ಬಡ್ಡಿ ಮತ್ತು ಸಿಂಕಿಂಗ್ ಫಂಡ್ ಛಾರ್ಜುಗಳು ಇವುಗಳಿಗಾಗಿ ಪ್ರತ್ಯೇಕವಾಗಿ ಹೆಚ್ಚು ಮೊಬಲಗನ್ನು ಕೊಡುವ ಭಾರವನ್ನು ವಹಿಸಬೇಕೆಂಬುದು ಸಹ ಗೊತ್ತೇ ಇದೆ. ಆದುದರಿಂದ ರೈಲ್ವೆಗಳು, ವಿದ್ಯುಚ್ಛಕ್ತಿ ಮತ್ತು ಕೃಷ್ಣರಾಜಸಾಗರ ಇವುಗಳಿಂದ ಬರುವ ಹುಟ್ಟುವಳಿಯನ್ನು ಹೆಚ್ಚಿಸುವ ಮಾರ್ಗಗಳನ್ನು ಕಲ್ಪಿಸುವುದೂ ಮತ್ತು ಸಂಸ್ಥಾನದ ಕಬ್ಬಿಣದ ಕಾರ್ಖಾನೆಯ ಕೆಲಸಗಳಿಗೆ ಸಮರ್ಪಕವಾಗಿ ದ್ರವ್ಯಾನುಕೂಲತೆಯನ್ನು ಉಂಟುಮಾಡಿಕೊಡುವುದು ತೀರ ಅವಶ್ಯವಾಗಿರುತ್ತದೆ.

ನಾವು ಪ್ರಜಾಪ್ರತಿನಿಧಿ ಸಭೆಯ ಕಳೆದ ವರ್ಷಾಂತ್ಯೋತ್ಸವದ ಅಧಿವೇಶನದಲ್ಲಿ ಸಂಕ್ಷೇಪವಾಗಿ ತಿಳಿಸಿದಂತೆ ಹಣಕಾಸಿನ ಮುಗ್ಗಟ್ಟನ್ನು ಪರಿಹರಿಸಲು ನಮಗೆ ವಿಶೇಷವಾಗಿ ಸಹಾಯಮಾಡುವ ಮೂರು ಪ್ರಾಮುಖ್ಯಮಾರ್ಗಗಳಿರುತ್ತವೆ. ಈ ಮಾರ್ಗಗಳಲ್ಲಿ ಕಳೆದ ಒಂದು ವರ್ಷದಿಂದಲೂ ಸ್ವಲ್ಪ ಮುಂದುವರಿದು ಮೇಲ್ಮೆಯನ್ನು ಸಾಧಿಸಿದೆವೆಂಬುದನ್ನು ಕೇಳಿ ನೀವು ಸಂತೋಷಿಸಬಹುದೆಂದೂ ತೋರುತ್ತದೆ. ಶ್ರೀಮನ್ಮಹಾರಾಜರವರ ಸರ್ಕಾರಕ್ಕೂ, ಮತ್ತು ಇಂಡಿಯಾ ಸರ್ಕಾರಕ್ಕೂ, ರೈಲ್ವೆ ಸ್ಟರ್ಲಿಂಗ್ ಡಿಬೆಂಚರ್ ಲೋನ್ ಸಂಬಂಧದಲ್ಲಿ ಸಿಂಕಿಂಗ್ ಫಂಡಿನಲ್ಲಿ ಶೇಖರವಾಗಿದ್ದ ಮೊಬಲಗನ್ನು ಉಪಯೋಗಿಸಿಕೊಳ್ಳುವುದರ ವಿಚಾರವಾಗಿ ನಡೆಯುತ್ತಿದ್ದ ಪತ್ರವ್ಯವಹಾರವು ಶುಭದಾಯಕವಾಗಿ ಪರಿಣಮಿಸುವಂತಿದೆ. ಈ ವಿಚಾರದಲ್ಲಿ ಮೈಸೂರು ಸಂಸ್ಥಾನದ ಆಖೈರು ಅಂಕೆಗಳು ಕಾರ್ಯಕಾರಿಗಳಾಗುವ ಪಕ್ಷಕ್ಕೆ ಬಂಡವಾಳವನ್ನೊದಗಿಸುವ ವೆಚ್ಚಗಳಿಗಾಗಿ ಇನ್ನು ಮೂರುವರ್ಷ ಕಾಲ ಸಾಲವನ್ನೇ ಮಾಡದೆ ಹಣವು ದೊರೆಯಲು ಅನುಕೂಲವಾಗುತ್ತದೆ. ಬೆಂಗಳೂರು ದಂಡಿನ ಹುಟ್ಟುವಳಿಯಲ್ಲಿ ಮಿಗುತಾಯವಾದ ಶಿಲ್ಕು ಮೊಬಲಗನ್ನು ಶ್ರೀಮನ್ ಮಹಾರಾಜರವರ ಸರ್ಕಾರಕ್ಕೆ ಕೊಡುವ ವಿಚಾರದಲ್ಲಿ ಕಳೆದ ವರ್ಷದ ಮೇ ತಿಂಗಳಲ್ಲಿ ಇಂಡಿಯಾ ಸ್ಟೇಟ್‌ಸೆಕ್ರೆಟರಿಯವರು ಸಾದರ್ಮಾಡಿದ ಹುಕುಮಿನಿಂದ ಬಹಳ ಅನುಮಾನಕ್ಕೆ ಕಾರಣವಾಯಿತು; ಅದರ ವಿಷಯವಾಗಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಇಂಡಿಯಾ ಸರ್ಕಾರದವರಿಗೆ ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಅರಿಕೆಮಾಡಿದರು. ಆ ಅರಿಕೆಗಳ ಫಲಿತಾಂಶವಾಗಿ ಇಂಡಿಯಾ ಸರ್ಕಾರದವರು ದಯೆಯಿಟ್ಟು ಆ ವಿಚಾರವನ್ನು ಮತ್ತೆ ಚರ್ಚೆಮಾಡಲು ಉಪಕ್ರಮಿಸಿದರು; ಈಚೆಗೆ ಶ್ರೀಮನ್ಮಹಾರಾಜರವರ ಸರ್ಕಾರದವರಿಗೂ ಮತ್ತು ಘನಹೊಂದಿದ ಬ್ರಿಟಿಷ್ ರೆಸಿಡೆಂಟರವರಿಗೂ ಸದರಿ ವಿಚಾರದಲ್ಲಿ ಒಪ್ಪಂದದ ಕ್ರಮವೊಂದು ಗೊತ್ತಾಗಿರುತ್ತದೆ ಮತ್ತು ಇಂಡಿಯಾ ಸರ್ಕಾರದವರೂ, ಮತ್ತು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಇದನ್ನು ಆಖೈರಾಗಿ ಅಂಗೀಕರಿಸುವರೆಂದು ಭರವಸೆ ಪಡುತ್ತೇವೆ; ಈ ಏರ್ಪಾಡಿನಲ್ಲಿ ಹತ್ತುವರ್ಷ ಕಾಲದ ಅವಧಿಯನ್ನು ಗೊತ್ತುಮಾಡಿರುವುದರಿಂದ ಕನಿಷ್ಠ ಪಕ್ಷ ಅಷ್ಟು ಕಾಲದವರೆಗಾದರೂ ಬೆಂಗಳೂರು ದಂಡಿನ ಹುಟ್ಟುವಳಿಯಲ್ಲಿ ಮಿಗುವಳಿಯಾಗುವ ಶಿಲ್ಕು ಮೊಬಲಗಿನ ವಿಚಾರದಲ್ಲಿ ಕಳೆದ ಕೆಲವು ವರ್ಷಗಳ ಬಡ್ಜೆಟ್ ಅಂದಾಜಿನಲ್ಲಿ ಕಂಡುಬರುತ್ತಿರುವಂಥ ಯಾವ ಸಂಶಯಗಳಿಗೂ ಅವಕಾಶವಿರುವುದಿಲ್ಲ.

ಮೈಸೂರು ಸಂಸ್ಥಾನದ ಆಯವ್ಯಯಗಳ ವಿಚಾರದಲ್ಲಿ ಬಹಳ ಪ್ರಾಮುಖ್ಯವಾದ ಮತ್ತು ಗಣನೀಯವಾದ ವಿಚಾರವೊಂದಿದೆ. ಅದಾವುದೆಂದರೆ, ಮೈಸೂರು ಪೊಗದಿಯ ವಿಷಯ. ಈ ವಿಚಾರದಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಈಗ್ಗೆ ಸ್ವಲ್ಪಕಾಲಕ್ಕೆ ಹಿಂದಿನಿಂದಲೂ ತಕ್ಕ ಉದ್ಯಮವನ್ನು ಕೈಗೊಂಡಿರುತ್ತಾರೆ. ಈ ಪೊಗದಿಯನ್ನು ಕೊಡಬೇಕಾದುದನ್ನು ತಪ್ಪಿಸಬೇಕೆಂದು ಐತಿಹಾಸಿಕವಾದ, ಆರ್ಥಿಕವಾದ ಮತ್ತು ನ್ಯಾಯಸಮ್ಮತವಾದ ಅನೇಕ ಕಾರಣಗಳನ್ನು ಹೇಳಿ ಇಂಡಿಯಾ ಸರ್ಕಾರದವರಿಗೆ 1919ನೇ ಇಸವಿಯಲ್ಲಿ ಅರಿಕೆಮಾಡಲಾಯಿತು. ಈಚೆಗೆ ಮಹಾಮಹಿಮರಾದ ವೈಸರಾಯಿಯವರು ಮೈಸೂರಿಗೆ ದಯಮಾಡಿಸಿದ್ದಾಗ ಅವರ ಗೌರವಾರ್ಥವಾಗಿ ನಡೆಯಿಸಿದ ಔತಣಕೂಟದಲ್ಲಿ ಅವರು ಅಪ್ಪಣೆ ಕೊಡಿಸಿದ ಮೇರೆಗೆ ಪೊಗದಿಯನ್ನು ಕಡಮೆಮಾಡುವ ಸರ್ವೇ ಸಾಮಾನ್ಯವಾದ ಏರ್ಪಾಡೊಂದು ರಚಿಸಲ್ಪಟ್ಟು ನಮಗೆ ತಿಳಿಸಲ್ಪಟ್ಟಿದೆ. ಅಲ್ಲದೆ ಆ ಏರ್ಪಾಡಿಗನುಸಾರವಾಗಿ ನಮ್ಮ ಹಕ್ಕನ್ನು ತಿಳಿಸಬೇಕೆಂದು ಬಿನ್ನವಿಸಲ್ಪಟ್ಟಿದೆ. ಪೊಗದಿಯ ಹಣವೂ ಸೇರಿ ಒಟ್ಟು ಸೈನ್ಯದ ವೆಚ್ಚವು ಸಂಸ್ಥಾನದ ಒಟ್ಟು ಹುಟ್ಟುವಳಿಯಲ್ಲಿ ಶೇಕಡ 15 ಕ್ಕಿಂತ ಹೆಚ್ಚಾಗಿದ್ದರೆ ಹಾಗೆ ಹೆಚ್ಚಾಗಿರುವ ಮೊಬಲಗನ್ನೂ ಪೊಗದಿಯಲ್ಲಿ ಕಡಮೆಮಾಡತಕ್ಕುದು ಮೇಲ್ಕಂಡ ರಿಯಾಯಿತಿಯ ಏರ್ಪಾಡಿನ ಸಾಮಾನ್ಯ ನಿಯಮವಾಗಿದೆ. ಮೈಸೂರು ಸಂಸ್ಥಾನದ ವಿಷಯದಲ್ಲಿ ಈ ಲೆಕ್ಕಾಚಾರದಿಂದ ಎಷ್ಟುಮಟ್ಟಿಗೆ ಪ್ರಯೋಜನವಾಗುವುದೆಂಬ ಅಂಶವನ್ನು ಜಾಗರೂಕತೆಯಿಂದ ಪರಿಶೀಲಿಸಿದುದರಲ್ಲಿ, ಶ್ರೀಮನ್ ಮಹಾರಾಜರವರ ಸರ್ಕಾರದವರು ಈ ವಿಷಯದಲ್ಲಿ ಇಂಡಿಯಾ ಸರ್ಕಾರದವರಿಗೆ ಮತ್ತಷ್ಟು ವಿಜ್ಞಾಪಿಸಿಕೊಳ್ಳುವುದು ಅವಶ್ಯಕವೆಂದು ಭಾವಿಸಿರುತ್ತಾರೆ. ಈ ವಿಷಯದಲ್ಲಿ ಇನ್ನೂ ಪತ್ರವ್ಯವಹಾರವು ನಡೆಯುತ್ತಿರುವುದರಿಂದ, ನಿರೀಕ್ಷಿಸಬಹುದಾದ ಸಹಾಯದ ವಿಷಯದಲ್ಲಿ ಖಂಡಿತವಾಗಿ ಯಾವ ವಿವರವನ್ನೂ ನಾವು ಹೇಳಲಾಗುವುದಿಲ್ಲ. ಆದರೂ ನ್ಯಾಯಪಕ್ಷಪಾತಿಗಳೆಂದು ಪ್ರಸಿದ್ಧರಾದ ಬ್ರಿಟಿಷ್ ಸರ್ಕಾರದವರು, ತಮ್ಮ ಸಹಜವಾದ ಸಮದೃಷ್ಟಿಯಿಂದ ನಮ್ಮ ವಿಜ್ಞಾಪನೆಗಳನ್ನು ಪರ್ಯಾಲೋಚಿಸುವರೆಂದು ದೃಢವಾಗಿ ನಂಬಲಾಗಿರುತ್ತದೆ.

ಇಂಡಿಯಾ ಸರ್ಕಾರದಲ್ಲಿಯೂ, ಬ್ರಿಟಿಷ್ ಇಂಡಿಯಾದ ಇತರ ಪ್ರಾಂತೀಯ ಸರಕಾರಗಳಲ್ಲಿಯೂ ಮತ್ತು ದೇಶೀಯ ಸಂಸ್ಥಾನಗಳಲ್ಲಿಯೂ ನಡೆಯುತ್ತಿರುವ ಬದಲಾವಣೆಗಳ ಪ್ರಕಾರ ಪರಿಶೀಲಿಸಿ ನೋಡಿದರೆ ಮೈಸೂರಿನವರ ಹಿತಸಾಧನೆಗೋಸ್ಕರವೂ ಮತ್ತು ಮೈಸೂರಿನವರಿಗೆ ನ್ಯಾಯವಾಗಿ ಬರಬೇಕಾದ ಮೇಲ್ಕಂಡ ಹುಟ್ಟುವಳಿಯ ಭಾಗವನ್ನು ಬರಮಾಡಿಕೊಳ್ಳುವುದಕ್ಕೂ ಈ ವಿಚಾರಗಳನ್ನೆಲ್ಲಾ ಸಾಧ್ಯವಾದಷ್ಟು ಹೆಚ್ಚಾಗಿ ಒತ್ತಿ ಹೇಳಿ ಇಂಡಿಯಾ ಸರಕಾರದವರ ಪರ್ಯಾಲೋಚನೆ ಬಗ್ಗೆ ಒಪ್ಪಿಸುವುದು ನಮ್ಮ ಕರ್ತವ್ಯವಾಗಿರುತ್ತದೆ. ಈ ಸಂದರ್ಭದಲ್ಲಿ ಸುಂಕಗಳ ಮತ್ತು ನಿರಕುಶಾಮೆಗಳ ಸಂಬಂಧದ ಕಾರ್ಯಕ್ರಮದ ವಿಚಾರವಾಗಿ ನಾವು ಕಳುಹಿಸಿದ ಅರಿಕೆಯಲ್ಲಿ ನಮೂದಿಸಿರುವ ಅಭಿಪ್ರಾಯವನ್ನೇ ಮತ್ತೆ ಒತ್ತಿ ಹೇಳುವುದೂ, ಅವಶ್ಯಕ. ಇಂಡಿಯಾದೇಶದ ರಾಜಕೀಯ ಸುಧಾರಣೆಗಳ ಮೇಲಣ ವರದಿಯಲ್ಲಿ ಇರತಕ್ಕ ಇಂಡಿಯಾ ಸರಕಾರದವರೂ ಮತ್ತು ದೇಶೀಯ ಸಂಸ್ಥಾನಗಳ ಸರಕಾರದವರೂ ಉಭಯತ್ರರಿಗೂ ಸಾಮಾನ್ಯಾಸಕ್ತಿ ಇರತಕ್ಕ ವಿಚಾರಗಳೆಲ್ಲಾ ಒಟ್ಟಿಗೆ ಕಲೆತು ಸಮಾಲೋಚಿಸಿಮಾಡುವುದಕ್ಕೆ ಅನುಕೂಲಗಳನ್ನು ಕಲ್ಪಿಸಬೇಕೆಂಬ ಶಿಫಾರಸುಗಳನ್ನು ಕುರಿತು ನಾವು ಪ್ರಸ್ತಾಪಿಸಿದ್ದೆವು. ಮೇಲ್ಕಂಡಂಥ ವಿಚಾರಗಳಲ್ಲಿ ಇಂಡಿಯಾ ಸರಕಾರದ ಸುಂಕದ ಮತ್ತು ನಿರುಕುಶಾಮೆಯ ವಿಚಾರವೂ ಒಂದಾಗಿದೆ; ಮೈಸೂರು ಸರಕಾರದವರು ಇಂಡಿಯಾ ಸರಕಾರದವರೊಡನೆ ಒಟ್ಟಿಗೆ ಕಲೆತು ಸಮಾಲೋಚನೆ ಮಾಡತಕ್ಕುದು ಬಹು ಮುಖ್ಯವಾದುದು; ಆದುದರಿಂದ ಮೈಸೂರು ಸರಕಾರದವರು ಈ ಅಂಶವನ್ನು ಸಮಾಲೋಚನೆಮಾಡುವ ಕಮಿಟಿಯಲ್ಲಾಗಲಿ, ಸಭೆಯಲ್ಲಾಗಲಿ, ಮೈಸೂರು ಸರಕಾರದವರಿಗೆ ಪ್ರಾತಿನಿಧ್ಯವು ದೊರೆಯಬೇಕೆಂದು ಅವರು ಒತ್ತಿ ಹೇಳಿ ಅರಿಕೆಮಾಡಿಕೊಳ್ಳಬೇಕು. ಆದುದರಿಂದ ಸಾಮಾನ್ಯವಾಗಿ ಮೈಸೂರು ದೇಶದ ಆಯವ್ಯಯಗಳ ಹಿತಸಾಧನೆಗಾಗಿಯೂ, ಮತ್ತು ಸಂಸ್ಥಾನದ ಚೈತನ್ಯಸ್ವಾಯಿಯೆನಿಸುವ ವಿಚಾರವನ್ನು ಕಾಪಾಡಿಕೊಳ್ಳುವುದಕ್ಕಾಗಿಯೂ, ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಪ್ರಾಮುಖ್ಯ ವಿಚಾರಗಳಲ್ಲಿ ಮತ್ತೆ ಅರಿಕೆ ಮಾಡಿಕೊಳ್ಳತಕ್ಕವರಾಗಿದ್ದಾರೆ. ಅಲ್ಲದೆ ತೃಪ್ತಿಕರವಾದ ತೀರ್ಮಾನವು ದೊರೆಯುವವರೆಗೂ ಅವರೆಂದಿಗೂ ಸಮಾಧಾನದಿಂದಿರುವುದಿಲ್ಲ.

ನಮ್ಮ ಹಣಕಾಸಿನ ಸ್ಥಿತಿಯನ್ನು ಮೇಲ್ಪಡಿಸುವುದಕ್ಕಾಗಿ ಮಿತವ್ಯಯವನ್ನು ಮಾಡತಕ್ಕ ಮತ್ತು ಹುಟ್ಟುವಳಿಯನ್ನು ಅಭಿವೃದ್ಧಿಪಡಿಸತಕ್ಕ ಎಲ್ಲಾ ಬಗೆ ಏರ್ಪಾಡುಗಳಮೂಲಕ ನಮ್ಮ ಪ್ರಯತ್ನಗಳು ವಿಶ್ವಾಸಪೂರ್ವಕವಾಗಿ ನಡೆದಾಗ್ಯೂ, ನಾವು ಕೊಡತಕ್ಕ ಪೊಗದಿಯಲ್ಲಿ ವಾಸ್ತವಿಕವಾದ ರಿಯಾಯಿತಿಯು ದೊರೆತಹೊರತು ಮತ್ತು ಬ್ರಿಟಿಷ್ ಇಂಡಿಯಾಕ್ಕೆ ಸುಂಕಗಳಿಂದ ಬರುವ ಹುಟ್ಟುವಳಿಯಲ್ಲಿ ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟಷ್ಟು ಭಾಗಕ್ಕೆ ಮೈಸೂರು ಸಂಸ್ಥಾನದವರಿಗಿರುವ ನ್ಯಾಯವಾದ ಹಕ್ಕನ್ನು ಸಂಪೂರ್ಣವಾಗಿ ಅಂಗೀಕರಿಸಿದಹೊರತು, ಸದ್ಯದಲ್ಲಿ ಹುಟ್ಟುವಳಿಯಲ್ಲಿ ಮಿಗತಾಯವಾಗತಕ್ಕ ಕಾಲವನ್ನು ನಾವು ನೋಡಲಾರೆವು. ರೈಲ್ವೆ ಬಡಾವಣೆಯ ವಿಚಾರದಲ್ಲಿ ನಮ್ಮ ಕಾರ್ಯಕ್ರಮವು ನಿಲೆಗಟ್ಟಿ ನಿಂತು ಹೋಗಿರುತ್ತದೆ. ಮದರಾಸು ಸರ್ಕಾರದವರೊಡನೆ ಮಾಡಿಕೊಂಡ ಕರಾರಿನ ನಿರ್ಣಯಗಳ ನಂತರ ಈಗ ತೀರ್ಮಾನವಾಗಿರುವ ಗೊತ್ತಾದ ಕಾರ್ಯಕ್ರಮವನ್ನನುಸರಿಸಿ ಕೃಷ್ಣರಾಜಸಾಗರ ಪ್ರಾಜೆಕ್ಟಿನ ಮುಂದಿನ ಅಭಿವೃದ್ಧಿಯೂ, ಪ್ರಾಥಮಿಕ ವಿದ್ಯಾಭ್ಯಾಸದ ಬಡಾವಣೆಯೂ, ವ್ಯವಸಾಯ, ವಾಣಿಜ್ಯ ಮತ್ತು ಕೈಗಾರಿಕೆ ಇವುಗಳ ಅಭಿವೃದ್ಧಿಯೂ, ಕೆರೆಗಳನ್ನು ಉತ್ತಮಸ್ಥಿತಿಗೆ ತರುವುದು ಮತ್ತು ಹೊಸನೀರಾವರಿ ಕಾಮಗಾರಿಗಳನ್ನು ಏರ್ಪಡಿಸುವುದು ಮುಂತಾಗಿ, ಇವುಗಳೆಲ್ಲಾ ನಮ್ಮ ಹುಟ್ಟುವಳಿಯನ್ನು ಹೆಚ್ಚಿಸದೇ ಹೋದ ಪಕ್ಷದಲ್ಲಿ, ಬಹುಕಾಲದವರೆಗೂ ನಿಂತೇ ಹೋಗಬೇಕಾಗುತ್ತದೆ. ಇಂಥಾ ಸ್ಥಿತಿಗತಿಗಳು ಒದಗಿರುವಲ್ಲಿ, ಅವುಗಳ ದೆಸೆಯಿಂದ ಆಶಾಭಂಗವೂ, ವ್ಯಾಕುಲವೂ, ಎಂದಿಗೂ ತಪ್ಪಲಾರವು. ಸಾಕಾದಷ್ಟು ಹಣವನ್ನು ಉಳಿಸಿಕೊಳ್ಳದೇ ಇರುವ ಪಕ್ಷದಲ್ಲಿ, ನಾವು ಜನಗಳಿಂದ ಸಾಲವನ್ನು ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕಾಗುತ್ತದೆ. ಹೀಗೆ ಮಾಡುವುದರಿಂದ, ಜಾಗ್ರತೆಯಾಗಿಯೇ ಆಗಲಿ, ಅಥವಾ ಸಂಪೂರ್ಣವಾಗಿಯೇ ಆಗಲಿ, ಆದಾಯವನ್ನು ದೊರಕಿಸಲಾರದೇ ಇರತಕ್ಕ ನೀರಾವರಿ ಕಾಮಗಾರಿಗಳಂಥ ಕಾಮಗಾರಿಗಳ ವಿಷಯದಲ್ಲಿ, ಸಂಸ್ಥಾನದ ವಾರ್ಷಿಕ ಉತ್ಪತ್ತಿಯಲ್ಲಿ ಬಹಳ ವೆಚ್ಚಕ್ಕೆ ಕಾರಣವಾಗುತ್ತದೆ. ಇದರಿಂದ, ರಾಜ್ಯಾಡಳಿತದ ಹಲವುಬಗೆಯಾದ ಇಲಾಖೆಗಳಲ್ಲಿನ ಕಾರ್ಯಕಲಾಪಗಳಿಗೆ ಸ್ವಲ್ಪಮಟ್ಟಿಗೆ ಅಡಚಣೆಯೂ, ಸಾಮಾನ್ಯವಾಗಿ ಕಾರ್ಯದಕ್ಷತೆಗೆ ಲೋಪವೂ ಮುಂದಕ್ಕೂ, ಸಂಭವಿಸುವುದು ಖಂಡಿತ.

ವಿದ್ಯಾಭ್ಯಾಸದ ವೆಚ್ಚ.

ಯೂನಿವರ್ಸಿಟಿಯೂ ಸೇರಿ ವಿದ್ಯಾಭ್ಯಾಸಕ್ಕಾಗಿ ಚಾಲ್ತಿ ಸಾಲಿನಲ್ಲಿ ಕೊಟ್ಟಿದ್ದ 42,92,000 ರೂಪಾಯಿಗೆ ಬದಲಾಗಿ 45,66,000 ರೂಪಾಯಿನ ಸ್ಟೇಟ್‌ಗ್ರಾಂಟನ್ನು ನಿಗದಿಮಾಡಿರುತ್ತದೆ. ಯೂನಿವರ್ಸಿಟಿಯ ಗ್ರಾಂಟನ್ನು 6 ಲಕ್ಷ ರೂಪಾಯಿಗಳಿಂದ 7,44,000 ರೂಪಾಯಿಗಳಿಗೆ ಹೆಚ್ಚಿಸಿರುತ್ತದೆ. ಇದರ ಈ ನಮೂದಿಸಿರುವ ಎರಡು ಕಾರಣಗಳಿಂದ ನಿರ್ವಾಹವಿಲ್ಲದೆ ಮೊಬಲಗನ್ನು ಹೆಚ್ಚಿಸಬೇಕಾಯಿತು. ಆ ಕಾರಣಗಳಾವುವೆಂದರೆ:—

ಮೊದಲನೆಯದಾಗಿ, ಹಣಕಾಸಿನ ಮುಗ್ಗಟ್ಟಿನಿಂದ ಕಳೆದ ಎರಡು ವರುಷಗಳಲ್ಲಿ ಯೂನಿವರ್ಸಿಟಿ ಗ್ರಾಂಟನ್ನು ಬಹಳವಾಗಿ ಕಡಮೆಮಾಡಬೇಕಾಯಿತು. ಇದರ ಫಲಿತಾಂಶವೇನೆಂದರೆ, ಯೂನಿವರ್ಸಿಟಿಯವರಿಗೆ ಸರ್ವೇಸಾಧಾರಣವಾಗಿ ಬೇಕಾಗುವ ಮೊಬಲಗಿಗೆ ಕೂಡಾ ಸರ್ಕಾರದ ಗ್ರಾಂಟು ಮೊಬಲಗಿನ ಹಣವು ಸಾಲದೆಹೋಗಿ ಯೂನಿವರ್ಸಿಟಿಯವರು ಸದರಿ ವೆಚ್ಚಕ್ಕಾಗಿ ತಮ್ಮ ಶಿಲ್ಕು ಮೊಬಲಗಿನಿಂದ ಸದರಿ ವೆಚ್ಚದ ಮೊಬಲಗಿನ ಒಂದು ಭಾಗವನ್ನು ತೆಗೆದು ಉಪಯೋಗಿಸಿಕೊಳ್ಳಬೇಕಾಯಿತು. ಈ ಶಿಲ್ಕು ಮೊಬಲಗು ಈಗ ಬಹಳವಾಗಿ ಕಡಮೆಯಾಗಿಹೋಗಿರುತ್ತದೆ. ಎರಡನೆಯದಾಗಿ, ತಮ್ಮ ವಿದ್ಯಾರ್ಥಿಗಳಿಗಾಗಿ ಸೈನ್ಸ್ ವಿಷಯಗಳನ್ನು ಕಲಿಯಲು ಕೊಂಡು ಸೆಂಟ್ರಲ್ ಕಾಲೇಜಿಗೆ ಸೇರಲಪೇಕ್ಷಿಸುವಂಥ ಅನೇಕಜನ ವಿದ್ಯಾರ್ಥಿಗಳಿಗೆ ಸ್ಥಳವನ್ನೊದಗಿಸತಕ್ಕ ಬಗ್ಗೆ ಬಹಳ ಹೆಚ್ಚಾಗಿ ಗ್ರಾಂಟನ್ನು ಮಾಡಬೇಕಾಯಿತು. ಈ ವಿಷಯವನ್ನು ಕೂಲಂಕಷವಾಗಿ ವಿಮರ್ಶೆಮಾಡಿ ತಕ್ಕ ಸಲಹೆಗಳನ್ನು ಕೊಡುವುದಕ್ಕಾಗಿ ಸೆನೆಟ್ಟಿನಿಂದ ಒಂದು ಕಮಿಟಿಯು ಮೊಕರರ್ಮಾಡಲ್ಪಟ್ಟಿತ್ತು. ಸದರಿ ಕಮಿಟಿಯವರು, 1924 ರಿಂದ 1927ರ ವರೆಗಿನ ನಾಲ್ಕು ವರುಷಗಳಲ್ಲಿ ಸೆಂಟ್ರಲ್ ಕಾಲೇಜಿಗೆ ಸೇರತಕ್ಕ ಬಗ್ಗೆ ನ್ಯಾಯಕವಾಗಿ ಬರತಕ್ಕವರ ಸಂಖ್ಯೆಯನ್ನು ಪರ್ಯಾಲೋಚಿಸಿ ಕೆಲವು ಶಿಫಾರಸುಗಳನ್ನು ಜಾಹೀರ್ಮಾಡಿದರು. ಆದರೆ ಯೂನಿವರ್ಸಿಟಿ ಕೌನ್ಸಿಲಿನವರು ಮುಂದಿನ ಎರಡು ವರ್ಷಗಳಲ್ಲಿ ಮಾತ್ರ ತುರ್ತಾಗಿ ಆಗಬೇಕಾದ್ದನ್ನು ಪರ್ಯಾಲೋಚಿಸಬೇಕೆಂದು ಅಭಿಪ್ರಾಯಪಟ್ಟರು. ಬರುವ ವರುಷದಲ್ಲಿ 260 ವಿದ್ಯಾರ್ಥಿಗಳನ್ನೂ, ಅದರ ಮುಂದಿನ ವರುಷದಲ್ಲಿ 310 ವಿದ್ಯಾರ್ಥಿಗಳನ್ನೂ ಸೇರಿಸಲು ಪ್ರಥಮತಃ ಆಗಬೇಕಾದ ವೆಚ್ಚಕ್ಕೆ 76,000 ರೂಪಾಯಿಗಳೂ, ಅಲ್ಲದೆ ವರ್ಷಂಪ್ರತಿಯಲ್ಲಿಯೂ ತಗಲುವ ವೆಚ್ಚಕ್ಕಾಗಿ 54,000 ರೂಪಾಯಿಗಳೂ ಹೆಚ್ಚಾಗಿ ಒದಗಿಸಲ್ಪಡಬೇಕೆಂದು ಸದರಿ ಕೌನ್ಸಿಲಿನವರು ಅಂದಾಜು ಮಾಡಿರುತ್ತಾರೆ. ಈ ಸಲಹೆಗಳನ್ನು ಬಹಳ ಜಾಗರೂಕತೆಯಿಂದ ಪರ್ಯಾಲೋಚಿಸಿ ಯುಕ್ತಾಯುಕ್ತ ವಿಚಾರದಿಂದ 1,50,000 ರೂಪಾಯಿ ಬೆಲೆ ಬಾಳತಕ್ಕ ಒಂದು ಕಟ್ಟಡವನ್ನು ಯೂನಿವರ್ಸಿಟಿಯ ಸ್ವಾಧೀನಕ್ಕೆ ಕೊಡುವ ಏರ್ಪಾಡು ಮಾಡಿರುವುದಲ್ಲದೆ, ಇದಕ್ಕಾಗಿ ಯೂನಿವರ್ಸಿಟಿ ಬಡ್ಜೆಟ್ಟಿನಲ್ಲಿ 90,000 ರೂಪಾಯಿಗಳನ್ನು ಸರ್ಕಾರದವರು ಒದಗಿಸಿರುತ್ತಾರೆ.

ಈಚೆಗೆ ಕೆಲವು ದಿನಗಳಿಂದ ಪರ್ಯಾಲೋಚನೆಯಲ್ಲಿದ್ದ ಮೇರೆಗೆ ಯೂನಿವರ್ಸಿಟಿಯಲ್ಲಿ ಒಂದು ಮೆಡಿಕಲ್ ಫ್ಯಾಕಲ್ಟಿ (ವೈದ್ಯದ ಶಾಖೆ) ಯನ್ನು ಸ್ಥಾಪಿಸತಕ್ಕ ವಿಚಾರವು ಈಗ ಸ್ವಲ್ಪಮಟ್ಟಿಗೆ ನಿರ್ಧರವಾಗಿ ಒಂದು ಮುಖಕ್ಕೆ ಬಂದಿರುತ್ತದೆ. ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ವೈದ್ಯದ ಸಹಾಯವು ಹೆಚ್ಚಾಗಿ ಬೇಕಾಗಿರುವ ಪ್ರಯುಕ್ತವೂ, ಮತ್ತು ಬ್ರಿಟಿಷ್ ಇಂಡಿಯಾದಲ್ಲಿನ ಮೆಡಿಕಲ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡಲು ನಮ್ಮ ವಿದ್ಯಾರ್ಥಿಗಳಿಗೆ ಸರಿಯಾಗಿ ಅವಕಾಶ ದೊರೆಯದೆ ಬಹಳ ಕಷ್ಟವಾಗಿರುವುದರಿಂದಲೂ ಈ ಮೊದಲೇ ಇರತಕ್ಕ ಮೆಡಿಕಲ್ ಸ್ಕೂಲಿನ ಸಂಬಂಧದಲ್ಲಿ ಮುಂದಿನ ತಿಂಗಳ ಲಾಗಾಯಿತು ಬೆಂಗಳೂರಿನಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪಿಸಲು ಯೂನಿವರ್ಸಿಟಿ ಸೆನೆಟ್ಟಿನವರ ಸಲಹೆಯನ್ನು ಸರ್ಕಾರದವರು ಅನುಮೋದಿಸಿರುತ್ತಾರೆ. ನಾವು ಈಗ ಹಾಲಿ ಮೆಡಿಕಲ್ ಸ್ಕೂಲಿಗಾಗಿ ಸುಮಾರು 33,000 ರೂಪಾಯಿಗಳನ್ನು ವೆಚ್ಚಮಾಡುತ್ತಿದ್ದೇವೆ. ಬ್ರಿಟಿಷ್ ಇಂಡಿಯಾದಲ್ಲಿರುವ ಮೆಡಿಕಲ್ ಕಾಲೇಜುಗಳಲ್ಲಿ ವ್ಯಾಸಂಗಮಾಡತಕ್ಕ ನಮ್ಮ ವಿದ್ಯಾರ್ಥಿಗಳ ಸಲುವಾಗಿ, ವಿದ್ಯಾರ್ಥಿವೇತನಗಳ ಮತ್ತು ಸಹಾಯದ್ರವ್ಯಗಳ ರೂಪದಲ್ಲಿ ವರುಷ ಒಂದಕ್ಕೆ 32,000 ರೂಪಾಯಿಗಳ ಹೆಚ್ಚಿನ ಖರ್ಚನ್ನೂ ಸಹ ಮಾಡುತ್ತಲಿರುತ್ತೇವೆ. ಈ ಏರ್ಪಾಡನ್ನು ತಪಶೀಲುವಾರಾಗಿ ಪರಿಶೀಲನೆ ಮಾಡುವುದಕ್ಕಾಗಿ ಯೂನಿವರ್ಸಿಟಿ ಸೆನೆಟ್ಟಿನಿಂದ ಮೊಕರರು ಮಾಡಲ್ಪಟ್ಟ ಕಮಿಟಿಯವರ ರಿಪೋರ್ಟಿನಿಂದ ಇನ್ನೂ ಕೆಲವು ವರುಷಗಳ ಕಾಲ ಮೆಡಿಕಲ್ ಕಾಲೇಜಿಗೋಸ್ಕರವಾಗಿ ಆಗತಕ್ಕ ಹೆಚ್ಚಿನ ಖರ್ಚು ಬಹಳವಾಗಿರುವುದಿಲ್ಲವೆಂಬುದಾಗಿ ವ್ಯಕ್ತಪಡುತ್ತದೆ. ಅದೇ ಪ್ರಕಾರ ಇದಕ್ಕಾಗಿ 15,000 ರೂಪಾಯಿನ ಹೆಚ್ಚಿನ ಗ್ರಾಂಟನ್ನು ಯೂನಿವರ್ಸಿಟಿ ಬಡ್ಜೆಟ್ಟಿನಲ್ಲಿ ಸೇರಿಸಿರುತ್ತದೆ.

ಯೂನಿವರ್ಸಿಟಿ ವಿದ್ಯಾಭ್ಯಾಸಕ್ಕೆ ಕೊಡುವ ಮೊಬಲಗನ್ನು ಸೇರಿಸದೆ ವಿದ್ಯಾಭ್ಯಾಸದ ಬಾಬಿನಲ್ಲಿ ಕೊಡುತ್ತಿರುವ ನಿವ್ವಳ ಗ್ರಾಂಟನ್ನು 36,92,000 ರೂಪಾಯಿಗಳಿಂದ 38,22,000 ರೂಪಾಯಿಗಳಿಗೆ ಹೆಚ್ಚಿಸಿದೆ. ಸ್ಥಳೀಯ ಸಂಸ್ಥೆಗಳಿಂದ ಬಂದ ಸಹಾಯದ್ರವ್ಯವೂ ಸೇರಿ ವಿದ್ಯಾಭ್ಯಾಸದ ಒಟ್ಟು ವೆಚ್ಚವು 48,12,000 ರೂಪಾಯಿಗಳಾಗಿರುತ್ತದೆ. ಚಾಲ್ತಿ ವರುಷದಲ್ಲಿ 43,40,000 ರೂಪಾಯಿಗಳು ಮಾತ್ರವೇ ವಿದ್ಯಾಭ್ಯಾಸಕ್ಕಾಗಿ ಒಟ್ಟು ಖರ್ಚಾಗಿರುತ್ತದೆ. ವಿದ್ಯಾಭಿವೃದ್ಧಿಗಾಗಿ ಡಿಸ್ಟ್ರಿಕ್ಟು ಬೋರ್ಡುಗಳಿಗೆ ವಸೂಲ್ಮಾಡಬಹುದೆಂದು ವಿಧಿಸಲ್ಪಟ್ಟ ವಿದ್ಯಾಭ್ಯಾಸದ ಸೆಸ್ಸು ದೇಖಿಲ್ ಒಟ್ಟು ಖರ್ಚು ಈರೀತಿ ವಿಶೇಷ ಹೆಚ್ಚುವುದಕ್ಕೆ ಕಾರಣವಾಗಿದೆ.

ವಿದ್ಯಾಭ್ಯಾಸದ ಸೆಸ್ಸನ್ನು ವಿಧಿಸಿ ವಸೂಲು ಮಾಡುವ ಮತ್ತು ಸ್ಥಳೀಯ ದ್ರವ್ಯೋತ್ಪತ್ತಿಗಳಿಂದ ಸಹಾಯ ಪಡೆಯುವ ಸಂಬಂಧದಲ್ಲಿ ಸರ್ಕಾರದವರು ವಿದ್ಯಾಭ್ಯಾಸದ ಆಯವ್ಯಯದ ವಿಷಯವನ್ನೆಲ್ಲಾ ಈಗ ಕೂಲಂಕಷವಾಗಿ ಪರಿಶೀಲಿಸಬೇಕಾಗಿದೆ. ವಿಧಾಯಕ ಮಾಡಿರುವ ಅಭಿವೃದ್ಧಿಕ್ರಮಕ್ಕನುಗುಣವಾಗಿ, ಯೂನಿವರ್ಸಿಟಿಯನ್ನು ಬಿಟ್ಟು ಉಳಿದ ಸರ್ಕಾರಿ ವಿದ್ಯಾಭ್ಯಾಸಕ್ಕಾಗಿ ತಗಲುವ ಒಟ್ಟು ಖರ್ಚು ಸುಮಾರು 60 ಲಕ್ಷ ರೂಪಾಯಿ ಯಾಗಬಹುದು. ಇದಕ್ಕಾಗಿ ಬಹಳ ಹೆಚ್ಚು ಖರ್ಚನ್ನು ಇಡಬೇಕಾಗುತ್ತದೆ. ಈ ಹೆಚ್ಚು ಖರ್ಚಿಗಾಗಿ ಬೇಕಾಗುವ ಹಣವನ್ನು ಹೇಗೆ ಒದಗಿಸಬೇಕು? ಸ್ಥಳೀಯ ದ್ರವ್ಯೋತ್ಪತ್ತಿಗಳಿಂದ ಯಾವ ದಾನಾಸಹಾಯದ ಮೇರೆಗೆ ಸಹಾಯವನ್ನು ಪಡೆಯಬೇಕು? ಎಂಬ ವಿಷಯಗಳನ್ನು ನಾವು ಬಹಳ ಜಾಗರೂಕತೆಯಿಂದ ಪರ್ಯಾಲೋಚಿಸಬೇಕಾಗಿದೆ.

ವಿದ್ಯುಚ್ಛಕ್ತಿಯ ಇಲಾಖೆ.

ವಿದ್ಯುಚ್ಛಕ್ತಿ ಇಲಾಖೆಯ ಮೂಲಧನದ ವೆಚ್ಚವು ಸದರಿ ಇಲಾಖೆಯು ನಿರ್ಮಾಣವಾದ 1900—01 ನೇ ಸಾಲಿನಿಂದ ಚಾಲ್ತಿ ವರ್ಷದ ಆಖೈರಿಗೆ 179 ಲಕ್ಷ ರೂಪಾಯಿಗಳಾಗಿರುತ್ತದೆ ಮತ್ತು ಈ ಮೂಲಧನದಿಂದ ಅದೇ ಕಾಲದಲ್ಲಿ, ಕೆಲಸ ನಡೆಸುವ ವೆಚ್ಚಗಳಿಗೂ, ಡಿಪ್ರಿಸಿಯೇಷನ್ ಫಂಡಿಗೂ, ಅವಶ್ಯವಾದ ಹಣವನ್ನು ಒದಗಿಸಿದ ನಂತರವೂ, ಒಟ್ಟು 273 ಲಕ್ಷ ರೂಪಾಯಿಗಳು ಹುಟ್ಟುವಳಿಯಾಗಿರುತ್ತವೆ. ಮೂಲಧನದ ಮೇಲಣ ಬಡ್ಡಿಗಾಗಿ 72 ಲಕ್ಷ ರೂಪಾಯಿಯನ್ನು ಇದರಿಂದ ಉತ್ತಾರಹಾಕಿದಾಗ್ಯೂ ನಿಲ್ಲುವ 201 ಲಕ್ಷ ರೂಪಾಯಿ ನಿವ್ವಳ ಆದಾಯವು ಈ ಉದ್ಯಮಕ್ಕಾಗಿ ಹಾಕಿದ ಮೂಲಧನಕ್ಕಿಂತಲೂ 22 ಲಕ್ಷ ರೂಪಾಯಿಗಳಷ್ಟು ಅಧಿಕವಾಗಿರುತ್ತದೆ. ತಿದ್ದುಪಡಿಯಾದ ಅಂದಾಜಿನ ಮೇರೆಗೆ ಚಾಲ್ತಿ ವರ್ಷದಲ್ಲಿ ಮೂಲಧನದ ಮೇಲೆ ಬಡ್ಡಿ ದೇಖಿಲು ಶೇಕಡ 13½ ಯಂತೆಯೂ ಬಡ್ಡಿಯನ್ನು ವಜಾಮಾಡಿ ಶೇಕಡ 9½ ಯಂತೆಯೂ ವರಮಾನವಿರುತ್ತದೆ. ಈ ಫಲಿತಾಂಶಗಳು ಬಹಳ ತೃಪ್ತಿಕರವಾಗಿರುತ್ತವೆ. ಆದರೆ ಕೃಷ್ಣರಾಜಸಾಗರದ ಕಟ್ಟಡವು ಪೂರ್ತಿಯಾದೊಡನೆಯೇ ವಿದ್ಯುಚ್ಛಕ್ತಿಯ ಕಾಂಗಾರಿಗಳನ್ನೂ ಕೃಷ್ಣರಾಜಸಾಗರದ ಕಾಂಗಾರಿಗಳನ್ನೂ ಒಟ್ಟುಗೂಡಿಸಿ ಒಂದೇ ಉದ್ಯೋಗವೆಂದೇ ಭಾವಿಸಬೇಕಾಗಿರುವುದರಿಂದ ಇವುಗಳನ್ನು ತಿದ್ದುಪಡಿ ಮಾಡತಕ್ಕುದು ಅವಶ್ಯವಾಗಿರುತ್ತದೆ, ಏಕೆಂದರೆ:—ವಿದ್ಯುಚ್ಛಕ್ತಿಯನ್ನು ಉತ್ಪನ್ನ ಮಾಡುವುದಕ್ಕಾಗಿ ವರ್ಷದ ಎಲ್ಲಾ ಕಾಲಗಳಲ್ಲಿಯೂ ಅವಿಚ್ಛಿನ್ನವಾಗಿ ನೀರು ಸರಬರಾಯಿಯಾಗುವಂತೆ ಏರ್ಪಡಿಸುವುದಕ್ಕಾಗಿಯೂ ಮತ್ತು ಕೃಷ್ಣರಾಜಸಾಗರದ ಅಣೆಕಟ್ಟನ್ನು ಕಟ್ಟುವುದಕ್ಕೆ ಮುಂಚೆ ಸಾಧ್ಯವಾಗುತ್ತಿದ್ದುದಕ್ಕಿಂತಲೂ ಹೆಚ್ಚಾಗಿ ವಿದ್ಯುಚ್ಛಕ್ತಿಯು ಉತ್ಪನ್ನವಾಗುವಂತೆ ಹೆಚ್ಚು ನೀರನ್ನೊದಗಿಸುವುದಕ್ಕಾಗಿಯೂ ಉದ್ದೇಶಿಸಲ್ಪಟ್ಟಿರುವ ಕೃಷ್ಣರಾಜಸಾಗರದ ಕಾಂಗಾರಿಯ ಮೊದಲನೆಯ ಅಂತಸ್ತು ಸಂಪೂರ್ಣವಾಗಿ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಿದೆಂದೇ ಹೇಳಬಹುದು. ಈ ಆಧಾರದಮೇಲೆ ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾಂಗಾರಿಯನ್ನೂ ಕೃಷ್ಣರಾಜಸಾಗರವನ್ನೂ ಒಂದೇ ಬಾಬನ್ನಾಗಿ ತೆಗೆದುಕೊಂಡು ಮೂಲಧನ ಮತ್ತು ಹುಟ್ಟುವಳಿಯ ಲೆಕ್ಕಗಳನ್ನು ತಯಾರ್ಮಾಡಿ ನಮ್ಮ ಬಂಡವಾಳದಮೇಲೆ ಲಾಭವು ಯಾವ ದರದಲ್ಲಿ ಬರುವುದೆಂಬುದನ್ನು ಮತ್ತೊಮ್ಮೆ ಲೆಕ್ಕಾಚಾರ ಮಾಡತಕ್ಕದೆಂದು ಜಾಗ್ರತೆಯಲ್ಲಿಯೇ ಹುಕುಂಗಳನ್ನು ಸಾದರ್ಮಾಡಲಾಗುತ್ತದೆ. ಈ ರೀತಿ ತಿದ್ದುಪಾಟು ಮಾಡಿದಮೇಲೆ, ಒಂದುವೇಳೆ ಎರಡು ಬಾಬುಗಳನ್ನೂ ಒಟ್ಟುಗೂಡಿಸಿದ ಕಾರಣದಿಂದ ಬರತಕ್ಕ ಲಾಭದ ದರವು ತಗ್ಗಬಹುದಾದರೂ ಕೂಡ, ಒಟ್ಟಿನಲ್ಲಿ ಈ ಜಂಟಿ ಕಾಮಗಾರಿಯು ಲಾಭಕರವಾದ ಕಾಮಗಾರಿಯೆನಿಸಿ ಸಾರ್ಥಕವಾಗಿಯೇ ಆಗುವುದು.

ಕೃಷ್ಣರಾಜಸಾಗರ.

ಚಾಲ್ತಿ ವರ್ಷದ ಆಖೈರುವರೆಗೆ ಜಲಾಶಯವೂ, ಎರಡು ಕೀಲ್ಪಟ್ಟಿದ ನಾಲೆಗಳೂ ಸೇರಿ ಒಟ್ಟು 196 ಲಕ್ಷ ರೂಪಾಯಿಗಳ ಮೂಲಧನದ ಖರ್ಚು ಆಗಿರುತ್ತದೆ. ಅಣೆಯನ್ನೂ, ಕೋಡಿಯ ಕಾಂಗಾರಿಗಳನ್ನೂ ಸಾಧ್ಯವಾದಷ್ಟು ಜಾಗ್ರತೆಯಾಗಿ ಪೂರೈಸುವ ಬಗ್ಗೆ, ಈ ವರ್ಷ 3 ಲಕ್ಷ ರೂಪಾಯಿಗಳ ಹೆಚ್ಚು ಮೊತ್ತವನ್ನು ಮಂಜೂರ್ಮಾಡಲಾಯಿತು. ಮತ್ತು ಮುಂದಿನ ವರ್ಷಕ್ಕಾಗಿ 15 ಲಕ್ಷ ರೂಪಾಯಿಯು ಗ್ರಾಂಟನ್ನು ಒದಗಿಸಿದೆ. ಜಲಾಶಯದ ಸಹಾಯದಿಂದ ವಿದ್ಯುಚ್ಛಕ್ತಿಯ ಬಾಬಿನಲ್ಲಿ ನಮ್ಮ ನಿರೀಕ್ಷಣೆಯು ಸಾರ್ಥಕವಾಗುವಂತೆ ಹುಟ್ಟುವಳಿಯಾಗಿರುತ್ತದೆ. ಮತ್ತು ಅದರ ನೀರನ್ನು ಸಾಗುವಳಿಗೆ ಕೊಡುವುದರಿಂದ ಬರತಕ್ಕ ವರಮಾನವನ್ನು ಹೆಚ್ಚಿಸಲು ಪ್ರಯತ್ನಗಳು ನಡೆಯುತ್ತಿವೆ.

ಬಡ್ಜೆಟ್ಟಿನಲ್ಲಿ ಈ ಬಾಬಿನ ಕೆಳಗೆ ಸುಮಾರು 1½ ಲಕ್ಷ ರೂಪಾಯಿಗಳಷ್ಟು ನಿವ್ವಳ ಹುಟ್ಟುವಳಿಯು ಹೆಚ್ಚಾಗಿ ಬರಬಹುದೆಂದು ನಿರೀಕ್ಷಿಸಿ ನಮೂದಿಸಲಾಗಿದೆ. ಜರೂರಾಗಿ ಕೈಗೊಳ್ಳಬೇಕಾಗಿರುವ ಕಾಂಗಾರಿಗಳ [illegible] ಯಾಗಿ [illegible] ಅಧಿಕಾರದ [illegible]

ಮೇಲೆ ಸರ್ಕಾರದವರ ಹುಕುಂಗಳು ಕಳೆದ ಡಿಸೆಂಬರು ತಿಂಗಳಲ್ಲಿ ಸಾದರಾದುವು ಮತ್ತು ಮದರಾಸು ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ನಡೆದ ಒಪ್ಪಂದದಲ್ಲಿ ಕಾಣಿಸಿರುವ ನೀರಾವರಿಯ ಬಗ್ಗೆ ಕೆಲವು ಸರ್ವೆಯ ಕಾರ್ಯಗಳನ್ನು ಮಂಜೂರ್ಮಾಡಿ ಮತ್ತೊಂದು ಹುಕುಮನ್ನು ಈಚೆಗೆ ಸಾದರ್ಮಾಡಲಾಯಿತು. ಈ ವ್ಯವಸ್ಥೆಯ ವಿಷಯವಾಗಿ ನಮ್ಮ ನೆರೆಯವರಾದ ಮದರಾಸಾಧಿಪತ್ಯದ ಜನರಲ್ಲಿ ಕೆಲವು ತಪ್ಪು ಅಭಿಪ್ರಾಯಗಳಿರುವಂತೆ ತೋರುವುದು. ದುರ್ಯೋಗ ವಶದಿಂದ ಕೆಲವು ಮದರಾಸು ವರ್ತಮಾನ ಪತ್ರಿಕೆಗಳಲ್ಲಿ ಈಚೆಗೆ ಪ್ರಕಟವಾಗಿರುವ ವಿಮರ್ಶೆಗಳನ್ನು ಪರಿಶೀಲಿಸಿ ನೋಡಿದರೆ ಸದರಿ ಒಪ್ಪಂದವನ್ನು ಪೂರ್ತಿಯಾಗಿ ಪ್ರಕಟಿಸಿದ ತರುವಾಯ ಈ ಶಂಕೆಗಳೆಲ್ಲವೂ ಪರಿಹಾರವಾಗುವುವೆಂದು ನಂಬುತ್ತೇವೆ. ಕ್ಷಿಪ್ರದಲ್ಲಿಯೇ ಸಾದರ್ಮಾಡಲ್ಪಡುವ ಸರ್ಕಾರಿ ಹುಕುಮಿನಲ್ಲಿ ಈ ಒಪ್ಪಂದದ ತಪಶೀಲುಗಳೂ, ಕಾಮಗಾರಿಗಳ ಮುಂದಿನ ಕಾರ್ಯಕ್ರಮಗಳೂ ಮತ್ತು ಸರ್ಕಾರದವರ ಸಾಮಾನ್ಯ ಉದ್ದೇಶಗಳೂ ಸವಿಸ್ತಾರವಾಗಿ ಪ್ರಕಟಿಸಲ್ಪಡುವುವು.

ರೈಲ್ವೆಗಳು.

ಕಂಪೆನಿಯವರಿಂದಲೂ, ನಮ್ಮಿಂದಲೂ, ನಡೆಸಲ್ಪಡುತ್ತಲಿರುವ ಎಲ್ಲಾ ಲೈನುಗಳಿಂದಲೂ ಸೇರಿ ಈ ವರ್ಷದಲ್ಲಿ 80 ಲಕ್ಷ ರೂಪಾಯಿಗಳ ಒಟ್ಟು ಉತ್ಪತ್ತಿಯು ಆಗಬಹುದೆಂದು ನಾವು ನಿರೀಕ್ಷಿಸಿಕೊಂಡಿದ್ದೆವು. ಆದರೆ, ಈ ನಿರೀಕ್ಷಣೆಗನುಸಾರವಾಗಿ ದೊರೆಯಬೇಕಾದುದಕ್ಕಿಂತಲೂ ಸುಮಾರು 6 ಲಕ್ಷದವರೆಗೆ ಕಡಮೆಯಾದುದು ಖೇದಕರವಾಗಿದೆ. ಪ್ರತಿಕೂಲವಾದ ಆರ್ಥಿಕ ಮತ್ತು ವ್ಯವಸಾಯದ ಸ್ಥಿತಿಗಳಿಂದ, ಸಾಮಾನುಗಳನ್ನು ಸಾಗಿಸುವುದು ಬಹಳ ಕಡಮೆಯಾಯಿತು. ಈ ಕಾರಣದಿಂದ, ಕಂಪೆನಿಯವರು ನಡೆಸಿದ ಲೈನುಗಳಲ್ಲಿ 3 ಲಕ್ಷ ರೂಪಾಯಿಗಳೂ, ಸರ್ಕಾರದಿಂದ ನಡೆಸುವ ಲೈನುಗಳಲ್ಲಿ ಸುಮಾರು 3 ಲಕ್ಷ ರೂಪಾಯಿಗಳೂ, ಆದಾಯದಲ್ಲಿ ಕಡಮೆಯಾದುವು, ಆದರೆ ಆದಾಯದಿಂದ ಕೊಡಬೇಕಾದ ವೆಚ್ಚದ ಮೊಬಲಗುಗಳು, ಆದಾಯದಲ್ಲಿ ಕಡಮೆಯಾದ ಮೊಬಲಗಿಗಿಂತಲೂ ಬಹಳ ಕಡಮೆಯಾದುವು, ಆದುದರಿಂದ ನಿವ್ವಳ ಹುಟ್ಟುವಳಿಯು ಬಡ್ಜೆಟ್ಟಿನಲ್ಲಿ ಅಂದಾಜಾಗಿದ್ದುದಕ್ಕಿಂತ ಸುಮಾರು 3½ ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿಯೇ ದೊರೆಯಿತು. ಮುಂದಣ ವರುಷಕ್ಕೆ ತಿದ್ದುಪಾಟಾದ ಈಗಿನ ಅಂದಾಜಿಗಿಂತ ಸುಮಾರು ಒಂದು ಲಕ್ಷ ರೂಪಾಯಿ ಹೆಚ್ಚಾಗಬಹುದಾದುದರಿಂದ, 75½ ಲಕ್ಷ ರೂಪಾಯಿ ಉತ್ಪತ್ತಿಯಾಗುವಂತೆ ಲೆಕ್ಕಾಚಾರವಾಗಿದೆ. ಹೊಸದಾಗಿ ಏರ್ಪಡಿಸಿರುವ ಡಿಪ್ರೀಸಿಯೇಷನ್ ಫಂಡಿಗೆ ಕೊಡಬೇಕಾದ ಮೊಬಲಗೂ ಸೇರಿ, ಹುಟ್ಟುವಳಿಯಿಂದ ಕೊಡಬೇಕಾದ ಒಟ್ಟು ವೆಚ್ಚದ ಪರಿಮಿತಿಯು ಮುಂದಣ ವರುಷದಲ್ಲಿ ಸುಮಾರು ಈ ವರುಷದಷ್ಟೇ ಆಗಬಹುದಾದುದರಿಂದ 1924—25 ನೇ ಸಾಲಿಗೆ ನಿವ್ವಳ ಹುಟ್ಟುವಳಿಯು ತಿದ್ದುಪಾಟಾದ ಈ ವರುಷದ ಅಂದಾಜಿಗಿಂತ ಸುಮಾರು ಒಂದು ಲಕ್ಷ ರೂಪಾಯಿಗಳು ಹೆಚ್ಚಾಗಬಹುದಾಗಿದೆ.

ಕೆಲಸ ನಡೆಸುವುದಕ್ಕೆ ತಗಲುವ ವೆಚ್ಚವು, ರೈಲ್ವೆಗಳಿಂದ ಬಂದ ಪ್ರತಿಫಲವಾಗಿ ಕೈಸೇರುವ ಒಟ್ಟು ಮೊಬಲಗಿನ ಯಾವ ಅಂಶವಾಗಿದೆಯೆಂಬುದನ್ನು ಪರಿಶೀಲಿಸಿದರೆ ಅದು ಕ್ರಮಕ್ರಮವಾಗಿ ಕಡಮೆಯಾಗುತ್ತಾ ಬರುತ್ತಿದೆಯಾದರೂ, ಬಹಳ ಜಾಗರೂಕತೆಯಿಂದ ವರ್ತಿಸುತ್ತಾ ಬಂದು ಮಿತವ್ಯಯಮಾಡಿ, ಸಾಧ್ಯವಾದಷ್ಟು ಮಟ್ಟಿಗೆ ವೆಚ್ಚದ ಪರಿಮಾಣವನ್ನು ತಗ್ಗಿಸುವುದು ತುಂಬ ಅವಶ್ಯವಾಗಿದೆ. ಕೆಲವು ಲೈನುಗಳಲ್ಲಿ ಉತ್ಪತ್ತಿಯನ್ನು ಹೆಚ್ಚಿಸುವ ಬಗ್ಗೆ ಬಹಳ ಗಮನವನ್ನು ಕೊಡಬೇಕಾಗಿದೆ. ಈ ಲೈನುಗಳಲ್ಲಿ ಹಣ ಕಾಸುಗಳ ಸ್ಥಿತಿಯನ್ನು ಸಮರ್ಪಕವಾಗಿರುವಂತೆ ಏರ್ಪಡಿಸಬೇಕಾದರೆ, ನಾವು ಹುಟ್ಟುವಳಿಯನ್ನು ಹೆಚ್ಚಿಸಿ, ವೆಚ್ಚವನ್ನು ತಗ್ಗಿಸುತ್ತಾ ಬರಬೇಕು.

ಭದ್ರಾವತಿಯ ಕಬ್ಬಿಣದ ಕಾರ್ಖಾನೆ.

ಕಳೆದ ಏಪ್ರಿಲ್ ಮಾಹೆಯಲ್ಲಿ ನಡೆದ ನ್ಯಾಯವಿಧಾಯಕ ಸಭೆಯ ಮೀಟಿಂಗಿನ ನಮ್ಮ ಸಮಾರಂಭ ಭಾಷಣದಲ್ಲಿ, 1923 ನೆಯ ಡಿಸೆಂಬರು ಮಾಹೆಯ ಆಖೈರುವರೆಗೆ ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ನಡೆದಿರುವ ಕೆಲಸಗಳ ಫಲಿತಾಂಶವನ್ನು ಪುನರ್ವಿಮರ್ಶೆ ಮಾಡಿ ತಿಳಿಸಿರುತ್ತೇವೆ.

ಚಾಲ್ತಿ ಕ್ಯಾಲೆಂಡರ್ ಸಾಲಿನ ಐದು ತಿಂಗಳುಗಳುಗಳಲ್ಲಿ ಯಂತ್ರಗಳು ತಡೆ ಇಲ್ಲದೆ ನಿರಂತರವಾಗಿ ಕೆಲಸಮಾಡುತ್ತಿವೆ; ಉತ್ಪತ್ತಿಯು ಶೇಕಡ 50 ರಷ್ಟು ಹೆಚ್ಚಿರುತ್ತದೆ; ಕಬ್ಬಿಣದ ತಯಾರಿ ಖರ್ಚಿನ ದರವನ್ನು ಗಣನೀಯವಾದ ರೀತಿಯಲ್ಲಿ ಕಡಿಮೆ ಮಾಡಿರುತ್ತದೆ. ಆದಾಗ್ಯೂ ಮುಷ್ಟು ಕಬ್ಬಿಣದ (ಪಿಂಗ್ ಐರನ್) ಬೆಲೆಯೂ ಮರದ ಭಟ್ಟಿಯಿಂದ ತಯಾರಾದ ಸಾಮಾನುಗಳ ಬೆಲೆಯೂ ಸಹ ಈಚೆಗೆ ತಗ್ಗಿಹೋಗಿರುವುದರಿಂದಲೂ, ಮೇಲ್ಕಂಡಂತೆ ಒದಗಿದ ಅನುಕೂಲ್ಯಗಳಿಗೆ ಇದರಿಂದ ಪ್ರತಿಕೂಲವಾಗಿದೆ. ಈಗಿರತಕ್ಕ ಕಡಿಮೆ ದರಗಳಿಗೆ ಅನುಸಾರವಾಗಿಯೂ ಕೂಡ, 1924 ನೆಯ ಜನವರಿ ಲಾಗಾಯಿತು ಉತ್ಪತ್ತಿಯಾಗಿರುವ ಸಾಮಾನುಗಳ ಕಿಮ್ಮತ್ತಿಗೂ ಅಲ್ಲಿನ ಕೆಲಸಗಳಿಗೆ ಆಗಿರುವ ವೆಚ್ಚಕ್ಕೂ ಸರಿಹೋಗುವುದೆಂದು ಅಂದಾಜು ಮಾಡಿರುತ್ತದೆ.

ಉಪಸಂಹಾರ.

ನಮ್ಮ ಆಯವ್ಯಯಗಳ ಆಡಳಿತದ ವಿಚಾರವನ್ನು ಈಗ ಸಾಮಾನ್ಯವಾಗಿ ವಿಮರ್ಶೆಮಾಡಿ ತಿಳಿಯಹೇಳಿದುದಾಯಿತು. ಈ ವಿಚಾರಕ್ಕೆ ಸಂಬಂಧಪಟ್ಟ ನಾನಾಬಗೆಯ ಮುಖ್ಯಾಂಶಗಳನ್ನು ವಿವರಿಸಿ ಹೇಳಿರುವುದರಿಂದ ಈಗಿನ ಸ್ಥಿತಿಯನ್ನು ಮೇಲ್ಪಡಿಸಲು ಸರಕಾರದವರು ಸಾಧ್ಯವಾದಷ್ಟು ಮಟ್ಟಿಗೆ ಜಾಗರೂಕತೆಯಿಂದಲೂ, ಸಾವಧಾನದಿಂದಲೂ, ಕಾರ್ಯಗಳನ್ನು ನಡಿಸುತ್ತಿದ್ದಾರೆಂಬ ವಿಷಯವು ತಿಳಿಯಬಂದು ನಿಮಗೆ ತೃಪ್ತಿಕರವಾಗಿ ಪರಿಣಮಿಸುವುದೆಂದು ಭಾವಿಸಿರುತ್ತೇವೆ. ನಮ್ಮ ಭಾರಿಭಾರಿಯ ಕಾಮಗಾರಿಗಳಿಗೋಸ್ಕರ ಸಾಲವನ್ನು ಮಾಡದೆ ಅವುಗಳು ಮುಂದುವರಿಯುವಂತೆ ಮಾಡುವುದಕ್ಕೆ ಅವಶ್ಯಕವಾದ ಬಂಡವಾಳದ ಖರ್ಚಿಗೆ ಏರ್ಪಾಡನ್ನು ಮಾಡಲಾಗಿದೆ. ಸಂಸ್ಥಾನದ ಭಾಗ್ಯಾಭಿವೃದ್ಧಿಯ ಸಾಧನಗಳನ್ನು ಅಭಿವೃದ್ಧಿಗೊಳಿಸುತ್ತಾ ಇದೆ; ನಮ್ಮ ಸರ್ಕಾರದ ಸಾಲವನ್ನು ತೀರಿಸುವುದಕ್ಕೂ ಮತ್ತು ಅದರ ಬಡ್ಡಿಯನ್ನು ಪಾವತಿ ಮಾಡುವುದಕ್ಕೂ ಪೂರ್ತಿಯಾಗಿ ಹಣವನ್ನೊದಗಿಸಿದ ಮೇಲೂ ಸಹ ಆಯವ್ಯಯಗಳನ್ನು ಸಮತೂಕಕ್ಕೆ ತರಬೇಕೆಂಬ ಸರ್ಕಾರದ ಮೇಲೆ ಹೊತ್ತಿರುವ ಕರ್ತವ್ಯವನ್ನು ಜಾರಿ ನಡೆಯದಂತೆ, ಪ್ರಜೆಗಳ ವಿದ್ಯಾಭಿವೃದ್ಧಿ ಮತ್ತು ಭಾಗ್ಯಾಭಿವೃದ್ಧಿ ಇವುಗಳಿಗೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೂ ಮುಂದಿನ ವರುಷದಲ್ಲಿ ಉದಾರವಾಗಿ ಗ್ರ್ಯಾಂಟುಗಳನ್ನು ಒದಗಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. 1922ನೇ ಇಸವಿಯ ಜೂನ್ ತಿಂಗಳಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿನ ನಮ್ಮ ಭಾಷಣದ ಪ್ರಕಾರ ನಾವು ಕೈಗೊಂಡ ಕಾರ್ಯಕ್ರಮವನ್ನು ಒಂದೇ ಸಮನಾಗಿ ಗಮನದಲ್ಲಿಟ್ಟುಕೊಂಡು ವರ್ತಿಸುತ್ತಾ ಬಂದುದರಿಂದ ಹಿಂದಣ ವರುಷಗಳಲ್ಲಿದ್ದಂತೆ, ವೆಚ್ಚಕ್ಕೆ ಹಣವು ಸಾಲದೆ ಬರತಕ್ಕ ಕೊರತೆಯು ತಪ್ಪಿ, 1922—23ನೆ ಸಾಲಿನಲ್ಲಿ ಆಯವ್ಯಯಗಳನ್ನು ಸಮತೂಕಕ್ಕೆ ತಂದುದು ಮಾತ್ರವೇ ಅಲ್ಲದೆ ಸ್ವಲ್ಪಮಟ್ಟಿಗೆ ಮಿಗತಾಯವನ್ನು ತೋರಿಸುವುದಕ್ಕೂ ಸಾಧ್ಯವಾಯಿತು. ಈ ವರುಷದ ಆಯವ್ಯಯಗಳ ಆಡಳಿತದಲ್ಲಿಯೂ ಕೂಡ ಅಬೇಧವಾದ ಸಮತೆಯನ್ನುಂಟುಮಾಡಲಾಗುತ್ತದೆ. ನಮ್ಮ ತ್ರೈವಾರ್ಷಿಕ ಕಾರ್ಯಕ್ರಮದ ಪ್ರಕಾರ ನಿರೀಕ್ಷಿಸಲಾಗಿದ್ದ ಈ ಅಭಿವೃದ್ಧಿಯನ್ನು ಸಾಧಿಸದೇ ಹೋಗಿದ್ದ ಪಕ್ಷದಲ್ಲಿ ಹಣಕಾಸಿನ ಮುಗ್ಗಟ್ಟಿನಿಂದ ಇದುವರೆಗೂ ನಿಲ್ಲಿಸಿದ್ದ ಏಳಿಗೆಯ ಏರ್ಪಾಡುಗಳನ್ನು ನೆರವೇರಿಸಲು ಅವಕಾಶಕೊಡುವ ರೀತಿಯಲ್ಲಿ ಈಗಿನ ಬಡ್ಜೆಟ್ಟನ್ನು ರಚಿಸಲಾಗುತ್ತಲೇ ಇರಲಿಲ್ಲ.

ಪ್ರಪಂಚದ ಸಮಸ್ತ ಪ್ರದೇಶಗಳಲ್ಲೂ ಅತಿ ಶೀಘ್ರವಾಗಿ ಬದಲಾವಣೆಗಳು ನಡೆಯುತ್ತಾ ಇವೆ; ಮತ್ತು ಇಂಡಿಯಾ ದೇಶದಲ್ಲಿ ಮೊದಲಿಗಿಂತಲೂ ಹೆಚ್ಚು ಜಾಗ್ರತೆಯಾಗಿ ಘಟನಾವಳಿಗಳು ಸಂಭವಿಸುತ್ತಲಿವೆ; ಇದಕ್ಕೆ ಹಿಂದೆಲ್ಲಾ ಅಭ್ಯುದಯ ಸಾಧನೆಯ ವಿಚಾರದಲ್ಲಿ ಕೇವಲ ಪುರೋಭಾಗದಲ್ಲಿ ನಿಂತಿದ್ದ ಮೈಸೂರು ಸಂಸ್ಥಾನವು ಇನ್ನು ಮುಂದೆ ನಿಲೆಗೆಟ್ಟು ನಿಂತಲ್ಲೇ ನಿಂತಿರುವುದು ಎಂದಿಗೂ ಸಾಧ್ಯವಿಲ್ಲ. ಸಂಸ್ಥಾನಗಳೆಲ್ಲಾ ಒಟ್ಟುಗೂಡಿ ಉಂಟಾಗಬಹುದಾದ ಸಾಂಘಾತಿಕ ರಾಷ್ಟ್ರದ ಯಾವ ಏರ್ಪಾಡಿನಲ್ಲಿಯೇ ಆಗಲಿ ಮೈಸೂರು ಸಂಸ್ಥಾನದ ಹಿತಸಾಧನೆಯನ್ನು ಲೇಶವೂ ಕುಂದಕ ಬಾರದಂತೆ ನೆರವೇರಿಸಬೇಕು. ಈಗ ನಾವು ವಿಶೇಷ ಬಂಡವಾಳವನ್ನು ವಿನಿಯೋಗಿಸಿ ಕೈಕೊಂಡಿರುವ ಕಾಮಗಾರಿಗಳೆಲ್ಲವನ್ನೂ ಅವುಗಳಿಂದ ಸರಿಯಾಗಿ ಲಾಭವು ಬರುವಂತೆ ಎಚ್ಚರಿಕೆಯಿಂದ ಅವುಗಳನ್ನು ರೂಢಿಸುವುದಲ್ಲದೆ, ಸಂಸ್ಥಾನದ ಸಾಂಪತ್ತಿಕ ಸಾಧನಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸಬಹುದಾದ ಹೊಸ ಮಾರ್ಗಗಳನ್ನು ಕಂಡು ಹಿಡಿಯಬೇಕಾಗಿದೆ. ಈ ಮಹಾತ್ಕಾರ್ಯಗಳಲ್ಲೆಲ್ಲಾ ಶ್ರೀಮನ್ ಮಹಾರಾಜರವರ ಸರ್ಕಾರದವರು ರಾಜ್ಯಾಡಳಿತವನ್ನು ನೆರವೇರಿಸುವುದರಲ್ಲಿ ಪ್ರಜೆಗಳ ಪ್ರತಿನಿಧಿಗಳೊಡನೆ ಸಮವೇತರು ನಡೆದು, ತಮ್ಮ ಪ್ರಯತ್ನಗಳನ್ನು ನೆರವೇರಿಸಿ, ಮೈಸೂರು ಪ್ರಜೆಗಳ ಪುರೋಭಿವೃದ್ಧಿಯನ್ನೂ, ಸಂಸ್ಥಾನದ ಘನತೆಯನ್ನೂ ವಿಶೇಷವಾಗಿ ಹೆಚ್ಚಿಸುವ ಸತ್ಫಲಗಳನ್ನು ಸಾಧಿಸಲು ಸಮರ್ಥರಾಗುವರೆಂದು ನಮಗೆ ಸಂಪೂರ್ಣವಾದ ಭರವಸೆಯು ಇರುತ್ತದೆ.

ಎ. ಆರ್. ಬಾನರ್ಜಿ,
ತಾರೀಖು 9-6-1924. ಮೈಸೂರು ಸಂಸ್ಥಾನದ ದಿವಾನರವರು.

ಅನುಬಂಧ.
(ಅಂಕಗಳು ಲಕ್ಷ ರೂಪಾಯಿಗಳಲ್ಲಿ)

1	1920—21 2	1921—22 3	1922—23 4	1923-24ನೆಯ ಪರಿಷ್ಕರಿಸಿದ ಅಂದಾಜು 5	1924-25ನೆಯ ಬಡ್ಜೆಟ್ಟು 6	2 ಮತ್ತು 6 ನೆಯ ಕಲಂಗಳ ವ್ಯತ್ಯಾಸ 7
ಖರ್ಚುಬಾಬ್ತಿನಲ್ಲಿ ತೋರಿಸಿರುವ ಬಾಬುಗಳು	322.36	304.15	279.78	285.36	284.87	—37.49
ಜಮಾಬಾಬ್ತಿನಲ್ಲಿ ತೋರಿಸಿರುವ ಬಾಬುಗಳು	71.70	78.55	85.82	76.49	72.35	+.65
ಬಂಡವಾಳದ ಖರ್ಚು	110.92	112.96	51.11	38.26	46.91	—64.01
ಒಟ್ಟು	504.98	495.66	416.71	400.11	404.14	—100.85

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦ ಅನಂತರ ಪ್ರತಿ ೧೦೦ ಕ್ಕೂ ೦—೧೨—೦; ಬಿಳಿಗ್ಲೇಜ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ವಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳಪ್ಪ, ಊದಬತ್ತಿ ಷಾಪ್,
17 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲು ನಿಮ್ಮಲ್ಲಿದ್ದರೆ ಅದರ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲು 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ವಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾರಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ವಿಕರಿಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50 — 37] ಮೈಸೂರು.

೧೯೨೪ ನೆಯ ಇಸವಿ ಜೂನ್ ತಾ|| ೧೫ ರಿಂದ ೧೯೨೪ ನೆಯ ಇಸವಿ ಜೂನ್ ತಾ|| ೨೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಜ್ಯೇಷ್ಠ ಶುದ್ಧ ತ್ರಯೋದಶಿಯಿಂದ ಜ್ಯೇಷ್ಠ ಬಹುಳ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ.
15	ಭಾನು	ತ್ರಯೋ	23-33	ವಿಶಾ	8-1	2
16	ಸೋಮ	ಚತು	17-24	ಅನೂ	3-57	3
17	ಮಂಗಳ	ಪೌರ್ಣ	11-14	ಮೂಲ	55-37	4
18	ಬುಧ	ಪಾ-ಬ	5.12 54-4	ಪೂಷಾ	51 50	5
19	ಗುರು	ತದಿ	54-6	ಉಷಾ	48-37	6
20	ಶುಕ್ರ	ಚೌತಿ	49-48	ಶ್ರವ	46-೫	7
21	ಶನಿ	ಪಂಚ	46-20	ಧನಿ	44-29	8

ಮೈಸೂರು : ಕ್ಯ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ‖
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ‖
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿರೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ‖

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸಣ್ ೧೯೨೪ ನೆಯ ಇಸವಿ ಜೂನ್ ತಾರೀಖು ೨೨ ನೆಯ ಭಾನುವಾರ. [ಸಂಚಿಕೆ ೨೫

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ
ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟಿದ, ಹೊಟ್ಟೆಯುಬ್ಬ[illegible] ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.

ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
20 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—42] ಪೋ. ಬಾ. ೫೧೦, ಮದರಾಸು.

---

4 ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗತಾನೆ 4ನೆ ಮುದ್ರಣವು ಅಚ್ಚಾಗಿ ವಿಕ್ರಯಕ್ಕೆ ಸಿದ್ಧವಾಗಿರುತ್ತದೆ. ಕ್ರಯ 1—0—0 ಸಂತೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—8] ಕೇರಳಾಪುರ, ಅರಕಲಗೂಡು ತಾಲ್ಲೋಕು, ಹಾಸನ ಡಿ||

ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಜಗತ್ತಿನ ನಿಜವಾದ] ಆಗತ್ಯವಿದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಿಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಬಸರೋಣ, ವೀರನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದಾಗೋಣ, ಸಂದು ಬೆನ್ನು, ಕಿಡುಪು, ಕಾಲು ಬೇನೆಗಳಾದವುಗಳು ನೋವು[illegible], ಎದೆಯಲ್ಲಿ ನೋಯೋಣ (ಹಾರ್ಟ್‌ಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಶಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣೆ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೇಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆಪುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಟಕಂದ, ಕ್ರೌಷ್ಠಕಂದ, ತಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಸಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕ, ಕಮರಕಸ, ಕಥಲ್ಯಾಗೊಂದ, ಪಂಜಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ. ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾಲಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹ್ಯಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫|| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣ ತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ಣ ಅಡ್ರೆಸ್ ಮೊಕ್ಕಾಂ ಪೋಸ್ಟ್ ಸಹ ಬರೆಯಿರಿ.

[50—45] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಗಿ.

ಗ್ರಂಥಸಿಕ್ಕುವಸ್ಥಳ :—
ಹೊಸಮಠದ ಚನ್ನಯ್ಯನವರು ಹರಿಹರ,
24—11 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿ
[50—23] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪನಿ,
[illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜೂನ್ ತಾ|| ೨೨ ನೆಯ ಭಾನುವಾರ.

A MEMORABLE SESSION.

The Birthday Session of the Representative Assembly this year was a memorable one. When the Reforms were granted by His Highness the Maharaja there were a few sceptics who felt doubtful of their practical utility. It may be that it is premature to judge the full import of the new Reforms. But if a full session running for over a week could give us some indication of what the Assembly could do, this Session showed that it could influence the Government considerably in various matters affecting the interests of the State. It is our pleasure at the outset to offer our hearty congratulations to the Dewan-President for the very able and tactful manner in which he conducted the Session. He had at once to play the *role* of the responsible Premier and the Speaker of the House, a by-no-means happy combination, and much of the success of the Session was due to the President's sympathetic handling of the House. The feelings of the House found a felicitous expression in Mr. G. Paramashiviah's vote of thanks to the Dewan at the end of the Session. As regards the discussions themselves, it may be said, much to the credit of the Assembly, that the average level of the speeches was high. It was a pleasant thing to see some members of the back benches from rural constituencies making very effective speeches on the budget and other subjects. There is hardly any doubt that the people are out to take full advantage of the opportunities given to them, and it only requires a little more organisation to focus their opinions on public questions to take us to the way in which the modern democracies are working. The Government have to be a great deal more on the alert than before, and there could be no better corrective of Government than the well-informed criticism of the reconstituted Councils. There were a number of important matters that came up for consideration before the Birthday Session of the Assembly besides the Budget Estimates for the coming year. The Government introduced a new Bill in place of the old Press Regulation on which there was a lively discussion. It was finally accepted by the House by 102 voting for and 79 against, a success which was due to the support given to it by the liberal party. It is hardly possible to refer to the various interesting matters that were brought up before the House at the Session. There was a fine controversy over the resolution for utilising the funds provided for chattrams for feeding the poor students of all classes. It met with the opposition of the conservative section of the House but the liberal party carried the resolution by a big majority. Then again, the resolution of Mr. B. L. Byanna for making a larger provision of funds for converting the Primary and Middle schools was carried by a large majority. Mr. Nilgiri G. Sanjeeviah's resolution for increasing the proportion of the representation of the Backward classes in the Police and Medical Departments from 50 percent to 75 percent was, despite the opposition from the Government, carried by a large majority. These are no ordinary successes at the first meeting of the Assembly for the popular party—which is the liberal party. It was a striking demonstration of their solidarity and showed what concerted action could accomplish. While we congratulate them on their success, may we appeal to them to continue to work unitedly. We have to make this appeal because we have reasons to think that there were some attempts made this time to divide and rule, to set up Hindus against Muslims, the Vokkaligars against Lingayets and so on. It is gratifying to note that the attempt did not fiz. For the sake of the country, and of the vast masses who are looking forward to their true representatives to lift them up to their full heights of citizenship it is the duty of the members to keep the popular party united and strong. What was witnessed at the Birthday Session was the result of years of work. How much more unity and strength is needed in the years to come when the task becomes more ardous? The work of reclaiming the rightful position of the masses has only just commenced and there could be no rest till it is accomplished. Why then allow interested men to set up internecine troubles? May we hope that the spirit of service, of sacrifice and of true comradeship will never be wanting in those on whom the moulding of the destiny of future Mysore depends.

ಪ್ರಜಾಪ್ರತಿನಿಧಿಸಭೆಯ ಬಡ್ಜೆಟ್ ಅಧಿವೇಶನವು.

ಈ ಅಧಿವೇಶನದಲ್ಲಿ ದಿವಾನರು ಮಾಡಿದ ಭಾಷಣದ ಮುಖ್ಯಾಂಶಗಳು ಕಳೆದವಾರ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುವಷ್ಟೆ? ಇವನ್ನು ನೋಡುವಲ್ಲಿ ದಿವಾನರು ಕಳೆದ ವರ್ಷ ತಮ್ಮ ಭಾಷಣದಲ್ಲಿ ಅಪ್ಪಣೆಕೊಡಿಸಿದ್ದಂತೆ ಸಂಸ್ಥಾನದ ಆಯವ್ಯಯವನ್ನು ಸಮತೂಕಕ್ಕೆ ತರಲು ಬಹಳ ಬುದ್ಧಿಶಕ್ತಿಯನ್ನು ಪಯೋಗಿಸಿರುತ್ತಾರೆಂಬುದು ವ್ಯಕ್ತವಾಗುತ್ತದೆ. ಪ್ರಸಕ್ತವರ್ಷದಲ್ಲಿ 3,31,50,000ರೂ. ಹುಟ್ಟುವಳಿಯಾಗಿ 3,30,87,000 ರೂ. ವೆಚ್ಚವೂ ಆಗಿ 63 ಸಾವಿರ ರೂ. ಮಿಗುವುದೆಂದು ನಿರೀಕ್ಷಿಸಲಟ್ಟಿದ್ದು ಕಾಲಸ್ಥಿತಿಯ ಅನಾನುಕೂಲತೆಯಿಂದ ಒಟ್ಟುತ್ಪನ್ನದಲ್ಲಿ 9 ಲಕ್ಷ ರೂ. ಕಡಿಮೆಯಾದುದರಿಂದ, ದಂಡಿನುತ್ಪನ್ನದಿಂದ ಬಂದ 5 ಲಕ್ಷ ರೂ. ಸೇರಿ ಒಟ್ಟುತ್ಪನ್ನವು 3,29,02,000 ರೂ. ಆಗುವುದೆಂದೂ ಈ ಕಾರಣದಿಂದ ಮಿಗಿತಾಯಕ್ಕೆ ಬದಲು 2,84,000 ರೂ. ಗಳು ವೆಚ್ಚಕ್ಕೆ ಸಾಲದೆಬರುವುವೆಂದೂ 1924-25 ರಲ್ಲಿ 3,35,84,000ರೂ. ಆದಾಯವೂ 3,35,15,000ರೂ. ವ್ಯಯವೂ ಆಗಿ 69,000 ರೂ. ಉಳಿಯುವುದೆಂದೂ ನಿರೀಕ್ಷಿಸಲ್ಪಟ್ಟಿರುತ್ತದೆ. ಕೆಲವರ್ಷಗಳಿಂದಲೂ, ಆದಾಯಕರವೆಂದು ಆರಂಭಿಸಲ್ಪಟ್ಟ ದೊಡ್ಡ ಕೆಲಸಗಳಿಗಾಗಿ ವಿಶೇಷ ಹಣವು ವೆಚ್ಚವಾಗುತ ಬಂದುದರಮೇಲೆ ಹಣಕ್ಕೆ ಬಹಳ ಮುಗ್ಗಟ್ಟಾಗಿ ಕಳವಳವನ್ನುಂಟುಮಾಡಿದ್ದ ಸಮಯದಲ್ಲಿ ದಿವಾನರಾದ ಮಿ|| ಬಾನರ್ಜಿಯವರು ತಮ್ಮ ಬುದ್ಧಿಶಕ್ತಿಯನ್ನು ವಿನಿಯೋಗಿಸಿ ಆಯವ್ಯಯವು ಸಮತೂಕಕ್ಕೆ ಬರುವಂತೆ ಮಾಡಿದುದಲ್ಲದೆ ಮುಂದಿನವರ್ಷದಲ್ಲಿ ವೆಚ್ಚವು ಕಳೆದು 69,000 ರೂ. ವರೆಗೂ ಮಿಗುತಾಯವಾಗುವಂತೆ ಮಾಡಿರುವುದು ವಂದನೀಯವೂ ಪ್ರಶಂಸನೀಯವೂ ಆಗಿರುತ್ತದೆ. ಈವರ್ಷ ನಿಶ್ಚಿತವಾದ ವೆಚ್ಚಕ್ಕಿಂತಲೂ ಮುಂದಣ ವರ್ಷದಲ್ಲಿ 6.03 ಲಕ್ಷ ರೂ. ವೆಚ್ಚವಾಗುವುದೆಂದು ನಿರೀಕ್ಷಿಸಲ್ಪಟ್ಟಿರುವುದರಲ್ಲಿ ಶ್ರೀಮನ್ಮಹಾರಾಜರವರ ವೆಚ್ಚಕ್ಕಾಗಿ ಕೊಡಲ್ಪಡುವ ಹಣಕ್ಕೆ 3 ಲಕ್ಷ ರೂ. ಹೆಚ್ಚಾಗಿ ಸೇರಿಸಲ್ಪಟ್ಟಿರುತ್ತದೆ. ವಿದ್ಯಾಭ್ಯಾಸಕ್ಕಾಗಿ ಹೆಚ್ಚಿಸಲ್ಪಟ್ಟಿರುವ 2.74 ಲಕ್ಷ ರೂಪಾಯಿಗಳಲ್ಲಿ 1.44 ಲಕ್ಷ ರೂ. ಗಳು ವಿಶ್ವವಿದ್ಯಾಲಯಕ್ಕಾಗಿ ವಿನಿಯೋಗವಾಗಿ, ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಕ್ಕೆ 1.30 ಲಕ್ಷ ಮಾತ್ರ ಉಳಿಯುವುದು ಬಹಳ ಶೋಚನೀಯವು. ಈರೀತಿಯಾಗಿ ಪ್ರೌಢವಿದ್ಯಾಭ್ಯಾಸಕ್ಕೆ ಮುಖ್ಯತಳಹದಿಯಾಗಿರುವ ಪ್ರಾಥಮಿಕ ವಿದ್ಯಾಭ್ಯಾಸಕ್ಕಿಂತ ವಿಶ್ವವಿದ್ಯಾಲಯಕ್ಕೆ ಹೆಚ್ಚು ಪ್ರೋತ್ಸಾಹವನ್ನು ಕೊಡುತ್ತಿರುವುದನ್ನು ನಾವು ಮೊದಲಿಂದಲೂ ಖಂಡಿಸುತಬಂದಿರುವೆವು. ಇತರ ಕಡೆಗಳಲ್ಲಿ ಸರ್ಕಾರದವರು ಪ್ರೌಢವಿದ್ಯಾಭ್ಯಾಸವನ್ನು ಗೌಣವಾಗಿಯೂ, ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಗಳನ್ನು ಮುಖ್ಯವಾಗಿಯೂ ಪರಿಗಣಿಸಿರುತ್ತಾರೆ. ಅಲ್ಲದೆ ವಿಶ್ವವಿದ್ಯಾಲಯಗಳು ಸ್ವತಂತ್ರಜನರಿಂದ ಪೋಷಿಸಲ್ಪಟ್ಟು ಸರ್ಕಾರದವರಿಂದ ಗ್ರಾಂಟು ಕೊಡಲ್ಪಡುತ್ತಿವೆ. ಈ ವಿಶ್ವವಿದ್ಯಾಲಯಸ್ಥಾಪನೆಯು ಪ್ರಕೃತದಲ್ಲಿ ನಮ್ಮ ಸೀಮೆಗೆ ಅನವಶ್ಯಕವಾಗಿದ್ದಾದರೂ, ಯಾವ ಉದ್ದೇಶದಿಂದಲೋ ಸ್ಥಾಪಿತವಾಗಿರುವುದರ ಮೇಲೆ ಅದನ್ನು ನಡೆಯಿಸಿಕೊಂಡು ಬರಲೇಬೇಕಾಗಿದೆ. ಆದರೆ ಈ ವಿಶ್ವವಿದ್ಯಾಲಯದಲ್ಲಿ ಪಟ್ಟಪ್ರಧಾನವನ್ನು ಹೊಂದಿದ ವಿದ್ಯಾರ್ಥಿಗಳಿಗೆ ಸಂಸ್ಥಾನದ ಉದ್ಯೋಗಗಳಲ್ಲಿ ಅವಕಾಶದೊರೆಯದಿರುವಾಗ ಮತ್ತು ಹೊರಗಡೆಹೋಗಿ ಜೀವಿಸಲು ಅವಕಾಶವಿಲ್ಲದಿರುವಾಗ, ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸವು ಪ್ರೋತ್ಸಾಹವಿಲ್ಲದೆ ನರಳುತ್ತಿರುವಾಗ ವಿಶ್ವವಿದ್ಯಾಲಯಕ್ಕಾಗಿ ಹೆಚ್ಚು ದ್ರವ್ಯವನ್ನು ವೆಚ್ಚಮಾಡುವುದು ಉಚಿತವಾಗಿ ಕಂಡುಬರುವುದಿಲ್ಲವು. ವಿದ್ಯಾಭ್ಯಾಸ ವಿಚಾರದಲ್ಲಿ ಸರ್ಕಾರದವರು ಶಿರೋಭಾರಗೊಳಿಸುವ ವಿಧಾನದಿಂದ ಜನಸಾಮಾನ್ಯ ವಿದ್ಯಾಭಿವೃದ್ಧಿಗೆ ಲೇಶವೂ ಅವಕಾಶವಿಲ್ಲದೆ ಎಲ್ಲೋ ಕೆಲ ಜನರಿಗೆ ಮಾತ್ರ ಪ್ರಯೋಜನವಾಗುತ್ತದೆಂದು ಅನೇಕ ಪ್ರತಿನಿಧಿಗಳು ಸಭೆಯಲ್ಲಿ ಖಂಡಿಸಿ ತಮ್ಮ ಅಸಮಾಧಾನವನ್ನು ತಿಳಿಸಿದರು. ನಮ್ಮ ಸರ್ಕಾರದವರು ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿಗೊಳಿಸುವುದರಲ್ಲಿ ಯಾವುದರಿಂದ ವಿಶೇಷಪ್ರಯೋಜನವಾಗುತ್ತದೆ ಯಾವುದರಿಂದ ಆಗುವುದಿಲ್ಲವೆಂಬುದನ್ನು ವಿವೇಚಿಸದಿರುವುದು ಬಹಳ ಶೋಚನೀಯವು. ದೊಡ್ಡ ಪಟ್ಟಣಗಳ ವಿನಾ ಇತರ ಕಡೆಯಿರುವ ಆಸ್ಪತ್ರೆಗಳಲ್ಲಿ ಬೇಕಾದ ಔಷಧಗಳೂ ಶಸ್ತ್ರಚಿಕಿತ್ಸೆಯ ಸಾಮಗ್ರಿಗಳೂ ಇಲ್ಲದೆ ರೋಗಿಗಳಿಗೆ ಆ ಆಸ್ಪತ್ರೆಗಳಿಂದ ಸಾಕಷ್ಟು ಪ್ರಯೋಜನವಾಗುತ್ತಿಲ್ಲವೆಂಬಂಶವು ಸರ್ಕಾರದವರ ಗಮನಕ್ಕೆ ಬಂದಿಲ್ಲವೆಂದು ಮುಂದಣ ವರ್ಷದ ಬಡ್ಜೆಟ್ಟಿನಲ್ಲಿ ವೈದ್ಯಶಾಖೆಯ ವೆಚ್ಚವನ್ನು 37,000 ರೂ. ವರೆಗೆ ಹೆಚ್ಚಿಸಿರುವುದಲ್ಲಿ ಮೇಲ್ಕಂಡ ಕೊರತೆಗಳ ನಿವಾರಣೆಗೆ ಅವಕಾಶವನ್ನು ಕಲ್ಪಿಸದಿರುವುದರಿಂದಲೇ ವ್ಯಕ್ತವಾಗುತ್ತದೆ.

ದಿವಾನರು ಬಹಳ ಸಮರ್ಥತೆಯಿಂದಲೂ, ಚಾಕಚಕ್ಯದಿಂದಲೂ, ಸಾನುಭೂತಿಯಿಂದಲೂ ತಾಳ್ಮೆಯಿಂದಲೂ ಈ ಬಡ್ಜೆಟ್ ಅಧಿವೇಶನ ಕಾರ್ಯವನ್ನು ನಿರ್ವಹಿಸಿದುದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ಸಭೆಯಲ್ಲಿ ಮೆಂಬರುಗಳು ಮಾಡಿದ ಚರ್ಚೆಯೂ ಭಾಷಣವೂ ಬಹುಸಮರ್ಪಕವಾಗಿದ್ದುವು. ತತ್ರಾಪಿ ಗ್ರಾಮವಾಸಿಗಳಾದ ಮೆಂಬರುಗಳು ಧೈರ್ಯವಾಗಿ ಮುಂದೆಬಂದು ಬಡ್ಜೆಟ್ಟು ಮತ್ತು ಇತರವಿಚಾರಗಳಲ್ಲಿ ಯುಕ್ತವಾಗಿ ಚರ್ಚೆನಡಿಸಿದುದು ಮಾತ್ರ ಬಹಳ ಶುಭಸೂಚಕವೂ ಪ್ರಶಂಸನೀಯವೂ ಆಗಿರುತ್ತದೆ. ಈ ಸಭೆಯಲ್ಲಿ ಮುಂದಣ ವರ್ಷದ ಬಡ್ಜೆಟ್ಟಿನ ಮೇಲೆ ಚರ್ಚೆಯು ನಡೆದುದಲ್ಲದೆ ಕೆಲ ಬಿಲ್ಲುಗಳು ಮೆಂಬರುಗಳ ಸಮ್ಮತಿಯಬಗೆಗೆ ಸರ್ಕಾರದವರಿಂದ ತರಲ್ಪಟ್ಟಿದ್ದುವು. ಅವುಗಳಲ್ಲಿ ಪ್ರೆಸ್‌ರೆಗ್ಯುಲೇಷನ್ ಅಂದರೆ ವರ್ತಮಾನಪತ್ರಿಕೆಯ ಸಂಬಂಧವಾದ ನೂತನ ಶಾಸನವು ಅನುಷ್ಠಾನಕ್ಕೆ ತರಲ್ಪಡಬೇಕು ಬೇಡವೆಂಬ ಬಗೆಗೆ ದೀರ್ಘವಾಗಿ ಚರ್ಚೆಯು ನಡೆದು ಕಡೆಯಲ್ಲಿ ಅನುಷ್ಠಾನಕ್ಕೆ ತರಲ್ಪಡಬೇಕೆಂಬುದಕ್ಕೆ 102 ಓಟುಗಳೂ ಬೇಡವೆಂಬುದಕ್ಕೆ 79 ಓಟುಗಳು ಬಂದು ಆ ರೆಗ್ಯುಲೇಷನ್ನು ಪ್ಯಾಸ್ಮಾಡಲ್ಪಟ್ಟಿತು. ಇದರಂತೆಯೇ ಸತ್ರಗಳಲ್ಲಿ ಒಂದು ಪಂಗಡದವರಿಗೆ ಮಾತ್ರ ಅನ್ನ ಹಾಕಲ್ಪಡುವುದಕ್ಕಾಗಿ ಗೊತ್ತುಮಾಡಲ್ಪಟ್ಟಿರುವ ಹಣವು ಎಲ್ಲ ಜಾತಿಯ ಬಡವಿದ್ಯಾರ್ಥಿಗಳ ಅಶನಕ್ಕಾಗಿ ಉಪಯೋಗಿಸಲ್ಪಡಬೇಕೆಂಬ ಬಗೆಗೆ ತರಲ್ಪಟ್ಟಿದ್ದ ರೆಜಲ್ಯೂಷನ್ನೂ, ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಗಳಿಗೆ ಹೆಚ್ಚು ಹಣವನ್ನು ವ್ಯಯಮಾಡಬೇಕೆಂದು ಮ|| ಬಯಣ್ಣನವರು ತಂದಿದ್ದ ರೆಜ್ಯುಲೇಷನ್ನೂ, ಪೊಲೀಸು ಮತ್ತು ವೈದ್ಯಶಾಖೆಗಳ ಕೆಲಸಗಾರರಲ್ಲಿ ಹಿಂದುಳಿದವರ ಸಂಖ್ಯೆಯು ಶೇಕಡ 50 ರಿಂದ 75 ಕ್ಕೆ ಹೆಚ್ಚಿಸಲ್ಪಡಬೇಕೆಂದು ಮ|| ನೀಲ್ಗಿರಿ ಸಂಜೀವಯ್ಯನವರು ತಂದಿದ್ದ ರೆಜ್ಯುಲೇಷನ್ನೂ ಕೆಲವರಿಂದ ಪ್ರತಿಭಟಿಸಲ್ಪಟ್ಟಾಗ್ಯೂ ಹೆಚ್ಚು ಓಟುಗಳು ಬಂದುದರ ಮೇಲೆ ಅಂಗೀಕರಿಸಲ್ಪಟ್ಟುವು. ಇಷ್ಟರ ಮಟ್ಟಿಗಾದುದು ಸಾಮಾನ್ಯವೆಂದು ಭಾವಿಸಲ್ಪಡಲಾಗದು. ಇದಕ್ಕೆ ಉದಾರಮತಿಗಳಾದ ಹಿಂದುಳಿದ ವರ್ಗದವರ ಐಕಮತ್ಯವೂ ಪರಸ್ಪರ ಪ್ರೀತಿವಿಶ್ವಾಸವೂ ಮುಖ್ಯ ಕಾರಣವಾಗಿರುವುದರಿಂದ, ಇನ್ನು ಮುಂದೆ ಇದಕ್ಕಿಂತಲೂ ಪ್ರಬಲವಾದ ಐಕಮತ್ಯ ಪ್ರೀತಿ ವಿಶ್ವಾಸಗಳಿಂದ ದೇಶದ ಬಹುಪ್ರಜೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಭುತ್ವದವರಲ್ಲಿ ನಿವೇದಿಸಿ ಏಕಾಭಿಪ್ರಾಯದಿಂದ ವರ್ತಿಸುವುದಾದರೆ ಪ್ರಜಾವರ್ಗಕ್ಕೆ ಅತಿಶಯವಾದ ಪ್ರಯೋಜನವಾಗುತ್ತೆನ್ನುವುದರಲ್ಲಿ ಸಂದೇಹವಿಲ್ಲವು. ಶ್ರೀಮನ್ ಮಹಾರಾಜರವರಿಂದ ಅನುಗ್ರಹಿಸಲ್ಪಟ್ಟಿರುವ ಸುಧಾರಣೆಗಳನ್ನು ಸಾರ್ಥಕಪಡಿಸಬಲ್ಲರೆಂದು ಈ ಸಲದ ಸಭೆಯಲ್ಲಿ ನಿದರ್ಶನಗೊಳಿಸಿದ ಪ್ರಜಾಪ್ರತಿನಿಧಿಗಳನ್ನು ನಾವು ಅಭಿನಂದಿಸುತ್ತೇವೆ. ಸಭಾವಿಸರ್ಜನೆಯ ಕಾಲದಲ್ಲಿ ಮ|| ಜಿ. ಪರಮಶಿವಯ್ಯನವರಿಂದ ಸಭಾಪರವಾಗಿ ದಿವಾನರಿಗೆ ವಂದನೆಯು ಅರ್ಪಿಸಲ್ಪಟ್ಟಿತು.

ಅರಮನೆಯಲ್ಲಿ ನಡೆದ ವಿವಾಹಮಹೋತ್ಸವವು.

ಶ್ರೀಮನ್ಮಹಾರಾಜರವರ ಸೋದರ ಸೊಸೆಯರು (ಹ|| ಕುಂ|| ಶೋಭಿತೆಯರಾದ ಸೌ|| ಮಹಾರಾಜಕುಮಾರಿ ಚಲುವಾಜಮ್ಮಣ್ಣಿಯವರ ಮತ್ತು ಮಹಾರಾಜಶ್ರೀ ಸರದಾರ್ ಲಕ್ಷ್ಮೀಕಾಂತರಾಜ ಅರಸಿನವರ ದ್ವಿತೀಯಪುತ್ರಿಯರು) ಹ|| ಕುಂ|| ಶೋಭಿತೆಯರಾದ ಸೌ|| ರಾಜಕುಮಾರಿ ಜೆನ್ನಾಜಮ್ಮಣ್ಣಿಯವರನ್ನು 'ಮ|| ವಳವಾಯಿ ದೇವರಾಜಅರಸಿನವರ ತೃತೀಯಪುತ್ರ ಸಹಸ್ರಾಯುಷ್ಯರಾದ ಮದನಗೋಪಾಲರಾಜ ಅರಸಿನವರಿಗೆ ಕೊಟ್ಟು ವಿವಾಹಮಹೋತ್ಸವವು ಈ ತಾ|| 19ನೆಯ ಗುರುವಾರ ಬೆಳಿಗ್ಗೆ 1 ಗಂಟೆಯಮೇಲೆ 1-55 ಗಂಟೆಯೊಳಗೆ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದ ಅರಮನೆಯ ವಿವಾಹಮಂಟಪದಲ್ಲಿ ವಿಧ್ಯುಕ್ತವಾಗಿ ವೈಭವದಿಂದ ನಡೆಯಿಸಲ್ಪಟ್ಟಿತು. ದಿವಾನರು, ಕೌನ್ಸಿಲರುಗಳು, ಸರದಾರರುಗಳು, ರಾಜಬಂಧುಗಳು, ಚೀಫ್‌ಸೆಕ್ರೆಟರಿಯರಾದಿಯಾಗಿ ಎಲ್ಲಾ ಸೆಕ್ರೆಟರಿಗಳು, ಶಾಖಾಧಿಕಾರಿಗಳು, ಡೆ|| ಕಮೀಷನರುಗಳು ಮೊದಲಾಗಿ ಎಲ್ಲ ಸರ್ಕಾರಿಯುದ್ಯೋಗಸ್ಥರೂ, ವಕೀಲರುಗಳು, ಮ್ಯು|| ಕೌನ್ಸಿಲರುಗಳು, ವರ್ತಕರು ಮೊದಲಾಗಿ ಪುರಪ್ರಮುಖರೂ, ವೈದಿಕರುಗಳೂ ಆಹ್ವಾನಿಸಲ್ಪಟ್ಟಿದ್ದರು. ವರನು ಅಂಬಾರಿಯುತ್ಸವದಿಂದ ಧಾರಾಮುಹೂರ್ತಕ್ಕೆ ಕರೆತರಲ್ಪಟ್ಟ ಕೊಂಚಹೊತ್ತಿನಮೇಲೆ ಶ್ರೀಮನ್ಮಹಾರಾಜರವರ ಸವಾರಿಯು ಚಿತ್ತೈಸಿ ವಿವಾಹಮಂಟಪದ ಬಲಭಾಗಕ್ಕೆ ಕೊಂಚದೂರದಲ್ಲಿ ರಜತಾಸನದಮೇಲೆ ಮಂಡಿಸಿತು. ಅನಂತರ ಕನ್ನೆಯ ತಂದೆಯವರಾದ ಸರದಾರ್ ಲಕ್ಷ್ಮೀಕಾಂತರಾಜ ಅರಸಿನವರೂ ಅವರ ಪತ್ನಿಯರಾದ ರಾಜಕುಮಾರಿಯವರೂ ಶ್ರೀಮನ್ ಮಹಾರಾಜರವರ ಅನುಜ್ಞೆಯನ್ನು ಪಡೆದುಕೊಂಡು ತಮ್ಮ ಸಾಲಂಕೃತಪುತ್ರಿಯನ್ನು ಮ|| ಮದನಗೋಪಾಲರಾಜ ಅರಸಿನವರಿಗೆ ವಿಧ್ಯುಕ್ತವಾಗಿ ಧಾರೆಯೆರೆದುಕೊಟ್ಟರು. ಲೆ|| ಕರ್ನಲ್ ಚಾಮರಾಜ ಬಹದ್ದೂರ್‌ರವರು ವರನಕಡೆಯವರಾಗಿದ್ದುಕೊಂಡು ಕನ್ಯಾದಾನವನ್ನು ಅಂಗೀಕರಿಸಿದರು. ಆಸ್ಥಾನ ಸಂಗೀತವಿದ್ವಾನರುಗಳಿಂದ ಕಾನ್ಸರ್ಟ್‌ವಾದ್ಯವು ಮನೋಹರವಾಗಿ ಆಗುತ್ತಿರುವಾಗ್ಗೆ ಶ್ರೀಮನ್ ಮಹಾರಾಜರವರು ಮಹಾಮಾತೃಶ್ರೀಯವರು, ಪ್ರಥಮ ರಾಜಕುಮಾರಿಯರು, ರಾಜಕುಮಾರ ದೇಶರಾಜ ಅರಸಿನವರು, ಸರದಾರರುಗಳಾದ ಗೋಪಾಲರಾಜ ಅರಸಿನವರು, ಗೋಪಾಲಕೃಷ್ಣ ಅರಸಿನವರು ಎ. ಚಾಮಪ್ಪಾಜಿ ಅರಸಿನವರು ಮತ್ತೆ ಕೆಲ ರಾಜಬಂಧುಗಳಿಂದ ಕಿಲ್ಲತ್ತುಗಳು ವಧೂವರರಿಗೆ ಆಶೀರ್ವಾದಪೂರ್ವಕವಾಗಿ ಒಪ್ಪಿಸಲ್ಪಟ್ಟಮೇಲೆ ಸಭಿಕರಿಗೆ ಪುಷ್ಪಹಾರ ತಾಂಬೂಲ ದಕ್ಷಿಣೆಗಳ ವಿನಿಯೋಗದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಅಷ್ಟುಹೊತ್ತಿಗೆ ಮಧ್ಯಾಹ್ನ 3 ಗಂಟೆಯಾಗಿದ್ದಿತು. ಆ ದಿವಸ ಎಲ್ಲ ದೇವಾಲಯಗಳಲ್ಲೂ ದೇವತಾರ್ಚನೆಯೂ, ಎಲ್ಲಜಾತಿಯ ಬಡಜನರಿಗೆ ಮೃಷ್ಟಾನ್ನಭೋಜನವೂ ಭೂರಿದಕ್ಷಿಣೆಯೂ ಧಾರಾಳವಾಗಿ ನಡೆಯಿಸಲ್ಪಟ್ಟವು ಮತ್ತು ಎಲ್ಲ ಪಾಠಶಾಲೆಗಳ ಬಾಲಕ ಬಾಲಿಕೆಯರುಗಳಿಗೆ ಮಿಠಾಯಿಯು ಕೊಡಲ್ಪಟ್ಟಿತು. ಈ ನೂತನ ದಂಪತಿಗಳಿಗೆ ಸಕಲಸನ್ಮಂಗಳವಾಗಲೆಂದು ಹಾರೈಸುತ್ತೇವೆ.

ಬಡ್ಜೆಟ್ಟಿನಮೇಲೆ ಚರ್ಚೆ.

ಬೆಂಗಳೂರು ಮಿ|| ಅಬ್ಬಾಸ್‌ಖಾನ್‌ರವರು—ರೆವಿನ್ಯೂ, ಕ್ಸೈಸ್, ಫಾರೆಸ್ಟು ಇನ್ಕಂಟ್ಯಾಕ್ಸ್, ಡಿ. ಪಿ. ಡಬ್ಲ್ಯು ತ್ತೆ ಕೆಲ ಇಲಾಖೆಗಳಲ್ಲಿ ವೆಚ್ಚವು ಹೆಚ್ಚಾಗಿ ಆಗುತ್ತಿರುವ ಚಾರದಲ್ಲಿ ಬಹಳವಾಗಿ ಪ್ರಸ್ತಾವಿಸಿ, ಮದ್ರಾಸು ಬೊಂಬಾಯಿ ಆಧಿಪತ್ಯಗಳಲ್ಲಿಯ ಇದೇ ಶಾಖೆಗಳ ಆಯವ್ಯಯಕ್ಕೆ ಹೋಲಿಸಿದುದಾದರೆ ಇಲ್ಲಿಯ ಇಲಾಖೆಗಳಲ್ಲಿ ಆದಾಯಕ್ಕಿಂತಲೂ ವೆಚ್ಚವು ಹೆಚ್ಚಾಗಿರುತ್ತದೆಂಬುದು ವ್ಯಕ್ತವಾಗುತ್ತದೆ. ಕ್ರೆಟರಿಯೆಟ್ಟಿನ ವೆಚ್ಚವು ವರ್ಷಂಪ್ರತಿ ಹೆಚ್ಚುತಲೇ ಇದೆ. ಇನ್ಕಂಟ್ಯಾಕ್ಸ್ ಇಲಾಖೆಯಲ್ಲಿ 450 ರೂ. ಸಂಬಳದ ಒಬ್ಬ ಅಧಿಕಾರಿಯು ಈಗ 800 ರೂ. ಸಂಬಳ ತೆಗೆದುಕೊಳ್ಳುತ್ತಿದಾರೆ. ಈರೀತಿಯಾಗಿ ಪ್ರತಿಯೊಂದು ಇಲಾಖೆಯಲ್ಲೂ ಹೆಚ್ಚು ವೆಚ್ಚವಾಗುತ್ತಿರುವುದರಿಂದ ವೆಚ್ಚವನ್ನು ತಗ್ಗಿಸಿ ಅದರಿಂದುಳಿಯುವ ಹಣವನ್ನು ಗ್ರಾಮಾಂತರವಾಸಿಗಳ ವೈದ್ಯಸಹಾಯಕ್ಕಾಗಿಯೂ ಗ್ರಾಮಾಭಿವೃದ್ಧಿಗಾಗಿಯೂ ಕುಡಿಯುವ ನೀರನ್ನೊದಗಿಸುವುದಕ್ಕಾಗಿಯೂ ಉಪಯೋಗಿಸಬೇಕು. ಬೆಂಗಳೂರು ಪಟ್ಟಣದಲ್ಲಿ ಕುಡಿಯುವ ನೀರು ಸರಿಯಾಗಿ ಒದಗಿಸಲ್ಪಡದಿರುವಪ್ರಯುಕ್ತ, ಜನರಿಗುಂಟಾಗಿರುವ ತೊಂದರೆಯನ್ನು ಹೇಳತೀರದುದಾಗಿದೆ.

ಶ್ರೀರಂಗಪಟ್ಟಣದ ಮ|| ಬಿ. ನರಸಿಂಗರಾಯರು—ಓಟುಗಳು ತೆಗೆಯಲ್ಪಡಬೇಕಾಗಿರುವ ವಿಷಯಗಳನ್ನು ಈ ವರ್ಷ ಓಟುಗಳು ತೆಗೆಯಲ್ಪಡಬೇಕಾದುದಿಲ್ಲವಾದ ಭಾಗಕ್ಕೆ ಸೇರಿಸಲ್ಪಟ್ಟಿರುವುದರ ಕಾರಣವು ತಿಳಿಯಲಿಲ್ಲ. ಅಧಿಕಾರಿಗಳು ಸಂಬಳವನ್ನು ಕ್ರಮವಾಗಿ ತೆಗೆದುಕೊಳ್ಳುತ್ತಿರುವಾಗ್ಗೆ ಡ್ಯೂಟಿ ಅಲೋಯನ್ಸ್ ಅಂದರೆ ಭತ್ಯವನ್ನು ಹೊಂದಬೇಕಾದುದರ ಕಾರಣವು ತಿಳಿಯಲಿಲ್ಲ. ಪ್ರಯಾಣದ ವೆಚ್ಚ ವಿನಹ ಮತ್ತಾವ ಭತ್ಯವು, ಯಾವರೂಪದಿಂದಲೂ ಕೊಡಲ್ಪಡತಕ್ಕುದಲ್ಲವು. ವ್ಯವಸಾಯ ಇಲಾಖೆಯ ವೆಚ್ಚವು ಪ್ರತಿವರ್ಷದಲ್ಲೂ ಹೆಚ್ಚು ಯಾದರೂ ರೈತನಿಗಾಗಲಿ ಸಂಸ್ಥಾನದ ಬೆಳೆಯಭಿವೃದ್ಧಿಗಾಗಲಿ ಏನೊಂದು ಪ್ರಯೋಜನವಾಗುತ್ತಿಲ್ಲವು. ಆರೋಗ್ಯ ಕಾರಕ್ಕಾಗಿ ವೆಚ್ಚವಾಗುವ ಹಣವು ಬಹಳವಾಗಿರುವುದರಿಂದ ಗಳು ಕ್ಷೀಣಿಸುತ್ತಿದೆಯಾದುದರಿಂದ ಗ್ರಾಮಾಭಿವೃದ್ಧಿಗಾಗಿ ಹೆಚ್ಚು ಹಣವು ವೆಚ್ಚಮಾಡಬೇಕು.

ತರೀಕೆರೆಯ ಮಿ|| ರಸುಲ್‌ಖಾನ್‌ರವರು—ಸೆಕ್ರೆಟರಿಯೆಟ್ಟಿನ ಫೈನಾನ್ಸ್ ಇಲಾಖೆಯಲ್ಲೂ ಕೆಲಸಗಾರರ ಸಂಖ್ಯೆಯು ಹೆಚ್ಚಿರುವುದರಿಂದ ಅವರನ್ನು ತಗ್ಗಿಸಬೇಕು. ತರೀಕೆರೆಯಲ್ಲಿ ಒಂದು ಹೆರಿಗೆಯಾಸ್ಪತ್ರೆಯನ್ನಿಡಿಸಿಕೊಡುವುದಾಗಿ 3 ವರ್ಷಗಳ ಹಿಂದೆ ವಾಗ್ದಾನವಾಗಿದ್ದಾಗ್ಯೂ ಆ ಬಗೆಗೆ ಈ ಬಡ್ಜೆಟ್ಟಿನಲ್ಲೂ ದಕ್ಕಾಗಿ ಹಣವು ಗೊತ್ತುಮಾಡಲ್ಪಟ್ಟಿಲ್ಲವು. ರೈತರು ರೈಲ್ವೆ ಸ್ಸನ್ನು ಕೊಡುತ್ತಿರುವರಾದರೂ ತಮ್ಮ ನಾಟಾಗಳನ್ನು ತರೀಕೆರೆ—ನರಸಿಂಹರಾಜಪುರ ಟ್ರಾಂಬಂಡಿಯಲ್ಲಿ ಸಾಗಿಸಲವಕಾಶವಿಲ್ಲವು. ಉತ್ತರಹಿಂದೂಸ್ಥಾನದಲ್ಲಿ ಯುನಾನಿ ವೈದ್ಯವಿದ್ಯೆಯನ್ನು ಸರ್ಕಾರದ ದ್ರವ್ಯಸಹಾಯದಿಂದ ಕಲಿತು ಬಂದಿರುವವರಾದರೂ ಉದ್ಯೋಗವಿಲ್ಲದೆ ಕಾಲಹರಣಮಾಡುತ್ತಿರುವದಾದುದರಿಂದ ಕೆಲ ಯುನಾನಿ ಆಸ್ಪತ್ರೆಗಳನ್ನು ಸ್ಥಾಪಿಸಿ ಅವರ ಜೀವನಕ್ಕವಕಾಶವನ್ನು ಕಲ್ಪಿಸಿಕೊಡಬೇಕು.

ತಿಪಟೂರಿನ ಮ|| ಡಿ. ಎಸ್. ಮಲ್ಲಪ್ಪನವರು—ಸಂಸ್ಥಾನದಲ್ಲಿರುವ ಆಸ್ಪತ್ರೆಗಳಿಗೆ ಸಾಕಷ್ಟು ಔಷಧಗಳನ್ನೊದಗಿಸುವುದಕ್ಕಾಗಿ ಹೆಚ್ಚು ಹಣವನ್ನು ವೈದ್ಯಶಾಖೆಗೆ ಕೊಡಬೇಕಾಗಿದೆ. ವಿದ್ಯಾಭ್ಯಾಸದ ಮೆಮೊರಾಂಡಮ್ಮು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲ್ಪಟ್ಟಿಲ್ಲವು. ಗ್ರಾಮಾಂತರಗಳಲ್ಲಿ ಸಾಕಷ್ಟು ಬಾಲಪಾಠಶಾಲೆಗಳೇರ್ಪಡಿಸಲ್ಪಟ್ಟಿಲ್ಲ. ಅಲ್ಲದೆ ದ್ರವ್ಯಾಭಾವದಿಂದ 2000ಕ್ಕೆ ಮೇಲ್ಪಟ್ಟು ಪ್ರಾಥಮಿಕ ಪಾಠಶಾಲೆಗಳು ಮುಚ್ಚಲ್ಪಟ್ಟಿವೆ. ಸ್ಥಳೀಯ ಸರ್ಕಾರಕ್ಕೆ ಕೊಡಲ್ಪಡುವ ಗ್ರಾಂಟು ಬಹಳ ಕಡಿಮೆ ಮತ್ತು ಪಟ್ಟಣಗಳಾಭಿವೃದ್ಧಿಗಾಗಿ ಗೊತ್ತುಮಾಡಿರುವ 20000 ರೂ. ಗಳು ಸಾಲದು. ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಗೊತ್ತುಮಾಡಲ್ಪಟ್ಟಿರುವ ವಿದ್ಯಾರ್ಥಿವೇತನವು ಈಗ ಒಂದೇ ಒಂದು ವರ್ಷದವರೆಗೆ ಸಲ್ಲುತ್ತಿರುವುದ ಯಾವ ತಾರತಮ್ಯವೂ ಇಲ್ಲದೆ ಸಮಸ್ತ ವರ್ಗಗಳ ವಿದ್ಯಾರ್ಥಿಗಳಿಗೂ ಸಲ್ಲುವಂತೆಯೇರ್ಪಾಟಾಗಬೇಕು.

ಬೆಂಗಳೂರು ಮ|| ಆರ್. ಗೋಪಾಲಸ್ವಾಮಿಅಯ್ಯರ್‌ರವರು—ಸಂಸ್ಥಾನದ ಎಲ್ಲ ಹೈಸ್ಕೂಲುಗಳಲ್ಲೂ ಹೊಲೆಯ ಮಾದಿಗವಿದ್ಯಾರ್ಥಿಗಳ ಸಂಖ್ಯೆಯು 200ಕ್ಕೆ ಮೇಲ್ಪಟ್ಟಿರುವುದರಿಂದ ಅವರುಗಳಿಗೆ ವೇತನವನ್ನು ಕೊಡುವುದಕ್ಕಾಗಿ ಹೆಚ್ಚು ಹಣವನ್ನೊದಗಿಸಿಕೊಡಬೇಕು. ಅಲ್ಲದೆ ಈ ಜಾತಿಗಳ ಬಾಲಕರುಪಯೋಗಕ್ಕಾಗಿ ಒಂದು ಅಶನವಸನಗೃಹವನ್ನು ಸ್ಥಾಪಿಸಬೇಕು. ಬೆಂಗಳೂರು ಸೆಂಟ್ರಲ್ ಜೈಲನಲ್ಲಿರುವ ಅಡುಗೆಮನೆಯು ತಿರುಚಿನಾಪಲ್ಲಿಯಲ್ಲಿರುವಂತೆ ಕಟ್ಟಲ್ಪಟ್ಟಲ್ಲಿ ಸೌದೆ ಖರ್ಚು ಬಹಳವಾಗಿ ಕಡಿಮೆಯಾಗುವುದು. ಜೈಲುಗಳಲ್ಲಿ ತಯಾರಿಸಲ್ಪಟ್ಟ ಸಾಮಾನುಗಳನ್ನು ಜನರು ಬಹಳವಾಗಿ ಅಪೇಕ್ಷಿಸುತ್ತಾರಾದುದರಿಂದ ಮಾರ್ಕೆಟ್ಟುಗಳಲ್ಲಿ ವಿಕ್ರಯಿಸುವಿಕೆಯೇರ್ಪಾಟಾಗಬೇಕು. ಬೆಂಗಳೂರು ಕಾರಾಗೃಹದಲ್ಲಿ ಅಪ್ರಾಪ್ತವಯಸ್ಸಿನ ಬಂದಿಗಳ ವಾಸಕ್ಕೆ ಬೇರೊಂದು ವಾರ್ಡು ಕಟ್ಟಿಸಲ್ಪಡಬೇಕಾಗಿದೆ. ಹುಚ್ಚರ ಆಸ್ಪತ್ರೆಯ ಕಾರ್ಯಕ್ರಮವು ಅತೃಪ್ತಿಕರವಾಗಿರುತ್ತದೆ. ಪಂಚಮರ ವಿದ್ಯಾಭಿವೃದ್ಧಿಗಾಗಿ ಒಂದು ಕಮಿಟಿಯು ಅಗತ್ಯವಾಗಿ ಏರ್ಪಡಿಸಲ್ಪಡಬೇಕಾಗಿದೆ.

ಮಂಡ್ಯ ತಾ|| ಮದ್ದೂರಿನ ಮ|| ಎಂ. ಸಿ. ಮಲ್ಲಯ್ಯನವರು—ಈಗ ಸಂಸ್ಥಾನದಲ್ಲೆಲ್ಲಾ ನಿರುಪಯೋಗವಾಗಿರುವ 14,300 ಕೆರೆಗಳಲ್ಲಿ 702 ಕೆರೆಗಳು ಮಾತ್ರ ಕಳೆದ 10 ವರ್ಷಗಳಕಾಲದಲ್ಲಿ ಜೀರ್ಣೋದ್ಧಾರಮಾಡಲ್ಪಟ್ಟಿವೆ. ಗ್ರಾಮವಾಸಿಗಳು ತಮ್ಮ ವಿನಿಯೋಗಕ್ಕೂ ತಮ್ಮ ದನಕರುಗಳ ಹಾಗೂ ಭೂಮಿಗಳುಪಯೋಗಕ್ಕೂ ಕೆರೆಯ ನೀರನ್ನೇ ಆಶ್ರಯಿಸಿಕೊಂಡಿರುವರಾದುದರಿಂದ, ಸರ್ಕಾರದವರು ಆದಷ್ಟುಜಾಗ್ರತೆಯಲ್ಲಿ ಅನುಕೂಲವಾದಷ್ಟು ಕೆರೆಗಳನ್ನು ರಿಪೇರಿಮಾಡಿಸಿ ಉಪಯೋಗಕ್ಕೆ ತರುವುದು ಅತ್ಯವಶ್ಯವಾಗಿದೆ. ವ್ಯವಸಾಯ, ವೈದ್ಯ ಮತ್ತು ಆರೋಗ್ಯಶಾಖೆಗಳಿಂದ ಜನರಿಗೆ ಹೆಚ್ಚು ಪ್ರಯೋಜನವಾಗುವಂತೆ ಮಾಡಲು ಸರ್ಕಾರಿಯ ಗ್ರಾಂಟನ್ನು ಹೆಚ್ಚಿಸಿಕೊಡಬೇಕು. ಇವೆಲ್ಲಕ್ಕಿಂತಲೂ ಗ್ರಾಮವಾಸಿಗಳು ವಿದ್ಯೆಯಿಲ್ಲದೆ ಮೂಢರಾಗಿರುವುದರಿಂದ ಪ್ರಾಥಮಿಕ ವಿದ್ಯಾಭ್ಯಾಸವು ಬಹಳವಾಗಿ ಅಭಿವೃದ್ಧಿಗೊಳಿಸಲ್ಪಡತಕ್ಕುದು ಅತ್ಯಾವಶ್ಯಕವು. ಗ್ರಾಮಸ್ಥರು ತಕ್ಕ ಮಟ್ಟಿಗಾದರೂ ವಿದ್ಯಾವಂತರಾದ ವಿನಾ ಯಾವ ವಿಧದಲ್ಲೂ ಗ್ರಾಮಾಭಿವೃದ್ಧಿಮಾಡಲು ಶಕ್ಯವಿಲ್ಲವು. ಆದುಕಾರಣ ಸಾಧಾರಣಜನರ ವಿದ್ಯಾಭ್ಯಾಸವಾಗಿ ಸರ್ಕಾರದವರು ಸಾನುಭೂತಿಪೂರ್ವಕವಾಗಿ ಮೊದಲು ಗಮನಕೊಡತಕ್ಕುದಾಗಿದೆ.

ಮದ್ಗಿರಿಯ ಮ|| ಶ್ಯಾಮಶಾಸ್ತ್ರಿಗಳು—ಮದ್ಗಿರಿಯಲ್ಲಿ ಒಂದು ಹೈಸ್ಕೂಲು ಸ್ಥಾಪನೆಯು ಅತ್ಯವಶ್ಯವಾಗಿರುವುದರಿಂದ ಅಲ್ಲಿಯ ಪ್ರಮುಖಜನರ ಸಭೆಯೊಂದು ಈಚೆಗೆ ನಡೆಸಲ್ಪಟ್ಟು 20,000 ರೂ. ಚಂದಾ ಹಣ ವಾಗ್ದಾನಮಾಡಲ್ಪಟ್ಟು ಈ ತಾಲ್ಲೂಕಿನಲ್ಲಿ ಒಂದು ಹೈಸ್ಕೂಲನ್ನು ಸ್ಥಾಪಿಸಿಕೊಡಬೇಕಾಗಿ ಸರ್ಕಾರಕ್ಕೆ ವಿಜ್ಞಾಪಿಸಿಕೊಳ್ಳಲ್ಪಟ್ಟಿದ್ದಿತು. ಆದುಕಾರಣ ದಯಾಳು ಸರ್ಕಾರದವರು ನಮ್ಮ ತಾಲ್ಲೂಕಿನ ಪ್ರಜೆಗಳ ಪ್ರಾರ್ಥನೆಯಂತೆ ಹೈಸ್ಕೂಲನ್ನು ಸ್ಥಾಪಿಸಿಕೊಡಬೇಕು. ತುಮಕೂರು ಡಿಸ್ಟ್ರಿಕ್ಟಿನಲ್ಲಿ ಜುಡಿಷಿಯಲ್ ಮತ್ತು ಎಕ್ಸಿಕ್ಯುಟಿವ್ ಉದ್ಯೋಗಗಳನ್ನು ಬೇರ್ಪಡಿಸಿಕೊಡಬೇಕು. (ಈ ವಿಚಾರವು ಸರ್ಕಾರದವರಿಂದ ಅನುಕೂಲವಾಗಿ ಪರ್ಯಾಲೋಚಿಸಲ್ಪಡುವುದೆಂದು ದಿವಾನರಪ್ಪಣೆಕೊಡಿಸಿದರು).

ಸಿದ್ಧಘಟ್ಟದ ಮ|| ಹಂಪಯ್ಯನವರು—ಆಸ್ಪತ್ರೆಗಳುಪಯೋಗಕ್ಕೆ ಅವಶ್ಯಗಳಾದ ಔಷಧಗಳೂ, ಶಸ್ತ್ರಚಿಕಿತ್ಸೆಯ ಸಾಮಗ್ರಿಗಳೂ ಸಾಕಷ್ಟು ಕೊಡಲ್ಪಡುತ್ತಿಲ್ಲವಾದುದರಿಂದ ಅವುಗಳನ್ನು ಸಾಕಷ್ಟು ಕೊಡಿಸಿಕೊಡಬೇಕು. ಸಂಸ್ಥಾನದಲ್ಲಿ ರೇಷ್ಮೆ ವ್ಯವಸಾಯಾಭಿವೃದ್ಧಿಗೊಳಿಸುವುದಕ್ಕಾಗಿ ರೈತರಿಗೂ ರೇಷ್ಮೆದಾರ ತೆಗೆಯುವವರಿಗೂ ಅವರ ಆಸ್ತಿಯ ಹೊಣೆಯಮೇಲೆ ಹಣವನ್ನು ಅಡ್ವಾನ್ಸಾಗಿ ಕೊಡಿಸಬೇಕು.

ಬೆಂಗಳೂರಿನ ಮ|| ನೀಲ್ಗಿರಿ ಸಂಜೀವಯ್ಯನವರು—ಮೈಸೂರು ಸಂಸ್ಥಾನದಲ್ಲಿ ಕುರುಬರ ಪ್ರಜಾಸಂಖ್ಯೆಯು ಪ್ರಾಯಶಃ 4 ಲಕ್ಷವಿರುವುದರಿಂದ ಅವರ ವಿದ್ಯಾರ್ಥಿಗಳಿಗೆ ಜನಸಂಖ್ಯಾನುಗುಣವಾಗಿ ಸ್ಕಾಲರ್‌ಷಿಪ್ಪು ದೊರೆಯುತ್ತಿಲ್ಲವಾದಪ್ರಯುಕ್ತ, ಈ ಜನವರ್ಗದ ವಿದ್ಯಾರ್ಥಿಗಳನ್ನು ಬೇರ್ಪಡಿಸಿ ಅವರಿಗೆ ವೇತನಗಳು ಸರಿಯಾಗಿ ದೊರೆಯುವಂತೆ ಮಾಡಿಸಬೇಕು. ಕುರುಬರು ತಮ್ಮ ಕುಲಕಸಬಾದ ಮತ್ತು ಮುಖ್ಯವಾದ ಕಂಬಳಿಯ ನೇಗೆಯನ್ನು ಪ್ರೋತ್ಸಾಹವೂ ಸಾಹಯವೂ ಇಲ್ಲದಿರುವುದರಿಂದ ಬಿಟ್ಟುಬಿಡುತ್ತಿರುವ ಪ್ರಯುಕ್ತ ಸರ್ಕಾರದವರು ಅವರಿಗೆ ಪ್ರೋತ್ಸಾಹವನ್ನು ಕೊಟ್ಟು ಕಂಬಳಿಯ ಕೈಗಾರಿಕೆಯು ಅಭಿವೃದ್ಧಿಯಾಗುವಂತೆ ಮಾಡುವುದು ಬಹಳ ಅವಶ್ಯಕವು.

ಕಡಬದ ಮ|| ಹುಚ್ಚೀರೇಗೌಡರು ಮತ್ತು ಮ|| ಸೂರ್ಯನಾರಾಯಣರಾಯರು—ಪಟೇಲ ಶಾನುಭಾಗರುಗಳಿಗೆ ಈಗ ಸಲ್ಲುತ್ತಿರುವ ಮೊಬಲಗು ಅವರು ಮಾಡುತ್ತಿರುವ ಮೆಹನತ್ತಿಗೆ ಬಹಳ ಕಡಿಮೆಯಾಗಿರುವುದರಿಂದ ಈ ಕಾಲಕ್ಕೆ ತಕ್ಕಂತೆ ಹೆಚ್ಚಿಸಿಕೊಡಬೇಕು.

ಸಕಲೇಶಪುರದ ಮ|| ಮಳಲಿ ವೆಂಕಟರಾಮಯ್ಯನವರು—ಸಕಲೇಶಪುರದಲ್ಲಿ ಒಂದು ಹೆರಿಗೆಯಾಸ್ಪತ್ರೆಯನ್ನಿಡಲು ತಕ್ಕ ಕಟ್ಟಡವು ಸಿದ್ಧವಾಗಿರುವುದರಿಂದ ಜಾಗ್ರತೆಯಲ್ಲಿ ಆಸ್ಪತ್ರೆ ಇಡುವಂತೆ ಅಪ್ಪಣೆಯಾಗಬೇಕು.

ಸ್ವದೇಶದ ವೃತ್ತಾಂತಗಳು

ಕಳೆದ ತಾ|| 16ರಲ್ಲಿ ದಿವಾನರು ಪ್ರಜಾಪ್ರತಿನಿಧಿಗಳನ್ನೂ ಅಧಿಕಾರಿಗಳನ್ನೂ ತಮ್ಮ ಬಿಡಾರವಾದ ಲೇಕ್‌ವ್ಯೂ ಬಂಗಲೆಗೆ ಬರಮಾಡಿಕೊಂಡು ಅಲ್ಪಾಹಾರದಿಂದಲೂ ವಾದ್ಯವಿಶೇಷದಿಂದಲೂ ಸತ್ಕರಿಸಿದರು.

ಪ್ರಜಾಪ್ರತಿನಿಧಿಸಭೆಯಿಂದ ನ್ಯಾಯವಿಧಾಯಕ ಸಭೆಗೆ 8 ಜನ ಮೆಂಬರುಗಳನ್ನು ಆರಿಸಿದ ಕಾಲದಲ್ಲಿ ಅನ್ಯಾಯಾಕ್ರಮಗಳು ಜರುಗಿದುವಾದುದರಿಂದ ಆ ಚುನಾವಣೆಯನ್ನು ರದ್ದುಪಡಿಸಬೇಕೆಂದು ಮೈಸೂರು ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ ಮ|| ಕರ್ಣಿಕ ಕೃಷ್ಣಮೂರ್ತಿರಾಯರು ಹೂಡಿದ್ದ ವಿವಾದದಲ್ಲಿ ಕಕ್ಷಿಪ್ರತಿಕಕ್ಷಿಗಳ ಕಡೆಯ ಸಾಕ್ಷಿಗಳ ವಿಚಾರಣೆಯೂ ವಕೀಲರುಗಳ ಆರ್ಗ್ಯುಮೆಂಟೂ ನಡೆದು ಕಳೆದ ತಾ|| 20 ರಲ್ಲಿ ತಳ್ಳುಪಡಿಮಾಡಲ್ಪಟ್ಟಿತು ಮತ್ತು ಪ್ರತಿವಾದಿಗಳ ಪರಲಾಯರ ಖರ್ಚಿಗಾಗಿ 25 ರೂ. ಗಳನ್ನು ಅರ್ಜಿದಾರರು ಕೊಡಬೇಕೆಂದು ಅಪ್ಪಣೆ ಮಾಡಲ್ಪಟ್ಟಿರುವುದು. ಪರೋಕ್ಷಪ್ರಾಸಹನೆಯ ಫಲವಿದಲ್ಲವೆ?

ರಾಜಧಾನಿಯ ಆಯುರ್ವೇದಕಾಲೇಜಿನ ಹೆಡ್ಮಾಸ್ಟರಾದ ಡಾಕ್ಟರ್ ಕೆ. ಕೃಷ್ಣಯ್ಯಂಗಾರ್ಯರು ಕಳೆದ 2 ತಿಂಗಳಿಂದಲೂ ಅಸ್ವಸ್ಥರಾಗಿದ್ದು ಈಗ ಬಹುಮಟ್ಟಿಗೆ ಗುಣವನ್ನು ಹೊಂದಿರುವರೆಂದೂ ಇನ್ನು ಕೆಲದಿನಗಳಲ್ಲಿ ತಮ್ಮ ಉದ್ಯೋಗದಮೇಲೆ ಬರುವರೆಂದೂ ಕೇಳಿ ಬಹಳವಾಗಿ ಸಂತೋಷಿಸುತ್ತೇವೆ. ಇವರು ರೋಗಿಗಳಲ್ಲಿ ಬಡವರು ಬಲ್ಲಿದರು ಎಂಬ ತಾರತಮ್ಯವಿಡದೆ ಎಲ್ಲರನ್ನೂ ಬಹಳ ಶ್ರದ್ಧೆಯಿಂದಲೂ ಅಭಿಮಾನದಿಂದಲೂ ಕಂಡು ಉಪಚರಿಸುತ್ತಿರುವುದರಿಂದ ವಿಶೇಷಜನಾನುರಾಗಕ್ಕೆ ಪಾತ್ರರಾಗಿರುವ ಪ್ರಯುಕ್ತ ಇವರನ್ನು ಕಂಡು ಕೇಳಿದವರೆಲ್ಲರೂ ಇವರ ರೋಗನಿವಾರಣೆಯ ಸುದ್ದಿಯನ್ನು ಕೇಳಿ ಬಹಳವಾಗಿ ಆನಂದಿಸುವುದರಲ್ಲಿ ಸಂದೇಹವಿಲ್ಲವು.

ಮಳವಳ್ಳಿಯ ಮ್ಯುನ್ಸಿಪಲ್ ಕೌನ್ಸಿಲರೂ, ಡಿಸ್ಟ್ರಿಕ್ಟ್ ಬೋರ್ಡು ಮತ್ತು ಪ್ರಜಾಪ್ರತಿನಿಧಿಸಭಾ ಮೆಂಬರೂ ಆದ ಮ|| ಚಿಕ್ಕಣ್ಣನವರು ತಮ್ಮ ಮಗಳ ವಿವಾಹಮಹೋತ್ಸವವನ್ನು ಕಳೆದ ತಾ|| 29 ರಲ್ಲಿ ಬಹಳ ವಿಜೃಂಭಣೆಯಿಂದಲೂ ವಿತರಣೆಯಿಂದಲೂ ಜರುಗಿಸಿದರೆಂದೂ, ಅಮಲ್ದಾರರು ಮೊದಲಾಗಿ ಅಧಿಕಾರಿಗಳೂ, ಕೊಳ್ಳೇಗಾಲದ ತಾಲ್ಲೂಕು ಬೋರ್ಡು ಪ್ರೆಸಿಡೆಂಟರಾದ ಮ|| ಜಿ. ಪಿ. ಮಲ್ಲಪ್ಪನವರು ಮೊದಲಾಗಿ ಸ್ಥಳ ಪರಸ್ಥಳಗಳ ದೊಡ್ಡಮನುಷ್ಯರುಗಳೂ ಬಂಧುಬಳಗದವರೂ ಆಹ್ವಾನಿಸಲ್ಪಟ್ಟಿದ್ದು ಅಲ್ಪಾಹಾರದಿಂದಲೂ ಮ|| ಜಿ. ಪಿ. ಮಲ್ಲಪ್ಪನವರ ಪುತ್ರ ನಟರಾಜ (ಬಾಲಕ)ನ ಸಂಗೀತಶ್ರವಣದಿಂದಲೂ ವೇಶ್ಯೆಯರ ನರ್ತನದಿಂದಲೂ ಸತ್ಕರಿಸಲ್ಪಟ್ಟರೆಂದೂ ಉತ್ಸವಭಾಗಿಗಳೊಬ್ಬರು ತಿಳಿಸುತ್ತಾರೆ.

ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವದ ದಿವಸ ಅಂದರೆ ತಾ|| 13ರ ಸಾಯಂಕಾಲ ಮಳೆಯು ವಿಶೇಷವಾಗಿ ಬಂದು ಜನರ ಉತ್ಸಾಹಭಂಗಮಾಡಿದುದರಿಂದೀಚೆಗೆ ಆಗಾಗ್ಗೆ ತುಂತುರುಮಳೆಯು ಮಾತ್ರವಾಗುತ್ತಿದೆ. ಈಚೆಗಾದ ಮಳೆಯಿಂದ ರಾಜಧಾನಿಯಲ್ಲಿ ವಾಂತಿಭೇದಿರೋಗವು ಶಮನವಾಗಿದ್ದಿತೆಂದು ಭಾವಿಸಲ್ಪಟ್ಟಿದ್ದಿತು. ಆದರೆ ಹಳ್ಳದಕೇರಿಯಲ್ಲಿ ಹಾಲುಮಾರಿಕೊಂಡು ಜೀವಿಸುವ ಒಂದು ಒಕ್ಕಲಿಗರ ಕುಟುಂಬದಲ್ಲಿ ಈ ವಾಂತಿಭೇದಿರೋಗವು ಕಾಣಿಸಿಕೊಂಡು 13-14 ವರ್ಷವಯಸ್ಸಿನ ಒಬ್ಬ ಹುಡುಗನೂ ತಾ|| 17ರಲ್ಲೂ ತಾ|| 18 ರಲ್ಲಿ 3-4 ವರ್ಷದ ಒಂದು ಗಂಡುಮಗುವೂ ಸತ್ತುಹೋದರು. ಈ ವಿಷಯವನ್ನು ಹಲ್ತಾಫೀಸರು ತಿಳಿದಕೂಡಲೆ ಆ ಸ್ಥಳಕ್ಕೆ ಹೋಗಿ ಅದೇ ಮನೆಯಲ್ಲಿ ಇನ್ನೂ ಮೂವರು ರೋಗಗ್ರಸ್ತರಾಗಿರುವುದನ್ನು ನೋಡಿ ಅವರಲ್ಲೊಬ್ಬ ಹೆಂಗುಸನ್ನು ಕ್ಯಾಂಪು ಆಸ್ಪತ್ರೆಗೆ ಸಾಗಿಸಿ ಉಳಿದವರು ಹೋಗಲೊಪ್ಪಲಿಲ್ಲವಾಗಿ ಅವರಿಗೆ ಔಷಧವನ್ನು ತರಿಸಿಕೊಟ್ಟು ಅದನ್ನು ತೆಗೆದುಕೊಳ್ಳುವಂತೆ ಹೇಳಿ ಹೋದರು. ಅದೇ ಮಧ್ಯಾಹ್ನ ಕ್ಯಾಂಪಿಗೆ ಸಾಗಿಸಲ್ಪಟ್ಟಿದ್ದವಳು ಮೃತಳಾದಳು. ಮನೆಯಲ್ಲಿ ರೋಗಗ್ರಸ್ತರಾಗಿದ್ದ ಅತ್ತೆ ಮತ್ತು ಅಳಿಯ ಇವರಿಬ್ಬರಲ್ಲಿ ಅತ್ತೆಯು ತಾ|| 19ರ ರಾತ್ರಿ ಸತ್ತುಹೋದಳು. ಅಳಿಯನು ಇನ್ನೂ ನರಳುತ್ತಿರುವನು. ಈ ಮನೆಯಲ್ಲಿ ಒಟ್ಟು 4 ಮರಣಗಳಾದವು.

ಜಾಹೀರ ನೋಟೀಸು.

ಧಾರವಾಡ ಶ್ರೀ ಉಳವೀಬಸವೇಶ್ವರಜಾತ್ರೆಯ ಕಮಿಟಿ,
ಚೇರಮನ್ನರ ಕಡಿಯಿಂದ.

ಯಾವತ್ತೂ ಸದ್ಗೃಹಸ್ಥರಿಗೆ ವಿ. ವಿ.—

ಧಾರವಾಡ ಶ್ರೀ ಉಳವೀಬವೇಶ್ವರ ಜಾತ್ರೆಮಾಡುವದನ್ನು ನಿಶ್ಚಯಿಸಿದ್ದು ಆ ಸಂಬಂಧಿ ಹಕ್ಕುಬಾಬು ವಗೈರೆಗಳ ಕಾಗದಪತ್ರಗಳಿದ್ದವರು ಮತ್ತು ತೇರಿನಲ್ಲಿ ಯೋಗ್ಯಸ್ವಾಮಿಗಳನ್ನು ಕೂಡಿರಿಸುವಬಗ್ಗೆ ಕಾಗದಪತ್ರಗಳ ದಾಖಲೆ ಇದ್ದವರು ಅವುಗಳನ್ನು ತಾ|| 5-7-1924ನೆ ಇಸವಿ ಒಳಗಾಗಿ ನಮ್ಮ ಕಡಿಗೆ ತಂದುತೋರಿಸಬೇಕು. ಅನಂತರ ಬಂದ ದಾಖಲೆಗಳನ್ನು ವಿಚಾರಮಾಡುವದರಲ್ಲಿ ಬರಲಾರದು.

ಶಿವಲಿಂಗಶಾಸ್ತ್ರಿ ಕನವಳ್ಳಿ
ಹಿರೇಮಠ ಸಂಪಾದಕ ಕರ್ನಾಟಕ ಟಾಯಿಮ್ಸು
ಚೇರಮನ್, ಧಾರವಾಡ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಸಂ.

ತಿರಸ್ಕೃತಪತ್ರಗಳು.

(1) ದಾವಣಗೆರೆ ತಾ|| ಹೆಮ್ಮನಬೇತೂರು ಶಿರಸ್ತಹಳ್ಳಿ ಮ|| ಕಂಬಿರಪ್ಪನವರ ಮಗ ಸಿದ್ಧಬಸಪ್ಪನಿಗೆ ಹರಪನಹಳ್ಳಿ ತಾ|| ರಾಮಘಟ್ಟದ ಮ|| ಕರಿಬಸಪ್ಪನವರ ಪುತ್ರಿ ಸೌ|| ಸಿದ್ದಮ್ಮನನ್ನು ಕೊಟ್ಟು ನಡಸಿದ ಲಗ್ನದಲ್ಲಿ ಮ|| ತಿಟ್ಟರು ಕಲವೀರಪ್ಪನವರ ಮೂಲಕ 1 ರೂ. (2) ಹರಪನಹಳ್ಳಿ ಬ್ರ|| ಶ್ರೀ|| ಹೊಳಿಬಸವಶಾಸ್ತ್ರಿಗಳಿಂದ ಅವರ ಕುಮಾರ ಮ|| ಷಡಕ್ಷರಪ್ಪ ಎಂ. ಎ., ಯವರ ಲಗ್ನದಲ್ಲಿ 2 ರೂ. (3) ಎಸ್. ಎಚ್. ಆರ್. ಎಸ್. ಸೊನ್ನ—ನಿಮ್ಮ ಲೇಖವು ಗ್ರಾಹಕರಿಗೆ ಪ್ರಯೋಜನಕರವಾಗಿರದೆ ಒಬ್ಬ ವ್ಯಕ್ತಿಯನ್ನು ನಿಂದಿಸತಕ್ಕುದಾಗಿರುವುದರಿಂದ ತಿರಸ್ಕರಿಸಲ್ಪಟ್ಟಿದೆ.

ಸರ್ಕಾರಿ ಮಹಾಪಾಠಶಾಲೆಗಳಿಗೆ ವೀರಶೈವರ ಪ್ರವೇಶ.

(ಲೇಖಕ—ಆಸ್ಥಾನವಿದ್ವಾನ್ ಶ್ರೀ ಗುರುಶಾಂತಶಾಸ್ತ್ರಿ.)

ಬೆಂಗಳೂರು ಮೈಸೂರು ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ವೀರಶೈವ ವೈದಿಕ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕೊಡಬೇಕೆಂದು ಅನೇಕ ವರ್ಷಗಳಿಂದಲೂ ವೀರಶೈವ ಪ್ರಮುಖರು ಕೋರಿಯುತ್ತಿದ್ದದ್ದಾಗಿ [illegible] ಅಳುವ ಮಕ್ಕಳನ್ನು ಸಮಾಧಾನಪಡಿಸುವಂತೆ ಬೆಂಗಳೂರು ಪಾಠಶಾಲೆಯಲ್ಲಿ ಸಂಸ್ಕೃತ ಪ್ರೌಢವಿದ್ಯಾಭ್ಯಾಸಕ್ಕೆ ಮಾತ್ರ ಅವಕಾಶವುಂಟುಮಾಡಲ್ಪಟ್ಟಿರುವುದು. ರಾಜಧಾನಿಯಲ್ಲಿರುವ ಮಹಾಪಾಠಶಾಲೆಯಲ್ಲಿ ಬಹುಕಾಲದಿಂದ ವೇದ ವೇದಾಂಗಶಾಸ್ತ್ರಾಭ್ಯಾಸವು ನಡೆದುಕೊಂಡು ಬಂದಿರುವುದರಿಂದಲೂ, ಅದರಲ್ಲಿ ಯಾವುದೊಂದು ವ್ಯತ್ಯಸ್ತಮಾಡುವಕಾರಣವಿಲ್ಲದಿರುವುದರಿಂದಲೂ, ರಾಜಧಾನಿಯ ಪಾಠಶಾಲೆಯು [illegible] ನಡೆಯುತ್ತಿಕೊಂಡು ಬಂದಂತೆ ಮುಂದೆಯೂ ನಡೆಯಬೇಕೆಂತಲೂ, [illegible] ಪಾಠಶಾಲೆಯಲ್ಲಿ ಅವರಿಗೆ ಅವಕಾಶ [illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜೂನ್ ತಾ|| ೨೨ ನೆಯ ಭಾನುವಾರ.

A MEMORABLE SESSION.

The Birthday Session of the Representative Assembly this year was a memorable one. When the Reforms were granted by His Highness the Maharaja there were a few sceptics who felt doubtful of their practical utility. It may be that it is premature to judge the full import of the new Reforms. But if a full session running for over a week could give us some indication of what the Assembly could do, this Session showed that it could influence the Government considerably in various matters affecting the interests of the State. It is our pleasure at the outset to offer our hearty congratulations to the Dewan-President for the very able and tactful manner in which he conducted the Session. He had at once to play the *role* of the responsible Premier and the Speaker of the House, a by-no-means happy combination, and much of the success of the Session was due to the President's sympathetic handling of the House. The feelings of the House found a felicitous expression in Mr. G. Paramashiviah's vote of thanks to the Dewan at the end of the Session. As regards the discussions themselves, it may be said, much to the credit of the Assembly, that the average level of the speeches was high. It was a pleasant thing to see some members of the back benches from rural constituencies making very effective speeches on the budget and other subjects. There is hardly any doubt that the people are out to take full advantage of the opportunities given to them, and it only requires a little more organisation to focus their opinions on public questions to take us to the way in which the modern democracies are working. The Government have to be a great deal more on the alert than before, and there could be no better corrective of Government than the well-informed criticism of the reconstituted Councils. There were a number of important matters that came up for consideration before the Birthday Session of the Assembly besides the Budget Estimates for the coming year. The Government introduced a new Bill in place of the old Press Regulation on which there was a lively discussion. It was finally accepted by the House by 102 voting for and 79 against, a success which was due to the support given to it by the liberal party. It is hardly possible to refer to the various interesting matters that were brought up before the House at the Session. There was a fine controversy over the resolution for utilising the funds provided for chattrams for feeding the poor students of all classes. It met with the opposition of the conservative section of the House but the liberal party carried the resolution by a big majority. Then again, the resolution of Mr. B. L. Byanna for making a larger provision of funds for converting the Primary and Middle schools was carried by a large majority. Mr. Nilgiri G. Sanjeeviah's resolution for increasing the proportion of the representation of the Backward classes in the Police and Medical Departments from 50 percent to 75 percent was, despite the opposition from the Government, carried by a large majority. These are no ordinary successes at the first meeting of the Assembly for the popular party—which is the liberal party. It was a striking demonstration of their solidarity and showed what concerted action could accomplish. While we congratulate them on their success, may we appeal to them to continue to work unitedly. We have to make this appeal because we have reasons to think that there were some attempts made this time to divide and rule, to set up Hindus against Muslims, the Vokkaligars against Lingayets and so on. It is gratifying to note that the attempt did not fiz. For the sake of the country, and of the vast masses who are looking forward to their true representatives to lift them up to their full heights of citizenship it is the duty of the members to keep the popular party united and strong. What was witnessed at the Birthday Session was the result of years of work. How much more unity and strength is needed in the years to come when the task becomes more ardous? The work of reclaiming the rightful position of the masses has only just commenced and there could be no rest till it is accomplished. Why then allow interested men to set up internecine troubles? May we hope that the spirit of service, of sacrifice and of true comradeship will never be wanting in those on whom the moulding of the destiny of future Mysore depends.

ಪ್ರಜಾಪ್ರತಿನಿಧಿಸಭೆಯ ಬಡ್ಜೆಟ್ ಅಧಿವೇಶನವು.

ಈ ಅಧಿವೇಶನದಲ್ಲಿ ದಿವಾನರು ಮಾಡಿದ ಭಾಷಣದ ಮುಖ್ಯಾಂಶಗಳು ಕಳೆದವಾರ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುವಷ್ಟೆ? ಇವನ್ನು ನೋಡುವಲ್ಲಿ ದಿವಾನರು ಕಳೆದ ವರ್ಷ ತಮ್ಮ ಭಾಷಣದಲ್ಲಿ ಅಪ್ಪಣೆಕೊಡಿಸಿದ್ದಂತೆ ಸಂಸ್ಥಾನದ ಆಯವ್ಯಯವನ್ನು ಸಮತೂಕಕ್ಕೆ ತರಲು ಬಹಳ ಬುದ್ಧಿಶಕ್ತಿಯನ್ನು ಪಯೋಗಿಸಿರುತ್ತಾರೆಂಬುದು ವ್ಯಕ್ತವಾಗುತ್ತದೆ. ಪ್ರಸಕ್ತವರ್ಷದಲ್ಲಿ 3,31,50,000ರೂ. ಹುಟ್ಟುವಳಿಯಾಗಿ 3,30,87,000 ರೂ. ವೆಚ್ಚವೂ ಆಗಿ 63 ಸಾವಿರ ರೂ. ಮಿಗುವುದೆಂದು ನಿರೀಕ್ಷಿಸಲ್ಪಟ್ಟಿದ್ದು ಕಾಲಸ್ಥಿತಿಯ ಅನಾನುಕೂಲತೆಯಿಂದ ಒಟ್ಟುತ್ಪನ್ನದಲ್ಲಿ 9 ಲಕ್ಷ ರೂ. ಕಡಿಮೆಯಾದುದರಿಂದ, ದಂಡಿನುತ್ಪನ್ನದಿಂದ ಬಂದ 5 ಲಕ್ಷ ರೂ. ಸೇರಿ ಒಟ್ಟುತ್ಪನ್ನವು 3,29,02,000 ರೂ. ಆಗುವುದೆಂದೂ ಈ ಕಾರಣದಿಂದ ಮಿಗಿತಾಯಕ್ಕೆ ಬದಲು 2,84,000 ರೂ. ಗಳು ವೆಚ್ಚಕ್ಕೆ ಸಾಲದೆಬರುವುವೆಂದೂ 1924-25 ರಲ್ಲಿ 3,35,84,000ರೂ. ಆದಾಯವೂ 3,35,15,000ರೂ. ವ್ಯಯವೂ ಆಗಿ 69,000 ರೂ. ಉಳಿಯುವುದೆಂದೂ ನಿರೀಕ್ಷಿಸಲ್ಪಟ್ಟಿರುತ್ತದೆ. ಕೆಲವರ್ಷಗಳಿಂದಲೂ, ಆದಾಯಕರವೆಂದು ಆರಂಭಿಸಲ್ಪಟ್ಟ ದೊಡ್ಡ ಕೆಲಸಗಳಿಗಾಗಿ ವಿಶೇಷ ಹಣವು ವೆಚ್ಚವಾಗುತ ಬಂದುದರಮೇಲೆ ಹಣಕ್ಕೆ ಬಹಳ ಮುಗ್ಗಟ್ಟಾಗಿ ಕಳವಳವನ್ನುಂಟುಮಾಡಿದ್ದ ಸಮಯದಲ್ಲಿ ದಿವಾನರಾದ ಮಿ|| ಬಾನರ್ಜಿಯವರು ತಮ್ಮ ಬುದ್ಧಿಶಕ್ತಿಯನ್ನು ವಿನಿಯೋಗಿಸಿ ಆಯವ್ಯಯವು ಸಮತೂಕಕ್ಕೆ ಬರುವಂತೆ ಮಾಡಿದುದಲ್ಲದೆ ಮುಂದಿನವರ್ಷದಲ್ಲಿ ವೆಚ್ಚವುಕಳೆದು 69,000 ರೂ. ವರೆಗೂ ಮಿಗುತಾಯವಾಗುವಂತೆ ಮಾಡಿರುವುದು ವಂದನೀಯವೂ ಪ್ರಶಂಸನೀಯವೂ ಆಗಿರುತ್ತದೆ. ಈವರ್ಷ ನಿಶ್ಚಿತವಾದ ವೆಚ್ಚಕ್ಕಿಂತಲೂ ಮುಂದಣ ವರ್ಷದಲ್ಲಿ 6.03 ಲಕ್ಷ ರೂ. ವೆಚ್ಚವಾಗುವುದೆಂದು ನಿರೀಕ್ಷಿಸಲ್ಪಟ್ಟಿರುವುದರಲ್ಲಿ ಶ್ರೀಮನ್ಮಹಾರಾಜರವರ ವೆಚ್ಚಕ್ಕಾಗಿ ಕೊಡಲ್ಪಡುವ ಹಣಕ್ಕೆ 3 ಲಕ್ಷ ರೂ. ಹೆಚ್ಚಾಗಿ ಸೇರಿಸಲ್ಪಟ್ಟಿರುತ್ತದೆ. ವಿದ್ಯಾಭ್ಯಾಸಕ್ಕಾಗಿ ಹೆಚ್ಚಿಸಲ್ಪಟ್ಟಿರುವ 2.74 ಲಕ್ಷ ರೂಪಾಯಿಗಳಲ್ಲಿ 1.44 ಲಕ್ಷ ರೂ. ಗಳು ವಿಶ್ವವಿದ್ಯಾಲಯಕ್ಕಾಗಿ ವಿನಿಯೋಗವಾಗಿ, ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಕ್ಕೆ 1.30 ಲಕ್ಷ ಮಾತ್ರ ಉಳಿಯುವುದು ಬಹಳ ಶೋಚನೀಯವು. ಈರೀತಿಯಾಗಿ ಪ್ರೌಢವಿದ್ಯಾಭ್ಯಾಸಕ್ಕೆ ಮುಖ್ಯತಳಹದಿಯಾಗಿರುವ ಪ್ರಾಥಮಿಕ ವಿದ್ಯಾಭ್ಯಾಸಕ್ಕಿಂತ ವಿಶ್ವವಿದ್ಯಾಲಯಕ್ಕೆ ಹೆಚ್ಚು ಪ್ರೋತ್ಸಾಹವನ್ನು ಕೊಡುತ್ತಿರುವುದನ್ನು ನಾವು ಮೊದಲಿಂದಲೂ ಖಂಡಿಸುತಬಂದಿರುವೆವು. ಇತರ ಕಡೆಗಳಲ್ಲಿ ಸರ್ಕಾರದವರು ಪ್ರೌಢವಿದ್ಯಾಭ್ಯಾಸವನ್ನು ಗೌಣವಾಗಿಯೂ, ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಗಳನ್ನು ಮುಖ್ಯವಾಗಿಯೂ ಪರಿಗಣಿಸಿರುತ್ತಾರೆ. ಅಲ್ಲದೆ ವಿಶ್ವವಿದ್ಯಾಲಯಗಳು ಸ್ವತಂತ್ರಜನರಿಂದ ಪೋಷಿಸಲ್ಪಟ್ಟು ಸರ್ಕಾರದವರಿಂದ ಗ್ರಾಂಟು ಕೊಡಲ್ಪಡುತ್ತಿವೆ. ಈ ವಿಶ್ವವಿದ್ಯಾಲಯಸ್ಥಾಪನೆಯು ಪ್ರಕೃತದಲ್ಲಿ ನಮ್ಮ ಸೀಮೆಗೆ ಅನವಶ್ಯಕವಾಗಿದ್ದಿತಾದರೂ, ಯಾವ ಉದ್ದೇಶದಿಂದಲೋ ಸ್ಥಾಪಿತವಾಗಿರುವುದರ ಮೇಲೆ ಅದನ್ನು ನಡೆಯಿಸಿಕೊಂಡು ಬರಲೇಬೇಕಾಗಿದೆ. ಆದರೆ ಈ ವಿಶ್ವವಿದ್ಯಾಲಯದಲ್ಲಿ ಪಟ್ಟಪ್ರಧಾನವನ್ನು ಹೊಂದಿದ ವಿದ್ಯಾರ್ಥಿಗಳಿಗೆ ಸಂಸ್ಥಾನದ ಉದ್ಯೋಗಗಳಲ್ಲಿ ಅವಕಾಶದೊರೆಯದಿರುವಾಗ ಮತ್ತು ಹೊರಗಡೆಹೋಗಿ ಜೀವಿಸಲು ಅವಕಾಶವಿಲ್ಲದಿರುವಾಗ, ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸವು ಪ್ರೋತ್ಸಾಹವಿಲ್ಲದೆ ನರಳುತ್ತಿರುವಾಗ ವಿಶ್ವವಿದ್ಯಾಲಯಕ್ಕಾಗಿ ಹೆಚ್ಚು ದ್ರವ್ಯವನ್ನು ವೆಚ್ಚಮಾಡುವುದು ಉಚಿತವಾಗಿ ಕಂಡುಬರುವುದಿಲ್ಲವು. ವಿದ್ಯಾಭ್ಯಾಸ ವಿಚಾರದಲ್ಲಿ ಸರ್ಕಾರದವರು ಶಿರೋಧಾರಗೊಳಿಸುವ ವಿಧಾನದಿಂದ ಜನಸಾಮಾನ್ಯ ವಿದ್ಯಾಭಿವೃದ್ಧಿಗೆ ಲೇಶವೂ ಅವಕಾಶವಿಲ್ಲದೆ ಎಲ್ಲೋ ಕೆಲ ಜನರಿಗೆ ಮಾತ್ರ ಪ್ರಯೋಜನವಾಗುತ್ತದೆಂದು ಅನೇಕ ಪ್ರತಿನಿಧಿಗಳು ಸಭೆಯಲ್ಲಿ ಖಂಡಿಸಿ ತಮ್ಮ ಅಸಮಾಧಾನವನ್ನು ತಿಳಿಸಿದರು. ನಮ್ಮ ಸರ್ಕಾರದವರು ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿಗೊಳಿಸುವುದರಲ್ಲಿ ಯಾವುದರಿಂದ ವಿಶೇಷಪ್ರಯೋಜನವಾಗುತ್ತದೆ ಯಾವುದರಿಂದ ಆಗುವುದಿಲ್ಲವೆಂಬುದನ್ನು ವಿವೇಚಿಸದಿರುವುದು ಬಹಳ ಶೋಚನೀಯವು. ದೊಡ್ಡ ಪಟ್ಟಣಗಳ ವಿನಾ ಇತರ ಕಡೆಯಿರುವ ಆಸ್ಪತ್ರೆಗಳಲ್ಲಿ ಬೇಕಾದ ಔಷಧಗಳೂ ಶಸ್ತ್ರಚಿಕಿತ್ಸೆಯ ಸಾಮಗ್ರಿಗಳೂ ಇಲ್ಲದೆ ರೋಗಿಗಳಿಗೆ ಆ ಆಸ್ಪತ್ರೆಗಳಿಂದ ಸಾಕಷ್ಟು ಪ್ರಯೋಜನವಾಗುತ್ತಿಲ್ಲವೆಂಬಂಶವು ಸರ್ಕಾರದವರ ಗಮನಕ್ಕೆ ಬಂದಿಲ್ಲವೆಂದು ಮುಂದಣ ವರ್ಷದ ಬಜ್ಜೆಟ್ಟಿನಲ್ಲಿ ವೈದ್ಯಶಾಖೆಯ ವೆಚ್ಚವನ್ನು 37,000 ರೂ. ವರೆಗೆ ಹೆಚ್ಚಿಸಿರುವುದಲ್ಲಿ ಮೇಲ್ಕಂಡ ಕೊರತೆಗಳ ನಿವಾರಣೆಗೆ ಅವಕಾಶವನ್ನು ಕಲ್ಪಿಸದಿರುವುದರಿಂದಲೇ ವ್ಯಕ್ತವಾಗುತ್ತದೆ.

ದಿವಾನರು ಬಹಳ ಸಮರ್ಥತೆಯಿಂದಲೂ, ಚಾಕಚಕ್ಯದಿಂದಲೂ, ಸಾನುಭೂತಿಯಿಂದಲೂ ತಾಳ್ಮೆಯಿಂದಲೂ ಈ ಬಜ್ಜೆಟ್ ಅಧಿವೇಶನ ಕಾರ್ಯವನ್ನು ನಿರ್ವಹಿಸಿದುದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ಸಭೆಯಲ್ಲಿ ಮೆಂಬರುಗಳು ಮಾಡಿದ ಚರ್ಚೆಯೂ ಭಾಷಣವೂ ಬಹುಸಮರ್ಪಕವಾಗಿದ್ದುವು. ತತ್ರಾಪಿ ಗ್ರಾಮವಾಸಿಗಳಾದ ಮೆಂಬರುಗಳು ಧೈರ್ಯವಾಗಿ ಮುಂದೆಬಂದು ಬಜ್ಜೆಟ್ಟು ಮತ್ತು ಇತರವಿಚಾರಗಳಲ್ಲಿ ಯುಕ್ತವಾಗಿ ಚರ್ಚೆನಡಿಸಿದುದು ಮಾತ್ರ ಬಹಳ ಶುಭಸೂಚಕವೂ ಪ್ರಶಂಸನೀಯವೂ ಆಗಿರುತ್ತದೆ. ಈ ಸಭೆಯಲ್ಲಿ ಮುಂದಣ ವರ್ಷದ ಬಜ್ಜೆಟ್ಟಿನ ಮೇಲೆ ಚರ್ಚೆಯು ನಡೆದುದಲ್ಲದೆ ಕೆಲ ಬಿಲ್ಲುಗಳು ಮೆಂಬರುಗಳ ಸಮ್ಮತಿಯಬಗೆಗೆ ಸರ್ಕಾರದವರಿಂದ ತರಲ್ಪಟ್ಟಿದ್ದುವು. ಅವುಗಳಲ್ಲಿ ಪ್ರೆಸ್‌ರೆಗ್ಯುಲೇಷನ್ ಅಂದರೆ ವರ್ತಮಾನಪತ್ರಿಕೆಯ ಸಂಬಂಧವಾದ ನೂತನ ಶಾಸನವು ಅನುಷ್ಠಾನಕ್ಕೆ ತರಲ್ಪಡಬೇಕು ಬೇಡವೆಂಬ ಬಗೆಗೆ ದೀರ್ಘವಾಗಿ ಚರ್ಚೆಯು ನಡೆದು ಕಡೆಯಲ್ಲಿ ಅನುಷ್ಠಾನಕ್ಕೆ ತರಲ್ಪಡಬೇಕೆಂಬುದಕ್ಕೆ 102 ಓಟುಗಳೂ ಬೇಡವೆಂಬುದಕ್ಕೆ 79 ಓಟುಗಳು ಬಂದು ಆ ರೆಗ್ಯುಲೇಷನ್ನು ವ್ಯಾಸ್ಯಾಡಲ್ಪಟ್ಟಿತು. ಇದರಂತೆಯೇ ಸತ್ರಗಳಲ್ಲಿ ಒಂದು ಪಂಗಡದವರಿಗೆ ಮಾತ್ರ ಅನ್ನ ಹಾಕಲ್ಪಡುವುದಕ್ಕಾಗಿ ಗೊತ್ತುಮಾಡಲ್ಪಟ್ಟಿರುವ ಹಣವು ಎಲ್ಲ ಜಾತಿಯ ಬಡವಿದ್ಯಾರ್ಥಿಗಳ ಅಶನಕ್ಕಾಗಿ ಉಪಯೋಗಿಸಲ್ಪಡಬೇಕೆಂಬ ಬಗೆಗೆ ತರಲ್ಪಟ್ಟಿದ್ದ ರೆಜಲ್ಯೂಷನ್ನೂ, ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಗಳಿಗೆ ಹೆಚ್ಚು ಹಣವನ್ನು ವ್ಯಯಮಾಡಬೇಕೆಂದು ಮ|| ಬಯಣ್ಣನವರು ತಂದಿದ್ದ ರೆಜ್ಯುಲೇಷನ್ನೂ, ಪೊಲೀಸು ಮತ್ತು ವೈದ್ಯಶಾಖೆಗಳ ಕೆಲಸಗಾರರಲ್ಲಿ ಹಿಂದುಳಿದವರ ಸಂಖ್ಯೆಯು ಶೇಕಡ 50 ರಿಂದ 75 ಕ್ಕೆ ಹೆಚ್ಚಿಸಲ್ಪಡಬೇಕೆಂದು ಮ|| ನೀಲ್ಗಿರಿ ಸಂಜೀವಯ್ಯನವರು ತಂದಿದ್ದ ರೆಜ್ಯುಲೇಷನ್ನೂ ಕೆಲವರಿಂದ ಪ್ರತಿಭಟಿಸಲ್ಪಟ್ಟಾಗ್ಯೂ ಹೆಚ್ಚು ಓಟುಗಳು ಬಂದುದರ ಮೇಲೆ ಅಂಗೀಕರಿಸಲ್ಪಟ್ಟುವು. ಇಷ್ಟರ ಮಟ್ಟಿಗಾದುದು ಸಾಮಾನ್ಯವೆಂದು ಭಾವಿಸಲ್ಪಡಲಾಗದು. ಇದಕ್ಕೆ ಉದಾರಮತಿಗಳಾದ ಹಿಂದುಳಿದ ವರ್ಗದವರ ಐಕಮತ್ಯವೂ ಪರಸ್ಪರ ಪ್ರೀತಿವಿಶ್ವಾಸವೂ ಮುಖ್ಯ ಕಾರಣವಾಗಿರುವುದರಿಂದ, ಇನ್ನು ಮುಂದೆ ಇದಕ್ಕಿಂತಲೂ ಪ್ರಬಲವಾದ ಐಕಮತ್ಯ ಪ್ರೀತಿ ವಿಶ್ವಾಸಗಳಿಂದ ದೇಶದ ಬಹುಪ್ರಜೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಭುತ್ವದವರಲ್ಲಿ ನಿವೇದಿಸಿ ಏಕಾಭಿಪ್ರಾಯದಿಂದ ವರ್ತಿಸುವುದಾದರೆ ಪ್ರಜಾವರ್ಗಕ್ಕೆ ಅತಿಶಯವಾದ ಪ್ರಯೋಜನವಾಗುತ್ತೆನ್ನುವುದರಲ್ಲಿ ಸಂದೇಹವಿಲ್ಲವು. ಶ್ರೀಮನ್ ಮಹಾರಾಜರವರಿಂದ ಅನುಗ್ರಹಿಸಲ್ಪಟ್ಟಿರುವ ಸುಧಾರಣೆಗಳನ್ನು ಸಾರ್ಥಕಪಡಿಸಬಲ್ಲರೆಂದು ಈ ಸಲದ ಸಭೆಯಲ್ಲಿ ನಿದರ್ಶನಗೊಳಿಸಿದ ಪ್ರಜಾಪ್ರತಿನಿಧಿಗಳನ್ನು ನಾವು ಅಭಿನಂದಿಸುತ್ತೇವೆ. ಸಭಾವಿಸರ್ಜನೆಯ ಕಾಲದಲ್ಲಿ ಮ|| ಜಿ. ಪರಮಶಿವಯ್ಯನವರಿಂದ ಸಭಾಪರವಾಗಿ ದಿವಾನರಿಗೆ ವಂದನೆಯು ಅರ್ಪಿಸಲ್ಪಟ್ಟಿತು.

ಅರಮನೆಯಲ್ಲಿ ನಡೆದ ವಿವಾಹಮಹೋತ್ಸವವು.

ಶ್ರೀಮನ್ಮಹಾರಾಜರವರ ಸೋದರ ಸೊಸೆಯರು (ಸ|| ಕುಂ|| ಶೋಭಿತೆಯರಾದ ಸೌ|| ಮಹಾರಾಜಕುಮಾರಿ ಚಲುವಾಜಮ್ಮಣ್ಣಿಯವರ ಮತ್ತು ಮಹಾರಾಜಶ್ರೀ ಸರದಾರ್ ಲಕ್ಷ್ಮೀಕಾಂತರಾಜ ಅರಸಿನವರ ದ್ವಿತೀಯಪುತ್ರಿಯರು) ಸ|| ಕುಂ|| ಶೋಭಿತೆಯರಾದ ಸೌ|| ರಾಜಕುಮಾರಿ ಚೆನ್ನಾಜಮ್ಮಣ್ಣಿಯವರನ್ನು 'ಮ|| ದಳವಾಯಿ ದೇವರಾಜಅರಸಿನವರ ತೃತೀಯಪುತ್ರ ಸಹಸ್ರಾಯುಷ್ಯರಾದ ಮದನಗೋಪಾಲರಾಜ ಅರಸಿನವರಿಗೆ ಕೊಟ್ಟು ವಿವಾಹಮಹೋತ್ಸವವು ಈ ತಾ|| 19ನೆಯ ಗುರುವಾರ ಬೆಳಿಗ್ಗೆ 1 ಗಂಟೆಯಮೇಲೆ 1-55 ಗಂಟೆಯೊಳಗೆ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದ ಅರಮನೆಯ ವಿವಾಹಮಂಟಪದಲ್ಲಿ ವಿಧ್ಯುಕ್ತವಾಗಿ ವೈಭವದಿಂದ ನಡೆಯಿಸಲ್ಪಟ್ಟಿತು. ದಿವಾನರು, ಕೌನ್ಸಿಲರುಗಳು, ಸರದಾರರುಗಳು, ರಾಜಬಂಧುಗಳು, ಚೀಫ್‌ಸೆಕ್ರೆಟರಿಯರಾದಿಯಾಗಿ ಎಲ್ಲಾ ಸೆಕ್ರೆಟರಿಗಳು, ಶಾಖಾಧಿಕಾರಿಗಳು, ಡೆ|| ಕಮಿಷನರುಗಳು ಮೊದಲಾಗಿ ಎಲ್ಲ ಸರ್ಕಾರಿಯುದ್ಯೋಗಸ್ಥರೂ, ವಕೀಲರುಗಳು, ಮ್ಯು|| ಕೌನ್ಸಿಲರುಗಳು, ವರ್ತಕರು ಮೊದಲಾಗಿ ಪುರಪ್ರಮುಖರೂ, ವೈದಿಕರುಗಳೂ ಆಹ್ವಾನಿಸಲ್ಪಟ್ಟಿದ್ದರು. ವರನು ಅಂಬಾರಿಯುತ್ಸವದಿಂದ ಧಾರಾಮುಹೂರ್ತಕ್ಕೆ ಕರೆತರಲ್ಪಟ್ಟ ಕೊಂಚಹೊತ್ತಿನಮೇಲೆ ಶ್ರೀಮನ್ಮಹಾರಾಜರವರ ಸ್ವಾರಿಯು ಚಿತ್ತೈಸಿ ವಿವಾಹಮಂಟಪದ ಬಲಭಾಗಕ್ಕೆ ಕೊಂಚದೂರದಲ್ಲಿ ರಜತಾಸನದಮೇಲೆ ಮಂಡಿಸಿತು. ಅನಂತರ ಕನ್ಯೆಯ ತಂದೆಯವರಾದ ಸರದಾರ್ ಲಕ್ಷ್ಮೀಕಾಂತರಾಜ ಅರಸಿನವರೂ ಅವರ ಪತ್ನಿಯರಾದ ರಾಜಕುಮಾರಿಯವರೂ ಶ್ರೀಮನ್ ಮಹಾರಾಜರವರ ಅನುಜ್ಞೆಯನ್ನು ಪಡೆದುಕೊಂಡು ತಮ್ಮ ಸಾಲಂಕೃತಪುತ್ರಿಯನ್ನು ಮ|| ಮದನಗೋಪಾಲರಾಜ ಅರಸಿನವರಿಗೆ ವಿಧ್ಯುಕ್ತವಾಗಿ ಧಾರೆಯೆರೆದುಕೊಟ್ಟರು. ಲೆ|| ಕರ್ನಲ್ ಚಾಮರಾಜ ಬಹದ್ದೂರ್‌ರವರು ವರನಕಡೆಯವರಾಗಿದ್ದುಕೊಂಡು ಕನ್ಯಾದಾನವನ್ನು ಅಂಗೀಕರಿಸಿದರು. ಆಸ್ಥಾನ ಸಂಗೀತವಿದ್ವಾಂಸರುಗಳಿಂದ ಕಾನ್ಸರ್ಟ್‌ವಾದ್ಯವು ಮನೋಹರವಾಗಿ ಆಗುತ್ತಿರುವಾಗ್ಗೆ ಶ್ರೀಮನ್ ಮಹಾರಾಜರವರು ಮಹಾಮಾತೃಶ್ರೀಯವರು, ಪ್ರಥಮ ರಾಜಕುಮಾರಿಯರು, ರಾಜಕುಮಾರ ದೇಶರಾಜ ಅರಸಿನವರು, ಸರದಾರರುಗಳಾದ ಗೋಪಾಲರಾಜ ಅರಸಿನವರು, ಗೋಪಾಲಕೃಷ್ಣ ಅರಸಿನವರು ಎ. ಚಾಮಪ್ಪಾಜಿ ಅರಸಿನವರು ಮತ್ತೆ ಕೆಲ ರಾಜಬಂಧುಗಳಿಂದ ಕಿಲ್ಲತ್ತುಗಳು ವಧೂವರರಿಗೆ ಆಶೀರ್ವಾದ ಪೂರ್ವಕವಾಗಿ ಒಪ್ಪಿಸಲ್ಪಟ್ಟಮೇಲೆ ಸಭಿಕರಿಗೆ ಪುಷ್ಪಹಾರ ತಾಂಬೂಲ ದಕ್ಷಿಣೆಗಳ ವಿನಿಯೋಗದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಅಷ್ಟುಹೊತ್ತಿಗೆ ಮಧ್ಯಾಹ್ನ ೩ ಗಂಟೆಯಾಗಿದ್ದಿತು. ಆ ದಿವಸ ಎಲ್ಲ ದೇವಾಲಯಗಳಲ್ಲೂ ದೇವತಾರ್ಚನೆಯೂ, ಎಲ್ಲಜಾತಿಯ ಬಡಜನರಿಗೆ ಮೃಷ್ಟಾನ್ನಭೋಜನವೂ ಭೂರಿದಕ್ಷಿಣೆಯೂ ಧಾರಾಳವಾಗಿ ನಡೆಯಿಸಲ್ಪಟ್ಟವು ಮತ್ತು ಎಲ್ಲ ಪಾಠಶಾಲೆಗಳ ಬಾಲಕ ಬಾಲಿಕೆಯರುಗಳಿಗೆ ಮಿಠಾಯಿಯು ಕೊಡಲ್ಪಟ್ಟಿತು. ಈ ನೂತನ ದಂಪತಿಗಳಿಗೆ ಸಕಲಸನ್ಮಂಗಳವಾಗಲೆಂದು ಹಾರೈಸುತ್ತೇವೆ.

ಬಜ್ಜೆಟ್ಟಿನಮೇಲೆ ಚರ್ಚೆ.

ಬೆಂಗಳೂರು ಮಿ|| ಅಬ್ಬಾಸ್‌ಖಾನ್‌ರವರು—ರೆವಿನ್ಯೂ, ಕ್ಸೈಸ್, ಫಾರೆಸ್ಟು ಇನ್ಕಂಟ್ಯಾಕ್ಸ್, ಡಿ. ಪಿ. ಡಬ್ಲ್ಯೂ ಮುತ್ತೆ ಕೆಲ ಇಲಾಖೆಗಳಲ್ಲಿ ವೆಚ್ಚವು ಹೆಚ್ಚಾಗಿ ಆಗುತ್ತಿರುವ ಚಾರದಲ್ಲಿ ಬಹಳವಾಗಿ ಪ್ರಸ್ತಾಪಿಸಿ, ಮದ್ರಾಸು ಬೊಂಬಾ ಯಿ ಆಧಿಪತ್ಯಗಳಲ್ಲಿಯ ಇದೇ ಶಾಖೆಗಳ ಆಯವ್ಯಯಕ್ಕೆ ಹೋಲಿಸಿದುದಾದರೆ ಇಲ್ಲಿಯ ಇಲಾಖೆಗಳಲ್ಲಿ ಆದಾಯಕ್ಕಿಂತಲೂ ವೆಚ್ಚವು ಹೆಚ್ಚಾಗಿರುತ್ತದೆಂಬುದು ವ್ಯಕ್ತವಾಗುತ್ತದೆ. ಕ್ರೆಟರಿಯೆಟ್ಟಿನ ವೆಚ್ಚವು ವರ್ಷಂಪ್ರತಿ ಹೆಚ್ಚುತಲೇ ಇದೆ. ಇನ್ಕಂಟ್ಯಾಕ್ಸ್ ಇಲಾಖೆಯಲ್ಲಿ 450 ರೂ. ಸಂಬಳದ ಒಬ್ಬ ಅಧಿಕಾರಿಯು ಈಗ 800 ರೂ. ಸಂಬಳ ತೆಗೆದುಕೊಳ್ಳುತ್ತಿದಾ . ಈರೀತಿಯಾಗಿ ಪ್ರತಿಯೊಂದು ಇಲಾಖೆಯಲ್ಲೂ ಹೆಚ್ಚು ವೆಚ್ಚವಾಗುತ್ತಿರುವುದರಿಂದ ವೆಚ್ಚವನ್ನು ತಗ್ಗಿಸಿ ಅದರಿಂದುಳಿಯುವ ಹಣವನ್ನು ಗ್ರಾಮಾಂತರವಾಸಿಗಳ ವೈದ್ಯಸಹಾಯಕ್ಕಾಗಿಯೂ ಗ್ರಾಮಾಭಿವೃದ್ಧಿಗಾಗಿಯೂ ಕುಡಿಯುವ ನೀರ ನ್ನೊದಗಿಸುವುದಕ್ಕಾಗಿಯೂ ಉಪಯೋಗಿಸಬೇಕು. ಬೆಂಗಳೂರು ಪಟ್ಟಣದಲ್ಲಿ ಕುಡಿಯುವ ನೀರು ಸರಿಯಾಗಿ ಒದಗಿಸಲ್ಪಡದಿರುವಪ್ರಯುಕ್ತ, ಜನರಿಗುಂಟಾಗಿರುವ ತೊಂದರೆಯನ್ನು ಹೇಳತೀರದುದಾಗಿದೆ.

ಶ್ರೀರಂಗಪಟ್ಟಣದ ಮ|| ಬಿ. ನರಸಿಂಗರಾಯರು—ಓಟುಗಳು ತೆಗೆಯಲ್ಪಡಬೇಕಾಗಿರುವ ವಿಷಯಗಳನ್ನು ಈ ವರ್ಷ ಟುಗಳು ತೆಗೆಯಲ್ಪಡಬೇಕಾದುದಿಲ್ಲವಾದ ಭಾಗಕ್ಕೆ ಸೇರಿಸಲ್ಪಟ್ಟಿರುವುದರ ಕಾರಣವು ತಿಳಿಯಲಿಲ್ಲ. ಅಧಿಕಾರಿಗಳು ಸಂಬಳವನ್ನು ಕ್ರಮವಾಗಿ ತೆಗೆದುಕೊಳ್ಳುತ್ತಿರುವಾಗ್ಗೆ ಡ್ಯೂಟಿ ಅಲೋಯನ್ಸ್ ಅಂದರೆ ಭತ್ಯವನ್ನು ಹೊಂದಬೇಕಾದುದರ ಕಾರಣವು ತಿಳಿಯಲಿಲ್ಲ. ಪ್ರಯಾಣದ ವೆಚ್ಚವಿನಹ ಮತ್ತಾವ ಭತ್ಯವು, ಯಾವರೂಪದಿಂದಲೂ ಕೊಡಲ್ಪಡತಕ್ಕದ್ದಲ್ಲವು. ವ್ಯವಸಾಯ ಇಲಾಖೆಯ ವೆಚ್ಚವು ಪ್ರತಿವರ್ಷದಲ್ಲೂ ಹೆಚ್ಚುತಿಯಾದರೂ ರೈತನಿಗಾಗಲಿ ಸಂಸ್ಥಾನದ ಬೆಳೆಯಭಿವೃದ್ಧಿಗಾಗಲಿ ಏನೊಂದು ಪ್ರಯೋಜನವಾಗುತ್ತಿಲ್ಲವು. ಆರೋಗ್ಯಕಾರಕ್ಕಾಗಿ ವೆಚ್ಚವಾಗುವ ಹಣವು ಬಹಳವಾಗಿರುವುದರಿಂದ ಗಗಳು ಕ್ಷೀಣಿಸುತ್ತಿದೆಯಾದುದರಿಂದ ಗ್ರಾಮಾಭಿವೃದ್ಧಿಗಾಗಿ ಹೆಚ್ಚು ಹಣವು ವೆಚ್ಚಮಾಡಬೇಕು.

ತರೀಕೆರೆಯ ಮಿ|| ರಸುಲ್‌ಖಾನ್‌ರವರು—ಸೆಕ್ರೆಟರಿಯಟ್ಟಿನ ಫೈನಾನ್ಸ್ ಇಲಾಖೆಯಲ್ಲೂ ಕೆಲಸಗಾರರ ಸಂಖ್ಯೆಯು ಹೆಚ್ಚಿರುವುದರಿಂದ ಅವರನ್ನು ತಗ್ಗಿಸಬೇಕು. ತರೀಕೆರೆಯಲ್ಲಿ ಒಂದು ಹೆರಿಗೆಯಾಸ್ಪತ್ರೆಯನ್ನಿಡಿಸಿಕೊಡುವುದಾಗಿ 3 ವರ್ಷಗಳಿಂದೆ ವಾಗ್ದಾನವಾಗಿದ್ದಾಗ್ಯೂ ಆ ಬಗೆಗೆ ಈ ಬಜ್ಜೆಟ್ಟಿನಲ್ಲೂ ಅದಕ್ಕಾಗಿ ಹಣವು ಗೊತ್ತುಮಾಡಲ್ಪಟ್ಟಿಲ್ಲವು. ರೈತರು ರೈಲ್ವೆಸ್ಸನ್ನು ಕೊಡುತ್ತಿರುವರಾದರೂ ತಮ್ಮ ನಾಟಾಗಳನ್ನು ರೀಕೆರೆ—ನರಸಿಂಹರಾಜಪುರ ಟ್ರಾಂಬಂಡಿಯಲ್ಲಿ ಸಾಗಿಸಲವಕಾಶವಿಲ್ಲವು. ಉತ್ತರಹಿಂದೂಸ್ಥಾನದಲ್ಲಿ ಯುನಾನಿ ವೈದ್ಯವಿದ್ಯೆಯನ್ನು ಸರ್ಕಾರದ ದ್ರವ್ಯಸಹಾಯದಿಂದ ಕಲಿತು ಬಂದಿರುವರಾದರೂ ಉದ್ಯೋಗವಿಲ್ಲದೆ ಕಾಲಹರಣಮಾಡುತ್ತಿರುವರಾದುದರಿಂದ ಕೆಲ ಯುನಾನಿ ಆಸ್ಪತ್ರೆಗಳನ್ನು ಸ್ಥಾಪಿಸಿ ಅವರ ಜೀವನಕ್ಕವಕಾಶವನ್ನು ಕಲ್ಪಿಸಿಕೊಡಬೇಕು.

ತಿಪಟೂರಿನ ಮ|| ಡಿ. ಎಸ್. ಮಲ್ಲಪ್ಪನವರು—ಸಂಸ್ಥಾನದಲ್ಲಿರುವ ಆಸ್ಪತ್ರೆಗಳಿಗೆ ಸಾಕಷ್ಟು ಔಷಧಗಳನ್ನೊದಗಿಸುವುದಕ್ಕಾಗಿ ಹೆಚ್ಚು ಹಣವನ್ನು ವೈದ್ಯಶಾಖೆಗೆ ಕೊಡಬೇಕಾಗಿದೆ. ವಿದ್ಯಾಭ್ಯಾಸದ ಮೆಮೊರಾಂಡಮ್ಮು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲ್ಪಟ್ಟಿಲ್ಲವು. ಗ್ರಾಮಾಂತರಗಳಲ್ಲಿ ಸಾಕಷ್ಟು ಬಾಲಪಾಠಶಾಲೆಗಳೇರ್ಪಡಿಸಲ್ಪಟ್ಟಿಲ್ಲ. ಅಲ್ಲದೆ ದ್ರವ್ಯಾಭಾವದಿಂದ 2000ಕ್ಕೆ ಮೇಲ್ಪಟ್ಟು ಪ್ರಾಥಮಿಕ ಪಾಠಶಾಲೆಗಳು ಮುಚ್ಚಲ್ಪಟ್ಟಿವೆ. ಸ್ಥಳೀಯ ಸರ್ಕಾರಕ್ಕೆ ಕೊಡಲ್ಪಡುವ ಗ್ರಾಂಟು ಬಹಳ ಕಡಿಮೆ ಮತ್ತು ಪಟ್ಟಣಗಳಾಭಿವೃದ್ಧಿಗಾಗಿ ಗೊತ್ತುಮಾಡಿರುವ 20000 ರೂ. ಗಳು ಸಾಲದು. ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಗೊತ್ತುಮಾಡಲ್ಪಟ್ಟಿರುವ ವಿದ್ಯಾರ್ಥಿವೇತನವು ಈಗ ಒಂದೇ ಒಂದು ವರ್ಷದವರೆಗೆ ಸಲ್ಲುತ್ತಿರುವುದ ರ ಯಾವ ತಾರತಮ್ಯವೂ ಇಲ್ಲದೆ ಸಮಸ್ತ ವರ್ಗಗಳ ವಿದ್ಯಾರ್ಥಿಗಳಿಗೂ ಸಲ್ಲುವಂತೆಯೇರ್ಪಾಟಾಗಬೇಕು.

ಬೆಂಗಳೂರು ಮ|| ಆರ್. ಗೋಪಾಲಸ್ವಾಮಿಅಯ್ಯರ್ರವರು—ಸಂಸ್ಥಾನದ ಎಲ್ಲ ಹೈಸ್ಕೂಲುಗಳಲ್ಲೂ ಹೊಲೆಯ ಮಾದಿಗವಿದ್ಯಾರ್ಥಿಗಳ ಸಂಖ್ಯೆಯು 200ಕ್ಕೆ ಮೇಲ್ಪಟ್ಟಿರುವುದರಿಂದ ಅವರುಗಳಿಗೆ ವೇತನವನ್ನು ಕೊಡುವುದಕ್ಕಾಗಿ ಹೆಚ್ಚು ಹಣವನ್ನೊದಗಿಸಿಕೊಡಬೇಕು. ಅಲ್ಲದೆ ಈ ಜಾತಿಗಳ ಬಾಲಿಕೆಯರುಪಯೋಗಕ್ಕಾಗಿ ಒಂದು ಅಶನವಸನಗೃಹವನ್ನು ಸ್ಥಾಪಿಸಿಕೊಡಬೇಕು. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿರುವ ಅಡುಗೆಮನೆಯು ತಿರುಚಿನಾಪಳ್ಳಿಯಲ್ಲಿರುವಂತೆ ಕಟ್ಟಲ್ಪಟ್ಟಲ್ಲಿ ಸೌದೆ ಖರ್ಚು ಬಹಳವಾಗಿ ಕಡಿಮೆಯಾಗುವುದು. ಜೈಲುಗಳಲ್ಲಿ ತಯಾರಿಸಲ್ಪಟ್ಟ ಸಾಮಾನುಗಳನ್ನು ಜನರು ಬಹಳವಾಗಿ ಅಪೇಕ್ಷಿಸುತ್ತಾರಾದುದರಿಂದ ಮಾರ್ಕಟ್ಟುಗಳಲ್ಲಿ ವಿಕ್ರಯಿಸುವಂತೆಯೇರ್ಪಾಟಾಗಬೇಕು. ಬೆಂಗಳೂರು ಕಾರಾಗೃಹದಲ್ಲಿ ಅಪ್ರಾಪ್ತವಯಸ್ಸಿನ ಬಂದಿಗಳ ವಾಸಕ್ಕೆ ಬೇರೊಂದು ವಾರ್ಡು ಕಟ್ಟಿಸಲ್ಪಡಬೇಕಾಗಿದೆ. ಹುಚ್ಚರ ಆಸ್ಪತ್ರೆಯ ಕಾರ್ಯಕ್ರಮವು ಅತೃಪ್ತಿಕರವಾಗಿರುತ್ತದೆ. ಪಂಚಮರ ವಿದ್ಯಾಭಿವೃದ್ಧಿಗಾಗಿ ಒಂದು ಕಮಿಟಿಯು ಅಗತ್ಯವಾಗಿ ಏರ್ಪಡಿಸಲ್ಪಡಬೇಕಾಗಿದೆ.

ಮಂಡ್ಯ ತಾ|| ಮದ್ದೂರಿನ ಮ|| ಎಂ. ಸಿ. ಮಲ್ಲಯ್ಯನವರು—ಈಗ ಸಂಸ್ಥಾನದಲ್ಲೆಲ್ಲಾ ನಿರುಪಯೋಗವಾಗಿರುವ 14,300 ಕೆರೆಗಳಲ್ಲಿ 702 ಕೆರೆಗಳು ಮಾತ್ರ ಕಳೆದ 10 ವರ್ಷಗಳಕಾಲದಲ್ಲಿ ಜೀರ್ಣೋದ್ಧಾರಮಾಡಲ್ಪಟ್ಟಿವೆ. ಗ್ರಾಮವಾಸಿಗಳು ತಮ್ಮ ವಿನಿಯೋಗಕ್ಕೂ ತಮ್ಮ ದನಕರುಗಳ ಹಾಗೂ ಭೂಮಿಗಳುಪಯೋಗಕ್ಕೂ ಕೆರೆಯ ನೀರನ್ನೇ ಆಶ್ರಯಿಸಿಕೊಂಡಿರುವರಾಗುದರಿಂದ, ಸರ್ಕಾರದವರು ಆದಷ್ಟುಜಾಗ್ರತೆಯಲ್ಲಿ ಅನುಕೂಲವಾದಷ್ಟು ಕೆರೆಗಳನ್ನು ರಿಪೇರಿಮಾಡಿಸಿ ಉಪಯೋಗಕ್ಕೆ ತರುವುದು ಅತ್ಯವಶ್ಯವಾಗಿದೆ. ವ್ಯವಸಾಯ, ವೈದ್ಯ ಮತ್ತು ಆರೋಗ್ಯಶಾಖೆಗಳಿಂದ ಜನರಿಗೆ ಹೆಚ್ಚು ಪ್ರಯೋಜನವಾಗುವಂತೆ ಮಾಡಲು ಸರ್ಕಾರಿಯ ಗ್ರಾಂಟನ್ನು ಹೆಚ್ಚಿಸಿಕೊಡಬೇಕು. ಇವೆಲ್ಲಕ್ಕಿಂತಲೂ ಗ್ರಾಮವಾಸಿಗಳು ವಿದ್ಯೆಯಿಲ್ಲದೆ ಮೂಢರಾಗಿರುವುದರಿಂದ ಪ್ರಾಥಮಿಕ ವಿದ್ಯಾಭ್ಯಾಸವು ಬಹಳವಾಗಿ ಅಭಿವೃದ್ಧಿಗೊಳಿಸಲ್ಪಡತಕ್ಕದು ಅತ್ಯಾವಶ್ಯಕವು. ಗ್ರಾಮಸ್ಥರು ತಕ್ಕ ಮಟ್ಟಿಗಾದರೂ ವಿದ್ಯಾವಂತರಾದ ವಿನಾ ಯಾವ ವಿಧದಲ್ಲೂ ಗ್ರಾಮಾಭಿವೃದ್ಧಿಮಾಡಲು ಶಕ್ಯವಿಲ್ಲವು. ಅದುಕಾರಣ ಸಾಧಾರಣಜನರ ವಿದ್ಯಾಭ್ಯಾಸವಾಗಿ ಸರ್ಕಾರದವರು ಸಾನುಭೂತಿಪೂರ್ವಕವಾಗಿ ಮೊದಲು ಗಮನಕೊಡತಕ್ಕುದಾಗಿದೆ.

ಮದ್ಗಿರಿಯ ಮ|| ಶ್ಯಾಮಶಾಸ್ತ್ರಿಗಳು—ಮದ್ಗಿರಿಯಲ್ಲಿ ಒಂದು ಹೈಸ್ಕೂಲು ಸ್ಥಾಪನೆಯು ಅತ್ಯವಶ್ಯವಾಗಿರುವುದರಿಂದ ಅಲ್ಲಿಯ ಪ್ರಮುಖಜನರ ಸಭೆಯೊಂದು ಈಚೆಗೆ ನಡೆಸಲ್ಪಟ್ಟು 20,000 ರೂ. ಚಂದಾ ಹಣ ವಾಗ್ದಾನಮಾಡಲ್ಪಟ್ಟು ಈ ತಾಲ್ಲೂಕಿನಲ್ಲಿ ಒಂದು ಹೈಸ್ಕೂಲನ್ನು ಸ್ಥಾಪಿಸಿಕೊಡಬೇಕಾಗಿ ಸರ್ಕಾರಕ್ಕೆ ವಿಜ್ಞಾಪಿಸಿಕೊಳ್ಳಲ್ಪಟ್ಟಿದ್ದಿತು. ಅದುಕಾರಣ ದಯಾಳು ಸರ್ಕಾರದವರು ನಮ್ಮ ತಾಲ್ಲೂಕಿನ ಪ್ರಜೆಗಳ ಪ್ರಾರ್ಥನೆಯಂತೆ ಹೈಸ್ಕೂಲನ್ನು ಸ್ಥಾಪಿಸಿಕೊಡಬೇಕು. ತುಮಕೂರು ಡಿಸ್ಟ್ರಿಕ್ಟಿನಲ್ಲಿ ಜುಡಿಷಿಯಲ್ ಮತ್ತು ಎಕ್ಸಿಕ್ಯುಟಿವ್ ಉದ್ಯೋಗಗಳನ್ನು ಬೇರ್ಪಡಿಸಿಕೊಡಬೇಕು. (ಈ ವಿಚಾರವು ಸರ್ಕಾರದವರಿಂದ ಅನುಕೂಲವಾಗಿ ಪರ್ಯಾಲೋಚಿಸಲ್ಪಡುವುದೆಂದು ದಿವಾನರಪ್ಪಣೆಕೊಡಿಸಿದರು).

ಸಿದ್ಧಘಟ್ಟದ ಮ|| ಹಂಪಯ್ಯನವರು—ಆಸ್ಪತ್ರೆಗಳುಪಯೋಗಕ್ಕೆ ಅವಶ್ಯಗಳಾದ ಔಷಧಗಳೂ, ಶಸ್ತ್ರಚಿಕಿತ್ಸೆಯ ಸಾಮಗ್ರಿಗಳೂ ಸಾಕಷ್ಟು ಕೊಡಲ್ಪಡುತ್ತಿಲ್ಲವಾದುದರಿಂದ ಅವುಗಳನ್ನು ಸಾಕಷ್ಟು ಕೊಡಿಸಿಕೊಡಬೇಕು. ಸಂಸ್ಥಾನದಲ್ಲಿ ರೇಷ್ಮೆವ್ಯವಸಾಯಾಭಿವೃದ್ಧಿಗೊಳಿಸುವುದಕ್ಕಾಗಿ ರೈತರಿಗೂ ರೇಷ್ಮೆದಾರ ತೆಗೆಯುವವರಿಗೂ ಅವರ ಆಸ್ತಿಯ ಹೊಣೆಯಮೇಲೆ ಹಣವನ್ನು ಅಡ್ವಾನ್ಸಾಗಿ ಕೊಡಿಸಬೇಕು.

ಬೆಂಗಳೂರಿನ ಮ|| ನೀಲ್ಗಿರಿ ಸಂಜೀವಯ್ಯನವರು—ಮೈಸೂರು ಸಂಸ್ಥಾನದಲ್ಲಿ ಕುರುಬರ ಪ್ರಜಾಸಂಖ್ಯೆಯು ಪ್ರಾಯಶಃ 4 ಲಕ್ಷವಿರುವುದರಿಂದ ಅವರ ವಿದ್ಯಾರ್ಥಿಗಳಿಗೆ ಜನಸಂಖ್ಯಾನುಗುಣವಾಗಿ ಸ್ಕಾಲರ್ಷಿಪ್ಪು ದೊರೆಯುತ್ತಿಲ್ಲವಾದಪ್ರಯುಕ್ತ, ಈ ಜನವರ್ಗದ ವಿದ್ಯಾರ್ಥಿಗಳನ್ನು ಬೇರ್ಪಡಿಸಿ ಅವರಿಗೆ ವೇತನಗಳು ಸರಿಯಾಗಿ ದೊರೆಯುವಂತೆ ಮಾಡಿಸಬೇಕು. ಕುರುಬರು ತಮ್ಮ ಕುಲಕಸಬಾದ ಮತ್ತು ಮುಖ್ಯವಾದ ಕಂಬಳಿಯ ನೇಗೆಯನ್ನು ಪ್ರೋತ್ಸಾಹವೂ ಸಾಹಯವೂ ಇಲ್ಲದಿರುವುದರಿಂದ ಬಿಟ್ಟುಬಿಡುತ್ತಿರುವ ಪ್ರಯುಕ್ತ ಸರ್ಕಾರದವರು ಅವರಿಗೆ ಪ್ರೋತ್ಸಾಹವನ್ನು ಕೊಟ್ಟು ಕಂಬಳಿಯ ಕೈಗಾರಿಕೆಯು ಅಭಿವೃದ್ಧಿಯಾಗುವಂತೆ ಮಾಡುವುದು ಬಹಳ ಅವಶ್ಯಕವು.

ಕಡಬದ ಮ|| ಹುಚ್ಚೀರೇಗೌಡರು ಮತ್ತು ಮ|| ಸೂರ್ಯನಾರಾಯಣರಾಯರು—ಪಟೇಲ ಶಾನುಭೋಗರುಗಳಿಗೆ ಈಗ ಸಲ್ಲುತ್ತಿರುವ ಮೊಬಲಗು ಅವರು ಮಾಡುತ್ತಿರುವ ಮೆಹನತ್ತಿಗೆ ಬಹಳ ಕಡಿಮೆಯಾಗಿರುವುದರಿಂದ ಈ ಕಾಲಕ್ಕೆ ತಕ್ಕಂತೆ ಹೆಚ್ಚಿಸಿಕೊಡಬೇಕು.

ಸಕಲೇಶಪುರದ ಮ|| ಮಳಲಿ ವೆಂಕಟರಾಮಯ್ಯನವರು—ಸಕಲೇಶಪುರದಲ್ಲಿ ಒಂದು ಹೆರಿಗೆಯಾಸ್ಪತ್ರೆಯನ್ನಿಡಲು ತಕ್ಕ ಕಟ್ಟಡವು ಸಿದ್ಧವಾಗಿರುವುದರಿಂದ ಜಾಗ್ರತೆಯಲ್ಲಿ ಆಸ್ಪತ್ರೆ ಇಡುವಂತೆ ಅಪ್ಪಣೆಯಾಗಬೇಕು.

ಸ್ವದೇಶದ ವೃತ್ತಾಂತಗಳು

ಕಳೆದ ತಾ|| 16ರಲ್ಲಿ ದಿವಾನರು ಪ್ರಜಾಪ್ರತಿನಿಧಿಗಳನ್ನೂ ಅಧಿಕಾರಿಗಳನ್ನೂ ತಮ್ಮ ಬಿಡಾರವಾದ ಲೇಕ್‌ವ್ಯೂಬಂಗಲೆಗೆ ಬರಮಾಡಿಕೊಂಡು ಅಲ್ಪಾಹಾರದಿಂದಲೂ ವಾದ್ಯವಿಶೇಷದಿಂದಲೂ ಸತ್ಕರಿಸಿದರು.

ಪ್ರಜಾಪ್ರತಿನಿಧಿಸಭೆಯಿಂದ ನ್ಯಾಯವಿಧಾಯಕ ಸಭೆಗೆ 8 ಜನ ಮೆಂಬರುಗಳನ್ನು ಆರಿಸಿದ ಕಾಲದಲ್ಲಿ ಅನ್ಯಾಯಾಕ್ರಮಗಳು ಜರುಗಿದುವಾದುದರಿಂದ ಆ ಚುನಾವಣೆಯನ್ನು ರದ್ದುಪಡಿಸಬೇಕೆಂದು ಮೈಸೂರು ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ ಮ|| ಕರ್ಣಿಕ ಕೃಷ್ಣಮೂರ್ತಿರಾಯರು ಹೂಡಿದ್ದ ವಿವಾದದಲ್ಲಿ ಕಕ್ಷಿಪ್ರತಿಕಕ್ಷಿಗಳ ಕಡೆಯ ಸಾಕ್ಷಿಗಳ ವಿಚಾರಣೆಯೂ ವಕೀಲರುಗಳ ಆರ್ಗ್ಯುಮೆಂಟೂ ನಡೆದು ಕಳೆದ ತಾ|| 20 ರಲ್ಲಿ ತಳ್ಳುಪಡಿಮಾಡಲ್ಪಟ್ಟಿತು ಮತ್ತು ಪ್ರತಿವಾದಿಗಳ ಪರ ಲಾಯರ ಖರ್ಚಿಗಾಗಿ 25 ರೂ. ಗಳನ್ನು ಅರ್ಜಿದಾರರು ಕೊಡಬೇಕೆಂದು ಅಪ್ಪಣೆ ಮಾಡಲ್ಪಟ್ಟಿರುವುದು. ಪರೋಕ್ಷ ಪಾಗಸತನೆಯ ಫಲವಿದಲ್ಲವೆ?

ರಾಜಧಾನಿಯ ಆಯುರ್ವೇದಕಾಲೇಜಿನ ಹೆಡ್ಮಾಸ್ತರಾದ ಡಾಕ್ಟರ್ ಕೆ. ಕೃಷ್ಣಯ್ಯಂಗಾರ್ಯರು ಕಳೆದ ೨ ತಿಂಗಳಿಂದಲೂ ಅಸ್ವಸ್ಥರಾಗಿದ್ದು ಈಗ ಬಹುಮಟ್ಟಿಗೆ ಗುಣವನ್ನು ಹೊಂದಿರುವರೆಂದೂ ಇನ್ನು ಕೆಲದಿನಗಳಲ್ಲಿ ತಮ್ಮ ಉದ್ಯೋಗದ ಮೇಲೆ ಬರುವರೆಂದೂ ಕೇಳಿ ಬಹಳವಾಗಿ ಸಂತೋಷಿಸುತ್ತೇವೆ. ಇವರು ರೋಗಿಗಳಲ್ಲಿ ಬಡವರು ಬಲ್ಲಿದರು ಎಂಬ ತಾರತಮ್ಯವಿಡದೆ ಎಲ್ಲರನ್ನೂ ಬಹಳ ಶ್ರದ್ಧೆಯಿಂದಲೂ ಅಭಿಮಾನದಿಂದಲೂ ಕಂಡು ಉಪಚರಿಸುತ್ತಿರುವುದರಿಂದ ವಿಶೇಷಜನಾನುರಾಗಕ್ಕೆ ಪಾತ್ರರಾಗಿರುವ ಪ್ರಯುಕ್ತ ಇವರನ್ನು ಕಂಡು ಕೇಳಿದವರೆಲ್ಲರೂ ಇವರ ರೋಗನಿವಾರಣೆಯ ಸುದ್ದಿಯನ್ನು ಕೇಳಿ ಬಹಳವಾಗಿ ಆನಂದಿಸುವುದರಲ್ಲಿ ಸಂದೇಹವಿಲ್ಲವು.

ಮಳವಳ್ಳಿಯ ಮ್ಯುನಿಸಿಪಲ್ ಕೌನ್ಸಿಲರೂ, ಡಿಸ್ಟ್ರಿಕ್ಟ್ ಬೋರ್ಡು ಮತ್ತು ಪ್ರಜಾಪ್ರತಿನಿಧಿಸಭಾ ಮೆಂಬರೂ ಆದ ಮ|| ಚಿಕ್ಕಣ್ಣನವರು ತಮ್ಮ ಮಗಳ ವಿವಾಹಮಹೋತ್ಸವವನ್ನು ಕಳೆದ ತಾ|| 29 ರಲ್ಲಿ ಬಹಳ ವಿಜೃಂಭಣೆಯಿಂದಲೂ ವಿತರಣೆಯಿಂದಲೂ ಜರುಗಿಸಿದರೆಂದೂ, ಅಮಲ್ದಾರರು ಮೊದಲಾಗಿ ಅಧಿಕಾರಿಗಳೂ, ಕೊಳ್ಳೇಗಾಲದ ತಾಲ್ಲೂಕು ಬೋರ್ಡು ಪ್ರೆಸಿಡೆಂಟರಾದ ಮ|| ಜೆ. ಪಿ. ಮಲ್ಲಪ್ಪನವರು ಮೊದಲಾಗಿ ಸ್ಥಳ ಪರಸ್ಥಳಗಳ ದೊಡ್ಡಮನುಷ್ಯರುಗಳೂ ಬಂಧುಬಳಗದವರೂ ಆಹ್ವಾನಿಸಲ್ಪಟ್ಟಿದ್ದು ಅಲ್ಪಾಹಾರದಿಂದಲೂ ಮ|| ಜೆ. ಪಿ. ಮಲ್ಲಪ್ಪನವರ ಪುತ್ರ ನಟರಾಜ (ಬಾಲಕ)ನ ಸಂಗೀತಶ್ರವಣದಿಂದಲೂ ವೇಶ್ಯೆಯರ ನರ್ತನದಿಂದಲೂ ಸತ್ಕರಿಸಲ್ಪಟ್ಟರೆಂದೂ ಉತ್ಸವಭಾಗಿಗಳೊಬ್ಬರು ತಿಳಿಸುತ್ತಾರೆ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ದಿವಸ ಅಂದರೆ ತಾ|| 13ರ ಸಾಯಂಕಾಲ ಮಳೆಯು ವಿಶೇಷವಾಗಿ ಬಂದು ಜನರ ಉತ್ಸಾಹಭಂಗಮಾಡಿದುದರಿಂದೀಚೆಗೆ ಆಗಾಗ್ಗೆ ತುಂತುರುಮಳೆಯು ಮಾತ್ರವಾಗುತ್ತಿದೆ. ಈಚೆಗಾದ ಮಳೆಯಿಂದ ರಾಜಧಾನಿಯಲ್ಲಿ ವಾಂತಿಭೇದಿರೋಗವು ಶಮನವಾಗಿದ್ದಿತೆಂದು ಭಾವಿಸಲ್ಪಟ್ಟಿದ್ದಿತು. ಆದರೆ ಹಳ್ಳದಕೇರಿಯಲ್ಲಿ ಹಾಲುಮಾರಿಕೊಂಡು ಜೀವಿಸುವ ಒಂದು ಒಕ್ಕಲಿಗರ ಕುಟುಂಬದಲ್ಲಿ ಈ ವಾಂತಿಭೇದಿರೋಗವು ಕಾಣಿಸಿಕೊಂಡು 13-14 ವರ್ಷವಯಸ್ಸಿನ ಒಬ್ಬ ಹುಡುಗನೂ ತಾ|| 17ರಲ್ಲೂ ತಾ|| 18 ರಲ್ಲಿ 3-4 ವರ್ಷದ ಒಂದು ಗಂಡುಮಗುವೂ ಸತ್ತುಹೋದರು. ಈ ವಿಷಯವನ್ನು ಹೆಲ್ತಾಫೀಸರು ತಿಳಿದಕೂಡಲೆ ಆ ಸ್ಥಳಕ್ಕೆ ಹೋಗಿ ಅದೇ ಮನೆಯಲ್ಲಿ ಇನ್ನೂ ಮೂವರು ರೋಗಗ್ರಸ್ತರಾಗಿರುವುದನ್ನು ನೋಡಿ ಅವರಲ್ಲೊಬ್ಬ ಹೆಂಗುಸನ್ನು ಕ್ಯಾಂಪು ಆಸ್ಪತ್ರೆಗೆ ಸಾಗಿಸಿ ಉಳಿದವರು ಹೋಗಲೊಪ್ಪಲಿಲ್ಲವಾಗಿ ಅವರಿಗೆ ಔಷಧವನ್ನು ತರಿಸಿಕೊಟ್ಟು ಅದನ್ನು ತೆಗೆದುಕೊಳ್ಳುವಂತೆ ಹೇಳಿ ಹೋದರು. ಅದೇ ಮಧ್ಯಾಹ್ನ ಕ್ಯಾಂಪಿಗೆ ಸಾಗಿಸಲ್ಪಟ್ಟಿದ್ದವಳು ಮೃತಳಾದಳು. ಮನೆಯಲ್ಲಿ ರೋಗಗ್ರಸ್ತರಾಗಿದ್ದ ಅತ್ತೆ ಮತ್ತು ಅಳಿಯ ಇವರಿಬ್ಬರಲ್ಲಿ ಅತ್ತೆಯು ತಾ|| 19ರ ರಾತ್ರಿ ಸತ್ತುಹೋದಳು. ಅಳಿಯನು ಇನ್ನೂ ನರಳುತ್ತಿರುವನು. ಈ ಮನೆಯಲ್ಲಿ ಒಟ್ಟು 4 ಮರಣಗಳಾದವು.

ಜಾಹೀರ ನೋಟೀಸು.

ಧಾರವಾಡ ಶ್ರೀ ಉಳವಿಬಸವೇಶ್ವರಛಾತ್ರಯ ಕಮಿಟಿ,
ಚೀರಮನ್ನರ ಕಡೆಯಿಂದ.

ಯಾವತ್ತೂ ಸದ್ಗೃಹಸ್ಥರಿಗೆ ವಿ. ವಿ.—

ಧಾರವಾಡ ಶ್ರೀ ಉಳವಿಬಸವೇಶ್ವರ ಛಾತ್ರ ನಡೆಸುವದನ್ನು ನಿಶ್ಚಯಿಸಿದ್ದು ಆ ಸಂಬಂಧ ಹಕ್ಕುಬಾಬು ವಗೈರೆಗಳ ಕಾಗದಪತ್ರಗಳಿದ್ದವರು ಮತ್ತು ತೀರಲ್ಲಿ ಯೋಗ್ಯಸ್ವಾಮಿಗಳನ್ನು ಕೂಡಿಸುವಬಗ್ಗೆ ಕಾಗದಪತ್ರಗಳ ದಾಖಲೆ ಇದ್ದವರು ಅವುಗಳನ್ನು ತಾ|| 5-7-1924ನೆ ಇಸವಿ ಒಳಗಾಗಿ ನನ್ನ ಕಡೆಗೆ ತಂದುತೋರಿಸಬೇಕು. ಅನಂತರ ಬಂದ ದಾಖಲೆಗಳನ್ನು ವಿಚಾರಮಾಡುವದರಲ್ಲಿ ಬರಲಾರದು.

ಶಿವಲಿಂಗಶಾಸ್ತ್ರಿ ಕನವಳ್ಳಿ
ಹಿರೇಮಠ ಸಂಪಾದಕ ಕರ್ನಾಟಕ ಟಾಯಿಮ್ಸು
ಚೀರಮನ್, ಧಾರವಾಡ.

ಪತ್ರವ್ಯವಹಾರ.

☞ ಪತ್ರವ್ಯವಹಾರದ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ತಿರಸ್ಕೃತಪತ್ರಗಳು.

(1) ದಾವಣಗೆರೆ ತಾ|| ಹೆಮ್ಮನಬೇತೂರು ಶಿರಸ್ತಹಳ್ಳಿ ಮ|| ಶಂಕರಪ್ಪನವರ ಮಗ ಸಿದ್ಧಬಸಪ್ಪನಿಗೆ ಹರಪನಹಳ್ಳಿ ತಾ|| ರಾಮಘಟ್ಟದ ಮ|| ಶಂಬಸಪ್ಪನವರ ಪುತ್ರಿ ಸೌ|| ಸಿದ್ಧಮ್ಮನನ್ನು ಕೊಟ್ಟು ನಡಿಸಿದ ಲಗ್ನದಲ್ಲಿ ಮ|| ಚಿಟ್ಟಿರು ಕಲವೀರಪ್ಪನವರ ಮೂಲಕ 1 ರೂ. (2) ಹರಪನಹಳ್ಳಿ ಬ್ರ|| ಶ್ರೀ|| ಹೋಳಿಬಸವಶಾಸ್ತ್ರಿಗಳಿಂದ ಅವರ ಕುಮಾರ ಮ|| ಷಡಕ್ಷರಪ್ಪ ಎಂ. ಎ., ಯವರ ಲಗ್ನದಲ್ಲಿ 2 ರೂ. (3) ಎಸ್. ಎಚ್. ಆರ್. ಎಸ್. ಸೊನ್ನ—ನಿಮ್ಮ ಲೇಖನ ಗ್ರಾಹಕರಿಗೆ ಪ್ರಯೋಜನಕರವಾಗಿರದೆ ಒಬ್ಬ ವ್ಯಕ್ತಿಯನ್ನು ನಿಂದಿಸತಕ್ಕದಾಗಿರುವುದರಿಂದ ತಿರಸ್ಕರಿಸಲ್ಪಟ್ಟಿದೆ.

ಸರ್ಕಾರಿ ಮಹಾಪಾಠಶಾಲೆಗಳಿಗೆ ವೀರಶೈವರ ಪ್ರವೇಶ.

(ಲೇಖಕ—ಆಸ್ಥಾನವಿದ್ವಾನ್ ಶ್ರೀ ಗುರುಶಾಂತಶಾಸ್ತ್ರಿ.)

ಬೆಂಗಳೂರು ಮೈಸೂರು ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ವೀರಶೈವ ವೈದಿಕ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕೊಡಬೇಕೆಂದು ಅನೇಕ ವರ್ಷಗಳಿಂದಲೂ ವೀರಶೈವ ಪ್ರಮುಖರು ಹೋರಾಡುತ್ತಿದ್ದಕ್ಕಾಗಿ [illegible] ಅಳುವ ಮಕ್ಕಳನ್ನು ಸಮಾಧಾನಪಡಿಸುವಂತೆ ಬೆಂಗಳೂರು ಪಾಠಶಾಲೆಯಲ್ಲಿ ಸಂಸ್ಕೃತ ಪ್ರೌಢವಿದ್ಯಾಭ್ಯಾಸಕ್ಕೆ ಮಾತ್ರ ಅವಕಾಶವೊದಗಿಸಲ್ಪಟ್ಟಿರುವುದು. ರಾಜಧಾನಿಯಲ್ಲಿರುವ ಮಹಾಪಾಠಶಾಲೆಯಲ್ಲಿ ಬಹುಕಾಲದಿಂದ ವೇದ ವೇದಾಂಗಶಾಸ್ತ್ರಾಭ್ಯಾಸವು ನಡೆಯುತ್ತಿರುವುದರಿಂದಲೂ, ಅದರಲ್ಲಿ ಯಾವುದೊಂದು ವ್ಯಕ್ತಿಗೆ [illegible] ರಾಜಧಾನಿಯ ಪಾಠಶಾಲೆಯು [illegible] ಮುಂದೆಯೂ ನಡೆಯಬೇಕೆಂದೂ, [illegible] ಜಯ ಪಾಠಶಾಲೆಯಲ್ಲಿ [illegible]

ತವಾದ ಸರ್ಕಾರದ ಅಪ್ಪಣೆಯನ್ನು ಪತ್ರಿಕಾಮುಖದಿಂದ ತಿಳಿದು ವೀರಶೈವ ಜನಾಂಗವೆಲ್ಲವೂ ಕಲುಷಿತಮನಸ್ಕುಳ್ಳದಾಗಿರುವುದು. ಅನಂತ ವರುಷಗಳಿಂದಲೂ ಚಕೋರವು ಚಂದ್ರನನ್ನೇ ನಿರೀಕ್ಷಿಸಿಕೊಂಡಿದ್ದಂತೆ ಕಾದಿದ್ದ ವೀರಶೈವ ಮಹಾಜನಗಳೆಲ್ಲರೂ ಈ ಹುಕುಮನ್ನು ನೋಡಿ ಹತಾಶೆಯುಳ್ಳವರಾದರು. ಇವರ ರೋದನವೆಲ್ಲವೂ ಅರಣ್ಯದಲ್ಲಿ ವ್ಯಾಪಿಸಿದ ಚಂದ್ರಿಕೆಯಂತೆ ನಿಷ್ಫಲವಾಯಿತು. ವೈದಿಕಬ್ರಾಹ್ಮಣರ ವಿನಹ ಇತರರಿಗೆ ರಾಜಧಾನಿಯ ಮಹಾಪಾಠಶಾಲೆಯಲ್ಲಿ ಅವಕಾಶವಿಲ್ಲವೆಂಬ ವಾತಿನ ಅರ್ಥವನ್ನು ವಿಚಾರಮಾಡಿದರೆ, ವೀರಶೈವ ಸಿದ್ಧಾಂತರಹಸ್ಯವನ್ನು ಎಷ್ಟರಮಟ್ಟಿಗೆ ಪರಿಶೀಲಿಸಿ ಈ ಅಭಿಪ್ರಾಯವನ್ನು ಪ್ರಕಟಪಡಿಸಿರುವರು ಎಂಬುದು ನೋಡುವವರಿಗೆ ಸ್ಪಷ್ಟವಾಗುವುದು. ಈ ವೀರಶೈವಮತಕ್ಕೂ ಇತರ ವೈದಿಕಮತಗಳಿಗೂ ಇರುವ ತರತಮಭಾವವನ್ನೇ ಆಲೋಚಿಸದೆ ಈ ದೇಶದಲ್ಲಿ ನೆಲೆಗೊಂಡಿರುವ ದ್ವೈತಾದ್ವೈತ, ವಿಶಿಷ್ಟಾದ್ವೈತ ಮತಾವಲಂಬಿಗಳಾದ ಕೆಲ ತ್ರಿಮತಬ್ರಾಹ್ಮಣರು ತಮ್ಮಲ್ಲಿ ಮಾತ್ರ ವೈದಿಕತ್ವಸ್ಥಿರೀಕರಣಾಪೇಕ್ಷೆಯಿಂದಲೂ, ಆತಿರಿಕ್ತರಲ್ಲಿ ಅವೈದಿಕತ್ವಸ್ಥಾಪನೇಚ್ಛೆಯಿಂದಲೂ ವೈಯ್ಯುಂಡಪಿಶಾಚಿಯಂತೆ ತಾವೇ ವೈದಿಕರೆಂತಲೂ, ಇತರರು ಅವೈದಿಕರೆಂತಲೂ, ವೇದಗಳೂ ಉಪನಿಷತ್ತುಗಳೂ ತ್ರಿಮತಬ್ರಾಹ್ಮಣರ ಮನೆಯ ಸ್ಥಿರಸೊತ್ತೆಂತಲೂ, ಮಿಕ್ಕಮತಕ್ಕೆ ಈ ಸ್ವತ್ತಿನಮೇಲೆ ಅಧಿಕಾರವಿಲ್ಲವೆಂತಲೂ ವಿಜೃಂಭಿಸುತ್ತಿರುವರು. ಭುಂಜಿಸುವುದಕ್ಕೆ ಮುಷ್ಟಿಪಿಷ್ಟವಿಲ್ಲದಿದ್ದರೂ ಅನ್ನದಾನಿ ಎಂದು ಹೇಳಿಸಿಕೊಳ್ಳುವವರಂತೆ ಬ್ರಾಹ್ಮಣ್ಯವನ್ನೇ ಕ್ರಯಕ್ಕೆ ತೆಗೆದುಕೊಂಡು ತಾದಾತ್ಮ್ಯವನ್ನು ಹೊಂದಿರುವರು.

ಈ ಬ್ರಾಹ್ಮಣರಿಗಾಧಾರವಾದ ದ್ವೈತಾದಿಮತಗಳು ಒಂದೊಂದು ಕಾಲದಲ್ಲಿ ಒಬ್ಬೊಬ್ಬ ಮಹನೀಯರಾದ ಆಚಾರ್ಯರಿಂದ ವ್ಯಾಸಕೃತ ಉತ್ತರಮೀಮಾಂಸೆಯಮೇಲೂ, ಈಶಾವಾಸ್ಯ-ಕೇನಾದಿ ದಶೋಪನಿಷತ್ತುಗಳ ಮೇಲೂ, ಭಗವದ್ಗೀತೆಯಮೇಲೂ ಅವರವರು ಸಾಧಿಸಿ ಹೊಂದಿದ ಬ್ರಹ್ಮಾನಂದ ವಿಷಯವಾಗಿ ಸೂತ್ರಭಾಷ್ಯವೂ, ಉಪನಿಷದ್ಭಾಷ್ಯವೂ, ಗೀತಾಭಾಷ್ಯವೂ ಬರೆಯಲ್ಪಟ್ಟು ಒಂದೊಂದು ಉಪಾಸನಾಮಾರ್ಗವಂ ಸ್ಥಿರಗೊಳಿಸಿ ವೈದಿಕತ್ವವನ್ನು ಸ್ಥಾಪಿಸಿದರು. ಇದರಂತೆ ಇನ್ನೂ ಅನೇಕ ಹತ್ತಾರು ಮತಗಳು ಆಯಾಯ ಆಚಾರ್ಯರಿಂದ ಆಯಾಯಕಾಲಗಳಲ್ಲಿ ಅನೇಕ ದೇಶಗಳಲ್ಲಿ ಸ್ಥಾಪಿಸಿ ಪ್ರಕಾಶಗೊಳಿಸಲ್ಪಟ್ಟವೆ. ಆ ವೈದಿಕಮತಗಳೊಳಗೆ ಎಷ್ಟೋ ಬಿಲವಾಗಿ ಹೋಗಿರುವುವು. ಈ ದ್ವೈತಾದ್ವೈತ, ವಿಶಿಷ್ಟಾದ್ವೈತಗಳೆಂಬ ಮೂರುಮತಗಳಿಗಿಂತಲೂ ಅತಿಪ್ರಾಚೀನವಾದ ಈ ವೀರಶೈವಮತವು ಶ್ರೀಜಗದ್ಗುರು ರೇಣುಕಾಚಾರ್ಯರಿಂದ ವೇದಾಗಮ ಪ್ರಮಾಣದ್ವಾರಾ ಪ್ರಸ್ಥಾನತ್ರಯ ಭಾಷ್ಯರಚನಾ ಪುರಸ್ಸರವಾಗಿ ಸ್ಥಾಪಿಸಲ್ಪಟ್ಟು ಅದ್ಯಾಪಿ ವೇದೋಕ್ತಧರ್ಮಗಳೊಂದೊಡಗೂಡಿ ಕರ್ಮಾನುಷ್ಠಾನಪರರಾದ, ಪರಮಪವಿತ್ರರಾದ ಈ ವೀರಶೈವ ಮತೀಯರನ್ನು ಸರ್ಕಾರದವರು ಹಿಂದುಗಳಲ್ಲದವರ ಜತೆಯಲ್ಲೂ ಬ್ರಾಹ್ಮಣರಿಗೆ ಅಧೀನವಾದ ಶಾಖೆಯವರೊಡನೆಯೂ ಸೇರಿಸಿ ಪ್ರತ್ಯೇಕವಾಗಿ ಹಿಂದುಮತಗಳಲ್ಲಿ ಒಂದಾದ ಈ ಮತವನ್ನು ತಲೆಗೆಲ್ಲಾ ಒಂದೇಶಾಸ್ತ್ರವೆಂಬ ಹಾಸ್ಯೋಕ್ತಿಯಂ ಅನುಕರಿಸಿರುವುದು ಈ ಜನಾಂಗಕ್ಕೆಲ್ಲಾ ಶೋಚನೀಯವಾದ ವಿಷಯವಾಗಿರುವುದು. ಒಂದುವೇಳೆ ಈ ವೀರಶೈವರು ಇತರ ಜಾತಿಯವರಂತೆ ಕೇವಲ ರೂಢವಾಗಿ ಬಂದಿರುವ ಬ್ರಾಹ್ಮಣ್ಯವೆಂಬ ಅಗ್ರಶಾಖೆಗೆ ಅಧೀನರಾಗಿದ್ದರೆ ಈ ನವನಾಗರಿಕತೆಯಂತೆ ಒಪ್ಪಿಕೊಳ್ಳದಿದ್ದರೂ ಪ್ರಾಚೀನಕಾಲದ ಪದ್ಧತಿಯಂತೆ ಒಪ್ಪಲೂಬಹುದು. ಹಾಗೆ ಗ್ರಂಥದಲ್ಲಿಯಾಗಲೀ ಅನುಭವದಲ್ಲಿಯಾಗಲೀ ವೀರಶೈವ ದ್ವೈತಪವಲಂಬಿಗಳಾದ ಅಧುನಿಕಬ್ರಾಹ್ಮಣರಿಗೂ ಆ ಮತಾಚಾರ್ಯರಿಗೂ ಶಿಷ್ಯಭಾವವನ್ನು ವಹಿಸಿಲ್ಲವು. ಆಮತವೃತ್ತಗಳಲ್ಲಿ ಸೇರಿದ ಶಾಖೆಗಳಲ್ಲಿ ಈ ಮತವು ಯಾವ ಶಾಖೆಗೂ ಸೇರುವುದಿಲ್ಲವು. ಲಿಂಗಾಂಗಿಯಾದವನಿಗೆ ಅಲಿಂಗಿಯಾದವನ ಸೇವೆಯು ಪ್ರತ್ಯವಾಯಜನಕವೂ ಆಗಿರುವುದು. ಈ ಮತವು ವೇದಮೂಲಕಗಳಾದ ದ್ವೈತಾದಿಮತಗಳಂತೆ ಸ್ವತಂತ್ರವಾದ ವೈದಿಕಮತವಾಗಿರುವುದು. ಆದುದರಿಂದಲೇ ವೀರಶೈವಮತದ ವರ್ಣಾಶ್ರಮಧರ್ಮಗಳಿಗೂ, ಮಿಕ್ಕವರ್ಣಾಶ್ರಮಧರ್ಮಗಳಿಗೂ ಅನೇಕ ಭಾಗಗಳಲ್ಲಿ ವ್ಯತ್ಯಾಸವಿರುವುದು.

ವೀರಶೈವಸಿದ್ಧಾಂತದಲ್ಲಿ "ವರ್ಣಾಶ್ರಮೋಚಿತ್ವಿಧಿಃ" ಎಂದು ಪ್ರತ್ಯೇಕವಾಗಿ ವಿಂಗಡಿಸಿರುವರು ಮತ್ತು "ಯಜ್ಞೋಪವೀತಂ ಪರಮಂ ಪವಿತ್ರಂ" "ಸರ್ವಾನನಶಿರೋಗ್ರೀವಃ ಸರ್ವಭೂತಗುಹಾಶಯಃ" "ಏತತ್ಸೋಮಸ್ಯ ಸೂರ್ಯಸ್ಯ ಸರ್ವಲಿಂಗಂಸ್ಥಾಪಯತಿ ಪಾಣಿಮಂತ್ರಂಪವಿತ್ರಂ" "ನಮೋಸ್ತು ಬ್ರಹ್ಮಣೇಧಾರಣಂಮೇಸ್ತು" ಮೊದಲಾದ ಅನಂತಶ್ರುತಿಗಳಿಗೂ ಶಿವಲಿಂಗಧಾರಣಪರವಾದ ಅರ್ಥವನ್ನು ರಚಿಸಿರುವುದಲ್ಲದೆ "ಅಷ್ಟಾವರಣಸಂಪನ್ನಃ ಪಂಚಾಚಾರಪರಾಯಣಃ ವೈದಿಕಂಕರ್ಮಕುರ್ವೀತ ಜ್ಞಾನೈಕಫಲಸಾಧನಂ ವಂಶಾವಳಿಪ್ರಯಾತಾನಾಂ ಲಿಂಗಧಾರಣಶಾಲಿನಾಂ" ಮೊದಲಾದ ಶಿವಾಗಮಪುರಾಣವಾಕ್ಯಗಳಿಂದಲೂ ವೀರಶೈವಮತಕ್ಕೆ ಪರಮ ವೈದಿಕತ್ವವು ಅನೇಕ ಉದ್ದಾಮಗ್ರಂಥಗಳಿಂದ ಸಾಧಿಸಲ್ಪಟ್ಟಿರುವುದು. ಮತ್ತು ಸ್ವಸಿದ್ಧಾಂತಗ್ರಂಥಗಳಲ್ಲಿ ಶಕ್ತಿವಿಶಿಷ್ಟಾದ್ವೈತವೆಂದು ಪೃಥಕ್ಕಾಗಿ ಸಂಕೇತವೂ ಮಾಡಲ್ಪಟ್ಟು ವ್ಯಾವರ್ತಕ ಧರ್ಮವೂ ತೋರಿಸಿರುವುದರಿಂದ ದ್ವೈತ, ಅದ್ವೈತ, ವಿಶಿಷ್ಟಾದ್ವೈತಮತಗಳಿಗಿಂತಲೂ ಈ ಮತವು, ಈ ಮತಾನುಗುಣವಾದ ಜ್ಞಾನಸಂಬಂಧವಾದ ಕ್ರಿಯಾಚರಣೆಯೂ, ಉಪಾಸನೆಯೂ, ಉಪಾಸನಾನಂತರ ಲಭಿಸುವ ಮೋಕ್ಷಾನಂದವೂ ಪ್ರತ್ಯೇಕವಾಗಿಯೇ ಇರುವುದು. ದ್ವೈತಾದಿಮತಪ್ರಭೇದಗಳೊಳಗೆ ಯಾವುದರಲ್ಲಿಯೂ ಸೇರುವುದಿಲ್ಲವು. ಈ ಮತೀಯರು ವೇದಾಗಮೋಕ್ತಗಳಾದ ಕರ್ಮಾನುಷ್ಠಾನಬಲದಿಂದಲೇ ದೇಹಾಂತರ್ವರ್ತಿಯಾದ, ಕಿಂಚಿಜ್ಞಭಾವವನ್ನು ಪಡೆದ, ಅಂಗಶಬ್ದವಾಚ್ಯರಾದ ಜೀವರು ಲಿಂಗಶಬ್ದವಾಚ್ಯನಾದ ಪರಮಾತ್ಮನ ಧ್ಯಾನಧಾರಣಸಮಾಧ್ಯಾದಿಗಳಿಂದ ವಿಮೋಚನೆಯನ್ನು ಹೊಂದಬೇಕಾದುದರಿಂದಲೂ, ಮತ್ತು ಈ ಮತಸಂಬಂಧವಾದ ನಿತ್ಯನೈಮಿತ್ತಿಕಾದಿ ಕರ್ಮಗಳೆಲ್ಲವೂ ವೇದೋಕ್ತಗಳಾಗಿಯೇ ಇರುವುದರಿಂದಲೂ ವೀರಶೈವರಿಗೆ ವೇದಾಧ್ಯಯನವು ತದಂಗಶಾಸ್ತ್ರಾಧ್ಯಯನವೂ ಜೀವಾತುಗಳಾಗಿರುವುವು. ಇತರ ಜನಾಂಗದ ಬ್ರಾಹ್ಮಣೇತರರಿಗೆ ಅಷ್ಟು ಅವಶ್ಯಕವಿಲ್ಲ. ಜೈನರಂತೂ ಈ ವೇದವೇದಾಂಗಗಳಿಗೆ ಅಷ್ಟು ಪ್ರಾಮುಖ್ಯತೆಯನ್ನು ಕೊಡುವುದೂ ಇಲ್ಲ. ಈ ವೇದೋಪನಿಷತ್ತುಗಳಿಗೆ ಪ್ರತಿಯಾಗಿ ಆತ್ಮೋದ್ಧಾರಕಗಳಾದ ಪವಿತ್ರ ಗ್ರಂಥಗಳು ಇದ್ದೇ ಇರುವುವು. ಈ ವೀರಶೈವಮತದ ಯಾವದ್ಗ್ರಂಥಗಳೂ ಯುಗಾದಿವೇದತ್ರಯಾಧಾರದಿಂದಲೇ ಹುಟ್ಟಿ, ಅದರಂಗಭಾಗಗಳೆಲ್ಲವೂ ತನ್ಮಯವೇ ಆಗಿರುವುವು. ವೀರಶೈವರಿಗೆ ತ್ರಿಕಾಲದಲ್ಲಿಯೂ ಪರಮಧ್ಯೇಯವಾದ "ಶಿವಪಂಚಾಕ್ಷರಿ" ಎಂಬ ಮಹಾಮಂತ್ರವಾದರೋ ವೇದಚತುಷ್ಟಯದಲ್ಲಿ ಪ್ರಧಾನವಾದ ಯಜುರ್ವೇದದ ಚತುರ್ಥಾಧ್ಯಾಯದಲ್ಲಿ, ಅಷ್ಟಮೋನುವಾಕಾಂತರ್ಗತವಾಗಿರುವುದು. ಈ ಮಂತ್ರಕ್ಕೆ ವಾಚ್ಯವೆನಿಸಿರುವ ಇವರ ಶಿವಲಿಂಗಾರ್ಚನಾವಸರವಂತೂ ಕೇವಲ ವೇದಮಂತ್ರಗಳಿಂದಲೇ ನಡೆಯಬೇಕಾಗಿರುವುದು. ಮತ್ತು ಈ ಮತೀಯರಿಗೆ ಆಗಾಗ್ಗೆ ನಡೆಯುವ ಶುಭಶೋಭನಹವ್ಯಕವ್ಯಗಳ ನಿರ್ವಾಹಕ್ಕಾಗಿ ಪ್ರತಿಯೊಂದು ಗ್ರಾಮಗಳಲ್ಲಿ ಮಠಾಧಿಕಾರಿಗಳು ಪ್ರಾಚೀನಕಾಲದಿಂದಲೂ ಏರ್ಪಟ್ಟಿದ್ದಾರೆ. ಇವರಿಗೆಲ್ಲಾ ಆಯಾ ಕಾಲಗಳಲ್ಲಿ ಸಂಭವಿಸುವ ವೈದಿಕ ಕಾರ್ಯಗಳಿಗೆ ವೇದಾಧ್ಯಯನ ತದನುಷ್ಠಾನಗಳು ಇದ್ದೇತೀರಬೇಕು. ಈ ಸೌಕರ್ಯಗಳಿಗಾಗಿಯೇ ಸಾರ್ವಜನಿಕವಾದ ದ್ರವ್ಯದಿಂದ ಪೋಷಿಸಲ್ಪಡುತ್ತಿರುವ ಮೇಲ್ಕಂಡ ಉಭಯಪಾಠಶಾಲೆಗಳಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಅವಕಾಶವಂ ಕಲ್ಪಿಸಿಕೊಡಬೇಕೆಂದು ಅನೇಕಧಾ ಅನೇಕಪ್ರಮಾಣ, ಅನುಭವಗಳೊಡನೆ ಸರ್ಕಾರಕ್ಕೆ ಪ್ರಾರ್ಥಿಸಿಕೊಂಡು, ಬೇಸಾಯಗಾರನು ಮೇಘೋದಯವನ್ನೇ ಬಯಸಿಕೊಂಡು ನಿರೀಕ್ಷಿಸುತ್ತಿರುವಂತೆ, ಸರ್ಕಾರಿಯ ಸುಮುಖವಾದ ಅಪ್ಪಣೆಯನ್ನೇ ನಿರೀಕ್ಷಿಸಿಕೊಂಡಿರುವಲ್ಲಿ ಜಂಝಾಮಾರುತವು ಮೇಘಮಂಡಲವನ್ನೇ ಚದುರಿಸಿಬಿಡುವಂತೆ ವಿಪರೀತವಾಗಿ ಬಂದಿರುವ, ಸರ್ಕಾರಿಯಪ್ಪಣೆಯನ್ನು ನೋಡಿ ಈ ಜನಾಂಗವೆಲ್ಲಾ ಭಗ್ನಮನೋರಥವುಳ್ಳದಾಗಿದೆ. ಕೇವಲ ಶುಷ್ಕವಾದ ಸಂಸ್ಕೃತವು, ಗಾಣಕ್ಕೆ ಕೊಟ್ಟ ಕಬ್ಬಿನಸಿಪ್ಪೆಯಂತೆ ನೀರಸವೇಸರಿ. ಹೀಗೆ ವಿಷಮವಾಗಿ ಸಂಸ್ಕೃತಾಭ್ಯಾಸ ವಿಷಯದಲ್ಲಿ ತೋರಿಸುವ, ದಯಾರಸವೆಲ್ಲವೂ ಸಹಜವಲ್ಲವು. ವೀರಶೈವರಿಗೆ ಸಂತೋಷಪ್ರದವೂ ಅಲ್ಲ. ಇಂತಹ ಸತ್ಪ್ರಮಾಣವಾದ ವೈದಿಕರೆಂದೆನಿಸಿರುವ ವೀರಶೈವರಲ್ಲಿಯೇ ಅನೇಕ ವಿಧವಾದ ಭಿನ್ನಾಭಿಪ್ರಾಯಗಳು ಸಿದ್ಧವಾಗುವಾಗ ಇತರ ಜನಾಂಗ ವಿಷಯದಲ್ಲಿ ವೇದವೇದಾಂಗಾಭ್ಯಾಸಕ್ಕೆ ಎಷ್ಟರಮಟ್ಟಿಗೆ ಅವಕಾಶವು ದೊರೆಯುವುದು ? ಬ್ರಾಹ್ಮಣರೆಂದು ಅಭಿಮಾನಿಸಿಕೊಳ್ಳುತ್ತಿರುವವರು ನ್ಯಾಯತಃ ವೈದಿಕ ವರ್ಗದಲ್ಲಿ ಸೇರಿದ ವೀರಶೈವರನ್ನೇ ಪ್ರತಿಕಕ್ಷಿಗನ್ನಾಗಿ ಭಾವಿಸಿಕೊಂಡು ಅಧಿಕಾರಿ, ಅನಧಿಕಾರಿಭೇದವಂ ಕಲ್ಪಿಸಿಹೋರಾಡುತ್ತಿರುವಲ್ಲಿ ನಿಖಿಲಭಾರತೀಯ ಮಾತೆಯಲ್ಲಿ ಜನಿಸಿದ, ಇತರ ಜನಾಂಗಗಳಲ್ಲಿ ಇವರ ಮೈತ್ರಿಯೂ, ಏಕತೆಯೂ, ಸೌಖ್ಯವೂ ಎಷ್ಟರಮಟ್ಟಿಗೆ ಸ್ಥಿರವಾದುವೆಂದು ತಿಳಿಯಬಹುದು ? ಶ್ರೀ ಶಂಕರಾಚಾರ್ಯರಿಂದ ಅಂಗೀಕೃತವಾದ ಷಣ್ಮತಗಳೊಳಗೊಂದಾದ ಶೈವದಲ್ಲಿ "(ಆಚಾರಭೇದಾತ್ಸಂತತ್ರ ಧ್ವಿತ್ವೇಧುನಾ, ಸಾಮಾನ್ಯಶೈವಂಪ್ರಥಮಂ, ಮಿಶ್ರಶೈವಂತತಃಪರಂ ಶುದ್ಧಶೈವಂತಥಾಜ್ಞೇಯಂ ವೀರಶೈವಂತತಃಪರಂ" ಎಂದು ಪಾರಮೇಶ್ವರಸುಪ್ರಭೇದಾಗಮಗಳಲ್ಲಿಯೂ ಹೇಳಿರುವಂತೆಯೇ ವೀರಶೈವವು ಒಂದು ಭಾಗವಾಗಿರುವುದು. "(ರುದ್ರೇಣಾತ್ತಮಶ್ನಂತಿರುದ್ರೇಣಪೀತಂ ಪಿಬಂತಿ ರುದ್ರೇಣಾಘ್ರಾತಂ ಜಿಘ್ರಂತಿ, ತಸ್ಮಾದ್ಬ್ರಾಹ್ಮಣಾಃ ಪ್ರಶಾಂತಮನಸೋವಿದ್ವಾಂಸೋನಿರ್ಮಾಲ್ಯಮೇವಭಕ್ಷಯಂತಿ" ಮೊದಲಾದ ಹಂಸೋಪನಿಷತ್ತು ಜಾಬಾಲೋಪನಿಷತ್ತುಗಳಿಂದಲೂ ಉತ್ತಮಾಂಗೇಗಳೇವಾಪಿ.. ಪ್ರಾಣಲಿಂಗಂಧರೇತ್ಸುಧೀಃ ಗತ್ಯಶಕ್ತಿಶ್ಚ ......ಲಿಂಗಂಸರ್ವತ್ರಧಾರಯೇತ್ | ಎಂಬ ಸ್ಕಾಂದೋಕ್ತಿಗಳಿಂದಲೂ "ಘ್ರಾತಮೇವಹಿಜಿಘ್ರಂತಿ ಪೀತಮೇವಪಿಬಂತಿಹಿ | ಎಂಬ ಆಗಮೋಕ್ತಿಗಳಿಂದಲೂ "ತ್ವಂ ದೇವೇಷುಬ್ರಾಹ್ಮಣೋಸ್ಯಹಂ ಮನುಷ್ಯೇಷು ಬ್ರಾಹ್ಮಣಃ | ಬ್ರಾಹ್ಮಣೋ ವೈಬ್ರಾಹ್ಮಣಮುಪಧಾವತಿ" ಮೊದಲಾದ ಸಾಮಶಾಖಾ ಯಜುಶ್ಶಾಖಾದಿ ಶ್ರುತಿಗಳಿಂದ ಶಿವಾರಾಧನೆಯಂ ಮಾಡುವ ಶೈವರೊಳಗೆ ಅತಿಶಯವಾದ ಪಾರಮ್ಯವನ್ನು ಪಡೆಯುವವರಾದುದರಿಂದ ಇವರಿಗೆ ವೀರಶೈವ ಎಂಬ ನಾಮವು ಬಂದಿರುವುದು. ಇಂತಹ ವೇದ, ಆಗಮ, ಇತಿಹಾಸ, ಪುರಾಣಗಳಲ್ಲಿ ಕೇಂದ್ರಸ್ಥಾನವಂ ಪಡೆದಿರುವ ಈ ವೀರಶೈವಮತಕ್ಕೆ ಅವೈದಿಕತ್ವಾರೋಪಣೆ ಮಾಡಿರುವುದನ್ನು ನೋಡಿ ವೀರಶೈವರು ಸಹಿಸುವರೆ? ಅವೈದಿಕರೆಂದರೆ ಪಾಷಂಡಿಗಳೆಂದರ್ಥವಾಗುವುದಿಲ್ಲವೇ? ಅಂತಹ ಪಾಷಂಡತ್ವವು "ಪತಿವ್ರತಾಸ್ವಭಾವೇನ ವಿಹಾಯಾನ ತು ದೈವತಂ" | ಎಂಬ ಸಿದ್ಧಾಂತೋಕ್ತಿಯನ್ನು ಮಾನಿಸುತ್ತಿರುವ ವೀರಶೈವರಲ್ಲಿ ಅನ್ವಯಿಸುವುದೋ? "ಪಾಷಂಡಾಸ್ಸರ್ವಲಿಂಗಿನಃ" ಎಂಬ ಅಮರಕಾರನ ಉಕ್ತಿಯಂತೆ ಇತರರಲ್ಲಿ ಅನ್ವಯಿಸುವುದೋ? ವಾಚಕರೇ ಊಹಿಸಬೇಕಾಗಿದೆ. ಮತ್ತು (ಶಾಸ್ತ್ರಯೋನಿತ್ವಾದಸ್ಯ ತಸ್ಯ ಶಾಸ್ತ್ರಯೋನಿತ್ವಮಿಷ್ಯತೆ | ಶಾಸ್ತ್ರಾಣಾಮಧ್ವಾಯೋನಿರಿತಿತತ್ವನಿದಾಂಸ್ಥಿತಿಃ | ಬ್ರಹ್ಮಣಶ್ಶಾಸ್ತ್ರಯೋನಿತ್ವಾತ್ ತತ್ರೋಪನಿಷದಾಂಗಣಃ | ವಿಷಯತ್ವೇನನಿರ್ಣೀತಃ ವಿಷಯೋಬ್ರಹ್ಮಧಾರಣಂ | ಏತೇಷಾಂಬ್ರಹ್ಮವಾಕ್ಯಾನಾಂ ಅನ್ವಯೋಬ್ರಹ್ಮಣಿಸ್ಮೃತಃ | ಸಮನ್ವಯಾತ್ತುಬ್ರಹ್ಮೈವ ಧಾರ್ಯಂಪೂಜ್ಯಂಮುಮುಕ್ಷುಭಿಃ | ವೈಷಮ್ಯದ್ಯೋತನಾರ್ಥಾಯ ಲಿಂಗಶಬ್ದೋಯಂಪ್ರಕಾಶಿತಃ | ಇತ್ಯಾದಿಯಾಗಿ ನೀಲಕಂಠ ಶಿವಾಚಾರ್ಯಕೃತ ಸೂತ್ರಭಾಷ್ಯದ ಕಾರಿಕಾರಚನಾವಸರದಲ್ಲಿ ಮೂರನೆಯ ಸೂತ್ರವೆನಿಸಿದ "ಶಾಸ್ತ್ರಯೋನಿತ್ವಾತ್" ಎಂಬ ಬ್ರಹ್ಮಸೂತ್ರಕ್ಕೆ ಕಾರಿಕಾಕಾರರು ಶಿವಲಿಂಗಧಾರಣಪರವಾಗಿ ಅರ್ಥವಂ ರಚಿಸಿರುವರು. ಇದೆಲ್ಲವೂ ವೀರಶೈವರಲ್ಲಿ ಪ್ರಕಾಶಮಾನಗಳಾಗಿದ್ದೂ ಇದೊಂದನ್ನೂ ಅವಲೋಕಿಸದೆ ಪ್ರಜಾವರ್ಗವನ್ನೆಲ್ಲಾ ಸಮವಾಗಿ ನೋಡುತ್ತಿರುವ ನಮ್ಮ ಮಹಾಸರ್ಕಾರವು ಹೀಗೆ ವೈಷಮ್ಯವಾಗಿ ತೀರ್ಪುಕೊಟ್ಟಿದ್ದು ಈ ಜನಾಂಗಕ್ಕೆಲ್ಲಾ ಅಸಮರ್ಪಕವಾಗಿರುವುದು. (ಸಶೇಷ)

ಬಾಳೇಹೊನ್ನೂರ ಶ್ರೀ ಜಗದ್ಗುರು ಪೀಠಾಧಿಕಾರವು.

(ಲೇಖಕ—ಚಂದ್ರಕಾಂತ, ಬಿ.ಎ., ಎಲ್.ಎಲ್.ಬಿ.)

ಪ್ರಕೃತದಲ್ಲಿ ಬಾಳೇಹೊನ್ನೂರ ಪೀಠವು ಬರಿದಾಗಿ 3 ವರ್ಷಗಳಾಗುತ್ತ ಬಂದರೂ ಆ ಪೀಠಕ್ಕೆ ಯೋಗ್ಯವಟುವಿನ ನಿಯೋಜನೆಯು ಇನ್ನೂ ಆಗದಿರುವದು ಆಶ್ಚರ್ಯದ ಮಾತಾಗಿದೆ. ಈ ಸಿಂಹಾಸನವು ಮಿಕ್ಕ ಸಿಂಹಾಸನಗಳಿಗಿಂತಲೂ ಹೆಚ್ಚು ಪ್ರಸಾರವಾದುದು. ಶಾಖಾಮಠಗಳು ಅಧಿಕವಾಗಿದ್ದು ಇಡೀ ಸಮಾಜಕ್ಕೇ ವಿಶೇಷವಾಗಿ ಸಂಬಂಧಪಟ್ಟದ್ದಾಗಿರುವದು. ಆದರೂ ಈ ಕಾರ್ಯವು ಇಷ್ಟು ವಿಲಂಬವಾಗಬೇಕಾದರೆ ಸಮಾಜದವರ ಉಪೇಕ್ಷೆಯಿಂದಲ್ಲ. ಯಾಕಂದರೆ —ಯಾರಬಾಯಿಯಲ್ಲಿ ನೋಡಿದರೂ ಕಳೆದ ಕೆಲವುದಿವಸಗಳಿಂದಲೂ ಈ ಪೀಠದ ವಿಷಯದ ಮಾತೇನಾತು. ಸಮಾಜದಲ್ಲಿಯ ಪ್ರಮುಖರು ಅಥವಾ ಸಮಾಜದಲ್ಲಿಯ ಮುಖ್ಯ ಪಕ್ಷದವರು ಇಲ್ಲವೇ ಸಿಂಹಾಸನದ ಅಭಿಮಾನಿಗಳು ಈ ಕಾರ್ಯವಿಚಾರದಲ್ಲಿ ಮೈಮರೆತು ಕೂತಿರುವರೆಂದು ಅನ್ನಬಾರದಾಗಿದೆ. ಯಾಕಂದರೆ— ಒಬ್ಬೊಬ್ಬರ ಉಗಿಬಂಡಿಯ ವೆಚ್ಚವೂ ಅಂಚೆಯವೆಚ್ಚವೂ ಅಳತೆಯಿಲ್ಲದಷ್ಟು ಆಗಿರುವದು, ಅಥವಾ ಸಮಾಜದ ಬಹುಜನರು ಈ ಪಟ್ಟಕ್ಕೆ ವಿರೋಧಿಸುವದರಿಂದ ವಿಲಂಬವಾಯಿತೆಂದೂ ಅನ್ನುವಂತಿಲ್ಲ. ಏಕಂದರೆ ಇಡೀ ಸಮಾಜವೇ ಬಾಳೇಹಳ್ಳೀ ಪೀಠಕ್ಕೆ ಅಧಿಕಾರಿಗಳು ಶೀಘ್ರ ಆಗತಕ್ಕದೆಂಬದಾಗಿ ಹಗಲಿರುಳು ಹಂಬಲಿಸುತ್ತಿರುವದು. ಹೀಗೆ ಸರ್ವರಲಕ್ಷ್ಯವೂ ಅತ್ತ ಪೂರೈಸಿದ್ದು ಎಷ್ಟೋಜನರ ವಿಶಿಷ್ಟಪ್ರಯತ್ನವು ಕಳೆದಷ್ಟೋ ತಿಂಗಳಿನಿಂದ ನಡೆದಿರುವದಾದರೂ ಇನ್ನೂ ಆ ಕಾರ್ಯವು ಆಗದೇ ಉಳಿದಿರುವದೆಂದಮೇಲೆ ಅದರಲ್ಲಿ ಏನಾದರೂ ವಿಶಿಷ್ಟಕಾರಣವಿರಬಹುದಲ್ಲವೇ ? ಇದರಲ್ಲನೇಕರು ತಲೆಚಿಟ್ಟೆನ್ನುವತನಕ ವರುಷಗಟ್ಟಲೆ ವಿಚಾರಮಾಡಿರುವರು. ಕೆಲವರು ಮೈಚಿವರೊಡೆಯುವತನಕ ಕಷ್ಟಪಟ್ಟಿರುವರು. ಆದರೂ ಈ ಕೆಲಸವು ಇನ್ನೂ "ಶ್ರೀ ಗಣೇಶಾಯನಮಃ" ದಲ್ಲಿಯೇ ಉಳಿಯಿತೆಂದಮೇಲೆ ಇವರೆಲ್ಲರುಗಳ ತನು, ಮನ, ಧನಪೂರ್ವಕ ಮಾಡಿದ ಪ್ರಯತ್ನದ ಫಲವೆತ್ತಹೋಯಿತು ? ಪೋಸ್ಟು, ರೇಲ್ವೇ, ಟೆಲಿಗ್ರಾಫ್ ಖಾತೆಯವರ ವರುಷದ ಆದಾಯೆಯಲ್ಲಿ ಉತ್ಪನ್ನವು ಮಾತ್ರ ಬೆಳೆಯಿತು ! ಅನ್ಯಸಮಾಜದವರಿಗೆ ವೀರಶೈವರೆಂಬುವರು ಪರಸ್ಪರ ಗುರುಗುಟ್ಟುವ ಪ್ರಾಣಿಗಳ ಪಂಗಡವೆಂಬುವದನ್ನು ಮಾತ್ರ ಮನಸ್ಸಿನಲ್ಲಿ ಬಿಂಬಿಸಿದೆವು. ಇದೇ ಫಲವೇಫಲವು!! ಇದರಿಂದ ಆಟನೋಟಕ್ಕಾಗಿ ಒಂದು ಉತ್ತ ಹಗ್ಗವನ್ನು ತಕ್ಕೊಂಡು ಒಂದು ತುದಿಗೆ ಕೆಲವುಜನರು ಮತ್ತೊಂದುತುದಿಗೆ ಕೆಲವುಜನರು ಹಿಡಿದು ಪರಸ್ಪರರು ವಿರುದ್ಧದಿಕ್ಕಿಗೆ ಜಗ್ಗಾಡುವ ಹುಡುಗರ ಆಟ (Tug of war)ದ ಪ್ರತ್ಯಕ್ಷ ಉದಾಹರಣೆಯು ಜಗತ್ತಿನಲ್ಲಿ ಸಿಗಬೇಕಾದರೆ ಅದು ಸದ್ಯದಲ್ಲಿ ಬಾಳೇಹೊನ್ನೂರ ಪೀಠಾಧಿಕಾರ ವಿಷಯದಲ್ಲಿ ನಡೆದಿರುವ ಉಭಯಪಕ್ಷದವರ ವಿಶಿಷ್ಟಪ್ರಯತ್ನವೇ ಎಂದು ನಿಸ್ಸಂದೇಹವಾಗಿ ಹೇಳಬೇಕಾಗಿದೆ. ಈ ಕಾರ್ಯಕ್ಕಭಿಮುಖರಾಗಿರುವವರಲ್ಲಿ ಎಂಥಹ ಬುದ್ಧಿಶಾಲಿಗಳು ! ಮುತ್ಸದ್ದಿಗಳು ! ವಿಚಾರಶೀಲರು ! ದಿವ್ಯಮೂರ್ತಿಗಳು ! ಸಮಾಜಧುರಂಧರರು ! ಇವರೆಲ್ಲರೂ ಕೂಡಿಕೊಂಡು ಇಂತಹ ಮಹತ್ತರಪ್ರಸಂಗದಲ್ಲಿ ಬಾಲಿಶತ್ವ ಯನ್ನು ಪ್ರದರ್ಶಿಸುವದು ಯಾರಿಗೆ ಲಾಂಛನವಾದಮಾತು ? ಸಮಾಜದ ಸಾಮಾನ್ಯಸ್ವರೂಪದ ಪ್ರಶ್ನೆಯೆಂದು ಆ ದೃಷ್ಟಿಯಿಂದ ಕಾರ್ಯಾವಲಂಬಿಗಳಾಗದೇ ವಿಶಿಷ್ಟಸಂಕಲ್ಪಗಳನ್ನಿಟ್ಟುಕೊಂಡು ಪರಸ್ಪರರಲ್ಲಿ ಅವಿಶ್ವಾಸವನ್ನು ಹುಟ್ಟಿಸುವಂತಹ ಕೃತಿಗಳಿಗೆ ಮುಖವಿಟ್ಟು ಅಶಿಕ್ಷಿತರೂ ಅನಭಿಜ್ಞರೂ ಆದವರಂತೆ ಪ್ರವರ್ತಿಸುವದು ಇವರೆಲ್ಲರುಗಳಿಗೆ ಒಪ್ಪುವಮಾತೇ ? ಸಡ್ಡುಹೊಡೆದು ಕಾಲುಕೆದರುತ್ತ ಆತ್ಮಶಕ್ತಿಯ ಪ್ರೌಢಿಮೆಯನ್ನು ಪ್ರದರ್ಶಿಸುವ ಪ್ರಸಂಗವಿದೆಂದೆಣಿಸಿ ಆ ಪ್ರಕಾರ ಸಾಹಸಬಡುತ್ತಿರುವ ಇವರ ಧೋರಣವು ಇವರ ಗೌರವಕ್ಕೆ ಒಪ್ಪುವಮಾತೇ ? ಸಮಾಜದೃಷ್ಟಿಯಿಂದ ಯಾರಾದರೂ ಒಂದು ವಿಧಾನವನ್ನಿಟ್ಟರೆ—ಒಬ್ಬರು ಹಾಗಾಗಲೆಂದು "ಗಿಲೀಟು-ಗಿಲಾಯು"ಗಳ ಮಾತುಗಳನ್ನಾಡಿ ಅಂತರಂಗದಲ್ಲಿಯ ಸಂಕೇತವನ್ನು ಸಾಧಿಸಲು ಹೆಣಗಾಡುವದು ಇವರಿಗೆ ಯೋಗ್ಯವೇ? ತಮ್ಮ ಇಷ್ಟಾರ್ಥವನ್ನು ಸಾಧಿಸಿಕೊಳ್ಳುವ ಸಮಯವಿದೆಂದು ಸಮಾಜದ ನೆವದಿಂದ ಅಸಂಬದ್ಧವಾಗಿ ಸಹಾಸಬಡುವದು ಸಯುಕ್ತಿಕವೇ ? ಯಾರು ಸಮಾಜಶಾಂತಿ, ಯಾರು ಗುಣಾಢ್ಯತೆ, ಯಾರು ಪಾಂಡಿತ್ಯಪ್ರಾಧಾನ್ಯ ಇವೇ ವಿಚಾರಗಳನ್ನು ಬಹಿರಂಗದಲ್ಲಿ ಆದರಿಸುವ ಲಕ್ಷಣದಿಂದ ಅಂತರಂಗದಲ್ಲಿ ಬೇರೆ ಬೇರೆ ಸಂಕಲ್ಪಗಳನ್ನು ಕಲ್ಪಿಸಿ ಅವುಗಳ ಸಾಧನೆಗಾಗಿ ಅಂತರ್ಯದಲ್ಲಿ ಪ್ರಯತ್ನಿಸುವದು ಶೋಭಿಸುವ ಮಾತೇ ? ತಮ್ಮತಮ್ಮ ವ್ಯಕ್ತಿಗಳ ಧ್ಯೇಯವನ್ನೇ ಈ ಸಾಮಾಜಿಕ ಪ್ರಶ್ನೆಯಲ್ಲಿ ಧುಮುಕಿಸುವದು ಭೂಷಣವಾದ ಮಾತೇ ? ಬಹಳ ಒಳ್ಳೇ ಪಾಂಡಿತ ! ಒಳ್ಳೇಯ ನಾಗರಿಕತನ! ನ್ಯಾಯಸ್ಥಾನ(Courts)ಗಳನ್ನಾಶ್ರಯಿಸಿ ಹೊಡೆದಾಡಿ ತನು ಮನ ಧನಗಳಿಂದಲೂ ನಾಶವಾಗುವದರಲ್ಲಿ ವೀರಶೈವರು ಖಿಗಿಲೆಂಬದಾಗಿ ಪ್ರಶಂಸಾಪತ್ರವನ್ನು ಪರಮತದವರಿಂದ ಪಡೆದಿರುವೆವು. ಲೌಕಿಕದಲ್ಲಿ ಅಜ್ಞಾನಪ್ರಾಬಲ್ಯದಿಂದ ಅಶಿಕ್ಷಿತರಿಂದ ಈ ತರಹದ ಯೋಗ್ಯತೆಯು ನಮಗೆ ಸಿಕ್ಕೊ ಸಿಗುತ್ತಲೂ ಇರುವದು. ಆದರೆ ಈ ಮಹಾಮಹಾ ಪಂಡಿತಶ್ರೇಷ್ಠರೂ ಅಸಾಧಾರಣ ಅನುಭವಶಾಲಿಗಳೂ ಕೂಡಿರುವ ಈ ಮಹಾಮಂಡಳವೂ ಸಹ ಧಾರ್ಮಿಕ ವಿಷಯದಲ್ಲಿಯೂ ಈ ಪ್ರಸಂಗದಲ್ಲಿ ಅದೇಯೋಗ್ಯತೆಯ ಪತ್ರಕ್ಕಾಗಿ ಮುಖ ನಿಜ್ಜಿರುವದೆಂದರೆ ಇವರ ಪ್ರವೃತ್ತಿಯು ವಂಶಪರಂಪರೆಯಿಂದ ಬಂದ ಅಭಿಧಾನಕ್ಕೆ ಅನ್ಯಥಾ ಆಗಬಾರದೆಂಬ ಹವ್ಯಾಸವೆನ್ನಬೇಕೋ ? ಎಲ್ಲಿಯಾದರೂ ವೀರಶೈವರ ನೈಸರ್ಗಿಕಗುಣವೇ ಇದೆನ್ನಬೇಕೋ ? ತಿಳಿಯದಾಗಿದೆ. ತತ್ವದವಿಷಯದಲ್ಲಿ ಮತಭಿನ್ನತೆಯಿದ್ದರೆ ಅದನ್ನು ಸಿದ್ಧಗೊಳಿಸಿಕೊಳ್ಳುವ ಸಾಧಕವಾದ ರಾಜಮಾರ್ಗವು ಎಂದಿಗೂ ಇರುವದು. ಪೀಠಾಧಿಕಾರಕ್ಕೆ ಈ ಭಿನ್ನತೆಯು ನಿಕಟಸಂಬಂಧವೂ ಪ್ರಾಸಂಗಿಕವೂ ಇದ್ದಲ್ಲಿ ಅದರ ತೀರ್ಮಾನವಾದಮೇಲೆ ಪಟ್ಟನಿಯೋಜನೆಯಾಗಲೆಂದಾದರೂ ಪ್ರಯತ್ನಿಸುವದು ಸಾಧಕತನವೂ ಸಮರ್ಪಕರೀತಿಯೂ ಆಗಿರುವದಲ್ಲವೆ? ಹಾಗಿಲ್ಲದಿದ್ದ ಪಕ್ಷದಲ್ಲಿ ಈರೀತಿಯಾಗಿ ಕೃಷ್ಣಕಾರಸ್ಥಾನವನ್ನೆಬ್ಬಿಸುವದು ಎಷ್ಟರಮಟ್ಟಿಗೆ ಕ್ಷಮ್ಯವಾದೀತು ? ಲಾಭವು ಬರಬಹುದೆಂಬುವದನ್ನು ಗಮನಿಸಬೇಕಲ್ಲವೇ ?

ಸಿಂಹಾಸನಗಳು ಮೂಲಗುಂಬಾಗಿವೆ. ಅಶಕ್ತವು ಅಜಾಗ್ರತವಾಗಿ ಕರ್ತವ್ಯ ಪರಾಙ್ಮುಖವಾಗಿದೆ. ಸಮಾಜಕ್ಕೆ ಸಂಪೂರ್ಣ ಸಂಬದ್ಧರಾಗಿ ಅದರ ಅಭ್ಯುದಯವು ಇವರ ಕಾರ್ಯದಕ್ಷತೆಯನ್ನವಲಂಬಿಸಿರುವದಾಗಿರುವದರಿಂದ ಸಿಂಹಾಸನದವರೂ ಅವರ ಪಕ್ಷದವರೂ ಸ್ವಕರ್ತವ್ಯಮಗ್ನರಾಗಿ ಕಾರ್ಯಪ್ರವೃತ್ತರಾಗಲೆಂದು ಸಮಾಜವು ಹಂಬಲಿಸುತ್ತದೆ. ಈ ಪ್ರಸಂಗದಲ್ಲಿ ಇವರುಗಳು ದೂರದರ್ಶಿತ್ವದಿಂದಲೂ ಸಮಾಜಹಿತಚಿಂತನೆಯ ದೃಷ್ಟಿಯಿಂದಲೂ ಇತಿಕರ್ತವ್ಯ ವಿಚಾರದಿಂದಲೂ ಸಮಯವನ್ನು ಪರಿಶೀಲಿಸಿ ತಮ್ಮ ಧೋರಣವನ್ನು ಸರಿಪಡಿಸಿಕೊಳ್ಳತಕ್ಕದ್ದು ಅತ್ಯಾವಶ್ಯತೆಯ ಮಾತಾಗಿರುವದು. ಇನ್ನುಳಿದವರಾದರೂ ಬಿದ್ದವರನ್ನು ಹಕ್ಕೊತ್ತುವದು ತಮಗೆ ಕ್ಷೇಮವೆಂದು ಭಾವಿಸದೇ ತಮಗೆ ಸಂಬದ್ಧವಾದುದನ್ನು ತಾವು ಸಮಾಲೋಚಿಸಿಕೊಂಡು ಮಿಕ್ಕದುದನ್ನು ಸಮಾಜದ ಮುಂದಿರಿಸಿ ಬಿಡುವದು ಶ್ರೇಯಸ್ಕರವಾಗಿರುವದು. ಯಾವದಾದರೊಂದು ಬಲದಿಂದ "ಕೈಮತ್ತು" ಮಾಡಿಕೊಂಡರಾಯಿತೆಂದು ಹಾತೊರೆಯುವ ಪ್ರಸಂಗವು ಇದಲ್ಲ. ಸಮಾಜದಲ್ಲಿ ಐಕ್ಯತೆ ಪರಸ್ಪರ ವಿಶ್ವಾಸಗಳಿದ್ದರೆ ಕೇವಲ ವಿಶಿಷ್ಟ ವ್ಯಕ್ತಿಗಳು ಇಲ್ಲವೇ ಒಂದು ಪಕ್ಷವು ಆರಿಸಿದರೂ ಕೂಡ ಗಲಭೆಯೇಳುತ್ತಿರಲಿಲ್ಲ. ಸಮಾಜದ ಮತಪದ್ಧತಿಯಿಂದಲಾದರೂ ಆರಿಸಬಹುದಾಗಿತ್ತು. ಆದರೆ ಪರಸ್ಪರರಲ್ಲಿ ವಿಶೇಷವಾದ ಅವಿಶ್ವಾಸವು ಬೆಳೆದಿರುವದರಿಂದ ಸಾಂಪ್ರತದಲ್ಲಿ ಇವೆರಡು ಮಾರ್ಗಗಳಿಂದಲೂ ವಟುಗಳನ್ನಾರಿಸುವದು ಅಸಾಧ್ಯವಾಗಿದೆ. ಪ್ರಕೃತಸ್ಥಿತಿಯು ಹೀಗೇ ಉಳಿದಮೇಲೆ ಈ ಯಾವತ್ತರೂ ಸದ್ಯದ ಧೋರಣವನ್ನು ವ್ಯತ್ಯಾಸಪಡಿಸಿ ಏಕರೂಪದಲ್ಲಿ ಪ್ರಯತ್ನವನ್ನಿಡಬೇಕು. ಇಲ್ಲವಾದರೆ ಪೀಠವು ಅಧಿಕಾರಿಗಳಿಲ್ಲದೇ ಬರಿದಾಗಿ ಬೀಳಬೇಕು. ಏಕಂದರೆ :— ಮತಪದ್ಧತಿಯಿಂದ ಆರಿಸುವದು ತಾತ್ವಿಕದೃಷ್ಟಿಯಿಂದ ಸಮರ್ಪಕವಾಗಿದೆ, ಆದರೂ ಅದನ್ನವಲಂಬಿಸಿದರೂ ಕೂಡಾ ವ್ಯವಹಾರಿಕ ರೀತಿಯಿಂದಲೂ ಸಹ ಅಸಂಭವನೀಯವೂ ಅಶಕ್ಯವೂ ಆಗಿರುವದೆಂಬಂತೆ ಈಗಿನ ಶಾಸನ ಸಭೆಗಳಿಗೆ ಆರಿಸುವದರ ಅನುಭವದಿಂದ ಮನಗಾಣುವ ಮಾತಾಗಿದೆ. ಅಲ್ಲದೇ ಇವರಿಂವರು ವೀರಶೈವರಹುದು, ಅಲ್ಲದೆಂಬುವದನ್ನು ತೀರ್ಮಾನಿಸುವದೂ ಅದಕ್ಕಾಗಿ ಪಟ್ಟಿಗೆ ತಗಲುವ ಲಕ್ಷಾಂತರ ರೂಪಾಯಿಗಳ ಭಾರವನ್ನು ಹೊರುವದೂ ಅಶಕ್ಯವೇ ! ಅದರಿಂದ ಮೇಲ್ನೋಟಕ್ಕೆ ಸರಳಮಾರ್ಗವಾಗಿಕಂಡರೂ ಅದರ ರಕ್ಷಾಕರ್ತೆಯ ಪ್ರಶ್ನೆಯ ವಿಲಂದ ಮತಪದ್ಧತಿಯ ಕೆಲವರು ಅನುಮತಿಸದಿರುವ ಪ್ರಸಂಗವಿದನ್ನು ಜನರ ಮುಂದಿಟ್ಟು ಅವರ ವಿಷಯದಲ್ಲಿ ಮನಃಕಲುಷಿತಮಾಡಿ ಈ ಪೀಠದ ಕಾರ್ಯಕ್ಕೆ ವಿಘ್ನತರಬೇಕೆನ್ನುವವರು ಮಾತ್ರ ಈ ಮತಪದ್ಧತಿಯನ್ನು ವಿಶೇಷವಾಗಿ ಮುಂದೆಮಾಡುತ್ತಾರೆಂದು ಹೇಳಬಹುದು. ಇನ್ನು ಯಾವ ವ್ಯಕ್ತಿಗಳು ಇದ್ದರೂ ಅವರು ಒಂದೊಂದು ಪಕ್ಷಕ್ಕೆ ಹೊಂದಿದವರೆಂದಾಗಲೀ ಹೊಂದಿದವರೆಂಬಸಂಶಯವಾಗಲೀ ಇರುವದರಿಂದ ಒಂದು ಪಕ್ಷದಲ್ಲಿ ಕೈದುಡಿಕಿನಿಂದ ವಟುಗಳನ್ನಾರಿಸಿದರೂ ಆ ನಿಯೋಜನೆಯು ನ್ಯಾಯಸ್ಥಾನವನ್ನು ಕಾಣದೇ ಉಳಿಯದು. ಆದುದರಿಂದ ಇದರಲ್ಲಿ ಸೇರಿರುವ ಮುಂದಾಳುಗಳು, ಬಾಳೇಹಳ್ಳಿಯ ಪೀಠದ ವಿಷಯದಲ್ಲಿ ಜನರ ಆತುರತೆಯು ಹೆಚ್ಚಾಗಿದೆ ಎಂಬದನ್ನೂ ಸದ್ಯಕ್ಕೆ ನಡೆದಿರುವ ಕೃತಿಗಳ ಕ್ಷೋಭೆಯನ್ನು ಹೆಚ್ಚಿಸಿರುವದೆಂಬುದನ್ನೂ ಅನುಲಕ್ಷಿಸಿ ಸರ್ವಜನ ಸಮ್ಮತವೂ ಸರಳವೂ ಆದ ಮಾರ್ಗವನ್ನವಲಂಬಿಸುವದು ಅತ್ಯಾವಶ್ಯಕವಾಗಿದೆ. ಕೇವಲ ಸಿಂಹಾಸನದ ಶ್ರೇಯಸ್ಸನ್ನು ಬಯಸುವದು ಶ್ರೇಯಸ್ಕರವು. ಇದರಲ್ಲಿರುವ ಮಹನೀಯರು ಆ ಪಕ್ಷದವರು ಈ ಪಕ್ಷದವರೆಂದು ಮುಂಚಿತವಾಗಿಯೇ ಸ್ವಕೀಯವಾದ ಮುದ್ರಾಧಾರಣವನ್ನು ಮಾಡಿಕೊಳ್ಳದೇ ವಟುವನ್ನಾರಿಸುವದರ ವಿಷಯದಲ್ಲಿ ತಮಗೆ ಇಷ್ಟವಾಗಿಕಾಣುವ ಇಂತಿಂತಹಪಕ್ಷದ ವಟುವೇ ಬೇಕೆಂಬ ಒರೆಯನ್ನಿಟ್ಟುಕೊಳ್ಳದೇ ಪ್ರಯತ್ನಿಸಬೇಕು. ಇಂತಿಂತಹ ಮಾರ್ಗದಿಂದಲೇ ನಡೆಯಬೇಕೆಂಬುವ ಉದ್ದೇಶದಿಂದ ಆರಿಸುವ ಮರಿಯಾದರೂ ಅಂತೆಯೇ ತದನಂತರದಲ್ಲಿ ನಡೆಯುವದೆಂಬ ಬಗ್ಗೆ ಹೊಣೆಯಾದರೂ (guarantee) ಇರುವದೇ ? ಹೀಗೆ ಉದ್ದೇಶಪಡುವದು ಬಲುತಪ್ಪಿತವು. ಈ ಕಾರಣದಿಂದ ವಟುವು ಸಮಾಜಾಂತಃಕರಣಾ ಶಾಸ್ತ್ರೀಯವಾದ ವರ್ತನವನ್ನಿಟ್ಟುಕೊಂಡು ಅದರಂತೆ ನಡೆಯುವದು ತವೆಂಬುದನ್ನು ಮುಂದಿಟ್ಟುಕೊಂಡು ಅದರಂತೆ ಕಾರ್ಯಚಾಲಕರು ಶ್ರ ಕ್ಷಪಟ್ಟು ಇದಕ್ಕೆ ಪಾತ್ರಿಯಾದ ವಿಭಾಷಕವ್ಯಕ್ತಿಗಳನ್ನು ಬದಿಗಿರಿಸಿ ಮುಂದಿನ ಕಾರ್ಯಕ್ಕುಪಕ್ರಮಿಸಬೇಕು. ಈ ಪ್ರಶ್ನೆಯು ಸರ್ವಸಾಮಾನ್ಯವಾದುದರಿಂದ ಯಾವನೊಂದು ದೇಶಸ್ಥರಿಗೆ ಪ್ರಾಧಾನ್ಯಕೊಡದೇ ಯಾವತ್ತೂ ಕಡೆಯ ಮುಖ್ಯಸ್ಥರನ್ನು ಬರಮಾಡಿಕೊಂಡು ಸತ್ಕುಲಪ್ರಸೂತರೂ ಆಚಾರಶೀಲರೂ ಕಾರ್ಯದಕ್ಷರೂ ಧರ್ಮತತ್ವಜ್ಞರೂ ಪೀಠದಪ್ರತಿಷ್ಠೆಯನ್ನು ಕಾಯಬಲ್ಲವರೂ ಆದವರನ್ನು ನಿಷ್ಕಲಂಕಮನಸ್ಸಿನಿಂದಲೂ ನಿಷ್ಕಪಟಹೃದಯದಿಂದಲೂ ಆರಿಸುವದು ಸಮುತ್ತಮಾರ್ಗವೆನ್ನಬಹುದು, ಅಥವಾ ಸದ್ಯದ ಸಮಾಜದಲ್ಲಿಯ ಪರಿಸ್ಥಿತಿಗೆ ಸರಿಯಾಗಿ ಪೀಠದ ಗೌರವವನ್ನು ಕಾಯ್ದುಕೊಂಡು ಸಮಾಜಾಭ್ಯುದಯವನ್ನು ಮಾಡಿ ಸುಖಶಾಂತಿಗಳನ್ನು ನೆಲೆಯಿಸುವದಕ್ಕೆ ತಕ್ಕ ವಟುವು ಎಂತಹದಿರಬೇಕೆಂಬುವದನ್ನು ಸಾವಧಾನಚಿತ್ತದಿಂದ ಸರ್ವರೂ ಸಮಾಲೋಚಿಸಿ ನಿರ್ಣಯಿಸಬಹುದು. ಅದಿಲ್ಲದೆ ಮೊದಲೇಪಕ್ಷಭೇದಗಳನ್ನು ಕಲ್ಪಿಸಿ ಉದ್ಯುಕ್ತರಾಗುವದು ಅನುಚಿತವು. ಮನಸ್ಸಿನೊಳಗಿನ ಕುದಿಯುಳುಕಗ್ಗಲಿ ! ಪಕ್ಷಪಾತದೃಷ್ಟಿಯು ಅಡಗಲಿ ! ಶಕ್ತಿಪರೀಕ್ಷೆಯ ಹಮ್ಮುಹೋಗಲಿ ! ಇಂತಿಂತಹ ಅತಿರಥಮಹಾರಥರು ಕೂಡಿಯೂ ಕೆಲಸವು ಕೊನೆಗಾಣದೆಂದರೆ ಬಲುಶೋಚನೀಯವಾದ ಸಂಗತಿಯು. ಅನ್ಯರ ಎದುರಿಗೆ ಲಾಂಛನಾಸ್ಪದವು ! ಮುಜರಾಯಿತಾಖೆಯವರಂತೂ ವೀರಶೈವಪಂಗಡವು ಎಂತಹದೆಂಬುವದನ್ನು ನೂರಾರುಸಾರಿ ನಿಶ್ಚಯಿಸಿಕೊಂಡಿರಬಹುದು. ಇದರಲ್ಲಿ ಮಿಲಿತರಾಗಿರುವ ಎಲ್ಲ ಪಕ್ಷದವರೂ ಇದನ್ನು ಸಮಾಲೋಚಿಸಲಿಲ್ಲವೆಂತಲ್ಲ. ಪಕ್ಷಾಂಧತೆಯಲ್ಲಿ ಇದೆಲ್ಲವೂ ಮರೆಯಾಗಿರುವದೆಂದೆನ್ನಬಹುದು. ಒಂದು ಪಕ್ಷದವರು ಮಾಡುವದು ತಪ್ಪಿತವಿರುವಾಗ ಅದನ್ನು ಸರಿಪಡಿಸಿಕೊಳ್ಳುವ ಯೋಗ್ಯಪದ್ಧತಿಯನ್ನು ಬಿಟ್ಟು ಇನ್ನೊಂದು ಪಕ್ಷವನ್ನು ಕಲ್ಪಿಸಿಕೊಂಡು ಮೊದಲಿನ ಪಕ್ಷದವರಲ್ಲಿ ಮತ್ತಿಷ್ಟು ಅಭಿಮಾನ, ಛಲ, ಪಂಥಗಳನ್ನು ಹುಟ್ಟಿಸಿ ಅದರಿಂದ ಜರುಗುವ ವಿಚಿತ್ರಕೃತಿಗಳಿಗೆ ಒಮ್ಮೆ ಸಂಯಾಗಿಯೂ ಮತ್ತೊಮ್ಮೆ ಇಮ್ಮಡಿಯಾಗಿಯೂ ಜೋಡಿಸುವ ಧಾರ್ಷ್ಟ್ಯವನ್ನು ತಮ್ಮಲ್ಲಿ ಬರಮಾಡಿಕೊಳ್ಳುವ ಧೋರಣವು ಅಕ್ಷಮ್ಯವಾದುದು.

ಈ ಪ್ರಸಂಗದಲ್ಲಿ ದಿ॥ ಬ॥ ಪುಟ್ಟಣ್ಣಶೆಟ್ಟರ ಕಾರ್ಯದಕ್ಷತೆ ಉಜ್ಜಯನಿ ಜಗದ್ಗುರು ಶ್ರೀ ॥ ॥ ಗಳವರ ದೂರದೃಷ್ಟಿಗನುಗುಣವಾದ ಕೃಪಾಬಲ ಇನ್ನಿತರರ ಸರಳವಾದಸಹಾಯ ಇವುಗಳು ಅವಶ್ಯಕವಾಗಿವೆ. ದಿವಾನ್ ಬಹದ್ದೂರರವರು ತಮ್ಮ ಅನುಭವ, ವರ್ಚಸ್ಸು ಬುದ್ಧಿಮತ್ತೆಯ ಪ್ರಭಾವವನ್ನು ಇದರಲ್ಲಿ ತೋರಿಸಿ ಸಮಾಜಶಾಂತಿಯನ್ನುಂಟುಮಾಡುವದು ಅತ್ಯಗತ್ಯವೆಂದು ಎಲ್ಲರೂ ಕೋರುತ್ತಿರುವರು. ಶ್ರೀ ॥ ॥ ಗಳವರಾದರೂ ಸುತ್ತುಮುತ್ತಾಡುವ ವಿಶಿಷ್ಟಧ್ಯೇಯದ ಕೆಲವರ ಮಾತುಗಳಿಗೆ ಮನಸ್ಸಿಡದೆ ಸಮಾಜಹಿತಕ್ಕೆ ಪೂರ್ಣಸಂಬಂಧವೂ ಹೊಣೆಯೂ (Responsible) ಆದ ಮಹಾಸನ್ನಿಧಿಗೆ ಗೌರವಾಸ್ಪದವೂ ಸಮಾಜಕ್ಕೆ ಹಿತಕರವೂ ಆದುದಾವದೆಂಬುದನ್ನು ಚಿತ್ತೈಸಬೇಕು. ಸನ್ನಿಧಿಯವರಾಗಲೀ ದಿ॥ ಬ॥ ರಾಗಲೀ ಇನ್ನುಳಿದ ಪ್ರಮುಖರಾಗಲೀ ಪಕ್ಷದವರೆಂದೆನಿಸಿಕೊಳ್ಳದೇ ಕಾರ್ಯಕ್ಕುಪಕ್ರಮಿಸಲಿ. ಈ ಪೀಠಾಧಿಕಾರಕ್ಕೆ ಶ್ರಮಪಡುತ್ತಲಿರುವ ಎಡೆಹಳ್ಳಿ ಶಾಂತಪ್ಪಶೆಟ್ಟರು ವೃದ್ಧಾಪ್ಯದಿಂದಾಗಲೀ ಮುತ್ಸದ್ದಿತನದಿಂದಾಗಲೀ ನಾನಾವರ್ಣಾಧಾರಿಗಳಾಗಿ ಈ ಕಾರ್ಯವನ್ನೇ ಇಲ್ಲಿಯವರೆಗೂ ನೆನೆಗುದಿಗೆ ಕೆಡವಿಬಿಟ್ಟ ಹೆಸರನ್ನು ತಕ್ಕೊಳ್ಳದೇ ನಿರ್ಮಲಾಂತಃಕರಣದಿಂದ ಸಾಹಸಬಡುವ ಧೋರಣವನ್ನಿಟ್ಟುಕೊಳ್ಳಲಿ. ಒಟ್ಟಿನ ಮೇಲೆ ಈ ಯಾವತ್ತರೂ ಗಾಂಭೀರ್ಯಚಿತ್ತರಾಗಿ (Serious) ಒಮ್ಮನಸ್ಸಿನಿಂದ ಈ ಮಹಾಕಾರ್ಯವನ್ನು ನೆರವೇರಿಸುವ ಭಾವನೆಯುಳ್ಳವರಾಗಿ ಸರ್ವರು ಕಲತು ಈ ದೊಡ್ಡ ಗಲಭೆಯನ್ನು ಅಡಗಿಸುವ ಸಮಾಜದ ಶಾಂತಿಯನ್ನು ರಕ್ಷಿಸುವದು ಅವರ ಕರ್ತವ್ಯವಾಗಿದೆ. ಈ ವಿಧವಾದ ಧ್ಯೇಯದಿಂದ ಒಬ್ಬರ ಮುಖವು ಒತ್ತಟ್ಟಿಗೆ ಮತ್ತೊಬ್ಬರ ಮುಖವು ಮತ್ತೊತ್ತಟ್ಟಿಗೆ ಆಗುವ ಪದ್ಧತಿಯನ್ನು ಬಿಟ್ಟು ಜಗದ್ಗುರು ಶ್ರೀ ಗಳಾದರೂ ದಿ॥ ಬ॥ ರವರೂ ಎಲ್ಲ ಪ್ರಮುಖರನ್ನು ಬರಮಾಡಿಕೊಂಡು ಈ ವಿಷಯಕ್ಕೆ ಇನ್ನುಮೇಲೆ ಉದಾಸೀನರಾಗದೆ ಒಂದೆರಡು ತಿಂಗಳಲ್ಲಿ ಯಾವದೊಂದು ಸಮಾಧಾನರೀತಿಯಾಗಿ ಮುಂದೆ ಬರುವ ಕಾರ್ತೀಕಮಾಸದಲ್ಲಿ ಈ ಕಾರ್ಯವು ನೆರವೇರಿಯೇ ಬಿಡುವಂತೆ ಪ್ರಯತ್ನಿಸಲೆಂದು ಪ್ರಾರ್ಥಿಸುವುದು ಈ ಲೇಖದ ಉದ್ದೇಶವಾಗಿದೆ.

ಅಖಿಲ ಭಾರತ ವೀರಶೈವ ಮಹನೀಯರುಗಳಿಗೆ ವಿಜ್ಞಾಪನೆ.

ವೀರಶೈವ ಮಹಾನೀಯರೇ, ಈಗ ಕೆಲವು ವಾರಗಳ ಹಿಂದೆ ಇದೇ ಮೈಸೂರು ಸ್ಟಾರಿನ ತಾ॥ 9-3-24 ನೆಯ ಸಂಚಿಕೆಯಲ್ಲಿ ನನ್ನ ಮಿತ್ರರಲ್ಲೊಬ್ಬರು "ನಮ್ಮ ಮತದ ದುಸ್ಥಿತಿ" ಎಂಬ ಶಿರೋಲೇಖನದಿಂದ ಒಂದು ಚಿಕ್ಕ ಒಕ್ಕಣೆಯನ್ನು ಕೊಟ್ಟದು ಸರಿಯಷ್ಟೆ. ಅದು ಶ್ರೀ ವೀರಶೈವ ಮತೋದ್ಧಾರಕಾಗ್ರೇಸರನಾದ ಬಸವೇಶ್ವರನನ್ನು ನಿಂದಿಸುವವರನ್ನೂ, ಶ್ರೀ ವಿರಕ್ತರು ಮತ್ತು ಪಂಚಾಚಾರ್ಯರಲ್ಲಿ ಇಲ್ಲದ ಸಲ್ಲದ ಭೇದಗಳನ್ನು ಕಲ್ಪಿಸಿ ಅವರಲ್ಲೇ ಪರಸ್ಪರ ಜಗಳವನ್ನು ಹುಟ್ಟಿಸಲು ಹುರುಪುಗೊಂಡಿರುವವರನ್ನೂ, ಕುರಿತು ಅವರ ವಿಷಯದಲ್ಲಿ ತಮಗೂ ಮತ್ತು ಇತರ ವೀರಶೈವ ಜನಾಂಗಕ್ಕೂ ಉಂಟಾಗಿರುವ ಮನೋಕ್ಷೋಭೆಯನ್ನು ಪ್ರದರ್ಶಿಸುತ್ತದೆಯೇಹೊರತು ಅನ್ಯಥಾ ಅಲ್ಲವೆಂದು ಸ್ಪಷ್ಟವಾದರೂ, ಕೆಲವು ಜನ ಮಹನೀಯರು ಅನೇಕ ವಿಧವಾದ ವ್ಯಂಗ್ಯಾರ್ಥಗಳನ್ನು ಕಲ್ಪಿಸಿ ವಿಧವಿಧವಾಗಿ ಅಭಿಪ್ರಾಯಪಟ್ಟು ಮನಸ್ಸಂಕೋಚಮಾಡಿಕೊಳ್ಳುತ್ತಿರುವರು. ಹಾಗೆ ಮಾತ್ರ ಮಾಡದಿರಲಿ. ಮತಾಭಿಮಾನಿಗಳೇ ವಿದ್ಯಾರ್ಥಿಗಳು ಚಿಕ್ಕವರಾದರೆ ತಾನೇ ಏನು. ರಾಜಕೀಯ ಜನಾಂಗದ ಮತ್ತು ಮತದ ವಿಷಯಗಳಲ್ಲಿ ತಮಗಿರುವ ಚಿಕ್ಕ ದೊಡ್ಡ ಅಭಿಪ್ರಾಯಗಳನ್ನು ಕೊಡಲು ಸ್ವತಂತ್ರರಲ್ಲವೇನು ? ಅಂಥವರಿಗೆ ಪ್ರೋತ್ಸಾಹ ಕೊಡಬೇಕೆ ? ವೃಥಾ ನಿಂದಿಸಬೇಕೆ ? ಅಹಾ ! ಏನದು ನಮ್ಮವರಿನ್ನೂ ಸುಧಾರಿಸುವಸಂಭವವೇ ಇಲ್ಲವಲ್ಲ !! ಸ್ವರಾಜ್ಯ ಬೇಡವಂತೆ, ಸ್ವರಾಜ್ಯ ಬೇಡವಾದರೂ ಸ್ವಾತಂತ್ರ್ಯವೂ ಬೇಡವೆ !!! ಅದೂ ಬೇಡವಾದರೆ ಬಿಡಿ. ಆದರೆ ಈ ಸುಧಾರಿಸಿದ ಮತವನ್ನು ಮತ್ತಷ್ಟು ಅಭಿವೃದ್ಧಿಗೆ ತರಲು ಪ್ರಯತ್ನ ಪಡದಿರಬೇಡಿರೆಂಬುದೇ ನನ್ನ ಸವಿನಯಪ್ರಾರ್ಥನೆ. ಕೊಟ್ರಪ್ಪ ಹೊನ್ನಾಳಿ ವಿದ್ಯಾರ್ಥಿ.

ಮದ್ರಾಸು, ಯೂನಿವರ್ಸಿಟಿಯ ನೂತನ ವೀರಶೈವ ಪದವೀಧರರು.

ಈ ವರ್ಷ ಮದ್ರಾಸು ಯೂನಿವರ್ಸಿಟಿಯಲ್ಲಿ ಅಭ್ಯಾಸಮಾಡುತ್ತಿದ್ದ ವೀರಶೈವ ಪ್ರೌಢವಿದ್ಯಾರ್ಥಿಗಳ ಪಲಿತಾಂಶಗಳು ದರವರುಷಕ್ಕಿಂತಲೂ ಹೆಚ್ಚು ತೃಪ್ತಿಕರವಾಗಿವೆ ಎಂಬುದನ್ನು ತಿಳುಹಿಸಲು, ಅತ್ಯಾನಂದವಾಗುತ್ತದೆ. ಮಿ॥ ಟಿ. ಹೆಚ್. ಎಂ. ಚಂದ್ರಶೇಖರಯ್ಯ (ಹರಪನಹಳ್ಳಿ) ಮಿ॥ ಪಿ. ಉದ್ದಾನೈಯ್ಯ (ಹೊಸಪ್ಯಾಟಿ) ಇವರು ಬಿ. ಎಲ್. ಪರೀಕ್ಷೆಯಲ್ಲೂ ಮಿ॥ ಟಿ. ಹೆಚ್. ಎಂ. ಸಿದ್ದಯ್ಯ (ಹರಪನಹಳ್ಳಿ) ಇವರು 1ನೇ ವರುಷದ ಬಿ. ಎಲ್. ಪರೀಕ್ಷೆಯಲ್ಲೂ ಕೃತಾರ್ಥರಾಗಿರುತ್ತಾರೆ. ಮಿ॥ ಟಿ. ಹೆಚ್. ಎಂ. [illegible] ಹರಪನಹಳ್ಳಿ ಬಿ. ಎ., ಆನರ್ಸು ಪರೀಕ್ಷೆಯಲ್ಲೂ ಮಿ॥ ಟಿ. ಹೆಚ್. ಎಂ. ಸದಾಶಿವಯ್ಯ ಹರಪನಹಳ್ಳಿ ಇವರು ಲಿಟರೇಚರ್ ಬಿ. ಎ. ಆನರ್ಸು ಪರೀಕ್ಷೆಯಲ್ಲಿ ಅತ್ಯುತ್ತಮಸರಣಿಯೊಳು ಪಾಸಾಗಿ ಗೌರ್ನರ್ ಚಾರ್ಲ್ಸ್ ವೆಂಡ್ಲೆಂಡು ಯೂನಿವರ್ಸಿಟಿ ಬಹುಮಾನಕ್ಕೆ ಅರ್ಹರಾಗಿರುತ್ತಾರೆ. ಮಿ॥ ಎಂ. ಎಚ್. ಎಂ. ನಂಜುಂಡಯ್ಯ (ಹರಪನಹಳ್ಳಿ) ಇವರು ಹೋದವರುಷ ಸೈನ್ಸು ಬಿ. ಎ ಪರೀಕ್ಷೆಯಲ್ಲಿ ಪಾಸಾಗಿರುತ್ತಾರೆ. ಇಲ್ಲಿಯ ದೇಶೀಯ ಕಲಾಶಾಲೆಯಲ್ಲಿ ಅಭ್ಯಾಸಮಾಡುತ್ತಿದ್ದ ಮಿ॥ ಎನ್. ಸಿ. ಕೆ. ಹಾಲಪ್ಪ (ಶಿವಮೊಗ್ಗಾ) ಮಿ॥ ಎನ್. ಬಿ. ಗುರುಬಸವರಾಜ (ಹರಪನಹಳ್ಳಿ) ಇವರು ಬಿ. ಎ. ಪರೀಕ್ಷೆಯಲ್ಲಿ ಪಾಸಾಗಿರುತ್ತಾರೆ. ಇದಲ್ಲದೆ ಇಂಟ್ರಮಿಡಿಏಟ್, ಪರೀಕ್ಷೆಯಲ್ಲಿ ಎಂ. ಕೆ. ನಾಗಪ್ಪ (ಅನಂತಪುರ) ಇವರು ಉತ್ತಮತರಗತಿಯಲ್ಲೂ ಮಿ॥ ಕೆ. ಯಂ. ದಕ್ಷಿಣಾಮೂರ್ತಿ (ಬಳ್ಳಾರಿ) ಮಿ॥ ಟಿ. ಹೆಚ್. ಪಂಚಾಕ್ಷರೈಯ್ಯ (ಹರಪನಹಳ್ಳಿ) ಇವರು ಪಾಸಾಗಿರುತ್ತಾರೆ. ಜಯಶೀಲರಾದ ವಿದ್ಯಾರ್ಥಿಗಳ ಪೈಕಿ 6 ಜನ ಟಿ. ಹೆಚ್. ಎಂ. ವಿದ್ಯಾರ್ಥಿಗಳು ಹರಪನಹಳ್ಳಿ ವಾಸಸ್ಥರಾದ ತೆಲಗಿಹರಪನಹಳ್ಳಿ ಮಠದ ಶ್ರೀ ಸಿದ್ಧಾಂತಿ ಹೊಳೆಬಸವಶಾಸ್ತ್ರಿಗಳ ಚಿರಂಜೀವಿಗಳಾಗಿರುತ್ತಾರೆ. ವೇ॥ ಶಾಸ್ತ್ರಿಗಳವರು ಇಷ್ಟು ದಿವಸ ವಿಶೇಷಶ್ರಮವಹಿಸಿ ಅಪಾರವಾಗಿ ಧನವ್ಯಯಮಾಡಿ ತಮ್ಮ ಚಿ॥ ಗಳನ್ನು ಅಭ್ಯಾಸಮಾಡಿಸಿದ್ದಕ್ಕೂ ಇವರ ಅಮೋಘಪ್ರಯತ್ನವು ಇಂದಿಗೆ ಸಾರ್ಥಕವಾಯಿತು.

ಓರ್ವ ವಿದ್ಯಾಭಿಮಾನಿ.

ತರೀಕೆರೆ ತಾಲ್ಲೂಕು ಬುಕ್ಕಾಂಬುಧಿ.

ಈ ಊರಿಗೆ 1921ರಲ್ಲಿ ಶ್ರೀ ಚಿತ್ರದುರ್ಗದ ಬೃಹನ್ಮಠದ ಜಗದ್ಗುರು ಮಹಾಸ್ವಾಮಿಗಳವರ ಸವಾರಿಯು ದಯಮಾಡಿಸಿದ್ದು ಸರಿಯಷ್ಟೆ. ಮಹಸ್ವಾಮಿಗಳವರ ಸವಾರಿಯು ಈ ಮುಕ್ಕಾಂನಲ್ಲಿರುವಾಗಲೇ ತಪೋನಿಷ್ಠರಾದ ಕೊಲ್ಲಾಪುರದ, ಶ್ರೀ ಶಾಂತವೀರಮಹಸ್ವಾಮಿಗಳು ಏಕಾಯೇಕಿ ಜಗದ್ಗುರುಗಳವರ ಪಾದದರ್ಶನಕ್ಕಾಗಿ ಈ ಊರಿಗೆ ದಯಮಾಡಿಸಿದವರು ಇಲ್ಲಿಯೇ ಮಹಾವಾದದಲ್ಲಿ ಐಕ್ಯರಾದರು. ಪೂಜ್ಯರಾದ ಮಹಾಸ್ವಾಮಿಗಳವರ ಗದ್ದುಗೆಯು ಗ್ರಾಮಮಧ್ಯದಲ್ಲಿರುವ ಶ್ರೀ ವಿರುಪಾಕ್ಷೇಶ್ವರ ದೇವಸ್ಥಾನದ ಕಾಂಪೌಂಡಿನಲ್ಲಿ ತಾ॥ 30-10-21ನೇ ಭಾನುವಾರ ಪ್ರಾತಃಕಾಲ ಸೂರ್ಯೋದಯ ಕಾಲಕ್ಕೆ ಸರಿಯಾಗಿ ಬಹಳ ವೈಭವದಿಂದ ಸುತ್ತಮುತ್ತಣ ಪ್ರದೇಶದಿಂದ ಬಂದಿದ್ದ ಸಾವಿರಾರು ಭಕ್ತಜನರುಗಳಿಂದ ಸ್ಥಾಪಿಸಲ್ಪಟ್ಟಿತು. ಅಗ್ಗೆ ನೆರದಿದ್ದ ಜನಸಮುದಾಯದಲ್ಲಿ ಜಗದ್ಗುರುಗಳವರು ಸದರಿ ಗದ್ದುಗೆಯ ಮೇಲ್ಭಾಗಕ್ಕೆ ಶಿಲಾಮಯವಾದ ಮಂಟಪವನ್ನು ಕಟ್ಟಿಸುವ ವಿಚಾರದಲ್ಲಿ ಆಲೋಚನೆಮಾಡಿದ ಕಾಲದಲ್ಲಿ ಈ ಊರಿನ ಸಾಹುಕಾರ್ ವೇ॥ ಚಂ. ನಂ. ವೀರೈಯ್ಯನವರು ತಮ್ಮ ಸ್ವಂತ ಲಾಗೋಡಿನಿಂದ ಒಂದು ಅಂಕಣ ಶಿಲಾಮಯವಾದ ಮಂಟಪವನ್ನು ಕಟ್ಟಿಸುತ್ತೇವೆಂದು ಬಹುಜನಗಳ ಸಮಕ್ಷಮ ಜಗದ್ಗುರುಸನ್ನಿಧಿಯಲ್ಲಿ ನಮಸ್ಕಾರಪೂರ್ವಕವಾಗಿ ವಾಗ್ದಾನಮಾಡಿದವರು ಇಷ್ಟು ದಿವಸಗಳಾದಾಗ್ಯೂ, ಸದರಿ ಗದ್ದುಗೆಯು ಯಾವ ಸ್ಥಿತಿಯಲ್ಲಿದೆಯನ್ನುವದನ್ನು ಕಣ್ಣಿಂದ ನೋಡಿರುವದಾಗಿ ಕಾಣುವದಿಲ್ಲ. ಗದ್ದುಗೆಯ ವಿಚಾರವಾದರೋ ಬಹಳ ಶೋಚನೀಯಸ್ಥಿತಿಯಲ್ಲಿರುತ್ತೆ. ಊರಿನ ಜನಗಳಾದರೋ ಮಹನೀಯರ ಗದ್ದುಗೆಯು ಗ್ರಾಮಮಧ್ಯದಲ್ಲಿರುವದರಿಂದ ಇದರ ನಿಗಾವಣೆಗೆ ವಪ್ಪಿಕೊಂಡಿರುವ ಮಹನೀಯರ ಉದಾಶೀನತೆಯಿಂದ ಗ್ರಾಮಕ್ಕೆ ಯೇನುಕೇಡರೆ ಉಂಟಾದೀತೋ ಎಂದು ಹಗಲೂ ಇರುಳೂ ತಪಿಸುತ್ತಲಿದ್ದಾರೆ. ಸದರಿ ಚಂ. ನಂ. ವೀರಯ್ಯನವರು ಉದಾರಮನಸ್ಸಿನಿಂದ ತಮ್ಮ ಸಾಹುಕಾರಿಕೆಗೂ ದೊಡ್ಡಸ್ತಿಕೆಗೂ ಸರಿಯಾಗಿ ಪ್ರಮಾಣಪೂರ್ವಕವಾಗಿ ವಪ್ಪಿಗೆಮಾಡಿದ್ದರೋ ಅದರಂತೆ ಜಾಗ್ರತೆ ಮಂಟಪ ತಯಾರುಮಾಡಿಸಿ, ಕೀರ್ತಿಗೂ ಪುಣ್ಯಕ್ಕೂ ಭಾಗಿಗಳಾಗತಕ್ಕದ್ದು. ಇಲ್ಲವೇ ಶ್ರೀ ಜಗದ್ಗುರು ಸಂಸ್ಥಾನದವರು ಈ ವಿಚಾರದಲ್ಲಿ ತಕ್ಕ ನಿಗಾವಣೆಯಿಂದ ಜಾಗ್ರತೆ ಕೆಲಸ ನಡಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಒಬ್ಬ ಕಂಡು ಕೇಳಿದ್ದ ಭಕ್ತ.

ಪ್ರಶಸ್ತಿಯ ಬಹುಮಾನ.

ವೀರಶೈವ ಮತಸ್ಥಾಪನಾಚಾರ್ಯ ಶ್ರೀ ಜಗದ್ಗುರು ಶ್ರೀಮದ್ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಮಹಾಸ್ವಾಮಿಗಳವರ ಮಹಾಸವಾರಿಯು ಬಾಳ್ಳುಪೇಟೆಯ ಕಾಫಿಪ್ಲಾಂಟರ್ ರೈಸ್‌ಮಿಷನ್ ಶ್ರೀಮಂತ ಬಸಪ್ಪಗೌಡರ ಕೋರಿಕೆಯಂತೆ ತಾ॥ 26-5-1924ನೆ ಸೋಮವಾರ ಸಕಲ ಅಜಬಾಬು ಸಮೇತ ಸುಂದರವಾದ ಪಲ್ಲಕ್ಕಿಯಲ್ಲಿ ರಾಜನಪುರ ಮುಕ್ಕಾಮಿನಿಂದ ಬಾಳ್ಳುಪೇಟೆಗೆ ಬೆಳಗಿನ 10 ಗಂಟೆಗೆ ಮಹದುತ್ಸವದೊಡನೆ ಕಾಫಿಪ್ಲಾಂಟರ ಬಂಗಲೆಗೆ ದಿಗ್ವಿಜಯಮಾಡಿ ಪೀಠಾರೋಹಣಮಾಡಿದ ಕೂಡ್ಲೆ ಸಮಾಜಸೇವಾಧುರೀಣರಾದ ಗಂಗಪ್ಪ ಅಣ್ಣಾ ರುದ್ರಪ್ಪಗಡಿಗಿ ಶ್ರೀಮಂತ ಶಿದ್ದಾಪುರ ಇವರು ವಿದ್ಯಾ ಐಕ್ಯಮತ್ಯ ಮುಂತಾದ ವಿಷಯಗಳಮೇಲೆ ಭಾಷಣಮಾಡಿದ ತರುವಾಯ ನೆರದಿದ್ದ ಸಹಸ್ರಾರು ಜನರಿಗೆ 4 ಗಂಟೆಗೆ ಬರುವಂತೆ ಅಪ್ಪಣೆ ಕೊಡಿಸಿ ಮಹಾಪಾದಪೂಜೆಗೆ ತೆರಳಿ 4 ಗಂಟೆಗೆ ಸರಿಯಾಗಿ ಪೀಠಾರೋಹಣ ಮಾಡಿದಕೂಡ್ಲೆ ಮತಸಂಬಂಧವಾಗಿ ಅನೇಕ ವಿಷಯಗಳನ್ನು ಅಪ್ಪಣೆಕೊಡಿಸಿ ರೈಸ್‌ಮಿಷನ್ ಬಸಪ್ಪಗೌಡರು ಮಾಡಿದ ಗುರುಸೇವೆಯೂ ಅನೇಕ ಬಡವರಿಗೆ ಮಾಡುತ್ತಿರುವ ಮಹದುಪಕಾರವೂ ಶ್ರೀ ಸನ್ನಿಧಿಗೆ ವೇದ್ಯವಾಗಿ ಬಸವಪ್ಪಗೌಡರವರಿಗೆ ಗುರುಭಕ್ತಕೇಸರಿ ಎಂಬ ಸುವರ್ಣಪದಕವನ್ನು ಪುಷ್ಪಹಾರದೊಡನೆ ಕೊಡುವಂತೆ ಈಗಿನ ಶ್ರೀಶೈಲ ಸಂಪಾದನಕ್ಕೆ ತಮ್ಮ ತನುಮನಗಳನ್ನರ್ಪಿಸುತ್ತಿರುವ ಗಡಿಗಿ ಗಂಗಪ್ಪ ಅಣ್ಣನವರಿಗೆ ಅಪ್ಪಣೆಕೊಡಿಸಲು ಶ್ರೀಮಂತ ಗಡಿಗಿಯವರು ಕಾಫಿಪ್ಲಾಂಟರ ಕೊರಳಿಗೆ ಧರಿಸಿದರು. ಸಭೆಯಲ್ಲಿ ಮೈಸೂರು ಯಜಮಾನ್ ಕೈ॥ ವೀರಸಂಗಪ್ಪನವರು ನಮ್ಮ ವೀರಶೈವಮತಕ್ಕೆ ಮಹದುಪಕಾರಮಾಡಿದುದಕ್ಕಾಗಿ ಸದರಿ ಕೈ॥ ಯಜಮಾನರ . ಗೌರವಾರ್ಥವಾಗಿ 2 ರೂಪಾಯಿಗಳ ಸಂಭಾವನೆ ಕಳುಹಿಸುವಂತೆ ಶ್ರೀಮಂತ ಗಡಿಗಿಅಣ್ಣನವರು ಬಸಪ್ಪಗೌಡರಿಗೆ ಸೂಚಿಸಿದ ತರುವಾಯ ಶ್ರೀ ಜಗದ್ಗುರು ಮಹಾಸ್ವಾಮಿಯವರು ಕಾಫಿಪ್ಲಾಂಟರ್ ಬಸಪ್ಪಗೌಡರಿಗೂ ಅವರ ಪತ್ನಿ ಸಿದ್ಧಮ್ಮನವರಿಗೂ ಕೂಡ ಅವರ ಶ್ರೀ ಗುರುಸೇವಾತತ್ಪರತೆಗೆ ಮೆಚ್ಚಿ ಆಶೀರ್ವಾದವನ್ನಿತ್ತು 6 ಗಂಟೆಗೆ ರಾಜನಪುರ ಮುಕ್ಕಾಮಿಗೆ ದಯಮಾಡಿಸಿದರು. ಪ್ರತ್ಯಕ್ಷದರ್ಶಿ.

ಬ್ರಾಹ್ಮಣಕೌಟಿಲ್ಯ.

ಲೇಖಕ, ಸ್ವಾಮಿ ವಿರೂಪಾಕ್ಷವಡೆಯರ್, ಪ್ರೊಫೆಸರ, ಸಂಸ್ಕೃತ ಕಾಲೇಜ ಇಂದೋರ

(ಹಿಂದಿನಿಂದ ಮುಂದೆಸಾಗಿದ್ದು.)

ಈ ಮಾಹೇಶ್ವರದರ್ಶನಸಾರವೆಂಬ ಗ್ರಂಥದ ಪ್ರಾರಂಭದಲ್ಲಿ ಶೈವ, ಪಾಶುಪತ, ಲಿಂಗಾಯತರ ತತ್ವಸಿದ್ಧಾಂತಗಳು ಅಪಹಾಸ್ಯಕ್ಕೆ ಆಸ್ಪದವಾದವುಗಳೆಂದು ತೋರಿಸುವ ವಿಚಾರದಿಂದ ಎಲ್ಲಿಂದಲೋ ಕೆಲವು ಅಮಂಗಳವಾಕ್ಯಗಳನ್ನು ಹಾಕಿ ಪೀಠಿಕಾರೂಪದಿಂದ ತೋರಿಸಿರುವನು. ಹ್ಯಾಗಂದರೆ—

"ದೀಕ್ಷಾಪ್ರವೇಶಮಾತ್ರೇಣಬ್ರಾಹ್ಮಣೋಭವತಿತತ್ಕ್ಷಣಾತ್ | ಕಾಪಾಲಂ ವ್ರತಮಾಸ್ಥಾಯಯತಿರ್ಭವತಿಮಾನವಃ ॥ ಮುದ್ರಿಕಾಷಟ್ಕತತ್ವಜ್ಞ ಪರಮುದ್ರಾವಿಶಾರದಃ | ಭಗಾಸನಸ್ಥಮಾತ್ಮಾನಂಧ್ಯಾತ್ವಾನಿರ್ವಾಣಮೃಚ್ಛತಿ ॥ ಇತ್ಯಾದಿ.

ವೀರಶೈವರ ನಿಜವಾದ ತತ್ವಸಿದ್ಧಾಂತ, ಹಾಗೂ ಆಚಾರವಿಚಾರಗಳ ಜ್ಞಾನವಿಲ್ಲದೇ ಕೇವಲ ಮೂರ್ಖತನದಿಂದ ಈರೀತಿ ನೀಚಸ್ಥಿತಿಯ ವ್ರತಗಳನ್ನು, ಹಾಗೂ ತತ್ವಸಿದ್ಧಾಂತವನ್ನು ಅವರಲ್ಲಿ ಆರೋಪಿಸಿ ತನ್ನ ಹಾಗೂ ತನ್ನ ಕುಲಾಚಾರ್ಯರಲ್ಲಿ ಎಂಥಾ ನಿಂದ್ಯವಾದ ಹುಳುಕು ಇದೆ ಎಂಬುದನ್ನು ಲಕ್ಷ್ಯಕ್ಕೆ ತರದೇ ನಿರ್ಲಜ್ಜೆಯಿಂದ ಬರೆದಿರುವನು. ಯಾಕಂದರೆ, ಈವತ್ತಿಗೂ ಇವರಲ್ಲಿ ದೊಡ್ಡದೊಡ್ಡ ಆಚಾರ್ಯ, ಶಾಸ್ತ್ರಿ, ಧರ್ಮಾಧಿಕಾರಿ, ಎನಿಸಿಕೊಳ್ಳುವವರು ನಾಲಿಗೆಯರುಚಿಗಾಗಿ ಮದ್ಯ ಮಾಂಸಗಳನ್ನು ತಿನ್ನುತ್ತಾ ಸ್ವೇಚ್ಛಾಚಾರಿಗಳಾಗಿ ನಡಿಯುತ್ತಿದ್ದು ಅದಕ್ಕಾಗಿ

ನ ಮಾಂಸಭಕ್ಷಣೇದೋಷೋನಮದ್ಯೇನಚಮೈಥುನೇ | ಪ್ರವೃತ್ತಿರೇಷಾಭೂತಾನಾಂನಿವೃತ್ತಿಸ್ತುಮಹಾಫಲಾ ॥ (ಮನುಸ್ಮೃತಿ) ಮದ್ಯಂ ಮಾಂಸಂಚಮೀನಂಚಮುದ್ರಾಮೈಥುನಮೇವಚ | ಏತೇಪಂಚಮಕಾರಾಃ ಸ್ಯುರ್ಮೋಕ್ಷದಾಹಿಯುಗೇಯುಗೇ ॥ (ತಂತ್ರಶಾಸ್ತ್ರ)

ಈರೀತಿಯಾದ ಕೆಲವು ಶ್ಲೋಕಗಳನ್ನು ರಚಿಸಿಕೊಂಡು ಇಂಥಾ ಅಬದ್ಧ ಶ್ಲೋಕಗಳನ್ನು ಮನ್ವಾದಿಸ್ಮೃತಿಗ್ರಂಥಗಳಲ್ಲಿ ಸೇರಿಸಿ ಮದ್ಯ ಮಾಂಸ ಮೈಥುನಾದಿಗಳನ್ನು ಅವಶ್ಯ ಆಚರಿಸಬೇಕೆಂತಲೂ, ಹಾಗೂ ಇವೇ ಮೋಕ್ಷದಾಯಕಗಳೆಂತಲೂ ಬೋಧಿಸುತ್ತಾ,

ಪೀತ್ವಾಪೀತ್ವಾಪುನಃಪೀತ್ವಾಯಾವತ್‌ಪತತಿಭೂತಲೇ | ಪುನರುತ್ಥಾಯವೈಪೀತ್ವಾಪುನರ್ಜನ್ಮನವಿದ್ಯತೇ ॥

ಯಾವಾಗಲೂ ಶೆರೆಯನ್ನು ಮಿತಿಮೀರಿ ಕುಡಿಯಬೇಕೆಂತಲೂ ಈರೀತಿ ಅಳತೆಗೆಟ್ಟು ಕುಡಿಯುವ ಕುಡುಕರಿಗೆ ಪುನರ್ಜನ್ಮವಿರದೇ ಮೋಕ್ಷಭಾಗಿಗಳಾಗುವರೆಂತಲೂ ಸೃಷ್ಟಿನಿಯಮಕ್ಕೆ ವಿರುದ್ಧವಾದ ಶ್ಲೋಕಗಳನ್ನು ರಚಿಸುವವರಾದಿವರಿಗೆ ಪರಧರ್ಮನಿಂದಾಸ್ಪದ ಶ್ಲೋಕಗಳನ್ನು ರಚಿಸುವಲ್ಲಿ ನಾಚಿಕೆ ಬರುವದುಂಟೇ ?

ಇನ್ನು ಇವರು ಮಾಡುವ ಈ ಪಶುಹಿಂಸೆಯು ಹಿಂಸೆಯಲ್ಲವಂತೆ ! ಯಾಕಂದರೆ—

"ಯಜ್ಞಾರ್ಥಂಪಶವಃಸೃಷ್ಟಾಃಸ್ವಯಮೇವಸ್ವಯಂಭುವಾ | ಯಜ್ಞಸ್ಯಭೂತ್ಯೈಸರ್ವಸ್ಯ ತಸ್ಮಾದ್ಯಜ್ಞೇವಧೋಽವಧಃ ॥ (ಮನುಸ್ಮೃತಿ)

ಇಂಥಾ ಶ್ಲೋಕಗಳನ್ನು ಜನರ ಮನಸ್ಸನ್ನೇ ಮೋಹಗೊಳಿಸುವ ಉದ್ದಿಶ್ಯ ರಚಿಸಿಕೊಂಡು ಇವರು ತಮ್ಮ ಜಿಹ್ವಾಶಾಂತಿಗಾಗಿ ಯಜ್ಞವನ್ನು ನಿಮಿತ್ತ ಮಾಡಿಕೊಂಡು ಜೈನೇತರನಾದ ಯಾವ ಹಿಂದುವು ಈರೀತಿ ಮಾಂಸಾಹಾರ ಮಾಡುವದಿಲ್ಲವೋ ಅವನು ಮಹಾಗುರುದ್ರೋಹಿ ಎಂದು ವಿಶ್ವಗುಣಾದರ್ಶ ಚಂಪುಕಾರನು ಹೇಳುತ್ತಿರುವನು. ಹ್ಯಾಗಂದರೆ,—

"ಹಿಂಸಾತ್ಯಾಭಾವಮೇವಾಧ್ವರಪಶುಷುಹಕೇರಾಹರಾಮಾನುಜಾರ್ಯಃ | ತತ್ಪಕ್ಷಸ್ಥೋಪಿಯೋನಪ್ರಸಜತಿಯಜನೇಕಸ್ತದನ್ಯೋಗುರುದ್ವಿಟ್ ॥ ಹಿಂಸಾಂಪರೇಸ್ತ್ವಮುಮಾಶ್ರಿತಹಿಂಸನೇಽಪಿ ಜೈನೇತರೋಯದಿಜನೋಭಜತೇಜುಗುಪ್ಸಾಂ ॥ (ವಿಶ್ವ-ಚಂಪು, ಪಾನು ೨೦೦)

ಯಜ್ಞಾದಿಗಳಲ್ಲಿ ಪಶುಗಳನ್ನು ಕೊಲ್ಲುವದು ಹಿಂಸೆಯಲ್ಲವಾದ್ದರಿಂದ ಸರ್ವರೂ ಪಶುಹಿಂಸೆ ಮಾಡಬೇಕೆಂದು ರಾಮಾನುಜಾಚಾರ್ಯನು ಹೇಳುತ್ತಿರುವದರಿಂದ ಯಾರು ಪಶುಹಿಂಸೆ ಮಾಡುವದಿಲ್ಲವೋ ಅವರು ಗುರುದ್ರೋಹಿಗಳಂತೆ. ಇನ್ನು ಗ್ರಂಥಕಾರನು ರಾಮಾನುಜ ಸಾಂಪ್ರದಾಯಕರಿಗೆಂದು ಹೇಳುವಲ್ಲಿ ಟೀಕಾಕಾರನು ಮೊದಲನೇ ಶ್ಲೋಕದ ಅಪಿಶಬ್ದದಿಂದ ಸರ್ವರಿಗೂ ಈ ಹಿಂಸೆಯು ಸಂಬಂಧಿಸಿರುವಂತೆ, ಇವರ ಈರೀತಿಯಾದ ಬರವಣಿಗೆಯಮೇಲಿಂದ ಭರತಭೂಮಿಯಲ್ಲಿ ಮೊದಲು ಮದ್ಯ ಮಾಂಸಾಹಾರ ಸುರುಮಾಡಿದವರೇ ಬ್ರಾಹ್ಮಣರೆಂದು ಐತರೇಯಾದಿ ಬ್ರಾಹ್ಮಣಗ್ರಂಥಗಳಿಂದ ಸ್ಪಷ್ಟಹೇಳಬಹುದು. ಆದರೆ ಈ ಹಿಂಸೆಯನ್ನು ನಿಷೇಧಿಸುವದಕ್ಕಾಗಿಯೇ ಬುದ್ಧನು ತನ್ನ ಸರ್ವಾಯುಷ್ಯವನ್ನೇ ಖರ್ಚುಮಾಡಿದ್ದು ಇದನ್ನು ಲಕ್ಷ್ಯಕ್ಕೆತರದೇ ರಾ॥ ಟಿಳಕರು ತಮ್ಮ ಜಾತಿಯ ಈ ದುಷ್ಟಾಹಾರವು ಬೈಲಿಗೆ ಬೀಳುವದೆಂಬ ವಿಚಾರದಿಂದ ಎಲ್ಲಕ್ಕು ಮೊದಲು ಬುದ್ಧನೇ ಮಾಂಸಾಹಾರಿಯೆಂದು ಅವನಮೇಲೆ ಈ ದೋಷವನ್ನು ಆರೋಪಿಸಿ ಅರಗಾಗಿರುವರು. ಯಾಕಂದರೆ ಟಿಳಕರು ಗೀತಾರಹಸ್ಯದಲ್ಲಿ ಎಲ್ಲಿಯಾದರೂ ಬ್ರಾಹ್ಮಣರು ಮಾಂಸತಿನ್ನುತ್ತಿರುವರೆಂದು ಬರೆದಿರುವರೋ ಹ್ಯಾಗೆ ನೋಡಿರಿ? ಇಲ್ಲ ಅಂದಮೇಲೆ ಇವರ ಕುಟಿಲತ್ವವು ಹ್ಯಾಗಿದೆ ಎಂಬುದನ್ನು ವಾಚಕರೇ ಊಹಿಸಲಿ.

ಇನ್ನು ಶೈವ, ವೀರಶೈವರು ಭಗೇಂದ್ರಿಯದಲ್ಲಿರತಕ್ಕ ಆತ್ಮವನ್ನು ಧ್ಯಾನಿಸಿ ಮುಕ್ತಿಯನ್ನು ಹೊಂದುವರೆಂಬ ಆಗಮಶ್ಲೋಕಗಳನ್ನು ವಿಷ್ಣುವಾಮನ ಚಾಪಟನು ಒಂದುವೇಳೆ ಜನರಿಗೆ ಅಪಹಾಸ್ಯ ತೋರಲೆಂದು ಬರೆದಿದ್ದರೂ ನಾವು ಇದನ್ನು ಒಂದುಪಕ್ಷದಲ್ಲಿ ಆಗಮಶ್ಲೋಕವೆಂದು ಒಪ್ಪಿದಲ್ಲಿ ಈ ಶ್ಲೋಕಾರ್ಥವು ಕೇವಲ ಆಧ್ಯಾತ್ಮಿಕಪರವಾಗಿದ್ದು ಯಾವದೋಷವೂ ಇದರಲ್ಲಿ ಇರುವದಿಲ್ಲ, ಹ್ಯಾಗಂದರೆ, ಭಗ--ಅಂದರೆ, ಐಶ್ವರ್ಯ, ಸರ್ವೈಶ್ವರ್ಯಕ್ಕೆ ಸ್ಥಾನಭೂತವಾದದ್ದು ಜಗತ್ತು, ಆ ಜಗತ್ತಿನಲ್ಲಿ ಇರುವಂಥಾ ಅಂದರೆ ಸರ್ವಜಗದ್ವ್ಯಾಪಿಯಾದವನು ಆತ್ಮನು, ಅಂಥಾ ಸರ್ವಾಂತರ್ಯಾಮಿ ಸರ್ವವ್ಯಾಪಿ ಆತ್ಮತತ್ವವನ್ನು ತಿಳಿಯುವವನು ಮುಕ್ತನಾಗುವನು, ಅಥವಾ ಶಾಂತಿಸ್ಥಿತಿಯನ್ನು ಹೊಂದುವನೆಂಬ ಅರ್ಥವಾಗುತ್ತಿದ್ದು ಇದರಂತೆಯೇ ಉಪನಿಷತ್ತುಗಳಾದರೂ ಆತ್ಮನ ಸರ್ವವ್ಯಾಪಿತ್ವವನ್ನು ಹೇಳುವವು.

"ಯಸ್ತುಸರ್ವಾಣಿಭೂತಾನಿ ಆತ್ಮನ್ಯೇವಾನುಪಶ್ಯತಿ |

ಯಜುರ್ವೇದ, ಅ. ೪೦.

ಏಕೋದೇವಃ ಸರ್ವಭೂತೇಷುಗೂಢಃ ಸರ್ವವ್ಯಾಪೀಸರ್ವಭೂತಾಂತರಾತ್ಮಾ ॥ (ಶ್ವೇತಾಶ್ವತರೋಪನಿಷತ್ ಅ. ೬)

ಆತ್ಮನಲ್ಲಿ ಸರ್ವಭೂತಗಳು ಹಾಗೂ ಸರ್ವಭೂತಗಳಲ್ಲಿ ಆತ್ಮನು ಅಡಕನಾಗಿರುವನೆಂದು ಪರಸ್ಪರ ವ್ಯಾಪಕತ್ವವನ್ನು ವೇದೋಪನಿಷತ್ತುಗಳು ಆತ್ಮತತ್ವವನ್ನು ತೋರಿಸುತ್ತಿದ್ದು ಅದೇತತ್ವವನ್ನು ಈ ಆಗಮಶಾಸ್ತ್ರವೂ ಹೇಳಿದ್ದು ಇದನ್ನು ಪೂರ್ವಾಪರ ವಿಚಾರಮಾಡದೇ ಚೇಷ್ಟೆಗಾಸ್ಪದಮಾಡಿ ತೋರಿಸಿರುವನು.

ಇದೇ ಚಾಪಟನು ಜೈನದರ್ಶನಸಾರವೆಂಬ ಗ್ರಂಥವನ್ನು ಮರಾಠಿಯಲ್ಲಿ ಬರೆದಿದ್ದು ಅದರಲ್ಲಿ ಅವನು "ಜೈನಧರ್ಮವು ಕೇವಲ ನಾಸ್ತಿಕಧರ್ಮವೆಂತಲೂ ಇದು ಅರ್ವಾಚೀನಕಾಲದಿಂದ ಪ್ರಚಾರದಲ್ಲಿ ಬಂದಿದ್ದು ಇದರಲ್ಲಿಯ ಶ್ವೇತಾಂಬರಪಂಥವಂತೂ ವಿದ್ಯಾರಣ್ಯ ಮೊದಲಾದವರ ಕಾಲಕ್ಕೆ ಅಂದರೆ ಈವತ್ತಿಗೆ ೬೦೦ ವರ್ಷಗಳ ಸುಮಾರಕ್ಕೆ ಹುಟ್ಟಿದ್ದೆಂತಲೂ ಈ ಜೈನಧರ್ಮದಲ್ಲಿಯ ಸಂನ್ಯಾಸಿಗಳು ತಲೆಯನ್ನು ಬೋಳಿಸದೇ ಚಿಮಟಿಗೆಯಿಂದ ಕೂದಲಕೀಳಿಸುವದು ಹಾಗೂ ಮೂಗುಕಟ್ಟುವದು ಇವೇ ಮೊದಲಾದ ಅನಿಷ್ಟ ಕಷ್ಟಕಾರಕಕೃತಿಗಳಿರುವವೆಂದು ಬಹಳ ಹೀಯಾಳಿಸಿ ಈ ಜೈನಧರ್ಮವು ಮೋಕ್ಷಪ್ರಾಪ್ತಿಗೆ ಸರ್ವಥಾ ಅನುಕೂಲಸ್ಥಿತಿಯುಳ್ಳದ್ದಿರುವದಿಲ್ಲವಾದ್ದರಿಂದ ಇದು ಸರ್ವಥಾ ತ್ಯಾಜ್ಯವೇ ಸರಿ" ಎಂದು ನಿರ್ಧರಿಸಿ ಬರೆದಿರುವನು.

ಇನ್ನು ಈ ಚಾಪಟನೊಬ್ಬನೇ ಯಾಕೆ, ಇದರಂತೆ ಯಾವ ಬ್ರಾಹ್ಮಣನೂ ಯಾವ ಧಾರ್ಮಿಕಪುಸ್ತಕವನ್ನು ಬರೆದರೂ ಜೈನಧರ್ಮವನ್ನು ಸರಿಯಾಗಿ ತಿಳಿಯುವದಾ ಇಲ್ಲ. ಇಷ್ಟೇ ಅಲ್ಲದೇ

ತವಾದ ಸರ್ಕಾರದ ಅಪ್ಪಣೆಯನ್ನು ಪತ್ರಿಕಾಮುಖದಿಂದ ತಿಳಿದು ವೀರಶೈವ ಜನಾಂಗವೆಲ್ಲವೂ ಕಲುಷಿತಮನಸ್ಸುಳ್ಳದಾಗಿರುವುದು. ಅನಂತ ವರುಷಗಳಿಂದಲೂ ಚಕೋರವು ಚಂದ್ರನನ್ನೇ ನಿರೀಕ್ಷಿಸಿಕೊಂಡಿದ್ದಂತೆ ಕಾದಿದ್ದ ವೀರಶೈವ ಮಹಾಜನಗಳೆಲ್ಲರೂ ಈ ಹುಕುಮನ್ನು ನೋಡಿ ಹತಾಶೆಯುಳ್ಳವರಾದರು. ಇವರ ರೋದನವೆಲ್ಲವೂ ಅರಣ್ಯದಲ್ಲಿ ವ್ಯಾಪಿಸಿದ ಚಂದ್ರಿಕೆಯಂತೆ ನಿಷ್ಫಲವಾಯಿತು. ವೈದಿಕಬ್ರಾಹ್ಮಣರ ವಿನಹ ಇತರರಿಗೆ ರಾಜಧಾನಿಯ ಮಹಾಪಾಠಶಾಲೆಯಲ್ಲಿ ಅವಕಾಶವಿಲ್ಲವೆಂಬ ಮಾತಿನ ಅರ್ಥವನ್ನು ವಿಚಾರಮಾಡಿದರೆ, ವೀರಶೈವ ಸಿದ್ಧಾಂತರಹಸ್ಯವನ್ನು ಎಷ್ಟರಮಟ್ಟಿಗೆ ಪರಿಶೀಲಿಸಿ ಈ ಅಭಿಪ್ರಾಯವನ್ನು ಪ್ರಕಟಪಡಿಸಿರುವರು ಎಂಬುದು ನೋಡುವವರಿಗೆ ಸ್ಪಷ್ಟವಾಗುವುದು. ಈ ವೀರಶೈವಮತಕ್ಕೂ ಇತರ ವೈದಿಕಮತಗಳಿಗೂ ಇರುವ ತರತಮಭಾವವನ್ನೇ ಆಲೋಚಿಸದೆ ಈ ದೇಶದಲ್ಲಿ ನೆಲಗೊಂಡಿರುವ ದ್ವೈತಾದ್ವೈತ, ವಿಶಿಷ್ಟಾದ್ವೈತ ಮತಾವಲಂಬಿಗಳಾದ ಕೆಲ ತ್ರಿಮತಬ್ರಾಹ್ಮಣರು ತಮ್ಮಲ್ಲಿ ಮಾತ್ರ ವೈದಿಕತ್ವಸ್ಥಿರೀಕರಣಾಪೇಕ್ಷೆಯಿಂದಲೂ, ಆತಿರಿಕ್ತರಲ್ಲಿ ಅವೈದಿಕತ್ವಸ್ಥಾಪನೇಚ್ಛೆಯಿಂದಲೂ ಮೈಯ್ಯುಂಡಪಿಶಾಚಿಯಂತೆ ತಾವೇ ವೈದಿಕರೆಂತಲೂ, ಇತರರು ಅವೈದಿಕರೆಂತಲೂ, ವೇದಗಳೂ ಉಪನಿಷತ್ತುಗಳೂ ತ್ರಿಮತಬ್ರಾಹ್ಮಣರ ಮನೆಯ ಸ್ಥಿರಸೊತ್ತೆಂತಲೂ, ವಿಕ್ಕಮತಕ್ಕೆ ಈ ಸ್ವತ್ತಿನಮೇಲೆ ಅಧಿಕಾರವಿಲ್ಲವೆಂತಲೂ ವಿಜೃಂಭಿಸುತ್ತಿರುವರು. ಭುಂಜಿಸುವುದಕ್ಕೆ ಮುಷ್ಟಿಪಿಷ್ಟವಿಲ್ಲದಿದ್ದರೂ ಅನ್ನದಾನಿ ಎಂದು ಹೇಳಿಸಿಕೊಳ್ಳುವವರಂತೆ ಬ್ರಾಹ್ಮಣ್ಯವನ್ನೇ ಕ್ರಿಯಕ್ಕೆ ತೆಗೆದುಕೊಂಡು ತಾದಾತ್ಮ್ಯವನ್ನು ಹೊಂದಿರುವರು.

ಈ ಬ್ರಾಹ್ಮಣರಿಗಾಧಾರವಾದ ದ್ವೈತಾದಿಮತಗಳು ಒಂದೊಂದು ಕಾಲದಲ್ಲಿ ಒಬ್ಬೊಬ್ಬ ಮಹನೀಯರಾದ ಆಚಾರ್ಯರಿಂದ ವ್ಯಾಸಕೃತ ಉತ್ತರಮೀಮಾಂಸೆಯಮೇಲೂ, ಈಶಾವಾಸ್ಯ-ಕೇನಾದಿ ದಶೋಪನಿಷತ್ತುಗಳ ಮೇಲೂ, ಭಗವದ್ಗೀತೆಯಮೇಲೂ ಅವರವರು ಸಾಧಿಸಿ ಹೊಂದಿದ ಬ್ರಹ್ಮಾನಂದ ವಿಷಯವಾಗಿ ಸೂತ್ರಭಾಷ್ಯವೂ, ಉಪನಿಷದ್ಭಾಷ್ಯವೂ, ಗೀತಾಭಾಷ್ಯವೂ ಬರೆಯಲ್ಪಟ್ಟು ಒಂದೊಂದು ಉಪಾಸನಾಮಾರ್ಗವಂ ಸ್ಥಿರಗೊಳಿಸಿ ವೈದಿಕತ್ವವನ್ನು ಸ್ಥಾಪಿಸಿದರು. ಇದರಂತೆ ಇನ್ನೂ ಅನೇಕ ಹಜಾರು ಮತಗಳು ಆಯಾಯ ಆಚಾರ್ಯರಿಂದ ಆಯಾಯಕಾಲಗಳಲ್ಲಿ ಅನೇಕ ದೇಶಗಳಲ್ಲಿ ಸ್ಥಾಪಿಸಿ ಪ್ರಕಾಶಗೊಳಿಸಲ್ಪಟ್ಟಿವೆ. ಆ ವೈದಿಕಮತಗಳೊಳಗೆ ಎಷ್ಟೋ ಬಲವಾಗಿ ಹೋಗಿರುವುವು. ಈ ದ್ವೈತಾದ್ವೈತ, ವಿಶಿಷ್ಟಾದ್ವೈತಗಳೆಂಬ ಮೂರುಮತಗಳಿಗಿಂತಲೂ ಅತಿಪ್ರಾಚೀನವಾದ ಈ ವೀರಶೈವಮತವು ಶ್ರೀಜಗದ್ಗುರು ರೇಣುಕಾದ್ಯಾಚಾರ್ಯರಿಂದ ವೇದಾಗಮ ಪ್ರಮಾಣದ್ವಾರಾ ಪ್ರಸ್ಥಾನತ್ರಯ ಭಾಷ್ಯರಚನಾ ಪುರಸ್ಸರವಾಗಿ ಸ್ಥಾಪಿಸಲ್ಪಟ್ಟು ಅದ್ಯಾಪಿ ವೇದೋಕ್ತಧರ್ಮಗಳಿಂದೊಡಗೂಡಿ ಕರ್ಮಾನುಷ್ಠಾನಪರರಾದ, ಪರಮಪವಿತ್ರರಾದ ಈ ವೀರಶೈವ ಮತೀಯರನ್ನು ಸರ್ಕಾರದವರು ಹಿಂದುಗಳಲ್ಲದವರ ಜತೆಯಲ್ಲೂ ಬ್ರಾಹ್ಮಣಿಕೆಗೆ ಅಧೀನವಾದ ಶಾಖೆಯವರೊಡನೆಯೂ ಸೇರಿಸಿ ಪ್ರತ್ಯೇಕವಾಗಿ ಹಿಂದುಮತಗಳಲ್ಲಿ ಒಂದಾದ ಈ ಮತವನ್ನು ತಲೆಗೆಲ್ಲಾ ಒಂದೇಶಾಸ್ತ್ರವೆಂಬ ಹಾಸ್ಯೋಕ್ತಿಯಂ ಅನುಕರಿಸಿರುವುದು ಈ ಜನಾಂಗಕ್ಕೆಲ್ಲಾ ಶೋಚನೀಯವಾದ ವಿಷಯವಾಗಿರುವುದು. ಒಂದುವೇಳೆ ಈ ವೀರಶೈವರು ಇತರ ಜಾತಿಯವರಂತೆ ಕೇವಲ ರೂಢವಾಗಿ ಬಂದಿರುವ ಬ್ರಾಹ್ಮಣ್ಯವೆಂಬ ಅಗ್ರಶಾಖೆಗೆ ಅಧೀನರಾಗಿದ್ದರೆ ಈ ನವನಾಗರಿಕತೆಯಂತೆ ಒಪ್ಪಿಕೊಳ್ಳದಿದ್ದರೂ ಪ್ರಾಚೀನಕಾಲದ ಪದ್ಧತಿಯಂತೆ ಒಪ್ಪಲೂಬಹುದು. ಹಾಗೆ ಗ್ರಂಥದಲ್ಲಿಯಾಗಲೀ ಅನುಭವದಲ್ಲಿಯಾಗಲೀ ವೀರಶೈವ ದ್ವೈತದವಲಂಬಿಗಳಾದ ಆಧುನಿಕಬ್ರಾಹ್ಮಣರಿಗೂ ಆ ಮತಾಚಾರ್ಯರಿಗೂ ಶಿಷ್ಯಭಾವವನ್ನು ವಹಿಸಿಲ್ಲವು. ಅಮತವೃಕ್ಷಗಳಲ್ಲಿ ಸೇರಿದ ಶಾಖೆಗಳಲ್ಲಿ ಈ ಮತವು ಯಾವ ಶಾಖೆಗೂ ಸೇರುವುದಿಲ್ಲವು. ಲಿಂಗಾಂಗಿಯಾದವನಿಗೆ ಅಲಿಂಗಿಯಾದವನ ಸೇವೆಯು ಪ್ರತ್ಯವಾಯಜನಕವೂ ಆಗಿರುವುದು. ಈ ಮತವು ವೇದಮೂಲಕಗಳಾದ ದ್ವೈತಾದಿಮತಗಳಂತೆ ಸ್ವತಂತ್ರವಾದ ವೈದಿಕಮತವಾಗಿರುವುದು. ಆದುದರಿಂದಲೇ ವೀರಶೈವಮತದ ವರ್ಣಾಶ್ರಮಧರ್ಮಗಳಿಗೂ, ವಿಕ್ಕವರ್ಣಾಶ್ರಮಧರ್ಮಗಳಿಗೂ ಅನೇಕ ಭಾಗಗಳಲ್ಲಿ ವ್ಯತ್ಯಾಸವಿರುವುದು.

ವೀರಶೈವಸಿದ್ಧಾಂತದಲ್ಲಿ “ವರ್ಣಾಶ್ರಮೋಹಿದ್ವಿವಿಧಃ” ಎಂದು ಪ್ರತ್ಯೇಕವಾಗಿ ವಿಂಗಡಿಸಿರುವರು ಮತ್ತು “ಯಜ್ಞೋಪವೀತಂ ಪರಮಂ ಪವಿತ್ರಂ” “ಸರ್ವಾನನಶಿರೋಗ್ರೀವಃ ಸರ್ವಭೂತಗುಹಾಶಯಃ” “ಏತತ್ಸೋಮಸ್ಯ ಸೂರ್ಯಸ್ಯ ಸರ್ವಲಿಂಗಂಸ್ಥಾಪಯತಿ ಪಾಣಿಮಂತ್ರಂಪವಿತ್ರಂ” “ನಮೋಸ್ತು ಬ್ರಹ್ಮಣೇಧಾರಣಂಮೇಸ್ತು” ಮೊದಲಾದ ಅನಂತಶ್ರುತಿಗಳಿಗೂ ಶಿವಲಿಂಗಧಾರಣಪರವಾದ ಅರ್ಥವನ್ನು ರಚಿಸಿರುವುದಲ್ಲದೆ “ಅಷ್ಟಾವರಣಸಂಪನ್ನಾಃ ಪಂಚಾಚಾರಪರಾಯಣಾಃ ವೈದಿಕಂಕರ್ಮಕುರ್ವೀತ ಜ್ಞಾನೈಕಫಲಸಾಧನಂ ವಂಶಾವಳಿಪ್ರಯಾತಾನಾಂ ಲಿಂಗಧಾರಣಶಾಲಿನಾಂ” ಮೊದಲಾದ ಶಿವಾಗಮಪುರಾಣವಾಕ್ಯಗಳಿಂದಲೂ ವೀರಶೈವಮತಕ್ಕೆ ಪರಮವೈದಿಕತ್ವವು ಅನೇಕ ಉದ್ದಾಮಗ್ರಂಥಗಳಿಂದ ಸಾಧಿಸಲ್ಪಟ್ಟಿರುವುದು. ಮತ್ತು ಸ್ವಸಿದ್ಧಾಂತಗ್ರಂಥಗಳಲ್ಲಿ ಶಕ್ತಿವಿಶಿಷ್ಟಾದ್ವೈತವೆಂದು ಪೃಥಕ್ಕಾಗಿ ಸಂಕೇತವೂ ಮಾಡಲ್ಪಟ್ಟು ವ್ಯಾವರ್ತಕ ಧರ್ಮವೂ ತೋರಿಸಿರುವುದರಿಂದ ದ್ವೈತ, ಅದ್ವೈತ, ವಿಶಿಷ್ಟಾದ್ವೈತಮತಗಳಿಗಿಂತಲೂ ಈ ಮತವು, ಈ ಮತಾನುಗುಣವಾದ ಜ್ಞಾನಸಂಬಂಧವಾದ ಕ್ರಿಯಾಚರಣೆಯೂ, ಉಪಾಸನೆಯೂ, ಉಪಾಸನಾನಂತರ ಲಭಿಸುವ ಮೋಕ್ಷಾನಂದವೂ ಪ್ರತ್ಯೇಕವಾಗಿಯೇ ಇರುವುದು. ದ್ವೈತಾದಿಮತಪ್ರಭೇದಗಳೊಳಗೆ ಯಾವುದರಲ್ಲಿಯೂ ಸೇರುವುದಿಲ್ಲವು. ಈ ಮತೀಯರು ವೇದಾಗಮೋಕ್ತಗಳಾದ ಕರ್ಮಾನುಷ್ಠಾನಬಲದಿಂದಲೇ ದೇಹಾಂತರ್ವರ್ತಿಯಾದ, ಕಿಂಚಿಜ್ಞಭಾವವನ್ನು ಪಡೆದ, ಅಂಗಶಬ್ದವಾಚ್ಯರಾದ ಜೀವರು ಲಿಂಗಶಬ್ದವಾಚ್ಯನಾದ ಪರಮಾತ್ಮನ ಧ್ಯಾನಧಾರಣಸಮಾಧ್ಯಾದಿಗಳಿಂದ ವಿಮೋಚನೆಯನ್ನು ಹೊಂದಬೇಕಾದುದರಿಂದಲೂ, ಮತ್ತು ಈ ಮತಸಂಬಂಧವಾದ ನಿತ್ಯನೈಮಿತ್ತಿಕಾದಿ ಕರ್ಮಗಳೆಲ್ಲವೂ ವೇದೋಕ್ತಗಳಾಗಿಯೇ ಇರುವುದರಿಂದಲೂ ವೀರಶೈವರಿಗೆ ವೇದಾಧ್ಯಯನವು ತದಂಗಶಾಸ್ತ್ರಾಧ್ಯಯನವೂ ಜೀವಾತುಗಳಾಗಿರುವುವು. ಇತರ ಜನಾಂಗದ ಬ್ರಾಹ್ಮಣೇತರರಿಗೆ ಅಷ್ಟು ಅವಶ್ಯಕವಿಲ್ಲ. ಜೈನರಂತೂ ಈ ವೇದವೇದಾಂಗಗಳಿಗೆ ಅಷ್ಟು ಪ್ರಾಮುಖ್ಯತೆಯನ್ನು ಕೊಡುವುದೂ ಇಲ್ಲ. ಈ ವೇದೋಪನಿಷತ್ತುಗಳಿಗೆ ಪ್ರತಿಯಾಗಿ ಆತ್ಮೋದ್ಧಾರಕಗಳಾದ ಪವಿತ್ರಗ್ರಂಥಗಳು ಇದ್ದೇ ಇರುವುವು. ಈ ವೀರಶೈವಮತದ ಯಾವದ್ಗ್ರಂಥಗಳೂ ಋಗಾದಿವೇದಕ್ರಿಯಾಧಾರದಿಂದಲೇ ಹುಟ್ಟಿ, ಆದ್ಯಂತಭಾಗಗಳೆಲ್ಲವೂ ತನ್ಮಯವೇ ಆಗಿರುವುವು. ವೀರಶೈವರಿಗೆ ತ್ರಿಕಾಲದಲ್ಲಿಯೂ ಪರಮಧ್ಯೇಯವಾದ “ಶಿವಪಂಚಾಕ್ಷರಿ” ಎಂಬ ಮಹಾಮಂತ್ರವಾದರೋ ವೇದಚತುಷ್ಟಯದಲ್ಲಿ ಪ್ರಧಾನವಾದ ಯಜುರ್ವೇದದ ಚತುರ್ಥಾಧ್ಯಾಯದಲ್ಲಿ, ಅಷ್ಟಮೋನುವಾಕಾಂತರ್ಗತವಾಗಿರುವುದು. ಈ ಮಂತ್ರಕ್ಕೆ ವಾಚ್ಯವೆನಿಸಿರುವ ಇವರ ಶಿವಲಿಂಗಾರ್ಚನಾವಸರವಂತೂ ಕೇವಲ ವೇದಮಂತ್ರಗಳಿಂದಲೇ ನಡೆಯಬೇಕಾಗಿರುವುದು. ಮತ್ತು ಈ ಮತೀಯರಿಗೆ ಆಗಾಗ್ಗೆ ನಡೆಯುವ ಶುಭಶೋಭನಹವ್ಯಕವ್ಯಗಳ ನಿರ್ವಾಹಕ್ಕಾಗಿ ಪ್ರತಿಯೊಂದು ಗ್ರಾಮಗಳಲ್ಲಿ ಮಠಾಧಿಕಾರಿಗಳು ಪ್ರಾಚೀನಕಾಲದಿಂದಲೂ ಏರ್ಪಟ್ಟಿದ್ದಾರೆ. ಇವರಿಗೆಲ್ಲಾ ಆಯಾ ಕಾಲಗಳಲ್ಲಿ ಸಂಭವಿಸುವ ವೈದಿಕ ಕಾರ್ಯಗಳಿಗೆ ವೇದಾಧ್ಯಯನ ತದನುಷ್ಠಾನಗಳು ಇದ್ದೇ ಇರಬೇಕು. ಈ ಸೌಕರ್ಯಗಳಿಗಾಗಿಯೇ ಸಾರ್ವಜನಿಕವಾದ ದ್ರವ್ಯದಿಂದ ಪೋಷಿಸಲ್ಪಡುತ್ತಿರುವ ಮೇಲ್ಕಂಡ ಉಭಯಪಾಠಶಾಲೆಗಳಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಅವಕಾಶವಂ ಕಲ್ಪಿಸಿಕೊಡಬೇಕೆಂದು ಅನೇಕಧಾ ಅನೇಕಪ್ರಮಾಣ, ಅನುಭವಗಳೊಡನೆ ಸರ್ಕಾರಕ್ಕೆ ಪ್ರಾರ್ಥಿಸಿಕೊಂಡು, ಬೇಸಾಯಗಾರನು ಮೇಘೋದಯವನ್ನೇ ಬಯಸಿಕೊಂಡು ನಿರೀಕ್ಷಿಸುತ್ತಿರುವಂತೆ, ಸರ್ಕಾರಿಯ ಸುಮುಖವಾದ ಅಪ್ಪಣೆಯನ್ನೇ ನಿರೀಕ್ಷಿಸಿಕೊಂಡಿರುವಲ್ಲಿ ಜಂಝಾಮಾರುತವು ಮೇಘಮಂಡಲವನ್ನೇ ಚದುರಿಸಿಬಿಡುವಂತೆ ವಿಪರೀತವಾಗಿ ಬಂದಿರುವ, ಸರ್ಕಾರಿಯಪ್ಪಣೆಯನ್ನು ನೋಡಿ ಈ ಜನಾಂಗವೆಲ್ಲಾ ಭಗ್ನಮನೋರಥವುಳ್ಳದಾಗಿದೆ. ಕೇವಲ ಶುಷ್ಕವಾದ ಸಂಸ್ಕೃತವು, ಗಾಣಕ್ಕೆಕೊಟ್ಟ ಕಬ್ಬಿನಸಿಪ್ಪೆಯಂತೆ ನೀರಸವೇ ಸರಿ. ಹೀಗೆ ವಿಷಮವಾಗಿ ಸಂಸ್ಕೃತಾಭ್ಯಾಸ ವಿಷಯದಲ್ಲಿ ತೋರಿಸುವ, ದಯಾರಸವೆಲ್ಲವೂ ಸಹಜವಲ್ಲವು. ವೀರಶೈವರಿಗೆ ಸಂತೋಷಪ್ರದವೂ ಅಲ್ಲ. ಇಂತಹ ಸಪ್ರಮಾಣವಾದ ವೈದಿಕರೆಂದೆನಿಸಿರುವ ವೀರಶೈವರಲ್ಲಿಯೇ ಅನೇಕ ವಿಧವಾದ ಭಿನ್ನಾಭಿಪ್ರಾಯಗಳು ಸಿದ್ಧವಾಗುವಾಗ ಇತರ ಜನಾಂಗ ವಿಷಯದಲ್ಲಿ ವೇದವೇದಾಂಗಾಭ್ಯಾಸಕ್ಕೆ ಎಷ್ಟರಮಟ್ಟಿಗೆ ಅವಕಾಶವು ದೊರೆಯುವುದು? ಬ್ರಾಹ್ಮಣರೆಂದು ಅಭಿಮಾನಿಸಿಕೊಳ್ಳುತ್ತಿರುವವರು ನ್ಯಾಯತಃ ವೈದಿಕ ವರ್ಗದಲ್ಲಿ ಸೇರಿದ ವೀರಶೈವರನ್ನೇ ಪ್ರತಿಕಕ್ಷಿಗನ್ನಾಗಿ ಭಾವಿಸಿಕೊಂಡು ಅಧಿಕಾರಿ, ಅನಧಿಕಾರಿಭೇದವಂ ಕಲ್ಪಿಸಿಹೋರಾಡುತ್ತಿರುವಲ್ಲಿ ನಿಖಿಲಭಾರತೀಯ ಮಾತೆಯಲ್ಲಿ ಜನಿಸಿದ, ಇತರ ಜನಾಂಗಗಳಲ್ಲಿ ಇವರ ಮೈತ್ರಿಯೂ, ಏಕತೆಯೂ, ಸೌಷ್ಠವವೂ ಎಷ್ಟರಮಟ್ಟಿಗೆ ಸ್ಥಿರವಾದುವೆಂದು ತಿಳಿಯಬಹುದು? ಶ್ರೀ ಶಂಕರಾಚಾರ್ಯರಿಂದ ಅಂಗೀಕೃತವಾದ ಷಣ್ಮತಗಳೊಳಗೊಂದಾದ ಶೈವರಲ್ಲಿ “(ಆಚಾರಭೇದಾತ್ತಂತ್ರಭೇದಾತ್ತ್ರೈವಿಧುನಾ, ಸಾಮಾನ್ಯಶೈವಂಪ್ರಥಮಂ, ಮಿಶ್ರಶೈವಂತತಃಪರಂ ಶುದ್ಧಶೈವಂತಥಾಜ್ಞೇಯಂ ವೀರಶೈವಂತತಃಪರಂ” ಎಂದು ಪಾರಮೇಶ್ವರಸುಪ್ರಭೇದಾಗಮಗಳಲ್ಲಿಯೂ ಹೇಳಿರುವಂತೆಯೇ ವೀರಶೈವವು ಒಂದು ಭಾಗವಾಗಿರುವುದು. “(ರುದ್ರೇಣಾತ್ತಮುಕ್ಷಂತಿ ರುದ್ರೇಣಪೀತಂ ಪಿಬಂತಿ ರುದ್ರೇಣಾಘ್ರಾತಂ ಜಿಘ್ರಂತಿ, ತಸ್ಮಾದ್ಬ್ರಾಹ್ಮಣಾಃ ಪ್ರಶಾಂತಮನಸೋವಿದ್ವಾಂಸೋನಿರ್ಮಾಲ್ಯಮೇವಭಕ್ಷಯಂತಿ” ಮೊದಲಾದ ಹಂಸೋಪನಿಷತ್ತು ಜಾಬಾಲೋಪನಿಷತ್ತುಗಳಿಂದಲೂ ಉತ್ತಮಾಂಗಗಳೇವಾಪಿ.. |ಪ್ರಾಣಲಿಂಗಂಧರೇತ್ಸುಧೀಃ||ಗಚ್ಛ್ ತಿಷ್ಠ್ ....ಲಿಂಗಂಸರ್ವತ್ರಧಾರಯೇತ್ | ಎಂಬ ಸ್ಕಾಂದೋಕ್ತಿಗಳಿಂದಲೂ “ಘ್ರಾತಮೇವಜಿಘ್ರಂತಿ ಪೀತಮೇವಪಿಬಂತಿಹಿ | ಎಂಬ ಆಗಮೋಕ್ತಿಗಳಿಂದಲೂ “ತ್ವಂ ದೇವೇಷುಬ್ರಾಹ್ಮಣೋಸ್ಯಹಂ ಮನುಷ್ಯೇಷು ಬ್ರಾಹ್ಮಣಃ | ಬ್ರಾಹ್ಮಣೋ ವೈಬ್ರಾಹ್ಮಣಮುಪಧಾವತಿ” ಮೊದಲಾದ ಸಾಮಶಾಖಾ ಯಜುಶ್ಶಾಖಾದಿ ಶ್ರುತಿಗಳಿಂದ ಶಿವಾರಾಧನೆಯಂ ಮಾಡುವ ಶೈವರೊಳಗೆ ಅತಿಶಯವಾದ ಪಾರಮ್ಯವನ್ನು ಪಡೆಯುವವರಾದುದರಿಂದ ಇವರಿಗೆ ವೀರಶೈವ ಎಂಬ ನಾಮವು ಬಂದಿರುವುದು. ಇಂತಹ ವೇದ, ಆಗಮ, ಇತಿಹಾಸ, ಪುರಾಣಗಳಲ್ಲಿ ಕೇಂದ್ರಸ್ಥಾನವಂ ಪಡೆದಿರುವ ಈ ವೀರಶೈವಮತಕ್ಕೆ ಅವೈದಿಕತ್ವಾರೋಪಣೆ ಮಾಡಿರುವುದನ್ನು ನೋಡಿ ವೀರಶೈವರು ಸಹಿಸುವರೆ? ಅವೈದಿಕರೆಂದರೆ ಪಾಷಂಡಿಗಳೆಂದರ್ಥವಾಗುವುದಿಲ್ಲವೇ? ಅಂತಹ ಪಾಷಂಡತ್ವವು “ಸತಿಪ್ರತಾಪಭಾವೇನ ವಿಹಾಯಾನತುದ್ವೈತಂ” | ಎಂಬ ಸಿದ್ಧಾಂತೋಕ್ತಿಯನ್ನು ಮಾನಿಸುತ್ತಿರುವ ವೀರಶೈವರಲ್ಲಿ ಅನ್ವಯಿಸುವುದೋ? “ಪಾಷಂಡಾಸ್ಸರ್ವಲಿಂಗಿನಃ” ಎಂಬ ಅಮರಕಾರನ ಉಕ್ತಿಯಂತೆ ಇತರರಲ್ಲಿ ಅನ್ವಯಿಸುವುದೋ? ವಾಚಕರೇ ಊಹಿಸಬೇಕಾಗಿದೆ. ಮತ್ತು (ಶಾಸ್ತ್ರಯೋನಿರ್ಯಸ್ಯ ತಸ್ಯ ಶಾಸ್ತ್ರಯೋನಿತ್ವಮಿಷ್ಯತೆ | ಶಾಸ್ತ್ರಾಣಾಮುಖವಾಯೋರಿತಿತತ್ಸದಿದಾಂಸ್ಥಿತಿಃ | ಬ್ರಹ್ಮಣಶ್ಶಾಸ್ತ್ರಯೋನಿತ್ವಾತ್ ತತ್ತ್ರೋಪನಿಷದಾಂಗಣಃ | ವಿಷಯತ್ವೇನನಿರ್ಣೀತಃ ವಿಷಯೋಬ್ರಹ್ಮಧಾರಣಂ | ಏತೇಷಾಂಬ್ರಹ್ಮವಾಕ್ಯಾನಾಂ ಅನ್ವಯೋಬ್ರಹ್ಮಣಿಸ್ಮೃತಃ | ಸಮನ್ವಯಾತ್ತುಬ್ರಹ್ಮೈವ ಧಾರ್ಯಂಪೂಜ್ಯಂಮುಮುಕ್ಷುಭಿಃ | ವೈಷಮ್ಯದ್ಯೋತನಾರ್ಥಾಯ ತುಶಬ್ದೋಯಂಪ್ರಕಾಶಿತಃ | ಇತ್ಯಾದಿಯಾಗಿ ನೀಲಕಂಠಶಿವಾಚಾರ್ಯಕೃತ ಸೂತ್ರಭಾಷ್ಯದ ಕಾರಿಕಾರಚನಾವಸರದಲ್ಲಿ ಮೂರನೆಯ ಸೂತ್ರವೆನಿಸಿದ “ಶಾಸ್ತ್ರಯೋನಿತ್ವಾತ್” ಎಂಬ ಬ್ರಹ್ಮಸೂತ್ರಕ್ಕೆ ಕಾರಿಕಾಕಾರರು ಶಿವಲಿಂಗಧಾರಣಪರವಾಗಿ ಅರ್ಥವಂ ರಚಿಸಿರುವರು. ಇದೆಲ್ಲವೂ ವೀರಶೈವರಲ್ಲಿ ಪ್ರಕಾಶಮಾನಗಳಾಗಿದ್ದೂ ಇದೊಂದನ್ನೂ ಅವಲೋಕಿಸದೆ ಪ್ರಜಾವರ್ಗವನ್ನೆಲ್ಲಾ ಸಮವಾಗಿ ನೋಡುತ್ತಿರುವ ನಮ್ಮ ಮಹಾಸರ್ಕಾರವು ಹೀಗೆ ವೈಷಮ್ಯವಾಗಿ ತೀರ್ಪುಕೊಟ್ಟದ್ದು ಈ ಜನಾಂಗಕ್ಕೆಲ್ಲಾ ಅಸಮರ್ಪಕವಾಗಿರುವುದು. (ಸಶೇಷ)

ಬಾಳೇಹೊನ್ನೂರ ಶ್ರೀ ಜಗದ್ಗುರು ಪೀಠಾಧಿಕಾರವು.

(ಲೇಖಕ—ಚಂದ್ರಕಾಂತ, ಬಿ.ಎ., ಎಲ್.ಎಲ್.ಬಿ.)

ಪ್ರಕೃತದಲ್ಲಿ ಬಾಳೇಹೊನ್ನೂರ ಪೀಠವು ಬರಿದಾಗಿ 3 ವರ್ಷಗಳಾಗುತ್ತ ಬಂದರೂ ಆ ಪೀಠಕ್ಕೆ ಯೋಗ್ಯವಟುವಿನ ನಿಯೋಜನೆಯು ಇನ್ನೂ ಆಗದಿರುವದು ಆಶ್ಚರ್ಯದ ಮಾತಾಗಿದೆ. ಈ ಸಿಂಹಾಸನವು ಮಿಕ್ಕ ಸಿಂಹಾಸನಗಳಿಗಿಂತಲೂ ಹೆಚ್ಚು ಪ್ರಸಾರವಾದುದು. ಶಾಖಾಮಠಗಳು ಅಧಿಕವಾಗಿದ್ದು ಇಡೀ ಸಮಾಜಕ್ಕೇ ವಿಶೇಷವಾಗಿ ಸಂಬಂಧಪಟ್ಟದ್ದಾಗಿರುವದು. ಆದರೂ ಈ ಕಾರ್ಯವು ಇಷ್ಟು ವಿಲಂಬವಾಗಬೇಕಾದರೆ ಸಮಾಜದವರ ಉಪೇಕ್ಷೆಯಿಂದಲ್ಲ. ಯಾಕೆಂದರೆ—ಯಾರಬಾಯಿಯಲ್ಲಿ ನೋಡಿದರೂ ಕಳೆದ ಕೆಲವುದಿವಸಗಳಿಂದಲೂ ಈ ಪೀಠದ ವಿಷಯದ ಮಾತೇಮಾತು. ಸಮಾಜದಲ್ಲಿಯ ಪ್ರಮುಖರು ಅಥವಾ ಸಮಾಜದಲ್ಲಿಯ ಮುಖ್ಯ ಪಕ್ಷದವರು ಇಲ್ಲವೇ ಸಿಂಹಾಸನದ ಅಭಿಮಾನಿಗಳು ಈ ಕಾರ್ಯವಿಚಾರದಲ್ಲಿ ಮೈಮರೆತು ಕೂತಿರುವರೆಂದು ಅನ್ನಬಾರದಾಗಿದೆ. ಯಾಕಂದರೆ—ಒಬ್ಬೊಬ್ಬರ ಉಗಿಬಂಡಿಯ ವೆಚ್ಚವೂ ಅಂಚೆಯವೆಚ್ಚವೂ ಅಳತೆಯಿಲ್ಲದಷ್ಟು ಆಗಿರುವದು, ಅಥವಾ ಸಮಾಜದ ಬಹುಜನರು ಈ ಪಟ್ಟಕ್ಕೆ ವಿರೋಧಿಸುವದರಿಂದ ವಿಲಂಬವಾಯಿತೆಂದೂ ಅನ್ನುವಂತಿಲ್ಲ. ಏಕೆಂದರೆ ಇಡೀ ಸಮಾಜವೇ ಬಾಳೇಹಳ್ಳಿ ಪೀಠಕ್ಕೆ ಅಧಿಕಾರಿಗಳು ತೀವ್ರ ಆಗತಕ್ಕದೆಂಬದಾಗಿ ಹಗಲಿರಳು ಹಂಬಲಿಸುತ್ತಿರುವದು. ಹೀಗೆ ಸರ್ವರಲಕ್ಷ್ಯವೂ ಅತ್ತ ಪೂರೈಸಿದ್ದು ಎಷ್ಟೋಜನರ ವಿಶ್ವಪ್ರಯತ್ನವು ಕಳೆದಷ್ಟೋ ತಿಂಗಳಿನಿಂದ ನಡೆದಿರುವದಾದರೂ ಇನ್ನೂ ಆ ಕಾರ್ಯವು ಆಗದೇ ಉಳಿದಿರುವದೆಂದಮೇಲೆ ಅದರಲ್ಲಿ ಏನಾದರೂ ವಿಶಿಷ್ಟ ಕಾರಣವಿರಬಹುದಲ್ಲವೇ? ಇದರಲ್ಲನೇಕರು ತಲೆಬೆಟ್ಟನ್ನುವತನಕ ವರುಷಗಟ್ಟಲೆ ವಿಚಾರಮಾಡಿರುವರು. ಕೆಲವರು ಮೈಬೆವರೊಡೆಯುವತನಕ ಕಷ್ಟಪಟ್ಟಿರುವರು. ಆದರೂ ಈ ಕೆಲಸವು ಇನ್ನೂ “ಶ್ರೀ ಗಣೇಶಾಯನಮಃ” ದಲ್ಲಿಯೇ ಉಳಿಯಿತೆಂದಮೇಲೆ ಇವರೆಲ್ಲರುಗಳ ತನು, ಮನ, ಧನಪೂರ್ವಕ ಮಾಡಿದ ಪ್ರಯತ್ನದ ಫಲವೆತ್ತಹೋಯಿತು? ಪೋಸ್ಟ್, ರೇಲ್ವೇ, ಟೆಲಿಗ್ರಾಫ್ ಖಾತೆಯವರ ವರುಷದ ಆದಾಯದಲ್ಲಿ ಉತ್ಪನ್ನವು ಮಾತ್ರ ಬೆಳೆಯಿತು! ಅನ್ಯಸಮಾಜದವರಿಗೆ ವೀರಶೈವರೆಂಬುವರು ಪರಸ್ಪರ ಗುರುಗುಟ್ಟುವ ಪ್ರಾಣಿಗಳ ಸಂಗಡವೆಂಬುವದನ್ನು ಮಾತ್ರ ಮನಸ್ಸಿನಲ್ಲಿ ಬಿಂಬಿಸಿದೆವು. ಇದೇ ಫಲವೇಫಲವು!! ಇದರಿಂದ ಆಟನೋಟಕ್ಕಾಗಿ ಒಂದು ಲಠ್ಠ ಹಗ್ಗವನ್ನು ತಕ್ಕೊಂಡು ಒಂದು ತುದಿಗೆ ಕೆಲವುಜನರು ಮತ್ತೊಂದುತುದಿಗೆ ಕೆಲವುಜನರು ಹಿಡಿದು ಪರಸ್ಪರರು ವಿರುದ್ಧದಿಕ್ಕಿಗೆ ಜಗ್ಗಾಡುವ ಹುಡುಗರ ಆಟ (Tug of war) ದ ಪ್ರತ್ಯಕ್ಷ ಉದಾಹರಣೆಯು ಜಗತ್ತಿನಲ್ಲಿ ಸಿಗಬೇಕಾದರೆ ಅದು ಸದ್ಯದಲ್ಲಿ ಬಾಳೇಹೊನ್ನೂರ ಪೀಠಾಧಿಕಾರ ವಿಷಯದಲ್ಲಿ ನಡೆದಿರುವ ಉಭಯಪಕ್ಷದವರ ವಿಶ್ವಪ್ರಯತ್ನವೇ ಎಂದು ನಿಸ್ಸಂದೇಹವಾಗಿ ಹೇಳಬೇಕಾಗಿದೆ. ಈ ಕಾರ್ಯಕ್ಕೆ ಅಭಿಮುಖರಾಗಿರುವವರಲ್ಲಿ ಎಂಥಹ ಬುದ್ಧಿಶಾಲಿಗಳು! ಮುತ್ಸದ್ದಿಗಳು! ವಿಚಾರಶೀಲರು! ದಿವ್ಯಮೂರ್ತಿಗಳು! ಸಮಾಜಧುರಂಧರರು! ಇವರೆಲ್ಲರೂ ಕೂಡಿಕೊಂಡು ಇಂತಹ ಮಹತ್ತರಪ್ರಸಂಗದಲ್ಲಿ ಬಾಲಿಶತ್ವ ಯನ್ನು ಪ್ರದರ್ಶಿಸುವದು ಯಾರಿಗೆ ಲಾಂಛನವಾದಮಾತು? ಸಮಾಜದ ಸಾಮಾನ್ಯಸ್ವರೂಪದ ಪ್ರಶ್ನೆಯೆಂದು ಆ ದೃಷ್ಟಿಯಿಂದ ಕಾರ್ಯಾವಲಂಬಿಗಳಾಗದೇ ವಿಶಿಷ್ಟಸಂಕಲ್ಪಗಳನ್ನಿಟ್ಟುಕೊಂಡು ಪರಸ್ಪರರಲ್ಲಿ ಅವಿಶ್ವಾಸವನ್ನು ಹುಟ್ಟಿಸುವಂತಹ ಕೃತಿಗಳಿಗೆ ಮುಖವಿಟ್ಟು ಅಶಿಕ್ಷಿತರೂ ಅನಭಿಜ್ಞರೂ ಆದವರಂತೆ ಪ್ರವರ್ತಿಸುವದು ಇವರೆಲ್ಲರುಗಳಿಗೆ ಒಪ್ಪುವಮಾತೇ? ಸಡ್ಡುಹೊಡೆದು ಕಾಲುಕೆದರುತ್ತ ಆತ್ಮಶಕ್ತಿಯ ಪ್ರೌಢಿಮೆಯನ್ನು ಪ್ರದರ್ಶಿಸುವ ಪ್ರಸಂಗವಿದೆಂದೆಣಿಸಿ ಆ ಪ್ರಕಾರ ಸಾಹಸಬಡುತ್ತಿರುವ ಇವರ ಧೋರಣವು ಇವರ ಗೌರವಕ್ಕೆ ಒಪ್ಪುವಮಾತೇ? ಸಮಾಜದೃಷ್ಟಿಯಿಂದ ಯಾರಾದರೂ ಒಂದು ವಿಧಾನವನ್ನಿಟ್ಟರೆ—ಒಬ್ಬರು ಹಾಗಾಗಲೆಂದು “ಗಿಲೀಟು-ಗಿಲಾಯಿ” ಗಳ ಮಾತುಗಳನ್ನಾಡಿ ಅಂತರಂಗದಲ್ಲಿಯ ಸಂಕೇತವನ್ನು ಸಾಧಿಸಲು ಹೆಣಗಾಡುವದು ಇವರಿಗೆ ಯೋಗ್ಯವೇ? ತಮ್ಮ ಇಚ್ಛಾರ್ಥವನ್ನು ಸಾಧಿಸಿಕೊಳ್ಳುವ ಸಮಯವಿದೆಂದು ಸಮಾಜದ ನಿಮಿತ್ತದಿಂದ ಅಸಂಬದ್ಧವಾಗಿ ಸಹಾಸಬಡುವದು ಸಯುಕ್ತಿಕವೇ? ಯಾರು ಸಮಾಜ ಶಾಂತಿ, ಯಾರು ಗುಣಾಢ್ಯತೆ, ಯಾರು ಪಾಂಡಿತ್ಯಪ್ರಾಧಾನ್ಯ ಇವೇ ವಿಚಾರಗಳನ್ನು ಬಹಿರಂಗದಲ್ಲಿ ಆದರಿಸುವ ಲಕ್ಷಣದಿಂದ ಅಂತರಂಗದಲ್ಲಿ ಬೇರೆಬೇರೆ ಸಂಕಲ್ಪಗಳನ್ನು ಕಲ್ಪಿಸಿ ಅವುಗಳ ಸಾಧನೆಗಾಗಿ ಅಂತರ್ಯದಲ್ಲಿ ಪ್ರಯತ್ನಿಸುವದು ಶೋಭಿಸುವ ಮಾತೇ? ತಮ್ಮತಮ್ಮ ವ್ಯಕ್ತಿಗಳ ಧ್ಯೇಯವನ್ನೇ ಈ ಸಾಮಾಜಿಕ ಪ್ರಶ್ನೆಯಲ್ಲಿ ಧುಮುಕಿಸುವದು ಭೂಷಣವಾದ ಮಾತೇ? ಬಹಳ ಒಳ್ಳೇ ಪಾಂಡಿತ! ಒಳ್ಳೇಯ ನಾಗರಿಕತನ! ನ್ಯಾಯಸ್ಥಾನ (Courts) ಗಳನ್ನಾಶ್ರಯಿಸಿ ಹೊಡೆದಾಡಿ ತನು ಮನ ಧನಗಳಿಂದಲೂ ನಾಶವಾಗುವದರಲ್ಲಿ ವೀರಶೈವರು ಮಿಗಿಲೆಂಬವಾಗಿ ಪ್ರಶಂಸಾಪತ್ರವನ್ನು ಪರಮತದವರಿಂದ ಪಡೆದಿರುವೆವು. “ಲೌಕಿಕದಲ್ಲಿ ಅಜ್ಞಾನಪ್ರಾಬಲ್ಯದಿಂದ ಅಶಿಕ್ಷಿತರಿಂದ ಈ ತರಹದ ಯೋಗ್ಯತೆಯು ನಮಗೆ ಸಿಕ್ಕೊ ಸಿಗುತಲೂ ಇರುವದು. ಆದರೆ ಈ ಮಹಾಮಹಾ ಪಂಡಿತಶ್ರೇಷ್ಠರೂ ಅಸಾಧಾರಣ ಅನುಭವಶಾಲಿಗಳೂ ಕೂಡಿರುವ ಈ ಮಹಾಮಂಡಲವೂ ಸಹ ಧಾರ್ಮಿಕ ವಿಷಯದಲ್ಲಿಯೂ ಈ ಪ್ರಸಂಗದಲ್ಲಿ ಅದೇಯೋಗ್ಯತೆಯ ಪತ್ರಕ್ಕಾಗಿ ಮುಖ ನಿಟ್ಟಿರುವದೆಂದರೆ ಇವರ ಪ್ರವೃತ್ತಿಯು ವಂಶಪರಂಪರೆಯಿಂದ ಬಂದ ಅಭಿಧಾನಕ್ಕೆ ಅನ್ಯಥಾ ಆಗಬಾರದೆಂಬ ಹವ್ಯಾಸವನ್ನಬೇಕೋ? ಎಲ್ಲಿಯಾದರೂ ವೀರಶೈವರ ನೈಸರ್ಗಿಕಗುಣವೇ ಇನ್ನಬೇಕೋ? ತಿಳಿಯದಾಗಿದೆ. ತತ್ವದವಿಷಯದಲ್ಲಿ ಮತಭಿನ್ನತೆಯಿದ್ದರೆ ಅದನ್ನು ನಿರ್ಧರಿಸಿಕೊಳ್ಳುವ ಸ ಕವಾದ ರಾಜಮಾರ್ಗವು ಎಂದಿಗೂ ಇರುವದು. ಪೀಠಾಧಿಕಾರಕ್ಕೆ ಈ ಭಿನ್ನತೆಯು ನಿಕಟಸಂಬಂಧವೂ ಪ್ರಾಸಂಗಿಕವೂ ಇದ್ದಲ್ಲಿ ಅದರ ತೀರ್ಮಾನವಾದಮೇಲೆ ವಟುನಿಯೋಜನೆಯಾಗಲೆಂದಾದರೂ ಪ್ರಯತ್ನಿಸುವದು ಶೀಲತನವೂ ಸಮರ್ಪಕರೀತಿಯೂ ಆಗಿರುವದಲ್ಲವೆ? ಹಾಗಿಲ್ಲದಿದ್ದ ದಲ್ಲಿ ಈರೀತಿಯಾಗಿ ಕೃಷ್ಣಕಾರಸ್ಥಾನವನ್ನೆಬ್ಬಿಸುವದು ಎಷ್ಟರಮಟ್ಟಿಗೆ ಕ್ಷಮ್ಯವಾದೀತು? ಲಾಘವವು ಬರಬಹುದೆಂಬುವದನ್ನು ಗಮನಿಸಬೇಕಲ್ಲವೇ?

ಸಿಂಹಾಸನಗಳು ಮೂಲಗುಂಪಾಗಿವೆ. ಆಪಕ್ಷವು ಅಜಾಗ್ರತವಾಗಿ ಕರ್ತವ ಪರಾಙ್ಮುಖವಾಗಿದೆ. ಸಮಾಜಕ್ಕೆ ಸಂಪೂರ್ಣ ಸಂಬದ್ಧರಾ ಅದರ ಅಭ್ಯುದಯವು ಇವರ ಕಾರ್ಯದಕ್ಷತೆಯನ್ನವಲಂಬಿಸಿರುವದಾಗಿ ವದರಿಂದ ಸಿಂಹಾಸನಪತಿಗಳೂ ಅವರ ಪಕ್ಷದವರೂ ಸ್ವಕರ್ತವ್ಯಮನ್ನರ ಕಾರ್ಯಪ್ರವೃತ್ತರಾಗಲೆಂದು ಸಮಾಜವು ಹಂಬಲಿಸುತ್ತದೆ. ಈ ಪ್ರಸಂಗದಲ್ಲಿ ಇವರುಗಳು ದೂರದರ್ಶಿತ್ವದಿಂದಲೂ ಸಮಾಜಹಿತಚಿಂತನೆಯ ದೃಷ್ಟಿಯಿಂದಲೂ ಇತಿಕರ್ತವ್ಯ ವಿಚಾರದಿಂದಲೂ ಸಮಯವನ್ನು ಪರಿಶೀಲಿ ತಮ್ಮ ಧೋರಣವನ್ನು ಸರಿಪಡಿಸಿಕೊಳ್ಳತಕ್ಕದ್ದು ಅತ್ಯಾವಶ್ಯಕತೆಯ ಮಾಗ ವಾಗಿರುವದು. ಇನ್ನುಳಿದವರಾದರೂ ಬದ್ಧವರನ್ನು ಹಚ್ಚೊತ್ತುವ ತಮಗೆ ಕ್ಷೇಮವೆಂದು ಭಾವಿಸದೇ ತಮಗೆ ಸಂಬದ್ಧವಾದುದನ್ನು ತಾ ಸಮಾಲೋಚಿಸಿಕೊಂಡು ಮಿಕ್ಕದುದನ್ನು ಸಮಾಜದ ಮುಂದಿರಿಸಿ ಬಿಡುವದು ಶ್ರೇಯಸ್ಕರವಾಗಿರುವದು. ಯಾವದಾದರೊಂದು ಬಲದಿಂದ “ಕೈ ಮತ್ತು” ಮಾಡಿಕೊಂಡರಾಯಿತೆಂದು ಹಾತೊರೆಯುವ ಪ್ರಸಂಗವು ಇದ ಅಲ್ಲ. ಸಮಾಜದಲ್ಲಿ ಐಕ್ಯತೆ ಪರಸ್ಪರ ವಿಶ್ವಾಸಗಳಿದ್ದರೆ ಕೇವಲ ವಿಶಿಷ್ಟ ವ್ಯಕ್ತಿಗಳು ಇಲ್ಲವೇ ಒಂದು ಪಕ್ಷವು ಆರಿಸಿದರೂ ಕೂಡ ಗಲಭೆಯೇ ತಿರಲಿಲ್ಲ. ಸಮಾಜದ ಮತಪದ್ಧತಿಯಿಂದಲಾದರೂ ಆರಿಸಬಹುದಾಗಿತ್ತು. ಆದರೆ ಪರಸ್ಪರರಲ್ಲಿ ವಿಶೇಷವಾದ ಅವಿಶ್ವಾಸವು ಬೆಳೆದಿರುವದರಿಂದ ಸಾಂಪ್ರತದಲ್ಲಿ ಇವೆರಡು ಮಾರ್ಗಗಳಿಂದಲೂ ವಟುಗಳನ್ನಾರಿಸುವದು ಅಸಾಧ್ಯ ಗಿದೆ. ಪ್ರಕೃತಸ್ಥಿತಿಯು ಹೀಗೇ ಉಳಿದಮೇಲೆ ಈ ಯಾವತ್ತರೂ ಸದ ಧೋರಣವನ್ನು ವ್ಯಕ್ತಪಡಿಸಿ ಏಕರೂಪದಲ್ಲಿ ಪ್ರಯತ್ನವನ್ನಿಡಬೇಕು ಇಲ್ಲವಾದರೆ ಪೀಠವು ಅಧಿಕಾರಿಗಳಿಲ್ಲದೇ ಬರಿದಾಗಿ ಬೀಳಬೇಕು. ಏಕೆಂದರೆ:—ಮತಪದ್ಧತಿಯಿಂದ ಆರಿಸುವದು ತಾತ್ವಿಕದೃಷ್ಟಿಯಿಂದ ಸದು ಚಿತವಾಗಿದೆ, ಆದರೂ ಅದನ್ನವಲಂಬಿಸಿದರೂ ಕೂಡಾ ವ್ಯವಹಾರಿಕ ರೀ ಯಿಂದಲೂ ಸಹ ಅಸಂಭವನೀಯವೂ ಅಶಕ್ಯವೂ ಆಗಿರುವದೆಂಬಂ ಈಗಿನ ಶಾಸನ ಸಭೆಗಳಿಗೆ ಆರಿಸುವದರ ಅನುಭವದಿಂದ ಮನಗಾಣ ಮಾತಾಗಿದೆ. ಅಲ್ಲದೇ ಇವರಿಂದರು ವೀರಶೈವರಹುದು, ಅಲ್ಲದೆಂಬುವ ತೀರ್ಮಾನಿಸುವದೂ ಅದಕ್ಕಾಗಿ ವಟ್ಟಿಗೆ ತಗಲುವ ಲಕ್ಷಾಂತರ ರೂಪಾಯಿ ಗಳ ಭಾರವನ್ನು ಹೊರುವದೂ ಅಶಕ್ಯವೇ! ಆದದರಿಂದ ಮೇಲ್ಕಂ ಕೆಗೆ ಸರಳಮಾರ್ಗವಾಗಿಕಂಡರೂ ಅದರ ಶಕ್ಯಾಶಕ್ಯತೆಯ ಪ್ರಶ್ನೆಯ ಲಿಂದ ಮತಪದ್ಧತಿಯು ಕೆಲವರು ಅನುಮತಿಸಿರುವ ಪ್ರಸಂಗ ಇದನ್ನು ಜನರ ಮುಂದಿಟ್ಟು ಅವರ ವಿಷಯದಲ್ಲಿ ಮನಃಕಲುಷಿತ ಈ ಪೀಠದ ಕಾರ್ಯಕ್ಕೆ ವಿಘ್ನತರಬೇಕೆನ್ನುವವರು ಮಾತ್ರ ಈ ಮತ ತಿಯನ್ನು ವಿಶೇಷವಾಗಿ ಮುಂದೆಮಾಡುತ್ತಾರೆಂದು ಹೇಳಬಹುದು. ಇ ಯಾವ ವ್ಯಕ್ತಿಗಳು ಇದ್ದರೂ ಅವರು ಒಂದೊಂದು ಪಕ್ಷಕ್ಕೆ ಹೊಂದಿ ರೆಂದಾಗಲೀ ಹೊಂದಿದವರೆಂಬಸಂಶಯವಾಗಲೀ ಇರುವದರಿಂದ ಒಂ ಪಕ್ಷದಲ್ಲಿ ಕೈದುಡಿಕೆಯಿಂದ ವಟುಗಳನ್ನಾರಿಸಿದರೂ ಆ ನಿಯೋಜನೆ ನ್ಯಾಯಸ್ಥಾನವನ್ನು ಕಾಣದೇ ಉಳಿಯದು. ಆದುದರಿಂದ ಇದರಲ್ಲಿ ಸೇ ರುವ ಮುಂದಾಳುಗಳು, ಬಾಳೇಹಳ್ಳಿಯ ಪೀಠದ ವಿಷಯದಲ್ಲಿ ಜನ ಆತುರತೆಯು ಹೆಚ್ಚಾಗಿದೆ ಎಂಬದನ್ನೂ ಸದ್ಯಕ್ಕೆ ನಡೆದಿರುವ ಕೃತಿಗ ಕ್ಷೋಭೆಯನ್ನು ಹೆಚ್ಚಿಸಿರುವವೆಂಬುದನ್ನೂ ಅನುಲಕ್ಷಿಸಿ ಸರ್ವಜನ ಸಮ ತವೂ ಸರಳವೂ ಆದ ಮಾರ್ಗವನ್ನವಲಂಬಿಸುವದು ಅತ್ಯಾವಶ್ಯಕವ ಕೇವಲ ಸಿಂಹಾಸನದ ಶ್ರೇಯಸ್ಸನ್ನು ಬಯಸುವದು ಶ್ರೇಯಸ್ಕರವು. ಇ ರಲ್ಲಿರುವ ಮಹನೀಯರು ಆ ಪಕ್ಷದವರು ಈ ಪಕ್ಷದವರೆಂದು ಮುಂ ವಾಗಿಯೇ ಸ್ವಕೀಯವಾದ ಮುದ್ರಾಧಾರಣವನ್ನು ಮಾಡಿಕೊಳ್ಳದೇ ವಟು ನ್ನಾರಿಸುವದರ ವಿಷಯದಲ್ಲಿ ತಮಗೆ ಇಷ್ಟವಾಗಿಕಾಣುವ ಇಂತಿಂತಹದೇ ಯದ ವಟುವೇ ಬೇಕೆಂಬ ಒರೆಯನ್ನಿಟ್ಟುಕೊಳ್ಳದೇ ಪ್ರಯತ್ನಿಸಬೇಕು ಇಂತಿಂತಹ ಮಾರ್ಗದಿಂದಲೇ ನಡೆಯಬೇಕೆಂಬುವ ಉದ್ದೇಶದಿಂದ ಆರಿಸಿ ಮರಿಯಾದರೂ ಅಂತೆಯೇ ತದನಂತರದಲ್ಲಿ ನಡೆಯುವದೆಂಬ ಬಗ್ಗೆ ಹೊ ಯಾದರೂ (guarantee) ಇರುವದೇ? ಹೀಗೆ ಉದ್ದೇಶಪಡುವ ಬಲುತಪ್ಪಿತವು. ಈ ಕಾರಣದಿಂದ ವಟುವು ಸಮಾಜಾಂತಃಕರಣಾ ಶಾಸ್ತ್ರೀಯವಾದ ವರ್ತನವನ್ನಿಟ್ಟುಕೊಂಡು ಅದರಂತೆ ನಡೆಯುವದು ತನೆಂಬುದನ್ನು ಮುಂದಿಟ್ಟುಕೊಂಡು ಅದರಂತೆ ಕಾರ್ಯಚಾಲಕರು ಶ್ರೀ

ಕ್ಷಪಟ್ಟು ಇದಕ್ಕೆ ಪಾತ್ರಿಯಾದ ವಿಖ್ಯಾತಶೀಲವ್ಯಕ್ತಿಗಳನ್ನು ಬದಿಗಿರಿಸಿ ಮುಂದಿನ ಕಾರ್ಯಕ್ಕೆ ಪ್ರವೃತ್ತರಾಗಬೇಕು. ಈ ಪ್ರಶ್ನೆಯು ಸರ್ವಸಾಮಾನ್ಯವಾದುದರಿಂದ ಯಾವದೊಂದು ದೇಶಸ್ಥರಿಗೆ ಪ್ರಾಧಾನ್ಯಕೊಡದೇ ಯಾವತ್ತೂ ಕಡೆಯ ಮುಖ್ಯಸ್ಥರನ್ನು ಬರಮಾಡಿಕೊಂಡು ಸತ್ಕುಲಪ್ರಸೂತರೂ ಆಚಾರಶೀಲರೂ ಕಾರ್ಯದಕ್ಷರೂ ಧರ್ಮತತ್ವಜ್ಞರೂ ಪೀಠದಪ್ರತಿಷ್ಠೆಯನ್ನು ಕಾಯಬಲ್ಲವರೂ ಆದವರನ್ನು ನಿಷ್ಕಲಂಕಮನಸ್ಸಿನಿಂದಲೂ ನಿಷ್ಕಪಟಹೃದಯದಿಂದಲೂ ಆರಿಸುವದು ಸಮ್ಮತಮಾರ್ಗವೆನ್ನಬಹುದು, ಅಥವಾ ಸದ್ಯದ ಸಮಾಜದಲ್ಲಿಯ ಪರಿಸ್ಥಿತಿಗೆ ಸರಿಯಾಗಿ ಪೀಠದ ಗೌರವವನ್ನು ಕಾಯ್ದುಕೊಂಡು ಸಮಾಜಾಭ್ಯುದಯವನ್ನು ಮಾಡಿ ಸುಖಶಾಂತಿಗಳನ್ನು ನೆಲೆಯಿಸುವದಕ್ಕೆ ತಕ್ಕ ವಟುವು ಎಂತಹದಿರಬೇಕೆಂಬುವದನ್ನು ಸಾವಧಾನಚಿತ್ತದಿಂದ ಸರ್ವರೂ ಸಮಾಲೋಚಿಸಿ ನಿರ್ಣಯಿಸಬಹುದು. ಅದಿಲ್ಲದೆ ಮೊದಲೇಪಕ್ಷಭೇದಗಳನ್ನು ಕಲ್ಪಿಸಿ ಉದ್ಯುಕ್ತರಾಗುವದು ಅನುಚಿತವು. ಮನಸ್ಸಿನೊಳಗಿನ ಕುದಿಯುಕುಗ್ಗಲಿ! ಪಕ್ಷಪಾತದೃಷ್ಟಿಯು ಅಡಗಲಿ! ಶಕ್ತಿಪರೀಕ್ಷೆಯ ಹಮ್ಮುಹೋಗಲಿ! ಇಂತಿಂತಹ ಅತಿರಥಮಹಾರಥರು ಕೂಡಿಯೂ ಕೆಲಸವು ಕೊನೆಗಾಣದೆಂದರೆ ಬಲುಶೋಚನೀಯವಾದ ಸಂಗತಿಯು. ಅನ್ಯರ ಎದುರಿಗೆ ಲಾಂಛನಾಸ್ಪದವು! ಮುಜರಾಯಿಶಾಖೆಯವರಂತೂ ವೀರಶೈವಸಂಗಡವು ಎಂತಹದೆಂಬುವದನ್ನು ನೂರಾರುಸಾರಿ ನಿಶ್ಚಯಿಸಿಕೊಂಡಿರಬಹುದು. ಇದರಲ್ಲಿ ಮಿಳಿತರಾಗಿರುವ ಎಲ್ಲ ಪಕ್ಷದವರೂ ಇದನ್ನು ಸಮಾಲೋಚಿಸಲಿಲ್ಲವೆಂತಲ್ಲ. ಪಕ್ಷಾಂಧತೆಯಲ್ಲಿ ಇದೆಲ್ಲವೂ ಮರೆಯಾಗಿರುವದೆಂದೆನ್ನಬಹುದು. ಒಂದು ಪಕ್ಷದವರು ಮಾಡುವದು ತಪ್ಪಿತವಿರುವಾಗ ಅದನ್ನು ಸರಿಪಡಿಸಿಕೊಳ್ಳುವ ಯೋಗ್ಯಪದ್ಧತಿಯನ್ನು ಬಿಟ್ಟು ಇನ್ನೊಂದು ಪಕ್ಷವನ್ನು ಕಲ್ಪಿಸಿಕೊಂಡು ಮೊದಲಿನ ಪಕ್ಷದವರಲ್ಲಿ ಮತ್ತಿಷ್ಟು ಅಭಿಮಾನ, ಛಲ, ಪಂಥಗಳನ್ನು ಹುಟ್ಟಿಸಿ ಅದರಿಂದ ಜರುಗುವ ವಿಚಿತ್ರಕೃತಿಗಳಿಗೆ ಒಮ್ಮೆ ಸರಿಯಾಗಿಯೂ ಮತ್ತೊಮ್ಮೆ ಇಮ್ಮಡಿಯಾಗಿಯೂ ಜೋಡಿಸುವ ಧಾರ್ಷ್ಟ್ಯವನ್ನು ತಮ್ಮಲ್ಲಿ ಬರಮಾಡಿಕೊಳ್ಳುವ ಧೋರಣವು ಅಕ್ಷಮ್ಯವಾದುದು.

ಈ ಪ್ರಸಂಗದಲ್ಲಿ ದಿ|| ಬ|| ಪುಟ್ಟಣ್ಣಶೆಟ್ಟರ ಕಾರ್ಯದಕ್ಷತೆ ಉಜ್ಜಯನಿ ಜಗದ್ಗುರು ಶ್ರೀ|| || ಗಳವರ ದೂರದೃಷ್ಟಿಗನುಗುಣವಾದ ಕೈಬಲ ಇನ್ನಿತರರ ಸರಳವಾದಸಹಾಯ ಇವುಗಳು ಅವಶ್ಯಕವಾಗಿವೆ. ದಿವಾನ್ ಬಹದ್ದೂರರವರು ತಮ್ಮ ಅನುಭವ, ವರ್ಚಸ್ಸು ಬುದ್ಧಿಮತ್ತೆಯ ಪ್ರಭಾವವನ್ನು ಇದರಲ್ಲಿ ತೋರಿಸಿ ಸಮಾಜಶಾಂತಿಯನ್ನುಂಟುಮಾಡುವದು ಅತ್ಯಗತ್ಯವೆಂದು ಎಲ್ಲರೂ ಕೋರುತ್ತಿರುವರು. ಶ್ರೀ|| || ಗಳವರಾದರೂ ಸುತ್ತುಮುತ್ತಾಡುವ ವಿಶಿಷ್ಟಧ್ಯೇಯದ ಕೆಲವರ ಮಾತುಗಳಿಗೆ ಮನಸ್ಸಿಡದೆ ಸಮಾಜಹಿತಕ್ಕೆ ಪೂರ್ಣಸಂಬಂಧವೂ ಹೊಣೆಯೂ (Responsible) ಆದ ಮಹಾಸನ್ನಿಧಿಗೆ ಗೌರವಾಸ್ಪದವೂ ಸಮಾಜಕ್ಕೆ ಹಿತಕರವೂ ಆದುದಾವದೆಂಬುದನ್ನು ಚಿತ್ತೈಸಬೇಕು. ಸನ್ನಿಧಿಯವರಾಗಲೀ ದಿ|| ಬ|| ರಾಗಲೀ ಇನ್ನುಳಿದ ಪ್ರಮುಖರಾಗಲೀ ಪಕ್ಷದವರೆಂದೆನಿಸಿಕೊಳ್ಳದೇ ಕಾರ್ಯಕ್ಕುಪಕ್ರಮಿಸಲಿ. ಈ ಪೀಠಾಧಿಕಾರಕ್ಕೆ ಶ್ರಮಪಡುತ್ತಲಿರುವ ಎಡೆಹಳ್ಳಿ ಶಾಂತಪ್ಪಶೆಟ್ಟರು ವೃದ್ಧಾಪ್ಯದಿಂದಾಗಲೀ ಮುತ್ಸದ್ದಿತನದಿಂದಾಗಲೀ ನಾನಾವರ್ಣಧಾರಿಗಳಾಗಿ ಈ ಕಾರ್ಯವನ್ನೇ ಇಲ್ಲಿಯವರೆಗೂ ನೆನೆಗುದಿಗೆ ಕೆಡವಿಬಿಟ್ಟ ಹೆಸರನ್ನು ತಕ್ಕೊಳ್ಳದೇ ನಿರ್ಮಲಾಂತಃಕರಣದಿಂದ ಸಾಹಸಬಡುವ ಧೋರಣವನ್ನಿಟ್ಟುಕೊಳ್ಳಲಿ. ಒಟ್ಟಿನ ಮೇಲೆ ಈ ಯಾವತ್ತರೂ ಗಾಂಭೀರ್ಯಚಿತ್ತರಾಗಿ (Serious) ಒಮ್ಮನಸ್ಸಿನಿಂದ ಈ ಮಹಾಕಾರ್ಯವನ್ನು ನೆರವೇರಿಸುವ ಭಾವನೆಯುಳ್ಳವರಾಗಿ ಸರ್ವರು ಕಲತು ಈ ದೊಡ್ಡ ಗಲಭೆಯನ್ನು ಅಡಗಿಸುವ ಸಮಾಜದ ಶಾಂತಿಯನ್ನು ರಕ್ಷಿಸುವದು ಅವರ ಕರ್ತವ್ಯವಾಗಿದೆ. ಈ ವಿಧವಾದ ಧ್ಯೇಯದಿಂದ ಒಬ್ಬರ ಮುಖವು ಒತ್ತಟ್ಟಿಗೆ ಮತ್ತೊಬ್ಬರ ಮುಖವು ಮತ್ತೊತ್ತಟ್ಟಿಗೆ ಆಗುವ ಪದ್ಧತಿಯನ್ನು ಬಿಟ್ಟು ಜಗದ್ಗುರು ಶ್ರೀ ಗಳಾದರೂ ದಿ|| ಬ|| ರವರೂ ಎಲ್ಲ ಪ್ರಮುಖರನ್ನು ಬರಮಾಡಿಕೊಂಡು ಈ ವಿಷಯಕ್ಕೆ ಇನ್ನುಮೇಲೆ ಉದಾಸೀನರಾಗದೆ ಒಂದೆರಡು ತಿಂಗಳಲ್ಲಿ ಯಾವದೊಂದು ಸಮಾಧಾನರೀತಿಯಾಗಿ ಮುಂದೆ ಬರುವ ಕಾರ್ತೀಕಮಾಸದಲ್ಲಿ ಈ ಕಾರ್ಯವು ನೆರವೇರಿಯೇ ಬಿಡುವಂತೆ ಪ್ರಯತ್ನಿಸಲೆಂದು ಪ್ರಾರ್ಥಿಸುವುದು ಈ ಲೇಖದ ಉದ್ದೇಶವಾಗಿದೆ.

ಅಖಿಲ ಭಾರತ ವೀರಶೈವ ಮಹನೀಯರುಗಳಿಗೆ ವಿಜ್ಞಾಪನೆ.

ವೀರಶೈವ ಮಹಾನೀಯರೇ, ಈಗ ಕೆಲವು ವಾರಗಳ ಹಿಂದೆ ಇದೇ ಮೈಸೂರು ಸ್ಟಾರಿನ ತಾ|| 9-3-24 ನೆಯ ಸಂಚಿಕೆಯಲ್ಲಿ ನನ್ನ ಮಿತ್ರರೊಬ್ಬರು “ನಮ್ಮ ಮತದ ದುಸ್ಥಿತಿ” ಎಂಬ ಶಿರೋಲೇಖನದಿಂದ ಒಂದು ಚಿಕ್ಕ ಒಕ್ಕಣೆಯನ್ನು ಕೊಟ್ಟದು ಸರಿಯಷ್ಟೆ. ಅದು ಶ್ರೀ ವೀರಶೈವ ಮತೋದ್ಧಾರಕಾಗ್ರೇಸರನಾದ ಬಸವೇಶ್ವರನನ್ನು ನಿಂದಿಸುವವರನ್ನೂ, ಶ್ರೀ ವಿರಕ್ತರು ಮತ್ತು ಪಂಚಾಚಾರ್ಯರಲ್ಲಿ ಇಲ್ಲದ ಸಲ್ಲದ ಭೇದಗಳನ್ನು ಕಲ್ಪಿಸಿ ಅವರಲ್ಲೇ ಪರಸ್ಪರ ಜಗಳವನ್ನು ಹುಟ್ಟಿಸಲು ಹುರುಪುಗೊಂಡಿರುವವರನ್ನೂ, ಕುರಿತು ಅವರ ವಿಷಯದಲ್ಲಿ ತಮಗೂ ಮತ್ತು ಇತರ ವೀರಶೈವ ಜನಾಂಗಕ್ಕೂ ವುಂಟಾಗಿರುವ ಮನೋಕ್ಷೋಭೆಯನ್ನು ಪ್ರದರ್ಶಿಸುತ್ತದೆಯೇಹೊರತು ಅನ್ಯಥಾ ಅಲ್ಲವೆಂದು ಸ್ಪಷ್ಟವಾದರೂ, ಕೆಲವು ಜನ ಮಹನೀಯರು ಅನೇಕ ವಿಧವಾದ ವ್ಯಂಗ್ಯಾರ್ಥಗಳನ್ನು ಕಲ್ಪಿಸಿ ವಿಧವಿಧವಾಗಿ ಅಭಿಪ್ರಾಯಪಟ್ಟು ಮನಸ್ಸಂಕೋಚಮಾಡಿಕೊಳ್ಳುತ್ತಿರುವರು. ಹಾಗೆ ಮಾತ್ರ ಮಾಡದಿರಲಿ. ಮತಾಭಿಮಾನಿಗಳೇ ವಿದ್ಯಾರ್ಥಿಗಳು ಚಿಕ್ಕವರಾದರೆ ತಾನೇ ಏನು. ರಾಜಕೀಯ ಜನಾಂಗದ ಮತ್ತು ಮತದ ವಿಷಯಗಳಲ್ಲಿ ತಮಗಿರುವ ಚಿಕ್ಕ ದೊಡ್ಡ ಅಭಿಪ್ರಾಯಗಳನ್ನು ಕೊಡಲು ಸ್ವತಂತ್ರರಲ್ಲವೇನು? ಅಂಥವರಿಗೆ ಪ್ರೋತ್ಸಾಹ ಕೊಡಬೇಕೆ? ವೃಥಾ ನಿಂದಿಸಬೇಕೆ? ಅಹಾ! ಏನಿದು ನಮ್ಮವರಿನ್ನೂ ಸುಧಾರಿಸುವಸಂಭವವೇ ಇಲ್ಲವಲ್ಲ!! ಸ್ವರಾಜ್ಯ ಬೇಡವಂತೆ, ಸ್ವರಾಜ್ಯ ಬೇಡವಾದರೂ ಸ್ವಾತಂತ್ರ್ಯವೂ ಬೇಡವೆ!!! ಅದೂ ಬೇಡವಾದರೆ ಬಿಡಿ. ಆದರೆ ಈ ಸುಧಾರಿಸಿದ ಮತವನ್ನು ಮತ್ತಷ್ಟು ಅಭಿವೃದ್ಧಿಗೆ ತರಲು ಪ್ರಯತ್ನ ಪಡದಿರಬೇಡಿರೆಂಬುದೇ ನನ್ನ ಸವಿನಯಪ್ರಾರ್ಥನೆ. ಕೊಟ್ರಪ್ಪ ಹೊನ್ನಾಳಿ ವಿದ್ಯಾರ್ಥಿ.

ಮದ್ರಾಸು, ಯೂನಿವರ್ಸಿಟಿಯ ನೂತನ ವೀರಶೈವ ಪದವೀಧರರು.

ಈ ವರ್ಷ ಮದ್ರಾಸು ಯೂನಿವರ್ಸಿಟಿಯಲ್ಲಿ ಅಭ್ಯಾಸಮಾಡುತ್ತಿದ್ದ ವೀರಶೈವ ಪ್ರೌಢವಿದ್ಯಾರ್ಥಿಗಳ ಫಲಿತಾಂಶಗಳು ದರವರುಷಕ್ಕಿಂತಲೂ ಹೆಚ್ಚು ತೃಪ್ತಿಕರವಾಗಿವೆ ಎಂಬುದನ್ನು ತಿಳುಹಿಸಲು, ಆನಂದವಾಗುತ್ತದೆ. ಮಿ|| ಟಿ. ಹೆಚ್. ಎಂ. ಚಂದ್ರಶೇಖರಯ್ಯ (ಹರಪನಹಳ್ಳಿ) ಮಿ|| ಪಿ. ಉದ್ದಾನೈಯ್ಯ (ಹೊಸಪ್ಯಾಟೆ) ಇವರು ಬಿ. ಎಲ್. ಪರೀಕ್ಷೆಯಲ್ಲೂ ಮಿ|| ಟಿ. ಹೆಚ್. ಎಂ. ಸಿದ್ದಯ್ಯ (ಹರಪನಹಳ್ಳಿ) ಇವರು 1ನೇ ವರುಷದ ಬಿ. ಎಲ್. ಪರೀಕ್ಷೆಯಲ್ಲೂ ಕೃತಾರ್ಥರಾಗಿರುತ್ತಾರೆ. ಮಿ|| ಟಿ. ಹೆಚ್. ಎಂ. ಷಡಕ್ಷರೈಯ್ಯ, ಹರಪನಹಳ್ಳಿ ಬಿ. ಎ., ಆನರ್ಸು ಪರೀಕ್ಷೆಯಲ್ಲೂ ಮಿ|| ಟಿ. ಹೆಚ್. ಎಂ. ಸದಾಶಿವಯ್ಯ ಹರಪನಹಳ್ಳಿ ಇವರು ಲಿಟರೇಚರ್ ಬಿ. ಎ. ಆನರ್ಸು ಪರೀಕ್ಷೆಯಲ್ಲಿ ಉತ್ತಮಶ್ರೇಣಿಯೊಳು ಪಾಸಾಗಿ ಗೌರ್ನರ್ ಲಾರ್ಡು ವೆಂಡ್‌ಲಾಕು ಯೂನಿವರ್ಸಿಟಿ ಬಹುಮಾನಕ್ಕೆ ಅರ್ಹರಾಗಿರುತ್ತಾರೆ. ಮಿ|| ಎಂ. ಎಚ್. ಎಂ. ನಂಜುಂಡಯ್ಯ (ಹರಪನಹಳ್ಳಿ) ಇವರು ಹೋದವರುಷ ಸೈನ್ಸು ಬಿ. ಎ. ಪರೀಕ್ಷೆಯಲ್ಲಿ ಪಾಸಾಗಿರುತ್ತಾರೆ. ಇಲ್ಲಿಯ ದೇಶೀಯ ಕಲಾಶಾಲೆಯಲ್ಲಿ ಅಭ್ಯಾಸಮಾಡುತ್ತಿದ್ದ ಮಿ|| ಎಚ್. ಸಿ. ಕೆ. ಹಾಲಪ್ಪ (ಶಿವಮೊಗ್ಗ) ಮಿ|| ಎಚ್. ಬಿ. ಗುರುಬಸವರಾಜ (ಹರಪನಹಳ್ಳಿ) ಇವರು ಬಿ. ಎ. ಪರೀಕ್ಷೆಯಲ್ಲಿ ಪಾಸಾಗಿರುತ್ತಾರೆ. ಇದಲ್ಲದೆ ಇಂಟರ್ಮೀಡಿಯೆಟ್, ಪರೀಕ್ಷೆಯಲ್ಲಿ ಎಂ. ಕೆ. ನಾಗಪ್ಪ (ಅನಂತಪುರ) ಇವರು ಉತ್ತಮತರಗತಿಯಲ್ಲೂ ಮಿ|| ಕೆ. ಯಂ. ದಕ್ಷಿಣಾಮೂರ್ತಿ (ಬಳ್ಳಾರಿ) ಮಿ|| ಟಿ. ಹೆಚ್. ಪಂಚಾಕ್ಷರೈಯ್ಯ (ಹರಪನಳ್ಳಿ) ಇವರು ಪಾಸಾಗಿರುತ್ತಾರೆ. ಜಯಶೀಲರಾದ ವಿದ್ಯಾರ್ಥಿಗಳ ಪೈಕಿ 6 ಜನ ಟಿ. ಹೆಚ್. ಎಂ. ವಿದ್ಯಾರ್ಥಿಗಳು ಹರಪನಹಳ್ಳಿ ವಾಸಸ್ತರಾದ ತೆಲಿಗಿಹರಪನಹಳ್ಳಿ ಮಠದ ಶ್ರೀ ಸಿದ್ಧಾಂತಿ ಹೊಳೆಬಸವಶಾಸ್ತ್ರಿಗಳ ಚಿರಂಜೀವಿಗಳಾಗಿರುತ್ತಾರೆ. ವೇ|| ಶಾಸ್ತ್ರಿಗಳವರು ಇಷ್ಟು ದಿವಸ ವಿಶೇಷಶ್ರಮವಹಿಸಿ ಅಪಾರವಾಗಿ ಧನವ್ಯಯಮಾಡಿ ತಮ್ಮ ಚಿ|| ಗಳನ್ನು ಅಭ್ಯಾಸಮಾಡಿಸಿದ್ದಕ್ಕೂ ಇವರ ಅಮೋಘಪ್ರಯತ್ನವು ಇಂದಿಗೆ ಸಾರ್ಥಕವಾಯಿತು.

ಓರ್ವ ವಿದ್ಯಾಭಿಮಾನಿ.

ತರೀಕೆರೆ ತಾಲ್ಲೂಕು ಬುಕ್ಕಾಂಬುಧಿ.

ಈ ಊರಿಗೆ 1921ರಲ್ಲಿ ಶ್ರೀ ಚಿತ್ರದುರ್ಗದ ಬೃಹನ್ಮಠದ ಜಗದ್ಗುರು ಮಹಾಸ್ವಾಮಿಗಳವರ ಸವಾರಿಯು ದಯಮಾಡಿಸಿದ್ದು ಸರಿಯಷ್ಟೆ. ಮಹಾಸ್ವಾಮಿಗಳವರ ಸವಾರಿಯು ಈ ಮುಕ್ಕಾಂನಲ್ಲಿರುವಾಗಲೇ ಷಟ್ಸ್ಥಲಸ್ಥರಾದ ಕೊಲ್ಲಾಪುರದ, ಶ್ರೀ ಶಾಂತವೀರಮಹಸ್ವಾಮಿಗಳು ಏಕಾಯೇಕಿ ಜಗದ್ಗುರುಗಳವರ ಪಾದದರ್ಶನಕ್ಕಾಗಿ ಈ ಊರಿಗೆ ದಯಮಾಡಿಸಿದವರು ಇಲ್ಲಿಯೇ ಮಹಾಪಾದದಲ್ಲಿ ಐಕ್ಯರಾದರು. ಪೂಜ್ಯರಾದ ಮಹಾಸ್ವಾಮಿಗಳವರ ಗದ್ದುಗೆಯು ಗ್ರಾಮಮಧ್ಯದಲ್ಲಿರುವ ಶ್ರೀ ವಿರುಪಾಕ್ಷೇಶ್ವರ ದೇವಸ್ಥಾನದ ಕಾಂಪೌಂಡಿನಲ್ಲಿ ತಾ|| 30-10-21ನೇ ಭಾನುವಾರ ಪ್ರಾತಃಕಾಲ ಸೂರ್ಯೋದಯ ಕಾಲಕ್ಕೆ ಸರಿಯಾಗಿ ಬಹಳ ವೈಭವದಿಂದ ಸುತ್ತಮುತ್ತಣ ಪ್ರದೇಶದಿಂದ ಬಂದಿದ್ದ ಸಾವಿರಾರು ಭಕ್ತಜನರುಗಳಿಂದ ಸ್ಥಾಪಿಸಲ್ಪಟ್ಟಿತು. ಅಗ್ಗೆ ನೆರದಿದ್ದ ಜನಸಮುದಾಯದಲ್ಲಿ ಜಗದ್ಗುರುಗಳವರು ಸದರಿ ಗದ್ದುಗೆಯ ಮೇಲ್ಭಾಗಕ್ಕೆ ಶಿಲಾಮಯವಾದ ಮಂಟಪವನ್ನು ಕಟ್ಟಿಸುವ ವಿಚಾರದಲ್ಲಿ ಆಲೋಚನೆಮಾಡಿದ ಕಾಲದಲ್ಲಿ ಈ ಊರಿನ ಸಾಹುಕಾರ್ ವೇ|| ಚಂ. ನಂ. ವೀರಯ್ಯನವರು ತಮ್ಮ ಸ್ವಂತ ಲಾಗೋಡಿನಿಂದ ಒಂದು ಅಂಕಣ ಶಿಲಾಮಯವಾದ ಮಂಟಪವನ್ನು ಕಟ್ಟಿಸುತ್ತೇವೆಂದು ಬಹುಜನಗಳ ಸಮಕ್ಷಮ ಜಗದ್ಗುರುಸನ್ನಿಧಿಯಲ್ಲಿ ನಮಸ್ಕಾರಪೂರ್ವಕವಾಗಿ ವಾಗ್ದಾನಮಾಡಿದವರು ಇಷ್ಟು ದಿವಸಗಳಾದಾಗ್ಯೂ, ಸದರಿ ಗದ್ದುಗೆಯು ಯಾವ ಸ್ಥಿತಿಯಲ್ಲಿದೆಯನ್ನುವದನ್ನು ಕಣ್ಣಿಂದ ನೋಡಿರುವದಾಗಿ ಕಾಣುವದಿಲ್ಲ. ಗದ್ದುಗೆಯ ವಿಚಾರವಾದರೋ ಬಹಳ ಶೋಚನೀಯಸ್ಥಿತಿಯಲ್ಲಿರುತ್ತೆ. ಊರಿನ ಜನಗಳಾದರೋ ಮಹನೀಯರ ಗದ್ದುಗೆಯು ಗ್ರಾಮಮಧ್ಯದಲ್ಲಿರುವದರಿಂದ ಇದರ ನಿಗಾವಣೆಗೆ ಒಪ್ಪಿಕೊಂಡಿರುವ ಮಹನೀಯರ ಉದಾಸೀನತೆಯಿಂದ ಗ್ರಾಮಕ್ಕೆ ಯೇನುಕೊಂಡರೆ ವುಂಟಾದೀತೋ ಎಂದು ಹಗಲೂ ಇರುಳೂ ತಪಿಸುತ್ತಲಿದ್ದಾರೆ. ಸದರಿ ಚಂ. ನಂ. ವೀರಯ್ಯನವರು ಉದಾರಮನಸ್ಸಿನಿಂದ ತಮ್ಮ ಸಾಹುಕಾರಿಕೆಗೂ ದೊಡ್ಡಸ್ತಿಕೆಗೂ ಸರಿಯಾಗಿ ಪ್ರಮಾಣಪೂರ್ವಕವಾಗಿ ಒಪ್ಪಿಗೆಮಾಡಿದ್ದರೋ ಅದರಂತೆ ಜಾಗ್ರತೆ ಮಂಟಪ ತಯಾರುಮಾಡಿಸಿ, ಕೀರ್ತಿಗೂ ಪುಣ್ಯಕ್ಕೂ ಭಾಗಿಗಳಾಗತಕ್ಕದ್ದು. ಇಲ್ಲವೇ ಶ್ರೀ ಜಗದ್ಗುರು ಸಂಸ್ಥಾನದವರು ಈ ವಿಚಾರದಲ್ಲಿ ತಕ್ಕ ನಿಗಾವಣೆಯಿಂದ ಜಾಗ್ರತೆ ಕೆಲಸ ನಡಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಒಬ್ಬ ಕಂಡು ಕೇಳಿದ್ದ ಭಕ್ತ.

ಪ್ರಶಸ್ತಿಯ ಬಹುಮಾನ.

ವೀರಶೈವ ಮತಸ್ಥಾಪನಾಚಾರ್ಯ ಶ್ರೀ ಜಗದ್ಗುರು ಶ್ರೀಮದ್ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಮಹಾಸ್ವಾಮಿಗಳವರ ಮಹಾಸವಾರಿಯು ಬಾಳ್ಳುಪೇಟೆಯ ಕಾಫಿಪ್ಲಾಂಟರ್ ರೈಸ್‌ಮಿಷನ್ ಶ್ರೀಮಂತ ಬಸಪ್ಪಗೌಡರ ಕೋರಿಕೆಯಂತೆ ತಾ|| 26-5-1924ನೆ ಸೋಮವಾರ ಸಕಲ ಅಜಬಾಬು ಸಮೇತ ಸುಂದರವಾದ ಪಲ್ಲಕ್ಕಿಯಲ್ಲಿ ರಾಜನಪುರ ಮುಕ್ಕಾಮಿನಿಂದ ಬಾಳ್ಳುಪೇಟೆಗೆ ಬೆಳಗಿನ 10 ಗಂಟೆಗೆ ಮಹದುತ್ಸವದೊಡನೆ ಕಾಫಿಪ್ಲಾಂಟರ ಬಂಗಲೆಗೆ ದಿಗ್ವಿಜಯಮಾಡಿ ಪೀಠಾರೋಹಣಮಾಡಿದ ಕೂಡಲೆ ಸಮಾಜಕೇ ವಾಧುರೀಣರಾದ ಗಂಗಪ್ಪ ಅಣ್ಣಾ ರುದ್ರಪ್ಪ ಗಡಿಗಿ ಶ್ರೀಮಂತ ಶಿದ್ದಾಪುರ ಇವರು ವಿದ್ಯಾಐಕ್ಯಮತ್ಯ ಮುಂತಾದ ವಿಷಯಗಳಮೇಲೆ ಭಾಷಣಮಾಡಿದ ತರುವಾಯ ನೆರದಿದ್ದ ಸಹಸ್ರಾರು ಜನರಿಗೆ 4 ಗಂಟೆಗೆ ಬರುವಂತೆ ಅಪ್ಪಣೆಕೊಡಿಸಿ ಮಹಾಪಾದಪೂಜೆಗೆ ಸರಿ 4 ಗಂಟೆಗೆ ಸರಿಯಾಗಿ ಪೀಠಾರೋಹಣ ಮಾಡಿದಕೂಡಲೆ ಮತಸಂಬಂಧವಾಗಿ ಅನೇಕ ವಿಷಯಗಳನ್ನು ಅಪ್ಪಣೆಕೊಡಿಸಿ ರೈಸ್‌ಮಿಷನ್ ಬಸಪ್ಪಗೌಡರು ಮಾಡಿದ ಗುರುಸೇವೆಯೂ ಅನೇಕ ಬಡವರಿಗೆ ಮಾಡುತ್ತಿರುವ ಮಹದುಪಕಾರವೂ ಶ್ರೀ ಸನ್ನಿಧಿಗೆ ವೇದ್ಯವಾಗಿ ಬಸವಪ್ಪಗೌಡರವರಿಗೆ ಗುರುಭಕ್ತಕೇಸರಿ ಎಂಬ ಸುವರ್ಣಪದಕವನ್ನು ಪುಷ್ಪಹಾರದೊಡನೆ ಕೊಡುವಂತ ಈಗಿನ ಶ್ರೀಶೈಲ ಸಂಪಾದನಕ್ಕೆ ತಮ್ಮ ತನುಮನಗಳನ್ನರ್ಪಿಸುತ್ತಿರುವ ಗಡಿಗಿ ಗಂಗಪ್ಪ ಅಣ್ಣನವರಿಗೆ ಅಪ್ಪಣೆಕೊಡಿಸಲು ಶ್ರೀಮಂತ ಗಡಿಗಿಯವರು ಕಾಫಿಪ್ಲಾಂಟರ ಕೊರಳಿಗೆ ಧರಿಸಿದರು. ಸಭೆಯಲ್ಲಿ ಮೈಸೂರು ಯಜಮಾನ್ ಕೈ|| ವೀರಸಂಗಪ್ಪನವರು ನಮ್ಮ ವೀರಶೈವಮತಕ್ಕೆ ಮಹದುಪಕಾರಮಾಡಿದುದಕ್ಕಾಗಿ ಸದರಿ ಕೈ|| ಯಜಮಾನರ. ಗೌರವಾರ್ಥವಾಗಿ 2 ರೂಪಾಯಿಗಳ ಸಂಭಾವನೆ ಕಳುಹಿಸುವಂತೆ ಶ್ರೀಮಂತ ಗಡಿಗಿಅಣ್ಣನವರು ಬಸಪ್ಪಗೌಡರಿಗೆ ಸೂಚಿಸಿದ ತರುವಾಯ ಶ್ರೀ ಜಗದ್ಗುರು ಮಹಾಸ್ವಾಮಿಯವರು ಕಾಫಿಪ್ಲಾಂಟರ್ ಬಸವಪ್ಪಗೌಡರಿಗೂ ಅವರ ಪತ್ನಿ ಸಿದ್ಧಮ್ಮನವರಿಗೂ ಕೂಡ ಅವರ ಶ್ರೀ ಗುರುಸೇವಾತತ್ಪರತೆಗೆ ಮೆಚ್ಚಿ ಆಶೀರ್ವಾದವನ್ನಿತ್ತು 6 ಗಂಟೆಗೆ ರಾಜನಪುರ ಮುಕ್ಕಾಮಿಗೆ ದಯಮಾಡಿಸಿದರು. ಪ್ರತ್ಯಕ್ಷದರ್ಶಿ.

ಬ್ರಾಹ್ಮಣೀಕೌಟಿಲ್ಯ.

ಲೇಖಕ, ಸ್ವಾಮಿ ವಿರೂಪಾಕ್ಷವಡೆಯರ್, ಪ್ರೊಫೆಸರ, ಸಂಸ್ಕೃತ ಕಾಲೇಜ ಇಂದೋರ

(ಹಿಂದಿನಿಂದ ಮುಂದೆಸಾಗಿದ್ದು.)

ಈ ಮಾಹೇಶ್ವರದರ್ಶನಸಾರವೆಂಬ ಗ್ರಂಥದ ಪ್ರಾರಂಭದಲ್ಲಿ ಶೈವ, ಪಾಶುಪತ, ಲಿಂಗಾಯತರ ತತ್ವಸಿದ್ಧಾಂತಗಳು ಅಪಹಾಸ್ಯಕ್ಕೆ ಆಸ್ಪದವಾದವುಗಳೆಂದು ತೋರಿಸುವ ವಿಚಾರದಿಂದ ಎಲ್ಲಿಂದಲೋ ಕೆಲವು ಅಮಂಗಳ ವಾಕ್ಯಗಳನ್ನು ಹಾಕಿ ವಿಲಕ್ಷಣರೂಪದಿಂದ ತೋರಿಸಿರುವನು. ಹ್ಯಾಗಂದರೆ—

“ದೀಕ್ಷಾಪ್ರವೇಶಮಾತ್ರೇಣಬ್ರಾಹ್ಮಣೋಭವತಿಕ್ಷಣಾತ್ | ಕಾಪಾಲಂ ವ್ರತಮಾಸ್ಥಾಯಯತಿರ್ಭವತಿಮಾನವಃ || ಮುದ್ರಿಕಾಷಟ್ಕತತ್ವಜ್ಞ ಪರಮ ಮುದ್ರಾವಿಶಾರದಃ | ಭಗಾಸನಸ್ಥಮಾತ್ಮಾನಂಧ್ಯಾತ್ವಾನಿರ್ವಾಣಮೃಚ್ಛತಿ || ಇತ್ಯಾದಿ.

ವೀರಶೈವರ ನಿಜವಾದ ತತ್ವಸಿದ್ಧಾಂತ, ಹಾಗೂ ಆಚಾರವಿಚಾರಗಳ ಜ್ಞಾನವಿಲ್ಲದೇ ಕೇವಲ ಮೂರ್ಖತನದಿಂದ ಈರೀತಿ ನೀಚಸ್ಥಿತಿಯ ವ್ರತಗಳನ್ನು, ಹಾಗೂ ತತ್ವಸಿದ್ಧಾಂತವನ್ನು ಅವರಲ್ಲಿ ಆರೋಪಿಸಿ ತನ್ನ ಹಾಗೂ ತನ್ನ ಕುಲಾಚಾರ್ಯರಲ್ಲಿ ಎಂಥಾ ನಿಂದ್ಯವಾದ ಹುಳುಕು ಇದೆ ಎಂಬುದನ್ನು ಲಕ್ಷ್ಯಕ್ಕೆತರದೇ ನಿರ್ಲಜ್ಜೆಯಿಂದ ಬರೆದಿರುವನು. ಯಾಕಂದರೆ, ಈವತ್ತಿಗೂ ಇವರಲ್ಲಿ ದೊಡ್ಡದೊಡ್ಡ ಆಚಾರ್ಯ, ಶಾಸ್ತ್ರಿ, ಧರ್ಮಾಧಿಕಾರಿ, ಎನಿಸಿಕೊಳ್ಳುವವರು ನಾಲಿಗೆಯರುಚಿಗಾಗಿ ಮದ್ಯ ಮಾಂಸಗಳನ್ನು ತಿನ್ನುತ್ತಾ ಸ್ವೇಚ್ಛಾಚಾರಿಗಳಾಗಿ ನಡಿಯುತ್ತಿದ್ದು ಅದಕ್ಕಾಗಿ

ನ ಮಾಂಸಭಕ್ಷಣೇದೋಷೋನಮದ್ಯೇನಚಮೈಥುನೇ | ಪ್ರವೃತ್ತಿರೇಷಾಭೂತಾನಾಂನಿವೃತ್ತಿಸ್ತುಮಹಾಫಲಾ || (ಮನುಸ್ಮೃತಿ) ಮದ್ಯಂಮಾಂಸಂಚಮೀನಂಚಮುದ್ರಾಮೈಥುನಮೇವಚ | ಏತೇಪಂಚಮಕಾರಾಃಸ್ಯುರ್ಮೋಕ್ಷದಾಹಿಯುಗೇಯುಗೇ || (ತಂತ್ರಶಾಸ್ತ್ರ)

ಈರೀತಿಯಾದ ಕೆಲವು ಶ್ಲೋಕಗಳನ್ನು ರಚಿಸಿಕೊಂಡು ಇಂಥಾ ಅಬದ್ಧ ಶ್ಲೋಕಗಳನ್ನು ಮನ್ವಾದಿಸ್ಮೃತಿಗ್ರಂಥಗಳಲ್ಲಿ ಸೇರಿಸಿ ಮದ್ಯ ಮಾಂಸ ಮೈಥುನಾದಿಗಳನ್ನು ಅವಶ್ಯ ಆಚರಿಸಬೇಕೆಂತಲೂ, ಹಾಗೂ ಇವೇ ಮೋಕ್ಷದಾಯಕಗಳೆಂತಲೂ ಬೋಧಿಸುತಾ,

ಪೀತ್ವಾಪೀತ್ವಾಪುನಃಪೀತ್ವಾಯಾವತ್ಪತತಿಭೂತಲೇ | ಪುನರುತ್ಥಾಯವೈಪೀತ್ವಾಪುನರ್ಜನ್ಮನವಿದ್ಯತೇ ||

ಯಾವಾಗಲೂ ಸೆರೆಯನ್ನು ಮಿತಿಮೀರಿ ಕುಡಿಯಬೇಕೆಂತಲೂ ಈರೀತಿ ಅಳತೆಗೆಟ್ಟು ಕುಡಿಯುವ ಕುಡಕರಿಗೆ ಪುನರ್ಜನ್ಮವಿರದೇ ಮೋಕ್ಷಭಾಗಿಗಳಾಗುವರೆಂತಲೂ ಸೃಷ್ಟಿನಿಯಮಕ್ಕೆ ವಿರುದ್ಧವಾದ ಶ್ಲೋಕಗಳನ್ನು ರಚಿಸುವವರಾದಿವರಿಗೆ ಪರಧರ್ಮನಿಂದಾಸ್ಪದ ಶ್ಲೋಕಗಳನ್ನು ರಚಿಸುವಲ್ಲಿ ನಾಚಿಕೆ ಬರುವದುಂಟೇ?

ಇನ್ನು ಇವರು ಮಾಡುವ ಈ ಪಶುಹಿಂಸೆಯು ಹಿಂಸೆಯಲ್ಲವಂತೆ! ಯಾಕಂದರೆ—

“ಯಜ್ಞಾರ್ಥಂಪಶವಸ್ಸೃಷ್ಟಾಸ್ಸ್ವಯಮೇವಸ್ವಯಂಭುವಾ | ಯಜ್ಞಸ್ಯಭೂತ್ಯೈಸರ್ವಸ್ಯ ತಸ್ಮಾದ್ಯಜ್ಞೇವಧೋಽವಧಃ || (ಮನುಸ್ಮೃತಿ)

ಇಂಥಾ ಶ್ಲೋಕಗಳನ್ನು ಜನರ ಮನಸ್ಸನ್ನೇ ಮೋಹಗೊಳಿಸುವ ಉದ್ದಿಶ್ಯ ರಚಿಸಿಕೊಂಡು ಇವರು ತಮ್ಮ ಜಿಹ್ವಾಶಾಂತಿಗಾಗಿ ಯಜ್ಞವನ್ನು ನಿಮಿತ್ತಮಾಡಿಕೊಂಡು ಜೈನೇತರನಾದ ಯಾವ ಹಿಂದುವು ಈರೀತಿ ಮಾಂಸಾಹಾರ ಮಾಡುವದಿಲ್ಲವೋ ಅವನು ಮಹಾಗುರುದ್ರೋಹಿ ಎಂದು ವಿಶ್ವಗುಣಾದರ್ಶ ಚಂಪುಕಾರನು ಹೇಳುತ್ತಿರುವನು. ಹ್ಯಾಗಂದರೆ,—

“ಹಿಂಸಾಕಾಮ್ಯಾಭಾವಮೇವಾಧ್ವರಪಶುನಿಹತೇರಾಹರಾಮಾನುಜಾರ್ಯಃ | ತತ್ಪಕ್ಷಸ್ಥೋಪಿಯೋನಪ್ರಸಜತಿಯಜನೇಕಸ್ತದನ್ಯೋಗುರುದ್ವಿಟ್ || ಹಿಂಸಾಂಪರೇಪ್ಸಿತಮಬ್ರಾಹ್ಮತಹಿಂಸನೇಽಪಿ ಜೈನೇತರೋಯದಿಜನೋಭಜತೇಜುಗುಪ್ಸಾಂ || (ವಿಶ್ವ-ಚಂಪು, ಪಾನು ೨೦೦)

ಯಜ್ಞಾದಿಗಳಲ್ಲಿ ಪಶುಗಳನ್ನು ಕೊಲ್ಲುವದು ಹಿಂಸೆಯಲ್ಲವಾದ್ದರಿಂದ ಸರ್ವರೂ ಪಶುಹಿಂಸೆ ಮಾಡಬೇಕೆಂದು ರಾಮಾನುಜಾಚಾರ್ಯನು ಹೇಳುತ್ತಿರುವದರಿಂದ ಯಾರು ಪಶುಹಿಂಸೆ ಮಾಡುವದಿಲ್ಲವೋ ಅವರು ಗುರುದ್ರೋಹಿಗಳಂತೆ. ಇನ್ನು ಗ್ರಂಥಕಾರನು ರಾಮಾನುಜ ಸಾಂಪ್ರದಾಯಕರಿಗೆಂದು ಹೇಳುವಲ್ಲಿ ಟೀಕಾಕಾರನು ಮೊದಲನೇ ಶ್ಲೋಕದ ಅಪಿಶಬ್ದದಿಂದ ಸರ್ವರಿಗೂ ಈ ಹಿಂಸೆಯು ಸಂಬಂಧಿಸಿರುವಂತೆ, ಇವರ ಈರೀತಿಯಾದ ಬರವಣಿಗೆಯಮೇಲಿಂದ ಭರತಭೂಮಿಯಲ್ಲಿ ಮೊದಲು ಮದ್ಯ ಮಾಂಸಾಹಾರ ಸುರುಮಾಡಿದವರೇ ಬ್ರಾಹ್ಮಣರೆಂದು ಐತರೇಯಾದಿ ಬ್ರಾಹ್ಮಣಗ್ರಂಥಗಳಿಂದ ಸ್ಪಷ್ಟಹೇಳಬಹುದು. ಆದರೆ ಈ ಹಿಂಸೆಯನ್ನು ನಿಷೇಧಿಸುವದಕ್ಕಾಗಿಯೇ ಬುದ್ಧನು ತನ್ನ ಸರ್ವಾಯುಷ್ಯವನ್ನೇ ಖರ್ಚುಮಾಡಿದ್ದು ಇದನ್ನು ಲಕ್ಷ್ಯಕ್ಕೆತರದೇ ಲಾ|| ಟಿಳಕರು ತಮ್ಮ ಜಾತಿಯ ಈ ದುಷ್ಟಾಹಾರವು ಬೈಲಿಗೆ ಬೀಳುವದೆಂಬ ವಿಚಾರದಿಂದ ಎಲ್ಲಕ್ಕೂ ಮೊದಲು ಬುದ್ಧನೇ ಮಾಂಸಾಹಾರಿಯೆಂದು ಅವನಮೇಲೆ ಈ ದೋಷವನ್ನು ಆರೋಪಿಸಿ ಅರಗಾಗಿರುವರು. ಯಾಕಂದರೆ ಟಿಳಕರು ಗೀತಾರಹಸ್ಯದಲ್ಲಿ ಎಲ್ಲಿಯಾದರೂ ಬ್ರಾಹ್ಮಣರು ಮಾಂಸತಿನ್ನುತ್ತಿರುವರೆಂದು ಬರೆದಿರುವರೋ ಹ್ಯಾಗೆ ನೋಡಿರಿ? ಇಲ್ಲ. ಅಂದಮೇಲೆ ಇವರ ಕುಟಿಲತ್ವವು ಹ್ಯಾಗಿದೆ ಎಂಬುದನ್ನು ವಾಚಕರೇ ಊಹಿಸಲಿ.

ಇನ್ನು ಶೈವ, ವೀರಶೈವರು ಭಗೇಂದ್ರಿಯದಲ್ಲಿರತಕ್ಕ ಆತ್ಮವನ್ನು ಧ್ಯಾನಿಸಿ ಮುಕ್ತಿಯನ್ನು ಹೊಂದುವರೆಂಬ ಆಗಮಶ್ಲೋಕಗಳನ್ನು ವಿಷ್ಣುವಾಮನ ಬಾಪಟನು ಒಂದುವೇಳೆ ಜನರಿಗೆ ಅಪಹಾಸ ತೋರಲೆಂದು ಬರೆದಿದ್ದರೂ ನಾವು ಇದನ್ನು ಒಂದುಪಕ್ಷದಲ್ಲಿ ಆಗಮಶ್ಲೋಕವೆಂದು ಒಪ್ಪಿದಲ್ಲಿ ಈ ಶ್ಲೋಕಾರ್ಥವು ಕೇವಲ ಆಧ್ಯಾತ್ಮಿಕಪರವಾಗಿದ್ದು ಯಾವದೋಷವೂ ಇದರಲ್ಲಿ ಇರುವದಿಲ್ಲ, ಹ್ಯಾಗಂದರೆ, ಭಗ-ಅಂದರೆ, ಐಶ್ವರ್ಯ, ಸರ್ವೈಶ್ವರ್ಯಕ್ಕೆ ಸ್ಥಾನಭೂತವಾದದ್ದು ಜಗತ್ತು, ಆ ಜಗತ್ತಿನಲ್ಲಿ ಇರುವಂಥಾ ಅಂದರೆ ಸರ್ವಜಗದ್ವ್ಯಾಪಿಯಾದವನು ಆತ್ಮನು, ಅಂಥಾ ಸರ್ವಾಂತರ್ಯಾಮಿ ಸರ್ವವ್ಯಾಪಿ ಆತ್ಮತತ್ವವನ್ನು ತಿಳಿಯುವವನು ಮುಕ್ತನಾಗುವನು, ಅಥವಾ ಶಾಂತಿಸ್ಥಿತಿಯನ್ನು ಹೊಂದುವನೆಂಬ ಅರ್ಥವಾಗುತ್ತಿದ್ದು ಇದರಂತೆಯೇ ಉಪನಿಷತ್ತುಗಳಾದರೂ ಆತ್ಮನ ಸರ್ವವ್ಯಾಪಿತ್ವವನ್ನು ಹೇಳುವವು.

“ಯಸ್ತುಸರ್ವಾಣಿಭೂತಾನಿ ಆತ್ಮನ್ಯೇವಾನುಪಶ್ಯತಿ |
ಯಜುರ್ವೇದ, ಅ. ೪೦.

ಏಕೋದೇವಃ ಸರ್ವಭೂತೇಷುಗೂಢಃ ಸರ್ವವ್ಯಾಪೀಸರ್ವಭೂತಾಂತರಾತ್ಮಾ || (ಶ್ವೇತಾಶ್ವತರೋಪನಿಷತ್ ಅ. ೬)

ಆತ್ಮನಲ್ಲಿ ಸರ್ವಭೂತಗಳು ಹಾಗೂ ಸರ್ವಭೂತಗಳಲ್ಲಿ ಆತ್ಮನು ಅಡಕನಾಗಿರುವನೆಂದು ಪರಸ್ಪರ ವ್ಯಾಪಕತ್ವವನ್ನು ವೇದೋಪನಿಷತ್ತುಗಳು ಆತ್ಮತತ್ವವನ್ನು ತೋರಿಸುತ್ತಿದ್ದು ಅದೇತತ್ವವನ್ನು ಈ ಆಗಮಶಾಸ್ತ್ರವೂ ಹೇಳಿದ್ದು ಇದನ್ನು ಪೂರ್ವಾಪರ ವಿಚಾರಮಾಡದೇ ಚೇಷ್ಟೆಗಾಸ್ಪದಮಾಡಿ ತೋರಿಸಿರುವನು.

ಇದೇ ಬಾಪಟನು ಜೈನದರ್ಶನಸಾರವೆಂಬ ಗ್ರಂಥವನ್ನು ಮರಾಠಿಯಲ್ಲಿ ಬರೆದಿದ್ದು ಅದರಲ್ಲಿ ಅವನು “ಜೈನಧರ್ಮವು ಕೇವಲ ನಾಸ್ತಿಕಧರ್ಮವೆಂತಲೂ ಇದು ಅರ್ವಾಚೀನಕಾಲದಿಂದ ಪ್ರಚಾರದಲ್ಲಿ ಬಂದಿದ್ದು ಇದರಲ್ಲಿಯ ಶ್ವೇತಾಂಬರಪಂಥವಂತೂ ವಿದ್ಯಾರಣ್ಯ ಮೊದಲಾದವರ ಕಾಲಕ್ಕೆ ಅಂದರೆ ಈವತ್ತಿಗೆ ೬೦೦ ವರ್ಷಗಳ ಸುಮಾರಕ್ಕೆ ಹುಟ್ಟಿದ್ದೆಂತಲೂ ಈ ಜೈನಧರ್ಮದಲ್ಲಿಯ ಸ್ವಾಮಿಗಳು ತಲೆಯನ್ನು ಬೋಳಿಸದೇ ಚಿಮಟಿಗೆಯಿಂದ ಕೂದಲುಕೀಳಿಸುವದು ಹಾಗೂ ಮೂಗುಕಟ್ಟುವದು ಇವೇ ಮೊದಲಾದ ಅನಿಷ್ಟ ಕಷ್ಟಕಾರಕಕೃತಿಗಳಿರುವವೆಂದು ಬಹಳ ಹೀಯಾಳಿಸಿ ಈ ಜೈನಧರ್ಮವು ಮೋಕ್ಷಪ್ರಾಪ್ತಿಗೆ ಸರ್ವಥಾ ಅನುಕೂಲಸ್ಥಿತಿಯುಳ್ಳದ್ದಿರುವದಿಲ್ಲವಾದ್ದರಿಂದ ಇದು ಸರ್ವಥಾ ತ್ಯಾಜ್ಯವೇ ಸರಿ” ಎಂದು ನಿರ್ಧರಿಸಿ ಬರೆದಿರುವನು.

ಇನ್ನು ಈ ಬಾಪಟನೊಬ್ಬನೇ ಯಾಕೆ, ಇದರಂತೆ ಯಾವ ಬ್ರಾಹ್ಮಣನೂ ಯಾವ ಧಾರ್ಮಿಕಪುಸ್ತಕವನ್ನು ಬರೆದರೂ ಜೈನಧರ್ಮವನ್ನು ಸರಿಯಾಗಿ ಹೇಳಿರುವದೇ ಇಲ್ಲ. ಇಷ್ಟೇ ಅಲ್ಲದೇ

"ನವದೇದ್ಯಾವನೀಂಭಾಷಾಂ ಪ್ರಾಣೈಃಕಂಠಗತೈರಪಿ | ಹಸ್ತಿನಾತಾಡ್ಯಮಾನೋಽಪಿ ನಗಚ್ಛೇಜ್ಜೈನಮಂದಿರಂ ||

ಪ್ರಾಣಾಂತ್ಯಸಮಯವು ಬಂದಾಗ್ಯೂ ಮುಸಲ್ಮಾನರ ಭಾಷೆಯಿಂದ ಮಾತಾಡಬಾರದು. ಮತ್ತು ಆನೆಯು ತುಳಿಯಲು ಬೆನ್ನಹತ್ತಿದಾಗ ಪ್ರಾಣವನ್ನುಳಿಸಿಕೊಳ್ಳುವದಕ್ಕಾಗಿ ಜೈನಮಂದಿರವು ಸಮೀಪದಲ್ಲಿದ್ದರೂ ಕೂಡಾ ಆ ಮಂದಿರದಲ್ಲಿ ಹೋಗಬಾರದು ಎಂದು ಪವಿತ್ರ ದೇವತಾಮಂದಿರ ಪ್ರವೇಶವನ್ನು ಸಹ ನಿಷೇಧಿಸುವವರಾದೀಬ್ರಾಹ್ಮಣರು ಇನ್ನೇನನ್ನು ಹೇಳಿಯದೇ ಬಿಟ್ಟಾರು? ಇದರಿಂದ ಇವರಲ್ಲಿ ಪರಧರ್ಮದವರ ವಿಷಯವಾಗಿ ಎಷ್ಟು ಮಾತ್ಸರ್ಯಬುದ್ಧಿ ಇದೆ ಎಂಬುವದು ಸ್ಪಷ್ಟವಾಗಿ ಕಾಣುತ್ತದೆ.

ಈರೀತಿಯಾದ ಈ ಜೈನಧರ್ಮದ ಸರ್ವತ್ರ ನಿಂದೆಯನ್ನು ನೋಡಿ ನಾವು ಪುಣೆಯ ಮರಾಠಿ "ಚಿತ್ರಮಯ ಜಗತ್" ಎಂಬ ಮಾಸಿಕದ ೧೯೨೦ನೇ ಏಪ್ರಿಲ್ ತಿಂಗಳ ಅಂಕದಲ್ಲಿ "ಜೈನಧರ್ಮ ಮೀಮಾಂಸಾ" ಎಂಬ ವಿಸ್ತೃತವಾದ ಮರಾಠೀ ಲೇಖನವನ್ನು ಹಾಗೂ ಆಗ್ರಾದಲ್ಲಿ ಹೊರಡುವ "ಜೈನಪಥಪ್ರದರ್ಶಕ" ಎಂಬ ಹಿಂದೀಮಾಸಿಕದಲ್ಲಿ "ಜೈನಧರ್ಮಾಕ್ಷೇಪ ನಿರಸನಮಾಲಾ" ಎಂಬ ಲೇಖಮಾಲೆಯನ್ನು ಕೊಟ್ಟು ಅದರಲ್ಲಿ ಜೈನಧರ್ಮದ ನಿಜಸ್ಥಿತಿ, ಹಾಗೂ ಅದರ ತತ್ವಸಿದ್ಧಾಂತದ ಶ್ರೇಷ್ಠತೆ ಮತ್ತು ಆ ಧರ್ಮದ ಪುರಾತನತ್ವ ಇವುಗಳನ್ನು ಚೆನ್ನಾಗಿ ವಿವೇಚನಮಾಡಿ ತೋರಿಸಿರುವೆವು.

ಈ ಜೈನಧರ್ಮದ ಮೊದಲನೇ ತೀರ್ಥಂಕರರು ವೃಷಭನಾಥರೆಂಬುವರಿದ್ದು ಇದರಂತೆ ಈ ಜೈನಧರ್ಮದಲ್ಲಿ ಒಟ್ಟು ೨೪ ತೀರ್ಥಂಕರರಾಗಿ ಹೋಗಿರುವರು. ಅದರಲ್ಲಿಯ ಕಡೆಯ ತೀರ್ಥಂಕರರಾದ ಮಹಾವೀರರೆಂಬುವರು ಆಗಿಹೋಗಿ ಈವತ್ತಿಗೆ ಸರಾಸರಿ ೨೪೫೦ ವರ್ಷಗಳಾಗಿರುವವೆಂದು ಕಂಡುಬರುತ್ತದೆ, ಆದರೆ ಈ ಮಹಾವೀರತೀರ್ಥಂಕರರು ಸಮಾಧಿಸ್ಥರಾದ ನಂತರ ೧೬೦ ವರ್ಷದ ಸುಮಾರಕ್ಕೆ ಅಂದರೆ ೨೨೮೦ ವರ್ಷ ಸಮಯದಲ್ಲಿ "ಭದ್ರಬಾಹು" ಎಂಬ ಒಬ್ಬ ದೊಡ್ಡ ಜೈನಾಚಾರ್ಯರಾಗಿ ಹೋಗಿದ್ದು, ಇವರು ಉಜ್ಜಯಿನೀನಗರದ ಚಂದ್ರಗುಪ್ತರಾಜನ ಕಾಲಕ್ಕಿದ್ದು ಆ ಚಂದ್ರಗುಪ್ತರಾಜನೂ ಇವರ ಶಿಷ್ಯತ್ವವನ್ನು ವಹಿಸಿದ್ದನೆಂತಲೂ ಈ ಆಚಾರ್ಯರೊಡನೆ ಸಹಸ್ರಾವಧಿ ಶಿಷ್ಯರಿದ್ದು ಅವರೆಲ್ಲರನ್ನೊಡಗೂಡಿ ಈ ಭದ್ರಬಾಹು ಆಚಾರ್ಯರು ದಕ್ಷಿಣದೇಶಕ್ಕೆ ಬಂದು ಜೈನಧರ್ಮವನ್ನು ವಿಶೇಷವಾಗಿ ಪ್ರಚಾರಮಾಡಿದರೆಂತಲೂ ಇವರ ಅನಂತ ಶಿಷ್ಯಸಮೂಹದ ವಿಚಾರ ಭಿನ್ನತ್ವದಿಂದ "ಶ್ವೇತಾಂಬರ, ದಿಗಂಬರ, ಎಂಬ ಎರಡುಭೇದಗಳು ಜೈನಧರ್ಮದಲ್ಲಿ ಹುಟ್ಟಿದವೆಂತಲೂ ತಿಳಿದುಬರುತ್ತದೆ. ಅಂತೂ ಶ್ವೇತಾಂಬರ ಪಂಥವು ಅಸ್ತಿತ್ವದಲ್ಲಿ ಬಂದು ಈವತ್ತಿಗೆ ಎರಡುಸಾವಿರ ವರ್ಷಗಳಾಗಿರಬಹುದೆಂದು ಅನುಮಾನಿಸಲು ಸಂಧಿಯುಂಟು.

ಇನ್ನು "ಆರ್ಯಸಂಸ್ಕೃತಿಕಾಂಚಾಪ್ರಾಚೀನ, ವ, ಅರ್ವಾಚೀನ ಇತಿಹಾಸ" ಎಂಬ ಮರಾಠೀ ಗ್ರಂಥಕಾರನು ತಾನು ೩೪೭-೩೪೮ ರಲ್ಲಿ "ಮಾದಿರಾಜನ ಮಗನಾದ ಬಸವನೆಂಬುವನು ಲಿಂಗಾಯತ ಅಥವಾ ವೀರಶೈವಮತವನ್ನು ಸ್ಥಾಪಿಸಿದನೆಂದು ಸಾಮಾನ್ಯತಃ ಎಲ್ಲರೂ ತಿಳಿಯುವರು ಆದರೂ ಇವನು ಈ ಪಂಥದ ಸ್ಥಾಪಕನಿರದಿದ್ದರೂ ವಿಶೇಷಪ್ರಚಾರಕನಾಗಿ ಹೋಗಿರುವನು, ಇವರಲ್ಲಿ ಜಂಗಮ (ಭಡಜೀ) ಶೀಲವಂತ, (ಭಕ್ತ) ಬಣಜಿಗ (ವ್ಯಾಪಾರೀ) ಮತ್ತು ಪಂಚಮಸಾಲೀ ಹೀಗೆ ನಾಲ್ಕುಭೇದಗಳಿರುತ್ತವೆಂದು ಬರೆದಿದ್ದು ಏನೊಂದೂ ಲಿಂಗಾಯತಧರ್ಮದ ಮಾಹಿತಿ ಇಲ್ಲದೇ ಮನಬಂದಂತೆ ಈ ಮಹಾರಾಷ್ಟ್ರೀಯರು ಬರೆದುಹಾಕುತ್ತಿರುವರು,

(ಸಶೇಷ)

ಪ್ರೈವೇಟ್ ಸೆಕ್ರೆಟರಿ ಟುಹಿಜ್ ಎಕ್ಸಲೆನ್ಸಿಗೌರ್ನರ್ ಆಫ್ ಬಾಂಬೆ, ಇವರ ಸನ್ನಿಧಿಯಲ್ಲಿ.

ಗದಗಿನ ನಿವಾಸಿಗಳಾದ ಕೆಳಗೆ ಸಹಿಮಾಡಿರುವ ಕಾಟನ್ ಮಾರ್ಕೆಟಿನ ದಲಾಲರು, ವ್ಯಾಪಾರಿಗಳು, ಕಿರಾಣಿ, ಜವಳಿ, ಸರಾಫ, ವ್ಯಾಪಾರಸ್ಥರು ಮತ್ತು ಜೀನ ಪ್ರೇಸ ಮೊದಲಾದ ಫ್ಯಾಕ್ಟರಿಗಳ ಮಾಲಿಕರು ವಗೈರೇರು ಕೂಡಿ ಅರಿಕೆಮಾಡಿಕೊಳ್ಳುವದೇನಂದರೆ:—

ಈ ಊರಿನ ಮುಖ್ಯ ವ್ಯಾಪಾರವೆಂದರೆ ಹತ್ತಿ, ಅರಳಿಯು. ಇದೊಂದರಿಂದ ಇತರ ಕಿರಾಣಿ, ಜವಳಿ, ಸರಾಫ ವಗೈರೆ ವ್ಯಾಪಾರಗಳು ಅಧಿಕವಾಗಿ ನಡೆಯುತ್ತವೆ. ಸದ್ಯಕ್ಕೆ ಈ ಊರಲ್ಲಿ ಇರುವ ಫ್ಯಾಕ್ಟರಿಗಳು.—

(1) ನೂಲುತೆಗೆಯುವ ಗಿರಣಿ (8) ಅರಳಿ ಗಂಟುಕಟ್ಟುವ ಪ್ರೇಸುಗಳು (18) ಜೀನ ಫ್ಯಾಕ್ಟರಿಗಳು ಇವುಗಳಲ್ಲಿ 204 ಜೀನುಗಳು. 1854 ಸಾಜೀನ ತಿರಗಿಸಗಳುಳ್ಳ ರಾಟಿಗಳು ಇರುತ್ತವೆ. (48) ಕಾಟನ್ ಮಾರ್ಕೆಟಿನಲ್ಲಿ ಮಾಲು ಹಚ್ಚಲಿಕ್ಕೆ ದಲಾಲರು ಕಟ್ಟಿಸಿರುವ ವಖಾರಗಳು ಇವುಗಳಲ್ಲಿ ಅಜಮಾಸ ಅರವತ್ತು ಮಂದಿ ದಲಾಲರು ಇರುತ್ತಾರೆ.

ಈ ಪ್ರಕಾರ ಇದ್ದು ಈ ಉದ್ಯೋಗ (ಹತ್ತಿ ಅರಳಿ, ಒಂದರಿಂದಲೇ ಅಂದರೆ ಗಿರಣಿ, ಜೀನ, ಪ್ರೇಸು ಮತ್ತು ವಖಾರಗಳಲ್ಲಿ ಸಹಾ ದರದಿವಸ ಅಜಮಾಸು ಮೂರುಸಾವಿರ ಬಡಕೂಲಿಕಾರರು ಉಪಜೀವನ ಮಾಡುತ್ತಿರುವರು. ಈ ಗ್ರಾಮವು ಮೊದಲಿಗೆ ಸಣ್ಣದಿದ್ದು ಈ ಹತ್ತಿ ಅರಳಿ ವ್ಯಾಪಾರವು ಊರ್ಜಿತಾವಸ್ಥೆಗೆ ಬಂದಹಾಗೆಲ್ಲ ಬೆಳೆದು ಸಿಟಿ (ಪಟ್ಟಣ) ಅನಿಸಿಕೊಂಡದೆ. ಈ ಗ್ರಾಮಕ್ಕೆ ಬಹಳ ವರುಷಗಳಿಂದ ನಿಜಾಮು ಇಲಾಖೆಯ ಮಾಲು ಹಾಗೂ ಮದ್ರಾಸ ಇಲಾಖೆಗೆ ಸೇರಿದ ಕೂಡ್ಲಿಗಿ ಹುವ್ವಿನಹಡಗಲಿ ವಗೈರೆ ತಾಲೂಕಗಳ ಮಾಲು ಶಿವಾಯ ವಿಜಾಪೂರ ಜಿಲ್ಲೆಯ ಬಾಗಲಕೋಟಿ, ಮುದ್ದೇಬಿಹಾಳ, ವಗೈರೆ ಕಡೆಯ ಮಾಲು ಮತ್ತು ಶಿರಹಟ್ಟಿ ರಾಮದುರ್ಗ ಮುಂತಾದ ಸಂಸ್ಥಾನಗಳ ಮಾಲು ಬರುತ್ತಾ ಇದ್ದವು. ಮೇಲ್ಕಂಡ ಪ್ರದೇಶಗಳ ಮಾಲುಗಳೆಲ್ಲ ಬಹುತೇಕ ಧಾರವಾಡ ಕುಮಠಾ ವರ್ಗದಲ್ಲಿ ಬರುತ್ತಿದ್ದು ಕಾರಿನಿಂದಲೂ ಕಲರಿನಿಂದಲೂ ಒಂದೇ ಸ್ವರೂಪದವು ಇರುತ್ತವೆ.

ಹೀಗಿದ್ದು ಇತ್ತೀಚಿಗೆ ಹೊಸದಾಗಿ ಆಗಿರುವ ಕಾಟನ್ ಟ್ರಾನ್ಸಪರ ಆಕ್ಟಿನಿಂದ ಈ ಊರಿಗೆ ಗೊತ್ತುಪಡಿಸಿರುವ ಏರಿಯಾ (ಹದ್ದು) ಬಹಳ ಸ್ವಲ್ಪ ಅಂದರೆ ಪೂರ್ವಕ್ಕೆ ಹರ್ಲಾಪೂರ ಸ್ಟೇಷನ್ 12 ಮೈಲು, ಉತ್ತರ ಬಾಜೂಕ್ಕೆ ಹೊಳೆಆಲೂರ ಸ್ಟೇಷನ್ 30 ಮೈಲು, ದಕ್ಷಿಣಕ್ಕೆ ಮುಂಡರಗಿ ಪೇಠಾ ಅಜಮಾಸು 25 ಮೈಲು ಈ ಪ್ರಕಾರ ಇರುತ್ತದೆ. ಪಶ್ಚಿಮಕ್ಕೆ ಸಮುದ್ರದವರೆಗೂ ದೊಡ್ಡ ಏರಿಯಾ ಇದ್ದರೂ ಆ ಬಾಜೂಕ್ಕೆ ದೊಡ್ಡ ಪಟ್ಟಣವಾದ ಹುಬ್ಬಳ್ಳಿ ಇರುವದರಿಂದ ಅತ್ತಕಡೆಯಮಾಲು ಈ ಊರಿಗೆ ಬಿಲ್ಕುಲ ಬರುವದಿಲ್ಲ.

ಸನ್ 1917 ನೇ ಇಸವಿಯಲ್ಲಿ ಮಳೆ ಬೆಳೆ ನೆಟ್ಟಗಾದ್ದರಿಂದ ಆ ಇಸವಿಯಲ್ಲಿ ಈ ಊರಿಂದ 73 ಸಾವಿರ ಅರಳೀ ಬೇಲುಗಳು (73000) ತಯಾರಾಗಿ ರವಾನಿಸಲ್ಪಟ್ಟವೆ. ಅತ್ತಿಂದ ಇತ್ತೀಚಿಗೆ ಸಾಕಷ್ಟು ಮಳೆ ಬೆಳೆಗಳು ಇಲ್ಲದೆ ಇದ್ದದರಿಂದ ಹೋದ ಸಾಲಿನಲ್ಲಿ ಅಂದರೆ 1923 ನೇ ಇಸವಿಯಲ್ಲಿ 29700 ಅರಳೀ ಬೇಲುಗಳು ಮಾತ್ರ ತಯಾರಾಗಿ ರವಾನಿಸಲ್ಪಟ್ಟವು.

ಈ ಪ್ರಕಾರ ಮಳೆ ಬೆಳೆಗಳು ಇತ್ತೀಚಿಗೆ ಕಡಿಮೆಯಾಗುತ್ತಾ ಬಂದದ್ದರಿಂದಲೇ ಹತ್ತಿ ಅರಳೀ ವ್ಯಾಪಾರವು ಸಹ ಕಡಿಮೆಯಾಗಿ ಈ ಗ್ರಾಮದ ನಿವಾಸಿಗಳಾದ ಎಲ್ಲ ವ್ಯಾಪಾರಿಕರು ಉತ್ಪನ್ನವಿಲ್ಲದೆ ಹಾಗೂ ಇತರ ಬಡಜನರು ಕೂಲಿ ಇಲ್ಲದೆ ತಳಮಳಿಸುತ್ತಾ ಇದ್ದರು. ಇಂಥಾದ್ದರಲ್ಲಿ ಈ ಹೊಸ ಕಾಟನ್ ಕಾಯಿದೇಯಿಂದ ಮೇಲ್ಕಂಡಂತೆ ಗದಗಿನ ಏರಿಯ (ಹದ್ದು) ಆಗದೀ ಸ್ವಲ್ಪವೇ ಗೊತ್ತುಪಡಿಸಿದ್ದರಿಂದ ಮತ್ತಷ್ಟು ತೊಂದರೆಯಾಗಿ ಈ ಊರಿನ ಎಲ್ಲ ವ್ಯಾಪಾರಕ್ಕೂ ಧಕ್ಕೆ ತಗಲಿ ತುಸುದಿವಸಗಳಲ್ಲಿಯೇ ಈ ಪಟ್ಟಣವು ಹಳ್ಳಿಯಾಗುವ ಸಂಭವವು ನಿಶ್ಚಯವಾಗಿ ಬರುವದು. ಇದೇ ವಿಷಯ ವಿಚಾರಮಾಡುವದಕ್ಕಾಗಿಯೇ ಹೊರಟಿದ್ದ ಶೇತಕೀ ಖಾತೆಯ ಡಾಯರೆಕ್ಟರರಾದ ಡಾಕ್ಟರ ಮ್ಯಾನಸಾಹೇಬರವರು ಕಳೆದ ತಾ|| 1ನೇ ಫೆಬ್ರುವರಿ 1924ನೇ ಇಸವಿಯ ದಿವಸ ನಮ್ಮ ಕಾಟನ್ ಮಾರ್ಕೆಟ ಮರ್ಚೆಂಟ ಹಾಲಿಗೆ ದಯಮಾಡಿಸಿ ಯಾವತ್ತು ವ್ಯಾಪಾರಸ್ಥರಿಗೂ ದಲಾಲರಿಗೂ ಭೆಟ್ಟಿಯನ್ನು ಕೊಟ್ಟು ಮೇಲ್ಕಂಡ ಹಕೀಕತುಗಳ ವಿಚಾರಿಸಿಕೊಂಡು ಹೀಗೆ ಅಪ್ಪಣೆ (ವಚನ) ಕೊಟ್ಟಿರುತ್ತಾರಲ್ಲಾ.—

"ಈಗ ಸದ್ಯಕ್ಕೆ ಹತ್ತಿ ಅರಳಿಯ ಮೋಸಮು ಸುರುವು ಆಗಿರುವದರಿಂದ ಲೈನರಸ್ತೆಗಳಿಂದ ಚಕ್ಕಡಿಯ ಮೇಲೆ ಬರುತ್ತಿರುವ ಹತ್ತಿ ಅರಳಿ ಮಾಲು ಈಗಿನಂತೆ ಲಾಯಸನ್ಸ ಇಲ್ಲದೇ ಬರಲಿ. ಫಕ್ತ ರೇಲ್ವೇ ಸ್ಟೇಷನ್ನಗಳ ಬಗ್ಗೆ ನಿಮಗೆ ಇದೇ ಊರಲ್ಲಿ ಬೇಕಾದಾಗ ಲಾಯಸನ್ಸ ದೊರೆಯುವಂತೆ ವ್ಯವಸ್ಥೆ ಮಾಡುವೆವು. ಶಿವಾಯ ಮುಂದಿನ ವರುಷದೊಳಗೆ ರೈಲಿನಿಂದ ಬರುವ ಮಾಲಿಗೂ ಯಾವ ತೊಂದರೆಯಾಗದಂತೆ ವ್ಯವಸ್ಥೆ ಮಾಡಿಸುವೆವು" ಈ ಪ್ರಕಾರ ಅಪ್ಪಣೆ ಕೊಡಿಸಿಹೋದರು. ಆದರಂತೆ ಅವರು ಬಂದು ಹೋದ ಕೆಲವು ದಿವಸಗಳವರೆಗೂ ಲೈನರಸ್ತೆಗಳಿಂದಾ ಚಕ್ಕಡಿಗಳ ಮೇಲೆ ನಿರ್ಭೀತಿಯಿಂದಾ ಅನಿರ್ಬಂಧವಾಗಿ ಹತ್ತಿ ಅರಳಿ ಮಾಲು ಬರುತ್ತಾ ಇತ್ತು ಮತ್ತು ಡಾ|| ಮ್ಯಾನಸಾಹೇಬರವರ ಹೇಳಿಕೆಯಂತೆ ಮೆ|| ಡಿ. ಡಿ. ಡಾಯರೆಕ್ಟರರಾದ ಶಿ. ಶಿ. ಸಾಲಿಮಠ ಇವರು ತಾ|| 28-2-1924 ನೇ ದಿವಸ ರೇಲ್ವೆಯಿಂದ ಬರತಕ್ಕ ಹತ್ತಿ ಅರಳಿ ಮಾಲಿಗೆ ಗದಗಿನಲ್ಲಿಯೇ ಲಾಯಸನ್ಸ ಸಿಗುವದೆಂದು ಜಾಹೀರ ನೋಟಿಸ ತೆಗೆದು ಅದರಂತೆ ವ್ಯವಸ್ಥೆ ಮಾಡಿದರು. ಆದರಲ್ಲಿ ಸಹಾ ಚಕ್ಕಡಿಗಳ ಮೇಲೆ ಬರುವ ಮಾಲಿಗೆ ಲಾಯಸನ್ಸ ತೆಗೋಬೇಕೆಂದು ಇರುವದಿಲ್ಲ. ಹೀಗಿದ್ದು ಇತ್ತೀಚಿಗೆ ಯಾವ ಉದ್ದೇಶದಿಂದಲೋ ಇಲ್ಲಿಯ ಕಾಟನ್ ಓವ್ಹರಶಿಯರರು ವ್ಯವಹಾರಿಕರಿಗೂ ದಲಾಲರಿಗೂ ಬಹುತೇಕ ಭಾಗದ ಬಡರೈತರಿಗೂ ತೊಂದರೆ ವ ಲುಕ್ಸಾನ ಆಗುವಂತೆ, ಲೈನರಸ್ತೆಗಳಿಂದ ಚಕ್ಕಡಿ ಮೇಲೆ ಬರುತ್ತಿದ್ದ ಹತ್ತಿ ಅರಳಿ ಮಾಲುಗಳಿಗೂ ಅಡ್ಡಿಮಾಡಿ ಲಾಯಸನ್ಸ ಪಡೆಕೊಳ್ಳಬೇಕೆಂಬ ವಗೈರೆ ಪ್ರತಿಬಂಧಕವಾದ ಕಾಯದೆಯನ್ನು ಅಮಲಿನಲ್ಲಿ ಬರುವಂತೆ ಮಾಡಿರುತ್ತಾರೆ.

ಈ ಪ್ರಕಾರ ಮೇಲಿಕಂಡಂತೆ ಈ ಊರಿಗೆ ಬರುತ್ತಿದ್ದ ಹತ್ತಿ ಅರಳಿಯ ಮಾಲಿಗೆ ಪ್ರತಿಬಂಧವಾಗುವದರಿಂದ ಇದೇ ವ್ಯಾಪಾರಕ್ಕಾಗಿಯೇ ಈ ಪಟ್ಟಣದಲ್ಲಿ ವಾಸವಾಗಿರುವ ದೊಡ್ಡ ದೊಡ್ಡ ವ್ಯಾಪಾರಿಕರಿಗೂ ದಲಾಲರಿಗೂ ಗಿರಣಿ, ಪ್ರೇಸು, ಜೀನು, ಫ್ಯಾಕ್ಟರಿಗಳ ಮಾಲಕರಿಗೂ ಬಹಳ ಲುಕ್ಸಾನ ಆಗುವದಲ್ಲದೆ ಈಗ ಗೊತ್ತುಪಡಿಸಿರುವ ಸಂಕುಚಿತವಾದ ಏರಿಯಾದ ಹೊರಗಿನ ಬಡರೈತಜನರಿಗೂ ಅತಿಶಯ ತೊಂದರೆಯು ಲುಕ್ಸಾನವು ಸಹ ಆಗುತ್ತದೆ. ಶಿವಾಯ ಈ ವ್ಯಾಪಾರವು ಕಟ್ಟು ಆಗುವದರಿಂದ ಅದರೊಂದಿಗೆ ಕಿರಾಣಿ, ಜವಳಿ, ಸರಾಫ ಮುಂತಾದ ವ್ಯಾಪಾರಗಳು ಕಟ್ಟಾಗಿ ಎಲ್ಲರಿಗೂ ಲುಕ್ಸಾನ ಆಗುತ್ತದೆ. ಮತ್ತು ಇದೊಂದೇ ಹತ್ತಿ ಅರಳಿ ಉದ್ಯೋಗದಲ್ಲಿ ದರದಿವಸ ಕೆಲಸಮಾಡಿ ಉಪಜೀವನ ಸಾಗಿಸಿಕೊಳ್ಳುತ್ತಿರುವ ಅಜಮಾಸ 3000 ಬಡಕೂಲಿಜನರಿಗೂ ಅತಿಶಯ ಕಷ್ಟಗುತ್ತದೆ.

ಕಾರಣ ಖಾವಂದರವರು ಮೇಲ್ಕಂಡ ಯಾವತ್ತು ಮಜಕೂರುಗಳನ್ನು ಪೂರ್ಣ ಲಕ್ಷಕ್ಕೆತಂದು ಕೆಳಗಿನ ನಮ್ಮ ಪ್ರಾರ್ಥನೆಯನ್ನು ಪೂರ್ಣಮಾಡಬೇಕು.

(1) ಈ ಊರಿಗೆ ಪೂರ್ವಭಾಗಕ್ಕೆ ಗೊತ್ತುಪಡಿಸಿರುವ ಹರ್ಲಾಪೂರ ಸ್ಟೇಷನ್ ಏರಿಯಾ (ಹದ್ದು) ರಹಿತಪಡಿಸಿ ಹೊಸಪೇಟಿ ಮತ್ತು ಕೊಟ್ಟೂರ ಸ್ಟೇಷನ್‌ಗಳವರೆಗೂ ಏರಿಯಾ ಗೊತ್ತುಪಡಿಸಬೇಕು. ಮತ್ತು ನಿಜಾಮು ಇಲಾಖಾದಲ್ಲಿ ಯಲಬುರ್ಗಿ, ಕೊಪ್ಪಳ, ಕುಷ್ಟಗಿ ಈ ಮೂರು ತಾಲೂಕಗಳ ಸಮಾವೇಶ ಮಾಡಬೇಕು.

(2) ದಕ್ಷಿಣ ದಿಕ್ಕಿನ ರಸ್ತೆಗಳಿಂದ ಬರುವ ಮದ್ರಾಸ ಇಲಾಖೆಯ ಪೈಕಿ ಹರಪನಹಳ್ಳಿ, ಹುವ್ವಿನಹಡಗಲಿ, ಕೂಡಲಿಗಿ, ತಾಲೂಕಗಳಿಗೆ ಸೇರಿದ ಯಾವತ್ತು ಗ್ರಾಮಕ್ಕೆ ಮಾಲು ಚಕ್ಕಡಿಗಳಮೇಲೆ ಅನಿರ್ಬಂಧವಾಗಿ ಬರಲಿಕ್ಕೆ ಹುಕುಮು ಆಗಬೇಕು.

(3) ಉತ್ತರ ಬಾಜೂಕ್ಕೆ ಈಗ ಗೊತ್ತುಪಡಿಸಿರುವ ಕುಮಠಾ ಧಾರವಾಡ ಏರಿಯಾನೇ ಕಾಯಂ ಇಡಿಸಿ, ಅದರ ಪೋಟ ಏರಿಯಾಗಳಲ್ಲಿ ಕಾಂಪ್ಟಾ ಏರಿಯಾಗಳೆಂದು ವಿಜಾಪೂರ ಮತ್ತು ಬಾಗಲಕೋಟಿ ಭಾಗಗಳನ್ನು ಪ್ರತ್ಯೇಕನಮೂದಿರುವದನ್ನು ರಹಿತಪಡಿಸಿ, ಇಡಿ ಕುಮಠಾ ಧಾರವಾಡ ಏರಿಯಾದಲ್ಲಿ ಬೇಕಾದ ಠಿಕಾಣೆಯಿಂದ ಹತ್ತಿ ಅರಳಿ ಮಾಲು ಬರಹೋಗಲಿಕ್ಕೆ ಮತ್ತು ಅದರಂತೆ ಆ ಬಾಜು ಲೈನರಸ್ತೆಗಳಿಂದಲೂ ಬರಹೋಗುವ ಮಾಲುಗಳಿಗೂ ಅನಿರ್ಬಂಧವಾಗಿ ಬರಹೋಗಲಿಕ್ಕೆ ಹುಕುಮು ಆಗಬೇಕು.

(4) ಈ ಹತ್ತಿ ಅರಳಿ ವ್ಯಾಪಾರಗಳ ಬಗ್ಗೆ ಯಾವ ಕಾಯದೆ ಕಾನೂನಗಳನ್ನು ಪಾಸುಮಾಡುವದಾದರೆ ನಮ್ಮ ಕರ್ನಾಟಕದ ಪೈಕಿ ಹತ್ತಿ ಅರಳಿ ವ್ಯಾಪಾರದ ಬಗ್ಗೆ ಮುಖ್ಯಪಟ್ಟಣಗಳಾದ ಹುಬ್ಬಳ್ಳಿ ಮತ್ತು ಗದಗಿನ ನಿವಾಸಿಗಳಲ್ಲಿ ಅನುಭವಿಕರಾದ ಒಬ್ಬೊಬ್ಬ ದಲಾಲರನ್ನು ಒಬ್ಬೊಬ್ಬ ಖರೀದಿದಾರರನ್ನು ಅಭಿಪ್ರಾಯದ ಬಗ್ಗೆ ಚುನಾಯಿಸಬೇಕು.

(5) ಈ ಊರಿಗೆ ಯಾವ ಭಾಗದಿಂದಲೂ ಮತ್ತು ಯಾವದೇ ರೇಲ್ವೆ ಅಗರ ಲೈನರಸ್ತೆಗಳಿಂದಲೂ ಯೋಗ್ಯ ಕಾರಣದ ಮತ್ತು ಲಾಯಸನ್ಸಿನ ಶಿವಾಯ ಕೆಟ್ಟ ಅರಳಿ ಅಂದರೆ ಗಿರಣಿಯ ಡ್ರಾಪಿಂಗ ಪ್ಲಾಯ ಮೊದಲಾದ ಕೆಟ್ಟ ಅರಳಿ ಎಂಬುವಗಳನ್ನು ತರಬಾರದಾಗಿ ಕಾಯದೇಯಿಂದ ಕಟ್ಟಪ್ಪಣೆಯಾಗಬೇಕು.

ಈ ಪ್ರಕಾರವಾದಲ್ಲಿ ಈ ಪ್ರದೇಶಕ್ಕೂ ವ್ಯಾಪಾರಕ್ಕೂ ಬಡರೈತರೇ ಮುಂತಾದ ಯಾವತ್ತರಿಗೂ ಹಿತವಾದೀತೆಂಬ ಮೇಲಿನ ನಮ್ಮ ಬೇಡಿಕೆಗಳನ್ನು ಪೂರ್ಣಮಾಡಿ ಅದರಂತೇ ತೀವ್ರ ಹುಕುಮು ಜಾರಿಯಲ್ಲಿ ತರುವಿರೆಂದು ಪ್ರಾರ್ಥಿಸುತ್ತೇವೆ.

ಮತ್ತು ಈ ಸಮ್ಮಂಧಿ ಯಾವತ್ತು ಪತ್ರವ್ಯವಹಾರಗಳನ್ನು ನಮ್ಮ ಗದಗ ಕಾಟನ್ ಮಾರ್ಕೆಟಿನ ದಲಾಲ ಸಂಘದ ಪ್ರೆಸಿಡೆಂಟರಾದ ಮ|| ರಾ|| ರಾ|| ಈಶ್ವರಪ್ಪಾ ಹೊಳಿಯಪ್ಪಾ ಬುಳ್ಳಾ ಇವರ ಕಡೆಗೂ ಅಥವಾ ಇದೇ ಸಂಘಕ್ಕೆ ವ್ಹಾಯಿಸ ಪ್ರೆಸಿಡೆಂಟರಾಗಿರುವ ಮ|| ರಾ|| ರಾ|| ರಂಗೀಲದಾಸ ರಾಮದಾಸ ಶೇಟಜಿ ಪುಣೇಕರ ಇವರ ಕಡೆಗೂ ಮಾಡುವಿರೆಂದು ಇಚ್ಛಿಸಿ ಇದರಡಿಯಲ್ಲಿ ನಮ್ಮ ಸ್ವಸಂತೋಷದಿಂದ ಸಹಿ ಮಾಡಿರುತ್ತೇವೆ.

ಗದಗ,
25-5-1924. }

ಪ್ರೆಸಿಡೆಂಟ: ಈಶ್ವರಪ್ಪ ಬುಳ್ಳಾ
ವ್ಹಾ. ಪ್ರೆಸಿಡೆಂಟ:—ರಂಗೀಲದಾಸ ಪುಣೇಕರ.
ದಲಾಲರ ಸಂಘ ಗದಗ.

ಇದಕ್ಕೆ 91 ಜನ ದೊಡ್ಡ ದೊಡ್ಡ ದಲಾಲರ ಮತ್ತು ವರ್ತಕರ ಸೈನ್ ಆಗಿರುತ್ತದೆ. ಇದರ ಪ್ರತಿಯು ಮೆ|| ಡಾಯರೆಕ್ಟರ ಆಫ್ ಎಗ್ರಿಕಲ್ಚರ ಪೂನಾ, ಮೆ|| ದಿ ರೆವಿನ್ಯು ಕಮಿಶನರ ಸದರ್ನ ಡಿವ್ಹಿಜನ್ ಬೆಳಗಾವ, ಮೆ|| ದಿ ಕಲೆಕ್ಟರ ಆಫ್ ಧಾರವಾರ, ಮೆ|| ಡಿಪುಟಿ ಡಾಯರೆಕ್ಟರ ಸದರ್ನ ಡಿವ್ಹಿಜನ್ ಧಾರವಾರ, ದಿ ಮಾಮಲೇದಾರ ಗದಗ, ಮೆಂಬರ್ಸ ಆಫ್ ಲೆಜಿಸ್ಲೇಟಿವ್ಹ ಕೌನ್ಸಿಲ ಧಾರವಾರ ಡಿಸ್ಟ್ರಿಕ್ಟ ಇವರಿಗೂ ಮತ್ತು ವರ್ತಮಾನ ಪತ್ರಿಕೆಗಳಿಗೂ ಕಳುಹಿಸಲ್ಪಟ್ಟಿವೆ.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾವು ೪೦ ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿ ಬಿಕರಿಮಾಡುತ್ತಾ ಇದ್ದೇವೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳಪ್ಪ, ಊದುಬತ್ತಿ ಷಾಪ್,
18 ದೊಡ್ಡಪ್ಯಾಟಿ ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲ ನಿಮ್ಮಲ್ಲಿದ್ದರೆ ಆದರೆ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರೀಮಾತ್ರೆ ಬಾಟ್ಲ 1ಕ್ಕೆ 0—4—0.6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ಬಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಟಲೆ ಸುಲಭ ಕಂತಿಗೂ, ಸಹ ಸಪ್ಲೈ ಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್‌ಶಾಲುಗಳನ್ನು ಸುಲಭ ಬೆಲೆಯಿಂದ ಬಿಕರಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—38] ಮೈಸೂರು.

೧೯೨೪ ನೆಯ ಇಸವಿ ಜೂನ್ ತಾ|| ೨೨ ರಿಂದ ೧೯೨೪ ನೆಯ ಇಸವಿ ಜೂನ್ ತಾ|| ೨೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಜ್ಯೇಷ್ಠ ಬಹುಳ ಷಷ್ಠಿಯಿಂದ ಜ್ಯೇಷ್ಠ ಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನಮಾಸ
22	ಭಾನು	ಷಷ್ಠಿ	43-54	ಶತ	44-1	9
23	ಸೋಮ	ಸಪ್ತ	42-40	ಪೂಭಾ	44-35	10
24	ಮಂಗಳ	ಅಷ್ಟ	42-45	ಉಭಾ	46-24	11
25	ಬುಧ	ನವ	43-25	ರೇವ	49-20	12
26	ಗುರು	ದಶ	46-34	ಅಶ್ವಿ	53-44	13
27	ಶುಕ್ರ	ಏಕಾ	50-58	ಭರ	59-12	14
28	ಶನಿ	ದ್ವಾದ	54-44	ಕೃತ್ತಿ	60	15

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಶ್ರೀಕೃಪಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರ ಶೋಭರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ ಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೇತ್ತ್ರಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಜೂನ್ ತಾರೀಖು ೨೯ ನೆಯ ಭಾನುವಾರ. [ಸಂಚಿಕೆ ೨೬

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHARAGHAVA
VAIDYASALA

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲೂಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
21 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾಕ್ಟರ್ ಜೇ ಬೀ ಯವರ ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—43] ಪೋ. ಬಾ. ೫೧೦, ಮದರಾಸು.

---

4 ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗತಾನೆ 4ನೆ ಮುದ್ರಣವು ಅಚ್ಚಾಗಿ ವಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ಸಂತೆ ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಆಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—9] ಕೇರಳಾಪುರ, ಅರಕಲಗೂಡು ತಾಲ್ಲೋಕು, ಹಾಸನ ಡಿ||

ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುತ್ತದೆ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

☞ ೧೦೦೦ ರೂ. ಇನಾಮು. ☜

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದುಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಿಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಿಕೆ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೆಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಶಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿತಪ್ಪೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಶೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ, ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಕ್ರೌಂಚಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕೆ, ಕಮರಕಸ, ಕಥಲ್ಯಾಗೊಂದ, ಪಂಜಾಬಿಮಿಶ್ರಿ, ವಂಶಲೋಚನ, ಸಾಲಮಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ. ಬೀಜಬಂಧ, ಬಿಗರಿಗೊರಸು, ಮೊಂಗಲ್ ಬೇದಾಣಾ, ಮೈದಾಬಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೪೨ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಅವಶ್ಯತೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ಣ ಅಡ್ರೆಸ್ ಮೊಕ್ಕಾಂ ಪೋಸ್ಟ್ ಸಹ ಬರೆಯಿರಿ.

[50—46] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಿಗಿ.

ಗ್ರಂಥಸಿಕ್ಕುವಸ್ಥಳ:—
ಹೊಸಮಠದ ಚನ್ನಯ್ಯನವರು ಹರಿಹರ,
24—12 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿ
[50—24] ಅಂಡ್ ಸನ್ಸ್, ಚಿ.ಪಿ. ಮಂಡಲಿ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೦ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—20] [illegible]

ಪ್ರಸಿದ್ಧಪತ್ರಿಕೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದ ಜನರಲ್ ಕಮಿಟಿ ಮೀಟಿಂಗು ಬರುವ ಜುಲೈ ತಿಂಗಳು 27ನೇ ತಾರೀಖು ಭಾನುವಾರ ಸಾಯಂಕಾಲ 4 ಗಂಟೆಗೆ ಬೆಂಗಳೂರು ಸಿಟಿ ಶೇಷಾದ್ರಿ ರೋಡಿನಲ್ಲಿರುವ ಶ್ರೀ ಜಗದ್ಗುರು ಜಯದೇವ ವೀರಶೈವ ವಿದ್ಯಾರ್ಥಿನಿಲಯದಲ್ಲಿ ನಡೆಯುತ್ತದೆ. ಆಗ್ಗೆ ವೀರಶೈವ ಸಮಾಜಾಭಿವೃದ್ಧಿಗೆ ಮುಖ್ಯಸಾಧಕವಾದ ವಿಚಾರಗಳು ಚರ್ಚಿಸಲ್ಪಡುತ್ತಾದುದರಿಂದ ಮೆಂಬರುಗಳೆಲ್ಲರೂ ದಯವಿಟ್ಟು ತಪ್ಪದೆ ಮೀಟಿಂಗಿಗೆ ದಯಮಾಡಿಸಿ, ಸಮಾಜಸೇವೆಯನ್ನು ಮಾಡಿದ ಪುಣ್ಯಕ್ಕೆ ಭಾಗಿಗಳಾಗಬೇಕಾಗಿ ಪ್ರಾರ್ಥನೆ.

ಬೆಂಗಳೂರು ಸಿಟಿ, } ಜಿ. ಪರಮಶಿವಯ್ಯ, ಬಿ.ಎ. ಎಲ್‌ಎಲ್.ಬಿ.
ತಾ|| 26-6-24, } ಆನರರಿ ಸೆಕ್ರಟರಿ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜೂನ್ ತಾ|| ೨೯ ನೆಯ ಭಾನುವಾರ.

THE MYSORE LEGISLATIVE COUNCIL.

The Mysore Legislative Council commenced its Budget Session on the 23rd June 1924 with the Dewan presiding over it. Among a number of interpellations that were asked was one from Mr. J. Rudrappa regarding the Government grants to the Sanskrit Schools and Colleges. The answer was that two of the Colleges situated at Bangalore and Mysore were maintained entirely by Government and the third at Melkote was receiving a grant from State Funds. The Government was spending on these three institutions Rs. 41,260 per annum. Besides there were 50 Sanskrit *Patasalas* maintained by Brahmins which received an annual grant totalling Rs. 9000. To none of these 53 institutions were non-Brahmins allowed. There were only four Sanskrit Patasalas maintained by non-Brahmins which received a grant of Rs. 924 per annum. These figures disclose how far there has been justice done to the people of the State in the matter of Sanskrit education all these years. Monopoly is bad in all things, but it is worst in the field of education and especially of the study of our own ancient literature. It is only recently on the 10th June 1924 that orders were passed on a report of the Committee appointed to reorganise Sanskrit Colleges which was received on 13th June 1921. The mountain of labour has really produced the rat of an offspring. The order reserves the Mysore Sanskrit College as a seat of ancient and orthodox learning to Brahmins only and very grudgingly makes a provision for the admission of non-Brahmins to study subjects other than Vedas and Vedangas to the Bangalore Sanskrit College. We are supposed still to live in a democratic age and to adopt democratic institutions to govern the country. Apart from the actual harm done to other communities by these unjustifiable and irrational restrictions, we are also concerned about the mentality which can propose and countenance such an injustice, and are doubtful whether such a mentality would ever be conducive to the real progress of the State.

Dewan Bahadur K. P. Puttanna Chetty, C.I.E., opened the budget discussion with a thought-provoking speech which those responsible for the administration of the State may well consider. The key-note of his speech is that there has been after no real progress in the State, either from the point of view of growth of population or the increase of prosperity. He says that civilisation and progress of society anywhere means growth of population, and that the rate of increase in our State has not been satisfactory. He has quoted figures which show that from 1881, it has been a sliding scale of continuous decrease. As regards the Malnad districts the figures are rather appalling. Instead of any increase there has been for the last two decades a rising decrease. As regards the means of subsistence which in our State he says, depends on agriculture, that is, increase in the area sown and cropped–whether extensively or intensively–which again depends on irrigation. In this field also the increase that obtained in the earlier decades slowly disappeared until there has been between the year 1911 and 1921 a decrease of 3·8 percent of the cropped area. Without minimising the importance of industrial and mineral wealth he wished to make it clear that the cardinal index of progress in our State was *growth* in the wealth derived from agriculture, a fact which may not be so striking as other matters regarding schemes and enterprises. It was a pertinent question that the Dewan Bahadur asked why our country though it had vast advantages over its neighbours it was not going forward as it should and was even showing a tendency to stagnate, if not going down. He looked in vain for an account of the peoples' activities which went to sustain the Government on the eve of taking stock of the year's work. Mr. Puttanna Chetty has struck the correct note. Education and enlightenment of the people is an indispensable factor in leading them onward on the path of progress and we cannot deny that it requires all the concentrated effort of Government to remove the present ignorance that prevails among the masses. We are afraid, if there is not going to be a more vigourous campaign of educational operations than what obtains now, the progress so well indicated in the Dewan Bahadur's speech will be very slow of realisation. We hope the Government with the help of the reformed Assemblies will be able to usher in a new era of progress and all-round development.

ಮೈಸೂರು ನ್ಯಾಯವಿಧಾಯಕ ಸಭೆ.

ಕಳೆದ ತಾ|| 23 ನೆಯ ಸೋಮವಾರದ ದಿವಸ ದಿವಾನರ ಅಧ್ಯಕ್ಷತೆಯಲ್ಲಿ ನಡೆದ ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರುಗಳು ಕೇಳಿದ ಪ್ರಶ್ನೆಗಳಿಗೆ ಸರ್ಕಾರದವರು ಉತ್ತರವನ್ನು ಕೊಡುವಾಗ್ಗೆ, "ಸಂಸ್ಥಾನದಲ್ಲಿ ಎಷ್ಟು ಸಂಸ್ಕೃತ ಕಾಲೇಜುಗಳೂ ಪಾಠಶಾಲೆಗಳೂ ಇರುವುವು. ಅವುಗಳಲ್ಲಿ ಯಾವ್ಯಾವ ವರ್ಗದ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿರುವರು ಮತ್ತು ಅವುಗಳಲ್ಲಿ ಸರ್ಕಾರದಿಂದ ಪೋಷಿಸಲ್ಪಡುತ್ತಿರುವುವೂ ಗ್ರಾಂಟು ಕೊಡಲ್ಪಡುತ್ತಿರುವುವೂ ಎಷ್ಟು" ಎಂದು ಮೊದಲಾಗಿ ತುಮಕೂರಿನ ಮ|| ಜೆ. ರುದ್ರಪ್ಪನವರು ಕೇಳಿದ ಪ್ರಶ್ನೆಗೆ, "ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ಸಂಸ್ಕೃತ ಮಹಾ ಪಾಠಶಾಲೆಗಳು ಸರ್ಕಾರದಿಂದ ಪೋಷಿಸಲ್ಪಡುತ್ತಿರುವುವು. ಆದರೆ ಮೇಲ್ಕೋಟೆಯಲ್ಲಿರುವ ಮಹಾಪಾಠಶಾಲೆಗೆ ಮಾತ್ರ ಗ್ರಾಂಟು ಸಲ್ಲುತ್ತಿರುವುದು. ಈ ಮೂರು ಮಹಾಪಾಠಶಾಲೆಗಳಿಗೂ ಸರ್ಕಾರದಿಂದ ಪ್ರತಿ ವರ್ಷದಲ್ಲೂ 41,260 ರೂಪಾಯಿಗಳು ವ್ಯಯವಾಗುತ್ತಿವೆ. ಇವಲ್ಲದೆ ಬ್ರಾಹ್ಮಣರ ಪೋಷಣೆಯಲ್ಲಿರುವ 50 ಸಂಸ್ಕೃತ ಪಾಠಶಾಲೆಗಳಿಗೆ 9000 ರೂ. ಗ್ರಾಂಟು ಕೊಡಲ್ಪಡುತ್ತಿದೆ. ಈ 53 ಪಾಠಶಾಲೆಗಳಲ್ಲೊಂದಕ್ಕೂ ಬ್ರಾಹ್ಮಣೇತರ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವಿಲ್ಲವು. ಬ್ರಾಹ್ಮಣೇತರರಿಂದ ನಡಿಸಲ್ಪಡುತ್ತಿರುವ ಪಾಠಶಾಲೆಗಳಿಗೆ 924 ರೂ. ವರ್ಷಾಶನವು ಸಲ್ಲುತ್ತದೆ" ಎಂದು ತಿಳಿಸಲ್ಪಟ್ಟಿತು. ಸಂಸ್ಕೃತ ವಿದ್ಯಾಭ್ಯಾಸದ ವಿಚಾರದಲ್ಲಿ ಈವರೆಗೆ ಎಷ್ಟರ ಮಟ್ಟಿಗೆ ಸರ್ಕಾರದವರು ಪಕ್ಷಪಾತದಿಂದ ನಡಿಸಿಕೊಂಡು ಬಂದಿರುವರೆಂಬುದು ಮೇಲ್ಕಂಡ ಅಂಶದಿಂದ ವ್ಯಕ್ತವಾಗುತ್ತದೆ. ಯಾವ ವಿಚಾರದಲ್ಲಾಗಲಿ ಗುತ್ತಿಗೆ ಹಿಡಿಯುವುದು ಕೆಟ್ಟುದು. ಮುಖ್ಯವಾಗಿ ವಿದ್ಯಾಭ್ಯಾಸವನ್ನು ಅದರಲ್ಲೂ ಪ್ರಾಚೀನ ವಿದ್ಯಾಭ್ಯಾಸವನ್ನು ಇಂತಹವರೇ ಓದಬೇಕೆಂದು ನಿರ್ಬಂಧಿಸುವುದು ಶುದ್ಧ ಅನ್ಯಾಯವು. ಮೈಸೂರು ಬೆಂಗಳೂರು ಸಂಸ್ಕೃತ ಕಾಲೇಜುಗಳನ್ನು ಕ್ರಮಪಡಿಸುವಬಗೆಗೆ ಗೊತ್ತುಮಾಡಲ್ಪಟ್ಟಿದ್ದ ಕಮಿಟಿಯವರ ಅಭಿಪ್ರಾಯದಂತೆ ಮೈಸೂರು ಕಾಲೇಜು ನಿಷ್ಠರಾದ ವೈದಿಕ ಬ್ರಾಹ್ಮಣರ ವೇದವೇದಾಂಗಾದಿ ಶಾಸ್ತ್ರಾಭ್ಯಾಸಕ್ಕೆ ಮಾತ್ರ ಕಾದಿಡಲ್ಪಟ್ಟು ಬೆಂಗಳೂರು ಕಾಲೇಜು ವಿದ್ಯಾಭ್ಯಾಸ ಶಾಖೆಯ ಆಡಳಿತಕ್ಕೊಳಪಡಿಸಲ್ಪಟ್ಟು ಯಾವಜಾತಿ ಮತ ತಾರತಮ್ಯವಿಲ್ಲದೆ ಸಮಸ್ತರೂ ವೇದಾಭ್ಯಾಸ ಹೊರತಾಗಿ ಸಂಸ್ಕೃ ಪ್ರೌಢವಿದ್ಯಾಭ್ಯಾಸ ಮಾಡಲನುಕೂಲಿಸುವಂತೇರ್ಪಡಿಸಲ್ಪಡಬೇಕಾಗಿ ಈ ಜೂನ್ ತಾ|| 13 ರಲ್ಲಿ ಸರ್ಕಾರದವರಿಂದ ಅಪ್ಪಣೆ ಮಾಡಲ್ಪಟ್ಟಿತು. ಪ್ರಜಾಧಿಪತ್ಯಸಾಧನೆಗಾಗಿ ಹೋರಾಡುವ ಈ ಕಾಲದಲ್ಲಿ ಅನ್ಯಾಯವೂ ಅನುಚಿತವೂ ಆದ ಪಕ್ಷಪಾತಾಚರಣೆಯ ಸಲಹೆಯಿಂದ ಸಂಸ್ಥಾನಾಭಿವೃದ್ಧಿಯೆಂದಿಗೂ ಆಗುವುದಿಲ್ಲವು.

ದಿವಾನ್ ಬಹದ್ದೂರ್ ಕೆ.ಪಿ. ಪುಟ್ಟಣ್ಣಸೆಟ್ಟರು, ಸಿ.ಐ.ಇ., ಯವರು ಬಜೆಟ್ಟನ್ನು ಕುರಿತು ಚರ್ಚಿಸುವಾಗ್ಗೆ ಬಹಳ ವಿಚಾರಪುಷ್ಟತವಾದ ಭಾಷಣವನ್ನು ಮಾಡಿದರು. ಅದರಲ್ಲಿ "ಪ್ರಜೆಗಳ ಸುಖಸಂಪತ್ತು ಅಭಿವೃದ್ಧಿಯಾಗುವವರೆಗೂ ಸಂಸ್ಥಾನದ ಸಂಪದಭಿವೃದ್ಧಿಯಾಯಿತೆಂದು ಹೇಳಲಿಕ್ಕಾಗುವುದಿಲ್ಲ ಮತ್ತು ಪ್ರಜೆಗಳ ಬಡತನವೇ ಸರ್ಕಾರದ ಬಡತನವು ಎಂಬುದು ಮಾತ್ರ ಕಂದಾಯವನ್ನು ವಿಧಿಸುವ ಕಾಲದಲ್ಲಿ ಸ್ಮೃತಿಪಥಕ್ಕೆ ಬರುವುದಿಲ್ಲವು. ಕಂದಯವು ಮನುಷ್ಯನ ಚೇತನ್ಯವನ್ನು ನಿದರ್ಶಿಸತಕ್ಕುದಾಗಿದೆ. ಪ್ರತಿಯೊಬ್ಬ ಮನುಷ್ಯನ ಆದಾಯವು ಹೆಚ್ಚಿದ ಹೊರತು ಅವನು ತೆರುವ ಕಂದಾಯವು ಹೆಚ್ಚುವುದಿಲ್ಲವು. ಪ್ರಪಂಚದಲ್ಲಿ ಆಂಗ್ಲೇಯರು ಕೊಡುವಷ್ಟು ಹೆಚ್ಚು ಕಂದಾಯವನ್ನು ಮತ್ತಾರೂ ಕೊಡುವುದಿಲ್ಲವೆಂದು ಹೇಳುವುದುಂಟು. ಆದರೆ ಅವರಲ್ಲಿ ಪ್ರತಿಯೊಬ್ಬನಿಗೂ ಇರುವಷ್ಟು ಆದಾಯವು ಮತ್ತಾರಿಗೂ ಇಲ್ಲವು. ಅದು ಕಾರಣವೇ ಅವರು ಕಂದಾಯದ ಭಾರವನ್ನು ಎಷ್ಟಾದರೂ ಹೊರಬಲ್ಲರು. ಇಂತಹವರು ಸಹ ಯುದ್ಧವಾದಾರಭ್ಯ ತಮಗೆ ಆದಾಯ ಕಡಿಮೆಯಾಗಿರುತ್ತಾದ ಪ್ರಯುಕ್ತ ಕಂದಾಯವನ್ನು ತಗ್ಗಿಸಬೇಕೆಂದು ಬೊಬ್ಬೆಯಿಡುತ್ತಿರುವರು. ನಮ್ಮ ಸಂಸ್ಥಾನದ ಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ನೋಡಿದುದಾದರೆ, ಅದರ ಅಭಿವೃದ್ಧಿಗಾಗಿ ಎಷ್ಟು ಪ್ರಯತ್ನಿಸಿದಾಗ್ಯೂ ಅದು ಕನಿಷ್ಠಸ್ಥಿತಿಗಿಳಿಯದಿದ್ದರೂ ಪೂರ್ವದ ಸ್ಥಿತಿಯಲ್ಲೇ ಇರುವುದೆಂದು ವ್ಯಕ್ತವಾಗುತ್ತದೆ. ಇದರ ಕಾರಣವನ್ನು ಕಂಡುಹಿಡಿದು ಪರಿಹಾರೋಪಾಯವನ್ನು ಕಲ್ಪಿಸತಕ್ಕುದು ಮುಖ್ಯ ಕರ್ತವ್ಯವಾಗಿದೆ. ಪೌರಸಾಮಾಜಿಕಾಭಿವೃದ್ಧಿಗೆ ಪ್ರಜಾಭಿವೃದ್ಧಿಯು ಮುಖ್ಯಕಾರಣವು. ನಮ್ಮ ಸಂಸ್ಥಾನದ ವಿಸ್ತೀರ್ಣಕ್ಕನುಗುಣವಾಗಿ ಪ್ರಜಾಭಿವೃದ್ಧಿಯಾಗುತ್ತಿಲ್ಲವು. ಕಳೆದ 50 ವರ್ಷಗಳಾರಭ್ಯ ಪ್ರಜಾಸಂಖ್ಯೆಯನ್ನು ನೋಡಿದುದಾದರೆ, ಸಂಖ್ಯೆಯು ಹೆಚ್ಚುವುದಕ್ಕೆ ಬದಲು ಕ್ಷೀಣಿಸುತ್ತಿರುವುದೆಂದು ಗೊತ್ತಾಗುತ್ತದೆ. ತತ್ರಾಪಿ ಪಶ್ಚಿಮದಿಕ್ಕಿನ ಮಲ್ನಾಡು ಪ್ರಾಂತಗಳಲ್ಲಂತೂ ಪ್ರಜಾಸಂಖ್ಯೆಯು ಬಹಳವಾಗಿ ಕಡಿಮೆಯಾಗುತ್ತಿದೆ. ಈ ಕ್ಷೀಣಗತಿಯ ಕಾರಣವು ಕಂಡುಹಿಡಿಯಲ್ಪಟ್ಟು ಅದರ ಪರಿಹಾರೋಪಾಯವು ಕಲ್ಪಿಸಲ್ಪಡತಕ್ಕುದು ಅತಿ ಮುಖ್ಯವೂ ಅವಸರವೂ ಆಗಿರುತ್ತದೆ. ನಮ್ಮ ಸಂಸ್ಥಾನದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಅವಕಾಶವಿಲ್ಲದಿರುವುದರಿಂದ ಬೇಸಾಯವು ಈ ದೇಶೀಯರ ಮುಖ್ಯ ಜೀವನಾಧಾರವಾಗಿದೆ. ಅದುಕಾರಣ ಬೇಸಾಯವು ಅಂದರೆ ಭೂಮಿಯ ವಿಸ್ತೀರ್ಣವೂ ಅದರಲ್ಲಿಟ್ಟ ಫಸಲೂ ಅಭಿವೃದ್ಧಿಯಾಗಬೇಕಾಗಿದೆ. ಅದಕ್ಕೆ ನೀರಾವರಿಯು ಅನುಕೂಲವಿರಬೇಕು. ನೀರಾವರಿಯು ವೃದ್ಧಿಗಾಗಿಯೂ ಕೆರೆಗಳ ಜೀರ್ಣೋದ್ಧಾರಕ್ಕಾಗಿಯೂ ಎಷ್ಟೋ ದ್ರವ್ಯವು ವೆಚ್ಚಮಾಡಲ್ಪಡುತ್ತಿರುವುದಾದರೂ 1911 ರಿಂದ 1921 ನೆ ಇಸವಿಯವರೆಗೆ ಬೇಸಾಯದ ಭೂವಿಸ್ತೀರ್ಣವು ಶೇಕಡ 3·8 ರಂತೆ ಕಡಿಮೆಯಾಗಿರುತ್ತದೆ. ಇದರ ಕಾರಣವನ್ನು ಕಂಡುಹಿಡಿದು ಅಭಿವೃದ್ಧಿಯ ಉಪಾಯಗಳನ್ನು ಸೂಚಿಸಲು ಒಂದು ಕಮಿಟಿಯೇರ್ಪಡಿಸಲ್ಪಡಬೇಕು. ನಮ್ಮ ಸಂಸ್ಥಾನವು ನೆರೆಸಂಸ್ಥಾನಗಳಿಗಿಂತ ಹೆಚ್ಚಾಗಿ ಅನುಕೂಲ್ಯಗಳನ್ನುಳ್ಳುದಾಗಿರುವುದಾದರೂ ಅಭಿವೃದ್ಧಿಯನ್ನು ಹೊಂದದೆ ಪೂರ್ವಸ್ಥಿತಿಯಲ್ಲೇ ಇರುವುದರ ಕಾರಣ ಗೊತ್ತಾಗಲಿಲ್ಲವು. ದಿವಾನರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾಡಿದ ಭಾಷಣದಲ್ಲಾಗಲಿ ನಡೆಸಿದ ಚರ್ಚೆಯಲ್ಲಾಗಲಿ ಪ್ರಜೆಗಳ ಸ್ಥಿತಿಗತಿಯನ್ನು ಕುರಿತು ಏನೂ ಹೇಳಲ್ಪಟ್ಟಿಲ್ಲವು. ಪ್ರಜೆಗಳು ವಿದ್ಯೆಯಲ್ಲೂ ನಾಗರಕತೆಯಲ್ಲೂ ಅಭಿವೃದ್ಧರಾದ ಹೊರತು ದೇಶಾಭಿವೃದ್ಧಿಯಾಗಲವಕಾಶವಿಲ್ಲವಾದಕಾರಣ, ಸರ್ಕಾರದವರು ಜನರ ಮೌಢ್ಯವನ್ನು ಹೋಗಲಾಡಿಸಿ ಅವರನ್ನು ಮುಂದುವರಿಸಲು ತಕ್ಕಪ್ರಯತ್ನ ಮಾಡಬೇಕಾಗಿದೆ" ಎಂದು ಮೊದಲಾಗಿ ಹೇಳಿರುವರು. ದಿ|| ಬ|| ಸೆಟ್ಟರು ತೋರಿಸಿಕೊಟ್ಟಿರುವ ನ್ಯೂನತೆಗಳೆಲ್ಲವನ್ನೂ ಸರ್ಕಾರದವರು ಸರಿಪಡಿಸಿಕೊಂಡು ಸಂಸ್ಕೃತಗಳಾಗಿರುವ ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳ ಸಹಾಯ ಸಾನುಭೂತಿಗಳಿಂದ ಸಂಸ್ಥಾನವು ಎಲ್ಲ ಭಾಗದಲ್ಲೂ ಅಭಿವೃದ್ಧಿಯಾಗುವಂತೆ ಪ್ರಯತ್ನಿಸುವರೆಂದು ನಿರೀಕ್ಷಿಸುತ್ತೇವೆ.

ರಾಜಕುಮಾರಿಯರ ಪತಿಗೃಹಪ್ರವೇಶವು.

ಅರಮನೆಯಲ್ಲಿ ನಡೆದ ರಾಜಕುಮಾರ ಸ್ವಾ|| ಚನ್ನಾಜಮ್ಮಣ್ಣಿಯವರ ವಿವಾಹಸಂಬಂಧ ನಾಕಬಲಿ ಮಹೋತ್ಸವವು ಕಳೆದ ಭಾನುವಾರ ನಡೆದಮೇಲೆ ದಂಪತಿಗಳು ವಧುವಿನ ತೌರಮನೆಯಾದ ಮೂರನೆಯ ರಾಜಕುಮಾರಿಯವರ ಪ್ರಾಸಾದಕ್ಕೆ ಕರೆತರಲ್ಪಟ್ಟು ಕಳೆದ ಸೋಮವಾರ ಬಂಧುವರ್ಗಕ್ಕೆಲ್ಲಾ ದಿವ್ಯಭೋಜನಮಾಡಿಸಲ್ಪಟ್ಟಿತು. ಸಾಯಂಕಾಲ 7 ಗಂಟೆಗೆ ನೂತನದಂಪತಿಗಳು ಅಮೋಘವಾದ ವಸ್ತ್ರಾಭರಣಭೂಷಿತರಾಗಿ ಮಹಾಗಜದ ಮೇಲೇರಿಸಲ್ಪಟ್ಟಿದ್ದ ಮತ್ತು ವಿದ್ಯುದ್ದೀಪಗಳಿಂದಲಂಕೃತವಾಗಿದ್ದ ಭಂಗಾರದ ಹೌದಾದಲ್ಲಿ ಮಂಡಿಸಿದರು. ಅವರ ಹಿಂಭಾಗದಲ್ಲಿ ಸರದಾರ್ ಎಂ. ಗೋಪಾಲರಾಜ ಅರಸಿನವರು ಕುಳಿತಿದ್ದರು. ಉತ್ಸವವು ಪ್ರಾಸಾದದಿಂದ ರಾತ್ರಿ 7 ಗಂಟೆಗೆ ಹೊರಟಿತು. ರಾಜಬಂಧುಗಳು ಮುಂಗಡೆ ನಡೆದು ಬರುತ್ತಿದ್ದರು. ಕುದುರೆಸ್ವಾರರೂ, ಸಿಪಾಯಿಗಳೂ, ಗಗ್ರಿಭಾಲ್ಯದ ರಾಚಾವರದವರೂ ಸಾಲುಕಟ್ಟಿ ನಡಿಯುತ್ತಿದ್ದರು. ಇಂಗ್ಲೀಷು ಮತ್ತು ಕರ್ಣಾಟಕ ಬ್ಯಾಂಡಿನವರು ಮನೋಹರವಾಗಿ ವಾದ್ಯಮಾಡುತ್ತಿದ್ದರು. ಈರೀತಿಯಾಗಿ ಹೊರಟ ಉತ್ಸವವು ರೈಲ್ವೆ ಸ್ಟೇಷನ್ ಮಾರ್ಗವಾಗಿ ಚಾಮರಾಜೇಂದ್ರ ಕೈಗಾರಿಕೆಯ ಪಾಠಶಾಲೆಯವರೆಗೂ ಬಂದು ಅಲ್ಲಿಂದ ದಕ್ಷಿಣ ದಿಕ್ಕಿಗೆ ತಿರುಗಿಕೊಂಡು ಕೃಷ್ಣರಾಜೇಂದ್ರ ಆಸ್ಪತ್ರೆ ಯಿದಿರಿಗೆ ಸಯ್ಯಾಜಿರಾವ್ ರೋಡಿನಲ್ಲಿ ಹೊರಟು ಕರ್ಜನ್‌ಪಾರ್ಕಿನ ಮಾರ್ಗವಾಗಿ ಉತ್ತರದಿಕ್ಕಿನ ಮಹಾದ್ವಾರದಿಂದ ಕೋಟೆಯೊಳಕ್ಕೆ ಪ್ರವೇಶಿಸಿ ವರನಮನೆಯನ್ನು ಅಂದರೆ ದಳವಾಯಿ ದೇವರಾಜಅರಸಿನವರ ಮನೆಯನ್ನು ತಲುಪುವ ಹೊತ್ತಿಗೆ 8 ಗಂಟೆಯ ಮೇಲಾಗಿದ್ದಿತು. ದಂಪತಿಗಳ ಆರತ್ಯಕ್ಷತೆಯು ನಡೆದು ಸಭಿಕರೆಲ್ಲರೂ ಗಂಧಪುಷ್ಪಹಾರಾದಿಗಳಿಂದ ಸತ್ಕರಿಸಲ್ಪಟ್ಟರು. ಉತ್ಸವವು ವಧುವಿನ ಮನೆಯಿಂದ ಹೊರಟು ವರನ ಮನೆಯನ್ನು ತಲುಪುವ ದಾರಿಯುದ್ದಕ್ಕೂ ಜನರು ಕಿಕ್ಕಿರಿದು ನಿಂತುಕೊಂಡು ದಂಪತಿಗಳ ಉತ್ಸವ ವೈಖರಿಯನ್ನು ಕಾಣ್ಬಾರದೋದಿ ಆನಂದಪರವಶರಾಗಿದ್ದರು. ವಧುವಾದ ರಾಜಕುಮಾರಿಯರು ಧರಿಸಿದ್ದ ಅಮೋಘವಾದ ನವರತ್ನಾಭರಣಗಳ ಪ್ರಕಾಶವು ಮಿಂಚಿನೋಪಾದಿಯಲ್ಲಿ ಹೊಳೆಯುತ ನೋಟಕರ ಕಣ್ಣುಗಳನ್ನು ಮುಚ್ಚಿಸುವಂತಿದ್ದಿತು. ಕಳೆದ ಬುಧವಾರ ವರನ ಗೃಹದಲ್ಲಿ ಶ್ರೀಮನ್ಮಹಾರಾಜರವರ ಪಾದಪೂಜೆಯೂ ಬಂಧುವರ್ಗಕ್ಕೆ ಔತಣವೂ ನಡೆದುವು. ವಧುವಿನ ಗೃಹದಲ್ಲಿ ಮೂರನೆಯದಿನ ವಸಂತೋತ್ಸವ ಜರುಗಿತು.

ದಕ್ಷಿಣಾಫ್ರಿಕಾ ಮಂತ್ರಿಬದಲಾವಣೆಯು.

ದಕ್ಷಿಣಾಫ್ರಿಕೆಯ ಮಂತ್ರಿಯಾಗಿದ್ದ ಸ್ಮಟ್ಸ್ ಸೇನಾನಿಯು ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟುದರಿಂದ ದಕ್ಷಿಣಾಫ್ರಿಕೆಯ ಜಾತೀಯಪಕ್ಷ ನಾಯಕರಾಗಿದ್ದ ಹಾರ್ಟ್ಜಾಗ್‌ಯವರು ಮಂತ್ರಿಪದವಿಯನ್ನು ವಹಿಸಿಕೊಂಡಿರುವರು. ಬ್ರಿಟಿಶ್‌ಸಾಮ್ರಾಜ್ಯ ಸಂಬಂಧವನ್ನು ತಪ್ಪಿಸಿಕೊಂಡು ಸ್ವತಂತ್ರವಾಗಿರಲು ಪ್ರಯತ್ನಿಸುತ್ತಿರುವ ಜಾತೀಯಪಕ್ಷಕ್ಕೆ ಈ ಹಾರ್ಟ್ಜಾಗರವರು ಸೇರಿದವರಾದರೂ, ಪಾರ್ಲಿಮೆಂಟು ಸಭೆಯಲ್ಲಿ ಇವರ ಪಕ್ಷಾಭಿಮಾನಿಗಳ ಸಂಖ್ಯೆಯು ಕಡಿಮೆಯಾಗಿರುವುದರಿಂದ ಇವರು ತಮ್ಮ ಸ್ವಾತಂತ್ರ್ಯಸಾಧನ ಪ್ರಯತ್ನನಡಿಸಲೆತ್ನವಿಲ್ಲವಾಗಿದೆ. ಒಂದುವೇಳೆ ಜಾತೀಯಪಕ್ಷದವರೂ ಲೇಬರುಪಕ್ಷದವರೂ ಒಟ್ಟುಗೂಡಿದರೂ ಅಧಿಕಸಂಖ್ಯಾಕರಾಗಲಾರರು. ಲೇಬರುಕಕ್ಷದಲ್ಲಿರುವ ಕೆಲ ಆಂಗ್ಲೇಯರು ಅವರ ಸ್ವಾತಂತ್ರ್ಯವನ್ನು ಕೋರುವರಾದರೂ ಅವರು ಸಾಮ್ರಾಜ್ಯ ಸಂಬಂಧವನ್ನು ಬಿಟ್ಟುಹೋಗಲು ಸಮ್ಮತಿಸುವುದಿಲ್ಲವು. ಈ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯಸಾಧನೆಗೆ ಯಾವ ಪ್ರಯತ್ನವನ್ನೂ ನಡಿಸಲಾಗುವುದಿಲ್ಲವಾದರೂ ಸಾಮ್ರಾಜ್ಯಾಭಿಮಾನವು ಮಾತ್ರ ಅವರಿಗೆ ಹೆಚ್ಚಾಗಿರುವುದಿಲ್ಲವೆಂದು ಹೇಳಬಹುದಾಗಿದೆ. ಇವರಿಗೆ ಈ ರೀತಿಯಾಗಿ ಸಾಮ್ರಾಜ್ಯಾಭಿಮಾನವು ಕಡಿಮೆಯಾಗಿರುವುದರಿಂದ ಇವರ ಕಾಲದಲ್ಲಿ ಭಾರತೀಯರ ಪರಿಸ್ಥಿತಿಯು ಸ್ಮಟ್ಸ್‌ರವರ ಕಾಲದಲ್ಲಿದ್ದುದಕ್ಕಿಂತಲೂ ಅಧ್ವಾನವಾಗಿರುವುದೆಂದು ಕೆಲರು ಅಭಿಪ್ರಾಯಪಡುವರು.

ವಿಶ್ವಬಂಧು.

ಇದು ಕರ್ಣಾಟಕ ಪ್ರಾಂತದ ಜೈನಮತಸ್ಥರ ನೈತಿಕ ಸಾಮಾಜಿಕ ಮತ್ತು ಧಾರ್ಮಿಕಗಳ ಉನ್ನತಿಗಾಗಿ ರಾಜಧಾನಿಯಲ್ಲಿ ನೂತನವಾಗಿ ಹೊರಡುತ್ತಿರುವ ಪಾಕ್ಷಿಕ ಪತ್ರಿಕೆಯಾಗಿರುತ್ತದೆ. ಇದರ ಪ್ರಥಮ ಮತ್ತು ದ್ವಿತೀಯ ಸಂಚಿಕೆಗಳನ್ನು ನಾವು ವಿಶ್ವಾಸದಿಂದ ಸ್ವೀಕರಿಸಿದೆವು. ರಾಜಧಾನಿಯ ಶ್ರೀಮಂತ ಲಕ್ಷ್ಮೀಪತಯ್ಯನವರ ಜೈನಬೋರ್ಡಿಂಗ್ ಸಂಸ್ಕೃತ ಪಾಠಶಾಲಾಧ್ಯಾಪಕರೂ, ಸಂಸ್ಕೃತ ಮತ್ತು ಕನ್ನಡ ಭಾಷಾಪಂಡಿತರೂ, ಕವಿತಾಶಕ್ತಿಯುಳ್ಳವರೂ, ನ್ಯಾಯತೀರ್ಥ ಪದವೀಧರರೂ, ಜೈನಧರ್ಮಗ್ರಂಥಪ್ರಸಾರಕರೂ ಆದ ಮ|| ಎಂ. ಶಾಂತಿರಾಜಶಾಸ್ತ್ರಿಗಳ ಸಂಪಾದಕತ್ವದಿಂದಲೂ, ಜೈನ ವಿದ್ಯಾವರ್ಧಕ ಸಂಘದ ಹಾಗೂ ಸ್ವಜನಾಭಿವೃದ್ಧಿಕಾರ್ಯದಲ್ಲಿ ಕಂಕಣಬದ್ಧರಾಗಿರುವ ಶ್ರೀಮಂತ ಎಂ. ಎಲ್. ವರ್ಧಮಾನಯ್ಯನವರ ಸಾನುಭೂತಿ ಪ್ರೋತ್ಸಾಹಗಳಿಂದಲೂ ಈ ವಿಶ್ವಬಂಧುಪತ್ರಿಕೆಯು ನಡಿಸಲ್ಪಡುತ್ತಿರುವುದರಿಂದ, ತನ್ನ ಉದ್ದಿಷ್ಟಕಾರ್ಯವನ್ನು ನಿರ್ವಿಘ್ನತೆಯಿಂದ ನೆರವೇರಿಸುತ್ತದೆನ್ನುವುದರಲ್ಲಿ ಸಂದೇಹವಿಲ್ಲವು. ಇದರಲ್ಲಿ ಜೈನಸಮಾಜಕ್ಕೆ ಸಂಬಂಧಪಟ್ಟ ವಿಷಯಗಳು ಮಾತ್ರವಲ್ಲದೆ, ಲೌಕಿಕ ರಾಜಕೀಯ ವಿಚಾರಗಳೂ, ದೇಶವಿದೇಶಗಳ ವರ್ತಮಾನಗಳೂ ಉಲ್ಲೇಖಿಸಲ್ಪಡುವುದರಿಂದಲೂ, ಇದರ ವಾರ್ಷಿಕ ಚಂದಾಹಣವು ರೂ. 1—8—0 ಮಾತ್ರವಾಗಿರುವುದರಿಂದಲೂ ಈ ಪತ್ರಿಕೆಯು ಸರ್ವಜನಗ್ರಾಹ್ಯವಾಗಿದೆ.

ಸ್ವದೇಶದ ವೃತ್ತಾಂತಗಳು

ಶ್ರೀರಂಗಪಟ್ಟಣದಲ್ಲಿ ಸ್ಥಾಪಿತವಾಗಿರುವ ಎರಡನೆಯ ಮುನಸೀಪ್‌ಕೋರ್ಟು ಬರುವ ಜುಲೈ ತಾ|| 1 ರಿಂದ ತೆಗೆದು ಹಾಕಲ್ಪಡುವುದು.

ರಾಜಧಾನಿಯಲ್ಲಿ ಎರಡನೆಯ ಸಬ್‌ಕೋರ್ಟು ಬರುವ ತಾ|| 1 ರಿಂದ ಆರಂಭವಾಗುವುದು. ಒಂದನೆಯ ಸಬ್‌ಕೋರ್ಟಿನಲ್ಲಿ ನಡೆಸಲ್ಪಡುವ ಒರಿಜನಲ್, ಅಪೀಲು, ಸ್ಮಾಲ್‌ಕಾಜ್ ಮೊದಲಾಗಿ ಡಿ|| ಜಡ್ಜರಿಂದ ಕಳುಹಲ್ಪಡುವ ವಿವಾದಗಳು ಈ ಎರಡನೆಯ ಸಬ್‌ಕೋರ್ಟಿನಲ್ಲಿ ನಡಿಸಲ್ಪಡುವುವು.

ರಾಜಧಾನಿಯಲ್ಲಿ 3–4 ದಿನಗಳಿಂದ ಬರೇ ಮೋಡವಾಡುತ್ತಿದ್ದು ಮೊನ್ನೆಯ ದಿನದ ಸಾಯಂಕಾಲ ತಕ್ಕಮಟ್ಟಿಗೆ ಮಳೆಯು ಬಂದಿತು. ತಳ್ಳದಕೇರಿಯಲ್ಲಿ ಕಳೆದವಾರ ಒಂದೇ ಮನೆಯಲ್ಲಿ ವಾಂತಿಭೇದಿ ರೋಗದಿಂದ 4 ಮರಣಗಳಾಗಿ ಇನ್ನೊಬ್ಬನು ನರಳುತ್ತಿದ್ದನಷ್ಟೆ? ಈಗ ಅವನು ಗುಣವಾಗಿರುವನು. ಈ ರೋಗವು ಮತ್ತೆಲ್ಲಿಯೂ ಇಲ್ಲದಿರುವುದಾಗಿ ಕೇಳುತ್ತೇವೆ.

ಹೊಸಗನಹಳ್ಳಿ ತಿಮ್ಮಯ್ಯನನ್ನು ಕೊಲೆಮಾಡಿದನೆಂದು ಕಾನಕಾನಹಳ್ಳಿಯ ಕ್ಯಾತೆಗೌಡನು ಬೆಂಗಳೂರು ಸೆಷನ್ಸು ವಿಚಾರಣೆಗೆ ಗುರಿಮಾಡಲ್ಪಟ್ಟಿರುವಲ್ಲಿ ಕೃತ್ಯನಡೆದ ಬಗೆಗೆ ಸಾಕಷ್ಟು ನಿದರ್ಶನ ದೊರಲ್ಲವಾಗಿ ಕ್ಯಾತೆಗೌಡನು ನಿರಪರಾಧಿಯೆಂದು ಅಸೆಸರುಗಳು ಅಭಿಪ್ರಾಯಪಟ್ಟುದನ್ನು ಸೆಷನ್ಸು ಜಡ್ಜರು ಅನುಮೋದಿಸಿ ಅಪರಾಧಿಯನ್ನು ದೋಷಮುಕ್ತನನ್ನಾಗಿ ಮಾಡಿದರು.

ಮೈಸೂರು ಡಿ|| ತಿರುಮಕೂಡ್ಲು ನರಸೀಪುರ ತಾ|| ಬುಗತಹಳ್ಳಿಯಲ್ಲಿ ಕೆಲ ದಿನಗಳ ಹಿಂದೆ ಸಿದ್ದನೆಂಬುವವನನ್ನು ಭೂಮಿಯ ಸಂಬಂಧವಾದ ವ್ಯಾಜ್ಯದಲ್ಲಿ ಕೊಲೆಮಾಡಿದರೆಂದು ಸೀಹಳ್ಳಿಯ ಪಟೇಲ್ ಸಿದ್ದೇಗೌಡ ಮೊದಲಾಗಿ ಆರುಜನರನ್ನು ಪೋಲೀಸರು ಸೆರೆಹಿಡಿದು ಟಿ|| ನರಸೀಪುರದ ಲಾಕಪ್ಪಿನಲ್ಲಿ ಮಡಗಿದ್ದಾಗ್ಗೆ ಅವರಲೊಬ್ಬನಿಗೆ ವಾಂತಿಭೇದಿರೋಗವು ತಗುಲಿ ಸತ್ತುಹೋಗಲು, ಉಳಿದ ಐವರನ್ನು ರಾಜಧಾನಿಗೆ ಕರೆದುಕೊಂಡು ಬಂದು ಕಾರಾಗೃಹದಲ್ಲಿಟ್ಟಿದ್ದರು. ಇವರಲ್ಲಿ ಪಟೇಲ್ ಸಿದ್ದೇಗೌಡನು ವಾಂತಿಭೇದಿ ರೋಗಗ್ರಸ್ತನಾಗಿ ಸತ್ತುಹೋದನು.

ರಾಜಧಾನಿಯ ಶಿವರಾಮಪೇಟೆಯಲ್ಲಿರುವ ಒಬ್ಬ ವೀರಶೈವನ ದೋಸೆಯಂಗಡಿಗೆ ಬಹಳ ನಿಶ್ಯಕ್ತನಾದ ಒಬ್ಬ ತಿರುಪೆಯವನು ತಾ|| 21 ರ ಬೆಳಿಗ್ಗೆ ಹೋಗಿ ತಿನ್ನಲಿಕ್ಕೆ ದೋಸೆಯನ್ನು ಕೇಳಿ ತಟ್ಟೆಯಲ್ಲಿದ್ದ ತಿಂಡಿಯಪದಾರ್ಥವನ್ನೆತ್ತುಕೊಂಡುದನ್ನು ಆ ಅಗಂಡಿಯವನು ಕಂಡು ಆ ತಿರುಪೆಯವನ ಕೆನ್ನೆಯಮೇಲೆ ಹೊಡೆಯಲು ಅವನು ಅಂಗಡಿಯನ್ನು ಬಿಟ್ಟುಸ್ವಲ್ಪ ದೂರ ಹೋಗಿ ನೆಲದಮೇಲೆ ಬಿದ್ದು ಮೃತನಾದನೆಂದೂ, ಈ ವಿಷಯವನ್ನು ಪೋಲೀಸರು ತಿಳಿದು ಆ ಅಂಗಡಿಯವನನ್ನು ಹಿಡಿದು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವರೆಂದೂ, ಅವನು ಹೊಣೆಯಮೇಲೆ ಬಿಡಲ್ಪಟ್ಟಿರುವನೆಂದೂ ತಿಳಿಯಬರುತ್ತದೆ.

ರಾಜಧಾನಿಯ ಮುಲ್ತಾನಿ ಸವಲ್ದಾಸ್ ಸೇಟು ಮತ್ತಿಬ್ಬರು ಎಕ್ಸೈಸು ಕಂಟ್ರಾಕ್ಟರಾದ ಮ|| ರಂಗರಾಯರನ್ನು ಹೊಡೆದುಬಡಿದು ಅವರ ಮೈಮೇಲಿದ್ದ ನಗಗಳನ್ನು ಸುಲಿದುಕೊಂಡರೆಂಬ ಅಪರಾಧಕ್ಕಾಗಿ ಶಷನ್ಸು ವಿಚಾರಣೆಗೆ ಗುರಿಮಾಡಲ್ಪಟ್ಟಿರುವರಷ್ಟೆ? ಈ ವಿವಾದದ ವಿಚಾರಣೆಯು ಕಳೆದ ತಾ|| 26 ರಿಂದ ಪ್ರಾರಂಭವಾಗಿ ನಡಿಯುತ್ತಿರುವುದು. ಅಪರಾಧಿಗಳ ಪರ 30–36 ಜನರ ಸಾಕ್ಷಿಗಳ ವಿಚಾರಣೆಯು ಆಗಬೇಕಾಗಿರುವುದರಿಂದ ಈ ವಿವಾದವು ಇನ್ನೂ 3–4 ದಿವಸದವರೆಗೆ ನಡಿಯಬಹುದೆಂದು ತೋರುತ್ತದೆ. ಈ ವಿವಾದದ ಫಲಿತಾಂಶವನ್ನು ಜನರು ಬಹು ಕುತೂಹಲದಿಂದ ನಿರೀಕ್ಷಿಸಿಕೊಂಡಿರುವರು.

ರಾಜಧಾನಿಯ ಕೃಷ್ಣರಾಜಮಹೊಲ್ಲಾಕ್ಕೆ ಸೇರಿದ ಚಿಕ್ಕಂಗಡಿಬೀದಿಯಲ್ಲಿ ಜನರುಪಯೋಗಾರ್ಥವಾಗಿ ಕುಡಿಯುವ ನೀರಿನ ನಲ್ಲಿಯು ಒಕ್ಕಲಿಗರಜಾತಿಯ ಸುಡಗಾಡಮ್ಮನೆಂಬುವಳಿಂದ ಈಗ್ಗೆ 30–40 ವರ್ಷಗಳ ಕೆಳಗೆ ಇಡಿಸಲ್ಪಟ್ಟು ಶಿಲಾಶಾಸನವು ಹಾಕಲ್ಪಟ್ಟಿರುತ್ತದೆ. ಈ ನಲ್ಲಿಯ ಪಕ್ಕದಲ್ಲಿರುವ ಮನೆಗೆ ಸೀತವೇರುತ್ತದೆಂದೂ, ಜನರ ಗದ್ದಲದಿಂದ ತೊಂದರೆಯಾಗುತ್ತಾದಪ್ರಯುಕ್ತ ಆ ನಲ್ಲಿಯನ್ನು ತೆಗೆಸಿ ದೂರವಾಗಿಡಿಸಬೇಕೆಂದೂ ಆ ಮನೆಯ ಮಾಲೀಕನು ಮ್ಯುನಿಸಿಪಾಲಿಟಿಯವರಿಗೆ ಹೇಳಿಕೊಂಡುದರ ಮೇಲೆ ಅವರು ಅದನ್ನು ತೆಗೆಯಲು ಪ್ರಯತ್ನಿಸಿದಾಗ, ಆ ಬೀದಿಯ ಜನರು ಬಹುಜನರುಪಯೋಗಕ್ಕಾಗಿರುವ ಆ ನಲ್ಲಿಯನ್ನು ತೆಗೆಯಕೂಡದೆಂದೂ ಆ ಮನೆಯ ಮಾಲೀಕನು ಆ ನಲ್ಲಿಯಿರುವ ಪ್ರದೇಶವನ್ನು ತನ್ನ ಮನೆಗೆ ಸೇರಿಸಿಕೊಳ್ಳಬೇಕೆಂಬ ದುರುದ್ದೇಶವುಳ್ಳವನಾಗಿರುತ್ತಾನೆಂದೂ ಬಿನ್ನೈಸಿಕೊಂಡಾಗ್ಯೂ ಮ್ಯುನಿಸಿಪಾಲಿಟಿಯವರು ಬಲವಂತದಿಂದ ನಲ್ಲಿಯನ್ನು ತೆಗೆದುಬಿಡಲು ಪ್ರಯತ್ನಿಸಿದುದಕ್ಕೆ ಜನರು ಅವಕಾಶವನ್ನು ಕೊಡಲಿಲ್ಲವು. ಇದರಮೇಲೆ ಮ್ಯುನಿಸಿಪಾಲಿಟಿಯವರು ನಲ್ಲಿಯಲ್ಲಿ ನೀರು ಬರುವುದನ್ನು ನಿಲ್ಲಿಸಿಬಿಟ್ಟಿರುತ್ತಾರೆಂದು ಕೇಳಿ ವಿಷಾದಿಸುತ್ತೇವೆ. ನೆನ್ನೆಯ ದಿವಸ ನಡೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಮಿ|| ಮಹಮ್ಮದ್‌ಸೇಟರು ಈ ವಿಚಾರವನ್ನು ಪರ್ಯಾಲೋಚಿಸಬೇಕಾಗಿ ಪ್ರೆಸಿಡೆಂಟರಿಗೆ ಬಹಳ ಒತ್ತಿಹೇಳಿದುದರ ಮೇಲೆ ಪ್ರೆಸಿಡೆಂಟರಿಗೂ ಅವರಿಗೂ ಬಹಳ ಜಿಜ್ಞಾಸ ಜರುಗಿತೆಂದು ಕೇಳುತ್ತೇವೆ. ಮ್ಯು|| ಅಧಿಕಾರಿಗಳು ಇಂತಹ ವಿಷಯಗಳನ್ನು ಕೌನ್ಸಿಲಿನವರ ಪರ್ಯಾಲೋಚನೆಗೆ ತಂದು ಕೂಡಲೆ ಬಗೆಹರಿಸುವುದು ಯುಕ್ತವಾಗಿರುತ್ತದಲ್ಲದೆ, ಜನರಿಗೆ ತೊಂದರೆಯಾಗುವ ರೀತಿಯಲ್ಲಿ ಕಾರ್ಯಭಾಗ ನಡಿಸುವುದು ಚೆನ್ನಾಗಿಲ್ಲವು.

ವರ್ತಮಾನ ಸಂಗ್ರಹ.

ತಾರಕೇಶ್ವರದಲ್ಲಿ ನಡೆಯುತ್ತಿರುವ ಸತ್ಯಾಗ್ರಹ ಯುದ್ಧಕ್ಕೆ ಹೋಗಿದ್ದ ದೇಶಬಂಧು ಸಿ. ಆರ್. ದಾಸರವರ ಕುಮಾರರಾದ ಚಿರರಂಜನ ದಾಸರು ಸೆರೆಹಿಡಿಯಲ್ಪಟ್ಟಿರುವರು.

ಮಹಾತ್ಮಾ ಗಾಂಧಿಯವರು ಭರತಖಂಡವನ್ನು ಸಂಚರಿಸಿ ಬರಲು ಬರುವ ಆಗಸ್ಟಿನಲ್ಲಿ ಪ್ರಯಾಣಮಾಡುವರೆಂದೂ, ಮೊಟ್ಟಮೊದಲು ದೇಶೀಯ ಸಂಸ್ಥಾನವಾದ ಹೈದರಾಬಾದಿಗೆ ಬರುವರೆಂದೂ ತಿಳಿಯಬಂದಿದೆ.

ಅಮೇರಿಕಾರಾಜ್ಯಕ್ಕೆ ಸೇರಿದ ಮಾಂಟ್ರೇಲ್ ಎಂಬೂರಿನಲ್ಲಿ ಒಂದು ಹಸುವಿನ ಹಾಲಿನಿಂದ ಒಂದುವರ್ಷ ಕಾಲದಲ್ಲಿ 1200 ಪೌಂಡ್ ತೂಕದಷ್ಟು ಅಂದರೆ ದಿನ 1ಕ್ಕೆ 5½ ಸೇರಿನಷ್ಟು ಬೆಣ್ಣೆಯು ಬಂದಿರುತ್ತದೆ.

ಭರತಖಂಡದಲ್ಲಿ ಡಿಸ್ಟ್ರಿಕ್ಟ್ ಜಡ್ಜರಾಗಿದ್ದು ಈಗ ಜನ್ಮಭೂಮಿಯಾದ ಲಂಡನ್ ನಗರದಲ್ಲಿ ವಾಸವಾಗಿರುವ ಎ. ಡಾರ್ಸನ್‌ರವರು ವ್ಯಭಿಚಾರ ಮಾಡಿದರೆಂಬ ಅಪರಾಧಕ್ಕಾಗಿ ಅವರಮೇಲೆ ಅವರ ಪತ್ನಿಯು ಹೈಕೋರ್ಟಿನಲ್ಲಿ ವಿವಾದಮಾಡಿ ದಾಂಪತ್ಯಾನುಬಂಧದಿಂದ ವಿಮುಕ್ತಳಾದಳು.

ಪೂನಾ ಡಿಸ್ಟ್ರಿಕ್ಟಿನಲ್ಲಿ ಜುನ್ನಾಲ್ ತಾಲ್ಲೂಕಿಗೆ ಸೇರಿದ ರಾಜೂರಿನಲ್ಲಿ ಕಳೆದ 4 ವರ್ಷಗಳಿಂದಲೂ ಜನರು ಕ್ಷಾಮಪೀಡಿತರಾಗಿದ್ದರೂ ರೆವಿನ್ಯೂಅಧಿಕಾರಿಗಳು ಕಂದಾಯವನ್ನೆತ್ತಲು ಪಕ್ರಮಿಸಿರುವರು. ಆದರೆ ರೈತರು ಕಂದಾಯವನ್ನು ತೆರಲು ಮಾರ್ಗವಿಲ್ಲದೆ ನಿರಾಕರಿಸುತ್ತಿರುವುದರಿಂದ ಶಿಕ್ಷೆಗೆ ಗುರಿಮಾಡಲ್ಪಡುತ್ತಿರುವರು.

ಮಹಾತ್ಮಾ ಗಾಂಧಿಯವರು ಇಸ್ಲಾಮದಲ್ಲಿ ಪೂರ್ಣವಿಶ್ವಾಸವುಳ್ಳವರಾದುದರಿಂದ ಮಹಮ್ಮದೀಯಮತವನ್ನು ಅವಲಂಬಿಸಬೇಕೆಂದು ದಿಲ್ಲಿಯ ಕೊಜಾಹಸನ್‌ರವರು ಸೂಚಿಸಿದ್ದುದರಮೇಲೆ, ಹಿಂದೂಗಳ ಸಖ್ಯವನ್ನು ಬಯಸುವ ಮಹಮ್ಮದಾಲಿಯವರು ಹಿಂದೂ ಧರ್ಮಾವಲಂಬಿಗಳಾಗಬೇಕೆಂದು ಆರ್ಯಸಮಾಜದ ಲಾಲಾಚಿರಂಜಿಲಾಲರವರು ಸೂಚಿಸಿರುತ್ತಾರೆ.

ಅಮೇರಿಕಾದೇಶದ ಶ್ರೀಮಂತನೊಬ್ಬನು ಲಕ್ಷಾಂತರ ರೂಪಾಯಿಗಳ ವ್ಯಯದಿಂದ 3,25,000 ಮೈಲಿಗಳ ದೂರ ಪ್ರಯಾಣಮಾಡಿ ನಾನಾಬಗೆಯ ರತ್ನಗಂಬಳಿಗಳನ್ನು ಶೇಖರಿಸಿಕೊಂಡು ಬಂದಿರುವನು. ಇವುಗಳಲ್ಲಿ 5 ಅಡಿ 10 ಅಂಗುಲ ಉದ್ದವೂ 3 ಅಡಿ 8 ಅಂಗುಲ ಅಗಲವೂ 150 ರವಾಯಿಗಳ ಭಾರವೂ ಇರುವ 1 ಕಂಬಳಿಗೆ 45,000 ರೂ. ಬಿದ್ದಿರುವುದು ಮತ್ತು 1 ಲಕ್ಷ ರೂ. ಬೆಲೆ ಕೊಡಲು ಜನರು ಸಿದ್ಧರಾಗಿರುವರು.

ಮದ್ರಾಸು ಗೌರ್ನರು ಪರಸ್ಥಳ ಸಂಚರಿಸುವಾಗ್ಗೆ ಸ್ಪೆಷಲ್‌ಟ್ರೇನಿನಲ್ಲಿ ಪ್ರಯಾಣಮಾಡುವುದರಿಂದ ವೆಚ್ಚವು ಬಹಳವಾಗಿ ರೈತರಿಗೆ ಭಾರಹೆಚ್ಚಾಗುತ್ತದೆಂದು ಭಾವಿಸಿ ಅದನ್ನು ತಪ್ಪಿಸುವುದಕ್ಕಾಗಿ ಇತಃಪರಃ ಸಂಚಾರ ಹೊರಡುವಾಗ್ಗೆ ಮೋಟಾರು, ಸಾಧಾರಣ ಮೇಲ್ ಮತ್ತು ಪ್ಯಾಸಂಜರು ಟ್ರೇನುಗಳಲ್ಲಿಯೇ ಪ್ರಯಾಣಮಾಡುವುದಾಗಿ ನಿರ್ಧರಿಸಿರುತ್ತಾರೆ. ಇವರ ಮನೋಭಾವವನ್ನು ಇತರ ಅಧಿಕಾರಿಗಳು ಅನುಕರಿಸಿದರೆ ರೈತಜನರಿಗೆ ಉಪಕಾರವಾಗುವುದರಲ್ಲಿ ಸಂದೇಹವಿಲ್ಲವು.

ಪೆಸಿಫಿಕ್ ಸಾಗರದಲ್ಲಿ ನಿಕರಾಗ್ವಾಕ್ಕೆ ದಕ್ಷಿಣದಲ್ಲಿರುವ ಕೋಸ್ಟರೀಕಾದಲ್ಲಿ ಮಿಂಚಿನಹುಳುಗಳು ಬಹಳ ದೊಡ್ಡವಾಗಿದ್ದು ವಿಶೇಷ ಪ್ರಕಾಶವನ್ನು ಕೊಡತಕ್ಕವುಗಳಾಗಿರುವುದರಿಂದ, ಅಲ್ಲಿಯ ಬಡಜನರು ದೀಪಗಳಿಗೆ ಬದಲು ಅವುಗಳನ್ನು ತಮ್ಮ ಮನೆಯಲ್ಲಿ ತಂದಿಟ್ಟುಕೊಂಡು ರಾತ್ರಿಯಲ್ಲಿ ಕಾಲಹರಣ ಮಾಡುವರಂತೆ ಮತ್ತು ಈ ಹುಳಗಳಲ್ಲಿ ಎರಡನ್ನು ಒಂದು ಗಾಜಿನಪಾತ್ರೆಯಲ್ಲಿ ಹಾಕಿ ಒಂದು ದೊಡ್ಡ ಕೊಠಡಿಯಲ್ಲಿಟ್ಟದ್ದರೆ ಅದರಲ್ಲಿರುವವರು ಆ ಬೆಳಕಿನ ಸಹಾಯದಿಂದ ಓದಲಾಗುವುದಂತೆ.

ವಯಸ್ಕರಾಗಿಯೂ ಇಂದ್ರಿಯಶಕ್ತಿವಿಹೀನರಾಗಿಯೂ ಇರುವ ಮನುಷ್ಯರಶರೀರದ ರಕ್ತನಾಳಗಳಿಗೆ ಕೋಳಿಯ ಶರೀರದ ರಕ್ತವನ್ನು ತೆಗೆದು ಪಿಚಕಾರಿಯ ಮೂಲಕ ಸೇರಿಸಿದಲ್ಲಿ ಇಂದ್ರಿಯಪಟುವಾಗುವುದೆಂದು ಒಬ್ಬ ಪಾಶ್ಚಾತ್ಯಡಾಕ್ಟರು ಪರೀಕ್ಷಿಸಿ ಹೇಳಿರುತ್ತಾನೆ. ಈರೀತಿ ರಕ್ತವನ್ನು ಮನುಷ್ಯನ ಶರೀರಕ್ಕೆ ಸೇರಿಸಲು ಒಂದುವೇಳೆಗೆ 1½ ರೂಪಾಯಿ ವೆಚ್ಚವಾಗುವುದೆಂದೂ, ರಕ್ತವು ತೆಗೆಯಲ್ಪಟ್ಟುದರಿಂದ ಕೋಳಿಗೆ ಯಾವ ತೊಂದರೆಯೂ ಆಗುವುದಿಲ್ಲವೆಂತಲೂ ತಿಳಿಸಲ್ಪಟ್ಟಿದೆ. ವಿಷಯಾಸಕ್ತರಿಗೆ ಇದು ಒಳ್ಳೆಯ ಸಾಧನವಲ್ಲವೆ!

ಸೀಮೆಯಲ್ಲಿ ಒಬ್ಬ ನವಯುವನಸ್ಥನು ತಾನು ವ್ಯಾಮೋಹಿಸಿದ ಯುವತಿಯೊಡನೆ ವಿಹಾರಾರ್ಥವಾಗಿ ಮೋಟಾರುಬಂಡಿಯಲ್ಲಿ ಕುಳಿತು ಅತಿರಭಸದಿಂದ ಸ್ವಾರಿಮಾಡುತ್ತಿರುವಾಗ್ಗೆ, ಆ ಯುವತಿಯ ಕೈವಸ್ತ್ರವು ಕೆಳಗೆ ಬಿದ್ದುಹೋಗಲು ತನಗೆ ಆಕೆಯಲ್ಲಿರುವ ಅನುರಾಗಾತಿಶಯವನ್ನು ತೋರಿಸುವುದಕ್ಕಾಗಿ, ಆ ಬಿದ್ದುಹೋದ ವಸ್ತ್ರವನ್ನು ತೆಗೆದುಕೊಳ್ಳಲು ವೇಗದಿಂದ ಹೋಗುತ್ತಿದ್ದ ಬಂಡಿಯಿಂದ ಕೆಳಗೆ ದುಮ್ಮಿಕ್ಕಿದಾಗ, ಇದಿರಾಗಿ ಬರುತ್ತಿದ್ದ ಮೋಟಾರುಬಂಡಿಗೆ ಸಿಕ್ಕಿ ಹತನಾದನು. ಸ್ತ್ರೀವ್ಯಾಮೋಹಕರಿಗೆ ಪ್ರಾಣವೂ ತೃಣಗಣಾಯಮಾನವಲ್ಲವೆ!

ಸಾಮಾನ್ಯವಾಗಿ ಮಕ್ಕಳು ಹುಟ್ಟುವಾಗ್ಗೆ 19½ ಅಂಗುಲ ಉದ್ದವಿದ್ದು ಅನಂತರ ಮೊದಲನೆಯ ವರ್ಷದಲ್ಲಿ 2 ಅಂಗುಲ ಬೆಳೆಯುವುವು. ಇದರಂತೆ 70 ವರ್ಷಕಾಲ ಬೆಳೆಯುವುದಾದರೆ 70ನೆ ವರ್ಷ ವಯಸ್ಸಿನಲ್ಲಿ 64 ಅಡಿ ಎತ್ತರ ಬೆಳೆದಿರಬೇಕಾಗಿರುತ್ತದೆ. ಆದರೆ ಆರೀತಿ ಬೆಳೆಯದೆ ಮೊದಲನೆಯ ವರ್ಷದಲ್ಲಿ 3½ ಅಂಗುಲವೂ, ೨ನೆಯ ವರ್ಷದಲ್ಲಿ 2½ ಅಂಗುಲವೂ ಅನಂತರ

ಗೃಹಕೃತ್ಯದ ನೋಟೀಸ್.

ಚಿತ್ರದುರ್ಗದ ತಾಲ್ಲೂಕು ಕಸಬಾ-ಸಮ್ಮತು ಮಲ್ಲಾಪುರದ ವಾಸಿ ರಂಗಪ್ಪನ ಹೆಂಡತಿ ವೆಂಕಮ್ಮನು ಇದರ ಮೂಲಕ ಸಮಸ್ತಜನರಿಗೂ ತಿಳಿಯಪಡಿಸುವುದೇನಂದರೆ:—

ನನ್ನ ಮಗ ಫೌತಿ ರಂಗಪ್ಪನ ಹೆಂಡತಿಯಾದ ತಿಮ್ಮಕ್ಕನೆಂಬಾಕೆಯು ದುರ್ಬೋಧನೆಗೆ ಒಳಪಟ್ಟು ನಮ್ಮ ಪಿತ್ರಾರ್ಜಿತವೂ, ನನ್ನ ಗಂಡನ ಸ್ವಯಾರ್ಜಿತವೂ ಆಗಿ ನನ್ನ ಸ್ವಂತ ಅನುಭವದಲ್ಲಿರುವ ಸ್ಥಿರ ಆಸ್ತಿಗಳನ್ನು ಹಲಾಕು ಮಾಡಬೇಕೆಂದೂ ದುರಾಲೋಚನೆಯಿಂದ ಪರಭಾರೆಮಾಡುವ ಪ್ರಯತ್ನದಲ್ಲಿರುವುದಾಗಿ ತಿಳಿಯಬರುತ್ತೆ. ಸಾಲವಗೈರೆ ಮಾಡಲು ಕಾರಣವೂ ಇಲ್ಲ. ಇಂಥದ್ದರಲ್ಲಿ ಯಾರಾದರೂ ಸದರೀ ಸ್ವತ್ತುಗಳನ್ನು ಕ್ರಯ ಭೋಗ್ಯಾದಿಗಳನ್ನು ಮಾಡಿಸಿಕ್ಕೊಂಡರೆ ಸದರೀ ಪರಭಾರೆಯು ಊರ್ಜಿತವಾಗತಕ್ಕದ್ದಲ್ಲವೆಂದೂ ಸದರೀ ಮೊಬಲಗಿಗೆ ಈ ಆಸ್ತಿಗಳ ಮೇಲೆ ಯಾವ ಹಕ್ಕೂ ಇಲ್ಲವೆಂದೂ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ. ಸದರೀ ತಿಮ್ಮಕ್ಕನ ಸ್ವಾಧೀನದಲ್ಲೂ ಯಾವ ಸ್ಥಿರಆಸ್ತಿಯೂ ಇರುವುದಿಲ್ಲ.

(ರುಜು) ವೆಂಕಮ್ಮ.

16ನೆಯ ವರ್ಷದವರೆಗೆ ಪ್ರತಿವರ್ಷದಲ್ಲಿ 1½ ಅಂಗುಲದಂತೆಯೂ, ತರುವಾಯ 20ನೆಯ ವರ್ಷದವರೆಗೂ ಮೇಲ್ಕಂಡ ದರದಲ್ಲಿ ½ ಅಂಗುಲದಂತೆ ಕಡಿಮೆಯಾಗಿಯೂ ಬೆಳೆಯುತ್ತಿರುವವು. ಕ್ರಮವಾಗಿ ಬೆಳೆದ ಪುರುಷನ ಪಾದದಳತೆಯ 6½ ರಷ್ಟು ಎತ್ತರವಾಗಿಯೂ, ಸ್ತ್ರೀಯು ತನ್ನ ಪಾದದಳತೆಯ 6½ ರಷ್ಟು ಎತ್ತರವಾಗಿಯೂ ಇರುವರು.

ಸೂರತ್ತಿನ ಮ್ಯುನಿಸಿಪಲ್ ಕೌನ್ಸಿಲರುಗಳಲ್ಲಿ ಸಹಾಯನಿರಾಕರಣವಾದಿಗಳಾದ 22 ಜನರು ಮ್ಯುನಿಸಿಪಾಲಿಟಿಯ ಹಣವನ್ನು ದುರುಪಯೋಗಪಡಿಸಿದರೆಂದೂ ಅದನ್ನು ಅವರಿಂದ ಬರಮಾಡಿಕೊಡಬೇಕೆಂದೂ ಸ್ಟೇಟ್ ಸೆಕ್ರೆಟರಿಯವರು ಮಾಡಿದ್ದ ವಿವಾದದಲ್ಲಿ ಆ 22 ಜನ ಕೌನ್ಸಿಲರುಗಳು 40,000 ರೂ.ಗಳನ್ನು ನೂರಕ್ಕೆ 7 ರೂ. ನಂತೆ ಬಡ್ಡಿ ಸೇರಿಸಿ ಖರ್ಚುಸಮೇತ ಕೊಡಬೇಕಾಗಿ ತೀರ್ಮಾನವಾಗಿರುತ್ತದೆ. ಸರ್ಕಾರದವರು ಈ ಮೊಬಲಗನ್ನು ಪ್ರತಿವಾದಿಗಳಿಂದ ಬರಮಾಡಿಕೊಳ್ಳಲು ಮುಂದಣಕ್ರಮ ಜರುಗಿಸುವುದಾದಲ್ಲಿ ಈ ಪಟ್ಟಣದ ಸಹಾಯನಿರಾಕರಣ ಪಕ್ಷದವರು ಮ್ಯುನಿಸಿಪಲ್ ತೆರಿಗೆಯನ್ನು ಕೊಡಕೂಡದೆಂದೂ ನ್ಯಾಯವಿಧಾಯಕಸಭಾ ಸಭಿಕತ್ವವನ್ನು ತ್ಯಜಿಸತಕ್ಕುದೆಂದೂ ಮಹಾತ್ಮಾ ಗಾಂಧಿಯವರು ತಿಳಿಸಿರುತ್ತಾರೆ.

ಹಾಲೆಂಡುದೇಶಸ್ಥನಾದ ಲಾಫ್ಟಿ ಎಂಬುವವನು 9 ಅಡಿ 3½ ಅಂಗುಲ ಎತ್ತರವಾಗಿ ಬೆಳೆದಿರುವನು. ಇವನಷ್ಟು ಎತ್ತರವಾಗಿರುವವರು ಪ್ರಪಂಚದಲ್ಲಿ ಮತ್ತೊಬ್ಬರಿಲ್ಲವೆಂದೂ ಇವನು ತನ್ನ 7ನೆಯ ವರ್ಷ ವಯಸ್ಸಿನಲ್ಲೇ 7 ಅಡಿ ಎತ್ತರವಿದ್ದನೆಂದೂ ತಿಳಿಯಬಂದಿದೆ. ಇವನು ಲಂಡನ್ ನಗರದಲ್ಲಿ ಜರುಗುತ್ತಿರುವ ಸಾಮ್ರಾಜ್ಯ ಮಹಾವಸ್ತುಪ್ರದರ್ಶನವನ್ನು ನೋಡುವುದಕ್ಕಾಗಿ ಹೋಗಿ ಇತರ ಪ್ರೇಕ್ಷಕರಿಗೆ ಆಶ್ಚರ್ಯಕರವಾದ ಒಂದು ಪ್ರದರ್ಶನವಸ್ತುವಾಗಿ ಪರಿಣಮಿಸಿರುವನು. ಇವನ ಒಂದು ಹೊತ್ತು ಊಟಕ್ಕೆ 15 ಕೋಳಿಮೊಟ್ಟೆಗಳೂ, 3 ತಟ್ಟೆಯ ಮೀನುಗಳೂ, ಒಂದುತೊಡೆಯ ಮಾಂಸವೂ, ಎರಡುತಟ್ಟೆ ಗಂಜಿಯೂ, 7 ಹೋಳು ರೊಟ್ಟಿಗಳೂ, 8 ಬಟ್ಟಲು ಟೀಯೂ ಬೇಕಾಗಿರುವವಂತೆ. ಇವನನ್ನು ಕಲಿಯುಗದ ಸೈಂಧವನೆಂದು ಕರೆಯಬಹುದಲ್ಲವೆ!

ಬೊಂಬಾಯಿ ಪಟ್ಟಣದಲ್ಲಿರುವ ಪಠಾಣಜನರು ಅಲ್ಲಿಯ ಶ್ರೀಮಂತರುಗಳ ಮನೆಗಳಿಗೆ ನುಗ್ಗಿ ಸಿಕ್ಕಿದುದನ್ನು ದೋಚಿಕೊಂಡು ಹೋಗುತ್ತಿರುವುದರಿಂದ, ಅವರ ಹಾವಳಿಯನ್ನು ಅಣಗಿಸಲು ಪೋಲೀಸಿನವರು ತಕ್ಕ ಪ್ರಯತ್ನಮಾಡಬೇಕಾಗಿ ಆ ಪಟ್ಟಣದ ಮ್ಯುನಿಸಿಪಾಲಿಟಿಯವರು ಪೋಲೀಸು ಮುಖ್ಯಾಧಿಕಾರಿಗಳನ್ನೂ ಪ್ರಭುತ್ವದವರನ್ನೂ ಪ್ರಾರ್ಥಿಸುವ ವಿಚಾರದಲ್ಲಿ ಪರ್ಯಾಲೋಚಿಸುತ್ತಿರುವಾಗ್ಗೆ ಪ್ರಭುತ್ವದವರು ಜಾಗ್ರತೆಯಲ್ಲಿ ಪಠಾಣರ ಹಾವಳಿಯನ್ನು ಅಣಗಿಸುವುದು ಅತ್ಯಾವಶ್ಯಕವೆಂದು ಬಹಳ ಆವೇಶದಿಂದ ಪ್ರಸ್ತಾಪಿಸಿದ ಶಿವದಾಸ ಚಾಂಪ್ಸಿಯವರ ಮೇಲೆ ಆಗ್ರಹಗೊಂಡು 40 ಜನ ಪಠಾಣರು ಕಳೆದ ತಾ|| 30 ರ ರಾತ್ರಿ ಗಾಟ್ಕೋಪುರದಲ್ಲಿರುವ ಚಾಂಪ್ಸಿಯವರ ಮನೆಗೆ ನುಗ್ಗಿ ಅಲ್ಲಿ ವಾಸವಾಗಿದ್ದ ಮಾರ್ವಾಡಿ ಏಜಂಟನ್ನು ಚಾಂಪ್ಸಿಯವರ ಕಬ್ಬಿಣದ ಪೆಟ್ಟಿಗೆಯ ಬೀಗದಕೈಯನ್ನು ಕೊಡೆಂದು ಕೇಳಿ ಅದು ಸಿಕ್ಕಲಿಲ್ಲವಾಗಿ ಆ ಮಾರ್ವಾಡಿಯನ್ನೂ ಅವನ ಸೇವಕನನ್ನೂ ಚೆನ್ನಾಗಿ ಮರ್ದಿಸಿ ಅವನ ಹೆಂಡತಿಯ ಮಾನಭಂಗವನ್ನು ಮಾಡಿ ಅವನ ಮೈಮೇಲಿದ್ದ ಸುಮಾರು 2000 ರೂ. ಬೆಲೆಬಾಳುವ ಆಭರಣಗಳನ್ನು ಕಿತ್ತುಕೊಂಡು ಹೋಗುವಾಗ್ಗೆ ಅಡ್ಡಬಂದ ಜನರನ್ನು ತುಪಾಕಿಯನ್ನು ಹಾರಿಸಿ ತಮ್ಮ ಹತ್ತಿರ ಬರಗೊಡದೆ ಪಲಾಯನರಾದರು. ಗಾಯವಡೆದ ಮಾರ್ವಾಡಿಯು ಆಸ್ಪತ್ರೆಯ ಚಿಕಿತ್ಸೆಯಲ್ಲಿರುವನು. ಇದರಿಂದ ಪಟ್ಟಣದಲ್ಲೆಲ್ಲಾ ಕಳವಳವುಂಟಾಗಿದೆ.

ಮಹಾತ್ಮಾ ಗಾಂಧಿಯವರ ಮಹತ್ವ ವಿಚಾರಗಳ ಮುಖ್ಯಭಾಗಗಳು.

ಶುದ್ಧಿ ಚಳವಳಿ.

ಕ್ರೈಸ್ತ ಅಥವಾ ಮುಸಲ್ಮಾನ ಧರ್ಮಗಳಲ್ಲಿ ಯಾವಪ್ರಕಾರ ಪರಧರ್ಮದವರನ್ನು ಸ್ವಧರ್ಮದಲ್ಲಿ ಸೇರಿಸಿಕೊಳ್ಳುವ ವಿಧಿಗಳು ಹೇಳಲ್ಪಟ್ಟಿವೆಯೋ ಅಂಥ ರೀತಿಗಳು ನಮ್ಮ ಹಿಂದು ಧರ್ಮದಲ್ಲಿವೆಯೆಂದು ನನಗೆ ತೋರುವದಿಲ್ಲ. ಆರ್ಯಸಮಾಜದವರು ಈ ಶುದ್ಧಿ ಚಳವಳಿಯನ್ನು ಹೆಚ್ಚಾಗಿ ಕ್ರೈಸ್ತಮತದವರ ಪದ್ಧತಿಯನ್ನನುಸರಿಸಿಯೇ ನಡೆಸಿದ್ದಾರೆ. ಧರ್ಮಾಂತರಗೊಳಿಸುವ ಈ ಆಧುನಿಕ ಪದ್ಧತಿಯು ನನಗೆ ಸಮ್ಮತವಿಲ್ಲ. ಹಿತವಾಗುವದಕ್ಕಿಂತ ಅಹಿತವೇ ಅತ್ಯಧಿಕವಾಗುತ್ತದೆ.

ಧರ್ಮಾಂತರವು ಅಂತಃಕರಣಕ್ಕೂ ಮತ್ತು ತನಗೂ ಪರಮಾತ್ಮನಿಗೂ ಇರತಕ್ಕ ಸಂಬಂಧಕ್ಕೂ ಅನ್ವಯಿಸಿದ್ದಾಗಿದೆ. ಆದರೆ ಅದು ಈಗ ಸ್ವಾರ್ಥಬುದ್ಧಿಯನ್ನು ಜಾಗ್ರತಗೊಳಿಸುತ್ತಲಿದೆ. ಆರ್ಯಸಮಾಜದವರಿಗೆ ಪರಮತ ಖಂಡನೆಯು ಅತ್ಯಂತ ಸಂತೋಷದ ಕಾರ್ಯವಾಗಿದೆ.

ಎಲ್ಲಾ ಧರ್ಮಗಳೂ ಸ್ವಲ್ಪ ಹೆಚ್ಚು ಕಡಿಮೆಯಾಗಿ ಸತ್ಯಾನುವರ್ತಿಗಳಾಗಿಯೇ ಇವೆಯೆಂದು ನನ್ನ ಹಿಂದುಧರ್ಮವು ನನಗೆ ಹೇಳುತ್ತದೆ. ಸಕಲ ಧರ್ಮಗಳೂ ದೇವರಿಂದಲೇ ಉಂಟಾಗಿದ್ದರೂ, ಅವುಗಳೆಲ್ಲಾ ಅಪೂರ್ಣವಾಗಿಯೇ ಇವೆ. ಏಕೆಂದರೆ, ಅಪೂರ್ಣವಾದ ಮಾನವದೇಹದಿಂದಲೇ ಆ ಧರ್ಮಗಳು ನಮ್ಮ ಕಡೆಗೆ ಬಂದಿವೆ.

ಸ್ವಧರ್ಮದಲ್ಲಿದ್ದು ಪೂರ್ಣತ್ವವನ್ನು ಹೊಂದಲು ಪ್ರಯತ್ನಿಸುವದರಲ್ಲಿಯು ಮತ್ತು ತನ್ನ ಚಾರಿತ್ರ್ಯವನ್ನು ಪವಿತ್ರಗೊಳಿಸುವದರಲ್ಲಿಯು ಶುದ್ಧಿ ಚಳವಳಿಯು ಪರಿಸಮಾಪ್ತಿಯಾಗಬೇಕು. ತನ್ನ ಗುಣಸ್ವಭಾವಗಳು ಉನ್ನತಿಯನ್ನು ಹೊಂದದೆ, ವೃಥಾ ಒಂದು ಧರ್ಮದಿಂದ ಇನ್ನೊಂದು ಧರ್ಮದಲ್ಲಿ ಸೇರುವದರಿಂದ ಫಲವೇನು? ನನ್ನ ಮನೆಯಲ್ಲಿರುವವರೇ ತಮ್ಮ ಆಚರಣೆಯಿಂದ ನಾಸ್ತಿಕರಾಗುತ್ತಿರುವಾಗ ದೇವರ ಸೇವೆಗಾಗಿ ಹೊರಗಿನಿಂದ ತನ್ನ ಮನೆಗೆ ಜನರನ್ನು ಕರೆದುಕೊಂಡು ಬರುವದರಿಂದ ಪ್ರಯೋಜನವೇನು?

ಇವೇನೋ ನನ್ನ ವಿಚಾರಗಳು. ಆದರೆ ಆರ್ಯಸಮಾಜದವರಿಗೆ ಅವರು ಈಗ ನಡೆಸಿರುವ ಚಳವಳಿಯೇ ವಿಹಿತವಾಗಿ ತೋರುತ್ತಿದ್ದರೆ, ಆ ಪ್ರಕಾರ ನಡೆಯಲು ಅವರು ಸ್ವತಂತ್ರರೇ ಇದ್ದಾರೆ. ಆರ್ಯಸಮಾಜದವರಾಗಲಿ, ಮುಸಲ್ಮಾನರಾಗಲಿ ತಮ್ಮ ಧರ್ಮಪ್ರಸಾರಾರ್ಥವಾಗಿ ಪ್ರಯತ್ನಿಸುವದರಿಂದಲೇ ಹಿಂದು ಮುಸಲ್ಮಾನರ ಐಕ್ಯವು ಆಗುತ್ತಿದ್ದರೆ, ಅದು ನಿಜವಾದ ಐಕ್ಯವೆಂದು ಹೇಳಲಿಕ್ಕೆ ಬರುವದಿಲ್ಲ. ಆದರೆ ಧರ್ಮಪ್ರಸಾರದ ರೀತಿಯು ಮಾತ್ರ ನ್ಯಾಯವಾದುದಾಗಿರಬೇಕು. ತಮ್ಮ ಧರ್ಮಪ್ರಸಾರ ಮಾಡುವ ನಿಮಿತ್ತದಿಂದ ಅನ್ಯ ಧರ್ಮವನ್ನು ಹೀಯಾಳಿಸಬಾರದು.

ಹಿಜ್ ಹೈನೆಸ್ ಆಗಾಖಾನರ ಪುಸ್ತಕಗಳ ರಾಶಿಯು ಗುಡ್ಡದಂತೆ ನನ್ನ ಮುಂದಿದೆ. ಆದರೆ ನಾನು ಅವುಗಳನ್ನೆಲ್ಲಾ ಇನ್ನೂ ಓದಿಲ್ಲ. ಓದಿದ ಗ್ರಂಥಗಳ ಮೇಲಿಂದ ಆಗಾಖಾನರು ಹಿಂದು ಅವತಾರೀ ಪುರುಷರೆಂದು ಪ್ರತಿಪಾದಿಸುವದು ವ್ಯಕ್ತವಾಗುತ್ತದೆ. ಆಗಾಖಾನರ ಹೆಸರಿನಿಂದ ಚಳವಳಿ ನಡೆಸಿರುವವರು ಹಿಂದು ಧರ್ಮದ ಬಡ ಜನರಿಗೆ ಹಣಕೊಟ್ಟು ಅನಂತರ ಮುಸಲ್ಮಾನ ಧರ್ಮದಲ್ಲಿ ನೀವು ಬಂದರೆ ನಿಮ್ಮ ಸಾಲ ತೀರುವದಾಗಿ ಹೇಳುತ್ತಾರೆಂದು ನನಗೆ ಒಬ್ಬರು ತಿಳಿಸಿದ್ದಾರೆ. ಇದು ಅನ್ಯಾಯವಾದ ರೀತಿಯು. ಇದಕ್ಕಿಂತಲೂ ಹೇಯವಾದ ಪದ್ಧತಿಯನ್ನು ದಿಲ್ಲಿಯ ಒಬ್ಬ ಗೃಹಸ್ಥನು ಸೂಚಿಸಿದ್ದಾನೆ. ಆ ಸೂಚನೆಗಳ ಪ್ರತಿಯನ್ನು ನಾನು ಸಂಪೂರ್ಣವಾಗಿ ಓದಿದ್ದೇನೆ. ಹಿಂದುಗಳನ್ನು ಮುಸಲ್ಮಾನ ಧರ್ಮಕ್ಕೆ ತೆಗೆದುಕೊಳ್ಳಲು ಒಂದು ಗುಪ್ತ ಸಂಘವನ್ನು ಸ್ಥಾಪಿಸಬೇಕೆಂತಲೂ, ಅದರಲ್ಲಿ ವೇಶ್ಯಾ ಸ್ತ್ರೀಯಾದಿಯಾಗಿ ಎಲ್ಲಾ ಕಸಬು, ಅಧಿಕಾರಗಳುಳ್ಳವರೂ ಸೇರಿ, ಅವರವರಿಗೆ ಸಾಧ್ಯ ರೀತಿಯಿಂದ ಅಂತೂ ಮುಸಲ್ಮಾನ ಧರ್ಮಕ್ಕೆ ಜನರನ್ನು ತೆಗೆದುಕೊಳ್ಳಬೇಕೆಂತಲೂ, ಆ ಪ್ರಕಟನೆಯಲ್ಲಿದೆ. ಈ ಪ್ರಕಟನೆಗಳು ನೈಜಾಮು ರಾಜ್ಯದಲ್ಲಿ ಹೆಚ್ಚು ಪ್ರಸಾರವಾಗಿರುವದಾಗಿಯೂ ತಿಳಿಯುತ್ತದೆ. ಧರ್ಮಪ್ರಸಾರದ ಈ ಪದ್ಧತಿಗಳು ಆ ಮಹನೀಯರಾದ ಪೈಗಂಬರರ ತತ್ವಗಳಿಗೆ ಕಲಂಕವನ್ನುಂಟುಮಾಡತಕ್ಕವುಗಳಾಗಿವೆ.

ಗೋವಧೆ.

ಗೋಸಂರಕ್ಷಣೆಯು ಹಿಂದು ಧರ್ಮದ ಮುಖ್ಯಾಂಗವಾಗಿದೆ. ಇಂಗ್ಲಿಷ್ ಜನರ ಸಲುವಾಗಿ ಪ್ರತಿನಿತ್ಯ ಗೋವಧೆಯು ಜರಗುತ್ತಾ ಇದ್ದರೂ ಆ ವಿಷಯದಲ್ಲಿ ಒಂದು ಮಾತನ್ನಾದರೂ ಆಡದೆ ಒಬ್ಬ ಮುಸಲ್ಮಾನನು ಗೋವಧೆ ಮಾಡಿದರೆ ಮಾತ್ರ ಇಷ್ಟು ಕೋಪೋದ್ರೇಕವಾಗುವದೇಕೆ? ಗೋಮಾತೆಯ ಸಂಬಂಧವಾಗಿ ನಡೆದ ದೊಂಬಿಯಿಂದ ನಮ್ಮ ಕಾಲಕ್ಷೇಪವು ಮಾತ್ರ ಆಗಿದೆಯೇ ವಿನಾ ಒಂದು ಗೋವಾದರೂ ರಕ್ಷಿಸಲ್ಪಡಲಿಲ್ಲ. ಇಷ್ಟೇ ಅಲ್ಲ; ಅದರಿಂದ ಮುಸಲ್ಮಾನರು ಇನ್ನೂ ಹೆಚ್ಚಾಗಿ ಸಂಹಾರ ಮಾಡಲುದ್ಯುಕ್ತರಾದರು. ಕಳೆದ 20 ವರ್ಷಗಳಲ್ಲಿ ನಮ್ಮ ಪ್ರಯತ್ನದಿಂದ ಎಷ್ಟು ಗೋವುಗಳು ರಕ್ಷಿಸಲ್ಪಟ್ಟವೋ, ಅವುಗಳಿಗಿಂತ ಕ್ರಿ. ಶ. 1920ರಲ್ಲಿ ಮುಸಲ್ಮಾನರು ತಾವಾಗಿಯೇ ಉದಾರ ಬುದ್ಧಿಯಿಂದ ಕೊಲ್ಲದೆ ಬಿಟ್ಟ ಗೋವುಗಳ ಸಂಖ್ಯೆಯು ಹೆಚ್ಚಾಗಿದೆ.

ಗೋರಕ್ಷಣೆಯು ಮೊದಲು ನಮ್ಮಿಂದಲೇ ಪ್ರಾರಂಭವಾಗಬೇಕು. ಹಿಂದೂಸ್ಥಾನದವರಷ್ಟು ನಿರ್ದಯೆಯಿಂದ ಆಕಳು ಮತ್ತು ಎತ್ತುಗಳನ್ನು ಪ್ರಪಂಚದ ಇನ್ನಾವ ದೇಶದವರೂ ಸಾಕುವದಿಲ್ಲ. ಹೆಚ್ಚಾದ ಭಾರವನ್ನು ಹೇರಿದ್ದರಿಂದ ನಡೆಯಲಾರದ ಎತ್ತುಗಳಿಗೆ ಕಬ್ಬಿಣದ ಮೊಳೆಯುಳ್ಳ ಕೋಲಿನಿಂದ ಚುಚ್ಚುತ್ತ ಗಾಡಿ ಹೊಡೆಯುತ್ತಿದ್ದ ಹಿಂದು ಮನುಷ್ಯನನ್ನು ನೋಡಿ ನನ್ನ ಕಣ್ಣುಗಳಿಂದ ದಳದಳ ನೀರು ಸುರಿದಿದೆ. ನಮ್ಮ ದನಗಳು ಪ್ರಾಯಶಃ ಅರಹೊಟ್ಟೆಯಿಂದಲೇ ಜೀವಿಸುತ್ತಲಿವೆ. ಇದು ನಮಗೆ ನಾಚಿಕೆಯ ಸಂಗತಿಯಲ್ಲವೇ? ಹಿಂದುಗಳೇ ಕಟುಕರ ಕತ್ತಿಗೆ ಗೋಮಾತೆಯ ಶಿರವನ್ನು ಕೊಡುತ್ತಿದ್ದಾರಲ್ಲಾ! ಇದಕ್ಕುಪಾಯವೇನು? ದನಗಳಿಗೆ ಹೊಟ್ಟೆತುಂಬಾ ಮೇವು ದೊರೆಯುತ್ತದೆಯೇ? ಅವುಗಳಿಗೆ ಹಿಂಸೆ ಪಡಿಸುತ್ತಿದ್ದಾರೆಯೇ? ಬೇಕಾದಷ್ಟು ಹುಲ್ಲುಗಾವಲು ಇದೆಯೇ! ಇವುಗಳನ್ನೆಲ್ಲಾ ಗೋಸಂರಕ್ಷಕರು ನೋಡಿ ತಕ್ಕ ಉಪಾಯವನ್ನು ಮಾಡಬೇಕು. ಬಡವರಿಂದ ಗೋವುಗಳನ್ನು ಕೊಂಡುಕೊಂಡು, ಗೋಶಾಲೆಗಳನ್ನೇರ್ಪಡಿಸಿ, ಸುವ್ಯವಸ್ಥೆಯಲ್ಲಿಟ್ಟು, ಹಾಲು ಸಮೃದ್ಧಿಯಾಗಿ ದೊರೆಯುವಂತೆ ಮಾಡಬೇಕು. ಈ ಕಾರ್ಯಗಳನ್ನು ಮಾಡದಿದ್ದ ಹಿಂದು ಮನುಷ್ಯನು ದೇವರಲ್ಲಿ ಅಪರಾಧಿಯಾಗುವನು.

ಮುಸಲ್ಮಾನರಿಂದಾಗತಕ್ಕ ಗೋವಧೆಯನ್ನು ನಿಲ್ಲಿಸದಿದ್ದರೆ, ಪಾಪಿಯಾಗಲಾರನು. ಆದರೆ ಗೋಸಂರಕ್ಷಣೆಗಾಗಿ ಮುಸಲ್ಮಾನರ ಸಂಗಡ ಕಲಹ ಮಾಡಿದರೆ ಮಾತ್ರ ದೇವರಲ್ಲಿ ಪಾಪಿಯಾಗುವನು. ಮುಸಲ್ಮಾನರ ಮನಸ್ಸನ್ನು ಸ್ವಾಧೀನಮಾಡಿಕೊಂಡು ಗೋವಧೆಯ ವಿಷಯವನ್ನು ಅವರ ಸದಸದ್ವಿವೇಕಬುದ್ಧಿಗೆ ವಹಿಸುವದೇ ವಿಹಿತವಾಗಿದೆ.

ವಾದ್ಯ ಮತ್ತು ಮಸೀದಿ.

ಗೋವಧೆಯ ವಿಷಯವು ಹಿಂದುಗಳಿಗೆ ಎಷ್ಟು ಮಹತ್ವದ್ದಾಗಿದೆಯೋ ಅಷ್ಟೇ ಈ ವಾದ್ಯಭಜಂತ್ರಿಯ ವಿಷಯವು ಮುಸಲ್ಮಾನರಿಗೆ ಮಹತ್ವದ್ದಾಗಿದೆ. ಮುಸಲ್ಮಾನರಿಂದ ಗೋವಧೆಯು ನಿಲ್ಲುವ ವಿಷಯದಲ್ಲಿ ಹಿಂದುಗಳ ಬಲಾತ್ಕಾರವು ಹೇಗೆ ಫಲಕಾರಿಯಾಗಲಾರದೋ ಹಾಗೆಯೇ ಮಸೀದೆಗಳ ಮುಂದೆ ವಾದ್ಯಬಾರಿಸಬಾರದೆಂಬುದು ಕೂಡಾ ಮುಸಲ್ಮಾನರ ಬಲಾತ್ಕಾರದಿಂದ ನಡೆಯತಕ್ಕ ಸಂಗತಿಯಲ್ಲ. ಈ ವಿಷಯವನ್ನು ಹಿಂದುಗಳ ಸದ್ಭಾವನೆಯ ಕಡೆಗೆ ಮುಸಲ್ಮಾನರು ವಹಿಸುವದೇ ಯುಕ್ತವು.

ಮುಸಲ್ಮಾನರ ಪ್ರಾರ್ಥನೆಗೆ ಆತಂಕವನ್ನು ಮಾಡಬೇಕೆಂಬ ಉದ್ದೇಶದಿಂದಲೇ ಮಂಗಳಾರತಿ ಮೊದಲಾದವುಗಳನ್ನು ಮಾಡುತ್ತಿರುವದಾಗಿ ನಾನು ಕೇಳಿದ್ದೇನೆ. ಇದು ಮಿತ್ರತ್ವದ ಲಕ್ಷಣವಲ್ಲ. ನಾವು ಭುಜಬಲದಿಂದಲೇ ಇದನ್ನು ನಿಲ್ಲಿಸುವೆವೆಂದು ಮುಸಲ್ಮಾನರು ತಿಳಿಯುವದೂ ವಿಹಿತವಲ್ಲ. ಇಂಥ ಹೆದರಿಕೆಗಳಿಗೆ ಹೆದರುವವರಲ್ಲಿ ಸ್ವಾಭಿಮಾನವಿಲ್ಲವೆಂದೇ ತಿಳಿಯಬೇಕು.

ಒಪ್ಪಂದ.

ಗೋವಧೆಯ ವಿಷಯದಲ್ಲಾಗಲೀ, ವಾದ್ಯಬಾರಿಸುವ ಸಂಗತಿಯಲ್ಲಾಗಲಿ ಉಭಯ ಸಮಾಜದವರಲ್ಲಿಯೂ ಕ್ರಮ ನಿಬಂಧನೆಗಳನ್ನು ಗೊತ್ತುಪಡಿಸುವದು ಸಾಧ್ಯವಲ್ಲ. ಈ ವಿಷಯಗಳು ಸ್ವಸಂತೋಷದಿಂದಲೇ ತೀರ್ಮಾನವಾಗತಕ್ಕವುಗಳಾಗಿವೆ.

ರಾಜಕೀಯ ವಿಷಯದಲ್ಲಿ ಒಪ್ಪಂದವು ಅವಶ್ಯಕವು. ಆದರೆ ಅದಕ್ಕು ಕೂಡಾ ಪರಸ್ಪರ ಪ್ರೇಮವೇ ಇರಬೇಕಾದುದು ಮುಖ್ಯ. ಸಮಾಜದ ಮುಖಂಡರು ಮತ್ತು ಬಹು ಸಂಖ್ಯಾಕ ಸಮಾಜದವರು ಯಾವ ಪ್ರಕಾರ ಆಚರಿಸುತ್ತಾರೆಯೋ ಆ ಪ್ರಕಾರ ಇತರ ಸಾಮಾನ್ಯ ಜನರು ಮತ್ತು ಚಿಕ್ಕ ಚಿಕ್ಕ ಸಮಾಜದವರು ಆಚರಿಸುತ್ತಿರುತ್ತಾರೆ. ಆದಕಾರಣ ಈ ಪರಸ್ಪರ ವಿಶ್ವಾಸವನ್ನು ಆಯಾಯ ಸಮಾಜಗಳ ಮುಖಂಡರು ಬಹು ಸಂಖ್ಯಾಕರಾದ ಹಿಂದುಗಳು ಆಚರಣೆಯಲ್ಲಿ ತರಬೇಕು. ಹಕೀಮ ಅಜಮಲಖಾನರವರ ಕಡೆಗೆ ಈ ವಿಷಯವನ್ನು ವಹಿಸಿ, ಅವರ ಹೇಳಿಕೆಯ ಪ್ರಕಾರ ನಡೆಯುವದೇ ಕ್ಷೇಮಕರವು.

ಸರಕಾರಿ ಅಧಿಕಾರಿಗಳಲ್ಲಿ ಜಾತಿವಾರ ಅಧಿಕಾರಿಗಳಿರಬೇಕೆಂಬುದು ಯುಕ್ತವಲ್ಲ. ರಾಜ್ಯಭಾರವು ಸಮರ್ಥರಾದ ಅಧಿಕಾರಿಗಳಿಂದಲೇ ನಡೆಯಿಸಲ್ಪಡಬೇಕು. ಈ ವಿಷಯದಲ್ಲಿ ಜಾತಿಯ ಪ್ರಶ್ನೆಯು ಅಹಿತವಾದುದಾಗಿದೆ.

ನಮಗೆ ೫ ಜನ ಇಂಜನೀಯರರು ಬೇಕಾಗಿದ್ದರೆ, ಅವರು ಜಾತಿಗೊಬ್ಬರಿರಬೇಕೆಂಬುವದಕ್ಕಿಂತ ಯಾರು ಉತ್ತಮರೋ, ಅವರೇ ಇರಬೇಕೆಂಬುದು ವಿಹಿತವಲ್ಲವೇ? ಆ ಐದು ಜನರು ಒಂದೇ ಧರ್ಮದವರಾದರೂ ಅಡ್ಡಿಯಿಲ್ಲ.

ಕಡಿಮೆ ತರದ ನೌಕರಿಗಳನ್ನು ಮಾತ್ರ ಆಯಾಯ ಜಾತಿಯ ನಿಷ್ಪಕ್ಷಪಾತಿಗಳ ಒಂದು ಸಂಘದಿಂದ ಪರೀಕ್ಷಿಸಲ್ಪಟ್ಟ ಜನಗಳಿಗೆ ಕೊಡಬಹುದು. ರಾಷ್ಟ್ರೀಯ ಪ್ರಭುತ್ವದ ಸಮಯದಲ್ಲಿ ಹಿಂದುಳಿದ ಜನರಿಗೆ ಶಿಕ್ಷಣ ವಿಷಯವಾಗಿ ಹೆಚ್ಚಿನ ಸೌಲಭ್ಯವು ತಾನಾಗಿಯೇ ದೊರೆಯುವದು.

ವಿಶ್ವಾಸದಿಂದ ವಿಶ್ವಾಸ ಹುಟ್ಟುತ್ತದೆ.

ಹಿಂದು ಮುಸಲ್ಮಾನರಲ್ಲಿ ಐಕ್ಯವುಂಟಾಗದ ವಿನಾ ಸ್ವರಾಜ್ಯವು ಖಂಡಿತವಾಗಿಯೂ ದೊರೆಯುವದಿಲ್ಲವೆಂಬುದು ಉಭಯ ಸಮಾಜದ ಪ್ರಮುಖರಿಗೂ ಗೊತ್ತಾಗಿದೆ. ಈ ಐಕ್ಯಕ್ಕೋಸ್ಕರ ಪರಸ್ಪರ ವಿಶ್ವಾಸವನ್ನಿಡಬೇಕು. ನನಗೆ ಮಾನವಿ ಸ್ವಭಾವದಲ್ಲಿ ವಿಶ್ವಾಸವಿರುವದರಿಂದ ಉಭಯ ಸಮಾಜಗಳಲ್ಲಿಯೂ ಐಕ್ಯವುಂಟಾಗುವದೆಂದು ನಂಬಿಕೆಯಿದೆ.

ಮುಸಲ್ಮಾನರು ಶೂರರೂ, ಉದಾರ ಸ್ವಭಾವಿಗಳೂ ಆಗಿದ್ದಾರೆ. ಅವರ ಸಂದೇಹವು ಒಮ್ಮೆ ನಿವಾರಣೆಯಾದರೆ, ಪೂರ್ಣ ವಿಶ್ವಾಸವನ್ನಿಡುತ್ತಾರೆ. ಈ ಪ್ರಕಾರ ಅವರು ವಿಶ್ವಾಸವಿಡುವಂತೆ ನಡೆಯುವದು ಹಿಂದುಗಳ ಕರ್ತವ್ಯವಾಗಿದೆ. ಹಿಂದುಜನರು ಹೇಡಿತನವನ್ನು ಬಿಟ್ಟು ಮುಸಲ್ಮಾನರಲ್ಲಿ ನಂಬಿಕೆಯನ್ನಿಡುವಷ್ಟು ಶೂರರಾಗಬೇಕು.

ನಮಗೆ “ಕಾಫರ್” ಎಂದರೆ ಸಿಟ್ಟು ಬರುತ್ತದಷ್ಟೇ. ಆದರೆ ನಾವು “ಚಾಂಡಾಲ” ರೆಂದು ಅಸ್ಪರ್ಶಜನರಿಗೆ ಹೇಳಬಹುದೋ! ನಾವು ಹಿಂದುಳಿದ ಜನರ ಸಂಗಡ ಹೇಗೆ ನಡೆದುಕೊಳ್ಳುತ್ತೇವೆಯೋ, ಹಾಗೆ ಪ್ರಪಂಚದ ಧಾರ್ಮಿಕ ಚರಿತ್ರೆಯಲ್ಲಿ ಯಾರೂ ಆಚರಿಸಿದಂತೆ ತೋರುವದಿಲ್ಲ. ವೈಕಂದಲ್ಲಿ ನಡೆದಿರುವದನ್ನು ನೋಡಿರಿ. ಮನುಷ್ಯನ ಜನ್ಮಸಿದ್ಧವಾದ ಪ್ರಾಥಮಿಕ ಅಧಿಕಾರಕ್ಕೂ ಕೂಡಾ ಎಷ್ಟು ಶ್ರಮವಹಿಸಬೇಕಾಗಿದೆ?

ಇಸ್ಲಾಮಿ ಧರ್ಮವು ನೈತಿಕ ದೃಷ್ಟಿಯಿಂದ ನೋಡುವವರಿಗೆ ಈಗ ಅದು ಎಷ್ಟೋ ಕೆಳಗಿಳಿದಿರುವಂತೆ ತೋರುತ್ತಿದ್ದರೂ, ಅವರ ಧಾರ್ಮಿಕ ಚರಿತ್ರೆಯಲ್ಲಿ ಅನೇಕ ಉಜ್ವಲವಾದ ಭಾಗಗಳಿವೆಯೆಂಬುದನ್ನು ಮರೆಯಬಾರದು. ಹಿಂದುಗಳು ತಾವು ಕಾಜಿನ ಮನೆಯಲ್ಲಿ ವಾಸವಾಗಿರುವದರಿಂದ ಮುಸಲ್ಮಾನರ ಮನೆಯ ಮೇಲೆ ಕಲ್ಲುಗಳನ್ನೆಸೆಯಲು ಸಮರ್ಥರೇ ಅಲ್ಲ. ಇದನ್ನರಿತು ವಿಶ್ವಾಸದಿಂದ ನಡೆದುಕೊಂಡರೆ, ಎಲ್ಲಾ ತೊಂದರೆಗಳೂ ತಾವಾಗಿಯೇ ನಿವಾರಣೆಯಾಗುವವು.

ಪ್ರೇಮಾಂಧರು.

ಪ್ರೇಮಭರಿತರಾದವರು ತಾವು ಮಾಡುವ ಕೆಲಸಗಳ ಯುಕ್ತಾಯುಕ್ತವನ್ನರಿಯರೆನ್ನುವುದಕ್ಕೆ ಅನೇಕ ಉದಾಹರಣೆಗಳಿರುತ್ತವೆ. ಪ್ರೇಮಾಂಧರಾಗಿ ಇವರು ಯಾವ ಕೆಲಸವನ್ನಾದರೂ ಮಾಡುವರು; ಫಲಾಫಲಗಳ ಮೇಲೆ ಗಮನವನ್ನಿಡರು. ತಾತ್ಕಾಲಿಕ ಅಭೀಷ್ಟಸಿದ್ಧಿಯನ್ನು ಹಾರೈಸಿ ಮುಂದಿನ ಫಲದಕಡೆಗೆ ಮನ ಕೊಡುವುದಿಲ್ಲ.

ಇಂಗ್ಲೆಂಡಿನಲ್ಲಿ ಪ್ರಸಿದ್ಧ ರಾಜತಂತ್ರಜ್ಞರಾಗಿದ್ದ ವಿಲಿಯಂಪಿಟ್ ಎಂಬುವರು ಒಬ್ಬ ಯುವತಿಯ ಮೋಹಪಾಶವಶರಾಗಿ, ಆಕೆಯ ಪಾದರಕ್ಷೆಯಲ್ಲಿ ವೈನನ್ನು ಸುರಿದುಕೊಂಡು, ಕುಡಿದು ಆಕೆಯ ಆರೋಗ್ಯವನ್ನು ಕೋರಿದರಂತೆ!

ಸೆಂಡರ್ ಎಂಬ ವಿವೇಕಿಯು ತನಗೆ ಪ್ರೀತಿಪಾತ್ರಳಾಗಿದ್ದ ಯುವತಿಯ ಸಾನ್ನಿಧ್ಯದಲ್ಲಿರಲು, ಆಕೆಯ ತಂದೆಯು ಬಾಡಿಗೆಗೆ ಗೊತ್ತುಮಾಡಿದ್ದ ಬಾಡಿಗೆಗಾಡಿಯ ಡ್ರೈವರಾಗಿ ಕೆಲಸಮಾಡಿದನು. ರಾಜನೀತಿಜ್ಞನಾದ ಕ್ಯಾನಿಂಗನು ತಾನು ವಹಿಸಿದ ಕನ್ಯೆಯ ಜತೆಯಲ್ಲಿ ತಿರುಗುವ ಸಂತೋಷ ಲಾಭಕ್ಕಾಗಿ ಆಕೆಯ ಕುದುರೆಯ ಚಾಕರನಾಗಿ ವೇಷಮರಸಿಕೊಂಡಿದ್ದನು.

ಇಟಲಿಯ ಶ್ರೀಮಂತಮನೆತನದ ಹಕ್ಕುದಾರನೊಬ್ಬನು ಸಂಬಳಕ್ಕೆ ಸೇರಿದ್ದ ಒಬ್ಬ ಸುಂದರಿಯನ್ನು ವರಿಸಿ, ತನ್ನ ರಾಜ್ಯದಲ್ಲಿಯೇ ವಿವಾಹ ಮಾಡಿಕೊಳ್ಳಲು ಇದ್ದ ಅಡ್ಡಿಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಇಂಗ್ಲೆಂಡಿಗೆ ಪಲಾಯನಮಾಡಿ, ಅಲ್ಲಿ ಆಕೆಯನ್ನು ವಿವಾಹವಾದನು. ತಮ್ಮಲ್ಲಿದ್ದ ಹಣವೆಲ್ಲವೂ ಸ್ವಲ್ಪಕಾಲದಲ್ಲಿಯೇ ಮುಗಿದುಹೋಗಲು, ಗಂಡನು ಒಂದು ಆಯುಷ್ಯವರ್ಗಶಾಲೆಯಲ್ಲಿ ಕೆಲಸಕ್ಕೆ ನಿಂತನು. ಹೆಂಡತಿಯು ದರ್ಜಿ ಕೆಲಸವನ್ನು ಮಾಡುತ್ತಿರುವಳು. ಇದರಲ್ಲಿಯೇ ಅವರು ತೃಪ್ತರಾಗಿರುವರು.

ವರ್ಷಕ್ಕೆ 30 ಲಕ್ಷ ರೂಪಾಯಿಗಳ ಉತ್ಪತ್ತಿಯುಳ್ಳ ಆಸ್ತಿಯನ್ನು ಬಿಟ್ಟು, ಕೌಂಟ್ ಫ್ರಾನ್ಸಿಸ್ ಎಂಬುವವನು ಅಗಸರ ಕೆಲಸದಲ್ಲಿದ್ದ ಒಬ್ಬ ರೂಪವತಿಯನ್ನು ಕರೆದುಕೊಂಡು ಹೋಗಿ ಇಂಗ್ಲೆಂಡಿನಲ್ಲಿ ಮದುವೆಯಾದನು. ಹಾಲೆಂಡು ರಾಜ್ಯದ ರಾಣಿಯವರ ಬಂಧುವೊಬ್ಬನು ತನಗಿದ್ದ 3 ಲಕ್ಷ ಸವರಿನ್‌ಗಳ ವರಮಾನಕ್ಕೆ ರಾಜೀನಾಮೆಯನ್ನು ಕೊಟ್ಟು ಇಂಗ್ಲೆಂಡಿನಲ್ಲಿ ಒಬ್ಬ ವ್ಯಾಪಾರಿಯ ಮಗಳನ್ನು ವಿವಾಹಮಾಡಿಕೊಂಡನು. ಆಸ್ಟ್ರೇಲಿಯದ ರಾಜ ಮನೆತನದ ರಾಜಕುಮಾರನೊಬ್ಬನು ತನ್ನ ಹಕ್ಕು ಬಾಧ್ಯತೆಗಳಿಗೆಲ್ಲಾ ರಾಜೀನಾಮೆಯನ್ನು ಕೊಟ್ಟು ಒಂದು ಅಂಗಡಿಯಲ್ಲಿ ನೌಕರಿಗೆ ಸೇರಿದ ಸ್ತ್ರೀಯೊಬ್ಬಳನ್ನು ಮದುವೆಯಾಗಿ, ಮೋಟಾರು ಡ್ರೈವರು ಕೆಲಸದಲ್ಲಿ ಸುಖವಾಗಿರುವನು. ಇವರಂತೆಯೇ ಟಸ್ಕೆನಿಯ ರಾಜ ಕುಮಾರರಿಬ್ಬರು ಕೇವಲ ಬಡತನದಲ್ಲಿದ್ದ ಯುವತಿಯರನ್ನೇ ತಮ್ಮ ಹೆಂಡತಿಯರನ್ನಾಗಿ ಮಾಡಿಕೊಂಡಿರುವರು.

ಓ. ಪ.

1924ನೇ ಜೂನ್ 18ನೆಯ ಮುಕ್ಕಾಮಿಗೆ ಆಖೈರಾದ ವಾರಕ್ಕೆ ವರ್ತಮಾನ ಪತ್ರಿಕೆಗಳಬಗ್ಗೆ ಗೋಷ್ವಾರೆ.

1. ಯೂನಿಫಾರಂ ಧರಿಸಿ ತಮ್ಮ ಕರ್ತವ್ಯಗಳ ಬಗ್ಗೆ ಸಂಸ್ಥಾನದ ಮೂಲಕ ಹಾದುಹೋಗುವ ಬ್ರಿಟಿಷ್ ಮಿಲಿಟರಿ ಆಫೀಸರುಗಳು ಎಲ್ಲಾ ಪ್ರಾವಿನ್ಷಿಯಲ್ ಮತ್ತು ಡಿಸ್ಟ್ರಿಕ್ಟ್ ಫಂಡ್ ಸುಂಕದಕಟ್ಟೆಗಳಲ್ಲಿಯೂ ಸೇತುವೆಗಳ ಬಳಿಯಲ್ಲಿಯೂ ವಸೂಲ್ಮಾಡಲ್ಪಡುತ್ತಿರುವ ಸುಂಕವನ್ನು ಕೊಡತಕ್ಕುದಿಲ್ಲವೆಂದು ಸರ್ಕಾರದವರು ಇವರುಗಳಿಗೆ ವಿನಾಯಿತಿಯನ್ನು ಕೊಟ್ಟು ಹುಕ್ಕುಂ ಸಾದರ್ಮಾಡಿದ್ದಾರೆ. ಮ್ಯುನಿಸಿಪಲ್ ಸುಂಕದ ವಿಷಯದಲ್ಲಿ, ಈ ಆಫೀಸರುಗಳಿಗೆ ಇದೇರೀತಿಯ ವಿನಾಯಿತಿಯನ್ನು ಕೊಡುವ ವಿಷಯವು ಮ್ಯುನಿಸಿಪಲ್ ಕೌನ್ಸಿಲುಗಳಿಗೆ ಸೇರಿರುತ್ತದೆ; ಮತ್ತು ಡೆಪ್ಯುಟಿ ಕಮಿಷನರುಗಳು ತಮ್ಮ ಡಿಸ್ಟ್ರಿಕ್ಟುಗಳೊಳಗೆ ಸುಂಕ ವಸೂಲ್ಮಾಡುವಂತಹ ಮ್ಯುನಿಸಿಪಲ್ ಕೌನ್ಸಿಲುಗಳ ಪರ್ಯಾಲೋಚನೆ ಬಗ್ಗೆ ಈ ವಿಷಯವನ್ನು ತಿಳಿಸುವರೆಂದು ಕೋರಿದೆ.

2. ಲೋಕಲ್ ಫಂಡ್ ಡಿಸ್ಪೆನ್ಸರಿಗಳ ಪ್ರಾರಂಭದ ಮತ್ತು ಪದೇ ಪದೇ ಬೀಳುವ ಖರ್ಚನ್ನು ಸರ್ಕಾರದವರೂ, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯವರೂ ಸಮಭಾಗವಾಗಿ ವಹಿಸತಕ್ಕದೆಂದು ಅಪ್ಪಣೆಮಾಡಿರುವ 1920 ನೆಯ ಮೇ ತಿಂಗಳ ಹುಕುಮನ್ನು ರದ್ದುಮಾಡಿ, ಸಬ್ ಅಸಿಸ್ಟೆಂಟ್ ಸರ್ಜನ್ನರುಗಳ ಸಂಬಳವನ್ನು ದೇಶೀಯ ಔಷಧಗಳುಳ್ಳ ಇತರ ಎಲ್ಲಾ ಔಷಧಗಳ ಖರ್ಚನ್ನೂ ಸರ್ಕಾರದವರು ವಹಿಸುವಂತೆಯೂ, ಮನೆಯ ಬಾಡಿಗೆ, ಜವಾನರ ಸಂಬಳ, ಸಾದಿಲ್ವಾರು ಮತ್ತು ಸಬ್ ಅಸಿ

ಶಿವನೆಂಬ ಮಹಾರತ್ನವನ್ನೂ, ರತ್ನದ ಪ್ರಕಾಶದಂತಿರುವ ಶಿವಸಂಬಂಧವಾದ ಕ್ರಿಯೆಗಳನ್ನೂ, ತೆಗೆದುಕೊಂಡಿರುವುದರಿಂದ, ವೀರಶೈವರು ಯಾವದ್ವೇದವನ್ನೂ ಸ್ವೀಕರಿಸಿದಂತೆಯೇ ಆಯಿತು.

ವೇದದಲ್ಲಿ ಪೂರ್ವಕಾಂಡವೆಂತಲೂ, ಉತ್ತರಕಾಂಡವೆಂತಲೂ ಎರಡು ಭಾಗಗಳುಂಟು. ಪೂರ್ವಭಾಗವು ಸ್ವರ್ಗಾದಿ ಅನಿತ್ಯ ಫಲಪ್ರದವಾದ ಜ್ಯೋತಿಷ್ಟೋಮ ಅತಿರಾತ್ರ ಮೊದಲಾದ ಸಕಾಮಕರ್ಮಗಳನ್ನು ಪ್ರತಿಪಾದಿಸುವುದು. ಉತ್ತರಕಾಂಡವು ಅಂತಹ ಸಕಾಮಕರ್ಮಗಳನ್ನು ನಿಷೇಧಿಸುವುದು. ಕರ್ಮಗಳಲ್ಲಿ ಪಶುಕರ್ಮವೆಂತಲೂ ಪತಿಕರ್ಮವೆಂತಲೂ ಎರಡುವಿಧ. ಸ್ವರ್ಗಸಾಧನವಾದ ಜ್ಯೋತಿಷ್ಟೋಮಾದಿಕರ್ಮಗಳೇ ಪಶುಕರ್ಮಗಳು. ಭಸ್ಮ ರುದ್ರಾಕ್ಷ ಶಿವಲಿಂಗಯಜನ ಶಿವಲಿಂಗಭಜನ ಶಿವಲಿಂಗಾರ್ಪಣ ಲಿಂಗಪ್ರಸಾದಗ್ರಹಣ ಶಿವಲಿಂಗತೀರ್ಥನಿಷೇವಣ ಮೊದಲಾದ ಶಿವಜ್ಞಾನ ಸಾಧನವಾದ ಕರ್ಮಗಳೇ ಪತಿಕರ್ಮಗಳು. (ಏಕೇನಜನ್ಮನಾಮುಕ್ತಿರ್ವೀರಶಾಂತಸ್ಯ ಮಹೇಶ್ವರಿ) ಎಂಬ ಶಿವಾಗಮೋಕ್ತಿಯಂತೆ ವೀರಶೈವನು ಒಂದೇ ಜನ್ಮದಲ್ಲಿ ಮುಕ್ತಿಯನ್ನು ಪಡೆಯಬೇಕಾದುದರಿಂದ “ಅನೇಕ ಜನ್ಮಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ ನರಾಣಾಂಕ್ಷೀಣಪಾಪಾನಾಂ ಶಿವೇಭಕ್ತಿಃ ಪ್ರಜಾಯತೆ” ಎಂಬ ಆಗಮೋಕ್ತಿಯಂತೆ ಹಿಂದಣ ಜನ್ಮದಲ್ಲಿ ಪಶುಕರ್ಮಗಳನ್ನು ಮಾಡಿ ಪಾಪರಹಿತವಾದ ಶಿವಭಕ್ತಶರೀರವನ್ನು ಧರಿಸಿರುವ ದೀಕ್ಷಿತನಾದ ವೀರಮಾಹೇಶ್ವರನಿಗೆ ಪಶುಕರ್ಮಗಳು ವಿಹಿತಗಳಲ್ಲವು. ಪಶುವಿಶಸನಾದಿ ಪಶುಕರ್ಮಗಳು ಜನನಮರಣಗಳನ್ನು ತಪ್ಪಿಸುವುದಿಲ್ಲವು. ಪತಿಕರ್ಮವೆಂದೆನಿಸಿದ (ತಪಃಕರ್ಮಜಪೋಧ್ಯಾನಂಜ್ಞಾನಂ ಚೇತ್ಯನುಪೂರ್ವಕಂ ಅನೇನಪಂಚಯಜ್ಞೇನಯಃ ಪೂಜಯತಿಶಂಕರಂ) ಎಂಬ ಶಿವಾಗಮೋಕ್ತಿಯಂತೆ ಶಿವಲಿಂಗಾರ್ಚನ, ಶಿವಲಿಂಗಧ್ಯಾನ, ಶಿವಲಿಂಗತಪಸ್ಸು ಮೊದಲಾದ ಪಂಚಮಹಾಯಾಗಗಳಿಂದ ಸಂಸಾರ ಕಾರಣವಾದ ಮಲಗಳು ನಷ್ಟವಾಗುವವು. ಇದೇ ಅರ್ಥವು (ವಿದ್ಯಾಂಚಾವಿದ್ಯಾಂಚಯಸ್ತದ್ವೇದ)ಎಂಬ ಶ್ರುತಿಯಿಂದಲೂ (ಚಿತ್ತಮಾತ್ಮಾ) ಎಂಬ ಶಿವಸೂತ್ರದ ವ್ಯಾಖ್ಯಾನದಿಂದಲೂ ಸ್ಪಷ್ಟವಾಗುವದು. ನಮ್ಮ ಭಾರತೀಯರಲ್ಲಿ ಕೆಲವರು ಕ್ರಿಯಾಪ್ರಧಾನರು; ಕೆಲವರು ಜ್ಞಾನಪ್ರಧಾನರು ಕೆಲವರು ಉಭಯಪ್ರಧಾನರು. ಈ ವೀರಶೈವ ಮತಾವಲಂಬಿಗಳಾದರೊ ಕ್ರಿಯಾ ಜ್ಞಾನಗಳೆರಡಕ್ಕೂ ಸಮುಸಮುಚ್ಚಯವನ್ನೇ ಒಪ್ಪುವದರಿಂದ ಜ್ಞಾನಕ್ಕೆ ವಿರೋಧವಾಗದ ಕ್ರಿಯೆಯನ್ನು ಹೇಳುವರಲ್ಲದೆ ವಿರೋಧವಾದ ಕ್ರಿಯೆಗಳನ್ನು ಹೇಳುವುದಿಲ್ಲ. (ನಕರ್ಮಣಾನಪ್ರಜಯಾ) ಎಂಬ ಶ್ರುತಿಯಾದರೂ ಜ್ಞಾನವಿರುದ್ಧವಾದ ಪಶುಕರ್ಮವನ್ನು ನಿಷೇಧಿಸುವುದೆ ಹೊರತು ಅವಿರೋಧಿಯಾದ ಅಷ್ಟಾವರಣ ಪಂಚಾಚಾರಾದಿ ಕ್ರಿಯೆಗಳನ್ನು ನಿಷೇಧಿಸುವುದಿಲ್ಲ. ಪತಿಕರ್ಮಗಳನ್ನೂ ಸಹ ನಿಷೇಧಿಸುವುದು. ಅಂದರೆ (ಅಂಧಂತಮಃಪ್ರವಿಶಂತಿ) ಎಂಬ ಮಂತ್ರದಲ್ಲಿ ಜ್ಞಾನಕರ್ಮಗಳೆರಡರಲ್ಲಿ ಒಂದನ್ನು ಬಿಟ್ಟು ಒಂದನ್ನು ಆಚರಿಸುವವರಿಗೆ ದೋಷವು ಹೇಳಲ್ಪಟ್ಟಿರುವುದು. (ವಿದ್ಯಾಂಚಾವಿದ್ಯಾಂಚ) ಎಂಬ ಶ್ರುತಿಯಂತೆ ಕ್ರಿಯಾಜ್ಞಾನಗಳ ಸಮುಸಮುಚ್ಚಯವೇ ಮುಕ್ತಿಕಾರಣವು. ಈ ಅಭಿಪ್ರಾಯವನ್ನು ತೋರಿಸುವದಕ್ಕಾಗಿಯೇ ವೀರಶೈವ ಸಿದ್ಧಾಂತಗ್ರಂಥಗಳಲ್ಲಿ (ಉಭಾಭ್ಯಾಮೇವಪಕ್ಷಾಭ್ಯಾಂ ಯಥಾಖೇಪಕ್ಷಿಣಾಂಗತಿಃ) ಎಂದು ಎರಡು ರೆಕ್ಕೆಗಳ ಸಹಾಯದಿಂದ ಆಕಾಶಕ್ಕೆ ಹೋಗುವ ಪಕ್ಷಿಯ ದೃಷ್ಟಾಂತವನ್ನು ಹೇಳಿರುವರು. ಪಶುಕರ್ಮಗಳೆನಿಸಿರುವ ಪಶುವಿಶಸನಾದಿ ಕ್ರಿಯೆಗಳು ಲಿಂಗಾಂಗಿಯಾದ ಮಾನವನಿಗೆ ಹೇಯಗಳಾದುದರಿಂದಲೂ, ಪತಿಕರ್ಮಗಳೇ ಉಪಾದೇಯಗಳಾದುದರಿಂದಲೂ (ವೈದಿಕಂಕರ್ಮಕುರ್ವೀತ ಜ್ಞಾನೈಕಫಲಸಾಧನಂ) ಅಂದರೆ ಶಿವತತ್ವಸಮಾವೇಶಕ್ಕೆ ಸಾಧಕವಾದ ಶಿವತಪಸ್ಸು ಶಿವಜ್ಞಾನ ಶಿವಾರ್ಚನ ಮೊದಲಾದ ಪಂಚಯಜ್ಞಗಳನ್ನು ಮಾಡಬೇಕಲ್ಲದೆ, (ಶಿವಾರ್ಚಾಕರ್ತೃವಿಜ್ಞೇಯಂ ಬಾಹ್ಯಂಯಾಗಾದಿನೋಚ್ಯತೆ) ಎಂಬುಕ್ತಿಯಂತೆ ಸ್ವರ್ಗಾದಿ ಸಾಧಕವಾದ ಸಕಾಮಕರ್ಮಗಳನ್ನು ಮಾಡಕೂಡದೆಂದು ಸಿದ್ಧಾಂತದಲ್ಲಿ ಸ್ಪಷ್ಟಪಡಿಸಿರುವರು. ಮತ್ತು ಪಶುಮಾಲಭೇತ – ಯಜ್ಞದಪಶುವನ್ನು ಕೊಲ್ಲಬೇಕು” ಎಂಬುವ ವಿಶೇಷವಾಕ್ಯವು (ನಹಿಂಸ್ಯಾತ್ ಸರ್ವಾಭೂತಾನಿ) ಯಾವಪ್ರಾಣಿಯನ್ನೂ ಕೊಲ್ಲಬಾರದು ಎಂಬ ಸಾಮಾನ್ಯವಚನವನ್ನು ತಳ್ಳುವಂತೆಯೂ (ಸೋಮೇನೋಚ್ಛಿಷ್ಟಂ) ಎಂಬ ವಿಶೇಷವಾಕ್ಯವು (ನೋಚ್ಛಿಷ್ಟಂಕಸ್ಯಚಿದ್ದದ್ಯಾತ್) ಯಾವನಿಗೂ ಎಂಜಲನ್ನು ಕೊಡಬಾರದೆಂಬ ಸಾಮಾನ್ಯವಾಕ್ಯವನ್ನು ದುರ್ಬಲಗೊಳಿಸುವಂತೆಯೂ (ನಕರ್ಮಣಾ ನಾಸ್ತ್ಯಕೃತಃಕೃತೇನ) ಮೊದಲಾದ ಶ್ರುತಿವಾಕ್ಯಗಳು ಮುಕ್ತಿರಾಜ್ಯಕ್ಕೆ ಪ್ರತಿಬಂಧಕವಾದ ಜ್ಯೋತಿಷ್ಟೋಮಾದಿ ಕರ್ಮಗಳನ್ನು ನಿಷೇಧಿಸುವುದಲ್ಲದೆ ಮುಕ್ತಿಗೆ ಸಾಕ್ಷಾತ್ಕಾರಣವಾದ ಭಸ್ಮ ರುದ್ರಾಕ್ಷ ಲಿಂಗಪೂಜಾದಿ ಪತಿಕರ್ಮಗಳನ್ನು ನಿಷೇಧಿಸುವುದಿಲ್ಲವು. ಆದುದರಿಂದ ಪಶುಕ್ರಿಯೆಗೂ ಜ್ಞಾನಕ್ಕೂ ಸಮುಸಮುಚ್ಚಯವು ಸಂಭವಿಸುವದಿಲ್ಲವು. ಪತಿಕರ್ಮಕ್ಕೂ ಜ್ಞಾನಕ್ಕೂ ಸಮುಸಮುಚ್ಚಯವಾದರೂ ಸಂಭವಿಸುವುದು. ಹೀಗೆ ವೀರಶೈವಸಿದ್ಧಾಂತರೀತಿಯಾಗಿ ಶಿವನು ಕ್ರಿಯಾಜ್ಞಾನಗಳಿಗೆ ಆಶ್ರಿತನಾದುದರಿಂದ ಆ ಕ್ರಿಯಾಜ್ಞಾನ ಸಮುಸಮುಚ್ಚಯದಿಂದಲೇ ಮುಕ್ತಿಯು ಲಭಿಸುವುದು. ಇದೇ ಅರ್ಥವು (ಚಿದಚಿದುದಯಕೃದ್ಜ್ಞಕ್ರಿಯಾಂಘ್ರಿದ್ವಯಾಢ್ಯಂ) ಎಂದು ಶಿವಾದ್ವೈತಮಂಜರಿಯಲ್ಲಿಯೂ ಸಿದ್ಧಾಂತಶಿಖಾಮಣಿಯಲ್ಲಿಯೂ ಹೇಳಲ್ಪಟ್ಟಿರುವದು. ಮತ್ತು ಪಶುವಧೆಯಿಂದೊಡಗೂಡಿದ ಪಶುಕರ್ಮಗಳಿಗೆ ಅಂಗಗಳಾದ ತಂತುಮಯವಾದ ಯಜ್ಞೋಪವೀತ, ಭೂತಯಜ್ಞಾದಿ ಪಂಚಯಜ್ಞಗಳೂ, ಉಪನಿಷತ್ಪ್ರತಿಪಾದ್ಯವಾದ ಪತಿಕರ್ಮಗಳಿಗೆ ಅಂಗವಾದ ಲಿಂಗರೂಪಯಜ್ಞೋಪವೀತವು ಶಿವತಪಸ್ಸು, ಮೊದಲಾದ ಪಂಚಯಜ್ಞಗಳೂ ಎರಡೂ ವೈದಿಕಗಳಾದರೂ ಎಷ್ಟೋ ಭಾಗಗಳಲ್ಲಿ ವ್ಯತ್ಯಾಸವಿರುವುದು. ಆದುದರಿಂದಲೇ (ಯಜ್ಞೋಪವೀತಂಪರಮಂ| ಪವಿತ್ರಂಶ್ರದ್ಧಯಾಸಹ | ಕರಾಬ್ಜಪೀಠೇಪೀಠೆವಾಭಜದ್ಧ್ಯಂಶ್ರುತಿಕೋವಿದಾಃ) ಎಂಬ ಉಪಬೃಂಹಣವಾಕ್ಯವು ಹೊರಟಿರುವುದರಿಂದ ಇಲ್ಲಿ ಯಜ್ಞೋಪವೀತವೆಂದರೆ ಲಿಂಗವೆಂಬುದು ಸ್ಪಷ್ಟವಾಗುವುದು. (ಪತಿತೆ ಪ್ರಾಣಲಿಂಗೇತು ಪ್ರಾಣಾನ್ ಧತ್ತೆನರಾಧಮಃ) ಅಂದರೆ ಲಿಂಗಲೋಪದಲ್ಲಿ ಪ್ರಾಣತ್ಯಾಗವಲ್ಲದೆ ಬೇರೆ ಪ್ರಾಯಶ್ಚಿತ್ತವಿಲ್ಲವೆಂಬರ್ಥವುಳ್ಳ ಆಗಮವಾಕ್ಯದಿಂದ ಅಶುಚಿಕಾಲದಲ್ಲಿಯೂ ಈ ಲಿಂಗರೂಪ ಯಜ್ಞೋಪವೀತವನ್ನು ತೆಗೆಯಕೂಡದೆಂದು ವೀರಶೈವಸಿದ್ಧಾಂತವು. ಇದೇ ಅರ್ಥವು ಋಗ್ವೇದದಲ್ಲಿರುವ (ಪವಿತ್ರಂತೆವಿತತಂಬ್ರಹ್ಮಣಸ್ಪತೇ| ಪ್ರಭುರ್ಗಾತ್ರಾಣಿಪರ್ಯೇಷಿವಿಶ್ವತಃ) ಎಂಬ ಮಂತ್ರದಲ್ಲಿಯೂ ಸ್ಪಷ್ಟವಾಗಿರುವುದು. (ಅಂದರೆ ಈ ಮಂತ್ರದಲ್ಲಿರುವ ಬ್ರಹ್ಮಣಸ್ಪತೆ ಎಂಬ ಬ್ರಹ್ಮಪದಕ್ಕೆ ತಲ್ಲಿಂಗಂಬ್ರಹ್ಮಶಾಶ್ವತಂ || ಲಿಂಗಂಬ್ರಹ್ಮಸನಾತನಂ ಎಂಬ ರೇಣುಕಾಚಾರ್ಯರುಕ್ತಿಯಿಂದಲೂ, “ಲಿಂಗಂ ತದ್ಬ್ರಹ್ಮಸಂಜ್ಞಿತಂ” ಎಂಬ ಶಂಕರಾಚಾರ್ಯರುಕ್ತಿಯಿಂದಲೂ ಬ್ರಹ್ಮಶಬ್ದಕ್ಕೆ ಲಿಂಗವೆಂದರ್ಥವು. ತಸ್ಯಪತಿಃ ಅಧಿಷ್ಠಾತಾ, ತಚ್ಛರೀರಕಸ್ಸನ್ ತತ್ರಸ್ಥಿತ ಇತ್ಯರ್ಥಃ || ಹೆ ಬ್ರಹ್ಮಣಸ್ಪತೆ ಲಿಂಗರೂಪಶರೀರಾವಚ್ಛೇದೇನ ಶರೀರಭಾವೇನ ಅಧಿಷ್ಠಿತ ಪರಮಶಿವ, ತೆ ತವ ತತ್ಬ್ರಹ್ಮಪದ ವಾಚ್ಯ ಲಿಂಗ ರೂಪ, ಶರೀರಂ ಪವಿತ್ರಂ ಉತ್ತರೀಷ್ಯಾ ಅಶುಚಿ ಕಾಲೇಪಿ ಧರ್ತುಂ ಯೋಗ್ಯಂ. ವಿತತಂ ಇಷ್ಟಾದಿ ಭೇದೇನ ಭಕ್ತ ಶರೀರಾದಿ ಭೇದೇನವಾ ಬಹುವಿಧಂ, ಪ್ರಭುಃ ನಿಗ್ರಹಾನುಗ್ರಹ ಸಮರ್ಥಃ. ತ್ವಂ ವಿಶ್ವತಃ ಸಮಸ್ತಾನಿ (ಸಾರ್ವ ವಿಭಕ್ತಿಕ ಸ್ತಸಿಃ) ಗಾತ್ರಾಣಿ ಭಕ್ತ ಶರೀರಾಣಿ ಪರ್ಯೇಷಿ ವಾ ಪ್ನೋಷಿ ಧಾರ್ಯಮಾಣಸ್ಸನ್ ಲಿಂಗರೂಪ ಶರೀರ ದ್ವಾರಾ ಭಕ್ತಾಂಗ ಸಂಯುಕ್ತೋಸೀತ್ಯರ್ಥಃ | ಹೀಗೆ ಪತಿಕರ್ಮವೆಂದೆನಿಸಿದ, ಶಿವಲಿಂಗರೂಪವಾದ ಯಜ್ಞೋಪವೀತಧಾರಣವು, ಶಿವಾರ್ಚನಾದಿ ಪಂಚಯಜ್ಞಗಳೂ ಉಪನಿಷತ್ತುಗಳಲ್ಲಿ ಪ್ರತಿಪಾದಿಸುವುದಲ್ಲದೆ, ಕಾಮಿಕಾದಿ ವಾತುಲಾಂತವಾದ ಶಿವಾಗಮಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವುವು. ವೇದಕ್ಕೂ ಶಿವಾಗಮಗಳಿಗೂ ಶಿವನೇ ಕರ್ತನಾದುದರಿಂದ ವೇದದಂತೆ, ಆಗಮವೂ ಪ್ರಮಾಣವೇ ಆಗಿದೆ. ವೇದವು ತ್ರೈವರ್ಣಿಕ ವಿಷಯವು. ಶಿವಾಗಮವು ಸರ್ವವಿಷಯವು. ತ್ರೈವರ್ಣಿಕಪರರಾದ ವೈದಿಕರಿಗೆ ಉಪನಯನ ಸಂಸ್ಕಾರವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜಾತಿಯವರಿಗೆ ಮಾತ್ರ ನಡೆಯಬೇಕು. ವೈದಿಕರೆಂತಲೂ, ತಾಂತ್ರಿಕರೆಂತಲೂ, ವೈದಿಕತಾಂತ್ರಿಕರೆಂತಲೂ, ತಾಂತ್ರಿಕ ವೈದಿಕರೆಂತಲೂ ವೈದಿಕಮತಗಳೊಳಗೆ ನಾಲ್ಕುವಿಧ. ವೀರಶೈವರು ತಾಂತ್ರಿಕ ವೈದಿಕರಲ್ಲಿ ಸೇರುವರು. ತಂತ್ರದಲ್ಲಿ (ಆಗಮ) ಹೇಳಿದ ಕರ್ಮಜ್ಞಾನಗಳೆರಡನ್ನು ತೆಗೆದುಕೊಂಡು ವೇದದಲ್ಲಿ ಹೇಳಿದ ಜ್ಞಾನಾವಿರುದ್ಧವಾದ ಕ್ರಿಯೆಗಳನ್ನು ಮಾತ್ರ ತೆಗೆದುಕೊಂಡಿರುವುದರಿಂದ ಇವರಿಗೆ ತಾಂತ್ರಿಕವೈದಿಕರೆಂದು ಹೆಸರಾಯಿತು. ಸರ್ವವಿಷಯವುಳ್ಳ ಆಗಮವನ್ನು ಪ್ರಾಧಾನ್ಯವಾಗಿ ಒಪ್ಪುವುದರಿಂದ ಈ ವೀರಶೈವ ಭಕ್ತಮಾಹೇಶ್ವರರೆಲ್ಲರಿಗೂ ಶಿವದೀಕ್ಷೆಯು ಸಿದ್ಧವಾಗುವುದು. ಹೀಗೆ ವೀರಶೈವಮತಾನುಯಾಯಿಗಳಾದ ಸರ್ವರಿಗೂ ಲಿಂಗಧಾರಣವು ಅವಶ್ಯಕವಾಗಿರುವುದರಿಂದ ದೀಕ್ಷಾಕರ್ಮದಿಂದ ಪರಿಶುದ್ಧವಾಗದ ಹೊರತು ಶರೀರದಲ್ಲಿ ಅಂತಹ ಲಿಂಗವು ಧರಿಸಲನರ್ಹವಾಗಿರುವುದು. ಉಪನಯನವೆಂಬ ಪ್ರಾಕೃತ ಸಂಸ್ಕಾರವನ್ನು ಕೇವಲ ತ್ರಿವರ್ಣಗಳಿಗೆಂದು ಸಂಕೋಚಮಾಡಿದಂತೆ ಶಿವದೀಕ್ಷಾರೂಪವಾದ ಸಂಸ್ಕಾರವನ್ನು ಸಂಕೋಚಮಾಡಲು ಆಗುವದಿಲ್ಲವು. ಈ ದ್ವಿಜತ್ವಾಪಾದಕವಾದ ಶಿವದೀಕ್ಷಾರೂಪವಾದ ಉಪನಯನ ಸಂಸ್ಕಾರವು ವೇದ, ಕ್ರಿಯಾ, ಮನು ಎಂದು ಮೂರುವಿಧ. ತ್ಯಾಗಾಂಗ (ಸ್ಥೂಲ) ಭೋಗಾಂಗ (ಸೂಕ್ಷ್ಮ) ಯೋಗಾಂಗ (ಕಾರಣ) ಎಂದು ಶರೀರಗಳು ಮೂರು ವಿಧ. ಈ ಮೂರುವಿಧ ಶರೀರಗಳಲ್ಲಿ ಆಣವ, ಮಾಯಾ, ಕಾರ್ಮಿಕ ಎಂಬ ಮೂರುಮಲಗಳುಂಟು. ಗುರುವು (ಗರ್ಭಾಷ್ಟಮೇಶ್ಯತಾದೀಕ್ಷಾ) ಎಂಬುಕ್ತಿಯಂತೆ ಎಂಟನೆ ವರ್ಷದಲ್ಲಿ ಶಿಷ್ಯನ ಮೂರು ಶರೀರಗಳಲ್ಲಿರುವ ಮಲಗಳನ್ನು, ಮೂರು ದೀಕ್ಷೆಗಳಿಂದ ನಾಶಗೊಳಿಸಿ, ಇಷ್ಟ, ಪ್ರಾಣ, ಭಾವ ಎಂಬ ಮೂರು ಲಿಂಗಗಳನ್ನು ಧರಿಸಿ ಪೂಜಾದ್ಯಧಿಕಾರವನ್ನುಂಟುಮಾಡುವನು. ಇದೇ ಅರ್ಥವು (ತನುತ್ರಯಗತಾನಾದಿಮಲತ್ರಯಮುಸೌ ಗುರುಃ | ದೀಕ್ಷಾತ್ರಯೇಣನಿರ್ದಗ್ಧ್ವಾ ಲಿಂಗತ್ರಯಮುಪಾದಿಶತ್) ಎಂಬ ಶಿವಾಗಮಗಳಲ್ಲಿ ಹೇಳುವುದು. ಮತ್ತು (ಅತಪ್ತತನುರ್ನತದಾಮೊ ಅಶ್ನುತೆ) ತಪ್ತಾ ವೇದಾಮನುಕ್ರಿಯಾ ದೀಕ್ಷಾತ್ರಯೇಣ ನಿರ್ದಗ್ಧಪಾಶಪಂಜರಾ, ತನುರ್ಯಸ್ಯಸಾನಭವತೀತಿಅತಪ್ತತನುಃ, ದೀಕ್ಷಾತ್ರಯರಹಿತಃ. ಅಮಃ ಅಪರಿಪಕ್ವಾಂತಃಕರಣಃ | ತತ್ ಪರಶಿವಸ್ವರೂಪಂ, ನಾಶ್ನುತೆ ನಪ್ರಾಪ್ನೋತಿ, ಎಂದು ಋಗ್ವೇದ ಮಂತ್ರದಲ್ಲಿಯೂ ದೀಕ್ಷಾವಿಷಯವು ಹೇಳಲ್ಪಟ್ಟಿದೆ. ಹೀಗೆ ವೀರಶೈವರಿಂದ ಅನುಷ್ಠೇಯಗಳಾದ ಶಿವದೀಕ್ಷೆ ಲಿಂಗಧಾರಣಾದಿ ಯಾವತ್ಕರ್ಮಗಳೆಲ್ಲವೂ ವೇದಗಳಲ್ಲಿಯೂ ಆಗಮಗಳಲ್ಲಿಯೂ ವಾಸೋಕ್ತ ಪಾದ್ಮಸ್ಕಾಂದಾದಿ ಪುರಾಣಗಳಲ್ಲಿಯೂ ಹೇಳಲ್ಪಟ್ಟಿರುವುದರಿಂದಲೂ ವೇದಾಗಮಗಳಲ್ಲಿ ಅವಿರೋಧಗಳಾದ ಎಲ್ಲ ಕರ್ಮಗಳನ್ನೂ ಆಚರಿಸುವುದರಿಂದಲೂ ವೀರಶೈವರಿಗೆ ವೈದಿಕತ್ವವು ಘಂಟಾಘೋಷವಾಗಿರುವುದು.

ಪರೋತ್ಕರ್ಷಾಸಹಿಷ್ಣುಗಳಾದ ದೋಷೈಕದೃಕ್ಕುಗಳಾದ ಕೆಲ ಬ್ರಾಹ್ಮಣರು ವೀರಶೈವರಲ್ಲಿ ಅವೈದಿಕತ್ವಾರೋಪಣೆಯಂ ಮಾಡಲಿಚ್ಛಿಸುವರು. ವೀರಶೈವ ಮತದಲ್ಲಿ ವೈದಿಕತ್ವವು ಸಹಜವಾಗಿರುವಲ್ಲಿ ಈ ಆರೋಪವು ಅವಿಚಾರ ದೃಷ್ಟಿಯಲ್ಲಿ ರಮಣೀಯವಾಗಿ ತೋರುವುದಲ್ಲದೆ ಎಂದಿಗೂ ಸಹಜವಾದುದಲ್ಲ. ನಮ್ಮ ಘನವನ್ನು ಹೊಂದಿರುವ ಮಹಾಪ್ರಭು ಸರಕಾರವು “ಸರ್ವೇಜನಾಸ್ಸುಖಿನೋಭವಂತು” ಎಂಬ ವಚನಾರ್ಥವನ್ನು ಪರಿಪಾಲಿಸುವದರಲ್ಲಿ ಅತ್ಯಂತ ಸಮರ್ಥವಾಗಿದ್ದಾಗ್ಯೂ ನಮ್ಮ ವೀರಶೈವರ ವೈದಿಕ ವಿದ್ಯಾವಿಚಾರ ವಿಷಯದಲ್ಲಿ ತೃಪ್ತಿಕರವಾದ ಏರ್ಪಾಡನ್ನು ಮಾಡದಿರುವದು ಆಶ್ಚರ್ಯ ಜನಕವೂ, ವೀರಶೈವ ಮಹಾಜನರ ಮನಃಖೇದ ಜನಕವೂ ಆಗಿದೆ. ಗುಣದೋಷಗಳನ್ನು ವರೆಹಚ್ಚಿ ನೋಡಬೇಕೆಂದು ಅನೇಕ ವೇಳೆ ಪ್ರಾರ್ಥಿಸಿಕೊಂಡರೂ ನಮ್ಮ ಸರ್ಕಾರದವರು ಒರೆಗಲ್ಲಿನ ಸ್ವಭಾವವನ್ನು ಹೊಂದಲಿಲ್ಲವು. ವೈದಿಕರು ಇತರ ಪ್ರವೇಶಕ್ಕೆ ಒಪ್ಪುವುದಿಲ್ಲವು. ಹಾಗೆ ಬಲಾತ್ಕರಿಸಿದರೆ ಪಾಠಶಾಲೆಯನ್ನೇ ಬಿಡುತ್ತೇವೆಂದು ಹೇಳುವರ ಮಾತಿನಲ್ಲಿ ನಮ್ಮ ಸರ್ಕಾರದವರು ಪ್ರಾಮುಖ್ಯವನ್ನು ಇಟ್ಟು ಭಗವತಿಯಾದ ಶ್ರುತಿಮಾತೆಯ ಗರ್ಭದಲ್ಲಿ ಹುಟ್ಟಿರುವ ದ್ವೈತಾದಿಮತಗಳೊಳಗೆ ಶಕ್ತಿವಿಶಿಷ್ಟಾದ್ವೈತವೆಂಬ ವೀರಶೈವಮತವು ಅನಾದಿಯಾದ ಪ್ರಯುಕ್ತ ಜ್ಯೇಷ್ಠಪುತ್ರಸ್ಥಾನವನ್ನವಲಂಬಿಸಿದ್ದರೂ ಇಂಥ ವೀರಶೈವರಿಗೇನೇ ಆ ಶ್ರುತಿದೇವಿಯ ಸ್ವತ್ತನ್ನು ಹಂಚುವುದರಲ್ಲಿ ಸರ್ಕಾರದವರು ಇಷ್ಟು ಕಾರ್ಪಣ್ಯವಂ ಮಾಡಿದರೆ (ಮಾತಾ ಯದಿ ವಿಷಂದದ್ಯಾದ್ವಿಕ್ರೀಣಾತಿ ಪಿತಾಸುತಂ | ರಾಜಾಹರತಿಸರ್ವಸ್ವಂ ತತ್ರಕಾಪರಿದೇವನಾ ||) ಎಂಬ ನೀತಿಶ್ಲೋಕವು ಸ್ಮೃತಿಪಥವನ್ನು ಹೊಂದುವುದು. ಇಂತಹ ವೇದಸಿದ್ಧಮತಾನುಯಾಯಿಗಳಿಗೇ ಈ ಅವಸ್ಥೆಯು ಸಂಭವಿಸುವಂತೆ ಇರುವಲ್ಲಿ, ಇನ್ನು ಉಳಿದವರಪಾಡೇನು?

ಕರ್ನಾಟಕ ಪ್ರಾಂತದ 3 ನೇ ಸಹಕಾರೀ ಪರಿಷತ್ತು.

ಔದ್ಯೋಗಿಕ ಹಾಗು ಒಕ್ಕಲತನದ ಪ್ರದರ್ಶನವು.

1. ಕರ್ನಾಟಕ ಪ್ರಾಂತದ 3ನೇ ಸಹಕಾರೀ ಪರಿಷತ್ತು ತಾ|| 19-20 ಜುಲೈ 1924 ದಿವಸಗಳಲ್ಲಿ ಬಾಗಲಕೋಟೆಯಲ್ಲಿ ನೆರೆಯುವದು. ಮೈಸೂರ ಸಂಸ್ಥಾನದ ಸಹಕಾರೀ ಸಂಘಗಳ ರಿಜಿಸ್ಟ್ರಾರರಾದ ಮ. ಕೇ. ಎಚ್. ರಾಮಯ್ಯ, ಬಿ. ಎ., ಬಾರ್-ಅಟ್-ಲಾ-ಇವರು ಪರಿಷತ್ತಿನ ಅಧ್ಯಕ್ಷರಾಗುವದಲ್ಲದೆ, ಪ್ರದರ್ಶನವನ್ನು ತೆರೆಯುವ ಸಮಾರಂಭವೂ ಅವರ ಹಸ್ತದಿಂದಲೇ ಜರಗುವದು.

2. ಕರ್ನಾಟಕದೊಳಗಿನ ಉತ್ತಮೋತ್ತಮವಾದ ಕೈಗಾರಿಕೆಯ ಒಡವೆಗಳೂ, ಸ್ವದೇಶೀ ವಸ್ತ್ರಗಳೂ, ಒಕ್ಕಲತನದ ಸುಧಾರಿಸಿದ ಯಂತ್ರಗಳೂ, ಇತರ ಕಲಾಕೌಶಲ್ಯದ ಪದಾರ್ಥಗಳೂ ಪ್ರದರ್ಶನದಲ್ಲಿ ಇಡಲ್ಪಡುವವು. ಪ್ರದರ್ಶನವು ತಾ|| 19 ನೇ ದಿವಸ ಪ್ರಾರಂಭವಾಗಿ ಒಂದು ವಾರದ ವರೆಗೆ ನಡೆಯುವದು.

3. ಪರಿಷತ್ತಿನ ವೇಳೆಯಲ್ಲಿ ಸಹಕಾರಕ್ಕೆ ಸಂಬಂಧಿಸಿದ ನಾಟಕ, ಸಂಭಾಷಣೆಗಳೂ, ಪದಪದ್ಯಗಳೂ ನಡೆಯುವಂತೆ ಏರ್ಪಾಡು ಮಾಡಲ್ಪಡುವದು.

4. ಆದ್ದರಿಂದ ಕರ್ನಾಟಕದೊಳಗಿನ ಯಾವತ್ತು ಸಹಕಾರೀ ಬಂಧುಗಳು ಪರಿಷತ್ತಿಗೆ ಬಹುಸಂಖ್ಯಾಕರಾಗಿ ಬಂದು ಪರಿಷತ್ತು ಯಶಸ್ವಿಯಾಗುವದಕ್ಕೆ ನೆರವಾಗಬೇಕೆಂದು ವಿನಂತಿಯಿದೆ. ನೇಕಾರರೂ, ಒಕ್ಕಲಿಗರೂ, ಚಿತ್ರಕಲಾಕೋವಿದರೂ, ಇತರ ಧಂದೆ ಮಾಡುವವರೂ ಪ್ರದರ್ಶನವನ್ನು ನೋಡಿ ಹೋಗಿ, ನಮ್ಮಲ್ಲಿಯೂ ಕೈಗಾರಿಕೆಯ ಉದ್ಯೋಗವು ಹೆಚ್ಚಾಗಿ ನಡೆಯುವಂತೆ ಮಾಡುವದು ಇಷ್ಟವಾಗಿದೆ. ಸಹಕಾರೀ ತತ್ವಗಳ ಪ್ರಸಾರವು ನಮ್ಮ ಕರ್ನಾಟದಲ್ಲಿ ಚೆನ್ನಾಗಿ ಆಗಲಿಕ್ಕೆ ಈ ಪರಿಷತ್ತು ವಿಶೇಷ ಸಹಕಾರಿ ಯಾಗುವದರಲ್ಲಿ ಸಂದೇಹವಿಲ್ಲ.

ಪ್ರದರ್ಶನದಲ್ಲಿಡತಕ್ಕ ಸಾಮಾನುಗಳ ಬಗ್ಗೆ ಹೆಚ್ಚಿನ ಮಾಹಿತೀ ದೆಶೆಯಿಂದ ಪತ್ರವ್ಯವಹಾರ ಮಾಡತಕ್ಕದ್ದು.

ಬಾಗಲಕೋಟೆ,
ತಾ|| 12-6-1924.

ಡಾ|| ಎಸ್. ಡಿ. ಜವಾರ,
ಜಿ. ಎಸ್. ಹಾವರಗಿ.
ಗೌರವ ಕಾರ್ಯದರ್ಶಿಗಳು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ವಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
19 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

APPLY FOR
SCORPION CURE.
M.S.SIDDAPPA BROS
MYSORE.

ಖಾತ್ರಿಯಾದ ಚೇಳಿನ ಔಷಧ 2 ಬಾಟ್ಲುಗಳಿರುವ ಪೆಟ್ಟಿಗೆ 1ಕ್ಕೆ 0-8-0 12 ಪೆಟ್ಟಿಗೆಗಳಿಗೆ 4—8—0

ಉಪಯೋಗಿಸುವ ವಿಧಾನ 8 ಭಾಷೆಯಲ್ಲಿ ಪ್ರಿಂಟಾದ ಫಾರಂ ಪ್ರತಿಯೊಂದು ಪೆಟ್ಟಿಗೆ ಸಂಗಡಲೂ ರವಾನಿಸಲಾಗುತ್ತೆ.

ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟು ಯೋಗ್ಯತಾಪತ್ರವನ್ನು ಹೊಂದಿರುವುದಲ್ಲದೆ ಚೇಳಿನಿಂದ ಕಡಿಸಿಕೊಂಡುಬಂದವರಿಗೆ ನಮ್ಮ ಷಾಪಿನಬಳಿ ಪ್ರತಿನಿತ್ಯವೂ ಉಚಿತವಾಗಿ ಔಷಧಿ ಉಪಯೋಗಿಸಿ ಅಳುತ್ತಾ ಬಂದವರು ನಗುತ್ತಾ ಹೋಗುವಂತೆ ಮಾಡುವ ನಮ್ಮ ಕಂಪನಿಯ ಚೇಳಿನ ಔಷಧ ಒಂದು ಬಾಟ್ಲಿ ನಿಮ್ಮಲ್ಲಿದ್ದರೇ ಅದರ ನಿಮ್ಮ ಸಮಯಕ್ಕೆ ಅನುಕೂಲಿಸುವುದಲ್ಲದೆ, ಅನೇಕರಿಗೆ ತುಂಬಾ ಉಪಕಾರವಾದಿದಂತಾಗುತ್ತೆಯಾಗಿ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಹೊಸನಮೂನೆ ಪರಿಮಳ ಕಾರ್ಡು 12 ಕ್ಕೆ 0—10—0

ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಉತ್ತಮತರಹ ಕಸ್ತೂರಿಮಾತ್ರೆ ಬಾಟ್ಲಿ 1ಕ್ಕೆ 0—4—0. 6 ಬಾಟ್ಲುಗಳಿಗೆ 1—4—0. 12 ಬಾಟ್ಲುಗಳಿಗೆ 2—7—0. 25 ಬಾಟ್ಲುಗಳಿಗೆ 4—10—0. ಅನುಪಾನದ ಪತ್ರಿಕೆ ಪ್ರತಿಯೊಂದು ಬಾಟ್ಲಿನ ಸಂಗಡಲೂ ರವಾನಿಸಲಾಗುತ್ತೆ.

ತಯಾರಾದ ಕೆಲವು ವಾರಗಳಲ್ಲೇ ಸಾವಿರಾರು ಪ್ರತಿಗಳು ವಿಕರಿಯಾದ ಅಂದವಾಗಿ ತಯಾರಿಸಿರುವ ಪಾಕೆಟ್ ಕ್ಯಾಲಂಡರ್ 0—14—0. ಮಾತ್ರ ರವಾನಿಸುವವರಿಗೆ 12 ಪಾಕೆಟ್ ಕ್ಯಾಲೆಂಡರ್‌ಗಳನ್ನು ಪೋಸ್ಟೇಜು ನಾವೇ ವಹಿಸಿ ನೀವಿದ್ದೆಡೆಗೆ ರವಾನಿಸಲಾಗುತ್ತೆ.

ಮೈಸೂರು ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಉತ್ತಮ ತರಹ ಹಾರ್ಮೋನಿಯಂಗಳನ್ನು ನಗದು ಖರೀದಿಗೂ, ತಿಂಗಳು ಗಟ್ಟಲೆ ಸುಲಭ ಕಂತಿಗೂ, ಸಹ ಸಪ್ಲೈಮಾಡುತ್ತಾರೆ.

ಅನೇಕ ತರಹ ಕಾಶ್ಮೀರ್ ಶಾಲುಗಳನ್ನು ಸುಲಭ ಬೆಲೆಯಿಂದ ವಿಕರಿ ಮಾಡುತ್ತಾರೆ.

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು,
[50 – 39] ಮೈಸೂರು.

೧೯೨೪ ನೆಯ ಇಸವಿ ಜೂನ್ ತಾ|| ೨೯ ರಿಂದ ೧೯೨೪ ನೆಯ ಇಸವಿ ಜುಲೈ ತಾ|| ೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಜ್ಯೇಷ್ಠ ಬಹುಳ ತ್ರಯೋದಶಿಯಿಂದ ಆಷಾಢಶುದ್ಧ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
29	[1]ಭಾನು	ತ್ರಯೋ	59-46	ಕೃತ್ತಿ	5-36	16
30	ಸೋಮ	ಚತು	60	ರೋಹಿ	12-6	17
1	[2]ಮಂಗಳ	ಚತು	4-53	ಮೃಗ	18-38	18
2	ಬುಧ	ಅಮಾ	9-32	ಆರ್ದ್ರಾ	24-43	19
3	ಗುರು	ಪಾಡ್ಯ	13-30	ಪುನ	30-5	20
4	[3]ಶುಕ್ರ	ಬಿದಿ	16-28	ಪುಷ್ಯ	34-36	21
5	ಶನಿ	ತದಿ	18-17	ಆಶ್ಲೇ	37-39	22

(1) ಪ್ರದೋಷ, (2) ಸರ್ವತ್ರಾಮಾವಾಸ್ಯ, (3) [illegible], ಮಾರ್ಕಂಡೇಯೋತ್ಸವ.

ಮೈಸೂರು: ಕೈ. [illegible] ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಸ್ಪೆಂಡ್ ಕಮೀಷನರುಗಳ ಪ್ರಯಾಣದ ಭತ್ಯಗಳ ಸಮೇತ ಇತರ ಖರ್ಚುಗಳಿಗೆ ಡಿಸ್ಟ್ರಿಕ್ಟ್ ಫಂಡುಗಳಿಂದ ಹಣವೊದಗಿಸುವಂತೆಯೂ, ಸದರಿ ಕಮಿಷ್ನರರಿಗಳ ಖರ್ಚನ್ನು ಸರ್ಕಾರದವರಿಗೂ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯವರುಗಳಿಗೂ ಹಂಚತಕ್ಕದ್ದೆಂದು ಈಗ ಹುಕುಂ ಸಾದರಾಗಿದೆ. ಮ್ಯುನಿಸಿಪಲ್ ಟೌನುಗಳಲ್ಲಿ, ಈ ಸ್ಥಳೀಯ ಖರ್ಚುಗಳು ಒಟ್ಟಿನಲ್ಲಿ ಮೂರನೆಯ ಒಂದು ಭಾಗಕ್ಕೆ ಕ್ಲುಪ್ತವಾಗಿರತಕ್ಕದ್ದು.

3. ಸಂಸ್ಥಾನದ ಎಕ್ಸೈಜು ಆದಾಯವು ಸಂಪೂರ್ಣವಾಗಿ ಎಕ್ಸೈಜು ಕಮಿಷನರವರ ಹತೋಟಿಯಲ್ಲಿರುವಂತೆ ಮಾಡುವುದಕ್ಕಾಗಿ ಎಕ್ಸೈಜು ಹರಾಜುಗಳಿಗೆ ಸಂಬಂಧಪಟ್ಟ ಮೊಕದ್ದಮೆಗಳಲ್ಲಿ ಡೆಪ್ಯುಟಿಕಮಿಷನರುಗಳ ಹುಕುಮುಗಳ ಮೇಲೆ ಅಪೀಲು ಹಿಡಿಯುವುದಕ್ಕೂ ಮತ್ತು ಸದರಿ ಹುಕುಮುಗಳನ್ನು ರಿವೈಜ್ ಮಾಡಿ ಬದಲಾಯಿಸುವುದಕ್ಕೂ ಎಕ್ಸೈಜು ಕಮಿಷನರಿಗೆ ಅಧಿಕಾರಕೊಟ್ಟು ಹುಕುಂ ಸಾದರ್ಮಾಡಲಾಗಿದೆ.

4. ಎಂ. ಬಿ. ಬಿ. ಎಸ್. ಡಿಗ್ರಿ ಪರೀಕ್ಷೆಗೆ ಬೆಂಗಳೂರು ಮೆಡಿಕಲ್ ಕಾಲೇಜಿನ 1924-25ನೇಯ ವರುಷದ ಪ್ರಸಿದ್ಧಪತ್ರಿಕೆ (Prospectus) ಯನ್ನೂ ವ್ಯಾಸಂಗದ ಮೊದಲನೆಯ ವರ್ಷದ ಪಾಠದ ಪಟ್ಟಿಯನ್ನೂ ಸಹ ಮೈಸೂರು ಯೂನಿವರ್ಸಿಟಿ ರಿಜಿಸ್ಟ್ರಾರವರು ಪ್ರಕಟಿಸಿರುತ್ತಾರೆ.

ಸ್ವೀಕಾರ.

ಕೈ|| ವೈ. ವೀರಸಂಗಪ್ಪನವರ ಅಗ್ರತಾಂಬೂಲ ಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—

ಪ. ಪ್ರ.

(1) ದಾವಣಗೆರೆ ತಾ|| ಹೊನ್ನನಬೀತೂರು ಶಿರಸ್ತಹಳ್ಳಿ ಮ|| ಶಿಖರಪ್ಪನವರ ಮಗ ಸಿದ್ಧಪ್ಪನಿಗೂ ಹರಪನಹಳ್ಳಿ ತಾ|| ರಾಮಘಟ್ಟದ ಮ|| ಕರಿಬಸಪ್ಪನವರ ಪುತ್ರಿ ಸೌ|| ಸಿದ್ಧಮ್ಮನಿಗೂ ನಡೆದ ಲಗ್ನದಲ್ಲಿ ಮ|| ಶೆಟ್ಟರು ಕಲಿವೀರಪ್ಪನವರ ಮೂಲಕ 1 ರೂ. (2) ಹರಪನಹಳ್ಳಿ ಬ್ರ|| ಶ್ರೀ|| ಹೊಳೆಬಸವಶಾಸ್ತ್ರಿಗಳಿಂದ ಅವರ ಕುಮಾರರು ಮ|| ಷಡಕ್ಷರಪ್ಪ ಎಂ. ಎ. ಯವರ ಲಗ್ನದಲ್ಲಿ 2 ರೂ. (3) ಗುಬ್ಬಿ ತಾ|| ಮಲ್ಲೇನಹಳ್ಳಿ ಮಠದ ಶ್ರೀ ಸಿದ್ಧರಾಮಯ್ಯನವರ ಪುತ್ರಿ ಸೌ|| ಸಿದ್ಧಲಿಂಗಮ್ಮನಿಗೂ ಹೊಸಕೆರೆ ಶ್ರೀ ನಂಜುಂಡಪ್ಪನವರ ಪುತ್ರ ಮಲ್ಲಪ್ಪನಿಗೂ ನಡೆಸಿದ ಲಗ್ನದಲ್ಲಿ ಹೊನ್ನುಡಿಕೆ ಮ|| ಯ|| ಹೊನ್ನಶೆಟ್ಟಪ್ಪನವರ ಮೂಲಕ 1 ರೂ. (4) ಬಸವನಹಳ್ಳಿ ಮಠದ ಶ್ರೀ|| ಮುಂಜಯ್ಯನವರ ಪುತ್ರಿ ಸೌ|| ರುದ್ರಮ್ಮನಿಗೂ ತೊಗರಿಹಂಕಲ್ ಶ್ರೀ ಮರಿಅಯ್ಯನವರ ಪುತ್ರ ಪ್ರಭಯ್ಯನಿಗೂ ನಡೆದ ಲಗ್ನದಲ್ಲಿ ಕಾಫಿ ಪ್ಲಾಂಟರ್ ಮ|| ಕೆ. ಪಿ. ಬಸವೇಗೌಡರ ಮೂಲಕ 2 ರೂ. (5) ಹೊಸದುರ್ಗದ ಶೆಟ್ಟರು ಮ|| ಬಸಪ್ಪನವರ ಪುತ್ರಿ ಸೌ|| ಪಾರ್ವತಮ್ಮನಿಗೂ ಮರಕುಂಟೆ ಶೆಟ್ಟರು ಮ|| ಕೊಟ್ರಬಸಪ್ಪನವರ ಮಗ ಪರಪ್ಪನಿಗೂ ನಡೆದ ಲಗ್ನದಲ್ಲಿ ಮುತ್ತೋಡು ಮಠದ ಮುರಿಗೆಪ್ಪಯ್ಯನವರ ಮೂಲಕ 1 ರೂ. (6) ಕೊಳ್ಳೇಗಾಲದ ಮ|| ಗಂಡಿಗ ಶ್ರೀಕಂಠಪ್ಪನವರ ಮಗ ಬಸವರಾಜಪ್ಪನಿಗೂ ಚನ್ನಪಟ್ಟಣದ ಮ|| ಯಜಮಾನ್ ಮಲ್ಲಿಕಾರ್ಜುನಯ್ಯನವರ ಮಗಳು ಸೌ|| ಸರ್ವಮಂಗಳೆಗೂ ನಡೆದ ಲಗ್ನದಲ್ಲಿ ಮ|| ವೈ|| ಶಿವಪ್ಪನವರ ಮೂಲಕ 1 ರೂ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.
ಲಗ್ನದ ಫಂಡು.

1. ಸಾಗರದಲ್ಲಿರುವ ಮ|| ರಾ|| ದಳವಾಯಿ ಬಸವಲಿಂಗಪ್ಪನವರು ತಮ್ಮ ನೂತನ ಗೃಹಪ್ರವೇಶದಲ್ಲಿ ಫಂಡಿಗಾಗಿ ತೆಗೆದದ್ದು ರೂ. 5 ಮತ್ತು ಮ|| ರಾ|| ಬೆಲ್ಲದ ವೀರಭದ್ರಪ್ಪನವರ ಮಗನ ಲಗ್ನದಲ್ಲಿ 2 ರೂ. ಜುಮ್ಲಾ 7 ರೂ. ಗಳು ಮಹಾರಾಜಾ ಕಾಲೇಜು ವಿದ್ಯಾರ್ಥಿ ಪಿ. ಮುರುಡಪ್ಪನವರ ಮೂಲಕ.

2. ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗದಲ್ಲಿರುವ ವೇ|| ಮಠದ ಹುಚ್ಚಪ್ಪದೇವರು ತಮ್ಮ ತಾಯಿಯವರು ಶಿವಸಾಯುಜ್ಯವನ್ನು ಹೊಂದಿದ್ದರಿಂದ ಅವರ ಹೆಸರಿನಲ್ಲಿ ಸಂಘಕ್ಕೆ ಕಳುಹಿಸಿದ್ದು ರೂ. 2.

3. ನೆಲಮಂಗಲದಲ್ಲಿರುವ ಶೆಟ್ಟರ ಗುಬ್ಬಿ ಹುಚ್ಚಪ್ಪನವರ ಕುಮಾರ ಚಿ|| ರಾ|| ಚನ್ನಬಸಪ್ಪನಿಗೆ ಬೆಂಗಳೂರಿನಲ್ಲಿರುವ ಭಕ್ತಿ ಪುಟ್ಟಯ್ಯನವರ ಕುಮಾರ್ತಿ ಚಿ|| ಸೌ|| ಗೌರಮ್ಮನನ್ನು ಕೊಟ್ಟು ನಡಿಸಿದ ಲಗ್ನದಲ್ಲಿ ನೆಲಮಂಗಲದ ಶೆಟ್ಟರು ಯಜಮಾನರಿಂದ ಬಂದದು ಅಸೋಸಿಯೇಷನ್ ಕ್ಲಾರ್ಕ ಬಿ. ಶಾಂತವೀರಪ್ಪನವರ ಮೂಲಕ ರೂ. 3.

4. ನೆಲಮಂಗಲದಲ್ಲಿರುವ ಮ|| ರಾ|| ಪ್ರಭಯ್ಯನವರ ಹೊನ್ನಪ್ಪನವರ ಪುತ್ರ ಚಿ|| ರಾ|| ಹೊನ್ನಶೆಟ್ಟಪ್ಪನವರಿಗೆ ಡಿಟೋ ಊರಲ್ಲಿರುವ ಶೆಟ್ಟರ ಮಲ್ಲಪ್ಪನವರ ಪುತ್ರಿ ಚಿ|| ಸೌ|| ಸ್ವರ್ಣಾಂಬ ಎಂಬ ವಧುವನ್ನು ಕೊಟ್ಟು ನಡಸಿದ ಲಗ್ನದಲ್ಲಿ ನೆಲಮಂಗಲದ ಶೆಟ್ಟರು ಯಜಮಾನರಿಂದ ಬಂದದ್ದು ಅಸೋಸಿಯೇಷನ್ ಕ್ಲಾರ್ಕ ಬಿ. ಶಾಂತವೀರಪ್ಪನವರ ಮೂಲಕ ರೂ. 2.

5. ಕಾಡ್ಕಾಡ್ಹಳ್ಳಿ ತಾಲ್ಲೂಕು ಶೀಗೆಕೋಟೆಯಲ್ಲಿರುವ ಪಟೇಲ್ ಮುದ್ದವೀರಪ್ಪನವರ ಮಗ ವೀರಭದ್ರಪ್ಪನವರ ಕುಮಾರ್ತಿ ಚಿ|| ಸೌ|| ಭದ್ರಕಾಳಮ್ಮನನ್ನು ಬಿಜ್ಜಳ್ಳಿ ಮ|| ರಾ|| ಶಿದ್ದಪ್ಪನವರ ದ್ವಿತೀಯ ಕುಮಾರ ಚಿ|| ರಾ|| ಶಿದ್ದಲಿಂಗಪ್ಪನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ಕಾಡ್ಕಾಡ್ಹಳ್ಳಿ ಮ|| ಕೆ. ಪಿ. ಪರಶಿವಯ್ಯನವರ ಮೂಲಕ ರೂ. 8.

6. ಯಳಂದೂರಿನಲ್ಲಿರುವ ಮಂಡ್ಯದ ಸುಬ್ಬಪ್ಪನವರ ಮಕ್ಕಳು ಹುಚ್ಚಣ್ಣನೆಂಬ ವರನಿಗೆ ಚಿದರಹಳ್ಳಿ ಕಾ|| ಶಿವಪ್ಪನವರ ಮಗಳು ಚಿ||ಸೌ|| ಮಹದೇವಮ್ಮನೆಂಬ ವಧುವನ್ನು ಕೊಟ್ಟು ನಡಸಿದ ಲಗ್ನದಲ್ಲಿ ಮ|| ರಾ|| ಎಚ್. ಪುಟ್ಟಸ್ವಾಮಿಯವರ ಮೂಲಕ ರೂ. 2-1-0.

7. ಮಾಗಡಿಯಲ್ಲಿರುವ ವೈಸ್ ಪ್ರೆಸಿಡೆಂಟರಾದ ಮ|| ರಾ|| ಕೆ. ವೀರಶೆಟ್ಟಪ್ಪನವರ ಪುತ್ರ ಚಿ|| ರಾ|| ಕೆ. ವಿ. ಎನ್. ಮಲ್ಲಪ್ಪನವರಿಗೆ ನೆಲಮಂಗಲದ ತಾಲ್ಲೂಕು ಶಿತ್ತನಹಳ್ಳಿ ಸಾಹುಕಾರ್ ಮ|| ರಾ|| ಚೆನ್ನಮಲ್ಲಪ್ಪನವರ ಮೊಮ್ಮಗಳು ಚಿ|| ಸೌ|| ಪುಟ್ಟಮಲ್ಲಮ್ಮನನ್ನು ಕೊಟ್ಟು ನಡಸಿದ ಲಗ್ನದಲ್ಲಿ ಬೆಂಗಳೂರು ಸಿಟಿ ಮಲ್ಲೇಶ್ವರದಲ್ಲಿರುವ ಮ|| ರಾ|| ರಾಜಶೇಖರವಡೆಯರ್‌ರವರ ಮುಲಕ ರೂ. 8-6-0

8. ಹೊಸ್ಪೇಟೆ ಸಬ್ ತಾಲ್ಲೂಕು ಕೊಟಗಲ್ಲಿನಲ್ಲಿರುವ ಚಿಲ್ಲರೆ ಅಂಗಡಿ ಮ|| ರಾ|| ರೇವಣ್ಣನವರ ಮಗಳು ಮತ್ತು ಮಗನ ಲಗ್ನಗಳಲ್ಲಿ ದೇವನಹಳ್ಳಿ ಮ್ಯುನಿಸಿಪಲ್ ಕ್ಲಾರ್ಕ ಕೆ. ಸಾಂಬಯ್ಯನವರ ಮೂಲಕ ರೂ. 5.

9. ದಾವಣಗೆರೆ ತಾಲ್ಲೂಕು ಹೊನ್ನನಬೀತೂರು ಶಿರಸ್ತಹಳ್ಳಿ ಮ||ರಾ|| ಶಿಖರಪ್ಪನವರ ಮಗ ಶಿದ್ದಬಸಪ್ಪನವರಿಗೆ ಹರಪನಹಳ್ಳಿ ತಾಲ್ಲೂಕು ರಾಮಘಟ್ಟದಲ್ಲಿರುವ ಕರಿಬಸಪ್ಪನವರ ಪುತ್ರಿ ಶಿದ್ದಮ್ಮನನ್ನು ಕೊಟ್ಟು ನಡಸಿದ ಲಗ್ನದಲ್ಲಿ ವರನಕಡೆಯಿಂದ ಬಂದದ್ದು ಬಳಿಚೋಡು ಗ್ರಾಮದ ಮ|| ರಾ|| ಕೆ. ಎಂ. ಕರಿಬಸವಯ್ಯನವರ ಮೂಲಕ ರೂ. 5.

10. ಕಡೂರು ತಾಲ್ಲೂಕು ಯಳ್ಳಂಬಳಸೆ ಮ|| ರಾ|| ಶ್ಯಾಮಣ್ಣನವರ ಪುತ್ರ ಚಿ|| ರಾ|| ಚಂದಪ್ಪನೆಂಬ ವರನಿಗೆ ಚಟ್ನಹಳ್ಳಿ ಪಟೇಲ್ ಪುಟ್ಟೇಗೌಡರ ಪುತ್ರಿ ಚಿ|| ಸೌ|| ಮರುಳಮ್ಮನೆಂಬ ವಧುವನ್ನು ಕೊಟ್ಟು ನಡಸಿದ ಲಗ್ನದಲ್ಲಿಯೂ ಮತ್ತು ಸದರಿ ಶ್ಯಾಮಣ್ಣನವರ ಪುತ್ರಿ ಚಿ|| ಸೌ|| ರುದ್ರಮ್ಮನೆಂಬ ವಧುವನ್ನು ತಮ್ಮಯ್ಯಗೌಡರ ತಮ್ಮ ಚಿ|| ರಾ|| ನಂಜಪ್ಪನೆಂಬವರಿಗೆ ಕೊಟ್ಟು ನಡಸಿದ ಲಗ್ನದಲ್ಲಿಯೂ ಮ|| ರಾ|| ಎಸ್. ಚನ್ನಬಸಪ್ಪನವರ ಮೂಲಕ ರೂ. 6.

11. ಹಿರೇಗುಂಟನೂರು ಮ|| ರಾ|| ಕೊಂಡಾಪುರದ ತಿಮ್ಮಯ್ಯನವರ ತಮ್ಮಂದಿರು ಕಲ್ಲಪ್ಪನವರ ಲಗ್ನದಲ್ಲಿ ಮ|| ರಾ|| ಎಲ್. ಎಂ. ಸಂಗಪ್ಪಯ್ಯಶಾಸ್ತ್ರಿಗಳ ಮೂಲಕ ರೂ. 1 ಜುಮ್ಲಾ 49-7-0.

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರೆಟರಿ
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ
ಬೆಂಗಳೂರು ಸಿಟಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ಬಡವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.

ಮೇಲ್ಕಂಡ ಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜು, ಹೈಸ್ಕೂಲ್ ಮತ್ತು ಟೆಕ್ನಿಕಲ್ ಸ್ಕೂಲುಗಳಲ್ಲಿ ಅಭ್ಯಾಸಮಾಡುತ್ತಿರುವ ಬಡವೀರಶೈವ ವಿದ್ಯಾರ್ಥಿಗಳು ಜುಲೈ ತಾ|| 15ರ ಒಳಗಾಗಿ ಸೆಕ್ರೆಟರಿಯವರಿಗೆ ತಲಪುವಂತೆ (Printed prescribed form) ನಲ್ಲಿ ಅರ್ಜಿ ಬರೆದುಕೊಳ್ಳತಕ್ಕದ್ದು. ಅರ್ಜಿಫಾರಂಗಳು ಬೇಕಾದಲ್ಲಿ ಒಂದಾಣೆ ಸ್ಟಾಂಪು ಕಳುಹಿಸಿ ಅಡ್ರೆಸ್‌ತಿಳಿಸಿದಲ್ಲಿ ಕಳುಹಿಸಲ್ಪಡುತ್ತೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅರ್ಜಿ ಜೊತೆಯಲ್ಲಿ ಸರ್ಟಿಫಿಕೇಟುಗಳನ್ನೂ ಕಳುಹಿಸತಕ್ಕದ್ದು. ಸರ್ಟಿಫಿಕೇಟುಗಳು ಇಲ್ಲದೆಯು ಮತ್ತು ವಾಯಿದೆ ಮೀರಿಯು ಬರತಕ್ಕ ಅರ್ಜಿಗಳು ಅಂಗೀಕರಿಸಲ್ಪಡಲಾರವು.

ವೈದ್ಯ ವಿದ್ಯಾರ್ಥಿಗಳಿಗೆ ಸೂಚನೆ.

1. ಬೆಂಗಳೂರು ಶ್ರೀ ಜಯದೇವ ಮೆಡಿಕಲ್‌ಹಾಲ್ ಪ್ರೊಪ್ರೈಟರಾದ ಕ್ಯಾಪ್ಟನ್ ವೈ|| ವಿಶ್ವನಾಥಯ್ಯನವರು ಯುವಸಾರ್ವಭೌಮ (ಪ್ರಿನ್ಸ ಆಫ್ ವೇಲ್ಸ್)ರವರು ಮೈಸೂರು ದೇಶಕ್ಕೆ ದಯಮಾಡಿಸಿದುದರ ಜ್ಞಾಪಕಾರ್ಥವಾಗಿ ಐದು ಸಹಸ್ರ ರೂಪಾಯಿಗಳನ್ನು ಮೇಲ್ಕಂಡ ಫಂಡಿನ ಮೂಲಧನಕ್ಕೆ ಕೊಟ್ಟು, ಸದರಿ ಮೊಬಲಿಗಿನ ವೃದ್ಧ್ಯಂಶವನ್ನು ವೈದ್ಯವಿದ್ಯಾಭ್ಯಾಸಮಾಡಲಿಚ್ಛಿಸುವ ಮೈಸೂರು ದೇಶದ ವೀರಶೈವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡುವಂತೆ ಉದ್ದೇಶಿಸಿರುತ್ತಾರೆ.

2. ಧರ್ಮಕರ್ತರ ಉದ್ದೇಶದಂತೆ ಇದೆ ಜೂನ್ ಲಾಗಾಯತು ಮಾಹೆಯಾನ 25 ರೂ. ನಂತೆ ವೇತನವು ಮದರಾಸು ಅಥವಾ ಬೊಂಬಾಯಿ ಸರ್ಕಾರದ ಮೆಡಿಕಲ್ ಕಾಲೇಜಿನಲ್ಲಿ ಓದಲಪೇಕ್ಷಿಸುವ ಮೈಸೂರು ದೇಶದ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡಲ್ಪಡುತ್ತೆ. ಸಹಾಯವನ್ನು ಹೊಂದಲಪೇಕ್ಷಿಸುವವರು ಕೂಡಲೇ ಫಂಡಿನ ಸೆಕ್ರೆಟರಿಯವರಿಗೆ ಅರ್ಜಿ ಬರದುಕೊಳ್ಳತಕ್ಕದ್ದು.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ,
ಬೆಂಗಳೂರು ಸಿಟಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂ.

ತಿರಸ್ಕೃತ ಪತ್ರವ್ಯವಹಾರಗಳು.

(1) ಏಕಾಶಿಪುರದ ಎಸ್. ಎನ್. ಮಲ್ಲಪ್ಪಶೆಟ್ಟರು—ಲಗ್ನ ಕಾಲದಲ್ಲಿ ವಿದ್ಯಾಭಿವೃದ್ಧಿ ಫಂಡಿಗೆ ದ್ರವ್ಯ ಸಹಾಯಮಾಡಿದ ವಿಚಾರವು ಫಂಡಿನ ಸೆಕ್ರೆಟರಿಯವರಿಗೆ ತಿಳಿಸತಕ್ಕದಾಗಿದೆ. (2) ಮಂಜರಾಬಾದು ಎಸಳೂರ ಪೇಟೆ ವಿದ್ಯಾಭಿಮಾನಿ—ನೀವು ಸ್ಕೂಲಿನ ಅನುಕೂಲಕ್ಕಾಗಿ ತಿಳಿಸಿರುವ ವಿಷಯವೆಲ್ಲವೂ ಸರ್ಕಾರದಿಂದ ನಡಿಸಲ್ಪಡಬೇಕಾಗಿರುವಪ್ರಯುಕ್ತ ವಿದ್ಯಾಭ್ಯಾಸದ ಇ|| ಜನರಲ್‌ರವರಿಗೆ ಬರೆದುಕೊಳ್ಳುವುದು ಯುಕ್ತವು. (3) ನಿಷ್ಪಕ್ಷಪಾತಿ ಮತ್ತು ಪ್ರಜಾಹಿತೈಷಿ—ರಂಭಾಪುರೀ ಸಂಸ್ಥಾನ ಮಠದ ವಿಚಾರಕವಾದ ನಿಮ್ಮ ಲೇಖನಗಳು ವ್ಯಕ್ತಿದ್ವೇಷವನ್ನು ಹೆಚ್ಚಿಸುವುದಾಗಿರುವುವಲ್ಲದೆ ಸದ್ಯದಲ್ಲಿ ಅಪ್ರಕೃತವಾಗಿವೆ.—ಪ. ಪ್ರ.

ಒಬ್ಬ ಸರ್ಕಾರಿ ಉದ್ಯೋಗಸ್ಥರು ಶಿವೈಕ್ಯರಾದರು.

ಬಳ್ಳಾರಿ ಡಿ|| ಹುವ್ವಿನಹಡಗಲಿ ತಾ|| ಮಾಜೂಮದಳ್ಳಿ ಮಠದ ಮುದ್ವೀರಯ್ಯನವರು ಗೌರ್ನಮೆಂಟ್ ನೌಕರಿ ರಿವಿನ್ಯೂ ಖಾತೆಯಲ್ಲಿ ಇಪ್ಪತ್ತು ವರ್ಷದ ಸರ್ವಿಸುಮಾಡಿ ಮಾಮಲೇ ಜಾಗಕ್ಕೆ ಬೇಕಾದ ಎಲ್ಲಾ ಟೆಸ್ಟುಗಳಲ್ಲಿ ತೇರ್ಗಡೆಹೊಂದಿ ಇಷ್ಟರಲ್ಲೇ ಮಾಮಲೇ ಜಾಗಕ್ಕೆ ಬರತಕ್ಕವರಿದ್ದರು ; ಮತ್ತು ದಯಾಳುಗಳೂ ಸಮಾಜಾಭಿಮಾನಿಗಳೂ ಆಗಿದ್ದರು. ಇಂಥ ಸಮಯದಲ್ಲಿ ದೈವಯೋಗದಿಂದ ಮಾರಿಕಾತಗಲಿ ತಾ|| 14.5.1924 ಬುಧವಾರ ರಾತ್ರಿ ಶಿವಲೋಕವನ್ನು ಹೊಂದಿದ ವಿಷಯವನ್ನು ತಿಳಿಸಲಿಕ್ಕೆ ಮಹಾವಿಷಾದವಾಗುತ್ತದೆ. ಓರ್ವ ಪ್ರತ್ಯಕ್ಷದರ್ಶಿ.

ವೀರಶೈವ ಧರ್ಮೋಪನ್ಯಾಸ.

ಬೆಂಗಳೂರಿಗೆ ಆಗಂತುಕರಾಗಿ ದಯಮಾಡಿಸಿದ್ದ ಬಿಜಾಪುರದ ಚರಮೂರ್ತಿಮಠದ ದೇಶಿಕೇಂದ್ರ ಶ್ರೀಶಂಭುಲಿಂಗಸ್ವಾಮಿಗಳವರು ಇಲ್ಲಿಯ ದೇಶದಶೆಟ್ಟರು, ಯಜಮಾನರು ಮೊದಲಾದ ವೀರಶೈವ ಪ್ರಮುಖರ ಪ್ರಾರ್ಥನೆಮೇರೆಗೆ ಮಹಂತಿನಮಠದಲ್ಲಿ ಒಂದು ದಿವಸ ವೀರಶೈವ ಧರ್ಮಸಂಬಂಧವಾದ ಅಷ್ಟಾವರಣದಮೇಲೂ, ಮತ್ತೊಂದ ದಿವಸ “ ಬ್ರಹ್ಮಾನಂದದಮೇಲೂ ಬಹಳ ಶ್ಲಾಘ್ಯಕರವಾಗಿ ಉಪನ್ಯಾಸಮಾಡಿ ಶ್ರೋತೃಗಳ ಮನಸ್ಸಿಗೆ ಆನಂದವನ್ನುಂಟುಮಾಡಿದರು. ಪಟ್ಟಣದ ಮಹಾಜನಗಳ ಪ್ರಾರ್ಥನೆಯ ಪ್ರಕಾರ ತಾ|| 6.6-24 ರಲ್ಲಿ ಇಲ್ಲಿನ ಶ್ರೀ ಜಯದೇವ ಹಾಸ್ಟೆಲ್‌ನಲ್ಲಿ ಮಹಾರಾಜಶ್ರೀ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ನೆರದಿದ್ದ ವಿದ್ವತ್ಸಭೆಯಲ್ಲಿ “ ಶಿವಯೋಗ ” ವೆಂಬ ವಿಷಯವನ್ನು ಪ್ರತಿಪಾದಿಸಿ ಬಹಳ ಯುಕ್ತಿಯುಕ್ತವಾಗಿ ಭಾಷಣವನ್ನು ಮಾಡಿದರು. ಅದಿನದ ಸಭೆಯಲ್ಲಿ ನೆರದಿದ್ದ ವಿದ್ವಾನ್‌ಮಹಾಶಯರುಗಳಲ್ಲಿ ವೇ|| ವಿದ್ವಾನ್ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು, ರಿಟೈರ್ಡ್ ಚೀಫ್ ಇಂಜನೀಯರ್ ರಾವ್‌ಬಹದ್ದೂರ್ ಕರ್ಪೂರಶ್ರೀನಿವಾಸರಾಯರವರು ಮತ್ತು ರಿಟೈರ್ಡ್‌ಸರ್ವೆಸೂಪರಿಂಟೆಂಡೆಂಟ್ ಮ|| ದೇಶಮುಖಿತಾಮರಾಯರು ಶ್ರೀಗಳವರ ವಿದ್ವತ್ತನ್ನೂ ಸರಸವಾಣಿಯನ್ನೂ ಶ್ಲಾಘಿಸಿ ತುಂಬಾ ಸಂತೋಷಯುಕ್ತರಾದರು, ಶ್ರೀಗಳವರು ಇಲ್ಲಿನ ಮಹಾಜನಗಳ ಪ್ರಾರ್ಥನೆಯಂತೆ ಭಿಕ್ಷೆಯನ್ನು ಸ್ವೀಕರಿಸುತಾ ಒಂದುವಾರ ಪರ್ಯಂತರವಿದ್ದು ಹಾವೇರಿ ಮಾರ್ಗವಾಗಿ ವಾಪಸ್ ದಯಮಾಡಿಸಿದರು. ಓರ್ವಸಖಿಕ.

ಡೆಂಕಣಿಕೋಟೆ.

ಸೇಲಂ ಡಿಸ್ಟ್ರಿಕ್ಟ್ ಹೊಸೂರು ತಾ|| ಡೆಂಕಣಿಕೋಟೆ ಸಬ್‌ತಾಲ್ಲೂಕಿನಲ್ಲಿ ಬಹಳ ದಿನಗಳ ವರೆಗೂ ಮಳೆಯಿಲ್ಲದೆ ಕೆರೆಗಳೆಲ್ಲವೂ ಒಣಗಿ ಹೋಗಿ ಮನುಷ್ಯರುಗಳಿಗೂ ದನಕರುಗಳಿಗೂ ಕುಡಿಯುವ ನೀರಿಗೆ ಬಹಳ ಕಷ್ಟವಾಗಿತ್ತು. ಅಲ್ಲದೆ ವಾಂತಿಭೇದಿರೋಗವು ಪ್ರಾಪ್ತವಾಗಿ ಬಹಳ ಜನರನ್ನು ಆಹುತಿತೆಗೆದುಕೊಂಡು ಬಹಳ ಭಯವನ್ನುಂಟುಮಾಡಿತ್ತು. ಆದರೆ ದೈವಾಧೀನದಿಂದ ಈಚೆಗೆ ಮಳೆಯು ಬಹಳ ಚೆನ್ನಾಗಿ ಆಗಿ ಕೆರೆ ಕಟ್ಟೆಗಳೆಲ್ಲವೂ ತುಂಬಿತುಳುಕುತ್ತಿರುವವು. ಈ ಡೆಂಕಣಿಕೋಟೆ ಟವನ್ನಿನಲ್ಲೂ ನೀರು ಸಮೃದ್ಧಿಯಾಗಿದೆ. ಕಾಲರಾಜಾಡ್ಯವು ಕೆಲದಿವಸಗಳಿಂದ ನಿಂತುಹೋಗಿತ್ತು. ಆದರೆ ತಾ|| 19 ರಲ್ಲಿ ಇಲ್ಲಿಯ ಹೆಡ್‌ಕಾನೆಸ್ಟಬಲು ನಾಯಡುಯವರಿಗೆ ಅಕಸ್ಮಾತ್ತಾಗಿ ಕಾಲರಾ ಅಟಾಕ್ಕಾಗಿ 3 ಗಂಟೆ ಕಾಲದಲ್ಲಿ ಮೃತರಾದರು. ಇವರಿಗಿನ್ನೂ ಚಿಕ್ಕವಯಸ್ಸಾಗಿತ್ತು, ಮತ್ತು ಸಣ್ಣಪುಟ್ಟ ಮಕ್ಕಳು 6 ಜನರಿರುತ್ತಾರೆ. ದೇವರದಯದಿಂದ ಈಚೆಗೆ ಬೇರೆ ಅಟಾಕ್ಕಿಲ್ಲ. ಈ ಊರಿನ ಸಾಹುಕಾರರೂ ಗಣ್ಯರೂ ಆದ ವೀರಶೈವಮತಸ್ಥರು ಮ|| ನೋಟಗಾರ ನಂಜಪ್ಪನವರ ತಮ್ಮಂದಿರು ಶ್ರೀಕಂಠಪ್ಪನವರು ಕೆಲ ಕಾಲದಿಂದ ಬಾಯಿಲೆಯಿದ್ದು ಔಷಧವನ್ನು ತೆಗೆದುಕೊಂಡಾಗ್ಯೂ ಗುಣವನ್ನು ಹೊಂದದೆ ತಾ|| 19 ರಲ್ಲಿ ಶಿವಾಧೀನರಾದರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ಈ ಶ್ರೀಕಂಠಪ್ಪನವರು ಒಳ್ಳೆ ಸ್ನೇಹಪರರೂ, ನಿಗರ್ವಿಗಳೂ, ಮಧ್ಯವಯಸ್ಕರೂ ಆಗಿದ್ದರು. ಇವರ ಅಕಾಲ ಮರಣದಿಂದ ಅವರಣ್ಣನವರು ಮೊದಲಾದ ಅವರ ಕುಟುಂಬದವರಿಗಲ್ಲದೆ ಅವರ ಮಿತ್ರಮಂಡಲಿಗೆಲ್ಲಾ ಬಹಳ ವ್ಯಸನವುಂಟಾಗಿದೆ. ಮೃತರ ಆತ್ಮಕ್ಕೆ ಶಾಂತಿಯೂ ಕುಟುಂಬದವರಿಗೆ ದುಃಖಶಮನವೂ ಆಗಲೆಂದು ಕೋರುತ್ತೇನೆ. ಸ್ಥಳವಾಸಿ.

ದಾವಣಗೆರೆ ಮುನಸಿಪಾಲಟಿ.

ಈ ಮುನಸಿಪಾಲಟಿಯಲ್ಲಿ ಅನೇಕ ಅಕ್ರಮಗಳೂ ಅನ್ಯಾಯಗಳೂ ನಡೆಯುತ್ತಿರುವವೆಂದು 1922ನೆ ಇಸವಿಯ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದದ್ದು ಸರಿಯಷ್ಟೆ. ಈಚೆಗೆ ಮ|| ಚನ್ನರಾಜಅರಸಿನವರು ಬಂದಮೇಲೆ ಮನೆಗಳಿಗೆ ನೀರಿನ ಕನೆಕ್ಷನ್ ಕೊಡಬೇಕೆಂದು ಅರ್ಜಿ ಹಾಕಿಕೊಂಡಿದ್ದಕ್ಕೆ ಪ್ರಸಿಡೆಂಟಸಾಹೇಬರವರು 5 ರೂಪಾಯಿಗೆ ಕಡಿಮೆ ಕಂದಾಯವಿರುವ ಮನೆಗೆ, ನೀರಿನ ಕನೆಕ್ಷನ್ ಕೊಡಲು ರೂಲ್ಸಿನಲ್ಲಿ ಅವಕಾಶವಿರುವದಿಲ್ಲವೆಂದು ಅರ್ಜಿಯನ್ನು ತಿರಸ್ಕರಿಸಿದ್ದರ ಮೇಲೆ ಮನೆ ಕಂದಾಯ ಜಾಸ್ತಿಮಾಡಿ ಕನೆಕ್ಷನ್ ಕೊಡಬೇಕಾಗಿಯೂ, ಇದರಂತೆ ಹೆಚ್ಚು ಕಂದಾಯಮಾಡದೆ, ಹಿಂದೆ ಇದ್ದ ಪ್ರಸಿಡೆಂಟ್ ಮ|| ಚಕ್ರಪಾಣಯ್ಯಂಗಾರವರು ನೀರಿನ ಕನೆಕ್ಷನ್ ಕೊಟ್ಟಿರುತ್ತಾರೆಂದು ಪುನಃ ಅರ್ಜಿ ಬರೆದುಕೊಂಡಾಗ್ಯೂ, ಹಿಂದಿನವರು ತಪ್ಪಾಗಿನಡದರೆ ಈಗಲೂ ನಡೆಯುವದಕ್ಕೆ ಆದೀತೆ? ಬೈಲಾದಲ್ಲಿ ಕಡಿಮೆ ಕಂದಾಯವಿರುವ ಮನೆಗೆ ಕನೆಕ್ಷನ್ ಕೊಡಲು ವಿಧಾಯಕವಾಗಿಲ್ಲವಾದ್ದರಿಂದ, ಕೊಡಲಾಗುವದಿಲ್ಲವೆಂದು ತಿರಸ್ಕರಿಸಿಬಿಟ್ಟಿದ್ದರ ಮೇಲೆ, ಮ|| ಚನ್ನರಾಜಅರಸಿನವರು, ಖಂಡಿತವಾದ ಹುಕುಂ ಮಾಡತಕ್ಕವರೆಂತಲೂ, ನಿಷ್ಪಕ್ಷಪಾತಿಗಳೆಂತಲೂ, ನಿರ್ದಾಕ್ಷಿಣ್ಯವಂತರೆಂತಲೂ ಮುನಸಿಪಾಲಟಿಗೆ ಹೆಚ್ಚು ಫಾಯಿದೆ ಆಗುತ್ತೆಂದು ಕಂಡುಬಂದಾಗ್ಯೂ ಅದನ್ನು ಲಕ್ಷ್ಯಮಾಡದೆ ರೂಲ್ಸುಪ್ರಕಾರ ನಡೆಯತಕ್ಕವರೆಂತಲೂ ಜನಗಳು ತಿಳಿದುಕೊಂಡು, ತಮಗೆ ನೀರಿನ ತೊಂದರೆ ಎಷ್ಟಿದ್ದಾಗ್ಯೂ ಸಹಿಸಿಕೊಂಡು, ಕಡಿಮೆ ಕಂದಾಯವಿದ್ದವರು ಕನೆಕ್ಷನ್ ಕೇಳುವದನ್ನೇ ಬಿಟ್ಟುಬಿಟ್ಟರು. ಈಚೆಗೆ ಮ|| ಕುರುವತ್ತಿಕೊಟ್ರಬಸಪ್ಪನವರು ಎರಡು ರೂಪಾಯಿ ಕಂದಾಯವಿರುವ ತಮ್ಮ ಬಾಲೀನಿವೇಶನದಲ್ಲಿ ಹಾಕಿಕೊಂಡಿರುವ ಷಡ್ಡಿಗೆ ನೀರಿನ ಕನೆಕ್ಷನ್ ಕೇಳಿದ್ದಕ್ಕೆ ಕೊಡಬಹುದೆಂದು ಆರ್ಡರ್‌ಮಾಡಿರುವದಾಗಿಯೂ, ಅದರಂತೆ ಕನೆಕ್ಷನ್ ಕೊಟ್ಟಿರುವದಾಗಿಯೂ ವರ್ತಮಾನ ಕೇಳುತ್ತೇನೆ. ರಾ|| ಕೊಟ್ರಬಸಪ್ಪನವರು ಕಡಿಮೆ ಕಂದಾಯವಿರುವ ಸೈಟುಗಳಿಗೆ ಕಂದಾಯ ಹೆಚ್ಚುಮಾಡಿ ಕನೆಕ್ಷನ್ ಕೊಡಬೇಕೆಂದು ಅರ್ಜಿಯಲ್ಲಿ ನಮೂದಿಸದೆ ಇದ್ದಾಗ್ಯೂ, ಎರಡು ರೂಪಾಯಿ ಕಂದಾಯವಿರುವ ಸೈಟುಗಳಿಗೆ ನೀರನ್ನು ಕೊಟ್ಟಿರುವದು ನಮ್ಮ ಪ್ರಸಿಡೆಂಟಸಾಹೇಬರವರ ಪಕ್ಷಪಾತವನ್ನೂ, ದಾಕ್ಷಿಣ್ಯವನ್ನೂ, ರೂಲ್ಸಿಗೆ ವಿರೋಧವಾಗಿ ನಡೆಯುವದನ್ನೂ ವ್ಯಕ್ತಗೊಳಿಸುತ್ತದೆ. ಇದರಿಂದ ಪ್ರಜೆಗಳಿಗೆ ತೊಂದರೆಯಾಗುವದರಿಂದ ಇಂಥಾ ಅಕ್ರಮಗಳನ್ನು ಸರಿಪಡಿಸಿಕೊಂಡು ಮುಂದೆ ಕ್ರಮವಾಗಿ ನಡೆಯುವರೆಂದು ಪ್ರಾರ್ಥಿಸುವ, ಒಬ್ಬ ಪ್ರಜಾಹಿತೈಷಿ.

ಸರ್ಕಾರಿ ಸಂಸ್ಕೃತ ಮಹಾಪಾಠಶಾಲೆಗಳಿಗೆ ವೀರಶೈವರ ಪ್ರವೇಶ.

(ಲೇಖಕ—ಆಸ್ಥಾನ ವಿದ್ವಾನ್ ಶಿರ್ಶಿ ಗುರುಶಾಂತಶಾಸ್ತ್ರಿ.)

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ವೇದಗಳು ಪ್ರಪಂಚದ ಎಲ್ಲಾ ವಿಷಯಗಳನ್ನೊಳಗೊಂಡಿರುವುದರಿಂದ ವೇದೋಕ್ತ ವಿಷಯಗಳನ್ನೆಲ್ಲ ಒಬ್ಬೊಬ್ಬ ಮತೀಯರೇ ಆಚರಿಸಲಾರರು. ವೇದವು ರತ್ನದ ಅಂಗಡಿಯಂತೆ ಇರುವುದು. ರತ್ನವಿಕ್ರಯಕ್ಕೆ ಹೋದವನು ಅಂಗಡಿಯಲ್ಲಿರುವ ರತ್ನಗಳನ್ನೆಲ್ಲ ತೆಗೆದುಕೊಳ್ಳುವುದಿಲ್ಲವು; ತನಗೆ ಬೇಕಾದ ಕೆಲ ರತ್ನಗಳನ್ನು ಮಾತ್ರ ಸ್ವೀಕರಿಸುವನು. ರತ್ನಪ್ರಾಯಗಳಾದ ಯಾವದ್ವಿಷಯಗಳನ್ನೆಲ್ಲ ಅನುಷ್ಠಿಸಲಶಕ್ಯವಾದುದರಿಂದ ತನ್ನ ಮತಕ್ಕೆ ವಿರೋಧಗಳಲ್ಲದ, ಅವಶ್ಯಕವಾಗಿ ಉಪಾಸನೆ ಮಾಡಬೇಕಾದ, ಶಿವಾಧಿಕ್ಯವಂ ಹೇಳುವ, ಶಿವನಿಗೆ ಸಂಬಂಧಪಟ್ಟ ಕರ್ಮಗಳನ್ನು ಮಾತ್ರ ವೀರಶೈವರು ಅನುಷ್ಠಿಸುವರು. ವೈಷ್ಣವರು ವಿಷ್ಣುವಿಗೆ ಸಂಬಂಧಪಟ್ಟ ಭಾಗಗಳನ್ನು ತೆಗೆದುಕೊಳ್ಳುವರಲ್ಲದೆ, ಇತರ ಭಾಗಕ್ಕೆ ಕೈಹಾಕುವುದಿಲ್ಲ. ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಗಳಂತಿರುವ ಋಗ್ವೇದ, ಯಜುರ್ವೇದ, ಸಾಮವೇದಗಳಲ್ಲಿ ಪ್ರತಿಯೊಬ್ಬ ವೇದಾನುಯಾಯಿಗಳಾದ ದ್ವೈತಿಗಳು, ಅದ್ವೈತಿಗಳು, ವಿಶಿಷ್ಟಾದ್ವೈತಿಗಳು ತಮ್ಮ ತಮ್ಮ ಉಪಾಸ್ಯದೇವತಾ ಸಾಕ್ಷಾತ್ಕಾರಕ್ಕೆ ಸಾಧಕಗಳಾಗಿರುವಂತೆ, ಆಯಾಯ ಮತಾಚಾರ್ಯರಿಂದ ಸಂಗ್ರಹೀತವಾದ ವೇದಭಾಗಗಳನ್ನು ತೆಗೆದುಕೊಂಡು ಅವರವರಿಗೆ ಪರಮಧ್ಯೇಯವಾದ ಪರಮಾತ್ಮರೂಪವಾದ, ಅನರ್ಘ್ಯ ರತ್ನವನ್ನು ಸ್ವೀಕರಿಸಿರುವಂತೆ, (ಈಶಾನಸ್ಸರ್ವವಿದ್ಯಾನಾಂ) ಎಂಬ ಶ್ರುತಿಯಿಂದಲೂ, (ಅಸ್ಯಮಹತೋ ಭೂತಸ್ಯ ನಿಶ್ವಸಿತಂ,) ಎಂಬ ಶ್ರುತಿಯಿಂದಲೂ, ಅಷ್ಟಾದಶಾನಾ ಮೇತಾಸಾಂ ವಿದ್ಯಾನಾಂ ಭಿನ್ನವರ್ತ್ಮನಾಂ | ಆದಿಕರ್ತಾ ಕವಿಸ್ಸಾಕ್ಷಾ ಚ್ಛೂಲಪಾಣಿರಿತಿಶ್ರುತಿಃ || ಎಂಬ ಸ್ಮೃತಿವಾಕ್ಯದಿಂದಲೂ ವೇದಾದಿ ಸಕಲ ವಿದ್ಯೆಗಳಿಗೂ ಆದಿಕರ್ತೃವೆನಿಸಿದ, ಸರ್ವಾಧಾರಭೂತ, ಮಹಿಮಾಸ್ಪದಭೂತ, ಸೃಷ್ಟ್ಯಾದಿ ಸರ್ವಕರ್ತೃಭೂತ, ಅನಂತ ಶಕ್ತಿಯುಕ್ತ

REGISTERED No. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀಕಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವಕಾರಾ ಪಶ್ಯಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋತ್ರಮಾಭ್ಯುದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೭. ಮೈಸೂರ್ ಸ್ಟಾರ್ ಸ ೧೯೨೪ ನೆಯ ಇಸವಿ ಜುಲೈ ತಾರೀಖು ೬ ನೆಯ ಭಾನುವಾರ. (ಸಂಚಿಕೆ ೨೭

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರೆದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿಯೂ [illegible] ರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮಣಿಯಾರ್ಡರ್ ಕಮಿಷನ್ ಸೇರಿ ೨—[illegible]—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತ ಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮತಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕಡಿಬಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-[illegible]-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧[illegible]-೦. ವಿ.ಪಿ. ೧-[illegible]-೦. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ [illegible] ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಿಲ್ಲದೆ) [illegible] ಆಣೆ; ಸಟೀಕಶತಕಸೂತ್ರರತ್ನ [illegible] ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) [illegible] ಆಣೆ; ಸ್ತುತಿಮುಕ್ತಾವಳಿ [illegible] ಆಣೆ; ರತ್ನಾಶತಕ ೩ ಆಣೆ; ಶಂಕರಲಿಂಗಕಂದ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯ ೩ ನೆ ಮುದ್ರಣದ ಪ್ರತಿಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಜಾಸ್ತಿಯಾಗಿ ಸೇರಿಸಲ್ಪಟ್ಟಿವೆ. ಬೆಲೆ ೧[illegible] ಆಣೆ. ವಿ. ಪಿ. ಮೂಲಕ ೧-[illegible]-೦.

ಅ|| ವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿ ಅಂಡ್ ಸನ್ಸ್,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಪ್ಲುಯೆನ್ಜಾ
ಪ್ಲೇಗುಜ್ವರ

SITHARAGHAVA
VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ತುಳಿತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸವಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರ ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೊಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳಿತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧ ರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.
25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ

23 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಾಸುದೇವ ಕಪ

ಇದು ಹಿತ್ತಾಳೆಯಿಂದ ಮಾಡಿದ ಬಟ್ಟಲು. ಇದರ ಮಧ್ಯದಲ್ಲಿ ಶ್ರೀ ವಾಸುದೇವನು ಶ್ರೀ ಕೃಷ್ಣನನ್ನು ಎತ್ತಿಕೊಂಡು ನಿಂತಿರುವ ವಿಗ್ರಹವಿರುವದು. ಇದರ ಆಶ್ಚರ್ಯವೇನೆಂದರೆ, ಕೃಷ್ಣನು ಜನ್ಮವನ್ನು ಎತ್ತಿದ ಕೂಡಲೆ ಕಂಸನಿಗೆ ಭಯಪಟ್ಟು ಶ್ರೀ ಕೃಷ್ಣನನ್ನು ಗೋಕುಲಕ್ಕೆ ಎತ್ತಿಕೊಂಡುಹೋಗುವಾಗ ನದಿಯು ಸಿಕ್ಕಿ ಅದರ ತುಂಬಾ ನೀರು ಹರಿಯುವದನ್ನು ಕಂಡು ವಾಸುದೇವನು ಭಯಪಡದೆ ಆ ನದಿಯಲ್ಲಿ ಬಹಳ ಕಷ್ಟದಿಂದ ನಡೆದುಕೊಂಡು ಹೋಗುವಾಗ ಶ್ರೀಕೃಷ್ಣನ ಕಾಲಿಗೆ ನೀರು ತಗಲಿತು. ಆ ಕೂಡಲೆ ನದಿಯಲ್ಲಿ ನೀರು ಕಡಿಮೆಯಾಗಿ ವಾಸುದೇವನು ಬಹು ಬೇಗನೆ ನದಿಯನ್ನು ದಾಟಿ ಗೋಕುಲವನ್ನು ಸೇರಿದನು. ಈ ಸಂಗತಿಯು ನಮ್ಮ ಹಿಂದೂಜನರಿಗೆ ತಿಳಿಯದ ವಿಷಯವಲ್ಲ. ಆದರೆ ಈಗ ಈ ವಿಷಯವನ್ನು ಕಣ್ಣಾರ ನೋಡಿ ಸಂತೋಷಪಡುವಂತೆ ಇದನ್ನು ತಯಾರಿಸಿರುವೆವು. ಈ ಬಟ್ಟಲಿನಲ್ಲಿ ನೀರು ಹಾಕಿದರೆ ಒಂದು ಬೊಟ್ಟಾದರೂ ಚೆಲ್ಲುವದಿಲ್ಲ. ಯಾವಾಗ ಶ್ರೀ ಕೃಷ್ಣನ ಕಾಲಿಗೆ ನೀರು ತಗಲುತ್ತೋ ಆಗ ನೀರು ತನ್ನಷ್ಟಕ್ಕೆ ತಾನೇ ಕೆಳಭಾಗದಿಂದ ಸುರಿದುಹೋಗುವದು. ಬಟ್ಟಲಿನಲ್ಲಿ ರಂಧ್ರವಿಲ್ಲ. ಇದನ್ನು ನೋಡುವವರಿಗೆ ಆಶ್ಚರ್ಯವನ್ನುಂಟುಮಾಡುವದು.



ಕ್ರಯ 1ಕ್ಕೆ 2—0—0.

ಲಿಂಗದ ಕಾಯಿಗಳು.



ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು. ಕ್ರಯ 1ಕ್ಕೆ 0—12—0.

ವಿಳಾಸ:—ಧೈರ್ಯಲಕ್ಷ್ಮಿ ಅಂಡ್‌ಕೊ,
48 ಪೋ|| ಬಾ|| ನಂ. 265, ಮದರಾಸು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರಾನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೪—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೪—೦; ಅನಂತರ ಪ್ರತಿ ೧೦೦ ಕ್ಕೂ ೧—೦—೦; ಬಿಳಿ ಗ್ಲೇಜ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೨—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಪ್ರಕಟನೆ.

ಶ್ರೀಮದಥಣಿ ಶಿವಯೋಗೀಶ ಚರಿತ್ರ ಎಂಬ ಆದುನಿಕ ಪುರಾಣವು ಷಟ್ಪದೀರೂಪವಾಗಿ ದಾವಣಗೇರಿ ತೆಲಗಿ ಮಠದ ವೇ|| ಪಂಡಿತ ಟಿ. ಯಂ. ಚಂದ್ರಶೇಖರಶಾಸ್ತ್ರಿಗಳಿಂದ ರಚಿಸಲ್ಪಟ್ಟು ಬಿಕರಿಗೆ ಸಿದ್ಧವಾಗಿದೆ. ಬೆಲೆ 0-12-0. [12-7]

ವಿಳಾಸ—ಟಿ. ಯಂ. ಚಂದ್ರಶೇಖರಶಾಸ್ತ್ರಿ,
ತೆಲಗಿಮಠ, ದಾವಣಗೆರೆ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ. ಮದನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಶೀಘ್ರಸ್ಖಲನ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ [illegible] ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು.

24

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಲಶ್ರುತ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನು [illegible] ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ಗೆ ೨ ರೂ. ೧೨ ಆಣೆ. [illegible] ಔಷಧದ ಸಂಗಡ [illegible] ಬೇರೆ. ಪ್ರತ್ಯೇಕ [illegible] ಉತ್ತಮ.

ವಿಳಾಸ—ವೈದ್ಯ ಜಿ. ಎಸ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬಾವಸಿ, [illegible].

ಸ್ಟೆಂಟ್ ಸರ್ಜನ್ನರುಗಳ ಪ್ರಯಾಣದ ಭತ್ಯಗಳ ಸಮೇತ ಇತರ ಖರ್ಚುಗಳಿಗೆ ಡಿಸ್ಟ್ರಿಕ್ಟು ಫಂಡುಗಳಿಂದ ಹಣಪೊದಗಿಸುವಂತೆಯೂ, ಸದರಿ ಡಿಸ್ಪೆನ್ಸರಿಗಳ ಖರ್ಚನ್ನು ಸರ್ಕಾರದವರಿಗೂ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯವರುಗಳಿಗೂ ಹಂಚತಕ್ಕದೆಂದು ಈಗ ಹುಕುಂ ಸಾದರಾಗಿದೆ. ಮ್ಯುನಿಸಿಪಲ್ ಟೌನುಗಳಲ್ಲಿ, ಈ ಸ್ಥಳೀಯ ಖರ್ಚುಗಳು ಒಟ್ಟನಲ್ಲಿ ಮೂರನೆಯ ಒಂದು ಭಾಗಕ್ಕೆ ಕ್ಲುಪ್ತವಾಗಿರತಕ್ಕದ್ದು.

3. ಸಂಸ್ಥಾನದ ಎಕ್ಸೈಜು ಆದಾಯವು ಸಂಪೂರ್ಣವಾಗಿ ಎಕ್ಸೈಜು ಕಮಿಷನರವರ ಹತೋಟಿಯಲ್ಲಿರುವಂತೆ ಮಾಡುವುದಕ್ಕಾಗಿ ಎಕ್ಸೈಜು ಹರಾಜುಗಳಿಗೆ ಸಂಬಂಧಪಟ್ಟ ಮೊಕದ್ದಮೆಗಳಲ್ಲಿ ಡೆಪ್ಯುಟಿಕಮಿಷನರುಗಳ ಹುಕುಮುಗಳ ಮೇಲೆ ಅಪೀಲು ಹಿಡಿಯುವುದಕ್ಕೂ ಮತ್ತು ಸದರಿ ಹುಕುಮುಗಳನ್ನು ರಿವ್ಯೂ ಯಾನೆ ಬದಲಾಯಿಸುವುದಕ್ಕೂ ಎಕ್ಸೈಜು ಕಮಿಷನರಿಗೆ ಅಧಿಕಾರಕೊಟ್ಟು ಹುಕುಂ ಸಾದರ್ಮಾಡಲಾಗಿದೆ.

4. ಎಂ. ಬಿ. ಬಿ. ಎಸ್. ಡಿಗ್ರಿ ಪರೀಕ್ಷೆಗೆ ಬೆಂಗಳೂರು ಮೆಡಿಕಲ್ ಕಾಲೇಜಿನ 1924-25ನೇಯ ವರುಷದ ಪ್ರಸಿದ್ಧಿಪತ್ರಿಕೆ (Prospectus) ಯನ್ನೂ ವ್ಯಾಸಂಗದ ಮೊದಲನೆಯ ವರ್ಷದ ವಾರದ ಪಟ್ಟಿಯನ್ನೂ ಸಹ ಮೈಸೂರು ಯೂನಿವರ್ಸಿಟಿ ರಿಜಿಸ್ಟ್ರಾರವರು ಪ್ರಕಟಿಸಿರುತ್ತಾರೆ.

ಸ್ವೀಕಾರ.

ಕೈ|| ವೈ. ವೀರಸಂಗಪ್ಪನವರ ಅಗ್ರತಾಂಬೂಲ ಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—

ವ. ಪ್ರ.

(1) ದಾವಣಗೆರೆ ತಾ|| ಹೊನ್ನನಬೇತೂರು ಶಿರಸ್ತಹಳ್ಳಿ ಮ|| ಶಿಖರಪ್ಪನವರ ಮಗ ಸಿದ್ಧಪ್ಪನಿಗೂ ಹರಪನಹಳ್ಳಿ ತಾ|| ರಾಮಘಟ್ಟದ ಮ|| ಕರಿಬಸಪ್ಪನವರ ಪುತ್ರಿ ಸೌ|| ಸಿದ್ಧಮ್ಮನಿಗೂ ನಡೆದ ಲಗ್ನದಲ್ಲಿ ಮ|| ಶೆಟ್ಟರು ಕಲಿವೀರಪ್ಪನವರ ಮೂಲಕ 1 ರೂ. (2) ಹರಪನಹಳ್ಳಿ ಬ್ರ|| ಶ್ರೀ|| ಹೊಳೆಬಸವಶಾಸ್ತ್ರಿಗಳಿಂದ ಅವರ ಕುಮಾರರು ಮ|| ಷಡಕ್ಷರಪ್ಪ ಎಂ. ಎ. ಯವರ ಲಗ್ನದಲ್ಲಿ 2 ರೂ. (3) ಗುಬ್ಬಿ ತಾ|| ಮಲ್ಲೇನಹಳ್ಳಿ ಮಠದ ಶ್ರೀ ಸಿದ್ಧರಾಮಯ್ಯನವರ ಪುತ್ರಿ ಸೌ|| ಸಿದ್ಧಲಿಂಗಮ್ಮನಿಗೂ ಹೊಸಕೆರೆ ಶ್ರೀ ನಂಜುಂಡಪ್ಪನವರ ಪುತ್ರ ಮಲ್ಲಪ್ಪನಿಗೂ ನಡೆಸಿದ ಲಗ್ನದಲ್ಲಿ ಹೊನ್ನುಡಿಕೆ ಮ|| ಯ|| ಹೊನ್ನಶೆಟ್ಟಪ್ಪನವರ ಮೂಲಕ 1 ರೂ. (4) ಬಸವನಹಳ್ಳಿ ಮಠದ ಶ್ರೀ|| ಮಂಜಯ್ಯನವರ ಪುತ್ರಿ ಸೌ|| ರುದ್ರಮ್ಮನಿಗೂ ತೊಗರಿಹಂಕಲ್ ಶ್ರೀ ಮರಿಅಯ್ಯನವರ ಪುತ್ರ ಪ್ರಭಯ್ಯನಿಗೂ ನಡೆದ ಲಗ್ನದಲ್ಲಿ ಕಾಫಿ ಪ್ಲಾಂಟರ್ ಮ|| ಸಿ. ಪಿ. ಬಸವೇಗೌಡರ ಮೂಲಕ 2 ರೂ. (5) ಹೊಸದುರ್ಗದ ಶೆಟ್ಟರು ಮ|| ಬಸಪ್ಪನವರ ಪುತ್ರಿ ಸೌ|| ಪಾರ್ವತಮ್ಮನಿಗೂ ಮರಕುಂಟೆ ಶೆಟ್ಟರು ಮ|| ಕೊಟ್ರಬಸಪ್ಪನವರ ಮಗ ಪರಪ್ಪನಿಗೂ ನಡೆದ ಲಗ್ನದಲ್ಲಿ ಮುತ್ತೋಡು ಮಠದ ಮುರಿಗೆಪ್ಪಯ್ಯನವರ ಮೂಲಕ 1 ರೂ. (6) ಕೊಳ್ಳೇಗಾಲದ ಮ|| ಗಂಧಿಗ ಶ್ರೀಕಂಠಪ್ಪನವರ ಮಗ ಬಸವರಾಜಪ್ಪನಿಗೂ ಚನ್ನಪಟ್ಟಣದ ಮ|| ಯಜಮಾನ್ ಮಲ್ಲಿಕಾರ್ಜುನಯ್ಯನವರ ಮಗಳು ಸೌ|| ಸರ್ವಮಂಗಳೆಗೂ ನಡೆದ ಲಗ್ನದಲ್ಲಿ ಮ|| ವೈ|| ಶಿವಪ್ಪನವರ ಮೂಲಕ 1 ರೂ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.
ಲಗ್ನದ ಫಂಡು.

1. ಸಾಗರದಲ್ಲಿರುವ ಮ|| ರಾ|| ದಳವಾಯಿ ಬಸವಲಿಂಗಪ್ಪನವರು ತಮ್ಮ ನೂತನ ಗೃಹಪ್ರವೇಶದಲ್ಲಿ ಫಂಡಿಗಾಗಿ ತೆಗೆದದ್ದು ರೂ. 5 ಮತ್ತು ಮ|| ರಾ|| ಬೆಲ್ಲದ ವೀರಭದ್ರಪ್ಪನವರ ಮಗನ ಲಗ್ನದಲ್ಲಿ 2 ರೂ. ಜುಮ್ಲಾ 7 ರೂ. ಗಳು ಮಹಾರಾಜಾ ಕಾಲೇಜು ವಿದ್ಯಾರ್ಥಿ ಪಿ. ಮುರುಡಪ್ಪನವರ ಮೂಲಕ.

2. ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗದಲ್ಲಿರುವ ವೇ|| ಮಠದ ಹುಚ್ಚಪ್ಪದೇವರು ತಮ್ಮ ತಾಯಿಯವರು ಶಿವಸಾಯುಜ್ಯವನ್ನು ಹೊಂದಿದ್ದರಿಂದ ಅವರ ಹೆಸರಿನಲ್ಲಿ ಸಂಘಕ್ಕೆ ಕಳುಹಿಸಿದ್ದು ರೂ. 2.

3. ನೆಲಮಂಗಲದಲ್ಲಿರುವ ಶೆಟ್ಟರ ಗುಬ್ಬಿ ಹುಚ್ಚಪ್ಪನವರ ಕುಮಾರ ಚಿ|| ರಾ|| ಚನ್ನಬಸಪ್ಪನಿಗೆ ಬೆಂಗಳೂರಿನಲ್ಲಿರುವ ಭಕ್ತಿ ಪುಟ್ಟಯ್ಯನವರ ಕುಮಾರ್ತಿ ಚಿ|| ಸೌ|| ಗೌರಮ್ಮನನ್ನು ಕೊಟ್ಟು ನಡಿಸಿದ ಲಗ್ನದಲ್ಲಿ ನೆಲಮಂಗಲದ ಶೆಟ್ಟರು ಯಜಮಾನರಿಂದ ಬಂದದು ಅಸೋಸಿಯೇಷನ್ ಕ್ಲಾರ್ಕು ಬಿ. ಶಾಂತವೀರಪ್ಪನವರ ಮೂಲಕ ರೂ. 3.

4. ನೆಲಮಂಗಲದಲ್ಲಿರುವ ಮ|| ರಾ|| ಪ್ರಭಯ್ಯನವರ ಹೊನ್ನಪ್ಪನವರ ಪುತ್ರ ಚಿ|| ರಾ|| ಹೊನ್ನಶೆಟ್ಟಪ್ಪನವರಿಗೆ ಡಿಟೋ ಊರಲ್ಲಿರುವ ಶೆಟ್ಟರ ಮಲ್ಲಪ್ಪನವರ ಪುತ್ರಿ ಚಿ|| ಸೌ|| ಸ್ವರ್ಣಾಂಬ ಎಂಬ ವಧುವನ್ನು ಕೊಟ್ಟು ನಡಸಿದ ಲಗ್ನದಲ್ಲಿ ನೆಲಮಂಗಲದ ಶೆಟ್ಟರು ಯಜಮಾನರಿಂದ ಬಂದದ್ದು ಅಸೋಸಿಯೇಷನ್ ಕ್ಲಾರ್ಕು ಬಿ. ಶಾಂತವೀರಪ್ಪನವರ ಮೂಲಕ ರೂ. 2.

5. ಕಾರ್ಕಾರ್ಹಳ್ಳಿ ತಾಲ್ಲೂಕು ಶೀಗೆಕೋಟೆಯಲ್ಲಿರುವ ಪಟೇಲ್ ಮುದ್ದವೀರಪ್ಪನವರ ಮಗ ವೀರಭದ್ರಪ್ಪನವರ ಕುಮಾರ್ತಿ ಚಿ|| ಸೌ|| ಭದ್ರಕಾಳಮ್ಮನನ್ನು ಬಿಜ್ಜಳ್ಳಿ ಮ|| ರಾ|| ಶಿದ್ಧಪ್ಪನವರ ದ್ವಿತೀಯ ಕುಮಾರ ಚಿ|| ರಾ|| ಶಿದ್ಧಲಿಂಗಪ್ಪನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ಕಾರ್ಕಾರ್ಹಳ್ಳಿ ಮ|| ಕೆ. ಪಿ. ಪರಶಿವಯ್ಯನವರ ಮೂಲಕ ರೂ. 8.

6. ಯಳಂದೂರಿನಲ್ಲಿರುವ ಮಂಡ್ಯದ ಸುಬ್ಬಪ್ಪನವರ ಮಕ್ಕಳು ಹುಚ್ಚಣ್ಣನೆಂಬ ವರನಿಗೆ ಚಿದರಹಳ್ಳಿ ರಾ|| ಶಿವಪ್ಪನವರ ಮಗಳು ಚಿ|| ಸೌ|| ಮಹದೇವಮ್ಮನೆಂಬ ವಧುವನ್ನು ಕೊಟ್ಟು ನಡಸಿದ ಲಗ್ನದಲ್ಲಿ ಮ|| ರಾ|| ಎಚ್. ಪುಟ್ಟಸ್ವಾಮಿಯವರ ಮೂಲಕ ರೂ. 2-1-0.

7. ಮಾಗಡಿಯಲ್ಲಿರುವ ವೈಸ್ ಪ್ರೆಸಿಡೆಂಟರಾದ ಮ|| ರಾ|| ಕೆ. ವೀರಶೆಟ್ಟಪ್ಪನವರ ಪುತ್ರ ಚಿ|| ರಾ|| ಕೆ. ವಿ. ಎನ್. ಮಲ್ಲಪ್ಪನವರಿಗೆ ನೆಲಮಂಗಲದ ತಾಲ್ಲೂಕು ಶಿಕ್ತನಹಳ್ಳಿ ಸಾಹುಕಾರ್ ಮ|| ರಾ|| ಚನ್ನಮಲ್ಲಪ್ಪನವರ ಮೊಮ್ಮಗಳು ಚಿ|| ಸೌ|| ಪುಟ್ಟಮಲ್ಲಮ್ಮನನ್ನು ಕೊಟ್ಟು ನಡಸಿದ ಲಗ್ನದಲ್ಲಿ ಬೆಂಗಳೂರು ಸಿಟಿ ಮಲ್ಲೇಶ್ವರದಲ್ಲಿರುವ ಮ|| ರಾ|| ರಾಜಶೇಖರವಡೆಯರ್‌ರವರ ಮೂಲಕ ರೂ. 8-6-0

8. ಕೊಪ್ಪೇಸ್‌ಪೇಟೆ ಸಬ್ ತಾಲ್ಲೂಕು ಕಂಟಿಗನ್ನಿನಲ್ಲಿರುವ ಚಿಲ್ಲರೆ ಅಂಗಡಿ ಮ|| ರಾ|| ರೇವಣ್ಣನವರ ಮಗಳು ಮತ್ತು ಮಗನ ಲಗ್ನಗಳಲ್ಲಿ ದೇವನಹಳ್ಳಿ ಮ್ಯುನಿಸಿಪಲ್ ಕ್ಲಾರ್ಕು ಕೆ. ಸಾನಂದಯ್ಯನವರ ಮೂಲಕ ರೂ. 5.

9. ದಾವಣಗೆರೆ ತಾಲ್ಲೂಕು ಹೊನ್ನನಬೇತೂರು ಶಿರಸ್ತಹಳ್ಳಿ ಮ|| ರಾ|| ಶಿಖರಪ್ಪನವರ ಮಗ ಸಿದ್ಧಬಸಪ್ಪನವರಿಗೆ ಹರಪನಹಳ್ಳಿ ತಾಲ್ಲೂಕು ರಾಮಘಟ್ಟದಲ್ಲಿರುವ ಕರಿಬಸಪ್ಪನವರ ಪುತ್ರಿ ಸಿದ್ಧಮ್ಮನನ್ನು ಕೊಟ್ಟು ನಡಸಿದ ಲಗ್ನದಲ್ಲಿ ವರನಕಡೆಯಿಂದ ಬಂದದ್ದು ಬೆಳಗೋಡು ಗ್ರಾಮದ ಮ|| ರಾ|| ಕೆ. ಎಂ. ಕರಿಬಸವಯ್ಯನವರ ಮೂಲಕ ರೂ. 5.

10. ಕಡೂರು ತಾಲ್ಲೂಕು ಯಳ್ಳಂಬಳಸೆ ಮ|| ರಾ|| ಶ್ಯಾಮಣ್ಣನವರ ಪುತ್ರ ಚಿ|| ರಾ|| ಚಂದಪ್ಪನೆಂಬ ವರನಿಗೆ ಚಟ್ಟನಹಳ್ಳಿ ಪಟೇಲ್ ಪುಟ್ಟೇಗೌಡರ ಪುತ್ರಿ ಚಿ|| ಸೌ|| ಮರುಳಮ್ಮನೆಂಬ ವಧುವನ್ನು ಕೊಟ್ಟು ನಡಸಿದ ಲಗ್ನದಲ್ಲಿಯೂ ಮತ್ತು ಸದರಿ ಶ್ಯಾಮಣ್ಣನವರ ಪುತ್ರಿ ಚಿ|| ಸೌ|| ರುದ್ರಮ್ಮನೆಂಬ ವಧುವನ್ನು ತಮ್ಮಯ್ಯಗೌಡರ ತಮ್ಮ ಚಿ|| ರಾ|| ನಂಜಪ್ಪನೆಂಬವರಿಗೆ ಕೊಟ್ಟು ನಡಸಿದ ಲಗ್ನದಲ್ಲಿಯೂ ಮ|| ರಾ|| ಎಸ್. ಚನ್ನಬಸಪ್ಪನವರ ಮೂಲಕ ರೂ. 6.

11. ಹಿರೇಗುಂಟನೂರು ಮ|| ರಾ|| ಕೊಂಡಾಪುರದ ತಿಮ್ಮಯ್ಯನವರ ತಮ್ಮಂದಿರು ಕಲ್ಲಪ್ಪನವರ ಲಗ್ನದಲ್ಲಿ ಮ|| ರಾ|| ಎಲ್. ಎಂ. ಸಂಗಪ್ಪಯ್ಯಶಾಸ್ತ್ರಿಗಳ ಮೂಲಕ ರೂ. 1 ಜುಮ್ಲಾ 49-7-0.

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತ.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರೆಟರಿ
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ,
ಬೆಂಗಳೂರು ಸಿಟಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ಬಡವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.

ಮೇಲ್ಕಂಡ ಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜು, ಹೈಸ್ಕೂಲ್ ಮತ್ತು ಟೆಕ್ನಿಕಲ್ ಸ್ಕೂಲುಗಳಲ್ಲಿ ಅಭ್ಯಾಸಮಾಡುತ್ತಿರುವ ಬಡವೀರಶೈವ ವಿದ್ಯಾರ್ಥಿಗಳು ಜುಲೈ ತಾ|| 15ರ ಒಳಗಾಗಿ ಸೆಕ್ರೆಟರಿಯವರಿಗೆ ತಲಪುವಂತೆ (Printed prescribed form) ನಲ್ಲಿ ಅರ್ಜಿ ಬರೆದುಕೊಳ್ಳತಕ್ಕದ್ದು. ಅರ್ಜಿಫಾರಂಗಳು ಬೇಕಾದಲ್ಲಿ ಒಂದಾಣೆ ಸ್ಟಾಂಪು ಕಳುಹಿಸಿ ಅಡ್ರಸ್ ತಿಳಿಸಿದಲ್ಲಿ ಕಳುಹಿಸಲ್ಪಡುತ್ತೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅರ್ಜಿ ಜೊತೆಯಲ್ಲಿ ಸರ್ಟಿಫಿಕೇಟುಗಳನ್ನೂ ಕಳುಹಿಸತಕ್ಕದ್ದು. ಸರ್ಟಿಫಿಕೇಟುಗಳು ಇಲ್ಲದೆಯು ಮತ್ತು ವಾಯಿದೆ ಮೀರಿಯು ಬರತಕ್ಕ ಅರ್ಜಿಗಳು ಅಂಗೀಕರಿಸಲ್ಪಡಲಾರವು.

ವೈದ್ಯ ವಿದ್ಯಾರ್ಥಿಗಳಿಗೆ ಸೂಚನೆ.

1. ಬೆಂಗಳೂರು ಶ್ರೀ ಜಯದೇವ ಮೆಡಿಕಲ್‌ಹಾಲ್ ಪ್ರೊಪ್ರೈಟರಾದ ಕ್ಯಾಪ್ಟನ್ ವೈ|| ವಿಶ್ವನಾಥಯ್ಯನವರು ಯುವಸಾರ್ವಭೌಮ (ಪ್ರಿನ್ಸ ಆಫ್ ವೇಲ್ಸ್)ರವರು ಮೈಸೂರು ದೇಶಕ್ಕೆ ದಯಮಾಡಿಸಿದುದರ ಜ್ಞಾಪಕಾರ್ಥವಾಗಿ ಐದು ಸಹಸ್ರ ರೂಪಾಯಿಗಳನ್ನು ಮೇಲ್ಕಂಡ ಫಂಡಿನ ಮೂಲಧನಕ್ಕೆ ಕೊಟ್ಟು, ಸದರಿ ಮೊಬಲಿಗಿನ ವೃದ್ಧ್ಯಂಶವನ್ನು ವೈದ್ಯವಿದ್ಯಾಭ್ಯಾಸಮಾಡಲಿಚ್ಛಿಸುವ ಮೈಸೂರು ದೇಶದ ವೀರಶೈವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡುವಂತೆ ಉದ್ದೇಶಿಸಿರುತ್ತಾರೆ.

2. ಧರ್ಮಕರ್ತರ ಉದ್ದೇಶದಂತೆ ಇದೆ ಜೂನ್ ಲಾಗಾಯತು ಮಾಹೆಯಾನ 25 ರೂ. ನಂತೆ ವೇತನವು ಮದರಾಸು ಅಥವಾ ಬೊಂಬಾಯಿ ಸರ್ಕಾರದ ಮೆಡಿಕಲ್ ಕಾಲೇಜಿನಲ್ಲಿ ಓದಲಪೇಕ್ಷಿಸುವ ಮೈಸೂರು ದೇಶದ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಕೊಡಲ್ಪಡುತ್ತೆ. ಸಹಾಯವನ್ನು ಹೊಂದಲಪೇಕ್ಷಿಸುವವರು ಕೂಡಲೇ ಫಂಡಿನ ಸೆಕ್ರೆಟರಿಯವರಿಗೆ ಅರ್ಜಿ ಬರದುಕೊಳ್ಳತಕ್ಕದ್ದು.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ,
ಬೆಂಗಳೂರು ಸಿಟಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ತಿರಸ್ಕೃತ ಪತ್ರವ್ಯವಹಾರಗಳು.

(1) ಏಕಾಶಿಪುರದ ಎಸ್. ಎನ್. ಮಲ್ಲಪ್ಪಶೆಟ್ಟರು—ಲಗ್ನ ಕಾಲದಲ್ಲಿ ವಿದ್ಯಾಭಿವೃದ್ಧಿ ಫಂಡಿಗೆ ದ್ರವ್ಯ ಸಹಾಯಮಾಡಿದ ವಿಚಾರವು ಫಂಡಿನ ಸೆಕ್ರೆಟರಿಯವರಿಗೆ ತಿಳಿಸತಕ್ಕದಾಗಿದೆ. (2) ಮಂಜರಾಬಾದು ಎಸಳೂರ ಪೇಟೆ ವಿದ್ಯಾಭಿಮಾನಿ—ನೀವು ಸ್ಕೂಲಿನ ಅನುಕೂಲಕ್ಕಾಗಿ ತಿಳಿಸಿರುವ ವಿಷಯವೆಲ್ಲವೂ ಸರ್ಕಾರದಿಂದ ನಡಿಸಲ್ಪಡಬೇಕಾಗಿರುವಪ್ರಯುಕ್ತ ವಿದ್ಯಾಭ್ಯಾಸದ ಇ|| ಜನರಲ್‌ರವರಿಗೆ ಬರೆದುಕೊಳ್ಳುವುದು ಯುಕ್ತವು. (3) ನಿಷ್ಪಕ್ಷಪಾತಿ ಮತ್ತು ಪ್ರಜಾಹಿತೈಷಿ—ರಂಭಾಪುರೀ ಸಂಸ್ಥಾನ ಮಠದ ವಿಚಾರಕವಾದ ನಿಮ್ಮ ಲೇಖನಗಳು ವ್ಯಕ್ತಿದ್ವೇಷವನ್ನು ಹೆಚ್ಚಿಸುವುದಾಗಿರುವುದಲ್ಲದೆ ಸದ್ಯದಲ್ಲಿ ಅಪ್ರಕೃತವಾಗಿವೆ.—ಪ. ಪ್ರ.

ಒಬ್ಬ ಸರ್ಕಾರಿ ಉದ್ಯೋಗಸ್ಥರು ಶಿವೈಕ್ಯರಾದರು.

ಬಳ್ಳಾರಿ ಡಿ|| ಹುವ್ವಿನಹಡಗಲಿ ತಾ|| ಮಾಜಿಮುದ್ಲ್ಯ ಮಠದ ಮುದ್ದೀರಯ್ಯನವರು ಗೌರ್ನಮೆಂಟ್ ನೌಕರಿ ರಿವಿನ್ಯೂ ಖಾತೆಯಲ್ಲಿ ಇಪ್ಪತ್ತು ವರ್ಷದ ಸರ್ವಿಸುಮಾಡಿ ಮಾಮುಲೀ ಜಾಗಕ್ಕೆ ಬೇಕಾದ ಎಲ್ಲಾ ಟೆಸ್ಟುಗಳಲ್ಲಿ ತೇರ್ಗಡೆಹೊಂದಿ ಇಷ್ಟರಲ್ಲೇ ಮಾಮುಲೀ ಜಾಗಕ್ಕೆ ಬರತಕ್ಕವರಿದ್ದರು; ಮತ್ತು ದಯಾಳುಗಳೂ ಸದಾಚಾರಾಭಿಮಾನಿಗಳೂ ಆಗಿದ್ದರು. ಇಂಥ ಸಮಯದಲ್ಲಿ ದೈವಯೋಗದಿಂದ ಮಾರಕಾತಗಲಿ ತಾ|| 14-5-1924 ಬುಧವಾರ ರಾತ್ರಿ ಶಿವಲೋಕವನ್ನು ಹೊಂದಿದ ವಿಷಯವನ್ನು ತಿಳಿಸಲಿಕ್ಕೆ ಮಹಾವಿಷಾದವಾಗುತ್ತದೆ.

ಓರ್ವ ಪ್ರತ್ಯಕ್ಷದರ್ಶಿ.

ವೀರಶೈವ ಧರ್ಮೋಪನ್ಯಾಸ.

ಬೆಂಗಳೂರಿಗೆ ಆಗಂತುಕರಾಗಿ ದಯಮಾಡಿಸಿದ್ದ ವಿಜಾಪುರದ ಚರಮೂರ್ತಿಮಠದ ದೇಶಿಕೇಂದ್ರ ಶ್ರೀಶಂಭುಲಿಂಗಸ್ವಾಮಿಗಳವರು ಇಲ್ಲಿಯ ದೇಶದಶೆಟ್ಟರು, ಯಜಮಾನರು ಮೊದಲಾದ ವೀರಶೈವ ಪ್ರಮುಖರ ಪ್ರಾರ್ಥನೆಮೇರೆಗೆ ಮುಹಂತಿನಮಠದಲ್ಲಿ ಒಂದು ದಿವಸ ವೀರಶೈವ ಧರ್ಮಸಂಬಂಧವಾದ ಅಷ್ಟಾವರಣದಮೇಲೂ, ಮತ್ತೊಂದ ದಿವಸ "ಬ್ರಹ್ಮಾನಂದದಮೇಲೂ ಬಹಳ ಶ್ಲಾಘ್ಯತರವಾಗಿ ಉಪನ್ಯಾಸಮಾಡಿ ಶ್ರೋತೃಗಳ ಮನಸ್ಸಿಗೆ ಆನಂದವನ್ನುಂಟುಮಾಡಿದರು. ಪಟ್ಟಣದ ಮಹಾಜನಗಳ ಪ್ರಾರ್ಥನೆಯ ಪ್ರಕಾರ ತಾ|| 6.6-24 ರಲ್ಲಿ ಇಲ್ಲಿನ ಶ್ರೀ ಜಯದೇವ ಹಾಸ್ಟೆಲ್‌ನಲ್ಲಿ ಮಹಾರಾಜಶ್ರೀ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ನೆರದಿದ್ದ ವಿದ್ವತ್ಸಭೆಯಲ್ಲಿ "ಶಿವಯೋಗ" ವೆಂಬ ವಿಷಯವನ್ನು ಪ್ರತಿಪಾದಿಸಿ ಬಹಳ ಯುಕ್ತಿಯುಕ್ತವಾಗಿ ಭಾಷಣವನ್ನು ಮಾಡಿದರು. ಆದಿನದ ಸಭೆಯಲ್ಲಿ ನೆರದಿದ್ದ ವಿದ್ವಾನ್ಮಹಾಶಯರುಗಳಲ್ಲಿ ವೇ|| ವಿದ್ವಾನ್ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು, ರಿಟೈರ್ಡ್ ಚೀಫ್ ಇಂಜಿನೀಯರ್ ರಾವ್‌ಬಹದ್ದೂರ್ ಕರ್ಪೂರಶ್ರೀನಿವಾಸರಾಯರವರು ಮತ್ತು ರಿಟೈರ್ಡ್‌ಸರ್ವೆಸೂಪರಿಂಟೆಂಡೆಂಟ್ ಮ|| ದೇಶಮುಖರಾಮರಾಯರು ಶ್ರೀಗಳವರ ವಿದ್ವತ್ತನ್ನೂ ಸರಸವಾಣಿಯನ್ನೂ ಶ್ಲಾಘಿಸಿ ತುಂಬಾ ಸಂತೋಷಯುಕ್ತರಾದರು. ಶ್ರೀಗಳವರು ಇಲ್ಲಿನ ಮಹಾಜನಗಳ ಪ್ರಾರ್ಥನೆಯಂತೆ ಭಿಕ್ಷೆಯನ್ನುಸ್ವೀಕರಿಸುತಾ ಒಂದುವಾರ ಪರ್ಯಂತರವಿದ್ದು ಹಾವೇರಿ ಮಾರ್ಗವಾಗಿ ವಾಪಸ್ ದಯಮಾಡಿಸಿದರು.

ಓರ್ವಸಭಿಕ.

ಡೆಂಕಣಿಕೋಟೆ.

ಸೇಲಂ ಡಿಸ್ಟ್ರಿಕ್ಟು ಹೊಸೂರು ತಾ|| ಡೆಂಕಣಿಕೋಟೆ ಸಬ್‌ತಾಲ್ಲೂಕಿನಲ್ಲಿ ಬಹಳ ದಿನಗಳ ವರೆಗೂ ಮಳೆಯಿಲ್ಲದೆ ಕೆರೆಗಳೆಲ್ಲವೂ ಒಣಗಿಹೋಗಿ ಮನುಷ್ಯರುಗಳಿಗೂ ದನಕರುಗಳಿಗೂ ಕುಡಿಯುವ ನೀರಿಗೆ ಬಹಳ ಕಷ್ಟವಾಗಿತ್ತು. ಅಲ್ಲದೆ ವಾಂತಿಭೇದಿರೋಗವು ಪ್ರಾಪ್ತವಾಗಿ ಬಹಳ ಜನರನ್ನು ಆಹುತಿತಗೆದುಕೊಂಡು ಬಹಳ ಭಯವನ್ನುಂಟುಮಾಡಿತ್ತು. ಆದರೆ ದೈವಾಧೀನದಿಂದ ಈಚೆಗೆ ಮಳೆಯು ಬಹಳ ಚೆನ್ನಾಗಿ ಆಗಿ ಕೆರೆ ಕಟ್ಟೆಗಳೆಲ್ಲವೂ ತುಂಬಿತುಳುಕುತ್ತಿರುವವು. ಈ ಡೆಂಕಣಿಕೋಟೆ ಟವನ್ನಿನಲ್ಲೂ ನೀರು ಸಮೃದ್ಧಿಯಾಗಿದೆ. ಕಾಲರಾಜಾಡ್ಯವು ಕೆಲದಿವಸಗಳಿಂದ ನಿಂತುಹೋಗಿತ್ತು. ಆದರೆ ತಾ|| 19 ರಲ್ಲಿ ಇಲ್ಲಿಯ ಹೆಡ್‌ಕಾನೆಸ್ಟಬಲು ನಾಯಡುಯವರಿಗೆ ಅಕಸ್ಮಾತ್ತಾಗಿ ಕಾಲರಾ ಅಟಾಕ್ಕಾಗಿ 3 ಗಂಟೆ ಕಾಲದಲ್ಲಿ ಮೃತರಾದರು. ಇವರಿಗಿನ್ನೂ ಚಿಕ್ಕವಯಸ್ಸಾಗಿತ್ತು, ಮತ್ತು ಸಣ್ಣಪುಟ್ಟ ಮಕ್ಕಳು 6 ಜನರಿರುತ್ತಾರೆ. ದೇವರದಯದಿಂದ ಈಚೆಗೆ ಬೇರೆ ಅಟಾಕ್ಕಿಲ್ಲ. ಈ ಊರಿನ ಸಾಹುಕಾರರೂ ಗಣ್ಯರೂ ಆದ ವೀರಶೈವಮತಸ್ಥರು ಮ|| ನೋಟಗಾರ ನಂಜಪ್ಪನವರ ತಮ್ಮಂದಿರು ಶ್ರೀಕಂಠಪ್ಪನವರು ಕೆಲ ಕಾಲದಿಂದ ಬಾಯಿಲೆಯಿದ್ದು ಔಷಧವನ್ನು ತೆಗೆದುಕೊಂಡಾಗ್ಯೂ ಗುಣವನ್ನು ಹೊಂದದೆ ತಾ|| 19 ರಲ್ಲಿ ಶಿವಾಧೀನರಾದರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ಈ ಶ್ರೀಕಂಠಪ್ಪನವರು ಒಳ್ಳೆ ಸ್ನೇಹಪರರೂ, ನಿಗರ್ವಿಗಳೂ, ಮಧ್ಯವಯಸ್ಕರೂ ಆಗಿದ್ದರು. ಇವರ ಅಕಾಲ ಮರಣದಿಂದ ಅವರಣ್ಣನವರು ಮೊದಲಾದ ಅವರ ಕುಟುಂಬದವರಿಗಲ್ಲದೆ ಅವರ ಮಿತ್ರಮಂಡಲಿಗೆಲ್ಲಾ ಬಹಳ ವ್ಯಸನವುಂಟಾಗಿದೆ. ಮೃತರ ಆತ್ಮಕ್ಕೆ ಶಾಂತಿಯೂ ಕುಟುಂಬದವರಿಗೆ ದುಃಖಸಮಾಧಾನವೂ ಆಗಲೆಂದು ಕೋರುತ್ತೇನೆ.

ಸ್ಥಳವಾಸಿ.

ದಾವಣಗೆರೆ ಮುನಸಿಪಾಲಟಿ.

ಈ ಮುನಸಿಪಾಲಟಿಯಲ್ಲಿ ಅನೇಕ ಅಕ್ರಮಗಳೂ ಅನ್ಯಾಯಗಳೂ ನಡೆಯುತ್ತಿರುವವೆಂದು 1922ನೆ ಇಸವಿಯ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದದ್ದು ಸರಿಯಷ್ಟೆ. ಈಚೆಗೆ ಮ|| ಚನ್ನರಾಜಅರಸಿನವರು ಬಂದ ಮೇಲೆ ಮನೆಗಳಿಗೆ ನೀರಿನ ಕನೆಕ್ಷನ್ ಕೊಡಬೇಕೆಂದು ಅರ್ಜಿ ಹಾಕಿಕೊಂಡಿದ್ದಕ್ಕೆ ಪ್ರಸಿಡೆಂಟಸಾಹೇಬರವರು 5 ರೂಪಾಯಿಗೆ ಕಡಿಮೆ ಕಂದಾಯವಿರುವ ಮನೆಗೆ, ನೀರಿನ ಕನೆಕ್ಷನ್ ಕೊಡಲು ರೂಲ್ಸಿನಲ್ಲಿ ಅವಕಾಶವಿರುವದಿಲ್ಲವೆಂದು ಅರ್ಜಿಯನ್ನು ತಿರಸ್ಕರಿಸಿದ್ದರ ಮೇಲೆ ಮನೆ ಕಂದಾಯ ಜಾಸ್ತಿಮಾಡಿ ಕನೆಕ್ಷನ್ ಕೊಡಬೇಕಾಗಿಯೂ, ಇದರಂತೆ ಹೆಚ್ಚು ಕಂದಾಯಮಾಡದೆ, ಹಿಂದೆ ಇದ್ದ ಪ್ರಸಿಡೆಂಟ್ ಮ|| ಚಕ್ರಪಾಣಯ್ಯಂಗಾರವರು ನೀರಿನ ಕನೆಕ್ಷನ್ ಕೊಟ್ಟಿರುತ್ತಾರೆಂದು ಪುನಃ ಅರ್ಜಿ ಬರೆದುಕೊಂಡಾಗ್ಯೂ, ಹಿಂದಿನವರು ತಪ್ಪಾಗಿನಡದರೆ ಈಗಲೂ ನಡೆಯುವದಕ್ಕೆ ಆದೀತೆ? ಬೈಲಾದಲ್ಲಿ ಕಡಿಮೆ ಕಂದಾಯವಿರುವ ಮನೆಗೆ ಕನೆಕ್ಷನ್ ಕೊಡಲು ವಿಧಾಯಕವಾಗಿಲ್ಲವಾದ್ದರಿಂದ, ಕೊಡಲಾಗುವದಿಲ್ಲವೆಂದು ತಿರಸ್ಕರಿಸಿಬಿಟ್ಟದ್ದರ ಮೇಲೆ, ಮ|| ಚನ್ನರಾಜಅರಸಿನವರು, ಖಂಡಿತವಾದ ಹುಕುಂ ಮಾಡತಕ್ಕವರೆಂತಲೂ, ನಿಷ್‌ಪಕ್ಷಪಾತಿಗಳೆಂತಲೂ, ನಿರ್ದಾಕ್ಷಿಣ್ಯವಂತರೆಂತಲೂ ಮುನಸಿಪಾಲಟಿಗೆ ಹೆಚ್ಚು ಫಾಯಿದೆ ಆಗುತ್ತೆಂದು ಕಂಡುಬಂದಾಗ್ಯೂ ಅದನ್ನು ಲಕ್ಷ್ಯಮಾಡದೆ ರೂಲ್ಸುಪ್ರಕಾರ ನಡೆಯತಕ್ಕವರೆಂತಲೂ ಜನಗಳು ತಿಳಿದುಕೊಂಡು, ತಮಗೆ ನೀರಿನ ತೊಂದರೆ ಎಷ್ಟಿದ್ದಾಗ್ಯೂ ಸಹಿಸಿಕೊಂಡು, ಕಡಿಮೆ ಕಂದಾಯವಿದ್ದವರು ಕನೆಕ್ಷನ್ ಕೇಳುವದನ್ನೇ ಬಿಟ್ಟುಬಿಟ್ಟರು. ಈಚೆಗೆ ಮ|| ಕುರುವತ್ತಿಕೊಟ್ರಬಸಪ್ಪನವರು ಎರಡು ರೂಪಾಯಿ ಕಂದಾಯವಿರುವ ತಮ್ಮ ಖಾಲೀನಿವೇಶನದಲ್ಲಿ ಹಾಕಿಕೊಂಡಿರುವ ಷಡ್ಡಿಗೆ ನೀರಿನ ಕನೆಕ್ಷನ್ ಕೇಳಿದ್ದಕ್ಕೆ ಕೊಡಬಹುದೆಂದು ಆರ್‌ಡರ್‌ಮಾಡಿರುವದಾಗಿಯೂ, ಅದರಂತೆ ಕನೆಕ್ಷನ್ ಕೊಟ್ಟಿರುವದಾಗಿಯೂ ವರ್ತಮಾನ ಕೇಳುತ್ತೇನೆ. ರಾ|| ಕೊಟ್ರಬಸಪ್ಪನವರು ಕಡಿಮೆ ಕಂದಾಯವಿರುವ ಸೈಟುಗಳಿಗೆ ಕಂದಾಯ ಹೆಚ್ಚುಮಾಡಿ ಕನೆಕ್ಷನ್ ಕೊಡಬೇಕೆಂದು ಅರ್ಜಿಯಲ್ಲಿ ನಮೂದಿಸದೆ ಇದ್ದಾಗ್ಯೂ, ಎರಡು ರೂಪಾಯಿ ಕಂದಾಯವಿರುವ ಸೈಟುಗಳಿಗೆ ನೀರನ್ನು ಕೊಟ್ಟಿರುವದು ನಮ್ಮ ಪ್ರಸಿಡೆಂಟಸಾಹೇಬರವರ ಪಕ್ಷಪಾತವನ್ನೂ, ದಾಕ್ಷಿಣ್ಯವನ್ನೂ, ರೂಲ್ಸಿಗೆ ವಿರೋಧವಾಗಿ ನಡೆಯುವದನ್ನೂ ವ್ಯಕ್ತಗೊಳಿಸುತ್ತದೆ. ಇದರಿಂದ ಪ್ರಜೆಗಳಿಗೆ ತೊಂದರೆಯಾಗುವದರಿಂದ ಇಂಥಾ ಅಕ್ರಮಗಳನ್ನು ಸರಿಪಡಿಸಿಕೊಂಡು ಮುಂದೆ ಕ್ರಮವಾಗಿ ನಡೆಯುವರೆಂದು ಪ್ರಾರ್ಥಿಸುವ,

ಒಬ್ಬ ಪ್ರಜಾಹಿತೈಷಿ.

ಸರ್ಕಾರಿ ಸಂಸ್ಕೃತ ಮಹಾಪಾಠಶಾಲೆಗಳಿಗೆ ವೀರಶೈವರ ಪ್ರವೇಶ.

(ಲೇಖಕ—ಆಸ್ಥಾನ ವಿದ್ವಾನ್ ಶಿರ್ಶಿ ಗುರುಶಾಂತಶಾಸ್ತ್ರಿ.)

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ವೇದಗಳು ಪ್ರಪಂಚದ ಎಲ್ಲಾ ವಿಷಯಗಳನ್ನೊಳಗೊಂಡಿರುವುದರಿಂದ ವೇದೋಕ್ತ ವಿಷಯಗಳನ್ನೆಲ್ಲ ಒಬ್ಬೊಬ್ಬ ಮತೀಯರೇ ಆಚರಿಸಲಾರರು. ವೇದವು ರತ್ನದ ಅಂಗಡಿಯಂತೆ ಇರುವುದು. ರತ್ನವಿಕ್ರಯಕ್ಕೆ ಹೋದವನು ಅಂಗಡಿಯಲ್ಲಿರುವ ರತ್ನಗಳನ್ನೆಲ್ಲ ತೆಗೆದುಕೊಳ್ಳುವುದಿಲ್ಲವು; ತನಗೆ ಬೇಕಾದ ಕೆಲ ರತ್ನಗಳನ್ನು ಮಾತ್ರ ಸ್ವೀಕರಿಸುವನು. ರತ್ನ ಪ್ರಾಯಗಳಾದ ಯಾವದ್ವಿಷಯಗಳನ್ನೆಲ್ಲ ಅನುಷ್ಠಿಸಲಶಕ್ಯವಾದುದರಿಂದ ತನ್ನ ಮತಕ್ಕೆ ವಿರೋಧಗಳಲ್ಲದ, ಅವಶ್ಯಕವಾಗಿ ಉಪಾಸನೆ ಮಾಡಬೇಕಾದ, ಶಿವಾಧಿಕ್ಯವಂ ಹೇಳುವ, ಶಿವನಿಗೆ ಸಂಬಂಧಪಟ್ಟ ಕರ್ಮಗಳನ್ನು ಮಾತ್ರ ವೀರಶೈವರು ಅನುಷ್ಠಿಸುವರು. ವೈಷ್ಣವರು ವಿಷ್ಣುವಿಗೆ ಸಂಬಂಧಪಟ್ಟ ಭಾಗಗಳನ್ನು ತೆಗೆದುಕೊಳ್ಳುವರಲ್ಲದೆ, ಇತರ ಭಾಗಕ್ಕೆ ಕೈಹಾಕುವುದಿಲ್ಲ. ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಗಳಂತಿರುವ ಋಗ್ವೇದ, ಯಜುರ್ವೇದ, ಸಾಮವೇದಗಳಲ್ಲಿ ಪ್ರತಿಯೊಬ್ಬ ವೇದಾನುಯಾಯಿಗಳಾದ ದ್ವೈತಿಗಳು, ಅದ್ವೈತಿಗಳು, ವಿಶಿಷ್ಟಾದ್ವೈತಿಗಳು ತಮ್ಮ ತಮ್ಮ ಉಪಾಸ್ಯದೇವತಾ ಸಾಕ್ಷಾತ್ಕಾರಕ್ಕೆ ಸಾಧಕಗಳಾಗಿರುವಂತೆ, ಆಯಾಯ ಮತಾಚಾರ್ಯರಿಂದ ಸಂಗೃಹೀತವಾದ ವೇದಭಾಗಗಳನ್ನು ತೆಗೆದುಕೊಂಡು ಅವರವರಿಗೆ ಪರಮಧ್ಯೇಯವಾದ ಪರಮಾತ್ಮರೂಪವಾದ, ಅನರ್ಘ್ಯ ರತ್ನವನ್ನು ಸ್ವೀಕರಿಸಿರುವಂತೆ, (ಈಶಾನಸ್ಸರ್ವವಿದ್ಯಾನಾಂ) ಎಂಬ ಶ್ರುತಿಯಿಂದಲೂ, (ಅಸ್ಯಮಹತೋ ಭೂತಸ್ಯ ನಿಶ್ವಸಿತಂ,) ಎಂಬ ಶ್ರುತಿಯಿಂದಲೂ, ಅಷ್ಟಾದಶಾನಾ ಮೇತಾಸಾಂ ವಿದ್ಯಾನಾಂ ಭಿನ್ನವರ್ತ್ಮನಾಂ | ಆದಿಕರ್ತಾ ಕವಿಸ್ಸಾಕ್ಷಾಚ್ಛೂಲಪಾಣಿರಿತಿಶ್ರುತಿಃ || ಎಂಬ ಸ್ಮೃತಿವಾಕ್ಯದಿಂದಲೂ ವೇದಾದಿ ಸಕಲ ವಿದ್ಯೆಗಳಿಗೂ ಆದಿಕರ್ತೃವೆನಿಸಿದ, ಸರ್ವಾಧಾರಭೂತ, ಮಹಿಮಾಸ್ಪದಭೂತ, ಬ್ರಹ್ಮಾದಿ ಸರ್ವಕರ್ತೃಭೂತ, ಅನಂತ ಶಕ್ತಿಯುಕ್ತ

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಕಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾನತಾರಾ ಪಶ್ಯಜ್ಞನಕ್ಷತ್ರ ಮೋಹರಾಜೇಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭ್ಯರ್ಚಿತಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತ ಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಅಂಚೆವೆಚ್ಚ ಸೇರಿ ೨-೮-೦]

ಸಂಪುಟ ೩೭. ಮೈಸೂರ್ ಸ್ಟಾರ್ ಸ ೧೯೨೪ ನೆಯ ಇಸವಿ ಜುಲೈ ತಾರೀಖು ೬ ನೆಯ ಭಾನುವಾರ. ಸಂಚಿಕೆ ೨೭

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ.

(ದ್ವಿತೀಯ ಮುದ್ರಣ)

ಶ್ರೀ ರೇಣುಕಾಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವಸಿದ್ಧಾಂತ ಸ್ವರೂಪವೆಲ್ಲಾ ಇದರಲ್ಲಿ ಕರತಲಾಮಲಕವಾಗಿ ನಿರೂಪಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟಿಪ್ಪಣಿಯನ್ನು ಬರಿದು ಮೇಲ್ಗಡೆ ಸಂಸ್ಕೃತವೂ ಅಡಿಯಲ್ಲಿ ಟಿಪ್ಪಣಿಯೂ ಇರುವಂತೆ ಸ್ಥೂಲಾಕ್ಷರಗಳಿಂದ ಮುದ್ರಿಸಲಾಗಿದೆ. ಸರ್ವೋತ್ತಮವಾದ ವೀರಶೈವ ಧರ್ಮವನ್ನೂ ಸಿದ್ಧಾಂತವನ್ನೂ ತಿಳಿಯಬೇಕೆನ್ನುವ ಪ್ರತಿಯೊಬ್ಬರೂ ಈ ಗ್ರಂಥವನ್ನು ಸಂಗ್ರಹಿಸಿಡಬೇಕು. ಬೆಲೆ ೧—೧೨—೦. ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ.—ಇದು ವೀರಶೈವಮತದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅತಿ ವಿಸ್ತಾರವಾದ ಚರಿತ್ರೆ. ಆಚಾರ್ಯರ ಮಹತ್ತ್ವವೂ ಪರವಾದಿಗಳೊಡನೆ ವಾದಮಾಡಿ ಶಿವಮತಸಿದ್ಧಾಂತಸ್ಥಾಪನ ಮಾಡಿದುದೂ, ಬಸವಪುರಾಣದಲ್ಲಿಲ್ಲದಿರುವ ಅನೇಕ ಶರಣರ ಚರಿತ್ರೆಗಳೂ, ಶ್ರೀ ಶೈಲಮಹತ್ತ್ವವೂ ಶಿವಮುಕಾಚಾರ ಲಕ್ಷಣಗಳೂ ಇದರಲ್ಲಿ ಹೇಳಲ್ಪಟ್ಟಿವೆ. ಟೀಕಾಸಮೇತವಾಗಿದೆ. ೫ ಪ್ರಕರಣಗಳೂ ಸೇರಿದ ಪೂರ್ಣಗ್ರಂಥ ೫ ರೂಪಾಯಿ. ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ.—ಬೆಲೆ ೧—೨—೦. ವಿ.ಪಿ. ಮೂಲಕ ೧—೧೦—೦. ಇದು ಪಾರಮೇಶ್ವರಾಗಮದ ಆಧಾರದ ಮೇಲೆ ಹುಟ್ಟಿರುವ ವೀರಶೈವ ಧರ್ಮಕರ್ಮಗಳನ್ನೂ ಶೈವವೀರಶೈವಾದಿ ಭೇದಲಕ್ಷಣವನ್ನೂ ನಿರೂಪಿಸುವ ಸವ್ಯಾಖ್ಯಾಗ್ರಂಥ.

ಬಸವರಾಜವಿಜಯಂ.—ಬೆಲೆ ೧-೨-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡಿಗನ್ನಡ ನುಡಿಯಿಂದ ವೃಷಭೇಂದ್ರ ವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ. ವಿ.ಪಿ. ೧-೧೦-೦.

ಚೆನ್ನಬಸವೇಶವಿಜಯಂ.—ಬೆಲೆ ೧-೬-೦. ದ್ವಿತೀಯ ಮುದ್ರಣ. ಚೆನ್ನಬಸವಪುರಾಣದಲ್ಲಿರುವ ಚನ್ನಬಸವೇಶ ಚರಿತ್ರೆ--ಶಿವನ ಪಂಚವಿಂಶತಿ ಲೀಲೆಗಳು--ಅನೇಕ ಶಿವಶರಣರ ಚರಿತ್ರೆಗಳು--ಷಟ್ಸ್ಥಲಾಷ್ಟಾವರಣ, ಕಲಿಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ. ವಿ. ಪಿ. ೧-೧೪-೦.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೦-೧೪-೦. ವಿ.ಪಿ. ೧-೪-೦. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೦-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿಗ್ರಂಥ. ವಿ.ಪಿ. ೧-೮-೦.

ಪಂಚಶ್ಲೋಕೀ.—ಬೆಲೆ ೧-೦-೦. ವಿ. ಪಿ. ೧-೮-೦. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ ಸವ್ಯಾಖ್ಯಾನ.

ಸೌಂದರಪುರಾಣಂ.—೧-೮-೦; ಸಟೀಕತತ್ವಪ್ರಕಾಶಿಕಾ (ಪೋಸ್ಟೇಜಲ್ಲದೆ) ೪ ಆಣೆ; ಸಟೀಕಶತಕಸ್ತೋತ್ರರತ್ನ ೪ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೪ ಆಣೆ; ಶ್ರುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂಪಂ ೧ ಆಣೆ.

☞ ಸಟೀಕ ವೀರಶೈವ ದೀಕ್ಷಾವಿಧಿಯು 3 ನೆ ಮುದ್ರಣವು ಪುರೈಸಿ ಪುಸ್ತಕಗಳು ಸಿದ್ಧವಾಗಿವೆ. ಮೊದಲಿಗಿಂತಲೂ ಇದು ಬಹಳ ಚೆನ್ನಾಗಿ ಪರಿಷ್ಕರಿಸಲ್ಪಟ್ಟು ವಿಶೇಷವಿಷಯಗಳು ಹೆಚ್ಚಾಗಿ ಸೇರಿಸಲ್ಪಟ್ಟಿವೆ. ಬೆಲೆ ೧೪ ಆಣೆ. ವಿ. ಪಿ. ಮೂಲಕ ೧-೪-೦.

ಅ|| ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿ ಅಂಡ್ ಸನ್ಸ್,
ಗ್ರಂಥಪ್ರಸಾರಕಮಂಡಲಿ ಮೈಸೂರು.

ಪಾಳ್ಯ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SRI SITHARAGHAVA VAIDYASALA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.
ಇಂಫ್ಲುಯೆಂಜಾ	
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಸಾರಸ್ವತಾಸವಂ (ಬುದ್ಧಿಪ್ರಸಾದಿನಿ)

ಮಕ್ಕಳಿಗೆ, ತರುಣರಿಗೆ, ವೃದ್ಧರಿಗೆ, ಸ್ತ್ರೀಯರಿಗೆ, ಶಕ್ತಿವರ್ಧನಕಾರಿ ಮೆದುಳಿನ ದುರ್ಬಲ, ಎದೆ, ಹೊಟ್ಟೆಗಳ ನೋವು, ಮರವೆ, ಆಲಸ್ಯ, ಸೊಮಾರಿತನ, ಮಲಬದ್ಧ, ಕೈನಡುಕ, ನರಗಳ ಸೆಳೆತ, ಮೂಳೆಗಳ ನೋವು ಮೊದಲಾದುವು ಗುಣವಾಗಿ ಪುಷ್ಟಿ ಮತ್ತು ಶುದ್ಧ ರಕ್ತಗಳನ್ನುಂಟುಮಾಡುತ್ತದೆ. ಸಂಗೀತಗಾರರಿಗೆ ಪ್ರಾಣಸ್ನೇಹಿತ.
25 ದಿನಕ್ಕೆ ಸಾಕಾಗುವ 6 ಔನ್ಸ್ ಸೀಸೆ 1 ರೂಪಾಯಿ. ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳ ಮಲಬದ್ಧ, ಹೊಟ್ಟೆಕಟ್ಟಿಕೊಂಡಿರುವದು, ಜೀರ್ಣವಾಗದೆ ಭೇದಿಯಾಗುವದು, ಕೈಕಾಲು ಬಡವಾಗಿರುವದು, ಚಂಡಿಹಿಡಿಯುವದು, ಇವುಗಳೆಲ್ಲಾ ಗುಣವಾಗಿ ಶುದ್ಧರಕ್ತವೂ, ಲವಲವಿಕೆಯೂ ಉಂಟಾಗುತ್ತದೆ. ಸೀಸೆ 12 ಆಣೆ. ಪೋಸ್ಟೇಜು ಬೇರೆ

23 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಾಸುದೇವ ಕಪ್.

ಇದು ಹಿತ್ತಾಳೆಯಿಂದ ಮಾಡಿದ ಬಟ್ಟಲು. ಇದರ ಮಧ್ಯದಲ್ಲಿ ಶ್ರೀ ವಾಸುದೇವನು ಶ್ರೀ ಕೃಷ್ಣನನ್ನು ಎತ್ತಿಕೊಂಡು ನಿಂತಿರುವ ವಿಗ್ರಹವಿರುವದು. ಇದರ ಆಶ್ಚರ್ಯವೇನೆಂದರೆ, ಕೃಷ್ಣನು ಜನ್ಮವನ್ನು ಎತ್ತಿದ ಕೂಡಲೆ ಕಂಸನಿಗೆ ಭಯಪಟ್ಟು ಶ್ರೀ ಕೃಷ್ಣನನ್ನು ಗೋಕುಲಕ್ಕೆ ಎತ್ತಿಕೊಂಡುಹೋಗುವಾಗ ನದಿಯು ಸಿಕ್ಕಿ ಅದರ ತುಂಬಾ ನೀರು ಹರಿಯುವದನ್ನು ಕಂಡು ವಾಸುದೇವನು ಭಯಪಡದೆ ಆ ನದಿಯಲ್ಲಿ ಬಹಳ ಕಷ್ಟದಿಂದ ನಡೆದುಕೊಂಡು ಹೋಗುವಾಗ ಶ್ರೀಕೃಷ್ಣನ ಕಾಲಿಗೆ ನೀರು ತಗಲಿತು. ಆ ಕೂಡಲೆ ನದಿಯಲ್ಲಿ ನೀರು ಕಡಿಮೆಯಾಗಿ ವಾಸುದೇವನು ಬಹುಬೇಗನೆ ನದಿಯನ್ನು ದಾಟಿ ಗೋಕುಲವನ್ನು ಸೇರಿದನು. ಈ ಸಂಗತಿಯು ನಮ್ಮ ಹಿಂದೂಜನರಿಗೆ ತಿಳಿಯದ ವಿಷಯವಲ್ಲ. ಆದರೆ ಈಗ ಈ ವಿಷಯವನ್ನು ಕಣ್ಣಾರ ನೋಡಿ ಸಂತೋಷಪಡುವಂತೆ ಇದನ್ನು ತಯಾರಿಸಿರುವೆವು. ಈ ಬಟ್ಟಲಿನಲ್ಲಿ ನೀರು ಹಾಕಿದರೆ ಒಂದು ಬೊಟ್ಟಾದರೂ ಚೆಲ್ಲುವದಿಲ್ಲ. ಯಾವಾಗ ಶ್ರೀ ಕೃಷ್ಣನ ಕಾಲಿಗೆ ನೀರು ತಗಲುತ್ತೋ ಆಗ ನೀರು ತನ್ನಷ್ಟಕ್ಕೆ ತಾನೇ ಕೆಳಭಾಗದಿಂದ ಸುರಿದುಹೋಗುವದು. ಬಟ್ಟಲಿನಲ್ಲಿ ರಂಧ್ರವಿಲ್ಲ. ಇದನ್ನು ನೋಡುವವರಿಗೆ ಆಶ್ಚರ್ಯವನ್ನುಂಟುಮಾಡುವದು.



ಕ್ರಯ 1ಕ್ಕೆ 2—0—0.

ಲಿಂಗದ ಕಾಯಿಗಳು.

ಈ ಕರಡಿಗೆಗಳನ್ನು ಜರ್ಮನ್ ಬೆಳ್ಳಿಯಿಂದ ಮಾಡಿ ಸಾಚಾಬೆಳ್ಳಿಯ ಗಿಲೀಟು ಕೊಟ್ಟಿದೆ. ಎಂದಿಗೂ ಕಪ್ಪಾಗದು. ಬಣ್ಣಕ್ಕೆ ಗ್ಯಾರಂಟಿ ಕೊಡುತ್ತೇವೆ. ಶ್ರೀಮಂತರೂ ಗರೀಬರೂ ಸಹ ಉಪಯೋಗಿಸಲು ಲಾಯಖಾದವು. ಕ್ರಯ 1ಕ್ಕೆ 0—12—0.

ವಿಳಾಸ:—ಧೈರ್ಯಲಕ್ಷ್ಮಿ ಅಂಡ್‌ಕೋ,
48 ಪೋ|| ಬಾ|| ನಂ. 265, ಮದರಾಸು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೨—೪—೦; ಅನಂತರ ಪ್ರತಿ ೧೦೦ ಕ್ಕೂ ೧—೨—೦; ಹಳದೀ ಗ್ಲೆಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೪—೦; ಅನಂತರ ಪ್ರತಿ ೧೦೦ ಕ್ಕೂ ೧—೦—೦; ಬಿಳಿ ಗ್ಲೆಜ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೨—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಪ್ರಕಟನೆ.

ಶ್ರೀಮದಥಣಿ ಶಿವಯೋಗೀಶ ಚರಿತ್ರ ಎಂಬ ಆಧುನಿಕ ಪುರಾಣವು ಷಟ್ಪದೀರೂಪವಾಗಿ ದಾವಣಗೇರಿ ತೆಲಗಿ ಮಠದ ವೇ|| ಪಂಡಿತ ಟಿ. ಯಂ. ಚಂದ್ರಶೇಖರಶಾಸ್ತ್ರಿಗಳಿಂದ ರಚಿಸಲ್ಪಟ್ಟು ವಿಕರಿಗೆ ಸಿದ್ಧವಾಗಿದೆ. ಬೆಲೆ 0-12-0. [12-7]

ವಿಳಾಸ—ಟಿ. ಯಂ. ಚಂದ್ರಶೇಖರಶಾಸ್ತ್ರಿ,
ತೆಲಗಿಮಠ, ದಾವಣಗೆರೆ.

ಸತ್ಯಮೇವಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪಥ್ಯ. ಮದನೋದ್ಭವಗುಳಿಗೆ. ಇಲ್ಲ

(ಗುಣವಾಗದಿದ್ದರೆ ಹಣ ಪರತ.)

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಶೀಘ್ರಪಾತ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಹ್ಲಾದಕ, ಇಂದ್ರಿಯಸ್ತಂಭಕ, ಗರ್ಮಿ, (ಹಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ (ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 24

ಪುರುಷನ ಇಂದ್ರಿಯಕ್ಕೆ ಮುಷ್ಠಮೈಥುನದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ದೃಢತ್ವವನ್ನುಂಟುಮಾಡಿ, ರತಿಸುಖವನ್ನ ಸುಖಿಸಲು ಶಕ್ತಿಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಸಯೋಗಿಸಬೇಕು. ಕಿಮ್ಮತ್ತು ಬಾಟ್ಲಿಗೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಪ್ರತ್ಯಕ್ಷ ಪರೀಕ್ಷೆ ಉತ್ತಮ.

ವಿಳಾಸ—ವೈದ್ಯ ಜಿ. ಎಸ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಉತ್ತರಕನ್ನಡ.

ಮೈಸೂರು ಸ್ಟಾರ್.

೧೯೨೩ ನೆ ಇಸವಿಯು ಜುಲೈ ತಾ|| ೮ ನೆಯ ಭಾನುವಾರ.

THE AMILDARI SERVICE IN MYSORE.

The Amildari Service is the most important branch of Executive Service in the State, which is immediately concerned with the Economic improvement and the Educational advancement of the people in rural parts. Hence, it is very essential that this service should consist of men who are familiar with life in villages, which have been inhabited by people belonging to the Backward communities. We need not say that candidates belonging to these communities will be in a better position to discharge the official duties expected of them more smoothly and efficiently than those belonging to a community, which has kept itself aloof from other communities from the very begining. The Government in their recent order relating to direct recruitment to the Amildari service have decided to take in six probationers of whom two will be from the Brahmin community. Amongst the existing number of Amildars, about one third of them belong to other communities, and the rest belong to the Brahmin community. Is there any sense of proportion in the above arrangement, which seems to have been based upon an order passed in January 1923? There is no justification whatever to reserve one third of the appointments to a community, which forms only three per cent. of the total population of the State, and which is already being represented in all branches of service in over-whelmingly large numbers. We hear that there are already more than one hundred applicants from amongst the Backward communities seeking for these appointments. We have heard of proportionate representation in service and in public bodies, but this reservation of 33⅓ per cent., to the small class forming a microscopic minority of the population of the State is the worst form of it we have ever come across. The Government could not have found a better method for perpetuating the monopoly of the class than this. Just recently the Madras Government recruited about 8 officers to the Income Tax Department and there even without an order as we have on the Miller Committee Report here, but in fairness to all the communities gave only one of the place to Brahmin community. Why the Mysore Government alone should set at naught the accepted principles and be so partial to that class we cannot understand. We are left in doubt as to the reasons for this preferential treatment of the community and it is, we need hardly say, the duty of the Government to explain it. The theory of dearth of candidature among backward classes was a favourite one with the Government formerly and it used to be trotted out on all occasions when the backward classes demanded their claims. We wonder what they have to advance now when there are enough of candidates and to spare among the backward classes. Is it so difficult to obtain justice, so long deferred in our State? Will the Government see their way at least now to meet out fair—not special or partial—treatment to the backward classes by giving all the places to them.

SRI JAGADGURU JAYADEVA VEERASHAIVA HOSTEL.

It is with great pleasure that we hear of the completion of the above building, the foundation stone of which was laid by His Highness the Yuvaraja in the month of October 1919. The Hostel is now said to be ready for occupation and to accomodate more than one hundred students. The beautiful pile of buildings is situated in Sheshadri Road, Bangalore City, which is one of the best and healthiest localities, just behind the Race Course. This is all the outcome of the generous gift of His Holiness the Jagadguru of Chitaldrug, who has contributed Rs. 30,000 with a promise to make a further contribution of Rs. 10,000 to the amount of Rs. 10,000 which had been paid long ago by the late Mr. Attibele Sidlabasappa. The Government of His Highness the Maharaja have paid Rs. 20,000 and the site has been given by them free of cost. Dewan Bahadur Rajasabhabhushana Mr. K. P. Puttanna Chetty, C.I.E. the President of the Mysore Lingayet Education Fund Association, under whose unremitting attention the work has been accomplished, said, at the time of the laying of the foundation stone, "we are confident that the building will soon rise and will in every way proves worthy of the august and noble hearted personage, who will lay the Foundation Stone with his own hand and of the saintly Jagadguru whose name it will bear on completion." The above words have become literally true. In this connection we wish to express our gratitude on behalf of the Veerashaiva community to our Dewan Mr. A. R. Banerji who took prompt action as the First Councillor then, in the matter of handing over the site to the Association, which had been pressingly requesting the Government for it since 1908, and to the Inspector General of Education in Mysore, who is said to have rendered timely and sympathetic help.

ದೇವಾದಾಯ ಬ್ರಹ್ಮಾದಾಯ ಶಾಸನ

(ರಿಲಿಜಿಯಸ್ ಎಂಡೌಮೆಂಟ್ ಬಿಲ್ಲು).

ಜನರ ಆಚಾರವ್ಯವಹಾರಗಳಿಗೂ ಸ್ವರ್ಗ ಅಥವಾ ಮುಕ್ತಿ ಪ್ರಾಪ್ತಿಗೂ ಸಾಧಕಗಳಾದ ಮಠಗಳೂ ದೇವಸ್ಥಾನಗಳೂ ಏರ್ಪಡಿಸಲ್ಪಟ್ಟು ಅವುಗಳ ರಕ್ಷಣೆಗಾಗಿ ರಾಜರುಗಳಿಂದಲೂ ಭಕ್ತ ಪ್ರಜೆಗಳಿಂದಲೂ ಭೂಮಿ, ದ್ರವ್ಯ, ವಸ್ತ್ರಾಭರಣಾದಿಗಳು ಕೊಡಲ್ಪಟ್ಟೂ ಈಗಲೂ ಕೊಡಲ್ಪಡುತ್ತಲೂ ಇರುವವಷ್ಟೆ ? ಹೀಗೆ ಧರ್ಮರಕ್ಷಣೆಗಾಗಿ ಏರ್ಪಟ್ಟ ಮಠಗಳ ಅಧಿಕಾರಿಗಳು ಅರಿಷಡ್ವರ್ಗಾಧೀನರಾಗಿ ತಮ್ಮ ಕರ್ತವ್ಯಕರ್ಮವನ್ನು ಮರೆತು ಮಠದ ಆಸ್ತಿಯನ್ನೆಲ್ಲಾ ನಿರರ್ಗಳವಾಗಿ ಹಾಳ್ಮಾಡಿರುವ ಮತ್ತು ಮಡುತ್ತಿರುವ ಉದಾಹರಣೆಗಳೆಷ್ಟೋ ನಮ್ಮ ಕಣ್ಣೆದುರಿಗಿರುವುವು. ಇವರು ಭಕ್ತಾದಿಗಳಿಂದ ಎತ್ತಿತರುವ ದ್ರವ್ಯವನ್ನು ಸದ್ವಿನಿಯೋಗ ಅಥವಾ ದುರ್ವಿನಿಯೋಗ ಮಾಡುತ್ತಾರೆಂಬುದು ಗೊತ್ತಾಗಲು ಅವಕಾಶವಿಲ್ಲವಾಗಿದೆ. ಇದರಿಂದ ಮಠಾಧಿಪತಿಗಳು, ಕಾಣಿಕೆ ರೂಪವಾಗಿ ಬರುವ ದ್ರವ್ಯವೆಲ್ಲವೂ ಸಾರ್ವಜನಿಕವಾದುದರಿಂದ ಅದು ಜನೋಪಯುಕ್ತವಾದ ಕಾರ್ಯಗಳಿಗೆ ಉಪಯೋಗಿಸಲ್ಪಡತಕ್ಕುದೆಂಬುದನ್ನು ಮರೆತು ಸ್ವಯಾರ್ಜಿತವಾದ ಸ್ವತ್ತೆಂದು ಭಾವಿಸಿ ಮನಬಂದಂತೆ ವಿನಿಯೋಗಿಸುವರಲ್ಲದೆ, ತಮ್ಮ ಪೂರ್ವಾಶ್ರಮದ ಅನುಬಂಧಿಗಳಿಗೆ ಕೊಟ್ಟು ಮಠವನ್ನು ಶೂನ್ಯವನ್ನಾಗಿ ಮಾಡಿರುವ ದೃಷ್ಟಾಂತಗಳನೇಕವಿರುವುವು. ಶಿಷ್ಯರಿಂದೆತ್ತಿತಂದ ದ್ರವ್ಯವನ್ನು ಶಿಷ್ಯರ ಆಚಾರವ್ಯವಹಾರಗಳಿಗೂ, ವಿದ್ಯಾಬುದ್ಧಿಗೂ ವಿನಿಯೋಗಿಸುವ ಮಠಾಧಿಪತಿಯು ನೂರರಲ್ಲಿ ಒಬ್ಬನು ಸಹ ಸಿಕ್ಕುವುದು ಕಷ್ಟವಾಗಿದೆ. ಆದರೆ ವಿಷಯ ಲಂಪಟಕ್ಕೆ ಶಿಲ್ಕಿ ಪರಿಶುದ್ಧವಾದ ತಮ್ಮಾಶ್ರಮವನ್ನು ನರಕಪ್ರಾಯವಾಗಿ ಮಾಡಿಕೊಂಡು ನರಳುತ್ತಿರುವವರೇ ಹೆಚ್ಚು. ಇದೂ ಅಲ್ಲದೆ ಅನೇಕ ಮಠಪತಿಗಳು ತಮ್ಮ ಶಿಷ್ಯರ ಅನುಮತಿಯಿಲ್ಲದೆ ತಮ್ಮ ಪೂರ್ವಾಶ್ರಮದ ಅನುಬಂಧಿಗಳನ್ನಾಗಲಿ ಅಥವಾ ಮತ್ತಾರನ್ನಾಗಲಿ ವಿದ್ಯೆ ಜಿತೇಂದ್ರಿಯತ್ವಾದಿ ಗುಣಶೀಲಗಳನ್ನು ಪರಿಶೀಲಿಸದೆ ತಮ್ಮುತ್ತರಾಧಿಕಾರಿಗಳನ್ನಾಗಿ ಮಾಡಿ ತನ್ಮೂಲಕ ಶಿಷ್ಯರುಗಳಿಗೆ ಮಠದಮೇಲಿರುವ ಅಭಿಮಾನವು ತಪ್ಪಿಹೋಗಲು ಅವಕಾಶ ಕಲ್ಪಿಸಿಕೊಟ್ಟಿರುವುದನ್ನೂ, ತಮ್ಮ ಜೀವಿತಕಾಲದಲ್ಲಿ ಉತ್ತರಾಧಿಕಾರಿಗಳನ್ನು ನಿಯಮಿಸದೆ ಹೋಗಿ ಶಿಷ್ಯರುಗಳೊಳಗೆ ತದ್ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿ ಪಾರ್ಟಿಗಳೇರ್ಪಟ್ಟು ಅವರ ಒಡಿದಾಟದಿಂದ ಮಠಗಳೂ, ಅವುಗಳ ಆಸ್ತಿಗಳೂ ಹಾಳಾಗಿರುವುದನ್ನೂ ಯಾರು ಕಾಣರು ? ಇದರಂತೆಯೇ ದೇವಾಲಯಗಳ ಸ್ಥಿತಿಯಾದರೂ ಶೋಚನೀಯವಾಗಿದೆ. ಅನೇಕ ದೇವಾಲಯಗಳಿಗೆ ಸಾವಿರ ಲಕ್ಷಗಟ್ಟಲೆ ವರಮಾನವುಂಟು. ಅದರಲ್ಲಿ ಎಷ್ಟು ದೇವಾಲಯಗಳಿಗೆ ಸದ್ವಿನಿಯೋಗವಾಗುತ್ತದೆಂಬುದು ಗೊತ್ತಾಗುವುದಿಲ್ಲವು. ಕೆಲ ದೇವಸ್ಥಾನಗಳಿಗೆ ಜವಾನ್ದಾರರುಗಳೇ ಮೊದಲಾದವರು ವಂಶಪರಂಪರೆಯಾ ಧರ್ಮದರ್ಶಿಗಳಾಗಿರುವರಾದರೂ ದೇವಾಲಯಗಳ ಹಣದಲ್ಲಿ ಬಹುಭಾಗವು ಸದ್ವಿನಿಯೋಗವಿಲ್ಲದೆ ಉಳಿದಿರುತ್ತದೆ. ಇನ್ನೂ ಅನೇಕ ದೇವಾಲಯಗಳ ವರಮಾನವು ದುರ್ವಿನಿಯೋಗವಾಗಿ ದೇವರ ದೀಪಾರಾಧನೆಗೂ ಕಟ್ಟಡದ ಜೀರ್ಣೋದ್ಧಾರಕ್ಕೂ ಅವಕಾಶವಿಲ್ಲದೆ ಹೋಗಿರುವುದು. ಈ ರೀತಿಯಾಗಿ ಮಠ ದೇವಸ್ಥಾನಗಳ ದ್ರವ್ಯವು ಹಾಳಾಗುವುದನ್ನು ತಡೆಯಲು ಶಿಷ್ಯರುಗಳಿಗಾಗಲಿ ಸರ್ಕಾರದವರಿಗಾಗಲಿ ಈವರೆಗೆ ಯಾವ ಅಧಿಕಾರವೂ ಇಲ್ಲದಿರುವುದರಿಂದ, ಮದ್ರಾಸು ಶಾಸನಸಭೆಯವರು ದೇವಾದಾಯ ಬ್ರಹ್ಮಾದಾಯಕ್ಕೆ ಸಂಬಂಧಪಟ್ಟ ಒಂದು ಶಾಸನವನ್ನು ಹೊಸದಾಗಿ ಏರ್ಪಡಿಸಿರುತ್ತಾರೆ.

ಈ ಶಾಸನದಿಂದ ಮಠ ದೇವಾಲಯಗಳ ಆಡಳಿತಗಳನ್ನು ಧರ್ಮಾಧಿಕಾರಿಗಳ ಸಂಘದ ಮೇಲ್ವಿಚಾರಣೆಗೊಳಪಡಿಸುವುದು, ವ್ಯವಹಾರಗಳೇನಾದರುಂಟಾದಲ್ಲಿ ಅವುಗಳ ವಿಚಾರಣೆ ಮಾಡಲು ಒಂದು ಸೆಂಟ್ರಲ್ ಬೋರ್ಡನ್ನು ಏರ್ಪಡಿಸುವುದು, ಧರ್ಮಾಧಿಕಾರಿಸಂಘಗಳಿಗೆ ಯುಕ್ತವಾಗಿ ತೋರುವ ಧರ್ಮಕಾರ್ಯಗಳಿಗೆ ಮಠ ದೇವಾಲಯಗಳ ದ್ರವ್ಯವನ್ನು ಯಥೋಚಿತವಾಗಿ ವಿನಿಯೋಗಿಸುವುದು, ಉತ್ತರಾಧಿಕಾರಿಗಳನ್ನು ಗೊತ್ತುಮಾಡದೆ ದೈವಾಧೀನರಾಗುವ ಮಠಾಧಿಕಾರಿಗಳ ಸ್ಥಾನಕ್ಕೆ ಉತ್ತರದಾರರ ಸಂಬಂಧದಿಂದಲೋ ಬೇರೆ ಉಚಿತರೀತಿಯಿಂದಲೋ ಉತ್ತರಾಧಿಕಾರಿಗಳನ್ನಾರಿಸಿ ನಿಯಮಿಸುವುದು ಇತ್ಯಾದಿ ಅಧಿಕಾರಗಳು ಲಭ್ಯವಾಗುವುವು. ಈ ನೂತನ ಶಾಸನದ ಪ್ರಕಾರವೇರ್ಪಡುವ ಮೇಲ್ವಿಚಾರಕ ಸಂಘಗಳು ಸದ್ವಿನಿಯೋಗವಿಲ್ಲದೆ ಬಿದ್ದಿರುವ ದೇವಾಲಯಗಳ ಹಣದಲ್ಲಿ ಕೆಲಭಾಗವು ಧಾರ್ಮಿಕ ವಿದ್ಯಾಭಿವೃದ್ಧಿಗೂ ದೇವತೋತ್ಸವಕಾಲಗಳಲ್ಲಿ ನೆರೆಯುವ ಜಾತ್ರೆಯವರ ಜಲವಸತಿ ಆರೋಗ್ಯಕಲ್ಪನೆ ಮೊದಲಾದ ಉಪಯುಕ್ತಕಾರ್ಯಗಳಿಗೂ ಉಪಯೋಗಿಸಲ್ಪಡುವ ಏರ್ಪಾಟನ್ನು ಮಾಡಲವಕಾಶವಿರುತ್ತದೆ. ಅಲ್ಲದೆ ಸರ್ಕಾರದವರು ಗೊತ್ತುಮಾಡಿಕಳುಹಿಸುವ ಆಡಿಟರುಗಳಿಂದ ಮಠ ದೇವಾಲಯಗಳ ಲೆಖ್ಖಗಳು ಆಗಾಗ್ಗೆ ಪರಿಶೋಧಿಸಲ್ಪಡುವುದರಿಂದ ಹಣದ ವ್ಯತ್ಯಾಸವು ಗೊತ್ತಾಗುವುದು. ಈ ಕಾರಣಗಳಿಂದ ಮಠ ದೇವಸ್ಥಾನಗಳ ಆಸ್ತಿಯರಕ್ಷಣೆಗೆ ಈ ಶಾಸನವು ವಿಶೇಷ ಸಹಾಯಕವಾಗುವುದೆಂಬುದರಲ್ಲಿ ಸಂದೇಹವಿಲ್ಲವು. ಆದರೂ ನಿರಂಕುಶಾಧಿಕಾರಿಗಳಾಗಿ ಮಠಪತಿಗಳು ಈ ಶಾಸನ ನಿರ್ಮಾಣದಿಂದ ತಮ್ಮ ಸ್ವೇಚ್ಛಾವಿಹಾರಕ್ಕೆ ಭಂಗವುಂಟಾಗುತ್ತದೆಂಬ ಶಂಕೆಯಿಂದ ದೇವಾದಾಯ ಬ್ರಹ್ಮಾದಾಯಗಳ ವಿಷಯದಲ್ಲಿ ಸರ್ಕಾರದವರು ಪ್ರವರ್ತಿಸಿ ನಿರ್ಬಂಧವನ್ನು ಕಲ್ಪಿಸಬಾರದೆಂದು ವಾದಿಸುತ್ತಿರುವರಲ್ಲದೆ ವೃತ್ತ ಪತ್ರಿಕೆಗಳ ಮೂಲಕ ಕೋಲಾಹಲವನ್ನು ಮಾಡಿಸುತ್ತಿರುವರು. ಈ ಸ್ವೇಚ್ಛಾ ವಿಹಾರಕಾಂಕ್ಷಿಗಳಾದ ಮಠಪತಿಗಳ ಅನುರಾಗಕ್ಕೆ ಪಾತ್ರರಾಗಿಯೋ, ಈ ಶಾಸನದಿಂದ ಕಾಲಕ್ರಮೇಣ ಮಠ ದೇವಸ್ಥಾನಗಳಾಡಳಿತವು ಪರಮತಿಯರ ವಶವಾಗುವುದೆಂಬ ಶಂಕೆಯುಳ್ಳವರಾಗಿಯೋ ಕೆಲ ಜನರು ಅಲ್ಲಲ್ಲಿ ಸಭೆಗಳನ್ನು ಮಾಡಿ ಶಾಸನವನ್ನು ಅನುಷ್ಠಾನಕ್ಕೆ ತರಕೂಡದೆಂದು ರೆಜಲ್ಯೂಷನುಗಳನ್ನು ಮಾಡಿ ಮದ್ರಾಸ್ ಗೌರ್ನರಿಗೂ ವೈಸ್‌ರಾಯರಿಗೂ ತಂತಿ ಮೂಲಕವೂ ವಿಜ್ಞಾಪನ ಪತ್ರಿಕೆಗಳ ಮೂಲಕವೂ ಅರಿಕೆಮಾಡಿಕೊಳ್ಳುತ್ತಿದಾರೆ. ಇದೇ ರೀತಿ ನಮ್ಮ ಸಂಸ್ಥಾನದ ಕೆಲ ಜನರು, ಮದ್ರಾಸು ಸರ್ಕಾರದಿಂದ ಮಾಡಲ್ಪಟ್ಟ ಈ ಶಾಸನವು ನಮಗೆ ಸಂಬಂಧಪಟ್ಟುದಲ್ಲವಾದರೂ, ನಿರಂಕುಶಾಧಿಕಾರಬಲದಿಂದ ಸ್ವೇಚ್ಛಾವಿಹಾರಿಗಳಾಗಿರುವ ಮಠಪತಿಗಳ ಪ್ರೇರಣೆಯಿಂದ ಶಾಸನ ನಿರೋಧಕ ಸಭೆಗಳನ್ನು ಮಾಡಿ, ಭಾರತೀಯರ ಮತಜಾತಿ ವಿಚಾರಗಳಲ್ಲಿ ಬ್ರಿಟಿಷ್ ಸರ್ಕಾರದವರು ಪ್ರವೇಶಿಸುವುದಿಲ್ಲವೆಂದು ವಿಕ್ಟೋರಿಯಾಮಹಾರಾಣಿಯವರು ಮಾಡಿರುವ ವಾಗ್ದಾನಕ್ಕೆ ವಿರುದ್ಧವಾಗಿ ಈ ಶಾಸನವನ್ನು ಅನುಷ್ಠಾನಕ್ಕೆ ತರಕೂಡದೆಂದು ನಿರ್ಧಾರಗಳನ್ನು ಮಾಡಿ ಮದ್ರಾಸು ಗೌರ್ನರಿಗೂ ವೈಸ್‌ರಾಯರಿಗೂ ಕಳುಹಿಸುತ್ತಿರುವರು. ಅಲ್ಲದೆ ಗೌರ್ನರಲ್ಲಿಗೆ ಒಂದು ರಾಯಭಾರವನ್ನು ಆಗಲೇ ಕಳುಹಿದ್ದಲ್ಲದೆ ವೈಸ್‌ರಾಯರಲ್ಲಿಗೂ ಕಳುಹಲು ಯೋಚಿಸಿರುವರು. ನಮ್ಮ ಮೈಸೂರು ಸೀಮೆಗೆ ಸೇರಿದ ಸೋಸಲೆ, ನಂಜನಗೂಡು, ಹೊಳೇನರಸೀಪುರ ಮೊದಲಾದ ಕಡೆಗಳಲ್ಲಿರುವ ಕೆಲ ಮಠಪತಿಗಳು ಮಠದಾಸ್ತಿಯನ್ನು ತಮ್ಮನುಬಂಧಿಗಳಿಗೆ ಕೊಟ್ಟೋ ಅಥವಾ ಮತ್ತಾವ ವಿಧದಲ್ಲೋ ಹಾಳ್ಮಾಡುತ್ತಿದ್ದುದುದರಿಂದ ಸರ್ಕಾರದವರು ಪ್ರವೇಶಿಸಿ ಸರಿಪಡಿಸಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಎಷ್ಟೋವೇಳೆ ಕೆಲಮೆಂಬರುಗಳಿಂದ ತತ್ರಾಪಿ ಆ ಮಠಗಳ ಶಿಷ್ಯರಾದ ಮೆಂಬರುಗಳಿಂದಲೇ ಪ್ರಾರ್ಥಿಸಲ್ಪಟ್ಟಿರುವುದನ್ನು ತಿಳಿದವರೂ, ಅದರಲ್ಲಿ ಭಾಗಿಗಳಾಗಿದ್ದವರೂ ಈ ಶಾಸನನಿರೋಧಕಾರ್ಯಭಾಗದಲ್ಲಿ ತೊಡಗಿರುವುದು ಆಶ್ಚರ್ಯವೇಸರಿ. ಇವರು ಮಠಪತಿಗಳ ಪ್ರೇರಣೆಯಿಂದಲ್ಲದೆ ಮಠ ದೇವಾಲಯಗಳ ಆಡಳಿತವು ಕಾಲಕ್ರಮೇಣ ಪರಮತೀಯರ ವಶವಾಗಿ ಧರ್ಮ ಲೋಪಕ್ಕವಕಾಶವಾಗುವುದೆಂಬ ಶಂಕೆಯಿಂದ ನಿರೋಧಿಸುವುದಾಗಿದ್ದರೆ, ಹಾಗೆ ಧರ್ಮಸಂಸ್ಥೆಗಳು ಸ್ವಧರ್ಮ ವಿರೋಧಿಗಳ ವಶವಾಗುವುದು ಅಸಂಭವವಾದ ಪ್ರಯುಕ್ತ, ಸ್ವತಂತ್ರಾಧಿಕಾರಿಗಳಾಗಿ ಸ್ವೇಚ್ಛಾಪ್ರವರ್ತಿಸುವ ಮಠಪತಿಗಳ ವಿನಾ ಭಯಪಡಬೇಕಾದ ಕಾರಣವಿಲ್ಲವು. ಈ ಶಾಸನದಿಂದ ಮಠ ದೇವಾಲಯಗಳಿಗೆ ಎಷ್ಟೋ ಉಪಕಾರವಾಗುತ್ತೆನ್ನುವುದರಲ್ಲಿ ಸಂದೇಹವಿಲ್ಲವಾದರೂ ಇದರ ಮಸೂದೆಯ ಮೇಲೆ ನಿಯುಕ್ತ ಸಂಘದವರು ವಿಮರ್ಶೆಮಾಡಿ ಸೂಚಿಸಿದ ಸವರಣೆಗಳಲ್ಲಿ, ಧರ್ಮಾಧಿಕಾರಿ ಸಂಘಗಳಮೇಲೆ 3 ರಿಂದ 5 ರ ವರೆಗೆ ಸಭಿಕರನ್ನೊಳಗೊಂಡ ಒಂದು ಸೆಂಟ್ರಲ್ ಬೋರ್ಡು ಇರಬೇಕೆಂದೂ, ಆ ಬೋರ್ಡಿನ ಅಧ್ಯಕ್ಷರಿಗೆ ಪ್ರತಿತಿಂಗಳಲ್ಲಿ 1200 ರೂ. ಗಳಂತೆಯೂ ಸಭಿಕರಿಗೆ 800 ರೂ. ಗಳಂತೆಯೂ ಸಂಬಳ ಸಲ್ಲುವುದಕ್ಕೂ ಬೋರ್ಡಿನ ಇತರ ವೆಚ್ಚಕ್ಕೂ ಮಠ ದೇವಾಲಯಗಳುತ್ಪತ್ತಿಯಲ್ಲಿ 100ಕ್ಕೆ 3 ರಷ್ಟು ಎತ್ತಿಕೊಡಬೇಕೆಂದೂ ಮಾಡಿರುವುದು ಸಮರ್ಪಕವಾಗಿಲ್ಲವು. ಇದೊಂದು ವಿಚಾರವು ಸರಿಪಡಿಸಲ್ಪಟ್ಟಲ್ಲಿ ಶಾಸನವು ಸರ್ವ ಸಮ್ಮತವಾಗಿರುವುದೆಂದು ಖಂಡಿತವಾಗಿ ಹೇಳಬಹುದು. ಯಾವುದೋ ಅಂತರಿಕಾಭಿಪ್ರಾಯವನ್ನಿಟ್ಟುಕೊಂಡು ಶಾಸನವನ್ನು ನಿರೋಧಿಸುವ ಕೆಲವರ ಮಾತಿಗೆ ಜನರು ಕಿವಿಕೊಡದೆ ತಾವು ಮಠ ದೇವಾಲಯಗಳ ಕಾರ್ಯನಿರ್ವಾಹಕ್ಕಾಗಿ ಕೊಡುವ ಕಾಣಿಕೆಯ ದ್ರವ್ಯವು ಈಗಿನಂತೆ ದುರ್ವಿನಿಯೋಗವಾಗದೆ ಸರ್ವ ಜನೋಪಯುಕ್ತಕಾರ್ಯಗಳಿಗೆ ಸದ್ವಿನಿಯೋಗವಾಗಲು ಸಾಧಕವಾಗಿರುವ ಈ ಶಾಸನವನ್ನು ಅನುಮೋದಿಸದೆ ಇರಲಾರರೆಂದು ನಿರೀಕ್ಷಿಸುತ್ತೇವೆ.

ಬೊಂಬಾಯಿನಲ್ಲಿ ಮಳೆಯಾಧಿಕ್ಯವು.

ಕೆಲ ದಿನಗಳ ಹಿಂದೆ ಬೊಂಬಾಯಿನಲ್ಲಿ ಜನರು ಮಳೆ ಬರಲ್ಲಿಲ್ಲವೆಂದು ತಪಿಸುತ್ತಿದ್ದವರು ಕಳೆದ ತಾ|| ೫ರಿಂದ ೩ ದಿವಸಗಳವರೆಗೆ ಮಳೆಯು ಬಿಡದೆ ಸುರಿಯುತ್ತಿರುವುದರಿಂದ ಸ್ವಲ್ಪ

1923ನೇ ಜುಲೈ ಜಾಗಾಯ್ತು ಬೆಂಗಳೂರು ಸಿಟಿ ಲಾಲ್ ಬಾಗ್ ರೋಡಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಡುವ ಸರ್ಕಾರಿ ಪಂಚಮ ಬೋರ್ಡಿಂಗಿಗೆ ಮಾಹೆಯಾನ 10 ರೂಪಾಯಿ ಮೇರೆ ಒಬ್ಬ ಮ್ಯಾನೇಜರೂ ಮತ್ತು 20 ರೂಪಾಯಿ ಮೆರೆ ಒಬ್ಬ ಎಜುಕೇಷನಲ್ ಸೂಪರ್ ವೈಜರ್ ಬೇಕಾಗಿರುವುದರಿಂದ ಈ ಕೆಲಸಕ್ಕೆ ಇಷ್ಟ ಪಡುವವರು ಸರ್‌ಟಿಫಿಕೇಟ್‌ಸೊಡನೆ ಅಪ್ಲಿಕೇಷನ್‌ಗಳನ್ನು ಈ ಮಾಹೆ 27ನೇ ತಾರೀಕಿನ ಒಳಗಾಗಿ ವಿದ್ಯಾಭ್ಯಾಸದ ಸರ್ಕಲ್ ಇನ್ಸ್‌ಪೆಕ್ಟರ್ ಸಾಹೇಬರವರಿಗೆ ಗುಜರಾಯಿಸಿಕೊಳ್ಳತಕ್ಕದ್ದು.

M. A. TIRUMALACHAR,
Secretary.
Panchama Boarding Home.

Dated 21/6/23.

ಶಿವಮೊಗ್ಗ ವೀರಶೈವ ಹಾಸ್ಟಲ್.

ಈ ಹಾಸ್ಟಲಿನಲ್ಲಿ ಅಭ್ಯಾಸಮಾಡುತ್ತಿದ್ದು ಕಳೆದ ಯೂನಿವರ್ಸಿಟಿ ಎಂಟ್ರನ್ಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಮೂರು ವಿದ್ಯಾರ್ಥಿಗಳು ಬಿ. ಎ. ಕ್ಲಾಸಿಗೆ ಸೇರಿ ಓದುವುದಕ್ಕೆ ತಕ್ಕ ಅನುಕೂಲವಿಲ್ಲದೆ ಪೇಚಾಡುತ್ತಿದ್ದುದನ್ನು ಕಂಡು ಈ ಟವನ್ನಿನ ಕೆಲವು ವೀರಶೈವ ಪ್ರಮುಖರು ಸದರಿ ವಿದ್ಯಾರ್ಥಿಗಳಿಗೆ ಪ್ರತಿಯೊಬ್ಬರಿಗೂ ಮಾಹೆಯಾನ 101 ರೂಪಾಯಿ ಸ್ಕಾಲರ್‌ಷಿಪ್ ಕೊಡಬೇಕೆಂದು ಬರೆದು ಕೆಳಗಿನ ಪಟ್ಟಿಯಲ್ಲಿರುವಂತೆ ಚಂದಾ ಹಾಕಿರುವುದಲ್ಲದೆ 3 ವರ್ಷ ಇದೇ ರೀತಿ ಕೊಡುವುದಕ್ಕೆ ಒಪ್ಪಿರುವುದು ತುಂಬಾ ಶ್ಲಾಘನೀಯವಾದ ವಿಷಯವಾಗಿದೆ. ಸದರಿ ವಿದ್ಯಾರ್ಥಿಗಳು ಕಷ್ಟಪಟ್ಟು ಅಭ್ಯಾಸಮಾಡಿ ಮೊದಲನೆ ಸಾರಿಯೇ ಬಿ. ಎ. ಪರೀಕ್ಷೆಯಲ್ಲಿ ಉತ್ತಮ ವರ್ಗದಲ್ಲಿ ಉತ್ತೀರ್ಣರಾಗಿ ಸಾಹಾಯ್ಯಮಾಡಿದವರ ಮನಸ್ಸಂತೋಷಗೊಳಿಸುವರೆಂದು ಕೋರಿದೆ.

ಮ|| ರಾ|| ಗಳಾದ ದುಮ್ಮಿ ಪಂಚಾಕ್ಷರಪ್ಪನವರು 100 ರೂ., ಜಿ. ಸಿ. ಮಹಲಿಂಗಪ್ಪನವರು 50 ರೂ., ಬಿ. ರುದ್ರಪ್ಪನವರು 50 ರೂ., ಮೂರುಶಾವು ಚನ್ನವೀರಪ್ಪನವರು 25 ರೂ., ದೊಡ್ಡ ತಮ್ಮಣ್ಣನವರು 25 ರೂ., ಹಿರಿಯೂರು ಮುರಿಗಪ್ಪನವರು 25 ರೂ., ಕೋರಿ ಹಾಲಪ್ಪನವರು 20 ರೂ., ಡಿ. ಆಡಿವಪ್ಪನವರು 15 ರೂ., ನಗರದ ಗುರುಶಾಂತಪ್ಪನವರು 5 ರೂ., ಜುಮ್ಲಾ 315 ರೂ.

ಎಚ್. ಲಿಂಗಪ್ಪ, ಬಿ. ಎ., ಎಲ್‌ಎಲ್. ಬಿ.,
ವೀರಶೈವ ಹಾಸ್ಟಲ್, ಶಿವಮೊಗ್ಗ.

ತಿಪಟೂರು ಶ್ರೀ ವೀರಶೈವಾನಂದಾಶ್ರಮ.

ಬಡವರಾಗಿಯೂ, ಅನಾಥರಾಗಿಯೂ ಎ. ವಿ. ಸ್ಕೂಲು 2-3 ಫಾರಂ ತರಗತಿಯಲ್ಲಿ ಅಭ್ಯಾಸಮಾಡತಕ್ಕ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಅಭ್ಯಾಸಮಾಡಲು ಅಪೇಕ್ಷೆಯುಳ್ಳವರು ಇದೇ 1923ನೇ ಇಸವಿ ಜುಲೈ 8ರೊಳಗಾಗಿ ತಲುಪುವಂತೆ ಸೆಕ್ರಟರಿಯವರಿಗೆ ಅರ್ಜಿಯನ್ನು ಬರೆದುಕೊಳ್ಳಬೇಕು. ಈ ವರ್ಷ ಧರ್ಮಾರ್ಥವಾಗಿ 30 ಹುಡುಗರ ವಸತಿಗೂ, ಭೋಜನಕ್ಕೂ ಕಮಿಟಿಯವರು ಏರ್ಪಡಿಸಿರುತ್ತಾರೆ. ಚಿಕ್ಕವಯಸ್ಸಿನ ವಿದ್ಯಾರ್ಥಿಗಳಿಗೆ ಮೊದಲು ಪ್ರಿಫರೆನ್ಸು ಕೊಡಲ್ಪಡುತ್ತೆ. III ಫಾರಂ ವಿದ್ಯಾರ್ಥಿಗಳಿಗೆ ಮೊದಲು ಅವಕಾಶಕೊಟ್ಟನಂತರ II ಫಾರಂ ವಿದ್ಯಾರ್ಥಿಗಳಿಗೆ, ಸೀಟು ಖಾಲಿ ಇದ್ದರೆ ಅನುಕೂಲಪಡಿಸುತ್ತೆ. ಈ ಆಶ್ರಮದಲ್ಲಿ ಶ್ರೀ ಚಿತ್ರದುರ್ಗ ಜಗದ್ಗುರು ಪೂಜ್ಯಪಾದರವರು ಸಂಸ್ಕೃತ ಮತ್ತು ವೈದಿಕ ಪಾಠಶಾಲೆಯನ್ನೂ, ಲೈಬ್ರರಿ ಮತ್ತು ವಾಚನಾಲಯವನ್ನೂ ಸ್ಥಾಪಿಸಿದ್ದಾರೆ. ಈ ಪಾಠಶಾಲೆಯಲ್ಲಿ ಕಾವ್ಯ, ನಾಟಕ, ಚಂಪು, ಸಿದ್ಧಾಂತ ಕೌಮುದಿ, ಮತ್ತು ವೈದಿಕ ಭಾಗಗಳು ಅಭ್ಯಾಸಮಾಡಿಸಲ್ಪಡುತ್ತೆ. ಸಂಸ್ಕೃತ, ಮತ್ತು ವೈದಿಕ ಭಾಗಗಳನ್ನು ಅಭ್ಯಾಸಮಾಡತಕ್ಕ 10 ಜನ ವೀರಶೈವ ವಿದ್ಯಾರ್ಥಿಗಳಿಗೆ ಕಮಿಟಿಯವರು ಈ ವರುಷ ಅನುಕೂಲಪಡಿಸಿರುತ್ತಾರೆ. ಅಭ್ಯಾಸಮಾಡಲಪೇಕ್ಷೆಯುಳ್ಳವರು ಮೇಲ್ಕಂಡ ತಾರೀಖಿನೊಳಗಾಗಿ ಅರ್ಜಿ ಬರೆದುಕೊಳ್ಳಬೇಕು. ತಾವು ಬಡವರೆಂಬ ಬಗ್ಗೆ, ಸ್ಥಳದ ದೊಡ್ಡ ಮನುಷ್ಯರ ಸರ್ಟಿಫಿಕೇಟನ್ನು, ಅರ್ಜಿಜೊತೆಯಲ್ಲಿ ಲಗತ್ತಿಸಬೇಕು. ವಿದ್ಯಾರ್ಥಿಯ ವಯಸ್ಸನ್ನು ಖಂಡಿತ ನಮೂದಿಸಬೇಕು.

G. THAMMAYYAH,
Hon. Secretary,
Sri Veerasaivashrama.

Tiptur,
23-6-23.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಪ. ಪ್ರ.

ತಿರಸ್ಕೃತವಾದ ಪತ್ರವ್ಯವಹಾರಗಳು.

(1) ಬಡವರ ಹಿತೈಷಿ ಗೊಲ್ಲರಹಳ್ಳಿ—ರೈತರಿಗೆ ಜೋಡಿದಾರರಿಂದುಂಟಾಗುವ ತೊಂದರೆಯ ನಿವಾರಣಾರ್ಥವಾಗಿ ಸರ್ಕಾರಕ್ಕೆ ಬರೆದುಕೊಳ್ಳಿ.

(2) ಲೋಕಹಿತಚಿಂತಕರ ಡಂಗೂರವು ನಿಮ್ಮ ಲೇಖನವು ಸರ್ವಸಾಮಾನ್ಯವಾಗಿ ಅರ್ಥವಾಗಲೊಲ್ಲದು.

(3) ಬಸವಪುತ್ರ ನಿಮ್ಮ ಲೇಖನವು ನಮ್ಮ ನಿಬಂಧನೆಗೆ ಅನುಸಾರವಾಗಿ ಸ್ಪಷ್ಟವಾಗಿ ಕಾಗದದ ಒಂದು ಕಡೆ ಬರೆಯಲ್ಪಟ್ಟ ವಿನಾ ಪ್ರಕಟನೆಗೆ ಸಾಧ್ಯವಿಲ್ಲವು. [ಪ. ಪ್ರ.]

Mr. GOPALASWAMI IYER AND HIS VAGARIES.

Dear Mr. Editor,

I duly read the subsequent reply of Mr. Iyer to the allegations made against him in your valuable paper of the 8th and 15th April 1923 respectively. I request you to kindly give due publication to this rejoinder of mine.

1. Is it not incumbent upon Mr. Iyer to have bestowed sufficient thought over his sense of responsibility on the occasions of signing "the false declaration" or the pay bills of the Mavalli Librarian clerk when the said clerk is not an whole-time clerk?

2. Is not Mr. Iyer even now aware of the said clerk attending the Wesleyan Mission Girls' School during the mornings of every Saturday, New Moon and other Hindu Festival days, the whole of March and part of April as teacher of the said School?

3. Did Mr. Iyer make or contemplate making any suitable arrangements to look after the affairs of the Reading Room and Library during the unavoidable absence of the said Librarian who cannot devote his undivided attention to the work?

4. Is it not for Mr. Iyer to say whether in view of the irregularities prevailing in the Reading Room and Library the amount allotted to the said Library is being appropriated for the benefit of the public?

5. Is it a fact that Mr. Iyer has raised several loans in the Koramarapalya Society of which he is an Honorary Secretary, without executing bonds in favour of the Society nor paying any interest for the loan in question?

6. If Mr. Iyer poses himself as a public worker, are his actions consistent or in confirmity with the essential requisites of a public worker? If not, are they not liable to be impeached.

Bangalore City,
30th June, 1923.

PRO BONO PUBLICO.

ಚಿಕ್ಕಮಗಳೂರಿಗೆ ಶ್ರೀಮನ್ಮಹಾರಾಜರು ಚಿತ್ತೈಸಿದ್ದುದು

ಶ್ರೀಮನ್ಮಹಾರಾಜರವರ ಸವಾರಿಯು ಚಿಕ್ಕಮಗಳೂರಿಗೆ ಜೂನ್ ತಾ|| 10ನೇ ಭಾನುವಾರ ಸಾಯಂಕಾಲ 6-20 ಕ್ಕೆ ಚಿತ್ತೈಸಿತು. ಶುಕ್ರವಾರ 10 ಗಂಟೆವರೆಗೂ ಇದ್ದು ಟವನ್ನಿನ ಎಲ್ಲಾ ಭಾಗಕ್ಕೂ ಖುದ್ದಾಗಿ ದಯಮಾಡಿಸಿ ಪರಾಂಬರಿಸಿಕೊಂಡು ಬಂದದ್ದಲ್ಲದೆ ಸುತ್ತ ಮುತ್ತಣ ಬೀಕನಹಳ್ಳಿ ಮೊದಲಾದ ಗ್ರಾಮಗಳಿಗೆ ದಯಮಾಡಿಸಿ ಅಲ್ಲಿನ ಪ್ರಜೆಗಳ ಅಹವಾಲನ್ನು ಸಾಕ್ಷಾತ್ತಾಗಿ ಕೇಳಿದುಕೊಂಡು ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಡಲು ಅಪ್ಪಣೆಯನ್ನುಕೊಟ್ಟರು. ಸಾಮಾನ್ಯಪ್ರಜೆಗಳಲ್ಲಿಯೂ ಸಂಭಾಷಣೆ ಮಾಡುತ್ತಿದ್ದುದೂ, ಸಕಲರಿಗೂ ಪರಮಾಶ್ಚರ್ಯವನ್ನುಂಟುಮಾಡುತ್ತಿದ್ದಿತು. ನಮ್ಮ ಸ್ಟೂಡೆಂಟ್ಸ್ ಹೋಮಿಗೂ 13ನೆ ಬುಧವಾರ 9½ ಗಂಟೆಗೆ ಸವಾರಿ ದಯಮಾಡಿಸಿ 10 ಗಂಟೆವರೆಗೆ ಇದ್ದು ಪ್ರತಿ ಯೊಂದು ಕೊಠಡಿ, ಮತ್ತು ಹಾಲ್, ಮಹಡಿ ಹಾಲ್, ಕಿಚ್ಚನ್ ರೂಮ್, ಬಾತ್‌ರೂಮ್, ಡಿನ್ನರ್ ಹಾಲ್ ಮೊದಲಾದ್ದನ್ನು ಪರಾಂಬರಿಸಿಕೊಂಡು ಬೋರ್ಡರ್ ಸಂಖ್ಯೆ, ಹಾಸ್ಟಲ್ ವ್ಯವಸ್ಥಾ ಕ್ರಮ ಮುಂತಾದ್ದನ್ನು ಪ್ರಶ್ನೆಹಾಕಿ ಆಮೂಲಾಗ್ರವಾಗಿ ಕೇಳಿದುಕೊಂಡು ದಯಮಾಡಿಸಿದರು. ಶ್ರೀಯವರ ಇಲ್ಲಿನ ಸಂಚಾರ ಸಂಭಾಷಣೆಗಳನ್ನು 10 ಪೇಜು ಬರೆದರೂ ತೀರದಾಗಿದೆ.

ಸಿ. ಚನ್ನಬಸಪ್ಪ, ಸ್ಕೂಲ್ ಹೆಡ್ಮಾಸ್ಟರ್.

ಪಟೇಲರ ಸಮ್ಮೇಳನವು.

ಚನ್ನಪಟ್ಟಣ ಮತ್ತು ಕ್ಲೋಸ್‌ಪೇಟೆ ತಾಲ್ಲೂಕುಗಳ ಪಟೇಲರು ಚನ್ನಪಟ್ಟಣದಲ್ಲಿ ಒಂದು ಮೀಟಿಂಗನ್ನು ಮಾಡಿ ಅದರಲ್ಲಿ ಪಟೇಲರ ಸಮ್ಮೇಳನ ವೊಂದನ್ನು ಈ ಜುಲೈ ತಿಂಗಳು ಆಖೈರಿನೊಳಗಾಗಿ ನಡಸಬೇಕೆಂದು ತೀರ್ಮಾನಿಸಿರುವರು. ಈ ವಿಷಯವನ್ನು ಪತ್ರಿಕೆಗಳ ಮೂಲಕ ಸಂಸ್ಥಾನದ ಸಮಸ್ತ ಪಟೇಲರಿಗೂ ತಿಳಿಯಪಡಿಸಿ ಅವರ ಸಲಹೆಗಳನ್ನು ತೆಗೆದುಕೊಂಡು ಸಭೆ ಸೇರುವ ಸ್ಥಳವನ್ನೂ ಸಭಾಧ್ಯಕ್ಷರನ್ನೂ ಇತರ ಏರ್ಪಾಡುಗಳನ್ನೂ ಯೋಚಿಸುವವರಾಗಿರುತ್ತಾರೆ. ರಿಸೆಪ್ಷನ್ ಕಮಿಟಿ ಚೇರ್ಮನ್ನರಾಗಿ ಚನ್ನಪಟ್ಟಣದ ತಾಲ್ಲೂಕು ತಿಮ್ಮಸಂದ್ರದ ಪಟೇಲರಾದ ಮ|| ರಾ|| ಸಿದ್ದೇಗೌಡರವರೂ, ಕ್ಲೋಸ್‌ಪೇಟೆ ಸಬ್‌ತಾಲ್ಲೂಕು ಅರ್ಚಕರಳ್ಳಿ ಪಟೇಲರಾದ ಮ|| ರಾ|| ಸೋಮೇಗೌಡರವರೂ ನೇಮಿಸಲ್ಪಟ್ಟಿರುತ್ತಾರೆ. ಮಾಯಗಾನಹಳ್ಳಿ ಪಟೇಲ್ ಗುರುಲಿಂಗಯ್ಯನವರೂ, ಬನ್ನಿಕುಪ್ಪೆ ಬಿ. ಚೋಡಯ್ಯ ಗೌಡರೂ ಜಾಯಿಂಟ್ ಸೆಕ್ರಿಟರಿಗಳಾಗಿರುತ್ತಾರೆ. ಸಂಸ್ಥಾನದ ಅಧಿಕಾರಿಗಳಲ್ಲಿ ಪಟೇಲರು ಎಷ್ಟು ಮುಖ್ಯರಾದವರೆಂಬುದನ್ನು ಹೇಳಬೇಕಾದುದಿಲ್ಲ. ಇವರು ತಮ್ಮ ಸಮ್ಮೇಳನವನ್ನು ಮಾಡಿಕೊಂಡು ತನ್ಮೂಲಕ ತಮ್ಮ ಸ್ಥಿತಿಗತಿಗಳನ್ನು ಉತ್ತಮ ಪಡಿಸಿಕೊಳ್ಳತಕ್ಕದ್ದು ಅತ್ಯಂತ ಆವಶ್ಯಕವಾಗಿದೆ. ಚೆನ್ನಪಟ್ಟಣ ಮತ್ತು ಕ್ಲೋಸ್‌ಪೇಟೆ ಪಟೇಲರುಗಳು ಈ ವಿಷಯದಲ್ಲಿ ಮುಂದಾಳುಗಳಾಗಿ ನಿಂತು ಅತ್ಯಂತ ಶ್ರದ್ಧೆಯಿಂದಲೂ ವಿಶ್ವಾಸದಿಂದಲೂ ಕೆಲಸ ಮಾಡುತ್ತಿರುವುದು ಸ್ತುತ್ಯಾರ್ಹವಾಗಿದೆ. ಈ ಸಮಯದಲ್ಲಿ ಸಂಸ್ಥಾನಾವಳಿ ಸಮಸ್ತ ಪಟೇಲರೂ ಪಟೇಲರ ಹಿತಚಿಂತಕರೂ ಒಗ್ಗಟ್ಟಾಗಿ ಈ ಸದುದ್ದೇಶವನ್ನು ಜಯಪ್ರದವಾಗಿ ನಡೆಯುವಂತೆ ಮಾಡಬೇಕಾದುದು ಕರ್ತವ್ಯವಾಗಿದೆ. ಎಲ್ಲಾ ಪಟೇಲರು ತಮ್ಮ ತಮ್ಮ ಸಲಹೆಗಳನ್ನು ಮ|| ರಾ|| ವಿ. ವೆಂಕಟಪ್ಪ, ಒಕ್ಕಲಿಗರ ಹಾಸ್ಟೆಲ್ ಸೂಪರಿಂಟೆಂಡೆಂಟ್, ಚೆನ್ನಪಟ್ಟಣ ಎಂಬ ವಿಳಾಸಕ್ಕೆ ತಿಳಿಸಬೇಕೆಂದು ಪ್ರಾರ್ಥನೆ.

ಸಮ್ಮೇಳನ ಕುತೂಹಲಿ.

ಔದಾರ್ಯ.

ಶಿವಮೊಗ್ಗೆ ವೀರಶೈವ ಹಾಸ್ಟಲ್ ಕಟ್ಟಡದ ಕಾರ್ಯವನ್ನಾರಂಭಿಸುವ ವಿಚಾರದಲ್ಲಿ ಪರ್ಯಾಲೋಚಿಸುವುದಕ್ಕಾಗಿ 1922ನೇ ಜುಲೈ ತಿಂಗಳೊಂದು ದಿನ ಸಾಯಂಕಾಲ ಕೆಲ ಮತಾಭಿಮಾನಿಗಳು ಸೇರಿದ್ದು ಹಿಂದಿರುಗಿ ಮನೆಗಳಿಗೆ ಬರುತ್ತಿರುವ ಕಾಲದಲ್ಲಿ ಶಿವಮೊಗ್ಗೆಯ ಮ|| ಸಾಹುಕಾರ್ ಕಾಶಪ್ಪನವರು, ರಂಗಾರೆಯವರ ಬೀದಿಗೆ ಹೋಗುವ ರಸ್ತೆಯ ಪಕ್ಕದಲ್ಲಿ ತಾವು ಕಟ್ಟಿಸುತ್ತಿರುವ ಕಟ್ಟಡದ ಸ್ವಲ್ಪ ಭಾಗದುತ್ಪತ್ತಿಯನ್ನು ಹಾಸ್ಟಲಿನ ವಿದ್ಯಾರ್ಥಿಗಳ ಪ್ರಯೋಜನಕ್ಕೆ ವಿನಿಯೋಗಿಸಬೇಕೆಂದಿರುವುದಾಗಿಯೂ, 3 ಅಥವಾ 4 ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ಪಾಗುತ್ತದೆಂದೂ ಕೇಳಿದಾಗ ಅಲ್ಲಿದ್ದವರೊಬ್ಬರು ಹೈಸ್ಕೂಲಿನ ವಿದ್ಯಾರ್ಥಿಗಳು ಪ್ರತಿ ತರಗತಿಯಲ್ಲೂ ಕೊಡಬೇಕಾದ ಫೀಸೆಷ್ಟೆಂಬುದನ್ನು ತಿಳಿಸಿದಮೇಲೆ ಮ|| ಕಾಶಪ್ಪನವರು ತಾವು ಒಟ್ಟು ಕಟ್ಟಡವನ್ನು ಧರ್ಮಕ್ಕೆ ಕೊಡಲು ಸಾಧ್ಯವಿಲ್ಲದಿದ್ದರೂ ಮೂರು ಮಳಿಗೆಗಳಲೊಂದನ್ನು ಮೇಲ್ಕಂಡಂತೆ ವಿದ್ಯಾಪ್ರೋತ್ಸಾಹಕ್ಕೆ ಕೊಡುವುದಾಗಿ ಹೇಳಿದರು. ಅದಕ್ಕೆ ಸಮೀಪದಲ್ಲಿದ್ದವರು ಸಂತೋಷಯುಕ್ತರಾಗಿ, "ವಿದ್ಯಾರ್ಥಿಗಳ ಶಿಕ್ಷಣಕಾರ್ಯಕ್ಕಾಗಿ ನಿಮ್ಮ ಸದುದ್ದೇಶವನ್ನು ಪ್ರಕಟಿಸಬಹುದೆ ?" ಎಂದು ಕೇಳಿದುದಕ್ಕೆ ಸಮ್ಮತಿಯನ್ನು ಕೊಟ್ಟರು. ಆಗ ಅಲ್ಲಿದ್ದವರೆಲ್ಲರೂ ಕರತಾಡನಮೂಲಕ ತಮ್ಮಾನಂದವನ್ನು ತೋರ್ಪಡಿಸಿದರು. ವಯೋವೃದ್ಧರೂ ವಿಚಾರಪರರೂ ಆದ ಮ|| ಕಾಶಪ್ಪನವರ ಮಿತವ್ಯಯ ಹಾಗೂ ಔದಾರ್ಯ [illegible] ಜೀವಿತಕಾಲದಿಂದ ಸೆರೆಗೊಂಡಿದ್ದು [illegible] ಸ್ಥಾನಕ್ಕಾಗಿ ಕೊರವಿರಬೇಕೆಂದು ಕೋರುತ್ತೇವೆ. ಇವರು ತಮ್ಮ [illegible] ಉತ್ತರೋತ್ತರ [illegible] ಈ ಧರ್ಮವು ಸಾರ್ಥಕಗೊಳ್ಳುವಂತೆ [illegible] ಮಾಡುವರೆಂದು ಸಂಪೂರ್ಣವಾಗಿ ನಂಬಿದ್ದೇನೆ. ಈ ಮಹನೀಯರ ಮೇಲ್ಪಂಕ್ತಿಯನ್ನನುಸರಿಸಿ ಉಪಪನ್ನರಾದ ವೀರಶೈವರು ಮುಕೋದ್ಧಾರಕ್ಕೆ ಅತ್ಯಾವಶ್ಯಕವಾದ ವಿದ್ಯಾಪ್ರಚಾರಕ್ಕೆ ಸಹಾಯ ಮಾಡಬೇಕಾಗಿ ಕೋರುತ್ತೇನೆ.

ಕೆ. ಹಾಲಪ್ಪ.

ವಿದ್ಯಾರ್ಥಿನಿಲಯದ ಪ್ರವೇಶೋತ್ಸವವು.

ಚನ್ನಪಟ್ಟಣ—ಈ ಗ್ರಾಮದಲ್ಲಿ ವಿನ್ಯವಾದ ಒಂದು ವಿದ್ಯಾರ್ಥಿನಿಲಯ (ಹಾಸ್ಟಲ್) ಸ್ಥಾಪನೆಯಾದದ್ದು ಬಹು ಜನಾನಂದಕರವಾಗಿರುತ್ತದೆ. ತಾ|| 21-6-23ನೆ ಪ್ರಾತಃಕಾಲ 9 ಗಂಟೆಗೆ ಸರಿಯಾಗಿ ಪುರಪ್ರಮುಖರು, ಉದ್ಯೋಗಸ್ಥರು, ಅನೇಕ ಉಪಾಧ್ಯಾಯರು, ವಿದ್ಯಾರ್ಥಿಗಳೂ, ಮುನಿಸಿಪಲ್ ಕೌನ್ಸಿಲರುಗಳೂ ಮತ್ತು ಅನೇಕವಾದ ಇತರ ಜನರೂ ರಂಭಾಸ್ತಂಭ ತೋರಣ ಪತಾಕೆಗಳಿಂದ ಅಲಂಕರಿಸಲ್ಪಟ್ಟದ್ದ ಮಂಟಪದೊಳಗೆ ಸುಖಾಸೀನರಾಗಿದ್ದರು. ವಿದ್ಯಾ ಇಲಾಖಾಧ್ಯಕ್ಷರಾದ ಶ್ರೀಮಾನ್ ಸಿ. ಎಸ್. ಬಾಲಸುಂದರಮಯ್ಯರ್ ಬಿ. ಎ. ಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಕೋಟೆ ಗರ್ಲ್ಸ್ ಸ್ಕೂಲ್ ಹೆ|| ಮಿಸ್ಟ್ರೆಸ್ ಶ್ರೀಮತಿ ಸರಸ್ವತಮ್ಮನವರು ಅವರ ಶಾಲೆಯ ಬಾಲಿಕೆಯರೊಡನೆ ಇನ್ಸ್‌ಪೆಕ್ಟರ್ ಜನರಲ್‌ರವರ ಸ್ವಾಗತಪರ ಗೀತವನ್ನು ಬಹು ಶ್ರಾವ್ಯವಾಗಿ ಹಾಡಿದ ತರುವಾಯ ಹೈಸ್ಕೂಲ್ ವಿದ್ಯಾರ್ಥಿಗಳಲ್ಲಿ ಒಬ್ಬರು ಸಂಸ್ಕೃತ ಆಶೀರ್ವಚನಗಳನ್ನು ಹೇಳಿದರು. ಹಿಂದೂಸ್ಥಾನಿ ಸ್ಕೂಲ್ ವಿದ್ಯಾರ್ಥಿಯೊಬ್ಬರು ಉರುದು ಭಾಷೆಯಲ್ಲಿ ಪ್ರಾರ್ಥನೆಯನ್ನು ಮಾಡಿದರು. ಬಳಿಕ ಶ್ರೀಮಾನ್ ರಾಮಸಂಜೀವರೆಡ್ಡಿಯವರು ಉದಾರಮನಸ್ಸಿನಿಂದ ಕಟ್ಟಿಸಿದ ನೂತನ ನಿಲಯ ವಿಚಾರಕವಾದ ಅಡ್ರೆಸ್ಸನ್ನು ಓದಿದರು. ತರುವಾಯ ರಜತಬೀಗದಿಂದ ಬಂಧಿಸಿದ್ದ ಮಂದಿರದ್ವಾರವನ್ನು ಶ್ರೀಮಾನ್ ಬಾಲಸುಂದರಮಯ್ಯರ್‌ರವರು ಅವರ ಅಮೃತಹಸ್ತದಿಂದ ತೆಗೆದರು. ಮಂದಿರದೊಳಭಾಗವೆಲ್ಲವನ್ನು ಅವಲೋಕಿಸಿ, ಶ್ರೀಯುತ ರಾಮಸಂಜೀವರೆಡ್ಡಿಯವರ ಭಾವಚಿತ್ರವನ್ನು ಚಿರಸ್ಥಾಯಿಯಾಗಿರಲು ಗ್ರಂಥಾಲಯದಲ್ಲಿ ಸ್ಥಾಪಿಸಿದರು. ಮತ್ತು ಆರುಸಾವಿರ ರೂಪಾಯಿಗಳನ್ನು ಖರ್ಚುಮಾಡಿ ನಿಲಯವನ್ನು ಕಟ್ಟಿಸಿದ ಶ್ರೀ|| ರಾ||ಮ|| ಸಂಜೀವರೆಡ್ಡಿಯವರನ್ನು ಶ್ಲಾಘಿಸಿದರು. ತರುವಾಯ ಸರ್ಕಲ್ ಇನ್ಸ್‌ಪೆಕ್ಟರ್ ಮ|| ರಾ|| ವೆಂಕಟರಾಮಯ್ಯನವರು ಹಾಸ್ಟಲ್‌ನ ಉಪಯೋಗವನ್ನು ಕುರಿತು ಇಂಗ್ಲೀಷಿನಲ್ಲಿ ದಿವ್ಯವಾದ ಭಾಷಣವನ್ನು ಮಾಡಿ ವಿದ್ಯಾರ್ಥಿ ಉಪಾಧ್ಯಾಯರುಗಳಿಗೆ ಉತ್ತೇಜನವನ್ನು ಕೊಟ್ಟರು. ಬಳಿಕ ಇಂಡಸ್ಟ್ರಿಯಲ್ ಸ್ಕೂಲ್ ಡ್ರಾಯಿಂಗ್ ಮಾಸ್ಟರ್ ಮೆ|| ಯಂ. ಆರ್ಯಮೂರ್ತಿಯವರು ಅಂಧ್ರ ಪದ್ಯಗಳಿಂದ ಮೊದಲು ಶ್ರೀಮನ್ಮಹಾರಾಜ, ಯುವರಾಜ, ಮಂತ್ರಿವರ್ಯರ ಮತ್ತು ಇ|| ಜನರಲ್‌ರವರ ಗುಣಕಥನವನ್ನು ಮಾಡಿದನಂತರ, ಹಾಸ್ಟಲ್ ಕಟ್ಟಲು ಮೊದಲು ಪುನಾದಿಯನ್ನು ಹಾಕಿದ ಶ್ರೀಮಾನ್ ಸಿ. ಆರ್. ರೆಡ್ಡಿಯವರನ್ನೂ ಅವರ ಆಲೋಚನಾಭಾವವನ್ನು ಪೂರ್ಣಗೊಳಿಸಿ ಕೀರ್ತಿಯುತರಾದ ಮ|| ರಾಮಸಂಜೀವರೆಡ್ಡಿಯವರನ್ನೂ, ನಂತರ ಅಮೃತಹಸ್ತಗಳಿಂದ ನೂತನಭವನವನ್ನು ಶುದ್ಧಿಗೊಳಿಸಿದ ಮ|| ಬಾಲಸುಂದರಮಯ್ಯರ್‌ರವರನ್ನೂ ಕೊಂಡಾಡಿ, ಮಂದಿರವನ್ನು ಪೂರ್ತಿಗೊಳಿಸಿದ ಮೂವರ ಮೂರ್ತಿಗಳನ್ನು ತ್ರಿಮೂರ್ತಿಗಳು ಆಶೀರ್ವದಿಸಿ, ದೀರ್ಘಾಯುರಾರೋಗ್ಯಗಳನ್ನೀಯಲೆಂದು ಸ್ವಾರಸ್ಯವಾದ ತೆಲುಗು ಭಾಷಣವನ್ನು ಮಾಡಿದರು. ನಂತರ ಸಂಸ್ಕೃತ ಪಂಡಿತರು ಬಹು ಸ್ವಾರಸ್ಯವಾದ ದೀರ್ಘಭಾಷಣವನ್ನು ಮಾಡಿದರು. ಅಮೇಲೆ ಅಧ್ಯಕ್ಷರ ಭಾಷಣವು ನಡೆಯಿತು. ತರುವಾಯ ಹೈಸ್ಕೂಲ್ ಹೆ|| ಮಾಸ್ಟರವರು ಎಲ್ಲರಿಗೂ ಅಭಿವಂದನೆಗಳನ್ನು ಹೇಳಿದರು. ಗಂಧ ಪುಷ್ಪಗಳನ್ನು ಹಂಚಿದರು. ಮಹಾರಾಜರ ಶ್ರೇಯಃ ಪ್ರಾರ್ಥನೆಯೊಡನೆ ಮಂಗಳವನ್ನು ಹಾಡಿದರು. ಸಾಯಂಕಾಲ 3 ಗಂಟೆಗೆ ಇನ್ಸ್‌ಪೆಕ್ಟರ್ ಜನರಲ್‌ರವರು ಸರ್ಕಲ್ ಇನ್ಸ್‌ಪೆಕ್ಟರವರು, ಹೈಸ್ಕೂಲ್ ಹೆಡ್‌ಮಾಸ್ಟರು ಮೋಟಾರಿನಲ್ಲಿ ಹೊರಟು ಕೋಟೆ ಗರ್ಲ್ಸ್ ಸ್ಕೂಲ್‌ಅನ್ನು ಪರಾಂಬರಿಸಿದರು. ಹೇ|| ಮಿಸ್ಟ್ರೆಸ್‌ವರು ಸ್ಕೂಲಿಗೆ ಬೇಕೆಂದು ಕೇಳಿಕೊಂಡ ಸಲಕರಣೆಗಳೆಲ್ಲವನ್ನು ನೋಟುಮಾಡಿಕೊಂಡು ಸಿಂಗಿಂಗ್ ಮಾಸ್ಟರವರನ್ನು ಜಾಗ್ರತೆ ಕೊಡುವದಾಗಿ ಹೇಳಿ ಹೊರಟರು. ಇದು ಕೋಟೆ ಜನರ ಅದೃಷ್ಟವು.

ಒಬ್ಬ ಪ್ರತ್ಯಕ್ಷದರ್ಶಿ.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡು.

ಈವರಿಗೆ ಈ ದೇಶದಲ್ಲಿ 4 ಡಿಸ್ಟ್ರಿಕ್ಟ್ ಬೋರ್ಡುಗಳು ತಮ್ಮ ಜವಾಬುದಾರಿಯನ್ನು ಅರಿತುಕೊಂಡು ತಮ್ಮ ತಮ್ಮ ಡಿಸ್ಟ್ರಿಕ್ಟುಗಳಲ್ಲಿ ಪ್ರಾಥಮಿಕ ಮತ್ತು ಸೆಕೆಂಡರಿ ವಿದ್ಯಾಭ್ಯಾಸಗಳಿಗೆ ಏರ್ಪಾಡುಮಾಡಿಕೊಂಡುವು. ಸದರೀ ಡಿಸ್ಟ್ರಿಕ್ಟುಗಳಲ್ಲಿ ವಿದ್ಯಾಭ್ಯಾಸದ ತೆರಿಗೆಯನ್ನು ವಸೂಲುಮಾಡಿ ಸರ್ಕಾರದವರು ಕೆಲವು ಭಾಗ ಗ್ರಾಂಟು ಕೊಟ್ಟು ಅನೇಕ ವಿದ್ಯಾಭಿವೃದ್ಧಿ ಕಾರ್ಯಗಳು ಪ್ರಾರಂಭಿಸಲ್ಪಟ್ಟು ಇರುವುವು. ಯಾವ ದೇಶವೇ ಆಗಲೀ ನಾಗರೀಕತೆಯಲ್ಲಿ ಮುಂದುವರಿಯಬೇಕಾದರೆ, ಆ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯೂ ತನ್ನ ತನ್ನ ಕಸುಬನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವುದಕ್ಕೂ ದೇಶಾಭಿಮಾನ ಮತ್ತು ರಾಜಭಕ್ತಿಯನ್ನು ಹೊಂದುವುದಕ್ಕೂ ವಿದ್ಯೆಯೇ ಆಧಾರವಾಗಿರುವುದು. ಈ ಪ್ರಪಂಚದಲ್ಲಿ ಪ್ರತಿಯೊಬ್ಬ ಪ್ರಜೆಗೂ ವಿದ್ಯೆಕಲಿಸಿದ ರಾಜ್ಯಗಳು ಹೇಗೆ ಇತಿಹಾಸದಲ್ಲಿ ಕೀರ್ತಿಯನ್ನು ಪಡೆದು ಸುಖಿಸುತ್ತಿರುವುವು ಗಳನ್ನು ಅನುಭವಿಸುತ್ತಲಿರುವ ವಿಚಾರವನ್ನು ವಿದ್ಯಾಭ್ಯಾಸದ ಇಲಾಖೆಯ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಮ|| ಆರ್. ಕೃಷ್ಣಯ್ಯಂಗಾರ್‌ರವರೂ, ಕೋಆಪರೇಟಿವ್ ಸೊಸೈಟೀಸ್ ರಿಜಿಸ್ಟ್ರಾರ್‌ರವರಾದ ಮೆ|| ಕೆ. ಎಚ್. ರಾಮಯ್ಯನವರೂ ಬಹು ಚೆನ್ನಾಗಿ ಡಿಸ್ಟ್ರಿಕ್ಟ್ ಕಾನ್ಫರೆನ್ಸಿನಲ್ಲಿ ತಿಳಿಸಿದರು.

ವಿದ್ಯಾಭ್ಯಾಸದ ತೆರಿಗೆಯನ್ನು ಕೊಟ್ಟ ಡಿಸ್ಟ್ರಿಕ್ಟಿನಲ್ಲಿ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಿಕೊಳ್ಳುವಂತೆ ಸರ್ಕಾರದವರು ಸುಮಾರು ಎರಡು ವರುಷಗಳ ಹಿಂದೆಯೇ ಡಿಸ್ಟ್ರಿಕ್ಟ್ ಬೋರ್ಡಿಗೆ ತಿಳಿಸಿದರು. ರೂಲ್ಸು ಮೇರೆ ಡಿಸ್ಟ್ರಿಕ್ಟ್ ಬೋರ್ಡಿನಲ್ಲೂ ತಾಲ್ಲೂಕು ಬೋರ್ಡಿನಲ್ಲೂ ಅಭಿಪ್ರಾಯವನ್ನು ಕೇಳಿದರು. ಶೇಕಡ 75 ಬೋರ್ಡುಗಳು ಅಗ್ಗೆ ಒಪ್ಪಲಿಲ್ಲವಾಗಿ ಆ ವಿಚಾರವು ಗೌರ್ನ್ಮೆಂಟಿಗೆ ತಿಳಿಸಲ್ಪಟ್ಟಿತು. ಪುನರಾಲೋಚನೆ ಮಾಡತಕ್ಕದೆಂದು ಗೌರ್ನ್ಮೆಂಟಿನವರು ಸೂಚಿಸಿದರು. ಪುನಹ ತಾಲ್ಲೂಕು ಬೋರ್ಡಿನವರನ್ನು ಕೇಳಲಾಯಿತು. ಶ್ರೀರಂಗಪಟ್ಟಣ, ಕೃಷ್ಣರಾಜಪೇಟೆ ಮತ್ತು ಚಾಮರಾಜನಗರಗಳ ತಾಲ್ಲೂಕು ಬೋರ್ಡುಗಳು ವಿನಹ ಉಳಿದ ತಾಲ್ಲೂಕು ಬೋರ್ಡುಗಳೆಲ್ಲವೂ ವಿದ್ಯಾಭ್ಯಾಸದ ತೆರಿಗೆಯನ್ನು ಕೊಡಲು ಒಪ್ಪಿಕೊಂಡವು. ಮಂಡ್ಯ ಮತ್ತು ಮಳವಳ್ಳಿ ತಾಲ್ಲೂಕು ಕಾನ್ಫರೆನ್ಸುಗಳಲ್ಲಿ ಹಳ್ಳಿಗಾಡಿನ ಜನರು ಮುಂದಾಗಿ ಬಂದು, ಬಹಳ ವಿದ್ಯಾಭ್ಯಾಸದ ತೆರಿಗೆಯನ್ನು [illegible]

ಮೈಸೂರು ಸ್ಟಾರ್.

೧೯೨೩ ನೆ ಇಸವಿಯ ಜುಲೈ ತಾ|| ೮ ನೆಯ ಭಾನುವಾರ.

THE AMILDARI SERVICE IN MYSORE.

The Amildari Service is the most important branch of Executive Service in the State, which is immediately concerned with the Economic improvement and the Educational advancement of the people in rural parts. Hence, it is very essential that this service should consist of men who are familiar with life in villages, which have been inhabited by people belonging to the Backward communities. We need not say that candidates belonging to these communities will be in a better position to discharge the official duties expected of them more smoothly and efficiently than those belonging to a community, which has kept itself aloof from other communities from the very begining. The Government in their recent order relating to direct recruitment to the Amildari service have decided to take in six probationers of whom two will be from the Brahmin community. Amongst the existing number of Amildars, about one third of them belong to other communities, and the rest belong to the Brahmin community. Is there any sense of proportion in the above arrangement, which seems to have been based upon an order passed in January 1923? There is no justification whatever to reserve one third of the appointments to a community, which forms only three per cent. of the total population of the State, and which is already being represented in all branches of service in over-whelmingly large numbers. We hear that there are already more than one hundred applicants from amongst the Backward communities seeking for these appointments. We have heard of proportionate representation in service and in public bodies, but this reservation of 33⅓ per cent., to the small class forming a microscopic minority of the population of the State is the worst form of it we have ever come across. The Government could not have found a better method for perpetuating the monopoly of the class than this. Just recently the Madras Government recruited about 8 officers to the Income Tax Department and there even without an order as we have on the Miller Committee Report here, but in fairness to all the communities gave only one of the place to Brahmin community. Why the Mysore Government alone should set at naught the accepted principles and be so partial to that class we cannot understand. We are left in doubt as to the reasons for this preferential treatment of the community and it is, we need hardly say, the duty of the Government to explain it. The theory of dearth of candidature among backward classes was a favourite one with the Government formerly and it used to be trotted out on all occasions when the backward classes demanded their claims. We wonder what they have to advance now when there are enough of candidates and to spare among the backward classes. Is it so difficult to obtain justice, so long deferred in our State? Will the Government see their way at least now, to meet out fair—not special or partial—treatment to the backward classes by giving all the places to them.

SRI JAGADGURU JAYADEVA VEERASHAIVA HOSTEL.

It is with great pleasure that we hear of the completion of the above building, the foundation stone of which was laid by His Highness the Yuvaraja in the month of October 1919. The Hostel is now said to be ready for occupation and to accomodate more than one hundred students. The beautiful pile of buildings is situated in Sheshadri Road, Bangalore City, which is one of the best and healthiest localities, just behind the Race Course. This is all the outcome of the generous gift of His Holiness the Jagadguru of Chitaldrug, who has contributed Rs. 30,000 with a promise to make a further contribution of Rs. 10,000 to the amount of Rs. 10,000 which had been paid long ago by the late Mr. Attibele Sidlabasappa. The Government of His Highness the Maharaja have paid Rs. 20,000 and the site has been given by them free of cost. Dewan Bahadur Rajasabhabhushana Mr. K. P. Puttanna Chetty, C.I.E. the President of the Mysore Lingayet Education Fund Association, under whose unremitting attention the work has been accomplished, said, at the time of the laying of the foundation stone, "we are confident that the building will soon rise and will in every way proves worthy of the august and noble hearted personage, who will lay the Foundation Stone with his own hand and of the saintly Jagadguru whose name it will bear on completion." The above words have become literally true. In this connection we wish to express our gratitude on behalf of the Veerashaiva community to our Dewan Mr. A. R. Banerji who took prompt action as the First Councillor then, in the matter of handing over the site to the Association, which had been pressingly requesting the Government for it since 1908, and to the Inspector General of Education in Mysore, who is said to have rendered timely and sympathetic help.

ದೇವಾದಾಯ ಬ್ರಹ್ಮಾದಾಯ ಶಾಸನ

(ರಿಲಿಜಿಯಸ್ ಎಂಡೌಮೆಂಟ್ ಬಿಲ್ಲು).

ಜನರ ಆಚಾರವ್ಯವಹಾರಗಳಿಗೂ ಸ್ವರ್ಗ ಅಥವಾ ಮುಕ್ತಿ ಪ್ರಾಪ್ತಿಗೂ ಸಾಧಕಗಳಾದ ಮಠಗಳೂ ದೇವಸ್ಥಾನಗಳೂ ಏರ್ಪಡಿಸಲ್ಪಟ್ಟು ಅವುಗಳ ರಕ್ಷಣೆಗಾಗಿ ರಾಜರುಗಳಿಂದಲೂ ಭಕ್ತ ಪ್ರಜೆಗಳಿಂದಲೂ ಭೂಮಿ, ದ್ರವ್ಯ, ವಸ್ತ್ರಾಭರಣಾದಿಗಳು ಕೊಡಲ್ಪಟ್ಟೂ ಈಗಲೂ ಕೊಡಲ್ಪಡುತ್ತಲೂ ಇರುವವಷ್ಟೆ ? ಹೀಗೆ ಧರ್ಮರಕ್ಷಣೆಗಾಗಿ ಏರ್ಪಟ್ಟ ಮಠಗಳ ಅಧಿಕಾರಿಗಳು ಅರಿಷಡ್ವರ್ಗಾಧೀನರಾಗಿ ತಮ್ಮ ಕರ್ತವ್ಯಕರ್ಮವನ್ನು ಮರೆತು ಮಠದ ಆಸ್ತಿಯನ್ನೆಲ್ಲಾ ನಿರರ್ಗಳವಾಗಿ ಹಾಳ್ಮಾಡಿರುವ ಮತ್ತು ಮಡುತ್ತಿರುವ ಉದಾಹರಣೆಗಳೆಷ್ಟೋ ನಮ್ಮ ಕಣ್ಣೆದಿರಿಗಿರುವುವು. ಇವರು ಭಕ್ತಾದಿಗಳಿಂದ ಎತ್ತಿತರುವ ದ್ರವ್ಯವನ್ನು ಸದ್ವಿನಿಯೋಗ ಅಥವಾ ದುರ್ವಿನಿಯೋಗ ಮಾಡುತ್ತಾರೆಂಬುದು ಗೊತ್ತಾಗಲು ಅವಕಾಶವಿಲ್ಲವಾಗಿದೆ. ಇದರಿಂದ ಮಠಾಧಿಪತಿಗಳು, ಕಾಣಿಕೆ ರೂಪವಾಗಿ ಬರುವ ದ್ರವ್ಯವೆಲ್ಲವೂ ಸಾರ್ವಜನಿಕವಾದುದರಿಂದ ಅದು ಜನೋಪಯುಕ್ತವಾದ ಕಾರ್ಯಗಳಿಗೆ ಉಪಯೋಗಿಸಲ್ಪಡತಕ್ಕುದೆಂಬುದನ್ನು ಮರೆತು ಸ್ವಯಾರ್ಜಿತವಾದ ಸ್ವತ್ತೆಂದು ಭಾವಿಸಿ ಮನಬಂದಂತೆ ವಿನಿಯೋಗಿಸುವರಲ್ಲದೆ, ತಮ್ಮ ಪೂರ್ವಾಶ್ರಮದ ಅನುಬಂಧಿಗಳಿಗೆ ಕೊಟ್ಟು ಮಠವನ್ನು ಶೂನ್ಯವನ್ನಾಗಿ ಮಾಡಿರುವ ದೃಷ್ಟಾಂತಗಳನೇಕವಿರುವುವು. ಶಿಷ್ಯರಿಂದೆತ್ತಿತಂದ ದ್ರವ್ಯವನ್ನು ಶಿಷ್ಯರ ಆಚಾರವ್ಯವಹಾರಗಳಿಗೂ, ವಿದ್ಯಾಬುದ್ಧಿಗೂ ವಿನಿಯೋಗಿಸುವ ಮಠಾಧಿಪತಿಯು ನೂರರಲ್ಲಿ ಒಬ್ಬನು ಸಹ ಸಿಕ್ಕುವುದು ಕಷ್ಟವಾಗಿದೆ. ಆದರೆ ವಿಷಯ ಲಂಪಟಕ್ಕೆ ಶಿಲ್ಕಿ ಪರಿಶುದ್ಧವಾದ ತಮ್ಮಾಶ್ರಮವನ್ನು ನರಕಪ್ರಾಯವಾಗಿ ಮಾಡಿಕೊಂಡು ನರಳುತ್ತಿರುವವರೇ ಹೆಚ್ಚು. ಇದೂ ಅಲ್ಲದೆ ಅನೇಕ ಮಠಪತಿಗಳು ತಮ್ಮ ಶಿಷ್ಯರ ಅನುಮತಿಯಿಲ್ಲದೆ ತಮ್ಮ ಪೂರ್ವಾಶ್ರಮದ ಅನುಬಂಧಿಗಳನ್ನಾಗಲಿ ಅಥವಾ ಮತ್ತಾರನ್ನಾಗಲಿ ವಿದ್ಯೆ ಜಿತೇಂದ್ರಿಯತ್ವಾದಿ ಗುಣಶೀಲಗಳನ್ನು ಪರಿಶೀಲಿಸದೆ ತಮ್ಮುತ್ತರಾಧಿಕಾರಿಗಳನ್ನಾಗಿ ಮಾಡಿ ತನ್ಮೂಲಕ ಶಿಷ್ಯರುಗಳಿಗೆ ಮಠದಮೇಲಿರುವ ಅಭಿಮಾನವು ತಪ್ಪಿಹೋಗಲು ಅವಕಾಶ ಕಲ್ಪಿಸಿಕೊಟ್ಟಿರುವುದನ್ನೂ, ತಮ್ಮ ಜೀವಿತಕಾಲದಲ್ಲಿ ಉತ್ತರಾಧಿಕಾರಿಗಳನ್ನು ನಿಯಮಿಸದೆ ಹೋಗಿ ಶಿಷ್ಯರುಗಳೊಳಗೆ ತದ್ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿ ಪಾರ್ಟಿಗಳೇರ್ಪಟ್ಟು ಅವರ ಒಡಿದಾಟದಿಂದ ಮಠಗಳೂ, ಅವುಗಳ ಆಸ್ತಿಗಳೂ ಹಾಳಾಗಿರುವುದನ್ನೂ ಯಾರು ಕಾಣರು ? ಇದರಂತೆಯೇ ದೇವಾಲಯಗಳ ಸ್ಥಿತಿಯಾದರೂ ಶೋಚನೀಯವಾಗಿದೆ. ಅನೇಕ ದೇವಾಲಯಗಳಿಗೆ ಸಾವಿರ ಲಕ್ಷಗಟ್ಟಲೆ ವರಮಾನವುಂಟು. ಅದರಲ್ಲಿ ಎಷ್ಟು ದೇವಾಲಯಗಳಿಗೆ ಸದ್ವಿನಿಯೋಗವಾಗುತ್ತದೆಂಬುದು ಗೊತ್ತಾಗುವುದಿಲ್ಲವು. ಕೆಲ ದೇವಸ್ಥಾನಗಳಿಗೆ ಜಮೀನ್ದಾರರುಗಳೇ ಮೊದಲಾದವರು ವಂಶಪರಂಪರಯಾ ಧರ್ಮದರ್ಶಿಗಳಾಗಿರುವರಾದರೂ ದೇವಾಲಯಗಳ ಹಣದಲ್ಲಿ ಬಹುಭಾಗವು ಸದ್ವಿನಿಯೋಗವಿಲ್ಲದೆ ಉಳಿದಿರುತ್ತದೆ. ಇನ್ನೂ ಅನೇಕ ದೇವಾಲಯಗಳ ವರಮಾನವು ದುರ್ವಿನಿಯೋಗವಾಗಿ ದೇವರ ದೀಪಾರಾಧನೆಗೂ ಕಟ್ಟಡದ ಜೀರ್ಣೋದ್ಧಾರಕ್ಕೂ ಅವಕಾಶವಿಲ್ಲದೆ ಹೋಗಿರುವುದು. ಈ ರೀತಿಯಾಗಿ ಮಠ ದೇವಸ್ಥಾನಗಳ ದ್ರವ್ಯವು ಹಾಳಾಗುವುದನ್ನು ತಡೆಯಲು ಶಿಷ್ಯರುಗಳಿಗಾಗಲಿ ಸರ್ಕಾರದವರಿಗಾಗಲಿ ಈವರೆಗೆ ಯಾವ ಅಧಿಕಾರವೂ ಇಲ್ಲದಿರುವುದರಿಂದ, ಮದ್ರಾಸು ಶಾಸನಸಭೆಯವರು ದೇವಾದಾಯ ಬ್ರಹ್ಮಾದಾಯಕ್ಕೆ ಸಂಬಂಧಪಟ್ಟ ಒಂದು ಶಾಸನವನ್ನು ಹೊಸದಾಗಿ ಏರ್ಪಡಿಸಿರುತ್ತಾರೆ.

ಈ ಶಾಸನದಿಂದ ಮಠ ದೇವಾಲಯಗಳ ಆಡಳಿತಗಳನ್ನು ಧರ್ಮಾಧಿಕಾರಿಗಳ ಸಂಘದ ಮೇಲ್ವಿಚಾರಣೆಗೊಳಪಡಿಸುವುದು, ವ್ಯವಹಾರಗಳೇನಾದರುಂಟಾದಲ್ಲಿ ಅವುಗಳ ವಿಚಾರಣೆ ಮಾಡಲು ಒಂದು ಸೆಂಟ್ರಲ್ ಬೋರ್ಡನ್ನು ಏರ್ಪಡಿಸುವುದು, ಧರ್ಮಾಧಿಕಾರಿಸಂಘಗಳಿಗೆ ಯುಕ್ತವಾಗಿ ತೋರುವ ಧರ್ಮಕಾರ್ಯಗಳಿಗೆ ಮಠ ದೇವಾಲಯಗಳ ದ್ರವ್ಯವನ್ನು ಯಥೋಚಿತವಾಗಿ ವಿನಿಯೋಗಿಸುವುದು, ಉತ್ತರಾಧಿಕಾರಿಗಳನ್ನು ಗೊತ್ತುಮಾಡದೆ ದೈವಾಧೀನರಾಗುವ ಮಠಾಧಿಕಾರಿಗಳ ಸ್ಥಾನಕ್ಕೆ ಉತ್ತರಾರಸ ಸಂಬಂಧದಿಂದಲೋ ಬೇರೆ ಉಚಿತರೀತಿಯಿಂದಲೋ ಉತ್ತರಾಧಿಕಾರಿಗಳನ್ನಾರಿಸಿ ನಿಯಮಿಸುವುದು ಇತ್ಯಾದಿ ಅಧಿಕಾರಗಳು ಲಭ್ಯವಾಗುವುವು. ಈ ನೂತನ ಶಾಸನದ ಪ್ರಕಾರವೇರ್ಪಡುವ ಮೇಲ್ವಿಚಾರಕ ಸಂಘಗಳು ಸದ್ವಿನಿಯೋಗವಿಲ್ಲದೆ ಬಿದ್ದಿರುವ ದೇವಾಲಯಗಳ ಹಣದಲ್ಲಿ ಕೆಲಭಾಗವು ಧಾರ್ಮಿಕ ವಿದ್ಯಾಭಿವೃದ್ಧಿಗೂ ದೇವತೋತ್ಸವಕಾಲಗಳಲ್ಲಿ ನೆರೆಯುವ ಜಾತ್ರೆಯವರ ಜಲವಸತಿ ಆರೋಗ್ಯಕಲ್ಪನೆ ಮೊದಲಾದ ಉಪಯುಕ್ತಕಾರ್ಯಗಳಿಗೂ ಉಪಯೋಗಿಸಲ್ಪಡುವ ಏರ್ಪಾಟನ್ನು ಮಾಡಲವಕಾಶವಿರುತ್ತದೆ. ಅಲ್ಲದೆ ಸರ್ಕಾರದವರು ಗೊತ್ತುಮಾಡಿಕಳುಹಿಸುವ ಆಡಿಟರುಗಳಿಂದ ಮಠ ದೇವಾಲಯಗಳ ಲೆಖ್ಖಗಳು ಆಗಾಗ್ಗೆ ಪರಿಶೋಧಿಸಲ್ಪಡುವುದರಿಂದ ಹಣದ ವ್ಯತ್ಯಾಸವು ಗೊತ್ತಾಗುವುದು. ಈ ಕಾರಣಗಳಿಂದ ಮಠ ದೇವಸ್ಥಾನಗಳ ಆಸ್ತಿಯರಕ್ಷಣೆಗೆ ಈ ಶಾಸನವು ವಿಶೇಷ ಸಹಾಯಕವಾಗುವುದೆಂಬುದರಲ್ಲಿ ಸಂದೇಹವಿಲ್ಲವು. ಆದರೂ ನಿರಂಕುಶಾಧಿಕಾರಿಗಳಾದ ಮಠಪತಿಗಳು ಈ ಶಾಸನ ನಿರ್ಮಾಣದಿಂದ ತಮ್ಮ ಸ್ವೇಚ್ಛಾವಿಹಾರಕ್ಕೆ ಭಂಗವುಂಟಾಗುತ್ತದೆಂಬ ಶಂಕೆಯಿಂದ ದೇವಾದಾಯ ಬ್ರಹ್ಮಾದಾಯಗಳ ವಿಷಯದಲ್ಲಿ ಸರ್ಕಾರದವರು ಪ್ರವರ್ತಿಸಿ ನಿರ್ಬಂಧವನ್ನು ಕಲ್ಪಿಸಬಾರದೆಂದು ವಾದಿಸುತ್ತಿರುವರಲ್ಲದೆ ವೃತ್ತ ಪತ್ರಿಕೆಗಳ ಮೂಲಕ ಕೋಲಾಹಲವನ್ನು ಮಾಡಿಸುತ್ತಿರುವರು. ಈ ಸ್ವೇಚ್ಛಾ ವಿಹಾರಕಾಂಕ್ಷಿಗಳಾದ ಮಠಪತಿಗಳ ಅನುರಾಗಕ್ಕೆ ಪಾತ್ರರಾಗಿಯೋ, ಈ ಶಾಸನದಿಂದ ಕಾಲಕ್ರಮೇಣ ಮಠ ದೇವಸ್ಥಾನಗಳಾಡಳಿತವು ಪರಮತಿಯರ ವಶವಾಗುವುದೆಂಬ ಶಂಕೆಯುಳ್ಳವರಾಗಿಯೋ ಕೆಲ ಜನರು ಅಲ್ಲಲ್ಲಿ ಸಭೆಗಳನ್ನು ಮಾಡಿ ಶಾಸನವನ್ನು ಅನುಷ್ಠಾನಕ್ಕೆ ತರಕೂಡದೆಂದು ರೆಜಲ್ಯೂಷನುಗಳನ್ನು ಮಾಡಿ ಮದ್ರಾಸ್ ಗೌರ್ನರಿಗೂ ವೈಸ್‌ರಾಯರಿಗೂ ತಂತಿ ಮೂಲಕವೂ ವಿಜ್ಞಾಪನ ಪತ್ರಿಕೆಗಳ ಮೂಲಕವೂ ಅರಿಕೆಮಾಡಿಕೊಳ್ಳುತ್ತಿದ್ದಾರೆ. ಇದೇ ರೀತಿ ನಮ್ಮ ಸಂಸ್ಥಾನದ ಕೆಲ ಜನರು, ಮದ್ರಾಸು ಸರ್ಕಾರದಿಂದ ಮಾಡಲ್ಪಟ್ಟ ಈ ಶಾಸನವು ನಮಗೆ ಸಂಬಂಧಪಟ್ಟುದಲ್ಲವಾದರೂ, ನಿರಂಕುಶಾಧಿಕಾರಬಲದಿಂದ ಸ್ವೇಚ್ಛಾವಿಹಾರಿಗಳಾಗಿರುವ ಮಠಪತಿಗಳ ಪ್ರೇರಣೆಯಿಂದ ಶಾಸನನಿರೋಧಕ ಸಭೆಗಳನ್ನು ಮಾಡಿ, ಭಾರತೀಯರ ಮತಜಾತಿವಿಚಾರಗಳಲ್ಲಿ ಬ್ರಿಟಿಷ್ ಸರ್ಕಾರದವರು ಪ್ರವೇಶಿಸುವುದಿಲ್ಲವೆಂದು ವಿಕ್ಟೋರಿಯಾಮಹಾರಾಣಿಯವರು ಮಾಡಿರುವ ವಾಗ್ದಾನಕ್ಕೆ ವಿರುದ್ಧವಾಗಿ ಈ ಶಾಸನವನ್ನು ಅನುಷ್ಠಾನಕ್ಕೆ ತರಕೂಡದೆಂದು ನಿರ್ಧಾರಗಳನ್ನು ಮಾಡಿ ಮದ್ರಾಸು ಗೌರ್ನರಿಗೂ ವೈಸ್‌ರಾಯರಿಗೂ ಕಳುಹಿಸುತ್ತಿರುವರು. ಅಲ್ಲದೆ ಗೌರ್ನರಲ್ಲಿಗೆ ಒಂದು ರಾಯಭಾರವನ್ನು ಆಗಲೇ ಕಳುಹಿದ್ದಲ್ಲದೆ ವೈಸ್‌ರಾಯರಲ್ಲಿಗೂ ಕಳುಹಲು ಯೋಚಿಸಿರುವರು. ನಮ್ಮ ಮೈಸೂರು ಸೀಮೆಗೆ ಸೇರಿದ ಸೋಸಲೆ, ನಂಜನಗೂಡು, ಹೊಳೇನರಸೀಪುರ ಮೊದಲಾದ ಕಡೆಗಳಲ್ಲಿರುವ ಕೆಲ ಮಠಪತಿಗಳು ಮಠದಾಸ್ತಿಯನ್ನು ತಮ್ಮನುಬಂಧಿಗಳಿಗೆ ಕೊಟ್ಟೋ ಅಥವಾ ಮತ್ತಾವ ವಿಧದಲ್ಲೋ ಹಾಳ್ಮಾಡುತ್ತಿದ್ದುದರಿಂದ ಸರ್ಕಾರದವರು ಪ್ರವೇಶಿಸಿ ಸರಿಪಡಿಸಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಎಷ್ಟೋವೇಳೆ ಕೆಲಮೆಂಬರುಗಳಿಂದ ತತ್ರಾಪಿ ಆ ಮಠಗಳ ಶಿಷ್ಯರಾದ ಮೆಂಬರುಗಳಿಂದಲೇ ಪ್ರಾರ್ಥಿಸಲ್ಪಟ್ಟಿರುವುದನ್ನು ತಿಳಿದವರೂ, ಅದರಲ್ಲಿ ಭಾಗಿಗಳಾಗಿದ್ದವರೂ ಈ ಶಾಸನನಿರೋಧಕಾರ್ಯಭಾಗದಲ್ಲಿ ತೊಡಗಿರುವುದು ಆಶ್ಚರ್ಯವೇ ಸರಿ. ಇವರು ಮಠಪತಿಗಳ ಪ್ರೇರಣೆಯಿಂದಲ್ಲದೆ ಮಠ ದೇವಾಲಯಗಳ ಆಡಳಿತವು ಕಾಲಕ್ರಮೇಣ ಪರಮತೀಯರ ವಶವಾಗಿ ಧರ್ಮ ಲೋಪಕ್ಕವಕಾಶವಾಗುವುದೆಂಬ ಶಂಕೆಯಿಂದ ನಿರೋಧಿಸುವುದಾಗಿದ್ದರೆ, ಹಾಗೆ ಧರ್ಮಸಂಸ್ಥೆಗಳು ಸ್ವಧರ್ಮ ವಿರೋಧಿಗಳ ವಶವಾಗುವುದು ಅಸಂಭವವಾದ ಪ್ರಯುಕ್ತ, ಸ್ವತಂತ್ರಾಧಿಕಾರಿಗಳಾಗಿ ಸ್ವೇಚ್ಛಾಪ್ರವರ್ತಿಸುವ ಮಠಪತಿಗಳ ವಿನಾ ಭಯಪಡಬೇಕಾದ ಕಾರಣವಿಲ್ಲವು. ಈ ಶಾಸನದಿಂದ ಮಠ ದೇವಾಲಯಗಳಿಗೆ ಎಷ್ಟೋ ಉಪಕಾರವಾಗುತ್ತೆನ್ನುವದರಲ್ಲಿ ಸಂದೇಹವಿಲ್ಲವಾದರೂ ಇದರ ಮಸೂದೆಯ ಮೇಲೆ ನಿಯುಕ್ತ ಸಂಘದವರು ವಿಮರ್ಶೆಮಾಡಿ ಸೂಚಿಸಿದ ಸವರಣೆಗಳಲ್ಲಿ, ಧರ್ಮಾಧಿಕಾರಿ ಸಂಘಗಳಮೇಲೆ 3 ರಿಂದ 5 ರ ವರೆಗೆ ಸಭಿಕರನ್ನೊಳಗೊಂಡ ಒಂದು ಸೆಂಟ್ರಲ್ ಬೋರ್ಡು ಇರಬೇಕೆಂದೂ, ಆ ಬೋರ್ಡಿನ ಅಧ್ಯಕ್ಷರಿಗೆ ಪ್ರತಿತಿಂಗಳಲ್ಲಿ 1200 ರೂ. ಗಳಂತೆಯೂ ಸಭಿಕರಿಗೆ 800 ರೂ. ಗಳಂತೆಯೂ ಸಂಬಳಸಲ್ಲುವುದಕ್ಕೂ ಬೋರ್ಡಿನ ಇತರ ವೆಚ್ಚಕ್ಕೂ ಮಠ ದೇವಾಲಯಗಳುತ್ಪತ್ತಿಯಲ್ಲಿ 100ಕ್ಕೆ 3 ರಷ್ಟು ಎತ್ತಿಕೊಡಬೇಕೆಂದೂ ಮಾಡಿರುವುದು ಸಮರ್ಪಕವಾಗಿಲ್ಲವು. ಇದೊಂದು ವಿಚಾರವು ಸರಿಪಡಿಸಲ್ಪಟ್ಟಲ್ಲಿ ಶಾಸನವು ಸರ್ವ ಸಮ್ಮತವಾಗಿರುವುದೆಂದು ಖಂಡಿತವಾಗಿ ಹೇಳಬಹುದು. ಯಾವುದೋ ಅಂತರಿಕಾಭಿಪ್ರಾಯವನ್ನಿಟ್ಟುಕೊಂಡು ಶಾಸನವನ್ನು ನಿರೋಧಿಸುವ ಕೆಲವರ ಮಾತಿಗೆ ಜನರು ಕಿವಿಕೊಡದೆ ತಾವು ಮಠ ದೇವಾಲಯಗಳ ಕಾರ್ಯನಿರ್ವಾಹಕ್ಕಾಗಿ ಕೊಡುವ ಕಾಣಿಕೆಯ ದ್ರವ್ಯವು ಈಗಿನಂತೆ ದುರ್ವಿನಿಯೋಗವಾಗದೆ ಸರ್ವ ಜನೋಪಯುಕ್ತಕಾರ್ಯಗಳಿಗೆ ಸದ್ವಿನಿಯೋಗವಾಗಲು ಸಾಧಕವಾಗಿರುವ ಈ ಶಾಸನವನ್ನು ಅನುಮೋದಿಸದೆ ಇರಲಾರರೆಂದು ನಿರೀಕ್ಷಿಸುತ್ತೇನೆ.

ಬೊಂಬಾಯಿನಲ್ಲಿ ಮಳೆಯಾಧಿಕ್ಯವು.

ಕೆಲ ದಿನಗಳ ಹಿಂದೆ ಬೊಂಬಾಯಿನಲ್ಲಿ ಜನರು ಮಳೆ ಬರಲ್ಲಿಲ್ಲವೆಂದು ತಪಿಸುತ್ತಿದ್ದವರು ಕಳೆದ ತಾ|| ೫ರಿಂದ ೭ ದಿವಸಗಳವರೆಗೆ ಮಳೆಯು ಬಿಡದೆ ಸುರಿಯುತ್ತಿರುವುದರಿಂದ ಸ್ವಲ್ಪ

1923ನೇ ಜುಲೈ ಲಾಗಾಯ್ತು ಬೆಂಗಳೂರು ಸಿಟಿ ಲಾಲ್ ಬಾಗ್ ರೋಡಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಡುವ ಸರ್ಕಾರಿ ಪಂಚಮ ಬೋರ್ಡಿಂಗಿಗೆ ಮಾಹೆಯಾನ 10 ರೂಪಾಯಿ ಮೇರೆ ಒಬ್ಬ ಮ್ಯಾನೇಜರೂ ಮತ್ತು 20 ರೂಪಾಯಿ ಮೇರೆ ಒಬ್ಬ ಎಜುಕೇಷನಲ್ ಸೂಪರ್ ವೈಜರ್ ಬೇಕಾಗಿರುವುದರಿಂದ ಈ ಕೆಲಸಕ್ಕೆ ಇಷ್ಟ ಪಡುವವರು ಸರ್ಟಿಫಿಕೇಟ್‌ನೊಡನೆ ಅಪ್ಲಿಕೇಷನ್ನುಗಳನ್ನು ಈ ಮಾಹೆ 27ನೇ ತಾರೀಖಿನ ಒಳಗಾಗಿ ವಿದ್ಯಾಭ್ಯಾಸದ ಜನರಲ್ ಇನ್ಸ್‌ಪೆಕ್ಟರ್ ಸಾಹೇಬರವರಿಗೆ ಗುಜರಾಯಿಸಿಕೊಳ್ಳತಕ್ಕದ್ದು.

M. A. TIRUMALACHAR,
Dated 21/6/23. Secretary.
Panchama Boarding Home.

ಶಿವಮೊಗ್ಗ ವೀರಶೈವ ಹಾಸ್ಟಲ್.

ಈ ಹಾಸ್ಟಲಿನಲ್ಲಿ ಅಭ್ಯಾಸಮಾಡುತ್ತಿದ್ದು ಕಳೆದ ಯೂನಿವರ್ಸಿಟಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಮೂರು ವಿದ್ಯಾರ್ಥಿಗಳು ಬಿ. ಎ. ಕ್ಲಾಸಿಗೆ ಸೇರಿ ಓದುವುದಕ್ಕೆ ತಕ್ಕ ಅನುಕೂಲ ವಿಲ್ಲದೆ ಪೇಚಾಡುತ್ತಿದ್ದುದನ್ನು ಕಂಡು ಈ ಟವನ್ನಿನ ಕೆಲವು ವೀರಶೈವ ಪ್ರಮುಖರು ಸದರಿ ವಿದ್ಯಾರ್ಥಿಗಳಿಗೆ ಪ್ರತಿಯೊಬ್ಬರಿಗೂ ಮಾಹೆಯಾನ 101 ರೂಪಾಯಿ ಸ್ಕಾಲರ್‌ಷಿಪ್ ಕೊಡಬೇಕೆಂದು ಬರೆದು ಕೆಳಗಿನ ಪಟ್ಟಿಯಲ್ಲಿರುವಂತೆ ಚಂದಾ ಹಾಕಿರುವುದಲ್ಲದೆ 3 ವರ್ಷ ಇದೇ ರೀತಿ ಕೊಡುವುದಕ್ಕೆ ಒಪ್ಪಿರುವುದು ತುಂಬಾ ಶ್ಲಾಘನೀಯವಾದ ವಿಷಯವಾಗಿದೆ. ಸದರಿ ವಿದ್ಯಾರ್ಥಿಗಳು ಕಷ್ಟಪಟ್ಟು ಅಭ್ಯಾಸಮಾಡಿ ಮೊದಲನೆ ಸಾರಿಯೇ ಬಿ. ಎ. ಪರೀಕ್ಷೆಯಲ್ಲಿ ಉತ್ತಮ ವರ್ಗದಲ್ಲಿ ಉತ್ತೀರ್ಣರಾಗಿ ಸಾಹಾಯ್ಯಮಾಡಿದವರ ಮನಸ್ಸಂತೋಷಗೊಳಿಸುವರೆಂದು ಕೋರಿದೆ.

ಮ|| ರಾ|| ಗಳಾದ ದುಮ್ಮಿ ಪಂಚಾಕ್ಷರಪ್ಪನವರು 100 ರೂ., ಜಿ. ಸಿ. ಮಹಲಿಂಗಪ್ಪನವರು 50 ರೂ., ಬಿ. ರುದ್ರಪ್ಪನವರು 50 ರೂ., ಮೂರುಸಾವು ಚನ್ನವೀರಪ್ಪನವರು 25 ರೂ., ದೊಡ್ಡ ತಮ್ಮಣ್ಣನವರು 25 ರೂ., ಹಿರಿಯೂರು ಮುರಿಗಪ್ಪನವರು 25 ರೂ., ಕೋರಿ ಹಾಲಪ್ಪನವರು 20 ರೂ., ಡಿ. ಅಡಿವಪ್ಪನವರು 15 ರೂ., ನಗರದ ಗುರುಶಾಂತಪ್ಪನವರು 5 ರೂ., ಜುಮ್ಲಾ 315 ರೂ.

ಎಚ್. ಲಿಂಗಪ್ಪ, ಬಿ. ಎ., ಎಲ್ ಎಲ್. ಬಿ.,
ವೀರಶೈವ ಹಾಸ್ಟಲ್, ಶಿವಮೊಗ್ಗ.

ತಿಪಟೂರು ಶ್ರೀ ವೀರಶೈವಾನಂದಾಶ್ರಮ.

ಬಡವರಾಗಿಯೂ, ಅನಾಥರಾಗಿಯೂ ಎ. ವಿ. ಸ್ಕೂಲು 2-3 ಫಾರಂ ತರಗತಿಯಲ್ಲಿ ಅಭ್ಯಾಸಮಾಡತಕ್ಕ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಅಭ್ಯಾಸಮಾಡಲು ಅಪೇಕ್ಷೆಯುಳ್ಳವರು ಇದೇ 1923ನೇ ಇಸವಿ ಜುಲೈ 8ರೊಳಗಾಗಿ ತಲುಪುವಂತೆ ಸೆಕ್ರೆಟರಿಯವರಿಗೆ ಅರ್ಜಿಯನ್ನು ಬರೆದುಕೊಳ್ಳಬೇಕು. ಈ ವರ್ಷ ಧರ್ಮಾರ್ಥವಾಗಿ 30 ಹುಡುಗರ ವಸತಿಗೂ, ಭೋಜನಕ್ಕೂ ಕಮಿಟಿಯವರು ಏರ್ಪಡಿಸಿರುತ್ತಾರೆ. ಚಿಕ್ಕವಯಸ್ಸಿನ ವಿದ್ಯಾರ್ಥಿಗಳಿಗೆ ಮೊದಲು ಪ್ರಿಫರೆನ್ಸು ಕೊಡಲ್ಪಡುತ್ತೆ. III ಫಾರಂ ವಿದ್ಯಾರ್ಥಿಗಳಿಗೆ ಮೊದಲು ಅವಕಾಶಕೊಟ್ಟ ನಂತರ II ಫಾರಂ ವಿದ್ಯಾರ್ಥಿಗಳಿಗೆ, ಸೀಟು ಖಾಲಿ ಇದ್ದರೆ ಅನುಕೂಲಪಡಿಸುತ್ತೆ. ಈ ಆಶ್ರಮದಲ್ಲಿ ಶ್ರೀ ಚಿತ್ರದುರ್ಗ ಜಗದ್ಗುರು ಪೂಜ್ಯಪಾದರವರು ಸಂಸ್ಕೃತ ಮತ್ತು ವೈದಿಕ ಪಾಠಶಾಲೆಯನ್ನೂ, ಲೈಬ್ರರಿ ಮತ್ತು ವಾಚನಾಲಯವನ್ನೂ ಸ್ಥಾಪಿಸಿದ್ದಾರೆ. ಈ ಪಾಠಶಾಲೆಯಲ್ಲಿ ಕಾವ್ಯ, ನಾಟಕ, ಚಂಪು, ಸಿದ್ಧಾಂತ ಕೌಮುದಿ, ಮತ್ತು ವೈದಿಕ ಭಾಗಗಳು ಅಭ್ಯಾಸಮಾಡಿಸಲ್ಪಡುತ್ತೆ. ಸಂಸ್ಕೃತ, ಮತ್ತು ವೈದಿಕ ಭಾಗಗಳನ್ನು ಅಭ್ಯಾಸಮಾಡತಕ್ಕ 10 ಜನ ವೀರಶೈವ ವಿದ್ಯಾರ್ಥಿಗಳಿಗೆ ಕಮಿಟಿಯವರು ಈ ವರುಷ ಅನುಕೂಲಪಡಿಸಿರುತ್ತಾರೆ. ಅಭ್ಯಾಸಮಾಡಲಪೇಕ್ಷೆಯುಳ್ಳವರು ಮೇಲ್ಕಂಡ ತಾರೀಖಿನೊಳಗಾಗಿ ಅರ್ಜಿ ಬರೆದುಕೊಳ್ಳಬೇಕು. ತಾವು ಬಡವರೆಂಬ ಬಗ್ಗೆ, ಸ್ಥಳದ ದೊಡ್ಡ ಮನುಷ್ಯರ ಸರ್ಟಿಫಿಕೇಟನ್ನು, ಅರ್ಜಿಜೊತೆಯಲ್ಲಿ ಲಗತ್ತಿಸಬೇಕು. ವಿದ್ಯಾರ್ಥಿಯ ವಯಸ್ಸನ್ನು ಖಂಡಿತ ನಮೂದಿಸಬೇಕು.

G. THAMMAYYAH,
Tiptur, Hon. Secretary,
23-6-23. Sri Veerasaivashrama.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ. ಪ್ರ.

ತಿರಸ್ಕೃತವಾದ ಪತ್ರವ್ಯವಹಾರಗಳು.

(1) ಬಡವರ ಹಿತೈಷಿ ಗೊಲ್ಲರಹಳ್ಳಿ—ರೈತರಿಗೆ ಜೋಡಿದಾರರಿಂದುಂಟಾಗುವ ತೊಂದರೆಯ ನಿವಾರಣಾರ್ಥವಾಗಿ ಸರ್ಕಾರಕ್ಕೆ ಬರೆದುಕೊಳ್ಳಿ.

(2) ಲೋಕಹಿತಚಿಂತಕರ ಡಂಗೂರವು ನಿಮ್ಮ ಲೇಖನವು ಸರ್ವಸಾಮಾನ್ಯವಾಗಿ ಅರ್ಥವಾಗಲೊಲ್ಲದು.

(3) ಬಸವಪುತ್ರ ನಿಮ್ಮ ಲೇಖನವು ನಮ್ಮ ನಿಬಂಧನೆಗೆ ಅನುಸಾರವಾಗಿ ಸ್ಪಷ್ಟವಾಗಿ ಕಾಗದದ ಒಂದು ಕಡೆ ಬರೆಯಲ್ಪಟ್ಟ ವಿನಾ ಪ್ರಕಟನೆಗೆ ಸಾಧ್ಯವಿಲ್ಲವು. [ಪ. ಪ್ರ.]

Mr. GOPALASWAMI IYER AND HIS VAGARIES.

Dear Mr. Editor,

I duly read the subsequent reply of Mr. Iyer to the allegations made against him in your valuable paper of the 8th and 15th April 1923 respectively. I request you to kindly give due publication to this rejoinder of mine.

1. Is it not incumbent upon Mr. Iyer to have bestowed sufficient thought over his sense of responsibility on the occasions of signing "the false declaration" or the pay bills of the Mavalli Librarian clerk when the said clerk is not an whole-time clerk?

2. Is not Mr. Iyer even now aware of the said clerk attending the Wesleyan Mission Girls' School during the mornings of every Saturday, New Moon and other Hindu Festival days, the whole of March and part of April as teacher of the said School?

3. Did Mr. Iyer make or contemplate making any suitable arrangements to look after the affairs of the Reading Room and Library during the unavoidable absence of the said Librarian who cannot devote his undivided attention to the work?

4. Is it not for Mr. Iyer to say whether in view of the irregularities prevailing in the Reading Room and Library the amount allotted to the said Library is being appropriated for the benefit of the public?

5. Is it a fact that Mr. Iyer has raised several loans in the Koramarapalya Society of which he is an Honorary Secretary, without excecuting bonds in favour of the Society nor paying any interest for the loan in question?

6. If Mr. Iyer poses himself as a public worker, are his actions consistent or in confirmity with the essential requisites of a public worker? If not, are they not liable to be impeached.

Bangalore City,
30th June, 1923. PRO BONO PUBLICO.

ಚಿಕ್ಕಮಗಳೂರಿಗೆ ಶ್ರೀಮನ್ಮಹಾರಾಜರು ಚಿತ್ತೈಸಿದ್ದುದು

ಶ್ರೀಮನ್ಮಹಾರಾಜರವರ ಸವಾರಿಯು ಚಿಕ್ಕಮಗಳೂರಿಗೆ ಜೂನ್ ತಾ|| 10ನೇ ಭಾನುವಾರ ಸಾಯಂಕಾಲ 6-20 ಕ್ಕೆ ಚಿತ್ತೈಸಿತು. ಶುಕ್ರವಾರ 10 ಗಂಟೆವರೆಗೂ ಇದ್ದು ಟವನ್ನಿನ ಎಲ್ಲಾ ಭಾಗಕ್ಕೂ ಖುದ್ದಾಗಿ ದಯಮಾಡಿಸಿ ಪರಾಂಬರಿಸಿಕೊಂಡು ಬಂದದ್ದಲ್ಲದೆ ಸುತ್ತ ಮುತ್ತಣ ಬೀಕನಹಳ್ಳಿ ಮೊದಲಾದ ಗ್ರಾಮಗಳಿಗೆ ದಯಮಾಡಿಸಿ ಅಲ್ಲಿನ ಪ್ರಜೆಗಳ ಅಹವಾಲನ್ನು ಸಾಕ್ಷಾತ್ತಾಗಿ ತಿಳಿದುಕೊಂಡು ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಡಲು ಅಪ್ಪಣೆಯನ್ನುಕೊಟ್ಟರು. ಸಾಮಾನ್ಯಪ್ರಜೆಗಳಲ್ಲಿಯೂ ಸಂಭಾಷಣೆ ಮಾಡುತ್ತಿದ್ದುದೂ, ಸಕಲರಿಗೂ ಪರಮಾಶ್ಚರ್ಯವನ್ನುಂಟುಮಾಡುತ್ತಿದ್ದಿತು. ನಮ್ಮ ಸ್ಟೂಡೆಂಟ್ಸ್ ಹೋಮಿಗೂ 13ನೆ ಬುಧವಾರ 9½ ಗಂಟೆಗೆ ಸವಾರಿ ದಯಮಾಡಿಸಿ 10 ಗಂಟೆವರೆಗೆ ಇದ್ದು ಪ್ರತಿ ಯೊಂದು ಕೊಠಡಿ, ಮತ್ತು ಹಾಲ್, ಮಹಡಿ ಹಾಲ್, ಕಿಚನ್ ರೂಮ್, ಬಾತ್‌ರೂಮ್, ಡಿನ್ನರ್ ಹಾಲ್ ಮೊದಲಾದ್ದನ್ನು ಪರಾಂಬರಿಸಿಕೊಂಡು ಬೋರ್ಡರ್ ಸಂಖ್ಯೆ, ಹಾಸ್ಟಲ್ ವ್ಯವಸ್ಥಾಕ್ರಮ ಮುಂತಾದ್ದನ್ನು ಪ್ರಶ್ನೆಹಾಕಿ ಆಮೂಲಾಗ್ರವಾಗಿತಿಳಿದುಕೊಂಡು ದಯಮಾಡಿಸಿದರು. ಶ್ರೀಯವರ ಇಲ್ಲಿನ ಸಂಚಾರ ಸಂಭಾಷಣೆಗಳನ್ನು 10 ಪೇಜು ಬರೆದರೂ ತೀರದ್ದಾಗಿದೆ.

ಸಿ. ಚೆನ್ನಬಸಪ್ಪ, ಸ್ಕೂಲ್ ಹೆಡ್ಮಾಸ್ಟರ್.

ಪಟೇಲರ ಸಮ್ಮೇಳನವು.

ಚೆನ್ನಪಟ್ಟಣ ಮತ್ತು ಕ್ಲೋಸ್‌ಪೇಟೆ ತಾಲ್ಲೂಕುಗಳ ಪಟೇಲರು ಚೆನ್ನಪಟ್ಟಣದಲ್ಲಿ ಒಂದು ಮೀಟಿಂಗನ್ನು ಮಾಡಿ ಅದರಲ್ಲಿ ಪಟೇಲರ ಸಮ್ಮೇಳನ ವೊಂದನ್ನು ಈ ಜುಲೈ ತಿಂಗಳು ಅಖೈರಿನೊಳಗಾಗಿ ನಡಿಸಬೇಕೆಂದು ತೀರ್ಮಾನಿಸಿರುವರು. ಈ ವಿಷಯವನ್ನು ಪತ್ರಿಕೆಗಳ ಮೂಲಕ ಸಂಸ್ಥಾನದ ಸಮಸ್ತ ಪಟೇಲರಿಗೂ ತಿಳಿಯಪಡಿಸಿ ಅವರ ಸಲಹೆಗಳನ್ನು ತೆಗೆದುಕೊಂಡು ಸಭೆ ಸೇರುವ ಸ್ಥಳವನ್ನೂ, ಸಭಾಧ್ಯಕ್ಷರನ್ನೂ ಇತರ ಏರ್ಪಾಡುಗಳನ್ನೂ ಯೋಚಿಸುವವರಾಗಿರುತ್ತಾರೆ. ರಿಸೆಪ್ಷನ್ ಕಮಿಟಿ ಚೇರ್ಮನ್ನರಾಗಿ ಚೆನ್ನಪಟ್ಟಣದ ತಾಲ್ಲೂಕು ತಿಮ್ಮಸಂದ್ರದ ಪಟೇಲರಾದ ಮ|| ರಾ|| ಸಿದ್ದೇಗೌಡರವರೂ, ಕ್ಲೋಸ್‌ಪೇಟೆ ಸಬ್‌ತಾಲ್ಲೂಕು ಅರ್ಚಕರಳ್ಳಿ ಪಟೇಲರಾದ ಮ|| ರಾ|| ಸೋಮೇಗೌಡರವರೂ ನೇಮಿಸಲ್ಪಟ್ಟಿರುತ್ತಾರೆ. ಮಾಯಗಾನಹಳ್ಳಿ ಪಟೇಲ್ ಗುರುಲಿಂಗಯ್ಯನವರೂ, ಬನ್ನಿಕುಪ್ಪ ಬಿ. ಬೋರಯ ಗೌಡರೂ ಜಾಯಿಂಟ್ ಸೆಕ್ರೆಟರಿಗಳಾಗಿರುತ್ತಾರೆ. ಸಂಸ್ಥಾನದ ಅಧಿಕಾರಿಗಳಲ್ಲಿ ಪಟೇಲರು ಎಷ್ಟು ಮುಖ್ಯರಾದವರೆಂಬುದನ್ನು ಹೇಳಬೇಕಾದುದಿಲ್ಲ. ಇವರು ತಮ್ಮ ಸಮ್ಮೇಳನವನ್ನು ಮಾಡಿಕೊಂಡು ತನ್ಮೂಲಕ ತಮ್ಮ ಸ್ಥಿತಿಗತಿಗಳನ್ನು ಉತ್ತಮ ಪಡಿಸಿಕೊಳ್ಳತಕ್ಕದ್ದು ಅತ್ಯಂತ ಆವಶ್ಯಕವಾಗಿದೆ. ಚೆನ್ನಪಟ್ಟಣ ಮತ್ತು ಕ್ಲೋಸ್‌ಪೇಟೆ ಪಟೇಲರುಗಳು ಈ ವಿಷಯದಲ್ಲಿ ಮುಂದಾಳುಗಳಾಗಿ ನಿಂತು ಅತ್ಯಂತ ಶ್ರದ್ಧೆಯಿಂದಲೂ ವಿಶರಣೆಯಿಂದಲೂ ಕೆಲಸ ಮಾಡುತ್ತಿರುವುದು ಸ್ತುತ್ಯಾರ್ಹವಾಗಿದೆ. ಈ ಸಮಯದಲ್ಲಿ ಸಂಸ್ಥಾನಾಮುಳಿ ಸಮಸ್ತ ಪಟೇಲರೂ ಪಟೇಲರ ಹಿತಚಿಂತಕರೂ ಒಗ್ಗಟ್ಟಾಗಿ ಈ ಸದುದ್ದೇಶವನ್ನು ಜಯಪ್ರದವಾಗಿ ನಡೆಯುವಂತೆ ಮಾಡಬೇಕಾದುದು ಕರ್ತವ್ಯವಾಗಿದೆ. ಎಲ್ಲಾ ಪಟೇಲರು ತಮ್ಮ ತಮ್ಮ ಸಲಹೆಗಳನ್ನು ಮ|| ರಾ|| ವಿ. ವೆಂಕಟಪ್ಪ, ಒಕ್ಕಲಿಗರ ಹಾಸ್ಟಲ್ ಸೂಪರಿಂಟೆಂಡೆಂಟ್, ಚೆನ್ನಪಟ್ಟಣ ಎಂಬ ವಿಳಾಸಕ್ಕೆ ತಿಳಿಸಬೇಕೆಂದು ಪ್ರಾರ್ಥನೆ.

ಸಮ್ಮೇಳನ ಕುತೂಹಲಿ.

ಔದಾರ್ಯ.

ಶಿವಮೊಗ್ಗ ವೀರಶೈವ ಹಾಸ್ಟಲ್ ಕಟ್ಟಡದ ಕಾರ್ಯವನ್ನಾರಂಭಿಸುವ ವಿಚಾರದಲ್ಲಿ ಪರ್ಯಾಲೋಚಿಸುವುದಕ್ಕಾಗಿ 1922ನೇ ಜುಲೈ ತಿಂಗಳಲೊಂದು ದಿನ ಸಾಯಂಕಾಲ ಕೆಲ ಮಹಾಭಿಮಾನಿಗಳು ಸೇರಿದ್ದು ಹಿಂದಿರುಗಿ ಮನೆಗಳಿಗೆ ಬರುತ್ತಿರುವ ಕಾಲದಲ್ಲಿ ಶಿವಮೊಗ್ಗೆಯ ಮ|| ಸಾಹುಕಾರ್ ಕಾಡಪ್ಪನವರು, ರಂಗಾರಿಯವರ ಬೀದಿಗೆ ಹೋಗುವ ರಸ್ತೆಯ ಪಕ್ಕದಲ್ಲಿ ತಾವು ಕಟ್ಟಿಸುತ್ತಿರುವ ಕಟ್ಟಡದ ಸ್ವಲ್ಪ ಭಾಗದುತ್ಪತ್ತಿಯನ್ನು ಹಾಸ್ಟಲಿನ ವಿದ್ಯಾರ್ಥಿಗಳ ಪ್ರಯೋಜನಕ್ಕೆ ವಿನಿಯೋಗಿಸಬೇಕೆಂದಿರುವುದಾಗಿಯೂ, 3 ಅಥವಾ 4 ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ಪಾಗುತ್ತದೆಂದೂ ಕೇಳಿದಾಗ ಅಲ್ಲಿದ್ದವರೊಬ್ಬರು ಹೈಸ್ಕೂಲಿನ ವಿದ್ಯಾರ್ಥಿಗಳು ಪ್ರತಿ ತರಗತಿಯಲ್ಲೂ ಕೊಡಬೇಕಾದ ಫೀಸೆಷ್ಟೆಂಬುದನ್ನು ತಿಳಿಸಿದಮೇಲೆ ಮ|| ಕಾಡಪ್ಪನವರು ತಾವು ಒಟ್ಟು ಕಟ್ಟಡವನ್ನು ಧರ್ಮಕ್ಕೆ ಕೊಡಲು ಸಾಧ್ಯವಿಲ್ಲದಿದ್ದರೂ ಮೂರು ಮಳಿಗೆಗಳಲೊಂದನ್ನು ಮೇಲ್ಕಂಡಂತೆ ವಿದ್ಯಾಪ್ರೋತ್ಸಾಹಕ್ಕೆ ಕೊಡುವುದಾಗಿ ಹೇಳಿದರು. ಅದಕ್ಕೆ ಸಮೀಪದಲ್ಲಿದ್ದವರು ಸಂತೋಷಯುಕ್ತರಾಗಿ, "ವಿದ್ಯಾರ್ಥಿಗಳ ತಿರುವಳಿಗೋಸ್ಕರ ನಿಮ್ಮ ಸದುದ್ದೇಶವನ್ನು ಪ್ರಕಟಿಸಬಹುದೆ ?" ಎಂದು ಕೇಳಿದುದಕ್ಕೆ ಸಮ್ಮತಿಯನ್ನು ಕೊಟ್ಟರು. ಆಗ ಅಲ್ಲಿದ್ದವರೆಲ್ಲರೂ ಕರತಾಡನಮೂಲಕ ತಮ್ಮಾನಂದವನ್ನು ತೋರ್ಪಡಿಸಿದರು. ವಯೋವೃದ್ಧರೂ ವಿಚಾರಪರರೂ ಆದ ಮ|| ಕಾಡಪ್ಪನವರ ಮನಸ್ಸಿನಲ್ಲಿ ಈ ವಿಷಯವು ಬಹುಕಾಲದಿಂದ ನೆಲೆಗೊಂಡಿದ್ದುದು [illegible] ಸ್ಯಾಕಾಗಿ ಹೊರಬಿದ್ದಿತೆಂದು ತೋರುತ್ತದೆ. ಇವರು ತಮ್ಮ ಜನ್ಮಾಂತ್ಯದಲ್ಲಿ ಉತ್ತರೋತ್ತರ ಚ್ಯುತಿಬಾರದಂತೆ ಈ ಧರ್ಮವು ಸಾರೋದ್ಧಾರವಾಗಿ ನಡೆಯಲು ತಕ್ಕೇರ್ಪಾಟನ್ನು ಮಾಡಿರುವರೆಂದು ಸಂಪೂರ್ಣವಾಗಿ ನಂಬಿದೇನೆ. ಈ ಮಹನೀಯರ ಮೇಲ್ಪಂಕ್ತಿಯನ್ನನುಸರಿಸಿ ಅಪಸನ್ನರಾದ ವೀರಶೈವರು ಮಠೋದ್ಧಾರಕ್ಕೆ ಅಸ್ತಿಭಾರವಾದ ವಿದ್ಯಾಪ್ರಚಾರಕ್ಕೆ ಸಹಾಯ ಮಾಡಬೇಕಾಗಿ ಕೋರುತ್ತೇನೆ.

ಕೆ. ಹಾಲಪ್ಪ.

ವಿದ್ಯಾರ್ಥಿನಿಲಯದ ಪ್ರವೇಶೋತ್ಸವವು.

ಚೆನ್ನಪಟ್ಟಣ—ಈ ಗ್ರಾಮದಲ್ಲಿ ವಿಶ್ಯವಾದ ಒಂದು ವಿದ್ಯಾರ್ಥಿನಿಲಯ (ಹಾಸ್ಟಲ್) ಸ್ಥಾಪನೆಯಾದದ್ದು ಬಹು ಜನಾನಂದಕರವಾಗಿರುತ್ತದೆ. ತಾ|| 21-6-23ನೆ ಪ್ರಾತಃಕಾಲ 9 ಗಂಟೆಗೆ ಸರಿಯಾಗಿ ಪುರಪ್ರಮುಖರು, ಉದ್ಯೋಗಸ್ಥರು, ಅನೇಕ ಉಪಾಧ್ಯಾಯರು, ವಿದ್ಯಾರ್ಥಿಗಳೂ, ಮುನಿಸಿಪಲ್ ಕೌನ್ಸಿಲರುಗಳೂ ಮತ್ತು ಅನೇಕವಾದ ಇತರ ಜನರೂ ರಂಭಾಸ್ತಂಭ ತೋರಣ ಪತಾಕೆಗಳಿಂದ ಅಲಂಕರಿಸಲ್ಪಟ್ಟಿದ್ದ ಮಂಟಪದೊಳಗೆ ಸುಖಾಸೀನರಾಗಿದ್ದರು. ವಿದ್ಯಾ ಇಲಾಖಾಧ್ಯಕ್ಷರಾದ ಶ್ರೀಮಾನ್ ಸಿ. ಎಸ್. ಬಾಲಸುಂದರಮಯ್ಯರ್ ಬಿ. ಎ. ಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಕೋಟೆ ಗರ್ಲ್ಸ್‌ಸ್ಕೂಲ್ ಹೆ|| ಮಿಸ್ಟ್ರೆಸ್ ಶ್ರೀಮತಿ ಸರಸ್ವತಮ್ಮನವರು ಅವರ ಶಾಲೆಯ ಬಾಲಿಕೆಯರೊಡನೆ ಇನ್ಸ್‌ಪೆಕ್ಟರ್ ಜನರಲ್‌ರವರ ಸ್ವಾಗತಪರ ಗೀತವನ್ನು ಬಹು ಶ್ರಾವ್ಯವಾಗಿ ಹಾಡಿದ ತರುವಾಯ ಹೈಸ್ಕೂಲ್ ವಿದ್ಯಾರ್ಥಿಗಳಲ್ಲಿ ಒಬ್ಬರು ಸಂಸ್ಕೃತ ಆಶೀರ್ವಚನಗಳನ್ನು ಹೇಳಿದರು. ಹಿಂದೂಸ್ಥಾನಿ ಸ್ಕೂಲ್ ವಿದ್ಯಾರ್ಥಿಯೊಬ್ಬರು ಉರುದು ಭಾಷೆಯಲ್ಲಿ ಪ್ರಾರ್ಥನೆಯನ್ನು ಮಾಡಿದರು. ಬಳಿಕ ಶ್ರೀಮಾನ್ ರಾಮಸಂಜೀವರೆಡ್ಡಿಯವರು ಉದಾರಮನಸ್ಸಿನಿಂದ ಕಟ್ಟಿಸಿದ ನೂತನ ನಿಲಯ ವಿಚಾರಕವಾದ ಅಡ್ರೆಸ್ಸನ್ನು ಓದಿದರು. ತರುವಾಯ ರಜತಬೀಗದಿಂದ ಬಂಧಿಸಿದ್ದ ಮಂದಿರದ್ವಾರವನ್ನು ಶ್ರೀಮಾನ್ ಬಾಲಸುಂದರಮಯ್ಯರ್‌ರವರು ಅವರ ಅಮೃತಹಸ್ತದಿಂದ ತೆಗೆದರು. ಮಂದಿರದೊಳಭಾಗವೆಲ್ಲವನ್ನು ಅವಲೋಕಿಸಿ, ಶ್ರೀಯುತ ರಾಮಸಂಜೀವರೆಡ್ಡಿಯವರ ಭಾವಚಿತ್ರವನ್ನು ಚಿರಸ್ಥಾಯಿಯಾಗಿರಲು ಗ್ರಂಥಾಲಯದಲ್ಲಿ ಸ್ಥಾಪಿಸಿದರು. ಮತ್ತು ಆರು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ನಿಲಯವನ್ನು ಕಟ್ಟಿಸಿದ ಶ್ರೀ|| ರಾ||ಮ|| ಸಂಜೀವರೆಡ್ಡಿಯವರನ್ನು ಶ್ಲಾಘಿಸಿದರು. ಆತರುವಾಯ ಸರ್ಕಲ್ ಇನ್ಸ್‌ಪೆಕ್ಟರ್ ಮ|| ರಾ|| ವೆಂಕಟರಾಮಯ್ಯ ನವರು ಹಾಸ್ಟಲ್‌ನ ಉಪಯೋಗವನ್ನು ಕುರಿತು ಇಂಗ್ಲೀಷಿನಲ್ಲಿ ದಿವ್ಯವಾದ ಭಾಷಣವನ್ನು ಮಾಡಿ ವಿದ್ಯಾರ್ಥಿ ಉಪಾಧ್ಯಾಯರುಗಳಿಗೆ ಉತ್ತೇಜನವನ್ನು ಕೊಟ್ಟರು. ಬಳಿಕ ಇಂಡಸ್ಟ್ರಿಯಲ್ ಸ್ಕೂಲ್ ಡ್ರಾಯಿಂಗ್ ಮಾಸ್ಟರ್ ಮೆ|| ಯಂ. ಆರ್ಯಮೂರ್ತಿಯವರು ಆಂಧ್ರ ಪದ್ಯಗಳಿಂದ ಮೊದಲು ಶ್ರೀಮನ್ಮಹಾರಾಜ, ಯುವರಾಜ, ಮಂತ್ರಿವರ್ಯರ ಮತ್ತು ಇನ್|| ಜನರಲ್‌ರವರ ಗುಣಕಥನವನ್ನು ಮಾಡಿದನಂತರ, ಹಾಸ್ಟಲ್ ಕಟ್ಟಲು ಮೊದಲು ಪುನಾದಿಯನ್ನು ಹಾಕಿದ ಶ್ರೀಮಾನ್ ಸಿ. ಆರ್. ರೆಡ್ಡಿಯವರನ್ನೂ ಅವರ ಅಮೋಘಭಾವವನ್ನು ಪೂರ್ಣಗೊಳಿಸಿ ಕೀರ್ತಿಯುತರಾದ ಮ|| ರಾಮಸಂಜೀವರೆಡ್ಡಿಯವರನ್ನೂ, ನಂತರ ಅಮೃತಹಸ್ತಗಳಿಂದ ನೂತಭವನವನ್ನು ಶುದ್ಧಿಗೊಳಿಸಿದ ಮ|| ಬಾಲಸುಂದರಮಯ್ಯರ್‌ವರನ್ನೂ ಕೊಂಡಾಡಿ, ಮಂದಿರವನ್ನು ಪೂರ್ತಿಗೊಳಿಸಿದ ಮೂವರ ಮೂರ್ತಿಗಳನ್ನು ತ್ರಿಮೂರ್ತಿಗಳು ಆಶೀರ್ವದಿಸಿ, ದೀರ್ಘಾಯುರಾರೋಗ್ಯಗಳನ್ನೀಯಲೆಂದು ಸ್ವಾರಸ್ಯವಾದ ತೆಲುಗು ಭಾಷಣವನ್ನು ಮಾಡಿದರು. ನಂತರ ಸಂಸ್ಕೃತ ಪಂಡಿತರು ಬಹು ಸ್ವಾರಸ್ಯವಾದ ದೀರ್ಘಭಾಷಣವನ್ನು ಮಾಡಿದರು. ಆಮೇಲೆ ಅಧ್ಯಕ್ಷರ ಭಾಷಣವು ನಡಿಯಿತು. ತರುವಾಯ ಹೈಸ್ಕೂಲ್ ಹೆ|| ಮಾಸ್ಟರವರವರು ಎಲ್ಲರಿಗೂ ಅಭಿವಂದನೆಗಳನ್ನು ಹೇಳಿದರು. ಗಂಧ ಪುಷ್ಪಗಳನ್ನು ಹಂಚಿದರು. ಮಹಾರಾಜರ ಶ್ರೇಯಃ ಪ್ರಾರ್ಥನೆಯೊಡನೆ ಮಂಗಳವನ್ನು ಹಾಡಿದರು. ಸಾಯಂಕಾಲ 3 ಗಂಟೆಗೆ ಇನ್ಸ್‌ಪೆಕ್ಟರ್ ಜನರಲ್‌ರವರು ಸರ್ಕಲ್ ಇನ್ಸ್‌ಪೆಕ್ಟರವರು, ಹೈಸ್ಕೂಲ್ ಹೆಡ್‌ಮಾಸ್ಟರು ಮೋಟಾರಿನಲ್ಲಿ ಹೊರಟು ಕೋಟೆ ಗರ್ಲ್ಸ್‌ಸ್ಕೂಲ್‌ಲನ್ನು ಪರಾಂಬರಿಸಿದರು. ಹೇ|| ಮಿಸ್ಟ್ರೆಸ್‌ವರು ಸ್ಕೂಲಿಗೆ ಬೇಕೆಂದು ಕೇಳಿಕೊಂಡ ಸಲಕರಣೆಗಳೆಲ್ಲವನ್ನು ನೋಟುಮಾಡಿಕೊಂಡು ಸಿಂಗಿಂಗ್ ಮಾಸ್ಟರವರನ್ನು ಜಾಗ್ರತೆ ಕೊಡುವದಾಗಿ ಹೇಳಿ ಹೊರಟರು. ಇದು ಕೋಟೆ ಜನರ ಅದೃಷ್ಟವು.

ಒಬ್ಬ ಪ್ರತ್ಯಕ್ಷದರ್ಶಿ.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡು.

ಈವರಿವಿಗೆ ಈ ದೇಶದಲ್ಲಿ 4 ಡಿಸ್ಟ್ರಿಕ್ಟ್ ಬೋರ್ಡುಗಳು ತಮ್ಮ ಜವಾಬುದಾರಿಯನ್ನು ಅರಿತುಕೊಂಡು ತಮ್ಮ ತಮ್ಮ ಡಿಸ್ಟ್ರಿಕ್ಟುಗಳಲ್ಲಿ ಪ್ರಾಥಮಿಕ ಮತ್ತು ಸೆಕೆಂಡರಿ ವಿದ್ಯಾಭ್ಯಾಸಗಳಿಗೆ ಏರ್ಪಾಡುಮಾಡಿಕೊಂಡುವು. ಸದರೀ ಡಿಸ್ಟ್ರಿಕ್ಟುಗಳಲ್ಲಿ ವಿದ್ಯಾಭ್ಯಾಸದ ತೆರಿಗೆಯನ್ನು ವಸೂಲುಮಾಡಿ ಸರ್ಕಾರದವರು ಕೆಲವು ಭಾಗ ಗ್ರಾಂಟು ಕೊಟ್ಟು ಅನೇಕ ವಿದ್ಯಾಭಿವೃದ್ಧಿ ಕಾರ್ಯಗಳು ಪ್ರಾರಂಭಿಸಲ್ಪಟ್ಟು ಇರುವುವು. ಯಾವ ದೇಶವೇ ಆಗಲೀ ನಾಗರೀಕತೆಯಲ್ಲಿ ಮುಂದುವರಿಯಬೇಕಾದರೆ, ಆ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯೂ ತನ್ನ ತನ್ನ ಕಸುಬನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವುದಕ್ಕೂ ದೇಶಾಭಿಮಾನ ಮತ್ತು ರಾಜಭಕ್ತಿಯನ್ನು ಹೊಂದುವುದಕ್ಕೂ ವಿದ್ಯೆಯೇ ಅಸ್ತಿಭಾರವಾಗಿರುವುದು. ಈ ಪ್ರಪಂಚದಲ್ಲಿ ಪ್ರತಿಯೊಬ್ಬ ಪ್ರಜೆಗೂ ವಿದ್ಯೆಕಲಿಸಿದ ರಾಜ್ಯಗಳು ಹೇಗೆ ಇತಿಹಾಸದಲ್ಲಿ ಕೀರ್ತಿಯನ್ನು ಪಡೆದು ಸುಖಸಂಪತ್ತುಗಳನ್ನು ಅನುಭವಿಸುತ್ತಲಿರುವ ವಿಚಾರವನ್ನು ವಿದ್ಯಾಭ್ಯಾಸದ ಇಲಾಖೆಯ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಮ|| ಆರ್. ಕೃಷ್ಣಯಂಗಾರ್‌ರವರೂ, ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರಾದ ಮೆ|| ಕೆ. ಎಚ್. ರಾಮಯ್ಯನವರೂ ಬಹು ಚೆನ್ನಾಗಿ ಡಿಸ್ಟ್ರಿಕ್ಟ್ ಕಾನ್ಫರೆನ್ಸಿನಲ್ಲಿ ತಿಳಿಸಿದರು.

ವಿದ್ಯಾಭ್ಯಾಸದ ತೆರಿಗೆಯನ್ನು ಕೊಟ್ಟು ಡಿಸ್ಟ್ರಿಕ್ಟಿನಲ್ಲಿ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಿಕೊಳ್ಳುವಂತೆ ಸರ್ಕಾರದವರು ಸುಮಾರು ಎರಡು ವರುಷಗಳ ಹಿಂದೆಯೇ ಡಿಸ್ಟ್ರಿಕ್ಟ್ ಬೋರ್ಡಿಗೆ ತಿಳಿಸಿದರು. ರೂಲ್ಸು ಮೇರೆ ಡಿಸ್ಟ್ರಿಕ್ಟ್ ಬೋರ್ಡಿನಲ್ಲೂ ತಾಲ್ಲೂಕು ಬೋರ್ಡಿನಲ್ಲೂ ಅಭಿಪ್ರಾಯವನ್ನು ಕೇಳಿದರು. ಶೇಕಡ 75 ಬೋರ್ಡುಗಳು ಅಗ್ಗ ಒಪ್ಪಲಿಲ್ಲವಾಗಿ ಆ ವಿಚಾರವು ಗೌರ್ನಮೆಂಟಿಗೆ ತಿಳಿಸಲ್ಪಟ್ಟಿತು. ಪುನರಾಲೋಚನೆ ಮಾಡತಕ್ಕುದೆಂದು ಗೌರ್ನಮೆಂಟಿನವರು ಸೂಚಿಸಿದರು. ಪುನಃ ತಾಲ್ಲೂಕು ಬೋರ್ಡಿನವರನ್ನು ಕೇಳಲಾಯಿತು. ಶ್ರೀರಂಗಪಟ್ಟಣ, ಕೃಷ್ಣರಾಜಪೇಟೆ ಮತ್ತು ಚಾಮರಾಜನಗರಗಳ ತಾಲ್ಲೂಕು ಬೋರ್ಡುಗಳು ವಿನಹ ಉಳಿದ ತಾಲ್ಲೂಕು ಬೋರ್ಡುಗಳೆಲ್ಲವೂ ವಿದ್ಯಾಭ್ಯಾಸದ ತೆರಿಗೆಯನ್ನು ಕೊಡಲು ಒಪ್ಪಿಕೊಂಡುವು. ಮಂಡ್ಯ ಮತ್ತು ಮಳವಳ್ಳಿ ತಾಲ್ಲೂಕು ಕಾನ್ಫರೆನ್ಸುಗಳಲ್ಲಿ ಹಳ್ಳಿಗಾಡಿನ ಜನರು ಮುಂದಾಗಿ ಬಂದು, ತಾವು ವಿದ್ಯಾಭ್ಯಾಸದ ತೆರಿಗೆಯನ್ನು ಒಂದಾಣೆಯಂತೆ ಕೊಡಲು ಸಿದ್ಧರಾಗಿರುವುದಾಗಿಯೂ, ತಾಲ್ಲೂಕಿನಲ್ಲೇ ಯೂನಿಟ್ಟಾಗಿ ಇಟ್ಟುಕೊಂಡು ಹಳ್ಳಿಗಾಡುಗಳಲ್ಲಿ ವಿದ್ಯಾಭ್ಯಾಸಕ್ಕೆ ಏರ್ಪಾಡುಮಾಡಿ [illegible] ಅವಕಾಶವನ್ನು ಕಲ್ಪಿಸಿಕೊಡಬೇಕಾಗಿ ಪ್ರಾರ್ಥಿಸಿಕೊಂಡರು. ವಿದ್ಯಾಭ್ಯಾಸದ ತೆರಿಗೆಯು [illegible] 16 [illegible]

ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನಲ್ಲಿ ಚರ್ಚೆಗೆ ಬಂದಿತು. ಪ್ರೆಸಿಡೆಂಟರು ಮತ್ತು ಡೆಪ್ಯುಟಿ ಕಮಿಷನರು ಆದ ಮ|| ಬಿ. ರಾಮಸ್ವಾಮಯ್ಯನವರು ಈ ವಿಚಾರದಲ್ಲಿ ಆಗಲೇ ನಮ್ಮ ಪ್ರಜೆಗಳು ಅನೇಕ ಕಂದಾಯ ಮತ್ತು ತೆರಿಗೆಗಳನ್ನು ಕೊಡುತ್ತಲಿರುವರೆಂತಲೂ, ವಿದ್ಯಾಭ್ಯಾಸದ ತೆರಿಗೆಯು ಅವರ ಮೇಲೆ ಬೀಳುವುದೆಂತಲೂ, ಒಂದು ವೇಳೆ ಈ ತೆರಿಗೆಯನ್ನು ಕೊಡಲು ಒಪ್ಪದೆಹೋದರೆ ಸರ್ಕಾರದವರು ಹೆಚ್ಚು ಗ್ರಾಂಟು ಕೊಡಲೊಲ್ಲರೆಂತಲೂ ವಿವರಿಸಿ ಹೇಳಿದರು. ಆಮೇಲೆ ತೆರಿಗೆಯನ್ನು ಕೊಡಲು ಸಮ್ಮತವೆಂತ ಕೆಲವು ಮೆಂಬರುಗಳೂ, ಕೊಡಲಾಗುವುದಿಲ್ಲವೆಂತ ಕೆಲವರೂ ಚರ್ಚೆ ಮಾಡಲಾರಂಭಿಸಿದರು. ಸಭಾಧ್ಯಕ್ಷರು ಓಟು ತೆಗೆದುಕೊಳ್ಳಲು ಅಪ್ಪಣೆ ಮಾಡಿದರು. ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಮ|| ಕೃಷ್ಣಯ್ಯಂಗಾರ್‌ರವರೂ, ಎಡತೊರೆ ತಾಲ್ಲೂಕಿನ ಮ|| ಟಿ. ಸುಬ್ಬರಾಯರೂ, ಮೂಗೂರು ಮ|| ಲಕ್ಷ್ಮೀನಾರಣಪ್ಪನವರೂ, ಇನ್ನು ಇಬ್ಬರು ಬ್ರಾಹ್ಮಣ ಮೆಂಬರುಗಳೂ, ಉಳಿದ ಬ್ರಾಹ್ಮಣೇತರ ಮೆಂಬರುಗಳೆಲ್ಲರೂ ಸೇರಿ 19 ಜನ ಮೆಂಬರುಗಳು ಸೆಸ್ಸು ಹಾಕಲು ಸಮ್ಮತಿಕೊಟ್ಟರು. ಡಿ|| ಬೋರ್ಡು ವೈಸ್‌ಪ್ರೆಸಿಡೆಂಟ್ ಮ|| ಕೃಷ್ಣಶಾಸ್ತ್ರಿಗಳು ಆದಿಯಾಗಿ 11 ಮಂದಿ ದೊಡ್ಡ ಮನುಷ್ಯರು ಸಮ್ಮತಿಕೊಡಲಿಲ್ಲ. ಈ ಹನ್ನೊಂದು ಮಂದಿಯಲ್ಲಿ ಸಾಲಿಗ್ರಾಮದ ಮ|| ಬೋರೇಗೌಡರು ಮಾತ್ರ ಒಬ್ಬರು. ರೂಲ್ಸು ಮೇರೆ ರೆಸಲೂಷನ್ ಪ್ಯಾಸ್ ಆಗಬೇಕಾದರೆ ನೆರೆದಿದ್ದ ಸಂಖ್ಯೆ ಮೆಂಬರಲ್ಲಿ ಸೇಕಡ 75 ಓಟುಗಳು ಬಂಬೇಕಾಗಿದ್ದಿತು. ಅಂದರೆ ಸಭೆಯಲ್ಲಿ 30 ಜನ ಮೆಂಬರು ಬಂದಿದ್ದುದರಿಂದ 22½ ಮಂದಿ ಸಮ್ಮತಿಕೊಡಬೇಕಾಗಿದ್ದಿತು. ಹಾಗಿಲ್ಲದೆ 19 ಮಂದಿ ಮಾತ್ರ ಒಪ್ಪಿರುವದರಿಂದ ರೆಸಲೂಷನ್ ಪ್ಯಾಸು ಆಗದೆ ಹೋಗಿ ಡಿಸ್ಟ್ರಿಕ್ಟ್ ಅಮಳೆ ವಿದ್ಯಾಭ್ಯಾಸಕ್ಕೆ ಕೊರತೆಯುಂಟಾಯಿತು. ಇದರಿಂದ ಯಾರಿಗೆ ಅನಾನುಕೂಲವಾಯಿತು? ಡಿಸ್ಟ್ರಿಕ್ಟ್ ಬೋರ್ಡಿನ ಕರ್ತವ್ಯವೇನು? ಈ ಸಂದರ್ಭದಲ್ಲಿ ಘನ ಸರ್ಕಾರದವರು ಏನು ಮಾಡಬಹುದು? ಮತ್ತು ಈಗ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಆಗಿರುವ ರೆಸಲೂಷನ್ ರೂಲ್ಸಿಗೆ ಅನುಸಾರವಾಗಿ ನಡೆದು ಇದೆಯೇ ಎಂಬುದನ್ನು ವಿವರಿಸಬೇಕಾಗಿರುತ್ತೆ. ಬ್ರಾಹ್ಮಣರಂತೂ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸುವುದನ್ನು ತಮ್ಮ ಮತಪದ್ಧತಿಯಾಗಿ ಆಚರಣೆಯಲ್ಲಿ ತಂದಿರುತ್ತಾರೆ. ಅವರು ನೆಲಸಿರುವ ಕಡೆಗಳಲ್ಲೆಲ್ಲಾ ಆಗಲೇ ಸ್ಕೂಲುಗಳು ಸ್ಥಾಪಿಸಲ್ಪಟ್ಟಿವೆ. ಈಗ ಹೊಸದಾಗಿ ಆಗಬೇಕಾಗಿರುವ ಸ್ಕೂಲುಗಳೆಲ್ಲಾ ಬ್ರಾಹ್ಮಣೇತರ ರೈತಪ್ರಜೆಗಳಿರುವ ಎಡೆಗಳಲ್ಲಿಯೇ. ಇದುವರಿವಿಗೆ ಅಲ್ಲಲ್ಲಿದ್ದ ಗ್ರ್ಯಾಂಟ್ ಸ್ಕೂಲುಗಳೂ ಮುಚ್ಚಿಹೋಗುತ್ತಲಿವೆ. ಹೊಸದಾಗಿ ಸ್ಕೂಲುಗಳನ್ನು ಅಪೇಕ್ಷಿಸಿದರೆ ಸೆಸ್ಸುಕೊಡಲು ಒಪ್ಪಿದರೆ ಸ್ಕೂಲು ಆಗುತ್ತೆಂತಲೂ ಈಗ ದ್ರವ್ಯದ ಅಭಾವವೆಂತಲೂ ಸಂಬಂಧಪಟ್ಟ ಅಧಿಕಾರಿಗಳು ಹೇಳುತಲಿದ್ದಾರೆ. ದೇವರು ವರಕೊಟ್ಟರೂ ಪೂಜಾರಿ ಕೊಡನೆಂಬ ಗಾದೆಯಂತೆ ನಾವು ದುಡ್ಡುಕೊಟ್ಟು ಓದಿಕೊಳ್ಳುತ್ತೇವೆಂದರೂ ಅವಕಾಶವಿಲ್ಲದೆ ನರಳುವ ಹೊತ್ತು ನಮ್ಮ ಹಿಂದುಳಿದ ಜನದಪಾಲಿಗೆ ಬಂದಿರುತ್ತೆ. ನಮ್ಮ ಡಿಸ್ಟ್ರಿಕ್ಟಿಗೆ ಮುಖ್ಯಪಟ್ಟಣವಾದ ಮೈಸೂರಿನಲ್ಲಿಯೇ ಯೂನಿವರ್ಸಿಟಿ ಇರುತ್ತೆ. ನಮ್ಮ ದೇಶದಲ್ಲಿ ಘನಪಂಡಿತರ ಸಂಖ್ಯೆ ಹೆಚ್ಚುತ್ತಾ ಬಂದ ಹಾಗೆಲ್ಲಾ ವಿದ್ಯಾವಂತರಾದ ರೈತಪ್ರಜೆಗಳ ಸಂಖ್ಯೆಯೂ ಹೆಚ್ಚದರಲ್ಲವೆ ರಾಜ್ಯವು ಮುಂದೆ ಬರುವುದು? ರೈತರು ಕೊಡುವ ಕಂದಾಯದಿಂದ ಕಲಾಶಾಲೆಗಳಲ್ಲಿ ಪಟ್ಟಣವಾಸಿಗಳಾದ ಸ್ತ್ರೀಪುರುಷರು ಓದಲು ಏರ್ಪಡಿಸಿರುವಲ್ಲಿ ರೈತಪ್ರಜೆಗಳಲ್ಲಿ ಸಾಮಾನ್ಯ ವಿದ್ಯಾಭ್ಯಾಸ ಹರಡಲು ಸೆಸ್ಸುಕೊಡದೆಂಬ ಮೆಂಬರುಗಳು ಏನು ಏರ್ಪಾಡುಮಾಡಿರುವರು, ಅಥವಾ ಮಾಡಲು ಸಿದ್ಧರಾಗಿರುವರು? ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಅಧಿಕಾರಕ್ಕೆ ಒಳಪಟ್ಟಿರುವ ರೈತಪ್ರಜೆಗಳಲ್ಲಿ ವಿದ್ಯಾಭ್ಯಾಸ ಹರಡಲು ಬೇರೆ ಯಾವ ಉಪಾಯವನ್ನು ಯೋಚಿಸಿರುವರು? ಹಾಗಿಲ್ಲದಿದ್ದರೆ ನಾವು ಸೆಸ್ಸು ಕೊಡುವುದಿಲ್ಲವೆಂತ ಹೇಳಿರುವುದು ನ್ಯಾಯವೆ? ಉಳಿದ ಡಿಸ್ಟ್ರಿಕ್ಟ್ ಪ್ರಜೆಗಳು ಮಾಡಿರುವ ಪುಣ್ಯವೇನು, ನಾವು ಅವಿದ್ಯಾವಂತರಾಗಿರಲು ಮಾಡಿರುವ ಪಾಪವೇನು? ಈ ವಿಚಾರವನ್ನು ಪುನಹ ಡಿಸ್ಟ್ರಿಕ್ಟ್ ಬೋರ್ಡಿನವರು ಸಾವಧಾನದಿಂದ ವಿಚಾರಮಾಡಿ ಡಿಸ್ಟ್ರಿಕ್ಟ್ ಅಮಳೆ ರೈತರಲ್ಲಿ ವಿದ್ಯಾಭ್ಯಾಸ ಹರಡಲು ಏರ್ಪಾಡುಮಾಡುವರೆಂದೂ ನಿರೀಕ್ಷಿಸಿರುತ್ತೆ. ಡಿಸ್ಟ್ರಿಕ್ಟ್ ಬೋರ್ಡು ಒಂದು ವ್ಯಾಪಾರಮಂಡಲಿಯಲ್ಲ. ರೈತರಿಂದ ಸರ್ಕಾರದವರು ವಸೂಲು ಮಾಡಿಕೊಡುವ ಸೆಸ್ಸನ್ನು ರೈತರ ಉಪಯೋಗಕ್ಕೆ ಕ್ರಮವಾಗಿ ಖರ್ಚು ಮಾಡದೆ ಹಣವನ್ನು ಉಳಿಸುತ್ತಾ ಬಂದರೆ ಪ್ರಯೋಜನವೇನು? ಇದುವರಿವಿಗೆ ಉಳಿಸಿರುವ ಸುಮಾರು 2 ಲಕ್ಷ ರೂಪಾಯಿನ ಪ್ರಯೋಜನ ವೇನು? ಎಲ್ಲಾ ಕೆಲಸಗಳಿಗೆ ಮೊದಲು ಜನರ ಆರೋಗ್ಯ ಮತ್ತು ನೀರು ಒದಗಿಸುವುದು ಬಹು ಮುಖ್ಯ. ಅದರ ಸಂಗಡಲೇ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಬೇಕು. ಹೀಗೆ ಹಣವನ್ನು ನಿಲ್ಲಿಸದೆ ವಿದ್ಯಾಭ್ಯಾಸವನ್ನು ಪ್ರಜಾಸಾಮಾನ್ಯದಲ್ಲಿ ಹರಡುತ್ತ ಬಂದಿದ್ದರೆ, ಮಳವಳ್ಳಿ, ಶ್ರೀರಂಗಪಟ್ಟಣ ಮತ್ತು ಕನ್ನೆಗಾಲದ (ರೈಟ್) ದೊಂಬಿ ಕೇಸ್‌ಗಳು ಆಗಿ ತುಂಟರ ಜತೆಯಲ್ಲಿ ಮಾನಿಷ್ಟ ಪ್ರಜೆಗಳುಸೇರಿ ಮಾನಹಾನಿ ಧನಹಾನಿ ಪ್ರಾಣಹಾನಿಗಳನ್ನು ಮಾಡಿಕೊಳ್ಳುತ್ತಲಿದ್ದರೆ? ವಿದ್ಯೆ ಕಲಿತ ಪ್ರಜೆಗಳು ಸರಕಾರಕ್ಕೆ ವತ್ತಾಸೆಯಾಗಿ ನಿಲ್ಲುವರು. ವಿದ್ಯೆ ಇಲ್ಲದೆ ಮೂಢ ಪ್ರಜೆಗಳು ಕೆಲವು ಜನರ ದುರ್ಬೋಧನೆಗೆ ಕಿವಿಕೊಟ್ಟು, ಸ್ವರಾಜ ಸಾಧನೆಗೆಂತಲೋ, ಒಬ್ಬರ ಮತ ದೊಡ್ಡದೆಂತಲೊ, ಇನ್ನೊಬ್ಬರ ಮತ ಸಣ್ಣದೆಂತಲೊ, ಅಥವಾ ಪಾರ್ಟಿ ವೈಷಮ್ಯದಿಂದಲೊ ಕಷ್ಟ ನಷ್ಟಗಳನ್ನು ಅನುಭವಿಸುವರಲ್ಲದೆ ಸರ್ಕಾರದವರಿಗೂ ತೊಂದರೆಕೊಡುವವರಾಗುವರು. ಈಗ ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನವರು ತಾವು ಕೈಕೊಂಡಿರುವ ಇತರ ಎಲ್ಲಾ ಕೆಲಸಗಳನ್ನು ಬಿಟ್ಟು ಮೊದಲು ವಿದ್ಯಾಭ್ಯಾಸಕ್ಕೆ ಗಮನಕೊಡುವುದು ತಮ್ಮ ಮೊದಲನೆ ಕೆಲಸವಾಗಿರುವುದು. ಇದುವರಿವಿಗೆ ಅರ್ಧ ರಾಜ್ಯವೇ ವಿದ್ಯಾಭ್ಯಾಸವು ಎಲ್ಲೆಲ್ಲಿಯೂ ಹರಡಲು ಏರ್ಪಾಡುಮಾಡಿಕೊಂಡ ಹಾಗಾಯಿತು. ಯೂನಿವರ್ಸಿಟಿಯೇ ಇರುವ ಈ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಏತಕ್ಕೆ ಕೂಡದೆಂಬುದನ್ನು ಘನಸರ್ಕಾರದವರು ಸ್ವಲ್ಪ ಯೋಚಿಸಬೇಕು. ಹುಚ್ಚು ಬಿಟ್ಟ ಹೊರತು ಮದುವೆ ಯಾಗದು ಮದುವೆ ಯಾದ ಹೊರತು ಹುಚ್ಚು ಬಿಡದೆಂಬ ಗಾದೆಯಂತೆ ಪ್ರಜೆಗಳಿಗೆ ಹೆಚ್ಚು ಸ್ವಾತಂತ್ರ್ಯ ಕೊಡಬೇಕೆಂಬ ಆಸೆ ಸರ್ಕಾರದವರಿಗೆ ಮತ್ತು ಸ್ವಾತಂತ್ರ್ಯ ಹೊಂದುತ್ತ ವಿದ್ಯಾವಂತರಾದಾರೆಂಬ ಉದ್ದೇಶ, ಇಂತಃ ಆಶಯದಿಂದ ಸ್ವಲ್ಪವೂ ಪ್ರಯೋಜನವೇ ಇಲ್ಲ. ಮೊದಲು ವಿದ್ಯಾವಂತರಾಗಿರಿ ಆಮೇಲೆ ಹೆಚ್ಚು ಸ್ವಾತಂತ್ರ್ಯಗಳನ್ನು ಕೊಡುತ್ತೇವೆಂದು ಘನಸರ್ಕಾರದವರು ಹೇಳಿದ್ದರೆ ಬಹು ಚನ್ನಾಗಿದ್ದಿತು. ಅವುಗಳ ಕರ್ತವ್ಯಗಳನ್ನು ಇನ್ನು ಅರಿತುಕೊಳ್ಳದಿರುವ ಬೋರ್ಡುಗಳಿಗೆ ಈಗ ಕೊಟ್ಟು ಇರುವ ಅಧಿಕಾರಕ್ಕಿಂತ ಹೆಚ್ಚು ಕೊಡದೆ ಅವುಗಳ ಕೆಲಸ ಕಾರ್ಯಗಳನ್ನು ಸರ್ಕಾರದವರು ಈಕ್ಷಿಸುತ್ತಲಿರಬೇಕಾಗಿರುತದೆ. 16ನೇ ತಾರೀಖಿನ ಮೀಟಿಂಗಿನ ಕಾರ್ಯಕ್ರಮದ ಪಟ್ಟಿಯಲ್ಲಿ "ವಿದ್ಯಾಭ್ಯಾಸದ ಸೆಸ್ಸು ಹಾಕುವ ವಿಚಾರ" ವೆಂಬ ವಿಷಯವೇ ಇರಲಿಲ. "ವಿದ್ಯಾಭ್ಯಾಸದ ಸೆಸ್ಸು ಹಾಕುವ ವಿಚಾರದಲ್ಲಿ ಎಡತೊರೆ ತಾಲ್ಲೂಕು ಬೋರ್ಡು ಪ್ರೆಸಿಡೆಂಟ್‌ರವರಿಂದ ತಲುಪಿರುವ 160ನೇ ನಂಬರ್ 9-5-23ನೇ ಮೆಮ್ಮೊ ನಡೆದ ವಿಚಾರ" ವೆಂಬ 15ನೇ ನಂಬರು ಸಬ್‌ಜಕ್ಟ್ ಅಜಂಡಾದಲ್ಲಿದ್ದಿತು. "ಡಿಸ್ಟ್ರಿಕ್ಟ್ ಅಮಳೆ ಸೆಸ್ಸು ಹಾಕುವ ವಿಚಾರ" ವೆಂದು ನಮೂದು ಇದ್ದಿದ್ದರೆ ಎಲ್ಲಾ ಮೆಂಬರುಗಳೂ ಬರುತ್ತಲಿದ್ದರು. 48 ಜನರು ಮೆಂಬರುಗಳು ಇರುವ ಕಡೆ ಇದರಿಂದಲೇ 30 ಜನರು ಹಾಜರಿದ್ದಂತೆ ಕಾಣುತ್ತೆ. ಅಲ್ಲದೆ ಹಿಂದೆ ಎಡತೊರೆ ತಾಲ್ಲೂಕು ಬೋರ್ಡಿನವರು ಸರಿಯಾಗಿ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಕೊಟ್ಟಿರಲಿಲ್ಲ. ಈಗಲೂ ಅವರ ಕಾಗದದಲ್ಲಿ ಸರಿಯಾದ ಜವಾಬು ಇಲ್ಲವೆಂತಲೇ ಅನೇಕರು ಭಾವಿಸಿರಬಹುದು. ಅಲ್ಲದೆ ಈ ವಿಚಾರದಲ್ಲಿ ಆದಿವಸ ಮೀಟಿಂಗನಲ್ಲಿ ಅವರ ಜವಾಬು ಸರಿಯೇ ಅಲ್ಲವೆ? ಅಂದರೆ ಸೆಸ್ಸುಕೊಡಲು ತಾಲ್ಲೂಕು ಬೋರ್ಡಿನವರು ಒಪ್ಪಿದರೆ ಇಲ್ಲವೆ? ಎಂಬುದನ್ನು ಮಾತ್ರ ನಿರ್ಧರ ಮಾಡಬೇಕಾಗಿದ್ದಿತು. ಅಲ್ಲದೆ ನಾಗಮಂಗಲದ ತಾಲ್ಲೂಕು ಬೋರ್ಡಿನಿಂದ ಇನ್ನೂ ಮೆಂಬರುಗಳೇ ಚುನಾಯಿಸಲ್ಪಟ್ಟಿರುವುದಿಲ್ಲ. ಅವರು ಚುನಾಯಿಸಲ್ಪಡುವವರಿವಿಗಾದರೂ ಈ ವಿಚಾರವನ್ನು ನಿಲ್ಲಿಸಬೇಕಾಗಿದ್ದಿತು. ವಿದ್ಯಾಭ್ಯಾಸದ ತೆರಿಗೆ ವಿಚಾರದಲ್ಲಿ ಭಿನ್ನಾಭಿಪ್ರಾಯವು ಬರುವುದೇ ಇಲ್ಲ. ಎಲ್ಲರೂ ಒಪ್ಪಿಕೊಳ್ಳುವರೆಂದು ಭಾವಿಸಿದ್ದರು. ಇದ್ದಕ್ಕಿದ್ದ ಹಾಗೆಯೇ ಕೂಡದೆಂದು ಕೆಲವು ದೊಡ್ಡ ಮನುಷ್ಯರು ಹೇಳಲು, ಆಗ ಒಬ್ಬ ಮೆಂಬರು ಹಾಗೆ ಹೇಳುವವರ ಗುರ್ತು ಹಾಕಿ ರಿಕಾರ್ಡುಮಾಡಿಕೊಳ್ಳಬೇಕೆಂದು ಕನ್ನಡದಲ್ಲಿಯೇ ಸೂಚಿಸಿದರು. ಅಂದರೆ ನಾನು ಅದಕ್ಕೆ ಇಂಗ್ಲೀಷ್‌ನಲ್ಲಿ (I demand polling) ಎಂದು ಅರ್ಥಮಾಡಿಕೊಂಡೆನು. ಆದರೆ ಪ್ರೆಸಿಡೆಂಟ್‌ರವರಾಗಲೀ ವೈಸ್‌ಪ್ರೆಸಿಡೆಂಟ್‌ರವರಾಗಲೀ ಸಮ್ಮತಿ ಕೊಟ್ಟವರ ಮತ್ತು ಕೊಡದವರ ಹೆಸರಿನ ಪಟ್ಟಿಯನ್ನು ಮಾಡಿಕೊಂಡಹಾಗೆ ಕಾಣಬರಲಿಲ್ಲ. ಈಗಲೂ ದಯವಿಟ್ಟು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟ್‌ರವರು ಮುಂದಿನ ಮೀಟಿಂಗ್ ಅಜಂಡಾದಲ್ಲಿ ವಿವರವಾಗಿ ಈ ವಿಚಾರವ (subject) ನ್ನು ಸೇರಿಸಿ ಯೋಚಿಸಲು ಅವಕಾಶ ಕೊಡಬೇಕಾಗಿ ಕೋರಿದೆ.

(ಸಶೇಷ.)

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ.	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ.	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦

ಜಗತ್ತಿನ ನಿಜವಾದ] ಆಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ

ನಂಬಿ ನಡೆದವರಿಗೆ ಗಂಭೀರವಾದ ಗುಣ.

೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.

ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಿಕೆ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯ ತೆಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ನಡುವು, ಕಾಲು ಮೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಸಕ್ತತೆ, ಜಾಗರಣೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಪ್ಲೋಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಶೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟ ರೋಗಗಳು ಬಾಲ-ಬಾಲಕಿ ತರುಣ-ತರುಣೆ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು. ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು.

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮುಕಂದ, ಮಧುಕಂದ, ಜಲಕಂದ, ಶ್ರೇಷ್ಠಕಂದ, ತಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೋಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಮುದ್ರಶೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಕಮಿಪತ್ರ, ಚಾಯಪತ್ರ, ಚಾಯಫಳ, ಮದನಮುಸ್ತ, ರತನಪುರುಷ, ರೂಮಾಮುಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಿಮಿಶ್ರಿ, ವಂಶಲೋಚನ, ಸಾಲಮಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ವೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಕೇರಿಭಾತ, ಗೋಖುರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ.

ಈ ಪ್ರಕಾರ ಮೇಲೆ ಕೊಟ್ಟ ಜಿನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ತಿಂದು ಮೇಲೆ ಉಗುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯಯಿಲ್ಲ. ೨೧ ದಿವಸ ಸಾಲುವ ೮೪ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾಲಹಾತ್ವರೆಮಾಡಿರಿ.

4 ಪತ್ತಾ:—ವೈದ್ಯ ವಿ. ಎಸ್. ಕಾಪಸೆ,

ಮು. ಪೋ. ಮಿರಜ.

ರಾಜಮಂಡ್ರಿ ಸೀರೆಗಳು.

ಬಹು ಸೊಗಸಾದ್ದು ! 16 ಮೊಳ ಉದ್ದವಿರುವದು

ಈ ಸೀರೆಗಳನ್ನು ಸಾಜ್ಯವಾದ ಒಳ್ಳೇ ನೂಲಿನಿಂದ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಅಂಚು ಕಟ್ಟಿರುವದು. ಇದು ಉಡುವದಕ್ಕೆ ಧಡೂತಿಯಾಗಿಯೂ ನಯವಾಗಿಯೂ ನೋಟಕ್ಕೆ ಗಂಭೀರವಾಗಿಯೂ ಇದೆ. ಬಣ್ಣ ಹೋಗದು. ಈ ಸೀರೆಗಳು ಇದುವರಿವಿಗೂ ಯಾರಿಗೂ ಬರಲಿಲ್ಲ. ನಮಗೆ ಮಾತ್ರ ಈಗಲೇ ಬಂದಿರುತ್ತೆ. ಈ ಸೀರೆಗಳು ಬೇರೆ ಯಾರಲ್ಲಿಯೂ ದೊರೆಯುವುದಿಲ್ಲ. ಯಾವ ಬಣ್ಣದಲ್ಲಿ ಬೇಕಾದರೂ ಸಿಕ್ಕುವುವು.

ಕ್ರಯ 1ಕ್ಕೆ 8—0—0

ಮ್ಯಾನೇಜರ್—ಪೋ|| ಬಾ|| ನಂ. 105,

48 ಮದರಾಸು.

ಮದರಾಸ್ ಗವರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷ ಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷ ಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.

ಹೇರ್ ಡಿಸ್ಟ್ರಾಯರ್ ಲೋಷನ್.

DURBAR
SOAP

ಈ ತೈಲವನ್ನು ಕೂದಲು ತೆಗಿಯಬೇಕಾದ ಸ್ಥಳಕ್ಕೆ ಸ್ವಲ್ಪ ಸವರಿ 5 ನಿಮಿಷಗಳು ತಡೆದು ತೊಳೆದರೆ ಕತ್ತಿಯಿಂದ ಕ್ಷೌರಮಾಡಿಸಿಕ್ಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದಂತೆ ಕೂದಲನ್ನು ತೆಗದುಬಿಡುವದು.

ಕ್ರಯ ಬಾಟಲ್ 1ಕ್ಕೆ 0—8—0

ಸಾಂಡೋ ಆಯಿಲ್.

(ನಪುಂಸಕತ್ವಹಾರಿ ತೈಲವು.)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭ ಕಾರಕವಾಗಲಾರದು ಅತ್ಯಂತ ಸಂಭೋಗ. ವ್ಯಾಯಾಮ (ಕಸರತ್) ದಿಂದಲೂ ಯಾವಾಗ್ಗೂ ಕೂತುಕೊಂಡೇ ಇರುವದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಡುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟು ಈ ಎಣ್ಣೆಯನ್ನು ಲಿಂಗಕ್ಕೆ ಸವರುವದರಿಂದ ಗುಣವಾಗುವದು.

ವಿಳಾಸ:—ವಿ. ಎ. ಎಸ್. ಪಾಣಿ ಕಂಪೆನಿ,

48 ಸಾಹುಕಾರಪೇಟೆ ಮದರಾಸು.

೧೯೨೩ ನೆಯ ಇಸವಿ ಜುಲೈ ತಾ|| ೮ ರಿಂದ ೧೯೨೩ ನೆಯ ಜುಲೈ ತಾ|| ೧೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೫ ನೆಯ ರುಧಿರೋದ್ಗಾರಿನಾಮ ಸಂವತ್ಸರದ ನಿಜಜ್ಯೇಷ್ಠ ಬಹುಳ ದಶಮಿಯಿಂದ ನಿಜಜ್ಯೇಷ್ಠ ಬಹುಳ ಅಮಾವಾಸ್ಯೆ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನಮಾ
8	ಭಾನು	ದಶ	45-12	ಭರ	60-0	24
9	ಸೋಮ	ಏಕಾ	49-30	ಭರ	3-22	25
10	ಮಂಗಳ	ದ್ವಾದ	53-23	ಕೃತ್ತಿ	11-5	26
11	ಬುಧ	ತ್ರಯೋ	56-30	ರೋಹಿ	16-15	27
12	ಗುರು	ಚತು	58-45	ಮೃಗ	20-40	28
13	ಶುಕ್ರ	ಅಮಾ	60-0	ಆರ್ದ್ರಾ	24-6	29
14	ಶನಿ	ಅಮಾ	0-5	ಪುನ	26-26	30

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ವಿರಾಮಕೊಟ್ಟರೆ ಸಾಕೆಂದು ಯೋಚಿಸುತ್ತಿರುವರು. ಬೊಂಬಾಯಿ ಪಟ್ಟಣದ ಕೆಲವೆಡೆಯಲ್ಲಿ ಕಳೆದ ತಾ|| 4ರ ಪ್ರಾತಃಕಾಲ 8 ಗಂಟೆಗೆ ಕಡೆಯಾದ 24 ಗಂಟೆಯಕಾಲದಲ್ಲಿ 12 ಅಂಗುಲ ಮಳೆಯಾದುದಲ್ಲದೆ ತಾ|| 4 ರಲ್ಲೂ ಬಂದಿತು. ಗ್ರಾಂಟ್‌ರೋಡು, ನಲ್‌ಬಜಾರ್, ಜಾಕೂಬ್‌ಸರ್ಕಲ್, ಮಜಗಾನ್ ಮತ್ತು ಮಸ್ಜಿದ್‌ಬಂದರ್ ಇವುಗಳ ಸುತ್ತಲಪ್ರದೇಶಗಳು ನೀರಿನಲ್ಲಿ ಮುಳುಗಿಹೋಗಿದ್ದುವು ಮತ್ತೆ ಈಗಲೂ ಆ ಸ್ಥಳಗಳಲ್ಲಿ ಮೊಳಕಾಲುದ್ದ ನೀರು ನಿಂತಿರುವುದು. ಅನೇಕ ಕಡೆ ಟ್ರಾಂ ಬಂಡಿಗಳ ತಿರುಗಾಟವು ನಿಲ್ಲಿಸಲ್ಪಟ್ಟಿದ್ದಿತು. ಬೊಂಬಾಯಿನಲ್ಲಿ ಮಳೆಯಾಧಿಕ್ಯದಿಂದ ಜನರು ತೊಂದರೆಪಟ್ಟು ಬೇಸತ್ತಿರುವಾಗ್ಗೆ ಈ ಪ್ರಾಂತದಲ್ಲಿ ಮಳೆಯಿಲ್ಲದೆ ಹೊಡೆಗೆಬಂದಿರುವ ಜೋಳದ ಪೈರು ಒಣಗುತ್ತಿರುವುದರಿಂದಲೂ ಅನೇಕ ಕಡೆ ಕುಡಿಯಲಿಕ್ಕೆ ನೀರಿಲ್ಲದಿರುವುದರಿಂದಲೂ ಮುಂದೆ ಕ್ಷಾಮವೆಲ್ಲಿ ಪ್ರಾಪ್ತವಾಗುತ್ತದೋ ಎಂಬ ಭೀತಿಯಿಂದ ಜನರು ತಪ್ಪಿಸುತ್ತಲಿರುವರು. ದೇವರ ದಯೆಯಿಂದ ಕೂಡಲೆ ಮಳೆ ಬಂದು ಜನರ ಚಿಂತೆಯು ಪರಿಹರವಾಗಬೇಕಾಗಿದೆ.

ಬರುವ ದಸರಾಕಾಲದಲ್ಲಿ ಜರಗುವ ಪ್ರಜಾಪ್ರತಿನಿಧಿ ಸಭಾ ಕಾರ್ಯಕ್ರಮವು.

ಬರುವ ಆಶ್ವೀಜಮಾಸದಲ್ಲಿ ನಡಿಯುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಡಬೇಕಾದ ವಿಷಯಗಳು 1923 ನೇ ಜುಲೈ ತಾ|| 17 ರೊಳಗೆ ತಾಲ್ಲೂಕು ಮೆಂಬರುಗಳಿಂದಲೂ, ಡಿ|| ಬೋರ್ಡು, ಮ್ಯು|| ಕೌನ್ಸಿಲುಗಳು ಮತ್ತು ಅಂಗೀಕೃತವಾದ ಸಂಘಗಳು ಇವುಗಳಿಂದ ಗೊತ್ತುಮಾಡಲ್ಪಟ್ಟ ಮೆಂಬರುಗಳೂ ಆಯಾ ಡಿ|| ಕಮಿಷನರುಗಳಿಗೆ ಕಳುಹಲ್ಪಡಬೇಕಲ್ಲದೆ ಸಭೆಗೆಬರುವ ಮೆಂಬರುಗಳ ಪಟ್ಟಿಯನ್ನು ಜ|| ಮತ್ತು ರೆ|| ಸೆಕ್ರೆಟರಿಯವರಿಗೆ ಕಳುಹಲ್ಪಡತಕ್ಕದ್ದು. (2) ಆಗಸ್ಟ್ ತಾ|| 1 ರೊಳಗೆ ಡೆ|| ಕಮಿಷನರುಗಳು ಮೆಂಬರುಗಳನ್ನು ಬರಮಾಡಿಕೊಂಡು ಮೀಟಿಂಗು ನಡಿಸಿ ಜ|| ಮತ್ತು ರೆ|| ಕಮಿಷನರಲ್ಲಿಗೆ ಕಳುಹಿಸಬೇಕಾದ ವಿಷಯಗಳನ್ನು ಗೊತ್ತುಮಾಡಬೇಕು. (3) ಗೊತ್ತುಮಾಡಲ್ಪಟ್ಟ ವಿಷಯಗಳ ಪಟ್ಟಿಯು ಡಿ|| ಕ|| ರವರ ಅಭಿಪ್ರಾಯದೊಡನೆ ಪ್ರತಿನಿಧಿ ಸಭೆಯಲ್ಲಿ ಚರ್ಚಿತವಾಗುವುದಕ್ಕಾಗಿ ಜ|| ಮತ್ತು ರೆ|| ಸೆಕ್ರೆಟರಿಯವರಲ್ಲಿಗೆ ಕಳುಹಲ್ಪಡತಕ್ಕುದು. (b) ಮೈಸೂರು ವಿಶ್ವವಿದ್ಯಾಲಯದಿಂದ ಕಳುಹಲ್ಪಡುವ ಮೆಂಬರುಗಳು ಚರ್ಚಿಸುವ ವಿಷಯಗಳು ರೆಜಿಸ್ಟ್ರಾರರಿಂದ ಜ|| ಮತ್ತು ರೆ|| ಸೆಕ್ರೆಟರಿಯವರಿಗೆ ನೇರವಾಗಿ ಕಳುಹಲ್ಪಡಬೇಕು. (4) ಅಕ್ಟೋಬರ್ ತಾ|| 13 ರೊಳಗೆ ಸಭಾರಂಭದ ದಿವಸ ಒಪ್ಪಿಸಲ್ಪಡುವ ವಿಜ್ಞಾಪನಪತ್ರಿಕೆಗಳ ನಕಲುಗಳು ಚೀಫ್ ಸೆಕ್ರೆಟರಿಯವರಿಗೆ ಕಳುಹಲ್ಪಡಬೇಕು. (5) ಅಕ್ಟೋಬರ್ ತಾ|| 20ರಲ್ಲಿ ಪ್ರತಿನಿಧಿ ಸಭಾರಂಭವಾಗುವುದು. (6) ಅಕ್ಟೋಬರ್ ತಾ|| 22ರಿಂದ ಸಭಾಕಾರ್ಯಕ್ಕುಪಕ್ರಮವಾಗುವುದು. ಸಭೆಯಲ್ಲಿ ಚರ್ಚಿಸಲ್ಪಡಬೇಕಾದ ವಿಶೇಷ ವಿಷಯಗಳು ಆದೇದಿವಸ ಮಧ್ಯಾಹ್ನ 12 ಗಂಟೆಯೊಳಗೆ ಚೀಫ್ ಸೆಕ್ರೆಟರಿಯವರಿಗೆ ಕಳುಹಲ್ಪಡಬೇಕು.

ಸ್ವದೇಶದ ವೃತ್ತಾಂತಗಳು.

ಸ್ಯಾನಿಟರಿ ಕಮಿಷನರಾಫೀಸು ಕೆಲಸಗಾರರ ಸಂಬಳದಲ್ಲಿ ವರ್ಷ ಒಂದಕ್ಕೆ 2100 ರೂ. ಮಿಗುವಂತೆ ಕಡಿಮೆಮಾಡಲ್ಪಟ್ಟಿರುತ್ತದೆ.

ಕೋಲಾರದ ಚಿನ್ನದಗಣಿಗಳಿಂದ ಒಟ್ಟು 21,54,880-4-6 ರೂ. ಬೆಲೆಯ ಭಂಗಾರವು ಕಳೆದ ಜೂನ್ ತಿಂಗಳಲ್ಲಿ ಬೊಂಬಾಯಿಗೆ ಕಳುಹಲ್ಪಟ್ಟಿತು.

ಸ್ಪೆಷಲ್ ರೆವಿನ್ಯೂ ಆಫೀಸರಾದ ಮ|| ಸಿ. ಎಸ್. ಕುಪ್ಪಸ್ವಾಮಯ್ಯಂಗಾರರಿಗೆ ಈ ತಾ|| 1ರಿಂದ 4 ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿದೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮ|| ಶಿರ್ಶಿ ಆನಂದರಾಯರ ಅಧಿಕಾರದವಧಿಯು ಮುಗಿದುದರಿಂದ, ಪುನಃ ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟರು.

ರೆವಿನ್ಯೂಕಮಿಷನರಾಫೀಸಿನಲ್ಲಿ ಕ್ಲಾರ್ಕಗಿದ್ದ ಮ|| ಎಂ. ಶಾಮಣ್ಣನವರು ಎರಡನೆಯ ಕೌನ್ಸಿಲರಾದ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರಿಗೆ ಪರ್ಸನಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿರುವರು.

ಮೈಸೂರು, ಶ್ರೀರಂಗಪಟ್ಟಣ ಮತ್ತು ಕೃಷ್ಣರಾಜಪೇಟೆ ತಾಲ್ಲೂಕುಗಳಲ್ಲಿ ಕೃಷ್ಣರಾಜಸಾಗರದ ನಾಲೆಗಳ ಕೆಳಗಿರುವ 69 ಸರ್ಕಾರಿಯ ಗ್ರಾಮಗಳ ಭೂಗಂದಾಯವು ಪುನರ್ವಿಮರ್ಶೆಮಾಡಲ್ಪಡಲು ಸರ್ಕಾರದ ಅಪ್ಪಣೆಯಾಗಿರುವುದು.

ಮದ್ದನಹಳ್ಳಿ ಗ್ರಾಮದಲ್ಲಿ ಭೂಮಿಯನ್ನು ಸರ್ಕಾರದುಪಯೋಗಕ್ಕಾಗಿ ಕೊಂಡುಕೊಳ್ಳುವ ಅಧಿಕಾರವು ಹಾಸನದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರಿಗೆ ತಪ್ಪಿಸಲ್ಪಟ್ಟು ಹೊಳೇನರಸೀಪುರದ ಸಬ್ ಡಿವಿಜನ್ ಅ|| ಕಮಿಷನರಿಗೆ ಕೊಡಲ್ಪಟ್ಟಿರುತ್ತದೆ.

ಮೈಸೂರು ಸರ್ಕಾರದವರಿಂದ ನಡಿಸಲ್ಪಡುತ್ತಿರುವ ರೈಲ್ವೆಗಳಿಂದ 1923ನೆಯ ಜುಲೈ ತಾ|| 1ರಿಂದ 1923ನೆಯ ಜೂನ್ ತಾ|| 16ರ ವರೆಗೆ 31,32,900 ರೂ. ಉತ್ಪನ್ನವಾಗಿದೆ. ಇದರ ಹಿಂದಣ ಉತ್ಪನ್ನಕ್ಕಿಂತ ಈ ವೇಳೆ 56000 ರೂ. ಹೆಚ್ಚಾಗಿದೆ ಎಂದು ತಿಳಿಯಬಂದಿದೆ.

ಶ್ರೈ|| ಬಸವಯ್ಯನವರ್ಂದೀಚೆಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ವೀರಶೈವರಾರೂ ಮೆಂಬರುಗಳಾಗಿ ನಿಯಮಿಸಲ್ಪಡದಿದ್ದ ಕೊರತೆಯು ಈಗ ಅಡ್ವೋಕೇಟ್ ಮ|| ಜೆ. ಪರಮಶಿವಯ್ಯನವರು ವಿಶ್ವವಿದ್ಯಾಲಯದ ಒಬ್ಬ ಫೆಲೊ ಆಗಿ ನಿಯಮಿಸಲ್ಪಟ್ಟು ನಿವಾರಣೆಗೊಳಿಸಲ್ಪಟ್ಟಿರುವುದಕ್ಕಾಗಿ ಸಂತೋಷಿಸುತ್ತೇವೆ.

ಮ|| ಬಿ. ಸುಬ್ಬಣ್ಣನವರು ಚೀಫ್‌ಕೋರ್ಟು ಜಡ್ಜರಾಗಿ ಸ್ಥಿರಗೊಳಿಸಲ್ಪಟ್ಟುದರಿಂದ ಡಿಸ್ಟ್ರಿಕ್ಟ್ ಜಡ್ಜಿಯರುಗಳಾದ ಮ|| ಕೆ. ರಾಮಸ್ವಾಮಿಯ್ಯಂಗಾರರು 2 ನೇ ತರಗತಿಯಲ್ಲೂ ಮ|| ಜಿ. ಶ್ರೀನಿವಾಸಯ್ಯರ್‌ರವರು 3ನೇ ತರಗತಿಯಲ್ಲೂ, ಮ|| ಶ್ರೀನಿವಾಸರಾಘವಾಚಾರರು ಚೀಫ್‌ಕೋರ್ಟು ರಿಜಿಸ್ಟ್ರಾರ್ ಉದ್ಯೋಗದಲ್ಲೂ ಸ್ಥಿರಗೊಳಿಸಲ್ಪಟ್ಟಿರುವರು.

ರಾಜಧಾನಿಯ ವೀರನಗೆರೆಯಲ್ಲಿ ಕಳೆದ ಶುಕ್ರವಾರ ರಾತ್ರಿ ಹೊಲೆಯರ ಮದುವೆ ಗಂಡು ಹೆಣ್ಣು ಮೋಟಾರುಬಂಡಿಯಲ್ಲಿ ಕುಳ್ಳಿರಿಸಲ್ಪಟ್ಟು ಉತ್ಸವ ಮಾಡಲ್ಪಡಲು ಅಲ್ಲಿಯ ತೊರೆಯರು ಮೊದಲಾದ ಜನರು ಅಡ್ಡಿಪಡಿಸುವುದಕ್ಕೆ ಸಿದ್ಧರಾಗಿದ್ದುದರಮೇಲೆ ಉಭಯ ಪಕ್ಷದವರಿಗೂ ಕಲಹನಡೆದುಅನಾಹುತವಾಗುದೆಂಬುದನ್ನು ಪೊಲೀಸು ಸೂಪರಿಂಟೆಂಡೆಂಟರವರು ಸಾಯುಧರಾದ ಪೊಲೀಸರನ್ನು ಕರೆದುಕೊಂಡು ಹೋಗಿ ಯಾವ ಗಲಭೆಗೂ ಅವಕಾಶವಾಗದಂತೆ ಮಾಡಿದರೆಂದು ತಿಳಿಯಬರುತ್ತದೆ.

ನಾವು ಕಳೆದ ವಾರ ತಿಳಿಸಿದ್ದಂತೆ ಶ್ರೀಮನ್ ಮಹಾರಾಜರವರು ಮಿತಪರಿವಾರದೊಡನೆ ಈ ತಾ|| 5ರ ಸಾಯಂಕಾಲ 6½ ಗಂಟೆಯಲ್ಲಿ ರಾಜಧಾನಿಯಿಂದ ಕಾಶ್ಮೀರ ದೇಶಕ್ಕೆ ಹೆಚ್ಚುಗಟ್ಟಲೆಯ ರೈಲು ಬಂಡಿಯಲ್ಲಿ ಪ್ರಯಾಣಮಾಡಿದರು. ಮತ್ತು ಪೂನಾ, ಬೊಂಬಾಯಿ, ದಿಲ್ಲಿ, ಲಾಹೋರು ಪಟ್ಟಣಗಳ ಮೇಲೆ ಹೊರಟು ಕಾಶ್ಮಿರಪಟ್ಟಣವನ್ನು ತಾ|| 11ರಲ್ಲಿ ತಲುಪಿ 2-2½ ತಿಂಗಳಕಾಲ ಅಲ್ಲೇ ಇದ್ದು ಆಶ್ವೀಜಮಾಸಕ್ಕೆ 1-2 ವಾರ ಮುಂದಾಗಿ ರಾಜಧಾನಿಗೆ ಚಿತ್ತೈಸುವುದಾಗಿ ಕೇಳುತ್ತೇವೆ.

ಹೊಳೇನರಸೀಪುರದ ಮ್ಯುನಸೀಫ್‌ರಾದ ಮ|| ಎಂ.ಎನ್. ಸುಬ್ಬಣ್ಣನವರು ತಮ್ಮ ಜ್ಯೇಷ್ಠ ಕುಮಾರಿಯನ್ನು ರಾಜಧಾನಿಯಲ್ಲಿರುವ ಸಾಹುಕಾರ್ ಮ|| ಗುರುಮಲ್ಲಯ್ಯನವರ ಮೊಮ್ಮಗನಿಗೆ ಕೊಟ್ಟು ಕಳೆದ ಭಾನುವಾರ ರಾಜಧಾನಿಯಲ್ಲಿ ಬಹಳ ವಿಜೃಂಭಣೆಯಿಂದ ಲಗ್ನವನ್ನು ಮಾಡಿದರು. ಈ ಮಹೋತ್ಸವಕ್ಕೆ ಡಿ|| ಕಮಿಷನರಾದ ಮ|| ಬಿ. ರಾಮಸ್ವಾಮಯ್ಯನವರು ಮೊದಲಾಗಿ ಸರ್ಕಾರಿಯುದ್ಯೋಗಸ್ಥರುಗಳೂ, ಜಡ್ಜಿಗಳೂ, ಲಾಯರುಗಳೂ ವರ್ತಕರುಗಳೂ ಆಹ್ವಾನಿಸಲ್ಪಟ್ಟಿದ್ದು ಸಂಗೀತಶ್ರವಣದಿಂದಲೂ ತಾಂಬೂಲ ವಿನಿಯೋಗದಿಂದಲೂ ಸತ್ಕರಿಸಲ್ಪಟ್ಟರು.

ಭರತಖಂಡದ ವೈಸ್‌ರಾಯರಾದ ಲಾರ್ಡ್‌ರೀಡಿಂಗ್‌ರವರು ಪತ್ನಿ ಸಮೇತರಾಗಿ ಮೈಸೂರು ಸೀಮೆಗೆ ದಯಮಾಡಿಸಬೇಕೆಂಬ ನಮ್ಮ ಶ್ರೀಮನ್ ಮಹಾರಾಜರವರ ಆಹ್ವಾನವನ್ನು ಅಂಗೀಕರಿಸಿರುವುದಾಗಿಯೂ, ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ದಿ|| ಬ|| ಶ್ರೀಕಂಠೇಶ್ವರಯ್ಯರ್‌ರವರು ಆಗಲೇ ಪಟ್ಟಣ ಶೃಂಗಾರ ಮೊದಲಾದ ವಿಚಾರಗಳನ್ನು ಕುರಿತು ಪರ್ಯಾಲೋಚಿಸುತ್ತಿರುವುದಾಗಿಯೂ, ಕೈ|| ಚಾಮರಾಜ ಒಡೆಯರ್ ಬಹುದ್ದೂರ್‌ರವರ ಶಿಲಾ ಪ್ರತಿಮೆಯ ಗೌಸಣಿಗೆಯನ್ನು ವೈಸ್‌ರಾಯರ ಹಸ್ತದಿಂದ ತೆಗೆಯಿಸಲನುಕೂಲಿಸುವಂತೆ ಪ್ರತಿಮೆಯನ್ನಿಲ್ಲಿಸಿರುವ ಮಂಟಪವನ್ನು ಸಿದ್ಧಗೊಳಿಸಲು ಸಾಹಸಪಡುತ್ತಿರುವುದಾಗಿಯೂ ಕೇಳುತ್ತೇವೆ.

ರಾಜಧಾನಿಯ ವೀರಶೈವ ವಿದ್ಯಾರ್ಥಿನಿಲಯ ಸಂಸ್ಥಾಪಕರೂ ಶ್ರೀಮಂತರೂ ಆದ ಗುಂಡ್ಲುಪೇಟೆ ತಾಲ್ಲೂಕು ಕಬ್ಬಹಳ್ಳಿಯ ಮ|| ಕೆ. ಚನ್ನಬಸಪ್ಪನವರು ತಮ್ಮ ಅಣ್ಣನವರ ಪುತ್ರಿಯ ವಿವಾಹ ಮಹೋತ್ಸವವನ್ನು ಈ ತಾ|| 6 ನೆಯ ಶುಕ್ರವಾರ ಕಬ್ಬಹಳ್ಳಿಯಲ್ಲಿ ಅತಿ ವೈಭವದಿಂದ ನೆರವೇರಿಸಿದರು. ಈ ಮಹೋತ್ಸವಕ್ಕೆ ಸರ್ಕಾರಿಯಧಿಕಾರಿಗಳೂ ದೊಡ್ಡ ಮನುಷ್ಯರುಗಳೂ ಆಹ್ವಾನಿಸಲ್ಪಟ್ಟಿದ್ದರು ಮತ್ತು ರಾಜಧಾನಿಯಿಂದ 30-35 ಜನ ವೀರಶೈವ ವಿದ್ಯಾರ್ಥಿಗಳು ಹೋಗಿದ್ದರು. ಮ|| ಚನ್ನಬಸಪ್ಪನವರು ಮಹೋತ್ಸವಕ್ಕೆ ಬಂದಿದ್ದ ಅತಿಥಿಗಳನ್ನೆಲ್ಲಾ ವಿಶೇಷ ಮರ್ಯಾದೆಯಿಂದ ಸತ್ಕರಿಸಿ ತಮ್ಮ ಔದಾರ್ಯವನ್ನೂ ಉತ್ಸಾಹವನ್ನೂ ವಿಶದಪಡಿಸಿದರೆಂದು ಕೇಳಿ ಸಂತೋಷಿಸುತ್ತೇವಲ್ಲದೆ ನೂತನ ದಂಪತಿಗಳಿಗೆ ಆಯುರಾರೋಗ್ಯ ಸಂಪದಭಿವೃದ್ಧಿಯಾಗಲೆಂದು ಹರಸುತ್ತೇವೆ. ಮತ್ತು ಇಂತಹ ಶುಭಕಾರ್ಯಗಳು ಶ್ರೀಮಂತರ ಮನೆಯಲ್ಲಿ ಆಗಾಗ್ಗೆ ನಡಿಯುತ್ತಿರಲೆಂದು ಅಪೇಕ್ಷಿಸುತ್ತೇವೆ

ಭರತಖಂಡದ ವೃತ್ತಾಂತಗಳು.

ಕಲಕತ್ತಾ ಪಟ್ಟಣದ ಮಹಮ್ಮದೀಯ ಅನಾಥಾಲಯದ ಒಂದು ಭಾಗವು ಬಿದ್ದುಹೋಗಿ ಅದರ ಕೆಳಗೆ ಸಿಕಿಹೊಗಿದ್ದ ಹುಡುಗರಲ್ಲಿ ಈವರೆಗೆ 45 ಜನರು ಸತ್ತಿರುವುದಾಗಿ ತಿಳಿದು ಬಂದಿದೆ.

ಮೆಕ್ಕಾಕ್ಕೆ ಪವಿತ್ರವಾದ ಜಂಜಾನವನ್ನೋಯುತಲಿದ್ದ ಹಡಗು ಜಡ್ಡಾದಲ್ಲಿ ನಿಂತುಹೋಗಿದೆ. ಬಹಳ ವರ್ಷಗಳಿಂದಲೂ ಕಾಲಕ್ಲೃಪ್ತವಾಗಿ ಹೋಗುತ್ತಿದ್ದ ಹಡಗು ತಪ್ಪಿಹೋದುದು ಇದೇ ಮೊದಲನೆಯಸಲವಂತೆ.

ಅಸ್ಸಾಂ ಬಂಗಾಳಾ ರೈಲ್ವೆಯವರು ತೆಗೆದುಕೊಂಡಿರುವ 430990 ಪೌನುಗಳ ಸಾಲದ ವಾಯದೆಯು ಈ ಜುಲೈ ತಾ|| 4 ಕ್ಕೆ ಮುಗಿದುದರಿಂದ ಇನ್ನೂ 4 ವರ್ಷಗಳ ಅವಧಿಯನ್ನು ಕೊಟ್ಟಲ್ಲಿ ಶೇಕಡ 4 ರಂತೆ ಬಡ್ಡಿಯನ್ನು ಕೊಡುವುದಾಗಿ ಸಾಲ ಕೊಟ್ಟಿರುವವರಿಗೆ ತಿಳಿಸಿರುತ್ತಾರೆ.

ಲಕ್ನೊ ಮ್ಯುನಿಸಿಪಲ್ ಕೌನ್ಸಿಲಿನವರು ವೈಸ್‌ರಾಯರಿಗೂ ಲಕ್ನೊ ಗೌರ್ನರಿಗೂ ವಿಜ್ಞಾಪನ ಪತ್ರಿಕೆಗಳನ್ನೊಪ್ಪಿಸಕೂಡದೆಂದು ನಿರ್ಧಾರಮಾಡಿದುದಲ್ಲದೆ ಮ್ಯುನಿಸಿಪಾಲಿಟಿಯ ರಜಾದಿನಗಳ ಪಟ್ಟಿಯಲ್ಲಿ ಎಂಪೈರ್‌ಡೆ ರಜವನ್ನು ತೆಗೆದುಬಿಟ್ಟು ಅದಕ್ಕೆ ಬದಲು ತಿಲಕರ ವರ್ಷಾಬ್ದಿಕ ದಿವಸದಲ್ಲೂ, ಗಾಂಧಿಯವರ ಜನ್ಮ ದಿನೋತ್ಸವ ದಿವಸದಲ್ಲೂ ರಜವು ಕೊಡಲ್ಪಡಬೇಕಾಗಿ ಸೇರಿಸಿದರು.

ಪಂಜಾಬ್ ಹೈಕೋರ್ಟು ವಕೀಲನಾದ ಅಮರನಾಥನು ಲಾಹೋರಿನಲ್ಲಿ ತಾನಿಟ್ಟಿದ್ದ ಸಿಗರೇಟ್ ಕಂಪೆನಿಯನ್ನು 30000 ರೂಪಾಯಿಗೆ ವಿಮೆಮಾಡಿದ್ದು ಆ ವಿಮೆಕಂಪೆನಿಗೆ ಮೋಸಪಡಿಸಬೇಕೆಂಬ ದುರಾಲೋಚನೆಯಿಂದ ಸಿಗರೇಟ್ ಕಂಪೆನಿಯನ್ನಿಟ್ಟಿದ್ದ ಕಟ್ಟಡಕ್ಕೆ ಬೆಂಕಿಯನ್ನು ಹೊತ್ತಿಸಿದ ಅಪರಾಧಕ್ಕಾಗಿ ಡಿಸ್ಟ್ರಿಕ್ಟ್ ಜಡ್ಜರಿಂದ ವಿಚಾರಣೆಗೊಂಡು 6 ವರ್ಷ ಕಠಿಣ ಕಾರಾಗೃಹವಾಸದ ಶಿಕ್ಷೆ ವಿಧಿಸಲ್ಪಟ್ಟನು.

ಭರತಖಂಡದ ಲೋಹಮಾರ್ಗಗಳಿಂದ ಕಳೆದ ಜೂನ್ ತಾ|| 16ಕ್ಕೆ ಕಡೆಯಾದ ವಾರದಲ್ಲಿ 176 ಲಕ್ಷ ರೂ. ಉತ್ಪನ್ನವಾಗಿರುತ್ತದೆ. ಆದರೆ ಇದೇವಾರದಲ್ಲಿ 187 ಲಕ್ಷ ರೂ. ಉತ್ಪನ್ನವಾಗುವುದೆಂದು ನಿರೀಕ್ಷಿಸಲ್ಪಟ್ಟಿದ್ದಿತಾದುದರಿಂದ 11 ಲಕ್ಷ ಉತ್ಪತ್ತಿಯು ಕಡಿಮೆಯಾದಂತಾಯಿತು. ಇದರ ಹಿಂದಣ ವಾರಗಳಲ್ಲೆಲ್ಲಾ 12 ಲಕ್ಷ ಕಡಿಮೆಬಂದಿದ್ದುದರಿಂದ ಈ ವಾರದಲ್ಲಿ 1 ಲಕ್ಷ ಮಾತ್ರ ಕಡಿಮೆಯಾಯಿತೆಂದು ತಿಳಿಯಬೇಕಾಗಿದೆ. ಈ ವಾರದಲ್ಲಿ ಹೀಗೆ 11 ಲಕ್ಷ ಕಡಿಮೆಯಾಗಲು ನಾರ್ತ್‌ವೆಸ್ಟರ್ನ್ ರೈಲ್ವೆ ವಿನಾ ಇತರ ಎಲ್ಲಾ ಮುಖ್ಯ ರೈಲ್ವೆಗಳಲ್ಲೂ ಪ್ರಯಾಣಿಕರ ಮತ್ತು ಸಾಮಾನಿನ ಉತ್ಪತ್ತಿಯು ಬಿದ್ದುಹೋದುದೇ ಕಾರಣವು.

ಕಲಕತ್ತಾದಲ್ಲಿ ಸಿನೆಮಾ ಕಂಪೆನಿಯನ್ನೇರ್ಪಡಿಸಿ ವಿಶೇಷ ಪ್ರಖ್ಯಾತಿಯನ್ನೂ ಐಶ್ವರ್ಯವನ್ನೂ ಸಂಪಾದಿಸಿದ್ದ ಜೆ. ಎಲ್. ಮದನ್ ಒ. ಬಿ. ಇ., ಎಂಬ ಪಾರ್ಶಿ ದೊಡ್ಡಮನುಷ್ಯರು ಹೃದ್ರೋಗದಿಂದ ಕಳೆದ ತಾ|| 29 ರಲ್ಲಿ ಕಾಲಾಧೀನರಾದರು. ಆ ದಿವಸ ಕಲಕತ್ತಾ ಮ್ಯುನಿಸಿಪಲ್ ಚೇರ್ಮನ್ನರಾದ ಟಾಗೂರು ಮಹಾರಾಜರು ಮೊದಲಾಗಿ ಅಧಿಕಾರಿಗಳೂ, ವರ್ತಕರುಗಳೂ ಅವರ ಮನೆಗೆಹೋಗಿ ನೋಡಿಕೊಂಡುಬಂದರು. ವೈಸ್‌ರಾಯರು ತಮ್ಮನುತಾಪವನ್ನು ಮೃತರ ಕುಟುಂಬಕ್ಕೆ ತಮ್ಮ ಪ್ರೈವೆಟ್ ಸೆಕ್ರೆಟರಿಯವರ ಮೂಲಕ ಕಳಿಸಿದರು. ಮದನರಿಗೆ 67 ವರ್ಷ ವಯಸ್ಸಾಗಿದ್ದಿತು. ಇವರು ಪ್ರಥಮತಃ ನಾಟಕಶಾಲೆಯಲ್ಲಿ ಸಾಧಾರಣ ಅಭಿನಯಸ್ಥರಾಗಿದ್ದು ಅಲ್ಲಿಂದ ಸಿನೆಮಾ ಕಂಪೆನಿಯನ್ನೇರ್ಪಡಿಸಿ ಆ ಕಸುಬಿನಲ್ಲಿ ಅದ್ವಿತೀಯರೆಂದು ಪ್ರಖ್ಯಾತಿಯನ್ನು ಹೊಂದಿದರು. ಇವರು ಯುದ್ಧಕಾಲದಲ್ಲಿ ಬಹಳ ಸಹಾಯಮಾಡಿದುದರ ಮೇಲೆ 1918 ರಲ್ಲಿ ಒ.ಬಿ.ಇ. ಎಂಬ ಪ್ರಶಸ್ತಿಯು ಚಕ್ರವರ್ತಿಯವರಿಂದ ದಯಪಾಲಿಸಲ್ಪಟ್ಟಿತು.

ಭರತಖಂಡದಲ್ಲೆಲ್ಲಾ ಕಳೆದ ಜೂನ್ ತಾ|| 23ಕ್ಕೆ ಕಡೆಯಾದ ವಾರದಲ್ಲಿ ವಾಂತಿಭೇದಿ ರೋಗದಿಂದ ಕಲಕತ್ತಾದಲ್ಲಿ 27, ಬೊಂಬಾಯಿನಲ್ಲಿ 3 ಮತ್ತು ರಂಗೂನಿನಲ್ಲಿ 1; ಪ್ಲೇಗಿನಿಂದ—ಬೊಂಬಾಯಿನಲ್ಲಿ 8, ಕರಾಚಿಯಲ್ಲಿ 5, ಮತ್ತು ರಂಗೂನಿನಲ್ಲಿ 32; ಇನ್‌ಫ್ಲೂಯೆಂಜಾದಿಂದ—ಬೊಂಬಾಯಿನಲ್ಲಿ 10, ಕಲಕತ್ತಾದಲ್ಲಿ 2, ಕರಾಚಿಯಲ್ಲಿ 1 ಮತ್ತು ರಂಗೂನಿನಲ್ಲಿ 4; ಸಿಡುಬಿನಿಂದ—ಮದ್ರಾಸಿನಲ್ಲಿ 1, ಕಲಕತ್ತಾದಲ್ಲಿ 1, ಬೊಂಬಾಯಿನಲ್ಲಿ 9 ಮತ್ತು ರಂಗೂನಿನಲ್ಲಿ 10; ಈ ಪ್ರಕಾರ ಮರಣಗಳಾಗಿರುತ್ತವೆ. ಪೂನಾಪಟ್ಟಣ, ಹಜಾರಿಬಾಗ್, ಕಥ್, ಯಮರೋಮತ್ತುಲಾ ಊರಿನಲ್ಲಿ ವಾಂತಿಭೇದಿ ರೋಗವೂ, ಮೂಂಡಲೆಪಟ್ಟಣ, ಥಾರ್, ಬಾಶ್ಯಿಂ, ಭಾಮೆ. ಕರಾಚಿ ಮತ್ತು ಬಳ್ಳಾರಿಯಲ್ಲಿ ಪ್ಲೇಗು ರೋಗವೂ; ಸುಕ್ಕೂರು, ಪಾಪೂರು, ಲೈಲ್‌ಪಾಡ, ಜಾಂಗ್, ಮುಲ್ತಾನ್, ಮತ್ತು ಕಡವಾದಲ್ಲಿ ಸಿಡಬಿನರೋಗವೂ ಹೊಸದಾಗಿ ಈ ವಾರದಲ್ಲಿ ತಗಲಿರುತ್ತವೆ. ವಾಂತಿಭೇದಿರೋಗವು ಕೃಷ್ಣ ಮತ್ತು ಭಾಮಾಗೆ ಹರಡುತ್ತಿದೆ. ಫೇಗುಪ್ಯಾಪಿನ್ನಿಗೂ, ಸಿಡುಬು ಮೆರ್ಮಸಿಂಗಿಗೂ ಪೆಸಾವರಿಗೂ ಮದ್ರಾಸು ಮತ್ತು ಬರ್ಮಾಗಳ ಕೆಲ ಭಾಗಗಳಿಗೂ ಹಬ್ಬುತ್ತಿವೆ.

ವಿದೇಶ ವೃತ್ತಾಂತಗಳು.

ಪತಿಪರಿತ್ಯಾಗ ಶಾಸನವು ಲಾರ್ಡ್ಸ್ ಸಭೆಯಲ್ಲಿ ಎರಡನೆಯ ವೇಳೆ ಅನುಮೋದಿತವಾಯ್ತು.

ಇಂಪೀರಿಯಲ್ ಟುಬಾಕೊ ಅಂದರೆ ಹೊಗೆಸೊಪ್ಪಿನ ಕಂಪೆನಿಯವರು ತಮ್ಮ ಬಂಡವಾಳವನ್ನು 750,000,000 ರೂಪಾಯಿಗಳಿಗೆ ಹೆಚ್ಚಿಸಲು ನಿರ್ಧರಿಸಿಕೊಂಡಿರುವರು.

ಅಮೇರಿಕೆಯ ಯುನೈಟೆಡ್ ಸ್ಟೇಟ್ಸಿನಲ್ಲಿ 1923-24 ನೆಯ ವರ್ಷದಲ್ಲಿ 1,134,13,000 ಬೇಲು ಹತ್ತಿ ಬೆಳೆಯಾಗುವುದೆಂದೂ ಹಿಂದಣ ವರ್ಷ 11,066000 ಬೇಲು ಹತ್ತಿ ಬೆಳೆಯಾಗಿದ್ದಿತೆಂದೂ ವರದಿಯಾಗಿದೆ.

ಸಿರಿಯಸ್ ಎಂಬ ಆಕಾಶಯಾನವು ಮಾಲ್ಟಾಯಿಂದ ಜಿಬ್ರಾಲ್ಟರಿಗೆ ಹೋಗಿ ಅಲ್ಲಿಂದ ಹಿಂದಿರುಗಿ 3,030 ಮೈಲಿ ವಿಸ್ತೀರ್ಣವನ್ನು 35 ಗಂಟೆಯ ಕಾಲದಲ್ಲಿ ಸಂಚರಿಸಿಕೊಂಡು ಬಂದಿರುತ್ತದೆ. ಇದರ ಜತೆಯಲ್ಲಿದ್ದ ಯಾನವು ಹಿಂತಿರುಗಿ ಬರುವಾಗ್ಗೆ ಕೆಟ್ಟುಹೋಯಿತು.

ಕಾಮನ್ಸ್ ಸಭೆಯಲ್ಲಿ ಅರ್ಲ್ ವಿಂಟರ್‌ಟನ್ನರವರಿಂದ ಭರತಖಂಡದ ಸರ್ಕಾರದವರು ರೈಲ್ವೆ ಮತ್ತು ನೀರಾವರಿ ಕೆಲಸಗಳಿಗಾಗಿ 7500 ಲಕ್ಷ ರೂ. ಗಳನ್ನೂ ಇತರ ಸಾಮಾನ್ಯ ಕೆಲಸಗಳಿಗಾಗಿ 2250 ಲಕ್ಷ ರೂ. ಗಳನ್ನೂ ಸಾಲವಾಗಿ ತೆಗೆದುಕೊಳ್ಳುವ ಚಟ್ಟವು ಅನುಮೋದನೆಗಾಗಿ ತರಲ್ಪಟ್ಟಿತು.

ರಜಾದ ಮೇಲಿದ್ದ ಬೆಲಜಿಯಂ ಸೈನಿಕರು ಪ್ರಯಾಣಮಾಡುತ್ತಿದ್ದ ರೈಲ್ವೆ ಬಂಡಿಗಳು ಡ್ಯೂಸ್‌ಬರ್ಗಿನಲ್ಲಿ ರೈನ್‌ನದಿಯ ಸೇತುವೆ ಮೇಲೆ ಹೋಗುತ್ತಿರುವಾಗ್ಗೆ ಬಂಡಿಯೊಳಗೆ ಒಂದು ಸಿಡಿಮದ್ದುಹಾರಿ ಬಂಡಿಯು ನುಚ್ಚುನೂರಾಯ್ತು. ಪ್ರಯಾಣೀಕರಲ್ಲಿ 10 ಜನರು ಸತ್ತರು, ಮತ್ತೆ 25 ಜನರಿಗೆ ಗಾಯವಾಯ್ತು.

ಬಹುಮೂತ್ರರೋಗನಿವಾರಕವಾದ ಇನ್ಸುಲೀನ್ ಎಂಬ ಔಷಧವನ್ನು ಕಂಡುಹಿಡಿದ ಡಾಕ್ಟರ್ ಎಂ. ಬಾಂಟಿಂಗ್‌ರವರಿಗೆ ಇದರಂತೆಯೇ ಪ್ರಯೋಪಯುಕ್ತವಾದ ಹೊಸಹೊಸ ಔಷಧಗಳನ್ನು ಕಂಡುಹಿಡಿಯುವಲ್ಲಿ ನಿರತರಾಗಿರುವ ಬಗೆಗೆ ಉತ್ತೇಜನ ಕೊಡುವುದಕ್ಕಾಗಿ 70000 ಡಾಲರು ಪೆನ್‌ಷನ್ ಕೊಡಬೇಕೆಂದು ಮಂತ್ರಿಗಳ ಸೂಚನೆಯು ಕಾಮನ್ಸ್ ಸಭೆಯಲ್ಲಿ ಅನುಮೋದಿತವಾಯ್ತು.

ಸರ್ವಿಯಾದ ಮುಖ್ಯಮಂತ್ರಿಯು ಸಾರ್ವಜನಿಕ ಸಭೆಗೆ ಹೋಗಿ ಅಲ್ಲಿಯ ಕೆಲಸವನ್ನು ಪೂರೈಸಿಕೊಂಡು ಮೋಟಾರು ಬಂಡಿಯಲ್ಲಿ ಕುಳಿತು ಹಿಂದಿರುಗಿ ಹೋಗುತ್ತಿರುವಾಗ್ಗೆ ವೇಜ್ ಎಂಬುವನು ಮಂತ್ರಿಗೆ ಗುರಿಕಟ್ಟಿ ನಾಲ್ಕು ಗುಂಡುಗಳನ್ನು ಹೊಡೆದನು. ಅದರಲ್ಲೊಂದು ಮಂತ್ರಿಯ ಎಡದಕೈಗೆ ಕೊಂಚ ತಗುಲಿ ಎಲ್ಲೋ ಸ್ವಲ್ಪ ನೋವಾಯ್ತು. ಆ ಮರಂತಕನನ್ನು ಹಿಡಿದು ವಿಚಾರಿಸುವಲ್ಲಿ ಅವನಿಗೆ ಬುದ್ಧಿಭ್ರಮಣೆಯುಂಟಾಗಿರುವುದೆಂದು ತಿಳಿದುಬಂದಿತು.

ವೈಟ್ ಹೇವನ್ ಎಂಬಲ್ಲಿಯ ಕಲ್ಲಿದ್ದಲು ಗಣಿಯಲ್ಲಿ ಕೆಲಸಮಾಡುತ್ತಿದ್ದವರಲ್ಲಿ 2500 ಜನರು ದಂಗೆಯೆದ್ದು ಕಿಟಕಿಗಳನ್ನೆಲ್ಲಾ ಒಡೆದುಹಾಕಿ ಮ್ಯಾನೇಜರಾಫೀಸನ್ನು ಸುಟ್ಟುಬಿಟ್ಟರು. ಪೋಲೀಸರು ಅಷ್ಟರಲ್ಲಿ ಬಂದು ಕಟ್ಟಡದ ಸುತ್ತಲೂ ಕಾವಲಿಗಾಗಿ ನಿಂತರು. ದಂಗೆಕೋರರು ಪೋಲೀಸು ಕಾವಲನ್ನು ಮೀರಿ ನುಗ್ಗಲು ಪ್ರಯತ್ನಿಸಿದಾಗ ಉಭಯರಿಗೂ ಬಡಿದಾಟವಾಗಿ ದಂಗೆಕೋರರಲ್ಲಿಯೂ ಪ್ರೇಕ್ಷಕ ಜನರಲ್ಲಿಯೂ ಅನೇಕರಿಗೆ ಪೆಟ್ಟುಬಿದ್ದಿತು. ಅನಂತರ ಜನರು ಚದರಿಹೋಗಿ ಶಾಂತವಾಯ್ತು.

ಹಲ್‌ರೇವೆ ಪಟ್ಟಣದಲ್ಲಿ ಹಡಗಿನಿಂದ ಸಾಮಾನುಗಳನ್ನಿಳಿಸುವ ಮತ್ತು ಹಡಗಿಗೆ ತುಂಬುವ ಕೂಲಿಕಾರರೆಲ್ಲರೂ ತಮ್ಮ ದಿನಕೂಲಿಯು ಕಡಿಮೆಮಾಡಲ್ಪಟ್ಟುದರ ಮೇಲೆ ಕೆಲಸಕ್ಕೆ ಹೋಗದೆ ನಿಂತುಬಿಟ್ಟಿರುವರು. ಇದು ಗ್ರಿಮ್ಸಬಿ, ಕಾರ್ಡಿಫ್, ಬ್ರಿಸ್ಟಲ್, ಲಂಡನ್ ಮತ್ತು ತಿಲ್ಬರಿ ಈ ಸ್ಥಳಗಳಿಗೂ ಹಬ್ಬಿ ಅಲ್ಲಿಯ ಕೆಲಸಗಾರರೆಲ್ಲರೂ ಮುಷ್ಕರಹಿಡಿದು ನಿಂತುಬಿಟ್ಟಿರುವುದರಿಂದ ಹಣ್ಣುಹಂಪಲುಗಳು ಮೊದಲಾಗಿ ಕೊಳೆತುಹೋಗುವ ಪದಾರ್ಥಗಳು ಹಡಗುಗಳಿಂದ ಹೊರಕ್ಕೆ ಸಾಗಿಸಲ್ಪಡಲೆತ್ನವಿಲ್ಲದೆ ಇದ್ದಲ್ಲಿಯೇ ಕೊಳೆಯುತ್ತಿವೆ.

ಇಂಗ್ಲೆಂಡಿನಲ್ಲೂ ವೇಲ್ಸಿನಲ್ಲೂ 1921 ರಲ್ಲಿ 320,852 ವಿವಾಹಗಳು ನಡೆದಿರುತ್ತವೆ. ಆದರೆ 1920 ರಲ್ಲಿ ಇದಕ್ಕಿಂತಲೂ 59,130 ವಿವಾಹಗಳು ಹೆಚ್ಚಾಗಿ ಆಗಿದ್ದುವು. ಅಷ್ಟು ಮದುವೆಗಳು ಯಾವಾಗಲೂ ನಡೆದಿರಲಿಲ್ಲವು. 1921 ರಲ್ಲಿ ಪ್ರತಿ 1,000 ಜನರಿಗೆ 16.9 ರಂತೆ ಮದುವೆ ನಡೆದಂತಾಯ್ತು. ಜನನವು 1,000 ಕ್ಕೆ 22.4 ರಂತೆ ಆಗಿರುವುದು. ಇಷ್ಟು ಕಡಿಮೆಯಾಗಿ 1837 ರಿಂದ ಯುದ್ಧಕಾಲದ ವಿನಾ ಯಾವಾಗಲೂ ಆಗಿರಲ್ಲಿಲ್ಲವು. ಈ ವರ್ಷದಲ್ಲಿ ಮರಣಕ್ಕಿಂತಲೂ ಜನನವು 390,186 ಅಥವಾ 1,000 ಕ್ಕೆ 10.3 ರಂತೆ ಹೆಚ್ಚಾಗಿ ಆಗಿರುತ್ತದೆ.

ಇರಾಕಿನಲ್ಲಿರುವ ಷಿಯ್ಯಾ ಜನಗಳಿಗೆ ಪ್ರಮುಖನಾದ ಷೇಕ್‌ಮಾದಿ ಅಲ್‌ಖಾಲಿಸಿ ಎಂಬಾತನು ಮುಂದೆಬರುವ ಮೆಂಬರುಗಳನ್ನು ಆರಿಸುವಿಕೆಯಲ್ಲಿ ಯಾರೂ ಓಟನ್ನು ಕೊಡಕೂಡದೆಂದೂ ಹಾಗೆ ಕೊಟ್ಟವರು ಜಾತಿಯಿಂದ ಬಹಿಷ್ಕರಿಸಲ್ಪಡುವರೆಂದೂ ಒಂದು ಪ್ರಕಟನೆಯನ್ನು ಹೊರಡಿಸಿದ್ದನು. ಈ ಖಾಲಿಸಿಯು ಪರ್ಷಿಯಾ ಪಂಗಡಕ್ಕೆ ಸೇರಿದವನಾದುದರಿಂದ ಇರಾಕ್ ಸರಕಾರದವರು ಮತಸಂಬಂಧದಮೇಲೆ ರಾಜಕೀಯ ವಿಚಾರದಲ್ಲಿ ಯಾರೂ ಪ್ರವೇಶಿಸಕೂಡದೆಂದು ಪ್ರಕಟಿಸಿ ಅವನನ್ನೂ ಅವನ ಇಬ್ಬರು ಮಕ್ಕಳುಸಮೇತ ಸೆರೆಹಿಡಿದು ಗಡೀಪಾರು ಮಾಡಿದರು.

ಕಾಮನ್ಸ್ ಸಭೆಯಲ್ಲಿ ಆಯವ್ಯಯದ ಲೆಖ್ಖವು ಮೂರನೆಯ ವೇಳೆ ವಾಚಿಸಲ್ಪಡುವಾಗ್ಗೆ ಚಾಯ್ಸಲರ್ ಹಿಕ್ಕ್ಯಾರವರು 449,000,000 ಪೌನುಗಳ ಸಾಲವು 1920ರಲ್ಲಿ ತೀರಿಸಲ್ಪಟ್ಟುದಾಗಿಯೂ, ಅಮೇರಿಕೆಯ ವಿನಾ ಇತರ ರಾಜ್ಯಗಳ ಸಾಲವು ಬಗೆಹರಿಸಲ್ಪಟ್ಟಿರುವುದಾಗಿಯೂ, ಆರ್ಮಿಸ್ಟೀಸ್ ಕಾಲದಲ್ಲಿದ್ದ ಸಾಲವು 15,00,000,000 ಪೌನುಗಳಲ್ಲದೆ 800,000,000 ಪೌನುಗಳಲ್ಲವೆಂದೂ ತಿಳಿಸಿದರು. ಮತ್ತು ಮುಖ್ಯಮಂತ್ರಿ ಸ್ಟಾನ್ಲೆಬಾಲ್ಡ್ವಿನ್‌ರವರು ಸದ್ಯದಲ್ಲಿ ಸಕ್ಕರೆಯ ಮೇಲಣ ಕಂದಾಯವನ್ನು ಕಡಿಮೆಮಾಡಲು ಸಾಧ್ಯವಿಲ್ಲವಾದುದರಿಂದ ಸಕ್ಕರೆಯನ್ನು ಬೆಳೆಯುವವರು ತಮ್ಮ ಕೈಗಾರಿಕೆಯನ್ನು ಸಮಯನಿರೀಕ್ಷಣೆಯಿಂದ ಅಭಿವೃದ್ಧಿಗೊಳಿಸಿಕೊಳ್ಳಬೇಕೆಂದು ಹೇಳಿದರು.

ಪದಭ್ರಷ್ಟನಾದ ಚೀನಾಚಕ್ರವರ್ತಿಯ ಪ್ರಖ್ಯಾತವಾದ 3 ಅರಮನೆಗಳಿಗೆ ಬೆಂಕಿಯುಬಿದ್ದು ಅವು ಸುಟ್ಟು ಭಸ್ಮವಾದುವಲ್ಲದೆ ಅಮೋಘವಾದ ಕಲಾಕೌಶಲ್ಯ ಪದಾರ್ಥಗಳೂ ಅಲಭ್ಯವಾದ ಇತರ ವಸ್ತುಗಳೂ ನಾಶವಾದುವು. ಚಕ್ರವರ್ತಿಯು ಮಧ್ಯರಾತ್ರಿಯಲ್ಲಿ ಅಗ್ನಿಪ್ರವೇಶವನ್ನು ಕಂಡು ಭಯಗ್ರಸ್ತನಾಗಿ ಕೂಗಿಕೊಂಡನಾದರೂ, ಪದಾರ್ಥಗಳು ಅಪಹರಿಸಲ್ಪಡುವುವೆಂಬ ಭಯದಿಂದ ಜನರು ಬೆಂಕಿಯನ್ನಾರಿಸಲು ಅವಕಾಶಕೊಡಲಿಲ್ಲವಾಗಿ ಕೆಲ ಕಟ್ಟಡಗಳು ಸುಟ್ಟು ಭಸ್ಮವಾದುವು. ತಾನೇ ರಾತ್ರಿಯಲ್ಲಾ ಕಾಯಿದುಕೊಂಡಿದ್ದನು. ವಿದ್ಯುಚ್ಛಕ್ತಿಯ ದೀಪಗಳಿಗಾಗಿ ಹಾಕಿದ್ದ ತಂತಿಗಳ ವ್ಯತ್ಯಾಸದಿಂದ ಈ ಅಗ್ನಿಯನಾಹುತವು ನಡೆದಿರುವುದಾಗಿ ಗೊತ್ತಾಗಿದೆ.

ಸೈಬೀರಿಯಾದಲ್ಲಿ ಬಂದಿಯಾಗಿದ್ದ ಒಬ್ಬ ಆಸ್ಟ್ರಿಯಾದೇಶಸ್ಥನು ತಾನು ಮದುವೆಯಾಗಲು ನಿಶ್ಚಯಿಸಿಕೊಂಡಿದ್ದ ವಿಯಾನಾದೇಶದ ಸ್ತ್ರೀಯನ್ನು 1917ರಲ್ಲಿ ತನ್ನ ಸಹೋದರನು ತನ್ನ ಪ್ರತಿನಿಧಿಯಾಗಿದ್ದುಕೊಂಡು ವಿಧ್ಯುಕ್ತವಾಗಿ ಲಗ್ನಕಾರ್ಯವನ್ನು ನೆರವೇರಿಸಲು ಗೊತ್ತುಮಾಡಿದ್ದನು. ಆದರೆ ಅವನ ಸಹೋದರನು ಆ ಲಗ್ನದ ದಿವಸ ದೇವಸ್ಥಾನಕ್ಕೆ ಹೋಗಲು ಕಾರ್ಯಗೌರವದಿಂದೆತ್ನವಾಗಲಿಲ್ಲವಾಗಿ ತನ್ನ ಸ್ನೇಹಿತನೊಬ್ಬನನ್ನು ತನ್ನ ಪರವಾಗಿ ಕಳುಹಿಸಿಕೊಟ್ಟನು. ಲಗ್ನವು ಶಾಸ್ತ್ರೋಕ್ತವಾಗಿ ನೆರವೇರಿತು. ಈ ಲಗ್ನವು ನೆರವೇರಿದ ವಿಚಾರವು ಆ ಕಾರಾಗೃಹದಲ್ಲಿದ್ದವನಿಗೆ ತಿಳಿಯಲಿಲ್ಲವಾಗಿ ಒಬ್ಬ ರಷ್ಯಾದೇಶದ ಯುವತಿಯನ್ನು ಮದುವೆಮಾಡಿಕೊಂಡು ತನ್ನ ದೇಶಕ್ಕೆ ಹಿಂತಿರುಗಿ ಬಂದಮೇಲೆ ತನ್ನಾಗಮನವನ್ನೇ ನಿರೀಕ್ಷಿಸಿಕೊಂಡಿದ್ದ ವೆನಿಸ್‌ದೇಶದವಳಾದ ಹೆಂಡತಿಯನ್ನು ಪರಿಗ್ರಹಿಸಿ ಸುಖದಿಂದ ಬಾಳುತ್ತಿದ್ದನು. ಆದರೆ ಅವನ ಕೂಡ ಬಂದ ರಷ್ಯಾದೇಶದವಳಾದ ಹೆಂಡಿತಿಯು ವೆನಿಸ್ ದೇಶಸ್ಥಳ ಮದುವೆಯನ್ನು ತನ್ನ ಪರವಾಗಿ ದೇವಸ್ಥಾನಕ್ಕೆ ಹೋಗಿ ವಿಧ್ಯುಕ್ತವಾಗಿ ನಡೆಯಿಸಬೇಕೆಂದು ಗೊತ್ತುಮಾಡಿದ್ದ ತನ್ನ ಗಂಡನ ಸಹೋದರನು ದೇವಾಲಯಕ್ಕೆ ಹೋಗಿರಲಿಲ್ಲವಾಗಿ ಆ ಲಗ್ನವು ನಿಷಿದ್ಧವಾದುದರಿಂದ ಅದನ್ನು ರದ್ದುಪಡಿಸಬೇಕೆಂದು ಕೋರ್ಟಿಗೆ ಬಿನ್ನೈಸಿಕೊಳ್ಳಲು, ಪ್ರತಿನಿಧಿಯು ಇಂಥವನೇ ಇರಬೇಕೆಂಬುದು ಪ್ರಾಮುಖ್ಯವಲವಾದುದರಿಂದ ವೆನಿಸ್ ದೇಶಸ್ಥಳ ಮದುವೆಯು ನಿಷಿದ್ಧವಲ್ಲವೆಂದು ಕೋರ್ಟಿನವರು ತೀರ್ಮಾನಿಸಿ ವಾದಿಯಾದ ರಷ್ಯಾದೇಶಸ್ಥಳ ಮದುವೆಯನ್ನು ರದ್ದುಪಡಿಸಿದರು.

ಸ್ವೀಕಾರ.

ಕೈ॥ ವೀರಸಂಗಪ್ಪನವರ ಸ್ಮರಣಾರ್ಥವಾಗಿ ಈ ಕೆಳಗೆಕಂಡ ವಿವಾಹಮಹೋತ್ಸವಗಳಲ್ಲಿ ತೆಗೆದ ಅಗ್ರತಾಂಬೂಲದ ಬಗೆಗೆ ಬಂದ ಕಾಣಿಕೆಯನ್ನು ವಿಶ್ವಾಸಪೂರ್ವಕವಾಗಿ ಸ್ವೀಕರಿಸಿರುತ್ತೇವೆ. ಪ. ಪ್ರ.

(1) ಬೆಂಗಳೂರು ಫಲಸರ್ಕಾಮಳಿಗೆ ಮ॥ ಸೂಲಕುಂಟೆ ವೀರಭದ್ರಪ್ಪನವರ ತಮ್ಮಂದಿರು ರಾ॥ ನಂಜುಂಡಪ್ಪನವರಿಗೆ ವಡಗೇನಳ್ಳಿ ಮ॥ ಕೋಲಾರದ ವೀರಭದ್ರಪ್ಪನವರ ಕುಮಾರ್ತಿ ಸೌ॥ ರುದ್ರಮ್ಮನವರನ್ನು ಕೊಟ್ಟು ನಡಸಿದ ಲಗ್ನದಲ್ಲಿ 1 ರೂ. (2) ಮಾಗಡಿ ತಾ॥ ತಾವರೆಕೆರೆ ಮ॥ ಕೋಟೆ ಚನ್ನಮಲ್ಲಪ್ಪನವರ ಮಗ ರಾ॥ ಅಡವೆಪ್ಪನಿಗೂ ಮಾಗಡಿ ಮ॥ ವೀರಪ್ಪನವರ ಮೊಮ್ಮಗಳು ಸೌ॥ ಮಹದೇವಮ್ಮನಿಗೂ ನಡೆದ ಲಗ್ನದಲ್ಲಿ 1 ರೂ. (3) ತಾವರೆಕೆರೆ ಮ॥ ಶೆಟ್ಟರು ಮಲ್ಲಶೆಟ್ಟರ ಕುಮಾರ ರಾ॥ ಬಸವಯ್ಯನಿಗೂ ಮೈಸೂರು ಗುರುಕಾರ್ ಮ॥ ಮುರುಡಪ್ಪನವರ ಕುಮಾರ್ತಿ ಸೌ॥ ಶಿವಗಂಗಮ್ಮನಿಗೂ ನಡೆದ ಲಗ್ನದಲ್ಲಿ 1 ರೂ. (5) ದೇವಿಕೆರೆ ಗೌಡರು ಮ॥ ಗುರುಸಿದ್ಧಪ್ಪನವರ ಮಗ ಸಿದ್ಧರಾಮಪ್ಪನಿಗೆ ಬೆಳ್ಳೊಡು ಶೆಟ್ಟರು ಮ॥ ಪಾಪಣ್ಣನವರ ಮಗಳು ಸೌ॥ ಬಸಮ್ಮನಿಗೂ ನಡೆದ ಲಗ್ನದಲ್ಲಿ 1 ರೂ. (5) ಮೈಸೂರು ಗುರುಕಾರ್ ಮ॥ ಮಲ್ಲಪ್ಪನವರ ಕುಮಾರ್ತಿ ಸೌ॥ ಸಂಜಮ್ಮಣ್ಣಿಗೂ ಚನ್ನಪಟ್ಟಣದ ತಾಂತಪ್ಪನವರ ಕುಮಾರ ರಾ॥ ರಾಜಶೇಖರಯ್ಯನಿಗೂ ನಡೆದ ಲಗ್ನದಲ್ಲಿ 1 ರೂ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ಲಗ್ನದ ಫಂಡು.

1. ಕಾಕ್ಕಾಕ್ಕಹಳ್ಳಿಯಲ್ಲಿರುವ ಶೆಟ್ಟರು ಮ॥ ರಾ॥ ಚನ್ನಪ್ಪನವರ ಮಗಳು ಚಿ॥ ಸೌ॥ ಗೌರಮ್ಮನನ್ನು ಡಿಟೊ ಗ್ರಾಮದ ಕುಂದಾಣದ ರಾಚೊಟಪ್ಪನವರ ಮಗ ಮರಿಯಪ್ಪನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ 5 ರೂ. ಮತ್ತು ಡಿಟೊ ಗ್ರಾಮದ ಯಜಮಾನ್ ಮ॥ ರಾ॥ ಚಿಕ್ಕಣ್ಣನವರ ಮಗಳನ್ನು ನಾಗದಾಸಹಳ್ಳಿ ವೀರಭದ್ರಪ್ಪನವರ ಮಗನಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ 3 ರೂ. ಜುಮ್ಲಾ 8 ರೂಗಳು ಬೆಂಗಳೂರಲ್ಲಿರುವ ಎಣ್ಣೆಗೆರೆ ರುದ್ರಪ್ಪನವರ ಕಪ್ಪಣ್ಣನವರ ಮೂಲಕ ರೂ. 8-0-0
2. ಬೆಂಗಳೂರು ಸಿಟಿ ಅರಲೇಪೇಟೆ ದೇಶದ ಯಜಮಾನ್ ಮ॥ ರಾ॥ ಬಸಪ್ಪನವರಿಂದ ಇವರ ತಮ್ಮಂದಿರು ಮ॥ ರಾ॥ ಯಜಮಾನ್ ಪುಟ್ಟಪ್ಪನವರ ಕುಮಾರ್ತಿ ಚಿ॥ ಸೌ॥ ಹೊನ್ನಮ್ಮನನ್ನು ಅರಲೇಪೇಟೆ ಶಂಕರಪ್ಪನವರ ಮ॥ ರಾ॥ ಶಿವಪ್ಪನವರ ಪುತ್ರ ದೊಡ್ಡ ಶಂಕರಪ್ಪನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ರೂ. 20-0-0
3. ಬೆಂಗಳೂರು ಸಿಟಿ ಅರಲೇಪೇಟೆಯಲ್ಲಿರುವ ತುಂಕೂರು ಯಜಮಾನ್ ಮ॥ ರಾ॥ ಗೊಲ್ಲಪ್ಪನವರ ಮಗಳ ಲಗ್ನದಲ್ಲಿ ಮ॥ ರಾ॥ ಬೆಂಗಳೂರು ದೇಶದ ಯಜಮಾನ್ ಮ॥ ರಾ॥ ಬಸಪ್ಪನವರ ಮೂಲಕ ರೂ. 5-0-0
4. ಬೆಂಗಳೂರು ಸಿಟಿ ಮ॥ ರಾ॥ ಎಲಿ. ಸಿದ್ಧಲಿಂಗಪ್ಪ ಶೆಟ್ಟರ ಮೂಲಕ ಹೊರೂರು ರುದ್ರಪ್ಪನವರ ರಾಚಪ್ಪನವರ ಲಗ್ನದಲ್ಲಿ ರೂ. 3 ಮತ್ತು ಅರಲೇಪೇಟೆ ದೇಶದ ಶೆಟ್ಟರು ಮ॥ ರಾ॥ ಬಸಲಿಂಗಶೆಟ್ಟರ ಮಗನ ಲಗ್ನದಲ್ಲಿ 3 ರೂ. ಜುಮ್ಲಾ ರೂ. 6-0-0
5. ಬೆಂಗಳೂರು ಅರಲೇಪೇಟೆ ದೇಶದ ಯಜಮಾನ್ ಮ॥ ರಾ॥ ಬಸಪ್ಪನವರ ಮೂಲಕ ಎಣ್ಣೆಗೆರೆ ದೊಡ್ಡ ಗಂಗಪ್ಪನವರ ತಮ್ಮಂದಿರು ಮ॥ ರಾ॥ ಗುರುಸಿದ್ಧಪ್ಪನವರ ಕುಮಾರ್ತಿ ಚಿ॥ ಸೌ॥ ಗಂಗಮ್ಮನನ್ನು ತುಂಕೂರು ತಾಲೂಕು ಹರಳೂರು ಮ॥ ರಾ॥ ಅಡವಿಯಪ್ಪನವರ ಪುತ್ರ ವೀರಪ್ಪನವರಿಗೆ ಕೊಟ್ಟು ನಡಸಿದ ಲಗ್ನದಲ್ಲಿ ಜಮ ರೂ. 5-0-0
6. ಮಾಗಡಿ ತಾಲ್ಲೂಕು ತಾವರೇಕೆರೆ ಕಸಬಾದಲ್ಲಿರುವ ಕೋಟೆ ಮ॥ ರಾ॥ ಚನ್ನಮಲ್ಲಪ್ಪನವರ ಮಗ ಅಡವಿಯಪ್ಪನವರಿಗೆ ಮಾಗಡಿ ವೀರಪ್ಪನವರ ಮೊಮ್ಮಗಳು ಮಹಾದೇವಮ್ಮನೆಂಬ ವಧುವನ್ನು ಕೊಟ್ಟು ನಡಸಿದ ಲಗ್ನದಲ್ಲಿ ತಾವರೇಕೆರೆ ಮ॥ ರಾ॥ ಯಜಮಾನ್ ಶಾಂತಪ್ಪನವರ ಮೂಲಕ ರೂ. 3-0-0
7. ಮಾಗಡಿ ತಾಲ್ಲೂಕು ಶಿಷ್ಟಸಂದ್ರದ ಮ॥ ರಾ॥ ಸಿದ್ಧಪ್ಪನವರ ಮೂಲಕ ಸದರಿ ಗ್ರಾಮದ ಮ॥ ರಾ॥ ವೀರಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ತೆಗೆದದ್ದು ರೂ. 3-0-0
8. ಚಗಲೂರು ತಾಲ್ಲೂಕು ದೇವಿಕೆರೆ ಗೌಡರು ಮ॥ ರಾ॥ ಗುರುಸಿದ್ಧಪ್ಪನವರ ಮಕ್ಕಳು ಸಿದ್ಧರಾಮಪ್ಪನವರಿಗೆ ಬೆಳ್ಳೋಡು ಶೆಟ್ಟರು ಮ॥ ರಾ॥ ಪಾಪಣ್ಣನವರ ಪುತ್ರಿ ಚಿ॥ ಸೌ॥ ಬಸಮ್ಮನನ್ನು ಕೊಟ್ಟು ನಡಸಿದ ಲಗ್ನದಲ್ಲಿ ವರನ ಕಡೆಯಿಂದ 5 ರೂ. ವಧುವಿನ ಕಡೆಯಿಂದ 2 ರೂ. ಜುಮ್ಲಾ 7 ರೂಗಳು ಶೆಟ್ಟರ ಕಲವೀರಪ್ಪನವರ ಮೂಲಕ ರೂ. 7-0-0
9. ಮಾಗಡಿ ತಾಲ್ಲೂಕು ತಾವರೆಕೆರೆ ಕಸಬಾದಲ್ಲಿರುವ ಮ॥ ರಾ॥ ಶೆಟ್ಟರು ಮಲ್ಲಶೆಟ್ಟರ ಪುತ್ರ ಕರಿಬಸವಯ್ಯನೆಂಬ ವರಣಿಗೆ ಮೈಸೂರು ಗುರುಕಾರ್ ಮ॥ ರಾ॥ ಮುರುಡಪ್ಪನವರ ಕುಮಾರ್ತಿ ಚಿ॥ ಸೌ॥ ಶಿವಗಂಗಮ್ಮನೆಂಬ ವಧುವನ್ನು ಕೊಟ್ಟು ನಡಸಿದ ಲಗ್ನದಲ್ಲಿ ಸದರಿ ಶೆಟ್ಟರು ಮಲ್ಲಶೆಟ್ಟರ ಮೂಲಕ ರೂ. 5-0-0
10. ಹೊಸದುರ್ಗ ತಾಲ್ಲೂಕು ಮುತ್ತೋಡು ಗ್ರಾಮದ ಐ. ಸಿ. ಯಂ. ಸ್ಕೂಲ್ ಹೆಡಮಾಸ್ಟರು ಮ॥ ರಾ ಜಿ. ಶಂಕರಯ್ಯನವರ ಮೂಲಕ ಸದರಿ ಮುತ್ತೋಡುಗ್ರಾಮದ ಮಾದಪ್ಪನವರ ಮಗ ಕರಿಸಿದ್ಧಪ್ಪನೆಂಬವರಿಗೆ ಪರಪ್ಪನವರ ಮಗಳು ಚಿ॥ ಸೌ॥ ರುದ್ರಮ್ಮನೆಂಬ ವಧುವನ್ನು ಕೊಟ್ಟು ನಡಸಿದ ಲಗ್ನದಲ್ಲಿ 2 ರೂ. ಮತ್ತು ಶಿವಮೊಗ್ಗ ಚಂದ್ರಪ್ಪನವರ ಮಕ್ಕಳು ವೀರಪ್ಪನೆಂಬವರಿಗೆ ಕೊಟ್ರಪ್ಪನವರ ಮಗಳು ಶಾಂತಮ್ಮನೆಂಬ ವಧುವನ್ನು ಕೊಟ್ಟು ನಡಸಿದ ಲಗ್ನದಲ್ಲಿ 1 ರೂ. ಜುಮ್ಲಾ 3 ರೂಗಳು
11. ಕೋಲಾರಪೇಟೆ ತಾಲ್ಲೂಕು ಅರ್ಚಕರಹಳ್ಳಿಯಲ್ಲಿರುವ ಪಟೇಲ್ ಮ॥ ರಾ॥ ಸೋಮಣ್ಣನವರ ಮನೆಯಲ್ಲಿ ನಡದ ಅವರ ಪುತ್ರ ಸಂಗಪ್ಪನವರ ಲಗ್ನದಲ್ಲಿ ವರನ ಕಡೆಯಿಂದ 5 ರೂ. ಮತ್ತು ವಧುವಿನ ತಂದೆ ಮ॥ ರಾ॥ ಛತ್ರಯ್ಯನವರಿಂದ 2 ರೂ. ಜುಮ್ಲಾ 7 ರೂಗಳು ಮಾಯಗಾನಹಳ್ಳಿ ಪಟೇಲ್ ಮತ್ತು ಜೋಡಿದಾರ್ ಮ॥ ರಾ॥ ಯಂ. ಬಿ. ಗುರುಲಿಂಗಯ್ಯನವರ ಮೂಲಕ ರೂ. 7-0-0
12. ದಾವಣಗೆರೆ ತಾಲ್ಲೂಕು ಮಾಯಕೊಂಡ ಹೋಬಳಿ ಹನುಮನಹಳ್ಳಿ ಮ॥ ರಾ॥ ಮಹದೇವಪ್ಪಗೌಡರವರಿಂದ ಲಗ್ನಗಳಲ್ಲಿ ತೆಗುದು ಕಳುಹಿಸಿದ್ದು ಜಮಾ ತಪಶೀಲ್ ಸರಿಯಾಗಿ ಗೊತ್ತಾಗಲಿಲ್ಲವಾಗಿ ಪ್ರಕಟಿಸಲು ಅವಕಾಶವಾಗಲಿಲ್ಲ ರೂ. 5-0-0

ಜುಮ್ಲಾ ರೂ 77-0-0

ಈ ಮೇಲ್ಕಂಡ ವೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೆ.

ಜಿ. ಪರಮಶಿವಯ್ಯ, ಬಿ. ಎ. ಎಲ್.ಎಲ್. ಬಿ.
ಸೆಕ್ರಟರಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು.

ದಾವಣಗೆರೆ ವೀರಶೈವ ವಿದ್ಯಾವರ್ಧಕಫಂಡ್ ಸಂಘ.

1922-23 ನೇ ಸಾಲಿನ ಆದಾಯ ವ್ಯಯ ಲೆಕ್ಕ.

ವ್ಯಾಜು ಡಿವಿಡೆಂಡು ಮೂಲಕ	ಜಮಾ ರೂ.	3648—11—7
ಪಕ್ಕೆ ಫಂಡುಮೂಲಕ		5236—8—9
ಲಗ್ನಕಾರ್ಯಗಳ ಮೂಲಕ		332—9—0
ಒಟ್ಟುತ್ಪತ್ತಿಯು	ರೂ.	9217—13—4
ಖರ್ಚು.		
ಪಕ್ಕೆ ಹಣ ವಸೂಲಿಯವರ ಸಂಬಳ	ರೂ.	396—0—0
ಮೈಸೂರು ಲೋವರ್‌ಸೆಕೆಂಡರಿ ಪರೀಕ್ಷೆಯ ಬೋರ್ಡಿಂಗ್ ಖರ್ಚು		382—8—3
ಬೋರ್ಡಿಂಗ್ ಸ್ಕಾಲರ್‌ಷಿಪ್ಪುಗಳು		1016—8—6
ಸ್ಕಾಲರ್‌ಷಿಪ್ಪುಗಳು ಕೊಟ್ಟದ್ದು		1800—0—0
ಎ. ವಿ. ಸ್ಕೂಲ್ ಪುಸ್ತಕಗಳಿಗೆ		8—0—0
ವಿದ್ಯಾರ್ಥಿಗಳಿಗೆ ಹಣ ಕಳಿಸಿದ ಖರ್ಚು		12—5—0
ಆಫೀಸ್ ಖರ್ಚು		69—2—9
ಶ್ರೀ ವಿರಕ್ತಮಠದ ಖರ್ಚು ಕಟ್ಟಡ ಸಹ		675—4—0
ಖರ್ಚು ಆದ ಹಣ		4359—12—6
ರಿಜರ್ವ್‌ಫಂಡು ಜಮಾ.		
ಕಳದ ಆಡಾವಿನ ಶಿಲ್ಕು	ರೂ.	45342—9—10
ಚಾಲ್ತಿಸಾಲಿನ ಉತ್ಪತ್ತಿಯಲ್ಲಿ ಖರ್ಚು ಚಾತ ಉಳಿದ ಹಣ		4858—0—10
ಈವತ್ತಿಗೆ ಮೂಲಧನ		50200—10—8

ಇದರ ತಪಶೀಲ್‌ಗಳು ವಗೈರೆ ವಾರ್ಷಿಕರಿಪೋರ್ಟಿನಲ್ಲಿ ನಮೂದಿಸಿದೆ.

ಪಲ್ಲಾಗಟ್ಟಿ ಗುರುಸಿದ್ಧಪ್ಪ, ಆನರರಿ ಸೆಕ್ರೆಟರಿ.

ಬಡ ವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜು, ಹೈಸ್ಕೂಲ್, ಟೆಕ್ನಿಕಲ್ ಸ್ಕೂಲ್‌ಗಳಲ್ಲಿ ಅಭ್ಯಾಸಮಾಡುತ್ತಿರುವ ಬಡ ವೀರಶೈವ ವಿದ್ಯಾರ್ಥಿಗಳು ಜುಲೈ ತಾ॥ 31ರ ವಳಗಾಗಿ ಸೆಕ್ರೆಟರಿಯವರಿಗೆ ತಲಪುವಂತೆ (Printed prescribed Form) ನಲ್ಲಿ ಅರ್ಜಿ ಬರದುಕೊಳ್ಳತಕ್ಕದ್ದು. ಅರ್ಜಿ ಫಾರಂಗಳು ಬೇಕಾದಲ್ಲಿ ಒಂದಾಣೆ ಸ್ಟಾಂಪು ಕಳುಹಿಸಿ ಅಡ್ರೆಸ್ ತಿಳಿಸಿದಲ್ಲಿ ಕಳುಹಿಸಲ್ಪಡುತ್ತೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅರ್ಜಿ ಜೊತೆಯಲ್ಲಿ ಸರ್ಟಿಫಿಕೇಟುಗಳನ್ನು ಕಳುಹಿಸಿಕೊಡಬೇಕು. ಸರ್ಟಿಫಿಕೇಟುಗಳು ಇಲ್ಲದೆಯೂ ಮತ್ತು ವಾಯಿದೆಮೀರಿಯೂ ಬರತಕ್ಕ ಅರ್ಜಿಗಳು ಅಂಗೀಕರಿಸಲ್ಪಡಲಾರವು.

ಜಿ. ಪರಮಶಿವಯ್ಯ, ಬಿ. ಎ. ಎಲ್.ಎಲ್.ಬಿ.
ಆನರರಿ ಸೆಕ್ರೆಟರಿ
ಎಂ. ವಿ. ವಿ. ಫಂಡ್ ಸಂಘ, ಬೆಂಗಳೂರು

ಮುರುಘಾಮಠ ಫ್ರೀಬೋರ್ಡಿಂಗ್ ಧಾರವಾಡ.

ಹೋದಸಾಲಿನಲ್ಲಿದ್ದ ವಿದ್ಯಾರ್ಥಿಗಳು ಮತ್ತು ತಾ॥ 10-6-1923ರಲ್ಲಿ ಕೂಡಿದ ಜನರಲ್ ಕಮಿಟಿಯಲ್ಲಿ ತಕೊಂಡ ವಿದ್ಯಾರ್ಥಿಗಳು ತಮ್ಮ ತಮ್ಮ ಶಾಲೆಗಳು ಸುರುವುಆದಕೂಡಲೆ ಈ ಬೋರ್ಡಿಂಗಿನಲ್ಲಿ ಹಾಜರ್ ಇರತಕ್ಕದ್ದಾಗಿದೆ. ಹೀಗಿದ್ದು ಉತ್ತರವರಿಗೆ ಕೆಲವು ಜನರು ಗೈರಹಾಜರ್ ಇರುತ್ತಾರೆ. ಆ ಗೈರಹಾಜರ ಇದ್ದ ಜನರು ಸನ್ 1923 ನೇ ಜುಲೈ ತಿಂಗಳ 15ನೇ ತಾರೀಖಿನೊಳಗಾಗಿ ಹಾಜರ್ ಆಗತಕ್ಕದ್ದು. ಇಲ್ಲವೆ ಅವರನ್ನು ಬೋರ್ಡಿಂಗಿನಿಂದ ವಜಾಮಾಡುವವರಲ್ಲಿ ಬರುವದು.

[illegible] ಕರಿಸಿದ್ದಪ್ಪ ಹೆಗ್ಗೆರಿ, [illegible].

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿಕ್ಕಿತಾ | ಘನಪಥಕೃತಾವಕಾರಾ ಪಕ್ಷಜ ನಕ್ಷತ್ರ ನೋಕರಾಜೀಯಾ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾತ್ವಿಕ ಸಾಧ್ಯುಕ್ತ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಕಾಮುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [illegible] ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೩ ಳ ನೆಯ ಇಸವಿ ಜುಲೈ ತಾರೀಖು ೨೦ ನೆಯ ಭಾನುವಾರ. [ಸಂಚಿಕೆ ೨೯

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHAR ACHARYA
VAIDYASALA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.
ಇಂಫ್ಲುಯೆಂಜಾ	
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ಕಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ
ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟಿದ, ಹೊಟ್ಟೆಯುಬ್ಬರಿಸದ ರೋಗವು ಗುಣವಾಗುತ್ತದೆ. ಶೀತ ಭೇದಿ, ರಕ್ತಭೇದಿ, ಆನುಶಂಕೆಗಳಿಗೆ ಕೂಡ ದಿವ್ಯೌಷಧಿ.

ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
24 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—46] ಪೋ. ಬಾ. ೪೧೦, ಮದರಾಸು.

4 ನೆಯ ಹೊಸಮುದ್ರಣ.

ಶ್ರೀಮನ್ಮಹಾರಾಜರವರ ಅಸ್ಥಾನ ಕವಿಗಳಾಗಿದ್ದು ಗತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳವರಿಂದ ರಚಿತವಾದ ಶಾಕುಂತಲ ನಾಟಕವು ಮೈಸೂರು ಯೂನಿವರ್ಸಿಟಿಯವರ ಸಹಾಯದಿಂದ ಈಗತಾನೆ 4ನೆ ಮುದ್ರವು ಅಚ್ಚಾಗಿ ಬೆಳಗೆ ಸಿದ್ಧವಾಗಿರುತ್ತದೆ. ಕ್ರಯ 1—0—0 ಇದು ಯೂನಿವರ್ಸಿಟಿಯವರಿಂದ ನಿರ್ಧರಿಸಲ್ಪಟ್ಟಿದೆ.

ಅಸ್ಥಾನ ವಿದ್ವಾನ್ ಬಿ. ಮಹದೇವಶಾಸ್ತ್ರಿ,
[12—13] ಬೆಂಗಳೂರ್, ಅರಕಲಗೂಡು ತಾಲ್ಲೋಕು, ಹಾಸನ ಡಿ॥
ಈ ಪುಸ್ತಕವು ಮೈಸೂರು ಸ್ಟಾರಾಫೀಸಿನಲ್ಲೂ ದೊರೆಯುತ್ತದೆ.

ಮೈಸೂರು ಸ್ಟಾರಾಫೀಸಿನಲ್ಲಿದೊರೆಯುವ ಗ್ರಂಥಗಳು.

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯ ೦
ವ್ರತಪಂಚಕ	೦—೪ ೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.

☞ ೧೦೦೦ ರೂ. ಇನಾಮು. ☜

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.	ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ. ವಜ್ರಾಂಗಸುಂದರಪಾಕ.	ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ್ಯಗೆ ಹಾಗೂ, ರೋಗಿಗಾದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ತೊಡವು, ಕಾಲು ವೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಆಸಕ್ತತೆ, ಜಾಗರನೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಕ್ಷೀಣ, ನಿದ್ರೆ ಹತ್ತದಿರೋಣ, ಮೇಲಿಂದ ಮೇಲಿ ಗರ್ಭವಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಶೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣಿ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೆಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತು ಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇದರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಪಕಂದ, ಕ್ಷೀರಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಬೊಗಟೆ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಸಮುದ್ರ ಕೋಳದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರಿಬೀಜ, ನಿವಳಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿಶಾಪತ್ರ, ಕಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮಸ್ತಕಿ, ಅಮರಕಣ, ಕಥಲ್ಯಾಗೊಂದ, ಪಂಚಾಂಗ ಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇದಮಿಶ್ರ, ತಾಲೀಮಖಾನಾ, ಬೀಜಬಂಧ, ಚಿಗರಿಗೊರಸು, ಮೊಂಗಲ್ ಬೇದಾಣ, ಮೈದಾಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಳೇರಿಭಾತ, ಗೋಖರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಆಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜೀನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಅದನಂತರ ೨ ತೊಲಿ ವಡೆ, ಒಂದು ಮೇಲೆ ಉಸುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯೆಯಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೪೨ ತೊಲಿ ಪಾಕಿಗೆ ೫॥ ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಶ್ರೈತ್ರಮಾಸದ ವರೆಗೆ ಮಾತ್ರ ಇರುವದು. ತಾರಾತ್ಮಕೊಡಬಾರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ತಿ ಅಡ್ರೆಸ್ ಪೋಸ್ಟ್ ಸಹ ಬರೆಯಿರಿ.

[50—49] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ವೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್‌ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ.	೧—೦—೦
ಕೇನೋಪನಿಷತ್ ಶಾಂಕರೀ	ರೂ.	೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ.	೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಗಿ.

ಗ್ರಂಥಸಿಕ್ಕುವಸ್ಥಲ:—
ಹೊಸಮಠದ ಚನ್ನಯ್ಯನವರು ಹರಿಹರ,
24—15 ಚಿತ್ರದುರ್ಗ ಡಿ॥

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[50—27] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.
ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,
(ನೀಲಗಿರಿ ಎಣ್ಣೆ)

ತಲೆನೋವು, ಕಜ್ಜಿತುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ನುಲಿ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಚೇಳು, ಕಣ್ಣಿಗುಂಟಾದ ಊತ, ಬಾವು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೫—೦ ವಿ. ಪಿ. ಚಾರ್ಜು ೦—೧೦—೦.

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೦ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಮತ್ತು ಕಂಪೆನಿ,
[50—38] [illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜುಲೈ ತಾ|| ೨೦ ನೆಯ ಭಾನುವಾರ.

A CLEAR INJUSTICE.

The appointment of Mr. J. C. Rollo as Acting Principal during the absence of the present Principal on furlough in supercession of Mr. A. R. Wadia who is senior in service does not come much as a surprise to us. This is not the first occasion when the Government have denied justice and brought other less commendable ways to play in the matter of appointments or promotions. But there is nothing to beat their present performance. If they profess to act arbitrarily in all such matters we would have no quarrel with them. But they often profess principles which they hardly act upon, talk justice which is hardly to be seen, and as for fairplay there is very little of it. If reason could prevail with anybody we showed enough of it in our issue of the 17th May 1924 to convince the Government that they would be quite unjustified if the claims of the Indian candidate, who was in every way efficient for the place, were overlooked, and that, without assigning any reasons. It is unnecessary to repeat here what we said then. This is not a matter which can be lightly passed over. It creates a precedent which is not only bad in principle but insulting to the self-respect of Indians. Far be it from us to cast any reflections on Europeans. We have nothing to say against the qualifications of Mr. J. C. Rollo for a Principalship. But we do say that there should be no preferential treatment given to a European as such. It shows either prejudice or weakness on the part of Government, neither of which makes for good administration. We really thought with an Indian Vice-Chancellor and an Indian Administration there could be no room for such a manifest injustice. It is interesting to contemplate what would have happened if Professor Radhakumar Mukherji of Calcutta, who was senior to Professor Wadia had continued to remain in Mysore. It is a pity that Mr. Mukherji's going away has come in the way of an Indian Principalship.

In connection with this question we were surprised to read the letter which appeared in the *Sampadabhyudaya* of the 27th May 1924 in reply to our leader. We thought there was a limit even to purely Brahmin-non-Brahmin controversy. It is not possible for us to forget that on every conceivable occasion and from every plat-form the veteran editor of the *Sampadabhyudaya* has been posing as a great nationalist. A Tilakite, a Ghandhi-ite, a Dasite-all find a welcome in the home of this eminent person and in the columns of his paper. He has again and again complained of foreign domination. How is it that on the present occasion he so boldly stands out for an European? Does Indiann nationalism stop on the threshold of Brahminism or on the outskirts of the Mysore State? We raised the question in our previous issue only as a matter of justice and on the broad basis of Indianisation. We refuse to follow the example of our contemporary and to enter into personalities. We had only hoped that after all the efforts of great Indian leaders, like Neroji and Gokhale which have received their final benediction in the declared policy of Indianisation of the British Government itself, such a simple question of an Indian Principal would have received the cordial support of Indians of all sections. But then we suppose India must show that she is India: caste-ridden, divided, and the result is that the third man makes capital out of it. Let it be so. If the 'patriotic' *Sampadabhyudaya* finds pleasure in such an attitude it is welcome to it. We are glad that the mask has now fallen and we understand what 'nationalism' 'patriotism' and 'justice' mean for our contemprary.

We might have said strongly, what we wanted to say but we cannot help resenting such a piece of injustice as is done now. It is only the Acting Principalship what is in question now. We hope that when in time to come the place becomes vacant permanently the claims of the senior candidate will not be ignored.

ಹಿಂದೂಮಹಮ್ಮದೀಯರ ಸಖ್ಯಪ್ರಯತ್ನ.

ಭಾರತೀಯರ ಸ್ವರಾಜ್ಯಪ್ರಾಪ್ತಿಗೆ ಹಿಂದೂಮಹಮ್ಮದೀಯರಸಖ್ಯದವಿನಾ ಬೇರೆಗತ್ಯಂತರವಿಲ್ಲನೆಂದು ಸ್ವರಾಜ್ಯಸಾಧನ ದೀಕ್ಷಾಬದ್ಧರಾದ ಮಹಾತ್ಮಾಗಾಂಧಿಯವರು ಭಾರತೀಯರಿಗೆ ಬೋಧಿಸುತ್ತ ಅದಕ್ಕಾಗಿ ಪಾಟುಪಡುತ್ತಿರುವುದೂ ಮಹಮ್ಮದಾಲಿಯವರೂ ಅದೇ ಅಭಿಪ್ರಾಯವುಳ್ಳವರಾಗಿರುವುದೂ ಸರ್ವಶ್ರುತವಿದೆ. ಆದರೆ ಅಲ್ಲಲ್ಲಿ ಮುಖ್ಯವಾಗಿ ಉತ್ತರ ಹಿಂದೂಸ್ಥಾನದಲ್ಲಿ ಹಿಂದೂ ಮಹಮ್ಮದೀಯರ ದೇವಸ್ಥಾನ ಮಸೀತಿಗಳ ಮುಂಗಡೆ ವಾದ್ಯಮಾಡುವ ವಿಚಾರದಲ್ಲೂ, ಗೋವಧೆಯ ವಿಚಾರದಲ್ಲೂ ಪರಸ್ಪರ ಕಲಹಗಳಾಗಿ ಅನರ್ಥವಾಗುತ್ತಿರುವುದು ಮಾತ್ರ ತಪ್ಪದಿರುವುದು ವಿಷಾದಸ್ಥಾನವಾಗಿದೆ. ಕಳೆದ ಬಕರೀದು ಹಬ್ಬದ ದಿವಸ ಹಿಂದೂ ದೇಶದ ಅನೇಕ ಭಾಗಗಳಲ್ಲಿ ಹಿಂದೂ ಮಹಮ್ಮದೀಯರಿಗೆ ಕಲಹವೇನೂ ಜರುಗಲಿಲ್ಲವಾದರೂ, ನಾಗಪುರ ಮತ್ತು ದಿಲ್ಲಿಪಟ್ಟಣಗಳಲ್ಲಿ ಮಾತ್ರ ಉಭಯರಿಗೂ ಬಡಿದಾಟಗಳಾಗಿರುವುದು ವಿಷಾದಕರವು. ಇದರಿಂದ ಮಹಾತ್ಮರ ಮನಸ್ಸಿಗೆ ವಿಶೇಷ ಪರಿತಾಪವುಂಟಾಗದಿರದು. ಈ ಬಕರೀದು ಹಬ್ಬದ ದಿವಸ ಮಹಮ್ಮದೀಯರು ಯಾವ ವಿಧವಾದ ಕಲಹಕ್ಕೂ ಆಸ್ಪದಕೊಡಕೂಡದೆಂದು ಮಹಮ್ಮದೀಯರ ನಾಯಕರುಗಳು ಎಚ್ಚರಿಸಿದ್ದರಾದರೂ, ಅದು ಸಂಪೂರ್ಣವಾಗಿ ಫಲಕಾರಿಯಾಗಲಿಲ್ಲವು. ಇದರಿಂದ ದಿಲ್ಲಿ ನಾಗಪುರಗಳಲ್ಲಿ ನಾಯಕರುಗಳು ಸಾಕಷ್ಟು ಪ್ರಯತ್ನಿಸಲಿಲ್ಲವೆಂದು ವ್ಯಕ್ತವಾಗುತ್ತದೆ. ಹಿಂದೂಗಳು ಮಹಮ್ಮದೀಯರೊಡಗೂಡಿ ನಡಿಯುವಂತೆ ಮಾಡಬೇಕಾಗಿರುವುದಲ್ಲದೆ ಮಹಮ್ಮದೀಯರನ್ನೇ ಸತ್ಪ್ರವರ್ತಕರನ್ನಾಗಿ ಮಾಡಲು ಪ್ರಯತ್ನಿಸಬೇಕಾಗಿದೆ ಎಂದು ಮಹಮ್ಮದಾಲಿಯವರು ಒಂದು ಪತ್ರಿಕಾಪ್ರತಿನಿಧಿಯೊಡನೆ ಸೂಚಿಸಿರುವರು. ಕೆಲ ಮಹಮ್ಮದೀಯರು ಹಿಂದುಗಳನ್ನು ಬಲವಂತದಿಂದಲೋ ಆಶೋತ್ತರದಿಂದಲೋ ಇಸ್ಲಾಮಿಯಾ ಮತಾವಲಂಬಿಗಳನ್ನಾಗಿ ಮಾಡುವುದರಿಂದ ತಮ್ಮ ಮತದ ಪ್ರಾಬಲ್ಯವು ಹೆಚ್ಚುತ್ತದೆಂದೂ, ಪರಸ್ಪರ ಕಲಹವೂ ಅಶಾಂತಿಯೂ ತಪ್ಪುತ್ತವೆಂದೂ ಭ್ರಮಿಸಿ ಅದಕ್ಕಾಗಿ ಎಲ್ಲಕಡೆಯೂ ನಾನಾಪ್ರಯತ್ನನಡಿಸುತ್ತಿರುವರಷ್ಟೆ? ಒಂದು ಮತದಿಂದ ಬೇರೊಂದುಮತಕ್ಕೆ ಹೆದರಿಕೆ ಬೆದರಿಕೆಗಳಿಂದ ಸೇರಿಸಿಕೊಳ್ಳುವುದೇನೋ ಸುಲಭವು, ಆದರೆ ಅವರ ಮನೋಭಾವವನ್ನು ಬದಲಾಯಿಸದೆ ಬಾಹ್ಯಬದಲಾವಣೆಯಿಂದ ಪ್ರಯೋಜನವೇನೂ ಆಗುವುದಿಲ್ಲವು. ಅದುಕಾರಣ ಮಹಮ್ಮದೀಯರಾಗಲಿ ಕ್ರೈಸ್ತರಾಗಲಿ ತಮ್ಮ ಮತಗಳಲ್ಲಿ ಭಕ್ತಿವಿಶ್ವಾಸವಿಲ್ಲದ ಬೇರೆ ಮತೀಯರನ್ನು ಸ್ವಮತಕ್ಕೆ ಸೇರಿಸಿಕೊಳ್ಳುವುದರಿಂದ ಪರರನ್ನು ಹಿಂಸಿಸಿದಂತಾಗುವುದರವಿನಾ ತಮ್ಮ ಮತಪ್ರಾಶಸ್ತ್ಯವನ್ನು ವ್ಯಕ್ತಗೊಳಿಸುವಂತಾಗುವುದಿಲ್ಲ. ಆದರೆ ಮಾನವ ಪ್ರಾಣಿಯನ್ನು ಹಿಂಸಿಸಬಾರದೆಂಬುದು ಮತ್ತು ಪ್ರೇಮರಹಿತವಾದ ಮತವು ಮತವೇ ಅಲ್ಲವೆಂಬುದು ಎಲ್ಲ ಮತಗಳ ತತ್ವವಾಗಿರುತ್ತವೆ. ಇದನ್ನು ಅವರುಗಳು ಮರೆತಿರುವುದು ಸಖೇದಾಶ್ಚರ್ಯವು. ಹಿಂದೂ ಮಹಮ್ಮದೀಯರ ಕಲಹನಿವಾರಣೆಯಾಗಿ ಸಖ್ಯವು ಬೆಳೆಯಲೆಂಬ ಉದ್ದೇಶದಿಂದ ಆಂಗ್ಲ ಮತ್ತು ಉರ್ದುಭಾಷೆಗಳಲ್ಲಿ ಪತ್ರಿಕೆಯನ್ನು ಪ್ರಚುರಪಡಿಸಿದುದಾಗಿದೆಯೆಂದು ಮಹಮ್ಮದಾಲಿಯವರು ತಿಳಿಸಿರುವರು. ಸಿಂಧೂಪ್ರದೇಶದಲ್ಲೂ ಉತ್ತರಹಿಂದೂಸ್ಥಾನದಲ್ಲೂ ಸಂಚರಿಸಿ ಹಿಂದೂ ಮಹಮ್ಮದೀಯರಿಗುಂಟಾಗಿರುವ ಮನಸ್ತಾಪವನ್ನು ಹೋಗಲಾಡಿಸಿ ಪರಸ್ಪರ ಪ್ರೀತಿವಿಶ್ವಾಸ ಹುಟ್ಟುವಂತೆ ಮಾಡುವುದಕ್ಕಾಗಿ ಸರೋಜನಿದೇವಿಯವರು ಮಹಾತ್ಮಗಾಂಧಿಯವರ ಅಪೇಕ್ಷೆಯಂತೆ ಹೊರಟಿರುವರು. ಯಾರು ಎಷ್ಟು ಬೋಧಿಸಿದರೇನು? ಈ ಕಲಹಕ್ಕೆ ಮುಖ್ಯ ಕಾರಣಗಳಾದ ಗೋವಧೆ ಮತ್ತು ಮಸೀತಿಗಳ ಮುಂದೆ ವಾದ್ಯಮಾಡುವುದು—ಇವೆರಡೂ ಪರಿಹಾರವಾದ ಹೊರತು ಹಿಂದೂ ಮಹಮ್ಮದೀಯರ ಸಖ್ಯವು ಕುದುರವುದು ಕಷ್ಟವು. ಒಂದುವೇಳೆ ಮಹಾತ್ಮರಂತಹ ಮಹಾಪುರುಷರುಗಳ ಉಪದೇಶದಿಂದ ಹಿಂದೂಗಳು ಮಸೀತಿ ಮುಂಗಡೆ ವಾದ್ಯವನ್ನು ನಿಲ್ಲಿಸಿದರೂ ನಿಲ್ಲಿಸಬಹುದು. ಆದರೆ ಮಹಮ್ಮದೀಯರು ಮಾತ್ರ ಗೋವಧೆಯನ್ನು ನಿಲ್ಲಿಸುವುದು ಅಸಂಭವವು ಮತ್ತು ಅದಾದ ಹೊರತು ಕಲಹವು ನಿಲ್ಲುವಂತಿಲ್ಲವು. ಇದರಮೇಲೆ ಕಾಲವಿಶೇಷವು ಹೇಗಿರುವುದೋ ಹೇಳಲಾಗದು.

ರವೀಂದ್ರರ ಸ್ವದೇಶಾಗಮನ

ಕವೀಂದ್ರರಾದ ರವೀಂದ್ರಟಾಗೂರರವರು ಚೈನಾ ಜಪಾನು ದೇಶಗಳಲ್ಲಿ ಸಂಚರಿಸಿಕೊಂಡು ಕಳೆದ ತಾ|| 14 ರಲ್ಲಿ ಕಲಕತ್ತಾಪಟ್ಟಣವನ್ನು ಸುರಕ್ಷಿತವಾಗಿ ತಲುಪಿದರು. ಆಸ್ಯಾಖಂಡವು ತನ್ನ ಪ್ರತಿಭೆಯನ್ನು ಅರಿತುಕೊಳ್ಳಬೇಕಾಗಿ ತಿಳಿಸಿರುವುದಾಗಿಯೂ, ತಮ್ಮ ಸಂದೇಶವು ಚೀನಾ ಜಪಾನು ದೇಶಗಳಲ್ಲಿ ವಿಶೇಷ ಪ್ರಬೋಧವನ್ನುಂಟುಮಾಡಿರುವುದಾಗಿಯೂ ತಿಳಿಸಿರುತ್ತಾರೆ. ಆಸ್ಯಾಖಂಡದ ಆದರ್ಶವು ಬರೇ ಭೌತಿಕಸಾಧನವಾಗಿಲ್ಲವು. ಚೀನಾ ಜಪಾನುಗಳಲ್ಲಿಯೂ ಆಧ್ಯಾತ್ಮಿಕ ಕಾಂಕ್ಷೆಯು ನಶಿಸಿಲ್ಲವೆಂದೂ, ಸ್ವಾರ್ಥತ್ಯಾಗವೂ ಸೇವಾಧರ್ಮವೂ ಇನ್ನೂ ಈ ದೇಶಕ್ಕಿನ್ನ ಪ್ರಬಲವಾಗಿವೆಯೆಂದೂ ರವೀಂದ್ರರು ತಿಳಿಸುತ್ತಾರೆ. ರವೀಂದ್ರರ ಏಸ್ಯಾಪರ್ಯಟನದಿಂದ ನೂತನೋತ್ಸಾಹವುಂಟಾಗಿದೆ. ಇವರಿಗೆ ಆ ದೇಶಗಳಲ್ಲಾದ ವಿಶೇಷ ಮರ್ಯಾದೆಯಿಂದ ಭರತಖಂಡಕ್ಕೇ ಮರ್ಯಾದೆಯಾದಂತಾಯಿತು. ರವೀಂದ್ರರು ಪುನಃ ಸ್ಪೇಯನು, ದಕ್ಷಿಣ ಅಮೇರಿಕೆ, ಇಟಲಿ ಮೊದಲಾದ ಪಾಶ್ಚಾತ್ಯದೇಶಗಳಲ್ಲಿ ಸಂಚರಿಸಿಕೊಂಡು ಬರುವವರಾಗಿರುವರು. ಇವರ ಈ ಪರ್ಯಟನದಿಂದ ಪೂರ್ವಪಶ್ಚಿಮ ದೇಶೀಯರ ಪ್ರೇಮಾಭಿವೃದ್ಧಿಯಾಗಲವಕಾಶವಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಸ್ವದೇಶದ ವೃತ್ತಾಂತಗಳು

ಪ್ರಥಮರಾಜಕುಮಾರಿಯರಾದ ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರು ಕಳೆದ ಗುರುವಾರ ಬೆಳಗ್ಗೆ ರಾಜಧಾನಿಯಿಂದ ಬೆಂಗಳೂರಿಗೆ ಸ್ಪೆಷಲ್ ಟ್ರೇನಿನಲ್ಲಿ ದಯಮಾಡಿಸಿದರು.

ತುಮಕೂರು ಡಿಸ್ಟ್ರಿಕ್ಟಿನಲ್ಲಿ ವಿದ್ಯಾಭ್ಯಾಸದ ತೆರುಗೆಯಿಂದುತ್ಪನ್ನವಾಗುವ ಹಣವು ವಿದ್ಯಾಭಿವೃದ್ಧಿಕಾರ್ಯಗಳಿಗುಪಯೋಗಿಸಲ್ಪಡತಕ್ಕುದೆಂದು ಅಲ್ಲಿಯ ಡಿ|| ಬೋರ್ಡಿನವರು ನಿರ್ಧರಿಸಿರುವುದನ್ನು ಸರ್ಕಾರದವರನುಮೋದಿಸಿರುತ್ತಾರೆ.

ರಾಜಧಾನಿಯ ಸಬ್‌ಜಡ್ಜರಾದ ಮ|| ಬಿ. ಆರ್. ಕೃಷ್ಣಮಾಚಾರರ ಪತ್ನಿಯವರು ಕೆಲಕಾಲದಿಂದಲೂ ಅಸ್ವಸ್ಥರಾಗಿದ್ದು 4-5 ದಿವಸಗಳ ಹಿಂದೆ ವಿಧಿವಶರಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರು ಅಪುತ್ರವತಿಯರಾಗಿಯೂ 40 ವರ್ಷ ವಯಸ್ಕರಾಗಿಯೂ ಇದ್ದರು.

ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರಾಗಿರುವವರ 3 ವರ್ಷಗಳಕಾಲಾವಧಿಯು ಬರುವ ಆಗಸ್ಟ್ ತಿಂಗಳ ಕಡೆಯಲ್ಲಿ ಮುಗಿಯುವುದರಿಂದ ಹೊಸ ಕೌನ್ಸಿಲರುಗಳ ಚುನಾವಣೆಯು ಬರುವ ತಿಂಗಳ ತಾ|| 18, 19, 20 ಮತ್ತು 21ರಲ್ಲಿ ನಡಿಯುವುದಾಗಿಯೂ ಉಮೇದುವಾರರುಗಳ ಸ್ಪರ್ಧೆಯು ಹೆಚ್ಚಾಗಿರುವುದಾಗಿಯೂ ಕೇಳುತ್ತೇವೆ.

ಕೃಷ್ಣರಾಜಮೊಹಲ್ಲಾದ ಚಿಕ್ಕಂಗಡಿಬೀದಿಯಲ್ಲಿ ಸುಡುಗಾಡಮ್ಮನಿಂದ ಧರ್ಮಾರ್ಥವಾಗಿ ಇಡಿಸಲ್ಪಟ್ಟಿರುವ ನಲ್ಲಿಯಲ್ಲಿ ನೀರು ತಡೆದುನಿಲ್ಲಿಸಲ್ಪಟ್ಟಿದ್ದುದು ಕೌನ್ಸಿಲರುಗಳ ತೀರ್ಮಾನದ ಶಕ್ತಿಯಿಂದಲೋ ಮತ್ತಾವ ಕಾರಣದಿಂದಲೋ 3-4 ದಿನಗಳ ಕೆಳಗೆ ನೀರು ಬಿಡಲ್ಪಟ್ಟು ಆ ಪ್ರದೇಶದ ಜನರಿಗುಂಟಾಗಿದ್ದ ಜೀವನದ ತೊಂದರೆಯು ಪರಿಹರಿಸಲ್ಪಟ್ಟಿರುವುದಕ್ಕಾಗಿ ಸಂತೋಷಿಸುತ್ತೇವೆ.

ಬೆಂಗಳೂರು ಡಿ|| ಕಮಿಷನರ ಪರ್ಸನಲ್ ಅಸಿಸ್ಟೆಂಟರಾದ ಮಿ|| ಸಿ. ನರೊನ್ಹರವರು ರುಜುಮಾಡಿದಂತೆ ಇದ್ದ 3 ರೆವಿನ್ಯೂ ಡಿಪಾಜಿಟ್ಟು ರೀಫಂಡು ಓಚರುಗಳನ್ನು ಹನುಮಂತರಾವ್ ಎಂಬುವವನು ಸ್ಟೇಟ್ ಹುಜೂರು ಖಜಾನೆಗೆ ಕೊಟ್ಟು 1400 ರೂ. ಗಳನ್ನು ತೆಗೆದುಕೊಂಡು ಹೋಗಿದ್ದನು. ಆ ಓಚರು ಚೀಟಿಗಳಲ್ಲಿ ತಿದ್ದಲ್ಪಟ್ಟಿದ್ದುದರ ಮೇಲೆ ಅನುಮಾನವುಂಟಾಗಿ ಕಂಟ್ರೋಲರವರು ಪೊಲೀಸಿಗೆ ದೂರುಮಾಡಿರುವರು. ಪೊಲೀಸಿನವರು ಆ ಕಳ್ಳನನ್ನು ತಡಕಲು ಪ್ರಯತ್ನಿಸಿರುತ್ತಾರೆ.

ರಾಜಧಾನಿಯ ಸಬ್‌ಜಡ್ಜರಾದ ಮ|| ಬಿ. ಆರ್. ಕೃಷ್ಣಮಾಚಾರರು ರಜವನ್ನು ಪಡೆದುಕೊಂಡಿರುವುದರಿಂದ ಅಡೀಷನಲ್ ಸಬ್‌ಜಡ್ಜರಾದ ಮ|| ಪಿ. ಮಹದೇವಯ್ಯನವರು ತಮ್ಮ ಸ್ವಂತಕೆಲಸದ ಜತೆಗೆ ಸಬ್‌ಕೋರ್ಟಿನ ಕೆಲಸವನ್ನು ನೋಡಿಕೊಳ್ಳಬೇಕಾಗಿಯೂ, ಈ ಮಧ್ಯೆ ಮ|| ಪಿ. ಮಹಾದೇವಯ್ಯನವರು 12 ದಿನಗಳ ರಜ ಪಡೆದುಕೊಂಡಿರುವುದರಿಂದ ಇವರು ಬರುವವರೆಗೆ ಒಂದನೇ ಮುನಸೀಫರಾದ ಮ|| ಎಚ್. ಎಂ. ಕೃಷ್ಣಸ್ವಾಮಿಯವರು ಸಬ್‌ಜಡ್ಜರ ಕೆಲಸವನ್ನು ನೋಡುವಂತೆಯೂ ಅಪ್ಪಣೆಯಾಗಿದೆ.

ಅಸಿಸ್ಟೆಂಟ್ ಕಮಿಷನರಾದ ಮ|| ಸಿ. ಎಸ್. ಕುಪ್ಪಸ್ವಾಮಯ್ಯಂಗಾರರು ಸೇನೆಯ ಚೀಫ್ ಕಮಾಂಡೆಂಟರ ಪರ್ಸನಲ್ ಅಸಿಸ್ಟೆಂಟರಾಗಿಯೂ, ಮ|| ಟಿ. ಎ. ಈಶ್ವರಂರವರು ಬೆಂಗಳೂರು ಡಿ|| ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿಯೂ, ಮಿ|| ಸಿ. ನರೊನ್ಹಾರವರು ಬೆಂಗಳೂರು ಎರಡನೇ ಗ್ರೇಡ್ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿಯೂ, ಮ|| ಎಂ. ರಾಮರಾಯರು ನಂಜನಗೂಡಿನ ಎರಡನೇ ಗ್ರೇಡ್ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿಯೂ, ಮ|| ಎಂ. ವೆಂಕಟೇಶರವರು ಗೌರ್ನಮೆಂಟ್ ಅಸಿಸ್ಟೆಂಟ್ ಸೆಕ್ರೆಟರಿಯಾಗಿಯೂ, ಮ|| ಸಿ. ಸತ್ಯನಾರಾಯಣಶಾಸ್ತ್ರಿಗಳು ಮದ್ದಗಿರಿ ಸಬ್‌ಡಿವಿಜನ್ ಆಫೀಸರಾಗಿಯೂ, ಮ|| ಎ. ಸುಂದರರಾಜಯ್ಯಂಗಾರರು ತುಮಕೂರು ಡಿಸ್ಟ್ರಿಕ್ಟ್ ಟ್ರಜರಿ ಆಫೀಸರಾಗಿಯೂ, ಮ|| ಎಸ್. ಸೀತಾರಾಮಯ್ಯನವರು ಶಿವಮುಗ್ಗ ಸಬ್ ಡಿವಿಜನ್ ಆಫೀಸರಾಗಿಯೂ, ಮ|| ಸಿ. ರಾಮಚಂದ್ರರಾಯರು ಕೋಲಾರ ಡಿ|| ಟ್ರೆಜರಿ ಆಫೀಸರಾಗಿಯೂ, ಮ|| ಆರ್. ತಿರುಮಲಯ್ಯಂಗಾರರು ಶಿವಮಗ್ಗ ಡಿ|| ಟ್ರೆಜರಿ ಆಫೀಸರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಕಾವೇರಿ ನದಿಯಲ್ಲಿ ಅಭೂತಪೂರ್ವವಾದ ಪ್ರವಾಹವು ಬಂದು ಶ್ರೀರಂಗಪಟ್ಟಣದ ಸಮೀಪದಲ್ಲಿರುವ ಕಿರಂಗೂರು ಸೇತುವೆಯ ಮೇಲೆ 3 ಅಡಿ ಎತ್ತರದಿಂದ ನೀರು ಹರಿಯುತ್ತಿರುವುದರಿಂದ ಸೇತುವೆಯ ಒಂದು ಪಕ್ಕದ ಗಾರೆಕೈಪಿಡಿಯು ಮುರಿದುಬಿದ್ದುಹೋಗಿದೆಯಲ್ಲದೆ ಎಲ್ಲೆಲ್ಲೂ ಜಲಮಯವಾಗಿದೆ. ಈ ಕಾರಣದಿಂದ ಬೆಂಗಳೂರು-ಮೈಸೂರು ಮಧ್ಯೆ ಮೋಟಾರು ಮೊದಲಾದ ಬಂಡಿಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಹೊಳೆಯ ದಡದಲ್ಲಿರುವ ಬಾಬುರಾಯನಕೊಪ್ಪಲು ಮೊದಲಾದ ಗ್ರಾಮಗಳಲ್ಲಿ ಕೆಲ ಮನೆಗಳು ನಾಶವಾದುದರಿಂದ ಜನರು ಭೀತರಾಗಿ ಮನೆಗಳನ್ನು ಬಿಟ್ಟಿರುವುದಾಗಿ ತಿಳಿಯಬರುತ್ತದೆ. ಕನ್ನಂಬಾಡಿಕಟ್ಟೆಯಮೇಲೆ ಮೊನ್ನೆಯದಿನ 14 ಅಡಿ 10 ಅಂಗುಲ ಎತ್ತರದಿಂದ ನೀರುರುಳುತ್ತಿದ್ದಿತು, ಮತ್ತು ಯಡತೊರೆಯಲ್ಲಿ ಊರಿನ ಹಳ್ಳಪ್ರದೇಶಕ್ಕೆ ನೀರುನುಗ್ಗಿ ಕೆಲ ಮನೆಗಳು ನಾಶವಾದಂತೆಯೂ, ಕಪಿಲಾನದಿಯಲ್ಲೂ ಪೂರ್ಣಪ್ರವಾಹಬಂದು ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರಸ್ವಾಮಿಯ ದೇವಸ್ಥಾನದವರೆಗೂ ಅಂಗಡಿಬೀದಿಯವರೆಗೂ ನೀರುನುಗ್ಗಿದ್ದುದಾಗಿಯೂ, ತಿರುಮಕೂಡ್ಲಿನಲ್ಲಿ ಒಂದು ಪುರುಷಪ್ರಮಾಣದವರೆಗೆ ನೀರು ನುಗ್ಗಿನಿಂತಿದ್ದುದರಿಂದ ಜನರು ಆ ಗ್ರಾಮವನ್ನು ಬಿಟ್ಟಿರುವುದಾಗಿಯೂ, ಗರ್ಗೇಶ್ವರಿಯವರೆಗೂ ನೀರು ನಿಂತುಕೊಂಡು ಸಮುದ್ರದಂತೆ ಕಂಡುಬರುತ್ತಿರುವುದಾಗಿಯೂ ತಿಳಿಯಬಂದಿದೆ. ಜನರು ರೈಲುಬಂಡಿಗಳಲ್ಲೂ, ಮೋಟಾರು, ಜಟ್ಕಾ ಮೊದಲಾದ ಬಂಡಿಗಳಮೂಲಕವೂ ತಂಡೋಪತಂಡವಾಗಿ ಕನ್ನಂಬಾಡಿ ಶ್ರೀರಂಗಪಟ್ಟಣ ನಂಜನಗೂಡು ಮತ್ತು ಗರ್ಗೇಶ್ವರಿ ಈ ಸ್ಥಳಗಳಿಗೆ ಹೋಗಿ ನೋಡಿಕೊಂಡು ಬರುತ್ತಿರುವರು. ಈ ಪ್ರವಾಹವಿಶೇಷದಿಂದ ಯಾವ್ಯಾವಕಡೆ ಪ್ರಾಣಿ ಮತ್ತು ಪದಾರ್ಥಗಳ ನಷ್ಟವಾಗಿರುತ್ತದೆಂಬುದು ಇನ್ನೂ ತಿಳಿದುಬಂದಿಲ್ಲ. ಕನ್ನಂಬಾಡಿಕಟ್ಟೆಯ ಮೇಲೆ ನೀರು ಉರುಳುವುದು ಪರಮಾಶ್ಚರ್ಯಕರವಾಗಿರುವುದು. ಶ್ರೀಮನ್ಮಹಾರಾಜರವರೂ, ರಾಣೀವಾಸದವರೂ ಮೋಟಾರುಬಂಡಿಗಳಲ್ಲಿ ಕನ್ನಂಬಾಡಿಗೂ ರೈಲುಬಂಡಿಯಲ್ಲಿ ನಂಜನಗೂಡಿಗೂ ದಯಮಾಡಿಸಿ ಪರಾಂಬರಿಸಿಕೊಂಡು ಬಂದರು.

ಭರತಖಂಡದ ವೃತ್ತಾಂತಗಳು.

ಆಲ್ ಇಂಡ್ಯಾ ಸ್ವರಾಜ್ಯಪಕ್ಷದವರು ಬರುವ ಆಗಸ್ಟ ತಾ|| 10 ರಲ್ಲಿ ಕಲಕತ್ತಾದಲ್ಲಿ ಸಭೆಸೇರಿ ತಾವು ಮುಂದೆ ಮಾಡಬೇಕಾದ ಕಾರ್ಯಕ್ರಮನ್ನು ನಿರ್ಧರಿಸುವವರಾಗಿರುವರು.

ಭರತಖಂಡದ ಸ್ಕಾಟಿಗೆ ಸೇರಿದ ದೇವಾರ್ ಎಂಬಾತನು ಬೈಸಿಕಲ್ ಸ್ವಾರಿಯಿಂದ ಭೂಪ್ರದಕ್ಷಿಣೆಯನ್ನು ಮಾಡಿಕೊಂಡು ಬರಲು ಬೊಂಬಾಯಿನಿಂದ ತೆಹರಾನಿಗೆ ಹೋಗಿ ಅಲ್ಲಿಂದ ಮುಂದೆ ಪ್ರಯಾಣಮಾಡುವವನಾಗಿರುವನು.

ಪೂನಾಪಟ್ಟಣದಲ್ಲಿ ಅಲ್ಲಿಯ ಮ್ಯುನಿಸಿಪಾಲಿಟಿಯವರಿಂದ ಈ ತಾ|| 22ರ ದಿವಸ ಪ್ರತಿಷ್ಠಾಪಿಸಲ್ಪಡುವ ಕೈ|| ತಿಲಕರ ಅಮೃತಶಿಲಾಪ್ರತಿಮೆಯಮೇಲಣ ಗೌಸಣಿಗೆಯನ್ನು ತೆರೆಯಲು ಪಂಡಿತ ಮೋತಿಲಾಲನೆಹರು ಅವರು ಒಪ್ಪಿಕೊಂಡಿರುವರು.

ಆಫ್‌ಘಾನಸ್ಥಾನದಿಂದ ಪ್ಯಾರಿಸ್ಸಿಗೆ ರಾಯಭಾರ ಹೊರಟಿರುವ ಜನರಲ್ ನಾಡಿರ್‌ಖಾನರವರು ಕಳೆದ ಸೋಮವಾರ ಲಾಹೂರಿಗೆ ಬಂದು ಅಲ್ಲಿ ಔತಣಾದಿಗಳನ್ನು ತೀರಿಸಿಕೊಂಡು ಮೂರನೇಯ ದಿನ ಬೊಂಬಾಯಿಗೆ ಪ್ರಯಾಣಮಾಡಿದರು.

ಬೊಂಬಾಯಿಪಟ್ಟಣದ ಕೊಲಾಬಾ ಹತ್ತಿರ ಸಮುದ್ರತೀರದಲ್ಲಿ ಒಬ್ಬ ಪಾರ್ಸಿಸ್ತ್ರೀಯು ಕಳೆದ ಭಾನುವಾರ ಸಾಯಂಕಾಲ ಪ್ರಾರ್ಥನೆಮಾಡುತ್ತಿರುವಾಗ್ಗೆ ದೊಡ್ಡ ಅಲೆಗಳಿಂದ ನೀರಿನೊಳಕ್ಕೆ ಕೊಚ್ಚಿಕೊಂಡು ಹೋಗಲ್ಪಟ್ಟು ಮೃತಳಾದಳು. ಮೂರನೆಯ ದಿನ ಅವಳ ಶವವು ದೊರಕಿತು.

ಗುಡ್ಡಪ್ರದೇಶದ ಲೋಹಮಾರ್ಗಗಳಲ್ಲಿ ಮಳೆಯು ಅಧಿಕವಾಗಿದ್ದುದರಿಂದ ಕಲಕತ್ತಾಪಟ್ಟಣಕ್ಕೆ 1-2 ದಿನಗಳವರೆಗೆ ಹೊರಗಿನಿಂದ ತರಕಾರಿಯು ಬರಲಿಲ್ಲವಾಗಿ ಒಂದು ಪೌಂಡು ತರಕಾರಿಗೆ 5 ಆಣೆ ಬೆಲೆಯಾಗಿದ್ದಿತಂತೆ ಮತ್ತು ಅನೇಕರು ತರಕಾರಿಯಿಲ್ಲದೆ ಬರೇಮಾಂಸವನ್ನೇ ಉಪಯೋಗಿಸಿದರಂತೆ.

ಮದ್ರಾಸು ಹೈಕೋರ್ಟಿನ ಜಡ್ಜಿಯರಾದ ಸರ್ ವಿಲಿಯಂ ವಲಿಂಗ್‌ರವರು ಉದ್ಯೋಗದಿಂದ ನಿವೃತ್ತರಾಗುವ ಪ್ರಯುಕ್ತ ಮಿ|| ವಾಲೆಸ್ ಐ. ಸಿ. ಎಸ್. ರವರು ಆ ಕೋರ್ಟಿನ ಒಬ್ಬ ಜಡ್ಜಿಯರಾಗಿ ನಿಯಮಿಸಲ್ಪಟ್ಟಿರುವರು. ಈ ಮಿ|| ವಾಲೆಸ್‌ರವರು ಮೈಸೂರು ಚೀಫ್ ಕೋರ್ಟಿನಲ್ಲಿ ಕೆಲ ಕಾಲ ಒಬ್ಬ ಜಡ್ಜರಾಗಿದ್ದರು.

ನಾಗಪುರದಲ್ಲಿ ಕಳೆದ ದೊಡ್ಡ ಏಕಾದಶಿ ದಿವಸ ಹಿಂದೂ ದೇವರುಗಳ ಉತ್ಸವಗಳು ಸಾಯುಧರಾದ ಪೊಲೀಸು ಅಧಿಕಾರಿಗಳ ಬೆಂಗಾವಲಿನಿಂದ ಮಸೀದಿಗಳ ಮುಂಗಡೆ ಹಾದುಹೋದುವು. ಇನ್ನೊಂದು ದೇವರ ಉತ್ಸವವು ನಡೆಯುವಾಗ್ಗೆ ಹಿಂದೂಗಳಿಗೂ ಮಹಮ್ಮದೀಯರಿಗೂ ಬಡಿದಾಟವಾಗಿ ಉಭಯಪಕ್ಷದಲ್ಲೂ 30 ಜನರವರೆಗೆ ಪೆಟ್ಟನ್ನುತಿಂದು ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿರುವರು. ಇವರಲ್ಲಿ ಒಬ್ಬನಿಗೆ ಪ್ರಾಣಾಪಾಯವಾಗಿರುವುದಂತೆ. ಪುನಃ ಕಲಹವಾಗದಂತೆ ಅನುಮಾನವಾದ ಸ್ಥಳಗಳಲ್ಲಿ ಸೈನಿಕರ ಕಾವಲಿರಿಸಲ್ಪಟ್ಟಿರುವುದು.

ಪಂಜಾಬುಸರ್ಕಾರದ ವ್ಯವಸಾಯಶಾಖಾ ಮಂತ್ರಿಯಾದ ಆನರಬಲ್ ಚೌಧರಿಲಾಲಚಂದ್‌ರವರು ನ್ಯಾಯವಿಧಾಯಕ ಸಭಿಕತ್ವಕ್ಕಾಗಿ ವೇಷಧಾರಣೆಯಿಂದ ಓಟ್ಸನ್ನು ಪಡೆದರಾದುದರಿಂದ ಅದನ್ನು ರದ್ದುಪಡಿಸಬೇಕೆಂದು ಚೌಧುರಿಮಾಧುರಾಂ ಎಂಬುವವರು ಒಂದು ವ್ಯಾಜ್ಯವನ್ನು ಹೂಡಿದ್ದರು. ಈ ವ್ಯಾಜ್ಯದಲ್ಲಿ ಲಾಲಚಂದರವರು ಅಕ್ರಮನಡಿಸಿದರೆಂಬುದು ಸ್ಥಿರಪಟ್ಟು ಅರ್ಜಿದಾರನ ವೆಚ್ಚಕ್ಕಾಗಿ 3000 ರೂ. ಕೊಡಬೇಕೆಂದೂ ಸಭಿಕತ್ವವನ್ನು ಕಳೆದುಕೊಂಡಿರುವರೆಂದೂ ತೀರ್ಮಾನಿಸಲ್ಪಟ್ಟಿರುವುದರಿಂದ ಅವರ ಬದಲು ಮತ್ತೊಬ್ಬರು ಮೆಂಬರಾಗಿ ಆರಿಸಲ್ಪಡಬೇಕಾಗಿ ಬಂದಿತು.

ಸರೋಜನಿದೇವಿಯವರು ದಕ್ಷಿಣಾಫ್ರಿಕೆಯ ಪ್ರವಾಸವನ್ನು ತೀರಿಸಿಕೊಂಡು ಬೊಂಬಾಯಿಗೆ ಬಂದು ಅಲ್ಲಿ ಪುರನಿವಾಸಿಗಳು ಮಾಡಿದ ಮರ್ಯಾದೆಯನ್ನು ಕೈಕೊಂಡು ಕಳೆದ ಮಂಗಳವಾರ ಅಹಮದಾಬಾದಿಗೆ ಹೋಗಿ ಮಹಾತ್ಮ ಗಾಂಧಿಯವರ ದರ್ಶನಕ್ಕೆ ಪಾತ್ರರಾಗಿ ದಕ್ಷಿಣ ಮತ್ತು ಪೂರ್ವ ಆಫ್ರಿಕೆಗಳಲ್ಲಿ ತಾವು ಮಾಡಿದ ಪ್ರವಾಸದ ವಿಷಯವನ್ನೂ ಅಲ್ಲಿಯ ರಾಜಕೀಯ ಪರಿಸ್ಥಿತಿಯನ್ನೂ ತಿಳಿಸಿದರು. ಸಿಂದ್ ಮತ್ತು ಉತ್ತರಹಿಂದೂಸ್ಥಾನದಲ್ಲುಂಟಾಗಿರುವ ಹಿಂದೂಮಹಮ್ಮದೀಯರ ಕಲಹವನ್ನು ಶಾಂತಗೊಳಿಸಲು ಮಹಾತ್ಮರ ಇಷ್ಟಪ್ರಕಾರ ಆ ಪ್ರಾಂತಗಳಲ್ಲಿ ಸಂಚರಿಸಿ ಬರುವವರಾಗಿರುವರು.

ಪೂನಾಪಟ್ಟಣದಲ್ಲಿರುವ ರೀಮಾರ್ಕೆಟ್ ಎಂಬ ಹೆಸರನ್ನು ತೆಗೆದು ತಿಲಕ್ ಮಂಡಿ ಎಂದು ನಾಮಕರಣ ಮಾಡಬೇಕೆಂಬ ಬಗೆಗೆ ಅಲ್ಲಿಯ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಬಹಳ ಚರ್ಚೆಯು ನಡೆದು 11 ಜನ ಕೌನ್ಸಿಲರು ಹೆಸರನ್ನು ಬದಲಾಯಿಸಬೇಕೆಂದೂ 3 ಜನರು ಬೇಡವೆಂದೂ ಓಟ್ಸನ್ನು ಕೊಟ್ಟು 8 ಜನರು ತಟಸ್ಥರಾಗಿದ್ದುದರಮೇಲೂ, ಈ ವಿಷಯವನ್ನು ಮತ್ತೊಂದುವೇಳೆ ಪರ್ಯಾಲೋಚಿಸಬೇಕೆಂದು ಅರ್ಜಿಗಳು ಬಂದಿದ್ದುದರಮೇಲೂ ಪ್ರೆಸಿಡೆಂಟರು ಈಗಿರುವ ಹೆಸರನ್ನು ಬದಲಾಯಿಸುವುದು ಯುಕ್ತವಲ್ಲವೆಂದು ಅಭಿಪ್ರಾಯಪಟ್ಟುದುದರಿಂದ ಮಾರ್ಕೆಟ್ಟಿಗೆ ಈಗಿರುವ ಹೆಸರು ಬದಲಾಯಿಸಲ್ಪಡಲಿಲ್ಲವು.

ದಕ್ಷಿಣದೇಶದಲ್ಲಿ ಖಿದ್ದರುಪ್ರಸಾರವನ್ನು ಮಾಡುತ್ತಿದ್ದ ಗಣಪತಯ್ಯರು ಮತ್ತು ಅಂಗಾಚಮ್ಮ ಇವರೀರ್ವರೂ ಕಳೆದ ಜೂನ್ ತಾ|| 18ರ ದಿವಸ ವೃದ್ಧಾಚಲದಲ್ಲಿ ಹೆಂಡ ಮತ್ತು ಸಾರಾಯಿ ಅಂಗಡಿಗಳ ಹರಾಜು ನಡೆಯುತ್ತಿದ್ದ ತಾಲ್ಲೂಕು ಕಚೇರಿ ಬಳಿಗೆ ಹೋಗಿ ಅಲ್ಲಿ ನೆರದಿದ್ದ ಜನರಿಗೆ ಮದ್ಯಸೇವನೆಯನ್ನು ಮಾಡಬಾರದೆಂದು ಬೋಧಿಸುತ್ತಿದ್ದುದರಮೇಲೆ 144 ಸೆಕ್ಷನ್ ಪ್ರಕಾರ ಬೋಧೆಮಾಡಕೂಡದೆಂದು ಪೊಲೀಸರು ಅಡ್ಡಿಪಡಿಸಿದರೂ ಆ ಉಭಯರು ಲಕ್ಷಿಸದೆ ಹೋಗಲಾಗಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟು 3 ವಾರಗಳ ಕಾರಾಗೃಹವಾಸದ ಶಿಕ್ಷೆ ವಿಧಿಸಲ್ಪಟ್ಟರು. ಆ ಉಭಯರು ಇದಕ್ಕಾಗಿ ಕೊಂಚವೂ ವ್ಯಸನಪಡದೆ ಸಂತೋಷದಿಂದಿರುವರಂತೆ.

ಭಾರತೀಯರು ಮಾತೃಭಾಷಾಭಿವೃದ್ಧಿ ಕಾಂಕ್ಷೆಯಿಂದ ಕೋರ್ಟುಕಚೇರಿಗಳಲ್ಲಿ ಮುಖ್ಯವಾಗಿ ಸ್ಥಳೀಯ ಸರ್ಕಾರದಾಡಳಿತಗಳಲ್ಲಿ ಎಲ್ಲ ವ್ಯವಹಾರಗಳೂ ಆಯಾಯ ಸ್ಥಳಭಾಷೆಯಿಂದ ನಡಿಸಲ್ಪಡಬೇಕೆಂದೆತ್ನಿಸುತ್ತಿರುವರಷ್ಟೆ? ಅಹಮ್ಮದಾಬಾದಿನ ಸ್ಥಳೀಯ ಸರ್ಕಾರ ಅಂದರೆ ಮ್ಯುನಿಸಿಪಲ್ ಬೋರ್ಡಿನವರು ಎಲ್ಲಪತ್ರವ್ಯವಹಾರಗಳೂ, ಮೀಟಿಂಗಿನಲ್ಲಿ ಚರ್ಚೆಗಳೂ ಗುಜರಾತಿ ಭಾಷೆಯಲ್ಲೇ ನಡೆಸಲ್ಪಡಬೇಕಾಗಿ ನಿರ್ಧರಿಸಿಕೊಂಡಿರುವರು. ಆಂಧ್ರದೇಶದ ಸ್ಥಾನಿಕಸಂಘದವರು ಅಹಮದಾಬಾದಿನವರ ಅನುಕರಣವನ್ನು ಮಾಡಲೆತ್ನಿಸಿರುವರು. ಇದರಂತೆ ಸದ್ಯದಲ್ಲಿ ಎಲ್ಲಕಡೆಯ ಸ್ಥಾನಿಕಸಂಘದವರು ಏರ್ಪಡಿಸಿದಲ್ಲಿ ಮಾತೃಭಾಷೆಯು ಶೀಘ್ರದಲ್ಲೇ ಅಭಿವೃದಿಯಾಗುವುದರಲ್ಲಿ ಸಂದೇಹವಿಲ್ಲವು.

ದಿಲ್ಲಿಪಟ್ಟಣದಲ್ಲಿ ಹಿಂದೂ ಮಹಮ್ಮದೀಯರ ಮನಸ್ತಾಪವು ನಿತ್ಯದಲ್ಲೂ ಪ್ರಬಲವಾಗುತ ಅನರ್ಥಕಾರಿಯಾಗಿದೆ. ಹಿಂದೂಗಳು ವಿಶೇಷವಾಗಿ ವಾಸಿಸುವ ಬೀದಿಯಲ್ಲಿ ಹೋಗಕೂಡದೆಂದು ಮಹಮ್ಮದೀಯರು ಪೊಲೀಸರಿಂದ ನಿರ್ಬಂಧಪಡಿಸಲ್ಪಟ್ಟಿದ್ದಾಗ್ಯೂ ಕೆಲ ಮಹಮ್ಮದೀಯರು ಒಂದು ದನವನ್ನು ಅದೇ ಮಾರ್ಗವಾಗಿ ತೆಗೆದುಕೊಂಡು ಹೋಗಲು ಪ್ರಯತ್ನಿಸಿದುದರಮೇಲೆ ಅವರಿಗೂ ಹಿಂದೂಗಳಿಗೂ ಕಲಹಕ್ಕಾರಂಭವಾಗುವಷ್ಟರಲ್ಲಿ ಪೊಲೀಸರು ಬಂದು ದೊಂಬಿಯನ್ನು ಚದರಿಸಿಬಿಟ್ಟರು. ಆದರೆ ಹಿಂದೂಗಳ ವಾಸ್ಥಳದ ಹಿಂಭಾಗದಲ್ಲಿ ವಾಸಿಸುವ ಕೆಲ ಕಟುಕರು ಹಿಂದೂಗಳ ಮನೆಗೆ ನುಗ್ಗಿ ಅನೇಕ ಗಂಡುಸರನ್ನೂ ಕೆಲ ಹೆಂಗುಸರನ್ನೂ ಚೆನ್ನಾಗಿ ಹೊಡೆದು ಒಂದು ಮನೆಗೆ ಬೆಂಕಿಯನ್ನು ಹೊತ್ತಿಸಿಬಿಟ್ಟರು, ಮತ್ತು ಒಂದು ದೇವಾಲಯದ ಬಾಗಿಲನ್ನು ಹೊಡೆದು ಒಳಗೆ ನುಗ್ಗಿ ವಿಗ್ರಹವನ್ನು ಹಾಳ್ಮಾಡಿದರು. ಈ ಕದನದಲ್ಲಿ 100 ಜನರಿಗೆ ಮೇಲ್ಪಟ್ಟು ಗಾಯವಾಗಿರುವುದು. ಪೊಲೀಸರು ಕೆಲವರನ್ನು ಹಿಡಿದು ಶರೆಯಲ್ಲಿಟ್ಟಿರುವರು. ಈ ದೊಂಬಿಯನ್ನು ಅಣಗಿಸಲು ಬಂದಿದ್ದ ಸೈನಿಕರ ಗುಂಡಿನೇಟಿನಿಂದ ಕೆಲವರು ಸತ್ತರಂತೆ.

ವಿದೇಶದ ವೃತ್ತಾಂತಗಳು

ಶ್ರೀಮಾನ್ ಪ್ರಿನ್ಸ್ ಆಫ್ ವೇಲ್ಸರು ಬ್ರಿಟಿಷ್ ದಕ್ಷಿಣ ಆಫ್ರಿಕಾ ಸರ್ಕಾರದವರ ಆಹ್ವಾನವನ್ನು ಅಂಗೀಕರಿಸಿ ಮುಂದಿನ ವರ್ಷ ಅಲ್ಲಿಗೆ ಹೋಗಿಬರುವವರಾಗಿದ್ದಾರೆ.

ಈಗ್ಗೆ 6 ವರ್ಷಗಳ ಹಿಂದೆ 9,37,50,000 ರೂ. ಬೆಲೆಯ ಬೆಳ್ಳಿ ಭಂಗಾರ ನಾಣ್ಯಗಳನ್ನು ತುಂಬಿಕೊಂಡು ಲಂಡನ್ನಿಗೆ ಹೋಗುತ್ತಿದ್ದ ವೈಟ್‌ಸ್ಟಾರ್‌ಲೈನರ್ ಲಾರೆಂಟಿಕ್ ಎಂಬ ಹಡಗು ಜರ್ಮನಿಯ ಸಬ್‌ಮೇರಿನ್ನಿಂದ ನೀರಿನಲ್ಲಿ ಮುಳಿಗಿಸಲ್ಪಟ್ಟಿದ್ದಿತು. ಈಗ ಆ ನಾಣ್ಯಗಳೆಲ್ಲವೂ ಸಮುದ್ರದಿಂದ ಮೇಲಕ್ಕೆ ಅತ್ಯಂತ ಸಾಹಸದಿಂದ ತೆಗೆಯಲ್ಪಟ್ಟಿರುತ್ತವೆ.

ಹ್ಯಾಂಬರ್ಗಿನಲ್ಲಿ 450 ಪೌಂಡು ತೂಕವುಳ್ಳ ಒಂದು ಹಸುವಿನ ಮತ್ತು 160 ಪೌಂಡು ತೂಕವಿರುವ ಟಗರಿನ ಸಂಯೋಗದಿಂದ ಹಸುವಿನ ಹೊಟ್ಟೆಯಲ್ಲಿ ಒಂದು ಟಗರಿನಮರಿ ಜನಿಸಿ 5 ವಾರವಾಗಿದೆಯೆಂದೂ ಶರೀರವು ತಾಯಿಯಂತೆಯೂ ತಲೆ ಮತ್ತು ಕಾಲುಗಳು ಮಾತ್ರ ಟಗರಿನಂತೆಯೂ ಇರುವುದೆಂದೂ ಟೈಂಸ್ ಪತ್ರಿಕೆಗೆ ಒಬ್ಬ ವಿಲೇಖಕನು ಬರೆದಿರುತ್ತಾನೆ.

ಇಸ್ಲಾಂ ಮತಕ್ಕೆ ಕಷ್ಟಕಾಲಪ್ರಾಪ್ತವಾಗಿದೆ ಎಂದು ಆಂಗ್ಲಪತ್ರಿಕೆಗಳು ಇಸ್ಲಾಂಮತವನ್ನು ಅಪಹಾಸ್ಯಮಾಡುತ್ತಿರುವುವಲ್ಲದೆ ತಪ್ಪುಸಂಗತಿಗಳನ್ನು ಬರೆಯುತ್ತಿವೆಯೆಂದೂ, ಇಸ್ಲಾಂಮತಪ್ರತಿಷ್ಠೆಯನ್ನು ಕಾಪಾಡಿಕೊಂಡು ಬರಲು ಎಷ್ಟು ಸ್ವಾರ್ಥತ್ಯಾಗವನ್ನಾದರೂ ಮಾಡಬೇಕಾದುದು ಪ್ರತಿಯೊಬ್ಬ ಮಹಮ್ಮದೀಯನ ಕರ್ತವ್ಯವಾಗಿರುತ್ತದೆಂದೂ ಇಮಾಂ ಕ್ವಾಜಾನಾಜನು ಅಹಮದ್‌ರವರು ಬಕರೀದು ಹಬ್ಬದ ದಿವಸ ಉಪನ್ಯಾಸಮಾಡುವಾಗ್ಗೆ ತಿಳಿಸಿದರು.

ಸ್ಪೇನ್‌ರಾಜ್ಯದ ರಾಣಿಯವರು ತಮ್ಮ ಇಬ್ಬರು ಕುವರಿಯರೊಡನೆ ಬ್ರಿಟಿಷ್ ಸಾಮ್ರಾಜ್ಯ ಮಹಾವಸ್ತು ಪ್ರದರ್ಶನವನ್ನು ನೋಡಲು ಹೋಗಿದ್ದು ಭಾರತದೇಶ ವಸ್ತುಪ್ರದರ್ಶನಗಳ ಮಂದಿರದಲ್ಲಿ ಬಹಳ ಹೊತ್ತಿನವರೆಗಿದ್ದು ಗಂಧದ ಮತ್ತು ದಂತದ ಕೆತ್ತನೆಯ ಕೆಲಸಗಳನ್ನು ನೋಡಿ ಆಶ್ಚರ್ಯಪಟ್ಟು ದಂತದ ಲಕ್ಷ್ಮೀವಿಗ್ರಹವನ್ನು ಕೊಂಡುಕೊಂಡರು. ಕಾಗದವನ್ನು ಹರಿಯುವ ದಂತದ ಚಾಕೂವೂ ಕಂಠಾಭರಣಗಳೂ ಅವರಿಗೂ ಅವರ ಅಮಕ್ಕಳಿಗೂ ಜ್ಞಾಪನಾರ್ಥವಾಗಿ ಒಪ್ಪಿಸಲ್ಪಟ್ಟುವು.

ಲಂಡನ್ ಹೈಕೋರ್ಟಿನಲ್ಲಿ ನಡೆದ ಡಾಯರ್-ಶಂಕರನಾಯರ್‌ರವರ ವಿವಾದದ ವಿಷಯವನ್ನು ಗಮನಿಸಿ 1920 ನೆಯ ವರ್ಷದಲ್ಲಿ ಪ್ರಭುತ್ವದವರು ಅಸಂಪೂರ್ಣವಾಗಿ ವಿಚಾರಿಸಿ ಡೈಯರ್‌ಸೇನಾನಿಯು ದೋಷಿಯೆಂದು ಮಾಡಿರುವ ತೀರ್ಮಾನವನ್ನು ರದ್ದುಪಡಿಸಬೇಕೆಂದು ಸಾರ್ವಭೌಮರವರನ್ನು ಪ್ರಾರ್ಥಿಸಿಕೊಳ್ಳಲು ಪಾರ್ಲಿಮೆಂಟ್ ಸಭೆಯಲ್ಲಿ ಉಪಪಾದಿಸುವುದಕ್ಕಾಗಿ ಸರ್ ಚಾರ್ಲ್ಸ್‌ಯೇಟ್‌ರವರು ಕೊಟ್ಟಿರುವ ನೋಟೀಸು ಕಾಮನ್ಸ್‌ಸಭಾಕಾರ್ಯಕ್ರಮಪಟ್ಟಿಯಲ್ಲಿ ಸೇರಿಸಲ್ಪಡುವುದಾಗಿರುವುದು.

ಮೇಡ್ರಿಡ್ ನಗರದಲ್ಲಿರುವ ಹೊಗೇಸೊಪ್ಪಿನ ಕಾರ್ಖಾನೆಯೊಂದರಲ್ಲಿ ಕೆಲಸಮಾಡುತ್ತಿರುವ 4,000 ಮಂದಿ ಸ್ತ್ರೀಯರು ಒಗ್ಗಟ್ಟಾಗಿ, ತಮಗೆ ಸಂಬಳವನ್ನು ಹೆಚ್ಚಿಸಿದಲ್ಲದೆ ಕೆಲಸಕ್ಕೆ ಬರುವುದಿಲ್ಲವೆಂದು ಹಟಹಿಡಿದು ನಿಂತುಬಿಟ್ಟರು. ಈ ರೀತಿ ಹೆಚ್ಚಿಗೆ ದರವನ್ನು ಕೇಳುವುದು ಅನ್ಯಾಯವೆಂದು ಭಾವಿಸಿದ ಕಾರ್ಖಾನೆಯ ಯಜಮಾನರು, ಈ ಸ್ತ್ರೀಯರಿಗೆ ಬುದ್ಧಿಗಲಿಸಬೇಕೆಂದು 3 ತಿಂಗಳಕಾಲ ಕಾರ್ಖಾನೆಯನ್ನು ಮುಚ್ಚಿರುವುದಾಗಿ ತಿಳಿಸಿದರು. ಈಗ ಇರುವ ಜೀವನಕ್ಕೂ ಕೊರತೆಯಾಯಿತಲ್ಲಾ ಎಂದು ಆ ಸ್ತ್ರೀಯರು ವ್ಯಥೆಪಡುತ್ತಿರುವರು.

22,50,000 ರೂ. ಗಳನ್ನು ಕೊಟ್ಟು ಒಂದು ಮುತ್ತಿನ ಕಂಠಹಾರವನ್ನು ಕೊಂಡುಕೊಂಡಿರುವ ಅಮೇರಿಕೆಯ ಶ್ರೀಮಂತನು 45,00,000 ರೂಪಾಯಿಗಳನ್ನು ಕೊಟ್ಟು ಒಂದು ವಜ್ರವನ್ನು ಕೊಂಡುಕೊಳ್ಳಬೇಕೆಂದಿರುವನು. ಈ ವಜ್ರವು ರಷ್ಯಾಚಕ್ರವರ್ತಿಯ ವಶವಾಗಿದ್ದು ಆತನಿಂದ ಯಾರಿಗೊ ಬಹುಮಾನಿಸಲ್ಪಟ್ಟಿದ್ದಿತು. ಅಲ್ಲಿಂದ 120000 ರೂ. ಗಳಿಗೆ ಸುಜನ್ನೆಜುಲ್ಲೀರ್ ಎಂಬಾತನಲ್ಲಿ ಅಡುವಿಡಲ್ಪಟ್ಟಿರುವುದು. ಈ ವಜ್ರವು 43 ಕ್ಯಾರೆಟ್ಟುಗಳ ತೂಕವಿರುವುದು ಮತ್ತು ರಷ್ಯಾ ಚಕ್ರವರ್ತಿಯ ವಶವಾಗುವುದಕ್ಕೆ ಎಷ್ಟೋ ಶತಮಾನಗಳ ಹಿಂದೆ ಬುದ್ಧದೇವರ ವಿಗ್ರಹಕ್ಕೆ ಅಲಂಕರಿಸಲ್ಪಟ್ಟಿದ್ದುದಾಗಿ ಭಾವಿಸಲ್ಪಟ್ಟಿರುತ್ತದೆ.

ಪಾರಿಯತುನಿಬಂಧನೆಯ ಪ್ರಕಾರ ಭೌತಿಕಾಧ್ಯಾತ್ಮಿಕ ಅಧಿಕಾರವು ಕಲಿಫರಿಗೇ ಇರಬೇಕೆಂಬುದು ಕೆಲವರ ಆಶಯವಾಗಿರುತ್ತದೆ. ಯಾವುದೋ ಒಂದು ಕುಟುಂಬದವರನ್ನೇ ಆ ಪದವಿಗೆ ತರಬೇಕೆಂಬುದಾಗಿದ್ದ ಪದ್ಧತಿಯನ್ನು ನೀವು ತಪ್ಪಿಸಿದ ವಿಚಾರದಲ್ಲಿ ಯಾವ ಆಕ್ಷೇಪವೂ ಇಲ್ಲವು, ಆದರೆ ಕಲೀಫನ ಪದವಿಯನ್ನೇ ನೀವು ತಪ್ಪಿಸಿಬಿಟ್ಟಿರುವುದರಿಂದ ಮಹಮ್ಮದೀಯ ಪ್ರಪಂಚದ ಸ್ಥೈರ್ಯವು ಬಹಳಮಟ್ಟಿಗೆ ಕುಗ್ಗಿಹೋಗಿರುವುದಲ್ಲದೆ ತುರ್ಕಿಪ್ರಭುತ್ವಕ್ಕೂ ಕೂಡ ಬಹಳ ಹಾನಿಯಾಗದೆ ತಪ್ಪದು. ಅದುಕಾರಣ ಪುನಃ ನಂಬುಗೆಯನ್ನು ಹುಟ್ಟಿಸುವಂತಹ ವರ್ತಮಾನವನ್ನು ತಿಳಿಸಬೇಕಾಗಿ ಕೋರುತ್ತೇವೆ ಎಂದು ಡಾಕ್ಟರು ಅನ್ಸಾರಿಯವರು ಅಂಗೋರಾ ರಾಜ್ಯಾಂಗ ಸಭಾಧ್ಯಕ್ಷರಾದ ಕೇಮಲ್‌ಪಾಷಾಯವರಿಗೆ ತಂತ್ರಿವಾರ್ತೆಯಿಂದ ತಿಳಿಸಿರುವರು.

ಅದ್ಭುತವೂ ಅಂತ್ಯಕಾರಕವೂ ಆದ ಒಂದು ಬಾಲಚುಕ್ಕಿಯು ಇಷ್ಟರಲ್ಲೇ ಕಾಣಿಸಿಕೊಳ್ಳುವುದೆಂದೂ, ಇದು ಶರಿಮುಂದಾಗಿ ಒಂದು ಸೆಕೆಂಡಿಗೆ 50 ಮೈಲಿಗಳಿಗೆ ಮೇಲ್ಪಟ್ಟು ವೇಗವಾಗಿ ಚಲಿಸುವುದೆಂದೂ, ಆ ಕಾಲದಲ್ಲಿ ನಮ್ಮ ಭೂಗೋಳವು ಅದರ ಮುಖಕ್ಕೆ ಇದಿರಾಗಿ ಸಿಕ್ಕಿದಲ್ಲಿ ಅದರ ಹಾಹಕದ ರಭಸದಿಂದ ಕ್ಷಣಾರ್ಧದಲ್ಲಿ ನುಚ್ಚುನೂರಾಗುವುದೆಂದೂ ಅದು ಈ ಭೂಮಂಡಲವನ್ನು ಸಮೀಪಿಸುತ ಬಂದಹಾಗೆಲ್ಲಾ, ಅದರ

ಆವಾಸಿಕೊಂಡಿರುವ ಒಂದು ವಿಷವಾಯುವು ಭೂಮಿಯನ್ನು ವ್ಯಾಪಿಸುವುದರಿಂದ ಪ್ರಾಣಿಕೋಟಿಗಳು ಸಾಯುವವೆಂದೂ ಅಥವಾ ಆ ಚುಕ್ಕಿಯು ಬಾಲಮುಂದಾಗಿಬಂದು ಭೂಮಂಡಲವನ್ನು ತಾಕುವುದಾದರೆ ಪ್ರಾಣನಾಶಕರವಾದ ಅನಾಹುತವು ಆಗುವುದಲ್ಲವೆಂದೂ ಪಾಶ್ಚಾತ್ಯ ಖಗೋಳಶಾಸ್ತ್ರಜ್ಞರು ಪರಿಶೋಧಿಸಿ ಹೇಳಿರುತ್ತಾರೆ. ಇವರ ಭವಿಷ್ಯದ ಫಲಿತಾಂಶವು ಮುಂದೆ ಗೊತ್ತಾಗಬೇಕಾಗಿದೆ.

ಅಮೇರಿಕೆಯ ಚಿಕಾಗೋ ಪಟ್ಟಣದಿಂದ ಹೊರಟ ಒಂದು ಎಕ್ಸ್‌ಪ್ರೆಸ್ ರೈಲುಬಂಡಿಯ ಎಂಜಿನನಲ್ಲಿ ಇಬ್ಬರು ಕಳ್ಳರು ಅವಿತುಕೊಂಡಿದ್ದು, ಬಂಡಿಯು ತಮ್ಮ ಸಂಕೇತಸ್ಥಳಕ್ಕೆ ಬರುತ್ತಲೇ ಹೊರಬಂದು, ಡ್ರೈವರನ್ನು ಪಿಸ್ತೂಲಿನಿಂದ ಹೆದರಿಸಿ, ಬಂಡಿಯನ್ನು ನಿಲ್ಲಿಸಿ ಟಪ್ಪಾಲ್ ಗಾಡಿಯಲ್ಲಿದ್ದ 70 ಮಂದಿ ಪೋಸ್ಟಲ್ ಗುಮಾಸ್ತರನ್ನೂ, ಆಯುಧಪಾಣಿಗಳಾದ ಸಿಪಾಯಿಗಳನ್ನೂ, ತಮಗಾಗಿ ಕಾದಿದ್ದ ಕಳ್ಳರ ಸಹಾಯದಿಂದ ಮುತ್ತಿ ವಿಷವಾಯು ತುಂಬಿದ ಸಿಡಿಮದ್ದುಗಳನ್ನು ಒಳಗೆ ಎಸೆದು ಅವರೆಲ್ಲರೂ ಹೊರಗೆಬರುವಂತೆ ಮಾಡಿದರು. ಅನಂತರ ವಿಷವಾಯುವಿನ ಅಪಾಯವಿಲ್ಲದಂತೆ ಮುಖದ ಗೌಸನ್ನು ಗುಮಾಸ್ತನೊಬ್ಬನಿಗೆ ಕೊಟ್ಟು ಅವನಿಂದ ಗಾಡಿಯಲ್ಲಿದ್ದ ಇನಷ್ಯೂರ್ಡ್ ಪದಾರ್ಥಗಳನ್ನು ತೆಗೆಸಿಕೊಂಡು ಮೋಟಾರು ಗಾಡಿಗಳಲ್ಲಿ ತುಂಬಿಕೊಂಡು ಪಲಾಯನರಾದರು. ಸೂರೆಮಾಡಿದ ವಸ್ತುಗಳ ಒಟ್ಟು ಬೆಲೆ 69 ಸಾವಿರ ಸವರನ್ನು. ಇದರ ಪೈಕಿ 29 ಸಾವಿರ ಸವರನ್ನುಗಳ ಕರೆನ್ಸಿ ನೋಟುಗಳಿದ್ದವು. ಕಳ್ಳರು ಮೋಟಾರು ಗಾಡಿಗಳನ್ನು ಕಳುವುಮಾಡಿ ತಂದಿದ್ದರು. ಇವುಗಳಿಂದಲೂ ಅದೇರೀತಿ ಕಳ್ಳತನದಲ್ಲಿ ಹಡೆ ದೋಣಿಗಳಲ್ಲೂ ತಪ್ಪಿಸಿಕೊಂಡು, ಕಡೆಯಲ್ಲಿ ವಿಮಾನಗಳ ಮೂಲಕ ದೂರದೇಶಕ್ಕೆ ಹೋಗಿರುತ್ತಾರೆ. ಈಚೆಗೆ ಪೋಲೀಸಿನವರು ಗುಂಡಿನ ಪೆಟ್ಟುತಿಂದ ಒಬ್ಬನನ್ನೂ ಅವನ ಜತೆಯಲ್ಲಿದ್ದ ಕೆಲವರನ್ನೂ ಅನುಮಾನದ ಮೇಲೆ ದಸ್ತಗಿರಿ ಮಾಡಿರುವರು. ಈ ಕಳ್ಳರು ಪೆನ್ಷನ್ ಮೇಲೆ ನಿವೃತ್ತರಾದ ಸಿಪಾಯಿಗಳಿರಬಹುದೆಂದು ಅನುಮಾನ ಹುಟ್ಟಿರುವುದು.

ಜೀವರಕ್ಷಾಜ್ಞಾನಪ್ರಚಾರಕ ಗೋರಕ್ಷಣಸಂಘ.

ದಯೆಯೇ ದೇವರು ! ದಯೆವುಳ್ಳವರ ಹೃದಯವೇ ದೇವಾಲಯ !! ದಯೆಯನ್ನರಿತವರೇ ಭಕ್ತರು !!!

“ ಮಹನೀಯರುಗಳಾದ ಸ್ತ್ರೀಪುರುಷರಲ್ಲಿ ವಿಜ್ಞಾಪಿಸಿಕೊಳ್ಳುವದೇನೆಂದರೆ,—

ಈಗ 2 ವರುಷಗಳಿಂದ ಬೆಂಗಳೂರುಸಿಟಿಯಲ್ಲಿ ‘ ಶ್ರೀಸದ್ಗುರುಮಹಾದೇವ ಜೀವರಕ್ಷಾಜ್ಞಾನಪ್ರಚಾರಕ ಗೋರಕ್ಷಣ ಸಂಘ ’ ಎಂಬ ಹೆಸರಿನಿಂದ ಪರಮಗುರುಸೇವಕಳಾದ ಗೋರಾಮಮ್ಮ ಎಂಬ ಒಬ್ಬ ಯೋಗಿನಿಯು “ ಅಹಿಂಸಾಪರಮೋಧರ್ಮಃ ” ಎಂಬ ವ್ರತಕ್ಕೆ ಮಹರ್ಷಿಗಳ ಆಜ್ಞಾನುಸಾರವಾಗಿ ತನ್ನ ಜೀವಿತಕಾಲವೆಲ್ಲವನ್ನೂ ಧಾರೆಯೆರೆಯುತ್ತಾ ಮೇಲಿನ ಸಂಘಕ್ಕಾಗಿ ಹುಲ್ಲು ನೀರಿಗೆ ಅನುಕೂಲವಾಗಿಯೂ ಈ ಊರಿಗೆ ಸಮೀಪವಾಗಿಯೂ ಇರುವ ಒಳ್ಳೇ ಪ್ರದೇಶವನ್ನು ನೋಡಿ, 1500 ರೂಪಾಯಿಗಳಿಗೆ ಮಾತನಾಡಿ, ಅದಕ್ಕಾಗಿ ಬಹಳ ಶ್ರಮಪಟ್ಟು, 500 ರೂಪಾಯಿಗಳನ್ನು ಅಡ್ವಾನ್ಸು ಕೊಟ್ಟು ಸ್ವಾಧೀನದಲ್ಲಿಟ್ಟುಕೊಂಡು ಇರುವುದು ತಮ್ಮೆಲ್ಲರಿಗೂ ಗೊತ್ತಾಗಿರುತ್ತೆಯಷ್ಟೆ. ಆದರೆ, ಲೋಕದಲ್ಲಿ ಜನರು ನಾನಾವಿಧವಾಗಿ ಮಾಡುವ ದುರಾಕ್ಷೇಪಣೆಗಳನ್ನು ಪರಿಹರಿಸುವುದಕ್ಕೋಸ್ಕರವಾಗಿ ಉದ್ದೇಶಪಟ್ಟ ಕಾರ್ಯವನ್ನು ಸಫಲವಾಗಿ ಜಾಗ್ರತೆಯಲ್ಲಿ ಆಚರಣೆಗೆ ತರಬೇಕೆಂಬ ಉದ್ದೇಶದಿಂದ 1924ನೇ ಇಸವಿ ಏಪ್ರೆಲ್ 17 ನೇ ತಾರೀಖಿನಲ್ಲಿ ಶ್ರೀಯುತ ವೆಂಕಟಮುನಿಸ್ವಪ್ಪಶೆಟ್ಟರವರ ಧರ್ಮಛತ್ರದಲ್ಲಿ ಜನರಲ್‌ಮೀಟಿಂಗು ನಡಿಸಿ ಮುಂದಿನವರ್ಷಕ್ಕಾಗಿ “ ಎಕ್ಸಿಕ್ಯೂಟಿವ್‌ಕೌನ್ಸಿಲಿಗೆ ” ಸರಿಯಾದ ಮೆಂಬರುಗಳನ್ನು ಚುನಾಯಿಸಿ ರೂಲ್ಸುಗಳನ್ನು ಏರ್ಪಡಿಸಿ ರಿಜಿಸ್ಟರು ಮಾಡಿಸಲಾಯಿತು.

ಶ್ಲೋ॥ ಪ್ರಾಣದಾನಾತ್ಪರಂದಾನಂ ಅನ್ನದಾನಮತಃಪರಂ |
ಅನ್ನೇನ ಕ್ಷಣಿಕಾತೃಪ್ತಿಃ ಪ್ರಾಣದಾನಾನ್ನಿರಂತರಂ ||

ತಾ॥ ಅನ್ನದಾನಕ್ಕಿಂತಲೂ ಪ್ರಾಣದಾನವೇ ಶ್ರೇಷ್ಠವು. ಹ್ಯಾಗಂದರೆ, ಇತರರಿಂದ ಕೊಲ್ಲಲ್ಪಡುವ ಯಾವ ಪ್ರಾಣಿಯನ್ನಾದರೂ ಉಳಿಸಿದರೆ ಅದು ತನ್ನ ಜೀವಿತಕಾಲದವರೆಗೂ ಸುಖವಾಗಿದ್ದು ಪ್ರಾಣಬಿಡುವುದು. ಅನ್ನವಾದರೋ ಆ ಕಾಲದ ಕ್ಷುದ್ಬಾಧೆಯನ್ನು ಪರಿಹರಿಸಿ ಜೀರ್ಣಿಸಿದನಂತರ ಪುನಃ ಅನ್ನವನ್ನು ಬಯಸುವುದು. ಮತ್ತು

ಶ್ಲೋ॥ ನಾಸ್ತಿನಾಸ್ತಿಪರೋಧರ್ಮೋ ಲೋಕೇ ಗೋರಕ್ಷಣಾದೃತೇ | ಸಂಸಾರಸಾಗರೋತ್ತೀರ್ಣೋಪಾಯಅನ್ಯಃಕಲೌನೃಣಾಂ ||

ತಾ॥ ಮಾನವಜನ್ಮವನ್ನು ಪಡೆದವರು ಯಾರು ತಮ್ಮ ಮನೆಗಳಲ್ಲಿ ಒಂದು ಆಕಳನ್ನಾದರೂ ಇಟ್ಟುಕೊಂಡು ಕಾಪಾಡುತ್ತಾ ಅದರ ಸೇವಾದಿಗಳನ್ನು ಮಾಡುವದಿಲ್ಲವೋ ಅವರುಗಳಿಗೆ ಪರಮಾತ್ಮಜ್ಞಾನವೆಂದಿಗೂ ಉಂಟಾಗುವುದಿಲ್ಲ. ಮತ್ತು ಈ ಕಲಿಯುಗದಲ್ಲಿ ಘೋರಸಂಸಾರವನ್ನು ದಾಂಟಬೇಕಾಗಿದ್ದರೆ ಗೋರಕ್ಷಣೆಯಿಂದಲ್ಲದೆ ಬೇರೆ ಮಾರ್ಗಗಳು ಇಲ್ಲವೆಂದು ಪರಾಶರ, ಮಾರ್ಕಂಡೇಯ, ದತ್ತಾತ್ರೇಯರೇ ಮುಂತಾದ ಮಹಾತ್ಮರುಗಳು ಹೇಳಿರುತ್ತಾರಾದ್ದರಿಂದ, ‘ ಕಲ್ಯಾಣಪುರ ’ ಎಂಬ ಹೆಸರುಳ್ಳ ಈ ಬೆಂಗಳೂರಲ್ಲಿ ಒಂದು ಗೋರಕ್ಷಣಶಾಲೆಯಿಲ್ಲದಿರುವದು ಬಹಳ ಶೋಚನೀಯವಾಗಿರುತ್ತೆ. ಒಂದುವೇಳೆ ಇದ್ದರೂ ಕಾರ್ಯಭಾಗವಿಲ್ಲದೆ ಬರೇ ಮನಶ್ಶಾಂತಿಯಂ ಮಾಡುವುದು ಪ್ರಯೋಜನವಿಲ್ಲವಾದುದರಿಂದ ದಯಾಳುಗಳಾದ ಸ್ತ್ರೀಪುರುಷರೆಲ್ಲರೂ ಈ ಕೆಳಗಿನ ಉದ್ದೇಶಗಳಿಗೆ ಉದಾರಬುದ್ಧಿಯಿಂದ ದ್ರವ್ಯಸಹಾಯವನ್ನು ಮಾಡಿ ಇಹಪರಗಳಲ್ಲಿ ಸುಖವನ್ನು ಹೊಂದುವರೆಂದು ನಂಬಿದ್ದೇವೆ.

ತತ್ಕಾಲಕ್ಕೆ 10,000 ರೂಪಾಯಿಗಳು ಬೇಕಾಗಿರುತ್ತೆ.

ವಿಷಯಗಳು.—(1) ಅನಾಥ ಗೋವುಗಳನ್ನೂ ಮತ್ತು ಹೊರಗೆ ಅಲ್ಲಲ್ಲಿ ಇಟ್ಟಿರುವ ಜಾನುವಾರುಗಳೆಲ್ಲವನ್ನೂ ಒಂದು ಕಡೆ ಸೇರಿಸಿ ಅವುಗಳಿಗೆ ಮೇವಿಗೂ ನೀರಿಗೂ ಅನುಕೂಲಪಡಿಸುವುದು. (2) ಅವುಗಳಿಗೂ ಮತ್ತು ಅವುಗಳನ್ನು ಕಾಪಾಡುವ ಗೋಪಾಲಕರಿಗೂ ಸಹ ವಾಸವಾಗಿರಲು ತಕ್ಕ ಕಟ್ಟಡಗಳನ್ನು ಕಟ್ಟಿಸುವುದು. (3) ಜಮೀನಿನ ಸುತ್ತಲೂ ತಂತಿ ಹಾಕಿ ಬೇಲಿಯನ್ನು ಭದ್ರಪಡಿಸುವುದು ಮತ್ತು (4) ಬೆಂಗಳೂರಿನಲ್ಲಿ ಸಂಘದ ಆಫೀಸಿಗೂ, ವಾಚಕಶಾಲೆಗೂ ಮತ್ತು ಪುಸ್ತಕಭಾಂಡಾಗಾರಕ್ಕೂ ಒಂದು ಚಿಕ್ಕ ಕಟ್ಟಡವನ್ನು ಕಟ್ಟಿಸುವುದು. (5) ಉಪನ್ಯಾಸಕರನ್ನು ಏರ್ಪಡಿಸುವದಕ್ಕೂ ಸಹಾ ದ್ರವ್ಯಸಹಾಯ ಬೇಕಾಗುತ್ತೆ.

ಬಿ.ಎಸ್. ವಿಜಯದೇವರವರು, ಎಂ. ಚಂಗಯ್ಯಶೆಟ್ಟರವರು,
ಎಂ.ಎ.ಬಾರ್-ಅಟ್-ಲಾ, ಬಿ.ಎ., (ರಿಟೈರ್ಡ್ ಡೆಪ್ಯುಟಿಕಮಿಷನರ್)
ವೈಸ್‌ಪ್ರೆಸಿಡೆಂಟರು. ಪ್ರೆಸಿಡೆಂಟರು.

ಷರಾ-ಸಂಘದ ನಿಬಂಧನೆಗಳು ಗೋಸ್ತೋತ್ರ ಮುಂತಾದ ಇತರಪುಸ್ತಕಗಳು ಪತ್ರಿಕೆಗಳು ಬೇಕಾಗಿದ್ದರೂ ಮತ್ತು ಇತರ ಸಂಗತಿಗಳನ್ನೂ ತಿಳಿಯಲಪೇಕ್ಷೆಯುಳ್ಳವರು ಸಂಘದ ಸೆಕ್ರಿಟರಿಯವರಿಗೆ ಒಂದು ಆಣೆ ಸ್ಟಾಂಪು ಇಟ್ಟು ಬರೆದುಕೊಳ್ಳಬಹುದು. ಗೋಮಹಿಮೆಯ ವಿಚಾರದಲ್ಲಿ ಉತ್ತಮವಾದ ಲೇಖನಗಳನ್ನು ಕಳುಹಿಸಿದವರಿಗೆ ಬಹುಮಾನಗಳು ದೊರೆಯುತ್ತೆ. ಮಿರಾನು ಕನ್ನಡದಲ್ಲಿ ಅಥವಾ ತೆಲಿಗಿನಲ್ಲಿ ಪ್ರಿಂಟು ಆಗಿದ್ದರೆ ಅದರ ಅಡ್ರೆಸ್ಸು ದಯವಿಟ್ಟು ತಿಳಿಸಿ, ಅಥವಾ ಯಾರಲ್ಲಾದರೂ ಪ್ರಿಂಟು ಇಲ್ಲದೆ ಇಟ್ಟುಕೊಂಡಿದ್ದಲ್ಲಿ ಕಳುಹಿಸಿಕೊಟ್ಟರೆ ಪ್ರಿಂಟುಮಾಡುತ್ತೇವೆ. ಈ ಸಂಘದ ಧರ್ಮದ ಡಬ್ಬಿಗಳು ಇಟ್ಟುಕೊಂಡಿರುವವರಲ್ಲಿ ಭರ್ತಿ ಆಗಿದ್ದರೆ ಆ ನೊಬಲಗನ್ನು ಸಂಘಕ್ಕೆ ಮನಿಯಾರ್ಡರು ಮಾಡಬೇಕೆಂದು ಕೋರುತ್ತೇನೆ.

ಬಿ. ಪಿ. ಕೃಷ್ಣಯ್ಯ, ಕಾರ್ಯದರ್ಶಿ,
ನಂ. 44, ಆರ್ಕಾಟ್ ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

THE ABSOLUTE NECESSITY FOR 2 MUNICIPAL COUNCILLORS FOR THE VI DIVISION.

Ever since the inception of the Municipality there has been only one Municipal Councillor for the VI Division and that the invariable continuance of one councillor till of late years is justifiable to a very great extent in view of the fact that the area was limited and the number of voters was not so large as to necessiate the creation of another councillor for this Division. It is now a happy augury of the times that the spirit of the times has considerably changed and one cannot shut his eyes to the fact that people especially the voters are now keenly alive to the affairs partaining to the Municipality and there is very likelihood of the voters evincing much interest in matters of public importance with the accelaration of the pace of times.

Now referring to the Division in particular, it can be said to its credit that it has extended in its area admirably due to the new inclusion to its existing one of Visweswarapuram extension. What was once a more meadow has now been transformed into a pupulous extension with innumerable decent buildings all over the extension. The VI Division comprises Mission Road, Lal-Bagh Road, Doddamavally, Chikkamavally, Upparahally, Visweswarapuram, Koramarapalyam, Kalasipalyam, Ammachowdripalyam, Bamboo Bazaar etc. The area is now extended doubly with almost a mile and a half from one corner to another corner of the Division and the number of voters is on the increase and is bound to increase by leaps and bounds consequent on the growth of population.

So great, amazing and rapid is the development of the Division that one cannot but feel that the Division in question richly deserves to have two councillors. When a comparison is instituted between the VI and IV Division which has the honour of being represented by two Councillors, the former is not found favourable with the latter. The VI Division has now become unwieldy and tends to become so all the more in course of time and as such it may not be possible for one Municipal Councillor to visit the various places of the Division for the purpose of inspection if he has an inclination to do so.

In the light of the cremulative circumstances referred to above, it is not too much, I trust, to request the Government to give this matter regarding the nomination of another councillor for election to the Municipal Council their earnest and sympathetic consideration immediately. Even now it is not too late for the Government to issue orders accordingly although the Municipal General election is fast approaching viz September next-nearly two months before the election is too come off. Fortunate, indeed, will be the VI Division if it is favoured with one more Councillor to represent same in the Municipal Council.

B. L. BYANNA.

ದಾವಣಗೆರೆ ವೀರಶೈವ ವಿದ್ಯಾವರ್ಧಕ ಫಂಡು ಸಂಘ.

1923-1924ನೇ ಸಾಲಿನ ಆಡಾವ್ ರಿಪೋರ್ಟು, ಆದಾಯದ ಜಮಾ. ರೂ. 3722-12-8 ವ್ಯಾಜು ಮತ್ತು ಡಿವಿಡೆಂಡು ಮೂಲಕ 4133-3-3 ಪಕ್ಕಿ ಫಂಡು ಮೂಲಕ 498-0-0 ಲಗ್ನಕಾರ್ಯದ ಫಂಡು ಮೂಲಕ 10-8-0 ರೀಫಂಡು ಮೂಲಕ 8362-7-11 ಅಂತು ಉತ್ಪತ್ತಿಯು. ಖರ್ಚು ಹಣ 475-9-9 ಆಫೀಸ್ ಖರ್ಚು, ಸಂಬಳ ವಗ್ಯೆರೆ. 555-13-6 ಮೈಸೂರು ಲೋವರ್‌ಸೆಕೆಂಡರಿ ಪರೀಕ್ಷೆಗೆ ಬಂದ ವಿದ್ಯಾರ್ಥಿಗಳ ಬೋರ್ಡಿಂಗು ಖರ್ಚು, 610ಕ್ಕೆ 605-0-9 ಶ್ರೀ ವಿರಕ್ತಮಠದ ಖರ್ಚು, ಕಟ್ಟಡದ ಖರ್ಚು ಸಹಾ, 850-0-9 ಬೋರ್ಡಿಂಗಿಗಾಗಿ ಸ್ಕಾಲರಷಿಪ್ಪು ವಿದ್ಯಾರ್ಥಿಗಳು 19ಕ್ಕೆ ಕೊಟ್ಟದ್ದು. 88-0-0 ಎ. ವಿ. ಸ್ಕೂಲ್ ವಿದ್ಯಾರ್ಥಿಗಳು 6ಕ್ಕೆ ಸ್ಕಾಲರಷಿಪು ಕೊಟ್ಟದ್ದು 2102-0-0 ಲಾ. ಕಾಲೇಜು, ಕಾಲೇಜು, ಮತ್ತು ಹೈಸ್ಕೂಲುಗಳ ವಿದ್ಯಾರ್ಥಿಗಳು 51ಕ್ಕೆ ಸ್ಕಾಲರ್‌ಷಿಪು ಕೊಟ್ಟದ್ದು, 4632-8-9 ಅಂತೂ ರಿಜರ್ವ್ ಫಂಡು ಜಮ 50200-10-8 ಕಳೆದ ಅಡಾವಿನ ಶಿಲ್ಕು 3729-15-2 ಚಾಲ್ತಿ ಸಾಲಿನ ಉತ್ಪತ್ತಿಯಲ್ಲಿ ಖರ್ಚು ಚಾಶಿಲ್ಕಿ ಸಹಣ 53930-9-10 ಅಂತೂ ಈ ದಿವಸಕ್ಕೆ ಮೂಲಧನ, ಇದರ ತಪಶೀಲ್ ವಗ್ಯೆರೆ ಲೆಖ್ಖವನ್ನು ವಾರ್ಷಿಕರಿಪೋರ್ಟಿನಲ್ಲಿ ನಮೂದಿಸಿದೆ.

ದಾವಣಗೆರೆ,
ತಾ॥ 30-6-1994. } ಆನರರಿ ಪ್ರೆಸಿಡೆಂಟ್.

ಧಾರವಾಡ ಹಾವೇರಿಪೇಟೆ ಮುರುಘಾಮಠದ ಬೋರ್ಡಿಂಗಿನ ಸಹಾಯಕರಾದ ಯಾವತ್ತೂ ಸದ್ಭಕ್ತ ಮಹಾಶಯರಿಗೆ.

ಸದರಿ ಬೋರ್ಡಿಂಗಿನ ಸೆಕ್ರೆಟರಿಗಳವರು ಅತ್ಯಂತ ವಿನಯ ಪೂರ್ವಕವಾಗಿ ಕೇಳಿಕೊಳ್ಳುವದೇನಂದರೆ--ನಮ್ಮ ಈ ಬೋರ್ಡಿಂಗು ಸ್ಥಾಪಿತವಾಗಿ ಇಂದಿಗೆ 8ನೇ ವರ್ಷ ನಡೆಯುತ್ತಾ ಇದೆ. ಈ ಬೋರ್ಡಿಂಗಿನ ಉತ್ಪಾದಕರ ಮುಖ್ಯತತ್ವವೇನಂದರೆ--ಸಮಾಜದಲ್ಲಿ ವಿದ್ಯಾಭಿವೃದ್ಧಿಯು ಮತ್ತು ವೀರಶೈವ ಧರ್ಮದ ನೀತಿಯು ಇವೆರಡೂ ಪುಷ್ಟಸ್ಥಿತಿಗೆ ಬರಬೇಕೆಂದು ಇವರ ಧ್ಯೇಯವಿರುತ್ತದೆ. ಹೀಗಿದ್ದ ಈವತ್ತಿನವರೆಗೆ ಕಾರ್ಯವು ಮಹಾಸ್ವಾಮಿಗಳವರ ಕೃಪೆಯಿಂದಲೂ ತಮ್ಮೆಲ್ಲರ ಸಹಾಯದಿಂದಲೂ ಸುಯಂತ್ರಿತವಾಗಿ ಸಾಗುತ್ತಾ ಬಂದಿರುವದು ಸರ್ವರಿಗೂ ತಿಳಿದ ಸಂಗತಿಯಾಗಿರುವದು. ಈ ವರ್ಷ ಬೋರ್ಡಿಂಗಿನಲ್ಲಿ 112 ಹುಡುಗರು ಇರುತ್ತಿರುವರು. ಹಿಂದಕ್ಕೆ ದೊರೆಯುತ್ತಿದ್ದ ಶ್ರೀ ಶಿರಸಂಗಿ ಫಂಡಿನ ಸಹಾಯವು ಕಳೆದವರ್ಷ ದುಷ್ಕಾಲದ ಮೂಲಕ ನಿಂತುಹೋಗಿರುವದು. ಶ್ರೀ ಮೃತ್ಯುಂಜಯ ಸ್ವಾಮಿಗಳವರ ಪ್ರಕೃತಿಯು ಪ್ರವಾಸದಿಂದ ಅಷ್ಟು ಕ್ಷೇಮವಾಗಿ ಉಳಿದಿರುವದಿಲ್ಲ. ಆದ್ದರಿಂದ ತಾವುಗಳೆಲ್ಲರೂ ತಮ್ಮ ತಮ್ಮ ವರ್ಷಾಶನ ಮತ್ತು ಮಾಸಾಶನ ಹಾಗೂ ಭಿಕ್ಷದರೂಪದಿಂದ ಸಲ್ಲಿಸುತ್ತ ಬಂದ ಸಹಾಯ ನಿಧಿಯನ್ನು ಯಥಾಪ್ರಕಾರವಾಗಿ ಸಲ್ಲಿಸಿ ಬೋರ್ಡಿಂಗಿನ ಕಾರ್ಯವನ್ನು ಸರಳವಾಗಿ ಸಾಗಿಸಬೇಕು. ಪ್ರತಿಯೊಬ್ಬರಲ್ಲಿಗೆ ಸ್ವತಃ ಸ್ವಾಮಿಗಳೇ ಆಗಲಿ ಬೇರೆ ಯವರಾಗಲಿ ಬಂದುನಿಂತು ಬೇಡ ಬೇಕೆಂಬ ಭಾವವನ್ನು ದಯಮಾಡಿ ಇಟ್ಟುಕೊಳ್ಳಬಾರದು. ಕೆಲವು ಮಹನೀಯರು ಒಮ್ಮೆ ವಾಗ್ದಾನಮಾಡಿ ಈ ವರೆಗೆ ಕೈಯನ್ನೇ ಎತ್ತುವದಿಲ್ಲ. ಹೀಗಾದರೆ ಬಡಮಕ್ಕಳ ವಿದ್ಯಾಭ್ಯಾಸವೂ ಧರ್ಮಶಿಕ್ಷಣವೂ ನಿಂತುಹೋಗುವ ಸಂಭವವಿರುವದು. ಆದ್ದರಿಂದ ಹಾಗೆ ಮಾಡದೆ ತಾವುಗಳು ಹಣಸಲ್ಲಿಸುವದಲ್ಲದೆ ತಮ್ಮ ಆಪ್ತ ಬಾಂಧವ ಹಾಗೂ ಸ್ನೇಹಿತರಿಂದಲೂ ಬೋರ್ಡಿಂಗಿನ ಸಹಾಯಕ್ಕೆ ತಕ್ಕ ಸಹಾಯವನ್ನು ಒದಗಿಸಿಕೊಟ್ಟು ಸ್ವಾಮಿಯ ಶ್ರಮಕ್ಕೆ ನೆರವಾಗಿ ಪುಣ್ಯಾಶೀರ್ವಾದಗಳಿಗೆ ಭಾಗಿಗಳಾಗಬೇಕೆಂದು ಬೇಡಿಕೊಳ್ಳುವ ತಮ್ಮ ವಿಧೇಯ,

ಕಾರ್ಯದರ್ಶಿ.
ಬಸಪ್ಪಾ ಮಲ್ಲಪ್ಪಾ ಅಹೆಪ್ಪ.

ಮೈಸೂರು ಸೀಮೆಗೆ ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರ ಆಗಮನ.

ಶ್ರೀಮನ್ಮಹಾ ದಕ್ಷಿಣ ಕಾಶೀ ಸಿಂಹಾಸನಾಧೀಶ ಚವುಡಯ್ಯದಾನಪುರ ಸಂಸ್ಥಾನದ ಪಂಡಿತ, ವೇದತೀರ್ಥ, ಧರ್ಮಭೂಷಣಾದಿ ಪದವೀ ಪ್ರತಿಷ್ಠಿತರಾದ ಶ್ರೀ ಸ್ವಾಮಿ ವಿರುಪಾಕ್ಷ ಒಡಿಯರವರನ್ನು ಮೈಸೂರು ಸೀಮೆ ಗಂಜಾಮುಪಟ್ಟಣದ ಗಂಗಾಮತಸ್ಥರು ತಾ॥ 3-7-24ನೇ ದಿವಸ ಬರಮಾಡಿಕೊಂಡು ತಳಿರುತೋರಣಗಳಿಂದಲೂ ದಿವ್ಯವಾದ ಮಂಟಪಗಳಿಂದಲೂ ಅಲಂಕೃತವಾದ ಬೀದಿಗಳಲ್ಲಿ ಶ್ರೀರಂಗಪಟ್ಟಣದಿಂದ ಗಂಜಾಮುದವರೆಗೆ ಬಹುಸಂಭ್ರಮದಿಂದ ಮೆರವಣಿಗೆಯಿಂದ ಬಿಜಯಂಗೈಸಿಕೊಂಡು ಬಂದು ಕಾವೇರೀ ತೀರದಲ್ಲಿರುವ ವಿಶಾಲವಾದ ಸ್ಥಳದಲ್ಲಿ ಇಳಿಸಿ ತಮ್ಮ ಸೇವಾಸತ್ಕಾರಗಳನ್ನು ನಡಿಸಿದರು. ಬಳಿಕ ಶ್ರೀರಂಗಪಟ್ಟಣ ವ ಗಂಜಾಮು ಸರ್ವಜಾತಿಯ ಜನರು ಶ್ರೀ ಸ್ವಾಮಿಗಳ ಸಮ್ಮುಖದಿಂದ ವೇದಾದಿ ಸಚ್ಛಾಸ್ತ್ರಗಳಿಂದ ಆಧಾರವಾದ ಮಾನವೀ ಜನ್ಮದ ಮುಕ್ತತೆಯ ಬಗ್ಗೆ ಉಪದೇಶಮಾಡಬೇಕೆಂದು ಪ್ರಾರ್ಥಿಸಿಕೊಂಡ ಬಗ್ಗೆ ಈ ತಾ॥ 9 ರಲ್ಲಿ ಶ್ರೀರಂಗಪಟ್ಟಣದ ದರಿಯಾದವಲತ್ ಎಂಬ ಸರಕಾರೀ ಮಹಾಲಿನಲ್ಲಿ ಮಾನವೀ ಧರ್ಮವೆಂಬ ವಿಷಯದಮೇಲೆಯೂ ತಾ॥ 11 ರಲ್ಲಿ ಮನುಷ್ಯನಿಗೆ ಮುಕ್ತಿಸಾಧಕವಾದ ತತ್ವಾರ್ಥ ವಿಷಯದ ಸರ್ವಮಾನವೀ ಪ್ರಾಣಿಯೂ ಉಚ್ಚನೀಚ ಭಾವನೆ ಇಲ್ಲದೆ ವೇದಾದಿ ಸತ್ಯಶಾಸ್ತ್ರಗಳ ಅಧ್ಯಯನ ಮಾಡಿ ಜ್ಞಾನಸಂಪಾದಿಸಿ ಮುಕ್ತಮಾರ್ಗವನ್ನು ಹೊಂದಬೇಕೆಂದು ಅನೇಕ ವೇದಮಂತ್ರಗಳ ಉದಾಹರಣೆಯಿಂದ ಪಂಡಿತಪಾಮರರಿಗೂ ತಿಳಿಯುವಂತೆ ಉಪನ್ಯಾಸವಾಗಿ ಭಾಷಣಮಾಡಿದರು. ವೀರಶೈವ ಧರ್ಮದ ಪುನರುದ್ಧಾರಕ್ಕಾಗಿ ಪರಶಿವನ ಪ್ರೇರಣೆಯಿಂದಲೇ ಬಂದಿರುವ ಈ ಅಗಾಧವಾದ ಮೂರ್ತಿಯು ಅಕಸ್ಮಾತ್ತಾಗಿ ನಮ್ಮ ಪ್ರಾಂತಕ್ಕೆ ದಯಮಾಡಿಸಿರುವದರಿಂದ ನಮ್ಮ ಮೈಸೂರ ಪ್ರಾಂತದ ಯಾವತ್ತು ಜನರು ಇವರ ಸದುಪಯೋಗ ಮಾಡಿಕೊಂಡು ಕೃತಾರ್ಥರಾಗುವರೆಂದು ನಂಬಿದ್ದೇನೆ. ಈ ಮಹಾಸ್ವಾಮಿಯವರು ಇಷ್ಟರಲ್ಲಿಯೇ ಮೈಸೂರಿಗೆ ದಯಮಾಡಿಸುವರೆಂಬ ವದಂತಿಯಿದೆ. ಕಾರಣ ಮೈಸೂರ ಪುರವಾಸಿಗಳಾದ ವೀರಶೈವಾದಿ ಪ್ರಮುಖ ಜನರು ರಾಜಧಾನಿಗೆ ದಯಮಾಡಿಸಿಕೊಂಡು ಈ ಅಮೌಲ್ಯ ವ್ಯಕ್ತಿಯಿಂದ ಸದುಪದೇಶಹೊಂದಿ ನಮ್ಮ ಘನವನ್ನೈದಿದ ಶ್ರೀಮನ್ಮಹಾರಾಜರವರ ಪ್ರಜೆಗಳ ಜನ್ಮಸಿದ್ಧ ಹಕ್ಕುಗಳನ್ನು ವ್ಯಕ್ತಗೊಳಿಸಿ ಮಾನವೀ ಜನ್ಮದ ಸ್ವಾತಂತ್ರ್ಯವನ್ನು ಪಡೆಯುವರೆಂದು ತುಂಬಾನಂಬಿದ್ದೇನೆ.

ತಮ್ಮ
ಸರ್ವಪ್ರಜಾಸೇವಕ, ಸಿದ್ಧಯ್ಯಾ,
ಗಂಜಾಂ ಮುನಸಿಪಲ್ ಕೌನ್ಸಿಲರ್.

ಶ್ರೀಮದ್ವೀರಶೈವ ಧರ್ಮಾರ್ಥ ಸಂಸ್ಕೃತಪಾಠಶಾಲಾ, ಹೊಸಪೇಟೆ.

ಬಳ್ಳಾರಿಜಿಲ್ಲಾ ಹೊಸಪೇಟೆ ಗ್ರಾಮದಲ್ಲಿ ಮೇಲ್ಕಂಡ ಪಾಠಶಾಲೆಯು ಸ್ಥಾಪನವಾಗಿ ಸುಮಾರು 7-8 ತಿಂಗಳಾಗುತ್ತಾ ಬಂದಿರುತ್ತೆ. ಸದರಿ ಪಾಠಶಾಲೆಯು ಕಾರ್ಯಕಾರಿಮಂಡಲಿಯವರು, ಅತ್ಯಂತ ಶ್ರದ್ಧೆಯಿಂದ ಕೆಲಸ ಮಾಡುತ್ತಿರುವರಲ್ಲದೆ ಸ್ವಹಸ್ತ ಪರಹಸ್ತಗಳಿಂದಲೂ ಮಾಸಾಶನರೂಪದಿಂದ ಹಣವನ್ನು ಸಂಗ್ರಹಿಸುತ್ತ ಅಭಿವೃದ್ಧಿಗೆ ತಂದಿರುವರು. ಸದ್ಯಃ ಪಾಠಶಾಲಾದಲ್ಲಿ 10 ಜನ ವಿದ್ಯಾರ್ಥಿಗಳು ಅಭ್ಯಸಿಸುತ್ತಿರುವರು. ಈ ಪಾಠಶಾಲೆಯು ಅವಿಚ್ಛಿನ್ನವಾಗಿ ಜರುಗಲೋಸುಗ ಶ್ರೀ ಜಗದ್ಗುರು ಕೇದಾರಮಹಾಸ್ವಾಮಿಗಳವರು ಎರಡು ಸಾವಿರ ರೂಪಾಯಿಗಳನ್ನು ಕೊಡಲು ಆಶೀರ್ವಚನವನ್ನಿತ್ತು ತಾತ್ಕಾಲಿಕವಾಗಿ ಹಣದ ಬಡ್ಡಿಯನ್ನು ಮಾತ್ರ ದಯಪಾಲಿಸುತ್ತಾ ಬಂದಿರುವರು. ಈಗ 10-12 ದಿವಸಗಳ ಹಿಂದೆ ಶ್ರೀ. ಶಿ. ಅಂದಾನಯ್ಯಾ ಹಮ್ಮಿಗಿ ರಾ. ವೀರಬಸಪ್ಪ ಮಾಗಳ ಈ ಉಭಯರಿಂದ ತಯಾರಿಸಲ್ಪಟ್ಟ ಸಂತಳ್ಳಿ ಬಾಲಸಂಗೀತ ನಾಟಕ ಮಂಡಲಿಯು ನಮ್ಮ ಗ್ರಾಮಕ್ಕೆ ಬಂದು 3-4 ನಾಟಕಗಳನ್ನು ಅಭಿನಯಿಸಿದರು. ಅಷ್ಟರಲ್ಲಿ ಮೇಲ್ಕಂಡ ಪಾಠಶಾಲೆಯ ಕಾರ್ಯಕಾರಿಮಂಡಲಿಯವರು ಒಂದು ನಾಟಕವನ್ನು ಆಡಿ ಬಂದ ಹಣವನ್ನು ಪಾಠಶಾಲೆಯ ಸಹಾಯಾರ್ಥವಾಗಿ ಕೊಡುವವ್ಯವಸ್ಥೆಯನ್ನು ಮಾಡಿದರೆಂದು ಗುರುಭಕ್ತಕೇಸರಿ ಹಮ್ಮಿಗಿ ಇವರಿಗೆ ಸೂಚಿಸಲು ಸದರಿಯವರು ನಾಟಕ ಮಂಡಲಿಯವರಿಗೆ ಪ್ರೋತ್ಸಾಹಿಸಲಾಗಿ ಅವರು ಅತ್ಯಾನಂದದಿಂದ ಒಪ್ಪಿದರು. ನಾಟಕದ ಟಿಕೆಟುಗಳನ್ನು ಸಂಘದವರು 2 ದಿವಸ ಮುಂಚಿತವಾಗಿಯೇ ತಯಾರಿಸಿ ಶ್ರೀ. ಶಿ. ರಾಚಯ್ಯನವರು ದಂಡಾವತಿಮಠ ಹುಬ್ಬಳ್ಳಿ ತಾ. ಚಿತ್ರವಾಡಿಗಿ ಗುಗ್ರಿ ಹುಚ್ಚಪ್ಪನವರು ವಗ್ಯೆರೆಯವರು ಸ್ಥಳ ಪರಸ್ಥಳಗಳಲ್ಲಿಯೂ ಟಿಕೆಟುಗಳನ್ನು ಅತ್ಯಂತ ಶ್ರದ್ಧೆಯಿಂದ ವಿಕ್ರಯಿಸಿದರು. ಕಂಪನಿಯವರು ತಾ॥ 13-6-1924ನೇ ಶುಕ್ರವಾರ ದಿವಸ ಪ್ರಭಾಮಣಿವಿಜಯ ವೆಂಬ ಆಖ್ಯಾನವನ್ನು ಸರ್ವಜನ ಮನೋಲ್ಲಾಸವಾಗುವಂತೆ ಅಭಿನಯಿಸಿದರು ಕಂಪನಿಯಲ್ಲಿರತಕ್ಕ ಚಿಕ್ಕಚಿಕ್ಕಬಾಲಕರು ತಮ್ಮ ತಮ್ಮ ಪಾರ್ಟುಗಳನುಸರಿಸಿ ಯೋಗ್ಯತೆಯಾಗಿ ಕೆಲಸಮಾಡುವದನ್ನು ಕಂಡು ಪಾಠಶಾಲೆಯ ಸಂಘದವರು ನಾಟಕದ ಕಂಪನಿಯವರಿಗೆ ಒಂದು ಸುವರ್ಣ ಪದಕವನ್ನು ಶ್ರೀ ಶಿ. ಪಿ. ಉದ್ದಾನಯ್ಯನವರು ಬಿ.ಎ.ಬಿ.ಎಲ್ ಯವರ ಹಸ್ತದಿಂದ ಕೊಡಿಸಿದರು. ಕಂಪೆನಿಯವರು ವಿದ್ಯಾದಾನಕ್ಕಾಗಿ ಈ ರೀತಿಯಾಗಿ ಧನಸಹಾಯವನ್ನು ಮಾಡಿದ್ದು ಬಹು ಸ್ತುತ್ಯವಾದದ್ದು. ಶ್ರೀ ಜಗದೀಶನು ಈ ಸಂತಳ್ಳಿ ಬಾಲಸಂಗೀತ ನಾಟಕ ಕಂಪನಿಯನ್ನು ದಿನೇ ದಿನೇ ಅಭಿವೃದ್ಧಿಗೆ ತರಲೆಂದು ಹಾರೈಸುತ್ತೇನೆ.

ಓರ್ವ ಪ್ರೇಕ್ಷಕ.

ಅರಕಲಗೂಡು ತಾಲ್ಲೋಕು ಬಸವಾಪಟ್ಟಣ.

ಮಳೆ ಆಗುತ್ತಿದೆ. ಬಿಸಿಲಿನತಾಪಕಮ್ಮಿ. ಊರಿನಲ್ಲಿ ಕಾಲರಾಗಲಾಟೆ ಸುತರಾಂ ಇಲ್ಲವೆಂದು ಹೇಳಬಹುದು. ಹೊದತಿಂಗಳಲ್ಲಿ ನಮ್ಮ ಡಿ॥ ಮೆಡಿಕಲ್ ಆಫೀಸರಾದ ಮೆ॥ ಬಾಲಕೃಷ್ಣಮೊದಲಿಯಾರ್‌ರವರು ಇಲ್ಲಿಗೆ ತಾ॥ ಅಮಲ್‌ದಾರರೊಡನೆ ದಯಮಾಡಿಸಿ ಗ್ರಾಮವನ್ನು ಪರಾಂಬರಿಸಿ ಜನಗಳು ಕಾಯಿಲೆಗೆ ಗುರಿಯಾಗದಂತೆ ಹಿತೋಪದೇಶಗಳನ್ನು ಹೇಳಿ ಪ್ರೈಮರಿ ಸ್ಕೂಲ್ ಮುಂತಾದುವುಗಳನ್ನು ಪರಾಂಬರಿಸಿ ಪ್ರಯಾಣಮಾಡಿದರು. ಕೊಣನೂರಿನಿಂದ ವಾರಕ್ಕೊಂದಾವರ್ತಿ ಡಾಕ್ಟರು ಇಲ್ಲಿಗೆ ಬರುವಂತೆ ಏರ್ಪಡಿಸಿಕೊಡಬೇಕೆಂದು ವಿಲೇಜ್ ಇಂಪ್ರೂವ್‌ಮೆಂಟ್ ಚೇರ್‌ಮೆನ್ ರಾ॥ ಹ॥ ಮಲ್ಲಶೆಟ್ಟರು ಅರಿಕೆಮಾಡಿದ್ದರಮೇಲೆ ತಾಲ್ಲೋಕು ಬೋರ್ಡಿನಿಂದ ಶಿಫಾರ್ಸು ಬರುವಂತೆ ಏರ್ಪಡಿಸಿದ ನಂತರ ಯೋಚಿಸಿ ಮಾಡಿಕೊಡುತ್ತೇವೆ ಎಂದು ಅಪ್ಪಣೆಕೊಟ್ಟರು. ಇಲ್ಲಿನ ಮಿಡ್ಲ್‌ಸ್ಕೂಲಿಗೆ ಹೊಸಸ್ಕೇಲಿನಂತೆ ಬರಬೇಕಾದ ಉಪಾಧ್ಯಾಯರೆಲ್ಲರೂ ಬಂದಂತಾಯಿತು. ಇನ್ನು ಮೇಲಾದರೂ ನಮ್ಮ ಡಿ॥ ಇ॥ ರವರು ಇವರಿಗೆ ಪದೇ ಪದೇ ರಜಾಕೊಡದೆ ವರ್ಗಕ್ಕೆ ಏರ್ಪಡಿಸದೆ ಖಚಿತವಾಗಿ ಕೆಲಸಮಾಡಲು ಉತ್ಸಾಹಕೊಡುತ್ತಾರೆಂದೂನೂ; ವಿದ್ಯಾವಂತರಾಗಿಯೂ, ಚಿಕ್ಕವಯಸ್ಸಿನವರಾಗಿಯೂ, ಕಾರ್ಯದಕ್ಷರಾಗಿಯೂ ಇರುವ ಉಪಾಧ್ಯಾಯರು ಗ್ರಾಮಾಭಿಮಾನದಿಂದ ಕೆಲಸಮಾಡುತ್ತಾರೆಂದೂನೂ ಜನಗಳು ನಂಬಿರುತ್ತಾರೆ. ಇಲ್ಲಿನ ಪ್ರೈಮರಿ ಸ್ಕೂಲಿಗೆ ಹೊಸಲವಾಜಮದಂತೆ ಹೆ॥ ಮಾ॥ ಒಬ್ಬರು ಮಾತ್ರ ಇರುವಂತಾಗಿದೆ. ಉಳಿದ 4 ಜನಗಳ ವರ್ಗಾವರ್ಗಿ ಕ್ರಮಪಟ್ಟನಂತರ ಪಾಠಗಳು ಕ್ರಮಪಡಬೇಕೆಂದು ಕೋರುತ್ತೆ. ಪ್ರೈಮರಿ ಸ್ಕೂಲಿಗೆ ಗಾರ್ಡನ್ನಿಗೆ ಬಾಲಕರ ಆಟಪಾಟಗಳಿಗೆ ಜಾಗವಿಲ್ಲದಿರುವುದರಿಂದ ಪ್ರಯೋಜನಕ್ಕೆ ಬಾರದಿರುವ ಸರ್ಕಾರದ ದೊಡ್ಡಿಯ ಜಾಗವನ್ನು ಹೆ॥ ಮಾಸ್ಟರು ರಿಕಾರಡು ನಡೆಸಿದ್ದರೂ ನಮ್ಮ ಡಿ॥ ಇ॥ ರವರು ಡಿ॥ ಬೋರ್ಡ್ ಮೀಟಿಂಗಿನಲ್ಲಿ ಪ್ರಶ್ನಿಸಿ ಅನುಕೂಲಪಡಿಸದಿರುವುದು ಹುಡುಗರ ದೌರ್ಭಾಗ್ಯ. ಡಿ॥ ಇ॥ ರವರ ಅಧಿಕಾರಕ್ಕೆ ಒಳಪಟ್ಟ ಲವಾಜಮಾ ವರ್ಗಾವರ್ಗಿ ತಾ॥ 9 ಆದರೂ ಆರ್ಡರು ಬಾರದಿರುವುದು ನೋಡಿದರೆ ಸ್ವಲ್ಪವೂ ಅನ್ಯಾಯವೂ, ನೌಕರರಿಗೆ ತೊಂದರೆಯೂ ಆಗದಂತೆ ನಡೆಯುತ್ತೆಂದು ನಿರೀಕ್ಷಿಸಲ್ಪಟ್ಟಿದೆ. ಪರಿಣಾಮದಲ್ಲಿ ಗೊತ್ತಾಗಬೇಕು. ಈ ಊರಿನಲ್ಲಿ ಒಂದು ರೀಡಿಂಗ್‌ರೂಂ ಏರ್ಪಡಿಸದಿರುವುದು ತುಂಬಾ ಶೋಚನೀಯವಾಗಿದೆ. ನಮ್ಮ ಹ॥ ಮಲ್ಲಶೆಟ್ಟರು ತಾವು ಮಾಡುತಲಿರುವ ಅನೇಕ ಧರ್ಮಕೆಲಸಗಳ ಜೊತೆಯಲ್ಲಿ ಊರಿನ ಮಧ್ಯರಾಷ್ಟ್ರದಲ್ಲಿರುವ ಗೌ॥ ಪ್ರೈಮರೀ ಸ್ಕೂಲ್ ಕಟ್ಟಡದಲ್ಲಿ ಒಂದು “ಫ್ರೀ” ರೀಡಿಂಗ್‌ರೂಂ ಏರ್ಪಡಿಸಲು ಮನಸ್ಸು ಮಾಡಿ ಕೀರ್ತಿಪಡೆಯುತ್ತಾರೆಂದು ನಂಬಿದೆ. ಇದು ಅವರ ಹೆಸರನ್ನು ಶಾಶ್ವತಗೊಳಿಸುವುದರಲ್ಲಿ ಒಂದು ಧರ್ಮಮಾರ್ಗವೆಂದೇ ಹೇಳಬಹುದು

ವಿದ್ಯಾಭಿಮಾನಿ.

ಗೋರಕ್ಷಣೆಯ ವಿಚಾರವಾಗಿ ದಾವಣಗೆರೆಯಲ್ಲಿ ನಡೆದ ಪ್ರಚಂಡಸಭೆಯು.

ದಾವಣಗೆರೆಯ ಧನಲಕ್ಷ್ಮೀ ನಾಟಕ ಭವನದಲ್ಲಿ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಈ ತಾ॥ 6 ನೆಯ ಭಾನುವಾರದ ದಿವಸ ಒಂದು ಪ್ರಚಂಡ ಸಭೆಯು ಈ ಊರಿನ ಪ್ರಸಿದ್ಧ ವರ್ತಕರಾದ ಶ್ರೀಮಂತ ದೇವೇಂದ್ರಪ್ಪ ತವನಪ್ಪನವರ ಇವರ ಪ್ರೋತ್ಸಾಹ ವಿಶೇಷದಿಂದ ಕೂಡಿಸಲ್ಪಟ್ಟಿದ್ದಿತು. ಸರ್ಕಾರಿಯಧಿಕಾರಿಗಳು, ಪ್ರಸಿದ್ಧ ವರ್ತಕರುಗಳು, ಲಾಯರುಗಳು ಇನ್ನೂ ಇತರ ಪ್ರಮುಖರು ಸೇರಿ 6000 ಜನರವರೆಗೆ ಬಂದಿದ್ದರು. ಗೋರಕ್ಷಣೆಯ ವಿಚಾರದಲ್ಲಿ ಜನರಿಗೆ ಬೋಧಿಸುವದಕ್ಕಾಗಿ ಆಹ್ವಾನಿಸಲ್ಪಟ್ಟಿದ್ದ ಶ್ರೀಯುತ ಗುಂಡೂರಾವ್ ಬಾದ್ರೆಯವರು 1½ ಗಂಟೆಕಾಲ ಆವೇಶಪೂರಿತವಾಗಿ ಭಾಷಣಮಾಡಿ ಸಭಿಕರನ್ನು ಸ್ತಂಭೀಭೂತರನ್ನಾಗಿ ಮಾಡಿದ್ದರು. ಗೋರಕ್ಷಣೆಗಿಂತ ಅಧಿಕವಾದ ಧರ್ಮಕಾರ್ಯವು ಪ್ರಪಂಚದಲ್ಲಿ ಬೇರೊಂದಿಲ್ಲವೆಂಬ ಬಗ್ಗೆ ಶಾಸ್ತ್ರಾಧಾರವನ್ನೂ ಚಾರಿತ್ರಿಕ ಇತಿಹಾಸಗಳನ್ನೂ ಕೊಟ್ಟು ವಿದ್ಯಾವಂತರಾದ ಜನರು ಗೋಮಾತಾವಧೆಯನ್ನು ನಿಲ್ಲಿಸಲು ತಮ್ಮ ಕೈಯಲ್ಲಾದ ಸಾಹಸವನ್ನು ಮಾಡಬೇಕಾಗಿ ಪ್ರಾರ್ಥಿಸಿದರು. ಧನಿಕರು ಗೋವುಗಳನ್ನು ತಮ್ಮ ಶಕ್ತ್ಯಾನುಸಾರ ಸಾಕಿ ಬಡವರೂ ಅನಾಥರೂ ಆದ ಮಕ್ಕಳ ಸಂರಕ್ಷಣಾರ್ಥವಾಗಿ ಹಾಲನ್ನು ಸಹಾಯಮಾಡುವ ಮಹಾಪುಣ್ಯಕಾರ್ಯವನ್ನು ಅಲಕ್ಷಿಸಿ ಪಾಶ್ಚಾತ್ಯರ ಅನುಕರಣಮಾಡಿ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡು ವಿಶಾಲವಾದ ಕಾಂಪೌಂಡಿನಲ್ಲಿ ಕ್ರೂರವಾದ ನಾಯಿಗಳನ್ನು ಸಾಕಿ ನಿರ್ಗತಿಕರ ಪ್ರವೇಶಕ್ಕೆ ಅವಕಾಶವಿಲ್ಲದಂತೆ ಮಾಡಿರುವುದು ಬಹಳ ಶೋಚನೀಯವು. ನಮ್ಮ ಭಾರತ ಭೂಮಿಯು ಮುಖ್ಯ ಐಶ್ವರ್ಯವಾದ ಒಂದು ಕೋಟಿ ದನಗಳು ಪ್ರತಿವರ್ಷದಲ್ಲೂ ವಧಿಸಲ್ಪಡುತ್ತಿದ್ದಾಗ್ಯೂ ನಾವು ಇಂತಹ ಘೋರಕೃತ್ಯವು ನಡೆಯುತ್ತಿಲ್ಲವೆಂದೇ ತಿಳಿದು ಮೌನವಾಗಿರುತ್ತೇವೆ. ಈ ನಮ್ಮ ಪಾಪಕೃತವೇ ನಮ್ಮನ್ನು ತಿನ್ನುತ ಜೀವನವನ್ನೇ ದುಸ್ಸಹವಾಗಿ ಮಾಡುತ್ತಿದೆ. ಆದ್ದರಿಂದ ಈ ಧರ್ಮಕಾರ್ಯವನ್ನು ಕೈಗೊಂಡು ನಮ್ಮ ಇಷ್ಟಾರ್ಥವು ನೆರವೇರುವವರೆಗೂ ಬಿಡಬೇಡಿ (ಜಯಧ್ವಾನವಾಗುವುದು.) ಎಂದು ಮೊದಲಾಗಿ ಎಂತಹ ಪಾಷಾಣ ಹೃದಯನ ಮನಸ್ಸೂ ಕರಗಿ ನೀರಾಗುವಂತೆ ಭಾಷಣಮಾಡಿದಮೇಲೆ ತಿಲಕ ವಿಜಯಜಿ ಮಹಾರಾಜರು ಹಿಂದಿಭಾಷೆಯಲ್ಲಿ, ಪ್ರಪಂಚದಲ್ಲಿ ಪ್ರತಿಯೊಂದು ಪ್ರಾಣಿಯು ಒದೊಂದು ಕಾರ್ಯವನ್ನು ಮಾಡುವುದಕ್ಕಾಗಿಯೇ ಸೃಜಿಸಲ್ಪಟ್ಟಿದೆ ಎಂಬುದನ್ನು ಸರಿಯಾಗಿ ಗ್ರಹಿಸುವುದಿಲ್ಲ. ಮನುಷ್ಯನ ಉಪಯೋಗಾರ್ಥವಾಗಿ ಎಲ್ಲ ಪ್ರಾಣಿಗಳೂ ವಸ್ತುಗಳೂ ಇರುತ್ತವೆಂದು ಅನೇಕ ಜನರು ಭಾವಿಸಿರುತ್ತಾರೆ. ಆ ಪ್ರಾಣಿಗಳು ಮನುಷ್ಯನರ ಪ್ರಯೋಜನಾರ್ಥವಾಗಿಯೇ ಸೃಜಿಸಲ್ಪಟ್ಟಿವೆ ಎಂಬುದರಲ್ಲಿ ಸಂದೇಹವಿಲ್ಲವಾದರೂ, ಅವು ಕೊಲ್ಲಲ್ಪಡುವುದಕ್ಕೆ ಅಥವಾ ದುರುಪಯೋಗಪಡಿಸಲ್ಪಡುವುದಕ್ಕೆ ಮಾತ್ರವಲ್ಲವು. ಮುಖ್ಯವಾಗಿ ಗೋವು ಪವಿತ್ರತಮವಾದ ಪ್ರಾಣಿಯಾಗಿರುವುದರಿಂದ ಅದರ ಕೊಲೆಗೆ ಅವಕಾಶವನ್ನುಂಟುಮಾಡುವುದು ಅತ್ಯಂತ ಹೇಯತವು. ಮತ್ತು ಫಲವೃಕ್ಷವನ್ನು ಕಡಿಯುವುದಕ್ಕೆ ಸಮಾನವಾದುದು. ಈ ಮಹಾಧಾರ್ಮಿಕಕಾರ್ಯವು ಈ ಕೂಡಲೆ ಪುನರುದ್ಧರಿಸಲ್ಪಟ್ಟು ಸರ್ವಪ್ರಕಾರದಿಂದಲೂ ಗೋಮಾತೆಯು ಕಾಪಾಡಲ್ಪಡಬೇಕು (ಕೋಲಾಹಲವು). ಎಂದು ಹೇಳಿದಮೇಲೆ ಅಧ್ಯಕ್ಷ ಸ್ಥಾನವನ್ನಲಂಕರಿಸಿದ್ದ ಶ್ರೀ ಜಗದ್ಗುರುಗಳು, ಎಲ್ಲ ವಿಧದಲ್ಲೂ ಅನುಕೂಲ ವಿದ್ಯಾಗ್ಗೂ ಧಾರ್ಮಿಕ ಕೆಲಸಗಳಲ್ಲಿ ಮಾನವರು ಎಷ್ಟರಮಟ್ಟಿಗೆ ಹಿಂದುಳಿದಿದರೆಂಬುವದನ್ನು ವ್ಯಕ್ತಗೊಳಿಸಿ ಪ್ರತಿಯೊಬ್ಬನೂ ಗೋಮಾತೆಯ ರಕ್ಷಣೆಗಾಗಿ ತನ್ನ ಕೈಯಲ್ಲಾದ ಸಾಹಸವನ್ನೆಲ್ಲಾ ಮಾಡಬೇಕಲ್ಲದೆ ಆರೀತಿ ಮಾಡುವಂತೆ ಇತರರಿಗೆ ಬೋಧಿಸಬೇಕೆಂದು ಯುಕ್ತಿ ಯುಕ್ತವಾಗಿಯೂ ಸರಸವಾಗಿಯೂ ಅಪ್ಪಣೆಕೊಡಿಸಿದರು. ತರುವಾಯ ಜಗದ್ಗುರುಗಳ ಆಶೀರ್ವಾದದಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರೇಕ್ಷಕ,

ಮಹತ್ವ ವಿಚಾರವಾಗಿ ವೀರಶೈವರಲ್ಲಿ ವಿಜ್ಞಾಪನೆ.

ಈಗ ಹೈದರಾಬಾದ (ಡೆಕನ್) ನೈಜಾಮು ಸ್ಟೇಟದಲ್ಲಿ ಪೇರಲೇ ವೈಜನಾಥವೆಂಬ ದೊಂದು ಗ್ರಾಮವಿರುವದು ತಮಗೆ ವಿದಿತವೇ ಇರಬಹುದು. ಅಲ್ಲಿ ಪುರಾತನಕಾಲದಿಂದ ಜ್ಯೋತಿರ್ಲಿಂಗ ಸ್ಥಾಪನೆಯಾಗಿದ್ದು, ಅದರ ವೆವಸ್ಥೆ, ಪೂಜಾ, ನೇಮಾದಿಗಳನ್ನು ಅಲ್ಲಿಯ ವೀರಶೈವರೇ ಇಲ್ಲಿಯ ತನಕ ಪೂರೈಸುತ್ತಿದ್ದರು. ಈಗ ಮೊನ್ನೆ ಎಂದರೆ ಎಂಟು ಅಥವಾ ಹತ್ತು ದಿವಸಗಳ ಪೂರ್ವದಲ್ಲಿ ಅಲ್ಲಿಯ ಶ್ರೀ ಗಳವರು ಆ ಲಿಂಗಕ್ಕೆ ಮಹಾರುದ್ರಾಭಿಷೇಕವನ್ನು ಮಾಡಿಸಬೇಕೆಂದು ನಿಶ್ಚಯಿಸಿ 10000 ರೂ. ವರ್ಗಣಿಯನ್ನು ಕೂಡಿಸಿ ಸಮಾರಂಭವನ್ನು ಕೈಕೊಳ್ಳುವವರಿದ್ದರು. ಆದರೆ ಅಷ್ಟರಲ್ಲಿ ನಮ್ಮ ಭಾರತ ಬಾಂಧವರಾದ ಕೆಲವು ಬ್ರಾಹ್ಮಣ ಪುಢಾರಿಗಳು ಅಸೂಯೆಯಿಂದಲೋ ಅಥವಾ ಬೇರೆಯ ಉತ್ಕಟೇಚ್ಛೆಯಿಂದಲೋ ಆ ಸಮಾರಂಭವನ್ನು ನುಗ್ಗ ಬಡಿಯುವದಕ್ಕಾಗಿ ಹೆಣಗಾಡುತ್ತಿರುವರು. ಅವರು ಅಲ್ಲಿಯೇ ತಮ್ಮ ಹಾಗೂ ಮಹಮ್ಮದೀಯ ಕಾಮದಾರರಿಂದ ಕೂಡಿದ ತಾಲ್ಲೋಕ ಕಚೇರಿಯಲ್ಲಿ ವೀರಶೈವರು ಶೂದ್ರರು ಅವರಿಗೆ ಮಹಾರುದ್ರಾಭಿಷೇಕ ಮಾಡಲು ಅಧಿಕಾರವಿಲ್ಲ. ಕಾರಣ ಅದನ್ನು ಬಂದುಮಾಡಲೇಬೇಕೆಂದು ಸೂಚನೆಯನ್ನು ಒಯ್ದು, ಅದನ್ನು ತಮ್ಮಂತೆಯೇ ಠರಾಯಿಸಿಕೊಂಡು ಬಂದು ಉತ್ಸವಭಂಗಮಾಡಿದರು. ತಾಲ್ಲೂಕ ಕಚೇರಿಯಲ್ಲಿ ತಮ್ಮ ಸ್ಥಿತಿಯು ಹೀಗಾದದ್ದನ್ನು ಕಂಡು ಅಲ್ಲಿಯ ವೀರಶೈವ ಬಾಂಧವರು ಒಟ್ಟುಗೂಡಿ ನೈಜಾಮು ಸ್ಟೇಟದ ಹೈಕೋರ್ಟಿಗೆ ಅಪೀಲುಮಾಡಲಾಗಿ ಅದೇ ಪುಢಾರಿಗಳು ಊರೊಳಗಿನ ಇತರೇ ಜಾತಿಯ ತಿಳಿಯದ ಜನರಿಗೆ ಇಲ್ಲದ ಸಲ್ಲದ ಉಪದೇಶಮಾಡಿ ಅವರಿಂದ ಸರ್ಕಾರಕ್ಕೆ ‘ ತಾವು ಈ ಸಮಾರಂಭಕ್ಕೆ ಅಪ್ಪಣೆಕೊಟ್ಟಲ್ಲಿ ಈ ಗ್ರಾಮದಲ್ಲಿ ಲಿಂಗಾಯತ ಮತ್ತು ಬ್ರಾಹ್ಮಣರ ನಡುವೆ ಕಲಹವಾಗಿ ಖೂನು ಸಹಿತವಾಗುವ ಪ್ರಸಂಗವಿರುವದರಿಂದ ತಾವು ಸಮಾರಂಭವನ್ನು ನಿಲ್ಲಿಸಬೇಕೆಂದು’ ಅರ್ಜಿ ಮಾಡಿಸಿರುವರು. ಇಷ್ಟೇ ಅಲ್ಲ ; ಲಿಂಗಾಯತರಿಗೆ ಅಭಿಷೇಕಮಾಡಲು ಅಧಿಕಾರವಿಲ್ಲದ್ದರಿಂದ ಈ ಅಭಿಷೇಕದಲ್ಲಿ ಬ್ರಾಹ್ಮಣರು ಎನರು ಪವಿತ್ರ ಚಿಂತಕರ ಸಮಾವೇಶರಾಗಲೇ ಬೇಕು ಮತ್ತು ಅವರೇ ಆ ಎಲ್ಲಾ ಕಾರ್ಯ ಸಾಂಗಗೊಳಿಸಬೇಕೆಂದು ಸರ್ಕಾರಕ್ಕೆ ತಿಳುಹಿಸಿರುವರು. ಇದೆಲ್ಲ ಹೀಗಾಗಲು ಭಗ್ನಮನೋರಥರಾದ ಆ ನಮ್ಮ ಪೇರಳಿಯ ವೀರಶೈವ ಸ್ತೋಮವು ಈ ಕೊಲ್ಹಾಪುರದಲ್ಲಿರುವ ‘ ಸತ್ಯಶೋಧಕಸಮಾಜ ’ ವೆಂಬ ಸಂಘಕ್ಕೆ ಒಂದು ಮರಾಠಿಯಲ್ಲಿ ಪತ್ರ ಬರೆದಿರುವರು. ಈ ಮೇಲಿನ ಪತ್ರವು ಆ ಮರಾಠೀ ಪತ್ರದ ಭಾಷಾಂತರವಿರುವದು. ಅದರಲ್ಲಿ ಅವರು ಇನ್ನೂ ಹೆಚ್ಚು ಬರೆದಿರುವರು. ಅದೇನೆಂದರೆ—ಆ ಸತ್ಯಶೋಧಕ ಸಂಘದ ಮ್ಯಾನೇಜರರಿಗೆ ತಾವು ಈ ವಿಷಯವನ್ನು ಬ್ರಾಹ್ಮಣೇತರ ಪಕ್ಷದ ವೃತ್ತದಲ್ಲಿ ಕೊಡಬೇಕು ಮತ್ತು ಬ್ರಾಹ್ಮಣ ಬಾಂಧವರ ಕುಟಿಲ ಹೃದಯವನ್ನೂ ಚಾಣಕ್ಯತೆಯನ್ನು ವ್ಯಕ್ತಪಡಿಸುವಂಥ ಲೇಖಗಳನ್ನು ಅದೇ ವೃತ್ತಪತ್ರಗಳಲ್ಲಿ ಕೊಡಬೇಕು. ಮತ್ತು ನಮ್ಮ ವೀರಶೈವ ಸಮಾಜದ ಮುಂದಾಳುಗಳಿಗೆ ಅದನ್ನು ತಿಳಿಸಬೇಕು. ಇದರಂತೆಯೇ ಎಲ್ಲ ಪುಢಾರಿಗಳಿಗೆ ಪತ್ರಗಳನ್ನು ಕಳಿಸಿದ್ದಾಗಿದೆ. ಎಲ್ಲ ಕನ್ನಡ ಮತ್ತು ಬ್ರಾಹ್ಮಣೇತರ ವರ್ತಮಾನಪತ್ರಗಳಿಗೆ ಇದನ್ನು ಕಳುಹಿಸಲು ಸತ್ಯಶೋಧಕ ಸಮಾಜದ ಚಾಲಕರೇ ಒಪ್ಪಿರುವರು. ತಾವಾದರೂ ಇದನ್ನೆಲ್ಲ ಓದಿಕೊಂಡು ಮುಂದೇನುಮಾಡಬೇಕೆಂಬ ಬಗ್ಗೆ ತೀವ್ರವೇ ಕಾರ್ಯಪ್ರವೃತ್ತರಾದೀರೆಂದು ಪೂರ್ಣ ನಂಬಿದೆ. ನಮ್ಮ ಸಮಾಜಬಾಂಧವರಮೇಲೆ ಈತರದ ಬಿಕ್ಕಟ್ಟಿನಪ್ರಸಂಗ ಬಂದಿರಲು ಇದನ್ನು ವೀರಶೈವರು ಐಕಮತ್ಯದಿಂದ ಅವರ ಗೋಳನ್ನು ದೂರಮಾಡಬೇಕಾಗಿ ನೈಜಾಮು ಸರಕಾರಕ್ಕೆ ತಿಳಿಸುವದು ಉಚಿತವಲ್ಲವೇ ? ವಿದ್ವನ್ಮಣಿಗಳಿಗೆ ಯುಕ್ತಿಗಳನ್ನು ಸೂಚಿಸುವದು ನಮ್ಮ ಶಕ್ತಿಯಲ್ಲ. ಏನೇ ಆದರೂ ತೀವ್ರವೇ ಕಾರ್ಯತತ್ಪರರಾಗಬೇಕೆಂದು ಅಪೇಕ್ಷೆ.

V. S. Panchayanavar, S.B.A.,
Rajaram College, Kolhapur City.

ಬಳ್ಳಾರಿ ವೀರಶೈವಸಭೆಯು.

ಬಳ್ಳಾರಿ ಜಿಲ್ಲೆಯ ವೀರಶೈವರ ಪ್ರಸ್ತುತದ ಸ್ಥಿತಿಯನ್ನು ಕುರಿತು ಪರ್ಯಾಲೋಚಿಸಲು ಇದೇ ತಾರೀಖು 14-3-24 ಸೋಮವಾರ ಸಾಯಂಕಾಲ 5½ ಗಂಟೆಗೆ ಸರಿಯಾಗಿ ಹೀರಿದ ಸೂಗಮ್ಮನವರ ಚೌಕಿಯಲ್ಲಿ ಬಳ್ಳಾರಿ ವೀರಶೈವರ ಪ್ರಮುಖರ ಸಭೆಯೊಂದು ನೆರೆದಿದ್ದಿತು. ವೇ॥ ಟಿ. ಎಚ್. ಎಂ. ಚಂದ್ರಶೇಖರಯ್ಯ ಬಿ. ಎ., ಬಿ. ಎಲ್., ವಕೀಲ ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಭೆಗೆ ಇಲ್ಲಿಯ ಮ॥ ರಾ॥ ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದ ಹಾಲಿ ಪ್ರೆಸಿಡೆಂಟರಾದ ಎಚರೆಡ್ಡಿ ಚೆಂಗಳಪ್ಪನವರು, ‘ ವಿದ್ಯಾಪ್ರವರ್ಧಕ ’ ತೋಗರಿ ವೀರಪ್ಪನವರು ಡಿ॥ ಎಜ್ಯುಕೇಷನಲ್ ಕೌನ್ಸಿಲನ ಮೆಂಬರು ಆದ ಹೀರದ ಕರಿಬಸಪ್ಪನವರು, ಹಾವಳಿಗಿ ಮರಿಯಪ್ಪನವರು, ವೀರಶೈವ ಮಿಡಲ್ ಸ್ಕೂಲು ಮೇನೇಜರು ವಸ್ತ್ರದ ಗುರುಲಿಂಗಯ್ಯನವರು, ಎಂ. ವಿ. ವಿ. ಸಂಘದ ಸೆಕ್ರೆಟರಿಗಳು ಮತ್ತು ಮ್ಯುನ್ಸಿಪಲ್ ಕೌನ್ಸಿಲರುಗಳಾದ ಶಿವಚನ್ನಬಸಪ್ಪನವರು, ಬಳೆ ಚನ್ನಬಸಯ್ಯನವರು, ಕೌತಾಳದ ಶಾಂತರುದ್ರಪ್ಪನವರು, ಅರಳಿ ಮುದ್ದಪ್ಪನವರು ಇನ್ನೂ ಮುಂತಾದ ಪ್ರಮುಖಜನರು ಮತ್ತು ವೇ॥ ಕಂಬಳಿಮಠದ ಸಿದ್ಧಾಂತಭೂಷಣ ವಿಶ್ವನಾಥಶಾಸ್ತ್ರಿಗಳು, ಪಗಡದಿನ್ನಿಮಠದ ಸೋಮಶೇಖರಶಾಸ್ತ್ರಿಗಳು ಮತ್ತು ವೈ॥ ನಾಗೇಶಶಾಸ್ತ್ರಿಗಳು ಮುಂತಾದ ವಿದ್ವಾಂಸರು ಆಗಮಿಸಿದ್ದರು. ಸಭಾಕಾರ್ಯದ ಪ್ರಾರಂಭದಲ್ಲಿ ಅಧ್ಯಕ್ಷರು ಬಳ್ಳಾರಿಜಿಲ್ಲೆಯ ಸದ್ಯದ ಶೋಚನೀಯವಾದ ಸ್ಥಿತಿಯನ್ನು ಕುರಿತು ಸುಮಾರು ಒಂದುಕಾಲು ಗಂಟೆಯವರೆಗೂ ಒಳ್ಳೇ ಸ್ಫೂರ್ತಿವಾಗಿ ಭಾಷಣಮಾಡಿದರು. ಬಳ್ಳಾರಿಜಿಲ್ಲೆಯಲ್ಲಿ ವೀರಶೈವರೇ ಅಧಿಕಸಂಖ್ಯಾಕರಾಗಿದ್ದರೂ ವಿದ್ಯೆಯಲ್ಲಿ ತೀರಾಹಿಂದುಳಿದಿರುವದರಿಂದ ಪ್ರತಿ ಒಂದು ವಿಷಯದಲ್ಲಿಯೂ ಇವರು ಇತರ ಜನಾಂಗದವರಿಗಿಂತಲೂ ತೀರ ಹಿಂದುಳಿದಿರುತ್ತಾರೆಂತಲೂ ಮತ್ತು ಇಲ್ಲಿಯ ಲೋಕಲ್‌ಬೋರ್ಡು, ಎಜ್ಯುಕೇಷನಲ್ ಬೋರ್ಡು ಮುಂತಾದ ಕೌನ್ಸಿಲುಗಳಲ್ಲಿ ಇವರ ಪ್ರಾತಿನಿಧ್ಯದ ಸಂಖ್ಯೆಯು ಬಹಳ ಕಡಿಮೆಯಾಗಿರುವದರಿಂದ ಆದಷ್ಟು ಪ್ರಯತ್ನದಿಂದ ಈ ಸಂಸ್ಥೆಗಳಲ್ಲಿ ಸಭಿಕರಾಗಿರುವದು ಅತ್ಯಂತಾವಶ್ಯಕವೆಂತಲೂ, ಸಾಂಘಿಕಶಕ್ತಿ ಇಲ್ಲದಲೇ ಘನಕಾರ್ಯಗಳನ್ನು ಕೈಗೊಳ್ಳುವದಸಾಧ್ಯವಾದುದರಿಂದ ಒಳಪಂಗಡಗಳನ್ನು ತ್ಯಜಿಸಿ ಸರ್ವರೂ ಐಕ್ಯಮತ್ಯದಿಂದಿರುವದತ್ಯಾವಶ್ಯಕವೆಂತಲೂ, ಇವೇ ಮುಂತಾದ ವಿಷಯಗಳ ಮೇಲೆ ಭಾಷಣಮಾಡಿದರು. ನಂತರ ವೇ॥ ಸೋಮಶೇಖರಶಾಸ್ತ್ರಿಗಳು ಮೈಸೂರು ಸಂಸ್ಕೃತ ಕಾಲೇಜುಗಳಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಪ್ರವೇಶವಿಲ್ಲದೇ ಇರುವದನ್ನು ಸಯುಕ್ತಿಕವಾಗಿ ನಿಷೇಧಿಸುತ್ತಾ, ನೈಜಾಮು ಇಲಾಖೆ ಯಾದಗಿರಿ ಶ್ರೀಮಂತ ಸಜ್ಜನಶೆಟ್ಟಿ ಶಂಕರಪ್ಪನವರು ಸಂಸ್ಕೃತ ಕಾಲೇಜಿಗೋಸ್ಕರ ಒಂದು ಲಕ್ಷ ರೂಪಾಯಿಗಳನ್ನು ದಾನವಾಗಿ ಕೊಟ್ಟಿದ್ದನ್ನು ಸ್ಮರಿಸುತ್ತಾ ಭಾಷಣಮಾಡಿದರು. ಅನಂತರ ವೇ॥ ನಾಗೇಶಾಸ್ತ್ರಿಗಳವರು ಇಲ್ಲಿಯ ವಿದ್ಯಾವರ್ಧಕ ಸಂಘದವರಿಂದ ಸ್ಥಾಪಿತವಾದ ವೀರಶೈವ ಸ್ಕೂಲನ್ನು ಊರ್ಜಿತಾವಸ್ಥೆಗೆ ತರುವ ವಿಷಯವಾಗಿಯೂ ಮತ್ತು ಮದ್ರಾಸು ಇಲಾಖೆಯ ವೀರಶೈವ ವಿದ್ಯಾರ್ಥಿಗಳಿಗೂ ಶಿರಸಂಗೀಕರ ಫಂಡಿನಿಂದ ವಿದ್ಯಾರ್ಥಿವೇತನಗಳು ಲಭಿಸುವಹಾಗೆ ಪ್ರಯತ್ನಮಾಡುವ ವಿಷಯವಾಗಿಯೂ ಭಾಷಣಮಾಡಿದರು. ತದನಂತರ ಇಲ್ಲಿಯ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಮ॥ ರಾ॥ ಶಿವಾಚನ್ನಬಸಪ್ಪನವರು ಮದ್ರಾಸು ಇಲಾಖೆಯ ಪಬ್ಲಿಕ್ ಸರ್ವಿಸದಲ್ಲಿ ವೀರಶೈವರು ಬಹುತೇಕ ಇಲ್ಲದೇ ಇರುವ ಕೊರತೆಯಮೇಲೆ ಭಾಷಣಮಾಡಿದರು. ತದನಂತರ ಈ ಕೆಳಗಿನಕಂಡ ಠರಾವುಗಳು ಸರ್ವಾನುಮತದಿಂದ ಪಾಸಾದಮೇಲೆ ಸಭೆಯು ಪೂರ್ಣಗೊಂಡಿತು.

ತೊಗರಿ ವೀರಮಲ್ಲಪ್ಪ.

ಠರಾವುಗಳು.

(1) ಮದ್ರಾಸು ಇಲಾಖೆಯ ಕಾಯಿದೆ ಕೌನ್ಸಿಲ ಲೋಕಲ್ ಬೋರ್ಡ, ಎಜ್ಯುಕೇಷನಲ್ ಕೌನ್ಸಿಲಗಳಲ್ಲಿಯೂ ಮತ್ತು ಪಬ್ಲಿಕ್ ಸರ್ವಿಸದಲ್ಲಿಯೂ ವೀರಶೈವರನ್ನು ಅವರ ಸಂಖ್ಯೆ ಮತ್ತು ಪ್ರಾಮುಖ್ಯತೆಗನುಗುಣವಾಗಿ ಘನತರಹೊಂದಿದ ಪ್ರಭುತ್ವದವರು ನೇಮಿಸತಕ್ಕದ್ದೆಂದು ಈ ಸಭೆಯು ಪ್ರಾರ್ಥಿಸಿಕೊಳ್ಳುತ್ತದೆ. (2) ಮೈಸೂರು ಸಂಸ್ಕೃತಕಾಲೇಜುಗಳಲ್ಲಿ ವೀರಶೈವ, ಜೈನ ಮೊದಲಾದ ಮತಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಪ್ರವೇಶವಿಲ್ಲದೇ ಇರುವದನ್ನು ನಿಷೇಧಿಸುತ್ತಾ ಈ ಕೊರತೆಯನ್ನು ನೀಗಿಸಬೇಕೆಂದು ಮೈಸೂರು ಸರಕಾರದವರನ್ನು ಈ ಸಭೆಯು ಪ್ರಾರ್ಥಿಸಿಕೊಳ್ಳುತ್ತದೆ. (3) ನೈಜಾಮು ಇಲಾಖೆಯಲ್ಲಿ ಓರ್ವ ವೀರಶೈವತರುಣನನ್ನು ಬಲಾತ್ಕಾರವಾಗಿ ಮುಸಲ್ಮಾನನ್ನಾಗಿ ಮಾಡಿದ ವಿಷಯವನ್ನು ವಿಚಾರಣೆಮಾಡಲು ಒಂದು ಸ್ವತಂತ್ರ ಕಮಿಷನನೇಮಿಸಬೇಕೆಂದು ನಿಜಾಮು ಸರಕಾರದವರನ್ನು ಈ ಸಭೆಯು ಪ್ರಾರ್ಥಿಸಿಕೊಳ್ಳುತ್ತದೆ. (4) ವೀರಶೈವ ಸಂಸ್ಕೃತ ಕಾಲೇಜಿಗೋಸ್ಕರ ಒಂದು ಲಕ್ಷ ರೂಪಾಯಿಗಳನ್ನು ದಾನವಾಗಿಕೊಟ್ಟ ಯಾದಗಿರಿ ಶ್ರೀಮಂತ ಸಜ್ಜನಶೆಟ್ಟಿ ಶಂಕರಪ್ಪನವರನ್ನು ಈ ಸಭೆಯು ಅಭಿನಂದಿಸುತ್ತದೆ. (5) ಮದ್ರಾಸು ಇಲಾಖೆಯ ವಿದ್ಯಾರ್ಥಿಗಳಿಗೂ ಶಿರಸಂಗೀಕರ ಫಂಡಿನಿಂದ ವಿದ್ಯಾರ್ಥಿವೇತನಕೊಡುವಂತೆ ಸದರಿ ಫಂಡಿನ ಧರ್ಮಕರ್ತರಿಗೆ ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. (6) ಬಳ್ಳಾರಿ ಪಟ್ಟಣದಲ್ಲಿ ಈಗ ಸಂಸ್ಥಾಪಿತವಾಗಿರುವ ವೀರಶೈವ ಇಂಗ್ಲೀಷು ಸ್ಕೂಲನ್ನು ಅದಷ್ಟು ತೀವ್ರವಾಗಿ ಹೈಸ್ಕೂಲನ್ನಾಗಿ ಮಾಡುವಂತೆ ಇಲ್ಲಿಯ ವೀರಶೈವ ವಿದ್ಯಾವರ್ಧಕ ಸಂಘದವರಿಗೆ ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ.

ತರುಣರಿಗೆ ಸುಸಂಧಿ.

ಕಾರಾಗೃಹದಿಂದ ಹೊರಗೆ ಬಂದನಂತರ ಮಹಾತ್ಮಾ ಗಾಂಧಿಯವರು ರಾಜಕಾರ್ಯವನ್ನು ಮರಳಿ ಕೈಕೊಂಡದ್ದರಿಂದ, ರಾಷ್ಟ್ರಕ್ಕೆ ಹೊಸ ಚೈತನ್ಯವು ಪ್ರಾಪ್ತವಾಗಿರುತ್ತದೆ, ಮತ್ತು ರಾಷ್ಟ್ರಕಾರ್ಯವನ್ನು ಹೆಚ್ಚು ಜೋರಿನಿಂದ ಮುಂದರಿಸಲಿಕ್ಕೆ ನಮ್ಮೆಲ್ಲರಲ್ಲಿ ಧೈರ್ಯ, ವಿಶ್ವಾಸ, ಮತ್ತು ಉತ್ಸಾಹಗಳು ಉಂಟಾಗಿರುತ್ತವೆ. ಅಹಮ್ಮದಾಬಾದದ ಮೊನ್ನಿನ ಅಖಿಲ ಇಂಡಿಯಾ ಕಾಂಗ್ರೆಸ ಕಮಿಟಿಯ ಠರಾವಿನನುಸಾರವಾಗಿ ನಮ್ಮ ಕರ್ನಾಟಕದ ಮುಂದಾಳುವಾದ ದೇ. ಭ. ಗಂಗಾಧರರಾಯರು ಎಲ್ಲ ಪ್ರತಿನಿಧಿಕ ಸಂಸ್ಥೆಗಳ ಕಾರ್ಯಕಾರೀ ಮಂಡಳಗಳಲ್ಲಿಯ ಅಧಿಕಾರದ ಜಾಗೆಗೆ ಈಗಾಗಲೇ ರಾಜೀನಾಮೆಯನ್ನು ಕೊಟ್ಟಿರುವರು. ಮತ್ತು ಇತರ ಮುಂದಾಳುಗಳೂ, ಕಾರ್ಯವಾಹಕರೂ ಇನ್ನು ತೀವ್ರವೇ ದೇ. ಭ. ಗಂಗಾಧರರಾಯರನ್ನನುಸರಿಸುವದು ನಿಶ್ಚಯವೇ ಇದೆ. ಆಲ ಇಂಡಿಯಾ ಕಾಂಗ್ರೆಸ ಕಮಿಟಿಯ ಠರಾವುಗಳನ್ನು ಮನ್ನಿಸುವದೇ ರಾಷ್ಟ್ರೀಯ ಪಕ್ಷದ [illegible] ಕರ್ತವ್ಯವು [illegible]

ಳಕ್ಕೆ ಮುಂದೆಬರಲಿಚ್ಛಿಸುವ ತರುಣರಿಗೆ ಈ ಅಪ್ರಾರ್ಥಿತ ಸಂಯೋಗವು ಯೋಗ್ಯ ಸಂಧಿಯನ್ನು ಒದಗಿಸಿಕೊಡುತ್ತದೆ. ಉತ್ಸಾಹೀ ತರುಣರು ಇಂಥ ಪ್ರಸಂಗವನ್ನು ಬಹು ದಿವಸಗಳಿಂದ ನಿರೀಕ್ಷಿಸುತ್ತಿದ್ದಾರೆ. ಅದರಲ್ಲಿ ಅವರದೇನು ದೋಷವಲ್ಲ. ಈ ಪ್ರಸಂಗದ ಲಾಭವನ್ನು ತೆಗೆದುಕೊಂಡು ಧೈರ್ಯದಿಂದ ಮುಂದೆ ಬಂದು ತಮ್ಮ ಯೋಗ್ಯತೆಯನ್ನು ಪ್ರದರ್ಶಿಸಲಿಕ್ಕೆ ತರುಣರಿಗೆ ಇದೇ ಸುಸಂಧಿಯು. ಮೇಲಿನ ಠರಾವುಗಳಿಗನುಸರಿಸಿ ತೆರವಾದ ಅಧಿಕಾರಿಸ್ಥಳಗಳನ್ನು ಇನ್ನು ಮುಂದೆ ತರುಣರೇ ಮುಂದರಿಸತಕ್ಕದ್ದು. ನಮ್ಮ ಪ್ರಾಂತದ ಮುಂದಾಳುಗಳಾದ ದೇ. ಭ. ಗಂಗಾಧರರಾಯರು ಮತ್ತು ಕೌಜಲಗಿ ಶ್ರೀನಿವಾಸರಾಯರು ಇವರೀರ್ವರ ಕೂಡ ಈ ವಿಷಯದಲ್ಲಿ ನಾನು ಅನೇಕ ವಿಧವಾಗಿ ಚರ್ಚಿಸಿದ್ದೇನೆ. ಅವರಿಬ್ಬರೂ ನಮಗೆ ಪೂರ್ಣವಾಗಿ ನೆರವಾಗಲಿಕ್ಕೆ ಸನ್ನದ್ಧರಿರುವರು. ಅವರ ಅಧಿಕಾರೀ ಸ್ಥಳಗಳನ್ನು ನಾವು ಸ್ವೀಕರಿಸಿದರೆ, ತಾವು ಸ್ವತಃ ಕಾರ್ಯಕಾರೀ ಮಂಡಳದ ಹೊರಗೆ ನಿಂತು ನಮ್ಮ ಪ್ರಾಂತದ ಕಾಂಗ್ರೆಸ ಕೆಲಸವನ್ನು ನಾವು ಜೋರಿನಿಂದ ನಡಿಸುವಂತೆ ನಮಗೆ ಪೂರ್ಣನೆರವಾಗುವೆವೆಂದು ಅವರು ವಚನವನ್ನಿತ್ತಿರುವರು. ಇಂಥ ವಿಶ್ವಸನೀಯ ಮತ್ತು ಅನುಭವಿಕ ಮುಂದಾಳುಗಳ ಬೆಂಬಲವು ನಮಗಿದ್ದ ಮೇಲೆ, ಬರುವ ತೊಂದರೆಗಳೆಲ್ಲ ಸಹಜವಾಗಿಯೇ ದೂರಾಗುವವೆಂದು ನನ್ನ ನಂಬಿಗೆಯದೆ. ಈ ವೇಳೆಯಲ್ಲಿ ತರುಣಜನರು ರಾಷ್ಟ್ರೀಯ ಸಂಸ್ಥೆಗಳನ್ನು ಯಶಸ್ವಿಯಾಗಿ ಸಾಗಿಸಿದರೆ, ಹಿಂದೀ ತರುಣರ ಕರ್ತೃತ್ವಶಕ್ತಿಯನ್ನು ನಾವು ಇದೇ ಜಗತ್ತಿನ ನಿದರ್ಶನಕ್ಕೆ ತಂದುಕೊಟ್ಟಂತಾಗುವದು. ಅನನುಭವದ ಮೂಲಕ ನಮ್ಮ ಕೆಲಸದಲ್ಲಿ ಅನೇಕ ಎಡರುಗಳು ಬಂದೇ ಬರುವವು. ಆದರೂ ದೃಢಮನಸ್ಸಿನಿಂದ ಅದನ್ನು ಸಾಗಿಸಿದರೆ, ದೇಶಕಾರ್ಯದಲ್ಲಿ ನಮಗೆ ಅದು ಹೆಚ್ಚೆಚ್ಚು ಅಭಿರುಚಿಯನ್ನು ಹುಟ್ಟಿಸುವದಲ್ಲದೆ, ಕಡೆಗೆ ಫಲಕಾರಿಯಾಗಿಯೂ ಪರಿಣಮಿಸುವದು. ಈ ಅಹಮ್ಮದಾಬಾದ ಠರಾವುಗಳ ಬಗ್ಗೆ ಭಿನ್ನ ಭಿನ್ನ ಜನರು ಭಿನ್ನ ಭಿನ್ನ ಮತಗಳನ್ನು ವ್ಯಕ್ತಪಡಿಸಿದರೂ, ಅಂತ್ಯದಲ್ಲಿ ಅವುಗಳ ಪರಿಣಾಮವು ಮಾತ್ರ ಒಳ್ಳೇದಾಗದೇ ಇರದು. ಈ ಠರಾವುಗಳನ್ನು ಅಕ್ಷರಶಃ ಅನುಲಿಸಲ್ಲಿ ತಂದರೆ ಭಕ್ತಿಯಿಂದಲೂ, ಅಂತಃಕರಣದಿಂದಲೂ ದೇಶಕಾರ್ಯವನ್ನು ಮಾಡುವ ಯುವಕರು ಇನ್ನು ಮುಂದೆ ನಮಗೆ ದೊರೆಯುವರು. ರಾಮದಾಸ್ ಪಂಥದ ಮಹಂತರಂತೆಯೂ, ಅಥವಾ ಯುರೋಪದ ಮಿಶನರಿಗಳಂತೆಯೂ ತಮ್ಮ ಸರ್ವಸ್ವವನ್ನೂ ದೇಶಕಾರ್ಯಕ್ಕೆ ಕೊಡುವ ಭಕ್ತರೇ ಅವಶ್ಯವಾಗಿ ಮುಂದೆ ಬರುವರು. ನಿಸ್ವಾರ್ಥತನದಿಂದ ಕೆಲಸಮಾಡುವಂಥ ಇಂಥ ಭಕ್ತರೇ ಎಲ್ಲ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹೆಚ್ಚು ತೀವ್ರವಾಗಿ ಘನತೆಯನ್ನು ಪಡೆಯುವರು. ಆದ್ದರಿಂದ ಈ ಅಪ್ರಾರ್ಥಿತಸಂಧಿಯ ಪೂರ್ಣಲಾಭವನ್ನು ಪಡೆಯಲು ಬಹುಸಂಖ್ಯಾಕರಾಗಿ ಮುಂದೆ ಬರಲಿಕ್ಕೆ ಎಲ್ಲ ಕರ್ನಾಟಕತರುಣರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಮಾಡತಕ್ಕ ಕಾರ್ಯವೆಂದರೆ:—(೧) ಕರ್ನಾಟಕದ ಎಲ್ಲ ಪ್ರತಿನಿಧಿಕ ಕಾಂಗ್ರೆಸ ಸಂಸ್ಥೆಗಳ ಅಧಿಕಾರೀ ಸ್ಥಳಗಳನ್ನು ಭಕ್ತಿಯಿಂದಲೂ, ಆತ್ಮವಿಶ್ವಾಸದಿಂದಲೂ ಸ್ವೀಕರಿಸುವದು. (೨) ವಿಧಾಯಕಕಾರ್ಯಕ್ರಮವನ್ನು ಜೋರಿನಿಂದ ನಡಿಸುವದು. ಇಲ್ಲದ ಶಂಕೆಕುಶಂಕೆಗಳನ್ನು ಮನಸ್ಸಿನಲ್ಲಿ ತಾರದೆ, ಆತ್ಮವಿಶ್ವಾಸದಿಂದ ಕಾರ್ಯವನ್ನು ನಡಿಸಿದರೆ, ಅದನ್ನು ಯಶಸ್ವಿಯಾಗಿ ಪಾರುಗಾಣಿಸಲಿಕ್ಕೆ ನಾವು ಸಮರ್ಥರಿದ್ದೇವೆಂದು ನಮ್ಮ ದೇಶದ ನಿದರ್ಶನಕ್ಕೆ ಸಹಜವಾಗಿಯೇ ತರಬಲ್ಲೆವು. ಸಂಖ್ಯಾ ಬಾಹುಲ್ಯಕ್ಕಿಂತ ಗುಣಬಾಹುಲ್ಯವು ಶ್ರೇಷ್ಠತರವಾದದ್ದು. ಪರಮಾತ್ಮನ ಕೃಪೆಯಿಂದ ಮಹಾತ್ಮರಂಥ ಮುಂದಾಳುವು ದೇ. ಭ. ಗಂಗಾಧರರಾವ ಮತ್ತು ಶ್ರೀನಿವಾಸರಾವ ಇವರಂಥ ಮಾರ್ಗದರ್ಶಕರೂ ನಮಗೆ ಲಭಿಸಿರಲು, ನಮ್ಮ ಅಂಗೀಕೃತ ಕಾರ್ಯದಲ್ಲಿ ನಮಗೆ ಸಂಪೂರ್ಣಜಯವು ದೊರಕುವದೆಂದು ನನಗಂತೂ ಆತ್ಮವಿಶ್ವಾಸವಿದೆ. ಇದೇ ಆತ್ಮವಿಶ್ವಾಸದಿಂದಲೇ ನಾವೆಲ್ಲರೂ ಕಾರ್ಯಮಾಡುವಾ ಮತ್ತು ಕರ್ನಾಟಕದ ಜಾಗೃತಿಯನ್ನು ಜಗತ್ತಿನ ನಿದರ್ಶನಕ್ಕೆ ತಂದುಕೊಡುವಾ.

ಹುಬ್ಬಳ್ಳಿ, ೧೦-೭-೨೪. ನಾ. ಸಾ. ಹರ್ಡೀಕರ.

ಕಡೂರು ತಾಲ್ಲೂಕು ಯಗಟಿ ಮತ್ತು ಪುರ.

ಈ ಎರಡು ಊರುಗಳ ಮಧ್ಯೆ ವೇದಾವತಿ ನದಿಯು ಹರಿದು ಹೋಗಿರುತ್ತದೆ. ನದಿಯ ಬಲಭಾಗದಲ್ಲಿ ಪುರವೆಂಬ ಗ್ರಾಮವೂ ಇದರ ಮುಂಭಾಗದಲ್ಲಿ ನದಿಯ ಪಕ್ಕದ ಅರೆ ಬಂಡೆಯಲ್ಲಿ ಶ್ರೀ ಪರಮೇಶ್ವರನು ಜಟಾಮುಕುಟದಿಂದ ಗಂಗಾಸಮೇತ ಉದ್ಭವಿಸಿ ಮಲ್ಲಿಕಾರ್ಜುನಸ್ವಾಮಿಯೆಂಬ ಹೆಸರಿನಿಂದ ತನ್ನ ಮಹಿಮೆಯನ್ನು ಪ್ರಕಟಪಡಿಸಿ ಪುಣ್ಯಕ್ಷೇತ್ರವಾಗಿ ಎರಡನೆ ಕಾಶಿಯಂತೆ ಪ್ರಸಿದ್ಧಿಯನ್ನು ಪಡದಿರುವ ವಿಚಾರವು ಜನಜನಿತವಾಗಿರುತ್ತದೆ. ಯಗಟಿ ಗ್ರಾಮದಲ್ಲಿ ಉತ್ಸವಸ್ವಾಮಿಯು ಭಾರಿದೇವಸ್ಥಾನವು ಇರುತ್ತದೆ. ಈ ದೇವರುಗಳ ಪೂಜಾವಿನಿಯೋಗವು ಪುರದ ಗ್ರಾಮದಲ್ಲಿರುವ ವೀರಶೈವ ಅರ್ಚಕರುಗಳದಾಗಿರುತ್ತದೆ. ಇವರು ಯಗಟಿಗೂ ಪುರಕ್ಕೂ ಮಧ್ಯೆಯಿರುವ ನದಿಯಲ್ಲಿ ಮಳೆಗಾಲದಲ್ಲಿ ಭಾರಿಯಾಗಿ ಪ್ರವಾಹ ಬಂದ ಕಾಲಕ್ಕೂ ಅಂಥಾ ಪ್ರವಾಹದಲ್ಲಿಯೆ ಯಗಟಿಯಲ್ಲಿರುವ ಸ್ವಾಮಿಯ ಪೂಜೆಗೆ ಪೂಜಾನೈವೇದ್ಯಸಾಮಗ್ರಿಗಳನ್ನು ತಲೆಯ ಮೇಲ್ಭಾಗದಲ್ಲಿ ಕಟ್ಟಿಕೊಂಡು ಪ್ರವಾಹದಲ್ಲಿ ಈಜಿಕೊಂಡು ಹೋಗುವದು ಆಶ್ಚರ್ಯವೂ ಮಹತ್ವವೂ ಆಗಿರುತ್ತದೆ. ಸದರಿ ಸ್ವಾಮಿಯವರ ರಥೋತ್ಸವವು ಪ್ರತಿ ಸಂವತ್ಸರ ಫಾಲ್ಗುಣ ಮಾಸದಲ್ಲಿಬರುವ ಮಘಾನಕ್ಷತ್ರದ ದಿವಸ ನಡಸಲ್ಪಡುತ್ತದೆ. ಈ ಜಾತ್ರೆಗೆ ದೂರದೇಶಗಳಿಂದ ಯಾತ್ರಾರ್ಥಿಗಳೂ ವ್ಯಾಪಾರಿಗಳೂ ಬಂದು ಲಕ್ಷಾಂತರ ರೂಪಾಯಿಗಳಿಗೆ ಮೇಲ್ಪಟ್ಟು ವ್ಯಾಪಾರ ನಡಯುತ್ತಾ ಜಾತ್ರೆಯು 15 ದಿವಸಗಳಿಗೆ ಜಾಸ್ತಿಯಾಗಿ ನಡಿಯುತ್ತದೆ. ಈ ದೇವಸ್ಥಾನವು ಮುಜರಾಯಿ ಇಲಾಖೆಗೆ ಸೇರಿ ಐದು ಜನ ಧರ್ಮದರ್ಶಿಗಳ ಮೇಲುತನಿಖೆಯಿಂದ ನಡಿಯಬೇಕಾಗಿರುತ್ತದೆ. ಜಾತ್ರೆ ಪೂರ್ತಿಯಾದ ನಂತರ ಈ ಜಾತ್ರೆಯಿಂದ ಸರ್ಕಾರ್ಕೆ 500-600 ರೂಪಾಯಿಗಳವರೆಗೆ ಉತ್ಪತ್ತಿ ಇರುತ್ತೆ. ಈ ರೀತಿಯಾಗಿ ವಸೂಲು ಬಂದ ಹಣವೆಲ್ಲಾ ತಾಲ್ಲೂಕು ಟ್ರೆಜರಿಯಲ್ಲಿ ಇಡಲ್ಪಡುತ್ತೆ. ಈ ಮಲ್ಲಿಕಾರ್ಜುನಸ್ವಾಮಿಯವರಿಗೆ ನಮ್ಮ ಮೈಸೂರು ಸೀಮೆಯ ಅನೇಕ ಭಾಗಗಳಲ್ಲಿರುವ ವೀರಶೈವ ಮಹನೀಯರು ಭಕ್ತರಾಗಿರುತ್ತಾರೆ. ಸ್ವಾಮಿಯವರ ದೀಪಾರಾಧನೆ ಬಗ್ಗೆ ಅರ್ಚಕರ ಸಂಬಳಕ್ಕೂ ಪಕ್ಷೋತ್ಸವ ಮಾಸೋತ್ಸವ ಶ್ರಾವಣ ಕಾರ್ತೀಕಮಾಸ ವಗೈರೆ ಕಾಲಗಳಲ್ಲಿ ನಡಿಯುವ ಪೂಜಾ ವಗೈರೆಯಲ್ಲಾ ಸೇವೆಗಳು ಭಕ್ತರುಗಳ ಹಾಳುಲಾಗೋಡಿನಿಂದ ನಡಸಲ್ಪಡುತ್ತಾ ಬರುತ್ತಿದೆ. ಈಗ ನಾಲ್ಕು ವರ್ಷಗಳ ಲಾಗಾಯತು ಯಗಟಿ ಬ್ರಾಹ್ಮಣರು ತಮ್ಮ ಶ್ರೇಷ್ಠತೆಯನ್ನು ಪ್ರಬಲಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ರಥೋತ್ಸವಕಾಲದಲ್ಲಿ ತರಲೆ ತಕರಾರು ಒಡ್ಡಿ ರಥೋತ್ಸವದ ದಿವಸ ಸ್ವಾಮಿ ಪೂಜೆಯೂ ಸ್ವಾಮಿಯನ್ನು ಹೊತ್ತುಕೊಂಡು ಹೋಗಿ ರಥಾರೋಹಣ ಮಾಡಿಸಿ ಮೂರು ಉರುಡುಯಳೆಯುವದೂ ತಮ್ಮದು ಎನ್ನುವದೇ ಇವರ ವ್ಯಾಜ್ಯ. ಈ ಕಾರಣದಿಂದ ವೀರಶೈವರಿಗೂ ಬ್ರಾಹ್ಮಣರಿಗೂ ವ್ಯಾಜ್ಯ ಹುಟ್ಟಿ ಕಾಲಕ್ಕೆ ಸರಿಯಾಗಿ ರಥನಡಿಯದೆ ಬಂದಿದ್ದ ಭಕ್ತರುಗಳ ಸೇವೆಗೆ ತೊಂದರೆಯುಂಟಾಗುತ್ತಿರುವ ಸಂಗತಿಯನ್ನು ಹೇಳಲಾಗುವದಿಲ್ಲ. ಆ ಲಾಗಾಯತು ಈ ವ್ಯಾಜ್ಯವು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರಲ್ಲಿ ನಡಿಯುತ್ತಾ ಬಂದಿರುತ್ತೆ. ಅವರ ಒಬ್ಬೊಬ್ಬರ ಕಾಲದಲ್ಲಿ ಒಂದೊಂದು ವಿಧವಾದ ಆರ್ಡರುಗಳು ಉಂಟಾಗಿರುತ್ತವೆ. ಈ ವಿಚಾರದಲ್ಲಿ ಅರ್ಚಕರಿಗೆ ವಿರೋಧಿಗಳಾದ ಶಾಸ್ತ್ರಾರು ಜನರುಗಳ ವಿಚಾರಣೆ ಮಾಡಿಕೊಂಡು ಆರ್ಡರ್ ಮಾಡಿರುವದಾಗಿ ತಿಳಿಯುತ್ತೇನೆ. ಈ ವರ್ಷವೂ ರಥೋತ್ಸವ ಕಾಲಕ್ಕೆ ಸರಿಯಾಗಿ ಬ್ರಾಹ್ಮಣರು ಮೇಲ್ಕಂಡ ರೀತ್ಯಾ ಆರ್ಡರು ಪಡದಿರುತ್ತಾರೆ. ಆ ಪ್ರಕಾರ ಯಾರೂ ರಥ ಮುಟ್ಟದೆ ದೂರವಾಗಿ ನಿಂತಿರುವಂತೆ ಆರ್ಡರು ಜಾರಿಮಾಡಲು ಆ ಕಾಲಕ್ಕೆ ದಯಮಾಡಿಸಿದ್ದ ಸರ್ಕಾರಿ ಆಫೀಸರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರು ಸಬ್ ಡಿವಿಜನ್ ಸಾಹೇಬರು ತಾಲ್ಲೂಕು ಅಮಲ್ದಾರರೂ ಪೋಲೀಸ್ ಇನ್‌ಸ್ಪೆಕ್ಟರವರೂ ಸಹಾ ದಯಮಾಡಿಸಿದ್ದರು. ಈ ವೀರಶೈವರನ್ನು ಕರಸಿ ಈ ವರ್ಷಕ್ಕೆ ಸರ್ಕಾರಿ ಅಪ್ಪಣೆಯಂತೆ ಬ್ರಾಹ್ಮಣರಿಗೆ ಸೇವಾ ನಡಿಸುವದಕ್ಕೆ ಕೊಡಿಯೆಂದು ಅಪ್ಪಣೆ ಮಾಡಿದ್ದರಿಂದ ವೀರಶೈವರು ಬಿಟ್ಟುಕೊಟ್ಟರು. ಮಧ್ಯಾಹ್ನ 12 ಗಂಟೆಗೆ ರಥೋತ್ಸವವು ನಡಿಯಬೇಕಾದ್ದು ರಾತ್ರಿ 10 ಗಂಟೆಗೆ ನಡಿಸಲ್ಪಟ್ಟಿತು. ಬ್ರಾಹ್ಮಣರು ರಾತ್ರಿ 8 ಗಂಟೆಗೆ ದೇವರನ್ನು ರಥದ ಮೇಲಿರಿಸಿದ ನಂತರ ರಥ ಎಳಿಯುವಂತೆ ಆಫೀಸರು ತಿಳಿಸಿದರು. ಬ್ರಾಹ್ಮಣರಿಂದ ಎರಡು ಗಂಟೆಗಳ ಕಾಲ ನಿರೀಕ್ಷಣೆಮಾಡಿದಾಗ್ಯೂ ರಥಯಳಿಯಲಿಕ್ಕೆ ಆಗಲಿಲ್ಲ. ನಂತರ ಡೆಪ್ಯುಟಿ ಕಮಿಷನರ್ ಸಾಹೇಬರವರು ಬ್ರಾಹ್ಮಣರನ್ನು ರಥದಿಂದ ಇಳಿಸಿ ವೀರಶೈವರುಗಳಿಗೆ ರಥ ಯಳಿಯಲು ಅಪ್ಪಣೆಮಾಡಿದ ತರುವಾಯ ಅರ್ಚಕರುಗಳಿಂದ ಮಂಗಳಾರ್ತಿ ಮಾಡಿಸಿ ರಥಯಳಿಯಲು ರಥವು ಸಾಗಿ ರಾತ್ರಿ 10 ಗಂಟೆಗೆ ಪೂರ್ತಿ ಮಾಡಲ್ಪಟ್ಟಿತು. ಇದೇರೀತಿ ರಿಕಾರ್ಡುಮಾಡಲು ಮಹಾಸ್ವಾಮಿಯವರಾದ ಡೆ|| ಕ|| ರವರು ತಿಳಿಸಿದ್ದರೂ ರಿಕಾರ್ಡು ಮಾಡಿರುವ ಸಂಗ್ತಿ ಗೊತ್ತಿಲ್ಲ. ಸೇವೆಗೆ ಬಂದಿದ್ದ ಭಕ್ತಾದಿಗಳೆಲ್ಲರೂ ಹಗಲೆಲ್ಲಾ ಉಪವಾಸವಿದ್ದು ರಾತ್ರಿ 12 ಗಂಟೆಗೆ ಊಟಮಾಡಿದರು. ಅದುವರಿಗೆ ಉಪವಾಸವಿದ್ದ ಮಕ್ಕಳು ಮರಿಗಳ ಗತಿಯೇನಾಗಿರಬಹುದು? ಈ ದೇವಸ್ಥಾನದಲ್ಲಿ ವೀರಶೈವರೇ ಅರ್ಚಕರಾಗಿದ್ದು 360 ದಿವಸವೂ ಕಷ್ಟಪಟ್ಟು ಎಲ್ಲಾ ಸೇವೆಗಳನ್ನು ಅರ್ಚಕರುಗಳು ಮತ್ತು ಭಕ್ತಾದಿಗಳು ಸ್ವಂತ ಲಾಗೋಡಿನಿಂದ ನಡಸಿಕೊಂಡು ಬಂದು ರಥೋತ್ಸವದ ದಿವಸದಲ್ಲಿ 2-3 ಗಂಟೆಗಳ ಕಾಲ ಮಾತ್ರ ಬ್ರಾಹ್ಮಣರ ವಶಕೊಟ್ಟು ಬಾಕಿಯವರೆಲ್ಲಾ ಮುಟ್ಟದಂತೆ ದೂರವಾಗಿ ನಿಂತಿರುವಂತೆ ಅಪ್ಪಣೆಮಾಡಿರುವದು ಪಕ್ಷಪಾತವಲ್ಲದೆ ಎಷ್ಟು ನ್ಯಾಯವಾಗಿರುವದೆಂಬುವದನ್ನು ಘನ ಸರ್ಕಾರದವರು ಯೋಚಿಸಬೇಕು. ಈ ರೀತಿಯಾಗಿ ದೂರವಾಗಿ ನಿಂತಿರಬೇಕೆನ್ನುವದರಿಂದ ಬಹಳ ಜನರಿಗೆ ದುಃಖವೂ ಅಗೌರವವೂ ಉಂಟಾಗದೆ ಇರಲಾರದು. ಈ ರೀತಿಯಾದ ಆರ್ಡರುಗಳು ಮತಪಕ್ಷಪಾತದಿಂದ ದಾಕ್ಷಿಣ್ಯಕ್ಕೆ ಉಂಟಾದವುಗಳು ಎಂದು ಖಂಡಿತವಾಗಿ ಹೇಳಬಹುದಲ್ಲವೆ? ಬ್ರಾಹ್ಮಣರೇ ಅರ್ಚಕರಾಗಿರುವ ನಂಜನಗೂಡು ಸೋಮಪುರ ವಗೈರೆ ದೇವಾಲಯಗಳಲ್ಲಿ ವೀರಶೈವರನ್ನು ಬಿಡುತ್ತಾರೆಯೆ? ಬೇಲೂರು ಮೇಲ್ಕೋಟೆ ಶ್ರೀರಂಗಪಟ್ಟಣ ವಗೈರೆ ದೇವಸ್ಥಾನಗಳಲ್ಲಿ ಶ್ರೀ ವೈಷ್ಣವರು ಅರ್ಚಕರಾಗಿರುವದರಿಂದ ಸ್ಮಾರ್ತಾದಿ ಬ್ರಾಹ್ಮಣರನ್ನು ಒಳಗೆ ಬಿಡುತ್ತಾರೆಯೆ? ಶ್ರೀರಂಗಪಟ್ಟಣದ ದೇವಸ್ಥಾನಕ್ಕೆ ಶ್ರಿಂಗೇರಿ ಸ್ವಾಮಿಗಳು ದಯಮಾಡಿಸಿದ್ದಾಗ ದಿವಾನ್ ಶೇಷಾದ್ರಯ್ಯರ್‌ರವರು ದೇವಸ್ಥಾನದ ಒಳಗೆ ಪ್ರವೇಶಮಾಡಿಸಿ ಪೂಜಾ ಮಂಗಳಾರ್ತಿ ಮಾಡಿಸಿದ್ದಕ್ಕಾಗಿ ಶ್ರೀ ವೈಷ್ಣವರು ವಿವಾದಮಾಡಿ ಪರಿಶುದ್ಧ ಮಾಡಿಕೊಳ್ಳತಕ್ಕ ಬಗ್ಗೆ ಸರ್ಕಾರದಿಂದ ಹಣ ಕೊಡಿಸಿದ್ದು ಘನ ಸರ್ಕಾರಕ್ಕೆ ಗೊತ್ತೇ ಇರುತ್ತೆ. ಈ ಯಗಟಿ ಪುರದ ದೇವಸ್ಥಾನದಲ್ಲಿ ಗರ್ಭಗುಡಿಯೊಳಗಡೆ ಇವರ ಪ್ರವೇಶವು ಯಾವಾಗಲೂ ಇರಲಿಲ್ಲ, ಶಿವರಾತ್ರಿ ಶ್ರಾವಣಮಾಸ ಕಾರ್ತೀಕ ಮುಂತಾದ ವಿಶೇಷ ಕಾಲಗಳಲ್ಲೂ ಇವರ ಪ್ರವೇಶವಿಲ್ಲ. ರಥೋತ್ಸವ ಕಾಲದಲ್ಲಿ ಮಾತ್ರ ಜನರಮ್ಮಕ್ಕಾಗಿ ಮಾಡಿಕೊಂಡಿರುವ ಪಾರ್ವತಿ ಪರಮೇಶ್ವರ ಎಂಬ ಎರಡು ವಿಗ್ರಹಗಳನ್ನು ಬ್ರಾಹ್ಮಣ ಪುರೋಹಿತರಿಂದ ದೇವಸ್ಥಾನದ ಮುಂಭಾಗದ ರಂಗಮಂಟಪದಲ್ಲಿ ಆಗಮನಮಾಡಿಸುತ್ತಾ ಬಂದಿರುತ್ತೆ. ಈ ರೀತಿಯಾಗಿ ನಡಿಯುತ್ತಾ ಬಂದಿರುವದಕ್ಕೆ ಬದಲಾಗಿ ಆ ದಿವಸದ ಪೂರ್ಣ ಹಕ್ಕನ್ನೇ ಉಂಟುಮಾಡಿಕೊಳ್ಳಬೇಕೆಂಬ ಇರಾದೆಯಿಂದ ಅಧಿಕಾರ ಬಲದಿಂದಲೂ ದರ್ಪದಿಂದಲೂ ಆಯಾಯ ಕಾಲದಲ್ಲಿ ಬರುವ ಸ್ವಮತೀಯರಾದ ಅಧಿಕಾರಿಗಳ ದಯೆಸಂಪಾದಿಸಿಕೊಂಡು ದೇವಸ್ಥಾನದ ಪೂರ್ಣ ಹಕ್ಕನ್ನೇ ಉಂಟುಮಾಡಿಕೊಳ್ಳಬೇಕೆನ್ನುವದೇ ಇವರ ಅಂತರಂಗದ ಪ್ರಯತ್ನವಾಗಿ ಕಾಣುತ್ತದೆ. ಇಷ್ಟೆಲ್ಲಾ ಇರುತ್ತ ಯಾವ ವಿಚಾರವೂ ನಡಿಯದೆ ಇನ್ನೊಂದು ವಿಧವಾದ ಹೊಸ ಆರ್ಡರು ಉಂಟಾಗಿರುವದಾಗಿ ಕೇಳುತ್ತೇನೆ. ಅದು ಯಾವ ಆಧಾರದ ಮೇಲೆ ಕೊಟ್ಟಿರುತ್ತಾರೆಯೋ ತಿಳಿಯಲಿಲ್ಲ. ಈ ದೇವರಿಗೆ ಸುಮಾರು 50 ಸಾವಿರ ರೂಪಾಯಿಗಳವರಿಗೆ ಇರುವ ಆಭರಣಗಳು ಪುರ ಮತ್ತು ಯಗಟಿಯಲ್ಲಿರುವ ಭಾರಿ ದೇವಸ್ಥಾನ ವಗೈರೆ ಕೆಲಸ ಕಾರ್ಯಗಳು ಬ್ರಾಹ್ಮಣರ ಹೊರತು ವೀರಶೈವರು ವಗೈರೆ ಭಕ್ತರುಗಳದಾಗಿರುತ್ತೆ. ಬ್ರಾಹ್ಮಣರಿಂದ ಯಾವ ವಿಧವಾಗಿಯೂ ಯಾವಾಗಲೂ ಒಂದು ಕಾಸಿನ ವರಮಾನವಿರುವದಿಲ್ಲ. ಈ ವ್ಯಾಜ್ಯಕಾರಣದಿಂದ ಸ್ವಾಮಿ ಸೇವೆಗೆ ಉಂಟಾದ ಕುಂದುಕದಿಂದ ಈಗ ನಾಲ್ಕು ವರ್ಷಗಳ ಲಾಗಾಯತು ಈ ಪ್ರಾಂತ್ಯಕ್ಕೆ ಮಳೆ ಬೆಳೆಯಿಲ್ಲದೆ ಕ್ಷಾಮವುಂಟಾಗಿ ಜನ ಜಾನುವಾರುಗಳು ಪಡುವ ಕಷ್ಟವನ್ನು ಹೇಳಲಸಾಧ್ಯವಾಗಿರುತ್ತೆ. ಇದಕ್ಕೆಲ್ಲಾ ಕಾರಣಸ್ಥರು ಈ ಧರ್ಮದರ್ಶಿಗಳ ಪೈಕಿ ಇಬ್ಬರು ಶಾನುಭೋಗರು ಬಾಕಿ ಧರ್ಮದರ್ಶಿಗಳನ್ನು ತಮ್ಮ ಕಡೆ ಸೇರಿಸಿಕೊಂಡು ತಮ್ಮ ಇಷ್ಟ ನೆರವೇರಲಿಕ್ಕೆ ಅನುಕೂಲವಾಗಿ ಜನಗಳಿಗೆ ದುರ್ಬೋಧನೆ ಮಾಡುತ್ತಾ ಪುರದಲ್ಲಿರುವ 16 ಮನೆ ಕಮ್ಮಿ ತಿಳುವಳಿಕೆಯುಳ್ಳ ಅರ್ಚಕರುಗಳಲ್ಲಿ ಒಬ್ಬರೊಬ್ಬರಿಗೆ ವ್ಯಾಜ್ಯಹಚ್ಚಿ ಪಾರ್ಟಿ ಹುಟ್ಟಿಸಿ ಸದ್ಯದ ಸ್ವಾಮಿಯ ನಿತ್ಯಗಟ್ಟಿ ಪೂಜೆಗೂ ಭಂಗತರುವವರಾಗಿರುತ್ತಾರೆ. ಇವರ ಕುಹಕ ತಂತ್ರದಿಂದ ಏನಾಗಿದೆ ಎಂದರೆ ಸನ್ಯಾಸಿ ಕಡಿದ ನಾಯಿಯು ಪಾಪಕ್ಕೆ ಬೀಳುವವರೆಗೂ ಸೋವು ತಿನ್ನುವವನ ಗತಿ ಏನಾಗಬೇಕು? ಎನ್ನುವ ಗಾದೆಗೆ ಸಮನಾಗಿ ಈ ಪ್ರಾಂತ್ಯದ ಬಡ ಪ್ರಜೆಗಳ ಸ್ಥಿತಿಯಾಗಿರುತ್ತೆ. ತಕ್ಷಣ ಈ ವಿಚಾರದಲ್ಲಿ ನಮ್ಮನ್ನಾಳುವ ಮಹಾಸ್ವಾಮಿಯವರ ಧರ್ಮ ಸರ್ಕಾರದವರು ಈ ವಿಚಾರದಲ್ಲಿ ನ್ಯಾಯಾನ್ಯಾಯ ಪರಿಶೀಲನೆ ಮಾಡಿ ಸರ್ವಸಮ್ಮತವಾದ ತೀರ್ಮಾನಮಾಡಿ ದೇವತಾ ಸೇವೆಗೆ ಉಂಟಾಗಿರುವ ನಿರ್ಬಂಧವನ್ನು ತಪ್ಪಿಸಿ ನಿಷ್ಪಕ್ಷಪಾತಿಗಳಾದ ಧರ್ಮದರ್ಶಿಗಳನ್ನು ನೇಮಕಮಾಡಿ ದೇವರ ಸೇವೆ ಸರಿಯಾಗಿ ನಡಿಯುವಂತೆ ಏರ್ಪಡಿಸಿ ದೇಶಕ್ಕೂ ಈ ನಮ್ಮ ಪ್ರಾಂತ್ಯಕ್ಕೂ ಕ್ಷೇಮವನ್ನುಂಟುಮಾಡಬೇಕಾಗಿ ಬೇಡುವ,

ಒಬ್ಬ ನಿಷ್ಪಕ್ಷಪಾತಿಯಾದ ಭಕ್ತ.

ಡಿಟೆಕ್ಟಸ್ಕೋಪ್ (ಅಮೇರಿಕನ್ ಯಂತ್ರ.)

ಈ ಯಂತ್ರದ ಆಶ್ಚರ್ಯವೇನಂದರೆ, ನಮ್ಮ ಹಿಂದುಗಡೆ ನಡೆಯುವ ಎಲ್ಲಾ ಮರ್ಮ ರಹಸ್ಯ ಕೆಲಸಗಳನ್ನು ಹಿಂತಿರುಗಿ ನೋಡದೆಯೇ ಇದರಲ್ಲಿ ಕಾಣಬಹುದು. ಮದುವೆಮನೆ, ನಾಟಕ ಕಂಪನಿ, ಮುಂತಾದ ಜನಭರಿತವಾದ ಸ್ಥಳಗಳಲ್ಲಿಯೂ, ರಸ್ತೆಗಳಲ್ಲಿಯೂ ಹಿಂದೆ ಯಾರು ಯಾರು ಇದ್ದಾರೆ, ಏನೇನು ಕೆಲಸಗಳು ನಡೆಯುತ್ತಿವೆ ಎಂಬುದನ್ನು ವಿವರವಾಗಿ ತಿಳುಕೊಳ್ಳಬಹುದು. ಯಂತ್ರ 1ಕ್ಕೆ ಕ್ರಯ ರೂ. 1—8—0

ಸಿಟಿ ವಾಚ್ ಕಂಪನಿ ೨೩ ತಿರುಪಳ್ಳಿ ಬೀದಿ
[4—1] ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
22 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಮೈಸೂರು.
ಮಳೆಗಾಲಕ್ಕಾಗಿ.

ಅನೇಕ ನಮೂನೆ ಕಾಸ್ಮೀರ್‌ಶಾಲುಗಳನ್ನು ಹೆಚ್ಚಾಗಿ ತರಿಸಿ ಬಹು ಸುಲಭ ಬೆಲೆಯಿಂದ ಬಿಕರಿಮಾಡುತ್ತಲಿದೇವೆಯಾಗಿ ಪ್ರತಿನಿತ್ಯವೂ ಅನೇಕ ಬಿಕರಿಯಾಗುತ್ತಲಿವೆ. ಇದರಡೀ ನಮೂದಿಸಿರುವ ಖರೀದಿಯ ಶಾಲುಗಳ ಪೈಕಿ ನಿಮಗೆ ಬೇಕಾದ ಖರೀದಿಯದಕ್ಕೆ ಆರ್ಡರ್ ಕೊಟ್ಟಲ್ಲಿ ನಂಬಿಗೆಯಿಂದ ನೀವಿದ್ದೆಡೆಗೆ ರವಾನಿಸುತ್ತೇವೆ.

ಬಾರ್ಡರ್‌ಹಾಕಿದ ಉಲ್ಲನ್ ಶಾಲುಗಳು 1ಕ್ಕೆ 12-4-0, 13-2-0, 14-8-0, 15-4-0, 16-8-0, 17-2-0, 18-12-0, 19-8-0, 20-4-0, 21-8-0, 22-12-0, 23-8-0, 24-2-0, 25-4-0, 27-8-0, 30-0-0, 32-8-0, 34-4-0, 37-8-0, 48-8-0 ಮೇಲ್ಪಟ್ಟು 65 ರೂಪಾಯಿವರುವಿಗೆ ಸ್ಟಾಕಿನಲ್ಲಿವೆ.

ಖಾತ್ರಿಯಾದ ಚೇಳಿನ ಔಷಧ ಪೆಟ್ಟಿ 1ಕ್ಕೆ 0-8-0, 12ಕ್ಕೆ 4-8-0,

"ನ್ಯಾಷನಲ್ ಇಂಕ್‌ಪೌಡರ್ ಪ್ಯಾಕೆಟ್" 1ಕ್ಕೆ 1-0-0.

M.S.SIDDAPPA & BROS

ಅನೇಕ ನಮೂನೆ ಟೈಂಪೀಸುಗಳು ಸೀಮೆಯಿಂದ ಹೆಚ್ಚಾಗಿ ಸಪ್ಲೈ ಆಗಿರುತ್ತಾಗಿ ಖರೀದಿ ಬಹಳ ಕಡಮೆಯಾಗಿರುತ್ತೆ. ಕೊಂಡುಕೊಳ್ಳುವವರಿಗೆ ಇದು ಸುಸಮಯವಾಗಿರುತ್ತಾಗಿ ಇದರಡಿ ನಮೂದಿಸಿರುವ ಖರೀದಿ ಟೈಂಪೀಸುಗಳ ಪೈಕಿ ನಿಮಗೆ ಬೇಕಾದ ಖರೀದಿ ಟೈಂಪೀಸಿಗೆ ಆರ್‌ಡರ್ ಕೊಡುವುದಲ್ಲದೆ 1-0-0 ರೂ. ಅಡ್ವಾನ್ಸ್ ರವಾನಿಸಿದಲ್ಲಿ ಉತ್ತಮವಾದದನ್ನು ಚುನಾಯಿಸಿ ನಂಬಿಗೆಯಿಂದ ರವಾನಿಸಲಾಗುತ್ತೆ. ಸಾದಾ ಟೈಂಪೀಸ್ 1ಕ್ಕೆ 3-4-0, 3-6-0.

ಅಲಾರಂಟೈಂಪೀಸುಗಳು 4-4-0, 5-2-0, 6-8-0, 7-0-0, 7-12-0, 8-4-0, 9-8-0, 10-2-0, ಮೇಲ್ಪಟ್ಟಿರುತ್ತೆ.

ಗಂಟೆ $\frac{1}{2}$ ಗಂಟೆ ಹೊಡೆದು ಅಲಾರಂ ಸಹಾ ಬಾರಿಸುವ ಟೈಂಪೀಸುಗಳು 7-14-0, 8-8-0, 17-8-0, 18-12-0.

ಕರ್ಣಾನಂದವಾಗಿ ಗಾನಮಾಡುವ ಕ್ಯಾರೇಜ್ ಕ್ಲಾಕ್ 1ಕ್ಕೆ 15-8-0, 16-4-0

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—42] ಮೈಸೂರು.

೧೯೨೪ ನೆಯ ಇಸವಿ ಜುಲೈ ತಾ|| ೨೦ ರಿಂದ ೧೯೨೪ ನೆಯ ಇಸವಿ ಜುಲೈ ತಾ|| ೨೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಆಷಾಢ ಬಹುಳ ಚೌತಿಯಿಂದ ಆಷಾಢ ಬಹುಳ ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾ ಮಾಸ
20	ಭಾನು	ಚೌತಿ	13-8	ಶತ	3-49	6
21	[1] ಸೋಮ	ಪಂಚ	11-50	ಪೂಭಾ	4-10	7
22	[2] ಮಂಗಳ	ಷಷ್ಠಿ	11-46	ಉಭಾ	5-43	8
23	ಬುಧ	ಸಪ್ತ	13-0	ರೇವ	8-33	9
24	ಗುರು	ಅಷ್ಟ	15-23	ಅಶ್ವಿ	12-33	10
25	[3] ಶುಕ್ರ	ನವ	18-58	ಭರ	17-38	11
26	ಶನಿ	ದಶ	23-19	ಕೃತ್ತಿ	23-33	12

(1) ಟೀಕಾಚಾರ್ಯರಪುಣ್ಯದಿನ. (2) ಶ್ರೀ ಚಾಮುಂಡೇಶ್ವರೀ ಜನ್ಮೋತ್ಸವ, ಮೇಲುಕೋಟೆಯಲ್ಲಿ ಕೃಷ್ಣರಾಜಮುಡೀ ಉತ್ಸವ, ಜಯಚಾಮರಾಜಒಡೆಯರವರ ವರ್ಧಂತಿ, ಅನುಷ್ಠಾನದಿನವು. (3) [illegible].

ಮೈಸೂರು : ವೈ. ಪಟ್ಟಾಭಿರಾಮಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನು[illegible] ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಜುಲೈ ತಾರೀಖು ೨೭ ನೆಯ ಭಾನುವಾರ. [ಸಂಚಿಕೆ ೩೦

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.
ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.



ದೊಡ್ಡವರ
ಶೀತ, ನೆಗಡಿ,
ಶೀತ[illegible],
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಕ್ಷೀಣಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
[illegible] ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ನೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.
ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
25 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ! ಸುಲಭಕ್ರಯ!!

ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.
ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—47] ಪ್ರೊ. ಬಾ. ೫೧, ಮದರಾಸು.

(Registered Trade Mark)

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
23 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಪಟ್ಟಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹಂದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಜಗತ್ತಿನ ನಿಜವಾದ] ಅಗತ್ಯ ಓದಿರಿ ವಿಶ್ವಾಸ ಇಡಿರಿ [ಗುಟ್ಟು ನೋಡಿರಿ
ನಂಬಿ ನಡೆದವರಿಗೆ ಗಂಭೀರವಾದ ಗುಣ.
೧೦೦೦ ರೂ. ಇನಾಮು.

ಸ್ವಲ್ಪ ಖರ್ಚಿನ ಕಡೆಗೆ ನೋಡಿ ರೋಗಕಾಯ್ದು ಕೊಳ್ಳಬೇಡಿರಿ.

ಮಿರಜದಲ್ಲಿಯ ಆಯುರ್ವೇದಿಕ ಸುಪ್ರಸಿದ್ಧ ವೈದ್ಯ ಇವರ ಸರ್ವೋತ್ಕೃಷ್ಟ.
ವಜ್ರಾಂಗಸುಂದರಪಾಕ.

ಧಿಕ್ಕಾರ ಮಾಡಿದರೆ ಕುಕ್ಕರಸಿ ಹೋದೀರಿ.

ಇದನ್ನು ಸೇವನೆ ಮಾಡುವುದರಿಂದ ಬೇಕಾದಂಥ ಧಾತುಜನ್ಯವಿಕಾರ ವೀರ್ಯಸ್ಥಾನದ ಹುಣ್ಣು (ಕಡಕಿ) ಮುಷ್ಟಿಯಿಂದ ಆಗುವ ಧಾತುಶಿಥಿಲತ್ವ ಮತ್ತು ನಪುಂಸಕತ್ವ, ಸ್ವಪ್ನಾವಸ್ಥೆ ಹಾಗೂ ಮೂತ್ರಕಾಲದಲ್ಲಿ ವೀರ್ಯಸ್ಖಲನವಾಗೋಣ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಧಾತು ಒಸರೋಣ, ವೀರ ನಳ್ಳಗೆ ಹಾಗೂ, ರೋಗಿಇದ್ದು, ಸಂತತಿ ಬಂದುಆಗೋಣ, ಸಂದು ಬೆನ್ನು, ಕೆಡುವು, ಕಾಲು ನೊದಲಾದವುಗಳು ನೋಯೋಣ, ಎದೆಯಲ್ಲಿ ನೋಯೋಣ (ಹಾರ್ಟಡಿಸಿಜ) ಎಲುವಿನ ಉರಿ, ಕಫಕ್ಷಯ, ಪಾಂಡುರೋಗ, ಮೂಲವ್ಯಾಧ, ಮತ್ತು ಮುಖರೋಗ ಹಳೆಹುಣ್ಣು, ಎಲ್ಲ ಉಷ್ಣರಸಾಯನದ ವಿಕಾರ, ಚರ್ಮವಿಕಾರ, ಬೇಕಾದ ನೆಟ್ಟಗಾದ ಜ್ವರದ ಅಸಕ್ತತೆ, ಜಾಗರನೆಯಿಂದಾಗುವ ಬಾಧೆ, ಮಾನಸಿಕದಿಂದ ಆಗುವ ಕ್ಷೀಣತೆ, ಕೈಕಾಲು ಮತ್ತು ಮೂತ್ರದ ಸ್ವಚ್ಛತೆ, ಎಲ್ಲ ಪಿತ್ತವಿಕಾರ, ಸ್ಮೃತಿಕ್ಷೀಣ, ನಿದ್ರೆ ಹತ್ತದಿರೋಣ, ಮೇಲಿಂದ ವೇಳೆ ಗರ್ಭಪಾತವಾಗೋಣ, ಅನಿಯಮಿತ ಕಾಲದಲ್ಲಿ ಕಡೆಗಾಗೋಣ, ಗರ್ಭಾಶಯ ವಿಕಾರದ ದೆಸೆಯಿಂದ ಸಂತತಿ ಆಗದಿರೋಣ ಮುಂತಾದ ಅನೇಕ ಮಹಾ ಕೆಟ್ಟರೋಗಗಳು ಬಾಲ-ಬಾಲಕಿ ತರುಣ-ತರುಣೆ ವೃದ್ಧ-ವೃದ್ಧೆಯರಲ್ಲಿ ಬೇಕಾದವರಿಗೆ ಇದ್ದರೂ, ಕೂಡಲೇ ನಾಶವಾಗಿ ಅತಿಶಯ ಹಸಿವೆಯಾಗುತ್ತದೆ. ಹಾಗೂ ಬಹಿರ್ದೇಶೆ ಸಾಫ ಆಗುತ್ತದೆ. ರಕ್ತಶುದ್ಧಿಯಾಗುತ್ತದೆ. ವೀರ್ಯದ ಬೆಳವಣಿಗೆಯಾಗುವದಲ್ಲದೆ ಘಟ್ಟಿಯಾಗುತ್ತದೆ. ಮತ್ತು ಪುರುಷತ್ವಕ್ಕೆ ಬಲಬರುತ್ತದೆ. ವೀರ್ಯಕ್ಕೆ ಸ್ಥಿರತ್ವ ಬಂದು ಕಾಮವಾಸನೆವುಂಟಾಗುವುದು ಮತ್ತು ಸಂತತಿಯಾಗಲಿಕ್ಕೆ ವಿಶೇಷ ಅನುಕೂಲವಾಗುವುದು.

ಇಂಥ ಮಹತ್ವದ ಧಾತುಪೌಷ್ಟಿಕ, ಖಾತ್ರಿಯ ಮತ್ತು ಜಿದ್ದಿನ ಸ್ವಲ್ಪ ಬೆಲೆಯ, ಬಹಳ ಗುಣಕಾರಿಯುಳ್ಳ ಪಾಕವನ್ನು ಇಂದಿನವರೆಗೆ ಈ ಜಗತ್ತಿನಲ್ಲಿ ಯಾರೂ ತಯಾರಮಾಡಿಲ್ಲ. ಶರೀರ ಸಂಪತ್ತು ಹಾಗೂ ಕಾಮೇಚ್ಛೆಯುಳ್ಳ ಮನುಷ್ಯರೂ ಕೂಡ ಒಮ್ಮೆ ಇದನ್ನು ಸೇವನೆ ಮಾಡಿ ನೋಡಿದರೆ ಇತರ ಮಹತ್ವವು ಸಹಜವಾಗಿ ಕಂಡುಬರುವುದು

ಈ ಪಾಕದಲ್ಲಿ ಒಳ್ಳೇ ಕಷ್ಟದಿಂದ ದೊರಕಿಸಿ ಹಾಕಿದ, ಬಹು ಬೆಲೆಯುಳ್ಳ, ಆರಿಸಿದ ೫೨ ವನಸ್ಪತಿಗಳುಂಟು. ಅವು ಯಾವವೆಂದರೆ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಲಕಂದ, ಶ್ರೇಷ್ಠಕಂದ, ಶಾಲ್ಮಲೀಕಂದ, ಅಶ್ವಗಂಧ, ಮುಸಳೀಕಂದ, ಸೇವರಿ (ಚೊಗಚಿ) ಕಂದ, ದ್ವಿಪಾಂತರವಚಾಕಂದ, ಕವಚಬೀಜ, ಮುದ್ರಕೋಕದ ಬೀಜ, ಶನಬೀಜ, ಸಾಗಬೀಜ, ವಿಜಯಬೀಜ, ಭೋಕರೆಬೀಜ, ನವಲಬೀಜ, ಚಿಕಣದ ಪಂಚಾಂಗ, (೫ ಅಂಗ) ಅಡವೀ ಎಳ್ಳಿನ ಪಂಚಾಂಗ, ಅಡವಿ ಉದ್ದಿನ ಪಂಚಾಂಗ, ಪಿತಾಪತ್ರ, ಶಮಿಪತ್ರ, ಜಾಯಪತ್ರ, ಜಾಯಫಳ, ಮದನಮಸ್ತ, ರತನಪುರುಷ, ರೂಮಾಮುಸ್ತಕ, ಕಮರಕಸ, ಕಫಲ್ಯಾಗೊಂದ, ಪಂಜಾಬಿಮಿಶ್ರ, ವಂಶಲೋಚನ, ಸಾಲಮಮಿಶ್ರ, ಸಫೇತಮಿಶ್ರ, ತಾಲೀಮಖಾನಾ, ಬೀಜಬಂಧ, ಚಿಗಿರಿಗೊರಸು, ಮೊಂಗಲ್ ಬೇದಾಣ, ಮೈದಾಣಲಕಡಿ, ಶತಾವರಿ ಹತ್ತಿಕಾಳಿನ ಸತ್ವ (ಮಗಜ), ಆಲದ ಹಾಲು, ವಾಳೇರಿಭಾತ, ಗೋಖರು, ಅಡವಿ ಬೆಂಡಿಯ ಬೇರು, ಗುಳವೇಲಸತ್ವ, ಇಸಫಗೋಲ, ಒಣನೆಲ್ಲಿಕಾಯಿ, ಶಿಲಾಜಿತ, ವರದಾರಾ, ಕೇಶರ, ಯಾಲಕ್ಕಿ, ಕಲ್ಲುಸಕ್ಕರೆ,

ಈ ಪ್ರಕಾರ ಮೇಲೆ ಕೊಟ್ಟ ಜೀನಸುಗಳಲ್ಲಿ, ಧಾತುಪೌಷ್ಟಿಕ, ಗುಣವಿಲ್ಲೆಂದು ತೋರಿಸಿಕೊಟ್ಟವರಿಗೆ ೧೦೦೦ ರೂ. ಇನಾಮು ಕೊಡುವೆವು. ಮುಂಜಾನೆ ೨ ತೊಲಿ ವಡೆ, ಹಾಗೂ ರಾತ್ರಿ ಊಟ ಆದನಂತರ ೨ ತೊಲಿ ವಡೆ, ಒಂದು ವೇಳೆ ಉಸುರುಬೆಚ್ಚಗಾದ ೨೦ ತೊಲಿ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಲುವ ೪೨ ತೊಲಿ ಪಾಕಿಗೆ ೫| ರೂ. ಮಾತ್ರ. ವಿ. ಪಿ. ಖರ್ಚು ಬೇರೆ. ಈ ಅಲ್ಪ ಕಿಮ್ಮತ್ತು ಚೈತ್ರಮಾಸದ ವರೆಗೆ ಮಾತ್ರ ಇರುವದು. ಕಾರಣತ್ವರೆಮಾಡಿರಿ.

ಕಾಗದ ಬರೆಯತಕ್ಕವರು ತಮ್ಮ ಪೂರ್ಣ ಅಡ್ರೆಸ್ ಪೋಸ್ಟ ಸಹ ಬರೆಯಿರಿ.

[50—50] ಪತ್ತಾ:—ವೈದ್ಯ ವಿ. ಎಸ್. ಕಾಪಸೆ,
ಮು. ಪೋ. ಮಿರಜ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ.	೧—೦—೦
ಕೇನೋಪನಿಷತ್ ಶಾಂಕರೀ	ರೂ.	೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ.	೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉನುಚಿಗಿ.

ಗ್ರಂಥಸಿಕ್ಕುವಸ್ಥಲ:—
ಹೊಸಮಠದ ಚನ್ನಯ್ಯನವರು ಹರಿಹರ,
24—16 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[50—28] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.
ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,
(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಗಾಯ, [illegible], ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೦ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—[illegible]] [illegible]

“ಮೈಸೂರು ಸ್ಟಾರ್” ಪತ್ರಿಕೆಯ ಬಹುಮಾನದ ಫಲಿತಾಂಶ.

1924 ನೇ ಫೆಬ್ರುವರಿ ತಾ|| ೨ ರ ಸಂಚಿಕೆಯಿಂದ ಜೂನ್ ತಾ|| ೨೨ನೆಯ ಸಂಚಿಕೆಯವರೆಗೆ ವಾರ 1ಕ್ಕೆ 30 ರಂತೆ 19 ವಾರಕ್ಕೆ 570 ನಂಬರುಗಳನ್ನು ಆರಿಸಿಕೊಂಡು ಲಾಟರಿ ಹಾಕಿದುದರಲ್ಲಿ ಈ ಕೆಳಗೆ ಕಂಡ 3 ನಂಬರುಗಳಿಗೆ ಬಹುಮಾನಗಳು ಬಂದಿರುತ್ತವೆ. ಆದುದರಿಂದ ಆ ನಂಬರನ್ನುಳ್ಳ ಮೂವರು ಚಂದಾದಾರರು 1924ನೇ ಫೆಬ್ರುವರಿ ತಾ|| ೨ರ ಸಂಚಿಕೆಯಿಂದ ಜೂನ್ ತಾ|| ೨೨ರ ಸಂಚಿಕೆಯವರೆಗೆ ಅಂದರೆ 19 ಸಂಚಿಕೆಗಳನ್ನು ತಮ್ಮ ಪೂರ್ಣ ಹೆಸರು ವಿಳಾಸಗಳನ್ನು ಸ್ಟಾರ್ ಪತ್ರಿಕೆಯ ತಮ್ಮ ಚಂದಾ ರಿಜಿಸ್ಟರ್ ನಂಬರು ಸಹಿತ ಕಳುಹಿಸಿಕೊಟ್ಟಲ್ಲಿ ಅವರ ಹೆಸರುಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಿ ಬಹುಮಾನದ ಹಣವನ್ನು ಮನಿಯಾರ್ಡರ್ ಮೂಲಕ ಕಳುಹಿಸಿಕೊಡುತ್ತೇವೆ. ಬಹುಮಾನ ಬಾರದಿರುವ ನಂಬರನ್ನುಳ್ಳವರು ಕಳುಹಿಸಬೇಕಾದುದಿಲ್ಲವು. ಮ್ಯಾನೇಜರ್.

ಒಂದನೆಯ ಬಹುಮಾನ **3695**ನೇ ನಂಬರಿಗೆ ಬಂದಿರುತ್ತದೆ.
ಎರಡನೆಯ ,, **1400** ,, ,,
ಮೂರನೆಯ ,, **2600** ,, ,,

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಜುಲೈ ತಾ|| ೨೭ ನೆಯ ಭಾನುವಾರ.

FLOODS IN MYSORE.

We are having a repetition of last year's floods in much greater severity this year causing considerable havoc in all the affected areas. The Government have done well in issueing a *communique* on the 24th July 1924 with regard to the situation created by the floods, which has been followed by another. While we are thankful for the promptness in which the Government have taken and intends to take relief measures, we are afraid that the Government are not fully aware of the terrible distress in all the flooded areas. The situation was bad enough when the first *communique* was issued. The Cauvery rose to nearly 15 feet over the Krishnarajasagara dam' 4 feet more than last year on the 24th July, and carried enough devastation in her onward course with her. Even the report according to the *communiques* shows that the situation in Mysore Shimoga and Kadur is very bad. The floods rose to the imprecedented height of 18 feet over the Krishnarajasagara Dam, and at Nanjangud the floods overflowed the railway bridge by 5 feet. One or two villages were completely submerged. The whole town of T. Narsipur and good portions of Yedatore and Nanjangud were under water. From all accounts the situation in Kadur and Shimoga districts is worse. Hundreds of houses have been destroyed. In many cases people have been bereft of their belongings and are passing through a very trying time. It is not possible to estimate the loss or the hardship caused to the suffering. The damages to bridges and culverts are very much greater than last year. It is not likely that the Government were prepared to meet such a contingency when the budget estimates were being drawn up. The present allotments of Rs. 1000 to give immediate relief to the poor who have suffered on account of the floods and of Rs. 5000 to be given to people in the shape of loans which are placed in the hands of each of the Deputy Commissioners of Mysore Hassan, Kadur and Shimoga Districts are hardly sufficient to meet the acute situation that has arisen. It is also hoped that Government will be more lenient than last year in the cases of those who have lost their crops on account of the floods. A particular trouble arises in the case of lessees who take lease of the lands on a fixed rental without making provision for extraordinary conditions, and unless the Government, is more liberal in remissions of assessment the lessees will doubly suffer. The situation demands a concentrated effort on the part of Government to provide suitable and sufficient relief measures. We hopethat the Government will make cuts in other lines and find enough funds to meet the needs of the situation. May we also appeal to the philanthropic section of our people to raise a Floods Relief Fund and contribute their quota to the distressed. Last year the Viceroy started the Japanese Relief Fund. May we not hope here for a similar movement. It would be as much a positive proof of the increasing cooperation between the people and the Government as a service done in the cause of the suffering humanity.

ನೂಲುವುದು ವರ್ಣಾಶ್ರಮಧರ್ಮ ವಿರೋಧವಲ್ಲವು.

ಭರತಖಂಡದ ದಾರಿದ್ರ್ಯ ನಿವಾರಣೆಗೂ, ಸ್ವರಾಜ್ಯಸಾಧನೆಗೂ ರಾಟೆಯೇ ಮೂಲಾಧಾರವಾದುದರಿಂದ ಪ್ರತಿಯೊಬ್ಬ ಗಂಡುಸೂ ಹೆಂಗುಸೂ ಪ್ರತಿದಿನವೂ ತಂತಮ್ಮ ವಿರಾಮಕಾಲದಲ್ಲಿ ರಾಟೆಯಿಂದ ನೂಲನ್ನು ನೂತು ಬಟ್ಟೆಯನ್ನು ಸ್ವತಃ ನೆಯಬೇಕು ಅಥವಾ ನೇಯುವವರಿಗೆ ವಿಕ್ರಯಿಸಬೇಕು ಎಂದೂ, ಇದರವಿನಾ ಇಷ್ಟಾರ್ಥಸಿದ್ಧಿಯಾಗುವುದಿಲ್ಲವೆಂದೂ ಮಹಾತ್ಮ ಗಾಂಧಿಯವರು ಸಾರ್ವತ್ರಿಕವಾಗಿ ಬೋಧಿಸುತ್ತಿರುವರಷ್ಟೆ ? ಈ ರಾಟೆಯ ಪರಿಶ್ರಮವು ಅಂದರೆ ನೂಲುವುದು ವೈಶ್ಯವೃತ್ತಿಯಾದುದರಿಂದ ಬ್ರಾಹ್ಮಣ-ಕ್ಷತ್ರಿಯ ಧರ್ಮವಿರುದ್ಧವಾಗಿರುತ್ತದೆ. ಇಂತಹುದರಲ್ಲಿ ಬ್ರಾಹ್ಮಣರೂ ಕ್ಷತ್ರಿಯರೂ ಆಚರಿಸುವುದು ಹೇಗೆ? ಎಂದು ಒಬ್ಬ ಹಿಂದೂ ಕುಲೀನಸ್ತ್ರೀಯು ಮಹಾತ್ಮರನ್ನು ಕೇಳಿದ್ದುದಕ್ಕೆ, “ ಈ ರಾಟೆಯ ಪರಿಶ್ರಮವು ಹಿಂದೂಗಳಿಂದ ಮಾತ್ರವಲ್ಲದೆ, ಮಹಮ್ಮದೀಯರು, ಪಾರ್ಶಿಗಳು, ಕ್ರೈಸ್ತರು, ಸಿಕ್ಕರು ಮೊದಲಾದ ಮತೀಯರಿಂದಲೂ ಆಚರಿಸಲ್ಪಡತಕ್ಕುದಾಗಿದೆ. ಈ ರಾಟೆಯ ಪರಿಶ್ರಮವು ಭಾರತೀಯರೆಲ್ಲರಿಂದಲೂ ಆಚರಿಸಲ್ಪಡುವುದಾದರೆ ಭರತಖಂಡದ ಆರ್ಥಿಕ ದುಸ್ಥಿತಿಯು ನಿವಾರಣೆಯಾಗುವುದರಲ್ಲಿ ಸಂದೇಹವಿಲ್ಲವು. ಬ್ರಾಹ್ಮಣರು ಸ್ವತಃ ಹತ್ತಿಯಿಂದ ಅರಳೆಯನ್ನು ಬಿಡಿಸಿ ನೂಲನ್ನು ತೆಗೆದು ಯಜ್ಞೋಪವೀತವನ್ನು ಹೊಸದು ಉಪಯೋಗಿಸುತ್ತಿರುವುದು ಹೇಗೆ ಧರ್ಮವಿರುದ್ಧವಾಗಿರುವುದಿಲ್ಲವೋ ಹಾಗೆಯೇ ತಮ್ಮ ಬಟ್ಟೆಬರೆಗಳಿಗೆ ರಾಟೆಯಿಂದ ನೂಲನ್ನು ತೆಗೆಯುವುದು ಧರ್ಮವಿರುದ್ಧವಾಗಿಲ್ಲವು. ಪ್ರಾಚೀನ ಮಹರ್ಷಿಗಳು ತಮ್ಮ ಸಕಲ ಸಾಮಗ್ರಿಗಳನ್ನು ಕಾಯಕಷ್ಟಪಟ್ಟು ಒದಗಿಸಿಕೊಂಡು ತಮ್ಮ ಧರ್ಮವನ್ನು ಕಾಪಾಡಿಕೊಂಡಿರುತ್ತಿದ್ದರು. ಅದರಂತೆ ಪ್ರತಿಯೊಬ್ಬರೂ ಕಾಯಕಷ್ಟದಿಂದ ತಮ್ಮ ಧರ್ಮವನ್ನು ಆಚರಿಸುವುದಾದಲ್ಲಿ ದೇಶದ ದಾರಿದ್ರ್ಯವು ತೊಲಗಿ ಸುಖವುಂಟಾಗುವುದರಲ್ಲಿ ಅಭ್ಯಂತರವಿಲ್ಲವು. ಅದುಕಾರಣ ಪ್ರತಿ ವರ್ಣಾಶ್ರಮದವರೂ ಈ ದೇಶೋದ್ಧಾರಕವೂ ಸ್ವರಾಜ್ಯಸಾಧಕವೂ ಆದ ಈ ರಾಟೆಯ ಪರಿಶ್ರಮವನ್ನು ಆಚರಿಸತಕ್ಕುದು ನಿರಾಕ್ಷೇಪವೂ ಅತ್ಯವಶ್ಯಕವೂ ಆಗಿರುತ್ತದೆ.'' ಎಂದು ಮಹಾತ್ಮರು ಆ ನಾರೀಮಣಿಗೆ ಸಮಾಧಾನರೂಪವಾಗಿ ಉತ್ತರವನ್ನು ಕೊಟ್ಟಿರುತ್ತಾರೆ.

ಮಹಾತ್ಮರು ಹೇಳುವಂತೆ ರಾಟೆನೂಲುವುದು ಬ್ರಾಹ್ಮಣಧರ್ಮಕ್ಕೆ ವಿರುದ್ಧವಾದುದಲ್ಲವು. ಹಾಗಿದ್ದರೆ ಬ್ರಾಹ್ಮಣರೆಂದಿಗೂ ತಮ್ಮ ಜನ್ನಿವಾರಕ್ಕಾಗಿ ಸ್ವತಃ ರಾಟೆಯಿಂದ ನೂಲನ್ನು ತೆಗೆಯುತ್ತಿರಲಿಲ್ಲ. ಬರೇ ದುರಭಿಮಾನದಿಂದಲೂ, ನೂಲಿಗುಪಯೋಗಿಸುವ ಬಣ್ಣವು ದುರ್ವಾಸನೆಯಿಂದ ಅಸಹ್ಯಕರವಾಗಿರುವುದರಿಂದಲೂ ಅರೀತಿ ಧರ್ಮವಿರುದ್ಧವಾದ ಕಸಬೆಂದು ನಿಷೇಧಿಸಲ್ಪಟ್ಟಿರಬಹುದು. ಇದು ಶುಷ್ಕವಾದವೇ ಸರಿ. ರಾಟೆಯ ಪರಿಶ್ರಮವು ಧರ್ಮವಿರುದ್ಧವಾದುದಲ್ಲವಾದರೂ ಪರರು ದುಡಿದು ತಂದುದನ್ನು ತಿಂದು ಸುಖದಿಂದ ಮೈಬೆಳಸುತ್ತಿರುವವರು ಅದನ್ನು ಅನುಸರಿಸುವುದುಂಟೆ? ಅದರಲ್ಲೂ ದೌರ್ಬಲ್ಯದಿಂದ ಅಥವಾ ದೊಡ್ಡಸ್ತಿಕೆಯಿಂದ ತಾವುಟ್ಟ ಬಟ್ಟೆಯನ್ನೂ ಮುಸರೆಯ ಪಾತ್ರೆಗಳನ್ನೂ ತೊಳೆಯಲಾರದ ಸ್ತ್ರೀಯರು ಆಫೀಸಿಗೆ ಹೋಗುವ ತಮ್ಮ ಗಂಡಂದಿರ ಪಂಗ್ತಿಯಲ್ಲಿ ಸುಖಭೋಜನ ಮಾಡಿಕೊಂಡು ಓದುವುದೋ ಪಗಡೆಯಾಡುವುದೋ ಕ್ಲಬ್ಬಿಗೆ ಹೋಗಿ ಟೆನಿಸ್ ಮೊದಲಾಗಿ ಆಟಪಾಟಗಳನ್ನಾಡುವುದೋ ಮೊಟಾರುಗಳಲ್ಲಿ ಕುಳಿತು ಸುತ್ತುವುದೋ ಈ ರೀತಿಯಾಗಿ ಬಹು ನಾಜೂಕಿನಿಂದ ವಿಹರಿಸಿಕೊಂಡಿರುವುದನ್ನು ಬಿಟ್ಟು ಶ್ರಮಸಾಧ್ಯವಾದ ರಾಟೆಯನ್ನು ತಿರುಗಿಸಿ ಕೈನೋಯಿಸಿಕೊಂಡು ಆಯಾಸಪಡುವುದುಂಟೆ? ಮಹಾತ್ಮರಂತೆಯೂ, ಅವರ ಪತ್ನಿ ಪುತ್ರಾದಿಗಳಂತೆಯೂ ದೇಶಹಿತಾರ್ಥಕ್ಕಾಗಿ ಸ್ವಸುಖವನ್ನು ತ್ಯಜಿಸಿ ದೇಹಶ್ರಮಪಡುವಂತೆ ಇತರ ಪುರುಷ ಸ್ತ್ರೀಯರೆಲ್ಲರೂ ಸ್ವಸುಖವನ್ನು ಪರಿತ್ಯಜಿಸಿದಲ್ಲಿ ಈ ರಾಟೆಯ ಪರಿಶ್ರಮವು ಸರ್ವಜನಪರಿಗೃಹೀತವಾಗಿ ಮಹಾತ್ಮರ ಸಂಕಲ್ಪವು ಸಾರ್ಥಕವಾಗುವುದರಲ್ಲಿ ಸಂದೇಹವಿಲ್ಲವು.

ನಿಕಲ್ ೮ ಆಣೆಯ ನಾಣ್ಯವು ಚಲಾವಣೆಯಿಂದ ತೆಗೆದುಹಾಕಲ್ಪಟ್ಟುದು.

1924ನೆಯ ಅಕ್ಟೋಬರ್ ತಾ|| 1 ರಿಂದ ನಿಕ್ಕಲ್ಲು 8 ಆಣೆಯ ನಾಣ್ಯವು ಉಪಯೋಗಿಸಲ್ಪಡಕೂಡದೆಂದು ಇಂಡ್ಯಾ ಸರ್ಕಾರದವರಿಂದ ಪ್ರಕಟಿಸಲ್ಪಟ್ಟಿದೆ. ಆದರೂ ಇನ್ನೊಂದು ವರ್ಷದವರೆಗೆ ಅಂದರೆ 1925ನೆಯ ಸೆಪ್ಟಂಬರ್ ತಾ|| 30ರವರೆಗೆ ಖಜಾನೆಯಲ್ಲಿ ಸದರಿ ನಾಣ್ಯವು ತೆಗೆದುಕೊಳ್ಳಲ್ಪಡುತ್ತಿರುವುದು. ಅನಂತರ 1925ನೆಯ ಅಕ್ಟೋಬರ್ ತಾ|| 1 ರಿಂದ ಖಜಾನೆಯಲ್ಲಿ ತೆಗೆದುಕೊಳ್ಳಲ್ಪಡುವುದಿಲ್ಲವು. ಆದರೆ ಆಮೇಲೂ ಕೂಡ ಕಲಕತ್ತಾ, ಬೊಂಬಾಯಿ, ಮದ್ರಾಸು, ರಂಗೂನು, ಲಾಹೋರು, ಕಾನ್ಪೂರು ಮತ್ತು ಕರಾಚಿ ಈ ಸ್ಥಳಗಳಲ್ಲಿಯ ಕರೆನ್ಸಿ ಆಫೀಸಿನಲ್ಲಿ ಮಾತ್ರ ಈ ನಾಣ್ಯಗಳು ತೆಗೆದುಕೊಳ್ಳಲ್ಪಡುವುವು. ಅದುಕಾರಣ ನಿಕ್ಕಲ್ಲು 8 ಆಣೆ ನಾಣ್ಯಗಳನ್ನಿಟ್ಟುಕೊಂಡಿರುವ ವರ್ತಕರು ಮೊದಲಾದ ಜನರು ಮರೆಯದೆ ಮತ್ತು ಅಲಸ್ಯಮಾಡದೆ 1925ನೆಯ ಸೆಪ್ಟಂಬರ್ ತಾ|| 30ರೊಳಗೆ ಸಮೀಪದಲ್ಲಿರುವ ಸರ್ಕಾರಿ ಖಜಾನೆಗಳಿಗೆ ತೆಗೆದುಕೊಂಡುಹೋಗಿ ಕೊಟ್ಟು ಬದಲಾಯಿಸಿಕೊಳ್ಳತಕ್ಕುದು. ನಿಕ್ಕಲ್ಲು 4 ಆಣೆ, 2 ಆಣೆ ಮತ್ತು 1 ಆಣೆಗಳು ಮಾತ್ರ ನಿಲ್ಲಿಸಲ್ಪಡದೆ ಯಥಾಪ್ರಕಾರ ಚಲಾವಣೆಯಲ್ಲಿರುವುವು.

ಸ್ವದೇಶದ ವೃತ್ತಾಂತಗಳು

ಮಹಾಮಾತೃಶ್ರೀಯವರು ಪರಿವಾರದೊಡನೆ ಈ ದಿವಸ ಬೆಳಗ್ಗೆ ಸ್ಪೆಷಲ್ ರೈಲುಬಂಡಿಯಲ್ಲಿ ಬೆಂಗಳೂರಿಗೆ ದಯಮಾಡಿಸಿದರು.

ರಾಜಧಾನಿಯ ಹೆಲ್ತಾಫೀಸರಾದ ಡಾ|| ಜೆ. ಪಿ. ಮಾಸ್ಕರ್ನ್ಹಾಸ್‌ರವರು ಬೆಂಗಳೂರಿಗೂ ಅಲ್ಲಿಯ ಹೆಲ್ತಾಫೀಸರಾದ ಮ|| ಎಂ. ಜಿ. ಶ್ರೀನಿವಾಸಪೇದ್ದಿಟ್‌ರವರು ರಾಜಧಾನಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಕಳೆದ 1-2 ತಿಂಗಳುಗಳಿಂದಲೂ ಅಸ್ವಸ್ಥರಾಗಿರುವ ಮೈಸೂರು ಡಿ|| ಬೋರ್ಡ್ ವೈಸ್‌ಪ್ರೆಸಿಡೆಂಟ್ ಮ|| ಕೆ. ಕೃಷ್ಣಶಾಸ್ತ್ರಿಗಳ ಪ್ರಕೃತಸ್ಥಿತಿಯು ಪ್ರಬಲವಾಗಿದೆಯೆಂದು ಕೇಳಿ ವಿಷಾದಿಸುತ್ತೇವೆ, ಮತ್ತು ಜಾಗ್ರತೆ ಗುಣಮುಖವಾಗಲೆಂದು ಹಾರೈಸುತ್ತೇವೆ.

ರಾಜಧಾನಿಯ ಪಿಂಜರಾಪೋಲಿನ ವಾರ್ಷಿಕೋತ್ಸವವು ಆಗಸ್ಟು ತಾ|| 2 ನೆಯ ಶನಿವಾರದ ದಿವಸ ಸಾಯಂಕಾಲ 6 ಗಂಟೆಗೆ ಟೌನ್‌ಹಾಲಿನಲ್ಲಿ ಡಿ|| ಕೆ|| ಮ|| ಬಿ. ರಾಮಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ಜರಗುವದಾದುದರಿಂದ, ಪ್ರಾಣಿದಯಾಪರರೆಲ್ಲರೂ ದಯಮಾಡಿಸಬೇಕೆಂದು ಸೆಕ್ರೆಟರಿಗಳು ಈ ಮೂಲಕ ಪ್ರಾರ್ಥಿಸುತ್ತಾರೆ.

ಚೀಫ್‌ಕೋರ್ಟಿನ ಚೀಫ್‌ಜಡ್ಜರಾಗಿದ್ದ ಮ|| ಕೆ. ಚಂದ್ರಶೇಖರಯ್ಯರ್‌ರವರು ಬರುವ ಆಗಸ್ಟ್ ತಾ|| 2ರಲ್ಲಿ ಉದ್ಯೋಗದಿಂದ ನಿವೃತ್ತರಾಗುವ ಪ್ರಯುಕ್ತ ಎರಡನೆ ಜಡ್ಜರಾದ ಮಿ|| ಪ್ಲಮರ್‌ರವರು ಅಫಿಷಿಯೇಟಿಂಗ್ ಚೀಫ್‌ಜಡ್ಜರಾಗಿ ನಿಯಮಿಸಲ್ಪಟ್ಟಿರುವರು. ಮೂರನೆಯ ಜಡ್ಜರಾಗಿ ಇನ್ನೂ ಯಾರೂ ನಿಯಮಿಸಲ್ಪಟ್ಟಿಲ್ಲವು. ಮ|| ಬಿ. ನಾಗಪ್ಪನವರಿಗೆ ಹಿಂದಾಗಿರುವ ಅನ್ಯಾಯದ ಸಂಮಾರ್ಜನೆಯು ಈವೇಳೆಯಾದರೂ ಆದೀತೋ?

ಕಾವೇರಿ ಕಪಿಲಾನದಿಗಳಲ್ಲಿ ಪ್ರವಾಹವು ಮಿತಿಮೀರಿಬಂದು ಶಿವಸಮುದ್ರದ ವಿದ್ಯುಚ್ಛಕ್ತಿ ಕಾರ್ಯಾಲಯಕ್ಕೂ ನೀರು ನುಗ್ಗಿ ಅಲ್ಲಿಯ ಕೆಲಸಗಳಿಗೆ ತೊಂದರೆಯಾಗಿರುವಪ್ರಯುಕ್ತ ಕಳೆದ ಶುಕ್ರವಾರದಿಂದಲೂ ರಾಜಧಾನಿಯ ಕಾರ್ಯಾಲಯಗಳಿಗೆ ವಿದ್ಯುಚ್ಛಕ್ತಿಯು ಕೊಡಲ್ಪಟ್ಟಿಲ್ಲ ಮತ್ತು ಶನಿವಾರದ ರಾತ್ರಿ ಬೀದಿಗಳಲ್ಲಿ ದೀಪಗಳು ಸಹ ಹೊತ್ತಿಸಲ್ಪಡಲಿಲ್ಲವು. ಈ ಕಾರಣದಿಂದ ಸ್ಟಾರ್ ಪತ್ರಿಕೆಯು ಸಕಾಲದಲ್ಲಿ ಹೊರಡಲಿಕ್ಕೆ ಶಕ್ಯವಾಗಲಿಲ್ಲವೆಂದೂ ಮುಂದಣ ವಾರದಲ್ಲೂ ಇದೇ ತೊಂದರೆಯುಂಟಾದಲ್ಲಿ ಪತ್ರಿಕಾಪ್ರಕಟನೆಗೆ ಸಾವಕಾಶವಾಗುವುದೆಂದೂ ತಿಳುಹಲು ವಿಷಾದಿಸುತ್ತೇವೆ.

ಹಿಂದೆ ರಾಜಧಾನಿಯಲ್ಲಿ ಹೆಲ್ತಾಫೀಸರಾಗಿದ್ದು ಈಗ ಕೆಮಿಕಲ್ ಎಕ್ಸಾಮಿನರಾಗಿರುವ ಡಾಕ್ಟರ್ ಕೆ. ಪಾಣಿಯವರ ವಿಚಾರದಲ್ಲಿ ಯಾರೋ ದುಷ್ಟರು ಅಶುಭವಾರ್ತೆಯನ್ನು ಹುಟ್ಟಿಸಿದ್ದುದರಮೇಲೆ ಅವರ ಮಿತ್ರರುಗಳಿಗೂ ಪರಿಚಿತಸ್ಥರುಗಳಿಗೂ ಬಹಳ ವ್ಯಸನವುಂಟಾಗಿದ್ದಿತು. ಈಗ ನಾವು ವಿಚಾರಿಸಿದುದರಲ್ಲಿ ಡಾ|| ಪಾಣಿಯವರೂ ಅವರ ಕುಟುಂಬದವರೂ ಸುಖವಾಗಿರುವರೆಂದು ತಿಳಿಯಬಂದಿದೆ. ವೃಥಾವ್ಯಸನವಾದವುಂಟಾದುದಕ್ಕೆ ನಾವು ಚಿಂತಿಸುತ್ತೇವಾದರೂ, ಡಾಕ್ಟರಿಗೆ ಪ್ರಾಪ್ತವಾಗಬಹುದಾಗಿದ್ದ ಯಾವುದೋ ಕಂಟಕವು ಜನವಾರ್ತೆಯಮೂಲಕ ಪರಿಹಾರವಾದುದಕ್ಕಾಗಿ ಸಂತೋಷಿಸುತ್ತೇವೆ.

ಗುಂಡುಕಲ್ಲಿನಲ್ಲಿ ಪ್ರಸಿದ್ಧ ವೀರಶೈವ ವರ್ತಕರಾಗಿದ್ದ ಮ|| ಸಿರ್ಸಿ ಅಡವೆಪ್ಪನವರು ಕಳೆದ ಸೋಮವಾರ ರಾತ್ರಿ 10 ಗಂಟೆ ಸಮಯದಲ್ಲಿ ಕೆಲಜನರ ಸಮೇತ ಮುಂಗಡೆ ಒಬ್ಬ ಆಳಿನ ಕೈಲಿ ಲಾಂದ್ರವನ್ನಿಡಿಸಿಕೊಂಡು ರೈಲ್ವೆ ಸ್ಟೇಷನ್ನಿನಿಂದ ಮನೆಗೆ ಹಿಂದಿರುಗಿ ಬರುತ್ತಿರುವಾಗ್ಗೆ ಗಾರ್ಡುಗಳ ವಾಸಸ್ಥಳದಬಳಿ ಒಂದು ಸಿಡಿಮದ್ದು ಅವರ ಎಡಪಕ್ಕದಲ್ಲಿ ಬಿಸಾಡಲ್ಪಟ್ಟಿತು. ಅದು ಆ ಕೂಡಲೆ ಹಾರಿ ಅವರ ಎಡದ ಭುಜಕ್ಕೆ ತಗುಲಿ ಕೋಳನ್ನು ಹಾರಿಸಿಬಿಟ್ಟಿತು. ಅವರು ಮನೆಗೆ ಸಾಗಿಸಲ್ಪಟ್ಟ ಕೊಂಚಹೊತ್ತಿನಮೇಲೆ ಮೃತರಾದರೆಂದು ಕೇಳಿ ವಿಷಾದಿಸುತ್ತೇವೆ. ಕೈ|| ಅಡವೆಪ್ಪನವರು ಒಳ್ಳೇ ಗುಣಾಢ್ಯರಾಗಿಯೂ ಧರ್ಮಿಷ್ಠರಾಗಿಯೂ ಇದ್ದು ಜನಾನುರಾಗವನ್ನು ಸಂಪಾದಿಸಿದ್ದರು.

ಶ್ರೀಮದ್ಯುವರಾಜರವರ ಕುಮಾರರೂ, ಮೈಸೂರು ಮಹಾರಾಜಕುಲದೀಪಕರೂ ಆದ ಜಯಚಾಮರಾಜ ಒಡೆಯರವರಿಗೆ ಕಳೆದ ತಾ|| [illegible]ನೆಯ ಸೋಮವಾರದ ದಿವಸಕ್ಕೆ 5 ವರ್ಷ ವಯಸ್ಸು ತುಂಬಿದುದರಿಂದ 6ನೆಯ ವರ್ಷದ ಪ್ರಥಮದಿನವಾದ ಮಂಗಳವಾರ ವರ್ಧಂತ್ಯುತ್ಸವವು ಬಹು[illegible]ರಂಗವಾಗಿ ಆಚರಿಸಲ್ಪಟ್ಟಿತು. ಆ ದಿವಸ ಬೆಳಿಗ್ಗೆ ಬಾಲಯುವರಾಜರವರು ಅಭ್ಯಂಜನಸ್ನಾನಾಂತರ ಆರತಕ್ಷತೆಯನ್ನು ನಡೆಯಿಸಿಕೊಂಡು ಸಾಯಂಕಾಲದಲ್ಲಿ ನವರತ್ನದ ಶಿರಪೇಷ್‌ತುರಾಯಿಂದ ಕೂಡಿದ ಜರತಾರಿರುವ[illegible]ನ್ನೂ ಕಿನಕಾಪು ಅಂಗರೇಕ ಶರಾಯಿಗಳನ್ನೂ ಅಮೋಘವಾದ ವಜ್ರ[illegible]ಣಿಯ ಕಂಠಮಾಲೆ ಬಾಜುಬಂದು ಮೊದಲಾಗಿ ಆಭರಣಗಳನ್ನೂ ಧ[illegible]ಕೊಂಡು ಭಂಗಾರದ ಪಾಲ್ಕಿಯಲ್ಲಿ ಕುಳಿತು ಗಜಾಶ್ವಪದಾತಿಸೇನೆಯಿಂದಲೂ, ಗಗ್ರಿಬಾಲ್ಕ ಮೊದಲಾಗಿ ಬಿರುದಾವಳಿಗಳಿಂದಲೂ, ರಾಜಬಂಧುಗಳಿಂದಲೂ ಮುಖ್ಯಾಧಿಕಾರಿವರ್ಗದವರಿಂದಲೂ ಪರಿವೃತರಾಗಿ ಇಂಗ್ಲಿಷ್ ಕನ್ನಡಬ್ಯಾಂಡುಗಳ ವಾದ್ಯವಿಶೇಷದೊಡನೆ ಅರಮನೆಯ ಆನೆಬಾಗಿಲಿನಿಂದ ಹೊರಟು ಶ್ರೀ ತ್ರಿನಯನೇಶ್ವರಸ್ವಾಮಿಯ ದೇವಸ್ಥಾನಕ್ಕೆ ಬಂದು ದೇವ[illegible]ಮಂಗಳಾರತಿಯನ್ನೂ ಪ್ರಸಾದವನ್ನೂ ಸ್ವೀಕರಿಸಿ ಅಲ್ಲಿಂದ ವರಹಾಸ್ವಾಮಿ ಮತ್ತು ಕೃಷ್ಣದೇವರುಗಳ ದೇವಸ್ಥಾನಗಳಿಗೆ ಹೋಗಿ ಮಂಗಳಾರತಿ ಪ್ರಸಾದಗಳ ಸ್ವೀಕಾರಾನಂತರ ದಿವ್ಯಾಶ್ವವನ್ನೇರಿ ಆನೆಯಬಾಗಿಲಿನಿಂದ ಅರಮನೆಯನ್ನು ಸೇರಿದರು. ಅಷ್ಟುಹೊತ್ತಿಗೆ ರಾತ್ರಿ 8 ಗಂಟೆಯಾಗಿದ್ದಿತು. ರಾಜ[illegible]ಮಾರರ ದಿವ್ಯತೇಜಸ್ಸನ್ನೂ, ಠೀವಿಯನ್ನೂ, ಗಾಂಭೀರ್ಯವನ್ನೂ ಕೋಟೆಯ ಬೈಲಿನಲ್ಲಿ ಕಿಕ್ಕಿರಿದುನಿಂತಿದ್ದ ಪ್ರೇಕ್ಷಕಜನಸಮೂಹವು ನೋಡಿ ಆನಂದಾ[illegible]ಭರಿತವಾಗಿ ಅವರ ಶ್ರೇಯಃಪ್ರಾರ್ಥನೆಯನ್ನು ಮಾಡುತ್ತಿದ್ದಿತು. ಬಾಲ[illegible]ವರಾಜರವರು ದೀರ್ಘಾಯುರಾರೋಗ್ಯವನ್ನು ಪಡೆದು ಇಂತಹ ವರ್ಧಂತ್ಯುತ್ಸವಗಳನ್ನು ಅನಂತವಾಗಿ ನಡೆಯಿಸಿಕೊಂಡು ಶ್ರೀಮನ್ಮಹಾರಾಜರವರಿಗೂ ಮಹಾಮಾತೃಶ್ರೀಯವರಿಗೂ ಮಾತಾಪಿತೃಗಳಿಗೂ ಅಖಿಲಪ್ರಜಾವರ್ಗದವರಿಗೂ ಮಹಾನಂದವನ್ನುಂಟುಮಾಡುವವರಾಗಲೆಂದು ನಾವು ಸರ್ವೇಶ[illegible] ಕೋರುವೆವು.

ರಾಜಧಾನಿಯಲ್ಲಿ ಕಳೆದ ಬುಧವಾರ, ಗುರುವಾರಗಳಲ್ಲಿ ಮಳೆ[illegible] ಕೊಂಚವೂ ವಿರಾಮವಿಲ್ಲದೆ ಸುರಿಯುತ್ತಿದ್ದಿತು ಮತ್ತು ಈಗಲೂ ಅ[illegible]

ಅಲ್ಪಸ್ವಲ್ಪವಾಗಿ ಬರುತ್ತಿದ್ದಿತು. ಕೊಡಗು ಹೆಗ್ಗಡದೇವನಕೋಟೆ ಮೊದಲಾಗಿ ಮಲೆನಾಡು ಪ್ರದೇಶಗಳಲ್ಲೂ ವಿಪರೀತ ಮಳೆಯಾಗಿರಬಹುದೆಂದು ತೋರುತ್ತದೆ. [illegible] ಅಂದರೆ ತಾ|| 23ರಲ್ಲಿ ಕಾವೇರಿನದಿಯಲ್ಲಿ ಪ್ರವಾಹವು ಮೊದಲಿಗಿನ್ನ ಹೆಚ್ಚಾಗಿಬಂದು ಕನ್ನಂಬಾಡಿ ಕಟ್ಟೆಯಮೇಲೆ 15½ ಅಡಿ ಮತ್ತು ತಾ|| 26ರಲ್ಲಿ 18 ಅಡಿ ಎತ್ತರದಿಂದ ನೀರು ಧುಮುಕುತ್ತಿದ್ದಿತು; ಶ್ರೀರಂಗಪಟ್ಟಣದಲ್ಲಿ ಕಿರಂಗೂರು ಸೇತುವೆಯಮೇಲೆ 3-4 ಅಡಿ ಎತ್ತರದಿಂದ ನೀರು ಹರಿಯುತ್ತಿದ್ದಿತು. ಪ್ರಾಯಶಃ ಈ ಸೇತುವೆಯು ಈವೇಳೆ ಅಪಾಯವಾಗಬಹುದೆಂದು ತೋರುತ್ತದೆ; ಯಡತೊರೆಯಲ್ಲಿ ಊರಿನ ಬಹುಭಾಗಕ್ಕೆ ನೀರು ನುಗ್ಗಿ ಮಾರ್ಗಗಳಲ್ಲೆಲ್ಲಾ ನಿಂತಿದೆ. ಕಪಿಲಾನದಿಯಲ್ಲೂ ಪ್ರವಾಹವು ಹೆಚ್ಚಿ ನೀರು ಊರೊಳಗಿನ ಅಂಗಡಿಬೀದಿಗೆ ಬಂದಿರುವುದರಿಂದ ಪ್ರಾಯಶಃ 500 ಮನೆಗಳು ಬಿಡಲ್ಪಟ್ಟು ಜನರು ಭಯದಿಂದ ತಪಿಸುತ್ತಿರುವರು. ಟ್ರಾವೆಲರ್ಸ್ ಬಂಗಲೆಯು ಅರ್ಧದಮಟ್ಟಿಗೆ ಮುಳುಗಿಹೋಗಿದೆ. ರೈಲ್ವೆ ಸೇತುವೆಯ ಮೇಲೆ ನೀರು ಹರಿಯುತ್ತಿದ್ದು ಕಂಬಿಯು ಮುರಿದುಹೋಗಿರುವುದರಿಂದ ರಾಜಧಾನಿಯಿಂದ ಕಡಕೊಳದವರೆಗೆ ರೈಲು ಹೋಗಿ ಹಿಂದಿರುಗಿ ಬರುತ್ತಿರುವುದು. ಬಂಡಿಗಳೂ ಜನರೂ ತಿರುಗಾಡಲಿಕ್ಕಿಲ್ಲವಾಗಿದೆ. ತಿರುಮಕೂಡ್ಲು ಕಾವೇರಿ ಕಪಿಲಾನದಿಗಳ ಮಧ್ಯೆ ನೀರಿನೊಳಗೆ ಮುಳುಗಿಹೋಗಿದೆ. ನರಸೀಪುರದಲ್ಲೂ ಊರಿನೊಳಕ್ಕೆ ನೀರು ನುಗ್ಗಿರುವುದರಿಂದ ಜನರು ಭಯಪಟ್ಟುಕೊಂಡು ತಪಿಸುತ್ತಿರುವರು ಮತ್ತು ಬಹು ಜನರು ಊರನ್ನು ಬಿಟ್ಟು ಬೇರೆಕಡೆಗೆ ಹೋಗಿರುವರು. ಕಾವೇರಿ ಕಪಿಲಾನದಿಗಳ ದಡಗಳಲ್ಲಿರುವ ಗ್ರಾಮಗಳು ನಿರ್ನಾಮವಾಗಿರುವಂತೆಯೂ ಅನೇಕ ಧನಧಾನ್ಯ ಪ್ರಾಣನಷ್ಟವಾಗಿರುವಂತೆಯೂ ವದಂತಿಯಿದೆ. ಈ ನದಿಗಳ ಪ್ರವಾಹಗಳು ಇಳಿಯದೆ ಇನ್ನೂ ಹೆಚ್ಚಿದಲ್ಲಿ ಅನೇಕ ಊರುಗಳು ನೀರಿನಲ್ಲಿ ಮುಳುಗಿಹೋಗಿ ಅರ್ಥಪ್ರಾಣಹಾನಿಯು ವಿಶೇಷವಾಗಿ ಆಗುವ ಸಂಭವವುಂಟು. ಇಂತಹ ಅನಾಹುತಗಳು ಆಗದಿರಲೂ, ಒಂದುವೇಳೆ ಆದಲ್ಲಿ ಅದಕ್ಕೆ ತಕ್ಕ ಸಹಾಯವನ್ನು ಒದಗಿಸಲೂ ಸರ್ಕಾರದಿಂದ ಮಾಡಲ್ಪಟ್ಟಿರುವ ಏರ್ಪಾಟು ಪಬ್ಲಿಸಿಟಿ ಆಫೀಸರ ಪ್ರಕಟನೆಯಿಂದ ಗೊತ್ತಾಗುತ್ತದೆ. ಶ್ರೀಮನ್ಮಹಾರಾಜರೂ ಮಹಾಮಾತೃಶ್ರೀಯವರೂ ಮಹಾರಾಣಿಯವರೂ ಮೊನ್ನೆಯದಿನ ಕನ್ನಂಬಾಡಿಕಟ್ಟೆಯನ್ನು ಪರಾಂಬರಿಸಿಕೊಂಡು ಬಂದರು.

ದಕ್ಷಿಣ ಇಂಡ್ಯಾದಲ್ಲಿ ನದಿಯ ಪ್ರವಾಹದಿಂದಾದ ಅನಾಹುತವು.

ಟ್ರಾವಂಕೂರು ಮತ್ತು ಕೊಚ್ಚಿ ಸಂಸ್ಥಾನಗಳಲ್ಲಿ ಪ್ರವಾಹದಿಂದ ಅನೇಕ ಸೇತುಗಳೊಡೆದುಹೋಗಿವೆ. ಸರ್ಕಾರಿಯ ಕಟ್ಟಡಗಳಿಗೂ, ಕೂಲಿಕಾರರ ವಾಸಸ್ಥಳಗಳಿಗೂ ಬಹಳಮಟ್ಟಿಗೆ ಅಪಾಯವಾಗಿದೆ. ಟ್ರಾವಂಕೂರಿನಲ್ಲಿ ಅನೇಕ ದನಕರುಗಳೂ 110 ಮನುಷ್ಯರೂ ನಾಶವಾಗಿರುವರಂತೆ ಮತ್ತು ಅನೇಕರಿಗೆ ಗಾಯವಾಗಿದೆಯಂತೆ. ಅನೇಕ ಗ್ರಾಮಗಳೂ ಮಾರ್ಗಗಳೂ ನೀರಿನಲ್ಲಿ ಮುಳುಗಿದ್ದುವು. ಧನಧಾನ್ಯವಂತು ವಿಶೇಷವಾಗಿ ನಷ್ಟವಾಗಿರುತ್ತವೆ. ಕೊಚ್ಚಿನ್ನಿನಲ್ಲಿ ಮಾತ್ರ ಪ್ರಾಣನಷ್ಟವೇನೂ ಇಲ್ಲ. ಕೊಚ್ಚಿಹೋಗಿದ್ದ ರೈಲ್ ಮಾರ್ಗಗಳು ಸರಿಪಡಿಸಲ್ಪಡುತ್ತಿರುವುವು. ವಿಪನ್ನರ ಸಹಾಯಕ್ಕಾಗಿ ಸರ್ಕಾರದವರಿಂದ ತಕ್ಕೇರ್ಪಾಟು ಮಾಡಲ್ಪಟ್ಟಿದೆ.

ಕೊಯಮತ್ತೂರು ಡಿಸ್ಟ್ರಿಕ್ಟು—ಭವಾನಿ ಮತ್ತು ಕಾವೇರಿ ನದಿಗಳಲ್ಲಿ ಪ್ರವಾಹವು ಮಿತಿಮೀರಿಬಂದು ನದಿಗಳ ಪಕ್ಕದಲ್ಲಿರುವ ಊರು ಗ್ರಾಮಗಳಿಗೂ ದವಸಧಾನ್ಯಗಳಿಗೂ ಪ್ರಾಣಿಗಳಿಗೂ ಬಹಳ ನಷ್ಟವಾಗಿರುತ್ತದೆ. ಈವರೆಗೆ ಒಟ್ಟು 900 ಮನೆಗಳೂ, 40,000 ರೂಪಾಯಿ ಬೆಲೆಬಾಳುವ ಪದಾರ್ಥಗಳೂ ನಾಶವಾಗಿರುವುವಲ್ಲದೆ 3,000 ಜನರಿಗೆ ವಾಸಕ್ಕಿಲ್ಲದಂತಾಗಿದೆ.

ತಿರುಚನಾಪಲ್ಲಿ ಡಿಸ್ಟ್ರಿಕ್ಟು—ಕಾವೇರಿಯಲ್ಲಿ ಕಳೆದ 30 ವರ್ಷಗಳಿಂದಲೂ ಬಾರದಿದ್ದಷ್ಟು ಪ್ರವಾಹವು ಬಂದು ಅನೇಕ ಗ್ರಾಮಗಳಿಗೂ ತಿರುಚನಾಪಲ್ಲಿಯ ಅರ್ಧ ಊರಿಗೂ ನೀರು ನುಗ್ಗಿದ್ದಿತು. ಎಷ್ಟೋ ದವಸಧಾನ್ಯವೂ, ದನಕರುಗಳೂ ನಾಶವಾಗಿರುವುವಲ್ಲದೆ 700 ಜನರು ಮನೆಯನ್ನು ಕಳೆದುಕೊಂಡಿರುವರು. ಕೊಲರೂನ್ ಸೇತುವೆಯು ನಾಶವಾಗಿ ಕಾವೇರಿ ಸೇತುವೆಯು ಬಿರುಕುಬಿಟ್ಟಿದೆ.

ತಂಜಾವೂರು ಡಿಸ್ಟ್ರಿಕ್ಟು—1896 ರಂದೀಚೆಗೆ ಕಾವೇರಿ ನದಿಯ ಮುಮೂಲೆ ಪ್ರದೇಶದಲ್ಲಿ ಈಗಿನಷ್ಟು ಅಧಿಕಪ್ರವಾಹವು ಬಂದಿರಲಿಲ್ಲವು. ಕೊಲರೂನು ಮತ್ತು ಕಾವೇರಿ ದಡಗಳು ಅನೇಕಕಡೆ ಒಡೆದುಹೋಗಿವೆ. ಈ ಡಿ|| ನಲ್ಲೂ ಮನೆಮಠಗಳೂ ದವಸಧ್ಯಾನ್ಯಗಳೂ ಪದಾರ್ಥಗಳೂ ಬಹಳವಾಗಿ ನಷ್ಟವಾಗಿವೆ.

ಸೇಲಂ ಡಿಸ್ಟ್ರಿಕ್ಟು—ತಿರ್ಚಂಗೋಡು ಮತ್ತು ನಾಮಕಲ್ ತಾಲ್ಲೂಕುಗಳಲ್ಲಿ ಕಾವೇರಿನದಿಯ ಪ್ರವಾಹವು ಬಹಳವಾಗಿ ಬಂದಿತ್ತು. ಆದರೆ ಅಲ್ಲಾದ ನಷ್ಟವೇನೆಂಬುದು ಇನ್ನೂ ತಿಳಿದುಬಂದಿಲ್ಲ. ಪ್ರವಾಹವು ಇಳಿಯುತ್ತಿದೆ. ಪೆರಿಯೂರ ಅಣೆಕಟ್ಟೆಯು ಸುರಕ್ಷಿತವಾಗಿರುವುದೆಂದೂ ಆದರೆ ಅಲ್ಲಿಗೆ ಹೋಗುವ ಮಾರ್ಗಗಳು 2 ಮೈಲಿಯವರೆಗೆ ಕೊಚ್ಚಿಹೋಗಿರುವುವೆಂದೂ ಮಧುರೆಯಿಂದ ಬಂದ ತಂತಿಯಿಂದ ತಿಳಿಯಬರುತ್ತದೆ. ಈ 4 ಡಿಸ್ಟ್ರಿಕ್ಟುಗಳಲ್ಲಿ ಪ್ರಾಣಾಪಾಯವೇನೂ ಆಗಿಲ್ಲವು

ಮಧುರೆ ಡಿ|| ವೇಗೇಯನದಿಯಲ್ಲಿ ಪ್ರವಾಹವು ಮಿತಿಮೀರಿಬಂದು ಮಧುರೆಯ ಊರಿನೊಳಕ್ಕೆ ನುಗ್ಗಿದ್ದಿತು. ಅಲ್ಲದೆ ರೈಲ್ವೆಮಾರ್ಗವು 1 ಮೈಲಿ ದೂರ ನಾಶವಾಗಿದ್ದಿತು. ಕೆಲ ಗುಡಿಸಲುಗಳು ಬಿದ್ದುಹೋಗಿ ಬಹಳ ನಷ್ಟಸಂಭವಿಸಿರುವುದು.

ದಕ್ಷಿಣಕನಡ ಡಿ||—ತಾ|| 15 ರಿಂದ ಮಳೆಯು ಒಂದೇ ಸಮನಾಗಿ ಸುರಿಯುತ್ತಿದ್ದು ನದಿಯಲ್ಲಿ ಪ್ರವಾಹಬಂದು ಉಪ್ಪಿನಂಗಡಿ ಊರಿನೊಳಕ್ಕೆ ನೀರು ನುಗ್ಗಿದ್ದಿತು. ಕಳೆದ ವರ್ಷದ ಅನುಭವದಿಂದ ಮುಂಜಾಗರೂಕರಾಗಿದ್ದು ಮುಕ್ಕಾಲುಪಾಲು ಜನರು ನೀರು ನುಗ್ಗುವುದಕ್ಕೆ ಮೊದಲೇ ದನಕರುಗಳನ್ನೂ ಪದಾರ್ಥಗಳನ್ನೂ ಎತ್ತರವಾದ ಸ್ಥಳಕ್ಕೆ ಸಾಗಿಸಿಕೊಂಡು ಹೋಗಿದ್ದರು. ಒಂದು ಗುಡಿಸಲಿನಲ್ಲಿ 54 ಮಾಪಿಳ್ಳೆಗಳು ಸೇರಿಕೊಂಡಿದ್ದರು ಮತ್ತು 30 ಕುಟುಂಬದವರು ಇನ್ನೊಂದು ಕಡೆ ಸೇರಿದ್ದರು. ಇವರೆಲ್ಲರೂ ಹತರಾದರೆಂದು ವರ್ತಮಾನವಿದೆ. ಪಾಣೆಮಂಗಳೂರಿನಲ್ಲೂ ಪ್ರವಾಹದ ಅನಾಹುತದಿಂದ ಬಹಳ ನಷ್ಟ ಸಂಭವಿಸಿರುತ್ತದೆ. ಬಂಟರಾಳ, ಪಾಣೆಮಂಗಳೂರು ಮತ್ತು ಉಪ್ಪಿನಂಗಡಿ ಈ ಮೂರು ಸ್ಥಳಗಳಲ್ಲಿ ಒಟ್ಟು 9000 ಪ್ರಜೆಗಳಿದ್ದುದಕ್ಕೆ ಈಗ 1000 ಪ್ರಜೆಗಳು ಮಾತ್ರವಿರುವರಂತೆ, ಮತ್ತು ಮುಕ್ಕಾಲುಭಾಗದ ಮನೆಗಳು ಬಿದ್ದುಹೋಗಿವೆ. ನದಿಯದಡದಲ್ಲಿ 20 ಮೈಲಿಗಳುದ್ದಕ್ಕೂ ಇದ್ದ ಗ್ರಾಮಗಳು ನೀರಿನಲ್ಲಿ ಮುಳುಗಿದ್ದವು; ನಿಂತಿದ್ದ ಬೆಳೆಗಳೆಲ್ಲವೂ ನಾಶವಾದುವು. ಒಟ್ಟು ಈ ಡಿಸ್ಟ್ರಿಕ್ಟಿನಲ್ಲಿ 1000 ಮನೆಗಳು ನಾಶವಾಗಿ 10,000 ಜನರಿಗೆ ವಾಸಕ್ಕೆ ಮನೆಯಿಲ್ಲದಿದ್ದಾರೆ. ವಿಪನ್ನರ ಸಹಾಯಾರ್ಥವಾಗಿ ತಕ್ಕೇರ್ಪಾಟುಮಾಡಲ್ಪಟ್ಟಿದೆ. ಪ್ರವಾಹವು ಕಡಿಮೆಯಾಗುತ್ತಿದೆ.

ಈರೋಡು—ಕಾವೇರಿ ಪ್ರವಾಹದಿಂದ ಕಟ್ಟೆಯು ಒಡೆದುಹೋಗುವ ಸಂಭವವಿದ್ದಿತು. ರೈಲುಮಾರ್ಗ ಬಂಡಿಮಾರ್ಗಗಳೂ ತಂತಿಯಕಂಭಗಳೂ ಬಹಳಮಟ್ಟಿಗೆ ಕೊಚ್ಚಿಹೋಗಿರುವುದರಿಂದ ಅಲ್ಲಿಂದ ಮುಂದಕ್ಕೆ ರೈಲುಬಂಡಿಗಳು ಬಿಡಲ್ಪಡುತ್ತಿಲ್ಲವು.

ನೀಲ್ಗಿರಿ ಡಿ||—ಇಲ್ಲೂ ಮಳೆಯಾಧಿಕ್ಯದಿಂದ ಅನೇಕ ಸೇತುವೆಗಳು ಒಡೆದುಹೋದುವು, ಗುಡ್ಡಗಳು ಕುಸಿದುಬಿದ್ದವು; ಮಾರ್ಗಗಳು ಕೊಚ್ಚಿಹೋಗಿ ತಿರುಗಾಡಲಿಕ್ಕಿಲ್ಲವಾಗಿದೆ. ಪದಾರ್ಥಗಳ ನಷ್ಟವು ಬಹಳವಾಗಿಯೂ ಪ್ರಾಣನಷ್ಟವು ತಕ್ಕಮಟ್ಟಿಗೂ ಆಗಿರುವುದಂತೆ.

(ಮೈಸೂರು ಸೀಮೆಯಲ್ಲಿ ನದೀಪ್ರವಾಹದಿಂದಾದ ಅನಾಹುತವು.)

ಪಬ್ಲಿಸಿಟಿ ಆಫೀಸರವರ ಆಫೀಸು,
ಬೆಂಗಳೂರು, ತಾರೀಖು 23ನೆ ಜುಲೈ 1924.

ಪ್ರಸಿದ್ಧಪತ್ರಿಕೆ.

ಈ ತಿಂಗಳ ಎರಡನೆಯ ವಾರದಲ್ಲಿಯೂ ಮೂರನೆಯ ವಾರದ ಒಂದು ಭಾಗದಲ್ಲಿಯೂ ನಮ್ಮ ಸಂಸ್ಥಾನದ ಮಲೆನಾಡು ಡಿಸ್ಟ್ರಿಕ್ಟುಗಳಲ್ಲಿಯೂ ಅವುಗಳ ನೆರೆಹೊರೆಗಳಲ್ಲಿರುವ ಕೊಡಗಿನ ಡಿಸ್ಟ್ರಿಕ್ಟುಗಳು ಮತ್ತು ವೈನಾಡಿನಲ್ಲಿಯೂ ಹಿಂದೆ ಎಂದೂ ಇಲ್ಲದಷ್ಟು ಹೆಚ್ಚಾಗಿ ಮಳೆಯಾಯಿತೆಂದು ಸರ್ಕಾರದವರಿಗೆ ವರ್ತಮಾನವು ಬಂದಿತು. ಸಂಸ್ಥಾನದ ಮುಖ್ಯನದಿಗಳಾದ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ಮೊದಲಾದ ನದಿಗಳ ಮೂಲಗಳಲ್ಲಿ ಅನ್ಯಾದೃಶವಾದ ಈ ಭಾರೀ ಮಳೆಗಳಿಂದ ಪ್ರವಾಹವು ಉಕ್ಕಿ ಸೇತುವೆಗಳು, ಅಣೆಗಳು, ಮತ್ತು ನದಿಗಳ ತೀರದಲ್ಲಿರುವ ಗ್ರಾಮಗಳು, ಪಟ್ಟಣಗಳು, ಇವು ಕೊಚ್ಚಿಹೋಗುವುದು; ಮನೆಗಳು, ಜಮೀನುಗಳು ಮತ್ತು ಬೆಳೆಗಳು ಹಾಳಾಗುವುದು; ರಸ್ತೆಗಳು ಗುಂಡಿಬಿದ್ದು ಪ್ರಯಾಣಕ್ಕೆ ಅಡಚಣೆಯಾಗುವುದು; ಮುಂತಾದ ಅನಾಹುತಗಳಾಗಬಹುದೆಂದು ಸರ್ಕಾರದವರಿಗೆ ವಿಶೇಷ ವ್ಯಾಕುಲವುಂಟಾಗಿ ಮೈಸೂರು, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿಯೂ ಹಾಸನ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಿಯೂ ಮಳೆಗಳಿಂದ ಉಂಟಾಗಿರುವ ನಷ್ಟಗಳನ್ನು ತಂತಿ, ಟೆಲಿಫೋನು ಮತ್ತು ಟಪಾಲಿನ ಮೂಲಕ ಆ ಕೂಡಲೇ ತಿಳಿಯುವ ಬಗ್ಗೆ ಅವರು ತಕ್ಕ ಏರ್ಪಾಟುಗಳನ್ನು ಮಾಡಿದರು. ನಾನಾ ಆಫೀಸರುಗಳಿಂದಲೂ ಕೆಲವುಮಂದಿ ಖಾಸಗಿ ದೊಡ್ಡಮನುಷ್ಯರಿಂದಲೂ ವರದಿಗಳು ತಲಪಿರುತ್ತವೆ. ಇದುವರೆಗೆ ಇರುವ ಸ್ಥಿತಿಯನ್ನು ಈ ಮುಂದೆ ಸಂಕ್ಷೇಪವಾಗಿ ಕೊಟ್ಟಿದೆ:—

ಮೈಸೂರು ಡಿಸ್ಟ್ರಿಕ್ಟು—ಈ ಡಿಸ್ಟ್ರಿಕ್ಟಿನಲ್ಲಿರುವ ನದಿಗಳೆಲ್ಲವೂ, ಅದರಲ್ಲೂ ಹೇಮಾವತಿ, ಕಪಿನಿ ಮತ್ತು ಕಾವೇರಿ, ಈ ನದಿಗಳ ಪ್ರವಾಹವು ಅತಿಯಾಗಿರುವುದು. ತಿರುಮಕೂಡಲು ನರಸೀಪುರ, ಯಡತೊರೆ, ಶ್ರೀರಂಗಪಟ್ಟಣ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಬಹಳ ನಷ್ಟವು ಸಂಭವಿಸಿರುತ್ತದೆ. ತಿರುಮಕೂಡಲುನರಸೀಪುರದ ಟವನಿನ ಒಂದುಭಾಗವು ಮುಳುಗಿಹೋಗಿದ್ದುದರಿಂದ, ಖಜಾನೆಯನ್ನೂ ರಿಕಾರ್ಡುಗಳನ್ನೂ ತಾಲ್ಲೂಕು ಕಚೇರಿಯಿಂದ ಬೇರೆಕಡೆಗೆ ಸಾಗಿಸಬೇಕಾಯಿತು. ಸ್ಥಳದ ಅಧಿಕಾರಿಗಳು ಈ ಸ್ಥಳದಲ್ಲಿಯೂ ಇದೇ ದುರವಸ್ಥೆಗೊಳಪಟ್ಟಿದ್ದ ಇತರ ಪ್ರದೇಶಗಳಲ್ಲಿಯೂ ಜನಗಳನ್ನು ತಮ್ಮ ತಮ್ಮ ಮನೆಗಳನ್ನು ಖಾಲೀಮಾಡುವಂತೆ ಮಾಡಿ, ಅವರ ಸ್ವತ್ತನ್ನು ರಕ್ಷಿಸಿ ಪ್ರಾಣಕ್ಕೂ ಸ್ವತ್ತಿಗೂ ಯಾವುದೊಂದು ಬಗೆಯ ಅಪಾಯವೂ ಉಂಟಾಗದಂತೆ ಕೂಡಲೇ ತಕ್ಕ ಏರ್ಪಾಟುಗಳನ್ನು ಮಾಡಿದರು. ಮೈಸೂರು-ಉದಕಮಂಡಲದ (ಊಟಿ) ರಸ್ತೆಯ ಒಂದು ಭಾಗವು ನೀರಿನಲ್ಲಿ ಮುಳುಗಿಹೋಗಿದ್ದಿತು.

ಕಾವೇರಿನದಿಯ ಪ್ರವಾಹದಿಂದ ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾಮಗಾರಿಗೂ ಕೃಷ್ಣರಾಜಸಾಗರದ ಅಣೆಗೂ ಎಲ್ಲಿ ಅಪಾಯವಾದೀತೋ ಎಂದು ಸರ್ಕಾರದವರು ಕಳವಳಪಡುತ್ತಾ ಜಾಗರೂಕತೆಯಿಂದ ವರ್ತಮಾನವನ್ನು ನಿರೀಕ್ಷಿಸುತ್ತಿದ್ದರು. 17ನೆಯ ತಾರೀಖಿನಲ್ಲಿ ಕೃಷ್ಣರಾಜಸಾಗರದ ಅಣೆಯಮೇಲೆ 14 ಅಡಿಗಳ ನೀರು ಹರಿಯುತ್ತಿದ್ದಿತೆಂದೂ ಶಿವಸಮುದ್ರದ ಅಣೆಕಟ್ಟಿನ ಮೇಲೆ 10 ಅಡಿ 6 ಅಂಗುಲಗಳ ನೀರು ಹರಿಯುತ್ತಿದ್ದಿತೆಂದೂ ಆಗಿಂದಾಗ್ಗೆ ಬಂದಿರುವ ವರದಿಯಿಂದ ವ್ಯಕ್ತವಾಗುವುದು. ಶಿವಸಮುದ್ರದ ಸೇತುವೆಯ ಒಂದುಭಾಗವು ಕೊಚ್ಚಿಹೋಯಿತೆಂದೂ ವರದಿಯು ಬಂದಿದೆ. ನೀರಿನಿಂದ ನಾಲೆಗಳು ತುಂಬಿಹೋಗಿ ವಿದ್ಯುಚ್ಛಕ್ತಿಯ ಕಾಮಗಾರಿಗಳಿಗೆ ಬಾಧಕವಾಗದಂತೆ ಶಿವಸಮುದ್ರದಲ್ಲಿದ್ದ ವಿದ್ಯುಚ್ಛಕ್ತಿಯ ಇಲಾಖೆಯ ಆಫೀಸರುಗಳು ಸ್ವಲ್ಪವೂ ಆಲಸ್ಯವಿಲ್ಲದಂತೆ ತಕ್ಕ ಏರ್ಪಾಡುಗಳನ್ನು ಮಾಡಿದರು. ಕೃಷ್ಣರಾಜಸಾಗರದಲ್ಲಿಯೂ ಸಹ 19ನೆಯ ತಾರೀಖಿನವರೆಗೂ ಸ್ಥಿತಿಯು ಯಾವಾಗ ಏನು ಅಪಾಯವೊದಗುವುದೋ ಎಂಬಂತಿದ್ದಿತು. ಈಗ ಯಾವುದೊಂದು ಅಪಾಯದ ಭಯವೂ ಇರುವದಿಲ್ಲವೆಂದು ವರದಿಯು ಬಂದಿತು.

ಕಾವೇರಿ ನದಿಯ ಮಿರ್ಲೆ ನಾಲೆಗೂ ಹೇಮಾವತಿನದಿಯ ಕಲ್ಲಹಳ್ಳಿನಾಲೆಗೂ, ಕಾವೇರಿನದಿಯ ಕೃಷ್ಣರಾಜಕಟ್ಟೆಯಿಂದ ಬರುವ ಕಟ್ಟೇಪುರದನಾಲೆಗೂ, ಕಪಿನಿನದಿಯ ರಾಮಪುರದ ನಾಲೆಗೂ ಪ್ರವಾಹದ ದೆಸೆಯಿಂದ ತುಂಬ ನಷ್ಟವು ಸಂಭವಿಸಿದೆ ಎಂದು ವರದಿಯು ಬಂದಿದೆ. ಆದರೆ ಅದರ ಸ್ವಭಾವವೇನೆಂಬುದು ಮಾತ್ರ ಇನ್ನೂ ಚೆನ್ನಾಗಿ ಗೊತ್ತಾಗಿರುವುದಿಲ್ಲ; ಸಾಗುವಳಿಗೆ ತೊಂದರೆಯಾಗದಂತೆ ನೀರು ದೊರೆಯಲು ಅನುಕೂಲಿಸುವಂತೆ ಕೂಡಲೇ ತಕ್ಕ ಏರ್ಪಾಡುಗಳನ್ನು ಮಾಡುವ ಹಾಗೆ ಎಗ್ಜಿಕ್ಯೂಟಿವ್ ಇಂಜನಿಯರುಗಳಿಗೆ ಹುಕುಂ ಕೊಟ್ಟಿದೆ.

ಕಡೂರುಡಿಸ್ಟ್ರಿಕು:—ಕಡೂರು ಡಿಸ್ಟ್ರಿಕ್ಟಿನಲ್ಲಿ ಸ್ವಲ್ಪ ಹೆಚ್ಚು ಕಡಮೆ ವಿರಾಮವೇ ಇಲ್ಲದಂತೆ 5 ನೇ ತಾರೀಖಿನಿಂದ 16 ನೇ ತಾರೀಖಿನವರೆಗೂ ಮಳೆಯಾಗಿರುತ್ತೆಂದು ರಿಪೋರ್ಟು ತಲಪಿದೆ. ಮನೆಗಳು, ಸ್ವತ್ತುಗಳು ಅಥವಾ ಜಮೀನುಗಳಿಗೆ ಅಪಾಯವೇನಾದರೂ ಸಂಭವಿಸಿರುವುದೇ, ಪ್ರಯಾಣಕ್ಕೆ ಅಡಚಣೆಯಾಗುವಂತೆ ರಸ್ತೆ ಮುಂತಾದುವು ಕೊಚ್ಚಿಹೋಗಿವೆಯೆ, ಮತ್ತು ಮನುಷ್ಯರಿಗಾಗಲಿ, ದನಕರುಗಳಿಗಾಗಲಿ ಪ್ರಾಣಹಾನಿಯುಂಟಾಗಿರುವುದೆ, ಈ ಅಂಶಗಳನ್ನು ತಂತಿಯ ವರ್ತಮಾನದಮೂಲಕ ತಿಳಿಯಪಡಿಸುವಂತೆ ರೆವಿನ್ಯೂ ಕಮಿಷನರವರಿಗೂ ಡೆಪ್ಯುಟಿ ಕಮಿಷನರವರಿಗೂ ಅನುಜ್ಞೆಗಳನ್ನು ಸಾದರ್ಮಾಡಲಾಯಿತು. ತರೀಕೆರೆ ನರಸಿಂಹರಾಜಪುರದ ಟ್ರಾಂವೇ ರಸ್ತೆಯಲ್ಲಿರುವ ಸೇತುವೆಗೂ ಕೆಲವು ಚರಂಡಿಗಳಮೇಲಣ ಸಣ್ಣ ಸೇತುವೆಗಳಿಗೂ (ಕಲ್ವರ್ಟುಗಳಿಗೂ) ಸ್ವಲ್ಪ ಅಪಾಯವುಂಟಾಗಿರುತ್ತೆಂದು ವರದಿಯಾಗಿದೆ. ಕಡೂರು ಡಿಸ್ಟ್ರಿಕ್ಟಿನ ಕೆರೆಗಳೆಲ್ಲಾ ತುಂಬಿ ಹೋಗಿವೆ. ಹೊಸದಾಗಿ ದುರಸ್ತಾದ ಮಿಟ್ಟಿಗಾಪುರದ ಕೆರೆಯು ಒಡೆದು ಹೋಗಿರುವುದೆಂದು ವರದಿಯಾಗಿದೆ. ಬಣಕಲ್ಲಿನ ಆಮದುರಫ್ತುಗಳಿಗೆ ಅವಕಾಶವೇ ಇರುವದಿಲ್ಲ. ಹಿರೇಪುರ, ಷಣವಲ್ಲಿ ಮತ್ತು ಬಣಕಲ್ಲಿನ ಸಮೀಪದಲ್ಲಿ ಗಾಡಿಗಳ ಸಂಚಾರಕ್ಕೆ ಮಾರ್ಗವಿಲ್ಲದೆ ವ್ಯಾಪಾರಕ್ಕೆ ಸ್ವಲ್ಪ ತೊಂದರೆಯಾಗಿರುವುದರ ಹೊರತು, ಮತ್ಯಾವ ರಸ್ತೆಗಳಿಗೂ ಹಾನಿಯುಂಟಾಗಿರುವಂತೆ ವರದಿಯಾಗಿರುವುದಿಲ್ಲ. ಅಲ್ಲದೆ ಪ್ರಾಣಕ್ಕೇ ಆಗಲಿ ಸ್ವತ್ತಿಗೇ ಆಗಲಿ ಯಾವ ಅಪಾಯವೂ ಸಂಭವಿಸಿರುವಂತೆ ವರದಿಯಾಗಿರುವುದಿಲ್ಲ. ಒಡೆದು ಹೋಗಿರುವ ಸಣ್ಣ ಸೇತುವೆಗಳನ್ನು ಶೀಘ್ರದಲ್ಲಿ ಸರಿಪಡಿಸಿ ಪ್ರಯಾಣ ಸೌಕರ್ಯಗಳನ್ನು ಮೊದಲಿನಂತೆಯೇ ಒದಗಿಸಲಾಗುವುದೆಂದು ಸ್ಥಳದ ಆಫೀಸರುಗಳು ಸರ್ಕಾರದವರಿಗೆ ಭರವಸೆಕೊಟ್ಟಿರುತ್ತಾರೆ.

ಶಿವಮೊಗ್ಗಾ ಡಿಸ್ಟ್ರಿಕ್ಟು:—ಇಲ್ಲಿಯೂ ಸಹ ಮಳೆಯು ವಿಪರೀತವಾಗಿ ಆಗಿದೆ. ತುಂಗಾನದಿಯಲ್ಲಿಯೂ ಭದ್ರಾನದಿಯಲ್ಲಿಯೂ ನೀರು ಬಹಳ ಎತ್ತರಕ್ಕೆ ಬಂದಿದ್ದಿತು. ಆದರೂ ದೈವಕೃಪೆಯಿಂದ ಎರಡು ನದಿಗಳಲ್ಲೂ ಪ್ರವಾಹಗಳು ಏಕಕಾಲದಲ್ಲಿ ಬರಲಿಲ್ಲವಾಗಿ, ಒಟ್ಟಿನಲ್ಲಿ ಸ್ಥಿತಿಯು ಕಳೆದವರುಷದಷ್ಟು ಅಪಾಯಕರವಾಗಿರುವುದಿಲ್ಲ. ತುಂಗಾ ನದಿಯಲ್ಲಿ ಪ್ರವಾಹವು 18 ನೆಯ ತಾರೀಖಿನ ದಿನ ಅತ್ಯಧಿಕವಾದ ಎತ್ತರಕ್ಕೆ ಎಂದರೆ 30 ಅಡಿಗಳವರೆಗೆ ಏರಿದ್ದಿತೆಂದು ರಿಪೋರ್ಟಾಗಿದೆ. ನದಿಯ ತೀರದ ಸಮೀಪದಲ್ಲಿ ವಾಸಮಾಡುತ್ತಿದ್ದ ಜನಗಳಿಗೆ ಅಪಾಯದ ವಿಷಯವಾಗಿ ಎಚ್ಚರಿಕೆಯನ್ನು ಕೊಟ್ಟು, ಕೂಡಲೇ ಮನೆಗಳನ್ನು ಖಾಲಿಮಾಡುವಂತೆ ತಿಳಿಯಪಡಿಸಲಾಯಿತು. ಜನಗಳೆಲ್ಲರೂ ಈರೀತಿ ಮಾಡಿದುದರಿಂದ ಪ್ರಾಣಕ್ಕೇ ಆಗಲಿ ಸ್ವತ್ತಿಗೇ ಆಗಲಿ ಯಾವ ಅಪಾಯವೂ ಆಗಲಿಲ್ಲ; ಆದರೆ 14 ವರುಷ ವಯಸ್ಸಿನ ಒಬ್ಬ ಹುಡುಗನು ಮಾತ್ರ ಶಿವಮೊಗ್ಗೆಯಲ್ಲಿ ಮನೆಯಲ್ಲಿ ನಿದ್ರಿಸುತ್ತಿದ್ದ ವೇಳೆ ಮನೆಯು ಬಿದ್ದುಹೋಗಿ ಮೃತಪಟ್ಟನೆಂದು ವರದಿಯಾಗಿರುತ್ತದೆ. ಅದೇ ಮನೆಯಲ್ಲಿ ನಿದ್ರೆಯಲ್ಲಿದ್ದ ಮತ್ತೊಬ್ಬ ಹುಡುಗನಿಗೆ ಗಾಯವಾಗಿ ಸ್ಥಳದ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನು. ಈ ಗಾಯಗಳು ಕೇವಲ ಅಲ್ಪವಾದುವುಗಳಾಗಿರುವುವೆಂದು ತಿಳಿದುಬಂದಿದೆ. ಮನೆಗಳಿಗೆ ಸ್ವಲ್ಪಮಟ್ಟಿಗೆ ಅಪಾಯವಾಗಿದೆ ಮತ್ತು ಮನೆಗಳನ್ನು ಕಳೆದುಕೊಂಡವರಿಗೆ ಸ್ಥಳವಸತಿಯನ್ನೊದಗಿಸಲು ಸ್ಥಳದ ಅಧಿಕಾರಿಗಳು ಕೂಡಲೆ ಏರ್ಪಾಡುಗಳನ್ನು ಮಾಡುತ್ತಿರುವರು. ಖಾಸಗಿ ಜನರ ಪೈಕಿ ಕೆಲವರು ಈ ವಿಷಯದಲ್ಲಿ ಸರ್ಕಾರಿ ಆಫೀಸರುಗಳಿಗೆ ಮನಃಪೂರ್ವಕವಾಗಿ ಸಹಾಯಮಾಡಿದರೆಂದು ತಿಳಿಯಲು ಸರ್ಕಾರದವರು ಸಂತೋಷಿಸುತ್ತಾರೆ. ಶಿವಮೊಗ್ಗೆಯ ರೈಲ್ವೆ ಸ್ಟೇಷನ್ನಿಗೆ ಪ್ರವಾಹದ ನೀರು ನುಗ್ಗಿ ಸುಮಾರು ಒಂದು ಸಾವಿರ ಅಡಿಗಳಷ್ಟು ರೈಲ್ವೆಲೈನು ಕೊಚ್ಚಿಕೊಂಡು ಹೋಯಿತೆಂದೂ ವರದಿಯಾಗಿದ್ದಿತು. ಈ ಲೈನನ್ನು ದುರಸ್ತುಮಾಡುವುದಕ್ಕೆ ಏರ್ಪಾಡುಮಾಡಿದೆ. ಪ್ರವಾಹದಿಂದ ಅನೇಕ ಮರದ ದಿಮ್ಮಿಗಳು ಕೊಚ್ಚಿಹೋದುವೆಂದು ರಿಪೋರ್ಟು ಬಂದಿದೆ ಮತ್ತು ಚೌಬೀನೆ ವ್ಯಾಪಾರಿಗಳಿಗೆ ಸ್ವಲ್ಪ ನಷ್ಟವೂ ಉಂಟಾಗಿದೆ. ಈ ಡಿಸ್ಟ್ರಿಕ್ಟಿನ ಒಳಭಾಗದಲ್ಲಿ ಪ್ರವಾಹದಿಂದ ತೀರ್ಥಹಳ್ಳಿಯಲ್ಲಿ ಸ್ವಲ್ಪಮಟ್ಟಿಗೆ ಕಷ್ಟವುಂಟಾಗಿದೆ. ಆದರೆ ನಷ್ಟವಾಗುವುದಕ್ಕೆ ಪ್ರಬಲವಾದ ಕಾರಣವಾವುದೂ ಇಲ್ಲವೆಂದು ರಿಪೋರ್ಟಾಗಿದೆ. ಶಿವಮೊಗ್ಗೆಯಿಂದ ತೀರ್ಥಹಳ್ಳಿಗೆ ಹೋಗುವ ರಸ್ತೆಯ ಸ್ವಲ್ಪಭಾಗವು ನೀರಿನಿಂದ ಮುಚ್ಚಿಹೋಗಿತ್ತೆಂದು ವರದಿಯಾಗಿದ್ದಿತೇ ಹೊರತು, ಮಿಕ್ಕ ಯಾವ ರಸ್ತೆಗಳಿಗೂ ಅಡಚಣೆಯುಂಟಾಯಿತೆಂದು ವರದಿಗಳು ಬಂದಿಲ್ಲ. ತೀರ್ಥಹಳ್ಳಿಯಿಂದ ಶಿವಮೊಗ್ಗೆಗೂ ಅಲ್ಲಿಂದ ವಾಪಸು ತೀರ್ಥಹಳ್ಳಿಗೂ ಟಪಾಲನ್ನು ಸಾಗಿಸಲು ಪ್ರತ್ಯೇಕವಾದ ಏರ್ಪಾಡನ್ನು ಮಾಡಲಾಗಿದ್ದಿತು ಒಂದೆರಡು

ಸಣ್ಣ ಹಳ್ಳಿಗಳು ಶುದ್ಧಾಂಗವಾಗಿ ನೀರಿನಲ್ಲಿ ಮುಳುಗಡೆಯಾದುದಾಗಿ ವರದಿಯಾಗಿದೆ. ತಕ್ಕ ಗ್ರಾಮನಿವೇಶನಗಳನ್ನು ಕಂಡು ಹಿಡಿಯಲು ಡೆಪ್ಯುಟಿ ಕಮಿಷನರವರು ಕೂಡಲೆ ಏರ್ಪಾಡು ಮಾಡಿದರು. ನೀರು ಮುಳುಗಡೆಯಾದ ಗ್ರಾಮಸ್ಥರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕಾಗಿ ಅವರಿಗೆ ಮರವನ್ನು ಉಚಿತವಾಗಿ ಕೊಡುವುದಕ್ಕೂ ಸಹ ಏರ್ಪಾಡು ಮಾಡುತ್ತಿದೆ ಅವರಿಗೆ ಜಮೀನುಗಳನ್ನು ಕೊಡತಕ್ಕ ವಿಚಾರವೂ ಪರ್ಯಾಲೋಚನೆಯಲ್ಲಿದೆ.

ಹಾಸನ ಡಿಸ್ಟ್ರಿಕ್ಟು:—ಹಾಸನ ಡಿಸ್ಟ್ರಿಕ್ಟಿನಲ್ಲಿ ಚಂಗ್ಲನಹಳ್ಳಿಯ ಬಳಿ ಇರುವ ಕೆಲವು ನಾಲೆಗಳೂ ಮತ್ತು ಆಣೆಗಳೂ ಒಡೆದುಹೋಗಿವೆ. ಕೆಲವು ರಸ್ತೆಗಳೂ ಕೊಚ್ಚಿಹೋಗಿವೆ. ಸಕಲೇಶಪುರದಲ್ಲಿ 16 ಮಣ್ಣಿನಮನೆಗಳು ಬಿದ್ದುಹೋದುವಾಗಿ ರಿಪೋರ್ಟಾಗಿದೆ. ಅಲ್ಲಿನ ಜನರಿಗೆ ಬೇರೆಕಡೆ ವಸತಿಯನ್ನು ಕಲ್ಪಿಸಲು ಕೂಡಲೆ ಏರ್ಪಾಡು ಮಾಡಲಾಯಿತು. ರಾಮನಾಥಪುರದಲ್ಲಿಯೂ ಕೆಲವು ಮನೆಗಳು ಬಿದ್ದುಹೋದುವು ಮತ್ತು ಆ ಸ್ಥಳದಲ್ಲಿ ಖಾಸಗಿಜನರು ಮಾಡಿದ ಧರ್ಮಾರ್ಥವಾದ ಸಹಾಯವು ಕಷ್ಟನಿವಾರಣೆಗೆ ಕೂಡಲೆ ಒದಗಿತು. ಅರಕಲಗೂಡಿಗೂ ಇತರ ಸ್ಥಳಗಳಿಗೂ ಸಂಪರ್ಕವಿಲ್ಲದಂತೆ ರಸ್ತೆಯು ನೀರಿನಿಂದ ಕಟ್ಟಿಹೋಗಿರುವುದಾಗಿ ರಿಪೋರ್ಟಾಗಿದೆ. ಯಾವ ತಾಲ್ಲೂಕುಗಳಲ್ಲಿಯೂ ಪ್ರಾಣಹಾನಿಯಾಗಲಿ ಅಥವಾ ಸ್ವತ್ತುಗಳಿಗೆ ಪ್ರಬಲವಾದ ನಷ್ಟವಾಗಲಿ, ಯಾವುದೂ ಉಂಟಾಗಿಲ್ಲ.

ಚಿತ್ರದುರ್ಗ ಡಿಸ್ಟ್ರಿಕ್ಟು:—ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಹರಿಹರದ ಬಳಿ ತುಂಗಭದ್ರಾ ನದಿಯಲ್ಲಿ ಪ್ರವಾಹವು ಬಂದಿದ್ದಿತು. ಆದರೆ, ಹರಿಹರದಲ್ಲಾಗಲಿ ಅಥವಾ ಆ ನದಿಯ ದಡದಲ್ಲಿರುವ ಯಾವ ಗ್ರಾಮಗಳಲ್ಲಾಗಲಿ, ಪ್ರಾಣಹಾನಿಯೇ ಆಗಲಿ, ಅಥವಾ ಸ್ವತ್ತುಗಳಿಗೆ ನಷ್ಟವೇ ಆಗಲಿ, ಸಂಭವಿಸಲಿಲ್ಲ.

ಆಯಾಯ ಸ್ಥಳೀಯ ಆಫೀಸರುಗಳು ಸಾಧ್ಯವಾದಷ್ಟು ಜಾಗ್ರತೆಯಾಗಿ ಸಮರ್ಪಕವಾದ ಏರ್ಪಾಡುಗಳನ್ನು ಮಾಡಲನುಕೂಲಿಸುವುದಕ್ಕಾಗಿ, ಸರ್ಕಾರದವರು ಮೈಸೂರು ಹಾಸನ, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳ ಡೆಪ್ಯುಟಿಕಮಿಷನರುಗಳಲ್ಲಿ ಪ್ರತಿಯೊಬ್ಬರ ವಶಕ್ಕೂ, ಪ್ರವಾಹಗಳಿಂದ ಕಷ್ಟವನ್ನನುಭವಿಸಿರುವ ಬಡಜನರಿಗೆ ಕೂಡಲೆ ಕಷ್ಟನಿವಾರಣೆಮಾಡುವುದಕ್ಕಾಗಿ, 1000 ರೂಪಾಯಿಗಳನ್ನು ಕೊಟ್ಟಿರುತ್ತಾರೆ. ರಸ್ತೆಗಳನ್ನೂ ಮತ್ತು ಸೇತುವೆಗಳನ್ನೂ ಕೂಡಲೆ ದುರಸ್ತುಮಾಡಿಸುವುದಕ್ಕೂ ಮತ್ತು ಪ್ರವಾಹಗಳಿಂದ ಜನರೂ, ಬಂಡಿಗಳೂ ತಿರುಗುವುದಕ್ಕೆ ಉಂಟಾಗಿರುವ ಅಡಚಣೆಗಳನ್ನು ತಪ್ಪಿಸುವುದಕ್ಕೂ, ಈ ಡಿಸ್ಟ್ರಿಕ್ಟುಗಳ ಎಗ್ಜಿಕ್ಯುಟಿವ್ ಇಂಜಿನಿಯರುಗಳ ವಶಕ್ಕೆ 2500 ರೂಪಾಯಿಗಳ ಇಂಪ್ರೆಸ್ಟನ್ನು ಕೊಡಲಾಯಿತು. ಅಲ್ಲದೆ ಪ್ರವಾಹಗಳಿಂದ ನಷ್ಟಪಟ್ಟ ಜನಗಳಿಗೆ ಸಾಲದರೂಪದಲ್ಲಿ ಮುಂಗಡವಾಗಿ ಕೊಡುವ ಬಗ್ಗೆ ಸರ್ಕಾರದವರು ಪ್ರತಿಯೊಬ್ಬರು ಡೆಪ್ಯುಟಿಕಮಿಷನರವರ ವಶಕ್ಕೂ 5,000 ರೂಪಾಯಿಗಳನ್ನು ಕೊಟ್ಟಿರುತ್ತಾರೆ.

ಡಿಸ್ಟ್ರಿಕ್ಟು ಆಫೀಸರುಗಳಿಗೆ ಪ್ರವಾಹಗಳದೆಸೆಯಿಂದ ಅನಾಹುತಗಳು ಸಂಭವಿಸುವ ವಿಚಾರದಲ್ಲಿಯೂ, ಅವುಗಳ ನಿವಾರಣೆಯಲ್ಲಿಯೂ, ಹಿಂದಣವರ್ಷ ತುಂಬ ಅನುಭವವುಂಟಾಗಿದ್ದಿತು. ಆದುದರಿಂದ ಅವರು ಈರೀತಿ ಮಳೆಯು ಅವಿಚ್ಛಿನ್ನವಾಗಿ ಬೀಳುತ್ತಿದ್ದಾಗ್ಯೂ ತಕ್ಕಷ್ಟು ಎಚ್ಚರದಿಂದ ಇದ್ದು ಅಪಾಯ ವೊದಗಿದಂತೆಲ್ಲಾ ತಕ್ಕ ಪರಿಹಾರಗಳನ್ನು ಆಚರಿಸುತ್ತಲೇ ಇದ್ದರು. ಶೀಘ್ರದಲ್ಲಿಯೇ ಎಲ್ಲವೂ ಯಥಾಸ್ಥಿತಿಗೆ ಬರುವುದೆಂದೂ, ಕಳವಳ [illegible]ಬೇಕಾದುದಿಲ್ಲವೆಂದೂ ನಂಬಿಕೆಯುಂಟಾಗಿದೆ. ಸರ್ಕಾರದವರು ಪ್ರತಿದಿನವೂ ಡಿಸ್ಟ್ರಿಕ್ಟು ಆಫೀಸರುಗಳೊಂದಿಗೆ ವ್ಯವಹರಿಸುತ್ತಿರುವರಲ್ಲದೆ ಅವಶ್ಯಕವಾದ ಸಹಾಯವನ್ನು ಸ್ವಲ್ಪವೂ ಹಿಂದೆಗೆಯದಂತೆ ಒದಗಿಸಲು ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡುವರು.

ಆರ್. ರಂಗರಾವ್,
ಸರ್ಕಾರದ ಪಬ್ಲಿಸಿಟಿ ಆಫೀಸರ್.

ಭರತಖಂಡದ ವೃತ್ತಾಂತಗಳು.

500 ಅಕಾಲಿಗಳ 9ನೆಯ ಷಾಹಿದೀಜತವು ಜಯತೋವನ್ನು ಸೇರಿದ ಮೇಲೆ ಯಥಾಪ್ರಕಾರ ನಭಾ ಸರ್ಕಾರದವರಿಂದ ಸೆರೆಹಿಡಿಯಲ್ಪಟ್ಟಿತು.

ಅಹಮದಾಬಾದಿನಲ್ಲಿ ಬಹಳ ಶಿಥಿಲವಾಗಿದ್ದ ಮನೆಯನ್ನು ಮ್ಯುನಿಸಿಪಾಲಿಟಿಯವರು ಒಡೆದುಹಾಕಿಸುತ್ತಿದ್ದಾಗ್ಗೆ 9 ಜನ ಆಳುಗಳ ಮೇಲೆ ಗೋಡೆಯು ಬಿದ್ದು ಅವರಲ್ಲೊಬ್ಬನು ಅಲ್ಲೇ ಸತ್ತನು, ಇನ್ನೊಬ್ಬನು ಆಸ್ಪತ್ರೆಯಲ್ಲಿ ಸತ್ತುಹೋದನು, ಉಳಿದವರು ಚಿಕಿತ್ಸೆಯನ್ನು ಹೊಂದುತ್ತಿರುವರು.

ತಿರುವಾಂಕೂರಿನಲ್ಲಿ ಪ್ರತಿಯೊಂದು ಸಿನೀಮಾಪ್ರದರ್ಶನಶಾಲೆಯವರು ಪ್ರತಿ ದಿನವೂ ಪ್ರದರ್ಶನಾರಂಭದಲ್ಲಿ 10 ನಿಮಿಷಗಳವರೆಗೆ ಆರೋಗ್ಯ ಸಂಬಂಧವಾದ ಚಿತ್ರಗಳನ್ನು ಪ್ರದರ್ಶಿಸಬೇಕೆಂದು ಅಲ್ಲಿಯ ಸರ್ಕಾರದವರು ಒಂದು ವಿಧಿಯನ್ನು ಮಾಡುವವರಾಗಿರುವರಂತೆ. ಇದರಂತೆಯೇ ಮೈಸೂರು ಸರ್ಕಾರದವರು ಮಾಡಬಹುದಲ್ಲವೆ ?

ಬಡಜನರ ವಿದ್ಯಾಭ್ಯಾಸ ಮೊದಲಾಗಿ ಧರ್ಮಕಾರ್ಯಗಳಿಗೆ ಬಂಗಾಳಾ ಶ್ರೀಮಂತರುಗಳಿಂದ ಎಷ್ಟು ಎಷ್ಟು ದ್ರವ್ಯವು ವಿನಿಯೋಗವಾಗಿರುವುದೆಂಬುದು ಮುಂದಣ ವಿವರಣೆಯಿಂದ ಗೊತ್ತಾಗುವುದು.—ಸರ್ ತಾರಕನಾಥಪಲಿತರವರು 1912ರಲ್ಲಿ 14,65,800 ಸರ್ ರಸವಿಹಾರಿಘೋಸ್‌ರವರು 1913ರಲ್ಲಿ 10,00,000; 1919ರಲ್ಲಿ 11,43,000; 1921 ರಲ್ಲಿ 2,50,000; ಸಿ. ಸಿ. ಘೋಸ್‌ರವರು 1919ರಲ್ಲಿ 1,00,000; ಕುಮಾರ ಗುರುಪ್ರಸಾದ ಸಿಂಹರವರು 1920ರಲ್ಲಿ 5,50,000 ಒಟ್ಟು 45,08,800 ರೂಪಾಯಿಗಳು.

ಮದ್ರಾಸ್ ಸರ್ಕಾರದವರು ತುಂಗಭದ್ರಾನದಿಗೆ ಆಣೆಯನ್ನು ಕಟ್ಟಿ ತನ್ಮೂಲಕ ಬಳ್ಳಾರಿ ಕಡಪ ಮೊದಲಾದ ಡಿಸ್ಟ್ರಿಕ್ಟುಗಳಿಗೆ ವ್ಯವಸಾಯಕ್ಕಾಗಿ ನೀರನ್ನೊದಗಿಸಬೇಕೆಂದು ಅನೇಕ ವೇಳೆ ಯೋಚಿಸಿ ಕಡೆಗೆ ಅದರಿಂದ ವೆಚ್ಚಕ್ಕೆ ತಕ್ಕಷ್ಟು ಆದಾಯವಾಗುವುದಿಲ್ಲವೆಂಬುದರ ಮೇಲೆ ನಿಲ್ಲಿಸಿಬಿಟ್ಟಿದ್ದರು ಈಗಿನ ಪರಿಸ್ಥಿತಿಯಲ್ಲಿ ಆಣೆಯನ್ನು ಕಟ್ಟಿದರೆ ಆದಾಯವಾಗುತ್ತದೆಂಬುದನ್ನರಿತು ಕೂಡಲೆ ಕೆಲಸಕ್ಕಾರಂಭಿಸಲು ಮದ್ರಾಸ್ ಸರ್ಕಾರದ ಚೀಫ್ ಇಂಜನಿಯರು ಒಂದು ನಿರೀಕ್ಷಿತ ಲೆಖ್ಖದ ಪಟ್ಟಿಯನ್ನು ಸಿದ್ಧಗೊಳಿಸಿ ಸರ್ಕಾರದವರ ಅನುಮತಿಗಾಗಿ ಕಳುಹಿಸಿಕೊಟ್ಟಿರುವರು.

ಕೊಯಮತ್ತೂರು ಡಿ|| ಕೋಲವುರಂ ತಾಲ್ಲೂಕಿಗೆ ಸೇರಿದ ಜಯಕೊಂಡ ಗ್ರಾಮವಾಸಸ್ಥನಾದ ಆರುಮುಗಂ ಎಂಬ ಚೋರಶಿಖಾಮಣಿಯು ಅನೇಕ ಕನ್ನ ಕಳ್ಳತನಗಳನ್ನೂ ದರೋಡೆಗಳನ್ನೂ ನಡೆಯಿಸುತ್ತ ಮಹಾಕಂಟಕಪ್ರಾಯನಾಗಿರುವುದರಿಂದ ಜನರು ಅವನ ಹೆಸರನ್ನು ಕೇಳಿದಮಾತ್ರಕ್ಕೆ ತತ್ತರಿಸುವರು. ಇವನು ತನ್ನ ಸುಳಿವನ್ನು ಯಾರಾದರೂ ಅಧಿಕಾರಿಗಳಿಗೆ ತಿಳಿಸಿದಲ್ಲಿ ಅವರನ್ನು ಪ್ರಾಣಸಹಿತ ಬಿಡುವುದಿಲ್ಲವಾದುದರಿಂದ, ಯಾರೂ ತಿಳುಹಲು ಹೆದರುವರು. ಇವನ ಭೂಮಿಯು ಕಂದಾಯದ ಬಾಕಿಗಾಗಿ ಸರ್ಕಾರದವರಿಂದ ಹರಾಜುಹಾಕಲ್ಪಡುವುದೆಂಬ ಸಂಗತಿಯನ್ನು ಆರ್ಮುಗಂ ತಿಳಿದು ಯಾರಾದರು ತೆಗೆದುಕೊಂಡ ಪಕ್ಷದಲ್ಲಿ ಅವರ ತಲೆಯು ಆ ಕ್ಷಣದಲ್ಲೇ ತೆಗೆದುಹಾಕಲ್ಪಡುವುದೆಂದು ಜನರನ್ನು ಎಚ್ಚರಿಸಿದ್ದನಾದರೂ ಅವನ ಸ್ವಂತ ಚಿಕ್ಕಪ್ಪನು ಧೈರ್ಯದಿಂದ ಹರಾಜಿನಲ್ಲಿ ಭೂಮಿಯನ್ನು ತೆಗೆದುಕೊಳ್ಳಲಾಗಿ ಕೆಲ ದಿನಗಳಲ್ಲಿ ಆರ್ಮುಗಮ್ಮನಿಂದ ಕೊಲ್ಲಲ್ಪಟ್ಟನು. ಕೋಲತ್ತೂರಿನ ಗ್ರಾಮ ಮುನಸೀಫನು ಇವನನ್ನು ಹೇಗಾದರೂ ಪ್ರಯತ್ನಿಸಿ ಹಿಡಿದುಕೊಡುತ್ತೇನೆಂದು ಸರ್ಕಾರಕ್ಕೆ ತಿಳಿಸಿದ್ದುದರ ಮೇಲೆ ಕಳೆದ ತಾ|| 9 ರಲ್ಲಿ ಅವನ ತಲೆಯು ಕತ್ತರಿಸಿಹಾಕಲ್ಪಟ್ಟಿತು. ಇದರ ಮೇಲೆ ಪೊಲೀಸಿನವರು ಈ ಘಾತುಕನನ್ನು ಹಿಡಿಯಲು ಹಟತೊಟ್ಟು ಮಹಾಪ್ರಯತ್ನವನ್ನು ನಡೆಸಿರುವರು ಮತ್ತು ರಿಜರ್ವ್ ಪೊಲೀಸಿನವರು ಸಹ ಜಯಗೊಂಡ ಕೋಲವುರ ಮೊದಲಾದ ಸ್ಥಳಗಳ ಕಾಡುಗಳಲ್ಲಿ ತಡಕಲು ಸಾಹಸಪಡುತ್ತಿರುವರಾದರೂ ಆರ್ಮುಗಮ್ಮನು ಸಿಕ್ಕದೆ ತಪ್ಪಿಸಿಕೊಂಡಿರುವನು. ಇವನು ಯಾವಾಗಲೂ ಬಂದೂಕ ಕತ್ತಿ ಈಟಿ ಮೊದಲಾದ ಆಯುಧಗಳನ್ನು ಧರಿಸಿಯೇ ಇರುವನು.

ವಿದೇಶದ ವೃತ್ತಾಂತಗಳು

ಇಂಗ್ಲೆಂಡಿನ ಒಬ್ಬ ಶಿಲ್ಪಿಯು ಒಂದು ಆಶ್ಚರ್ಯಕರವಾದ ಕುರ್ಚಿಯನ್ನು ಮಾಡಿರುವನು. ಅದರಲ್ಲಿಟ್ಟಿರುವ ಕೀಲನ್ನು ತಿರುಗಿಸಿದರೆ ಅದು ಕುರ್ಚಿ, ಮೇಜ, ಮಂಚ ಮೊದಲಾಗಿ 12 ವಿಧದಿಂದ ಉಪಯೋಗಿಸಲ್ಪಡಲಿಕ್ಕೆ ಬರುವುದಂತೆ.

ದಕ್ಷಿಣ ಅಮೇರಿಕೆಯ ಬೋಲಿವಿಯಾದೇಶಕ್ಕೆ ಸೇರಿದ ಅಲ್ಟೋಪ್ರೆಕ್ರುಸಿರೋ ಎಂಬೂರಿನಲ್ಲಿ ಮಧ್ಯಾಹ್ನದ ವೇಳೆ ಮೈಬಿಟ್ಟುಕೊಂಡು ತಿರುಗಾಡಿದಲ್ಲಿ ಮೈಮೇಲೆ ಗುಳ್ಳೆಗಳೇಳುವಷ್ಟು ಬಿಸಿಲು ತೀಕ್ಷ್ಣವಾಗಿಯೂ, ರಾತ್ರಿವೇಳೆ ನೀರು ಮಂಜಿನಂತೆ ಗಡ್ಡೆ ಕಟ್ಟಿಕೊಳ್ಳುವಷ್ಟು ಶೈತ್ಯವಾಗಿಯೂ ಇರುವುದಂತೆ.

ಬ್ರಿಟಿಷ್ ಸೈನ್ಯಶಾಖೆಯವರು ಒಂದು ಹೊಸಮಾದರಿಯ ಆಕಾಶಯಾನವನ್ನು ನಿರ್ಮಿಸುತ್ತಿರುವರು. ಇದರಲ್ಲಿಡಲ್ಪಡುವ ವೈದ್ಯುತಯಂತ್ರಸಹಾಯದಿಂದ ಸಿಡಿಮದ್ದು ಯಾವಕಡೆ ಬೇಕಿದ್ದರೂ ತಿರುಗಿಸುವಂತೆಯೂ, ಯಾವ ಸ್ಥಳದ ಮೇಲಾದರೂ ಬೀಳುವಂತೆಯೂ ಹಾಕಲ್ಪಡಲು ಸಾಧ್ಯವಾಗುವುದಂತೆ. ಈ ಯಾನನಿರ್ಮಾಣಪ್ರಯತ್ನವು ಸಫಲವಾಗುವುದಾದಲ್ಲಿ ಶತ್ರುರಾಜ್ಯಗಳನ್ನು ದೂರದಲ್ಲಿದ್ದುಕೊಂಡೇ ನಾಶಮಾಡಬಹುದಲ್ಲವೆ !

ಆಸ್ಟ್ರೇಲಿಯಾ ದೇಶದಲ್ಲಿ 2 ವರ್ಷ ವಯಸ್ಸಿನ ಒಂದು ಹಂದಿಮರಿಯು 1188 ಪೌಂಡು ತೂಕವಿರುವುದು. ಇದರ ಉದ್ದವು 8 ಅಡಿ 3 ಅಂಗುಲವೂ, ಎತ್ತರವು 3 ಅಡಿ 9 ಅಂಗುಲವೂ, ಸೊಂಟದ ಸುತ್ತಳತೆಯು 6 ಅಡಿ 5 ಅಂಗುಲವೂ ಇರುವುವು. ಇಷ್ಟು ದೊಡ್ಡಹಂದಿಯು ಪ್ರಪಂಚದ ಮತ್ತಾವಭಾಗದಲ್ಲೂ ಇಲ್ಲವು, ಮತ್ತು ಈ ಸಣ್ಣವಯಸ್ಸಿನಲ್ಲೇ ಇಷ್ಟು ಗಾತ್ರವಾಗಿರುವುದರಿಂದ ಮುಂದೆ ಚೆನ್ನಾಗಿ ಬೆಳೆದಮೇಲೆ ಒಂದು ದೊಡ್ಡ ಮರಿಯಾನೆಯಂತಾಗಬಹುದೆಂದು ತೋರುತ್ತದೆ.

ವಿದ್ಯುಚ್ಛಕ್ತಿಯ ಸಹಾಯದಿಂದ ಬಟ್ಟೆಗಳನ್ನು ಜಲುವೆ ಮಾಡಿ ಇಸ್ತ್ರಿಮಾಡುವ ಒಂದು ದೊಡ್ಡ ಯಂತ್ರವು ಬ್ರಿಟಿಷ್ ಸಾಮ್ರಾಜ್ಯ ಮಹಾವಸ್ತುಪ್ರದರ್ಶನಾಲಯದಲ್ಲಿ ಅಮೇರಿಕೆಯವರಿಂದ ಪ್ರದರ್ಶಿಸಲ್ಪಟ್ಟಿರುವುದು. ಇದರಲ್ಲಿರುವ ವಿದ್ಯುಚ್ಛಕ್ತಿಯ ಶಾಖದಿಂದ 400 ಒದ್ದೆಬಟ್ಟೆಗಳು 5 ನಿಮಿಷಗಳಲ್ಲಿ ಒಣಗಿಸಬಹುದು ಮತ್ತು ಇದರಲ್ಲಿರುವ 2000 ಪೌಂಡು ತೂಕವುಳ್ಳ ಒಂದು ಉರುಳೆಯ ಸಹಾಯದಿಂದ 300 ಪೌಂಡು ತೂಕವುಳ್ಳ ಫ್ಲಾನಲ್ಲು ಬಟ್ಟೆಯನ್ನು 1 ಗಂಟೆಯಕಾಲದಲ್ಲಿ ಇಸ್ತ್ರಿಮಾಡಬಹುದಂತೆ.

ಯುನೈಟೆಡ್ ಸ್ಟೇಟ್ಸಿನಲ್ಲಿ ಕ್ಯಾಲಿಫೋರ್ನಿಯಾಕ್ಕೆ ಸೇರಿದ ಲಾಸ್‌ಏಂಜಲ್ಸ್ ಎಂಬಲ್ಲಿ ಹೋಪ್‌ಡೆವಲೊಪ್‌ಮೆಂಟ್ ಪಾಠಶಾಲೆಯ 14 ವರ್ಷ ವಯಸ್ಸಿನ ವಿದ್ಯಾರ್ಥಿನಿಯೊಬ್ಬಳು ಪಾಠಶಾಲಾ ವಿದ್ಯಾರ್ಥಿನಿಯರೆಲ್ಲರಿಗೂ ವಿರಾಮವನ್ನು ಕೊಡಿಸಲು ತಕ್ಕುಪಾಯವನ್ನು ಕಂಡುಹಿಡಿಯಲೆತ್ನಿಸಿ ಸರಿಯಾದುದಾವುದೂ ತೋಚಲಿಲ್ಲವಾಗಿ ಕಡೆಗೆ ಪಾಠಶಾಲಾ ಕಟ್ಟಡಕ್ಕೆ ಬೆಂಕಿಯನ್ನು ಹೊತ್ತಿಸುವುದು ತಕ್ಕುಪಾಯವೆಂದು ನಿರ್ಧರಿಸಿ ಆ ರೀತಿ ಬೆಂಕಿಯನ್ನು ಹೊತ್ತಿಸಿಬಿಟ್ಟಳು. ಅದರಿಂದ 54 ವಿದ್ಯಾರ್ಥಿನಿಯರು ಅಗ್ನಿಗೆ ಆಹುತಿಯಾದರಲ್ಲದೆ ಅನೇಕ ಬಾಲಿಕೆಯರು ಮಾಡದಮೇಲಿಂದ ನೆಲದಮೇಲೆ ದುಮುಕಿ ಅಂಗವಿಕಲತೆಯನ್ನು ಹೊಂದಿರುವರು.

ಲಂಡನ್ ಮಹಾನಗರದ ವೆಂಬ್ಲೆ ಪ್ರದೇಶದಲ್ಲಿ ಜರುಗುತ್ತಿರುವ ಬ್ರಿಟಿಷ್ ಮಹಾವಸ್ತುಪ್ರದರ್ಶನಾಲಯದಲ್ಲಿ ಕಳೆದ 21 ರಿಂದ ಭರತಖಂಡದ ನಾನಾಪಟ್ಟಣಗಳ ಲಕ್ಷಣಗಳೆಲ್ಲವೂ ಪ್ರದರ್ಶಿಸಲ್ಪಡುತ್ತಿರುವುವು. ಹಾವಾಡಿಗರು, ಗಾರುಡಿಗರು, ವೇಶ್ಯೆಯರು, ಸಿದ್ಧರು, ಸನ್ಯಾಸಿಗಳು ಮೊದಲಾದವರೂ ಭಾರತಸಂಸ್ಥಾನಾಧೀಶ್ವರರುಗಳು ಧರಿಸುವ ವಸ್ತ್ರಾಭರಣಗಳೂ ಪ್ರದರ್ಶಿಸಲ್ಪಡುತ್ತಿವೆ. ಚೀನಾ ಮತ್ತು ಪರ್ಷಿಯಾ ವರ್ತಕರುಗಳು ತಮ್ಮ ದೇಶದ ಉಡುಪುಗಳನ್ನು ಧರಿಸಿಕೊಂಡಿರುವರು. 1616ರಲ್ಲಿ ಜಹಂಗೀರನ ಸಂಸ್ಥಾನಕ್ಕೆ ಸರ್ ಥಾಮಸ್‌ರೋ ಬಂದಿದ್ದಾಗ ಇದ್ದ ಪರಿಸ್ಥಿತಿಯೂ 1912ರಲ್ಲಿ ಸಾರ್ವಭೌಮರವರು ಭರತಖಂಡಕ್ಕೆ ಬಂದಿದ್ದಾಗ ಇದ್ದಸ್ಥಿತಿಯೂ ಪ್ರದರ್ಶಿಸಲ್ಪಟ್ಟಿರುವುದು.

ಅಮೇರಿಕೆಗೆ ಸೇರಿದ ರೋಡ್‌ದ್ವೀಪದಲ್ಲಿ ಒಂದು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು ಒಂದಾನೊಂದು ವಿಷಯವನ್ನು ಬಹಳ ಆವೇಶದಿಂದ 42 ಗಂಟೆಗಳ ಕಾಲ ಕೊಂಚವೂ ಬಿಡುವಿಲ್ಲದೆ ಚರ್ಚಿಸುತ್ತಿದ್ದು ಕಡೆಯಲ್ಲಿ ಒಂದು ಪಕ್ಷದವರು ಇದಿರ ಪಕ್ಷದವರ ಓಟುಗಳನ್ನು ಕಡಿಮೆಮಾಡಿ ತಮ್ಮ ಪಕ್ಷದವರು ಓಟುಗಳನ್ನು ಹೆಚ್ಚಿಸಿಕೊಳ್ಳಬೇಕೆಂಬ ಅಭಿಪ್ರಾಯದಿಂದ ಜ್ಞಾನವನ್ನು ತಪ್ಪಿಸುವಂತಹ ವಾಯುವನ್ನು ಇದಿರ ಪಕ್ಷದ ಮೆಂಬರುಗಳು ಅಘ್ರಾಣಿಸುವಂತೆ ಮಾಡಲು ಅವರಲ್ಲನೇಕರು ಅಪಾಯವನ್ನು ಹೊಂದಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಲ್ಪಡಬೇಕಾಗಿ ಬಂದಿತು. ಹಟಸಾಧನೆಗಾಗಿ ನಾಗರಿಕರು ಕೂಡ ಎಂತಹ ಅಕೃತ್ಯವನ್ನು ಮಾಡಲೂ ಹಿಂಜರಿಯರೆಂಬುದಕ್ಕೆ ಇದು ಒಳ್ಳೆಯ ನಿದರ್ಶನವಾಗಿದೆ.

ಇಂಗ್ಲೆಂಡಿಗೆ ಸೇರಿದ ಕ್ಯಾಸಿಂಗ್ಟನ್ ಎಂಬಲ್ಲಿಯ ವಾಸಸ್ಥನೊಬ್ಬನು ಮನೆಯಲ್ಲಿ ತನ್ನ ಹೆಂಡತಿಯು ಪ್ರತಿನಿತ್ಯದಲ್ಲೂ ಮಾಡುತ್ತಿರುವ ಕಲಹದಿಂದ ಬೇಸರಪಟ್ಟು ಉಪಾಯಾಂತರದಿಂದ ಆಕೆಯಿಂದ ದೂರನಾಗಿದ್ದುಕೊಂಡಿರಬೇಕೆಂದು ಯೋಚಿಸಿ ಒಂದುದಿವಸ ಒಂದು ಅಂಗಡಿಯ ಕಿಟಕಿಯನ್ನು ಒಡೆದುದಾಕೆ ಮ್ಯಾಜಿಸ್ಟ್ರೇಟರ ವಿಚಾರಣೆಗೊಳಪಟ್ಟು 1 ತಿಂಗಳ ಕಾರಾಗೃಹವಾಸದ ಶಿಕ್ಷೆಯು ವಿಧಿಸಲ್ಪಡಲು ಆ ಶಿಕ್ಷೆಯು ಬಹಳ ಕಡಿಮೆಯಾದುದರಿಂದ ಅದನ್ನು ಹೆಚ್ಚಿಸಬೇಕೆಂದು ಪ್ರಾರ್ಥಿಸಿಕೊಂಡುದರಮೇಲೆ ಮ್ಯಾಜಿಸ್ಟ್ರೇಟರು ಆಶ್ಚರ್ಯದಿಂದ ಅದರ ಕಾರಣವನ್ನು ಕೇಳಲು, ಜಗಳಗಂಟಿಯಾದ ಹೆಂಡತಿಯ ಕೂಡ ವಾಸಮಾಡುವುದಕ್ಕಿನ್ನ ಕಾರಾಗೃಹವಾಸವು ಸರ್ವೋತ್ತಮವೆಂದು ಅಪರಾಧಿಯು ಹೇಳಿದನಂತೆ.

ಲಾಲಾದೀನನಾಥರು ಕೈಜರರ ದರ್ಶನಭಾಷಣಮಾಡಿದುದು.

ಪಂಜಾಬಿನಲ್ಲಿ ದೇಶ ಎಂಬ ವೃತ್ತಪತ್ರಿಕೆಯ ಸಂಪಾದಕರಾಗಿದ್ದ ಲಾಲಾ ದೀನನಾಥ ಎಂಬ ಭಾರತೀಯ ದೊಡ್ಡಮನುಷ್ಯರು ಇಂಗ್ಲೆಂಡಿಗೆ ಪ್ರಯಾಣಮಾಡುವಾಗ್ಗೆ ಮಾರ್ಗದಲ್ಲಿ ಹಾಲೆಂಡಿನಲ್ಲಿದ್ದು ಲೋಕೈಕವೀರನೆಂದು ಪ್ರಸಿದ್ಧನಾಗಿದ್ದು ಜರ್ಮನಿ ಸಾಮ್ರಾಜ್ಯಪದಚ್ಯುತನಾಗಿ ಹಾಲೆಂಡಿನಲ್ಲಿ ನಿರ್ಬಂಧವಾಸದಲ್ಲಿರುವ ಕೈಜರನ ದರ್ಶನ ಭಾಷಣಮಾಡಬೇಕೆಂಬ ಅಭಿಲಾಷೆಯಿಂದ ಅವರನ್ನು ಕಾಣುವ ಸಾಧ್ಯಾಸಾಧ್ಯತೆಯನ್ನು ಕುರಿತು ತಾನಿಳಿದಿರುವ ಹೋಟಲಿನ ಯಜಮಾನನನ್ನೂ ಇತರರನ್ನೂ ಕೇಳುವಲ್ಲಿ, ಕೈಜರರು ಯಾವಾಗಲೂ ಏಕಾಂತವಾಸಿಯಾಗಿರುವುದರಿಂದ ಯಾರ ದರ್ಶನಕ್ಕೂ ಅವಕಾಶವಿಲ್ಲವಾದ ಪ್ರಯುಕ್ತ ನೀವು ಅವರನ್ನು ಕಾಣುವ ಅಪೇಕ್ಷೆಯನ್ನು ಬಿಡಬೇಕು" ಎಂದು ಉತ್ತರವನ್ನು ಕೊಟ್ಟರು. ಆದರೂ ಲಾಲರು ಅಷ್ಟಕ್ಕೆ ತಟಸ್ಥರಾಗಿರದೆ ತಮ್ಮ ದರ್ಶನಾಪೇಕ್ಷಿಯಾಗಿ 6 ಸಾವಿರ ಮೈಲಿ ದೂರಪ್ರದೇಶದಿಂದ ಬಂದಿರುವ ನನಗೆ ಅವಕಾಶವನ್ನು ಕೊಡಬೇಕಲ್ಲದೆ ತಿರಸ್ಕರಿಸಬಾರದೆಂದು ಕೈಜರರಿಗೆ ಕಾಗದವನ್ನು ಬರೆದರು. ಕೈಜರರನ್ನು ನೀವು ಯಾವಾಗ ಬೇಕಿದ್ದರೂ ಕಾಣಬಹುದು ಎಂದು ಅವರ ಸೆಕ್ರೆಟರಿಯು ಇಂಗ್ಲೀಷುಭಾಷೆಯಲ್ಲಿ ಬರೆದಿದ್ದ ಪತ್ರವನ್ನು ಓದಿಕೊಂಡು ಆನಂದಪರವಶರಾಗಿ ಕೈಜರರನ್ನು ಕಾಣಲು ಅರಮನೆಗೆ ಹೋದ ವಿಚಾರವಾಗಿ ದೀನನಾಥರು ಹೀಗೆ ಬರೆದಿರುತ್ತಾರೆ.—

ನಾನು ಅರಮನೆಯ ದ್ವಾರದಬಳಿ ಹೋಗುತಲೆ ದ್ವಾರಪಾಲಕನು ನನ್ನ ಹೆಸರು ವಾಸಸ್ಥಳ ಮುಂತಾದುದನ್ನು ವಿಚಾರಿಸಿ ಒಳಗಿನ ಕೊಠಡಿಗೆ ಕರೆದುಕೊಂಡುಹೋಗಿ ಬಿಟ್ಟನು. ಅಲ್ಲಿ 50 ವರ್ಷ ವಯಸ್ಸಿನ ಒಬ್ಬ ಮನುಷ್ಯನಿದ್ದನು ಆತನೇ ಕೈಜರನ ಸೆಕ್ರೆಟರಿಯಾಗಿರಬೇಕೆಂದು ತಿಳಿದುಕೊಂಡೆನು. ಆತನು ಒಂದು ಕುರ್ಚಿಯಮೇಲೆ ನನ್ನನ್ನು ಕುಳ್ಳಿರಿಸಿ ನಾನು ಬಂದಿರುವ ಸಂಗತಿಯನ್ನು ಕೈಜರರಿಗೆ ತಿಳುಹಲು ಒಳಗೆ ಹೋದನು. ಆ ಕೊಠಡಿಯಲ್ಲಿ ಟೈಪ್‌ಮಾಡುತಿದ್ದ ಒಬ್ಬ ಯುವತಿಯನ್ನು ಕಂಡು ಕೈಜರರ ವಿಚಾರವಾಗಿ ಆಕೆಯನ್ನು ಕೇಳುವಲ್ಲಿ, ಕೈಜರರು ಯಾರ ಅಂಕೆಯಲ್ಲೂ ಇರುವುದಿಲ್ಲ, ಮನಸ್ಸು ಬಂದಾಗ ಸರ್ಕಾರದವರಿಗೆ ತಿಳಿಸಿ ಮೋಟಾರು ಬಂಡಿಯಲ್ಲಿ ಕುಳಿತು 20 ಮೈಲಿಯೊಳಗಿನ ಪ್ರದೇಶದಲ್ಲಿ ಸಂಚರಿಸಿಕೊಂಡು ಬರುವರೆಂದೂ, ಇಂಗ್ಲೀಷು ಮತ್ತು ಫ್ರೆಂಚ್ ಜನರನ್ನು ನೋಡಲು ಅವರಿಷ್ಟಪಡುವುದಿಲ್ಲವಾದ ಪ್ರಯುಕ್ತ ಯಾವಾಗಲೂ ಜರ್ಮನ್ ಸೇವಕರನ್ನು ತಮ್ಮ ಬಳಿಯಲ್ಲಿಟ್ಟುಕೊಂಡಿರುವರೆಂದೂ ಅಂತಹವರು ಅವರ ಬಳಿ ಈಗ 15 ಜನರಿದ್ದಾರೆಂದೂ ಆಕೆಯು ತಿಳಿಸಿದಳು.

ಆ ಯುವತಿಯೊಡನೆ ಇನ್ನೂ ಕೆಲ ಸಂಗತಿಗಳನ್ನು ಕುರಿತು ಮಾತನಾಡುತ್ತಿರುವಷ್ಟರಲ್ಲಿ ಸೆಕ್ರೆಟರಿಯು ಒಳಗಿನಿಂದ ಬಂದು ಕೊಂಚಕಾಲ ಉದ್ಯಾನದಲ್ಲಿರಬೇಕೆಂದು ಹೇಳಲು ನಾನು ಅದೇಪ್ರಕಾರ ಉದ್ಯಾನದಲ್ಲಿ ಅದರ ಸೌಂದರ್ಯವನ್ನು ನೋಡಿ ಆಶ್ಚರ್ಯಪಟ್ಟು ಶತಪಥ ತಿರುಗುತ್ತಿರುವಾಗ್ಗೆ ಕೈಜರರ ಮಗಳನ್ನು ಕಂಡೆನು. ಆಕೆಗೆ ಇಂಗ್ಲೀಷಿನಲ್ಲಿ ಮಾತನಾಡಲು ಬರುತ್ತಿದ್ದಿತು. ಆ ಉದ್ಯಾನದಲ್ಲಿ ಕೈಜರನ ತಾತನ ಶಿಲಾಮೂರ್ತಿಯೂ ಕೈಜರನ ಈಗಿರುವ ಎರಡನೆ ಹೆಂಡತಿಯ ಭಾವಚಿತ್ರಪಟವೂ ಇದ್ದುವು. [illegible] ಹೆಂಡತಿಯಂತಹ ರೂಪವತಿಯು ಹಾಲೆಂಡಿನಲ್ಲೇ ಮತ್ತಾರೂ ಇಲ್ಲವಂತೆ !

ಹೀಗೆ ನಾನು ಉದ್ಯಾನದಲ್ಲಿ 1 ಗಂಟೆಯವರೆಗೂ ಕಾಲಕಳೆಯುತ್ತಿರುವಾಗ್ಗೆ, ಸೆಕ್ರೆಟರಿಯು ಬಂದು ನನ್ನನ್ನು ಒಳಕ್ಕೆ ಕರೆದುಕೊಂಡುಹೋಗಿ ಒಂದು ದಿವ್ಯವಾದ ಕೊಠಡಿಯಲ್ಲಿ ಕುಳ್ಳಿರಿಸಿದನು. ಅಷ್ಟರಲ್ಲಿ ಮಹಾತೇಜಸ್ವಿಯಾದ ಕೈಜರರು ಕೊಠಡಿಯೊಳಕ್ಕೆ ಬರಲು ನಾನು ಎದ್ದು ನಿಂತುಕೊಂಡು ಆಂಗ್ಲಮರ್ಯಾದೆಯಂತೆ ಅವರ ಕರಾಸ್ಫಾಲನ ಮಾಡಲು ಹಿಂಜರಿದು ಬರೀ ಸಲಾಂ ಮಾಡಿದೆನು. ಆದರೆ ಕೈಜರರು ತಾವಾಗಿಯೇ ತಮ್ಮ ಕೈಯನ್ನು ಮುಂದೆ ಚಾಚಲು ನಾನು ಧೈರ್ಯದಿಂದ ಕರಾಸ್ಫಾಲನ ಮಾಡಿದಮೇಲೆ ನಿಮ್ಮನ್ನು ಕಂಡು ನನಗೆ ಆನಂದವಾಯಿತೆಂದು ಕೈಜರರು ಮುಗುಳುನಗೆಯಿಂದ ಹೇಳಿದರು. ಆಗ ನನ್ನಮೇಲೆ ತಾವು ಮಾಡಿದ ದರ್ಶನಾನುಗ್ರಹಕ್ಕಾಗಿ ನಾನು ಬಹಳ ಉಪಕೃತನಾಗಿರುತ್ತೇನೆಂದು ತಿಳುಹಿದೆನು. ಇದರಿಂದ ಆ ಕೈಜರರ ಸ್ವಭಾವವು ಎಷ್ಟು ಸರಳವಾಗಿದೆಯೆಂಬುದು ವ್ಯಕ್ತವಾಯಿತು. ಲೋಕೈಕವೀರನಾದ ಆ ಪುರುಷಸಿಂಹನ ಇದಿರಿಗೆ ಕುಳಿತುಕೊಂಡಿರುವ ನಾನೇ ಧನ್ಯನು ಎಂದು ಹೇಳಲು "ಹೌದು ಒಂದಾನೊಂದು ಕಾಲದಲ್ಲಿ ನಾನು ಪ್ರಸಿದ್ಧನಾಗಿದ್ದೆನು, ಆದರೆ ಈಗ ಸಾಮಾನ್ಯಮನುಷ್ಯನಂತಿರುವೆನು" ಎಂದು ಕೈಜರರು ಉತ್ತರಕೊಟ್ಟರು.

ಆನಂತರ ಭಾರತದೇಶದ ಮತ್ತು ಮಹಾತ್ಮಾ ಗಾಂಧಿಯವರ ವಿಚಾರವಾಗಿ ಪ್ರಸ್ತಾಪನಡೆದು, ಪೂರ್ವಕಾಲದಿಂದಲೂ ಭಾರತೀಯರು ಸುಧಾರಿಸಿದವರೆಂದು ಪ್ರಖ್ಯಾತರಾಗಿರುವುದರಿಂದಲೇ ಅಲ್ಲಿಯ ವಿದ್ಯಮಾನಗಳನ್ನು ತಿಳಿಯಲು ನನ್ನ ಚಿಕ್ಕತನದಿಂದಲೂ ನನಗೆ ಬಹಳ ಇಷ್ಟವಾಗಿರುತ್ತದೆ. ಇತ್ತೀಚಿಗೆ ಭರತಖಂಡದಲ್ಲಿ ನಡೆಯುವ ಸಂಗತಿಗಳೆಲ್ಲವನ್ನೂ ನಾನು ಆಂಗ್ಲಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡಿರುತ್ತೇನೆ. ನಿಮ್ಮಲ್ಲಿ ಗಾಂಧಿಯವರು ನಡೆಯಿಸಿರುವ ರಾಜಕೀಯ ಚಳವಳಿಯನ್ನು ನಾನು ಬಲ್ಲೆನು. ಅವರನ್ನು ನೀವು ನೋಡಿರುತ್ತೀರಾ ? ಅವರ ರಾಟೆಯ ಪರಿಶ್ರಮಬೋಧೆಯು ಯಶಸ್ಕರವಾಗಿರುವುದೆ ? ಎಂದು ಪ್ರಶ್ನಿಸಲು, ಹೌದು ಆ ಮಹಾತ್ಮರನ್ನು ನಾನು ಬಲ್ಲೆ ಮತ್ತು ಅವರ ರಾಟೆಯಪರಿಶ್ರಮವು ಯಶಸ್ಕರವಾಗುವಂತೆ ಮಾಡಲು ತಮ್ಮ ಕೈಲಾದ ಪ್ರಯತ್ನವನ್ನೆಲ್ಲಾ ಮಾಡುತ್ತಿರುವರು ಎಂದುತ್ತರ ಕೊಟ್ಟೆನು.

ಕೈಜರ್—ಗಾಂಧಿಯವರು ಸ್ವತಃ ನೇಕಾರರಿರುವರೆ ?

ನಾನು—ಅವರು ನೇಕಾರರೆನ್ನಿಸಿಕೊಳ್ಳಲು ಅನುಮಾನಿಸುವುದಿಲ್ಲ.

ಕೈಜರ್—ಗಾಂಧಿಯವರ ಚಳವಳಿಯಿಂದ ಭರತಖಂಡಕ್ಕೆ ವಿಶೇಷ ಲಾಭವಾಗುವಂತಿದೆ. ಈಗ ಅವರ ವಯಸ್ಸೆಷ್ಟು ?

ನಾನು—55 ವರ್ಷ.

ಕೈಜರ್—ಸರಿ, ಅವರು ಇನ್ನೂ ಚಿಕ್ಕವರೆ!

ನಾನು—ಸ್ವಾಮಿ, ಅದು ಹೇಗೆ ಅವರು ಚಿಕ್ಕವರು ?

ಕೈಜರ್—ಮುಗುಳ್ನಗೆಯಿಂದ, ನನ್ನ ವಯಸ್ಸಿಗೆ ಹೋಲಿಸಿದರೆ ಅವರೇ ಚಿಕ್ಕವರಾಗಿ ತೋರುವರು.

ನಾನು—ಲಾಲಾಜಿಯವರ ಹೆಸರನ್ನು ತಾವು ಕೇಳಿರುವಿರಾ ?

ಕೈಜರ್—ಗಾಂಧಿಯವರನ್ನು ಬಿಟ್ಟರೆ ಲಾಲಾಜಿಯವರೇ ಪ್ರಸಿದ್ಧಪ್ರಮುಖರೆಂಬುದು ನನಗೆ ಗೊತ್ತು. ಇವರುಗಳಂತೆ ದೇಶಹಿತಕ್ಕಾಗಿ ಹೋರಾಡಿದವರಾದ ಲಾಲಾ ಹರದಯಾಳ, ರಾಜಾ ಮಹೇಂದ್ರಪ್ರತಾಪ ಇವರುಗಳ ಹೆಸರನ್ನೂ ಕೇಳಬಲ್ಲೆ. ಅಲ್ಲದೆ ಕವೀಂದ್ರರಾದ ರವೀಂದ್ರರ ಗ್ರಂಥಗಳನ್ನು ಓದಿ ಬಹಳವಾಗಿ ಮೆಚ್ಚಿಕೊಂಡಿರುವೆನು. ಅವರು ಈ ಹಾಲೆಂಡಿಗೆ ಬಂದಿದ್ದಾಗ್ಗೆ ನನ್ನ ಕುಮಾರನು ಅವರನ್ನು ನೋಡಿದ್ದನು; ನನಗೆ ಮಾತ್ರ ಅವರ ದರ್ಶನ ಲಾಭವಾಗಲಿಲ್ಲವು ಎಂದು ಹೇಳಿದರು.

ಇಷ್ಟು ಸಂಭಾಷಣೆಯು ನಡೆದಮೇಲೆ, ಅವರ ದರ್ಶನದ ಜ್ಞಾಪನಾರ್ಥವಾಗಿ ಅವರ ಭಾವಚಿತ್ರಪಟವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳಲು ಅವರು ತಮ್ಮ ಹಸ್ತಾಕ್ಷರದಿಂದ ಶೋಭಿತವಾದ ಪಟವನ್ನು ಸಂತೋಷದಿಂದ ಕೊಟ್ಟರು. ತರುವಾಯ ನಾನು ಅವರ ಕರಾಸ್ಫಾಲನಮಾಡಿ ಅವರ ಅಪ್ಪಣೆಯನ್ನು ಪಡೆದು ಹೊರಟುಬಂದೆನು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ತಿರಸ್ಕೃತಲೇಖಗಳು.

(1) ಜಿಟ್ಟಕಟ್ಟೆ ಸಣ್ಣಕೊಟ್ರಗೌಡ—ನಿಮ್ಮ ಎಂ. ಬಿ. ಬಿ. ರವರ ಭ್ರಮಣವೆಂಬ ಲೇಖವು ಬಸವರಾಜಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖದ ಖಂಡನರೂಪವಾಗಿರುವುದರಿಂದ ಆ ಪತ್ರಿಕೆಯಲ್ಲೇ ಪ್ರಕಟವಾಗತಕ್ಕದಾಗಿದೆ.

ಕಡೂರು ತಾ|| ಬೆಳವಾಲ.

ಈ ಪ್ರಾಂತ್ಯ ಮಳೆಬಾರದೆ ಮುಂಗಾರು ಬೆಳೆಯಲ್ಲಾ ಬಾಡಿಹೋಗುವುದರಲ್ಲಿತ್ತು. ಆದರೆ ಭಗವಂತನ ಅನುಗ್ರಹದಿಂದ ಈಚೆಗೆ ಮಳೆಬಂದು ಮತ್ತು ಈಗ ಸೋನೆಯಾಡುತಾ ಇರುವುದು ಪ್ರತಿಯೊಂದು ಪೈರಿಗೂ ತುಂಬಾ ಅನುಕೂಲವಾಗಿರುತ್ತೆ. ಈ ಗ್ರಾಮದ ಧನಿಕರು ಮತ್ತು ಧರ್ಮಾಭಿಮಾನಿಗಳು ಆದ ಮ|| ಸಿ. ಕಪ್ಪೇಚೆನ್ನೆಗೌಡರವರು ತಮ್ಮ ಸ್ವಂತಲಾಗೇಡಿನಿಂದ ಸಹಸ್ರಾರು ರೂಪಾಯಿ ಬೆಲೆ ಬಾಳುವ ಒಂದು ಸ್ಕೂಲ್‌ಕಟ್ಟಡವನ್ನು ಧರ್ಮಾರ್ಥವಾಗಿ ಕಟ್ಟಿಸಿ, ಸರ್ಕಾರಕ್ಕೆ ಒಪ್ಪಿಸುವುದಾಗಿ ತಮ್ಮ ಉದಾರಮನಸ್ಸಿನಿಂದ ವಾಗ್ದಾನಮಾಡಿರುವುದು ಆನಂದದಾಯಕವಾಗಿರುತ್ತೆ. 70-80 ಮನೆಗಳಿಂದಲೂ 400-450 ಪ್ರಜಾಸಂಖ್ಯೆಯಿಂದಲೂ 45-50 ಮಂದಿ ಬಾಲಕರಿಂದಲೂ ಕೂಡಿರುವ ಈ ಊರಿನಲ್ಲಿ ಯಾವವಿಧವಾದ ಸ್ಕೂಲೂ ಇಲ್ಲದಿರುವುದು ನಮ್ಮ ಮಕ್ಕಳುಗಳ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆಯಾಗಿರುತ್ತೆ. ಈ ವಿಚಾರವನ್ನು ಕುರಿತು ತಾಲ್ಲೂಕು ಮಜ್ಕೂರು ರೇಂಜ್‌ಸ್ಕೂಲ್‌ಗಳ ಅ|| ಇನ್ಸ್‌ಪೆಕ್ಟರವರು ಮೊದಲುಗೊಂಡು ಸರ್ಕಲ್ ಇನ್ಸ್‌ಪೆಕ್ಟರವರವಿಗೂ ಮಾಡಿಕೊಂಡ ನಮ್ಮ ಪ್ರಾರ್ಥನೆಗಳೆಲ್ಲಾ ಕಾಡಿನಲ್ಲಿ ಬಿದ್ದ ಬೆಳದಿಂಗಳಿನಂತೆ ಪರಿಣಮಿಸಿರುತ್ತೆ. ಈ ಗ್ರಾಮವಾದರೊ, ನಾನಾಭಾಗದಲ್ಲೂ ಬ್ರಾಹ್ಮಣರ ಅಧೀನವಾಗಿ ಅವರು ಕೇಳಿದಷ್ಟು ರೊಕ್ಕವನ್ನು ಕೊಡುತ್ತ ಕುಣಿಕೆಗಳಂತೆ ಅವರ ಹಿಂದೂ ಮುಂದೂ ಅಲೆದಾಡುತ್ತಿರುವುದು ನಮ್ಮಗಳಲ್ಲಿರುವ ವಿದ್ಯಾಹೀನತೆಯ ದೆಸೆಯ ಮಹತ್ವವಲ್ಲವೇ ಅಯ್ಯೋ ಇಂಥಾ ನಾಗರೀಕಕಾಲದಲ್ಲು ಕೂಡ ನಾವೂ ನಮ್ಮ ಮಕ್ಕಳುಗಳೂ ಕಾಡು ಮಂಚರಂತೆ ಅಜ್ಞಾನಾಂಧಕಾರದಲ್ಲಿ ವರ್ತಿಸುತ್ತಿರುವುದು ನಮ್ಮಗಳ ದೌರ್ಭಾಗ್ಯದ ಫಲವಲ್ಲವೇ? ಇನ್ನಾದರು ನಮ್ಮ ಧನಿಕರಾದವರು ಈ ಗ್ರಾಮದಲ್ಲಿ ಒಂದು ಸ್ಕೂಲನ್ನು ಸ್ಥಾಪಿಸಿಕೊಟ್ಟು ನಮ್ಮ ಗ್ರಾಮವನ್ನು ವಿದ್ಯಾಬುದ್ಧಿಯಲ್ಲಿ ಮುಂದುವರಿಸಬೇಕಾಗಿ ಪ್ರಾರ್ಥಿಸುವ,

ಓರ್ವ ವಿದ್ಯಾಭಿಮಾನಿ.

ಶಿವಕೀರ್ತನಕಾರರಿಗೆ ಆದ ಬಹುಮಾನ.

ಬೆಂಗಳೂರು ಸಿಟಿ ಹಳೇತರಗುಪೇಟೆ ಮತ್ತು ದೊಡ್ಡಪೇಟೆ ವರ್ತಕ ಮಂಡಲಿಯವರು (8-7-1924) ಮಂಗಳವಾರ ಸಿಟಿ ತುಲಸೀತೋಟದ ರಸಿಕ ಜನಾನಂದಿನಿ ನಾಟಕದ ಥಿಯೇಟರಿನಲ್ಲಿ ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಾದ ಮಿಸ್ಟರ್ ಸಿ. ಬಾಲಸುಂದರಂ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಕರ್ನಾಟಕನಾಟಕ ಕವಿತಾವಿಶಾರದ, ಶುದ್ಧವಾಣಿ, ನವರಸ ಶಿವಕಥಾ ವಿದ್ವಾನ್, ಇತ್ಯಾದಿ ಬಿರುದಾಂಕಿತರಾದ ದೊಡ್ಡಬಳ್ಳಾಪುರದ ವೇ|| ಶಿವದೇವಶಾಸ್ತ್ರಿಗಳಿಂದ "ಇಂದ್ರಾರ್ಜುನಸಂವಾದ" ವೆಂಬ ಶಿವಕಥಾಕಾಲಕ್ಷೇಪವನ್ನು ಜರುಗಿಸಿದರು. ಛೀಫ್‌ಕೋರ್ಟ್ ಜಡ್ಜ್ ಮಿಸ್ಟರ್ ಬಿ. ಸುಬ್ಬಣ್ಣನವರು ಮೈಸೂರು ಸೀಮೆಯ ಕೋಆಪರೇಟಿವ್ ರಿಜಿಸ್ಟ್ರಾರ್ ಮಿಸ್ಟರ್ ಕೆ ಹೆಚ್. ರಾಮಯ್ಯನವರು ಮೊದಲಾದ ಆಫೀಸರರೂ ವಿದ್ವಜ್ಜನರೂ ಅಡ್ವೋಕೇಟರೂ ಲಾಯರುಗಳೂ ಪ್ರಮುಖವರ್ತಕರೂ ಆಗಮಿಸಿದ್ದರು. ಸಾವಿರಾರು ಜನ ಸ್ತ್ರೀಪುರುಷರಿಂದ ಸಭೆಯು ನಿಬಿಡವಾಗಿದ್ದಿತು. ತಬಲಾ ಪಿಟೀಲ್ ಮುಂತಾದ ಮಂಜುಲವಾದ್ಯಗಳಿಂದ ಕಥೆಯು ಸಾಯಂಕಾಲ $5\frac{1}{2}$ ಗಂಟೆಯಿಂದ 9 ಗಂಟೆವರೆಗೆ ರಸಭರಿತವಾಗಿ ಜರುಗಿಸಲ್ಪಟ್ಟಿತು. ಸುಧಾರಿಸಿರುವ ಶಾಸ್ತ್ರಿಗಳಿಂದ ಮಾಡಲ್ಪಟ್ಟ ಶಿವಕೀರ್ತನವನ್ನು ಶ್ರವಣಮಾಡಿ ಸಭ್ಯರು ಆನಂದವನ್ನು ಹೊಂದಿದರು. ಕಥಾಂತ್ಯದಲ್ಲಿ ಮಿ|| ಬಾಲಸುಂದರಂ ಅಯ್ಯರ್‌ರವರು ಶಾಸ್ತ್ರಿಗಳ ಅಸ್ಖಲಿತವಾಣಿಯನ್ನೂ ವಿದ್ವತ್ಪಾಂಡಿತ್ಯವನ್ನೂ ಭಕ್ತಿಜ್ಞಾನಪ್ರಯೋಜನಪ್ರದಾನವಾದ ಶಿವಕೀರ್ತನಾವೈಖರಿಯನ್ನೂ ಕುರಿತು ಶ್ಲಾಘ್ಯವಾದ ಉಪನ್ಯಾಸವನ್ನು ಮಾಡಿ "ಶಿವಕೀರ್ತನಕಲಾವಿಶಾರದ" ಎಂಬ ಪ್ರಶಸ್ತಿಯನ್ನೊಡಗೊಂಡ ಸುವರ್ಣಪದಕರೂಪವಾದ ಮೆಡಲನ್ನು ಭಕ್ತಮಹಾಜನಂಗಳ ಪರವಾಗಿ ತಮ್ಮ ವಿದ್ವತ್ಕರದಿಂದ ಶಿವದೇವಶಾಸ್ತ್ರಿಗಳಿಗೆ ಸಂತುಷ್ಟಭಾವದಿಂದ ಸಲ್ಲಿಸಿದರು. ಪ್ರತ್ಯಾಮ್ನಾಯವಾಗಿ ಶಾಸ್ತ್ರಿಗಳು ಮಿ|| ಬಾಲಸುಂದರಂ ಅಯ್ಯರ್‌ರವರ ಸದ್ಗುಣ ವಿದ್ವದ್ಗಾಂಭೀರ್ಯಾದಿಗಳನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸವನ್ನುಮಾಡಿ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಮತ್ತು ಸಾರ್ವಭೌಮರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಬಳಿಕ ಸಭಿಕರಿಗೆ ಗಂಧ ಪುಷ್ಪಹಾರಾದಿಗಳು ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಪ್ರತ್ಯಕ್ಷದರ್ಶಿ.

ಬೌರಿಂಗಪೇಟೆಯಲ್ಲಿ ನಡೆದ ಗಿರಿಜಾಕಲ್ಯಾಣಮಹೋತ್ಸವ.

ಬೌರಿಂಗಪೇಟೆಯಲ್ಲಿ ನೆಲಗೊಂಡಿರುವ ಶ್ರೀ ಚಂದ್ರಮೌಳೀಶ್ವರಸ್ವಾಮಿಯ ರಥೋತ್ಸವ ಪ್ರಯುಕ್ತ ಶ್ರೀ ಗಿರಿಜಾಕಲ್ಯಾಣ ಮಹೋತ್ಸವವನ್ನು ವಾಮೂಲಿನಿಂದ ನಡೆಸುತಾ ಬಂದಿರುವ ಕೀ|| ಶೇ|| ಮಾಗೊಂದಿ ನಂಜುಂಡಪ್ಪ ಮತ್ತು ರುದ್ರಪ್ಪನವರ ಸಂತತಿಯರಾದ ಶ್ರೀಯುತ ಎಂ. ಚನ್ನಬಸಪ್ಪನವರು ಮತ್ತು ಅರಸ ನಂಜುಂಡಪ್ಪನವರು ಸಹ ಈ ವರ್ಷವೂ ಪದ್ಧತಿಮೇರೆಗೆ 1924ನೇ ಜೂನ್ 25ನೇ ತಾರೀಖು ಬುಧವಾರ ರಾತ್ರಿ ಅತ್ಯಂತ ಭಕ್ತಿಶ್ರದ್ಧೆಗಳೊಡನೆ ಕಲ್ಯಾಣಮಹೋತ್ಸವವನ್ನು ನೇರವೇರಿಸಿದರು. ಶ್ರೀ ಸ್ವಾಮಿಯ ರಥೋತ್ಸವವನ್ನು ನಡೆಸುತ್ತಿರುವ ಈ ಊರಿನ ವೈಶ್ಯಮಹಾಜನರು ಆರ್ಯಸಂಪ್ರದಾಯಾನುಸಾರವಾಗಿ ಶ್ರೀ ಸ್ವಾಮಿಗೆ ಕಾಶೀಯಾತ್ರೆಯನ್ನು ಪದ್ಧತಿಮೇರೆಗೆ ನೆರವೇರಿಸಿ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದ ಕಲ್ಯಾಣಮಂಟಪಕ್ಕೆ ಸ್ವಾಮಿಯನ್ನು ಬಿಜಯಮಾಡಿಸಿದನಂತರ ಪದ್ಧತಿಯಮೇರೆಗೆ ವೈಶ್ಯಮಹಾಜನರಲ್ಲಿ ಮುಖಂಡರಾದವರು ವಾದ್ಯವೈಭವಗಳೊಡನೆ ಪಾಲಕಿಯನ್ನು ತೆಗೆದುಕೊಂಡು ಮೇಲ್ಕಂಡ ಮಾಗೊಂದಿ ಚನ್ನಬಸಪ್ಪ ಅರಸನಂಜುಂಡಪ್ಪನವರ ಗೃಹಕ್ಕೆ ದಯಮಾಡಿಸಿ ಅವರಿಂದ ಸತ್ಕೃತರಾಗಿ ಕಲ್ಯಾಣಮಹೋತ್ಸವಕ್ಕೆ ಸಿದ್ಧಪಡಿಸಿದ್ದ ನೂತನವಸ್ತ್ರಗಳೇ ಮೊದಲಾದ ಸಮಸ್ತ ಮಂಗಳದ್ರವ್ಯಗಳನ್ನು ಪಾಲಕಿಯಲ್ಲಿಟ್ಟುಕೊಂಡು ವಾದ್ಯಗಳೊಡನೆ ಸರ್ವರೂ ಕಲ್ಯಾಣಮಂಟಪಕ್ಕೆ ಬಂದುಸೇರಿದರು. ಆ ವೇಳೆಗೆ ಪುರನಿವಾಸಿಗಳಾದ ಸರ್ವರೂ ಬಂದು ಸೇರಿದುದಲ್ಲದೆ ಬ್ರಾಹ್ಮಣವೃಂದಗಳಿಂದಲೂ ಬಾಲಬಾಲಕಿಯರಿಂದಲೂ ತುಂಬಿತುಳುಕುತ್ತಿದ್ದ ಆ ಮಹಾಮಂಟಪವು ಗಿರಿಜೆಯ ಸಾಕ್ಷಾತ್ ಕಲ್ಯಾಣಮಂಟಪವೋ ಎಂಬಂತೆ ಶೋಭಿಸುತ್ತಿದ್ದಿತು. ಅನಂತರ ಯಥಾಶಾಸ್ತ್ರವಿಧಿಯಾಗಿ ಕಲ್ಯಾಣಮಹೋತ್ಸವವು ರಾತ್ರಿ 10 ಗಂಟೆಗೆ ಪ್ರಾರಂಭವಾಗಿ $2\frac{1}{2}$ ಗಂಟೆಗೆ ಅತ್ಯಂತ ವೈಭವದೊಡನೆ ಪೂರೈಸಿತು. ಮಹಾಮಂಗಳಾರತಿಯಾದನಂತರ ನೆರೆದಿದ್ದ ಜಂಗಮ ಬ್ರಾಹ್ಮಣವೃಂದವನ್ನು ದಕ್ಷಿಣೆ ತಾಂಬೂಲಾದಿಗಳಿಂದ ಸತ್ಕರಿಸಿ ಪುರನಿವಾಸಿಗಳಿಗೆಲ್ಲರಿಗೂ ಮರಿಯಾದಾನುಸಾರವಾಗಿ ಗಂಧ ಪುಷ್ಪ ತಾಂಬೂಲಾದಿಗಳನ್ನೂ ಮಹಿಳೆಯರಿಗೆ ಮಂಗಳದ್ರವ್ಯಗಳನ್ನೂ ಕೊಟ್ಟನಂತರ ಸರ್ವತ್ರ ಚರುವು ಹಂಚಲ್ಪಟ್ಟು ಸ್ವಾಮಿಯ ಪ್ರಸಾದವನ್ನು ಕೈಕೊಂಡು ಸರ್ವರೂ ಸ್ವಾಮಿಯ ಕೃಪೆಗೆ ಪಾತ್ರರಾಗಿ ಗೃಹಗಳಿಗೆ ತೆರಳಿದರು. ಈ ಮಹೋತ್ಸವವನ್ನು ನಡೆಸಿದ ಮ|| ಎಂ. ಚನ್ನಬಸಪ್ಪ ಮತ್ತು ಅರಸ ನಂಜುಂಡಪ್ಪ ಇವರುಗಳಿಗೂ ಈ ಕಾರ್ಯದಲ್ಲಿ ಭಾಗಿಗಳಾಗಿದ್ದವರಿಗೂ ಸಹ ಶ್ರೀ ಚಂದ್ರಮೌಳೀಶ್ವರನು ಆಯುರಾರೋಗ್ಯ ಭಾಗ್ಯಗಳನ್ನು ಕೊಟ್ಟು ರಕ್ಷಿಸಲೆಂದು ಹಾರೈಸುವ,

ಪ್ರತ್ಯಕ್ಷದರ್ಶಿ.

ಬ್ರಾಹ್ಮಣಮಹಾಜನಗಳಲ್ಲಿ ವಿಜ್ಞಾಪನೆ.

ಮೈಸೂರು ದೇಶದಲ್ಲಿ ಇರತಕ್ಕ ಹಳೇನಾಡು ಕರ್ನಾಟಕರು ತಮಗೆ ಬಂದಿರುವ ಅಪಖ್ಯಾತಿಯನ್ನು ತಪ್ಪಿಸಿ, ಬ್ರಾಹ್ಮಣರಲ್ಲಿ ಸಹಪಂಕ್ತಿ ಭೋಜನ ಇತ್ಯಾದಿ ಅಧಿಕಾರಗಳನ್ನು ಕೊಡಿಸಬೇಕೆಂದು ಶ್ರೀ ಶೃಂಗೇರಿ ಸ್ವಾಮಿಗಳನ್ನು ಆನಂದ ಮತ್ತು ಅಕ್ಷಯಸಂವತ್ಸರದಲ್ಲಿ ಕೇಳಿಕೊಂಡರು. ಈ ಪ್ರಾರ್ಥನೆಯು ಆಗಲಾರದೆಂದು 10-1-1867 ರಲ್ಲಿ ಸ್ವಾಮಿಗಳು ಉತ್ತರ ಕೊಟ್ಟರು.

ಪುನಃ 905-906 ರಲ್ಲಿ ಚರ್ಚೆ ಹುಟ್ಟಿ ಮೈಸೂರುದೇಶದಲ್ಲಿ ಕೆಲವು ಸ್ಥಳದ ಬ್ರಾಹ್ಮಣ ಮಹಾಜನಗಳು ಸೇರಿ ಮೇಲ್ಕಂಡಂತೆ ಇವರಿಗೆ ಅಧಿಕಾರ ಕೊಡುವದು ಪೂರ್ವಾಚಾರವಿಲ್ಲವೆಂದು ಮಠಕ್ಕೆ ಬರದಾಗ್ಯೂ ಮಠದವರು ಲಕ್ಷ್ಯಮಾಡದೆ ಹೋದರು.

15-12-23 ರಲ್ಲಿ ಈ ಹಳೇನಾಡು ಕರ್ನಾಟಕದವರಲ್ಲಿ ಭೋಜನ ಪ್ರತಿಭೋಜನಗಳನ್ನು ನಡಿಸಿದಾಗ್ಯೂ ಕೂಡ, ಅಂಥವರು ಪ್ರಾಯಶ್ಚಿತ್ತಾರ್ಹರಲ್ಲ. ಎಂದು ವಗೈರೆ ಮಠದವರು ಉತ್ತರ ಕೊಟ್ಟರು.

924ನೇ ಏಪ್ರಿಲ್ ತಿಂಗಳಲ್ಲಿ ಸದರಿ ಶ್ರೀ ಸ್ವಾಮಿಗಳು ಮೈಸೂರಿಗೆ ದಯಮಾಡಿಸಿದ್ದಾಗ್ಗೆ ಮೈಸೂರು, ನಂಜನಗೂಡು, ಕೊಣನೂರು, ಚಾಮರಾಜನಗರ ಈ ಸ್ಥಳಗಳಲ್ಲಿ ಪೂರ್ವಾಚಾರ ಇಲ್ಲದ ಹಳೇ ಕರ್ನಾಟಕರ ಮನೆಗೆ ದಯಮಾಡಿಸಿ, ವೇದೋಕ್ತವಾಗಿ ಪಾದಪೂಜೆಯನ್ನು ಹೊಂದಿ ಈ ಜನಗಳನ್ನು ಬ್ರಾಹ್ಮಣರ ಸಭೆಯಲ್ಲಿ ಸೇರಿಸಿ, ಫಲಮಂತ್ರಾಕ್ಷತೆಯನ್ನು ಕೊಟ್ಟರು, ಈ ಭಾಗಗಳಲ್ಲಿ ಮಹಾಜನರ ಆಕ್ಷೇಪಣೆಯು ಸಾರ್ಥಕವಾಗಲಿಲ್ಲ.

ಇದರಮೇಲೆ ಮೈಸೂರು, ನಂಜನಗೂಡಿನಲ್ಲಿ ಬ್ರಾಹ್ಮಣರು ಸಭೆ ಸೇರಿ, ಈ ಹಳೇ ಕರ್ನಾಟಕರು ಬ್ರಾಹ್ಮಣರಸಭಾ ಸಂಧ್ಯಾಮಂಟಪಗಳಲ್ಲಿ ಸೇರತಕ್ಕ ಪದ್ಧತಿ ಇಲ್ಲವೆಂದೂ ಮತ್ತು ಇವರಿಗೆ ತಿಳಿಯದೆ ಪೌರೋಹಿತ್ಯ ಮಾಡಿಸಿ, ಈ ಜನರಲ್ಲಿ ತಿಳಿಯದೆ ಊಟಮಾಡಿದ ಕೆಲವು ಬ್ರಾಹ್ಮಣರಿಗೆ ಪ್ರಾಯಶ್ಚಿತ್ತ ಮಾಡುತ್ತಲೂ ಇತ್ಯಾದಿ. ಮಠದವರು. ನಡಿಸಿರುವ ಅತ್ಯಾಚಾರದಿಂದ ಬ್ರಾಹ್ಮಣರ ಧರ್ಮಕ್ಕೂ. ಗುರುಗಳ ತೇಜಸ್ಸು ಮತ್ತು ಯಶಸ್ಸಿಗೂ, ಭಂಗವೂ ಮತ್ತು ದುರಾಚಾರವೂ ಉಂಟಾಯಿತೆಂದು ಬ್ರಾಹ್ಮಣರು ಯೋಚಿಸುವದಾದರೆ, ಈ ಮಠಕ್ಕೆ ಬಹಿಷ್ಕಾರ ಹಾಕಿ, ಇನ್ನುಮುಂದೆ ತಮ್ಮ ತಮ್ಮ ಸ್ಥಳದಲ್ಲಿಯೋ ಏರ್ಪಾಡು ಮಾಡಿಕೊಳ್ಳುವದರ ಮೂಲಕ ಬ್ರಾಹ್ಮಣ ಧರ್ಮವನ್ನು ಕಾಪಾಡಬೇಕಾಗಿ ಪ್ರಾರ್ಥನೆ.

ನಂಜನಗೂಡು,
ತಾ|| 15-7-24.

ತಮ್ಮ ವಿಧೇಯ, ಬಿ. ರಂಗಣ್ಣ.
ಶ್ರೀ ಶಂಕರ ಭಗವತ್ಪಾದರವರ ಸೇವಕ.

ಅಣ್ಣಗಳಿರಾ, ಗೋವುಗಳನ್ನು ಕಟುಗರಿಗೆ ಮಾರಬೇಡಿರಿ.

ಸರ್ವಗುಣಗಳಿಂದ ಕೂಡಿದವನಾಗಿಯೂ ಸರ್ವವ್ಯಾಪಕನಾಗಿಯೂ ಇರುವ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಪ್ರಾಣಿಕೋಟಿಗಳಲ್ಲಿ ಮನುಷ್ಯನೇ ಶ್ರೇಷ್ಠನೆಂದು ಸಕಲ ವೇದಶಾಸ್ತ್ರ ಪುರಾಣಗಳೂ ಹೊಗಳುತ್ತವೆ. ಕಾರಣವೇನು ? ಈತನಲ್ಲಿ ಎಲ್ಲಾ ಪ್ರಾಣಿಗಳಿಗಿಂತಲೂ ಹೆಚ್ಚಾಗಿ ಭೂತದಯೆ, ಒಳ್ಳೆ ತಿಳುವಳಿಕೆ, ಸತ್ಯವೃತ್ತಿ, ಧರ್ಮಾಚರಣೆ ವಿಚಾರಪರವಾದ ಜ್ಞಾನ ಇರುವುದಲ್ಲದೆ ತನ್ಮೂಲಕ ಉತ್ತಮ ಪದವಿಯನ್ನು ಹೊಂದುತಾನೆಂದಲ್ಲವೆ ? ಅಂದಮೇಲೆ ಇಂಥ ಶ್ರೇಷ್ಠವಾದ ಮನುಷ್ಯಜನ್ಮದಲ್ಲಿದ್ದುಕೊಂಡು ಈಗ ನಮ್ಮ ದೇಶದಲ್ಲಿ ನಡೆದಿರುವಂಥ ಭಯಂಕರವಾದ ಪಾಪಕೃತ್ಯದಕಡೆಗೆ ಸ್ವಲ್ಪ ಯೋಚಿಸುವುದು ನಮ್ಮಗಳ ಕರ್ತವ್ಯವಲ್ಲವೆ ? ಅಂಥ ಪಾಪಕಾರ್ಯವನ್ನು ಮಾಡದಿರುವುದು ಮತ್ತು ಇತರರು ಮಾಡದಂತೆ ಪ್ರಯತ್ನಿಸುವುದು ನಮ್ಮಗಳ ಧರ್ಮವಲ್ಲವೆ? ಆ ದುಃಖದ ಧ್ವನಿಯು ತಂದೆ ತಾಯಿಗಳಂತೆ ಅನಂತ ಉಪಕಾರಮಾಡಿರುವ ಬಸವಣ್ಣಗಳ ಮತ್ತು ಆಕಳುಗಳ ಕೊಲೆಯಿಂದುಂಟಾಗಿಲ್ಲವೆ ? ನಮ್ಮ ದೇಶದಲ್ಲಿ ಕ್ಷಣಿಕ ನಾಲಿಗೆಯ ರುಚಿಗಾಗಿ ವರ್ಷ 1ಕ್ಕೆ 54 ಲಕ್ಷ ಈ ಮೂಲಕ ಬಡಪ್ರಾಣಿಗಳು ಕೊಲ್ಲಲ್ಪಟ್ಟರೆ ನಮ್ಮ ಮುಂದಿನ ಸ್ಥಿತಿಯು ಏನಾದೀತೆಂದು ಚಿಂತಿಸುವುದು ಸಹಜವಲ್ಲವೇ ? ನಮ್ಮ ಈ ಪಾಪದ ಫಲವಾಗಿ ದಾರಿದ್ರ್ಯ, ಕ್ಷಾಮ, ನಾನಾ ರೋಗಾದಿಗಳು ಪೀಡಿಸುತ್ತಿರುವವಲ್ಲವೆ ? ಅಯ್ಯೋ, ಉತ್ತಮಜಾತಿಯವರೆಂದು ಹೇಳಿಕೊಳ್ಳುವ ಹಿಂದುಗಳೇ ಹಣದಾಸೆಯಿಂದ ನಮಗೆ ಬಹು ದಿವಸಗಳವರೆಗೆ ಹಾಲು, ಮೊಸರು ಮೊದಲಾದುವುಗಳನ್ನು ಒದಗಿಸಿ, ಅನೇಕ ರೂಪಾಯಿಗಳ ಬೆಲೆಬಾಳುವ ಕರುಮರಿಗಳನ್ನು ಕೊಟ್ಟು ಅತ್ಯಂತ ಉಪಕಾರಮಾಡಿದ ಈ ಪ್ರಾಣಿಗಳು ಮುಪ್ಪನ್ನು ಹೊಂದಲು, ಕೇವಲ ನಾಲ್ಕಾರು ರೂಪಾಯಿಗಳಿಗೆ ಮಾರಿಬಿಡುವುದು ಮನುಷ್ಯತ್ವಕ್ಕೆ ಸರಿಯಾದುದೆ. "ಮನುಷ್ಯರು ಎಷ್ಟು ಕಠಿಣಹೃದಯದವರಾದರಲ ! ಇವರ ಉಪಕಾರವನ್ನು ಏನೆಂದು ಹೇಳಬೇಕು ? ಮನುಷ್ಯತ್ವಕ್ಕೇನೆ ಕಲಂಕ ಉಂಟಾಗುವ ಘೋರತರವಾದ ಅಪರಾಧವನ್ನು ನಾಚಿಕೆಯಿಲ್ಲದೆ ಮಾಡುತ್ತಿರುವರಲ್ಲಾ ! ಬಹು ಅಲ್ಪವಾದ ಹುಲ್ಲನ್ನು ತಿಂದು, ಅತಿ ಅಮೌಲ್ಯವಾದ ಅಮೃತವನ್ನು ಕೊಟ್ಟು, ಇವರನ್ನು ಸಂತೋಷಪಡಿಸಿದುದಕ್ಕೆ ಮರಣದಂಡನೆಯೇ ಬಹುಮಾನವೇ ? ಅಯ್ಯೋ, ಯಾವ ಕೈಗಳಿಂದ ಹಾಲನ್ನು ಹಿಂಡಿಕೊಂಡರೋ, ಯಾವಕೈಗಳಿಂದ ನೇಗಲಿಗೆಕಟ್ಟಿ ಮಳೆ ಬಿಸಿಲೆನ್ನದೆ ದುಡಿದುಕೊಂಡರೋ ಅದೇ ಕೈಗಳಿಂದಲೇ ಕಡಿಯಲಿಕ್ಕೆ ಕೊಡುತ್ತಿರುವರಲ್ಲಾ ! ಹಾವಿಗೆ ಹಾಲೆರೆದಂತಾಯಿತೇ" ಎಂದು ಆ ಗೋವುಗಳು ಮತ್ತು ಎತ್ತುಗಳು ಮರಗುತ್ತಿರಲಿಕ್ಕಿಲ್ಲವೇ ? ಅಕಸ್ಮಾತ್ತಾಗಿ ಅವುಗಳಿಗೆ ಮಾತುಗಳನ್ನಾಡಲು ಬಂದುಬಿಟ್ಟಿದ್ದರೆ ಈ ಪ್ರಕಾರ ಮೊರೆಯಿಡಲಿಕ್ಕಿಲ್ಲವೆ ? ಯೋಚಿಸಿ ! ಯೋಚಿಸಿ ! ರೈತಜನರೇ ಈ ಬಡಪ್ರಾಣಿಗಳ ವಿಕ್ರಯದಿಂದ ನಿಮ್ಮ ಬಡತನವೇನೂ ಹಿಂಗದು ಆದರೆ ಪಾಪವನ್ನು ಮಾತ್ರ ದುಡಿದುಕೊಳ್ಳುವಿರಿ. ಮಳೆಯು ಕಾಲಕಾಲಕ್ಕೆ ನಿಮಗೆ ಬೇಕಾದರೆ, ನಿಮ್ಮ ಹೊಲಗಳಲ್ಲಿ ಬೆಳೆಯು ಹೆಚ್ಚಾಗಿ ಬರಬೇಕೆಂದು ಅಪೇಕ್ಷಿಸುವುದಾದರೆ, ನಿಮ್ಮ ಸಂತಾನಗಳು ಅಭಿವೃದ್ಧಿಹೊಂದಬೇಕೆಂದು ಚಿಂತಿಸುವುದಾದರೆ ಖಂಡಿತವಾಗಿಯೂ ಸ್ಯಾಟಿಗಳ ಸಂತೆಗೆ ಆ ಪ್ರಾಣಿಗಳನ್ನು ಹಿಡಿದುತಂದು ಕಟುಕರಪಾಲು ಮಾಡಬೇಡಿರಿ. ಗೌಡ ಮತ್ತು ಶಾನುಭೋಗ ಮಹನೀಯರುಗಳಿರಾ ! ಇಂಥ ಪ್ರಾಣಿಗಳಿಗೆ ತಳಚೀಟಿಗಳನ್ನು ಕೊಟ್ಟು ಸ್ಯಾಟಿಗಳಸಂತೆಗೆ ಏತಕ್ಕೆ ಕಳುಹಿಸುವಿರಿ ? ಕಟುಗರ ಪಾಲಾಗುವವೆಂದು ಅರಿಯಿರಾ? ಪಾಪದ ರಾಶಿಯನ್ನು ನೀವಾದರೂ ಏತಕ್ಕೆ ಹೊಂದಬೇಕು ? ರೈತಜನರಿಗೆ ಈ ವಿಷಯವನ್ನು ಬೋಧಿಸಿ ಅವರಿಂದ ನಡೆಯುತ್ತಿರುವ ಈ ಪಾಪಕಾರ್ಯವನ್ನು ನಿಲ್ಲಿಸುವುದು ನಿಮ್ಮಗಳ ಧರ್ಮವಲ್ಲವೇ ? ತಂದೆತಾಯಿಗಳಂತಿರುವ ಈ ಪ್ರಾಣಿಗಳನ್ನು ಕೊಲ್ಲುತ್ತಿದ್ದರೆಂದು ಕೇಳಿರುವಿರಾ? ಆದರೆ ಈಗ ಮಾತ್ರ ಎಲ್ಲೆಲ್ಲಿಯೂ ದನಕಟುಗರು ಇದ್ದಾರೆಂದು ಜ್ಞಾಪಕದಲ್ಲಿಟ್ಟು ಕೊಲ್ಲುವುದಕ್ಕಾಗಿ ತರುವ ರಾಸುಗಳಿಗೆ ಮಾತ್ರ ತಳಚೀಟಿಗಳನ್ನು ಕೊಡದೆ ಪುಣ್ಯವನ್ನು ಸಂಪಾದಿಸಿರಿ. ಸರ್ವರೂ ದಯಾಶಾಲಿಗಳಾಗಿರಿ.

ಸರ್ವರಿಗೂ ಪಾಪಕಾರ್ಯವನ್ನು ಮಾಡದಂತೆಯೂ ಮತ್ತು ಪ್ರಾಣಿದಯಾಪ್ರಸಾರ ಮಾಡುವಂತೆಯೂ ಸದ್ಗುಣವನ್ನು ಕೊಟ್ಟು, ಮೂಕಪ್ರಾಣಿಗಳ ದುಃಖವನ್ನು ಹೋಗಲಾಡಿಸಲೆಂದು ದಯಾಮಯನಾದ ಪರಮಾತ್ಮನಲ್ಲಿ ಪ್ರಾರ್ಥನೆ.

ತಮ್ಮ

ದಾವಣಗೆರೆ,
25-6-24.

ತವನಪ್ಪನವರ ದೇವೇಂದ್ರಪ್ಪ.

ಭಾರತೀಯಸಾಹಿತ್ಯ.

(ಲೇಖಕ, ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರು, ಪ್ರೊಫೆಸರ, ಸಂಸ್ಕೃತ ಕಾಲೇಜ ಇಂದೋರ.)

ಈಶ್ವರನ ಪ್ರೇರಣೆಯ ಪೂರ್ವಕ ಪ್ರಕೃತಿಯಿಂದ ಪ್ರಪಂಚಿಸಲ್ಪಟ್ಟ ಸೃಷ್ಟಿಯಲ್ಲಿ ಅನಂತಪ್ರಾಣಿಗಳ ಉತ್ಪತ್ತಿಯಾಗಿದ್ದು ಅದರಲ್ಲಿ ಸ್ವತಂತ್ರತೆ, ಅಧಿಕಾರ, ವಿಚಾರಶಕ್ತಿಯುಳ್ಳ ಮನುಷ್ಯನೆಂಬ ಪ್ರಾಣಿಯೊಂದಿದ್ದು ಈ ಮಾನವ ಪ್ರಾಣಿಯ ಸುಖದುಃಖೋತ್ಪಾದಕವಾದ, ಮತ್ತು ವ್ಯವಹಾರಕ್ಕನುಕೂಲವಾದದ್ದೊಂದು ಅವಿಚ್ಛಿನ್ನವಾದ ಕ್ರಿಯೆಯು ಪ್ರೇರಿಸಲ್ಪಟ್ಟಿದ್ದು ಅದಕ್ಕೆ ಭಾಷೆಯೆಂದೆನ್ನುವರು. ಈ ಭಾಷೆಗೆ ಮೊದಲು ವೈದಿಕ ಭಾಷೆಯೆಂತಲೂ (ಆರ್ಯಭಾಷಾ) ಅನಂತರ ಸಂಸ್ಕೃತ ಭಾಷೆಯೆಂತಲೂ ಈ ಸಂಸ್ಕೃತದಿಂದ ಅಪಭ್ರಂಶಗಳಾಗಿ ಕಾಲಸ್ಥಿತ್ಯನುಸಾರ ಪ್ರಾಕೃತವೆಂತಲೂ ಹೆಸರಾಗಿರುವುದು ಮತ್ತು ಈ ಪ್ರಾಕೃತದಲ್ಲಿ ಅನಂತಭಾಷೆಗಳಾಗಿರುವವು. ಈ ಎಲ್ಲ ಭಾಷೆಗಳಿಗೆ ಮೂಲಕಾರಣವಾದದ್ದು ಸಂಸ್ಕೃತಭಾಷೆಯಾಗಿರುವದು. ಈ ಸಂಸ್ಕೃತ ಭಾಷೆಯ ವಿಷಯವಾಗಿ ಪಾಶ್ಚಾತ್ಯಪಂಡಿತರಾದ "ಮೆಕ್ಸಮೂಲರ ಥಿಯೋಪಾಲಡ್ಮ್ಯಕಸ್" ಮೊದಲಾದವರು ಕ್ರಿಸ್ತಶಕದ ಒಂದೂವರೆ ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಅಂದರೆ ಈ ಹೊತ್ತಿಗೆ ೬—೮ ಸಾವಿರ ವರ್ಷದ ಹಿಂದಿನದೆಂತಲೂ ಅಂತು ಅದನ್ನು ಒಟ್ಟಿಗೆ ಇಪ್ಪತ್ತೊಂದು ಸಾವಿರ ವರ್ಷದವರೆಗೂ ಒಯ್ಯುವರು. ಇನ್ನು ಭಾರತೀಯ ಪ್ರಾಚೀನ ಶಿಕ್ಷಿತರು ವೈದಿಕವಾಣಿಗೆ ಅನಾದ್ಯನಂತತ್ವವನ್ನು ಅಂದರೆ ತ್ರೈಕಾಲಿಕ ಅಬಾಧಿತವನ್ನು ಹೇಳುವರು. ಅಂತೂ ಐತಿಹಾಸಿಕ ದೃಷ್ಟಿಯಿಂದಲೂ, ಮುಂದೆ ನಾನು ತೋರಿಸುವ ವಿಚಾರಗಳ ಮೇಲಿಂದಲೂ ಸಂಸ್ಕೃತ ವಾಣಿಯು ಎಲ್ಲಾ ಭಾಷೆಗಳಿಗಿಂತಲೂ ಬಹುಪುರಾತನವಾದದ್ದೆಂದೂ ಮತ್ತು ಸರ್ವಜನಸ್ತುತ [illegible] ಶಿಕ್ಷಿತವೆಂದೂ ಕಂಡುಬರುವದು. ಇನ್ನು ಈರೀತಿ ಬಹುಕಾಲದಿಂದ ಅವ್ಯಾಹತವಾಗಿ ನಡೆಯುತ್ತಿರುವ ಸಂಸ್ಕೃತ [illegible]

ವಾಚಕರೇ ಊಹಿಸಬಹುದು. ಮೊದಲು ಸಂಸ್ಕೃತ ಸಾಹಿತ್ಯ ಅಂದರೇನು ಈ ವಿಷಯ ವಿಚಾರಮಾಡಿ ಮುಂದೆ ಇದು ಜಗತ್ತಿನ ಶಿಕ್ಷಕ ಹ್ಯಾಗಾಯಿತೆಂಬುವದನ್ನು ಆಯಾಯ ಪರದೇಶಗಳ ಕ್ರಿಯಾ ಮತ್ತು ಅಲ್ಲಲ್ಲಿ ಈ ಹೊತ್ತಿನವರೆಗಿರುವ ಕೆಲವು ಐತಿಹಾಸಿಕ ಪದಾರ್ಥಗಳ ಮೇಲಿಂದಲೂ, ವಿಚಾರಮಾಡುವಾ.

ಲೋಕದಲ್ಲಿ ಸಂಸ್ಕೃತ ಸಾಹಿತ್ಯವೆಂದರೆ ಸಾಹಿತ್ಯ ದರ್ಪಣ, ಕಾವ್ಯಪ್ರಕಾಶ, ರಸಗಂಗಾಧರ, ರಘುವಂಶ ಮೊದಲಾದ ಕಾವ್ಯಗಳೂ ಶಾಕುಂತಲಾದಿ ನಾಟಕಗಳೂ ಮತ್ತು ಚಂಪೂಗ್ರಂಥಗಳೂ ಸಾಹಿತ್ಯವೆಂದು ತಿಳಿಯುವರು. ಆದರೆ ಇದು ಸಾಹಿತ್ಯದ ಅರ್ಥವಲ್ಲ. ಯಾಕಂದರೆ ಸಾಹಿತ್ಯದ ಅರ್ಥವು ಇಷ್ಟೊಂದು ಸಂಕುಚಿತವಲ್ಲ, ಮತ್ತು ಇಷ್ಟು ಸಂಕುಚಿತಾರ್ಥವನ್ನು ಯಾವ ಪೂರ್ವ ವಿದ್ವಾಂಸರೂ ಮಾಡಿಲ್ಲ. ಪೂರ್ವಜರಿಂದ ಮಾಡಿದ ಸಾಹಿತ್ಯವ್ಯಾಖ್ಯಾನವೆಂದರೆ—"ಪರಸ್ಪರ ಸಾಪೇಕ್ಷಾಣಾಂ ತುಲ್ಯರೂಪಾಣಾಂ ಯುಗಪದೇಕಕ್ರಿಯಾನ್ವಯಿತ್ವಂ ಬುದ್ಧಿವಿಶೇಷ ವಿಷಯತ್ವಂವಾ ಸಾಹಿತ್ಯಂ" ಹೀಗೆ ಶ್ರಾದ್ಧವಿವೇಕದಲ್ಲಿ "ಸಾಹಿತ್ಯಂ ಮೇನಂ ತುಲ್ಯವದೇಕಕ್ರಿಯಾನ್ವಯಿತ್ವಂ ಬುದ್ಧಿವಿಶೇಷ ವಿಷಯತ್ವಂವಾಸಾಹಿತ್ಯಂ" ಹೀಗೆ ಶಬ್ದಶಕ್ತಿಪ್ರಕಾಶಿಕೆಯಲ್ಲಿಯೂ "ಮನುಷ್ಯಕೃತ ಶ್ಲೋಕಮಯ ಗ್ರಂಥವಿಶೇಷಸಾಹಿತ್ಯಂ" ಹೀಗೆ ಶಬ್ದಕಲ್ಪದ್ರುಮದಲ್ಲಿಯೂ ಹೇಳಿರುವದರಿಂದ ಸಾಧಾರಣವಾಗಿ "ಸಹಿತಸ್ಯಭಾವಃ" ಅಂದರೆ ಯಾವದೊಂದು ವಿಷಯವು ಸಹಗಮನಾರ್ಥದಿಂದ ಸಂಗ್ರಹಿಸಲ್ಪಡುವದೋ ಅಥವಾ ವಿಷಯಗಳ ಪರಸ್ಪರ ಸಾಪೇಕ್ಷತೆಯಿಂದ ಸಂಗ್ರಹವಾದಲ್ಪಡುವದೋ ಆ ವಿಷಯವೇ ಸಾಹಿತ್ಯವೆಂದು ಶಬ್ದಾರ್ಥದಿಂದ ತೋರುವದು. ಇದರಿಂದ ಜಗತ್ತಿನಲ್ಲಿ ಸಂಸಾರ ವ್ಯವಹಾರಾರ್ಥವಾಗಿ ಪದಾರ್ಥಗಳನ್ನು ಒಕ್ಕಟ್ಟಿಗೆ ಮಾಡಿ ಇಡುವದೇ ಸಾಹಿತ್ಯವೆನಿಸುವದು. ಈರೀತಿ ವ್ಯಾಖ್ಯಾನಮಾಡೋಣದರಿಂದ ಕಾವ್ಯ, ಇತಿಹಾಸ, ಪುರಾಣ, ದರ್ಶನಶಾಸ್ತ್ರ, ಭೂಗೋಲ, ಗಣಿತ, ರಸಾಯನ, ವೈದ್ಯ ಮೊದಲಾದ ವಿದ್ಯೆಗಳೆಲ್ಲ ಸಾಹಿತ್ಯದ ಅಂತರ್ಗತಗಳಾಗುವವು. ಇನ್ನು ಲೋಕವ್ಯವಹಾರ ನೋಡಿದರೂ ಇದರಂತೆಯೇ ಕಂಡುಬರುವದು, ಹ್ಯಾಗಂದರೆ "ಸರ್ವಸಾಧನಗಳನ್ನು ಸಂಗ್ರಹಮಾಡಿ ಇಡುವದಕ್ಕೇನೇ ಸಾಹಿತ ವೆನ್ನುವರು." ಅಂದಮೇಲೆ ಪೂರ್ವಜರ ಅನುಭವದ ಸಮಸ್ತ ವಿಷಯವು ಯಾವದರಲ್ಲಿ ಸಂಗ್ರಹಮಾಡಿ ಇಡಲ್ಪಡುವದೋ ಅದೇ ಸಾಹಿತ್ಯವೆನಿಸುವದು. ಅತಿ ಪೂರ್ವದಲ್ಲಿ ಸಂಸ್ಕೃತಭಾಷೆಯೇ ಭರತಖಂಡದ ಸಾರ್ವತ್ರಿಕಭಾಷೆಯಾದ್ದರಿಂದ ಈ ಸಂಸ್ಕೃತಭಾಷೆಯ ಸಾಹಿತ್ಯವು ಬಹಳೇ ವಿಸ್ತಾರವಾಗಿರುವದು. ಅದರಲ್ಲಿ ಪಾಲೀ, ಮಾಗಧೀ, ಶೌರಸೇನಿ, ಮೊದಲಾದ ಪ್ರಾಕೃತಭಾಷೆಗಳನ್ನು ಹಿಡಿದರಂತೂ ಅದರ ವಿಸ್ತೀರ್ಣತೆಗೆ ಮಿತಿಯೇ ಇಲ್ಲ. ಒಂದುವೇಳೆ ಇವುಗಳನ್ನು ಬಿಟ್ಟರೂ ಸಂಸ್ಕೃತದ ಮಹಿಮೆ ಕಡಿಮೆಯಾಗುವಂತಿಲ್ಲ. ಯಾಕಂದರೆ ಸಂಸ್ಕೃತ ಸಾಹಿತ್ಯ ಭಂಡಾರದ ಯಾದಿಯು ೧೮೯೧ ನೇ ಇಸವಿಯಲ್ಲಿ ನಾಲ್ವತ್ತು ಸಾವಿರ ಪುಸ್ತಕಗಳದ್ದೆಂದು ತಯಾರುಮಾಡಲ್ಪಟ್ಟಿದ್ದು ಅದರಿಂದೀಚೆಗೆ ಎಷ್ಟೋ ಗ್ರಂಥಗಳಾಗಿರುವವು. ಇದಲ್ಲದೇ ಎಷ್ಟೋ ಗುಪ್ತವಾಗಿ ಮೂಲೆಗಳಲ್ಲಿ ಬಿದ್ದಗ್ರಂಥಗಳು ದಿನೇ ದಿನೇ ಶೋಧನವಾಗುತ್ತ ನಡೆದಿರುವವು. ಆದರೆ ಅವುಗಳ ಗಣನೆಯೇ ಇಲ್ಲ. ಸ್ವಲ್ಪ ದಿವಸದ ಪೂರ್ವದಲ್ಲಿ ನೇಪಾಳ ರಾಜಧಾನಿಯಲ್ಲಿದ್ದ ೧೪ ನೂರು ವರ್ಷ ಪೂರ್ವದ ಇತಿಹಾಸವನ್ನು ಬೋಧಿಸುವ ೭೮೦ ಪುಸ್ತಕಗಳು ಅಕ್ಸಫರ್ಡ ಯೂನಿವರ್ಸಿಟಿಯವರಿಂದ ನೇಪಾಳ ಮಹಾರಾಜರವರ ಸಮ್ಮತಿಮೇರೆಗೆ ಒಯ್ಯಲ್ಪಟ್ಟವೆಂದು ಸಮಸ್ತ ಭಾರತೀಯ ವರ್ತಮಾನ ಪತ್ರಕಾರರು ಪ್ರಸಿದ್ಧಮಾಡಿರುವರು. ಮತ್ತು ಏಶಿಯಾದ ಗೋಬೀಮಾಯಕರೇಗಿಸ್ತಾನದಲ್ಲಿ ಹುದಿಗಿಟ್ಟ ಸಂಸ್ಕೃತ ಸಾಹಿತ್ಯ ಸಂಬಂಧೀ ಅನೇಕ ಸಾಮಗ್ರಿಯು ಸಿಕ್ಕಿರುವದೆಂದು ಪ್ರಸಿದ್ಧಮಾಡಲ್ಪಟ್ಟಿದೆ. ಇದರಂತೆಯೇ ಚೀನ, ಜಪಾನ, ಕೋರಿಯಾ, ತಿಬೇತ, ಮಂಗೋಲಿಯಾ ಮೊದಲಾದ ಸ್ಥಳಗಳಲ್ಲಿ ಕೆಲವು ಸಂಸ್ಕೃತ ಪುಸ್ತಕಗಳು ಸಿಕ್ಕಿರುವವು. ಬೌದ್ಧಜನರಲ್ಲಿ ಅವತಾರ ಪುರುಷನೆಂದು ಮನ್ನಿಸಲ್ಪಟ್ಟ ಪುಂಡರೀಕನಾಮಕ ವಿದ್ವಾಂಸನು ಬರೆದಿರುವ ಪುಸ್ತಕದ ಮೇಲಿಂದ ಹೀಗೆ ತರ್ಕವಾಗುತ್ತದಲ್ಲಾ—ರೋಮನೀಲ ನದಿಯ ಪರ್ಯಂತ ಥಾರೀಸ ಮೊದಲಾದ ದೇಶವು ಸಂಸ್ಕೃತ ಭಾಷೆಯ ಗಣಿಯಾಗಿರುವದೆಂತಲೂ, ಮೈದಗೋಸ್ಕರದಿಂದ ಥಾರಿಸೇನಟಾಪಕ್ಕಿಂತಲೂ ದೂರ ದೂರ ತನಕ ನಡೆದಿರುವ ಭಾಷೆಗಳ ಮೂಲಾಧಾರ ಸಂಸ್ಕೃತವೇ ಎಂದು ಸಿದ್ಧವಾಗುವದು. ಈ ಸಂಸ್ಕೃತ ಸಾಹಿತ್ಯದಲ್ಲಿ ಸೀಮಾಕಲ್ಪನೆ ಕೇವಲ ತರ್ಕ ವಿತರ್ಕಗಳು ಮಾತ್ರವಾಗುವದಲ್ಲದೆ ಇದರ ನಿಶ್ಚಿತ ಸೀಮಾಯಾರಿಗೂ ಹೇಳಲಿಕ್ಕೆ ಸಾಧ್ಯವಿಲ್ಲಾ.

ಈಸಂಸ್ಕೃತ ಸಾಹಿತ್ಯದಲ್ಲಿ ಮುಖ್ಯವಾಗಿ ಋಕ್, ಯಜು, ಸಾಮ, ಅಥರ್ವಣವೇದವೆಂಬ ನಾಲ್ಕು ವೇದಗಳು ಮುಖ್ಯವಾಗಿದ್ದು ಇದುಪ್ರಚಲಿತ ಸಂಸ್ಕೃತಭಾಷೆಗಿಂತ ಭಿನ್ನವಾಗಿರುವದರಿಂದ, ಇದಕ್ಕೆ ವೈದಿಕವಾಣಿ ಎಂದು ಕೆಲವರು ಹೆಸರಿಟ್ಟಿರುವರು. ಆದರೆ ಈ ನಾಲ್ಕುವೇದಗಳು ಸದ್ಯಕ್ಕೆ ಸಂಪೂರ್ಣವಾಗಿ ಸಿಗದೇ ಇದರಲ್ಲಿ ಎಷ್ಟೋ ಶಾಖೆಗಳುಲುಪ್ತವಾಗಿರುವವೆಂದು ತಿಳಿದುಬರುವದು. "ಋಗ್ವೇದಸ್ಯ ಶಾಖಾಃ ಸ್ಯುರೇಕವಿಂಶತಿಸಂಖ್ಯಕಾಃ | ನವಾಧಿಕಶತಂಶಾಖಾ ಯಜುಷೋಮಾರುತಾತ್ಮಜ | ಸಹಸ್ರಸಂಖ್ಯಯಾಜಾತಾಃ ಶಾಖಾಃ ಸಾಮ್ನಃ ಪರಂತಪ | ಅಥರ್ವಣಸ್ಯ ಶಾಖಾಃ ಸ್ಯುಃ ಪಂಚಾಶದ್ಭೇದತೋಹರೇ ||" ಇಂಥಾ ಯಾವ ಬಹುಶಾಖೆಗಳುಳ್ಳ ವೇದಗಳಲ್ಲಿ ಸದ್ಯಕ್ಕೆ ೬-೭ ಶಾಖೆಗಳು ಮಾತ್ರ ಕಂಡುಬರುವವು. ಆದರೆ ಇದು ಭಾರತೀಯರಿಗೆ ಲಜ್ಜಾಸ್ಪದ ಮಾತಾಗಿರುವದು. ಯಾಕಂದರೆ ಸರ್ವಧರ್ಮಶಾಸ್ತ್ರ ಮೂಲಾಧಾರವಾದ ವೇದವೇ ಈಗೀಗ ಲುಪ್ತಪ್ರಾಯವಾದದ್ದನ್ನು ನೋಡಿಯೂ ಅದನ್ನು ಬೋಧಿಸುವದರಲ್ಲಿ ಯಾರೂ ಇನ್ನೂ ಮನಸ್ಸನ್ನು ಹಾಕದೇ ಇರುವದಲ್ಲದೆ ತದ್ವಿರುದ್ಧವಾಗಿ ಪರದೇಶಿಯ ಧಾರ್ಮಿಕರ ದುರಭಿಮಾನದಿಂದ ವೇದಗಳನ್ನು ನಿಂದಿಸುತ್ತಲೂ ಇರುವರು. ಅಂದಮೇಲೆ ಇದು ಎಂಥಾ ಅವಸ್ಥಿತಿ ಎಂಬುವದನ್ನು ವಾಚಕರೇ ವಿಚಾರಮಾಡಬಹುದು. ಇನ್ನು ಪವಿತ್ರವಾದ ವೇದಶ್ರುತಿಯನ್ನು ಪೌರ್ವಾತ್ಯರಂತೂ ಅನುಸರಿಸುವರು. ಆದರೆ ಪಾಶ್ಚಿಮಾತ್ಯರೂ ಕೂಡ ಕೆಲವರು ವೇದವನ್ನು ಬಹುರೀತಿಯಾಗಿ ಹೊಗಳಿರುವರು. ಅದರಲ್ಲಿ ಪ್ರೊಫೇಸರ್ ಮ್ಯಾಕ್ಸ್‌ಮೂಲರಂತೂ ಮಾನವ ಜಾತಿಯಸ್ಥಿತಿಯನ್ನು ಬೋಧಮಾಡುವ ಖರೇ ಗ್ರಂಥವೆಂದರೆ ವೇದವೇ ಎಂದು ಅನೇಕ ರೀತಿಯಿಂದ ಸ್ತುತಿಮಾಡಿರುವರು. ಇಂಥಾ ಈ ಪರಮಪವಿತ್ರ ವೇದಗಳನ್ನು ಆದಷ್ಟು ಮಟ್ಟಿಗೆ ಸರ್ವ ಮಾನವಪ್ರಾಣಿಗಳು ಓದಿ ಅದರಲ್ಲಿದ್ದ ವಿಷಯಗಳನ್ನು ಹೊಸಹೊಸ ರೀತಿಯಾಗಿ ಶೋಧಿಸಿ ಈಶ್ವರನಿಗೆ ಕೃತಜ್ಞರಾಗುವರೆಂದು ನಂಬಿರುವೆನು. ಈ ಪವಿತ್ರವಾದ ವೇದಗಳಲ್ಲುಲ್ಲೇಖಿಸಿರುವ ಜ್ಞಾನೋಪಾಸನಕರ್ಮಕಾಂಡಗಳೆಂಬ ಕಾಂಡತ್ರಯಗಳಲ್ಲಿಯ ಕರ್ಮಕಾಂಡ ಪ್ರತಿಪಾದಕಗಳಾದ ಐತರೇಯ, ತೈತ್ತಿರೇಯಾದಿ ಬ್ರಾಹ್ಮಣ ಗ್ರಂಥಗಳು ಪೂರ್ವದಲ್ಲಿ ೪೩೦ ಇದ್ದವೆಂದು ಮಿ|| ರಮೇಶಚಂದ್ರಬೋಸರವರು ಶೋಧನೆಮಾಡಿ ಬರೆದಿರುವರು. ಆದರೆ ಇವುಗಳಲ್ಲಿ ೭-೮ ಮಾತ್ರ ಸದ್ಯಕ್ಕೆ ಉಪಲಬ್ಧವಿದ್ದು ಇನ್ನುಳಿದ ಸರ್ವಬ್ರಾಹ್ಮಣಗ್ರಂಥಗಳು ಲುಪ್ತವಾಗಿ ಹೋಗಿರುವವು. ಈ ಬ್ರಾಹ್ಮಣ ಗ್ರಂಥಗಳು ಋಗ್ಯಜುಸ್ಸಾಮಾಥರ್ವಣವೆಂಬ ನಾಲ್ಕು ವೇದಗಳಿಗೆ ಸಮಾನಗಳೆಂತಲೂ ವೇದದಷ್ಟು ಪೂಜ್ಯತೆ ಇವುಗಳಿಗುಂಟೆಂತಲೂ ಕಾತ್ಯಾಯನಮುನಿಯು "ಮಂತ್ರಬ್ರಾಹ್ಮಣಾತ್ಮಕಯೋರ್ವೇದನಾಮಧೇಯಂ" ಎಂಬದಾಗಿ ಉಭಯಕ್ಕೂ ವೇದನಾಮವನ್ನು ಕೊಡುತ್ತಿರುವನು. ಆದರೆ ಇದು ನಮಗೆ ಹಿತವೆಂದು ಕಾಣುವದಿಲ್ಲ, ಯಾಕಂದರೆ ಬ್ರಾಹ್ಮಣ ಗ್ರಂಥಗಳು ಮನುಷ್ಯ ಪ್ರಾಣಿಯಿಂದ ನಿರ್ಮಿತವಾಗಿದ್ದು ಈಶ್ವರೀಯವಾಣಿ ಅಲ್ಲವಾದ್ದರಿಂದಲೂ, ಕಾತ್ಯಾಯನನ ಹೊರತು ಯಾವ ಋಷಿಗಳು ಇವುಗಳಿಗೆ ವೇದನಾಮಧೇಯವನ್ನು ಕೊಡದೇ ಇರುವದರಿಂದಲೂ, ಮತ್ತು ವೇದದಂತೆ ಸರ್ವಜ್ಞಾನಭಂಡಾರವು ಇವುಗಳಲ್ಲಿ ಪ್ರತಿಪಾದಿಸಲ್ಪಡದೆ ಕೇವಲ ಒಂದೊಂದೇ ವಿಷಯವು ಇವುಗಳಲ್ಲಿ ಪ್ರತಿಪಾದಿಸಿದ್ದರಿಂದ ಇವು ಅಪೌರುಷೇಯವೆಂದೂ ಅನಾದಿ ಸಾಮಾನ್ಯಋಷಿ ಗ್ರಂಥಗಳಂತೆ ಮಾನ್ಯತೆಯು ಇವುಗಳಿಗೆ ವಿಹಿತವಾಗಿರುವದೆಂದು ಕಂಡುಬರುವದು. ಆದ್ದರಿಂದ ವೇದನಾಮವು ಇವುಗಳಿಗೆ ಸರ್ವಥಾ ಅರ್ಹವಲ್ಲವೆಂದು ಹೇಳಬಹುದು. ಆದರೆ ಈ ಬ್ರಾಹ್ಮಣ ಗ್ರಂಥಗಳು ಅತಿಪ್ರಾಚೀನಕಾಲದ ಇತಿಹಾಸಗ್ರಂಥಗಳೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಮೇಲೆ ತೋರಿಸಿದ ಬ್ರಾಹ್ಮಣ ಗ್ರಂಥಗಳ ಉತ್ಪತ್ತಿಯಾದನಂತರ ಕೆಲವು ಕಾಲದಮೇಲೆ ಉಪನಿಷದ್ಗ್ರಂಥಗಳು ಪ್ರಚಾರದಲ್ಲಿ ಬಂದವು. ಆದರೆ ಅವುಗಳಲ್ಲಿ ಈ ಹೊತ್ತಿಗೆ ೧೦೮ ಉಪಲಬ್ಧವಿದ್ದು ಇವುಗಳಲ್ಲಿ "ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡುಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ" ಇವೇ ಮೊದಲಾದ ಹತ್ತು ಉಪನಿಷತ್ತುಗಳು ಪ್ರಧಾನವಾಗಿದ್ದು ಈ ಹೊತ್ತಿಗೆ ೧೦೮ ಉಪನಿಷತ್ತುಗಳು ದೃಗ್ಗೋಚರದಲ್ಲಿರುವವು. ಅವುಗಳಲ್ಲಿ ದಶೋಪನಿಷತ್ತು ಬ್ರಹ್ಮಸೂತ್ರ ಭಗವದ್ಗೀತಾ ಈ ಮೂರು ಪ್ರಸ್ಥಾನತ್ರಯಗಳೆಂತಲೂ ಈ ಪ್ರಸ್ಥಾನತ್ರಯಗಳಿಗೆ ತಮ್ಮ ತಮ್ಮ ಸೂಕ್ಷ್ಮದೃಷ್ಟಿಯಿಂದ ವಿಚಾರಮಾಡಿ ಭಾಷ್ಯಗಳನ್ನು ಬರೆದವರೇ ಜಗನ್ಮಾನ್ಯರಾದ ಧರ್ಮಗುರುಗಳೆಂತಲೂ ಲೋಕದಲ್ಲಿ ರೂಢಿಯುಂಟು. ಈ ಅನುಪಮವಾದ ಉಪನಿಷದ್ಗ್ರಂಥಗಳು ಕೇವಲ ಮುಕ್ತಿಸಂಬಂಧ ವಿಷಯವನ್ನೇ ಬೋಧಿಸುತ್ತಿರುವವು. ಇವುಗಳಿಗೆ ತಮ್ಮ ತಮ್ಮ ಅಭಿಪ್ರಾಯಕ್ಕನುಸಾರವಾಗಿ ಬರೆದ ಎಷ್ಟೋ ಭಾಷ್ಯಗ್ರಂಥಗಳು ಈ ಹೊತ್ತಿಗೆ ಉಪಲಬ್ಧವಿರುವವು. ಇನ್ನು ಜಗದ್ಧಿತವನ್ನು ಮಾಡುವ ವೇದವೇದಾಂತಗಳ ಸಂರಕ್ಷಣಾರ್ಥವಾಗಿ ಅರ್ಥಾತ್ ಅವುಗಳ ಯಥಾರೀತಿಯಾದ ಅರ್ಥಬೋಧಕ್ಕಾಗಿ ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ, ಕಲ್ಪಗಳೆಂಬ ಷಡಂಗಗಳ ಉತ್ಪತ್ತಿಯಾಗಿದ್ದು ಅದರಲ್ಲಿ ಮೊದಲನೇದಾದ ಶಿಕ್ಷಾವಿಷಯವು ಜಾಬಾಲ ಮೊದಲಾದ ಋಷಿಗಳಿಂದ ಪ್ರಣೀತವಾಗಿ ಅನೇಕ ಗ್ರಂಥ ವಿಸ್ತೀರ್ಣತೆಯಲ್ಲಿದ್ದದ್ದು ಈಗ ಅತ್ಯಂತ ದುರ್ದಶಾದಲ್ಲಿ ಬಂದು ಅದರಲ್ಲಿ "ಪಾಣಿನೀಶಿಕ್ಷಾ" ಎಂಬ ಒಂದೇ ಗ್ರಂಥವು ಪಠಣ ಪಾಠನವ್ಯವಸ್ಥೆಯಲ್ಲಿರುವದು. ಈ ಶಿಕ್ಷಾ ವಿಷಯಕ್ಕೆ ಸಂಪೂರ್ಣಜ್ಞಾನವಾಗುವ ಗ್ರಂಥಗಳು ಇನ್ನೂ ಶೋಧವಾಗಿಲ್ಲ. ಹಿಂದುಸ್ಥಾನದ ಕೆಲವು ಭಾಗದಲ್ಲಿ ನೋಡಿದ ಪಂಡಿತರ ಪೈಕಿ ಶಿಕ್ಷಾ ವಿಷಯಕ ವಿಶೇಷಮಾಹಿತಿ ಇದ್ದು ಅದರಲ್ಲಿ ಅಕ್ಷರೋಚ್ಚಾರಣೆ, ಲಿಪಿವಗೈರೆ ಯೋಗ್ಯರೀತಿ ಪ್ರಾಚೀನಪದ್ಧತಿಗೆ ಕೂಡಿಸುವ ಪ್ರಯತ್ನ ಅಂದರೆ ಶರೀರದ ಆಯಾಯ ಸ್ಥಾನಗಳಿಂದ ಅಕ್ಷರವು ಯಾವ ಆಕೃತಿಯಲ್ಲಿ ಹೊರಡುವದು ಮತ್ತು ಅದು ಪೂರ್ವಜರಿಂದ ಹೀಗೆ ಯಾಕೆ ಬರೆಯಲ್ಪಟ್ಟಿತೆಂಬ ವಿಶೇಷ ಶೋಧವನ್ನು ಚಿತ್ರಪಟದಲ್ಲಿ ಬರೆದು ಯಥಾವತ್ತಾಗಿ ತೋರಿಸುವವರಲ್ಲಿ ಮುಂಬಯಿಯ ಪ್ರಸಿದ್ಧಪುರುಷರಾದ ಶಿವಕರ್ ಬಾಪೂಜಿತಳಪದೇ ಎಂಬವರ ಹೊರ್ತು ಮತ್ಯಾರೂ ಈ ಹೊತ್ತಿನವರೆಗೆ ಅಷ್ಟು ಶೋಧವನ್ನು ಮಾಡಿಲ್ಲವೆಂದು ನನಗೆ ಕಂಡುಬರುತ್ತದೆ. ವೇದಾಂಗಗಳಲ್ಲಿಯ ಎರಡನೇ ಅಂಗವಾದ ವ್ಯಾಕರಣಶಾಸ್ತ್ರವು ಹದಿನೈದು ಮಂದಿ ಋಷಿಗಳಿಂದ ಹದಿನೈದು ಪ್ರಕಾರ ವಿರಚಿಸಲ್ಪಟ್ಟಿತ್ತೆಂದು ಪಾಣಿನಿಯು ನಿರ್ದೇಶಮಾಡಿದ ಶಾಕಟಾಯನ, ಗಾರ್ಗ್ಯ, ಕಾಶ್ಯಪ, ಗಾಲವಾದಿ ಋಷಿಗಳ ಹೆಸರಿನಿಂದ ಸ್ಪಷ್ಟವಾಗಿ ಕಂಡುಬರುವದು. ಮತ್ತು ಇದಲ್ಲದೆ ಸಾರಸ್ವತ, ಮುಗ್ಧಬೋಧ, ಕಲಾಪ ಮೊದಲಾದ ವ್ಯಾಕರಣ ಗ್ರಂಥಗಳ ಸದ್ಯದ ಪ್ರಚಾರದ ಮೇಲಿಂದಲೂ, ವ್ಯಾಕರಣ ಶಾಖೆಗಳು ಅನೇಕ ವಿದ್ದವೆಂದು ಕಂಡುಬರುವದು. ಆದರೆ ಅವೆಲ್ಲವುಗಳಲ್ಲಿ ಪಾಣಿನಿಯವ್ಯಾಕರಣದ ೪೦೦೦ ಸೂತ್ರಗಳೂ ಅದಕ್ಕೆ ಕಾತ್ಯಾಯನರಿಂದ ಬರೆಯಲ್ಪಟ್ಟ ವಾರ್ತಿಕ ಗ್ರಂಥವೂ ಮತ್ತು ಪತಂಜಲಿಮಹರ್ಷಿಗಳಿಂದ ಬರೆದ ಮಹಾಭಾಷ್ಯಗ್ರಂಥವೂ ಈ ಮೂರು ಗ್ರಂಥಗಳು ವ್ಯಾಕರಣಕ್ಕೆ ಪ್ರಮಾಣವೂ ಜಗನ್ಮೋಹರವೂ ಆದರವುಳ್ಳವೂ ಆಗಿರುವವು. (ಸಶೇಷ).

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಕೃಪಾಬಲದಿಂದ ದಾವಣಗೆರೆ ಶ್ರೀಗುರು ಬಕ್ಕೇಶ್ವರ ಸ್ವಾಮಿ ಚೌಕಿಯಲ್ಲಿ ಧರ್ಮಾರ್ಥವಾಗಿ ಜರಗುವ

ಉಪನಯನ ಮಹೋತ್ಸವಾಹ್ವಾನ ಪತ್ರಿಕಾ.

ಸಮಸ್ತ ಮಠಸ್ಥರಿಗೂ ಮಾಹೇಶ್ವರರುಗಳಿಗೂ ದಾವಣಗೆರೆ ಗೌಡ್ರ ಸಣ್ಣಮಹಾಲಿಂಗಪ್ಪ ಗುರುಶಾಂತಪ್ಪ ಇವರು ವಿನಯ ಪೂರ್ವಕವಾಗಿ ಬಿನ್ನೈಸಿಕೊಳ್ಳುವದೇನೆಂದರೆ:—ಸ್ವಸ್ತಿಶ್ರೀವಿಜಯಾಭ್ಯುದಯ ನೃಪ ಶಾಲಿವಾಹನ ಶಕೆ ೧೮೪೬ ನೇ ರಕ್ತಾಕ್ಷಿನಾಮ ಸಂವತ್ಸರದ ಶ್ರಾವಣ ಬಹುಳ ೧೩ ಗುರುವಾರ ಅರುಣೋದಯಾದಿ ಉಪನಯನ ಸುಮುಹೂರ್ತ ಶುಭಾಂಶದಲ್ಲಿ ಈ ಗುರುಕಾರ್ಯವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲು ಗುರುಹಿರಿಯರು ನಿಶ್ಚಯಿಸಿರುತ್ತಾರಾದಕಾರಣ ತಾವುಗಳು ವಟುಗಳ ಸಮೇತ ೨ ದಿನಗಳ ಮುಂಚಿಗಿವಾಗಿ ಆಗಲಿ ಅಥವಾ ಶ್ರಾವಣ ಬಹುಳ ೧೨ ಬುಧವಾರಕ್ಕಾಗಲಿ ತಪ್ಪದೆ ತಮ್ಮ ಇಷ್ಟಮಿತ್ರರೊಡನೆ ದಯಮಾಡಿಸಬೇಕಾಗಿ ಪ್ರಾರ್ಥಿಸುತ್ತೇವೆ. ತಮ್ಮಲ್ಲಿ ದೊರೆಯತಕ್ಕ ವಟುಗಳು ಎಷ್ಟು ಎಂಬುದನ್ನು ೫ ದಿವಸಗಳ ಮುಂಚಿತವಾಗಿ ನಮಗೆ ಸೂಚಿಸಬೇಕಾಗಿ ಬೇಡುತ್ತೇವೆ. ಈ ಕಾರ್ಯಕ್ಕೆ ಬರತಕ್ಕ ಸಮಸ್ತ ಮಹೇಶ್ವರರಿಗೆ ಭೋಜನ ಮತ್ತು ವಸತಿಗೆ ತಕ್ಕ ಸೌಕರ್ಯವನ್ನು ಏರ್ಪಡಿಸಿದೆ. ಶ್ರೀ|| ಶ್ರೀ|| ಜಗದ್ಗುರು ಮಹಾ|| || ಸನ್ನಿಧಿಯ ಮುಕ್ಕಾಂ ಈ ಶ್ರಾವಣಮಾಸ ಆಖೈರುವರಿವಿಗೂ ದಾವಣಗೆರೆಯಲ್ಲಿಯೇ ಇರುತ್ತೆ. ಈ ವಿಷಯವನ್ನು ತಮಗೆ ತಿಳಿಸಲು ತುಂಬಾ ಸಂತೋಷಪಡುತ್ತೇವೆ.

ಪ್ರೋಗ್ರಾಂ.—ಶ್ರಾವಣ ಬಹುಳ ೧೩ ಗುರುವಾರ ಬೆಳಗಿನ ೫ ಘಂಟೆಯಿಂದ ೯ ಘಂಟೆವರಿಗೂ ಉಪನಯನವೂ ೯ ಘಂಟೆಯಿಂದ ೧೦ ವರಿಗೆ ಶ್ರೀ ಮಹಾ ಸನ್ನಿಧಿಯನ್ನು ವಿರಕ್ತ ಮಠದಿಂದ ಬಿರುದಾವಳಿ ವಾದ್ಯ ವೈಭವದೊಡನೆ ಸದರಿ ಚೌಕಿಗೆ ಬಿಜಯಂಗೈಸುವದು. ಮಹಾಪಾದಪೂಜೆ ನೆರವೇರಿಸಿ ಗಣಾರಾಧನೆ ನಡೆಯುವದು. ಸಾಯಂಕಾಲ ೫ ಘಂಟೆಯಿಂದ ಗಜ ತುರಗ ಪದಾತಿಗಳಿಂದಲೂ ವಾದ್ಯಗಳ ಜಯಘೋಷಗಳಿಂದಲೂ ವಟುಗಳ ಭಿಕ್ಷಾಟನ ಲೀಲಾ ಮತ್ತು ಅಥಣಿ ಶ್ರೀ || || ಗಳವರ ಭಾವಚಿತ್ರ ಪ್ರಭುಲಿಂಗಲೀಲೆಯೆಂಬ ಮಹಾಪುರಾಣದ ಸಮಾಪ್ತಿ ಮಹೋತ್ಸವವೂ ಜರಗುವದು. ಶ್ರಾವಣ ಶುದ್ಧ ೨ ಲಾಗಾಯತು ಈ ಬಹುಳ ೧೩ ವರೆಗೆ ಪ್ರತಿನಿತ್ಯದಲ್ಲೂ ಮಧ್ಯಾಹ್ನ ೩ ಘಂಟೆಯಿಂದ ೬ ಘಂಟೆವರಿವಿಗೂ ಪ್ರಭುಲಿಂಗಲೀಲೆಯೆಂಬ ಮಹಾಪುರಾಣ ಶ್ರವಣವು ಚೌಕಿಯಲ್ಲಿ ಮ|| ರಾ|| ಮೈಸೂರು ಶಿವಾನುಭವದ ಶಿದ್ಧಪ್ಪನವರಿಂದ ಮತ್ತು ತಿಪಟೂರು ಶಾಸ್ತ್ರಿ ನಂಜುಂಡಪ್ಪನವರಿಂದ ಹೇಳಲ್ಪಡುತ್ತೆ. ಈ ಕಾರ್ಯಕ್ಕೆ ಸಮ್ಮಂಧಪಟ್ಟ ಎಲ್ಲಾ ವಿಷಯಗಳೂ ಮೈಸೂರು ಸ್ಟಾರ್ ಹಾವೇರಿ ಬಸವರಾಜ ಮತ್ತು ಹುಬ್ಬಳ್ಳಿ ಲೋಕಮತ ಈ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತ್ತೆ.

ತಮ್ಮ ವಿಧೇಯರು,
ಗೌಡ್ರ ಸಣ್ಣಮಹಾಲಿಂಗಪ್ಪ ಗುರುಶಾಂತಪ್ಪ ದಾವಣಗೆರೆ.

ಡಿಟೆಕ್ಟ್‌ಸ್ಕೋಪ್ (ಅಮೇರಿಕನ್ ಯಂತ್ರ)

ಈ ಯಂತ್ರದ ಆಶ್ಚರ್ಯವೇನಂದರೆ, ನಮ್ಮ ಹಿಂದುಗಡೆ ನಡೆಯುವ ಎಲ್ಲಾ ಮರ್ಮ ರಹಸ್ಯ ಕೆಲಸಗಳನ್ನು ಹಿಂತಿರುಗಿ ನೋಡದೆಯೇ ಇದರಲ್ಲಿ ಕಾಣಬಹುದು. ಮದುವೆಮನೆ, ನಾಟಕ ಕಂಪನಿ, ಮುಂತಾದ ಜನಭರಿತವಾದ ಸ್ಥಳಗಳಲ್ಲಿಯೂ, ರಸ್ತೆಗಳಲ್ಲಿಯೂ ಹಿಂದೆ ಯಾರು ಯಾರು ಇದ್ದಾರೆ, ಏನೇನು ಕೆಲಸಗಳು ನಡೆಯುತ್ತಿವೆ ಎಂಬುದನ್ನು ವಿವರವಾಗಿ ತಿಳುಕೊಳ್ಳಬಹುದು. ಯಂತ್ರ 1ಕ್ಕೆ ಕ್ರಯ ರೂ. 1—8—0

ಸಿಟಿ ವಾಚ್ ಕಂಪನಿ 22 ತಿರುಪಳ್ಳಿ ಬೀದಿ
[4—2] ಮದರಾಸು.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಮೈಸೂರು.

ಮಳೆಗಾಲಕ್ಕಾಗಿ.

ಅನೇಕ ನಮೂನೆ ಕಾಶ್ಮೀರ್‌ಶಾಲುಗಳನ್ನು ಹೆಚ್ಚಾಗಿ ತರಿಸಿ ಬಹು ಸುಲಭ ಬೆಲೆಯಿಂದ ವಿಕರಿಮಾಡುತ್ತಲಿದ್ದೇವೆಯಾಗಿ ಪ್ರತಿನಿತ್ಯವೂ ಅನೇಕ ವಿಕರಿಯಾಗುತ್ತಲಿವೆ. ಇದರಡಿ ನಮೂದಿಸಿರುವ ಖರೀದಿಯ ಶಾಲುಗಳ ಪೈಕಿ ನಿಮಗೆ ಬೇಕಾದ ಖರೀದಿಯದಕ್ಕೆ ಆರ್ಡರ್ ಕೊಟ್ಟಲ್ಲಿ ನಂಬಿಗೆಯಿಂದ ನೀವಿದ್ದೆಡೆಗೆ ರವಾನಿಸುತ್ತೇವೆ.

ಬಾರ್ಡರ್‌ಹಾಕಿದ ಉಲನ್ ಶಾಲುಗಳು 1ಕ್ಕೆ 12-4-0, 13-2-0, 14-8-0, 15-4-0, 16-8-0, 17-2-0, 18-12-0, 19-8-0, 20-4-0, 21-8-0, 22-12-0, 23-8-0, 24-2-0, 25-4-0, 27-8-0, 30-0-0, 32-8-0, 34-4-0, 37-8-0, 48-8-0 ಮೇಲ್ಪಟ್ಟು 65 ರೂಪಾಯಿವರುವಿಗೆ ಸ್ಟಾಕಿನಲ್ಲಿವೆ.

ಖಾತ್ರಿಯಾದ ಚೇಳಿನ ಔಷಧ ಪೆಟ್ಟಿ 1 ಕ್ಕೆ 0-8-0, 12 ಕ್ಕೆ 4-8-0, "ನ್ಯಾಷನಲ್ ಇಂಕ್‌ಪೌಡರ್ ಪ್ಯಾಕೆಟ್" 1ಕ್ಕೆ 1-0-0.



M.S. SIDDAPPA & BROS.

ಅನೇಕ ನಮೂನೆ ಟೈಂಪೀಸುಗಳು ಶೀಮೆಯಿಂದ ಹೆಚ್ಚಾಗಿ ಸಪ್ಲೈ ಆಗಿರುತ್ತಾಗಿ ಖರೀದಿ ಬಹಳ ಕಡಮೆಯಾಗಿರುತ್ತೆ. ಕೊಂಡುಕೊಳ್ಳುವವರಿಗೆ ಇದು ಸುಸಮಯವಾಗಿರುತ್ತಾಗಿ ಇದರಡಿ ನಮೂದಿಸಿರುವ ಖರೀದಿ ಟೈಂಪೀಸುಗಳ ಪೈಕಿ ನಿಮಗೆ ಬೇಕಾದ ಖರೀದಿ ಟೈಂಪೀಸಿಗೆ ಆರ್‌ಡರ್ ಕೊಡುವುದಲ್ಲದೆ 1-0-0 ರೂ. ಅಡ್ವಾನ್ಸ್ ರವಾನಿಸಿದಲ್ಲಿ ಉತ್ತಮವಾದದನ್ನು ಚುನಾಯಿಸಿ ನಂಬಿಗೆಯಿಂದ ರವಾನಿಸಲಾಗುತ್ತೆ. ಸಾದಾ ಟೈಂಪೀಸ್ 1 ಕ್ಕೆ 3-4-0, 3-6-0.

ಅಲಾರಂಟೈಂಪೀಸುಗಳು 4-4-0, 5-2-0, 6-8-0, 7-0-0, 7-12-0, 8-4-0, 9-8-0, 10-2-0, ಮೇಲ್ಪಟ್ಟಿರುತ್ತೆ.

ಗಂಟೆ ½ ಗಂಟೆ ಹೊಡೆದು ಅಲಾರಂ ಸಹಾ ಬಾರಿಸುವ ಟೈಂಪೀಸುಗಳು 7-14-0, 8-8-0, 17-8-0, 18-12-0.

ಕರ್ಣಾನಂದವಾಗಿ ಗಾನಮಾಡುವ ಕ್ಯಾರೇಜ್ ಕ್ಲಾಕ್ 1 ಕ್ಕೆ 15-8-0, 16-4-0

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—43] ಮೈಸೂರು.

೧೯೨೪ ನೆಯ ಇಸವಿ ಜುಲೈ ತಾ|| ೨೭ ರಿಂದ ೧೯೨೪ ನೆಯ ಇಸವಿ ಆಗಸ್ಟ್ ತಾ|| ೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಆಷಾಢ ಬಹುಳ ಏಕಾದಶಿಯಿಂದ ಶ್ರಾವಣ ಶುದ್ಧ ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಮಾಸ
27	[1]ಭಾನು	ಏಕಾ	28-23	ರೋಹಿ	29-58	13
28	ಸೋಮ	ದ್ವಾದ	33-20	ಮೃಗ	36-38	14
29	[2]ಮಂಗಳ	ತ್ರಯೋ	38-9	ಆರ್ದ್ರಾ	42-53	15
30	ಬುಧ	ಚತು	42-14	ಪುನ	48-34	16
31	[3]ಗುರು	ಅಮಾ	45-26	ಪುಷ್ಯ	53-14	17
1	[4]ಶುಕ್ರ	ಪಾಡ್ಯ	17-25	ಆಶ್ಲೇ	56-41	18
2	[5]ಶನಿ	ಬಿದಿ	48-3	ಮಖಾ	58-53	19

(1) ಸರ್ವತ್ರೈಕಾದಶಿ. (2) ಪ್ರದೋಷಃ. (3) ಸರ್ವತ್ರ ಭೀಮಾಮಾವಾಸ್ಯ, ಜ್ಯೋತಿಸ್ತಂಭವ್ರತಂ. (4) ಆದಿಶುಕ್ರವಾರಂ, ಪದಿನೆಟ್ಟಾಂಪೆರಕ್. (5) ಶ್ರಾವಣಶನಿವಾರಂ, ಮೊಹರಂ ಪ್ರಾರಂಭಃ.

ಮೈಸೂರು : ಶ್ರೀ. ಶಿವಬಸಪ್ಪನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಸೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲೀಕ ಸಾಧ್ವ ಗ್ಜ್ಯಾಲಪಾಲಂವಲಂ ||
ಕೀರ್ತಿತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬತ್ತಿಲೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಆಗಸ್ಟ್ ತಾರೀಖು ೩ ನೆಯ ಭಾನುವಾರ. [ಸಂಚಿಕೆ ೩೧

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು.
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ, ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ
ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.
ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
26 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ [illegible] 141
ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—48] ಪೋ. ಬಾ. ೫೧, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹಾಶಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಕಡ್ಡಿ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಮಾರಾಟಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹಾಶಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳಬೇಕೆಂದು ಕೋರುತ್ತೇನೆ.

ಎಸ್. ಕಲ್ಲಪ್ಪ, ಊದುಬತ್ತಿ ಷಾಪ್,
24 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್‌ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಮೈಸೂರು.

ಮಳೆಗಾಲಕ್ಕಾಗಿ.

ಅನೇಕ ನಮೂನೆ ಕಾಶ್ಮೀರ್‌ಶಾಲುಗಳನ್ನು ಹೆಚ್ಚಾಗಿ ತರಿಸಿ ಬಹು ಸುಲಭ ಬೆಲೆಯಿಂದ ವಿಕರಿಮಾಡುತ್ತಲಿದ್ದೇವೆಯಾಗಿ ಪ್ರತಿನಿತ್ಯವೂ ಅನೇಕ ವಿಕರಿಯಾಗುತ್ತಲಿವೆ. ಇದರಡಿ ನಮೂದಿಸಿರುವ ಖರೀದಿಯ ಶಾಲುಗಳ ಪೈಕಿ ನಿಮಗೆ ಬೇಕಾದ ಖರೀದಿಯದಕ್ಕೆ ಆರ್ಡರ್ ಕೊಟ್ಟಲ್ಲಿ ನಂಬಿಗೆಯಿಂದ ನೀವಿದ್ದೆಡೆಗೆ ರವಾನಿಸುತ್ತೇವೆ.

ಬಾರ್ಡರ್‌ಹಾಕಿದ ಉಲನ್ ಶಾಲುಗಳು 1ಕ್ಕೆ 12-4-0, 13-2-0, 14-8-0, 15-4-0, 16-8-0, 17-2-0, 18-12-0, 19-8-0, 20-4-0, 21-8-0, 22-12-0, 23-8-0, 24-2-0, 25-4-0, 27-8-0, 30-0-0, 32-8-0, 34-4-0, 37-8-0, 48-8-0 ಮೇಲ್ಪಟ್ಟು 65 ರೂಪಾಯಿವರುವಿಗೆ ಸ್ಟಾಕಿನಲ್ಲಿವೆ.

ಖಾತ್ರಿಯಾದ ಚೇಳಿನ ಔಷಧ ಪೆಟ್ಟಿ 1 ಕ್ಕೆ 0-8-0, 12 ಕ್ಕೆ 4-8-0, "ನ್ಯಾಷನಲ್ ಇಂಕ್‌ಪೌಡರ್ ಪ್ಯಾಕೆಟ್" - 1ಕ್ಕೆ 1-0-0.



M.S. SIDDAPPA & BROS.

ಅನೇಕ ನಮೂನೆ ಟೈಂಪೀಸುಗಳು ಶೀಮೆಯಿಂದ ಹೆಚ್ಚಾಗಿ ಸಪ್ಲೈ ಆಗಿರುತ್ತಾಗಿ ಖರೀದಿ ಬಹಳ ಕಡಮೆಯಾಗಿರುತ್ತೆ. ಕೊಂಡುಕೊಳ್ಳುವವರಿಗೆ ಇದು ಸುಸಮಯವಾಗಿರುತ್ತಾಗಿ ಇದರಡಿ ನಮೂದಿಸಿರುವ ಖರೀದಿ ಟೈಂಪೀಸುಗಳ ಪೈಕಿ ನಿಮಗೆ ಬೇಕಾದ ಖರೀದಿ ಟೈಂಪೀಸಿಗೆ ಆರ್‌ಡರ್ ಕೊಡುವುದಲ್ಲದೆ 1-0-0 ರೂ. ಅಡ್ವಾನ್ಸ್ ರವಾನಿಸಿದಲ್ಲಿ ಉತ್ತಮವಾದದನ್ನು ಚುನಾಯಿಸಿ ನಂಬಿಗೆಯಿಂದ ರವಾನಿಸಲಾಗುತ್ತೆ. ಸಾದಾ ಟೈಂಪೀಸ್ 1 ಕ್ಕೆ 3-4-0, 3-6-0.

ಅಲಾರಂಟೈಂಪೀಸುಗಳು 4-4-0, 5-2-0, 6-8-0, 7-0-0, 7-12-0, 8-4-0, 9-8-0, 10-2-0, ಮೇಲ್ಪಟ್ಟಿರುತ್ತೆ.

ಗಂಟೆ ½ ಗಂಟೆ ಹೊಡೆದು ಅಲಾರಂ ಸಹಾ ಬಾರಿಸುವ ಟೈಂಪೀಸುಗಳು 7-14-0, 8-8-0, 17-8-0, 18-12-0.

ಕರ್ಣಾನಂದವಾಗಿ ಗಾನಮಾಡುವ ಕ್ಯಾರೇಜ್ ಕ್ಲಾಕ್ 1 ಕ್ಕೆ 15-8-0, 16-4-0

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—44] ಮೈಸೂರು.

ಡಿಟೆಕ್ಟ್‌ಸ್ಕೋಪ್ (ಅಮೇರಿಕನ್ ಯಂತ್ರ)

ಈ ಯಂತ್ರದ ಆಶ್ಚರ್ಯವೇನಂದರೆ, ನಮ್ಮ ಹಿಂದುಗಡೆ ನಡೆಯುವ ಎಲ್ಲಾ ಮರ್ಮ ರಹಸ್ಯ ಕೆಲಸಗಳನ್ನು ಹಿಂತಿರುಗಿ ನೋಡದೆಯೇ ಇದರಲ್ಲಿ ಕಾಣಬಹುದು. ಮದುವೆಮನೆ, ನಾಟಕ ಕಂಪನಿ, ಮುಂತಾದ ಜನಭರಿತವಾದ ಸ್ಥಳಗಳಲ್ಲಿಯೂ, ರಸ್ತೆಗಳಲ್ಲಿಯೂ ಹಿಂದೆ ಯಾರು ಯಾರು ಇದ್ದಾರೆ, ಏನೇನು ಕೆಲಸಗಳು ನಡೆಯುತ್ತಿವೆ ಎಂಬುದನ್ನು ವಿವರವಾಗಿ ತಿಳುಕೊಳ್ಳಬಹುದು. ಯಂತ್ರ 1ಕ್ಕೆ ಕ್ರಯ ರೂ. 1—8—0

ಸಿಟಿ ವಾಚ್ ಕಂಪನಿ 22 ತಿರುಪಳ್ಳಿ ಬೀದಿ
[4—3] ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರಿಯದೆ ಬರಿಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ. ೧—೦—೦
ಕೇನೋಪನಿಷತ್ ಶಾಂಕರೀ	ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢಗಳಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

ಧರ್ಮರತ್ನ ಪಂ. ಶಂಕರಶಾಸ್ತ್ರಿ, ಉಮಚಗಿ.

ಗ್ರಂಥಸಿಕ್ಕುವಸ್ಥಲ :—
ಹೊಸಮಠದ ಚನ್ನಯ್ಯನವರು ಹರಿಹರ,
24—17 ಚಿತ್ರದುರ್ಗ ಡಿ||

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[50—29] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ನಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಜ್ಜು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೦ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—35] [illegible], ಮದರಾಸು.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಆಗಸ್ಟು ತಾ|| ೩ ನೆಯ ಭಾನುವಾರ.

ಮ್ಯುನಿಸಿಪಲ್ ಕೌನ್ಸಿಲರ ಚುನಾವಣೆಯು.

ಮ್ಯುನಿಸಿಪಾಲಿಟಿಯು ಆಯಾ ಊರಿನ ಕಾರ್ಯಭಾರವನ್ನು ನಿರ್ವಹಿಸುವ ರಾಜ್ಯಭಾರವಾಗಿರುತ್ತದೆ. ಊರಿನ ಆರೋಗ್ಯ ರಕ್ಷಣೆ, ಶುಚೀಕರಣ, ಬೆಳಕಿನೇರ್ಪಾಟು, ಮಾರ್ಗನಿರ್ಮಾಣ, ಮತ್ತು ಶುದ್ಧಿ, ವೈದ್ಯಸಹಾಯ, ನೀರಿನ ಅನುಕೂಲ್ಯ ಇತ್ಯಾದಿ ನಿತ್ಯಪ್ರಯೋಜನಯುಕ್ತ ಕಾರ್ಯಭಾರವನ್ನು ನಿರ್ವಹಿಸುವುದಕ್ಕಾಗಿಯೇ ಇದಿರುವುದು ಇವೆಲ್ಲಾ ಪುರಜನರ ಸ್ವಂತ ಕೆಲಸವೇ ಹೊರತು ಬೇರೆಯಲ್ಲವು. ಆದಕ್ಕಾಗಿಯೇ ಇದರ ವೆಚ್ಚಕ್ಕೆ ತಗಲುವ ಹಣವನ್ನು ಪ್ರಜೆಗಳು ಮನೆಗಂದಾಯ, ನೀರಿನ ಕಂದಾಯ, ಬೆಳಕಿನ ಕಂದಾಯ, ಗೇಟಿನ ಕಂದಾಯ, ಬಟ್ಟೆಬರೆ ಪದಾರ್ಥಗಳ ಮೇಲಿನ ಕಂದಾಯ ಮೊದಲಾದವುಗಳ ರೂಪದಿಂದ ಕೊಟ್ಟು ಒದಗಿಸುತ್ತಿರುವುದು. ಪುರಜನರೆಲ್ಲರೂ ಈ ಕಾರ್ಯಭಾರವನ್ನು ವಿಮರ್ಶಾಪೂರ್ವಕವಾಗಿ ನಡೆಸುವುದು ಸಾಧ್ಯವಲ್ಲವಾದುದರಿಂದ, ಅವರೆಲ್ಲರೂ ತಮಗೆ ಪ್ರತಿನಿಧಿಗಳನ್ನಾಗಿ ಸಮರ್ಥರಾದ ಕೆಲವರನ್ನು ಆರಿಸಿಕೊಂಡು ಅವರಿಂದ ತಮ್ಮೂರಿನ ಕೆಲಸಗಳನ್ನು ನಿರ್ವಾಹಮಾಡಿಸುವುದಕ್ಕಾಗಿಯೇ ಈ ಮ್ಯುನಿಸಿಪಲ್ ಕೌನ್ಸಿಲರ ಆರಿಸುವಿಕೆಯೆಂಬುದು ಏರ್ಪಟ್ಟಿದೆ.

ಈಗ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ಈ ಆಗಸ್ಟ್ ತಾ|| 18 ರಿಂದ 21 ರ ವರೆಗೆ ನಡೆಯಲು ಗೊತ್ತಾಗಿದೆ. ಚಾಲಿನ ಮುಂದೆ ಬೆಕ್ಕು ಸುಳಿದಾಡುವಂತೆ ಕೌನ್ಸಿಲರುಗಳಾಗಬೇಕೆಂದಿರುವವರು ಈಗಾಗಲೇ ಓಟುಕೊಡತಕ್ಕವರುಗಳನ್ನು ಪರಮಮಿತ್ರರಂತೆ ಅನುಸರಿಸಲುಪಕ್ರಮಿಸಿರುತ್ತಾರೆ. ಆದರೆ, ಹಿಂದುಳಿದ ಜನವರ್ಗದವರ ವಿಜ್ಞಾಪನ ಪತ್ರಿಕೆಗೆ ಉತ್ತರವನ್ನು ದಯಪಾಲಿಸುವಾಗ್ಗೆ "ನಿಮ್ಮಿಷ್ಟ ಬಂದವರಿಗೆ ನೀವು ಓಟುಗಳನ್ನು ಕೊಟ್ಟು ನಿಮಗೋಸ್ಕರ ಸರಿಯಾಗಿ ಕೆಲಸಮಾಡತಕ್ಕವರನ್ನು ನಿಮ್ಮ ಪ್ರತಿನಿಧಿಗಳನ್ನಾಗಿ ನೀವು ಸ್ವಾತಂತ್ರ್ಯದಿಂದ ಆರಿಸಿಕೊಂಡು ನಿಮ್ಮ ಎಲ್ಲ ಜನವರ್ಗಗಳಿಗೂ ಮ್ಯುನಿಸಿಪಲ್ ಕೌನ್ಸಿಲ್ ಮೊದಲಾದವುಗಳಲ್ಲಿ ಪ್ರಾತಿನಿಧ್ಯವಿರುವಂತೆ ಮಾಡಿಕೊಳ್ಳುವಲ್ಲಿ ಅಭ್ಯಂತರವಿಲ್ಲವು." ಎಂದು ಶ್ರೀಮನ್ಮಹಾರಾಜರವರು ಹೇಳಿ ತಂತಮ್ಮ ಪ್ರಾತಿನಿಧ್ಯವನ್ನು ಕಾಪಾಡಿಕೊಳ್ಳುವ ಭಾರವನ್ನು ಪ್ರಜೆಗಳಿಗೇ ವಹಿಸಿಕೊಟ್ಟಿರುತ್ತಾರಾದುದರಿಂದ, ಅದನ್ನು ಸದುಪಯೋಗಮಾಡಿಕೊಂಡು ಸಾರ್ಥಕಪಡಿಸಿಕೊಳ್ಳುವ ಕೆಲಸವು ಪ್ರಜೆಗಳದೇ ಆಗಿರುತ್ತದೆಂಬುದನ್ನು ಈ ಸಮಯದಲ್ಲಿ ಓಟನ್ನು ಕೊಡತಕ್ಕವರು ತಮ್ಮ ಸ್ಮೃತಿಪಥಕ್ಕೆ ತಂದುಕೊಂಡು ಬಹಳ ಎಚ್ಚರಿಕೆಯಿಂದ ವರ್ತಿಸುವುದು ಪರಮಾವಶ್ಯಕ.

ಈ ಮ್ಯುನಿಸಿಪಲ್ ಕೌನ್ಸಿಲ್ಲು ಪುರಜನರ ಪ್ರತಿನಿಧಿಯಾದುದರಿಂದ, ಇದಕ್ಕೆ ಒಂದು ಜಾತಿ, ಒಂದು ಕುಲ, ಒಂದು ಮತ ಎಂಬ ನಿರ್ದೇಶವೇನೂ ಇರುವುದಿಲ್ಲ. ಊರು ಸರ್ವಸಾಮಾನ್ಯವಾಗಿರುವಂತೆ ಈ ಕೌನ್ಸಿಲೂ ಸರ್ವಸಾಮಾನ್ಯವಾಗಿಯೇ ಇರಬೇಕು. ಇದರ ಕಾರ್ಯಗಳು ನಿಷ್ಪಕ್ಷಪಾತವಾಗಿಯೂ, ಸರ್ವಸಾಮಾನ್ಯವಾಗಿಯೂ ನಡೆಯುವಂತಿರಬೇಕು. ನಮ್ಮ ಪ್ರಭುತ್ವದವರು ಈ ಕೌನ್ಸಿಲುಗಳ ಅಧಿಕಾರಪರಿಮಿತಿಯನ್ನು ಹೆಚ್ಚಿಸಿಕೊಟ್ಟಿರುತ್ತಾರಲ್ಲದೆ ಇವನ್ನು ಸಂಪೂರ್ಣಪ್ರಜಾಸ್ವಾತಂತ್ರ್ಯಕ್ಕೇ ವಹಿಸಿ ನಿರ್ವಾಹಗೊಳ್ಳುವಂತೆ ಏರ್ಪಡಿಸಿರುತ್ತಾರೆ. ಇಷ್ಟು ವ್ಯಾಪಕತೆಯೂ, ಸಾಮರ್ಥ್ಯವೂ ಅನುಗ್ರಹಿಸಲ್ಪಟ್ಟಿರುವ ಈ ಕೌನ್ಸಿಲುಗಳು ಸರ್ವಪ್ರಜಾಪ್ರಾತಿನಿಧ್ಯವುಳ್ಳವುಗಳಾಗದಿದ್ದರೆ ಅವುಗಳ ಕಾರ್ಯಭಾಗವು ಸರ್ವಹಿತಕರವಾಗಿ ನಡೆಯಲು ಅವಕಾಶವಿರಲಾರದು. ಬಾಯ್ಮಾತಿನಲ್ಲಿ ಘನವೈರಾಗ್ಯವನ್ನು ತೋರಿಸುವ ಕಪಟಬ್ರಹ್ಮರೇ ಹೆಚ್ಚಿರುವ ಈ ಕಾಲದಲ್ಲಿ ಕುಲ ಜಾತಿ ಮತಾಭಿಮಾನವು ಬಹುಪಕ್ಷಪಾತಕ್ಕೂ ಅನರ್ಥಕ್ಕೂ ಅವಕಾಶವನ್ನುಂಟುಮಾಡುತ್ತಿರುವುದು ಅನುಭವದ ಮಾತಾಗಿದೆ. ಅದಕ್ಕವಕಾಶವಿಲ್ಲದಂತೆ ಸರ್ವರಿಗೂ ಒಂದೇ ಸಮನಾದ ನ್ಯಾಯವೂ, ನಿಷ್ಪಕ್ಷಪಾತಾಚರಣೆಯೂ ಸ್ಥಳೀಯಸರ್ಕಾರಗಳಿಂದ ಆಗಬೇಕಾಗಿದ್ದರೆ, ಬೇರೆ ಬೇರೆ ಜನವರ್ಗಗಳ ಪ್ರತಿನಿಧಿಗಳು ಅವುಗಳಲ್ಲಿದ್ದೇ ತೀರಬೇಕು. ಹಾಗಿಲ್ಲದಿರುವ ಕೌನ್ಸಿಲು ಮೊದಲಾಗಿ ಸ್ಥಳೀಯಸರ್ಕಾರಗಳಲ್ಲಿ ಎಷ್ಟೋ ಪಕ್ಷಪಾತವೂ, ಪ್ರಜಾಪೀಡೆಯೂ ಉಂಟಾಗಿರುವುದೆಂಬುದನ್ನು ಈ ವರೆಗೆ ಅನೇಕರು ಸ್ವಾನುಭವದ ಮೂಲಕ ಕಂಡುಕೊಂಡಿದ್ದಾರೆ. ಅಂತಹ ಅನರ್ಥವುಂಟಾಗದಂತೆ ಮಾಡುವುದಕ್ಕೆ ತಮ್ಮಗಳ ನಿಜವಾದ ಅಭಿಪ್ರಾಯವನ್ನನುಸರಿಸಿ ಕಾರ್ಯಮಾಡತಕ್ಕವರಾರೋ ಅಂತಹ ನಂಬುಗೆಗೂ, ವಿಶ್ವಾಸಕ್ಕೂ ಪಾತ್ರರಾದ ಜನರನ್ನೇ ತಮ್ಮ ಪ್ರತಿನಿಧಿಗಳನ್ನಾಗಿ ಆರಿಸುವುದಕ್ಕೆ ನಿರ್ದಾಕ್ಷಿಣ್ಯವಾಗಿ ಸಂಕಲ್ಪಿಸಿಕೊಂಡು ಅಂತಹವರಿಗೇನೆ ಓಟನ್ನು ಕೊಡುವುದೇ ಮುಖ್ಯೋಪಾಯವಾಗಿರುತ್ತದೆ. ಇತರರು ಮನೆಬಾಗಿಲಿಗೆ ಬಂದು ಕೈಮುಗಿದು ಮರ್ಯಾದಿಸಿದ ಮಾತ್ರದಿಂದಲೇ ತಾವು ಕೃತಾರ್ಥರಾದೆವೆಂದು ತಿಳಿದು, ಅಂತಹವರ ಬಾಹ್ಯೋಪಚಾರ ಮಾತುಗಳಿಗೆ ಮರುಳಾಗಿ ದೂರದೃಷ್ಟಿಯಿಲ್ಲದೆ, ಸ್ವಾರ್ಥೈಕಪರರೂ, ಆತ್ಮಪ್ರತಿಷ್ಠಾಕಾಮಿಗಳೂ ಆದ ಜನರಿಗೆ ದಾಕ್ಷಿಣ್ಯದಿಂದ ಓಟುಗಳನ್ನು ಕೊಟ್ಟುಬಿಟ್ಟರೆ, ತಮ್ಮ ಕೈ ಹಗ್ಗವನ್ನು ಅವರ ಕೈಗೆಕೊಟ್ಟು ತಾವೇ ಕಟ್ಟಿಹಾಕಿಸಿಕೊಂಡು ಪಶ್ಚಾತ್ತಾಪಪಡಬೇಕಾಗಿ ಬರುವುದು. ಅದುಕಾರಣ ಓಟನ್ನು ಕೊಡತಕ್ಕ ಜನರೆಲ್ಲರೂ ಇದನ್ನು ಅತ್ಯವಶ್ಯವಾಗಿ ಗಮನಿಸಬೇಕೆಂದು ಸೂಚಿಸುತ್ತೇವೆ. ಅಲ್ಲದೆ ಸರ್ಕಾರದ ಘನೋದ್ದೇಶವನ್ನೂ, ಶ್ರೇಷ್ಠವಾದ ಪೌರಕಾರ್ಯವನ್ನೂ ನೆರವೇರಿಸಲು ಶಕ್ತಿಯುಳ್ಳ, ಬೇರೆ ಬೇರೆ ಜನವರ್ಗಗಳ ಮುಂದಾಳುಗಳು ಕೌನ್ಸಿಲರಾಗಲು ಉಮೇದುವಾರರಾಗಿ ನಿಂತುಕೊಳ್ಳುವುದೂ, ಅಂತಹವರನ್ನು ಇತರರು ಪ್ರೋತ್ಸಾಹಿಸಿ ನಿಲ್ಲಿಸುವುದೂ ಅವಶ್ಯವಾಗಿರುತ್ತವೆ. ಅಂತಹವರು ಸೋಂಬೇರಿತನದಿಂದಲೋ, ಔದಾಸೀನ್ಯದಿಂದಲೋ, ಬಾಯಿಬಡುಕರ ಪಟಾಟೋಪಕ್ಕೂ ಗುಡ್ಡುಬೆದರಿಕೆಗೂ ಹೆದರಿಯೋ ಹಿಂಜರಿಯುವುವಾದರೆ ಸ್ವಾರ್ಥೈಕಸಾಧಕರೂ, ಪ್ರತಿಷ್ಠಾಕಾಮಿಗಳೂ, ಆಸನಾಲಂಕಾರಪ್ರಾಯರೂ, ಅಶಕ್ತರೂ ಆದವರು ಕೌನ್ಸಿಲಿನಲ್ಲಿ ಹೆಚ್ಚಿ ಕಾರ್ಯಲೋಪ ನ್ಯಾಯಲೋಪಗಳಿಗೂ, ಪಕ್ಷಪಾತಗಳಿಗೂ ಅವಕಾಶವಾಗುವುದು. ಆದುದರಿಂದ ಓಟರುಮಹಾಶಯರು ಮೇಲೆ ವಿವರಿಸಿರುವ ನಮ್ಮ ಶ್ರೀಮನ್ಮಹಾಪ್ರಭುವರ್ಯರ ಹಿತೋಪದೇಶವನ್ನು ಗಮನಿಸಿಯೂ, ಈವರೆಗಣ ಸ್ವಾನುಭವವನ್ನು ಪರ್ಯಾಲೋಚಿಸಿಯೂ ತಮ್ಮ ಸ್ಥಳಿಕಸರ್ಕಾರದ ಕಾರ್ಯಗಳು ನ್ಯಾಯಸಮ್ಮತವಾಗಿಯೂ, ನಿಷ್ಪಕ್ಷಪಾತವಾಗಿಯೂ, ಸರ್ವಜನಹಿತಕರವಾಗಿಯೂ ನಡೆಯುವಂತೆ ಮಾಡುವುದಕ್ಕಾಗಿಯೂ ಎಲ್ಲಕ್ಕೂ ತಳಹದಿಯಾಗಿರುವ ಮ್ಯುನಿಸಿಪಲ್ ಕೌನ್ಸಿಲಿನ ನಿರ್ಮಾಣವನ್ನು ಸರ್ವಜನಾಂಗಪ್ರತಿನಿಧಿತ್ವದಿಂದ ಕೂಡಿ ಸಮರ್ಥವಾಗಿಯೂ, ಪರಿಪುಷ್ಟವಾಗಿಯೂ ಇರುವಂತೆ ಮಾಡುವಲ್ಲಿ ಬಹಳ ಜಾಗರೂಕರಾಗಿರಬೇಕೆಂದು ಒತ್ತಿಹೇಳುತ್ತೇವೆ.

ಪ್ರವಾಹದ ಅನಾಹುತವೂ, ವಿಪನ್ನರ ಸಹಾಯವೂ.

ಮೈಸೂರು ಸೀಮೆಯ ಮೈಸೂರು, ಶಿವಮೊಗ್ಗ, ಕಡೂರು, ಚಿತ್ರದುರ್ಗ ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿ ಹರಿಯುವ ಕಾವೇರಿ, ಕಪಿಲಾ, ಹೇಮಾವತಿ, ತುಂಗಭದ್ರ ಮೊದಲಾದ ನದಿಗಳಲ್ಲೂ; ಮದ್ರಾಸಾಧಿಪತ್ಯದ ತಿರುಚಿನಾಪಲ್ಲಿ, ಸೇಲಂ, ಕೊಯಮತ್ತೂರು, ಈರೋಡು, ಮಧುರೆ, ತಂಜಾವೂರು, ನೀಲ್ಗಿರಿ ಮತ್ತು ದಕ್ಷಿಣಕಾನಡ ಡಿಸ್ಟ್ರಿಕ್ಟುಗಳಲ್ಲೂ; ಕೊಡಗಿನಲ್ಲೂ; ತಿರುವಾಂಕೂರು ಮತ್ತು ಕೊಚಿನ್ ಸಂಸ್ಥಾನಗಳಲ್ಲೂ ಪ್ರವಹಿಸುತ್ತಿರುವ ಕಾವೇರಿ, ಕೊಲರೂನು, ವೇಗೇಯಿ ಮೊದಲಾದ ನದಿಗಳಲ್ಲೂ ಅಭೂತಪೂರ್ವವಾದ ಪ್ರವಾಹವು ಬಂದು ನೂರಾರು ಪುರಗ್ರಾಮಾದಿಗಳು ಜಲಮಯವಾಗಿ ಅನೇಕ ಜನರ ಪ್ರಾಣಹಾನಿಯೂ, ಪಶುಗಳ ನಾಶವೂ, ಬೆಳೆಗಳ ಧಾನ್ಯಾದಿ ಸಾಮಗ್ರಿಗಳ ವಿಪರೀತಹಾನಿಯೂ ಆಗಿರುವುವೆಂದು ಬಂದಿರುವ ವರ್ತಮಾನವನ್ನು ನಾವು ಒಂದೆರಡು ವಾರಗಳಿಂದಲೂ ಪ್ರಕಟಿಸುತ್ತ ಬಂದಿರುವೆವಷ್ಟೆ? ಮೈಸೂರು ಕೃಷ್ಣರಾಜಸಾಗರಕಟ್ಟೆಯಮೇಲೆ 18½ ಅಡಿಯಷ್ಟು ಅಂದರೆ ಭೂಮಟ್ಟದಮೇಲೆ 98½ ಅಡಿಯೆತ್ತರದಿಂದ ನೀರು ಬೀಳುತ್ತಿದ್ದಿತು. ಈ ಜಲಾಶಯದಲ್ಲಿ 98½ ಅಡಿ ನೀರು ತುಂಬಿ ಹರಿಯುತ್ತಿದ್ದುದರಿಂದ ಕಟ್ಟೆ ಎಲ್ಲಿ ಒಡೆದುಹೋಗುವುದೋ ಎಂದು ಇಂಜನಿಯರುಗಳು ಸಹ ಭೀತರಾಗಿದ್ದರು. ಆದರೆ ದೈವಾಧೀನದಿಂದ ಯಾವ ಅಪಾಯವೂ ಸಂಭವಿಸಲಿಲ್ಲ. ಪ್ರವಾಹದ ವೇಗದಿಂದ ಕೆಲನಾಲೆಗಳೂ, ಸೇತುಗಳೂ ಕಿತ್ತುಹೋದುವು, ಮತ್ತು ಅನೇಕ ಊರುಗ್ರಾಮಗಳು ನೀರಿನಲ್ಲಿ ತೇಲಾಡಿದುವು. ಜನರ ಮತ್ತು ಬಂಡಿಗಳ ತಿರುಗಾಟಕ್ಕೆ ವಿಘ್ನವಾಯಿತು. ತಂತಿಯ ವಾರ್ತೆಕಂಭಗಳು ಕಿತ್ತುರುಳಿದುವು. ರೈಲ್ವೆಕಂಬಿಗಳು ಕೊಚ್ಚಿಕೊಂಡುಹೋದುವು. ಅತಿರಭಸವಾಗಿ ನುಗ್ಗುತ್ತಿದ್ದ ಪ್ರವಾಹಗಳ ಏಟಿಗೆ ಸಾವಿರಾರು ಮನೆಗಳು ತಡೆಯಲಾರದೆ ಕುಸಿದುಬಿದ್ದುವು. ದನಕರು, ಎಮ್ಮೆ, ಕುರಿ, ಕೋಳಿ ಮೊದಲಾದ ಪ್ರಾಣಿಗಳೂ ಇತರ ವಸ್ತುಗಳೂ ಅಪರಿಮಿತವಾಗಿ ನೀರಿನಲ್ಲಿ ಕೊಚ್ಚಿಹೋಗುತ್ತಿದ್ದುವು. ಲಕ್ಷಾಂತರ ಜನರು ನಿರ್ಗತಿಕರಾಗಿ ನಿಂತಿರುತ್ತಾರೆ. ನಿಲ್ಲುವುದಕ್ಕೆ ಆಶ್ರಯವೂ, ಹೊದಿಯುವುದಕ್ಕೆ ಬಟ್ಟೆಯೂ, ತಿನ್ನುವುದಕ್ಕೆ ಆಹಾರವೂ ಇಲ್ಲದೆ ಉಪವಾಸವಿದ್ದು ಜನರು ಬಹಳ ಸಂಕಟಪಡುತ್ತಿರುವುದನ್ನು ನೋಡಿ-ಕೇಳಿ ಧರ್ಮಾತ್ಮರೂ, ದಯಾಳುಗಳೂ ಆದ ಮಹಾಜನರನೇಕರು ಮರುಗಿ ವಿಪನ್ನರ ಸಹಾಯಾರ್ಥವಾಗಿ ಫಂಡುಗಳನ್ನು ಕೂಡಿಸಿ ಸಹಾಯಮಾಡುತ್ತಿರುವರು. ಈಗಲೂ ಒಂದುಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸುವುದೇ ಪ್ರಯಾಸವಾಗಿದೆ. ಎಲ್ಲೆಲ್ಲೂ ನೀರೂ ಕೆಸರೂ ತುಂಬಿಕೊಂಡಿವೆ. ಈ ಅವಾಂತರಗಳ ಜತೆಗೆ ಕೆಲವೆಡೆಯಲ್ಲಿ ವಾಂತಿಭೇದಿರೋಗವೂ ಶೀತಜ್ವರವೂ ಪ್ರಾಪ್ತವಾಗಿರುವುವೆಂದು ಕೇಳುತ್ತೇವೆ. ಕುಯಿಲಿಗೆ ಬಂದಿದ್ದ ಮತ್ತು ನಾಟಿಹಾಕಲ್ಪಟ್ಟಿದ್ದ ಪೈರುಗಳೆಲ್ಲವೂ ಕೊಚ್ಚಿಹೋದುವು. ಶೇಖರಿಸಲ್ಪಟ್ಟಿದ್ದ ಧಾನ್ಯಗಳೂ ಹಾಳಾದುವು. ಈ ಕಾರಣಗಳಿಂದ ಮೇಲ್ಕಂಡ ಡಿಸ್ಟ್ರಿಕ್ಟುಗಳ ಪ್ರಜೆಗಳು ಮುಂದೆ ಕ್ಷಾಮಬಾಧೆಗೆ ಗುರಿಯಾಗುವ ಹೊತ್ತು ಬಂದಿರುತ್ತದೆ. ಎಷ್ಟೋ ಕಡೆಗಳಲ್ಲಿ ಹೊರಗಣಿಂದ ಆಹಾರಪದಾರ್ಥಗಳು ಬರಲಿಕ್ಕವಕಾಶವಿಲ್ಲದಿದ್ದುದರಮೇಲೆ ಸೀಮೆಯಣ್ಣೆ, ಅಕ್ಕಿ, ರಾಗಿ ಮೊದಲಾಗಿ ನಿತ್ಯೋಪಯುಕ್ತಪದಾರ್ಥಗಳು 1ಕ್ಕೆ 4ರಷ್ಟು ಬೆಲೆಗೆ ಮಾರಲ್ಪಡುತ್ತಿದ್ದುವು. ವಿಪನ್ನರ ರಕ್ಷಣಾರ್ಥವಾಗಿ ಸರ್ಕಾರದವರು ಆಪತ್ಕಾಲದ ಕೂಲಿಕೆಲಸಗಳನ್ನು ಆರಂಭಿಸುವುದು ತಕಾವಿಸಾಲ ಕೊಡುವುದು, ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮರಮುಟ್ಟುಗಳನ್ನು ಉಚಿತವಾಗಿ ಒದಗಿಸುವುದು ಇತ್ಯಾದಿ ಏರ್ಪಾಟುಗಳನ್ನು ಮಾಡುತ್ತಿದ್ದಾರೆ, ಮತ್ತು ಪ್ರಜಾಪ್ರಮುಖರು ಧನರಾಶಿಯನ್ನು ಕೂಡಿಸುತ್ತಿದ್ದಾರೆ. ಮದ್ರಾಸಿನ ಮ್ಯುನಿಸಿಪಾಲಿಟಿಯವರು ತಮ್ಮಾಧಿಪತ್ಯದ ವಿಪನ್ನರ ಸಹಾಯದ ಧನರಾಶಿಗೆ 10,000 ರೂ. ಗಳನ್ನು ಕೊಟ್ಟಿರುತ್ತಾರೆ, ಅಲ್ಲದೆ ಅನೇಕ ಧರ್ಮಾತ್ಮರು ಯಥೋಚಿತವಾಗಿ ಧನಸಹಾಯ ಮಾಡುತ್ತಿದ್ದಾರೆ. ಅದರಂತೆ ಅನಾಹುತ ನಡೆದಿರುವ ಡಿಸ್ಟ್ರಿಕ್ಟುಗಳ ಡೆ|| ಕಮಿಷನರು ತಂತಮ್ಮ ಡಿ|| ಗಳಲ್ಲಿ ಪ್ರಜೆಗಳಿಂದ ಚಂದಾ ದ್ರವ್ಯವನ್ನು ಕೂಡಿಸಲು ತಕ್ಕ ಪ್ರಯತ್ನ ಮಾಡಬೇಕಾಗಿ ನಮ್ಮ ಸರ್ಕಾರದವರು ಸೂಚಿಸಿರುವರೆಂದು ಕೇಳುತ್ತೇವೆ. ನಮ್ಮ ಸೀಮೆಯಲ್ಲಿ ನದಿಗಳ ದಡದಲ್ಲಿರುವ ಊರು ಗ್ರಾಮಗಳಿಗೆ ಪ್ರವಾಹದಿಂದ ಈವೇಳೆ ಆಗಿರತಕ್ಕಂತಹ ಹಾನಿಯು ಹಿಂದೆ ಯಾವಾಗಲೂ ಆಗಿರಲಿಲ್ಲವೆಂದು ಹೇಳಬಹುದಾಗಿದೆ. ಅದುಕಾರಣ ನಮ್ಮ ಸೀಮೆಯ ಪ್ರತಿಯೊಂದುಕಡೆಯ ಜನರೂ ನೆರೆಯೂರು ಗ್ರಾಮಗಳ ವಿಪನ್ನರ ಸಹಾಯಾರ್ಥವಾಗಿ ಉದಾರವಾಗಿ ದ್ರವ್ಯಸಹಾಯಮಾಡಿ ತಮ್ಮ ಸೋದರಜನವಾತ್ಸಲ್ಯವನ್ನು ಪ್ರದರ್ಶಿಸಿ ಕೀರ್ತಿಗೂ ಪುಣ್ಯಕ್ಕೂ ಭಾಜನರಾಗದೆ ಇರಲಾರರೆಂದು ನಾವು ನಂಬುತ್ತೇವೆ. ಮತ್ತು ವಿಪನ್ನರ ಸಹಾಯಾರ್ಥವಾಗಿ ಧನರಾಶಿಯನ್ನು ಕೂಡಿಸಲು ರಾಜಧಾನಿಯಲ್ಲಿ ನೆನ್ನೆಯದಿನ ದಿವಾನರ ಅಧ್ಯಕ್ಷತೆಯಲ್ಲಿ ನಡಿಸಲ್ಪಡುವುದಾಗಿದ್ದ ಸಭೆಯಲ್ಲಿ ರಾಜಧಾನಿಯ ನಿವಾಸಿಗಳು ವಿಪನ್ನ ಭ್ರಾತೃವಾತ್ಸಲ್ಯದಮೇಲೆ ಯಥೋಚಿತವಾಗಿ ದ್ರವ್ಯಸಹಾಯ ಮಾಡಿ ತಮ್ಮೌದಾರ್ಯವನ್ನು ವ್ಯಕ್ತಗೊಳಿಸಿ ಇತರ ಕಡೆಯವರಿಗೆ ಮಾರ್ಗದರ್ಶಕರಾಗಿರುವರೆಂದು ನೆನಸುತ್ತೇವೆ.

ಸ್ವದೇಶದ ವೃತ್ತಾಂತಗಳು

ರಾಜಧಾನಿಯಲ್ಲಿ ನೆನ್ನೆಯ ದಿನ ಆಗಾಗ್ಗೆ ಮೋಡಕವಿದುಕೊಂಡು ತುಂತುರು ಮಳೆಯಾಗುತ್ತಿದ್ದಿತು.

ಮೈಸೂರು ಡಿ|| ಬೋರ್ಡು ವೈಸ್‌ಪ್ರೆಸಿಡೆಂಟರಾಗಿದ್ದ ಮ|| ಕೆ. ಕೃಷ್ಣಶಾಸ್ತ್ರಿಗಳು ಕಳೆದಸೋಮವಾರ ವಿಧಿವಶರಾದರೆಂದು ತಿಳುಹಲು ಬಹಳ ವ್ಯಸನವಾಗುತ್ತದೆ.

ಯಡತೊರೆ ಸಮೀಪದಲ್ಲಿ ಒಂದು ಬಂಡಿಗೆ ಹೂಡಿದ್ದ ಎರಡು ಎತ್ತುಗಳು ಕಾವೇರಿನದಿಯ ಪ್ರವಾಹದಲ್ಲಿ ಕೊಚ್ಚಿಕೊಂಡು ಬರುತ್ತಿದ್ದುವೆಂದು ಅದನ್ನು ಕಣ್ಣಾರನೋಡಿದವರೊಬ್ಬರು ತಿಳಿಸಿರುತ್ತಾರೆ.

ನಂಜನಗೂಡಿನಲ್ಲಿ ಪ್ರವಾಹದ ದೆಶೆಯಿಂದ 500 ಮನೆಗಳವರೆಗೂ ಬಿಡಲ್ಪಟ್ಟಿದ್ದುವೆಂದೂ, 150 ಮನೆಗಳಮೇಲೆಯೇ ಬಿದ್ದುಹೋಗಿರುವುವೆಂದೂ, ಅರಮನೆಯ ಹಿಂಭಾಗದ ಗೋಡೆಯು ಸಹ ಬಿದ್ದುಹೋಗಿರುವುದೆಂದೂ, ಈ ಅನಾಹುತದದೆಶೆಯಿಂದ ಬಹಳ ನಷ್ಟಕಷ್ಟಗಳಿಗೆ ಗುರಿಯಾಗಿರುವ ನೂರಾರು ಬಡಕುಟುಂಬಗಳ ಗೋಳನ್ನು ಹೇಳಲಸಾಧ್ಯವಾಗಿರುವ ಪ್ರಯುಕ್ತ ದಯಾಳುಸರ್ಕಾರದವರು ಅವರುಗಳಿಗೆ ತಕ್ಕ ಸಹಾಯವನ್ನು ಮಾಡಿ ಅವರ ದುಃಖಶಮನಮಾಡುವುದು ಅತ್ಯವಶರವಾಗಿದೆಯೆಂದೂ ಆ ಸ್ಥಳದ ಚಂದಾದಾರರೊಬ್ಬರು ಬರೆದಿರುತ್ತಾರೆ.

ರಾಜಧಾನಿಯ ಕೆಲ ವಿದ್ಯಾರ್ಥಿಗಳು ಕೈ|| ತಿಲಕರ ಸ್ಮಾರಕದ ದಿನವಾದ ಮೊನ್ನೆಯದಿನ ತಿಲಕರ ಮತ್ತು ಮಹಾತ್ಮ ಗಾಂಧಿಯವರ ಚಿತ್ರಪಟಗಳನ್ನು ಹಿಡಿದುಕೊಂಡು ಕೆಲಪಾಠಶಾಲೆಗಳಲ್ಲಿದ್ದ ಹುಡುಗರನ್ನು ಕೂಗಿಕರೆದು ಜತೆಗೆ ಸೇರಿಸಿಕೊಂಡು ವೆಸ್ಲಿಯನ್ ಮಿಷನ್ ಹೈಸ್ಕೂಲಿನಬಳಿ ಬಂದು ಅಲ್ಲಿಯ ಹುಡುಗರನ್ನು ಕರೆಯುತ್ತಿದ್ದುದರಮೇಲೆ, ಪ್ರಿನ್ಸಿಪಾಲರಾದ ರೆವರೆಂಡ್ ಬ್ರಂಟ್‌ರವರು ತಮ್ಮ ವಿದ್ಯಾರ್ಥಿಗಳು ಹೊರಗೆ ಹೋಗಲು ಅವಕಾಶಕೊಡದೆ ಹೊರಗೆ ಕೂಗಿಕೊಳ್ಳುತ್ತಿದ್ದವರಿಗೆ ವಿವೇಕವನ್ನು ಹೇಳಲು ಪ್ರಯತ್ನಿಸಿದಾಗ ಯಾರೋ ದುಷ್ಟರು ಕಲ್ಲನ್ನು ಅವರ ಮುಖದಮೇಲೆ ಬಿಸಾಡಿದ್ದರಿಂದ ಅವರ ಕನ್ನಡಕವು ಒಡೆದುಹೋಯಿತೆಂದು ಕೇಳುತ್ತೇವೆ.

ನಂಜನಗೂಡು ತಾಲ್ಲೂಕಿನಲ್ಲಿ ಹೊಳೆದಡದಲ್ಲಿರುವ ತೊರ್ಯಾವು, ಹುಳ್ಳಾವು, ಹೆಜ್ಜಿಗೆ, ಚಿಕ್ಕಹಳ್ಳಿ, ಮೋಳೆ ಮೊದಲಾದ ಹಳ್ಳಿಗಳು ಪ್ರವಾಹದಲ್ಲಿ ಸಂಪೂರ್ಣವಾಗಿ ನಾಶವಾಗಿ ಅನೇಕ ದನಕರು ಕುರಿ ಕೋಳಿ ಮೊದಲಾಗಿ ಪ್ರಾಣಿಗಳು ಮತ್ತು ದವಸಧಾನ್ಯಗಳು ವಿಶೇಷನಷ್ಟವಾಗಿರುವುದಾಗಿಯೂ ಸುತ್ತೂರಿನಬಳಿ ಅಂಬಿಗರು ಕೆಲ ಜನರನ್ನು ದೋಣಿಯಲ್ಲಿ ಕುಳ್ಳಿರಿಸಿಕೊಂಡು ಒಂದು ದಡದಿಂದ ಇನ್ನೊಂದುದಡಕ್ಕೆ ಬರುತ್ತಿರುವಾಗ್ಗೆ ನೀರಿನಸೆಳತಕ್ಕೆ ದೋಣಿಯು ಕೊಚ್ಚಿಕೊಂಡುಹೋಗಿ ಒಂದು ಮರಕ್ಕೆ ತಗುಲಿ ಮಗುಚಿಕೊಂಡು ಒಳಗೆ ಕುಳಿತಿದ್ದವರು ಮರದರಂಬೆಗಳನ್ನು ಹಿಡಿದುಕೊಂಡು ದಡವನ್ನು ಸೇರಿದರು, ಮತ್ತು ಒಬ್ಬಿಬ್ಬರು ಜಲಸಮಾಧಿಯನ್ನು ಹೊಂದಿದರು ಎಂಬುದಾಗಿಯೂ ಆಸ್ಥಳದವರೊಬ್ಬರು ತಿಳಿಸುತ್ತಾರೆ.

ಶ್ರೀರಂಗಪಟ್ಟಣಕ್ಕೆ ದಯಮಾಡಿಸಿರುವ ಇಂದೂರು ಸಂಸ್ಥಾನದ ಸಂಸ್ಕೃತ ಮಹಾಪಾಠಶಾಲೆಯ ಸೀನಿಯರ್ ಪ್ರೊಫೆಸರರೂ, ವೇದತೀರ್ಥ ಧರ್ಮಭೂಷಣ, ವಿದ್ಯಾನಿಧಿ ಮೊದಲಾಗಿ ಬಿರುದಾಂಕಿತರೂ ಆದ ರಾಣಿಬನ್ನೂರು ತಾ|| ಚೌಡಯ್ಯದಾನಪುರದ ಪಂಡಿತ ಬ್ರ|| ಶ್ರೀ|| ಸ್ವಾಮಿ ವಿರೂಪಾಕ್ಷ ಒಡೆಯರವರು ಕಳೆದಬುಧವಾರ ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ರಾಜಧಾನಿಗೆ ದಯಮಾಡಿಸಿ ಅರಮನೆಗೆ ಸೇರಿದ ರಾಮಮಂದಿರದಲ್ಲಿಳಿದುಕೊಂಡಿದ್ದು ಆ ದಿವಸ ಮಧ್ಯಾಹ್ನ 3 ರಿಂದ 4½ ಗಂಟೆಯವರೆಗೂ ಮಾರನೆಯದಿನ ಮಧ್ಯಾಹ್ನವೂ ಅರಮನೆಯ ಕರೀಕಲ್ಲುತೊಟ್ಟಿಯಲ್ಲಿ ಶ್ರೀಮನ್ಮಹಾರಾಜರವರ ದರ್ಶನಕ್ಕೆ ಪಾತ್ರರಾಗಿ ಶಿವಾದ್ವೈತಸಿದ್ಧಾಂತದಮೇಲೆ ಭಾಷಣಮಾಡಿದರೆಂದೂ, ಮಹಾಪ್ರಭುಗಳು ವೇ|| ಒಡೆಯರವರ ಪಾಂಡಿತ್ಯಕ್ಕೆ ಸಂತುಷ್ಟರಾಗಿ ಶಾಲುಜತೆಗಳಿಂದ ಮರ್ಯಾದಿಸಿದರೆಂದೂ ತಿಳುಹಲು ಸಂತೋಷವಾಗುತ್ತದೆ. ಪಂಡಿತರ ಸಂಚಾರಕ್ಕೆ ಸರ್ಕಾರಿಯ ಜೋಡಿ ಕುದುರೆಯಬಂಡಿಯೂ ಕೊಡಲ್ಪಟ್ಟಿದ್ದಿತು.

ಕಾವೇರಿ ಕಪಿಲಾ ಮತ್ತು ಇತರ ನದಿಗಳ ಪ್ರವಾಹದಿಂದುಂಟಾಗಿರುವ ಅನರ್ಥವನ್ನು ಪ್ರತ್ಯಕ್ಷವಾಗಿ ಪರಾಂಬರಿಸಿಕೊಂಡು ಬರುವುದಕ್ಕಾಗಿ ಸಂಚಾರ ಹೊರಟಿರುವ ದಿವಾನರು ಶಿವನಸಮುದ್ರದ ವೈದ್ಯುತಾಲಯ ಸ್ಥಿತಿಯನ್ನು ನೋಡಿಕೊಂಡು ಕಳೆದ ತಾ|| 31ರ ಸಾಯಂಕಾಲದ ರೈಲಿನಲ್ಲಿ ರಾಜಧಾನಿಗೆ ಬಂದರು. ಇವರು ಒಂದು ವಾರದವರೆಗೆ ಹುಣಸೂರು, ಹೆಗ್ಗಡದೇವನಕೋಟೆ, ತಿರುಮಕೂಡ್ಲುನರಸೀಪುರ, ಶ್ರೀರಂಗಪಟ್ಟಣ, ಯಡತೊರೆ ಮತ್ತು ಕಷ್ಟಸಂಭವಿಸಿರುವ ಇತರ ತಾಲ್ಲೂಕುಗಳಿಗೆ ಹೋಗುವವರಾಗಿರುವರಲ್ಲದೆ ಹಾಸನಕ್ಕೂ, ಸಾಧ್ಯವಾದಲ್ಲಿ ಶಿವಮೊಗ್ಗೆಗೂ ಹೋಗಿಬರುವರಾಗಿರುತ್ತಾರೆ. ಒಂದನೆಯ ಕೌನ್ಸಿಲರೂ ಕಳೆದಗುರುವಾರ ರಾಜಧಾನಿಗೆ ಬಂದು ಯಡತೊರೆ, ಹುಣಸೂರು, ನಂಜನಗೂಡುಗಳನ್ನು ನೋಡಿಕೊಂಡು ಬಂದರು, ಮತ್ತು ಇತರ ಕಡೆಯಲ್ಲೂ ಸಂಚರಿಸಿಕೊಂಡು ಬರುವವರಾಗಿರುವರು. ಎರಡನೆಯ ಕೌನ್ಸಿಲರೂ ಶಿವಮೊಗ್ಗ ಪ್ರಾಂತ ಹೊರಟಿರುವರಾಗಿ ಕೇಳುತ್ತೇವೆ. ಈ ಅಧಿಕಾರಿಗಳು ಪ್ರವಾಹದದೆಶೆಯಿಂದಾಗಿರತಕ್ಕ ಅನರ್ಥಗಳನ್ನೂ, ವಿಪನ್ನರನ್ನೂ ಪತ್ರವ್ಯವಹಾರದ್ವಾರ ತಿಳಿಯುವುದಕ್ಕಿಂತ [illegible] ತಿಳಿಯುವುದಕ್ಕಾಗಿ ಸಂಚಾರಹೊರಟಿರುವುದು ಸಂತೋಷ [illegible]; ಆದರೆ ಇದರಿಂದ ವಿಪನ್ನರಿಗೆ ತಕ್ಕ ಪ್ರಯೋಜನವಾದರೆ ಆ [illegible] ಮಾತ್ರ ಸಾರ್ಥಕವಾಗುವುದು.

FANNING HATRED.

Sir,

I request you to be so good as to publish the following in your valued and disinterested journal.

I have been one of those who usually do not pay much attention to the unbalanced and ill-thought-out outpourings of your contemporary, the *Sampadabhyudaya* against everything but Brahminical. But the recent contributions with regard to the Mysore City Municipal Council in that paper are such that should not be left unchallenged. It is probably because the Municipal elections are approaching that it has started, as usual on such occasions, a campaign of hatred and calumny against those classes which it does not represent. It has begun in right earnest with the issue of 25th July 1924 where the members of the Municipal Council who are mostly non-Brahmins have been attacked in a most irresponsible manner. If it was the only one one could have thought it was a stray outburst of a prejudiced mind. But since it has been followed by other and worse writings I think it is necessary to correct the wrong impression that such writings might create in the minds of its readers, however few they may be. Place would not permit me to give a detailed and correct version of what has taken place in the Council, but this much I can say that what it has stated with regard to the conduct of the Councillors it refers to is far from the truth. I fail to see where comes the question of compelling the President of the Municipal Council to resign. It is no wonder that the *Sampadabhyudaya* should champion the President's cause so valiantly. But unfortunately it is backing up the wrong party. What is the President for if he is to go continually in opposition to the House of which he is the President. One was not hearing of such a clash between the ex-President Mr. Srikanteswara Iyer and the Council which was the same then as now, though there used to be a good deal of fighting. The present President has to thank himself if he wants to go counter to the resolutions and wishes of the Council and get into awkward corners. As regards the compulsory retirement of the Daroga and the replacing of the fountain in the Krishnaraja Mohalla for which the non-Brahmin Councillors are blamed, I may point out that persons like Mr. S. P. Rajgopalachari, Assistant Private Secretary to His Highness and Rev. Edwards were on the side of the Council and not of the President. Your contempor ary pays a poor compliment to Rev. Edwards when it says that he was *made* to move a resolution for the compulsory retirement of the Daroga, whereas he was only fulfilling a duty in the best interests of the City, the welfare of which he has so much at heart. I am shocked to see what amount of hate is lurking in the heart of your contemporary which speaks of 'Messrs. Basaviah & Co.' and those others on whom their 'mantles' have fallen as fanning "in season and out of season the flame of of communal jealousies" and further that 'anti Brahmins' in Mysore are worse than those of Bangalore. It has now declared war against the Mohammadans just because Mr. Mahammad Sait, who has no axe of his own to grind, is a Municipal Councillor and he is standing up for the rights of the ratepayers, and there chance to be a Mohammadan Chief Officer and an *elected* Vice-President in the person of Mr. T. S. Alli Khan whom your contemparary states as having been *made* a Vice-President in much the same way as the Chief Officer was. It is not even a few months since the present Chief Officer took up his office and yet so soon he is said to have formed a clique in the Council. The Mysore people are not strangers to cliques and caucuses and it is to rid the State of them that the late Mr. Basaviah took up his cudgels and was partly successful. And it is to efface such cliques completely and to make room for a freer atmosphere that his followers are still striving. One can quite well sympathise with your contemporary for making Herculian efforts to give as long a lease as possible to these cliques by fighting in ways as questionable as its cause is unrighteous. One can understand why the bogey of Mohammadans has been trotted out. The efforts to hit against the non-Brahmins as a whole did not prove so successful. I may assure our contemporary that at this stage when the masks from its face and from the faces of its ilk have fallen it cannot succeed with the policy of divide and rule as in days gone by. Just because there are two or three Mohammadans in the Council so much is made of them. What is it when compared to the Brahmin rule which is not confined to any particular department or place but is everywhere, and consider what justification there is for such a monopoly having regard to its population? Is it not shameful that at this phase of our national progress there should be in Mysore such an unholy campaign, and that, from the very quarter which is never tired of burning camphor before nationalism? It is the greatest disservice to the land. Little wonder then, that our country should be what it is with such scheming in the past. I am writing this with the hope that the people on their part may not be misguided by such mischievous propaganda and they will go on harmoniously working in the best interests of the State.

'UNITY'

ಪ್ರಸಿದ್ಧಪತ್ರಿಕೆ.
(Press Communique)

1924ನೇ ಜುಲೈ 23ನೇ ತಾರೀಖಿನ ಪ್ರಸಿದ್ಧಪತ್ರಿಕೆಯಲ್ಲಿ ಮೈಸೂರು, ಶಿವಮೊಗ್ಗಾ, ಹಾಸನ, ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಈಚೆಗೆ ಭಾರಿಮಳೆ ಮತ್ತು ಪ್ರವಾಹಗಳದೆಸೆಯಿಂದುಂಟಾದ ಕಷ್ಟನಷ್ಟಗಳನ್ನು ವಿವರಿಸಿದೆ. ಸರ್ಕಾರದವರಿಗೆ ಸ್ಥಳೀಯ ಆಫೀಸರುಗಳಿಂದ ಆಗಿಂದಾಗ್ಗೆ ತಲುಪಿದ ತಂತಿಯವರ್ತಮಾನಗಳು ಮತ್ತು ಸಂಕ್ಷೇಪಲೇಖನಗಳು ಇವುಗಳ ಆಧಾರದಮೇಲೆ ಆರೀತಿಯಾಗಿ ಸಂಗತಿಯನ್ನು ವಿವರಿಸಲಾಯಿತು. ಆದರೆ, ಆ ಮುಂದಿನ ವಿವರಗಳನ್ನು ತಪಸೀಲಾಗಿ ತಿಳಿಸುವ ಉದ್ದೇಶದಿಂದ ಒಟ್ಟುಗೂಡಿದ ರಿಪೋರ್ಟನ್ನು ಕಳುಹಿಸಬೇಕೆಂದು ಸ್ಥಳೀಯ ಆಫೀಸರುಗಳನ್ನು ಸರ್ಕಾರದವರು ಕೇಳಿದ್ದರಮೇಲೆ ಸದರಿ ರಿಪೋರ್ಟುಗಳು ತಲುಪಿದಂತೆಲ್ಲಾ ಕಷ್ಟವುಂಟಾದ ಡಿಸ್ಟ್ರಿಕ್ಟುಗಳ ಪೈಕಿ ಪ್ರತಿಯೊಂದರಲ್ಲಿಯೂ ಇರತಕ್ಕ ಸ್ಥಿತಿಯನ್ನು ಕುರಿತು ಒಂದು ಪ್ರಸಿದ್ಧಪತ್ರಿಕೆಯನ್ನು ಸರ್ಕಾರದವರು ಸಾದರಮಾಡುವವರಾಗಿರುತ್ತಾರೆ.

ಈ ಕೆಳಗೆ ನಮೂದಿಸಿರುವ ತಪಸೀಲುಗಳಿಂದ ಕಡೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿನ ಸ್ಥಿತಿಯು ವ್ಯಕ್ತವಾಗುತ್ತದೆ—

ಕಡೂರು ಡಿಸ್ಟ್ರಿಕ್ಟು.

ಈ ಡಿಸ್ಟ್ರಿಕ್ಟಿನಲ್ಲಿ ಮೂಡಗೆರೆ, ಕೊಪ್ಪ, ತರಿಕೆರೆ ಈ ತಾಲ್ಲೂಕುಗಳಲ್ಲಿಯೂ, ನರಸಿಂಹರಾಜಪುರದ ಸಬ್ ತಾಲ್ಲೂಕಿನಲ್ಲಿಯೂ, ಮತ್ತು ಶೃಂಗೇರಿ ಜಹಗೀರಿನಲ್ಲಿಯೂ ಪ್ರವಾಹಗಳಿಂದ ತೊಂದರೆಗಳುಂಟಾಗಿವೆ. ಈ ಪ್ರಾಂತ್ಯಗಳಲ್ಲಿ 6 ನೇ ತಾರೀಖಿನಿಂದ 16ನೇ ತಾರೀಖಿನವರೆಗೂ ಅವಿಚ್ಛಿನ್ನವಾಗಿ ಬಹು ಭಾರೀಮಳೆಯಾಯಿತು. 14 ನೇ ತಾರೀಖಿನ ದಿವಸ ಕೊಟಿಗೆಹಾರಿನಲ್ಲಿ ಸುಮಾರು 21 ಅಂಗುಲ ಮಳೆಯಾಯಿತು. ಹಳ್ಳಿಗಳಲ್ಲಿಯೂ, ನದಿಗಳಲ್ಲಿಯೂ ಪೂರ್ಣಪ್ರವಾಹ ಬಂದು ಮೊಹರಿಗಳೂ, ಸೇತುವೆಗಳೂ ಕೊಚ್ಚಿಕೊಂಡುಹೋದುವು. ಇತರ ವಿಧದಲ್ಲಿಯೂ ಬಹು ಭಾರೀ ನಷ್ಟವುಂಟಾಯಿತು. ಕಷ್ಟಪ್ರಾಪ್ತವಾದ ಸ್ಥಳಗಳಿಗೆ ಕೂಡಲೆ ಹೋಗಿ ಅಲ್ಲಿನ ವಾಸ್ತವಿಕ ಸ್ಥಿತಿಯನ್ನೂ ಕರಾರ್ವಾಕಾಗಿ ರಿಪೋರ್ಟುಮಾಡಬೇಕೆಂದು ದಿವಾನರವರು ಡೆಪ್ಯುಟಿಕಮೀಷನರವರಿಗೆ ಟೆಲಿಗ್ರಾಮು ಮೂಲಕ ಹುಕುಂಮಾಡಿದರು. ಅಲ್ಲದೆ ಕಷ್ಟಪರಿಹಾರಕ್ಕಾಗಿ ಮಾಡಬೇಕಾದ ಏರ್ಪಾಡುಗಳನ್ನೂ, ಕೂಡಲೇ ಮಾಡಬೇಕಾದ ದುರಸ್ತಿ ಕಾಮಗಾರಿಗಳನ್ನೂ ಸರ್ಕಾರದವರ ಮಂಜೂರಾತಿಯ ನಿರೀಕ್ಷಣೆಯಲ್ಲಿ ಮಾಡಿಸಬಹುದೆಂತ ಅವರಿಗೆ ಅಧಿಕಾರವನ್ನೂ ಕೊಟ್ಟರು.

ಡೆಪ್ಯುಟೀಕಮೀಷನರವರಿಂದ ತಲಪಿರುವ ರಿಪೋರ್ಟಿನಿಂದ ಮಳೆಯಿಂದಲೂ ಪ್ರವಾಹಗಳಿಂದಲೂ ಮುಖ್ಯವಾಗಿ ಈ ಮುಂದೆ ನಮೂದಿಸಿರುವ ರೀತಿಗಳಲ್ಲಿ ತೊಂದರೆಗಳುಂಟಾಗಿರುವಂತೆ ವ್ಯಕ್ತವಾಗುತ್ತದೆ:—

(1) ಸೇತುವೆಗಳು ಮೊಹರಿಗಳು ಮುರಿದುಹೋಗಿ, ಗುಡ್ಡಗಳು ಜಾರಿ, ರಸ್ತೆಗಳು ಕೊಚ್ಚಿಕೊಂಡುಹೋಗಿ ತಿರುಗಾಟಕ್ಕೆ (ಆಮದುರಫ್ತಿಗೆ) ಅಡಚಣೆಯುಂಟಾಗಿರುವುದು.

(2) ಸಾಗುವಳಿಯಾದ ಜಮೀನುಗಳಮೇಲೆ ನೀರುನುಗ್ಗಿ ಫಸಲು ನಷ್ಟವಾಗಿರುವುದು.

(3) ಕೆರೆಗಳು ಒಡೆದುಹೋಗಿರುವುದು.

ಕಾನುವಳ್ಳಿಯಲ್ಲಿ ಹರಿಹರಪುರ-ಆಗುಂಬೆರಸ್ತೆಯಲ್ಲಿ ಒಂದು ಸೇತುವೆಯನ್ನು ಕಟ್ಟುತ್ತಾ ಇದೆ. ಅಲ್ಲಿ ತಿರುಗಾಟದ ಅನುಕೂಲತೆಗಾಗಿ ಒಂದು ಹಂಗಾಮಿ ಸೇತುವೆಯನ್ನು ಕಟ್ಟಿತ್ತು. ಈ ಸೇತುವೆಯು ಕೊಚ್ಚಿಕೊಂಡುಹೋಗಿರುವಂತೆ ರಿಪೋರ್ಟಾಗಿದೆ. ಈ ಸೇತುವೆಯನ್ನು ದುರಸ್ತುಮಾಡುವುದಕ್ಕೂ ಅದರಿಂದ ಸ್ವಲ್ಪ-ಮೇಲುಭಾಗದಲ್ಲಿ ಕೊಚ್ಚಿಹೋಗಿರುವ ರಸ್ತೆಯನ್ನು ದುರಸ್ತುಮಾಡುವುದಕ್ಕೂ ತಕ್ಕ ಏರ್ಪಾಡನ್ನು ಮಾಡಿದೆ. ಈ ಎರಡು ಕಾಮಗಾರಿಗಳೂ ಈ ಮಾಹೆ 26ನೇ ತಾರೀಖಿನೊಳಗಾಗಿ ಮುಗಿದು ಪ್ರಯಾಣಕ್ಕೆ ಅನುಕೂಲವಾದೀತೆಂದು ನಿರೀಕ್ಷಿಸಿದೆ. ಹರಿಹರಪುರ-ಶೃಂಗೇರಿ ರಸ್ತೆಯಲ್ಲಿ ಕೆರೆಹಳ್ಳಿ ಸಮೀಪದಲ್ಲಿ ಒಂದು ಹಂಗಾಮಿಸೇತುವೆಯು ಮುರಿದುಹೋಗಿದೆ. ಇದನ್ನು ದುರಸ್ತುಮಾಡುವುದಕ್ಕೆ ತಕ್ಕ ಏರ್ಪಾಡನ್ನು ಮಾಡಲು ಇನ್ನೂ ಸಾಧ್ಯವಾಗಿಲ್ಲ. ಕೊಪ್ಪ-ಹರಿಹರಪುರ ರಸ್ತೆಯಲ್ಲಿದ್ದ ಒಂದು ಹಂಗಾಮಿಸೇತುವೆಯು ಮುರಿದುಹೋಗಿ ತಿರುಗಾಡುವುದಕ್ಕೆ ಅಪಾಯಕರವಾಗಿತ್ತು. ಇದನ್ನು ದುರಸ್ತುಮಾಡಲಾಗಿದೆ. ಈಗ ಅದು ಸಾಧಾರಣ ತಿರುಗಾಟಕ್ಕೆ ಯೋಗ್ಯವಾಗಿದೆ.

ಮೊಹರಿಗಳ ಪೈಕಿ ತರಿಕೆರೆ-ಮಂಗಳೂರು ರಸ್ತೆಯಲ್ಲಿ ತರಿಕೆರೆಯಿಂದ ಸ್ವಲ್ಪ ಆಚೆಗಿದ್ದ ಒಂದು ಮೊಹರಿಯು ಮುರಿದುಹೋಗಿತ್ತು. ಅದನ್ನು ದುರಸ್ತುಮಾಡಿಸಲಾಗಿದೆ. ಅದು ತಿರುಗಾಟಕ್ಕೆ ಅನುಕೂಲವಾಗಿದೆ. ಬಾಳೆಹೊನ್ನೂರು-ಕೊಪ್ಪ ರಸ್ತೆಯಲ್ಲಿರುವ ಮತ್ತೊಂದು ಮೊಹರಿಯು ಕೂಡ ಒಡೆದುಹೋಗಿದೆ. ಇದೂ ಅಲ್ಲದೆ ಇನ್ನೂ ಅನೇಕ ಚಿಕ್ಕಚಿಕ್ಕ ಮೊಹರಿಗಳು ಕೂಡ ಒಡೆದುಹೋಗಿವೆಯೆಂದು ವರದಿಯು ಬಂದಿದೆ. ಆದರೆ ಇದರಿಂದ ತಿರುಗಾಟಕ್ಕೆ ವಿಶೇಷ ತೊಂದರೆಯಾಗಿಲ್ಲವೆಂದೂ ಅವುಗಳ ಪೈಕಿ ಅನೇಕ ಮೊಹರಿಗಳನ್ನು ದುರಸ್ತುಮಾಡಿಸಿಯೂ ದುರಸ್ತುಮಾಡಿಸುತ್ತಲೂ ಇದೆಯೆಂದೂ ಸ್ಥಳೀಯ ಆಫೀಸರುಗಳು ಸರ್ಕಾರಕ್ಕೆ ಭರವಸೆಕೊಟ್ಟಿರುತ್ತಾರೆ. ತರೀಕೆರೆ ತಾಲ್ಲೂಕು ಹೊಸಹಳ್ಳಿ ಹತ್ತಿರ ಇರುವ ಬ್ಯಾಡಗಿ ಕಟ್ಟೆ ಕೆರೆಯು ಒಡೆದುಹೋಗಿದೆ.

ವಸ್ತಾರೆ—ಕೊಪ್ಪದ ರಸ್ತೆಯಲ್ಲಿ ಬಾಳೆಹೊನ್ನೂರಿಗೂ ಕೊಪ್ಪಕ್ಕೂ ಮಧ್ಯೆ ಬಹಳಕಡೆ ಕೊಚ್ಚಿಹೋಗಿದೆ. ಅದುದರಿಂದ ಆ ರಸ್ತೆಯಲ್ಲಿ ಗಾಡಿಗಳು ಸಂಚರಿಸುವಂತಿಲ್ಲ. ಹರಿಹರಪುರ-ಶೃಂಗೇರಿ ರಸ್ತೆಯಲ್ಲಿ ಮಣ್ಣುಜಾರಿ ರಸ್ತೆಗೆ ಅಡಚಣೆಯಾಗಿರುವುದರಿಂದ ಗಾಡಿಗಳ ಸಂಚಾರಕ್ಕೆ ಅಪಾಯಕರವಾಗಿದೆ. ಸಂಚಾರಕ್ಕೆ ಅನುಕೂಲವಾಗುವಂತೆ ಅವಶ್ಯವಾದ ಕಾಮಗಾರಿಗಳನ್ನು ನಡೆಸುತ್ತಿದ್ದಾರೆ.

ಅಲ್ಲಿನ ಸ್ಥಿತಿಯನ್ನು ಡೆಪ್ಯುಟಿಕಮೀಷನರವರು ಈರೀತಿಯಾಗಿ ಸಂಕ್ಷೇಪವಾಗಿ ತಿಳಿಸಿದ್ದಾರೆ. ದೊಡ್ಡ ಅನಾಹುತಗಳೇನೂ ಸಂಭವಿಸಿಲ್ಲ. ಪ್ರಾಣಾಪಾಯವಾವುದೂ ನಡೆಯಲಿಲ್ಲ. ದುಸ್ಥಿತಿಯ ತೊಂದರೆಯ ಸೂಚನೆಯೂ ಇಲ್ಲ. ಕಡೂರು ತರಿಕೆರೆ ತಾಲ್ಲೂಕುಗಳ ಮತ್ತು ನರಸಿಂಹರಾಜಪುರದ ಸಬ್ ತಾಲ್ಲೂಕಿನ ಸ್ಥಿತಿಗತಿಗಳು ಸಮರ್ಪಕವಾಗಿವೆ. ಈಮೇರೆಗೆ ವರದಿಯು ಬಂದಿದೆ. ಕೊಪ್ಪ ತಾಲ್ಲೂಕಿನಲ್ಲಿ ನೆಲವು ಕುಸಿದುದರಿಂದಲೂ ನೀರು ಹೆಚ್ಚಾಗಿ ನುಗ್ಗಿದುದರಿಂದಲೂ ತರಿ ಬಾಗಾಯಿತು ಜಮೀನುಗಳಿಗೆ ನಷ್ಟತಟ್ಟಿರುತ್ತದೆ. ಆದುದರಿಂದ ಮುಂದೆ ಕಂದಾಯವನ್ನು ಮಾಫ್ ಮಾಡಬೇಕಾಗಬಹುದೆಂದೂ ತಕಾವಿ ಸಾಲಗಳನ್ನು ಕೊಡಬೇಕಾಗುವುದೆಂದೂ ಡೆಪ್ಯುಟಿಕಮೀಷನರು ನಿರೀಕ್ಷಿಸಿರುತ್ತಾರೆ. ಶೃಂಗೇರಿಯಲ್ಲಿಯೂ ಸ್ಥಿತಿಗತಿಗಳು ಇದೇ ರೀತಿಯಲ್ಲಿವೆ.

ಹಾಸನದ ಡಿಸ್ಟ್ರಿಕ್ಟು—ಈ ಡಿಸ್ಟ್ರಿಕ್ಟಿನಲ್ಲಿ ಬಹಳ ಮಳೆಯಾಗಿ ಪ್ರವಾಹಗಳು ಉಕ್ಕಿಬಂದುದರಿಂದ ಉಂಟಾಗಿರುವ ತೊಂದರೆಗಳನ್ನು ತಿಳಿಸಿ ಡೆಪ್ಯುಟಿಕಮೀಷನರವರು ತಪಶೀಲಾಗಿ ವರದಿಮಾಡಿರುತ್ತಾರೆ. ಅವರು ತಮ್ಮ ವರದಿಯಲ್ಲಿ ಈವರುಷ ಮಳೆಯು ಬಹಳ ಹೆಚ್ಚಾಗಿ ಬಿದ್ದಿತೆಂದೂ ತಿಳಿಸಿ ಈ ಮುಂದೆ ನಮೂದಿಸಿರುವ ಮಳೆಲೆಕ್ಕವನ್ನು ಕಳುಹಿಸಿರುತ್ತಾರೆ—

ಸ್ಥಳದ ಹೆಸರು.	1924ನೆ ಜುಲೈ 1ರಿಂದ 21ರವರೆಗೆ	1923ನೆ ಜುಲೈ 1ರಿಂದ 21ರವರೆಗೆ	30 ವರ್ಷಗಳ ಸರಾಸರಿ
ಮಾದನಹಳ್ಳಿ	116	104	51
ಹನಬಾಳು	100	80	30
ಸಕಲೇಶಪುರ	48	47	23
ಬೇಲೂರು	22	16	6
ಅರಕಲಗೂಡು	20	21	5
ಹಾಸನ	11	11	4

ಸಕಲೇಶಪುರದಲ್ಲಿ ಹೇಮಾವತಿನದಿಯ ಪ್ರವಾಹವು 1924ನೇ ಇಸ್ವಿ ಜುಲೈ 15 ನೆಯ ತಾರೀಖಿನ ದಿನ ಹಿಂದೆ ರಿಕಾರ್ಡಾಗಿರುವ ಅತ್ಯಂತ ಎತ್ತರವಾದ ಮಟ್ಟಕ್ಕಿಂತಲೂ 16 ಅಡಿ ಎತ್ತರ ಹೆಚ್ಚಾಗಿದ್ದಿತು. ಮತ್ತು ಶ್ರೀರಾಮದೇವರ ಅಣೆಯಮೇಲೆ 11½ ಅಡಿ ನೀರು ಹರಿಯುತ್ತಿದ್ದಿತು. ಕಾವೇರಿನದಿಯಲ್ಲಿ ಅದೇ ತಿಂಗಳು 17ನೆ ತಾರೀಖಿನಲ್ಲಿ ಕೃಷ್ಣರಾಜಕಟ್ಟೆ ಅಣೆಯಮೇಲೆ 10½ ಅಡಿ ಎತ್ತರ ಪ್ರವಾಹವು ಹರಿಯುತ್ತಿದ್ದಿತು. ಎಂದರೆ ರಾಮನಾಥಪುರದಲ್ಲಿ 1911ನೆ ಇಸ್ವಿಯಲ್ಲಿ ಬಂದಿದ್ದ ಮಟ್ಟಕ್ಕಿಂತಲೂ 1½ ಅಡಿ ಎತ್ತರವಾಗಿದ್ದಿತು. ಹೇಮಾವತಿನದಿಯಲ್ಲಿ ಪ್ರವಾಹವು 16ನೆಯ ತಾರೀಖಿನ ದಿವಸ ಇಳಿಯಿತು; ಕಾವೇರಿ ನದಿಯಲ್ಲಿ 18ನೆಯ ತಾರೀಖಿನ ದಿನ ಪ್ರವಾಹವು ಇಳಿಯಿತು.

ಸಕಲೇಶಪುರದಲ್ಲಿ ಹದಿನೈದು ಮನೆಗಳು (ಇವುಗಳಲ್ಲಿ ಬಹುಮಟ್ಟಿಗೆ ಮಣ್ಣಿನವು) ಬಿದ್ದುಹೋದುವು; ರಾಮನಾಥಪುರದಲ್ಲಿ 15 ಇದೇವಿಧದ ಮನೆಗಳೂ, ಅರಕಲಗೂಡು ತಾಲ್ಲೋಕು ಕೇರಳಾಪುರದಲ್ಲಿ 6 ಮನೆಗಳೂ ಬಿದ್ದುಹೋದುವು, ಬಿದ್ದ ಮನೆಗಳಲ್ಲಿದ್ದ ಜನಗಳಿಗೆ ಖಾಲಿಮನೆಗಳಲ್ಲೂ, ಛತ್ರಮುಂತಾದ ಜನೋಪಯೋಗವಾದ ಕಟ್ಟಡಗಳಲ್ಲೂ ಹಂಗಾಮಿಯಾಗಿ ಸ್ಥಳವಸತಿಯು ಏರ್ಪಡಿಸಲ್ಪಟ್ಟಿತು. ಸಕಲೇಶಪುರದಲ್ಲಿಯೂ ರಾಮನಾಥಪುರದಲ್ಲಿಯೂ ತೊಂದರೆಗೆ ಗುರಿಯಾದ ಜನಗಳಿಗೆ ಒಡನೆಯೇ ಅವಶ್ಯವಾದ ಸಹಾಯವನ್ನು ಮಾಡಲಾಯಿತು. ಪ್ರಾಣಾಪಾಯಗಳೇನೂ ಸಂಭವಿಸಲಿಲ್ಲ. ರಾಮನಾಥಪುರದಲ್ಲಿ ಒಬ್ಬ ಬಣಗಿಯ ಜಾಬತ್ತು 800 ರೂಪಾಯಿಗಳು ಬೆಲೆಯುಳ್ಳ

ತಯಾರಾದ ಮರಗಳ ಸಾಮಾನುಗಳು ನಷ್ಟವಾದುದು ಹೊರತು ಮತ್ಯಾವ ಹೆಚ್ಚು ಸ್ವತ್ತಿನ ನಷ್ಟವೂ ಆಗಿಲ್ಲ. ತಕಾವಿ ಸಾಲಬೇಕಾಗಿರುವ ಜನರಿಗೆ ಅವುಗಳನ್ನು ಕೊಡಲು ಅಮಲ್ದಾರರುಗಳಿಗೆ ಹಣವನ್ನು ಒದಗಿಸಿದೆ.

ಯಗಚಿನದಿಯಿಂದ ತೆಗೆದ ಹುಲುವಾಗಲು ಮತ್ತು ಚಂಗರವಳ್ಳಿ ನಾಲೆಗಳ ಏರಿಗಳೂ ಮತ್ತು ಕಾವೇರೀನದಿಯಿಂದ ತೆಗೆದ ಕಟ್ಟೆಪುರ ಮತ್ತು ರಾಮನಾಥಪುರ ನಾಲೆಗಳ ಏರಿಗಳೂ ಒಡೆದುಹೋಗಿವೆ.

ಹಾಸನದ ತಾಲೋಕಿನಲ್ಲಿ ಒಂದು ಮೇಜರ್ ಮತ್ತು ಒಂದು ಮೈನರ್ ಕೆರೆಯೂ, ಬೇಲೂರು ತಾಲ್ಲೋಕಿನಲ್ಲಿ ಒಂದು ಮೇಜರ್ ಮತ್ತು 5 ಮೈನರ್ ಕೆರೆಗಳೂ, ಅರಕಲಗೂಡು ತಾಲೋಕಿನಲ್ಲಿ ಎರಡು ಮೈನರ್ ಕೆರೆಗಳೂ ಒಡೆದುಹೋಗಿರುತ್ತವೆ. ಇತರ 16 ತಾಲ್ಲೋಕುಗಳಲ್ಲಿ ಕೆರೆಗಳು ಸೋಳಿಬಿದ್ದುವು. ಆದರೆ ಅವುಗಳ ದುರಸ್ತಿ ಕಾಮಗಾರಿಗೆ ಸರಿಯಾದ ಗಮನವನ್ನು ಕೊಟ್ಟು ಇದುವರಿಗೂ ಕೆರೆಗಳನ್ನು ಕಾಪಾಡಲಾಗಿದೆ. ಮಾದನಹಳ್ಳಿಯ ಆಚೆ ಹಾಸನ-ಮಂಗಳೂರು ರಸ್ತೆಯ 153 ಮತ್ತು 156ನೆ ಮೈಲಿಗಳಲ್ಲಿರತಕ್ಕ ಬಹು ಚಿಕ್ಕದಾದ ಎರಡು ಸೇತುವೆಗಳು ಕೊಚ್ಚಿಕೊಂಡುಹೋಗಿರುತ್ತವೆ. ಅದೇ ರಸ್ತೆಯಮೇಲೆ ಮೂರು ಪ್ರದೇಶಗಳ ಜಾರುಮಣ್ಣುಬಿದ್ದು ಪ್ರಯಾಣಕ್ಕೆ ಅಡಚಣೆಯಾಗಿದೆ. ಅಲ್ಲಿನ ಸ್ಥಿತಿಗತಿಗಳಿಗನುಗುಣವಾಗಿ ಅನುಕೂಲಕಂಡೊಡನೆಯೇ ಈ ನಷ್ಟಗಳಿಗೆ ತಕ್ಕ ಗಮನಕೊಡುವಂತೆ ಎಗ್ಜಿಕ್ಯೂಟಿವ್ ಇನ್‌ಜನೀಯರಿಗೆ ತಿಳಿಸಿರುತ್ತದೆ. ಅಲ್ಲದೆ ಅವರಲ್ಲಿ ಕೂಡಲೇ ಆಗಬೇಕಾಗಿರುವ ಕೆಲಸಗಳಿಗೆ ಗಮನಕೊಡುವುದಕ್ಕಾಗಿ 2500 ರೂ. ಗಳ ವಿಶೇಷ ಸ್ವಭಾವದ ಒಂದು "ಇಂಪ್ರೆಸ್ಟ್" ಇಟ್ಟಿರುತ್ತದೆ. ನಷ್ಟವುಂಟಾದ ಎಲ್ಲಾ ಪ್ರದೇಶಗಳನ್ನೂ ಡೆಪ್ಯುಟಿಕಮಿಷನರವರು ಅಜಮಾಯಿಷಿಮಾಡಿರುತ್ತಾರಲ್ಲದೆ, ನಿವಾರಣೆಯ ಉಪಾಯಗಳನ್ನು ಏರ್ಪಡಿಸಿ ಹೊಸದಾಗಿ ಪ್ರಾಪ್ತವಾಗುವ ಜರೂರು ಸಂದರ್ಭಗಳಲ್ಲಿ ಕಾಲಕ್ಕೆ ಸರಿಯಾಗಿ ಅವಶ್ಯವಾದ ಕೆಲಸಗಳನ್ನು ನಡೆಸತಕ್ಕ ಬಗ್ಗೆ ಆಯಾಯ ಸ್ಥಳೀಯ ಅಧಿಕಾರಿಗಳಿಗೆ ತಕ್ಕ ತಿಳುವಳಿಕೆಗಳನ್ನು ಕೊಟ್ಟಿರುತ್ತಾರೆ. ಜನಗಳ ಸಹಾಯಾರ್ಥವಾಗಿ ರಾಮನಾಥಪುರದಲ್ಲಿ ಹೆಚ್ಚುಗಟ್ಟಲೆಯ ಪೋಲೀಸ್ ಸಿಬ್ಬಂದಿಯನ್ನೂ ಸಹ ಇಟ್ಟಿರುತ್ತದೆ. ಹೇಮಾವತಿ ಮತ್ತು ಕಾವೇರಿನದಿಗಳಲ್ಲಿ ಪ್ರವಾಹಗಳು ಈ ಮಾಹೆ 15 ಮತ್ತು 17 ನೇ ತಾರೀಖುಗಳಲ್ಲಿ ಉಕ್ಕಿದ ಪರಮಾವಧಿಯ ಪ್ರಮಾಣಕ್ಕಿಂತಲೂ 2 ಅಡಿಗಳಷ್ಟು ಕಡಮೆಯಾದ ಪ್ರಮಾಣಕ್ಕೆ ಪುನಃ ಉಕ್ಕಿಬಂದಿರುವುದಾಗಿ ವರದಿಯು ಬಂದಿರುತ್ತದೆ. ಈ ಮೂರು ಡಿಸ್ಟ್ರಿಕ್ಟುಗಳ ಪೈಕಿ ಪ್ರತಿಯೊಂದರಲ್ಲಿಯೂ ಉಚಿತವಾದ ಸಹಾಯಕ್ಕಾಗಿ 1000 ರೂ. ಗಳನ್ನೂ ರಸ್ತೆಗಳನ್ನು ದುರಸ್ತು ಮಾಡುವುದಕ್ಕಾಗಿ 2,500 ರೂ. ಗಳನ್ನೂ, ತಕಾವಿ ಸಾಲಗಳಾಗಿ 5,000 ರೂ. ಗಳನ್ನೂ ಮುಂಜೂರು ಮಾಡಿರುವುದನ್ನು ಈ ಮಾಹೆ 23ನೇ ತಾರೀಖಿನ ತಮ್ಮ ಪ್ರಸಿದ್ಧಪತ್ರಿಕೆಯಲ್ಲಿ ಮೊದಲೇ ಸರ್ಕಾರದವರು ತಿಳಿಸಿರುತ್ತಾರೆ. ಡೆಪ್ಯುಟಿಕಮಿಷನರುಗಳಿಂದ ಇನ್ನೂ ಹೆಚ್ಚಿನ ಪಟ್ಟಿಗಳು ತಲುಪಿದನಂತರ, ಇನ್ನೂ ಹೆಚ್ಚು ಹಣವನ್ನು ಒದಗಿಸತಕ್ಕದ್ದು ಅವಶ್ಯಕವೆಂಬ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸಿ ತೀರ್ಮಾನಿಸುವರಾಗಿದ್ದಾರೆ.

ಬೆಂಗಳೂರು, ಆರ್. ರಂಗರಾವ್.
23ನೇ ಜುಲೈ 1924. ಸರ್ಕಾರದ ಪಬ್ಲಿಸಿಟಿ ಆಫೀಸರು.

ಹಾಸನ ಡಿಸ್ಟ್ರಿಕ್ಟು.—ರಾಮನಾಥಪುರದಲ್ಲಿ ಬಹುಬಡವರಾದ ಕೆಲವು ಜನರಿಗೆ ದಿಕ್ಕಿಲ್ಲದಂತಾಗಿದೆ. ಸರ್ಕಾರಿ ಉದ್ಯೋಗಸ್ಥರಲ್ಲದ ಜನರಿಂದ ಏರ್ಪಟ್ಟ ಕಮಿಟಿಯವರು ಪರೋಪಕಾರಾರ್ಥವಾದ ಏರ್ಪಾಡುಗಳನ್ನು ಸ್ವಂತವಾಗಿಮಾಡಿ, ಸಹಾಯ ದ್ರವ್ಯವನ್ನು ವಸೂಲ್ಮಾಡಿ, ಅದನ್ನು ವಿನಿಯೋಗಮಾಡಿರುತ್ತಾರೆ. ಮನೆಕಟ್ಟುವ ಸಾಮಾನುಗಳು, ಮುಟ್ಟುಗಳು ಮುಂತಾದುವುಗಳನ್ನು ಉಚಿತವಾಗಿ ಒದಗಿಸಿದೆ. ಮತ್ಯಾವ ಕ್ರಮವನ್ನೂ ಜರುಗಿಸಬೇಕಾದುದಿಲ್ಲವೆಂದು ವರದಿಯು ಬಂದಿರುತ್ತದೆ. ಕೃಷ್ಣರಾಜಕಟ್ಟೆಗೂ ಅದರ ನಾಲೆಗಳಿಗೂ ಯಾವ ಅಪಾಯವೂ ಸಂಭವಿಸುವಂತಿಲ್ಲ. ಕಟ್ಟೆಪುರದನಾಲೆಯ ಪ್ರಧಾನವಾದ ತೂಬುಗಳ ಮುಖ್ಯಭಾಗವು ಕೊಚ್ಚಿಹೋಗಿದೆ. ಇದಲ್ಲದೆ, ಈ ನಾಲೆಯು ಮೊದಲನೆಯದ್ವಾರಕ್ಕೆ ಸಮೀಪದಲ್ಲಿ ಅಥವಾ ಪ್ರಧಾನವಾದ ತೂಬಿಗೆ ಕೆಲವು ಗಜಗಳ ಫಾಸಲೆಯೊಳಗಿರುವ ಹೆಚ್ಚು ನೀರುಹರಿದುಹೋಗುವ ಕೋಡಿಗೆ ಸಮೀಪದಲ್ಲಿ ಒಡೆದುಹೋಗಿದೆ ಸ್ವಲ್ಪ ಕೆಳಭಾಗದಲ್ಲಿ ಮತ್ತೊಂದು ಕಡೆಯೂ ಒಡೆದುಹೋಗಿದೆ. ಆದರೆ ಇದನ್ನು ಸುಲಭವಾಗಿ ಮುಚ್ಚಿಬಿಡುವುದು ಸಾಧ್ಯವೆಂದು ವರದಿಯು ಬಂದಿರುತ್ತದೆ.

ರಾಮನಾಥಪುರದ ನಾಲೆ.

ಈ ನಾಲೆಯ ಪ್ರಧಾನವಾದ ತೂಬುಗಳು ಭದ್ರವಾಗಿವೆ. ಆದರೂ ನದಿಯನೀರು ಹಳೆಯನಾಲೆಯಮೇಲ್ಗಡೆಯಲ್ಲಿ ನುಗ್ಗಿಬರುತ್ತಿರುವಂತೆಯೂ ಅದರ ಏರಿಯು ಒಡೆದುಹೋಗಿ, ನೀರು ರಾಮನಾಥಪುರದ ನಾಲೆಗೆ ನುಗ್ಗುತ್ತಿರುವಂತೆಯೂ ವರದಿಯು ಬಂದಿರುತ್ತದೆ. ನೀರೊದಗಿಸುವ ನಾಲೆಯಲ್ಲಿ ಒಂದು ಸಣ್ಣ ಸೋಳಿಬಿದ್ದಿದೆ; ಆದರೆ ಉಂಟಾದ ನಷ್ಟವು ಅಲ್ಪವಾಗಿರುವಂತೆ ವರದಿಯಾಗಿದೆ. ಒಡೆದುಹೋಗಿರುವ ಕಡೆಯಲ್ಲಿ ದುರುಸ್ತಿಯ ಮತ್ತು ಮುಚ್ಚುವ ಕಾಮಗಾರಿಗಳನ್ನು ತ್ವರೆಯಿಂದ ನಡೆಸುವುದರಲ್ಲಿ ಎಗ್ಜಿಕ್ಯೂಟಿವ್ ಇಂಜನೀಯರುಗಳಿಗೆ ಸಹಾಯವನ್ನೊದಗಿಸುವಂತೆ ಅಮಲ್ದಾರರುಗಳಿಗೆ ತಿಳುವಳಿಕೆಗಳನ್ನು ಸಾದರ್ಮಾಡಲಾಗಿದೆ. ಕೇರಳಾಪುರದಲ್ಲಿ 5-6 ಮನೆಗಳು ಬಿದ್ದುಹೋಗಿರುವಂತೆ ವರದಿಯಾಗಿದೆ. ಆದರೆ ಯಾರಿಗೂ ಮನೆಮಠಗಳಿಲ್ಲದಂತಾಗಲಿಲ್ಲವೆಂದು ವರದಿಬಂದಿದೆ.

ಹಾಸನದ ಟವನಿನಲ್ಲಿರುವ ಮೂರು ಕೆರೆಗಳಿಂದಲೂ ನೀರು ವಿಪರೀತವಾಗಿ ಹರಿಯುತ್ತಿದೆ ಎಂದು ವರದಿಯು ಬಂದಿದೆ. ಬೀರನಹಳ್ಳಿ ಕೆರೆಯಿಂದ ಉಕ್ಕಿಬಂದ ನೀರು ಹಾಸನದ ಟವನಿಗೂ ರೈಲ್ವೆಸ್ಟೇಷನ್ನಿಗೂ ಮಧ್ಯದಲ್ಲಿರುವ ರಸ್ತೆಯಲ್ಲಿನಿಂತಿದೆ; ಆದರೆ ಇದರಿಂದ ಜನ ಸಂಚಾರಕ್ಕೆ ಭಾರಿತೊಂದರೆಯೇನೂ ಆಗಿಲ್ಲ. ಚನ್ನಪಟ್ಟಣದ ಕೆರೆಯಿಂದ ಬಹಳವಾಗಿ ನೀರು ಹರಿದು ಹಾಸನ-ಹೊಳೆನರಸೀಪುರದ ರಸ್ತೆಯು ಜನಸಂಚಾರಕ್ಕೆ ಅನುಪಯುಕ್ತವಾಗಿರುವಂತೆ ವರದಿಯು ಬಂದಿದೆ. ಹುಣಸಿನಕೆರೆಯ ನೀರು ಸ್ರವಿದುದರಿಂದ, ಬೆಂಗಳೂರು-ಮಂಗಳೂರು ರಸ್ತೆಯೂ, ಹಾಸನ-ಸಕಲೇಶಪುರದ ರಸ್ತೆಯು ಜನಸಂಚಾರಕ್ಕೆ ಸ್ವಲ್ಪಕಾಲ ಅಪಾಯಕರವಾಗಿದ್ದಿತು.

ಆಕಡೆಗಳಲ್ಲಿ ಜನರು, ಬಂಡಿಗಳೂ, ತಿರುಗಾಡದಂತೆ ಎಚ್ಚರಿಕೆ ಕೊಡುವುದಕ್ಕೂ ಮತ್ತು ಕೆರೆಗೆ ಅಪಾಯವುಂಟಾಗದಂತೆ ನೋಡಿಕೊಳ್ಳುವುದಕ್ಕೂ ಅವಶ್ಯಕವಾದ ಏರ್ಪಾಡನ್ನು ಮಾಡಿದೆ. ಮಳೆಯು ನಿಂತರೆ ಕೆಲವು ದಿನಗಳಲ್ಲೇ ರಸ್ತೆಯು ಪ್ರಯಾಣಕ್ಕೆ ಅನುಕೂಲಿಸುವುದಾಗಿ ವರದಿಯಾಗಿದೆ. ಆಲೂರು ಸಬ್ ತಾಲ್ಲೂಕಿನಲ್ಲಿ ಯಗಚಿನದಿಯ ಉಪನದಿಗೆ ಅಡ್ಡಲಾಗಿರುವ ಮುದ್ದನಹಳ್ಳಿ ಅಣೆಯ ಅರ್ಧಭಾಗವು ಕೊಚ್ಚಿಕೊಂಡು ಹೋಗಿರುವುದಾಗಿ ವರದಿಯಾಗಿದೆ. ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಸ್ಥಿತಿಯು ಕನುಕೂಲಿಸುವರೀತಿಯಲ್ಲಿದೆ ಎಂದೂ ಮತ್ತು ಯಾವ ಹಟಾತ್ತಾದ ಅಪಾಯವಾಗಲಿ ಅಥವಾ ನಷ್ಟವಾಗಲಿ ಉಂಟಾಗುವ ಶಂಕೆಯು ಇಲ್ಲವೆಂದೂ ಡೆಪ್ಯೂಟಿಕಮಿಷನರವರು ತಿಳಿಸಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟು.—ನದಿಗಳಲ್ಲಿ ಪುನಃ ಭಾರಿಪ್ರವಾಹಗಳು ಬಂದಿರುವುದಾಗಿ ಡೆಪ್ಯೂಟಿಕಮಿಷನರವರಿಂದ ವರದಿಯಾಗಿದೆ. ಎಡತೊರೆಯ ಕೆಲವು ಪ್ರದೇಶಗಳೂ ಮತ್ತು ನಂಜನಗೂಡಿನ ಸೇತುವೆಯೂ ನೀರಿನಲ್ಲಿ ಮುಳುಗಿಹೋಗಿರುವುದಾಗಿ ವರದಿಯಾಗಿದೆ. ನಂಜನಗೂಡಿನ ರೈಲ್ವೆರಸ್ತೆಯ ಸ್ವಲ್ಪಭಾಗವು 25ನೇ ತಾರೀಖಿನ ದಿನ ಬೆಳಿಗ್ಗೆ ಕೊಚ್ಚಿಹೋಗಿರುವುದಾಗಿ ವರದಿಯಾಗಿದೆ. ನಂಜನಗೂಡಿನಿಂದ ಮೈಸೂರಿಗೆ ಇರುವ ಟೆಲಿಗ್ರಾಫ್ ತಂತಿಯು ಕಿತ್ತುಹೋಗಿದೆ. ನದಿಗಳಲ್ಲಿ ಪ್ರವಾಹವು ಇನ್ನೂ ಹೆಚ್ಚುವ ಸಂಭವವು ಕಂಡುಬಂದಿದೆ. ಕೃಷ್ಣರಾಜಸಾಗರದಲ್ಲಿ ಭಾರಿಪ್ರವಾಹಗಳು ಇನ್ನೂ ಮೊದಲಿನಂತೆಯೇ ಇವೆ. ಸದರಿ ಕಟ್ಟೆಯ ಹಿಂಭಾಗದಲ್ಲಿರುವ ಹಂಗಾಮಿಯಾಗಿರುವಂತೆ ಕಟ್ಟಿರುವ ಸೇತುವೆಗೆ ಮಾತ್ರ ಅಪಾಯವು ಸಂಭವಿಸಬಹುದು. ಇತರ ಸ್ಥಳಗಳಲ್ಲಿ ನಾಲೆಗಳ ವಿಷಯದಲ್ಲಿ ಹೊರತು ಮಿಕ್ಕ ಯಾವ ಗೊತ್ತಾದ ನಷ್ಟವೂ ಸಂಭವಿಸಿದುದಾಗಿ ವರದಿಗಳು ಇನ್ನೂ ಬಂದಿಲ್ಲ. ಅನೇಕ ನಾಲೆಗಳು ಅಲ್ಲಲ್ಲಿ ಬಹಳವಾಗಿ ಒಡೆದುಹೋಗಿವೆ. ಕಾವೇರಿನದಿಯ ಕಣಿವೆ ಪ್ರದೇಶದಲ್ಲಿರುವ ಅನೇಕ ಹಳೇಅಣೆಗಳಿಗೆ ಬಹಳವಾಗಿ ಅಪಾಯಸಂಭವಿಸಬಹುದೆಂಬ ಶಂಕೆಯುಂಟಾಗಿದೆ. ಸ್ಥಿತಿಗತಿಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಲಿದೆ. ಶ್ರೀರಂಗಪಟ್ಟಣದ ಬಳಿ ಇರುವ ವೆಲೆಸ್ಲಿ ಸೇತುವೆಯು ನೀರಿನಲ್ಲಿ ಮುಳುಗಿಹೋಗಿದೆ.

ಮೈಸೂರು.—ಮಾನಂದವಾಡಿ ರಸ್ತೆಯಲ್ಲಿ ರಾಮಪುರದವರೆಗೆ ಪ್ರಯಾಣಮಾಡಬಹುದು. ಅದರ ಆಚೆಗೆ ಇರುವ ರಸ್ತೆಯಲ್ಲಿ ಸ್ವಲ್ಪಭಾಗವು ನೀರಿನಲ್ಲಿ ಮುಳುಗಿಹೋಗಿದೆ.

ಚಿತ್ರದುರ್ಗಡಿಸ್ಟ್ರಿಕ್ಟು—ತುಂಗಭದ್ರಾನದಿಯಲ್ಲಿ ಪುನಃ ಪ್ರವಾಹವು ಬಂದಿದೆಯೆಂದೂ, ಆದರೆ ಕಳೆದ ವಾರದಲ್ಲಿದ್ದಷ್ಟು ಇಲ್ಲವೆಂದೂ ಚಿತ್ರದುರ್ಗದ ಡೆಪ್ಯುಟಿಕಮಿಷನರವರಿಂದ ತಂತಿಯವರ್ತಮಾನದಮೂಲಕ ವರದಿಯಾಗಿದೆ.

ಶಿವಮೊಗ್ಗ ಡಿಸ್ಟ್ರಿಕ್ಟು—ತುಂಗಾನದಿಯಲ್ಲಿ ಪ್ರವಾಹವು 31 ಅಡಿಗಳ ಎತ್ತರವಿದೆ ಎಂದು ಶಿವಮೊಗ್ಗೆಯ ಡೆಪ್ಯುಟಿಕಮಿಷನರವರು ಈದಿನ ತಂತಿಯವರ್ತಮಾನವನ್ನು ಕೊಟ್ಟಿರುತ್ತಾರೆ. ರೈಲ್ವೆರಸ್ತೆಯ ಪೈಕಿ 1000 ಅಡಿಗಳಷ್ಟು ರಸ್ತೆಯು ಪುನಃ ಕೊಚ್ಚಿಹೋಗಿದೆ. ಶಿವಮೊಗ್ಗೆಯಲ್ಲಿ ದೊಡ್ಡಬ್ರಾಹ್ಮಣರಕೇರಿಗೂ ಕೃಷ್ಣರಾಜಪುರಕ್ಕೂ ಮತ್ತು ನದಿಯದಡದಲ್ಲಿರುವ ಎಲ್ಲಾ ಪ್ರದೇಶಗಳಿಗೂ ಪ್ರವಾಹವು ನುಗ್ಗಿದ್ದಿತು. ಆದರೆ ಅಲ್ಲ ವಾಸವಾಗಿದ್ದ ಜನರನ್ನೆಲ್ಲಾ ದೋಣಿಗಳಲ್ಲಿ ಸಾಗಿಸುವುದರ ಮೂಲಕ ಅವರ ಪ್ರಾಣರಕ್ಷಣೆಯನ್ನು ಮಾಡಲಾಯಿತು. ಅನೇಕ ಮನೆಗಳು ಬಿದ್ದುಹೋಗಿರುವುದಾಗಿಯೂ ಇನ್ನು ಕೆಲವು ಮನೆಗಳು ಅಪಾಯಸ್ಥಿತಿಯಲ್ಲಿರುವುದಾಗಿಯೂ ವರದಿಯಾಗಿದೆ. ಯಾವಪ್ರಾಣಹಾನಿಯೂ ಉಂಟಾಗಿಲ್ಲ. ಆದರೆ ಅನೇಕ ಜನರು ಮನೆಮಠಗಳನ್ನು ಕಳೆದುಕೊಂಡಿರುತ್ತಾರೆಂದು ತೋರಿಬಂದಿದೆ. ಮನೆಮಠಗಳನ್ನು ಕಳೆದುಕೊಂಡವರಿಗೆ ಸ್ಕೂಲುಗಳು ಸರ್ಕಾರೀಕಟ್ಟಡಗಳೂ ಟೌನ್ ಹಾಲ್ ಮುಂತಾದ ಜನೋಪಯುಕ್ತವಾದ ಎಲ್ಲಾ ಕಟ್ಟಡಗಳಲ್ಲಿಯೂ ವಾಸಕ್ಕೆ ಅವಕಾಶವನ್ನು ಕೊಟ್ಟಿದೆ. ಅನೇಕ ದನಕರುಗಳು ಕೊಚ್ಚಿಕೊಂಡು ಹೋಗಿರುವುದಾಗಿ ವರದಿಯಾಗಿದೆ. ಜನರು ಬಿಟ್ಟುಹೋದ ಮನೆಗಳಲ್ಲಿದ್ದ ಅನೇಕ ಸ್ವತ್ತುಗಳು ಪ್ರಾಯಶಃ ಕೊಚ್ಚಿಹೋಗಿರಬಹುದೆಂಬ ಶಂಕೆಯುಂಟಾಗಿದೆ. ಮನೆಮಠಗಳನ್ನು ಕಳೆದುಕೊಂಡವರಿಗೆಲ್ಲಾ ಊಟಉಪಚಾರಗಳನ್ನು ಮಾಡಿಸುವುದಕ್ಕೆ ಡೆಪ್ಯುಟಿಕಮಿಷನರವರು ತಕ್ಕ ಏರ್ಪಾಡುಮಾಡಿರುತ್ತಾರೆ. ಶಿವಮೊಗ್ಗೆಯಲ್ಲಿರತಕ್ಕ ಸೇತುವೆಯಲ್ಲಿನ ಒಂದು ಕಮಾನಿನಲ್ಲಿ ಸಣ್ಣದಾಗಿ ಸೀಳುಕಾಣಿಸಿಕೊಂಡಿರುವುದಾಗಿ ವರದಿಯು ಬಂದಿರುತ್ತದೆ. ಸೇತುವೆಯಮೇಲೆ ಎಲ್ಲಾ ವಿಧವಾದ ಸಂಚಾರವನ್ನೂ ನಿಲ್ಲಿಸಲಾಗಿದೆ. ಎಲ್ಲಾ ಜಂಗಡಗಳ ಮುಖಂಡರೂ ಅಪಾಯವನ್ನು ತಪ್ಪಿಸಿ ಸಹಾಯಮಾಡುವ ಕೆಲಸದಲ್ಲಿ ಅಧಿಕಾರಿಗಳಿಗೆ ಬಹಳ ಆಸಕ್ತಿಯಿಂದ ಸಹಾಯಮಾಡುತ್ತಿರುವುದನ್ನು ಕೇಳಿ ಸರ್ಕಾರದವರಿಗೆ ಬಹಳ ಸಂತೋಷವುಂಟಾಗಿದೆ. ಶಿವಮೊಗ್ಗೆಯಲ್ಲಿಯೂ ಮತ್ತು ಭದ್ರಾವತಿಯಲ್ಲಿಯೂ ಇರತಕ್ಕ ಕೋಠಿಗಳಿಂದ ಚೌಬೀನೆಯ ಮರಗಳು ಕೊಚ್ಚಿಹೋಗುತ್ತವೆಯೆಂದು ಫಾರೆಸ್ಟು ಇಲಾಖೆಯ ಕನ್ಸರ್ವೇಟರವರಿಂದ ರಿಪೋರ್ಟು ತಲುಪಿರುತ್ತದೆ. ನದಿಯಲ್ಲಿ ತೇಲಿಕೊಂಡು ಹೋಗುತ್ತಿರುವ ಚೌಬೀನೆಮರಗಳನ್ನು ದಡಕ್ಕೆ ಸಾಗಿಸಲು ತಕ್ಕ ಏರ್ಪಾಡುಮಾಡುವಂತೆ ಚಿತ್ರದುರ್ಗದ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಗೆ ಹುಕುಂಮಾಡಲಾಗಿದೆ. ಈ ಕೆಲಸದಲ್ಲಿ ಸೌಕರ್ಯವನ್ನುಂಟುಮಾಡುವುದಕ್ಕಾಗಿ ಈ ಆಫೀಸರಿಗೆ ಇನ್ನೂ ಹೆಚ್ಚಿನ ಅನುಕೂಲವನ್ನು ಒದಗಿಸುತ್ತಿದೆ.

ಹೊನ್ನಾಳಿ ತಾಲ್ಲೋಕಿನಲ್ಲಿರತಕ್ಕ ದೊಡ್ಡ ಕೆರೆಯು ಒಡೆದುಹೋಗಿರುತ್ತದೆಯೆಂದೂ ಮತ್ತು ಅದನ್ನು ದುರಸ್ತುಮಾಡುವುದಕ್ಕೆ ಕೂಡಲೆ ಏರ್ಪಾಡುಗಳನ್ನು ಕೈಗೊಳ್ಳುತ್ತಿರುತ್ತದೆಯೆಂದೂ ವರ್ತಮಾನವು ಈದಿನ ಸಾಯಂಕಾಲ 5 ಘಂಟೆಯಲ್ಲಿ ತಲುಪಿರುತ್ತದೆ. ಇದರಿಂದುಂಟಾದ ನಷ್ಟವು 10,000 ರೂ. ಗಳೆಂದು ಅಂದಾಜು ಮಾಡಲಾಗಿದೆ.

ಭದ್ರಾನದಿಯ ಪ್ರವಾಹವು ಕಡಮೆಯಾಗಿದೆಯೆಂದೂ ಮತ್ತು ನರಸಿಂಹರಾಜಪುರದ ರಸ್ತೆಯು ಪ್ರಯಾಣಕ್ಕೆ ಅನುಕೂಲವಾಗಿದೆಯೆಂದೂ ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರು ವರದಿಮಾಡಿರುತ್ತಾರೆ. ಅಪಾಯದ ಭಯವು ತಪ್ಪಿದೆಯೆಂದೂ ಅವರು ತಿಳಿಸಿರುತ್ತಾರೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿರತಕ್ಕ ಎಲ್ಲಾ ನದಿಗಳಲ್ಲಿಯೂ ಪ್ರವಾಹವು ಕಡಮೆಯಾಗಿರುತ್ತದೆಯೆಂದು ಕೃಷ್ಣರಾಜಸಾಗರದ ಸ್ಪೆಷಲ್ ಆಫೀಸರವರೂ ಮತ್ತು ಚೀಫ್ ಎಲೆಕ್ಟ್ರಿಕಲ್ ಇಂಜನೀಯರವರೂ ವರದಿಮಾಡಿರುತ್ತಾರೆ. ಕೃಷ್ಣರಾಜಸಾಗರದ ಕಟ್ಟೆಯಮೇಲೆ ಈ ಪ್ರಾತಃಕಾಲ ಪರಮಾವಧಿ 18·40 ಅಡಿಗಳಷ್ಟು ನೀರು ಹರಿದುಹೋಗುತ್ತಿದ್ದುದು ತಪ್ಪಿ ಈದಿನ ಸಾಯಂಕಾಲ 5 ಘಂಟೆಗೆ 18 ಅಡಿಗಳಿಗೆ ತಗ್ಗಿರುತ್ತದೆ. ನಾಲಾಗಳು ಒಡೆದುಹೋಗಿರುವುದರ ಹೊರತು ಇನ್ನು ಹೆಚ್ಚಿನ ನಷ್ಟಗಳೇನೂ ಸಂಭವಿಸಿಲ್ಲವೆಂದು ವರದಿಬಂದಿದೆ.

ತಾ|| 29-7-24. ಆರ್. ರಂಗರಾವ್, ಪಬ್ಲಿಸಿಟಿ ಆಫೀಸರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ಸ್ತೋತ್ರಾರ್ಹವಾದ ಏರ್ಪಾಟು.

ಗೋರಿಬಿದನೂರು ಗ್ರಾಮದ ವಾಸಸ್ಥರಾದ ಸಾಹುಕಾರ್ ಮ|| ನಾಮಾ ಚೆಲುಮಯ್ಯನವರ ವೆಂಕಟಪ್ಪ ಎಂಬುವವರು ಪ್ರೈಜ್‌ಫಂಡಿಗಾಗಿ (Prize Fund) 100 ರೂ. ಗಳನ್ನು ಗೋರಿಬಿದನೂರು ಮಿಡಲ್ ಸ್ಕೂಲ್ ಹೆಡ್‌ಮಾಸ್ಟರ ಹೆಸರಿನಲ್ಲಿ ಗ|| ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಟ್ಟು ಸದರಿ ಮೊಬಲಗಿಗಾಗಿ ಬರುವ ಬಡ್ಡಿಯಿಂದ ಮಿಡಲ್ ಸ್ಕೂಲಿನಿಂದ ತೇರ್ಗಡೆಹೊಂದುವ ಎಲ್. ಸಿ. ವಿದ್ಯಾರ್ಥಿಗಳಲ್ಲಿ ಒಂದನೆಯವನಿಗೆ ಬಹುಮಾನವನ್ನು ಸಾಲಿಯಾನ ಕೊಡುವಂತೆ ಏರ್ಪಾಡುಮಾಡಿಕೊಡಬೇಕೆಂದು ವಿದ್ಯಾ ಇಲಾಖಾ ಅಧಿಕಾರಿಗಳಿಗೆ ಅರ್ಜಿಗಳನ್ನು ಕೊಟ್ಟಿರುವರು. ಇದರಂತೆ ಇತರರೂ ಬೇರೆ ವಿಧಗಳಲ್ಲಿ ಸ್ಕೂಲಿಗೆ ಸಹಾಯಮಾಡುವ ಉದ್ದೇಶವುಳ್ಳವರಾಗಿರುವರು. ಇದು ಕೈಗೂಡಲೆಂದು ಹಾರೈಸುವ,

ವಿದ್ಯಾಭಿಮಾನಿ.

ಚಿಕ್ಕಾಯರಹಳ್ಳಿಯ ದುಸ್ಥಿತಿಯು.

ಕೃಷ್ಣರಾಜಸಾಗರ ರಿಜರ್ವಾಯರ್ ಮುಳುಗಡೆಗೆ ಸೇರಿದ ಚಿಕ್ಕಾಯರಹಳ್ಳಿ ಎಂಬ ಗ್ರಾಮವು ಕಳೆದ ಮಾಹೆ 25-26ನೇ ತಾರೀಖುಗಳಲ್ಲಿನ ಪ್ರವಾಹದ ದೆಸೆಯಿಂದ ಊರೊಳಕ್ಕೆ ನೀರುನುಗ್ಗಿ ಅನೇಕ ಮನೆಗಳ ಗೋಡೆಗಳೆಲ್ಲಾ ಬಿದ್ದುಹೋಗಿ ಗ್ರಾಮದ ಸುತ್ತಲೂ ಇದ್ದ ನೂರಾರು ಹುಲ್ಲುಮನೆಗಳು ಕೊಚ್ಚಿಹೋಗಿರುವವಲ್ಲದೆ ಅನೇಕ ಮರಮುಟ್ಟುಗಳು ಸಹ ತೇಲಿಹೋಗಿ ಸಾವಿರಾರು ರೂಪಾಯಿಗಳ ನಷ್ಟವುಂಟಾಗಿರುತ್ತದೆ. ಈ ಗ್ರಾಮವು ರಿಜರ್ವಾಯರ್ ನೀರಿನಿಂದ ಮುಳುಗುವುದಾಗಿ ತಿಳಿದು ಅಲ್ಲಿನ ಮನೆಗಳಿಗೆ ಪರಿಹಾರದ್ರವ್ಯವನ್ನು ಕೊಟ್ಟು ಸರ್ಕಾರದವರು ಸೈಟು ವಗೈರೆ ವಿಂಗಡಿಸಿಕೊಟ್ಟು, ರಸ್ತೆ, ಭಾವಿ ವಗೈರೆ ವಸತಿಗಳನ್ನು ಕಲ್ಪಿಸಿಕೊಡುವ ಬೇರೆ ಜಾಗದಲ್ಲಿ ಈ ಊರನ್ನು ಕಟ್ಟಿಕೊಳ್ಳತಕ್ಕದ್ದೆಂದು ತೀರ್ಮಾನವಾಗಿ 2 ವರ್ಷಗಳಾಗುತ್ತಾ ಬಂದಾಗ್ಯೂ ಅದ್ಯಾಪಿ ಮೇಲ್ಕಂಡ ವಸತಿಗಳನ್ನು ಒದಗಿಸಿಕೊಡದೆ ಸಾವಕಾಶಮಾಡಿರುವದ್ದರಿಂದಲೇ ಈ ಗ್ರಾಮವು ಇಷ್ಟು ನಷ್ಟವನ್ನು ಅನುಭವಿಸಬೇಕಾಯಿತು. ಈಗಲಾದರೂ ಘನಸರ್ಕಾರದವರು ಬಡರೈತರ ಕಷ್ಟವನ್ನು ಚಿತ್ತಕ್ಕೆತಂದು ಅವರಿಗುಂಟಾಗಿರತಕ್ಕ ಕುಂದುಕೊರತೆಗಳನ್ನು ಜಾಗ್ರತೆಯಾಗಿ ನಿವಾರಣೆಮಾಡಿಕೊಟ್ಟಾರೆಂತ ನಂಬಿರುತ್ತೇವೆ.

ಗ್ರಾಮವಾಸಿ.

ಸಂಪದಭ್ಯುದಯ ಪತ್ರಿಕೆಗೆ ಬರೆದಿರುವ ಲೇಖನದ ನಕಲು.

ತಮ್ಮ 28-7-24 ನೇ ಪತ್ರಿಕೆಯಲ್ಲಿ "ಗುರುವಿಗೆ ತಿರುಮಂತ್ರ" ಎಂಬ ಅಭಿಧಾನದಿಂದ ಬರೆದಿರುವ ಲೇಖನನೋಡಿದೆನು. ಈ ಲೇಖನವನ್ನು ಬರೆದ "ಜಗಚ್ಛಿಷ್ಯ" ನು ತನ್ನ ಹೆಸರನ್ನು ಬಹಿರಂಗಮಾಡಿಲ್ಲವಾದ್ದರಿಂದ ಈ ಅಜ್ಞಾತನ ಕುಲ, ಶೀಲ ತಿಳಿಯದೆ ಈತನ ಅಪಭ್ರಂಶ ಬರವಣಿಗೆಗೆ ಜವಾಬುಕೊಡಲು ಅವಕಾಶವಿಲ್ಲ. ಹಳೇಕಾರ್ಪೊರೇಟರು ಅಭಿವೃದ್ಧಿಗೆ ಬರುವದರಲ್ಲಿ ನನಗೆ ಅಸಂತೋಷವಿಲ್ಲ. ಹಳೆಕಾರ್ಪೊರೇಟರಿಗೆ ಶೃಂಗೇರಿ ಮಠದ ಏಜಂಟರು ಕೊಟ್ಟಿರುವ ಶ್ರೀಮುಖದ ಸಂಗತಿ, ವಿರೋಧವಾಗಿ ಬ್ರಾಹ್ಮಣ ಮಹಾಜನಗಳು ಸಭೆಯುತ್ತಾ ಇರುವದ್ದರಿಂದ [illegible] ಯಾರಾದರು ಹಿಂದಾಗಬೇಕಲ್ಲದೆ, ಬಹಿರಂಗವಾದ ಪ್ರದೇಶದಲ್ಲಿ [illegible] ರಿಂದಿಗೂ ನಡೆದು ಬಂದಿರುವಂಥಾ ಕಲಹಗಳನ್ನು ಮುಂದೆ [illegible] ಕೊಂಡು ಸಂಕಟಪಡುವದಕ್ಕಿಂತಲೂ ದೂರವಾಗಿರುವುದು [illegible] ವದು ಈ ಅಜ್ಞಾತ ಶಿಷ್ಯನಿಗೆ ಗೋಚರಿಸಲಿಲ್ಲವೋ ಅಲ್ಲವೋ? [illegible]

ಉದಾಹರಣಾರ್ಥವಾಗಿ ಸಮುದ್ರಯಾನ ಮಾಡಿ ಬಂದ ಬ್ರಾಹ್ಮಣರು ಮತ್ತು ಕುಲಭ್ರಷ್ಟರಾಗಿರುವ ಸದಾಚಾರದಲ್ಲಿರತಕ್ಕ ವೈಕರು ಸಹಾ ಈಗ ಯಾವ ಭಾವನೆಯಲ್ಲಿದ್ದಾರೆ? ಅವರೇನಾದರು ಮಠದವರಮೇಲೆ ಕಲಹಮಾಡುತ್ತಾ ಇದ್ದಾರೆಯೆ? ಈ ಅಂಶಗಳೆಲ್ಲಾ ಈ ಶಿಷ್ಯನು ಚನ್ನಾಗಿ ಆಲೋಚಿಸಲಿಲ್ಲವೆಂದು ಊಹಿಸಬಹುದು. ಪತ್ರಿಕಾಕರ್ತರಾದರೂ ಈ ಶಿಷ್ಯನ ಹೆಸರು, ಅಡ್ರಸು, ಇತ್ಯಾದಿಗಳನ್ನು ದಯವಿಟ್ಟು ನನಗೆ ತಿಳಿಸಿದರೆ ಮಠದ ವಿಚಾರದಲ್ಲಿ ನನ್ನಲ್ಲಿರುವ ಬರಹಮೂಲಕವಾದ ಅನೇಕ ರಿಕಾರ್ಡುಗಳನ್ನು ಅವನಿಗೆ ನಿವೇದನಮಾಡುತ್ತೇನೆ.

ನಂಜನಗೂಡು, ವಿಧೇಯ,
30-7-24. ವಿ. ರಂಗಣ್ಣ.

ಕಾಲರ.

ಈ ರೋಗವು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಬಹುಕಡೆಗಳಲ್ಲೂ ಮತ್ತು ಇತರ ಬಹುಕಡೆಗಳಲ್ಲೂ ಸದ್ಯಕ್ಕೆ ವ್ಯಾಪನೆಯಾಗಿರುತ್ತದೆ. ಭಯಂಕರವಾದ ಈ ವಾಂತಿಭೇದಿರೋಗಕ್ಕೆ ತಕ್ಕ ಔಷದ ಚಿಕಿತ್ಸೆಗಳು ಹಳ್ಳಿಗಾಡಜನರಿಗೆ ಗೊತ್ತಿರುವುದಿಲ್ಲ. ಮಾರೀ ಮೊದಲಾದ ದೇವತೆಗಳ ಸಿಟ್ಟೂ, ಅತೃಪ್ತಿಯೂ, ಈ ರೋಗೋತ್ಪತ್ತಿಗೆ ಕಾರಣವೆಂದು ಮಾತ್ರ ತಿಳಿದಿರುತ್ತಾರೆ. ಈ ರೋಗವು ತಗಲಿದಾಗ ಈ ದೇವತೆಗಳ ಸಮಾಧಾನಕ್ಕಾಗಿಯೂ, ತೃಪ್ತಿಪಡಿಸುವುದಕ್ಕಾಗಿಯೂ, ಕುರಿ, ಕೋಣಗಳ ಬಲಿಕೊಡುತ್ತೇವೆಂದು ಹರಿಕೆ ಮಾಡಿಕೊಳ್ಳುವುದೊಂದರವಿನಹ ಈ ಜನರು ಮತ್ತೇನನ್ನೂ ಅರಿಯರು. ತಮಗೆ ತಿಳಿಯದ ಮತ್ತು ತಮ್ಮಿಂದಸಾಧ್ಯವಾಗದ ಸಂದರ್ಭಗಳಲ್ಲೆಲ್ಲ ಹೀಗೆ ದೇವರಮೇಲೆ ಭಾರಹಾಕಿ ಹಟಸ್ಥರಾಗಿದ್ದುಬಿಡತಕ್ಕದ್ದು ನಮ್ಮವರಲ್ಲಿ ಹಿಂದಿನ ಕಾಲದಿಂದಲೂ ನಡೆದುಬಂದ ಒಂದು ಪ್ರಬಲಪದ್ಧತಿಯೇ ಆಗಿಬಿಟ್ಟಿದೆ. ಈತೆರದ ಮೌಢ್ಯಾಚಾರಗಳಿಂದ ಇಂಥ ದುಚ್ಛ್ಯಾಡಗಳಿಗೆ ಪ್ರತಿಕ್ರಿಯೆಗಳಿಲ್ಲದೆ ಜನರು ಪ್ರಾಣಹಾನಿಗೆ ಗುರಿಯಾಗುತ್ತಲಿರುವುದು ಅಸ್ವಿಷ್ಟವಲ್ಲ, ಹಗುಲಿದ ಕೆಲವು ತಾಲುಗಳಲ್ಲಿ ಜೀವಮಾನವನ್ನೇ ಸಮಾಪ್ತಗೊಳಿಸುವ ಈ ಕ್ರೂರರೋಗಪ್ರಾಪ್ತವಾದವೇಳೆಯಲ್ಲಿ ಜನರು ಅತಿಶಯ ಭಯಭ್ರಾಂತರಾಗುವುದು ಸಹಜವಾದ್ದೇ ಅದೆ. ಸದ್ಯಕ್ಕೆ ಬಹುಕಡೆಯಲ್ಲಿ ಜನರು ಇಂಥ ಅಂಜಿಕೆ ಅಸ್ವಸ್ಥತೆಗಳಿಂದ ದಿಕ್ಕುತೋರದವರಾಗಿರುವಪ್ರಯುಕ್ತ ನಮ್ಮ ದೇಶೀಯ ವೈದ್ಯರಾಗಲಿ, ಡಾಕ್ಟರುಗಳಾಗಲಿ, ಈ ಕಾಲರಾರೋಗಪ್ರಾಪ್ತಿಯಕಾಲಕ್ಕೆ ಜನರು ಆಚರಿಸಬೇಕಾದ ವಿಧಿ, ವಿಧಾನಗಳನ್ನೂ ತಮಗೆ ಖಾತ್ರಿಯಾಗಿ ಅನುಭವಕಂಡುಬಂದ ಔಷಧ ಅನುಪಾನಗಳನ್ನೂ ಜನರ ತಿಳುವಳಿಕೆಗಾಗಿ ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿ ಸಹಾಯಮಾಡಿಸುವಂತಾಗಬೇಕು. ಮತ್ತು ಇಂಥ ರೋಗಗಳಿಗೆ, ಹಳ್ಳಿಯಜನರಲ್ಲಿ ಒಬ್ಬೊಬ್ಬರು, ಬೇರು, ಸೊಪ್ಪು, ಮೊದಲಾದ ಸುಲಭವಾಗಿ ಸಿಕ್ಕತಕ್ಕ ದಿವ್ಯೌಷಧಗಳನ್ನು ತಿಳಿದವರಾಗಿರುತ್ತಾರೆ. ಆದರೆ ಅದನ್ನು ಅವರು ಬಹು ಗುಪ್ತಪಡಿಸಿಟ್ಟುಕೊಂಡಿರುತ್ತಾರೆ. ಸಾಯುವಾಗ ಸಹ ಇಂಥವರು ತಮ್ಮ ಮಕ್ಕಳಿಗೆ ಮೊದಲು ತಿಳಿಸಲು ಪಡಂಬಡದೆ ಸತ್ತುಹೋಗುತ್ತಾರೆ. ಹೀಗಾಗಿಯೇ ನಮ್ಮ ದೇಶದ ಅನೇಕ ವುತ್ತಮೋತ್ತಮ ಔಷಧಿಗಳು ನಾಶವಾಗುತ್ತಬಂದಿವೆ. ಮುಂದಾಳುಗಳಾದ ಜನರು ಈ ಕಾಲರಾರೋಗವನ್ನು ಗುಣಪಡಿಸತಕ್ಕ ಔಷಧಿಗಳೇನಾದರೂ, ಯಾರಿಗಾದರೂ, ತಿಳಿದಿರುವಪಕ್ಷಕ್ಕೆ ಅದನ್ನು ಅಂಥವರಿಂದ ಹ್ಯಾಗಾದರೂ ಮಾಡಿ ತಿಳಿದು ಜನರ ತಿಳುವಳಿಕೆಗಾಗಿ ಪ್ರಕಟಿಸಿ ಸಹಾಯಮಾಡಿಸುವಂತಾಗಬೇಕು.

ಚನ್ನಬಸವಪ್ಪಗೌಡ, ಪಾಟೀಲ್, ಕಪ್ಪನಹಳ್ಳಿ.

ನಮ್ಮ ದುಶ್ಚಟಗಳ ದುಷ್ಪರಿಣಾಮ.

ನಾನು ನಶ್ಯಹಾಕುವುದು, ಚುಟ್ಟಾಸೇದುವುದು, ತಂಬಾಕಿನೊಂದಿಗೆ ಎಲೆಯಡಿಕೆ ಜಗಿಯುವುದು. ಇವುಗಳ ಪರಮಭಕ್ತನಾಗಿದ್ದೆನು. ಈ ಪಿಶಾಚತ್ರಯಗಳೊಂದೊಂದರಲ್ಲಿಯೂ ಇರುವ ಆರೋಗ್ಯನಾಶಕ, ಸ್ವಾಸ್ಥ್ಯವಿನಾಶಕ, ದ್ರವ್ಯಭಕ್ಷಕ ನೀತಿವಿಧ್ವಂಸಕ ಗುಣಗಳು ನನಗೆ ತಿಳಿದಿರಲಿಲ್ಲ. ಈ ಪಿಶಾಚತ್ರಯಗಳ ಸೇವನೆಯೆಂದರೆ ಸುಧಾರಕರ ಲಕ್ಷಣವೆಂದೂ ಶಿಷ್ಟಾಚಾರದ ಪದ್ಧತಿಯೆಂದೂ ಸಭ್ಯವರ್ತನದ ಹೆಗ್ಗುರುತೆಂದೂ ನಾನು ಭಾವಿಸಿದ್ದೆನು. ಇದರಂತೆ ಬಾಲ ದಿಂದಲೂ ಇವುಗಳ ಆರಾಧನೆಗೆ ಯಾವ ಕುಂದುಕೊರತೆಯೂ ಆಗದಂತೆ ನಡಿಸಿಕೊಂಡು ಬಂದಿದ್ದೆನು. ಇವುಗಳಲ್ಲಿ ಒಂದೊಂದರ ಒಂದುವಾರದ ತೀರಾ ಕಡಮೆಯ ಖರ್ಚೆಂದರೆ 200 ಎಲೆಗಳಿಗೆ 2 ಆಣೆಯೂ, ಒಂದು ಸೇರು ಅಡಿಕೆಗೆ 3 ಆಣೆಯೂ ಅರ್ಧಸೇರು ತಂಬಾಕಿಗೆ 3 ಆಣೆಯೂ ಅಂತೂ 8 ಆಣೆಗಳೂ ಚುಟ್ಟದ ಬಾಬಿಗೆ ರೂಲರ್ ಸಿಗರೇಟ್ ಪ್ಯಾಕ್ 1 ಕ್ಕೆ 1 ಆ. 6 ಪೈ. ಯಂತೆ 4-6 ಕ್ಕೆ ಸುಮಾರು 8 ಆಣೆಗಳೂ ಬೆಂಕಿಯಪೆಟ್ಟಿಗಾಗಿ 1 ಆಣೆಯೂ ನಶ್ಯ ಒಂದು ತೊಲೆಗೆ 1 ಆ. 6 ಪೈ. ಯೂ ಹೀಗೆ ಒಟ್ಟನಲ್ಲಿ ಒಂದು ರೂಪಾಯಿಗೆ ಮೇಲ್ಪಟ್ಟು ಖರ್ಚಾಗುತ್ತಿದ್ದಿತು. ಇದರಂತೆ ಒಂದು ತಿಂಗಳಿಗಾಗುವ 4 ರೂಪಾಯಿಗಳಂತೆ ಎಷ್ಟೋ ವರ್ಷಗಳವರಿವಿಗೆ ಖರ್ಚುಮಾಡುತ್ತ ಬಂದಿರುವೆನು. ನೋಡಿದಿರೋ ಒಬ್ಬೊಬ್ಬನ ಈ ತರದ ಖರ್ಚಿನ ಪ್ರಕಾರ ಎಷ್ಟೊಂದು ದ್ರವ್ಯವು ವೆಚ್ಚವಾಗುತ್ತಲಿರುವುದು? ಈಚೆಗೆ ನನ್ನ ಮಿತ್ರರೊಬ್ಬರು ಮೇಲೆ ಹೇಳಿದಂತೆ ಈ ದುರಭ್ಯಾಸದ ದುಷ್ಫಲಗಳನ್ನೂ, ಕಣ್ಣಿಗೆ ಕಾಣಿಸದಂತೆ ಅವು ಒಂದು ವರ್ಷದೊಳಗಾಗಿ ಹೀಗೆ 50 ರೂಪಾಯಿಗಳಗಟ್ಟಲೆ ನುಂಗುತ್ತಿರುವ ವಿವರವನ್ನೂ ನನಗೆ ತಿಳಿಸಿ ಈ ದುಶ್ಚಟಗಳನ್ನು ಬಿಡಬೇಕೆಂದು ಬೋಧಿಸಿದರು. ಮೊದಮೊದಲು ನನಗೆ ಇವುಗಳನ್ನು ಬಿಡುವುದಕ್ಕೆ ಬಹಳ ಕಠಿಣವೆನಿಸಿತು. ಆದರೂ ಪ್ರಯತ್ನಪೂರ್ವಕವಾಗಿ ಅವುಗಳನ್ನು ಪೂರ್ಣವರ್ಜಿಸಿಬಿಟ್ಟೆನು. ಅಲ್ಲಿಂದೀಚೆಗೆ ಅವುಗಳಿಗಾಗಿ ಖರ್ಚಾಗುತ್ತಿದ್ದ ಮೊಬಲಗು 5 ರೂಪಾಯಿಗಳು ಕೂಡಿರುತ್ತವೆ. ಈ ಮೊಬಲಗನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಕನ್ನಡ ಲೋ|| ಸೆ|| ಪರೀಕ್ಷೆಯಲ್ಲಿ ಪ್ರಾವಿನ್ಸಿಗೆ ಮೊದಲನೆಯವನಾಗಿ ಈ ವರ್ಷದಲ್ಲಿ ಅಂದರೆ ಕಳೆದ 1923-24ನೆ ಸಾಲಿನಲ್ಲಿ ಪ್ಯಾಸಾದ ವೀರಶೈವ ವಿದ್ಯಾರ್ಥಿ ಯಾವನಾದರೂ ಇರುವ ಪಕ್ಷಕ್ಕೆ ಆತನಿಗೆ ಬಹುಮಾನವಾಗಿ ಕೊಡಲು ಗೊತ್ತುಮಾಡಿರುತ್ತೇನೆ. ಪರಂತು ಈ ಡಿಸ್ಟ್ರಿಕ್ಟಿನಲ್ಲಿ ಇಂಥ ವಿದ್ಯಾರ್ಥಿಯು ಇಲ್ಲದಿರುವ ಪಕ್ಷಕ್ಕೆ ಇತರಕಡೆ ಈ ರೀತಿ ಪಾಸಾಗಿರುವ ವಿದ್ಯಾರ್ಥಿಗಾದರೂ ಕೊಡಲು ಸಿದ್ಧನಿದ್ದೇನೆ. ಕದಾಚಿತು ವೀರಶೈವ ವಿದ್ಯಾರ್ಥಿಗಳಲ್ಲಿ ಈ ರೀತಿ ತೇರ್ಗಡೆಯಾದವರು ಯಾರೂ ಇಲ್ಲದೆ ಹೋದಪಕ್ಷಕ್ಕೆ ಒಂದು ಸೆಂಟರಿಗಾದರೂ ಫಸ್ಟ್ ಪ್ಯಾಸಾದ ವಿದ್ಯಾರ್ಥಿಗೆ ಕೊಡತಕ್ಕವನಾಗಿದ್ದೇನೆ. ಅಂಥ ವಿದ್ಯಾರ್ಥಿಗಳು ನನ್ನೊಂದಿಗೆ ಪತ್ರವ್ಯವಹಾರನಡಿಸಿ ಬಹುಮಾನ ದ್ರವ್ಯವನ್ನು ಪಡೆಯಬಹುದೆಂದು ಕೋರುವ,

ತತ್ತೂರು ಶ್ರೀಕಂಠಗೌಡ, ಜಮೀನ್ದಾರ್, ತಾ|| ಸೊರಬ.

ಇಳಕಲ್ಲ ಮಹಂತಪ್ಪನವರ ನಿಧನವು.

ಶ್ರೀ ಮಹಾಂತೇಶ ಎ. ವಿ. ಸ್ಕೂಲಿನ ಸೆಕ್ರೆಟರಿ ಮತ್ತು ಶ್ರೀ ಮಹಾಂತೇಶವಾಚನಾಲಯದ ಸಾಹಸಿಕರೂ, ವೀರಶೈವ ತರುಣಸಂಘದ ಆಧಾರಸ್ತಂಭರೂ, ವಿದ್ಯಾರ್ಥಿಗಳೂ, ವಿದ್ಯಾಪಕ್ಷಪಾತಿಗಳೂ ಆದ ಮಹಾಂತಪ್ಪಾ ಸಂಗಪ್ಪಾ ಕಾರಂಜಿಯವರು ಮುಂಬಯಿಯಲ್ಲಿ ಒಮ್ಮಿಂದೊಮ್ಮೆ ಪಾರ್ಶ್ವರೋಗದಿಂದ ನರಳಿದೆಂದು ಸೋಮವಾರ ತಾ|| 7-7-24 ರ 3½ ಗಂಟೆಗೆ ತಂತಿಯಿಂದ ತಿಳಿದು, ಇಳಕಲ್ಲ ಪಟ್ಟಣವೇ ಶೋಕಸಾಗರದಲ್ಲಿ ಮುಳಗಿತು. ಈ ನಿಧನದ ವಾರ್ತೆಯನ್ನು ಕೇಳಿದ ಪ್ರತಿಯೊಬ್ಬನೂ ತನ್ನ ಮಿತ್ರನೂ ಹಿತಚಿಂತಕನೂ, ಛೇ ತನವಮನೆತನದಲ್ಲೊಬ್ಬನನ್ನು ಕಳೆಕೊಂಡನೆಂದು ಅನಿಸಿತು. ವೃದ್ಧರೂ, ಸ್ತ್ರೀಯರೂ, ಬಾಲಬಾಲಕಿಯರೂ, ತಮಗಾದ ದುಃಖವನ್ನು ಸಹಿಸದೆ ಇವರ ಹಿಂದೆ ಶೋಕಿಸುವ ವೃದ್ಧತಾಯಿಯು ಮತ್ತು ತರುಣ ಹೆಂಡತಿಯಳಡೆಗೆ ಹೋಗಲು ಮನೆಯು ಸಾಲದೆ ಹೊರಬದಿರಸ್ತೆಯಲ್ಲಿ ನಿಲ್ಲಬೇಕಾಯಿತು. ಪಾಪ! ತಾಯಿಯಗೆ ಈ ಸದ್ಗುಣಿಯಾದ ಕುಲದೀಪಕನನ್ನು ಕಳೆಕೊಂಡದ್ದರಿಂದಲೂ, ಹೆಂಡತಿಗೆ ಸಂತತಿಯಿಲ್ಲದ್ದರಿಂದಲೂ ಅವರ ದುಃಖಕ್ಕೆ ಎಣೆಯಿಲ್ಲದಾಯಿತು. ಅವರಿರುವಾಗಲೇ ಎಷ್ಟೋ ಜನರು ಮಕ್ಕಳಿಲ್ಲೆಂದು ಹಳಹಳಿಸಲು ಮುಗುಳುನಗೆಯಿಂದನಕ್ಕು ಶ್ರೀ ಮಹಾಂತೇಶ ಎ. ವಿ. ಸ್ಕೂಲಿನಲ್ಲಿಯ ವಿದ್ಯಾರ್ಥಿಗಳೇ ನನ್ನ ಚಿರಂಜೀವಗಳೆಂದು ಹಟ್ಟನೇ ಹೇಳುತ್ತಿದ್ದರು. ಪರಸ್ಥಳದಿಂದ ಬಂದ ವಿದ್ಯಾರ್ಥಿಗಳಿಗೆ ಊಟದ ಮನೆಗಳನ್ನು ಗೊತ್ತು ಮಾಡಲಿಕ್ಕೆ ಯಾವಾಗಲೂ ಸಿದ್ಧರಿದ್ದರು. ಇವರು ಸಾಮಾಜಿಕಕಾರ್ಯಗಳನ್ನು ಕೈಗೊಂಡು ಅವುಗಳನ್ನು ನೆರವೇರಿಸಿ ಉಪಯುಕ್ತವಾದ ಸಂಸ್ಥೆಗಳನ್ನು ದೃಢೀಕರಿಸಲಿಕ್ಕೆ ಯಾವಾಗಲೂ ಹೆಣಗಾಡುತ್ತಿದ್ದರು. ಈಗಿನ ಶ್ರೀ ಮಹಾಂತೇಶ ವಾಚನಾಲಯಕ್ಕೆ 850 ಪುಸ್ತಕಗಳೂ 2000 ರೂ. ಹಣವೂ ಶ್ರೀ ಮಹಾಂತೇಶ ಎ.ವಿ. ಸ್ಕೂಲಿಗೆ ಸ್ವತಂತ್ರ ಇಮಾರತಿಯೂ 3000 ರೂ. ಹಣವೂ ಕೂಡಿದ್ದು ಇವರ ಸಾಹಸದ ಫಲವು. ಶ್ರೀ ಮಹಾಂತೇಶನ ಕೃಪೆಯಿದ್ದಲ್ಲಿ ಈ ಎ. ವಿ. ಸ್ಕೂಲನ್ನು ಹಾಯಸ್ಕೂಲ ಮಾಡುವೆವೆಂದು ಆಗಾಗ್ಗೆ ಅನ್ನುತ್ತಿದ್ದರು ತಾವು ನೆರವೇರಿಸಿದ ಕಾರ್ಯಗಳಿಗಾಗಿ ಮರ್ಯಾದೆಯನ್ನು ಎಂದೂ ಅಪೇಕ್ಷಿಸದೆ ಯಾವಾಗಲೂ ನಾನು ಸಮಾಜಸೇವಕನೇ ಹೊರ್ತಾಗಿ ಮುಖಂಡನಲ್ಲೆಂದು ಬಹು ಸೌಜನ್ಯದಿಂದ ಹೇಳುತ್ತಿದ್ದರು. ಅವರ ಸ್ಥಿತಿಯು ಬಡತನದಿದ್ದಿತು. ಹಗಲಿರುಳು ತನುಮನಗಳಿಂದ ಸಮಾಜಕ್ಕಾಗಿ ಹೆಣಗಾಡುವ ಧುರೀಣನ ಮರಣದ ಹಾನಿಯು ತುಂಬಲಿಕ್ಕೆ ಇನ್ನೆಷ್ಟು ಕಾಲಾವಧಿಯೋ ತಿಳಿಯದು. ಅವರ ಸಂಸ್ಥೆಗಳ ಉಪಯೋಗಮಾಡಿಕೊಳ್ಳುವ ಪ್ರತಿಒಬ್ಬನು ಅವರ ಗುಣಗಳಲ್ಲಿ ಒಂದನ್ನಾದರೂ ತಮ್ಮ ಆಯುಷ್ಯದ ಧ್ಯೇಯವನ್ನಾಗಿಟ್ಟುಕೊಂಡರೆ ಅವರ ಯೋಗ್ಯಸ್ಮಾರಕವಾದಂತಾಗುವದು. ಮರಣದಸಮಯದಲ್ಲಿ ಇವರ ವಯಸ್ಸು 38 ಇತ್ತು.

ತಮ್ಮ ಕೃಪಾಭಿಲಾಷಿ.

ಆರ್. ಗೋಪಾಲಸ್ವಾಮಿ ಅಯ್ಯರ್‌ರವರ ಸರ್ವವ್ಯಾಪಕತೆ.

ಮೇಲ್ಕಂಡ ದೊಡ್ಡಮನುಷ್ಯರು ಯಾವ ಆಫೀಸರ ಮನೆಯಲ್ಲೂ, ಯಾವ ಆಫೀಸಿನಲ್ಲೂ ತಾವೇತಾವಾಗಿ ಓಡಾಡುತ್ತಲಿರುವುದು ಸರ್ವವಿದಿತವಾಗಿದೆ. ಈ ವಿಧವಾದ ಅವರ ವ್ಯಾಪಕತೆಯು ಬಹಳಮಟ್ಟಿಗೆ ಸ್ವಸಾಧನವಾಗಿದ್ದು ಸ್ವಲ್ಪಮಟ್ಟಿಗೆ ಸಂಬಂಧಪಟ್ಟ ದೊಡ್ಡಮನುಷ್ಯರ ಉತ್ತೇಜನದಿಂದ ಪುಷ್ಟೀಕರಿಸಲ್ಪಟ್ಟಿದೆ. ಆದರೆ ಇತ್ತೀಚೆಗೆ ಸರ್ಕಾರದವರು ಇಲ್ಲವೆ ಇಲಾಖೆಯ ಮೊಖ್ತೇಸರರು ಸಹ ಇವರಿಗೆ ಹೆಚ್ಚು ಹೆಚ್ಚಾದ ಗಣನೆಯನ್ನು ಕೊಡುತ್ತಲಿರುವಂತೆ ತೋರುತ್ತದೆ. ಪಂಚಮರ ಉದ್ಧರಣ ಕಾರ್ಯದಲ್ಲಿ ಶ್ರದ್ಧೆಯನ್ನು ವಹಿಸಿರತಕ್ಕವರು ಮೈಸೂರು ದೇಶದಲ್ಲಿ ಇವರೊಬ್ಬರೇ ಎನ್ನುವಂತೆ ಸಂಪದಭ್ಯುದಯ ಸಮಾಜದ (ಎಕನಾಮಿಕ್ ಕಾನ್ಫರೆನ್ಸಿನ) ವಿದ್ಯಾಶಾಖೆಗೆ ಪಂಚಮರ ವಿದ್ಯಾಭ್ಯಾಸದ ಪ್ರತಿನಿಧಿಯನ್ನಾಗಿ ಸರ್ಕಾರದವರು ಇವರನ್ನು ನೇಮಿಸಿರುವರು. ಪಂಚಮರ ನಿಜವಾದ ಪುರೋಭಿವೃದ್ಧಿಯನ್ನು ಕೋರತಕ್ಕ ಮೈಸೂರುದೇಶಸ್ಥರು ಇನ್ನಾರೂ ಇರಲಿಲ್ಲವೇನೋ? ಪ್ರಜಾಪ್ರತಿನಿಧಿ ಸಭೆಯಲ್ಲಿ ಇವರ ನಡೆನುಡಿಯನ್ನು ನೋಡಿರತಕ್ಕವರೆಲ್ಲರೂ ಇವರು ಹಿಂದುಳಿದ ಜನಾಂಗದವರ ಪುರೋಭಿವೃದ್ಧಿಯಲ್ಲಿ ಎಷ್ಟರಮಟ್ಟಿನ ಸಹನೆಯುಳ್ಳವರೆಂಬುದನ್ನು ಬಲ್ಲರು. ಇಂತಹವರನ್ನು ನಮ್ಮ ವಿದ್ಯಾಶಾಖೆಯ ಮುಖ್ಯಾಧಿಕಾರಿಗಳಾದ ಮಿ|| ಬಾಲಸುಂದರಂ ಅಯ್ಯರ್‌ರವರು ಬೆಂಗಳೂರು ಡಿಸ್ಟ್ರಿಕ್ಟಿನ ಹಿಂದುಳಿದ ಜನಾಂಗದವರ ಸ್ಕಾಲರ್‌ಷಿಪ್ ಕಮಿಟಿಗೆ ಮೆಂಬರನ್ನಾಗಿ ಮಾಡಿರುವಂತೆ ಈಗತಾನೆ ತಿಳಿಯಿತು. ಸಮಯಾಸಮಯವೆನ್ನದೆ ಸದಾಕಾಲದಲ್ಲೂ ಹಿಂದುಳಿದಜನಾಂಗದ ವಿದ್ಯಾರ್ಥಿಗಳಿಗೆ ಕೊಡಲ್ಪಡುತ್ತಲಿರುವ ವೇತನಗಳು ಕ್ರಮವಾಗಿ ಹಂಚಲ್ಪಡುತ್ತಲಿಲ್ಲವೆಂದು ವೃಥಾ ದೋಷಾರೋಪಣೆಯನ್ನು ಮಾಡುತ್ತಲಿರುವ ಮ|| ರಾಮಚಂದ್ರರಾವ್ ಸಿಂಧೆಯವರನ್ನಾಗಲಿ, ಅಥವಾ ಹಿಂದುಳಿದ ಜನಾಂಗಕ್ಕೆ ಸೇರಿದ ಮತ್ಯಾರನ್ನಾನ್ನಾಗಲಿ ಮೆಂಬರನ್ನಾಗಿಮಾಡದೆ ಮಿ|| ಅಯ್ಯರ್‌ರವರನ್ನು ಮೆಂಬರನ್ನಾಗಿ ನೇಮಿಸಲು ಕಾರಣವೇನಿರಬಹುದು? ಅವರ ಸರ್ವವ್ಯಾಪಕತೆಗೆ ಸರ್ಕಾರದವರು ಗೌರವವನ್ನು ಕೊಟ್ಟಿರುತ್ತಾರೆಂದು ಅವಿದ್ಯಾವಂತರಾದ ಜನಸಾಮಾನ್ಯಕ್ಕೆ ತೋರ್ಪಡಿಸುವುದಕ್ಕೋ? ಮಿ|| ಅಯ್ಯರ್‌ಯವರು ನ್ಯಾಯವಿಧಾಯಕ ಸಭೆಯ ಮೆಂಬರಲ್ಲದಿದ್ದಾಗ್ಗೂ ಈಸಾರೆ ನಡೆದ ಮಿಟಿಂಗಿನಲ್ಲಿ ಮೆಂಬರುಗಳ ಓಡಾಟಕ್ಕಿಂತಲೂ, ಮಿ|| ಅಯ್ಯರ್‌ರವರ ದರ್ಬಾರೇ ಹೆಚ್ಚಾಗಿತ್ತು. ಕೌನ್ಸಿಲಿನಲ್ಲಿದ್ದ ಅಧಿಕಾರಿವರ್ಗದವರಲ್ಲೂ, ರಿಕಾರ್ಡು ವಗೈರೆ ಇಟ್ಟುಕೊಂಡಿದ್ದ ನೌಕರವಾನೇರಲ್ಲೂ ಅಯ್ಯರ್‌ರವರು ಬಹಳ ಸಲಿಗೆಯಿಂದಲೂ, ಧೈರ್ಯದಿಂದಲೂ ಸಂಭಾಷಣೆಯನ್ನು ಮಾಡುತ್ತಲಿದ್ದುದನ್ನು ಅಲ್ಲಿದ್ದವರಲ್ಲಿ ಯಾರುತಾನೆ ಅರಿಯರು? ಇದರ ವಿಚಾರವಾಗಿ ಹಿಂದೆ ಪೇಪರುಗಳಲ್ಲಿ ದೂರುಗಳು ಬಂದು ಅವರ ಈ ವಿಧವಾದ ವರ್ತನಕ್ಕೆ ಸ್ವಲ್ಪಮಟ್ಟಿಗೆ ನಿರ್ಬಂಧವಿದ್ದಿತೆಂದು ನಾನು ಪರಸ್ಪರ ಕೇಳಿದ್ದೆನು. ಆದರೆ ಕಾಲಾತೀತವಾದಂತೆಲ್ಲಾ ಅದು ಮರೆಯಲ್ಪಟ್ಟಿರುವಂತೆ ಕಾಣುತ್ತೆ. ಈಗಲೂ ಸಂಬಂಧಪಟ್ಟವರು ಈ ವಿಚಾರದಲ್ಲಿ ಎಚ್ಚರಿಕೆಯಿಂದಿರುವುದು ಉತ್ತಮ.

ಒಬ್ಬ ಮೈಸೂರಿನವ.

ಮೈಸೂರು ದೇಶದಲ್ಲಿರುವ ಲೈಫ್ ಇನ್‌ಶೂರೆನ್ಸ್ ಕಂಪೆನಿಗಳು.

ನಮ್ಮ ಮೈಸೂರು ದೇಶದಲ್ಲಿ ಬಹಳ ದಿವಸಗಳಿಂದಲೂ ಒಂದೆರಡು ಪರದೇಶದ ಕಂಪೆನಿಗಳು ಮಾತ್ರ ತಲೆಹಾಕಿ ಪಾಲಿಸಿದಾರರನ್ನು ಏಜಂಟರುಗಳ ಮುಖಾಂತ್ರ ಸೇರಿಸುವ ವಾಡಿಕೆಯಲ್ಲಿತ್ತು. ಇವುಗಳ ಪೈಕಿ "ಬೊಂಬಾಯಿ ಓರಿಯಂಟಲ್ ಗೌರ್ನಮೆಂಟು ಸೆಕ್ಯೂರಿಟಿ ಲೈಫ್ ಆಫೀಸು" ಬಹಳ ಪ್ರಖ್ಯಾತಿಯಿಂದಲೂ ಮತ್ತೂ ಮಿತುವರ್ಜಿಯಿಂದಲೂ ಹಳ್ಳಿಹಳ್ಳಿಗಳಲ್ಲಿಯೂ ಏಜಂಟರುಗಳನ್ನು ನೇಮಿಸಿ ಬಹಳ ಉತ್ಸಾಹವನ್ನು ಏಜಂಟರುಗಳಿಗೆ ಉಂಟುಮಾಡಿ ಹೊಸ ವಿಮೇದಾರರನ್ನು ಸೇರಿಸುತ್ತಾ ಬಹಳ ಅಭಿವೃದ್ಧಿಸ್ಥಿತಿಗೆ ಬಂದಿದೆ. ನಮ್ಮ ಮಹಾರಾಜಾ ಸರ್ಕಾರದವರು ಸ್ಥಾಪಿಸಿರುವ (Public Branch) ಕಂಪೆನಿಯು ದಿನೇ ದಿನೇ ಕೃಶವಾಗುತ್ತಿರುವಂತೆ ಕಾಣುತ್ತೆ. ಇದಕ್ಕೆ ಮೂಲಕಾರಣ ಯಾವುದೆಂದರೆ:—

1. ಸರ್ಕಾರದಲ್ಲಿ ನೌಕರಸ್ತರಾಗಿರುವ ಎಷ್ಟೋ ಜನರು ಈ ಪ್ರೈವಟ್ ಕಂಪೆನಿಗಳಲ್ಲಿ ಉದ್ಯೋಗಮಾಡುತ್ತಿರುವುದು ಮತ್ತೂ ಪ್ರೈವಟ್ ಕಂಪೆನಿಗಳ ಏಜಂಟರಾಗಿ ಕೆಲಸ ಮಾಡುವುದು. ಮೇಲ್ಕಂಡ ಸರ್ಕಾರದ ನೌಕರರೆಲ್ಲರೂ ತಮ್ಮ ಗಮನವನ್ನು ಆಕಡೆ ಬಿಟ್ಟು ನಮ್ಮ ಸರ್ಕಾರದವರು ಸ್ಥಾಪಿಸಿರತಕ್ಕ ಸಂಘಕ್ಕೇ ಕೆಲಸಮಾಡಿದರೆ ಎಷ್ಟೋ ಹಣವು ನಮ್ಮ ದೇಶದಲ್ಲೇ ನಿಂತು ಸರ್ಕಾರಕ್ಕೆ ಎಷ್ಟೋ ಉತ್ತೇಜನಕೊಡುತ್ತೆ. 2. ಸರ್ಕಾರದ ಕೆಲಸದಲ್ಲಿರುವ ಡಾಕ್ಟರುಗಳು ತಮಗೆ ಇತರ ಊರುಗಳಲ್ಲಿ ಕೆಲಸವಿಲ್ಲದಿದ್ದಾಗ್ಯೂ ರಜಾಪಡೆದೋ ಅಥವಾ ಇನ್ಸ್‌ಪೆಕ್ಷನ್ ಡ್ಯೂಟಿಯ ಮೇಲೆಯೋ ಇತರ ಕಂಪೆನಿಯ ಏಜಂಟರುಗಳ ಹಿಂದೆ ಹೋಗಿ ಜನಗಳನ್ನು ಪರೀಕ್ಷೆ ಮಾಡುತ್ತಿರುವರು. ಹೀಗೆ ಮಾಡುವುದು "ಸರ್ವಿಸ್ ರೆಗ್ಯುಲೇಷನ್ಸಿ"ಗೆ ವಿರೋಧವಲ್ಲವೇ? ಸರ್ಕಾರದವರು ಇದನ್ನು ತಿಳಿದೂ ಸುಮ್ಮನೆ ಇರುವುದರಿಂದ ಇತರ ಹೊಸ ಕಂಪೆನಿಗಳಷ್ಟು ಮುಂದಕ್ಕೆ ನಮ್ಮ ಸರ್ಕಾರದ ಸಂಘವು ಬರಲಾರದೆಂದು ಹೇಳಬಹುದಾಗಿದೆ. ಸರ್ಕಾರದ ಉತ್ಪತ್ತಿಯ ಹಣದಾಸೆಗಾಗಿ ಅದಕ್ಕೆ ವ್ಯತಿರಿಕ್ತರಾಗಿ ಕೆಲಸಮಾಡುತ್ತಿರುವ ನೌಕರರನ್ನು ಸರ್ಕಾರದವರು ಚೆನ್ನಾಗಿ ವಿಚಾರಣೆಮಾಡಿ ಅವರುಗಳು ಎಲ್ಲಿಯೂ ಪ್ರೈವೇಟ್ ಕೆಲಸಗಳನ್ನು ಮಾಡಕೂಡದೆಂದು ನಿರ್ಬಂಧಿಸಬಾರದು? ನಾನು ಈ ದೇಶದವನಾದ್ದರಿಂದ ಈ ನೌಕರರು ಮಾಡತಕ್ಕ ಅನ್ಯಾಯವನ್ನು ಸಹಿಸಲಾರದೆ ಈ ಪ್ರಕಾರ ಬರೆದಿದೇನೆ. ಈ ನೌಕರರೂ, ಡಾಕ್ಟರುಗಳು ಸಹ ಸರ್ಕಾರಿ ಸಂಘವನ್ನು ಪ್ರೋತ್ಸಾಹಿಸಿದಲ್ಲಿ ಖಂಡಿತವಾಗಿ ಕ್ಷಿಪ್ರದಲ್ಲಿಯೇ ಸರ್ಕಾರಿ ಸಂಘವು ಎಷ್ಟೋ ಮುಂದಕ್ಕೆ ಬರಲು ಯಾವ ಅಭ್ಯಂತರವೂ ಇರುವುದಿಲ್ಲ. ಆದಪ್ರಯುಕ್ತ ಮಹಾರಾಜಾ ಸರ್ಕಾರದವರು ತಮ್ಮ ಶಾಖೆಯ ಸಂಘವು ಈ ಪ್ರಕಾರ ನಿದ್ರೆ ಮಾಡುತ್ತಿರುವುದನ್ನು ಲಕ್ಷ್ಯವಿಟ್ಟು ನೋಡಿ ಒಂದು ಸರ್ಕ್ಯುಲರನ್ನು ನೌಕರರುಗಳಿಗೆ ಕಳುಹಿಸಿ ಅವರುಗಳು ಇತರ ಹವ್ಯಾಸಗಳನ್ನು ಬಿಟ್ಟು ತಮ್ಮ ಸಂಘಕ್ಕೇ ಕೆಲಸಮಾಡತಕ್ಕದ್ದೆಂದು ನಿರ್ಬಂಧಪಡಿಸಿದರೆ ಒಂದೆರಡು ತಿಂಗಳುಗಳಲ್ಲಿಯೇ ಅದರ ಫಲವು ತಿಳಿಯುತ್ತೆ. ಎಷ್ಟೋ ಹಣವು ಪರದೇಶದ ಕಂಪೆನಿಯವರಿಂದ ತೆಗೆದುಕೊಳ್ಳಲ್ಪಟ್ಟು ಮೈಸೂರು ನಿವಾಸಿಗಳ ಕೈಲಿ ಹಣವಿಲ್ಲದಂತಾಗಿದೆ. ಈ ಹಣವು ಇಲ್ಲಿಯೇ ನಿಂತಲ್ಲಿ ಖಜಾನೆ ತುಂಬಿ ಎಷ್ಟೋ ಸ್ಕೀಮ್‌ಗಳನ್ನು ನಡೆಸಬಹುದು. ಸರಿಯಾದ ಉತ್ತೇಜನವನ್ನು ಸರ್ಕಾರದವರು ಕೊಡುವುದಾದರೆ ದೇಶವತ್ಸಲರಾದ ಎಷ್ಟೋ ಏಜಂಟರೂ ಸಹ ನಿಂತು ಸರ್ಕಾರದ ಸಂಘಕ್ಕೆ ಕೆಲಸಮಾಡಲು ಸಿದ್ಧರಾಗಿರುತ್ತಾರೆ. ಈ ವಿಚಾರವಾಗಿ ಅತಿ ಜಾಗ್ರತೆಯಲ್ಲಿಯೇ ತಕ್ಕ ಏರ್ಪಾಟು ನಡೆಯುತ್ತೆಂದು ನಂಬಿರುವ,

ಇನ್‌ಶೂರೆನ್ಸ್ ಅಬ್‌ಸರ್‌ವರ್.

ಶ್ರೀ ಜಗದ್ಗುರು ಜಯದೇವ ವೀರಶೈವ ಸಂಘ ತುಂಕೂರು.

ಇದೇ ಸ್ಟಾರ್ ಪತ್ರಿಕೆಯಲ್ಲಿ ನಾನು 8-6-24ರಲ್ಲಿ ಪ್ರಕಟಿಸಿದ್ದ ಮೇಲಿನ ಸಂಘದ ಫಂಡಿನ ವಿಚಾರದಲ್ಲಿ ಯಾರೋಧರ್ಮಾಭಿಮಾನಿಗಳೆಂಬುವವರು ನಿಜಾಂಶವನ್ನು ಹೊರಪಡಿಸಲಿಲ್ಲವೆಂದು 6-7-1924ರ ಇದೇ ಸ್ಟಾರ್ ಪತ್ರಿಕೆಯಲ್ಲಿ ಸುಳ್ಳು ಅಪವಾದನೆ ಮಾಡಿರುವುದು ಸಖೇದಾಶ್ಚರ್ಯವಾಗಿರುವುದು. ಕೆಳಗೆ ವಿವರಿಸಿರುವ ಸಂಗತಿಗಳಿಂದ ನಿಜಾಂಶವು ಯಾರಲ್ಲಿದೆಯೆಂಬುದು ವಾಚಕರಿಗೆ ಗೊತ್ತಾಗದೆ ಇರಲಾರದು. ಧರ್ಮಾಭಿಮಾನಿಗಳೆಂಬುವವರು ಕೈ|| ಸಾ|| ಗುಬ್ಬಿ ಹುಚ್ಚಯ್ಯನವರು 10,000 (ಹತ್ತು ಸಾವಿರ) ರೂಪಾಯಿಗಳ ಸಾಲವನ್ನು ವೀರಶೈವ ಫಂಡಿಗಾಗಿ ಪ್ರತ್ಯೇಕಿಸಿದ್ದುದು ಸುಳ್ಳೆಂದೂ 6,500 ರೂ. ಗಳ ಸಾಲಗಳನ್ನು ಮಾತ್ರ ಸದರಿ ಫಂಡಿಗಾಗಿ ತೆಗೆದಿಟ್ಟದ್ದರಿಂದೂ ಬರೆದಿರುವುದನ್ನು ನೋಡಿದರೆ ಫಂಡಿಗೆ ಸಲ್ಲಬೇಕಾದ 3,500 ರೂ. ಗಳನ್ನು ಕೊಡಬೇಕಾದವರ ವಕಾಲತ್ತನ್ನು ವಹಿಸಿ 3,500 ರೂ. ಗಳನ್ನು ಅವರಿಗೆ ಉಳಿಸಿಕೊಡುವ ಧರ್ಮವನ್ನು ವ್ಯಕ್ತಪಡಿಸಿದಂತೆ ಕಾಣುತ್ತದೆ. ಪೌತಿ ಗುಬ್ಬಿ ಹುಚ್ಚಯ್ಯನವರ ಆಸ್ತಿಪಾಸ್ತಿ ದಾಖಲೆಗಳೆಲ್ಲವೂ ಸದರಿ 3500 ರೂ. ಗಳನ್ನು ಕೊಡಬೇಕಾದವರ ಸ್ವಾಧೀನದಲ್ಲಿದೆಯೆಂದು ಸದರಿ ಆಸ್ತಿಗೆ ಹಕ್ಕುದಾರರಾದ ವಾರಸುದಾರರಿಂದ ತಿಳಿದು ಬಂದಿರುವಾಗ ಅವುಗಳೆಲ್ಲವೂ ಹೊರಬೀಳುವ ಸಂಭವ ಹೇಗೆ ಎಂಬುದನ್ನು ವಾಚಕರೇ ಊಹಿಸಬಹುದು. ಇದುವರೆಗೆ ವಸೂಲ್ಮಾಡಿದ 6500 ರೂ. ಗಳ ಸಾಲದ ದಾಖಲೆಗಳೆಲ್ಲವೂ ಸದರಿ 3,500 ರೂ. ಗಳನ್ನು ಕೊಡಬೇಕಾದವರ ಸ್ವಾಧೀನದಲ್ಲಿದ್ದುದು ಎಲ್ಲರಿಗೂ ಗೊತ್ತಾಗಿರುತ್ತೆ. ಧರ್ಮಾಭಿಮಾನಿಗಳೆಂಬವರು ನಮೂದಿಸಿರುವ ಟ್ರಸ್ಟಿಗಳಲ್ಲೊಬ್ಬರಾದ ಮತ್ತು ಕೈ|| ಸಾ|| ಗುಬ್ಬಿ ಹುಚ್ಚಯ್ಯನವರ ಆಸ್ತಿಪಾಸ್ತಿಗಳೆಲ್ಲಕ್ಕೂ ಮುಖ್ಯ ವಾರಸುದಾರರಾದ ಅನುಬಸವಾರಾಧ್ಯರೆಂಬುವರು ಪೌತಿ ಗುಬ್ಬಿ ಹುಚ್ಚಯ್ಯನವರು 10,000 ರೂ. ಗಳನ್ನು ಈ ಧರ್ಮಕ್ಕಾಗಿ ವಿನಿಯೋಗಿಸಲು ಪ್ರತ್ಯೇಕಿಸಿಟ್ಟಿದ್ದಾರೆಂದು ವಗೈರೆ ನಮೂದಿಸಿ ಸದರಿ 10,000 ರೂ. ಗಳ ಸಾಲವನ್ನು ಸಂಘದ ಪ್ರಸಿಡೆಂಟರು ವಸೂಲ್ ಮಾಡುವಂತೆ ಪವರ್ ಆಫ್ ಅಟ್ಟರ್ನಿಯನ್ನು ಬರೆದು ರಿಜಿಸ್ಟರು ಮಾಡಿಸಿ ಕೊಟ್ಟಿರುವುದರಿಂದಲೂ, ಕೈ|| ಗುಬ್ಬಿ ಹುಚ್ಚಯ್ಯನವರು ಸಾಯುವ ಕಾಲದಲ್ಲಿ ಹತ್ತಿರದ್ದ ನಮ್ಮ ಕಮಿಟಿ ಮೆಂಬರುಗಳಲ್ಲಿ ಮುಖ್ಯರಾದ ಮ|| ರಾ|| ಟಿ. ಸಿ. ರೇವಣ್ಣನವರೇ ಮೊದಲಾದ ದೊಡ್ಡಮನುಷ್ಯರಲ್ಲಿ ಹೇಳಿದ್ದರ ಮೇಲೂ ಪ್ರಸಿಡೆಂಟರು ಪವರ್ ಆಫ್ ಅಟ್ಟರ್ನಿಯನ್ನು ಈಗ್ಗೆ 8-9 ತಿಂಗಳಲ್ಲಿ ಬರೆಸಿಕೊಂಡು 3,500 ರೂ. ಕೊಡಬೇಕೆಂದು ಮ|| ರಾ|| ಟಿ. ಸಿ. ಗುಬ್ಬಯ್ಯನವರಿಗೆ ನೋಟೀಸನ್ನು ಕೊಟ್ಟದ್ದಕ್ಕೆ ಅವರು ಹಣವನ್ನು ಕೊಡಬೇಕಾದ್ದಿಲ್ಲವೆಂದು ಜವಾಬ್ ಕೊಡಲಿಲ್ಲವಾಗಿ 10,000 ರೂ. ಗಳು ಕೈ|| ಗುಬ್ಬಿ ಹುಚ್ಚಯ್ಯನವರು ಇದಕ್ಕಾಗಿ ತೆಗೆದಿಟ್ಟದ್ದರೆಂದು ತಿಳಿದು ಬಂದು ಮೃತರ ಸಂಕಲ್ಪವು ನೆರವೇರಲೆಂಬ ಉದ್ದೇಶದಿಂದ ಬಾಕಿ ಇರತಕ್ಕ ಮೊಬಲಗನ್ನು ಸೇರಿಸಿಕೊಟ್ಟು ಸಹಾಯಮಾಡುವವರಾಗುತ್ತಾರೆಂದು ಬರೆದಿದ್ದಾಯಿತು. ಈಗಲೂ ಸದರಿ ಮ|| ರಾ|| ಟಿ. ಎಚ್. ಗುಬ್ಬಯ್ಯನವರು ತಾವು ಕೈ|| ಗುಬ್ಬಿ ಹುಚ್ಚಯ್ಯನವರಿಗೆ ಯಾವ ಸಾಲವನ್ನೂ ಕೊಡಬೇಕಾದ್ದಿಲ್ಲವೆಂದೂ, 10,000 ರೂ. ಗಳ ಸಾಲವನ್ನು ತೆಗೆದಿಟ್ಟದ್ದು ಸುಳ್ಳೆಂದೂ ತಾವು ಕೊಡಬೇಕಾಗಿದ್ದ ಸಾಲದಲ್ಲಿ 3,500 ಕೊಡಬೇಕೆಂದು ಪೌತಿ ಗುಬ್ಬಿ ಹುಚ್ಚಯ್ಯನವರು ಯಾವಾಗಲೂ ಹೇಳಲಿಲ್ಲವೆಂದೂ, ಹಾಗೆ ಕೊಡಬೇಕಾದ್ದಿಲ್ಲವೆಂದೂ ಈ ಪತ್ರಿಕೆಯಲ್ಲಿ ಪ್ರಕಟಿಸಬಹುದಾಗಿತ್ತು ಅಥವಾ ಈ ಸಂಘದ ಪ್ರೆಸಿಡೆಂಟಾದ ನನಗೆ ಬರವಣಿಗೆಮೂಲಕ ತಿಳಿಸಬಹುದಾಗಿತ್ತು. ಇದೊಂದನ್ನೂ ಧರ್ಮಾಭಿಮಾನಿಗಳೆಂಬುವವರು ಪರ್ಯಾಲೋಚಿಸದೆ ತಮ್ಮ ಇಷ್ಟಬಂದಂತೆ ಹರಟೆಯನ್ನು ಹರಟಿ ಪ್ರೆಸಿಡೆಂಟರು ಸುಳ್ಳುಬರೆದಿದ್ದಾರೆಂಬ ಅಪವಾದವನ್ನು ಹೊರಿಸುವುದು ನ್ಯಾಯ ಸಮ್ಮತವೋ ಅಲ್ಲವೋ ಎಂಬುದನ್ನು ವಾಚಕರೇ ಊಹಿಸಬಹುದು.

ಟಿ. ರುದ್ರಪ್ಪ, ಪ್ರೆಸಿಡೆಂಟ್.

ಗೋಮಾತಾರಕ್ಷಣೆ.

ಪ್ರತಿಯೊಂದು ಗ್ರಾಮಾಧಿಕಾರಿಗಳಾದ ಪಾಟೀಲರು, ಶಾನುಭೋಗರು ಮತ್ತು ಮುನಿಸಿಪಾಲ್ಟಿ ಮೆಂಬರುಗಳು, ವರ್ತಕರು, ರೈತರು ಮೊದಲಾದ ಮಹಾಶಯರಿಗೆ ವಿನಂತಿ.—ಪ್ರಿಯಬಾಂಧವರೇ, ಶ್ರೀ ಪರಮಾತ್ಮನಿಂದ ನಿರ್ಮಿತವಾದ ಈ ಜಗತ್ತಿನಲ್ಲಿ ಸಕಲಪ್ರಾಣಿಗಳೊಳಗೆ ಮನುಷ್ಯಜನ್ಮವು ಅತ್ಯಂತ ಶ್ರೇಷ್ಠವಾದದ್ದು. ಯಾಕೆಂದರೆ—ಮನುಷ್ಯನಿಗೆ, ಪಾಪಪುಣ್ಯ, ಸುಖ, ದುಃಖ, ಶಾಂತಿ, ಪರೋಪಕಾರ ಭೂತದಯೆ ಮುಂತಾದ ವಿಚಾರಶಕ್ತಿಯುಂಟು. ಅಂದಮೇಲೆ ಜ್ಞಾನರಹಿತವಾದ ಪ್ರಾಣಿಗಳನ್ನು ಕಾಪಾಡುವದು ಪ್ರತಿಒಬ್ಬ ಮನುಷ್ಯನ ಕರ್ತವ್ಯವಲ್ಲವೇ? ಆದರೆ ಈಗ ನಮ್ಮ ದೇಶದಲ್ಲಿ ಎಷ್ಟು ಭಯಂಕರವಾದ ಘಾತಕಾರ್ಯ ನಡೆಯುತ್ತಿರುವದು? ಸೋಡಿರಿ ವರುಷ 1ಕ್ಕೆ ಅಜಮಾಸ 60 ಲಕ್ಷ [illegible] ಗೋವುಗಳು, ಕೊಲ್ಲಲ್ಪಡುತ್ತಿರುವದಾಗಿ ಕಂಡುಬಂದಿದೆ. [illegible] ಹಿಂದೂ ಜನರಿಗೂ ಪರಮಪೂಜ್ಯವಾಗಿಯೂ ಆರೋಗ್ಯಕರವಾಗಿಯೂ [illegible] ಉಪಕಾರಿಯಾಗಿಯೂ ಇದ್ದು ನಮ್ಮೆಲ್ಲರಿಗೆ [illegible] ಮೊಸರು ಮುಂತಾದವುಗಳನ್ನು ಕೊಡುತ್ತಾ [illegible] ಉವ ಕರುಗಳನ್ನು ಕೊಟ್ಟು [illegible]

ತಯಾರಾದ ಮರಗಳ ಸಾಮಾನುಗಳು ನಷ್ಟವಾದುದು ಹೊರತು ಮತ್ತಾವ ಹೆಚ್ಚು ಸ್ವತ್ತಿನ ನಷ್ಟವೂ ಆಗಿಲ್ಲ. ತಕಾವಿ ಸಾಲಬೇಕಾಗಿರುವ ಜನರಿಗೆ ಅವುಗಳನ್ನು ಕೊಡಲು ಅಮಲ್ದಾರರುಗಳಿಗೆ ಹಣವನ್ನು ಒದಗಿಸಿದೆ.

ಯಗಚಿನದಿಯಿಂದ ತೆಗೆದ ಹುಲುವಾಗಲು ಮತ್ತು ಚಂಗರವಳ್ಳಿ ನಾಲೆಗಳ ಏರಿಗಳೂ ಮತ್ತು ಕಾವೇರೀನದಿಯಿಂದ ತೆಗೆದ ಕಟ್ಟೆಪುರ ಮತ್ತು ರಾಮನಾಥಪುರ ನಾಲೆಗಳ ಏರಿಗಳೂ ಒಡೆದುಹೋಗಿವೆ.

ಹಾಸನದ ತಾಲೋಕಿನಲ್ಲಿ ಒಂದು ಮೇಜರ್ ಮತ್ತು ಒಂದು ಮೈನರ್ ಕೆರೆಯೂ, ಬೇಲೂರು ತಾಲ್ಲೋಕಿನಲ್ಲಿ ಒಂದು ಮೇಜರ್ ಮತ್ತು 6 ಮೈನರ್ ಕೆರೆಗಳೂ, ಅರಕಲಗೂಡು ತಾಲೋಕಿನಲ್ಲಿ ಎರಡು ಮೈನರ್ ಕೆರೆಗಳೂ ಒಡೆದುಹೋಗಿರುತ್ತವೆ. ಇತರ 16 ತಾಲ್ಲೋಕುಗಳಲ್ಲಿ ಕೆರೆಗಳು ಸೋರಿಬಿದ್ದುವು. ಆದರೆ ಅವುಗಳ ದುರಸ್ತಿ ಕಾಮಗಾರಿಗೆ ಸರಿಯಾದ ಗಮನವನ್ನು ಕೊಟ್ಟು ಇದುವರಿಗೂ ಕೆರೆಗಳನ್ನು ಕಾಪಾಡಲಾಗಿದೆ. ಮಾದನಹಳ್ಳಿಯ ಆಚೆ ಹಾಸನ-ಮಂಗಳೂರು ರಸ್ತೆಯ 153 ಮತ್ತು 156ನೆ ಮೈಲಿಗಳಲ್ಲಿರತಕ್ಕ ಬಹು ಚಿಕ್ಕದಾದ ಎರಡು ಸೇತುವೆಗಳು ಕೊಚ್ಚಿಕೊಂಡುಹೋಗಿರುತ್ತವೆ. ಅದೇ ರಸ್ತೆಯಮೇಲೆ ಮೂರು ಪ್ರದೇಶಗಳ ಜಾರುಮಣ್ಣುಬಿದ್ದು ಪ್ರಯಾಣಕ್ಕೆ ಅಡಚಣೆಯಾಗಿದೆ. ಅಲ್ಲಿನ ಸ್ಥಿತಿಗತಿಗಳಿಗನುಗುಣವಾಗಿ ಅನುಕೂಲಕಂಡೊಡನೆಯೇ ಈ ನಷ್ಟಗಳಿಗೆ ತಕ್ಕ ಗಮನಕೊಡುವಂತೆ ಎಗ್ಜಿಕ್ಯೂಟಿವ್ ಇಂಜನೀಯರಿಗೆ ತಿಳಿಸಿರುತ್ತದೆ. ಅಲ್ಲದೆ ಅವರಲ್ಲಿ ಕೂಡಲೇ ಆಗಬೇಕಾಗಿರುವ ಕೆಲಸಗಳಿಗೆ ಗಮನಕೊಡುವುದಕ್ಕಾಗಿ 2500 ರೂ. ಗಳ ವಿಶೇಷ ಸ್ವಭಾವದ ಒಂದು "ಇಂಪ್ರೆಸ್ಟ್" ಇಟ್ಟಿರುತ್ತದೆ. ನಷ್ಟವುಂಟಾದ ಎಲ್ಲಾ ಪ್ರದೇಶಗಳನ್ನೂ ಡೆಪ್ಯೂಟಿಕಮೀಷನರವರು ಆಜಮಾಯಿಷಿಮಾಡಿರುತ್ತಾರಲ್ಲದೆ, ನಿವಾರಣೆಯ ಉಪಾಯಗಳನ್ನು ಏರ್ಪಡಿಸಿ ಹೊಸದಾಗಿ ಪ್ರಾಪ್ತವಾಗುವ ಜರೂರು ಸಂದರ್ಭಗಳಲ್ಲಿ ಕಾಲಕ್ಕೆ ಸರಿಯಾಗಿ ಆವಶ್ಯವಾದ ಕೆಲಸಗಳನ್ನು ನಡೆಸತಕ್ಕ ಬಗ್ಗೆ ಆಯಾಯ ಸ್ಥಳೀಯ ಅಧಿಕಾರಿಗಳಿಗೆ ತಕ್ಕ ತಿಳವಳಿಕೆಗಳನ್ನು ಕೊಟ್ಟಿರುತ್ತಾರೆ. ಜನಗಳ ಸಹಾಯಾರ್ಥವಾಗಿ ರಾಮನಾಥಪುರದಲ್ಲಿ ಹೆಚ್ಚುಗಟ್ಲೆಯ ಪೋಲೀಸ್ ಸಿಬ್ಬಂದಿಯನ್ನೂ ಸಹ ಇಟ್ಟಿರುತ್ತದೆ. ಹೇಮಾವತಿ ಮತ್ತು ಕಾವೇರೀನದಿಗಳಲ್ಲಿ ಪ್ರವಾಹಗಳು ಈ ಮಾಹೆ 15 ಮತ್ತು 17 ನೇ ತಾರೀಖುಗಳಲ್ಲಿ ಉಕ್ಕಿದ ಪರಮಾವಧಿಯ ಪ್ರಮಾಣಕ್ಕಿಂತಲೂ 2 ಅಡಿಗಳಷ್ಟು ಕಡಮೆಯಾದ ಪ್ರಮಾಣಕ್ಕೆ ಪುನಃ ಉಕ್ಕಿಬಂದಿರುವುದಾಗಿ ವರದಿಯು ಬಂದಿರುತ್ತದೆ. ಈ ಮೂರು ಡಿಸ್ಟ್ರಿಕ್ಟುಗಳ ಪೈಕಿ ಪ್ರತಿಯೊಂದರಲ್ಲಿಯೂ ಉಚಿತವಾದ ಸಹಾಯಕ್ಕಾಗಿ 1000 ರೂ. ಗಳನ್ನೂ ರಸ್ತೆಗಳನ್ನು ದುರಸ್ತು ಮಾಡುವುದಕ್ಕಾಗಿ 2,500 ರೂ. ಗಳನ್ನೂ, ತಕಾವಿ ಸಾಲಗಳಿಗಾಗಿ 5,000 ರೂ. ಗಳನ್ನೂ ಮುಂಜೂರು ಮಾಡಿರುವುದನ್ನು ಈ ಮಾಹೆ 23ನೇ ತಾರೀಖಿನ ತಮ್ಮ ಪ್ರಸಿದ್ಧಪತ್ರಿಕೆಯಲ್ಲಿ ಮೊದಲೇ ಸರ್ಕಾರದವರು ತಿಳಿಸಿರುತ್ತಾರೆ. ಡೆಪ್ಯೂಟಿಕಮೀಷನರುಗಳಿಂದ ಇನ್ನೂ ಹೆಚ್ಚಿನ ತಖ್ತೀಲುಗಳು ತಲುಪಿದನಂತರ, ಇನ್ನೂ ಹೆಚ್ಚು ಹಣವನ್ನು ಒದಗಿಸತಕ್ಕದ್ದು ಆವಶ್ಯಕವೆಂಬ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸಿ ತೀರ್ಮಾನಿಸುವರಾಗಿದ್ದಾರೆ.

ಬೆಂಗಳೂರು, ಆರ್. ರಂಗರಾವ್.
25ನೇ ಜುಲೈ 1924. ಸರ್ಕಾರದ ಪಬ್ಲಿಸಿಟಿ ಆಫೀಸರು.

ಹಾಸನ ಡಿಸ್ಟ್ರಿಕ್ಟ್.—ರಾಮನಾಥಪುರದಲ್ಲಿ ಬಹುಬಡವರಾದ ಕೆಲವು ಜನರಿಗೆ ದಿಕ್ಕಿಲ್ಲದಂತಾಗಿದೆ. ಸರ್ಕಾರಿ ಉದ್ಯೋಗಸ್ಥರಲ್ಲದ ಜನರಿಂದ ಏರ್ಪಟ್ಟ ಕಮಿಟಿಯವರು ಪರೋಪಕಾರಾರ್ಥವಾದ ಏರ್ಪಾಡುಗಳನ್ನು ಸ್ವಂತವಾಗಿಮಾಡಿ, ಸಹಾಯ ದ್ರವ್ಯವನ್ನು ವಸೂಲ್ಮಾಡಿ, ಅದನ್ನು ವಿನಿಯೋಗಮಾಡಿರುತ್ತಾರೆ. ಮನೆಕಟ್ಟುವ ಸಾಮಾನುಗಳು, ಮುಟ್ಟುಗಳು ಮುಂತಾದುವುಗಳನ್ನು ಉಚಿತವಾಗಿ ಒದಗಿಸಿದೆ. ಮತ್ತಾವ ಕ್ರಮವನ್ನೂ ಜರುಗಿಸಬೇಕಾದುದಿಲ್ಲವೆಂದು ವರದಿಯು ಬಂದಿರುತ್ತದೆ. ಕೃಷ್ಣರಾಜಕಟ್ಟೆಗೂ ಅದರ ನಾಲೆಗಳಿಗೂ ಯಾವ ಅಪಾಯವೂ ಸಂಭವಿಸುವಂತಿಲ್ಲ. ಕಟ್ಟೆಪುರದನಾಲೆಯ ಪ್ರಧಾನವಾದ ತೂಬುಗಳ ಮುಖ್ಯಭಾಗವು ಕೊಚ್ಚಿಹೋಗಿದೆ. ಇದಲ್ಲದೆ, ಈ ನಾಲೆಯು ಮೊದಲನೆಯದ್ವಾರಕ್ಕೆ ಸಮೀಪದಲ್ಲಿ ಅಥವಾ ಪ್ರಧಾನವಾದ ತೂಬಿಗೆ ಕೆಲವು ಗಜಗಳ ಫಾಸಲೆಯೊಳಗಿರುವ ಹೆಚ್ಚು ನೀರುಹರಿದುಹೋಗುವ ಕೋಡಿಗೆ ಸಮೀಪದಲ್ಲಿ ಒಡೆದುಹೋಗಿದೆ ಸ್ವಲ್ಪ ಕೆಳಭಾಗದಲ್ಲಿ ಮತ್ತೊಂದು ಕಡೆಯೂ ಒಡೆದುಹೋಗಿದೆ. ಆದರೆ ಇದನ್ನು ಸುಲಭವಾಗಿ ಮುಚ್ಚಿಬಿಡುವುದು ಸಾಧ್ಯವೆಂದು ವರದಿಯು ಬಂದಿರುತ್ತದೆ.

ರಾಮನಾಥಪುರದ ನಾಲೆ.

ಈ ನಾಲೆಯ ಪ್ರಧಾನವಾದ ತೂಬುಗಳು ಭದ್ರವಾಗಿವೆ. ಆದರೂ ನದಿಯನೀರು ಹಳೆಯನಾಲೆಯಮೇಲ್ಗಡೆಯಲ್ಲಿ ನುಗ್ಗಿ ಬರುತ್ತಿರುವಂತೆಯೂ ಅದರ ಏರಿಯು ಒಡೆದುಹೋಗಿ, ನೀರು ರಾಮನಾಥಪುರದ ನಾಲೆಗೆ ನುಗ್ಗುತ್ತಿರುವಂತೆಯೂ ವರದಿಯು ಬಂದಿರುತ್ತದೆ. ನೀರೊದಗಿಸುವ ನಾಲೆಯಲ್ಲಿ ಒಂದು ಸಣ್ಣ ಸೋರಿಬಿದ್ದಿದೆ; ಆದರೆ ಉಂಟಾದ ನಷ್ಟವು ಅಲ್ಪವಾಗಿರುವಂತೆ ವರದಿಯಾಗಿದೆ. ಒಡೆದುಹೋಗಿರುವ ಕಡೆಯಲ್ಲಿ ದುರುಸ್ತಿಯ ಮತ್ತು ಮುಚ್ಚುವ ಕಾಮಗಾರಿಗಳನ್ನು ತ್ವರೆಯಿಂದ ನಡೆಸುವುದರಲ್ಲಿ ಎಗ್ಜಿಕ್ಯೂಟಿವ್ ಇಂಜನೀಯರುಗಳಿಗೆ ಸಹಾಯವನ್ನೊದಗಿಸುವಂತೆ ಅಮಲ್ದಾರರುಗಳಿಗೆ ತಿಳುವಳಿಕೆಗಳನ್ನು ಸಾದರ್ಮಾಡಲಾಗಿದೆ. ಕೇರಳಾಪುರದಲ್ಲಿ 5-6 ಮನೆಗಳು ಬಿದ್ದುಹೋಗಿರುವಂತೆ ವರದಿಯಾಗಿದೆ. ಆದರೆ ಯಾರಿಗೂ ಮನೆಮಠಗಳಿಲ್ಲದಂತಾಗಲಿಲ್ಲವೆಂದು ವರದಿಬಂದಿದೆ.

ಹಾಸನದ ಟವನಿನಲ್ಲಿರುವ ಮೂರು ಕೆರೆಗಳಿಂದಲೂ ನೀರು ವಿಪರೀತವಾಗಿ ಹರಿಯುತ್ತಿದೆ ಎಂದು ವರದಿಯು ಬಂದಿದೆ. ಬೀರನಹಳ್ಳಿ ಕೆರೆಯಿಂದ ಉಕ್ಕಿಬಂದ ನೀರು ಹಾಸನದ ಟವನಿಗೂ ರೈಲ್ವೆಸ್ಟೇಷನ್ನಿಗೂ ಮಧ್ಯದಲ್ಲಿರುವ ರಸ್ತೆಯಲ್ಲಿನಿಂತಿದೆ; ಆದರೆ ಇದರಿಂದ ಜನ ಸಂಚಾರಕ್ಕೆ ಭಾರಿತೊಂದರೆಯೇನೂ ಆಗಿಲ್ಲ. ಚನ್ನಪಟ್ಟಣದ ಕೆರೆಯಿಂದ ಬಹಳವಾಗಿ ನೀರು ಹರಿದು ಹಾಸನ-ಹೊಳೆನರಸೀಪುರದ ರಸ್ತೆಯು ಜನಸಂಚಾರಕ್ಕೆ ಅನುಪಯುಕ್ತವಾಗಿರುವಂತೆ ವರದಿಯು ಬಂದಿದೆ. ಹುಣಸಿನಕೆರೆಯ ನೀರು ಸ್ರವಿಸುದರಿಂದ, ಬೆಂಗಳೂರು-ಮಂಗಳೂರು ರಸ್ತೆಯೂ, ಹಾಸನ-ಸಕಲೇಶಪುರದ ರಸ್ತೆಯು ಜನಸಂಚಾರಕ್ಕೆ ಸ್ವಲ್ಪಕಾಲ ಅಪಾಯಕರವಾಗಿದ್ದಿತು.

ಆಕಡೆಗಳಲ್ಲಿ ಜನರು, ಬಂಡಿಗಳೂ, ತಿರುಗಾಡದಂತೆ ಎಚ್ಚರಿಕೆ ಕೊಡುವುದಕ್ಕೂ ಮತ್ತು ಕೆರೆಗೆ ಅಪಾಯವುಂಟಾಗದಂತೆ ನೋಡಿಕೊಳ್ಳುವುದಕ್ಕೂ ಆವಶ್ಯಕವಾದ ಏರ್ಪಾಡನ್ನು ಮಾಡಿದೆ. ಮಳೆಯು ನಿಂತರೆ ಕೆಲವು ದಿನಗಳಲ್ಲೇ ರಸ್ತೆಯು ಪ್ರಯಾಣಕ್ಕೆ ಅನುಕೂಲಿಸುವುದಾಗಿ ವರದಿಯಾಗಿದೆ. ಆಲೂರು ಸಬ್ ತಾಲ್ಲೂಕಿನಲ್ಲಿ ಯಗಚಿನದಿಯ ಉಪನದಿಗೆ ಅಡ್ಡಲಾಗಿರುವ ಮುದ್ದನಹಳ್ಳಿ ಆಣೆಯ ಅರ್ಧಭಾಗವು ಕೊಚ್ಚಿಕೊಂಡು ಹೋಗಿರುವುದಾಗಿ ವರದಿಯಾಗಿದೆ. ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಸ್ಥಿತಿಯು ಕನುಕೂಲಿಸುವರೀತಿಯಲ್ಲಿದೆ ಎಂದೂ ಮತ್ತು ಯಾವ ಹಟಾತ್ತಾದ ಅಪಾಯವಾಗಲಿ ಅಥವಾ ನಷ್ಟವಾಗಲಿ ಉಂಟಾಗುವ ಶಂಕೆಯು ಇಲ್ಲವೆಂದೂ ಡೆಪ್ಯೂಟಿಕಮೀಷನರವರು ತಿಳಿಸಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟ್.—ನದಿಗಳಲ್ಲಿ ಪುನಃ ಭಾರಿಪ್ರವಾಹಗಳು ಬಂದಿರುವುದಾಗಿ ಡೆಪ್ಯೂಟಿಕಮೀಷನರವರಿಂದ ವರದಿಯಾಗಿದೆ. ಎಡತೊರೆಯ ಕೆಲವು ಪ್ರದೇಶಗಳೂ ಮತ್ತು ನಂಜನಗೂಡಿನ ಸೇತುವೆಯೂ ನೀರಿನಲ್ಲಿ ಮುಳುಗಿಹೋಗಿರುವುದಾಗಿ ವರದಿಯಾಗಿದೆ. ನಂಜನಗೂಡಿನ ರೈಲ್ವೆರಸ್ತೆಯ ಸ್ವಲ್ಪಭಾಗವು 25ನೇ ತಾರೀಖಿನ ದಿನ ಬೆಳಿಗ್ಗೆ ಕೊಚ್ಚಿಹೋಗಿರುವುದಾಗಿ ವರದಿಯಾಗಿದೆ. ನಂಜನಗೂಡಿನಿಂದ ಮೈಸೂರಿಗೆ ಇರುವ ಟೆಲಿಗ್ರಾಫ್ ತಂತಿಯು ಕಿತ್ತುಹೋಗಿದೆ. ನದಿಗಳಲ್ಲಿ ಪ್ರವಾಹವು ಇನ್ನೂ ಹೆಚ್ಚುವ ಸಂಭವವು ಕಂಡುಬಂದಿದೆ. ಕೃಷ್ಣರಾಜಸಾಗರದಲ್ಲಿ ಭಾರಿಪ್ರವಾಹಗಳು ಇನ್ನೂ ಮೊದಲಿನಂತೆಯೇ ಇವೆ. ಸದರಿ ಕಟ್ಟೆಯ ಹಿಂಭಾಗದಲ್ಲಿರುವ ಹಂಗಾಮಿಯಾಗಿರುವಂತೆ ಕಟ್ಟಿರುವ ಸೇತುವೆಗೆ ಮಾತ್ರ ಅಪಾಯವು ಸಂಭವಿಸಬಹುದು. ಇತರ ಸ್ಥಳಗಳಲ್ಲಿ ನಾಲೆಗಳ ವಿಷಯದಲ್ಲಿ ಹೊರತು ಮಿಕ್ಕ ಯಾವ ಗೊತ್ತಾದ ನಷ್ಟವೂ ಸಂಭವಿಸಿದುದಾಗಿ ವರದಿಗಳು ಇನ್ನೂ ಬಂದಿಲ್ಲ. ಅನೇಕ ನಾಲೆಗಳು ಅಲ್ಲಲ್ಲಿ ಬಹಳವಾಗಿ ಒಡೆದುಹೋಗಿವೆ. ಕಾವೇರಿನದಿಯ ಕಣಿವೆ ಪ್ರದೇಶದಲ್ಲಿರುವ ಅನೇಕ ಹಳೇಆಣೆಗಳಿಗೆ ಬಹಳವಾಗಿ ಅಪಾಯಸಂಭವಿಸಬಹುದೆಂಬ ಶಂಕೆಯುಂಟಾಗಿದೆ. ಸ್ಥಿತಿಗತಿಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಲಿದೆ. ಶ್ರೀರಂಗಪಟ್ಟಣದ ಬಳಿ ಇರುವ ವೆಲ್ಲೆಸ್ಲಿ ಸೇತುವೆಯು ನೀರಿನಲ್ಲಿ ಮುಳುಗಿಹೋಗಿದೆ.

ಮೈಸೂರು.—ಮಾನಂದವಾಡಿ ರಸ್ತೆಯಲ್ಲಿ ರಾಮಪುರದವರೆಗೆ ಪ್ರಯಾಣಮಾಡಬಹುದು. ಅದರ ಆಚೆಗೆ ಇರುವ ರಸ್ತೆಯಲ್ಲಿ ಸ್ವಲ್ಪಭಾಗವು ನೀರಿನಲ್ಲಿ ಮುಳುಗಿಹೋಗಿದೆ.

ಚಿತ್ರದುರ್ಗಡಿಸ್ಟ್ರಿಕ್ಟ್—ತುಂಗಭದ್ರಾನದಿಯಲ್ಲಿ ಪುನಃ ಪ್ರವಾಹವು ಬಂದಿದೆಯೆಂದೂ, ಆದರೆ ಕಳೆದ ವಾರದಲ್ಲಿದ್ದಷ್ಟು ಇಲ್ಲವೆಂದೂ ಚಿತ್ರದುರ್ಗದ ಡೆಪ್ಯೂಟಿಕಮೀಷನರವರಿಂದ ತಂತಿಯವರ್ತಮಾನದಮೂಲಕ ವರದಿಯಾಗಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್—ತುಂಗಾನದಿಯಲ್ಲಿ ಪ್ರವಾಹವು 31 ಅಡಿಗಳ ಎತ್ತರವಿದೆ ಎಂದು ಶಿವಮೊಗ್ಗೆಯ ಡೆಪ್ಯೂಟಿಕಮೀಷನರವರು ಈದಿನ ತಂತಿಯವರ್ತಮಾನವನ್ನು ಕೊಟ್ಟಿರುತ್ತಾರೆ. ರೈಲ್ವೆರಸ್ತೆಯ ಪೈಕಿ 1000 ಅಡಿಗಳಷ್ಟು ರಸ್ತೆಯು ಪುನಃ ಕೊಚ್ಚಿಹೋಗಿದೆ. ಶಿವಮೊಗ್ಗೆಯಲ್ಲಿ ದೊಡ್ಡಬ್ರಾಹ್ಮಣರಕೇರಿಗೂ ಕೃಷ್ಣರಾಜಪುರಕ್ಕೂ ಮತ್ತು ನದಿಯದಡದಲ್ಲಿರುವ ಎಲ್ಲಾ ಪ್ರದೇಶಗಳಿಗೂ ಪ್ರವಾಹವು ನುಗ್ಗಿದ್ದಿತು. ಆದರೆ ಅಲ್ಲ ವಾಸವಾಗಿದ್ದ ಜನರನ್ನೆಲ್ಲಾ ದೋಣಿಗಳಲ್ಲಿ ಸಾಗಿಸುವುದರ ಮೂಲಕ ಅವರ ಪ್ರಾಣರಕ್ಷಣೆಯನ್ನು ಮಾಡಲಾಯಿತು. ಅನೇಕ ಮನೆಗಳು ಬಿದ್ದುಹೋಗಿರುವುದಾಗಿಯೂ ಇನ್ನು ಕೆಲವು ಮನೆಗಳು ಅಪಾಯಸ್ಥಿತಿಯಲ್ಲಿರುವುದಾಗಿಯೂ ವರದಿಯಾಗಿದೆ. ಯಾವಪ್ರಾಣಹಾನಿಯೂ ಉಂಟಾಗಿಲ್ಲ. ಆದರೆ ಅನೇಕ ಜನರು ಮನೆಮಠಗಳನ್ನು ಕಳೆದುಕೊಂಡಿರುತ್ತಾರೆಂದು ತೋರಿಬಂದಿದೆ. ಮನೆಮಠಗಳನ್ನು ಕಳೆದುಕೊಂಡವರಿಗೆ ಸ್ಕೂಲುಗಳು ಸರ್ಕಾರೀಕಟ್ಟಡಗಳೂ ಟೌನ್ ಹಾಲ್ ಮುಂತಾದ ಜನೋಪಯುಕ್ತವಾದ ಎಲ್ಲಾ ಕಟ್ಟಡಗಳಲ್ಲಿಯೂ ವಾಸಕ್ಕೆ ಅವಕಾಶವನ್ನು ಕೊಟ್ಟಿದೆ. ಅನೇಕ ದನಕರುಗಳು ಕೊಚ್ಚಿಕೊಂಡು ಹೋಗಿರುವುದಾಗಿ ವರದಿಯಾಗಿದೆ. ಜನರು ಬಿಟ್ಟುಹೋದ ಮನೆಗಳಲ್ಲಿದ್ದ ಅನೇಕ ಸ್ವತ್ತುಗಳು ಪ್ರಾಯಶಃ ಕೊಚ್ಚಿಹೋಗಿರಬಹುದೆಂಬ ಶಂಕೆಯುಂಟಾಗಿದೆ. ಮನೆಮಠಗಳನ್ನು ಕಳೆದುಕೊಂಡವರಿಗೆಲ್ಲಾ ಊಟಉಪಚಾರಗಳನ್ನು ಮಾಡಿಸುವುದಕ್ಕೆ ಡೆಪ್ಯೂಟಿಕಮೀಷನರವರು ತಕ್ಕ ಏರ್ಪಾಡುಮಾಡಿರುತ್ತಾರೆ. ಶಿವಮೊಗ್ಗೆಯಲ್ಲಿರತಕ್ಕ ಸೇತುವೆಯಲ್ಲಿನ ಒಂದು ಕಮಾನಿನಲ್ಲಿ ಸಣ್ಣದಾಗಿ ಸೀಳುಕಾಣಿಸಿಕೊಂಡಿರುವುದಾಗಿ ವರದಿಯು ಬಂದಿರುತ್ತದೆ. ಸೇತುವೆಯಮೇಲೆ ಎಲ್ಲಾ ವಿಧವಾದ ಸಂಚಾರವನ್ನೂ ನಿಲ್ಲಿಸಲಾಗಿದೆ. ಎಲ್ಲಾ ಪಂಗಡಗಳ ಮುಖಂಡರೂ ಅಪಾಯವನ್ನು ತಪ್ಪಿಸಿ ಸಹಾಯಮಾಡುವ ಕೆಲಸದಲ್ಲಿ ಅಧಿಕಾರಿಗಳಿಗೆ ಬಹಳ ಆಸಕ್ತಿಯಿಂದ ಸಹಾಯಮಾಡುತ್ತಿರುವುದನ್ನು ಕೇಳಿ ಸರ್ಕಾರದವರಿಗೆ ಬಹಳ ಸಂತೋಷವುಂಟಾಗಿದೆ. ಶಿವಮೊಗ್ಗೆಯಲ್ಲಿಯೂ ಮತ್ತು ಭದ್ರಾವತಿಯಲ್ಲಿಯೂ ಇರತಕ್ಕ ಕೋಠಿಗಳಿಂದ ಚೌಬೀನೆಯ ಮರಗಳು ಕೊಚ್ಚಿಹೋಗುತ್ತವೆಯೆಂದು ಫಾರೆಸ್ಟು ಇಲಾಖೆಯ ಕನ್ಸರ್ವೇಟರವರಿಂದ ರಿಪೋರ್ಟು ತಲುಪಿರುತ್ತದೆ. ನದಿಯಲ್ಲಿ ತೇಲಿಕೊಂಡು ಹೋಗುತ್ತಿರುವ ಚೌಬೀನೆಮರಗಳನ್ನು ದಡಕ್ಕೆ ಸಾಗಿಸಲು ತಕ್ಕ ಏರ್ಪಾಡುಮಾಡುವಂತೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸರವರಿಗೆ ಹುಕುಂಮಾಡಲಾಗಿದೆ. ಈ ಕೆಲಸದಲ್ಲಿ ಸೌಕರ್ಯವನ್ನುಂಟುಮಾಡುವುದಕ್ಕಾಗಿ ಈ ಆಫೀಸರಿಗೆ ಇನ್ನೂ ಹೆಚ್ಚಿನ ಅನುಕೂಲವನ್ನು ಒದಗಿಸುತ್ತಿದೆ.

ಹೊನ್ನಾಳಿ ತಾಲ್ಲೋಕಿನಲ್ಲಿರತಕ್ಕ ದೊಡ್ಡಕೆರೆಯು ಒಡೆದುಹೋಗಿರುತ್ತದೆಯೆಂದೂ ಮತ್ತು ಅದನ್ನು ದುರಸ್ತುಮಾಡುವುದಕ್ಕೆ ಕೂಡಲೆ ಏರ್ಪಾಡುಗಳನ್ನು ಕೈಗೊಳ್ಳುತ್ತಿರುತ್ತದೆಯೆಂದೂ ವರ್ತಮಾನವು ಈದಿನ ಸಾಯಂಕಾಲ 5 ಘಂಟೆಯಲ್ಲಿ ತಲುಪಿರುತ್ತದೆ. ಇದರಿಂದುಂಟಾದ ನಷ್ಟವು 10,000 ರೂ. ಗಳೆಂದು ಅಂದಾಜು ಮಾಡಲಾಗಿದೆ.

ಭದ್ರಾನದಿಯ ಪ್ರವಾಹವು ಕಡಮೆಯಾಗಿದೆಯೆಂದೂ ಮತ್ತು ನರಸಿಂಹರಾಜಪುರದ ರಸ್ತೆಯು ಪ್ರಯಾಣಕ್ಕೆ ಅನುಕೂಲವಾಗಿದೆಯೆಂದೂ ಕಡೂರು ಡಿಸ್ಟ್ರಿಕ್ಟ್ ಡೆಪ್ಯೂಟಿಕಮೀಷನರು ವರದಿಮಾಡಿರುತ್ತಾರೆ. ಅಪಾಯದ ಭಯವು ತಪ್ಪಿದೆಯೆಂದೂ ಅವರು ತಿಳಿಸಿರುತ್ತಾರೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿರತಕ್ಕ ಎಲ್ಲಾ ನದಿಗಳಲ್ಲಿಯೂ ಪ್ರವಾಹವು ಕಡಮೆಯಾಗಿರುತ್ತದೆಯೆಂದು ಕೃಷ್ಣರಾಜಸಾಗರದ ಸ್ಪೆಷಲ್ ಆಫೀಸರವರೂ ಮತ್ತು ಚೀಫ್ ಎಲೆಕ್ಟ್ರಿಕಲ್ ಇಂಜನೀಯರವರೂ ವರದಿಮಾಡಿರುತ್ತಾರೆ. ಕೃಷ್ಣರಾಜಸಾಗರದ ಕಟ್ಟೆಯಮೇಲೆ ಈ ಪ್ರಾತಃಕಾಲ ಪರಮಾವಧಿ 18·40 ಅಡಿಗಳಷ್ಟು ನೀರು ಹರಿದುಹೋಗುತ್ತಿದ್ದುದು ತಪ್ಪಿ ಈದಿನ ಸಾಯಂಕಾಲ 5 ಘಂಟೆಗೆ 18 ಅಡಿಗಳಿಗೆ ತಗ್ಗಿರುತ್ತದೆ. ನಾಲಾಗಳು ಒಡೆದುಹೋಗಿರುವುದರ ಹೊರತು ಇನ್ನು ಹೆಚ್ಚಿನ ನಷ್ಟಗಳೇನೂ ಸಂಭವಿಸಿಲ್ಲವೆಂದು ವರದಿಬಂದಿದೆ.

ತಾ॥ 29-7-24. ಆರ್. ರಂಗರಾವ್, ಪಬ್ಲಿಸಿಟಿ ಆಫೀಸರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂ.

ಸ್ತೋತ್ರಾರ್ಹವಾದ ಏರ್ಪಾಟು.

ಗೌರಿಬಿದನೂರು ಗ್ರಾಮದ ವಾಸಸ್ಥರಾದ ಸಾಹುಕಾರ್ ಮ॥ ನಾಮಾ ಚೆಲುಮಯ್ಯನವರ ವೆಂಕಟಪ್ಪ ಎಂಬುವವರು ಪ್ರೈಜ್ ಫಂಡಿಗಾಗಿ (Prize Fund) 100 ರೂ. ಗಳನ್ನು ಗೌರಿಬಿದನೂರು ಮಿಡಲ್ ಸ್ಕೂಲ್ ಹೆಡ್ ಮಾಸ್ಟರ ಹೆಸರಿನಲ್ಲಿ ಗ॥ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಟ್ಟು ಸದರಿ ಮೊಬಲಗಿಗಾಗಿ ಬರುವ ಬಡ್ಡಿಯಿಂದ ಮಿಡಲ್ ಸ್ಕೂಲಿನಿಂದ ತೇರ್ಗಡೆಹೊಂದುವ ಎಲ್. ಸಿ. ವಿದ್ಯಾರ್ಥಿಗಳಲ್ಲಿ ಒಂದನೆಯವನಿಗೆ ಬಹುಮಾನವನ್ನು ಸಾಲಿಯಾನ ಕೊಡುವಂತೆ ಏರ್ಪಾಡುಮಾಡಿಕೊಡಬೇಕೆಂದು ವಿದ್ಯಾ ಇಲಾಖಾ ಅಧಿಕಾರಿಗಳಿಗೆ ಅರ್ಜಿಗಳನ್ನು ಕೊಟ್ಟಿರುವರು. ಇದರಂತೆ ಇತರರೂ ಬೇರೆ ವಿಧಗಳಲ್ಲಿ ಸ್ಕೂಲಿಗೆ ಸಹಾಯಮಾಡುವ ಉದ್ದೇಶವುಳ್ಳವರಾಗಿರುವರು. ಇದು ಕೈಗೂಡಲೆಂದು ಹಾರೈಸುವ,

ವಿದ್ಯಾಭಿಮಾನಿ.

ಚಿಕ್ಕಾಯರಹಳ್ಳಿಯ ದುಸ್ಥಿತಿಯು.

ಕೃಷ್ಣರಾಜಸಾಗರ ರಿಜರ್ವಾಯರ್ ಮುಳುಗಡೆಗೆ ಸೇರಿದ ಚಿಕ್ಕಾಯರಹಳ್ಳಿ ಎಂಬ ಗ್ರಾಮವು ಕಳೆದ ಮಾಹೆ 25-26ನೇ ತಾರೀಖುಗಳಲ್ಲಿನ ಪ್ರವಾಹದ ದೆಸೆಯಿಂದ ಊರೊಳಕ್ಕೆ ನೀರುನುಗ್ಗಿ ಅನೇಕ ಮನೆಗಳ ಗೋಡೆಗಳೆಲ್ಲಾ ಬಿದ್ದುಹೋಗಿ ಗ್ರಾಮದ ಸುತ್ತಲೂ ಇದ್ದ ನೂರಾರು ಹುಲ್ಲುಮನೆಗಳು ಕೊಚ್ಚಿಹೋಗಿರುವವಲ್ಲದೆ ಅನೇಕ ಮರಮುಟ್ಟುಗಳು ಸಹ ತೇಲಿಹೋಗಿ ಸಾವಿರಾರು ರೂಪಾಯಿಗಳ ನಷ್ಟವುಂಟಾಗಿರುತ್ತದೆ. ಈ ಗ್ರಾಮವು ರಿಜರ್ವಾಯರ್ ನೀರಿನಿಂದ ಮುಳುಗುವುದಾಗಿ ತಿಳಿದು ಇಲ್ಲಿನ ಮನೆಗಳಿಗೆ ಪರಿಹಾರದ್ರವ್ಯವನ್ನು ಕೊಟ್ಟು ಸರ್ಕಾರದವರು ಸೈಟು ವಗೈರೆ ವಿಂಗಡಿಸಿಕೊಟ್ಟು, ರಸ್ತೆ, ಭಾವಿ ವಗೈರೆ ವಸತಿಗಳನ್ನು ಕಲ್ಪಿಸಿಕೊಡುವ ಬೇರೆ ಜಾಗದಲ್ಲಿ ಈ ಊರನ್ನು ಕಟ್ಟಿಕೊಳ್ಳತಕ್ಕದ್ದೆಂದು ತೀರ್ಮಾನವಾಗಿ 2 ವರ್ಷಗಳಾಗುತಾ ಬಂದಾಗ್ಯೂ ಅದ್ಯಾಪಿ ಮೇಲ್ಕಂಡ ವಸತಿಗಳನ್ನು ಒದಗಿಸಿಕೊಡದೆ ಸಾವಕಾಶಮಾಡಿರುವದ್ದರಿಂದಲೇ ಈ ಗ್ರಾಮವು ಇಷ್ಟು ನಷ್ಟವನ್ನು ಅನುಭವಿಸಬೇಕಾಯಿತು. ಈಗಲಾದರೂ ಘನಸರ್ಕಾರದವರು ಬಡರೈತರ ಕಷ್ಟವನ್ನು ಚಿತ್ತಕ್ಕೆತಂದು ಅವರಿಗುಂಟಾಗಿರತಕ್ಕ ಕುಂದುಕೊರತೆಗಳನ್ನು ಜಾಗ್ರತೆಯಾಗಿ ನಿವಾರಣೆಮಾಡಿಕೊಟ್ಟಾರೆಂತ ನಂಬಿರುತ್ತಾರೆ.

ಗ್ರಾಮವಾಸಿ.

ಸಂಪದಭ್ಯುದಯ ಪತ್ರಿಕೆಗೆ ಬರೆದಿರುವ ಲೇಖನದ ನಕಲು.

ತಮ್ಮ 28-7-24 ನೇ ಪತ್ರಿಕೆಯಲ್ಲಿ 'ಗುರುವಿಗೆ ತಿರುಮಂತ್ರ' ಎಂಬ ಅಭಿಧಾನದಿಂದ ಬರೆದಿರುವ ಲೇಖನನೋಡಿದೆನು. ಈ ಲೇಖನವನ್ನು ಬರೆದ 'ಜಗಚ್ಛಿಷ್ಯ'ನು ತನ್ನ ಹೆಸರನ್ನು ಬಹಿರಂಗಮಾಡಿಲ್ಲವಾದದರಿಂದ ಈ ಅಜ್ಞಾತನ ಕುಲ, ಶೀಲ ತಿಳಿಯದೆ ಈತನ ಅಪಭ್ರಂಶ ಬರವಣಿಗೆಗೆ ಜವಾಬುಕೊಡಲು ಅವಕಾಶವಿಲ್ಲ. ಹಳೆಕರ್ನಾಟಕರು ಅಭಿವೃದ್ಧಿಗೆ ಬರುವದರಲ್ಲಿ ನನಗೆ ಅಸಂತೋಷವಿಲ್ಲ. ಹಳೆಕರ್ನಾಟಕರಿಗೆ ಶೃಂಗೇರಿ ಮಠದ ಏಜಂಟರು ಕೊಟ್ಟಿರುವ ಶ್ರೀಮುಖದ ಸಂಗತಿ, ವಿರೋಧವಾಗಿ ಬ್ರಾಹ್ಮಣ ಮಹಾಜನಗಳು ಸಭೆಯುತಾ ಇರುವದ್ದರಿಂದ [illegible] ಯಾರಾದರು ಹಿಂದಾಗಬೇಕಲ್ಲದೆ, ಬಹಿರಂಗವಾದ ಪ್ರದೇಶದಲ್ಲಿ ಇರುವ ರಿಗೂ ಸಹದು ಬಂದಿರುವಂಥಾ ಕಲಹಗಳನ್ನು ಮುಂದೆ [illegible] ಮಾಡಿಕೊಂಡು ಸಂಕಟಪಡುವವರಿಗೆ ಕಲಹ ದೂರವಾಗಿರುವುದು [illegible] ವದು ಈ ಅಜ್ಞಾತ ಶಿಷ್ಯನಿಗೆ ಗೋಚರಿಸಲಿಲ್ಲವೋ ಅಲ್ಲವೋ ? ತಿಳಿಯದು, ಉದಾಹರಣಾರ್ಥವಾಗಿ ಸಮುದ್ರಯಾನ ಮಾಡಿ ಬಂದ ಬ್ರಾಹ್ಮಣರು ಮತ್ತು ಕುಲಭ್ರಷ್ಟನಾಗಕವಾಗಿ ಸದಾಚಾರದಲ್ಲಿತಕ್ಕ ವೈಶ್ಯರು ಸಹಾ ಈಗ ಯಾವ ಭಾವನೆಯಲ್ಲಿದ್ದಾರೆ? ಅವರೇನಾದರು ಮಠದವರಮೇಲೆ ಕಲಹವನ್ನುಮಾಡುತ್ತಾ ಇದ್ದಾರೆಯೆ ? ಈ ಅಂಶಗಳೆಲ್ಲ ಈ ಶಿಷ್ಯನು ಚನ್ನಾಗಿ ಆಲೋಚಿಸಲಿಲ್ಲವೆಂದು ಊಹಿಸಬಹುದು. ಪತ್ರಿಕಾಕರ್ತರಾದರೂ ಈ ಶಿಷ್ಯನ ಹೆಸರು, ಅಡ್ರೆಸು, ಇತ್ಯಾದಿಗಳನ್ನು ದಯವಿಟ್ಟು ನನಗೆ ತಿಳಿಸಿದರೆ ಮಠದ ವಿಚಾರದಲ್ಲಿ ನನ್ನಲ್ಲಿರುವ ಬರಹಮೂಲಕವಾದ ಅನೇಕ ರಿಕಾರ್ಡುಗಳನ್ನು ಅವನಿಗೆ ನಿವೇದನಮಾಡುತ್ತೇನೆ.

ನಂಜನಗೂಡು, ವಿಧೇಯ,
30-7-24. ವಿ. ರಂಗಣ್ಣ.

ಕಾಲರ.

ಈ ರೋಗವು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಬಹುಕಡೆಗಳಲ್ಲೂ ಮತ್ತು ಇತರ ಬಹುಕಡೆಗಳಲ್ಲೂ ಸದ್ಯಕ್ಕೆ ವ್ಯಾಪನೆಯಾಗಿರುತ್ತದೆ. ಭಯಂಕರವಾದ ಈ ವಾಂತಿಭೇದಿರೋಗಕ್ಕೆ ತಕ್ಕ ಔಷದ ಚಿಕಿತ್ಸೆಗಳು ಹಳ್ಳಿಗಾಡಜನರಿಗೆ ಗೊತ್ತಿರುವುದಿಲ್ಲ. ಮಾರೀ ಮೊದಲಾದ ದೇವತೆಗಳ ಸಿಟ್ಟು, ಅತೃಪ್ತಿಯೂ, ಈ ರೋಗೋತ್ಪತ್ತಿಗೆ ಕಾರಣವೆಂದು ಮಾತ್ರ ತಿಳಿದಿರುತ್ತಾರೆ. ಈ ರೋಗವು ತಗಲಿದಾಗ ಈ ದೇವತೆಗಳ ಸಮಾಧಾನಕ್ಕಾಗಿಯೂ, ತೃಪ್ತಿಪಡಿಸುವುದಕ್ಕಾಗಿಯೂ, ಕುರಿ, ಕೋಣಗಳ ಬಲಿಕೊಡುತ್ತೇವೆಂದು ಹರಿಕೆಮಾಡಿಕೊಳ್ಳುವುದೊಂದರವಿನಹ ಈ ಜನರು ಮತ್ತೇನನ್ನೂ ಅರಿಯರು. ತಮಗೆ ತಿಳಿಯದ ಮತ್ತು ತಮ್ಮಿಂದಸಾಧ್ಯವಾಗದ ಸಂದರ್ಭಗಳಲ್ಲೆಲ್ಲ ಹೀಗೆ ದೇವರಮೇಲೆ ಭಾರಹಾಕಿ ತಟಸ್ಥರಾಗಿದ್ದುಬಿಡತಕ್ಕದ್ದು ನಮ್ಮವರಲ್ಲಿ ಹಿಂದಿನ ಕಾಲದಿಂದಲೂ ನಡೆದುಬಂದ ಒಂದು ಪ್ರಬಲಪದ್ಧತಿಯೇ ಆಗಿಬಿಟ್ಟಿದೆ. ಈತೆರದ ಮೌಢ್ಯಾಚಾರಗಳಿಂದ ಇಂಥ ದುರ್ವ್ಯಾಧಿಗಳಿಗೆ ಪ್ರತಿಕ್ರಿಯೆಗಳಿಲ್ಲದೆ ಜನರು ಪ್ರಾಣಹಾನಿಗೆ ಗುರಿಯಾಗುತ್ತಲಿರುವುದು ಅಷ್ಟಿಷ್ಟಲ್ಲ, ತಗುಲಿದ ಕೆಲವು ತಾಸುಗಳಲ್ಲಿ ಜೀವಮಾನವನ್ನೇ ಸಮಾಪ್ತಿಗೊಳಿಸುವ ಈ ಕ್ರೂರರೋಗಪ್ರಾಪ್ತವಾದವೇಳೆಯಲ್ಲಿ ಜನರು ಅತಿಶಯ ಭಯಭ್ರಾಂತರಾಗುವುದು ಸಹಜವಾದ್ದೇ ಅಹೆ. ಸದ್ಯಕ್ಕೆ ಬಹುಕಡೆಯಲ್ಲಿ ಜನರು ಇಂಥ ಅಂಜಿಕೆ ಅಸ್ವಸ್ಥತೆಗಳಿಂದ ದಿಕ್ಕುತೋರದವರಾಗಿರುವಪ್ರಯುಕ್ತ ನಮ್ಮ ದೇಶೀಯ ವೈದ್ಯರಾಗಲಿ, ಡಾಕ್ಟರುಗಳಾಗಲಿ, ಈ ಕಾಲರಾರೋಗಪ್ರಾಪ್ತಿಯಕಾಲಕ್ಕೆ ಜನರು ಆಚರಿಸಬೇಕಾದ ವಿಧಿ, ವಿಧಾನಗಳನ್ನೂ ತಮಗೆ ಖಾತ್ರಿಯಾಗಿ ಅನುಭವಕಂಡುಬಂದ ಔಷಧ ಅನುಪಾನಗಳನ್ನೂ ಜನರ ತಿಳುವಳಿಕೆಗಾಗಿ ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿ ಸಹಾಯಮಾಡಿಸುವಂತಾಗಬೇಕು. ಮತ್ತು ಇಂಥ ರೋಗಗಳಿಗೆ, ಹಳ್ಳಿಯಜನರಲ್ಲಿ ಒಬ್ಬೊಬ್ಬರು, ಬೇರು, ಸೊಪ್ಪು, ಮೊದಲಾದ ಸುಲಭವಾಗಿ ಸಿಕ್ಕತಕ್ಕ ದಿವ್ಯೌಷಧಗಳನ್ನು ತಿಳಿದವರಾಗಿರುತ್ತಾರೆ. ಆದರೆ ಅದನ್ನು ಅವರು ಬಹುಗುಪ್ತಪಡಿಸಿಟ್ಟುಕೊಂಡಿರುತ್ತಾರೆ. ಸಾಯುವಾಗ ಸಹ ಇಂಥವರು ತಮ್ಮ ಮಕ್ಕಳಿಗೆ ಮೊದಲು ತಿಳಿಸಲು ಮಡಂಬಡದೆ ಸತ್ತುಹೋಗುತ್ತಾರೆ. ಹೀಗಾಗಿಯೇ ನಮ್ಮ ದೇಶದ ಅನೇಕ ಉತ್ತಮೋತ್ತಮ ಔಷಧಿಗಳು ನಾಶವಾಗುತ್ತಬಂದಿವೆ. ಮುಂದಾಳುಗಳಾದ ಜನರು ಈ ಕಾಲರಾರೋಗವನ್ನು ಗುಣಪಡಿಸತಕ್ಕ ಔಷಧಿಗಳೇನಾದರೂ, ಯಾರಿಗಾದರೂ, ತಿಳಿದಿರುವಪಕ್ಷಕ್ಕೆ ಅದನ್ನು ಅಂಥವರಿಂದ ಹ್ಯಾಗಾದರೂ ಮಾಡಿ ತಿಳಿದು ಜನರ ತಿಳುವಳಿಕೆಗಾಗಿ ಪ್ರಕಟಿಸಿ ಸಹಾಯಮಾಡಿಸುವಂತಾಗಬೇಕು.

ಚನ್ನಬಸವಪ್ಪಗೌಡ, ಪಾಟೀಲ್, ಕಪ್ಪನಹಳ್ಳಿ.

ನಮ್ಮ ದುಶ್ಚಟಗಳ ದುಷ್ಪರಿಣಾಮ.

ನಾನು ನಶ್ಯಹಾಕುವುದು, ಚುಟ್ಟಾಸೇದುವುದು, ತಂಬಾಕಿನೊಂದಿಗೆ ಎಲೆಯಡಿಕೆ ಜಗಿಯುವುದು. ಇವುಗಳ ಪರಮಭಕ್ತನಾಗಿದ್ದೆನು. ಈ ಪಿಶಾಚತ್ರಯಗಳೊಂದೊಂದರಲ್ಲಿಯೂ ಇರುವ ಆರೋಗ್ಯನಾಶಕ, ಸ್ವಾಸ್ಥ್ಯವಿನಾಶಕ, ದ್ರವ್ಯಭಕ್ಷಕ ನೀತಿವಿಧ್ವಂಸಕ ಗುಣಗಳು ನನಗೆ ತಿಳಿದಿರಲಿಲ್ಲ. ಈ ಪಿಶಾಚತ್ರಯಗಳ ಸೇವನೆಯೆಂದರೆ ಸುಧಾರಕರ ಲಕ್ಷಣವೆಂದೂ ಶಿಷ್ಟಾಚಾರದ ಪದ್ಧತಿಯೆಂದೂ ಸಭ್ಯವರ್ತನದ ಹೆಗ್ಗುರುತೆಂದೂ ನಾನು ಭಾವಿಸಿದ್ದೆನು. ಇದರಂತೆ ಬಾಲದಿಂದಲೂ ಇವುಗಳ ಆರಾಧನೆಗೆ ಯಾವ ಕುಂದುಕೊರತೆಯೂ ಆಗದಂತೆ ನಡಿಸಿಕೊಂಡು ಬಂದಿದ್ದೆನು. ಇವುಗಳಲ್ಲಿ ಒಂದೊಂದರ ಒಂದುವಾರದ ತೀರಾ ಕಡಮೆಯ ಖರ್ಚೆಂದರೆ 200 ಎಲೆಗಳಿಗೆ 2 ಆಣೆಯೂ, ಒಂದು ಸೇರು ಅಡಿಕೆಗೆ 3 ಆಣೆಯೂ ಅರ್ಧಸೇರು ತಂಬಾಕಿಗೆ 3 ಆಣೆಯೂ ಅಂತೂ 8 ಆಣೆಗಳೂ ಚುಟ್ಟದ ಬಾಬಿಗೆ ರೂಲರ್ ಸಿಗರೇಟ್ ಪ್ಯಾಕ್ 1 ಕ್ಕೆ 1 ಆ. 6 ಪೈ. ಯಂತೆ 4·6 ಕ್ಕೆ ಸುಮಾರು 8 ಆಣೆಗಳೂ ಬೆಂಕಿಯಪೆಟ್ಟಿಗಾಗಿ 1 ಆಣೆಯೂ ನಶ್ಯ ಒಂದು ತೊಲೆಗೆ 1 ಆ. 6 ಪೈ. ಯೂ ಹೀಗೆ ಒಟ್ಟಿನಲ್ಲಿ ಒಂದು ರೂಪಾಯಿಗೆ ಮೇಲ್ಪಟ್ಟು ಖರ್ಚಾಗುತ್ತಿದ್ದಿತು. ಇದರಂತೆ ಒಂದು ತಿಂಗಳಿಗಾಗುವ 4 ರೂಪಾಯಿಗಳಂತೆ ಎಷ್ಟೋ ವರ್ಷಗಳವರಿವಿಗೆ ಖರ್ಚುಮಾಡುತ್ತ ಬಂದಿರುವೆನು. ನೋಡಿದಿರೋ ಒಬ್ಬೊಬ್ಬನ ಈ ತರದ ಖರ್ಚಿನ ಪ್ರಕಾರ ಎಷ್ಟೊಂದು ದ್ರವ್ಯವು ವೆಚ್ಚವಾಗುತ್ತಲಿರುವುದು? ಈಚೆಗೆ ನನ್ನ ಮಿತ್ರರೊಬ್ಬರು ಮೇಲೆ ಹೇಳಿದಂತೆ ಈ ದುರಭ್ಯಾಸದ ದುಷ್ಫಲಗಳನ್ನೂ, ಕಣ್ಣಿಗೆ ಕಾಣಿಸದಂತೆ ಅವು ಒಂದು ವರ್ಷದೊಳಗಾಗಿ ಹೀಗೆ 50 ರೂಪಾಯಿಗಳಗಟ್ಟಲೆ ನುಂಗುತ್ತಿರುವ ವಿವರವನ್ನೂ ನನಗೆ ತಿಳಿಸಿ ಈ ದುಶ್ಚಟಗಳನ್ನು ಬಿಡಬೇಕೆಂದು ಬೋಧಿಸಿದರು. ಮೊದಮೊದಲು ನನಗೆ ಇವುಗಳನ್ನು ಬಿಡುವುದಕ್ಕೆ ಬಹಳ ಕಠಿಣವೆನಿಸಿತು. ಆದರೂ ಪ್ರಯತ್ನಪೂರ್ವಕವಾಗಿ ಅವುಗಳನ್ನು ಪೂರ್ಣ ವರ್ಜಿಸಿಬಿಟ್ಟೆನು. ಅಲ್ಲಿಂದೀಚೆಗೆ ಅವುಗಳಿಗಾಗಿ ಖರ್ಚಾಗುತ್ತಿದ್ದ ಮೊಬಲಗು 5 ರೂಪಾಯಿಗಳು ಕೂಡಿರುತ್ತವೆ. ಈ ಮೊಬಲಗನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಕನ್ನಡ ಲೋ॥ ಸೆ॥ ಪರೀಕ್ಷೆಯಲ್ಲಿ ಪ್ರಾವಿನ್ಸಿಗೆ ಮೊದಲನೆಯವನಾಗಿ ಈ ವರ್ಷದಲ್ಲಿ ಅಂದರೆ ಕಳೆದ 1923-24ನೆ ಸಾಲಿನಲ್ಲಿ ಪ್ಯಾಸಾದ ವೀರಶೈವ ವಿದ್ಯಾರ್ಥಿ ಯಾವನಾದರೂ ಇರುವ ಪಕ್ಷಕ್ಕೆ ಅವನಿಗೆ ಬಹುಮಾನವಾಗಿ ಕೊಡಲು ಗೊತ್ತುಮಾಡಿರುತ್ತೇನೆ. ಪರಂತು ಈ ಡಿಸ್ಟ್ರಿಕ್ಟಿನಲ್ಲಿ ಇಂಥ ವಿದ್ಯಾರ್ಥಿಯು ಇಲ್ಲದಿರುವ ಪಕ್ಷಕ್ಕೆ ಇತರಕಡೆ ಈ ರೀತಿ ಪಾಸಾಗಿರುವ ವಿದ್ಯಾರ್ಥಿಗಾದರೂ ಕೊಡಲು ಸಿದ್ಧನಿದ್ದೇನೆ. ಕದಾಚಿತು ವೀರಶೈವ ವಿದ್ಯಾರ್ಥಿಗಳಲ್ಲಿ ಈ ರೀತಿ ತೇರ್ಗಡೆಯಾದವರು ಯಾರೂ ಇಲ್ಲದೆಹೋದಪಕ್ಷಕ್ಕೆ ಒಂದು ಸೆಂಟರಿಗಾದರೂ ಫಸ್ಟ್ ಪ್ಯಾಸಾದ ವಿದ್ಯಾರ್ಥಿಗೆ ಕೊಡತಕ್ಕವನಾಗಿದ್ದೇನೆ. ಅಂಥ ವಿದ್ಯಾರ್ಥಿಗಳು ನನ್ನೊಂದಿಗೆ ಪತ್ರವ್ಯವಹಾರನಡಿಸಿ ಬಹುಮಾನ ದ್ರವ್ಯವನ್ನು ಪಡಿಯಬಹುದೆಂದು ಕೋರುವ,

ಕಟ್ಟೂರು ಶ್ರೀಕಂಠಗೌಡ, ಜಮೀನ್ದಾರ್, ತಾ॥ ಸೊರಬ.

ಇಲಕಲ್ಲ ಮಹಂತಪ್ಪನವರ ನಿಧನವು.

ಶ್ರೀ ಮಹಾಂತೇಶ ಎ. ವಿ. ಸ್ಕೂಲಿನ ಸೆಕ್ರೆಟರಿ ಮತ್ತು ಶ್ರೀ ಮಹಾಂತೇಶವಾಚನಾಲಯದ ಸ್ಥಾಪಕರೂ, ವೀರಶೈವ ತರುಣಸಂಘದ ಆಧಾರಸ್ತಂಭರೂ, ವಿದ್ಯಾರ್ಥಿಗಳೂ, ವಿದ್ಯಾಪಕ್ಷಪಾತಿಗಳೂ ಆದ ಮಹಾಂತಪ್ಪಾ ಸಂಗಪ್ಪಾ ಕಾರಡಿಯವರು ಮುಂಬಯಿಯಲ್ಲಿ ಒಮ್ಮಿಂದೊಮ್ಮೆ ಪಾರ್ಶ್ವರೋಗದಿಂದ [illegible] ಸೋಮವಾರ ತಾ॥ 7-7-24 3½ ಗಂಟೆಗೆ ತಂ ಯಿಂದ ತೀರಿದರು, ಇಲಕಲ್ಲ ಪಟ್ಟಣವೇ ಶೋಕಸಾಗರದಲ್ಲಿ ಮುಳಗಿತು. ಈ ನಿಧನದ ವಾರ್ತೆಯನ್ನು ಕೇಳಿದ ಪ್ರತಿಯೊಬ್ಬನೂ ತನ್ನ ಮಿತ್ರನೂ ಹಿತಚಿಂತಕನೂ, ಛೇ ತನವುನೆತನದಲ್ಲೊಬ್ಬನನ್ನು ಕಳಕೊಂಡೆನೆಂದು ಅನಿಸಿತು. ವೃದ್ಧರೂ, ಸ್ತ್ರೀಯರೂ, ಬಾಲಬಾಲಕಿಯರೂ, ತಮಗಾದ ದುಃಖವನ್ನು ಸಹಿಸದೆ ಇವರ ಹಿಂದೆ ಶೋಕಿಸುವ ವೃದ್ಧತಾಯಿಯು ಮತ್ತು ತರುಣ ಹೆಂಡತಿಯಳಡೆಗೆ ಹೋಗಲು ಮನೆಯು ಸಾಲದೆ ಹೊರಬದಿರಸ್ತೆಯಲ್ಲಿ ನಿಲ್ಲಬೇಕಾಯಿತು. ಪಾಪ! ತಾಯಿಯಿಗೆ ಈ ಸದ್ಗುಣಿಯಾದ ಕುಲದೀಪಕನನ್ನು ಕಳಕೊಂಡದ್ದರಿಂದಲೂ, ಹೆಂಡತಿಗೆ ಸಂತತಿಯಿಲ್ಲದ್ದರಿಂದಲೂ ಅವರ ದುಃಖಕ್ಕೆ ಎಣೆಯಿಲ್ಲದಾಯಿತು. ಅವರಿರುವಾಗಲೇ ಎಷ್ಟೋ ಜನರು ಮಕ್ಕಳಿಲ್ಲೆಂದು ಹಳಹಳಿಸಲು ಮುಗುಳುನಗೆಯಿಂದನಕ್ಕು ಶ್ರೀ ಮಹಾಂತೇಶ ಎ. ವಿ. ಸ್ಕೂಲಿನಲ್ಲಿಯ ವಿದ್ಯಾರ್ಥಿಗಳೇ ನನ್ನ ಚಿರಂಜೀವಗಳೆಂದು ತಟ್ಟನೇ ಹೇಳುತ್ತಿದ್ದರು. ಪರಸ್ಥಳದಿಂದ ಬಂದ ವಿದ್ಯಾರ್ಥಿಗಳಿಗೆ ಊಟದ ಮನೆಗಳನ್ನು ಗೊತ್ತುಮಾಡಲಿಕ್ಕೆ ಯಾವಾಗಲೂ ಸಿದ್ಧರಿದ್ದರು. ಇವರು ಸಾಮಾಜಿಕಕಾರ್ಯಗಳನ್ನು ಕೈಗೊಂಡು ಅವುಗಳನ್ನು ನೆರವೇರಿಸಿ ಉಪಯುಕ್ತವಾದ ಸಂಸ್ಥೆಗಳನ್ನು ದೃಢೀಕರಿಸಲಿಕ್ಕೆ ಯಾವಾಗಲೂ ಹೆಣಗಾಡುತ್ತಿದ್ದರು. ಈಗಿನ ಶ್ರೀ ಮಹಾಂತೇಶ ವಾಚನಾಲಯಕ್ಕೆ 850 ಪುಸ್ತಕಗಳೂ 2000 ರೂ. ಹಣವೂ ಶ್ರೀ ಮಹಾಂತೇಶ ಎ. ವಿ. ಸ್ಕೂಲಿಗೆ ಸ್ವತಂತ್ರ ಇಮಾರತಿಯೂ 3000 ರೂ. ಹಣವೂ ಕೂಡಿದ್ದು ಇವರ ಸಾಹಸದ ಫಲವು. ಶ್ರೀ ಮಹಾಂತೇಶನ ಕೃಪೆಯಿದ್ದಲ್ಲಿ ಈ ಎ. ವಿ. ಸ್ಕೂಲನ್ನು ಹಾಯಸ್ಕೂಲ ಮಾಡುವೆನೆಂದು ಆಗಾಗ್ಗೆ ಅನ್ನುತ್ತಿದ್ದರು. ತಾವು ನೆರವೇರಿಸಿದ ಕಾರ್ಯಗಳಿಗಾಗಿ ಮರ್ಯಾದೆಯನ್ನು ಎಂದೂ ಅಪೇಕ್ಷಿಸದೆ ಯಾವಾಗಲೂ ನಾನು ಸಮಾಜಸೇವಕನೇ ಹೊರ್ತಾಗಿ ಮುಖಂಡನಲ್ಲೆಂದು ಬಹು ಸೌಜನ್ಯದಿಂದ ಹೇಳುತ್ತಿದ್ದರು. ಅವರ ಸ್ಥಿತಿಯು ಬಡತನದಿದ್ದಿತು. ಹಗಲಿರುಳು ತನುಮನಗಳಿಂದ ಸಮಾಜಕ್ಕಾಗಿ ಹೆಣಗಾಡುವ ಧುರೀಣನ ಮರಣದ ಹಾನಿಯು ತುಂಬಲಿಕ್ಕೆ ಇನ್ನೆಷ್ಟು ಕಾಲಾವಧಿಯೋ ತಿಳಿಯದು. ಅವರ ಸಂಸ್ಥೆಗಳ ಉಪಯೋಗಮಾಡಿಕೊಳ್ಳುವ ಪ್ರತಿಒಬ್ಬನು ಅವರ ಗುಣಗಳಲ್ಲಿ ಒಂದನ್ನಾದರೂ ತಮ್ಮ ಆಯುಷ್ಯದ ಧ್ಯೇಯವನ್ನಾಗಿಟ್ಟುಕೊಂಡರೆ ಅವರ ಯೋಗ್ಯಸ್ಮಾರಕವಾದಂತಾಗುವದು. ಮರಣದಸಮಯದಲ್ಲಿ ಇವರ ವಯಸ್ಸು 38 ಇತ್ತು.

ತಮ್ಮ ಕೃಪಾಭಿಲಾಷಿ.

ಆರ್. ಗೋಪಾಲಸ್ವಾಮಿ ಅಯ್ಯರ್‌ರವರ ಸರ್ವವ್ಯಾಪಕತೆ.

ಮೇಲ್ಕಂಡ ದೊಡ್ಡಮನುಷ್ಯರು ಯಾವ ಆಫೀಸರ ಮನೆಯಲ್ಲೂ, ಯಾವ ಆಫೀಸಿನಲ್ಲೂ ಕಾವೇಶವಾಗಿ ಓಡಾಡುತ್ತಲಿರುವುದು ಸರ್ವವಿದಿತವಾಗಿದೆ. ಈ ವಿಧವಾದ ಅವರ ವ್ಯಾಪಕತೆಯು ಬಹಳಮಟ್ಟಿಗೆ ಸ್ವಸಾಧನವಾಗಿದ್ದು ಸ್ವಲ್ಪಮಟ್ಟಿಗೆ ಸಂಬಂಧಪಟ್ಟ ದೊಡ್ಡಮನುಷ್ಯರ ಉತ್ತೇಜನದಿಂದ ಪುಷ್ಟೀಕರಿಸಲ್ಪಟ್ಟಿದೆ. ಆದರೆ ಇತ್ತೀಚೆಗೆ ಸರ್ಕಾರದವರು ಇಲ್ಲವೆ ಇಲಾಖೆಯ ಮೊಖ್ತೇಸರರು ಸಹ ಇವರಿಗೆ ಹೆಚ್ಚು ಹೆಚ್ಚಾದ ಗಣನೆಯನ್ನು ಕೊಡುತ್ತಲಿರುವಂತೆ ತೋರುತ್ತದೆ. ಪಂಚಮರ ಉದ್ಧರಣ ಕಾರ್ಯದಲ್ಲಿ ಶ್ರದ್ಧೆಯನ್ನು ವಹಿಸಿರತಕ್ಕವರು ಮೈಸೂರು ದೇಶದಲ್ಲಿ ಇವರೊಬ್ಬರೇ ಎನ್ನುವಂತೆ ಸಂಪದಭ್ಯುದಯ ಸಮಾಜದ (ಎಕನಾಮಿಕ್ ಕಾನ್ಫರೆನ್ಸಿನ) ವಿದ್ಯಾಶಾಖೆಗೆ ಪಂಚಮರ ವಿದ್ಯಾಭ್ಯಾಸದ ಪ್ರತಿನಿಧಿಯನ್ನಾಗಿ ಸರ್ಕಾರದವರು ಇವರನ್ನು ನೇಮಿಸಿರುವರು. ಪಂಚಮರ ನಿಜವಾದ ಪುರೋಭಿವೃದ್ಧಿಯನ್ನು ಕೋರತಕ್ಕ ಮೈಸೂರುದೇಶಸ್ಥರು ಇನ್ನಾರೂ ಇರಲಿಲ್ಲವೇನೊ ? ಪ್ರಜಾಪ್ರತಿನಿಧಿ ಸಭೆಯಲ್ಲಿ ಇವರ ನಡೆನುಡಿಯನ್ನು ನೋಡಿರತಕ್ಕವರೆಲ್ಲರೂ ಇವರು ಹಿಂದುಳಿದ ಜನಾಂಗದವರ ಪುರೋಭಿವೃದ್ಧಿಯಲ್ಲಿ ಎಷ್ಟರಮಟ್ಟಿನ ಸಹನೆಯುಳ್ಳವರೆಂಬುದನ್ನು ಬಲ್ಲರು. ಇಂತಹವರನ್ನು ನಮ್ಮ ವಿದ್ಯಾಶಾಖೆಯ ಮುಖ್ಯಾಧಿಕಾರಿಗಳಾದ ಮಿ॥ ಬಾಲಸುಂದರಂ ಅಯ್ಯರ್‌ರವರು ಬೆಂಗಳೂರು ಡಿಸ್ಟ್ರಿಕ್ಟಿನ ಹಿಂದುಳಿದ ಜನಾಂಗದವರ ಸ್ಕಾಲರ್‌ಷಿಪ್ ಕಮಿಟಿಗೆ ಮೆಂಬರನ್ನಾಗಿ ಮಾಡಿರುವಂತೆ ಈಗತಾನೆ ತಿಳಿಯಿತು. ಸಮಯಾಸಮಯವೆನ್ನದೆ ಸದಾಕಾಲದಲ್ಲೂ ಹಿಂದುಳಿದಜನಾಂಗದ ವಿದ್ಯಾರ್ಥಿಗಳಿಗೆ ಕೊಡಲ್ಪಡುತ್ತಲಿರುವ ವೇತನಗಳು ಕ್ರಮವಾಗಿ ಹಂಚಲ್ಪಡುತ್ತಲಿಲ್ಲವೆಂದು ವೃಥಾ ದೋಷಾರೋಪಣೆಯನ್ನು ಮಾಡುತ್ತಲಿರುವ ಮ॥ ರಾಮಚಂದ್ರರಾವ್ ಸಿಂಧೆಯವರನ್ನಾಗಲಿ, ಅಥವಾ ಹಿಂದುಳಿದ ಜನಾಂಗಕ್ಕೆ ಸೇರಿದ ಮತ್ತ್ಯಾರನ್ನಾಗಲಿ ಮೆಂಬರನ್ನಾಗಿಮಾಡದೆ ಮಿ॥ ಅಯ್ಯರ್‌ರವರನ್ನು ಮೆಂಬರನ್ನಾಗಿ ನೇಮಿಸಲು ಕಾರಣವೇನಿರಬಹುದು ? ಅವರ ಸರ್ವವ್ಯಾಪಕತೆಗೆ ಸರ್ಕಾರದವರು ಗೌರವವನ್ನು ಕೊಟ್ಟಿರುತ್ತಾರೆಂದು ಅವಿದ್ಯಾವಂತರಾದ ಜನಸಾಮಾನ್ಯಕ್ಕೆ ತೋರ್ಪಡಿಸುವುದಕ್ಕೋ ? ಮಿ॥ ಅಯ್ಯರ್‌ಯವರು ನ್ಯಾಯವಿಧಾಯಕ ಸಭೆಯ ಮೆಂಬರಲ್ಲದಿದ್ದಾಗ್ಯೂ ಈಸಾರೆ ನಡೆದ ವೋಟಿಂಗಿನಲ್ಲಿ ಮೆಂಬರುಗಳ ಓಡಾಟಕ್ಕಿಂತಲೂ, ಮಿ॥ ಅಯ್ಯರ್‌ರವರ ದರ್ಬಾರೇ ಹೆಚ್ಚಾಗಿತ್ತು. ಕೌನ್ಸಿಲಿನಲ್ಲಿದ್ದ ಅಧಿಕಾರಿವರ್ಗದವರಲ್ಲೂ, ರಿಕಾರ್ಡು ವಗೈರೆ ಇಟ್ಟುಕೊಂಡಿದ್ದ ನೌಕರಮಾನೇರಲ್ಲೂ ಅಯ್ಯರ್‌ರವರು ಬಹಳ ಸಲಿಗೆಯಿಂದಲೂ, ಧೈರ್ಯದಿಂದಲೂ ಸಂಭಾಷಣೆಯನ್ನು ಮಾಡುತ್ತಲಿದ್ದುದನ್ನು ಅಲ್ಲಿದ್ದವರಲ್ಲಿ ಯಾರುತಾನೆ ಅರಿಯರು ? ಇವರ ವಿಚಾರವಾಗಿ ಹಿಂದೆ ಪೇಪರುಗಳಲ್ಲಿ ದೂರುಗಳು ಬಂದು ಅವರ ಈ ವಿಧವಾದ ವರ್ತನಕ್ಕೆ ಸ್ವಲ್ಪಮಟ್ಟಿಗೆ ನಿರ್ಬಂಧವಿದ್ದಿತೆಂದು ನಾನು ಪರಸ್ಪರ ಕೇಳಿದ್ದೆನು. ಆದರೆ ಕಾಲಾತೀತವಾದಂತೆಲ್ಲಾ ಅದು ಮರೆಯಲ್ಪಟ್ಟಿರುವಂತೆ ಕಾಣುತ್ತೆ. ಈಗಲೂ ಸಂಬಂಧಪಟ್ಟವರು ಈ ವಿಚಾರದಲ್ಲಿ ಎಚ್ಚರಿಕೆಯಿಂದಿರುವುದು ಉತ್ತಮ.

ಒಬ್ಬ ಮೈಸೂರಿನವ.

ಮೈಸೂರು ದೇಶದಲ್ಲಿರುವ ಲೈಫ್ ಇನ್ಷೂರೆನ್ಸ್ ಕಂಪೆನಿಗಳು.

ನಮ್ಮ ಮೈಸೂರು ದೇಶದಲ್ಲಿ ಬಹಳ ದಿವಸಗಳಿಂದಲೂ ಒಂದೆರಡು ಪರದೇಶದ ಕಂಪೆನಿಗಳು ಮಾತ್ರ ತಲೆಹಾಕಿ ಪಾಲಿಸಿದಾರರನ್ನು ಏಜಂಟರುಗಳ ಮುಖಾಂತ್ರ ಸೇರಿಸುವ ವಾಡಿಕೆಯಲ್ಲಿತ್ತು. ಇವುಗಳ ಪೈಕಿ 'ಬೊಂಬಾಯಿ ಓರಿಯಂಟಲ್ ಗೌರ್ನಮೆಂಟು ಸೆಕ್ಯೂರಿಟಿ ಲೈಫ್ ಆಫೀಸು' ಬಹಳ ಪ್ರಖ್ಯಾತಿಯಿಂದಲೂ ಮತ್ತೂ ಮುತುವರ್ಜಿಯಿಂದಲೂ ಹಳ್ಳಿಹಳ್ಳಿಗಳಲ್ಲಿಯೂ ಏಜಂಟರುಗಳನ್ನು ನೇಮಿಸಿ ಬಹಳ ಉತ್ಸಾಹವನ್ನು ಏಜಂಟರುಗಳಿಗೆ ಉಂಟುಮಾಡಿ ಹೊಸ ವಿಮೇದಾರರನ್ನು ಸೇರಿಸುತ್ತಾ ಬಹಳ ಅಭಿವೃದ್ಧಿಸ್ಥಿತಿಗೆ ಬಂದಿದೆ. ನಮ್ಮ ಮಹಾರಾಜಾ ಸರ್ಕಾರದವರು ಸ್ಥಾಪಿಸಿರುವ (Public Branch) ಕಂಪೆನಿಯು ದಿನೇ ದಿನೇ ಕ್ಷೀಣವಾಗುತ್ತಿರುವಂತೆ ಕಾಣುತ್ತೆ. ಇದಕ್ಕೆ ಮೂಲಕಾರಣ ಯಾವುದೆಂದರೆ:— 1. ಸರ್ಕಾರದಲ್ಲಿ ಗುಮಾಸ್ತೆಗಳಾಗಿರುವ ಎಷ್ಟೋ ಜನರು ಈ ಪ್ರೈವೇಟ್ ಕಂಪೆನಿಗಳಲ್ಲಿ ಉದ್ಯೋಗಮಾಡುತ್ತಿರುವುದು ಮತ್ತೂ ಪ್ರೈವೇಟ್ ಕಂಪೆನಿಗಳ ಏಜಂಟರಾಗಿ ಕೆಲಸ ಮಾಡುವುದು. ಮೇಲ್ಕಂಡ ಸರ್ಕಾರದ ನೌಕರರೆಲ್ಲರೂ ತಮ್ಮ ಗಮನವನ್ನು ಅಕಡೆ ಬಿಟ್ಟು ನಮ್ಮ ಸರ್ಕಾರದವರು ಸ್ಥಾಪಿಸಿರತಕ್ಕ ಸಂಘಕ್ಕೇ ಕೆಲಸಮಾಡಿದರೆ ಎಷ್ಟೋ ಹಣವು ನಮ್ಮ ದೇಶದಲ್ಲೇ ನಿಂತು ಸರ್ಕಾರಕ್ಕೆ ಎಷ್ಟೋ ಉತ್ತೇಜನಕೊಡುತ್ತೆ. 2. ಸರ್ಕಾರದ ಕೆಲಸದಲ್ಲಿರುವ ಡಾಕ್ಟರುಗಳು ತಮಗೆ ಇತರ ಊರುಗಳಲ್ಲಿ ಕೆಲಸವಿಲ್ಲದಿದ್ದಾಗ್ಯೂ ರಜಾಪಡೆದೋ ಅಥವಾ ಇನ್ಸ್‌ಪೆಕ್ಷನ್ ಡ್ಯೂಟಿಯ ಮೇಲೆಯೋ ಇತರ ಕಂಪೆನಿಯ ಏಜಂಟರುಗಳ ಹಿಂದೆ ಹೋಗಿ ಜನಗಳನ್ನು ಪರೀಕ್ಷೆಮಾಡುತ್ತಿರುವರು. ಹೀಗೆ ಮಾಡುವುದು 'ಸರ್ವಿಸ್ ರೆಗ್ಯುಲೇಷನ್ನಿಗೆ' ವಿರೋಧವಲ್ಲವೇ ? ಸರ್ಕಾರದವರು ಇದನ್ನು ತಿಳಿದೂ ಸುಮ್ಮನೆ ಇರುವುದರಿಂದ ಇತರ ಹೊಸ ಕಂಪೆನಿಗಳಷ್ಟು ಮುಂದಕ್ಕೆ ನಮ್ಮ ಸರ್ಕಾರದ ಸಂಘವು ಬರಲಾರದೆಂದು ಹೇಳಬಹುದಾಗಿದೆ. ಸರ್ಕಾರದ ಉದ್ಯೋಗದಲ್ಲಿದ್ದು ಹಣದಾಸೆಗಾಗಿ ಅದಕ್ಕೆ ವ್ಯತಿರಿಕ್ತರಾಗಿ ಕೆಲಸಮಾಡುತ್ತಿರುವ ನೌಕರರನ್ನು ಸರ್ಕಾರದವರು ಯಾಕೆ ವಿಚಾರಣೆಮಾಡಿ ಅವರುಗಳು ಎಲ್ಲಿಯೂ ಪ್ರೈವೇಟ್ ಕೆಲಸಗಳನ್ನು ಮಾಡಕೂಡದೆಂದು ನಿರ್ಬಂಧಿಸಬಾರದು ? ನಾನು ಈ ದೇಶದವನಾದ್ದರಿಂದ ಈ ನೌಕರರು ಮಾಡತಕ್ಕ ಅನ್ಯಾಯವನ್ನು ಸಹಿಸಲಾರದೆ ಈ ಪ್ರಕಾರ ಬರೆದಿದೇನೆ. ಈ ನೌಕರರೂ, ಡಾಕ್ಟರುಗಳು ಸಹ ಸರ್ಕಾರಿ ಸಂಘವನ್ನು ಪ್ರೋತ್ಸಾಹಿಸಿದಲ್ಲಿ ಖಂಡಿತವಾಗಿ ಕ್ಷಿಪ್ರದಲ್ಲಿಯೇ ಸರ್ಕಾರಿ ಸಂಘವು ಎಷ್ಟೋ ಮುಂದಕ್ಕೆ ಬರಲು ಯಾವ ಅಭ್ಯಂತರವೂ ಇರುವುದಿಲ್ಲ. ಅದಪ್ರಯುಕ್ತ ಮಹಾರಾಜಾ ಸರ್ಕಾರದವರು ತಮ್ಮ ಶಾಖೆಯ ಸಂಘವು ಈ ಪ್ರಕಾರ ನಿದ್ರೆ ಮಾಡುತ್ತಿರುವುದನ್ನು ಲಕ್ಷ್ಯವಿಟ್ಟು ನೋಡಿ ಒಂದು ಸರ್‌ಕ್ಯುಲರನ್ನು ನೌಕರರುಗಳಿಗೆ ಕಳುಹಿಸಿ ಅವರುಗಳು ಇತರ ಹವ್ಯಾಸಗಳನ್ನು ಬಿಟ್ಟು ತಮ್ಮ ಸಂಘಕ್ಕೇ ಕೆಲಸಮಾಡತಕ್ಕದ್ದೆಂದು ನಿರ್ಬಂಧಪಡಿಸಿದರೆ ಒಂದೆರಡು ತಿಂಗಳುಗಳಲ್ಲಿಯೇ ಅದರ ಫಲವು ತಿಳಿಯುತ್ತೆ. ಎಷ್ಟೋ ಹಣವು ಪರದೇಶದ ಕಂಪೆನಿಯವರಿಂದ ತೆಗೆದುಕೊಳ್ಳಲ್ಪಟ್ಟು ಮೈಸೂರು ನಿವಾಸಿಗಳ ಕೈಲಿ ಹಣವಿಲ್ಲದಂತಾಗಿದೆ. ಈ ಹಣವು ಇಲ್ಲಿಯೇ ನಿಂತಲ್ಲಿ ಖಜಾನೆ ತುಂಬಿ ಎಷ್ಟೋ ಸ್ಕೀಮ್‌ಗಳನ್ನು ನಡೆಸಬಹುದು. ಸರಿಯಾದ ಉತ್ತೇಜನವನ್ನು ಸರ್ಕಾರದವರು ಕೊಡುವುದಾದರೆ ದೇಶವತ್ಸಲರಾದ ಎಷ್ಟೋ ಏಜಂಟರೂ ಸಹ ನಿಂತು ಸರ್ಕಾರದ ಸಂಘಕ್ಕೆ ಕೆಲಸಮಾಡಲು ಸಿದ್ಧರಾಗಿರುತ್ತಾರೆ. ಈ ವಿಚಾರವಾಗಿ ಅತಿ ಜಾಗ್ರತೆಯಲ್ಲಿಯೇ ತಕ್ಕ ಏರ್ಪಾಟು ನಡೆಯುತ್ತೆಂದು ನಂಬಿರುವ,

ಇನ್ಷೂರೆನ್ಸ್ ಅಬ್‌ಸರ್ವರ್.

ಶ್ರೀ ಜಗದ್ಗುರು ಜಯದೇವ ವೀರಶೈವ ಸಂಘ ತುಂಕೂರು.

ಇದೇ ಸ್ಟಾರ್ ಪತ್ರಿಕೆಯಲ್ಲಿ ನಾನು 8-6-24ರಲ್ಲಿ ಪ್ರಕಟಿಸಿದ್ದ ಮೇಲಿನ ಸಂಘದ ಫಂಡಿನ ವಿಚಾರದಲ್ಲಿ ಯಾರೋಧರ್ಮಾಭಿಮಾನಿಗಳೆಂಬುವವರು ನಿಜಾಂಶವನ್ನು ಹೊರಪಡಿಸಲಿಲ್ಲವೆಂದು 6-7-1924ರ ಇದೇ ಸ್ಟಾರ್ ಪತ್ರಿಕೆಯಲ್ಲಿ ಸುಳ್ಳು ಅಪವಾದನೆ ಮಾಡಿರುವುದು ಸಖೇದಾಶ್ಚರ್ಯವಾಗಿರುವುದು. ಕೆಳಗೆ ವಿವರಿಸಿರುವ ಸಂಗತಿಗಳಿಂದ ನಿಜಾಂಶವು ಯಾರಲ್ಲಿದೆಯೆಂಬುದು ವಾಚಕರಿಗೆ ಗೊತ್ತಾಗದೆ ಇರಲಾರದು. ಧರ್ಮಾಭಿಮಾನಿಗಳೆಂಬುವವರು ಕೈ॥ ಸಾ॥ ಗುಬ್ಬಿ ಹುಚ್ಚಯ್ಯನವರು 10,000 (ಹತ್ತು ಸಾವಿರ) ರೂಪಾಯಿಗಳ ಸಾಲವನ್ನು ವೀರಶೈವ ಫಂಡಿಗಾಗಿ ಪ್ರತ್ಯೇಕಿಸಿದ್ದುದು ಸುಳ್ಳೆಂದೂ 6,500 ರೂ. ಗಳ ಸಾಲಗಳನ್ನು ಮಾತ್ರ ಸದರಿ ಫಂಡಿಗಾಗಿ ತೆಗೆದಿಟ್ಟದ್ದರೆಂದೂ ಬರೆದಿರುವುದನ್ನು ನೋಡಿದರೆ ಫಂಡಿಗೆ ಸಲ್ಲಬೇಕಾದ 3,500 ರೂ. ಗಳನ್ನು ಕೊಡಬೇಕಾದವರ ವಕಾಲತ್ತನ್ನು ವಹಿಸಿ 3,500 ರೂ. ಗಳನ್ನು ಅವರಿಗೆ ಉಳಿಸಿಕೊಡುವ ಧರ್ಮವನ್ನು ವ್ಯಕ್ತಪಡಿಸಿದಂತೆ ಕಾಣುತ್ತದೆ. ಪೌತಿ ಗುಬ್ಬಿ ಹುಚ್ಚಯ್ಯನವರ ಆಸ್ತಿಪಾಸ್ತಿ ದಾಖಲೆಗಳೆಲ್ಲವೂ ಸದರಿ 3500 ರೂ. ಗಳನ್ನು ಕೊಡಬೇಕಾದವರ ಸ್ವಾಧೀನದಲ್ಲಿದೆಯೆಂದು ಸದರಿ ಆಸ್ತಿಗೆ ಹಕ್ಕುದಾರರಾದ ವಾರಸುದಾರರಿಂದ ತಿಳಿದು ಬಂದಿರುವಾಗ ಅವುಗಳೆಲ್ಲವೂ ಹೊರಬೀಳುವ ಸಂಭವ ಹೇಗೆ ಎಂಬುದನ್ನು ವಾಚಕರೇ ಊಹಿಸಬಹುದು. ಇದುವರೆಗೆ ವಸೂಲ್ಮಾಡಿದ 6500 ರೂ. ಗಳ ಸಾಲದ ದಾಖಲೆಗಳೆಲ್ಲವೂ ಸದರಿ 3,500 ರೂ. ಗಳನ್ನು ಕೊಡಬೇಕಾದವರ ಸ್ವಾಧೀನದಲ್ಲಿದ್ದುದು ಎಲ್ಲರಿಗೂ ಗೊತ್ತಾಗಿರುತ್ತೆ. ಧರ್ಮಾಭಿಮಾನಿಗಳೆಂಬವರು ನಮೂದಿಸಿರುವ ಟ್ರಸ್ಟಿಗಳಲ್ಲೊಬ್ಬರಾದ ಮತ್ತು ಕೈ॥ ಸಾ॥ ಗುಬ್ಬಿ ಹುಚ್ಚಯ್ಯನವರ ಆಸ್ತಿಪಾಸ್ತಿಗಳೆಲ್ಲಕ್ಕೂ ಮುಖ್ಯ ವಾರಸುದಾರರಾದ ಅನುಬಸವಾರಾಧ್ಯರೆಂಬುವರು ಪೌತಿ ಗುಬ್ಬಿ ಹುಚ್ಚಯ್ಯನವರು 10,000 ರೂ. ಗಳನ್ನು ಈ ಧರ್ಮಕ್ಕಾಗಿ ವಿನಿಯೋಗಿಸಲು ಪ್ರತ್ಯೇಕಿಸಿಟ್ಟಿದ್ದಾರೆಂದು ವಗೈರೆ ನಮೂದಿಸಿ ಸದರಿ 10,000 ರೂ. ಗಳ ಸಾಲವನ್ನು ಸಂಘದ ಪ್ರಸಿಡೆಂಟರು ವಸೂಲ್ ಮಾಡುವಂತೆ ಪವರ್ ಆಫ್ ಅಟಾರ್ನಿಯನ್ನು ಬರೆದು ರಿಜಸ್ಟರು ಮಾಡಿಸಿಕೊಟ್ಟಿರುವುದರಿಂದಲೂ, ಕೈ॥ ಗುಬ್ಬಿ ಹುಚ್ಚಯ್ಯನವರು ಸಾಯುವ ಕಾಲದಲ್ಲಿ ಹತ್ತಿರಿದ್ದ ನಮ್ಮ ಕಮಿಟಿ ಮೆಂಬರುಗಳಲ್ಲಿ ಮುಖ್ಯರಾದ ಮ॥ ರಾ॥ ಟಿ. ಸಿ. ರೇವಣ್ಣನವರೇ ಮೊದಲಾದ ದೊಡ್ಡಮನುಷ್ಯರಲ್ಲಿ ಹೇಳಿದ್ದರ ಮೇಲೂ ಪ್ರಸಿಡೆಂಟರು ಪವರ್ ಆಫ್ ಅಟಾರ್ನಿಯನ್ನು ಈಗ್ಗೆ 8-9 ತಿಂಗಳಲ್ಲಿ ಬರೆಸಿಕೊಂಡು 3,500 ರೂ. ಕೊಡಬೇಕೆಂದು ಮ॥ ರಾ॥ ಟಿ. ಸಿ. ಗುಬ್ಬಯ್ಯನವರಿಗೆ ನೋಟೀಸನ್ನು ಕೊಟ್ಟದ್ದಕ್ಕೆ ಅವರು ಹಣವನ್ನು ಕೊಡಬೇಕಾದ್ದಿಲ್ಲವೆಂದು ಜವಾಬ್ ಕೊಡಲಿಲ್ಲವಾಗಿ 10,000 ರೂ. ಗಳು ಕೈ॥ ಗುಬ್ಬಿ ಹುಚ್ಚಯ್ಯನವರು ಇದಕ್ಕಾಗಿ ತೆಗೆದಿಟ್ಟದ್ದರೆಂದು ತಿಳಿದುಬಂದು ಮೃತರ ಸಂಕಲ್ಪವು ನೆರವೇರಲೆಂಬ ಉದ್ದೇಶದಿಂದ ಬಾಕಿ ಇರತಕ್ಕ ಮೊಬಲಗನ್ನು ಸೇರಿಸಿಕೊಟ್ಟು ಸಹಾಯಮಾಡುವವರಾಗುತ್ತಾರೆಂದು ಬರೆದಿದ್ದಾಯಿತು. ಈಗಲೂ ಸದರಿ ಮ॥ ರಾ॥ ಟಿ. ಎಚ್. ಗುಬ್ಬಯ್ಯನವರು ತಾವು ಕೈ॥ ಗುಬ್ಬಿ ಹುಚ್ಚಯ್ಯನವರಿಗೆ ಯಾವ ಸಾಲವನ್ನೂ ಕೊಡಬೇಕಾದ್ದಿಲ್ಲವೆಂದೂ, 10,000 ರೂ. ಗಳ ಸಾಲವನ್ನು ತೆಗೆದಿಟ್ಟದ್ದು ಸುಳ್ಳೆಂದೂ ತಾವು ಕೊಡಬೇಕಾಗಿದ್ದ ಸಾಲದಲ್ಲಿ 3,500 ಕೊಡಬೇಕೆಂದು ಪೌತಿ ಗುಬ್ಬಿ ಹುಚ್ಚಯ್ಯನವರು ಯಾವಾಗಲೂ ಹೇಳಲಿಲ್ಲವೆಂದೂ, ಹಾಗೆ ಕೊಡಬೇಕಾದ್ದಿಲ್ಲವೆಂದೂ ಈ ಪತ್ರಿಕೆಯಲ್ಲಿ ಪ್ರಕಟಿಸಬಹುದಾಗಿತ್ತು ಅಥವಾ ಈ ಸಂಘದ ಪ್ರಸಿಡೆಂಟಾದ ನನಗೆ ಬರವಣಿಗೆಮೂಲಕ ತಿಳಿಸಬಹುದಾಗಿತ್ತು. ಇದೊಂದನ್ನೂ ಧರ್ಮಾಭಿಮಾನಿಗಳೆಂಬುವವರು ಪರ್ಯಾಲೋಚಿಸದೆ ತಮ್ಮ ಇಷ್ಟಬಂದಂತೆ ಹರಟೆಯನ್ನು ಹರಟಿ ಪ್ರಸಿಡೆಂಟರು ಸುಳ್ಳುಬರೆದಿದಾರೆಂಬ ಅಪವಾದವನ್ನು ಹೊರಿಸುವುದು ನ್ಯಾಯ ಸಮ್ಮತವೋ ಅಲ್ಲವೋ ಎಂಬುದನ್ನು ವಾಚಕರೇ ಊಹಿಸಬಹುದು.

ಜಿ. ರುದ್ರಪ್ಪ, ಪ್ರೆಸಿಡೆಂಟ್.

ಗೋಮಾತಾರಕ್ಷಣೆ.

ಪ್ರತಿಯೊಂದು ಗ್ರಾಮಾಧಿಕಾರಿಗಳಾದ ಪಾಟೀಲರು, ಶಾನುಭೋಗರು ಮತ್ತು ಮುನಸಿಪಾಲ್ಟಿ ಮೆಂಬರುಗಳು, ವರ್ತಕರು, ರೈತರು ಮೊದಲಾದ ಮಹಾಶಯರಿಗೆ ವಿನಂತಿ.—ಪ್ರಿಯಬಾಂಧವರೇ, ಶ್ರೀ ಪರಮಾತ್ಮನಿಂದ ನಿರ್ಮಿತವಾದ ಈ ಜಗತ್ತಿನಲ್ಲಿ ಸಕಲಪ್ರಾಣಿಗಳೊಳಗೆ ಮನುಷ್ಯಜನ್ಮವು ಅತ್ಯಂತ ಶ್ರೇಷ್ಠವಾದದ್ದು. ಯಾಕೆಂದರೆ—ಮನುಷ್ಯನಿಗೆ, ಪಾಪಪುಣ್ಯ, ಸುಖ, ದುಃಖ, ಶಾಂತಿ, ಪರೋಪಕಾರ ಭೋಜನಯ ಮುಂತಾದ ವಿಚಾರಶಕ್ತಿಯುಂಟು. ಅಂದಮೇಲೆ ಜ್ಞಾನರಹಿತವಾದ ಪ್ರಾಣಿಗಳನ್ನು ಕಾಪಾಡುವದು ಪ್ರತಿಒಬ್ಬ ಮನುಷ್ಯನ ಕರ್ತವ್ಯವಲ್ಲವೇ ? ಆದರೆ ಈಗ ನಮ್ಮ ದೇಶದಲ್ಲಿ ಎಷ್ಟು ಭಯಂಕರವಾದ ಪಾತಕಾರ್ಯ ನಡೆಯುತ್ತಿರುವದು ? ಕೋಟಿರಿ ವರುಷ 1ಕ್ಕೆ ಅಜಮಾಸ 60 ಲಕ್ಷ [illegible] ಗೋವುಗಳು, ಕೊಲ್ಲಲ್ಪಡುತ್ತಿರುವದಾಗಿ [illegible]. [illegible] ಸರ್ವರಿಗೂ ಪರಮಪೂಜ್ಯವಾಗಿಯೂ [illegible] ಉಪಕಾರಿಯಾಗಿಯೂ ಇದ್ದು ನಮ್ಮನೆಗೆ [illegible] ಮೊಸರು ಮುಂತಾದವುಗಳನ್ನು ಕೊಡುತ್ತಾ [illegible] ರುವ ಕರುಗಳನ್ನು ಕೊಟ್ಟು [illegible]

ಗೋವುಗಳನ್ನೂ, ಮತ್ತು ಬಿಸಲು, ಮಳೆ, ಗಾಳಿಯಲ್ಲಿ ನೇಗಲಗಳಿಗೂ ಗಾಡಿಗಳಿಗೂ ಹೆಗಲುಕೊಟ್ಟು ಬೆನ್ನುಕೊಟ್ಟು ದುಡಿದು ಸರ್ವರಿಗೂ ಅನ್ನದಸಂಗ್ರಹವನ್ನೊದಗಿಸಿ ಉಪಕಾರವಮಾಡುವ ಬಡಪ್ರಾಣಿಗಳನ್ನೂ ಮುಪ್ಪಿನ ಕಾಲಕ್ಕೆ ಲೇಶವಾದರೂ ಕರುಣವಿಲ್ಲದೆ, ಕೆಟ್ಟ ಹಣದಾಶೆಯಿಂದ ಕೇವಲ ೩-6 ರೂಪಾಯಿ ಕಿಮ್ಮತ್ತಿಗೆ ಕಟುಕರಿಗೆ ಮಾರಾಟಮಾಡಿಬಿಡುವರಲ್ಲ ! ಅಹಾ ! ಇದು ಯಾವಧರ್ಮವು, ಯಾವನ್ಯಾಯವು ? ಗೋದಾನವು ಬಹು ಶ್ರೇಷ್ಠವೆಂಬುದಾಗಿಯೂ, ಗೋರಕ್ಷಣೆಮಾಡಿದವರಿಗೆ ಪಾಪರಾಶಿಯು ನಾಶವಾಗಿ ಪುಣ್ಯಸಂಪಾದನೆಯಾಗುವದಾಗಿಯೂ ಅನೇಕ ಧರ್ಮಶಾಸ್ತ್ರ ಪುರಾಣಗಳು ಸಾರುತ್ತಿವೆ. ಮತ್ತು ವರ್ಣಾಶ್ರಮ ಧರ್ಮಾಸಕ್ತರಾದ ವೀರಶೈವ ಹಾಗೂ ಬ್ರಾಹ್ಮಣಾದಿ ಜನರಿಗಂತೂ ಪ್ರತಿದಿವಸ ಪ್ರತಿಯೊಂದು ವಿವಾಹ, ಉಪನಯನ ದೀಕ್ಷಾದಿಕಾರ್ಯಗಳಲ್ಲಿ ಪಂಚಗವ್ಯವು (ಗೋಮಯ, ಗೋಮೂತ್ರ, ಗೋಕ್ಷೀರ, ಗೋದಧಿ, ಗೋಘೃತ) ಅತ್ಯವಶ್ಯಕವಾಗಿ ಬೇಕಾಗುವದು. ಲೌಕಿಕ ಪಾರಮಾರ್ಥಿಕ ರೀತಿಯಿಂದಲೂ ನಮ್ಮಗಳಿಗೆ ಮಹದುಪಕಾರಮಾಡಿ ತಂದೆ ತಾಯಿಗಳಂತೆ ಸಂತೋಷವನ್ನುಂಟು ಮಾಡುವದಿಲ್ಲವೆ ಮತ್ತು ಗೋವಿನ ಪಾದದಿಂದ ಮಸ್ತಕಪರ್ಯಂತರವಾಗಿ ಸರ್ವಾಂಗಗಳಲ್ಲಿಯೂ ಸಕಲ ದೇವಾದಿದೇವತೆಗಳೂ ಮತ್ತು ತೀರ್ಥಗಳೂ ಸಹಾ ನೆಲೆಗೊಂಡಿರುವರೆಂದು ಧರ್ಮಶಾಸ್ತ್ರಪ್ರಕಾರ ತಯಾರಿಸಲ್ಪಟ್ಟ ಚಿತ್ರಪಟಗಳನ್ನನೋಡಿರಿ. ಅದರಿಂದಲಾದರೂ ನಿಮಗೆ ನಿಶ್ಚಯವಾಗಬಹುದು. ಇಂಥಾ ಪುಣ್ಯಶರೀರಿಗಳಾದ ಗೋವುಗಳನ್ನೂ ವೃಷಭಗಳನ್ನೂ ಪ್ರತಿಯೊಂದು ಗ್ರಾಮದಲ್ಲಿ ಮತ್ತು ಜಾತ್ರೆ ಸಂತೆ ಪೇಟೆಗಳಲ್ಲಿ ಕೈಗೆಬಂದಷ್ಟು ರೂಪಾಯಿಗೆ ಮಾರಾಟಮಾಡುತ್ತಿರುವರಲ್ಲಾ ! ಅಹೊ ರೈತಜನರೇ, ಈ ಬಡಪ್ರಾಣಿಗಳ ವಿಕ್ರಯದ ಹಣದಿಂದ ನಿಮ್ಮ ಬಡತನವು ದೂರವಾಗುವದೇನು ? ಇಲ್ಲಾ. ಪಾಪದರಾಶಿಯನ್ನು ಮಾತ್ರ ಸಂಪಾದಿಸುವಿರಿ. ಅಯ್ಯೊ ! ಆ ಬಡ ಮೂಕಪ್ರಾಣಿಗಳು ಕಟುಕರಿಗೆ ಕೊಡಲ್ಪಡುವಾಗ ಮನಸ್ಸಿನಲ್ಲಿ ಎಷ್ಟು ದುಃಖಿಸುತ್ತಿರಬಹುದು! ಯೋಚನೆಮಾಡಿನೋಡಿರಿ. ಗೋಮಾತೆಯನ್ನು ಹತಮಾಡುವ ಕೃತಿಗಳು ದೇಶದತುಂಬಾ ನಡೆಯುವದರಿಂದಲೇ ಈ ಪಾಪದ ಫಲರೂಪವಾಗಿ ದಾರಿದ್ರ್ಯ, ಕ್ಷಾಮ, ಪ್ಲೇಗು, ಮಾರಿಕಾದಿ ರೋಗಾದ್ಯುಪದ್ರವಗಳು ಪ್ರಾಪ್ತವಾಗಿ ಪೀಡಿಸುತ್ತಿರುವವು. ಈ ವಿಷಯತಿಳಿಯದೆ, ನಾವು ಮೂಢರಂತೆ ನಡೆಯುವದರಿಂದಲ್ಲವೇ ಇಂಥಾ ಕಷ್ಟಗಳೊದಗುವವು ? ಕರುಣಾಶಾಲಿಗಳಾದ ಗೌಡ, ಶಾನುಭೋಗರುಗಳೇ ಈ ಬಡಪ್ರಾಣಿಗಳಿಗೆ ನೀವು ತಂದೆ ತಾಯಿಗಳಾಗಿರಿ, ಇವುಗಳ ಮಾರಾಟಕ್ಕೆ ಅಸ್ಪದಕೊಡದಂತೆ ನಿರ್ಬಂಧಮಾಡಿರಿ, ಮತ್ತು ತಲಚೀಟಿ (ರಹದಾರಿ) ಗಳನ್ನು ಕೊಡಬೇಡಿರಿ; ಚೀಟಿಗಳಕೊಟ್ಟು ದ್ರವ್ಯಹತ್ಯೆಕೊಳ್ಳಬೇಡಿರಿ. ಮುನಿಸಿಪಾಲ್ಟಿ ಸಭಾಸದರಾದ ಮೆಂಬರುಗಳೇ, ತಾವೂ ಕೂಡ ಗೋವುಗಳ ಮಾರಾಟಮಾಡದಂತೆ ನಿಮ್ಮ ಸರಹದ್ದುಗಳಲ್ಲಿ ಬಲವಾದ ಶಾಸನಮಾಡಿರಿ. ಕೊಡುವವರಿಗೂ ತೆಗದುಕೊಳ್ಳುವವರಿಗೂ ಬಹಿಷ್ಕಾರ ತಪ್ಪುಕಾಣಿಕೆಗಳನ್ನು ಹಾಕಿರಿ. ಪ್ರಮುಖರಾದ ತಾವು ಸರ್ವರಿಗೂ ಈ ವಿಷಯವನ್ನು ಬೋಧಿಸುತ್ತ ಮಾರಾಟಮಾಡುವದನ್ನು ನಿಲ್ಲಿಸುವದು ನಿಮ್ಮ ಧರ್ಮವು. ನೀವು ಅಧಿಕಾರಕ್ಕೆ ಬಂದದ್ದು ಸಾರ್ಥಕವಲ್ಲವೆ ? ಈಪ್ರಕಾರ ಪ್ರತಿಯೊಂದು ಗ್ರಾಮದವರೂ ಏಕೀಭವಿಸಿ ಈ ದುಷ್ಕಾರ್ಯ ನಡೆಯದಂತೆ ಮಾಡುವದರಿಂದ ಮುಂದೆ ಆಪ್ರಾಣಿಗಳ ಜೀವರಕ್ಷಣೆಯಾಗಿ ಆ ಪುಣ್ಯಫಲದಿಂದ ದೇಶದಲ್ಲಿ ಆರೋಗ್ಯವೂ, ಮಳೆ ಬೆಳೆ ಸಂತೃಪ್ತಿಯೂ, ಸಂತಾನಾಭಿವೃದ್ಧಿಯೂ ಉಂಟಾಗಿ ಸರ್ವರೂ ಕೀರ್ತಿಯನ್ನೂ ಸುಖವನ್ನೂ ಹೊಂದುವರು. ಇಷ್ಟು ಮಾತ್ರ ತಾವುಗಳು ದಯವಿಟ್ಟು ಠರಾವುಮಾಡುವರೆಂದು ತುಂಬಾನಂಬಿದ್ದೇನೆ. ದಯಾಶಾಲಿಗಳಾಗಿ ಈ ಪಾಪಕಾರ್ಯಮಾಡದಂತೆ ಸರ್ವರಿಗೂ ಸದ್ಬುದ್ಧಿಯನ್ನು ಕೊಟ್ಟು ರಕ್ಷಿಸಲೆಂದು ಶ್ರೀ ಪರಮಾತ್ಮನನ್ನು ಕುರಿತು ಪ್ರಾರ್ಥನೆ.

ವಿರೂಪಾಕ್ಷಾರ್ಯ, ಪುರಾಣೀಕಮಠ, ಹಿರೇಹಡಗಲಿ.

ಭಾರತೀಯಸಾಹಿತ್ಯ.

(ಲೇಖಕ, ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರು, ಪ್ರೊಫೇಸರ, ಸಂಸ್ಕೃತ ಕಾಲೇಜ ಇಂದೋರ.)

(ಕಳೆದವಾರದ ಶೇಷ.)

ವೇದಾಂಗಗಳಲ್ಲಿ ಮೂರನೇದಾದ ಕಲ್ಪಸೂತ್ರವು, ಅಶ್ವಲಾಯನ ಆಪಸ್ತಂಬಬೋಧಾಯನಾದಿ ಋಷಿಗಳಿಂದ ರಚಿಸಲ್ಪಟ್ಟ ಕಲ್ಪಸೂತ್ರ ಗ್ರಂಥಗಳು ಭಾಷ್ಯಸಹಿತವಾಗಿ ಈಹೊತ್ತಿಗೂ ಕೆಲವು ಪ್ರಚಾರದಲ್ಲಿರುವವು. ಇದರಲ್ಲಿಯೂ, ಎಷ್ಟೋ ಗ್ರಂಥಗಳು ಲುಪ್ತವಾಗಿದ್ದು ಇನ್ನೂ ಶೋಧವಾಗಿಲ್ಲ. ಇವು ವೇದದಲ್ಲಿಯ ಹವನಕ್ರಿಯ ಮೊದಲಾದ ವಿಷಯಗಳನ್ನು ಮತ್ತು ಅದಕ್ಕೆ ಬೇಕಾದ ವೇದಿಕಾರಚನಾ ಪದ್ಧತಿ ಮೊದಲಾದ ವಿಷಯಗಳನ್ನು ಪ್ರತಿಪಾದಿಸುವವು. ಮತ್ತು ಹವನ ಕಾಲನಿರ್ಣಯಾದಿಗಳನ್ನು ತೋರಿಸುವವು. ವೇದದ ನಾಲ್ಕನೇ ಅಂಗವಾದ ನಿರುಕ್ತವೆಂಬುವದು ವೇದದ ಗಂಭೀರವಾದ ಅಲೌಕಿಕ ಅರ್ಥವನ್ನು ಪ್ರತಿಪಾದಿಸುವ ವೈದಿಕ ವ್ಯಾಕರಣಶಾಸ್ತ್ರವಿದ್ದು ಇದರಲ್ಲಿ ಒಂದು ವೈದಿಕಶಬ್ದಕ್ಕೆ ಅನಂತ ಅರ್ಥಗಳನ್ನು ಪ್ರತಿಪಾದಿಸುವ ಶೈಲಿಯು ತೋರಿಸಿದ್ದು ವೇದಮಂತ್ರಗಳ ಯಥಾರ್ಥಜ್ಞಾನ ಬೋಧಕರೀತಿಯೂ ಹೇಳಿರುತ್ತದೆ. ಈ ನಿರುಕ್ತಶಾಸ್ತ್ರವು ಎಷ್ಟೋ ಋಷಿಗಳಿಂದ ರಚಿಸಲ್ಪಟ್ಟಿರುವದು. ಅದರಲ್ಲಿ ಈಹೊತ್ತಿಗೆ ವಿಶೇಷ ಪ್ರಚಾರದಲ್ಲಿರುವದೆಂದರೆ ದುರ್ಗಾಚಾರ್ಯರ ಭಾಷ್ಯದಿಂದ ಕೂಡಿದ ಯಾಸ್ಕಮುನಿಗಳಿಂದ ರಚಿತವಾದ ನಿರುಕ್ತಶಾಸ್ತ್ರವೇ ಆಗಿರುವದು. ಈ ನಿರುಕ್ತಶಾಸ್ತ್ರಕ್ಕೆ ಇನ್ನೂ ಭಾಷ ಟೀಕಾಗ್ರಂಥಗಳನೇಕವಿರುವವು. ಈ ನಿರುಕ್ತಶಾಸ್ತ್ರವು ವೇದದ ವಿಲಕ್ಷಣಾರ್ಥವನ್ನು ಯಥಾರ್ಥ ತಿಳಕೊಳ್ಳಲಿಕ್ಕೆ ಅತಿ ಸುಲಭೋಪಾಯವೆಂದು ಹೇಳಲಿಕ್ಕೆ ಏನೂ ಅಡ್ಡಿಯಿಲ್ಲ. ವೇದದ ಐದನೇ ಅಂಗವು ಜ್ಯೋತಿಷಶಾಸ್ತ್ರವಿರುವದು. ಇದರಲ್ಲಿ ಫಳಿತಗಣಿತಗಳೆಂಬ ಎರಡು ಭೇದಗಳಿದ್ದು ಗಣಿತವಿಷಯಕವಾದ ಸೂರ್ಯಸಿದ್ಧಾಂತಾದಿ ಅನೇಕ ಮಹತ್ವಗ್ರಂಥಗಳಿರುವವು. ಇದರಂತೆ ಫಲಿತಾಂಶದ ಗ್ರಂಥಗಳು ಅನೇಕವಿದ್ದು ಕೆಲವರು ಅವುಗಳಲ್ಲಿಯ ಫಲಿತಾಂಶವನ್ನು ಸತ್ಯವೆಂದು ನಂಬುವದಿಲ್ಲ. ಆದರೆ ಈ ಜ್ಯೋತಿಷ್ಯದ ಗಣಿತ ಫಲಿತಾಂಶದಲ್ಲಿ ಭಾರತೀಯರು ಶೋಧಮಾಡಿ ಎಷ್ಟು ಉಚ್ಚಪದವಿಯನ್ನು ಹೊಂದಿರುವರೋ ಅಷ್ಟು ಮತ್ತಿನ್ನಾವರಾಷ್ಟ್ರದವರೂ ಇದೂವರೆಗೂ ಶೋಧಮಾಡಿಲ್ಲವೆಂದು ಸ್ಪಷ್ಟ ಹೇಳುವದರಲ್ಲಿ ಯಾವ ಶಂಸಯವೂ ಕಂಡುಬರುವದಿಲ್ಲ. ಕೇವಲ ನಮ್ಮ ಪೂರ್ವ ಮಹರ್ಷಿಗಳಿಂದ ಬರೆದಿಟ್ಟ ವಿಷಯಗಳನ್ನು ಮಾತ್ರ ಪೂರ್ವಾಪರ ಪರ್ಯಾಲೋಚಿಸಿ ಅವುಗಳನ್ನು ಕ್ರಿಯಾರೂಪದಲ್ಲಿ ತಂದು ಯಂತ್ರಸಾಧನದಿಂದ ಜನರ ಪ್ರತ್ಯಕ್ಷ ನಿದರ್ಶನಕ್ಕೆ ಅನುಕೂಲಮಾಡಿ ಅದನ್ನು ತಮ್ಮ ತಮ್ಮ ಮಾತೃಭಾಷೆಗಳಲ್ಲಿ ಭಾರತೀಯ ಪ್ರಾಚೀನ ಸಂಸ್ಕೃತಗ್ರಂಥಗಳ ಭಾಷಾಂತರಮಾಡಿಕೊಂಡಿರುವರಷ್ಟೇ ಅಲ್ಲದೇ ಆ ಗ್ರಂಥಗಳಲ್ಲಿಲ್ಲದ ನವೀನಶೋಧವನ್ನು ಇನ್ನು ಯಾವ ರಾಷ್ಟ್ರದವರೂ ಮಾಡಿಲ್ಲ. ಈಗಿನ ನವೀನಶೋಧವೆಲ್ಲ ಭಾರತೀಯ ಗ್ರಂಥದಲ್ಲಿಯೇ ಇರುವದೆಂದು ಹೇಳಿದಪಕ್ಷದಲ್ಲಿ ಯುರೋಪ್ಯರು ಈ ದೇಶಕ್ಕೆ ಬರುವದಕ್ಕಿಂತ ಪೂರ್ವದಲ್ಲಿ ಅಥವಾ ಬಂದನಂತರವಾದರೂ ಭಾರತೀಯರೇಯಾಕೆ ಮೊದಲು ಶೋಧಮಾಡಲಿಲ್ಲವೆಂದು ಸಹಜಪ್ರಶ್ನೆ ಮಾಡಬಹುದು. ಅದಕ್ಕೆ ಉತ್ತರವೇನಂದರೆ, ಪರಿಸ್ಥಿತಿಯು ಅನುಕೂಲವಾಗದ ವಿನಾ ಯಾವ ಕಾರ್ಯವೂ ಸೂಚಿಸುವದಿಲ್ಲ. ಮತ್ತು ಸಾಧ್ಯವಾಗುವದಿಲ್ಲ. ಇದಕ್ಕೆ ಪ್ರತ್ಯಕ್ಷ ಉದಾಹರಣವೆಂದರೆ ಮ॥ರಾ॥ ಶಿವಕರ ಬಾಪೂಜೀತಳಪದೆ ಎಂಬವರು ಮುಂಬಯಿಯಲ್ಲಿ ಭಾರತೀಯ ಗ್ರಂಥಾಧಾರಗಳಿಂದ ವಿಮಾನರಚಿಸಲಿಕ್ಕೆ ಹತ್ತಿದ್ದು ಅವರಿಗೆ ದ್ರವ್ಯ ಮೊದಲಾದ ಕೊರತೆಗಳಿಂದ ಅನುಕೂಲಸ್ಥಿತಿಯು ಒದಗದೇ ಅಲ್ಲಿಂದಲ್ಲೀ ಅವರು ಹಟಸ್ಥರಾಗಿರುವರು. ಇದಲ್ಲದೆ ಜಗತ್ಪ್ರಸಿದ್ಧರಾದ ಬಂಗಾಲದ "ಬೋಸ" ಎಂಬುವರು ಅನೇಕ ರೀತಿಪದಾರ್ಥವಿಜ್ಞಾನಶಾಸ್ತ್ರದ ಶೋಧವನ್ನು ಭಾರತೀಯ ಶಾಸ್ತ್ರಾಧಾರದಿಂದ ಮಾಡಿದ್ದು ಅದಕ್ಕೆ ಉತ್ತೇಜನಕೊಡುವ ಅಭಿಮಾನಿಗಳಾದ ಸಮರ್ಥರಿಲ್ಲದ್ದರಿಂದ ಪ್ರಚಾರದಲ್ಲಿ ತರತಕ್ಕ ಎಷ್ಟೋ ಕಾರ್ಯಗಳು ವಿಘ್ನವಾಗಿ ನಿಂತಿರುವವು. ಇದರಂತೆಯೇ ಭಾರತೀಯರ ಎಷ್ಟೋ ಕಾರ್ಯಗಳು ಪೂರ್ವದ ಮತ್ತು ಈಗಿನ ಪರರಾಷ್ಟ್ರದವರ ಧರ್ಮದ ವಿಘಾತದಿಂದ "ಹೃದಯೇಷ್ವೇವಲೀಯಂತೆ ದರಿದ್ರಾಣಾಂ ಮನೋರಥಾಃ" ಎಂಬ ನೀತಿ ವಾಕ್ಯದಂತೆ ಹೃದಯದಲ್ಲಿಯೇ ಉದ್ಭವಿಸಿ ಹೃದಯದಲ್ಲಿಯೇ ಲೀನವಾಗುವವು. ಪ್ರಾಚೀನಕಾಲದಲ್ಲಿ ಆಗ್ನೇಯಾಸ್ತ್ರ ಧನಂಜಯಾಸ್ತ್ರ ವಾಯುವಾಸ್ತ್ರಗಳ ಉಲ್ಲೇಖವಿದ್ದು ಬಂದೂಕ, ತೋಫ, ಮೊದಲಾದವುಗಳಿಗೆ ಬುಸುಂಡೀ ಶತಘ್ನೀ ಮೊದಲಾದ ಹೆಸರುಗಳು ಸಂಸ್ಕೃತಗ್ರಂಥಗಳಲ್ಲಿ ಕಂಡುಬರುವವು. ಮೋಹಶಾಸ್ತ್ರ ಮೊದಲಾದ ಹೆಸರುಗಳು ಆಯಾಯ ಶಸ್ತ್ರಗಳ ಕ್ರಿಯೆಗಳ ಮೇಲಿಂದ ಕೊಡಲ್ಪಟ್ಟಿದ್ದವೆಂದು ತಿಳಿದುಬರುತ್ತದೆ. ಮೋಹನ ವೆಂಬ ಅಸ್ತ್ರಕ್ಕೆ ಇಂಥಾದೊಂದು ವನಸ್ಪತಿಯ ಸಂಯೋಜನ ಮಾಡುತ್ತಿದ್ದರಲ್ಲಾ ಹೊಡೆದ ಆ ಅಸ್ತ್ರವು ಎಲ್ಲಿಯವರೆಗೆ ಹೋಗುವದೋ ಅಲ್ಲಿಯವರೆಗೆ ಅದರಲ್ಲಿದ್ದ ವನಸ್ಪತಿಕಣಗಳ ಸಿಂಚನೆವಾಸನೆಗಳಿಂದ ಸಮೀಪದ ಜನರು ಮೂರ್ಛಿತರಾಗಿ ಹೋಗುತ್ತಿದ್ದರು ಅದರಿಂದ ಶತ್ರು ಸೈನ್ಯಕ್ಕೆ ಅಷ್ಟೊಂದು ಹಾನಿಯನ್ನುಂಟುಮಾಡದೆ ತಮ್ಮ ಕಾರ್ಯಸಾಧಿಸಿಕೊಳ್ಳುತ್ತಿದ್ದರು. ಈರೀತಿ ವಿಲಕ್ಷಣಶಕ್ತಿಯುಳ್ಳ ಅಸ್ತ್ರಾದಿಗಳ ಪ್ರಯೋಗ ನಮ್ಮ ಆರ್ಯಾವರ್ತದಲ್ಲಿ ಪೂರ್ವದಲ್ಲಿದ್ದ ಬಗ್ಗೆ ಎಷ್ಟೋ ಆಧಾರಗಳು, ಪ್ರತ್ಯಕ್ಷವಾಗುವವು. ಭೂಮಿ ನಕ್ಷತ್ರ, ಸೂರ್ಯ, ಚಂದ್ರಾದಿ ವಿಷಯಕ ಶೋಧವು ಅತಿಸೂಕ್ಷ್ಮರೀತಿಯಾಗಿ ವೇದದಿಂದಲೇ ಸುರವಿದ್ದು ಅನಂತರ ಋಷಿಗಳೂ ವಿದ್ವಾನರೂ ಅನೇಕ ರೀತಿ ಶೋಧವನ್ನುಮಾಡಿಟ್ಟಿರುವರು. ಇನ್ನು ಜ್ಯೋತಿಷ್ಯದ ಫಲಿತಾಂಶದ ವಿಷಯವಾಗಿ ಕೆಲವರು ಫಲಿತಾಂಶವು ಸತ್ಯವೆಂತಲೂ ಕೆಲವು ಅಸತ್ಯವೆಂತಲೂ ವಾದಿಸುವರು. ಆದರೆ ನನಗೆ ಮಾತ್ರ ಕೆಲವು ಭಾಗದಲ್ಲಿ ಫಲಿತಜ್ಯೋತಿಷ್ಯವು ಸತ್ಯವೆಂದು ತಂಡುಬರುತದೆ. ಯಾಕಂದರೆ ಈ ವಿಷಯಕವಾಗಿ, ಕೆಲವು ವೇದಪ್ರಮಾಣಗಳೂ ಸಿಗುವವು ಹ್ಯಾಗಂದರೆ--ಜ್ಯೇಷ್ಠಘ್ನ್ಯಾಂಜಾತೋವಿಚೃತೋರ್ಯಮಸ್ಯ ಮೂಲಬರ್ಹಣಾತ್ ಪರಿಪಾಹ್ಯೇನಮ್ ॥ ಅತ್ಯೇನಂನೇಷದ್ದುರಿತಾನಿ ವಿಶ್ವಾದೀರ್ಘಾಯುತ್ವಾಯ ಶತಶಾರದಾಯ ॥ "ಅಥರ್ವ ೬-೧೧೦-೨ ಅಥರ್ವಣವೇದದಲ್ಲಿ ತನಗಿಂತ ಹಿರಿಯನನ್ನು ಕೊಲ್ಲುವದಕ್ಕೆ ಜ್ಯೇಷ್ಠಘ್ನಿಯನ್ನುವರು. ಅಂದರೆ ಜ್ಯೇಷ್ಠಾನಕ್ಷತ್ರದಲ್ಲಿ ಉತ್ಪನ್ನನಾದ ಪುತ್ರನು ತನಗಿಂತ ಹಿರಿಯನಾದ ಅಣ್ಣನನ್ನು ಅಥವಾ ತಂದೆತಾಯಿಗಳನ್ನು ಕೊಲ್ಲುವನು. ಮತ್ತು ವಿಚೃತ ಅಂದರೆ ವಿವರ್ತನ ಶೀಲವಾದ ಮೂಲಾನಕ್ಷತ್ರದಲ್ಲಿ ಹುಟ್ಟಿದ ಪುತ್ರನು ತನ್ನ ವಂಶವನ್ನೆಲ್ಲಾ ನಾಶಮಾಡುವವನಾಗುವನಾದ್ದರಿಂದ ಇಂಥಾ ನಕ್ಷತ್ರದಲ್ಲಿ ಹುಟ್ಟಿದ ಪುತ್ರನ ಸಂರಕ್ಷಣಾರ್ಥ ಮೂಲೋಚ್ಛೇದಿತ ದೋಷವುಳ್ಳವನನ್ನು ಮಾಡತಕ್ಕದ್ದು ಮತ್ತು ಆ ಪುತ್ರನು ದೀರ್ಘಾಯು ಅಂದರೆ ೧೦೦ ವರ್ಷ ಆಯುಷ್ಯವುಳ್ಳವನಾಗುವದರ ದೆಶೆಯಿಂದ ತಕ್ಕ ಉಪಾಯಗಳನ್ನು ಮಾಡಿರಿ ಎಂದು ಬೋಧಿಸಿರುವದು. ಇದರಂತೆಯೇ

"ವ್ಯಾಘ್ರೇನಹ್ಯಜನಿಷ್ಟವೀರೋ ನಕ್ಷತ್ರಜಾಜಾಯಮಾನಃ ಸುವೀರಃ | ಸಮಾವಧೀತ್‌ಪಿತರಂ ವರ್ಧಮಾನೋ ಮಾಮಾತರಂ ಪ್ರಜನೀಂ ಜನಿಷ್ಟ್ರೀಮ್ ॥" ಅಥರ್ವ ವೇದ ೬-೧೧೦-೩. ವ್ಯಾಘ್ರ ಸಮಾನವಾದ ಕ್ರೂರ ನಕ್ಷತ್ರಗಳಲ್ಲಿ ಹುಟ್ಟಿದ ಪುತ್ರನು ಮಹಾವೀರನಾಗಿ ದೊಡ್ಡವನಾದ ನಂತರ ತಂದೆ ತಾಯಿಗಳ ಘಾತಕನಾಗಬಾರದು. "ಮಾಜ್ಯೇಷ್ಠಂವಧೀದಯಮಗ್ನ ಉಷಾಂಮೂಲಬರ್ಹಣಾತ್ ಪರಿಪಾಹ್ಯೇನಮ್ | ಸಗ್ರಾಹ್ಯಾಃ ಪಾಶಾನ್ ತುಭ್ಯಂ ದೇವಾಅನುಜಾನಂತುವಿಶ್ವೇ" ॥ ಅಥರ್ವವೇದ ೬-೧೧೨-೪. ಎಲೈ ಅಗ್ನಿಯೇ ಈ ಮೂಲಾನಕ್ಷತ್ರದಲ್ಲಿ ಹುಟ್ಟಿದವನು ತನ್ನ ಹಿರಿಯ ಅಣ್ಣನನ್ನು ಹೊಡಿಯದಂತೆ ದೋಷ ನಾಶಮಾಡಿ ಇವನನ್ನು ರಕ್ಷಿಸು. ನೀನು ಈ ಪಾಶದಿಂದ ಬಿಡಿಸುವ ಉಪಾಯವನ್ನು ತಿಳಿಯುತ್ತೀ ಎಂಬದಾಗಿ ಋಷಿಗಳು ಅನೇಕ ರೀತಿ ಫಲಜ್ಯೋತಿಷ್ಯವನ್ನನುಸರಿಸಿ ಅಗ್ನಿಯನ್ನು ಬೇಡಿಕೊಂಡಿರುವರು. ಈ ಮೇಲೆ ತೋರಿಸಿದ ವೇದಪ್ರಮಾಣಗಳಿಂದ ಫಲಿತ ಜ್ಯೋತಿಷ್ಯವು ಪುರಾತನವಾದದ್ದೆಂತಲೂ ವೇದದಲ್ಲಿ ಇದು ಅಂಗೀಕರಿಸಲ್ಪಟ್ಟದ್ದೆಂತಲೂ ಸಿದ್ಧವಾಗುವದು. ಆದರೆ ಕೆಲವು ಭಾರತೀಯ ವಿದ್ವಾನರೇ ಈ ಫಲಜ್ಯೋತಿಷ್ಯದಲ್ಲಿ ಅವಿಶ್ವಾಸಿತರಾಗಿ ಈ ಫಲಜ್ಯೋತಿಷ್ಯವು ಮುಸಲ್ಮಾನರಿಂದ ಕಲಿಯಲ್ಪಟ್ಟಿರುವದೆಂದು ತರ್ಕಿಸುವರು. ಆದರೆ ಅದು ಸರ್ವಥಾ ಅಸತ್ಯವಿದ್ದು ಮೇಲಿನ ವೇದಾದಿಗಳ ಪ್ರಮಾಣಗಳಿಂದ ಅರ್ಥವಿಚಾರವಿರುವದೆಂದು ಸ್ಪಷ್ಟ ಕಂಡುಬರುವದು. ಇದರಲ್ಲಿ ಅವರಿಗಾದರೂ ಅವಿಶ್ವಾಸವುಂಟಾಗಲಿಕ್ಕೆ ಕಾರಣವೇನಂದರೆ ಕೆಲವು ಉದರಂಭರಾರ್ಥಿಗಳಾದ ಧಡ್ಡಗಳು ಯತ್ಕಿಂಚಿತ್ ಜೋತಿಷ್ಯಕಲಿತು ದುಡ್ಡುಗಳಿಸಲುವಾಗಿ ಜನರಿಗೆ ಮನಬಂದಂತೆ ಹೇಳುತಾ ಅಲಸ್ಯವಂತರಾಗಿ ತಿರುಗಾಡುತ್ತಿರುವರು. ಅಲ್ಲದೆ ಜನರಿಗೆ ಮನಬಂದಂತೆ ಫಲವನ್ನು ಹೇಳಿ ಮೋಸಮಾಡುತ್ತಿರುವರಾದ್ದರಿಂದ ಜೋತಿಷ್ಯವು ಫಸಾಯಿಸುವ ವಿದ್ಯೆ ಎಂದು ಜನರಲ್ಲಿ ಅವಿಶ್ವಾಸವುಂಟಾಗಿರುವದು. ಆದರೆ ಇನ್ನುಮುಂದೆ ಕೇವಲ ಉದರಂಭರಣದ ಕಡೆಗೆ ಲಕ್ಷಕೊಡದೆ ಈಗಿನ ಜ್ಯೋತಿಷ್ಯಕಾರರಾದರೂ, ಜ್ಯೋತಿಷ್ಯದ ಮುಖ್ಯ ಉದ್ದೇಶವನ್ನು ಲಕ್ಷದಲ್ಲಿ ತಂದು ತಾವು ಕಲಿತ ಜ್ಯೋತಿಷ ವಿದ್ಯೆಯ ಮಹತ್ವವನ್ನು ಬೆಳೆಸುವರೆಂದು ಅಪೇಕ್ಷಿಸುವೆನು. ಫಲಜ್ಯೋತಿಷ ವಿಷಯಕವಾಗಿ ಪಾಶ್ಚಿಮಾತ್ಯರ ವಿಶ್ವಾಸವೂ ಕೂಡ ಸರ್ವರಿಗೂ ಶ್ರುತವಿರುವದು. ಕೇವಲ ಫಲಜ್ಯೋತಿಷ್ಯ ವಿಷಯವಲ್ಲದೇ ಅವರ ಶಕುನಾಪಶಕುನಫಲ ವಿಶ್ವಾಸವು ಇಲ್ಲಿಯತನಕ ಹೀಗಿರುವದಲ್ಲಾ ಸಾಮಾನ್ಯ ಒಂದೇ ಲೇಖಣಿಯಿಂದ ಬರೆದ ಕಾರ್ಯವು ಸಿದ್ಧವಾಯಿತೆಂದರೆ ಆ ಲೇಖಣಿಯ ಕಿಮ್ಮತ್ತು ಸಾವಿರಾರು ಬೆಲೆ ಬಾಳುವದು. ಈ ಶಕುನಾಪಶಕುನ ಪ್ರಚಾರವು ಈ ಹೊತ್ತಿಗೂ ಅದರಲ್ಲಿ ಉನ್ನತದೆಶೆಯಲ್ಲಿ ಇರುವದು. ನ್ಯಾಯ, ವೈಶೇಷಿಕ, ಯೋಗ, ಸಾಂಖ್ಯ, ಪೂರ್ವಮೀಮಾಂಸ, ಉತ್ತರಮೀಮಾಂಸೆಗಳೆಂಬ ಆರುದರ್ಶನ ಗ್ರಂಥಗಳಂತೂ ಅನಂತವಿದ್ದು ಅವುಗಳಲ್ಲಿ ಎಷ್ಟೋ ಪ್ರಚಾರದಲ್ಲಿಯೂ ಎಷ್ಟೋ ನವೀನ ಶೋಧದಲ್ಲಿಯೂ ಇರುವವು. ಒಂದೇ ಉತ್ತರಮೀಮಾಂಸವೆಂಬ (ಬ್ರಹ್ಮಸೂತ್ರ) ಗ್ರಂಥದ ಮೇಲೆ ೨೫ ಭಾಷ್ಯಗಳಿರುವವೆಂದು ಕಂಡುಬಂದಿರುವದು. ಈ ಭಾಷ್ಯಗಳಿಗೆ ಪುನಃ ಟೀಕಾಗ್ರಂಥಗಳು ಅನೇಕವಿರುವವು. ಸರ್ವಸಾಮಾನ್ಯವಾದ ಮನುಷ್ಯ ಧರ್ಮ, ರಾಜನೀತಿ, ಪ್ರಜಾನುರಾಗ ಬ್ರಹ್ಮಚರ್ಯಾದ್ಯಾಶ್ರಮ ಮೊದಲಾದ ನಿಯಮಗಳನ್ನು ಬೋಧಿಸುವ ಮನು, ಯಾಜ್ಞವಲ್ಕ್ಯ, ಹಾರೀತ, ಪರಾಶರ ಮೊದಲಾದ ೨೦ ಸ್ಮೃತಿ ಗ್ರಂಥಗಳಿದ್ದು ಅವುಗಳಿಗೆ ಭಾಷ್ಯ ಮತ್ತು ಟೀಕಾಗ್ರಂಥಗಳಾದರೂ ಇರುವವು. ಶೈವ, ವೈಷ್ಣವ, ಶಾಕ್ತೇಯ ಮೊದಲಾದ ಧರ್ಮಗಳನ್ನು ಪ್ರತಿಪಾದನ ಮಾಡುವ ಧರ್ಮ ಗ್ರಂಥಗಳ ಸಂಗ್ರಹವಂತೂ ಅಪರಿಮಿತ ಇರುವದು. ಶೈವಾಗಮಗಳು ೨೮ ಇರುವವೆಂತಲೂ, ಕೆಲವರು ೧೦೮ ಇರುವವೆಂತಲೂ ಹೇಳುವರು ಇದಲ್ಲದೆ ತಂತ್ರಶಾಸ್ತ್ರವೆಂದು ಬಂಗಾಲದೇಶದಲ್ಲಿ ಪ್ರಸಿದ್ಧವಿದ್ದು ಅದರ ಗ್ರಂಥಗಳ ಶೋಧವೂ ನಡೆದಿರುವದು. ಇದರಂತೆಯೇ ಬೌದ್ಧ, ಜೈನ, ತತ್ವಗ್ರಂಥಗಳ, ಸಂಗ್ರಹವೂ ದೊಡ್ಡದಿದ್ದು ಕೆಲವು ಗ್ರಂಥಗಳು ಪ್ರಚಾರದಲ್ಲಿಯೂ, ಇನ್ನೂ ಕೆಲವು ಶೋಧವಾಗದೆಯೂ ಇರುವವು. ಸಂಪತ್ತಿ ಶಾಸ್ತ್ರ ವಿಜ್ಞಾನ, ಕಲಾಕೌಶಲ್ಯ, ಇತಿಹಾಸ, ಕಾವ್ಯ, ಪುರಾಣ, ನಾಟಕಾದಿ ಅನೇಕ ಸಾಂಸಾರಿಕ ವ್ಯಾವಹಾರೋಪಯೋಗಿ ಗ್ರಂಥಗಳ ಸಾಹಿತ್ಯವು ಸೂಕ್ಷ್ಮಶೋಧದಿಂದಲೂ ಗಂಭೀರ ವಿಚಾರಗಳಿಂದಲೂ, ರಸಭರಿತವಾದ ವಾಣಿಯಿಂದಲೂ, ನಮ್ಮ ಭರತಖಂಡದಲ್ಲಿ ತುಂಬಿದ್ದು ಇವರಲ್ಲಿ ವಿಚಾರಮಾಡಿ ನೋಡದೇ ಕೆಲವು ಯುರೋಪ್ಯರ ಮಾತಿನ ಮೇಲೆ ವಿಶ್ವಾಸವಿಟ್ಟು ನವೀನ ಶಿಕ್ಷಿತರು ಸಂಸ್ಕೃತ ಸಾಹಿತ್ಯವು ಕೇವಲ ಬ್ರಾಹ್ಮಣರ ಧರ್ಮಸಾಹಿತ್ಯವಿದ್ದು ಬ್ರಾಹ್ಮಣರ ಉಪಯೋಗ ಗ್ರಂಥಗಳ ಹೊರ್ತು ಮತ್ತು ಇನ್ನು ಯಾವ ವಿಷಯವು ಅದರಲ್ಲಿಲ್ಲದ್ದರಿಂದ ನಿರುಪಯೋಗವೆಂದು ಸಂಸ್ಕೃತ ಭಾಷೆಯಮೇಲೆ ದೋಷಾರೋಪಣ ಮಾಡುತ್ತ ಅದನ್ನು ಮೂಲಿಗೆ ಹಾಕುವ ಪ್ರಯತ್ನಮಾಡುವರು. ಅಯ್ಯೋ ಎಂಥಾ ಕಷ್ಟದ ಮಾತಿದು ? ಯಾವನೊಬ್ಬ ಯುವಕನು ನವಕನ್ಯೆಯೊಡನೆ ವಿವಾಹಿತನಾಗಿ ಆಕೆಯ ರೂಪ, ಲಾವಣ್ಯ, ಹಾವಭಾವಗಳಿಗೆ ಭ್ರಮಿತನಾಗಿ ತನ್ನ ಪೂರ್ವದ ವಿಚಾರಗಳನ್ನು ಮರೆತು ತನ್ನ ಪರಮ ಪೂಜ್ಯರಾದ ಮಾತಾಪಿತೃಗಳನ್ನು ಧಿಕ್ಕರಿಸುತ್ತ ರಾತ್ರಿಂದಿನದಲ್ಲಿ ಹ್ಯಾಗೆ ತಿರಸ್ಕಾರದೃಷ್ಟಿಯಿಂದ ನೋಡುವನೋ ಅಂಥಾ ಸ್ಥಿತಿಯೇ ನಮ್ಮಾ ವೃದ್ಧಮಾತೆಯಂತಿದ್ದ ಸಂಸ್ಕೃತ ಭಾಷೆಗೆ ಬಂದಿರುವದು. ಆದರೆ ಆದೇ ಯುವಕನು ಮಾತಾಪಿತೃಗಳು ಗತಿಸಿದನಂತರ ಮನೆಯಲ್ಲಿ ಬುದ್ಧಿವಾದ ಹೇಳುವ ಹಿರಿಯರು ಯಾರೂ ಇಲ್ಲದ್ದರಿಂದ ಹೆಂಡತಿಯು ಸ್ವೇಚ್ಛಾವಿಹಾರಿಯಾದಾಗ್ಗೆ ಅಗುವಳೋ ಅವಾಗ್ಗೆ ಅಯ್ಯೋ ಇನ್ನೇನುಮಾಡಲಿ ? ಅಯ್ಯೋ ನನ್ನ ಹೆಂಡತಿಗೆ ಅಹರ್ನಿಶಿಯಲ್ಲಿ ಬುದ್ಧಿವಾದಹೇಳಿ ಆಕೆಯನ್ನು ಸನ್ಮಾರ್ಗದಲ್ಲಿಡತಕ್ಕ ಹಿರಿಯರಿಲ್ಲವಲ್ಲ ? ಎಂದು ಹ್ಯಾಗೆ ಪ್ರತಿಪಾದಿಸುವನೋ ಅದರಂತೆ ಸಂಸ್ಕೃತ ಮಾತೆಗೆ ತಿರಸ್ಕಾರ ಮಾಡುವ ನವಯುವಕರಿಗೆ ಮುಂದೆ ಪಶ್ಚಾತ್ತಾಪಪಡುವ ಪ್ರಸಂಗವು ನಿಃಸಂದೇಹವಾಗಿ ಬಂದೀತು. ಆದರೆ ಈಗ ಅವರಿಗೆ ಪಾಶ್ಚಾತ್ಯವಿದ್ಯೆಯೇ ತಮ್ಮ ಯೌವನಮದದಲ್ಲಿ ತಿಳಿಯುವದು, ಅಸಾಧ್ಯವಾಗಿರುವದು. ಇನ್ನು ತಿಳಿದವರಾದರೂ ನವಯುವಕರ ಕಡೆಗೆ ಲಕ್ಷಕೊಡದೇ ಈ ಸಂಸ್ಕೃತಮಾತೆಯ ಉನ್ನತಿಯ ವಿಷಯದಲ್ಲಿ ಲಕ್ಷವಿಡುವಿರೆಂದು ಆಶೆಯುಂಟು. ಸಂಸ್ಕೃತಭಾಷೆಯಲ್ಲಿ ಇತಿಹಾಸವೇ ಇಲ್ಲವೆಂದು ಕೆಲವರು ತರ್ಕಿಸುವರು. ಆದರೆ ಇದು ಸರ್ವಥಾ ಅಸಮಂಜಸವಾದ ಮಾತಾಗಿರುವದು. ಯಾಕೆಂದರೆ ಸಂಸ್ಕೃತದಲ್ಲಿದ್ದಷ್ಟು ಪ್ರಾಚೀನ ಇತಿಹಾಸಗ್ರಂಥಗಳು ಯಾವ ಭಾಷೆಯಲ್ಲಿಯೂ ಯಾವ ರಾಷ್ಟ್ರಗಳಲ್ಲಿಯೂ ಇಲ್ಲವೆಂದು ನಿಃಸಂದೇಹವಾಗಿ ಹೇಳಬಹುದು. ನಮ್ಮ ಪೂರ್ವಜರು ಇತಿಹಾಸವನ್ನು ಬರೇಪುಸ್ತಕದಲ್ಲಿ ಬರೆಯದೇ ಶಿಲಾಲೇಖ, ಮತ್ತು ತಾಮ್ರ ಕಂಚು ಮೊದಲಾದ ಧಾತುಗಳಲ್ಲಿಯೂ ಪ್ರಾಚೀನವೃತ್ತಾಂತವನ್ನು ಬರೆದಿಟ್ಟಿರುವರು. ಇಷ್ಟೇ ಅಲ್ಲದೇ ಪ್ರತಿಯೊಂದು ವಂಶದ ಪ್ರತಿಯೊಂದು ಮನಿಯ ಪೂರ್ವದ ಇತಿಹಾಸವನ್ನು ಇಡುವ ಪರಂಪರೆಯು ನಮ್ಮಾ ಭರತಖಂಡದಲ್ಲಿದ್ದು ಅದು ಇಲ್ಲಿಯವರೆಗೂ ಪ್ರಚಾರದಲ್ಲಿರುವದು. ನಮ್ಮಾ ಕರ್ನಾಟಕದಲ್ಲಿ "ಹೇಳುವರೆಂದು" ಕೆಲವರು ಈ ಹೊತ್ತಿಗೂ ಪ್ರಚಾರದಲ್ಲಿದ್ದು ಅವರು ಮನೆ ಮನೆಗೆ ಬಂದು ಪೂರ್ವಜರ ವೃತ್ತಾಂತವನ್ನು ಅವರ ವಂಶಪರಂಪರೆಯನ್ನು ಮತ್ತು ಅವರ ಉದ್ಯೋಗಾದಿಗಳನ್ನು ಹೇಳಿ ಸದ್ಯದಲ್ಲಿದ್ದ ಅವರ ಉದ್ಯೋಗಾದಿಗಳನ್ನು ಬರೆದುಕೊಂಡು ಹೋಗುವರು. ಹೇಳವರು ಅಂದರೆ "ಹಳಬರು" ಅರ್ಥಾತ್ ಹಳೇಹಿಂದಿನ ಸರ್ವಸುದ್ದಿಯನ್ನು ಅಥವಾ ಪೂರ್ವಜರ ಇತಿಹಾಸವನ್ನು ಹೇಳುವವರು. ಅಂದರೆ ತಮಗಿಂತ ಪೂರ್ವದ ವೃತ್ತಾಂತವನ್ನು ಹೇಳುವ ಜನರಿಗೆ ಕನ್ನಡದಲ್ಲಿ ಹಳಬರೆನ್ನುವರು. ಅದು ಅಪಭ್ರಂಶವಾಗಿ ಹೇಳವರೆಂಬೋ ನಾಮದಲ್ಲಿ ಬಂದಿರುವದು. ಉತ್ತರ ಹಿಂದುಸ್ಥಾನದಲ್ಲಿ ಇವರಿಗೆ "ಭಾಟರೆನ್ನುವರು. ಈ ಪ್ರಚಾರವು ಈ ಹೊತ್ತಿಗೂ ಸಂಪೂರ್ಣ ಭರತಖಂಡದಲ್ಲಿರುವದು. ಆದರೆ ಅದು ಪ್ರಾಚೀನ ಪದ್ಧತಿಗೆ ತಪ್ಪಿರುವದರಿಂದ ಎಷ್ಟೋ ನ್ಯೂನತೆಯಲ್ಲಿ ಬಂದಿರುವದು. ಇಂಥಾ ಉದಾಹರಣೆಗಳಮೇಲಿಂದ ನೋಡಲು ಪೂರ್ವಜರಿಗೆ ಇತಿಹಾಸವಿಷಯಕ ಎಷ್ಟು ಮಹತ್ವವಿತ್ತೆಂಬುದು ಕಂಡುಬರುವದು. ಇದರಂತೆ ಪ್ರಾಚೀನ ದೊಡ್ಡ ದೊಡ್ಡ ವಿದ್ವಾಂಸರು ಇತಿಹಾಸವನ್ನು ಪುರಾಣರೂಪದಿಂದ ಜನರಿಗೆ ಸುಶ್ರಾವ್ಯವಾಗುವಂತೆ ತಮ್ಮ ಪೂರ್ವದ ವೃತ್ತಾಂತವನ್ನು ಬರೆದಿರುವರು. ಇದಲ್ಲದೇ ರಾಮಾಯಣ, ಮಹಾಭಾರತ, ಮತ್ತು ೩೮೦ ಐತರೇಯಾದಿ ಬ್ರಾಹ್ಮಣ ಗ್ರಂಥಗಳಲ್ಲಿ ಹಿಂದಿನ ದೊಡ್ಡ ದೊಡ್ಡ ರಾಜರ ವಂಶಾವಳಿ ಮತ್ತು ಅವರ ಕಾರ್ಯಕ್ರಮಗಳನ್ನು ವರ್ಣಿಸಿ ಬರೆದಿರುವರು. ಎರಡನೇ ಶತಮಾನದಲ್ಲಿ ಬರೆದ ಇತಿಹಾಸವು ಸಿಗುತ್ತಿದ್ದು ಅದರಲ್ಲಿ ಹರ್ಷವರ್ಧನನೆಂಬ ರಾಜನ ಕಾಲದ ರಾಜ್ಯದಾಡಳತೆಯು ವರ್ಣಿಸಲ್ಪಟ್ಟಿದೆ ಅದರಿಂದೀಚಿಗೆ, ನವಸಾಹಸಾಂಕ ಚರಿತ್ರ, ವಿಕ್ರಮಾಂಕಚರಿತ್ರ, ಪೃಥ್ವೀರಾಜಚರಿತ್ರ ಮತ್ತು ರಾಜತರಂಗಣಿ, ಭೋಜಚರಿತ್ರ, ರಾಮಚರಿತ್ರ, ಮೊದಲಾದ ಗ್ರಂಥಗಳಮೇಲಿಂದ ಆಯಾಯ ಕಾಲದ ರಾಜರ ಚರಿತ್ರೆಯು ಭಿನ್ನ ಭಿನ್ನರೀತಿಯಾಗಿ ವರ್ಣಿಸಿ ಬರೆಯಲ್ಪಟ್ಟಿದ್ದು ಅವುಗಳನ್ನು ಸ್ವತಃ ನೋಡೋಣದರಿಂದ ಗೊತ್ತಾಗುವದು. ವಿಜಯನಗರದ ರಾಜ್ಯಕಾಲಕ್ಕೆ ಪ್ರಸಿದ್ಧಪಂಡಿತರಾದ ಮಾಧವಾಚಾರ್ಯ ಮೊದಲಾದ ಮಂತ್ರಿಮಂಡಲಿಯಿಂದ ಸಂಗ್ರಹಿಸಲ್ಪಟ್ಟ ಎಷ್ಟೋ ಇತಿಹಾಸಗ್ರಂಥಗಳು ಮುಸಲ್ಮಾನರಿಂದ ಸುಡಲ್ಪಟ್ಟವೆಂದು ತಿಳಿಯಬರುತ್ತದೆ.

೧೯೨೪ ನೆಯ ಇಸವಿ ಅಗಸ್ಟ ತಾ॥ ೩ ರಿಂದ ೧೯೨೪ ನೆಯ ಇಸವಿ ಅಗಸ್ಟ ತಾ॥ ೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಶ್ರಾವಣ ಶುದ್ಧ ತದಿಗೆಯಿಂದ ಶ್ರಾವಣ ಶುದ್ಧ ನವಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸೌರ್ಯ ಮಾಸ
3	[1]ಭಾನು	ತದಿ	47-23	ಪುಬ್ಬ	59-49	20
4	[2]ಸೋಮ	ಚೌತಿ	45-32	ಉತ್ತ	59-31	21
5	[3]ಮಂಗಳ	ಪಂಚ	42-42	ಹಸ್ತ	58-10	22
6	ಬುಧ	ಷಷ್ಠಿ	28-28	ಚಿತ್ತ	54-20	23
7	ಗುರು	ಸಪ್ತ	33-37	ಸ್ವಾತಿ	52-38	24
8	[4]ಶುಕ್ರ	ಅಷ್ಟ	28-10	ವಿಶಾ	48-54	25
9	[5]ಶನಿ	ನವ	22-19	ಅನೂ	44-47	26

(1) ಸಂಪದ್ಗೌರೀವ್ರತಂ. (2) ನಾಗರಚೌತಿ. (3) ಮಂಗಳಗೌರೀವ್ರತಂ. (4) ವರಮಹಾಲಕ್ಷ್ಮೀವ್ರತಂ. (5) ಶ್ರಾವಣಶನಿವಾರಂ.

ಮೈಸೂರು : ಪೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M.124.

ಮೈಸೂರು ಸ್ಟಾರ್

ಪ್ರತಿ ಭಾನುವಾರ [illegible]ತಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಕೈ[illegible] ತಾವತಾರಾ ಪಕ್ಷಜ್ಞ ಸಹೃತ್ತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಭ[illegible] ಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಶೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾರಾ[illegible] ಶ್ರೇಯಂಪತ್ರಿಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

REGISTERED NO. M. 124.

[ವಾರ್ಷಿಕಚಂದಾ ೧-೧೦-೦]   [ಲೈಬ್ರರಿಗೆ ೨-೧೦-೦]

ಸಂಪುಟ ೩೭]   ಮೈಸೂರು ಸ್ಟಾರ್ ಸನ್ ೧೯೨೪ನೆಯ ಇಸವಿ ಅಗಸ್ಟ ತಾರೀಖು ೧೭ ನೆಯ ಭಾನುವಾರ.   [ಸಂಚಿಕೆ ೩೩

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವೆ,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ತುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟಿದ, ಹೊಟ್ಟೆಯುಬ್ಬರಿಸಿದ ರೋಗವು ಗುಣವಾಗುತ್ತದೆ. ಶೀತ ಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
28 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಜ್ಜುತುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಟಿನ್ನು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಟಿನ್ನು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಟಿನ್ನು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ: — ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—37] ಪೋಸ್ಟು ಬಾಕ್ಸು ನಂಬರು ೫೧೭, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.
ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.
ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.
ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.
ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.
ಪಂಚಸ್ತೋತ್ರೀ ಬೆಲೆ ೧—೦—೦.
ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.
ಸಟೀಕಶಿವಜ್ಞಾನದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎಂ.ಆರ್. ಕರಿಬಸವಶಾಸ್ತ್ರಿ
[50—31] ಅಂಡ್ ಸನ್ಸ್, ಚಿ.ಪಿ. ಮಂಡಲಿ, ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦



ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಮೈಸೂರು.

ಮಳೆಗಾಲಕ್ಕಾಗಿ.

ಅನೇಕ ನಮೂನೆ ಕಾಶ್ಮೀರ್ ಶಾಲುಗಳನ್ನು ಹೆಚ್ಚಾಗಿ ತರಿಸಿ ಬಹು ಸುಲಭ ಬೆಲೆಯಿಂದ ವಿಕರಿಮಾಡುತ್ತಲಿರುವೆಯಾಗಿ ಪ್ರತಿನಿತ್ಯವೂ ಅನೇಕ ವಿಕರಿಯಾಗುತ್ತಲಿವೆ. ಇದರಡೀ ನಮೂದಿಸಿರುವ ಖರೀದಿಯ ಶಾಲುಗಳ ಪೈಕಿ ನಿಮಗೆ ಬೇಕಾದ ಖರೀದಿಯದಕ್ಕೆ ಆರ್ಡರ್ ಕೊಟ್ಟಲ್ಲಿ ನಂಬಿಗೆಯಿಂದ ನೀವಿದ್ದೆಡೆಗೆ ರವಾನಿಸುತ್ತೇವೆ.

ಬಾರ್ಡರ್‌ಹಾಕಿದ ಉಲನ್ ಶಾಲುಗಳು 1 ಕ್ಕೆ 12-4-0, 13-2-0, 14-8-0, 15-4-0, 16-8-0, 17-2-0, 18-12-0, 19-8-0, 20-4-0, 21-8-0, 22-12-0, 23-8-0, 24-2-0, 25-4-0, 27-8-0, 30-0-0, 32-8-0, 34-4-0, 37-8-0, 48-8-0 ಮೇಲ್ಪಟ್ಟು 65 ರೂಪಾಯಿವರುವಿಗೆ ಸ್ಟಾಕಿನಲ್ಲಿವೆ.

ಖಾತ್ರಿಯಾದ ಬೇಳಿನ ಔಷಧ ಪೆಟ್ಟಿ 1 ಕ್ಕೆ 0-8-0, 12 ಕ್ಕೆ 4-8-0, "ನ್ಯಾಷನಲ್ ಇಂಕ್‌ಪೌಡರ್ ಪ್ಯಾಕೆಟ್" 1ಕ್ಕೆ 1-0-0.

ಅನೇಕ ನಮೂನೆ ಟೈಂಪೀಸುಗಳು ಶೀಮೆಯಿಂದ ಹೆಚ್ಚಾಗಿ ಸಪ್ಲೈ ಆಗಿರುತ್ತಾಗಿ ಖರೀದಿ ಬಹಳ ಕಡಮೆಯಾಗಿರುತ್ತೆ. ಕೊಂಡುಕೊಳ್ಳುವವರಿಗೆ ಇದು ಸುಸಮಯವಾಗಿರುತ್ತಾಗಿ ಇದರಡಿ ನಮೂದಿಸಿರುವ ಖರೀದಿ ಟೈಂಪೀಸುಗಳ ಪೈಕಿ ನಿಮಗೆ ಬೇಕಾದ ಖರೀದಿ ಟೈಂಪೀಸಿಗೆ ಆರ್ಡರ್ ಕೊಡುವುದಲ್ಲದೆ 1-0-0 ರೂ. ಅಡ್ವಾನ್ಸ್ ರವಾನಿಸಿದಲ್ಲಿ ಉತ್ತಮವಾದದನ್ನು ಚುನಾಯಿಸಿ ನಂಬಿಗೆಯಿಂದ ರವಾನಿಸಲಾಗುತ್ತೆ. ಸಾದಾ ಟೈಂಪೀಸ್ 1 ಕ್ಕೆ 3-4-0, 3-6-0.

ಅಲಾರಂಟೈಂಪೀಸುಗಳು 4-4-0, 5-2-0, 6-8-0, 7-0-0, 7-12-0, 8-4-0, 9-8-0, 10-2-0, ಮೇಲ್ಪಟ್ಟಿರುತ್ತೆ.

ಗಂಟೆ ½ ಗಂಟೆ ಹೊಡೆದು ಅಲಾರಂ ಸಹಾ ಬಾರಿಸುವ ಟೈಂಪೀಸುಗಳು 7-14-0, 8-8-0, 17-8-0, 18-12-0.

ಕರ್ಣಾನಂದವಾಗಿ ಗಾನಮಾಡುವ ಕ್ಯಾರೇಜ್ ಕ್ಲಾಕ್ 1 ಕ್ಕೆ 15-8-0, 16-4-0

ವಿಳಾಸ :—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50 46] ಮೈಸೂರು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು ೪೦ ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ವಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಚಳ್ಳಪ್ಪ, ಊದುಬತ್ತಿ ಷಾಪ್,
26 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಲ್ಲದರಲ್ಲಿ ಪುರಾತನ ಕಾರಖಾನೆಯು.

ಸೂಚನೆ:—ಯಾವದೊಂದು ಮಾಲು ಗುಣಕಾರಿಯಾಗಿರುವದೆಂದು ತಿಳಿದಕೂಡಲೆ ಎಲ್ಲ ಕಡೆಗೂ ಅದರ ನಕಲು ಮಾಡಲಿಕ್ಕೆ ಆರಂಭವಾಗುತ್ತದೆ. ಆದರೆ ಹೆಸರಿಗೆ ತಕ್ಕಂತೆ ಗುಣಕ್ಕೆ ಮಾತ್ರ ಪಾತ್ರವಾಗುವದಿಲ್ಲ. ಈಗೀಗ ಇಲ್ಲಿ ನಕಲೀ ಔಷಧಿಯ ಕಾರಖಾನೆಗಳು ಹೊರಡಹತ್ತಿರುವವು. ಆದ್ದರಿಂದ ಗಿರಾಕಿಗಳು ನಮ್ಮ ಟ್ರೇಡಮಾರ್ಕನ್ನು ನೋಡಿ ತಕ್ಕೊಳ್ಳಬೇಕು

ಸುವರ್ಣಪದಕ ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦, ೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವುದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.—ಪರಮಾ ಹಾಗೂ ಕಾವಿನಿಂದದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇರೋಗ ಇದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟಲಿಯ ಕಿಮ್ಮತ್ತು ೧| ರೂಪಾಯಿ ಮೂರುಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತ್ತು ೧೧—೦—೦ ಮತ್ತು ೧ ಬಾಟಲೆ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧—೪—೦, ೩ ಬಾಟ್ಲಿಗೆ ೩—೦—೦, ಡಜನ್ನಿಗೆ ೧೩—೦—೦

ಮ್ಯಾನೇಜರ—ದ್ರಾಕ್ಷಾರ್ಕಮಧು ಆಫೀಸು,
[12-2] ಪೋ. ನಿಪ್ಪಾಣಿ, ಜಿ. ಬೆಳಗಾವ.

(Registered Trade Mark)

ಸುಲಭಕ್ರಯ !   ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಇಂತಹ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಕ್ಕಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜ ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—30] ಪೋ. ಬಾ. ೩೧೦, ಮದರಾಸು.

ಗೋವುಗಳನ್ನೂ, ಮತ್ತು ಬಿಸಲು, ಮಳೆ, ಗಾಳಿಯಲ್ಲಿ ನೇಗಲಗಳಿಗೂ ಗಾಡಿಗಳಿಗೂ ಹೆಗಲುಕೊಟ್ಟು ಬೆನ್ನುಕೊಟ್ಟು ದುಡಿದು ಸರ್ವರಿಗೂ ಅನ್ನದಸಂಗ್ರಹವನ್ನೊದಗಿಸಿ ಉಪಕಾರವಮಾಡುವ ಬಸವಣ್ಣಗಳನ್ನೂ ಮುಪ್ಪಿನ ಕಾಲಕ್ಕೆ ಲೇಶವಾದರೂ ಕರುಣವಿಲ್ಲದೆ, ಕೆಟ್ಟ ಹಣದಾಶೆಯಿಂದ ಕೇವಲ 4-6 ರೂಪಾಯಿ ಕಿಮ್ಮತ್ತಿಗೆ ಕಟುಕರಿಗೆ ಮಾರಾಟಮಾಡಿಬಿಡುವರಲ್ಲ! ಅಹಾ! ಇದು ಯಾವಧರ್ಮವು, ಯಾವನ್ಯಾಯವು? ಗೋದಾನವು ಬಹು ಶ್ರೇಷ್ಠವೆಂಬುದಾಗಿಯೂ, ಗೋರಕ್ಷಣೆಮಾಡಿದವರಿಗೆ ಪಾಪರಾಶಿಯು ನಾಶವಾಗಿ ಪುಣ್ಯಸಂಪಾದನೆಯಾಗುವದಾಗಿಯೂ ಅನೇಕ ಧರ್ಮಶಾಸ್ತ್ರ ಪುರಾಣಗಳು ಸಾರುತ್ತಿವೆ. ಮತ್ತು ವರ್ಣಾಶ್ರಮ ಧರ್ಮಾಸಕ್ತರಾದ ವೀರಶೈವ ಹಾಗೂ ಬ್ರಾಹ್ಮಣಾದಿ ಜನರಿಗಂತೂ ಪ್ರತಿದಿವಸ ಪ್ರತಿಯೊಂದು ವಿವಾಹ, ಉಪನಯನ ದೀಕ್ಷಾದಿಕಾರ್ಯಗಳಲ್ಲಿ ಪಂಚಗವ್ಯವು (ಗೋಮಯ, ಗೋಮೂತ್ರ, ಗೋಕ್ಷೀರ, ಗೋದಧಿ, ಗೋಘೃತ) ಅತ್ಯವಶ್ಯಕವಾಗಿ ಬೇಕಾಗುವದು. ಲೌಕಿಕ ಪಾರಮಾರ್ಥಿಕ ರೀತಿಯಿಂದಲೂ ನಮ್ಮಗಳಿಗೆ ಮಹದುಪಕಾರಮಾಡಿ ತಂದೆ ತಾಯಿಗಳಂತೆ ಸಂತೋಷವನ್ನುಂಟು ಮಾಡುವದಿಲ್ಲವೆ ಮತ್ತು ಗೋವಿನ ಪಾದದಿಂದ ಮಸ್ತಕಪರ್ಯಂತರವಾಗಿ ಸರ್ವಾಂಗಗಳಲ್ಲಿಯೂ ಸಕಲ ದೇವಾದಿದೇವತೆಗಳೂ ಮತ್ತು ತ್ರಿಮೂರ್ತಿಗಳೂ ಸಹಾ ನೆಲೆಗೊಂಡಿರುವರೆಂದು ಧರ್ಮಶಾಸ್ತ್ರಪ್ರಕಾರ ತಯಾರಿಸಲ್ಪಟ್ಟ ಚಿತ್ರಪಟಗಳನ್ನನೋಡಿರಿ. ಅದರಿಂದಲಾದರೂ ನಿಮಗೆ ನಿಶ್ಚಯವಾಗಬಹುದು. ಇಂಥಾ ಪುಣ್ಯಶರೀರಿಗಳಾದ ಗೋವುಗಳನ್ನೂ ವೃಷಭಗಳನ್ನೂ ಪ್ರತಿಯೊಂದು ಗ್ರಾಮದಲ್ಲಿ ಮತ್ತು ಜಾತ್ರೆ ಸಂತೆ ಪೇಟೆಗಳಲ್ಲಿ ಕೈಗೆಬಂದಷ್ಟು ರೂಪಾಯಿಗೆ ಮಾರಾಟಮಾಡುತ್ತಿರುವರಲ್ಲಾ! ಅಹೊ ರೈತಜನರೇ, ಈ ಬಡಪ್ರಾಣಿಗಳ ವಿಕ್ರಯದ ಹಣದಿಂದ ನಿಮ್ಮ ಬಡತನವು ದೂರವಾಗುವದೇನು? ಇಲ್ಲಾ. ಪಾಪದರಾಶಿಯನ್ನು ಮಾತ್ರ ಸಂಪಾದಿಸುವಿರಿ. ಅಯ್ಯೊ! ಆ ಬಡ ಮೂಕಪ್ರಾಣಿಗಳು ಕಟುಕರಿಗೆ ಕೊಡಲ್ಪಡುವಾಗ್ಗೆ ಮನಸ್ಸಿನಲ್ಲಿ ಎಷ್ಟು ದುಃಖಿಸುತ್ತಿರಬಹುದು! ಯೋಚನೆಮಾಡಿನೋಡಿರಿ. ಗೋವಧೆಯನ್ನು ಹತಮಾಡುವ ಕೃತಿಗಳು ದೇಶದತುಂಬಾ ನಡೆಯುವದರಿಂದಲೇ ಈ ಪಾಪದ ಫಲರೂಪವಾಗಿ ದಾರಿದ್ರ್ಯ, ಕ್ಷಾಮ, ಪ್ಲೇಗು, ಮಾರಿಕಾದಿ ರೋಗಾದ್ಯುಪದ್ರವಗಳು ವ್ಯಾಪ್ತವಾಗಿ ಪೀಡಿಸುತ್ತಿರುವವು. ಈ ವಿಷಯತಿಳಿಯದೆ, ನಾವು ಮೂಢರಂತೆ ನಡೆಯುವದರಿಂದಲ್ಲವೇ ಇಂಥಾ ಕಷ್ಟಗಳೊದಗುವವು? ಕರುಣಾಶಾಲಿಗಳಾದ ಗೌಡ, ಶಾನುಭೋಗರುಗಳೇ ಈ ಬಡಪ್ರಾಣಿಗಳಿಗೆ ನೀವು ತಂದೆ ತಾಯಿಗಳಾಗಿರಿ, ಇವುಗಳ ಮಾರಾಟಕ್ಕೆ ಅಸ್ಪದಕೊಡದಂತೆ ನಿರ್ಬಂಧಮಾಡಿರಿ, ಮತ್ತು ತಳಚೀಟಿ (ರಹದಾರಿ) ಗಳನ್ನು ಕೊಡಬೇಡಿರಿ; ಚೀಟಿಗಳಕೊಟ್ಟು ದ್ರವ್ಯಹಕಟ್ಟಿಕೊಳ್ಳಬೇಡಿರಿ. ಮುನಸಿಪಾಲಿಟಿ ಸಭಾಸದರಾದ ಮೆಂಬರುಗಳೇ, ತಾವು ಕೂಡ ಗೋವುಗಳ ಮಾರಾಟಮಾಡದಂತೆ ನಿಮ್ಮ ಸರಹದ್ದುಗಳಲ್ಲಿ ಬಲವಾದ ಶಾಸನಮಾಡಿರಿ. ಕೊಡುವವರಿಗೂ ತೆಗೆದುಕೊಳ್ಳುವವರಿಗೂ ಬಹಿಷ್ಕಾರ ತಪ್ಪುಕಾಣಿಕೆಗಳನ್ನು ಹಾಕಿರಿ. ಪ್ರಮುಖರಾದ ತಾವು ಸರ್ವರಿಗೂ ಈ ವಿಷಯವನ್ನು ಬೋಧಿಸುತ್ತ ಮಾರಾಟಮಾಡುವದನ್ನು ನಿಲ್ಲಿಸುವದು ನಿಮ್ಮ ಧರ್ಮವು. ನೀವು ಅಧಿಕಾರಕ್ಕೆ ಬಂದದ್ದು ಸಾರ್ಥಕವಲ್ಲವೆ? ಈಪ್ರಕಾರ ಪ್ರತಿಯೊಂದು ಗ್ರಾಮದವರೂ ಏಕೀಭವಿಸಿ ಈ ಧರ್ಮಕಾರ್ಯನಡೆಯುದಂತೆ ಮಾಡುವದರಿಂದ ಮುಂದೆ ಆಪ್ರಾಣಿಗಳ ಜೀವರಕ್ಷಣೆಯಾಗಿ ಆ ಪುಣ್ಯಫಲದಿಂದ ದೇಶದಲ್ಲಿ ಆರೋಗ್ಯವೂ, ಮಳೆ ಬೆಳೆ ಸಂತೃಪ್ತಿಯೂ, ಸಂತಾನಾಭಿವೃದ್ಧಿಯೂ ಉಂಟಾಗಿ ಸರ್ವರೂ ಕೀರ್ತಿಯನ್ನೂ ಸುಖವನ್ನೂ ಹೊಂದುವರು. ಇಷ್ಟು ಮಾತ್ರ ತಾವುಗಳು ದಯವಿಟ್ಟು ಠರಾವುಮಾಡುವರೆಂದು ತುಂಬಾನಂಬಿದ್ದೇನೆ. ದಯಾಶಾಲಿಗಳಾಗಿ ಈ ಪಾಪಕಾರ್ಯಮಾಡದಂತೆ ಸರ್ವರಿಗೂ ಸದ್ಬುದ್ಧಿಯನ್ನು ಕೊಟ್ಟು ರಕ್ಷಿಸಲೆಂದು ಶ್ರೀ ಪರಮಾತ್ಮನನ್ನು ಕುರಿತು ಪ್ರಾರ್ಥನೆ.

ವಿರೂಪಾಕ್ಷಯ್ಯ, ಪುರಾಣೀಕಮಠ, ಹಿರೇಹಡಗಲಿ.

ಭಾರತೀಯಸಾಹಿತ್ಯ.

(ಲೇಖಕ, ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರು, ಪ್ರೊಫೇಸರ, ಸಂಸ್ಕೃತ ಕಾಲೇಜ ಇಂದೋರ.)

(ಕಳೆದವಾರದ ಶೇಷ.)

ವೇದಾಂಗಗಳಲ್ಲಿ ಮೂರನೇದಾದ ಕಲ್ಪಸೂತ್ರವು, ಅಶ್ವಲಾಯನ ಅಪಸ್ತಂಬಬೋಧಾಯನಾದಿ ಋಷಿಗಳಿಂದ ರಚಿಸಲ್ಪಟ್ಟ ಕಲ್ಪಸೂತ್ರ ಗ್ರಂಥಗಳು ಭಾಷ್ಯಸಹಿತವಾಗಿ ಈಹೊತ್ತಿಗೂ ಕೆಲವು ಪ್ರಚಾರದಲ್ಲಿರುವವು. ಇದರಲ್ಲಿಯೂ, ಎಷ್ಟೋ ಗ್ರಂಥಗಳು ಲುಪ್ತವಾಗಿದ್ದು ಇನ್ನೂ ಶೋಧವಾಗಿಲ್ಲ. ಇವು ವೇದದಲ್ಲಿಯ ಹವನಕ್ರಿಯ ಮೊದಲಾದ ವಿಷಯಗಳನ್ನು ಮತ್ತು ಅದಕ್ಕೆ ಬೇಕಾದ ವೇದಿಕಾರಚನಾ ಪದ್ಧತಿ ಮೊದಲಾದ ವಿಷಯಗಳನ್ನು ಪ್ರತಿಪಾದಿಸುವವು. ಮತ್ತು ಹವನ ಕಾಲನಿರ್ಣಯಾದಿಗಳನ್ನು ತೋರಿಸುವವು. ವೇದದ ನಾಲ್ಕನೇ ಅಂಗವಾದ ನಿರುಕ್ತವೆಂಬುವದು ವೇದದ ಗಂಭೀರವಾದ ಅಲೌಕಿಕ ಅರ್ಥವನ್ನು ಪ್ರತಿಪಾದಿಸುವ ವೈದಿಕ ವ್ಯಾಕರಣಶಾಸ್ತ್ರವಿದ್ದು ಇದರಲ್ಲಿ ಒಂದು ವೈದಿಕಶಬ್ದಕ್ಕೆ ಅನಂತ ಅರ್ಥಗಳನ್ನು ಪ್ರತಿಪಾದಿಸುವ ಶೈಲಿಯು ತೋರಿಸಿದ್ದು ವೇದಮಂತ್ರಗಳ ಯಥಾರ್ಥಜ್ಞಾನ ಬೋಧಕರೀತಿಯೂ ಹೇಳಿರುತ್ತದೆ. ಈ ನಿರುಕ್ತಶಾಸ್ತ್ರವು ಎಷ್ಟೋ ಋಷಿಗಳಿಂದ ರಚಿಸಲ್ಪಟ್ಟಿರುವದು. ಅದರಲ್ಲಿ ಈಹೊತ್ತಿಗೆ ವಿಶೇಷ ಪ್ರಚಾರದಲ್ಲಿರುವದೆಂದರೆ ದುರ್ಗಾಚಾರ್ಯರ ಭಾಷ್ಯದಿಂದ ಕೂಡಿದ ಯಾಸ್ಕಮುನಿಗಳಿಂದ ರಚಿತವಾದ ನಿರುಕ್ತಶಾಸ್ತ್ರವೇ ಆಗಿರುವದು. ಈ ನಿರುಕ್ತಶಾಸ್ತ್ರಕ್ಕೆ ಇನ್ನೂ ಭಾಷ್ಯ ಟೀಕಾಗ್ರಂಥಗಳನೇಕವಿರುವವು. ಈ ನಿರುಕ್ತಶಾಸ್ತ್ರವು ವೇದದ ವಿಲಕ್ಷಣಾರ್ಥವನ್ನು ಯಥಾರ್ಥ ತಿಳಕೊಳ್ಳಲಿಕ್ಕೆ ಅತಿ ಸುಲಭೋಪಾಯವೆಂದು ಹೇಳಲಿಕ್ಕೆ ಏನೂ ಅಡ್ಡಿಯಿಲ್ಲ. ವೇದದ ಐದನೇ ಅಂಗವು ಜ್ಯೋತಿಷಶಾಸ್ತ್ರವಿರುವದು. ಇದರಲ್ಲಿ ಫಲಿತಗಣಿತಗಳೆಂಬ ಎರಡು ಭೇದಗಳಿದ್ದು ಗಣಿತವಿಷಯಕವಾದ ಸೂರ್ಯಸಿದ್ಧಾಂತಾದಿ ಅನೇಕ ಮಹತ್ವಗ್ರಂಥಗಳಿರುವವು. ಇದರಂತೆ ಫಲಿತಾಂಶದ ಗ್ರಂಥಗಳು ಅನೇಕವಿದ್ದು ಕೆಲವರು ಅವುಗಳಲ್ಲಿಯ ಫಲಿತಾಂಶವನ್ನು ಸತ್ಯವೆಂದು ನಂಬುವದಿಲ್ಲ. ಆದರೆ ಈ ಜ್ಯೋತಿಷ್ಯದ ಗಣಿತ ಫಲಿತಾಂಶದಲ್ಲಿ ಭಾರತೀಯರು ಶೋಧಮಾಡಿ ಎಷ್ಟು ಉಚ್ಚಪದವಿಯನ್ನು ಹೊಂದಿರುವರೋ ಅಷ್ಟು ಮತ್ತಿನ್ನಾವರಾಷ್ಟ್ರದವರೂ ಇದೂವರೆಗೂ ಶೋಧಮಾಡಿಲ್ಲವೆಂದು ಸ್ಪಷ್ಟ ಹೇಳುವದರಲ್ಲಿ ಯಾವ ಸಂಶಯವೂ ಕಂಡುಬರುವದಿಲ್ಲ. ಕೇವಲ ನಮ್ಮ ಪೂರ್ವ ಮಹರ್ಷಿಗಳಿಂದ ಬರೆದಿಟ್ಟ ವಿಷಯಗಳನ್ನು ಮಾತ್ರ ಪೂರ್ವಾಪರ ಪರ್ಯಾಲೋಚಿಸಿ ಅವುಗಳನ್ನು ಕ್ರಿಯಾರೂಪದಲ್ಲಿ ತಂದು ಯಂತ್ರಸಾಧನದಿಂದ ಜನರ ಪ್ರತ್ಯಕ್ಷ ನಿದರ್ಶನಕ್ಕೆ ಅನುಕೂಲಮಾಡಿ ಅದನ್ನು ತಮ್ಮ ತಮ್ಮ ಮಾತೃಭಾಷೆಗಳಲ್ಲಿ ಭಾರತೀಯ ಪ್ರಾಚೀನ ಸಂಸ್ಕೃತಗ್ರಂಥಗಳ ಭಾಷಾಂತರಮಾಡಿಕೊಂಡಿರುವರಷ್ಟೇ ಅಲ್ಲದೇ ಆ ಗ್ರಂಥಗಳಲ್ಲಿಲ್ಲದ ನವೀನಶೋಧವನ್ನು ಇನ್ನು ಯಾವ ರಾಷ್ಟ್ರದವರೂ ಮಾಡಿಲ್ಲ. ಈಗಿನ ನವೀನಶೋದವೆಲ್ಲ ಭಾರತೀಯ ಗ್ರಂಥದಲ್ಲಿಯೇ ಇರುವದೆಂದು ಹೇಳಿದಪಕ್ಷದಲ್ಲಿ ಐರೋಪ್ಯರು ಈ ದೇಶಕ್ಕೆ ಬರುವದಕ್ಕಿಂತ ಪೂರ್ವದಲ್ಲಿ ಅಥವಾ ಬಂದನಂತರವಾದರೂ ಭಾರತೀಯರೇ ಯಾಕೆ ಮೊದಲು ಶೋಧಮಾಡಲಿಲ್ಲವೆಂದು ಸಹಜಪ್ರಶ್ನೆ ಮಾಡಬಹುದು. ಅದಕ್ಕೆ ಉತ್ತರವೇನಂದರೆ, ಪರಿಸ್ಥಿತಿಯು ಅನುಕೂಲವಾಗದ ವಿನಾ ಯಾವ ಕಾರ್ಯವೂ ಸೂಚಿಸುವದಿಲ್ಲ. ಮತ್ತು ಸಾಧ್ಯವಾಗುವದಿಲ್ಲ. ಇದಕ್ಕೆ ಪ್ರತ್ಯಕ್ಷ ಉದಾಹರಣವೆಂದರೆ ಮ॥ರಾ॥ ಶಿವಳಕರ ಬಾಪೂಜೀತಳಪದೆ ಎಂಬವರು ಮುಂಬಯಿಯಲ್ಲಿ ಭಾರತೀಯ ಗ್ರಂಥಾಧಾರಗಳಿಂದ ವಿಮಾನರಚಿಸಲಿಕ್ಕೆ ಹತ್ತಿದ್ದು ಅವರಿಗೆ ದ್ರವ್ಯ ಮೊದಲಾದ ಕೊರತೆಗಳಿಂದ ಅನುಕೂಲಸ್ಥಿತಿಯು ಒದಗದೇ ಅಲ್ಲಿಂದಲ್ಲೇ ಅವರು ತಟಸ್ಥರಾಗಿರುವರು. ಇದಲ್ಲದೆ ಜಗತ್ಪ್ರಸಿದ್ಧರಾದ ಬಂಗಾಲದ "ಬೋಸ" ಎಂಬುವರು ಅನೇಕ ರೀತಿಪದಾರ್ಥವಿಜ್ಞಾನಶಾಸ್ತ್ರದ ಶೋಧವನ್ನು ಭಾರತೀಯ ಶಾಸ್ತ್ರಾಧಾರದಿಂದ ಮಾಡಿದ್ದು ಅದಕ್ಕೆ ಉತ್ತೇಜನಕೊಡುವ ಅಭಿಮಾನಿಗಳಾದ ಸಮರ್ಥರಿಲ್ಲದ್ದರಿಂದ ಪ್ರಚಾರದಲ್ಲಿ ತರತಕ್ಕ ಎಷ್ಟೋ ಕಾರ್ಯಗಳು ವಿಘ್ನವಾಗಿ ನಿಂತಿರುವವು. ಇದರಂತೆಯೇ ಭಾರತೀಯರ ಎಷ್ಟೋ ಕಾರ್ಯಗಳು ಪೂರ್ವದ ಮತ್ತು ಈಗಿನ ಪರರಾಷ್ಟ್ರದವರ ಧರ್ಮದ ವಿಘಾತದಿಂದ "ಹೃದಯೇಷ್ವೇವಲೀಯಂತೆ ದರಿದ್ರಾಣಾಂ ಮನೋರಥಾಃ" ಎಂಬ ನೀತಿ ವಾಕ್ಯದಂತೆ ಹೃದಯದಲ್ಲಿಯೇ ಉದ್ಭವಿಸಿ ಹೃದಯದಲ್ಲಿಯೇ ಲೀನವಾಗುವವು. ಪ್ರಾಚೀನಕಾಲದಲ್ಲಿ ಅಗ್ನೇಯಾಸ್ತ್ರ ಧನಂಜಯಾಸ್ತ್ರ ವಾಯುವಾಸ್ತ್ರಗಳ ಉಲ್ಲೇಖವಿದ್ದು ಬಂದೂಕ, ತೋಫ, ಮೊದಲಾದವುಗಳಿಗೆ ಬುಸುಂಡೀ ಶತಘ್ನೀ ಮೊದಲಾದ ಹೆಸರುಗಳು ಸಂಸ್ಕೃತಗ್ರಂಥಗಳಲ್ಲಿ ಕಂಡುಬರುವವು. ಮೋಹಶಾಸ್ತ್ರ ಮೊದಲಾದ ಹೆಸರುಗಳು ಆಯಾಯ ಶಸ್ತ್ರಗಳ ಕ್ರಿಯೆಗಳ ಮೇಲಿಂದ ಕೊಡಲ್ಪಟ್ಟದ್ದವೆಂದು ತಿಳಿದುಬರುತ್ತದೆ. ಮೋಹನ ವೆಂಬ ಅಸ್ತ್ರಕ್ಕೆ ಇಂಥಾದೊಂದು ವನಸ್ಪತಿಯ ಸಂಯೋಜನ ಮಾಡುತ್ತಿದ್ದರಲ್ಲಾ ಹೊಡೆದ ಆ ಅಸ್ತ್ರವು ಎಲ್ಲಿಯವರೆಗೆ ಹೋಗುವದೋ ಅಲ್ಲಿಯವರೆಗೆ ಅದರಲ್ಲಿದ್ದ ವನಸ್ಪತಿಕಣಗಳ ಸಿಂಚನೆವಾಸನೆಗಳಿಂದ ಸಮಿಪದ ಜನರು ಮೂರ್ಛಿತರಾಗಿ ಹೋಗುತ್ತಿದ್ದರು ಅದರಿಂದ ಶತ್ರು ಸೈನ್ಯಕ್ಕೆ ಅಷ್ಟೊಂದು ಹಾನಿಯನ್ನುಂಟುಮಾಡದೆ ತಮ್ಮ ಕಾರ್ಯಸಾಧಿಸಿಕೊಳ್ಳುತ್ತಿದ್ದರು. ಈರೀತಿ ವಿಲಕ್ಷಣಶಕ್ತಿಯುಳ್ಳ ಅಸ್ತ್ರಾದಿಗಳ ಪ್ರಯೋಗ ನಮ್ಮ ಆರ್ಯಾವರ್ತದಲ್ಲಿ ಪೂರ್ವದಲ್ಲಿದ್ದ ಬಗ್ಗೆ ಎಷ್ಟೋ ಆಧಾರಗಳು, ಪ್ರತ್ಯಕ್ಷವಾಗುವವು. ಭೂಮಿ ನಕ್ಷತ್ರ, ಸೂರ್ಯ, ಚಂದ್ರಾದಿ ವಿಷಯಕ ಶೋಧವು ಅತಿಸೂಕ್ಷ್ಮರೀತಿಯಾಗಿ ವೇದದಿಂದಲೇ ಸುರುವಿದ್ದು ಅನಂತರ ಋಷಿಗಳೂ ವಿದ್ವಾನರೂ ಅನೇಕ ರೀತಿ ಶೋಧವನ್ನುಮಾಡಿಟ್ಟಿರುವರು. ಇನ್ನು ಜ್ಯೋತಿಷ್ಯದ ಫಲಿತಾಂಶದ ವಿಷಯವಾಗಿ ಕೆಲವರು ಫಲಿತಾಂಶವು ಸತ್ಯವೆಂತಲೂ ಕೆಲವು ಅಸತ್ಯವೆಂತಲೂ ವಾದಿಸುವರು. ಆದರೆ ನನಗೆ ಮಾತ್ರ ಕೆಲವು ಭಾಗದಲ್ಲಿ ಫಲಿತಜ್ಯೋತಿಷ್ಯವು ಸತ್ಯವೆಂದು ಕಂಡುಬರುತದೆ. ಯಾಕಂದರೆ ಈ ವಿಷಯಕವಾಗಿ, ಕೆಲವು ವೇದಪ್ರಮಾಣಗಳೂ ಸಿಗುವವು ಹ್ಯಾಗಂದರೆ—"ಜ್ಯೇಷ್ಠಘ್ನ್ಯಾಂಜಾತೋವಿಚೃತೋರ್ಯಮಸ್ಯ ಮೂಲಬರ್ಹಣಾತ್ ಪರಿಪಾಹ್ಯೇನಮ್ ॥ ಅತ್ಯೇನಂನೇಷದ್ದುರಿತಾನಿ ವಿಶ್ವಾದೀರ್ಘಾಯುತ್ವಾಯ ಶತಶಾರದಾಯ ॥" ಅಥರ್ವ ೬-೧೧೦-೨ ಅಥರ್ವಣವೇದದಲ್ಲಿ ತನಗಿಂತ ಹಿರಿಯನನ್ನು ಕೊಲ್ಲುವದಕ್ಕೆ ಜ್ಯೇಷ್ಠಘ್ನಿಯನ್ನುವರು. ಅಂದರೆ ಜ್ಯೇಷ್ಠಾನಕ್ಷತ್ರದಲ್ಲಿ ಉತ್ಪನ್ನನಾದ ಪುತ್ರನು ತನಗಿಂತ ಹಿರಿಯನಾದ ಅಣ್ಣನನ್ನು ಅಥವಾ ತಂದೆತಾಯಿಗಳನ್ನು ಕೊಲ್ಲುವನು. ಮತ್ತು ವಿಚೃತ ಅಂದರೆ ವಿನಶನ ಶೀಲವಾದ ಮೂಲಾನಕ್ಷತ್ರದಲ್ಲಿ ಹುಟ್ಟಿದ ಪುತ್ರನು ತನ್ನ ವಂಶವನ್ನೆಲ್ಲಾ ನಾಶಮಾಡುವವನಾಗುವನಾದ್ದರಿಂದ ಇಂಥಾ ನಕ್ಷತ್ರದಲ್ಲಿ ಹುಟ್ಟಿದ ಪುತ್ರನ ಸಂರಕ್ಷಣಾರ್ಥ ಮೂಲೋಚ್ಛೇದಿತ ದೋಷವುಳ್ಳವನನ್ನು ಮಾಡತಕ್ಕದ್ದು ಮತ್ತು ಆ ಪುತ್ರನು ದೀರ್ಘಾಯು ಅಂದರೆ ೧೦೦ ವರ್ಷ ಆಯುಷ್ಯವುಳ್ಳವನಾಗುವದರ ದೆಶೆಯಿಂದ ತಕ್ಕ ಉಪಾಯಗಳನ್ನು ಮಾಡಿರಿ ಎಂದು ಬೋಧಿಸಿರುವದು. ಇದರಂತೆಯೇ

"ವ್ಯಾಘ್ರೇಽಹ್ನ್ಯಜನಿಷ್ಟವೀರೋ ನಕ್ಷತ್ರಜಾಜಾಯಮಾನಃ ಸುವೀರಃ। ಸಮಾವಧೀತ್ಪಿತರಂ ವರ್ಧಮಾನೋ ಮಾಮಾತರಂ ಪ್ರಮಿನೀಂ ಜನಿತ್ರೀಮ್ ॥" ಅಥರ್ವ ವೇದ ೬-೧೧೦-೩. ವ್ಯಾಘ್ರ ಸಮಾನವಾದ ಕ್ರೂರನಕ್ಷತ್ರಗಳಲ್ಲಿ ಹುಟ್ಟಿದ ಪುತ್ರನು ಮಹಾವೀರನಾಗಿ ದೊಡ್ಡವನಾದ ನಂತರ ತಂದೆ ತಾಯಿಗಳ ಘಾತಕನಾಗಬಾರದು. "ಮಾಜ್ಯೇಷ್ಠಾಂ ವಧೀಯಮಗ್ನ ಉಷಾಂಮೂಲಬರ್ಹಣಾತ್ ಪರಿಪಾಹ್ಯೇನಮ್। ನಗ್ರಾಹ್ಯಾಃ ಪಾಶಾನ್ ತುಭ್ಯಂ ದೇವಾಅನುಜಾನಂತುವಿಶ್ವಾ" ॥ ಅಥರ್ವವೇದ ೬-೧೧೨-೪. ಎಲೈ ಅಗ್ನಿಯೇ ಈ ಮೂಲಾನಕ್ಷತ್ರದಲ್ಲಿ ಹುಟ್ಟಿದವನು ತನ್ನ ಹಿರಿಯ ಅಣ್ಣನನ್ನು ಹೊಡೆಯದಂತೆ ದೋಷ ನಾಶಮಾಡಿ ಇವನನ್ನು ರಕ್ಷಿಸು. ನೀನು ಈ ಪಾಶದಿಂದ ಬಿಡಿಸುವ ಉಪಾಯವನ್ನು ತಿಳಿಯುತ್ತೀ ಎಂಬದಾಗಿ ಋಷಿಗಳು ಅನೇಕ ರೀತಿ ಫಲಜ್ಯೋತಿಷ್ಯವನ್ನನುಸರಿಸಿ ಅಗ್ನಿಯನ್ನು ಬೇಡಿಕೊಂಡಿರುವರು. ಈ ಮೇಲೆ ತೋರಿಸಿದ ವೇದಪ್ರಮಾಣಗಳಿಂದ ಫಲಿತಜ್ಯೋತಿಷ್ಯವು ಪುರಾತನವಾದದ್ದೆಂತಲೂ ವೇದದಲ್ಲಿ ಇದು ಅಂಗೀಕರಿಸಲ್ಪಟ್ಟದ್ದೆಂತಲೂ ಸಿದ್ಧವಾಗುವದು. ಆದರೆ ಕೆಲವು ಭಾರತೀಯ ವಿದ್ವಾನರೇ ಈ ಫಲಜ್ಯೋತಿಷ್ಯದಲ್ಲಿ ಅವಿಶ್ವಾಸಿತರಾಗಿ ಈ ಫಲಜ್ಯೋತಿಷ್ಯವು ಮುಸಲ್ಮಾನರಿಂದ ಕಲಿಯಲ್ಪಟ್ಟಿರುವದೆಂದು ತರ್ಕಿಸುವರು. ಆದರೆ ಅದು ಸರ್ವಥಾ ಅಸತ್ಯವಿದ್ದು ಮೇಲಿನ ವೇದಾದಿಗಳ ಪ್ರಮಾಣಗಳಿಂದ ಆರ್ಷವಿಚಾರವಿರುವದೆಂದು ಸ್ಪಷ್ಟ ಕಂಡುಬರುವದು. ಇದರಲ್ಲಿ ಅವರಿಗಾದರೂ ಅವಿಶ್ವಾಸವುಂಟಾಗಲಿಕ್ಕೆ ಕಾರಣವೇನಂದರೆ ಕೆಲವು ಉದರಂಭರಾರ್ಥಿಗಳಾದ ಭಟ್ಟಗಳು ಯತ್ಕಿಂಚಿತ್ ಜ್ಯೋತಿಷ್ಯಕಲಿತು ದುಡ್ಡು ನಸಲುವಾಗಿ ಜನರಿಗೆ ಮನಬಂದಂತೆ ಹೇಳುತಾ ಅಲಸ್ಯವಂತರಾಗಿ ತಿರುಗಾಡುತ್ತಿರುವರು. ಅಲ್ಲದೆ ಜನರಿಗೆ ಮನಬಂದಂತೆ ಫಲವನ್ನು ಹೇಳಿ ಮೋಸಮಾಡುತ್ತಿರುವರಾದ್ದರಿಂದ ಜ್ಯೋತಿಷ್ಯವು ಘಸಾಸಿಸುವ ವಿದ್ಯೆ ಎಂದು ಜನರಲ್ಲಿ ಅವಿಶ್ವಾಸವುಂಟಾಗಿರುವದು. ಆದರೆ ಇನ್ನುಮುಂದೆ ಕೇವಲ ಉದರಂಭರಣದ ಕಡೆಗೆ ಲಕ್ಷಕೊಡದೆ ಈಗಿನ ಜ್ಯೋತಿಷ್ಯಕಾರರಾದರೂ, ಜ್ಯೋತಿಷ್ಯದ ಮುಖ್ಯ ಉದ್ದೇಶವನ್ನು ಲಕ್ಷದಲ್ಲಿ ತಂದು ತಾವು ಕಲಿತ ಜ್ಯೋತಿಷ ವಿದ್ಯೆಯ ಮಹತ್ವವನ್ನು ಬೆಳೆಸುವರೆಂದು ಅಪೇಕ್ಷಿಸುವೆನು. ಫಲಜ್ಯೋತಿಷ ವಿಷಯಕವಾಗಿ ಪಾಶ್ಚಿಮಾತ್ಯರ ವಿಶ್ವಾಸವೂ ಕೂಡ ಸರ್ವರಿಗೂ ಶ್ರುತವಿರುವದು. ಕೇವಲ ಫಲಜ್ಯೋತಿಷ್ಯ ವಿಷಯವಲ್ಲದೇ ಅವರ ಶಕುನಾಪಶಕುನಫಲ ವಿಶ್ವಾಸವು ಇಲ್ಲಿಯತನಕ ಹೀಗಿರುವದಲ್ಲಾ ಸಾಮಾನ್ಯ ಒಂದೇ ಲೇಖಣಿಯಿಂದ ಬರೆದ ಕಾರ್ಯವು ಸಿದ್ಧವಾಯಿತೆಂದರೆ ಆ ಲೇಖಣಿಯ ಕಿಮ್ಮತ್ತು ಸಾವಿರಾರು ಬೆಲೆ ಬಾಳುವದು. ಈ ಶಕುನಾಪಶಕುನ ಪ್ರಚಾರವು ಈ ಹೊತ್ತಿಗೂ ಅದರಲ್ಲಿ ಉನ್ನತದೆಶೆಯಲ್ಲಿ ಇರುವದು. ನ್ಯಾಯ, ವೈಶೇಷಿಕ, ಯೋಗ, ಸಾಂಖ್ಯ, ಪೂರ್ವಮೀಮಾಂಸ, ಉತ್ತರಮೀಮಾಂಸೆಗಳೆಂಬ ಆರುದರ್ಶನ ಗ್ರಂಥಗಳಂತೂ ಅನಂತವಿದ್ದು ಅವುಗಳಲ್ಲಿ ಎಷ್ಟೋ ಪ್ರಚಾರದಲ್ಲಿಯೂ ಎಷ್ಟೋ ನವೀನ ಶೋಧದಲ್ಲಿಯೂ ಇರುವವು. ಒಂದೇ ಉತ್ತರಮೀಮಾಂಸವೆಂಬ (ಬ್ರಹ್ಮಸೂತ್ರ) ಗ್ರಂಥದ ಮೇಲೆ ೨೫ ಭಾಷ್ಯಗಳಿರುವವೆಂದು ಕಂಡುಬಂದಿರುವದು. ಈ ಭಾಷ್ಯಗಳಿಗೆ ಪುನಃ ಟೀಕಾಗ್ರಂಥಗಳು ಅನೇಕವಿರುವವು. ಸರ್ವಸಾಮಾನ್ಯವಾದ ಮನುಷ್ಯ ಧರ್ಮ, ರಾಜನೀತಿ, ಪ್ರಜಾನುರಾಗ ಬ್ರಹ್ಮಚರ್ಯಾದ್ಯಾಶ್ರಮ ಮೊದಲಾದ ನಿಯಮಗಳನ್ನು ಬೋಧಿಸುವ ಮನು, ಯಾಜ್ಞವಲ್ಕ್ಯ, ಹಾರೀತ, ನೃಪಪಾರಾಶರ ಮೊದಲಾದ ೨೦ ಸ್ಮೃತಿ ಗ್ರಂಥಗಳಿದ್ದು ಅವುಗಳಿಗೆ ಭಾಷ್ಯ ಮತ್ತು ಟೀಕಾಗ್ರಂಥಗಳಾದರೂ ಇರುವವು. ಶೈವ, ವೈಷ್ಣವ, ಶಾಕ್ತೇಯ ಮೊದಲಾದ ಧರ್ಮಗಳನ್ನು ಪ್ರತಿಪಾದನ ಮಾಡುವ ಧರ್ಮ ಗ್ರಂಥಗಳ ಸಂಗ್ರಹವಂತೂ ಅಪರಿಮಿತ ಇರುವದು. ಶೈವಾಗಮಗಳು ೨೮ ಇರುವವೆಂತಲೂ, ಕೆಲವರು ೧೦೮ ಇರುವವೆಂತಲೂ ಹೇಳುವರು ಇದಲ್ಲದೆ ತಂತ್ರಶಾಸ್ತ್ರವೆಂದು ಬಂಗಾಲದೇಶದಲ್ಲಿ ಪ್ರಸಿದ್ಧವಿದ್ದು ಅದರ ಗ್ರಂಥಗಳ ಶೋಧವು ನಡೆದಿರುವದು. ಇದರಂತೆಯೇ ಬೌದ್ಧ, ಜೈನ, ತತ್ವಗ್ರಂಥಗಳ, ಸಂಗ್ರಹವು ದೊಡ್ಡದಿದ್ದು ಕೆಲವು ಗ್ರಂಥಗಳು ಪ್ರಚಾರದಲ್ಲಿಯೂ, ಇನ್ನೂ ಕೆಲವು ಶೋಧವಾಗದೆಯೂ ಇರುವವು. ಸಂಪತ್ತಿಶಾಸ್ತ್ರ, ವಿಜ್ಞಾನ, ಕಲಾಕೌಶಲ್ಯ, ಇತಿಹಾಸ, ಕಾವ್ಯ, ಪುರಾಣ, ನಾಟಕಾದಿ ಅನೇಕ ಸಾಂಸಾರಿಕ ವ್ಯಾವಹಾರೋಪಯೋಗಿ ಗ್ರಂಥಗಳ ಸಾಹಿತ್ಯವು ಸೂಕ್ಷ್ಮಶೋಧದಿಂದಲೂ ಗಂಭೀರ ವಿಚಾರಗಳಿಂದಲೂ, ರಸಭರಿತವಾದ ವಾಣಿಯಿಂದಲೂ, ನಮ್ಮ ಭರತಖಂಡದಲ್ಲಿ ತುಂಬಿದ್ದು ಇದರಲ್ಲಿ ವಿಚಾರಮಾಡಿ ನೋಡದೇ ಕೆಲವು ಐರೋಪ್ಯರ ಮಾತಿನ ಮೇಲೆ ವಿಶ್ವಾಸವಿಟ್ಟು ನವೀನ ಶಿಕ್ಷಿತರು ಸಂಸ್ಕೃತ ಸಾಹಿತ್ಯವು ಕೇವಲ ಬ್ರಾಹ್ಮಣರ ಧರ್ಮಸಾಹಿತ್ಯವಿದ್ದು ಬ್ರಾಹ್ಮಣರ ಉಪಯೋಗಿ ಗ್ರಂಥಗಳ ಹೊರ್ತು ಮತ್ತು ಇನ್ನು ಯಾವ ವಿಷಯವು ಅದರಲ್ಲಿಲ್ಲದ್ದರಿಂದ ನಿರುಪಯೋಗಿವೆಂದು ಸಂಸ್ಕೃತ ಭಾಷೆಯಮೇಲೆ ದೋಷಾರೋಪಣ ಮಾಡುತ್ತ ಅದನ್ನು ಮೂಲಿಗೆ ಹಾಕುವ ಪ್ರಯತ್ನಮಾಡುವರು. ಅಯ್ಯೋ ಎಂಥಾ ಕಷ್ಟದ ಮಾತಿದು? ಯಾವನೊಬ್ಬ ಯುವಕನು ನವತರುಣಿಯೊಡನೆ ವಿವಾಹಿತನಾಗಿ ಆಕೆಯ ರೂಪ, ಲಾವಣ್ಯ, ಹಾವಭಾವಗಳಿಗೆ ಭ್ರಮಿತನಾಗಿ ತನ್ನ ಪೂರ್ವದ ವಿಚಾರಗಳನ್ನು ಮರೆತು ತನ್ನ ಪರಮ ಪೂಜ್ಯರಾದ ಮಾತಾಪಿತೃಗಳನ್ನು ಧಿಕ್ಕರಿಸುತ್ತ ರಾತ್ರಿಂದಿನದಲ್ಲಿ ಹ್ಯಾಗೆ ತಿರಸ್ಕಾರದೃಷ್ಟಿಯಿಂದ ನೋಡುವನೋ ಅಂಥಾ ಸ್ಥಿತಿಯೇ ನಮ್ಮಾ ವೃದ್ಧಮಾತೆಯಂತಿದ್ದ ಸಂಸ್ಕೃತ ಭಾಷೆಗೆ ಬಂದಿರುವದು. ಆದರೆ ಅದೇ ಯುವಕನು ಮಾತಾಪಿತೃಗಳು ಗತಿಸಿದನಂತರ ಮನೆಯಲ್ಲಿ ಬುದ್ಧಿವಾದ ಹೇಳುವ ಹಿರಿಯರು ಯಾರೂ ಇಲ್ಲದ್ದರಿಂದ ಹೆಂಡತಿಯು ಸ್ವೇಚ್ಛಾವಿಹಾರಿಯಾದಾಗ್ಗೆ ಆಗುವಳೋ ಅವಾಗ್ಗೆ ಅಯ್ಯೋ ಇನ್ನೇನುಮಾಡಲಿ? ಅಯ್ಯೋ ನನ್ನ ಹೆಂಡತಿಗೆ ಅಹರ್ನಿಶಿಯಲ್ಲಿ ಬುದ್ಧಿವಾದಹೇಳಿ ಆಕೆಯನ್ನು ಸನ್ಮಾರ್ಗದಲ್ಲಿಡತಕ್ಕ ಹಿರಿಯರಿಲ್ಲವಲ್ಲ? ಎಂದು ಹ್ಯಾಗೆ ಪ್ರತಿಪಾದಿಸುವನೋ ಅದರಂತೆ ಸಂಸ್ಕೃತಮಾತೆಗೆ ತಿರಸ್ಕಾರ ಮಾಡುವ ನವಯುವಕರಿಗೆ ಮುಂದೆ ಪಶ್ಚಾತ್ತಾಪಪಡುವ ಪ್ರಸಂಗವು ನಿಃಸಂದೇಹವಾಗಿ ಬಂದೀತು. ಆದರೆ ಈಗ ಅವರಿಗೆ ಪಾಶ್ಚಾತ್ಯವಿದ್ಯೆಯೇ ತಮ್ಮ ಯೌವನಮದದಲ್ಲಿ ತಿಳಿಯುವದು, ಅಸಾಧ್ಯವಾಗಿರುವದು. ಇನ್ನು ತಿಳಿದವರಾದರೂ ನವಯುವಕರ ಕಡೆಗೆ ಲಕ್ಷ್ಯಕೊಡದೇ ಈ ಸಂಸ್ಕೃತಮಾತೆಯ ಉನ್ನತಿಯ ವಿಷಯದಲ್ಲಿ ಲಕ್ಷವಿಡುವಿರೆಂದು ಆಶೆಯುಂಟು. ಸಂಸ್ಕೃತಭಾಷೆಯಲ್ಲಿ ಇತಿಹಾಸವೇ ಇಲ್ಲವೆಂದು ಕೆಲವರು ತರ್ಕಿಸುವರು. ಆದರೆ ಇದು ಸರ್ವಥಾ ಅಸಮಂಜಸವಾದ ಮಾತಾಗಿರುವದು. ಯಾಕೆಂದರೆ ಸಂಸ್ಕೃತದಲ್ಲಿದ್ದಷ್ಟು ಪ್ರಾಚೀನ ಇತಿಹಾಸಗ್ರಂಥಗಳು ಯಾವ ಭಾಷೆಯಲ್ಲಿಯೂ ಯಾವ ರಾಷ್ಟ್ರಗಳಲ್ಲಿಯೂ ಇಲ್ಲವೆಂದು ನಿಃಸಂದೇಹವಾಗಿ ಹೇಳಬಹುದು. ನಮ್ಮ ಪೂರ್ವಜರು ಇತಿಹಾಸವನ್ನು ಬರೇಪುಸ್ತಕದಲ್ಲಿ ಬರೆಯದೇ ಶಿಲಾಲೇಖ, ಮತ್ತು ತಾಮ್ರ ಕಂಚು ಮೊದಲಾದ ಧಾತುಗಳಲ್ಲಿಯೂ ಪ್ರಾಚೀನವೃತ್ತಾಂತವನ್ನು ಬರೆದಿಟ್ಟಿರುವರು. ಇಷ್ಟೇ ಅಲ್ಲದೇ ಪ್ರತಿಯೊಂದು ವಂಶದ ಪ್ರತಿಯೊಂದು ಮನೆಯ ಪೂರ್ವದ ಇತಿಹಾಸವನ್ನು ಇಡುವ ಪರಂಪರೆಯು ನಮ್ಮಾ ಭರತಖಂಡದಲ್ಲಿದ್ದು ಅದು ಇಲ್ಲಿಯವರೆಗೂ ಪ್ರಚಾರದಲ್ಲಿರುವದು. ನಮ್ಮಾ ಕರ್ನಾಟಕದಲ್ಲಿ "ಹೇಳುವರೆಂದು" ಕೆಲವರು ಈ ಹೊತ್ತಿಗೂ ಪ್ರಚಾರದಲ್ಲಿದ್ದು ಅವರು ಮನೆ ಮನೆಗೆ ಬಂದು ಪೂರ್ವಜರ ವೃತ್ತಾಂತವನ್ನು ಅವರ ವಂಶಪರಂಪರೆಯನ್ನು ಮತ್ತು ಅವರ ಉದ್ಯೋಗಾದಿಗಳನ್ನು ಹೇಳಿ ಸದ್ಯದಲ್ಲಿದ್ದ ಅವರ ಉದ್ಯೋಗಾದಿಗಳನ್ನು ಬರೆದುಕೊಂಡು ಹೋಗುವರು. ಹೇಳವರು ಅಂದರೆ "ಹಳಬರು" ಅರ್ಥಾತ್ ಹಳೇಹಿಂದಿನ ಸರ್ವಶುದ್ಧಿಯನ್ನು ಅಥವಾ ಪೂರ್ವಜರ ಇತಿಹಾಸವನ್ನು ಹೇಳುವವರು. ಅಂದರೆ ತಮಗಿಂತ ಪೂರ್ವದ ವೃತ್ತಾಂತವನ್ನು ಹೇಳುವ ಜನರಿಗೆ ಕನ್ನಡದಲ್ಲಿ ಹಳಬರೆನ್ನುವರು. ಅದು ಅಪಭ್ರಂಶವಾಗಿ ಹೇಳವರೆಂಬೋ ನಾಮದಲ್ಲಿ ಬಂದಿರುವದು. ಉತ್ತರ ಹಿಂದುಸ್ಥಾನದಲ್ಲಿ ಇವರಿಗೆ "ಭಾಟ"ರೆನ್ನುವರು. ಈ ಪ್ರಚಾರವು ಈ ಹೊತ್ತಿಗೂ ಸಂಪೂರ್ಣ ಭರತಖಂಡದಲ್ಲಿರುವದು. ಆದರೆ ಅದು ಪ್ರಾಚೀನ ಪದ್ಧತಿಗೆ ತಪ್ಪಿರುವದರಿಂದ ಎಷ್ಟೋ ನ್ಯೂನತೆಯಲ್ಲಿ ಬಂದಿರುವದು. ಇಂಥಾ ಉದಾಹರಣೆಗಳಮೇಲಿಂದ ನೋಡಲು ಪೂರ್ವಜರಿಗೆ ಇತಿಹಾಸವಿಷಯಕ ಎಷ್ಟು ಮಹತ್ವವಿತ್ತೆಂಬುದು ಕಂಡುಬರುವದು. ಇದರಂತೆ ಪ್ರಾಚೀನ ದೊಡ್ಡ ದೊಡ್ಡ ವಿದ್ವಾಂಸರು ಇತಿಹಾಸವನ್ನು ಪುರಾಣರೂಪದಿಂದ ಜನರಿಗೆ ಸುಶ್ರಾವ್ಯವಾಗುವಂತೆ ತಮ್ಮ ಪೂರ್ವದ ವೃತ್ತಾಂತವನ್ನು ಬರೆದಿರುವರು. ಇದಲ್ಲದೇ ರಾಮಾಯಣ, ಮಹಾಭಾರತ, ಮತ್ತು ೩೬೦ ಐತರೇಯಾದಿ ಬ್ರಾಹ್ಮಣ ಗ್ರಂಥಗಳಲ್ಲಿ ಹಿಂದಿನ ದೊಡ್ಡ ದೊಡ್ಡ ರಾಜರ ವಂಶಾವಳಿ ಮತ್ತು ಅವರ ಕಾರ್ಯಕ್ರಮಗಳನ್ನು ವರ್ಣಿಸಿ ಬರೆದಿರುವರು. ಎರಡನೇ ಶತಮಾನದಲ್ಲಿ ಬರೆದ ಇತಿಹಾಸವು ಸಿಗುತ್ತಿದ್ದು ಅದರಲ್ಲಿ ಹರ್ಷವರ್ಧನನೆಂಬ ರಾಜನ ಕಾಲದ ರಾಜ್ಯದಾಡಳಿತೆಯು ವರ್ಣಿಸಲ್ಪಟ್ಟಿದೆ ಅದರಿಂದೀಚೆಗೆ, ನವಸಾಹಸಾಂಕ ಚರಿತ್ರ, ವಿಕ್ರಮಾಂಕಚರಿತ್ರ, ಪೃಥ್ವೀರಾಜಚರಿತ್ರ ಮತ್ತು ರಾಜತರಂಗಿಣಿ, ಭೋಜಚರಿತ್ರ, ರಾಮಚರಿತ್ರ, ಮೊದಲಾದ ಗ್ರಂಥಗಳಮೇಲಿಂದ ಆಯಾಯ ಕಾಲದ ರಾಜರ ಚರಿತ್ರೆಯು ಭಿನ್ನ ಭಿನ್ನರೀತಿಯಾಗಿ ವರ್ಣಿಸಿ ಬರೆಯಲ್ಪಟ್ಟಿದ್ದು ಅವುಗಳನ್ನು ಸ್ವತಃ ನೋಡೋಣದರಿಂದ ಗೊತ್ತಾಗುವದು. ವಿಜಯನಗರದ ರಾಜ್ಯಕಾಲಕ್ಕೆ ಪ್ರಸಿದ್ಧಪಂಡಿತರಾದ ಮಾಧವಾಚಾರ್ಯ ಮೊದಲಾದ ಮಂತ್ರಿಮಂಡಲಿಯಿಂದ ಸಂಗ್ರಹಿಸಲ್ಪಟ್ಟ ಎಷ್ಟೋ ಇತಿಹಾಸಗ್ರಂಥಗಳು ಮುಸಲ್ಮಾನರಿಂದ ಸುಡಲ್ಪಟ್ಟವೆಂದು ತಿಳಿಯಬರುತ್ತದೆ.

೧೯೨೪ ನೆಯ ಇಸವಿ ಅಗಸ್ಟ್ ತಾ॥ ೩ ರಿಂದ ೧೯೨೪ ನೆಯ ಇಸವಿ ಅಗಸ್ಟ್ ತಾ॥ ೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಶ್ರಾವಣ ಶುದ್ಧ ತದಿಗೆಯಿಂದ ಶ್ರಾವಣ ಶುದ್ಧ ನವಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾ ಮಾಸ
3	[1]ಭಾನು	ತದಿ	47-23	ಪುಬ್ಬ	59-49	20
4	[2]ಸೋಮ	ಚೌತಿ	45-32	ಉತ್ತ	59-31	21
5	[3]ಮಂಗಳ	ಪಂಚ	42-42	ಹಸ್ತ	58-10	22
6	ಬುಧ	ಷಷ್ಠಿ	38-28	ಚಿತ್ತ	54-20	23
7	ಗುರು	ಸಪ್ತ	33-37	ಸ್ವಾತಿ	52-38	24
8	[4]ಶುಕ್ರ	ಅಷ್ಟ	28-10	ವಿಶಾ	48-54	25
9	[5]ಶನಿ	ನವ	22-19	ಅನೂ	44-47	26

(1) ಸಂಪದ್ಗೌರೀವ್ರತಂ. (2) ನಾಗಚೌತಿ. (3) ಮಂಗಳಗೌರೀವ್ರತಂ. (4) ವರಮಹಾಲಕ್ಷ್ಮೀವ್ರತಂ. (5) ಶ್ರಾವಣಶನಿವಾರಂ.

ಮೈಸೂರು: ಶ್ರೀ. ವಿರೂಪಾಕ್ಷಯ್ಯನವರಿಂದ ಶ್ರೀ ಪಂಚಾಕ್ಷರಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGSITERED NO. M.124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ [illegible]ಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಕ[illegible] [illegible]ಕಾವತಾರಾ ಪಕ್ಷಜ ನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಶ[illegible] ಭೀಷ್ಟದಶೀಲ ಸಾತ್ವಲಿತ ಸಾದ್ಗುಣ್ಯಾಲವಾಲಂವಲಂ ॥
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾ[illegible] ಶ್ರೀವಾಂಬಿತ್ತಿಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ನೆಯ ಇಸವಿ ಅಗಸ್ಟ್ ತಾರೀಖು ೧೭ ನೆಯ ಭಾನುವಾರ. [ಸಂಚಿಕೆ ೩೩

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,

ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHARAGHAVA VAIDYASALA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
28 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುವುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಚಳುವು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—37] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚೆನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[50—31] ಅಂಡ್ ಸನ್ಸ್, ಚಿ.ಪಿ. ಮಂಡಳಿ, ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್‌ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹಂದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಮೈಸೂರು.

ಮಳೆಗಾಲಕ್ಕಾಗಿ.

ಅನೇಕ ನಮೂನೆ ಕಾಶ್ಮೀರ್‌ಶಾಲುಗಳನ್ನು ಹೆಚ್ಚಾಗಿ ತರಿಸಿ ಬಹು ಸುಲಭ ಬೆಲೆಯಿಂದ ಬಿಕರಿಮಾಡುತ್ತಲಿದ್ದೇವೆಯಾಗಿ ಪ್ರತಿನಿತ್ಯವೂ ಅನೇಕ ಬಿಕರಿಯಾಗುತ್ತಲಿವೆ. ಇದರಡಿ ನಮೂದಿಸಿರುವ ಖರೀದಿಯ ಶಾಲುಗಳ ಪೈಕಿ ನಿಮಗೆ ಬೇಕಾದ ಖರೀದಿಯದಕ್ಕೆ ಆರ್ಡರ್ ಕೊಟ್ಟಲ್ಲಿ ನಂಬಿಗೆಯಿಂದ ನೀವಿದ್ದೆಡೆಗೆ ರವಾನಿಸುತ್ತೇವೆ.

ಬಾರ್ಡರ್‌ಹಾಕಿದ ಉಲನ್ ಶಾಲುಗಳು 1ಕ್ಕೆ 12-4-0, 13-2-0, 14-8-0, 15-4-0, 16-8-0, 17-2-0, 18-12-0, 19-8-0, 20-4-0, 21-8-0, 22-12-0, 23-8-0, 24-2-0, 25-4-0, 27-8-0, 30-0-0, 32-8-0, 34-4-0, 37-8-0, 48-8-0 ಮೇಲ್ಪಟ್ಟು 65 ರೂಪಾಯಿವರುವಿಗೆ ಸ್ಟಾಕಿನಲ್ಲಿವೆ.

ಖಾತ್ರಿಯಾದ ಚೇಳಿನ ಔಷಧ ಪೆಟ್ಟಿ 1 ಕ್ಕೆ 0-8-0, 12 ಕ್ಕೆ 4-8-0, "ನ್ಯಾಷನಲ್ ಇಂಕ್‌ಪೌಡರ್ ಪ್ಯಾಕೆಟ್" 1ಕ್ಕೆ 1-0-0.

M.S.SIDDAPPA & BROS

ಅನೇಕ ನಮೂನೆ ಟೈಂಪೀಸುಗಳು ಸೀಮೆಯಿಂದ ಹೆಚ್ಚಾಗಿ ಸಪ್ಲೈ ಆಗಿರುತ್ತಾಗಿ ಖರೀದಿ ಬಹಳ ಕಡಮೆಯಾಗಿರುತ್ತೆ. ಕೊಂಡುಕೊಳ್ಳುವವರಿಗೆ ಇದು ಸುಸಮಯವಾಗಿರುತ್ತಾಗಿ ಇದರಡಿ ನಮೂದಿಸಿರುವ ಖರೀದಿ ಟೈಂಪೀಸುಗಳ ಪೈಕಿ ನಿಮಗೆ ಬೇಕಾದ ಖರೀದಿ ಟೈಂಪೀಸಿಗೆ ಆರ್ಡರ್ ಕೊಡುವುದಲ್ಲದೆ 1-0-0 ರೂ. ಅಡ್ವಾನ್ಸ್ ರವಾನಿಸಿದಲ್ಲಿ ಉತ್ತಮವಾದದನ್ನು ಚುನಾಯಿಸಿ ನಂಬಿಗೆಯಿಂದ ರವಾನಿಸಲಾಗುತ್ತೆ. ಸಾದಾ ಟೈಂಪೀಸ್ 1 ಕ್ಕೆ 3-4-0, 3-6-0.

ಅಲಾರಂಟೈಂಪೀಸುಗಳು 4-4-0, 5-2-0, 6-8-0, 7-0-0, 7-12-0, 8-4-0, 9-8-0, 10-2-0, ಮೇಲ್ಪಟ್ಟಿರುತ್ತೆ.

ಗಂಟೆ ½ ಗಂಟೆ ಹೊಡೆದು ಅಲಾರಂ ಸಹಾ ಬಾರಿಸುವ ಟೈಂಪೀಸುಗಳು 7-14-0, 8-8-0, 17-8-0, 18-12-0.

ಕರ್ಣಾನಂದವಾಗಿ ಗಾನಮಾಡುವ ಕ್ಯಾರೇಜ್ ಕ್ಲಾಕ್ 1 ಕ್ಕೆ 15-8-0, 16-4-0

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50 46] ಮೈಸೂರು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಚ್ಛೆಯುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದುಬತ್ತಿ ಷಾಪ್,
26 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಲ್ಲದರಲ್ಲಿ ಪುರಾತನ ಕಾರಖಾನೆಯು.

ಸೂಚನೆ:—ಯಾವದೊಂದು ಮಾಲು ಗುಣಕಾರಿಯಾಗಿರುವದೆಂದು ತಿಳಿದಕೂಡಲೆ ಎಲ್ಲಕಡೆಗೂ ಅದರ ನಕಲು ಮಾಡಲಿಕ್ಕೆ ಆರಂಭವಾಗುತ್ತದೆ. ಆದರೆ ಹೆಸರಿಗೆ ತಕ್ಕಂತೆ ಗುಣಕ್ಕೆ ಮಾತ್ರ ಪಾತ್ರವಾಗುವದಿಲ್ಲ. ಈಗೀಗ ಇಲ್ಲಿ ನಕಲೀ ಓಷಧಿಯ ಕಾರಖಾನೆಗಳು ಹೊರಡಹತ್ತಿರುವವು. ಆದ್ದರಿಂದ ಗಿರಾಕಿಗಳು ನಮ್ಮ ಟ್ರೇಡಮಾರ್ಕನ್ನು ನೋಡಿ ತಕ್ಕೊಳ್ಳಬೇಕು

ಸುವರ್ಣಪದಕ ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ಥ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦, ೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವುದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.—ಪರಮಾ ಹಾಗೂ ಶಾಪಿನಿಂದದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇರೋಗವಿದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟಲಿಯ ಕಿಮ್ಮತ್ತು ೧। ರೂಪಾಯಿ ಮೂರುಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತ್ತು ೧೧—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧—೪—೦, ೩ ಬಾಟ್ಲಿಗೆ ೩—೦—೦, ಡಜನ್ನಿಗೆ ೧೩—೦—೦

ಮ್ಯಾನೇಜರ—ದ್ರಾಕ್ಷಾರ್ಕಮಧು ಆಫೀಸು,
[12-2] ಪೋ. ನಿಪ್ಪಾಣಿ, ಜಿ. ಬೆಳಗಾವ.

ಸುಲಭಕ್ರಯ! ಸುಲಭಕ್ರಯ!!

ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಇಂತಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—50] ಪೋ. ಬಾ. ೩೧೧, ಮದರಾಸು.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಆಗಸ್ಟ್ ತಾ|| ೧೭ ನೆಯ ಭಾನುವಾರ.

THE CITY ELECTORATE.

It is not very difficult to fore-cast the results of the elections to the Mysore City Municipal Council which are to commence from tomorrow as at present arranged. An analysis of the list of voters gives a clear indication of what they would be. There are on the whole this time 1882 voters for a population of 83,000 and odd. That in itself is a sufficient commentary on the representative or rather unrepresentative character of the Municipal Council to be. There are about 16,000 Brahmins in the City. Out of 1882 voters about 970 are Brahmins–which is over 50 per cent, for a population which is 19 per cent of the total, whereas to represent the whole lot of the rest of the city population of 67,000 and odd there are only 900 voters. Among the latter, be it noted, the same voter in many cases figures twice, thrice and even four times over in the same list, which would lessen their number still further. In vain have been the attempts to check this iniquitous tendency. We have written often about this with little effect. At the last Municipal elections held in 1921 there were nearly 2800 voters when the strength of Brahmin voters was even less than at present, and the other communities had a strength which, though a disproportionately small one, was yet a majority. In 1923 December, when the list for the elections to the Representative Assembly was prepared the total strength fell down to 2600 and that of the Brahmin voters increased. There was a loud protest then by the members of the Council. The Government was approached, though at somewhat a late stage with no effect. The Councillors who wanted a revision requisitioned a special meeting which the then President did not call and meantime the elections were held. This time when the list which received no publicity as in Bangalore in any *Gazette* but was put up at the Municipal Office on some unknown date for the information of the thousands of ratepayers who had all to make a pilgrimage to the office to find out whether their names were included in the list or not and to put in claims within 15 days from the unnotified date–when such a list was put up, the Councillors sent up a requisition for a special meeting. The President denied them the privilege quoting to the rule that claims of persons unreasonably omitted should be put within the stipulated time. These have been the vain efforts of the representatives of the City to get justice. The other answer to the requisitionists seems to be that the list has been prepared as per the rules, which disqualify ratepayers who are in arrears for over six months from being a voter. There are many whose names, though suffering from no such disability, have been omitted. But there is the idea abroad that this rule has been made to serve on ignoble purpose, in so far as those responsible for the collection of taxes from the ratepayers have brought pressure on only a certain section more strongly than on others, with the result that that section has managed to get a good representation, and the others who having had no reason to withhold their dues were yet not in a position to pay them up because of the absence of the demand on which it is usual for them to pay their taxes. The moment the list was prepared and there was no more fear of the swelling of the list of voters by the undesirables after that, pressure came and more than half of the outstandings were recovered within a time so short that it is doubtful if there could be anything to compare with it at any time previous in the history of the City Municipal administration. This is how things are manipulated. This is not all. The Municipal election rules lay down that an officer appointed by the Government shoud prepare the list of voters and that a similar list must be renewed every year, but neithar of these has been done. It is a constitutional point which if raised before a court of justice would invalidate the whole election. Further, we learn that women are also enfranchised for Municipal elections, but the eligibles among them are not included in the list. Where is there any chance for the progress of the City without a liberal and sympathatic working of the privileges given to the people? All the reforms by way of democratising Public Bodies will be so much of an unreality and a danger if the Executive handling them have not a sympathetic outlook and a genuine desire to do good. How few there are with that burning zeal for the people's welfare and that genuine ring about their action? It is not yet too late for the higher authorities to interfere and to order the stay of the elections and postpone them pending a thorough revision of the voters' list. We would be failing in our duty if we do not lay our emphatic protest against the present method of going about the elections and if we do not appeal on behalf of the ratepayers for righting the wrong.

ಚುನಾವಣೆ.

ರಾಜಧಾನಿಯಲ್ಲಿ ನಾಳೆಯ ದಿವಸದಿಂದ 4 ದಿನಗಳವರೆಗೆ ನಡೆಯುವ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯಲ್ಲಿ ಉಮೇದುವಾರರಾಗಿ ನಿಲ್ಲುವವರ ಯೋಗ್ಯತೆಯು ಎಂತಹುದಾಗಿರಬೇಕು ಮತ್ತು ಅನರ್ಹರಾದವರಿಗೆ ದಾಕ್ಷಿಣ್ಯದಿಂದಲೋ ಬೆದರಿಕೆಯಿಂದಲೋ, ಮತ್ತಾವಕಾರಣದಿಂದಲೋ ಓಟುಗಳನ್ನು ಕೊಟ್ಟಲ್ಲಿ ಪ್ರಜೆಗಳು ಎಂತಹ ನಷ್ಟ ಕಷ್ಟಗಳನ್ನು ಅನುಭವಿಸಬೇಕಾಗುವುದು ಇತ್ಯಾದಿ ವಿಚಾರವಾಗಿ ಈ ಸ್ಟಾರ್ ಪತ್ರಿಕೆಯ ಕಳೆದೆರಡು ಸಂಚಿಕೆಗಳಲ್ಲಿ ಸಯುಕ್ತಿಕವಾಗಿ ಪ್ರಸ್ತಾಪಿಸಲ್ಪಟ್ಟಿರುವುದಷ್ಟೆ? ರಾಜಧಾನಿಯ ಲಷ್ಕರ್ ಮೊಹಲ್ಲಾಕ್ಕೆ ಚುನಾಯಿಸಲ್ಪಡಬೇಕಾಗಿರುವ 4 ಜನರಿಗೆ 9 ಜನರೂ, ನಜರ್‌ಬಾದ್ ಮೊಹಲ್ಲಾಕ್ಕೆ ಒಬ್ಬನಿಗೆ 3 ಜನರೂ, ಮಂಡಿಮೊಹಲ್ಲಾಕ್ಕೆ 3 ಜನರಿಗೆ 9 ಜನರೂ, ಕಿಲ್ಲೆಮೊಹಲ್ಲಾಕ್ಕೆ ಒಬ್ಬನಿಗೆ 4 ಜನರೂ, ದೇವರಾಜಮೊಹಲ್ಲಾಕ್ಕೆ 3 ಜನರಿಗೆ 12 ಜನರೂ, ಕೃಷ್ಣರಾಜಮೊಹಲ್ಲಾಕ್ಕೆ 4 ಜನರಿಗೆ 8 ಜನರೂ, ಚಾಮರಾಜಮೊಹಲ್ಲಾಕ್ಕೆ 4 ಜನರಿಗೆ 12 ಜನರೂ ಹೀಗೆ ಒಟ್ಟು 20 ಜನರು ಕೌನ್ಸಿಲರಾಗಿ ಚುನಾಯಿಸಲ್ಪಡಬೇಕಾಗಿರುವುದಕ್ಕೆ 57 ಜನರು ಉಮೇದುವಾರರಾಗಿ ನಿಂತಿರುತ್ತಾರೆ. ಈ 57 ಜನ ಉಮೇದುವಾರರಲ್ಲಿ ಬ್ರಾಹ್ಮಣರು 38, ವೀರಶೈವರು 4, ಒಕ್ಕಲಿಗರು 4, ವೈಶ್ಯರು 3, ಮಹಮ್ಮದೀಯರು 2, ಮೊದಲಿಯಾರರು 2, ಕುಂಚಿಟಿಗರು 1, ದರ್ಜಿಯವರು 2, ಅಕ್ಕಸಾಲಿಗರು 1 ಇರುತ್ತಾರೆ. ಇಂತಿಷ್ಟು ಬ್ರಾಹ್ಮಣರು ಹಿಂದೆ ಯಾವಾಗಲೂ ಉಮೇದುವಾರರಾಗಿ ನಿಂತಿರಲಿಲ್ಲವೆಂದು ತೋರುತ್ತದೆ. ಈ ಜನರು ಈವೇಳೆ ಇಷ್ಟು ಹೆಚ್ಚಾಗಿ ನಿಲ್ಲಲು ಒಟ್ಟು 1882 ಓಟರುಗಳಲ್ಲಿ 970 ಓಟರುಗಳು ಬ್ರಾಹ್ಮಣರಾಗಿರುವುದೇ ಕಾರಣವೆಂದು ಹೇಳಲು ಅಭ್ಯಂತರವಿಲ್ಲವು. 1921 ರಲ್ಲಿ ಒಟ್ಟು ಓಟರುಗಳ ಸಂಖ್ಯೆಯು 2800 ಇದ್ದಿತು. ಆದರೆ ಈವೇಳೆ ಒಟ್ಟು ಸಂಖ್ಯೆಯು 1892 ಇರುವುದು. ಹೀಗೆ ಸಂಖ್ಯೆಯು ಕಡಿಮೆಯಾಗುವುದಕ್ಕೆ ಓಟರುಗಳ ಪಟ್ಟಿಯು ತಯಾರಿಸಲ್ಪಡುವ ಕಾಲದಲ್ಲಿ ಕಂದಾಯವನ್ನು ಬಾಕಿಯಿಟ್ಟುಕೊಂಡಿದ್ದವರ ಹೆಸರುಗಳು ಬಿಡಲ್ಪಟ್ಟಿರುವುದೇ ಕಾರಣವೆಂದು ಕೇಳುತ್ತೇವೆ. ಈ ಅಕ್ರಮವನ್ನು ಸರಿಪಡಿಸಬೇಕೆಂದು ಕೆಲ ಮ್ಯುನಿಸಿಪಲ್ ಕೌನ್ಸಿಲರುಗಳು ಪ್ರೆಸಿಡೆಂಟರಿಗೆ ತಿಳಿಸಿದ್ದುದರಮೇಲೆ, ಅವರು ಒಂದು ಸ್ಪೆಷಲ್ ಮೀಟಿಂಗನ್ನು ಮಾಡಿ, "ರೂಲ್ಸುಪ್ರಕಾರ ಓಟರುಗಳ ಪಟ್ಟಿಯು ತಯಾರಿಸಲ್ಪಟ್ಟು ಮ್ಯುನಿಸಿಪಲ್ ಆಫೀಸಿನ ಮುಂಭಾಗದಲ್ಲಿ ಪ್ರಕಟಿಸಲ್ಪಟ್ಟಿದೆ. ಅದರಲ್ಲಿ ಬಿಟ್ಟು ಹೋಗಿರುವ ಹೆಸರಿನವರು 15 ದಿನಗಳಲ್ಲಿ ಲಿಖಿತಮೂಲಕವಾಗಿ ಆಫೀಸಿಗೆ ತಿಳುಹಿದಲ್ಲಿ ಸೇರಿಸಲ್ಪಡಲಾಗುತ್ತದಲ್ಲದೆ, ಈಗ ತಯಾರಿಸಿರುವ ಲಿಸ್ಟನ್ನು ಬದಲಾಯಿಸಲಾಗುವುದಿಲ್ಲ." ಎಂದು ಹೇಳಿದರು, ಮತ್ತು ಬೆಂಗಳೂರು ಮ್ಯುನಿಸಿಪಾಲಿಟಿಯವರು ಓಟರುಗಳ ಲಿಸ್ಟನ್ನು ತಯಾರಿಸುವುದಕ್ಕೆ ಮೊದಲು ಕಂದಾಯವನ್ನು ಬಾಕಿಯಿಟ್ಟುಕೊಂಡಿರುವವರು ಇಷ್ಟು ದಿನಗಳಲ್ಲಿ ಕೊಟ್ಟರೆ ಅವರುಗಳ ಹೆಸರು ಲಿಸ್ಟಿಗೆ ಸೇರಿಸಲ್ಪಡುವುದೆಂದು ಪ್ರಕಟಿಸಿದ್ದು ಅನಂತರ ಗೆಜೆಟ್ಟಿನಲ್ಲಿ ಲಿಸ್ಟನ್ನು ಪ್ರಕಟಿಸಿದರು; ಅಲ್ಲದೆ ಆ ಲಿಸ್ಟಿನಲ್ಲಿ ಬಿಟ್ಟುಹೋಗಿರುವ ಹೆಸರುಗಳು ಇಷ್ಟು ದಿನಗಳಲ್ಲಿ ತಿಳುಹಲ್ಪಟ್ಟರೆ ಸೇರಿಸಲ್ಪಡುವುವು ಎಂದೂ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಅದರಂತೆ ಇಲ್ಲಿ ಮಾಡದಿದ್ದುದು ತಪ್ಪು ಎಂದು ಮೊದಲಾಗಿ ವಾದಿಸಿದರೂ ಪ್ರೆಸಿಡೆಂಟರು ಕಿವಿಗೆ ಹಾಕಿಕೊಳ್ಳಲಿಲ್ಲವು. ರಾಜಧಾನಿಯ ಒಟ್ಟು ಪ್ರಜಾಸಂಖ್ಯೆಯು 83ಸಾವಿರ ಚಿಲ್ಲರೆ. ಇದರಲ್ಲಿ ಸುಮಾರು 16000 ಬ್ರಾಹ್ಮಣರಿಗೆ 970 ಓಟರೂ, 13000 ಮಹಮ್ಮದೀಯರಿಗೆ 125 ಓಟರೂ ಇರುವುದನ್ನೋಡಿದರೆ ಎಂತಹವರಿಗೂ ಸಖೇದಾಶ್ಚರ್ಯವಾಗದಿರದು. ಹೀಗೆ ಅವರ ಸಂಖ್ಯೆಯು ಹೆಚ್ಚಿ ಇತರರ ಸಂಖ್ಯೆಯು ಕಡಮೆಯಾಗಲು ಸಕಾಲದಲ್ಲಿ ಬ್ರಾಹ್ಮಣರಿಂದ ಕಂದಾಯವೆತ್ತಲ್ಪಟ್ಟು ಇತರರಿಂದ ಎತ್ತಲ್ಪಡದೆ ಬಾಕಿಯಲ್ಲಿಡಲ್ಪಟ್ಟದ್ದುದೇ ಮುಖ್ಯಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಓಟರುಗಳ ಲಿಸ್ಟು ತಯಾರಾದನಂತರ ಇತರರಿಂದ ಕಂದಾಯದ ಹಣವು ಎಷ್ಟು ಶ್ರದ್ಧೆಯಿಂದಲೂ, ಒತ್ತರದಿಂದಲೂ ವಸೂಲ್ಮಾಡಲ್ಪಟ್ಟಿರುವುದೆಂಬುದು ಜಪ್ತಿ ವಾರಂಟುಗಳಿಗೆ ಗುರಿಯಾಗಿದ್ದ ಜನರನ್ನು ವಿಚಾರಿಸಿದಲ್ಲಿ ಮತ್ತು ಆಫೀಸಿನ ಲೆಖ್ಖವನ್ನು ನೋಡಿದಲ್ಲಿ ತಾನಾಗಿ ವ್ಯಕ್ತವಾಗುತ್ತದೆ. ಈ ವೇಳೆಯ ಓಟರುಗಳ ಲಿಸ್ಟು ಇಷ್ಟು ಸಂಕುಚಿತವಾಗಿಯೂ ಅಕ್ರಮವಾಗಿಯೂ ತಯಾರಿಸಲ್ಪಟ್ಟಿರುವುದರಿಂದ, ಪುರಪಾಲಕ ಸಂಘದಲ್ಲಿ ಪ್ರಜಾಸಂಖ್ಯಾನುಗುಣವಾಗಿ ಬೇರೆ ಬೇರೆ ವರ್ಗಗಳ ಪ್ರತಿನಿಧಿಗಳಿರಲವಕಾಶವಿಲ್ಲವೆಂಬುದರಮೇಲೆ, ನಾಳೆಯದಿನ ನಡೆಯಲಿಕ್ಕಿರುವ ಚುನಾವಣೆಯನ್ನು ಸದ್ಯದಲ್ಲಿ ನಿಲ್ಲಿಸಿ ಹೊಸಲಿಸ್ಟನ್ನು ತಯಾರಿಸಲಪ್ಪಣೆಯಾಗಬೇಕೆಂದು ಅನೇಕರು ಶ್ರೀಮನ್ಮಹಾರಾಜರವರಿಗೂ ಗೌರ್ನಮೆಂಟಿನವರಿಗೂ ವಿಜ್ಞಾಪನಪತ್ರಿಕೆಯನ್ನು ಬರೆದುಕೊಂಡಿರುವುದಾಗಿ ಕೇಳುತ್ತೇವೆ. ಈ ಪ್ರಾರ್ಥನೆಯು ಮಹಾಪ್ರಭುಗಳಿಂದಲೂ ಅವರ ಸರ್ಕಾರದವರಿಂದಲೂ ಅಂಗೀಕರಿಸಲ್ಪಡತಕ್ಕದು ಯುಕ್ತವಾಗಿದೆಯೆಂದು ಹೇಳಬೇಕಾದುದಿಲ್ಲವು. ಒಂದುವೇಳೆ ಅಂಗೀಕೃತವಾಗದಿದ್ದರೆ ಮ್ಯುನಿಸಿಪಾಲಿಟಿಯಧಿಕಾರಿಗಳು ಮಾಡಿರುವ ಕೈವಾಡದಿಂದ ಒಂದೇ ವರ್ಗದವರು ಬಹು ಸಂಖ್ಯಾಕರಾಗಿ ಚುನಾಯಿಸಲ್ಪಡುವುದರಲ್ಲಿ ಸಂದೇಹವಿಲ್ಲ. ತಮ್ಮ ವರ್ಗದ ಓಟರುಗಳ ಸಂಖ್ಯೆಯು ಹೆಚ್ಚಾಗಿರುವ ಕಡೆಗಳಲ್ಲಿ ತಾವು ಹೆಚ್ಚಾಗಿ ಬರುವುದರಿಂದಲೇ ತೃಪ್ತರಾಗದೆ ತಮ್ಮ ವರ್ಗದ ಓಟರ ಸಂಖ್ಯೆಯು ಕಡಿಮೆಯಾಗಿರುವ ಕಡೆಯಲ್ಲೂ ಇತರರನ್ನು ತಮ್ಮ ಚತುರೋಪಾಯದಿಂದ ಹಿಂದಕ್ಕೆ ದೂಡಿ ತಾವು ಉತ್ತೀರ್ಣರಾಗಿಬರಲು ಮಹಾಪ್ರಯತ್ನವನ್ನು ನಡಿಸಿರುತ್ತಾರೆ. ಅದುಕಾರಣ ಇತರ ವರ್ಗದವರು ಆ ಅತ್ಯಾಶಾಪರರ ಮರಳುಮಾತಿಗೆ ಕಿವಿಗೊಡದೆ ಆತ್ಮೋದ್ಧಾರಣೆಯಮೇಲೂ ಸ್ವಜನಾಭಿಮಾನದಮೇಲೂ ದೃಷ್ಟಿಯಿಟ್ಟು ಆತ್ಮಗೌರವವನ್ನು ಕಾಪಾಡಿಕೊಳ್ಳುವವರಾಗಲೆಂದು ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು

ಕಲಕತ್ತಾಕ್ಕೆ ದಯಮಾಡಿಸಿರುವ ದಿವಾನ್ ಮಿ|| ಬಾನರ್ಜಿಯವರು ಈ ತಾ|| 21 ರಲ್ಲಿ ಬೆಂಗಳೂರಿಗೆ ಹಿಂದಿರುಗಿ ಬರುವವರಾಗಿರುವರು.

ನಮ್ಮ ಸೀಮೆಯಲ್ಲಿ ಪ್ರವಾಹದ ಅನಾಹುತದಿಂದ ವಿಪನ್ನರಾದವರ ಸಹಾಯಾರ್ಥವಾಗೇರ್ಪಟ್ಟಿರುವ ಫಂಡಿಗೆ ಹಣವನ್ನು ಕೂಡಿಸಲು ಬೆಂಗಳೂರಿನ ವಿದ್ಯಾರ್ಥಿಕೂಟದವರು ಈ ದಿವಸ ಮನೆ ಮನೆಗೂ ಹೋಗಿ ದುಡ್ಡನ್ನೂ ಧಾನ್ಯವನ್ನೂ ಎತ್ತಲು ಸಂಕಲ್ಪಿಸಿರುತ್ತಾರೆ. ಈ ಸ್ತುತ್ಯವಾದ ಪ್ರಯತ್ನವನ್ನು ಇತರ ಕಡೆಯ ವಿದ್ಯಾರ್ಥಿಗಳೂ ಅನುಕರಣೆಸುವುದು ಅಗತ್ಯವೂ ಅತ್ಯವಸರವೂ ಆಗಿರುತ್ತದೆ.

ರಾಜಧಾನಿಯಲ್ಲಿ ಪಂಜಾಗಳನ್ನಿಡಕೂಡದೆಂದು ಬೋಧಿಸುತ್ತಿದ್ದ ಮುಸ್ಲಿಂವೆಲ್ಲೂರಿಯವರಿಂದ ಮೊಹರಂ ಹಬ್ಬದ ವೇಳೆಯಲ್ಲಿ ಗೊಂದಲವಾಗಬಹುದೆಂಬ ಶಂಕೆಯಿಂದ ಸರ್ಕಾರದವರು ಅವರನ್ನು ಸೆರೆಮನೆಯಲ್ಲಿಟ್ಟಿದ್ದು ನೆನ್ನೆಯ ದಿನ ಸಿಟಿಮ್ಯಾಜಿಸ್ಟ್ರೇಟರ ಕೋರ್ಟಿಗೆ ವಿಚಾರಣೆಗಾಗಿ ಮೋಟಾರು ಬಂಡಿಯಲ್ಲಿ ಸಾಯುಧರಾದ ಪೋಲೀಸರ ಬೆಂಗಾವಲಿನಿಂದ ಕರೆತರಲ್ಪಟ್ಟಿದ್ದರು ಮತ್ತು ಆ ವಿಚಾರಣೆಯ ಫಲಿತಾಂಶವನ್ನು ತಿಳಿಯಲು ಸಾವಿರಾರು ಮಹಮ್ಮದೀಯರು ಕೋರ್ಟಿನ ಹೊರಗಡೆ ಕಾದುಕೊಂಡಿದ್ದರು.

ರಾಜಧಾನಿಯಲ್ಲಿ ಮೊಹರಂಹಬ್ಬವು ಕಳೆದ ಮಂಗಳವಾರ ಯಾವುದೊಂದು ಗೊಂದಲವಿಲ್ಲದೆ ಶಾಂತಿಯಿಂದಲೂ ಉತ್ಸಾಹದಿಂದಲೂ ಕೊನೆಮುಟ್ಟಿತು. ಆದರೆ ಪೋಲೀಸಿನವರು ಮಾತ್ರ ಮಹಾನರ್ಥವು ಸಂಭವಿಸುತ್ತದೆಂದು ದಿಗಿಲುಬಿದ್ದು ಬೇಕಾದ ಸನ್ನಾಹಗಳನ್ನು ಮಾಡಿಕೊಂಡಿದ್ದರಲ್ಲದೆ ಸಿಟಿ ಮತ್ತು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರುಗಳನ್ನು ಸಹ ಸಿಟಿ ಸೆಂಟ್ರಲ್ ಪೋಲೀಸುಠಾಣಾಕ್ಕೆ ಬರಮಾಡಿಕೊಂಡಿದ್ದರು. ಪಂಜಾಗಳನ್ನಿಡಕೂಡದೆಂದೂ ವೇಷಗಳನ್ನು ಧರಿಸಕೂಡದೆಂದೂ ಬೆದರಿಸಿಹೇಳುವುದು ಹೆಚ್ಚಾದುದರಮೇಲೆ ಡೋಲಾಯಮಾನಸರಾಗಿದ್ದವರು ಕೂಡ ಪಂಜಾಗಳನ್ನಿಡುವುದೂ ವೇಷಗಳನ್ನು ಧರಿಸಿಕೊಂಡು ಕುಣಿಯುವುದೂ ಹೆಚ್ಚಾದುವು.

ಅಮುಲ್ದಾರರುಗಳಾದ ಮ|| ಆರ್. ತಮ್ಮಾಜಿರಾಯರು ದೊಡ್ಡಬಳ್ಳಾಪುರದಿಂದ ಬೆಂಗಳೂರಿಗೂ, ಮ|| ಎಚ್. ನಾರಾಯಣರಾಯರು ಹಿರಿಯೂರಿನಿಂದ ದೊಡ್ಡಬಳ್ಳಾಪುರಕ್ಕೂ, ಮ|| ಕೆ. ಸುಬ್ಬರಾವ್‌ನಾಯಕ್‌ರವರು ಮುಳಬಾಗಲಿನಿಂದ 2 ತಿಂಗಳು ಮತ್ತು 25 ದಿನಗಳ ಪ್ರಿವಿಲೆಜ್‌ರಜವನ್ನು ಈ ತಾ|| 10 ರಿಂದ ಪಡೆದುಕೊಂಡಿರುವ ಮಿ|| ಸಯದ್‌ಅಬ್ದುಲ್ ಕಾಲಕ್‌ರವರ ಬದಲು ಶ್ರೀನಿವಾಸಪುರಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ. ಮತ್ತು ಕೋಆಪರೇಟಿವ್ ಸೊಸೈಟಿಗಳ ಇನ್‌ಸ್ಪೆಕ್ಟರಾದ ಮ|| ಎಂ. ಪುಟ್ಟಸ್ವಾಮಿಯವರು ಹಿರಿಯೂರು ತಾಲ್ಲೂಕಿನ ಆಕ್ಟಿಂಗ್ ಅಮುಲ್ದಾರರಾಗಿಯೂ, ರೆವಿನ್ಯೂ ಸೆಕ್ರೆಟರಿಯಟ್ಟಿನ ಆಕ್ಟಿಂಗ್ ಸೂಪರಿಂಡೆಂಟರಾದ ಮ|| ಕೆ. ಪಾಂಡುರಂಗರಾಯರು ಮುಳಬಾಗಲು ತಾಲ್ಲೂಕು ಆಕ್ಟಿಂಗ್ ಅಮುಲ್ದಾರರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ವಿಪನ್ನರ ಸಹಾಯಾರ್ಥವಾಗೇರ್ಪಟ್ಟಿರುವ ಫಂಡಿಗೆ ಸಂಸ್ಥಾನದ ಎಲ್ಲ ಗೆಜೆಟೆಡ್ ಆಫೀಸರುಗಳೂ ತಮ್ಮ ಒಂದು ತಿಂಗಳ ಸಂಬಳವನ್ನು ಕೊಡಬೇಕೆಂದೂ, ಅಷ್ಟೊಂದನ್ನೂ ಒಂದೇ ಗಂಟಿನಲ್ಲಿ ಕೊಡಲು ಕಷ್ಟವಾಗುವುದರಿಂದ ಸರ್ಕಾರದವರು ಅವರುಗಳ ಒಂದು ತಿಂಗಳ ಸಂಬಳವನ್ನು ಮುಂಗಡವಾಗಿ ಕೊಟ್ಟು 10 ಕಿಸ್ತುಗಳನ್ನಾಗಿ ಅವರ ಪ್ರತಿ ತಿಂಗಳಿನ ಸಂಬಳದಲ್ಲೂ ಹಿಡಿದುಕೊಂಡು ಅಡ್ವಾನ್ಸ್ ಹಣಕ್ಕೆ ವಜಾ ಕಟ್ಟಿಕೊಳ್ಳಬೇಕೆಂದೂ, ಹೀಗೆ ಮಾಡುವುದರಿಂದ ಕೊಡುವವರಿಗೆ ಭಾರವಾಗಿ ಕಾಣದೆ ಫಂಡಿಗೆ ಹೆಚ್ಚು ಮೊಬಲಗು ನಿರಾಯಾಸವಾಗಿ ಕೂಡುತ್ತದೆಂದೂ ಕ್ಲೋಸ್‌ಪೇಟೆ ಸಬ್ ಡಿವಿಜನ್ ಅ|| ಕಮಿಷನರು ಸೂಚಿಸಿದ್ದರು. ಈ ಸೂಚನೆಯು ಬಹಳ ಯುಕ್ತಿಯುಕ್ತವಾಗಿ ಸರ್ಕಾರದವರಿಗೆ ಕಂಡಿರುವುದಾದರೂ, 50 ರೂ. ಗೆ ಮೇಲ್ಪಡದೆ ಸಂಬಳವಿರುವವರಿಗೆ ಮಾತ್ರ ತಿಂಗಳ ಸಂಬಳಕ್ಕೆ ಹೆಚ್ಚಿಲ್ಲದಂತೆ ಅಡ್ವಾನ್ಸ್ ಕೊಡಲ್ಪಟ್ಟು ತಿಂಗಳ ಸಂಬಳದಲ್ಲಿ ವಜಾಕಟ್ಟಿಕೊಳ್ಳಲ್ಪಡುವುದೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ. ಅ|| ಕಮಿಷನರು ಸೂಚನೆಯಂತೆ ಸರ್ಕಾರದವರು ನಡೆಸಿದ್ದರೆ ಹೆಚ್ಚು ಹಣವು ಶೇಖರವಾಗಲು ಅವಕಾಶವಾಗುತ್ತಿದ್ದಿತು.

ಭರತಖಂಡದ ವೃತ್ತಾಂತಗಳು.

ದಕ್ಷಿಣಕಾನಡಾ ಪ್ರಾಂತದಲ್ಲಿ ಈಚೆಗೆ ಪುನಃ ಹೆಚ್ಚು ಮಳೆಯಾಗಿ ನದಿಗಳಲ್ಲಿ ಪ್ರವಾಹಬಂದು ಜನರ ತಿರುಗಾಟಕ್ಕೆ ಅಡಚಣೆಯಾಗಿ ಆಹಾರ ಸಾಮಗ್ರಿಗಳು ದೊರೆಯದೆ ಜನರು ಪೇಚಾಡುತ್ತಿರುವರಂತೆ.

ಬಂಗಾಳಾಕ್ಕೆ ಸೇರಿದ ಬ್ಯಾರಿಸಾಲ್ ಡಿಸ್ಟ್ರಿಕ್ಟಿನ ಉತ್ತರಭಾಗವೆಲ್ಲಾ ನದಿಯ ಪ್ರವಾಹದಿಂದ ಜಲಮಯವಾಗಿ ಇಟ್ಟಿದ್ದ ಬೆಳೆಯಲ್ಲವೂ ನಾಶವಾಗಿರುವುದು ಮತ್ತು ಮುಂದಣ ಬೆಳೆಯಾದರೂ ಆಗುವ ಸಂಭವವಿಲ್ಲವು.

ಅಸ್ವಸ್ಥರಾಗಿರುವ ತಮ್ಮ ಮಾತೃಶ್ರೀಯವರಿಗೆ ಈ ಮಧ್ಯೆ ಪ್ರಾಣಾಪಾಯವುಂಟಾಗಿದ್ದುದರಿಂದ, ಮಹಮ್ಮದಾಲಿ ಷೌಕತಾಲಿಯವರು ರಾಂಪೂರಿಗೆ ಹೋಗಿ ಆಕೆಯನ್ನು ದಿಲ್ಲಿಗೆ ಕರೆದುಕೊಂಡುಬಂದು ಡಾಕ್ಟರು ಅನ್ಸಾರಿಯವರ ಕೈಲಿ ಚಿಕಿತ್ಸೆಯನ್ನು ಮಾಡಿಸುತ್ತಿರುವುದರಮೇಲೆ ಪ್ರಾಣಾಪಾಯವು ತಪ್ಪಿರುತ್ತದೆ.

ಅಫಘಾನಸ್ಥಾನವು ಬಹಳಮಟ್ಟಿಗೆ ಅಭಿವೃದ್ಧಿಯನ್ನು ಹೊಂದುತ್ತಿದೆ ಅಲ್ಲಿಯ ರಾಜರಾದ ಅಮೀರರು ಮೊದಲಾಗಿ ಸಮಸ್ತ ಜನರೂ ಪರದೇಶದ ಬಟ್ಟೆಯನ್ನು ಬಹಳ ಮಟ್ಟಿಗೆ ಉಪಯೋಗಿಸದೆ ಖಾದಿ ಬಟ್ಟೆಯನ್ನುಪಯೋಗಿಸುತ್ತಿರುವರು. ಆ ರಾಜ್ಯದಲ್ಲಿ ಹಿಂದೂ ಮಹಮ್ಮದೀಯರು ಐಕಮತ್ಯದಿಂದಲೂ ಸೋದರಭಾವದಿಂದಲೂ ಇರುವರು, ಅಲ್ಲದೆ ಗೋಹತ್ಯವು ಸುತರಾಂ ನಡೆಯುವುದಿಲ್ಲ. ಎಂದು ಅಫಘಾನಸ್ಥಾನದ ರಾಯಭಾರಿಯಾಗಿ ಫ್ರಾನ್ಸಿಗೆ ಹೋಗಿರುವ ನಾದಿರ್‌ಖಾನ್ ಸೇನಾನಿಯು ಲಾಹೋರಿನಲ್ಲಿಳಿದಿದ್ದಾಗ್ಗೆ ವಾರ್ತಾಪತ್ರಿಕೆಯ ಪ್ರತಿನಿಧಿಯೊಡನೆ ಹೇಳಿದರಂತೆ

ಅಹಮದಾಬಾದಿನಲ್ಲಿರುವ ಗುಜರಾತ್ ನೇಗೆಯ ಕಾರ್ಖಾನೆಯದ ಒಂದು ಭಾಗವು ಮಳೆಯಲ್ಲಿ ನೆನೆದು ಬಿದ್ದುಹೋದುದರಿಂದ ಅದರೊಳಗೆ ಕೆಲಸಮಾಡುತ್ತಿದ್ದವರಲ್ಲಿ 26 ಜನರು ಮೃತರಾದರು, ಗಾಯವಡೆದ 34 ಜನರಲ್ಲಿ 16 ಜನರು ಆಸ್ಪತ್ರೆಯ ಚಿಕಿತ್ಸೆಯಲ್ಲಿರುವರು. ಮೃತರ ಶವಸಂಸ್ಕಾರಕ್ಕಾಗಿ ತಲೆಯೊಂದಕ್ಕೆ 10 ರೂಪಾಯಿನಂತೆ ದ್ರವ್ಯವೂ, ಮೃತರ ಕುಟುಂಬದ ಜೀವನಕ್ಕೆ ದವಸವೂ ಕಂಪೆನಿಯವರಿಂದ ಕೊಡಲ್ಪಟ್ಟುವು. ಕಟ್ಟಡದ ಉಳಿದಭಾಗವು ಪರೀಕ್ಷಿಸಲ್ಪಟ್ಟು ಭದ್ರವಾಗಿದೆಯೆಂದು ಹೇಳಲ್ಪಡುವವರೆಗೂ ಯಾರೂ ಪ್ರವೇಶಿಸಕೂಡದೆಂದು ಮ್ಯಾಜಿಸ್ಟ್ರೇಟರು ಅಪ್ಪಣೆಮಾಡಿದುದರಮೇಲೆ ಕೆಲಸವು 3 ತಿಂಗಳವರೆಗೆ ನಿಲ್ಲಿಸಲ್ಪಟ್ಟಿರುತ್ತದೆ.

ಬಂಗಾಳಾಕ್ಕೆ ಸೇರಿದ ನರೇಲಿ ಎಂಬೂರಿನಲ್ಲಿ ಅಕ್ಷಯಕುಮಾರಛಾಟರ್ಜಿ ಎಂಬೊಬ್ಬ ಬಾಬುವು ತನ್ನ 5 ಮತ್ತು 8 ವರ್ಷ ವಯಸ್ಸಿನ ಮಕ್ಕಳಿಬ್ಬರ ಹೊಟ್ಟೆಯಲ್ಲಿ ಕ್ರಿಮಿಗಳು ಹೆಚ್ಚಾಗಿ ಸೇರಿಕೊಂಡಿರುವುದನ್ನು ಡಾಕ್ಟರಿಂದ ಪರೀಕ್ಷಿಸಿ ಸ್ಯಾಂಟೋನೈನ್ ಪುಡಿಯನ್ನು ಕಾಂಪೌಂಡರಿಂದ ತೆಗೆದುಕೊಂಡು ಒಂದು ರಾತ್ರಿವೇಳೆ ಮಲಗಿದ್ದ ಮಕ್ಕಳನ್ನು ಎಬ್ಬಿಸಿ ಅವುಗಳಿಗೆ ತಿನ್ನಿಸಿದನು. ಆ ಎರಡು ಮಕ್ಕಳೂ ಆ ಪುಡಿಯನ್ನು ಸೇವಿಸಿದ ಅರ್ಧಗಂಟೆಯಲ್ಲಿ ಸತ್ತುಹೋಗಲು, ಡಾಕ್ಟರು ಪರೀಕ್ಷಿಸಿ ಸ್ಟ್ರಿಕ್ನೈನ್ ಎಂಬ ವಿಷವು ಪ್ರಯೋಗಿಸಲ್ಪಟ್ಟಿತೆಂದು ನಿರ್ಧರಿಸಿದುದರಮೇಲೆ ಆ ಪುಡಿಯನ್ನು ಕೊಟ್ಟ ಕಾಂಪೌಂಡರೂ ಅವನ ಸಂಗಡಿಗನೂ ಪೋಲೀಸರಿಂದ ಸೆರೆಹಿಡಿಯಲ್ಪಟ್ಟು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ವಿದೇಶದ ವೃತ್ತಾಂತಗಳು

ಚೀನಾಕ್ಕೆ ಕಳ್ಳತನದಿಂದ ಕಳುಹಲ್ಪಡಲುದ್ದೇಶಿಸಲ್ಪಟ್ಟಿದ್ದ ಆಯುಧಗಳನ್ನೂ ಮದ್ದುಗುಂಡು ಸಾಮಗ್ರಿಗಳನ್ನೂ ಇಬ್ಬರು ಗ್ರೀಕು ನಾವಿಕರನ್ನೂ ಮತ್ತೆ ಕೆಲವರನ್ನೂ ಪೋಲೀಸರು ಸೆರೆಹಿಡಿದಿರುವರು.

ಬ್ರಿಟಿಷ್ ಸಾರ್ವಭೌಮರವರ ದ್ವಿತೀಯಪುತ್ರರಾದ ಡ್ಯೂಕ್ ಆಫ್ ಯಾರ್ಕ್‌ರವರು ಪತ್ನಿಯೊಡನೆ ಮೃಗಯಾವಿಹಾರಾರ್ಥವಾಗಿ ಬರುವ ನವಂಬರ್ ತಿಂಗಳಲ್ಲಿ ಕೆನಿಯ ಮತ್ತು ಯುಗಾಂಡ ಪ್ರಾಂತಗಳಿಗೆ ಹೋಗಿಬರುವವರಾಗಿರುವರು.

ಹಾಲಂಡಿಗೆ ಸೇರಿದ ಆಂಸ್ಟರ್ಡಾಂನಿಂದ ಫ್ರಾನ್ಸಿನ ದಕ್ಷಿಣತೀರದಲ್ಲಿ 700 ಮೈಲಿದೂರದಲ್ಲಿರುವ ಒಂದು ಪಟ್ಟಣಕ್ಕೆ ಒಬ್ಬ ಮನುಷ್ಯನು ದಿನ ಒಂದಕ್ಕೆ 4 ಮೈಲಿಯಂತೆ ನೆಲದಮೇಲೆ ಉರುಳಿಕೊಂಡೇ ಒಂದುಸೇರಿರುತ್ತಾನಂತೆ ಪಾಶ್ಚಾತ್ಯರ ಪ್ರಯತ್ನವಿಶೇಷವು ಅತಿವಿಚಿತ್ರತರವಾಗಿದೆ

ಬಲ್ಗೇರಿಯಾದಲ್ಲೂ ಬಾಲ್ಕನ್ನಿನಲ್ಲೂ ವಿಪ್ಲವಕಾರ್ಯವನ್ನು ನಡೆಯಿಸಲು ರಷ್ಯನರು ಪ್ರಯತ್ನಿಸುತ್ತಿರುವರು. ಅಕ್ಟೋಬರು-ಸೆಪ್ಟಂಬರು ಮತ್ತು ನವಂಬರು ತಿಂಗಳುಗಳೊಳಗೆ ರುಮೇನಿಯಾ ವಿಪ್ಲವವನ್ನು ಪ್ರರಂಭಿಸುತ್ತಾರಂತೆ. ಆ ಪ್ರದೇಶಗಳಲ್ಲಿ ರಷ್ಯನರು ವಿಪ್ಲಾವವನ್ನು ಪ್ರೋತ್ಸಾಹಿಸುತ್ತಿರುವರಂತೆ.

ಅಫಘಾನಿಸ್ಥಾನದಲ್ಲಿ ಬಂಗಾರದ ಗಣಿಗಳಿರುತ್ತವೆಂದು ತಿಳಿದು ಅವನ್ನೆಲ್ಲ ಸಂಪಾದಿಸುವುದಕ್ಕಾಗಿಯೂ, ಪರಿಶೋಧಿಸುವದಕ್ಕಾಗಿಯೂ ಆಂಗ್ಲೋ-ಆಸ್ಟ್ರೇಲಿಯಾದವರು 22,50,000 ರೂಪಾಯಿ ಬಂಡವಾಳದಮೇಲೆ ದುರಾನಿಕಂಪನಿ ಹೆಸರಿನಿಂದ ಒಂದು ಸಂಘವನ್ನೇರ್ಪಡಿಸಿಕೊಳ್ಳುವ ಪ್ರಯತ್ನದಲ್ಲಿದಾರೆ

ಈಗ್ಗೆ 10,000 ವರ್ಷಗಳ ಹಿಂದೆ ಇದ್ದ ಒಬ್ಬ ಮನುಷ್ಯನ ಶರೀರವು ಸಮಾಧಿಯಿಂದ ಹೊರಗೆ ತೆಗೆಯಲ್ಪಟ್ಟು ಗ್ಲೋಯರ್‌ಸ್ಟ್ರಟಿನ ವಿಶ್ವವಿದ್ಯಾಲಯದ ಸರ್ವವಸ್ತುಪ್ರದರ್ಶನ ಶಾಲೆಯಲ್ಲಿಡಲ್ಪಟ್ಟಿರುವುದು. ಈ ಶವವು ಈಜಿಪ್ಟ್ ದೇಶದಿಂದ ತರಲ್ಪಟ್ಟಿರುವುದಾಗಿದೆ. ಚರ್ಮವೂ, ನರಗಳೂ ಸ್ವಲ್ಪವೂ ಕೆಡದೆ ಅಸ್ತಿಗಳಿಗೆ ಅಂಟಿಕೊಂಡಿರುವುವಂತೆ ಮತ್ತು ತಲೆಯ ಕೂದಲೂ, ಹಲ್ಲುಗಳೂ ಕೈಕಾಲುಬೆರಳುಗಳ ಉಗುರುಗಳೂ ಕೆಡದೆ ಚೆನ್ನಾಗಿರುವುವಂತೆ !

ಪದಚ್ಯುತರಾದ ತುರ್ಕಿ ಸುಲ್ತಾನರಿಗೆ ಸೇರಿದ ಆಭರಣಾದಿ ಪದಾರ್ಥಗಳ ಬೆಲೆಯು ಪ್ರಾಯಶಃ 36 ಕೋಟಿ ಸವರನ್ ಆಗಬಹುದೆಂದೂಹಿಸಲ್ಪಟ್ಟಿದೆ. ಇವುಗಳಲ್ಲಿ ಪರ್ಷಿಯಾದ ಷಾರವರ ಪಕ್ಷಿಯ ಸಿಂಹಾಸನವೂ, ಮಹಮ್ಮದನ ಪಕ್ಷಿಯ ಕಠಾರಿಯೂ, ಬೈಜಾಂಟಿಯಮ್ಮಿನ ಚಕ್ರವರ್ತಿಯಾಗಿದ್ದ ಕಾನಿಸ್ಟಂಟೈನಿನ ಪಟ್ಟದ ಕತ್ತಿಯೂ, ನವರತ್ನಖಚಿತವಾದ ಶಿರ್ಪೇಚ್ ತುರಾಯಿಗಳೂ, ಇನ್ನೂ ಅನೇಕ ಅಮೋಘವಸ್ತುಗಳೂ ಸೇರಿರುತ್ತವೆ. ಇವೆಲ್ಲವನ್ನೂ ವಿಕ್ರಯಿಸಿ ಅದರಿಂದ ಬರುವ ದ್ರವ್ಯವನ್ನು ಪ್ರಜೋಪಯುಕ್ತಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಅಂಗೋರಾ ಸರ್ಕಾರದವರು ಯೋಚಿಸಿರುತ್ತಾರೆ.

ಉತ್ತರ ಅಮೇರಿಕೆಯಲ್ಲಿ ಇಬ್ಬರು ದಂಪತಿಗಳು ದೀರ್ಘರೋಗಿಗಳಾಗಿದ್ದು ಎಷ್ಟು ಔಷಧಗಳನ್ನು ವರ್ಷಗಟ್ಟಲೆ ಸೇವಿಸಿದಾಗ್ಗೂ ಗುಣಹೊಂದಲಿಲ್ಲವಾಗಿ, 50,000 ಮೈಲಿ ದೂರ ಪಾದಚಾರಿಗಳಾಗಿ ಸಂಚರಿಸಿದಲ್ಲಿ ರೋಗವು ಗುಣವಾಗುವುದೆಂದೂ, ಹಾಗೆ ಗುಣವಾಗದಿದ್ದಲ್ಲಿ 3,00,000 ರೂ. ಗಳನ್ನು ದಂಡದ್ರವ್ಯವಾಗಿ ಕೊಡುತ್ತೇನೆಂದೂ ಆ ದಂಪತಿಗಳ ಸ್ನೇಹಿತನು ಪಂಥಕಟ್ಟಿ ಹೇಳಿದುದರಮೇಲೆ, ಅವರಿಬ್ಬರೂ 7 ವರ್ಷಗಳ ಕಾಲದಲ್ಲಿ 50,000 ಮೈಲಿಗಳ ಪ್ರದೇಶವನ್ನು ಸಂಚರಿಸಿಬರಲು ಶಪಥಮಾಡಿಕೊಂಡು ಹೊರಟು ಕಳೆದ ಎರಡು ವರ್ಷಗಳಲ್ಲಿ 20,000 ಮೈಲಿಗಳ ದೂರ ಸಂಚಾರಮಾಡಿರುವರು. ಇದರಿಂದ ಈಗಾಗಲೇ ಅವರ ರೋಗವು ಬಹುಮಟ್ಟಿಗೆ ಗುಣವಾಗಿರುವುದು.

ವರ್ತಮಾನ ಪತ್ರಿಕೆಗಳಿಗೆ ಕಳುಹಿಸುವ ವಿಷಯಗಳ ಗೋಷ್ವಾರೆ.

ರಿಲೀಫ್ ಫಂಡು.

ಮೈಸೂರು ಸಂಸ್ಥಾನದಲ್ಲಿ ಈಚೆಗೆ ಬಂದ ಅಭೂತಪೂರ್ವವಾದ ಪ್ರವಾಹಗಳ ದೆಸೆಯಿಂದ ತೊಂದರೆಗಳಿಗೆ ಗುರಿಯಾದ ಜನಗಳ ಸಹಾಯಾರ್ಥವಾಗಿ ಹಣವನ್ನು ಜಮಾಯಿಸಲು ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರವರೂ, ಬೆಂಗಳೂರಿನ ಇತರ ಪ್ರಮುಖರಾದ ಪುರಜನರೂ, ಕಳೆದ 8 ನೆಯ ತಾರೀಖು ಶುಕ್ರವಾರದದಿನ ಬೆಂಗಳೂರು ಗವರ್ನಮೆಂಟ್ ಹೈಸ್ಕೂಲಿನಲ್ಲಿ ಒಂದು ಸಭೆಯನ್ನು ನಡೆಸಿದರು. ಅಲ್ಲಿ ಬಹಳ ಜನರು ಸೇರಿದ್ದರು. ದಿವಾನ್ ಸಾಹೇಬರವರಾದ ಮಿ|| ಎ. ಆರ್. ಬಾನರ್ಜಿಯವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಸಭಾರಂಭದ ಭಾಷಣದಲ್ಲಿ (ಈ ಭಾಷಣವು ಕೆಳಗಡೆ ಮುದ್ರಿತವಾಗಿದೆ.) ದಿವಾನ್ ಸಾಹೇಬರವರು ಮೈಸೂರು, ಶಿವಮೊಗ್ಗ, ಕಡೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿಯೂ, ಚಿತ್ರದುರ್ಗ ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ, ಪ್ರವಾಹಗಳಿಂದ ಉಂಟಾದ ಅನಾಹುತಗಳನ್ನು ವಿವರಿಸಿದರು. ಸಂಭವಿಸಿದ ಅಪಾಯವು ಮೂರು ವಿಧವಾಗಿದ್ದಿತೆಂದು ತಿಳಿಸಿದರು. (i) ಸೇತುವೆಗಳು, ರಸ್ತೆಗಳು, ಚರಂಡಿಗಳು, ನಾಲೆಗಳು ಮತ್ತು ಇತರ ನೀರಾವರಿಯ ಕಾಮಗಾರಿಗಳು, ಈ ಜನೋಪಯುಕ್ತ ಕಾಮಗಾರಿಗಳು ಕೊಚ್ಚಿಹೋಗಿ, ಅದರ ದೆಸೆಯಿಂದ ಉಂಟಾದ ನಷ್ಟ. (ii) ಖಾಸಗಿ ಜನಗಳ ಮನೆಗಳು ಬಿದ್ದುಹೋದುದೇ ಮುಂತಾದ ಅನಾಹುತ ಮತ್ತು (iii) ಜಮೀನುಗಳಿಗೆ ಉಂಟಾದ ನಷ್ಟ. ಸ್ಥಳದ ಆಫೀಸರುಗಳು ಕೂಡಲೇ ಸಮರ್ಪಕವಾದ ಏರ್ಪಾಡುಗಳನ್ನು ಮಾಡಿದುದರಿಂದ ಎಲ್ಲಿಯೂ ಪ್ರಾಣನಷ್ಟವಾಗಲಿಲ್ಲ.

ಸರ್ಕಾರದವರು ಮುಂಜೂರ್ಮಾಡಿದ ಸಹಾಯದ ಏರ್ಪಾಡುಗಳ ವಿಷಯವಾಗಿ, ಸೇತುವೆಗಳು, ಚರಂಡಿಗಳು, ರಸ್ತೆಗಳೇ ಮೊದಲಾದವುಗಳನ್ನು ದುರಸ್ತುಮಾಡಿ ಪ್ರಯಾಣಸೌಕರ್ಯಗಳನ್ನು ಕೂಡಲೇ ಯಥಾಸ್ಥಿತಿಗೆ ತರುವಂತೆ ಹಂಗಾಮಿ ಏರ್ಪಾಡುಗಳನ್ನು ಮಾಡಲಾಗಿರುವುದೆಂದು ದಿವಾನ್ ಸಾಹೇಬರವರು ಹೇಳಿದರು. ಕೆರೆಗಳು, ನಾಲೆಗಳು ಮತ್ತು ಸಾಗುವಳಿಗೆ ನೀರನ್ನೊದಗಿಸುವ ಇತರ ಮೂಲಗಳ ವಿಷಯದಲ್ಲಿ, ನೀರನ್ನು ಸರಬರಾಯಿ ಮಾಡುವ ಅವಧಿಯನ್ನು ಒಂದು ತಿಂಗಳಿನಷ್ಟು ಹೆಚ್ಚಿಸಿ, ಚಾಲ್ತಿ ವ್ಯವಸಾಯಕಾಲದಲ್ಲಿ ನೀರು ಸರಬರಾಯಿಯಾಗುವಂತೆ ಅವುಗಳನ್ನೆಲ್ಲಾ ಕೂಡಲೇ ದುರಸ್ತುಮಾಡುವಂತೆ ತಕ್ಕ ಏರ್ಪಾಡುಗಳನ್ನು ಮಾಡಲಾಗುವುದು. ಮೈಸೂರು ಡಿಸ್ಟ್ರಿಕ್ಟಿನಲ್ಲಿಯೂ ಶಿವಮೊಗ್ಗ ಟೌನಿನಲ್ಲಿಯೂ ವಿಶೇಷ ಅಪಾಯವುಂಟಾಗಿರುವ ಮನೆಗಳ ವಿಷಯದಲ್ಲಿ, ಮನೆಗಳನ್ನು ಕಳೆದುಕೊಂಡಿರುವವರಿಗೆ ಪುನಃ ತಮ್ಮ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಚೈತನ್ಯವುಂಟಾಗಲು ವಿಶೇಷವಾದ ಸಹಾಯವು ಅವಶ್ಯವಾಗಿರುವುದೆಂದು ದಿವಾನ್ ಸಾಹೇಬರವರು ಹೇಳಿದರು. ಸರ್ಕಾರದವರು ಅಸಲುಖರೀದಿಗೆ ಸುರಕ್ಷಿತವಾದ ಮತ್ತು ಅನುಕೂಲವಾದ ತಾಣಗಳನ್ನು ಕೊಡುವರು. ಅವಶ್ಯವಾದ ಸಂದರ್ಭಗಳಲ್ಲೆಲ್ಲಾ ಜನಗಳಿಗೆ ನೇರವಾಗಿ ಸರ್ಕಾರದಿಂದಲೇ ಆಗಲಿ, ಪರಸ್ಪರ ಸಹಾಯಸಂಘಗಳ ಮೂಲಕವಾಗಿಯೇ ಆಗಲಿ ಹಣವನ್ನು ಸಾಲವಾಗಿ ಕೊಡಲಾಗುವುದು. ಮನೆಗಳನ್ನು ಕಟ್ಟಲು ಕಟ್ಟಡದ ಸಾಮಾನುಗಳನ್ನು ಉಪಪತ್ತಿಯುಳ್ಳವರಿಗೆ ಅಸಲುಖರೀದಿಗೂ, ಬಡವರಿಗೆ ಮುಫತ್ತಾಗಿಯೂ ಕೊಡಲಾಗುವುದು. ನಷ್ಟಸಂಭವಿಸಿರುವ ಜಮೀನುಗಳ ವಿಷಯದಲ್ಲಿ, ಅವುಗಳನ್ನು ಪುನಃ ಸಾಗುವಳಿಗೆ ಯೋಗ್ಯವಾಗಿ ಮಾಡುವುದಕ್ಕೆ ಸರ್ಕಾರದವರು ಮಾಲೀಕರಿಗೆ ಸಾಲಗಳನ್ನು ಕೊಡುವರು. ಶೀಘ್ರದಲ್ಲಿ ಬೆಳೆಯಾಗುವ ಬೀಜವನ್ನು ಕೊಳ್ಳುವುದಕ್ಕೆ ಮುಂಗಡಗಳನ್ನು ಕೊಡಲಾಗುವುದು ಮತ್ತು ವ್ಯವಸಾಯದ ಇಲಾಖೆಯವರು ಆ ಬೀಜವನ್ನು ಅನುಕೂಲವಾದ ಮಧ್ಯಕೇಂದ್ರಗಳಲ್ಲಿ ಸರಬರಾಯಿ ಮಾಡುವರು. ಈ ವಿಷಯಗಳಲ್ಲೆಲ್ಲಾ ಬಡವರಿಗೆ ಮಾತ್ರ ಮುಫತ್ತಾಗಿ ಸಹಾಯವನ್ನು ಕೊಡಲಾಗುವುದೆಂದು ದಿವಾನ್ ಸಾಹೇಬರವರು ಸೂಚಿಸಿದರು.

ಉಚಿತವಾದ ಸಹಾಯಕ್ಕಾಗಿಯೂ ಸಾಲವಾಗಿ ಕೊಡುವುದಕ್ಕಾಗಿಯೂ ಬಡ್ಜೆಟ್ಟಿನಲ್ಲಿ ಒದಗಿಸಿರುವ ಮೊಬಲಗಿನ ಜತೆಗೆ ಸುಮಾರು ಒಂದು ಲಕ್ಷ ರೂಪಾಯಿಯನ್ನು ವಿಶೇಷ ಸ್ವಭಾವದ ಮೊತ್ತವಾಗಿ ಮುಂಜೂರ್ಮಾಡಲಾಯಿತು. ಈಗ ಸಂಭವಿಸಿರುವ ನಷ್ಟವು ಅತ್ಯಧಿಕವಾಗಿರುವ ಕಾರಣ ಪೂರ್ವಸ್ಥಿತಿಗೆ ತರಲು ತಕ್ಕ ಏರ್ಪಾಡುಗಳನ್ನು ನಡೆಸುವುದಕ್ಕೆ ಖಾಸಗಿ ಜನಗಳ ಸಹಾಯವು ಅತ್ಯವಶ್ಯವಾಗಿರುವುದೆಂದು ದಿವಾನ್ ಸಾಹೇಬರವರು ಅಪ್ಪಣೆಯಾಡಿಸಿದರು. ಆತರುವಾಯ, ಅವರು ಸಂಸ್ಥಾನದ ಹೊರಗಣಿಂದ ಸಹಾನುಭೂತಿಯನ್ನು ಸೂಚಿಸಿ ಬಂದ ವರ್ತಮಾನಗಳನ್ನು ಓದಿಹೇಳಿದರು. ಆ ಪೈಕಿ ಕೆಲವನ್ನು ಈ ಮುಂದೆ ಕೊಟ್ಟಿದೆ :—ಸಂಸ್ಥಾನಕ್ಕೆ ಸಂಭವಿಸಿದ ನಷ್ಟಕ್ಕೂ ಕಷ್ಟಕ್ಕೂ ತಮಗುಂಟಾದ ಅನುತಾಪವನ್ನು ಕುರಿತು ಇಂಡಿಯಾ ಸರ್ಕಾರದವರೂ ತಮ್ಮ ಸ್ವಂತ ಸಹಾನುಭೂತಿಯನ್ನು ಸೂಚಿಸಿ ಮಹಾಮಹಿಮರಾದ ವೈಸ್ರಾಯಿರವರೂ ಬರೆದಿದ್ದ ಸಂದೇಶಗಳು ಬಂದಿದ್ದುವು. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ವೈಸ್‌ಪ್ರೆಸಿಡೆಂಟರವರು ತಮ್ಮ ಸಹಾನುಭೂತಿಯನ್ನು ಸೂಚಿಸಿ ಸಹಾಯವನ್ನು ಮಾಡುವುದಾಗಿ ವರ್ತಮಾನವನ್ನು ಕಳುಹಿಸಿದ್ದರು ; ಗುಜರಾತು ದೇಶದ ಪೆಟ್‌ಲಾಡ್ ಎಂಬ ಸ್ಥಳದವರೂ, ಚಿನ್ನದಗಣಿಗಳವರೂ, ಅದೇರೀತಿಯಾಗಿ ವರ್ತಮಾನಗಳನ್ನು ಕಳುಹಿಸಿದ್ದರು. ಶ್ರೀಮನ್ಮಹಾರಾಜರವರು 15,000 ರೂಪಾಯಿಗಳನ್ನೂ ಶ್ರೀಮದ್ಯುವರಾಜರವರು 2,000 ರೂಪಾಯಿಗಳನ್ನೂ ಮೊದಲನೆಯ ರಾಜಕುಮಾರಿಯವರು 1000 ರೂಪಾಯಿಗಳನ್ನೂ ತಾವು ಸ್ವಂತವಾಗಿ 500 ರೂಪಾಯಿಗಳನ್ನೂ ದೊನೇಷನ್ ರೂಪದಲ್ಲಿ ಕೊಟ್ಟಿರುವುದಾಗಿ ದಿವಾನ್ ಸಾಹೇಬರವರು ತಿಳಿಯಪಡಿಸಿದರು. ಈ ಸಂಗತಿಯನ್ನು ಕೇಳುತ್ತಿರುವಾಗ ಜನರ ಆನಂದಘೋಷಗಳು ಮೊಳಗಿದುವು.

ಮೊದಲನೆಯ ಮತ್ತು ಎರಡನೆಯ ಕೌನ್ಸಿಲರುಗಳು ಹಾಸನ, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟಿನ ವಿದ್ಯಮಾನಗಳನ್ನು ವಿವರಿಸಿ ದಿವಾನ್ ಸಾಹೇಬರವರು ಪ್ರಾರಂಭಿಸಿದ್ದ ವಿವರಣೆಯನ್ನು ಪೂರೈಸಿದರು. ಮಹಾಜನಗಳು ಅಂತಃಕರಣವನ್ನೂ ಔದಾರ್ಯವನ್ನೂ ಈ ಸಮಯದಲ್ಲಿ ಪ್ರಕಾಶಪಡಿಸಬೇಕೆಂದು ಅಪ್ಪಣೆಕೊಡಿಸಿದರು.

ಆ ಕೂಡಲೆ 15,000 ರೂಪಾಯಿಗಳನ್ನು ಸಹಾಯಮಾಡುವುದಾಗಿ ವಾಗ್ದಾನಗಳು ಮಾಡಲ್ಪಟ್ಟುವು. ಆ ಪೈಕಿ ಕೆಲವನ್ನು ಈ ಕೆಳಗೆ ಸೂಚಿಸಿದೆ :—

	ರೂಪಾಯಿ
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಿಂದ	3,000
ಮೈಸೂರು ಬ್ಯಾಂಕಿನಿಂದ	2,000
ಸೆಂಟ್ರಲ್ ಕಾಲೇಜಿನಿಂದ	600
ಮಿ|| ತಂಗವೇಲು ಮೊದಲಿಯಾರರಿಂದ	500
ಮಿ|| ಉಸ್ಮಾನ್‌ಖಾನ್ ರವರಿಂದ	500 ಕಂಬಳಿಗಳು.
ಕೋಆಪರೇಟಿವ್ ಬ್ಯಾಂಕಿನಿಂದ	500
ಮಿ|| ರಹಿಮತುಲ್ಲಾರವರಿಂದ	251
ಮಿ|| ಗರುಡಾಚಾರ್ಯರವರಿಂದ	250
ಡಾಕ್ಟರ್ ಮೈಲ್ವಾಗನಂರವರಿಂದ	250
ಮಿ|| ಪುಟ್ಟಣಶೆಟ್ಟರವರಿಂದ	200
ಮಿ|| ಮಿರ್ ಹಂಜಾಹುಸೇನ್‌ರವರಿಂದ	200
ಮಿ|| ಕೆ. ಆರ್. ಶ್ರೀನಿವಾಸಯ್ಯಂಗಾರ್ಯರಿಂದ	200
ಮಿ|| ಬಾಲರಾಜ ಅರಸರವರಿಂದ	200
ಮಿ|| ತ್ಯಾಗರಾಜ ಅಯ್ಯರವರಿಂದ	200

ಹಣವು ವಸೂಲಾಗುತ್ತಿದೆ ಮತ್ತು ಜನಗಳು ಧಾರಾಳವಾಗಿ ಸಹಾಯಮಾಡುವರೆಂಬುದರಲ್ಲಿ ಪೂರ್ಣಭರವಸೆಯುಂಟು. ವರ್ತಕರೂ ಇತರ ವೃತ್ತಿಗಳವರೂ ಈ ವಿಷಯದಲ್ಲಿ ಹೇರಳವಾಗಿ ಭಾಗಿಗಳಾಗುವರೆಂದು ನಿರೀಕ್ಷಿಸಿದೆ. ಸಹಾಯದ ಏರ್ಪಾಡುಗಳನ್ನು ಕ್ರಮಪಡಿಸುವ ಬಗ್ಗೆ ಶ್ರೀಮದ್ಯುವರಾಜರವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಉದ್ಯೋಗಸ್ಥರ ಮತ್ತು ಖಾಸಗಿ ದೊಡ್ಡಮನುಷ್ಯರ ಒಂದು ಬಲವಾದ ಸೆಂಟ್ರಲ್ ಕಮಿಟಿಯನ್ನು ಏರ್ಪಡಿಸಲಾಯಿತು. ಚಂದಾಗಳನ್ನು ವಸೂಲ್ಮಾಡುವುದಕ್ಕಾಗಿ ಅನುಕೂಲವಾದ ಸಬ್‌ಕಮಿಟಿಗಳನ್ನೂ ಸಹ ರಚಿಸಿದೆ. ನಷ್ಟಕ್ಕೆ ಗುರಿಯಾಗಿದ್ದ ಪ್ರತಿ ಡಿಸ್ಟ್ರಿಕ್ಟಿಗೂ ಶಾಖಾಕಮಿಟಿಗಳನ್ನು ಏರ್ಪಡಿಸಲಾಗುವುದು.

ಶ್ರೀಮನ್ಮಹಾರಾಜರವರ ವಿಷಯದಲ್ಲಿಯೂ ರಾಜಕುಟುಂಬದವರ ವಿಷಯದಲ್ಲಿಯೂ ಕೃತಜ್ಞತಾ ಸೂಚಕವಾದ ನಿರ್ಣಯಗಳನ್ನೂ ಮದರಾಸು, ಟ್ರಾವನ್‌ಕೂರು ಮತ್ತು ಕೊಚ್ಚಿನ್ ಪ್ರಾಂತ್ಯಗಳಲ್ಲಿ ಪ್ರವಾಹಗಳಿಂದ ಕಷ್ಟಕ್ಕೀಡಾದ ಜನಗಳ ವಿಷಯದಲ್ಲಿ ಅನುತಾಪ ಸೂಚಕವಾದ ನಿರ್ಣಯಗಳನ್ನೂ ಲೇಖಿಸಿಟ್ಟ ತರುವಾಯ ಮೀಟಿಂಗು ಪರಿಸಮಾಪ್ತಿಗೊಂಡಿತು.

ದಿವಾನ್‌ರವರ ಭಾಷಣ.

ಮಹನೀಯರೆ,

ಮೈಸೂರು, ಕಡೂರು, ಶಿವಮೊಗ್ಗ, ಹಾಸನ ಡಿಸ್ಟ್ರಿಕ್ಟುಗಳಲ್ಲಿಯೂ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನ ಕೆಲವು ಪ್ರಾಂತ್ಯಗಳಲ್ಲಿಯೂ ಪ್ರವಾಹಗಳಿಂದುಂಟಾದ ಅನಾಹುತಗಳು ; ಮತ್ತು ಮುಖ್ಯವಾಗಿ ಶಿವಮೊಗ್ಗ, ಯಡತೊರೆ, ನಂಜನಗೂಡು, ತಿರುಮಕೂಡ್ಲು ನರಸೀಪುರ ಮತ್ತು ಹರಿಹರ, ಈ ಟೌನುಗಳಲ್ಲಿ ನಷ್ಟಪಟ್ಟವರಿಗೂ, ಇದಲ್ಲದೆ ಹೇಮಾವತಿ, ಕಾವೇರಿ, ಕಪಿನಿ, ತುಂಗಾ ಮತ್ತು ಭದ್ರಾನದಿಗಳಲ್ಲಿ ಕೆಲವು ಸ್ಥಳಗಳಲ್ಲಿ 30 ಅಡಿಗಳಿಗಿಂತ ಹೆಚ್ಚಾಗಿ ಅಸಾಧಾರಣವಾದ ಪ್ರವಾಹವುಂಟಾದುದರಿಂದ ಸದರಿ ನದಿಗಳ ಕೆಳಗಿನ ಪ್ರದೇಶಗಳಲ್ಲಿ ನಷ್ಟಪಟ್ಟ ಅನೇಕಗ್ರಾಮಗಳ ನಿವಾಸಿಗಳಿಗೂ, ಕೂಡಲೆ ಕಷ್ಟನಿವಾರಣೆಯನ್ನುಂಟುಮಾಡಬೇಕಾದ ಆವಶ್ಯಕತೆ; ಈ ಸಂಗತಿಗಳನ್ನು ಕುರಿತು 1924ನೇ ಆಗಸ್ಟ್ 2ನೇ ತಾರೀಖಿನ ದಿನ ಮೈಸೂರು ಸಿಟಿಯಲ್ಲಿ ನಡೆದ ಪಬ್ಲಿಕ್‌ಮೀಟಿಂಗಿನಲ್ಲಿ ಸರ್ವಸಾಮಾನ್ಯವಾದ ರೀತಿಯಲ್ಲಿ ನನ್ನ ಭಾಷಣದಲ್ಲಿ ಸೂಚಿಸಿದ್ದೆನು.

ಈಚೆಗೆ, ನಾನೂ ಮತ್ತು ನನ್ನ ಗೌರವಾರ್ಹರಾದ ಸಹೋದ್ಯೋಗಿಗಳೂ ಸಂಚಾರಹೊರಟು, ಕಷ್ಟಕ್ಕೊಳಗಾದ ಮುಖ್ಯಾಲುವಾಸಿ ಎಲ್ಲಾ ಪ್ರಾಂತ್ಯಗಳಲ್ಲೂ ತನಿಖೆಯನ್ನು ನಡಿಸಿ ಹಿಂತಿರುಗಿಬಂದೆವು. ಈಗ ಉಂಟಾಗಿರತಕ್ಕ ಅಸಾಧಾರಣವಾದ ಸ್ಥಿತಿಗತಿಗಳ ವಿಷಯದಲ್ಲಿ ನಡೆಸತಕ್ಕ ಸಾಮಾನ್ಯವಾದ ಕಾರ್ಯಕ್ರಮವನ್ನು ವಿಧಿಸಿ, ಶ್ರೀಮನ್ಮಹಾರಾಜರವರ ಸರ್ಕಾರದವರು ಒಂದು ತಪಸೀಲಾದ ಹುಕುಮನ್ನು ಈಗಿನ ಸಾದರಪಡಿಸಿರುತ್ತಾರೆ. ನಾವು ಮೈಸೂರಿನಲ್ಲಿ ಈ ಮೊದಲೇ ಸೂಚಿಸಿದ್ದಂತೆ, ನಮ್ಮ ನೆರೆಹೊರೆ ಸಂಸ್ಥಾನಗಳಲ್ಲಿ ಉಂಟಾದಷ್ಟು ಕಷ್ಟವು ಈ ಸಂಸ್ಥಾನದಲ್ಲಿ ನಮಗೆ ಉಂಟಾಗಿಲ್ಲ; ಆದಾಗ್ಯೂ ಬಡಜನರಿಗೆ ಉಂಟಾಗಿರತಕ್ಕ ಕಷ್ಟವು ಕೇವಲ ದುಸ್ಸಹವಾದುದಾಗಿದೆ. ಅದನ್ನು ತಾವಕಾಶಮಾಡದೆ [illegible] ಮಾಡಬೇಕಾಗಿದೆ. ಮೇಲ್ಕಂಡ ನಾಲ್ಕು ಡಿಸ್ಟ್ರಿಕ್ಟುಗಳ ಡೆಪ್ಯುಟಿಕಮಿಷನರುಗಳಲ್ಲಿ ಪ್ರತಿಯೊಬ್ಬರ ವಶಕ್ಕೂ 2,500 ರೂಪಾಯಿಗಳನ್ನು [illegible] ಬಡವರಿಗೆ ಉಚಿತವಾಗಿ ಸಹಾಯಮಾಡುವುದಕ್ಕೂ, ಇದಲ್ಲದೆ 25,000 [illegible] ಅನ್ನು ತಕಾವಿಸಾಲಗಳನ್ನು ಕೊಡುವುದಕ್ಕೂ, ಸರ್ಕಾರದವರು ಕೊಟ್ಟಿರುವುದು ಜನರಿಗೆ ಗೊತ್ತೇ ಇರಬಹುದು. [illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಆಗಸ್ಟ್ ತಾ|| ೧೭ ನೆಯ ಭಾನುವಾರ.

THE CITY ELECTORATE.

It is not very difficult to fore-cast the results of the elections to the Mysore City Municipal Council which are to commence from tomorrow as at present arranged. An analysis of the list of voters gives a clear indication of what they would be. There are on the whole this time 1882 voters for a population of 83,000 and odd. That in itself is a sufficient commentary on the representative or rather unrepresentative character of the Municipal Council to be. There are about 16,000 Brahmins in the City. Out of 1882 voters about 970 are Brahmins–which is over 50 per cent, for a population which is 19 per cent of the total, whereas to represent the whole lot of the rest of the city population of 67,000 and odd there are only 900 voters. Among the latter, be it noted, the same voter in many cases figures twice, thrice and even four times over in the same list, which would lessen their number still further. In vain have been the attempts to check this iniquitous tendency. We have written often about this with little effect. At the last Municipal elections held in 1921 there were nearly 2800 voters when the strength of Brahmin voters was even less than at present, and the other communities had a strength which, though a disproportionately small one, was yet a majority. In 1923 December, when the list for the elections to the Representative Assembly was prepared the total strength fell down to 2600 and that of the Brahmin voters increased. There was a loud protest then by the members of the Council. The Government was approached, though at somewhat a late stage with no effect. The Councillors who wanted a revision requisitioned a special meeting which the then President did not call and meantime the elections were held. This time when the list which received no publicity as in Bangalore in any *Gazette* but was put up at the Municipal Office on some unknown date for the information of the thousands of ratepayers who had all to make a pilgrimage to the office to find out whether their names were included in the list or not and to put in claims within 15 days from the unnotified date–when such a list was put up, the Councillors sent up a requisition for a special meeting. The President denied them the privilege quoting to the rule that claims of persons unreasonably omitted should be put within the stipulated time. These have been the vain efforts of the representatives of the City to get justice. The other answer to the requisitionists seems to be that the list has been prepared as per the rules, which disqualify ratepayers who are in arrears for over six months from being a voter. There are many whose names, though suffering from no such disability, have been omitted. But there is the idea abroad that this rule has been made to serve on ignoble purpose, in so far as those responsible for the collection of taxes from the ratepayers have brought pressure on only a certain section more strongly than on others, with the result that that section has managed to get a good representation, and the others who having had no reason to withhold their dues were yet not in a position to pay them up because of the absence of the demand on which it is usual for them to pay their taxes. The moment the list was prepared and there was no more fear of the swelling of the list of voters by the undesirables after that, pressure came and more than half of the outstandings were recovered within a time so short that it is doubtful if there could be anything to compare with it at any time previous in the history of the City Municipal administration. This is how things are manipulated. This is not all. The Municipal election rules lay down that an officer appointed by the Government shoud prepare the list of voters and that a similar list must be renewed every year, but neithar of these has been done. It is a constitutional point which if raised before a court of justice would invalidate the whole election. Further, we learn that women are also enfranchised for Municipal elections, but the eligibles among them are not included in the list. Where is there any chance for the progress of the City without a liberal and sympathatic working of the privileges given to the people? All the reforms by way of democratising Public Bodies will be so much of an unreality and a danger if the Executive handling them have not a sympathetic outlook and a genuine desire to do good. How few there are with that burning zeal for the people's welfare and that genuine ring about their action? It is not yet too late for the higher authorities to interfere and to order the stay of the elections and postpone them pending a thorough revision of the voters' list. We would be failing in our duty if we do not lay our emphatic protest against the present method of going about the elections and if we do not appeal on behalf of the ratepayers for righting the wrong.

ಚುನಾವಣೆ.

ರಾಜಧಾನಿಯಲ್ಲಿ ನಾಳೆಯ ದಿವಸದಿಂದ 4 ದಿನಗಳವರೆಗೆ ನಡೆಯುವ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯಲ್ಲಿ ಉಮೇದುವಾರರಾಗಿ ನಿಲ್ಲುವವರ ಯೋಗ್ಯತೆಯು ಎಂತಹುದಾಗಿರಬೇಕು ಮತ್ತು ಅನರ್ಹರಾದವರಿಗೆ ದಾಕ್ಷಿಣ್ಯದಿಂದಲೋ ಬೆದರಿಕೆಯಿಂದಲೋ, ಮತ್ತಾವ ಕಾರಣದಿಂದಲೋ ಓಟುಗಳನ್ನು ಕೊಟ್ಟಲ್ಲಿ ಪ್ರಜೆಗಳು ಎಂತಹ ನಷ್ಟ ಕಷ್ಟಗಳನ್ನು ಅನುಭವಿಸಬೇಕಾಗುವುದು ಇತ್ಯಾದಿ ವಿಚಾರವಾಗಿ ಈ ಸ್ಟಾರ್ ಪತ್ರಿಕೆಯ ಕಳೆದೆರಡು ಸಂಚಿಕೆಗಳಲ್ಲಿ ಸಯುಕ್ತಿಕವಾಗಿ ಪ್ರಸ್ತಾಪಿಸಲ್ಪಟ್ಟಿರುವುದಷ್ಟೆ? ರಾಜಧಾನಿಯ ಲಷ್ಕರ್ ಮೊಹಲ್ಲಾಕ್ಕೆ ಚುನಾಯಿಸಲ್ಪಡಬೇಕಾಗಿರುವ 4 ಜನರಿಗೆ 9 ಜನರೂ, ನಜರ್ ಬಾದ್ ಮೊಹಲ್ಲಾಕ್ಕೆ ಒಬ್ಬನಿಗೆ 3 ಜನರೂ, ಮಂಡಿಮೊಹಲ್ಲಾಕ್ಕೆ 3 ಜನರಿಗೆ 9 ಜನರೂ, ಕಿಲ್ಲೆ ಮೊಹಲ್ಲಾಕ್ಕೆ ಒಬ್ಬನಿಗೆ 4 ಜನರೂ, ದೇವರಾಜಮೊಹಲ್ಲಾಕ್ಕೆ 3 ಜನರಿಗೆ 12 ಜನರೂ, ಕೃಷ್ಣರಾಜಮೊಹಲ್ಲಾಕ್ಕೆ 4 ಜನರಿಗೆ 8 ಜನರೂ, ಚಾಮರಾಜಮಹಲ್ಲಾಕ್ಕೆ 4 ಜನರಿಗೆ 12 ಜನರೂ ಹೀಗೆ ಒಟ್ಟು 20 ಜನರು ಕೌನ್ಸಿಲರಾಗಿ ಚುನಾಯಿಸಲ್ಪಡಬೇಕಾಗಿರುವುದಕ್ಕೆ 57 ಜನರು ಉಮೇದುವಾರರಾಗಿ ನಿಂತಿರುತ್ತಾರೆ. ಈ 57 ಜನ ಉಮೇದುವಾರರಲ್ಲಿ ಬ್ರಾಹ್ಮಣರು 38, ವೀರಶೈವರು 4, ಒಕ್ಕಲಿಗರು 4, ವೈಶ್ಯರು 3, ಮಹಮ್ಮದೀಯರು 2, ಮೊದಲಿಯಾರರು 2, ಕುಂಚಿಟಿಗರು 1, ದರ್ಜಿಯವರು 2, ಅಕ್ಕಸಾಲಿಗರು 1 ಇರುತ್ತಾರೆ. ಇಂತಿಷ್ಟು ಬ್ರಾಹ್ಮಣರು ಹಿಂದೆ ಯಾವಾಗಲೂ ಉಮೇದುವಾರರಾಗಿ ನಿಂತಿರಲಿಲ್ಲವೆಂದು ತೋರುತ್ತದೆ. ಈ ಜನರು ಈವೇಳೆ ಇಷ್ಟು ಹೆಚ್ಚಾಗಿ ನಿಲ್ಲಲು ಒಟ್ಟು 1882 ಓಟರುಗಳಲ್ಲಿ 970 ಓಟರುಗಳು ಬ್ರಾಹ್ಮಣರಾಗಿರುವುದೇ ಕಾರಣವೆಂದು ಹೇಳಲು ಅಭ್ಯಂತರವಿಲ್ಲವು. 1921 ರಲ್ಲಿ ಒಟ್ಟು ಓಟರುಗಳ ಸಂಖ್ಯೆಯು 2800 ಇದ್ದಿತು. ಆದರೆ ಈವೇಳೆ ಒಟ್ಟು ಸಂಖ್ಯೆಯು 1892 ಇರುವುದು. ಹೀಗೆ ಸಂಖ್ಯೆಯು ಕಡಿಮೆಯಾಗುವುದಕ್ಕೆ ಓಟರುಗಳ ಪಟ್ಟಿಯು ತಯಾರಿಸಲ್ಪಡುವ ಕಾಲದಲ್ಲಿ ಕಂದಾಯವನ್ನು ಬಾಕಿಯಿಟ್ಟುಕೊಂಡಿದ್ದವರ ಹೆಸರುಗಳು ಬಿಡಲ್ಪಟ್ಟಿರುವುದೇ ಕಾರಣವೆಂದು ಕೇಳುತ್ತೇವೆ. ಈ ಅಕ್ರಮವನ್ನು ಸರಿಪಡಿಸಬೇಕೆಂದು ಕೆಲ ಮ್ಯುನಿಸಿಪಲ್ ಕೌನ್ಸಿಲರುಗಳು ಪ್ರೆಸಿಡೆಂಟರಿಗೆ ತಿಳಿಸಿದ್ದುದರಮೇಲೆ, ಅವರು ಒಂದು ಸ್ಪೆಷಲ್ ಮೀಟಿಂಗನ್ನು ಮಾಡಿ, "ರೂಲ್ಸು ಪ್ರಕಾರ ಓಟರುಗಳ ಪಟ್ಟಿಯು ತಯಾರಿಸಲ್ಪಟ್ಟು ಮ್ಯುನಿಸಿಪಲ್ ಆಫೀಸಿನ ಮುಂಭಾಗದಲ್ಲಿ ಪ್ರಕಟಿಸಲ್ಪಟ್ಟಿದೆ. ಅದರಲ್ಲಿ ಬಿಟ್ಟುಹೋಗಿರುವ ಹೆಸರಿನವರು 15 ದಿನಗಳಲ್ಲಿ ಲಿಖಿತಮೂಲಕವಾಗಿ ಆಫೀಸಿಗೆ ತಿಳಿಸಿದಲ್ಲಿ ಸೇರಿಸಲ್ಪಡಲಾಗುತ್ತದಲ್ಲದೆ, ಈಗ ತಯಾರಿಸಿರುವ ಲಿಸ್ಟನ್ನು ಬದಲಾಯಿಸಲಾಗುವುದಿಲ್ಲ." ಎಂದು ಹೇಳಿದರು, ಮತ್ತು ಬೆಂಗಳೂರು ಮ್ಯುನಿಸಿಪಾಲಿಟಿಯವರು ಓಟರುಗಳ ಲಿಸ್ಟನ್ನು ತಯಾರಿಸುವುದಕ್ಕೆ ಮೊದಲು ಕಂದಾಯವನ್ನು ಬಾಕಿಯಿಟ್ಟುಕೊಂಡಿರುವವರು ಇಷ್ಟು ದಿನಗಳಲ್ಲಿ ಕೊಟ್ಟರೆ ಅವರುಗಳ ಹೆಸರು ಲಿಸ್ಟಿಗೆ ಸೇರಿಸಲ್ಪಡುವುದೆಂದು ಪ್ರಕಟಿಸಿದ್ದು ಅನಂತರ ಗೆಜೆಟ್ಟಿನಲ್ಲಿ ಲಿಸ್ಟನ್ನು ಪ್ರಕಟಿಸಿದರು; ಅಲ್ಲದೆ ಆ ಲಿಸ್ಟಿನಲ್ಲಿ ಬಿಟ್ಟುಹೋಗಿರುವ ಹೆಸರುಗಳು ಇಷ್ಟು ದಿನಗಳಲ್ಲಿ ತಿಳುಪಲ್ಪಟ್ಟರೆ ಸೇರಿಸಲ್ಪಡುವುವು ಎಂದೂ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಆದರಂತೆ ಇಲ್ಲಿ ಮಾಡದಿದ್ದುದು ತಪ್ಪು ಎಂದು ಮೊದಲಾಗಿ ವಾದಿಸಿದರೂ ಪ್ರೆಸಿಡೆಂಟರು ಕಿವಿಗೆ ಹಾಕಿಕೊಳ್ಳಲಿಲ್ಲವು. ರಾಜಧಾನಿಯ ಒಟ್ಟು ಪ್ರಜಾಸಂಖ್ಯೆಯು 83ಸಾವಿರ ಚಿಲ್ಲರೆ. ಇದರಲ್ಲಿ ಸುಮಾರು 16000 ಬ್ರಾಹ್ಮಣರಿಗೆ 970 ಓಟರೂ, 13000 ಮಹಮ್ಮದೀಯರಿಗೆ 125 ಓಟರೂ ಇರುವುದನ್ನೋಡಿದರೆ ಎಂತಹವರಿಗೂ ಸಖೇದಾಶ್ಚರ್ಯವಾಗದಿರದು. ಹೀಗೆ ಅವರ ಸಂಖ್ಯೆಯು ಹೆಚ್ಚಿ ಇತರರ ಸಂಖ್ಯೆಯು ಕಡಮೆಯಾಗಲು ಸಕಾಲದಲ್ಲಿ ಬ್ರಾಹ್ಮಣರಿಂದ ಕಂದಾಯವೆತ್ತಲ್ಪಟ್ಟು ಇತರರಿಂದ ಎತ್ತಲ್ಪಡದೆ ಬಾಕಿಯಲ್ಲಿಡಲ್ಪಟ್ಟದ್ದುದೇ ಮುಖ್ಯಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಓಟರುಗಳ ಲಿಸ್ಟು ತಯಾರಾದನಂತರ ಇತರರಿಂದ ಕಂದಾಯದ ಹಣವು ಎಷ್ಟು ಶ್ರದ್ಧೆಯಿಂದಲೂ, ಒತ್ತರದಿಂದಲೂ ವಸೂಲ್ಮಾಡಲ್ಪಟ್ಟಿರುವುದೆಂಬುದು ಜಪ್ತಿ ವಾರಂಟುಗಳಿಗೆ ಗುರಿಯಾಗಿದ್ದ ಜನರನ್ನು ವಿಚಾರಿಸಿದಲ್ಲಿ ಮತ್ತು ಆಫೀಸಿನ ಲೆಖ್ಖವನ್ನು ನೋಡಿದಲ್ಲಿ ತಾನಾಗಿ ವ್ಯಕ್ತವಾಗುತ್ತದೆ. ಈ ವೇಳೆಯ ಓಟರುಗಳ ಲಿಸ್ಟು ಇಷ್ಟು ಸಂಕುಚಿತವಾಗಿಯೂ ಅಕ್ರಮವಾಗಿಯೂ ತಯಾರಿಸಲ್ಪಟ್ಟಿರುವುದರಿಂದ, ಪುರಪಾಲಕ ಸಂಘದಲ್ಲಿ ಪ್ರಜಾಸಂಖ್ಯಾನುಗುಣವಾಗಿ ಬೇರೆ ಬೇರೆ ವರ್ಗಗಳ ಪ್ರತಿನಿಧಿಗಳಿರಲವಕಾಶವಿಲ್ಲವೆಂಬುದರಮೇಲೆ, ನಾಳೆಯದಿನ ನಡೆಯಲಿಕ್ಕಿರುವ ಚುನಾವಣೆಯನ್ನು ಸದ್ಯದಲ್ಲಿ ನಿಲ್ಲಿಸಿ ಹೊಸಲಿಸ್ಟನ್ನು ತಯಾರಿಸಲಪ್ಪಣೆಯಾಗಬೇಕೆಂದು ಅನೇಕರು ಶ್ರೀಮನ್ಮಹಾರಾಜರವರಿಗೂ ಗೌರ್ನಮೆಂಟಿನವರಿಗೂ ವಿಜ್ಞಾಪನಪತ್ರಿಕೆಯನ್ನು ಬರೆದುಕೊಂಡಿರುವುದಾಗಿ ಕೇಳುತ್ತೇವೆ. ಈ ಪ್ರಾರ್ಥನೆಯು ಮಹಾಪ್ರಭುಗಳಿಂದಲೂ ಅವರ ಸರ್ಕಾರದವರಿಂದಲೂ ಅಂಗೀಕರಿಸಲ್ಪಡತಕ್ಕದು ಯುಕ್ತವಾಗಿದೆಯೆಂದು ಹೇಳಬೇಕಾದುದಿಲ್ಲವು. ಒಂದುವೇಳೆ ಅಂಗೀಕೃತವಾಗದಿದ್ದರೆ ಮ್ಯುನಿಸಿಪಾಲಿಟಿಯಧಿಕಾರಿಗಳು ಮಾಡಿರುವ ಕೈವಾಡದಿಂದ ಒಂದೇ ವರ್ಗದವರು ಬಹು ಸಂಖ್ಯಾಕರಾಗಿ ಚುನಾಯಿಸಲ್ಪಡುವುದರಲ್ಲಿ ಸಂದೇಹವಿಲ್ಲ. ತಮ್ಮ ವರ್ಗದ ಓಟರುಗಳ ಸಂಖ್ಯೆಯು ಹೆಚ್ಚಾಗಿರುವ ಕಡೆಗಳಲ್ಲಿ ತಾವು ಹೆಚ್ಚಾಗಿ ಬರುವುದರಿಂದಲೇ ತೃಪ್ತರಾಗದೆ ತಮ್ಮ ವರ್ಗದ ಓಟರ ಸಂಖ್ಯೆಯು ಕಡಿಮೆಯಾಗಿರುವ ಕಡೆಯಲ್ಲೂ ಇತರರನ್ನು ತಮ್ಮ ಚತುರೋಪಾಯದಿಂದ ಹಿಂದಕ್ಕೆ ದೂಡಿ ತಾವು ಉತ್ತೀರ್ಣರಾಗಿಬರಲು ಮಹಾಪ್ರಯತ್ನವನ್ನು ನಡಿಸಿರುತ್ತಾರೆ. ಅದುಕಾರಣ ಇತರ ವರ್ಗದವರು ಆ ಅತ್ಯಾಚಾರಪರರ ಮರಳುಮಾತಿಗೆ ಕಿವಿಗೊಡದೆ ಆತ್ಮೋದ್ಧಾರಣೆಯಮೇಲೂ ಸ್ವಜನಾಭಿಮಾನದಮೇಲೂ ದೃಷ್ಟಿಯಿಟ್ಟು ಆತ್ಮಗೌರವವನ್ನು ಕಾಪಾಡಿಕೊಳ್ಳುವವರಾಗಲೆಂದು ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು

ಕಲಕತ್ತಾಕ್ಕೆ ದಯಮಾಡಿಸಿರುವ ದಿವಾನ್ ಮಿ|| ಬಾನರ್ಜಿಯವರು ಈ ತಾ|| 21 ರಲ್ಲಿ ಬೆಂಗಳೂರಿಗೆ ಹಿಂದಿರುಗಿ ಬರುವವರಾಗಿರುವರು.

ನಮ್ಮ ಸೀಮೆಯಲ್ಲಿ ಪ್ರವಾಹದ ಅನಾಹುತದಿಂದ ವಿಪನ್ನರಾದವರ ಸಹಾಯಾರ್ಥವಾಗೇರ್ಪಟ್ಟಿರುವ ಫಂಡಿಗೆ ಹಣವನ್ನು ಕೂಡಿಸಲು ಬೆಂಗಳೂರಿನ ವಿದ್ಯಾರ್ಥಿಕೂಟದವರು ಈ ದಿವಸ ಮನೆ ಮನೆಗೂ ಹೋಗಿ ದುಡ್ಡನ್ನೂ ಧಾನ್ಯವನ್ನೂ ಎತ್ತಲು ಸಂಕಲ್ಪಿಸಿರುತ್ತಾರೆ. ಈ ಸ್ತುತ್ಯವಾದ ಪ್ರಯತ್ನವನ್ನು ಇತರ ಕಡೆಯ ವಿದ್ಯಾರ್ಥಿಗಳೂ ಅನುಕರಣಿಸುವುದು ಅಗತ್ಯವೂ ಅತ್ಯವಸರವೂ ಆಗಿರುತ್ತದೆ.

ರಾಜಧಾನಿಯಲ್ಲಿ ಪಂಜಾಗಳನ್ನಿಡಕೂಡದೆಂದು ಬೋಧಿಸುತ್ತಿದ್ದ ಮುಸ್ಲಿಂವೆಲ್ಲೂರಿಯವರಿಂದ ಮೊಹರಂ ಹಬ್ಬದ ವೇಳೆಯಲ್ಲಿ ಗೊಂದಲವಾಗಬಹುದೆಂಬ ಶಂಕೆಯಿಂದ ಸರ್ಕಾರದವರು ಅವರನ್ನು ಸೆರೆಮನೆಯಲ್ಲಿಟ್ಟಿದ್ದು ನೆನ್ನೆಯ ದಿನ ಸಿಟಿಮ್ಯಾಜಿಸ್ಟ್ರೇಟರ ಕೋರ್ಟಿಗೆ ವಿಚಾರಣೆಗಾಗಿ ಮೋಟಾರು ಬಂಡಿಯಲ್ಲಿ ಸಾಯುಧರಾದ ಪೋಲೀಸರ ಬೆಂಗಾವಲಿನಿಂದ ಕರೆತರಲ್ಪಟ್ಟಿದ್ದರು ಮತ್ತು ಆ ವಿಚಾರಣೆಯ ಫಲಿತಾಂಶವನ್ನು ತಿಳಿಯಲು ಸಾವಿರಾರು ಮಹಮ್ಮದೀಯರು ಕೋರ್ಟಿನ ಹೊರಗಡೆ ಕಾದುಕೊಂಡಿದ್ದರು.

ರಾಜಧಾನಿಯಲ್ಲಿ ಮೊಹರಂಹಬ್ಬವು ಕಳೆದ ಮಂಗಳವಾರ ಯಾವುದೊಂದು ಗೊಂದಲವಿಲ್ಲದೆ ಶಾಂತಿಯಿಂದಲೂ ಉತ್ಸಾಹದಿಂದಲೂ ಕೊನೆಮುಟ್ಟಿತು. ಆದರೆ ಪೋಲೀಸಿನವರು ಮಾತ್ರ ಮಹಾನರ್ಥವು ಸಂಭವಿಸುತ್ತದೆಂದು ದಿಗಿಲುಬಿದ್ದು ಬೇಕಾದ ಸನ್ನಾಹಗಳನ್ನು ಮಾಡಿಕೊಂಡಿದ್ದರಲ್ಲದೆ ಸಿಟಿ ಮತ್ತು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರುಗಳನ್ನು ಸಹ ಸಿಟಿ ಸೆಂಟ್ರಲ್ ಪೋಲೀಸುಠಾಣಾಕ್ಕೆ ಬರಮಾಡಿಕೊಂಡಿದ್ದರು. ಪಂಜಾಗಳನ್ನಿಡಕೂಡದೆಂದೂ ವೇಷಗಳನ್ನು ಧರಿಸಕೂಡದೆಂದೂ ಬೆದರಿಸಿಹೇಳುವುದು ಹೆಚ್ಚಾದುದರಮೇಲೆ ಡೋಲಾಯಮಾನಸರಾಗಿದ್ದವರು ಕೂಡ ಪಂಜಾಗಳನ್ನಿಡುವುದೂ ವೇಷಗಳನ್ನು ಧರಿಸಿಕೊಂಡು ಕುಣಿಯುವುದೂ ಹೆಚ್ಚಾದುವು.

ಅಮಲ್ದಾರರುಗಳಾದ ಮ|| ಆರ್. ತಮ್ಮಾಜಿರಾಯರು ದೊಡ್ಡಬಳ್ಳಾಪುರದಿಂದ ಬೆಂಗಳೂರಿಗೂ, ಮ|| ಎಚ್. ನಾರಾಯಣರಾಯರು ಹಿರಿಯೂರಿನಿಂದ ದೊಡ್ಡಬಳ್ಳಾಪುರಕ್ಕೂ, ಮ|| ಕೆ. ಸುಬ್ಬರಾವ್‌ನಾಯಕ್‌ರವರು ಮುಳ್ಬಾಗಲಿನಿಂದ 2 ತಿಂಗಳು ಮತ್ತು 25 ದಿನಗಳ ಪ್ರಿವಿಲೆಜ್‌ರಜವನ್ನು ಈ ತಾ|| 10 ಲಿಂದ ಪಡೆದುಕೊಂಡಿರುವ ಮಿ|| ಸಯದ್‌ಅಬ್ದುಲ್ ಕಾಲಕ್‌ರವರ ಬದಲು ಶ್ರೀನಿವಾಸಪುರಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ. ಮತ್ತು ಕೋಆಪರೇಟಿವ್ ಸೊಸೈಟಿಗಳ ಇನ್‌ಸ್ಪೆಕ್ಟರಾದ ಮ|| ಎಂ. ಪುಟ್ಟಸ್ವಾಮಿಯವರು ಹಿರಿಯೂರು ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರರಾಗಿಯೂ, ರೆವಿನ್ಯು ಸೆಕ್ರೆಟರಿಯಟ್ಟಿನ ಆಕ್ಟಿಂಗ್ ಸೂಪರಿಂಟೆಂಡೆಂಟರಾದ ಮ|| ಕೆ. ಪಾಂಡುರಂಗರಾಯರು ಮುಳ್ಬಾಗಲು ತಾಲ್ಲೂಕು ಆಕ್ಟಿಂಗ್ ಅಮಲ್ದಾರರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ವಿಪನ್ನರ ಸಹಾಯಾರ್ಥವಾಗೇರ್ಪಟ್ಟಿರುವ ಫಂಡಿಗೆ ಸಂಸ್ಥಾನದ ಎಲ್ಲ ಗೆಜೆಟೆಡ್ ಆಫೀಸರುಗಳೂ ತಮ್ಮ ಒಂದು ತಿಂಗಳ ಸಂಬಳವನ್ನು ಕೊಡಬೇಕೆಂದೂ, ಅಷ್ಟೊಂದನ್ನೂ ಒಂದೇ ಗಂಟಿನಲ್ಲಿ ಕೊಡಲು ಕಷ್ಟವಾಗುವುದರಿಂದ ಸರ್ಕಾರದವರು ಅವರುಗಳ ಒಂದು ತಿಂಗಳ ಸಂಬಳವನ್ನು ಮುಂಗಡವಾಗಿ ಕೊಟ್ಟು 10 ಕಿಸ್ತುಗಳನ್ನಾಗಿ ಅವರ ಪ್ರತಿ ತಿಂಗಳಿನ ಸಂಬಳದಲ್ಲೂ ಹಿಡಿದುಕೊಂಡು ಅಡ್ವಾನ್ಸ್ ಹಣಕ್ಕೆ ವಜಾ ಕಟ್ಟಿಕೊಳ್ಳಬೇಕೆಂದೂ, ಹೀಗೆ ಮಾಡುವುದರಿಂದ ಕೊಡುವವರಿಗೆ ಭಾರವಾಗಿ ಕಾಣದೆ ಫಂಡಿಗೆ ಹೆಚ್ಚು ಮೊಬಲಗು ನಿರಾಯಾಸವಾಗಿ ಕೂಡುತ್ತದೆಂದೂ ಕ್ಲೋಸ್‌ಪೇಟೆ ಸಬ್ ಡಿವಿಜನ್ ಅ|| ಕಮೀಷನರು ಸೂಚಿಸಿದ್ದರು. ಈ ಸೂಚನೆಯು ಹಳ ಯುಕ್ತಿಯುಕ್ತವಾಗಿ ಸರ್ಕಾರದವರಿಗೆ ಕಂಡಿರುವುದಾದರೂ, 50 ರೂ. ಗೆ ಮೇಲ್ಪಡದೆ ಸಂಬಳವಿರುವವರಿಗೆ ಮಾತ್ರ ತಿಂಗಳ ಸಂಬಳಕ್ಕೆ ಹೆಚ್ಚಿಲ್ಲದಂತೆ ಅಡ್ವಾನ್ಸ್ ಕೊಡಲ್ಪಟ್ಟು ತಿಂಗಳ ಸಂಬಳದಲ್ಲಿ ವಜಾಕಟ್ಟಿಕೊಳ್ಳಲ್ಪಡುವುದೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ. ಅ|| ಕಮೀಷನರು ಸೂಚನೆಯಂತೆ ಸರ್ಕಾರದವರು ನಡೆಸಿದ್ದರೆ ಹೆಚ್ಚು ಹಣವು ಶೇಖರವಾಗಲು ಅವಕಾಶವಾಗುತ್ತಿದ್ದಿತು.

ಭರತಖಂಡದ ವೃತ್ತಾಂತಗಳು.

ದಕ್ಷಿಣಕಾನಡಾ ಪ್ರಾಂತದಲ್ಲಿ ಈಚೆಗೆ ಪುನಃ ಹೆಚ್ಚು ಮಳೆಯಾಗಿ ನದಿಗಳಲ್ಲಿ ಪ್ರವಾಹಬಂದು ಜನರ ತಿರುಗಾಟಕ್ಕೆ ಅಡಚಣೆಯಾಗಿ ಆಹಾರ ಸಾಮಗ್ರಿಗಳು ದೊರೆಯದೆ ಜನರು ಪೇಚಾಡುತ್ತಿರುವರಂತೆ.

ಬಂಗಾಳಾಕ್ಕೆ ಸೇರಿದ ಬ್ಯಾರಿಸಾಲ್ ಡಿಸ್ಟ್ರಿಕ್ಟಿನ ಉತ್ತರಭಾಗವೆಲ್ಲಾ ನದಿಯ ಪ್ರವಾಹದಿಂದ ಜಲಮಯವಾಗಿ ಇಟ್ಟಿದ್ದ ಬೆಳೆಯೆಲ್ಲವೂ ನಾಶವಾಗಿರುವುದು ಮತ್ತು ಮುಂದಣ ಬೆಳೆಯಾದರೂ ಆಗುವ ಸಂಭವವಿಲ್ಲವು.

ಅಸ್ವಸ್ಥರಾಗಿರುವ ತಮ್ಮ ಮಾತೃಶ್ರೀಯವರಿಗೆ ಈ ಮಧ್ಯೆ ಪ್ರಾಣಾಪಾಯವುಂಟಾಗಿದ್ದುದರಿಂದ, ಮಹಮ್ಮದಾಲಿ ಷೌಕತಾಲಿಯವರು ರಾಂಪೂರಿಗೆ ಹೋಗಿ ಆಕೆಯನ್ನು ದಿಲ್ಲಿಗೆ ಕರೆದುಕೊಂಡುಬಂದು ಡಾಕ್ಟರು ಅನ್ಸಾರಿಯವರ ಕೈಲಿ ಚಿಕಿತ್ಸೆಯನ್ನು ಮಾಡಿಸುತ್ತಿರುವುದರಮೇಲೆ ಪ್ರಾಣಾಪಾಯವು ತಪ್ಪಿರುತ್ತದೆ.

ಅಫಘಾನಸ್ಥಾನವು ಬಹಳಮಟ್ಟಿಗೆ ಅಭಿವೃದ್ಧಿಯನ್ನು ಹೊಂದುತ್ತಿದೆ ಅಲ್ಲಿಯ ರಾಜರಾದ ಅಮೀರರು ಮೊದಲಾಗಿ ಸಮಸ್ತ ಜನರೂ ಪರದೇಶದ ಬಟ್ಟೆಯನ್ನು ಬಹಳ ಮಟ್ಟಿಗೆ ಉಪಯೋಗಿಸದೆ ಖಾದಿ ಬಟ್ಟೆಯನ್ನುಪಯೋಗಿಸುತ್ತಿರುವರು. ಆ ರಾಜ್ಯದಲ್ಲಿ ಹಿಂದೂ ಮಹಮ್ಮದೀಯರು ಐಕಮತ್ಯದಿಂದಲೂ ಸೋದರಭಾವದಿಂದಲೂ ಇರುವರು, ಅಲ್ಲದೆ ಗೋಹತ್ಯವು ಸುತರಾಂ ನಡೆಯುವುದಿಲ್ಲ. ಎಂದು ಅಫಘಾನಸ್ಥಾನದ ರಾಯಭಾರಿಯಾಗಿ ಫ್ರಾನ್ಸಿಗೆ ಹೋಗಿರುವ ನಾದಿರ್‌ಖಾನ್ ಸೇನಾನಿಯು ಲಾಹೋರಿನಲ್ಲಿದ್ದಾಗ್ಗೆ ವಾರ್ತಾಪತ್ರಿಕೆಯ ಪ್ರತಿನಿಧಿಯೊಡನೆ ಹೇಳಿದರಂತೆ

ಅಹಮದಾಬಾದಿನಲ್ಲಿರುವ ಗುಜ್ರಾತ್ ನೇಗೆಯ ಕಾರ್ಯಾಲಯದ ಒಂದು ಭಾಗವು ಮಳೆಯಲ್ಲಿ ನೆನೆದು ಬಿದ್ದುಹೋದುದರಿಂದ ಅದರೊಳಗೆ ಕೆಲಸಮಾಡುತ್ತಿದ್ದವರಲ್ಲಿ 26 ಜನರು ಮೃತರಾದರು, ಗಾಯವಡೆದ 34 ಜನರಲ್ಲಿ 16 ಜನರು ಆಸ್ಪತ್ರೆಯ ಚಿಕಿತ್ಸೆಯಲ್ಲಿರುವರು. ಮೃತರ ಶವಸಂಸ್ಕಾರಕ್ಕಾಗಿ ತಲೆಯೊಂದಕ್ಕೆ 10 ರೂಪಾಯಿನಂತೆ ದ್ರವ್ಯವೂ, ಮೃತರ ಕುಟುಂಬದ ಜೀವನಕ್ಕೆ ದವಸವೂ ಕಂಪೆನಿಯವರಿಂದ ಕೊಡಲ್ಪಟ್ಟುವು. ಕಟ್ಟಡದ ಉಳಿದಭಾಗವು ಪರೀಕ್ಷಿಸಲ್ಪಟ್ಟು ಭದ್ರವಾಗಿದೆಯೆಂದು ಹೇಳಲ್ಪಡುವವರೆಗೂ ಯಾರೂ ಪ್ರವೇಶಿಸಕೂಡದೆಂದು ಮ್ಯಾಜಿಸ್ಟ್ರೇಟರು ಅಪ್ಪಣೆಮಾಡಿದುದರಮೇಲೆ ಕೆಲಸವು 3 ತಿಂಗಳವರೆಗೆ ನಿಲ್ಲಿಸಲ್ಪಟ್ಟಿರುತ್ತದೆ.

ಬಂಗಾಳಾಕ್ಕೆ ಸೇರಿದ ನರೇಲಿ ಎಂಬೂರಿನಲ್ಲಿ ಅಕ್ಷಯಕುಮಾರಛಾಟರ್ಜಿ ಎಂಬೊಬ್ಬ ಬಾಬುವು ತನ್ನ 5 ಮತ್ತು 8 ವರ್ಷ ವಯಸ್ಸಿನ ಮಕ್ಕಳಿಬ್ಬರ ಹೊಟ್ಟೆಯಲ್ಲಿ ಕ್ರಿಮಿಗಳು ಹೆಚ್ಚಾಗಿ ಸೇರಿಕೊಂಡಿರುವುದನ್ನು ಡಾಕ್ಟರಿಂದ ಪರೀಕ್ಷಿಸಿ ಸ್ಯಾಂಟೋನೀನ್ ಪುಡಿಯನ್ನು ಕಾಂಪೌಂಡರಿಂದ ತೆಗದುಕೊಂಡು ಒಂದು ರಾತ್ರಿವೇಳೆ ಮಲಗಿದ್ದ ಮಕ್ಕಳನ್ನು ಎಳಿಸಿ ಅವುಗಳಿಗೆ ತಿನ್ನಿಸಿದನು. ಆ ಎರಡು ಮಕ್ಕಳೂ ಆ ಪುಡಿಯನ್ನು ಸೇವಿಸಿದ ಅರ್ಧಗಂಟೆಯಲ್ಲಿ ಸತ್ತುಹೋಗಲು, ಡಾಕ್ಟರು ಪರೀಕ್ಷಿಸಿ ಸ್ಟ್ರಿಕ್ನೈನ್ ಎಂಬ ವಿಷವು ಪ್ರಯೋಗಿಸಲ್ಪಟ್ಟಿತೆಂದು ನಿರ್ಧರಿಸಿದುದರಮೇಲೆ ಆ ಪುಡಿಯನ್ನು ಕೊಟ್ಟ ಕಾಂಪೌಂಡರೂ ಅವನ ಸಂಗಡಿಗನೂ ಪೋಲೀಸರಿಂದ ಸೆರೆಹಿಡಿಯಲ್ಪಟ್ಟು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ವಿದೇಶದ ವೃತ್ತಾಂತಗಳು

ಚೀನಾಕ್ಕೆ ಕಳ್ಳತನದಿಂದ ಕಳುಹಲ್ಪಡಲುದ್ದೇಶಿಸಲ್ಪಟ್ಟಿದ್ದ ಆಯುಧಗಳನ್ನೂ ಮದ್ದುಗುಂಡು ಸಾಮಗ್ರಿಗಳನ್ನೂ ಇಬ್ಬರು ಗ್ರೀಕು ನಾವಿಕರನ್ನೂ ಮತ್ತೆ ಕೆಲವರನ್ನೂ ಪೋಲೀಸರು ಸೆರೆಹಿಡಿದಿರುವರು.

ಬ್ರಿಟಿಷ್ ಸಾರ್ವಭೌಮರವರ ದ್ವಿತೀಯಪುತ್ರರಾದ ಡ್ಯೂಕ್ ಆಫ್ ಯಾರ್ಕ್‌ರವರು ಪತ್ನಿಯೊಡನೆ ಮೃಗಯಾವಿಹಾರಾರ್ಥವಾಗಿ ಬರುವ ನವಂಬರ್ ತಿಂಗಳಲ್ಲಿ ಕೆನಿಯ ಮತ್ತು ಯುಗಾಂಡ ಪ್ರಾಂತಗಳಿಗೆ ಹೋಗಿಬರುವವರಾಗಿರುವರು.

ಹಾಲೆಂಡಿಗೆ ಸೇರಿದ ಆಂಸ್ಟರ್ಡಾಂನಿಂದ ಫ್ರಾನ್ಸಿನ ದಕ್ಷಿಣತೀರದಲ್ಲಿ 700 ಮೈಲಿದೂರದಲ್ಲಿರುವ ಒಂದು ಪಟ್ಟಣಕ್ಕೆ ಒಬ್ಬ ಮನುಷ್ಯನು ದಿನ ಒಂದಕ್ಕೆ 4 ಮೈಲಿಯಂತೆ ನೆಲದಮೇಲೆ ಉರುಳಿಕೊಂಡೇ ಒಂದುಸೇರಿರುತ್ತಾನಂತೆ ಪಾಶ್ಚಾತ್ಯರ ಪ್ರಯತ್ನವಿಶೇಷವು ಅತಿವಿಚಿತ್ರತರವಾಗಿದೆ

ಬಲ್ಗೇರಿಯಾದಲ್ಲೂ ಬಾಲ್ಕನ್ನಿನಲ್ಲೂ ವಿಪ್ಲವಕಾರ್ಯವನ್ನು ನಡೆಯಿಸಲು ರಷ್ಯನರು ಪ್ರಯತ್ನಿಸುತ್ತಿರುವರು. ಅಕ್ಟೋಬರು-ಸೆಪ್ಟಂಬರು ಮತ್ತು ನವಂಬರು ತಿಂಗಳುಗಳೊಳಗೆ ರುಮೇನಿಯಾ ವಿಪ್ಲವವನ್ನು ಪ್ರರಂಭಿಸುತ್ತಾರಂತೆ. ಆ ಪ್ರದೇಶಗಳಲ್ಲಿ ರಷ್ಯನ್ನರು ವಿಪ್ಲವವನ್ನು ಪ್ರೋತ್ಸಾಹಿಸುತ್ತಿರುವರಂತೆ.

ಅಫಘಾನಿಸ್ಥಾನದಲ್ಲಿ ಬಂಗಾರದ ಗಣಿಗಳಿರುತ್ತವೆಂದು ತಿಳಿದು ಅವನ್ನೆಲ್ಲ ಸಂಪಾದಿಸುವುದಕ್ಕಾಗಿಯೂ, ಪರಿಶೋಧಿಸುವದಕ್ಕಾಗಿಯೂ ಆಂಗ್ಲೋ-ಅಸ್ಟ್ರೇಲಿಯಾದವರು 22,50,000 ರೂಪಾಯಿ ಬಂಡವಾಳದಮೇಲೆ ದುರಾನಿಕಂಪನಿ ಹೆಸರಿನಿಂದ ಒಂದು ಸಂಘವನ್ನೇರ್ಪಡಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ.

ಈಗ್ಗೆ 10,000 ವರ್ಷಗಳ ಹಿಂದೆ ಇದ್ದ ಒಬ್ಬ ಮನುಷ್ಯನ ಶರೀರವು ಸಮಾಧಿಯಿಂದ ಹೊರಗೆ ತೆಗೆಯಲ್ಪಟ್ಟು ಗ್ರೋಯರ್‌ಸ್ಟ್ರಟಿನ ವಿಶ್ವವಿದ್ಯಾಲಯದ ಸರ್ವವಸ್ತುಪ್ರದರ್ಶನಶಾಲೆಯಲ್ಲಿಡಲ್ಪಟ್ಟಿರುವುದು. ಈ ಶವವು ಈಜಿಪ್ಟ್ ದೇಶದಿಂದ ತರಲ್ಪಟ್ಟಿರುವುದಾಗಿದೆ. ಚರ್ಮವೂ, ನರಗಳೂ ಸ್ವಲ್ಪವೂ ಕೆಡದೆ ಅಸ್ಥಿಗಳಿಗೆ ಅಂಟಿಕೊಂಡಿರುವುವಂತೆ ಮತ್ತು ತಲೆಯ ಕೂದಲೂ, ಹಲ್ಲುಗಳೂ ಕೈಕಾಲುಬೆರಳುಗಳ ಉಗುರುಗಳೂ ಕೆಡದೆ ಚೆನ್ನಾಗಿರುವುವಂತೆ !

ಪದಚ್ಯುತರಾದ ತುರ್ಕಿ ಸುಲ್ತಾನರಿಗೆ ಸೇರಿದ ಆಭರಣಾದಿ ಪದಾರ್ಥಗಳ ಬೆಲೆಯು ಪ್ರಾಯಶಃ 36 ಕೋಟಿ ಸವರನ್ ಆಗಬಹುದೆಂದೂಹಿಸಲ್ಪಟ್ಟಿದೆ. ಇವುಗಳಲ್ಲಿ ಪರ್ಷಿಯಾದ ಷಾರವರ ಪಕ್ಷಿಯ ಸಿಂಹಾಸನವೂ, ಮಹಮ್ಮದನ ಪಕ್ಷಿಯ ಕಠಾರಿಯೂ, ಬೈಜಾಂಟಿಯಮ್ಮಿನ ಚಕ್ರವರ್ತಿಯಾಗಿದ್ದ ಕಾನ್ಸ್ಟಂಟೈನಿನ ಪಟ್ಟದ ಕತ್ತಿಯೂ, ನವರತ್ನಖಚಿತವಾದ ಶಿರ್ಪೇಸ್ ತುರಾಯಿಗಳೂ, ಇನ್ನೂ ಅನೇಕ ಅಮೋಘವಸ್ತುಗಳೂ ಸೇರಿರುತ್ತವೆ. ಇವೆಲ್ಲವನ್ನೂ ವಿಕ್ರಯಿಸಿ ಅದರಿಂದ ಬರುವ ದ್ರವ್ಯವನ್ನು ಪ್ರಜೋಪಯುಕ್ತಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಅಂಗೋರಾ ಸರ್ಕಾರದವರು ಯೋಚಿಸಿರುತ್ತಾರೆ.

ಉತ್ತರ ಅಮೇರಿಕೆಯಲ್ಲಿ ಇಬ್ಬರು ದಂಪತಿಗಳು ದೀರ್ಘರೋಗಿಗಳಾಗಿದ್ದು ಎಷ್ಟು ಔಷಧಗಳನ್ನು ವರ್ಷಗಟ್ಟಲೆ ಸೇವಿಸಿದಾಗ್ಯೂ ಗುಣಹೊಂದಲಿಲ್ಲವಾಗಿ, 50,000 ಮೈಲಿ ದೂರ ಪಾದಚಾರಿಗಳಾಗಿ ಸಂಚರಿಸಿದಲ್ಲಿ ರೋಗವು ಗುಣವಾಗುವುದೆಂದೂ, ಹಾಗೆ ಗುಣವಾಗದಿದ್ದಲ್ಲಿ 3,00,000 ರೂ. ಗಳನ್ನು ದಂಡದ್ರವ್ಯವಾಗಿ ಕೊಡುತ್ತೇನೆಂದೂ ಆ ದಂಪತಿಗಳ ಸ್ನೇಹಿತನು ಪಂಥಕಟ್ಟಿ ಹೇಳಿದುದರಮೇಲೆ, ಅವರಿಬ್ಬರೂ 7 ವರ್ಷಗಳ ಕಾಲದಲ್ಲಿ 50,000 ಮೈಲಿಗಳ ಪ್ರದೇಶವನ್ನು ಸಂಚರಿಸಿಬರಲು ಶಪಥಮಾಡಿಕೊಂಡು ಹೊರಟು ಕಳೆದ ಎರಡು ವರ್ಷಗಳಲ್ಲಿ 20,000 ಮೈಲಿಗಳ ದೂರ ಸಂಚಾರಮಾಡಿರುವರು. ಇದರಿಂದ ಈಗಾಗಲೇ ಅವರ ರೋಗವು ಬಹುಮಟ್ಟಿಗೆ ಗುಣವಾಗಿರುವುದು.

ವರ್ತಮಾನ ಪತ್ರಿಕೆಗಳಿಗೆ ಕಳುಹಿಸುವ ವಿಷಯಗಳ ಗೋಷ್ವಾರೆ.

ರಿಲೀಫ್ ಫಂಡು.

ಮೈಸೂರು ಸಂಸ್ಥಾನದಲ್ಲಿ ಈಚೆಗೆ ಬಂದ ಅಭೂತಪೂರ್ವವಾದ ಪ್ರವಾಹಗಳ ದೆಸೆಯಿಂದ ತೊಂದರೆಗಳಿಗೆ ಗುರಿಯಾದ ಜನಗಳ ಸಹಾಯಾರ್ಥವಾಗಿ ಹಣವನ್ನು ಜಮಾಯಿಸಲು ರಾಜಸಭಾಭೂಷಣ ದಿವಾನ್‌ಬಹದ್ದೂರ್ ಕೆ. ಪಿ. ಪುಟ್ಟಣ್ಣಚೆಟ್ಟರವರೂ, ಬೆಂಗಳೂರಿನ ಇತರ ಪ್ರಮುಖರಾದ ಪುರಜನರೂ, ಕಳೆದ 8 ನೆಯ ತಾರೀಖು ಶುಕ್ರವಾರದದಿನ ಬೆಂಗಳೂರು ಗವರ್ನಮೆಂಟ್ ಹೈಸ್ಕೂಲಿನಲ್ಲಿ ಒಂದು ಸಭೆಯನ್ನು ನಡೆಸಿದರು. ಅಲ್ಲಿ ಬಹಳ ಜನರು ಸೇರಿದ್ದರು. ದಿವಾನ್‌ಸಾಹೇಬರವರಾದ ಮಿ|| ಎ. ಆರ್. ಬಾನರ್ಜಿಯವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಸಮಾರಂಭದ ಭಾಷಣದಲ್ಲಿ (ಈ ಭಾಷಣವು ಕೆಳಗಡೆ ಮುದ್ರಿತವಾಗಿದೆ.) ದಿವಾನ್‌ಸಾಹೇಬರವರು ಮೈಸೂರು, ಶಿವಮೊಗ್ಗ, ಕಡೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿಯೂ, ಚಿತ್ರದುರ್ಗ ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ, ಪ್ರವಾಹಗಳಿಂದ ಉಂಟಾದ ಅನಾಹುತಗಳನ್ನು ವಿವರಿಸಿದರು. ಸಂಭವಿಸಿದ ಅಪಾಯವು ಮೂರು ವಿಧವಾಗಿದ್ದಿತೆಂದು ತಿಳಿಸಿದರು. (i) ಸೇತುವೆಗಳು, ರಸ್ತೆಗಳು, ಚರಂಡಿಗಳು, ನಾಲೆಗಳು ಮತ್ತು ಇತರ ನೀರಾವರಿಯ ಕಾಮಗಾರಿಗಳು, ಈ ಜನೋಪಯುಕ್ತ ಕಾಮಗಾರಿಗಳು ಕೊಚ್ಚಿಹೋಗಿ, ಅದರ ದೆಸೆಯಿಂದ ಉಂಟಾದ ನಷ್ಟ. (ii) ಖಾಸಗಿ ಜನಗಳ ಮನೆಗಳು ಬಿದ್ದುಹೋದುದೇ ಮುಂತಾದ ಅನಾಹುತ ಮತ್ತು (iii) ಜಮೀನುಗಳಿಗೆ ಉಂಟಾದ ನಷ್ಟ. ಸ್ಥಳದ ಆಫೀಸರುಗಳು ಕೂಡಲೇ ಸಮರ್ಪಕವಾದ ಏರ್ಪಾಡುಗಳನ್ನು ಮಾಡಿದುದರಿಂದ ಎಲ್ಲಿಯೂ ಪ್ರಾಣನಷ್ಟವಾಗಲಿಲ್ಲ.

ಸರ್ಕಾರದವರು ಮಂಜೂರ್ಮಾಡಿದ ಸಹಾಯದ ಏರ್ಪಾಡುಗಳ ವಿಷಯವಾಗಿ, ಸೇತುವೆಗಳು, ಚರಂಡಿಗಳು, ರಸ್ತೆಗಳೇ ಮೊದಲಾದವುಗಳನ್ನು ದುರಸ್ತುಮಾಡಿ ಪ್ರಯಾಣಸೌಕರ್ಯಗಳನ್ನು ಕೂಡಲೇ ಯಥಾಸ್ಥಿತಿಗೆ ತರುವಂತೆ ಹಂಗಾಮಿ ಏರ್ಪಾಡುಗಳನ್ನು ಮಾಡಲಾಗಿರುವುದೆಂದು ದಿವಾನ್‌ಸಾಹೇಬರವರು ಹೇಳಿದರು. ಕೆರೆಗಳು, ನಾಲೆಗಳು ಮತ್ತು ಸಾಗುವಳಿಗೆ ನೀರನ್ನೊದಗಿಸುವ ಇತರ ಮೂಲಗಳ ವಿಷಯದಲ್ಲಿ, ನೀರನ್ನು ಸರಬರಾಯಿಮಾಡುವ ಅವಧಿಯನ್ನು ಒಂದು ತಿಂಗಳಿನಷ್ಟು ಹೆಚ್ಚಿಸಿ, ಚಾಲ್ತಿ ವ್ಯವಸಾಯಕಾಲದಲ್ಲಿ ನೀರು ಸರಬರಾಯಾಗುವಂತೆ ಅವುಗಳನ್ನೆಲ್ಲಾ ಕೂಡಲೇ ದುರಸ್ತುಮಾಡುವಂತೆ ತಕ್ಕ ಏರ್ಪಾಡುಗಳನ್ನು ಮಾಡಲಾಗುವುದು. ಮೈಸೂರು ಡಿಸ್ಟ್ರಿಕ್ಟಿನಲ್ಲಿಯೂ ಶಿವಮೊಗ್ಗ ಟವುನಿನಲ್ಲಿಯೂ ವಿಶೇಷ ಅಪಾಯವುಂಟಾಗಿರುವ ಮನೆಗಳ ವಿಷಯದಲ್ಲಿ, ಮನೆಗಳನ್ನು ಕಳೆದುಕೊಂಡಿರುವವರಿಗೆ ಪುನಃ ತಮ್ಮ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಚೈತನ್ಯವುಂಟಾಗಲು ವಿಶೇಷವಾದ ಸಹಾಯವು ಅವಶ್ಯವಾಗಿರುವುದೆಂದು ದಿವಾನ್‌ಸಾಹೇಬರವರು ಹೇಳಿದರು. ಸರ್ಕಾರದವರು ಅಸಲುಖರೀದಿಗೆ ಸುರಕ್ಷಿತವಾದ ಮತ್ತು ಅನುಕೂಲವಾದ ತಾಕುಗಳನ್ನು ಕೊಡುವರು. ಅವಶ್ಯವಾದ ಸಂದರ್ಭಗಳಲ್ಲೆಲ್ಲಾ ಜನಗಳಿಗೆ ನೇರವಾಗಿ ಸರ್ಕಾರದಿಂದಲೇ ಆಗಲಿ, ಪರಸ್ಪರ ಸಹಾಯಸಂಘಗಳ ಮೂಲಕವಾಗಿಯೇ ಆಗಲಿ ಹಣವನ್ನು ಸಾಲವಾಗಿ ಕೊಡಲಾಗುವುದು. ಮನೆಗಳನ್ನು ಕಟ್ಟಲು ಕಟ್ಟಡದ ಸಾಮಾನುಗಳನ್ನು ಉಪಪತ್ತಿಯುಳ್ಳವರಿಗೆ ಅಸಲುಖರೀದಿಗೂ, ಬಡವರಿಗೆ ಮುಫತ್ತಾಗಿಯೂ ಕೊಡಲಾಗುವುದು. ನಷ್ಟಸಂಭವಿಸಿರುವ ಜಮೀನುಗಳ ವಿಷಯದಲ್ಲಿ, ಅವುಗಳನ್ನು ಪುನಃ ಸಾಗುವಳಿಗೆ ಯೋಗ್ಯವಾಗಿ ಮಾಡುವುದಕ್ಕೆ ಸರ್ಕಾರದವರು ಮಾಲೀಕರಿಗೆ ಸಾಲಗಳನ್ನು ಕೊಡುವರು. ಶೀಘ್ರದಲ್ಲಿ ಬೆಳೆಯಾಗುವ ಬೀಜವನ್ನು ಕೊಳ್ಳುವುದಕ್ಕೆ ಮುಂಗಡಗಳನ್ನು ಕೊಡಲಾಗುವುದು ಮತ್ತು ವ್ಯವಸಾಯದ ಇಲಾಖೆಯವರು ಆ ಬೀಜವನ್ನು ಅನುಕೂಲವಾದ ಮಧ್ಯಕೇಂದ್ರಗಳಲ್ಲಿ ಸರಬರಾಯಿ ಮಾಡುವರು. ಈ ವಿಷಯಗಳಲ್ಲೆಲ್ಲಾ ಬಡವರಿಗೆ ಮಾತ್ರ ಮುಫತ್ತಾಗಿ ಸಹಾಯವನ್ನು ಕೊಡಲಾಗುವುದೆಂದು ದಿವಾನ್‌ಸಾಹೇಬರವರು ಸೂಚಿಸಿದರು.

ಉಚಿತವಾದ ಸಹಾಯಕ್ಕಾಗಿಯೂ ಸಾಲವಾಗಿ ಕೊಡುವುದಕ್ಕಾಗಿಯೂ ಬಡ್ಜೆಟ್ಟಿನಲ್ಲಿ ಒದಗಿಸಿರುವ ಮೊಬಲಗಿನ ಜತೆಗೆ ಸುಮಾರು ಒಂದು ಲಕ್ಷ ರೂಪಾಯಿಯನ್ನು ವಿಶೇಷ ಸ್ವಭಾವದ ಮೊತ್ತವಾಗಿ ಮಂಜೂರ್ಮಾಡಲಾಯಿತು. ಈಗ ಸಂಭವಿಸಿರುವ ನಷ್ಟವು ಅತ್ಯಧಿಕವಾಗಿರುವ ಕಾರಣ ಪೂರ್ವಸ್ಥಿತಿಗೆ ತರಲು ತಕ್ಕ ಏರ್ಪಾಡುಗಳನ್ನು ನಡೆಸುವುದಕ್ಕೆ ಖಾಸಗಿ ಜನಗಳ ಸಹಾಯವು ಅತ್ಯವಶ್ಯವಾಗಿರುವುದೆಂದು ದಿವಾನ್‌ಸಾಹೇಬರವರು ಅಪ್ಪಣೆಯಾಡಿಸಿದರು. ಆತರುವಾಯ, ಅವರು ಸಂಸ್ಥಾನದ ಹೊರಗಡೆಯಿಂದ ಸಹಾನುಭೂತಿಯನ್ನು ಸೂಚಿಸಿ ಬಂದ ವರ್ತಮಾನಗಳನ್ನು ಓದಿಹೇಳಿದರು. ಆ ಪೈಕಿ ಕೆಲವನ್ನು ಈ ಮುಂದೆ ಕೊಟ್ಟಿದೆ :—ಸಂಸ್ಥಾನಕ್ಕೆ ಸಂಭವಿಸಿದ ನಷ್ಟಕ್ಕೂ ಕಷ್ಟಕ್ಕೂ ತಮಗುಂಟಾದ ಅನುತಾಪವನ್ನು ಕುರಿತು ಇಂಡಿಯಾ ಸರ್ಕಾರದವರೂ ತಮ್ಮ ಸ್ವಂತ ಸಹಾನುಭೂತಿಯನ್ನು ಸೂಚಿಸಿ ಮಹಾಮಹಿಮರಾದ ವೈಸ್ರಾಯರವರೂ ಬರೆದಿದ್ದ ಸಂದೇಶಗಳು ಬಂದಿದ್ದುವು. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ವೈಸ್‌ಪ್ರೆಸಿಡೆಂಟರವರು ತಮ್ಮ ಸಹಾನುಭೂತಿಯನ್ನು ಸೂಚಿಸಿ ಸಹಾಯವನ್ನು ಮಾಡುವುದಾಗಿ ವರ್ತಮಾನವನ್ನು ಕಳುಹಿಸಿದ್ದರು; ಗುಜರಾತು ದೇಶದ ಪೆಟ್ಲಾಡ್ ಎಂಬ ಸ್ಥಳದವರೂ, ಚಿನ್ನದಗಣಿಗಳವರೂ, ಅಮೇರಿಕೆಯಿಂದ ವರ್ತಮಾನಗಳನ್ನು ಕಳುಹಿಸಿದ್ದರು. ಶ್ರೀಮನ್ಮಹಾರಾಜರವರು 15,000 ರೂಪಾಯಿಗಳನ್ನೂ ಶ್ರೀಮದ್ಯುವರಾಜರವರು 2,000 ರೂಪಾಯಿಗಳನ್ನೂ ಮೊದಲನೆಯ ರಾಜಕುಮಾರಿಯವರು 1000 ರೂಪಾಯಿಗಳನ್ನೂ ತಾವು ಸ್ವಂತವಾಗಿ 500 ರೂಪಾಯಿಗಳನ್ನೂ ದೊಣೇಷನ್ ರೂಪದಲ್ಲಿ ಕೊಟ್ಟಿರುವುದಾಗಿ ದಿವಾನ್‌ಸಾಹೇಬರವರು ತಿಳಿಯಪಡಿಸಿದರು. ಈ ಸಂಗತಿಯನ್ನು ಕೇಳುತ್ತಿರುವಾಗ ಜನರ ಆನಂದಘೋಷಗಳು ಮೊಳಗಿದುವು.

ಮೊದಲನೆಯ ಮತ್ತು ಎರಡನೆಯ ಕೌನ್ಸಿಲರುಗಳು ಹಾಸನ, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟಿನ ವಿದ್ಯಮಾನಗಳನ್ನು ವಿವರಿಸಿ ದಿವಾನ್‌ಸಾಹೇಬರವರು ಪ್ರಾರಂಭಿಸಿದ್ದ ವಿವರಣೆಯನ್ನು ಪೂರೈಸಿದರು. ಮಹಾಜನಗಳು ಅಂತಃಕರಣವನ್ನೂ ಔದಾರ್ಯವನ್ನೂ ಈ ಸಮಯದಲ್ಲಿ ಪ್ರಕಾಶಪಡಿಸಬೇಕೆಂದು ಅಪ್ಪಣೆಕೊಡಿಸಿದರು.

ಆ ಕೂಡಲೆ 15,000 ರೂಪಾಯಿಗಳನ್ನು ಸಹಾಯಮಾಡುವುದಾಗಿ ವಾಗ್ದಾನಗಳು ಮಾಡಲ್ಪಟ್ಟುವು. ಆ ಪೈಕಿ ಕೆಲವನ್ನು ಈ ಕೆಳಗೆ ಸೂಚಿಸಿದೆ :—

	ರೂಪಾಯಿ
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಿಂದ	3,000
ಮೈಸೂರು ಬ್ಯಾಂಕಿನಿಂದ	2,000
ಸೆಂಟ್ರಲ್ ಕಾಲೇಜಿನಿಂದ	600
ಮಿ|| ತಂಗವೇಲು ಮೊದಲಿಯಾರರಿಂದ	500
ಮಿ|| ಉಸ್ಮಾನ್‌ಖಾನ್‌ರವರಿಂದ	500 ಕಂಬಳಿಗಳು.
ಕೋಆಪರೇಟಿವ್ ಬ್ಯಾಂಕಿನಿಂದ	500
ಮಿ|| ರಹಿಮತುಲ್ಲಾರವರಿಂದ	251
ಮಿ|| ಗರುಡಾಚಾರ್ಯರವರಿಂದ	250
ಡಾಕ್ಟರ್ ಮೈಲ್ವಾಗನಂರವರಿಂದ	250
ಮಿ|| ಪುಟ್ಟಣಚೆಟ್ಟರವರಿಂದ	200
ಮಿ|| ಮಿರ್ ಹಂಜಾಹುಸೇನ್‌ರವರಿಂದ	200
ಮಿ|| ಕೆ. ಆರ್. ಶ್ರೀನಿವಾಸಯ್ಯಂಗಾರ್ಯರಿಂದ	200
ಮಿ|| ಬಾಲರಾಜ ಅರಸರವರಿಂದ	200
ಮಿ|| ತ್ಯಾಗರಾಜ ಅಯ್ಯರವರಿಂದ	200

ಹಣವು ವಸೂಲಾಗುತ್ತಿದೆ ಮತ್ತು ಜನಗಳು ಧಾರಾಳವಾಗಿ ಸಹಾಯಮಾಡುವರೆಂಬುದರಲ್ಲಿ ಪೂರ್ಣಭರವಸೆಯುಂಟು. ವರ್ತಕರೂ ಇತರ ವೃತ್ತಿಗಳವರೂ ಈ ವಿಷಯದಲ್ಲಿ ಹೇರಳವಾಗಿ ಭಾಗಿಗಳಾಗುವರೆಂದು ನಿರೀಕ್ಷಿಸಿದೆ. ಸಹಾಯದ ಏರ್ಪಾಡುಗಳನ್ನು ಕ್ರಮಪಡಿಸುವ ಬಗ್ಗೆ ಶ್ರೀಮದ್ಯುವರಾಜರವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಉದ್ಯೋಗಸ್ಥರ ಮತ್ತು ಖಾಸಗಿ ದೊಡ್ಡಮನುಷ್ಯರ ಒಂದು ಬಲವಾದ ಸೆಂಟ್ರಲ್ ಕಮಿಟಿಯನ್ನು ಏರ್ಪಡಿಸಲಾಯಿತು. ಚಂದಾಗಳನ್ನು ವಸೂಲ್ಮಾಡುವುದಕ್ಕಾಗಿ ಅನುಕೂಲವಾದ ಸಬ್‌ಕಮಿಟಿಗಳನ್ನೂ ಸಹ ರಚಿಸಿದೆ. ನಷ್ಟಕ್ಕೆ ಗುರಿಯಾಗಿದ್ದ ಪ್ರತಿ ಡಿಸ್ಟ್ರಿಕ್ಟಿಗೂ ಶಾಖಾಕಮಿಟಿಗಳನ್ನು ಏರ್ಪಡಿಸಲಾಗುವುದು.

ಶ್ರೀಮನ್ಮಹಾರಾಜರವರ ವಿಷಯದಲ್ಲಿಯೂ ರಾಜಕುಟುಂಬದವರ ವಿಷಯದಲ್ಲಿಯೂ ಕೃತಜ್ಞತಾ ಸೂಚಕವಾದ ನಿರ್ಣಯಗಳನ್ನೂ ಮದರಾಸು, ಟ್ರಾವನ್‌ಕೂರು ಮತ್ತು ಕೊಚ್ಚಿನ್ ಪ್ರಾಂತ್ಯಗಳಲ್ಲಿ ಪ್ರವಾಹಗಳಿಂದ ಕಷ್ಟಕ್ಕೀಡಾದ ಜನಗಳ ವಿಷಯದಲ್ಲಿ ಅನುತಾಪ ಸೂಚಕವಾದ ನಿರ್ಣಯಗಳನ್ನೂ ಲೇಬಿಸಿಟ್ಟ ತರುವಾಯ ಮೀಟಿಂಗು ಪರಿಸಮಾಪ್ತಿಗೊಂಡಿತು.

ದಿವಾನ್‌ರವರ ಭಾಷಣ.

ಮಹನೀಯರೆ,

ಮೈಸೂರು, ಕಡೂರು, ಶಿವಮೊಗ್ಗ, ಹಾಸನ ಡಿಸ್ಟ್ರಿಕ್ಟುಗಳಲ್ಲಿಯೂ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನ ಕೆಲವು ಪ್ರಾಂತ್ಯಗಳಲ್ಲಿಯೂ ಪ್ರವಾಹಗಳಿಂದುಂಟಾದ ಅನಾಹುತಗಳು; ಮತ್ತು ಮುಖ್ಯವಾಗಿ ಶಿವಮೊಗ್ಗ, ಯಡತೊರೆ, ನಂಜನಗೂಡು, ತಿರುಮಕೂಡ್ಲು ನರಸೀಪುರ ಮತ್ತು ಹರಿಹರ, ಈ ಟೌನುಗಳಲ್ಲಿ ನಷ್ಟಪಟ್ಟವರಿಗೂ, ಇದಲ್ಲದೆ ಹೇಮಾವತಿ, ಕಾವೇರಿ, ಕಪಿನಿ, ತುಂಗಾ ಮತ್ತು ಭದ್ರಾನದಿಗಳಲ್ಲಿ ಕೆಲವು ಸ್ಥಳಗಳಲ್ಲಿ 30 ಅಡಿಗಳಿಗಿಂತ ಹೆಚ್ಚಾಗಿ ಅಸಾಧಾರಣವಾದ ಪ್ರವಾಹವುಂಟಾದುದರಿಂದ ಸದರಿ ನದಿಗಳ ಕೆಳಗಿನ ಪ್ರದೇಶಗಳಲ್ಲಿ ನಷ್ಟಪಟ್ಟ ಅನೇಕಗ್ರಾಮಗಳ ನಿವಾಸಿಗಳಿಗೂ, ಕೂಡಲೆ ಕಷ್ಟನಿವಾರಣೆಯನ್ನುಂಟುಮಾಡಬೇಕಾದ ಆವಶ್ಯಕತೆ; ಈ ಸಂಗತಿಗಳನ್ನು ಕುರಿತು 1924ನೇ ಆಗಸ್ಟ್ 2ನೇ ತಾರೀಖಿನ ದಿನ ಮೈಸೂರು ಸಿಟಿಯಲ್ಲಿ ನಡೆದ ಪಬ್ಲಿಕ್‌ಮೀಟಿಂಗಿನಲ್ಲಿ ಸರ್ವಸಾಮಾನ್ಯವಾದ ರೀತಿಯಲ್ಲಿ ನನ್ನ ಭಾಷಣದಲ್ಲಿ ಸೂಚಿಸಿದ್ದೆನು.

ಈಚೆಗೆ, ನಾನೂ ಮತ್ತು ನನ್ನ ಗೌರವಾರ್ಹರಾದ ಸಹೋದ್ಯೋಗಿಗಳೂ ಸಂಚಾರಹೊರಟು, ಕಷ್ಟಕ್ಕೊಳಗಾದ ಮುಖ್ಯವಾಗಿ ಎಲ್ಲಾ ಪ್ರಾಂತ್ಯಗಳಲ್ಲೂ ತನಿಖೆಯನ್ನು ನಡಿಸಿ ಹಿಂದಿರುಗಿಬಂದೆವು. ಈಗ ಉಂಟಾಗಿರತಕ್ಕ ಅಸಾಧಾರಣವಾದ ಸ್ಥಿತಿಗತಿಗಳ ವಿಷಯದಲ್ಲಿ ನಡೆಸತಕ್ಕ ಸಾಮಾನ್ಯವಾದ ಕಾರ್ಯಕ್ರಮವನ್ನು ವಿಧಿಸಿ, ಶ್ರೀಮನ್ಮಹಾರಾಜರವರ ಸರ್ಕಾರದವರು ಒಂದು ತಪಸೀಲಾದ ಹುಕುಮನ್ನು ಈದಿನ ಸಾದರಪಡಿಸುತ್ತಾರೆ. ನಾವು ಮೈಸೂರಿನಲ್ಲಿ ಈ ಮೊದಲೇ ಸೂಚಿಸಿದ್ದಂತೆ, ನಮ್ಮ ನೆರೆಹೊರೆ ಸಂಸ್ಥಾನಗಳಲ್ಲಿ ಉಂಟಾದಷ್ಟು ಕಷ್ಟವು ಈ ಸಂಸ್ಥಾನದಲ್ಲಿ ನಮಗೆ ಉಂಟಾಗಿಲ್ಲ; ಆದಾಗ್ಯೂ ಬಡಜನರಿಗೆ ಉಂಟಾಗಿರತಕ್ಕ ಕಷ್ಟವು ಕೇವಲ ದುಸ್ಸಹವಾದುದಾಗಿದೆ. ಅದನ್ನು ಕಾಲಾವಕಾಶಮಾಡದೆ ನಿವಾರಣೆ ಮಾಡಬೇಕಾಗಿದೆ. ಮೇಲ್ಕಂಡ ನಾಲ್ಕು ಡಿಸ್ಟ್ರಿಕ್ಟುಗಳ ಡೆಪ್ಯುಟಿಕಮೀಷನರುಗಳಲ್ಲಿ ಪ್ರತಿಯೊಬ್ಬರ ವಶಕ್ಕೂ 2,500 ರೂಪಾಯಿಗಳನ್ನು ನಷ್ಟಪಟ್ಟಂಥ ಜನರಿಗೆ ಉಚಿತವಾಗಿ ಸಹಾಯಮಾಡುವುದಕ್ಕೂ, ಇದಲ್ಲದೆ 25,000 ರೂಪಾಯಿಗಳನ್ನು ತಕಾವಿಸಾಲಗಳನ್ನು ಕೊಡುವುದಕ್ಕೂ, ಸರ್ಕಾರದವರು ಕೊಟ್ಟಿರುವುದು ಜನರಿಗೆ ಗೊತ್ತೇಇರಬಹುದು. [illegible]

ಟಾದ ರಸ್ತೆಗಳಿಗೂ, ಸೇತುವೆಗಳಿಗೂ ಮತ್ತು ನೀರಾವರಿಯ ನಾಲೆಗಳಿಗೂ ಕೂಡಲೆ ದುರಸ್ತಿ ಕಾಂಗಾರಿಗಳನ್ನು ನಡಿಸತಕ್ಕದೆಂದು ಸರ್ಕಾರದವರು ಹುಕುಮನ್ನು ಸಾದರ್‌ಪಡಿದ್ದರು. ಮನೆಮಠಗಳನ್ನು ಕಳೆದುಕೊಂಡು ಆಹಾರಕ್ಕಿಲ್ಲದೆ ಪೇಚಾಡುತ್ತಿರುವ ಗ್ರಾಮಸ್ಥರು, ಇನ್ನೂ ಎತ್ತರದಲ್ಲಿರುವ ಮತ್ತು ಸಮೀಪವಾದ, ತಕ್ಕ ನಿವೇಶನಗಳಲ್ಲಿ ಕ್ಷಿಪ್ರದಲ್ಲೇ ಮನೆಗಳನ್ನು ಕಟ್ಟಿಕೊಂಡು ನೆಲೆಯಾಗಿ ನಿಲ್ಲುವಂತೆ ಅವರಿಗೆ ಸಹಾಯಮಾಡುವುದಕ್ಕಾಗಿ, ಕಷ್ಟನಿವಾರಣೆಯನ್ನು ಮಾಡತಕ್ಕ ಜನರನ್ನು ದ್ರವ್ಯ, ಆಹಾರಸಾಮಗ್ರಿಗಳೇ ಮುಂತಾದುವುಗಳೊಡನೆ ಕಷ್ಟಕ್ಕೊಳಗಾದ ಪ್ರಾಂತ್ಯಗಳಿಗೆ ಕಳುಹಿಸಿಕೊಡತಕ್ಕದೆಂದೂ ಸರ್ಕಾರದವರು ಅಪ್ಪಣೆಮಾಡಿದ್ದರು. ಎಲ್ಲಾ ಕಡೆಗಳಲ್ಲಿಯೂ ಸ್ಥಳೀಯ ಆಫೀಸರುಗಳೂ ಮತ್ತು ಅನೇಕ ಖಾಸಗಿಜನರೂ, ವಿಶೇಷ ಮುಂಜಾಗ್ರತೆಯಿಂದಲೂ ಧೈರ್ಯದಿಂದಲೂ ಮತ್ತು ಸಹಾಯ ತತ್ಪರತೆಯಿಂದಲೂ ಕೆಲಸಮಾಡಿರುತ್ತಾರೆಂಬ ಸಂಗತಿಯು ಸಂತೋಷಕರವಾಗಿದೆ. ಮತ್ತು ಅನೇಕ ಸ್ಥಳಗಳಲ್ಲಿ ಜನರು ಊರುಗಳನ್ನು ಬಿಟ್ಟುಹೋಗುವ ವಿಷಯದಲ್ಲಿ ಅವರು ತಮ್ಮ ಶಕ್ತಿಸಾಹಸಗಳನ್ನು ತೋರಿಸಿ ಕೂಡಲೆ ಜನರಿಗೆ ಸಹಾಯವನ್ನು ಮಾಡದೆ ಇದ್ದಪಕ್ಷದಲ್ಲಿ, ವಿಶೇಷ ಪ್ರಾಣಹಾನಿಯುಂಟಾಗುತ್ತಿದ್ದಿತೆಂದು ನಮಗೆ ಖಚಿತವಾಗಿ ಕಂಡುಬಂದಿದೆ. ಯಾವುದೊಂದು ಪ್ರಾಣಹಾನಿಯೂ ಉಂಟಾಗದೆ ಇದ್ದುದಕ್ಕಾಗಿ ನಾವು ಕೃತಜ್ಞರಾಗಿರಬೇಕಾಗಿದೆ. ಸಕಾಲದಲ್ಲಿ ಎಚ್ಚರಿಕೆಗಳನ್ನು ಕೊಟ್ಟುದರಿಂದ ಚರಸ್ವತ್ತುಗಳು ಉಳಿದುಕೊಂಡುವು. ಇಲ್ಲದೆಹೋಗಿದ್ದಪಕ್ಷದಲ್ಲಿ ಅವುಗಳು ಪ್ರವಾಹದಲ್ಲಿ ಎಂದೋ ಕೊಚ್ಚಿಹೋಗುತ್ತಿದ್ದುವು.

ಹಾಲಿ ಇರತಕ್ಕ ಸ್ಥಿತಿಯ ವಿಚಾರವಾಗಿ ಕೆಲವು ತಪಸೀಲುಗಳನ್ನು ನಾವು ಈಗ ಸಾಧ್ಯವಾದಮಟ್ಟಿಗೂ ವಿವರಿಸಲಿಚ್ಛಿಸುವೆವು. ಕ್ಷಿಪ್ರದಲ್ಲೇ ಎಷ್ಟುಮಟ್ಟಿಗೆ ಕಷ್ಟನಿವಾರಣೆಯ ಕಾರ್ಯವನ್ನು ನಡೆಸಬೇಕೆಂಬ ಅಂಶವನ್ನು ಅವುಗಳಿಂದ ನಿರ್ಧರಿಸಬಹುದು.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕಾವೇರಿ, ಕಪಿಲಾ, ಹೇಮಾವತಿ ನದಿಗಳ ಮತ್ತು ತಾರಕಾ ಮುಂತಾದ ಸಣ್ಣತೊರೆಗಳ ಕೆಳಗಿನ ಪ್ರದೇಶಗಳು ವಿಶೇಷವಾಗಿ ನಷ್ಟಕ್ಕೊಳಗಾದುವು. ನಂಜನಗೂಡು, ಯಡತೊರೆ, ಶ್ರೀರಂಗಪಟ್ಟಣ, ತಿರುಮಕೂಡ್ಲುನರಸೀಪುರ, ಈ ಟೌನುಗಳಲ್ಲದೆ ಒಂದುನೂರ ಎರಡು ಗ್ರಾಮಗಳಿಗೆ ಭಾರಿನಷ್ಟವುಂಟಾಯಿತು. ಈ ಪ್ರದೇಶಗಳಲ್ಲಿ ಸುಮಾರು 4,000 ಮನೆಗಳು ಬಿದ್ದುಹೋಗಿವೆ. ಛಾಟಾರಸ್ತೆಗಳೂ, ಕೆರೆಗಳೂ ನಾಲೆಗಳೂ ಮತ್ತು ಅಣೆಗಳೂ ಅಲ್ಲಲ್ಲೇ ಒಡೆದುಹೋಗಿವೆ. ಜನರೂ ಬಂಡಿಗಳೂ ತಿರುಗಾಡುವುದಕ್ಕೆ ಅಡಚಣೆಯುಂಟಾಗಿದೆ. ನಂಜನಗೂಡಿನ ರಸ್ತೆಯ ಮತ್ತು ರೈಲ್ವೆಯ ಸೇತುವೆಗೂ, ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆಗೂ ವಿಶೇಷ ಅಪಾಯವುಂಟಾಗುವಂತಿದ್ದಿತು. ಆದರೆ ಅಲ್ಪಸ್ವಲ್ಪ ನಷ್ಟದಲ್ಲೇ ಪರ್ಯವಸಾನವಾಯಿತು. ಸುಮಾರು 8,000 ಎಕರೆಗಳ ಜಮೀನಿಗೆ ನಷ್ಟವುಂಟಾಗಿದೆ ಮತ್ತು ಅವುಗಳ ಪೈಕಿ ಕೆಲವು ಭಾಗಗಳು ಸಂಪೂರ್ಣವಾಗಿ ಕೊಚ್ಚಿಹೋಗಿವೆ. ಕೊಚ್ಚಿಹೋಗಿರುವ ಜಮೀನುಗಳನ್ನು ಸಾಗುವಳಿ ಜಮೀನಿಗೆ ಸೇರಿಸಿಕೊಂಡು ಈ ಜಮೀನುಗಳನ್ನೆಲ್ಲಾ ಪುನಃ ಸಾಗುವಳಿಗೆ ತರಬೇಕಾದರೆ, ರೈತರಿಗೆ ಈಗಾಗಲೇ ಉಂಟಾಗಿರುವ ಫಸಲು ನಷ್ಟದ ಜತೆಗೆ ಭಾರಿ ಖರ್ಚು ತಗಲುವುದು. ಮಳೆ ಬೆಳೆಗಳಿಲ್ಲದೆ ಜೀವನೋಪಾಯಕ್ಕೆ ವಿಶೇಷ ಕಷ್ಟವುಂಟಾಗಿರುವ ಈಗಿನ ಕಾಲಸ್ಥಿತಿಯಲ್ಲಿ ತಮ್ಮ ಮನೆಗಳನ್ನೂ, ಗುಡಿಸಲುಗಳನ್ನೂ, ಪಶುಗಳನ್ನೂ ಮತ್ತು ಇತರ ಸ್ವತ್ತುಗಳ ಪೈಕಿ ಅನೇಕವನ್ನೂ ಕಳೆದುಕೊಂಡು ಜೀವನಕ್ಕಿಲ್ಲದೆ ಪೇಚಾಡುತ್ತಿರುವ ನೂರಾರು ಮಂದಿ ಪಂಚಮರನ್ನೂ ಮತ್ತು ಇತರ ಬಡಜನರನ್ನೂ ನಾವು ಖುದ್ದುನೋಡಿರುತ್ತೇವೆ. ಸದ್ಯಕ್ಕೆ ಅವರ ಕಷ್ಟನಿವಾರಣೆಯನ್ನು ಮಾಡಲು ಹಂಗಾಮಿ ಏರ್ಪಾಡುಗಳನ್ನೇನೋ ಮಾಡಿದೆ; ಆದರೆ, ಈ ಜನರು ಪುನಃ ಮನೆಗಳನ್ನು ಕಟ್ಟಿಕೊಂಡು ನೆಲೆಯಾಗಿನಿಲ್ಲುವಂತೆ ಮಾಡಲು ಒಂದು ಕ್ರಮವಾದ ಏರ್ಪಾಡು ಕೂಡಲೆ ಅವಶ್ಯಕವಾಗಿದೆ. ಈಗ ಎಲ್ಲರೂ ಒಂದೇಸಮವಾಗಿ ಕಷ್ಟಪಡುತ್ತಿರುವ ಕಾಲ. ಒಬ್ಬರಿಗೆ ಒಳ್ಳೆಯದಾಗಿ ಮತ್ತೊಬ್ಬರಿಗೆ ಮಾತ್ರ ಕೆಡಕಾಗುವ ಸಂಭವವೇನೂ ಇಲ್ಲ. ಆದುದರಿಂದ ಈ ಜನರಿಗೆ ಮೊದಲಿದ್ದ ಗ್ರಾಮನಿವೇಶನಕ್ಕಿಂತಲೂ ಇನ್ನೂ ಆರೋಗ್ಯವಾದ ಗ್ರಾಮನಿವೇಶನಗಳನ್ನೊದಗಿಸಿ ಅವರು ಸರಿಯಾದಮೇಲ್ವಿಚಾರಣೆಯಿಂದ ಮನೆಗಳನ್ನು ಕಟ್ಟಿಸುವಂತೆ ಅವರಿಗೆ ಸಹಾಯಮಾಡಲು ಇದೊಂದು ಮಹತ್ತಾದ ಸಂದರ್ಭವಾಗಿದೆ. ನಷ್ಟಕ್ಕೊಳಪಟ್ಟಿರುವ ಎಲ್ಲಾ ಟೌನುಗಳನ್ನೂ ಮತ್ತು ಗ್ರಾಮಗಳನ್ನೂ ಈರೀತಿಯಾಗಿ ಪುನಃ ಕಟ್ಟಿಸುವುದಾದರೆ ಒಂದು ಮಹತ್ತಾದ ಕೆಲಸವನ್ನು ನೆರವೇರಿಸಿದಂತಾಗುವುದು. ಈ ವಿಷಯದಲ್ಲಿ ಸರ್ಕಾರದವರಮೇಲೆ ಬೀಳುವ ಭಾರಜವಾಬ್ದಾರಿಯನ್ನು ನಿರ್ವಹಿಸಲು ನಾವು ಹಿಂತೆಗೆಯುವುದಿಲ್ಲ; ಪರಂತು, ಇಂಥಾ ಸಂದರ್ಭದಲ್ಲಿ, ಶ್ರೀಮನ್ಮಹಾರಾಜರವರ ಪ್ರಜೆಗಳೂ ಮತ್ತು ಮೈಸೂರು ಸಂಸ್ಥಾನದ ಪುರನಿವಾಸಿಗಳೂ, ಕಷ್ಟಕ್ಕೆಸಿಕ್ಕಿರುವ ತಮ್ಮ ಜತೆಯ ಪುರನಿವಾಸಿಗಳಿಗೂ ಮತ್ತು ಪ್ರಜೆಗಳಿಗೂ ಉದಾರವಾಗಿ ಸಹಾಯಮಾಡತಕ್ಕದು ಅವಶ್ಯಕರ್ತವ್ಯವಾಗಿದೆ. ಆ ಕರ್ತವ್ಯವನ್ನು ಪರಿಪಾಲಿಸುವುದರಲ್ಲಿ ಅವರು ಈಗ ಮುಂದಾಳುಗಳಾಗಿ ಬಂದು, ಕಷ್ಟನಿವಾರಣೆಯ ವಿಚಾರದಲ್ಲೂ, ಸ್ಥಿತಿಗತಿಗಳನ್ನು ಪೂರ್ವಸ್ಥಿತಿಗೆ ತರುವ ವಿಚಾರದಲ್ಲೂ ತಪ್ಪದೆ ತಾವು ಸಹಾಯಕರಾಗಬೇಕು. ಗೌರವಾರ್ಹರೂ ಮತ್ತು ನನ್ನ ಸಹೋದ್ಯೋಗಿಗಳೂ ಆದ ಮೊದಲನೇ ಮತ್ತು ಎರಡನೇ ಮೆಂಬರುಗಳು, ಶಿವಮೊಗ್ಗ, ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿನ ಸ್ಥಿತಿಗತಿಗಳನ್ನು ಕುರಿತು ತಪಸೀಲಾದ ವಿವರವನ್ನು ನಿಮಗೆ ತಿಳಿಸುವರೆಂದು ನಾವು ನಿರೀಕ್ಷಿಸುತ್ತೇವೆ. ಅವುಗಳನ್ನು ನಾವೂ ಇಲ್ಲಿ ಸಂಕ್ಷೇಪವಾಗಿ ಸೂಚಿಸುವೆವು.

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ, ಪ್ರವಾಹದ ನೀರು ಶಿವಮೊಗ್ಗ ಟೌನಿಗೆ ನುಗ್ಗಿದ್ದಿತಲ್ಲದೆ, ತುಂಗಾ ಮತ್ತು ಭದ್ರಾ ನದಿಗಳ ದಡಗಳಲ್ಲಿರುವ 15 ಮುಖ್ಯವಾದ ಗ್ರಾಮಗಳು ವಿಶೇಷ ನಷ್ಟಪಟ್ಟಿವೆ. ಶಿವಮೊಗ್ಗೆಯಲ್ಲಿ 735 ಮನೆಗಳು ನೀರಿನಲ್ಲಿ ಮುಳುಗಿ ಹೋಗಿದ್ದುವು. ಅವುಗಳ ಪೈಕಿ 250 ಮನೆಗಳು ಬಿದ್ದುಹೋಗಿವೆ. ಇತರ ಕಡೆಗಳಲ್ಲಿ ಬಿದ್ದುಹೋದ ಮನೆಗಳ ಒಟ್ಟು ಸಂಖ್ಯೆಯು ಸುಮಾರು 1,000 ವೆಂದು ಅಂದಾಜಾಗಿದೆ. ಮೈಸೂರಿನಲ್ಲಿ ಆದಂತೆಯೇ ಸಾಗುವಳಿ ಜಮೀನುಗಳಿಗೆ ನಷ್ಟವುಂಟಾಗಿದೆ.

ಕಡೂರು ಡಿಸ್ಟ್ರಿಕ್ಟಿನಲ್ಲಿ, ಕೆಲವು ಗ್ರಾಮಗಳನ್ನು ಬೇರೆ ಕಡೆಗೆ ಬದಲಾಯಿಸಬೇಕಾಗಿದ್ದಾಗ್ಯೂ ಅಲ್ಲಿನ ಗ್ರಾಮಗಳಿಗೆ ವಿಶೇಷ ನಷ್ಟವುಂಟಾಗಿಲ್ಲ. ಆದರೆ ಬತ್ತದ ಪೈರಿನ ಜಮೀನುಗಳಿಗೆ ಪ್ರವಾಹಗಳಿಂದ ವಿಶೇಷ ನಷ್ಟವುಂಟಾಗಿರುವಂತೆ ಕಂಡು ಬರುತ್ತದೆ. ಇದರಿಂದ ವ್ಯವಸಾಯಗಾರರಿಗೆ ವಿಶೇಷನಷ್ಟವುಂಟಾಗಿರಲೇಬೇಕು.

ಹಾಸನ ಡಿಸ್ಟ್ರಿಕ್ಟಿನಲ್ಲಿ, ಸುಮಾರು 100 ಮನೆಗಳು ನಷ್ಟವಾಗಿ, ರಾಮನಾಥಪುರಗ್ರಾಮಕ್ಕೆ ವಿಶೇಷ ನಷ್ಟವುಂಟಾಗಿದೆಯೇ ಹೊರತು ಮಿಕ್ಕ ಕಡೆಗಳಲ್ಲಿ ನಷ್ಟವು ಅಲ್ಪವಾಗಿದೆ. ರಸ್ತೆಗಳಿಗೂ, ನಾಲೆಗಳಿಗೂ ಮತ್ತು ಅಣೆಗಳಿಗೂ ಅಪಾಯವುಂಟಾದುದರಿಂದ ರೈತರಿಗೆ ವ್ಯವಸಾಯದ ಕೆಲಸದಲ್ಲಿ ತೊಂದರೆಯಾಗಿದೆ.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ, ಹರಿಹರಕ್ಕೆ ವಿಶೇಷ ನಷ್ಟವುಂಟಾಗಿದೆ. ಎಲ್ಲಾ ಕಡೆಗಳಲ್ಲಿಯೂ ಕಷ್ಟನಿವಾರಣೆಯ ಬಗ್ಗೆ ನಡೆಸತಕ್ಕ ಕೆಲಸಗಳನ್ನು ಪ್ರಾರಂಭಿಸಿದೆ ಮತ್ತು ನಾವೂ, ಸರ್ಕಾರದ ಇತರ ಮೆಂಬರುಗಳೂ, ನಮ್ಮ ಸಂಚಾರಗಳಲ್ಲಿ ನಡೆಸಿದ ತನಿಖೆಯ ಫಲಿತಾಂಶವಾಗಿ ಈ ದಿನ ಸಾದರ್ಪಡಿಸಿದ ಹುಕುಮುಗಳಿಂದ ಮೇಲ್ಕಂಡ ಕೆಲಸಗಳು ಎಷ್ಟುಮಟ್ಟಿನವು ಮತ್ತು ಅವುಗಳ ಉದ್ದೇಶವೇನೆಂಬುದು ವ್ಯಕ್ತವಾಗುವುದು. ಸರ್ಕಾರದವರು ಅವಶ್ಯಕವಾದ ಕೆಲಸಗಳನ್ನೆಲ್ಲಾ ಮಾಡಬಹುದಾದಾಗ್ಯೂ, ಬಡಜನರ ಸಂಕಟಗಳನ್ನು ಪರಿಹರಿಸಿ ಕಷ್ಟವನ್ನು ಕಡಮೆಮಾಡತಕ್ಕ ಬಗ್ಗೆ ಸಮಸ್ತಜನರೂ ಒಟ್ಟಾಗಿ ಪ್ರಯತ್ನಿಸಬೇಕಾದ ಸಂದರ್ಭವು ಈಗ ಪ್ರಾಪ್ತವಾಗಿದೆ. ಈ ಉದ್ದೇಶದಿಂದ, ಈ ಮಹಾಜನರ ಸಭೆಯನ್ನು ಏರ್ಪಡಿಸಿದೆ. ಮತ್ತು ಈದಿನ ಏರ್ಪಡತಕ್ಕದಾಗಿರುವ ಸೆಂಟ್ರಲ್ ರಿಲೀಫ್ ಕಮಿಟಿಯವರು ಜನಸಾಮಾನ್ಯದ ಸಹಕಾರವನ್ನು ಪಡೆದು, ಕಷ್ಟಕ್ಕೆ ಗುರಿಯಾಗಿರುವ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಶೀಘ್ರವಾಗಿ ಹಂಚುವ ಬಗ್ಗೆ ಸಾಧ್ಯವಾದಷ್ಟು ಹೆಚ್ಚು ಮೊತ್ತವನ್ನು ಚಂದಾ ಎತ್ತಲನುಕೂಲಿಸುವುದೆಂದು ಉತ್ಸಾಹದಿಂದ ಹಾರೈಸುತ್ತೇವೆ.

ನಾವು ಮೈಸೂರಿನಲ್ಲಿ ತಿಳಿಯಪಡಿಸಿದ ಪ್ರಕಾರ, ಶ್ರೀಮನ್ಮಹಾರಾಜರವರು ಈ ಫಂಡಿಗೆ 15,000 ರೂಪಾಯಿಗಳನ್ನು ಕೃಪಾಪೂರ್ವಕವಾಗಿ ಅನುಗ್ರಹಿಸಿದ್ದಾರೆ ಮತ್ತು ಶ್ರೀಯುವರಾಜರವರು ಈ ಸೆಂಟ್ರಲ್ ಕಮಿಟಿಯ ಅಧ್ಯಕ್ಷರಾಗಲು ದಯೆಯಿಟ್ಟು ಸಮ್ಮತಿಸಿರುವುದು, ಈದಿನ ನಾವು ಬೆಂಗಳೂರಿನಲ್ಲಿ ಆರಂಭಿಸುತ್ತಿರುವ ಈ ಏರ್ಪಾಡಿಗೆ ಶುಭಸೂಚನೆಯಾಗಿದೆ. ಶ್ರೀಮನ್ಮಹಾರಾಜರವರಿಗೂ ರಾಜಕುಟುಂಬ ವರ್ಗದವರಿಗೂ ಜನರ ಯೋಗಕ್ಷೇಮ ಮತ್ತು ಸುಖಸಂತೋಷಗಳ ವಿಷಯದಲ್ಲಿರುವ ಉತ್ಸುಕತೆಗೂ, ಬಡಬಗ್ಗರಿಗೆ ಅತಲ್ಪಸಂಕಟವುಂಟಾದಲ್ಲಿ ಅವರು ಪಡುವ ವಿಶೇಷ ಅನುತಾಪಕ್ಕೂ ಮೈಸೂರು ದೇಶಕ್ಕೆ ಯಾವ ಹೊಸನಿದರ್ಶನವೂ ಬೇಕಾಗಿಲ್ಲವೆಂದು ದೃಢವಾಗಿ ಹೇಳುತ್ತೇವೆ; ಆದರೆ ಈದಿನ ಇಲ್ಲಿ ನಾವು ಯಾವ ಏರ್ಪಾಡನ್ನು ನೆರವೇರಿಸುವುದಕ್ಕಾಗಿ ಸಭೆಸೇರಿರುವೆವೋ ಆ ಏರ್ಪಾಡಿಗೆ, ಶ್ರೀಮನ್ಮಹಾರಾಜರವರ ಮತ್ತು ಘನತೊಂದಿದ ಅವರ ಸಹೋದರರ ಕೃಪಾಪೂರ್ವಕವಾದ ವರ್ತನೆಗಳಿಂದ ಆ ಉತ್ತೇಜನವೂ ಪ್ರೋತ್ಸಾಹವೂ ಅವುಗಳು ಅವಶ್ಯಕವಾಗಿದ್ದಲ್ಲಿ ಉಂಟಾಗಬೇಕಾಗಿದೆ.

ಈ ಸಂಸ್ಥಾನದಲ್ಲಿ ಪ್ರವಾಹಗಳ ದೆಸೆಯಿಂದ ಉಂಟಾದ ನಷ್ಟಕಷ್ಟಗಳ ವಿಷಯದಲ್ಲಿ ತಮಗಿರುವ ಅಪಾರವಾದ ವ್ಯಾಕುಲವನ್ನು ವ್ಯಕ್ತಗೊಳಿಸಿ ಇಂಡಿಯಾ ಸರ್ಕಾರದವರು ತಂತಿಯುವರ್ತಮಾನವನ್ನು ಕೊಟ್ಟಿದ್ದಾರೆಂಬುದನ್ನೂ, ಇದಲ್ಲದೆ ಮಹಾಮಹಿಮರಾದ ವೈಸ್ರಾಯರವರು ಕಷ್ಟಕ್ಕೊಳಗಾದವರ ವಿಷಯದಲ್ಲಿ ತಮಗೆ ಸ್ವತಃಉಂಟಾಗಿರುವ ಅನುತಾಪವನ್ನು ಶ್ರೀಮನ್ಮಹಾರಾಜರವರಿಗೆ ತಿಳಿಯಪಡಿಸಿದ್ದಾರೆಂಬುದನ್ನೂ ಕೇಳಿ ತಮ್ಮೆಲ್ಲರಿಗೂ ಹರ್ಷವುಂಟಾಗಬಹುದು.

ಈ ಮೈಸೂರು ಸಂಸ್ಥಾನದ ಹೊರಗೆ ಇರುವ ಸಂಸ್ಥಾನದ ಹಿತೈಷಿಗಳಿಗೆ ಇದರ ಚಿಂತೆಯು ಇಲ್ಲದೆ ಇಲ್ಲ. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ವೈಸ್ ಪ್ರೆಸಿಡೆಂಟರಿಂದ ಒಂದು, ಪೆಟ್ಲಾಡ್ ಎಂಬ ಸ್ಥಳದಲ್ಲಿನ ನಮಗೆ ಅಪರಿಚಿತರಾದೊಬ್ಬರಿಂದ ಮತ್ತೊಂದು, ಹೀಗೆ ವಿಶೇಷ ಅನುತಾಪ ಸೂಚಕವಾದ ಎರಡು ತಂತಿಯ ವರ್ತಮಾನಗಳು ನಮ್ಮಲ್ಲಿಗೆ ಬಂದಿವೆ. ಅವುಗಳೆರಡನ್ನೂ ತಮಗೆ ಓದಿ ಹೇಳುತ್ತೇವೆ:—

"(1) ತಮ್ಮ ರಾಜ್ಯದಲ್ಲಿ ಪ್ರವಾಹಗಳ ದೆಸೆಯಿಂದ ಕಷ್ಟಕ್ಕೊಳಗಾದವರ ಸಂಕಟಗಳನ್ನು ಕೇಳಿ ಅಪಾರವಾದ ದುಃಖವುಂಟಾಯಿತು. ಸದರಿ ಜನರ ವಿಷಯದಲ್ಲಿ ನಾವು ನಮ್ಮ ಅನುತಾಪವನ್ನು ಸೂಚಿಸುತ್ತೇವೆ. ಈ ಜನರ ಸಂಕಟವನ್ನು ಪರಿಹರಿಸಲು ತಮ್ಮ ಸರ್ಕಾರದವರು ಸರ್ವಪ್ರಯತ್ನವನ್ನೂ ಮಾಡುವರೆಂದು ನಂಬಿದ್ದೇವೆ. ಈ ದಿನ ಸಾಯಂಕಾಲ ಬೊಂಬಾಯಿಯ ಸರ್ವೆಂಟ್ಸ್ ಆಫ್ ಇಂಡಿಯಾ ಮಂದಿರದಲ್ಲಿ ನಡೆಯುವಂತೆ ಏರ್ಪಡಿಸಿರುವ ಸಭೆಯಲ್ಲಿ ಸದರಿ ಜನರಿಗೆ ಹಂಚುವ ಬಗ್ಗೆ ಹಣವನ್ನು ಚಂದಾ ಎತ್ತುವುದಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಲಾಗುವುದು. ಬ್ರಿಟಿಷ್ ಇಂಡಿಯಾದಲ್ಲಿಯೂ ಮತ್ತು ಇಂಡಿಯಾ ದೇಶದ ಸಂಸ್ಥಾನಗಳಲ್ಲಿಯೂ ಕಷ್ಟಕ್ಕೆ ಗುರಿಯಾದವರಿಗೆ ಸಹಾಯಮಾಡುವುದಕ್ಕಾಗಿ ಏರ್ಪಟ್ಟಿರುವ ಸಂಸ್ಥೆಗಳವರು ಪ್ರವಾಹದ ದೆಸೆಯಿಂದ ಉಂಟಾದ ನಷ್ಟದ ಸ್ವಭಾವ, ಅದರ ಪರಿಮಾಣ ಮತ್ತು ಈಗ ಕೈಗೊಂಡಿರುವ ಮತ್ತು ಉದ್ದೇಶಿಸಿರುವ ಸಹಾಯದ ಏರ್ಪಾಡುಗಳು, ಇವುಗಳನ್ನು ತಿಳಿಯಲಪೇಕ್ಷಿಸುತ್ತಾರೆ."

"ಪರಿಮಿತವಾದ ವರಮಾನವುಳ್ಳ ನನ್ನ ಕಮಿಟಿಯವರಿಂದ ಅವರಿಗೆ ಹೇಗೆ ಮತ್ತು ಯಾವರೀತಿಯಲ್ಲಿ ಉಪಯೋಗವಾಗಬಹುದೆಂಬುದನ್ನು ದಯೆಯಿಟ್ಟು ತಿಳಿಸಿ. ಹೆಚ್ಚಾಗಿ ಹಣವನ್ನು ಚಂದಾ ಎತ್ತಲು ಕಾಲವು ಅನುಕೂಲವಾಗಿಲ್ಲ. ಆದಾಗ್ಯೂ ಬೊಂಬಾಯಿನವರು ತಮಗೆ ಸಾಧ್ಯವಾದ ಸೇವೆಯನ್ನು ಮಾಡಲು ಅಪೇಕ್ಷಿಸುವರು."

"(2) ಪ್ರವಾಹಗಳ ದೆಸೆಯಿಂದ ಆದ ನಷ್ಟಗಳ ವಿವರಗಳನ್ನು ತಿಳಿಸಿ ಮತ್ತು ಯಾವ ಪ್ರಾಂತ್ಯಗಳಿಗೆ ವಿಶೇಷ ನಷ್ಟವಾಯಿತೆಂಬುದನ್ನೂ, ಕಷ್ಟನಿವಾರಣೆಯ ಬಗ್ಗೆ ಮಾಡಿದ ಏರ್ಪಾಟುಗಳನ್ನೂ ಬಣ್ಣಹಾಕುವ ಕಾರ್ಖಾನೆಯ ರಾಜರತ್ನನಾರಾಯಣಭಾನ್ ಕೇಶವಲಾಲ್‌ಯವರಿಗೆ ತಂತಿಯ ಮೂಲಕ ತಿಳಿಸಿರಿ."

ಕೋಲಾರದ ಚಿನ್ನದಗಣಿಯ ಬೋರ್ಡಿನವರೂ ಸಹ ಸರ್ಕಾರದವರ ತಿಳಿವಳಿಕೆ ಬಗ್ಗೆ ಈ ಕೆಳಗೆ ಕಂಡ ನಿರ್ಣಯಗಳನ್ನು ಕಳುಹಿಸಿದ್ದಾರೆ:—

"(1) ಬೋರ್ಡಿನವರಿಗೆ ಉಂಟಾದ ಅಪಾರವಾದ ಅನುತಾಪವನ್ನು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತಿಳಿಯಪಡಿಸತಕ್ಕದು.

"(2) ಮೈಸೂರು ಸಿಟಿಯಲ್ಲಿ ಏರ್ಪಡಿಸಿರುವ ಪ್ರವಾಹ ಕಷ್ಟನಿವಾರಣೆಯ ಫಂಡಿಗೆ ಚಂದಾ ಎತ್ತಲು ಕ್ರಮಜರುಗಿಸತಕ್ಕದು."

ಇದಲ್ಲದೆ ಬೆಂಗಳೂರಿನ ಅಮೆಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್ನಿನವರು ಪ್ರವಾಹ ಕಷ್ಟನಿವಾರಣೆಯ ಫಂಡಿಗೆ ನೆರವಾಗುವಂತೆ ಅದರ ಪ್ರಯೋಜನಾರ್ಥವಾಗಿ ಸೆಪ್ಟಂಬರು ತಿಂಗಳ ಆದಿಭಾಗದಲ್ಲಿ ಒಂದು ನಾಟಕವನ್ನಾಡಲು ನಿರ್ಧರಿಸಿರುವುದನ್ನು ಪ್ರಸಿದ್ಧಪಡಿಸುವಂತೆ ನನ್ನನ್ನು ಕೇಳಿರುತ್ತಾರೆ.

ಮಹಾಶಯರೆ, ಈ ಸಂಸ್ಥಾನದೊಳಗೂ ಹೊರಗೂ ಜನರಿಗೆ ಅನುತಾಪವುಂಟಾಗಿರುವ ಚಿಹ್ನೆಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಈ ಅನುತಾಪವು ಕಾರ್ಯರೂಪದಲ್ಲಿ ಧನಸಹಾಯವಾಗಿ ಪರಿಣಮಿಸುವುದೆಂದು ಕೋರುತ್ತೇವೆ.

ಶ್ರೀಯುವರಾಜರವರು ಕಷ್ಟನಿವಾರಣೆಯ ಫಂಡಿಗೆ 2,000 ರೂಪಾಯಿ ಚಂದಾದಯಪಾಲಿಸಿದ್ದಾರೆಂಬುದನ್ನು ಈ ಭಾಷಣವನ್ನು ಮುಗಿಸುವುದಕ್ಕೆ ಮೊದಲು ತಿಳಿಯಪಡಿಸುವುದು ನಮಗೆ ವಿಶೇಷ ಆನಂದಕರವಾಗಿದೆ. ಇದಲ್ಲದೆ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರು ತಮ್ಮ ಸಹೋದ್ಯೋಗಿಗಳ ಮತ್ತು ತಮ್ಮ ಅಪಾರವಾದ ಅನುತಾಪವನ್ನು ಸೂಚಿಸಿ ಬರೆದಿರುವ ಕಾಗದದಲ್ಲಿ ಸದರಿ ಕಾಲೇಜಿನ ಸಿಬ್ಬಂದಿ ಮತ್ತು ಆಫೀಸಿನವರು 600 ರೂಪಾಯಿಗಳ ಒಂದು ಚೆಕ್ಕನ್ನು ಕಳುಹಿಸಿದ್ದಾರೆಂದು ತಿಳಿಯಪಡಿಸುವುದು ನಮಗೆ ಬಹಳ ಸಂತೋಷಪ್ರದವಾಗಿದೆ. ಇದೂ ಅಲ್ಲದೆ, ಮೈಸೂರು ಬ್ಯಾಂಕಿನವರು 2,000 ರೂಪಾಯಿಗಳನ್ನೂ, ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕಿನವರು 500 ರೂಪಾಯಿಗಳನ್ನೂ, ಚಂದಾ ಕೊಟ್ಟಿದ್ದಾರೆಂದೂ, ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಈ ಕಷ್ಟನಿವಾರಣೆಯ ಫಂಡಿಗೆ ಈಗಾಗಲೇ 3,000 ರೂಪಾಯಿ ಕೊಟ್ಟಿದ್ದಾರೆಂದೂ, ಸಂತೋಷದಿಂದ ತಿಳಿಸುತ್ತೇವೆ. ಪ್ರಥಮ ರಾಜಕುಮಾರಿಯವರು 1,000 ರೂಪಾಯಿಗಳನ್ನು ಅನುಗ್ರಹಿಸಿದ್ದಾರೆಂದು ಕೇಳಿ ನಿಮಗೆ ಸಂತೋಷವಾಗಬಹುದು.

OFFICE OF THE INSPECTOR-GENERAL OF EDUCATION IN MYSORE, BANGALORE.

Notification D. No. 118, dated 24th June 1924.

THE DEVARAJA BAHADUR CHARITY FUNDS—LITERARY SECTION.

1. Applications are invited before the 15th December 1924, from Authors who desire to submit their books for patronage from the Devaraja Bahadur Charity Funds—Literary Section. Authors should submit their printed books or manuscripts along with their applications.

2. The books or manuscripts submitted for patronage may be original works in Kannada or Sanskrit, translations from other languages into Kannada or Sanskrit, or newly printed books or reprints or manuscripts or critical editions of standard works; Kannada journals publishing matter of the requisite literary quality will also be eligible to compete. The order of preference in making the awards will be as follows:—

i. Original Compositions.
ii. Translations.
iii. Critical Editions of standard works.
iv. Reprints and
v. Journals.

The applications should be accompanied by a memorandum explaining as the case may be, how far the work is original, the source of the translation, stating the special claims of the book, etc., for the prize.

3. The awards shall be made on the judgment of a committee appointed every year by the Inspector-General of Education.

4. There will be two prizes, one of Rs. 500 and another of Rs. 200 to be awarded to the two best competitors under the various kinds of compositions indicated and in the order of preference stated in article (2).

5. The award may be in the shape of an absolute grant to the author, or a contribution towards the printing or reprinting of the work, or the purchase of certain number of copies at a suitable price.

6. In every case, the decision of the Inspector-General of Education shall be final.

7. Copies of books sent for patronage in response to this advertisment will not be returned, but manuscripts will be returned to the applicants after June 1925.

C. S. BALASUNDARAM IYER,
Inspector-General of Education.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂ.

ತಿರಸ್ಕೃತಲೇಖಗಳು.

1. ಕ್ಯಾತಸಂದ್ರದ ಧರ್ಮಾಭಿಮಾನಿ ಮತ್ತು ತುಮಕೂರಿನ ಕೈ|| ಗುಬ್ಬಿ ಹುಚ್ಚಪ್ಪನವರ ಸಮೀಪಬಂಧು—ಕೈ|| ಗುಬ್ಬಿ ಹುಚ್ಚಪ್ಪನವರ ಧರ್ಮವಿಚಾರವಾಗಿ ನೀವು ಉಭಯರೂ ಬರೆದಿರುವ ಲೇಖಗಳು ದೀರ್ಘಪತ್ರವ್ಯವಹಾರಕ್ಕೂ ಮನಸ್ತಾಪಕ್ಕೂ ಅವಕಾಶವನ್ನುಂಟುಮಾಡುತ್ತವಾದುದರಿಂದ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಲಾಗುವುದಿಲ್ಲ.

CATTLE PROTECTION.

The following resolution is sent by wire to Pandit Shamlal Nehru, M.L.A., Prayag Street, Allahabad. I appeal to the several leaders everywhere to conduct meetings and send similar resolutions supporting the Bill as the subject is of vital importance to our country from Humanitarian and Economic standpoints.

SHA CHAMMANMAL DONGAJI,
President.

RESOLUTION.

"Sri Gorakshaka Mandali, Bangalore City, under the Presidency of Dewan Bahadur Rajasabhabhushana K. P. Puttanna Chetty, Esq., C.I.E., accord their full support to the bill proposed by you for prohibiting Export of cattle meat from India."

SHA CHAMMANMAL DONGAJI,
President.

THE DESIRABILITY OF CONVERTING MAVALLY GOVERNMENT SCHOOL INTO COMPLETE MIDDLE SCHOOL.

Sir,

Education especially Primary and Middle ones among the masses of Mysore State is the only Panacea for the various ills under which many of our people are suffering. That a pretty large number of people have plunged into deep depths of darkness due to illeteracy which should be banished as early as possible is indubitable. But the spirit of times has considerably changed and there is consolation in the fact that there is a great yearning for education among most people in the State. It is only in recent years that the idea of valeing and appreciating to the fullest extent primary and middle education not to speak of higher education and of getting the children educated in large numbers has permeated even the minds of the people living in some remote places of the State. So primary and middle must be started or opened in large numbers with a view to spread and develop education as years roll by. Mysore can hope at no distant date to see persons making great strides in education and particularly higher University Education.

The one thought that is dominant or uppermost in the minds of the people of Mavally and its neighbouring places is to get the present Mavally Government Kanada Boys' School into complete Middle School. The present Kanada Boys' School is located in front of the Main Road leading to Lal-Bagh i.e., opposite Mavally Reading Room and Library. The site on which the present school stands is the munificient gift of the late Mr. Subbiah whose main desire was to get the school converted into complete Middle School in the near future. What an irony of fate befell him is difficult to surmise! It is to be deeply regretted that the object of the donor was not accomplished at all. His really valuable life has been snatched away by the merciless or cruel hand of death before he could cherish benevolent and long felt desires. Mavally especially can ill afford his death.

I need hardly point out that students living in Mavally, its neighbouring places and even remote parts such as Suddaguntapalya, Vodderapalya, Madivala, Siddapur, Maranahally, Kanakanapalya, Visweswarapuram, Kotamangalam etc., suffer more or less inconvenience or difficulty arising out of long distances from which they have to come all the way in order to attend their respective schools situated near Ulsoor gate, Yelahanka gate and Fort. It is therefore for the benefit of these students coming off long distances that an urgent necessity of converting the present school into complete Middle School has arisen. This is the problem of the home that engrosses the attention of the people of this place and its suburbs. It is, therefore, earnestly prayed on behalf of the people that our benign Government will sympathetically and favourably consider the legitimate and reasonable demand of the people and pass orders to its effect as early as possible and thus earn the undying gratitude of the people. Suffice it to say that a great boon will be conferred on the people of Mavally and its vicinity if the prayer of conversion into complete Middle School is conceded by the ever generous Government.

B. L. BYANNA.

ಉಪನ್ಯಾಸ.

ಧಾರವಾಡ ಹಾವೇರಿಪೇಟೆ ಮುರುಘಾಮಠದ ಫ್ರೀಬೋರ್ಡಿಂಗಿಗೆ ಶ್ರೀ ಕೆ. ಎಚ್. ರಾಮಯ್ಯನವರು ಬ್ಯಾರಿಸ್ಟರ ಮೈಸೂರ ಸಂಸ್ಥಾನದ ಕೋಆಪರೇಟಿವ್ ಸೊಸಾಯಿಟಿಯ ರಜಿಸ್ಟ್ರಾರ, ಇವರು ಆಗಸ್ಟು ತಾ|| 24ರ ದಿವಸ ದಯಮಾಡಿಸಿದ್ದರು. ಆ ಕಾಲಕ್ಕೆ ಶ್ರೀ ಸೆಟ್ಟಿ, ಅಸಿಸ್ಟಂಟ್ ರಜಿಸ್ಟ್ರಾರ ಧಾರವಾಡ ಇವರ ಅಧ್ಯಕ್ಷತೆಯಕೆಳಗೆ ಶ್ರೀ ರಾಮಯ್ಯನವರು ವಿದ್ಯಾರ್ಥಿಗಳಿಗೆ ಉಪಯೋಗವಾದ ಭಾಷಣವನ್ನು ಮಾಡಿದರು. ಇದಲ್ಲದೆ ಶ್ರೀ ಸಿದ್ಧರಾಮಪ್ಪ ಪಾವಟೆ, ಬಿ. ಎ., ಎಲ್ ಎಲ್. ಬಿ, ವಕೀಲ, ಹುಬ್ಬಳ್ಳಿ ಇವರು "ಲಿಂಗಾಂಗಸಾಮರಸ್ಯದ ಜ್ಞಾನ" ಎಂಬ ವಿಷಯದ ಮೇಲೆ ಆಗಸ್ಟ 26ರ ದಿವಸ ಶ್ರೋತೃಜನರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಭಾಷಣಮಾಡಿದರು. ಸೆಕ್ರೆಟರಿ, ಡಿಬೇಟಿಂಗ ಯೂನಿಯನ್.

ಹುಲ್ಲಳ್ಳಿ ಮಠದ ಜೀರ್ಣೋದ್ಧಾರ.

ನಂಜನಗೂಡು ತಾ|| ಹುಲ್ಲಳ್ಳಿಯಲ್ಲಿ ಕಪಿಲಾನದಿಯತೀರದಿಂದ 30 ಗಜದೂರದಲ್ಲಿರುವ ಹುಲ್ಲಹಳ್ಳಿಮಠವು ಶ್ರೀ ಮುರುಘಾಶಾಖೆಗೆ ಸೇರಿದ ಒಂದು ವಿರಕ್ತಮಠವಾಗಿದೆ. ಈ ಮಠದ ಮೂಲಗುರುಗಳಾದ ಶ್ರೀ ರುದ್ರಮುನಿಸ್ವಾಮಿಗಳ ಗದ್ದುಗೆಯೂ ಶಿವಲಿಂಗಮೂರ್ತಿಯೂ ಇದ್ದು ಸ್ಥಲಪರಸ್ಥಲಗಳ ಭಕ್ತಾದಿಗಳಿಂದ ಆರಾಧಿಸಲ್ಪಡುತ್ತಿದ್ದುವು. ಕಪಿಲಾನದಿಯಲ್ಲಿ ಕೆಲವು ದಿವಸಗಳ ಕೆಳಗೆ ಬಂದಿದ್ದ ಪೂರ್ಣಪ್ರವಾಹವು ಈ ಮಠದೊಳಕ್ಕೆನುಗ್ಗಿ ಸ್ವಾಮಿಗದ್ದುಗೆ ವಿನಹ ಇತರ ಕಡೆಯಲ್ಲೆಲ್ಲ 6-7 ಅಡಿ ನೀರು ನಿಂತಿದ್ದುದರಿಂದ ಮಠದ ಕಟ್ಟಡವೆಲ್ಲವೂ ಬಿದ್ದುಹೋಗಿರುವದು, ಮತ್ತು ಒಳಗಿದ್ದ ಪದಾರ್ಥಗಳೆಲ್ಲಾ ನೀರಿನಲ್ಲಿ ಕೊಚ್ಚಿಹೋದವು. ಆದರೆ ದೈವಾಧೀನದಿಂದ ಪ್ರಾಣನಷ್ಟವೇನೂ ಆಗಲಿಲ್ಲವು. ಮಠದಲ್ಲಿ ವಾಸಮಾಡಲು ನೆರಳಿಲ್ಲವಾದ್ದರಿಂದ ಚನ್ನಮಲ್ಲಶಿವಯೋಗೀಂದ್ರವರ್ಯರು ತಮ್ಮ ನಿಜಾಶ್ರಮವನ್ನು ಬಿಟ್ಟು ಗ್ರಾಮದೊಳಗೆ ಭಕ್ತರ ಮನೆಯನ್ನು ಆಶ್ರಯಿಸಬೇಕಾಗಿ ಬಂದುದಕ್ಕಾಗಿ ಚಿಂತಾಸಕ್ತರಾಗಿರುವರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ಈ ಪ್ರಖ್ಯಾತ ಪುರಾತನ ವಿರಕ್ತಮಠದ ಜೀರ್ಣೋದ್ಧಾರವನ್ನು ಸಮಸ್ತ ಸದ್ಭಕ್ತವೀರಶೈವ ಮಹಾಜನರು ಯಥಾಶಕ್ತಿದ್ರವ್ಯಸಹಾಯದಿಂದ ಮಾಡಿಸಿ ಕೃತ್ಯಭಾಗಿಗಳಾಗಬೇಕೆಂದು ಪ್ರಾರ್ಥಿಸುವ, ಚನ್ನಬಸವದೇವರು,

ಮಠಾಭಿಮಾನಿ.

ಮೈಸೂರು ಸಂಸ್ಥಾನದ ರಾಜಮನೆತನಕ್ಕೂ ಶ್ರೀ ಚೌಡಯ್ಯದಾನಪುರಮಠಕ್ಕೂ ಇರುವ ಸಂಬಂಧವು.

ತಮ್ಮ 3ನೇ ಆಗಸ್ಟ 1924ನೇ ಇಸವಿಯ ಸ್ಟಾರಪತ್ರಿಕೆಯ ಸಂಚಿಕೆಯಲ್ಲಿ ಶ್ರೀಮನ್ಮಹಾ ದಕ್ಷಿಣಕಾಶೀ ಸಿಂಹಾಸನ ಚೌಡಯ್ಯದಾನಪುರ ಸಂಸ್ಥಾನದ ವೇದೋದ್ಧಾರ ಪದವೀಧರರಾದ ಪಟ್ಟದಸ್ವಾಮಿ ಶ್ರೀ ವಿರೂಪಾಕ್ಷ ಒಡೆಯರವರು ನಮ್ಮ ಮೈಸೂರ ಸಂಸ್ಥಾನದ ಮಹಾರಾಜರವರ ಅತಿಥಿಗಳಾಗಿದ್ದು ಅವರಲ್ಲಿ ಮಾಡಿದ ಸಂಭಾಷಣೆಯಿಂದ ಅವರ ಪಾಂಡಿತ್ಯಕ್ಕೆ ಸಂತೋಷಿಸಿ ಬಹುಮಾನವನ್ನು ಹೊಂದಿದರೆಂಬಂಶವನ್ನು ಓದಿ ಸಕಲಾಭಿಮಾನಿಗಳಿಗೂ ಅತಿಶಸಂತೋಷವಾಗಿರುವದೇನೋ ನಿಜ. ಆದರೆ ಇಷ್ಟಕ್ಕೇನೆ ಸಂತೃಪ್ತರಾಗಿರಬೇಕೋ? ಯಾವ ಚೌಡಯ್ಯದಾನಪುರ ಸಂಸ್ಥಾನದ ಪೂರ್ವ ದೇವರ್ಷಿ ಶ್ರೀ ಶಿವದೇವ ಒಡೆಯರವರ ಪ್ರಸಾದದಿಂದಲೇ ಮೈಸೂರ ಮಹಾರಾಜರ ಪೂರ್ವಜರಾದ ಯದುಕುಲೋತ್ತಮ ದೇವರಸರು [illegible] 12ನೇ [illegible] ವೀರಶ್ರೀಯನ್ನು ಪಲ್ಲಿಸಿ, ಸೈನ್ಯದೊಡನೆ ಪರವಿತ್ರರಾಜಗುರು ಶ್ರೀ ಶಿವದೇವ ಒಡೆಯರ ದರ್ಶನಾರ್ಥವಾಗಿ ಶ್ರೀಮನ್ಮಹಾ ಉಜ್ಜಯಿನಿ ಪುರವರಾಧೀಶ್ವರಂ ಚಂದ್ರಗುಪ್ತಾನ್ವಯಂ ಗುಹಕುಲಕಮಲಮಾರ್ತಾಂಡ ಕದನಪ್ರಚಂಡ ಪನ್ನಿಬ್ಬರಗಂಡಮಂಡಲೀಕ ಭೈರವಂ ಶರಣಾಗತ ವಜ್ರಪಂಜರಂ ಯದುಕುಲನೃಪೋತ್ತಮ ಹಿರಿಯದೇವರಸರು ಕೊಳ್ಳೇಗಾಲದಿಂದ ಬಂದು ತಮ್ಮ ತಾಯಿರಸ ಪದ್ಮಾದೇವಿಯರ ಕೈಯಿಂದ 11 ಗ್ರಾಮಗಳನ್ನು ದಾನವನ್ನಾಗಿಕೊಟ್ಟು ಪರವಿತ್ರ ಶ್ರೀ ದೇವರಂ ಶ್ರೀ ಗುಹಾನ್ವಯಂ ರಾಜಗುರು ವಿನಾರಾಧಿಸಿದರು. ಎಂಬುವಬಗ್ಗೆ ಈಗೂ ಚವುಡಯ್ಯದಾನಪುರ ಸಂಸ್ಥಾನದಲ್ಲಿರುವ ಶಿಲಾಶಾಸನಗಳಿಂದ ವೇದ್ಯವಾಗುತ್ತದೆ. ಯಾವ ಶ್ರೀ ಶಿವದೇವ ಒಡೆಯರವರ ವರದಿಂ ಈ ಮೈಸೂರು ಸಂಸ್ಥಾನವು ದೇದೀಪ್ಯಮಾನವಾಗಿ ಪ್ರಜ್ವಲಿಸುತ್ತಿದ್ದಿತೋ ಅಂಥಾ ಪೀಠದ ಸದ್ಯದ ಸ್ವಾಮಿ ಶ್ರೀ ವಿರೂಪಾಕ್ಷ ಒಡೆಯರು ವೇದಾದಿ ಸಕಲ ಶಾಸ್ತ್ರಕೋವಿದರಾಗಿ ಜಗನ್ಮಾನ್ಯರಾಗಿರುವರೋ ಅಂಥಾ ಪೀಠದ ಪರಸ್ಪರ ಸಂಬಂಧವು ಮರೆತುಹೋಗಿರುವ ಕಾಲವೈಚಿತ್ರ್ಯಕ್ಕೆ ಯಾರುತಾನೇ ದುಃಖಪಡಲಿಕ್ಕಿಲ್ಲ? ಆದ್ದರಿಂದ ನಮ್ಮ ದಯಾಳು ಮಹಾರಾಜರವರೂ ಮತ್ತು ಅವರ ಬಂಧುವರ್ಗದವರೂ ಇಂಥಾ ಮಹತ್ವ ವಿಷಯಗಳನ್ನೆಲ್ಲಾ ಪರಿಶೀಲಿಸಿ ಪೂರ್ವಸ್ಥಿತಿಯಕಡೆಗೆ ಗಮನಕೊಡುವಂತೆ ಶ್ರೀ ಪರಮಾತ್ಮನು ಅನುಗ್ರಹಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ತಮ್ಮ ವಿಧೇಯ,
ಎಸ್. ಹಾಲಪ್ಪ, ಮಾಸ್ತರ ಸಂತೇಬೆನ್ನೂರು, ತಾಲ್ಲೂಕ ಚನ್ನಗಿರಿ.

ಅರಕಲಗೂಡು ತಾ|| ಬಸವಾಪಟ್ಟಣ.

ಕಳೆದ ಮಾಹೆ ತಾ|| 10 ರಲ್ಲಿ ಶುರುವಾದ ಮಳೆ ತಾ|| 26 ರವರೆಗೂ ಅವಿಚ್ಛಿನ್ನವಾಗಿ ಹುಯಿದದ್ದರಿಂದ ಬಾಗಾಯಿತು ಮತ್ತು ತರೀ ಜಮೀನುದಾರರಿಗೆ ಆಗಿರುವ ಪೈರುನಷ್ಟ ಎಷ್ಟು ಹೇಳಿದರೂ ತೀರದು. ಕಾವೇರಿ ನದಿಯ ಪ್ರವಾಹ ವಿಪರೀತವಾಗಿ ಬಂದದ್ದರಿಂದ ಒಂದುವಾರ ಅರಕಲಗೂಡು ಪ್ರಾಂತ್ಯದ ಸಂಚಾರಕ್ಕೆ ಅವಕಾಶವಿಲ್ಲವಾಯಿತು. ರಾಮನಾಥಪುರದಲ್ಲಿ ಅನೇಕ ಮನೆಗಳ ನಾಶದಿಂದ ಉಂಟಾಗಿರುವ ಕಷ್ಟನಷ್ಟಗಳು ಕಣ್ಣಿಂದ ನೋಡಿ ಸಹಿಸಲು ಅಸಾಧ್ಯವಾಗಿರುತ್ತೆ. ನಮ್ಮ ದಯಾಳುಗಳಾದ ಅಮಲ್ದಾರರವರು ಸಂಚಾರಮಾಡಿ ಪ್ರವಾಹದಿಂದ ಕಷ್ಟಕ್ಕೆಸಿಕ್ಕಿದ ಜನಗಳಿಗೆ ಧೈರ್ಯಕೊಡುತ್ತಾ ಸದ್ಯಕ್ಕೆ ಅನುಕೂಲವಾದ ಏರ್ಪಾಡು ಮಾಡುತಿದ್ದುದು ಸ್ತೋತ್ರಾರ್ಹವೇಸರಿ. ಈ ಊರಿನ ಮಿಡ್ಲ್‌ಸ್ಕೂಲಿಗೆ ಹೊಸಲವಾಜಮೆಯಂತೆ, 3 ಇಂಗ್ಲೀಷ್ ಮಾಸ್ತರುಗಳನ್ನೂ ಒಬ್ಬ ಕನ್ನಡಾ ಮಾಸ್ತರನ್ನೂ ಕೊಟ್ಟದ್ದು ಒಂದು ತಿಂಗಳೊಳಗಾಗಿ ಒಬ್ಬ ಇಂಗ್ಲಿಷ್ ಮಾಸ್ತರನ್ನು ತೆಗೆದು ಆಜಾಗಕ್ಕೆ ಕನ್ನಡಾ ಮಾಸ್ತರನ್ನು ಕೊಟ್ಟಿರುವುದು ತುಂಬಾ ಶೋಚನೀಯವಾದ ಸಂಗತಿ. ಮಿಡ್ಲ್‌ಸ್ಕೂಲಿಗೆ ಇಂಗ್ಲೀಷು ಮಾಸ್ತರು ಹೆಚ್ಚಾಗಿರುವುದರಿಂದ ಅಭಿವೃದ್ಧಿಗೆ ಕಾರಣವಾಗಿರುತ್ತೆ. ಹೀಗಿರುವಲ್ಲಿ ಸರಿಯಾದ ಕ್ವಾಲಿಫಿಕೇಷನ್ನಿನಲ್ಲಿದ್ದ ಇಂಗ್ಲೀಷು ಮಾಸ್ತರನ್ನು ವರ್ಗಾಯಿಸಿ ಆ ಜಾಗಕ್ಕೆ ಇಂಗ್ಲೀಷು ಮಾಸ್ತರನ್ನು ಕಳುಹಿಸದಿರುವುದು ಇಲ್ಲಿನ ಪ್ರಜೆಗಳ ದೌರ್ಭಾಗ್ಯ. ಈಗಲೂ ನಮ್ಮ ಡಿ|| ಇ|| ರು ಕೂಡಲೆ ಹಾಲಿ ಇರುವ 2 ಕನ್ನಡ ಮಾಸ್ತರುಗಳ ಪೈಕಿ ಬಹಳ ಮಟ್ಟಿನ ಯೋಗ್ಯತೆಯುಳ್ಳ ಒಂದು ಹ್ಯಾಂಡನ್ನು ಮಾತ್ರ ಇರಿಸಿ, ಇನ್ನೊಂದು ಕನ್ನಡಾ ಹ್ಯಾಂಡಿಗೆ ಬದಲಾಗಿ S.S.L.C. ಯೋಗ್ಯತೆಯ ಒಂದು ಇಂಗ್ಲೀಷು ಹ್ಯಾಂಡನ್ನು ದಯಪಾಲಿಸುವದರ ಮೂಲಕ ಹೊಸದಾದ ಈ ಮಿಡ್ಲ್ ಸ್ಕೂಲನ್ನು ಉತ್ತಮಸ್ಥಿತಿಗೆ ಬರುವಂತೆ ಮಾಡಿಯಾರೆಂದು ನಿರೀಕ್ಷಿಸಲ್ಪಟ್ಟಿದೆ. 20 ರೂ. ನ ಲವಾಜಮ ಭರ್ತಿವಿಚಾರ ಇವರಿಗೇ ಸೇರಿದ್ದಾದ್ದರಿಂದ ಇದ್ದುದರಲ್ಲಿ ಜಾಗ್ರತೆಯಿಂ ಈ ಜಾಗದಲ್ಲಿರುವ ಕನ್ನಡಾ ಮಾಸ್ತರನ್ನು ಬದಲಾಯಿಸಿ ಇಂಗ್ಲೀಷು ಮಾಸ್ತರನ್ನು ಏರ್ಪಡಿಸಿಕೊಡುವುದರಲ್ಲಿ ಉದಾರವಾದ ಮನಸ್ಸು ಮಾಡುತ್ತಾರೆಂದು ನಂಬಿರುತ್ತೆ. ಈ ಊರಿನ ಪ್ರೈಮರಿ ಸ್ಕೂಲಿಗೆ ಜವಾನನ ಲವಾಜಮ ಇಲ್ಲದಿರುವುದು ತುಂಬಾ ತೊಂದರೆ ಆಗಿರುತ್ತೆ. 130 ಹುಡುಗರು ಇರುವ ಈ ಸ್ಕೂಲಿಗೆ ಜವಾನನನ್ನು ಕೊಡುವ ಭಾಗದಲ್ಲಿ ಇನ್ನೂ ಬಾಲಕರು ಹೆಚ್ಚಿ, ಹಾಜರಾತಿಯು ಕ್ರಮಪಡುವುದರಲ್ಲಿ ಯಾವ ಅಡ್ಡಿಯೂ ಇಲ್ಲ. ನಮ್ಮ ಡಿ|| ಇ|| ರವರು ಕೂಡಲೆ ಒಬ್ಬ ಜವಾನನನ್ನು ನೇಮಿಸಿಕೊಡುವರೆಂದು ನಿರೀಕ್ಷಿಸಿದೆ. ಈ ಊರಿನ ಎಲ್ಲಾ ಸ್ಕೂಲ್‌ಗಳಲ್ಲೂ ಕಾಲಕ್ಕೆ ಸರಿಯಾಗಿ ಪಾಠಗಳು ನಡೆಯುತ್ತಾ ಬರುತ್ತಿದೆ. ಪ್ರೈಮರಿಸ್ಕೂಲಿನ ಹತ್ತರ ಇರುವ ದೊಡ್ಡ, ಪ್ರಯೋಜನವಿಲ್ಲದ್ದಾಗಿದೆಯಲ್ಲದೆ, ಈ ಮಳೆಗಾಲದಲ್ಲಿ ನೀರುನಿಂತು ದುರ್ವಾಸನೆಯಿಂದ ಸ್ಕೂಲಿನ ಬಾಲಕರ ಆರೋಗ್ಯಕ್ಕೆ ಕುಂದಕವಾಗಿರುತ್ತೆ. ಇಲ್ಲಿನ ಬಸವೇಶ್ವರ ಕೋ-ಆ-ಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗ್ ನಡೆಯಿತು. ವೃತ್ತಪತ್ರಿಕೆಗಳಿಗಾಗಿ 20 ರೂ. ತೆಗೆದಿರುತ್ತಾರೆ. ಆದರೆ ಒಂದು "ಫ್ರೀ" ರೀಡಿಂಗ್‌ರೂಂ ಮಾಡುವುದರಲ್ಲಿ ಪ್ರೆಸಿಡೆಂಟರಿಗೂ, ಮೆಂಬರುಗಳಿಗೂ ಈಶ್ವರನು ಬುದ್ಧಿ ಕೊಡಬೇಕೆಂದು ಅನೇಕರು ಹಾರೈಸುತ್ತಿದಾರೆ, ಪ್ರೆಸಿಡೆಂಟರಾದ ರಾ|| ಹ|| ಮಲ್ಲಶೆಟ್ಟರು ಉದಾರವಾದ ಮನಸ್ಸು ಮಾಡಿದಲ್ಲದೆ ಈ ಕೆಲಸ ಆಗುವುದಿಲ್ಲ. ಆದಕಾರಣ ಭಗವಂತನು ಚಿರಕಾಲ ಅವರ ಹೆಸರನ್ನು ಶಾಶ್ವತಗೊಳಿಸುವಂತೆ ಪ್ರೇರಿಸುವನೆಂದು ನಂಬಿದೆ. ಗ್ರಾಮಾಭಿಮಾನಿ.

ಹೆಗ್ಗಡದೇವನಕೋಟೆ ತಾ|| ಅಂತರಸಂತೆ.

ಇಲ್ಲಿನ ವಿ. ಇ. ಸ್ಕೂಲ್ ಮಾಸ್ತರ್ ನಂಜುಂಡಯ್ಯನವರು ಓದಲಿಕ್ಕೆ (ಟ್ರೈನಿಂಗ್) ಹೋಗಿರುವುದರಿಂದ ಅವರ ಸ್ಥಾನಕ್ಕೆ ಬಿದರಹಳ್ಳಿ ಸ್ಕೂಲ್ ಹೆಡ್‌ಮಾಸ್ತರ್ ಆರ್. ಕೃಷ್ಣಅಯ್ಯಂಗಾರ್‌ರವರು ಬಂದಿದ್ದಾರೆ. ಇವರು ವಿದ್ಯಾರ್ಥಿಗಳಿಗೆ ಪಾಠಹೇಳಲಿಕ್ಕೆ ತುಂಬಾ ಸಮರ್ಥರಾಗಿರುವಂತೆ ಕಾಣುತ್ತಾರೆ, ಆದರೆ ಇಲ್ಲಿನ ಸ್ಕೂಲ್‌ಮಾಸ್ತರುಗಳ ವಾಸಕ್ಕೆ ಮನೆಯಿಲ್ಲದೆ ತುಂಬಾತೊಂದರೆಯಾಗಿರುವದರಿಂದ ಸ್ಕೂಲು ಊರೊಳಗೆ ಇರುವುದಕ್ಕಿನ್ನ ರಸ್ತೆಪಕ್ಕದಲ್ಲಿ ಅಂದರೆ ಅಂತರಸಂತೆ, ಅಂಗಡಿಬೀದಿ, ಸೂರ್ಲಗುಪ್ಪೆ, ಈ ಗ್ರಾಮಗಳ ಮಧ್ಯೆ ಸ್ಕೂಲ್ ಕಟ್ಟಡಕಟ್ಟಿಸಿ ಸ್ಕೂಲ್‌ಯಿಟ್ಟದ್ದರೆ ಇದುವರೆಗೆ ಸ್ಕೂಲ್ ತುಂಬಾ ಅಭಿವೃದ್ಧಿಸ್ಥಿತಿಗೆ ಬಂದು ಎ. ವಿ. ಸ್ಕೂಲ್ ಆಗುವುದಕ್ಕಿತ್ತು. ಈಗಲು ಕೂಡ ಇಲ್ಲಿನ ರೈತರು ಈ ಏರ್ಪಾಡುಮಾಡುವುದುತ್ತಮ. ಇಲ್ಲಿನ ಕೆರೆ ತುಂಬಾ ಹೀನಸ್ಥಿತಿಗೆ ಬಂದಿದೆ. ಈ ವಿಚಾರ ಯಾರಿಗೂ ಬೇಕಾಗಿಲ್ಲ. ನೀರುಮಾತ್ರ ಸರ್ವರಿಗೂಬೇಕು. ಕೆರೆಗೆ ನೀರು ಭರ್ತಿಯಾಗಿ ನದಿಪ್ರವಾಹದಂತೆ ಹರಿಯುತ್ತಾಯಿದೆ. ಏರಿಮಧ್ಯೆ ಮೂರುನಾಲ್ಕುಕಡೆ ಕಿಂಡಿಬಿಟ್ಟು ನೀರು ಹರಿಯುತ್ತಾಯಿದೆ. ಇದನ್ನು ದುರಸ್ತುಮಾಡದೆ ಬಿಟ್ಟಲ್ಲಿ ಕೆರೆಗೆ ಅಪಾಯಸಂಭವಿಸುವುದರಲ್ಲಿ ಸಂಶಯವಿಲ್ಲ. ಈ ಕೆರೆಯಲ್ಲಿ ಇಲ್ಲಿನ ಫಾರೆಸ್ಟ್ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಮತ್ತು ಇಂಜಿನೀಯರ್ ಅಧಿಕಾರಿಗಳೇ ಆದಿಯಾಗಿ ಅನೇಕ ಪ್ರಯಾಣಿಕರೂ ಇಲ್ಲಿನ 34 ಊರಿನವರು ಸಹ ನೀರನ್ನು ಪಯೋಗಿಸುತ್ತಾರೆ. ಇದರಲ್ಲಿ ಜನರು ಕೊಳಕುಬಟ್ಟೆ ಒಗೆಯುವುದು ದನಕರುಗಳನ್ನು ತೊಳೆಯುವುದು ಇತ್ಯಾದಿ ರೀತಿಯಿಂದ [illegible] ಈ ಪ್ರಾಂತವರಿಗೆ [illegible] ಕ್ಕೆ ನಮ್ಮ ತಾಲ್ಲೋಕ್ ಅಮಲ್ದಾರ್ ಸಾಹೇಬರವರ ಮತ್ತು ಪೊಲೀಸ್ ಆಫೀಸರುಗಳ ದಯೆ ಒದಗಬೇಕಾಗಿದೆ. ಈ ಪ್ರಾಂತ್ಯ ಕಳೆದ ತಿಂಗಳು ತಾ|| 12 ರ ಲಾಗಾಯಿತು ಒಂದೆ ಸಮನಾಗಿ, ದಿನ 1 ಕ್ಕೆ 3-4 ಅಂಗುಲದಲಾಗಾಯಿತು 8-9 ಅಂಗುಲದವರೆಗೆ ಮಳೆಬೀಳುತ್ತಾಯಿದ್ದು ಯಾವ ಕಡೆನೋಡಿದರೂ ನೀರೇ ಕಾಣುತ್ತಿತ್ತು. ಕಪಿಲಾಪ್ರವಾಹ ಒಂದುಕಡೆ, ಬಡವರ ಕಣ್ಣೀರಿನ ಪ್ರವಾಹ ಮತ್ತೊಂದುಕಡೆ, ಕಪಿಲಾ ಕರೆಬೊಂತು, ರೈತರ ಜಮೀನು ಸಾಗರವಾಯಿತು, ಬೆಳೆ ಹಾಳಾಯಿತು; ಮಠಮನೆಮಾಯವಾಯಿತು, ಬಡವರ ದುಃಖಪ್ರಾಪ್ತಿಯಾಯಿತು. ಈ ಮಧ್ಯೆ ಟಿಂಬರ್ ವ್ಯಾಪಾರಿಗಳ ಮನಸ್ಸು ಧಡಕಹತ್ತಿತು, ನಾಟಾವಗೈರೆ ಮರವು ತೇಲಹತ್ತಿತು, ಮೂಗುಪ್ರಾಣಿ ಸಾಯುಹತ್ತಿತು. ಹೆಗ್ಗಡದೇವನಕೋಟೆ, ಮೈಸೂರು ಮಧ್ಯೆ ಓಡಾಡುತ್ತಿದ್ದ ಮೋಟಾರ್ ತಟಸ್ಥವಾಯಿತು. ಈ ತಾಲ್ಲೋಕಿಗೆ ಸೇರಿದ ಅನೇಕ ಗ್ರಾಮಗಳು ಅಂದರೆ, ಮಾಗಡಹಳ್ಳಿ, ಕಡು, ಬೆಳತೂರು, ನಿಸನ, ಮಗ್ಗೆ, ಮಳಲಿ, ಹೊಸಹೊಳಲು, ಕೃಷ್ಣರಾಜಪುರ, ಸುಂದಾಪುರ, ಎರೆಕೊರೆಹುಂಡಿ, ನಾಗೆಗೌಡನಹುಂಡಿ, ಜೀಯಾರ, ಬೀಚನಹಳ್ಳಿ, ಕಾರಬಾನೆ, ಸರೂರ್, ವಗೈರೆ ಅರ್ಧ-ಪೂರ್ತಿ ಮುಚ್ಚಿಹೋಗಿದ್ದುವು. ರೈತರುಗಳಿಗೆ ಉಂಟಾಗಿರುವ ಕಷ್ಟವನ್ನು ಹೇಳಲು ಅಸಾಧ್ಯ. ಯಾವ ಕಡೆ ನೋಡಿದರೂ ಬಡವರಗೋಳೆ. ನಮ್ಮ ಧರ್ಮಪ್ರಭುಗಳಾದ ಖಾವಂದರವರ ಸಂಪೂರ್ಣದಯೆ ಈಕಡೆ ಒದಗಬೇಕಾಗಿದೆ. ಮೈಸೂರು-ಮಾನಂದವಾಡಿ ರೋಡಿನಲ್ಲಿ, ತಗ್ಗಾಗಿರುವ ಸ್ಥಳಗಳಲ್ಲಿ ಕೆಲವುಕಡೆ, 10 ಅಡಿ ಲಾಗಾಯಿತು 20-25 ಅಡಿ ಎತ್ತರವೂ ¼ ಫರ್ಲಾಂಗ್ ಲಾಗಾಯಿತು 2-3 ಫರ್ಲಾಂಗ್ ಅಗಲವೂ, ನೀರುನಿಂತು ಸಂಚಾರಕ್ಕೆ ತೊಂದರೆಯಾಗಿ ಆಹಾರವೊದಗುವುದೇ ಕಷ್ಟವಾಗಿತ್ತು. ಈ ಗ್ರಾಮದ ಪೊಂದು ಮನೆಯಲ್ಲಿ ರಾತ್ರಿ ಮಲಗಿದ್ದವೇಳೆ ಗೋಡೆಬಿದ್ದು 10-12 ವರ್ಷದ ಒಬ್ಬ ಮುಸಲ್ಮಾನರ ಹುಡುಗನು ಮೃತ್ಯುವಶನಾದನಂತೆ. ಅನೇಕ ದಿವಸಗಳ ಲಾಗಾಯ್ತು ಇಂಥಾ ಮಳೆ ಹೊಳೆ ಮತ್ತು ನಷ್ಟವು ಇರಲಿಲ್ಲವೆಂದು ಜನಗಳು ಅಂದುಕೊಳ್ಳುತ್ತಿದ್ದಾರೆ. ಇದೇ ಕಷ್ಟನಷ್ಟಗಳ ಮಧ್ಯೆ ನಮ್ಮ ಮೈಸೂರು ಗೌರ್ನಮೆಂಟ್‌ನವರು ದನಗಳ ಹುಲ್ಲುಬನ್ನಿ (ಗ್ರೇಜಿಂಗ್) ವಸೂಲ್ ಮಾಡಲು ಶುರುಮಾಡಿರುವುದಾಗಿ ತಿಳಿಯಬರುತ್ತೆ. ಹೋದವರ್ಷ ಮೇಲ್ಕಂಡ ಕಷ್ಟನಷ್ಟಗಳ ದೆಸೆಯಿಂದ ಒಂದು ವರ್ಷ ಇದನ್ನು ನಿಲ್ಲಿಸಿರುವುದಾಗಿ ಅಪ್ಪಣೆಯಾಯಿತು. ಆದರೆ ಇದಕ್ಕೆ ಮುಂಚೆಯೇ ವಸೂಲಿಕೆಲಸ ಪೂರ್ತಿಯಾಗಿದ್ದ ಪ್ರಯುಕ್ತ 1 ವರ್ಷಕ್ಕೆ ಬದಲು 1 ತಿಂಗಳು ಕೂಡ ಬಿಟ್ಟಂತಾಗಲಿಲ್ಲ. ಈಸಾರಿಯಾದರೂ ನಮ್ಮ ಘನಸರ್ಕಾರದವರು ಇದನ್ನು ನಿಲ್ಲಿಸಿ ಬಡವರ ಗೋಳನ್ನು ಸ್ವಲ್ಪಮಟ್ಟಿಗಾದರೂ ಪರಿಹರಿಸುವರೆಂದು ನಂಬಿದೆ.

ಪ್ರಜಾಭಿಮಾನಿ.

ಹಳ್ಳಿಗಾಡಿನ ವಿದ್ಯಾಭ್ಯಾಸ.

ಭಂಡಾರಕ್ಕೆ ಹಣವನ್ನು ಭರ್ತಿಮಾಡತಕ್ಕ ಹಳ್ಳಿಗಾಡ ಜನರಿಗೆ ವಿದ್ಯಾಭ್ಯಾಸದ ಇಲಾಖೆಯಿಂದ ಪ್ರಯೋಜನ ದೊರೆಯುತ್ತಿರುವುದಿಲ್ಲೆಂದು ಶ್ರೀಯುತ ರೆಡ್ಡಿಯವರು ವಿದ್ಯಾಭ್ಯಾಸದ ಇನ್ಸ್‌ಪೆಕ್ಟರು ಜನರಲ್‌ರವರಾಗಿದ್ದಾಗ್ಗೆ ಈ ಇಲಾಖೆಯಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದರು. ಸರ್ಕಾರದವರು ಈ ಇಲಾಖೆಗಾಗಿ ಸುಮಾರು ಅರ್ಧಕೋಟಿ ರೂಪಾಯಿಗಳವರಿಗೆ ಖರ್ಚುಮಾಡುತ್ತಲಿರುವರು. ಸಾಲದುದಕ್ಕೆ ಪ್ರಜೆಗಳ ಮೇಲೆ ವಿದ್ಯಾಭ್ಯಾಸದ ತೆರುಗೆಯೊಂದು ಸಹ ಹೇರಲ್ಪಟ್ಟಿರುವುದು. ಆದರೇನು ರಾಮೇಶ್ವರಕ್ಕೆ ಹೋದರೂ ಶನೇಶ್ವರ ಬಿಡದೆಂಬಂತೆ, ಹಳ್ಳಿಗಾಡ ಜನರಿಗೆ ಈ ಇಲಾಖೆಯಿಂದ ನ್ಯಾಯವಾಗಿ ದೊರೆಯಬೇಕಾಗಿರುವಷ್ಟು ಪ್ರಯೋಜನವು ಮಾತ್ರ ದೊರೆಯುತ್ತಿರುವುದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಹಳ್ಳಿಯ ಜನರು ವಿದ್ಯಾವಂತರಾಗದೆ, ಪಟ್ಟಣವಾಸಿಗಳಾದ ಅಲ್ಪಸ್ವಲ್ಪ ಜನರು ವಿದ್ಯಾವಂತರಾದ ಮಾತ್ರಕ್ಕೆ ದೇಶವು ಮುಂದಕ್ಕೆ ಬರಲಾರದು. ಅದು ಸಮಸ್ತ ವಿಧದಲ್ಲೂ ಊರ್ಜಿತಸ್ಥಿತಿಗೆ ಬರಬೇಕಾದರೆ, ಒಟ್ಟು ಜನಸಂಖ್ಯೆಯಲ್ಲಿ 100 ಕ್ಕೆ 95 ರಂತೆ ಇರುವ ಹಳ್ಳಿಗಾಡ ಜನರು ಸಹಿತ ವಿದ್ಯಾವಂತರಾಗಬೇಕಾದದ್ದು ತುಂಬಾ ಅವಶ್ಯವಾಗಿರುತ್ತದೆ. ಇದುವರಿವಿಗೆ ನಡೆದುಬಂದ ಪದ್ಧತಿಯಲ್ಲಿ ಹಳ್ಳಿಗಾಡ ಜನರೂ ಸಹ ತಪ್ಪದೆ ವಿದ್ಯಾವಂತರಾಗಬೇಕೆಂಬುದಕ್ಕೆ ಸಾಧಕವಾದ ಸರಿಯಾದ ಆಚರಣೆಗಳು ರೂಢಿಗೆ ತರಲ್ಪಡದೆ ಹೋಗಿರುವುದರಿಂದಲೇ ಮಾದ್ರಿ ಸಂಸ್ಥಾನವೆಂದು ಕರೆಸಿಕೊಳ್ಳುವ ನಮ್ಮ ದೇಶದಲ್ಲಿ ಈಗಲೂ 100ಕ್ಕೆ 95 ರಂತೆ ಅವಿದ್ಯಾವಂತರ ಸಂಖ್ಯೆಯು ಕಂಡುಬರುತ್ತಿರುವುದು. ಪಟ್ಟಣಗಳಲ್ಲಿ ಮಧ್ಯಮ ಮತ್ತು ಪ್ರೌಢ ತರಗತಿಗಳ ವಿದ್ಯಾಭ್ಯಾಸದ ವಿಷಯವನ್ನು ಬಿಟ್ಟರೂ ಅಲ್ಲಿಯ ಪ್ರೈಮರಿ ತರಗತಿಗಳ ವಿದ್ಯಾಭ್ಯಾಸಕ್ಕೂ ಸಹ ಬೇಕಾದಷ್ಟು ಸ್ಕೂಲುಗಳು ಶಕ್ತರಾದ ಉಪಾಧ್ಯಾಯರು, ಒಳ್ಳೆಯಸ್ಕೂಲು ಕಟ್ಟಡಗಳು, ಅತಿಶಯ ಸಾಮಾನು ಸಲಕರಣೆಗಳು ವಿದ್ಯಾರ್ಥಿಗಳ ವಿಹಾರವಿನೋದಕ್ಕೆ ಮೇಲಾದ ಅನುಕೂಲತೆಗಳು ಇತ್ಯಾದಿ ಯಾವತ್ತೂ ಸೌಕರ್ಯಗಳು ಕಲ್ಪಿಸಿಕೊಡಲ್ಪಟ್ಟಿರುವುವು. ಹಳ್ಳಿಗಳಲ್ಲಿ ಎಲ್ಲಿಯೋ ಹತ್ತಿಪ್ಪತ್ತು ಊರುಗಳಿಗೊಂದರಂತೆ ಸ್ಕೂಲುಗಳಿರತಕ್ಕದ್ದು. ಅಲ್ಲೂ ಸ್ಕೂಲಿಗೆ ಕಟ್ಟಡ ಇದ್ದರೆ ಇತ್ತು, ಇಲ್ಲದಿದ್ದರೆ ಇಲ್ಲ. ಮಠ, ಸತ್ರ, ದೇವಸ್ಥಾನ ಇವೊಂದೂ ಇಲ್ಲದಿದ್ದರೆ ಮುಸೀ, ಗೌಡರಮನೆಯ ಜಗಲಿ ಇತ್ಯಾದಿ ಕಡೆಗಳಲೆಲ್ಲಾ ಸ್ಕೂಲು ನಡಿಯಬೇಕು. ಇನ್ನು ಸ್ಕೂಲಿಗೆ ಸಂಬಂಧಪಟ್ಟ ಸಾಮಾನುಗಳೆಂದರೆ, ಯಾವುದೊಂದಿದ್ದರೆ ಇತ್ತು ಇಲ್ಲದಿದ್ದರೆ ಇಲ್ಲವೇ ಇಲ್ಲ. ಬೆತ್ತವಂತೂ ಮಾಸ್ತರ ಕೈಯ್ಯಲ್ಲಿದ್ದೇಯಿರತಕ್ಕದ್ದು. ಇದು ಇವರಿಗೆ ಮಾಮೂಲು ಹಕ್ಕುದಾರಿಯೇ ಸರಿ. ಈ ಬೆತ್ತದ ಸಹಾಯದಿಂದಲೇ ಹುಡುಗರಿಗೆ ಭೂಮಿಯು ಗುಂಡಾಗಿರುವುದು, ಸೂರ್ಯನ ಸುತ್ತಲೂ ಭೂಮಿಯು ತಿರುಗುವುದು ಹಗಲು ರಾತ್ರಿಗಳಾಗುವುದು ಇತ್ಯಾದಿಗಳೆಲ್ಲಾ ತಿಳಿಯಬೇಕು. ಇನ್ನು ಉಪಾಧ್ಯಾಯರ ವಿಷಯವಾಗಿ ಸ್ವಲ್ಪ ತಿಳಿಯತಕ್ಕದ್ದದೆ. ಹಳ್ಳಿಯ ಜನರೆಂದರೆ ಬುದ್ಧಿವಂತಿಕೆಯಲ್ಲಿ ಹೀನರಾದವರು ಸರಿಯಷ್ಟೆ! ಬೀಜದಂತೆ ಗಿಡ ತಂದೆಯಂತೆ ಮಕ್ಕಳು. ಬಾಲ್ಯಸಂಸ್ಕಾರವಂತೂ ಉತ್ತಮಪ್ರಕಾರದ್ದು. ಹೀಗೆ ಮನೆಯಲ್ಲಿ 8-10 ವರ್ಷಗಳವರಿವಿಗೆ ಕಲಿಯಬೇಕಾದ್ದನ್ನೆಲ್ಲಾ ಕಲಿತು, ಮಧ್ಯೆ 2-3 ವರ್ಷಗಳ ಮಟ್ಟಿಗೆ ದನಗಳನ್ನು ಕಾಯುವ ಆಕ್ಟಿಂಗ್ ಕೆಲಸಮಾಡಿ ಅನೇಕ ಹಳ್ಳಿಯ ಹುಡುಗರು ಪಾಠಶಾಲೆಗೆ ಬಂದರೆ ಬರಬೇಕು. ಹೀಗೆ ಹುಡುಗರ ತಲೆಯು ಮೊದಲೇ ನಾಜೂಕಾದ್ದು, ಉಪಾಧ್ಯಾಯರೂ ತುಸು ಹೆಚ್ಚೂ, ಕಮ್ಮಿ ಇಂಥವರೇ ಗಂಟುಬಿದ್ದಲ್ಲಿ ಕೇಳುವುದೇನು! ಉಪಾಧ್ಯಾಯರಾಗಲು ಇರಬೇಕಾದ ಯಾವತ್ತು ಲಕ್ಷಣಗಳಿಲ್ಲದಿದ್ದರೂ ಅವನಲ್ಲಿ ಲೋ|| ಸೆ|| ಪರೀಕ್ಷೆಯ ಪ್ಯಾಸಾದ ಸರ್ಟಿಫಿಕೇಟ್ ಒಂದಿದ್ದರೆ ತೀರಿತು. ಈಗಿನ ಹಳ್ಳೀ ಸ್ಕೂಲ್ ಮಾಸ್ತರುಗಳಲ್ಲಿ ಇನ್ಸ್‌ಪೆಕ್ಟರ್ ಸಾಹೇಬರಿಗೆ [illegible] (ಅರ್ಜಂಟು) [illegible]

ಬಾದ ರಸ್ತೆಗಳಿಗೂ, ಸೇತುವೆಗಳಿಗೂ ಮತ್ತು ನೀರಾವರಿಯ ನಾಲೆಗಳಿಗೂ ಕೂಡಲೆ ದುರಸ್ತಿ ಕಾಂಗಾರಿಗಳನ್ನು ನಡಿಸತಕ್ಕದೆಂದು ಸರ್ಕಾರದವರು ಹುಕುಮನ್ನು ಸಾದರ್ಮಾಡಿದ್ದರು. ಮನೆಮಠಗಳನ್ನು ಕಳೆದುಕೊಂಡು ಆಹಾರಕ್ಕಿಲ್ಲದೆ ಪೇಚಾಡುತ್ತಿರುವ ಗ್ರಾಮಸ್ಥರು, ಇನ್ನೂ ಎತ್ತರದಲ್ಲಿರುವ ಮತ್ತು ಸಮೀಪವಾದ, ತಕ್ಕ ನಿವೇಶನಗಳಲ್ಲಿ ಕ್ಷಿಪ್ರದಲ್ಲೇ ಮನೆಗಳನ್ನು ಕಟ್ಟಿಕೊಂಡು ನೆಲೆಯಾಗಿ ನಿಲ್ಲುವಂತೆ ಅವರಿಗೆ ಸಹಾಯಮಾಡುವುದಕ್ಕಾಗಿ, ಕಷ್ಟನಿವಾರಣೆಯನ್ನು ಮಾಡತಕ್ಕ ಜನರನ್ನು ದ್ರವ್ಯ, ಆಹಾರಸಾಮಗ್ರಿಗಳೇ ಮುಂತಾದುವುಗಳೊಡನೆ ಕಷ್ಟಕ್ಕೊಳಗಾದ ಪ್ರಾಂತ್ಯಗಳಿಗೆ ಕಳುಹಿಸಿಕೊಡತಕ್ಕದೆಂದೂ ಸರ್ಕಾರದವರು ಅಪ್ಪಣೆಮಾಡಿದ್ದರು. ಎಲ್ಲಾ ಕಡೆಗಳಲ್ಲಿಯೂ ಸ್ಥಳೀಯ ಆಫೀಸರುಗಳೂ ಮತ್ತು ಅನೇಕ ಖಾಸಗಿಜನರೂ, ವಿಶೇಷ ಮುಂಜಾಗ್ರತೆಯಿಂದಲೂ ಧೈರ್ಯದಿಂದಲೂ ಮತ್ತು ಸಹಾಯ ತತ್ಪರತೆಯಿಂದಲೂ ಕೆಲಸಮಾಡಿರುತ್ತಾರೆಂಬ ಸಂಗತಿಯು ಸಂತೋಷಕರವಾಗಿದೆ. ಮತ್ತು ಅನೇಕ ಸ್ಥಳಗಳಲ್ಲಿ ಜನರು ಊರುಗಳನ್ನು ಬಿಟ್ಟು ಹೋಗುವ ವಿಷಯದಲ್ಲಿ ಅವರು ತಮ್ಮ ಶಕ್ತಿ ಸಾಹಸಗಳನ್ನು ತೋರಿಸಿ ಕೂಡಲೆ ಜನರಿಗೆ ಸಹಾಯವನ್ನು ಮಾಡದೆ ಇದ್ದ ಪಕ್ಷದಲ್ಲಿ, ವಿಶೇಷ ಪ್ರಾಣಹಾನಿಯುಂಟಾಗುತ್ತಿತ್ತೆಂದು ನಮಗೆ ಖಚಿತವಾಗಿ ಕಂಡುಬಂದಿದೆ. ಯಾವುದೊಂದು ಪ್ರಾಣಹಾನಿಯೂ ಉಂಟಾಗದೆ ಇದ್ದುದಕ್ಕಾಗಿ ನಾವು ಕೃತಜ್ಞರಾಗಿರಬೇಕಾಗಿದೆ. ಸಕಾಲದಲ್ಲಿ ಎಚ್ಚರಿಕೆಗಳನ್ನು ಕೊಟ್ಟುದರಿಂದ ಚರಸ್ವತ್ತುಗಳು ಉಳಿದುಕೊಂಡುವು. ಇಲ್ಲದೆಹೋಗಿದ್ದ ಪಕ್ಷದಲ್ಲಿ ಅವುಗಳು ಪ್ರವಾಹದಲ್ಲಿ ಎಂದೋ ಕೊಚ್ಚಿಹೋಗುತ್ತಿದ್ದುವು.

ಹಾಲಿ ಇರತಕ್ಕ ಸ್ಥಿತಿಯ ವಿಚಾರವಾಗಿ ಕೆಲವು ತಪಸೀಲುಗಳನ್ನು ನಾವು ಈಗ ಸಾಧ್ಯವಾದಮಟ್ಟಿಗೂ ವಿವರಿಸಲಿಚ್ಛಿಸುವೆವು. ಕ್ಷಿಪ್ರದಲ್ಲೇ ಎಷ್ಟುಮಟ್ಟಿಗೆ ಕಷ್ಟನಿವಾರಣೆಯ ಕಾರ್ಯವನ್ನು ನಡೆಸಬೇಕೆಂಬ ಅಂಶವನ್ನು ಅವುಗಳಿಂದ ನಿರ್ಧರಿಸಬಹುದು.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕಾವೇರಿ, ಕಪಿಲಾ, ಹೇಮಾವತಿ ನದಿಗಳ ಮತ್ತು ತಾರಕಾ ಮುಂತಾದ ಸಣ್ಣ ತೊರೆಗಳ ಕೆಳಗಿನ ಪ್ರದೇಶಗಳು ವಿಶೇಷವಾಗಿ ನಷ್ಟಕ್ಕೊಳಗಾದುವು. ನಂಜನಗೂಡು, ಯಡತೊರೆ, ಶ್ರೀರಂಗಪಟ್ಟಣ, ತಿರುಮಕೂಡ್ಲು ನರಸೀಪುರ, ಈ ಟೌನುಗಳಲ್ಲದೆ ಒಂದುನೂರ ಎರಡು ಗ್ರಾಮಗಳಿಗೆ ಭಾರಿನಷ್ಟವುಂಟಾಯಿತು. ಈ ಪ್ರದೇಶಗಳಲ್ಲಿ ಸುಮಾರು 4,000 ಮನೆಗಳು ಬಿದ್ದುಹೋಗಿವೆ. ಭಾಟಾರಸ್ತೆಗಳೂ, ಕೆರೆಗಳೂ ನಾಲೆಗಳೂ ಮತ್ತು ಅಣೆಗಳೂ ಅಲ್ಲಲ್ಲೇ ಒಡೆದುಹೋಗಿವೆ. ಜನರೂ ಬಂಡಿಗಳೂ ತಿರುಗಾಡುವುದಕ್ಕೆ ಅಡಚಣೆಯುಂಟಾಗಿದೆ. ನಂಜನಗೂಡಿನ ರಸ್ತೆಯ ಮತ್ತು ರೈಲ್ವೆಯ ಸೇತುವೆಗೂ, ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆಗೂ ವಿಶೇಷ ಅಪಾಯವುಂಟಾಗುವಂತಿದ್ದಿತು. ಆದರೆ ಅಲ್ಪಸ್ವಲ್ಪ ನಷ್ಟದಲ್ಲೇ ಪರ್ಯವಸಾನವಾಯಿತು. ಸುಮಾರು 8,000 ಎಕರೆಗಳ ಜಮೀನಿಗೆ ನಷ್ಟವುಂಟಾಗಿದೆ ಮತ್ತು ಅವುಗಳ ಪೈಕಿ ಕೆಲವು ಭಾಗಗಳು ಸಂಪೂರ್ಣವಾಗಿ ಕೊಚ್ಚಿಹೋಗಿವೆ. ಕೊಚ್ಚಿಹೋಗಿರುವ ಜಮೀನುಗಳನ್ನು ಸಾಗುವಳಿ ಜಮೀನಿಗೆ ಸೇರಿಸಿಕೊಂಡು ಈ ಜಮೀನುಗಳನ್ನೆಲ್ಲಾ ಪುನಃ ಸಾಗುವಳಿಗೆ ತರಬೇಕಾದರೆ, ರೈತರಿಗೆ ಈಗಾಗಲೇ ಉಂಟಾಗಿರುವ ಫಸಲು ನಷ್ಟದ ಜತೆಗೆ ಭಾರಿ ಖರ್ಚು ತಗಲುವುದು. ಮಳೆ ಬೆಳೆಗಳಿಲ್ಲದೆ ಜೀವನೋಪಾಯಕ್ಕೆ ವಿಶೇಷ ಕಷ್ಟವುಂಟಾಗಿರುವ ಈಗಿನ ಕಾಲಸ್ಥಿತಿಯಲ್ಲಿ ತಮ್ಮ ಮನೆಗಳನ್ನೂ, ಗುಡಿಸಲುಗಳನ್ನೂ, ಪಶುಗಳನ್ನೂ ಮತ್ತು ಇತರ ಸ್ವತ್ತುಗಳ ಪೈಕಿ ಅನೇಕವನ್ನೂ ಕಳೆದುಕೊಂಡು ಜೀವನಕ್ಕಿಲ್ಲದೆ ಪೇಚಾಡುತ್ತಿರುವ ನೂರಾರು ಮಂದಿ ಪಂಚಮರನ್ನೂ ಮತ್ತು ಇತರ ಬಡಜನರನ್ನೂ ನಾವು ಖುದ್ದು ನೋಡಿರುತ್ತೇವೆ. ಸದ್ಯಕ್ಕೆ ಅವರ ಕಷ್ಟನಿವಾರಣೆಯನ್ನು ಮಾಡಲು ಹಂಗಾಮಿ ಏರ್ಪಾಡುಗಳನ್ನೇನೋ ಮಾಡಿದೆ; ಆದರೆ, ಈ ಜನರು ಪುನಃ ಮನೆಗಳನ್ನು ಕಟ್ಟಿಕೊಂಡು ನೆಲೆಯಾಗಿ ನಿಲ್ಲುವಂತೆ ಮಾಡಲು ಒಂದು ಕ್ರಮವಾದ ಏರ್ಪಾಡು ಕೂಡಲೆ ಅವಶ್ಯಕವಾಗಿದೆ. ಈಗ ಎಲ್ಲರೂ ಒಂದೇಸಮವಾಗಿ ಕಷ್ಟಪಡುತ್ತಿರುವ ಕಾಲ. ಒಬ್ಬರಿಗೆ ಒಳ್ಳೆಯದಾಗಿ ಮತ್ತೊಬ್ಬರಿಗೆ ಮಾತ್ರ ಕೆಡಕಾಗುವ ಸಂಭವವೇನೂ ಇಲ್ಲ. ಆದುದರಿಂದ ಈ ಜನರಿಗೆ ಮೊದಲಿದ್ದ ಗ್ರಾಮನಿವೇಶನಕ್ಕಿಂತಲೂ ಇನ್ನೂ ಆರೋಗ್ಯವಾದ ಗ್ರಾಮನಿವೇಶನಗಳನ್ನೊದಗಿಸಿ ಅವರು ಸರಿಯಾದಮೇಲ್ವಿಚಾರಣೆಯಿಂದ ಮನೆಗಳನ್ನು ಕಟ್ಟಿಸುವಂತೆ ಅವರಿಗೆ ಸಹಾಯಮಾಡಲು ಇದೊಂದು ಮಹತ್ತಾದ ಸಂದರ್ಭವಾಗಿದೆ. ನಷ್ಟಕ್ಕೊಳಪಟ್ಟಿರುವ ಎಲ್ಲಾ ಟೌನುಗಳನ್ನೂ ಮತ್ತು ಗ್ರಾಮಗಳನ್ನೂ ಈರೀತಿಯಾಗಿ ಪುನಃ ಕಟ್ಟಿಸುವುದಾದರೆ ಒಂದು ಮಹತ್ತಾದ ಕೆಲಸವನ್ನು ನೆರವೇರಿಸಿದಂತಾಗುವುದು. ಈ ವಿಷಯದಲ್ಲಿ ಸರ್ಕಾರದವರಮೇಲೆ ಬೀಳುವ ಭಾರಿಜವಾಬ್ದಾರಿಯನ್ನು ನಿರ್ವಹಿಸಲು ನಾವು ಹಿಂತೆಗೆಯುವುದಿಲ್ಲ; ಪರಂತು, ಇಂಥಾ ಸಂದರ್ಭದಲ್ಲಿ, ಶ್ರೀಮನ್ಮಹಾರಾಜರವರ ಪ್ರಜೆಗಳೂ ಮತ್ತು ಮೈಸೂರು ಸಂಸ್ಥಾನದ ಪುರನಿವಾಸಿಗಳೂ, ಕಷ್ಟಕ್ಕೆಸಿಕ್ಕಿರುವ ತಮ್ಮ ಜತೆಯ ಪುರನಿವಾಸಿಗಳಿಗೂ ಮತ್ತು ಪ್ರಜೆಗಳಿಗೂ ಉದಾರವಾಗಿ ಸಹಾಯಮಾಡತಕ್ಕದ್ದು ಅವಶ್ಯಕರ್ತವ್ಯವಾಗಿದೆ. ಆ ಕರ್ತವ್ಯವನ್ನು ಪರಿಪಾಲಿಸುವುದರಲ್ಲಿ ಅವರು ಈಗ ಮುಂದಾಳುಗಳಾಗಿ ಬಂದು, ಕಷ್ಟನಿವಾರಣೆಯ ವಿಚಾರದಲ್ಲೂ, ಸ್ಥಿತಿಗತಿಗಳನ್ನು ಪೂರ್ವಸ್ಥಿತಿಗೆ ತರುವ ವಿಚಾರದಲ್ಲೂ ತಪ್ಪದೆ ತಾವು ಸಹಾಯಕರಾಗಬೇಕು. ಗೌರವಾರ್ಹರೂ ಮತ್ತು ನಮ್ಮ ಸಹೋದ್ಯೋಗಿಗಳೂ ಆದ ಮೊದಲನೇ ಮತ್ತು ಎರಡನೇ ಮೆಂಬರುಗಳು, ಶಿವಮೊಗ್ಗ, ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿನ ಸ್ಥಿತಿಗತಿಗಳನ್ನು ಕುರಿತು ತಪಸೀಲಾದ ವಿವರವನ್ನು ನಿಮಗೆ ತಿಳಿಸುವರೆಂದು ನಾವು ನಿರೀಕ್ಷಿಸುತ್ತೇವೆ. ಅವುಗಳನ್ನು ನಾವೂ ಇಲ್ಲಿ ಸಂಕ್ಷೇಪವಾಗಿ ಸೂಚಿಸುವೆವು.

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ, ಪ್ರವಾಹದ ನೀರು ಶಿವಮೊಗ್ಗಾ ಟೌನಿಗೆ ನುಗ್ಗಿದ್ದಿತಲ್ಲದೆ, ತುಂಗಾ ಮತ್ತು ಭದ್ರಾ ನದಿಗಳ ದಡಗಳಲ್ಲಿರುವ 15 ಮುಖ್ಯವಾದ ಗ್ರಾಮಗಳು ವಿಶೇಷ ನಷ್ಟಪಟ್ಟಿವೆ. ಶಿವಮೊಗ್ಗೆಯಲ್ಲಿ 735 ಮನೆಗಳು ನೀರಿನಲ್ಲಿ ಮುಳುಗಿ ಹೋಗಿದ್ದುವು. ಅವುಗಳ ಪೈಕಿ 250 ಮನೆಗಳು ಬಿದ್ದುಹೋಗಿವೆ. ಇತರ ಕಡೆಗಳಲ್ಲಿ ಬಿದ್ದುಹೋದ ಮನೆಗಳ ಒಟ್ಟು ಸಂಖ್ಯೆಯು ಸುಮಾರು 1,000 ವೆಂದು ಅಂದಾಜಾಗಿದೆ. ಮೈಸೂರಿನಲ್ಲಿ ಆದಂತೆಯೇ ಸಾಗುವಳಿ ಜಮೀನುಗಳಿಗೆ ನಷ್ಟವುಂಟಾಗಿದೆ.

ಕಡೂರು ಡಿಸ್ಟ್ರಿಕ್ಟಿನಲ್ಲಿ, ಕೆಲವು ಗ್ರಾಮಗಳನ್ನು ಬೇರೆ ಕಡೆಗೆ ಬದಲಾಯಿಸಬೇಕಾಗಿದ್ದಾಗ್ಯೂ ಅಲ್ಲಿನ ಗ್ರಾಮಗಳಿಗೆ ವಿಶೇಷ ನಷ್ಟವುಂಟಾಗಿಲ್ಲ. ಆದರೆ ಬತ್ತದ ಪೈರಿನ ಜಮೀನುಗಳಿಗೆ ಪ್ರವಾಹಗಳಿಂದ ವಿಶೇಷ ನಷ್ಟವುಂಟಾಗಿರುವಂತೆ ಕಂಡು ಬರುತ್ತದೆ. ಇದರಿಂದ ವ್ಯವಸಾಯಗಾರರಿಗೆ ವಿಶೇಷನಷ್ಟವುಂಟಾಗಿರಲೇಬೇಕು.

ಹಾಸನ ಡಿಸ್ಟ್ರಿಕ್ಟಿನಲ್ಲಿ, ಸುಮಾರು 100 ಮನೆಗಳು ನಷ್ಟವಾಗಿ, ರಾಮನಾಥಪುರಗ್ರಾಮಕ್ಕೆ ವಿಶೇಷ ನಷ್ಟವುಂಟಾಗಿದೆಯೇ ಹೊರತು ಮಿಕ್ಕ ಕಡೆಗಳಲ್ಲಿ ನಷ್ಟವು ಅಲ್ಪವಾಗಿದೆ. ರಸ್ತೆಗಳಿಗೂ, ನಾಲೆಗಳಿಗೂ ಮತ್ತು ಅಣೆಗಳಿಗೂ ಅಪಾಯವುಂಟಾದುದರಿಂದ ರೈತರಿಗೆ ವ್ಯವಸಾಯದ ಕೆಲಸದಲ್ಲಿ ತೊಂದರೆಯಾಗಿದೆ.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ, ಹರಿಹರಕ್ಕೆ ವಿಶೇಷ ನಷ್ಟವುಂಟಾಗಿದೆ. ಎಲ್ಲಾ ಕಡೆಗಳಲ್ಲಿಯೂ ಕಷ್ಟನಿವಾರಣೆಯ ಬಗ್ಗೆ ನಡೆಸತಕ್ಕ ಕೆಲಸಗಳನ್ನು ಪ್ರಾರಂಭಿಸಿದೆ ಮತ್ತು ನಾವೂ, ಸರ್ಕಾರದ ಇತರ ಮೆಂಬರುಗಳೂ, ನಮ್ಮ ಸಂಚಾರಗಳಲ್ಲಿ ನಡೆಸಿದ ತನಿಖೆಯ ಫಲಿತಾಂಶವಾಗಿ ಈ ದಿನ ಸಾದರ್ಮಾಡಿದ ಹುಕುಮುಗಳಿಂದ ಮೇಲ್ಕಂಡ ಕೆಲಸಗಳು ಎಷ್ಟುಮಟ್ಟಿನವು ಮತ್ತು ಅವುಗಳ ಉದ್ದೇಶವೇನೆಂಬುದು ವ್ಯಕ್ತವಾಗುವುದು. ಸರ್ಕಾರದವರು ಅವಶ್ಯಕವಾದ ಕೆಲಸಗಳನ್ನೆಲ್ಲಾ ಮಾಡಬಹುದಾದಾಗ್ಯೂ, ಬಡಜನರ ಸಂಕಟಗಳನ್ನು ಪರಿಹರಿಸಿ ಕಷ್ಟವನ್ನು ಕಡಮೆಮಾಡತಕ್ಕ ಬಗ್ಗೆ ಸಮಸ್ತ ಜನರೂ ಒಟ್ಟಾಗಿ ಪ್ರಯತ್ನಿಸಬೇಕಾದ ಸಂದರ್ಭವು ಈಗ ಪ್ರಾಪ್ತವಾಗಿದೆ. ಈ ಉದ್ದೇಶದಿಂದ, ಈ ಮಹಾಜನರ ಸಭೆಯನ್ನು ಏರ್ಪಡಿಸಿದೆ. ಮತ್ತು ಈದಿನ ಏರ್ಪಡತಕ್ಕದಾಗಿರುವ ಸೆಂಟ್ರಲ್ ರಿಲೀಫ್ ಕಮಿಟಿಯವರು ಜನಸಾಮಾನ್ಯದ ಸಹಕಾರವನ್ನು ಪಡೆದು, ಕಷ್ಟಕ್ಕೆ ಗುರಿಯಾಗಿರುವ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಶೀಘ್ರವಾಗಿ ಹಂಚುವ ಬಗ್ಗೆ ಸಾಧ್ಯವಾದಷ್ಟು ಹೆಚ್ಚು ಮೊತ್ತವನ್ನು ಚಂದಾ ಎತ್ತಲನುಕೂಲಿಸುವುದೆಂದು ಉತ್ಸಾಹದಿಂದ ಹಾರೈಸುತ್ತೇವೆ.

ನಾವು ಮೈಸೂರಿನಲ್ಲಿ ತಿಳಿಯಪಡಿಸಿದ ಪ್ರಕಾರ, ಶ್ರೀಮನ್ಮಹಾರಾಜರವರು ಈ ಫಂಡಿಗೆ 15,000 ರೂಪಾಯಿಗಳನ್ನು ಕೃಪಾಪೂರ್ವಕವಾಗಿ ಅನುಗ್ರಹಿಸಿದ್ದಾರೆ ಮತ್ತು ಶ್ರೀಮದ್ಯುವರಾಜರವರು ಈ ಸೆಂಟ್ರಲ್ ಕಮಿಟಿಯ ಅಧ್ಯಕ್ಷರಾಗಲು ದಯೆಯಿಟ್ಟು ಸಮ್ಮತಿಸಿರುವುದು, ಈದಿನ ನಾವು ಬೆಂಗಳೂರಿನಲ್ಲಿ ಆರಂಭಿಸುತ್ತಿರುವ ಈ ಏರ್ಪಾಡಿಗೆ ಶುಭಸೂಚನೆಯಾಗಿದೆ. ಶ್ರೀಮನ್ಮಹಾರಾಜರವರಿಗೂ ರಾಜಕುಟುಂಬ ವರ್ಗದವರಿಗೂ ಜನರ ಯೋಗಕ್ಷೇಮ ಮತ್ತು ಸುಖಸಂತೋಷಗಳ ವಿಷಯದಲ್ಲಿರುವ ಉತ್ಸುಕತೆಗೂ, ಬಡಬಗ್ಗರಿಗೆ ಅತ್ಯಲ್ಪ ಸಂಕಟವುಂಟಾದಲ್ಲಿ ಅವರು ಪಡುವ ವಿಶೇಷ ಅನುತಾಪಕ್ಕೂ ಮೈಸೂರು ದೇಶಕ್ಕೆ ಯಾವ ಹೊಸನಿದರ್ಶನವೂ ಬೇಕಾಗಿಲ್ಲವೆಂದು ದೃಢವಾಗಿ ಹೇಳುತ್ತೇವೆ; ಆದರೆ ಈದಿನ ಇಲ್ಲಿ ನಾವು ಯಾವ ಏರ್ಪಾಡನ್ನೂ ನೆರವೇರಿಸುವುದಕ್ಕಾಗಿ ಸಭೆಸೇರಿರುವೆವೋ ಆ ಏರ್ಪಾಡಿಗೆ, ಶ್ರೀಮನ್ಮಹಾರಾಜರವರ ಮತ್ತು ಘನತೊಂದಿದ ಅವರ ಸಹೋದರರ ಕೃಪಾಪೂರ್ವಕವಾದ ವರ್ತನೆಗಳಿಂದ ಆ ಉತ್ತೇಜನವೂ ಪ್ರೋತ್ಸಾಹವೂ ಅವುಗಳು ಅವಶ್ಯಕವಾಗಿದ್ದಲ್ಲಿ-ಉಂಟಾಗಬೇಕಾಗಿದೆ.

ಈ ಸಂಸ್ಥಾನದಲ್ಲಿ ಪ್ರವಾಹಗಳ ದೆಸೆಯಿಂದ ಉಂಟಾದ ನಷ್ಟಕಷ್ಟಗಳ ವಿಷಯದಲ್ಲಿ ತಮಗಿರುವ ಅಪಾರವಾದ ವ್ಯಾಕುಲವನ್ನು ವ್ಯಕ್ತಗೊಳಿಸಿ ಇಂಡಿಯಾ ಸರ್ಕಾರದವರು ತಂತಿಯವರ್ತಮಾನವನ್ನು ಕೊಟ್ಟಿದ್ದಾರೆಂಬುದನ್ನೂ, ಇದಲ್ಲದೆ ಮಹಾನುಭಾವರಾದ ವೈಸ್ರಾಯರವರು ಕಷ್ಟಕ್ಕೊಳಗಾದವರ ವಿಷಯದಲ್ಲಿ ತಮಗೆ ಸ್ವತಃ ಉಂಟಾಗಿರುವ ಅನುತಾಪವನ್ನು ಶ್ರೀಮನ್ಮಹಾರಾಜರವರಿಗೆ ತಿಳಿಯಪಡಿಸಿದ್ದಾರೆಂಬುದನ್ನೂ ಕೇಳಿ ತಮ್ಮಲ್ಲರಿಗೂ ಹರ್ಷವುಂಟಾಗಬಹುದು.

ಈ ಮೈಸೂರು ಸಂಸ್ಥಾನದ ಹೊರಗೆ ಇರುವ ಸಂಸ್ಥಾನದ ಹಿತೈಷಿಗಳಿಗೆ ಇದರ ಚಿಂತೆಯು ಇಲ್ಲದೆ ಇಲ್ಲ. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ವೈಸ್ ಪ್ರೆಸಿಡೆಂಟರಿಂದ ಒಂದು, ಪೆಟ್ಲಾಡ್ ಎಂಬ ಸ್ಥಳದಲ್ಲಿನ ನಮಗೆ ಅಪರಿಚಿತರಾದೊಬ್ಬರಿಂದ ಮತ್ತೊಂದು, ಹೀಗೆ ವಿಶೇಷ ಅನುತಾಪ ಸೂಚಕವಾದ ಎರಡು ತಂತಿಯ ವರ್ತಮಾನಗಳು ನಮ್ಮಲ್ಲಿಗೆ ಬಂದಿವೆ. ಅವುಗಳೆರಡನ್ನೂ ತಮಗೆ ಓದಿ ಹೇಳುತ್ತೇವೆ:—

"(1) ತಮ್ಮ ರಾಜ್ಯದಲ್ಲಿ ಪ್ರವಾಹಗಳ ದೆಸೆಯಿಂದ ಕಷ್ಟಕ್ಕೊಳಗಾದವರ ಸಂಕಟಗಳನ್ನು ಕೇಳಿ ಅಪಾರವಾದ ದುಃಖವುಂಟಾಯಿತು. ಸದರಿ ಜನರ ವಿಷಯದಲ್ಲಿ ನಾವು ನಮ್ಮ ಅನುತಾಪವನ್ನು ಸೂಚಿಸುತ್ತೇವೆ. ಈ ಜನರ ಸಂಕಟವನ್ನು ಪರಿಹರಿಸಲು ತಮ್ಮ ಸರ್ಕಾರದವರು ಸರ್ವಪ್ರಯತ್ನವನ್ನೂ ಮಾಡುವರೆಂದು ನಂಬಿದ್ದೇವೆ. ಈ ದಿನ ಸಾಯಂಕಾಲ ಬೊಂಬಾಯಿಯ ಸರ್ವೆಂಟ್ಸ್ ಆಫ್ ಇಂಡಿಯಾ ಮಂದಿರದಲ್ಲಿ ನಡೆಯುವಂತೆ ಏರ್ಪಡಿಸಿರುವ ಸಭೆಯಲ್ಲಿ ಸದರಿ ಜನರಿಗೆ ಹಂಚುವ ಬಗ್ಗೆ ಹಣವನ್ನು ಚಂದಾ ಎತ್ತುವುದಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಲಾಗುವುದು. ಬ್ರಿಟಿಷ್ ಇಂಡಿಯಾದಲ್ಲಿಯೂ ಮತ್ತು ಇಂಡಿಯಾ ದೇಶದ ಸಂಸ್ಥಾನಗಳಲ್ಲಿಯೂ ಕಷ್ಟಕ್ಕೆ ಗುರಿಯಾದವರಿಗೆ ಸಹಾಯಮಾಡುವುದಕ್ಕಾಗಿ ಏರ್ಪಟ್ಟಿರುವ ಸಂಸ್ಥೆಗಳವರು ಪ್ರವಾಹದ ದೆಸೆಯಿಂದ ಉಂಟಾದ ನಷ್ಟದ ಸ್ವಭಾವ, ಅದರ ಪರಿಮಾಣ ಮತ್ತು ಈಗ ಕೈಗೊಂಡಿರುವ ಮತ್ತು ಉದ್ದೇಶಿಸಿರುವ ಸಹಾಯದ ಏರ್ಪಾಡುಗಳು, ಇವುಗಳನ್ನು ತಿಳಿಯಲಪೇಕ್ಷಿಸುತ್ತಾರೆ."

"ಪರಿಮಿತವಾದ ವರಮಾನವುಳ್ಳ ನಮ್ಮ ಕಮಿಟಿಯವರಿಂದ ಅವರಿಗೆ ಹೇಗೆ ಮತ್ತು ಯಾವರೀತಿಯಲ್ಲಿ ಒತ್ತಾಸೆಯಾಗಬಹುದೆಂಬುದನ್ನು ದಯೆಯಿಟ್ಟು ತಿಳಿಸಿ. ಹೆಚ್ಚಾಗಿ ಹಣವನ್ನು ಚಂದಾ ಎತ್ತಲು ಕಾಲವು ಅನುಕೂಲವಾಗಿಲ್ಲ. ಆದಾಗ್ಯೂ ಬೊಂಬಾಯಿನವರು ತಮಗೆ ಸಾಧ್ಯವಾದ ಸೇವೆಯನ್ನು ಮಾಡಲು ಅಪೇಕ್ಷಿಸುವರು."

"(2) ಪ್ರವಾಹಗಳ ದೆಸೆಯಿಂದ ಆದ ನಷ್ಟಗಳ ವಿವರಗಳನ್ನು ತಿಳಿಸಿರಿ ಮತ್ತು ಯಾವ ಪ್ರಾಂತ್ಯಗಳಿಗೆ ವಿಶೇಷ ನಷ್ಟವಾಯಿತೆಂಬುದನ್ನೂ, ಕಷ್ಟನಿವಾರಣೆಯ ಬಗ್ಗೆ ಮಾಡಿದ ಏರ್ಪಾಟುಗಳನ್ನೂ, ಬಣ್ಣಹಾಕುವ ಕಾರ್ಖಾನೆಯ ರಾಜರತ್ನನಾರಾಯಣಭಾನ್ ಕೇಶವಲಾಲ್‌ಯವರಿಗೆ ತಂತಿಯ ಮೂಲಕ ತಿಳಿಸಿರಿ."

ಕೋಲಾರದ ಚಿನ್ನದಗಣಿಯ ಬೋರ್ಡಿನವರೂ ಸಹ ಸರ್ಕಾರದವರ ತಿಳುವಳಿಕೆ ಬಗ್ಗೆ ಈ ಕೆಳಗೆ ಕಂಡ ನಿರ್ಣಯಗಳನ್ನು ಕಳುಹಿಸಿದ್ದಾರೆ:—

"(1) ಬೋರ್ಡಿನವರಿಗೆ ಉಂಟಾದ ಅಪಾರವಾದ ಅನುತಾಪವನ್ನು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತಿಳಿಯಪಡಿಸತಕ್ಕದ್ದು.

"(2) ಮೈಸೂರು ಸಿಟಿಯಲ್ಲಿ ಏರ್ಪಡಿಸಿರುವ ಪ್ರವಾಹ ಕಷ್ಟನಿವಾರಣೆಯ ಫಂಡಿಗೆ ಚಂದಾ ಎತ್ತಲು ಕ್ರಮಜರುಗಿಸತಕ್ಕದ್ದು."

ಇದಲ್ಲದೆ ಬೆಂಗಳೂರಿನ ಅಮೆಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್ನಿನವರು ಪ್ರವಾಹ ಕಷ್ಟನಿವಾರಣೆಯ ಫಂಡಿಗೆ ನೆರವಾಗುವಂತೆ ಅದರ ಪ್ರಯೋಜನಾರ್ಥವಾಗಿ ಸೆಪ್ಟಂಬರು ತಿಂಗಳ ಆದಿಭಾಗದಲ್ಲಿ ಒಂದು ನಾಟಕವನ್ನಾಡಲು ನಿರ್ಧರಿಸಿರುವುದನ್ನು ಪ್ರಸಿದ್ಧಪಡಿಸುವಂತೆ ನಮ್ಮನ್ನು ಕೇಳಿರುತ್ತಾರೆ.

ಮಹಾಶಯರೆ, ಈ ಸಂಸ್ಥಾನದೊಳಗೂ ಹೊರಗೂ ಜನರಿಗೆ ಅನುತಾಪವುಂಟಾಗಿರುವ ಚಿಹ್ನೆಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಈ ಅನುತಾಪವು ಕಾರ್ಯರೂಪದಲ್ಲಿ ಧನಸಹಾಯವಾಗಿ ಪರಿಣಮಿಸುವುದೆಂದು ಕೋರುತ್ತೇವೆ.

ಶ್ರೀಮದ್ಯುವರಾಜರವರು ಕಷ್ಟನಿವಾರಣೆಯ ಫಂಡಿಗೆ 2,000 ರೂಪಾಯಿ ಚಂದಾದಯಪಾಲಿಸಿದ್ದಾರೆಂಬುದನ್ನು ಈ ಭಾಷಣವನ್ನು ಮುಗಿಸುವುದಕ್ಕೆ ಮೊದಲು ತಿಳಿಯಪಡಿಸುವುದು ನಮಗೆ ವಿಶೇಷ ಆನಂದಕರವಾಗಿದೆ. ಇದಲ್ಲದೆ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರು ತಮ್ಮ ಸಹೋದ್ಯೋಗಿಗಳ ಮತ್ತು ತಮ್ಮ ಅಪಾರವಾದ ಅನುತಾಪವನ್ನು ಸೂಚಿಸಿ ಬರೆದಿರುವ ಕಾಗದದಲ್ಲಿ ಸದರಿ ಕಾಲೇಜಿನ ಸಿಬ್ಬಂದಿ ಮತ್ತು ಆಫೀಸಿನವರು 600 ರೂಪಾಯಿಗಳ ಒಂದು ಚೆಕ್ಕನ್ನು ಕಳುಹಿಸಿದ್ದಾರೆಂದು ತಿಳಿಯಪಡಿಸುವುದು ನಮಗೆ ಬಹಳ ಸಂತೋಷಪ್ರದವಾಗಿದೆ. ಇದೂ ಅಲ್ಲದೆ, ಮೈಸೂರು ಬ್ಯಾಂಕಿನವರು 2,000 ರೂಪಾಯಿಗಳನ್ನೂ, ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕಿನವರು 500 ರೂಪಾಯಿಗಳನ್ನೂ, ಚಂದಾ ಕೊಟ್ಟಿದ್ದಾರೆಂದೂ, ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಈ ಕಷ್ಟನಿವಾರಣೆಯ ಫಂಡಿಗೆ ಈಗಾಗಲೇ 3,000 ರೂಪಾಯಿ ಕೊಟ್ಟಿದ್ದಾರೆಂದೂ, ಸಂತೋಷದಿಂದ ತಿಳಿಸುತ್ತೇವೆ. ಪ್ರಥಮ ರಾಜಕುಮಾರಿಯವರು 1,000 ರೂಪಾಯಿಗಳನ್ನು ಅನುಗ್ರಹಿಸಿದ್ದಾರೆಂದು ಕೇಳಿ ನಿಮಗೆ ಸಂತೋಷವಾಗಬಹುದು.

OFFICE OF THE INSPECTOR-GENERAL OF EDUCATION IN MYSORE, BANGALORE.

Notification D. No. 118, dated 24th June 1924.

THE DEVARAJA BAHADUR CHARITY FUNDS—LITERARY SECTION.

1. Applications are invited before the 15th December 1924, from Authors who desire to submit their books for patronage from the Devaraja Bahadur Charity Funds—Literary Section. Authors should submit their printed books or manuscripts along with their applications.

2. The books or manuscripts submitted for patronage may be original works in Kannada or Sanskrit, translations from other languages into Kannada or Sanskrit, or newly printed books or reprints or manuscripts or critical editions of standard works; Kannada journals publishing matter of the requisite literary quality will also be eligible to compete. The order of preference in making the awards will be as follows:—

i. Original Compositions.
ii. Translations.
iii. Critical Editions of standard works.
iv. Reprints and
v. Journals.

The applications should be accompanied by a memorandum explaining as the case may be, how far the work is original, the source of the translation, stating the special claims of the book, etc., for the prize.

3. The awards shall be made on the judgment of a committee appointed every year by the Inspector-General of Education.

4. There will be two prizes, one of Rs. 500 and another of Rs. 200 to be awarded to the two best competitors under the various kinds of compositions indicated and in the order of preference stated in article (2).

5. The award may be in the shape of an absolute grant to the author, or a contribution towards the printing or reprinting of the work, or the purchase of certain number of copies at a suitable price.

6. In every case, the decision of the Inspector-General of Education shall be final.

7. Copies of books sent for patronage in response to this advertisment will not be returned, but manuscripts will be returned to the applicants after June 1925.

C. S. BALASUNDARAM IYER,
Inspector-General of Education.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ತಿರಸ್ಕೃತಲೇಖಗಳು.

1. ಕ್ಯಾತಸಂದ್ರದ ಧರ್ಮಾಭಿಮಾನಿ ಮತ್ತು ತುಮಕೂರಿನ ಕೈ|| ಗುಬ್ಬಿ ಹುಚ್ಚಪ್ಪನವರ ಸಮಿಪಬಂಧು—ಕೈ|| ಗುಬ್ಬಿ ಹುಚ್ಚಪ್ಪನವರ ಧರ್ಮವಿಚಾರವಾಗಿ ನೀವು ಉಭಯರೂ ಬರೆದಿರುವ ಲೇಖಗಳು ದೀರ್ಘಪತ್ರವ್ಯವಹಾರಕ್ಕೂ ಮನಸ್ತಾಪಕ್ಕೂ ಅವಕಾಶವನ್ನುಂಟುಮಾಡುತ್ತವಾದುದರಿಂದ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಲಾಗುವುದಿಲ್ಲ.

CATTLE PROTECTION.

The following resolution is sent by wire to Pandit Shamlal Nehru, M.L.A., Prayag Street, Allahabad. I appeal to the several leaders everywhere to conduct meetings and send similar resolutions supporting the Bill as the subject is of vital importance to our country from Humanitarian and Economic standpoints.

SHA CHAMMANMAL DONGAJI,
President.

RESOLUTION.

"Sri Gorakshaka Mandali, Bangalore City, under the Presidency of Dewan Bahadur Rajasabbabhushana K. P. Puttanna Chetty, Esq., C.I.E., accord their full support to the bill proposed by you for prohibiting Export of cattle meat from India."

SHA CHAMMANMAL DONGAJI,
President.

THE DESIRABILITY OF CONVERTING MAVALLY GOVERNMENT SCHOOL INTO COMPLETE MIDDLE SCHOOL.

Sir,

Education especially Primary and Middle ones among the masses of Mysore State is the only Panacea for the various ills under which many of our people are suffering. That a pretty large number of people have plunged into deep depths of darkness due to illeteracy which should be banished as early as possible is indubitable. But the spirit of times has considerably changed and there is consolation in the fact that there is a great yearning for education among most people in the State. It is only in recent years that the idea of valuing and appreciating to the fullest extent primary and middle education not to speak of higher education and of getting the children educated in large numbers has permeated even the minds of the people living in some remote places of the State. So **primary and middle** must be started or opened in **large numbers** with a view to spread and develop education as years roll by. Mysore can hope at no distant date to see persons making great strides in education and particularly higher University Education.

The one thought that is dominant or uppermost in the minds of the people of Mavally and its neighbouring places is to get the present Mavally Government Kanada Boys' School into complete Middle School. The present Kanada Boys' School is located in front of the Main Road leading to Lal-Bagh i.e., opposite Mavally Reading Room and Library. The site on which the present school stands is the munificient gift of the late Mr. Subbiah whose main desire was to get the school converted into complete Middle School in the near future. What an irony of fate befell him is difficult to surmise! It is to be deeply regretted that the object of the donor was not accomplished at all. His really valuable life has been snatched away by the merciless or cruel hand of death before he could cherish benevolent and long felt desires. Mavally especially can ill afford his death.

I need hardly point out that students living in Mavally, its neighbouring places and even remote parts such as Suddaguntapalya, Vodderapalya, Madivala, Siddapur, Maranahally, Kanakanapalya, Visweswarapuram, Kotamangalam etc., suffer more or less inconvenience or difficulty arising out of long distances from which they have to come all the way in order to attend their respective schools situated near Ulsoor gate, Yelahanka gate and Fort. It is therefore for the benefit of these students coming off long distances that an urgent necessity of converting the present school into complete Middle School has arisen. This is the problem of the home that engrosses the attention of the people of this place and its suburbs. It is, therefore, earnestly prayed on behalf of the people that our benign Government will sympathetically and favourably consider the legitimate and reasonable demand of the people and pass orders to its effect as early as possible and thus earn the undying gratitude of the people. Suffice it to say that a great boon will be conferred on the people of Mavally and its vicinity if the prayer of conversion into complete Middle School is conceded by the ever generous Government.

B. L. BYANNA.

ಉಪನ್ಯಾಸ.

ಧಾರವಾಡ ಹಾವೇರಿಪೇಟೆ ಮುರುಘಾಮಠದ ಫ್ರೀಬೋರ್ಡಿಂಗಿಗೆ ಶ್ರೀ ಕೆ. ಎಚ್. ರಾಮಯ್ಯನವರು ಬ್ಯಾರಿಸ್ಟರ ಮೈಸೂರ ಸಂಸ್ಥಾನದ ಕೋಆಪರೇಟಿವ್ ಸೊಸಾಯಿಟಿಯ ರಜಿಸ್ಟ್ರಾರ, ಇವರು ಆಗಸ್ಟು ತಾ|| 24ರ ದಿವಸ ದಯಮಾಡಿಸಿದ್ದರು. ಆ ಕಾಲಕ್ಕೆ ಶ್ರೀ ಸೆಟ್ಟಿ, ಅಸಿಸ್ಟಂಟ್ ರಜಿಸ್ಟ್ರಾರ ಧಾರವಾಡ ಇವರ ಅಧ್ಯಕ್ಷತೆಯಕೆಳಗೆ ಶ್ರೀ ರಾಮಯ್ಯನವರು ವಿದ್ಯಾರ್ಥಿಗಳಿಗೆ ಉಪಯೋಗವಾದ ಭಾಷಣವನ್ನು ಮಾಡಿದರು. ಇದಲ್ಲದೆ ಶ್ರೀ ಸಿದ್ಧರಾಮಪ್ಪ ಪಾವಟೆ, ಬಿ. ಎ., ಎಲ್ ಎಲ್. ಬಿ, ವಕೀಲ, ಹುಬ್ಬಳ್ಳಿ ಇವರು "ಲಿಂಗಾಂಗಸಾಮರಸ್ಯದ ಜ್ಞಾನ" ಎಂಬ ವಿಷಯದ ಮೇಲೆ ಆಗಸ್ಟ್ 26ರ ದಿವಸ ಶ್ರೋತೃಜನರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಭಾಷಣಮಾಡಿದರು. ಸೆಕ್ರೆಟರಿ, ಡಿಬೇಟಿಂಗ ಯೂನಿಯನ್.

ಹುಲ್ಲಳ್ಳಿ ಮಠದ ಜೀರ್ಣೋದ್ಧಾರ.

ನಂಜನಗೂಡು ತಾ|| ಹುಲ್ಲಳ್ಳಿಯಲ್ಲಿ ಕಪಿಲಾನದಿಯತೀರದಿಂದ 30 ಗಜದೂರದಲ್ಲಿರುವ ಹುಲ್ಲಹಳ್ಳಿಮಠವು ಶ್ರೀ ಮುರುಘಾಶಾಖೆಗೆ ಸೇರಿದ ಒಂದು ವಿರಕ್ತಮಠವಾಗಿದೆ. ಈ ಮಠದ ಮೂಲಗುರುಗಳಾದ ಶ್ರೀ ರುದ್ರಮುನಿಸ್ವಾಮಿಗಳ ಗದ್ದುಗೆಯೂ ಶಿವಲಿಂಗಮೂರ್ತಿಯೂ ಇದ್ದು ಸ್ಥಲ ಪರಸ್ಥಲಗಳ ಭಕ್ತಾದಿಗಳಿಂದ ಆರಾಧಿಸಲ್ಪಡುತ್ತಿದ್ದುವು. ಕಪಿಲಾನದಿಯಲ್ಲಿ ಕೆಲವು ದಿವಸಗಳ ಕೆಳಗೆ ಬಂದಿದ್ದ ಪೂರ್ಣಪ್ರವಾಹವು ಈ ಮಠದೊಳಕ್ಕೆನುಗ್ಗಿ ಸ್ವಾಮಿಗಳಿಗೆ ವಿನಹ ಇತರ ಕಡೆಯಲ್ಲೆಲ್ಲ 6–7 ಅಡಿ ನೀರು ನಿಂತಿದ್ದುದರಿಂದ ಮಠದ ಕಟ್ಟಡವೆಲ್ಲವೂ ಬಿದ್ದುಹೋಗಿರುವದು, ಮತ್ತು ಒಳಗಿದ್ದ ಪದಾರ್ಥಗಳೆಲ್ಲಾ ನೀರಿನಲ್ಲಿ ಕೊಚ್ಚಿಹೋದವು. ಆದರೆ ದೈವಾಧೀನದಿಂದ ಪ್ರಾಣನಷ್ಟವೇನೂ ಆಗಲಿಲ್ಲವು. ಮಠದಲ್ಲಿ ವಾಸಮಾಡಲು ನೆರಳಿಲ್ಲವಾದ್ದರಿಂದ ಚೆನ್ನಮಲ್ಲಶಿವಯೋಗೀಂದ್ರವರ್ಯರು ತಮ್ಮ ನಿಜಾಶ್ರಮವನ್ನು ಬಿಟ್ಟು ಗ್ರಾಮದೊಳಗೆ ಭಕ್ತರ ಮನೆಯನ್ನು ಆಶ್ರಯಿಸಬೇಕಾಗಿ ಬಂದುದಕ್ಕಾಗಿ ಚಿಂತಾಸಕ್ತರಾಗಿರುವರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ಈ ಪ್ರಖ್ಯಾತ ಪುರಾತನ ವಿರಕ್ತಮಠದ ಜೀರ್ಣೋದ್ಧಾರವನ್ನು ಸಮಸ್ತ ಸದ್ಭಕ್ತವೀರಶೈವ ಮಹಾಜನರು ಯಥಾಶಕ್ತಿದ್ರವ್ಯಸಹಾಯದಿಂದ ಮಾಡಿ ಕೃತಾರ್ಥಭಾಗಿಗಳಾಗಬೇಕೆಂದು ಪ್ರಾರ್ಥಿಸುವ,

ಚೆನ್ನಬಸವದೇವರು,
ಮಠಾಭಿಮಾನಿ.

ಮೈಸೂರು ಸಂಸ್ಥಾನದ ರಾಜಮನೆತನಕ್ಕೂ ಶ್ರೀ ಚೌಡಯ್ಯದಾನಪುರಮಠಕ್ಕೂ ಇರುವ ಸಂಬಂಧವು.

ತಮ್ಮ 3ನೇ ಆಗಸ್ಟ್ 1924ನೇ ಇಸವಿಯ ಸ್ಟಾರ್‌ಪತ್ರಿಕೆಯ ಸಂಚಿಕೆಯಲ್ಲಿ ಶ್ರೀಮನ್ಮಹಾ ದಕ್ಷಿಣಕಾಶೀ ಸಿಂಹಾಸನ ಚೌಡಯ್ಯದಾನಪುರ ಸಂಸ್ಥಾನದ ವೇದಪೀಠಾದಿ ಪದವೀಧರರಾದ ಪಟ್ಟದಸ್ವಾಮಿ ಶ್ರೀ ವಿರೂಪಾಕ್ಷ ಒಡೆಯರವರು ನಮ್ಮ ಮೈಸೂರ ಸಂಸ್ಥಾನದ ಮಹಾರಾಜರವರ ಅತಿಥಿಗಳಾಗಿದ್ದು ಅವರಲ್ಲಿ ಮಾಡಿದ ಸಂಭಾಷಣೆಯಿಂದ ಅವರ ಪಾಂಡಿತ್ಯಕ್ಕೆ ಸಂತೋಷಪಟ್ಟು ಬಹುಮಾನವನ್ನು ಹೊಂದಿದರೆಂಬಂಶವನ್ನು ಓದಿ ಸಕಲ ಧರ್ಮಾಭಿಮಾನಿಗಳಿಗೂ ವಿಶೇಷಸಂತೋಷವಾಗಿರುವದೇನೋ ನಿಜ. ಆದರೆ ಅಷ್ಟಕ್ಕೇನೆ ಸಂತೃಪ್ತರಾಗಿರಬೇಕೋ? ಯಾವ ಚೌಡಯ್ಯದಾನಪುರ ಸಂಸ್ಥಾನದ ಪೂರ್ವ ದೇವರ್ಷಿ ಶ್ರೀ ಶಿವದೇವ ಒಡೆಯರವರ ಪ್ರಸಾದದಿಂದಲೇ ಮೈಸೂರ ಮಹಾರಾಜರ ಪೂರ್ವಜರಾದ ಯದುಕುಲಸ್ವತೋತ್ತಮ ದೇವರಸರು [illegible] 12ನೇ [illegible] ಪೀಠ್ರೋಯನ್ನು ನಿಲ್ಲಿಸಿ, ಸ್ವಸ್ಥದೊಡನೆ ವರದತ್ತರಾಜಗುರು ಶ್ರೀ ಶಿವದೇವ ಒಡೆಯರ ದರ್ಶನಾರ್ಥವಾಗಿ ಶ್ರೀಮನ್ಮಹಾ ಉಜ್ಜಯನಿ ಪುರವರಾಧೀಶ್ವರಂ ಚಂದ್ರಗುಪ್ತಾನ್ವಯಂ ಗುತ್ತಕುಲಕಮಲಮಾರ್ತಾಂಡ ಕದನಪ್ರಚಂಡ ಪನ್ನಿಬ್ಬರಗಂಡಮಾಂಡಳೀಕ ಭೈರವಂ ಶರಣಾಗತ ವಜ್ರಪಂಜರಂ ಯದುಕುಲನೃಪೋತ್ತಮ ಹಿರಿಯದೇವರಸರು ಕೊಳ್ಳೇಗಾಲದಿಂದ ಬಂದು ತಮ್ಮ ತಾಯಿರಪ್ಪ ಪದ್ಮಲಾದೇವಿಯರ ಕೈಯಿಂದ 11 ಗ್ರಾಮಗಳನ್ನು ದಾನವನ್ನಾಗಿಕೊಟ್ಟು ವರದತ್ತ ಶ್ರೀ ದೇವರಂ ಶ್ರೀ ಗುತ್ತಾನ್ವಯಂ ರಾಜಗುರು ವಿನಾರಾಧಿಸಿದರು. ಎಂಬುವಬಗ್ಗೆ ಈಗ್ಗೂ ಚವುಡಯ್ಯದಾನಪುರ ಸಂಸ್ಥಾನದಲ್ಲಿರುವ ಶಿಲಾಶಾಸನಗಳಿಂದ ವೇದ್ಯವಾಗುತ್ತದೆ. ಯಾವ ಶ್ರೀ ಶಿವದೇವ ಒಡೆಯರವರ ವರದಿಂ ಈ ಮೈಸೂರು ಸಂಸ್ಥಾನವು ದೇದೀಪ್ಯಮಾನವಾಗಿ ಪ್ರಜ್ವಲಿಸುತ್ತಿದ್ದಿತೋ ಅಂಥಾ ಪೀಠದ ಸದ್ಯದ ಸ್ವಾಮಿ ಶ್ರೀ ವಿರೂಪಾಕ್ಷ ಒಡೆಯರು ವೇದಾದಿ ಸಕಲ ಶಾಸ್ತ್ರಕೋವಿದರಾಗಿ ಜಗನ್ಮಾನ್ಯರಾಗಿರುವರೋ ಅಂಥಾ ಪೀಠದ ಪರಸ್ಪರ ಸಂಬಂಧವು ಮುರಿತುಹೋಗಿರುವ ಕಾಲವೈಚಿತ್ರ್ಯಕ್ಕೆ ಯಾರುತಾನೇ ದುಃಖಪಡಲಿಕ್ಕಿಲ್ಲ? ಆದ್ದರಿಂದ ನಮ್ಮ ದಯಾಳು ಮಹಾರಾಜರವರೂ ಮತ್ತು ಅವರ ಬಂಧುವರ್ಗದವರೂ ಇಂಥಾ ಮಹತ್ವ ವಿಷಯಗಳನ್ನೆಲ್ಲಾ ಪರಿಶೀಲಿಸಿ ಪೂರ್ವಸ್ಥಿತಿಯಕಡೆಗೆ ಗಮನಕೊಡುವಂತೆ ಶ್ರೀ ಪರಮಾತ್ಮನು ಅನುಗ್ರಹಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ತಮ್ಮ ವಿಧೇಯ,
ಎಸ್. ಹಾಲಪ್ಪ, ಮಾಸ್ತರ ಸಂತೇಬೆನ್ನೂರು, ತಾಲ್ಲೂಕ ಚನ್ನಗಿರಿ.

ಅರಕಲಗೊಡು ತಾ|| ಬಸವಾಪಟ್ಣ.

ಕಳೆದ ಮಾಹೆ ತಾ|| 10 ರಲ್ಲಿ ಷುರುವಾದ ಮಳೆ ತಾ|| 26 ರವರೆಗೂ ಅವಿಚ್ಛಿನ್ನವಾಗಿ ಹುಯಿದದ್ದರಿಂದ ಬಾಗಾಯಿತು ಮತ್ತು ತರೀ ಜಮೀನುದಾರರಿಗೆ ಆಗಿರುವ ಪೈರುನಷ್ಟ ಎಷ್ಟು ಹೇಳಿದರೂ ತೀರದು. ಕಾವೇರಿ ನದಿಯ ಪ್ರವಾಹ ವಿಪರೀತವಾಗಿ ಬಂದದ್ದರಿಂದ ಒಂದುವಾರ ಅರಕಲಗೂಡು ಪ್ರಾಂತ್ಯದ ಸಂಚಾರಕ್ಕೆ ಅವಕಾಶವಿಲ್ಲವಾಯಿತು. ರಾಮನಾಥಪುರದಲ್ಲಿ ಅನೇಕ ಮನೆಗಳ ನಾಶದಿಂದ ಉಂಟಾಗಿರುವ ಕಷ್ಟನಷ್ಟಗಳು ಕಣ್ಣಿಂದ ನೋಡಿ ಸಹಿಸಲು ಅಸಾಧ್ಯವಾಗಿರುತ್ತೆ. ನಮ್ಮ ದಯಾಳುಗಳಾದ ಅಮಲ್ದಾರರವರು ಸಂಚಾರಮಾಡಿ ಪ್ರವಾಹದಿಂದ ಕಷ್ಟಕ್ಕೆ ಸಿಕ್ಕಿದ ಜನಗಳಿಗೆ ಧೈರ್ಯಕೊಡುತಾ ಸದ್ಯಕ್ಕೆ ಅನುಕೂಲವಾದ ಏರ್ಪಾಡು ಮಾಡುತಿದ್ದುದು ಸ್ತೋತ್ರಾರ್ಹವೇಸರಿ. ಈ ಊರಿನ ಮಿಡ್ಲ್‌ಸ್ಕೂಲಿಗೆ ಹೊಸಲವಾಜಮೆಮಾಡಂತೆ, 3 ಇಂಗ್ಲೀಷ್ ಮಾಸ್ತರುಗಳನ್ನೂ ಒಬ್ಬ ಕನ್ನಡಾ ಮಾಸ್ತರನ್ನೂ ಕೊಟ್ಟಿದ್ದು ಒಂದು ತಿಂಗಳೊಳಗಾಗಿ ಒಬ್ಬ ಇಂಗ್ಲಿಷ್ ಮಾಸ್ತರನ್ನು ತೆಗೆದು ಅಜಾಗಕ್ಕೆ ಕನ್ನಡಾ ಮಾಸ್ತರನ್ನು ಕೊಟ್ಟಿರುವುದು ತುಂಬಾ ಶೋಚನೀಯವಾದ ಸಂಗತಿ. ಮಿಡ್ಲ್ ಸ್ಕೂಲಿಗೆ ಇಂಗ್ಲೀಷು ಮಾಸ್ತರು ಹೆಚ್ಚಾಗಿರುವುದರಿಂದ ಅಭಿವೃದ್ಧಿಗೆ ಕಾರಣವಾಗಿರುತ್ತೆ. ಹೀಗಿರುವಲ್ಲಿ ಸರಿಯಾದ ಕ್ವಾಲಿಫಿಕೇಷನ್ನಿನಲ್ಲಿದ್ದ ಇಂಗ್ಲೀಷು ಮಾಸ್ತರನ್ನು ವರ್ಗಾಯಿಸಿ ಆ ಜಾಗಾಕ್ಕೆ ಇಂಗ್ಲೀಷು ಮಾಸ್ತರನ್ನು ಕಳುಹಿಸದಿರುವುದು ಇಲ್ಲಿನ ಪ್ರಜೆಗಳ ದೌರ್ಭಾಗ್ಯ. ಈಗಲೂ ನಮ್ಮ ಡಿ|| ಇ|| ರು ಕೂಡಲೆ ಹಾಲಿ ಇರುವ 2 ಕನ್ನಡ ಮಾಸ್ತರುಗಳ ಪೈಕಿ ಬಹಳ ಮಟ್ಟಿನ ಯೋಗ್ಯತೆಯುಳ್ಳ ಒಂದು ಹ್ಯಾಂಡನ್ನು ಮಾತ್ರ ಇರಿಸಿ, ಇನ್ನೊಂದು ಕನ್ನಡಾ ಹ್ಯಾಂಡಿಗೆ ಬದಲಾಗಿ S.S.L.C. ಯೋಗ್ಯತೆಯ ಒಂದು ಇಂಗ್ಲೀಷು ಹ್ಯಾಂಡನ್ನು ದಯಪಾಲಿಸುವದರ ಮೂಲಕ ಹೊಸದಾದ ಈ ಮಿಡ್ಲ್‌ಸ್ಕೂಲನ್ನು ಉತ್ತಮಸ್ಥಿತಿಗೆ ಬರುವಂತೆ ಮಾಡಿಯಾರೆಂದು ನಿರೀಕ್ಷಿಸಲ್ಪಟ್ಟಿದೆ. 20 ರೂ. ನ ಲವಾಜಮಾ ಭರ್ತಿವಿಚಾರ ಇವರಿಗೇ ಸೇರಿದ್ದಾದ್ದರಿಂದ ಇದ್ದುದರಲ್ಲಿ ಜಾಗ್ರತೆಲಿ ಈ ಜಾಗದಲ್ಲಿರುವ ಕನ್ನಡಾ ಮಾಸ್ತರನ್ನು ಬದಲಾಯಿಸಿ ಇಂಗ್ಲೀಷು ಮಾಸ್ತರನ್ನು ಏರ್ಪಡಿಸಿಕೊಡುವುದರಲ್ಲಿ ಉದಾರವಾದ ಮನಸ್ಸು ಮಾಡುತ್ತಾರೆಂದು ನಂಬಿರುತ್ತೆ. ಈ ಊರಿನ ಪ್ರೈಮರಿ ಸ್ಕೂಲಿಗೆ ಜವಾನನ ಲವಾಜಮಾ ಇಲ್ಲದಿರುವುದು ತುಂಬಾ ತೊಂದರೆ ಆಗಿರುತ್ತೆ. 130 ಹುಡುಗರು ಇರುವ ಈ ಸ್ಕೂಲಿಗೆ ಜವಾನನನ್ನು ಕೊಡುವ ಭಾಗದಲ್ಲಿ ಇನ್ನೂ ಬಾಲಕರು ಹೆಚ್ಚಿ, ಹಾಜರಾತಿಯು ಕ್ರಮಪಡುವುದರಲ್ಲಿ ಯಾವ ಅಡ್ಡಿಯೂ ಇಲ್ಲ. ನಮ್ಮ ಡಿ|| ಇ|| ರವರು ಕೂಡಲೆ ಒಬ್ಬ ಜವಾನನನ್ನು ನೇಮಿಸಿಕೊಡುವರೆಂದು ನಿರೀಕ್ಷಿಸಿದೆ. ಈ ಊರಿನ ಎಲ್ಲಾ ಸ್ಕೂಲ್‌ಗಳಲ್ಲೂ ಕಾಲಕ್ಕೆ ಸರಿಯಾಗಿ ಪಾಠಗಳು ನಡೆಯುತಾ ಬರುತ್ತಿದೆ. ಪ್ರೈಮರಿಸ್ಕೂಲಿನ ಹತ್ತರ ಇರುವ ದೊಡ್ಡಿ, ಪ್ರಯೋಜನವಿಲ್ಲದ್ದಾಗಿದೆಯಲ್ಲದೆ, ಈ ಮಳೆಗಾಲದಲ್ಲಿ ನೀರುನಿಂತು ದುರ್ವಾಸನೆಯಿಂದ ಸ್ಕೂಲಿನ ಬಾಲಕರ ಆರೋಗ್ಯಕ್ಕೆ ಕುಂದಕವಾಗಿರುತ್ತೆ. ಇಲ್ಲಿನ ಬಸವೇಶ್ವರ ಕೋ-ಆ-ಪರೇಟಿವ್ ಸೊಸೈಟಿಯ ಜನರಲ್ ಮಿಟಿಂಗ್ ನಡೆಯಿತು. ವೃತ್ತಪತ್ರಿಕೆಗಳಿಗಾಗಿ 20 ರೂ. ತೆಗೆದಿರುತ್ತಾರೆ. ಆದರೆ ಒಂದು "ಫ್ರೀ" ರೀಡಿಂಗ್‌ರೂಂ ಮಾಡುವುದರಲ್ಲಿ ಪ್ರೆಸಿಡೆಂಟರಿಗೂ, ಮೆಂಬರುಗಳಿಗೂ ಈಶ್ವರನು ಬುದ್ಧಿಕೊಡಬೇಕೆಂದು ಅನೇಕರು ಹಾರೈಸುತ್ತಾರೆ, ಪ್ರೆಸಿಡೆಂಟರಾದ ರಾ|| ಹ|| ಮಲ್ಲಸೆಟ್ಟರು ಉದಾರವಾದ ಮನಸ್ಸು ಮಾಡಲ್ಲದೆ ಈ ಕೆಲಸ ಆಗುವುದಿಲ್ಲ. ಅದಕಾರಣ ಭಗವಂತನು ಚಿರಕಾಲ ಅವರ ಹೆಸರನ್ನು ಶಾಶ್ವತಗೊಳಿಸುವಂತೆ ಪ್ರೇರಿಸುವನೆಂದು ನಂಬಿದೆ.

ಗ್ರಾಮಾಭಿಮಾನಿ.

ಹೆಗ್ಗಡದೇವನಕೋಟೆ ತಾ|| ಅಂತರಸಂತೆ.

ಇಲ್ಲಿನ ವಿ. ಇ. ಸ್ಕೂಲ್ ಮಾಸ್ತರ್ ನಂಜುಂಡಯ್ಯನವರು ಓದಲಿಕ್ಕೆ (ಟ್ರೈನಿಂಗ್) ಹೋಗಿರುವುದರಿಂದ ಅವರ ಸ್ಥಾನಕ್ಕೆ ಬಿದರಹಳ್ಳಿ ಸ್ಕೂಲ್ ಹೆಡ್‌ಮಾಸ್ತರ್ ಆರ್. ಕೃಷ್ಣಅಯ್ಯಂಗಾರ್‌ರವರು ಬಂದಿದ್ದಾರೆ. ಇವರು ವಿದ್ಯಾರ್ಥಿಗಳಿಗೆ ಪಾಠಹೇಳಲಿಕ್ಕೆ ತುಂಬಾ ಸಮರ್ಥರಾಗಿರುವಂತೆ ಕಾಣುತ್ತಾರೆ, ಆದರೆ ಇಲ್ಲಿನ ಸ್ಕೂಲ್‌ಮಾಸ್ತರುಗಳ ವಾಸಕ್ಕೆ ಮನೆಯಿಲ್ಲದೆ ತುಂಬಾತೊಂದರೆಯಾಗಿರುವದರಿಂದ ಸ್ಕೂಲು ಊರೊಳಗೆ ಇರುವುದಕ್ಕಿನ್ನ ರಸ್ತೆಪಕ್ಕದಲ್ಲಿ ಅಂದರೆ ಅಂತರಸಂತೆ, ಅಂಗಡಿಬೀದಿ, ಸೂರ್ಲಗುಪ್ಪೆ, ಈ ಗ್ರಾಮಗಳ ಮಧ್ಯೆ ಸ್ಕೂಲ್ ಕಟ್ಟಡತಯಾರಿಸಿ ಸ್ಕೂಲ್‌ಯಿಟ್ಟಿದ್ದರೆ ಇದುವರೆಗೆ ಸ್ಕೂಲ್ ತುಂಬಾ ಅಭಿವೃದ್ಧಿಸ್ಥಿತಿಗೆ ಬಂದು ಎ. ವಿ. ಸ್ಕೂಲ್ ಆಗುವುದಕ್ಕಿತ್ತು. ಈಗಲು ಕೂಡ ಇಲ್ಲಿನ ರೈತರು ಈ ಏರ್ಪಾಡುಮಾಡುವುದುತ್ತಮ. ಇಲ್ಲಿನ ಕೆರೆ ತುಂಬಾ ಹೀನಸ್ಥಿತಿಗೆ ಬಂದಿದೆ. ಈ ವಿಚಾರ ಯಾರಿಗೂ ಬೇಕಾಗಿಲ್ಲ. ನೀರುಮಾತ್ರ ಸರ್ವರಿಗೂಬೇಕು. ಕೆರೆಗೆ ನೀರು ಭರ್ತಿಯಾಗಿ ನದಿಪ್ರವಾಹದಂತೆ ಹರಿಯುತ್ತಾಯಿದೆ. ಏರಿಮಧ್ಯೆ ಮೂರು ನಾಲ್ಕುಕಡೆ ಕಿಂಡಿಬಿಟ್ಟು ನೀರು ಹರಿಯುತ್ತಾಯಿದೆ. ಇದನ್ನು ದುರಸ್ತು ಮಾಡದೆ ಬಿಟ್ಟಲ್ಲಿ ಕೆರೆಗೆ ಅಪಾಯಸಂಭವಿಸುವುದರಲ್ಲಿ ಸಂಶಯವಿಲ್ಲ. ಈ ಕೆರೆಯಲ್ಲಿ ಇಲ್ಲಿನ ಪಾರೆಸ್ಟ ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳು ಮತ್ತು ಇಂಜನೀಯರ್ ಅಧಿಕಾರಿಗಳಾದಿಯಾಗಿ ಅನೇಕ ಪ್ರಯಾಣಿಕರೂ ಇಲ್ಲಿನ 34 ಊರಿನವರು ಸಹ ನೀರನ್ನು ಪಯೋಗಿಸುತ್ತಾರೆ. ಇದರಲ್ಲಿ ಜನರು ಕೊಳೆಬಟ್ಟೆ ಒಗೆಯುವುದು ದನಕರುಗಳನ್ನು ತೊಳೆಯುವುದು ಇತ್ಯಾದಿ ರೀತಿಯಿಂದ ಗಲೀಜ್‌ಮಾಡುವುದಲ್ಲದೆ, ಏರಿಮೇಲಿಂದ ದನಗಳನ್ನು [illegible] [illegible] ಹೋಗುತ್ತಿದೆ. ಈ ಪ್ರಾಂತದವರಿಗೆ ಇರುವ ಇದೊಂದು ಕೆರೆಯು [illegible], ಮುಂದೆ ಪ್ರಜೆಗಳ ಕೆಲ್ಮೆಗೆ [illegible] ಈ ಬಗ್ಗೆ ನಮ್ಮ ತಾಲ್ಲೂಕ್ ಅಮಲ್‌ದಾರ್ ಸಾಹೇಬರವರ ಮತ್ತು ಪೋಲೀಸ್ ಅಫೀಸರುಗಳ ದಯೆ ಒದಗಬೇಕಾಗಿದೆ. ಈ ಪ್ರಾಂತ್ಯ ಕಳೆದ ತಿಂಗಳು ತಾ|| 12 ರ ಲಾಗಾಯಿತು ಒಂದೆ ಸಮನಾಗಿ, ದಿನ 1 ಕ್ಕೆ 3-4 ಅಂಗುಲದಲಾಗಾಯಿತು 8-9 ಅಂಗುಲದವರೆಗೆ ಮಳೆಬೀಳುತ್ತಾಯಿದ್ದು ಯಾವ ಕಡೆನೋಡಿದರೂ ನೀರೇ ಕಾಣುತ್ತಿತ್ತು. ಕಪಿಲಾಪ್ರವಾಹ ಒಂದುಕಡೆ, ಬಡವರ ಕಣ್ಣೀರಿನ ಪ್ರವಾಹ ಮತ್ತೊಂದುಕಡೆ. ಕಪಿಲಾ ಕರೆಬಾರಿಕು, ರೈತರ ಜಮೀನು ಸಾಗರವಾಯಿತು, ಬೆಳೆ ಹಾಳಾಯಿತು; ಮನೆಮನೆಮಾಯವಾಯಿತು, ಬಡವರ ದುಃಖಜಾಸ್ತಿಯಾಯಿತು. ಈ ಮಧ್ಯೆ ಟಿಂಬರ್ ವ್ಯಾಪಾರಿಗಳ ಮನಸ್ಸು ಧಡಕಹತ್ತಿತು, ನಾಟಾವಗೈರೆ ಮರವು ತೇಲಹತ್ತಿತು, ಮೂಗಪ್ರಾಣಿ ಸಾಯುಹತ್ತಿತು. ಹೆಗ್ಗಡದೇವನಕೋಟೆ, ಮೈಸೂರು ಮಧ್ಯೆ ಓಡಾಡುತ್ತಿದ್ದ ಮೋಟಾರ್ ಸ್ಥಗಿತವಾಯಿತು. ಈ ತಾಲ್ಲೋಕಿಗೆ ಸೇರಿದ ಅನೇಕ ಗ್ರಾಮಗಳು ಅಂದರೆ, ಮಾಗಡಹಳ್ಳಿಕಡು, ಬೆಳತ್ತೂರು, ನಿಸನ, ಮಗ್ಗೆ, ಮಳಲಿ, ಹೊಸಹೊಳಲು, ಕೃಷ್ಣರಾಜಪುರ, ಸುಂಡಾಪುರ, ಎರೆಕೊರೆಹುಂಡಿ, ನಾಗೆಗೌಡನಹುಂಡಿ, ಹೀಯಾರ, ಬೀಚನಹಳ್ಳಿ. ಕಾರಬಾನೆ, ಸರ್ಗೂರ್, ವಗೈರೆ ಅರ್ಧ-ಪೂರ್ತಿ ಮುಚ್ಚಿಹೋಗಿದ್ದವು. ರೈತರುಗಳಿಗೆ ಉಂಟಾಗಿರುವ ಕಷ್ಟವನ್ನು ಹೇಳಲು ಅಸಾಧ್ಯ. ಯಾವ ಕಡೆ ನೋಡಿದರೂ ಬಡವರಗೋಳೆ. ನಮ್ಮ ಧರ್ಮಪ್ರಭುಗಳಾದ ಖಾವಂದರವರ ಸಂಪೂರ್ಣದಯೆ ಈಕಡೆ ಒದಗಬೇಕಾಗಿದೆ. ಮೈಸೂರು-ಮಾನಂದವಾಡಿ ರೋಡಿನಲ್ಲಿ, ತಗ್ಗಾಗಿರುವ ಸ್ಥಳಗಳಲ್ಲಿ ಕೆಲವುಕಡೆ, 10 ಅಡಿ ಲಾಗಾಯಿತು 20-25 ಅಡಿ ಎತ್ತರವೂ $\frac{1}{4}$ ಫರ್ಲಾಂಗ್ ಲಾಗಾಯಿತು 2-3 ಫರ್ಲಾಂಗ್ ಅಗಲವೂ, ನೀರುನಿಂತು ಸಂಚಾರಕ್ಕೆ ತೊಂದರೆಯಾಗಿ ಆಹಾರವೊದಗುವುದೇ ಕಷ್ಟವಾಗಿತ್ತು. ಈ ಗ್ರಾಮದ ಪೊಂದು ಮನೆಯಲ್ಲಿ ರಾತ್ರಿ ಮಲಗಿದ್ದವೇಳೆ ಗೋಡೆಬಿದ್ದು 10-12 ವರ್ಷದ ಒಬ್ಬ ಮುಸಲ್ಮಾನರ ಹುಡುಗನು ಮೃತ್ಯುವಶನಾದನಂತೆ. ಅನೇಕ ದಿವಸಗಳ ಲಾಗಾಯ್ತು ಇಂಥಾ ಮಳೆ ಹೊಳೆ ಮತ್ತು ನಷ್ಟವು ಇರಲಿಲ್ಲವೆಂದು ಜನಗಳು ಅಂದುಕೊಳ್ಳುತ್ತಿದ್ದಾರೆ. ಇದೇ ಕಷ್ಟನಷ್ಟಗಳ ಮಧ್ಯೆ ನಮ್ಮ ಮೈಸೂರು ಗೌರ್ನ್ಮೆಂಟ್‌ನವರು ದನಗಳ ಹುಲ್ಲುಬನ್ನಿ (ಗ್ರೇಜಿಂಗ್) ವಸೂಲ್ ಮಾಡಲು ಷುರು ಮಾಡಿರುವುದಾಗಿ ತಿಳಿಯಬರುತ್ತೆ. ಹೋದವರ್ಷ ಮೇಲ್ಕಂಡ ಕಷ್ಟನಷ್ಟಗಳ ದೆಸೆಯಿಂದ ಒಂದು ವರ್ಷ ಇದನ್ನು ನಿಲ್ಲಿಸಿರುವುದಾಗಿ ಅಪ್ಪಣೆಯಾಯಿತು. ಆದರೆ ಇದಕ್ಕೆ ಮುಂಚೆಯೇ ವಸೂಲಿಕೆಲಸ ಪೂರ್ತಿಯಾಗಿದ್ದ ಪ್ರಯುಕ್ತ 1 ವರ್ಷಕ್ಕೆ ಬದಲು 1 ತಿಂಗಳು ಕೂಡ ಬಿಟ್ಟಂತಾಗಲಿಲ್ಲ. ಈಸಾರಿಯಾದರೂ ನಮ್ಮ ಘನಸರ್ಕಾರದವರು ಇದನ್ನು ನಿಲ್ಲಿಸಿ ಬಡವರ ಗೋಳನ್ನು ಸ್ವಲ್ಪಮಟ್ಟಿಗಾದರೂ ಪರಿಹರಿಸುವರೆಂದು ನಂಬಿದೆ.

ಪ್ರಜಾಭಿಮಾನಿ.

ಹಳ್ಳಿಗಾಡಿನ ವಿದ್ಯಾಭ್ಯಾಸ.

ಭಂಡಾರಕ್ಕೆ ಹಣವನ್ನು ಭರ್ತಿಮಾಡತಕ್ಕ ಹಳ್ಳಿಗಾಡ ಜನರಿಗೆ ವಿದ್ಯಾಭ್ಯಾಸದ ಇಲಾಖೆಯಿಂದ ಪ್ರಯೋಜನ ದೊರಿಯುತ್ತಿರುವುದಿಲ್ಲೆಂದು ಶ್ರೀಯುತ ರೆಡ್ಡಿಯವರು ವಿದ್ಯಾಭ್ಯಾಸದ ಇನ್ಸ್‌ಪೆಕ್ಟರು ಜನರಲ್‌ರವರಾಗಿದ್ದಾಗ್ಗೆ ಈ ಇಲಾಖೆಯಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದರು. ಸರ್ಕಾರದವರು ಈ ಇಲಾಖೆಗಾಗಿ ಸುಮಾರು ಅರ್ಧಕೋಟಿ ರೂಪಾಯಿಗಳವರಿವಿಗೆ ಖರ್ಚುಮಾಡುತ್ತಲಿರುವರು. ಸಾಲದುದಕ್ಕೆ ಪ್ರಜೆಗಳ ಮೇಲೆ ವಿದ್ಯಾಭ್ಯಾಸದ ತೆರುಗೆಯೊಂದು ಸಹ ಹೇರಲ್ಪಟ್ಟಿರುವುದು. ಆದರೇನು ರಾಮೇಶ್ವರಕ್ಕೆ ಹೋದರೂ ಶನೇಶ್ವರ ಬಿಡದೆಂಬಂತೆ, ಹಳ್ಳಿಗಾಡ ಜನರಿಗೆ ಈ ಇಲಾಖೆಯಿಂದ ನ್ಯಾಯವಾಗಿ ದೊರಿಯಬೇಕಾಗಿರುವಷ್ಟು ಪ್ರಯೋಜನವು ಮಾತ್ರ ದೊರಿಯುತ್ತಿರುವುದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಹಳ್ಳಿಯ ಜನರು ವಿದ್ಯಾವಂತರಾಗದೆ, ಪಟ್ಟಣವಾಸಿಗಳಾದ ಅಲ್ಪಸ್ವಲ್ಪ ಜನರು ವಿದ್ಯಾವಂತರಾದ ಮಾತ್ರಕ್ಕೆ ದೇಶವು ಮುಂದಕ್ಕೆ ಬರಲಾರದು. ಅದು ಸಮಸ್ತ ವಿಧದಲ್ಲೂ ಊರ್ಜಿತಸ್ಥಿತಿಗೆ ಬರಬೇಕಾದರೆ, ಒಟ್ಟು ಜನಸಂಖ್ಯೆಯಲ್ಲಿ 100 ಕ್ಕೆ 95 ರಂತೆ ಇರುವ ಹಳ್ಳಿಗಾಡ ಜನರು ಸಹಿತ ವಿದ್ಯಾವಂತರಾಗಬೇಕಾದದ್ದು ತುಂಬಾ ಅವಶ್ಯವಾಗಿರುತ್ತದೆ. ಇದುವರಿವಿಗೆ ನಡೆದುಬಂದ ಪದ್ಧತಿಯಲ್ಲಿ ಹಳ್ಳಿಗಾಡ ಜನರೂ ಸಹ ತಪ್ಪದೆ ವಿದ್ಯಾವಂತರಾಗಬೇಕೆಂಬುದಕ್ಕೆ ಸಾಧಕವಾದ ಸರಿಯಾದ ಆಚರಣೆಗಳು ರೂಢಿಗೆ ತರಲ್ಪಡದೆ ಹೋಗಿರುವುದರಿಂದಲೇ ಮಾದ್ರಿ ಸಂಸ್ಥಾನವೆಂದು ಕರಿಸಿಕೊಳ್ಳುವ ನಮ್ಮ ದೇಶದಲ್ಲಿ ಈಗಲೂ 100ಕ್ಕೆ 95 ರಂತೆ ಅವಿದ್ಯಾವಂತರ ಸಂಖ್ಯೆಯು ಕಂಡುಬರುತ್ತಿರುವುದು. ಪಟ್ಟಣಗಳಲ್ಲಿ ಮಧ್ಯಮ ಮತ್ತು ಪ್ರೌಢ ತರಗತಿಗಳ ವಿದ್ಯಾಭ್ಯಾಸದ ವಿಷಯವನ್ನು ಬಿಟ್ಟರೂ ಅಲ್ಲಿಯ ಪ್ರೈಮರಿ ತರಗತಿಗಳ ವಿದ್ಯಾಭ್ಯಾಸಕ್ಕೂ ಸಹ ಬೇಕಾದಷ್ಟು ಸ್ಕೂಲುಗಳು ಶಕ್ತರಾದ ಉಪಾಧ್ಯಾಯರು, ಒಳ್ಳೆಯಸ್ಕೂಲು ಕಟ್ಟಡಗಳು, ಅತಿಶಯ ಸಾಮಾನು ಸಲಕರಣೆಗಳು ವಿದ್ಯಾರ್ಥಿಗಳ ವಿಹಾರುವಿನೋದಕ್ಕೆ ಮೇಲಾದ ಅನುಕೂಲತೆಗಳು ಇತ್ಯಾದಿ ಯಾವತ್ತೂ ಸೌಕರ್ಯಗಳು ಕಲ್ಪಿಸಿಕೊಡಲ್ಪಟ್ಟಿರುವುವು. ಹಳ್ಳಿಗಳಲ್ಲಿ ಎಲ್ಲಿಯೋ ಹತ್ತಿಪ್ಪತ್ತು ಊರುಗಳಿಗೊಂದರಂತೆ ಸ್ಕೂಲುಗಳಿರತಕ್ಕದ್ದು. ಅಲ್ಲೂ ಸ್ಕೂಲಿಗೆ ಕಟ್ಟಡ ಇದ್ದರೆ ಇತ್ತು, ಇಲ್ಲದಿದ್ದರೆ ಇಲ್ಲ. ಮಠ, ಸತ್ರ, ದೇವಸ್ಥಾನ ಇವೊಂದೂ ಇಲ್ಲದಿದ್ದರೆ ಮಾಳಿ, ಗೌಡರಮನೆಯ ಜಗಲಿ ಇತ್ಯಾದಿ ಕಡೆಗಳಲೆಲ್ಲಾ ಸ್ಕೂಲು ನಡಿಯಬೇಕು. ಇನ್ನು ಸ್ಕೂಲಿಗೆ ಸಂಬಂಧಪಟ್ಟ ಸಾಮಾನುಗಳೆಂದರೆ, ಯಾವುದೊಂದಿದ್ದರೆ ಇತ್ತು ಇಲ್ಲದಿದ್ದರೆ ಇಲ್ಲವೇ ಇಲ್ಲ. ಬೆತ್ತವಂತೂ ಮಾಸ್ತರ ಕೈಯ್ಯಲ್ಲಿದ್ದೇಯಿರತಕ್ಕದ್ದು. ಇದು ಇವರಿಗೆ ಮಾಮೂಲು ಹಕ್ಕುದಾರಿಯೇ ಸರಿ. ಈ ಬೆತ್ತದ ಸಹಾಯದಿಂದಲೇ ಹುಡುಗರಿಗೆ ಭೂಮಿಯು ಗುಂಡಾಗಿರುವುದು, ಸೂರ್ಯನ ಸುತ್ತಲೂ ಭೂಮಿಯು ತಿರುಗುವುದು ಹಗಲು ರಾತ್ರಿಗಳಾಗುವುದು ಇತ್ಯಾದಿಗಳೆಲ್ಲಾ ತಿಳಿಯಬೇಕು. ಇನ್ನು ಉಪಾಧ್ಯಾಯರ ವಿಷಯವಾಗಿ ಸ್ವಲ್ಪ ತಿಳಿಯತಕ್ಕದ್ದದೆ. ಹಳ್ಳಿಯ ಜನರೆಂದರೆ ಬುದ್ಧಿವಂತಿಕೆಯಲ್ಲಿ ಹೀನರಾದವರು ಸರಿಯಷ್ಟೆ! ಬೀಜದಂತೆ ಗಿಡ ತಂದೆಯಂತೆ ಮಕ್ಕಳು. ಬಾಲ್ಯಸಂಸ್ಕಾರವಂತೂ ಉತ್ತುಮಪ್ರಕಾರದ್ದು. ಹೀಗೆ ಮನೆಯಲ್ಲಿ 8-10 ವರ್ಷಗಳವರಿವಿಗೆ ಕಲಿಯಬೇಕಾದ್ದನ್ನೆಲ್ಲಾ ಕಲಿತು, ಮಧ್ಯೆ 2-3 ವರ್ಷಗಳ ಮಟ್ಟಿಗೆ ದನಗಳನ್ನು ಕಾಯುವ ಆಕ್ಟಿಂಗ್ ಕೆಲಸಮಾಡಿ ಅಮೇಲೆ ಹಳ್ಳಿಯ ಹುಡುಗರು ಪಾಠಶಾಲೆಗೆ ಬಂದರೆ ಬರಬೇಕು. ಹೀಗೆ ಹುಡುಗರ ತಲೆಯು ಮೊದಲೇ ನಾಜೂಕಾದ್ದು, ಉಪಾಧ್ಯಾಯರೂ ತುಸು ಹೆಚ್ಚೂ, ಕಮ್ಮಿ ಇಂಥವರೇ ಗಂಟುಬಿದ್ದಲ್ಲಿ ಕೇಳುವುದೇನು! ಉಪಾಧ್ಯಾಯರಾಗಲು ಇರಬೇಕಾದ ಯಾವತ್ತು ಲಕ್ಷಣಗಳಿಲ್ಲದಿದ್ದರೂ ಅವನಲ್ಲಿ ಲೋ|| ಸೆ|| ಪರೀಕ್ಷೆಯ ಪ್ಯಾಸಾದ ಸರ್ಟಿಫಿಕೇಟ್ ಒಂದಿದ್ದರೆ ತೀರಿತು. ಈಗಿನ ಹಳ್ಳೀ ಸ್ಕೂಲ್ ಮಾಸ್ತರುಗಳಲ್ಲಿ [illegible] ಸಾಹೇಬರಿಗೆ ಸಾಗಿ [illegible] ಟ್ (ಅರ್ಜಂಟ್) ರಜಾಬೇಕಾಗಿದೆ. ಅದ್ದರಿಂದ 3 ದಿವಸಕ್ಕೆ [illegible] ಹಚಿಕೇಳು....ಮಾಸ್ತರನ [illegible] ಎಂದು ಬರೆಯಲ್ಪಡುತ್ತ [illegible] ರುತ್ತಾರೆ. ಇದು [illegible] [illegible] ಹೆಚ್ಚಿನ [illegible] ಬೇಕಾದರೆ [illegible]. ಹಳ್ಳಿಗಾಡಿನಲ್ಲಿ ವಿದ್ಯಾಭ್ಯಾಸಮಾಡತಕ್ಕ [illegible] ಉಪಾಧ್ಯಾಯರಲ್ಲಿ ಗ್ರಾಮಾಂತರದ [illegible] [illegible] [illegible]

ಖರ್ಚುಬಾಬು ಬೆಳೆಯಿಸಲಿಕ್ಕೆ ಸ್ಕೂಲುಗಳ ಸಂಖ್ಯೆ ಜಾಸ್ತಿಯಾದುದೊಂದೂ ಪ್ರೈಮರಿ ಸ್ಕೂಲು ಇಕ್‌ಕಂಪ್ಲೀಟ್ ಮಿಡಲ್ ಸ್ಕೂಲ್ ಮಿಡಲ್‌ಸ್ಕೂಲ್ ಎಂದು ಸ್ಕೂಲುಗಳ ಹೆಸರು ಬದಲಾವಣೆಯಾದುದೊಂದೂ ಹೊಟ್ಟೆಗೆ ಕಂಡು ಬರುತ್ತವೆಯೋ ಹೊರತು ಉದ್ದೇಶಕ್ಕೆ ಸರಿಯಾದ ಏರ್ಪಾಡುಗಳೇನಾದದ್ದು ಕಂಡುಬರುವುದಿಲ್ಲ. ಪಟ್ಟಣಗಳಿಗೆ ತಮ್ಮ ಹುಡುಗರನ್ನು ಕಳುಹಿಸಿ ಅಲ್ಲಾಗುವ ಹೆಚ್ಚು ಖರ್ಚುಗಳನ್ನು ಬಡವರಾದ ಹಳ್ಳಿಯ ಜನರು ಕೊಟ್ಟು ನಡಿಸಲಾರರೆಂದು ಹಳ್ಳಿಗಳಲ್ಲೇ ಹತ್ತೆಂಟು ಊರುಗಳಿಗೊಂದರಂತೆ ಇ|| ಕ|| ಮಿಡಲ್ ಸ್ಕೂಲುಗಳಾದಲ್ಲಿ ಈ ತೊಂದರೆಯು ತಪ್ಪುವದೆಂದು ಶ್ರೀಯುತ ರೆಡ್ಡಿಯವರು ಈರೀತಿ ಬದಲಾವಣೆಗಳನ್ನು ಮಾಡಿದರು. ಇ|| ಕ|| ಮಿಡಲ್ ಸ್ಕೂಲುಗಳು ತಕ್ಕನುಟ್ಟಿಗೂ ಒಳ್ಳೇ ಉಪಾಧ್ಯಾಯರಿಂದಲೂ ಸಾಮಾನು ಸಲಕರಣೆಗಳಿಂದಲೂ ಕೂಡಿದವಾಗಿವೆಯೆಂದು ಹೇಳಬಹುದು. ಆದರೆ ಪ್ರೈಮರಿಸ್ಕೂಲಿನಲ್ಲಿ ಓದಿ ಮುಗಿಸಿದ ಹುಡುಗನು ಇಕ್‌ಕಂಪ್ಲೀಟ್ ಮಿಡಲ್ ಸ್ಕೂಲಿಗೆ ಬರಬೇಕು. ಇಲ್ಲಿ ಹುಡುಗರ ಊಟಕ್ಕೂ ವಾಸಕ್ಕೂ ತಕ್ಕ ಏರ್ಪಾಟಿರುವುದಿಲ್ಲ. ಹಳ್ಳಿಗಳಲ್ಲಿ ಊಟದ ಹೋಟೆಲ್‌ಗಳು ಸಹ ಇರುವುದಿಲ್ಲ. ವರಸ್ಸಿನ 8-10 ಹುಡುಗರಿಗಾಗಿ ಇಡುವುದೂ ಸಾಧ್ಯವಲ್ಲ. ಒಬ್ಬೊಬ್ಬ ಹುಡುಗನಿಗೆ ಪ್ರತ್ಯೇಕ ಏರ್ಪಾಟು ಮಾಡಿಕೊಳ್ಳುವುದೂ, ಅದರ ಖರ್ಚನ್ನು ಬಡವರಾದ ರೈತರು ನಡಿಯಿಸುವುದೂ ಸಾಧ್ಯವಲ್ಲ. ಹೀಗೆ ಹಳ್ಳಿಯ ಬಡವರ ಮಕ್ಕಳು ಅವಿದ್ಯಾವಂತರಾಗಿ ಬಾಳುವುದು ತಪ್ಪಲಿಲ್ಲ. ದುಡ್ಡು ಕೊಟ್ಟು ಆಕಳುಗಳನ್ನು ಕೊಂಡು ಕಟ್ಟಿದ್ದೇವೆ, ಅಮೃತ ಕುಡಿಯಿರೆಂದು ಶಿಶುಗಳಿಗೆ ತಂದೆ ತಾಯಿಗಳು ಹೇಳಿದ ಮಾತ್ರಕ್ಕೆ ಅವರ ಜವಾಬ್ದಾರಿಯು ಹೇಗೆ ತೀರುವುದಿಲ್ಲವೋ ಹಾಗೆ ಸರ್ಕಾರದವರು ಸ್ಕೂಲುಗಳನ್ನು ಬೇಕಾದಷ್ಟು ಇಟ್ಟುಕೊಟ್ಟಿದ್ದೇವೆ. ಅತಿಶಯ ಖರ್ಚುಮಾಡುತ್ತಲಿದ್ದೇವೆ ವಿದ್ಯೆ ಕಲಿಯಿರೆಂದು ಹೇಳುವ ಮಾತ್ರಕ್ಕೆ ತಮ್ಮ ಜವಾಬ್ದಾರಿಯು ತೀರಲಾರದು. ಆಕಳುಗಳ ಹಾಲನ್ನು ಹಿಂಡಿ ಅಮೃತದ ಗುಣವನ್ನು ತಿಳಿಯದ ಶಿಶುಗಳಿಗೆ ಬಲುಮೆಯಿಂದಲಾದರೂ ಕುಡಿಸಿದ ನಂತರವೇ ಹಿರಿಯರ ಜವಾಬ್ದಾರಿಯು ಹೇಗೆ ತೀರಿದಂತಾಗುವುದೋ ಹಾಗೆ ಸರ್ಕಾರದವರು ಸಹ ವಿದ್ಯೆ ಕಲಿಯಲೇಬೇಕೆಂಬ ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಸರ್ವತ್ರ ಜಾರಿಗೆ ತಂದು ಸರ್ಕಾರೀ ಹಣದಿಂದಲೇ ತಕ್ಕ ಸ್ಥಳಗಳಲ್ಲಿ ಸ್ಕೂಲು ಕಟ್ಟಡಗಳನ್ನು ಕಟ್ಟಿಸಿ ಶಕ್ತರಾದ ಉಪಾಧ್ಯಾಯರನ್ನು ಒದಗಿಸಿಕೊಟ್ಟು ಬಡವರ ಮಕ್ಕಳಿಗೆ ಅಶನ ವಸನದ ಏರ್ಪಾಟುಗಳನ್ನು ಮಾಡಿಸಿಕೊಟ್ಟಲ್ಲಿ ಅವರ ಜವಾಬ್ದಾರಿಯು ಪೂರೈಸಿದಂತಾಗುವುದು. ಇತ್ಯಾದಿ ಲೋಪಗಳಿಂದ ಕೂಡಿರುವ ಈ ಇಲಾಖೆಯ ಅವಶ್ಯ ಸುಧಾರಣೆಗಳನ್ನು ಸರ್ಕಾರದವರು ಕೈಕೊಳ್ಳುವಂತಾಗಲೆಂಬುದೇ ಈ ಲೇಖನದ ನಮ್ರ ಸೂಚನೆಯು.

ಕಪ್ಪನಹಳ್ಳಿ ಚನ್ನಬಸವಪ್ಪಗೌಡ.

ರಿಲೀಫ್ ಫಂಡು.

ಹಾಸನ ಡಿ|| ದೆ|| ಕಮೀಷನರ ಕೋರ್ಟಿನಲ್ಲಿ ಈ ತಾ|| 9 ನೆಯ ಶನಿವಾರದ ದಿವಸ ದೆ|| ಕ|| ಮ|| ಎ. ವಿ. ರಾಮನಾಥನ್ ಬಿ. ಎ., ಯವರ ಅಧ್ಯಕ್ಷತೆಯಲ್ಲಿ ಜರುಗಿದ ಮಹಾಜನ ಸಭೆಯ ನಡವಳಿಕೆಗಳು.—

ಪ್ರವಾಹದ ದೆಸೆಯಿಂದ ಕಷ್ಟನಷ್ಟಗಳಿಗೆ ಗುರಿಯಾದ ಜನರ ಸಹಾಯಾರ್ಥವಾಗಿ ಒಂದು ಫಂಡನ್ನು ಏರ್ಪಡಿಸುವುದರ ಆವಶ್ಯಕತೆಯನ್ನು ಕುರಿತು ಮ|| ಎನ್. ಎಸ್. ನಂಜುಂಡಯ್ಯನವರು ಪ್ರತಿಯೊಬ್ಬ ಸಭಿಕರ ಮನಸ್ಸಿಗೆ ಹಿಡಿಯುವಂತೆ ಭಾಷಣಮಾಡಿದಮೇಲೆ ಈ ಕೆಳಗೆಕಂಡ ಪ್ರಕಾರ ಒಂದು ಡಿಸ್ಟ್ರಿಕ್ಟ್ ಕಮಿಟಿಯನ್ನು ನೇಮಿಸಬೇಕೆಂದು ಸೂಚಿಸಿದರು.

ಪ್ರೆಸಿಡೆಂಟರು.

ಹಾಸನ ಡಿ|| ದೆ|| ಕ|| ಮ|| ಎ. ವಿ. ರಾಮನಾಥನ್, ಬಿ. ಎ., ಯವರು.

ವೈಸ್‌ಪ್ರೆಸಿಡೆಂಟರು.

ಡಿ|| ಬೋರ್ಡು ಪ್ರೆಸಿಡೆಂಟ್ ಮತ್ತು ಲೆ|| ಕೌನ್ಸಿಲ್ ಮೆಂಬರ್ ಮ|| ಎನ್. ಎಸ್. ನಂಜುಂಡಯ್ಯನವರು.

ಜಾಯಿಂಟ್ ಸೆಕ್ರೆಟರಿಗಳು.

ಹಾಸನದ ಎಕ್ಸಿಕ್ಯುಟಿವ್ ಇಂಜನಿಯರ್ ಮ|| ಎನ್. ಜಿ. ಕೃಷ್ಣಯ್ಯಂಗಾರ್‌ರವರು ಮತ್ತು ಡಿ|| ಬೋರ್ಡು ವೈಸ್ ಪ್ರೆಸಿಡೆಂಟ್ ಮ|| ಎಚ್. ವಿ. ರಂಗಸ್ವಾಮಿ, ಬಿ. ಎ., ಎಲ್‌ಎಲ್. ಬಿ., ಯವರು.

ಟ್ರೆಜರರ್.

ಹಾಸನ ಡಿ|| ಟ್ರೆಜರಿ ಆಫಸರ್ ಮ|| ಪಿ. ಎಚ್. ಕೃಷ್ಣರಾವ್, ಎಂ. ಎ., ಯವರು.

ಮೆಂಬರುಗಳು.

1. ಹಾಸನದ ವೆಸ್ಲಿಯನ್ ಮಿಷನ್ ರೆವರೆಂಡ್ ಎ. ಆರ್. ಸ್ಲೇಟರ್ ರವರು. 2. ಬಿಕ್ಕೋಡು ಎಸ್ಟೇಟ್ ಮೇಜರ್ ಎ. ಎಲ್. ಹಿಲ್, ಓ. ಬಿ. ಇ., ಎಂ. ಸಿ. ಯವರು. 3. ಲೆಫ್ಟಿನೆಂಟ್‌ಕರ್ನಲ್ ಡಬ್ಲ್ಯು. ಎಲ್. ಕ್ರಾಫರ್ಡ್ ಡಿ. ಎಸ್. ಓ., ಉಸ್ಲೂರು ಎಸ್ಟೇಟ್. 4. ಉಬ್ಬನ್ ಎಸ್ಟೇಟ್ ಮಿ|| ಇ. ಡಬ್ಲ್ಯು. ರೂಥರ್‌ಫರ್ಡ್ ರವರು. 5. ಹಾಸನ ಮ್ಯುನಿಸಿಪಲ್ ಪ್ರೆಸಿಡೆಂಟ್ ಮ|| ಎಚ್. ಬೋರಣ್ಣನವರು. 6. ಹಾಸನದ ರಿಟೈರ್ಡ್ ಸೀನಿಯರ್ ಅ|| ಕಮಿಷನರ್ ಸಯದ್ ಅಮೀರ್‌ಹಸೇನ್ ರವರು. 7. ಹಾಸನ ತಾ|| ಬೋರ್ಡು ವೈಸ್ ಪ್ರೆಸಿಡೆಂಟ್ ಮ|| ಬಿ. ಕಪ್ಪಣ್ಣಗೌಡರು. 8. ಹಾಸನದ ಅಡ್ವೊಕೇಟ್ ಮ|| ಎಸ್. ವೆಂಕಟೇಶಯ್ಯ, ಬಿ. ಎ., ಬಿ.ಎಲ್. ರವರು. 9. ಆಲೂರಿನ ಮ|| ಎಸ್. ನಂಜುಂಡಯ್ಯನವರು. 10. ಹಾಸನದ ಮ|| ಕೆ. ಮಹಾದೇವಪ್ಪನವರು. 11. ಶ್ರವಣಬೆಳಗೊಳದ ಮ|| ಜಿ. ಕೆ. ಡಿ. ಪದ್ಮನಾಭಯ್ಯನವರು. 12. ಕಾಂತರಾಜಪುರದ ಮ|| ಎಂ. ನಂಜಪ್ಪನವರು. 13. ಅರಸೀಕೆರೆ ತಾ|| ಬೋರ್ಡು ವೈಸ್‌ಪ್ರೆಸಿಡೆಂಟ್ ಮಿ|| ಕಾಶಿಮಲಿಶೇಟ್‌ರವರು. 14. ಹಲ್ಮಿರಿನ ಮ|| ಮರುಳಸಿದ್ದಪ್ಪನವರು. 15. ಸಕಲೇಶಪುರದ ಮ|| ಬೆಳ್ಳೂರು ದೇವಪ್ಪಗೌಡರು. 16. ಸಕಲೇಶಪುರದ ಮ|| ಹೊಸಕೆರೆ ಬಸವೇಗೌಡರು. 17. ಅರಕಲಗೂಡಿನ ಮ|| ಎ. ವಿ. ಸೂರ್ಯನಾರಾಯಣಶೆಟ್ಟರು. 18. ಹೊಳೇನರಸೀಪುರದ ಮಿ|| ಮಹಮದಿಬೇಗ್‌ರವರು. 19. ಹಾಸನದ ಮ|| ಶಂಕರಯ್ಯನವರು. 20. ಹೊಳೇನರಸೀಪುರದ ಮ|| ಬಿ. ವೆಂಕಟಕಾಮಣ್ಣನವರು. 21. ಸಕಲೇಶಪುರದ ಮ|| ಮಾಳಲಿವೆಂಕಟರಾಮಯ್ಯನವರು. 22. ಹಾಸನದ ಮ|| ಎಚ್. ಗೋವಿಂದಶೆಟ್ಟರು. 23. ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಡಾಕ್ಟರ್ ಬಾಲಕೃಷ್ಣರವರು. 24. ಹೊಳೇನರಸೀಪುರ ಸಬ್ ಡಿವಿಜನ್ ಅ|| ಕಮಿಷನರ್ ಮ|| ಪಿ. ವೇದವ್ಯಾಸಾಚಾರ್, ಬಿ.ಎ.ಯವರು. 25. ಸಕಲೇಶಪುರ ಸಬ್‌ಡಿವಿಜನ್ ಅ|| ಕಮಿಷನರ್ ಮ|| ಕೆ. ಗುರುದತ್, ಬಿ.ಎ., ಯವರು.

II. ಟವನ್ ಮ್ಯುನಿಸಿಪಲ್ ಕೌನ್ಸಿಲಿನವರು ಮ್ಯು|| ಪ್ರೆಸಿಡೆಂಟರನ್ನು ಪ್ರೆಸಿಡೆಂಟರನ್ನಾಗಿಯೂ, ಕೌನ್ಸಿಲರುಗಳನ್ನು ಮತ್ತು ಪ್ರಮುಖಜನರನ್ನು ಮೆಂಬರುಗಳನ್ನಾಗಿಯೂ ಇಟ್ಟುಕೊಂಡು ಕಮಿಟಿಗಳನ್ನು ಏರ್ಪಡಿಸುವಂತೆ ಅವರುಗಳನ್ನು ಕೇಳಿಕೊಳ್ಳತಕ್ಕದು.

III. ಪ್ರತಿ ತಾಲ್ಲೂಕು ಕಮಿಟಿಯವರು ಸಬ್‌ಡಿವಿಜನ್ ಆಫೀಸರುಗಳನ್ನು ಪ್ರೆಸಿಡೆಂಟರುಗಳನ್ನಾಗಿಯೂ ಅಮಲ್ದಾರರುಗಳನ್ನು ವೈಸ್ ಪ್ರೆಸಿಡೆಂಟರುಗಳನ್ನಾಗಿಯೂ ತಾ|| ಬೋರ್ಡು ಮತ್ತು ಮ್ಯು|| ಕೌನ್ಸಿಲ್ ವೈಸ್‌ಪ್ರೆಸಿಡೆಂಟರುಗಳನ್ನು ಸೆಕ್ರೆಟರಿಗಳನ್ನಾಗಿಯೂ ತಾ|| ಬೋರ್ಡು ಮತ್ತು ಮ್ಯು|| ಕೌನ್ಸಿಲ್‌ಮೆಂಬರುಗಳು, ಪ್ರಜಾಪ್ರತಿನಿಧಿಗಳು, ಇತರ ಪ್ರಮುಖ ದೊಡ್ಡಮನುಷ್ಯರುಗಳು ಇತರರುಗಳನ್ನು ಮೆಂಬರುಗಳನ್ನಾಗಿಯೂ ಇಟ್ಟುಕೊಂಡು ಕಮಿಟಿಗಳನ್ನೇರ್ಪಡಿಸುವಂತೆ ಅವರುಗಳನ್ನು ಕೇಳಿಕೊಳ್ಳತಕ್ಕದು.

IV. ಈ ಫಂಡಿಗೆ ಕನಿಷ್ಠ ಪಕ್ಷ 15,000 ರೂಪಾಯಿಗಳನ್ನು ಕೂಡಿಸತಕ್ಕದು.

ಎ. ವಿ. ರಾಮನಾಥನ್,
ಚೇರ್ಮನ್.

ಪ್ರಾರ್ಥನೆ.

Mr. M. G. Dastagir moved the next resolution which ran as follows.—"That the ratepayers and voters of Mysore City in public meeting assembled do convey their most respectful thanks to the Government of His Highness the Maharaja of Mysore for their just and timely action in postponing the elections to the Mysore City Municipal Council fixed for the 18th August 1924 and the subsequent days and ordering the same to take place after the preparatiod of a fresh voters' list." Mr. B. Raghava Naik seconded and Mr. M. Ramachandra Shetty supported the motion. Mr. K. Dhanakoti Shetty in further supporting the same referred to what transpired on the 20th instant and said that the protest that he and some others made at the meeting that they should await the receipt of the Government Order before condemning their action was justified by later events. The Government Order was available and the Government were fully justified in passing the Order. It was a question of the candidates *versus* the people and he was sorry that there were some candidates who did not view the matter from the point of view of the people. The intervention of the Government was the only remedy and it was quite in time and this just and generous act of Government only showed that they were keen in safeguarding the interests of the people.

Mr. M. V. Narayana Rao who opposed the resolution put forward the theory that though the order may result in good to the ratepayers still as it was against law the resolution was not to be supported. He was seconded by Mr. Krishnaswamy Rao.

Mr. Y. Virupakshiah pointed out that it was not against law and added that the selling of the copies of the list of voters was against rules.

When the resolution was put to vote the whole House with the exception of 5 members adopted the resolution. The feeble opposition only brought out in greater relief the solidarity of public opinion in favour of the resolution. The third resolution was for authorising the President to submit the resolutions to His Highness the Maharaja and to the Government of H. H. the Maharaja.

The President in bringing the proceedings to a close said that Mysore City was the metropolis of the State and was thus a model to the other parts of the State which would follow its example. The City had a reputation to maintain and they had by their adoption of the resolutions of the evening not only helped in maintaining the reputation but strengthened and enhanced it. The benefits of their work were far reaching and in the succeeding years those who would come after them would be grateful to those present there for the stand they had taken up on behalf of the ratepayers. The Government Order was no curtailment of the powers of the ratepayers. On the other hand, it was only giving a freer play for their powers and as such they should welcome the order. He thanked them on behalf of the organisers for the enthusiastic manner in which they had responded to their notice. Finally, he expressed his unbounded thanks to them for the pleasant and orderly manner in which the proceedings were allowed to go on and for their whole hearted co-operation in making the meeting a supreme success.

The meeting which was an eventful one came to a termination with a hearty vote of thanks to the President.

ಗೌರ್ನಮೆಂಟ್ ಆರ್ಡರ್ ನಿಷೇಧಕಸಭೆ.

ಇದೇ ಆಗಸ್ಟ್ ತಾ॥ 18 ರ ಆರಾಭ್ಯ 21 ರ ವರೆಗೆ ನಡೆಯಲು ಗೊತ್ತಾಗಿದ್ದ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ನಡೆಯಕೂಡದೆಂದೂ, ಹೊಸ ಓಟರುಲಿಸ್ಟು ತಯಾರಿಸಲ್ಪಡಬೇಕೆಂದೂ, ಇನ್ನೂ 6 ತಿಂಗಳ ಕಾಲ ಈಗಿರುವ ಕೌನ್ಸಿಲರೇ ಇರತಕ್ಕದ್ದೆಂದೂ ಬಂದಿರುವ ಗೌರ್ನಮೆಂಟ್ ಆರ್ಡರಿನಿಂದ ಪ್ರಜೆಗಳಿಗೆ ಅನನುಕೂಲವಾಗಿರುವ ಪ್ರಯುಕ್ತ ಅದನ್ನು ನಿಷೇಧಿಸುವುದಕ್ಕಾಗಿ ಕಳೆದ 20 ನೆಯ ಬುಧವಾರ ಸಾಯಂಕಾಲ ಟೌನ್‌ಹಾಲಿನಲ್ಲಿ ಅಡ್ವೋಕೇಟ್ ಮ॥ ಎಚ್. ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಸೇರಿತ್ತು. ಚುನಾವಣೆಗೆ ನಿಂತಿದ್ದ ಉಮೇದುವಾರರುಗಳೂ, ಅನೇಕ ಅಡ್ವೋಕೇಟರುಗಳೂ, ಕೆಲ ಬ್ರಾಹ್ಮಣ ಓಟರುಗಳೂ, ಸ್ಕೂಲು ಹುಡುಗರೂ ಈ ಸಭೆಗೆ ಬಂದಿದ್ದರು. ಒಟ್ಟು ಸುಮಾರು 300 ಜನರಿರಬಹುದು. ಇವರಲ್ಲಿ 40—50 ಜನರ ವಿನಾ ಉಳಿದವರೆಲ್ಲರೂ ಬ್ರಾಹ್ಮಣರೇ ಆಗಿದ್ದರು. ಅಧ್ಯಕ್ಷರು ಆ ದಿವಸದ ಸಭೆಯುದ್ದೇಶವನ್ನು ತಿಳಿಸಿದಮೇಲೆ ಅವರಪಕ್ಕದ ಆಸನದಲ್ಲಿ ಕುಳಿತಿದ್ದ ಮ॥ ವೆಂಕಟಕೃಷ್ಣಯ್ಯನವರು ಎದ್ದು ಮ್ಯುನಿಸಿಪಾಲಟಿ ಎಂಬುದು ಪುರಪಾಲಕಸಂಘವಾಗಿದೆ. ಇದು ಎಲ್ಲಾ ಜಾತಿ ಜನರುಪಯೋಗಾರ್ಥವಾಗಿ ಏರ್ಪಟ್ಟಿರುವದರಿಂದ ಇದರಲ್ಲಿ ಪ್ರಜೆಗಳ ಪ್ರತಿನಿಧಿಯಾಗಿರತಕ್ಕ ಕೌನ್ಸಿಲರುಗಳು ಯಾವ ಜಾತಿಮತಗಳ ತಾರತಮ್ಯವಿಲ್ಲದೆ ನಿರ್ವಂಚನೆಯಿಂದಲೂ ನಿಸ್ಪೃಹತೆಯಿಂದಲೂ ಕೆಲಸಮಾಡಬೇಕೆಂದು ಧರ್ಮಬೋಧೆಯನ್ನು ಮಾಡಿ ಎಲಕ್ಷನ್ನ ರದ್ದುಪಡಿಸಿರುವ ಗೌರ್ನಮೆಂಟ್ ಆರ್ಡರು ಅನ್ಯಾಯವೆಂಬುವದನ್ನು ಮ॥ ಎ. ಕೃಷ್ಣರಾಯರು ಮೊದಲಾದವರು ತಿಳಿಸುತ್ತಾರೆಂದು ಹೇಳಿ ಕುಳಿತುಕೊಂಡರು. ತರುವಾಯ ಅಡ್ವೋಕೇಟ್ ಮ॥ ಎ. ಕೃಷ್ಣರಾಯರೆದ್ದು ಈಗ ನಡೆಯಬೇಕಾಗಿದ್ದ ಚುನಾವಣೆಯನ್ನು ರದ್ದುಪಡಿಸಿ ಹಾಲಿ ಇರತಕ್ಕ ಕೌನ್ಸಿಲಿನ ಅವಧಿಯನ್ನು ಹೆಚ್ಚಿಸಿರುವದಾಗಿ ಗೌರ್ನಮೆಂಟಿನವರು ಮಾಡಿರುವ ಆರ್ಡರು ಅನ್ಯಾಯವೂ, ಅಪ್ರಕೃತವೂ, ಅಧರ್ಮವೂ, ಆಗಿರುತ್ತದೆಂಬ ಬಗ್ಗೆ ಒಂದು ರೆಜ್ಯುಲೇಷನ್ನನ್ನು ಓದಿ ಅದನ್ನು ಸಮರ್ಥನಮಾಡುವಾಗ್ಗೆ ಮ್ಯುನಿಸಿಪಲ್ ಕೌನ್ಸಿಲಿನವರು ತಯಾರಿಸಿದ ಓಟರು ಲಿಸ್ಟನ್ನು ಪ್ರಕಟಿಸಲು ಮತ್ತು ಇಂತಿಂತಹ ತಾರೀಖುಗಳಲ್ಲಿ ಇಂತಿಂತಹ ಸ್ಥಳಗಳಲ್ಲಿ ಎಲಕ್ಷನ್ ನಡೆಸಲು ಸರ್ಕಾರದವರು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದು ಎಲಕ್ಷನ್ ನಡೆಯುವುದಕ್ಕೆ 24 ಗಂಟೆಗಳ ಮುಂಚೆ ಎಲಕ್ಷನ್ ನಡೆಯಕೂಡದೆಂದು ಆರ್ಡರ್‌ಮಾಡಿರುವುದು ಅನ್ಯಾಯವೂ ಅಯುಕ್ತವೂ ಆಗಿದೆ. ಮ್ಯುನಿಸಿಪಲ್ ರೆಗ್ಯುಲೇಷನ್ನಿನ 178 ನೇ ಸೆಕ್ಷನ್ ಪ್ರಕಾರ ಮ್ಯುನಿಸಿಪಲ್ ಕೌನ್ಸಿಲಿನವರು ಯಾವುದಾದರು ಗೊತ್ತಾದ ಕಾರ್ಯವನ್ನು ಮಾಡದೆ ತಪ್ಪಿದಲ್ಲಿ ಆ ಕಾರ್ಯವನ್ನು ಇಷ್ಟು ಕಾಲಾವಧಿಯಲ್ಲಿ ಮಾಡಬೇಕೆಂದು ವಿಧಿಸಲೂ, ಆಗಲೂ ಕೌನ್ಸಿಲಿನವರು ಮಾಡದೆ ಇದ್ದರೆ ಬೇರೆಯವರ ಮೂಲಕ ಮಾಡಿಸಿ ಅದಕ್ಕಾಗಿ ತಗಲುವ ಖರ್ಚನ್ನು ಮ್ಯುನಿಸಿಪಾಲಟಿಯಿಂದ ಬರಮಾಡಿಕೊಳ್ಳಲೂ ಸರ್ಕಾರದವರಿಗೆ ಅಧಿಕಾರವಿರುವುದರ ಹೊರತು ಸರ್ಕಾರಿಯಧಿಕಾರಿಯಾಗಿರುವ ಚೀಫ್ ಆಫೀಸರಿಂದ ತಯಾರಿಸಲ್ಪಟ್ಟ ಓಟರು ಲಿಸ್ಟನ್ನು [illegible] ಅನಂತರ ಎಲಕ್ಷನ್ ನಡೆಯುವ ಸಮಯದಲ್ಲಿ ರದ್ದುಪಡಿಸಲು [illegible] ಸರ್ಕಾರದವರಿಗೆ ಅಧಿಕಾರವಿಲ್ಲ. [illegible] ಸರ್ಕಾರದವರು ಚುನಾವಣೆಯನ್ನು [illegible] ಗೌರ್ನಮೆಂಟ್ ಆರ್ಡರಿನಲ್ಲಿ [illegible] ಈ ಆರ್ಡರ್ [illegible]

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಆಗಸ್ಟು ತಾ|| ೨೪ ನೆಯ ಭಾನುವಾರ.

GENUINE *VS.* SPURIOUS.

The order of Government staying the elections to the Municipal Council which were to be held from the 18th of August 1924 onwards and ordering the preparation of a fresh voters' list in accordance with the rules created a flutter in the political dove-cote of the *Sampadabhyudaya*. It did not stop to see what the grounds were on which the order was passed, nor to think of the justification for the same. We have said enough about the voters' list which had been prepared and its iniquitous character. The Order would mean the setting right of the ommissions and commissions in the list. This was not to the advantage of the *Sampadabhyudaya*, though it was in the interests of the ratepayers. Neither law nor justice being on its side the only recourse it is having to is abuse and vilification, and since it was Mushir-ul-Mulk Mir Humza Hussein, the First Member of Council who, acting as Dewan in the absence of Mr. A. R. Banerji at Calcutta, passed the order, there is a hysterical outburst of abuse on his devoted head. "Abuse begins when argument fails," and when there is no argument at all we know how much worse abuse is; and with a tongue like that of the *Sampadabhyudaya* brood it can better be imagined than expressed. Criticism of the action of officers in given up to criticism of their persons, and it thinks Billingsgate is politics. If it has any connection with politics it must be of the very lowest type, one which injects poison into the body-politic more than anything else. Not satisfied with vilification in the paper, the Venkatakrishnayya's School convened a so-called citizens' meeting on the 20th instant. This was attended by some few of the soberer section of the city population, the notice being very short. A large number of Brahmins was in evidence while the non-Brahmin conveners of the meeting were conspicuous by their absence. The attempt to criticise the action of Government as illegal, inexpedient and unjustifiable did not prove so successful as expected, though they could get a majority in their favour at the meeting. There was not one non-Brahmin who spoke in favour of the resolution. Messrs. H. C. Dasappa, K. Dhanakoti Shetty, Y. Viroopakshiah and M. P. Bhogiah spoke against the resolution and said that to criticise Government without a copy of the order before them was unwise, and unreasonable, and the resolutions of the meeting would not be treated with any respect, but it was in vain. It was a striking demonstration of the popular opinion of Mysore City ratepayers and voters that they made when they met on the 22nd instant at the Town Hall to convey their thanks to His Highness the Maharaja of Mysore and to the Government of Mysore for their just and timely action. The Government Order was out by the time and it is significant that the resolution to convey their loyal and respectful thanks to His Highness was passed unanimously though the opposition bench was not badly represented, and that there were only about 5 dissenting members for the resolution expressing thanks to the Government. The two meetings showed clearly to the public which was the genuine expression of public opinion and which the spurious. The public of the City are to be congratulated on being able to show definitely that those few who hitherto were doing things in the name of the many could no longer hoodwink the many and that the few stand for none but themselves. We on our part are glad that the Government have been able to do justice and to gain the gratitude of the citizens of Mysore.

ಅನುಚಿತವಾದ ಖಂಡನೆಯು.

ಅನುಚಿತನಿಷೇಧಪ್ರದರ್ಶನ.

ಈ ವಾರದಲ್ಲಿ ನಡೆಯಬೇಕಾಗಿದ್ದ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಗಾಗಿ ತಯಾರಿಸಲ್ಪಟ್ಟಿದ್ದ ಓಟರುಗಳ ಲಿಸ್ಟು ನಿರಾಕ್ಷೇಪವಾಗಿಯೂ, ವಿಧಿಪ್ರಕಾರವಾಗಿಯೂ ಇಲ್ಲವೆಂಬುದನ್ನು ನಾವು ನಮ್ಮ ಕಳೆದವಾರದ ಅಗ್ರಲೇಖದಲ್ಲಿ ನಿದರ್ಶನಪೂರ್ವಕವಾಗಿ ಪ್ರತಿಪಾದಿಸಿದ್ದೆವಲ್ಲದೆ, ಕಂದಾಯಕೊಡತಕ್ಕ ಪ್ರತಿಯೊಬ್ಬನ ಹೆಸರೂ ಲಿಸ್ಟಿನಲ್ಲಿ ಸೇರಲವಕಾಶವಾಗುವಂತೆ ಹೊಸ ಲಿಸ್ಟನ್ನು ತಯಾರಿಸಲಪ್ಪಣೆಯಾಗಬೇಕೆಂದು ಅನೇಕ ಓಟರುಗಳು ಶ್ರೀಮನ್ಮಹಾರಾಜರವರಿಗೂ ಅವರ ಸರ್ಕಾರದವರಿಗೂ ಬಿನ್ನೈಸಿಕೊಂಡಿರುತ್ತಾರೆಂದು ತಿಳಿಯಬರುತ್ತಾದುದರಿಂದ ಅವರ ಪ್ರಾರ್ಥನೆಯು ಮಹಾಪ್ರಭುವರ್ಯರಿಂದಲೂ, ಸರ್ಕಾರದವರಿಂದಲೂ ಅಂಗೀಕರಿಸಲ್ಪಡತಕ್ಕದು ಯುಕ್ತವೆಂದು ಅಭಿಪ್ರಾಯಪಟ್ಟಿದ್ದೆವಷ್ಟೆ? ಅದರಂತೆ, ಸಮಸ್ತವರ್ಗದ ಪ್ರಜೆಗಳನ್ನೂ ಪುತ್ರನಿರ್ವಿಶೇಷದಿಂದ ಕಾಪಾಡುತ್ತಿರುವ ನಮ್ಮ ಮಹಾಪ್ರಭುವರ್ಯರು, ಜಾತಿವಾರು ಪ್ರಾತಿನಿಧ್ಯವನ್ನು ದಯಪಾಲಿಸಬೇಕೆಂದು ಹಿಂದುಳಿದವರ್ಗಗಳ ರಾಯಭಾರದವರು ಮಾಡಿಕೊಂಡಿದ್ದ ಪ್ರಾರ್ಥನೆಗೆ ಉತ್ತರಕೊಡುವ ವೇಳೆಯಲ್ಲಿ "Separate sections of inhabitants are already given social representation, and my hope is that with extended franchise and a larger scope for elections a large number will associate themselves with local administration and all communities on whose behalf you speak will be more largely represented (ಸಂಗಡಗಳ ಬೇರೆಬೇರೆ ಆರಿಸುವಿಕೆಗೆ ಈ ಮೊದಲೇ ಏರ್ಪಾಟುಮಾಡಲ್ಪಟ್ಟಿದೆ. ಓಟನ್ನು ಕೊಡುವವರ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಆರಿಸಲ್ಪಡುವುದಕ್ಕೆ ನಿಲ್ಲುವವರೂ ಹೆಚ್ಚುವರು ಮತ್ತು ತಕ್ಕಷ್ಟು ಪ್ರಾತಿನಿಧ್ಯವೂ ಕ್ರಮಕ್ರಮವಾಗಿ ನಿಮ್ಮ ಎಲ್ಲ ಸಂಗಡದವರಿಗೂ ಸಿಕ್ಕೇಸಿಕ್ಕುವುದು.'') ಎಂದು ತಮ್ಮ ಮಹಾಮೃತವಾಣಿಯಿಂದಪ್ಪಣೆಕೊಡಿಸಿದ್ದುದರಪ್ರಕಾರ, ರಾಜಧಾನಿಯ ಪ್ರಸಕ್ತ ಮ್ಯುನಿಸಿಪಲ್ ಕೌನ್ಸಿಲರ ಚುನಾವಣೆಯಲ್ಲಿ ಪ್ರತಿಯೊಬ್ಬ ಕಂದಾಯಕೊಡತಕ್ಕವನೂ ಭಾಗಿಯಾಗಲವಕಾಶವಾಗುವಂತೆ ಈಗಣ ಓಟರುಲಿಸ್ಟನ್ನು ರದ್ದುಪಡಿಸಿ ಸಕ್ರಮವಾದ ಲಿಸ್ಟನ್ನು ಹೊಸದಾಗಿ ಚೀಫ್ ಆಫೀಸರು ತಯಾರಿಸಬೇಕೆಂದು ಸರ್ಕಾರದವರು ಅಪ್ಪಣೆಮಾಡಿರುವುದಕ್ಕಾಗಿ ಸಂತೋಷಿಸುತ್ತೇವಲ್ಲದೆ, ಶ್ರೀಮನ್ಮಹಾರಾಜರವರಿಗೂ ಅವರ ಸರ್ಕಾರದವರಿಗೂ ಪುರನಿವಾಸಿಗಳ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಯನ್ನರ್ಪಿಸುತ್ತೇವೆ.

"ದೇವರು ವರವನ್ನು ಕೊಟ್ಟರೂ ಪೂಜಾರಿಯು ಕೊಡನು'' ಎಂಬ ಚಾಟೂಕ್ತಿಯಂತೆ ನ್ಯಾಯವಿಧಾಯಕಸಭೆ, ಪ್ರಜಾಪ್ರತಿನಿಧಿಸಭೆ, ಸ್ಥಳೀಯ ಸರ್ಕಾರ ಇತ್ಯಾದಿಗಳಿಗೆ ಮೆಂಬರುಗಳನ್ನು ತಮ್ಮ ಪ್ರತಿನಿಧಿಗಳನ್ನಾಗಿ ಆರಿಸಿ ಕಳುಹುವಲ್ಲಿ, ಪ್ರತಿಯೊಬ್ಬ ಕಂದಾಯದಾರನಿಗೂ ಅವಕಾಶದೊರೆಯಬೇಕೆಂಬ ಮಹೋದಾರಭಾವದಿಂದ ಶ್ರೀಮನ್ಮಹಾರಾಜರವರು ದಯಪಾಲಿಸಿದ ವರವನ್ನು ರಾಜಧಾನಿಯ ಮ್ಯುನಿಸಿಪಲ್ ಅಧಿಕಾರಿಗಳು ಕೊಡಲ್ಲವೆಂದು ವ್ಯಥೆಪಡುತ್ತಿದ್ದ ಓಟರುಗಳು, ಈಗ ಬಿಟ್ಟುಹೋಗಿರುವ ಓಟರುಗಳ ಹೆಸರನ್ನು ಸೇರಿಸಿ ಹೊಸಲಿಸ್ಟನ್ನು ತಯಾರಿಸುವಂತಾದುದಕ್ಕಾಗಿ ಸಮಾಧಾನಪಟ್ಟುಕೊಂಡಿರುವಾಗ್ಗೆ ಸಜಾತ್ಯಭಿಮಾನದಿಂದಲೋ, ಮತ್ತಾವ ಕಾರಣದಿಂದಲೋ ಶೇಕಡ 50 ರಷ್ಟು ಹೆಚ್ಚುಸಂಖ್ಯಾಕರಾಗಿ ಸೇರಿಸಲ್ಪಟ್ಟಿರುವ ಒಂದೇವರ್ಗದ ಓಟರುಗಳೂ ಉಮೇದುವಾರರುಗಳೂ ಹೊಸ ಕೌನ್ಸಿಲಿನಲ್ಲಿ ಮುಕ್ಕಾಲುಪಾಲು ಸ್ಥಾನಗಳನ್ನು ಆಕ್ರಮಿಸುತ್ತೇವೆಂಬ ಭರವಸೆಯಿಂದಿರುತ್ತಿರುವಾಗ್ಗೆ, ತಮ್ಮ ಛದ್ಮಭೇದಕ್ಕಾಗಿ ಆಕಾಶದಿಂದ ಬಂದ ಸಿಡಿಲಿನೋಪಾದಿಯಲ್ಲಿ ಹುಟ್ಟಿದ ಸರ್ಕಾರಿ ಅಪ್ಪಣೆಯಿಂದ ''ಕೈಗೆಬಂದ ತುತ್ತು ಬಾಯಿಗೆಬರಲಿಲ್ಲ'' ಎಂಬ ಗಾಥೆಯಂತೆ ಆಯಿತೆಂದು ಚಿಂತಾಕ್ರಾಂತರಾಗಿ ಜಾಗ್ರತ್ ಸ್ವಪ್ನ ಸುಷುಪ್ತಿಗಳಲ್ಲೂ ಆ ಆರ್ಡರನ್ನು ರದ್ದುಪಡಿಸಲು ತಕ್ಕುಪಾಯಗಳನ್ನು ಹುಡುಕಿ ಕಳೆದ ತಾ|| 20 ರ ಸಾಯಂಕಾಲ ರಾಜಧಾನಿಯ ಟವರ್ಹಾಲಿನಲ್ಲಿ ಪುರನಿವಾಸಿಗಳ ಮಹಾಸಭೆಯೆಂದು ಕರೆಯಲ್ಪಟ್ಟು 200-300 ಜನರಿಂದ ಅದರಲ್ಲೂ ಭಗ್ನಮನೋರಥರಾದ ಒಂದೇವರ್ಗದವರಿಂದ ಕೂಡಿದ ಒಂದು ಸಣ್ಣಸಭೆಯನ್ನು ಅಡ್ವೊಕೇಟ್ ಮ|| ಎಚ್. ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಕೂಡಿಸಿ ನಿರ್ಧಾರಗಳನ್ನು ಮಾಡಿದರು. ಈ ಸಭಾಸಂಬಂಧವಾದ ನಡವಳಿಕೆಯು ಬೇರೆಕಡೆ ಮುದ್ರಿಸಲ್ಪಟ್ಟಿರುತ್ತದೆ.

ಈ ನಿರ್ಧಾರಗಳನ್ನು ಉಪಪಾದಿಸಿದ ಅಡ್ವೋಕೇಟ್ ಮ|| ಎ. ಕೃಷ್ಣರಾಯರು, ಚುನಾವಣೆಯನ್ನು ನಿಲ್ಲಿಸುವ ವಿಚಾರದಲ್ಲಿ ಸರ್ಕಾರದವರು ಮಾಡಿರುವ ಆರ್ಡರು ಅನ್ಯಾಯವೂ, ಅಪ್ರಕೃತವೂ, ಅಧರ್ಮವೂ ಎಂಬ ಬಗೆಗೆ ಸೂಚಿಸಿದ ಮೊದಲನೆಯ ನಿರ್ಧಾರವನ್ನು ಸಮರ್ಥಿಸಿ ಹೇಳಿದುದರಮೇಲೆ, ಸರ್ಕಾರದ ಆರ್ಡರೇನೆಂಬುದನ್ನು ತಿಳಿಯದೆ, ಸರ್ಕಾರದವರಿಗೆ ಅಧಿಕಾರವಿಲ್ಲ, ಅವರು ಹಾಗೆ ಮಾಡಿದುದು ತಪ್ಪೆಂದು ನಿರ್ಧರಿಸುವುದು ಯುಕ್ತವಲ್ಲ. ಆ ಆರ್ಡರೇನೆಂಬುದನ್ನು ಸರ್ಕಾರದವರನ್ನಾದರೂ ಕೇಳಿ ತಿಳಿದುಕೊಂಡು ಅನಂತರ ಹಾಗೆ ರದ್ದುಮಾಡಲು ಸರ್ಕಾರದವರಿಗೆ ಅಧಿಕಾರವಿದೆಯೋ ಇಲ್ಲವೋ ಅಥವಾ ಅದು ಯುಕ್ತವೋ, ಅಯುಕ್ತವೋ ಎಂಬುದನ್ನು ಚೆನ್ನಾಗಿ ಪರಿಶೀಲಿಸಿ ಅನಂತರ ಯಾವ ನಿರ್ಧಾರವನ್ನಾದರೂ ಮಾಡತಕ್ಕದು ಯೋಗ್ಯವೆಂದು ಮ|| ಗಳಾದ ಎಚ್. ಸಿ. ದಾಸಪ್ಪನವರು ಕೆ. ಧನಕೋಟಿಸೆಟ್ಟರು ಮತ್ತು ವೈ. ವಿರೂಪಾಕ್ಷಯ್ಯನವರು ಯುಕ್ತಿಯುಕ್ತವಾಗಿ ತಿಳಿಸಿದವರಾದರೂ, ಕೆಳಕೋರ್ಟಿನ ವಿವಾದದಲ್ಲಿ ಸೋತ ಕಕ್ಷಿಗಾರನು ಅದರಮೇಲಣ ಕೋರ್ಟಿಗೆ ಅಪೀಲನ್ನುಮಾಡಬೇಕೆಂದು ಆತುರದಿಂದ ಹೇಳಿದರೆ ಅವನಿಗೆ, ಜಡ್ಜಿಯು ಯಾವಾಧಾರದ ಮೇಲೆ ಕೇಸನ್ನು ಫೈಸಲ್ಮಾಡಿರುತ್ತಾನೆಂಬುದನ್ನೂ, ಅಪೀಲು ಮಾಡಲು ತಕ್ಕ ಕಾರಣಗಳಿರುತ್ತವೆಯೋ ಎಂಬುದನ್ನೂ ತಿಳಿಯದೇ ಅಪೀಲನ್ನು ಮಾಡಲಾಗುವುದಿಲ್ಲವೆಂದು ಹೇಳುವಂತಹ ವಕೀಲರಾದ ಮ|| ಕೃಷ್ಣರಾಯರೂ ಅವರ ಮಿತ್ರಮಂಡಲಿಯವರೂ 'ಆತುರಗಾರರಿಗೆ ಬುದ್ಧಿಮಟ್ಟು' ಎಂಬಂತೆ ದೂರಾಲೋಚನೆಯಿಲ್ಲದೆ, ಸ್ವಲ್ಪವೂ ಸಾವಕಾಶಮಾಡದೆ ಆ ಕೂಡಲೆ ಸರ್ಕಾರದವರ ಆರ್ಡರು ಅನ್ಯಾಯವೂ, ಅಪ್ರಕೃತವೂ, ಅಧರ್ಮವೂ ಆದುದರಿಂದ ಅದನ್ನು ರದ್ದುಪಡಿಸಬೇಕೆಂಬ ಬಗೆಗೆ ನಿರ್ಧಾರಮಾಡಿಸಲು ಸಾಹಸಪಟ್ಟುದು ಸಖೇದಾಶ್ಚರ್ಯವೇ ಸರಿ. ಮ|| ಕೃಷ್ಣರಾಯರು ಸೂಚಿಸಿದ ನಿರ್ಧಾರವನ್ನು ಪುಷ್ಟೀಕರಿಸುವಲ್ಲಿ, ಕ್ಯಾನವಾಸಿಂಗಿಗಾಗಿ ಎಷ್ಟೋ ದುಡ್ಡನ್ನು ಕೊಟ್ಟು ಶ್ರಮಪಟ್ಟಿರುತ್ತೇವೆಂದೂ, ಓಟರುಗಳಿಗೆ ಬಹಳ ತೊಂದರೆಯಾಯಿತೆಂದೂ ಕ್ಯಾಂಡಿಡೇಟರುಗಳೂ ಅವರ ಮಿತ್ರರಾದ ಮ|| ಎಂ. ಎಸ್. ಕೃಷ್ಣರಾಯರೂ ಹೇಳಿದರೇವಿನಾ ಬೇರೆ ಓಟರುಗಳಾರೂ ತಮಗೆ ತೊಂದರೆಯಾಯಿತೆಂದು ಹೇಳಲಿಲ್ಲವು. ಇದರಿಂದ ಕೆಲ ಉಮೇದುವಾರರಿಗೆ ಆಶಾಭಂಗವಾದುದರಹೊರತು ಓಟರರಾರಿಗೂ ಯಾವ ವಿಧವಾದ ತೊಂದರೆಯು ಆಗದೆ ಅನುಕೂಲವೇ ಆಯಿತೆಂದು ಹೇಳಬಹುದಾಗಿದೆ.

ಓಟರುಗಳ ಲಿಸ್ಟು ರೂಲ್ಸುಪ್ರಕಾರ ಮಾಡಲ್ಪಟ್ಟು ಜನರೆಲ್ಲರಿಗೂ ತಿಳಿಯುವಂತೆ ಪ್ರಕಟಿಸಲ್ಪಡಲಿಲ್ಲವೆಂದು ಪ್ರೆಸಿಡೆಂಟರಿಗೆ ತಿಳಿಸಿದೆವು, ಆದರೆ ಅವರು ಅದನ್ನು ಗಮನಿಸಲಿಲ್ಲವೆಂದು ಕೌನ್ಸಿಲರು ಹೇಳುತ್ತಾರೆ. ಆರೀತಿ ಪ್ರೆಸಿಡೆಂಟರು ತಮ್ಮ ಮಾತನ್ನು ನಡಿಸಲಿಲ್ಲವೆಂದು ಕೌನ್ಸಿಲರುಗಳು ಕಂದಾಯದಾರರಿಗೆ ತಿಳಿಸಬೇಕಾಗಿತ್ತು. ಅವರು ಹಾಗೆ ಮಾಡದೆ ಹೋದುದರಿಂದ ಇನ್ನು 6 ತಿಂಗಳವರೆಗೆ ಕೌನ್ಸಿಲರಾಗಿರುವಂತೆ ಸರ್ಕಾರದವರಿಂದ ಮಾಡಲ್ಪಟ್ಟಿರುವುದು ಅಸಂಗತವು, ಎಂದು ಮ|| ಎಂ. ಎಸ್. ಕೃಷ್ಣರಾಯರು ಖಂಡಿಸಿದರು. ಇವರು ಹಾಗೆ ಹೇಳುವುದಕ್ಕೆ ಮೊದಲು ತಾವು ಕೌನ್ಸಿಲರಾಗಿದ್ದಾಗ್ಯೆ ಮಾಡಿದ ಕಾರ್ಯಭಾಗಗಳನ್ನು ಎಷ್ಟರಮಟ್ಟಿಗೆ ಕಂದಾಯದಾರರಿಗೆ ತಿಳಿಸಿದ್ದೆವೆಂಬುದನ್ನು ಹೇಳಿದ್ದರೆ ಇವರ ಮಾತಿಗೆ ಬೆಲೆಕೊಡಬಹುದಾಗಿದ್ದಿತು. ಇವರು ಹಾಗೆ ಮಾಡದೆ ಪರರ ತಪ್ಪನ್ನು ಉದ್ಘಾಟಿಸುವ ಪ್ರಯತ್ನದಲ್ಲಿ ತಮ್ಮ ಅಸೂಯೆಯನ್ನೂ, ಕರ್ತವ್ಯಕುಂಠಿತೆಯನ್ನೂ ವ್ಯಕ್ತಗೊಳಿಸಿದುದಕ್ಕಾಗಿ ವಿಷಾದಿಸುತ್ತೇವೆ. ಮ|| ಕೃಷ್ಣರಾಯರ ಹೇಳಿಕೆಯನ್ನು ಪುಷ್ಟೀಕರಿಸುವ ಸಂದರ್ಭದಲ್ಲಿ ಬೆಂಗಳೂರು ಮತ್ತು ಮೈಸೂರುಪಟ್ಟಣಗಳಲ್ಲಿ ಪ್ರಜಾಪ್ರತಿನಿಧಿಗಳನ್ನು ಚುನಾಯಿಸುವ ಓಟರುಗಳ ಯೋಗ್ಯತೆಯು ಮ್ಯುನಿಸಿಪಲ್ ಕೌನ್ಸಿಲರನ್ನು ಚುನಾಯಿಸಲಿರಬೇಕಾದ ಯೋಗ್ಯತೆಯಷ್ಟೇ ಇರಬೇಕೆಂಬುದನ್ನು ಅಡ್ವೋಕೇಟ್ ಮ|| ಸಿ. ನರಸಿಂಹಯ್ಯನವರು ಮರೆತುಬಿಟ್ಟು ಮೇಲ್ಕಂಡ ಉಭಯ ಓಟರುಗಳ ಯೋಗ್ಯತೆಯು ಬೇರೆಬೇರೆಯಾಗಿರುವುದರಿಂದ ಓಟರುಗಳ ಲಿಸ್ಟಿನಲ್ಲಿ ಇಷ್ಟೊಂದು ವ್ಯತ್ಯಾಸವಾಗಲು ಕಾರಣವೆಂದು ಹೇಳಿದುದಕ್ಕಾಗಿ ಆಶ್ಚರ್ಯಪಡಬೇಕಾಗಿದೆ. ಈ ನಿಷೇಧಕ ರೆಜ್ಯುಲೇಷನನ್ನು ಪುಷ್ಟೀಕರಿಸಿ ಮಾತನಾಡಿದವರೆಲ್ಲರೂ ಬ್ರಾಹ್ಮಣರೆಂಬುದನ್ನು ಗಮನಿಸತಕ್ಕದು ಅತ್ಯಾವಶ್ಯಕವು.

ಓಟರುಗಳ ಲಿಸ್ಟು ಸರ್ಕಾರದವರಿಂದ ಗೊತ್ತುಮಾಡಲ್ಪಟ್ಟ ಅಧಿಕಾರಿಯಿಂದ ತಯಾರಿಸಲ್ಪಡದಿರುವುದೂ, ಇಂಗ್ಲೀಷಿನಲ್ಲಿ ಮುದ್ರಿಸಲ್ಪಡದಿರುವುದೂ ಸಮಸ್ತ ಜನರಿಗೂ ತಿಳಿಯುವಂತೆ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡದಿರುವುದೂ, ವಿಕ್ರಯಿಸಲ್ಪಟ್ಟಿರುವುದೂ ಆಕ್ಷೇಪಕರವೆಂದು ಸರ್ಕಾರದವರು ಅಭಿಪ್ರಾಯಪಟ್ಟು ಹೊಸ ಲಿಸ್ಟನ್ನು ತಯಾರಿಸಲು ಅಪ್ಪಣೆಮಾಡಿರುವುದಾಗಿ ತಿಳಿಯುತ್ತೇವೆ. ಲಿಸ್ಟು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡದಿದ್ದುದರಿಂದಲೂ, ಪ್ರತಿಗಳು ವಿಕ್ರಯಿಸಲ್ಪಟ್ಟುದರಿಂದಲೂ ದುಡ್ಡುಕೊಟ್ಟು ಕೊಂಡುಕೊಂಡಂತಹ ಕೆಲರು ಅಂದರೆ ಓಟರುಗಳ ಹೆಸರನ್ನು ತಿಳಿಯಲು ಕುತೂಹಲರಾಗಿದ್ದ ಉಮೇದುವಾರರುಗಳ ವಿನಾ ಇತರರು ತಿಳಿಯಲವಕಾಶವಾಗಲಿಲ್ಲವೆಂದು ಎಂತಹ ಅಲ್ಪಮತಿಗಾದರೂ ಗೊತ್ತಾಗುವುದು. ಇಂತಹುದರಲ್ಲಿ ನ್ಯಾಯಶಾಸ್ತ್ರವನ್ನು ಅರೆದು ಕುಡಿದಿರುವವರು ಮ್ಯುನಿಸಿಪಾಲಟಿಯವರ ಕಾರ್ಯಕ್ರಮವು ಸರಿಯಾದುದೆಂದೂ, ಒಂದುವೇಳೆ ಸರಿಯಾಗಿಲ್ಲದಿದ್ದಲ್ಲಿ ಅದನ್ನು ರದ್ದುಪಡಿಸಲು ಡಿಸ್ಟ್ರಿಕ್ಟ್ ಜಡ್ಜರಿಗೆ ಮಾತ್ರ ಅಧಿಕಾರವಿರುವುದರಿಂದ ಸರ್ಕಾರದವರು ಎಲಕ್ಷನ್ ನಡೆಯಕೂಡದೆಂದು ಮಾಡಿರುವ ಆರ್ಡರು ಶುದ್ಧ ಅನ್ಯಾಯವೆಂದೂ ಸಾಧಿಸಲು ಪ್ರಯತ್ನಿಸಿದುದಕ್ಕೆ ಅವರ ಆಶಾಭಂಗವೇ ಕಾರಣವೆಂದು ತೋರುತ್ತದೆ. ಎಲಕ್ಷನ್ ಕಾಲದಲ್ಲಿ ಉಮೇದುವಾರರಿಂದ ಅಥವಾ ಪೋಲಿಂಗ್ ಆಫೀಸರಿಂದ ಅಕ್ರಮ ಅತ್ಯಾಚಾರಗಳೇನಾದರೂ ನಡೆಸಲ್ಪಟ್ಟಲ್ಲಿ ಅಂತಹವರ ಉತ್ತೀರ್ಣತೆಯನ್ನಾಗಲಿ ನಡೆದ ಎಲಕ್ಷನ್ನಾಗಲಿ ರದ್ದುಪಡಿಸಲು ಡಿ|| ಜಡ್ಜರಿಗೆ ಅಧಿಕಾರವಿರುವುದೇ ಹೊರತು, ಎಲಕ್ಷನ್ನು ನಡಿಯದಂತೆ ನಿಲ್ಲಿಸಲ್ಪಡಲು ಸರ್ಕಾರದವರ ವಿನಾ ಮತ್ತಾರಿಗೂ ಅಧಿಕಾರವಿಲ್ಲವು. ಹಳೆಯ ಲಿಸ್ಟನ್ನು ರದ್ದುಪಡಿಸಿ ಹೊಸ ಲಿಸ್ಟನ್ನು ಸಕ್ರಮವಾಗಿ ತಯಾರಿಸಬೇಕೆಂದು ದಯಾಳು ಸರ್ಕಾರದವರು ಮಾಡಿರುವ ಆರ್ಡರಿನಿಂದ, ಪ್ರತಿಯೊಬ್ಬ ಕಂದಾಯದಾರನೂ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರುವ ಪ್ರಕಾರ ಓಟನ್ನು ಕೊಡಲು ಅವಕಾಶವುಂಟಾಗುತ್ತದೆಂದು ನಾವು ಧಾರಾಳವಾಗಿ ಹೇಳುತ್ತೇವೆ, ಮತ್ತು ಸರ್ವೇ ಜನಾಸ್ಸುಖಿನೋಭವಂತು ಎಂದು ಹೇಳಿಕೊಳ್ಳುವ ಜನರು ಮಾತ್ರ ಇದಕ್ಕೆ ವಿರುದ್ಧವಾಗಿ ಆಚರಿಸುವುದಕ್ಕೋಸ್ಕರ ವಿಷಾದಿಸುತ್ತೇವೆ. ಸರ್ಕಾರದ ಈ ಆರ್ಡರು ಹುಟ್ಟಲು ಕಾರಣವನ್ನೂ, ತತ್ಸಂಬಂಧವಾದ ವಿದ್ಯಮಾನಗಳನ್ನೂ ನಾವು ತಿಳಿಯದ ಹೊರತು ಮೇಲ್ಕಂಡ ನಿಷೇಧಕ ನಿರ್ಧಾರವು ಮಾಡಲ್ಪಡಕೂಡದೆಂದು ಮ||ಗಳಾದ ಎಚ್. ಸಿ. ದಾಸಪ್ಪನವರು, ಧನಕೋಟಿಶೆಟ್ಟರು ಮತ್ತು ವೈ. ವಿರೂಪಾಕ್ಷಯ್ಯನವರು ನಿರೋಧಿಸಿದುದರಮೇಲೆ ಓಟಿಗೆ ಹಾಕಿ ಮೇಲ್ಕಂಡವರ ಸಮೇತ 48 ಜನರು ಪ್ರತಿಕೂಲವಾಗಿಓಟುಮಾಡಿದುದನ್ನು ಕಣ್ಣಾರನೋಡಿ ಕಿವಿಯಾರಕೇಳಿದ ಸಂಪದಭ್ಯುದಯ ಪತ್ರಿಕಾಸಂಪಾದಕರಾದ ಮ|| ವೆಂಕಟಕೃಷ್ಣಯ್ಯನವರು, ತಮ್ಮ ಪತ್ರಿಕೆಯಲ್ಲಿ ಮ|| ವಿರೂಪಾಕ್ಷಯ್ಯನವರು ಮತ್ತು ಮ|| ಧನಕೋಟಿಶೆಟ್ಟರು ಪ್ರತಿಕೂಲವಾಗಿ ಓಟುಮಾಡಲಿಲ್ಲವೆಂದು ಬರೆಯಲ್ಪಡಲು ಅವಕಾಶಕೊಟ್ಟುದಕ್ಕಾಗಿ ಎಷ್ಟು ಚಿಂತಿಸಿದರೂ ಸಾಲದು. ಮ|| ವೆಂಕಟಕೃಷ್ಣಯ್ಯನವರು ತಮ್ಮ ಮೂಗಿನ ಮುಂದೆ ನಡೆದ ವಿಷಯವನ್ನೇ ಹೀಗೆ ವಿಪರ್ಯಾಸವಾಗಿ ಬರೆಯಲು ನಾಚದಿರುವಾಗ್ಯೆ ಪರೋಕ್ಷದಲ್ಲಿ ನಡೆಯುವ ವಿಷಯವನ್ನು ಯದ್ವಾತದ್ವಾ ಬರೆಯುವುದರಲ್ಲಿ ಆಶ್ಚರ್ಯವೇನಿರುವುದು? ಬಹುಜನ ಕಂದಾಯದಾರರ ಅಸಮಾಧಾನಕ್ಕೆ ಕಾರಣವಾಗಿದ್ದ ಓಟರ ಲಿಸ್ಟನ್ನು ರದ್ದುಪಡಿಸಿ ಎಲ್ಲರಿಗೂ ಸಮಾಧಾನಕರವಾಗಿರುವಂತೆ ಹೊಸ ಲಿಸ್ಟನ್ನು ತಯಾರಿಸಲು ಹುಟ್ಟಿರುವ ಸರ್ಕಾರಿಯಪ್ಪಣೆಯನ್ನು ಸ್ವಾರ್ಥಬುದ್ಧಿಯಿಂದ ನಿರೋಧಿಸಿದುದಕ್ಕಾಗಿ ವಿದ್ಯಾಧಿಕರು ಪಶ್ಚಾತ್ತಾಪಪಟ್ಟು ಹೊಸ ಲಿಸ್ಟು ನಿರಾಕ್ಷೇಪಕರವಾಗಿಯೂ ಸಮಗ್ರವಾಗಿಯೂ ತಯಾರಿಸಲ್ಪಡುವಲ್ಲಿ ಈಗಲಾದರೂ ಸಹಾಯಕರಾಗಲು ಪ್ರಯತ್ನಿಸುವರೆಂದು ಕೋರುತ್ತೇವೆ.

A MASS MEETING.

A crowded mass meeting of the ratepayers and voters of the Mysore City numbering nearly two thousand was held at the Town Hall, Mysore on Friday the 22nd August 1924 at 5 p.m. under the presidency of H. C. Dasappa, Esq., Advocate, Mysore to convey their thanks to His Highness the Maharaja and the Government for their recent order, postponing the elections to the Municipal Council pending revision of the voters' list. Members of every community and interest in the City were present, among whom were Messrs. Nizamuddin Ali Khan, Dharmaprakasha D. Banumiah, Abul Hasanath Syed Hasrat Peer, Mahamad Sait, V. Thiruvengada Moodr., M. Venkatakrishnayya, M. V. Venkata Rao, B.A., LL.B., K. Dhanakoti Chetty, Y. Virupakshiah, M. Basavaraj Urs, M.A., B.L., C. Narasimhaiya, B.A., B.L., M. P. Bhogiah, B.A.,B.L., M. G. Dastgir, R.G. Hardekar, Md. Ismail Sab, Regimentdar, S. Subba Rao, B.A., LL.B., K. Krishnaswami Rao, B.A., LL.B., B. Devaraj Urs, B.A., LL.B., Kaveripatna Subbaraya Chetty, M. Muddappa, K. Madhava Rao, N. R. Lingoji Rao, M. Ramachandra Chetty, B.A., Setwaji Rao, Savoy Ranganna, Giriappa, Sahukar Dodda Javarappa, Sahukar Thammayya, Balaram Singh, Narayanaswamy, M. C. Lingegowda, Abdul Waheb Sait, P. S. Anantha Rao, B. Raghava Naik, G. Parthasarathi Iengar, B.A., B.L., H. Subba Rao, B.A., B.L., M. V. Narayana Rao, B.A., LL.B., M. Madappa, Sreekantachar, P. Seetharamiah, B.A., B.L., J. Mallaradhya, B.A., LL.B., M. Puttananjappa, Jusab Osman Sait, A. Kareemkhan Saheb, G. Husainkhan Saheb, Siddoji Rao, T.C. Tampiran, B.A., B. Munivenkatappa and many others.

Mr. M. Ramachandra Chetty proposed Mr. H. C. Dasappa, B.A., LL.B., to the Chair which was duly seconded by Sahukar Thammayya. The President in his opening remarks said that he was sure there were men worthier and more experienced to preside on the important occasion but probably the choice had fallen on him because the times and the circumstances were such that legal questions had been made to assume a greater importance than other things and he would be of some help on such an occasion. He read the notice signed by 70 leading persons of the city convening the meeting and said how fitting and proper it was to express their grateful thanks to His Highness the Maharaja and the Government for the prompt action the Government had taken in staying the election and ordering a fresh one to be held after the preparation of a fresh voter's list. He called upon Mr. M. Basavaraj Urs, M.A., LL B., to move the first resolution.

Mr. Basavaraj Urs' resolution ran thus. "That the ratepayers and voters of Mysore City in public meeting assembled do convey their most loyal and respectful thanks to His Highness the Maharaja of Mysore for the just and timely action taken by the Government of His Highness the Maharaja of Mysore in postponing the elections to the Municipal Council fixed for the 18th August 1924 and subsequent days and ordering the same to be held after the preparation of a fresh voters' list."

In placing the resolution for the acceptance of the meeting the mover said he was aware that there were many material irregularities in the preparation of the list, that the ordering of a new list would result in a much larger number of the ratepayers taking part in the elections and would be of real good to the citizens of Mysore. It was their good fortune that the memorial of the ratepayers was heard and in the circumstances it was only their duty to express their loyal thanks to His Highness the Maharaja of Mysore who was ever anxious to see to the welfare of the subjects.

Mr. M. P. Bhogiah, Advocate in seconding the resolution answered *seriatim* the charges levelled against the order of Government. A meeting called on behalf of the citizens on the 20th August had characterised the order of Government as illegal, inexpedient and unjustifiable. The Order he said was perfectly legal. The present list of voters was not prepared by an officer appointed by Government for the purpose as required by S. 8. of the Rules of Election. The list of voters was quite incomplete. No demand for taxes was made prior to the preparation of the list on thousands of ratepayers, and such of them who in consequence could not pay their taxes were excluded from the list. There were many whose names, though they had paid taxes in time were not to be seen in the list. S. 178 of the Municipal Regulation provided for the interference of Government in all cases of the Municipal Council not performing its duty and there could not have been any better occasion demanding such an action of the Government as the present one. Those gentlemen who criticised the action of the Government had stated that those who were affected by the irregularities in the voters' list could move the Court of the District Judge to set aside the election. The speaker regretted their knowledge about the provisions of the Regulation which clearly laid down in S. 22 that if the validity of the election was questioned merely on the ground of an error by the officer or officers charged with the carrying out the rules for regulating the elections, the Judge should not set aside the election. After all, the order of the Government would only conduce to the good of the ratepayers and not do any harm

Mr. Mir Nizamuddin Ali Khan in supporting the same resolution said they ought to consider the good intention of His Highness the Maharaja and the Government. He was sorry to state that though there were 7 persons in his house each of whom had paid taxes and was entitled to vote only one was included in the list of voters. He asked how it was possible for so many of the ignorant sections of the Mysore City population to know these deficiencies and how they could over progress unless there was more sympathy and liberality introduced into the working of these privileges.

Mr. M. V. Venkata Rao, Advocate in further supporting the resolution made a very short and effective speech. He said it would be very regrettable if on a point of thanksgiving there should arise any differences of opinion. After all, who were the people who had reason to object to the order of Government. They were the 57 candidates, not all of whom had taken objection. It may be true that the candidates had taken a lot of trouble. He was a candidate and he was at a loss to get at the voters if he took up the list as at present prepared. Some had talked of the expenses incurred by the candidates. What was that he asked when compared to the good of tens of thousands of citizens. Was it their *Dharma* to place their personal selves before the public weal, and how could they expect those who raised such objections to discharge their duty towards the public properly. Mr. Y. Viroopakshiah in supporting the resolution said that judged from the point of view of the ratepayers, which was the correct stand point, the order was most welcome.

Mr. K. Krishnaswamy Rao wanted to move an amendment to the effect that while conveying thanks to His Highness the Maharaja the meeting condemns the action of Government as illegal, inexpedient and unjustifiable. The President ruled it out of order as it was in the nature of opposition.

Mr. H. Subba Rao, B.A., B.L., in opposing the resolution said that he was doing it in part. He was quite anxious to express thanks to His Highness and in fact there was none who was not grateful to His Highness, but that they should differentiate between occasion and occasion, and the speaker went on to say that this was not the particular occasion when such an expression of thanks was called for when the audience felt dissatisfied at the remarks of the speaker and he withdrew the same and expressed his regret that it was a slip of his tongue.

Mr. G. Parthasarathi Iyengar in seconding Mr. Subba Rao said that the point was that the Government had not acted in right time, though probably it was better late than never. It was on the ground that the Government interference was illegal that he opposed the resolution. Mr. S. Subba Rao, B.A., B.L., also opposed.

When the resolution was put to vote the whole house adopted the same unanimously with acclamation.

Mr. M. G. Dastagir moved the next resolution which ran as follows.—"That the ratepayers and voters of Mysore City in public meeting assembled do convey their most respectful thanks to the Government of His Highness the Maharaja of Mysore for their just and timely action in postponing the elections to the Mysore City Municipal Council fixed for the 18th August 1924 and the subsequent days and ordering the same to take place after the preparatiod of a fresh voters' list." Mr. B. Raghava Naik seconded and Mr. M. Ramachandra Shetty supported the motion. Mr. K. Dhanakoti Shetty in further supporting the same referred to what transpired on the 20th instant and said that the protest that he and some others made at the meeting that they should await the receipt of the Government Order before condemning their action was justified by later events. The Government Order was available and the Government were fully justified in passing the Order. It was a question of the candidates *versus* the people and he was sorry that there were some candidates who did not view the matter from the point of view of the people. The intervention of the Government was the only remedy and it was quite in time and this just and generous act of Government only showed that they were keen in safeguarding the interests of the people.

Mr. M. V. Narayana Rao who opposed the resolution put forward the theory that though the order may result in good to the ratepayers still as it was against law the resolution was not to be supported. He was seconded by Mr. Krishnaswamy Rao.

Mr. Y. Virupakshiah pointed out that it was not against law and added that the selling of the copies of the list of voters was against rules.

When the resolution was put to vote the whole House with the exception of 5 members adopted the resolution. The feeble opposition only brought out in greater relief the solidarity of public opinion in favour of the resolution. The third resolution was for authorising the President to submit the resolutions to His Highness the Maharaja and to the Government of H. H. the Maharaja.

The President in bringing the proceedings to a close said that Mysore City was the metropolis of the State and was thus a model to the other parts of the State which would follow its example. The City had a reputation to maintain and they had by their adoption of the resolutions of the evening not only helped in maintaining the reputation but strengthened and enhanced it. The benefits of their work were far reaching and in the succeeding years those who would come after them would be grateful to those present there for the stand they had taken up on behalf of the ratepayers. The Government Order was no curtailment of the powers of the ratepayers. On the other hand, it was only giving a freer play for their powers and as such they should welcome the order. He thanked them on behalf of the organisers for the enthusiastic manner in which they had responded to their notice. Finally, he expressed his unbounded thanks to them for the pleasant and orderly manner in which the proceedings were allowed to go on and for their whole hearted co-operation in making the meeting a supreme success.

The meeting which was an eventful one came to a termination with a hearty vote of thanks to the President.

ಗೌರ್ನಮೆಂಟ ಆರ್ಡರ್ ನಿಷೇಧಕಸಭೆ.

ಇದೇ ಆಗಸ್ಟ್ ತಾ|| 18 ರ ಆರಾಭ್ಯ 21 ರ ವರೆಗೆ ನಡೆಯಲು ಗೊತ್ತಾಗಿದ್ದ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ನಡೆಯಕೂಡದೆಂದೂ, ಹೊಸ ಓಟರುಲಿಸ್ಟು ತಯಾರಿಸಲ್ಪಡಬೇಕೆಂದೂ, ಇನ್ನೂ 6 ತಿಂಗಳ ಕಾಲ ಈಗಿರುವ ಕೌನ್ಸಿಲರೇ ಇರತಕ್ಕದ್ದೆಂದೂ ಬಂದಿರುವ ಗೌರ್ನಮೆಂಟ್ ಆರ್ಡರಿನಿಂದ ಪ್ರಜೆಗಳಿಗೆ ಅನನುಕೂಲವಾಗಿರುವ ಪ್ರಯುಕ್ತ ಅದನ್ನು ನಿಷೇಧಿಸುವುದಕ್ಕಾಗಿ ಕಳೆದ 20 ನೆಯ ಬುಧವಾರ ಸಾಯಂಕಾಲ ಟವರ್ಹಾಲಿನಲ್ಲಿ ಅಡ್ವೋಕೇಟ್ ಮ|| ಎಚ್. ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಸೇರಿತ್ತು. ಚುನಾವಣೆಗೆ ನಿಂತಿದ್ದ ಉಮೇದುವಾರರುಗಳೂ, ಅನೇಕ ಅಡ್ವೋಕೇಟರುಗಳೂ, ಕೆಲ ಬ್ರಾಹ್ಮಣ ಓಟರುಗಳೂ, ಸ್ಕೂಲು ಹುಡುಗರೂ ಈ ಸಭೆಗೆ ಬಂದಿದ್ದರು. ಒಟ್ಟು ಸುಮಾರು 300 ಜನರಿರಬಹುದು. ಇವರಲ್ಲಿ 40—50 ಜನರ ವಿನಾ ಉಳಿದವರೆಲ್ಲರೂ ಬ್ರಾಹ್ಮಣರೇ ಆಗಿದ್ದರು. ಅಧ್ಯಕ್ಷರು ಆ ದಿವಸದ ಸಭೆಯುದ್ದೇಶವನ್ನು ತಿಳಿಸಿದಮೇಲೆ ಅವರಪಕ್ಕದ ಆಸನದಲ್ಲಿ ಕುಳಿತಿದ್ದ ಮ|| ವೆಂಕಟಕೃಷ್ಣಯ್ಯನವರು ಎದ್ದು ಮ್ಯುನಿಸಿಪಾಲಿಟಿ ಎಂಬುದು ಪುರಪಾಲಕಸಂಘವಾಗಿದೆ. ಇದು ಎಲ್ಲಾ ಜಾತಿ ಜನರುಪಯೋಗಾರ್ಥವಾಗಿ ಏರ್ಪಟ್ಟಿರುವದರಿಂದ ಇದರಲ್ಲಿ ಪ್ರಜೆಗಳ ಪ್ರತಿನಿಧಿಯಾಗಿರತಕ್ಕ ಕೌನ್ಸಿಲರುಗಳು ಯಾವ ಜಾತಿಮತಗಳ ತಾರತಮ್ಯವಿಲ್ಲದೆ ನಿರ್ವಂಚನೆಯಿಂದಲೂ ನಿಸ್ಪೃಹತೆಯಿಂದಲೂ ಕೆಲಸಮಾಡಬೇಕೆಂದು ಧರ್ಮಬೋಧೆಯನ್ನು ಮಾಡಿ ಎಲಕ್ಷನ್ನ ರದ್ದುಪಡಿಸಿರುವ ಗೌರ್ನಮೆಂಟ್ ಆರ್ಡರು ಅನ್ಯಾಯವೆಂಬುವದನ್ನು ಮ|| ಎ. ಕೃಷ್ಣರಾಯರು ಮೊದಲಾದವರು ತಿಳಿಸುತ್ತಾರೆಂದು ಹೇಳಿ ಕುಳಿತುಕೊಂಡರು. ತರುವಾಯ ಅಡ್ವೋಕೇಟ್ ಮ|| ಎ. ಕೃಷ್ಣರಾಯರೆದ್ದು ಈಗ ನಡೆಯಬೇಕಾಗಿದ್ದ ಚುನಾವಣೆಯನ್ನು ರದ್ದುಪಡಿಸಿ ಹಾಲಿ ಇರತಕ್ಕ ಕೌನ್ಸಿಲಿನ ಅವಧಿಯನ್ನು ಹೆಚ್ಚಿಸಿರುವದಾಗಿ ಗೌರ್ನಮೆಂಟಿನವರು ಮಾಡಿರುವ ಆರ್ಡರು ಅನ್ಯಾಯವೂ, ಅಪ್ರಕೃತವೂ, ಅಧರ್ಮವೂ, ಆಗಿರುತ್ತದೆಂಬ ಬಗ್ಗೆ ಒಂದು ರೆಜ್ಯುಲೇಷನ್ನನ್ನು ಓದಿ ಅದನ್ನು ಸಮರ್ಥನಮಾಡುವಾಗ್ಗೆ ಮ್ಯುನಿಸಿಪಲ್ ಕೌನ್ಸಿಲಿನವರು ತಯಾರಿಸಿದ ಓಟರು ಲಿಸ್ಟನ್ನು ಪ್ರಕಟಿಸಲು ಮತ್ತು ಇಂತಿಂತಹ ತಾರೀಖುಗಳಲ್ಲಿ ಇಂತಿಂತಹ ಸ್ಥಳಗಳಲ್ಲಿ ಎಲಕ್ಷನ್ ನಡೆಸಲು ಸರ್ಕಾರದವರು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದು ಎಲಕ್ಷನ್ ನಡೆಯುವುದಕ್ಕೆ 24 ಗಂಟೆಗಳ ಮುಂಚೆ ಎಲಕ್ಷನ್ ನಡೆಯಕೂಡದೆಂದು ಆರ್ಡರ್ ಮಾಡಿರುವುದು ಅನ್ಯಾಯವೂ ಅಯುಕ್ತವೂ ಆಗಿದೆ. ಮುನಿಸಿಪಲ್ ರೆಗ್ಯುಲೇಷನ್ನಿನ 178 ನೇ ಸೆಕ್ಷನ್ ಪ್ರಕಾರ ಮ್ಯುನಿಸಿಪಲ್ ಕೌನ್ಸಿಲಿನವರು ಯಾವುದಾದರು ಗೊತ್ತಾದ ಕಾರ್ಯವನ್ನು ಮಾಡದೆ ತಪ್ಪಿದಲ್ಲಿ ಆ ಕಾರ್ಯವನ್ನು ಇಷ್ಟು ಕಾಲಾವಧಿಯಲ್ಲಿ ಮಾಡಬೇಕೆಂದು ವಿಧಿಸಲೂ, ಆಗಲೂ ಕೌನ್ಸಿಲಿನವರು ಮಾಡದಿದ್ದರೆ ಬೇರೆಯವರ ಮೂಲಕ ಮಾಡಿಸಿ ಅದಕ್ಕಾಗಿ ತಗಲುವ ಖರ್ಚನ್ನು ಮ್ಯುನಿಸಿಪಾಲಿಟಿಯಿಂದ [illegible] ಸರ್ಕಾರದವರಿಗೆ ಅಧಿಕಾರವಿರುವುದರ ಹೊರತು [illegible] ಚೀಫ್ ಆಫೀಸರಿಂದ ತಯಾರಿಸಲ್ಪಟ್ಟ ಓಟರು ಲಿಸ್ಟನ್ನು [illegible] ಎಲಕ್ಷನ್ [illegible] ರದ್ದುಪಡಿಸಲು [illegible] ಸರ್ಕಾರದವರಿಗೆ ಅಧಿಕಾರವಿಲ್ಲ. [illegible] ಸರ್ಕಾರದವರು ಚುನಾವಣೆಯನ್ನು [illegible] ಗೌರ್ನಮೆಂಟ್ ಆರ್ಡರನ್ನು [illegible]. ಈ ಆರ್ಡರ್ [illegible]

ಗೊತ್ತಿಲ್ಲವೆಂದು ಪ್ರೆಸಿಡೆಂಟರು ತಿಳಿಸಿದಾಗ ಮ|| ವೆಂಕಟಕೃಷ್ಣಯ್ಯನವರು ಹೇಳುತ್ತಾರೆ. ಓಟರ ಲಿಸ್ಟು ರೂಲ್ಸಿಗೆ ಅನುಸಾರವಾಗಿ ಮಾಡಲ್ಪಟ್ಟಿಲ್ಲವೆಂದೂ ಬಹುಜನರ ಹೆಸರು ಬಿಟ್ಟುಹೋಗಿರುವುದೆಂದೂ ರೇಟ್ ಪೇಯರುಗಳು ಶ್ರೀಮನ್ಮಹಾರಾಜರವರಿಗೆ ಅರ್ಜಿಬರೆದುಕೊಂಡಿದ್ದರೆಂಬ ಸಂಗತಿಯು ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುವುದರಿಂದ ತಿಳಿಯಬರುತ್ತದೆ. ಪ್ರಾಯಶಃ ಈ ಜನರ ಅರ್ಜಿಯಮೇಲೆ ಈರೀತಿ ಸರ್ಕಾರದವರು ರದ್ದು ಮಾಡಿರಬಹುದು. ಆದರೆ ಯಾವದೊಂದನ್ನೂ ವಿಚಾರಿಸದೆ ಈರೀತಿಯಾಗಿ ಏಕಾಏಕಿ ರದ್ದು ಪಡಿಸಲು ಅವರಿಗೆ ಸುತರಾಂ ಅಧಿಕಾರವಿಲ್ಲವು. ಚುನಾವಣೆಯಲ್ಲಿ ಅಕ್ರಮವೇನಾದರೂ ನಡೆದರೆ ಅದನ್ನು ರದ್ದು ಪಡಿಸಲು ಡಿಸ್ಟ್ರಿಕ್ಟ್ ಜಡ್ಜರಿಗೆ ಮಾತ್ರ ಅಧಿಕಾರವಿರುತ್ತದೆ. ಈ ಓಟರುಗಳ ಲಿಸ್ಟನ್ನು ತಯಾರಿಸಿ ಪ್ರಕಟಿಸುವುದರ ವಿಚಾರವಾಗಿ ಕೌನ್ಸಿಲಿನಲ್ಲಿ ಏನು ನಡೆಯಿತೆಂಬುದು ನನಗೆ ಗೊತ್ತಿಲ್ಲವು. ಅದನ್ನು ತಿಳಿದವರು ಹೇಳಬಹುದೆಂದು ಹೇಳಿ ಕುಳಿತುಕೊಂಡರು. ಆಮೇಲೆ ಅಡ್ವೋಕೇಟರುಗಳಾದ ಮ|| ಎಸ್. ಕೃಷ್ಣಸ್ವಾಮಿರಾಯರೂ, ಎಚ್. ಸುಬ್ಬರಾಯರೂ ಮ|| ಎ. ಕೃಷ್ಣರಾಯರ ರೆಜ್ಯುಲೇಷನನ್ನು ಸಪೋರ್ಟು ಮಾಡುವಾಗ್ಗೆ ಕ್ಯಾನ್ವಾಸಿಂಗಿಗಾಗಿ ಬಹಳ ದುಡ್ಡನ್ನು ಖರ್ಚುಮಾಡಿ ಓಟರುಗಳ ಮನೆಮನೆಗೂ ತಿರುಗಿ ಪ್ರಯಾಸಪಟ್ಟಿರುವ ಕ್ಯಾಂಡಿಡೇಟರುಗಳಿಗೆ ಸರ್ಕಾರದ ಈ ಅನ್ಯಾಯವಾದ ಆರ್ಡರಿನಿಂದ ಬಹಳ ನಷ್ಟವೂ ಕಷ್ಟವೂ ಉಂಟಾಯಿತೆಂದು ಹೇಳಿದರು. ತರುವಾಯ ಮ|| ವೈ. ವಿರೂಪಾಕ್ಷಯ್ಯನವರೆದ್ದು ಬಂದು, ಕೌನ್ಸಿಲಿನಲ್ಲಿ ಲಿಸ್ಟಿನ ತಯಾರಿ ಮತ್ತು ಪ್ರಕಟನೆಯ ವಿಚಾರದಲ್ಲಿ ನಡೆದಿರುವ ವಿಷಯವನ್ನು ಬಲ್ಲವರು ತಿಳಿಸಬಹುದೆಂದು ಹೇಳಿದರಾದುದರಿಂದ ಕೌನ್ಸಿಲಿನಲ್ಲಿ ನಡೆದ ಸಂಗತಿಯನ್ನು ತಿಳುಹಲು ಅವಕಾಶವನ್ನು ಕೊಡಬೇಕೆಂದು ಅಧ್ಯಕ್ಷರನ್ನು ಕೇಳಿ ಅವರನುಮತಿಯನ್ನು ಪಡೆದು - ಆಫೀಸಿನವರಿಂದ ತಯಾರಿಸಲ್ಪಟ್ಟಿರುವ ಓಟರ ಲಿಸ್ಟು ಕ್ರಮವಾಗಿಲ್ಲವೆಂದೂ, ಅನೇಕರ ಹೆಸರು ಬಿಟ್ಟುಹೋಗಿರುವುದೆಂದೂ ಕೇಳುತ್ತಿರುವುದರಿಂದ ಇದನ್ನು ಪರಿಶೀಲಿಸಿ ಕ್ರಮಪಡಿಸುವ ಬಗ್ಗೆ ಒಂದು ಸ್ಪೆಷಲ್ ಮೀಟಿಂಗ್ ಮಾಡಬೇಕೆಂದು 12 ಜನ ಕೌನ್ಸಿಲರು ಒಂದು ಅಪ್ಲಿಕೇಷನ್ನನ್ನು ಪ್ರೆಸಿಡೆಂಟರಿಗೆ ತಾ|| 7—4—1924ರಲ್ಲಿ ಕೊಟ್ಟಿದ್ದರು. ಅದರಂತೆ ಪ್ರೆಸಿಡೆಂಟರು ಒಂದು ಸ್ಪೆಷಲ್ ಮೀಟಿಂಗನ್ನು ನಡೆಸಿದಾಗ್ಗೆ, ಓಟರ ಲಿಸ್ಟು ರೂಲ್ಸು ಪ್ರಕಾರ ತಯಾರಾಗಿಲ್ಲ. ಬಹುಜನರ ಹೆಸರುಗಳು ಬಿಟ್ಟುಹೋಗಿವೆ. ಬೆಂಗಳೂರು ಮ್ಯುನಿಸಿಪಾಲಿಟಿಯವರು, ಓಟರ ಲಿಸ್ಟನ್ನು ತಯಾರ್ಮಾಡುತ್ತಿರುವುದರಿಂದ ಕಂದಾಯದ ಬಾಕಿಯನ್ನಿಟ್ಟುಕೊಂಡಿರುವವರು ಇಷ್ಟು ದಿವಸದಲ್ಲಿ ಕೊಟ್ಟರೆ ಅವರ ಹೆಸರು ಲಿಸ್ಟಿನಲ್ಲಿ ಸೇರಿಸಲ್ಪಡುತ್ತದೆಂದು ಡೇಲಿಪೋಸ್ಟ್ ಮತ್ತೆ ಕೆಲ ಕನ್ನಡ ಪೇಪರುಗಳಲ್ಲಿ ಪ್ರಕಟಿಸಿದ್ದು ಅನಂತರ ಲಿಸ್ಟನ್ನು ಗೆಜೆಟ್ಟಿನಲ್ಲಿ ಪ್ರಕಟಿಸಿ, ಅದರಲ್ಲಿ ಬಿಟ್ಟುಹೋಗಿರತಕ್ಕವರ ಹೆಸರನ್ನು ತಿಳಿಸಿದಲ್ಲಿ ಸೇರಿಸಲ್ಪಡುತ್ತದೆಂದು ಯಥಾಪ್ರಕಾರ ಡೇಲಿಪೋಸ್ಟ್ ಪತ್ರಿಕೆಯಲ್ಲಿ ಪ್ರಸಿದ್ಧಮಾಡಿದ್ದರು. ಆ ರೀತಿಯಲ್ಲಿ ಮಾಡದಿರುವುದು ತಪ್ಪು. ಬರೇ ಆಫೀಸಿನ ಮುಂಗಡೆ ಲಿಸ್ಟನ್ನು ಹಾಕುವುದರಿಂದ ದೂರಪ್ರದೇಶದಲ್ಲಿರುವ ಜನರು ಬಂದು ನೋಡಲು ಪ್ರಯಾಸವಾಗುತ್ತದೆ ಆದ್ದರಿಂದ ಎಲ್ಲಾ ಪೊಲೀಸು ಸ್ಟೇಷನ್ನುಗಳಲ್ಲೂ ಚಿಕಟಾಯಿಸುವುದಲ್ಲದೆ. ಗೆಜೆಟ್ಟಿನಲ್ಲಿ ಪ್ರಕಟಿಸಬೇಕೆಂದು ಮೊದಲಾಗಿ ಮೆಂಬರುಗಳು ತಿಳಿಸಲು, ಎಲ್ಲವೂ ರೂಲ್ಸು ಪ್ರಕಾರ ಮಾಡಿದೆಯಾದ್ದರಿಂದ ಈಗ ಬದಲಾಯಿಸಲಾಗುವುದಿಲ್ಲ. ಹೆಸರು ಬಿಟ್ಟುಹೋಗಿರತಕ್ಕವರು 15 ದಿವಸಗಳಲ್ಲಿ ಚೀಫ್ ಆಫೀಸರಿಗೆ ಬರೆದುಕೊಂಡಲ್ಲಿ ಸೇರಿಸಲ್ಪಡುತ್ತದೆ ಎಂದು ಉತ್ತರಕೊಟ್ಟುಬಿಟ್ಟರು. ಚುನಾವಣೆಯನ್ನು ರದ್ದುಮಾಡಿರುವುದು ತಪ್ಪೆಂದು ಆರ್ಡರನ್ನು ನೋಡಿದ ಹೊರತು ನಿರ್ಧರಿಸಲಾಗುವುದಿಲ್ಲ. ಯಾರ ಹೆಸರು ಬಿಟ್ಟುಹೋಗಿರುವುದೋ ಅವರು ಅರ್ಜಿ ಬರೆದುಕೊಂಡಿರುವುದರಮೇಲೆ ಸರ್ಕಾರದವರು ಮ್ಯುನಿಸಿಪಲ್ ಪ್ರೆಸಿಡೆಂಟರ ಕೂಡ ಕರೆಸ್ಪಾಂಡೆನ್ಸನ್ನು ನಡಿಸಿ ಕ್ಯಾನ್ಸಲ್ ಆರ್ಡರ್ ಮಾಡಿರಬಹುದು. ಅವೆಲ್ಲವನ್ನೂ ತಿಳಿಯದೆ ಆತುರದಿಂದ ಸರ್ಕಾರದವರು ತಪ್ಪುಮಾಡಿದರೆಂದು ನಿರ್ಧರಿಸುವುದು ಯುಕ್ತವಾಗಿಲ್ಲವೆಂದು ತಿಳಿಸಿದರು. ಇದೇ ವಿಷಯವನ್ನು ಮ|| ಗಳಾದ ಕೆ. ಧನಕೋಟಿಸೆಟ್ಟರೂ, ಎಚ್. ಸಿ. ದಾಸಪ್ಪನವರೂ ಪುಷ್ಟೀಕರಿಸಿ ಮಾತನಾಡುವಾಗ್ಗೆ, ಸರ್ಕಾರದ ಆರ್ಡರು ತಪ್ಪೆಂದು ಪ್ರತಿಪಾದಿಸುವಲ್ಲಿ ನೀವುಗಳು ತೋರಿಸುವ ರೂಲ್ಸು ರೆಗ್ಯುಲೇಷನ್ನುಗಳು ಸರ್ಕಾರದವರಿಗೆ ತಿಳಿಯದೇ ಇಲ್ಲ. ಅವರು ನಮಗಿಂತಲೂ ಹೆಚ್ಚಾಗಿಯೇ ಬಲ್ಲರು. ಅದುಕಾರಣ ಈ ಆರ್ಡರನ್ನು ಮಾಡಲು ಅವರಿಗೆ ಯಾವ ಪ್ರಬಲಕಾರಣವಿದ್ದಿತೆಂಬುದನ್ನು ನಾವು ಸರಿಯಾಗಿ ತಿಳಿಯದಹೊರತು ನಿಷೇಧಕ ನಿರ್ಧಾರವನ್ನು ಮಾಡತಕ್ಕದಲ್ಲ. ಅಲ್ಲದೆ ಇಷ್ಟು ಅವಸರದಿಂದ ಮಾಡಬೇಕಾದ ಕಾರಣವಿಲ್ಲವಾದುದರಿಂದ ಈ ದಿವಸದ ಮೀಟಿಂಗನ್ನು ನಿಲ್ಲಿಸಿ, ಸರ್ಕಾರಿಯಆರ್ಡರನ್ನೂ ಅವರಿಗೂ ಮ್ಯುನಿಸಿಪಲ್ ಪ್ರೆಸಿಡೆಂಟರಿಗೂ ನಡೆದಿರುವ ಕರೆಸ್ಪಾಂಡೆನ್ಸನ್ನೂ ಸರ್ಕಾರದವರನ್ನು ಕೇಳಿ ತರಿಸಿಕೊಂಡು ಮತ್ತೊಂದು ದಿವಸ ಮೀಟಿಂಗನ್ನುಮಾಡಿ ಎಲ್ಲಾ ವಿಷಯಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ಅನಂತರ ಯಾವ ನಿರ್ಧಾರವನ್ನಾದರೂ ಮಾಡಬಹುದಲ್ಲದೆ ಈಗ ದುಡುಕಿ ನಿರ್ಧಾರವನ್ನು ಮಾಡಕೂಡದೆಂದು ಬಹಳ ಯುಕ್ತಿ ಯುಕ್ತವಾಗಿ ವಾದಿಸಿದರು. ಈ ಉಭಯರೂ ನಿರೋಧಕ ನಿರ್ಧಾರವನ್ನು ಮಾಡಕೂಡದೆಂದು ಹೇಳುತ್ತಿರುವಾಗ್ಗೆ ಈರೀತಿಯಾಗಿ ಪ್ರತಿಭಟಿಸಿ ಮಾತನಾಡಲವಕಾಶವಿಲ್ಲವೆಂದು ಕೆಲರು ನಿಷೇಧಿಸಿದರು. ಆದರೆ ನೀವು ಪ್ರಕಟಿಸಿರುವ ನೋಟೀಸಿನಲ್ಲಿ ಪ್ರಜೆಗಳಿಗುಂಟಾಗಿರುವ ಅನನುಕೂಲವನ್ನು ಪರ್ಯಾಲೋಚಿಸುವ ನಿಮಿತ್ತ ಎಂದಿರುತ್ತದೆಹೊರತು ರೆಜ್ಯುಲೇಷನ್ ಮಾತ್ರ ಪ್ಯಾಸ್ಮಾಡಬೇಕೆಂದೂ ಅದನ್ನು ಅನುಮೋದಿಸುವವರು ಮಾತ್ರ ಬರಬೇಕೆಂದೂ ಇಲ್ಲವಾದ್ದರಿಂದ ಬೇಕಾದಷ್ಟು ಚರ್ಚಿಸಲವಕಾಶವಿರುತ್ತದೆ. ಎಂದು ಮ|| ವಿರೂಪಾಕ್ಷಯ್ಯನವರು ನೋಟೀಸನ್ನು ಓದಿಹೇಳಿ ವಾದಿಸಿದುದರಮೇಲೆ ಅವರುಗಳು ಮೌನರಾದರು. ಅಡ್ವೋಕೇಟ್ ಮ|| ಎಂ. ಎಸ್. ಕೃಷ್ಣರಾಯರೆದ್ದು ಬಂದು, ಲಾರ್ಡ್‌ರಿಪ್ಪನ್ನರವರ ಕಾಲದಲ್ಲಿ ಮ್ಯುನಿಸಿಪಾಲಿಟಿ ಮೊದಲಾದವುಗಳು ಸ್ಥಳೀಯ ಸರ್ಕಾರವಾಗೇರ್ಪಟ್ಟು ಅವುಗಳ ಆಡಳಿತವು ಪ್ರಜೆಗಳಿಗೆ ವಹಿಸಲ್ಪಟ್ಟಿತು. ನಮ್ಮ ಶ್ರೀಮನ್ಮಹಾರಾಜರವರು ಅದೇ ತತ್ವವನ್ನು ಅನುಸರಿಸಿ ನಮ್ಮಗಳಿಗೂ ಸ್ಥಳೀಯ ಸರ್ಕಾರದ ಆಡಳಿತವನ್ನು ಅನುಗ್ರಹಿಸಿರುತ್ತಾರೆ ಈ ಅಧಿಕಾರ ನಿರ್ವಾಹಕ್ಕೆ ಬಹಳ ಯೋಗ್ಯತೆಯು ಬೇಕು. ನಮ್ಮ ಮ್ಯುನಿಸಿಪಲ್ ಕೌನ್ಸಿಲರುಗಳಿಗೆ ಯೋಗ್ಯತೆ ಇಲ್ಲವೆಂದಲ್ಲ. ಅವರುಗಳು ತಮ್ಮ ಕೈಲಾದಮಟ್ಟಿಗೆ ಕೆಲಸಮಾಡಿರುತ್ತಾರೆ. ಆದರೆ ಓಟರ ಲಿಸ್ಟಿನ ಅಕ್ರಮದ ವಿಚಾರವಾಗಿ ಪ್ರೆಸಿಡೆಂಟರಿಗೆ ತಿಳಿಸಿದೆವು ; ಅವರು ಗಮನಕ್ಕೆ ತಂದುಕೊಳ್ಳಲಿಲ್ಲವೆಂದು ಈಗತಾನೆ ಕೆಲರು ಹೇಳಿದರು. ಹಾಗೆ ಪ್ರೆಸಿಡೆಂಟರು ಹೇಳಿದ್ದಲ್ಲಿ ಅದನ್ನು ರೇಟ್‌ಪೇಯರುಗಳಿಗೆ ಕೌನ್ಸಿಲರುಗಳು ತಿಳಿಸದೆಹೋದುದು ತಪ್ಪು. ಈ ಕಾರಣದಿಂದಲೇ ಇವರ ಉದ್ಯೋಗದವಧಿಯನ್ನು ಸರ್ಕಾರದವರು ಹೆಚ್ಚಿಸಿದುದರಿಂದ ಪ್ರಜೆಗಳಿಗೆ ಅನನುಕೂಲವಾಯಿತೆಂದು ಹೇಳುವುದಾಗಿದೆ. ಸರ್ಕಾರದವರು ಮಾಡಿರುವ ಅನ್ಯಾಯದ ಆರ್ಡರನ್ನು ರದ್ದುಪಡಿಸುವಂತೆ ರೆಜ್ಯುಲೇಷನ್ ಮಾಡಿ ಕಳುಹಿ ಬೇಕಾದುದು ಬಹಳ ಅವಶ್ಯಕವೆಂದು ಹೇಳಿದರು. ತರುವಾಯ ಅಡ್ವೋಕೇಟ್ ಮ|| ಸಿ. ನರಸಿಂಹಯ್ಯನವರು, ಮ|| ಕೃಷ್ಣರಾಯರ ರೆಜ್ಯುಲೇಷನ್ನು ಖಂಡಿತವಾಗಿಯೂ ಪ್ಯಾಸ್‌ಮಾಡಲ್ಪಡಬೇಕೆಂದು ಹೇಳುವಾಗ್ಗೆ, ರೆಪ್ರಜೆಂಟೇಟಿವ್ ಮೆಂಬರುಗಳನ್ನು ಚುನಾಯಿಸುವಾಗಿದ್ದಷ್ಟು ಓಟರುಗಳ ಸಂಖ್ಯೆಯು ಈಗಿರದೆ ಕಡಿಮೆಮಾಡಲ್ಪಟ್ಟಿರುತ್ತದೆಂದು ಆಕ್ಷೇಪಿಸಲ್ಪಡುತ್ತಿದೆ, ರೆಪ್ರಜೆಂಟೇಟಿವ್ ಎಲೆಕ್ಷನ್ ರೂಲ್ಸೇ ಬೇರೆ ಮ್ಯುನಿಸಿಪಲ್ ಎಲೆಕ್ಷನ್ ರೂಲ್ಸೆ ಬೇರೆ ಎಂದು ತಿಳಿಸಲು, ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಮಾತ್ರ ಮ್ಯುನ್ಸಿಪಲ್ ಎಲೆಕ್ಷನ್ನಿಗಾಗಿ ಓಟರುಗಳಿಗಿರಬೇಕಾದ ಅರ್ಹತೆಯೇ ರೆಪ್ರಜೆಂಟೇಟಿವ್ ಮೆಂಬರ್ ಎಲೆಕ್ಷನ್ನಿನ ಓಟರುಗಳಿಗೂ ಇರಬೇಕಾಗಿ ವಿಧಾಯಕವಾಗಿರುತ್ತದೆಂಬುದನ್ನು ಮ|| ವಿರೂಪಾಕ್ಷಯ್ಯನವರು ಅವರ ಸ್ಮರಣೆಗೆ ತಂದುಕೊಟ್ಟರು. ಮ|| ಪುರುಷೋತ್ತಮಗೋಸ್ವಾಮಿಯವರೆದ್ದು, ಮ್ಯುನಿಸಿಪಲ್ ಕೌನ್ಸಿಲಿನವರು ಹೇಗೇ ಮಾಡಿರಲಿ, ಸರ್ಕಾರದವರು ಎಲೆಕ್ಷನ್ನು ಕಂಠಗತವಾಗಿರುವ ಸಮಯದಲ್ಲಿ ನಡೆಯದಂತೆ ಆರ್ಡರ್ ಮಾಡಿರುವುದು ಶುದ್ಧತಪ್ಪು, ನ್ಯಾಯಕ್ಕೆ ವಿರುದ್ಧವು ಆದ್ದರಿಂದ ಆ ಆರ್ಡರನ್ನು ರದ್ದುಪಡಿಸುವಂತೆ ರೆಜ್ಯುಲೇಷನ್ ಪ್ಯಾಸ್ಮಾಡಿ ಕಳುಹಿಸಲೇಬೇಕು ಎಂದು ಹೇಳಿ ಕುಳಿತುಕೊಂಡರು. ತರುವಾಯ ಅಡ್ವೋಕೇಟ್ ಮ|| ಎಂ. ಪಿ. ಭೋಗಯ್ಯನವರು ಬಂದು ಮ್ಯುನಿಸಿಪಲ್ ಕೌನ್ಸಿಲ್ ವಿಚಾರವಾಗಲಿ ಮತ್ತಾವ ವಿದ್ಯಮಾನವಾಗಲಿ ನನಗೊಂದೂ ತಿಳಿಯದು. ನಾನು ಈ ಊರಿನಲ್ಲಿ ಹುಟ್ಟಿ ಬೆಳೆದು ವಿದ್ಯಾಭ್ಯಾಸಂಗ ಮಾಡಿ ಈಗ ಕೆಲವರ್ಷಗಳಿಂದ ಇಲ್ಲೇ ಉದ್ಯೋಗ ನಡಿಸಿಕೊಂಡಿರುವುದರಿಂದ ನನ್ನ ಸ್ಥಳದವರ ಸೇವೆಮಾಡಬೇಕೆಂಬ ಇಷ್ಟದಿಂದ ಮ್ಯುನಿಸಿಪಲ್ ಚುನಾವಣೆಗೆ ಒಬ್ಬ ಕ್ಯಾಂಡಿಡೇಟಾಗಿ ನಿಂತುಕೊಂಡು ನನ್ನ ಬಂಧುಗಳು ಆಪ್ತೇಷ್ಟರು ಮೊದಲಾದವರಲ್ಲಿಗೆ ಹೋಗಿ ನನಗೊಂದು ಓಟನ್ನು ಕೊಡಿ ಎಂದು ಕೇಳುವಲ್ಲಿ - ನಾನು 15-20 ರೂ. ಗಳ ಕಂದಾಯವನ್ನು ಕೊಡುತ್ತಿದ್ದರೂ ನನ್ನ ಹೆಸರು ಲಿಸ್ಟಿನಲ್ಲಿ ಇಲ್ಲವೆಂದೂ ನನಗೆ ನೋಟೀಸು ಬಂದಿಲ್ಲವೆಂದೂ ಅನೇಕರು ಹೇಳಿದರು. ಇದನ್ನು ನೋಡಿದರೆ ಲಿಸ್ಟು ಕ್ರಮವಾಗಿ ತಯಾರಿಸಲ್ಪಡದಿದ್ದುದರಿಂದ ಅನೇಕರ ಹೆಸರು ಬಿಟ್ಟುಹೋಗಲು ಕಾರಣವಾಯಿತೆಂದು ಖಂಡಿತವಾಗಿ ಹೇಳುತ್ತೇನಲ್ಲದೆ ಕ್ಯಾಂಡಿಡೇಟರುಗಳಿಗೆ ಅಂತಹ ನಷ್ಟವೇನೂ ಆಗಲಿಲ್ಲ, ಆದರೆ ಕಂದಾಯವನ್ನು ಕೊಡತಕ್ಕವರಿಗೆ ಓಟನ್ನುಕೊಡುವ ಹಕ್ಕನ್ನು ಕಳೆದುಕೊಂಡುದರ ಮೂಲಕ ಬಹಳ ನಷ್ಟವಾಯಿತೆಂದೂ ಖಂಡಿತವಾಗಿ ಹೇಳಬಲ್ಲೆನೆಂದು ಬಹಳ ಸ್ವಾರಸ್ಯವಾಗಿ ಮಾತನಾಡಿದರು. ಆಮೇಲೆ ರಾಮಯ್ಯನವರು ಎದ್ದುಬಂದು ನಾನು 9 ರೂಪಾಯಿಗೆ ಮೇಲ್ಪಟ್ಟು ಮನೆಗಂದಾಯವನ್ನು ಕಟ್ಟಿರುತ್ತೇನಾದರೂ ನನ್ನ ಹೆಸರು ಓಟರ ಲಿಸ್ಟಿನಲ್ಲಿ ಬಿಡಲ್ಪಟ್ಟಿದೆಯೆಂದು ರೆಪ್ರಜೆಂಟೇಟಿವ್ ಎಲೆಕ್ಷನ್ ವೇಳೆಯಲ್ಲೂ ಈಗಲೂ ಅನೇಕ ಅರ್ಜಿಗಳನ್ನು ಬರೆದುಕೊಂಡಿದ್ದೆನು. ಆದಾಗ್ಯೂ ಯಾವ ಕಾರಣದಿಂದಲೋ ನನ್ನ ಹೆಸರು ಸೇರಿಸಲ್ಪಟ್ಟಿಲ್ಲ. ನನ್ನಂತೆಯೇ ಕಂದಾಯವನ್ನ ಕಟ್ಟಿರತಕ್ಕ ಅನೇಕರ ಹೆಸರು ಬಿಟ್ಟುಹೋಗಿರುತ್ತಾದ್ದರ ಪ್ರಯುಕ್ತ ಹಿಂದಿನ ಲಿಸ್ಟನ್ನು ಸರ್ಕಾರದವರು ರದ್ದುಮಾಡಿ ಹೊಸದಾಗಿ ಲಿಸ್ಟನ್ನು ತಯಾರಿಸುವಂತೆ ಅಪ್ಪಣೆಮಾಡಿರುವುದರಿಂದ ನಾವೆಲ್ಲರೂ ಓಟಿಂಗ್ ಲಿಸ್ಟಿನಲ್ಲಿ ಸೇರಲು ಅವಕಾಶವಾಯಿತು ಎಂದು ಹೇಳಿದರು. ತರುವಾಯ ರೆಜ್ಯುಲೇಷನ್ ಪ್ಯಾಸ್‌ಮಾಡುವ ವಿಚಾರದಲ್ಲಿ ಓಟನ್ನು ತೆಗೆದುಕೊಳ್ಳುವಲ್ಲಿ ಮ|| ಗಳಾದ ಎಚ್. ಸಿ. ದಾಸಪ್ಪನವರು, ಕೆ. ಧನಕೋಟಿಶೆಟ್ಟರು ಮತ್ತು ವೈ. ವಿರೂಪಾಕ್ಷಯ್ಯನವರು ಮೊದಲಾಗಿ 48 ಜನರು ವಿರುದ್ಧವಾಗಿಯೂ ಉಳಿದ ಬ್ರಾಹ್ಮಣ ಸಭಿಕರು ಅನುಕೂಲವಾಗಿಯೂ ಓಟನ್ನು ಕೊಟ್ಟರು. ತರುವಾಯ ಈ ನಿರ್ಧಾರವನ್ನು ಶ್ರೀಮನ್ಮಹಾರಾಜರವರಿಗೂ ಸರ್ಕಾರದವರಿಗೂ ಅಧ್ಯಕ್ಷರು ತಂತಿಯ ಮೂಲಕ ತಿಳುಹಿಸಿಕೊಡಬೇಕಾಗಿ ನಿರ್ಧರಿಸಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಅಲ್ಲಿಗೆ 8½ ಗಂಟೆಯು ಮೇಲಾಗಿದ್ದಿತು.

ಸರ್ಕಾರದ ಪಬ್ಲಿಸಿಟಿ ಆಫೀಸರವರ ಆಫೀಸು.
ತಾರೀಖು, ಬೆಂಗಳೂರು, 20 ನೇ ಆಗಸ್ಟು 1924.

ನಂಬರು 59/ಪಿ. ಓ.

ಪ್ರಸಿದ್ಧಪತ್ರಿಕೆ.

1924 ನೇ ಇಸವಿ ಮೇ ತಿಂಗಳು 19 ನೇ ತಾರೀಖಿನ ಸಂಪದಭ್ಯುದಯ ಪತ್ರಿಕೆಯಲ್ಲಿ "ಪರ್ಸೆಕ್ಯೂಷನ್ ಆಫ್ ಬ್ರಾಹ್ಮಿನ್ಸ್" ಎಂದರೆ "ಬ್ರಾಹ್ಮಣರಿಗೆ ಹಿಂಸೆ" ಎಂಬ ಅಭಿಧಾನದಿಂದ ಬರೆದಿದ್ದ ಒಂದು ಲೇಖನದಲ್ಲಿ ಮೊದಲನೆಯ ಕೌನ್ಸಿಲರವರು ಕಡೂರು, ಹಾಸನ ಈ ಎರಡು ಡಿಸ್ಟ್ರಿಕ್ಟುಗಳಲ್ಲಿ ಎರಡುವಾರ ಸಂಚಾರಾರ್ಥವಾಗಿ ಹೋಗಿದ್ದುದರ ಫಲಿತಾಂಶವಾಗಿ ಆರುಮಂದಿ ಕ್ಲಾರ್ಕುಗಳು ಅವರು ಬ್ರಾಹ್ಮಣರಾಗಿದ್ದರೆಂಬ ಕಾರಣದಿಂದ ಕೆಲಸದಿಂದ ವಜಾಮಾಡಲ್ಪಟ್ಟರೆಂಬುದಾಗಿ ಪ್ರಕಟಿಸಿದ್ದಿತು.

ಈ ಹೇಳಿಕೆಯು ಸುತರಾಂ ಸುಳ್ಳಾಗಿರುತ್ತದೆ. 1922 ನೇ ಇಸವಿ ಡಿಸೆಂಬರು ತಿಂಗಳು 31 ನೇ ತಾರೀಖಿನಿಂದ 1924 ನೇ ಇಸವಿ ಮಾರ್ಚಿ ತಿಂಗಳು 24 ನೇ ತಾರೀಖಿನವರೆಗೆ ಹಾಸನ ಡಿಸ್ಟ್ರಿಕ್ಟಿನ ಡೆಪ್ಯೂಟಿಕಮಿಷನರವರು ಬ್ರಾಹ್ಮಣವಂಗಡದ 22 ಮಂದಿ ಉಮೇದುವಾರರಿಗೆ ಕೆಲಸಗಳನ್ನು ಕೊಟ್ಟಿದ್ದರು ; ಇವುಗಳಲ್ಲಿ (1924 ನೇ ಇಸವಿ ಏಪ್ರಿಲ್ ತಿಂಗಳು 17 ನೇ ತಾರೀಖಿನಿಂದ 23 ನೇ ತಾರೀಖಿನವರೆಗೆ) 5 ಮಂದಿಗಳೂ ಮಾತ್ರ ಕೆಲಸದಿಂದ ವಜಾಮಾಡಲ್ಪಟ್ಟರು ; ಹೀಗೆ ಮಾಡಿದುದಕ್ಕೆ "ರಿಕ್ರೂಟ್‌ಮೆಂಟ್ ರೂಲ್ಸಿಗೆ" ಎಂದರೆ, ಉಮೇದುವಾರರನ್ನು ಕೆಲಸಕ್ಕೆ ನೇಮಿಸುವ ನಿಯಮಗಳಿಗೆ ವಿರೋಧವಾಗಿ ಈ 5 ಕೆಲಸಗಳೂ ಕೊಡಲ್ಪಟ್ಟಿದ್ದುದು ಮಾತ್ರವೇ ಕಾರಣವಾಗಿರುತ್ತದೆ. ಮೊದಲನೆಯ ಕೌನ್ಸಿಲರವರು ಆ ತಿಂಗಳ ಅಂತ್ಯಭಾಗದಲ್ಲಿ ಸಂಚಾರಾರ್ಥವಾಗಿ ದಯಮಾಡಿಸಿದ್ದರು. ಆಕಾಲದಲ್ಲಿ ಅವರ ಸಂಚಾರದ ಫಲಿತಾಂಶವಾಗಿ ಮೇಲ್ಕಂಡ ಎರಡು ಡಿಸ್ಟ್ರಿಕ್ಟುಗಳಲ್ಲಿ ಯಾವುದರಲ್ಲಿಯೂ, ಯಾರೊಬ್ಬರನ್ನೂ, ಕೆಲಸದಿಂದ ತೆಗೆದಿರುವುದಿಲ್ಲ.

ಆರ್. ರಂಗರಾವ್,
ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರು.

ಪ್ರಕಟಣೆ.

ಮೈಸೂರು ಡಿವಿಜನ್ ಕೋ ಆಪರೇಟಿವ್ ಸೊಸೈಟಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರವರ ಆಫೀಸಿನಿಂದ—

ಮೈಸೂರು ಡಿವಿಜನ್ನಲ್ಲಿರುವ ಎಲ್ಲಾ ಕೋ ಆಪರೇಟಿವ್ ಸೊಸೈಟಿಗಳ ಸೆಕ್ರೆಟರಿಯವರಿಗೆ—ಈ ವರ್ಷದ ಅತಿವೃಷ್ಟಿಯಿಂದ ಮೈಸೂರು ದೇಶದ ನದಿಗಳಲ್ಲಿ ಪ್ರವಾಹ ಹೆಚ್ಚಿ ನದೀತೀರದಲ್ಲಿರುವ ಊರುಗಳ ಮೇಲೆ ಹರಿದಿದ್ದರಿಂದ ಪ್ರಜೆಗಳು ಬಹಳವಾಗಿ ಕಷ್ಟನಷ್ಟಗಳನ್ನು ಅನುಭವಿಸುತ್ತಿರುವುದು ನಿಮಗೆ ತಿಳಿದೇ ಇರಬಹುದು. ಇಂಥಾ ಕಷ್ಟನಷ್ಟಗಳನ್ನು ಅನುಭವಿಸುತ್ತಿರುವ ಪ್ರಜೆಗಳಿಗಾಗಿ ಅನುತಾಪಪಟ್ಟು ಅವರ ಕಷ್ಟಪರಿಹಾರಕ್ಕಾಗಿ ಒಂದು ರಿಲೀಫ್ ಫಂಡು ಏರ್ಪಾಡಾಗಿರುತ್ತೆ. ಈ ಫಂಡಿಗೆ ಹರಿಹರದ ಕೋ ಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳು ಧರ್ಮಬುದ್ಧಿಯಿಂದ ಕಳೆದ ವರ್ಷದ ವಿಶಿಷ್ಟ ನಿವ್ವಳ ನಫೆಯನ್ನು ಅಂದರೆ 5,451 ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನಿಸಿರುತ್ತಾರೆಂದು ತಿಳಿಸಲು ಬಹಳ ಸಂತೋಷಿಸುತ್ತೇವೆ.

ಹರಿಹರದ ಸೊಸೈಟಿಯು ಶ್ಲಾಘನೀಯವಾದ ಮೇಲ್ಪಂಕ್ತಿಯನ್ನು ಅನುಸರಿಸಿ ನಿಮ್ಮ ಸಂಘದ ಜನರಲ್ ಮೀಟಿಂಗ್ ನಡೆಯುವ ವೇಳೆಯಲ್ಲಿ ಮೆಂಬರುಗಳೆಲ್ಲಾ ಏಕೀಭವಿಸಿ ಉದಾರಮನಸ್ಸಿನಿಂದ ಸಂಘದ ನಿವ್ವಳ ನಫೆ ಪೈಕಿ ಹೆಚ್ಚು ಮೊಬಲಗನ್ನು ರಿಲೀಫ್ ಫಂಡಿಗಾಗಿ ಓಟ್ ಮಾಡಿ ಕೊಡುವುದರ ಮೂಲಕ ಪರಸ್ಪರ ಸಹಾಯಸಂಘಗಳ ತತ್ವವಾದ ಪ್ರಜೋಪಕಾರಬುದ್ಧಿಯನ್ನು ಪ್ರಕಾಶಪಡಿಸುವರೆಂದು ನಂಬಿದೆ. ಜನರಲ್ ಮೀಟಿಂಗಿನಲ್ಲಿ ಓಟ್ ಮಾಡುವ ಮೊಬಲಗನ್ನು ಈ ಆಫೀಸಿಗೆ ಕಳುಹಿಕೊಟ್ಟರೆ ಸೆಂಟ್ರಲ್ ರಿಲೀಫ್ ಕಮಿಟಿಗೆ ತಲುಪಿಸಿ ನೀವು ಮಾಡಿರುವ ದ್ರವ್ಯಸಹಾಯವು ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತ್ತೆ.

ಕೆ. ಸುಬ್ಬರಾವ್,
ಕೋ-ಆಪರೇಟಿವ್ ಸೊಸೈಟಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್.

ಮೈಸೂರುಸೀಮೆಯ ಸೆಂಟ್ರಲ್ ಫ್ಲಡ್ ರಿಲೀಫ್ ಕಮಿಟಿ, ಬೆಂಗಳೂರು.

1924 ನೆ ಆಗಸ್ಟ 16 ಕ್ಕೆ ಕಡೆಯಾದ ವಾರದಲ್ಲಿ ಬಂದ ಚಂದಾ ಹಣ.

1.	ಮೊದಲನೇ ರಾಜಕುಮಾರಿಯವರು (ಮ|| ಬಾಳರಾಜೇ ಅರಸಿನವರ ಮೂಲಕ)	1000-0-0
2.	ಮಿ|| ಇ. ಪಿ. ಮೆಟ್‌ಕಾಫ್, ಪ್ರಿನ್ಸ್‌ಪಾಲ್, ಸೆಂಟ್ರಲ್‌ಕಾಲೇಜು, ಬೆಂಗಳೂರು	600-0-0
3.	ಬೆಂಗಳೂರು ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್	500-0-0
4.	ಮೈಸೂರು ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರಿಯೇಜ್ ಅಶ್ಯುರೆನ್ಸ್ ಕಂಪನಿಯ ಡೈರೆಕ್ಟರುಗಳು	500-0-0
5.	ಸರ್ ಹಾಜಿ ಇಸ್ಮಾಯಿಲ್ ಸೇಟ್‌ರವರು	250-0-0
6.	ಮ|| ಬಿ. ಕೆ. ಗರುಡಾಚಾರ್‌ರವರು	250-0-0
7.	ಮ|| ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು	200-0-0
8.	ಕೌನ್ಸಿಲರ್ ಮ|| ಕೆ. ಆರ್. ಶ್ರೀನಿವಾಸ ಅಯ್ಯಂಗಾರ್‌ಯವರು	200-0-0
9.	ಮ|| ಎಂ. ಎನ್. ಬಾಳರಾಜೇಅರಸ್, ಬಿ.ಎ., ಯವರು	200-0-0
10.	ಜಸ್ಟಿಸ್ ಮ|| ಬಿ. ಸುಬ್ಬಣ್ಣನವರು	150-0-0
11.	ಮ|| ಎನ್. ವಿ. ನರಸಿಂಹಅಯ್ಯಂಗಾರ್, ಬಿ. ಎ., ಬಿ. ಎಲ್., ಅಡ್ವೋಕೇಟರು	100-0-0
12.	ಬೆಂಗಳೂರು ಸೆಂಟ್ರಲ್ ಬಿಲ್ಡಿಂಗ್ ಕೋ-ಆಪರೇಟಿವ್ ಬ್ಯಾಂಕ್	100-0-0
13.	ಮ|| ರಾವ್‌ಬಹದ್ದೂರ್ ಎಂ. ಶಾಮರಾವ್, ಎಂ. ಎ., ಯವರು	100-0-0
14.	ಮ|| ಎಂ. ಜಿ. ಕೃಷ್ಣಸ್ವಾಮಿರಾಯರು	100-0-0
15.	ಮ|| ಬಿ. ವಿ. ರಾಮಯ್ಯಂಗಾರ್, ಫಾರೆಸ್ಟ್ ಕನ್ಸರ್ವೇಟರ್	50-0-0
16.	ಶ್ರೀಮತಿ ಎ. ಸಿಂಗಮ್ಮನವರು (ಶ್ರೀನಿವಾಸಮಂದಿರ)	25-0-0
17.	ಒಬ್ಬರು ದಯಾಶಾಲಿಗಳು	1-0-0
18.	ಮ|| ಜಿ. ಪರಮಶಿವಯ್ಯನವರು, ಬಿ.ಎ.,ಎಲ್.ಎಲ್.ಬಿ., ಅಡ್ವೊಕೇಟ್	25-0-0
19.	ಮೈಸೂರು ಲಿಂಗಾಯತ್ ಎಜುಕೇಷನ್ ಸೊಸೈಟಿಯವರು	100-0-0
20.	ಕೆ. ಜಿ. ಎಫ್. ಮೈನಿಂಗ್ ಬೋರ್ಡಿನವರು	1,500-0-0
21.	ಶ್ಯಾನುಭೋಗರ ಕಾನ್ಫರೆನ್ಸಿನವರು	25-4-0
22.	ಜಸ್ಟಿಸ್ ಆರ್. ಬಿ. ಪ್ಲಮರ್‌ರವರು	50-0-0
23.	ಮ|| ಬಿ. ವೆಂಕೋಬರಾಯರು ಡೆ|| ಕಮಿಷನರ್	100-0-0
24.	ಅಮೀನ್-ಉಲ್-ಮುಲ್ಕ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್, ಬಿ.ಎ., ಓ. ಬಿ. ಇ. ಯವರು	200-0-0
25.	ಮೈಸೂರು ಬ್ಯಾಂಕ್	2,000-0-0
26.	ಪಿ. ಡಬ್ಲ್ಯು. ಒಬ್ರೇನ್, ಮ್ಯಾನೇಜರ್, ಮೈಸೂರು ಬ್ಯಾಂಕು.	100-0-0
	ಜುಮ್ಲಾ	8,426-4-0

ಬಿ. ಕೆ. ಗರುಡಾಚಾರ್ ಸೆಕ್ರೆಟರಿ.
ಮೈಸೂರು ದೇಶದ ಸೆಂಟ್ರಲ್‌ಫ್ಲಡ್,
ರಿಲೀಫ್ ಕಮಿಟಿ, ಬೆಂಗಳೂರು.

ಡಿಸ್ಟ್ರಿಕ್ಟ್ ಫ್ಲಡ್‌ರಿಲೀಫ್ ಕಮಿಟಿ, ಹಾಸನ.

ತಾ|| 19-8-24ರ ವರೆಗೆ ಚಂದಾಹಣ ಬಂದಿರುವುದರ ವಿವರ.—

1.	ಉಬ್ಬಾನ್ ಮತ್ತು ದೈಕಾಪುರ ಎಸ್ಟೇಟುಗಳ ಮಿ|| ಬ್ರೂಕ್ ಮಾರ್ಕೆಟ್ಟರವರಿಂದ ಮಿ|| ಇ. ಡಬ್ಲ್ಯು. ರೂಥರ್‌ಫರ್ಡ್‌ರವರ ಮೂಲಕ	150-0-0
2.	ಹಾಸನ ಡಿ|| ಮೆಡಿಕಲ್ ಆಫೀಸರಾದ ಡಾಕ್ಟರ್ ಬಾಲಕೃಷ್ಣರವರಿಂದ	40-0-0
3.	ಹಾಸನದ ಎಕ್ಸಿಕ್ಯುಟಿವ್ ಇಂಜನೀರ್ ಮ|| ಜಿ. ಕೃಷ್ಣಯ್ಯಂಗಾರರಿಂದ	52-8-0
4.	ಹಾಸನದ ಡಿ|| ಪೊಲೀಸ್ ಸೂಪರಿಂಟೆಂಡೆಂಟ್ ಮ|| ಜಿ. ಶಾಂತವೀರಪ್ಪ, ಬಿ. ಎ., ಯವರಿಂದ	25-0-0
5.	ಮ|| ಎಂ. ಜಿ. ಲಕ್ಷ್ಮೀನರಸಿಂಹಯ್ಯಂಗಾರ್, ಬಿ. ಎ., ಬಿ. ಎಲ್. ರವರಿಂದ	20-0-0

ಎಚ್. ವಿ. ರಾಮಸ್ವಾಮಿ,
ಜಾಯಿಂಟ್ ಸೆಕ್ರೆಟರಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ದಾವಣಗೆರೆಯಲ್ಲಿ ನಡೆಯುವ ಗೋರಕ್ಷಣೆಯು.

ಮೈಸೂರು ಸಂಸ್ಥಾನದಲ್ಲಿ ದನಗಳ ಮುಖ್ಯ ಸಂತೆ ನಡೆಯುವ ಊರುಗಳಲ್ಲಿ ದಾವಣಗೆರೆಯೂ ಒಂದಾಗಿದೆಯಷ್ಟೆ. ಈ ಊರಿನಲ್ಲಿ ಪ್ರತಿವಾರವೂ 300 ರ ವರೆಗೂ ದನಗಳು ಸೇರಿ ನೂರಾರು ಗೋವುಗಳು ಕಟುಕರಪಾಲಾಗುತ್ತಿದ್ದವು. ಹೀಗೆ ಪ್ರತಿವಾರವೂ ತಪ್ಪದೆ ನೂರಾರು ದನಗಳು ಕಟುಕರ ಪಾಲಾಗುತ್ತಿದ್ದುದನ್ನು ಕಂಡು ಕೆಲವು ದಯಾಳು ಮಹಾಶಯರು ಸೇರಿ ಹೇಗಾದರೂಮಾಡಿ ಗೋವುಗಳು ಕಟುಕರಪಾಲಾಗದಂತೆ ಮಾಡಬೇಕೆಂದು ಯೋಚಿಸಿ "ಪ್ರಾಣಿದಯಾಪ್ರಸಾರಕಮಂಡಲಿ" ಎಂಬ ಹೆಸರಿನಿಂದ ಒಂದು ಸಂಘವನ್ನು ತೆಗೆದು ಇರುವುದಲ್ಲದೆ ಪ್ರಕಟಣಾಮೂಲಕವಾಗಿಯೂ, ಭೋದನಾಮೂಲಕವಾಗಿಯೂ, ಅಜ್ಞಜನರಿಗೆ ತಿಳಿಯಹೇಳುತ್ತಾ ಕಟುಕರಿಗೆ ದನಗಳನ್ನು ವಿಕ್ರಯಿಸದಂತೆಮಾಡಿದೆ. ಅಲ್ಲದೆ ಪ್ರತಿವಾರವೂ [illegible] ಪೇಟೆಗೆಹೋಗಿ ಗೋಮಾತೆಯಿಂದಾಗುವ ಪ್ರಯೋಜನಗಳನ್ನೂ, ಕೇವಲ ನಾಲ್ಕಾರು ರೂಪಾಯಿಗಳ ಆಶೆಗಾಗಿ ಅವುಗಳನ್ನು ಕಟುಕರಪಾಲು ಮಾಡುವುದರಿಂದಾಗುವ ಅನರ್ಥಗಳನ್ನೂ, ವಿವರವಾಗಿ ತಿಳಿಯಿಸಿ ಆ ದನಗಳನ್ನು ಮಾರದಂತೆ ವಾಪಾಸುಕಳುಹಿಸುತ್ತಾ ಬಂದುದರಿಂದ 300 ರ ವರೆಗೂ ಸೇರುತಿದ್ದ ಈ ಸಂತೆಯಲ್ಲಿ ಈಗ ಏಳೆಂಟು ಸೇರುವುದು ದುರ್ಲಭವಾಗಿದೆ. ಸೇರಿದ ಕೆಲವು ಪ್ರಾಣಿಗಳನ್ನಾದರೂ ಕಟುಕರಿಗೆ ಮಾರದಂತೆ ಪುನಃಪುನಃ ಮಾಲೀಕರಿಗೆ ವಿಜ್ಞಾಪಿಸಿಕೊಳ್ಳುವುದಲ್ಲದೆ ಕಟುಕರಿಗೆ ಒಂದು ರಾಸು ಸಹಾ ಸೇರದಂತೆಮಾಡಿದುದರಿಂದ ಈಗಾಗಲೇ ಕೆಲವು ಜನ ಕಟುಕರು ದಾವಣಗೆರೆಯ ದನಗಳ ಸಂತೆಗೆ ಬರುವುದನ್ನೇ ಬಿಟ್ಟುಬಿಟ್ಟರು. ಆದುದರಿಂದ ಪ್ರತಿಯೊಂದು ಗ್ರಾಮದ ಮಹಾಶಯರಿಗೂ ಮುಖ್ಯವಾಗಿ ಬ್ಯಾಡಗಿಗ್ರಾಮದ ಮಹಾಶಯರಿಗೂ ವಿಜ್ಞಾಪಿಸಿಕೊಳ್ಳುವುದೇನಂದರೆ :—ತಾವುಗಳೂ ಸಹ ತಮ್ಮ ತಮ್ಮ ಊರುಗಳಲ್ಲಿ ಮೇಲ್ಕಂಡಂತೆ ಆಚರಿಸಿ ಗೋವುಗಳು ಕಟುಕರಪಾಲಾಗದಂತೆ ಮಾಡಬೇಕಲ್ಲದೆ ಪ್ರತಿಯೊಂದು ಗ್ರಾಮದ ಪಟೇಲ್ ಮತ್ತು ಶಾನುಭೋಗ ಮಹಾಶಯರುಗಳೂ ಸಹ ತಮ್ಮ ಗ್ರಾಮದ ಜನಗಳಿಗೆ ಚೆನ್ನಾಗಿ ತಿಳಿಯಹೇಳಿ ಯಾರೂ ಕಟುಕರಿಗೆ ದನಗಳನ್ನು ವಿಕ್ರಯಿಸದಂತೆ ಕಟ್ಟುಮಾಡುವುದರಮೂಲಕ ಗೋಮಾತೆಯನ್ನು ರಕ್ಷಿಸಿದ ಪುಣ್ಯಕ್ಕೆ ಭಾಜನರಾಗಬೇಕಾಗಿ ಕೋರುವ,

ಆನೆಕೊಂಡದ ಮುಪ್ಪಣ್ಣ, ಗೋಸೇವಕ.

N. B.—ಗೋಸಂರಕ್ಷಣೆಯನ್ನು ಮಾಡಬೇಕೆಂದು ಅಪೇಕ್ಷಿಸುವವರು ಸಂಘದಿಂದ ಉಚಿತವಾಗಿ ದೊರೆಯುವ ಪ್ರಕಟನಪತ್ರಿಕೆ, ಪುಸ್ತಕ ವಗೈರೆಗಳನ್ನು ಅಪೇಕ್ಷಿಸಿದರೆ ಕಳುಹಿಸಲಾಗುತ್ತೆ.

ಅನುಕರಣೀಯವಾದ ಸಮಾಜಾಭಿವೃದ್ಧಿಕಾರ್ಯ.

ಚಿತ್ರದುರ್ಗ ಡಿ|| ಹೊಳಲಕೆರೆ ತಾ|| ಚನ್ನಪಟ್ಟಣದಲ್ಲಿ ಕಾಳ್ಬೆಹಳ್ಳಿ ಮಠದ ಗುರುಶಾಂತಪ್ಪಯ್ಯನವರು ಬಡವರಿಗೆ ಆಶ್ರಯದಾತರಾಗಿಯೂ, ಪರೋಪಕಾರಿಗಳಾಗಿಯೂ, ಶ್ರೀಮಂತರಾಗಿಯೂ ಇದ್ದರು. ಹೊಳಲಕೆರೆಯಲ್ಲಿ ಎ. ವಿ. ಸ್ಕೂಲ್ ಇದ್ದು ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಯವರೆಗೆ ವ್ಯಾಸಂಗವು ನಡೆಯುತ್ತಾ ಇದೆ. ಪರಸ್ಥಳಗಳಿಂದ ಬಂದು ಇಂಗ್ಲೀಷ್ ವಿದ್ಯಾಭ್ಯಾಸಮಾಡತಕ್ಕ ಬಡವರಾದ ವೀರಶೈವ ವಿದ್ಯಾರ್ಥಿಗಳಿಗೆ ಸಹಾಯಸೌಕರ್ಯವಿಲ್ಲದೆ ವ್ಯಾಸಂಗವನ್ನೇ ಬಿಡುವ ಪ್ರಸಂಗವು ಸಂಭವಿಸಬಹುದಾಗಿದ್ದುದರಿಂದ ಸಮಾಜದೇಳಿಗೆಯಲ್ಲಿ ಆಸಕ್ತರಾಗಿದ್ದ ಮೇಲೆ ಕಂಡ ಮಹನೀಯರು ಇದರ ನಿವಾರಣೆಗೋಸ್ಕರ ತಾವು ಶಿವಾಧೀನವಾಗುವದಕ್ಕೆ ಮುಂಚಿತವಾಗಿಯೇ ತಮ್ಮ ಸ್ವಯಾರ್ಜಿತದಲ್ಲಿ ಇಪ್ಪತ್ತು ಸಾವಿರ ರೂಪಾಯಿಗಳನ್ನು ಮೂಲಧನವಾಗಿಟ್ಟು ಇದರ ಬಡ್ಡಿಯಿಂದ ಹೊಳಲಕೆರೆ ತಾ|| ನ ಅನಾಥ ವೀರಶೈವ ವಿದ್ಯಾರ್ಥಿಗಳಿಗೆ ಸಾರೋದ್ಧಾರವಾಗಿ ಸಹಾಯವನ್ನು ಮಾಡಲು 6 ಜನ ಟ್ರಸ್ಟಿಗಳನ್ನು ನೇಮಿಸಿ ವಿಲ್ ಮಾಡಿ ತಮ್ಮ ಕೀರ್ತಿಶರೀರವನ್ನು ಶಾಶ್ವತಗೊಳಿಸಿದರು. ಈ ಧರ್ಮಾತ್ಮರ ಸಂಕಲ್ಪವನ್ನು ಕ್ಷಿಪ್ರದಲ್ಲಿ ನೆರವೇರಿಸಿ ಸಮಾಜದಲ್ಲಿ ವಿದ್ಯಾಪ್ರೋತ್ಸಾಹವನ್ನುಂಟುಮಾಡಲು ಇವರ ಮಕ್ಕಳುಗಳು ವೇ|| ಮುರಿಗಪ್ಪಯ್ಯನವರೂ, ಸದಾಶಿವಯ್ಯನವರೂ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಂಡು ಶ್ರೀ|| ಗಳವರ ಅಪ್ಪಣೆಯಪ್ರಕಾರ ಈ ಧರ್ಮಕಾರ್ಯವು ಶಾಶ್ವತವಾಗಿಯೂ, ನಿರ್ವಿಘ್ನವಾಗಿಯೂ ನಡೆಯುವುದಕ್ಕೋಸ್ಕರ ಗುರುಶಾಂತಪ್ಪಯ್ಯನವರ ಅನಾಥ ವೀರಶೈವ ವಿದ್ಯಾರ್ಥಿಗಳ ಸಹಾಯಕ ಫಂಡಿನ ಸಂಘವೆಂಬ ಹೆಸರಿನಿಂದ ಒಂದು ಕಮಿಟಿಯನ್ನು ಸ್ಥಾಪಿಸಿ ಇದಕ್ಕೆ ತಾವೇ ಅಧ್ಯಕ್ಷರಾಗಿರುತ್ತಾರೆ. ಶ್ಲಾಘನೀಯವಾದ ಈ ಧರ್ಮಕಾರ್ಯವನ್ನು ಈ ಮಾಹೆ ತಾ|| 28 ರಿಂದ ಪ್ರಾರಂಭಿಸಲು ನಿರ್ಧರಿಸಿರುತ್ತಾರೆ. ತಮ್ಮ ತಂದೆಗಳ ಸಂಕಲ್ಪವನ್ನು ನೆರವೇರಿಸುವುದಕ್ಕೋಸ್ಕರ ಪ್ರಯತ್ನಪೂರ್ವಕವಾಗಿ ನಡಸುತ್ತಿರುವ ಈ ಸಹೋದರರ ಸದ್ವರ್ತನವು ಸಕಲರಿಗೂ ಆದರ್ಶವಾಗಿರುವುದಲ್ಲದೆ ಇದು ಇವರ ಪಿತೃವಾಕ್ಯ ಪರಿಪಾಲನೆಯನ್ನೂ, ಔದಾರ್ಯವನ್ನೂ, ಧರ್ಮಬುದ್ಧಿಯನ್ನೂ, ಸಮಾಜದೇಳಿಗೆಯಲ್ಲಿ ಇವರಿಗಿರುವ ಆಸಕ್ತಿಯನ್ನೂ ವ್ಯಕ್ತಪಡಿಸುತ್ತದೆ. ವೀರಶೈವ ಮತದ ಶ್ರೀಮಂತರುಗಳು ಮೇಲೆ ಕಂಡ ಮಹನೀಯರ ಉದಾಹರಣೆಯನ್ನು ಅನುಕರಿಸಿದರೆ ವಿದ್ಯೆಯಲ್ಲಿ ಹಿಂದುಳಿದಿರುವ ಈ ನಮ್ಮ ಸಮಾಜವು ಶೀಘ್ರದಲ್ಲಿಯೇ ಏಳಿಗೆಗೆ ಬರುವದರಲ್ಲಿ ಸಂದೇಹವಿಲ್ಲ. ಸಮಾಜಾಭ್ಯುದಯಕಾರ್ಯತತ್ಪರರಾದ ಇವರಿಗೆ ಶ್ರೀ ಪರಮೇಶ್ವರನು ಇತೋಪ್ಯತಿಶಯವಾದ ಆಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ,

ಸಂಘದ ಸೆಕ್ರೆಟರಿ.

ವೀರಶೈವಪರಿಷತ್ತು.

ಧಾರವಾಡ ಹಾವೇರಿಪೇಟೆಯ ಮುರಘಾಮಠದಲ್ಲಿ ಇದೇ ಶ್ರಾವಣವದ್ಯ ತ್ರಯೋದಶಿ ತಾ|| ೨೮-೮-೧೯೨೪ ನೇ ದಿನ ಏಕಾದಶ ರುದ್ರಪೂಜಾ ಕಾರ್ಯನಡಿಸಲು ಇಲ್ಲಿಯ ಭಕ್ತಮಾಹೇಶ್ವರರಿಂದ ನಿಶ್ಚಯಿಸಲ್ಪಟ್ಟದೆ ಈ ಸುಸಂಧಿಯಲ್ಲಿ ವೀರಶೈವ ಪರಿಷತ್ತನ್ನು ಕೂಡಿಸಿ ಸಮಾಜದ ಪ್ರಮುಖರನ್ನು ಬರಮಾಡಿಕೊಂಡು ವೀರಶೈವ ಸಮಾಜದ ಪ್ರಗತಿಗೆ ಪ್ರತಿಬಂಧಕವಾಗುತ್ತಿರುವ ಅನೈಕ್ಯವನ್ನು ಹೋಗಲಾಡಿಸಿ ಧಾರ್ಮಿಕ ಮತ್ತೂ ವಿದ್ಯಾವಿಷಯಕ ಉನ್ನತಿಯಬಗ್ಗೆ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಳ್ಳುವಂತೆ ಮಾಡುವದು ಸದ್ಯಃಕಾಲದಲ್ಲಿ ಅತ್ಯವಶ್ಯವಾಗಿರುವದೆಂದು ಕಂಡುಬಂದುದರಿಂದ ತಾ|| ೧೩-೮-೧೯೨೪ ನೇ ಬುಧವಾರ ವೇ. ಮೂ. ರೇವಣಸಿದ್ಧಪ್ಪನವರು ಶಿತ್ತೂರ ರಿಟಾಯರ್ಡ ಡಿ. ಡಿ. ಕಲೆಕ್ಟರ ಇವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಪ್ರಮುಖರ ಪೂರ್ವಾಲೋಚನಾ ಕಮಿಟಿ ಕೂಡಿ ತಾ|| ೨೮--೨೯ ನೇ ಆಗಷ್ಟ ಸನ್ ೧೯೨೪ ನೇ ದಿನಗಳಲ್ಲಿ ಲಿಂಗಾಯತಶಾಲಿನಲ್ಲಿ ವೀರಶೈವ ಪರಿಷತ್ತನ್ನು ನೆರೆಯಿಸಬೇಕೆಂದು ನಿರ್ಧರಿಸಿ ವಿಷಯ, ಕಾರ್ಯಕ್ರಮ, ಕಾರ್ಯಕಾರಿ ಮಂಡಳಿಗಳು ಗೊತ್ತುಮಾಡಲ್ಪಟ್ಟವು.

ಕಾರ್ಯಕ್ರಮಗಳು.

(೨೮-೮-೧೯೨೪)

(೧) ಪ್ರಾತಃಕಾಲದ ೫ ಘಂಟೆಯಿಂದ ೯ ರವರೆಗೆ ಏಕಾದಶರುದ್ರಪೂಜಾ.
(೨) ೯ ಘಂಟೆಯಿಂದ ೧ ಘಂಟೆಯವರೆಗೆ ಮಹಾಗಣಾರಾಧನೆ.
(೩) ಮಧ್ಯಾಹ್ನದ ೩ ಘಂಟೆಯಿಂದ ೬ ರವರೆಗೆ ಪರಿಷತ್ತಿನ ಕಾರ್ಯ.
(೪) ೬ ರಿಂದ ೭ ರವರೆಗೆ ಶ್ರೀಬಸವೇಶ್ವರ ವಚನಶಾಸ್ತ್ರದ ಮೇಲೆ ಪ್ರವಚನ.
(೫) ೭ ರಿಂದ ೯ ರವರೆಗೆ ಶಿವಕೀರ್ತನ.
(೬) ೯ ರಿಂದ ಶ್ರೀ ಶಿವಯೋಗೀಶ್ವರರ ಮಹೋತ್ಸವ.

ತಾ|| ೨೯—೮—೧೯೨೪.

(೧) ಪ್ರಾತಃಕಾಲದ ೮ ರಿಂದ ೧೦ ರ ವರೆಗೆ ಪರಿಷತ್ತಿನ ಕಾರ್ಯ.
(೨) ೧೨ ರಿಂದ ೨ ರವರೆಗೆ ಸಂತೃಪ್ತಿ.
(೩) ೩ ರಿಂದ ಪರಿಷತ್ತಿನಲ್ಲಿ ಆಲೋಚಿಸಲ್ಪಟ್ಟ ವಿಷಯಗಳ ಚರ್ಚೆ.

ವಿಷಯಗಳು.

(೧) [illegible] ವೀರಶೈವ ಸಮಾಜದಲ್ಲಿ ಕಂಡುಬರುವ ಧಾರ್ಮಿಕ ಅವ[illegible]
(೨) ವೀರಶೈವ ಧಾರ್ಮಿಕ ವಾಙ್ಮಯ ಪ್ರಸಾರ.
(೩) ಸದ್ಯಕ್ಕೆ ವೀರಶೈವ ಸಮಾಜದಲ್ಲಿ ಕಂಡುಬರುವ ಅನೈಕ್ಯತೆಯ ಕಾರಣಗಳು ಹಾಗೂ ಅವುಗಳ ನಿವಾರಣೋಪಾಯಗಳು.

ಪ್ರಸಿದ್ಧ ಶಿವಕೀರ್ತನಕಾರರೂ ಉಪನ್ಯಾಸಕರೂ ಬರುವರು. ಪರಿಷತ್ತು ಕೈಕೊಂಡಿರುವ ಕಾರ್ಯವು ಅತ್ಯಂತ ಮಹತ್ವದ್ದೂ ಸದ್ಯಃಕಾಲದಲ್ಲಿ ಅತ್ಯವಶ್ಯವಾದದ್ದೂ ಇರುವದರಿಂದ ಯಾವತ್ತೂ ಸಮಾಜಾಭಿಮಾನಿಗಳು ದಯವಿಟ್ಟು ಆಗಮಿಸಿ ಪರಿಷತ್ತಿನ ಕಾರ್ಯಗಳು ಫಲಕಾರಿಯಾಗುವಂತೆ ಮಾಡುವಿರೆಂದು ಆಶಿಸುತ್ತೇವೆ.

ಮಹಾಜನಗಳು ತಾವು ಆಗಮಿಸುವ ವೇಳೆಯನ್ನು ಮುಂಚಿತವಾಗಿ ಸತ್ಕಾರಕ ಸಂಘದ ಕಾರ್ಯದರ್ಶಿಗಳಿಗೆ ತಿಳಿಸಿದಲ್ಲಿ ತಕ್ಕ ಅನುಕೂಲತೆಗಳನ್ನು ಮಾಡಲು ಸಹಾಯವಾಗುವದು.

ಬಸಪ್ಪಾ ಮಲ್ಲಪ್ಪಾ,
ಆಯಟ್ಟಿ ಸತ್ಕಾರಕಸಂಘದ ಸನ್ಮಾನಿತ ಕಾರ್ಯದರ್ಶಿ.
ಬಿ.ಎಫ್. ಹಂಚಿನಾಳ, ಎಚ್. ಎಫ್. ಕಟ್ಟಿಮನಿ,
ಮತ್ತು ಶಿ. ಅ. ಸೆಟ್ಟಿ.
ಪರಿಷತ್ತಿನ ಗೌರವ ಕಾರ್ಯದರ್ಶಿಗಳು.

ಬೌರಿಂಗಪೇಟೆ.

ಗುಬ್ಬಿ ಶ್ರೀ ಚನ್ನಬಸವೇಶ್ವರಕೃಪಾಪೋಷಿತ ನಾಟಕಸಭಾ ಪ್ರೊಪ್ರೈಟರ್ ಮ|| ಜಿ. ಹೆಚ್. ವೀರಣ್ಣನವರು ತಮ್ಮ ಕಂಪೆನಿಯೊಡನೆ ಈ ಊರಿಗೆ ಸುಮಾರು ಒಂದುತಿಂಗಳ ಕೆಳಗೆ ದಯಮಾಡಿಸಿ ಕೆಲವು ನಾಟಕಗಳನ್ನು ಅಭಿನಯಿಸಿ ತಮ್ಮ ನಾಟಕಕಲಾನೈಪುಣ್ಯದಿಂದಲೂ, ಅತ್ಯುತ್ತಮವಾದ ಸೀನರಿಗಳಿಂದಲೂ ಇಲ್ಲಿನ ಪುರನಿವಾಸಿಗಳ ಮನಸ್ಸನ್ನು ಆನಂದಗೊಳಿಸಿದರು. ಈ ಕಂಪೆನಿಯವರು ಈವರಿವಿಗೂ ಮೈಸೂರುದೇಶದ ಅನೇಕ ಭಾಗಗಳಲ್ಲಿ ತಮ್ಮ ನಾಟಕಗಳನ್ನು ಪ್ರದರ್ಶಿಸಿರುವುದಲ್ಲದೆ, ಈ ದೇಶಕ್ಕೆ ಮುಖ್ಯಪಟ್ಟಣವಾದ ಬೆಂಗಳೂರಿನಲ್ಲಿಯೂ, ರಾಜಧಾನಿಯಾದ ಮೈಸೂರಿನಲ್ಲಿಯೂ ಸಹ ಅನೇಕ ನಾಟಕಗಳನ್ನು ಪ್ರದರ್ಶಿಸಿ ಆಯಾಸ್ಥಳದ ಪ್ರಮುಖರಿಂದ ಅನೇಕವಾದ ಭಂಗಾರದಪದಕಗಳನ್ನೂ ಅಭಿನಂದನಪತ್ರಗಳನ್ನೂ ಹೊಂದಿರುವುದಲ್ಲದೆ ನಮ್ಮ ಕರ್ನಾಟಕ ಸಿಂಹಾಸನಾಧೀಶ್ವರರಾದ ಮೈಸೂರ್ ಶ್ರೀಮನ್ಮಹಾರಾಜರವರ ಸನ್ಮಾನಕ್ಕೂ ಕೂಡ ಪಾತ್ರರಾಗಿ ಅವರಿಂದ ಅನುಗ್ರಹಿಸಲ್ಪಟ್ಟಿರುವ ವಿನೋದರತ್ನಾಕರ, ವರ್ಸಟೈಲ್ ಕಮೇಡಿಯನ್ ಎಂಬ ಬಿರುದುಗಳನ್ನೂ ಭಂಗಾರದ ಪದಕಗಳನ್ನೂ ಸಹ ಪಡೆದಿರುವ ಕಂಪೆನಿಯ ಪ್ರೊಪ್ರೈಟರ್ ಮ|| ಜಿ. ಹೆಚ್. ವೀರಣ್ಣನವರು ತಮ್ಮ ಉದಾರಭಾವದಿಂದ ನದೀಪ್ರವಾಹಗಳ ದೆಸೆಯಿಂದ ಕಷ್ಟಪಡುತ್ತಿರುವ ಬಡವರ ಕಷ್ಟನಿವಾರಣಾರ್ಥವಾಗಿ ಪುರನಿವಾಸಿಗಳ ಕೋರಿಕೆಯಂತೆ ತಾ|| 17-8-24 ನೇ ಭಾನುವಾರ ರಾತ್ರಿ ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರವರ ಅಧ್ಯಕ್ಷತೆಯಲ್ಲಿ ಪ್ರಹ್ಲಾದಚರಿತ್ರೆ ಎಂಬ ನಾಟಕವನ್ನು ಪ್ರದರ್ಶಿಸಿ ಬಂದ ಉತ್ಪತ್ತಿಯಲ್ಲಿ ಅರ್ಧ ಅಂದರೆ (200-0-0) ಇನ್ನೂರು ರೂಪಾಯಿಗಳನ್ನು ಉದಾರಮನಸ್ಸಿನಿಂದ ದಯಪಾಲಿಸಿದರು. ಈ ಮಹನೀಯರು ಯಾವಾಗಲೂ ಧರ್ಮಕಾರ್ಯಾಸಕ್ತರಾಗಿ ತಾವು ಹೋದಕಡೆಗಳಲ್ಲೆಲ್ಲಾ ಅನೇಕ ಧರ್ಮಕಾರ್ಯಗಳಿಗೆ ಧನಸಹಾಯ ಮಾಡುತ್ತಿರುವರೆಂದು ಕೇಳಿ ಸರ್ವರೂ ಸಂತೋಷಿಸಬೇಕಾಗಿದೆ. ಈ ಊರಿನಲ್ಲಿ ಪ್ರದರ್ಶಿಸಿದ ನಾಟಕಗಳಲ್ಲಿ ಇದೇ ಕಡೇನಾಟಕವಾದುದರಿಂದ ಈ ಪುರನಿವಾಸಿಗಳು ತಮ್ಮ ಸಂತೋಷಾರ್ಥವಾಗಿ ಮ|| ಪ್ರೊಪ್ರೈಟರ್ ಜಿ. ಹೆಚ್. ವೀರಣ್ಣನವರಿಗೆ ಭಂಗಾರದ ಪದಕವನ್ನು ಕೋ|| ಡಿ|| ಡೆಪ್ಯುಟಿಕಮಿಷನರ್ ಸಾಹೇಬರವರ ಸ್ವಹಸ್ತದಿಂದ ದಯಪಾಲಿಸಿದರು ಮತ್ತು ಈ ಪುರನಿವಾಸಿಗಳಾದ ಆನರರಿ ಬೆಂಚ್‌ಮ್ಯಾಜಿಸ್ಟ್ರೇಟು ಮತ್ತು ರೆಪ್ರಜೆಂಟೆಟಿವ್ ಅಸೆಂಬ್ಲಿ ಮೆಂಬರಾದ ಮ|| ರಾ|| ಗಳಾದ ಎಂ. ಚನ್ನಬಸಪ್ಪನವರು, ವೈ. ಚನ್ನಪ್ಪನವರು, ಬಿ. ಎನ್. ನಂಜಪ್ಪನವರು, ಟಿ. ಕೆ. ನಲ್ಲಾಗೌಡರು, ಬಿ. ಸಿ. ಮುನಿಸ್ವಾಮಿಗೌಡರು ಈ ಐದುಜನಗಳು ತಮ್ಮ ಸಂತೋಷಾರ್ಥವಾಗಿ ಮ|| ಜಿ. ಹೆಚ್. ವೀರಣ್ಣನವರಿಗೆ ಮತ್ತೊಂದು ಭಂಗಾರದಪದಕವನ್ನು ಕೋ|| ಡಿ|| ಡೆಪ್ಯುಟಿಕಮಿಷನರವರ ಸ್ವಹಸ್ತದಿಂದಲೇ ದಯಪಾಲಿಸಿದರು. ಮುಖ್ಯವಿಷಯವೇನೆಂದರೆ — ಮೇಲ್ಕಂಡ ಮ|| ಪ್ರೊಪ್ರೈಟರ್ ಜಿ. ಹೆಚ್. ವೀರಣ್ಣನವರು ತಮ್ಮ ಧರ್ಮಬುದ್ಧಿಯಿಂದ ಎಲ್ಲೆಲ್ಲಿಯು ಗೌರವಿಸಲ್ಪಡುವರು. ಈ ಮಹನೀಯರು ಇದೇ ತಾಲ್ಲೂಕು ಕೆ. ಜಿ. ಎಫ್. ನಲ್ಲಿಯೂ ಕೂಡ ಪ್ರವಾಹನಿವಾರಣೆಗೋಸ್ಕರ ಅಲ್ಲಿನ ಪೊಲೀಸ್ ಸೂಪರಿಂಟೆಂಡೆಂಟರವರ ಅಧ್ಯಕ್ಷತೆಯಲ್ಲಿ ಭಕ್ತಕಬೀರ್ ಎಂಬ ನಾಟಕವನ್ನು ಪ್ರದರ್ಶಿಸಿ ಬಂದ ಉತ್ಪತ್ತಿಯಲ್ಲಿ ಅರ್ಧ ಅಂದರೆ (250-0-0) ಇನ್ನೂರೈವತ್ತು ರೂಪಾಯಿಗಳನ್ನು ದಯಪಾಲಿಸಿದರೆಂದು ಕೇಳಿ ಸಂತೋಷಿಸುತ್ತೇವೆ. ಇಂಥಾ ಧರ್ಮಬುದ್ಧಿಯುಳ್ಳ ಮ|| ಜಿ. ಹೆಚ್. ವೀರಣ್ಣನವರಿಗೆ ಶ್ರೀ ಚನ್ನಬಸವೇಶ್ವರನು ಆಯುರಾರೋಗ್ಯ ಭಾಗ್ಯಗಳನ್ನು ಕೊಟ್ಟು ಕಾಪಾಡಲೆಂದೂ, ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಣೆಯಲ್ಲಿ ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯಾಗುತ್ತಿರುವ ಈ ನಾಟಕಕಂಪೆನಿಯು ದಿನದಿನಾಭಿವೃದ್ಧಿಯನ್ನು ಹೊಂದಿ ಪೂರ್ಣಚಂದ್ರನಂತೆ ಪ್ರಕಾಶಿಸಲೆಂದು ಹಾರೈಸುತ್ತೇವೆ. ಈ ಮಹನೀಯರ ಮೇಲ್ಪಂಕ್ತಿಯನ್ನನುಸರಿಸಿ ಮಿಕ್ಕ ನಾಟಕಕಂಪೆನಿಗಳವರೂ, ಸಿನಿಮಾಗಳವರೂ ತಮ್ಮ ತಮ್ಮ ಶಕ್ತ್ಯಾನುಸಾರ ಪ್ರವಾಹನಿವಾರಣೆಗೋಸ್ಕರ ಸಹಾಯಮಾಡಲೆಂದು ಈಮೂಲಕ ಪ್ರಾರ್ಥಿಸುವ,

ಓರ್ವ ಕಲಾಭಿಮಾನಿ.

ಪ್ರವಾಹಗಳಿಂದುಂಟಾದ ಕಷ್ಟನಿವಾರಣೆಯ ನಿಧಿ.

ಮೈಸೂರು ದೇಶದ ಎಲ್ಲಾ ಗ್ರಾಮಗಳ ಪಟೇಲ್, ಶಾನುಭೋಗರು, ಸ್ಕೂಲ್‌ಮಾಸ್ಟರ್ ಮತ್ತು ಧರ್ಮಾತ್ಮರಾದ ಮುಖಂಡ ಮಹಾಜನರ ಸನ್ನಿಧಾನಂಗಳಲ್ಲಿ.—

ಮಹಾಶಯರೇ !

ಮೈಸೂರು, ಹಾಸನ, ಕಡೂರು, ಶಿವಮೊಗ್ಗ, ಚಿತ್ರದುರ್ಗ ಈ ಡಿಸ್ಟ್ರಿಕ್ಟುಗಳಲ್ಲಿ ಪ್ರವಹಿಸುವ ಕಾವೇರಿ, ತುಂಗ ಭದ್ರಾನದಿ ಮತ್ತು ಇವುಗಳ ಉಪನದಿಗಳ ಪ್ರವಾಹವು ಕಳೆದ ತಿಂಗಳಲ್ಲಿ ದೈವಿಕವಾಗಿ ಹೆಚ್ಚಿಗೆಬಂದು ಆ ನದಿಗಳ ಪಕ್ಕಗಳಲ್ಲಿದ್ದ ಹಲವು ಗ್ರಾಮಗಳಲ್ಲಿ ನಮ್ಮ ಸಹೋದರ ಪ್ರಜೆಗಳ ಅನೇಕ ಮನೆ ಮಠಾದಿಗಳು ಕೊಚ್ಚಿಕೊಂಡುಹೋಗಿ ಅವರೆಲ್ಲಾ ನಿಲ್ಲುವುದಕ್ಕೆ ನೆರಳಿಲ್ಲದೆ ತಿನ್ನುವುದಕ್ಕೆ ಕೂಳಿಲ್ಲದೆ ನಾನಾ ನಷ್ಟ ಕಷ್ಟಗಳಿಗೀಡಾಗಿರುವ ವಾರ್ತೆ ಸರ್ವರಿಗೂ ಪರಿತಾಪಕರವಾಗಿರುವುದಲ್ಲದೆ ಇಂತಹ ಆಕಸ್ಮಿಕವೂ, ಅನಿರೀಕ್ಷಿತವೂ ಆದ ಕಷ್ಟಗಳಿಗೀಡಾಗಿರುವ ಜನರಿಗೆ ಮೊದಲು ಸಹಾಯಮಾಡಬೇಕೆಂಬ ದಯಾಗುಣವು ಪ್ರತಿಯೊಬ್ಬರಿಗೂ ಪ್ರೇರಣೆಯಾಗಿರುವುದಷ್ಟೆ ?

ಇಂತಹ ಸುಪ್ರೇರಣೆಗೆ ನಮ್ಮ ಶ್ರೀಮನ್ಮಹಾರಾಜರವರು [illegible] ಹೃದಯದಿಂದ ಗೌರ್ನಮೆಂಟಿನಿಂದ ಮಾಡಬೇಕಾದ ಕಾರ್ಯ[illegible]ಗಳನ್ನೂ ಸಹಾಯಗಳನ್ನೂ ಒದಗಿಸಿಯೂ ಆ ಕಷ್ಟಕ್ಕೆ ಸಿಕ್ಕಿರುವ [illegible] ಪ್ರಜೆಗಳು ಎಂದಿನಂತೆ [illegible] ಲೋಕಸೇವಾನಿರತರಾಗಲು ಹೆಚ್ಚಾದ ದ್ರವ್ಯಸಹಾಯವು ಅತ್ಯವಶ್ಯಕವೆಂದು ಯೋಚಿಸಿ "ಪ್ರವಾಹಗಳಿಂದುಂಟಾದ ಕಷ್ಟನಿವಾರಣೆಯ ನಿಧಿ" ಎಂಬ ಫಂಡನ್ನೊಂದನ್ನೇರ್ಪಡಿಸಿ ಈ ಫಂಡಿಗೆ ತಾವು ಮೊದಲು 15000 ರೂಪಾಯಿ ದಯಪಾಲಿಸಿ ಈ ನಿಧಿಗೆ ಪ್ರಜೆಗಳೆಲ್ಲರೂ ಭಾಗಿಗಳಾಗಲು ಸೆಂಟ್ರಲ್‌ಕಮಿಟಿಯೊಂದನ್ನು ಸ್ಥಾಪಿಸಿ ಅದಕ್ಕೆ ನಮ್ಮ ಶ್ರೀಮದ್ಯುವರಾಜರನ್ನು ಪ್ರೆಸಿಡೆಂಟರನ್ನಾಗಿಯೂ, ದಿವಾನರೇ ಮೊದಲಾದ ಅಧಿಕಾರಿಗಳನ್ನೂ, ಖಾಸಗೀ ದೊಡ್ಡ ಮನುಷ್ಯರನ್ನೂ ಮೆಂಬರುಗಳನ್ನಾಗಿಯೂ ಏರ್ಪಡಿಸಿ ತಮ್ಮ ರಾಜಧರ್ಮವನ್ನು ಪ್ರಕಾಶಪಡಿಸಿರುವುದು ಸರ್ವತ್ರ ವಿದಿತವಾಗಿದೆಯಷ್ಟೆ ?

ಈ ಮಹೋಪಕಾರಕ್ಕಾಗಿ ಪ್ರಜೆಗಳೆಲ್ಲರೂ ಅತ್ಯಂತ ಕೃತಜ್ಞತೆಯಿಂದ ನಮ್ಮ ಮಹಾಪ್ರಭುಗಳ ಶ್ರೇಯಃಪ್ರಾರ್ಥನೆಮಾಡುತ್ತಾ ಮೇಲ್ಕಂಡ ಘನೋದ್ದೇಶದ ನಿಧಿಗೆ ಪ್ರತಿಯೊಬ್ಬ ಪ್ರಜೆಯು ಚಂದಾಕೊಡುವುದು ಪ್ರಜಾಧರ್ಮವಾಗಿರುವುದಷ್ಟೆ ? ಆದರೆ ನಾನಾಕಡೆ ದೂರ ದೂರವಾಗಿ ಬಹುಮುಖರಾಗಿ ವಾಸಿಸುತ್ತಿರುವ ನಮ್ಮ ಅಲ್ಪಸೇವೆಯನ್ನು ಕಮಿಟಿಗೆ ಒಬ್ಬೊಬ್ಬರೇ ಹೋಗಿ ಒಪ್ಪಿಸುವುದಾಗಲೀ ಕಮಿಟಿಯವರು ಸಂಸ್ಥಾನದಲ್ಲಿನ ಪ್ರತಿ ಗ್ರಾಮದ ಪ್ರತಿಮನೆಗೂ ಬಂದು ಸಹಾಯಕೇಳುವುದಾಗಲೀ ಸಾಧ್ಯವಿಲ್ಲವು ಮತ್ತು ಬಲವತ್ತರಮಾಡತಕ್ಕದ್ದೂ ಅಲ್ಲವು. ಇಂತಹ ಕಷ್ಟಕ್ಕೆ ಸಹಾಯಮಾಡಲು ಪ್ರತಿಯೊಬ್ಬರಿಗೂ ಭಗವತ್ಪ್ರೇರಣೆ ಆಗಿರುವುದರ ಸಂಕಲ್ಪನೆರವೇರಲೋಸುಗ ಪ್ರತಿಗ್ರಾಮದ ತಾಯಿ ದಂಡೆಗಳೋಪಾದಿ ಇರುವ ಮುಖ್ಯಸ್ತರನ್ನು ಪ್ರಾರ್ಥಿಸುವುದೇನಂದರೆ— ಆಯಾಯ ಗ್ರಾಮದ ಮುಖ್ಯಸ್ತರು ತಮ್ಮ ನಿತ್ಯಗಟ್ಟಲೆ ಕೆಲಸಗಳಲ್ಲಿ ಇದೊಂದು ಮುಖ್ಯ ಕರ್ತವ್ಯವು ಮತ್ತು ದೇವತಾಕಾರ್ಯವೆಂದು ಭಾವಿಸಿ ತಮ್ಮ ತಮ್ಮ ಗ್ರಾಮಗಳಲ್ಲಿಯೇ ಸಬ್‌ಕಮಿಟಿಯೊಂದನ್ನೇರ್ಪಡಿಸಿಕೊಂಡು ಆಯಾಯ ಗ್ರಾಮದಲ್ಲಿನ (ಬಡವರೂ ಬಲ್ಲಿದವರೂ ಎಂದೆಣಿಸದೆ) ಖಾನೇಷ್‌ಮಾರಿ ನಂಬರು ಅನುಸರಿಸಿ ಪ್ರತಿಯೊಂದು ಮನೆಗೂ ಹೋಗಿ ಆ ಮನೆಯ ಯಜಮಾನ (ಯಾ) ಯಜಮಾನಿಗೆ ವಿಷಯ ತಿಳುಹಿಸಿದರೆ ಕೂಡಲೆ ದೇವರ ಪ್ರೇರಣೆಯಂತೆ ತಮಗೆ ತೋಚಿದಷ್ಟು ಸಹಾಯಮಾಡಲು ಯಾವ ಅಭ್ಯಂತರವೂ ಇಲ್ಲವು. ಆದರೆ ಇಷ್ಟು ಅಷ್ಟು ಎಂತ ಬಲಾತ್ಕರಿಸದೆ ಈಗ ಚಲಾವಣೆಯಲ್ಲಿರುವ ನಾಣ್ಯಗಳು ಅಂದರೆ 1, 3, 6 ಕಾಸು. 1, 2, 4, 8 ಆಣೆ. 1 ರೂಪಾಯಿ ಇವುಗಳಲ್ಲಿ ಯಾವುದು, ಎಷ್ಟು ಕೊಟ್ಟರೂ ಪ್ರೀತಿಯಿಂದ ಸ್ವೀಕರಿಸಿ ಆ ಗ್ರಾಮದ ಒಟ್ಟು ಮೊಬಲಗನ್ನ ಚಂದಾಪಟ್ಟಿ ಎನಿಸಿ ಆಯಾಯ ತಾಲ್ಲೂಕು ಬೋರ್ಡಿಗೆ ಅಥವಾ ಸೆಂಟ್ರಲ್‌ಕಮಿಟಿಗೆ ಕಳುಹಿಸುವುದೇ ಸುಲಭೋಪಾಯವು, ಮತ್ತು ಎಲ್ಲರೂ ಕಷ್ಟನಿವಾರಣೆಯ ಪುಣ್ಯಕ್ಕೆ ಭಾಗಿಗಳಾಗಲು ಅವಕಾಶವು ದೊರತು ಭ್ರಾತೃಭಾವಪ್ರಕಾಶಪಡಿಸಿದಂತಾಗುತ್ತೆ. "ಹನಿಗೂಡಿದರೆ ಹಳ್ಳವೆಂಬ ಗಾದೆಯಂತೆಯೂ" "ಅಳಿಲಸೇವೆ ಮಳಲಭಕ್ತಿ" ಎಂಬಂತೆಯೂ 1 ಕಾಸು ಮೊದಲ್ಗೊಂಡು ಬರುವ ಸಹಾಯವು ಆಘನಿಧಿಗೆ ಸೇರಿದರೆ ಸಂಸ್ಥಾನದ ಸರ್ವಪ್ರಜೆಗಳೂ ಸೇರಿ ಇದೊಂದು ಮಹತ್ತರವಾದ ದೇವತಾಪೂಜೆಮಾಡಿದಂತಾಗುತ್ತೆ.

ಈ ದೇವತಾರಾಧನೆಗೆ ಸುಲಭೋಪಾಯದ ಈ ಸಲಹೆಯು ಯುಕ್ತವಾಗಿ ತೋರುವಪಕ್ಷ ಸಂಸ್ಥಾನದಲ್ಲಿನ ಪ್ರತಿಯೊಂದು ಗ್ರಾಮದ ಮುಖ್ಯಸ್ತರೂ ಸಾವಕಾಶಮಾಡದೆ ಕೊಡಲೆ ತಮ್ಮ ತಮ್ಮ ಗ್ರಾಮಗಳಲ್ಲಿರುವ ಪ್ರತಿ ಮನೆಯವರನ್ನು ಈ ಪುಣ್ಯಕ್ಕೆ ಭಾಗಿಗಳಾಗುವಂತೆ ಮಾಡಿ ಪರಮಾತ್ಮನ ಪ್ರೀತಿಗೆ ಪಾತ್ರರಾಗಬೇಕೆಂದು ಸರ್ವರಿಗೂ ವಂದಿಸಿ ಪ್ರಾರ್ಥಿಸುವ,

ಧರ್ಮಾತ್ಮರ ಸೇವಕ.

ಲಿಂಗಾಯತರ ವೈದಿಕತ್ವವು.

(ಲೇಖಕ, ಸ್ವಾಮಿ ವಿರೂಪಾಕ್ಷ ಒಡೆಯರ, ಚೌಡದಾನಪುರ, ಪ್ರೊಫೆಸರ, ಸಂಸ್ಕೃತಕಾಲೇಜ ಇಂದೂರ.)

ಕೆಲವು ದಿವಸಗಳ ಹಿಂದೆ "ಲಿಂಗಾಯತರು ಹಿಂದುಗಳಲ್ಲ, ಅವರು ಸರ್ವಹಿಂದುಗಳು ಮನ್ನಿಸುವ ವೇದ, ಉಪನಿಷತ್ತಾದಿಗಳನ್ನು ಮನ್ನಿಸುವದಿಲ್ಲ, ಅವರ ಮತ್ತು ಹಿಂದುಗಳ ನಿತ್ಯನೈಮಿತ್ತಿಕಾದಿ ಕರ್ಮಗಳು ಒಂದಕ್ಕೊಂದು ಅತ್ಯಂತ ಭಿನ್ನವಾಗಿವೆ, ಅವರ ಮತ್ತು ಹಿಂದುಗಳ ಏಕೀಕರಣವು ಯಾವ ವಿಷಯದಲ್ಲಿಯೂ ಆಗುವದಿಲ್ಲ" ಇವೇ ಮುಂತಾದ ಸಂಗತಿಗಳ ಬಗ್ಗೆ ಐದಾರು ಲೇಖಗಳು "ಟಾಯಿಮ್ಸ-ಆಫ್-ಇಂಡಿಯಾ" ಎಂಬ ಇಂಗ್ಲೀಷ್ ವರ್ತಮಾನಪತ್ರದಲ್ಲಿ ಪ್ರಸಿದ್ಧಿಸಲ್ಪಟ್ಟಿರುತ್ತವೆ. ಈ ಲೇಖಗಳಲ್ಲಿ ಸತ್ಯಾಂಶವು ಎಷ್ಟರಮಟ್ಟಿಗಿರುತ್ತದೆಂಬದನ್ನು ನಾನು ಇಲ್ಲಿ ತೋರಿಸುವೆನು. ಲಿಂಗಾಯತ ಧರ್ಮವು ಒಂದು ಸಾಂಪ್ರದಾಯಿಕ ಸಂಘವಿರುತ್ತದೆ ಅದು ವೇದ ಮೊದಲಾದವುಗಳಲ್ಲಿ ಹೇಳಲ್ಪಟ್ಟಿರುವ ಶಿವನೆಂಬ ದೇವರ ಆರಾಧನಾರ್ಥವಾಗಿ ರಚಿಸಲ್ಪಟ್ಟಿರುತ್ತದೆ. ಪೂರ್ವದಲ್ಲಿ ಶಿವಚಿಹ್ನವನ್ನು (ಲಿಂಗವನ್ನು) ದೇಹದಲ್ಲಿ ಧಾರಣಮಾಡುವ ರೂಢಿಯುಂಟಾಯಿತು. ಆದರೆ ಇದು ಕೆಲವರಿಗೆ ಇಷ್ಟವಾಗಿ ತೋರದ್ದರಿಂದ ಅವರು ದೇವಾಲಯಗಳನ್ನು ಕಟ್ಟಿಸಿ, ಅವುಗಳಲ್ಲಿ ಆ ಶಿವಚಿಹ್ನವನ್ನು ಸ್ಥಾಪಿಸಿ, ಅರ್ಚಿಸಲಾರಂಭಿಸಿದರು. ಇಂತಹ ಶಿವಚಿಹ್ನಕ್ಕೆ ಚರಲಿಂಗವೆಂದೂ ಹೆಸರುಗಳು ಬಿದ್ದವು. ಈ ಚರಲಿಂಗವನ್ನು ಅರ್ಚಿಸುವವರಿಗೆ ವೀರಶೈವರೆಂತಲೂ ಸ್ಥಿರಲಿಂಗವನ್ನು ಪೂಜಿಸುವವರಿಗೆ ಶೈವರೆಂತಲೂ, ಅನ್ನುವರು. ಈ ಶಿವನೆಂಬ ಹೆಸರನ್ನು ವೇದಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಸ್ಮೃತಿಗಳಲ್ಲಿಯೂ ಐತರೇಯಾದಿ ಬ್ರಾಹ್ಮಣಗ್ರಂಥಗಳಲ್ಲಿಯೂ ಕಾಣಬಹುದು. ಈ ಶಿವಚಿಹ್ನವಾದ ಲಿಂಗವನ್ನು ಅಹೋರಾತ್ರ ದೇಹದಲ್ಲಿ ಧರಿಸಿ ಅದನ್ನು ಅತ್ಯಂತ ಸಂರಕ್ಷಿಸಿ ಪೂಜಿಸುವ ವೀರವ್ರತವನ್ನು ಪಾಲಿಸುವವನಿಗೆ ಮಾತ್ರ "ವೀರಶೈವನು" ಎಂದು ಅನ್ನುವರು. ಇವನು ಸರ್ವರೀತಿಯಿಂದ ವೈದಿಕನೇ ಇರುತ್ತಾನೆ. ಲಿಂಗಾಯತರಿಗೆ ವಿಶೇಷಾದ್ವೈತಜ್ಞಾನವೆಂಬುದೇ ಮುಖ್ಯ ತತ್ವವು. ಅವರು ಈ ಜಗತ್ತಿಗೆ ಉಪಾದಾನ ಕಾರಣವಾದ ಪ್ರಕೃತಿಗೆ ಅಂದರೆ ಶಕ್ತಿಗೆ ಅನಾದ್ಯನಂತತ್ವವನ್ನು ಹೇಳಿ ಅಂತ್ಯದಲ್ಲಿ ಜೀವಪ್ರಕೃತಿಗಳೆರಡೂ ಶಿವನಲ್ಲಿ ಐಕ್ಯವಾಗುತ್ತವೆಂದು ಹೇಳುವರು. ಇದಕ್ಕೆ ಬ್ರಹ್ಮಸೂತ್ರದಮೇಲೆ ರಚಿಸಲ್ಪಟ್ಟ ಶ್ರೀಕರಭಾಷ್ಯವೇ ಸಾಕ್ಷಿಭೂತಗ್ರಂಥವು. ಈ ಶ್ರೀಕರಾಚಾರ್ಯರು ಸನ್ ೧೦೭೦ ನೇಯ ಇಸವಿಯ ಸುಮಾರಕ್ಕೆ ಇದ್ದರೆಂತಲೂ, ಇವರ ಯೋಗ್ಯತೆಯು ಶ್ರೀ ಆದಿಶಂಕರಾಚಾರ್ಯರ ಯೋಗ್ಯತೆಗೆ ಸಮಾನವಾದದ್ದೆಂತಲೂ ಸಿದ್ಧಮಾಡಲ್ಪಟ್ಟಿರುವದು. (ಇಂಡಿಯನ್‌ರಿವ್ಯು ೧೯೧೩ನೇ ಮೇ ತಿಂಗಳ ಅಂಕ ನೋಡಿರಿ) ಇವರ ಭಾಷ್ಯವು ಅಪ್ರತಿಮ ಗ್ರಂಥವಾಗಿದೆ. ಅದರಲ್ಲಿ ವಿಶೇಷಾದ್ವೈತ ತತ್ವವು ಬಹುಸರಸವಾಗಿ ವಿವರಿಸಲ್ಪಟ್ಟಿದೆ. "[illegible] ಸುಪರ್ಣೋ[illegible]ಮಂತ್ರಃ | [illegible]ಮಂತ್ರಃ ಅದ್ವೈತೇ[illegible] ||" ಎಂದು ವಿಶೇಷಾದ್ವೈತದ ವ್ಯಾಖ್ಯಾನವು ಶ್ರೀಕರಭಾಷ್ಯದಲ್ಲಿ ಕೊಡಲ್ಪಟ್ಟಿರುತ್ತದೆ. ಲಿಂಗಾಯತರಿಗೆ ಪ್ರಮಾಣಗ್ರಂಥಗಳು ಯಾವವೆಂದರೆ :—೧ ನಾಲ್ಕು ವೇದಗಳು, ೨ ಉಪನಿಷತ್ತುಗಳು, ೩ [illegible], ೪ ಬ್ರಹ್ಮಸೂತ್ರದ ಮೇಲಿನ ಭಾಷ್ಯಗಳು, ೫ [illegible], ೬ [illegible] [illegible]

ಗೊತ್ತಿಲ್ಲವೆಂದು ಪ್ರೆಸಿಡೆಂಟರು ತಿಳಿಸಿದುದಾಗಿ ಮ|| ವೆಂಕಟಕೃಷ್ಣಯ್ಯನವರು ಹೇಳುತ್ತಾರೆ. ಓಟರ ಲಿಸ್ಟು ರೂಲ್ಸಿಗೆ ಅನುಸಾರವಾಗಿ ಮಾಡಲ್ಪಟ್ಟಿಲ್ಲವೆಂದೂ ಬಹುಜನರ ಹೆಸರು ಬಿಟ್ಟುಹೋಗಿರುವುದೆಂದೂ ರೇಟ್ ಪೇಯರುಗಳು ಶ್ರೀಮನ್ಮಹಾರಾಜರವರಿಗೆ ಅರ್ಜಿಬರೆದುಕೊಂಡಿದ್ದರೆಂಬ ಸಂಗತಿಯು ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುವುದರಿಂದ ತಿಳಿಯಬರುತ್ತದೆ. ಪ್ರಾಯಶಃ ಈ ಜನರ ಅರ್ಜಿಯಮೇಲೆ ಈರೀತಿ ಸರ್ಕಾರದವರು ರದ್ದುಮಾಡಿರಬಹುದು. ಆದರೆ ಯಾವದೊಂದನ್ನೂ ವಿಚಾರಿಸದೆ ಈರೀತಿಯಾಗಿ ಏಕಾಏಕಿ ರದ್ದುಪಡಿಸಲು ಅವರಿಗೆ ಸುತರಾಂ ಅಧಿಕಾರವಿಲ್ಲವು. ಚುನಾವಣೆಯಲ್ಲಿ ಅಕ್ರಮವೇನಾದರೂ ನಡೆದರೆ ಅದನ್ನು ರದ್ದುಪಡಿಸಲು ಡಿಸ್ಟ್ರಿಕ್ಟ್ ಜಡ್ಜರಿಗೆ ಮಾತ್ರ ಅಧಿಕಾರವಿರುತ್ತದೆ ಈ ಓಟರುಗಳ ಲಿಸ್ಟನ್ನು ತಯಾರಿಸಿ ಪ್ರಕಟಿಸುವುದರ ವಿಚಾರವಾಗಿ ಕೌನ್ಸಿಲಿನಲ್ಲಿ ಏನು ನಡೆಯಿತೆಂಬುದು ನನಗೆ ಗೊತ್ತಿಲ್ಲವು. ಅದನ್ನು ತಿಳಿದವರು ಹೇಳಬಹುದೆಂದು ಹೇಳಿ ಕುಳಿತುಕೊಂಡರು. ಆಮೇಲೆ ಅಡ್ವೋಕೇಟರುಗಳಾದ ಮ|| ಎಸ್. ಕೃಷ್ಣಸ್ವಾಮಿರಾಯರೂ, ಎಚ್. ಸುಬ್ಬರಾಯರೂ ಮ|| ಎ. ಕೃಷ್ಣರಾಯರ ರೆಸ್ಯುಲೇಷನನ್ನು ಸಪೋರ್ಟು ಮಾಡುವಾಗ್ಗೆ ಕ್ಯಾನ್‌ವಾಸಿಂಗಿಗಾಗಿ ಬಹಳ ದುಡ್ಡನ್ನು ಖರ್ಚುಮಾಡಿ ಓಟರುಗಳ ಮನೆಮನೆಗೂ ತಿರುಗಿ ಪ್ರಯಾಸಪಟ್ಟಿರುವ ಕ್ಯಾಂಡಿಡೇಟರುಗಳಿಗೆ ಸರ್ಕಾರದ ಈ ಅನ್ಯಾಯವಾದ ಆರ್ಡರಿನಿಂದ ಬಹಳ ನಷ್ಟವೂ ಕಷ್ಟವೂ ಉಂಟಾಯಿತೆಂದು ಹೇಳಿದರು. ತರುವಾಯ ಮ|| ವೈ. ವಿರೂಪಾಕ್ಷಯ್ಯನವರೆದ್ದುಬಂದು, ಕೌನ್ಸಿಲಿನಲ್ಲಿ ಲಿಸ್ಟಿನ ತಯಾರಿ ಮತ್ತು ಪ್ರಕಟನೆಯ ವಿಚಾರದಲ್ಲಿ ನಡೆದಿರುವ ವಿಷಯವನ್ನು ಬಲ್ಲವರು ತಿಳಿಸಬಹುದೆಂದು ಹೇಳಿದರಾದುದರಿಂದ ಕೌನ್ಸಿಲಿನಲ್ಲಿ ನಡೆದ ಸಂಗತಿಯನ್ನು ತಿಳುಹಲು ಅವಕಾಶವನ್ನು ಕೊಡಬೇಕೆಂದು ಅಧ್ಯಕ್ಷರನ್ನು ಕೇಳಿ ಅವರನುಮತಿಯನ್ನು ಪಡೆದು - ಆಫೀಸಿನವರಿಂದ ತಯಾರಿಸಲ್ಪಟ್ಟಿರುವ ಓಟರ ಲಿಸ್ಟು ಕ್ರಮವಾಗಿಲ್ಲವೆಂದೂ, ಅನೇಕರ ಹೆಸರು ಬಿಟ್ಟುಹೋಗಿರುವುದೆಂದೂ ಕೇಳುತ್ತೇವಾದುದರಿಂದ ಇದನ್ನು ಪರಿಶೀಲಿಸಿ ಕ್ರಮಪಡಿಸುವ ಬಗ್ಗೆ ಒಂದು ಸ್ಪೆಷಲ್ ಮೀಟಿಂಗ್ ಮಾಡಬೇಕೆಂದು 12 ಜನ ಕೌನ್ಸಿಲರು ಒಂದು ಅಪ್ಲಿಕೇಷನ್ನನ್ನು ಪ್ರೆಸಿಡೆಂಟರಿಗೆ ತಾ|| 7—4—1924ರಲ್ಲಿ ಕೊಟ್ಟಿದ್ದರು. ಅದರಂತೆ ಪ್ರೆಸಿಡೆಂಟರು ಒಂದು ಸ್ಪೆಷಲ್ ಮೀಟಿಂಗನ್ನು ನಡೆಸಿದಾಗ್ಗೆ, ಓಟರ ಲಿಸ್ಟು ರೂಲ್ಸುಪ್ರಕಾರ ತಯಾರಾಗಿಲ್ಲ. ಬಹುಜನರ ಹೆಸರುಗಳು ಬಿಟ್ಟುಹೋಗಿವೆ. ಬೆಂಗಳೂರು ಮ್ಯುನಿಸಿಪಾಲಿಟಿಯವರು, ಓಟರ ಲಿಸ್ಟನ್ನು ತಯಾರಾದುದರಿಂದ ಕಂದಾಯದ ಬಾಕಿಯನ್ನಿಟ್ಟುಕೊಂಡಿರುವವರು ಇಷ್ಟು ದಿವಸದಲ್ಲಿ ಕೊಟ್ಟರೆ ಅವರ ಹೆಸರು ಲಿಸ್ಟಿನಲ್ಲಿ ಸೇರಿಸಲ್ಪಡುತ್ತದೆಂದು ಡೇಲಿಪೋಸ್ಟ್ ಮುಂತಾದ ಕೆಲ ಸ್ಥಳದ ಪೇಪರುಗಳಲ್ಲಿ ಪ್ರಕಟಿಸಿದ್ದು ಅನಂತರ ಲಿಸ್ಟನ್ನು ಗೆಜೆಟ್ಟಿನಲ್ಲಿ ಪ್ರಕಟಿಸಿ, ಅದರಲ್ಲಿ ಬಿಟ್ಟುಹೋಗಿರತಕ್ಕವರ ಹೆಸರನ್ನು ತಿಳಿಸಿದಲ್ಲಿ ಸೇರಿಸಲ್ಪಡುತ್ತದೆಂದು ಯಥಾಪ್ರಕಾರ ಡೇಲಿಪೋಸ್ಟ್ ಪತ್ರಿಕೆಯಲ್ಲಿ ಪ್ರಸಿದ್ಧಮಾಡಿದ್ದರು. ಆ ರೀತಿಯಲ್ಲಿ ಮಾಡದಿರುವುದು ತಪ್ಪು. ಬರೀ ಆಫೀಸಿನ ಮುಂಗಡೆ ಲಿಸ್ಟನ್ನು ಹಾಕುವುದರಿಂದ ದೂರಪ್ರದೇಶದಲ್ಲಿರುವ ಜನರು ಬಂದು ನೋಡಲು ಪ್ರಯಾಸವಾಗುತ್ತದೆ ಅದ್ದರಿಂದ ಎಲ್ಲಾ ಪೋಲೀಸು ಸ್ಟೇಷನ್ನುಗಳಲ್ಲಿ ಅಂಟಿಸುವುದಲ್ಲದೆ. ಗೆಜೆಟ್ಟಿನಲ್ಲಿ ಪ್ರಕಟಿಸಬೇಕೆಂದು ಮೊದಲಾಗಿ ಮೆಂಬರುಗಳು ತಿಳಿಸಲು, ಎಲ್ಲವೂ ರೂಲ್ಸು ಪ್ರಕಾರ ಮಾಡಿದೆಯಾದ್ದರಿಂದ ಈಗ ಬದಲಾಯಿಸಲಾಗುವುದಿಲ್ಲ. ಹೆಸರು ಬಿಟ್ಟುಹೋಗಿರತಕ್ಕವರು 15 ದಿವಸಗಳಲ್ಲಿ ಚೀಫ್ ಆಫೀಸರಿಗೆ ಬರೆದುಕೊಂಡಲ್ಲಿ ಸೇರಿಸಲ್ಪಡುತ್ತದೆ ಎಂದು ಉತ್ತರಕೊಟ್ಟುಬಿಟ್ಟರು. ಚುನಾವಣೆಯನ್ನು ರದ್ದುಮಾಡಿರುವುದು ತಪ್ಪೆಂದು ಆರ್ಡರನ್ನು ನೋಡಿದ ಹೊರತು ನಿರ್ಧರಿಸಲಾಗುವುದಿಲ್ಲ. ಯಾರ ಹೆಸರು ಬಿಟ್ಟುಹೋಗಿರುವುದೋ ಅವರು ಅರ್ಜಿ ಬರೆದುಕೊಂಡಿರುವುದರಮೇಲೆ ಸರ್ಕಾರದವರು ಮ್ಯುನಿಸಿಪಲ್ ಪ್ರೆಸಿಡೆಂಟರ ಕೂಡ ಕರೆಸ್ಪಾಂಡೆನ್ಸನ್ನು ನಡಿಸಿ ಕ್ಯಾನ್ಸಲ್ ಆರ್ಡರ್ ಮಾಡಿರಬಹುದು. ಅವೆಲ್ಲವನ್ನೂ ತಿಳಿಯದೆ ಆತುರದಿಂದ ಸರ್ಕಾರದವರು ತಪ್ಪುಮಾಡಿದರೆಂದು ನಿರ್ಧರಿಸುವುದು ಯುಕ್ತವಾಗಿಲ್ಲವೆಂದು ತಿಳಿಸಿದರು. ಇದೇ ವಿಷಯವನ್ನು ಮ|| ಗಳಾದ ಕೆ. ಧನಕೋಟಿಸೆಟ್ಟರೂ, ಎಚ್. ಸಿ. ದಾಸಪ್ಪನವರೂ ಪುಷ್ಟೀಕರಿಸಿ ಮಾತನಾಡುವಾಗ್ಗೆ, ಸರ್ಕಾರದ ಆರ್ಡರು ತಪ್ಪೆಂದು ಪ್ರತಿಪಾದಿಸುವಲ್ಲಿ ನೀವುಗಳು ತೋರಿಸುವ ರೂಲ್ಸು ರೆಗ್ಯುಲೇಷನ್ನುಗಳು ಸರ್ಕಾರದವರಿಗೆ ತಿಳಿಯದೇ ಇಲ್ಲ. ಅವರು ನಮಗಿಂತಲೂ ಹೆಚ್ಚಾಗಿಯೇ ಬಲ್ಲರು. ಆದುಕಾರಣ ಈ ಆರ್ಡರನ್ನು ಮಾಡಲು ಅವರಿಗೆ ಯಾವ ಪ್ರಬಲಕಾರಣವಿದ್ದಿತೆಂಬುದನ್ನು ನಾವು ಸರಿಯಾಗಿ ತಿಳಿಯದಹೊರತು ನಿಷೇಧಕ ನಿರ್ಧಾರವನ್ನು ಮಾಡತಕ್ಕದ್ದಲ್ಲ. ಅಲ್ಲದೆ ಇಷ್ಟು ಅವಸರದಿಂದ ಮಾಡಬೇಕಾದ ಕಾರಣವಿಲ್ಲವಾದುದರಿಂದ ಈ ದಿವಸದ ಮೀಟಿಂಗನ್ನು ನಿಲ್ಲಿಸಿ, ಸರ್ಕಾರಿಯಾರ್ಡರನ್ನೂ ಅವರಿಗೂ ಮ್ಯುನಿಸಿಪಲ್ ಪ್ರೆಸಿಡೆಂಟರಿಗೂ ನಡೆದಿರುವ ಕರೆಸ್ಪಾಂಡೆನ್ಸನ್ನೂ ಸರ್ಕಾರದವರನ್ನು ಕೇಳಿ ತರಿಸಿಕೊಂಡು ಮತ್ತೊಂದು ದಿವಸ ಮೀಟಿಂಗನ್ನುಮಾಡಿ ಎಲ್ಲಾ ವಿಷಯಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ಅನಂತರ ಯಾವ ನಿರ್ಧಾರವನ್ನಾದರೂ ಮಾಡಬಹುದಲ್ಲದೆ ಈಗ ದುಡುಕಿ ನಿರ್ಧಾರವನ್ನು ಮಾಡಕೂಡದೆಂದು ಬಹಳ ಯುಕ್ತಿಯುಕ್ತವಾಗಿ ವಾದಿಸಿದರು. ಈ ಉಭಯರೂ ನಿಷೇಧಕ ನಿರ್ಧಾರವನ್ನು ಮಾಡಕೂಡದೆಂದು ಹೇಳುತ್ತಿರುವಾಗ್ಗೆ ಈರೀತಿಯಾಗಿ ಪ್ರತಿಘಟಿಸಿ ಮಾತನಾಡಲವಕಾಶವಿಲ್ಲವೆಂದು ಕೆಲರು ನಿಷೇಧಿಸಿದರು. ಆದರೆ ನೀವು ಪ್ರಕಟಿಸಿರುವ ನೋಟೀಸಿನಲ್ಲಿ ಪ್ರಜೆಗಳಿಗುಂಟಾಗಿರುವ ಅನನುಕೂಲವನ್ನು ಪರ್ಯಾಲೋಚಿಸುವ ನಿಮಿತ್ತ ಎಂದಿರುತ್ತದೆಹೊರತು ರೆಜ್ಯುಲೇಷನ್ ಮಾತ್ರ ಪ್ಯಾಸ್ಮಾಡಬೇಕೆಂದೂ ಅದನ್ನು ಅನುಮೋದಿಸುವವರು ಮಾತ್ರ ಬರಬೇಕೆಂದೂ ಇಲ್ಲವಾದ್ದರಿಂದ ಬೇಕಾದಷ್ಟು ಚರ್ಚಿಸಲವಕಾಶವಿರುತ್ತದೆ. ಎಂದು ಮ|| ವಿರೂಪಾಕ್ಷಯ್ಯನವರು ನೋಟೀಸನ್ನು ಓದಿಹೇಳಿ ವಾದಿಸಿದುದರಮೇಲೆ ಅವರುಗಳು ಮೌನರಾದರು. ಅಡ್ವೋಕೇಟ್ ಮ|| ಎಂ. ಎಸ್. ಕೃಷ್ಣರಾಯರೆದ್ದುಬಂದು, ಲಾರ್ಡ್ ಲಿಟ್ಟನ್ನರವರ ಕಾಲದಲ್ಲಿ ಮ್ಯುನಿಸಿಪಾಲಿಟಿ ಮೊದಲಾದವುಗಳು ಸ್ಥಳೀಯ ಸರ್ಕಾರವಾಗೇರ್ಪಟ್ಟು ಅವುಗಳ ಆಡಳಿತವು ಪ್ರಜೆಗಳಿಗೆ ವಹಿಸಲ್ಪಟ್ಟಿತು. ನಮ್ಮ ಶ್ರೀಮನ್ಮಹಾರಾಜರವರು ಅದೇ ತತ್ವವನ್ನು ಅನುಸರಿಸಿ ನಮ್ಮಗಳಿಗೂ ಸ್ಥಳೀಯ ಸರ್ಕಾರದ ಆಡಳಿತವನ್ನು ಅನುಗ್ರಹಿಸಿರುತ್ತಾರೆ ಈ ಅಧಿಕಾರ ನಿರ್ವಾಹಕ್ಕೆ ಬಹಳ ಯೋಗ್ಯತೆಯು ಬೇಕು. ನಮ್ಮ ಮ್ಯುನಿಸಿಪಲ್ ಕೌನ್ಸಿಲರುಗಳಿಗೆ ಯೋಗ್ಯತೆ ಇಲ್ಲವೆಂದಲ್ಲ. ಅವರುಗಳು ತಮ್ಮ ಕೈಲಾದಮಟ್ಟಿಗೆ ಕೆಲಸಮಾಡಿರುತ್ತಾರೆ. ಆದರೆ ಓಟರ ಲಿಸ್ಟಿನ ಅಕ್ರಮದ ವಿಚಾರವಾಗಿ ಪ್ರೆಸಿಡೆಂಟರಿಗೆ ತಿಳಿಸಿದೆವು ; ಅವರು ಗಮನಕ್ಕೆ ತಂದುಕೊಳ್ಳಲಿಲ್ಲವೆಂದು ಈಗತಾನೆ ಕೆಲರು ಹೇಳಿದರು. ಹಾಗೆ ಪ್ರೆಸಿಡೆಂಟರು ಹೇಳದ್ದಲ್ಲಿ ಅದನ್ನು ರೇಟ್‌ಪೇಯರುಗಳಿಗೆ ಕೌನ್ಸಿಲರುಗಳು ತಿಳಿಸದೆಹೋದುದು ತಪ್ಪು. ಈ ಕಾರಣದಿಂದಲೇ ಇವರ ಉದ್ಯೋಗದವಧಿಯನ್ನು ಸರ್ಕಾರದವರು ಹೆಚ್ಚಿಸಿದುದರಿಂದ ಪ್ರಜೆಗಳಿಗೆ ಅನನುಕೂಲವಾಯಿತೆಂದು ಹೇಳುವುದಾಗಿದೆ. ಸರ್ಕಾರದವರು ಮಾಡಿರುವ ಅನ್ಯಾಯದ ಆರ್ಡರನ್ನು ರದ್ದುಪಡಿಸುವಂತೆ ರೆಜ್ಯುಲೇಷನ್ ಮಾಡಿ ಕಳುಹಿ ಬೇಕಾದುದು ಬಹಳ ಅವಶ್ಯಕವೆಂದು ಹೇಳಿದರು. ತರುವಾಯ ಅಡ್ವೋಕೇಟ್ ಮ|| ಸಿ. ನರಸಿಂಹಯ್ಯನವರು, ಮ|| ಕೃಷ್ಣರಾಯರ ರೆಜ್ಯುಲೇಷನನ್ನು ಖಂಡಿತವಾಗಿಯೂ ಪ್ಯಾಸ್ಮಾಡಲ್ಪಡಬೇಕೆಂದು ಹೇಳುವಾಗ್ಗೆ, ರೆಪ್ರೆಜೆಂಟೇಟಿವ್ ಮೆಂಬರುಗಳನ್ನು ಚುನಾಯಿಸುವಾಗಿದ್ದಷ್ಟು ಓಟರುಗಳ ಸಂಖ್ಯೆಯು ಈಗಿರದೆ ಕಡಿಮೆಮಾಡಲ್ಪಟ್ಟಿರುತ್ತದೆಂದು ಆಕ್ಷೇಪಿಸಲ್ಪಡುತ್ತಿದೆ, ರೆಪ್ರೆಜೆಂಟೇಟಿವ್ ಎಲೆಕ್ಷನ್ ರೂಲ್ಸೇ ಬೇರೆ ಮ್ಯುನಿಸಿಪಲ್ ಎಲೆಕ್ಷನ್ ರೂಲ್ಸೆ ಬೇರೆ ಎಂದು ತಿಳಿಸಲು, ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಮಾತ್ರ ಮ್ಯುನ್ಸಿಪಲ್ ಎಲೆಕ್ಷನ್ನಿಗಾಗಿ ಓಟರುಗಳಿಗಿರಬೇಕಾದ ಅರ್ಹತೆಯೇ ರೆಪ್ರೆಜೆಂಟೇಟಿವ್ ಮೆಂಬರ್ ಎಲೆಕ್ಷನ್ನಿನ ಓಟರುಗಳಿಗೂ ಇರಬೇಕಾಗಿ ವಿಧಾಯಕವಾಗಿರುತ್ತದೆಂಬುದನ್ನು ಮ|| ವಿರೂಪಾಕ್ಷಯ್ಯನವರು ಅವರ ಸ್ಮರಣೆಗೆ ತಂದುಕೊಟ್ಟರು. ಮ|| ಪುರುಷೋತ್ತಮಗೋಸ್ವಾಮಿಯವರೆದ್ದು, ಮ್ಯುನಿಸಿಪಲ್ ಕೌನ್ಸಿಲಿನವರು ಹೇಗೇ ಮಾಡಿರಲಿ, ಸರ್ಕಾರದವರು ಎಲೆಕ್ಷನ್ನು ಕಂಠಗತವಾಗಿರುವ ಸಮಯದಲ್ಲಿ ನಡೆಯದಂತೆ ಆರ್ಡರ್ ಮಾಡಿರುವುದು ಶುದ್ಧತಪ್ಪು, ನ್ಯಾಯಕ್ಕೆ ವಿರುದ್ಧವು ಅದ್ದರಿಂದ ಆ ಆರ್ಡರನ್ನು ರದ್ದುಪಡಿಸುವಂತೆ ರೆಜುಲೇಷನ್ ಪ್ಯಾಸ್ಮಾಡಿ ಕಳುಹಿಸಲೇಬೇಕು ಎಂದು ಹೇಳಿ ಕುಳಿತುಕೊಂಡರು. ತರುವಾಯ ಅಡ್ವೋಕೇಟ್ ಮ|| ಎಂ. ಪಿ. ಭೋಗಯ್ಯನವರು ಬಂದು ಮ್ಯುನಿಸಿಪಲ್ ಕೌನ್ಸಿಲ್ ವಿಚಾರವಾಗಲಿ ಮತಾಂತ್ರ ವಿದ್ಯಮಾನವಾಗಲಿ ನನಗೊಂದೂ ತಿಳಿಯದು. ನಾನು ಈ ಊರಿನಲ್ಲಿ ಹುಟ್ಟಿ ಬೆಳೆದು ವಿದ್ಯಾಭ್ಯಾಸಂಗ ಮಾಡಿ ಈಗ ಕೆಲವರ್ಷಗಳಿಂದ ಇಲ್ಲೇ ಉದ್ಯೋಗ ನಡಿಸಿಕೊಂಡಿರುವುದರಿಂದ ನನ್ನ ಸ್ಥಳದವರ ಸೇವೆಮಾಡಬೇಕೆಂಬ ಇಷ್ಟದಿಂದ ಮ್ಯುನಿಸಿಪಲ್ ಚುನಾವಣೆಗೆ ಒಬ್ಬ ಕ್ಯಾಂಡಿಡೇಟಾಗಿ ನಿಂತುಕೊಂಡು ನನ್ನ ಬಂಧುಗಳು ಆಪ್ತೇಷ್ಟರು ಮೊದಲಾದವರಲ್ಲಿಗೆ ಹೋಗಿ ನನಗೊಂದು ಓಟನ್ನು ಕೊಡಿ ಎಂದು ಕೇಳುವಲ್ಲಿ - ನಾನು 15-20 ರೂ. ಗಳ ಕಂದಾಯವನ್ನು ಕೊಡುತ್ತಿದ್ದರೂ ನನ್ನ ಹೆಸರು ಲಿಸ್ಟಿನಲ್ಲಿ ಇಲ್ಲವೆಂದೂ ನನಗೆ ನೋಟೀಸು ಬಂದಿಲ್ಲವೆಂದೂ ಅನೇಕರು ಹೇಳಿದರು. ಇದನ್ನು ನೋಡಿದರೆ ಲಿಸ್ಟು ಕ್ರಮವಾಗಿ ತಯಾರಿಸಲ್ಪಡದಿದ್ದುದರಿಂದ ಅನೇಕರ ಹೆಸರು ಬಿಟ್ಟುಹೋಗಲು ಕಾರಣವಾಯಿತೆಂದು ಖಂಡಿತವಾಗಿ ಹೇಳುತ್ತೇನಲ್ಲದೆ ಕ್ಯಾಂಡಿಡೇಟರುಗಳಿಗೆ ಅಂತಹ ನಷ್ಟವೇನೂ ಆಗಲಿಲ್ಲ, ಆದರೆ ಕಂದಾಯವನ್ನು ಕೊಡತಕ್ಕವರಿಗೆ ಓಟನ್ನುಕೊಡುವ ಹಕ್ಕನ್ನು ಕಳೆದುಕೊಂಡುದರ ಮೂಲಕ ಬಹಳ ನಷ್ಟವಾಯಿತೆಂದೂ ಖಂಡಿತವಾಗಿ ಹೇಳಬಲ್ಲೆನೆಂದು ಬಹಳ ಸ್ವಾರಸ್ಯವಾಗಿ ಮಾತನಾಡಿದರು. ಆಮೇಲೆ ರಾಮಯ್ಯನವರು ಎದ್ದುಬಂದು ನಾನು 9 ರೂಪಾಯಿಗೆ ಮೇಲ್ಪಟ್ಟು ಮನೆಗಂದಾಯವನ್ನು ಕಟ್ಟುತ್ತೇನಾದರೂ ನನ್ನ ಹೆಸರು ಓಟರ ಲಿಸ್ಟಿನಲ್ಲಿ ಬಿಡಲ್ಪಟ್ಟಿದೆಯೆಂದು ರೆಪ್ರೆಜೆಂಟೇಟಿವ್ ಎಲೆಕ್ಷನ್ ವೇಳೆಯಲ್ಲೂ ಈಗಲೂ ಅನೇಕ ಅರ್ಜಿಗಳನ್ನು ಬರೆದುಕೊಂಡಿದ್ದೆನು. ಆದಾಗ್ಯೂ ಯಾವ ಕಾರಣದಿಂದಲೋ ನನ್ನ ಹೆಸರು ಸೇರಿಸಲ್ಪಟ್ಟಿಲ್ಲ. ನನ್ನಂತೆಯೇ ಕಂದಾಯವನ್ನ ಕಟ್ಟತಕ್ಕ ಅನೇಕರ ಹೆಸರು ಬಿಟ್ಟುಹೋಗಿರುತ್ತಾದಪ್ರಯುಕ್ತ ಹಿಂದಿನ ಲಿಸ್ಟನ್ನು ಸರ್ಕಾರದವರು ರದ್ದುಮಾಡಿ ಹೊಸದಾಗಿ ಲಿಸ್ಟನ್ನು ತಯಾರಿಸುವಂತೆ ಅಪ್ಪಣೆಮಾಡಿರುವುದರಿಂದ ನಾವೆಲ್ಲರೂ ಓಟಿಂಗ್ ಲಿಸ್ಟಿನಲ್ಲಿ ಸೇರಲು ಅವಕಾಶವಾಯಿತು ಎಂದು ಹೇಳಿದರು. ತರುವಾಯ ರೆಜ್ಯುಲೇಷನ್ ಪ್ಯಾಸ್ಮಾಡುವ ವಿಚಾರದಲ್ಲಿ ಓಟನ್ನು ತೆಗೆದುಕೊಳ್ಳುವಲ್ಲಿ ಮ|| ಗಳಾದ ಎಚ್. ಸಿ. ದಾಸಪ್ಪನವರು, ಕೆ. ಧನಕೋಟಿಶೆಟ್ಟರು ಮತ್ತು ವೈ. ವಿರೂಪಾಕ್ಷಯ್ಯನವರು ಮೊದಲಾಗಿ 48 ಜನರು ವಿರುದ್ಧವಾಗಿಯೂ ಉಳಿದ ಬ್ರಾಹ್ಮಣ ಸಭಿಕರು ಅನುಕೂಲವಾಗಿಯೂ ಓಟನ್ನುಕೊಟ್ಟರು. ತರುವಾಯ ಈ ನಿರ್ಧಾರವನ್ನು ಶ್ರೀಮನ್ ಮಹಾರಾಜರವರಿಗೂ ಸರ್ಕಾರದವರಿಗೂ ಅಧ್ಯಕ್ಷರು ತಂತಿಯ ಮೂಲಕ ತಿಳುಹಿಸಿಕೊಡಬೇಕಾಗಿ ನಿರ್ಧರಿಸಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಅಲ್ಲಿಗೆ 8½ ಗಂಟೆಯು ಮೇಲಾಗಿದ್ದಿತು.

ಸರ್ಕಾರದ ಪಬ್ಲಿಸಿಟಿ ಆಫೀಸರವರ ಆಫೀಸು.
ತಾರೀಖು, ಬೆಂಗಳೂರು, 20 ನೇ ಆಗಸ್ಟು 1924.
ನಂಬರು 59/ಪಿ. ಓ.

ಪ್ರಸಿದ್ಧಪತ್ರಿಕೆ.

1924 ನೇ ಇಸವಿ ಮೇ ತಿಂಗಳು 19 ನೇ ತಾರೀಖಿನ ಸಂಪದಭ್ಯುದಯ ಪತ್ರಿಕೆಯಲ್ಲಿ "ಪರ್ಸೆಕ್ಯೂಷನ್ ಆಫ್ ಬ್ರಾಹ್ಮಿನ್ಸ್" ಎಂದರೆ "ಬ್ರಾಹ್ಮಣರಿಗೆ ಹಿಂಸೆ" ಎಂಬ ಅಭಿಧಾನದಿಂದ ಬರೆದಿದ್ದ ಒಂದು ಲೇಖನದಲ್ಲಿ ಮೊದಲನೆಯ ಕೌನ್ಸಿಲರವರು ಕಡೂರು, ಹಾಸನ ಈ ಎರಡು ಡಿಸ್ಟ್ರಿಕ್ಟುಗಳಲ್ಲಿ ಎರಡುವಾರ ಸಂಚಾರಾರ್ಥವಾಗಿ ಹೋಗಿದ್ದುದರ ಫಲಿತಾಂಶವಾಗಿ ಆರುಮಂದಿ ಕ್ಲಾರ್ಕುಗಳು ಅವರು ಬ್ರಾಹ್ಮಣರಾಗಿದ್ದರೆಂಬ ಕಾರಣದಿಂದ ಕೆಲಸದಿಂದ ವಜಾಮಾಡಲ್ಪಟ್ಟರೆಂಬುದಾಗಿ ಪ್ರಕಟಿಸಿದ್ದಿತು.

ಈ ಹೇಳಿಕೆಯು ಸುತರಾಂ ಸುಳ್ಳಾಗಿರುತ್ತದೆ. 1922 ನೇ ಇಸವಿ ಡಿಸೆಂಬರು ತಿಂಗಳು 31 ನೇ ತಾರೀಖಿನಿಂದ 1924 ನೇ ಇಸವಿ ಮಾರ್ಚಿ ತಿಂಗಳು 24 ನೇ ತಾರೀಖಿನವರೆಗೆ ಹಾಸನ ಡಿಸ್ಟ್ರಿಕ್ಟಿನ ಡೆಪ್ಯೂಟಿಕಮೀಷನರವರು ಬ್ರಾಹ್ಮಣವರ್ಗದ 22 ಮಂದಿ ಉಮೇದುವಾರರಿಗೆ ಕೆಲಸಗಳನ್ನು ಕೊಟ್ಟಿದ್ದರು ; ಇವುಗಳಲ್ಲಿ (1924 ನೇ ಇಸವಿ ಏಪ್ರಿಲ್ ತಿಂಗಳು 17 ನೇ ತಾರೀಖಿನಿಂದ 23 ನೇ ತಾರೀಖಿನವರೆಗೆ) 5 ಮಂದಿಗಳೂ ಮಾತ್ರ ಕೆಲಸದಿಂದ ವಜಾಮಾಡಲ್ಪಟ್ಟರು ; ಹೀಗೆ ಮಾಡಿದುದಕ್ಕೆ "ರಿಕ್ರೂಟ್‌ಮೆಂಟ್ ರೂಲ್ಸಿಗೆ" ಎಂದರೆ, ಉಮೇದುವಾರರನ್ನು ಕೆಲಸಕ್ಕೆ ನೇಮಿಸುವ ನಿಯಮಗಳಿಗೆ ವಿರೋಧವಾಗಿ ಈ 5 ಕೆಲಸಗಳೂ ಕೊಡಲ್ಪಟ್ಟಿದ್ದುದು ಮಾತ್ರವೇ ಕಾರಣವಾಗಿರುತ್ತದೆ. ಮೊದಲನೆಯ ಕೌನ್ಸಿಲರವರು ಆ ತಿಂಗಳ ಅಂತ್ಯಭಾಗದಲ್ಲಿ ಸಂಚಾರಾರ್ಥವಾಗಿ ದಯಮಾಡಿಸಿದ್ದರು. ಆಕಾಲದಲ್ಲಿ ಅವರ ಸಂಚಾರದ ಫಲಿತಾಂಶವಾಗಿ ಮೇಲ್ಕಂಡ ಎರಡು ಡಿಸ್ಟ್ರಿಕ್ಟುಗಳಲ್ಲಿ ಯಾವುದರಲ್ಲಿಯೂ, ಯಾರೊಬ್ಬರನ್ನೂ, ಕೆಲಸದಿಂದ ತೆಗೆದಿರುವುದಿಲ್ಲ.

ಆರ್. ರಂಗರಾವ್,
ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರು.

ಪ್ರಕಟಣೆ.

ಮೈಸೂರು ಡಿವಿಜನ್ ಕೋ ಆಪರೇಟಿವ್ ಸೊಸೈಟಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರವರ ಆಫೀಸಿನಿಂದ—

ಮೈಸೂರು ಡಿವಿಜನ್ನಲ್ಲಿರುವ ಎಲ್ಲಾ ಕೋ ಆಪರೇಟಿವ್ ಸೊಸೈಟಿಗಳ ಸೆಕ್ರೆಟರಿಯವರಿಗೆ—ಈ ವರ್ಷದ ಅತಿವೃಷ್ಟಿಯಿಂದ ಮೈಸೂರು ದೇಶದ ನದಿಗಳಲ್ಲಿ ಪ್ರವಾಹ ಹೆಚ್ಚಿ ನದೀತೀರದಲ್ಲಿರುವ ಊರುಗಳ ಮೇಲೆ ಹರಿದಿದ್ದರಿಂದ ಪ್ರಜೆಗಳು ಬಹಳವಾಗಿ ಕಷ್ಟನಷ್ಟಗಳನ್ನು ಅನುಭವಿಸುತ್ತಿರುವುದು ನಿಮಗೆ ತಿಳಿದೇ ಇರಬಹುದು. ಇಂಥಾ ಕಷ್ಟನಷ್ಟಗಳನ್ನು ಅನುಭವಿಸುತ್ತಿರುವ ಪ್ರಜೆಗಳಿಗಾಗಿ ಅನುತಾಪಪಟ್ಟು ಅವರ ಕಷ್ಟಪರಿಹಾರಕಾಗಿ ಒಂದು ರಿಲೀಫ್ ಫಂಡು ಏರ್ಪಾಡಾಗಿರುತ್ತೆ. ಈ ಫಂಡಿಗೆ ಹರಿಹರದ ಕೋ ಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳು ಧರ್ಮಬುದ್ಧಿಯಿಂದ ಕಳೆದ ವರ್ಷದ ವಿಶಿಷ್ಟ ನಿವ್ವಳ ಸಭೆಯನ್ನು ಅಂದರೆ 5,451 ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನಿಸಿರುತ್ತಾರೆಂದು ತಿಳಿಸಲು ಬಹಳ ಸಂತೋಷಿಸುತ್ತೇವೆ.

ಹರಿಹರದ ಸೊಸೈಟಿಯು ಶ್ಲಾಘನೀಯವಾದ ಮೇಲ್ಪಂಕ್ತಿಯನ್ನು ಅನುಸರಿಸಿ ನಿಮ್ಮ ಸಂಘದ ಜನರಲ್ ಮೀಟಿಂಗ್ ನಡೆಯುವ ವೇಳೆಯಲ್ಲಿ ಮೆಂಬರುಗಳೆಲ್ಲಾ ಏಕೀಭವಿಸಿ ಉದಾರಮನಸ್ಸಿನಿಂದ ಸಂಘದ ನಿವ್ವಳ ಸಭೆ ಪೈಕಿ ಹೆಚ್ಚು ಮೊಬಲಗನ್ನು ರಿಲೀಫ್ ಫಂಡಿಗಾಗಿ ಓಟ್ ಮಾಡಿಕೊಡುವುದರ ಮೂಲಕ ಪರಸ್ಪರ ಸಹಾಯಸಂಘಗಳ ತತ್ವವಾದ ಪ್ರಜೋಪಕಾರಬುದ್ಧಿಯನ್ನು ಪ್ರಕಾಶಪಡಿಸುವರೆಂದು ನಂಬಿದೆ. ಜನರಲ್ ಮೀಟಿಂಗಿನಲ್ಲಿ ಓಟ್ ಮಾಡುವ ಮೊಬಲಗನ್ನು ಈ ಆಫೀಸಿಗೆ ಕಳುಹಿಸಿಕೊಟ್ಟರೆ ಸೆಂಟ್ರಲ್ ರಿಲೀಫ್ ಕಮಿಟಿಗೆ ತಲುಪಿಸಿ ನೀವು ಮಾಡಿರುವ ದ್ರವ್ಯಸಹಾಯವು ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತ್ತೆ.

ಕೆ. ಸುಬ್ಬರಾವ್,
ಕೋ-ಆಪರೇಟಿವ್ ಸೊಸೈಟಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್.

ಮೈಸೂರುಸೀಮೆಯ ಸೆಂಟ್ರಲ್ ಫ್ಲಡ್ ರಿಲೀಫ್ ಕಮಿಟಿ, ಬೆಂಗಳೂರು.

1924 ನೆ ಆಗಸ್ಟ 16 ಕ್ಕೆ ಕಡೆಯಾದ ವಾರದಲ್ಲಿ ಬಂದ ಚಂದಾ ಹಣ.

1.	ಮೊದಲನೇ ರಾಜಕುಮಾರಿಯವರು (ಮ|| ಬಾಳರಾಜೇ ಅರಸಿನವರ ಮೂಲಕ)	1000-0-0
2.	ಮಿ|| ಇ. ಪಿ. ಮೆಟ್‌ಕಾಫ್, ಪ್ರಿನ್ಸ್‌ಪಾಲ್, ಸೆಂಟ್ರಲ್‌ಕಾಲೇಜು, ಬೆಂಗಳೂರು	600-0-0
3.	ಬೆಂಗಳೂರು ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್	500-0-0
4.	ಮೈಸೂರು ಗೌನರ್ಮೆಂಟ್ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರಿಯೇಜ್ ಅಷ್ಯುರೆನ್ಸ್ ಕಂಪನಿಯ ಡೈರೆಕ್ಟರುಗಳು	500-0-0
5.	ಸರ್ ಹಾಜಿ ಇಸ್ಮಾಯಿಲ್ ಸೇಟ್‌ರವರು	250-0-0
6.	ಮ|| ಬಿ. ಕೆ. ಗರುಡಾಚಾರ್‌ರವರು	250-0-0
7.	ಮ|| ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು	200-0-0
8.	ಕೌನ್ಸಿಲರ್ ಮ|| ಕೆ. ಆರ್. ಶ್ರೀನಿವಾಸ ಅಯ್ಯಂಗಾರ್‌ಯವರು	200-0-0
9.	ಮ|| ಎಂ. ಎನ್. ಬಾಳರಾಜೆಅರಸ್, ಬಿ.ಎ., ಯವರು	200-0-0
10.	ಜಸ್ಟಿಸ್ ಮ|| ಬಿ. ಸುಬ್ಬಣ್ಣನವರು	150-0-0
11.	ಮ|| ಎನ್. ವಿ. ನರಸಿಂಹಅಯ್ಯಂಗಾರ್, ಬಿ. ಎ., ಬಿ. ಎಲ್., ಅಡ್ವೋಕೇಟರು	100-0-0
12.	ಬೆಂಗಳೂರು ಸೆಂಟ್ರಲ್ ಬಿಲ್ಡಿಂಗ್ ಕೋ-ಆಪರೇಟಿವ್ ಬ್ಯಾಂಕ್	100-0-0
13.	ಮ|| ರಾವ್‌ಬಹದ್ದೂರ್ ಎಂ. ಶಾಮರಾವ್, ಎಂ. ಎ., ಯವರು	100-0-0
14.	ಮ|| ಎಂ. ಜಿ. ಕೃಷ್ಣಸ್ವಾಮಿರಾಯರು	100-0-0
15.	ಮ|| ಬಿ. ವಿ. ರಾಮಯ್ಯಂಗಾರ್, ಫಾರೆಸ್ಟು ಕನ್ಸರ್‌ವೇಟರ್	50-0-0
16.	ಶ್ರೀಮತಿ ಎ. ಸಿಂಗಮ್ಮನವರು (ಶ್ರೀನಿವಾಸಮಂದಿರ)	25-0-0
17.	ಒಬ್ಬರು ದಯಾಶಾಲಿಗಳು	1-0-0
18.	ಮ|| ಜಿ. ಪರಮಶಿವಯ್ಯನವರು, ಬಿ.ಎ.,ಎಲ್.ಎಲ್.ಬಿ., ಅಡ್ವೊಕೇಟ್	25-0-0
19.	ಮೈಸೂರು ಲಿಂಗಾಯತ್ ಎಜುಕೇಷನ್ ಸೊಸೈಟಿಯವರು	100-0-0
20.	ಕೆ. ಜಿ. ಎಫ್. ಮೈನಿಂಗ್ ಬೋರ್ಡಿನವರು	1,500-0-0
21.	ಶ್ಯಾನುಭೋಗರ ಕಾನ್ಫರೆನ್ಸಿನವರು	25-4-0
22.	ಜಸ್ಟಿಸ್ ಆರ್. ಬಿ. ಪ್ಲಮರ್‌ರವರು	50-0-0
23.	ಮ|| ಬಿ. ವೆಂಕೋಬರಾಯರು ಡೆ|| ಕಮಿಷನರ್	100-0-0
24.	ಅಮಿನ್-ಉಲ್-ಮುಲ್ಕ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್, ಬಿ.ಎ., ಓ. ಬಿ. ಇ. ಯವರು	200-0-0
25.	ಮೈಸೂರು ಬ್ಯಾಂಕ್	2,000-0-0
26.	ಪಿ. ಡಬ್ಲ್ಯು. ಒಬ್ರೀನ್, ಮ್ಯಾನೇಜರ್, ಮೈಸೂರು ಬ್ಯಾಂಕು.	100-0-0
	ಜುಮ್ಲಾ	8,426-4-0

ಬಿ. ಕೆ. ಗರುಡಾಚಾರ್ ಸೆಕ್ರೆಟರಿ.
ಮೈಸೂರು ದೇಶದ ಸೆಂಟ್ರಲ್‌ಫ್ಲಡ್,
ರಿಲೀಫ್ ಕಮಿಟಿ, ಬೆಂಗಳೂರು.

ಡಿಸ್ಟ್ರಿಕ್ಟ್ ಫ್ಲಡ್‌ರಿಲೀಫ್ ಕಮಿಟಿ, ಹಾಸನ.

ತಾ|| 19-8-24ರ ವರೆಗೆ ಚಂದಾಹಣ ಬಂದಿರುವುದರ ವಿವರ.—

1.	ಉಬ್ಬಾನ್ ಮತ್ತು ದೈತಾಪುರ ಎಸ್ಟೇಟುಗಳ ಮಿ|| ಬ್ರೂಕ್ ಮಾಕೆಟ್ಟರವರಿಂದ ಮಿ|| ಇ. ಡಬ್ಲ್ಯು. ರೂಥರ್ ಫರ್ಡ್‌ರವರ ಮೂಲಕ	150-0-0
2.	ಹಾಸನ ಡಿ|| ಮೆಡಿಕಲ್ ಆಫೀಸರಾದ ಡಾಕ್ಟರ್ ಬಾಲಕೃಷ್ಣರವರಿಂದ	40-0-0
3.	ಹಾಸನದ ಎಕ್ಸಿಕ್ಯುಟಿವ್ ಇಂಜನೀರ್ ಮ|| ಜಿ. ಕೃಷ್ಣಯ್ಯಂಗಾರರಿಂದ	52-8-0
4.	ಹಾಸನದ ಡಿ|| ಪೊಲೀಸ್ ಸೂಪರಿಂಟೆಂಡೆಂಟ್ ಮ|| ಜಿ. ಶಾಂತವೀರಪ್ಪ, ಬಿ. ಎ., ಯವರಿಂದ	25-0-0
5.	ಮ|| ಎಂ. ಜಿ. ಲಕ್ಷ್ಮೀನರಸಿಂಹಯ್ಯಂಗಾರ್, ಬಿ. ಎ., ಬಿ. ಎಲ್. ರವರಿಂದ	20-0-0

ಎಚ್. ವಿ. ರಾಮಸ್ವಾಮಿ,
ಜಾಯಿಂಟ್ ಸೆಕ್ರೆಟರಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂ.

ದಾವಣಗೆರೆಯಲ್ಲಿ ನಡೆಯುವ ಗೋರಕ್ಷಣೆಯು.

ಮೈಸೂರು ಸಂಸ್ಥಾನದಲ್ಲಿ ದನಗಳ ಮುಖ್ಯ ಸಂತೆ ನಡೆಯುವ ಊರುಗಳಲ್ಲಿ ದಾವಣಗೆರೆಯೂ ಒಂದಾಗಿದೆಯಷ್ಟೆ. ಈ ಊರಿನಲ್ಲಿ ಪ್ರತಿವಾರವೂ 300 ರ ವರೆಗೂ ದನಗಳು ಸೇರಿ ನೂರಾರು ಗೋವುಗಳು ಕಟುಗರಪಾಲಾಗುತ್ತಿದ್ದವು. ಹೀಗೆ ಪ್ರತಿವಾರವೂ ತಪ್ಪದೆ ನೂರಾರು ದನಗಳು ಕಟುಗರ ಪಾಲಾಗುತ್ತಿದ್ದುದನ್ನು ಕಂಡು ಕೆಲವು ದಯಾಳು ಮಹಾಶಯರು ಸೇರಿ ಹೇಗಾದರೂಮಾಡಿ ಗೋವುಗಳು ಕಟುಗರಪಾಲಾಗದಂತೆ ಮಾಡಬೇಕೆಂದು ಯೋಚಿಸಿ "ಪ್ರಾಣಿದಯಾಪ್ರಸಾರಕಮಂಡಲಿ" ಎಂಬ ಹೆಸರಿನಿಂದ ಒಂದು ಸಂಘವನ್ನು ತೆಗೆದು ಇರುವುದಲ್ಲದೆ ಪ್ರಕಟನಾಮೂಲಕವಾಗಿಯೂ, ಭೋಧನಾಮೂಲಕವಾಗಿಯೂ, ಅಲ್ಲಿ ಜನರಿಗೆ ತಿಳಿಯಹೇಳುತ್ತಾ ಕಟುಗರಿಗೆ ದನಗಳನ್ನು ವಿಕ್ರಯಿಸದಂತೆಮಾಡಿದೆ. ಅಲ್ಲದೆ ಪ್ರತಿವಾರವೂ [illegible]

ಪೇಟೆಗೆಹೋಗಿ ಗೋಮಾತೆಯಿಂದಾಗುವ ಪ್ರಯೋಜನಗಳನ್ನೂ, ಕೇವಲ ನಾಲ್ಕಾರು ರೂಪಾಯಿಗಳ ಆಶೆಗಾಗಿ ಅವುಗಳನ್ನು ಕಟುಗರಪಾಲು ಮಾಡುವುದರಿಂದಾಗುವ ಅನರ್ಥಗಳನ್ನೂ, ವಿವರವಾಗಿ ತಿಳಿಯಿಸಿ ಆ ದನಗಳನ್ನು ಮಾರದಂತೆ ವಾಪಾಸುಕಳುಹಿಸುತ್ತಾ ಬಂದುದರಿಂದ 300 ರ ವರೆಗೂ ಸೇರುತಿದ್ದ ಈ ಸಂತೆಯಲ್ಲಿ ಈಗ ಎಂಟು ಸೇರುವುದು ದುರ್ಲಭವಾಗಿದೆ. ಸೇರಿದ ಕೆಲವು ಪ್ರಾಣಿಗಳನ್ನಾದರೂ ಕಟುಗರಿಗೆ ಮಾರದಂತೆ ಪುನಃಪುನಃ ಮಾಲೀಕರಿಗೆ ವಿಜ್ಞಾಪಿಸಿಕೊಳ್ಳುವುದಲ್ಲದೆ ಕಟುಗರಿಗೆ ಒಂದು ರಾಸು ಸಹಾ ಸೇರದಂತೆಮಾಡಿದುದರಿಂದ ಈಗಾಗಲೇ ಕೆಲವು ಜನ ಕಟುಗರು ದಾವಣಗೆರೆಯ ದನಗಳ ಸಂತೆಗೆ ಬರುವುದನ್ನೇ ಬಿಟ್ಟುಬಿಟ್ಟರು. ಆದುದರಿಂದ ಪ್ರತಿಯೊಂದು ಗ್ರಾಮದ ಮಹಾಶಯರಿಗೂ ಮುಖ್ಯವಾಗಿ ಬ್ಯಾಡಗಿಗ್ರಾಮದ ಮಹಾಶಯರಿಗೂ ವಿಜ್ಞಾಪಿಸಿಕೊಳ್ಳುವುದೇನಂದರೆ :—ತಾವುಗಳೂ ಸಹ ತಮ್ಮ ತಮ್ಮ ಊರುಗಳಲ್ಲಿ ಮೇಲ್ಕಂಡಂತೆ ಆಚರಿಸಿ ಗೋವುಗಳು ಕಟುಗರಪಾಲಾಗದಂತೆ ಮಾಡಬೇಕಲ್ಲದೆ ಪ್ರತಿಯೊಂದು ಗ್ರಾಮದ ಪಟೇಲ್ ಮತ್ತು ಶಾನುಭೋಗ ಮಹಾಶಯರುಗಳೂ ಸಹ ತಮ್ಮ ಗ್ರಾಮದ ಜನಗಳಿಗೆ ಚೆನ್ನಾಗಿ ತಿಳಿಯಹೇಳಿ ಯಾರೂ ಕಟುಗರಿಗೆ ದನಗಳನ್ನು ವಿಕ್ರಯಿಸದಂತೆ ಕಟ್ಟುಮಾಡುವುದರಮೂಲಕ ಗೋಮಾತೆಯನ್ನು ರಕ್ಷಿಸಿದ ಪುಣ್ಯಕ್ಕೆ ಭಾಜನರಾಗಬೇಕಾಗಿ ಕೋರುವ,

ಆನೆಕೊಂಡದ ಮುಪ್ಪಣ್ಣ, ಗೋಸೇವಕ.

N. B.—ಗೋಸಂರಕ್ಷಣೆಯನ್ನು ಮಾಡಬೇಕೆಂದು ಅಪೇಕ್ಷಿಸುವವರು ಸಂಘದಿಂದ ಉಚಿತವಾಗಿ ದೊರೆಯುವ ಪ್ರಕಟನಪತ್ರಿಕೆ, ಪುಸ್ತಕ ವಗೈರೆಗಳನ್ನು ಅಪೇಕ್ಷಿಸಿದರೆ ಕಳುಹಿಸಲಾಗುತ್ತೆ.

ಅನುಕರಣೀಯವಾದ ಸಮಾಜಾಭಿವೃದ್ಧಿಕಾರ್ಯ.

ಚಿತ್ರದುರ್ಗ ಡಿ|| ಹೊಳಲಕೆರೆ ತಾ|| ಚನ್ನಪಟ್ಟಣದಲ್ಲಿ ಕಾಶ್ಮೆಹಳ್ಳಿ ಮಠದ ಗುರುಶಾಂತಪ್ಪಯ್ಯನವರು ಬಡವರಿಗೆ ಆಶ್ರಯದಾತರಾಗಿಯೂ, ಪರೋಪಕಾರಿಗಳಾಗಿಯೂ, ಶ್ರೀಮಂತರಾಗಿಯೂ ಇದ್ದರು. ಹೊಳಲಕೆರೆಯಲ್ಲಿ ಎ. ವಿ. ಸ್ಕೂಲ್ ಇದ್ದು ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಯವರೆಗೆ ವ್ಯಾಸಂಗವು ನಡೆಯುತ್ತಾ ಇದೆ. ಪರಸ್ಥಳಗಳಿಂದ ಬಂದು ಇಂಗ್ಲೀಷ್ ವಿದ್ಯಾಭ್ಯಾಸಮಾಡತಕ್ಕ ಬಡವರಾದ ವೀರಶೈವ ವಿದ್ಯಾರ್ಥಿಗಳಿಗೆ ಸಹಾಯಸೌಕರ್ಯವಿಲ್ಲದೆ ವ್ಯಾಸಂಗವನ್ನೇ ಬಿಡುವ ಪ್ರಸಂಗವು ಸಂಭವಿಸಬಹುದಾಗಿದ್ದುದರಿಂದ ಸಮಾಜದೇಳಿಗೆಯಲ್ಲಿ ಆಸಕ್ತರಾಗಿದ್ದ ಮೇಲೆ ಕಂಡ ಮಹನೀಯರು ಇದರ ನಿವಾರಣೆಗೋಸ್ಕರ ತಾವು ಶಿವಾಧೀನವಾಗುವದಕ್ಕೆ ಮುಂಚಿತವಾಗಿಯೇ ತಮ್ಮ ಸ್ವಯಾರ್ಜಿತದಲ್ಲಿ ಇಪ್ಪತ್ತು ಸಾವಿರ ರೂಪಾಯಿಗಳನ್ನು ಮೂಲಧನವಾಗಿಟ್ಟು ಇದರ ಬಡ್ಡಿಯಿಂದ ಹೊಳಲಕೆರೆ ತಾ|| ನ ಅನಾಥ ವೀರಶೈವ ವಿದ್ಯಾರ್ಥಿಗಳಿಗೆ ಸಾರೋದ್ಧಾರವಾಗಿ ಸಹಾಯವನ್ನು ಮಾಡಲು 6 ಜನ ಟ್ರಸ್ಟಿಗಳನ್ನು ನೇಮಿಸಿ ವಿಲ್‌ಮಾಡಿ ತಮ್ಮ ಕೀರ್ತಿಶರೀರವನ್ನು ಶಾಶ್ವತಗೊಳಿಸಿದರು. ಈ ಧರ್ಮಾತ್ಮರ ಸಂಕಲ್ಪವನ್ನು ಕ್ಷಿಪ್ರದಲ್ಲಿ ನೆರವೇರಿಸಿ ಸಮಾಜದಲ್ಲಿ ವಿದ್ಯಾಪ್ರೋತ್ಸಾಹವನ್ನುಂಟುಮಾಡಲು ಇವರ ಮಕ್ಕಳುಗಳು ವೇ|| ಮುರಿಗಪ್ಪಯ್ಯನವರೂ, ಸದಾಶಿವಯ್ಯನವರೂ ಶ್ರೀಮನ್ನಿಹಾರಾಜನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಂಡು ಶ್ರೀ|| ಗಳವರ ಅಪ್ಪಣೆಯಪ್ರಕಾರ ಈ ಧರ್ಮಕಾರ್ಯವು ಶಾಶ್ವತವಾಗಿಯೂ, ನಿರ್ವಿಘ್ನವಾಗಿಯೂ ನಡೆಯುವುದಕ್ಕೋಸ್ಕರ ಗುರುಶಾಂತಪ್ಪಯ್ಯನವರ ಅನಾಥ ವೀರಶೈವ ವಿದ್ಯಾರ್ಥಿಗಳ ಸಹಾಯಕ ಫಂಡಿನ ಸಂಘವೆಂಬ ಹೆಸರಿನಿಂದ ಒಂದು ಕಮಿಟಿಯನ್ನು ಸ್ಥಾಪಿಸಿ ಇದಕ್ಕೆ ತಾವೇ ಅಧ್ಯಕ್ಷರಾಗಿರುತ್ತಾರೆ. ಶ್ಲಾಘನೀಯವಾದ ಈ ಧರ್ಮಕಾರ್ಯವನ್ನು ಈ ಮಾಹೆ ತಾ|| 28 ರಿಂದ ಪ್ರಾರಂಭಿಸಲು ನಿರ್ಧರಿಸಿರುತ್ತಾರೆ. ತಮ್ಮ ತಂದೆಗಳ ಸಂಕಲ್ಪವನ್ನು ನೆರವೇರಿಸುವುದಕ್ಕೋಸ್ಕರ ಪ್ರಯತ್ನಪೂರ್ವಕವಾಗಿ ನಡಸುತ್ತಿರುವ. ಈ ಸಹೋದರರ ಸದ್ವರ್ತನವು ಸಕಲರಿಗೂ ಆದರ್ಶವಾಗಿರುವುದಲ್ಲದೆ ಇದು ಇವರ ಪಿತೃವಾಕ್ಯ ಪರಿಪಾಲನೆಯನ್ನೂ, ಔದಾರ್ಯವನ್ನೂ, ಧರ್ಮಬುದ್ಧಿಯನ್ನೂ, ಸಮಾಜದೇಳಿಗೆಯಲ್ಲಿ ಇವರಿಗಿರುವ ಆಸಕ್ತಿಯನ್ನೂ ವ್ಯಕ್ತಪಡಿಸುತ್ತದೆ. ವೀರಶೈವ ಮಠದ ಶ್ರೀಮಂತರುಗಳು ಮೇಲೆ ಕಂಡ ಮಹನೀಯರ ಉದಾಹರಣೆಯನ್ನು ಅನುಕರಿಸಿದರೆ ವಿದ್ಯೆಯಲ್ಲಿ ಹಿಂದುಳಿದಿರುವ ಈ ನಮ್ಮ ಸಮಾಜವು ಶೀಘ್ರದಲ್ಲಿಯೇ ಏಳಿಗೆಗೆ ಬರುವದರಲ್ಲಿ ಸಂದೇಹವಿಲ್ಲ. ಸಮಾಜಾಭ್ಯುದಯ ಕಾರ್ಯತತ್ಪರರಾದ ಇವರಿಗೆ ಶ್ರೀ ಪರಮೇಶ್ವರನು ಇತೋಪ್ಯತಿಶಯವಾದ ಆಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ,

ಸಂಘದ ಸೆಕ್ರೆಟರಿ.

ವೀರಶೈವಪರಿಷತ್ತು.

ಧಾರವಾಡ ಹಾವೇರಿಪೇಟೆಯ ಮುರಘಾಮಠದಲ್ಲಿ ಇದೇ ಶ್ರಾವಣವದ್ಯ ತ್ರಯೋದಶಿ ತಾ|| ೨೮-೮-೧೯೨೪ ನೇ ದಿನ ಏಕಾದಶ ರುದ್ರಪೂಜಾ ಕಾರ್ಯನಡಿಸಲು ಇಲ್ಲಿಯ ಭಕ್ತಮಾಹೇಶ್ವರರಿಂದ ನಿಶ್ಚಯಿಸಲ್ಪಟ್ಟಿದೆ ಈ ಸುಸಂಧಿಯಲ್ಲಿ ವೀರಶೈವ ಪರಿಷತ್ತನ್ನು ಕೂಡಿಸಿ ಸಮಾಜದ ಪ್ರಮುಖರನ್ನು ಬರಮಾಡಿಕೊಂಡು ವೀರಶೈವ ಸಮಾಜದ ಪ್ರಗತಿಗೆ ಪ್ರತಿಬಂಧಕವಾಗುತ್ತಿರುವ ಅನೈಕ್ಯವನ್ನು ಹೋಗಲಾಡಿಸಿ ಧಾರ್ಮಿಕ ಮತ್ತೂ ವಿದ್ಯಾವಿಷಯಕ ಉನ್ನತಿಯಬಗ್ಗೆ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಳ್ಳುವಂತೆ ಮಾಡುವದು ಸದ್ಯಃಕಾಲದಲ್ಲಿ ಅತ್ಯವಶ್ಯವಾಗಿರುವದೆಂದು ಕಂಡುಬಂದುದರಿಂದ ತಾ|| ೧೩-೮-೧೯೨೪ ನೇ ಬುಧವಾರ ವೇ. ಮೂ. ರೇವಣಶಿದ್ಧಪ್ಪನವರು ಕಿತ್ತೂರ ರಿಟಾಯರ್ಡ ಡಿ. ಡಿ. ಕಲೆಕ್ಟರ ಇವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಪ್ರಮುಖರ ಪೂರ್ವಾಲೋಚನಾ ಕಮಿಟಿ ಕೂಡಿ ತಾ|| ೨೮-೨೯ ನೇ ಆಗಸ್ಟ ಸ್ ೧೯೨೪ ನೇ ದಿನಗಳಲ್ಲಿ ಲಿಂಗಾಯತಶಾಲಿನಲ್ಲಿ ವೀರಶೈವ ಪರಿಷತ್ತನ್ನು ನೆರಿಯಿಸಬೇಕೆಂದು ನಿರ್ಧರಿಸಿ ವಿಷಯ, ಕಾರ್ಯಕ್ರಮ, ಕಾರ್ಯಕಾರಿ ಮಂಡಳಿಗಳು ಗೊತ್ತುಮಾಡಲ್ಪಟ್ಟವು.

ಕಾರ್ಯಕ್ರಮಗಳು.

(೨೮-೮-೧೯೨೪)

(೧) ಪ್ರಾತಃಕಾಲದ ೫ ಘಂಟೆಯಿಂದ ೯ ರವರೆಗೆ ಏಕಾದಶರುದ್ರಪೂಜಾ.
(೨) ೯ ಘಂಟೆಯಿಂದ ೧ ಘಂಟೆಯವರೆಗೆ ಮಹಾಗಣಾರಾಧನೆ.
(೩) ಮಧ್ಯಾಹ್ನದ ೩ ಘಂಟೆಯಿಂದ ೬ ರವರೆಗೆ ಪರಿಷತ್ತಿನ ಕಾರ್ಯ.
(೪) ೬ ರಿಂದ ೭ ರವರೆಗೆ ಶ್ರೀಬಸವೇಶ್ವರ ವಚನಶಾಸ್ತ್ರದ ಮೇಲೆಪ್ರವಚನ.
(೫) ೭ ರಿಂದ ೯ ರವರೆಗೆ ಶಿವಕೀರ್ತನ.
(೬) ೯ ರಿಂದ ಶ್ರೀ ಶಿವಯೋಗೀಶ್ವರರ ಮಹೋತ್ಸವ.

ತಾ|| ೨೯—೮—೧೯೨೪.

(೧) ಪ್ರಾತಃಕಾಲದ ೮ ರಿಂದ ೧೦ ರ ವರೆಗೆ ಪರಿಷತ್ತಿನ ಕಾರ್ಯ.
(೨) ೧೨ ರಿಂದ ೨ ರವರೆಗೆ ಸಮಷ್ಟಿ.
(೩) ೩ ರಿಂದ ಪರಿಷತ್ತಿನಲ್ಲಿ ಆಲೋಚಿಸಲ್ಪಟ್ಟ ವಿಷಯಗಳ ಚರ್ಚೆ.

ವಿಷಯಗಳು.

(೧) [illegible] ವೀರಶೈವ ಸಮಾಜದಲ್ಲಿ ಕಂಡುಬರುವ ಧಾರ್ಮಿಕ ಅವನತಿ [illegible]
(೨) ವೀರಶೈವ ಧಾರ್ಮಿಕ ವಾಙ್ಮಯ ಪ್ರಸಾರ.
(೩) ಸದ್ಯಕ್ಕೆ ವೀರಶೈವ ಸಮಾಜದಲ್ಲಿ ಕಂಡುಬರುವ ಅನೈಕ್ಯತೆಯ ಕಾರಣಗಳು ಹಾಗೂ ಅವುಗಳ ನಿವಾರಣೋಪಾಯಗಳು.

ಪ್ರಸಿದ್ಧ ಶಿವಕೀರ್ತನಕಾರರೂ ಉಪನ್ಯಾಸಕರೂ ಬರುವರು. ಪರಿಷತ್ತು ಕೈಕೊಂಡಿರುವ ಕಾರ್ಯವು ಅತ್ಯಂತ ಮಹತ್ವದ್ದೂ ಸದ್ಯಃಕಾಲದಲ್ಲಿ ಅತ್ಯವಶ್ಯವಾದದ್ದೂ ಇರುವದರಿಂದ ಯಾವತ್ತೂ ಸಮಾಜಾಭಿಮಾನಿಗಳು ದಯವಿಟ್ಟು ಆಗಮಿಸಿ ಪರಿಷತ್ತಿನ ಕಾರ್ಯಗಳು ಫಲಕಾರಿಯಾಗುವಂತೆ ಮಾಡುವಿರೆಂದು ಆಶಿಸುತ್ತೇವೆ.

ಮಹಾಜನಗಳು ತಾವು ಆಗಮಿಸುವ ವೇಳೆಯನ್ನು ಮುಂಚಿತವಾಗಿ ಸತ್ಕಾರಕ ಸಂಘದ ಕಾರ್ಯದರ್ಶಿಗಳಿಗೆ ತಿಳಿಸಿದಲ್ಲಿ ತಕ್ಕ ಅನುಕೂಲತೆಗಳನ್ನು ಮಾಡಲು ಸಹಾಯವಾಗುವದು.

ಬಸಪ್ಪಾ ಮಲ್ಲಪ್ಪಾ,
ಆಯಟ್ಟಿ ಸತ್ಕಾರಕಸಂಘದ ಸನ್ಮಾನಿತ ಕಾರ್ಯದರ್ಶಿ.
ಬಿ.ಎಫ್. ಹಂಚಿನಾಳ, ಎಚ್. ಎಫ್. ಕಟ್ಟಿಮನಿ,
ಮತ್ತು ಶಿ. ಅ. ಸೆಟ್ಟಿ.
ಪರಿಷತ್ತಿನ ಗೌರವ ಕಾರ್ಯದರ್ಶಿಗಳು.

ಬೌರಿಂಗಪೇಟೆ.

ಗುಬ್ಬಿ ಶ್ರೀ ಚನ್ನಬಸವೇಶ್ವರಕೃಪಾಪೋಷಿತ ನಾಟಕಸಭಾ ಪ್ರೊಪ್ರೈಟರ್ ಮ|| ಜಿ. ಹೆಚ್. ವೀರಣ್ಣನವರು ತಮ್ಮ ಕಂಪೆನಿಯೊಡನೆ ಈ ಊರಿಗೆ ಸುಮಾರು ಒಂದುತಿಂಗಳ ಕೆಳಗೆ ದಯಮಾಡಿಸಿ ಕೆಲವು ನಾಟಕಗಳನ್ನು ಅಭಿನಯಿಸಿ ತಮ್ಮ ನಾಟಕಕಲಾನೈಪುಣ್ಯದಿಂದಲೂ, ಅತ್ಯುತ್ತಮವಾದ ಸೀನರೀಗಳಿಂದಲೂ ಇಲ್ಲಿನ ಪುರನಿವಾಸಿಗಳ ಮನಸ್ಸನ್ನು ಆನಂದಗೊಳಿಸಿದರು. ಈ ಕಂಪೆನಿಯವರು ಈವರಿವಿಗೂ ಮೈಸೂರುದೇಶದ ಅನೇಕ ಭಾಗಗಳಲ್ಲಿ ತಮ್ಮ ನಾಟಕಗಳನ್ನು ಪ್ರದರ್ಶಿಸಿರುವುದಲ್ಲದೆ, ಈ ದೇಶಕ್ಕೆ ಮುಖ್ಯಪಟ್ಟಣವಾದ ಬೆಂಗಳೂರಿನಲ್ಲಿಯೂ, ರಾಜಧಾನಿಯಾದ ಮೈಸೂರಿನಲ್ಲಿಯೂ ಸಹ ಅನೇಕ ನಾಟಕಗಳನ್ನು ಪ್ರದರ್ಶಿಸಿ ಆಯಾಸ್ಥಳದ ಪ್ರಮುಖರಿಂದ ಅನೇಕವಾದ ಭಂಗಾರದಪದಕಗಳನ್ನೂ ಅಭಿನಂದನಪತ್ರಗಳನ್ನೂ ಹೊಂದಿರುವುದಲ್ಲದೆ ನಮ್ಮ ಕರ್ನಾಟಕ ಸಿಂಹಾಸನಾಧೀಶ್ವರರಾದ ಮೈಸೂರ್ ಶ್ರೀಮನ್ಮಹಾರಾಜರವರ ಸನ್ಮಾನಕ್ಕೂ ಕೂಡ ಪಾತ್ರರಾಗಿ ಅವರಿಂದ ಅನುಗ್ರಹಿಸಲ್ಪಟ್ಟಿರುವ ವಿನೋದರತ್ನಾಕರ, ವರ್ಸಟೈಲ್ ಕಮಿಡಿಯನ್ ಎಂಬ ಬಿರುದುಗಳನ್ನೂ ಭಂಗಾರದ ಪದಕಗಳನ್ನೂ ಸಹ ಪಡೆದಿರುವ ಕಂಪೆನಿಯ ಪ್ರೊಪ್ರೈಟರ್ ಮ|| ಜಿ. ಹೆಚ್. ವೀರಣ್ಣನವರು ತಮ್ಮ ಉದಾರಭಾವದಿಂದ ನದೀಪ್ರವಾಹಗಳ ದೆಸೆಯಿಂದ ಕಷ್ಟಪಡುತ್ತಿರುವ ಬಡವರ ಕಷ್ಟನಿವಾರಣಾರ್ಥವಾಗಿ ಪುರನಿವಾಸಿಗಳ ಕೋರಿಕೆಯಂತೆ ತಾ|| 17-8-24 ನೇ ಭಾನುವಾರ ರಾತ್ರಿ ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರವರ ಅಧ್ಯಕ್ಷತೆಯಲ್ಲಿ ಪ್ರಹ್ಲಾದಚರಿತ್ರೆ ಎಂಬ ನಾಟಕವನ್ನು ಪ್ರದರ್ಶಿಸಿ ಬಂದ ಉತ್ಪತ್ತಿಯಲ್ಲಿ ಅರ್ಧ ಅಂದರೆ (200-0-0) ಇನ್ನೂರು ರೂಪಾಯಿಗಳನ್ನು ಉದಾರಮನಸ್ಸಿನಿಂದ ದಯಪಾಲಿಸಿದರು. ಈ ಮಹನೀಯರು ಯಾವಾಗಲೂ ಧರ್ಮಕಾರ್ಯಾಸಕ್ತರಾಗಿ ತಾವು ಹೋದಕಡೆಗಳಲ್ಲೆಲ್ಲ ಅನೇಕ ಧರ್ಮಕಾರ್ಯಗಳಿಗೆ ಧನಸಹಾಯ ಮಾಡುತ್ತಿರುವರೆಂದು ಕೇಳಿ ಸರ್ವರೂ ಸಂತೋಷಿಸಬೇಕಾಗಿದೆ. ಈ ಊರಿನಲ್ಲಿ ಪ್ರದರ್ಶಿಸಿದ ನಾಟಕಗಳಲ್ಲಿ ಇದೇ ಕಡೇನಾಟಕವಾದುದರಿಂದ ಈ ಪುರನಿವಾಸಿಗಳು ತಮ್ಮ ಸಂತೋಷಾರ್ಥವಾಗಿ ಮ|| ಪ್ರೊಪ್ರೈಟರ್ ಜಿ. ಹೆಚ್. ವೀರಣ್ಣನವರಿಗೆ ಭಂಗಾರದ ಪದಕವನ್ನು ಕೋ|| ಡಿ|| ಡೆಪ್ಯುಟಿಕಮಿಷನರ್ ಸಾಹೇಬರವರ ಸ್ವಹಸ್ತದಿಂದ ದಯಪಾಲಿಸಿದರು ಮತ್ತು ಈ ಪುರನಿವಾಸಿಗಳಾದ ಆನರರಿ ಬೆಂಚ್‌ಮ್ಯಾಜಿಸ್ಟ್ರೇಟು ಮತ್ತು ರೆಪ್ರಜೆಂಟೆಟಿವ್ ಅಸೆಂಬ್ಲಿ ಮೆಂಬರಾದ ಮ|| ರಾ|| ಗಳಾದ ಎಂ. ಚನ್ನಬಸಪ್ಪನವರು, ವೈ. ಚನ್ನಪ್ಪನವರು, ಬಿ. ಎನ್. ನಂಜಪ್ಪನವರು, ಟಿ. ಕೆ. ನಲ್ಲಾಗೌಡರು, ಬಿ. ಸಿ. ಮುನಿಸ್ವಾಮಿಗೌಡರು ಈ ವಿದ್ವಜ್ಜನಗಳು ತಮ್ಮ ಸಂತೋಷಾರ್ಥವಾಗಿ ಮ|| ಜಿ. ಹೆಚ್. ವೀರಣ್ಣನವರಿಗೆ ಮತ್ತೊಂದು ಭಂಗಾರದಪದಕವನ್ನು ಕೋ|| ಡಿ|| ಡೆಪ್ಯುಟಿಕಮಿಷನರವರ ಸ್ವಹಸ್ತದಿಂದಲೇ ದಯಪಾಲಿಸಿದರು. ಮುಖ್ಯವಿಷಯವೇನೆಂದರೆ—ಮೇಲ್ಕಂಡ ಮ|| ಪ್ರೊಪ್ರೈಟರ್ ಜಿ. ಹೆಚ್. ವೀರಣ್ಣನವರು ತಮ್ಮ ಧರ್ಮಬುದ್ಧಿಯಿಂದ ಎಲ್ಲೆಲ್ಲಿಯು ಗೌರವಿಸಲ್ಪಡುವರು. ಈ ಮಹನೀಯರು ಇದೇ ತಾಲ್ಲೂಕು ಕೆ. ಜಿ. ಎಫ್. ನಲ್ಲಿಯೂ ಕೂಡ ಪ್ರವಾಹನಿವಾರಣೆಗೋಸ್ಕರ ಅಲ್ಲಿನ ಪೊಲೀಸ್ ಸೂಪರಿಂಟೆಂಡೆಂಟರವರ ಅಧ್ಯಕ್ಷತೆಯಲ್ಲಿ ಭಕ್ತಕಬೀರ್ ಎಂಬ ನಾಟಕವನ್ನು ಪ್ರದರ್ಶಿಸಿ ಬಂದ ಉತ್ಪತ್ತಿಯಲ್ಲಿ ಅರ್ಧ ಅಂದರೆ (250-0-0) ಇನ್ನೂರೈವತ್ತು ರೂಪಾಯಿಗಳನ್ನು ದಯಪಾಲಿಸಿದರೆಂದು ಕೇಳಿ ಸಂತೋಷಿಸುತ್ತೇವೆ. ಇಂಥಾ ಧರ್ಮಬುದ್ಧಿಯುಳ್ಳ ಮ|| ಜಿ. ಹೆಚ್. ವೀರಣ್ಣನವರಿಗೆ ಶ್ರೀ ಚನ್ನಬಸವೇಶ್ವರನು ಆಯುರಾರೋಗ್ಯ ಭಾಗ್ಯಗಳನ್ನು ಕೊಟ್ಟು ಕಾಪಾಡಲೆಂದೂ, ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಣೆಯಲ್ಲಿ ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯಾಗುತ್ತಿರುವ ಈ ನಾಟಕಕಂಪೆನಿಯು ದಿನದಿನಾಭಿವೃದ್ಧಿಯನ್ನು ಹೊಂದಿ ಪೂರ್ಣಚಂದ್ರನಂತೆ ಪ್ರಕಾಶಿಸಲೆಂದು ಹಾರೈಸುತ್ತೇವೆ. ಈ ಮಹನೀಯರ ಮೇಲ್ಪಂಗ್ತಿಯನ್ನನುಸರಿಸಿ ಮಿಕ್ಕ ನಾಟಕಕಂಪೆನಿಗಳವರೂ, ಸಿನಿಮಾಗಳವರೂ ತಮ್ಮ ತಮ್ಮ ಶಕ್ತ್ಯಾನುಸಾರ ಪ್ರವಾಹನಿವಾರಣೆಗೋಸ್ಕರ ಸಹಾಯಮಾಡಲೆಂದು ಈಮೂಲಕ ಪ್ರಾರ್ಥಿಸುವ,

ಓರ್ವ ಕಲಾಭಿಮಾನಿ.

ಪ್ರವಾಹಗಳಿಂದುಂಟಾದ ಕಷ್ಟನಿವಾರಣೆಯ ನಿಧಿ.

ಮೈಸೂರು ದೇಶದ ಎಲ್ಲಾ ಗ್ರಾಮಗಳ ಪಟೇಲ್, ಶಾನುಭೋಗರು, ಸ್ಕೂಲ್‌ಮಾಸ್ಟರ್ ಮತ್ತು ಧರ್ಮಾತ್ಮರಾದ ಮುಖಂಡ ಮಹಾಜನರ ಸನ್ನಿಧಾನಂಗಳಲ್ಲಿ.—

ಮಹಾಶಯರೇ !

ಮೈಸೂರು, ಹಾಸನ, ಕಡೂರು, ಶಿವಮೊಗ್ಗ, ಚಿತ್ರದುರ್ಗ ಈ ಡಿಸ್ಟ್ರಿಕ್ಟುಗಳಲ್ಲಿ ಪ್ರವಹಿಸುವ ಕಾವೇರಿ, ತುಂಗಭದ್ರಾನದಿ ಮತ್ತು ಇವುಗಳ ಉಪನದಿಗಳ ಪ್ರವಾಹವು ಕಳೆದ ತಿಂಗಳಲ್ಲಿ ದೈವಿಕವಾಗಿ ಹೆಚ್ಚಿಗೆಬಂದು ಆ ನದಿಗಳ ಪಕ್ಕಗಳಲ್ಲಿದ್ದ ಹಲವು ಗ್ರಾಮಗಳಲ್ಲಿ ನಮ್ಮ ಸಹೋದರ ಪ್ರಜೆಗಳ ಅನೇಕ ಮನೆ ಮಠಾದಿಗಳು ಕೊಚ್ಚಿಕೊಂಡುಹೋಗಿ ಅವರೆಲ್ಲಾ ನಿಲ್ಲುವುದಕ್ಕೆ ನೆರಳಿಲ್ಲದೆ ತಿನ್ನುವುದಕ್ಕೆ ಕೂಳಿಲ್ಲದೆ ನಾನಾ ನಷ್ಟ ಕಷ್ಟಗಳಿಗೀಡಾಗಿರುವ ವಾರ್ತೆ ಸರ್ವರಿಗೂ ಪರಿತಾಪಕರವಾಗಿರುವುದಲ್ಲದೆ ಇಂತಹ ಆಕಸ್ಮಿಕವೂ, ಅನಿರೀಕ್ಷಿತವೂ ಆದ ಕಷ್ಟಗಳಿಗೀಡಾಗಿರುವ ಜನಗಳಿಗೆ ಮೊದಲು ಸಹಾಯಮಾಡಬೇಕೆಂಬ ದಯಾಗುಣವು ಪ್ರತಿಯೊಬ್ಬರಿಗೂ ಪ್ರೇರಣೆಯಾಗಿರುವುದಷ್ಟೆ ?

ಇಂತಹ ಸುಪ್ರೇರಣೆಗೆ ನಮ್ಮ ಶ್ರೀಮನ್ಮಹಾರಾಜರವರು [illegible] ಹಿಂದಿನಿಂದ [illegible] ಮಾಡಬೇಕಾದ [illegible] ಸಹಾಯಗಳನ್ನೂ ಒದಗಿಸಿಯೂ ಆ ಕಷ್ಟಕ್ಕೆ ಸಿಕ್ಕಿರುವ [illegible] ಎಂದಿನಂತೆ [illegible] ಲೋಕಸೇವಾನಿರತರಾಗಲು ಹೆಚ್ಚಾದ ದ್ರವ್ಯಸಹಾಯವು ಅತ್ಯವಶ್ಯಕವೆಂದು ಯೋಚಿಸಿ "ಪ್ರವಾಹಗಳಿಂದುಂಟಾದ ಕಷ್ಟನಿವಾರಣೆಯ ನಿಧಿ" ಎಂಬ ಫಂಡನ್ನೊಂದನ್ನೇರ್ಪಡಿಸಿ ಈ ಫಂಡಿಗೆ ತಾವು ಮೊದಲು 15000 ರೂಪಾಯಿ ದಯಪಾಲಿಸಿ ಈ ನಿಧಿಗೆ ಪ್ರಜೆಗಳೆಲ್ಲರೂ ಭಾಗಿಗಳಾಗಲು ಸೆಂಟ್ರಲ್‌ಕಮಿಟಿಯೊಂದನ್ನು ಸ್ಥಾಪಿಸಿ ಅದಕ್ಕೆ ನಮ್ಮ ಶ್ರೀಮದ್ಯುವರಾಜರನ್ನು ಪ್ರೆಸಿಡೆಂಟರನ್ನಾಗಿಯೂ, ದಿವಾನರೇ ಮೊದಲಾದ ಅಧಿಕಾರಿಗಳನ್ನೂ, ಖಾಸಗೀ ದೊಡ್ಡಮನುಷ್ಯರನ್ನೂ ಮೆಂಬರುಗಳನ್ನಾಗಿಯೂ ಏರ್ಪಡಿಸಿ ತಮ್ಮ ರಾಜಧರ್ಮವನ್ನು ಪ್ರಕಾಶಪಡಿಸಿರುವುದು ಸರ್ವತ್ರ ವಿದಿತವಾಗಿದೆಯಷ್ಟೆ ?

ಈ ಮಹೋಪಕಾರಕ್ಕಾಗಿ ಪ್ರಜೆಗಳೆಲ್ಲರೂ ಅತ್ಯಂತ ಕೃತಜ್ಞತೆಯಿಂದ ನಮ್ಮ ಮಹಾಪ್ರಭುಗಳ ಶ್ರೇಯಃಪ್ರಾರ್ಥನೆಮಾಡುತ್ತಾ ಮೇಲ್ಕಂಡ ಘನೋದ್ದೇಶದ ನಿಧಿಗೆ ಪ್ರತಿಯೊಬ್ಬ ಪ್ರಜೆಯು ಚಂದಾಕೊಡುವುದು ಪ್ರಜಾಧರ್ಮವಾಗಿರುವುದಷ್ಟೆ ? ಆದರೆ ನಾನಾಕಡೆ ದೂರ ದೂರವಾಗಿ ಬಹುಮುಖರಾಗಿ ವಾಸಿಸುತ್ತಿರುವ ನಮ್ಮ ಅಲ್ಪಸೇವೆಯನ್ನು ಕಮಿಟಿಗೆ ಒಬ್ಬೊಬ್ಬರೇ ಹೋಗಿ ಒಪ್ಪಿಸುವುದಾಗಲೀ ಕಮಿಟಿಯವರು ಸಂಸ್ಥಾನದಲ್ಲಿನ ಪ್ರತಿಗ್ರಾಮದ ಪ್ರತಿಮನೆಗೂ ಬಂದು ಸಹಾಯಕೇಳುವುದಾಗಲೀ ಸಾಧ್ಯವಿಲ್ಲವು ಮತ್ತು ಬಲವತ್ತರಮಾಡತಕ್ಕದ್ದೂ ಅಲ್ಲವು. ಇಂತಹ ಕಷ್ಟಕ್ಕೆ ಸಹಾಯಮಾಡಲು ಪ್ರತಿಯೊಬ್ಬರಿಗೂ ಭಗವತ್ಪ್ರೇರಣೆ ಆಗಿರುವುದರ ಸಂಕಲ್ಪನೆರವೇರಲೋಸುಗ ಪ್ರತಿಗ್ರಾಮದ ತಾಯಿ ದಂತೆಗಳೋಪಾದಿ ಇರುವ ಮುಖ್ಯಸ್ಥರನ್ನು ಪ್ರಾರ್ಥಿಸುವುದೇನಂದರೆ— ಆಯಾಯ ಗ್ರಾಮದ ಮುಖ್ಯಸ್ಥರು ತಮ್ಮ ನಿತ್ಯಗಟ್ಲೆ ಕೆಲಸಗಳಲ್ಲಿ ಇದೊಂದು ಮುಖ್ಯ ಕರ್ತವ್ಯವು ಮತ್ತು ದೇವತಾಕಾರ್ಯವೆಂದು ಭಾವಿಸಿ ತಮ್ಮ ತಮ್ಮ ಗ್ರಾಮಗಳಲ್ಲಿಯೇ ಸಬ್‌ಕಮಿಟಿಯೊಂದನ್ನೇರ್ಪಡಿಸಿಕೊಂಡು ಆಯಾಯ ಗ್ರಾಮದಲ್ಲಿನ (ಬಡವರೂ ಬಲ್ಲಿದವರೂ ಎಂದೆಣಿಸದೆ) ಖಾನೇಷ್ಮಾರಿ ನಂಬರು ಅನುಸರಿಸಿ ಪ್ರತಿಯೊಂದು ಮನೆಗೂ ಹೋಗಿ ಆ ಮನೆಯ ಯಜಮಾನ (ಯಾ) ಯಜಮಾನಿಗೆ ವಿಷಯ ತಿಳುಹಿಸಿದರೆ ಕೂಡಲೆ ದೇವರ ಪ್ರೇರಣೆಯಂತೆ ತಮಗೆ ತೋಚಿದಷ್ಟು ಸಹಾಯಮಾಡಲು ಯಾವ ಅಭ್ಯಂತರವೂ ಇಲ್ಲವು. ಆದರೆ ಇಷ್ಟು ಅಷ್ಟು ಎಂತ ಬಲಾತ್ಕರಿಸದೆ ಈಗ ಚಲಾವಣೆಯಲ್ಲಿರುವ ನಾಣ್ಯಗಳು ಅಂದರೆ 1, 3, 6 ಕಾಸು. 1, 2, 4, 8 ಆಣೆ. 1 ರೂಪಾಯಿ ಇವುಗಳಲ್ಲಿ ಯಾವುದು, ಎಷ್ಟು ಕೊಟ್ಟರೂ ಪ್ರೀತಿಯಿಂದ ಸ್ವೀಕರಿಸಿ ಆ ಗ್ರಾಮದ ಒಟ್ಟು ಮೊಬಲಗನ್ನ ಚಂದಾಪಟ್ಟಿ ಎನಿಸಿ ಆಯಾಯ ತಾಲ್ಲೂಕು ಬೋರ್ಡಿಗೆ ಅಥವಾ ಸೆಂಟ್ರಲ್‌ಕಮಿಟಿಗೆ ಕಳುಹಿಸುವುದೇ ಸುಲಭೋಪಾಯವು, ಮತ್ತು ಎಲ್ಲರೂ ಕಷ್ಟನಿವಾರಣೆಯ ಪುಣ್ಯಕ್ಕೆ ಭಾಗಿಗಳಾಗಲು ಅವಕಾಶವು ದೊರತು ಭ್ರಾತೃಭಾವಪ್ರಕಾಶಪಡಿಸಿದಂತಾಗುತ್ತೆ. "ಹನಿಗೂಡಿದರೆ ಹಳ್ಳವೆಂಬ ಗಾದೆಯಂತೆಯೂ" "ಅಳಲಸೇವೆ ಮಳಲಭಕ್ತಿ" ಎಂಬಂತೆಯೂ 1 ಕಾಸು ಮೊದಲ್ಗೊಂಡು ಬರುವ ಸಹಾಯವು ಆಘನನಿಧಿಗೆ ಸೇರಿದರೆ ಸಂಸ್ಥಾನದ ಸರ್ವಪ್ರಜೆಗಳೂ ಸೇರಿ ಇದೊಂದು ಮಹತ್ತರವಾದ ದೇವತಾಪೂಜೆಮಾಡಿದಂತಾಗುತ್ತೆ.

ಈ ದೇವತಾರಾಧನೆಗೆ ಸುಲಭೋಪಾಯದ ಈ ಸಲಹೆಯು ಯುಕ್ತವಾಗಿ ತೋರುವಪಕ್ಷ ಸಂಸ್ಥಾನದಲ್ಲಿನ ಪ್ರತಿಯೊಂದು ಗ್ರಾಮದ ಮುಖ್ಯಸ್ಥರೂ ಸಾವಕಾಶಮಾಡದೆ ಕೂಡಲೆ ತಮ್ಮ ತಮ್ಮ ಗ್ರಾಮಗಳಲ್ಲಿರುವ ಪ್ರತಿ ಮನೆಯವರನ್ನು ಈ ಪುಣ್ಯಕ್ಕೆ ಭಾಗಿಗಳಾಗುವಂತೆ ಮಾಡಿ ಪರಮಾತ್ಮನ ಪ್ರೀತಿಗೆ ಪಾತ್ರರಾಗಬೇಕೆಂದು ಸರ್ವರಿಗೂ ವಂದಿಸಿ ಪ್ರಾರ್ಥಿಸುವ,

ಧರ್ಮಾತ್ಮರ ಸೇವಕ.

ಲಿಂಗಾಯತರ ವೈದಿಕತ್ವವು.

(ಲೇಖಕ, ಸ್ವಾಮಿ ವಿರೂಪಾಕ್ಷ ಒಡೆಯರ, ಚೌಡದಾನಪುರ, ಪ್ರೊಫೆಸರ, ಸಂಸ್ಕೃತಕಾಲೇಜ ಇಂದೂರ.)

ಕೆಲವು ದಿವಸಗಳ ಹಿಂದೆ "ಲಿಂಗಾಯತರು ಹಿಂದುಗಳಲ್ಲ, ಅವರು ಸರ್ವಹಿಂದುಗಳು ಮನ್ನಿಸುವ ವೇದ, ಉಪನಿಷತ್ತಾದಿಗಳನ್ನು ಮನ್ನಿಸುವದಿಲ್ಲ, ಅವರ ಮತ್ತು ಹಿಂದುಗಳ ನಿತ್ಯನೈಮಿತ್ತಿಕಾದಿ ಕರ್ಮಗಳು ಒಂದಕ್ಕೊಂದು ಅತ್ಯಂತ ಭಿನ್ನವಾಗಿವೆ, ಅವರ ಮತ್ತು ಹಿಂದುಗಳ ಏಕೀಕರಣವು ಯಾವ ವಿಷಯದಲ್ಲಿಯೂ ಆಗುವದಿಲ್ಲ" ಇವೇ ಮುಂತಾದ ಸಂಗತಿಗಳ ಬಗ್ಗೆ ಐದಾರು ಲೇಖಗಳು "ಟಾಯಿಮ್ಸ-ಆಫ್-ಇಂಡಿಯಾ" ಎಂಬ ಇಂಗ್ಲೀಷ್ ವರ್ತಮಾನಪತ್ರದಲ್ಲಿ ಪ್ರಸಿದ್ಧಿಸಲ್ಪಟ್ಟಿರುತ್ತವೆ. ಈ ಲೇಖಗಳಲ್ಲಿ ಸತ್ಯಾಂಶವು ಎಷ್ಟರಮಟ್ಟಿಗಿರುತ್ತದೆಂಬದನ್ನು ನಾನು ಇಲ್ಲಿ ತೋರಿಸುವೆನು. ಲಿಂಗಾಯತ ಧರ್ಮವು ಒಂದು ಸಾಂಪ್ರದಾಯಿಕ ಪಂಥವಿರುತ್ತದೆ ಅದು ವೇದ ಮೊದಲಾದವುಗಳಲ್ಲಿ ಹೇಳಲ್ಪಟ್ಟಿರುವ ಶಿವನೆಂಬ ದೇವರ ಆರಾಧನಾರ್ಥವಾಗಿ ರಚಿಸಲ್ಪಟ್ಟಿರುತ್ತದೆ. ಪೂರ್ವದಲ್ಲಿ ಶಿವಚಿಹ್ನವನ್ನು (ಲಿಂಗವನ್ನು) ದೇಹದಲ್ಲಿ ಧಾರಣಮಾಡುವ ರೂಢಿಯುಂಟಾಯಿತು. ಆದರೆ ಇದು ಕೆಲವರಿಗೆ ಇಷ್ಟವಾಗಿ ತೋರದ್ದರಿಂದ ಅವರು ದೇವಾಲಯಗಳನ್ನು ಕಟ್ಟಿಸಿ, ಅವುಗಳಲ್ಲಿ ಆ ಶಿವಚಿಹ್ನವನ್ನು ಸ್ಥಾಪಿಸಿ, ಅರ್ಚಿಸಲಾರಂಭಿಸಿದರು. ಇಂತಹ ಶಿವಚಿಹ್ನಕ್ಕೆ ಚರಲಿಂಗವೆಂದೂ ಹೆಸರುಗಳು ಬಿದ್ದವು. ಈ ಚರಲಿಂಗವನ್ನು ಅರ್ಚಿಸುವವರಿಗೆ ವೀರಶೈವರೆಂತಲೂ ಸ್ಥಿರಲಿಂಗವನ್ನು ಪೂಜಿಸುವವರಿಗೆ ಶೈವರೆಂತಲೂ, ಅನ್ನುವರು. ಈ ಶಿವನೆಂಬ ಹೆಸರನ್ನು ವೇದಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಸ್ಮೃತಿಗಳಲ್ಲಿಯೂ ಐತರೇಯಾದಿ ಬ್ರಾಹ್ಮಣಗ್ರಂಥಗಳಲ್ಲಿಯೂ ಕಾಣಬಹುದು. ಈ ಶಿವಚಿಹ್ನವಾದ ಲಿಂಗವನ್ನು ಅಹೋರಾತ್ರಿ ದೇಹದಲ್ಲಿ ಧರಿಸಿ ಅದನ್ನು ಅತ್ಯದಂತೆ ಸಂರಕ್ಷಿಸಿ ಪೂಜಿಸುವ ವೀರವ್ರತವನ್ನು ಪಾಲಿಸುವವನಿಗೆ ಮಾತ್ರ "ವೀರಶೈವನು" ಎಂದು ಅನ್ನುವರು. ಇವನು ಸರ್ವರೀತಿಯಿಂದ ವೈದಿಕನೇ ಇರುತ್ತಾನೆ. ಲಿಂಗಾಯತರಿಗೆ ವಿಶೇಷಾದ್ವೈತಜ್ಞಾನವೆಂಬುದೇ ಮುಖ್ಯ ತತ್ವವು. ಅವರು ಈ ಜಗತ್ತಿಗೆ ಉಪಾದಾನ ಕಾರಣವಾದ ಪ್ರಕೃತಿಗೆ ಅಂದರೆ ಶಕ್ತಿಗೆ ಅನಾದ್ಯನಂತತ್ವವನ್ನು ಹೇಳಿ ಅಂತ್ಯದಲ್ಲಿ ಜೀವಪ್ರಕೃತಿಗಳೆರಡೂ ಶಿವನಲ್ಲಿ ಐಕ್ಯವಾಗುತ್ತವೆಂದು ಹೇಳುವರು. ಇದಕ್ಕೆ ಬ್ರಹ್ಮಸೂತ್ರದಮೇಲೆ ರಚಿಸಲ್ಪಟ್ಟ ಶ್ರೀಕರಭಾಷ್ಯವೇ ಸಾಕ್ಷಿಭೂತಗ್ರಂಥವು. ಈ ಶ್ರೀಕರಾಚಾರ್ಯರು ಸ್ ೧೦೬೨ ನೇಯ ಇಸವಿಯ ಸುಮಾರಕ್ಕೆ ಇದ್ದರೆಂತಲೂ, ಇವರ ಯೋಗ್ಯತೆಯು ಶ್ರೀ ಆದಿಶಂಕರಾಚಾರ್ಯರ ಯೋಗ್ಯತೆಗೆ ಸಮಾನವಾದದ್ದೆಂತಲೂ ಸಿದ್ಧಮಾಡಲ್ಪಟ್ಟಿರುವದು. (ಇಂಡಿಯನ್ ರಿವ್ಯೂ ೧೯೧೫ನೇ ಮೇ ತಿಂಗಳ ಅಂಕ ನೋಡಿರಿ) ಇವರ ಭಾಷ್ಯವು ಅಪ್ರತಿಮ ಗ್ರಂಥವಾಗಿದೆ. ಅದರಲ್ಲಿ ವಿಶೇಷಾದ್ವೈತ ತತ್ವವು ಬಹುಸರಳವಾಗಿ ವಿವರಿಸಲ್ಪಟ್ಟಿದೆ. "[illegible] ಸುಪರ್ಣೋತಿಮಂತ್ರತಃ | [illegible] ||" ಎಂದು ವಿಶೇಷಾದ್ವೈತದ ವ್ಯಾಖ್ಯಾನವು ಶ್ರೀಕರಭಾಷ್ಯದಲ್ಲಿ ಕೊಡಲ್ಪಟ್ಟಿರುತ್ತದೆ. ಲಿಂಗಾಯತರಿಗೆ ಪ್ರಮಾಣಗ್ರಂಥಗಳು ಯಾವವೆಂದರೆ :—೧ ವೇದಗಳು, ೨ ಉಪನಿಷತ್ತುಗಳು, ೩ ಸ್ಮೃತಿಗ್ರಂಥಗಳು, ೪ ಬ್ರಹ್ಮಸೂತ್ರದ [illegible]

ಪಾಡಿಕೆಯಾಗಿ ಶೈವಧರ್ಮವನ್ನು ವೀರಶೈವ ಪಂಥವನ್ನು ಪ್ರತಿಪಾದಿಸಿರುವದರಿಂದ, ಅವು ಎರಡೂ ಪಂಥದವರಿಗೆ ಉಪಯೋಗವುಳ್ಳವುಗಳಾಗಿವೆ. ಲಿಂಗಾಯತರು ವೇದಗಳನ್ನು ಮನ್ನಿಸುವದಿಲ್ಲೆಂದು ಕೆಲವರು ಹೇಳುವರು. ಆದರೆ ಇದು ಸರಿಯಾದದ್ದಲ್ಲ. ಯಾಕಂದರೆ ಲಿಂಗಾಯತಧರ್ಮ ಪ್ರವರ್ತಕರಾದ ಸಮಸ್ತ ಪ್ರಮಥರೂ ಋಷಿಗಳೂ ಆಚಾರ್ಯರೂ ಪಂಡಿತರೂ ವೇದಮಂತ್ರಗಳ ಆಧಾರದಿಂದಲೇ ತಮ್ಮ ಗ್ರಂಥಗಳನ್ನು ರಚಿಸಿರುವರು. ಇದಲ್ಲದೆ ಶೈವಾಗಮಗಳಲ್ಲಿ ವೇದಸ್ತುತಿಯು ಅಲ್ಲಲ್ಲಿ ಕಂಡುಬರುತ್ತದೆ. ಲಿಂಗಾಂಗಿಧರ್ಮಪ್ರವರ್ತಕರಾದ ರೇಣುಕಾಚಾರ್ಯರೇ "ಪವಿತ್ರಂತೇವಿತತಂಬ್ರಹ್ಮಣಸ್ಪತೇಪ್ರಭುರ್ಗಾತ್ರಾಣಿಪರ್ಯೇಷಿವಿಶ್ವತಃ" ಎಂಬ ಋಗ್ವೇದ ಮಂತ್ರಕ್ಕೆ "ಬ್ರಹ್ಮೇತಿಲಿಂಗಮಾಖ್ಯಾತಂಬ್ರಹ್ಮಣಃಪತಿರೀಶ್ವರಃ | ಪವಿತ್ರಂತದ್ವಿಖ್ಯಾತಂತತ್ಸಂಪರ್ಕಾತ್ತನುಃಶುಚಿಃ ‖ ಋಗಿತ್ಯಾಹಪವಿತ್ರಂತೇವಿತತಂ ಬ್ರಹ್ಮಣಸ್ಪತೇ | ತಸ್ಮಾತ್ಪವಿತ್ರಂತಲ್ಲಿಂಗಂಧಾರ್ಯಂಶೈವಮನಾಮಯಂ" ಎಂದು ಸಿದ್ಧಾಂತಶಿಖಾಮಣಿ ಎಂಬ ತಮ್ಮ ಗ್ರಂಥದಲ್ಲಿ ಅರ್ಥವನ್ನು ಹೇಳಿರುವರು. ಇದರಂತೆ ಶ್ರೀಕರಾಚಾರ್ಯರಾದರೂ "ಅಥೋಪನಿಷತ್ಸಾರವಿಶೇಷಾದ್ವೈತಮಂಡನಂ ಶಿವಜ್ಞಾನಪ್ರದಂಸೂತ್ರಭಾಷ್ಯಂಜಯತುಸರ್ವದಾ ವೇದಾಗಮಾರ್ಥತತ್ವಜ್ಞಶೈವಾನಾಂಮೋಕ್ಷಕಾಂಕ್ಷಿಣಾಂ | ವೈದಿಕಾನಾಂವಿಶುದ್ಧಾನಾಮೇತದ್ಭಾಷ್ಯಂಚಕಲ್ಪಿತಂ ‖ ಶ್ರುತ್ಯೈಕ್ಯತದೇಕತ್ವಮಹಾಸ್ತ್ರ್ಯಂಪ್ರಾಪ್ಯತಾದ್ವೈತಮುಕಾದಿಷು | ದ್ವೈತಾದ್ವೈತಮತೇಶುದ್ಧೇವಿಶೇಷಾದ್ವೈತಸಂಜ್ಞಕೇ ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ" ಇತ್ಯಾದಿ ಶ್ಲೋಕಗಳಿಂದ ಮೊದಲು ಪೀಠಿಕೆಯಲ್ಲಿ ವೀರಶೈವಧರ್ಮಕ್ಕೆ ವೇದಪ್ರಾಮಾಣ್ಯವನ್ನೇ ಪ್ರತಿಪಾದಿಸಿರುವರು. ಇದಲ್ಲದೆ ಕನ್ನಡದಲ್ಲಿ ವೀರಶೈವಧರ್ಮಧುರಂಧರಾದ ನಿಜಗುಣಶಿವಯೋಗಿಗಳು, "ಅನುಭವಸಾರ" ವೆಂಬ ಗ್ರಂಥದಲ್ಲಿ "ಶ್ರುತಿಯ ನೇತ್ರದಿಪವೇರ ಶಿರಯದ ಋಷಿವಾಕ್ಯಸ್ಮೃತಿಯೆನಿಸಿಲೋಕದೊಳು ಸೇವ್ಯವೆನಿಸಲು | ಶ್ರುತಿಯೇಪ್ರಮಾಣವಬಿಗೆ ‖" ಎಂದು ಶ್ರುತಿ ಅಂದರೆ ವೇದ ಮತ್ತು ಉಪನಿಷತ್ತುಗಳನ್ನು ಕೊಂಡಾಡಿರುವರು. ಮತ್ತು ವೇದವೇದಾಂತದ ತತ್ವಾರ್ಥವನ್ನೇ ಈ ಅನುಭವಸಾರದಲ್ಲಿ ಹೇಳಿವೆ ವೆಂಬದಾಗಿ ಮೊದಲು ತಿಳಿಸಿ ಆಮೇಲೆ ಅದನ್ನೇ ಚೆನ್ನಾಗಿ ವರ್ಣಿಸಿರುವರು. ಒಂದುವೇಳೆ ಪಂಚಮರಿಗೆ "ವೇದಾರಿ" "ಮಖಾರಿ" ಎಂಬ ಹೆಸರುಗಳಿದ್ದರೂ ಅವರು ವೇದಗಳಿಗೆ ಶತ್ರುಗಳಾಗಲಾರರು. ಯಾಕಂದರೆ ಅವರು ವೇದಗಳಿಗೆ ಶತ್ರುಗಳಾಗಿದ್ದ ಪಕ್ಷದಲ್ಲಿ "ವೇದಾರಿ" "ಕಾಲಾರಿ" ಮೊದಲಾಗಿ ಪಂಚಮ ಶಿಷ್ಯರು ತಮ್ಮ ಗುರುಗಳ ಶಾಖೆಗಳಾದ ಋಗ್ವೇದ ಯಜುರ್ವೇದಾದಿಗಳನ್ನು ಅಂಗೀಕರಿಸಿ ತಾವು ಇಂತಹ ವೇದಶಾಖಾನುಯಾಯಿಗಳೆಂದು ಎಂದೂ ಹೇಳಿಕೊಳ್ಳುತ್ತಿದ್ದಿಲ್ಲ. ಇದಲ್ಲದೆ ಕಾಶೀ ಜಂಗಮವಾಡೀಮಠದಲ್ಲಿ ವರ್ಷಕ್ಕೊಮ್ಮೆ ಹವನಮಾಡುವ ಪರಿಪಾಠವು ಪೂರ್ವದಲ್ಲಿದ್ದದ್ದರಿಂದ ಆ ಹವನ ಕುಂಡವು ಈವತ್ತಿಗೂ ಇರುತ್ತದೆ. ಅದನ್ನು ಅಲ್ಲಿಯ ಅಧಿಕಾರಸ್ಥರು ಕಾಪಿಟ್ಟಿರುವರು. ಹವನಯಾಗಾದಿವಿಧಿಗಳು ಲಿಂಗಾಯತರಲ್ಲಿ ಲೋಪವಾಗಲು ಕಾರಣವೇನಂದರೆ:—ಶಿವಪೂಜಾವಿಧಾನಗಳಲ್ಲಿ ಆ ವಿಧಿಗಳೆಲ್ಲ ಬಂದು ಹೋಗುವವು. ಈ ವಿಷಯವನ್ನು "ಲಿಂಗಾಂಗಿಧರ್ಮವಿಚಾರ" ವೆಂಬ ನನ್ನ ಕನ್ನಡಗ್ರಂಥದಲ್ಲಿ ವಿವರವಾಗಿ ಹೇಳುವೆನು. ಈ ಸಂಗತಿಗಳನ್ನೆಲ್ಲ ವಿಚಾರ ಮಾಡದೆ "ವೇದಾರಿ" ಎಂಬ ಶಬ್ದಮಾತ್ರದಿಂದಲೇ ಲಿಂಗಾಯತರೆಲ್ಲರೂ ವೇದಕ್ಕೆ ಅರಿಗಳೆಂದು ಅರ್ಥಮಾಡಿ ಹೇಳುವದು ಸರಿಯಲ್ಲ. ಇದರ ಹೊರತು ಭಗವದ್ಗೀತೆಯಲ್ಲಿಯೂ "ತ್ರೈಗುಣ್ಯವಿಷಯಾವೇದಾನಿಸ್ತ್ರೈಗುಣ್ಯೋಭವಾರ್ಜುನ" ಎಂದು ವೇದಗಳಿಗೆ ತ್ರಿಗುಣಾತ್ಮಕತ್ವವನ್ನು ಹೇಳಿ ತ್ರಿಗುಣರಹಿತವಾಗೆಂದು ಶ್ರೀ ಕೃಷ್ಣದೇವನು ಅರ್ಜುನನಿಗೆ ಉಪದೇಶಿಸಿದ್ದಾನೆ. ಇಷ್ಟರಿಂದಲೇ ಶ್ರೀ ಕೃಷ್ಣದೇವನು ವೇದವಿರೋಧಿ ಎಂದು ಹೇಳಬಹುದೇ? ವೇದ ಮತ್ತು ಆಗಮ ಮೊದಲಾದ ಗ್ರಂಥಗಳಲ್ಲಿ, ಪ್ರಮಥಗೋತ್ರ, ಋಷಿಗೋತ್ರ, ಎಂಬೆರಡು ಮನುಷ್ಯಜಾತಿಯ ಗೋತ್ರಗಳು ಹೇಳಲ್ಪಟ್ಟಿರುತ್ತವೆ. ಇವುಗಳಲ್ಲಿ ಪ್ರಮಥಗೋತ್ರದವರೇ ವೀರಶೈವರೂ ಋಷಿಗೋತ್ರದವರೇ ಶೈವ, ಶಾಕ್ತ, ವೈಷ್ಣವಪಂಥದ ಅನುಯಾಯಿಗಳೂ ಆಗಿರುತ್ತಾರೆ. ಪ್ರಮಥಗಣದ ವರ್ಣನೆಯು "ಗಣಾನಾಂತ್ವಾಗಣಪತಿಂ" ಇತ್ಯಾದಿ ಮಂತ್ರಗಳಿಂದ ಯಜುರ್ವೇದದಲ್ಲಿಯೂ ಮಹಾಭಾರತ ಇತ್ಯಾದಿ ಇತಿಹಾಸಗ್ರಂಥಗಳಲ್ಲಿಯೂ ಪುನಃ ಪುನಃ ಕಣ್ಣಿಗೆಬೀಳುವದು. ಶೈವಾಗಮಗಳಲ್ಲಿ ಪ್ರಮಥವರ್ಣನೆಯು ವಿಶೇಷವಾಗಿರುವದು. ಶ್ರೀಕರಾದಿಭಾಷ್ಯಗಳಲ್ಲಿಯೂ ಅದರ ಪ್ರಶಂಸೆಯುಂಟು. "ನತ್ವಾನಂದೀಶಮುಖ್ಯಾದೀನ್‌ಶಿವತತ್ವೋಪದೇಶಿಕಾನ್ ಶಿವಾಗಮಸ್ತವಿಜ್ಞಾನಾನ್‌ಪಾರಂಪರ್ಯಮಹೇಶ್ವರಾನ್" ಇದರಂತೆ ಮಹಾಭಾರತದ ಅಶ್ವಮೇಧಪರ್ವದಲ್ಲಿ "ನಂದಿವರ್ಮಾಸ್ವಧಾನನಾಃ" ಎಂದು ನಂದೀಶ್ವರನು ಶಿವಧರ್ಮವು ಸ್ತುತಿಸಲ್ಪಟ್ಟಿರುತ್ತದೆ. ಪರಾಶರಸ್ಮೃತಿಯ ಆಚಾರಕಾಂಡದ ವ್ಯಾಖ್ಯಾನದಲ್ಲಿ ಪ್ರಸಿದ್ಧ ವಿದ್ವಾಂಸರಾದ ಮಾಧವಾಚಾರ್ಯರು ನಂದಿಪುರಾಣವನ್ನು "ನಂದಿಪ್ರೋಕ್ತಪುರಾಣ" ಎಂಬ ಮಹಾಭಾರತ ಶ್ಲೋಕವನ್ನು ಪ್ರಮಾಣವನ್ನಾಗಿ ಅಂಗೀಕರಿಸಿರುವರು. ಈ ನಂದೀಶ್ವರ ಪ್ರಮಥರನ್ನು ಮಹಾತ್ಮರಾದ ನಿಜಗುಣಶಿವಯೋಗಿಗಳು ತಮ್ಮ "ಅನುಭವಸಾರ" ವೆಂಬ ಗ್ರಂಥದಲ್ಲಿ "ನಂದೀಶ್ವರಂಗೊಮ್ಮೆ ನಾಸಿಖಿದು ನತನಪ್ಪೆಂ" ಎಂದು ಸ್ತುತಿಸಿರುವರು. ಇವೆಲ್ಲ ಕಾರಣಗಳಿಂದ ಪ್ರಮಥಗೋತ್ರವು ವೈದಿಕವೆಂತಲೇ ಸಿದ್ಧವಾಗುತ್ತದೆ. ಈ ಗೋತ್ರದವರಲ್ಲಿ ಗುರು ಶಿಷ್ಯರೆಂಬೆರಡೇ ಭೇದಗಳಿದ್ದು ಅವು ಭಕ್ತಮಾಹೇಶ್ವರರೆಂಬ ಹೆಸರುಗಳಿಂದ ಕರೆಯಲ್ಪಡುವವು. ಈ ರೀತಿಯಾಗಿ ಎರಡೇ ಭೇದಗಳನ್ನು ಕಲ್ಪಿಸಲು ಋಗ್ವೇದವೇ ಮುಖ್ಯಕಾರಣವು. ಯಾಕಂದರೆ ಸಮಗ್ರ ಋಗ್ವೇದದಲ್ಲಿ, ಆರ್ಯ, ಮತ್ತು ದಸ್ಯು, ಎಂಬೆರಡೇ ಮಾನವಜಾತಿಯ ತಾರತಮ್ಯವಾಚಕ ಶಬ್ದಗಳ ಉಲ್ಲೇಖವುಂಟು; ಮತ್ತು ಬ್ರಾಹ್ಮಣಾದಿವರ್ಣ ಚತುಷ್ಟಯಮಂತ್ರವು ಋಗ್ವೇದ ದಶಕದ ೧೦ನೇ ಮಂಡಲದ ಅಂತ್ಯದಲ್ಲಿ ಕಂಡುಬರುವದು. ಇದನ್ನು ವೇದದಲ್ಲಿ ಯಾರೋ ಸ್ವಾರ್ಥಿಗಳು ಸೇರಿಸಿರುವರೆಂತಲೂ ಇದು ಹೊಸದಾಗಿ ರಚಿಸಲ್ಪಟ್ಟಿದ್ದೆಂತಲೂ ಕೆಲವರು ಆಕ್ಷೇಪಿಸುವರು. ಕೆಲವರು ಇದರ ಅರ್ಥವನ್ನು ಅನೇಕ ರೀತಿಯಾಗಿ ಮಾಡುವರು. ಸಾರಾಂಶ, ವರ್ಣಚತುಷ್ಟಯದ ಕಲ್ಪನೆಯು ವರ್ಣದ್ವಯದ ಕಲ್ಪನೆಗಿಂತ ಪೂರ್ವದಲ್ಲೆಂದು ಸ್ಪಷ್ಟವಾಗಿ ಹೇಳಬಹುದು. ಲಿಂಗಾಂಗಿಧರ್ಮಪ್ರವರ್ತಕರಾದ ಪ್ರಮಥವರ್ಯರು ಋಗ್ವೇದವನ್ನು ನೋಡಿಯೇ ಆರ್ಯ-ದಸ್ಯುಗಳೆಂಬ ನಾಮಗಳಂತೆ ಭಕ್ತಮಾಹೇಶ್ವರರೆಂಬೆರಡು ನಾಮಗಳನ್ನು ಕಲ್ಪಿಸಿರುವರೆಂದು ಧಾರಾಳವಾಗಿ ಹೇಳಬಹುದು. ಭಕ್ತಮಾಹೇಶ್ವರ ಶಬ್ದಗಳ ಅರ್ಥವಾದರೂ ಆರ್ಯ-ದಸ್ಯುಶಬ್ದಗಳಿಗೆ ಅನುಗುಣವಾಗಿಯೇ ಇರುವವು ಹೇಗೆಂದರೆ:—ಯಾರು ಇನ್ನೂ ಈಶ್ವರಜ್ಞಾನವನ್ನು ಸಂಪಾದಿಸಿಕೊಂಡಿಲ್ಲವೋ ಯಾರು ಆ ಜ್ಞಾನ ಸಂಪಾದನಾರ್ಥವಾಗಿ ಜ್ಞಾನಬೋಧಕ ಗುರುವನ್ನು ಹುಡುಕಿಕೊಂಡು ಅವನಿಂದ ಆ ಜ್ಞಾನವನ್ನು ಪಡೆಯುತ್ತಿರುವರೋ ಅವರೇ ಭಕ್ತರೆಂತಲೂ ಮತ್ತು ಯಾರು ಮಹೇಶ್ವರ ಅಂದರೆ ಪರಮಾತ್ಮನ ಜ್ಞಾನವುಳ್ಳವರೋ ಅಥವಾ ಈಶ್ವರೀಭಾವ ಅರ್ಥಾತ್ ಈಶ್ವರಸಾಕ್ಷಾತ್ಕಾರಿಗಳೋ ಅಂದರೆ ಬ್ರಹ್ಮಭಾವವನ್ನು ಅರಿತಿರುವರೋ ಅವರೇ ಮಾಹೇಶ್ವರರೆಂತಲೂ ಆಗಮಗಳಲ್ಲಿಯೂ ಬೇರೆಗ್ರಂಥಗಳಲ್ಲಿಯೂ ಭಕ್ತ-ಮಾಹೇಶ್ವರರ ವ್ಯಾಖ್ಯಾನಗಳು ಕೊಡಲ್ಪಟ್ಟಿರುವವು. ಇದರಂತೆ ಯಾರು ಕರ್ಮನಾಶಕರೋ ಅಥವಾ ಜ್ಞಾನಮಾರ್ಗದಿಂದ ದೂರಾಗಿರುವವರೋ ಅವರೇದಸ್ಯುಗಳೆಂತಲೂ "ಅರ್ಯಂವೇದಾದಿಶಾಸ್ತ್ರಂಯ ಅರ್ಥಾತ್ತಪನಅರ್ಯ" ಅಂದರೆ ಯಾರು ಸೃಷ್ಟಿ ಪರಮಾತ್ಮ ಜ್ಞಾನಬೋಧಕಗಳಾದ ವೇದಗಳು ಅಂಬು ಜ್ಞಾನಿಗಳಾಗಿರುವರೋ ಅವರೇ ಆರ್ಯರೆಂತಲೂ ಋಷಿಗ್ರಂಥಗಳಲ್ಲಿ ವ್ಯಾಖ್ಯಾನಗಳು ಕೊಡಲ್ಪಟ್ಟಿರುವವು. ಇದು ಅಲ್ಲದೆ ಈ ಭೂಮಿಯು ಆರ್ಯರ ವಸತಿಸ್ಥಾನವಾದದ್ದರಿಂದ ಕೆಲವುಕಾಲದವರೆಗೆ ಇದು ಆರ್ಯಾವರ್ತವೆಂದು ಕರೆಯಲ್ಪಟ್ಟಿತೆಂದು ಮನುಸ್ಮೃತಿಯಲ್ಲಿ ಹೇಳಿದೆ. ಮತ್ತು ಸಮಸ್ತ ಜಗತ್ತಿಗೆ ಉಪದೇಶವನ್ನು ಮಾಡುವ ಮತ್ತು ಜೀವನಕ್ಕೆ ಆಧಾರಭೂತವಾದ ಧನಧಾನ್ಯಗಳನ್ನು ಪುಷ್ಟೀಕರಿಸುವ ಭೂಮಿಯಾದ್ದರಿಂದ ಇದು ಭಾರತಭೂಮಿ ಎಂದು ಎನ್ನಿಸಿಕೊಂಡಿತು. ಇದೂ ಅಲ್ಲದೆ ಈ ಭೂಮಿಯನ್ನು ಭರತ ರಾಜನು ಸಾರ್ವಭೌಮನಾಗಿ ಆಳಿದ್ದರಿಂದಲೂ ಅವನು ಜೀವನವೃತ್ತಿಗೆ ಆಧಾರಭೂತವಾದ ನಿಯಮಾವಳಿಗಳನ್ನು ಪಾಲಭೂಮಿಯ ಸಾಗುವಳಿಯನ್ನು ವಿಪುಲವಾಗಿ ಮಾಡಿದ್ದರಿಂದಲೂ ಅವನೇ ನಿಜವಾದ ಶಾಸನಕರ್ತನೆಂದು, ಅಂದರೆ ಭರತರಾಜನಿಂದ ಆಳಲ್ಪಟ್ಟ ಭೂಮಿಯೇ ಭಾರತವೆಂದು ಅನೇಕರು ಹೇಳುವರು. ಇದು ಹೇಗೇ ಇರಲಿ. ಇದರ ಉತ್ತರಭಾಗಕ್ಕೆ ಆರ್ಯಾವರ್ತ ಅಥವಾ ಭಾರತವೆಂದು ಪಂಚದ್ರಾವಿಡರಿಂದ ವಾಸಿಸಲ್ಪಟ್ಟ ದಕ್ಷಿಣಭಾಗಕ್ಕೆ ದ್ರವಿಡದೇಶವೆಂದು ಈ ದ್ರವಿಡದೇಶವಾಸಿಗಳಿಗೆ ದ್ರಾವಿಡರೆಂದು, ಅವರ ಭಾಷೆಗಳಿಗೆ ದ್ರವಿಡಭಾಷೆಗಳೆಂದು ಇವತ್ತಿಗೂ ಹೆಸರುಗಳಿರುವವು. ಈ ಸಂಗತಿಗಳನ್ನೆಲ್ಲಾ ಬಿಟ್ಟು ಆ ಲೇಖಕರು ಉಪಯೋಗಿಸಿರುವ ಹಿಂದೂ ಎಂಬ ಶಬ್ದವು ಭಾರತದಲ್ಲಿಯೂ ಪ್ರಚಲಿತಭಾಷೆಗಳ ಶಬ್ದಕೋಶಗಳಲ್ಲಿಯೂ ಸಿಗದೇ ಇರುವದರಿಂದ ಅವರು ಮಾಡುವ ಹಿಂದೂ ಎಂಬ ಶಬ್ದಪ್ರಯೋಗವೇ ತಪ್ಪಿದನೆಂದು ಹೇಳಬೇಕಾಗುವದು. ಅಲೆಕ್ಸಾಂದರನ ಕೂಡ ಈ ದೇಶಕ್ಕೆ ಬಂದವರು ಸಿಂಧುನದಿಯತೀರದ ನಿವಾಸಿಗಳನ್ನೆಲ್ಲ ಹಿಂದುಗಳು ಎಂಬ ಶಬ್ದದಿಂದ ಕರೆಯುತ್ತಿದ್ದರು ಈ ಮೇರೆಗೆ ಈ ಶಬ್ದವು ರೂಢಿಯಲ್ಲಿ ಬಂದಿರುವದನ್ನು ಮರೆತು ಲಿಂಗಾಯತರು ವೇದಾನುಯಾಯಿಗಳಾದ ಹಿಂದುಗಳೇ ಅಲ್ಲವೆಂದು ಉಸುರುವದು ತೀರಸಲ್ಲದಮಾತಾಗಿದೆ.

ವೇದಗಳಲ್ಲಿ ದಸ್ಯುಸದ್ಗುಣಿಯಾದರೆ ಅವನು ಆರ್ಯನಾಗಬಹುದೆಂದು ಗುಣಾನುಗುಣ್ಯ ಆರ್ಯ-ದಸ್ಯುತ್ವವನ್ನು ಪ್ರತಿಪಾದಿಸಿರುವಂತೆ ಗುಣಕರ್ಮಸ್ವಭಾವಗಳಿಂದ ಭಕ್ತನು ಮಾಹೇಶ್ವರನಾಗಬಲ್ಲನೆಂದು ಆಗಮಾದಿಗಳಲ್ಲಿಯೂ ಹೇಳಲ್ಪಟ್ಟಿರುವುದು. ಈ ಆಗಮಗ್ರಂಥಗಳ ಪ್ರಮಾಣವನ್ನು ಮಹಾಭಾರತಾದಿ ಇತಿಹಾಸಗ್ರಂಥಗಳಲ್ಲಿಯೂ ದಶಮಪುರಾಣಗಳಲ್ಲಿಯೂ ಕೊಟ್ಟಿರುವದಲ್ಲದೆ ಶ್ರೀಶಂಕರಾಧ್ಯಾಚಾರ್ಯರೂ ಸುಪ್ರಸಿದ್ಧ ವಿದ್ವಾಂಸರಾದ ಮಾಧವಾಚಾರ್ಯರೂ ಪರಾಶರಸ್ಮೃತಿಯ ಆಚಾರಕಾಂಡದ ವ್ಯಾಖ್ಯಾನದಲ್ಲಿ "ಅತ ಏವ ಶೈವಾಗಮೇ ಪಠ್ಯತೇ" ಎಂದು ಕೆಲವು ಶ್ಲೋಕಗಳನ್ನು ಹೇಳಿ ಆಗಮಗಳ ಪ್ರಮಾಣವನ್ನು ಅಂಗೀಕರಿಸಿರುವರು. ಒಂದುವೇಳೆ ಆಗಮಗ್ರಂಥಗಳು ವೇದವಿರುದ್ಧಮತವನ್ನು ಪ್ರತಿಪಾದಿಸುತ್ತಿದ್ದರೆ ವೇದ ಭಾಷ್ಯಕಾರರಾದ ವಿದ್ಯಾರಣ್ಯಸ್ವಾಮಿಗಳು ಆಗಮಪ್ರಮಾಣಗಳನ್ನು ಎಂದೂ ಉಲ್ಲೇಖಿಸುತ್ತಿದ್ದಿಲ್ಲ.

ಪ್ರಾಚೀನ ವೈದಿಕಧರ್ಮದಂತೆ ಲಿಂಗಾಯತರಲ್ಲಿ ಸ್ತ್ರೀಪುರುಷರಿಗೆ ಸಮಾನ ಅಧಿಕಾರವು ಪರಂಪರೆಯಿಂದ ನಡೆದುಬಂದಿರುವದು. ಆದರೆ ಲಿಂಗರಹಿತರಾದ ಕೆಲವು ದುಷ್ಟಸ್ವಾರ್ಥಿಗಳು ಉಪದ್ವ್ಯಾಪ ನಡಿಸಿ, ಮಧ್ಯಕಾಲದಿಂದ ಸ್ತ್ರೀಪುರುಷರ ಸಮಾನ ಅಧಿಕಾರಪರಂಪರೆಗೆ ವಿಘ್ನವನ್ನು ತಂದಿರುವರು. ಪೂರ್ವಕಾಲದಲ್ಲಿ ಅವರಿಗೆ ಸಮಾನ ಅಧಿಕಾರವಿತ್ತೆಂಬ ಬಗ್ಗೆ ಆಧಾರಗಳೂ ಉದಾಹರಣೆಗಳೂ ವಿಪುಲವಾಗಿ ದೊರೆಯುವವು. ಪಾರಸ್ಕರ ಗೃಹ್ಯಸೂತ್ರ | ಸಾಂಖ್ಯಾಯನ ಶ್ರೌತಸೂತ್ರ ೧-೫ ಆಪಸ್ತಂಭಸೂತ್ರ ೧೨-೧ | ಗೋಭಿಲಸೂತ್ರ ೨-೩ | ಕಾತ್ಯಾಯನಶ್ರೌತಸೂತ್ರ ೧-೬ | ಪೂರ್ವಮೀಮಾಂಸಾ ೬-೧ | ವ್ಯಾಕರಣಮಹಾಭಾಷ್ಯ ೩-೩-೨೧ ಸೂತ್ರ | ಇತ್ಯಾದಿ ಅನೇಕ ಪ್ರಮಾಣಗಳು ಅಧ್ಯಯನ, ಅಧ್ಯಾಪನ, ಹೋಮ, ಹವನ, ಮಂತ್ರಸಂಸ್ಕಾರಾದಿ ಧರ್ಮಕಾರ್ಯಗಳಲ್ಲಿಯೂ ದಿಕ್ಕ ಸರ್ವವ್ಯವಹಾರಗಳಲ್ಲಿಯೂ ಸ್ತ್ರೀಪುರುಷರಿಗೆ ಸಮಾನಅಧಿಕಾರಗಳನ್ನು ತೋರಿಸುತ್ತಿರುವವು.

ಪಂಚಸೂತಕಗಳನ್ನು ಲಿಂಗಾಯತರು ಮನ್ನಿಸುವದಿಲ್ಲೆಂಬದು ನಿಜವು. ಆದರೆ ಅವರು ಇವುಗಳನ್ನು ಮನ್ನಿಸದೆ ಇರುವುದಕ್ಕೆ ಕೆಲವು ಕಾರಣಗಳುಂಟು. ಅವು ಯಾವವೆಂದರೆ—ಲಿಂಗಾಯತರು ಜನನ ಕಾಲದಿಂದ ಪವಿತ್ರವಾದ ಲಿಂಗವನ್ನು ಧರಿಸುವದರಿಂದ ಜನನದಿಂದ ಬರುವ ಅಶೌಚವನ್ನು ನಿಷೇಧಿಸುವರು. ಮತ್ತು ಅಹೋರಾತ್ರಿ ಲಿಂಗವನ್ನು ಧರಿಸಿ ತಥ್ಯಾಚರಣಾದ ವೀರಶೈವನು ಶಿವಸಾಯುಜ್ಯವನ್ನು ಹೊಂದುವನೆಂದು ಧರ್ಮಶಾಸ್ತ್ರನಿರ್ಣಯವಿರುವದರಿಂದ ಅವರು ಮರಣಕಾಲದ ಅಶೌಚವನ್ನು ನಿಷೇಧಿಸುವರು. ಹೇಗೆಂದರೆ—

"ನಸ್ಯಾತ್ಸ್ಪರ್ಶಜದೋಷೋನಸ್ತ್ರೀಬಾಲಾದಿಕಲ್ಪನಾ | ನಜನ್ಮಮರಣಾಶೌಚಂನಸ್ನಾನಾದಿವಿಧಿರ್ಯತಃ ‖ ಮಲ್ಲಿಂಗಧಾರಣಾದೇವಮದ್ಭಕ್ತಾಃ ಪಾವನಾಃಶಿವೇ ‖" ಇದರಂತೆ ಸ್ತ್ರೀಯರ ರಜಸ್ವಲಾದೋಷವೂ ನಿಷೇಧಿಸಲ್ಪಟ್ಟಿರುವುದು.

"ಲಿಂಗಾರ್ಚನರತಾನಾಂಚ ಸೂತಕೇಚಾರಜಸ್ವಲಾ | ಯಥಾಗ್ನಿರ್ಯಥಾ ವಾಯುಃ ಕೋಟಿಕೋಟಿಗುಣಾಃಶುಚಿಃ | ಜಾತಕೇಸೂತಕೇಚಾಪಿನತ್ಯಾಜ್ಯಂ ಶಿವಪೂಜನಂ ‖"

ಈ ರೀತಿಯಾಗಿ ಲಿಂಗಾಯತ ಸ್ತ್ರೀಪುರುಷರಿಗೆ ಸೂತಕವು ನಿಷೇಧಿಸಲ್ಪಟ್ಟಿದೆ. ಪಂಚಸೂತಕಗಳು ದೇಶಕಾಲಸ್ಥಿತಿಗಳಿಗನುಸಾರವಾಗಿ ಸರ್ವದಾ ಬದಲಾಗುತ್ತಿರುವವು. ಇವು ಅಷ್ಟೇನೂ ಮಹತ್ವವಾದವುಗಳಲ್ಲ. ಪೌಂಡರೀಕಾದಿ ಯಾಗಕಾರ್ಯಗಳಲ್ಲಿಯೂ ಹೋಮಹವನಗಳಲ್ಲಿಯೂ ವಿವಾಹ ದೇವತಾರಾಧನೆ ಮೊದಲಾದ ಸಾಮಾನ್ಯಮಂಗಲಕಾರ್ಯಗಳಲ್ಲಿಯೂ ಪಂಚಸೂತಕಗಳಲ್ಲಿ ಯಾವದೊಂದು ಬಂದರೆ ಅದನ್ನು ಇತರ ಬ್ರಾಹ್ಮಣಾದಿ ವರ್ಗದವರು ನಿಷೇಧದಲ್ಲಿ ಗಣಿಸುವದಿಲ್ಲ. ದಂಪತಿಗಳೀರ್ವರೂ ಯಜಮಾನತ್ವದಿಂದ ಯಾಗ ಕಾರ್ಯದಲ್ಲಿ ತೊಡಗಿರಲು ಯಜಮಾನನ ಪತ್ನಿಯು ರಜಸ್ವಲೆಯಾದರೆ ಅಥವಾ ಅವರವರ ಸಂಬಂಧಿಗಳಲ್ಲಿ ಯಾರಾದರೂ ಮೃತಪಟ್ಟುಸೂತಕವು ಬಂದರೆ, ಆಯಜಮಾನನ ಪತ್ನಿಯನ್ನು ಅಥವಾ ಆ ದಂಪತಿಗಳೀರ್ವರನ್ನು ಹೊಲೆಯಿಂದ ಹೊರಗೆ ಕೂಡ್ರಿಸದೆ, ಅವರಿಂದ ಕೆಲವು ಮಂತ್ರೋಚ್ಚಾರಣೆಯನ್ನು ಮಾಡಿಸಿ, ಅವರು ಶುದ್ಧರಾದರೆಂದು ತಿಳಿಯುವರು ಇದಕ್ಕೆ ಪರಾಶರ ಸ್ಮೃತಿಯ ಪ್ರಮಾಣವನ್ನು ತೋರಿಸುವರು. "ಶ್ರೈತಂದೇವಾರ್ಚನಂಯಜ್ಞಯಜ್ಞಾಗ್ನಿಪರಿಗ್ರಹಃ | ಬ್ರಹ್ಮಚಾರಿಯತೀನಾಂ ಚಶರೀರೇನಾಸ್ತಿ ಸೂತಕಂ ‖"

ಈ ಮೇರೆಗೆ ಅವರಲ್ಲಿ ಸೂತಕಗಳು ಸಮಯಾನುಸಾರವಾಗಿ ಅನಿಷೇಧವೆಂದು ಹೇಳಲ್ಪಡುವವು. ಅಂದಬಳಿಕ ಪವಿತ್ರವಾದ ಲಿಂಗವನ್ನು ಸರ್ವಥಾ ಶರೀರದಲ್ಲಿ ಧರಿಸಿ, ಅನನ್ಯಭಾವನೆಯಿಂದ ಪೂಜಿಸುವ ವೀರಶೈವರಿಗೆ ಸೂತಕಗಳು ನಿಷೇಧವೆಂದು ಹೇಳಿದರೆ, ಅದು ವೈದಿಕಧರ್ಮಶಾಸ್ತ್ರಕ್ಕೆ ವಿರೋಧವಾದದ್ದಲ್ಲ.

ಲಿಂಗಾಯತರು ಶ್ರಾದ್ಧಾದಿ ಕರ್ಮಗಳನ್ನು ಆಚರಿಸುವದಿಲ್ಲವಾದ್ದರಿಂದ ಅವರು ಹಿಂದುಗಳಲ್ಲವೆಂದು ಹೇಳುವದು ಅವಿಚಾರದ ಮಾತಾಗಿದೆ. ಲಿಂಗಾಯತರಲ್ಲಿ ಜನಿಸಿದ ಪುರುಷನು. ಅಹೋರಾತ್ರಿ ಶಿವಲಿಂಗವನ್ನು ಧರಿಸಿ, ಶಿವಧ್ಯಾನಯುಕ್ತನಾದ್ದರಿಂದ ಅವನು ಶಿವಸ್ವರೂಪಿಯು ಅರ್ಥಾತ್ ಬ್ರಹ್ಮೀಭೂತನೂ ಆಗುವನು. ಅಂದರೆ ಅವನಿಗೆ ಪುನರ್ಜನ್ಮಾದಿಗಳಿಲ್ಲವೆಂಬ ತತ್ವವಿಚಾರದಿಂದ ಶ್ರಾದ್ಧಾದಿಗಳು ಅವರಲ್ಲಿ ನಿಷೇಧಿಸಲ್ಪಟ್ಟಿರುವವು. ಬ್ರಾಹ್ಮಣಾದಿಗಳಲ್ಲಿಯೂ ಸನ್ಯಾಸಾಶ್ರಮವನ್ನು ಹೊಂದಿದ ಸನ್ಯಾಸಿಗಳಿಗೆ ಪುನರ್ಜನ್ಮಾದಿಗಳಿಲ್ಲ. ಅವರು ಕೇವಲ ಜ್ಞಾನಮಾರ್ಗಾನುವರ್ತಿಗಳಾದ್ದರಿಂದ ಅವರು ಶ್ರಾದ್ಧಾದಿ ಕರ್ಮಗಳನ್ನು ಮಾಡುವದಿಲ್ಲ. ಅದ್ದರಿಂದ ಕರ್ಮಕ್ಕೆ ಅಪ್ರಧಾನವನ್ನೂ ಜ್ಞಾನಕ್ಕೆ ಪ್ರಾಧಾನ್ಯವನ್ನೂ ಕೊಡುವ ವರ್ತಿಸುವ ವೀರಶೈವರಿಗೆ ಶ್ರಾದ್ಧನಿಷೇಧವೇಕೆಂದು ಕೇಳುವದು ವಿಹಿತವಲ್ಲ. ಇದಲ್ಲದೆ ಶ್ರಾದ್ಧಾದಿ ಕರ್ಮಗಳು ವೇದಗಳಲ್ಲಿ ಹೇಳಲ್ಪಡದೆ ಇತ್ತೀಚಿನ ಪೌರಾಣಿಕ ಕಥಾಮೂಲಕವಾಗಿ ಬಂದಿರುತ್ತವೆ. ಅದ್ದರಿಂದ ಅವೈದಿಕಗಳಾದ ಈ ಕರ್ಮಗಳನ್ನು ಲಿಂಗಾಂಗಿಗಳು ಅಂಗೀಕರಿಸದಿರುವದು ವಿಧಿವಿಹಿತವೇ ಆಗಿದೆ.

ಇನ್ನು ಅಷ್ಟಾವರಣಗಳ ಆಚರಣೆಯು ಪದ್ಧತಿಯು ಯಾವ ಧರ್ಮದಲ್ಲಿಯೂ ಇಲ್ಲವಾದ್ದರಿಂದ ಅದು ವೇದೋಕ್ತಮಾರ್ಗವಲ್ಲೆಂದು ಹೇಳಲಿಕ್ಕಾಗದು. ಯಾಕೆಂದರೆ, ಅಷ್ಟಾವರಣಗಳೆಲ್ಲ ಪ್ರಾಚೀನಋಷಿ ಗ್ರಂಥಗಳಲ್ಲಿ ಅಂದರೆ ಉಪನಿಷತ್ತುಗಳಲ್ಲಿಯೂ ಐತರೇಯಾದಿ ಬ್ರಾಹ್ಮಣ ಗ್ರಂಥಗಳಲ್ಲಿಯೂ ಸ್ಮೃತಿಗ್ರಂಥಗಳಲ್ಲಿಯೂ ಮಹಾಭಾರತಾದಿ ಗ್ರಂಥಗಳಲ್ಲಿಯೂ ವರ್ಣಿಸಲ್ಪಟ್ಟಿರುವವು. ಗುರು, ಲಿಂಗ, ಜಂಗಮ, ಮಂತ್ರಪ್ರಸಾದ ಮುಂತಾದವುಗಳ ವರ್ಣನೆಯು ವೇದಗಳಲ್ಲಿ ಸಹ ಕಂಡುಬರುವದು. ಈ ವಿಷಯಕವಾದ ಪ್ರಮಾಣಗಳನ್ನೆಲ್ಲ "ಲಿಂಗಾಂಗಿ ಧರ್ಮವಿಚಾರ" ವೆಂಬ ನನ್ನ ಕನ್ನಡ ಪುಸ್ತಕದಲ್ಲಿ ಸಂಪೂರ್ಣವಾಗಿ ಹೇಳುವೆನು. ಈ ಅಷ್ಟಾವರಣಗಳಲ್ಲಿ ಎಷ್ಟೋ ವಿಷಯಗಳ ವರ್ಣನೆಯು ಐತರೇಯ ತೈತ್ತರೇಯಾದಿ ಬ್ರಾಹ್ಮಣ ಗ್ರಂಥಗಳಲ್ಲಿಯೂ ದೊರೆಯುವದು. "ರುದ್ರಾಕ್ಷಜಾಬಾಲೋಪನಿಷತ್" ಎಂಬ ಪೃಥಕ್ ಉಪನಿಷತ್ತು ರುದ್ರಾಕ್ಷಿಯ ಮಹಿಮೆಯನ್ನು ವರ್ಣಿಸುತ್ತದೆ. ಅದು ಇವತ್ತಿಗೂ ಪ್ರಚಾರದಲ್ಲಿರುವದು. ಅಷ್ಟಾವರಣಗಳಲ್ಲಿ ಬಹಿರಂಗ ಅಷ್ಟಾವರಣ ಅಂತರಂಗ ಅಷ್ಟಾವರಣವೆಂಬ ಎರಡು ಭೇದಗಳಿದ್ದು. ಅವೆರಡೂ ಲಿಂಗಾಯತರಿಗೂ ಬ್ರಾಹ್ಮಣಾದಿ ಚತುರ್ವರ್ಣದವರಿಗೂ ಮಾನ್ಯವುಳ್ಳವುಗಳಾಗಿವೆ.

ಜನನ ಮರಣ, ವಿವಾಹಾದಿ ವಿಧಿಗಳು ದೇಶಕಾಲಸ್ಥಿತಿಗಳಿಗನುಸಾರವಾಗಿ ಭಿನ್ನಭಿನ್ನ ಭಾಗಗಳಲ್ಲಿ ಭಿನ್ನಭಿನ್ನ ರೀತಿಯಾಗಿ ಆಚರಿಸಲ್ಪಡುವವು. ಪಂಜಾಬೀ ಕಾಶ್ಮೀರೀ ಬ್ರಾಹ್ಮಣರು ಮಾಡುವ ವಿಧಿಗಳು ದಕ್ಷಿಣದೇಶದ ಬ್ರಾಹ್ಮಣರು ಮಾಡುವ ವಿಧಿಗಳಿಗಿಂತಲು ಭಿನ್ನವಾಗಿದ್ದು ವಿವಾಹಾದಿ ಕಾರ್ಯಗಳಲ್ಲಿ ಅವರು ಹೇಳುವ ಮಂತ್ರಗಳಿಗೂ ದಕ್ಷಿಣದೇಶದ ಬ್ರಾಹ್ಮರು ಹೇಳುವ ಮಂತ್ರಗಳಿಗೂ ಪೂರ್ವಾಪರ ಸಂಬಂಧವೇ ಇಲ್ಲ. ಹೀಗಿದ್ದಾಗ್ಯೂ, ವೈದಿಕನಾಮಮಾತ್ರದಿಂದಲೇ ಸರ್ವರೂ ಏಕೀಕರಿಸಲಿಕ್ಕೆ ಅಡ್ಡಿ ಇಲ್ಲದಂತಿರುವದು. ಮಂತ್ರಗಳನ್ನು ಬೇರೆ ಹೇಳಿದಾಕ್ಷಣಕ್ಕೆ ಅಥವಾ ವಿವಾಹಾದಿ ಕಾರ್ಯಗಳನ್ನು ಬಿನ್ನರೀತಿಯಿಂದ ಆಚರಿಸಿದ ಮಾತ್ರಕ್ಕೆ ಕಾಶ್ಮೀರದವರು. ಅಥವಾ ಪಂಜಾಬದವರು ಬ್ರಾಹ್ಮಣರೆ ಅಲ್ಲ ಅಥವಾ ಹಿಂದುಗಳೇ ಅಲ್ಲ ಎಂದು ಈ ದಕ್ಷಿಣದೇಶದ ಬ್ರಾಹ್ಮಣರು ಹೇಳಲಿಕ್ಕೆ ಶಕ್ತರಾಗುವರೋ? ಎಂದೂ ಇಲ್ಲ. ಅದರಂತೆಯೇ ಲಿಂಗಾಯತರು. ಮಾಡುವ ವಿಧಿಗಳೂ ಹೇಳುವ ಮಂತ್ರಗಳೂ ವೇದ ಮತ್ತು ಆಗಮಗಳಿಗೆ ಸಮ್ಮತವಾಗಿದ್ದು ಕೇವಲ ಮಂತ್ರವಿಧಾನಗಳೂ ಕ್ರಿಯೆಗಳೂ ಬೇರೆಯಾದಾಕ್ಷಣಕ್ಕೆ ಅವರು ಹಿಂದುಗಳೇ ಅಲ್ಲವೆಂದು ಹೇಳುವದು. ಸಮಂಜಸವೋ? ಪೂಜಾವಿಧಾನಗಳಲ್ಲಿಯೂ ವಿವಾಹಾದಿ ಕಾರ್ಯಗಳಲ್ಲಿಯೂ ಲಿಂಗಾಯತರು ಹೇಳುವ ಮಂತ್ರಗಳೂ, ಬ್ರಾಹ್ಮಣರು ಹೇಳುವ ಮಂತ್ರಗಳೂ, ವಿಧಾನಗಳೂ ಏಕೀಕರಣವಾದವುಗಳಾಗಿರುವವು. ಸಾಮಾನ್ಯವಾಗಿ ಶಿವಪೂಜೆಗೆ ಪ್ರಾರಂಭಮಾಡುವಾಗ್ಗೆ ಅನ್ಯರ ಸಂಕಲ್ಪವು ಸಹ ಒಂದೇಯಾಗಿರುವ ಪಕ್ಷದಲ್ಲಿ ವಿಧಾನವು ಭಿನ್ನವಾದದ್ದೆಂಬುವದು. ಎಂದೂ ಸಮಂಜಸವಾಗಿ ತೋರುವದಿಲ್ಲ. ಇದರಂತೆ ಲಿಂಗಧಾರಣವೂ ವಿಧಿವಿಹಿತವಾದದ್ದೆಂದು ವೇದಮಂತ್ರಗಳ ಆಧಾರದಿಂದಲೇ ಲಿಂಗಾಗಿ ಧರ್ಮಪ್ರವರ್ತಕರು. ಸಿದ್ಧಮಾಡಿರುವರು. ಒಂದು ವೇಳೆ ಮಂತ್ರ ವಿಧಾನಗಳಿಂದ ಹಿಂದುತ್ವವು ಸಿದ್ಧವಾಗುತ್ತಿದ್ದರೆ ಬ್ರಾಹ್ಮಣರಲ್ಲಿಯೇ ಪರಸ್ಪರ ಅತ್ಯಂತ ಭಿನ್ನ ವಿಧಾನಗಳು ಆಗಾಗ್ಗೆ ಕಣ್ಣಿಗೆ ಬೀಳುವವು. ಶೈವರು ಶಿವರಾತ್ರಿಯನ್ನು ಶಿವಪುರಾಣಶ್ರವಣದಿಂದಲೂ ಶಿವನ ಸಂಬಂಧದ ವ್ರತದಿಂದಲೂ, ಶುದ್ಧ ಭಾವದಿಂದ ಶಿವಪೂಜೆಯನ್ನು ಮಾಡುತ್ತಲೂ, ಜಾಗರಣೆಯಿಂದಲೂ ಉಪವಾಸದಿಂದಲೂ ಕಳೆಯುವರು. ಆದರೆ ವೈಷ್ಣವರು ಆದಿವಸ ಹಠಾತ್ತಾಗಿ ಮೃಷ್ಟಾನ್ನವನ್ನುಂಡು, ಶಿವದೇವಾಲಯದ ದರ್ಶನವನ್ನು ಸಹಾ ತೆಗೆದುಕೊಳ್ಳುವದಿಲ್ಲ. ಜನನ ಮರಣ ವಿಧಿಗಳಂತೂ ಬಹಳೇ ಭಿನ್ನವಾಗಿರುವವು. ಇಂಥ ಸಣ್ಣಪುಟ್ಟ ವಿಧಾನಗಳಿಂದ ಪೌರಾಣಿಕ ಕಥಾಸಂಬಂಧದ ವ್ರತಗಳಿಂದ ವೈದಿಕತ್ವವು ಎಂದೂ ಸಿದ್ಧವಾಗಲಾರದು.

ಇನ್ನು ಪುರಾಣಗಳ ವಿಷಯವಾಗಿ ವಿಚಾರಮಾಡಲು ಲಿಂಗಾಯತರ ಪುರಾಣಗಳು ಭಿನ್ನವಾಗಿರುತ್ತವೆಂದು ಹೇಳುವದು ತೀರ ಅಸಂಬದ್ಧವಾದ ಮಾತಾಗಿದೆ. ಇತ್ತೀಚೆಗೆ ಆಗಿಹೋದ ಲಿಂಗಾಯತ ಮಹಾಪುರುಷರ ಚರಿತ್ರಗಳನ್ನು ಕನ್ನಡದಲ್ಲಿ ರಚಿಸಿ ಪ್ರಸಿದ್ಧಿಸಿದ ಕೂಡಲೇ ಲಿಂಗಾಯತರು ಹಿಂದುಗಳೇ ಅಲ್ಲವೆಂದು ಹೇಳಬೇಕೆ ಹೇಗೆ, ಹೀಗೆ ಹೇಳಲಿಕ್ಕೆ ಬರುವಂತಿಲ್ಲ. ಯಾಕಂದರೆ ಇತರ ಜಾತಿಯವರಲ್ಲಿಯೂ ಹಿಂದೀ ಭಾಷೆಯಲ್ಲಿ ರಚಿಸಿದ ಪುರಾಣಗಳಿರುತ್ತವೆ. ಅವುಗಳನ್ನು ಅವರು ಶ್ರದ್ಧಾಪೂರ್ವಕವಾಗಿ ಶ್ರವಣಮಾಡುತ್ತಾರೆ. ಇದರಿಂದ ಅವರಿಗಾದರೂ ಹಿಂದುಗಳಲ್ಲವೆಂದು ಅನ್ನಬೇಕಾಗುವದು. ಆದರೆ ಇಂತಹ ಪುರಾಣ ಭೇದದ ಕಾರಣಗಳನ್ನು ಸಂಪೂರ್ಣವಾಗಿ ಬದಲಿಕ್ಕೆ ಬೇಕು.

೧೯೨೪ ನೆಯ ಇಸವಿ ಅಗಸ್ಟ ತಾ॥ ೨೪ ರಿಂದ ೧೯೨೪ ನೆಯ ಇಸವಿ ಅಗಸ್ಟ ತಾ॥ ೩೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಶ್ರಾವಣ ಬಹುಳ ದಶಮಿಯಿಂದ ಶ್ರಾವಣ ಬಹುಳ ಅಮಾವಾಸ್ಯೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
24	ಭಾನು	ದಶ	60	ಮೃಗ	54-25	9
25	ಸೋಮ	ದಶ	3-0	ಆರ್ದ್ರಾ	60	10
26	[1] ಮಂಗಳ	ಏಕಾ	7-43	ಆರ್ದ್ರಾ	0-35	11
27	[2] ಬುಧ	ದ್ವಾದ	11-52	ಪುನ	6 16	12
28	ಗುರು	ತ್ರಯೋ	15-4	ಪುಷ್ಯ	11-7	13
29	ಶುಕ್ರ	ಚತು	17-8	ಆಶ್ಲೇ	14-46	14
30	[3] ಶನಿ	ಅಮಾ	17-53	ಮಘಾ	17-12	15

(1) ಸರ್ವತ್ರೈಕಾದಶಿ, ಮಂಗಳಗೌರೀವ್ರತಂ. (2) ಪ್ರದೋಷ. (3) ಶ್ರಾವಣಶನಿವಾರಂ.

ಮೈಸೂರು: ಶ್ರೀ. [illegible]

REGSITERED NO. M.124.

ಮೈಸೂರು ಸ್ಟಾರ್

ಪ್ರತಿ ಭಾನುವಾರ [illegible]ಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷ [illegible]ಕೃಶಾವತಾರಾ ಪಕ್ಕಜ ನಕ್ಷತ್ರ ಮೋಹರಾಜೀಯತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂ [illegible]ಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

REGISTERED NO. M. 124.

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ನೆಯ ಇಸವಿ ಅಗಸ್ಟ ತಾರೀಖು ೩೧ ನೆಯ ಭಾನುವಾರ. [ಸಂಚಿಕೆ ೩೫

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.
ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

.ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.
ಚಿಕ್ಕಸೀಸೆ 8 ಆಣೆ. ದೊಡ್ಡ ಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
30 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.
ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,
(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಟಿನ್ನು ಬಾಟ್ಲಿಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦
ಒಂದು ಟಿನ್ನು ಬಾಟ್ಲಿಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.
೨೪ ಟಿನ್ನು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[60—39] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.
ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.
ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಚೆನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.
ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.
ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.
[illegible] ಬೆಲೆ ೧—೦—೦.
ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.
ಸಟೀಕದೀಕ್ಷಾಬೋಧೆ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[60—38] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಮೈಸೂರು.
ಮಳೆಗಾಲಕ್ಕಾಗಿ

ಅನೇಕ ನಮೂನೆ ಕಾಶ್ಮೀರ್‌ಶಾಲುಗಳನ್ನು ಹೆಚ್ಚಾಗಿ ತರಿಸಿ ಬಹು ಸುಲಭ ಬೆಲೆಯಿಂದ ಬಿಕರಿಮಾಡುತ್ತಲಿದ್ದೇವೆಯಾಗಿ ಪ್ರತಿನಿತ್ಯವೂ ಅನೇಕ ಬಿಕರಿಯಾಗುತ್ತಲಿವೆ. ಇದರಡೀ ನಮೂದಿಸಿರುವ ಖರೀದಿಯ ಶಾಲುಗಳ ಪೈಕಿ ನಿಮಗೆ ಬೇಕಾದ ಖರೀದಿಯದಕ್ಕೆ ಆರ್ಡರ್ ಕೊಟ್ಟಲ್ಲಿ ನಂಬಿಗೆಯಿಂದ ನೀವಿದ್ದೆಡೆಗೆ ರವಾನಿಸುತ್ತೇವೆ.

ಬಾರ್ಡರ್‌ಹಾಕಿದ ಉಲನ್ ಶಾಲುಗಳು 1 ಕ್ಕೆ 12-4-0, 13-2-0, 14-8-0, 15-4-0, 16-8-0, 17-2-0, 18-12-0, 19-8-0, 20-4-0, 21-8-0, 22-12-0, 23-8-0, 24-2-0, 25-4-0, 27-8-0, 30-0-0, 32-8-0, 34-4-0, 37-8-0, 48-8-0 ಮೇಲ್ಪಟ್ಟು 65 ರೂಪಾಯಿವರುವಿಗೆ ಸ್ಟಾಕಿನಲ್ಲಿವೆ.

ಖಾತ್ರಿಯಾದ ಜೇಳಿನ ಔಷಧ ಪೆಟ್ಟಿ 1 ಕ್ಕೆ 0-8-0, 12 ಕ್ಕೆ 4-8-0, "ನ್ಯಾಷನಲ್ ಇಂಕ್‌ಪೌಡರ್ ಪ್ಯಾಕೆಟ್" 1ಕ್ಕೆ 1-0-0.

ಅನೇಕ ನಮೂನೆ ಟೈಂಪೀಸುಗಳು ಶೀಮೆಯಿಂದ ಹೆಚ್ಚಾಗಿ ಸಪ್ಲೈ ಆಗಿರುತ್ತಾಗಿ ಖರೀದಿ ಬಹಳ ಕಡಮೆಯಾಗಿರುತ್ತೆ. ಕೊಂಡುಕೊಳ್ಳುವವರಿಗೆ ಇದು ಸುಸಮಯವಾಗಿರುತ್ತಾಗಿ ಇದರಡಿ ನಮೂದಿಸಿರುವ ಖರೀದಿ ಟೈಂಪೀಸುಗಳ ಪೈಕಿ ನಿಮಗೆ ಬೇಕಾದ ಖರೀದಿ ಟೈಂಪೀಸಿಗೆ ಆರ್ಡರ್ ಕೊಡುವುದಲ್ಲದೆ 1-0-0 ರೂ. ಅಡ್ವಾನ್ಸ್ ರವಾನಿಸಿದಲ್ಲಿ ಉತ್ತಮವಾದದನ್ನು ಚುನಾಯಿಸಿ ನಂಬಿಗೆಯಿಂದ ರವಾನಿಸಲಾಗುತ್ತೆ. ಸಾದಾ ಟೈಂಪೀಸ್ 1 ಕ್ಕೆ 3-4-0, 3-6-0.

M.S. SIDDAPPA & BROS

ಅಲಾರಂಟೈಂಪೀಸುಗಳು 4-4-0, 5-2-0, 6-8-0, 7-0-0, 7-12-0, 8-4-0, 9-8-0, 10-2-0, ಮೇಲ್ಪಟ್ಟಿರುತ್ತೆ.

ಗಂಟೆ ½ ಗಂಟೆ ಹೊಡೆದು ಅಲಾರಂ ಸಹಾ ಬಾರಿಸುವ ಟೈಂಪೀಸುಗಳು 7-14-0, 8-8-0, 17-8-0, 18-12-0.

ಕರ್ಣಾನಂದವಾಗಿ ಗಾನಮಾಡುವ ಕ್ಯಾರೇಜ್ ಕ್ಲಾಕ್ 1 ಕ್ಕೆ 15-8-0, 16-4-0

ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು,
[50—48] ಮೈಸೂರು.

ಅಪೂರ್ವ ! ಹೊಸಪುಸ್ತಕ !! ಅಪೂರ್ವ !!!

ಶಿಶುವೈದ್ಯಸಂಜೀವನೀ.

ಕನ್ನಡಿಗರಿಗೆ ಯಾವ ವೈದ್ಯ ಸಂಹಿತೆಯೂ ಇದುವರಿಗೆ ಶಿಗುವಂತಿಲ್ಲ ! ಅದಕ್ಕಾಗಿ ಇದನ್ನು ಎಲ್ಲಾ ಆಯುರ್ವೇದದ ಆಧಾರದಿಂದ ಪ್ರಕಟಿಸಿದ್ದೇವೆ. ಇದರಲ್ಲಿ ಸ್ತ್ರೀಪುರುಷರ ದೇಹತತ್ವ, ವಿವಾಹ ದಾಂಪತ್ಯಸುಖ, ಪಾತಿವ್ರತ್ಯಧರ್ಮ, ಗರ್ಭಿಣಿಯರ ರೋಗನಿದಾನ, ಚಿಕಿತ್ಸೆ, ಉಪಚಾರ, ಸುಖಪ್ರಸವೌಷಧಗಳು, ಪ್ರಸವವಿಧಿ, ದಾಯಿಯಕರ್ತವ್ಯ, ಶಿಶುಪರಿಚರ್ಯ್ಯೆ, ಶಿಶುಗಳ ಸಕಲ ರೋಗಚಿಕಿತ್ಸೆ, ಹಾಗೂ ಎಲ್ಲಾ ಲೋಹಾದಿಗಳ ಶುದ್ಧಿಕ್ರಮ ಮತ್ತು ಭಸ್ಮಗಳು ಮಾಡುವ ವಿಧಾನ, ಧಾತುಪುಷ್ಟಿ ಔಷಧಿಗಳು ಇವೆಲ್ಲ ಶಾಸ್ತ್ರೀಯ ಮತ್ತು ಸಮರ್ಮವಾಗಿ ವಿವರಿಸಲ್ಪಟ್ಟಿದೆ. ಈ ಪುಸ್ತಕವು ಕೇವಲ ದೊಡ್ಡದು. ಇದರಲ್ಲಿ ಹೆಂಗಸರು ಹುಡುಗರು ಸಹ ಸುಲಭವಾಗಿ ತಯಾರ್ಮಾಡುವಂತಹ ೫೦೦ ಔಷಧಗಳಿಗಿಂತ ಹೆಚ್ಚಾಗಿರುವವು. ಈ ಪುಸ್ತಕದ ಕ್ರಯವು ಅದರಲ್ಲಿರುವ ಒಂದೊಂದು ಔಷಧದ ಬೆಲೆಯಾಗಲಾರದೆಂಬುದನ್ನು ನೀವೇ ತಿಳಿದುಕೊಳ್ಳಿರಿ !! ಈ ಪುಸ್ತಕವನ್ನು ಕೊಂಡುಕೊಳ್ಳುವ ಪ್ರತಿಮನುಷ್ಯನೂ ಖಂಡಿತವಾಗಿ ಒಬ್ಬ ವೈದ್ಯನೇ ಆಗುತ್ತಾನೆ. ಕ್ರಯ ಪುಸ್ತಕ ೧ಕ್ಕೆ ೨-೮-೦.

ನಮ್ಮ ವಿಳಾಸ:—ಭಾರತಿ ಬುಕ್‌ಡಿಪೋ,
[4—1] ೧೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

ಎಲ್ಲದರಲ್ಲಿ ಪುರಾತನ ಕಾರಖಾನೆಯು.

ಸೂಚನೆ:—ಯಾವದೊಂದು ಮಾಲು ಗುಣಕಾರಿಯಾಗಿರುವದೆಂದು ತಿಳಿದಕೂಡಲೆ ಎಲ್ಲ ಕಡೆಗೂ ಅದರ ನಕಲು ಮಾಡಲಿಕ್ಕೆ ಆರಂಭವಾಗುತ್ತದೆ. ಆದರೆ ಹೆಸರಿಗೆ ತಕ್ಕಂತೆ ಗುಣಕ್ಕೆ ಮಾತ್ರ ಪಾತ್ರವಾಗುವದಿಲ್ಲ. ಈಗೀಗ ಇಲ್ಲಿ ನಕಲೀ ಓಷಧಿಯ ಕಾರಖಾನೆಗಳು ಹೊರಡಹತ್ತಿರುವವು. ಆದ್ದರಿಂದ ಗಿರಾಕಿಗಳು ನಮ್ಮ ಟ್ರೇಡಮಾರ್ಕನ್ನು ನೋಡಿ ತಕ್ಕೊಳ್ಳಬೇಕು

ಸುವರ್ಣಪದಕ ಸಂಪಾದಿಸಿದ

ದ್ರಾಕ್ಷಾಶರ್ಕರಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ಥ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦, ೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವುದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.—ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾಶರ್ಕರ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚೆನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇರೋಗವಿದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟಲಿಯ ಕಿಮ್ಮತ್ತು ೧| ರೂಪಾಯಿ ಮೂರುಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತ್ತು ೧೧—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧—೪—೦, ೩ ಬಾಟ್ಲಿಗೆ ೩—೦—೦, ಡಜನ್ನಿಗೆ ೧೩—೦—೦

ಮ್ಯಾನೇಜರ—ದ್ರಾಕ್ಷಾಶರ್ಕರಮಧು ಆಫೀಸು,
[12—3] ಪೋ. ನಿಪ್ಪಾಣಿ, ಜಿ. ಬೆಳಗಾವ.

ಸುಗಂಧದ್ರವ್ಯಗಳ ಕಾರಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
28 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ	ರೂ.	೧—೦—೦
ಕೇನೋಪನಿಷತ್ ಶಾಂಕರೀ	ರೂ.	೧—೮—೦
ವೀರಶೈವಸಿದ್ಧಾಂತ ಸುಧಾಕರ	ರೂ.	೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೋಜನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಪ್ರೌಢವಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

[illegible] ಸಂ. [illegible], [illegible].

ಗ್ರಂಥಸಿಕ್ಕುವ ಸ್ಥಳ:— 36—31
ಹೊಸಮಠದ [illegible], ಚಿತ್ರದುರ್ಗ [illegible]

ವಾದಿಶೆಯಾಗಿ ಶೈವಧರ್ಮವನ್ನೂ ವೀರಶೈವ ಪಂಥವನ್ನೂ ಪ್ರತಿಪಾದಿಸಿರುವದರಿಂದ, ಅವು ಎರಡೂ ಪಂಥದವರಿಗೆ ಉಪಯೋಗವುಳ್ಳವುಗಳಾಗಿವೆ. ಲಿಂಗಾಯತರು ವೇದಗಳನ್ನು ಮನ್ನಿಸುವದಿಲ್ಲೆಂದು ಕೆಲವರು ಹೇಳುವರು. ಆದರೆ ಇದು ಸರಿಯಾದದ್ದಲ್ಲ. ಯಾಕೆಂದರೆ ಲಿಂಗಾಯತಧರ್ಮ ಪ್ರವರ್ತಕರಾದ ಸಮಸ್ತ ಪ್ರಮಥರೂ ಋಷಿಗಳೂ ಆಚಾರ್ಯರೂ ಪಂಡಿತರೂ ವೇದಮಂತ್ರಗಳ ಆಧಾರದಿಂದಲೇ ತಮ್ಮ ಗ್ರಂಥಗಳನ್ನು ರಚಿಸಿರುವರು. ಇದಲ್ಲದೆ ಶೈವಾಗಮಗಳಲ್ಲಿ ವೇದಶ್ರುತಿಯು ಅಲ್ಲಲ್ಲಿ ಕಂಡುಬರುತ್ತದೆ. ಲಿಂಗಾಂಗಿಧರ್ಮಪ್ರವರ್ತಕರಾದ ರೇಣುಕಾಚಾರ್ಯರೇ "ಪವಿತ್ರಂತೇವಿತತಂಬ್ರಹ್ಮಣಸ್ಪತೇಪ್ರಭುರ್ಗಾತ್ರಾಣಿಪರ್ಯೇಷಿವಿಶ್ವತಃ" ಎಂಬ ಋಗ್ವೇದ ಮಂತ್ರಕ್ಕೆ "ಬ್ರಹ್ಮೇತಿಲಿಂಗಮಾಖ್ಯಾತಂಬ್ರಹ್ಮಣಃಪತಿರೀಶ್ವರಃ | ಪವಿತ್ರಂತದ್ವಿಖ್ಯಾತಂತತ್ಸಂಪರ್ಕಾತ್ತನುಃಶುಚಿಃ || ಋಗಿತ್ಯಾಹಪವಿತ್ರಂತೇವಿತತಂಬ್ರಹ್ಮಣಸ್ಪತೇ | ತಸ್ಮಾತ್ಪವಿತ್ರಂತಲ್ಲಿಂಗಂಧಾರ್ಯಂಶೈವಮನೀಷಿಭಿಃ" ಎಂದು ಸಿದ್ಧಾಂತಶಿಖಾಮಣಿ ಎಂಬ ತಮ್ಮ ಗ್ರಂಥದಲ್ಲಿ ಅರ್ಥವನ್ನು ಹೇಳಿರುವರು. ಇದರಂತೆ ಶ್ರೀಕರಾಚಾರ್ಯರಾದರೂ "ಅಶೇಷೋಪನಿಷತ್ಸಾರ ವಿಶೇಷಾದ್ವೈತಮಂಡನಂ ಶಿವಜ್ಞಾನಪ್ರದಂಸೂತ್ರಭಾಷ್ಯಂವಿಜಯತುಸರ್ವದಾ ವೇದಾಗಮಾರ್ಥತತ್ವಜ್ಞ ಶೈವಾನಾಂಮೋಕ್ಷಕಾಂಕ್ಷಿಣಾಂ | ವೈದಿಕಾನಾಂವಿಶುದ್ಧಾನಾಮೇತದ್ಭಾಷ್ಯಂಚಕಲ್ಪಿತಂ || ಶ್ರುತ್ಯೈಕದೇಶಪ್ರಾಮಾಣ್ಯಂದ್ವೈತಾದ್ವೈತಮತಾದಿಷು | ದ್ವೈತಾದ್ವೈತಮತೇಶುದ್ಧೇವಿಶೇಷಾದ್ವೈತಸಂಜ್ಞಿತೇ ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ" ಇತ್ಯಾದಿ ಶ್ಲೋಕಗಳಿಂದ ಮೊದಲು ಪೀಠಿಕೆಯಲ್ಲಿ ವೀರಶೈವಧರ್ಮಕ್ಕೆ ವೇದಪ್ರಾಮಾಣ್ಯವನ್ನೇ ಪ್ರತಿಪಾದಿಸಿರುವರು. ಇದಲ್ಲದೆ ಕನ್ನಡದಲ್ಲಿ ವೀರಶೈವಧರ್ಮಧುರಂಧರಾದ ನಿಜಗುಣಶಿವಯೋಗಿಗಳು, "ಅನುಭವಸಾರ" ವೆಂಬ ಗ್ರಂಥದಲ್ಲಿ "ಶ್ರುತಿಯನೇಕ ರಿಷಿವೇಳ ಶಿಶಯದ ಋಷಿವಾಕ್ಯಸ್ಮೃತಿಯೆನಿಸಿಲೋಕದೊಳು ಸೇವ್ಯವೆನಿಸಲ್ | ಶ್ರುತಿಯೋಪ್ರಮಾಣವಿಲಿಗೆ ||" ಎಂದು ಶ್ರುತಿ ಅಂದರೆ ವೇದ ಮತ್ತು ಉಪನಿಷತ್ತುಗಳನ್ನು ಕೊಂಡಾಡಿರುವರು. ಮತ್ತು ವೇದವೇದಾಂತದ ತತ್ವಾರ್ಥವನ್ನೇ ಈ ಅನುಭವಸಾರದಲ್ಲಿ ಹೇಳಿದೆ ವೆಂಬದಾಗಿ ಮೊದಲು ತಿಳಿಸಿ ಆಮೇಲೆ ಅದನ್ನೇ ಚನ್ನಾಗಿ ವರ್ಣಿಸಿರುವರು. ಒಂದುವೇಳೆ ಪಂಚಮರಿಗೆ "ವೇದಾರಿ" "ಮಖಾರಿ" ಎಂಬ ಹೆಸರುಗಳಿದ್ದರೂ ಅವರು ವೇದಗಳಿಗೆ ಶತ್ರುಗಳಾಗಲಾರರು. ಯಾಕೆಂದರೆ ಅವರು ವೇದಗಳಿಗೆ ಶತ್ರುಗಳಾಗಿದ್ದ ಪಕ್ಷದಲ್ಲಿ "ವೇದಾರಿ" "ಕಾಲಾರಿ" ಮೊದಲಾಗಿ ಪಂಚಮ ಶಿಷ್ಯರು ತಮ್ಮ ಗುರುಗಳ ಶಾಖೆಗಳಾದ ಋಗ್ವೇದ ಯಜುರ್ವೇದಾದಿಗಳನ್ನು ಅಂಗೀಕರಿಸಿ ತಾವು ಇಂತಹ ವೇದಶಾಖಾನುಯಾಯಿಗಳೆಂದು ಎಂದೂ ಹೇಳಿಕೊಳ್ಳುತ್ತಿದ್ದಿಲ್ಲ. ಇದಲ್ಲದೆ ಕಾಶೀ ಜಂಗಮವಾಡೀಮಠದಲ್ಲಿ ವರ್ಷಕ್ಕೊಮ್ಮೆ ಹವನಮಾಡುವ ಪರಿಪಾಠವು ಪೂರ್ವದಲ್ಲಿದ್ದದ್ದರಿಂದ ಆ ಹವನಕುಂಡವು ಈವತ್ತಿಗೂ ಇರುತ್ತದೆ. ಅದನ್ನು ಅಲ್ಲಿಯ ಅಧಿಕಾರಸ್ಥರು ಕಾಯ್ದಿಟ್ಟಿರುವರು. ಹವನಯಾಗಾದಿವಿಧಿಗಳು ಲಿಂಗಾಯತರಲ್ಲಿ ಲೋಪವಾಗಲು ಕಾರಣವೇನಂದರೆ:—ಶಿವಪೂಜಾವಿಧಾನಗಳಲ್ಲಿ ಆ ವಿಧಿಗಳೆಲ್ಲ ಬಂದು ಹೋಗುವವು. ಈ ವಿಷಯವನ್ನು "ಲಿಂಗಾಂಗಿಧರ್ಮವಿಚಾರ" ವೆಂಬ ನನ್ನ ಕನ್ನಡಗ್ರಂಥದಲ್ಲಿ ವಿಶದವಾಗಿ ಹೇಳಿರುವೆನು. ಈ ಸಂಗತಿಗಳನ್ನೆಲ್ಲ ವಿಚಾರ ಮಾಡದೆ "ವೇದಾರಿ" ಎಂಬ ಶಬ್ದಮಾತ್ರದಿಂದಲೇ ಲಿಂಗಾಯತರೆಲ್ಲರೂ ವೇದಕ್ಕೆ ಅರಿಗಳೆಂದು ಅರ್ಥಮಾಡಿ ಹೇಳುವದು ಸರಿಯಲ್ಲ. ಇದರ ಹೊರತು ಭಗವದ್ಗೀತೆಯಲ್ಲಿಯೂ "ತ್ರೈಗುಣ್ಯವಿಷಯಾವೇದಾನಿಸ್ತ್ರೈಗುಣ್ಯೋ ಭವಾರ್ಜುನ" ಎಂದು ವೇದಗಳಿಗೆ ತ್ರಿಗುಣಾತ್ಮಕತ್ವವನ್ನು ಹೇಳಿ ತ್ರಿಗುಣರಹಿತನಾಗೆಂದು ಶ್ರೀ ಕೃಷ್ಣದೇವನು ಅರ್ಜುನನಿಗೆ ಉಪದೇಶಿಸಿದ್ದಾನೆ. ಇಷ್ಟರಿಂದಲೇ ಶ್ರೀ ಕೃಷ್ಣದೇವನು ವೇದವಿರೋಧಿ ಎಂದು ಹೇಳಬಹುದೇ? ವೇದ ಮತ್ತು ಆಗಮ ಮೊದಲಾದ ಗ್ರಂಥಗಳಲ್ಲಿ, ಪ್ರಮಥಗೋತ್ರ, ಋಷಿಗೋತ್ರ, ಎಂಬೆರಡು ಮನುಷ್ಯಜಾತಿಯ ಗೋತ್ರಗಳು ಹೇಳಲ್ಪಟ್ಟಿರುತ್ತವೆ. ಇವುಗಳಲ್ಲಿ ಪ್ರಮಥಗೋತ್ರದವರೇ ವೀರಶೈವರೂ ಋಷಿಗೋತ್ರದವರೇ ಶೈವ, ಶಾಕ್ತ, ವೈಷ್ಣವಪಂಥದ ಅನುಯಾಯಿಗಳೂ ಆಗಿರುತ್ತಾರೆ. ಪ್ರಮಥಗಣದ ವರ್ಣನೆಯು "ಗಣಾನಾಂತ್ವಾಗಣಪತಿಂ" ಇತ್ಯಾದಿ ಮಂತ್ರಗಳಿಂದ ಯಜುರ್ವೇದದಲ್ಲಿಯೂ ಮಹಾಭಾರತ ಇತ್ಯಾದಿ ಇತಿಹಾಸಗ್ರಂಥಗಳಲ್ಲಿಯೂ ಪುನಃ ಪುನಃ ಕಣ್ಣಿಗೆಬೀಳುವದು. ಶೈವಾಗಮಗಳಲ್ಲಿ ಪ್ರಮಥರವರ್ಣನೆಯು ವಿಶೇಷವಾಗಿರುವದು. ಶ್ರೀಕರಾದಿಭಾಷ್ಯಗಳಲ್ಲಿಯೂ ಅವರ ಪ್ರಶಂಸೆಯುಂಟು. "ನಕ್ಷತ್ರಾನಂದೀಶವಚನಾದ್ದೀಕ್ಷಾಶೈವಧರ್ಮೋಪದೇಶಿಕಾನ್ ಶಿವಾಗಮತತ್ವಜ್ಞಾನಾನ್ ಪಾರಂಪರ್ಯವಿಶೇಷತಃ" ಇದರಂತೆ ಮಹಾಭಾರತದ ಅಶ್ವಮೇಧಪರ್ವದಲ್ಲಿ "ನಂದಿಧರ್ಮಾಶ್ರಮಾನಾಮ" ಎಂದು ನಂದೀಶ್ವರನು ತಪೋಧರ್ಮವು ಸ್ತುತಿಸಲ್ಪಟ್ಟಿರುತ್ತದೆ. ಪರಾಶರಸ್ಮೃತಿಯ ಆಚಾರಕಾಂಡದ ವ್ಯಾಖ್ಯಾನದಲ್ಲಿ ಪ್ರಸಿದ್ಧ ವಿದ್ವಾಂಸರಾದ ಮಾಧವಾಚಾರ್ಯರು ನಂದಿಪುರಾಣವನ್ನು "ನಂದಿಧರ್ಮಾಶ್ರಮಾವನಾ" ಎಂಬ ಮಹಾಭಾರತ ಶ್ಲೋಕವನ್ನು ಪ್ರಮಾಣವನ್ನಾಗಿ ಅಂಗೀಕರಿಸಿರುವರು. ಆ ನಂದೀಶ್ವರ ಪ್ರಮಥರನ್ನು ಮಹಾತ್ಮರಾದ ನಿಜಗುಣಶಿವಯೋಗಿಗಳು ತಮ್ಮ "ಅನುಭವಸಾರ" ವೆಂಬ ಗ್ರಂಥದಲ್ಲಿ "ನಂದೀಶ್ವರಂಗೊಮ್ಮೆನಾನೆರಗಿದು ನತನಪ್ಪೆಂ" ಎಂದು ಸ್ತುತಿಸಿರುವರು. ಇವೆಲ್ಲ ಕಾರಣಗಳಿಂದ ಪ್ರಮಥಗೋತ್ರವು ವೈದಿಕವೆಂಬಲೇ ಸಿದ್ಧವಾಗುತ್ತದೆ. ಈ ಗೋತ್ರದವರಲ್ಲಿ ಗುರು ಶಿಷ್ಯರೆಂಬೆರಡೇ ಭೇದಗಳಿದ್ದು ಅವು ಭಕ್ತಮಾಹೇಶ್ವರರೆಂಬ ಹೆಸರುಗಳಿಂದ ಕರೆಯಲ್ಪಡುವವು. ಈ ರೀತಿಯಾಗಿ ಎರಡೇ ಭೇದಗಳನ್ನು ಕಲ್ಪಿಸಲು ಋಗ್ವೇದವೇ ಮುಖ್ಯ ಕಾರಣವು. ಯಾಕಂದರೆ ಸಮಗ್ರ ಋಗ್ವೇದದಲ್ಲಿ, ಆರ್ಯ, ಮತ್ತು ದಸ್ಯು, ಎಂಬೆರಡೇ ಮಾನವಜಾತಿಯ ತಾರತಮ್ಯವಾಚಕ ಶಬ್ದಗಳ ಉಲ್ಲೇಖವುಂಟು; ಮತ್ತು ಬ್ರಾಹ್ಮಣಾದಿವರ್ಣ ಚತುಷ್ಟಯಮಂತ್ರವು ಋಗ್ವೇದದ ಕಡೆಯ ೧೦ನೇ ಮಂಡಲದ ಅಂತ್ಯದಲ್ಲಿ ಕಂಡುಬರುವದು. ಇದನ್ನು ವೇದದಲ್ಲಿ ಯಾರೋ ಸ್ವಾರ್ಥಿಗಳು ಸೇರಿಸಿರುವರೆಂತಲೂ ಇದು ಹೊಸದಾಗಿ ರಚಿಸಲ್ಪಟ್ಟದ್ದೆಂತಲೂ ಕೆಲವರು ಆಕ್ಷೇಪಿಸುವರು. ಕೆಲವರು ಇದರ ಅರ್ಥವನ್ನು ಅನೇಕ ರೀತಿಯಾಗಿ ಮಾಡುವರು. ಸಾರಾಂಶ, ವರ್ಣಚತುಷ್ಟಯದ ಕಲ್ಪನೆಯು ವರ್ಣದ್ವಯದ ಕಲ್ಪನೆಗಿಂತ ಪೂರ್ವದಲ್ಲಿಂದು ಸ್ಪಷ್ಟವಾಗಿ ಹೇಳಬಹುದು. ಲಿಂಗಾಂಗಿಧರ್ಮಪ್ರವರ್ತಕರಾದ ಪ್ರಮಥವರ್ಯರು ಋಗ್ವೇದವನ್ನು ನೋಡಿಯೇ ಆರ್ಯ-ದಸ್ಯುಗಳೆಂಬ ನಾಮಗಳಂತೆ ಭಕ್ತಮಾಹೇಶ್ವರರೆಂಬೆರಡು ನಾಮಗಳನ್ನು ಕಲ್ಪಿಸಿರುವರೆಂದು ಧಾರಾಳವಾಗಿ ಹೇಳಬಹುದು. ಭಕ್ತಮಾಹೇಶ್ವರ ಶಬ್ದಗಳ ಅರ್ಥವಾದರೂ ಆರ್ಯ-ದಸ್ಯುಶಬ್ದಗಳಿಗೆ ಅನುಗುಣವಾಗಿಯೇ ಇರುವವು ಹೇಗೆಂದರೆ:—ಯಾರು ಇನ್ನೂ ಈಶ್ವರಜ್ಞಾನವನ್ನು ಸಂಪಾದಿಸಿಕೊಂಡಿಲ್ಲವೋ ಯಾರು ಆ ಜ್ಞಾನ ಸಂಪಾದನಾರ್ಥವಾಗಿ ಜ್ಞಾನಭೋದಕ ಗುರುವನ್ನು ಹುಡುಕಿಕೊಂಡು ಅವನಿಂದ ಆ ಜ್ಞಾನವನ್ನು ಪಡೆಯುತ್ತಿರುವರೋ ಅವರೇ ಭಕ್ತರೆಂತಲೂ ಮತ್ತು ಯಾರು ಮಹೇಶ್ವರ ಅಂದರೆ ಪರಮಾತ್ಮನ ಜ್ಞಾನವುಳ್ಳವರೋ ಅಥವಾ ಈಶ್ವರೀಭಾವ ಅರ್ಥಾತ್ ಈಶ್ವರಸಾಕ್ಷಾತ್ಕಾರಿಗಳೋ ಅಂದರೆ ಬ್ರಹ್ಮಭಾವವನ್ನು ಅರಿತಿರುವರೋ ಅವರೇ ಮಾಹೇಶ್ವರರೆಂತಲೂ ಆಗಮಗಳಲ್ಲಿಯೂ ಬೇರೆಗ್ರಂಥಗಳಲ್ಲಿಯೂ ಭಕ್ತ-ಮಾಹೇಶ್ವರರ ವ್ಯಾಖ್ಯಾನಗಳು ಕೊಡಲ್ಪಟ್ಟಿರುವವು. ಇದರಂತೆ ಯಾರು ಕರ್ಮಾಸಕ್ತರೋ ಅಥವಾ ಜ್ಞಾನಮಾರ್ಗದಿಂದ ದೂರಾಗಿರುವವರೋ ಅವರೇದಸ್ಯುಗಳೆಂತಲೂ "ಆರ್ಯಂವೇದಾದಿಶಾಸ್ತ್ರಂಯ ಅಚಾರಶ್ಚನವಿಯಾ" ಅಂದರೆ ಯಾರು ಶ್ರುತಿ ಪರಮಾತ್ಮಜ್ಞಾನಬೋಧಕಗಳಾದ ವೇದಗಳು [illegible] ಜ್ಞಾನಿಗಳಾಗಿರುವರೋ ಅವರೇ ಆರ್ಯರೆಂತಲೂ [illegible] ಗ್ರಂಥಗಳಲ್ಲಿ ವ್ಯಾಖ್ಯಾನಗಳು ಕೊಡಲ್ಪಟ್ಟಿರುವವು. ಇದು ಅಲ್ಲದೆ ಈ ಭೂಮಿಯು ಆರ್ಯರ ವಸತಿಸ್ಥಾನವಾದದ್ದರಿಂದ ಕೆಲವುಕಾಲದವರೆಗೆ ಇದು ಆರ್ಯಾವರ್ತವೆಂದು ಕರೆಯಲ್ಪಟ್ಟಿತೆಂದು ಮನುಸ್ಮೃತಿಯಲ್ಲಿ ಹೇಳಿದೆ. ಮತ್ತು ಸಮಸ್ತ ಜಗತ್ತಿಗೆ ಉಪದೇಶವನ್ನು ಮಾಡುವ ಮತ್ತು ಜೀವನಕ್ಕೆ ಆಧಾರಭೂತವಾದ ಧನಧಾನ್ಯಗಳನ್ನು ಪೂರೈಸುವ ಭೂಮಿಯಾದದ್ದರಿಂದ ಇದು ಭಾರತಭೂಮಿ ಎಂದು ಯೆನ್ನಿಸಿಕೊಂಡಿತು. ಇದೂ ಅಲ್ಲದೆ ಈ ಭೂಮಿಯನ್ನು ಭರತರಾಜನು ಸಾರ್ವಭೌಮನಾಗಿ ಆಳಿದ್ದರಿಂದಲೂ ಅವನು ಜೀವನವೃತ್ತಿಗೆ ಆಧಾರಭೂತವಾದ ನಿಯಮಕಾಲುವೆಗಳನ್ನು ಸಾಗುವಳಿಭೂಮಿಯನ್ನು ವಿಪುಲವಾಗಿ ಮಾಡಿದ್ದರಿಂದಲೂ ಅವನೇ ನಿಜವಾದ ಶಾಸನಕರ್ತನೆಂದು, ಅಂದರೆ ಭರತರಾಜನಿಂದ ಆಳಲ್ಪಟ್ಟ ಭೂಮಿಯೇ ಭಾರತವೆಂದು ಅನೇಕರು ಹೇಳುವರು. ಇದು ಹೇಗೇ ಇರಲಿ. ಇದರ ಉತ್ತರಭಾಗಕ್ಕೆ ಆರ್ಯಾವರ್ತ ಅಥವಾ ಭಾರತವೆಂದು ಪಂಚದ್ರಾವಿಡರಿಂದ ವಾಸಿಸಲ್ಪಟ್ಟ ದಕ್ಷಿಣಭಾಗಕ್ಕೆ ದ್ರಾವಿಡದೇಶವೆಂದು ಈ ದ್ರಾವಿಡದೇಶವಾಸಿಗಳಿಗೆ ದ್ರಾವಿಡರೆಂದು, ಅವರ ಭಾಷೆಗಳಿಗೆ ದ್ರಾವಿಡಭಾಷೆಗಳೆಂದು ಇವತ್ತಿಗೂ ಹೆಸರುಗಳಿರುವವು. ಈ ಸಂಗತಿಗಳನ್ನೆಲ್ಲಾ ಬಿಟ್ಟು ಆ ಲೇಖಕರು ಉಪಯೋಗಿಸಿರುವ ಹಿಂದೂ ಎಂಬ ಶಬ್ದವು ಭಾರತದಲ್ಲಿಯೂ ಪ್ರಚಲಿತಭಾಷೆಗಳ ಶಬ್ದಕೋಶಗಳಲ್ಲಿಯೂ ಸಿಗದೇ ಇರುವದರಿಂದ ಅವರು ಮಾಡುವ ಹಿಂದೂ ಎಂಬ ಶಬ್ದಪ್ರಯೋಗವೇ ತಪ್ಪಿದನೆಂದು ಹೇಳಬೇಕಾಗುವದು. ಅರಬ್ಬಾಂದರನಗೂಡ ಈ ದೇಶಕ್ಕೆ ಬಂದವರು ಸಿಂಧೂನದಿಯತೀರದ ನಿವಾಸಿಗಳನ್ನೆಲ್ಲ ಹಿಂದೂಗಳು ಎಂಬ ಶಬ್ದದಿಂದ ಕರೆಯುತ್ತಿದ್ದರು ಈ ವೇಳೆಗೆ ಈ ಶಬ್ದವು ರೂಢಿಯಲ್ಲಿ ಬಂದಿರುವದನ್ನು ಮರೆತು ಲಿಂಗಾಯತರು ವೇದಾನುಯಾಯಿಗಳಾದ ಹಿಂದೂಗಳೇ ಅಲ್ಲವೆಂದು ಉಸುರುವದು ತೀರಸಲ್ಲದಮಾತಾಗಿದೆ.

ವೇದಗಳಲ್ಲಿ ದಸ್ಯುವಿದ್ದ ಗುಣವಿದ್ದರೆ ಅವನು ಆರ್ಯನಾಗಬಹುದೆಂದು ಗುಣಾನುಗುಣ್ಯ ಆರ್ಯ-ದಸ್ಯುತ್ವವನ್ನು ಪ್ರತಿಪಾದಿಸಿರುವಂತೆ ಗುಣಕರ್ಮಸ್ವಭಾವಗಳಿಂದ ಭಕ್ತನು ಮಾಹೇಶ್ವರನಾಗಬಲ್ಲನೆಂದು ಆಗಮಾದಿಗಳಲ್ಲಿಯೂ ಹೇಳಲ್ಪಟ್ಟಿರುವುದು. ಈ ಆಗಮಗ್ರಂಥಗಳ ಪ್ರಮಾಣವನ್ನು ಮಹಾಭಾರತಾದಿ ಇತಿಹಾಸಗ್ರಂಥಗಳಲ್ಲಿಯೂ ದಶಮಪುರಾಣಗಳಲ್ಲಿಯೂ ಕೊಟ್ಟಿರುವದಲ್ಲದೆ ಶ್ರೀಶಂಕರಾಧ್ಯಾಚಾರ್ಯರೂ ಸುಪ್ರಸಿದ್ಧ ವಿದ್ವಾಂಸರಾದ ಮಾಧವಾಚಾರ್ಯರೂ ಪರಾಶರಸ್ಮೃತಿಯ ಆಚಾರಕಾಂಡದ ವ್ಯಾಖ್ಯಾನದಲ್ಲಿ "ಅತ ಏವ ಶೈವಾಗಮೇ ಪಠ್ಯತೇ" ಎಂದು ಕೆಲವು ಶ್ಲೋಕಗಳನ್ನು ಹೇಳಿ ಆಗಮಗಳ ಪ್ರಮಾಣವನ್ನು ಅಂಗೀಕರಿಸಿರುವರು. ಒಂದುವೇಳೆ ಆಗಮಗ್ರಂಥಗಳು ವೇದವಿರುದ್ಧಮತವನ್ನು ಪ್ರತಿಪಾದಿಸುತ್ತಿದ್ದರೆ ವೇದಭಾಷ್ಯಕಾರರಾದ ವಿದ್ಯಾರಣ್ಯಸ್ವಾಮಿಗಳು ಆಗಮಪ್ರಮಾಣಗಳನ್ನು ಎಂದೂ ಉಲ್ಲೇಖಿಸುತ್ತಿದ್ದಿಲ್ಲ.

ಪ್ರಾಚೀನ ವೈದಿಕಧರ್ಮದಂತೆ ಲಿಂಗಾಯತರಲ್ಲಿ ಸ್ತ್ರೀಪುರುಷರಿಗೆ ಸಮಾನ ಅಧಿಕಾರವು ಪರಂಪರೆಯಿಂದ ನಡೆದುಬಂದಿರುವದು. ಆದರೆ ಲಿಂಗರಹಿತರಾದ ಕೆಲವು ದುಷ್ಟಸ್ವಾರ್ಥಿಗಳು ಉಪದ್ವ್ಯಾಪ ನಡಿಸಿ, ಮಧ್ಯಕಾಲದಿಂದ ಸ್ತ್ರೀಪುರುಷರ ಸಮಾನ ಅಧಿಕಾರಪರಂಪರೆಗೆ ವಿಘ್ನವನ್ನು ತಂದಿರುವರು. ಪೂರ್ವಕಾಲದಲ್ಲಿ ಅವರಿಗೆ ಸಮಾನ ಅಧಿಕಾರವಿತ್ತೆಂಬ ಬಗ್ಗೆ ಆಧಾರಗಳೂ ಉದಾಹರಣೆಗಳೂ ವಿಪುಲವಾಗಿ ದೊರೆಯುವವು. ಪಾರಸ್ಕರ ಗೃಹ್ಯಸೂತ್ರ | ಸಾಂಖ್ಯಾಯನ ಶ್ರೌತಸೂತ್ರ ೧.೫ ಆಪಸ್ತಂಭಸೂತ್ರ ೧೩.೧ | ಗೋಭಿಲಸೂತ್ರ ೨.೩ | ಕಾತ್ಯಾಯನಶ್ರೌತಸೂತ್ರ ೧.೬ | ಪೂರ್ವಮೀಮಾಂಸಾ ೬.೧ | ವ್ಯಾಕರಣಮಹಾಭಾಷ್ಯ ೩.೩.೨೧ ಸೂತ್ರ | ಇತ್ಯಾದಿ ಅನೇಕ ಪ್ರಮಾಣಗಳು ಅಧ್ಯಯನ, ಅಧ್ಯಾಪನ, ಹೋಮ, ಹವನ, ಮಂತ್ರಸಂಸ್ಕಾರಾದಿ ಧರ್ಮಕಾರ್ಯಗಳಲ್ಲಿಯೂ ಬಿಕ್ಕ ಸರ್ವವ್ಯವಹಾರಗಳಲ್ಲಿಯೂ ಸ್ತ್ರೀಪುರುಷರಿಗೆ ಸಮಾನಅಧಿಕಾರಗಳನ್ನು ತೋರಿಸುತ್ತಿರುವವು.

ಪಂಚಸೂತಕಗಳನ್ನು ಲಿಂಗಾಯತರು ಮನ್ನಿಸುವದಿಲ್ಲೆಂಬದು ನಿಜವು. ಆದರೆ ಅವರು ಇವುಗಳನ್ನು ಮನ್ನಿಸದೆ ಇರುವುದಕ್ಕೆ ಕೆಲವು ಕಾರಣಗಳುಂಟು. ಅವು ಯಾವವೆಂದರೆ—ಲಿಂಗಾಯತರು ಜನನ ಕಾಲದಿಂದ ಪವಿತ್ರವಾದ ಲಿಂಗವನ್ನು ಧರಿಸುವದರಿಂದ ಜನನದಿಂದ ಬರುವ ಅಶೌಚವನ್ನು ನಿಷೇಧಿಸುವರು. ಮತ್ತು ಅಹೋರಾತ್ರಿ ಲಿಂಗವನ್ನು ಧರಿಸಿ ತಧ್ಯಾನರತನಾದ ವೀರಶೈವನು ಶಿವಸಾಯುಜ್ಯವನ್ನು ಹೊಂದುವನೆಂದು ಧರ್ಮಶಾಸ್ತ್ರನಿರ್ಣಯವಿರುವದರಿಂದ ಅವರು ಮರಣಕಾಲದ ಅಶೌಚವನ್ನು ನಿಷೇಧಿಸುವರು. ಹೇಗೆಂದರೆ—

"ನಸ್ಯೈಶ್ವಿನರಕೋದೋಷೋನಸ್ತ್ರೀಬಾಲಾವಿಕಲ್ಪನಾ | ನಜನ್ಮಮರಣಾಶೌಚಂನ್ನಸ್ನಾನಾದಿವಿಧಿರ್ಮತಃ || ಮಲ್ಲಿಂಗಧಾರಣಾದೇವಮದ್ರೂಪಾವನತಃಶಿವೇ ||" ಇದರಂತೆ ಸ್ತ್ರೀಯರ ರಜಸ್ವಲಾದೋಷವೂ ನಿಷೇಧಿಸಲ್ಪಟ್ಟಿರುವುದು.

"ಲಿಂಗಾರ್ಚನರತಾನಾಂ ಸೂತಕೇವಾರಜಸ್ವಲಾ | ದವಿರಗ್ನಿರ್ಯಥಾ ವಾಯುಃ ಕೋಟಿಕೋಟಿಗುಣಃಶುಚಿಃ | ಜಾತಕೇಸೂತಕೇವಾಪಿನತ್ಯಾಜ್ಯಂ ಶಿವಪೂಜನಂ ||"

ಈ ರೀತಿಯಾಗಿ ಲಿಂಗಾಯತ ಸ್ತ್ರೀಪುರುಷರಿಗೆ ಸೂತಕವು ನಿಷೇಧಿಸಲ್ಪಟ್ಟಿದೆ. ಪಂಚಸೂತಕಗಳು ದೇಶಕಾಲಸ್ಥಿತಿಗಳಿಗನುಸಾರವಾಗಿ ಸರ್ವದಾ ಬದಲಾಗುತ್ತಿರುವವು. ಇವು ಅಷ್ಟೇನೂ ಮಹತ್ವವಾದವುಗಳಲ್ಲ. ಪೌಂಡರೀಕಾದಿ ಯಾಗಕಾರ್ಯಗಳಲ್ಲಿಯೂ ಹೋಮಹವನಗಳಲ್ಲಿಯೂ ವಿವಾಹ ದೇವತಾರಾಧನೆ ಮೊದಲಾದ ಸಾಮಾನ್ಯಮಂಗಲಕಾರ್ಯಗಳಲ್ಲಿಯೂ ಪಂಚಸೂತಕಗಳಲ್ಲಿ ಯಾವದೊಂದು ಬಂದರೆ ಅದನ್ನು ಇತರ ಬ್ರಾಹ್ಮಣಾದಿ ವರ್ಣದವರು ನಿಷೇಧದಲ್ಲಿ ಗಣಿಸುವದಿಲ್ಲ. ದಂಪತಿಗಳೀರ್ವರೂ ಯಜಮಾನತ್ವದಿಂದ ಯಾಗ ಕಾರ್ಯದಲ್ಲಿ ತೊಡಗಿರಲು ಯಜಮಾನನ ಪತ್ನಿಯು ರಜಸ್ವಲೆಯಾದರೆ ಅಥವಾ ಅವರವರ ಸಂಬಂಧಿಗಳಲ್ಲಿ ಯಾರಾದರೂ ಮೃತಪಟ್ಟ ಸುದ್ದಿಯು ಬಂದರೆ, ಆಯಜಮಾನನ ಪತ್ನಿಯನ್ನು ಅಥವಾ ಆ ದಂಪತಿಗಳೀರ್ವರನ್ನು ಹೊಲೆಯಿಂದ ಹೊರಗೆ ಕೂಡ್ರಿಸದೆ, ಅವರಿಂದ ಕೆಲವು ಮಂತ್ರೋಚ್ಚಾರಣೆಯನ್ನು ಮಾಡಿಸಿ, ಅವರು ಶುದ್ಧರಾದರೆಂದು ತಿಳಿಯುವರು ಇದಕ್ಕೆ ಪರಾಶರ ಸ್ಮೃತಿಯ ಪ್ರಮಾಣವನ್ನು ತೋರಿಸುವರು. "ಶ್ರೈವಂದೇವಾರ್ಚನಂಯಜ್ಞೋಯಜ್ಞಾಗ್ನಿಪರಿಗ್ರಹಃ | ಬ್ರಹ್ಮಚಾರಿಯತೀನಾಂ ಚಶರೀರೆನಾಸ್ತಿಸೂತಕಂ ||"

ಈ ಮೇರೆಗೆ ಅವರಲ್ಲಿ ಸೂತಕಗಳು ಸಮಯಾನುಸಾರವಾಗಿ ಅನಿಷೇಧವೆಂದು ಹೇಳಲ್ಪಡುವವು. ಅಂದಬಳಿಕ ಪವಿತ್ರವಾದ ಲಿಂಗವನ್ನು ಸರ್ವಥಾ ಶರೀರದಲ್ಲಿ ಧರಿಸಿ, ಅನನ್ಯಭಾವನೆಯಿಂದ ಪೂಜಿಸುವ ವೀರಶೈವರಿಗೆ ಸೂತಕಗಳು ನಿಷೇಧವೆಂದು ಹೇಳಿದರೆ, ಅದು ವೈದಿಕಧರ್ಮಶಾಸ್ತ್ರಕ್ಕೆ ವಿರೋಧವಾದದ್ದಲ್ಲ.

ಲಿಂಗಾಯತರು ಶ್ರಾದ್ಧಾದಿ ಕರ್ಮಗಳನ್ನು ಆಚರಿಸುವದಿಲ್ಲವಾದ್ದರಿಂದ ಅವರು ಹಿಂದೂಗಳಲ್ಲವೆಂದು ಹೇಳುವದು ಅವಿಚಾರದ ಮಾತಾಗಿದೆ. ಲಿಂಗಾಯತರಲ್ಲಿ ಜನಿಸಿದ ಪುರುಷನು. ಅಹೋರಾತ್ರಿ ಶಿವಲಿಂಗವನ್ನು ಧರಿಸಿ, ಶಿವಧ್ಯಾನಯುಕ್ತನಾದ್ದರಿಂದ ಅವನು ಶಿವಸ್ವರೂಪಿಯು ಅರ್ಥಾತ್ ಬ್ರಹ್ಮೀಭೂತನೂ ಆಗುವನು. ಅಂದರೆ ಅವನಿಗೆ ಪುನರ್ಜನ್ಮಾದಿಗಳಿಲ್ಲವೆಂಬ ತತ್ವವಿಚಾರದಿಂದ ಶ್ರಾದ್ಧಾದಿಗಳು ಅವರಲ್ಲಿ ನಿಷೇಧಿಸಲ್ಪಟ್ಟಿರುವವು. ಬ್ರಾಹ್ಮಣಾದಿಗಳಲ್ಲಿಯೂ ಸನ್ಯಾಸಾಶ್ರಮವನ್ನು ಹೊಂದಿದ ಸನ್ಯಾಸಿಗಳಿಗೆ ಪುನರ್ಜನ್ಮಾದಿಗಳಿಲ್ಲ. ಅವರು ಕೇವಲ ಜ್ಞಾನಮಾರ್ಗಾನುವರ್ತಿಗಳಾದ್ದರಿಂದ ಅವರು ಶ್ರಾದ್ಧಾದಿ ಕರ್ಮಗಳನ್ನು ಮಾಡುವದಿಲ್ಲ. ಅದ್ದರಿಂದ ಕರ್ಮಕ್ಕೆ ಅಪ್ರಧಾನವನ್ನು ಜ್ಞಾನಕ್ಕೆ ಪ್ರಧಾನ್ಯವನ್ನು ಕೊಟ್ಟು ವರ್ತಿಸುವ ವೀರಶೈವರಿಗೆ ಶ್ರಾದ್ಧ ನಿಷೇಧವೇಕೆಂದು ಕೇಳುವದು ವಿಹಿತವಲ್ಲ. ಇದಲ್ಲದೆ ಶ್ರಾದ್ಧಾದಿ ಕರ್ಮಗಳು ವೇದಗಳಲ್ಲಿ ಹೇಳಲ್ಪಡದೆ ಇತ್ತೀಚಿನ ಪೌರಾಣಿಕ ಕಥಾಮೂಲಕವಾಗಿ ಬಂದಿರುತ್ತವೆ. ಅದ್ದರಿಂದ ಅವೈದಿಕಗಳಾದ ಕರ್ಮಗಳನ್ನು ಲಿಂಗಾಂಗಿಗಳು ಅಂಗೀಕರಿಸದಿರುವದು. ವಿಧಿವಿಹಿತವೇ ಆಗಿದೆ.

ಇನ್ನು ಅಷ್ಟಾವರಣಗಳ ಆಚರಣೆಯು ಪದ್ಧತಿಯು ಯಾವ ಧರ್ಮದಲ್ಲಿಯೂ ಇಲ್ಲವಾದ್ದರಿಂದ ಅದು ವೇದೋಕ್ತಮಾರ್ಗವಲ್ಲೆಂದು ಹೇಳಲಿಕ್ಕಾಗದು. ಯಾಕೆಂದರೆ, ಅಷ್ಟಾವರಣಗಳೆಲ್ಲ ಪ್ರಾಚೀನಋಷಿ ಗ್ರಂಥಗಳಲ್ಲಿ ಅಂದರೆ ಉಪನಿಷತ್ತುಗಳಲ್ಲಿಯೂ ಐತರೇಯಾದಿ ಬ್ರಾಹ್ಮಣ ಗ್ರಂಥಗಳಲ್ಲಿಯೂ ಸ್ಮೃತಿಗ್ರಂಥಗಳಲ್ಲಿಯೂ ಮಹಾಭಾರತಾದಿ ಗ್ರಂಥಗಳಲ್ಲಿಯೂ ವರ್ಣಿಸಲ್ಪಟ್ಟಿರುವವು. ಗುರು, ಲಿಂಗ, ಜಂಗಮ, ಮಂತ್ರಪ್ರಸಾದ ಮುಂತಾದವುಗಳ ವರ್ಣನೆಯು ವೇದಗಳಲ್ಲಿ ಸಹ ಕಂಡುಬರುವದು. ಈ ವಿಷಯಕವಾದ ಪ್ರಮಾಣಗಳನ್ನೆಲ್ಲ "ಲಿಂಗಾಂಗಿ ಧರ್ಮವಿಚಾರ" ವೆಂಬ ನನ್ನ ಕನ್ನಡ ಪುಸ್ತಕದಲ್ಲಿ ಸಂಪೂರ್ಣವಾಗಿ ಹೇಳುವೆನು. ಈ ಅಷ್ಟಾವರಣಗಳಲ್ಲಿ ಎಷ್ಟೋ ವಿಷಯಗಳ ವರ್ಣನೆಯು ಐತರೇಯ ಶೈತರೇಯಾದಿ ಬ್ರಾಹ್ಮಣ ಗ್ರಂಥಗಳಲ್ಲಿಯೂ ದೊರೆಯುವದು. "ರುದ್ರಾಕ್ಷಜಾಬಾಲೋಪನಿಷತ್" ಎಂಬ ಪೃಥಕ್ ಉಪನಿಷತ್ತು ರುದ್ರಾಕ್ಷಿಯ ಮಹಿಮೆಯನ್ನು ವರ್ಣಿಸುತ್ತದೆ. ಅದು ಇವತ್ತಿಗೂ ಪ್ರಚಾರದಲ್ಲಿರುವದು. ಅಷ್ಟಾವರಣಗಳಲ್ಲಿ ಬಹಿರಂಗ ಅಷ್ಟಾವರಣ ಅಂತರಂಗ ಅಷ್ಟಾವರಣವೆಂಬ ಎರಡು ಭೇದಗಳಿದ್ದು. ಅವೆರಡೂ ಲಿಂಗಾಯತರಿಗೂ ಬ್ರಾಹ್ಮಣಾದಿ ಚತುರ್ವರ್ಣದವರಿಗೂ ಮಾನ್ಯವುಳ್ಳವುಗಳಾಗಿವೆ.

ಜನನ ಮರಣ, ವಿವಾಹಾದಿ ವಿಧಿಗಳು ದೇಶಕಾಲಸ್ಥಿತಿಗಳಿಗನುಸಾರವಾಗಿ ಭಿನ್ನಭಿನ್ನ ಭಾಗಗಳಲ್ಲಿ ಭಿನ್ನಭಿನ್ನ ರೀತಿಯಾಗಿ ಆಚರಿಸಲ್ಪಡುವವು. ಪಂಜಾಬೀ ಕಾಶ್ಮೀರೀ ಬ್ರಾಹ್ಮಣರು ಮಾಡುವ ವಿಧಿಗಳು ದಕ್ಷಿಣದೇಶದ ಬ್ರಾಹ್ಮಣರು ಮಾಡುವ ವಿಧಿಗಳಿಗಿಂತಲು ಭಿನ್ನವಾಗಿದ್ದು ವಿವಾಹಾದಿ ಕಾರ್ಯಗಳಲ್ಲಿ ಅವರು ಹೇಳುವ ಮಂತ್ರಗಳಿಗೂ ದಕ್ಷಿಣದೇಶದ ಬ್ರಾಹ್ಮಣರು ಹೇಳುವ ಮಂತ್ರಗಳಿಗೂ ಪೂರ್ವಾಪರ ಸಂಬಂಧವೇ ಇಲ್ಲ. ಹೀಗಿದ್ದಾಗ್ಯೂ, ವೈದಿಕನಾಮಮಾತ್ರದಿಂದಲೇ ಸರ್ವರೂ ಏಕೀಕರಿಸಲಿಕ್ಕೆ ಅಡ್ಡಿ ಇಲ್ಲದಂತಿರುವದು. ಮಂತ್ರಗಳನ್ನು ಬೇರೆ ಹೇಳಿದಾಕ್ಷಣಕ್ಕೆ ಅಥವಾ ವಿವಾಹಾದಿ ಕಾರ್ಯಗಳನ್ನು ಬಿನ್ನರೀತಿಯಿಂದ ಆಚರಿಸಿದ ಮಾತ್ರಕ್ಕೆ ಕಾಶ್ಮೀರದವರು. ಅಥವಾ ಪಂಜಾಬದವರು ಬ್ರಾಹ್ಮಣರೆ ಅಲ್ಲ ಅಥವಾ ಹಿಂದೂಗಳೇ ಅಲ್ಲ ಎಂದು ಈ ದಕ್ಷಿಣದೇಶದ ಬ್ರಾಹ್ಮಣರು ಹೇಳಲಿಕ್ಕೆ ಶಕ್ತರಾಗುವರೋ? ಎಂದೂ ಇಲ್ಲ. ಅದರಂತೆಯೇ ಲಿಂಗಾಯತರು. ಮಾಡುವ ವಿಧಿಗಳೂ ಹೇಳುವ ಮಂತ್ರಗಳೂ ವೇದ ಮತ್ತು ಆಗಮಗಳಿಗೆ ಸಮ್ಮತವಾಗಿದ್ದು ಕೇವಲ ಮಂತ್ರವಿಧಾನಗಳೂ ಕ್ರಿಯೆಗಳೂ ಬೇರೆಯಾದಾಕ್ಷಣಕ್ಕೆ ಅವರು ಹಿಂದೂಗಳೇ ಅಲ್ಲವೆಂದು ಹೇಳುವದು. ಸಮಂಜಸವೋ? ಪೂಜಾವಿಧಾನಗಳಲ್ಲಿಯೂ ವಿವಾಹಾದಿ ಕಾರ್ಯಗಳಲ್ಲಿಯೂ ಲಿಂಗಾಯತರು ಹೇಳುವ ಮಂತ್ರಗಳೂ, ಬ್ರಾಹ್ಮಣರು ಹೇಳುವ ಮಂತ್ರಗಳೂ, ವಿಧಾನಗಳೂ ಏಕೀಕರಣವಾದವುಗಳಾಗಿರುವವು. ಸಾಮಾನ್ಯವಾಗಿ ಶಿವಪೂಜೆಗೆ ಪ್ರಾರಂಭಮಾಡುವಾಗ್ಗೆ ಅನ್ನುವ ಸಂಕಲ್ಪವು ಸಹ ಒಂದೇಯಾಗಿರುವ ಪಕ್ಷದಲ್ಲಿ ವಿಧಾನವು ಭಿನ್ನವಾದದ್ದೆಂಬುವದು. ಎಂದೂ ಸಮಂಜಸವಾಗಿ ತೋರುವದಿಲ್ಲ. ಇದರಂತೆ ಲಿಂಗಧಾರಣವೂ ವಿಧಿವಿಹಿತವಾದದ್ದೆಂದು ವೇದಮಂತ್ರಗಳ ಆಧಾರದಿಂದಲೇ ಲಿಂಗಾಂಗಿ ಧರ್ಮಪ್ರವರ್ತಕರು. ಸಿದ್ಧಮಾಡಿರುವರು. ಒಂದು ವೇಳೆ ಮಂತ್ರ ವಿಧಾನಗಳಿಂದ ಹಿಂದುತ್ವವು ಸಿದ್ಧವಾಗುತ್ತಿದ್ದರೆ ಬ್ರಾಹ್ಮಣರಲ್ಲಿಯೇ ಪರಸ್ಪರ ಅತ್ಯಂತ ಭಿನ್ನ ವಿಧಾನಗಳು ಆಗಾಗ್ಗೆ ಕಣ್ಣಿಗೆ ಬೀಳುವವು. ಶೈವರು ಶಿವರಾತ್ರಿಯನ್ನು ಶಿವಪುರಾಣಶ್ರವಣದಿಂದಲೂ ಶಿವನ ಸಂಬಂಧದ ವ್ರತದಿಂದಲೂ, ಶುದ್ಧ ಭಾವದಿಂದ ಶಿವಪೂಜೆಯನ್ನು ಮಾಡುತ್ತಲೂ, ಜಾಗರಣೆಯಿಂದಲೂ ಉಪವಾಸದಿಂದಲೂ ಕಳೆಯುವರು. ಆದರೆ ವೈಷ್ಣವರು ಆದಿವಸ ಹಠಾತ್ತಾಗಿ ಮೃಷ್ಟಾನ್ನವನ್ನುಂಡು, ಶಿವದೇವಾಲಯದ ದರ್ಶನವನ್ನು ಸಹಾ ತೆಗೆದುಕೊಳ್ಳುವದಿಲ್ಲ. ಜನನ ಮರಣ ವಿಧಿಗಳಂತೂ ಬಹಳೇ ಭಿನ್ನವಾಗಿರುವವು. ಇಂಥ ಸಣ್ಣ ಪುಟ್ಟ ವಿಧಾನಗಳಿಂದ ಪೌರಾಣಿಕ ಕಥಾಸಂಬಂಧದ ವ್ರತಗಳಿಂದ ವೈದಿಕತ್ವವು ಎಂದೂ ಸಿದ್ಧವಾಗಲಾರದು.

ಇನ್ನು ಪುರಾಣಗಳ ವಿಷಯವಾಗಿ ವಿಚಾರಮಾಡಲು ಲಿಂಗಾಯತರ ಪುರಾಣಗಳು ಭಿನ್ನವಾಗಿರುತ್ತವೆಂದು ಹೇಳುವದು ತೀರ ಅಸಂಬದ್ಧವಾದ ಮಾತಾಗಿದೆ. ಇತ್ತೀತ್ತಲಾಗಿ ಆಗಿಹೋದ ಲಿಂಗಾಯತ ಮಹಾಪುರುಷರ ಚರಿತ್ರಗಳನ್ನು ಕನ್ನಡದಲ್ಲಿ ರಚಿಸಿ ಪ್ರಸಿದ್ಧಿಸಿದ ಕೂಡಲೇ ಲಿಂಗಾಯತರು ಹಿಂದೂಗಳೇ ಅಲ್ಲವೆಂದು ಹೇಳಬೇಕೆ ಹೇಗೆ, ಹೀಗೆ ಹೇಳಲಿಕ್ಕೆ ಬರುವಂತಿಲ್ಲ. ಯಾಕಂದರೆ ಇತರ ಜಾತಿಯವರಲ್ಲಿಯೂ ಹಿಂದೀ ಭಾಷೆಯಲ್ಲಿ ರಚಿಸಿದ ಪುರಾಣಗಳಿರುತ್ತವೆ. ಅವುಗಳನ್ನು ಅವರು ಶ್ರದ್ಧಾಪೂರ್ವಕವಾಗಿ ಶ್ರವಣಮಾಡುತ್ತಾರೆ. ಇದರಿಂದ ಅವರಿಗಾದರೂ ಹಿಂದೂಗಳಲ್ಲವೆಂದು ಅನ್ನಬೇಕಾಗುವದು. ಆದರೆ ಇಂತಹ ಪುರಾಣ ಭೇದದ ಕಾರಣಗಳನ್ನು ಸಂಪೂರ್ಣವಾಗಿ ಬಡಲಿಕ್ಕೆ ಬೇಕು.

೧೯೨೪ ನೆಯ ಇಸವಿ ಅಗಸ್ಟ ತಾ|| ೨೪ ರಿಂದ ೧೯೨೪ ನೆಯ ಇಸವಿ ಅಗಸ್ಟ ತಾ|| ೩೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಶ್ರಾವಣ ಬಹುಳ ದಶಮಿಯಿಂದ ಶ್ರಾವಣ ಬಹುಳ ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
24	ಭಾನು	ದಶ	60	ಮೃಗ	54-25	9
25	ಸೋಮ	ದಶ	3-0	ಆರ್ದ್ರಾ	60	10
26	[1] ಮಂಗಳ	ಏಕಾ	7-43	ಆರ್ದ್ರಾ	0-35	11
27	[2] ಬುಧ	ದ್ವಾದ	11-52	ಪುನ	6 16	12
28	ಗುರು	ತ್ರಯೋ	15-4	ಪುಷ್ಯ	11-7	13
29	ಶುಕ್ರ	ಚತು	17-8	ಆಶ್ಲೇ	14-46	14
30	[3] ಶನಿ	ಅಮಾ	17-53	ಮಘಾ	17-12	15

(1) ಸರ್ವೈಕಾದಶಿ, ಮಂಗಳಗೌರೀವ್ರತಂ. (2) ಪ್ರದೋಷ. (3) ಶ್ರಾವಣಶನಿವಾರಂ.

ಮೈಸೂರು: ಶ್ರೀ. [illegible] ಪ್ರೆಸ್ಸಿನಲ್ಲಿ [illegible] ಮುದ್ರಿತವು.

REGSITERED NO. M.124.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷ | ಕೃಷ್ಣಾವತಾರಾ ಪಕ್ಕಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂ | ನಭೀಷ್ಟದೀಲ ನಾಕಲಿಕ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಫುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಲೆಯಂಸದಾಪೊರೆಗೆ ಗೌರೀಕಾಸುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸರ್ ೧೯೨೪ನೆಯ ಇಸವಿ ಆಗಸ್ಟ್ ತಾರೀಖು ೩೧ ನೆಯ ಭಾನುವಾರ. [ಸಂಚಿಕೆ ೩೫

ವೈದ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHARAGHAVA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟ ವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ.
ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ವೈದ್ಯದ ವೆಂಕಟಾಚಲಪಂಡಿತ,
30 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಮರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಟಿನ್ನು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦
ಒಂದು ಟಿನ್ನು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.
೨೪ ಟಿನ್ನು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—39] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.
ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.
ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.
ಚೆನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.
ಷಟ್‌ಸ್ಥಲಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.
ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.
ಪಂಚಸ್ತೋತ್ರೀ ಬೆಲೆ ೧—೦—೦.
ಸೌಂದರಪುರಾಣ ಬೆಲೆ [illegible]—೦—೦ ವಿ. ಪಿ. ಮೂಲಕ ೧-೮-೦.
ಷಟ್‌ಸ್ಥಲದೀಪ್ತಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿ
[60—38] ಅಂಡ್ ಸನ್ಸ್, ಜೆ.ಪಿ. ಮಂಡಿಲಿ, ಮೈಸೂರು.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಮೈಸೂರು.

ಮಳೆಗಾಲಕ್ಕಾಗಿ

ಅನೇಕ ನಮೂನೆ ಕಾಶ್ಮೀರ್ ಶಾಲುಗಳನ್ನು ಹೆಚ್ಚಾಗಿ ತರಿಸಿ ಬಹು ಸುಲಭ ಬೆಲೆಯಿಂದ ಬಿಕರಿಮಾಡುತ್ತಲಿದ್ದೇವೆಯಾಗಿ ಪ್ರತಿನಿತ್ಯವೂ ಅನೇಕ ಬಿಕರಿಯಾಗುತ್ತಲಿವೆ. ಇದರಡಿ ನಮೂದಿಸಿರುವ ಖರೀದಿಯ ಶಾಲುಗಳ ಪೈಕಿ ನಿಮಗೆ ಬೇಕಾದ ಖರೀದಿಯದಕ್ಕೆ ಆರ್ಡರ್ ಕೊಟ್ಟಲ್ಲಿ ನಂಬಿಗೆಯಿಂದ ನೀವಿದ್ದೆಡೆಗೆ ರವಾನಿಸುತ್ತೇವೆ.

ಬಾರ್ಡರ್ ಹಾಕಿದ ಉಲನ್ ಶಾಲುಗಳು 1ಕ್ಕೆ 12-4-0, 13-2-0, 14-8-0, 15-4-0, 16-8-0, 17-2-0, 18-12-0, 19-8-0, 20-4-0, 21-8-0, 22-12-0, 23-8-0, 24-2-0, 25-4-0, 27-8-0, 30-0-0, 32-8-0, 34-4-0, 37-8-0, 48-8-0 ಮೇಲ್ಪಟ್ಟು 65 ರೂಪಾಯಿವರುವಿಗೆ ಸ್ಟಾಕಿನಲ್ಲಿವೆ.

ಖಾತ್ರಿಯಾದ ಚೇಳಿನ ಔಷಧ ಪೆಟ್ಟಿ 1 ಕ್ಕೆ 0-8-0, 12 ಕ್ಕೆ 4-8-0, "ನ್ಯಾಷನಲ್ ಇಂಕ್ ಪೌಡರ್ ಪ್ಯಾಕೆಟ್" 1ಕ್ಕೆ 1-0-0.


M.S.SIDDAPPA & BROS.

ಅನೇಕ ನಮೂನೆ ಟೈಂಪೀಸುಗಳು ಶೀಮೆಯಿಂದ ಹೆಚ್ಚಾಗಿ ಸಪ್ಲೈ ಆಗಿರುತ್ತಾಗಿ ಖರೀದಿ ಬಹಳ ಕಡಮೆಯಾಗಿರುತ್ತೆ. ಕೊಂಡುಕೊಳ್ಳುವವರಿಗೆ ಇದು ಸುಸಮಯವಾಗಿರುತ್ತಾಗಿ ಇದರಡಿ ನಮೂದಿಸಿರುವ ಖರೀದಿ ಟೈಂಪೀಸುಗಳ ಪೈಕಿ ನಿಮಗೆ ಬೇಕಾದ ಖರೀದಿ ಟೈಂಪೀಸಿಗೆ ಆರ್ಡರ್ ಕೊಡುವುದಲ್ಲದೆ 1-0-0 ರೂ. ಅಡ್ವಾನ್ಸ್ ರವಾನಿಸಿದಲ್ಲಿ ಉತ್ತಮವಾದದನ್ನು ಚುನಾಯಿಸಿ ನಂಬಿಗೆಯಿಂದ ರವಾನಿಸಲಾಗುತ್ತೆ. ಸಾದಾ ಟೈಂಪೀಸ್ 1 ಕ್ಕೆ 3-4-0, 3-6-0.

ಅಲಾರಂಟೈಂಪೀಸುಗಳು 4-4-0, 5-2-0, 6-8-0, 7-0-0, 7-12-0, 8-4-0, 9-8-0, 10-2-0, ಮೇಲ್ಪಟ್ಟಿರುತ್ತೆ.

ಗಂಟೆ 1/2 ಗಂಟೆ ಹೊಡೆದು ಅಲಾರಂ ಸಹಾ ಬಾರಿಸುವ ಟೈಂಪೀಸುಗಳು 7-14-0, 8-8-0, 17-8-0, 18-12-0.

ಕರ್ಣಾನಂದವಾಗಿ ಗಾನಮಾಡುವ ಕ್ಯಾರೇಜ್ ಕ್ಲಾಕ್ 1 ಕ್ಕೆ 15-8-0, 16-4-0

ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು,
[50—48] ಮೈಸೂರು.

ಅಪೂರ್ವ ! ಹೊಸಪುಸ್ತಕ !! ಅಪೂರ್ವ !!!

ಶಿಶುವೈದ್ಯಸಂಜೀವನೀ.

ಕನ್ನಡಿಗರಿಗೆ ಯಾವ ವೈದ್ಯಸಂಹಿತೆಯೂ ಇದುವರಿಗೆ ಶಿಗುವಂತಿಲ್ಲ! ಅದಕ್ಕಾಗಿ ಇದನ್ನು ಎಲ್ಲಾ ಆಯುರ್ವೇದದ ಆಧಾರದಿಂದ ಪ್ರಕಟಿಸಿದ್ದೇವೆ. ಇದರಲ್ಲಿ ಸ್ತ್ರೀಪುರುಷರ ದೇಹತತ್ವ, ವಿವಾಹ ದಾಂಪತ್ಯಸುಖ, ಪಾತಿವ್ರತ್ಯಧರ್ಮ, ಗರ್ಭಿಣಿಯರ ರೋಗನಿದಾನ, ಚಿಕಿತ್ಸೆ, ಉಪಚಾರ, ಸುಖಪ್ರಸವೌಷಧಗಳು, ಪ್ರಸವವಿಧಿ, ದಾಯಿಯಕರ್ತವ್ಯ, ಶಿಶುಪರಿಚರ್ಯೆ, ಶಿಶುಗಳ ಸಕಲ ರೋಗಚಿಕಿತ್ಸೆ, ಹಾಗೂ ಎಲ್ಲಾ ಲೋಹಾದಿಗಳ ಶುದ್ಧಿಕ್ರಮ ಮತ್ತು ಭಸ್ಮಗಳು ಮಾಡುವ ವಿಧಾನ, ಧಾತುಪುಷ್ಟಿ ಔಷಧಿಗಳು ಇವೆಲ್ಲ ಶಾಸ್ತ್ರೀಯ ಮತ್ತು ಸಮರ್ಮವಾಗಿ ವಿವರಿಸಲ್ಪಟ್ಟಿದೆ. ಈ ಪುಸ್ತಕವು ಕೇವಲ ದೊಡ್ಡದು. ಇದರಲ್ಲಿ ಹೆಂಗಸರು ಹುಡುಗರು ಸಹ ಸುಲಭವಾಗಿ ತಯಾರುಮಾಡುವಂತಹ ೫೦೦ ಔಷಧಗಳಿಗಿಂತ ಹೆಚ್ಚಾಗಿರುವವು. ಈ ಪುಸ್ತಕದ ಕ್ರಯವು ಅದರಲ್ಲಿರುವ ಒಂದೊಂದು ಔಷಧದ ಬೆಲೆಯಾಗಲಾರದೆಂಬುದನ್ನು ನೀವೇ ತಿಳಿದುಕೊಳ್ಳುವಿರಿ !! ಈ ಪುಸ್ತಕವನ್ನು ಕೊಂಡುಕೊಳ್ಳುವ ಪ್ರತಿಮನುಷ್ಯನೂ ಖಂಡಿತವಾಗಿ ಒಬ್ಬ ವೈದ್ಯನೇ ಆಗುತ್ತಾನೆ. ಕ್ರಯ ಪುಸ್ತಕ ೧ಕ್ಕೆ ೨-೮-೦.

ನಮ್ಮ ವಿಳಾಸ:—ಭಾರತಿ ಬುಕ್‌ಡಿಪ್ಪೋ,
[4—1] ೧೯೧, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಎಲ್ಲದರಲ್ಲಿ ಪುರಾತನ ಕಾರಖಾನೆಯು.

ಸೂಚನೆ :—ಯಾವದೊಂದು ಮಾಲು ಗುಣಕಾರಿಯಾಗಿರುವದೆಂದು ತಿಳಿದಕೂಡಲೆ ಎಲ್ಲ ಕಡೆಗೂ ಅದರ ನಕಲು ಮಾಡಲಿಕ್ಕೆ ಆರಂಭವಾಗುತ್ತದೆ. ಆದರೆ ಹೆಸರಿಗೆ ತಕ್ಕಂತೆ ಗುಣಕ್ಕೆ ಮಾತ್ರ ಪಾತ್ರವಾಗುವದಿಲ್ಲ. ಈಗೀಗ ಇಲ್ಲಿ ನಕಲೀ ಓಷಧಿಯ ಕಾರಖಾನೆಗಳು ಹೊರಡಹತ್ತಿರುವವು. ಆದ್ದರಿಂದ ಗಿರಾಕಿಗಳು ನಮ್ಮ ಟ್ರೇಡಮಾರ್ಕನ್ನು ನೋಡಿ ತಕ್ಕೊಳ್ಳಬೇಕು

ಸುವರ್ಣಪದಕ ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ಥ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦, ೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವುದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.—ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇರೋಗ ವಿದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟಲಿಯ ಕಿಮ್ಮತ್ತು ೧| ರೂಪಾಯಿ ಮೂರುಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತ್ತು ೧೧—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧—೪—೦, ೩ ಬಾಟ್ಲಿಗೆ ೩—೦—೦, ಡಜನ್ನಿಗೆ ೧೩—೦—೦

ಮ್ಯಾನೇಜರ—ದ್ರಾಕ್ಷಾರ್ಕಮಧು ಆಫೀಸು,
[12—3] ಪೋ. ನಿಪ್ಪಾಣಿ, ಜಿ. ಬೆಳಗಾವ.

ಸುಗಂಧದ್ರವ್ಯಗಳ ಕಾರಖಾನಾ.

ಆಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
28 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಪ್ರಕಟನೆ.

ವೀರಶೈವರು ಅವಶ್ಯವಾಗಿ ಸಂಗ್ರಹಿಸಬೇಕಾದ
ಪ್ರೌಢಿಮಹೊಸ ಗ್ರಂಥಗಳು.

ಈಶಾವಾಸ್ಯೋಪನಿಷತ್ ಶಾಂಕರೀ ರೂ. ೧—೦—೦
ಕೇನೋಪನಿಷತ್ ಶಾಂಕರೀ ರೂ. ೧—೮—೦
ವೀರಶೈವಸಿದ್ಧಾಂತ ಸುಧಾಕರ ರೂ. ೨—೦—೦

ನನ್ನಿಂದ ಬರೆಯಲ್ಪಟ್ಟ ಮೇಲ್ಕಂಡ ಉಪನಿಷತ್ ಶಾಂಕರೀವ್ಯಾಖ್ಯಾನಕ್ಕೆ ಮೈಸೂರು ಆಸ್ಥಾನ ವಿದ್ವಾನ್ ಶಿರಸಿ ಸುರುಶಾಂತಶಾಸ್ತ್ರಿಗಳು ಬರೆದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಟ್ಟಿರುವವು. ಅಲ್ಲದೆ ಎಲ್ಲರಿಗೂ ಸುಲಭವಾಗಿ ವೀರಶೈವ ಸಿದ್ಧಾಂತವು ತಿಳಿಯಬೇಕೆಂದು ವೀರಶೈವ ಸಿದ್ಧಾಂತ ಸುಧಾಕರ ವೆಂಬ ಹೆಸರಿನ ಕನ್ನಡಗ್ರಂಥವು ಮುದ್ರಿಸಲ್ಪಟ್ಟಿರುವದು. ಇದು ಪ್ರಶ್ನೋತ್ತರರೂಪವಾಗಿರುವುದು. ಇದನ್ನು ಓದಿದರೆ ಇದು ಎಷ್ಟು ಅಮೂಲ್ಯವಾಗಿದೆಂಬುದು ಗೊತ್ತಾಗುತ್ತದೆ. ಅದ್ದರಿಂದ ಈ ಪ್ರೌಢವಾದ ಗ್ರಂಥಗಳನ್ನು ತರಿಸಿಕೊಂಡು ಮುಂದಿನ ನನ್ನ ಗ್ರಂಥ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇನೆ.

[illegible] ಸಂ. [illegible], [illegible].

ಗ್ರಂಥಸಿಕ್ಕುವ ಸ್ಥಳ :— 36—31
ಹೊಸಮಠದ ಚನ್ನಮ್ಮನವರು [illegible], ಚಿತ್ರದುರ್ಗ ಡಿ||

ಸೂಚನೆ.

☞ ಬರುವ ಮಂಗಳವಾರದ ದಿವಸ ಗೌರೀಗಣೇಶನ ಹಬ್ಬವಾದ ಪ್ರಯುಕ್ತ ಬರುವ ಭಾನುವಾರದಲ್ಲಿ (ತಾ|| 7-9-24) ಸ್ಟಾರ್‌ಪತ್ರವು ಪ್ರಕಟವಾಗುವುದಿಲ್ಲವು.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಅಗಸ್ಟ್ ತಾ|| ೩೧ ನೆಯ ಭಾನುವಾರ.

THE OLD GAME.

The outburst of vituperative denunciation of the Government Order stopping the Municipal elections has not abated. As we said last time no argument or reasons are advanced against the Order but there is a profuse output of contributed articles–not leading ones–misrepresenting the proceedings of the public meeting held on the 22nd instant on the one hand, and denouncing the First Member of Council on the other hand. There is a letter sent to us by one who was present at the meeting with regard to what exactly transpired at the meeting of the 22nd inst. and that will give the lie direct to their mischievous attempt to mislead the public. But one thing is noticeable, that now that the Order is published, there is no talk of it being illegal, inexpedient and unjustifiable. Those who did not bear the protest of Messrs K. Dhanakoti Chetty, H. C. Dasappa, M. P. Bhogiah and Y. Virupakshiah on the first day at the so called citizens' meeting, that it was unreasonable and unwise for an enlightened section of people to condemn an action without knowing what it was exactly must now be stewing in their own juice. Section 17 of the Mysore Municipal Regulation under which the Order is made provides for the extension of the term of office of a Municipal Council on any occasion the Government shall think fit for reasons whioh shall be notified together with the order in the Official Gazette. Without a knowledge of this provision the leading spirits of the *Sampadabhyudaya* exhausted plenty of powder and shot at their meeting and used big expressions to condemn the action of Government. They never troubled themselves whether the reasons for which the Government took the action were good or bad. Though the meeting was called for the purpose of discussing the inconvenience caused to the citizens not one who condemned the action of Government spoke a word about that matter, because for the obvious reason that they could find none. We have said enough about the order being quite expedient and justifiable, and it is very significant that the critics have studiously avoided discussing about the merits of the grounds on which the Government have passed their order. It is not therefore that they were not conscious of their fighting a wrong cause, but it was one dictated by pure selfishness, which has found such a striking expression in this attempt to thwart the good intentions of the Government.

They do not care what means they employ to achieve their purpose. It is disgusting to see the way they are going about to throw mud at one of the most liberal, sympethetic and farsighted statesman of Mysore, Mr. Mir Humza Hussain, the First Member of Council, for no other fault of his than having interceded on behalf of the ratepayers of Mysore to set right the grave irregularities in the election arrangements, an intercession for which the whole lot of ratepayers and voters of the City with the exception a few selfish candidates and their coterie feel so grateful. Whenever one tries to do something for the people for their uplift, these people who have been trading on the backwardness of the many communities of this land feel that their supremacy would be affected and raise a hue and cry, so much so that it is now come to be recognised that when any measure is loudly protested against by them it is a conclusive proof that it is for the good of the masses. In the recent history of Mysore there has not been one liberal measure which has not been opposed by our professional politicians. What low journalism it should be to throw open the columns of a news papers not for criticism of principles and policies but for persistant calumny against personalities? Is it likely to conduce to the development of a healthy public life? Freedom of speech is degenerating to license and if there is no way of checking such a tendency all the tall talk of freedom of speech will be only fruitful of lasting mischief and harm. When we see of the manner in which our contemporary the *Sampadabhyudaya* is writing against the First Member we remember the old game against the late Dewan Sir M. Kantaraj Urs and Mr. C. R. Reddy both of whom devoted themselves so much for the good of the people. It is our good fortune that our State has one so just and impartial a statesman so deeply interested in the welfare of his countrymen as Mr. Humza Hussein and it is such men who can set Mysore well on the way to progress. It is a great pity that these friends, all of whom are 'educated' in the modern sense should divert their energy in the wrong channel and alienate the sympathies of their brethren. How much more good it will be to Mysore if they only grow less selfish, employ better and more decent methods of political life and strive for all instead of for themselves?

THE PUISNE JUDGESHIP.

Once again the people of the State are to meet with the disappointment of seeing the claims of the worthy candidate Mr. B. Nagappa, Bar-at-law overlooked in connection with the appointment of a Puisne Judge to the Chief Court of Mysore. It is not sought to be made out by anybody that the one appointed to the vacancy is better qualified than Mr. Nagappa, whose legal acumen is an acknowledged fact. There is another matter in issue. The Honourable the Chief Court the highest appellate authority should not be the close preserve of any one community–a principle which is well recognised in British India. Here in Mysore after Mr. Plumer retires, the Chief Court is bound to be in the hands of one community for a long time to come, which we must say without intending the slightest reflection on the present judges is not a desirable state of affairs. We are sorry that the services of one so well versed in jurisprudence should not have been requisitioned to the Chief Court where men of more than mediocre talent should preside. We hope that if the Chief Court has lost the services of Mr. B. Nagappa they will be employed in other and more responsible spheres for the good of the people of the State.

ವಂದನಾರ್ಪಣಸಭೆ.

ರಾಜಧಾನಿಯ ಬಹುಜನ ಕಂದಾಯದಾರರ ಮನಃಕ್ಲೇಶಕ್ಕೆ ಕಾರಣವಾಗಿದ್ದ ಓಟರುಗಳ ಲಿಸ್ಟನ್ನು ರದ್ದುಪಡಿಸಿ ಹೊಸಲಿಸ್ಟನ್ನು ರೂಲ್ಸಿಗನುಸಾರವಾಗಿ ತಯಾರಿಸಿ ಪ್ರಕಟಿಸುವಂತೆ ಶ್ರೀಮನ್ಮಹಾರಾಜರವರ ಸರ್ಕಾರದವರು ಅಪ್ಪಣೆ ಮಾಡಿರುವುದು ಸರಿಯಷ್ಟೆ? ಈ ಅಪ್ಪಣೆಯು ಅನ್ಯಾಯವೂ, ಅಪ್ರಕೃತವೂ, ಅಧರ್ಮವೂ ಆಗಿರುವುದೆಂದು ಒಂದೇ ವರ್ಗದ ಕೆಲ ಉಮೇದುವಾರರುಗಳು 100-200 ಸಜಾತೀಯ ಜನರಿಂದಲೂ 40-50 ಜನ ಇತರರಿಂದಲೂ ಕೂಡಿದ್ದ ಒಂದು ಸಣ್ಣಸಭೆಯಲ್ಲಿ ದುರಾಗ್ರಹದಿಂದ ನಿರ್ಧರಿಸಿ ತಮ್ಮ ನಿಷೇಧನನ್ನು ಪ್ರದರ್ಶಿಸಿದುದು ಎಷ್ಟು ಅನುಚಿತವೂ, ಅಸೂಯಾಪ್ರದರ್ಶಕವೂ ಆಗಿದ್ದಿತೆಂಬುದನ್ನು ಮತ್ತು ಒಂದೇವರ್ಗದ ಕೆಲ ನಿರುತ್ಸಾಹಿ ಉಮೇದುವಾರರುಗಳ ಹೊರತು ಕಂದಾಯದಾರರುಗಳಿಗೆಲ್ಲಾ ಸರ್ಕಾರಿಯಪ್ಪಣೆಯು ಎಷ್ಟು ತೃಪ್ತಿಕರವಾಗಿರುವುದೆಂಬುದನ್ನು ನಾವು ನಮ್ಮ ಕಳೆದವಾರದ ಪತ್ರಿಕೆಯಲ್ಲಿ ಸಕಾರಣವಾಗಿ ಪ್ರಸ್ತಾಪಿಸಿರುತ್ತೇವೆ. ಆದುದರಿಂದ ಪುನರಪಿ ಅದನ್ನು ಹೇಳಬೇಕಾದುದಿಲ್ಲವು.

ಮೇಲೆ ಹೇಳಿದ ಅಸೂಯಾಪರರ ಹೊರತಾಗಿ ಕಂದಾಯದಾರರೂ, ಓಟರುಗಳೂ ಕೌನ್ಸಿಲರ ಚುನಾವಣೆಯಲ್ಲಿ ಭಾಗಿಗಳಾಗಲು ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ತಮ್ಮಗಳ ವಂದನೆಗಳನ್ನು ಶ್ರೀಮನ್ಮಹಾರಾಜರವರಿಗೂ, ಸರ್ಕಾರದವರಿಗೂ ಅರ್ಪಿಸುವುದಕ್ಕೋಸ್ಕರ ಕಳೆದ ತಾ|| 22 ರಲ್ಲಿ ಅಡ್ವೋಕೇಟ್ ಮ|| ಎಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಮಸ್ತವರ್ಗಗಳ ಮಹಾಜನಸಭೆಯನ್ನು ಕೂಡಿಸಿದ್ದರು. ತತ್ಸಂಬಂಧವಾದ ನಡವಳಿಕೆಯು ಈ ಪತ್ರಿಕೆಯ ಬೇರೊಂದುಕಡೆ ಪ್ರಕಟಿಸಲ್ಪಟ್ಟಿರುತ್ತದೆ. ಶ್ರೀಮನ್ಮಹಾರಾಜರವರಿಗೆ ವಂದನೆಯನ್ನರ್ಪಿಸಬೇಕೆಂಬ ನಿರ್ಧಾರವನ್ನು ಅಡ್ವೋಕೇಟ್ ಮ|| ಎಚ್. ಸುಬ್ಬರಾಯರು ಪ್ರತಿಭಟಿಸಿದುದು ಎಷ್ಟು ಆಕ್ಷೇಪ್ಯವಾಗಿರುತ್ತದೆಂಬುದನ್ನೂ ಅದಕ್ಕೆ ಸಭಿಕರ ಧೀತ್ಕಾರವು ತಾತ್ಕಾಲಿಕ ಪ್ರಾಯಶ್ಚಿತ್ತವಾಗಿದ್ದಿತೆಂಬುದನ್ನೂ ಹೇಳಬೇಕಾಗಿಲ್ಲವು. ನಮ್ಮನ್ನು ಸುರಕ್ಷಿತವಾಗಿಟ್ಟಿರುವುದಕ್ಕಾಗಿ ದೇವರನ್ನು ನಾವು ಯಾವಾಗಲೂ ವಂದಿಸುವಂತೆ, ನಾವು ಮನೆಯನ್ನು ಬಿಟ್ಟು ಹೊರಗೆ ಹೋಗಿದ್ದು ಪುನಃ ಮನೆಯನ್ನು ಸುರಕ್ಷಿ ವಾಗಿ ತಲುಪುವಂತೆ ನಮ್ಮನ್ನು ಕಾಪಾಡುತ್ತಿರುವ ಪ್ರತ್ಯಕ್ಷ ದೇವರಾದ ಮಹಾರಾಜರನ್ನು ವಂದಿಸಬೇಕಾದುದು ನಮ್ಮ ಮುಖ್ಯ ಕರ್ತವ್ಯವಾಗಿರುವಾಗ್ಗೆ, ಹೊರಗೆ ಹೋಗಿ ಮನೆ ಬಂದುದಕ್ಕೂ ಮಹಾರಾಜರನ್ನು ವಂದಿಸಬೇಕೆ? ಎಂದು ಕೇಳಿದ ಮ|| ಸುಬ್ಬರಾಯರ ಮುಸಲಾಗ್ರಬುದ್ಧಿಯನ್ನು ಎಷ್ಟು ಕೊಂಡಾಡಿದರೂ ತೀರದು. ಇದೂ ಅಲ್ಲದೆ ತಮಗೆ ಕನ್ನಡದ ಮಾತನಾಡಲು ಚೆನ್ನಾಗಿ ತಿಳಿಯದಾದಪ್ರಯುಕ್ತ, ಬಾಯಿ ತಪ್ಪಿ ಆ ರೀತಿ ಹೇಳಿದೆನೆಂದು ನುಡಿದಿರುವುದನ್ನು ನೋಡಿದ ಇವರು ತೆಲುಗು, ತಮಿಳು, ಮರಾಠಿ ಅಥವಾ ಆಂಗ್ಲಭಾಷೆಯನ್ನಾಡುವ ಪರಿಪಾಟಿಯುಳ್ಳವರೆಂದು ಭಾವಿಸಬೇಕಾಗುತ್ತದೆ ಆದರೆ ಇವರು ವಂಶಪಾರಂಪರ್ಯವಾಗಿ ಕನ್ನಡಮಾತನ್ನಾಡುವವರಾಗಿರುವರು. ಹೀಗಿರುವಾಗ ಇವರು ತಮಗೆ ಕನ್ನಡ ಮಾತನಾಡಲು ಚೆನ್ನಾಗಿ ಬರುವುದಿಲ್ಲವೆಂದು ಹೇಳಿರುವುದು ರಾಜದ್ರೋಹಕರವಾದ ತಮ್ಮ ಅಪರಾಧದಿಂದ ಪಾರಾಗಲು ಹೇಳಿ ಉಪಾಯವಾಗಿರುತ್ತದೆಂಬುದು ಎಂತಹವರಿಗಾದರೂ ಗೊತ್ತಾಗದೆ ಇರದು. ಇದರಿಂದ ಇವರು ಮಾಡಿದ ತಪ್ಪನ್ನು ಮರೆಮಚಲು ಪ್ರಯತ್ನಿಸಿ ಮತ್ತೊಂದು ತಪ್ಪನ್ನು ಮಾಡಿದ ಚಾಣ ಚಾಮಣಿಯಂತೆ ವರ್ತಿಸಿದವರಾದರು. ಇವರ ನಿಷೇಧಸೂಚನೆಯನ್ನು ಅನುಮೋದಿಸಿದ ಸಹೋದ್ಯೋಗಿಮಿತ್ರರುಗಳ ಪ್ರಯತ್ನವಿಶೇಷವು ಇನ್ನೂ ವಿಚಿತ್ರವಾಗಿರುವುದು. ಮುಖ್ಯವಾಗಿ ಈ ಯುವಕದೊಡ್ಡಮನುಷ್ಯರು ದೇಹಶ್ರಮದಿಂದ ಸಾ ರಾರು ರೂಪಾಯಿಗಳನ್ನು ವ್ಯಯಮಾಡಿ ಕಲಿತ ವಿದ್ಯಾಪ್ರೌ ಮೆಯನ್ನು ಈ ರೀತಿಯಾಗಿ ಪ್ರದರ್ಶಿಸಿ ಜನರ ಪರಿಹಾಸಕ್ಕೆ ಗುರಿಯಾದುದಕ್ಕಾಗಿ ನಾವು ಚಿಂತಿಸುತ್ತೇವೆ, ಅಲ್ಲದೆ ಇನ್ನು ಮೇಲಾದರೂ ಈರೀತಿ ಕೋಪಾಂಧರಾಗಿ ವರ್ತಿಸದೆ ಜಾಗರೂಕರಾಗಿರುವರೆಂದು ನಿರೀಕ್ಷಿಸುತ್ತೇವೆ.

ಗುಲ್ಬಾರ್ಗದಲ್ಲಿ ಮಹಮ್ಮದೀಯರ ದಾಂಧಲೆ.

ಗುಲ್ಬರ್ಗಾದ ಮಹಮ್ಮದೀಯರು ಸ್ವಜಾತಿಯ ದು ಭಿಮಾನದಿಂದ ಹಿಂದುಗಳಮೇಲೆ ಅತ್ಯಾಚಾರವನ್ನು ಆಗಾಗ ನಡೆಯಿಸುತ್ತಿರುವುದನ್ನು ಕೇಳುತ್ತಿದ್ದೇವೆ. ಅಲ್ಲಿ ಹಿಂದೂಗಳು ಮಹಮ್ಮದೀಯರಗಿನ್ನ ಅತ್ಯಧಿಕ ಸಂಖ್ಯಾಕರಾಗಿರುವರಾದರೂ ಮಹಮ್ಮದೀಯರ ಅಧಿಕಾರಪ್ರಾಬಲ್ಯದಿಂದ ತಕ್ಕ ಪರಿಹಾರೋಪಾಯವನ್ನು ಕಾಣದೆ ಅನುಭವಿಸಿಕೊಂಡಿರಬೇಕಾಗಿದೆ. ಈಗ್ಗೆ ಕೆಲ ದಿನಗಳ ಕೆಳಗೆ ಒಬ್ಬ ವೀರಶೈವ ಬಾಲಕನು ಮಹಮ್ಮದೀಯ ಮತಾವಲಂಬಿಯಾದ ಅವನ ತಂದೆಯ ಪೋಷಣೆಗೆ ಅವ ಅಭಿಮತಕ್ಕೆ ವಿರುದ್ಧವಾಗಿ, ನ್ಯಾಯಾಧೀಶನಿಂದವಶಪಡಿಸಲ್ಪಟ್ಟು ಅವನ ಸ್ವಧರ್ಮಭ್ರಷ್ಟತೆಗೆ ಅವಕಾಶವನ್ನುಂಟುಮಾಡಲ್ಪಟ್ಟದು ದಕ್ಕಾಗಿ ಆ ಊರಿನ ವೀರಶೈವರಾದಿಯಾಗಿ ಎಲ್ಲ ಹಿಂದೂಗಳೂ, ಇತರ ಪ್ರಾಂತಗಳ ವೀರಶೈವರೂ ಪ್ರಕ್ಷುಬ್ಧರಾಗಿ, ಈ ಧಾರ್ಮಿಕವಿಷಯವನ್ನು ಕೂಡಲೆ ವಿಚಾರಮಾಡಿ ತಪ್ಪಿತಸ್ಥರನ್ನು ಶಿಕ್ಷಿಸಿ ಮುಂದೆ ಇಂತಹ ಧರ್ಮಭ್ರಷ್ಟಕಾರ್ಯವು ನಡೆಯದಂ ಕಟ್ಟಪ್ಪಣೆಮಾಡಬೇಕೆಂದು ನೈಜಾಮರವರಲ್ಲಿ ವಿಜ್ಞಾಪಿ ಕೊಂಡಿದ್ದರೆಂದು ನಾವು ಹಿಂದೆ ತಿಳಿಸಿದ್ದೆವಷ್ಟೆ? ನೈಜಾಮ ವರು ಆ ಜನರ ಬಿನ್ನಪವನ್ನು ಲಾಲಿಸಿ ಆ ವೀರಶೈವ ಬಾಲ ನು ಮತಭ್ರಷ್ಟನಾದ ತಂದೆಯ ವಶದಿಂದ ತಪ್ಪಿಸಲ್ಪಟ್ಟು ತನ ಇಚ್ಛಾನುಸಾರ ಸ್ವಧರ್ಮಾವಲಂಬಿಯಾಗಿರುವಂತೆ ಮಾಡಿರು ರೆಂದು ಕೇಳಿ ಸಂತೋಷಿಸುತ್ತೇವೆ, ಅಲ್ಲದೆ ಈ ಉಪಕೃತಿಗಾ ಅವರನ್ನು ವೀರಶೈವರ ಪರವಾಗಿ ವಂದಿಸುತ್ತೇವೆ. ಇದರಂತೆಯೆ ನೈಜಾಂರವರು, ಈಗ ಅದೇ ಗುಲ್ಬರ್ಗಾದಲ್ಲಿ ಮಹಮ್ಮದೀಯರು ವೀರಶೈವರ ದೇವರನ್ನು ಭ್ರಷ್ಟಗೊಳಿಸಿ ದೇವಸ್ಥಾನವನ್ನೂ ಅಮೂಲ್ಯಪದಾರ್ಥಗಳನ್ನೂ ನಾಶಪಡಿಸಿ (ಈ ಸಂಬಂಧವಾ ಲೇಖವು ಬೇರೊಂದು ಕಡೆ ಮುದ್ರಿಸಲ್ಪಟ್ಟಿರುತ್ತದೆ) ಅನೇ ರಿಗೆ ಅಪಾಯವನ್ನುಂಟುಮಾಡಿ ದಾಂಧಲೆ ನಡೆಸಿರು ದನ್ನು ವಿಚಾರಿಸಿ ತಪ್ಪಿತಸ್ಥರಿಗೆ ಕಠಿಣಶಾಸ್ತಿಯನ್ನು ಮಾ ಇತಃಪರ ಇಂತಹ ಅತ್ಯಾಚಾರಗಳು ನಡೆಯದಂತೆ ತಕ್ಕೇರ್ಪಾ ಟನ್ನು ಮಾಡುವುದರ ಮೂಲಕ ತಮ್ಮ ರಾಜ್ಯದ ಮುಖ್ಯವಾ ಗುಲ್ಬರ್ಗೀಯ ಹಿಂದೂ ಪ್ರಜೆಗಳಿಗುಂಟಾಗಿರುವ ಭೀತಿಯನ್ನು ಹೋಗಲಾಡಿಸಿ ಅವರ ಚಿರಕೃತಜ್ಞತೆಗೆ ಪಾತ್ರರಾಗಬೇಕ ಅಪೇಕ್ಷಿಸುತ್ತೇವೆ.

ಬಾಲಿಕಾಗರ್ಭಿಣಿ.

ಮಿಡ್ನಾಪುರ ಡಿಸ್ಟ್ರಿಕ್ಟಿಗೆ ಸೇರಿದ ಲೀಲಧರ ಎಂ ಗ್ರಾಮದಲ್ಲಿ 4-5 ವರ್ಷ ವಯಸ್ಸಿನ ಒಬ್ಬ ಕುಂಬಾರರ ಬಾ ಕೆಯು 9 ತಿಂಗಳ ಗರ್ಭಿಣಿಯಾಗಿರುವುದನ್ನು ಕಣ್ಣಾರ ನೋ ಡಿರುವುದಾಗಿ ಮಿಡ್ನಾಪುರದ ಒಂದು ವೃತ್ತಪತ್ರಿಕೆಗೆ ಒಬ್ಬ ವಿಲೇಖಕನು ಬರೆದಿರುತ್ತಾನೆ. ಇದು ನಿಶ್ಚಯವಾಗಿದ್ದರೆ ಕಾ ವೈಚಿತ್ರ್ಯವೇಸರಿ. ಪ್ರಾಯಶಃ ಆ ಬಾಲಿಕೆಯ ಹೊಟ್ಟೆಯ ಏನಾದರೊಂದು ಗಡ್ಡೆಯು ಬೆಳೆದುಕೊಂಡು ಗರ್ಭಧಾರ ಯಂತೆ ತೋರಬಹುದು.

ಸ್ವದೇಶದ ವೃತ್ತಾಂತಗಳು

ಗೌರಿಗಣೇಶನ ಹಬ್ಬಕ್ಕಾಗಿ ಶ್ರೀಮದ್ಯುವರಾಣಿಯವ ಕಳೆದ ಗುರುವಾರ ಬೆಂಗಳೂರಿನಿಂದ ರಾಜಧಾನಿಗೆ ದಯಮಾ

ಡಿಸಿದರು. ಮಹಾಮಾತೃಶ್ರೀಯವರು ಈ ದಿವಸ ಚಿತ್ತೈಸುವವರಾಗಿರುವರು.

ಸಬ್‌ಜಡ್ಜಿಯರುಗಳಾದ ಮ|| [illegible]. ಮಹಾದೇವಯ್ಯನವರು ಮೈಸೂರಿನಿಂದ ಬೆಂಗಳೂರಿಗೂ, ಮ|| ಬಿ ರಂಗಯ್ಯಂಗಾರರು ಶಿವಮೊಗ್ಗೆಯಿಂದ ಬೆಂಗಳೂರಿಗೂ ವರ್ಗಾಯಿಸಲ್ಪಟ್ಟು ಮುನಸೀಫರಾದ ಮ|| ಡಿ. ಅಳಸಿಂಗ್ರಾಚಾರರು ಶಿವಮೊಗ್ಗಾ ಆಕ್ಟಿಂಗ್ ಸಬ್‌ಜಡ್ಜರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮ|| ಎಸ್. ಡಿ. ಶೇಷಾದ್ರಿಅಯ್ಯಂಗಾರರು ಮತ್ತು ರಾಮಕೃಷ್ಣಯ್ಯಂಗಾರರು ಸರ್ಕಾರಿ ಹಣವನ್ನು ದುರುಪಯೋಗಪಡಿಸಿದರೆಂಬುದರಮೇಲೆ ಸೆಷನ್ಸು ಜಡ್ಜರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ಕಳೆದ ತಾ|| 26 ರಲ್ಲಿ ಶೇಷಾದ್ರಿಅಯ್ಯಂಗಾರರು ನಿರಪರಾಧಿಗಳೆಂದು ಬಿಡಲ್ಪಟ್ಟು ಮ|| ಕೃಷ್ಣಯ್ಯಂಗಾರರು 3 ತಿಂಗಳ ಸಾಧಾರಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟರು.

ಬೆಂಗಳೂರು ಡಿ|| ಜಡ್ಜರಾದ ಮ|| ಕೆ. ರಾಮಸ್ವಾಮಿ ಅಯ್ಯಂಗಾರರು ಚೀಫ್ ಕೋರ್ಟಿನ ಅಫಿಷಿಯೇಟಿಂಗ್ ಜಡ್ಜರಾಗಿ ನಿಯಮಿಸಲ್ಪಟ್ಟುದರಿಂದ ಡಿ|| ಜಡ್ಜಿಯರುಗಳಾದ ಮ|| ಜಿ. ಶ್ರೀನಿವಾಸಯ್ಯರ್‌ರವರು ಮೈಸೂರಿನಿಂದ ಬೆಂಗಳೂರಿಗೂ, ಮ|| ಡಿ. ಕೆ. ರಾಮರಾಯರು ಶಿವಮೊಗ್ಗೆಯಿಂದ ಬೆಂಗಳೂರಿಗೂ ವರ್ಗಾಯಿಸಲ್ಪಟ್ಟು ಬೆಂಗಳೂರು ಸಬ್‌ಜಡ್ಜರಾದ ಮ|| ಜಿ. ಸತ್ಯಾಜಿರಾಯರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಆಕ್ಟಿಂಗ್ ಜಡ್ಜರಾಗಿ ನಿಯಮಿಸಲ್ಪಟ್ಟಿರುವರು.

ರಿಟೈರ್ಡ್ ಸಬ್‌ಜಡ್ಜರೂ ಮೈಸೂರು ನ್ಯಾಯವಿಧಾಯಕಸಭಾಮೆಂಬರೂ ಆದ ರಾವ್‌ಸಾಹೇಬ್ ಮ|| ಎಚ್. ಚನ್ನಯ್ಯನವರ ಸುಪುತ್ರಿಯರಾದ ಸೌಭಾಗ್ಯವತಿ ಲಕ್ಷ್ಮೀದೇವಮ್ಮ ಬಿ. ಎ., ಯವರು ಮೈಸೂರು ಮಹಾರಾಣೀಕಾಲೇಜಿನ ಪ್ರಕೃತಿಶಾಸ್ತ್ರಬೋಧಕರಾಗಿ ನಿಯಮಿಸಲ್ಪಟ್ಟಿರುತ್ತಾರೆಂದು ತಿಳುಹಲು ಅತ್ಯಾನಂದವಾಗುತ್ತದಲ್ಲದೆ ಇದಕ್ಕಾಗಿ ಅವರನ್ನು ನಾವು ಅಭಿನಂದಿಸಿ ಶೀಘ್ರದಲ್ಲಿ ಉನ್ನತಪದವಿಯನ್ನು ಪಡೆಯುವವರಾಗಲೆಂದು ಆಶಿಸುತ್ತೇವೆ. ಇಂತಹ ಅನೋಘ ಸುಪುತ್ರಪುತ್ರೀರತ್ನಗಳನ್ನು ಪಡೆದಿರುವ ರಾವ್‌ಸಾಹೇಬರೇ ಧನ್ಯರು.

ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿದ್ದ ಡಾಕ್ಟರ್ ಉಸ್ಮಾನ್‌ರವರು ಸೀನಿಯರ್ ಸರ್ಜನರಾಗಿ ನಿಯಮಿಸಲ್ಪಟ್ಟುದರಿಂದ, ಕೃಷ್ಣರಾಜೇಂದ್ರ ಆಸ್ಪತ್ರೆಯ ಡಾಕ್ಟರುಗಳೂ ಇತರ ಕೆಲಸಗಾರರೂ ತಮಗುಂಟಾದ ಸಂತೋಷಕ್ಕಾಗಿ ಕಳೆದ ತಾ|| 27 ನೆಯ ಬುಧವಾರ ಸಾಯಂಕಾಲದಲ್ಲಿ ಡಾಕ್ಟರ್ ಉಸ್ಮಾನ್‌ರವರನ್ನು ಆಸ್ಪತ್ರೆಗೆ ಬರಮಾಡಿಕೊಂಡು ಅಲ್ಪಾಹಾರದಿಂದ ಸತ್ಕರಿಸಿ ಅವರ ಗುಣಪ್ರಶಂಸಾರೂಪವಾದ ಪತ್ರಿಕೆಯನ್ನು ಓದಿ ಒಪ್ಪಿಸಿದಮೇಲೆ ಅತಿಥಿಗಳನ್ನು ತಮ್ಮಗಳ ಮಧ್ಯದಲ್ಲಿ ಕುಳ್ಳಿರಿಸಿಕೊಂಡು ಭಾವಚಿತ್ರವನ್ನು ತೆಗಿಸಿ ತಮ್ಮಗಳಿಗೆ ಅವರಲ್ಲಿರುವ ಪ್ರೀತಿವಿಶ್ವಾಸವನ್ನು ಪ್ರದರ್ಶಿಸಿದರು.

ಸೀನಿಯರ್‌ಸರ್ಜನರಾದ ಡಾ|| ವೈಲ್ಯಾಗನಂರವರು ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರಾಗಿ ನಿಯಮಿಸಲ್ಪಟ್ಟಿರುವ ಪ್ರಯುಕ್ತ ಡಾಕ್ಟರ್ ಉಸ್ಮಾನ್‌ರವರು ಸೀನಿಯರ್‌ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರಾಗಿಯೂ, ಡಾಕ್ಟರ್ ಡಿ. ಎಸ್. ಪುಟ್ಟಣ್ಣನವರು ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿಯೂ ನಿಯಮಿಸಲ್ಪಟ್ಟು, ಡಾ|| ಸಿ ರಾಜಗೋಪಾಲಮೊದಲಿಯಾರರು ಕಡೂರು ಡಿ|| ಮೆಡಿಕಲ್ ಆಫೀಸರಾಗಿಯೂ, ಡಾ|| ಎಸ್. ಕೃಷ್ಣಮೂರ್ತಿಯವರು ಸಾಗರದ ಡಿಸ್ಪೆನ್ಸರಿಗೂ, ಡಾ|| ವೈ. ಎನ್. ಕೃಷ್ಣಮೂರ್ತಿಯವರು ಕೋಲಾರದ ಗೋಲ್ಡ್‌ಫೀಲ್ಡ್ಸ್ ಡಿ|| ಮೆಡಿಕಲ್ ಆಫೀಸರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಮಹಾಜನಸಭೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಗಾಗಿ ತಯಾರಿಸಲ್ಪಟ್ಟಿದ್ದ ಓಟರುಗಳ ಲಿಸ್ಟು ಅಕ್ರಮವಾಗಿದ್ದುದರಿಂದ ಅದನ್ನು ರದ್ದುಮಾಡಿ ಹೊಸ ಲಿಸ್ಟು ತಯಾರಾಗುವವರೆಗೂ ಆಗಸ್ಟ್ ತಾ|| 18 ರಿಂದ ನಡೆಯಬೇಕಾಗಿದ್ದ ಚುನಾವಣೆಯನ್ನು ನಿಲ್ಲಿಸಲು ಸರ್ಕಾರದವರು ಅಪ್ಪಣೆಮಾಡಿದುದಕ್ಕಾಗಿ ಶ್ರೀಮನ್ಮಹಾರಾಜರವರಿಗೂ, ಮೈಸೂರು ಸರ್ಕಾರದವರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ತಿಳಿಸುವುದಕ್ಕೋಸ್ಕರ ರಾಜಧಾನಿಯ ಸಮಸ್ತ ಜಾತಿಯ ರೇಟ್‌ಪೇಯರುಗಳೂ ಓಟರುಗಳೂ ಕಳೆದ ತಾ|| 22 ರ ಸಾಯಂಕಾಲ ಟಿವರ್ನ್ ಹಾಲಿನಲ್ಲಿ ಕಿಕ್ಕಿರಿಯುವಂತೆ ಸಭೆ ಸೇರಿದ್ದರು. ಮುಸಾಹೇಬ್ ಮಿ|| ನೈಜಾಮುದ್ದೀನ್ ಅಲ್ಲಿಖಾನ್ ರವರು, ಮಿ|| ಆರ್. ಜಿ. ಹಾರ್ಡೀಕಾರ್‌ರವರು, ಮ|| ಗಳಾದ ಎಂ. ವೆಂಕಟಕೃಷ್ಣಯ್ಯನವರು, ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರು, ಅಡ್ವೋಕೇಟ್ ಎಂ. ವಿ. ವೆಂಕಟರಾವ್, ಬಿ.ಎ.,ಎಲ್‌ಎಲ್.ಬಿ., ಯವರು, ಅಡ್ವೋಕೇಟ್ ಸಿ. ನರಸಿಂಹಯ್ಯ, ಬಿ. ಎ. ಬಿ. ಎಲ್. ರವರು, ಅಬ್ದುಲ್ ಹಸನ್‌ನಾಥ್ ಸಯದ್‌ಹಜರತ್‌ಪೀರ್‌ರವರು, ಮಹಮದ್ ಸೇಟ್‌ರವರು; ಅಡ್ವೋಕೇಟ್ ಎಚ್. ಸಿ. ದಾಸಪ್ಪ, ಬಿ.ಎ.,ಎಲ್‌ಎಲ್.ಬಿ., ಯವರು, ಅಡ್ವೋಕೇಟ್ ಎಂ. ಬಸವರಾಜ ಅರಸ್, ಎಂ. ಎ. ಬಿ. ಎಲ್., ರವರು, ಅಡ್ವೋಕೇಟ್ ಎಂ. ಪಿ. ಭೋಗಯ್ಯ, ಬಿ.ಎ.,ಬಿ.ಎಲ್., ರವರು, ಅಡ್ವೋಕೇಟ್ ಬಿ. ದೇವರಾಜ ಅರಸ್, ಬಿ.ಎ.,ಎಲ್‌ಎಲ್. ಬಿ., ಯವರು, ವಿ. ತಿರುವೆಂಗಡಮೊದಲಿಯಾರರು, ಕಾವೇರಿಪಟ್ಟಿಣಂ ಸುಬ್ರಾಯಶೆಟ್ಟರು, ರಿಸಾಲ್‌ದಾರ್ ಮಹಮದ್ ಇಸ್ಮಾಯಿಲ್ ಸಾಹೇಬರು, ಕೆ. ಧನಕೋಟಿಶೆಟ್ಟರು, ವೈ. ವಿರೂಪಾಕ್ಷಯ್ಯನವರು, ಎಂ. ಮಾದಪ್ಪನವರು, ಶ್ರೀಕಂಠಾಚಾರರು, ಕೆ. ಮಾಧವರಾವ್‌ಸರ್ದಾರ್ ರವರು, ಎಂ. ಸೆಟ್ಟ್ಯಾಜಿರಾಯರು, ಯು. ಆರ್. ಲಿಂಗೋಜಿರಾಯರು, ಎಂ. ನಾರಾಯಣಸ್ವಾಮಿಯವರು, ಸಾಹುಕಾರ್ ಹಜಾಯಿ ರಂಗಣ್ಣನವರು, ಅಕ್ಕಿಮಂಡಿ ಗಿರಿಯಪ್ಪನವರು, ಕೈಸ್‌ಮಿಲ್ ದೊಡ್ಡಜವರಪ್ಪನವರು, ಕೈಸ್‌ಮಿಲ್ ತಮ್ಮಯ್ಯನವರು, ಎಂ. ರಾಮಚಂದ್ರಶೆಟ್ಟಿ, ಬಿ.ಎ., ಯವರು, ಎಂ. ಸಿ. ಲಿಂಗೇಗೌಡರು, ಎಂ. ಪುಟ್ಟನಂಜಪ್ಪನವರು, ಎಂ. ಗಿರ್ಯಾಜಿರಾಯರು, ಅಬ್ದುಲ್‌ವಾಹಬ್‌ಸೇಟರು, ಗನ್ನಿಸೇಟರು, ಜಸಬ್ ಉಸ್ಮಾನ್‌ಸೇಟರು, ಅಡ್ವೋಕೇಟ್ ಜಿ. ಮಲ್ಲಾರಾಧ್ಯ, ಬಿ.ಎ., ಎಲ್‌ಎಲ್.ಬಿ., ಯವರು, ಅಡ್ವೋಕೇಟ್ ಎಸ್. ಸುಬ್ಬರಾವ್, ಬಿ.ಎ., ಎಲ್‌ಎಲ್.ಬಿ., ಯವರು, ಪ್ಲೀಡರ್ ಕೆ. ಕೃಷ್ಣಸ್ವಾಮಿರಾವ್ ಬಿ.ಎ., ಎಲ್‌ಎಲ್.ಬಿ., ಯವರು, ಪ್ಲೀಡರ್ ಎಚ್. ಸುಬ್ಬರಾವ್, ಬಿ. ಎ., ಬಿ.ಎಲ್., ರವರು, ಅಡ್ವೋಕೇಟ್ ಎಂ.ವಿ. ನಾರಾಯಣರಾಯರು, ಬಿ. ಎ.,ಎಲ್‌ಎಲ್.ಬಿ., ಯವರು, ಅಡ್ವೋಕೇಟ್ ಪಿ. ಸೀತಾರಾಮಯ್ಯ, ಬಿ.ಎ.,ಬಿ.ಎಲ್., ರವರು, ಕಂಟ್ರ್ಯಾಕ್ಟರ್ ಬಿ. ಮುನಿವೆಂಕಟಪ್ಪನವರು, ಎ. ಕರೀಂಬಾಬ್ ಸಾಹೇಬರು, ಜಿ. ಹುಸೇನ್‌ಬಾಬ್ ಸಾಹೇಬರು, ಸಾಹುಕಾರ್ ಸಿದ್ಧೋಜಿರಾಯರು, ಟಿ.ಸಿ. ಟಾಂಪಿನ್, ಬಿ.ಎ., ಯವರು, ಪಂಡಿತ ನಂಜುಂಡಪ್ಪನವರು, ಗುರುಕಾರ್ ಮಲ್ಲಪ್ಪನವರು, ಮರಿಲಿಂಗಯ್ಯನವರು, ಪುನ್ನಾರಪ್ಪನವರು, ಪುಟ್ಟೊ ಸೂರ್ಯನಾರಾಯಣಶೆಟ್ಟರು, ಬಿ.ಆರ್. ಲಕ್ಷ್ಮೀನಾರಾಯಣಶೆಟ್ಟರು, ಎಂ.ಎಸ್. ಚನ್ನಬಸಪ್ಪನವರು, ಎಚ್.ಕೆ. ಸಿದ್ಧಲಿಂಗಪ್ಪನವರು, ದಾಸಪ್ಪನವರು, ರಾಘವನಾಯಕರು, ಯು. ಆರ್. ರಾಮಚಂದ್ರರಾಯರು, ಮಲ್ಲಾಜಪ್ಪನವರು, ಶ್ರೀಪಾಲಯ್ಯನವರು, ಎಂ. ಆದಿರಾಜಯ್ಯನವರು, ಧರಣಯ್ಯನವರು, ವಜ್ರನಾಥಯ್ಯನವರು, ಎಂ.ಎಸ್. ಬಸಪ್ಪನವರು, ಎಂ.ಜಿ ದಸ್ತಗೀರ್‌ರವರು, ಸಾಹುಕಾರ್ ವೀರಣ್ಣನವರು, ದಳ್ಳಾಳಿ ರುದ್ರಪ್ಪನವರು, ಎಂ.ಎನ್. ನಾಗಣ್ಣನವರು, ಮೊದಲಾಗಿ ಸುಮಾರು 1500 ಜನರವರೆಗೆ ಸಭೆಗೆ ದಯಮಾಡಿಸಿದ್ದರು. ಅಡ್ವೋಕೇಟ್ ಮ|| ಎಚ್.ಸಿ. ದಾಸಪ್ಪನವರು ಸಭಾಧ್ಯಕ್ಷತೆಯನ್ನು ವಹಿಸಬೇಕೆಂದು ಮ|| ಎಂ. ರಾಮಚಂದ್ರಶೆಟ್ಟಿ, ಬಿ.ಎ., ಯವರಿಂದ ಸೂಚಿಸಲ್ಪಟ್ಟು ಸಾಹುಕಾರ್ ತಮ್ಮಯ್ಯನವರಿಂದ ಅನುಮೋದಿಸಲ್ಪಟ್ಟಿತು. ಅದೇಪ್ರಕಾರ ಮ|| ದಾಸಪ್ಪನವರು ಅಧ್ಯಕ್ಷತೆಯನ್ನು ವಹಿಸಿ ಆರಂಭಭಾಷಣಮಾಡುವಾಗ್ಗೆ, "ಈ ಮಹಾಸಭಾಧ್ಯಕ್ಷಸ್ಥಾನವನ್ನಲಂಕರಿಸಲು ಯೋಗ್ಯತೆಯಲ್ಲೂ ಅನುಭವದಲ್ಲೂ ನನಗಿನ್ನ ಅರ್ಹರಾದವರು ಅನೇಕರಿರುವರಾದರೂ ನಾನು ಈದಿವಸದ ಸಭಾಕಾರ್ಯವನ್ನು ನಿರ್ವಹಿಸಬಲ್ಲನೆಂದು ಭರವಸೆಯನ್ನಿಟ್ಟು ನನಗೆ ವಹಿಸಿದುದಕ್ಕಾಗಿ ತಮ್ಮಗಳನ್ನು ವಂದಿಸಿ ತಮ್ಮ ನಿರೀಕ್ಷಣೆಯನ್ನು ತಕ್ಕಮಟ್ಟಿಗೆ ಸಾರ್ಥಕಪಡಿಸುವೆನು" ಎಂದು ಹೇಳಿ 70 ಜನ ರೇಟ್‌ಪೇಯರುಗಳೂ ಓಟರುಗಳೂ ಸೈನ್‌ಮಾಡಿ ಪ್ರಕಟಿಸಿರುವ ಪ್ರಸಿದ್ಧ ಪತ್ರಿಕೆಯಲ್ಲಿ ಕಂಡ ಸಭೆಯುದ್ದೇಶವನ್ನೋದಿ, ಚುನಾವಣೆಯನ್ನು ನಿಲ್ಲಿಸಿ, ಹೊಸಲಿಸ್ಟು ತಯಾರಾದನಂತರ ಚುನಾವಣೆಯು ನಡೆಯುವಂತೆ ಸಕಾಲದಲ್ಲಿ ಅಪ್ಪಣೆಮಾಡಿದುದಕ್ಕಾಗಿ ಶ್ರೀಮನ್ಮಹಾರಾಜರವರಿಗೂ ಘನಸರ್ಕಾರದವರಿಗೂ ಪ್ರಜೆಗಳ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸತಕ್ಕುದು ಯುಕ್ತವೂ ಅತ್ಯವಶ್ಯಕವೂ ಎಂದು ಹೇಳಿ ಆ ಬಗ್ಗೆ ನಿರ್ಧಾರವನ್ನು ಸೂಚಿಸಬೇಕಾಗಿ ಮ|| ಎಂ. ಬಸವರಾಜ ಅರಸ್, ಎಂ.ಎ., ಬಿ. ಎಲ್., ರವರಿಗೆ ತಿಳಿಸಿದರು.

"1924 ನೆಯ ಆಗಸ್ಟ್ ತಾ|| 18ರಲ್ಲಿ ನಡೆಯಬೇಕಾಗಿದ್ದ ಮ್ಯುನಿಸಿಪಲ್ ಚುನಾವಣೆಯು ನಿಲ್ಲಿಸಲ್ಪಟ್ಟು ಓಟರುಗಳ ಹೊಸಲಿಸ್ಟು ತಯಾರಾದನಂತರ ಚುನಾವಣೆಯು ನಡೆಯಬೇಕಾಗಿ ಸರ್ಕಾರದವರು ಸಕಾಲದಲ್ಲಿ ಯುಕ್ತವಾದಪ್ಪಣೆಯನ್ನು ಮಾಡಿದುದಕ್ಕೋಸ್ಕರ ಶ್ರೀಮನ್ಮಹಾರಾಜರವರಿಗೂ, ಘನಸರ್ಕಾರದವರಿಗೂ ತಮ್ಮ ರಾಜಭಕ್ತಿಯುತವೂ ಮರ್ಯಾದಾಪೂರ್ವಕವೂ ಆದ ವಂದನೆಗಳನ್ನು ಅರ್ಪಿಸುತ್ತಾರೆ" ಎಂಬ ನಿರ್ಧಾರವನ್ನು ಮ|| ಬಸವರಾಜ ಅರಸಿನವರು ಸೂಚಿಸುವಾಗ್ಗೆ, ಓಟರುಗಳ ಲಿಸ್ಟನ್ನು ತಯಾರಿಸುವಲ್ಲಿ ಅನೇಕ ಅಕ್ರಮಗಳೆದ್ದುವಾದುದರಿಂದ ಹೊಸಲಿಸ್ಟನ್ನು ತಯಾರಿಸಲಪ್ಪಣೆಯಾಗಿರುವ ಪ್ರಯುಕ್ತ ಮುಂದೆಬರುವ ಚುನಾವಣೆಯಲ್ಲಿ ಅನೇಕಜನರು ಓಟನ್ನು ಕೊಡಲವಕಾಶವಾಗುವುದಲ್ಲದೆ, ಅದರಿಂದ ರಾಜಧಾನಿಯ ಪ್ರಜೆಗಳಿಗೆ ನಿಜವಾದ ಮೇಲ್ಮೆಯುಂಟಾಗುವುದೆಂದೂ ರೇಟ್‌ಪೇಯರುಗಳ ವಿಜ್ಞಾಪನೆಯು ಪರಿಗಣಿಸಲ್ಪಟ್ಟುದು ಅವರ ಸುದೈವವೆಂದೂ, ಈ ಸಂದರ್ಭದಲ್ಲಿ ಅವರುಗಳು ತಮ್ಮ ರಾಜಭಕ್ತಿಪೂರ್ವಕವಾದ ವಂದನೆಗಳನ್ನು ಸಾರ್ವದಾ ಪ್ರಜಾಕ್ಷೇಮಚಿಂತಾಸಕ್ತರಾದ ಶ್ರೀಮನ್ಮಹಾರಾಜರವರಿಗೆ ಅರ್ಪಿಸತಕ್ಕುದು ಅವರುಗಳ ಪವಿತ್ರಧರ್ಮವಾಗಿರುವುದೆಂದೂ ಹೇಳಿದರು.

ಮ|| ಎಂ. ಪಿ. ಭೋಗಯ್ಯನವರು ಈ ನಿರ್ಧಾರವನ್ನು ಅನುಮೋದಿಸುವಾಗ್ಗೆ, ಸರ್ಕಾರಿಯಪ್ಪಣೆಯ ಖಂಡನರೂಪವಾದ ಪ್ರಶ್ನೆಗಳಿಗೆಲ್ಲಾ ಉತ್ತರರೂಪವಾಗಿ ಹೇಳಿದುದೇನಂದರೆ—ಪುರಜನರ ಪರವಾಗಿ ಕಳೆದ ತಾ|| 20ರಲ್ಲಿ ನೆರದಿದ್ದ ಸಭೆಯಲ್ಲಿ ಸರ್ಕಾರಿಯಪ್ಪಣೆಯು ಅನ್ಯಾಯವೂ, ಅಪ್ರಕೃತವೂ, ಅಧರ್ಮವೂ ಎಂದು ಖಂಡಿಸಲ್ಪಟ್ಟಿತು. ಆದರೆ ಸರ್ಕಾರಿಯಪ್ಪಣೆಯು ಹಾಗಿರದೆ ಸಂಪೂರ್ಣವಾಗಿ ನ್ಯಾಯಾಬದ್ಧವಾಗಿದೆ. ಚುನಾವಣೆಯು ರೂಲ್ಸಿನ 8 ನೆಯ ಸೆಕ್ಷನ್ ಪ್ರಕಾರ ಸರ್ಕಾರದವರಿಂದ ನಿಯಮಿತನಾದ ಅಧಿಕಾರಿಯಿಂದ ಈಗಣ ಓಟರುಗಳ ಲಿಸ್ಟು ತಯಾರಿಸಲ್ಪಟ್ಟಿಲ್ಲ. ಓಟರ ಲಿಸ್ಟು ಬಹಳ ಅಸಂಪೂರ್ಣವಾಗಿದೆ. ಈ ಲಿಸ್ಟು ತಯಾರಿಸಲ್ಪಡುವುದಕ್ಕೆ ಮೊದಲು ಸಾವಿರಾರು ಓಟರುಗಳಿಂದ ಬರಬೇಕಾದ ಕಂದಾಯಕ್ಕೆ ತಗಾದೆ ಮಾಡಲ್ಪಡಲಿಲ್ಲವು ಮತ್ತು ಈ ಕಾರಣದಿಂದ ಕಂದಾಯವನ್ನು ಕೊಡದಿದ್ದವರ ಹೆಸರು ಲಿಸ್ಟಿಗೆ ಸೇರಿಸಲ್ಪಡಲಿಲ್ಲವು. ಇದೂ ಅಲ್ಲದೆ ಮುಂಚಿತವಾಗಿ ಕಂದಾಯವನ್ನು ಕೊಟ್ಟರಕಕ್ಕ ಎಷ್ಟೋಜನರ ಹೆಸರುಗಳು ಸಹ ಬಿಡಲ್ಪಟ್ಟಿರುತ್ತವೆ. ರಿಜಿಸ್ಟರ್ಡ್ ಕಂಪೆನಿಯಲ್ಲಿ 50 ರೂಪಾಯಿಗೆ ಮೇಲ್ಪಟ್ಟು ಸಂಬಳವಿರತಕ್ಕವರು ಓಟನ್ನುಕೊಡಲು ಅರ್ಹರೆಂದು ಎಲೆಕ್ಷನ್ ರೂಲ್ಸು 5ರಲ್ಲಿ ಹೇಳಲ್ಪಟ್ಟಿದ್ದಾಗ್ಯೂ ಅನೇಕರ ಹೆಸರು ಬಿಡಲ್ಪಟ್ಟಿರುತ್ತದೆ. ನನಗೆ ಸಂಬಂಧಪಟ್ಟ ಒಂದು ರಿಜಿಸ್ಟರ್ಡ್ ಕಂಪೆನಿಯಲ್ಲಿ 50 ರೂ. ಸಂಬಳದವರು 7-8 ಜನರವರೆಗಿರುವರು. ಅವರ ಹೆಸರುಗಳನ್ನು ವಿಚಾರಿಸಿದವರೇ ಇಲ್ಲ. ಹೀಗೆ ಜನರ ಹೆಸರು ಬೇಕೆಂತಲೋ ಅಜಾಗರೂಕತೆಯಿಂದಲೋ ಬಿಡಲ್ಪಟ್ಟಿರುತ್ತವೆ. ಮ್ಯುನಿಸಿಪಲ್ ಕೌನ್ಸಿಲಿನವರು ತಮ್ಮ ಕರ್ತವ್ಯವನ್ನು ಮಾಡದೆ ತಪ್ಪಿದಲ್ಲಿ ಸರ್ಕಾರದವರು ತಕ್ಕ ಕಾರ್ಯಭಾಗನಡೆಸಲು ಮ್ಯುನಿಸಿಪಲ್ ರೆಗ್ಯುಲೇಷನ್ 178 ನೆಯ ಸೆಕ್ಷನ್ ಪ್ರಕಾರ ಅವಕಾಶವಿರುತ್ತಾದುದರಿಂದ ಅದನ್ನು ಅನುಷ್ಠಿಸಿಸಲು ಪ್ರಸಕ್ತಸಂದರ್ಭಕ್ಕಿನ್ನ ಅನುಕೂಲವಾದುದು ಬೇರೊಂದಿಲ್ಲವು. ಚುನಾವಣೆಯನ್ನು ರದ್ದುಪಡಿಸಬೇಕೆನ್ನುವವರು ಡಿಸ್ಟ್ರಿಕ್ಟ್ ಜಡ್ಜರಿಗೆ ಬರೆದುಕೊಳ್ಳಬೇಕಾಗಿದ್ದಿತೆಂದು ಸರ್ಕಾರಿಯಪ್ಪಣೆಯನ್ನು ಖಂಡಿಸಿದ ಕೆಲವರು ಹೇಳಿದರು. ಆದರೆ, ಚುನಾವಣೆಯನ್ನು ನಡೆಯಿಸಲು ನಿಯಮಿಸಲ್ಪಟ್ಟ ಅಧಿಕಾರಿ ಅಥವಾ ಅಧಿಕಾರಿಗಳು ಯಾವುದಾದರು ತಪ್ಪನ್ನು ಮಾಡಿದರೆಂಬುದರಮೇಲೆ ಚುನಾವಣೆಯು ನಡೆಯಕೂಡದೆಂದು ವಿವಾದಹುಟ್ಟಿದಲ್ಲಿ ಡಿ|| ಜಡ್ಜಿಯರು ಚುನಾವಣೆಯನ್ನು ರದ್ದುಮಾಡಲು ಅಧಿಕಾರವಿಲ್ಲವು ಎಂದು ಚುನಾವಣೆಯ ಸೆಕ್ಷನ್ನಿನಲ್ಲಿ ಹೇಳಲ್ಪಟ್ಟಿರುವುದನ್ನು ಸರ್ಕಾರಿಯಪ್ಪಣೆಯನ್ನು ಆಕ್ಷೇಪಿಸಿದವರು ಗಮನಿಸದಿದ್ದುದಕ್ಕಾಗಿ ವಿಷಾದಿಸಬೇಕಾಗಿದೆ. ಮುಖ್ಯವಾಗಿ ಈಗಣ ಸರ್ಕಾರಿಯಪ್ಪಣೆಯಿಂದ ಕೆಲ ಉಮೇದುವಾರರಿಗೆ ಅಸಮಾಧಾನವಿರಬಹುದೇ ವಿನಾ ಬಹುಜನ ರೇಟ್‌ಪೇಯರುಗಳಿಗೆ ಯಾವ ತೊಂದರೆಯೂ ಆಗದೆ ವಿಶೇಷ ಅನುಕೂಲವಾಯಿತೆಂದು ಖಂಡಿತವಾಗಿ ಹೇಳುತ್ತೇನೆ.

ಮುಸಾಹೇಬ್ ಮಿ|| ಮಿರ್ ನೈಜಾಮುದ್ದಿನ್ ಅಲ್ಲಿಖಾನ್ ಸಾಹೇಬರವರು ಈ ನಿರ್ಧಾರವನ್ನು ಪುಷ್ಟೀಕರಿಸುವಾಗ್ಗೆ ಹೇಳಿದುದೇನೆಂದರೆ—ತಮ್ಮ ಎಲ್ಲಾ ಕೋಮಿನ ಪ್ರಜೆಗಳಿಗೂ ಕ್ಷೇಮವನ್ನುಮಾಡಬೇಕೆಂಬುದೇ ನಮ್ಮ ಮಹಾಸ್ವಾಮಿಯವರ ಸಂಕಲ್ಪವಾಗಿರುತ್ತದೆ ಮತ್ತು ಅದಕ್ಕಾಗಿ ಅನೇಕ ಸೌಕರ್ಯಗಳನ್ನು ಮಾಡಿಕೊಟ್ಟು ಕೊಡುತಲೂ ಇರುವರು. ಅದಕ್ಕಾಗಿ ಪ್ರಜೆಗಳಾದ ನಾವು ನಮ್ಮ ಶ್ರೀಮನ್ಮಹಾರಾಜರವರಿಗೆ ಅತ್ಯಂತ ಕೃತಜ್ಞರಾಗಿರಬೇಕಾದದ್ದು ನಮ್ಮ ಮುಖ್ಯ ಧರ್ಮವಾಗಿರುತ್ತದೆ. ಈಗಿನ ಓಟರ ಲಿಸ್ಟು ಸರಿಯಾಗಿಲ್ಲವೆಂಬುದಕ್ಕೆ ಅನೇಕ ಕಾರಣಗಳಿವೆ. ಅದಕ್ಕೆ ನನ್ನ ಸ್ವಂತವಿಷಯವನ್ನು ಒಂದು ಉದಾಹರಣೆಯಾಗಿಕೊಡುತ್ತೇನೆ. ನನ್ನ ಮನೆಯಲ್ಲಿ 7 ಜನರು ಕಂದಾಯವನ್ನುಕೊಟ್ಟು ಓಟನ್ನು ಕೊಡಲು ಅರ್ಹರಾಗಿದ್ದರೂ ನನ್ನ ಒಬ್ಬನ ವಿನಾ ಅವರೆಲ್ಲರ ಹೆಸರುಬಿಡಲ್ಪಟ್ಟಿರುವವೆಂದು ತಿಳಿಸಲು ವ್ಯಸನವಾಗುತ್ತದೆ. ತಿಳಿದವರ ವಿಚಾರವೇ ಹೀಗಿರುವಾಗ್ಗೆ ಇನ್ನು ಏನನ್ನೂ ಅರಿಯದ ಜನರು ಈ ಕುಂದುಕೊರತೆಗಳನ್ನು ತಿಳಿದುಕೊಳ್ಳಲು ಸಾಧ್ಯವೆ ಮತ್ತು ಇಂತಹ ಸೌಕರ್ಯಗಳನ್ನುಂಟುಮಾಡಿಕೊಡುವಲ್ಲಿ ನಾವು ಭೀತಿಯೂ, ಔದಾರ್ಯವೂ ತೋರಿಸಲ್ಪಡದಿದ್ದಲ್ಲಿ ಅವರುಗಳು ಅಭಿವೃದ್ಧಿಯನ್ನು ಹೊಂದಲು ಸಾಧ್ಯವೆ? ಆದಕಾರಣ ಓಟನ್ನು ಕೊಡಲು ಅರ್ಹರಾದವರೆಲ್ಲರೂ ಓಟರ ಲಿಸ್ಟಿನಲ್ಲಿ ಸೇರಲು ಅವಕಾಶವಾಗುವಂತೆ ಹೊಸ ಲಿಸ್ಟು ತಯಾರಿಸಲ್ಪಡುವಂತೆ ಸರ್ಕಾರದವರು ದಯವಿಟ್ಟು ಅಪ್ಪಣೆಮಾಡಿರುವುದಕ್ಕಾಗಿ ಶ್ರೀಮನ್ಮಹಾರಾಜರವರಿಗೂ ಸರ್ಕಾರದವರಿಗೂ ನಮ್ಮಗಳ ವಂದನೆಯನ್ನು ತಿಳಿಸತಕ್ಕುದು ಅತ್ಯಾವಶ್ಯಕವಾಗಿದೆ.

ಮ|| ಎಂ. ವಿ. ವೆಂಕಟರಾಯರು ಈ ನಿರ್ಧಾರವನ್ನು ಇನ್ನೂ ಹೆಚ್ಚಾಗಿ ಪುಷ್ಟೀಕರಿಸುವಲ್ಲಿ ಹೇಳಿದುದೇನೆಂದರೆ—ವಂದನೆಯನ್ನರ್ಪಿಸುವ ವಿಚಾರದಲ್ಲಿ ಭಿನ್ನಾಭಿಪ್ರಾಯಹುಟ್ಟುವುದು ಬಹಳ ವಿಷಾದಕರವು. ಈ ಸರ್ಕಾರಿಯಪ್ಪಣೆಯನ್ನು ಆಕ್ಷೇಪಿಸತಕ್ಕವರು ಉಮೇದುವಾರರು. ಆದರೆ ಉಮೇದುವಾರರಾಗಿದ್ದ 57 ಜನರಲ್ಲಿ ಕೆಲವರ ವಿನಾ ಎಲ್ಲರೂ ಆಕ್ಷೇಪಿಸುವವರಾಗಿಲ್ಲ. ಓಟನ್ನು ಸಂಪಾದಿಸಲು ಉಮೇದುವಾರರು ತೊಂದರೆಯನ್ನನುಭವಿಸಿರುವುದು ನಿಜವಿರಬಹುದು. ನಾನೂ ಒಬ್ಬ ಉಮೇದುವಾರನಾಗಿದ್ದೆ, ಮತ್ತು ಲಿಸ್ಟಿನಪ್ರಕಾರ ಓಟರುಗಳನ್ನು ಗೊತ್ತುಮಾಡಲು ಎಷ್ಟು ಶ್ರಮಪಟ್ಟರೂ ಸಾಧ್ಯವಾಗಲಿಲ್ಲವು. ಇದರಿಂದ ಲಿಸ್ಟು ಎಷ್ಟರಮಟ್ಟಿಗೆ ನಿರಾಕ್ಷೇಪಕರವಾಗಿ ತಯಾರಿಸಲ್ಪಟ್ಟಿರುತ್ತದೆಂಬುದು ವ್ಯಕ್ತವಾಗುತ್ತದೆ. ಬಹಳ ದ್ರವ್ಯ ನಷ್ಟವಾಯಿತೆಂದು ಕೆಲ ಉಮೇದುವಾರರು ಹೇಳಿಕೊಳ್ಳುತ್ತಾರೆ. ಈ ಬದಲಾವಣೆಯಿಂದ ಸಾವಿರಾರು ಜನರಿಗೆ ಪ್ರಯೋಜನವಾಗುವಾಗ್ಗೆ ಕೆಲರು ತಮಗೆ ನಷ್ಟವಾಯಿತೆಂದು ಹೇಳುವುದು ಧರ್ಮವೆ ಮತ್ತು ಅಂತಹವರು ಎಷ್ಟರಮಟ್ಟಿಗೆ ಪೌರಕಾರ್ಯವನ್ನು ಮಾಡುವರೆಂದು ನೆನೆಸಬಹುದು? ಎಂದು ಮೊದಲಾಗಿ ಮೃದುಮಧುರವಾಣಿಯಿಂದ ಹೃದಯಂಗಮವಾಗುವಂತೆ ಹೇಳಿದರು.

ಶ್ರೀಮನ್ಮಹಾರಾಜರವರಿಂದ ಅನುಗ್ರಹಿಸಲ್ಪಟ್ಟಿರುವ ವರಪ್ರದಾನದಂತೆ ಸಮಸ್ತ ವರ್ಗದ ರೇಟ್‌ಪೇಯರೂ ತನ್ನ ಪ್ರತಿನಿಧಿಯನ್ನು ಆರಿಸುವಲ್ಲಿ ಭಾಗಿಯಾಗಲು ಅವಕಾಶವಾಗುವಂತೆ ಅಕ್ರಮವಾದ ಲಿಸ್ಟನ್ನು ರದ್ದುಮಾಡಿ ಹೊಸಲಿಸ್ಟನ್ನು ತಯಾರಿಸಲು ಸರ್ಕಾರದಪ್ಪಣೆಯಾಗಿರುವುದು ಪ್ರಜೆಗಳಾದ ನಮ್ಮಗಳ ಭಾಗ್ಯೋದಯಕ್ಕೆ ಕಾರಣವಾದುದರಿಂದ, ನಮ್ಮಗಳ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಶ್ರೀಮನ್ಮಹಾರಾಜರವರಿಗೂ ಮಹಾಸ್ವಾಮಿಯವರ ಘನಸರ್ಕಾರದವರಿಗೂ ಅರ್ಪಿಸತಕ್ಕುದು ನಮ್ಮ ಧರ್ಮವೆಂದು ಮ|| ವೈ. ವಿರೂಪಾಕ್ಷಯ್ಯನವರು ಹೇಳಿದರು.

ಶ್ರೀಮನ್ಮಹಾರಾಜರವರಿಗೆ ವಂದನೆಯನ್ನು ಅರ್ಪಿಸುವಲ್ಲಿ, ಸರ್ಕಾರದಪ್ಪಣೆಯು ಅನ್ಯಾಯವೂ ಅಪ್ರಕೃತವೂ ಅಧರ್ಮವೂ ಆಗಿರುತ್ತದೆಂದು ಈ ಸಭೆಯು ಖಂಡಿಸುತ್ತದೆಂದು ಮ|| ಕೆ. ಕೃಷ್ಣಸ್ವಾಮಿರಾಯರು ಸೂಚಿಸಲೆತ್ನಿಸಿದಾಗ್ಗೆ, ಈ ಸೂಚನೆಯು ಸವರಣೆಯಾಗಿರದೆ ಖಂಡನೆಯಾಗಿರುತ್ತದೆಂಬುದರಮೇಲೆ ಅಧ್ಯಕ್ಷರಿಂದ ತಿರಸ್ಕರಿಸಲ್ಪಟ್ಟಿತು.

ಮ|| ಎಚ್. ಸುಬ್ಬರಾವ್, ಬಿ.ಎ., ಬಿ.ಎಲ್., ರವರು ಈ ನಿರ್ಧಾರವನ್ನು ಪ್ರತಿಭಟಿಸಿ ಹೇಳಿದುದೇನೆಂದರೆ:—ಚುನಾವಣೆಯನ್ನು ನಿಲ್ಲಿಸಬೇಕೆಂದು ಬಂದಿರುವ ಸರ್ಕಾರಿಯಪ್ಪಣೆಯು ಎಷ್ಟು ಅನ್ಯಾಯವೂ, ಅಪ್ರಕೃತವೂ, ಅಧರ್ಮವೂ ಆದುದೆಂಬುದು ಮೊನ್ನೆಯದಿನ ನಡೆದಮೀಟಿಂಗಿನಲ್ಲಿ ಪೂರ್ಣವಿಮರ್ಶೆಯಿಂದ ನಿರ್ಧರಿಸಲ್ಪಟ್ಟಿರುತ್ತದೆ. ಇಂತಹ ಅನ್ಯಾಯವಾದ ಆರ್ಡರ್‌ಮಾಡಿರುವುದಕ್ಕಾಗಿ ವಂದನೆಯನ್ನು ಮಾಡಬೇಕಾದುದಿಲ್ಲವು. ಶ್ರೀಮನ್ಮಹಾರಾಜರವರನ್ನು ವಂದಿಸತಕ್ಕ ಸಮಯ ಬೇರೆ. ಮಾರ್ಕೆಟ್ಟಿಗೆ ಹೋಗಿ ಮನೆಯನ್ನು ಸೇರಿದುದಕ್ಕೂ ವಂದನೆಮಾಡಬೇಕೊ? ಎಂದಾಗ ಶ್ರೀಮನ್ಮಹಾರಾಜರವರಿಗೆ ವಂದನೆಯನ್ನು ಅರ್ಪಿಸಬೇಕೆ ಅಥವಾ ಬೇಡವೆ? ಎಂದು ಅಧ್ಯಕ್ಷರು ಕೇಳಲು, ವಂದನೆಮಾಡಬೇಕಾದುದಿಲ್ಲವೆಂದು ಹೇಳಿದರು. ಆ ಮೇಲೆ ವೈ ವಿರೂಪಾಕ್ಷಯ್ಯನವರೆದ್ದುನಿಂತು, ಸಮಸ್ತ ಪ್ರಜೆಗಳನ್ನೂ ಪುತ್ರನಿರ್ವಿಶೇಷದಿಂದ ಕಾಪಾಡುತ್ತ ಅವರ ಪುರೋಭಿವೃದ್ಧಿಗಾಗಿ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಿರುವ ನಮ್ಮ ಮಹಾಪ್ರಭುವರ್ಯರಿಗೆ ರೇಟ್‌ಪೇಯರುಗಳೆಲ್ಲರೂ ತಮ್ಮ ಪ್ರತಿನಿಧಿಗಳನ್ನಾರಿಸುವಲ್ಲಿ ಓಟನ್ನು ಕೊಡಲು ಸರ್ಕಾರಿಯಪ್ಪಣೆಯಿಂದ ಅವಕಾಶವುಂಟಾದುದಕ್ಕಾಗಿ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ತಿಳಿಸಬಾರದೆಂದು ಮ|| ಸುಬ್ಬರಾಯರು ಹೇಳುವುದನ್ನು ಅನುಮೋದಿಸುವವರಾರಾದರೂ ಈ ಸಭೆಯಲ್ಲಿರುವರೆ ಮತ್ತು ಇಂತಹ ರಾಜದ್ರೋಹಕರವಾದ ಮಾತನ್ನುಕೇಳಿ ಸಹಿಸುವುದು ಹೇಗೆ? ಎಂದು ಸಭಿಕರನ್ನು ಕೇಳಿದಾಗ ಖಂಡಿತವಾಗಿ ಸಹಿಸತಕ್ಕುದಲ್ಲ ಮತ್ತು ಇಂತಹ ಮಾತುಗಳನ್ನು ನಾವು ಕೇಳಲಾರವೆಂದು ಸಭಿಕರು ಕುಪಿತರಾಗಿ ಹೇಳಿದರು ಮತ್ತು ಇಂತಹವರು ಗಡಿಪಾರುಮಾಡಲ್ಪಡಬೇಕೆಂದು ಮ|| ಪುಟ್ಟನಂಜಪ್ಪನವರು ತಿಳಿಸಿದರು. ಜನರ ಈ ಕೋಲಾಹಲದಿಂದ ನನಗೆ ಭಯವಾಗುತ್ತದೆ ನನಗೆ ಕನ್ನಡ ಚೆನ್ನಾಗಿ ಬರುವುದಿಲ್ಲವಾದ್ದರಿಂದ ಬಾಯಿತಪ್ಪಿ ಹೇಳಿದುದಕ್ಕಾಗಿ ವ್ಯಸನಪಡುತ್ತೇನೆ ಎಂದು ಮ|| ರಾಯರು ಹೇಳಿದರು.

ಮ|| ಜಿ. ಪಾರ್ಥಸಾರಥಯ್ಯಂಗಾರರು ಮ|| ಸುಬ್ಬರಾಯರ ಹೇಳಿಕೆಯನ್ನು ಪುಷ್ಟೀಕರಿಸಿ ಮಾತನಾಡುವಾಗ್ಗೆ, ಸರ್ಕಾರದಪ್ಪಣೆಯು ನ್ಯಾಯವಿರುದ್ಧವಾದುದರಿಂದ ವಂದನೆಯನ್ನರ್ಪಿಸಬೇಕೆಂಬ ಸೂಚನೆಯನ್ನು ನಿಷೇಧಿಸುತ್ತೇನೆಂದು ಹೇಳಿದರು, ಮತ್ತು ಅಡ್ವೋಕೇಟ್ ಎಸ್. ಸುಬ್ಬರಾವ್‌ರವರೂ ವಿರೋಧಿಸಿದರು.

ತರುವಾಯ ಶ್ರೀಮನ್ಮಹಾರಾಜರವರಿಗೆ ವಂದನೆಯನ್ನು ಅರ್ಪಿಸುವ ವಿಚಾರವಾಗಿ ಸಭಿಕರ ಅಭಿಪ್ರಾಯವನ್ನು ಅಧ್ಯಕ್ಷರು ಕೇಳುವಲ್ಲಿ ಏಕವಾಕ್ಯತೆಯಿಂದ ಒಪ್ಪಲ್ಪಟ್ಟಿತು. ಆಗ ಶ್ರೀಮನ್ಮಹಾರಾಜರವರ ನಾಮಸ್ಮರಣೆಯಿಂದ ತ್ರಿವಾರ ಜಯಘೋಷವು ಮಾಡಲ್ಪಟ್ಟಿತು.

ಅವರು ಬಹುಜನ ರೇಟ್‌ಪೇಯರುಗಳಿಗೆ ಅನುಕೂಲವಾಗುವಂತೆ ಹೊಸ ಲಿಸ್ಟನ್ನು ತಯಾರಿ 'ಎವವರೆಗೂ ಚುನಾವಣೆಯು ನಡೆಯಕೂಡದೆಂದು ಶ್ರೀಮನ್ಮಹಾರಾಜರವರ ಸರ್ಕಾರದವರು ಸಕಾಲದಲ್ಲಿ ನ್ಯಾಯವಾದಪ್ಪಣೆಯನ್ನು ಮಾಡಿದುದಕ್ಕಾಗಿ ರೇಟ್‌ಪೇಯರುಗಳ ಮತ್ತು ಓಟರುಗಳ ಭಕ್ತಿಪೂರ್ವಕವಾದ ವಂದನೆಯನ್ನು ಸರ್ಕಾರದವರಿಗೆ ಅರ್ಪಿಸಬೇಕೆಂಬ ಎರಡನೆಯ ನಿರ್ಧಾರವು ಮ|| ದಸ್ತಗೀರ್‌ರವರಿಂದ ಸೂಚಿಸಲ್ಪಟ್ಟು, ಮ|| ಜಿ. ರಾಘವನಾಯಕರಿಂದಲೂ, ಮ|| ಎಂ. ರಾಮಚಂದ್ರಶೆಟ್ಟಿ, ಬಿ.ಎ., ಯವರಿಂದಲೂ ಅನುಮೋದಿಸಲ್ಪಟ್ಟಿತು. [illegible]

ಸುವಾಗ್ಗೆ ಹೇಳಿದುದೇನೆಂದರೆ—ಸರ್ಕಾರಿಯಾಜ್ಞೆಯೇನೆಂಬುದನ್ನು ತಿಳಿಯದೆ ಅದು ಅನ್ಯಾಯ ಅಪ್ರಕೃತ ಮತ್ತು ಅಧರ್ಮ ಎಂದು ನಿರ್ಧರಿಸುವುದು ತಪ್ಪು. ಅದನ್ನು ತಿಳಿದುಕೊಂಡನಂತರ ನ್ಯಾಯಾನ್ಯಾಯವೆಂದು ನಿರ್ಧರಿಸಿದಲ್ಲಿ ಚೆನ್ನಾಗಿರುತ್ತದೆ. ಹಾಗಲ್ಲದೆ ದುಡಿಕಿ ನಿಷೇಧಪ್ರದರ್ಶನವನ್ನು ಮಾಡಲು ನಾವೊಪ್ಪುವುದಿಲ್ಲ ಎಂದು ಕಳೆದ ತಾ|| 20ರಲ್ಲಿ ನಡೆದ ಸಭೆಯಲ್ಲಿ ನಾನೂ ಮತ್ತೆ ಕೆಲವರೂ ಬಹಳವಾಗಿ ಹೇಳಿದೇವಾದರೂ ಅವರುಗಳು ಕೇಳದೆ ಹೋದರು. ಈಗಲಾದರೋ ಸರ್ಕಾರಿಯಾಜ್ಞೆಯೇನೆಂಬುದು ಗೊತ್ತಾಗಿರುವುದರಿಂದ ಅವರು ಚುನಾವಣೆಯನ್ನು ನಿಲ್ಲಿಸತಕ್ಕದು ನ್ಯಾಯಬದ್ಧವಾಗಿರುವುದೆಂದು ಖಂಡಿತವಾಗಿ ಹೇಳುವುದಾಗಿದೆ. ಈ ಆರ್ಡರು ಅನ್ಯಾಯವೆಂದು ಕೆಲ ಉಮೇದುವಾರರೂ, ನ್ಯಾಯವೆಂದು ಓಟರುಗಳೂ ಚರ್ಚಿಸುತ್ತಿದಾರೆ. ಆದರೆ ಸರ್ಕಾರಿಯಾಜ್ಞೆಯು ಓಟರುಗಳಿಗೆ ಹೇಗೆ ಅನುಕೂಲವಾಗಿರುವುದೆಂಬುದನ್ನು ಕೆಲ ಉಮೇದುವಾರರು ಯೋಚಿಸದೆ ನಿಷೇಧಿಸುತ್ತಿರುವುದಕ್ಕಾಗಿ ವಿಷಾದಿಸುತ್ತೇನೆ. ಈ ವಿಷಮ ಸಮಯದಲ್ಲಿ ಸರ್ಕಾರದವರು ಪ್ರವೇಶಿಸಿ ಚರ್ಚಾಸ್ಪದವಾದ ವಿಷಯವನ್ನು ಬಗೆಹರಿಸಿದುದು ಯುಕ್ತವಾಗಿರುವುದಲ್ಲದೆ ಪ್ರಜೆಗಳ ಹಿತಸಾಧನೆಯಲ್ಲಿ ಎಷ್ಟು ವ್ಯಗ್ರರಾಗಿರುವರೆಂಬುದನ್ನು ವ್ಯಕ್ತಗೊಳಿಸುತ್ತದೆ.

ಸರ್ಕಾರಿಯಾಜ್ಞೆಯಿಂದ ರೇಟ್‌ಪೇಯರುಗಳಿಗೆ ಅನುಕೂಲವಾಗುವುದಾದರೂ ನ್ಯಾಯವಿರುದ್ಧವಾಗಿರುವುದರಿಂದ ಸರ್ಕಾರದವರಿಗೆ ವಂದನೆ ಮಾಡಕೂಡದೆಂದು ಮ|| ಎಂ. ಬಿ. ನಾರಾಯಣರಾವ್, ಬಿ.ಎ., ಎಲ್ ಎಲ್ ಬಿ., ಯವರು ಹೇಳಿದುದನ್ನು ಅಡ್ವೋಕೇಟ್ ಮ|| ಎಸ್. ಸುಬ್ಬರಾಯರು ಅನುಮೋದಿಸಿದರು.

ಓಟರ ಲಿಸ್ಟು ಜನರೆಲ್ಲರಿಗೂ ತಿಳಿಯುವಂತೆ ಎಲ್ಲಾ ಪೋಲೀಸುಸ್ಟೇಷನ್ನುಗಳಲ್ಲೂ ಇತರಕಡೆಯೂ ಬಿಗಿಯಲ್ಪಡದೆ ಮತ್ತು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡದೆ ಇದ್ದುದರಿಂದಲೂ, ರಾಜಭಾಷೆಯಾದ ಇಂಗ್ಲೀಷಿನಲ್ಲಿ ಮುದ್ರಿಸಲ್ಪಡದೆಯಿದ್ದುದರಿಂದಲೂ, ಅಚ್ಚಾದ ಕನ್ನಡಪ್ರತಿಗಳು ವಿಕ್ರಯಿಸಲ್ಪಟ್ಟದ್ದರಿಂದಲೂ ಜನರಿಗೆ ತಿಳಿಯಲವಕಾಶವಾಗಲಿಲ್ಲವಾಗಿ ಬಹು ಜನ ರೇಟ್‌ಪೇಯರ ಅಪೇಕ್ಷೆಯಂತೆ ಸರ್ಕಾರದವರು ಹೊಸದಾಗಿ ಲಿಸ್ಟನ್ನು ತಯಾರಿಸುವಂತೆ ಮಾಡಿರುವ ಆಜ್ಞೆಯು ನ್ಯಾಯವೂ ಸರ್ವಸಮ್ಮತವೂ ಆಗಿರುವುದರಿಂದ ವಂದನೆಯನ್ನು ತಿಳಿಸಬೇಕಾದುದು ಅತ್ಯಾವಶ್ಯಕವೂ ಯುಕ್ತವೂ ಆಗಿರುತ್ತದೆಂದು ಮ|| ವೈ. ವಿರೂಪಾಕ್ಷಯ್ಯನವರು ಹೇಳಿದರು. ತರುವಾಯ ಸಭಿಕರ ಅಭಿಪ್ರಾಯ ಕೇಳಲ್ಪಟ್ಟು 5 ಜನ ವಕೀಲರುಗಳ ವಿನಾ ಉಳಿದವರ ಏಕವಾಕ್ಯತೆಯಿಂದ ಒಪ್ಪಲ್ಪಟ್ಟು ಶ್ರೀಮನ್ಮಹಾರಾಜರವರಿಗೂ ಸರ್ಕಾರದವರಿಗೂ ಸಭಿಕರ ವಂದನೆಗಳನ್ನು ಅಧ್ಯಕ್ಷರು ತಡವಿಲ್ಲದೆ ತಂತಿಮುಖಾಂತರ ಅರ್ಪಿಸಬೇಕಾಗಿ ನಿರ್ಧರಿಸಲ್ಪಟ್ಟಿತು.

ಮೈಸೂರು ಪಟ್ಟಣವು ರಾಜಧಾನಿಯಾಗಿರುವುದರಿಂದ ಎಲ್ಲ ವಿಚಾರದಲ್ಲೂ ಸಂಸ್ಥಾನಕ್ಕೆ ಮಾರ್ಗದರ್ಶಕವಾಗಿರುತ್ತದೆ. ಇಲ್ಲಿಯ ನಿವಾಸಿಗಳು ತಮ್ಮ ನ್ಯಾಯವಾದ ಉದ್ದೇಶವನ್ನು ಸಾಧಿಸುವಲ್ಲಿ ಬಹಳ ವ್ಯಗ್ರರಾಗಿರುವರೆಂದು ಪ್ರಖ್ಯಾತವಾಗಿರುವಂತೆ ಈ ವಿಷಯ ವಂದನೆಗಳನ್ನರ್ಪಿಸುವ ರೆಜಲ್ಯೂಷನ್ನುಗಳನ್ನುಮಾಡಿ ಮೊದಲಿಂದ ಪ್ರಖ್ಯಾತಿಯನ್ನು ಮತ್ತಷ್ಟು ಪುಷ್ಟಿಗೊಳಿಸುತ್ತೀರಿ. ಇದರ ಪ್ರಯೋಜನವು ಅನಂತವಾಗಿರುವುದು ಮತ್ತು ರೇಟ್‌ಪೇಯರ ಹಿತಕ್ಕಾಗಿ ನೀವುಗಳು ಇಷ್ಟು ಸಾಹಸಮಾಡಿದುದಕ್ಕೋಸ್ಕರ ಭಾವಿಪ್ರಜೆಗಳು ನಿಮಗೆ ಕೃತಜ್ಞರಾಗಿರುವರು. ಈ ಸರ್ಕಾರಿಯಾಜ್ಞೆಯಿಂದ ರೇಟ್‌ಪೇಯರುಗಳೆಲ್ಲರೂ ಓಟನ್ನು ಕೊಡಲು ಅವಕಾಶವು ಹೆಚ್ಚಿತಲ್ಲದೆ ಕಡಿಮೆಯಾಗಲಿಲ್ಲವು. ಈ ಸಭೆಯನ್ನು ಕೂಡಿಸಿದವರ ಪ್ರಾರ್ಥನೆಯಂತೆ ತಾವುಗಳೆಲ್ಲರೂ ದಯವಿಟ್ಟು ದಯಮಾಡಿ ಸಾವಧಾನಚಿತ್ತದಿಂದ ವಿಷಯಗಳನ್ನು ಆಲಿಸಿ ಸಭಾಕಾರ್ಯವು ಸುಲಲಿತವಾಗಿಯೂ ಜಯಪ್ರದವಾಗಿಯೂ ನಡೆಯಲು ಸಹಾಯಮಾಡಿದುದಕ್ಕಾಗಿ ಎಲ್ಲರನ್ನೂ ವಂದಿಸುತ್ತೇನೆ ಎಂದು ಅಧ್ಯಕ್ಷರು ಉಪಸಂಹಾರಭಾಷಣಮಾಡಿದರು. ತರುವಾಯ ಮ|| ದನಕೋಟೆ ಚಿಕ್ಕರೆಡ್ಡಿ ಮ|| ಹೆಚ್. ಸಿ. ದಾಸಪ್ಪನವರು, ಎಲ್ಲ ಪಕ್ಷದವರಿಗೂ ಮಾತನಾಡಲು ಅವಕಾಶಕೊಟ್ಟು ಅವರುಗಳು ಹೇಳಿದನ್ನು ತಾಳ್ಮೆಯಿಂದ ಕೇಳಿ ಸಮಾಧಾನಚಿತ್ತದಿಂದಲೂ, ಧೈರ್ಯದಿಂದಲೂ ಸಭಾಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿದುದಕ್ಕೋಸ್ಕರ ಸಭಿಕರ ಪರವಾಗಿ ನಾನು ಅವರನ್ನು ವಂದಿಸುತ್ತೇನೆಂದು ಹೇಳಿದರು. ತರುವಾಯ ಸಭೆಯು ವಿಸರ್ಜಿಸಲ್ಪಟ್ಟಿತು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಸಂ.

IN HOPELESS DESPAIR.

After the complete discomfiture at the public meeting held on the 22nd instant the members of the *Sampadabhyudaya* camp are seeking consolation in filling the columns of the paper with a plethora of articles which are shockingly untrue. I have been an eyewitness to the meeting in question and I would like to take an opportunity of correcting the false impressions the articles in your contemporary are likely to create in the minds of those who did not attend the meeting.

I may say at the outset that the account given of the meeting in your issue of the 24th instant is a correct and true version of the proceedings, though I must admit it has been very charitable to those who opposed the resolution for conveying the thanks of the City to His Highness the Maharaja and the Government. If now the oppositionists are going about giving their own version of the meeting, each of which is by the way different from the others, it is only with the object of wriggling out of the awkward situation in which they placed themselves as safely as possible.

One Mr. K. Krishnaswami Rao who, I think, belongs to the honourble profession of Law contributes an article to your contemporary of the 27th instant under the title "Pandemonium" which is followed by another under the same title on the next day probably by the same gentleman though it is not signed as the first. He says that the meeting was delayed by one hour after which the conveners felt themselves strengthened by a large batch of students and others who poured into the hall for one Mr. Thakur Chadar Varma's discourse which was to take place later. The question is whether such a large contingency of students if it ever did come for the meeting composed as it should largely be of the class to which the writer belongs could ever have strengthened the position of the conveners. It was really the most representative gathering that had met in a public meeting for some years, comprising as it did members of all communities and all interests. It is surprising how this gentleman makes bold to say that the supporters of the meeting were rowdy throughout hissing and hooting at speakers who opposed the resolutions, whereas in fact the proceedings went on quite smoothly under the very considerate, tactful and able handling of the President Mr. H. C. Dasappa, and in spite of the obstructionist policy adopted by those who were against the meeting, and of their indiscretious speeches. It can only be the outcome of prejudice and spite when the writer says that the President could not control the rowdies nor maintain order, and himself set an example by his partisan ship through out, because, every one who opposed was given every chance to express himself freely within the available time. Not one of them was cut short during his speech. It is true that when one Mr. H. Subba Rao, Advocate went out of the way and said that no thanks should be conveyed to His Highness the audience expressed their dissatisfaction and Mr. Subba Rao himself confessed that he was a young man not much experienced in the use of the Kannada language and asked that he may be pardoned for the slip of the tongue and that they should accept the apology he was making. When after that he had time to go on with his speech he himself retired voluntarily.

The next one who supported Mr. Subba Rao was Mr. G. Parthasarathy Iengar and nobody could complain he was not given an opportunity to have his full say. Mr. S. Subba Rao who rose to speak and was given a chance, instead of proceeding with his speech said that the shortness of the time before him had disturbed the collection of his thoughts, a reason which a person who appears on a public platform should hardly advance. Persons who cannot command a proper power of expression should not appear before large audiences before undergoing a full apprenticeship. What wonder if one still lacking in that power appears on the platform and blunders into unwary statements and finds himself in an uncongenial position?

The amendment brought forward by Mr. Krishnaswamy Rao was not an amendment and the President was fully justified in ruling it out of order as an amendment and asking the mover if need be to bring a separate proposition. It is again a travesty of truth when the writer says that the Chairmain sat through out collected, pleased at his own security in the midst of confusion. When Mr. H. Subba Rao was heckled by the audience the Chairman immediately got up and made an appeal to the audience not to interrupt in the middle of a speech however different and disagreeable the views expressed by the speaker might be after which there was perfect sileece and the speaker could go on without the slightest interruption. But the crowning misrepresentation, the brazenness of which there is nothing to beat, comes when the writer says "the resolution conveying the thanks of the meeting to His Highness was put to vote and without counting the number either of voters and ratepayers or of those who supported it, the Chairman declared it carried, amidst emphatic protests." I need not go far to correct this because the more moderate of the articles in the same journal, signed by three persons who opposed the resolution, says though grudgingly "Those who opposed the resolution as it stood could not vote against the expression of the sense of loyalty that was contained in it," and there is no mention of the emphatic protests. What is exactly the fact? The Chairman asked those who were opposed to the resolution to lift up their hands but none did it. Then the Chairman particularly asked the meeting thrice whether he could take it that the resolution was carried unanimously and when there was not one against it and all were for it he declared it carried unanimously amidst prolonged and loud acclamation. What need was there to count votes in such a case?

It will take a long space to contradict all the misrepresentations in the articles, which I may not obtain in your valuable columns. The writer says that "a section of the audience then left the hall," that is, after the first resolution. One would like to know how many they were and who the worthies? So far as I and numerous others who attended the meeting know no section of the audience left the hall in the middle of the proceedings. If one or two did leave there is nothing wrong or significant about it. There is again and the misrepresentation that the second resolution thanking the Government was not put to vote and was like the previous one declared carried, whereas it was put to vote and there were 5 of those present who voted against it, the rest voting for the resolution.

In regard to the article contributed by Messrs H. Subba Rao, G. P. Sarathy and S. Subba Rao, all three of whom belong to the same profession as of the other writer, I must say there is a greater moderation but yet plenty of colouring and shading just to suit their case. For instance they say that Mr. Krishnaswami Rao who brought in an amendment received a ruling from the chair that he had either to support the resolution in toto or oppose it, while the ruling was as I have stated above, namely, it could not be an amendment to the resolution under discussion as it was in the nature of an opposition but that he could bring a separate proposition if he wanted to. They also say that Mr. S. Subba Rao was not allowed to speak, whereas he did not avail himself of the opportunity though granted to him.

There have been numerous other writings in the same journal, all, let it be noted, in the shape of contributions, though the old and experienced politician Mr. Venkatakrishnayya was present through out the meeting. There is nothing appearing from the editorial pen of the journal, but ample room is given for these articles. perhaps for want of better matter. It is fortunate that there was such a large audience to see what exactly transpired at the meeting.

I cannot think that any cause can be supported through such methods. Public good is no concern for them, for, as some said, it is not how the Government order affects the ratepayers that mattered but whether the order was legal or illegal. Even this they could not establish. And so, in such hopeless despair what is left to them beyond filling the hospitable columns of *Sampadabhyudaya* with matter which right or wrong would from a process of self-delusion give some self-satisfaction to the discomfitted, and by circulation to outsiders gain them the support of the men misled? I wish that there would be greater political honesty in the public life here however different the political views might be.

M. Ramachandra Shetty.

THE RETIRED CHIEF JUDGE AND MR. SETLUR.

Mr. Setlur has written a letter to some of the Madras papers pleading for the raising of the age limit for retirement in Judical Service in Mysore. His generalisations seem to have arisen on account of one single instance of the recent retirement of the Chief Judge of Mysore.

His admiration for the Chief Judge seems to have been the outcome of that wholesome feeling, that is usually generated by the victor in the vanquished. As he himself acknowledges, it was the chief who "took the Puisne Judgship from me" and this remark gathers force if it be recollected that the termination of the brief term of office of Mr. Setlur was not a pure act of volition on his part.

His reason for raising the age limit is that judgment in this country becomes really ripe after the age of 50. This admission incidently throws light on the quality of the production of his hero from 1907 to 1919 when he completed his 50th year, covering the major period of his judicial career. This reason may be good for fixing the minimum age limit for holding the office and in the particular instance, the rule if it had been followed, would at least have minimised the effect of immature judgment. But has he given any reasons or cited any specific instances wherein the mental powers continued to work unabated and unslackened until 60? The English analogies are not of much help. Racial and climatic conditions differ very widely, and while an Englishman begins to take the lead in any walk of life only after 60, we are not able to pick up many examples where men after 60 in India, have been able to at least, retain it. The example quoted in Mr. Setlur's letter itself refutes his plea. For instance the Full Bench overruled the decisions arrived at by the Chief after his judgment became ripe."

If one carefully scans the letter of Mr. Setlur one cannot fail to see how he has seized of the occasion with a view more to ventilate his own personal grievences against the other judges and against the "Petty Native State" which could not find a berth for this "average go lucky officer" any longer, than with a view either to eulozise the Chief or to substantiate his plea by cogent reasoning. His claim to any intimate knowledge of the retiring Chief could not obviously be on account of any close contact with him in Court as a legal practitioner. For soon after Mr. Setlur's service as Judge in Mysore was terminated he sought fresh and wide pastures outside this "Petty Native State" at Madras. Then finding that too to be equally petty perhaps, he migrated to Bombay. Thereafter he turned his eyes back once again to this "Petty Native State" the land of his birth. His time being too much occupied with other things, what little he can spare for service in Courts has to be divided between fighting his own cases therein and in indulging in occasional sallies of review applications and petitions for transfer

of cases from the file of the magistrates recruited from his erst while brethren from the bar. Mr. Setlur's admiration of the qualities of his hero, especially those touching the even distribution of patronage, impartiality etc., would have been very much sobered down if he had only come into closer touch himself with his hero in Court. We admit that the colleagues of his hero stand in great contrast to him, but only with the enumerated qualities transposed from the one to the other two. In fact Mr. Setlur will find that in the welcome address given to Mr. Plumer expressions like fair mindedness, patience, unfailing curtesy and a True Mysorean, find a prominent place while in the addresses and speeches made a short time back they were omitted but not accidently.

Besides Mr. Setlur seems to have forgotten the recent incident in the Representative Assembly where his hero exhibited his exemplary patience while trying to allay the feelings of the members as a result of his "Spade work" in the prevention of judicial delays. Mr. Setlur also opines that the chief always rose above the partisan spirit; may we support his opinion by citing an instance of a Mysore officer whose inefficiency was so mathamatically graduated as to be passed over just by one only of his juniors.

In this "Petty Native State" where all things are small age limit to be in harmony with other things, must necessarily be low and Mr. Setlur's star did not on any reckoning disappear much too soon.

Bangalore,
14-8-24.

"The Petty Native State,"
Citizen.

ಧಾರವಾಡ

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೋರ್ಡಿಂಗಿಗೆ ಗದಗಿನ ಮಹಾಜನರು ವಿದ್ಯಾರ್ಥಿಗಳಿಗೋಸ್ಕರ ಕೋಲಿಗಳನ್ನು ಕಟ್ಟಿಸುವಬಗ್ಗೆ ಶ್ರೀ ಮೃತ್ಯುಂಜಯದೇವರು ದಯಮಾಡಿಸಿದ್ದಾಗ್ಗೆ ಭಕ್ತಿಯಿಂದ ಹಣಕೊಟ್ಟವರ ಹೆಸರುಗಳು.—

1. ಗೂಳಪ್ಪ ತಡಸದ 2. ಮುಬಿಬಸಪ್ಪ ಬಳ್ಳೊಳ್ಳಿ 3. ಮಡಿವಾಳ ಶೆಟ್ಟರು ಸೂಡಿ 4. ತೋಟಪ್ಪನವರು ಕೋಟಿ ವಕೀಲ 5. ದೊಡ್ಡ ವೀರಪ್ಪನವರು ಭಂಗಾರಶೆಟ್ಟಿ 6. ಮಡಿವಾಳಪ್ಪ ಏಣೀಕರ 7. ಸಾಂತಪ್ಪ ಉಳಮಲಿ 8. ಸಂಗನಬಸಪ್ಪ ಸವದಿ 9. ಆಡಿವಪ್ಪ ಕುಪ್ಪದ ಈ ಮಹನೀಯರ ಮೇಲುಪಂಕ್ತಿಯನ್ನು ಇತರರೂ ಅನುಸರಿಸಿ ವಿದ್ಯಾದಾನಮಾಡಿದ ಮಹಾಪುಣ್ಯಕ್ಕೆ ಭಾಗಿಗಳಾಗುವರೆಂದು ನಿರೀಕ್ಷಿಸುವ, ಸೆಕ್ರೆಟರಿ.

ಉಚಿತಧನಸಹಾಯ.

ಬೆಂಗಳೂರು ರಸಿಕಜನಾನಂದಿನಿ ನಾಟಕ ಸಂಘದವರು ತಾ|| 18-8-24 ನೇ ಸೋಮವಾರ ರಾತ್ರಿ ಸಿಟಿ ತುಲಸೀತೋಟದ ಥಿಯೇಟರಿನಲ್ಲಿ ಸನ್ನಿವೇಶನವಾದ ಪಾತ್ರಗಳಿಂದಲೂ ನೇತ್ರಾನಂದಕರವಾದ ಸೀನರಿಗಳಿಂದಲೂ ಭದ್ರಾಚಲರಾಮದಾಸಚರಿತ್ರೆ ಎಂಬ ನಾಟಕವನ್ನಭಿನಯಿಸಿದರು. ಪ್ರೇಕ್ಷಕ ಸ್ತ್ರೀಪುರುಷಸಮುದಾಯದಿಂದ ನಾಟಕದ ಚಪ್ಪರವು ಸಾಂದ್ರವಾಗಿದ್ದಿತು. ಶ್ರೀರಾಮಭಕ್ತರಾದ ಕಬೀರದಾಸ, ರಾಮದಾಸ, ಕಮಲಾದೇವಿ, ವತ್ಸನಾದ ಕೋದಂಡರಾಮ ಮುಂತಾದ ಪಾತ್ರಗಳ ಸಂವಿಧಾನವು ಸ್ತೋತ್ರಾರ್ಹವಾಗಿದ್ದಿತು. ನಾಟಕ ಸಂಘಾಧ್ಯಕ್ಷರು ಆ ದಿನದ ಉತ್ಪತ್ತಿಧನವನ್ನು ಶ್ರೀ ಜಗದ್ಗುರು ರೇಣುಕಾಚಾರ್ಯರ ಮತ್ತು ಶ್ರೀ ಬಸವೇಶ್ವರರ ಜಯಂತ್ಯುತ್ಸವಗಳ ವಾಹನರೂಪರಥನಿರ್ಮಾಣ ಸತ್ಕಾರ್ಯಕ್ಕೋಸ್ಕರ ಭಕ್ತಿಪೂರ್ವಕವಾಗಿ ದೊಡ್ಡಪೇಟೆ ವರ್ತಕಮಂಡಲಿಯವರಿಗೆ ಸಲ್ಲಿಸಿದರು. ನಾಟಕಾಂತ್ಯದಲ್ಲಿ ಶಿವಕಥಾವಿದ್ವಾನ್ ವೇ|| ಶಿವದೇವಶಾಸ್ತ್ರಿಗಳು ಮೇಲ್ಕಂಡ ನಾಟಕಮಂಡಲಿಯವರ ಔದಾರ್ಯವನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸವನ್ನು ಮಾಡಿದರು. ಸಂಘದವರ ಶ್ರೀಯಃಪ್ರಾರ್ಥನೆಯಿಂದ ನಾಟಕವು ವಿರಮಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶ್ರೀಚವುಡಯ್ಯದಾನಪುರಮಠಾಧೀಶರಾಗಮನ.

ಶ್ರೀಮನ್ಮಹಾದಕ್ಷಿಣಕಾಶೀ ಸಿಂಹಾಸನ ಚವುಡಯ್ಯದಾನಪುರ ಸಂಸ್ಥಾನದ ಮಹಾಸ್ವಾಮಿಗಳ ಸವಾರಿಯು ಕೆಲವು ದಿವಸಗಳಹಿಂದೆ ಶ್ರೀರಂಗಪಟ್ಟಣ ಗಂಜಾಮುಗಳಿಗೆ ದಯಮಾಡಿಸಿದ್ದು ಅಲ್ಲಿಂದ ಮೈಸೂರು ಶ್ರೀಮನ್ಮಹಾರಾಜರವರ ಅರಮನೆಯ ಆತಿಥ್ಯವನ್ನು ಸ್ವೀಕರಿಸಿಕೊಂಡು ಮಂಡ್ಯ, ಮದ್ದೂರು, ಚನ್ನಪಟ್ಟಣ ಮೊದಲಾದ ಸ್ಥಳಗಳ ವೀರಶೈವ ಮತ್ತು ಗಂಗಾಮತಸ್ಥರ ಬಿನ್ನಹದ ಮೇರೆಗೆ ಅಲ್ಲಿ ಮುಕ್ಕಾಮುಗಳನ್ನು ಮಾಡಿ ಮೇಲೆಕೋರಿಸಿದ ಗ್ರಾಮಗಳಲ್ಲಿಯ ಭಕ್ತರಿಗೆ ಸದ್ಬೋಧವಂ ಮಾಡುತ್ತಾ ಆ ಸದ್ಬೋಧದಿಂದ ಭಕ್ತರುಗಳು ಕೊಂಡಾಡಿ ಶ್ರೀಗಳಿಗೆ ಯೋಗ್ಯಮರ್ಯಾದೆ ಮತ್ತು ಗುರುಕಾಣಿಕೆಗಳನ್ನು ಒಪ್ಪಿಸುತ್ತಾ ಮುಂಡದ ಕಾಲ್ಲೂಕು ಗುತ್ತಲ ಮಠದ ಪಟ್ಟದಸ್ವಾಮಿಗಳೇ ಮೊದಲಾದ ಮಠಾಧೀಶರು ಬಹು ಭಕ್ತಿಯಿಂದ ಮುತವರ್ಜಿವಹಿಸಿ ಸದ್ಭಕ್ತರಿಗೆ ಪ್ರೋತ್ಸಾಹಿಸಿ ಮಾಡಿದ ಆದರಾತಿಥ್ಯಗಳನ್ನು ನೋಡಿದ ಪ್ರತಿ ಒಬ್ಬ ವೀರಶೈವನಿಗೂ ಅಭಿಮಾನವೆನಿಸುತ್ತಿತ್ತು. ನಿತ್ಯದಲ್ಲಿಯೂ ಮಾಡುವ ಶ್ರೀ ಮಹಾಸ್ವಾಮಿಗಳ ಧರ್ಮಬೋಧೆಯಿಂದ ಈ ದೇಶದ ಜನರಲ್ಲಿ ಬಹು ಜಾಗ್ರತಿಯುಂಟಾಗಿರುವದೆಂದು ನಾನು ನಿಸ್ಸಂದೇಹವಾಗಿ ಹೇಳುವೆನು. ಈಗ ಮಹಾಸ್ವಾಮಿಗಳ ಸವಾರಿಯು ತಾ|| 21-8-24ನೇ ದಿವಸ ನಂಜನಗೂಡಿಗೆ ಅಲ್ಲಿಯ ವೀರಶೈವ ಮತ್ತು ಗಂಗಾಮತಸ್ಥರಿಂದ ಮಾಡುವ ಆದರಪುರಸ್ಸರವಾದ ಉತ್ಸವದೊಡನೆ ಬಹು ವಿಜೃಂಭಣೆಯಿಂದ ಬಿಜಯಂಗೈಸಿ ಅಲ್ಲಿ 1-2 ಮುಕ್ಕಾಮುಗಳನ್ನು ಮಾಡಿ ಅಲ್ಲಿಯ ಭಕ್ತರಿಗೂ ಸದ್ಬೋಧವನ್ನು ಮಾಡುವರೆಂದು ಕೇಳಿ ಸಂತೋಷಪಡುತ್ತೇನೆ.

ಓರ್ವ ಧರ್ಮಾಭಿಮಾನಿ.

ಅಭಿನಂದನಪ್ರದರ್ಶನ.

ಬಳ್ಳಾರಿಜಿಲ್ಲಾ ಹಡಗಲಿ ತಾಲ್ಲೂಕು ಕಸಬಾ ಪಾಟೀಲರಾದ ಮ|| ಬಸವನಗೌಡರು ಕೋ ಅಪರೇಟಿವ್ ರಿಜಿಸ್ಟ್ರಾರಾಗಿ ಸರ್ಕಾರದವರಿಂದ ನಿಯಮಿಸಲ್ಪಟ್ಟುದರಿಂದ ಹಡಗಲಿ ನಿವಾಸಿಗಳು ತಮಗುಂಟಾದ ಸಂತೋಷವನ್ನು ಪ್ರದರ್ಶಿಸುವದಕ್ಕಾಗಿ ಇದೇ ಆಗಸ್ಟು ತಾ|| 3 ನೆಯ ಶನಿವಾರದ ದಿವಸ ಬ್ರಾಹ್ಮಣೇತರ ಪಾಠಶಾಲೆಯಲ್ಲಿ ರಾವ್‌ಬಹದ್ದೂರ್ ಚಿತ್ರವಾಡಿಗಿ ಹನುಮಂತಗೌಡರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ನಡೆಸಿದರು. ಈ ಸಭೆಗೆ ಜಾಹಗೀರ್ದಾರರು, ಶಿರಸ್ತೇದಾರರು, ಡಿಪುಟಿ ಇನ್‌ಸ್ಪೆಕ್ಟರು, ಸ್ಕೂಲ್ ಹೆಡ್ಮಾಸ್ಟರು ಮೊದಲಾದ ಸರ್ಕಾರಿ ಅಧಿಕಾರಿಗಳೂ, ಮ|| ಗವಿಯಪ್ಪನವರು, ಶಿವರುದ್ರಗೌಡರು ಸಂಗನಗೌಡರು ಪಾಟೀಲ ಲಿಂಗನಗೌಡರು ಮೊದಲಾದ ಪ್ರಮುಖ ವರ್ತಕರುಗಳೂ, ಇತರ ದೊಡ್ಡ ಮನುಷ್ಯರುಗಳೂ ಬಂದಿದ್ದರು. ಸಭಿಕರೆಲ್ಲರಿಗೂ ಅಲ್ಪಾಹಾರವು ನಡೆಸಲ್ಪಟ್ಟು, ಸಭಾಕಾರ್ಯಕ್ಕುಪಕ್ರಮವಾಗಿ ಸಭಾಧ್ಯಕ್ಷರು ಆ ದಿವಸದ ಸಭೆಯುದ್ದೇಶವನ್ನು ತಿಳಿಸಿದ ಮೇಲೆ ಮದ್ರಾಸ್ ಗೌರ್ನಮೆಂಟಿನವರು ಸ್ವರಾಜ್ಯಪರಿಪಾಲನೆಗೆ ಅಂಗಭೂತವಾಗಿ ಹಡಗಲಿ ಪಾಟೀಲರಾದ ಮ|| ಬಸವನಗೌಡರಿಗೆ ದಯಾಪೂರ್ವಕವಾಗಿ ಕೋ ಅಪರೇಟಿವ್ ಅಸಿಸ್ಟೆಂಟ್ ರಿಜಿಸ್ಟ್ರಾರ ಕೆಲಸವನ್ನು ಕೊಟ್ಟದ್ದಕ್ಕಾಗಿ ಸರ್ಕಾರದವರಿಗೂ ಮ|| ಬಸವನಗೌಡರ ಏಳಿಗೆಗೆ ಮುಖ್ಯಕಾರಣಭೂತರಾದ ಮ|| ಗಿರಿಯಪ್ಪಗೌಡರಿಗೂ ಹಡಗಲಿ ನಿವಾಸಿಗಳ ವಂದನೆಯನ್ನು ತಿಳಿಸಬೇಕೆಂದು ತೀರ್ಮಾನಿಸಲ್ಪಟ್ಟಿತಲ್ಲದೆ ಈ ಅಪೂರ್ವವಾದ ಗೌರವಕ್ಕೆ ಪಾತ್ರರಾದ ಮ|| ಬಸವನಗೌಡರು ಅಭಿನಂದಿಸಲ್ಪಟ್ಟರು. ತರುವಾಯ ಚಕ್ರವರ್ತಿಯವರ ಮತ್ತು ಸಭಾಧ್ಯಕ್ಷರ ಶ್ರೀಯಃಪ್ರಾರ್ಥನೆಯು ಮಾಡಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ನೈಜಾಂದೇಶದಲ್ಲಿ ನಡೆದಿರುವ ಮುಸಲ್ಮಾನರ ಹಾವಳಿ.

ಇತ್ತೀಚೆಗೆ ಈ ದೇಶದಲ್ಲಿ ಮುಸಲ್ಮಾನರ ಉಪದ್ರವವು ಮಿತಿಮೀರಿದೆ. ಹಿಂದುಗಳಿಗಾಗುತ್ತಿರುವ ತೊಂದರೆಗಳಿಷ್ಟೆಂದು ಹೇಳಲು ಸಾಧ್ಯವಿಲ್ಲದಂತಾಗಿದೆ. ಈಗ್ಗೆ ಸ್ವಲ್ಪ ದಿವಸಗಳ ಮುಂಚೆ, ಹಿಂದುಮತದಲ್ಲೊಂದಾದ ವೀರಶೈವಮತದ ಬಾಲಕನೋರ್ವನನ್ನು ಬಲಾತ್ಕಾರದಿಂದ ಧರ್ಮಭ್ರಷ್ಟನನ್ನಾಗಿಮಾಡಿದ್ದನ್ನು ಸರ್ವರೂ ಕೇಳಿ ತಿಳಿದಿರುವ ವಿಷಯವಷ್ಟೇ? ಆ ಪ್ರಕರಣದಬಗ್ಗೆ ಹಿಂದೂಗಳೆಲ್ಲರೂ ಒಕ್ಕಟ್ಟಾಗಿ ನೈಜಾಮರವರಿಗೆ ಪ್ರಾರ್ಥಿಸಿಕೊಂಡದ್ದರಮೇಲೆ ಹಿಂದುಗಳಂತೆ ನ್ಯಾಯವು ತೀರ್ಪಾಗಿ ಸದರಿ ಹುಡುಗನನ್ನು ಹಿಂದೂಧರ್ಮಕ್ಕೆ ಬಿಟ್ಟುಕೊಟ್ಟದ್ದಾಯಿತು. ಹಿಂದುಗಳಾದರೂ ಆ ಹುಡುಗನನ್ನು ಸ್ವಧರ್ಮಕ್ಕೆ ಸೇರಿಸಿಕೊಂಡದ್ದಾಯಿತು. ಇಂತಹ ಭಯಂಕರವಾದ ಆಘಾತದ ನೋವು ಹಿಂದುಗಳು ಇನ್ನೂ ಅನುಭವಿಸುತ್ತಿರುವಷ್ಟರಲ್ಲಿಯೇ ಇಲ್ಲಿಯ ಮುಸಲ್ಮಾನರು ಪುನಃ ಹುಣ್ಣಿನಮೇಲೆ ಬರೆಯನ್ನೆಳೆದಂತೆ ಮತ್ತೊಂದು ಭಯಂಕರವಾದ ಅನಾಹುತವನ್ನು ಮಾಡಹತ್ತಿ ಹಿಂದೂಗಳ ಚಿರದ್ವೇಷಕ್ಕೆ ಭಾಗಿಗಳಾಗಿರುತ್ತಾರೆ. ಅದೇನೆಂದರೆ:—ಶ್ರಾವಣಮಾಸವು ಹಿಂದೂಗಳಿಗೆ ಪವಿತ್ರವಾಗಿದ್ದು ಆ ಮಾಸದಲ್ಲಿ ಶಿವಪೂಜಾದಿಕರ್ಮಗಳನ್ನೆಸಗುವದೂ, ಶಿವದೇವಾಲಯಗಳಲ್ಲಿ ಅಭಿಷೇಕ, ಭಜನಾದ್ಯುತ್ಸವಗಳನ್ನು ಮಾಡುವದೂ ಬಹುಕಾಲದಿಂದ ನಡೆದುಬಂದಿರುವ ಸಾಂಪ್ರದಾಯವಾಗಿದೆ. ಆ ಪ್ರಕಾರ ಮಠಮಾನ್ಯಗಳಲ್ಲೂ, ಗುಡಿಗಳಲ್ಲೂ ವಾದ್ಯಾದಿಗಳನ್ನು ಮಾಡುವದಕ್ಕೆ ನಿಜಾಂಸರ್ಕಾರದವರ ಅಪ್ಪಣೆಯೂ ಇರುತ್ತದೆ. ಸರಕಾರದವರ ಅಪ್ಪಣೆಗೂ, ತಮ್ಮ ಮತಧರ್ಮಕ್ಕೂ ಸರಿಯಾಗಿ ಆಚರಿಸುವದು ಮಾನವಜಾತಿಗೆ ಸೇರಿದ ಯಾರೊಬ್ಬರಿಗೂ ವಿರುದ್ಧವಾಗಲಾರದು. ಈ ವಿಚಾರಕ್ಕನುಸರಿಸಿ, (ಗುಲ್ಬರ್ಗಾಪಟ್ಟಣದಲ್ಲಿ ಪ್ರಸಿದ್ಧವಾದ ಬ್ರಹ್ಮಪುರದಲ್ಲಿ ಶ್ರೀ ಶರಣಬಸವೇಶ್ವರ ನೆಂಬ ಸಾಧುವರ್ಯನ ದೇವಾಲಯ ಒಂದಿರುತ್ತದೆ. ಈ ದೇವಾಲಯವು ಇಡೀನೈಜಾಂದೇಶದಲ್ಲಿಯೂ, ನೈಜಾಂದೇಶದ ಸಮೀಪವಿರುವ ಬಿಜಾಪುರ, ಸೊಲ್ಲಾಪುರ, ಬಳ್ಳಾರಿ ಮುಂತಾದ ಪ್ರಾಂತಗಳಲ್ಲಿಯೂ ಸುಪ್ರಸಿದ್ಧವಾಗಿರುತ್ತದೆ. ಈ ದೇವಾಲಯದಲ್ಲಿರುವ) ಶ್ರೀ ಶರಣಬಸವೇಶ್ವರನಿಗೆ ಪ್ರತಿನಿತ್ಯ ತ್ರಿಕಾಲಪೂಜಾನಡೆಯುತ್ತಿದ್ದು, ಪೂಜಾಸಮಯದಲ್ಲಿ ನಗಾರಿ, ಝಾಗಟೆ, ಕೈತಾಳ ಮುಂತಾದವುಗಳೂ, ಸನಾಯಿ, ಬಾಜಿಗಳೂ ಮಾಡುವ ರೂಢಿಯುಂಟು. ಶ್ರಾವಣಮಾಸದಲ್ಲಿಯಂತೂ ಪ್ರತಿದಿನ ನಡೆಯುವ ಪೂಜೆಗಿಂತ ವಿಶೇಷೋಪಚಾರದಿಂದ ಪೂಜಾದ್ಯುತ್ಸವಗಳು ನಡೆಯುವದು ಸ್ವಾಭಾವಿಕವು. ಅಲ್ಲದೆ ಪ್ರತಿಸೋಮವಾರ ಪಲ್ಲಕ್ಕಿಯುತ್ಸವವೂ ಆಗುತ್ತಿರುತ್ತದೆ (ಇದಾದರೂ ಹೊರಗಣ ಗುಡಿಯ ಕಂಪೌಂಡಿನಲ್ಲಿಯೇ) ಅಂದರೆ ಈ ವರ್ಷದ ಶ್ರಾವಣಮಾಸದಲ್ಲಿಯೂ ಪೂಜಾದ್ಯುತ್ಸವಗಳು ಆರಂಭವಾದವು. ಈ ವರ್ಷ ಶ್ರಾವಣದೊಡನೆ ಮೊಹರಂ ಹಬ್ಬವು ಬಂದುದರಿಂದ ಏನಾದರೂ ಗೊಂದಲವೆದ್ದೀತೆಂದು ತಿಳಿದು ಮುಂಚಿತವಾಗಿ ಸರಕಾರದಿಂದ ಹುಕುಮನ್ನಾದರೂ ತೆಗೆದುಕೊಳ್ಳಲಾಗಿತ್ತು. ಮೊದಲನೇ ಸೋಮವಾರವುಬಂತು, ಆ ಸೋಮವಾರದಲ್ಲಿ ನಡೆಯುವ ಪಲ್ಲಕ್ಕಿಯ ಉತ್ಸವಕ್ಕೆ ತುರುಕರಲ್ಲಿಯ ಕೆಲ ತುಂಟರು ಬಂದು ತಡೆದರು. ಆ ದಿವಸ (ಯಾವ ಊರುಸುಟ್ಟದ್ದರಿಂದ ಲೋ.ಏಸೋ) ಅವ್ವಲ್ ನಾಜಂಸಾಹೇಬರು ಮುದ್ದಾಂ ದಯಮಾಡಿಸಿ ತುರುಕರಮೇಲೆ ಸಿಟ್ಟುಮಾಡಿ ಸ್ವತಃನಿಂತು ಉತ್ಸವವನ್ನು ಯಥಾರೀತಿಸಾಗಿಸಿದರು. ಇದರಿಂದ ತುರುಕರು ಸಹಿಸಲಾರದಷ್ಟು ಸಿಟ್ಟುಮಾಡಿಕೊಂಡು ಆ ದಿವಸ ಹೊರಟುಹೋದರು. ಪುನಃ ಶ್ರಾವಣ ಶು|| ೧೧ ಸೋಮವಾರವುಬಂತು. ತುರುಕರು ಆ ದಿವಸವೂ ಬಂದು ಉತ್ಸವಕ್ಕೆ ಕಂಟಕರಾದರು (ಇದಕ್ಕೆ ಕೆಲ ಸರಕಾರಿಯ ಅಧಿಕಾರಿಗಳೂ ಸಹಾಯಮಾಡಿದ್ದರಂತೆ). ತುರುಕರ ಇಚ್ಛಾನುಸಾರ ಆ ದಿವಸ ಉತ್ಸವವು ನಿಂತುಹೋಯಿತು. ಮೇಲಿನವರ ಹುಕುಮಿದ್ದರೂ ಸ್ಥಳೀಯಾಧಿಕಾರಿಗಳ್ಯಾರೂ ಹಿಂದುಗಳ ಸಹಾಯಕ್ಕೆ ಬರದೆ ಇದ್ದುದರಿಂದ ಮೇಲಧಿಕಾರಿಗಳಿಗೂ, ನೈಜಾಮರವರಿಗೂ, ನಡೆದ ವರ್ತಮಾನವನ್ನು ಟೆಲಿಗ್ರಾಫ್‌ಮೂಲಕ ತಿಳಿಸಲಾಯಿತು. ಆದಾಗ್ಯೂ ಶ್ರಾವಣ ಶು|| ೧೨ ಮಂಗಳವಾರ ನಾಲ್ಕು ಬಡಿಯುವವರೆಗೂ ಯಾವ ಅಧಿಕಾರಿಗಳಾಗಲಿ, ಅಧಿಕಾರಿಗಳಿಂದ ಏನೊಂದು ಸಂದೇಶವಾಗಲಿ ಬಾರದ್ದರಿಂದ ಮುಸಲ್ಮಾನರಿಗೂ, ಮುಸಲ್ಮಾನ ಅಧಿಕಾರಿಗಳಿಗೂ ಹೊಸಹುರುಪು ಬಂದಂತಾಗಿ ಪುನಃ ದೇವಾಲಯದಮೇಲೆ ಹಲ್ಲೆಯನ್ನು ಮಾಡಬೇಕೆಂದು ಕವಿಮಾಟವನ್ನು ಕೂಡಿಸಿ ನಿರ್ಣಯಿಸಿಕೊಂಡು ಪ್ರತಿಓಣಿಯಲ್ಲಿಯೂ ಡಂಗುರವನ್ನು ಹೊಡೆಯಿಸಿದರು. ಆಯುಧ, ಬಂದೂಕ ಮುಂತಾದವುಗಳನ್ನು ತೆಗೆದುಕೊಂಡು ಹೊರಡಿರೆಂದು ಮುಸಲ್ಮಾನರಿಗೆಲ್ಲಾ ಸೂಚನೆಯನ್ನು ಕೊಟ್ಟರು. ಧರ್ಮದ ದುರಭಿಮಾನಿಗಳೂ, ಕಲಹವೆಂದರೆ ಕಾಲ್ಕೆದರುತ್ತಿರುವವರೂ ಆದ ಇಲ್ಲಿಯ ತುರುಕರು ತಮ್ಮ ಮುಖ್ಯಸ್ಥರ ಅಪ್ಪಣೆಯಂತೆ ಆಯುಧಪಾಣಿಗಳಾಗಿ ಗುಂಪು ಗುಂಪಾಗಿ ಗುಡಿಯಕಡೆಗೆ ಸಾಗಿದರು. ಆ ಸಮಯದಲ್ಲಿ ಪೋಲೀಸಖಾತೆಯಲ್ಲಿ ಸೇರಿದ ಕೃತಘ್ನಶಿರೋಮಣಿಗಳೂ, ನೀಚೋದ್ದೇಶವುಳ್ಳವರೂ ಮಾನವಜಾತಿಗೆ ಕಳಂಕಪ್ರಾಯರೂ ಆದ ಮುಸಲ್ಮಾನವರ್ಗಾಧಿಕಾರಿಗಳು ಆಚರಿಸಿದ ಕೃತಿಯನ್ನು ಬರೆಯಲು ಲೇಖನಿಯು ನಡುಗುವದು, ಹೃದಯವು ಕಂಪಿಸುವದು, ಮೈಮೇಲಿನ ಕೂದಲುಗಳು ನೆಟ್ಟಗೆ ನಿಲ್ಲುವವು. ಇವರು ಆಚರಿಸಿದ ಕೃತಿಯೆಂದರೆ—ಮುಸಲ್ಮಾನರನ್ನು ಗುಡಿಯಕಡೆಗೆ ಸಾಗಿಸುತ್ತಾ, ಹಿಂದುಗಳ್ಯಾರಾದರೂ ಹೋಗುತ್ತಿದ್ದರೆ ಅವರಿಗೆ ಮಾನಭಂಗಮಾಡಿ ಹಿಂದಕ್ಕೆ ತಿರುಗಿಸುತ್ತಾ ಪ್ರತಿರಸ್ತೆಯಲ್ಲಿಯೂ ಸಶಸ್ತ್ರರಾಗಿ ನಿಂತುಕೊಂಡುಬಿಟ್ಟಿದ್ದರು. ಅಲ್ಲಿಂದ ಗುಡಿಯಲ್ಲಿ ನಡೆದಿರುವ ವರ್ತಮಾನವನ್ನೇನುಹೇಳಬೇಕು! ಇದನ್ನು ಹೇಳುವದೆಂದರೆ—(ಗಜನೀಮಹಮೂದನು ಸೌರಾಷ್ಟ್ರದೇಶದಲ್ಲಿರುವ ಸೋಮನಾಥನ ದೇವಾಲಯದಮೇಲೆ ಮಾಡಿದ ಭಯಂಕರಕೃತಿಯು ಸ್ಮರಣೆಗೆಬರುತ್ತದೆ.) ಈ ವಿಷಯವನ್ನು ನೆನಸಿಕೊಂಡರೆ ಹಿಂದುಗಳಾದ ಪ್ರತಿ ಒಬ್ಬರಿಗೂ ದುಃಖವಾಗದೆ, ಅಥವಾ ಆವೇಶದಿಂದ ರೋಮಾಂಚವುಂಟಾಗದೆ ಇರದು. ರಾಕ್ಷಸಪ್ರಾಯರಾದ ಮುಸಲ್ಮಾನರು ಬರುವವರೊಳಗಾಗಿ, ಗುಡಿಯಪೂಜಾರಿಗಳು ಗರ್ಭಗುಡಿಯ ಕವಾಟವನ್ನಿಕ್ಕಿ ಭದ್ರಪಡಿಸಿಕೊಂಡಿದ್ದರು. ಆದರೂ ಸಾಯುಧರಾಗಿ ಬಂದ ಮುಸಲ್ಮಾನರು ಗುಡಿಯ ಹೊರ ಅವರಣದಲ್ಲಿಯ ಮಂಟಪದಲ್ಲಿದ್ದ ಬಹುಬೆಲೆಯುಳ್ಳ ಕನ್ನಡಿ, ಜುಮ್ಮರ, ಸಗಾಡಿ, ಜಾಗಟೆ, ಘಂಟೆ, ಶಂಖ, ಗಡಿಯಾರ ಮುಂತಾದ ಸಾಮಾನುಗಳನ್ನು ಮುರಿದೂ, ಹರಿದೂ, ಚೂರು ಚೂರುಮಾಡಿಯೂ ತುಷ್ಟರಾದರು. ಮತ್ತು ದೇವರ ಸಮ್ಮುಖದಲ್ಲಿರುವ ಸಾವಿರಾರು ರೂಪಾಯಿ ಖರ್ಚುಮಾಡಿ ಮಾಡಿಸಿದ ಭವ್ಯವೂ ಅತಿಮನೋಹರವೂ ಆದ ಶ್ರೀ ಬಸವೇಶ್ವರಮೂರ್ತಿಯನ್ನು ಭಗ್ನಗೊಳಿಸಿದರು. ಅದರಲ್ಲಿಯೂ ಅಧಮರಾದ ಕೆಲವರು ಅಪವಿತ್ರಕೃತಿಗಳನ್ನೆಸಗುವದಕ್ಕೂ ಹಿಂದೆಮುಂದೆನೋಡಲಿಲ್ಲ. ಅಲ್ಲಿಯ ಸಾಮಾನುಗಳನ್ನೆಲ್ಲಾ ಹಾಳುಮಾಡಿ, ದೇವರ ಪೂಜೆಯದೆಸೆಯಿಂದ ಹಚ್ಚಲ್ಪಟ್ಟ ಹೂಗಿಡಗಳೂ, ಪತ್ರಿಯ ಮರಗಳೂ ಇರುವ ಉಪವನಕ್ಕೆತೆರಳಿ ಅಲ್ಲಿರುವ ಬಂಗ್ಲೆಯಲ್ಲಿ ಶ್ರೀ ಶರಣರ ಉದಾರಾಶ್ರಯದಿಂದ ಪಾಠಶಾಲೆಯನ್ನಿಟ್ಟುಕೊಂಡಿರುವ ಶಾಸ್ತ್ರಿಗಳಿಗೂ, ವಿದ್ಯಾರ್ಥಿಗಳಿಗೂ ತೊಂದರೆಪಡಿಸಿ, ಮೇಜು, ಕುರ್ಚಿ, ಬೆಂಚು, ಹೂವಿನ ಕುಂಡ ಮುಂತಾದವುಗಳನ್ನೂ, ಸಮಾಧಿಯಮೇಲಿದ್ದ ಬಸವೇಶ್ವರಮೂರ್ತಿಯನ್ನೂ ಮುರಿದು ಬಾವಿಯಲ್ಲಿಚೆಲ್ಲಿ ದಾರುಣವಾದ ಕೃತಿಯನ್ನೆಸಗಿರುತ್ತಾರೆ. ಈ ಭಯಂಕರವಾದ ಹಾವಳಿಯಲ್ಲಿ 70-75 ಜನ ಹಿಂದೂಗಳು ಘಾಯಪಟ್ಟು ಡಾಕ್ಟರರ ಚಿಕಿತ್ಸೆಯಲ್ಲಿರುವರು. ತುರುಕರ ಈ ಪ್ರಕಾರವಾದ ಹಾವಳಿಯನ್ನೂ, ರಾಜೋದ್ಯೋಗಿಗಳು ಅವರಿಗೆ ಸಹಾಯವಾಗಿರುವದನ್ನೂ ಹಿಂದೂ ಪ್ರಜೆಗಳು ತಿಳಿದು ಭಯವಿಹ್ವಲರಾಗಿರುವರು. ತಮ್ಮ ಧನ ಮಾನಪ್ರಾಣಗಳನ್ನು ರಕ್ಷಿಸಿಕೊಳ್ಳುವದಕ್ಕಾಗಿ ತಮ್ಮ ತಮ್ಮ ಮನೆ ಅಂಗಡಿಗಳನ್ನು ಭದ್ರಪಡಿಸಿಕೊಂಡು ಕೂತಿರುತ್ತಾರೆ. ಎರಡು ದಿವಸಗಳವರೆಗೂ ಓಣಿಗಳಲ್ಲಿ ಹಿಂದೂಗಳ ಸುಳಿದಾಟವಿರಲಿಲ್ಲ. ಹಾಗೆ ಸುಳಿದಾಡುವವರಿಗೆ ಆಯುಷ್ಯಪೂರ್ತಿಯಾಯಿತೆಂತಲೇ ತಿಳಿಯಬೇಕಾಗಿದ್ದಿತು. ಈ ವರ್ತಮಾನವನ್ನರಿತು ಖಾಸ ನೈಜಾಮರವರಿಂದ ಅಪ್ಪಣೆಯನ್ನು ಪಡೆದು ಕುಪಿಯಾ ಮೊಹತಮಿಮ್ ಸಾಹೇಬರೂ, ಕೋತವಾಲಿ ನಾಜಂಸಾಹೇಬರೂ ಬಂದಿರುತ್ತಾರೆ. ಇದಕ್ಕಾಗಿ ಶ್ರಾವಣ ಶು|| ೧೪ ಬುಧವಾರ ತಕ್ಕಮಟ್ಟಿಗೆ ಶಾಂತತೆಯು ನೆಲೆಗೊಂಡಿತ್ತು. ಬಂದಿರುವ ಹೊದ್ದೇದಾರರು ಹಿಂದೂಗಳಿಗೆ ಅಭಯವನ್ನಿತ್ತು ದೇವರ ಉತ್ಸವವನ್ನು ಯಥಾರೀತಿಸಾಗಮಾಡಿಸುವೆವೆಂದು ಹೇಳಿದರು. ಈ ಉತ್ಸವವೆಂಬ ವರ್ತಮಾನವನ್ನು ತುರುಕರು ಕೇಳುತ್ತಲೇ ಪುನಃ ಜಮೆಯಾಗಹತ್ತಿದರು. ಸ್ಥಳೀಯಾಧಿಕಾರಿಗಳು ಅವರಿಗೆ ಸಹಾಯವನ್ನಿತ್ತರು. ಇನ್ನು ಕೇಳುವದೇನದೆ! ಮರ್ಕಟಗಳಿಗೆ ಮದಿರಾಪಾನಮಾಡಿಸಿದಂತಾಯಿತು. ಶ್ರಾವಣ ಶು|| ೧೫ ಗುರುವಾರದಿವಸ ಮುಸಲ್ಮಾನರು ಆಚರಿಸಿದ ಕೃತಿಯೆಂದರೆ ವರ್ಣನಾತೀತವು. ಆ ದಿವಸ ಪಂಚನಾಮಾಮಾಡಿದ ಮೊಹತಮಿಮು ಮತ್ತು ಆತನ ಸಂಗಡಿಗರಾದ ನಾಲ್ಕೈದು ಜನ ಪೋಲೀಸರನ್ನು ತಾರಜೀವದಿಂದ ಹೊಡೆದುಹಾಕಿದರು. ಲೆಕ್ಕವಿಲ್ಲದಷ್ಟು ಹಿಂದೂಗಳನ್ನು ಘಾಯಗೊಳಿಸಿದರು. ಹಾಗೂ ಮನಸ್ಸಿಗೆಬಂದಂತೆ ಅಪಮಾನಪಡಿಸಿದರು. ಹಿಂದೂಗಳ ಎಷ್ಟೋ ಅಂಗಡಿಗಳನ್ನು ಲೂಟಿಮಾಡಿದರು. ಹಿಂದೂ ದೇವಾಲಯಗಳೆಲ್ಲವನ್ನೂ ಹೇಳಹೆಸರಿಲ್ಲದಂತೆ ಭೂಸಮಮಾಡಿಬಿಟ್ಟರು. ಈ ಕಾರ್ಯಕ್ಕೆ ಹತ್ತೆಂಟು ಸಹಸ್ರಜನ ತುರುಕರು ಒಟ್ಟುಗೂಡಿದ್ದರಂತೆ. ಈ ಜನರು ಶ್ರೀ ಶರಣಬಸವೇಶ್ವರನ ಗುಡಿಗೂ ಹೋಗಿ ಅಲ್ಲಿಯೂ ಅತಿಯ ಉಕ್ಸಾನಮಾಡಿದ್ದಾರೆ. ಆ ದಿವಸ ತೆರೆಯದೆ ಇದ್ದ ಗರ್ಭಗುಡಿಯ ಬಾಗಿಲುಗಳನ್ನು ಮುರಿದು ಅರ್ಚಕರನ್ನು ಮನಸಾಬಡಿದು, ಬೆಳ್ಳಿಯ ಮುಖ ದೇವರಮೇಲಿನ ಆಭರಣ, ದೇವರಿಗೆ ಹೊದ್ದಿಸಿದ್ದ ಬಹುಬೆಲೆಯ ಮಡಿ, ಶಹಲುಗಳನ್ನೆಲ್ಲಾ ತೆಗೆದುಕೊಂಡುಹೋಗಿರುತ್ತಾರೆ. ಇದುವರೆಗೂ ಅರ್ಚಕರು ಏನಾದರೆಂಬುವದು ತಿಳಿದಿರುವದಿಲ್ಲ. ಗುಡಿಯು ಭದ್ರವಾಗಿ ಕಟ್ಟಿರುವುದರಿಂದ ಗುಡಿಯನ್ನು ಕೆಡವಲು ಸಾಧ್ಯವಾಗಲಿಲ್ಲ. ಅಲ್ಲಿಂದ ಶ್ರೀಶರಣನ ಗಾದಿಮಾಲಕರಿರುವ ಹಲ್ಲಾಮಾಡಿರುತ್ತಾರೆ. ಈ ತುರುಕರ ಹಾವಳಿಯನ್ನು ಅಡಗಿಸಬೇಕೆಂದರೆ, ಗುಲ್ಬರ್ಗಾದಲ್ಲಿರುವ ಪೋಲೀಸಾಳುಗಳೇ ಸಾಕಾಗುವರು. ಇದು ಸುಭೆಯಸ್ಥಳವಾದ್ದರಿಂದ ಸಾಕಷ್ಟು ದಂಡೂ ಇರುತ್ತದೆ. ಆದರೇನು! ಅವರೆಲ್ಲಾ ತುರುಕರಿಗೆ ಅನುಕೂಲವಾಗಿಯೇ ಇರುತ್ತಾರೆ. ಧರ್ಮವೆಂಬ ದುರಭಿಮಾನವು ಅವರನ್ನು ಹಾಗೆ ಮಾಡಹಚ್ಚಿರುತ್ತದೆ. ತೋಟವನ್ನು ರಕ್ಷಿಸುವದಕ್ಕಾಗಿ ಬೇಲಿಯನ್ನು ಹಚ್ಚಿರುತ್ತಾರಷ್ಟೇ, ಆ ಬೇಲಿಯೇ ಎದ್ದು ತೋಟವನ್ನು ಮೇಯಹತ್ತಿದಬಳಿಕ ಯಾರುತಾನೇ ಏನುಮಾಡಬಲ್ಲರು? ಹಿಂದೂಗಳಿಗೆ ಏನೊಂದೂ ತಿಳಿಯದಂತಾಗಿ ಉಪಾಯಶೂನ್ಯರಾಗಿರುತ್ತಾರೆ. ತಾರುಮಾಡಲು ಹೋದರೆ ಬಡಿಯುತ್ತಾರೆ, ಓಣಿಯಲ್ಲಿ ತಿರುಗಾಡಗೊಡುವದಿಲ್ಲ, ಪರಸ್ಥಳದವರನ್ನು ಊರಲ್ಲಿ ಬರಗೊಡುವದಿಲ್ಲ. ಊರಲ್ಲಿದ್ದವರನ್ನು ಹೊರಗೆ ಹೋಗಗೊಡುವದಿಲ್ಲ. ಇದರಿಂದ ಪ್ರತಿಮನೆಯವರೂ ಒಳಅಗಳಿ, ಕೀಲಿಗಳನ್ನು ಹಾಕಿಕೊಂಡು ಮಾನವಿಂದ ರಕ್ಷಿಸೆಂದು ಶಿವಚಿಂತನೆಯೊಂದನ್ನು ಮಾಡಹತ್ತಿರುತ್ತಾರೆ. ಇವರ ಗೋಳನ್ನು ಜಗದೀಶನೇ ಕೇಳಬೇಕಲ್ಲದೆ ಅನ್ಯರಾರೂ ಕೇಳದಂತಾಗಿದೆ. ಪರದೇಶದಲ್ಲಿರುವ ಹಿಂದೂ ಬಾಂಧವರು ಈ ಸಮಯದಲ್ಲಿ ತಮ್ಮ ಬಂಧುಗಳಿಗಾಗಿರುವ ಸಂಕಟದ ದೂರನ್ನು ವೈಸರಾಯ ಮುಂತಾದವರಿಗೆ ಮುಟ್ಟಿಸಿ ಸಹಾಯಮಾಡಬೇಕಾಗಿದೆ. ಈ ದಿವಸವೂ ವಿಶೇಷಜನರು ಒಟ್ಟಾಗಿಸೇರಿ ಪ್ರತಿ ಮನೆಮಠ ಅಂಗಡಿಗಳನ್ನು ಲೂಟಿಮಾಡಬೇಕೆನ್ನುತ್ತಿರುವರಂತೆ. ಈ ವಿಷಯ ಹೈದ್ರಾಬಾದದ ಕಡೆಯಿಂದ ಅಥವಾ ಮತ್ಯಾವ ಕಡೆಯಿಂದ ಸಹಾಯವದಗವಿದ್ದರೆ ಹಿಂದೂಗಳ ಧನ ಮಾನಗಳನ್ನೆಲ್ಲಾ ಮುಸಲ್ಮಾನರು ಅಪಹರಿಸದೆ ಎಂದೂ ಬಿಡಲಾರರು. ಗುಲ್ಬರ್ಗಾಪಟ್ಟಣವು ಇತ್ತೀಚೆಗೆ ವ್ಯಾಪಾರದಿಂದಲೂ, ರಾಜ್ಯಕಾರಭಾರದಿಂದಲೂ ಪ್ರಸಿದ್ಧವಾಗಿತ್ತು. ಅಲ್ಲದೆ ಹಿಂದೂಗಳು ಸಾಂಪತ್ತಿಕಸ್ಥಿತಿಯಲ್ಲಿ ಹೆಚ್ಚು ಮುಂದುವರಿದಿದ್ದರು. ಈ ಹೆಚ್ಚಳವು ದರಿದ್ರಾವಸ್ಥೆಯಲ್ಲಿರುವ ತುರುಕರಿಗೆ ಸಹನವಾಗದೆ, ಧರ್ಮಾಧರ್ಮವೆಂಬ ತಮ್ಮ ದುರಭಿಮಾನದ ಸುಳ್ಳುನೆವಗಳನ್ನು ಮುಂದೆಮಾಡಿ ತಮ್ಮ ದುರುದ್ದೇಶವನ್ನು ಪೂರ್ಣಮಾಡಿಕೊಳ್ಳಲು ಉದ್ಯುಕ್ತರಾಗಿರುತ್ತಾರೆ. ಈ ವಿಷಯವನ್ನು ದಯಾಳುಗಳಾದ ನೈಜಾಮರವರು ಕೇಳಿಯೂ ಹಿಂದೂಪ್ರಜೆಗಳ ಕಷ್ಟನಿವಾರಣೆಯನ್ನು ಮಾಡದಿರುವದೆಂದರೆ ಪರಮಲಾಂಛನವಾಗಿದೆ. ಇನ್ನುಮೇಲಾದರೂ ದುಷ್ಟಶಿಕ್ಷಣ ಶಿಷ್ಟರಕ್ಷಣ ಮಾಡದಿದ್ದರೆ ರಾಜರಿಗಾದರೂ ದುರಭಿಮಾನವೆಂಬ ಪಿಶಾಚಿಯು ಎಲ್ಲಿ ಬಡಿದುಕೊಂಡಿರುವದೋ ಎಂದು ಹಿಂದೂಗಳೆಲ್ಲರೂ ಶಂಕಿಸಬೇಕಾಗುತ್ತದೆ. ಈ ಗಂಡಾಂತರದಿಂದ ಗುಲ್ಬರ್ಗಾಪಟ್ಟಣವು ಏನಾಗುತ್ತದೋ ತಿಳಿಯದಂತಾಗಿದೆ.

ತೊಂದರೆಯಿಂದ ಪಾರಾದವನು.

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸ್.

ಇಸ್ತಿಹಾರ್ನಾಮೆ.

ಡಿ. ನಂ. 18 ತಾರೀಖು 6 ನೆಯ, ಆಗಸ್ಟ್ 1924.

ಬೆಂಗಳೂರು ಸಂಸ್ಕೃತ ಕಾಲೇಜಿಗೆ ಬ್ರಾಹ್ಮಣೇತರರನ್ನು ಸೇರಿಸುವ ವಿಷಯದಲ್ಲಿ ಸಾದರವಾದ 1924 ನೆಯ ಜುಲೈ 10 ನೆಯ ಹುಕುಂ ಇ. 3—15 ಎಜ್ಯುಕೇಷನ್ 31-20-48 ನೆಯ ನಂಬರ್ ಹುಕುಂನಲ್ಲಿ ಸರ್ಕಾರದವರು ಅಪ್ಪಣೆಮಾಡಿರುವ ಸಂಗತಿಗಳನ್ನು ಅನುಸರಿಸಿ, ಈ ಮೂಲಕ ಪ್ರಸಿದ್ಧಪಡಿಸುವುದೇನೆಂದರೆ.—

1924 ನೆಯ ಇಸವಿ ಅಕ್ಟೋಬರ್ 14 ನೆಯ ತಾರೀಖು [illegible] [illegible] ಆಗಾಯಿತು, [illegible]

ಸಂಸ್ಕೃತ ಕಾಲೇಜಿನಲ್ಲಿ ವಿದ್ಯಾಭ್ಯಾಸಕ್ಕಾಗಿ ಸೇರಲು ಎಲ್ಲಾ ಪಂಗಡಗಳ ವಿದ್ಯಾರ್ಥಿಗಳಿಗೂ ಅವಕಾಶ ಕೊಡಲಾಗಿರುತ್ತದೆ. ದಸರಾ-(ನವರಾತ್ರಿ) ರಜ ಕಳೆದ ಬಳಿಕ, ಮೇಲಿನ ತಾರೀಖು ಲಾಗಾಯತು ತರಗತಿಗಳಲ್ಲಿ ಪಾಠಗಳು ಹೊಸದಾಗಿ ಪ್ರಾರಂಭವಾಗುತ್ತವೆ.

2. ವಿದ್ಯಾಭ್ಯಾಸದ ಪಾಠಕ್ರಮ ಕಾಲಕ್ರಮಗಳನ್ನು ಸಂಪಾದಿಸುವುದಕ್ಕಾಗಿ ನಿಯುಕ್ತರಾದ ಕಮಿಟಿಯವರು ಅವುಗಳನ್ನು ವಿಚಾರಮಾಡಿ ನಿರ್ಧರಿಸಿದ ತರುವಾಯ ಅವುಗಳನ್ನು ಮೈಸೂರು ಗೆಜೆಟ್ಟಿನಲ್ಲಿ ಫಾಯಿಸ್ ಮಾಡಲಾಗುವುದು.

3. ಈ ಮಧ್ಯದಲ್ಲಿ ಹೊಸ ಏರ್ಪಾಟಿನ ಪ್ರಕಾರ ಬೆಂಗಳೂರು ಸಂಸ್ಕೃತ ಕಾಲೇಜಿಗೆ ಸೇರಬೇಕೆಂದು ಅಪೇಕ್ಷಿಸುವವರು ತಾತ್ಕಾಲಿಕವಾದ ಅಪ್ಲಿಕೇಷನ್ನುಗಳನ್ನು ಕಳುಹಿಸಬಹುದು.

4. ಅಪ್ಲಿಕೇಷನ್ನುಗಳನ್ನು, 1924 ನೆಯ ಸೆಪ್ಟೆಂಬರ್ 15 ನೆಯ ತಾರೀಖಿನ ದಿನ ಯಾ, ಅದಕ್ಕೆ ಮೊದಲು ತಲಪುವಂತೆ, ಬೆಂಗಳೂರು ಕೋಟೆಯಲ್ಲಿರುವ ಶ್ರೀಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್‌ರವರ ಹೆಸರಿಗೆ ಕಳುಹಿಸಿಕೊಡತಕ್ಕದ್ದು.

5. ಸದರಿ ಕಾಲೇಜಿನಲ್ಲಿ, ಕಾಲೇಜಿನ ಹೊಸವರ್ಷದ ಆದಿಯಿಂದ ಕಾಲೇಜ್ ತರಗತಿಗಳಲ್ಲಿ ಮತ್ತು ಸೆಕೆಂಡರಿ ಸ್ಕೂಲ್ ತರಗತಿಗಳಲ್ಲಿ ಮಾತ್ರ ವಿದ್ಯಾಭ್ಯಾಸ ನಡೆಯುತ್ತದೆ ಎಂಬ ಅಂಶವನ್ನು, ಅಪ್ಲಿಕೇಷನ್ ಮಾಡಬೇಕೆಂದಿರುವವರ ತಿಳಿವಳಿಕೆಗೆ ತರಲಾಗಿರುತ್ತದೆ.

6. ಈ ಕೆಳಗೆ ಕಂಡ ವಿದ್ಯಾರ್ಥಿಗಳು ಆಯಾ ಇಯತ್ತೆಯ ತರಗತಿಗಳಿಗೆ ಸೇರಲು ಅರ್ಹರಾಗಿರುವರು:—

I. ಸೆಕೆಂಡರಿ ಸ್ಕೂಲ್ ತರಗತಿಗಳಿಗೆ ಅರ್ಹರಾಗಿರುವವರು ಯಾರೆಂದರೆ:—

(a) ಅಂಗೀಕೃತವಾದ ಯಾವ ಸಂಸ್ಕೃತ ಸ್ಕೂಲ್ ಯಾ ಪಾಠಶಾಲೆಯಲ್ಲಿ ಯಾಗಲೀ, ಸಂಸ್ಕೃತ ಪ್ರಾಥಮಿಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರು, ಯಾ, ಆ ಇಯತ್ತೆಯಲ್ಲಿ ಸಂಪೂರ್ಣವಾಗಿ ವಿದ್ಯಾಭ್ಯಾಸ ಮಾಡಿರುವವರು (ಅಂದರೆ 4—5 ಸರ್ಗ ಕಾವ್ಯಗಳನ್ನು ಓದಿ, ಶಬ್ದರೂಪಗಳನ್ನೂ ಧಾತುರೂಪಗಳನ್ನೂ ಚೆನ್ನಾಗಿ ನಡಿಸುವುದನ್ನು ಕಲಿತು, ಅಮರವನ್ನು ಪೂರ್ತಿಯಾಗಿ ಅಥವಾ ಬಹಳ ಭಾಗದವರೆಗೆ, ಬಾಯಿಪಾಠ ಮಾಡಿರುವವರು).

(b) ಯಾವ ಸ್ಕೂಲಿನಲ್ಲಿಯೇ ಆಗಲೀ, ಸ್ವತಃ ವ್ಯಾಸಂಗದಿಂದಲೇ ಆಗಲೀ, ಭಂಡಾರ್ಕರ್ ಮೊದಲನೆಯ ಪುಸ್ತಕವನ್ನೂ, ಹಿತೋಪದೇಶ, ಪಂಚತಂತ್ರ ಮುಂತಾದ ಯಾವುದಾದರೂ ವಚನಕಾವ್ಯಗಳನ್ನೂ ಓದಿ, ನಾಮವಾಚಕ, ಗುಣವಾಚಕ, ಸರ್ವನಾಮ ಶಬ್ದಗಳಿಗೆ ಪೂರ್ತಿಯಾಗಿ ರೂಪನಡಿಸುವುದನ್ನು ಮತ್ತು ಕ್ರಿಯಾಪದಗಳಿಗೆ ಲಟ್, ಲೋಟ್, ಲಙ್, ವಿಧಿಲಿಙ್‌ಗಳಲ್ಲಿ ರೂಪನಡಿಸುವುದನ್ನು ಕಲಿತಿರತಕ್ಕವರು.

(c) ಮತಗ್ರಂಥಗಳನ್ನು ಓದಿಕೊಂಡು, ಸಂಸ್ಕೃತ ಭಾಷೆಯಲ್ಲಿಯೂ, ವ್ಯಾಕರಣಾಂಶಗಳಲ್ಲಿಯೂ, ಸಾಮಾನ್ಯವ್ಯುತ್ಪತ್ತಿಯನ್ನು ಪಡೆದಿರತಕ್ಕವರು.

(d) ಸಂಸ್ಕೃತವನ್ನು ಮೊದಲನೆಯ ಭಾಷೆಯನ್ನಾಗಿ ತೆಗೆದುಕೊಂಡು ಮೈಸೂರು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವವರು.

(e) ಸಂಸ್ಕೃತವನ್ನು ಎರಡನೆಯ ಭಾಷೆಯನ್ನಾಗಿ ತೆಗೆದುಕೊಂಡು ಮೆಟ್ರಿಕ್ ಪರೀಕ್ಷೆಯಲ್ಲಿಯಾಗಲಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಯಾಗಲಿ ತೇರ್ಗಡೆಯಾಗಿರುವವರು.

(f) ಸಂಸ್ಕೃತವನ್ನು ಎರಡನೆಯ ಭಾಷೆಯನ್ನಾಗಿ ತೆಗೆದುಕೊಂಡು ಇಂಗ್ಲೀಷ್ ಐದನೆಯ ಅಥವಾ ಆರನೆಯ ಫಾರಂಗಳಲ್ಲಿ ಓದುತ್ತಾ, ಸಂಸ್ಕೃತ ವಿದ್ಯಾಭ್ಯಾಸದಲ್ಲಿ ವಿಶೇಷ ಬುದ್ಧಿಶಕ್ತಿಯನ್ನು ತೋರಿಸಿರುವವರು.

II. ಕಾಲೇಜು ತರಗತಿಗಳಿಗೆ ಅರ್ಹರಾದವರು ಯಾರೆಂದರೆ:—

(a) ಮೈಸೂರು ವಿಶ್ವಪರೀಕ್ಷೆಯ ಸಂಬಂಧವಾದ ಸಂಸ್ಕೃತ ಪ್ರವೇಶ (ಎಂಟ್ರೆನ್ಸ್) ಪರೀಕ್ಷೆಯನ್ನು ಕೊಟ್ಟಿರುವವರು.

(b) ಮದರಾಸ್ ವಿಶ್ವವಿದ್ಯಾಲಯದ (ಯೂನಿವರ್ಸಿಟಿಯ) ವಿದ್ವತ್ ಮತ್ತು ಶಿರೋಮಣಿ ಪರೀಕ್ಷೆಗಳ ಸಂಬಂಧವಾಗಿ ಕ್ಲುಪ್ತವಾಗಿರುವ ಎಂಟ್ರೆನ್ಸ್ ಅಥವಾ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವವರು.

(c) ಮೇಲಿನ (a) ಯಾ (b) ಕಲಂಗಳಲ್ಲಿ ಸೂಚಿತವಾದ ಪರೀಕ್ಷೆಗೆ ಸಮಾನವಾದ ಇತರ ಯಾವ ಪರೀಕ್ಷೆಯಲ್ಲಿಯಾಗಲೀ ತೇರ್ಗಡೆ ಹೊಂದಿರುವವರು.

(d) ಪ್ರವೇಶಪರೀಕ್ಷೆ ಕೊಡಬೇಕೆಂಬ ನಿರ್ಬಂಧವಿಲ್ಲದೆಯೇ ಯಾವ ವಿದ್ಯಾಶಾಲೆಯಲ್ಲಿಯಾಗಲಿ ಕಾಲೇಜ್ (ಶಾಸ್ತ್ರ) ತರಗತಿಗಳಲ್ಲಿ ಈಗ ಓದುತ್ತಿರುವವರು.

(e) ಯಾವ ಕಾವ್ಯಗಳಲ್ಲಿಯಾದರೂ, ಸುಮಾರು ಹತ್ತು ಸರ್ಗಗ್ರಂಥವನ್ನು, ಅಥವಾ ಎರಡು ಚಂಪೂ ಗ್ರಂಥಗಳನ್ನು, ಮತ್ತು ಎರಡು ನಾಟಕಗಳನ್ನು ಓದಿಕೊಂಡು, ಅಲಂಕಾರ, ಛಂದಸ್ಸು, ವ್ಯಾಕರಣ ಇವುಗಳ ಸಂಬಂಧವಾದ ಭಾಗಗಳಲ್ಲಿ ಸಾಮಾನ್ಯಜ್ಞಾನವನ್ನು ಪಡೆದುಕೊಂಡು ಸ್ವತಃ ವ್ಯಾಸಂಗಮಾಡಿರುವವರು.

(f) ಯಾವುದಾದರೂ ಒಂದು ಯೂನಿವರ್ಸಿಟಿಯ (ವಿಶ್ವವಿದ್ಯಾಲಯದ) ಇಂಟರ್‌ಮಿಡಿಯೇಟ್ ಪರೀಕ್ಷೆಗೆ ಸಂಸ್ಕೃತವನ್ನು ಎರಡನೆಯ ಭಾಗವನ್ನಾಗಿ ಅಥವಾ ಐಚ್ಛಿಕ (ಆಪ್ಷನಲ್) ಭಾಗವನ್ನಾಗಿ ತೆಗೆದುಕೊಂಡು ಆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರು.

(g) ಅಲಂಕಾರಶಾಸ್ತ್ರ ಬಿಟ್ಟು, ಉಳಿದ ಯಾವುದಾದರೂ ಒಂದು ಶಾಸ್ತ್ರವನ್ನು ಪೂರ್ತಿಯಾಗಿ ವ್ಯಾಸಂಗಮಾಡಿ, ಸಾಹಿತ್ಯದಲ್ಲಿ ಒಳ್ಳೆಯ ವ್ಯುತ್ಪತ್ತಿಯನ್ನು ಪಡೆದಿರುವವರು.

(h) ಕಾಲೇಜು ತರಗತಿಗಳಲ್ಲಿ ಓದಲು ಅರ್ಹತೆ ಉಂಟೆಂಬ ಬಗ್ಗೆ ಸರಿಯಾದ ಕಾರಣಗಳನ್ನೂ ವಿವರಗಳನ್ನೂ ನಮೂದಿಸಿರುವ ಒಂದು ಸರ್ಟಿಫಿಕೇಟ್ (ಯೋಗ್ಯತಾಪತ್ರಿಕೆ) ನೊಡನೆ ಸಮರ್ಥರಾದ ಅಧಿಕಾರಿಗಳಿಂದ ಕಾಲೇಜಿನ ವಿದ್ಯಾಭ್ಯಾಸಕ್ಕಾಗಿಯೇ ಕಳುಹಿಸಲ್ಪಟ್ಟಿರುವವರು ಯಾ ಶಿಫಾರ್ಸು ಮಾಡಲ್ಪಟ್ಟಿರುವವರು.

7. ಮೇಲಿನ I ನೆಯ, ಯಾ, II ನೆಯ ಕಲಂಗಳ (ಡಿ) ನಮೂದಾದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳು ತಮ್ಮ ಅಪ್ಲಿಕೇಷನ್ನುಗಳೊಡನೆ ತಮಗೆ ಸರಿಯಾದ ಪರೀಕ್ಷಾಧಿಕಾರಿಗಳಿಂದ ಕೊಡಲ್ಪಟ್ಟಿರುವ ಸರ್ಟಿಫಿಕೇಟ್‌ಗಳನ್ನು ಕಳುಹಿಸಿಕೊಡಬೇಕು. ಉಳಿದವರು, ಇಲ್ಲಿಗೆ ಸೇರಿಕೊಳ್ಳುವುದಕ್ಕೆ ಮೊದಲು ತಮ್ಮ ಅರ್ಹತೆಯನ್ನು ದೃಢಪಡಿಸುವುದಕ್ಕಾಗಿ ಈ ಕಾಲೇಜಿನಲ್ಲಿ ಪರೀಕ್ಷೆ ಕೊಡಲು ಬದ್ಧರಾಗಿರಬೇಕು.

8. ಅಪ್ಲಿಕೇಷನ್ನುಗಳನ್ನು ವಿದ್ಯಾಭ್ಯಾಸದ ಇಲಾಖೆಯಲ್ಲಿ ವಿಧಾಯಕವಾಗಿ ಅಚ್ಚಾಗಿರುವ ವಾಡಿಕೆಯಾದ (ಇಂಗ್ಲೀಷ್ ಯಾ ಕನ್ನಡ) ನಮೂನೆಯಲ್ಲಿ ಬರೆದು ಕಳುಹಿಸಬಹುದು. ಅಂತಹ ನಮೂನೆಗಳನ್ನು ವಿದ್ಯಾಭ್ಯಾಸದ ಇಲಾಖೆಯ ಯಾವ ಅಧಿಕಾರಿಗಳ ಮೂಲಕವಾಗಿಯಾಗಲೀ, ಸ್ಕೂಲ್‌ಗಳ ಹೆಡ್‌ಮಾಸ್ಟರ್‌ಗಳ ಮೂಲಕವಾಗಿಯಾಗಲೀ ಪಡೆಯಬಹುದು. ಇಲ್ಲವಿದ್ದರೆ ಅಂತಹ ನಮೂನೆಯಲ್ಲಿರುವ ಆಯಾ ಶಿರನಾಮೆಗಳನ್ನು ಅನುಸರಿಸಿ ಸ್ಪಷ್ಟವಾಗಿ ಕೈಯಿಂದ ಬರೆದ ನಮೂನೆಯಲ್ಲಿಯಾಗಲೀ ಬರೆದು ಕಳುಹಿಸಬಹುದು.

ಸಿ. ಎಸ್. ಬಾಲಸುಂದರಂ ಅಯ್ಯರ್,
ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು.

ಮೈಸೂರುಸೀಮೆಯ ಸೆಂಟ್ರಲ್ ಫ್ಲಡ್ ರಿಲೀಫ್ ಕಮಿಟಿ, ಬೆಂಗಳೂರು.

1924ನೆ ಆಗಸ್ಟ್ 23ಕ್ಕೆ ಕಡೆಯಾದ ವಾರದಲ್ಲಿ ಬಂದ ಚಂದಾ ಹಣ.

1. ಮೈಸೂರು ಶ್ರೀಮನ್ಮಹಾರಾಜರವರಿಂದ 2,000-0-0. 2. ಮ|| ಜಿ. ಹೆಚ್. ವೀರಣ್ಣನವರ ಶ್ರೀ ಚನ್ನಬಸವೇಶ್ವರ ನಾಟಕ ಕಂಪೆನಿಯವರ ಬೆನಿಫಿಟ್‌ನಾಟಕದಿಂದ ಮ|| ಗಳಾದ ರಾಜಗೋಪಾಲ್ ಮತ್ತು ಡಿ. ವಿ. ವರದರಾಜಮೊದಲಿಯಾರರ ಮೂಲಕ 250-0-0. ಮ|| ಗಳಾದ 3. ಎ. ಸದಾಶಿವರಾಯರು 15-0-0. 4. ಕೆ. ಚಾಂಡಿಯವರು 100-0-0. 5. ಎ. ಮಾಧವಯ್ಯಂಗಾರರು 100-0-0. 6. ವಿ. ಎಸ್. ತಿರುವೆಂಗಡಸ್ವಾಮಿ ಮೊದಲಿಯಾರರು 100-0-0. 7. ಕೆ. ಶ್ರೀನರಸಿಂಹಯ್ಯನವರು 10-0-0. 8. ಎ. ಎಂ. ಸನ್, ಎಂ. ಎಸ್. ಸಿ. 50-0-0. 9. ಲೆ. ಕರ್ನಲ್ ಕ್ರಾಫರ್ಡ್‌ರವರು 100-0-0. 10. ಆರ್. ಎ. ನರಸಿಂಹಯ್ಯಂಗಾರರು 15-0-0. 11. ರೆವರೆಂಡ್ ಎ. ಆರ್. ಸ್ಲೇಟರ್‌ರವರು 20-0-0. 12. ಎಲ್. ಶ್ರೀನಿವಾಸಯ್ಯಂಗಾರರು 20-0-0. 13. ಮಿ|| ಪಿ ಎ. ಬಾರ್ಟನ್‌ರವರು 50-0-0. 14. ಮೆಸರ್ಸ್. ಬಾರ್ಟನ್ ಸನ್ ಅಂಡ್‌ಕೋ 100-0-0 15. ಮೆಸರ್ಸ್ ಬಾರ್ಟನ್ ಸನ್ ಅಂಡ್‌ಕೋಯವರ ಭಾರತೀಯ ಕೆಲಸಗಾರರು 60-0-0. 16. ಮಿ|| ಆರ್. ಡಬ್ಲ್ಯು. ರೂಥರ್‌ಫರ್ಡ್‌ರವರು 100-0-0. 17. ಮಿ|| ಎಸ್. ಬರ್ನ್‌ಮಟ್ಸನ್ 15-0-0. 18. ಜಿ. ಎಸ್. ದೊರಸ್ವಾಮಯ್ಯರ್‌ರವರು 50-0-0. 19. ಮಿ|| ಎಫ್. ಇ ಡೆಸ್ಸರ್‌ರವರು 40-0-0. 20. ಬಿ. ವಾಸುದೇವಮೂರ್ತಿಯವರು 15-0-0. 21. ಎಂ. ಎನ್. ಲಕ್ಷ್ಮೀನಾರಾಯಣಪ್ಪನವರು 10-0-0. 22. ಎಂ. ಪಿ. ಸೋಮಶೇಖರರಾಯರು 10-0-0. 23. ಡಿ. ಕೆ. ಡಾರಾಷಾರವರು 100-0-0. 24. ಕೆ. ಟಿ. ಸುದರ್ಶನಮಯ್ಯಂಗಾರರು 5 0-0. 25. ಬಿ. ಅಪ್ಪುರಾಯರು 15-0-0. 26. ಎಸ್. ಶ್ರೀಕಂಠಯ್ಯನವರು 10-0-0. 27. ಹಸನ್‌ಜಾಫರ್‌ಹುಸೇನ್‌ರವರು 251-0-0. 28. ಮಿ|| ಮುಷೀರ್ ಉಲ್-ಮುಲ್ಕ್-ಮಿರ್ ಹಂಸಾಹುಸೇನ್‌ರವರು 200-0-0. 29. ಡಬ್ಲ್ಯು. ರಾಸ್‌ಸ್ಕ್ವೈಯರ್ಸ್, ಮೇಜರ್, ಐ. ಎಂ. ಎಸ್. ರವರು 50-0-0. 30. ಅನುತಾಪಿ 10-0-0. 31. ಶ್ರೀ ಕೃಷ್ಣಾಫ್ಲೋರ್‌ಮಿಲ್ಸು 100-0-0. 32. ಕೇಸರಿಹಿಂದ್ ಉಲನ್, ಕಾಟನ್ ಮತ್ತು ಸಿಲ್ಕ್ ಮಿಲ್ಸ್ 150-0-0. 33. ಹೆಸರನ್ನು ಕೊಡದವರು 2-0-0. 34. ಮೈಸೂರು ಶ್ರೀಮನ್ ಮಹಾರಾಜರವರು 15,000-0-0. 35. ಕಪರ್ಥಲಾ ಮಹಾರಾಣಿಯವರು 250-0-0. ಉರುಗಾಮಿನ ಮೆಸರ್ಸ್. ಜಾನ್‌ಟೈಲರ್ ಅಂಡ್ ಸನ್ಸ್ ರವರ ಮೂಲಕ ಕೆಳಗೆ ಕಂಡ ಕಂಪೆನಿಗಳ ಹೆಡ್ಡಾಫೀಸುಗಳಿಂದ ಮೈಸೂರು ಗೋಲ್ಡ್‌ಮೈನಿಂಗ್ ಕೊ., ಲಿಮಿಟೆಡ್, ಚಾಂಪಿಯನ್‌ರೀಫ್ ಗೋಲ್ಡ್‌ಮೈನ್ಸ್ ಆಫ್ ಇಂಡ್ಯಾ ಲಿಮಿಟೆಡ್, ಉರಿಗಾಮ್ ಗೋಲ್ಡ್‌ಮೈನ್ಸ್ ಲಿಮಿಟೆಡ್ ನಂದಿದುರ್ಗ ಮೈನ್ಸ್ ಲಿಮಿಟೆಡ್, ಬಾಲಘಾಟ್ ಗೋಲ್ಡ್‌ಮೈನ್ಸ್ ಲಿಮಿಟೆಡ್ 3,000-0-0. 37 ಮಿ|| ಬ್ರೂಕ್‌ಮಾರ್ಕೆಟ್‌ರವರು 150-0-0. 38. ಎಂ. ರಾಮಚಂದ್ರರಾವ್, ಬಿ.ಎ.,ಬಿ.ಎಲ್., ರವರು 100-0-0. 39. ಕೆ. ರಾಮಸ್ವಾಮಯ್ಯಂಗಾರ್, ಬಿ.ಎ.,ಬಿ.ಎಲ್., ರವರು 100-0-0. 40. ಬಿ. ವಿ. ರಾಮಸ್ವಾಮಿಶೆಟ್ಟಿ ಬಿ.ಎ., ಯವರು 50-0-0. 41. ಆರ್. ರಾಮರಾವ್, ಬಿ.ಎ.,ಬಿ ಎಲ್., ರವರು 50-0-0. 42. ಸಿ. ಬಿ. ರಾಮರಾಯರು 10-0-0. 43. ಡಾಕ್ಟರ್ ಮಿಸ್ ಜೆ. ಜೆರಾರ್ಡ್, ಎಂ. ಡಿ. ಯವರು 20-0-0. 44. ಬಿ. ಎನ್. ವೆಂಕಟರಾಮಯ್ಯ, ಬಿ. ಎ. ಯವರು 20-0 0. 45. ಮಿ|| ಚಾರ್ಲ್ಸ್‌ನರೋನ್ಹಾ, ಎಂ.ಎ., ಯವರು 5-0-0. 46. ಆರ್. ಎ. ನರಸಿಂಹಾಚಾರ್, ಎಂ.ಎ., ಯವರು 10-0-0. 47. ಸಿ. ಶಾಮರಾವ್ ಬಿ.ಎ ,ಎಲ್.ಎಂ.ಎಸ್., ರವರು 5-0-0. 48 ದೇವರಾವ್ ಶಿವರಾಂರವರು 100-0-0. 49. ರೆವರೆಂಡ್ ಜೆ. ಎಚ್. ಫಾಲೆಯವರು 50-0-0. 50. ಮೈಸೂರು ಕ್ಲಾರಿಕಲ್ ಕೆಲಸಗಾರರು 50-0-0. 51. ರಾಮೆಹಳ್ಳಿ ಕೋ ಆಪರೇಟಿವ್ ಸೊಸೈಟಿ 10-0-0. 52. ಕೋಲಾರ್ ಟ್ರಿಜರಿ ಅಸಿಸ್ಟೆಂಟ್ ಸಿ. ರಾಮಚಂದ್ರರಾವ್, ಬಿ.ಎ.,ಬಿ.ಎಲ್. ರವರ ಮೂಲಕ ಕೋಲಾರ ಫ್ಲಡ್ ರಿಲೀಫ್ ಕಮಿಟಿ 335-0-0. 53. ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಸಿ. ರಾಜಗೋಪಾಲ್‌ರವರು 20 0-0, 54. ಜಿ ಸುಂದರರಾವ್, ಬಿ.ಎ., ಯವರು 25-0-0. 55. ಎಂ. ವೀರರಾಜ ಅರಸ್, ಬಿ.ಎ.,ಬಿ.ಎಲ್., ರವರು 20-0-0. ಒಟ್ಟು 23,503-0-0 ಇದಕ್ಕೆ ಮೊದಲು ಬಂದಿರುವುದು 8,426-4-0, ಎಲ್ಲಾ ಒಟ್ಟು 31,929-4-0.

ಬಿ. ಕೆ. ಗರುಡಾಚಾರ್ ಸೆಕ್ರೆಟರಿ.
ರಿಲೀಫ್ ಕಮಿಟಿ.

ಹಾಸನ ಡಿಸ್ಟ್ರಿಕ್ಟ್ ಫ್ಲಡ್‌ರಿಲೀಫ್ ಕಮಿಟಿ

ಈ ಕೆಳಗೆ ಕಂಡ ಸಹಾಯದ್ರವ್ಯವನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದೆ.

1. ಆಲೂರು ಮ್ಯುನಿಸಿಪಾಲಿಟಿ 500 ರೂ. 2. ಹೊಳೆನರಸೀಪುರ ಮ್ಯುನಿಸಿಪಾಲಿಟಿ 500 ರೂ. 3. ಅರಸೀಕೆರೆ ಮ್ಯುನಿಸಿಪಾಲಿಟಿ 300 ರೂ. 4. ಕೆಂಚಮ್ಮನಹೊಸಕೋಟೆ ಕಾಫಿ ಪ್ಲಾಂಟರ್ ಮಿ|| ಎ. ಅಹಮದ್ ಹುಸೇನ್‌ರವರು 100 ರೂ. 5. ಮ|| ಸಾಹುಕಾರ್ ಎ. ಎಸ್. ನಂಜುಂಡಪ್ಪನವರು 250 ರೂ. 6. ಮ|| ಮಲ್ಲೇಗೌಡರು 75 ರೂ. 7. ಮರಸು ವೀರಭದ್ರಗೌಡರು 60 ರೂ. 8. ಮಿ|| ಕೆರೀಂಸಾಬರು 25 ರೂ. 9. ಮ್ಯುನಿಸಿಪಲ್‌ಮೆಂಬರ್ ಆಲೂರು ಮ|| ಅಪ್ಪಣ್ಣಗೌಡರು 20 ರೂ. 10. ಮ|| ಸಿದ್ಧರಾಮಪ್ಪಶೆಟ್ಟರು 30 ರೂ. 11. ಮ|| ಆಲೂರು ದಾಸೇಗೌಡರು 30 ರೂ. 12. ಹುಣಸಹಳ್ಳಿ ನಿರ್ವಾಣಗೌಡರು 25 ರೂ. 13 ಮ|| ಕಿರುಗಡಲು ಕಾಳೇಗೌಡರ ಮಗ ಹೊನ್ನೇಗೌಡರು 10ರೂ. 14. ಮ|| ಹುಣಸವಳ್ಳಿ ಬಸವೇಗೌಡರು 15 ರೂ. 15. ಮ|| ಗೊಲ್ಲರಹಮ್ಮನಹಳ್ಳಿ ದೊಡ್ಡತಿಮ್ಮೇಗೌಡರು 15 ರೂ. 16. ಮ|| ಬೆಳ್ಳೂರು ರಾಮಭದ್ರೇಗೌಡರು 10 ರೂ. 17. ಯಡೂರು ಸೋಮಶೇಖರಶೆಟ್ಟರು 20 ರೂ. 18. ಮ|| ಕಂಟ್ರಾಕ್ಟರ್ ಆಲೂರು ಬಸವೇಗೌಡರು 15 ರೂ. 19. ಮ|| ಆಲೂರು ಕೆಂಚೇಗೌಡರು 25 ರೂ. 20. ಮ|| ವೀರಾಪುರದ ಚನ್ನಬಸವಯ್ಯನವರು 10 ರೂ 21. ಮ|| ಕಿರಗಡಲು ರೆವಿನ್ಯೂಪಟೇಲ್ ವೀರಪ್ಪಗೌಡರು 10 ರೂ. 22. ಮ|| ಕಡಬಗಾಲ ರಾಮಯ್ಯನವರು 3 ರೂ. 23. ಮ|| ಹೊಸಹಳ್ಳಿ ಮರೀಗೌಡರು 10 ರೂ. 24. ತಾ|| ಬೋರ್ಡು ವೈಸ್‌ಪ್ರೆಸಿಡೆಂಟ್ ಹಿರಿಯಣ್ಣನವರು 15 ರೂ. 25. ಉಪ್ಪಹಳ್ಳಿ ಮಲ್ಲೇಗೌಡರು 5 ರೂ.

ಎಚ್. ವಿ. ರಂಗಸ್ವಾಮಿ,
ಜಾಯಿಂಟ್ ಸೆಕ್ರೆಟರಿ.

ಮೈಸೂರು ಡಿಸ್ಟ್ರಿಕ್ಟ್ ಫ್ಲಡ್‌ರಿಲೀಫ್ ಫಂಡು.

1924ನೇ ಆಗಸ್ಟ್ ತಾ|| 24ರ ವರೆಗೆ ಮೇಲ್ಕಂಡ ಫಂಡಿಗೆ ಬಂದಿರುವ ಸಹಾಯದ್ರವ್ಯವನ್ನು ಈ ಫಂಡ್ ಕಮಿಟಿಯವರು ವಂದನಾಪೂರ್ವಕ ಸ್ವೀಕರಿಸಿರುತ್ತಾರೆ.—

ಮ|| ಗಳಾದ 1. ಎಚ್. ನಿರಂಜನರಾಜ ಅರಸಿನವರು 30-0-0. 2. ಬಿ. ಕೃಷ್ಣರಾಯರು 5-0-0. 3. [illegible] 5-0-0. 4. ಮಿಸಸ್. ಮೆಗ್ರಾತ್‌ರವರು 200-0-0. 5. ಕೆ. ಸಿದ್ಧರಾಮಪ್ಪನವರು 25-0-0. 6. ಆರ್. ತಿರುನಾರಣಯ್ಯಂಗಾರರು 5-0-0. 7. ಎಚ್. ನಂಜುಂಡರಾಜೇ ಅರಸಿನವರು 75-0-0. 8. ಬಿ. ಎಸ್. ಲಕ್ಷ್ಮಣರಾಯರು 1-0-0. 9. ಮಿ|| ಜೋನಾಥನ್ ಏಬಲ್‌ರವರ ಮೂಲಕ 38-12-0. 10. ಶ್ರೀ ರಾಜರಾಜೇಶ್ವರಿ ಕರ್ನಾಟಕಸಭಾ, ಮೈಸೂರು 11-0-0. 11. ರೆವರೆಂಡ್ ಸಾಡೆಯವರು 100-0-0. ಒಟ್ಟು 485-12-0.

ಬಿ. ರಾಮಸ್ವಾಮಯ್ಯ,
ಪ್ರೆಸಿಡೆಂಟ್.

ಬೇಕಾಗಿದೆ.

ಒಕ್ಕಲಿಗರ ಸಂಘದ ಪ್ರೆಸ್ಸಿಗೆ ಒಬ್ಬ ಮ್ಯಾನೇಜರು ಬೇಕಾಗಿದೆ. ಇವರಿಗೆ ಮಾಹೆಯಾನ ೫೦ ರೂ. ತಲಬು ವರ್ಷಂಪ್ರತಿ ೫ ರೂ. ನಂತೆ ಪ್ರಮೋಷನ್ ಮೇಲೆ ೭೫ ರೂ. ವರೆಗೂ ಸಂಬಳ ಮತ್ತು ಅವರು ತರುವ ಕೆಲಸಗಳಿಂದ ಬರುವ ಆದಾಯದಲ್ಲಿ ಖರ್ಚು ಜಾತ ಉಳಿಯುವ ನಿವ್ವಳ ನಫೆಯ ಮೇಲೆ ಶೇಕಡ ೧೦ ರಂತೆ ಕಮಿಷನ್ ಸಹ ಕೊಡಲಾಗುವುದು.

ಒಕ್ಕಲಿಗರ ಪತ್ರಿಕೆಗೆ ಒಬ್ಬ ಎಡಿಟರು ಸಹ ಬೇಕಾಗಿದೆ. ಇವರಿಗೂ ಮಾಹೆಯಾನ ೫೦ ರೂ. ತಲಬು, ವರ್ಷಂಪ್ರತಿ ೫ ರೂ. ನಂತೆ ಪ್ರಮೋಷನ್ ಮೇಲೆ ೭೫ ರೂ. ವರೆಗೂ ಸಂಬಳ ಮಾತ್ರ ಕೊಡಲ್ಪಡುವುದು.

ಇಬ್ಬರಿಗೂ ಇಂಗ್ಲೀಷ್ ಕನ್ನಡ ಭಾಷೆಗಳಲ್ಲಿ ಚನ್ನಾಗಿ ಪರಿಶ್ರಮವಿರಬೇಕು. ಅವರವರ ಯೋಗ್ಯತಾನುಸಾರ ಸಂಬಳಗಳು ನಿಷ್ಕರ್ಷಿಸಲ್ಪಡುವವು. ಯೋಗ್ಯತಾ ಪತ್ರಿಕೆಗಳೊಂದಿಗೆ ಕೆಳಕಂಡವರಿಗೆ ಅರ್ಜಿ ಬರೆದುಕೊಳ್ಳಬಹುದು.

ಜನರಲ್ ಸೆಕ್ರೆಟರಿ,
ಒಕ್ಕಲಿಗರ ಸಂಘ,
1 ೫೩, ಅರಳೇಪೇಟೆ, ಬೆಂಗಳೂರು ಸಿಟಿ

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.—ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯ ೦
ವ್ರತಪಂಚಕ	೦—೪ ೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

೧೯೨೪ ನೆಯ ಇಸವಿ ಆಗಸ್ಟ್ ತಾ|| ೩೧ ರಿಂದ ೧೯೨೪ ನೆಯ ಇಸವಿ ಸೆಪ್ಟೆಂಬರ್ ತಾ|| ೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಭಾದ್ರಪದ ಶುದ್ಧ ಪಾಡ್ಯಮಿಯಿಂದ ಭಾದ್ರಪದ ಶುದ್ಧ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
31	ಭಾನು	ಪಾಡ್ಯ	17-23	ಪುಬ್ಬ	18 24	16
1	ಸೋಮ	ಬಿದಿ	15-36	ಉತ್ತ	18-22	17
2	[1]ಮಂಗಳ	ತದಿ	12-43	ಹಸ್ತ	17-17	18
3	[2]ಬುಧ	ಚೌತಿ	8-54	ಚಿತ್ತ	15 13	19
4	ಗುರು	ಪಂ-ಷ	4-13 55-2	ಸ್ವಾತಿ	12-18	20
5	ಶುಕ್ರ	ಸಪ್ತ	53-21	ವಿಶಾ	8-47	21
6	[3]ಶನಿ	ಅಷ್ಟ	47-14	ಅನೂ	4-51	22

(1) ಸ್ವರ್ಣಗೌರೀವ್ರತಂ, ಸಿದ್ಧಿವಿನಾಯಕವ್ರತಂ, ಸಾಮಗೋಪಾಕರ್ಮ. (2) ಋಷಿಪಂಚಮಿ. (3) ದೂರ್ವಾಷ್ಟಮಿ, ಜ್ಯೇಷ್ಠಾಲಕ್ಷ್ಮೀ ಸಿದ್ಧಲಕ್ಷ್ಮೀ ಮಹಾಲಕ್ಷ್ಮೀವ್ರತಗಳು.

ಮೈಸೂರು: ಕೈ. [illegible] ಸ್ಟಾರ್ ಎಲೆಕ್ಟ್ರಿಕ್ [illegible]

REGISTERED NO. M.124.

ಮೈಸೂರು ಸ್ಟಾರ್

ಪ್ರತಿ ಭಾನುವಾರ [illegible]ಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ [illegible] ಚಕ್ರತಾವತಾರಾ ಪಠ್ಯಜ್ಞ ನಹೃತ್ತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗ[illegible] ಮಾಭೀಷ್ಟದಶೀಲ ಸಾಕಲಿತ ಸಾಧ್ವಿ ಕ್ಷ್ಮಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕು[illegible] ಶ್ರೀಮಂಚಿತ್ತಶೀಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೧೦-೦]

[[illegible] ೨-೧೦-೦]

REGISTERED NO. M. 124.

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ನೆಯ ಇಸವಿ ಅಕ್ಟೋಬರ್ ತಾರೀಖು ೧೨ ನೆಯ ಭಾನುವಾರ. [ಸಂಚಿಕೆ ೪೧

ಬಸವ ಸಮಿತಿ

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHARAGHAVA
VAIDYASALA

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲೂಯೆನ್ಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
35 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನ್ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುವುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—44] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮಣಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚೆನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಸ್ತೋತ್ರೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ.ಆರ್. ಕರಿಬಸವಶಾಸ್ತ್ರಿ
[50—38] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಮೈಸೂರು ಎಂ. ಎಸ್. ಶಿದ್ದಪ್ಪ ಬ್ರದರ್ಸ್‌ರವರ ವಿಜ್ಞಾಪನೆ.
ನಮ್ಮ ಕಂಪನಿಯ ಕ್ಯಾಲೆಂಡರುಗಳನ್ನು ಉಪಯೋಗಿಸುತ್ತಲಿರುವ ಗಿರಾಕಿಗಳಲ್ಲಿ
ವಿನಂತಿ.

1925 ನೇ ಇಸವಿಯ ಸಚಿತ್ರ ಷೀಟ್ ಕ್ಯಾಲೆಂಡರುಗಳು.

1925ನೇ ಇಸವಿಯ ಷೀಟ್ ಕ್ಯಾಲೆಂಡರ್ 1 ಕ್ಕೆ 0-1-0. 50 ಕ್ಯಾಲೆಂಡರ್‌ಗಳಿಗೆ 1-2-0. 100 ಕ್ಯಾಲೆಂಡರ್‌ಗಳಿಗೆ 2-0-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರ್‌ಗಳ ಪೂರಾ ಮೊಬಲಗು ಮಣಿಯಾರ್ಡರ್ ಮೂಲಕ ರವಾನಿಸಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜು ಯಾವ ಖರ್ಚೂ ಇಲ್ಲದಂತೆ ನೀವಿದ್ದೆಡೆಗೆ ರವಾನಿಸಲಾಗುತ್ತೆ. ಮೇಲ್ಕಂಡ ಕ್ಯಾಲೆಂಡರ್‌ನಲ್ಲಿ ಇಂಗ್ಲೀಷ್ ಮತ್ತು ಕನ್ನಡ ತಿಂಗಳು, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದಲ್ಲಿ ನಡೆಯುತಕ್ಕ ಹಬ್ಬವೇ ಮೊದಲಾದ ಮುಖ್ಯ ದಿವಸಗಳು, ರಾಹುಕಾಲ, ಗುಳಿಕಾಲ ಮಳೆನಕ್ಷತ್ರ, ಅರಮನೆಯಲ್ಲಿ ನಡೆಯತಕ್ಕ ಉತ್ಸವಗಳೂ. ಶ್ರೀಮನ್ ಮಹಾರಾಜರವರು, ಶ್ರೀಮನ್ ಯುವರಾಜರವರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರವರ ಭಾವಚಿತ್ರಗಳನ್ನಿಟ್ಟು ನಯವಾದ ಬಿಳೀ ದಪ್ಪ ಕಾಗದದಲ್ಲಿ ಅಂದವಾಗಿ ಪ್ರಿಂಟ್ ಮಾಡಿಸಿದ್ದೇವೆ.

1925 ನೇ ಇಸವಿಯ (ಮಂತ್ಲಿ ಟೇರಾಫ್) ತಿಂಗಳಿಗೊಂದು ಷೀಟಿನಂತೆ ಹರಿದುಬಿಡುವಂತೆ ತಯಾರಿಸಿರುವ ಕ್ಯಾಲೆಂಡರ್ 1 ಕ್ಕೆ 0-3-0, 3 ಕ್ಯಾಲೆಂಡರಿಗೆ 0-6-0, 12 ಕ್ಯಾಲೆಂಡರಿಗೆ 1-6-0. ತಮಗೆ ಬೇಕಾದಷ್ಟು ಕಾಪಿಗಳ ಪೂರಾ ಮೊಬಲಗನ್ನೂ ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜ್ ಯಾವ ಖರ್ಚೂ ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. [50—2]

ಮಣಿಯಾರ್ಡರ್ ರವಾನಿಸುವ ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೀ ಬೀ ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—5] ಪೋ. ಬಾ. ೩೧೦, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
33 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಲ್ಲದರಲ್ಲಿ ಪುರಾತನ ಕಾರಖಾನೆಯು.

ಸೂಚನೆ:—ಯಾವದೊಂದು ಮಾಲು ಗುಣಕಾರಿಯಾಗಿರುವದೆಂದು ತಿಳಿದಕೂಡಲೆ ಎಲ್ಲಕಡೆಗೂ ಅದರ ನಕಲು ಮಾಡಲಿಕ್ಕೆ ಆರಂಭವಾಗುತ್ತದೆ. ಆದರೆ ಹೆಸರಿಗೆ ತಕ್ಕಂತೆ ಗುಣಕ್ಕೆ ಮಾತ್ರ ಪಾತ್ರವಾಗುವದಿಲ್ಲ. ಈಗೀಗ ಇಲ್ಲಿ ನಕಲೀ ಔಷಧಿಯ ಕಾರಖಾನೆಗಳು ಹೊರಡಹತ್ತಿರುವವು. ಆದ್ದರಿಂದ ಗಿರಾಕಿಗಳು ನಮ್ಮ ಟ್ರೇಡಮಾರ್ಕನ್ನು ನೋಡಿ ತಕ್ಕೊಳ್ಳಬೇಕು.

ಸುವರ್ಣಪದಕ ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦, ೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವುದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ಷಂಡತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.—ಪರಮಾ ಹಾಗೂ ಗಾಂದಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇರೋಗ ಇದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟಲಿಯ ಕಿಮ್ಮತ್ತು ೧|| ರೂಪಾಯಿ ಮೂರುಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಸಾರ್ತಿ [illegible]. [illegible] ಟಪಾಲುಖರ್ಚು ಹೆಚ್ಚು ಬೀಳುವದಿಲ್ಲ. [illegible] ಕಿಮ್ಮತ್ತು ೧೧—೦—೦ ಮತ್ತು ೧ ಬಾಟಲಿ [illegible]. [illegible] ಖರ್ಚ ಬೇರೆ ಬೀಳುವದು. [illegible] ೧ ಬಾಟ್ಲಿಗೆ ೧—೪—೦, ೩ ಬಾಟ್ಲಿಗೆ ೩—೦—೦, [illegible] ೧೪—೦—೦

ಮ್ಯಾನೇಜರ—ದ್ರಾಕ್ಷಾರ್ಕಮಧು ಆಫೀಸು,
[12-6] ಪೋ. [illegible], ಜಿ. ಬೆಳಗಾಂವ.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಅಕ್ಟೋಬರ್ ತಾ॥ ೧೨ ನೆಯ ಭಾನುವಾರ.

THE DEWAN'S ADDRESS.

On the opening of the Representative Assembly on Friday the 10th October 1924 the Dewan-President gave an address, which for its comprehensive and informing nature is almost unique, one which is not only indicative of the lines and policies adopted in the working of the various departments but giving a some what detailed account of the work in each of them. Though it might be under the disadvantage of taking too bulky a shape, combining as it does the two parts to which the address used to be divided formerly, and though there are repetitions which could have been avoided, still it is to be acknowledged that it has the merit of placing before the House the various important matters with which the administration is concerned in a clear and easily understandable manner. We cannot also fail to observe that the Dewan is intent on taking the House into his fullest confidence quite in keeping with the reforms, an outlook which the representatives ought to appreciate. It is impossible to traverse the whole ground covered by the address in the course of an article. Referring to the work of the University the Dewan says that a Medical Faculty has been added to the University, in which connection we would like to draw the attention of the Government to a speech delivered by Dr. Mylvagnum recently at the 'College Day' celebration of the Mysore Maharaja's College, where he spoke of the essential requirements of the Faculty. Speaking of education the Dewan said that owing to the financial condition of the last few years the Government had not been able to carry out all the measures sanctioned in the order on the Education Memorandum. It would not have presented such a difficulty if the revenue raised through Income tax was diverted towards education as was promised by Government when the Legislative Council and the Representative Assembly voted for its levy. It is regrettable to notice that 3 Districts should still be opposed to the levy of the Education cess when the 5 others have accepted to pay the same and have been making good progress. The people being not very different in the different districts, one would like to know how it is that the three districts of which Mysore is one have not consented to the levy, for, we are sure that with a little less of opposition and more of sympathy from the enlightened section, both official and non-official there would be a wholehearted support given to the cess for education. We would welcome the suggestion of the Dewan who says that further progress in this direction would seem to lie in making the levy of the cess compulsory in all the District Boards and Municipalities. The demand for education is increasing daily and very much greater now than a few years before while the supply of educational facilities has not kept pace with the demand and we hope that the growing work of the Education Deprtment may not be allowed to go on only with starving rations. Talking of the Electric Department the Dewan referred to the the order that the Capital and Revenue Accounts of the Electric Works and the Krishnarajasagara Scheme should be combined. We are sorry for the Electric Department which cannot show the attractive profits which it used to any longer. Dealing with the Railways it would have been better if the income and expenditure on lines run by the Government were shown separately instead of combining both the M.S.M. and State lines for this purpose. The Dewan in accordance with the proposed separation of Railway Finance from the Administration Finance in Government of India, has suggested a depreciation Reserve so as to obviate the necessity of indenting upon general finances for subsidiring railways, and the desirability of recovering the interest charges on the capital invested on them which comes in all to about 5 crores of rupees. As regards the Bhadravati Iron works scheme we can only hope along with the Dewan that it will soon begin to yield a return. The Dewan says that the problem of providing finance for capital demands such as the opening out of the high level canel from the Krishnarajasagara and harnessing the Cauvery a second time lower down at Mekadatu which are so desirable and which are to met in the near future requires serious and early consideration and will continue to be the anxious concern of His Highness' Government. We hope, in any case, that there will not be any borrowing for these schemes. As regards the District Administration the Dewan says that there has been considerable improvement in the work, but we fail to notice any such change for the better. As regards recruitment there is no doubt a greater vigilence kept over the appointments than before, but as the figures show, namely that out of 343 appointments only 167 were given to members of the backward classes between July 1923 and June 1924, there has not been evidently any nearer approach to the 50 per cent that what remains at present. When the Government have undertaken to recruit ten Shekdar Probationers every year we do not see any reason for a direction that two candidates out of the three selected should belong to backward communities, which is as much as enduring 33⅓ per cent to the Brahmins who number not more than 4 per cent of the population. Considering the importance of Shekdari office from the point of view of the ryots it would be the right thing to reserve 9 appointments out of ten to the backward class communities, which even then will secure to the Brahmins more than their due. The Dewan states also that 5 out of 7 appointments as Special Magistrates have been given to the backward communities. We have said already that there could be no justification for giving 2 places to Brahmins, when there were candidates fully qualified among other communities. The Dewan has also referred to the recent order on the Mysore Civil Service and he says that the higher appointments open to officers not belonging to the Civil Service have been clearly indicated in it. It gives an idea that the higher places are a preserve of the Civil Servants into which non-civilians could only get in by their sufference. We hope that the rigidity of the rules will be removed and a certain elasticity introduced into them so that difficulties in interchange of offices may not arise. The question of exploitation of mineral resources has been the subject of much comment in recent times and we are glad to note that the Government intends to adopt sound commercial principles which while not stifling enterprise will also give the State a largest share of the returns. The Dewan deals with the Bhatkal scheme and its advantages, but that is again a matter of finance, which may will lie over till more prosperous days shine on our State. We are glad that the Mysore Durbar is putting a strenuous fight with the Imperial Government to recover the excess charges incurred between subsidy and military expenditure together over the 15 per cent of the total revenues of the State. What may be small to the Government of India will add considerably to our resources and we hope that the utmost pressure will be brought on it to accede to our claims. A similar claim is that of customs in which also we hope Government will be successful. In making this short review of a very wide survey by the Dewan we are glad to say that that the Government is proceeding with care and caution. The only matter which we need refer to is the desirability of laying greater emphasis on education. The index of good administration is the prosperity, contentment and happiness of the people. Ignorance of the masses must go, and they should be, if not highly prosperous at least manly, self-reliant and contented. Consulting the ryots, it does not look as though District Administration is purged of its evils. The improvement of District Administration on the one hand and the enlightenment of the masses on the other will go a great way towards achieving the end in view. We hope that the deliberations of the Assembly during the next few days will be fruitful of substantial good to the State.

ವೀರಶೈವಮಹಾಸಭಾಪುನರುಜ್ಜೀವನ.

ವೀರಶೈವರು ಒಂದು ಜನಾಂಗದವರೆಂದು ಪರಿಗಣಿಸಲ್ಪಡುವುದಕ್ಕೂ, ಅವರ ವಿದ್ಯಾಭಿವೃದ್ಧಿಗೆ ಸಾಧಕವಾದ ಪಾಠಶಾಲೆಗಳೂ, ಧನನಿಧಿಗಳೂ, ವಿದ್ಯಾರ್ಥಿನಿಲಯಗಳೂ ಅಲ್ಲಲ್ಲಿಗೆ ಸ್ಥಾಪನವಾಗಲಿಕ್ಕೂ, ಅವರ ನೈತಿಕ ಸಾಮಾಜಿಕ ಸುಧಾರಣೆಯಾಗಲಿಕ್ಕೂ, ದೇಶವಿದೇಶ ಸಮಾಜಬಂಧುಗಳ ಪರಸ್ಪರದರ್ಶನಭಾಷಣಕ್ಕೂ, ಪ್ರೀತಿವಿಶ್ವಾಸಕ್ಕೂ, ಏಕಮತ್ಯಕ್ಕೂ ಸಾಧನರೂಪವಾಗಿರುವ ಮಹಾಸಭೆಯೆಂಬ ಕಾಮಧೇನುವು ಶ್ರೀಹಾನಗಲ್ಲು ಕುಮಾರಮಹಾಸ್ವಾಮಿಗಳ ಕೃಪಾಶೀರ್ವಾದದಿಂದ ಧಾರ್‍ವಾಡಪಟ್ಟಣದಲ್ಲಿ ಜನ್ಮಿಸಿ ಬೆಂಗಳೂರು, ಸೊಲ್ಲಾಪುರ, ಬಾಗಲ್ಕೋಟೆ, ಬಳ್ಳಾರಿ, ಬೆಳಗಾವಿ, ನಿಪ್ಪಾಣಿ ಈ ಸ್ಥಳಗಳ ವೀರಶೈವರ ಪ್ರಾರ್ಥನೆಯಂತೆ ದರ್ಶನವನ್ನಿತ್ತು ಅವರ ಇಷ್ಟಾರ್ಥವನ್ನು ನೆರವೇರಿಸುತ್ತ ಬರುತ್ತಿದ್ದು ಯಾರ ಅಕೃತ್ಯದೋಷದಿಂದಲೋ ಮುಂದರಿಯದೆ ತಟಸ್ಥವಾಗಿ ನಿಂತುಬಿಟ್ಟಿದ್ದಿತು. ಆದರೆ ದಾವಣಗೆರೆಯ ಸಮಾಜಬಾಂಧವರು ಶ್ರೀಜಗದ್ಗುರುಮುರುಘರಾಜೇಂದ್ರಮಹಾಸ್ವಾಮಿಗಳ ಅಜ್ಞಾನುಸಾರ ಆ ಮಹಾಸಭಾಕಾಮಧೇನುವನ್ನು ಭಕ್ತಿವಿಶ್ವಾಸದಿಂದ ತಮ್ಮ ಸ್ಥಳಕ್ಕೆ ಬರಮಾಡಿಕೊಂಡು ವಿಶೇಷ ಆದರಾತಿಶಯದಿಂದ ಸತ್ಕರಿಸಿ ಬೇಡಿದಿಷ್ಟಾರ್ಥವನ್ನು ಕೊಡತಕ್ಕ ಮಹಾಸಭೆಯನ್ನು ತಿರಸ್ಕರಿಸಿದರೆಂಬ ಅಪಪ್ರಥೆಯನ್ನು ಹೋಗಲಾಡಿಸಿ, ಇತಃಪರ ಮಹಾಸಭೆಯು ಪ್ರತಿವರ್ಷದಲ್ಲೂ ನಿರಾತಂಕವಾಗಿ ನಡೆಯಲು ಅನುಕೂಲಿಸುವಂತೆ ಒಂದು ಚಿರಸ್ಥಾಯಿಫಂಡನ್ನು ಏರ್ಪಡಿಸಿ ತಾವುಗಳೂ ಉದಾರವಾಗಿ ದ್ರವ್ಯವನ್ನು ಕೊಟ್ಟು ಯಶೋವಂತರಾದರು. ಆದರ ಮುಂದಣವರ್ಷ ಮೈಸೂರಿನ ವೀರಶೈವರು ರಾಜಧಾನಿಯಲ್ಲಿ ಮಹಾಸಭೆಯನ್ನು ನೆರೆಯಿಸಲು ಕುತೂಹಲಾವಿಷ್ಟರಾಗಿ ಪ್ರಯತ್ನಿಸುತ್ತಿರುವಲ್ಲಿ, ಬೀರೂರಿನ ವೀರಶೈವಮಹಾಶಯರು ಮಹಾಸಭೆಯನು ತಮ್ಮೂರಿನಲ್ಲಿ ನಡೆಯಿಸಬೇಕೆಂದು ಯಾವುದೋ ಅಂತರ್ಗೂಢವಾದ ಅಭಿಪ್ರಾಯದಿಂದ ಮುಷ್ಕರ ಹಿಡಿದು ರಾಜಧಾನಿಯಲ್ಲಿ ಕೂಡಿಸಲು ಅವಕಾಶಕೊಡದೆ ತಮ್ಮಲ್ಲೇ ನೆರೆಯಿಸಿದರು. ಆದರೆ ಅವರ ಭಗ್ನಪ್ರಯತ್ನಗಳು ಸಾಗದೆ ಸಭಾಕಾರ್ಯವು ವಿಪರ್ಯಾಸದಲ್ಲಿ ಮುಕ್ತಾಯವಾಯಿತು ; ಅಷ್ಟೇ ಅಲ್ಲದೆ ಮುಂದೆ ಇತರರು ಸಭಾಚಾಲನವಿಷಯದಲ್ಲಿ ಕೈಹಾಕದಂತೆ ಭಯೋತ್ಪಾದನವಾಯಿತು.

ದಾವಣಗೆರೆಯಲ್ಲಿ ನೆರೆದಿದ್ದ ಮಹಾಸಭಾಧ್ಯಕ್ಷತೆಯನ್ನು ಯಾರುವಹಿಸಿದ್ದು ಈ ಚಿರಸ್ಥಾಯಿಫಂಡುಸ್ಥಾಪನೆಗೆ ಕಾರಣಭೂತರಾದರೋ ಮತ್ತು ಯಾರು ಈ ಚಿರಸ್ಥಾಯಿಫಂಡಿನ ಸಂಘಾಧ್ಯಕ್ಷರಾಗಿರುವರೋ ಅಂತಹ ದಿವಾನ್ ಬಹದ್ದೂರ್ ರಾಜಸಭಾಭೂಷಣ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರು ಚಿರಸ್ಥಾಯಿಫಂಡುಸ್ಥಾಪಿತವಾಗಿದ್ದರೂ, ಮಹಾಸಭೆಯು ಯಾವ ಸ್ಥಳದಲ್ಲೂ ನಡೆಯದಿರುವಪ್ರಯುಕ್ತ ಈ ಫಂಡಿನಸ್ಥಾಪನೋದ್ದೇಶವು ನೆರವೇರಲಿಕ್ಕಿಲ್ಲವಾಯಿತೆಂಬ ಪಶ್ಚಾತ್ತಾಪದಿಂದ, ಬರುವ ಡಿಸೆಂಬರ್ ತಿಂಗಳ ಕಡೆಯಭಾಗದಲ್ಲಿ ಬೆಂಗಳೂರಿನಲ್ಲೇ ಮಹಾಸಭೆಯನ್ನು ನೆರೆಯಿಸಬೇಕೆಂದು ಸಂಕಲ್ಪಿಸಿ, ತಮ್ಮ ಅಧ್ಯಕ್ಷತೆಯಲ್ಲೇ ಅಲ್ಲಿಯ ಕೆಲ ವೀರಶೈವ ದೊಡ್ಡಮನುಷ್ಯರುಗಳಿಂದ ಕೂಡಿದ ಒಂದು ಸ್ವಾಗತಸಂಘವ (ರಿಸೆಪ್ಷನ್ ಕಮಿಟಿಯ) ನ್ನು ಆಗಲೇ ಏರ್ಪಡಿಸಿ, ಸಭೆಯು ಸರ್ವಾಂಗಸುಂದರವಾಗಿ ನಡೆಯುವುದಕ್ಕೆ ತಕ್ಕೇರ್ಪಾಟನ್ನು ತಮ್ಮ ಸ್ವಂತಮೇಲ್ವಿಚಾರಣೆಯಿಂದ ಮಾಡುತ್ತಿರುವುದಾಗಿ ತಿಳಿದು ಸಂತೋಷಿಸುತ್ತೇವೆ. ಅಲ್ಲದೆ ಭಾರತೀಯವೀರಶೈವಸಮಾಜಕ್ಕೆ ಕಾಮಧೇನುವಿನಂತಿರುವ ಮಹಾಸಭೆಯನ್ನು ಪುನರುಜ್ಜೀವನಗೊಳಿಸಿದ ಕೀರ್ತಿಯನ್ನು ತಮ್ಮಪಾಲಿಗೆ ತಂದುಕೊಳ್ಳುವಂತಾದುದಕ್ಕಾಗಿ ಮ॥ ಶೆಟ್ಟರನ್ನೂ ಬೆಂಗಳೂರ ವೀರಶೈವಬಂಧುಗಳನ್ನೂ ನಾವು ಸಮಾಜದಪರವಾಗಿ ಅಭಿನಂದಿಸಿ, ಅವರು ಕೈಕೊಂಡಿರುವ ಈ ಮಹಾಸಭಾಕಾರ್ಯವು ನಿರ್ವಿಘ್ನವಾಗಿಯೂ, ಯಶಸ್ವಿಯಾಗಿಯೂ ನಡೆಯುವಂತೆ ಅನುಗ್ರಹಿಸಲೆಂದು ಆ ಉಮಾಪತಿಯನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಶ್ರೀಮನ್ಮಹಾರಾಜರವರ ವಿಜಯದಶಮಿಯುತ್ಸವ

ಕಳೆದ ತಾ॥ 8 ನೆಯ ಬುಧವಾರದ ದಿವಸ ಈ ಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿತು. ಅರಮನೆಯಿಂದ ಹಿಡಿದು ವೀರನಗೆರೆಯ ಟೋಲ್‌ಗೇಟಿನಿಂದಾಚೆಗೆ ಕೊಂಚದೂರದಲ್ಲಿ ಹೊಸದಾಗಿ ಏರ್ಪಡಿಸಲ್ಪಟ್ಟಿರುವ ಬನ್ನಿಯಮಂಟಪದವರೆಗೂ ಮಾರ್ಗವು ಧ್ವಜಪತಾಕೆಗಳಿಂದಲೂ, ತಳಿರುತೋರಣಗಳಿಂದಲೂ ಅಲಂಕರಿಸಲ್ಪಟ್ಟಿದ್ದಿತಲ್ಲದೆ, ನೀರಿನಹಳೇವಿನಿಂದ ತಂಪುಮಾಡಲ್ಪಟ್ಟಿದ್ದಿತು. ಬೆಳಗಿನ 10 ಗಂಟೆಗೆ ಪಟ್ಟದಾನೆ, ಪಟ್ಟದಕುದುರೆ ಮತ್ತು ಭಂಗಾರದ ಪಲ್ಲಕ್ಕಿಯಲ್ಲಿಡಲ್ಪಟ್ಟಿದ್ದ ಪಟ್ಟದಕತ್ತಿ ಇವುಗಳು ಸಕಲ ರಾಜಮರ್ಯಾದೆಯೊಡನೆ ಉತ್ಸವಪೂರ್ವಕವಾಗಿಹೊರಟು ನೂತನ ಬನ್ನಿಮಂಟಪವನ್ನು ಸೇರಿದುವು. ಮಧ್ಯಾಹ್ನ 2-3 ಗಂಟೆಯಿಂದಲೂ ಪಟ್ಟಣದ ಎಲ್ಲ ಕಡೆಯ ಜನರೂ ಪರಸ್ಥಳೀಕರೂ ಬಗೆಬಗೆಯ ಉಡುಪುಗಳನ್ನು ಧರಿಸಿಕೊಂಡು ಬಲುಸಂಭ್ರಮದಿಂದ ತಂಡತಂಡವಾಗಿಬಂದು ದೊಡ್ಡಬೀದಿಯ ಇಕ್ಕೆಲದ ಅಂಗಡಿಗಳು, ಮಾಡಗಳು ಮೊದಲಾದವುಗಳಲ್ಲೆಲ್ಲಾ ಸ್ಥಳಗಳನ್ನಾಕ್ರಮಿಸಿಕೊಂಡು ಕುಳಿತಿದ್ದರು. ಅಮೋಘವೂ, ದೇದೀಪ್ಯಮಾನವೂ ಆದ ವಸ್ತ್ರಾಭರಣವಿಭೂಷಿತರಾದ ಶ್ರೀಮನ್ ಮಹಾರಾಜರವರು ತಮ್ಮಂತೆಯೇ ಅಲಂಕೃತರಾದ ಶ್ರೀಮದ್ಯುವರಾಜರವರ ಸಮೇತರಾಗಿ ನೂತನವಸ್ತ್ರಾಭರಣಗಳಿಂದ ಸುಶೋಭಿತವಾದ ಆನೆಯಮೇಲಿನ ಅಂಬಾರಿಯಲ್ಲಿ ಮಂಡಿಸಿ 4½ ಗಂಟೆಗೆ ಚತುರಂಗಸೇನಾಸಮೇತರಾಗಿಯೂ, ಸಕಲಬಿರುದಾವಳಿಗಳೊಡನೆಯೂ ಪೊರಮಟ್ಟರು. ಇಂಗ್ಲೀಷ್ ಕನ್ನಡಬ್ಯಾಂಡುಗಳು, ಪಂಚವಾದ್ಯಗಳು, ಓಲಗಗಳು ಕುದುರೆಗಳ ಮೇಲಿನ ಬ್ಯಾಂಡು ಮೊದಲಾಗಿ 7-8 ಬಗೆಯ ವಾದ್ಯಗಳು, ಒಂಟೆಯ, ಆನೆಯ, ಎತ್ತುಗಳ ಮತ್ತು ಚತುರಾಶ್ವಗಳ ಪಂಚಕಲಶಯುಕ್ತವಾದ ರಥಗಳು, ನೂತನ ಉಡುಪುಗಳನ್ನು ಧರಿಸಿದ್ದ ಸೈನಿಕರು, ಅಶ್ವಾರೂಢರಾದ ಸರದಾರರುಗಳು, ನಡೆದುಕೊಂಡುಹೋಗುತ್ತಿದ್ದ ದರ್ಬಾರಿಗಳು ಇವರುಗಳಿಂದೆಲ್ಲಾ ಉತ್ಸವವು ಈವೇಳೆ ಅತ್ಯಂತ ರಮಣೀಯವಾಗಿದ್ದಿತು. ದಾರಿಯುದ್ದಕ್ಕೂ ಪ್ರಜೆಗಳು, ರಾಮಲಕ್ಷ್ಮಣರಂತೊಪ್ಪುತ್ತಿರುವ ಮಹಾಪ್ರಭುಸಹೋದರರುಗಳನ್ನು ತಮ್ಮ ಮನಸಾದಣಿಯುವಂತೆ ನೋಡಿ ಆನಂದಪರವಶರಾಗಿ ಕರತಾಡನಮಾಡಿ ಜಯಘೋಷವನ್ನು ಮಾಡುತ್ತಿರಲು, ಮಹಾಪ್ರಭುಸಹೋದರರು ಮಂದಹಾಸದಿಂದ ಪ್ರತಿಕ್ಷಣದಲ್ಲೂ ಪ್ರತಿವಂದನೆಗಳನ್ನು ಮಾಡುತ್ತ ಅಲ್ಲಲ್ಲಿಗೆ ದೊಡ್ಡಮನುಷ್ಯರುಗಳು ತಂತಮ್ಮ ಅಂಗಡಿ ಮನೆಗಳ ಮುಂಗಡೆಯೂ, ಸೆಂಟ್ರಲ್ ಪೊಲೀಸುಸ್ಟೇಷನ್ನಿನ ಮುಂಭಾಗದಲ್ಲಿ ಹಾಕಲ್ಪಟ್ಟಿದ್ದ ಚಪ್ಪರದಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳೂ ಒಪ್ಪಿಸಿದ ಪುಷ್ಪಹಾರಗುಚ್ಛಗಳನ್ನು ಸ್ವೀಕರಿಸುತ್ತ ಸಾಯಂಕಾಲ 6 ಗಂಟೆಯ ಸಮಯಕ್ಕೆ ಹೊಸಬನ್ನಿಮಂಟಪವನ್ನು ತಲುಪಿ ಅಲ್ಲಿ ಶಮೀವೃಕ್ಷಪೂಜೆಯಂಮಾಡಿಸಿ ಪ್ರಸಾದಸ್ವೀಕಾರಾನಂತರ ಸೇನಾಮರ್ಯಾದೆ, ದೀವಟಿಗೆಸಲಾಂ ಇತ್ಯಾದಿಗಳನ್ನೆಲ್ಲಾ ಪೂರೈಸಿಕೊಂಡು ಪಟ್ಟದಾನೆ, ಪಟ್ಟದಕುದುರೆ ಮತ್ತು ಪಟ್ಟದಕತ್ತಿಗಳೊಡನೆ ತಾವೊಬ್ಬರೇ ಅಂಬಾರಿಯಲ್ಲಿ ಕುಳಿತು ಹಿಂದಿರುಗಿ ಉತ್ಸವಗೊಂಡು ಅರಮನೆಯನ್ನು ತಲುಪುವ ಹೊತ್ತಿಗೆ ರಾತ್ರಿ 11½ ಗಂಟೆಯಾಗಿದ್ದಿತು. ಅನಂತರ ವಿವಾಹಮಂಟಪದ ಸಭಾಂಗಣದಲ್ಲಿ ಸಂಕ್ಷೇಪವಾದ ದರ್ಬಾರುನಡೆದು ಆ ದಿವಸದ ಕಾರ್ಯಗಳೆಲ್ಲವೂ ಮುಕ್ತಾಯಗೊಂಡವು. ಉತ್ಸವವು ಕೋಟೆಯನ್ನು ಬಿಟ್ಟು ಹೊರಟಾಗಲೂ ಮತ್ತು ಮ

ಕೋಟೆಯನ್ನು ಪ್ರವೇಶಿಸಿದಾಗಲೂ 21-21 ಗುಂಡುಗಳು ಹಾರಿಸಲ್ಪಟ್ಟುವು. ಬನ್ನಿಮಂಟಪದಬಳಿ ಸೇನಾಮರ್ಯಾದೆಯು ಆಗುವಾಗಲೂ ಗುಂಡುಗಳು ಹಾರಿಸಲ್ಪಟ್ಟುವು. ಆ ದಿವಸದ ರಾತ್ರಿಯುತ್ಸವವು ವಿದ್ಯುದ್ದೀಪಾವಳಿಯಿಂದಲೂ, ಶ್ರೀಮನ್ಮಹಾರಾಜರವರು ಮಂಡಿಸಿದ್ದ ಅಂಬಾರಿಯ ನಾಲ್ಕು ಪಕ್ಕದಲ್ಲೂ ಅತ್ಯಂತ ಪ್ರಕಾಶಮಾನವಾದ ವಿದ್ಯುದ್ದೀಪಗಳು ಏರ್ಪಡಿಸಲ್ಪಟ್ಟಿದ್ದುದರಿಂದಲೂ ಉತ್ಸವವು ಅತ್ಯಂತ ಶೋಭಾಯಮಾನವೂ ಚಿತ್ತಾಕರ್ಷವೂ ಆಗಿದ್ದಿತು. ಅಲ್ಲದೆ ಎರಡು ಆನೆಗಳನ್ನು ಕಟ್ಟಿದ್ದ ಒಂದು ಮಹಾರಥದಲ್ಲಿ ಅರಸುಮಕ್ಕಳುಗಳು ಸಾಲುಸಾಲಾಗಿ ಕುಳಿತಿದ್ದುದು ಪ್ರೇಕ್ಷಣೀಯವಾಗಿದ್ದಿತು. ಗುರುವಾರ ಶುಕ್ರವಾರ ರಾತ್ರಿಗಳಲ್ಲಿ ವಿವಾಹಮಂಟಪದ ಸಭಾಂಗಣದಲ್ಲಿ ದರ್ಬಾರು ನಡೆದು ಕೆಲವರಿಗೆ ಪ್ರಶಸ್ತಿಗಳು ಕಿಲ್ಲತ್ತು ಸಮೇತವಾಗಿ ಕೊಡಲ್ಪಟ್ಟುವು. ಸಂಸ್ಥಾನದ ಎಲ್ಲ ಕಡೆಯೂ ಉತ್ತರಾಮಳೆಯು ನಡೆಸಿ ಒಣಗುತ್ತಿದ್ದ ಪೈರುಗಳು ಚೇತರಿಸಿಕೊಳ್ಳುವಂತಾದುದರಮೇಲೂ ರಾಜಧಾನಿಯಲ್ಲಿ ಯಾವ ರೋಗವೂ ಇಲ್ಲದಿರುವುದರಿಂದಲೂ ಜನರು ಹರ್ಷಚಿತ್ತರಾಗಿ ತಮ್ಮ ಮಹಾಪ್ರಭುವರ್ಯರ ದರ್ಶನವನ್ನೂ ಉತ್ಸವ ಸಮಾರಂಭವನ್ನೂ ನೋಡುವ ಉದ್ದೇಶದಿಂದ ಹಿಂದೆ 15-20 ವರ್ಷಗಳಿಂದಲೂ ಬಾರದಿದ್ದಷ್ಟು ಅಪರಿಮಿತ ಸಂಖ್ಯೆಯಿಂದ ಬಂದಿದ್ದರು. ಅಂದರೆ ರೈಲು ಮಾರ್ಗದಿಂದಲೂ ಬಂಡಿಯ ಮಾರ್ಗದಿಂದಲೂ ಪ್ರಾಯಶಃ 60-70 ಸಾವಿರಕ್ಕೆ ಮೇಲ್ಪಟ್ಟೇ ಬಂದಿದ್ದರೆಂದು ಧಾರಾಳವಾಗಿ ಹೇಳಬಹುದು. ಮದ್ರಾಸುಕಡೆಯಿಂದ ನಾಟುಕೋಟೆ ಜನರಾದಿಯಾಗಿ ಅನೇಕರೂ, ಧಾರವಾಡ ಗದಗು ಬೆಳಗಾಂ ಇತ್ಯಾದಿ ಕಡೆಗಳಿಂದ ಸಾವಿರಾರು ಜನರೂ ಬಂದಿದ್ದರು. ರಾಜಧಾನಿಯ ಯಾವ ಭಾಗದಲ್ಲಿ ನೋಡಿದರೂ ಜನಸಂದಣಿಯೇ ಇದ್ದಿತು. ರೈಲ್ವೆ ಟ್ರಾಫಿಕ್ ಮ್ಯಾನೇಜರು ಪ್ರಯಾಣಿಕರಿಗೆ ಸ್ವಲ್ಪವೂ ತೊಂದರೆಯಾಗದಂತೆ ಒಳ್ಳೆಯೇರ್ಪಾಟನ್ನು ಮಾಡಿದ್ದುದು ಸ್ತುತ್ಯವು. ಈ ಅಪರಿಮಿತವಾದ ಜನಸಮೂಹದಿಂದ ರಾಜಧಾನಿಯ ತಿಂಡಿಪದಾರ್ಥಗಳ ಹಣ್ಣುಹಂಪಲುಗಳ ಮಾರಾಟವು ಬಹಳ ವಿಶೇಷವಾಗಿ ನಡೆದಿತಲ್ಲದೆ, ನಾಟಕದವರಿಗೂ ಸಿನಿಮಾಪ್ರದರ್ಶಕರಿಗೂ ಬಹಳ ಧನವುತ್ಪತ್ತಿಯಾಯಿತು. ಅರಮನೆಯ ಮುಂಗಡೆ ಪ್ರೇಕ್ಷಕರಿಗೆ ಕೊಂಚವೂ ತೊಂದರೆಯಾಗದಂತೆ ಕಟ್ಟಪ್ಪಣೆ ಮಾಡಲ್ಪಟ್ಟಿದ್ದಿತು. ಮತ್ತು ಪಾಪಿಪರದೇಶಿಗಳಲ್ಲಿ ದೊಡ್ಡವರಿಗೆ ಅರ್ಧ ಸೇರು ಅಕ್ಕಿ 6 ಕಾಸೂ, ಚಿಕ್ಕವರಿಗೆ ಒಂದು ಪಾವು ಅಕ್ಕಿ 3 ಕಾಸೂ ನಿತ್ಯದಲ್ಲೂ ಮೋತಿಖಾನೆಯಿಂದ ಕೊಡಿಸಲ್ಪಡುತ್ತಿದ್ದುದಾಗಿ ಕೇಳಿ ಸಂತೋಷಿಸುತ್ತೇವೆ. ಪ್ರಭುಗಳ ಪ್ರಜಾರಂಜಕತೆಯೂ, ಪ್ರಭುಗಳ ವಿಷಯದಲ್ಲಿ ಪ್ರಜೆಗಳ ಭಕ್ತಿವಿಶ್ವಾಸಗಳೂ ಎಷ್ಟು ದೃಢತಮವಾಗಿರುವುವೆಂಬುದನ್ನು ಈ ಮಹೋತ್ಸವದಿನಗಳಲ್ಲಿ ರಾಜಧಾನಿಯೊಳಗಿದ್ದ ಪರಿಸ್ಥಿತಿಯನ್ನು ಕಣ್ಣಾರೆ ನೋಡಿದವರು ಸ್ಪಷ್ಟವಾಗಿ ತಿಳಿಯದೆಹೋಗಲಿಲ್ಲವು. ನಿವಾರಣೀಯವಾದ ಭೌತಿಕಬಾಧೆಗಳಿಗೊಂದಕ್ಕೂ ಈಡಾಗದೆ ಸುಖಿಸುವ ಪ್ರಜೆಗಳನ್ನು ನೋಡಿ ಆನಂದಿಸಬೇಕೆಂದು ಅಹರ್ನಿಶಿಯೂ ಹಾರೈಸುತ್ತಿರುವ ಶ್ರೀಮನ್ ಮಹಾರಾಜರವರ ಕೋರಿಕೆಯನ್ನು ಆ ಕುಲದೇವನಾದ ಶ್ರೀಕಂಠೇಶ್ವರನು ಸಾರ್ಥಕಪಡಿಸಲೆಂದೂ, ಇಂತಹ ಉತ್ಸವವಿಭವಗಳನ್ನು ನಮ್ಮ ಪ್ರಭುವರ್ಯರು ಸಹೋದರರೊಡನೆ ಚಿರಕಾಲ ಅನುಭವಿಸುತ್ತಿರಲೆಂದೂ ಸಕಲ ಪ್ರಜೆಗಳೊಡನೆ ನಾವು ಕೋರುತ್ತೇವೆ, ಮತ್ತು

ಚಿರಕಾಲಮಿರ್ಕೆ ನಿಮ್ಮಯ |
ದೊರೆತನಮಿಳೆನಲಿಯುತಿರ್ಕೆ ಮಳೆಬೆಳೆಯಿಂದಂ ||
ವರಧರ್ಮನಿಷ್ಠೆ ನಿಮ್ಮೊಳ್ |
ಪರಿವರ್ಧಿಸುತಿರ್ಕೆ ಸುಮತಿ ಕೃಷ್ಣಕ್ಷಿತಿಪಾ ||

ಎಂದು ಮಂಗಳಾಶಾಸನವನ್ನು ಮಾಡುತ್ತೇವೆ.

ಪ್ರಜಾಪ್ರತಿನಿಧಿಸಭಾಧಿವೇಶನವು.

ಸುಧಾರಿತವಾದ ಈ ಸಭೆಯ ದ್ವಿತೀಯಾಧಿವೇಶನವು ಕಳೆದ ತಾ॥ 10 ನೆಯ ಶುಕ್ರವಾರ ಬೆಳಿಗ್ಗೆ 12 ಗಂಟೆಗೆ ಜಗನ್ಮೋಹನಪ್ರಾಸಾದದ ಸಭಾಂಗಣದಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ನಡೆಯುತ್ತಿರುವುದು. ಆರಂಭಕಾಲದಲ್ಲಿ ಬ್ರಿಟಿಷ್ ರೆಸಿಡೆಂಟರು ಮೊದಲಾಗಿ ಕೆಲ ಐರೋಪ್ಯಾತಿಥಿಗಳು ಬಂದಿದ್ದರು. ಸರ್ಕಾರಿಯಧಿಕಾರಿಗಳಲ್ಲದೆ ಪ್ರಾಯಶಃ 250 ಪ್ರತಿನಿಧಿಗಳೂ, ಪ್ರೇಕ್ಷಕರೂ ನೆರೆದಿದ್ದರು. ದಿವಾನರು ತಮ್ಮ ಆರಂಭಭಾಷಣವು 56 ಪುಟಗಳವರೆಗಿದ್ದುದರಿಂದ ಅರ್ಧದವರೆಗೋದಿ ಉಳಿದುದನ್ನು ಓದಲ್ಪಟ್ಟುದಾಗಿ ಭಾವಿಸಲ್ಪಡಬೇಕೆಂದು ಹೇಳಿ ಕುಳಿತುಕೊಂಡಮೇಲೆ ಕನ್ನಡ ಭಾಷಣವನ್ನು ಮ॥ ಕೆ. ಎಚ್. ರಾಮಯ್ಯನವರು ಸಂಪೂರ್ಣವಾಗಿ ಓದಿದರು. (ಅದು ಈ ಪತ್ರಿಕೆಯ ಬೇರೆ ಕಡೆ ಮುದ್ರಿತವಾಗಿರುತ್ತದೆ). ಅನಂತರ ಕೆಲ ರೆಜ್ಯುಲೇಷನ್ನುಗಳ ವಿಚಾರದಲ್ಲಿ ದೀರ್ಘವಾಗಿ ಚರ್ಚೆನಡೆದು ಸಾಯಂಕಾಲ 6½ ಗಂಟೆಯಾದುದರಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು. ನೆನ್ನೆಯ ದಿನದಿಂದ ವಿಷಯಗಳ ಚರ್ಚೆಗಾರಂಭವಾಗಿರುವುದು. ಈ ಭಾಷಣದ ವಿಚಾರದಲ್ಲಿ ನಮ್ಮ ಅಭಿಪ್ರಾಯವನ್ನು ಮುಂದೆ ತಿಳಿಸುವೆವು.

ಕಳೆದವರ್ಷ ರಾಜಧಾನಿಗೆ ಬಂದಿದ್ದು ಪೇರಣಿ ವಿದ್ಯೆಯನ್ನು ಪ್ರದರ್ಶಿಸಿ ಪ್ರೇಕ್ಷಕಜನರ ಮನಸ್ಸಿಗೆ ವಿಸ್ಮಯವನ್ನುಂಟುಮಾಡಿದ್ದ ಮ॥ ತಿಪ್ಪಾವಧಾನಿಗಳು ಈಸಲವೂ ಬಂದು ಕಳೆದ ಮಂಗಳವಾರ ಸಾಯಂಕಾಲ ಲಕ್ಷ್ಮೀಥಿಯೇಟರಿನಲ್ಲಿ ಪೇರಣಿವಿದ್ಯೆಯ ಅದ್ಭುತಸಾಹಸಕಾರ್ಯಗಳನ್ನು ಪ್ರದರ್ಶಿಸಿ ಪ್ರೇಕ್ಷಕರಾಗಿ ದಯಮಾಡಿಸಿದ್ದ 20-30 ಜನ ದೊಡ್ಡಮನುಷ್ಯರುಗಳನ್ನು ವಿಸ್ಮಯಗೊಳಿಸಿದರು. ಈ ಆಶ್ಚರ್ಯಕರವಾದ ವಿದ್ಯೆಯನ್ನು ನೋಡಲು ಮ್ಯುನಿಸಿಪಾಲಿಟಿಯ ಚೀಫ್ ಆಫೀಸರೂ, ಹೆಲ್ತಾಫೀಸರೂ, ಶ್ರೀರಂಗಪಟ್ಟಣದ ಮುನಸೀಫರೂ, ಕೆಲ ಮ್ಯು॥ ಕಮಿಷನರುಗಳೂ, ರೆಪ್ರಜೆಂಟೇಟಿವ್ ಮೆಂಬರುಗಳೂ ಆಹ್ವಾನಿಸಲ್ಪಟ್ಟಿದ್ದರು. ಈ ದೊಡ್ಡ ಮನುಷ್ಯರುಗಳೆಲ್ಲರೂ ಅವಧಾನಿಗಳ ಅದ್ಭುತಸಾಹಸಕಾರ್ಯಗಳನ್ನು ಕೊಂಡಾಡಿ ಅವರನ್ನು ಹರಸಿದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ
ದಿವಾನ್‌ಸಾಹೇಬರವರು ಮಾಡಿದ ಭಾಷಣ.

(ದಸರಾ ಅಧಿವೇಶನ)

10ನೆಯ ಅಕ್ಟೋಬರ್ 1924

ಪೀಠಿಕೆ.

ಮಹನೀಯರೆ,

ಆಳುತ್ತಿರುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ತಮ್ಮೆಲ್ಲರಿಗೂ ಸುಖಾಗಮನವನ್ನು ಬಯಸಿ, ಪ್ರಜಾಪ್ರತಿನಿಧಿ ಸಭೆಯು ಪುನರ್ವ್ಯವಸ್ಥಿತವಾದ ನಂತರ, ಕಳೆದ ಸಾಲಿನ ರಾಜ್ಯಾಡಳಿತದ ವಿಚಾರವನ್ನು ಮೊಟ್ಟಮೊದಲು ವಿಮರ್ಶೆಮಾಡುವುದಕ್ಕೂ ಮತ್ತು 1923ನೆಯ ಇಸ್ವಿಯ ಅಕ್ಟೋಬರು ತಿಂಗಳಿನಲ್ಲಿ ಶ್ರೀಮನ್ಮಹಾರಾಜರವರು ಅನುಗ್ರಹಿಸಿದ ರಾಜಶಾಸನಪತ್ರಿಕೆಯ ಮೇರೆಗೆ ಈ ಸಭೆಯವರಿಗೆ ವಹಿಸಿರುವ ಕರ್ತವ್ಯಗಳನ್ನು ನೆರವೇರಿಸುವುದಕ್ಕೂ, ನೆರೆದಿರುವ ಈ ಸಭೆಯ ನಾಲ್ವತ್ತಮೂರನೆಯ ವರುಷದ ಈ ಅಧಿವೇಶನಕ್ಕೆ ತಮ್ಮೆಲ್ಲರನ್ನೂ ಅತ್ಯಾದರದಿಂದ ಬರಮಾಡಿಕೊಳ್ಳುತ್ತೇವೆ.

ಹೊಸದಾಗಿ ವ್ಯವಸ್ಥೆ ಮಾಡಲ್ಪಟ್ಟ ಪ್ರಜಾಪ್ರತಿನಿಧಿ ಸಭೆಯೂ, ನ್ಯಾಯವಿಧಾಯಕ ಸಭೆಯೂ, ಕಳೆದ ಸರ್ಕಾರೀ ವರುಷದ ಕೊನೆಯ ತಿಂಗಳಲ್ಲಿ ನಡೆದ ಬಡ್ಜೆಟ್ ಅಧಿವೇಶನಗಳಲ್ಲಿ ನೆರವೇರಿಸಿದ ಕಾರ್ಯಕಲಾಪಗಳು ಇಲ್ಲಿ ಸಭೆಸೇರಿರುವ ನಮ್ಮೆಲ್ಲರಿಗೂ ಇನ್ನೂ ಚೆನ್ನಾಗಿ ನೆನಪಿನಲ್ಲಿರುವದರಿಂದ ಅವುಗಳನ್ನು ಕುರಿತು ಮತ್ತೆ ವಿಸ್ತಾರವಾಗಿ ಪ್ರಸ್ತಾಪಿಸಬೇಕಾದ ಅವಶ್ಯಕತೆಯೇನೂ ಇರುವುದಿಲ್ಲ. ಆದಕಾರಣ, ಹೊಸ ನ್ಯಾಯವಿಧಾಯಕಸಭೆ ಮತ್ತು ಪ್ರಜಾಪ್ರತಿನಿಧಿಸಭೆ, ಇವುಗಳೆರಡೂ ಸರ್ಕಾರದ ಆಯವ್ಯಯದ ಮತ್ತು ಬಡ್ಜೆಟ್ಟಿನ ವಿಚಾರದಲ್ಲಿ ಪ್ರಾಮುಖ್ಯವಾದ ಮತ್ತು ಕಷ್ಟಸಾಧ್ಯವಾದ ಕರ್ತವ್ಯಗಳನ್ನು ತಮಗೆ ವಹಿಸಲ್ಪಟ್ಟಿರುವ ಹೆಚ್ಚಿನ ಜವಾಬ್ದಾರಿಗನುಸಾರವಾಗಿ ನೆರವೇರಿಸಿ, ಸಂಸ್ಥಾನದ ಆಡಳಿತದ ಸಾಧನಗಳಲ್ಲೆಲ್ಲಾ ಅತ್ಯಂತ ಪ್ರಯೋಜನಕರವಾದ ಮತ್ತು ಕಾರ್ಯದಕ್ಷತೆಯಿಂದ ಕೂಡಿದ ಸಂಸ್ಥೆಗಳೆಂಬುದನ್ನು ವ್ಯಕ್ತಪಡಿಸಿರುವುದು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ವಿಶೇಷ ತೃಪ್ತಿಕರವಾಗಿದೆಯೆಂದು ತಿಳಿಸಿದರೆ ಸಾಕಾಗಿರುತ್ತದೆ. ರಾಜಕೀಯ ಸುಧಾರಣೆಗಳು ಆಚರಣೆಗೆ ಬಂದ ಮೊದಲನೆಯ ವರುಷದ ಆಡಳಿತದಲ್ಲಿನ ಮುಖ್ಯಾಂಶಗಳನ್ನು ಈಗ ಈ ಸಭೆಯವರಿಗೆ ತಿಳಿಸುವುದು ಆಡಳಿತದ ಪ್ರಧಾನಾಧಿಕಾರಿಗಳಾಗಿರುವ ನಮಗೆ ಗೌರವಪ್ರದವಾದ ಕೆಲಸವಾಗಿರುತ್ತದೆ. ಸದರೀ ವರುಷದಲ್ಲಿ ಸಂಸ್ಥಾನಕ್ಕೆ ಪ್ರಯೋಜನಕರವಾಗುವಂಥಾ ನಿರ್ದಿಷ್ಟವಾದ ಫಲಿತಾಂಶಗಳುಂಟಾಗುವುದಕ್ಕೆ ಸಾಧಕವಾಗಿ ಸರ್ಕಾರದವರ ಮತ್ತು ಪ್ರಜಾಪಕ್ಷದವರ ಕಾರ್ಯಕಲಾಪಗಳು ಎಷ್ಟುಮಟ್ಟಿಗೆ ಸಾಮರಸ್ಯದಿಂದ ಸಮ್ಮಿಳಿತವಾಗಿ ಸೇರಿದ್ದುವೆಂಬುದನ್ನೂ, ಮತ್ತು ಸರ್ಕಾರದವರೂ, ಪ್ರಜೆಗಳ ಪ್ರತಿನಿಧಿಗಳೂ, ಪರಸ್ಪರವಾಗಿ ಸೌಹಾರ್ದಭಾವದಿಂದಲೂ, ಮತ್ತು ಸಹಕಾರ ಭಾವದಿಂದಲೂ ಕೂಡಿ ತಮ್ಮತಮ್ಮ ಕರ್ತವ್ಯಗಳನ್ನು ಎಷ್ಟರಮಟ್ಟಿಗೆ ಪ್ರತಿಪಾಲಿಸಿರುವರೆಂಬುದನ್ನೂ, ನಿರ್ಧರಿಸುವ ಕೆಲಸವು ತಮಗೂ ಮತ್ತು ಪ್ರಜಾಸಾಮಾನ್ಯಕ್ಕೂ ಸೇರಿರುತ್ತದೆ.

ಕಳೆದ ವರುಷದ ರಾಜ್ಯಾಡಳಿತದ ಮುಖ್ಯವಾದ ವಿಷಯಗಳು.

ಸರ್ಕಾರದ ನಾನಾ ಇಲಾಖೆಗಳ ಆಡಳಿತವನ್ನು ಸಾಮಾನ್ಯವಾಗಿ ವಿವರಿಸತೊಡಗುವುದಕ್ಕೆ ಮೊದಲು, 1923-24ನೆಯ ವರುಷವನ್ನು ಮೈಸೂರು ದೇಶದಲ್ಲಿ ಚರಿತ್ರಾರ್ಹವಾದುದನ್ನಾಗಿ ಮಾಡಿದ ಪ್ರಾಮುಖ್ಯ ವಿಷಯಗಳಲ್ಲಿ ಕೆಲವನ್ನು ಕುರಿತು ಸ್ವಲ್ಪ ಪ್ರಸ್ತಾಪಿಸುವೆವು. ಕಳೆದ ದಸರಾ ಅಧಿವೇಶನದ ನಮ್ಮ ಭಾಷಣವನ್ನು ಉಪಸಂಹರಿಸುವುದರಲ್ಲಿ, ವೈಸ್‌ರಾಯಿ ಮತ್ತು ಇಂಡಿಯಾ ದೇಶದ ಗವರ್ನರ್ ಜನರಲ್‌ರವರಾದ ಮಹಾಮಹಿಮರಾದ ಲಾರ್ಡ್ ರೀಡಿಂಗ್‌ರವರೂ, ಅವರ ಪತ್ನಿಯವರಾದ ಕೌಂಟೆಸ್ ಆಫ್ ರೀಡಿಂಗ್‌ರವರೂ, ನಮ್ಮ ಸಂಸ್ಥಾನಕ್ಕೆ ದಯಮಾಡಿಸುವುದರಲ್ಲಿದ್ದರೆಂಬ ಸಂಗತಿಯನ್ನು ಸೂಚಿಸಿದ್ದೆವು. ಆ ಮಹನೀಯರ ಆಗಮನ ಕಾಲದಲ್ಲಿ ಉತ್ಸವಸಂದರ್ಶನಾರ್ಥವಾಗಿ ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಸಾವಿರಾರು ಪ್ರಜೆಗಳು ರಾಜಧಾನಿಗೆ ಬಂದಿದ್ದರು. ಅಲ್ಲದೆ ವೈಸ್‌ರಾಯಿದಂಪತಿಗಳು 1923ನೆಯ ನವಂಬರು 29ನೆಯ ತಾರೀಖಿನ ದಿನ ಮೆರವಣಿಗೆಯಲ್ಲಿ ಬಿಜಯಮಾಡಿಸಿದ ರಸ್ತೆಗಳ ಉಭಯ ಪಾರ್ಶ್ವಗಳಲ್ಲಿಯೂ, ತಂಡತಂಡವಾಗಿ ನೆರೆದಿದ್ದ ಪ್ರಜೆಗಳು ಈ ಮಹನೀಯರುಗಳಿಗೆ ಅಸಾಧಾರಣವಾದ ಮತ್ತು ಅಭೂತಪೂರ್ವವಾದ ರೀತಿಯಲ್ಲಿ ಕೋಲಾಹಲದೊಡನೆ ಸುಖಾಗಮನವನ್ನು ಬಯಸಿದರು. ಶ್ರೀಮನ್ ಮಹಾರಾಜರವರು ಮಹಾಮಹಿಮರಾದ ವೈಸ್ರಾಯಿಯವರ ಗೌರವಾರ್ಥವಾಗಿ ಮಾಡಿಸಿದ ಔತಣಕಾಲದಲ್ಲಿ ತತ್ಕಾಲದಲ್ಲಿ ಇಂಡಿಯಾ ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದ ಕೆಲವು ವಿಷಯಗಳನ್ನು, ಎಂದರೆ, ಮೈಸೂರು ಸಂಸ್ಥಾನದವರು ಸಾರ್ವಭೌಮ ಸರ್ಕಾರಕ್ಕೆ ಕೊಡತಕ್ಕ ಪೊಗದಿ, ಬೆಂಗಳೂರು ದಂಡಿನ ಸರ್‌ಪ್ಲಸ್ ಹುಟ್ಟುವಳಿ ಮತ್ತು ಸ್ಟರ್ಲಿಂಗ್ ಡಿಬೆಂಚರ್ ಲೋನ್ ಸಿಂಕಿಂಗ್‌ಫಂಡಿನ ವಿನಿಯೋಗ, ಈ ವಿಷಯಗಳನ್ನು ಕುರಿತು ವೈಸ್‌ರಾಯಿಯವರು ಮುಖ್ಯವಾದ ಅಂಶಗಳನ್ನು ಸೂಚಿಸಿದರು. ಕಳೆದ ಮಾರ್ಚಿ ತಿಂಗಳಿನಲ್ಲಿ ನಡೆದ ಅಧಿವೇಶನದಲ್ಲಿ ಶ್ರೀಮನ್ಮಹಾರಾಜರವರು ನೂತನ ನ್ಯಾಯವಿಧಾಯಕ ಸಭೆಯ ಮತ್ತು ಪ್ರಜಾಪ್ರತಿನಿಧಿ ಸಭೆಯ ಸಮಾರಂಭೋತ್ಸವವನ್ನು ಅನುಗ್ರಹಪೂರ್ವಕವಾಗಿ ನೆರವೇರಿಸಿ, ತಮ್ಮ ಪ್ರಜೆಗಳಿಗೆ ಉತ್ಸಾಹಜನಕವಾದ ಸಂದೇಶವನ್ನು ಆ ಕಾಲದಲ್ಲಿ ದಯಪಾಲಿಸಿದರು. ಸರ್ಕಾರಿ ವರುಷದ ಪ್ರಾರಂಭದಲ್ಲಿ ಮುಂಗಾರು ಮಳೆಯು ಮೊದಮೊದಲು ವಿಶೇಷವಾಗಿ ಬಿದ್ದು ಮಲೆನಾಡಿನಲ್ಲಿ ಭಾರೀ ಪ್ರವಾಹಗಳುಂಟಾಗಿ ಅಲ್ಲಿನ ಸ್ಥಿತಿಗಳು ಕೇವಲ ಅಪಾಯಕರವಾಗಿ ಕಂಡುಬಂದುವು. ಆ ತರುವಾಯ ಸ್ವಲ್ಪ ಕಾಲಾನಂತರ ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಅನಾವೃಷ್ಟಿಯ ದೆಸೆಯಿಂದ ಅನೇಕ ಕಷ್ಟಗಳು ಬಂದೊದಗಿದುವು; ಆದುದರಿಂದ, ಸದರಿ ಡಿಸ್ಟ್ರಿಕ್ಟುಗಳಲ್ಲಿ ಕಷ್ಟನಿವಾರಣೆಗೋಸ್ಕರ ಸಹಾಯದ ಏರ್ಪಾಡುಗಳನ್ನು ಮಾಡಬೇಕಾಗಿ ಬಂದಿತು.

ಕಳೆದ ತಾ॥ 9ರ ರಾತ್ರಿ ಅರಮನೆಯ ವಿವಾಹಮಂಟಪದಸಭಾಂಗಣದಲ್ಲಿ ನಡೆದ ದರ್ಬಾರಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ವೈಸ್‌ಛಾನ್ಸಲರಾದ ಡಾಕ್ಟರ್ ಬ್ರಜೇಂದ್ರನಾಥಶೀಲ್‌ರವರಿಗೆ ರಾಜತಂತ್ರಪ್ರವೀಣ ಎಂಬ ಪ್ರಶಸ್ತಿಯೂ, "ರಾಮಾಯಣಸಂಗ್ರಹ" ಗ್ರಂಥಕರ್ತರಾದ ಅರಮನೆ ಮುಜರಾಯಿಬಕ್ಷಿ ಮ॥ ಎಚ್. ಲಿಂಗರಾಜಅರಸಿನವರಿಗೆ ರಾಜಸಭಾಭೂಷಣ ಎಂಬ ಪ್ರಶಸ್ತಿಯೂ, ಶೃಂಗೇರಿಮಠದ ಏಜಂಟರಾದ ಮ॥ ಶ್ರೀಕಂಠಶಾಸ್ತ್ರಿಗಳಿಗೆ ಗುರುಸೇವಾಪ್ರವೀಣ ಎಂಬ ಪ್ರಶಸ್ತಿಯೂ, ಕ್ಯಾಪ್ಟನ್ ಹಯಾತ್‌ಖಾನ್‌ರವರಿಗೂ ಸುಬೇದಾರ್ ಮಾಣಿಕ್ಯರಾಜುಯವರಿಗೂ ಭಂಗಾರದ ಪದಕಗಳೂ ಮುತ್ತಿನಕಂಠಾಭರಣ ಮತ್ತು ಖಿಲ್ಲತ್ತುಗಳೊಡನೆ ಬಹುಮಾನಿಸಲ್ಪಟ್ಟುವು. ಅಲ್ಲದೆ ತಾ॥ 10ರ ರಾತ್ರಿಯ ದರ್ಬಾರಿನಲ್ಲೂ ಪ್ರಶಂಸಾಯುಕ್ತ ಕೆಲಸಗಳನ್ನುಮಾಡಿರುವ ದೊಡ್ಡಮನುಷ್ಯರುಗಳಿಗೆ ಭಂಗಾರದ ಪದಕಗಳು ಖಿಲ್ಲತ್ತುಗಳೊಡನೆ ಅನುಗ್ರಹಿಸಲ್ಪಟ್ಟುವು.

ಇನ್ನು ತಮ್ಮಗಳ ಅವಗಾಹನೆಗೆ ತರಬೇಕಾದ ಆ ಪ್ರಾಮುಖ್ಯ ವಿಷಯಗಳಲ್ಲಿ ಮತ್ತೊಂದು ಮಾತ್ರವೇ ಉಳಿದಿರುತ್ತದೆ; ಕೃಷ್ಣರಾಜಸಾಗರದ ವಿಚಾರದಲ್ಲಿಯೂ, ಕಾವೇರಿ ನದಿಯ ಹೆಚ್ಚು ನೀರನ್ನು ಮದರಾಸು ಮತ್ತು ಮೈಸೂರು ಸರ್ಕಾರಗಳಿಗೆ 50 ವರುಷಗಳ ಕಾಲಕ್ಕೆ ಹಂಚಿಕೆಮಾಡುವ ವಿಷಯದಲ್ಲಿಯೂ, ಮದರಾಸು ಸರ್ಕಾರದವರೊಂದಿಗೆ ನಡೆಯಬೇಕಾಗಿದ್ದ ಒಪ್ಪಂದವು ಪೂರ್ತಿಯಾದುದೇ ಆ ಪ್ರಾಮುಖ್ಯ ಸಂಗತಿಯಾಗಿರುತ್ತದೆ. ಈ ವ್ಯವಸ್ಥೆಯ ಮುಖ್ಯಾಂಶಗಳನ್ನು ಸೂಚಿಸಿ ಮುಂದೆ ಕಾವೇರಿ ಬಯಲಿನಲ್ಲಿ ನೀರಾವರಿಯ ಕೆಲಸವನ್ನು ವೃದ್ಧಿಪಡಿಸುವ ವಿಷಯವಾಗಿಯೂ, ಈ ಭಾರೀ ಪ್ರಾಜೆಕ್ಟನ್ನು ಪೂರೈಸುವ ವಿಷಯಗಾಗಿಯೂ, ಸರ್ಕಾರದವರು ಅನುಸರಿಸತಕ್ಕ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ನಮೂದಿಸಿ ಪರಿಷ್ಕಾರವಾದ ಸರ್ಕಾರಿ ಹುಕುಮನ್ನು ಈಚೆಗೆ ಪ್ರಕಟಿಸಿರುತ್ತೇವಾಗಿ, ಈ ಒಪ್ಪಂದದ ಮುಖ್ಯಾಂಶಗಳನ್ನು ಕುರಿತು ವಿಸ್ತಾರವಾಗಿ ಇಲ್ಲಿ ಪ್ರಸ್ತಾಪಿಸುವುದು ಅನಾವಶ್ಯಕ. ಈ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಅವಶ್ಯವಾದ ಪ್ರಾರಂಭದ ಏರ್ಪಾಡುಗಳನ್ನೆಲ್ಲಾ ಪ್ರಸಕ್ತವರ್ಷದಲ್ಲಿಯೇ ಮಾಡಲಾಗಿದೆ ಮತ್ತು ವಿಧಾಯಕವಾದ ಸರ್ವೆ ಕೆಲಸಗಳೂ, ತನಿಖೆಯ ಕ್ರಮಗಳೂ, ಸಮರ್ಪಕವಾಗಿ ಮುಂದುವರಿಯುತ್ತಾ ಇವೆ. ಈ ಭಾರೀ ವಿಷಯಗಳಲ್ಲದೆ, ಬೆಂಗಳೂರು ದಂಡಿನ "ಸರ್‌ಪ್ಲಸ್" ಎಂದರೆ ವೆಚ್ಚವು ಕಳೆದು ಉಳಿಯುವ ಶಿಲ್ಕುಮೊಬಲಗಿನ ವಿಷಯವನ್ನು ವ್ಯವಸ್ಥೆ ಮಾಡಿಕೊಳ್ಳುವುದಕ್ಕಾಗಿಯೂ, ರೈಲ್ವೆ ಸ್ಟರ್ಲಿಂಗ್ ಡಿಬೆಂಚರ್ ಸಾಲದ ಸಿಂಕಿಂಗ್ ಫಂಡನ್ನು ಉಪಯೋಗಿಸಿಕೊಳ್ಳುವುದಕ್ಕಾಗಿಯೂ, ಮೈಸೂರು ಸರ್ಕಾರದವರು ಇಂಡಿಯಾ ಸರ್ಕಾರದವರೊಡನೆ ಒಪ್ಪಂದ ಮಾಡಿಕೊಳ್ಳುವುದಕ್ಕಾಗಿ ಪತ್ರವ್ಯವಹಾರವನ್ನು ನಡೆಯಿಸುವುದರಲ್ಲಿಯೇ ವರ್ಷವೆಲ್ಲಾ ವಿಶೇಷವಾಗಿ ಉದ್ಯುಕ್ತರಾಗಿದ್ದರು. ಕಳೆದ ಡಿಸೆಂಬರು ತಿಂಗಳಿನಲ್ಲಿ ಮಹಾಮಹಿಮರಾದ ವೈಸ್ರಾಯಿಯವರು ಅಪ್ಪಣೆಕೊಡಿಸಿದುದಕ್ಕೆ ಅನುಸಾರವಾಗಿ ಮೈಸೂರು ಸಂಸ್ಥಾನದ ಪೊಗದಿಯ ವಿಷಯವನ್ನು ವಿಚಾರಮಾಡಿ, ಈ ಪೊಗದಿಯ ವಿಷಯದಲ್ಲಿ ಅನುಕೂಲವಾದ ಸಹಾಯವನ್ನು ಮಾಡಬೇಕೆಂದು ಜೂನ್ ತಿಂಗಳಲ್ಲಿ ಮತ್ತೆ ಅಂಕೆಮಾಡಿಕೊಳ್ಳಲಾಯಿತು. ಪ್ರಸಕ್ತವರ್ಷದಲ್ಲಿ ಮೈಸೂರು ಸೈನ್ಯದ ಪುನರ್ವ್ಯವಸ್ಥೆಯನ್ನು ತಪಶೀಲಾಗಿ ನಡೆಸಿ ತಕ್ಕ ಸಲಹೆಗಳನ್ನು ಇಂಡಿಯಾ ಸರ್ಕಾರದವರಿಗೆ ಕಳುಹಿಸಿಕೊಡಲಾಯಿತು. ಸರ್ಕಾರದ ಬೇರೆ ಬೇರೆ ಇಲಾಖೆಗಳಿಗೆ ಬೇಕಾಗುವ ಸ್ಟೋರುಗಳ ಮತ್ತು ಪದಾರ್ಥಗಳ ಸರಬರಾಯಿಯನ್ನು ಪಡೆಯುವಬಗ್ಗೆ ಜರುಗಿಸಬೇಕಾದ ನಡವಳಿಕೆಯ ವಿಷಯದಲ್ಲಿ ಒಂದು ಮುಖ್ಯವಾದ ಹೊಸ ಏರ್ಪಾಟನ್ನು ಮಾಡಲಾಯಿತು; ಮತ್ತು ಸರ್ಕಾರಿ ಉದ್ಯೋಗಸ್ಥರೂ, ಖಾಸಗಿ ದೊಡ್ಡಮನುಷ್ಯರೂ, ಸಭ್ಯರಾಗಿರುವ ಸ್ಟೋರ್ ಪರ್ಚೇಸ್ ಕಮಿಟಿಯೊಂದನ್ನು ಪ್ರಸಕ್ತವರ್ಷದಲ್ಲಿ ಏರ್ಪಡಿಸಲಾಯಿತು. ಸ್ಥಳೀಯ ಪ್ರಜಾಧಿಕಾರದ ಸಮ್ಮೇಳನದವರ (ಲೋಕಲ್ ಸೆಲ್ಫ್ ಗೌರ್ನಮೆಂಟ್ ಕಾನ್ಫರೆನ್ಸ್) ನಿರ್ಣಯಗಳನ್ನು ಆಚರಣೆಗೆ ತರುವುದಕ್ಕಾಗಿ ನಿಯಮಿತರಾದ ಸ್ಪೆಷಲ್ ಆಫೀಸರೊಬ್ಬರ ಸಹಾಯದಿಂದ ಸ್ಥಳೀಯ ಪ್ರಜಾಧಿಕಾರದ ಸಮಗ್ರ ಏರ್ಪಾಡನ್ನೂ ಸಾವಧಾನಪೂರ್ವಕವಾಗಿಯೂ, ಕೂಲಂಕಷವಾಗಿಯೂ, ಪರಾಮರ್ಶಿಸಿ ಪರಿಶೋಧಿಸಲಾಯಿತು. ಸಂಸ್ಥಾನದಲ್ಲಿ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲ್ ವಿದ್ಯಾಭ್ಯಾಸವನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿ ವಿಶೇಷವಾಗಿ ಗಮನ ಕೊಡಲಾಯಿತು ; ಮತ್ತು ಇವುಗಳೆರಡನ್ನೂ ವಿದ್ಯಾಭ್ಯಾಸದ ಮೆಮೋರ್‍ಯಾಂಡಮಿನಲ್ಲಿ ವಿಧಾಯಕವಾಗಿರುವ ಸಾಮಾನ್ಯ ಕಾರ್ಯಕ್ರಮಕ್ಕನುಸಾರವಾಗಿ ನವೀನ ಕ್ರಮದಲ್ಲಿ ವ್ಯವಸ್ಥೆಗೊಳಿಸಲಾಯಿತು. ಎಸ್.ಎಸ್.ಎಲ್.ಸಿ. ಏರ್ಪಾಡಿನ ವಿಷಯವನ್ನು ವಿಚಾರ ಮಾಡುವುದಕ್ಕಾಗಿ ಏರ್ಪಡಿಸಿದ್ದ ಕಮಿಟಿಯವರ ಶಿಫಾರಸುಗಳ ಮೇಲೆ ಹುಕುಂ ಸಾದರ್ಮಾಡಲಾಯಿತು. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಎಗ್ಸಿಕ್ಯೂಟಿವ್ ಮತ್ತು ಜುಡಿಷಿಯಲ್ ಅಧಿಕಾರಗಳನ್ನು ಪ್ರತ್ಯೇಕಿಸುವ ಏರ್ಪಾಡನ್ನು ಆಚರಣೆಗೆ ತರಲಾಯಿತು. ಸಿವಿಲ್ ಕೋರ್ಟುಗಳಲ್ಲಿ ಕೆಲಸಗಳು ಬಹುಕಾಲದಿಂದಲೂ ಬಾಕಿಯಲ್ಲಿ ನಿಂತುಹೋಗಿರುವುದನ್ನು ತಪ್ಪಿಸಿ ಅವುಗಳನ್ನು ಬೇಗನೆ ಮುಗಿಸುವುದಕ್ಕೋಸ್ಕರ ಹಂಗಾಮಿ ತರೀಖು ಹೆಚ್ಚು ಸಂಖ್ಯೆಯ ಕೋರ್ಟುಗಳನ್ನು ಸ್ಥಾಪಿಸಲಾಯಿತು. ಸಂಪದಭಿವೃದ್ಧಿ ಸಮಾಜದ ಬೋರ್ಡುಗಳ ಪುನರ್ವ್ಯವಸ್ಥೆಯನ್ನು ಮಾಡಲಾಯಿತು. ಇನಾಂ ಕಮಿಷನರವರ ವರದಿಯನ್ನು, ಮಲೆನಾಡು ಅಭಿವೃದ್ಧಿಯ ವಿಚಾರಗಳನ್ನೂ, ವಿಮರ್ಶಿಸಿ ಅಜಮಾಯಿಷಿ ಮಾಡಿರುವುದರಿಂದ ಈ ಎರಡು ವಿಷಯಗಳಲ್ಲಿಯೂ ಸರ್ಕಾರದ ಆಖೈರು ಹುಕುಂ ಸಾದರಾಗಿದೆ ಅಥವಾ ಆಗುವುದರಲ್ಲಿದೆ. ಮೈಸೂರು ಸರ್ಕಾರದವರು ಟಾಟಾ ಐರನ್ ಮತ್ತು ಸ್ಟೀಲ್ ಕಂಪೆನಿಯವರೊಡನೆ ಮಾಡಿಕೊಂಡಿದ್ದ ಏಜನ್ಸಿ ಒಪ್ಪಂದದ ಅವಧಿಯು ಉಭಯತ್ರರ ಸಮ್ಮತಿಯಿಂದ ಪ್ರಸಕ್ತವರ್ಷದಲ್ಲಿ ಮುಕ್ತಾಯವಾದುದರಿಂದ ಕಬ್ಬಿಣದ ಕಾರ್ಖಾನೆಯ ಕಾರ್ಯನಿರ್ವಾಹಕ ಬೋರ್ಡನ್ನು (ಬೋರ್ಡ್ ಆಫ್ ಮ್ಯಾನೇಜ್ಮೆಂಟ್) ಪುನರ್ವ್ಯವಸ್ಥೆಗೊಳಿಸಲಾಯಿತು. ಅಜಮಾಯಿಷಿಯ ಬಗ್ಗೆ ನಾವು ಮಾಡಿದ ಸಂಚಾರಗಳ ಕಾಲದಲ್ಲಿ ಡಿಸ್ಟ್ರಿಕ್ಟು ಆಡಳಿತದ ನ್ಯೂನಾತಿರಿಕ್ತಗಳು ನಮ್ಮ ಗಮನಕ್ಕೆ ಸ್ಪಷ್ಟವಾಗಿ ತರಲ್ಪಟ್ಟಿರುತ್ತವೆ ; ಆದುದರಿಂದ, ಸದರಿ ಆಡಳಿತವನ್ನು ಉತ್ತಮಸ್ಥಿತಿಗೆ ತರುವ ಉದ್ದೇಶದಿಂದ ಡಿಸ್ಟ್ರಿಕ್ಟುಗಳಲ್ಲಿನ ಕೆಲಸಗಳನ್ನು ಸೌಲಭ್ಯಗೊಳಿಸಿ, ಅವು ಕ್ರಮವಾಗಿ ನಡೆಯುತ್ತಿರುವ ವಿಚಾರದಲ್ಲಿ ತಕ್ಕ ಪರಿಶೋಧನೆಯು ನಡೆಯುವ ಬಗ್ಗೆ ವಿಚಾರಮಾಡಿ ತಪಶೀಲಾದ ಏರ್ಪಾಡನ್ನು ಕಲ್ಪಿಸಲಾಯಿತು. ದಿನಚರಿ ಕೆಲಸಗಳ ಹೊಸಕ್ರಮದ ಏರ್ಪಾಡಿನ ಮೇರೆಗೆ ಪ್ರಥಮತಃ ಒಂದು ಡಿಸ್ಟ್ರಿಕ್ಟಿನಲ್ಲಿ ಅಜಮಾಯಿಷಿ ಬಗ್ಗೆ ಕೆಲಸಗಳು ನಡೆಯತಕ್ಕದೆಂದು ಹುಕುಂ ಮಾಡಲಾಗಿದೆ. ಧ್ರುವಜಲದ ಸಹಾಯದಿಂದ ನೀರಾವರಿಯಾಗುವುದನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ, ಕಡಮೆಯಾಗಿ ಮಳೆಬೀಳುವ ಡಿಸ್ಟ್ರಿಕ್ಟುಗಳಲ್ಲಿ ವಿಶೇಷವಾಗಿ ಯಾತದ ಮತ್ತು ಕಪಿಲೆಯ ಬಾವಿಗಳನ್ನು ತೋಡುವ ಕೆಲಸದಲ್ಲಿ ರೈತರಿಗೆ ಸಹಾಯಮಾಡುವುದಕ್ಕಾಗಿ ತಕ್ಕ ಯಂತ್ರಸಾಧನಗಳೊಡನೆ ಸುರಂಗ ಹಾಕಿ ಬಾವಿಯನ್ನು ತೋಡುವ ಕೆಲಸದಲ್ಲಿ ನಿಪುಣರಾದವರನ್ನು ಕೆಲಸಕ್ಕೆ ನೇಮಿಸಲಾಗಿದೆ.

ಮಹಾಶಯರೇ, ಕಳೆದ ವರುಷದ ಆಡಳಿತದಲ್ಲಿನ ಕೆಲವು ಪ್ರಾಮುಖ್ಯಸಂಗತಿಗಳನ್ನು ಮೇಲೆ ಬಹಳ ಸಂಕ್ಷೇಪವಾಗಿ ಸೂಚಿಸಿದೆವು. ಕಳೆದ ವರುಷದಲ್ಲಿ ಬಹುಕಾಲದವರೆಗೆ ಎರಡು ಮೈದಾನ ಡಿಸ್ಟ್ರಿಕ್ಟುಗಳಲ್ಲಿಯೂ ಅನಾವೃಷ್ಟಿ ದೆಸೆಯಿಂದ ವಿಶೇಷವಾದ ಹಾವಳಿಯುಂಟಾಯಿತು ; ಅದರ ಜತೆಗೆ, ಈ ಸಂಸ್ಥಾನದಲ್ಲಿ ಎರಡನೆಯ ಆವರ್ತಿ ಕಳೆದ ಜುಲೈ ತಿಂಗಳಿನ ಆದಿಭಾಗದಲ್ಲಿ ಉಂಟಾದ ಅಭೂತಪೂರ್ವವಾದ ಭಾರಿಪ್ರವಾಹಗಳ ದೆಸೆಯಿಂದ ಅನಾಹುತವು ಬೇರೆ ಸಂಭವಿಸಿತು. ಅಂತು ಚಾಲ್ತಿಸಾಲಿನಲ್ಲಿ ಈಗಾಗಲೇ ಮೂರು ತಿಂಗಳುಗಳು ಕಳೆದುಹೋಗಿದ್ದರೂ ಈ ಕಷ್ಟನಷ್ಟಗಳಿಂದ ನಾವು ಇನ್ನೂ ಚೇತರಿಸಿಕೊಂಡೇ ಇಲ್ಲ. ಈ ವಿಪತ್ತಿನ ದೆಸೆಯಿಂದ ಕಷ್ಟಗಳನ್ನು ಅನುಭವಿಸುತ್ತಿರುವವರೆಲ್ಲರ ವಿಚಾರದಲ್ಲಿಯೂ ಸರ್ಕಾರದವರಿಗೆ ವಿಶೇಷವಾದ ಅನುತಾಪವುಂಟಾಗಿದೆಯೆಂದು ತಿಳಿಸಬಿಚ್ಛಿಸುತ್ತೇವೆ. ಕಷ್ಟಕ್ಕೆ ಗುರಿಯಾದವರಿಗೆ ಸಹಾಯಮಾಡುವ ವಿಷಯದಲ್ಲಿ ಸರ್ಕಾರದವರು ನಡೆಸಿದ ಏರ್ಪಾಡನ್ನು ಆಗಿಂದಾಗ್ಗೆ ಸಾದರ್ಮಾಡಲ್ಪಟ್ಟ ಸರ್ಕಾರಿ ಹುಕುಮುಗಳಲ್ಲಿಯೂ, ವರ್ತಮಾನಪತ್ರಿಕೆಗಳಿಗೆ ಕಳುಹಿಸಲ್ಪಟ್ಟ ಪ್ರಕಟನಪತ್ರಿಕೆಗಳಲ್ಲಿಯೂ ಈ ಕುರಿತು ಪ್ರಕಟಿಸಲಾಗಿದೆ. ಈ ಪ್ರವಾಹದಿಂದುಂಟಾದ ಕಷ್ಟಗಳ ನಿವಾರಣೆಗಾಗಿ ಒಂದು ಸಾರ್ವಜನಿಕ ಫಂಡನ್ನು ಏರ್ಪಡಿಸಿ ಸಂಸ್ಥಾನದ [illegible]

ತೋರ್ಪಡಿಸಿರುವುದು ಸಂತೋಷಪ್ರದವಾಗಿದೆ. ಕಷ್ಟಕ್ಕೊಳಗಾದ ಕೆಲವು ಪ್ರದೇಶಗಳಲ್ಲಿ ಗ್ರಾಮಗಳನ್ನೂ, ಟೌನುಗಳನ್ನೂ ಪೂರ್ವಸ್ಥಿತಿಗೆ ತರುವವಿಚಾರದಲ್ಲಿ ಬಾಯುವಾದ ಅಭಿವೃದ್ಧಿಕಾರ್ಯಗಳನ್ನು ನಡೆಸುವುದಕ್ಕಾಗಿ ಈ ಸಮಯವನ್ನು ಉಪಯೋಗಿಸಿಕೊಳ್ಳುತ್ತಲಿದೆ; ಮತ್ತು ಈ ವಿಷಯದಲ್ಲಿ ಈಗಿರುವುದಕ್ಕಿಂತಲೂ ಉತ್ತಮವಾದ ಸ್ಥಳಗಳಲ್ಲಿ ಜನಾರೋಗ್ಯಕ್ಕೂ ಮತ್ತು ಸ್ಥಳಾರೋಗ್ಯಕ್ಕೂ ಹೆಚ್ಚು ಅನುಕೂಲವಾದ ಸನ್ನಿವೇಶಗಳೊಡನೆ ಮನೆಗಳನ್ನು ಪುನಃ ಕಟ್ಟಿಸುವುದಕ್ಕಾಗಿ ಏರ್ಪಟ್ಟಿರುವ ಸರಿಯಾದ ಸಂಸ್ಥೆಗಳಿಗೆ ಸಾಕಾದಷ್ಟು ಸಹಾಯವನ್ನು ಮಾಡಲಾಗುವಂತೆ ಸರ್ಕಾರದವರು ತಕ್ಕ ಕ್ರಮಗಳನ್ನು ನಡೆಸುತ್ತಿದ್ದಾರೆ. ವರುಷದ ಆರಂಭದಲ್ಲಿ ಇಂಥಾ ಉತ್ಸಾಹ ಭಂಗವನ್ನುಂಟುಮಾಡುವ ವಿದ್ಯಮಾನಗಳು ಘಟಿಸಿದ್ದರೂ, ಮುಂಗಾರು ಮಳೆಗಳು ಒಟ್ಟಿನಲ್ಲಿ ಅನುಕೂಲವಾಗಿರುವುದು ಸ್ವಲ್ಪಮಟ್ಟಿಗೆ ಸಮಾಧಾನವನ್ನುಂಟುಮಾಡಿದೆ. ಈಗ ನಿರೀಕ್ಷಿಸಬಹುದಾಗಿರುವಂತೆ ಹಿಂಗಾರುಮಳೆಗಳೂ ಸರಿಯಾಗಿ ನಡೆಸಿ ಅನುಕೂಲವಾಗಿ ಪರಿಣಮಿಸಿದಲ್ಲಿ, ನಮ್ಮ ತಾತ್ಕಾಲಿಕ ಕಷ್ಟಗಳು ನಿವಾರಣೆಯಾಗಿ ವರ್ಷಾಂತ್ಯದಲ್ಲಿ ಜನರ ಸಾಂಪತ್ತಿಕಸ್ಥಿತಿಯೂ ಮತ್ತು ವ್ಯವಸಾಯ ಸನ್ನಿವೇಶಗಳೂ, ಪೂರ್ವಸ್ಥಿತಿಗೆ ಬರಬಹುದೆಂದು ನಾವು ಬರವಸೆ ಪಡಬಹುದಾಗಿದೆ.

ಸಾಮಾನ್ಯಾಡಳಿತ.

ಶ್ರೀಮನ್ಮಹಾರಾಜರವರ ಸಂಚಾರಗಳು.

ಶ್ರೀಮನ್ಮಹಾರಾಜರವರು 1923 ನೆಯ ಇಸ್ವಿಯ ಜುಲೈ ತಿಂಗಳಿನ ಪ್ರಾರಂಭದಲ್ಲಿ ಉತ್ತರ ಇಂಡಿಯಾ ದೇಶಕ್ಕೆ ಸಂಚಾರ ಹೊರಟು, ಸ್ವಲ್ಪ ಕಾಲದವರೆಗೆ ಕಾಶ್ಮೀರದೇಶದಲ್ಲಿದ್ದು 1923ನೆಯ ಇಸ್ವಿಯ ಸೆಪ್ಟಂಬರ್ 12ನೆಯ ತಾರೀಖಿನ ದಿನ ರಾಜಧಾನಿಗೆ ದಯಮಾಡಿಸಿದರು. 1923ನೆಯ ಇಸ್ವಿಯ ಡಿಸೆಂಬರ್ ತಿಂಗಳಲ್ಲಿ ಮಹಾಮಹಿಮರಾದ ವೈಸ್‌ರಾಯಿಯವರು ಈ ಸಂಸ್ಥಾನಕ್ಕೆ ದಯಮಾಡಿಸಿದ್ದ ಸಂದರ್ಭದಲ್ಲಿ, ಶ್ರೀಮನ್ಮಹಾರಾಜರವರು ಡಿಸೆಂಬರ್ ತಿಂಗಳಿನ ಮೊದಲನೆಯ ವಾರದಲ್ಲಿ ಐದುದಿನಗಳವರೆಗೆ ಕಾರಾಪುರದಲ್ಲಿ ಮೊಕ್ಕಾಂಮಾಡಿದರು; ಮತ್ತು 1923ನೆಯ ಇಸ್ವಿಯ ಡಿಸೆಂಬರ್ 31 ನೆಯ ತಾರೀಖಿನಿಂದ 1924ನೆಯ ಇಸ್ವಿಯ ಜನವರಿ 5 ನೆಯ ತಾರೀಖಿನವರೆಗೆ ಹಾಸನದ ಡಿಸ್ಟ್ರಿಕ್ಟಿನಲ್ಲಿ ಸಂಚಾರಮಾಡಿದರು.

ದಿವಾನರವರ ಸಂಚಾರಗಳು.

1923ನೆಯ ಇಸ್ವಿ ಜುಲೈ ತಿಂಗಳಿನ ಅಂತ್ಯಭಾಗದಲ್ಲಿ ನಾವು ಸಿಮ್ಲಾ ಪಟ್ಟಣಕ್ಕೆ ಹೋಗಿದ್ದೆವು. ಮೈಸೂರು ಸಂಸ್ಥಾನದ ಪೌಂಡ್, ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿನ ಶಿಲ್ಕು (ಸರ್‌ಪ್ಲಸ್) ಮೊಬಲಗು, ಸ್ಟರ್ಲಿಂಗ್ ಡಿಬೆಂಚರ್ ಸಾಲ, ಮತ್ತು ಸಂಸ್ಥಾನದ ಇತರ ಮುಖ್ಯವಾದ ವಿಷಯಗಳಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಆಗ ಇಂಡಿಯಾ ಸರ್ಕಾರದವರೊಡನೆ ಪತ್ರವ್ಯವಹಾರವು ನಡೆಯುತ್ತಿತ್ತು. ಸದರಿ ವಿಚಾರಗಳನ್ನು ಅವರೊಡನೆ ಚರ್ಚೆಮಾಡುವುದೇ ಆ ಪ್ರಯಾಣದ ಉದ್ದೇಶವಾಗಿದ್ದಿತು. ಆ ಕೆಲಸವನ್ನು ನೆರವೇರಿಸಿ ಸಿಮ್ಲಾ ಪಟ್ಟಣದಿಂದ ಅದರ ಮಾರನೇ ತಿಂಗಳಿನ ಎಂದರೆ ಆಗಸ್ಟ್ ತಿಂಗಳ ಆದಿಭಾಗದಲ್ಲಿ ಹಿಂದಿರುಗಿ ಬಂದೆವು. ಕಳೆದ ವರುಷದ ಸೆಪ್ಟಂಬರ್ ತಿಂಗಳಿನ ಪ್ರಾರಂಭದಲ್ಲಿ, ಅನಾವೃಷ್ಟಿಗೊಳಗಾದ ಕೋಲಾರ ಡಿಸ್ಟ್ರಿಕ್ಟಿನ ಕೆಲವು ಪ್ರಾಂತಗಳಲ್ಲಿ ಸಂಚಾರ ಮಾಡಿದೆವು ಮತ್ತು ಅದೇ ತಿಂಗಳಿನ ಅಖೈರಿನಲ್ಲಿ, ತುಮಕೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರ ಆಫೀಸನ್ನು ತನಿಖೆಮಾಡಿದೆವು. ಕಳೆದ ವರುಷದ ಅಕ್ಟೋಬರ್ ಮಾಹೆಯ ಪ್ರಾರಂಭದಲ್ಲಿ ಕರೀಕೆರೆಗೆ ಹೋಗಿದ್ದೆವು. ಅಲ್ಲಿ ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿನ ಸ್ಥಳೀಯ ಅಧಿಕಾರಿಗಳನ್ನೂ, ಖಾಸಗೀ ದೊಡ್ಡಮನುಷ್ಯರನ್ನೂ ಒಳಗೊಂಡ ಒಂದು ಸಮ್ಮೇಳನವನ್ನು ನಡೆಯಿಸಿ ಮಳೆಗಾಲದಲ್ಲಿ ಅತ್ಯಧಿಕವಾದ ಪ್ರವಾಹಗಳು ಬಂದುದರ ದೆಸೆಯಿಂದ ಪ್ರಜೆಗಳಿಗೆ ಬಾಧಿಸಿದ್ದ ಕಷ್ಟನಷ್ಟಗಳ ನಿವಾರಣೆಗೋಸ್ಕರ ಅವಲಂಬಿಸಬೇಕಾಗಿದ್ದ ಕ್ರಮಗಳನ್ನು ಪರ್ಯಾಲೋಚಿಸಿ ಏರ್ಪಡಿಸತಕ್ಕ ವಿಚಾರವನ್ನು ಚರ್ಚಿಸಿದೆವು. ಕೃಷ್ಣರಾಜಸಾಗರದ ವಿಚಾರದಲ್ಲಿ ಒಡಂಬಡಿಕೆಯ ಸಂಬಂಧದಲ್ಲಿ ಕಳೆದ ನವೆಂಬರ್ ಮಾಹೆಯಲ್ಲಿ ಮದರಾಸು ಪಟ್ಟಣಕ್ಕೂ ಹೋಗಿದ್ದೆವು. ಅನಾವೃಷ್ಟಿಗೆ ಗುರಿಯಾಗಿದ್ದ ಪ್ರಾಂತ್ಯಗಳನ್ನು ಅಜಮಾಯಿಷಿ ಮಾಡಿ ನೋಡಿಕೊಂಡು ಬರುವುದಕ್ಕಾಗಿ 1924ನೆಯ ಇಸ್ವಿ ಜನವರಿ ಮಾಹೆಯಲ್ಲಿ ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳ ಕೆಲವೆಡೆಗಳಲ್ಲಿ ಸಂಚಾರಮಾಡಿಕೊಂಡು ಬಂದೆವು. ಫೆಬ್ರವರಿ ಮಾಹೆಯಲ್ಲಿ ವೈಟ್‌ಫೀಲ್ಡ್ ಸ್ವಾಸ್ಥ್ಯವನ್ನು ನೋಡಿಕೊಂಡು ಬಂದೆವು. ಅದೇ ಮಾಹೆಯಲ್ಲಿ ಕೃಷ್ಣರಾಜಸಾಗರಕ್ಕೆ ಸಂಬಂಧಪಟ್ಟ ವಿವಾದದ ವಿಷಯದಲ್ಲಿ ಮೈಸೂರು ಸರ್ಕಾರದವರಿಗೂ, ಮದರಾಸು ಸರ್ಕಾರದವರಿಗೂ ಆದ ಒಪ್ಪಂದವನ್ನು ಪೂರೈಸುವುದಕ್ಕಾಗಿ ಪುನಃ ಮದರಾಸಿಗೆ ಹೋಗಿದ್ದೆವು.

ಪ್ರಜಾಪ್ರತಿನಿಧಿ ಸಭೆ.

ಪ್ರಸಕ್ತ ವರ್ಷದಲ್ಲಿ ಈ ಸಭೆಯ ಎರಡು ಅಧಿವೇಶನಗಳು, ಎಂದರೆ, ಹಿಂದಿನ ರಚನಾಕ್ರಮದ ಮೇರೆಗೆ ಅಕ್ಟೋಬರ್ ಮಾಹೆಯಲ್ಲಿ ಒಂದು ಅಧಿವೇಶನವೂ, ತಿದ್ದುಪಾಟಾದ ಹೊಸ ರಚನಾಕ್ರಮದ ಮೇರೆಗೆ ಕಳೆದ ಜೂನ್ ಮಾಹೆಯಲ್ಲಿ ಮತ್ತೊಂದು ಅಧಿವೇಶನವೂ ನಡೆದುವು. ಇವುಗಳ ಜತೆಗೆ ರಾಜಕೀಯ ಸುಧಾರಣೆಗಳ ಪ್ರಕಾರ ಪುನರ್ವ್ಯವಸ್ಥಿತವಾದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ, ಈ ಎರಡು ಸಂಸ್ಥೆಗಳೂ ಒಟ್ಟುಗೂಡಿದ ಒಂದು ಅಧಿವೇಶನವು ಮಾರ್ಚಿ ತಿಂಗಳಲ್ಲಿ ಜರುಗಿತು; ಶ್ರೀಮನ್ಮಹಾರಾಜರವರು ಅನುಗ್ರಹಮಾಡಿ ಅವುಗಳ ಸಮಾರಂಭೋತ್ಸವವನ್ನು ನೆರವೇರಿಸಿದರು.

ಅಕ್ಟೋಬರ್ ಮಾಹೆಯ ಅಧಿವೇಶನದಲ್ಲಿ 199 ವಿಷಯಗಳು ಚರ್ಚಿಸಲ್ಪಟ್ಟುವು; ಸಭೆಯು ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ ರಾಜಕೀಯ ಸುಧಾರಣೆಗಳ ವಿಚಾರಕ್ಕೆ ಸಂಬಂಧಪಟ್ಟ, ಶ್ರೀಮನ್ಮಹಾರಾಜರವರಿಂದ ಕರುಣಿಸಲ್ಪಟ್ಟ ರಾಜಶಾಸನ ಪತ್ರಿಕೆಯನ್ನು ಮಹಾಸ್ವಾಮಿಯವರ ಆಜ್ಞಾನುಸಾರವಾಗಿ ನಾವು ಸಭೆಯವರಿಗೆ ಕೃಪಡಿಸಿದೆವು.

ಪುನರ್ವ್ಯವಸ್ಥಿತವಾದ ಪ್ರಜಾಪ್ರತಿನಿಧಿ ಸಭೆಯ ಬಜೆಟ್ ಅಧಿವೇಶನವು 1924ನೆಯ ಜೂನ್ 9ನೆಯ ತಾರೀಖಿನ ದಿವಸ ಉಪಕ್ರಮವಾಗಿ 17ನೆಯ ತಾರೀಖಿನ ದಿವಸ ಪೂರೈಸಿತು. ಬಜೆಟ್ಟಿನ ಸಾಮಾನ್ಯ ತತ್ವಗಳ ವಿಷಯವಾಗಿ ಸಭೆಯಲ್ಲಿ ಎರಡು ದಿವಸಗಳಿಗಿಂತಲೂ ಹೆಚ್ಚು ಕಾಲ ಚರ್ಚೆಯು ನಡೆಯಿತು. ಚರ್ಚೆಯ ಕಾಲದಲ್ಲಿಯೂ, ಮತ್ತು ಸಭೆಯವರು ಮಾಡಿದ ನಿರ್ಣಯಗಳ ಮೂಲಕವೂ, ಅನೇಕ ಉಪಯುಕ್ತವಾದ ಸಲಹೆಗಳು ಸರ್ಕಾರದವರ ಅವಗಾಹನೆಗೆ ತರಲ್ಪಟ್ಟುವು. ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದ ಒಂಬತ್ತು ಮಸೂದೆಗಳ ವಿಷಯದಲ್ಲಿಯೂ ಸಹ ಸಭೆಯವರ ಅಭಿಪ್ರಾಯವನ್ನು ಅಪೇಕ್ಷಿಸಲಾಯಿತು. ಸದರಿ ಮಸೂದೆಗಳ ಸಾಮಾನ್ಯ ತತ್ವಗಳು ಯುಕ್ತವಾದುವುಗಳೆಂದು ಅವರು ಅನುಮೋದಿಸಿದರು. ಸಭೆಯ ಮೆಂಬರುಗಳು ಮುಖ್ಯಮುಖ್ಯವಾದ ಅನೇಕ ಅಂಶಗಳಲ್ಲಿ ಸರ್ಕಾರದವರನ್ನು ಪ್ರಶ್ನೆಮಾಡಿದರು; ಮತ್ತು ಪ್ರಜೆಗಳ ಹಿತಕ್ಕೆ ಸಾಧಕವಾದ ವಿಷಯಗಳಲ್ಲಿ ನಿರ್ಣಯಗಳನ್ನು ಸೂಚಿಸಲು ತಮಗೆ ಲಭಿಸಿದ ಅಧಿಕಾರವನ್ನು ಆ ಅಧಿವೇಶನದಲ್ಲಿ ಅವರು ಪ್ರಥಮತಃ ಚಲಾಯಿಸಿದರು. ಸಭೆಯ ಕಾರ್ಯಕ್ರಮದ ಪಟ್ಟಿಯ ಪ್ರಕಾರ 105 ವಿಷಯಗಳನ್ನು ಚರ್ಚಿಸಬೇಕಾಗಿದ್ದಿತು. ಆದರೆ, ಕಾಲವು ಸಾಲದೆಹೋದ ಪ್ರಯುಕ್ತ ಈ ಪೈಕಿ ಮುಖ್ಯವಾದ 50 ವಿಷಯಗಳು ಮಾತ್ರವೇ ಚರ್ಚಿಸಲ್ಪಟ್ಟುವು; ಉಳಿದುವುಗಳನ್ನು ಪರಿಶೀಲಿಸಿ ಯುಕ್ತವಾದ ನಡೆವಳಿಕೆಗಳನ್ನು ಕೈಗೊಳ್ಳಲಾಗುವುದೆಂದು ಸರ್ಕಾರದವರು ವಾಗ್ದಾನಮಾಡಿದರು.

ನ್ಯಾಯವಿಧಾಯಕ ಸಭೆ.

ಹೊಸ ನ್ಯಾಯವಿಧಾಯಕ ಸಭೆಯವರು ಕಳೆದ ಏಪ್ರಿಲ್ ಮಾಹೆಯ 4ನೆಯ ತಾರೀಖಿನ ದಿವಸ ಸಭೆಸೇರಿ ಮೈಸೂರು ಕೋರ್ಟು ಫೀ ರೆಗ್ಯುಲೇಷನನ್ನು ಖಾಯಂರೀತಿಯ ಕಾನೂನಾಗಿ ಅನುಮೋದಿಸಿದರು. ಬಜೆಟ್ಟನ್ನು ಚರ್ಚಿಸುವುದಕ್ಕೆ ಈ ಸಭೆಯು ಜೂನ್ ಮಾಹೆಯ 23ನೆಯ ತಾರೀಖಿನ ದಿವಸ ಮತ್ತೆ ಸಭೆ ಸೇರಿತು; 8 ದಿವಸಗಳ ಕಾಲ ಮೀಟಿಂಗುಗಳನ್ನು ನಡೆಯಿಸಲಾಯಿತು. ಬಜೆಟ್ಟಿನ ವಿಷಯವಾಗಿ "ವೋಟ್" ಎಂದರೆ ಸಮ್ಮತಿಯನ್ನು ಕೊಡಲು ಸಭಾಸದರಿಗೆ ಲಭಿಸಿದ್ದ ಅಧಿಕಾರವನ್ನು ಚಲಾಯಿಸಿದರು; ಸಂಸ್ಥಾನದಲ್ಲಿ ಆಡಳಿತದ ವೆಚ್ಚವನ್ನು ತಗ್ಗಿಸಬೇಕೆಂಬ ವಿಚಾರದಲ್ಲಿ 56 ನಿರ್ಣಯಗಳು ಚರ್ಚೆಗೆ ಬಂದುವು. ಅವುಗಳಲ್ಲಿ ಅನೇಕ ನಿರ್ಣಯಗಳನ್ನು ಅವು ಚರ್ಚೆಯಾದೊಡನೆಯೇ ಆಯಾಯ ನಿರ್ಣಯಸೂಚಕರು ವಾಪಸು ತೆಗೆದುಕೊಂಡರು. ಸಭೆಯವರು ಒಂಬತ್ತು ಮಸೂದಾ ಕಾನೂನುಗಳನ್ನು ಅಂಗೀಕರಿಸಿದರು. ಇವುಗಳಲ್ಲಿ ವರ್ತಮಾನ ಪತ್ರಿಕೆಗಳ ರೆಗ್ಯುಲೇಷನಿಗೆ ಸಂಬಂಧಪಟ್ಟ ಮಸೂದೆಯೇ ಪ್ರಾಮುಖ್ಯವಾದುದು.

ಸಂಪದಭಿವೃದ್ಧಿಯ ಬೋರ್ಡುಗಳು.

1923ನೆಯ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ಶ್ರೀಮನ್ಮಹಾರಾಜರವರು ಕೃಪಾಪೂರ್ವಕವಾಗಿ ದಯಪಾಲಿಸಿದ ರಾಜಕೀಯ ಸುಧಾರಣೆಗಳಿಗೆ ಅನುಸಾರವಾಗಿ ಸಂಪದಭಿವೃದ್ಧಿ ಕಾರ್ಯದ ಬೋರ್ಡುಗಳನ್ನು ಖಾಯಂ ಮಾಡಲಾಯಿತು; ಅವು ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕಸಭೆ ಇವುಗಳೊಂದಿಗೆ ಹೊಂದಿಕೊಂಡು ಕೆಲಸಮಾಡುತ್ತಾ ಬರುವಂತೆ ತಕ್ಕ ಏರ್ಪಾಡನ್ನು ಮಾಡಲಾಯಿತು. ಹೊಸ ಬೋರ್ಡುಗಳನ್ನು ಕಳೆದ ಮೇ ತಿಂಗಳಿನಲ್ಲಿ ರಚಿಸಲಾಯಿತು. ಯಾವಯಾವ ವಿಶೇಷೋದ್ದೇಶಗಳನ್ನು ಸಾಧಿಸಿ ಅಭಿವೃದ್ಧಿಗೊಳಿಸಬೇಕೆಂಬುದು ಈ ಬೋರ್ಡುಗಳವರ ದೃಷ್ಟಿಯಲ್ಲಿದೆಯೋ, ಆಯಾಯ ಉದ್ದೇಶಗಳಿಗೆ ಸಂಬಂಧಪಟ್ಟ ಸಂಗಡಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳೇ ಬಹುಮಟ್ಟಿಗೆ ಸಭಿಕರಾಗಿರುವುದೇ ಈ ಬೋರ್ಡುಗಳ ರಚನಾಕ್ರಮದ ಮುಖ್ಯಲಕ್ಷಣವಾಗಿರುತ್ತದೆ. ಎಲ್ಲಾ ಬೋರ್ಡುಗಳ ಸಭಿಕರೂ ಒಟ್ಟಿಗೆ ಸೇರಿದ್ದ ಒಂದು ಸಮಾರಂಭ ಸಭೆಯು 1924ನೆಯ ಇಸ್ವಿಯ ಜೂನ್ 18ಯ ತಾರೀಖಿನ ದಿವಸ ನಡೆಯಿತು. ಮುಂದೆ ಯಾವಯಾವ ಮಾರ್ಗಗಳಲ್ಲಿ ನಾವು ಕೆಲಸ ಮಾಡಬೇಕಾಗಿದೆಯೆಂಬುದನ್ನು ಕುರಿತು ನಾವು ಭಾಷಣಮಾಡಿದೆವು. ತಮ್ಮತಮ್ಮ ಕಾರ್ಯಕ್ರಮದ ಆರಂಭದ ಸಲಕರಣೆಗಳನ್ನು ಸಂಪೂರ್ಣವಾಗಿ ಒದಗಿಸಿಕೊಳ್ಳುವುದರಲ್ಲಿ ಸದರಿ ಬೋರ್ಡುಗಳ ಮೆಂಬರುಗಳು ಕೆಲಸಮಾಡುತ್ತಿರುವುದರಿಂದ ಚಾಲ್ತಿ ವರುಷದಲ್ಲಿಯೇ ಅವರು ತಮ್ಮ ಕರ್ತವ್ಯವನ್ನು ನೆರವೇರಿಸಿ ಸ್ಪಷ್ಟವಾದ ಫಲಿತಾಂಶಗಳನ್ನು ದೊರಕಿಸಿಕೊಡುವರೆಂದು ನಂಬಿದ್ದೇವೆ.

ಸ್ಥಳೀಯ ಪ್ರಜಾಧಿಕಾರ.

ಲೋಕಲ್‌ಬೋರ್ಡುಗಳು.

ಬೆಂಗಳೂರು, ಕೋಲಾರ ಮತ್ತು ಹಾಸನ ಈ ಮೂರು ಡಿಸ್ಟ್ರಿಕ್ಟು ಬೋರ್ಡುಗಳಲ್ಲಿ ಮಾತ್ರ ಖಾಸಗಿ ದೊಡ್ಡಮನುಷ್ಯರು ಪ್ರೆಸಿಡೆಂಟರಾಗಿಯೂ, ಮತ್ತು ಎಲ್ಲಾ ಡಿಸ್ಟ್ರಿಕ್ಟುಬೋರ್ಡುಗಳಲ್ಲಿಯೂ ಖಾಸಗೀ ದೊಡ್ಡಮನುಷ್ಯರೇ ವೈಸ್‌ಪ್ರೆಸಿಡೆಂಟರಾಗಿಯೂ ಇದ್ದರು. ಈ ವರುಷ ಕಡೂರು ಡಿಸ್ಟ್ರಿಕ್ಟು ಬೋರ್ಡನ್ನು ಪುನರ್ವ್ಯವಸ್ಥೆಗೊಳಿಸಲಾಯಿತು. ಡಿಸ್ಟ್ರಿಕ್ಟು ಬೋರ್ಡುಗಳ ವರಮಾನವು ಪ್ರಸಕ್ತವರ್ಷದಲ್ಲಿ 21,79,857 ರೂಪಾಯಿಗಳೂ, ಅದರ ಹಿಂದಿನ ಸಾಲಿನಲ್ಲಿ 22,81,436 ರೂಪಾಯಿಗಳೂ ಆಗಿದ್ದಿತು. ಸದರಿ ಬೋರ್ಡುಗಳ ವೆಚ್ಚವು ಪ್ರಸಕ್ತವರ್ಷದಲ್ಲಿ 21,91,831 ರೂಪಾಯಿಗಳೂ, ಅದರ ಹಿಂದಿನ ಸಾಲಿನಲ್ಲಿ 20,97,756 ರೂಪಾಯಿಗಳೂ ಆಗಿದ್ದಿತು.

ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಗಳಿಗಾಗಿ ಒಟ್ಟು 1,14,716 ರೂಪಾಯಿಗಳನ್ನು ವೆಚ್ಚಮಾಡಲಾಯಿತು.

ಮ್ಯುನಿಸಿಪಾಲಿಟಿಗಳು.

ರಚನಾಕ್ರಮ ಮುಂತಾದ ವಿಚಾರಗಳು.—ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿಗೆ ಪ್ರೆಸಿಡೆಂಟರನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಪುನಃ ಕೊಡಲಾಯಿತು; ಅಲ್ಲದೆ, ಅದಕ್ಕೆ ಒಬ್ಬ ಮ್ಯುನಿಸಿಪಲ್ ಕಮಿಷನರನ್ನೂ ಸಹ ನೇಮಕ ಮಾಡಲಾಯಿತು. ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿಗೆ ಒಬ್ಬ ಪ್ರೆಸಿಡೆಂಟರನ್ನು ಸರ್ಕಾರದವರೇ ನೇಮಕಮಾಡಿದ್ದರು. ಆ ಕೌನ್ಸಿಲಿಗೆ ವೈಸ್ ಪ್ರೆಸಿಡೆಂಟರವರನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಪುನಃ ಕೊಡಲಾಯಿತು.

ಮೈನರ್ ಮ್ಯುನಿಸಿಪಲ್ ಕೌನ್ಸಿಲುಗಳೊಳಗೆ, ಕುಣಿಗಲು ಮತ್ತು ಚಿಕ್ಕನಾಯಕನಹಳ್ಳಿ ಇವೆರಡು ಸ್ಥಳಗಳನ್ನು ಬಿಟ್ಟು, ಮಿಕ್ಕ ಎಲ್ಲಾ ಮ್ಯುನಿಸಿಪಲ್ ಕೌನ್ಸಿಲುಗಳಿಗೂ ಖಾಸಗಿ ದೊಡ್ಡಮನುಷ್ಯರೇ ವೈಸ್‌ಪ್ರೆಸಿಡೆಂಟರುಗಳಾಗಿದ್ದರು.

ಈ ಸಾಲಿನಲ್ಲಿ ಚಿತ್ರದುರ್ಗ, ತರೀಕೆರೆ ಮತ್ತು ನರಸಿಂಹರಾಜಪುರ, ಈ ಸ್ಥಳಗಳ ಮ್ಯುನಿಸಿಪಲ್ ಕೌನ್ಸಿಲುಗಳನ್ನು ಪುನರ್ವ್ಯವಸ್ಥೆಗೊಳಿಸಲಾಯಿತು. ಶಿವಮೊಗ್ಗ ಮ್ಯುನಿಸಿಪಲ್ ಕೌನ್ಸಿಲಿಗೆ ಒಬ್ಬ ಚೀಫ್‌ಆಫೀಸರವರನ್ನು ಮೊಕರರುಮಾಡಲಾಯಿತು. ಅಲ್ಲದೆ ತರೀಕೆರೆ ಮ್ಯುನಿಸಿಪಾಲಿಟಿಗೆ ಟವನ್ ಇಂಪ್ರೂವ್‌ಮೆಂಟ್ ಕಮಿಟಿಯೊಂದನ್ನು ಮಂಜೂರ್ಮಾಡಲಾಯಿತು.

ಮ್ಯುನಿಸಿಪಾಲಿಟಿಗಳ ಆಯವ್ಯಯಗಳ ವಿಚಾರ. — ಎಲ್ಲಾ ಮ್ಯುನಿಸಿಪಲ್ ಕೌನ್ಸಿಲುಗಳ ಒಟ್ಟು ಆದಾಯವು 20,47,460 ರೂಪಾಯಿಗಳಾಗಿಯೂ, ಒಟ್ಟು ವೆಚ್ಚವು 22,52,932 ರೂಪಾಯಿಗಳಾಗಿಯೂ ಇದ್ದುವು. ಕೆಲವು ಮ್ಯುನಿಸಿಪಾಲಿಟಿಗಳಲ್ಲಿ, ಜನಗಳಿಂದ ತೆಗೆದುಕೊಂಡಿರುವ ಸಾಲದ ಬಾಬುಗಳಿಗಾಗಿ ಹಣವನ್ನು ಜಮೆಕಟ್ಟಿದುದರಿಂದ ವೆಚ್ಚವು ಹೆಚ್ಚಾಗುವುದಕ್ಕೆ ಕಾರಣವಾಯಿತು.

ಮೈಸೂರು ಮತ್ತು ಬೆಂಗಳೂರು ನಗರಾಭಿವೃದ್ಧಿಯ ಕಾಮಗಾರಿಗಳು.—ಮೈಸೂರು "ಸಿಟಿ ಇಂಪ್ರೂವ್‌ಮೆಂಟ್" ಎಂದರೆ ನಗರಾಭಿವೃದ್ಧಿಯ ಕಾಮಗಾರಿಗಳಿಗಾಗಿ 2,27,988 ರೂಪಾಯಿಗಳನ್ನೂ, ಬೆಂಗಳೂರು ಸಿಟಿಗೆ ಅದೇ ವಿಚಾರಕ್ಕಾಗಿ 2,02,042 ರೂಪಾಯಿಗಳನ್ನೂ ವೆಚ್ಚಮಾಡಲಾಯಿತು, ಇದಕ್ಕಾಗಿ ಸರ್ಕಾರದವರು ಮೈಸೂರಿಗೆ 1,50,000 ರೂಪಾಯಿಗಳ ಗ್ರಾಂಟನ್ನೂ ಮತ್ತು ಬೆಂಗಳೂರಿಗೆ 50,000 ರೂಪಾಯಿಗಳ ಗ್ರಾಂಟನ್ನೂ ಕೊಟ್ಟರು.

ಆಯವ್ಯಯಗಳ ಸ್ಥಿತಿ.

1923-24 ನೆಯ ವರುಷದ ಆಯವ್ಯಯಗಳ ವಿಚಾರದಲ್ಲಿನ ಅಂದಾಜು ಲೆಕ್ಕಗಳು.—ನಾವು ಕಳೆದ ಜೂನ್ ತಿಂಗಳಿನಲ್ಲಿ ಈ ಸಭೆಯವರಿಗೆ ಒಪ್ಪಿಸಿದ 1923-24 ನೆಯ ವರುಷದ ತಿದ್ದುಪಾಟಾದ ಬಜೆಟ್ ಅಂದಾಜುಗಳಲ್ಲಿ, 324.02 ಲಕ್ಷ ರೂಪಾಯಿಗಳ ಒಟ್ಟು ಹುಟ್ಟುವಳಿಯು ಬರಬಹುದೆಂದೂ ಮತ್ತು ಎಲ್ಲಾ ಬಾಬುಗಳೂ ಸೇರಿ 329.12 ಲಕ್ಷ ರೂಪಾಯಿಗಳ ವೆಚ್ಚವು ತಗಲಬಹುದೆಂದೂ ಅಂದಾಜು ಮಾಡಲಾಗಿದ್ದಿತು; ಮತ್ತು ಸಾಮಾನ್ಯ ಹುಟ್ಟುವಳಿಯ ಲೆಕ್ಕದಲ್ಲಿ 5 ಲಕ್ಷ ರೂಪಾಯಿಗಳು ವೆಚ್ಚಕ್ಕೆ ಸಾಲದೆ ಹೋಗುವುದಾಗಿಯೂ, ಸಂಸ್ಥಾನಕ್ಕೆ ಪಾವತಿಯಾಗದೆ ನಿಂತುಹೋಗಿದ್ದ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿನ ಸರ್‌ಪ್ಲಸ್ ಹುಟ್ಟುವಳಿಯ ಪೈಕಿ, ಈ ಕ್ಲಿಷ್ಟವಾದ ವಿಷಯವು ವ್ಯವಸ್ಥೆಯಾದುದರ ಫಲಿತಾಂಶವಾಗಿ ಪಾವತಿಯಾದ 5 ಲಕ್ಷ ರೂಪಾಯಿಗಳ ಅಸಾಧಾರಣವಾದ ಹುಟ್ಟುವಳಿಯಿಂದ, ಖರ್ಚಿಗೆ ಸಾಲದೆ ಹೋಗುವ ಮೇಲ್ಕಂಡ 5 ಲಕ್ಷ ರೂಪಾಯಿಗಳಿಗೆ ಭರ್ತಿ ಹಾಕಬಹುದೆಂದೂ, ಸದರಿ ಅಂದಾಜುಗಳಲ್ಲಿ ತೋರಿಸಿದ್ದೆವು. 324.02 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬರಬಹುದೆಂದು ನಿರೀಕ್ಷಿಸಿದ್ದ ಸದರಿ ವರುಷದ ತಿದ್ದುಪಾಟಾದ ಅಂದಾಜುಗಳೊಡನೆ ಹೋಲಿಸಿ ನೋಡಲಾಗಿ, ಈಗ ಒದಗಿರುವ ಅಂದಾಜು ಲೆಕ್ಕಗಳ ಮೇರೆಗೆ ವಸ್ತುತಃ 332 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬಂದಿದೆ; ಎಂದರೆ, 8 ಲಕ್ಷ ರೂಪಾಯಿಗಳ ಹೆಚ್ಚು ಹುಟ್ಟುವಳಿಯು ಬಂದಿರುತ್ತದೆ.

ಜಮೀನುಕಂದಾಯ, ಫಾರೆಸ್ಟುಗಳು, ಎಕ್ಸೈಜು, ರೈಲ್ವೆ ಮತ್ತು ವಿದ್ಯುಚ್ಛಕ್ತಿಯ ಕಾಮಗಾರಿಗಳೇ ಮುಂತಾದ ಕೆಲವು ಹುಟ್ಟುವಳಿಯ ಬಾಬುಗಳಲ್ಲಿ ತಿದ್ದುಪಾಟಾದ ಅಂದಾಜಿನಲ್ಲಿ ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚು ಉತ್ಪತ್ತಿಯು ಬಂದಿರುವಂತೆಯೂ, ಮತ್ತು ಬಡ್ಡಿ, ಸಿವಿಲ್ ಕಾಮಗಾರಿಗಳು, ವಿದ್ಯಾಭ್ಯಾಸ ಮತ್ತು ಸೈನ್ಯದ ಬಾಬುಗಳಿಗಾಗಿ ಕೊಟ್ಟ ಗ್ರಾಂಟುಗಳಲ್ಲಿ ಮಿಗುತೆಯಾಗಿರುವಂತೆಯೂ, ಕಂಟ್ರೋಲರವರು ವರದಿಮಾಡಿರುವ ತಾತ್ಕಾಲಿಕವಾದ ಅಂದಾಜು ಲೆಕ್ಕಗಳಿಂದ ಕಂಡುಬರುತ್ತದೆ. ಪ್ರಸಕ್ತ ವರ್ಷದಲ್ಲಿ ಹುಟ್ಟುವಳಿಯು ಹೆಚ್ಚುವುದರ ಜತೆಗೆ ವೆಚ್ಚವೂ ಕಡಮೆಯಾದುದರಿಂದ ನಮ್ಮ ಆಯವ್ಯಯಗಳ ಸ್ಥಿತಿಯು, 13.65 ಲಕ್ಷ ರೂಪಾಯಿಗಳವರೆಗೂ ಉತ್ತಮಪಟ್ಟಿರುತ್ತದೆ; ಆದರೆ ಇದರಲ್ಲಿ ಮೇಲ್ಕಂಡ 5 ಲಕ್ಷ ರೂಪಾಯಿಗಳ ಅಸಾಧಾರಣ ಹುಟ್ಟುವಳಿಯನ್ನು ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ. ಇದನ್ನು ಮುಟ್ಟದೆಯೇ ಇಟ್ಟಿದ್ದು, ನಾವು ಮುಂದೆ ವಿವರಿಸುವ ರೀತಿಯಲ್ಲಿ ಅನಾವೃತ ವೆಚ್ಚದಬಗ್ಗೆ ಸ್ಪೆಷಲ್ ರಿಜರ್ವಿಗೆ ಜಮೆ ಕಟ್ಟಿಕೊಳ್ಳಲಾಗುವುದು. ಕೆಲವು ವೆಚ್ಚದ ಬಾಬುಗಳಲ್ಲಿ, ಅದರಲ್ಲೂ ಕಬ್ಬಿಣದ ಕಾರ್ಖಾನೆಯ ಸಂಬಂಧದಲ್ಲಿ ಉಂಟಾದ ನಷ್ಟ ಮತ್ತು ಕಳೆದವರುಷ ಪ್ರಾಪ್ತವಾದ ಕಷ್ಟನಿವಾರಣೆಯಬಗ್ಗೆ ಮಾಡಿರುವ ವೆಚ್ಚ, ಇವುಗಳಿಗೆ ಈ ಮೊಬಲಗಿನಿಂದ ಹಣವನ್ನೊದಗಿಸುವ ವಿಷಯವನ್ನು ಜಾಗರೂಕತೆಯಿಂದ ಪರಿಶೀಲಿಸಿ, ಅಂಥ ವೆಚ್ಚವನ್ನೆಲ್ಲಾ ಕೊಡಿದಮಟ್ಟಿಗೂ ನಮ್ಮ ಅಖೈರು ಲೆಕ್ಕಗಳ ಮೇರೆಗೆ ಪ್ರಸಕ್ತ ವರ್ಷದಲ್ಲಿ ವಾಸ್ತವವಾಗಿ ಮಿಗುತೆಯಾಗುವ ಮೊಬಲಗಿನಿಂದ ವಹಿಸತಕ್ಕದೆಂದು ನಿರ್ಧರಿಸಲಾಯಿತು. ಬೆಳೆಯಾಗದಿರುವದೆಸೆಯಿಂದ ಪ್ರಾಪ್ತವಾದ ಕಷ್ಟನಿವಾರಣೆಯ ಕಾರ್ಯಗಳನ್ನು ನಡೆಸುವುದಕ್ಕೆ ತಗಲುವ ಖರ್ಚನ್ನು ಕ್ಷಾಮನಿವಾರಣೆಗೆ ತೆಗೆದಿಟ್ಟಿರುವ ರಿಜರ್ವ್‌ಹಣದಿಂದ ಒದಗಿಸಬೇಕೆಂದು ಮೊದಲು ಉದ್ದೇಶಮಾಡಿಕೊಂಡಿದ್ದುದು ತಮ್ಮಗಳ ನೆನಪಿನಲ್ಲಿರಬಹುದು. ಆದರೆ ಈಗ ಪ್ರತ್ಯೇಕವಾದ ಹಣವಿರುವುದರಿಂದ ಈ ರಿಜರ್ವಿಗೆ ಖರ್ಚು ಹಾಕುವುದಿಲ್ಲ. ಕಬ್ಬಿಣದ ಕಾರ್ಖಾನೆಯ ದೆಸೆಯಿಂದ 1924 ನೆಯ ಸಾಲಿನ ಜೂನ್ ತಿಂಗಳಿನ ಅಖೈರಿನವರೆಗೆ ಎಂದರೆ 1923 ನೇ ಇಸವಿ ಜನವರಿ ತಿಂಗಳಿನಲ್ಲಿ ಕಾರ್ಯಾರಂಭ ಮಾಡಿದಮೇಲೆ ಇದುವರೆಗೆ ನಡೆಯುವ ಒಂದೂವರೆ ವರುಷಕ್ಕೆ ಒಟ್ಟು 7.66 ಲಕ್ಷ ರೂಪಾಯಿಗಳು ನಷ್ಟವಾಗಿದೆ. ಈ ವಿಶಿಷ್ಟ ಮೊಬಲಗನ್ನೂ 1923-24 ನೆಯ ಸಾಲಿನ ಹುಟ್ಟುವಳಿಯಿಂದ ಕಟ್ಟಿಕೊಡಬೇಕೆಂದು ಉದ್ದೇಶಿಸಿದೆ. ಬೆಳೆಯಿಲ್ಲದ ಪ್ರಯುಕ್ತ ಒದಗಿದ ಕಷ್ಟನಿವಾರಣೆ ಕೆಲಸಗಳು ಮತ್ತು ದನ ಕರುಗಳಿಗೆ ಮೇವನ್ನು ಒದಗಿಸುವ ಕೆಲಸಗಳು—ಇವುಗಳ ವೆಚ್ಚವು 1,35,000 ರೂಪಾಯಿಗಳಾಯಿತು. ಇದನ್ನೂ ಸಹ ಉಳಿತಾಯದ ಹಣದಿಂದ ಒದಗಿಸಲಾಗುತ್ತದೆ. ಮೇಲೆ ಹೇಳಿದುದರಜತೆಗೆ, ಅರಮನೆಯ ವೆಚ್ಚವು 3 ಲಕ್ಷ ರೂಪಾಯಿಗಳಷ್ಟು ಹೆಚ್ಚಿರುವುದರಿಂದ ಈ ಹೆಚ್ಚು ವೆಚ್ಚವನ್ನು ಕಳೆದ ವರುಷದ ಲೆಕ್ಕಗಳಲ್ಲಿ ಆಡಳಿತದ ಖರ್ಚಿನ ಬಾಬಿನಲ್ಲಿ ತೋರಿಸಿದೆ. ಬಜೆಟ್ಟಿನಲ್ಲಾಗಲೀ, ತಿದ್ದುಪಾಟಾದ ಅಂದಾಜಿನಲ್ಲಾಗಲೀ, ಒದಗಿಸದಿರುವ ಖರ್ಚುಗಳನ್ನು ಪ್ರಸಕ್ತ ವರ್ಷದ ಒಟ್ಟು ಹುಟ್ಟುವಳಿಯಿಂದ ಒದಗಿಸುವುದರಿಂದಲೂ, ಸಾಮಾನ್ಯ ಹುಟ್ಟುವಳಿಯಿಂದ $1\frac{1}{4}$ ಲಕ್ಷ ರೂಪಾಯಿಗಳನ್ನೂ, ವಿಶೇಷಬಾಬುಗಳ ಹುಟ್ಟುವಳಿಯಿಂದ 5 ಲಕ್ಷ ರೂಪಾಯಿಗಳನ್ನೂ ಚಾಲ್ತಿ ವರುಷದಲ್ಲಿ ಅನಾವೃತ ವೆಚ್ಚದ ಬಗ್ಗೆ ಮಾಡಿರುವ ಸ್ಪೆಷಲ್ ರಿಜರ್ವಿಗೆ ವರ್ಗಾಯಿಸುವುದರಿಂದಲೂ, 1923-24 ನೆಯ ಸಾಲಿನ ಒಟ್ಟು ಖರ್ಚು, ಬಜೆಟ್ ಅಂದಾಜಿನಲ್ಲಿ ನಮೂದಿಸಿದ್ದ 330.87 ಲಕ್ಷ ರೂಪಾಯಿಗಳಿಗೆ ಬದಲಾಗಿ 330.45 ಲಕ್ಷ ರೂಪಾಯಿಗಳಾಗುತ್ತದೆ. ಈ ಮೇಲೆ ಹೇಳಿದ ಸ್ಪೆಷಲ್ ರಿಜರ್ವಿನ ಹಣವು ಪ್ರವಾಹಗಳಿಂದ ಉಂಟಾದ ನಷ್ಟ, ರಸ್ತೆಗಳು, ಸೇತುವೆಗಳು, ಮತ್ತು ನೀರಾವರಿ ಕಾಮಗಾರಿಗಳು ಇವುಗಳ ದುರಸ್ತಿ, ಮತ್ತು ಬೆಳೆಯಿಲ್ಲದ ಪ್ರಯುಕ್ತ ಸಂಭವಿಸಿರುವ ಕಷ್ಟನಿವಾರಣೆ ಕೆಲಸಗಳು—ಈ ಬಾಬುಗಳಿಗೆ ಆಗತಕ್ಕ ಭಾರೀ ವೆಚ್ಚವನ್ನು ಒದಗಿಸುವುದಕ್ಕೆ ಬೇಕಾಗುತ್ತದೆ. ಈರೀತಿ ಪ್ರಸಕ್ತವರ್ಷದ ಲೆಕ್ಕಗಳ ಜಮಾ ಖರ್ಚಿನ ಕೊನೆಯಲ್ಲಿ ನಾಮಮಾತ್ರವಾಗಿ ಶಿಲ್ಕು ಉಳಿಯುತ್ತವೆ. ಸಾಲಗಳ ಬಗ್ಗೆ ಏರ್ಪಡಿಸಿರುವ ಸಿಂಕಿಂಗ್ ಫಂಡಿಗೂ ಪ್ರಸಕ್ತ ವರ್ಷದ ಹುಟ್ಟುವಳಿಯಿಂದ ಹಣವನ್ನು ಪೂರ್ತಿಯಾಗಿ ಒದಗಿಸಿದೆಯೆಂದು ನಾವು ಈ ಸಂದರ್ಭದಲ್ಲಿ ಹೇಳಬಹುದಾಗಿದೆ. ಅಲ್ಲದೆ, ಕಳೆದ ಮೂರು ವರುಷಗಳಿಂದಲೂ ವರ್ಷಂಪ್ರತಿಯಲ್ಲಿಯೂ ಕ್ರಮವಾಗಿ ಈರೀತಿಯಲ್ಲಿ ಫಂಡಿಗೆ ಹಣವನ್ನು ಸೇರಿಸುತ್ತಾ ಬಂದುದರಿಂದ ಸರ್ಕಾರಿ ಸಾಲವು 90 ಲಕ್ಷ ರೂಪಾಯಿಗಳವರೆಗೆ ಕಡಮೆಯಾಗುವಂತೆ ಮಾಡಲು ನಮಗೆ ಸಾಧ್ಯವಾಯಿತೆಂದೂ ಸಹ ತಿಳಿಸಬಹುದಾಗಿದೆ.

ಈಗ ದೊಡ್ಡ ದೊಡ್ಡ ಇಲಾಖೆಗಳ ಪೈಕಿ ಕೆಲವು ಇಲಾಖೆಗಳ ಆಡಳಿತವನ್ನು ಕುರಿತು ಪ್ರಸ್ತಾಪಿಸುತ್ತೇವೆ.

ರೆವಿನ್ಯೂ ಇಲಾಖೆ.

ಜಮೀನು ಕಂದಾಯ ಮತ್ತು ರೆವಿನ್ಯೂ ಮಿಸಲೇನಿಯಸ್, ಈ ಬಾಬುಗಳಲ್ಲಿ ಹಿಂದಿನ ಸಾಲುಗಳ ಬಾಕಿಗಳೂ ಸೇರಿ ಈ ಸಾಲಿಗೆ ವಸೂಲಾಗಬೇಕಾದ ಮೊಬಲಗು 1,30,74,430 ರೂಪಾಯಿಗಳಾಗಿದ್ದಿತು. ಅದರ ಹಿಂದಿನ ಸಾಲಿನಲ್ಲಿ ಈ ಮೊಬಲಗು 1,30,44,600 ರೂಯಿಗಳಾಗಿದ್ದಿತು. ಪ್ರಸಕ್ತವರ್ಷದಲ್ಲಿ ವಸೂಲಾದ ಮೊಬಲಗು, 1,16,05,100 ರೂಪಾಯಿಗಳಾಗಿದ್ದಿತು. ಹಿಂದಿನ ಸಾಲಿನಲ್ಲಿ 1,20,56,016 ರೂಪಾಯಿಗಳು ವಸೂಲಾಗಿದ್ದುವು ಅಂತು, ಸಾಲಾಖೈರಿನಲ್ಲಿ 14,69,330 ರೂಪಾಯಿಗಳು ಬಾಕಿಯಾಗಿ ಉಳಿದಿದ್ದುವು. ಮಳೆಬೆಳೆಗಳಿಲ್ಲದೆ ಕಾಲಸ್ಥಿತಿಯು ಕಷ್ಟತರವಾಗಿದ್ದುದರಿಂದ ವಸೂಲಾತಿಯು ಕಡಮೆಯಾಗಲು ಕಾರಣವಾಯಿತು. ವಸೂಲಾಗಬೇಕಾಗಿದ್ದ ಮೊಬಲಗಿನಲ್ಲಿ ವಸೂಲಾದ ಮೊಬಲಗಿನ ಶೇಕಡಾವಾರು ಪ್ರಸಕ್ತವರ್ಷದಲ್ಲಿ 88.7 ಆಗಿದ್ದಿತು. ಅದರ ಹಿಂದಿನ ವರುಷ ಈ ಶೇಕಡಾವಾರು 93.79 ಆಗಿದ್ದಿತು.

ಮೇಲಿನ ದರ್ಜೆಯ ನೌಕರರ ಮತ್ತು ಜವಾನರ ಶಿಬ್ಬಂದಿಯನ್ನು ಕಡಮೆ ಮಾಡುವುದರ ಮೂಲಕವೂ, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಎಕ್ಸೈಜು ಬಾಬಿಗೆ ಸಂಬಂಧಪಟ್ಟ ಕೆಲಸಗಳನ್ನು ಹೊಸರೀತಿಯಲ್ಲಿ ವ್ಯವಸ್ಥೆಮಾಡುವುದರ ಮೂಲಕವೂ, ರೆವಿನ್ಯೂ ಇಲಾಖೆಯಲ್ಲಿ ವೆಚ್ಚವನ್ನು ತಗ್ಗಿಸಿದುದರ ಫಲಿತಾಂಶವಾಗಿ ಸಾಲೀಯಾನ 47,052 ರೂಪಾಯಿಗಳು ಮಿಗುವುದಕ್ಕೆ ಅವಕಾಶವಾಯಿತು.

ರೆವಿನ್ಯೂ ಇಲಾಖೆಗೆ ಬಿಟ್ಟುಕೊಡಲ್ಪಟ್ಟ ಒಟ್ಟು 71,504 ಎಕರೆಗಳಷ್ಟು ವಿಸ್ತೀರ್ಣವುಳ್ಳ ಅಮೃತಮಹಲ್ ಕಾವಲು ಜಮೀನುಗಳು 1923ನೆ ಇಸ್ವಿ ಜುಲೈ 1 ನೇ ತಾರೀಖಿನಲ್ಲಿ ವಿಲೇವಾರಿಮಾಡತಕ್ಕ ಬಗ್ಗೆ ಸಿದ್ಧವಾಗಿದ್ದುವು. ಈ ಸಾಲಿನಲ್ಲಿ ಮತ್ತೆ ಹೊಸದಾಗಿ 6,296 ಎಕರೆಗಳು ಬಿಟ್ಟುಕೊಡಲ್ಪಟ್ಟುವು. ಇವುಗಳ ಪೈಕಿ 5,167 ಎಕರೆಗಳನ್ನು ಸಾಗುವಳಿ ಬಗ್ಗೆ ಬಿಕರಿ ಮಾಡಲಾಯಿತು. ಮತ್ತು 282 ಎಕರೆಗಳನ್ನು ಜಮೀನುಗಳಿಲ್ಲದ ಪಂಗಡದವರಿಗೆ ಕೊಡತಕ್ಕ ಬಗ್ಗೆ ಪ್ರತ್ಯೇಕಿಸಿಡಲಾಯಿತು. ಮೇಲ್ಕಂಡ ಜಮೀನಿನ ಮಾರಾಟದಿಂದ ಒಟ್ಟು 82,144 ರೂಪಾಯಿಗಳು ಬಂದುವು.

ಸಾಮಾನ್ಯವಾದ ದರಖಾಸ್ತುಗಳ ಫೈಸಲಾತಿಯೂ ಸಹ ವಿಶೇಷ ಉತ್ತಮ ಸ್ಥಿತಿಗೆ ಬಂದಿರುತ್ತದೆ. ಹೇಗೆಂದರೆ, 19,942 ದರಖಾಸ್ತುಗಳ ಪೈಕಿ ಈ ಸಾಲಿನಲ್ಲಿ 14,348 ದರಖಾಸ್ತುಗಳು ಫೈಸಲ್ಮಾಡಲ್ಪಟ್ಟು ಸಾಲಾಖೈರಿನಲ್ಲಿ 5,594 ದರಖಾಸ್ತುಗಳು ಮಾತ್ರ ಬಾಕಿಯಲ್ಲಿ ನಿಂತಿದ್ದುವು. ಅದರ ಹಿಂದಿನ ಸಾಲಿನಲ್ಲಿ 7,940 ದರಖಾಸ್ತುಗಳು ಬಾಕಿಯಲ್ಲಿ ನಿಂತುಹೋಗಿದ್ದುವು.

ಮುಖ್ಯವಾದ ಎರಡು ಆಹಾರ ಧಾನ್ಯಗಳಾದ ರಾಗಿ ಮತ್ತು ಬತ್ತ, ಇವುಗಳೆರಡನ್ನೂ ಬೆಳೆದ ಜಮೀನಿನ ಒಟ್ಟು ವಿಸ್ತೀರ್ಣವು ಎಲ್ಲಾ ಡಿಸ್ಟ್ರಿಕ್ಟುಗಳೂ ಸೇರಿ ಪ್ರಸಕ್ತ ವರ್ಷದಲ್ಲಿ 28 ಲಕ್ಷ ಎಕರೆಗಳೂ, ಅದರ ಹಿಂದಿನ ಸಾಲಿನಲ್ಲಿ 29.35 ಲಕ್ಷ ಎಕರೆಗಳೂ ಆಗಿದ್ದಿತು. ಸದರಿ ವಿಸ್ತೀರ್ಣವು ಪ್ರಸಕ್ತ ವರ್ಷದಲ್ಲಿ ಕಡಿಮೆಯಾದುದಕ್ಕೆ ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಸಾಕಾದಷ್ಟು ಮಟ್ಟಿಗೆ ಮಳೆಯಾಗದೆ ಇದ್ದುದೇ ಕಾರಣ.

ಅಮಲ್ದಾರರುಗಳಿಗೂ ಮತ್ತು ಡೆಪ್ಯುಟಿ ಅಮಲ್ದಾರರುಗಳಿಗೂ ಕಾಲಕ್ರಮವಾಗಿ ತಲಬಿನಲ್ಲಿ ಬಡತಿಯು ದೊರೆಯತಕ್ಕ ಸ್ಕೇಲನ್ನು ವಿಧಾಯಕಮಾಡಿ ಅವರ ದರ್ಜೆಯಲ್ಲಿ ಪರಿಷ್ಕೃತವಾದ ಏರ್ಪಾಡನ್ನು ಮಂಜೂರ್ಮಾಡಿದುದಲ್ಲದೆ ಅವರಿಗೆ ಕ್ಲುಪ್ತವಾದ ಪ್ರಯಾಣದ ಭತ್ಯವು ಸಲ್ಲತಕ್ಕದೆಂದು ಹುಕುಂ ಮಾಡಲಾಯಿತು.

ರೆವಿನ್ಯೂ ಸರ್ವೆ.

ಈ ಸಾಲಿನಲ್ಲಿ ಹುಣಸೂರು, ಮೈಸೂರು, ನಾಗಮಂಗಲ, ಮಂಜರಾಬಾದು, ಚನ್ನರಾಯಪಟ್ಟಣ ಮತ್ತು ಹೊಸಕೋಟೆ ಈ ತಾಲ್ಲೂಕುಗಳಲ್ಲಿ ರೀ ಸರ್ವೆಯ ಏರ್ಪಾಡನ್ನು ಜಾರಿಯಲ್ಲಿ ತರಲಾಯಿತು. ಇದರಿಂದ 1,60,446 ರೂಪಾಯಿಗಳ ಹೆಚ್ಚಿನ ಹುಟ್ಟುವಳಿಯು ಬರುವಂತೆ ಅಂದಾಜುಮಾಡಲಾಗಿದೆ. ಸಾಲಿನ ಆದಿಭಾಗದಲ್ಲಿ ಅರೆವಾಸಿಯಾಗಿ ನಡೆದಿದ್ದ ಜಮೀನುಗಳನ್ನು ವಿಂಗಡಿಸತಕ್ಕ ಕೆಲಸವನ್ನು ಐದು ತಾಲ್ಲೂಕುಗಳಲ್ಲಿ ಪೂರ್ತಿಗೊಳಿಸಲಾಯಿತು. ಮತ್ತು ಪ್ರಸಕ್ತ ವರ್ಷ ಇನ್ನೂ ಮೂರು ತಾಲ್ಲೂಕುಗಳಲ್ಲಿ ಇದೇ ಕೆಲಸವನ್ನು ಕೈಗೊಳ್ಳಲಾಯಿತು. ಇನ್ನೂ 16 ತಾಲ್ಲೂಕುಗಳಲ್ಲಿ ರಿವಿಜನ್ ಸೆಟಲ್‌ಮೆಂಟು ಆಗತಕ್ಕದು ಬಾಕಿಯಲ್ಲಿ ನಿಂತುಹೋಗಿರುತ್ತದೆ.

ಎಕ್ಸೈಜು ಇಲಾಖೆ.

ಎಕ್ಸೈಜು ಇಲಾಖೆಯ ಒಟ್ಟು ಆದಾಯವು ಹಿಂದಿನ ಸಾಲಿನಲ್ಲಿ 77·73 ಲಕ್ಷ ರೂಪಾಯಿಗಳಾಗಿದ್ದುದಕ್ಕೆ ಬದಲಾಗಿ, ಈ ಸಾಲಿನಲ್ಲಿ 72·96 ಲಕ್ಷ ರೂಪಾಯಿಗಳಾಗಿರುತ್ತದೆ. ದುಕಾನುಗಳ ಹರಾಜು ಕಾಲದಲ್ಲಿ ಕಮ್ಮಿ ಸವಾಲುಗಳಾದುದರಿಂದಲೂ ಮತ್ತು ಸಾರಾಯಿ, ಶೇಂದಿ ಮತ್ತು ಗಾಂಜ, ಇವುಗಳನ್ನು ಉಪಯೋಗಿಸುವುದು ಕಡಮೆಯಾಗಿಹೋಗಿರುವುದರಿಂದಲೂ ಈ ರೀತಿ ಆದಾಯವು ತಗ್ಗುವುದಕ್ಕೆ ಕಾರಣವಾಗಿರುತ್ತದೆ.

ಫಾರೆಸ್ಟ್ ಇಲಾಖೆ.

ಒಟ್ಟು ಜಂಗಲಿ ಹುಟ್ಟುವಳಿಯು ಹಿಂದಣ ವರುಷ 26·52 ಲಕ್ಷ ರೂಪಾಯಿಗಳಾಗಿದ್ದುದು ಪ್ರಸಕ್ತ ವರ್ಷದಲ್ಲಿ 25·81 ಲಕ್ಷ ರೂಪಾಯಿಗಳಿಗೆ ತಗ್ಗಿಹೋಯಿತು. ಒಟ್ಟು ವೆಚ್ಚವು ಸುಮಾರು 7·37 ಲಕ್ಷ ರೂಪಾಯಿಗಳವರೆಗೆ ಆಯಿತು.

ಗಂಧದೆಣ್ಣೆಯ ಮಾರಾಟದಿಂದ 13,24,238 ರೂಪಾಯಿಗಳ ನಿವ್ವಳ ಹುಟ್ಟುವಳಿಯೂ, ಗಂಧದಮರದ ಚಿಲ್ಲರೆ ಮಾರಾಟದಿಂದ 8,273 ರೂಪಾಯಿಗಳೂ ಉತ್ಪತ್ತಿಯಾದುವು. ಪ್ರಸಕ್ತವರ್ಷದಲ್ಲಿ ಸುಮಾರು 1,500 ಟನ್ನುಗಳಷ್ಟು ಗಂಧದಮರವನ್ನು ಗಂಧದೆಣ್ಣೆಯ ಕಾರ್ಖಾನೆಗಳಿಗೆ ಒದಗಿಸಲಾಯಿತು.

ಮಹಾಮಹಿಮರಾದ ವೈಸರಾಯಿಯವರು ದಯಮಾಡಿಸಿದ್ದ ಕಾಲದಲ್ಲಿ ಕಾಕನಕೋಟೆ ಜಂಗಲುಗಳಲ್ಲಿ ಖೆಡ್ಡಾ ಕಾರ್ಯಗಳನ್ನು ನಡೆಸಲಾಯಿತು. ಮರಿಗಳೂ ಸೇರಿ ಒಟ್ಟು 58 ಆನೆಗಳನ್ನು ಹಿಡಿದು, ಅವುಗಳ ಪೈಕಿ 46 ಆನೆಗಳನ್ನು 64,850 ರೂಪಾಯಿಗಳಿಗೆ ವಿಕ್ರಯಿಸಲಾಯಿತು.

ಹುಲ್ಲುಗಾವಲುಗಳಲ್ಲಿ ದನಗಳನ್ನು ಮೇಯಿಸುವುದಕ್ಕಾಗಿ ಹೆಚ್ಚು ಸೌಕರ್ಯಗಳನ್ನು ಕಲ್ಪಿಸಿಕೊಡಲಾಯಿತು. ಡಿಸ್ಟ್ರಿಕ್ಟು ಜಂಗಲಿಗಳ ಆಡಳಿತಕ್ಕೆ ಸಂಬಂಧಪಟ್ಟ ನಿಬಂಧನೆಗಳ ಕಾಠಿಣ್ಯವನ್ನು ಕಡಮೆ ಮಾಡುವುದರ ಮೂಲಕ ಮಲೆನಾಡಿನಲ್ಲಿರುವ ರೈತರಿಗೆ ಇದ್ದ ಕೊರತೆಗಳನ್ನು ಪರಿಹರಿಸಿ ಸಹಾಯ ಮಾಡಲಾಯಿತು. "ವಿಲೇಜ್ ಫಾರೆಸ್ಟ್ ಸ್ಕೀಮ್" ಎಂದರೆ ಗ್ರಾಮಜಂಗಲಿ ಏರ್ಪಾಡನ್ನು ಮತ್ತಷ್ಟು ಅಭಿವೃದ್ಧಿಗೆ ತರಲಾಯಿತು.

ವರಮಾನದ ತೆರಿಗೆಯ ಇಲಾಖೆ.

ವರಮಾನದ ತೆರಿಗೆಯ ಹೊಸ ರೆಗ್ಯುಲೇಷನು 1923ನೆಯ ಇಸವಿ ಜುಲೈ 1ನೆಯ ತಾರೀಖಿನ ಲಾಗಾಯಿತು ಆಚರಣೆಗೆ ಬಂದಿತು. ವರಮಾನದ ತೆರಿಗೆಯಿಂದ ಒಟ್ಟು 12.24 ಲಕ್ಷ ರೂಪಾಯಿಗಳು ವಸೂಲಾದುವು. ಮತ್ತು "ಸೂಪರ್‌ಟ್ಯಾಕ್ಸ್" ಎಂಬ ಹೆಚ್ಚಿಗೆ ತೆರಿಗೆಯಿಂದ 5.47 ಲಕ್ಷ ರೂಪಾಯಿಗಳು ವಸೂಲಾದುವು. ವರುಷದ ಅಖೈರಿನಲ್ಲಿ ವಸೂಲಾಗಬೇಕಾಗಿದ್ದ ಬಾಕಿಯು 5.56 ಲಕ್ಷ ರೂಪಾಯಿಗಳು ಆಗಿದ್ದಿತು. ವರಮಾನದ ತೆರಿಗೆಯ ಆಡಳಿತದಲ್ಲಿ ಇರತಕ್ಕ ಕೆಲವು ನ್ಯೂನಾತಿರಿಕ್ತಗಳನ್ನು ಕುರಿತು, ಕೂಲಂಕಷವಾದ ಪರಿಶೋಧನೆಯನ್ನು ನಡೆಸುವಂತೆ ಸರ್ಕಾರದವರು ವರಮಾನದ ತೆರಿಗೆಯ ಕಮಿಷನರವರನ್ನು ಕೇಳಿದರು. ಇದರ ಫಲಿತಾಂಶವಾಗಿ, ವರಮಾನದ ತೆರಿಗೆಗೆ ಸಂಬಂಧಪಟ್ಟ ಅರ್ಜಿಗಳನ್ನೂ, ಅಪೀಲುಗಳನ್ನೂ ಹಿಡಿದು ವಿಚಾರಣೆಮಾಡಿ ವ್ಯವಸ್ಥೆಪಡಿಸುವ ವಿಚಾರವಾಗಿಯೂ ಲೆಕ್ಕಗಳ ತನಿಖೆಯ ವಿಚಾರವಾಗಿಯೂ ಯುಕ್ತವಾದ ಅನುಜ್ಞೆಗಳನ್ನುಕೊಟ್ಟು ಹುಕುಂ ಸಾದರ್ಮಾಡಲಾಯಿತು.

ಕೋರ್ಟುಗಳು.

ಕೋರ್ಟುಗಳ ಬಾಬಿನಲ್ಲಿ ಪ್ರಸಕ್ತವರ್ಷದಲ್ಲಿ 10.6 ಲಕ್ಷ ರೂಪಾಯಿಗಳು ವೆಚ್ಚವಾದುವು. ಅದರ ಹಿಂದಣವರುಷ ಇದೇ ಬಾಬಿನಲ್ಲಿ 10.43 ಲಕ್ಷ ರೂಪಾಯಿಗಳು ವೆಚ್ಚವಾಗಿದ್ದುವು. ಜೂರೀಪದ್ಧತಿಯನ್ನು ಎಂದರೆ ಪಂಚಾಯಿತರನ್ನಿಟ್ಟುಕೊಂಡು ವಿಚಾರಣೆಮಾಡುವ ಪದ್ಧತಿಯನ್ನು ಕೋಲಾರ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಜಾರಿಗೆ ತರಬೇಕೆಂಬ ಅಂಶವು ಪರ್ಯಾಲೋಚನೆಯಲ್ಲಿದೆ. ಜುಡಿಷಿಯಲ್ ಮತ್ತು ಎಗ್ಜಿಕ್ಯುಟಿವ್ ಅಧಿಕಾರಗಳನ್ನು ಪ್ರತ್ಯೇಕಿಸುವ ಏರ್ಪಾಡನ್ನು ಪ್ರಸಕ್ತವರ್ಷದಲ್ಲಿ ಕೋಲಾರ ಡಿಸ್ಟ್ರಿಕ್ಟಿನಲ್ಲಿಯೂ ಆಚರಣೆಗೆ ತರಲಾಯಿತು; ಅಲ್ಲದೆ ಚಾಲ್ತಿಸಾಲಿನಲ್ಲಿ ಸದರಿ ಏರ್ಪಾಡನ್ನು ಹಾಸನ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಜಾರಿಗೆ ತರತಕ್ಕದೆಂದು ಹುಕುಂ ಮಾಡಲಾಯಿತು.

ಸಿವಿಲ್ ಕೋರ್ಟುಗಳಲ್ಲಿ ದೊಡ್ಡ ದಾವೆಗಳು ಫೈಸಲಾಗದೆ ವಿಶೇಷವಾಗಿ ಬಾಕಿಯಲ್ಲಿ ನಿಂತುಹೋಗುವುದನ್ನು ತಪ್ಪಿಸುವುದಕ್ಕಾಗಿ ಹಂಗಾಮಿಯಾಗಿ ಎರಡು ಅಡಿಷನಲ್ ಮುನಸೀಫ್ ಕೋರ್ಟುಗಳನ್ನು ಮೈಸೂರು ಮತ್ತು ಬೆಂಗಳೂರು ಸಿಟಿಗಳಲ್ಲಿಯೂ, ಒಂದು ಅಡಿಷನಲ್ ಸಬಾರ್ಡಿನೇಟ್ ಜಡ್ಜಿಗಳ ಕೋರ್ಟನ್ನು ಮೈಸೂರು ಸಿಟಿಯಲ್ಲಿಯೂ ಸ್ಥಾಪಿಸುವುದನ್ನು ಪ್ರಸಕ್ತವರ್ಷದಲ್ಲಿ ಮಂಜೂರ್ಮಾಡಲಾಯಿತು.

ಮೆಡಿಕಲ್ ಇಲಾಖೆ.

ಪ್ರಸಕ್ತವರ್ಷದಲ್ಲಿ ಮೂರು ಹೊಸ ಡಿಸ್ಪೆನ್ಸರಿಗಳು ಸ್ಥಾಪಿಸಲ್ಪಟ್ಟುವು; ಸರ್ಕಾರಿ ವರುಷದ ಅಖೈರಿನಲ್ಲಿ ಸಂಸ್ಥಾನದಲ್ಲಿ ಕೆಲಸ ನಡೆಸುತ್ತಿದ್ದ ಮೆಡಿಕಲ್ ಸಂಸ್ಥೆಗಳ ಒಟ್ಟು ಸಂಖ್ಯೆಯು 200ಕ್ಕೆ ಏರಿತು.

ನಾನಾ ಮೆಡಿಕಲ್ ಸಂಸ್ಥೆಗಳ ಆವಶ್ಯಕತೆಗಳಿಗೆ ತಕ್ಕಂತೆ ಆಯಾಯ ದರ್ಜೆಗಳ ಲೇಡಿ ಮೆಡಿಕಲ್ ಆಫೀಸರುಗಳ ಸಂಖ್ಯೆಯನ್ನೂ, ಅವರ ತಲಬಿನ ಪ್ರಮಾಣವನ್ನೂ, ಹೆಚ್ಚಿಸಿ ಸರಿಯಾದ ಅರ್ಹತೆಯಿರುವ ಲೇಡಿಡಾಕ್ಟರುಗಳು ಉತ್ಸಾಹದಿಂದ ನೌಕರಿಗೆ ಬಂದು ಸೇರುವುದಕ್ಕೆ ಏರ್ಪಾಡುಗಳನ್ನು ಮಾಡುವ ಅಂಶವು ಪರ್ಯಾಲೋಚನೆಯಲ್ಲಿರುವುದು.

ಜನಾರೋಗ್ಯ ಮತ್ತು ಸ್ಥಳಾರೋಗ್ಯ.

ಪ್ರಸಕ್ತವರ್ಷದಲ್ಲಿ 1,22,105 ಜನನಗಳೂ 1,15,563 ಮರಣಗಳೂ ರಿಜಿಸ್ಟರಿಗೆ ದಾಖಲ್ಮಾಡಲ್ಪಟ್ಟುವು. ಅದರ ಹಿಂದಿನವರುಷದಲ್ಲಿ 1,04,222 ಜನನಗಳೂ, 90,368 ಮರಣಗಳೂ ದಾಖಲಾಗಿದ್ದುವು. ಪ್ರಸಕ್ತವರ್ಷದ ಮರಣಸಂಖ್ಯೆಯು, ತಕ್ರಾಸಿ ವಾಂತಿಭೇದಿ ಮತ್ತು ಜ್ವರಗಳ ದೆಸೆಯಿಂದ ಹಿಂದಿನ ವರುಷದ ಮರಣಸಂಖ್ಯೆಗಿಂತಲೂ ಅತ್ಯಧಿಕವಾಗಿದ್ದಿತು. ಆಹಾರಪದಾರ್ಥಗಳಿಗೆ ಬೆರಕೆ ಮಾಡುವುದನ್ನು ಅಡ್ಡಿಪಡಿಸತಕ್ಕ ರೆಗ್ಯುಲೇಷನ್ನಿನ ನಿಯಮಗಳನ್ನು ಪ್ರಸಕ್ತವರ್ಷದಲ್ಲಿ ಕೋಲಾರದ ಚಿನ್ನದಗಣಿಗಳ ಸ್ಯಾನಿಟರಿ ಬೋರ್ಡಿನ ಪ್ರದೇಶದಲ್ಲಿ ಜಾರಿಗೆ ತರಲಾಯಿತು. ಸಿಡುಬು ಹಾಕಿಸುವ ರೆಗ್ಯುಲೇಷನ್ನಿನ ಮತ್ತು ಜನನ ಮರಣಗಳನ್ನು ರಿಜಿಸ್ಟರ್ಮಾಡಿಸುವ ರೆಗ್ಯುಲೇಷನ್ನಿನ ನಿಯಮಗಳು ಗ್ರಾಮಾಂತರ ಪ್ರದೇಶಗಳಿಗೂ ಅನ್ವಯಿಸುವಂತೆ ಮಾಡಬೇಕೆಂಬ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಮೈಸೂರು ಸಿಡುಬುಹಾಕಿಸುವ ರೆಗ್ಯುಲೇಷನ್ನನ್ನು ಹೊಸದಾಗಿ ಮೂರು ಟವನುಗಳಲ್ಲಿ ಜಾರಿಗೆ ತಂದು, 30 ಮ್ಯುನಿಸಿಪಾಲಿಟಿಗಳಲ್ಲಿ ಅದನ್ನು ನಿರ್ಬಂಧದಿಂದ ಜಾರಿಯಲ್ಲಿ ತರುವ ಅವಧಿಯನ್ನು ಹೆಚ್ಚಿಸಲಾಯಿತು. ಪ್ರಸಕ್ತವರ್ಷದ ಅಂತ್ಯದಲ್ಲಿ ಒಟ್ಟು 91 ಮ್ಯುನಿಸಿಪಾಲಿಟಿಗಳಲ್ಲಿ ಈ ರೆಗ್ಯುಲೇಷನು ಜಾರಿಯಲ್ಲಿದ್ದಿತು. ಸಿಡುಬು ಹಾಕುವುದು ಸಂಸ್ಥಾನದಲ್ಲೆಲ್ಲಾ ನಿರ್ಬಂಧಕವಾಗಿರತಕ್ಕದೆಂದು ವಿಧಿಸುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಗ್ರಾಮಾರೋಗ್ಯದ ರೆಗ್ಯುಲೇಷನಿನ ನಿಯಮಗಳು ಪ್ರಸಕ್ತವರ್ಷದ ಅಖೈರಿನಲ್ಲಿ ಸುಮಾರು 13,230 ಗ್ರಾಮಗಳಲ್ಲಿ ಜಾರಿಯಲ್ಲಿದ್ದುವು. ಸ್ಥಳಾರೋಗ್ಯದ ರೆಗ್ಯುಲೇಷನಿನ ಮತ್ತು ಅದರ ನಿಬಂಧನೆಗಳ ನಿಯಮಗಳನ್ನು ಜಾರಿಗೆತರುವ ಅಧಿಕಾರವನ್ನು ಗ್ರಾಮಪಂಚಾಯಿತಿಗಳಿಗೆ ವಹಿಸಿ ಅದಕ್ಕೆ ತಕ್ಕಂತೆ ಲೋಕಲ್ ಬೋರ್ಡುಗಳ ಮತ್ತು ಗ್ರಾಮ ಪಂಚಾಯಿತಿಗಳ ರೆಗ್ಯುಲೇಷನಿನಲ್ಲಿ ತಿದ್ದುಪಾಟನ್ನು ಮಾಡುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಮಿಲಿಟರಿ.

ಸೈನ್ಯದ ಬಾಬಿನಲ್ಲಿ ವೆಚ್ಚವು ಪ್ರಸಕ್ತವರ್ಷದಲ್ಲಿ 16,17,533 ರೂಪಾಯಿಗಳಾಗಿದ್ದಿತು; ಅದರ ಹಿಂದಣ ವರ್ಷ ಈ ಬಾಬಿಗಾಗಿ 16.09 ಲಕ್ಷ ರೂಪಾಯಿಗಳು ವೆಚ್ಚವಾದುವು. ಬ್ರಿಟಿಷ್ ಇಂಡಿಯಾ ಸೈನ್ಯದ ಮಾದರಿಯನ್ನು ಅನುಸರಿಸಿ ಸಿಲೇದಾರಿ—ಕ್ಯಾವಲ್ರಿ ಯೂನಿಟ್ಟುಗಳನ್ನು ನಾನ್-ಸಿಲೇದಾರಿ ಯೂನಿಟ್ಟುಗಳನ್ನಾಗಿ ಪುನಃ ಏರ್ಪಡಿಸಲಾಗುವಂತೆಯೂ, ಇನ್‌ಫೆಂಟ್ರಿ (ಕಾಲ್ಬಲದ) ರಿಜಿಮೆಂಟು ಹೆಚ್ಚು ಸಮರ್ಪಕವಾದುದಾಗಿ, ಯುದ್ಧಕಾಲದಲ್ಲಿ ಹೆಚ್ಚು ಪ್ರಯೋಜನಕರವಾಗುವಂತೆ ಮಾಡುವುದಕ್ಕೂ ಸಂಸ್ಥಾನದ ಸೈನ್ಯವನ್ನು ಪರಿಷ್ಕರಣಗೊಳಿಸುವ ವಿಷಯವನ್ನು ಪ್ರಸಕ್ತವರ್ಷದಲ್ಲಿ ಸರ್ಕಾರದವರು ಪರ್ಯಾಲೋಚಿಸಿರುತ್ತಾರೆ. ಟ್ರಾನ್ಸ್‌ಪೋರ್ಟ್ ಕೋರನ್ನು 7 ದಳಗಳಿಂದ 3 ದಳಗಳಿಗೆ ತಗ್ಗಿಸಲಾಯಿತು.

ಮೈಸೂರು ಯೂನಿವರ್ಸಿಟಿ.

ಯೂನಿವರ್ಸಿಟಿಯ ಎಲ್ಲಾ ಕಾಲೇಜುಗಳಲ್ಲಿಯೂ ಪ್ರಸಕ್ತವರ್ಷದಲ್ಲಿ 1,161 ಮಂದಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದರು; ಅದರ ಹಿಂದಣ ವರ್ಷ 1088 ಮಂದಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದರು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಿರುವುದರಿಂದ ಹೆಚ್ಚು ಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಏರ್ಪಾಡುಗಳನ್ನು ಮಾಡಲಾಯಿತು; ಮತ್ತು ಹೊಸ ಡಿಸ್ಟ್ರಿಕ್ಟು ಆಫೀಸಿನ ಕಟ್ಟಡವನ್ನು ಯೂನಿವರ್ಸಿಟಿಯವರಿಗೆ ವಹಿಸಿ, ಅದಕ್ಕೆ ಬದಲಾಗಿ ಯೂನಿವರ್ಸಿಟಿಯ ಯೂನಿಯನ್ ಕಟ್ಟಡವನ್ನು ಸರ್ಕಾರಕ್ಕೆ ತೆಗೆದುಕೊಂಡಿದೆ. ಅನೇಕ ಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲನುಕೂಲಿಸುವಂತೆ ಬಿ.ಎ. ಡಿಗ್ರಿ ಪರೀಕ್ಷೆಯ ವ್ಯಾಸಂಗದ ವಿಷಯಗಳನ್ನು ಪುನಃ ವಿಂಗಡಿಸಿದೆ; ಮತ್ತು ಈ ಹೊಸ ಗ್ರೂಪುಗಳಲ್ಲಿ (ವಿಂಗಡಿಸಲ್ಪಟ್ಟ ವ್ಯಾಸಂಗ ವಿಷಯಗಳಲ್ಲಿ) ಗಣಿತಶಾಸ್ತ್ರವನ್ನು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗಮಾಡತಕ್ಕ ಒಂದು ವಿಷಯವನ್ನಾಗಿ ಸೇರಿಸಿದೆ. ಯೂನಿವರ್ಸಿಟಿಗೆ "ಮೆಡಿಕಲ್ ಫ್ಯಾಕಲ್ಟಿ" ಎಂದರೆ ವೈದ್ಯವಿದ್ಯಾಶಾಖೆಯನ್ನು ಸೇರಿಸಿ ಬೆಂಗಳೂರಿನಲ್ಲಿ ಈ ವರುಷದಿಂದ ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪಿಸಲಾಗಿದೆ. ಪ್ರಸಕ್ತವರ್ಷದಲ್ಲಿ ಯೂನಿವರ್ಸಿಟಿಯಲ್ಲಿ ಒಟ್ಟು ಇನ್ನೂರನಲವತ್ತೆಂಟು ಮಂದಿ ಗ್ರ್ಯಾಜುಯೇಟುಗಳಾದರು; ಹೀಗೆ ತೇರ್ಗಡೆಹೊಂದಿದವರ ಶೇಕಡಾವಾರು 50.3 ಆಗಿದ್ದಿತು. ಎಂ.ಎ. ಡಿಗ್ರಿ ಪರೀಕ್ಷೆಗೆಹೋಗಿದ್ದ 14 ಜನರ ಪೈಕಿ ಒಂಬತ್ತುಮಂದಿ ತೇರ್ಗಡೆಯಾಗಿರುತ್ತಾರೆ, ಇವರ ಪೈಕಿ ಇಬ್ಬರು ಸ್ತ್ರೀಯರು; ಕಳೆದವರ್ಷ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರ ಪೈಕಿ, ಐದು ಜನ ವಿದ್ಯಾರ್ಥಿನಿಯರಿದ್ದರು; ಇವರ ಪೈಕಿ ಇಬ್ಬರು ಹಿಂದುಳಿದ ಪಂಗಡಗಳಿಗೆ ಸೇರಿದವರು. ಪ್ರಸಕ್ತವರ್ಷದಲ್ಲಿ ಒಂಬತ್ತು ಯೂನಿವರ್ಸಿಟಿ ಎಕ್ಸ್‌ಟೆನ್ಷನ್ ಲೆಕ್ಚರು (ಉಪನ್ಯಾಸ) ಗಳು ಕೊಡಲ್ಪಟ್ಟುವು; ಇವುಗಳ ಪೈಕಿ ಮೂರು ಕನ್ನಡಭಾಷೆಯಲ್ಲಿ ಕೊಡಲ್ಪಟ್ಟುವು. ಸದರಿ ವರುಷದಲ್ಲಿ 15,200 ರೂಪಾಯಿಗಳ ಬೆಲೆ ಬಾಳತಕ್ಕ ಆರು ಹೊಸ ಎಂಡೋಮೆಂಟು (ಧರ್ಮಾರ್ಥದಫಂಡು) ಗಳು ಅಂಗೀಕರಿಸಲ್ಪಟ್ಟುವು. ತಹಲ್‌ವರೆಗೆ ಯೂನಿವರ್ಸಿಟಿಯಲ್ಲಿರುವ ಎಂಡೋಮೆಂಟುಗಳ ಒಟ್ಟು ಸಂಖ್ಯೆಯು 45; ಅವುಗಳ ಮೊಬಲಗು 1,94,034 ರೂಪಾಯಿಗಳಾಗುತ್ತದೆ. ಯೂನಿವರ್ಸಿಟಿಯಲ್ಲಿ ಹಿಂದುಳಿದ ಪಂಗಡಗಳಿಗೆ ಕೊಡುತ್ತಿದ್ದ ವಿದ್ಯಾರ್ಥಿವೇತನಗಳ ಸಂಖ್ಯೆಯನ್ನು 60 ರಿಂದ 72ಕ್ಕೆ ಹೆಚ್ಚಿಸಲಾಯಿತು. ಜನಾಂಗಗಳ ನಾಗರಿಕತೆ ಮತ್ತು ಮೇಧಾಶಕ್ತಿಯ ವಿಷಯಕವಾದ ಚರಿತ್ರೆ (ಕಲ್ಚರಲ್ ಹಿಸ್ಟರಿ) ಯಲ್ಲೂ, ಮತ್ತು ಪ್ರಾಚೀನವಸ್ತುಶಾಸ್ತ್ರದಲ್ಲೂ, ವಿದೇಶಗಳಲ್ಲಿ ತರಬೇತನ್ನು ಪಡೆಯುವುದಕ್ಕಾಗಿ ಮಹಾರಾಜರವರ ಕೊಲಿಜಿಯೇಟ್ ಹೈಸ್ಕೂಲಿನಿಂದ ಒಬ್ಬ ಲೆಕ್ಚರರನ್ನು ಚುನಾಯಿಸಿದೆ.

ವಿದ್ಯಾಭ್ಯಾಸ.

ಕಳೆದ ಕೆಲವು ವರ್ಷಗಳಿಂದಲೂ ಹಣಕಾಸಿಗೆ ಮುಗ್ಗಟ್ಟಾಗಿರುವುದರ ದೆಸೆಯಿಂದ, ವಿದ್ಯಾಭ್ಯಾಸದ ಮೆಮೋರ್ಯಾಂಡಂ ಮೇಲಣ ಹುಕುಮಿನಲ್ಲಿ ಮಂಜೂರ್ಮಾಡಿದ್ದ ಏರ್ಪಾಡುಗಳನ್ನೆಲ್ಲಾ ಸರ್ಕಾರದವರು ಜಾರಿಗೆ ತರುವುದಕ್ಕಾಗಲಿಲ್ಲವೆಂಬ ಅಂಶವು ಈ ಸಭೆಯವರಿಗೆ ತಿಳಿದೇ ಇದೆ. ಹಣವು ದೊರೆತಹಾಗೆಲ್ಲಾ ಅವುಗಳನ್ನು ಆಚರಣೆಗೆ ತರಲು ಕ್ರಮವನ್ನು ಜರುಗಿಸುತ್ತಲಿದೆ. ಮೊದಲಿದ್ದಂತೆ ಇನ್‌ಸ್ಪೆಕ್ಟರುಗಳ ಅಧಿಕಾರವ್ಯಾಪ್ತಿಗೊಳಪಟ್ಟ ಪ್ರದೇಶಗಳನ್ನು ವಿಂಗಡಿಸಿ ನೇಮಕಮಾಡಿ ಕೊಡುತ್ತಿದ್ದ ಪದ್ಧತಿಯನ್ನು ತಪ್ಪಿಸಿ, ವಿದ್ಯಾಭ್ಯಾಸದ ಗ್ರೇಡುಗಳನ್ನು ವಿಂಗಡಿಸಿ ಅವುಗಳಿಗನುಸಾರವಾಗಿ ಅವರ ಅಧಿಕಾರವನ್ನು ನಿರ್ಣಯಮಾಡಿ ಇನ್‌ಸ್ಪೆಕ್ಟರುಗಳಿಗೆ ಸ್ಕೂಲುಗಳ ಮೇಲ್ವಿಚಾರಣೆಯ ಕೆಲಸವನ್ನು ಕೊಟ್ಟು ಇಬ್ಬರು ಇನ್‌ಸ್ಪೆಕ್ಟರ್ ಹುದ್ದೆಯ ಸುಪೀರಿಯರ್ ಶಿಬ್ಬಂದಿಯ ಕೆಲಸವನ್ನು ಈಚೆಗೆ ಪುನಃ ಕ್ರಮಪಡಿಸಿದೆ. ಸೈನ್ಸ್ ವಿದ್ಯಾಭ್ಯಾಸದ ಮೇಲ್ವಿಚಾರಣೆಗಾಗಿ ಪ್ರತ್ಯೇಕವಾಗಿ ಒಬ್ಬ ಅಫೀಸರನ್ನು ನೇಮಕಮಾಡಿದೆ. ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸಕ್ರಮವನ್ನು ತಿದ್ದುಪಾಟುಮಾಡಿದೆ. ಮಹಮ್ಮದೀಯರ ವಿದ್ಯಾಭ್ಯಾಸದ ಸಮ್ಮೇಳನದ (ಕಾನ್‌ಫರೆನ್ಸಿನ), ನಿರ್ಣಯಗಳಿಗನುಸಾರವಾಗಿ, ಮಹಮ್ಮದೀಯ ಪಂಗಡದವರ ವಿದ್ಯಾಭ್ಯಾಸದ ವಿಷಯದಲ್ಲಿ ಇಲಾಖೆಯವರಿಗೆ ಸಲಹೆಗಳನ್ನು ಕೊಡುವುದಕ್ಕಾಗಿ ಒಂದು ಅಡ್ವೈಜರಿ ಕಮಿಟಿಯನ್ನು (ಎಂದರೆ, ಸಲಹೆಗಳನ್ನು ಕೊಡತಕ್ಕ) ಕಮಿಟಿಯನ್ನು ಏರ್ಪಡಿಸಲಾಗಿದೆ; ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳಿಗಾಗಿ ಕೊಟ್ಟಿರುವ ಹಣದ ಸ್ವಲ್ಪ ಭಾಗವನ್ನೂ ಮತ್ತು ಅಲಿಘರಿನ ವಿದ್ಯಾರ್ಥಿವೇತನಗಳ ಮೊಬಲಗನ್ನೂ ಸೇರಿಸಿ ಮಹಮ್ಮದೀಯ ವಿದ್ಯಾರ್ಥಿವೇತನಗಳ ಫಂಡನ್ನು ಏರ್ಪಡಿಸಿದೆ. ಮೈಸೂರಿನಲ್ಲಿರುವ ಜನಾನಾ ನಾರ್ಮಲ್ ಸ್ಕೂಲನ್ನು ಮಹಮ್ಮದೀಯ ಸ್ತ್ರೀಯರ ಬೋರ್ಡಿಂಗ್ ಸ್ಕೂಲನ್ನಾಗಿ ಮಾರ್ಪಡಿಸಲಾಯಿತು. ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳಿಗಾಗಿ ಒದಗಿಸಲ್ಪಟ್ಟಿದ್ದ ದ್ರವ್ಯವು ಒಂದು ಲಕ್ಷಕ್ಕೆ ಹೆಚ್ಚಿಸಲ್ಪಟ್ಟಿತು. ವಿದ್ಯಾರ್ಥಿ ವೇತನಗಳ ಸಂಖ್ಯೆಯೂ ಸಹ ಹೆಚ್ಚಿಸಲ್ಪಟ್ಟಿದೆ. ಬೆಂಗಳೂರಿನಲ್ಲಿರುವ ಪಂಚಮರ ವಿದ್ಯಾರ್ಥಿಗಳ ಬೋರ್ಡಿಂಗ್ ಹೋಮಿನಲ್ಲಿ ವಾಸಿಸುವ ವಿದ್ಯಾರ್ಥಿಗಳ ಸಂಖ್ಯೆಯನ್ನು 12ರಿಂದ 38ಕ್ಕೆ ಹೆಚ್ಚಿಸಲಾಯಿತು; ಮತ್ತು ಈ ವರ್ಗದ ವಿದ್ಯಾರ್ಥಿಗಳು ಅಡ್ಮಿಷನ್ ಫೀಜನ್ನೂ, ಕ್ಲಾಸ್ ಫೀಜನ್ನೂ, ಪರೀಕ್ಷೆಯ ಫೀಜನ್ನೂ ಕೊಡಬೇಕಾದುದಿಲ್ಲವೆಂಬ ವಿನಾಯಿತಿಯು ಇನ್ನೂ ಮೂರು ವರುಷಗಳ ಕಾಲ ಜಾರಿಯಲ್ಲಿರತಕ್ಕದೆಂದೂ ಹುಕುಂ ಮಾಡಲಾಯಿತು. ಪ್ರೈಮರಿ ಸ್ಕೂಲುಗಳ ಕಟ್ಟಡಗಳ ಕೆಲವು ಮಾದರಿಗಳನ್ನು ಸರ್ಕಾರದವರು ಈಚೆಗೆ ಮಂಜೂರುಮಾಡಿರುತ್ತಾರೆ. ಅಲ್ಲದೆ, 1917ನೆಯ ಇಸವಿಯಲ್ಲಿ ಡಿಸ್ಟ್ರಿಕ್ಟು ಬೋರ್ಡುಗಳಿಗೆ ವರ್ಗಾಯಿಸಲ್ಪಟ್ಟ ಲೋಕಲ್ ಫಂಡಿನ ಸಾಮಾನ್ಯ ಬಾಬಿನ ಮೊಬಲಗಿನ ಪೈಕಿ ಬಹು ಭಾಗವನ್ನೂ, ಸ್ಟೇಟ್‌ಫಂಡಿನಿಂದ ಮಂಜೂರ್ಮಾಡಲ್ಪಟ್ಟಿರುವ 53,500 ರೂಪಾಯಿಗಳನ್ನೂ, ಸೆಸ್ ವರಮಾನದಿಂದ ಕೊಟ್ಟಿರುವ 9,800 ರೂಪಾಯಿಗಳನ್ನೂ, ಈ ಕಟ್ಟಡಗಳಿಗಾಗಿ ವಿನಿಯೋಗಿಸತಕ್ಕದೆಂದು ಸಹಾ ಹುಕುಂ ಮಾಡಲಾಗಿದೆ. ಅನೇಕ ಸ್ಕೂಲು ಕಟ್ಟಡಗಳನ್ನು ಕಟ್ಟಿಸಬೇಕಾಗಿರುವುದರಿಂದ ಈ ಹೆಚ್ಚಿನ ಕೆಲಸವನ್ನು ನಿರ್ವಹಿಸತಕ್ಕ ಬಗ್ಗೆ ವಿದ್ಯಾಭ್ಯಾಸದ ಇಲಾಖೆಯಲ್ಲಿನ ಇಂಜನಿಯರಿಂಗ್ ಶಿಬ್ಬಂದಿಯನ್ನು ಹೆಚ್ಚಿಸಲಾಯಿತು. ಬೆಂಗಳೂರಿನಲ್ಲಿರುವ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿಗೆ ಎಲ್ಲಾ ಪಂಗಡಗಳ ವಿದ್ಯಾರ್ಥಿಗಳು ಸೇರಲು ಅವಕಾಶವನ್ನು ಕೊಡತಕ್ಕ ಬಗ್ಗೆ ಹುಕುಂ ಸಾದರ್ಮಾಡಲಾಯಿತು. ಬೆಂಗಳೂರು ಸಂಸ್ಕೃತ ಕಾಲೇಜಿನ ಮೇಲ್ತನಿಖೆಯ ಕೆಲಸವನ್ನು ಮುಜರಾಯಿ ಇಲಾಖೆಯಿಂದ ವಿದ್ಯಾಭ್ಯಾಸದ ಇಲಾಖೆಗೆ ವರ್ಗಾಯಿಸಿದೆ. ಈ ಕಾಲೇಜಿನಲ್ಲಿ ವ್ಯಾಸಂಗದ ಕ್ರಮವನ್ನು ತಿದ್ದುಪಾಟುಮಾಡತಕ್ಕ ಬಗ್ಗೆ ಒಂದು ಕಮಿಟಿಯನ್ನು ಏರ್ಪಡಿಸಲಾಗಿದೆ. ಪ್ರಸಕ್ತವರ್ಷದ ಅಖೈರಿನಲ್ಲಿ 8,894 ವಿದ್ಯಾಸಂಸ್ಥೆಗಳಿದ್ದುವು; ಎಂದರೆ ವರ್ಷದ ಪ್ರಾರಂಭದಲ್ಲಿದ್ದುದಕ್ಕಿಂತ 100 ಸಂಸ್ಥೆಗಳು ಹೆಚ್ಚಾದುವು; ಎಜುಕೇಷನ್ ಸೆಸ್ಸೆಂಬ ವಿದ್ಯಾಭ್ಯಾಸದ ತೆರಿಗೆಯನ್ನು ವಸೂಲುಮಾಡಿ ಹೊಸ ಪಾಠಶಾಲೆಗಳನ್ನು ಸ್ಥಾಪಿಸಿದುದರಿಂದಲೂ ಎ.ವಿ. ಸ್ಕೂಲುಗಳನ್ನು ಮಿಡ್ಲ್ ಸ್ಕೂಲುಗಳನ್ನಾಗಿಯೂ ಪ್ರೈಮರಿ ಸ್ಕೂಲುಗಳನ್ನಾಗಿಯೂ ಪ್ರತ್ಯೇಕಿಸಿದುದರಿಂದಲೂ ಪಾಠಶಾಲೆಗಳ ಸಂಖ್ಯೆಯು ಈ ರೀತಿ ಹೆಚ್ಚುವುದಕ್ಕೆ ಅವಕಾಶವಾಯಿತು. ಏಡೆಡ್ ಸ್ಕೂಲುಗಳಿಗೆ ಒಂದೊಂದಕ್ಕೆ 2 ರೂಪಾಯಿಗಳ ಮೇರೆಗೆ ಗ್ರಾಂಟನ್ನು ಹೆಚ್ಚುಮಾಡಲಾಯಿತು. ಪಾಠಶಾಲೆಗಳಲ್ಲೆಲ್ಲಾ ಪ್ರಸಕ್ತವರ್ಷದ ಅಂತ್ಯದಲ್ಲಿ ಒಟ್ಟು 3,01,286 ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದರು. ಅದರ ಹಿಂದಿನವರುಷದ ಅಖೈರಿನಲ್ಲಿ ಒಟ್ಟು 2,87,794 ಮಂದಿಗಳು ವ್ಯಾಸಂಗಮಾಡುತ್ತಿದ್ದರು. ಹೈಸ್ಕೂಲ್ ಮತ್ತು ಯೂನಿವರ್ಸಿಟಿ ಎಂಟ್ರೆನ್ಸ್ ತರಗತಿಗಳಲ್ಲಿ 700 ಮಂದಿ ವಿದ್ಯಾರ್ಥಿಗಳು ಹೆಚ್ಚಿದುದರಿಂದ ಏಳು ಹೈಸ್ಕೂಲುಗಳಲ್ಲಿ ಹೆಚ್ಚು ಸೆಕ್ಷನ್‌ಗಳನ್ನು ಏರ್ಪಡಿಸಬೇಕಾಯಿತು. ಮಲ್ಲೇಶ್ವರದಲ್ಲಿ ಒಂದು ಹೊಸ ಹೈಸ್ಕೂಲನ್ನೂ ಸಹ ಸ್ಥಾಪಿಸಲಾಯಿತು.

ವ್ಯವಸಾಯದ ಇಲಾಖೆ.

ಕಾಲಸ್ಥಿತಿಗಳು ಪ್ರತಿಕೂಲವಾಗಿದ್ದುದರ ದೆಸೆಯಿಂದ ವ್ಯವಸಾಯದ ಇಲಾಖೆಯ ಕೆಲಸಕ್ಕೆ ಬಹುಮಟ್ಟಿಗೆ ಪ್ರತಿಬಂಧಕವುಂಟಾಯಿತು. ಈ ಇಲಾಖೆಯವರು ರಾಗಿ, ಜೋಳ, ಬತ್ತ, ಕಬ್ಬು, ಮತ್ತು ಅಡಿಕೆ ಇವುಗಳಿಗೆ ಬೇರೆ ಬೇರೆ ಗೊಬ್ಬರಗಳನ್ನು ಹಾಕಿ ಅದರ ಫಲಿತಾಂಶವನ್ನು ಪರೀಕ್ಷಿಸಿ ನೋಡುವ ಕೆಲಸವನ್ನು ನೆರವೇರಿಸಿದರು. ಕೊಳೆರೋಗವು ಬಾರದಂತೆ ಎರಡು ಸಾವಿರದ ಏಳುನೂರ ಎಕರೆಗಳಷ್ಟು ವಿಸ್ತೀರ್ಣವುಳ್ಳ ಅಡಿಕೆ ತೋಟಗಳಿಗೆ ಪಿಚಕಾರಿಯಿಂದ ಔಷಧವನ್ನೆರಚುವ ಕೆಲಸವನ್ನು ನಡೆಸಲಾಯಿತು. ಅಲ್ಲದೆ, ಔಷಧವನ್ನೆರಚುವ 460 ಪಿಚಕಾರಿಯ ಯಂತ್ರಗಳನ್ನು ಬಿಕರಿ ಮಾಡಲಾಯಿತು. ಕಾಫಿ ಸೊಸಿಗಳಿಗೆ ತಗಲುವ "ಬ್ಲ್ಯಾಕ್‌ರಾಟ್" ಎಂಬ ರೋಗದ ಪ್ರತಿಕ್ರಿಯೆಯ ಪ್ರಥಮ ನಿದರ್ಶನವನ್ನು ಬಾಬಾಬುಡನ್ ಬೆಟ್ಟದ ಕಾಫಿ ತೋಟಗಳಲ್ಲಿ ನಡೆಸಿದುದಾಯಿತು. ಅದು ಕೇವಲ ಪ್ರಯೋಜನಕರವಾಗಿರುವಂತೆ ಕಂಡು ಬಂದಿತು.

ಪ್ರಸಕ್ತವರ್ಷದಲ್ಲಿ ಅಮೃತಮಹಲ್ ಇಲಾಖೆಯನ್ನು ಮೈಸೂರು ಸಂಸ್ಥಾನದ ಸೈನ್ಯಗಳ ಚೀಫ್ ಕಮ್ಯಾಂಡೆಂಟರವರ ಹತೋಟಿಯಿಂದ ವ್ಯವಸಾಯದ ಇಲಾಖೆಯ ಡೈರೆಕ್ಟರವರ ಹತೋಟಿಗೆ ವರ್ಗಾಯಿಸಿ, "ಲೈವ್ ಸ್ಟಾಕ್ ಎಕ್ಸ್‌ಪರ್ಟ್" ಎಂದರೆ ಪಶುಪಾಲನಾಕಲೆಯ ನಿಪುಣರ ಚಾರ್ಜಿನಲ್ಲಿ ಇರಿಸಲಾಯಿತು.

ಪಶುಪಾಲನಾ ಶಾಖೆಯಲ್ಲಿ, ಮಿಶ್ರಜಾತಿಯ ಹಾಲುಸ್ಪೃಷ್ಟಕರಣೆಯ ಪಶುಗಳ ತಳಿಯನ್ನು ಪಡೆಯುವ ಕೆಲಸವು ಮುಂದುವರಿಸಲ್ಪಟ್ಟಿತು. ಕಳೆದ ಜೂನ್ ಮಾಹೆ 30 ನೆಯ ತಾರೀಖಿನಲ್ಲಿ ಪಶುಪಾಲನಾ ಕ್ಷೇತ್ರದಲ್ಲಿ 53 ಹಸುವಿನ ಕಡಸುಗಳು ಇದ್ದುವು. ಈ ಸಾಲಿನಲ್ಲಿ, 6 ಮೆರೀನೋ ಜಾತಿಯ ಟಗರುಗಳನ್ನೂ ಮತ್ತು 6 ಕುರಿಗಳನ್ನೂ, ಆಸ್ಟ್ರೇಲಿಯಾ ದೇಶದಿಂದ ಈ ದೇಶಕ್ಕೆ ತರಿಸಿಕೊಳ್ಳಲಾಯಿತು; ಈ ಆರು ಕುರಿಗಳಲ್ಲಿ ಎರಡು ಸತ್ತುಹೋದುವು. ಮಿಕ್ಕ 4 ಕುರಿಗಳು ಗಂಡು ಮರಿಗಳನ್ನು ಹಾಕಿದುವು. ಈ ಸಾಲಿನಲ್ಲಿ ಮಿಶ್ರಜಾತಿಯ ಹನ್ನೊಂದು ಟಗರುಗಳನ್ನು ಜನರಿಗೆ ಹಂಚಲಾಯಿತು.

ಕೊನೆಯ ಪರೀಕ್ಷೆಯಲ್ಲಿ, ಹೆಬ್ಬಾಳಿನ ಸ್ಕೂಲಿನಿಂದ 3 ಜನ ವಿದ್ಯಾರ್ಥಿಗಳು ತೇರ್ಗಡೆಯನ್ನು ಹೊಂದಿದರು. ಈ ಸಾಲಿನಲ್ಲಿ 21 ಜನರನ್ನು ಸೇರಿಸಿಕೊಳ್ಳಲಾಗಿದೆ. ಪ್ರಸಕ್ತವರ್ಷದಲ್ಲಿ ಚಿಕ್ಕನಹಳ್ಳಿ ವ್ಯವಸಾಯದ ಸ್ಕೂಲಿನಿಂದ ಪರೀಕ್ಷೆಗೆ ಹೋಗಿದ್ದ 16 ಜನ ವಿದ್ಯಾರ್ಥಿಗಳ ಪೈಕಿ 15 ಜನಗಳು ತಮ್ಮ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಪಶುಪಾಲನೆ ಮತ್ತು ಪಶುವೈದ್ಯದ [illegible] ವ್ಯವಸಾಯದ ಇಲಾಖೆಯಲ್ಲಿ ಪ್ರಸಕ್ತವರ್ಷದಲ್ಲಿ ಒಟ್ಟು 5,30,[illegible] [illegible]

ತೋರ್ಪಡಿಸಿರುವುದು ಸಂತೋಷಪ್ರದವಾಗಿದೆ. ಕಷ್ಟಕ್ಕೊಳಗಾದ ಕೆಲವು ಪ್ರದೇಶಗಳಲ್ಲಿ ಗ್ರಾಮಗಳನ್ನೂ, ಟೌನುಗಳನ್ನೂ ಪೂರ್ವಸ್ಥಿತಿಗೆ ತರುವವಿ ಚಾರದಲ್ಲಿ ಬಾಯನಾದ ಅಭಿವೃದ್ಧಿ ಕಾರ್ಯಗಳನ್ನು ನಡೆಸುವುದಕ್ಕಾಗಿ ಈ ಸಮಯವನ್ನು ಉಪಯೋಗಿಸಿಕೊಳ್ಳುತ್ತಲಿದೆ; ಮತ್ತು ಈ ವಿಷಯದಲ್ಲಿ ಈಗಿರುವುದಕ್ಕಿಂತಲೂ ಉತ್ತಮವಾದ ಸ್ಥಳಗಳಲ್ಲಿ ಜನಾರೋಗ್ಯಕ್ಕೂ ಮತ್ತು ಸ್ಥಳಾರೋಗ್ಯಕ್ಕೂ ಹೆಚ್ಚು ಅನುಕೂಲವಾದ ಸನ್ನಿವೇಶಗಳೊಡನೆ ಮನೆಗಳನ್ನು ಪುನಃ ಕಟ್ಟಿಸುವುದಕ್ಕಾಗಿ ಏರ್ಪಟ್ಟಿರುವ ಸರಿಯಾದ ಸಂಸ್ಥೆಗಳಿಗೆ ಸಾಕಾದಷ್ಟು ಸಹಾಯವನ್ನು ಮಾಡಲಾಗುವಂತೆ ಸರ್ಕಾರದವರು ತಕ್ಕ ಕ್ರಮಗಳನ್ನು ನಡೆಸುತ್ತಿದ್ದಾರೆ. ವರುಷದ ಆರಂಭದಲ್ಲಿ ಇಂಥಾ ಉತ್ಸಾಹ ಭಂಗವನ್ನುಂಟುಮಾಡುವ ವಿದ್ಯಮಾನಗಳು ಘಟಿಸಿದ್ದರೂ, ಮುಂಗಾರು ಮಳೆಗಳು ಒಟ್ಟಿನಲ್ಲಿ ಅನುಕೂಲವಾಗಿರುವುದು ಸ್ವಲ್ಪಮಟ್ಟಿಗೆ ಸಮಾಧಾನವನ್ನುಂಟುಮಾಡಿದೆ. ಈಗ ನಿರೀಕ್ಷಿಸಬಹುದಾಗಿರುವಂತೆ ಹಿಂಗಾರುಮಳೆಗಳೂ ಸರಿಯಾಗಿ ನಡೆಸಿ ಅನುಕೂಲವಾಗಿ ಪರಿಣಮಿಸಿದಲ್ಲಿ, ನಮ್ಮ ತಾತ್ಕಾಲಿಕ ಕಷ್ಟಗಳು ನಿವಾರಣೆಯಾಗಿ ವರ್ಷಾಂತ್ಯದಲ್ಲಿ ಜನರ ಸಾಂಪತ್ತಿಕಸ್ಥಿತಿಯೂ ಮತ್ತು ವ್ಯವಸಾಯ ಸನ್ನಿವೇಶಗಳೂ, ಪೂರ್ವಸ್ಥಿತಿಗೆ ಬರಬಹುದೆಂದು ನಾವು ಬರವಸೆ ಪಡಬಹುದಾಗಿದೆ.

ಸಾಮಾನ್ಯಾಡಳಿತ.

ಶ್ರೀಮನ್ಮಹಾರಾಜರವರ ಸಂಚಾರಗಳು.

ಶ್ರೀಮನ್ಮಹಾರಾಜರವರು 1923 ನೆಯ ಇಸ್ವಿಯ ಜುಲೈ ತಿಂಗಳಿನ ಪ್ರಾರಂಭದಲ್ಲಿ ಉತ್ತರ ಇಂಡಿಯಾ ದೇಶಕ್ಕೆ ಸಂಚಾರ ಹೊರಟು, ಸ್ವಲ್ಪ ಕಾಲದವರೆಗೆ ಕಾಶ್ಮೀರದೇಶದಲ್ಲಿದ್ದು 1923ನೆಯ ಇಸ್ವಿಯ ಸೆಪ್ಟೆಂಬರ್ 12ನೆಯ ತಾರೀಖಿನ ದಿನ ರಾಜಧಾನಿಗೆ ದಯಮಾಡಿಸಿದರು. 1923ನೆಯ ಇಸ್ವಿಯ ಡಿಸೆಂಬರ್ ತಿಂಗಳಲ್ಲಿ ಮಹಾಮಹಿಮರಾದ ವೈಸ್‌ರಾಯಿಯವರು ಈ ಸಂಸ್ಥಾನಕ್ಕೆ ದಯಮಾಡಿಸಿದ್ದ ಸಂದರ್ಭದಲ್ಲಿ, ಶ್ರೀಮನ್ಮಹಾರಾಜರವರು ಡಿಸೆಂಬರ್ ತಿಂಗಳಿನ ಮೊದಲನೆಯ ವಾರದಲ್ಲಿ ಐದುದಿನಗಳವರೆಗೆ ಕಾರಾಪುರದಲ್ಲಿ ಮೊಕ್ಕಾಂಮಾಡಿದರು; ಮತ್ತು 1923ನೆಯ ಇಸ್ವಿಯ ಡಿಸೆಂಬರ್ 31 ನೆಯ ತಾರೀಖಿನಿಂದ 1924ನೆಯ ಇಸ್ವಿಯ ಜನವರಿ 5 ನೆಯ ತಾರೀಖಿನವರೆಗೆ ಹಾಸನದ ಡಿಸ್ಟ್ರಿಕ್ಟಿನಲ್ಲಿ ಸಂಚಾರಮಾಡಿದರು.

ದಿವಾನರವರ ಸಂಚಾರಗಳು.

1923ನೆಯ ಇಸ್ವಿ ಜುಲೈ ತಿಂಗಳಿನ ಅಂತ್ಯಭಾಗದಲ್ಲಿ ನಾವು ಸಿಮ್ಲಾ ಪಟ್ಟಣಕ್ಕೆ ಹೋಗಿದ್ದೆವು. ಮೈಸೂರು ಸಂಸ್ಥಾನದ ಪೊಗದಿ, ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿನ ಶಿಲ್ಕು (ಸರ್‌ಪ್ಲಸ್) ಮೊಬಲಗು, ಸ್ಟರ್ಲಿಂಗ್ ಡಿಬೆಂಚರ್ ಸಾಲ, ಮತ್ತು ಸಂಸ್ಥಾನದ ಇತರ ಮುಖ್ಯವಾದ ವಿಷಯಗಳಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಆಗ ಇಂಡಿಯಾ ಸರ್ಕಾರದವರೊಡನೆ ಪತ್ರವ್ಯವಹಾರವು ನಡೆಯುತ್ತಿತ್ತು. ಸದರಿ ವಿಚಾರಗಳನ್ನು ಅವರೊಡನೆ ಚರ್ಚೆಮಾಡುವುದೇ ಆ ಪ್ರಯಾಣದ ಉದ್ದೇಶವಾಗಿದ್ದಿತು. ಆ ಕೆಲಸವನ್ನು ನೆರವೇರಿಸಿ ಸಿಮ್ಲಾ ಪಟ್ಟಣದಿಂದ ಅದರ ಮಾರನೇ ತಿಂಗಳಿನ ಎಂದರೆ ಆಗಸ್ಟು ತಿಂಗಳ ಆದಿಭಾಗದಲ್ಲಿ ಹಿಂತಿರುಗಿ ಬಂದೆವು. ಕಳೆದ ವರುಷದ ಸೆಪ್ಟೆಂಬರ್ ತಿಂಗಳಿನ ಪ್ರಾರಂಭದಲ್ಲಿ, ಅನಾವೃಷ್ಟಿಗೊಳಗಾದ ಕೋಲಾರ ಡಿಸ್ಟ್ರಿಕ್ಟಿನ ಕೆಲವು ಪ್ರಾಂತಗಳಲ್ಲಿ ಸಂಚಾರ ಮಾಡಿದೆವು ಮತ್ತು ಅದೇ ತಿಂಗಳಿನ ಅಖೈರಿನಲ್ಲಿ, ತುಮಕೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರ ಆಫೀಸನ್ನು ತನಿಖೆಮಾಡಿದೆವು. ಕಳೆದ ವರುಷದ ಅಕ್ಟೋಬರ್ ಮಾಹೆಯ ಪ್ರಾರಂಭದಲ್ಲಿ ತರೀಕೆರೆಗೆ ಹೋಗಿದ್ದೆವು. ಅಲ್ಲಿ ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿನ ಸ್ಥಳೀಯ ಅಧಿಕಾರಿಗಳನ್ನೂ, ಖಾಸಗೀ ದೊಡ್ಡಮನುಷ್ಯರನ್ನೂ ಒಳಗೊಂಡ ಒಂದು ಸಮ್ಮೇಳನವನ್ನು ನಡೆಯಿಸಿ ಮಲೆನಾಡಿನಲ್ಲಿ ಅತ್ಯಧಿಕವಾದ ಪ್ರವಾಹಗಳು ಬಂದುದರ ದೆಸೆಯಿಂದ ಪ್ರಜೆಗಳಿಗೆ ಉಂಟಾಗಿದ್ದ ಕಷ್ಟನಷ್ಟಗಳ ನಿವಾರಣೆಗೋಸ್ಕರ ಅವಲಂಬಿಸಬೇಕಾಗಿದ್ದ ಕ್ರಮಗಳನ್ನು ಪರ್ಯಾಲೋಚಿಸಿ ಏರ್ಪಡಿಸತಕ್ಕ ವಿಚಾರವನ್ನು ಚರ್ಚಿಸಿದೆವು. ಕೃಷ್ಣರಾಜಸಾಗರದ ವಿಚಾರದಲ್ಲಿ ಒಡಂಬಡಿಕೆಯ ಸಂಬಂಧದಲ್ಲಿ ಕಳೆದ ನವೆಂಬರ್ ಮಾಹೆಯಲ್ಲಿ ಮದರಾಸು ಪಟ್ಟಣಕ್ಕೂ ಹೋಗಿದ್ದೆವು. ಅನಾವೃಷ್ಟಿಗೆ ಗುರಿಯಾಗಿದ್ದ ಪ್ರಾಂತ್ಯಗಳನ್ನು ಅಜಮಾಯಿಷಿ ಮಾಡಿ ನೋಡಿಕೊಂಡು ಬರುವುದಕ್ಕಾಗಿ 1924ನೆಯ ಇಸ್ವಿ ಜನವರಿ ಮಾಹೆಯಲ್ಲಿ ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳ ಕೆಲವೆಡೆಗಳಲ್ಲಿ ಸಂಚಾರಮಾಡಿಕೊಂಡು ಬಂದೆವು. ಫೆಬ್ರವರಿ ಮಾಹೆಯಲ್ಲಿ ವೈಟ್‌ಫೀಲ್ಡ್ ಸ್ಯಾನಿಟೋರಿಯಂ ನೋಡಿಕೊಂಡು ಬಂದೆವು. ಅದೇ ಮಾಹೆಯಲ್ಲಿ ಕೃಷ್ಣರಾಜಸಾಗರಕ್ಕೆ ಸಂಬಂಧಪಟ್ಟ ವಿವಾದದ ವಿಷಯದಲ್ಲಿ ಮೈಸೂರು ಸರ್ಕಾರದವರಿಗೂ, ಮದರಾಸು ಸರ್ಕಾರದವರಿಗೂ ಆದ ಒಪ್ಪಂದವನ್ನು ಪೂರೈಸುವುದಕ್ಕಾಗಿ ಪುನಃ ಮದರಾಸಿಗೆ ಹೋಗಿದ್ದೆವು.

ಪ್ರಜಾಪ್ರತಿನಿಧಿ ಸಭೆ.

ಪ್ರಸಕ್ತ ವರ್ಷದಲ್ಲಿ ಈ ಸಭೆಯ ಎರಡು ಅಧಿವೇಶನಗಳು, ಎಂದರೆ, ಹಿಂದಿನ ರಚನಾಕ್ರಮದ ಮೇರೆಗೆ ಅಕ್ಟೋಬರ್ ಮಾಹೆಯಲ್ಲಿ ಒಂದು ಅಧಿವೇಶನವೂ, ತಿದ್ದುಪಾಟಾದ ಹೊಸ ರಚನಾಕ್ರಮದ ಮೇರೆಗೆ ಕಳೆದ ಜೂನ್ ಮಾಹೆಯಲ್ಲಿ ಮತ್ತೊಂದು ಅಧಿವೇಶನವೂ ನಡೆದುವು. ಇವುಗಳ ಜತೆಗೆ ರಾಜಕೀಯ ಸುಧಾರಣೆಗಳ ಪ್ರಕಾರ ಪುನರ್ವ್ಯವಸ್ಥಿತವಾದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ, ಈ ಎರಡು ಸಂಸ್ಥೆಗಳೂ ಒಟ್ಟುಗೂಡಿದ ಒಂದು ಅಧಿವೇಶನವು ಮಾರ್ಚಿ ತಿಂಗಳಲ್ಲಿ ಜರುಗಿತು; ಶ್ರೀಮನ್ಮಹಾರಾಜರವರು ಅನುಗ್ರಹಮಾಡಿ ಅವುಗಳ ಸಮಾರಂಭೋತ್ಸವವನ್ನು ನೆರವೇರಿಸಿದರು.

ಅಕ್ಟೋಬರ್ ಮಾಹೆಯ ಅಧಿವೇಶನದಲ್ಲಿ 199 ವಿಷಯಗಳು ಚರ್ಚಿಸಲ್ಪಟ್ಟುವು; ಸಭೆಯು ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ ರಾಜಕೀಯ ಸುಧಾರಣೆಗಳ ವಿಚಾರಕ್ಕೆ ಸಂಬಂಧಪಟ್ಟ, ಶ್ರೀಮನ್ಮಹಾರಾಜರವರಿಂದ ಕರುಣಿಸಲ್ಪಟ್ಟ ರಾಜಶಾಸನ ಪತ್ರಿಕೆಯನ್ನು ಮಹಾಸ್ವಾಮಿಯವರ ಆಜ್ಞಾನುಸಾರವಾಗಿ ನಾವು ಸಭೆಯವರಿಗೆ ಕೃಪಡಿಸಿದೆವು.

ಪುನರ್ವ್ಯವಸ್ಥಿತವಾದ ಪ್ರಜಾಪ್ರತಿನಿಧಿ ಸಭೆಯ ಬಡ್ಜೆಟ್ ಅಧಿವೇಶನವು 1924ನೆಯ ಜೂನ್ 9ನೆಯ ತಾರೀಖಿನ ದಿವಸ ಉಪಕ್ರಮವಾಗಿ 17ನೆಯ ತಾರೀಖಿನ ದಿವಸ ಪೂರೈಸಿತು. ಬಡ್ಜೆಟ್ಟಿನ ಸಾಮಾನ್ಯ ತತ್ವಗಳ ವಿಷಯವಾಗಿ ಸಭೆಯಲ್ಲಿ ಎರಡು ದಿವಸಗಳಿಗಿಂತಲೂ ಹೆಚ್ಚು ಕಾಲ ಚರ್ಚೆಯು ನಡೆಯಿತು. ಚರ್ಚೆಯ ಕಾಲದಲ್ಲಿಯೂ, ಮತ್ತು ಸಭೆಯವರು ಮಾಡಿದ ನಿರ್ಣಯಗಳ ಮೂಲಕವೂ, ಅನೇಕ ಉಪಯುಕ್ತವಾದ ಸಲಹೆಗಳು ಸರ್ಕಾರದವರ ಅವಗಾಹನೆಗೆ ತರಲ್ಪಟ್ಟುವು. ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದ ಒಂಬತ್ತು ಮಸೂದೆಗಳ ವಿಷಯದಲ್ಲಿಯೂ ಸಹ ಸಭೆಯವರ ಅಭಿಪ್ರಾಯವನ್ನು ಅಪೇಕ್ಷಿಸಲಾಯಿತು. ಸದರಿ ಮಸೂದೆಗಳ ಸಾಮಾನ್ಯ ತತ್ವಗಳು ಯುಕ್ತವಾದುವುಗಳೆಂದು ಅವರು ಅನುಮೋದಿಸಿದರು. ಸಭೆಯ ಮೆಂಬರುಗಳು ಮುಖ್ಯಮುಖ್ಯವಾದ ಅನೇಕ ಅಂಶಗಳಲ್ಲಿ ಸರ್ಕಾರದವರನ್ನು ಪ್ರಶ್ನೆಮಾಡಿದರು; ಮತ್ತು ಪ್ರಜೆಗಳ ಹಿತಕ್ಕೆ ಸಾಧಕವಾದ ವಿಷಯಗಳಲ್ಲಿ ನಿರ್ಣಯಗಳನ್ನು ಸೂಚಿಸಲು ತಮಗೆ ಲಭಿಸಿದ ಅಧಿಕಾರವನ್ನು ಆ ಅಧಿವೇಶನದಲ್ಲಿ ಅವರು ಪ್ರಥಮತಃ ಚಲಾಯಿಸಿದರು. ಸಭೆಯ ಕಾರ್ಯಕ್ರಮದ ಪಟ್ಟಿಯ ಪ್ರಕಾರ 105 ವಿಷಯಗಳನ್ನು ಚರ್ಚಿಸಬೇಕಾಗಿದ್ದಿತು. ಆದರೆ, ಕಾಲವು ಸಾಲದೆಹೋದ ಪ್ರಯುಕ್ತ ಈ ಪೈಕಿ ಮುಖ್ಯವಾದ 50 ವಿಷಯಗಳು ಮಾತ್ರವೇ ಚರ್ಚಿಸಲ್ಪಟ್ಟುವು; ಉಳಿದುವುಗಳನ್ನು ಪರಿಶೀಲಿಸಿ ಯುಕ್ತವಾದ ನಡವಳಿಕೆಗಳನ್ನು ಕೈಗೊಳ್ಳಲಾಗುವುದೆಂದು ಸರ್ಕಾರದವರು ವಾಗ್ದಾನಮಾಡಿದರು.

ನ್ಯಾಯವಿಧಾಯಕ ಸಭೆ.

ಹೊಸ ನ್ಯಾಯವಿಧಾಯಕ ಸಭೆಯವರು ಕಳೆದ ಏಪ್ರಿಲ್ ಮಾಹೆಯ 4ನೆಯ ತಾರೀಖಿನ ದಿವಸ ಸಭೆಸೇರಿ ಮೈಸೂರು ಕೋರ್ಟು ಫೀ ರೆಗ್ಯುಲೇಷನನ್ನು ಖಾಯಂರೀತಿಯ ಕಾನೂನಾಗಿ ಅನುಮೋದಿಸಿದರು. ಬಡ್ಜೆಟ್ಟನ್ನು ಚರ್ಚಿಸುವುದಕ್ಕೆ ಈ ಸಭೆಯು ಜೂನ್ ಮಾಹೆಯ 23ನೆಯ ತಾರೀಖಿನ ದಿವಸ ಮತ್ತೆ ಸಭೆ ಸೇರಿತು; 8 ದಿವಸಗಳ ಕಾಲ ಮೀಟಿಂಗುಗಳನ್ನು ನಡೆಯಿಸಲಾಯಿತು. ಬಡ್ಜೆಟ್ಟಿನ ವಿಷಯವಾಗಿ - ವೋಟ್ - ಎಂದರೆ ಸಮ್ಮತಿಯನ್ನು ಕೊಡಲು ಸಭಾಸದರಿಗೆ ಲಭಿಸಿದ್ದ ಅಧಿಕಾರವನ್ನು ಚಲಾಯಿಸಿದರು; ಸಂಸ್ಥಾನದಲ್ಲಿ ಆಡಳಿತದ ವೆಚ್ಚವನ್ನು ತಗ್ಗಿಸಬೇಕೆಂಬ ವಿಚಾರದಲ್ಲಿ 56 ನಿರ್ಣಯಗಳು ಚರ್ಚೆಗೆ ಬಂದುವು. ಅವುಗಳಲ್ಲಿ ಅನೇಕ ನಿರ್ಣಯಗಳನ್ನು ಅವು ಚರ್ಚೆಯಾದೊಡನೆಯೇ ಆಯಾಯ ನಿರ್ಣಯಸೂಚಕರು ವಾಪಸು ತೆಗೆದುಕೊಂಡರು. ಸಭೆಯವರು ಒಂಬತ್ತು ಮಸೂದಾ ಕಾನೂನುಗಳನ್ನು ಅಂಗೀಕರಿಸಿದರು. ಇವುಗಳಲ್ಲಿ ವರ್ತಮಾನ ಪತ್ರಿಕೆಗಳ ರೆಗ್ಯುಲೇಷನಿಗೆ ಸಂಬಂಧಪಟ್ಟ ಮಸೂದೆಯೇ ಪ್ರಾಮುಖ್ಯವಾದುದು.

ಸಂಪದಭಿವೃದ್ಧಿಯ ಬೋರ್ಡುಗಳು.

1923ನೆಯ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ಶ್ರೀಮನ್ಮಹಾರಾಜರವರು ಕೃಪಾಪೂರ್ವಕವಾಗಿ ದಯಪಾಲಿಸಿದ ರಾಜಕೀಯ ಸುಧಾರಣೆಗಳಿಗೆ ಅನುಸಾರವಾಗಿ ಸಂಪದಭಿವೃದ್ಧಿ ಕಾರ್ಯದ ಬೋರ್ಡುಗಳನ್ನು ಖಾಯಂ ಮಾಡಲಾಯಿತು; ಅವು ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕಸಭೆ ಇವುಗಳೊಂದಿಗೆ ಹೊಂದಿಕೊಂಡು ಕೆಲಸಮಾಡುತ್ತಾ ಬರುವಂತೆ ತಕ್ಕ ಏರ್ಪಾಡನ್ನು ಮಾಡಲಾಯಿತು. ಹೊಸ ಬೋರ್ಡುಗಳನ್ನು ಕಳೆದ ಮೇ ತಿಂಗಳಿನಲ್ಲಿ ರಚಿಸಲಾಯಿತು. ಯಾವಯಾವ ವಿಶೇಷೋದ್ದೇಶಗಳನ್ನು ಸಾಧಿಸಿ ಅಭಿವೃದ್ಧಿಗೊಳಿಸಬೇಕೆಂಬುದು ಈ ಬೋರ್ಡುಗಳವರ ದೃಷ್ಟಿಯಲ್ಲಿದೆಯೋ, ಆಯಾಯ ಉದ್ದೇಶಗಳಿಗೆ ಸಂಬಂಧಪಟ್ಟ ಪಂಗಡಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳೇ ಬಹುಮಟ್ಟಿಗೆ ಸಭಿಕರಾಗಿರುವುದೇ ಈ ಬೋರ್ಡುಗಳ ರಚನಾಕ್ರಮದ ಮುಖ್ಯಲಕ್ಷಣವಾಗಿರುತ್ತದೆ. ಎಲ್ಲಾ ಬೋರ್ಡುಗಳ ಸಭಿಕರೂ ಒಟ್ಟಿಗೆ ಸೇರಿದ್ದ ಒಂದು ಸಮಾರಂಭ ಸಭೆಯು 1924ನೆಯ ಇಸ್ವಿಯ ಜೂನ್ 18ಯ ತಾರೀಖಿನ ದಿವಸ ನಡೆಯಿತು. ಮುಂದೆ ಯಾವಯಾವ ಮಾರ್ಗಗಳಲ್ಲಿ ನಾವು ಕೆಲಸ ಮಾಡಬೇಕಾಗಿದೆಯೆಂಬುದನ್ನು ಕುರಿತು ನಾವು ಭಾಷಣಮಾಡಿದೆವು. ತಮ್ಮತಮ್ಮ ಕಾರ್ಯಕ್ರಮದ ಆರಂಭದ ಸಲಕರಣೆಗಳನ್ನು ಸಂಪೂರ್ಣವಾಗಿ ಒದಗಿಸಿಕೊಳ್ಳುವುದರಲ್ಲಿ ಸದರಿ ಬೋರ್ಡುಗಳ ಮೆಂಬರುಗಳು ಕೆಲಸಮಾಡುತ್ತಿರುವುದರಿಂದ ಚಾಲ್ತಿ ವರುಷದಲ್ಲಿಯೇ ಅವರು ತಮ್ಮ ಕರ್ತವ್ಯವನ್ನು ನೆರವೇರಿಸಿ ಸ್ಪಷ್ಟವಾದ ಫಲಿತಾಂಶಗಳನ್ನು ದೊರಕಿಸಿಕೊಡುವರೆಂದು ನಂಬಿದ್ದೇವೆ.

ಸ್ಥಳೀಯ ಪ್ರಜಾಧಿಕಾರ.

ಲೋಕಲ್‌ಬೋರ್ಡುಗಳು.

ಬೆಂಗಳೂರು, ಕೋಲಾರ ಮತ್ತು ಹಾಸನ ಈ ಮೂರು ಡಿಸ್ಟ್ರಿಕ್ಟು ಬೋರ್ಡುಗಳಲ್ಲಿ ಮಾತ್ರ ಖಾಸಗಿ ದೊಡ್ಡಮನುಷ್ಯರು ಪ್ರೆಸಿಡೆಂಟರಾಗಿಯೂ, ಮತ್ತು ಎಲ್ಲಾ ಡಿಸ್ಟ್ರಿಕ್ಟುಬೋರ್ಡುಗಳಲ್ಲಿಯೂ ಖಾಸಗೀ ದೊಡ್ಡಮನುಷ್ಯರೇ ವೈಸ್‌ಪ್ರೆಸಿಡೆಂಟರಾಗಿಯೂ ಇದ್ದರು. ಈ ವರುಷ ಕಡೂರು ಡಿಸ್ಟ್ರಿಕ್ಟು ಬೋರ್ಡನ್ನು ಪುನರ್ವ್ಯವಸ್ಥೆಗೊಳಿಸಲಾಯಿತು. ಡಿಸ್ಟ್ರಿಕ್ಟು ಬೋರ್ಡುಗಳ ವರಮಾನವು ಪ್ರಸಕ್ತವರ್ಷದಲ್ಲಿ 21,79,857 ರೂಪಾಯಿಗಳೂ, ಅದರ ಹಿಂದಿನ ಸಾಲಿನಲ್ಲಿ 22,81,436 ರೂಪಾಯಿಗಳೂ ಆಗಿದ್ದಿತು. ಸದರಿ ಬೋರ್ಡುಗಳ ವೆಚ್ಚವು ಪ್ರಸಕ್ತವರ್ಷದಲ್ಲಿ 21,91,831 ರೂಪಾಯಿಗಳೂ, ಅದರ ಹಿಂದಿನ ಸಾಲಿನಲ್ಲಿ 20,97,756 ರೂಪಾಯಿಗಳೂ ಆಗಿದ್ದಿತು.

ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಗಳಿಗಾಗಿ ಒಟ್ಟು 1,14,716 ರೂಪಾಯಿಗಳನ್ನು ವೆಚ್ಚಮಾಡಲಾಯಿತು.

ಮ್ಯುನಿಸಿಪಾಲಿಟಿಗಳು.

ರಚನಾಕ್ರಮ ಮುಂತಾದ ವಿಚಾರಗಳು.—ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿಗೆ ಪ್ರೆಸಿಡೆಂಟರನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಪುನಃ ಕೊಡಲಾಯಿತು; ಅಲ್ಲದೆ, ಅದಕ್ಕೆ ಒಬ್ಬ ಮ್ಯುನಿಸಿಪಲ್ ಕಮಿಷನರನ್ನೂ ಸಹ ನೇಮಕ ಮಾಡಲಾಯಿತು. ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿಗೆ ಒಬ್ಬ ಪ್ರೆಸಿಡೆಂಟರನ್ನು ಸರ್ಕಾರದವರೇ ನೇಮಕಮಾಡಿದ್ದರು. ಆ ಕೌನ್ಸಿಲಿಗೆ ವೈಸ್ ಪ್ರೆಸಿಡೆಂಟರವರನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಪುನಃ ಕೊಡಲಾಯಿತು.

ಮೈನರ್ ಮ್ಯುನಿಸಿಪಲ್ ಕೌನ್ಸಿಲುಗಳೊಳಗೆ, ಕುಣಿಗಲು ಮತ್ತು ಚಿಕ್ಕನಾಯಕನಹಳ್ಳಿ ಇವೆರಡು ಸ್ಥಳಗಳನ್ನು ಬಿಟ್ಟು, ಮಿಕ್ಕ ಎಲ್ಲಾ ಮ್ಯುನಿಸಿಪಲ್ ಕೌನ್ಸಿಲುಗಳಿಗೂ ಖಾಸಗಿ ದೊಡ್ಡಮನುಷ್ಯರೇ ವೈಸ್‌ಪ್ರೆಸಿಡೆಂಟರುಗಳಾಗಿದ್ದರು.

ಈ ಸಾಲಿನಲ್ಲಿ ಚಿತ್ರದುರ್ಗ, ತರೀಕೆರೆ ಮತ್ತು ನರಸಿಂಹರಾಜಪುರ, ಈ ಸ್ಥಳಗಳ ಮ್ಯುನಿಸಿಪಲ್ ಕೌನ್ಸಿಲುಗಳನ್ನು ಪುನರ್ವ್ಯವಸ್ಥೆಗೊಳಿಸಲಾಯಿತು. ಶಿವಮೊಗ್ಗ ಮ್ಯುನಿಸಿಪಲ್ ಕೌನ್ಸಿಲಿಗೆ ಒಬ್ಬ ಚೀಫ್‌ಆಫೀಸರವರನ್ನು ಮೊಕರರುಮಾಡಲಾಯಿತು. ಅಲ್ಲದೆ ತರೀಕೆರೆ ಮ್ಯುನಿಸಿಪಾಲಿಟಿಗೆ ಟವರ್ ಇಂಪ್ರೂವ್‌ಮೆಂಟ್ ಕಮಿಟಿಯೊಂದನ್ನು ಮಂಜೂರ್ಮಾಡಲಾಯಿತು.

ಮ್ಯುನಿಸಿಪಾಲಿಟಿಗಳ ಆಯವ್ಯಯಗಳ ವಿಚಾರ.—ಎಲ್ಲಾ ಮ್ಯುನಿಸಿಪಲ್ ಕೌನ್ಸಿಲುಗಳ ಒಟ್ಟು ಆದಾಯವು 20,47,460 ರೂಪಾಯಿಗಳಾಗಿಯೂ, ಒಟ್ಟು ವೆಚ್ಚವು 22,52,932 ರೂಪಾಯಿಗಳಾಗಿಯೂ ಇದ್ದುವು. ಕೆಲವು ಮ್ಯುನಿಸಿಪಾಲಿಟಿಗಳಲ್ಲಿ, ಜನಗಳಿಂದ ತೆಗೆದುಕೊಂಡಿರುವ ಸಾಲದ ಬಾಬುಗಳಿಗಾಗಿ ಹಣವನ್ನು ಜಮೆಕಟ್ಟಿದುದರಿಂದ ವೆಚ್ಚವು ಹೆಚ್ಚಾಗುವುದಕ್ಕೆ ಕಾರಣವಾಯಿತು.

ಮೈಸೂರು ಮತ್ತು ಬೆಂಗಳೂರು ನಗರಾಭಿವೃದ್ಧಿಯ ಕಾಮಗಾರಿಗಳು.—ಮೈಸೂರು - ಸಿಟಿ ಇಂಪ್ರೂವ್‌ಮೆಂಟ್ - ಎಂದರೆ ನಗರಾಭಿವೃದ್ಧಿಯ ಕಾಮಗಾರಿಗಳಿಗಾಗಿ 2,27,988 ರೂಪಾಯಿಗಳನ್ನೂ, ಬೆಂಗಳೂರು ಸಿಟಿಗೆ ಅದೇ ವಿಚಾರಕ್ಕಾಗಿ 2,02,042 ರೂಪಾಯಿಗಳನ್ನೂ ವೆಚ್ಚಮಾಡಲಾಯಿತು. ಇದಕ್ಕಾಗಿ ಸರ್ಕಾರದವರು ಮೈಸೂರಿಗೆ 1,50,000 ರೂಪಾಯಿಗಳ ಗ್ರಾಂಟನ್ನೂ ಮತ್ತು ಬೆಂಗಳೂರಿಗೆ 50,000 ರೂಪಾಯಿಗಳ ಗ್ರಾಂಟನ್ನೂ ಕೊಟ್ಟರು.

ಆಯವ್ಯಯಗಳ ಸ್ಥಿತಿ.

1923-24 ನೆಯ ವರುಷದ ಆಯವ್ಯಯಗಳ ವಿಚಾರದಲ್ಲಿನ ಅಂದಾಜು ಲೆಕ್ಕಗಳು.—ನಾವು ಕಳೆದ ಜೂನ್ ತಿಂಗಳಿನಲ್ಲಿ ಈ ಸಭೆಯವರಿಗೆ ಒಪ್ಪಿಸಿದ 1923-24 ನೆಯ ವರುಷದ ತಿದ್ದುಪಾಟಾದ ಬಡ್ಜೆಟ್ ಅಂದಾಜುಗಳಲ್ಲಿ, 324.02 ಲಕ್ಷ ರೂಪಾಯಿಗಳ ಒಟ್ಟು ಹುಟ್ಟುವಳಿಯು ಬರಬಹುದೆಂದೂ ಮತ್ತು ಎಲ್ಲಾ ಬಾಬುಗಳೂ ಸೇರಿ 329.12 ಲಕ್ಷ ರೂಪಾಯಿಗಳ ವೆಚ್ಚವು ತಗಲಬಹುದೆಂದೂ ಅಂದಾಜು ಮಾಡಲಾಗಿದ್ದಿತು; ಮತ್ತು ಸಾಮಾನ್ಯ ಹುಟ್ಟುವಳಿಯ ಲೆಕ್ಕದಲ್ಲಿ 5 ಲಕ್ಷ ರೂಪಾಯಿಗಳು ವೆಚ್ಚಕ್ಕೆ ಸಾಲದೆ ಹೋಗುವುದಾಗಿಯೂ, ಸಂಸ್ಥಾನಕ್ಕೆ ಪಾವತಿಯಾಗದೆ ನಿಂತುಹೋಗಿದ್ದ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿನ ಸರ್‌ಪ್ಲಸ್ ಹುಟ್ಟುವಳಿಯ ಪೈಕಿ, ಈ ಕ್ಲಿಷ್ಟವಾದ ವಿಷಯವು ವ್ಯವಸ್ಥೆಯಾದುದರ ಫಲಿತಾಂಶವಾಗಿ ಪಾವತಿಯಾದ 5 ಲಕ್ಷ ರೂಪಾಯಿಗಳ ಅಸಾಧಾರಣವಾದ ಹುಟ್ಟುವಳಿಯಿಂದ, ಖರ್ಚಿಗೆ ಸಾಲದೆ ಹೋಗುವ ಮೇಲ್ಕಂಡ 5 ಲಕ್ಷ ರೂಪಾಯಿಗಳಿಗೆ ಭರ್ತಿ ಹಾಕಬಹುದೆಂದೂ, ಸದರಿ ಅಂದಾಜುಗಳಲ್ಲಿ ತೋರಿಸಿದ್ದೆವು. 324.02 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬರಬಹುದೆಂದು ನಿರೀಕ್ಷಿಸಿದ್ದ ಸದರಿ ವರುಷದ ತಿದ್ದುಪಾಟಾದ ಅಂದಾಜುಗಳೊಡನೆ ಹೋಲಿಸಿ ನೋಡಲಾಗಿ, ಈಗ ಒದಗಿರುವ ಅಂದಾಜು ಲೆಕ್ಕಗಳ ಮೇರೆಗೆ ವಸ್ತುತಃ 332 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬಂದಿದೆ; ಎಂದರೆ, 8 ಲಕ್ಷ ರೂಪಾಯಿಗಳ ಹೆಚ್ಚು ಹುಟ್ಟುವಳಿಯು ಬಂದಿರುತ್ತದೆ.

ಜಮಿನುಕಂದಾಯ, ಫಾರೆಸ್ಟುಗಳು, ಎಕ್ಸೈಜು, ರೈಲ್ವೆ ಮತ್ತು ವಿದ್ಯುಚ್ಛಕ್ತಿಯ ಕಾಮಗಾರಿಗಳೇ ಮುಂತಾದ ಕೆಲವು ಹುಟ್ಟುವಳಿಯ ಬಾಬುಗಳಲ್ಲಿ ತಿದ್ದುಪಾಟಾದ ಅಂದಾಜಿನಲ್ಲಿ ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚು ಉತ್ಪತ್ತಿಯು ಬಂದಿರುವಂತೆಯೂ, ಮತ್ತು ಬಡ್ಡಿ, ಸಿವಿಲ್ ಕಾಮಗಾರಿಗಳು, ವಿದ್ಯಾಭ್ಯಾಸ ಮತ್ತು ಸೈನ್ಯದ ಬಾಬುಗಳಿಗಾಗಿ ಕೊಟ್ಟ ಗ್ರಾಂಟುಗಳಲ್ಲಿ ಮಿಗುತೆಯಾಗಿರುವಂತೆಯೂ, ಕಂಟ್ರೋಲರವರು ವರದಿಮಾಡಿರುವ ತಾತ್ಕಾಲಿಕವಾದ ಅಂದಾಜು ಲೆಕ್ಕಗಳಿಂದ ಕಂಡುಬರುತ್ತದೆ. ಪ್ರಸಕ್ತವರ್ಷದಲ್ಲಿ ಹುಟ್ಟುವಳಿಯು ಹೆಚ್ಚುವುದರ ಜತೆಗೆ ವೆಚ್ಚವೂ ಕಡಮೆಯಾದುದರಿಂದ ನಮ್ಮ ಆಯವ್ಯಯಗಳ ಸ್ಥಿತಿಯು, 13.65 ಲಕ್ಷ ರೂಪಾಯಿಗಳವರೆಗೂ ಉತ್ತಮಪಟ್ಟಿರುತ್ತದೆ; ಆದರೆ ಇದರಲ್ಲಿ ಮೇಲ್ಕಂಡ 5 ಲಕ್ಷ ರೂಪಾಯಿಗಳ ಅಸಾಧಾರಣ ಹುಟ್ಟುವಳಿಯನ್ನು ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ. ಇದನ್ನು ಮುಟ್ಟದೆಯೇ ಇಟ್ಟಿದ್ದು, ನಾವು ಮುಂದೆ ವಿವರಿಸುವ ರೀತಿಯಲ್ಲಿ ಅನಾವೃತ ವೆಚ್ಚದಬಗ್ಗೆ ಸ್ಪೆಸಲ್ ರಿಜರ್ವಿಗೆ ಜಮೆ ಕಟ್ಟಿಕೊಳ್ಳಲಾಗುವುದು. ಕೆಲವು ವೆಚ್ಚದ ಬಾಬುಗಳಲ್ಲಿ, ಅದರಲ್ಲೂ ಕಬ್ಬಿಣದ ಕಾರ್ಖಾನೆಯ ಸಂಬಂಧದಲ್ಲಿ ಉಂಟಾದ ನಷ್ಟ ಮತ್ತು ಕಳೆದವರುಷ ಪ್ರಾಪ್ತವಾದ ಕಷ್ಟನಿವಾರಣೆಯಬಗ್ಗೆ ಮಾಡಿರುವ ವೆಚ್ಚ, ಇವುಗಳಿಗೆ ಈ ಮೊಬಲಗಿನಿಂದ ಹಣವನ್ನೊದಗಿಸುವ ವಿಷಯವನ್ನು ಜಾಗರೂಕತೆಯಿಂದ ಪರಿಶೀಲಿಸಿ, ಅಂಥ ವೆಚ್ಚವನ್ನೆಲ್ಲಾ ಕೂಡಿದಮಟ್ಟಿಗೂ ನಮ್ಮ ಅಖೈರು ಲೆಕ್ಕಗಳ ಮೇರೆಗೆ ಪ್ರಸಕ್ತವರ್ಷದಲ್ಲಿ ವಾಸ್ತವವಾಗಿ ಮಿಗುತೆಯಾಗುವ ಮೊಬಲಗಿನಿಂದ ವಹಿಸತಕ್ಕದೆಂದು ನಿರ್ಧರಿಸಲಾಯಿತು. ಬೆಳೆಯಾಗದಿರುವದೆಸೆಯಿಂದ ಪ್ರಾಪ್ತವಾದ ಕಷ್ಟನಿವಾರಣೆಯ ಕಾರ್ಯಗಳನ್ನು ನಡೆಸುವುದಕ್ಕೆ ತಗಲುವ ಖರ್ಚನ್ನು ಕ್ಷಾಮನಿವಾರಣೆಗೆ ತೆಗೆದಿಟ್ಟಿರುವ ರಿಜರ್ವ್‌ಹಣದಿಂದ ಒದಗಿಸಬೇಕೆಂದು ಮೊದಲು ಉದ್ದೇಶಮಾಡಿಕೊಂಡಿದ್ದುದು ತಮ್ಮಗಳ ನೆನಪಿನಲ್ಲಿರಬಹುದು. ಆದರೆ ಈಗ ಪ್ರತ್ಯೇಕವಾದ ಹಣವಿರುವುದರಿಂದ ಈ ರಿಜರ್ವಿಗೆ ಖರ್ಚು ಹಾಕುವುದಿಲ್ಲ. ಕಬ್ಬಿಣದ ಕಾರ್ಖಾನೆಯ ದೆಸೆಯಿಂದ 1924 ನೆಯ ಸಾಲಿನ ಜೂನ್ ತಿಂಗಳಿನ ಅಖೈರಿನವರೆಗೆ ಎಂದರೆ 1923 ನೇ ಇಸವಿ ಜನವರಿ ತಿಂಗಳಿನಲ್ಲಿ ಕಾರ್ಯಾರಂಭ ಮಾಡಿದಮೇಲೆ ಇದುವರೆಗೆ ನಡೆಯುವ ಒಂದೂವರೆ ವರುಷಕ್ಕೆ ಒಟ್ಟು 7.66 ಲಕ್ಷ ರೂಪಾಯಿಗಳು ನಷ್ಟವಾಗಿದೆ. ಈ ವಿಶಿಷ್ಟ ಮೊಬಲಗನ್ನೂ 1923-24 ನೆಯ ಸಾಲಿನ ಹುಟ್ಟುವಳಿಯಿಂದ ಕಟ್ಟಿಕೊಡಬೇಕೆಂದು ಉದ್ದೇಶಿಸಿದೆ. ಬೆಳೆಯಿಲ್ಲದ ಪ್ರಯುಕ್ತ ಒದಗಿದ ಕಷ್ಟನಿವಾರಣೆ ಕೆಲಸಗಳು ಮತ್ತು ದನ ಕರುಗಳಿಗೆ ಮೇವನ್ನು ಒದಗಿಸುವ ಕೆಲಸಗಳು—ಇವುಗಳ ವೆಚ್ಚವು 1,35,000 ರೂಪಾಯಿಗಳಾಯಿತು. ಇದನ್ನೂ ಸಹ ಉಳಿತಾಯದ ಹಣದಿಂದ ಒದಗಿಸಲಾಗುತ್ತದೆ. ಮೇಲೆ ಹೇಳಿದುದರಜತೆಗೆ, ಅರಮನೆಯ ವೆಚ್ಚವು 3 ಲಕ್ಷ ರೂಪಾಯಿಗಳಷ್ಟು ಹೆಚ್ಚಿರುವುದರಿಂದ ಈ ಹೆಚ್ಚು ವೆಚ್ಚವನ್ನು ಕಳೆದ ವರುಷದ ಲೆಕ್ಕಗಳಲ್ಲಿ ಆಡಳಿತದ ಖರ್ಚಿನ ಬಾಬಿನಲ್ಲಿ ತೋರಿಸಿದೆ. ಬಡ್ಜೆಟ್ಟಿನಲ್ಲಾಗಲೀ, ತಿದ್ದುಪಾಟಾದ ಅಂದಾಜಿನಲ್ಲಾಗಲೀ, ಒದಗಿಸದಿರುವ ಖರ್ಚುಗಳನ್ನು ಪ್ರಸಕ್ತವರ್ಷದ ಒಟ್ಟು ಹುಟ್ಟುವಳಿಯಿಂದ ಒದಗಿಸುವುದರಿಂದಲೂ, ಸಾಮಾನ್ಯ ಹುಟ್ಟುವಳಿಯಿಂದ $1\frac{1}{4}$ ಲಕ್ಷ ರೂಪಾಯಿಗಳನ್ನೂ, ವಿಶೇಷಬಾಬುಗಳ ಹುಟ್ಟುವಳಿಯಿಂದ 5 ಲಕ್ಷ ರೂಪಾಯಿಗಳನ್ನೂ ಚಾಲ್ತಿ ವರುಷದಲ್ಲಿ ಅನಾವೃತ ವೆಚ್ಚದ ಬಗ್ಗೆ ಮಾಡಿರುವ ಸ್ಪೆಸಲ್ ರಿಜರ್ವಿಗೆ ವರ್ಗಾಯಿಸುವುದರಿಂದಲೂ, 1923-24 ನೆಯ ಸಾಲಿನ ಒಟ್ಟು ಖರ್ಚು, ಬಡ್ಜೆಟ್ ಅಂದಾಜಿನಲ್ಲಿ ನಮೂದಿಸಿದ್ದ 330.87 ಲಕ್ಷ ರೂಪಾಯಿಗಳಿಗೆ ಬದಲಾಗಿ 330.45 ಲಕ್ಷ ರೂಪಾಯಿಗಳಾಗುತ್ತದೆ. ಈ ಮೇಲೆ ಹೇಳಿದ ಸ್ಪೆಸಲ್ ರಿಜರ್ವಿನ ಹಣವು ಪ್ರವಾಹಗಳಿಂದ ಉಂಟಾದ ನಷ್ಟ, ರಸ್ತೆಗಳು, ಸೇತುವೆಗಳು, ಮತ್ತು ನೀರಾವರಿ ಕಾಮಗಾರಿಗಳು ಇವುಗಳ ದುರಸ್ತಿ, ಮತ್ತು ಬೆಳೆಯಿಲ್ಲದ ಪ್ರಯುಕ್ತ ಸಂಭವಿಸಿರುವ ಕಷ್ಟನಿವಾರಣೆ ಕೆಲಸಗಳು—ಈ ಬಾಬುಗಳಿಗೆ ಆಗತಕ್ಕ ಭಾರೀ ವೆಚ್ಚವನ್ನು ಒದಗಿಸುವುದಕ್ಕೆ ಬೇಕಾಗುತ್ತದೆ. ಈರೀತಿ ಪ್ರಸಕ್ತವರ್ಷದ ಲೆಕ್ಕಗಳ ಜಮಾ ಖರ್ಚಿನ ಕೊನೆಯಲ್ಲಿ ನಾಮಮಾತ್ರವಾಗಿ ಸಿಲ್ಕು ಉಳಿಯುತ್ತವೆ. ಸಾಲಗಳ ಬಗ್ಗೆ ಏರ್ಪಡಿಸಿರುವ ಸಿಂಕಿಂಗ್ ಫಂಡಿಗೂ ಪ್ರಸಕ್ತ ವರ್ಷದ ಹುಟ್ಟುವಳಿಯಿಂದ ಹಣವನ್ನು ಪೂರ್ತಿಯಾಗಿ ಒದಗಿಸಿದೆಯೆಂದು ನಾವು ಈ ಸಂದರ್ಭದಲ್ಲಿ ಹೇಳಬಹುದಾಗಿದೆ. ಅಲ್ಲದೆ, ಕಳೆದ ಮೂರು ವರುಷಗಳಿಂದಲೂ ವರ್ಷಂಪ್ರತಿಯಲ್ಲಿಯೂ ಕ್ರಮವಾಗಿ ಈರೀತಿಯಲ್ಲಿ ಫಂಡಿಗೆ ಹಣವನ್ನು ಸೇರಿಸುತ್ತಾ ಬಂದುದರಿಂದ ಸರ್ಕಾರಿ ಸಾಲವು 90 ಲಕ್ಷ ರೂಪಾಯಿಗಳವರೆಗೆ ಕಡಮೆಯಾಗುವಂತೆ ಮಾಡಲು ನಮಗೆ ಸಾಧ್ಯವಾಯಿತೆಂದೂ ಸಹ ತಿಳಿಸಬಹುದಾಗಿದೆ.

ಈಗ ದೊಡ್ಡ ದೊಡ್ಡ ಇಲಾಖೆಗಳ ಪೈಕಿ ಕೆಲವು ಇಲಾಖೆಗಳ ಆಡಳಿತವನ್ನು ಕುರಿತು ಪ್ರಸ್ತಾಪಿಸುತ್ತೇವೆ.

ರೆವಿನ್ಯೂ ಇಲಾಖೆ.

ಜಮಿನು ಕಂದಾಯ ಮತ್ತು ರೆವಿನ್ಯೂ ಮಿಸಲೇನಿಯಸ್, ಈ ಬಾಬುಗಳಲ್ಲಿ ಹಿಂದಿನ ಸಾಲುಗಳ ಬಾಕಿಗಳೂ ಸೇರಿ ಈ ಸಾಲಿಗೆ ವಸೂಲಾಗಬೇಕಾದ ಮೊಬಲಗು 1,30,74,430 ರೂಪಾಯಿಗಳಾಗಿದ್ದಿತು. ಅದರ ಹಿಂದಿನ ಸಾಲಿನಲ್ಲಿ ಈ ಮೊಬಲಗು 1,30,44,600 ರೂಯಿಗಳಾಗಿದ್ದಿತು. ಪ್ರಸಕ್ತವರ್ಷದಲ್ಲಿ ವಸೂಲಾದ ಮೊಬಲಗು, 1,16,05,100 ರೂಪಾಯಿಗಳಾಗಿದ್ದಿತು. ಹಿಂದಿನ ಸಾಲಿನಲ್ಲಿ 1,20,56,016 ರೂಪಾಯಿಗಳು ವಸೂಲಾಗಿದ್ದುವು ಅಂತು, ಸಾಲಾಖೈರಿನಲ್ಲಿ 14,69,330 ರೂಪಾಯಿಗಳು ಬಾಕಿಯಾಗಿ ಉಳಿದಿದ್ದುವು. ಮಳೆಬೆಳೆಗಳಿಲ್ಲದೆ ಕಾಲಸ್ಥಿತಿಯು ಕಷ್ಟತರವಾಗಿದ್ದುದರಿಂದ ವಸೂಲಾತಿಯು ಕಡಮೆಯಾಗಲು ಕಾರಣವಾಯಿತು. ವಸೂಲಾಗಬೇಕಾಗಿದ್ದ ಮೊಬಲಗಿನಲ್ಲಿ ವಸೂಲಾದ ಮೊಬಲಗಿನ ಶೇಕಡಾವಾರು ಪ್ರಸಕ್ತವರ್ಷದಲ್ಲಿ 88.7 ಆಗಿದ್ದಿತು. ಅದರ ಹಿಂದಿನ ವರುಷ ಈ ಶೇಕಡಾವಾರು 93.79 ಆಗಿದ್ದಿತು.

ಮೇಲಿನ ದರ್ಜೆಯ ನೌಕರರ ಮತ್ತು ಜವಾನರ ಶಿಬ್ಬಂದಿಯನ್ನು ಕಡಮೆ ಮಾಡುವುದರ ಮೂಲಕವೂ, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಎಕ್ಸೈಜು ಬಾಬಿಗೆ ಸಂಬಂಧಪಟ್ಟ ಕೆಲಸಗಳನ್ನು ಹೊಸರೀತಿಯಲ್ಲಿ ವ್ಯವಸ್ಥೆ ಮಾಡುವುದರ ಮೂಲಕವೂ, ರೆವಿನ್ಯೂ ಇಲಾಖೆಯಲ್ಲಿ ವೆಚ್ಚವನ್ನು ತಗ್ಗಿಸಿದುದರ ಫಲಿತಾಂಶವಾಗಿ ಸಾಲೀಯಾನ 47,052 ರೂಪಾಯಿಗಳು ಮಿಗುವುದಕ್ಕೆ ಅವಕಾಶವಾಯಿತು.

ರೆವಿನ್ಯೂ ಇಲಾಖೆಗೆ ಬಿಟ್ಟುಕೊಡಲ್ಪಟ್ಟ ಒಟ್ಟು 71,504 ಎಕರೆಗಳಷ್ಟು ವಿಸ್ತೀರ್ಣವುಳ್ಳ ಅಮೃತಮಹಲ್ ಕಾವಲು ಜಮೀನುಗಳು 1923ನೆ

ಇಸ್ವಿ ಜುಲೈ 1 ನೇ ತಾರೀಖಿನಲ್ಲಿ ವಿಲೇವಾರಿಮಾಡತಕ್ಕ ಬಗ್ಗೆ ಸಿದ್ಧವಾಗಿದ್ದುವು. ಈ ಸಾಲಿನಲ್ಲಿ ಮತ್ತೆ ಹೊಸದಾಗಿ 6,296 ಎಕರೆಗಳು ಬಿಟ್ಟುಕೊಡಲ್ಪಟ್ಟುವು. ಇವುಗಳ ಪೈಕಿ 5,167 ಎಕರೆಗಳನ್ನು ಸಾಗುವಳಿ ಬಗ್ಗೆ ವಿಕರಿ ಮಾಡಲಾಯಿತು. ಮತ್ತು 282 ಎಕರೆಗಳನ್ನು ಜಮೀನುಗಳಿಲ್ಲದೆ ಪಂಗಡದವರಿಗೆ ಕೊಡತಕ್ಕ ಬಗ್ಗೆ ಪ್ರತ್ಯೇಕಿಸಿಡಲಾಯಿತು. ಮೇಲ್ಕಂಡ ಜಮೀನಿನ ಮಾರಾಟದಿಂದ ಒಟ್ಟು 82,144 ರೂಪಾಯಿಗಳು ಬಂದುವು.

ಸಾಮಾನ್ಯವಾದ ದರಖಾಸ್ತುಗಳ ಫೈಸಲಾತಿಯೂ ಸಹ ವಿಶೇಷ ಉತ್ತಮ ಸ್ಥಿತಿಗೆ ಬಂದಿರುತ್ತದೆ. ಹೇಗೆಂದರೆ, 19,942 ದರಖಾಸ್ತುಗಳ ಪೈಕಿ ಈ ಸಾಲಿನಲ್ಲಿ 14,348 ದರಖಾಸ್ತುಗಳು ಫೈಸಲ್ಮಾಡಲ್ಪಟ್ಟು ಸಾಲಾಖೈರಿನಲ್ಲಿ 5,594 ದರಖಾಸ್ತುಗಳು ಮಾತ್ರ ಬಾಕಿಯಲ್ಲಿ ನಿಂತಿದ್ದುವು. ಅದರ ಹಿಂದಿನ ಸಾಲಿನಲ್ಲಿ 7,940 ದರಖಾಸ್ತುಗಳು ಬಾಕಿಯಲ್ಲಿ ನಿಂತುಹೋಗಿದ್ದುವು.

ಮುಖ್ಯವಾದ ಎರಡು ಆಹಾರ ಧಾನ್ಯಗಳಾದ ರಾಗಿ ಮತ್ತು ಬತ್ತ, ಇವುಗಳೆರಡನ್ನೂ ಬೆಳೆದ ಜಮೀನಿನ ಒಟ್ಟು ವಿಸ್ತೀರ್ಣವು ಎಲ್ಲಾ ಡಿಸ್ಟ್ರಿಕ್ಟುಗಳೂ ಸೇರಿ ಪ್ರಸಕ್ತ ವರ್ಷದಲ್ಲಿ 28 ಲಕ್ಷ ಎಕರೆಗಳೂ, ಅದರ ಹಿಂದಿನ ಸಾಲಿನಲ್ಲಿ 29.35 ಲಕ್ಷ ಎಕರೆಗಳೂ ಆಗಿದ್ದಿತು. ಸದರಿ ವಿಸ್ತೀರ್ಣವು ಪ್ರಸಕ್ತ ವರ್ಷದಲ್ಲಿ ಕಡಿಮೆಯಾದುದಕ್ಕೆ ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಸಾಕಾದಷ್ಟು ಮಟ್ಟಿಗೆ ಮಳೆಯಾಗದೆ ಇದ್ದುದೇ ಕಾರಣ.

ಅಮಲ್ದಾರರುಗಳಿಗೂ ಮತ್ತು ಡೆಪ್ಯುಟಿ ಅಮಲ್ದಾರರುಗಳಿಗೂ ಕಾಲಕ್ರಮವಾಗಿ ತಲಬಿನಲ್ಲಿ ಬಡತಿಯು ದೊರೆಯತಕ್ಕ ಸ್ಕೇಲನ್ನು ವಿಧಾಯಕಮಾಡಿ ಅವರ ದರ್ಜೆಯಲ್ಲಿ ಪರಿಷ್ಕೃತವಾದ ಏರ್ಪಾಡನ್ನು ಮಂಜೂರ್ಮಾಡಿದುದಲ್ಲದೆ ಅವರಿಗೆ ಕ್ಲುಪ್ತವಾದ ಪ್ರಯಾಣದ ಭತ್ಯವು ಸಲ್ಲತಕ್ಕದೆಂದು ಹುಕುಂ ಮಾಡಲಾಯಿತು.

ರೆವಿನ್ಯೂ ಸರ್ವೆ.

ಈ ಸಾಲಿನಲ್ಲಿ ಹುಣಸೂರು, ಮೈಸೂರು, ನಾಗಮಂಗಲ, ಮಂಜರಾಬಾದು, ಚನ್ನರಾಯಪಟ್ಟಣ ಮತ್ತು ಹೊಸಕೋಟೆ ಈ ತಾಲ್ಲೂಕುಗಳಲ್ಲಿ ರೀ ಸರ್ವೆಯ ಏರ್ಪಾಡನ್ನು ಜಾರಿಯಲ್ಲಿ ತರಲಾಯಿತು. ಇದರಿಂದ 1,60,446 ರೂಪಾಯಿಗಳ ಹೆಚ್ಚಿನ ಹುಟ್ಟುವಳಿಯು ಬರುವಂತೆ ಅಂದಾಜುಮಾಡಲಾಗಿದೆ. ಸಾಲಿನ ಆದಿಭಾಗದಲ್ಲಿ ಅರೆವಾಸಿಯಾಗಿ ನಡೆದಿದ್ದ ಜಮೀನುಗಳನ್ನು ವಿಂಗಡಿಸತಕ್ಕ ಕೆಲಸವನ್ನು ಐದು ತಾಲ್ಲೂಕುಗಳಲ್ಲಿ ಪೂರ್ತಿಗೊಳಿಸಲಾಯಿತು. ಮತ್ತು ಪ್ರಸಕ್ತ ವರ್ಷ ಇನ್ನೂ ಮೂರು ತಾಲ್ಲೂಕುಗಳಲ್ಲಿ ಇದೇ ಕೆಲಸವನ್ನು ಕೈಗೊಳ್ಳಲಾಯಿತು. ಇನ್ನೂ 16 ತಾಲ್ಲೂಕುಗಳಲ್ಲಿ ರಿವಿಜನ್ ಸೆಟಲ್‌ಮೆಂಟು ಆಗತಕ್ಕದು ಬಾಕಿಯಲ್ಲಿ ನಿಂತುಹೋಗಿರುತ್ತದೆ.

ಎಕ್ಸೈಜು ಇಲಾಖೆ.

ಎಕ್ಸೈಜು ಇಲಾಖೆಯ ಒಟ್ಟು ಆದಾಯವು ಹಿಂದಿನ ಸಾಲಿನಲ್ಲಿ 77·73 ಲಕ್ಷ ರೂಪಾಯಿಗಳಾಗಿದ್ದುದಕ್ಕೆ ಬದಲಾಗಿ, ಈ ಸಾಲಿನಲ್ಲಿ 72·96 ಲಕ್ಷ ರೂಪಾಯಿಗಳಾಗಿರುತ್ತದೆ. ದುಕಾನುಗಳ ಹರಾಜು ಕಾಲದಲ್ಲಿ ಕಮ್ಮಿ ಸವಾಲುಗಳಾದುದರಿಂದಲೂ ಮತ್ತು ಸಾರಾಯಿ, ಶೇಂದಿ ಮತ್ತು ಗಾಂಜ, ಇವುಗಳನ್ನು ಉಪಯೋಗಿಸುವುದು ಕಡಮೆಯಾಗಿಹೋಗಿರುವುದರಿಂದಲೂ ಈ ರೀತಿ ಆದಾಯವು ತಗ್ಗುವುದಕ್ಕೆ ಕಾರಣವಾಗಿರುತ್ತದೆ.

ಫಾರೆಸ್ಟ್ ಇಲಾಖೆ.

ಒಟ್ಟು ಜಂಗಲಿ ಹುಟ್ಟುವಳಿಯು ಹಿಂದಣ ವರುಷ 26·52 ಲಕ್ಷ ರೂಪಾಯಿಗಳಾಗಿದ್ದುದು ಪ್ರಸಕ್ತ ವರ್ಷದಲ್ಲಿ 25·81 ಲಕ್ಷ ರೂಪಾಯಿಗಳಿಗೆ ತಗ್ಗಿಹೋಯಿತು. ಒಟ್ಟು ವೆಚ್ಚವು ಸುಮಾರು 7·37 ಲಕ್ಷ ರೂಪಾಯಿಗಳವರೆಗೆ ಆಯಿತು.

ಗಂಧದೆಣ್ಣೆಯ ಮಾರಾಟದಿಂದ 13,24,238 ರೂಪಾಯಿಗಳ ನಿವ್ವಳ ಹುಟ್ಟುವಳಿಯೂ, ಗಂಧದಮರದ ಚಿಲ್ಲರೆ ಮಾರಾಟದಿಂದ 8,273 ರೂಪಾಯಿಗಳೂ ಉತ್ಪತ್ತಿಯಾದುವು. ಪ್ರಸಕ್ತವರ್ಷದಲ್ಲಿ ಸುಮಾರು 1,500 ಟನ್ನುಗಳಷ್ಟು ಗಂಧದಮರವನ್ನು ಗಂಧದೆಣ್ಣೆಯ ಕಾರ್ಖಾನೆಗಳಿಗೆ ಒದಗಿಸಲಾಯಿತು.

ಮಹಾಮಹಿಮರಾದ ವೈಸರಾಯಿಯವರು ದಯಮಾಡಿಸಿದ್ದ ಕಾಲದಲ್ಲಿ ಕಾಕನಕೋಟೆ ಜಂಗಲುಗಳಲ್ಲಿ ಖೆಡ್ಡಾ ಕಾರ್ಯಗಳನ್ನು ನಡೆಸಲಾಯಿತು. ಮರಿಗಳೂ ಸೇರಿ ಒಟ್ಟು 58 ಆನೆಗಳನ್ನು ಹಿಡಿದು, ಅವುಗಳ ಪೈಕಿ 46 ಆನೆಗಳನ್ನು 64,850 ರೂಪಾಯಿಗಳಿಗೆ ವಿಕ್ರಯಿಸಲಾಯಿತು.

ಹುಲ್ಲುಗಾವಲುಗಳಲ್ಲಿ ದನಗಳನ್ನು ಮೇಯಿಸುವುದಕ್ಕಾಗಿ ಹೆಚ್ಚು ಸೌಕರ್ಯಗಳನ್ನು ಕಲ್ಪಿಸಿಕೊಡಲಾಯಿತು. ಡಿಸ್ಟ್ರಿಕ್ಟು ಜಂಗಲಿನ ಆಡಳಿತಕ್ಕೆ ಸಂಬಂಧಪಟ್ಟ ನಿಬಂಧನೆಗಳ ಕಾಠಿಣ್ಯವನ್ನು ಕಡಮೆ ಮಾಡುವುದರ ಮೂಲಕ ಮಲೆನಾಡಿನಲ್ಲಿರುವ ರೈತರಿಗೆ ಇದ್ದ ಕೊರತೆಗಳನ್ನು ಪರಿಹರಿಸಿ ಸಹಾಯ ಮಾಡಲಾಯಿತು. - ವಿಲೇಜ್ ಫಾರೆಸ್ಟ್ ಸ್ಕೀಮ್ - ಎಂದರೆ ಗ್ರಾಮಜಂಗಲಿ ಏರ್ಪಾಡನ್ನು ಮತ್ತಷ್ಟು ಅಭಿವೃದ್ಧಿಗೆ ತರಲಾಯಿತು.

ವರಮಾನದ ತೆರಿಗೆಯ ಇಲಾಖೆ.

ವರಮಾನದ ತೆರಿಗೆಯ ಹೊಸ ರೆಗ್ಯುಲೇಷನು 1923ನೆಯ ಇಸವಿ ಜುಲೈ 1ನೆಯ ತಾರೀಖಿನ ಲಾಗಾಯಿತು ಆಚರಣೆಗೆ ಬಂದಿತು. ವರಮಾನದ ತೆರಿಗೆಯಿಂದ ಒಟ್ಟು 12.24 ಲಕ್ಷ ರೂಪಾಯಿಗಳು ವಸೂಲಾದುವು. ಮತ್ತು "ಸೂಪರ್‌ಟ್ಯಾಕ್ಸ್" ಎಂಬ ಹೆಚ್ಚಿಗೆ ತೆರಿಗೆಯಿಂದ 5.47 ಲಕ್ಷ ರೂಪಾಯಿಗಳು ವಸೂಲಾದುವು. ವರುಷದ ಅಖೈರಿನಲ್ಲಿ ವಸೂಲಾಗಬೇಕಾಗಿದ್ದ ಬಾಕಿಯು 5.56 ಲಕ್ಷ ರೂಪಾಯಿಗಳು ಆಗಿದ್ದಿತು. ವರಮಾನದ ತೆರಿಗೆಯ ಆಡಳಿತದಲ್ಲಿ ಇರತಕ್ಕ ಕೆಲವು ನ್ಯೂನಾತಿರಿಕ್ತಗಳನ್ನು ಕುರಿತು, ಕೂಲಂಕಷವಾದ ಪರಿಶೋಧನೆಯನ್ನು ನಡೆಸುವಂತೆ ಸರ್ಕಾರದವರು ವರಮಾನದ ತೆರಿಗೆಯ ಕಮಿಷನರವರನ್ನು ಕೇಳಿದರು. ಇದರ ಫಲಿತಾಂಶವಾಗಿ, ವರಮಾನದ ತೆರಿಗೆಗೆ ಸಂಬಂಧಪಟ್ಟ ಅರ್ಜಿಗಳನ್ನೂ, ಅಪೀಲುಗಳನ್ನೂ ಹಿಡಿದು ವಿಚಾರಣೆಮಾಡಿ ವ್ಯವಸ್ಥೆ ಪಡಿಸುವ ವಿಚಾರವಾಗಿಯೂ ಲೆಕ್ಕಗಳ ತನಿಖೆಯ ವಿಚಾರವಾಗಿಯೂ ಯುಕ್ತವಾದ ಅನುಜ್ಞೆಗಳನ್ನುಕೊಟ್ಟು ಹುಕುಂ ಸಾದರ್ಮಾಡಲಾಯಿತು.

ಕೋರ್ಟುಗಳು.

ಕೋರ್ಟುಗಳ ಬಾಬಿನಲ್ಲಿ ಪ್ರಸಕ್ತವರ್ಷದಲ್ಲಿ 10.6 ಲಕ್ಷ ರೂಪಾಯಿಗಳು ವೆಚ್ಚವಾದುವು. ಅದರ ಹಿಂದಣವರುಷ ಇದೇ ಬಾಬಿನಲ್ಲಿ 10.43 ಲಕ್ಷ ರೂಪಾಯಿಗಳು ವೆಚ್ಚವಾಗಿದ್ದುವು. ಜೂರೀಪದ್ಧತಿಯನ್ನು ಎಂದರೆ ಪಂಚಾಯಿತರನ್ನಿಟ್ಟುಕೊಂಡು ವಿಚಾರಣೆಮಾಡುವ ಪದ್ಧತಿಯನ್ನು ಕೋಲಾರ ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ಜಾರಿಗೆ ತರಬೇಕೆಂಬ ಅಂಶವು ಪರ್ಯಾಲೋಚನೆಯಲ್ಲಿದೆ. ಜುಡಿಷಿಯಲ್ ಮತ್ತು ಎಗ್ಜಿಕ್ಯುಟಿವ್ ಅಧಿಕಾರಗಳನ್ನು ಪ್ರತ್ಯೇಕಿಸುವ ಏರ್ಪಾಡನ್ನು ಪ್ರಸಕ್ತವರ್ಷದಲ್ಲಿ ಕೋಲಾರ ಡಿಸ್ಟ್ರಿಕ್ಟಿನಲ್ಲಿಯೂ ಆಚರಣೆಗೆ ತರಲಾಯಿತು; ಅಲ್ಲದೆ ಚಾಲ್ತಿ ಸಾಲಿನಲ್ಲಿ ಸದರಿ ಏರ್ಪಾಡನ್ನು ಹಾಸನ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಜಾರಿಗೆ ತರತಕ್ಕದೆಂದು ಹುಕುಂ ಮಾಡಲಾಯಿತು.

ಸಿವಿಲ್ ಕೋರ್ಟುಗಳಲ್ಲಿ ಮೊಕದ್ದಮೆಗಳು ಫೈಸಲಾಗದೆ ವಿಶೇಷವಾಗಿ ಬಾಕಿಯಲ್ಲಿ ನಿಂತುಹೋಗುವುದನ್ನು ತಪ್ಪಿಸುವುದಕ್ಕಾಗಿ ಹಂಗಾಮಿಯಾಗಿ ಎರಡು ಅಡಿಷನಲ್ ಮುನಸೀಫ್ ಕೋರ್ಟುಗಳನ್ನು ಮೈಸೂರು ಮತ್ತು ಬೆಂಗಳೂರು ಸಿಟಿಗಳಲ್ಲಿಯೂ, ಒಂದು ಅಡಿಷನಲ್ ಸಬಾರ್ಡಿನೇಟ್ ಜಡ್ಜಿಗಳ ಕೋರ್ಟನ್ನು ಮೈಸೂರು ಸಿಟಿಯಲ್ಲಿಯೂ ಸ್ಥಾಪಿಸುವುದನ್ನು ಪ್ರಸಕ್ತವರ್ಷದಲ್ಲಿ ಮಂಜೂರ್ಮಾಡಲಾಯಿತು.

ಮೆಡಿಕಲ್ ಇಲಾಖೆ.

ಪ್ರಸಕ್ತವರ್ಷದಲ್ಲಿ ಮೂರು ಹೊಸ ಡಿಸ್ಪೆನ್ಸರಿಗಳು ಸ್ಥಾಪಿಸಲ್ಪಟ್ಟುವು; ಸರ್ಕಾರಿ ವರುಷದ ಅಖೈರಿನಲ್ಲಿ ಸಂಸ್ಥಾನದಲ್ಲಿ ಕೆಲಸ ನಡೆಸುತ್ತಿದ್ದ ಮೆಡಿಕಲ್ ಸಂಸ್ಥೆಗಳ ಒಟ್ಟು ಸಂಖ್ಯೆಯು 200ಕ್ಕೆ ಏರಿತು.

ನಾನಾ ಮೆಡಿಕಲ್ ಸಂಸ್ಥೆಗಳ ಆವಶ್ಯಕತೆಗಳಿಗೆ ತಕ್ಕಂತೆ ಆಯಾಯ ದರ್ಜೆಗಳ ಲೇಡಿ ಮೆಡಿಕಲ್ ಆಫೀಸರುಗಳ ಸಂಖ್ಯೆಯನ್ನೂ, ಅವರ ತಲಬಿನ ಪ್ರಮಾಣವನ್ನೂ, ಹೆಚ್ಚಿಸಿ ಸರಿಯಾದ ಅರ್ಹತೆಯಿರುವ ಲೇಡಿಡಾಕ್ಟರುಗಳು ಉತ್ಸಾಹದಿಂದ ನೌಕರಿಗೆ ಬಂದು ಸೇರುವುದಕ್ಕೆ ಏರ್ಪಾಡುಗಳನ್ನು ಮಾಡುವ ಅಂಶವು ಪರ್ಯಾಲೋಚನೆಯಲ್ಲಿರುವುದು.

ಜನಾರೋಗ್ಯ ಮತ್ತು ಸ್ಥಳಾರೋಗ್ಯ.

ಪ್ರಸಕ್ತವರ್ಷದಲ್ಲಿ 1,22,105 ಜನನಗಳೂ 1,15,563 ಮರಣಗಳೂ ರಿಜಿಸ್ಟರಿಗೆ ದಾಖಲ್ಮಾಡಲ್ಪಟ್ಟುವು. ಅದರ ಹಿಂದಿನವರುಷದಲ್ಲಿ 1,04,222 ಜನನಗಳೂ, 90,368 ಮರಣಗಳೂ ದಾಖಲಾಗಿದ್ದುವು. ಪ್ರಸಕ್ತವರ್ಷದ ಮರಣಸಂಖ್ಯೆಯು, ತತ್ರಾಪಿ ವಾಂತಿಭೇದಿ ಮತ್ತು ಜ್ವರಗಳ ದೆಸೆಯಿಂದ ಹಿಂದಿನ ವರುಷದ ಮರಣಸಂಖ್ಯೆಗಿಂತಲೂ ಅತ್ಯಧಿಕವಾಗಿದ್ದಿತು. ಆಹಾರಪದಾರ್ಥಗಳಿಗೆ ಬೆರಕೆ ಮಾಡುವುದನ್ನು ಅಡ್ಡಿಪಡಿಸತಕ್ಕ ರೆಗ್ಯುಲೇಷನ್ನಿನ ನಿಯಮಗಳನ್ನು ಪ್ರಸಕ್ತವರ್ಷದಲ್ಲಿ ಕೋಲಾರದ ಚಿನ್ನದ ಗಣಿಗಳ ಸ್ಯಾನಿಟರಿ ಬೋರ್ಡಿನ ಪ್ರದೇಶದಲ್ಲಿ ಜಾರಿಗೆ ತರಲಾಯಿತು. ಸಿಡುಬು ಹಾಕಿಸುವ ರೆಗ್ಯುಲೇಷನ್ನಿನ ಮತ್ತು ಜನನ ಮರಣಗಳನ್ನು ರಿಜಿಸ್ಟರ್ಮಾಡಿಸುವ ರೆಗ್ಯುಲೇಷನ್ನಿನ ನಿಯಮಗಳು ಗ್ರಾಮಾಂತರ ಪ್ರದೇಶಗಳಿಗೂ ಅನ್ವಯಿಸುವಂತೆ ಮಾಡಬೇಕೆಂಬ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಮೈಸೂರು ಸಿಡುಬುಹಾಕಿಸುವ ರೆಗ್ಯುಲೇಷನ್ನನ್ನು ಹೊಸದಾಗಿ ಮೂರು ಟವನುಗಳಲ್ಲಿ ಜಾರಿಗೆ ತಂದು, 30 ಮ್ಯುನಿಸಿಪಾಲಿಟಿಗಳಲ್ಲಿ ಅದನ್ನು ನಿರ್ಬಂಧದಿಂದ ಜಾರಿಯಲ್ಲಿ ತರುವ ಅವಧಿಯನ್ನು ಹೆಚ್ಚಿಸಲಾಯಿತು. ಪ್ರಸಕ್ತವರ್ಷದ ಅಂತ್ಯದಲ್ಲಿ ಒಟ್ಟು 91 ಮ್ಯುನಿಸಿಪಾಲಿಟಿಗಳಲ್ಲಿ ಈ ರೆಗ್ಯುಲೇಷನು ಜಾರಿಯಲ್ಲಿದ್ದಿತು. ಸಿಡುಬು ಹಾಕುವುದು ಸಂಸ್ಥಾನದಲ್ಲೆಲ್ಲಾ ನಿರ್ಬಂಧಕವಾಗಿರತಕ್ಕದೆಂದು ವಿಧಿಸುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಗ್ರಾಮಾರೋಗ್ಯದ ರೆಗ್ಯುಲೇಷನಿನ ನಿಯಮಗಳು ಪ್ರಸಕ್ತವರ್ಷದ ಅಖೈರಿನಲ್ಲಿ ಸುಮಾರು 13,230 ಗ್ರಾಮಗಳಲ್ಲಿ ಜಾರಿಯಲ್ಲಿದ್ದುವು. ಸ್ಥಳಾರೋಗ್ಯದ ರೆಗ್ಯುಲೇಷನಿನ ಮತ್ತು ಅದರ ನಿಬಂಧನೆಗಳ ನಿಯಮಗಳನ್ನು ಜಾರಿಗೆತರುವ ಅಧಿಕಾರವನ್ನು ಗ್ರಾಮಪಂಚಾಯಿತಿಗಳಿಗೆ ವಹಿಸಿ ಅದಕ್ಕೆ ತಕ್ಕಂತೆ ಲೋಕಲ್ ಬೋರ್ಡುಗಳ ಮತ್ತು ಗ್ರಾಮ ಪಂಚಾಯಿತಿಗಳ ರೆಗ್ಯುಲೇಷನಿನಲ್ಲಿ ತಿದ್ದುಪಾಟನ್ನು ಮಾಡುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಮಿಲಿಟರಿ.

ಸೈನ್ಯದ ಬಾಬಿನಲ್ಲಿ ವೆಚ್ಚವು ಪ್ರಸಕ್ತವರ್ಷದಲ್ಲಿ 16,17,533 ರೂಪಾಯಿಗಳಾಗಿದ್ದಿತು; ಅದರ ಹಿಂದಣ ವರ್ಷ ಈ ಬಾಬಿಗಾಗಿ 16.09 ಲಕ್ಷ ರೂಪಾಯಿಗಳು ವೆಚ್ಚವಾದುವು. ಬ್ರಿಟಿಷ್ ಇಂಡಿಯಾ ಸೈನ್ಯದ ಮಾದರಿಯನ್ನು ಅನುಸರಿಸಿ ಸಿಲೇದಾರಿ—ಕ್ಯಾವಲ್ರಿ ಯೂನಿಟ್ಟುಗಳನ್ನು ನಾನ್-ಸಿಲೇದಾರಿ ಯೂನಿಟ್ಟುಗಳನ್ನಾಗಿ ಪುನಃ ಏರ್ಪಡಿಸಲಾಗುವಂತೆಯೂ, ಇನ್‌ಫೆಂಟ್ರಿ (ಕಾಲ್ಬಲದ) ರಿಜಮೆಂಟು ಹೆಚ್ಚು ಸಮರ್ಪಕವಾದುದಾಗಿ, ಯುದ್ಧಕಾಲದಲ್ಲಿ ಹೆಚ್ಚು ಪ್ರಯೋಜನಕರವಾಗುವಂತೆ ಮಾಡುವುದಕ್ಕೂ, ಸಂಸ್ಥಾನದ ಸೈನ್ಯವನ್ನು ಪರಿಷ್ಕರಣಗೊಳಿಸುವ ವಿಷಯವನ್ನು ಪ್ರಸಕ್ತವರ್ಷದಲ್ಲಿ ಸರ್ಕಾರದವರು ಪರ್ಯಾಲೋಚಿಸಿರುತ್ತಾರೆ. ಟ್ರಾನ್ಸ್‌ಪೋರ್ಟ್ ಕೋರನ್ನು 7 ದಳಗಳಿಂದ 3 ದಳಗಳಿಗೆ ತಗ್ಗಿಸಲಾಯಿತು.

ಮೈಸೂರು ಯೂನಿವರ್ಸಿಟಿ.

ಯೂನಿವರ್ಸಿಟಿಯ ಎಲ್ಲಾ ಕಾಲೇಜುಗಳಲ್ಲಿಯೂ ಪ್ರಸಕ್ತವರ್ಷದಲ್ಲಿ 1,161 ಮಂದಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದರು; ಅದರ ಹಿಂದಣ ವರ್ಷ 1088 ಮಂದಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದರು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಿರುವುದರಿಂದ ಹೆಚ್ಚುಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಏರ್ಪಾಡುಗಳನ್ನು ಮಾಡಲಾಯಿತು; ಮತ್ತು ಹೊಸ ಡಿಸ್ಟ್ರಿಕ್ಟು ಆಫೀಸಿನ ಕಟ್ಟಡವನ್ನು ಯೂನಿವರ್ಸಿಟಿಯವರಿಗೆ ವಹಿಸಿ, ಅದಕ್ಕೆ ಬದಲಾಗಿ ಯೂನಿವರ್ಸಿಟಿಯ ಯೂನಿಯನ್ ಕಟ್ಟಡವನ್ನು ಸರ್ಕಾರಕ್ಕೆ ತೆಗೆದುಕೊಂಡಿದೆ. ಅನೇಕ ಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲನುಕೂಲಿಸುವಂತೆ ಬಿ.ಎ. ಡಿಗ್ರಿ ಪರೀಕ್ಷೆಯ ವ್ಯಾಸಂಗದ ವಿಷಯಗಳನ್ನು ಪುನಃ ವಿಂಗಡಿಸಿದೆ; ಮತ್ತು ಈ ಹೊಸ ಗ್ರೂಪುಗಳಲ್ಲಿ (ವಿಂಗಡಿಸಲ್ಪಟ್ಟ ವ್ಯಾಸಂಗ ವಿಷಯಗಳಲ್ಲಿ) ಗಣಿತಶಾಸ್ತ್ರವನ್ನು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗಮಾಡತಕ್ಕ ಒಂದು ವಿಷಯವನ್ನಾಗಿ ಸೇರಿಸಿದೆ. ಯೂನಿವರ್ಸಿಟಿಗೆ "ಮೆಡಿಕಲ್ ಫ್ಯಾಕಲ್ಟಿ" ಎಂದರೆ ವೈದ್ಯವಿದ್ಯಾಶಾಖೆಯನ್ನು ಸೇರಿಸಿ ಬೆಂಗಳೂರಿನಲ್ಲಿ ಈ ವರುಷದಿಂದ ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪಿಸಲಾಗಿದೆ. ಪ್ರಸಕ್ತವರ್ಷದಲ್ಲಿ ಯೂನಿವರ್ಸಿಟಿಯಲ್ಲಿ ಒಟ್ಟು ಇನ್ನೂರನಲವತ್ತೆಂಟು ಮಂದಿ ಗ್ರಾಜುಯೇಟುಗಳಾದರು; ಹೀಗೆ ತೇರ್ಗಡೆಹೊಂದಿದವರ ಶೇಕಡಾವಾರು 50.3 ಆಗಿದ್ದಿತು. ಎಂ.ಎ. ಡಿಗ್ರಿ ಪರೀಕ್ಷೆಗೆಹೋಗಿದ್ದ 14 ಜನರ ಪೈಕಿ ಒಂಬತ್ತುಮಂದಿ ತೇರ್ಗಡೆಯಾಗಿರುತ್ತಾರೆ, ಇವರ ಪೈಕಿ ಇಬ್ಬರು ಸ್ತ್ರೀಯರು; ಕಳೆದವರ್ಷ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರ ಪೈಕಿ, ಐದು ಜನ ವಿದ್ಯಾರ್ಥಿನಿಯರಿದ್ದರು; ಇವರ ಪೈಕಿ ಇಬ್ಬರು ಹಿಂದುಳಿದ ಪಂಗಡಗಳಿಗೆ ಸೇರಿದವರು. ಪ್ರಸಕ್ತವರ್ಷದಲ್ಲಿ ಒಂಬತ್ತು ಯೂನಿವರ್ಸಿಟಿ ಎಕ್ಸ್‌ಟೆನ್‌ಷನ್ ಲೆಕ್ಚರು (ಉಪನ್ಯಾಸ) ಗಳು ಕೊಡಲ್ಪಟ್ಟುವು; ಇವುಗಳ ಪೈಕಿ ಮೂರು ಕನ್ನಡಭಾಷೆಯಲ್ಲಿ ಕೊಡಲ್ಪಟ್ಟುವು. ಸದರಿ ವರುಷದಲ್ಲಿ 15,200 ರೂಪಾಯಿಗಳ ಬೆಲೆ ಬಾಳತಕ್ಕ ಆರು ಹೊಸ ಎಂಡೋಮೆಂಟು (ಧರ್ಮಾರ್ಥದಫಂಡು) ಗಳು ಅಂಗೀಕರಿಸಲ್ಪಟ್ಟುವು. ತಹಲ್‌ವರೆಗೆ ಯೂನಿವರ್ಸಿಟಿಯಲ್ಲಿರುವ ಎಂಡೋಮೆಂಟುಗಳ ಒಟ್ಟು ಸಂಖ್ಯೆಯು 45; ಅವುಗಳ ಮೊಬಲಗು 1,94,034 ರೂಪಾಯಿಗಳಾಗುತ್ತದೆ. ಯೂನಿವರ್ಸಿಟಿಯಲ್ಲಿ ಹಿಂದುಳಿದ ಪಂಗಡಗಳಿಗೆ ಕೊಡುತ್ತಿದ್ದ ವಿದ್ಯಾರ್ಥಿವೇತನಗಳ ಸಂಖ್ಯೆಯನ್ನು 60 ರಿಂದ 72ಕ್ಕೆ ಹೆಚ್ಚಿಸಲಾಯಿತು. ಜನಾಂಗಗಳ ನಾಗರಿಕತೆ ಮತ್ತು ಮೇಧಾಶಕ್ತಿಯ ವಿಷಯಕವಾದ ಚರಿತ್ರೆ (ಕಲ್ಚರಲ್ ಹಿಸ್ಟರಿ) ಯಲ್ಲೂ, ಮತ್ತು ಪ್ರಾಚೀನವಸ್ತುಶಾಸ್ತ್ರದಲ್ಲೂ, ವಿದೇಶಗಳಲ್ಲಿ ತರಬೇತನ್ನು ಪಡೆಯುವುದಕ್ಕಾಗಿ ಮಹಾರಾಜರವರ ಕೊಲಿಜಿಯೇಟ್ ಹೈಸ್ಕೂಲಿನಿಂದ ಒಬ್ಬ ಲೆಕ್ಚರರನ್ನು ಚುನಾಯಿಸಿದೆ.

ವಿದ್ಯಾಭ್ಯಾಸ.

ಕಳೆದ ಕೆಲವು ವರ್ಷಗಳಿಂದಲೂ ಹಣಕಾಸಿಗೆ ಮುಗ್ಗಟ್ಟಾಗಿರುವುದರ ದೆಸೆಯಿಂದ, ವಿದ್ಯಾಭ್ಯಾಸದ ಮೆಮೋರ್ಯಾಂಡಂ ಮೇಲಣ ಹುಕುಮಿನಲ್ಲಿ ಮಂಜೂರ್ಮಾಡಿದ್ದ ಏರ್ಪಾಡುಗಳನ್ನೆಲ್ಲಾ ಸರ್ಕಾರದವರು ಜಾರಿಗೆ ತರುವುದಕ್ಕಾಗಲಿಲ್ಲವೆಂಬ ಅಂಶವು ಈ ಸಭೆಯವರಿಗೆ ತಿಳಿದೇ ಇದೆ. ಹಣವು ದೊರೆಯುವ ಹಾಗೆಲ್ಲಾ ಅವುಗಳನ್ನು ಆಚರಣೆಗೆ ತರಲು ಕ್ರಮವನ್ನು ಜರುಗಿಸುತ್ತಿದೆ. ಮೊದಲಿದ್ದಂತೆ ಇನ್ಸ್‌ಪೆಕ್ಟರುಗಳ ಅಧಿಕಾರವ್ಯಾಪ್ತಿಗೊಳಪಟ್ಟ ಪ್ರದೇಶಗಳನ್ನು ವಿಂಗಡಿಸಿ ನೇಮಕಮಾಡಿ ಕೊಡುತ್ತಿದ್ದ ಪದ್ಧತಿಯನ್ನು ತಪ್ಪಿಸಿ, ವಿದ್ಯಾಭ್ಯಾಸದ ಗ್ರೇಡುಗಳನ್ನು ವಿಂಗಡಿಸಿ ಅವುಗಳಿಗನುಸಾರವಾಗಿ ಅವರ ಅಧಿಕಾರವನ್ನು ನಿರ್ಣಯಮಾಡಿ ಇನ್ಸ್‌ಪೆಕ್ಟರುಗಳಿಗೆ ಸ್ಕೂಲುಗಳ ಮೇಲ್ವಿಚಾರಣೆಯ ಕೆಲಸವನ್ನು ಕೊಟ್ಟು ಇಬ್ಬರು ಇನ್ಸ್‌ಪೆಕ್ಟರ್ ಹುದ್ದೆಯ ಸುಪೀರಿಯರ್ ಸಿಬ್ಬಂದಿಯ ಕೆಲಸವನ್ನು ಈಚೆಗೆ ಪುನಃ ಕ್ರಮಪಡಿಸಿದೆ ಸೈನ್ಸ್ ವಿದ್ಯಾಭ್ಯಾಸದ ಮೇಲ್ವಿಚಾರಣೆಗಾಗಿ ಪ್ರತ್ಯೇಕವಾಗಿ ಒಬ್ಬ ಆಫೀಸರನ್ನು ನೇಮಕಮಾಡಿದೆ. ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸಕ್ರಮವನ್ನು ತಿದ್ದುಪಾಟುಮಾಡಿದೆ. ಮಹಮ್ಮದೀಯರ ವಿದ್ಯಾಭ್ಯಾಸದ ಸಮ್ಮೇಳನದ (ಕಾನ್‌ಫರೆನ್ಸಿನ), ನಿರ್ಣಯಗಳಿಗನುಸಾರವಾಗಿ, ಮಹಮ್ಮದೀಯ ಪಂಗಡದವರ ವಿದ್ಯಾಭ್ಯಾಸದ ವಿಷಯದಲ್ಲಿ ಇಲಾಖೆಯವರಿಗೆ ಸಲಹೆಗಳನ್ನು ಕೊಡುವುದಕ್ಕಾಗಿ ಒಂದು ಅಡ್ವೈಜರಿ ಕಮಿಟಿಯನ್ನು (ಎಂದರೆ, ಸಲಹೆಗಳನ್ನು ಕೊಡತಕ್ಕ) ಕಮಿಟಿಯನ್ನು ಏರ್ಪಡಿಸಲಾಗಿದೆ; ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳಿಗಾಗಿ ಕೊಟ್ಟಿರುವ ಹಣದ ಸ್ವಲ್ಪ ಭಾಗವನ್ನೂ ಮತ್ತು ಅಲಿಘರಿನ ವಿದ್ಯಾರ್ಥಿವೇತನಗಳ ಮೊಬಲಗನ್ನೂ ಸೇರಿಸಿ ಮಹಮ್ಮದೀಯ ವಿದ್ಯಾರ್ಥಿವೇತನಗಳ ಫಂಡನ್ನು ಏರ್ಪಡಿಸಿದೆ. ಮೈಸೂರಿನಲ್ಲಿರುವ ಜನಾನಾ ನಾರ್ಮಲ್ ಸ್ಕೂಲನ್ನು ಮಹಮ್ಮದೀಯ ಸ್ತ್ರೀಯರ ಬೋರ್ಡಿಂಗ್ ಸ್ಕೂಲನ್ನಾಗಿ ಮಾರ್ಪಡಿಸಲಾಯಿತು. ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳಿಗಾಗಿ ಒದಗಿಸಲ್ಪಟ್ಟಿದ್ದ ದ್ರವ್ಯವು ಒಂದು ಲಕ್ಷಕ್ಕೆ ಹೆಚ್ಚಿಸಲ್ಪಟ್ಟಿತು. ವಿದ್ಯಾರ್ಥಿ ವೇತನಗಳ ಸಂಖ್ಯೆಯೂ ಸಹ ಹೆಚ್ಚಿಸಲ್ಪಟ್ಟಿದೆ. ಬೆಂಗಳೂರಿನಲ್ಲಿರುವ ಪಂಚಮರ ವಿದ್ಯಾರ್ಥಿಗಳ ಬೋರ್ಡಿಂಗ್ ಹೋಮಿನಲ್ಲಿ ವಾಸಿಸುವ ವಿದ್ಯಾರ್ಥಿಗಳ ಸಂಖ್ಯೆಯನ್ನು 12ರಿಂದ 38ಕ್ಕೆ ಹೆಚ್ಚಿಸಲಾಯಿತು; ಮತ್ತು ಈ ವರ್ಗದ ವಿದ್ಯಾರ್ಥಿಗಳು ಅಡ್ಮಿಷನ್ ಫೀಜನ್ನೂ, ಕ್ಲಾಸ್ ಫೀಜನ್ನೂ, ಪರೀಕ್ಷೆಯ ಫೀಜನ್ನೂ ಕೊಡಬೇಕಾದುದಿಲ್ಲವೆಂಬ ವಿನಾಯಿತಿಯು ಇನ್ನೂ ಮೂರು ವರುಷಗಳ ಕಾಲ ಜಾರಿಯಲ್ಲಿರತಕ್ಕದೆಂದೂ ಹುಕುಂ ಮಾಡಲಾಯಿತು. ಪ್ರೈಮರಿ ಸ್ಕೂಲುಗಳ ಕಟ್ಟಡಗಳ ಕೆಲವು ಮಾದರಿಗಳನ್ನು ಸರ್ಕಾರದವರು ಈಚೆಗೆ ಮಂಜೂರುಮಾಡಿರುತ್ತಾರೆ. ಅಲ್ಲದೆ, 1917ನೆಯ ಇಸವಿಯಲ್ಲಿ ಡಿಸ್ಟ್ರಿಕ್ಟು ಬೋರ್ಡುಗಳಿಗೆ ವರ್ಗಾಯಿಸಲ್ಪಟ್ಟ ಲೋಕಲ್ ಫಂಡಿನ ಸಾಮಾನ್ಯ ಬಾಬಿನ ಮೊಬಲಗಿನ ಪೈಕಿ ಬಹು ಭಾಗವನ್ನೂ, ಸ್ಟೇಟ್‌ಫಂಡಿನಿಂದ ಮಂಜೂರ್ಮಾಡಲ್ಪಟ್ಟಿರುವ 53,500 ರೂಪಾಯಿಗಳನ್ನೂ, ಸೆಸ್ಸ್ ವರಮಾನದಿಂದ ಕೊಟ್ಟಿರುವ 9,800 ರೂಪಾಯಿಗಳನ್ನೂ, ಈ ಕಟ್ಟಡಗಳಿಗಾಗಿ ವಿನಿಯೋಗಿಸತಕ್ಕದೆಂದು ಸಹಾ ಹುಕುಂ ಮಾಡಲಾಗಿದೆ. ಅನೇಕ ಸ್ಕೂಲು ಕಟ್ಟಡಗಳನ್ನು ಕಟ್ಟಿಸಬೇಕಾಗಿರುವುದರಿಂದ ಈ ಹೆಚ್ಚಿನ ಕೆಲಸವನ್ನು ನಿರ್ವಹಿಸತಕ್ಕ ಬಗ್ಗೆ ವಿದ್ಯಾಭ್ಯಾಸದ ಇಲಾಖೆಯಲ್ಲಿನ ಇಂಜನಿಯರಿಂಗ್ ಸಿಬ್ಬಂದಿಯನ್ನು ಹೆಚ್ಚಿಸಲಾಯಿತು. ಬೆಂಗಳೂರಿನಲ್ಲಿರುವ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿಗೆ ಎಲ್ಲಾ ಪಂಗಡಗಳ ವಿದ್ಯಾರ್ಥಿಗಳು ಸೇರಲು ಅವಕಾಶವನ್ನು ಕೊಡತಕ್ಕ ಬಗ್ಗೆ ಹುಕುಂ ಸಾದರ್ಮಾಡಲಾಯಿತು. ಬೆಂಗಳೂರು ಸಂಸ್ಕೃತ ಕಾಲೇಜಿನ ಮೇಲ್ತನಿಖೆಯ ಕೆಲಸವನ್ನು ಮುಜರಾಯಿ ಇಲಾಖೆಯಿಂದ ವಿದ್ಯಾಭ್ಯಾಸದ ಇಲಾಖೆಗೆ ವರ್ಗಾಯಿಸಿದೆ. ಈ ಕಾಲೇಜಿನಲ್ಲಿ ವ್ಯಾಸಂಗದ ಕ್ರಮವನ್ನು ತಿದ್ದುಪಾಟುಮಾಡತಕ್ಕ ಬಗ್ಗೆ ಒಂದು ಕಮಿಟಿಯನ್ನು ಏರ್ಪಡಿಸಲಾಗಿದೆ. ಪ್ರಸಕ್ತವರ್ಷದ ಅಖೈರಿನಲ್ಲಿ 8,894 ವಿದ್ಯಾಸಂಸ್ಥೆಗಳಿದ್ದುವು; ಎಂದರೆ ವರ್ಷದ ಪ್ರಾರಂಭದಲ್ಲಿದ್ದುದಕ್ಕಿಂತ 100 ಸಂಸ್ಥೆಗಳು ಹೆಚ್ಚಾದುವು; ಎಜುಕೇಷನ್ ಸೆಸ್ಸೆಂಬ ವಿದ್ಯಾಭ್ಯಾಸದ ತೆರಿಗೆಯನ್ನು ವಸೂಲುಮಾಡಿ ಹೊಸ ಪಾಠಶಾಲೆಗಳನ್ನು ಸ್ಥಾಪಿಸಿದುದರಿಂದಲೂ ಎ.ವಿ. ಸ್ಕೂಲುಗಳನ್ನು ಮಿಡ್ಲ್ ಸ್ಕೂಲುಗಳನ್ನಾಗಿಯೂ ಪ್ರೈಮರಿ ಸ್ಕೂಲುಗಳನ್ನಾಗಿಯೂ ಪ್ರತ್ಯೇಕಿಸಿದುದರಿಂದಲೂ ಪಾಠಶಾಲೆಗಳ ಸಂಖ್ಯೆಯು ಈ ರೀತಿ ಹೆಚ್ಚುವುದಕ್ಕೆ ಅವಕಾಶವಾಯಿತು. ಏಡೆಡ್ ಸ್ಕೂಲುಗಳಿಗೆ ಒಂದೊಂದಕ್ಕೆ 2 ರೂಪಾಯಿಗಳ ಮೇರೆಗೆ ಗ್ರಾಂಟನ್ನು ಹೆಚ್ಚು ಮಾಡಲಾಯಿತು. ಪಾಠಶಾಲೆಗಳಲ್ಲಿ ಪ್ರಸಕ್ತವರ್ಷದ ಅಂತ್ಯದಲ್ಲಿ ಒಟ್ಟು 3,01,286 ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದರು. ಅದರ ಹಿಂದಿನವರುಷದ ಅಖೈರಿನಲ್ಲಿ ಒಟ್ಟು 2,87,794 ಮಂದಿಗಳು ವ್ಯಾಸಂಗಮಾಡುತ್ತಿದ್ದರು. ಹೈಸ್ಕೂಲ್ ಮತ್ತು ಯೂನಿವರ್ಸಿಟಿ ಎಂಟ್ರೆನ್ಸ್ ತರಗತಿಗಳಲ್ಲಿ 700 ಮಂದಿ ವಿದ್ಯಾರ್ಥಿಗಳು ಹೆಚ್ಚಿದುದರಿಂದ ಏಳು ಹೈಸ್ಕೂಲುಗಳಲ್ಲಿ ಹೆಚ್ಚು ಸೆಕ್ಷನ್‌ಗಳನ್ನು ಏರ್ಪಡಿಸಬೇಕಾಯಿತು. ಮಲ್ಲೇಶ್ವರದಲ್ಲಿ ಒಂದು ಹೊಸ ಹೈಸ್ಕೂಲನ್ನೂ ಸಹ ಸ್ಥಾಪಿಸಲಾಯಿತು.

ವ್ಯವಸಾಯದ ಇಲಾಖೆ.

ಕಾಲಸ್ಥಿತಿಗಳು ಪ್ರತಿಕೂಲವಾಗಿದ್ದುದರ ದೆಸೆಯಿಂದ ವ್ಯವಸಾಯದ ಇಲಾಖೆಯ ಕೆಲಸಕ್ಕೆ ಬಹುಮಟ್ಟಿಗೆ ಪ್ರತಿಬಂಧಕವುಂಟಾಯಿತು. ಈ ಇಲಾಖೆಯವರು ರಾಗಿ, ಜೋಳ, ಬತ್ತ, ಕಬ್ಬು, ಮತ್ತು ಅಡಿಕೆ ಇವುಗಳಿಗೆ ಬೇರೆ ಬೇರೆ ಗೊಬ್ಬರಗಳನ್ನು ಹಾಕಿ ಅದರ ಫಲಿತಾಂಶವನ್ನು ಪರೀಕ್ಷಿಸಿ ನೋಡುವ ಕೆಲಸವನ್ನು ನೆರವೇರಿಸಿದರು. ಕೊಳೆರೋಗವು ಬಾರದಂತೆ ಎರಡು ಸಾವಿರದ ಏಳುನೂರ ಎಕರೆಗಳಷ್ಟು ವಿಸ್ತೀರ್ಣವುಳ್ಳ ಅಡಿಕೆ ತೋಟಗಳಿಗೆ ಪಿಚಕಾರಿಯಿಂದ ಔಷಧವನ್ನೆರಚುವ ಕೆಲಸವನ್ನು ನಡೆಸಲಾಯಿತು. ಅಲ್ಲದೆ, ಔಷಧವನ್ನೆರಚುವ 460 ಪಿಚಕಾರಿಯ ಯಂತ್ರಗಳನ್ನು ವಿಕರಿ ಮಾಡಲಾಯಿತು. ಕಾಫಿ ಸೊಸಿಗಳಿಗೆ ತಗಲುವ "ಬ್ಲ್ಯಾಕ್‌ರಾಟ್" ಎಂಬ ರೋಗದ ಪ್ರತಿಕ್ರಿಯೆಯ ಪ್ರಥಮ ನಿದರ್ಶನವನ್ನು ಬಾಬಾಬುಡನ್ ಬೆಟ್ಟದ ಕಾಫಿ ತೋಟಗಳಲ್ಲಿ ನಡೆಸಿದುದಾಯಿತು. ಅದು ಕೇವಲ ಪ್ರಯೋಜನಕರವಾಗಿರುವಂತೆ ಕಂಡು ಬಂದಿತು.

ಪ್ರಸಕ್ತವರ್ಷದಲ್ಲಿ ಅಮೃತಮಹಲ್ ಇಲಾಖೆಯನ್ನು ಮೈಸೂರು ಸಂಸ್ಥಾನದ ಸೈನ್ಯಗಳ ಚೀಫ್ ಕಮ್ಯಾಂಡೆಂಟರವರ ಹತೋಟಿಯಿಂದ ವ್ಯವಸಾಯದ ಇಲಾಖೆಯ ಡೈರೆಕ್ಟರವರ ಹತೋಟಿಗೆ ವರ್ಗಾಯಿಸಿ, "ಲೈವ್ ಸ್ಟಾಕ್ ಎಕ್ಸ್‌ಪರ್ಟ್" ಎಂದರೆ ಪಶುಪಾಲನಾಕಲೆಯ ನಿಪುಣರ ಚಾರ್ಜಿನಲ್ಲಿ ಇರಿಸಲಾಯಿತು.

ಪಶುಪಾಲನಾ ಶಾಖೆಯಲ್ಲಿ, ಮಿಶ್ರಜಾತಿಯ ಹಾಲುಸ್ಟೈನ್ ತರಹೆಯ ಪಶುಗಳ ತಳಿಯನ್ನು ಪಡೆಯುವ ಕೆಲಸವು ಮುಂದುವರಿಸಲ್ಪಟ್ಟಿತು. ಕಳೆದ ಜೂನ್ ಮಾಹೆ 30 ನೆಯ ತಾರೀಖಿನಲ್ಲಿ ಪಶುಪಾಲನಾ ಕ್ಷೇತ್ರದಲ್ಲಿ 53 ಹಸುವಿನ ಕಡಸುಗಳು ಇದ್ದುವು. ಈ ಸಾಲಿನಲ್ಲಿ, 6 ಮೆರೀನೋ ಜಾತಿಯ ಟಗರುಗಳನ್ನೂ ಮತ್ತು 6 ಕುರಿಗಳನ್ನೂ, ಆಸ್ಟ್ರೇಲಿಯಾ ದೇಶದಿಂದ ಈ ದೇಶಕ್ಕೆ ತರಿಸಿಕೊಳ್ಳಲಾಯಿತು; ಈ ಆರು ಕುರಿಗಳಲ್ಲಿ ಎರಡು ಸತ್ತುಹೋದುವು. ಮಿಕ್ಕ 4 ಕುರಿಗಳು ಗಂಡು ಮರಿಗಳನ್ನು ಹಾಕಿದುವು. ಈ ಸಾಲಿನಲ್ಲಿ ಮಿಶ್ರಜಾತಿಯ ಹನ್ನೊಂದು ಟಗರುಗಳನ್ನು ಜನರಿಗೆ ಹಂಚಲಾಯಿತು.

ಕೊನೆಯ ಪರೀಕ್ಷೆಯಲ್ಲಿ, ಹೆಬ್ಬಾಳಿನ ಸ್ಕೂಲಿನಿಂದ 3 ಜನ ವಿದ್ಯಾರ್ಥಿಗಳು ತೇರ್ಗಡೆಯನ್ನು ಹೊಂದಿದರು. ಈ ಸಾಲಿನಲ್ಲಿ 21 ಜನಗಳನ್ನು ಸೇರಿಸಿಕೊಳ್ಳಲಾಗಿದೆ. ಪ್ರಸಕ್ತವರ್ಷದಲ್ಲಿ ಚಿಕ್ಕನಹಳ್ಳಿ ವ್ಯವಸಾಯದ ಸ್ಕೂಲಿನಿಂದ ಪರೀಕ್ಷೆಗೆ ಹೋಗಿದ್ದ 16 ಜನ ವಿದ್ಯಾರ್ಥಿಗಳ ಪೈಕಿ 15 ಜನಗಳು ತಮ್ಮ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಪಶುಪಾಲನೆ ಮತ್ತು ಪಶುವೈದ್ಯದ ಇಲಾಖೆಗಳೂ ಸೇರಿ ವ್ಯವಸಾಯದ ಇಲಾಖೆಯಲ್ಲಿ ಪ್ರಸಕ್ತವರ್ಷದಲ್ಲಿ ಒಟ್ಟು 5,30,487 ರೂಪಾಯಿ

ಗಳು ವೆಚ್ಚವಾದುವು. ಅದರ ಹಿಂದಣ ವರುಷ ಒಟ್ಟು 5,44,361 ರೂಪಾಯಿಗಳು ವೆಚ್ಚವಾಗಿದ್ದುವು;

ಕೈಗಾರಿಕೆಗಳ ಮತ್ತು ವಾಣಿಜ್ಯದ ಇಲಾಖೆ.

ಕೆಲವು ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸತಕ್ಕ ಬಗ್ಗೆ ಮುಖ್ಯವಾಗಿ ಈ ಕೆಳಗೆ ಕಂಡ ಬಾಬುಗಳಲ್ಲಿ ಪ್ರಯೋಗ ಕ್ರಿಯೆಗಳನ್ನು ನಡೆಸಲಾಯಿತು—

(1) ಅರಗಿನ ತಯಾರಿ. ಕಚ್ಚಾ ಪದಾರ್ಥಗಳನ್ನು ಹದಮಾಡುವುದಕ್ಕಾಗಿಯೂ ಮತ್ತು ಕಾಚನ್ನು ತಯಾರುಮಾಡುವುದಕ್ಕಾಗಿಯೂ ಯಂತ್ರವನ್ನು ಉಪಯೋಗಿಸುವುದು.

(2) ಬಟ್ಟೆಯ ಕೈಗಾರಿಕೆಯನ್ನು ಉತ್ತಮಪಡಿಸುವುದು.

(3) ಉಣ್ಣೆಯ ದಾರವನ್ನು ತಯಾರುಮಾಡುವುದಕ್ಕಾಗಿ ಮನೆಯಲ್ಲಿ ಕೆಲಸಮಾಡತಕ್ಕ ಒಂದು ಸಣ್ಣ ಯಂತ್ರವನ್ನು ಬಳಕೆಗೆ ತರುವುದು.

(4) ರೇಷ್ಮೆಯನ್ನು ಹುರಿಮಾಡುವುದಕ್ಕೆ ರಾಟೆಯ ಯಂತ್ರವನ್ನು (ಫಿಲೇಚರನ್ನು) ಉಪಯೋಗಿಸುವುದು.

ಪ್ರಸಕ್ತವರ್ಷದಲ್ಲಿ ಕೈಗಾರಿಕೆಯ ಸಾಲಗಳ ಬಗ್ಗೆ ಬಂದ 6 ಅರ್ಜಿಗಳನ್ನು ಮಂಜೂರುಮಾಡಲಾಯಿತು. ಖಜಾನೆಯಿಂದ ತೆಗೆದುಕೊಂಡ ಒಟ್ಟು ಮೊಬಲಗು 1922-23 ನೆಯ ಸಾಲಿನಲ್ಲಿ 41,997 ರೂಪಾಯಿಗಳು ಆಗಿದ್ದುದು, ಪ್ರಸಕ್ತವರ್ಷದಲ್ಲಿ 40,082 ರೂಪಾಯಿಗಳು ಆಯಿತು, ತಕಾವಿ ಸಾಲಗಳನ್ನು ಕೊಡುವ ಪದ್ಧತಿಯನ್ನು ಆಚರಣೆಗೆ ತಂದಲಾಗಾಯಿತು, 1924 ನೆಯ ಇಸವಿ ಜೂನ್ ತಿಂಗಳ ಕೊನೆಯವರೆಗೆ 8,90,472 ರೂಪಾಯಿಗಳನ್ನು ಸಾಲವಾಗಿ ಕೊಡಲಾಗಿದೆ ; ಈ ಪೈಕಿ 4,77,055 ರೂಪಾಯಿಗಳು ವಸೂಲಾಗಿವೆ.

ಬ್ರಿಟಿಷ್ ಎಂಪೈರ್ ಎಗ್ಜಿಬಿಷನ್ನಲ್ಲಿ (ಬ್ರಿಟಿಷ್ ಸಾಮ್ರಾಜ್ಯದ ಪ್ರದರ್ಶನದಲ್ಲಿ) ಮೈಸೂರು ಸೀಮೆಯ ಪ್ರದರ್ಶನದ ವಸ್ತುಗಳ ಸುಪರ್ದಿನಲ್ಲಿರುವಂತೆ ವೆಂಬ್ಲಿಗೆ ಇಂಡಸ್ಟ್ರಿಯಲ್ ಕೆಮಿಸ್ಟರನ್ನು ಕಳುಹಿಸಲಾಯಿತು. ಈ ವಸ್ತುಗಳು ಜನರಿಗೆ ವಿಶೇಷವಾಗಿ ಮನೋರಂಜಕವಾಗಿದ್ದುವೆಂದೂ, ದಂತದ ಕೆತ್ತನೆಯಲ್ಲಿ ಕಂಡುಬಂದ ಕಲಾಕೌಶಲ್ಯವೂ, ಗಂಧದಮರದ ಕೆತ್ತನೆಯಕೆಲಸವೂ, ಇತರ ಪದಾರ್ಥಗಳೂ, ಮೆಚ್ಚಿಗೆಗೆ ಪಾತ್ರವಾದುವೆಂದೂ ವರದಿಯು ಬಂದಿರುತ್ತದೆ.

ಈ ಇಲಾಖೆಯ ಒಟ್ಟು ವೆಚ್ಚವು 1922-23 ನೆಯ ಸಾಲಿನಲ್ಲಿ 1.33 ಲಕ್ಷ ರೂಪಾಯಿಗಳಾಗಿದ್ದುದು, ಪ್ರಸಕ್ತವರ್ಷದಲ್ಲಿ 1.57 ಲಕ್ಷ ರೂಪಾಯಿಗಳಾಯಿತು. (ಸಶೇಷ.)

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಚಿಗುರಿಗಳ ಹಾವಳಿ.

ಮುಂಬಯಿ ಕಾಯಿದೆ ಕೌನ್ಸಿಲಮೆಂಬರರಾದ ಮಿ|| ಕಂಬಳಿ ಹಾಗೂ ಜೋಗ ಇವರಿಗೆ ವಿನಂತಿ—ಗದಗ ರೋಣ ಮತ್ತು ನವಲಗುಂದ ಈ 3 ತಾಲ್ಲೂಕುಗಳಲ್ಲಿ ಬಸವೀ (ಉಡಾಳ) ದನಗಳು ಹಾಗೂ ಚಿಗರಿಗಳು ನೂರಿನ್ನೂರು ಹಿಂಡುಕಟ್ಟಿ ಜಮೀನಿನಲ್ಲಿ ಬಿತ್ತಿದ ಬೆಳೆಗಳನ್ನು ನಾಶಮಾಡುತ್ತವೆ. ಇದರಿಂದ ಬಹಳ ತ್ರಾಸು ಆಗಿ ಅಪಾರವಾದ ಹಾನಿ ಆಗುತ್ತದೆ. ಹೊಲಗಳನ್ನು ಕಾಯಲಿಕ್ಕೆ ಹೋದರೂ ಇವುಗಳ ಹಾವಳಿ ತಪ್ಪಲೊಲ್ಲದು. ಕಾರಣ ನೀವು ನಮ್ಮ ಜಿಲ್ಲೆಯ ಪತಿಯಿಂದ ಕೌನ್ಸಿಲಮೆಂಬರು ಇರುವದರಿಂದ ಈ ಸಂಗತಿ ಸರಕಾರದವರ ಮುಂದಿಟ್ಟು ಇವುಗಳ ಉಪದ್ರವಾಗದಂತೆ ವ್ಯವಸ್ಥಾ ಮಾಡಬೇಕು. ಅಂದರೆ ತಾವು ರೈತರ ಕಲ್ಯಾಣಮಾಡಿದಂತಾಗುತ್ತದೆ. ಇತಿ ವಿನಂತಿ. ನಿಮ್ಮ ಭರಮಗೌಡ ಪೋ. ಪಾಟೀಲ ಕಡಡಿ.

ಪ್ರಜಾಪ್ರತಿನಿಧಿಗಳಲ್ಲಿ ಒಂದು ವಿಜ್ಞಾಪನೆ.

ಈ ವರ್ಷದಲ್ಲಿ ನಡೆಯಬೇಕಾದ ದಸರಾಪ್ರತಿನಿಧಿಗಳ ಚುನಾವಣೆಯ ವಿಧಿಗಳಲ್ಲಿ ಡೆಪ್ಯೂಟಿಕಮಿಷನರ್‌ರವರ ತೀರ್ಮಾನದಮೇಲೆ ಗೌರ್ನಮೆಂಟಿಗೆ ಅಪ್ಪೀಲ್ ಇರುವುದಾಗಿ ನಮೂದಿದೆ. ಅದರಂತೆ ಡೆಪ್ಯೂಟಿಕಮಿಷನರ್‌ರವರ ತೀರ್ಮಾನದಮೇಲೆ ನ್ಯಾಯಬಾಧಹೊಂದಿದ ನಾನೊಬ್ಬನಲ್ಲದೆ ಅನೇಕ ಮಂದಿ ಅಪ್ಪೀಲ್‌ದಾಖಲುಮಾಡಿದ್ದರು. ಆದರೆ ಗೌರ್ನಮೆಂಟಿನವರು ಪಾರ್ಟಿ ವಿಚಾರಣೆಯಿಂದ ಎಷ್ಟು ಮೊಕದ್ದಮೆಗಳನ್ನು ತೀರ್ಮಾನಿಸಿರುವರು ಎಂಬುದನ್ನು ಸ್ಪೆಷಲ್ ಸಬ್‌ಜಕ್ಟ್ ಕಾಲದಲ್ಲಿ ಇಂಟರ್‌ಪೆಲೇಷನ್ ಮೂಲಕ ಕೇಳಿಯೊ, ಸಬ್‌ಜಕ್ಟ್ ಮೂಲಕ ಕೇಳಿಯೊ ಮುಂದೆಯಾದರೂ ಇಂಥಾ ಅನರ್ಥವನ್ನು ತೊಲಗಿಸುವ ಯೋಚನೆಯನ್ನು ಮಾಡುವವರಾಗಬೇಕೆಂದು ಪ್ರಾರ್ಥಿಸುವ, ಟಿ. ಗುರುಬಸವಯ್ಯ, ತುಮಕೂರು.

ಶಾರದಾ ಮಹೋತ್ಸವವು.

ಸೊಲ್ಲಾಪುರ ಶ್ರೀಮದ್ವಾರದ ಸಂಸ್ಕೃತ ಪಾಠಶಾಲೆಯ ಶಾರದಾ ಮಹೋತ್ಸವವು ಬಹು ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಉತ್ಸವಕಾಲಕ್ಕೆ ವಿದ್ಯಾರ್ಥಿಗಳಿಂದ ಅನೇಕ ತಳಿರುತೋರಣಗಳಿಂದಲೂ ಚಿತ್ರವಿಚಿತ್ರ ಫೋಟೋ ನಿಲುಗನ್ನಡಿಗಳಿಂದಲೂ ಪ್ರೇಕ್ಷಕರ ಮನಸ್ಸನ್ನಾಕರ್ಷಿಸುವಂತೆ ಶಾಲೆಯು ಶೃಂಗರಿಸಲ್ಪಟ್ಟಿತ್ತು. ಮತ್ತು ವಿದ್ಯಾರ್ಥಿಗಳು ಪೂಜಾಕಾಲಕ್ಕೆ ಈಶಸ್ತವನ ವೇದಪಠನ ಮಾಡುವ ಕಾಲಕ್ಕೆ ಆ ಸ್ಥಾನವು ಶಾರದೆಯ ವಿಲಾಸಮಂದಿರದೋಪಾದಿಯಲ್ಲಿ ಶೋಭಿಸುತ್ತಿತ್ತು. ತಾ|| 7-10-24 ಮಂಗಳವಾರ ವಿಜಯದಶಮಿಯ ದಿವಸ ಮಧ್ಯಾಹ್ನ 3 ಗಂಟೆಯಿಂದ 5 ಗಂಟೆಯವರೆಗೆ ಶ್ರೀಗುರುಲಿಂಗದೇವರು ಬೆಳಗಾಂವಿ ಚಂದ್ರಶೇಖರಮಠ ಇವರ ಅಧ್ಯಕ್ಷತೆ ಕೆಳಗೆ ಸಭೆಸೇರಿ ಇಲ್ಲಿಯ ವಿದ್ಯಾರ್ಥಿಗಳು ಅಷ್ಟಾವರ್ಣಮಹತ್ವ ಸಮಾಜಸುಧಾರಣೆ, ಒಕ್ಕಟ್ಟು, ಸತ್ಸಂಗ, ಸಂದರ್ಶನ, ಧರ್ಮ ಮೊದಲಾದ ವಿಷಯಗಳ ಮೇಲೆ ಭಾಷಣಗಳನ್ನು ಮಾಡಿದರು. ತರುವಾಯ ಅಧ್ಯಕ್ಷರು ತಮ್ಮ ಅಮೃತವಾಣಿಯಿಂದ ಸಂಸ್ಕೃತದ ಅವಶ್ಯಕತೆ ಎಂಬ ವಿಷಯದಮೇಲೆ ಸರ್ವರಿಗೂ ಅಹ್ಲಾದಕರವಾಗುವಂತೆ ಭಾಷಣಮಾಡಿದರು. ಈ ಸಭೆಗೆ ಊರೊಳಗಿನ ಪ್ರಮುಖಭಕ್ತವರ್ಗವು ಕೂಡಿತ್ತು. ಅಧ್ಯಕ್ಷರ ಭಾಷಣವಾದಮೇಲೆ ವಿದ್ಯಾರ್ಥಿಗಳ ಪತಿಯಿಂದ ಅಧ್ಯಕ್ಷರಿಗೆ ಪುಷ್ಪಹಾರಗಳನ್ನು ಸಮರ್ಪಿಸಿ ಆಭಾರಮನ್ನಿಸಿದ ಮೇಲೆ ಶಾರದೆಯ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ವಿದ್ಯಾರ್ಥಿ ಎಸ್.ಎಂ. ಧಾರವಾಡ.

ದೇಶೀಯ ವೈದ್ಯಪ್ರೋತ್ಸಾಹ.

ಶ್ರೀರಂಗಪಟ್ಟಣದ ತಾಲ್ಲೂಕು ಮೇಲುಕೋಟೆಯಲ್ಲಿ ಪ್ರಸಿದ್ಧ ನೇಟಿವ್ ಡಾಕ್ಟರಾಗಿರುವ ಮ|| ಪಂಡಿತ ಕೃಷ್ಣಪ್ಪನವರು ಬಡವರು ಬಲ್ಲಿದವರು ಎಂಬ ತಾರತಮ್ಯವಿಲ್ಲದೆ ಎಲ್ಲರಲ್ಲೂ ಒಂದೇವಿಧವಾದ ಪ್ರೀತಿಯನ್ನಿಟ್ಟು ಅನೇಕ ದುಸ್ತರವಾದ ಖಾಯಿಲೆಗಳನ್ನು ಗುಣಪಡಿಸುತ್ತಲಿದ್ದಾರೆ. ಇವರಿಗೆ ಈ ವೈದ್ಯವಿದ್ಯೆಯು ವಂಶಪಾರಂಪರ್ಯವಾಗಿಬಂದಿದೆ. ಇದೇ ಊರು ಮ|| ಕರಡಿ ವೆಂಕಟರಮಣಶೆಟ್ಟರ ನಾದಿನಿಯವರು ಪ್ರಸವಿಸಿದ 10 ದಿನಗಳಲ್ಲೇ ಮಹತ್ತರವಾದ ಖಾಯಿಲೆಯಿಂದಪೀಡಿತರಾಗಿ ಅನೇಕ ಇಂಗ್ಲಿಷ್ ಮತ್ತು ನೇಟಿವ್ ವೈದ್ಯರಿಂದ ಕೈಬಿಡಲ್ಪಟ್ಟು ಬಹಳ ಉತ್ಕ್ರಮಣಾವಸ್ಥೆಯಲ್ಲಿದ್ದವರನ್ನು ಮೇಲ್ಕಂಡ ಪಂಡಿತರು ತನ್ನ ಬುದ್ಧಿವಂತಿಕೆಯನೆಲ್ಲ ಉಪಯೋಗಿಸಿ ಆರೋಗ್ಯಸ್ಥಿತಿಗೆ ತಂದುದಕ್ಕಾಗಿ ಮೇಲ್ಕಂಡ ಮ|| ಕರಡಿವೆಂಕಟರಮಣಶೆಟ್ಟರು ತಾ|| 2-10-24 ರಲ್ಲಿ ಸ್ಥಳೀಯ ಮುಖಂಡರಿಂದ ಕೂಡಿದ ಒಂದು ಸಂತೋಷಕೂಟವನ್ನು ಸೇರಿಸಿ ಪಂಡಿತರ ಗುಣಕಥನವನ್ನುಮಾಡಿ ಅವರಿಗೆ ಬಹಳ ಬೆಲೆ ಬಾಳುವ ಒಂದು ಬೆಳ್ಳಿಯಚೊಂಬನ್ನು ಮತ್ತು ಈ ಸಂಧರ್ಭದಲ್ಲಿ ಅವರಿಗೆ ಸಹಾಯಕರಾಗಿದ್ದ ನೇಟಿವ್ ಡಾಕ್ಟರ್ ದೇ|| ದಾಶೆಟ್ಟರಿಗೆ ಒಂದು ಬೆಳ್ಳಿಯಲೋಟವನ್ನೂ ಆ ದಿವಸ ಅಗ್ರಾಸನವನ್ನು ವಹಿಸಿದ್ದ ವಿದ್ವಾನ್ ಶ್ರೀ ವೇ|| ಗೋವಿಂದಪ್ಪಯ್ಯಂಗಾರ್ಯರ ಹಸ್ತದಿಂದ ಬಹುಮಾನವಾಗಿ ಕೊಡಿಸಿ ಸಂತೋಷಪಡಿಸಿದರು. ಇವರು ಈ ಪ್ರಾಂತ್ಯದಲ್ಲೆಲ್ಲಾ ಮಹಾಶಕ್ತರಾದ ನೇಟಿವ್ ಡಾಕ್ಟರಾಗಿದ್ದಾರೆ. ನೇಟಿವ್ ವೈದ್ಯವು ಶ್ರೇಷ್ಠವಾದದ್ದೆಂಬುದನ್ನು ಇವರು ಧೃಢೀಕರಿಸುತ್ತಲಿದ್ದಾರೆ. ಇಂಥವರಿಗೆ ಎಲ್ಲರೂ ಪ್ರೋತ್ಸಾಹಕೊಟ್ಟು ಆಯುರ್ವೇದಮಹಿಮೆಯನ್ನು ಪ್ರಕಾಶಪಡಿಸಬೇಕಾಗಿ ಪ್ರಾರ್ಥನೆ. ಪ್ರತ್ಯಕ್ಷದರ್ಶಿ.

ಶ್ರೀಯುತ ಸರದಾರರ ಸನ್ಮಾನವು.

ತಾ|| 25-9-24 ನೇ ದಿವಸ ಶ್ರೀಯುತ ಮಡಿವಾಳೇಶ್ವರ ಸರದಾರ, ಬಿ.ಎ. (ಆಕ್ಸನ್) ಬಾರ್-ಆಟ್-ಲಾ ಇವರು ಸೊಲ್ಲಾಪುರಕ್ಕೆ ಆಗಮಿಸಿದರು. ಇಲ್ಲಿಯ ಪ್ರಮುಖಜನರು ಸ್ಟೇಶನ್ನಿನಲ್ಲಿ ಇವರ ಸುಸ್ವಾಗತವನ್ನು ಬಹಳ ಸಂಭ್ರಮದಿಂದಮಾಡಿದರು. ಮತ್ತು ತಾ|| 1-10-24ನೇ ದಿವಸ ಜೂನೇಗಿರಣಿಯ ಮೇನೆಜರರಾದ ನಟವರ್ಲಾಲ್ ಎಂ. ಎ. ಇವರ ಅಧ್ಯಕ್ಷತೆಕೆಳಗೆ ಸಭೆಸೇರಿತ್ತು. ಈ ಸಭೆಗೆ 2 ಸಾವಿರ ಜನಸಮೂಹವು ಕೂಡಿತ್ತಲ್ಲದೆ, ಶ್ರೀ ಕಿರೀಟಮಠದ ನಿಜಗುಣಸ್ವಾಮಿಗಳು, ಹುಕ್ಕೇರಿ ಶಿವಲಿಂಗಸ್ವಾಮಿಗಳು, ಕುಂಟೋಜಿಮಠದ ಚನ್ನವೀರಸ್ವಾಮಿಗಳು, ಗುಲಬುರ್ಗೆಯ ರೇವಣಸಿದ್ಧಸ್ವಾಮಿಗಳು, ಬೆಳಗಾಂವಿ ಗುರಲಿಂಗದೇವರು, ಪಂಡಿತ ಜಗದೀಶ ಶಾಸ್ತ್ರಿಗಳೇ ಮೊದಲಾದ ಮೂರ್ತಿಗಳವೃಂದವು ಅನ್ಯಮತೀಯ ಮುಖ್ಯ ಮುಖ್ಯ ಪುಢಾರಿಗಳು ಸಹ ಆಗಮಿಸಿದ್ದರು. ಶ್ರೀಯುತ ಸರದಾರರ ಪಾಶ್ಚಿಮಾತ್ಯದೇಶದ ವಿದ್ಯಾಶಿಕ್ಷಣ ವಿಷಯವಾಗಿಯೂ ಇವರ ವಕ್ತೃತ್ವಕಲಾಬುದ್ಧಿಯ ಕುಶಲತೆ, ಪರದೇಶಗಮನದ ಸುಖದುಃಖಗಳನ್ನು ಗಣನೆಗೆ ತಾರದೆ ಶ್ರೀ ಚಿತ್ರದುರ್ಗದ ಜಗದ್ಗುರುಗಳ ಮತ್ತು ಕಿರೀಟಮಠದ ನಿಜಗುಣಮಹಾಸ್ವಾಮಿಗಳ ಉದಾರಾಶ್ರಯದಿಂದ ಬಿ.ಎ. (ಆಕ್ಸನ್) ಬಾರ್-ಆಟ್-ಲಾ-ಪರೀಕ್ಷೆಯಲ್ಲಿ ತೇರಗಡೆಹೊಂದಿ ಸ್ವದೇಶಕ್ಕೆ ತಿರುಗಿಬಂದಿರುವದಕ್ಕಾಗಿ ಇಲ್ಲಿಯ ಮುಖ್ಯ ಪುಢಾರಿಗಳಾದ ಶ್ರೀಯುತ ನಾಗಪ್ಪಣ್ಣಾ ಅಬ್ದುಲ್‌ಪೂರಕರ್, ಗುರುಶಾಂತಪ್ಪಣ್ಣಾ ಉಮ್ಮರಜಿ ಬಿ.ಎ. ಮಲ್ಲಿಕಾರ್ಜುನಪ್ಪಾ ಅಪ್ಪಾರಾವ್ ಪಾಟೀಲ್, ಮತ್ತು ದೇಶಮುಖ ಡಾಕ್ಟರ್ ಮಹಾಲಿಂಗಪ್ಪಣ್ಣಾ ವಜೀರ್‌ಕರ್ ಚಪ್ಪಳಗಿ ರಾಜವಾಡೆಯ ವಕೀಲ ಮೊದಲಾದ ಮುಖ್ಯ ಪುಢಾರಿಗಳು ಇವರ ವಿದ್ಯಾಕುಶಲತೆ ಸ್ವಜನಪ್ರೇಮ ಮೊದಲಾದ ವಿಷಯಗಳಮೇಲೆ ಸ್ಫೂರ್ತಿದಾಯಕವಾದ ಉಪನ್ಯಾಸಗಳನ್ನು ಮಾಡಿದರು. ಶ್ರೀಯುತ ಸರದಾರರು ಪಾಶ್ಚಿಮಾತ್ಯದೇಶದಲ್ಲಿ ತಮಗಾದ ಅನುಭವವನ್ನು ಸವಿಸ್ತಾರವಾಗಿ ಹೇಳಿದ್ದಲ್ಲದೆ, ಪೌರ್ವಾತ್ಯ ಪಾಶ್ಚಿಮಾತ್ಯ ವಿಷಯಗಳ ವ್ಯತ್ಯಾಸಗಳ ವಿಷಯಗಳಲ್ಲಿ ಸಭಿಕರಿಗೆ ಬಹಳ ಆನಂದವಾಗುವಂತೆ ಉಪನ್ಯಾಸಮಾಡಿದರು. ಅನಂತರ ಶ್ರೀಯುತ ಸರದಾರರು ಇಷ್ಟು ಚಿಕ್ಕವಯಸ್ಸಿನಲ್ಲಿ ಕಾಯಿದೆಬಲ್ಲವರಾಗಿ ಸ್ವದೇಶಕ್ಕೆ ತಿರುಗಿಬಂದುದಕ್ಕೆ ಸಮಸ್ತಸಭಿಕಜನವು ಸಂತೋಷಸಾಗರದಲ್ಲಿ ಮಗ್ನವಾಯಿತು. ತರುವಾಯ ಅಧ್ಯಕ್ಷರಿಗೂ ಶ್ರೀಯುತ ಸರದಾರರಿಗೂ ಪುಷ್ಪಹಾರಗಳು ಸಮರ್ಪಿಸಿದಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು. ಓರ್ವ ಪ್ರೇಕ್ಷಕ.

ಜಾನುವಾರಿನಮೇಲೆ ಫೀಸು.

ದಕ್ಷಿಣ ಕನ್ನಡಾ ಜಿಲ್ಲಾ ಉಪ್ಪಿನಂಗಡಿ ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರುಷ 1924 ನೇ ಇಸವಿ ನವಂಬರು 11 ರಿಂದ 26 ನೇ ತಾರೀಕುವರೆಗೆ ಜರಗುವದು. ಅಂದರೆ ಸಂತೆಯು ಕಾರ್ತೀಕ ಪೂರ್ಣಿಮಿದಿವಸ ಪ್ರಾರಂಭವಾಗಿ ಸುಬ್ರಹ್ಮಣ್ಯ ಅಮಾವಾಸ್ಯೆ ದೀಪೋತ್ಸವದಪರಿಯಂತ ಜರಗುವದು. ಸಂತೆಗೆ ತಂದ ಪ್ರತಿ ಒಂದು ಜಾನುವಾರಿನಮೇಲೆ ಎರಡಾಣೆ ಫೀಸು ವಸೂಲುಮಾಡಲಾದೀತು. [1—1]

ಪುತ್ತೂರು, 1924ನೇ ಇಸವಿ, ಆಗೋಸ್ತು 8 ನೇ ತಾರೀಕು. } ಕೆ. ಎನ್. ಚೋಯಿಕುಟ್ಟಿ, ರೆವಿನ್ಯೂ ಡಿವಿಜನಲ್ ಆಫೀಸರರು.

ವೀರಶೈವ ಧರ್ಮಸಂಗ್ರಹ.

ಮಾಸಪತ್ರಿಕೆ.

ಒಂದು ವರ್ಷಕ್ಕೆ ವರ್ಗಣಿ ಅಂಚೆವೆಚ್ಚಸೇರಿ 2—8—0.

ಈ ಪತ್ರಿಕೆಯು ಎರಡನೆಯ ವರ್ಷವು ಈ ರಕ್ತಾಕ್ಷಿ ಸಂ-ಅಶ್ವೀಜಮಾಸದಿಂದ ಪ್ರಾರಂಭವಾಗುವುದು. ಎರಡನೆಯ ವರ್ಷದಲ್ಲಿ ವಾಚಕರ ಪ್ರಯೋಜನಾರ್ಥವಾಗಿ ಎರಡು ಫಾರಮ್ಮುಗಳಿಂದ ಮೂರು ಫಾರಮ್ಮಿಗೆ ಹೆಚ್ಚಿಸಿ ವೀರಶೈವಮತ ಪ್ರಾಚೀನತೆ, ವೀರಶೈವ ವೈದಿಕತ್ವ, ಲಿಂಗಧಾರಣವಿಚಾರ, ಶಕ್ತಿವಿಶಿಷ್ಟಾದ್ವೈತ, ಶಿವದೀಕ್ಷೆ, ಶಿವಪೂಜೆಯಕ್ರಮ, ವೀರಶೈವಾಚಾರ, ವೀರಶೈವ ವೈದಿಕವಿದ್ಯಾವಶ್ಯಕತೆ, ವೀರಶೈವ ಬ್ರಹ್ಮಚಾರಿಶಿಕ್ಷೆ, ವೀರಶೈವ ಸ್ತ್ರೀಧರ್ಮ ಮೊದಲಾದ ವಿಚಾರಗಳನ್ನು ಪ್ರಮಾಣಗಳ ಉದಾಹರಣೆಯಿಂದ ಉಪನ್ಯಾಸರೂಪವಾಗಿಯೂ, ಬಸವರಾಜೀಯ ಮೊದಲಾದ ಗ್ರಂಥಗಳನ್ನು ಕನ್ನಡಟಿಪ್ಪಣಿಯೊಡನೆಯೂ ಪ್ರಕಟಿಸುವೆವು.

ವೀರಶೈವ ಧರ್ಮಾಭಿಮಾನಿಗಳು ಈ ಪತ್ರಿಕೆಗೆ ಚಂದಾದಾರರೂ, ಪೋಷಕರೂ ಆಗಿ ಇದು ಚಿರಕಾಲ ನಡೆಯುವಂತೆ ಸಹಾಯಕಾರಿಗಳಾಗಬೇಕಾಗಿ ಅತ್ಯಂತ ವಿಧೇಯತೆಯಿಂದ ಪ್ರಾರ್ಥಿಸುವೆವು.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಅಷ್ಟಾವರಣ ವಿಚಾರದರ್ಪಣ (ಪ್ರಶ್ನೋತ್ತರ ರೂಪ)			೦-೧೪-೦
ಕೊಡಗೂಸು ಕಥೆ (ಶಿವಕಥೆಯನ್ನು ಮಾಡುವವರಿಗೆಯೋಗ)			೦- ೪-೦
ವೇಮನಾರಾಧ್ಯರ ಕಥೆ	೦-೪-೦	ಶಿವಗೀತೆ (ಕನ್ನಡ ವಚನ)	೦- ೪-೦
ಶಿವಾಧಿಕ್ಯ	೦-೨-೦	ಸಿದ್ಧಲಿಂಗೇಶ್ವರಸ್ತೋತ್ರ	೦- ೦-೬
ನಕ್ಷತ್ರಮಾಲಿಕೆ	೦-೦-೬	ಜಯದೇವ ಭಜನಾನಂದಿನಿ	೦- ೨-೦
ಗುರುಭಜನ	೦-೧-೦	ಶಿವಸ್ತುತಿ ಮಣಿಮಾಲಾ	೦- ೦-೩

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ :—

ಸಂಪಾದಕ ಎಸ್. ವೀರಪ್ಪಶಾಸ್ತ್ರೀ, ಮಾಗಡಿ.

[24—4] ಬೆಂಗಳೂರು ಡಿ||

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

೧. ಅರಮನೆ ಯಸ್ಟೇಟ್ಸ್ ಮತ್ತು ಗಾರ್ಡನ್ಸ್ ಇಲಾಖಾ ಶೇರ್ವೆ ರಾಸುಗಳ ಪೈಕಿ ಕೆಲವು ಹಸುಗಳನ್ನೂ, ಕಡಸುಗಳನ್ನೂ, ಎತ್ತುಗಳನ್ನೂ, ಮತ್ತು ಹೋರಿಗಳನ್ನೂ, ಸನ್ ಮಜಕೂರು ಅಕ್ಟೋಬರ್ ತಾರೀಖು 16 ನೇ ಗುರುವಾರ ಮಧ್ಯಾಹ್ನ ೨ ಘಂಟೆ ಲಾಗಾಯಿತು ಅರಮನೆ ಗಜಶಾಲೆಯಲ್ಲಿ ಹರಾಜು ಹಾಕಿಸುತ್ತೆ. ಇಷ್ಟವುಳ್ಳವರು ಆ ಕಾಲದಲ್ಲಿ ಹಾಜರಾಗಿ ಭಿಡದರಖಾಸ್ತು ಮಾಡಬಹುದು.

೨. ಹರಾಜು ಹಾಕಿಸತಕ್ಕ ರಾಸುಗಳನ್ನು ಪೂರ್ವಭಾವಿಯಾಗಿ ನೋಡುವದಕ್ಕೆ ಇಷ್ಟವಿದ್ದರೆ ಹರಾಜು ತಾರೀಖಿಗೆ ಎರಡು ದಿನಗಳು ಮುಂಚಿತವಾಗಿಯೇ ಬಂದು ಹೊಸೂರಮ್ಮನವರ ಛತ್ರದಲ್ಲಿ ನೋಡಬಹುದು.

೩. ಆಯಾಯ ರಾಸುಗಳು ಹರಾಜಾದ ಕೂಡಲೇ ಆಖೈರ್ ಬಿಡ್‌ದಾರನು ಆ ಬಾಬಿನ ಪೂರ್ತಾ ಮೊಬಲಗನ್ನು ಪಾವತಿಮಾಡಿ ರಶೀತಿ ಪಡೆದು ರಾಸುಗಳನ್ನು ಸುಪರ್ದಿಗೆ ತೆಗೆದುಕೊಳ್ಳತಕ್ಕದ್ದು. ತಪ್ಪಿದರೆ ದುಸರಾ ಹರಾಜು ಮಾಡಿಸಿ ಅದರಿಂದ ನಷ್ಟ ಸಂಭವಿಸಿದಲ್ಲಿ ಮೊದಲು ಪಡೆದಿದ್ದ ಬಿಡ್‌ದಾರನನ್ನು ಗುರಿಮಾಡಲಾಗುತ್ತದೆ. ಫಾಯಿದೆ ಬಂದಲ್ಲಿ ಆತನಿಗೆ ಸಲ್ಲಲಾರದು.

೪. ಹರಾಜಿನಲ್ಲಿ ಪಡೆದ ರಾಸುಗಳ ವಿಚಾರದಲ್ಲಿ ಅನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸುವುದಿಲ್ಲ, ತಿಳಿಯುವುದು.

N. Seshagiri Rao,

ಮೈಸೂರು, ತಾ|| 7-10-24. } ಮೊಬ್ತೇಸರ್, ಅರಮನೆ ಯಸ್ಟೇಟ್ಸ್ ಮತ್ತು ಗಾರ್ಡನ್ಸ್ ಇಲಾಖಾ.

18 ಕ್ಯಾರೆಕ್ಟ್ ಗೋಲ್ಡ್ ಪ್ಲೇಟ್ ರೇಡಿಯಂ ರಿಸ್ಟ್‌ವಾಚ್.

ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಅವಶ್ಯವಾಗಿರಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ.

ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಈ ಗಡಿಯಾರವು ಸ್ವಿಜರ್‌ಲ್ಯಾಂಡ್ ದೇಶದಲ್ಲಿ ಮಜಬೂತಾದ ಮೂವ್ಮೆಂಟ್ಸ್‌ಗಳಿಂದ ತಯಾರಾದದ್ದು. ಇದರ ಬಣ್ಣವು ಭಂಗಾರಕ್ಕೆ ಸಮನಾಗಿರುವದು. 3 ವರುಷ ಗ್ಯಾರಂಟಿ. ಕ್ರಯ 1ಕ್ಕೆ 8—8—0, ಪ್ಲೇನ್‌ಡೈಯಲ್ 7—0—0.

ವಿಳಾಸ—ಎಟೋನಿಯಾ ಅಂಡ್ ಕೊ,

[4—3] ಪೋ|| ಬಾ|| ನಂ. 66, ಮದರಾಸು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

೧೯೨೪ನೆಯ ಇಸವಿ ಅಕ್ಟೋಬರ್ ತಾ|| ೧೨ ರಿಂದ ೧೯೨೪ ನೆಯ ಇಸವಿ ಅಕ್ಟೋಬರ್ ತಾ|| ೧೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಆಶ್ವಯುಜ ಶುದ್ಧಪೌರ್ಣಮಿಯಿಂದ ಆಶ್ವಯುಜ ಬಹುಳ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ, ತುಲಾ
12	ಭಾನು	ಪೌರ್ಣ	45-34	ಉಭಾ	2.0	27
13	ಸೋಮ	ಪಾಡ್ಯ	46-53	ರೇವ	3-56	28
14	ಮಂಗಳ	ಬಿದಿ	49-30	ಅಶ್ವಿ	7-6	29
15	[1]ಬುಧ	ತದಿ	53-9	ಭರ	11 25	30
16	[2]ಗುರು	ಚೌತಿ	57-47	ಕೃತ್ತಿ	16-47	31
17	ಶುಕ್ರ	ಪಂಚ	60	ರೋಹಿ	22-51	1
18	ಶನಿ	ಪಂಚ	3-16	ಮೃಗ	29-31	2

(1) ಶ್ರೀ ಚಾಮುಂಡೇಶ್ವರೀರಥ. (2) ಸಂಕಷ್ಟಚತುರ್ಥಿ, ಶ್ರೀರಂಗದಲ್ಲಿ ದೋಲೋತ್ಸವಾರಂಭ.

ಮೈಸೂರು : ವೈ. ತಿರುಮಲಯ್ಯಂಗಾರ್ಯರವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

REGISTERED NO. M. 124.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲೀಕೇ | ಘನಪಥಕೃತಾವತಾರಾ ಪಶ್ಯಜ್ಜ ನಕ್ಷತ್ರ ಮೋಹರಾಜೀಯಾಪ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತ್ರೀಮಾಭೀಷ್ಟದಶೀಲ ನಾಶಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತ [illegible]ಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦]

[ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ನೆಯ ಇಸವಿ ಅಕ್ಟೋಬರ್ ತಾರೀಖು ೧೯ ನೆಯ ಭಾನುವಾರ. [ಸಂಚಿಕೆ ೪೨

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲೂಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ
ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
36 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—45] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦,

ಆಸ್ಥಾನ ವಿದ್ವಾನ್ ಎ.ಆರ್. ಕರಿಬಸವಶಾಸ್ತ್ರಿ
[50—39] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಮೈಸೂರು ಎಂ. ಎಸ್. ಶಿದ್ದಪ್ಪ ಬ್ರದರ್ಸ್‌ರವರ ವಿಜ್ಞಾಪನೆ.
ನಮ್ಮ ಕಂಪನಿಯ ಕ್ಯಾಲೆಂಡರುಗಳನ್ನು ಉಪಯೋಗಿಸುತ್ತಲಿರುವ ಗಿರಾಕಿಗಳಲ್ಲಿ
ವಿನಂತಿ.

1925 ನೇ ಇಸವಿಯ ಸಚಿತ್ರ ಷೀಟ್ ಕ್ಯಾಲೆಂಡರುಗಳು.

1925ನೇ ಇಸವಿಯ ಷೀಟ್ ಕ್ಯಾಲೆಂಡರ್ 1 ಕ್ಕೆ 0-1-0. 50 ಕ್ಯಾಲೆಂಡರ್‌ಗಳಿಗೆ 1-2-0. 100 ಕ್ಯಾಲೆಂಡರ್‌ಗಳಿಗೆ 2-0-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರ್‌ಗಳ ಪೂರ್ತಾ ಮೊಬಲಗು ಮಣಿಯಾರ್ಡರ್ ಮೂಲಕ ರವಾನಿಸಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜು ಯಾವ ಖರ್ಚು ಇಲ್ಲದಂತೆ ನೀವಿದ್ದೆಡೆಗೆ ರವಾನಿಸಲಾಗುತ್ತೆ. ಮೇಲ್ಕಂಡ ಕ್ಯಾಲೆಂಡರ್‌ನಲ್ಲಿ ಇಂಗ್ಲೀಷ್ ಮತ್ತು ಕನ್ನಡ ತಿಂಗಳು, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದಲ್ಲಿ ನಡೆಯತಕ್ಕ ಹಬ್ಬವೇ ಮೊದಲಾದ ಮುಖ್ಯ ದಿವಸಗಳು, ರಾಹುಕಾಲ, ಗುಳಿಕಾಲ ಮಳೇನಕ್ಷತ್ರ, ಅರಮನೆಯಲ್ಲಿ ನಡೆಯತಕ್ಕ ಉತ್ಸವಗಳೂ, ಶ್ರೀಮನ್ ಮಹಾರಾಜರವರು, ಶ್ರೀಮನ್ ಯುವರಾಜರವರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರವರ ಛಾಯಾಚಿತ್ರಗಳನ್ನಿಟ್ಟು ನಯವಾದ ಬಿಳೀ ದಪ್ಪ ಕಾಗದದಲ್ಲಿ ಅಂದವಾಗಿ ಪ್ರಿಂಟ್ ಮಾಡಿಸಿದ್ದೇವೆ.

1925 ನೇ ಇಸವಿಯ (ಮಂತ್ಲಿ ಟೇರಾಫ್) ತಿಂಗಳಿಗೊಂದು ಷೀಟಿನಂತೆ ಹರಿದುಬಿಡುವಂತೆ ತಯಾರಿಸಿರುವ ಕ್ಯಾಲೆಂಡರ್ 1 ಕ್ಕೆ 0-3-0, 3 ಕ್ಯಾಲೆಂಡರಿಗೆ 0-6-0, 12 ಕ್ಯಾಲೆಂಡರಿಗೆ 1-6-0. ತಮಗೆ ಬೇಕಾದಷ್ಟು ಕಾಪಿಗಳ ಪೂರ್ತಾಮೊಬಲಗನ್ನೂ ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜ್ ಯಾವ ಖರ್ಚು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. [50—3]

ಮಣಿಯಾರ್ಡರ್ ರವಾನಿಸುವ ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ತಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—6] ಪೋ. ಬಾ. ೪೧೦, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ವಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
34 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಲ್ಲದರಲ್ಲಿ ಪುರಾತನ ಕಾರಖಾನೆಯು.

ಸೂಚನೆ :—ಯಾವದೊಂದು ಮಾಲು ಗುಣಕಾರಿಯಾಗಿರುವದೆಂದು ತಿಳಿದಕೂಡಲೆ ಎಲ್ಲ ಕಡೆಗೂ ಅದರ ನಕಲು ಮಾಡಲಿಕ್ಕೆ ಆರಂಭವಾಗುತ್ತದೆ. ಆದರೆ ಹೆಸರಿಗೆ ತಕ್ಕಂತೆ ಗುಣಕ್ಕೆ ಮಾತ್ರ ಪಾತ್ರವಾಗುವದಿಲ್ಲ. ಈಗೀಗ ಇಲ್ಲಿ ನಕಲೀ ಔಷಧಿಯ ಕಾರಖಾನೆಗಳು ಹೊರಡಹತ್ತಿರುವವು. ಅದ್ದರಿಂದ ಗಿರಾಕಿಗಳು ನಮ್ಮ ಟ್ರೇಡಮಾರ್ಕನ್ನು ನೋಡಿ ತಕ್ಕೊಳ್ಳಬೇಕು ಸರ್ಕಾರದಲ್ಲಿ ರಿಜಿಸ್ಟರ್‌ಆದಂಥ ಸುವರ್ಣಪದಕ ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ಥ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦, ೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವುದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ಷಂಡತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.—ಪರಮಾ ಹಾಗೂ ಶಾಂಕಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇರೋಗ ಇದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟಲಿಯ ಕಿಮ್ಮತ್ತು ೧| ರೂಪಾಯಿ ಮೂರುಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲುಖರ್ಚು ಹೆಚ್ಚು ಬೀಳುವದಿಲ್ಲ. [illegible] ಬಾಟಲಿಗಳ ಕಿಮ್ಮತ್ತು ೧೧—೦—೦ ಮತ್ತು ೧ ಬಾಟಲಿ ಪುಕ್ಕಟೆ ಕೊಡುವೆವು. ಟಪಾಲು ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦, ೩ ಬಾಟ್ಲಿಗೆ ೩—೦—೦, ಡಜನ್ನಿಗೆ ೧೩—೦—೦

ಮ್ಯಾನೇಜರ—ದ್ರಾಕ್ಷಾರ್ಕಮಧು ಆಫೀಸು,
[13—0] ಪೋ. ಶಿಗ್ಗಾವಿ, ಜಿ. [illegible]

ಗಳು ವೆಚ್ಚವಾದುವು. ಅದರ ಹಿಂದಣ ವರುಷ ಒಟ್ಟು 5,44,361 ರೂಪಾಯಿಗಳು ವೆಚ್ಚವಾಗಿದ್ದುವು;

ಕೈಗಾರಿಕೆಗಳ ಮತ್ತು ವಾಣಿಜ್ಯದ ಇಲಾಖೆ.

ಕೆಲವು ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸತಕ್ಕ ಬಗ್ಗೆ ಮುಖ್ಯವಾಗಿ ಈ ಕೆಳಗೆಕಂಡ ಬಾಬುಗಳಲ್ಲಿ ಪ್ರಯೋಗ ಕ್ರಿಯೆಗಳನ್ನು ನಡೆಸಲಾಯಿತು—

(1) ಅರಗಿನ ತಯಾರಿ. ಕಚ್ಚಾ ಪದಾರ್ಥಗಳನ್ನು ಹದಮಾಡುವುದಕ್ಕಾಗಿಯೂ ಮತ್ತು ಕಾಚನ್ನು ತಯಾರ್ಮಾಡುವುದಕ್ಕಾಗಿಯೂ ಯಂತ್ರವನ್ನು ಉಪಯೋಗಿಸುವುದು.

(2) ಬಟ್ಟೆಯ ಕೈಗಾರಿಕೆಯನ್ನು ಉತ್ತಮಪಡಿಸುವುದು.

(3) ಉಣ್ಣೆಯ ದಾರವನ್ನು ತಯಾರ್ಮಾಡುವುದಕ್ಕಾಗಿ ಮನೆಯಲ್ಲಿ ಕೆಲಸಮಾಡತಕ್ಕ ಒಂದು ಸಣ್ಣ ಯಂತ್ರವನ್ನು ಬಳಕೆಗೆ ತರುವುದು.

(4) ರೇಷ್ಮೆಯನ್ನು ಹುರಿಮಾಡುವುದಕ್ಕೆ ರಾಟೆಯ ಯಂತ್ರವನ್ನು (ಫಿಲೇಚರನ್ನು) ಉಪಯೋಗಿಸುವುದು.

ಪ್ರಸಕ್ತವರ್ಷದಲ್ಲಿ ಕೈಗಾರಿಕೆಯ ಸಾಲಗಳ ಬಗ್ಗೆ ಬಂದ 6 ಅರ್ಜಿಗಳನ್ನು ಮಂಜೂರ್ಮಾಡಲಾಯಿತು. ಖಜಾನೆಯಿಂದ ತೆಗೆದುಕೊಂಡ ಒಟ್ಟು ಮೊಬಲಗು 1922-23 ನೆಯ ಸಾಲಿನಲ್ಲಿ 41,997 ರೂಪಾಯಿಗಳು ಆಗಿದ್ದುದು, ಪ್ರಸಕ್ತವರ್ಷದಲ್ಲಿ 40,082 ರೂಪಾಯಿಗಳು ಆಯಿತು, ತಕಾವಿ ಸಾಲಗಳನ್ನು ಕೊಡುವ ಪದ್ಧತಿಯನ್ನು ಆಚರಣೆಗೆ ತಂದಲಾಗಾಯಿತು, 1924 ನೆಯ ಇಸವಿ ಜೂನ್ ತಿಂಗಳ ಕೊನೆಯವರೆಗೆ 8,90,472 ರೂಪಾಯಿಗಳನ್ನು ಸಾಲವಾಗಿ ಕೊಡಲಾಗಿದೆ ; ಈ ಪೈಕಿ 4,77,055 ರೂಪಾಯಿಗಳು ವಸೂಲಾಗಿವೆ.

ಬ್ರಿಟಿಷ್ ಎಂಪೈರ್ ಎಗ್ಸಿಬಿಷನ್ನಲ್ಲಿ (ಬ್ರಿಟಿಷ್ ಸಾಮ್ರಾಜ್ಯದ ಪ್ರದರ್ಶನದಲ್ಲಿ) ಮೈಸೂರು ಸೀಮೆಯ ಪ್ರದರ್ಶನದ ವಸ್ತುಗಳ ಸುಪರ್ದಿನಲ್ಲಿರುವಂತೆ ಮೆಂಬ್ಬಗೆ ಇಂಡಸ್ಟ್ರಿಯಲ್ ಕೆಮಿಸ್ಟರನ್ನು ಕಳುಹಿಸಲಾಯಿತು. ಈ ವಸ್ತುಗಳು ಜನರಿಗೆ ವಿಶೇಷವಾಗಿ ಮನೋರಂಜಕವಾಗಿದ್ದುವೆಂದೂ, ದಂತದ ಕೆತ್ತನೆಯಲ್ಲಿ ಕಂಡುಬಂದ ಕಲಾಕೌಶಲ್ಯವೂ, ಗಂಧದಮರದ ಕೆತ್ತನೆಯಕೆಲಸವೂ, ಇತರ ಪದಾರ್ಥಗಳೂ, ಮೆಚ್ಚಿಗೆಗೆ ಪಾತ್ರವಾದುವೆಂದೂ ವರದಿಯು ಬಂದಿರುತ್ತದೆ.

ಈ ಇಲಾಖೆಯ ಒಟ್ಟು ವೆಚ್ಚವು 1922-23 ನೆಯ ಸಾಲಿನಲ್ಲಿ 1.33 ಲಕ್ಷ ರೂಪಾಯಿಗಳಾಗಿದ್ದುದು, ಪ್ರಸಕ್ತವರ್ಷದಲ್ಲಿ 1.57 ಲಕ್ಷ ರೂಪಾಯಿಗಳಾಯಿತು. (ಸಶೇಷ.)

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಚಿಗುರಿಗಳ ಹಾವಳಿ.

ಮುಂಬಯಿ ಕಾಯಿದೆ ಕೌನ್ಸಿಲ ಮೆಂಬರರಾದ ಮಿ|| ಕಂಬಳಿ ಹಾಗೂ ಜೋಗ ಇವರಿಗೆ ವಿನಂತಿ—ಗದಗ ರೋಣ ಮತ್ತು ನವಲಗುಂದ ಈ 3 ತಾಲ್ಲೂಕುಗಳಲ್ಲಿ ಬಸವೀ (ಉಡಾಳ) ದನಗಳು ಹಾಗೂ ಚಿಗರಿಗಳು ನೂರಿನ್ನೂರು ಹಿಂಡುಕಟ್ಟಿ ಜಮೀನಿನಲ್ಲಿ ಬಿತ್ತಿದ ಬೆಳೆಗಳನ್ನು ನಾಶಮಾಡುತ್ತವೆ. ಇದರಿಂದ ಬಹಳ ತ್ರಾಸು ಆಗಿ ಅಪಾರವಾದ ಹಾನಿ ಆಗುತ್ತದೆ. ಹೊಲಗಳನ್ನು ಕಾಯಲಿಕ್ಕೆ ಹೋದರೂ ಇವುಗಳ ಹಾವಳಿ ತಪ್ಪಲೊಲ್ಲದು. ಕಾರಣ ನೀವು ನಮ್ಮ ಜಿಲ್ಲೆಯ ವತಿಯಿಂದ ಕೌನ್ಸಿಲಮೆಂಬರು ಇರುವದರಿಂದ ಈ ಸಂಗತಿ ಸರಕಾರದವರ ಮುಂದಿಟ್ಟು ಇವುಗಳ ಉಪದ್ರವಾಗದಂತೆ ವ್ಯವಸ್ಥೆ ಮಾಡಬೇಕು. ಅಂದರೆ ತಾವು ರೈತರ ಕಲ್ಯಾಣಮಾಡಿದಂತಾಗುತ್ತದೆ. ಇತಿ ವಿನಂತಿ. ನಿಮ್ಮ ಭರಮಗೌಡ ಪೋ. ಪಾಟೀಲ ಕದಡಿ.

ಪ್ರಜಾಪ್ರತಿನಿಧಿಗಳಲ್ಲಿ ಒಂದು ವಿಜ್ಞಾಪನೆ.

ಈ ವರ್ಷದಲ್ಲಿ ನಡೆಯಬೇಕಾದ ದಸರಾಪ್ರತಿನಿಧಿಗಳ ಚುನಾವಣೆಯ ವಿಧಿಗಳಲ್ಲಿ ಡೆಪ್ಯೂಟಿಕಮಿಷನರ್‌ರವರ ತೀರ್ಮಾನದಮೇಲೆ ಗೌರ್ನಮೆಂಟಿಗೆ ಅಪ್ಪೀಲ್ ಇರುವುದಾಗಿ ನಮೂದಿದೆ. ಅದರಂತೆ ಡೆಪ್ಯೂಟಿಕಮಿಷನರ್‌ರವರ ತೀರ್ಮಾನದಮೇಲೆ ನ್ಯಾಯಲೋಪಹೊಂದಿದ ನಾನೊಬ್ಬನಲ್ಲದೆ ಅನೇಕ ಮಂದಿ ಅಪ್ಪೀಲ್‌ದಾಖಲ್ಮಾಡಿದ್ದರು. ಆರೀತಿ ಗೌರ್ನಮೆಂಟಿನವರು ಪಾರ್ಟಿ ವಿಚಾರಣೆಯಿಂದ ಎಷ್ಟು ಮೊಕದ್ದಮೆಗಳನ್ನು ತೀರ್ಮಾನಿಸಿರುವರು ಎಂಬುದನ್ನ ಸ್ಪೆಷಲ್ ಸಬ್‌ಜೆಕ್ಟ್ ಕಾಲದಲ್ಲಿ ಇನ್ಟರ್‌ಪಲೇಷನ್ ಮೂಲಕ ಕೇಳಿಯೆ, ಸಬ್‌ಜೆಕ್ಟ್ ಮೂಲಕ ಕೇಳಿಯೊ ಮುಂದೆಯಾದರೂ ಇಂಥಾ ಅನರ್ಥವನ್ನ ಹೋಗಲಾಡಿಸುವ ಯೋಚನೆಯನ್ನು ಮಾಡುವವರಾಗಬೇಕೆಂದು ಪ್ರಾರ್ಥಿಸುವ, ಟಿ. ಗುರುಬಸವಯ್ಯ, ತುಮಕೂರು.

ಶಾರದಾ ಮಹೋತ್ಸವವು.

ಸೊಲ್ಲಾಪುರ ಶ್ರೀಮದ್ವಾರದ ಸಂಸ್ಕೃತ ಪಾಠಶಾಲೆಯ ಶಾರದಾ ಮಹೋತ್ಸವವು ಬಹು ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಉತ್ಸವಕಾಲಕ್ಕೆ ವಿದ್ಯಾರ್ಥಿಗಳಿಂದ ಅನೇಕ ತಳಿರುತೋರಣಗಳಿಂದಲೂ ಚಿತ್ರವಿಚಿತ್ರ ಫೋಟೋ ನಿಲುಗನ್ನಡಿಗಳಿಂದಲೂ ಪ್ರೇಕ್ಷಕರ ಮನಸ್ಸನ್ನಾಕರ್ಷಿಸುವಂತೆ ಶಾಲೆಯು ಶೃಂಗರಿಸಲ್ಪಟ್ಟಿತ್ತು. ಮತ್ತು ವಿದ್ಯಾರ್ಥಿಗಳು ಪೂಜಾಕಾಲಕ್ಕೆ ಈಶಕಸ್ತವನ ವೇದಪಠನ ಮಾಡುವ ಕಾಲಕ್ಕೆ ಆ ಸ್ಥಾನವು ಶಾರದೆಯ ವಿಲಾಸಮಂದಿರದೋಪಾದಿಯಲ್ಲಿ ಶೋಭಿಸುತ್ತಿತ್ತು. ತಾ|| 7-10-24 ಮಂಗಳವಾರ ವಿಜಯದಶಮಿಯ ದಿವಸ ಮಧ್ಯಾಹ್ನ 3 ಗಂಟೆಯಿಂದ 5 ಗಂಟೆಯವರೆಗೆ ಶ್ರೀಗುರುಲಿಂಗದೇವರು ಬೆಳಗಾಂವಿ ಚಂದ್ರಶೇಖರಮಠ ಇವರ ಅಧ್ಯಕ್ಷತೆ ಕೆಳಗೆ ಸಭೆಸೇರಿ ಇಲ್ಲಿಯ ವಿದ್ಯಾರ್ಥಿಗಳು ಅಷ್ಟಾವರ್ಣಮಹತ್ವ ಸಮಾಜಸುಧಾರಣೆ, ವಕ್ತೃತ್ವ, ಸತ್ಸಂಗ, ಸಂದರ್ಶನ, ಧರ್ಮ ಮೊದಲಾದ ವಿಷಯಗಳ ಮೇಲೆ ಭಾಷಣಗಳನ್ನು ಮಾಡಿದರು. ತರುವಾಯ ಅಧ್ಯಕ್ಷರು ತಮ್ಮ ಅಮೃತವಾಣಿಯಿಂದ ಸಂಸ್ಕೃತದ ಅವಶ್ಯಕತೆ ಎಂಬ ವಿಷಯದಮೇಲೆ ಸರ್ವರಿಗೂ ಆಹ್ಲಾದಕರವಾಗುವಂತೆ ಭಾಷಣಮಾಡಿದರು. ಈ ಸಭೆಗೆ ಊರೊಳಗಿನ ಪ್ರಮುಖಭಕ್ತವರ್ಗವು ಕೂಡಿತ್ತು. ಅಧ್ಯಕ್ಷರ ಭಾಷಣವಾದಮೇಲೆ ವಿದ್ಯಾರ್ಥಿಗಳ ವತಿಯಿಂದ ಅಧ್ಯಕ್ಷರಿಗೆ ಪುಷ್ಪಹಾರಗಳನ್ನು ಸಮರ್ಪಿಸಿ ಆಭಾರಮನ್ನಿಸಿದ ಮೇಲೆ ಶಾರದೆಯ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ವಿದ್ಯಾರ್ಥಿ ಎಸ್.ಎಂ. ಧಾರವಾಡ.

ದೇಶೀಯ ವೈದ್ಯಪ್ರೋತ್ಸಾಹ.

ಶ್ರೀರಂಗಪಟ್ಟಣದ ತಾಲ್ಲೂಕು ಮೇಲುಕೋಟೆಯಲ್ಲಿ ಪ್ರಸಿದ್ಧ ನೇಟಿವ್ ಡಾಕ್ಟರಾಗಿರುವ ಮ|| ಪಂಡಿತ ಕೃಷ್ಣಪ್ಪನವರು ಬಡವರು ಬಲ್ಲಿದವರು ಎಂಬ ತಾರತಮ್ಯವಿಲ್ಲದೆ ಎಲ್ಲರಲ್ಲೂ ಒಂದೇವಿಧವಾದ ಪ್ರೀತಿಯನ್ನಿಟ್ಟು ಅನೇಕ ದುಸ್ತರವಾದ ಖಾಯಿಲೆಗಳನ್ನು ಗುಣಪಡಿಸುತ್ತಲಿದ್ದಾರೆ. ಇವರಿಗೆ ಈ ವೈದ್ಯವಿದ್ಯೆಯು ವಂಶಪಾರಂಪರ್ಯವಾಗಿಬಂದಿದೆ. ಇದೇ ಊರು ಮ|| ಕರಡಿ ವೆಂಕಟರಮಣಶೆಟ್ಟರ ನಾದಿನಿಯವರು ಪ್ರಸವಿಸಿದ 10 ದಿನಗಳಲ್ಲೇ ಮಹತ್ತರವಾದ ಖಾಯಿಲೆಯಿಂದಪೀಡಿತರಾಗಿ ಅನೇಕ ಇಂಗ್ಲಿಷ್ ಮತ್ತು ನೇಟಿವ್ ವೈದ್ಯರಿಂದ ಕೈಬಿಡಲ್ಪಟ್ಟು ಬಹಳ ಉತ್ಕ್ರಮಣಾವಸ್ಥೆಯಲ್ಲಿದ್ದವರನ್ನು ಮೇಲ್ಕಂಡ ಪಂಡಿತರು ತಮ್ಮ ಬುದ್ಧಿವಂತಿಕೆಯನೆಲ್ಲ ಉಪಯೋಗಿಸಿ ಆರೋಗ್ಯಸ್ಥಿತಿಗೆ ತಂದುದಕ್ಕಾಗಿ ಮೇಲ್ಕಂಡ ಮ|| ಕರಡಿವೆಂಕಟರಮಣಶೆಟ್ಟರು ತಾ|| 2-10-24 ರಲ್ಲಿ ಸ್ಥಳೀಯ ಮುಖಂಡರಿಂದ ಕೂಡಿದ ಒಂದು ಸಂತೋಷಕೂಟವನ್ನು ಸೇರಿಸಿ ಪಂಡಿತರ ಗುಣಕಥನವನ್ನುಮಾಡಿ ಅವರಿಗೆ ಬಹಳ ಬೆಲೆ ಬಾಳುವ ಒಂದು ಬೆಳ್ಳಿಯಬೋಂಬನ್ನು ಮತ್ತು ಈ ಸಂಧರ್ಭದಲ್ಲಿ ಅವರಿಗೆ ಸಹಾಯಕರಾಗಿದ್ದ ನೇಟಿವ್ ಡಾಕ್ಟರ್ ದೇ|| ದಾಸೆಟ್ಟರಿಗೆ ಒಂದು ಬೆಳ್ಳಿಯಲೋಟವನ್ನೂ ಆ ದಿವಸ ಅಗ್ರಾಸನವನ್ನು ವಹಿಸಿದ್ದ ವಿದ್ವಾನ್ ಶ್ರೀ ವೇ|| ಗೋವಿಂದಪ್ಪಯ್ಯಂಗಾರ್ಯರ ಹಸ್ತದಿಂದ ಬಹುಮಾನವಾಗಿ ಕೊಡಿಸಿ ಸಂತೋಷಪಡಿಸಿದರು. ಇವರು ಈ ಪ್ರಾಂತ್ಯದಲ್ಲೆಲ್ಲಾ ಮಹಾಕರ್ತರಾದ ನೇಟಿವ್ ಡಾಕ್ಟರಾಗಿದ್ದಾರೆ. ನೇಟಿವ್ ವೈದ್ಯವು ಶ್ರೇಷ್ಠವಾದದ್ದೆಂಬುದನ್ನು ಇವರು ಧೃಢಪಡಿಸುತ್ತಲಿದ್ದಾರೆ. ಇಂಥವರಿಗೆ ಎಲ್ಲರೂ ಪ್ರೋತ್ಸಾಹಕೊಟ್ಟು ಆಯುರ್ವೇದಮಹಿಮೆಯನ್ನು ಪ್ರಕಾಶಪಡಿಸಬೇಕಾಗಿ ಪ್ರಾರ್ಥನೆ. ಪ್ರತ್ಯಕ್ಷದರ್ಶಿ.

ಶ್ರೀಯುತ ಸರದಾರರ ಸನ್ಮಾನವು.

ತಾ|| 25-9-24 ನೇ ದಿವಸ ಶ್ರೀಯುತ ಮಡಿವಾಳೇಶ್ವರ ಸರದಾರ, ಬಿ.ಎ. (ಆಕ್ಸನ್) ಬಾರ್-ಆಟ್-ಲಾ ಇವರು ಸೊಲ್ಲಾಪುರಕ್ಕೆ ಆಗಮಿಸಿದರು. ಇಲ್ಲಿಯ ಪ್ರಮುಖಜನರು ಸ್ಟೇಶನ್ನಿನಲ್ಲಿ ಇವರ ಸುಸ್ವಾಗತವನ್ನು ಬಹಳ ಸಂಭ್ರಮದಿಂದಮಾಡಿದರು. ಮತ್ತು ತಾ|| 1-10-24ನೇ ದಿವಸ ಜೂನೇಗಿರಣಿಯ ಮೇನೆಜರರಾದ ನಟವರಲಾಲ್ ಎಂ. ಎ. ಇವರ ಅಧ್ಯಕ್ಷತೆಕೆಳಗೆ ಸಭೆಸೇರಿತ್ತು. ಈ ಸಭೆಗೆ 2 ಸಾವಿರ ಜನಸಮೂಹವು ಕೂಡಿತ್ತಲ್ಲದೆ, ಶ್ರೀ ಕಿರೀಟಮಠದ ನಿಜಗುಣಸ್ವಾಮಿಗಳು, ಹುಕ್ಕೇರಿ ಶಿವಲಿಂಗಸ್ವಾಮಿಗಳು, ಕುಂಟೋಜಿಮಠದ ಚನ್ನವೀರಸ್ವಾಮಿಗಳು, ಗುಲಬುರ್ಗೆಯ ರೇವಣಸಿದ್ಧಸ್ವಾಮಿಗಳು, ಬೆಳಗಾಂವಿ ಗುರಲಿಂಗದೇವರು, ಪಂಡಿತ ಜಗದೀಶ ಶಾಸ್ತ್ರಿಗಳೇ ಮೊದಲಾದ ಮೂರ್ತಿಗಳವೃಂದವು ಅನ್ಯಮತೀಯ ಮುಖ್ಯಮುಖ್ಯ ಪುಢಾರಿಗಳು ಸಹ ಆಗಮಿಸಿದ್ದರು. ಶ್ರೀಯುತ ಸರದಾರರ ಪಾಶ್ಚಿಮಾತ್ಯದೇಶದ ವಿದ್ಯಾಶಿಕ್ಷಣ ವಿಷಯವಾಗಿಯೂ ಇವರ ವಕ್ತೃತ್ವಕಲಾಬುದ್ಧಿಯ ಕುಶಲತೆ, ಪರದೇಶಗಮನದ ಸುಖದುಃಖಗಳನ್ನು ಗಣನೆಗೆ ತಾರದೆ ಶ್ರೀ ಚಿತ್ರದುರ್ಗದ ಜಗದ್ಗುರುಗಳ ಮತ್ತು ಕಿರೀಟಮಠದ ನಿಜಗುಣಮಹಾಸ್ವಾಮಿಗಳ ಉದಾರಾಶ್ರಯದಿಂದ ಬಿ.ಎ. (ಆಕ್ಸನ್) ಬಾರ್-ಆಟ್-ಲಾ-ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಸ್ವದೇಶಕ್ಕೆ ತಿರುಗಿಬಂದಿರುವದಕ್ಕಾಗಿ ಇಲ್ಲಿಯ ಮುಖ್ಯ ಪುಢಾರಿಗಳಾದ ಶ್ರೀಯುತ ನಾಗಪ್ಪಣ್ಣಾ ಅಬ್ದುಲ್‌ಪೂರ್ಕರ್, ಗುರುಶಾಂತಪ್ಪಣ್ಣಾ ಉಮ್ಮರಜಿ ಬಿ.ಎ. ಮಲ್ಲಿಕಾರ್ಜುನಪ್ಪಾ ಅಪ್ಪಾರಾವ್ ಪಾಟೀಲ್, ಮತ್ತು ದೇಶಮುಖ ಡಾಕ್ಟರ್ ಮಹಾಲಿಂಗಪ್ಪಣ್ಣಾ ವಜೀರ್‌ಕರ್ ಚಪ್ಪಳಗಿ ರಾಜವಾಡೆಯ ವಕೀಲ ಮೊದಲಾದ ಮುಖ್ಯ ಪುಢಾರಿಗಳು ಇವರ ವಿದ್ಯಾಕುಶಲತೆ ಸ್ವಜನಪ್ರೇಮ ಮೊದಲಾದ ವಿಷಯಗಳಮೇಲೆ ಸ್ಫೂರ್ತಿದಾಯಕವಾದ ಉಪನ್ಯಾಸಗಳನ್ನು ಮಾಡಿದರು. ಶ್ರೀಯುತ ಸರದಾರರು ಪಾಶ್ಚಿಮಾತ್ಯದೇಶದಲ್ಲಿ ತಮಗಾದ ಅನುಭವವನ್ನು ಸವಿಸ್ತಾರವಾಗಿ ಹೇಳಿದ್ದಲ್ಲದೆ, ಪೌರ್ವಾತ್ಯ ಪಾಶ್ಚಿಮಾತ್ಯ ವಿಷಯಗಳ ವ್ಯತ್ಯಾಸಗಳ ವಿಷಯಗಳಲ್ಲಿ ಸಭಿಕರಿಗೆ ಬಹಳ ಆನಂದವಾಗುವಂತೆ ಉಪನ್ಯಾಸಮಾಡಿದರು. ಅನಂತರ ಶ್ರೀಯುತ ಸರದಾರರು ಇಷ್ಟು ಚಿಕ್ಕವಯಸ್ಸಿನಲ್ಲಿ ಕಾಯಿದೆಬಲ್ಲವರಾಗಿ ಸ್ವದೇಶಕ್ಕೆ ತಿರುಗಿಬಂದುದಕ್ಕೆ ಸಮಸ್ತ ಸಭಿಕಜನವು ಸಂತೋಷಸಾಗರದಲ್ಲಿ ಮಗ್ನವಾಯಿತು. ತರುವಾಯ ಅಧ್ಯಕ್ಷರಿಗೂ ಶ್ರೀಯುತ ಸರದಾರರಿಗೂ ಪುಷ್ಪಹಾರಗಳು ಸಮರ್ಪಿಸಿದಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು. ಓರ್ವ ಪ್ರೇಕ್ಷಕ.

ಜಾನುವಾರಿನಮೇಲೆ ಫೀಸು.

ದಕ್ಷಿಣ ಕನ್ನಡಾ ಜಿಲ್ಲಾ ಉಪ್ಪಿನಂಗಡಿ ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮದ ಕುಲ್ಕುಂದದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರುಷ 1924 ನೇ ಇಸವಿ ನವಂಬರು 11 ರಿಂದ 26 ನೇ ತಾರೀಕುವರೆಗೆ ಜರಗುವದು. ಅಂದರೆ ಸಂತೆಯು ಕಾರ್ತೀಕ ಪೂರ್ಣಿಮಿದಿವಸ ಪ್ರಾರಂಭವಾಗಿ ಸುಬ್ರಹ್ಮಣ್ಯ ಅಮಾವಾಸ್ಯೆ ದೀಪೋತ್ಸವದಪರಿಯಂತ ಜರಗುವದು. ಸಂತೆಗೆ ತಂದ ಪ್ರತಿ ಒಂದು ಜಾನುವಾರಿನಮೇಲೆ ಎರಡಾಣೆ ಫೀಸು ವಸೂಲ್ಮಾಡಲಾದೀತು. [4—1]

ಪುತ್ತೂರು, 1924ನೇ ಇಸವಿ, ಆಗೋಸ್ತು 8 ನೇ ತಾರೀಕು. } ಕೆ. ಎನ್. ಜೋಯಿಕುಟ್ಟಿ, ರೆವಿನ್ಯೂ ಡಿವಿಜನಲ್ ಆಫೀಸರರು.

ವೀರಶೈವ ಧರ್ಮಸಂಗ್ರಹ.
ಮಾಸಪತ್ರಿಕೆ.

ಒಂದು ವರ್ಷಕ್ಕೆ ವರ್ಗಣಿ ಅಂಚೆವೆಚ್ಚಸೇರಿ 2—8—0.

ಈ ಪತ್ರಿಕೆಯ ಎರಡನೆಯ ವರ್ಷವು ಈ ರಕ್ತಾಕ್ಷಿ ಸಂ. ಅಶ್ವೀಜಮಾಸದಿಂದ ಪ್ರಾರಂಭವಾಗುವುದು. ಎರಡನೆಯ ವರ್ಷದಲ್ಲಿ ವಾಚಕರ ಪ್ರಯೋಜನಾರ್ಥವಾಗಿ ಎರಡು ಫಾರಮ್ಮುಗಳಿಂದ ಮೂರು ಫಾರಮ್ಮಿಗೆ ಹೆಚ್ಚಿಸಿ ವೀರಶೈವಮತ ಪ್ರಾಚೀನತೆ, ವೀರಶೈವ ವೈದಿಕತ್ವ, ಲಿಂಗಧಾರಣವಿಚಾರ, ಶಕ್ತಿವಿಶಿಷ್ಟಾದ್ವೈತ, ಶಿವದೀಕ್ಷೆ, ಶಿವಪೂಜೆಯಕ್ರಮ, ವೀರಶೈವಾಚಾರ, ವೀರಶೈವ ವೈದಿಕವಿದ್ಯಾವಶ್ಯಕತೆ, ವೀರಶೈವ ಬ್ರಹ್ಮಚಾರಿಶಿಕ್ಷೆ, ವೀರಶೈವ ಸ್ತ್ರೀಧರ್ಮ ಮೊದಲಾದ ವಿಚಾರಗಳನ್ನು ಪ್ರಮಾಣಗಳ ಉದಾಹರಣೆಯಿಂದ ಉಪನ್ಯಾಸರೂಪವಾಗಿಯೂ, ಬಸವರಾಜೀಯ ಮೊದಲಾದ ಗ್ರಂಥಗಳನ್ನು ಕನ್ನಡಟಿಪ್ಪಣಿದೊಡನೆಯೂ ಪ್ರಕಟಿಸುವೆವು.

ವೀರಶೈವ ಧರ್ಮಾಭಿಮಾನಿಗಳು ಈ ಪತ್ರಿಕೆಗೆ ಚಂದಾದಾರರೂ, ಪೋಷಕರೂ ಆಗಿ ಇದು ಚಿರಕಾಲ ನಡೆಯುವಂತೆ ಸಹಾಯಕಾರಿಗಳಾಗಬೇಕಾಗಿ ಅತ್ಯಂತ ವಿಧೇಯತೆಯಿಂದ ಪ್ರಾರ್ಥಿಸುವೆವು.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಅಷ್ಟಾವರಣ ವಿಚಾರದರ್ಪಣ (ಪ್ರಶ್ನೋತ್ತರ ರೂಪ) ೦-೧೪-೦
ಕೊಡಗೂಸು ಕಥೆ (ಶಿವಕಥೆಯನ್ನು ಮಾಡುವವರಿಗೆಯೋಗ್ಯ) ೦- ೪-೦
ವೇಮನಾರಾಧ್ಯರ ಕಥೆ ೦-೪-೦ ಶಿವಗೀತೆ (ಕನ್ನಡ ವಚನ) ೦- ೪-೦
ಶಿವಾಧಿಕ್ಯ ೦-೨-೦ ಸಿದ್ಧಲಿಂಗೇಶ್ವರಸ್ತೋತ್ರ ೦- ೦-೬
ನಕ್ಷತ್ರಮಾಲಿಕೆ ೦-೦-೬ ಜಗದೇವ ಭುಜಕಾನಂದಿನಿ ೦- ೨-೦
ಗುರುಭಜನ ೦-೧-೦ ಶಿವಸ್ತುತಿ ಮಣಿಮಾಲಾ ೦- ೦-೯

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ :—
ಸಂಪಾದಕ ಎಸ್. ವೀರಪ್ಪಶಾಸ್ತ್ರೀ, ಮಾಗಡಿ.
[24—4] ಬೆಂಗಳೂರು ಡಿ||

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

೧. ಅರಮನೆ ಯಸ್ಟೇಟ್ಸ್ ಮತ್ತು ಗಾರ್ಡನ್ಸ್ ಇಲಾಖಾ ಶೇರ್ವೆ ರಾಸುಗಳ ಪೈಕಿ ಕೆಲವು ಹಸುಗಳನ್ನೂ, ಕಡಸುಗಳನ್ನೂ, ಎತ್ತುಗಳನ್ನೂ, ಮತ್ತು ಹೋರಿಗಳನ್ನೂ, ಸನ್ ಮಜಕೂರು ಅಕ್ಟೋಬರ್ ತಾರೀಖು 16 ನೇ ಗುರುವಾರ ಮಧ್ಯಾಹ್ನ ೨ ಘಂಟೆ ಲಾಗಾಯಿತು ಅರಮನೆ ಗಜಶಾಲೆಯಲ್ಲಿ ಹರಾಜು ಹಾಕಿಸುತ್ತೆ. ಇಷ್ಟವುಳ್ಳವರು ಆ ಕಾಲದಲ್ಲಿ ಹಾಜರಾಗಿ ಭಡದರಖಾಸ್ತು ಮಾಡಬಹುದು.

೨. ಹರಾಜು ಹಾಕಿಸತಕ್ಕ ರಾಸುಗಳನ್ನು ಪೂರ್ವಭಾವಿಯಾಗಿ ನೋಡುವದಕ್ಕೆ ಇಷ್ಟವಿದ್ದರೆ ಹರಾಜು ತಾರೀಖಿಗೆ ಎರಡು ದಿನಗಳು ಮುಂಚಿತವಾಗಿಯೇ ಬಂದು ಹೊಸೂರಮ್ಮನವರ ಛತ್ರದಲ್ಲಿ ನೋಡಬಹುದು.

೩. ಆಯಾಯ ರಾಸುಗಳು ಹರಾಜಾದ ಕೂಡಲೇ ಆಖೈರ್ ಬಿಡ್‌ದಾರನು ಆ ಬಾಬಿನ ಪೂರಾ ಮೊಬಲಗನ್ನು ಪಾವತಿಮಾಡಿ ರಶೀತಿ ಪಡೆದು ರಾಸುಗಳನ್ನು ಸುಪರ್ದಿಗೆ ತೆಗೆದುಕೊಳ್ಳತಕ್ಕದ್ದು. ತಪ್ಪಿದರೆ ದುಸರಾ ಹರಾಜು ಮಾಡಿಸಿ ಅದರಿಂದ ನಷ್ಟ ಸಂಭವಿಸಿದಲ್ಲಿ ಮೊದಲು ಪಡೆದಿದ್ದ ಬಿಡ್‌ದಾರನನ್ನು ಗುರಿಮಾಡಲಾಗುತ್ತದೆ. ಫಾಯಿದೆ ಬಂದಲ್ಲಿ ಆತನಿಗೆ ಸಲ್ಲಲಾರದು.

೪. ಹರಾಜಿನಲ್ಲಿ ಪಡೆದ ರಾಸುಗಳ ವಿಚಾರದಲ್ಲಿ ಅನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸುವುದಿಲ್ಲ, ತಿಳಿಯುವುದು.

N. Seshagiri Rao,
ಆಫೀಸರ್,
ಮೈಸೂರು, ತಾ|| 7-10-24. } ಅರಮನೆ ಯಸ್ಟೇಟ್ಸ್ ಮತ್ತು ಗಾರ್ಡನ್ಸ್ ಇಲಾಖಾ.

18 ಕ್ಯಾರೆಕ್ಟ್ ಗೋಲ್ಡ್‌ಪ್ಲೇಟ್ ರೇಡಿಯಂ ರಿಸ್ಟ್‌ವಾಚ್.

ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಅವಶ್ಯವಾಗಿರಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ.

ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಈ ಗಡಿಯಾರವು ಸ್ವಿಜರ್‌ಲ್ಯಾಂಡ್ ದೇಶದಲ್ಲಿ ಮಜಬೂತಾದ ಮೂವ್ಮೆಂಟ್ಸ್‌ಗಳಿಂದ ತಯಾರಾದದ್ದು. ಇದರ ಬಣ್ಣವು ಭಂಗಾರಕ್ಕೆ ಸಮನಾಗಿರುವದು. 3 ವರುಷ ಗ್ಯಾರಂಟಿ. ಕ್ರಯ 1ಕ್ಕೆ 8—8—0, ಪ್ಲೇನ್‌ಡೈಯಲ್ 7—0—0.

ವಿಳಾಸ—ಎಟೋನಿಯಾ ಅಂಡ್ ಕೊ,
[4—3] ಪೋ|| ಬಾ|| ನಂ. 65, ಮದರಾಸು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿಃ	೦— ೮—೦	೦—೧೦—೦
ಷಟ್ಸ್ಥಲವಿದ್ಯಾ	೦— ೪—೦	೦— ೬—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೬ ೦
ವ್ರತಪಂಚಕ	೦— ೪ ೦	೦— ೬—೦
ಗುರುಶಂಕರೇಶ್ವರಶತಕ	೦— ೧—೦	೦— ೩—೦
ಬಸವೇಶ್ವರಜನನ	೦— ೮—೦	೦—೧೦—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧— ೦—೦	೧— ೩—೦

೧೯೨೪ನೆಯ ಇಸವಿ ಅಕ್ಟೋಬರ್ ತಾ|| ೧೨ ರಿಂದ ೧೯೨೪ ನೆಯ ಇಸವಿ ಅಕ್ಟೋಬರ್ ತಾ|| ೧೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಆಶ್ವಯುಜ ಶುದ್ಧಪೌರ್ಣಿಮೆಯಿಂದ ಆಶ್ವಯುಜ ಬಹುಳ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ. ತುಲಾ.
12	ಭಾನು	ಪೌರ್ಣ	45-34	ಉಭಾ	2.0	27
13	ಸೋಮ	ಪಾಡ್ಯ	46-53	ರೇವ	3-56	28
14	ಮಂಗಳ	ಬಿದಿ	49-30	ಅಶ್ವಿ	7-6	29
15	[1] ಬುಧ	ತದಿ	53.9	ಭರ	11 25	30
16	[2] ಗುರು	ಚೌತಿ	57-47	ಕೃತ್ತಿ	16-47	31
17	ಶುಕ್ರ	ಪಂಚ	60	ರೋಹಿ	22-51	1
18	ಶನಿ	ಪಂಚ	3-16	ಮೃಗ	29-21	2

(1) ಶ್ರೀ ಚಾಮುಂಡೇಶ್ವರೀರಥೋ. (2) ಸಂಕಷ್ಟಚತುರ್ಥೀ, ಶ್ರೀರಂಗದಲ್ಲಿ ದೋಲೋತ್ಸವಾರಂಭೋ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಶ್ರೀ[illegible] ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED NO. M.124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಾಹಿತೌ | ಘನಪದಭಕ್ತಾವತಾರಾ ಪಕ್ಷ್ಮಜ ನಹೃತ್ತ ಮೋಹರಾಜೀಚೂಷ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ[illegible]ಪುಂಗವ | ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತ[illegible]ಲಂ | ಪ್ರೇಮಂಚೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ಅಕ್ಟೋಬರ್ ತಾರೀಖು ೧೯ ನೆಯ ಭಾನುವಾರ. [ಸಂಚಿಕೆ ೪೨

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SITHARAGHAVA
VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತ್ಯವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
36 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುವು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—45] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦ —೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.
ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.
ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.
[illegible] ಬೆಲೆ ೧—೦—೦.
ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.
[illegible] ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦,

ಆಸ್ಥಾನ ವಿದ್ವಾನ್ ಎ.ಆರ್. ಕರಿಬಸವಶಾಸ್ತ್ರಿ
[50—39] ಅಂಡ್ ಸನ್ಸ್, ಚಿ.ಪಿ. ಮಂಟಪಿ, ಮೈಸೂರು.

ಮೈಸೂರು ಎಂ. ಎಸ್. ಶಿದ್ದಪ್ಪ ಬ್ರದರ್ಸ್‌ರವರ ವಿಜ್ಞಾಪನೆ.
ನಮ್ಮ ಕಂಪನಿಯ ಕ್ಯಾಲೆಂಡರುಗಳನ್ನು ಉಪಯೋಗಿಸುತ್ತಲಿರುವ ಗಿರಾಕಿಗಳಲ್ಲಿ
ವಿನಂತಿ.

1925 ನೇ ಇಸವಿಯ ಸಚಿತ್ರ ಷೀಟ್ ಕ್ಯಾಲೆಂಡರುಗಳು.

1925ನೇ ಇಸವಿಯ ಷೀಟ್ ಕ್ಯಾಲೆಂಡರ್ 1 ಕ್ಕೆ 0-1-0. 50 ಕ್ಯಾಲೆಂಡರ್‌ಗಳಿಗೆ 1-2-0. 100 ಕ್ಯಾಲೆಂಡರ್‌ಗಳಿಗೆ 2-0-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರ್‌ಗಳ ಪೂರಾ ಮೊಬಲಗು ಮಣಿಯಾರ್ಡರ್ ಮೂಲಕ ರವಾನಿಸಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜು ಯಾವ ಖರ್ಚೂ ಇಲ್ಲದಂತೆ ನೀವಿದ್ದೆಡೆಗೆ ರವಾನಿಸಲಾಗುತ್ತೆ. ಮೇಲ್ಕಂಡ ಕ್ಯಾಲೆಂಡರ್‌ನಲ್ಲಿ ಇಂಗ್ಲೀಷ್ ಮತ್ತು ಕನ್ನಡ ತಿಂಗಳು, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದಲ್ಲಿ ನಡೆಯತಕ್ಕ ಹಬ್ಬವೇ ಮೊದಲಾದ ಮುಖ್ಯ ದಿವಸಗಳು, ರಾಹುಕಾಲ, ಗುಳಿಕಾಲ ಮಳೇನಕ್ಷತ್ರ, ಅರಮನೆಯಲ್ಲಿ ನಡೆಯತಕ್ಕ ಉತ್ಸವಗಳೂ. ಶ್ರೀಮನ್ ಮಹಾರಾಜರವರು, ಶ್ರೀಮದ್ ಯುವರಾಜರವರು ಮತ್ತು ಶ್ರೀಮದ್ ಜಯಚಾಮರಾಜ ಒಡೆಯರವರ ಛಾಯಾಚಿತ್ರಗಳನ್ನಿಟ್ಟು ನಯವಾದ ಬಿಳೀ ದಪ್ಪ ಕಾಗದದಲ್ಲಿ ಅಂದವಾಗಿ ಪ್ರಿಂಟ್ ಮಾಡಿಸಿದ್ದೇವೆ.

1925 ನೇ ಇಸವಿಯ (ಮಂತ್ಲಿಟೀರಾಫ್) ತಿಂಗಳಿಗೊಂದು ಷೀಟಿನಂತೆ ಹರಿದುಬಿಡುವಂತೆ ತಯಾರಿಸಿರುವ ಕ್ಯಾಲೆಂಡರ್ 1 ಕ್ಕೆ 0-3-0, 3 ಕ್ಯಾಲೆಂಡರಿಗೆ 0-6-0, 12 ಕ್ಯಾಲೆಂಡರಿಗೆ 1-6-0. ತಮಗೆ ಬೇಕಾದಷ್ಟು ಕಾಪಿಗಳ ಪೂರಾಮೊಬಲಗನ್ನೂ ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜ್ ಯಾವ ಖರ್ಚೂ ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. [50—3]

ಮಣಿಯಾರ್ಡರ್ ರವಾನಿಸುವ ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್‌ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ತಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—6] ಪೋ. ಬಾ. ೫೧೦, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳಪ್ಪ, ಊದಬತ್ತಿ ಷಾಪ್,
34 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಲ್ಲದರಲ್ಲಿ ಪುರಾತನ ಕಾರಖಾನೆಯು.

ಸೂಚನೆ:—ಯಾವದೊಂದು ಮಾಲು ಗುಣಕಾರಿಯಾಗಿರುವದೆಂದು ತಿಳಿದಕೂಡಲೆ ಎಲ್ಲಾ ಕಡೆಗೂ ಅದರ ನಕಲು ಮಾಡಲಿಕ್ಕೆ ಆರಂಭವಾಗುತ್ತದೆ. ಆದರೆ ಹೆಸರಿಗೆ ತಕ್ಕಂತೆ ಗುಣಕ್ಕೆ ಮಾತ್ರ ಪಾತ್ರವಾಗುವದಿಲ್ಲ. ಈಗೀಗ ಇಲ್ಲಿ ನಕಲೀ ಔಷಧಿಯ ಕಾರಖಾನೆಗಳು ಹೊರಡುತ್ತಿರುವವು. ಆದ್ದರಿಂದ ಗಿರಾಕಿಗಳು ನಮ್ಮ ಟ್ರೇಡಮಾರ್ಕನ್ನು ನೋಡಿ ತಕ್ಕೊಳ್ಳಬೇಕು ಸರ್ಕಾರದಲ್ಲಿ ರಿಜಿಸ್ಟರ್‌ಆದಂಥ ಸುವರ್ಣಪದಕ ಸಂಪಾದಿಸಿದ

ದ್ರಾಕ್ಷಾಕ್ಷರ್ಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ಥ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ-ಬೇನೆಯು ಹೋಗುವದು. ೬೦, ೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವುದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.—ಪರಮಾ ಹಾಗೂ [illegible]ನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾಕ್ಷರ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇರೋಗ ಇದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟಲಿಯ ಕಿಮ್ಮತ್ತು ೧| ರೂಪಾಯಿ ಮೂರುಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಸಾರ್ತಿ ತರಿಸಿದರೆ [illegible]. ಅಂಚೆ ಟಪಾಲುಖರ್ಚು ಹೆಚ್ಚು ಬೀಳುವದಿಲ್ಲ. ಹೊಸ ಬಾಟಲಿಗಳ ಕಿಮ್ಮತ್ತು ೧೧—೦—೦ ಮತ್ತು ೧ ಬಾಟಲಿ ಪುಕ್ಕಟೆ ಕೊಡುವದು. ಟಪಾಲ ಖರ್ಚು ಬೇರೆ ಬೀಳುವದು. ಟಪಾಲಿನ ರೀತಿಯಿಂದ ೧ ಬಾಟ್ಲಿಗೆ ೧—೪—೦, ೩ ಬಾಟ್ಲಿಗೆ ೩—೦—೦, [illegible]ಗೆ ೧೪—೦—೦

ಮ್ಯಾನೇಜರು—ದ್ರಾಕ್ಷಾಕ್ಷರ್ಮಧು ಆಫೀಸು,
[12—6] ಪೋ. ಶಿಗ್ಗಾಂವಿ, ಜಿ. [illegible]

NOTICE.

Wanted a qualified nurse for the Hubli Dispensary from the 1st week of November 1924. Pay Rs. 30 to 40 per month with free quarters. Private practice allowed.

Candidates should apply in their own hand writing before 31st October 1924 stating their age, caste and qualifications with credentials. They should also state whether they have any previous practice and if so for how many years?

K. K. Nadirsha, L.C.E.,
Chief Officer
Hubli Municipality.

Hubli,
13th Oct. 1924.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಅಕ್ಟೋಬರ್ ತಾ॥ ೧೯ ನೆಯ ಭಾನುವಾರ.

THE MYSORE CIVIL SERVICE.

In pursuance of the permission granted to the members of the Representative Assembly to move resolutions concerning the recent order of the Government on the Civil Service Rules, Mr. Abbas Khan has tabled two resolutions, one, for the appointment of a Committee to go into the question and submit a report, and the other, for appointing two candidates by nomination in proportion to one by competitive examination. If the first is accepted, the second becomes unnecessary at this stage. A Committee no doubt would be the right thing to shift all the matters relating to the question, which is of a vital importance to the Country. But when the Government have taken four years to consider the reorganisation of the Service and have evidently bestowed some pains in coming to their present conclusions, they may be extremely reticent to accede to the formation of a Committee. The matter was brought up for consideration on Friday the 17th instant and the House adjourned to Saturday as the discussions were yet to continue. In politics, people are not left to chose between absolute good and absolute evil and very often they have to be satisfied with varying shades of good. If the members find Government too hard to knock against with the first resolution we hope they will press forward the second resolution, no matter what the attitude of the Government may be. It is the minimum that we can expect of the Government, and there could be no compromise there. We have never been believers in a competitive examination for Service in administration, and have made no secret of our opinion. Given the requisite qualification, a desire to serve, broad sympathies for the people and sufficient strength of physique and of character are more conducive to efficiency of and progress in administration than a supreme capacity to mug up things and draft reports nicely which are the only virtues than an examination might bring to light. Whatever use, even this examination might have had in olden days, when being open to non-Mysoreans also, there was a chance of more easy to chose the pick of the Mysore students than before without the help of competitive examination. But if the Government are anxious to have the examination the second resolution of Mr. Abbas Khan which is a very resonable one we hope will be accepted by the Government.

As the matter is just going to the press we receive the information that the second resolution has been accepted by the Government.

NOTES AND COMMENTS.

Something Wrong Somewhere.

We are sorry to note that we have not been favoured with an admission ticket for our representative to the Reporters' Table at the Assembly though it was applied for in time and a reminder sent to the Special Duty Officer. We need hardly say that we are entitled as a matter of right for a pass. It is also to be regretted that no advance copy of the Address of the Dewan in Kannada was despatched to us as usual. There must be something wrong somewhere. This is hardly the way of seeking the co-operation of local press in securing the publicity to the deliberations of the Assembly and we trust that such irregularities will be taken due notice of and their recurrence prevented.

The City President.

With the resignation of Mr. K. Mylar Rao of the Presidentship of the Mysore City Municipal Council, the Government have thought fit to introduce an Official President who is to remain in office for 6 months. Mr. N. Madhava Rao the new incumbent is an able officer whose services elsewhere would have been more valueable and needed. Though we are sorry that Government took recourse to this arrangement which was not called for, yet we have no doubt that the work of the Council will be carried on more smoothly and satisfactorily than hitherto under the direction of one who could be trusted to maintain that friendly relationship between the Council and its Executive which is so necessary in the working of any constitutional body and which was so deplorably lacking in the previous *regime*.

Municipal Loans to Arts and Industries.

At the Representative Assembly the Government brought forward certain proposals that the Municipal Account Manual do provide for some additional functions one of which was for the grant of loans to encourage local arts and industries, which was accepted by a majority of the House. A proposal like the above one for the grant of loans is no doubt such as would easily get the assent of members. The proposition was opposed by a Section of the House on the grounds that it would in effect not work for the benefit of the poor but for the rich and influential, it would be trespassing on the province of Cooperative Societies and banks, that between the grant of the loan and the receipt of it by the grantee there would be considerable leakages and that most of the municipal bodies had not sufficient funds to meet the essential requirements of Sanitation, Education, maintenance of roads etc. These were reasons which should have weighed against the acceptance of the proposal. It may be good in theory but we are afraid it would not be very helpful in practice. We hope it will not be given effect to before its full implications are considered.

Progressivists.

The latest attempt of our Brahmin friends to organise their political forces under a democratic complexion is furnished by the formation of a party so called, under the name *Progressivists* by Mr. Hosakoppa Krishna Rao. The President of this Association is Mr. Abdur Rahmon, a reactionary, of whose political principles one could never be too sure. The party is against the pernicious doctrine of communalism underlying The Miller Committee Report, but its President in days gone by was one of the ardent supporters of the Miller Committee Report, when this very Mr. H. Krishna Rao attacked it at the Legislative Council. The secretaries are Mr. Krishna Rao and Mr. M. P. Somashekara Rao, and the Treasurer, a by no means insignificant office, is Mr. Gopalswamy Iyer. When Mr. Gundappa of *the Karnatak* fame started the People's Convention, they caught hold of a non-Brahmin Mr. M. Chengiah Chetty to preside over it. So it is here. We would not wonder if this party had the same span of life as the Convention had. As regards its policy there is nothing that is not vague and platitudinous, such as, free and compulsory education, freedom of speech, economic and moral progress. If we can just peep into the inside of this party we find that it is formed as an opposition to the popular party which commands the majority in the Assembly. We welcome the party even as such, for it would keep the popular party more on the alert, and hope that it will not, like so many of its forerunners vanish as quickly as it came into existence.

ದಿವಾನರಭಾಷಣ.

ಈವೇಳೆ ಪ್ರಜಾಪ್ರತಿನಿಧಿಸಭಾಧಿವೇಶನದಲ್ಲಿ ದಿವಾನರು ಮಾಡಿದ ಭಾಷಣವು ಬಹಳ ವಿಚಾರಪುಷ್ಕಲವಾಗಿಯೂ, ಸಮಗ್ರವಾಗಿಯೂ ಇರುವುದರಿಂದ ದೀರ್ಘವಾಗಿ ಅಂದರೆ 75 ಪುಟಗಳುಳ್ಳದಾಗಿರುವುದು. ಇಂತಹ ಸಂದರ್ಭದಲ್ಲಿ ಭಾಷಣವು ಎರಡು ಭಾಗಗಳಾಗಿ ಮಾಡಲ್ಪಡುತ್ತಿದ್ದುದು ಹಿಂದೆ ವಾಡಿಕೆಯಾಗಿದ್ದಿತು. ಈ ಭಾಷಣದಲ್ಲಿ ಅನೇಕ ವಿಷಯಗಳು ಪುನರುಕ್ತಿಯಾಗಿರುವುದರಿಂದ, ಅವುಗಳು ಬಿಡಲ್ಪಟ್ಟಿದ್ದಲ್ಲಿ ಭಾಷಣವು ತಕ್ಕಮಟ್ಟಿಗೆ ಕಡಿಮೆಯಾಗುತ್ತಿದ್ದ ಸಂಭವವಿದ್ದಿತು. ಆದರೂ ಅನೇಕ ಪ್ರಾಮುಖ್ಯವಿಷಯಗಳು ಸಭಿಕರಿಗೆ ವಿಶದವಾಗಿಯೂ, ಸುಲಭವಾಗಿಯೂ ತಿಳಿಯುವಂತೆ ವಿವರಿಸಲ್ಪಟ್ಟಿರುವುದರಿಂದ, ಭಾಷಣವು ಜುಗುಪ್ಸಿತವಾಗಿರುವುದೆಂದು ಭಾವಿಸಲ್ಪಡಲಾಗದು. ಅಲ್ಲದೆ ದಿವಾನರು ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಿಷಯವನ್ನೂ ಪ್ರತಿಯೊಬ್ಬರೂ ನಿರಾಯಾಸದಿಂದ ತಿಳಿದುಕೊಳ್ಳುವಂತೆ ವಿವರಿಸಿ ಬೇಸರವಿಲ್ಲದೆ ಬರೆದಿರುವುದು ಅವರ ಕಾರ್ಯದಕ್ಷತೆಯನ್ನು ವ್ಯಕ್ತಗೊಳಿಸುತ್ತದಲ್ಲದೆ ಪ್ರಶಂಸನೀಯವಾಗಿರುವುದು. ಅಷ್ಟೊಂದು ವಿಷಯಗಳನ್ನೂ ಸಮಾಲೋಚಿಸಲು ನಮಗಿರುವ ಅಲ್ಪಾವಕಾಶದಲ್ಲಿ ಸಾಧ್ಯವಿಲ್ಲವಾದ ಪ್ರಯುಕ್ತ ಮುಖ್ಯವಾದ ಕೆಲ ವಿಷಯಗಳನ್ನು ಕುರಿತು ಪ್ರಸ್ತಾಪಿಸುವವರಾಗಿರುತ್ತೇವೆ.

ಪ್ರಸಕ್ತ ವರ್ಷದಲ್ಲಿ ಆಯಕ್ಕಿನ್ನ ವೆಚ್ಚವು ಹೆಚ್ಚಾಗಬಹುದೆಂದು ಮೊದಲು ನಿರೀಕ್ಷಿಸಲ್ಪಟ್ಟಿದ್ದು ಕಡೆಯಲ್ಲಿ ಆಯವು ಹೆಚ್ಚಾಗಿ 8 ಲಕ್ಷ ರೂ. ಮಿಗುವಂತಾದುದೂ, ಸಂಸ್ಥಾನದಲ್ಲಿ ಜನರು ಮಾದಕಪದಾರ್ಥಗಳನ್ನು ಉಪಯೋಗಿಸುವುದು ಕಡಿಮೆಯಾದುದೂ ಸಂತೋಷಪ್ರದಗಳಾಗಿವೆ. ವರಮಾನದ ತೆರಿಗೆಗೆ ಸಂಬಂಧಪಟ್ಟ ಅರ್ಜಿಗಳನ್ನೂ, ಅಪೀಲುಗಳನ್ನೂ ಹಿಡಿದು ವಿಚಾರಣೆಮಾಡಿ ವ್ಯವಸ್ಥೆಪಡಿಸುವ ವಿಚಾರವಾಗಿಯೂ, ಲೆಕ್ಕಗಳ ತನಿಖೆಯ ವಿಚಾರವಾಗಿಯೂ ಯುಕ್ತವಾದ ಅನುಜ್ಞೆಗಳು ಕೊಡಲ್ಪಟ್ಟಿರುವುದಾಗಿ ತಿಳುಹಲ್ಪಟ್ಟಿದೆ. ಇಷ್ಟಾದರೂ ಈ ವಿಚಾರದಲ್ಲಿ ಜನರಿಗಿನ್ನೂ ತೊಂದರೆಯು ತಪ್ಪಿಲ್ಲವೆಂಬ ದೂರು ಇರುವುದರಿಂದ ಇನ್ನಷ್ಟು ಸೌಲಭ್ಯವನ್ನು ಕಲ್ಪಿಸಿಕೊಡತಕ್ಕದು ಅವಶ್ಯಕವು. ಸಿವಿಲ್‌ಕೋರ್ಟುಗಳಲ್ಲಿ ಮೊಖದ್ದಮೆಗಳು ತ್ವರಿತದಿಂದ ಬಗೆಹರಿಸಲ್ಪಡಬೇಕೆಂಬುದ್ದೇಶದಿಂದ ಕೋರ್ಟುಗಳ ಸಂಖ್ಯೆಯು ಹೆಚ್ಚಿಸಲ್ಪಟ್ಟಿರುವುದಾಗಿ ಹೇಳಲ್ಪಟ್ಟಿದೆ. ಇಷ್ಟಾದರೂ ವಿವಾದಗಳು ಜಾಗ್ರತೆ ಬಗೆಹರಿಸಲ್ಪಡುತ್ತಿಲ್ಲವೆಂಬ ದೂರು ಇನ್ನೂ ತಪ್ಪಲಿಲ್ಲವಾಗಿ, ಹೀಗೆ ನಿಧಾನವಾಗಲು ನಿಜವಾದಕಾರಣವೇನಿರುವುದೆಂಬುದನ್ನು ಕಂಡುಹಿಡಿದು ಅದರ ಪರಿಹಾರೋಪಾಯವನ್ನು ಕಲ್ಪಿಸುವುದು ಅತ್ಯವಶ್ಯವು. ಪ್ರಸಕ್ತ ವರ್ಷದಲ್ಲಿ ಜನರ ಮರಣ ಸಂಖ್ಯೆಯು ಹಿಂದಣ ವರ್ಷಕ್ಕಿನ್ನ ಅತ್ಯಧಿಕವಾಗಿರುವುದು ಭಯಂಕರವಾಗಿರುತ್ತದೆ ಮತ್ತು ಇದರ ಕಾರಣವು ಕಂಡುಹಿಡಿಯಲ್ಪಟ್ಟು ಇತಃಪರ ಜನರ ಮರಣಸಂಖ್ಯೆಯು ಹೆಚ್ಚದಿರಲು ತಕ್ಕ ಪ್ರಯತ್ನವು ಅಗತ್ಯವಾಗಿ ಮಾಡಲ್ಪಡತಕ್ಕುದಾಗಿದೆ. ವಿದ್ಯಾಭ್ಯಾಸದ ವಿಚಾರದಲ್ಲಿ ಪ್ರಸ್ತಾಪಿಸುವಾಗ್ಗೆ, ದ್ರವ್ಯಾಭಾವದಿಂದ ಮಿಲ್ಲರ್‌ಕಮಿಟಿರಿಪೋರ್ಟಿನಮೇಲೆ ಹುಟ್ಟಿರುವ ಸರ್ಕಾರಿಯ ಅಪ್ಪಣೆಯಲ್ಲಿ ಕಂಡ ವಿಧಾನಗಳನ್ನೆಲ್ಲಾ ಅನುಷ್ಠಾನಕ್ಕೆ ತರಲಾಗಲಿಲ್ಲವೆಂದು ಹೇಳಲ್ಪಟ್ಟಿದೆ. ವರಮಾನದತೆರಿಗೆಯನ್ನು ವಿಧಿಸುವಾಗ್ಗೆ, ಅದರಿಂದಾಗುವ ಉತ್ಪನ್ನವೆಲ್ಲವೂ ವಿದ್ಯಾಭ್ಯಾಸಕ್ಕೇ ವಿನಿಯೋಗಿಸಲ್ಪಡುವುದೆಂದು ವಾಗ್ದಾನಮಾಡಲ್ಪಟ್ಟಿದ್ದುದರಮೇಲೆ, ಆ ತೆರಿಗೆಯನ್ನು ವಿಧಿಸಲು ಪ್ರಜಾಪ್ರತಿನಿಧಿಸಭೆಯಲ್ಲೂ ನ್ಯಾಯವಿಧಾಯಕಸಭೆಯಲ್ಲೂ ಅನುಮೋದನವು ಕೊಡಲ್ಪಟ್ಟಿತು. ಅದರಂತೆ ವರಮಾನದ ತೆರಿಗೆಯುತ್ಪನ್ನವೆಲ್ಲವೂ ವಿದ್ಯಾಭ್ಯಾಸಕ್ಕೆ ವಿನಿಯೋಗಿಸಲ್ಪಡುವಂತಾಗಿದ್ದಲ್ಲಿ ವಿದ್ಯಾಭಿವೃದ್ಧಿಗೆ ದುಡ್ಡಿನ ಅಭಾವದತೊಂದರೆಯು ಉಂಟಾಗುತ್ತಿರಲಿಲ್ಲವು. ಇದೂ ಅಲ್ಲದೆ ಒಟ್ಟು 8 ಡಿಸ್ಟ್ರಿಕ್ಟುಗಳಲ್ಲಿ 5 ಡಿಸ್ಟ್ರಿಕ್ಟಿನವರು ಈ ವಿದ್ಯಾಭ್ಯಾಸದ ತೆರಿಗೆಯನ್ನು ವಿಧಿಸಿರುವರಾದರೂ ಉಳಿದ 3 ಡಿಸ್ಟ್ರಿಕ್ಟಿನವರು ಮಾತ್ರ ಇನ್ನೂ ವಿಧಿಸಲೊಪ್ಪದಿರುವುದು ಬಹಳ ಖೇದಕರವಾಗಿದೆ. ಅದುಕಾರಣ ದಿವಾನರು ಸೂಚಿಸುವಂತೆ ಈ ವಿದ್ಯಾಭ್ಯಾಸದ ತೆರಿಗೆಯನ್ನು ಎಲ್ಲ ಡಿಸ್ಟ್ರಿಕ್ಟ್ ಬೋರ್ಡಿನವರೂ ಮ್ಯುನಿಸಿಪಾಲಿಟಿಯವರೂ ವಿಧಿಸುವಂತೆ ನಿರ್ಬಂಧಪಡಿಸುವುದು ಅತ್ಯಗತ್ಯವಾಗಿರುವುದು; ಇದರ ವಿನಾ ಬೇರೊಂದುಪಾಯವಿಲ್ಲವು. ವಿದ್ಯಾಭ್ಯಾಸದ ಆವಶ್ಯಕತೆಯೂ ಮೊದಲಗಿನ್ನ ಈಗ ಪ್ರತಿನಿತ್ಯದಲ್ಲೂ ಹೆಚ್ಚಾಗುತ್ತಿರುವುದಾದರೂ ಸಾಕಾದಷ್ಟು ಪ್ರೋತ್ಸಾಹವು ಕೊಡಲ್ಪಡುತ್ತಿಲ್ಲವಾದುದರಿಂದ, ವಿದ್ಯಾಭ್ಯಾಸದ ಶಾಖೆಯ ಕೆಲಸವು ಕುಂಠಿತವಾಗದಂತೆ ಮಾಡಲ್ಪಡುವುದಾಗಿ ನಿರೀಕ್ಷಿಸುತ್ತೇವೆ. ಕೃಷ್ಣರಾಜಸಾಗರಜಲಾಶಯನಿರ್ಮಾಣವು ವೈದ್ಯುತಕೆಲಸಗಳಿಗೆ ಮುಖ್ಯಸಾಧನವಾಗಿರುವುದರಿಂದ ಇವೆರಡರ ಉತ್ಪನ್ನದ ಲೆಕ್ಕಗಳು ಒಟ್ಟುಗೂಡಿಸಲ್ಪಡುವುದಾಗಿ ತಿಳಿಸಲ್ಪಟ್ಟಿದೆ. ಆದರೆ ವೈದ್ಯುತಶಾಖೆಯಿಂದ ಗಮನೀಯವಾದಷ್ಟು ಉತ್ಪನ್ನವಾಗದಿರುವುದು ಮಾತ್ರ ಖೇದಕರವಾಗಿದೆ. ಮೈಸೂರುಸರ್ಕಾರದವರಿಂದಲೂ ಮದ್ರಾಸ್ ಮತ್ತು ಸದರ್ನ ಮರಾಟಾರೈಲ್ವೆಕಂಪೆನಿಯವರಿಂದಲೂ ನಮ್ಮ ಸೀಮೆಯಲ್ಲಿ ನಡೆಯಿಸಲ್ಪಡುತ್ತಿರುವ ಲೋಹಮಾರ್ಗಗಳ ಉತ್ಪನ್ನವು ಚೆನ್ನಾಗಿರುತ್ತದೆಂದು ತಿಳಿಸಲ್ಪಟ್ಟಿರುವುದಷ್ಟೆ? ಆದರೆ ನಮ್ಮ ಸರ್ಕಾರದವರಿಂದ ನಡಿಸಲ್ಪಡುತ್ತಿರುವ ರೈಲಿನುತ್ಪನ್ನದ ಲೆಕ್ಕವು ಕಂಪೆನಿಯವರ ಲೆಕ್ಕದ ಜತೆಗೆ ಸೇರಿಸಲ್ಪಡದೆ ಪ್ರತ್ಯೇಕವಾಗಿ ತಿಳುಹಲ್ಪಟ್ಟಿದ್ದಲ್ಲಿ ಆದಾಯಕರವಾಗಿರುವುದೇ ಇಲ್ಲವೇ ಎಂಬುದು ವ್ಯಕ್ತವಾಗುತ್ತಿದ್ದಿತು. ಪೂರ್ವಾಪರ ವಿಚಾರವಿಲ್ಲದೆ ಸ್ಥಾಪಿಸಲ್ಪಟ್ಟು ಬಕಾಸುರನಂತೆ ಪರಿಣಮಿಸಿರುವ ಭದ್ರಾವತಿಯ ಕಬ್ಬಿನದ ಕಾರ್ಯಾಲಯವು ದಿವಾನರ ನಿರೀಕ್ಷಣೆಯಂತೆ ಹೇಗಾದರೂ ಫಲದಾಯಕವಾಗಿ ಪರಿಣಮಿಸುವಂತಾಗಲೆಂದು ನಾವೂ ಕೋರುತ್ತೇವೆ. ಕೃಷ್ಣರಾಜಸಾಗರಜಲಾಶಯದಿಂದ ಎತ್ತರವಾದ ಪ್ರದೇಶಗಳಿಗೆ ಕಾಲುವೆಗಳ ಮೂಲಕ ನೀರನ್ನೊದಗಿಸುವುದು ಮತ್ತು ಮೇಕೆದಾಟಿನ ಕೆಳಭಾಗದಲ್ಲಿ ಕಾವೇರಿನದಿಯ ಜಲಪಾತದಿಂದ ವಿದ್ಯುಚ್ಛಕ್ತಿಯುತ್ಪಾದನವನ್ನು ಮಾಡುವುದು-ಇಂತಹ ಬಂಡವಾಳದ ಕಾಮಗಾರಿಗಳಿಗಾಗಿ ಹಣವನ್ನು ಒದಗಿಸಬೇಕಾದ ವಿಷಯವು ಜಾಗ್ರತೆಯಾಗಿಯೂ, ಪ್ರಬಲವಾಗಿಯೂ ಸರ್ಕಾರದವರಿಂದ ಆಸ್ಥಾಸಕ್ತಿಪೂರ್ವಕವಾಗಿ ಪರ್ಯಾಲೋಚಿಸಲ್ಪಡುತ್ತಿದೆ ಎಂದು ದಿವಾನರು ಹೇಳಿರುವರು. ಆದರೆ ಈ ಕಾರ್ಯಗಳ ಸಾಧನೆಗಾಗಿ ಎಂ

ಗೂ ಹಣವು ಕಾಲವಶಾಡಲ್ಪಡತಕ್ಕದಾಗಿ ನಾವು ಒತ್ತಿ ಹೇಳುತ್ತೇವೆ. ಡಿಸ್ಟ್ರಿಕ್ಟಿನ ಕಾರ್ಯಾಡಳಿತವು ಬಹುಮಟ್ಟಿಗೆ ಉತ್ತಮಗೊಳಿಸಲ್ಪಟ್ಟಿರುವುದಾಗಿ ದಿವಾನರು ಹೇಳಿರುತ್ತಾರೆ. ಆದರೆ ಆರೀತಿ ಉತ್ತಮವಾದೇರ್ಪಾಟೇನೂ ಆಗಿರುವುದು ನಮಗೆ ಗೋಚರವಾಗಿಲ್ಲವು. ಸರ್ಕಾರಿಯುದ್ಯೋಗಗಳ ವಿನಿಯೋಗವಿಚಾರದಲ್ಲಿ ಪೂರ್ವಕ್ಕಿನ್ನ ವಿಶೇಷವಾಗಿ ಎಚ್ಚರಿಕೆಯು ತೆಗೆದುಕೊಳ್ಳಲ್ಪಟ್ಟಿರುವುದೆಂದು ಸೂಚಿಸಲ್ಪಟ್ಟಿದೆ. ಆದರೆ 1923 ನೆಯ ಜುಲೈ ತಿಂಗಳಿಂದ 1924 ನೆಯ ಜೂನ್ ತಿಂಗಳ ಕಡೆಯವರೆಗೆ ವಿನಿಯೋಗವಾದ 343 ಉದ್ಯೋಗಗಳಲ್ಲಿ 167 ಉದ್ಯೋಗಗಳುಮಾತ್ರ ಹಿಂದುಳಿದ ಪಂಗಡದವರಿಗೆ ಕೊಡಲ್ಪಟ್ಟಿರುವುದನ್ನು ನೋಡಿದರೆ, ಶೇಕಡ 50 ರಷ್ಟು ಕೂಡ ಈ ವರ್ಗದವರಿಗೆ ಕೊಡಲ್ಪಟ್ಟಿಲ್ಲವೆಂಬುದು ತಾನಾಗಿ ವ್ಯಕ್ತವಾಗುತ್ತದೆ. ಇದೂ ಅಲ್ಲದೆ ಶೇಕದಾರಿ ಉದ್ಯೋಗಸ್ಥಾನವು ಉತ್ತಮಗೊಳಿಸಲ್ಪಡುವುದಕ್ಕಾಗಿ ಪ್ರತಿವರ್ಷದಲ್ಲೂ 10 ಜನರು ಪ್ರಬೇಷನರಿ ಶೇಕದಾರರುಗಳಾಗಿ ನಿಯಮಿಸಲ್ಪಡಬೇಕೆಂದು ಸಂಕಲ್ಪಿಸಲ್ಪಟ್ಟು ಈ 10 ಸ್ಥಾನಗಳಲ್ಲಿ ⅓ ಭಾಗವು ಬ್ರಾಹ್ಮಣರಿಗೆ ಕಾದಿಡಲ್ಪಟ್ಟಿರುವುದರಕಾರಣವೇನೆಂಬುದು ಗೊತ್ತಾಗುವುದಿಲ್ಲವು. ಇದರಿಂದ ಒಟ್ಟು ಪ್ರಜಾಸಂಖ್ಯೆಯಲ್ಲಿ ಶೇಕಡ 4 ರಂತಿರುವ ಬ್ರಾಹ್ಮಣರಿಗೆ 33⅓ ಉದ್ಯೋಗಸ್ಥಾನಗಳು ಮೀಸಲಾಗಿಡಲ್ಪಟ್ಟಿರುವುದು ಯಾವ ನ್ಯಾಯವೆಂಬುದನ್ನು ಸರ್ಕಾರದವರೇ ತಿಳಿಸಬೇಕಾಗಿದೆ. ಈ ಶೇಕದಾರರುಗಳು ಯಾವಾಗಲೂ ರೈತರುಗಳ ಸಮೀಪವರ್ತಿಗಳಾಗಿದ್ದು ಅವರ ಕಷ್ಟಸುಖಗಳನ್ನು ಬಲ್ಲವರಾಗಿ ಕೆಲಸ ಮಾಡಬೇಕಾಗಿರುವುದರಿಂದ, 10ರಲ್ಲಿ 9 ಸ್ಥಾನಗಳೂ ಹಿಂದುಳಿದವರಿಗೆ ಕಾದಿಡಲ್ಪಡಬೇಕಾದುದು ಅತ್ಯಾವಶ್ಯಕವು ಮತ್ತು ಹೇಗಾದರೂ ಬ್ರಾಹ್ಮಣರಿಗೆ ತಮ್ಮ ಜನಸಂಖ್ಯಾನುಗುಣವಾಗಿ ಸಲ್ಲಬೇಕಾಗಿರುವುದಕ್ಕಿನ್ನ ಹೆಚ್ಚಾಗಿಯೇ ದೊರಕುವಂತಾಗುವುದು. ಇದರಂತೆಯೇ ಈಚೆಗೆ ಕಲ್ಪಿಸಲ್ಪಟ್ಟ 7 ಸ್ಪೆಷಲ್ ಮ್ಯಾಜಿಸ್ಟ್ರೇಟ್ ಸ್ಥಾನಗಳಲ್ಲಿ 2 ಸ್ಥಾನಗಳು ಅಲ್ಪಸಂಖ್ಯಾಕರಾದ ಬ್ರಾಹ್ಮಣರಿಗೆ ಕೊಡಲ್ಪಟ್ಟಿರುವುದೂ ಅನ್ಯಾಯವಾಗಿರುವುದೆಂದು ಹೇಳಬೇಕಾದುದಿಲ್ಲವು. ಸಿವಿಲ್‌ಸರ್ವಿಸ್ ಉದ್ಯೋಗಗಳ ವಿನಿಯೋಗವಿಚಾರದಲ್ಲಿ ಕೆಲ ನಿಬಂಧನೆಗಳು ಮಾಡಲ್ಪಟ್ಟಿರುವುದಾಗಿ ತಿಳಿಸಲ್ಪಟ್ಟಿರುತ್ತದೆ. ಈ ನಿಬಂಧನೆಯಲ್ಲಿರತಕ್ಕ ಸಾಧಕಬಾಧಕಗಳನ್ನು ಕುರಿತು ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆಯು ನಡೆಯುತ್ತಿರುವುದು. ಇದರ ಫಲಿತಾಂಶವು ಮುಂದಣ ಸಂಚಿಕೆಯಲ್ಲಿ ತಿಳಿಸಲ್ಪಡುವುದು. ಭಟ್ಕಲ್ ರೇವೆಯ ನಿರ್ಮಾಣದಿಂದ ಸಂಸ್ಥಾನದ ವ್ಯಾಪಾರಾಭಿವೃದ್ಧಿಯಾಗಿ ರಾಜಾದಾಯವು ಹೆಚ್ಚುವುದರಿಂದ ಆ ಪ್ರಯತ್ನವು ನಡಿಸಬೇಕಾಗಿರುತ್ತದೆಂದು ಹೇಳಲ್ಪಟ್ಟಿದೆ. ಈ ಪ್ರಯತ್ನವು ವಿಶೇಷ ಲಾಭಕರವಾಗಿರುವುದೆನ್ನುವುದರಲ್ಲಿ ಸಂಶಯವಿಲ್ಲವಾದರೂ, ತಕ್ಕ ದ್ರವ್ಯಾನುಕೂಲದಿಂದಲೇ ನಡೆಯಬೇಕಾಗಿರುವ ಪ್ರಯುಕ್ತ ಈಗಿನ ದುಡ್ಡಿನ ಅಭಾವದದೆಸೆಯಿಂದ ಕೈಕೊಳ್ಳಲ್ಪಡತಕ್ಕುದಾಗಿಲ್ಲವೆಂದು ಹೇಳಬೇಕಾಗಿಲ್ಲವು. ನಮ್ಮ ಸಂಸ್ಥಾನದಿಂದ ಇಂಡ್ಯಾಸರ್ಕಾರದವರಿಗೆ ಸಲ್ಲುತ್ತಿರುವ ಪೊಗದಿಯ ಮೊಬಲಗನ್ನು ಕಡಿಮೆಮಾಡಿಸುವ ವಿಚಾರದಲ್ಲಿ ಇಂಡ್ಯಾಸರ್ಕಾರದವರೊಡನೆ ತಕ್ಕ ಪತ್ರವ್ಯವಹಾರವನ್ನು ನಡೆಯಿಸಿ ವಿಶೇಷಪ್ರಯತ್ನ ಮಾಡಲ್ಪಟ್ಟಿರುವುದು ಸಂತೋಷಪ್ರದವಾಗಿದೆ ಮತ್ತು ಆ ಪ್ರಯತ್ನವು ಸಫಲವಾಗಲೆಂದು ಕೋರುತ್ತೇವೆ. ಸಂಸ್ಥಾನಾಭಿವೃದ್ಧಿಕಾರ್ಯಗಳನ್ನು ನಮ್ಮ ಸರ್ಕಾರದವರು ವಿಶೇಷ ಎಚ್ಚರಿಕೆಯಿಂದಲೂ, ದಕ್ಷತೆಯಿಂದಲೂ ನಡೆಯಿಸಿಕೊಂಡು ಬರುತ್ತಿರುವುದು ಸಂತೋಷಪ್ರದವಾಗಿದೆ. ಆದರೆ ಎಲ್ಲ ಅಭಿವೃದ್ಧಿಗೂ ಬಹುಭಾಗದ ಜನರ ವಿದ್ಯಾಭಿವೃದ್ಧಿಯೇ ಮೂಲವಾಗಿರುವುದರಿಂದ, ಅತ್ತಕಡೆಗೆ ಸರ್ಕಾರದವರು ಹೆಚ್ಚು ಗಮನಕೊಡುವುದು ಅತ್ಯಂತ ಆವಶ್ಯಕವಾಗಿರುವುದು.

ಸ್ವದೇಶದ ವೃತ್ತಾಂತಗಳು

ಮುಷೀರ್-ಉಲ್-ಮುಲ್ಕ್ ಮಿ॥ ಹಂಸಾಹುಸೇನ್‌ರವರು ತಮ್ಮ ಕುಮಾರರ ವಿವಾಹವನ್ನು ಈ ತಾ॥ 23 ರಲ್ಲಿ ರಾಜಧಾನಿಯಲ್ಲಿ ಬೆಳೆಸುವವರಾಗಿರುವರು.

ಡೆಪ್ಯುಟಿಕಮಿಷನರುಗಳಾದ ಮ॥ ಬಿ. ರಾಮಸ್ವಾಮಯ್ಯನವರು ಮೈಸೂರು ಡಿ॥ ನಿಂದ ಚಿತ್ರದುರ್ಗ ಡಿ॥ ಗೂ, ಮ॥ ನಾನಾಸ್ವಾಮಿರಾಯರು ಚಿತ್ರದುರ್ಗ ಡಿ॥ ನಿಂದ ಹಾಸನ ಡಿ॥ ಗೂ, ಎ. ವಿ. ರಾಮನಾಥನ್‌ರವರು ಹಾಸನ ಡಿ॥ ನಿಂದ ಮೈಸೂರು ಡಿ॥ ಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ದಿವಾನ್‌ರಾದ ಮ॥ ಎ. ಆರ್. ಬಾನರ್ಜಿಯವರ ಉದ್ಯೋಗದವಧಿಯು ಇನ್ನೂ ಎರಡು ವರ್ಷಕಾಲದವರೆಗೂ, ಒಂದನೆಯ ಕೌನ್ಸಿಲರಾದ ಮುಷೀರ್-ಉಲ್-ಮುಲ್ಕ್ ಮಿ॥ ಹಂಸಾಹುಸೇನ್‌ರವರ ಉದ್ಯೋಗದವಧಿಯು 1926 ನೇಯ ಮಾರ್ಚಿ ತಿಂಗಳಕಡೆಯವರೆಗೂ ಹೆಚ್ಚಿಸಲ್ಪಟ್ಟಿರುವುದಾಗಿ ಕೇಳುತ್ತೇವೆ.

ಮೈಸೂರು ವಿಶ್ವವಿದ್ಯಾಲಯದ ವೈಸ್‌ಚಾನ್ಸಲರಾದ ಮ॥ ವ್ರಜೇಂದ್ರನಾಥಶೀಲ್‌ರವರಿಗೆ ರಾಜತಂತ್ರಪ್ರವೀಣ ಎಂಬ ಪ್ರಶಸ್ತಿಯು ಶ್ರೀಮನ್ಮಹಾರಾಜರವರಿಂದ ಅನುಗ್ರಹಿಸಲ್ಪಟ್ಟಿತೆಂಬುದಕ್ಕೆ ಬದಲಾಗಿ ರಾಜಪ್ರವೀಣ ಎಂದು ಹಸ್ತದೋಷದಿಂದ ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುವುದಕ್ಕಾಗಿ ವಿಷಾದಿಸುತ್ತೇವೆ.

ಬಾಳೆಹೊನ್ನೂರು ಸಂಸ್ಥಾನ ಪೀಠಾಧಿಕಾರಸ್ಥಾನಕ್ಕೆ ಸರ್ವವಿಧದಲ್ಲೂ ಯೋಗ್ಯರಾದ ವಟುವನ್ನು ಆರಿಸಿ ಪಟ್ಟವನ್ನು ಕಟ್ಟುವ ವಿಚಾರವಾಗಿ ರಾಜಧಾನಿಯಲ್ಲಿ ಸ್ಥಳಪರಸ್ಥಳಗಳ ವೀರಶೈವ ದೊಡ್ಡಮನುಷ್ಯರುಗಳಿಂದ ನಡೆಸಲ್ಪಟ್ಟ ಸಭೆಗಳ ನಡವಳಿಕೆಗಳು ಈ ಪತ್ರಿಕೆಯ ಬೇರೆಕಡೆ ಮುದ್ರಿಸಲ್ಪಟ್ಟಿವೆ. ಬಹಳ ಚರ್ಚಾಸ್ಪದವಾಗಿರುವ ಈ ವಿಚಾರವು ನಿರಾಕ್ಷೇಪಕರವಾಗಿಯೂ ಬಹುಮತದಿಂದಲೂ ಇತ್ಯರ್ಥಗೊಳಿಸಲ್ಪಡಬೇಕಾಗಿರುವುದರಿಂದ ಉಭಯ ಸಭೆಗಳಲ್ಲಾದ ನಿರ್ಧಾರದಂತೆ, ವೀರಶೈವ ಮಹಾಸಭೆಯು ಬೆಂಗಳೂರಿನಲ್ಲಿ ನಡೆದ ಕೂಡಲೆ ವಟುವನ್ನು ಆರಿಸುವಿಕೆಯು ಅತ್ಯಗತ್ಯವೂ ಅವಸರವೂ ಆಗಿರುವುದೆಂದು ನಾವೂ ಅಭಿಪ್ರಾಯಪಡುತ್ತೇವೆ.

ರಾಜಧಾನಿಯ ಹೊಸಮಠದ ಶ್ರೀಬಸವಲಿಂಗಸ್ವಾಮಿಗಳ ಅನುಗ್ರಹದಿಂದಲೂ, ವೀರಶೈವರ ಉದಾರಾಶ್ರಯದಿಂದಲೂ, ಸರ್ಕಾರಿಯ ಗ್ರ್ಯಾಂಟಿನಿಂದಲೂ, ವೇ॥ ಶಿರೀ ಗುರುಶಾಂತಶಾಸ್ತ್ರಿಗಳ ಅಧ್ಯಾಪಕತ್ವದಿಂದಲೂ ನಡೆಯಿಸಲ್ಪಡುತ್ತಿರುವ ಶ್ರೀಶಂಕರವಿಲಾಸಸಂಸ್ಕೃತಪಾಠಶಾಲಾವಿದ್ಯಾರ್ಥಿಗಳ ಪಾರಿತೋಷಿಕವಿನಿಯೋಗಸಮಾರಂಭೋತ್ಸವವು ಕಳೆದ ತಾ॥ 13 ರ ಸಾಯಂಕಾಲದಲ್ಲಿ ಅರಮನೆಯ ಮುಜರಾಯಿ ಭಕ್ಷಿಯವರಾದ ರಾಜಕವಿಭೂಷಣ ಮ॥ ಎಚ್. ಚಿಕ್ಕಲಿಂಗರಾಜ ಅರಸಿನವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಪರಸ್ಥಳಗಳಿಂದ ಬಂದಿರುವ ವೀರಶೈವಪ್ರಜಾಪ್ರತಿನಿಧಿಗಳೂ, ಸ್ಥಳದ ವೀರಶೈವದೊಡ್ಡಮನುಷ್ಯರುಗಳೂ ಸಭೆಗೆ ದಯಮಾಡಿಸಿದ್ದರು.

ರಾಜಧಾನಿಗೆ ದಸರಾಮಹೋತ್ಸವಕ್ಕಾಗಿ ಬಂದಿದ್ದ ನಾಟಕೋಟಿಜನರು ತುಲಾಸಂಕ್ರಮಣಕ್ಕಾಗಿ ತಲಕಾವೇರಿಗೆ ಕಳೆದ ತಾ॥ 16 ರಲ್ಲಿ ಮೋಟಾರುಬಂಡಿಯಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ, ಅವುಗಳಲ್ಲಿ ಒಂದು ಸಣ್ಣ ಮೋಟಾರುಬಂಡಿಯು ಹುಣಸೂರಿನ ಸಮೀಪದಲ್ಲಿ ಒಂದು ಸೇತುವೆಗೋ ಮರಕ್ಕೋ ತಾಕಲುಬಡಿದು ಹಳ್ಳಕ್ಕೆ ಬಿದ್ದುಹೋಯಿತೆಂದೂ, ಅದರೊಳಗೆ ಕುಳಿತಿದ್ದವರಲ್ಲಿ ಒಬ್ಬ ಹೆಂಗುಸು ಕೂಡಲೆ ಮೃತಳಾದಳೆಂದೂ, ಉಳಿದ 3-4 ಜನರಿಗೆ ಪೂರಾಪೆಟ್ಟುಬಿದ್ದಿರುವುದೆಂದೂ, ಮಡಕೇರಿಯಿಂದ ಬರುತ್ತಿದ್ದ ಮಿ॥ ಪಾಲಂಜಿಯವರ ಮೋಟಾರುಮೇಲುಬಂಡಿಯಲ್ಲಿ ಆ ಪೆಟ್ಟನ್ನುತಿಂದುಬಿದ್ದವರು ರಾಜಧಾನಿಗೆ ಸಾಗಿಸಲ್ಪಟ್ಟು ಆಸ್ಪತ್ರೆಯಲ್ಲಿ ಉಪಚರಿಸಲ್ಪಡುತ್ತಿರುವರೆಂದೂ ಕೇಳುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಉದ್ಯೋಗಸ್ಥಪ್ರೆಸಿಡೆಂಟರಾಗಿಯೂ, ಟ್ರಸ್ಟ್ ಬೋರ್ಡಿನ ಚೇರ್ಮನ್ನರಾಗಿಯೂ 6 ತಿಂಗಳವರೆಗೆ ನಿಯಮಿಸಲ್ಪಟ್ಟಿರುವ ಮ॥ ನ್ಯಾಪತಿ ಮಾಧವರಾಯರು ಈ ತಾ॥ 15 ರಲ್ಲಿ ಮ॥ ಕೆ. ಮೈಲಾರರಾಯರಿಂದ ಛಾರ್ಜನ್ನು ವಹಿಸಿಕೊಂಡು ಪ್ರತಿನಿತ್ಯದಲ್ಲೂ ಬೆಳಗಿನವೇಳೆ ಊರಿನಲ್ಲೆಲ್ಲಾ ಸಂಚರಿಸಿ ಶುಚೀಕರಣ ಮೊದಲಾದ ಹೊರಗಣಕೆಲಸಗಳನ್ನು ಪ್ರತ್ಯಕ್ಷವಾಗಿನೋಡಿ ತಿಳಿಯುತ್ತಿರುವುದಾಗಿಯೂ, ಮಧ್ಯಾಹ್ನ 11 ಗಂಟೆಗೆ ಸರಿಯಾಗಿ ಆಫೀಸಿಗೆಬಂದು ಕಾಗದಪತ್ರಗಳನ್ನು ಸ್ವತಃ ನೋಡಿ ಕೆಲಸ ಮಾಡುತ್ತಿರುವುದಾಗಿಯೂ, ಪ್ರತಿಯೊಬ್ಬ ಮ್ಯುನಿಸಿಪಲ್ ಕೌನ್ಸಿಲರ ಪರಿಚಯವನ್ನು ಮಾಡಿಕೊಂಡು ಅವರ ಮನೋಭಾವವನ್ನು ತಾವು ತಿಳಿದುಕೊಂಡು ತಮ್ಮ ಅಭಿಪ್ರಾಯವನ್ನು ಅವರಿಗೆ ತಿಳಿಸಿ ಪರಸ್ಪರ ಅನ್ಯೋನ್ಯಭಾವದಿಂದಲೂ, ವಿಶ್ವಾಸದಿಂದಲೂ ಪ್ರಜಾಹಿತಕಾರ್ಯಗಳನ್ನು ಮಾಡಬೇಕೆಂಬ ಕುತೂಹಲವುಳ್ಳವರಾಗಿರುವರೆಂದೂ ಕೇಳಿ ಸಂತೋಷಿಸುತ್ತೇವೆ. ಇವರು ಇನ್ನೂ ಯವ್ವನಸ್ಥರಾಗಿಯೂ, ಮೇಧಾವಿಗಳಾಗಿಯೂ, ಲವಲವಿಕೆಯಿಂದ ಕೆಲಸಮಾಡಬಲ್ಲವರಾಗಿಯೂ ಇರುವುದರಿಂದ ತಾವು ಸಂಕಲ್ಪಿಸಿರುವಂತೆ ಮ್ಯುನಿಸಿಪಲ್ ಕೌನ್ಸಿಲರುಗಳಕೂಡ ಸೌಹಾರ್ದದಿಂದ ಕೆಲಸಮಾಡುತ್ತಬಂದಲ್ಲಿ ಈವರೆಗಿದ್ದ ಆನರರಿ ಪ್ರೆಸಿಡೆಂಟರುಗಳಿಂದ ನಡೆಯಲ್ಪಟ್ಟ ಅವಿವೇಕಗಳೆಲ್ಲವೂ ಪರಿಮಾರ್ಜನೆಗೊಂಡು ರಾಜಧಾನಿಯ ಮ್ಯು॥ ಕೌನ್ಸಿಲು ನಿಜವಾಗಿಯೂ ಆದರ್ಶಪ್ರಾಯವಾಗಿ ಪರಿಣಮಿಸುವುದರಲ್ಲಿ ತಿಲಮಾತ್ರ ಅಭ್ಯಂತರವಿಲ್ಲವು. ಆದರೆ ಮ॥ ಕೆ. ಮೈಲಾರರಾಯರ ಪರಮಾಪ್ತರಂತೆ ನಟಿಸಿ ಅವರ ಪ್ರೆಸಿಡೆಂಟ್ ಪದವಿಗೆ ತಿಲೋದಕವನ್ನು ಬಿಡಿಸಿದಂತಹ ಹಿತಶತ್ರುಗಳಬಲೆಗೆ ಬೀಳದೆ ಎಚ್ಚರವಾಗಿರಬೇಕೆಂದು ಕೋರುತ್ತೇವೆ.

ಪ್ರತಿವರ್ಷದಲ್ಲೂ ಶ್ರೀಮನ್ಮಹಾರಾಜರವರ ವಿಜಯಯಾತ್ರೋತ್ಸವವುಆದ 8 ನೆಯ ದಿವಸದಲ್ಲಿ ನಡೆಯುವ ಶ್ರೀಚಾಮುಂಡೇಶ್ವರೀ ಅಮ್ಮನವರ ರಥೋತ್ಸವವು ಕಳೆದಬುಧವಾರ ಬಹಳ ವಿಜೃಂಭಣೆಯಿಂದ ನಡೆದಿತು. ಶ್ರೀಮನ್ಮಹಾರಾಜರವರೂ ರಾಣೀವಾಸದವರೂ ಆ ದಿವಸ ಬೆಳಗ್ಗೆ ಮೋಟಾರುಬಂಡಿಗಳಲ್ಲಿ ಲಲಿತಾದ್ರಿಮಾರ್ಗವಾಗಿ ಬೆಟ್ಟಕ್ಕೆ ಚಿತ್ತೈಸಿ ಶ್ರೀಅಮ್ಮನವರ ಅರ್ಚನಾದಿಗಳನ್ನೂ ರಥೋತ್ಸವವನ್ನೂ ಪರಾಮರ್ಶಿಸಿ ಸಾಯಂಕಾಲದವರೆಗೂ ಅಲ್ಲೇ ಇದ್ದು ಸಿಂಹವಾಹನೋತ್ಸವಾನಂತರ ರಾಜಧಾನಿಗೆ ದಯಮಾಡಿಸಿದರು. ಶ್ರೀಅಮ್ಮನವರ ರಥಾರೋಹಣಾನಂತರ ಶ್ರೀಮನ್ಮಹಾರಾಜರವರು ಮುಡಿಯಿಂದ ರಥದಹಗ್ಗವನ್ನು ಸ್ಪರ್ಶಮಾಡಿ ಕೊಂಚ ಜಗ್ಗಿದಮೇಲೆ ರಥವು ಸಾವಿರಾರು ಜನರಿಂದೆಳೆಯಲ್ಪಟ್ಟು ದೇವಸ್ಥಾನಪ್ರದಕ್ಷಿಣೆಯಿಂದ ಸ್ವಸ್ಥಾನವನ್ನು ಸೇರುವಲ್ಲಿ ಮಧ್ಯಾಹ್ನ 12 ಗಂಟೆಯಾಗಿದ್ದಿತು. ಆಗ 21 ಗುಂಡುಗಳು ಹಾರಿಸಲ್ಪಟ್ಟುವು. ಈವೇಳೆ ಭಕ್ತಾದಿಗಳ ಸಮೂಹವು ಬಹಳವಾಗಿ ಸೇರಿದ್ದಿತು. ಆ ದಿವಸ ರಾತ್ರಿ ಅರಮನೆಯ ಮೇಲೂ ಕೋಟೆಯಬಾಗಿಲುಗಳಮೇಲೂ ಸಾವಿರಾರು ವಿದ್ಯುದ್ದೀಪಗಳು ಹೊತ್ತಿಸಲ್ಪಟ್ಟಿದ್ದುವು. ಆ ರಾತ್ರಿ ಮಳೆಬಂದುದರಿಂದ ಬೆಟ್ಟದಮೇಲಿದ್ದ ಜನರಿಗೆ ಕೊಂಚ ತೊಂದರೆಯಾಯಿತು. ಬೆಟ್ಟದಮೇಲಿರುವ ಅರಮನೆಯಲ್ಲಿ ಬ್ರಾಹ್ಮಣರಿಗೆ ಊಟಮಾಡಿಸಲ್ಪಟ್ಟು ದಕ್ಷಿಣೆಯೂಕೊಡಲ್ಪಟ್ಟುದಾಗಿ ಕೇಳುತ್ತೇವೆ. ಮೊನ್ನೆ ಶುಕ್ರವಾರ ರಾತ್ರಿ ದೇವಗೆರೆಯಲ್ಲಿ ಶ್ರೀಅಮ್ಮನವರ ತೆಪ್ಪೋತ್ಸವವು ನಡೆದಿತು. ತೆಪ್ಪವು ಪುಷ್ಪಮಾಲಿಕೆಗಳಿಂದಲೂ ನಾನಾಬಣ್ಣಗಳ ವಿದ್ಯುದ್ದೀಪಾವಳಿಗಳಿಂದಲೂ ಅಲಂಕೃತವಾಗಿದ್ದುದರಿಂದ ಅತ್ಯಂತ ನೇತ್ರಾನಂದಕರವಾಗಿದ್ದಿತಲ್ಲದೆ ಅರಮನೆಯ ಕರ್ನಾಟಕಬ್ಯಾಂಡಿನವರು ಬಹುನಿಪುಣತೆಯಿಂದನುಡಿಸುತ್ತಿದ್ದ ರಾಗಗಳು ಮನೋಹರವಾಗಿದ್ದುವು. ಈ ತೆಪ್ಪೋತ್ಸವ ಸಮಾರಂಭಕ್ಕೂ ಜನಸಮೂಹವು ವಿಶೇಷವಾಗಿ ಸೇರಿದ್ದಿತು. ಆದರೆ ಈ ರಾತ್ರಿಯೂ ಮಳೆಯು ಬಂದು ಉತ್ಸವವನ್ನು ಕೊಂಚ ಭಂಗಪಡಿಸಿತು.

ಬಾಳೆಹೊನ್ನೂರು ಪೀಠಾಧಿಕಾರಿಗಳನ್ನು ಆರಿಸುವ ವಿಚಾರದಲ್ಲಿ ಮೈಸೂರಿನಲ್ಲಿ ನಡೆದ ಮೀಟಿಂಗುಗಳು.

ಹಾಸ್ಟಲ್ಲಿನಲ್ಲಿ ನಡೆದ ಮೀಟಿಂಗು.

1914ನೇ ಅಕ್ಟೋಬರ್ ತಾ॥ 12ರ ಸಾಯಂಕಾಲ ಮೈಸೂರು ಸಾಹುಕಾರ್ ಕಟ್ಟಳ್ಳಿ ಚನ್ನಬಸವಪ್ಪನವರ ಹಾಸ್ಟಲಿನಲ್ಲಿ ಈ ಕೆಳಗೆ ಕಂಡ ಸ್ಥಳಪರಸ್ಥಳಗಳ ವೀರಶೈವದೊಡ್ಡಮನುಷ್ಯರುಗಳು ರೆಪ್ರೆಜೆಂಟೇಟಿವ್ ಮೆಂಬರ್ ಮ॥ ಕೋಲಾರದ ಸಾಹುಕಾರ್ ಚಿಕ್ಕಚನ್ನಂಜಪ್ಪಶೆಟ್ಟರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ವಿಚಾರವಾಗಿ ಸಭೆಸೇರಿದ್ದು ನಡೆಸಿದ ಪ್ರೊಸೀಡಿಂಗ್ಸು—

ಮ॥ ಗಳಾದ (1) ಬೆಂಗಳೂರು ಅಡ್ವೋಕೇಟ್ ಜಿ. ಪರಮಶಿವಯ್ಯ ಬಿ.ಎ., ಎಲ್‌ಎಲ್.ಬಿ., ಯವರು ರೆಪ್ರೆಜೆಂಟೇಟಿವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಮೆಂಬರ್ (2) ತುಮಕೂರಿನ ಅಡ್ವೋಕೇಟ್ ಜಿ. ರುದ್ರಪ್ಪ, ಬಿ.ಎ.ಎಲ್‌ಎಲ್.ಬಿ., ಯವರು ರೆಪ್ರೆಜೆಂಟೇಟಿವ್ ಮತ್ತು ಲೆ॥ ಕೌನ್ಸಿಲ್‌ಮೆಂಬರು (3) ತಿಪಟೂರಿನ ಸಾಹುಕಾರ್ ಡಿ. ಎಸ್. ಮಲ್ಲಪ್ಪನವರು ರೆಪ್ರೆಜೆಂಟೇಟಿವ್ ಮತ್ತು ಲೆ॥ ಕೌನ್ಸಿಲ್‌ಮೆಂಬರು (4) ಮೈಸೂರಿನ ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರು (5) ಬೆಂಗಳೂರಿನ ತೂಬಗೆರೆ ನಂಜಪ್ಪನವರು ರೆಪ್ರೆಜೆಂಟೇಟಿವ್ ಮೆಂಬರು (6) ಹಾಸನದ ಕೇಣಿ ಮಹಾದೇವಪ್ಪನವರು ರೆಪ್ರೆ॥ ಮೆಂಬರು (7) ಶ್ರೀರಂಗಪಟ್ಟಣದ ಸಿದ್ಧಲಿಂಗದೇವರು ಇನಾಮ್ದಾರರು ಮತ್ತು ಆನರರಿ ಲೆಕ್ಚರರು (8) ಯಡೆಹಳ್ಳಿ ಸಾಹುಕಾರ್ ಇಂ॥ ಶಾಂತಪ್ಪಶೆಟ್ಟರು (9) ಅರಸೀಕೆರೆ ಸಾಹುಕಾರ್ ಮರುಳಸಿದ್ಧಪ್ಪಶೆಟ್ಟರು ರೆ॥ ಮೆಂಬರು (10) ಬೆಂಗಳೂರು ಇನ್ಕಂಟ್ಯಾಕ್ಸ್ ಇನ್ಸ್‌ಪೆಕ್ಟರು ಮ॥ ಜಿ. ಕೆ. ರುದ್ರಾರ್ಯರು (11) ಹುಲ್ಯಾರು ಸಾಹುಕಾರ್ ರುದ್ರಪ್ಪಶೆಟ್ಟರು ರೆ॥ ಮೆಂಬರು (12) ಯಡತೊರೆ ಬಳಿಸಿದ್ಧಲಿಂಗಶೆಟ್ಟರು ರೆ॥ ಮೆಂಬರು (13) ಬೆಂಗಳೂರು ಗುರುನಂಜಒಡೆಯರು ವರ್ತಕರು (14) ಚಿತ್ರದುರ್ಗದ ಸಾಹಿ ಹಾಲಪ್ಪನವರು ರೆ॥ ಮೆಂಬರು (15) ಚಿತ್ರದುರ್ಗದ ಎಸ್. ವೀರಭದ್ರಪ್ಪನವರು ರೆ॥ ಮೆಂಬರು (16) ಧರ್ಮನಾಯಕನದುರ್ಗದ ಬಿ. ಪಾಡಿಗಮಲ್ಲಪ್ಪನವರು ರೆ॥ ಮೆಂಬರು (17) ಶಿಕಾರಿಪುರದ ಸೊರಣಗಿಸಿದ್ಧಬಸಪ್ಪನವರು ರೆ॥ ಮೆಂಬರು (18) ಬೆಂಗಳೂರ ಬಿ. ರಾಚಪ್ಪನವರು, ಆನರರಿ ಮ್ಯಾಜಿಸ್ಟ್ರೇಟರು (19) ಸೊರಬದ ಚೆನ್ನಶೇಖರಪ್ಪನವರು ರೆ॥ ಮೆಂಬರ್ (20) ಚಿತ್ರದುರ್ಗದ ಜಗದ್ಗುರು ಮುರುಘಾಮಠದ ಏಜಂಟ್ ಲಿಂಗಪ್ಪನವರು (21) ಯಡತೊರೆ ಜಹಗೀರ್ದಾರ್ ಬಳಿಭದ್ರಶೆಟ್ಟರು (22) ಬೀರೂರಿನ ಉಜ್ಜಯಿನಿಮಠದ ಎಂ. ಶಿವಲಿಂಗಪ್ಪಯ್ಯನವರು ರೆ॥ ಮೆಂಬರು (23) ಹುನ್ನಮಾರ್ನಹಳ್ಳಿಮಠದ ಏಜಂಟ್ ತೋಂಟದಾರ್ಯರು ರೆ॥ ಮೆಂಬರು (24) ಗುಬ್ಬಿಯ ಜಿ. ಎಸ್. ಮುರುಘಪ್ಪನವರು ರೆ॥ ಮೆಂಬರು (25) ದಾವಣಗೆರೆಯ ಸಾಹುಕಾರ್ ಉರುಕೊಂಡೆ ಚೆನ್ನಬಸಪ್ಪನವರು ರೆ॥ ಮೆಂಬರು (26) ಶಿಕಾರಿಪುರದ ಪುಟ್ಟಮಲ್ಲಪ್ಪನವರು ರೆ॥ ಮೆಂಬರು (27) ತುಮಕೂರಿನ ಕನ್ನಯ್ಯಶೆಟ್ಟರು, ಮರ್ಚಂಟ್ (28) ಅಲ್ಲೂರಿನ ರಾಮಪ್ಪಗೌಡರು ರೆ॥ ಮೆಂಬರು (29) ಮೈಸೂರಿನ ವೈ. ವಿರೂಪಾಕ್ಷಯ್ಯನವರು ಮೈಸೂರು ಸ್ಟಾರ್ ಎಡಿಟರ್ (30) ಮೈಸೂರಿನ ಸಿಟ್ರಿಬಸಪ್ಪನವರು, ಮರ್ಚಂಟ್ (31) ದಾವಣಗೆರೆಯ ಕಂದಕಲ್ ಚನ್ನಬಸಪ್ಪನವರು ರೆ॥ ಮೆಂಬರು (32) ಹೊಳಲ್ಕೆರೆಯ ಶಂಭನೂರು ಭಿಕ್ಷಪ್ಪನವರು ರೆ॥ ಮೆಂಬರು (33) ಬಿಳ್ಕೋಡು ಚರಂತಿಮಠದ ರುದ್ರಾರಾಧ್ಯರು (34) ಹಾವೇರಿ ವೀರಭದ್ರಪ್ಪನವರು, ಮರ್ಚಂಟ್ (35) ಬಾಳೂರು ಬಿ. ಎಂ. ದೇವೇಗೌಡರು ರೆ॥ ಮೆಂಬರು (36) ಯಸಳೂರುಪೇಟೆ ತೊಜೇನಹಳ್ಳಿ ಮಲ್ಲಪ್ಪನವರು ಜಹಗೀರ್ದಾರ್ (37) ಮೈಸೂರಿನ ಆಸ್ಥಾನ ವಿದ್ವಾನ್ ಶಿರೀ ಗುರುಶಾಂತಶಾಸ್ತ್ರಿಗಳು (38) ಜಗಳೂರಿನ ಮಹಾಲಿಂಗಪ್ಪನವರು, ರೆ॥ ಮೆಂಬರು (39) ಹಿರಿಯೂರಿನ ಮುರುಘಪ್ಪನವರು, ರೆ॥ ಮೆಂಬರು (40) ಆಲೂರಿನ ನಂಜುಂಡಪ್ಪಶೆಟ್ಟರು, ರೆ॥ ಮೆಂಬರು (41) ಮೈಸೂರಿನ ಸೋಮಯ್ಯನವರು, ಮರ್ಚಂಟ್ (42) ಮೈಸೂರಿನ ಇನ್ಷೂರೆನ್ಸ್ ಕಂಪೆನಿ ಎಂ. ಎಲ್. ನಾಗಣ್ಣನವರು (43) ನಗರ ತಾ॥ ಕಳಲೇ ವೀರಭದ್ರಪ್ಪನವರು ರೆ॥ ಮೆಂಬರು (44) ನಾಗವಾಲದ ಜಿ. ಮಲ್ಲಣ್ಣನವರು, ರೆ॥ ಮೆಂಬರು (45) ಮೈಸೂರಿನ ಭಕ್ತಿ ಸೋಮಶೇಖರಪ್ಪನವರು (46) ಗುಬ್ಬಿಯ ಜಿ. ಮುರುಘಪ್ಪನವರು, ಮರ್ಚೆಂಟ್ (47) ಮೈಸೂರಿನ ಗುಬ್ಬಿಸೆಟ್ಟರ ಚನ್ನಬಸಪ್ಪನವರು (48) ಸಾಗರದ ದಳವಾಯಿ ಬಸವಲಿಂಗಪ್ಪನವರು ರೆ॥ ಮೆಂಬರು (49) ಶಿರೀ ಚನ್ನಬಸವಪ್ಪನವರು, ಮರ್ಚಂಟ್ (50) ನಗರದ ಗುರುಲಿಂಗಪ್ಪನವರು, ರೆ॥ ಮೆಂಬರು (51) ಕೊರಟಗೆರೆ ತಾ॥ ಸಾಗ್ಗೆರೆ ರೇವಣ್ಣನವರು (52) ಮೂಡಿಗೆರೆ ತಾ॥ ಚಿಣ್ಣಗದ ದೇವಪ್ಪಗೌಡರು, ರೆ॥ ಮೆಂಬರು (52) ಬೌರಿಂಗ್‌ಪೇಟೆಯ ಚನ್ನಬಸವಪ್ಪನವರು, ರೆ॥ ಮೆಂಬರು (54) ಆನೆಕಲ್ ತಾ॥ ಜಿಗಣಿಯ ಹೊನ್ನಗಂಗಪ್ಪನವರು, ರೆ॥ ಮೆಂಬರು (55) ಬೆಂಗಳೂರಿನ ಜಿ. ಎಸ್. ಮಲ್ಲಿಕಾರ್ಜುನಪ್ಪನವರು, ಮರ್ಚಂಟ್ (56) ಯಡೆಹಳ್ಳಿ ಶಾಂತಪ್ಪಶೆಟ್ಟರ ಅಡಿವೆಪ್ಪನವರು, ಜಹಗೀರ್ದಾರ್.

ಬಾಳೆಹೊನ್ನೂರು ಸಂಸ್ಥಾನಮಠವು ವೀರಶೈವಮತಸ್ಥಾಪಕರುಗಳಾದ ಪಂಚಾಚಾರ್ಯರುಗಳಲ್ಲಿ ಪ್ರಮುಖರಾದ ಶ್ರೀರೇಣುಕಾಚಾರ್ಯರ ಪೀಠಸ್ಥಲವಾಗಿಯೂ, ಪ್ರಖ್ಯಾತವಾಗಿಯೂ ಇರುವುದರಿಂದ ಈ ಪೀಠದ ಗೌರವಪ್ರತಿಷ್ಠೆಗಳನ್ನು ಕಾಪಾಡಿಕೊಂಡುಬರುವ ಸಾಮರ್ಥ್ಯವುಳ್ಳವರಾಗಿಯೂ ಈಗ ಮಠದಲ್ಲುಂಟಾಗಿರುವ ಅಂತಃಕಲಹ ಮತ್ತು ಅನೈಕಮತ್ಯಗಳನ್ನು ಹೋಗಲಾಡಿಸಿ ಒಟ್ಟು ಸಮಾಜಾಭಿವೃದ್ಧಿಯನ್ನು ಪಡಿಸುವಲ್ಲಿ ಆಸಕ್ತರಾಗಿಯೂ ವಿದ್ಯಾವಂತರಾಗಿಯೂ ಕುಲಶೀಲಸಂಪನ್ನರಾಗಿಯೂ ಇರುವವರೊಬ್ಬರು ಬಹುಜನಸಮ್ಮತಿಯಿಂದ ಆರಿಸಲ್ಪಟ್ಟು ಪಟ್ಟಾಧಿಕಾರಿಗಳಾಗಿ ಮಾಡಲ್ಪಡತಕ್ಕದು ಅತ್ಯಾವಶ್ಯಕವಾಗಿರುವುದೆಂದೂ, ಬೆಂಗಳೂರಿನಲ್ಲಿ ನಡೆಯುವ ಮಹಾಸಭೆಗೆ ಎಲ್ಲಾದೇಶದಿಂದ ಪ್ರಮುಖವೀರಶೈವರು ಬರುತ್ತಾರಾದ್ದರಿಂದ ಆ ಸಮಯದಲ್ಲಿ ವಟುವನ್ನು ಆರಿಸುವ ಕಾರ್ಯವನ್ನು ಇಟ್ಟುಕೊಳ್ಳುವುದು ನಿರಾಕ್ಷೇಪವೂ ಅನುಕೂಲವೂ ಆಗಿರುವುದೆಂದೂ ಮ॥ ಗಳಾದ ಸಿದ್ಧಲಿಂಗದೇವರು, ಜಿ. ಪರಮಶಿವಯ್ಯನವರು, ಜಿ. ರುದ್ರಪ್ಪನವರು, ಚಿತ್ರದುರ್ಗದ ತಾ॥ ಹಂದಿಗಲ್ ಚನ್ನಬಸಪ್ಪನವರು ಮತ್ತೆ ಕೆಲ ದೊಡ್ಡಮನುಷ್ಯರುಗಳಿಂದ ಬಹಳ ಯುಕ್ತಿಯುಕ್ತವಾಗಿ ಭಾಷಣಮಾಡಲ್ಪಟ್ಟಿತು. -ಬಾಳೆಹೊನ್ನೂರುಮಠವು ಶಿಥಿಲವಾಗಿಯೂ ಅನಾಯಕವಾಗಿಯೂ ಇರುವುದರಿಂದ ಅಲ್ಲಿಯ ನಿತ್ಯೋತ್ಸವ ವರ್ಷೋತ್ಸವಾದಿಗಳೂ ಭೂಮಿಕಾಣಿಗಳ ಆಡಳಿತವೂ ನಿಂತುಹೋಗಿ ಬಹಳ ಅನರ್ಥಕ್ಕೆ ಕಾರಣವಾಗಿದೆ. ಇದೇರೀತಿ ಇನ್ನೂ ಕೆಲಕಾಲ ನಡೆದುಕೊಂಡುಬಂದಲ್ಲಿ ಮಠವು ಸಂಪೂರ್ಣವಾಗಿ ಬಿದ್ದುಹೋಗುತ್ತದೆ ಮತ್ತು ಭೂಮಿಕಾಣಿಗಳು ಪಾಳುಬಿದ್ದು ಪರರ ಪಾಲಾಗುತ್ತವೆ; ಅಲ್ಲದೆ ಹೊಸಸ್ವಾಮಿಗಳನ್ನು ಪಟ್ಟಕಟ್ಟುವಾಗ್ಗೆ ನಾಲ್ಕುಸಿಂಹಾಸನದವರೊಪ್ಪಿದ ವಟುಗಳನ್ನೂ ಶಿಷ್ಯಜನರನ್ನೂ ಮಠಕ್ಕೆ ಬರಮಾಡಿಕೊಂಡು ಕರ್ತರ ಗದ್ದಿಗೆಯಬಳಿ ಚೀಟಿಯನ್ನು ಹಾಕಿ ಯಾವ ವಟುವಿನ ಹೆಸರಿಗೆ ಚೀಟಿ ಬರುತ್ತದೋ ಆ ವಟುವಿಗೆ ಪಟ್ಟಕಟ್ಟುವ ಪದ್ಧತಿಯಾಗಿರುವುದು. ಈಗಲೂ ಅದೇರೀತಿ ವಟುಗಳನ್ನು ಮಠಕ್ಕೆ ಬರಮಾಡಿಕೊಂಡು ಜನರೆಲ್ಲರೂ ಅಲ್ಲಿಗೆ ಹೋಗಿ ಚೀಟಿಹಾಕಿ ಯಾರಹೆಸರಿಗೆ ಚೀಟಿ ಬರುತ್ತದೋ ಅವರಿಗೆ ಪಟ್ಟಕಟ್ಟಬೇಕಲ್ಲದೆ ಬೇರೆಕಡೆ ಜನರು ಸೇರಿ ಓಟುಗಳನ್ನುಕೊಟ್ಟು ಆರಿಸುವುದು ಸಾಧ್ಯವಲ್ಲ ಮತ್ತು ಅದರಿಂದ ಯೋಗ್ಯರಾದವರು ದೊರಕುವುದಿಲ್ಲ" ಎಂದು ಮ॥ ಇಂ. ಶಾಂತಪ್ಪಶೆಟ್ಟರು ಸಭಿಕರಿಗೆ ತಿಳಿಸಿದರು. ತರುವಾಯ, ಶ್ರೀರಂಗಪಟ್ಟಣದ ಮ॥ ಸಿದ್ಧಲಿಂಗದೇವರು "ಅಖಿಲಭಾರತೀಯ ವೀರಶೈವ ಮಹಾಸಭೆಯ ಹತ್ತನೆಯಾಧಿವೇಶನವು ಬೆಂಗಳೂರಿನಲ್ಲಿ ನಡೆದಕೂಡಲೆ ಬಾಳೆಹೊನ್ನೂರು ಶ್ರೀ ಜಗದ್ಗುರು ಪೀಠಾಧಿಕಾರಿಗಳನ್ನು ಆರಿಸುವ ಕೆಲಸವು ಬೆಂಗಳೂರಿನಲ್ಲೇ ನಡೆಯಬೇಕು" ಎಂದು ಸೂಚಿಸಿದುದನ್ನು ತುಮಕೂರು ಅಡ್ವೋಕೇಟ್ ಮ॥ ಜಿ. ರುದ್ರಪ್ಪನವರು ಅನುಮೋದಿಸಿದರು. ಇದನ್ನು ಇನ್ಕಂಟ್ಯಾಕ್ಸ್ ಇನ್ಸ್‌ಪೆಕ್ಟರಾದ ಮ॥ ಜಿ. ಕೆ. ರುದ್ರಾರ್ಯರು, ಮ॥ ಇಂ. ಶಾಂತಪ್ಪಶೆಟ್ಟರು ಮತ್ತೆ ಕೆಲರು ವಿರೋಧಿಸಿ ಚಿಕ್ಕಮಗಳೂರಿನಲ್ಲಿ ಸ್ವಾಮಿಗಳ ಎಲೆಕ್ಷನ್ನಾಗಬೇಕೆಂದು ಸರ್ಕಾರದವರು ಆರ್ಡರ್‌ಮಾಡಿರುವುದರಿಂದಲೂ, ಚಿಕ್ಕಮಗಳೂರು ಬಾಳೆಹೊನ್ನೂರಿಗೆ ಸಮೀಪವಾಗಿರುವುದರಿಂದಲೂ ಅಲ್ಲೇ ಎಲೆಕ್ಷನ್ ನಡೆಯಬೇಕೆಂದೂ ವಾದಿಸಲಾಗಿ, ಮ॥ ಸಿದ್ಧಲಿಂಗದೇವರ ಸೂಚನೆಯು ಓಟಿಗೆ ಹಾಕಲ್ಪಟ್ಟು ಮ॥ ಗಳಾದ ಜಿ. ಕೆ. ರುದ್ರಾರ್ಯರು, ಇಂ. ಶಾಂತಪ್ಪಶೆಟ್ಟರು, ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರು, ವೇ॥ ಶಿರೀಗುರುಶಾಂತಶಾಸ್ತ್ರಿಗಳು ಮೊದಲಾಗಿ 18 ಜನರು ಪ್ರತಿಕೂಲವಾಗಿಯೂ, 36 ಜನರು ಅನುಕೂಲವಾಗಿಯೂ ಓಟುಗಳನ್ನು ಕೊಟ್ಟುದರಮೇಲೆ ಬಹುಮತದಂತೆ (1) ಬೆಂಗಳೂರಿನಲ್ಲಿ ವೀರಶೈವ ಮಹಾಸಭೆಯು ಪೂರೈಸಿದ ಕೂಡಲೆ ಶ್ರೀ ಬಾಳೆಹೊನ್ನೂರು ಪೀಠಾಧಿಕಾರಿಗಳನ್ನು ಆರಿಸುವಿಕೆಯು ಬೆಂಗಳೂರಿನಲ್ಲೇ ನಡೆಯಬೇಕೆಂದೂ, (2) ಈ ರೆಜ್ಯುಲೇಷನ್ನನ್ನು ಮುಜರಾಯಿ ಕಮಿಷನರಿಗೆ ಸಭಾಧ್ಯಕ್ಷರು ಕೂಡಲೆ ಕಳುಹಿಸುವುದಲ್ಲದೆ ಈ ಸಭೆಯ ನಡವಳಿಕೆಯನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂದೂ ತೀರ್ಮಾನಿಸಲ್ಪಟ್ಟಿತು. ತರುವಾಯ ಸಭಾಧ್ಯಕ್ಷರಿಗೆ ವಂದನೆಯು ಅರ್ಪಿಸಲ್ಪಟ್ಟು ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

(ರುಜು) ಡಿ. ಆರ್. ಚಿಕ್ಕಚನ್ನಂಜಪ್ಪಶೆಟ್ಟಿ,
ಕೋಲಾರ.

ತಾ॥ 12-10-24

NOTICE.

Wanted a qualified nurse for the Hubli Dispensary from the 1st week of November 1924. Pay Rs. 30 to 40 per month with free quarters. Private practice allowed.

Candidates should apply in their own hand writing before 31st October 1924 stating their age, caste and qualifications with credentials. They should also state whether they have any previous practice and if so for how many years?

K. K. Nadirsha, L.C.E.,
Chief Officer
Hubli Municipality.

Hubli,
13th Oct. 1924.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಅಕ್ಟೋಬರ್ ತಾ ೧೯ ನೆಯ ಭಾನುವಾರ.

THE MYSORE CIVIL SERVICE.

In pursuance of the permission granted to the members of the Representative Assembly to move resolutions concerning the recent order of the Government on the Civil Service Rules, Mr. Abbas Khan has tabled two resolutions, one, for the appointment of a Committee to go into the question and submit a report, and the other, for appointing two candidates by nomination in proportion to one by competitive examination. If the first is accepted, the second becomes unnecessary at this stage. A Committee no doubt would be the right thing to shift all the matters relating to the question, which is of a vital importance to the Country. But when the Government have taken four years to consider the reorganisation of the Service and have evidently bestowed some pains in coming to their present conclusions, they may be extremely reticent to accede to the formation of a Committee. The matter was brought up for consideration on Friday the 17th instant and the House adjourned to Saturday as the discussions were yet to continue. In politics, people are not left to chose between absolute good and absolute evil and very often they have to be satisfied with varying shades of good. If the members find Government too hard to knock against with the first resolution we hope they will press forward the second resolution, no matter what the attitude of the Government may be. It is the minimum that we can expect of the Government, and there could be no compromise there. We have never been believers in a competitive examination for Service in administration, and have made no secret of our opinion. Given the requisite qualification, a desire to serve, broad sympathies for the people and sufficient strength of physique and of character are more conducive to efficiency of and progress in administration than a supreme capacity to mug up things and draft reports nicely which are the only virtues than an examination might bring to light. Whatever use, even this examination might have had in olden days, when being open to non-Mysoreans also, there was a chance of more easy to chose the pick of the Mysore students than before without the help of competitive examination. But if the Government are anxious to have the examination the second resolution of Mr. Abbas Khan which is a very resonable one we hope will be accepted by the Government.

As the matter is just going to the press we receive the information that the second resolution has been accepted by the Government.

NOTES AND COMMENTS.

Something Wrong Somewhere.

We are sorry to note that we have not been favoured with an admission ticket for our representative to the Reporters' Table at the Assembly though it was applied for in time and a reminder sent to the Special Duty Officer. We need hardly say that we are entitled as a matter of right for a pass. It is also to be regretted that no advance copy of the Address of the Dewan in Kannada was despatched to us as usual. There must be something wrong somewhere. This is hardly the way of seeking the co-operation of local press in securing the publicity to the deliberations of the Assembly and we trust that such irregularities will be taken due notice of and their recurrence prevented.

The City President.

With the resignation of Mr. K. Mylar Rao of the Presidentship of the Mysore City Municipal Council, the Government have thought fit to introduce an Official President who is to remain in office for 6 months. Mr. N. Madhava Rao the new incumbent is an able officer whose services elsewhere would have been more valueable and needed. Though we are sorry that Government took recourse to this arrangement which was not called for, yet we have no doubt that the work of the Council will be carried on more smoothly and satisfactorily than hitherto under the direction of one who could be trusted to maintain that friendly relationship between the Council and its Executive which is so necessary in the working of any constitutional body and which was so deplorably lacking in the previous *regime*.

Municipal Loans to Arts and Industries.

At the Representative Assembly the Government brought forward certain proposals that the Municipal Account Manual do provide for some additional functions one of which was for the grant of loans to encourage local arts and industries, which was accepted by a majority of the House. A proposal like the above one for the grant of loans is no doubt such as would easily get the assent of members. The proposition was opposed by a Section of the House on the grounds that it would in effect not work for the benefit of the poor but for the rich and influential, it would be trespassing on the province of Cooperative Societies and banks, that between the grant of the loan and the receipt of it by the grantee there would be considerable leakages and that most of the municipal bodies had not sufficient funds to meet the essential requirements of Sanitation, Education, maintenance of roads etc. These were reasons which should have weighed against the acceptance of the proposal. It may be good in theory but we are afraid it would not be very helpful in practice. We hope it will not be given effect to before its full implications are considered.

Progressivists.

The latest attempt of our Brahmin friends to organise their political forces under a democratic complexion is furnished by the formation of a party so called, under the name *Progressivists* by Mr. Hosakoppa Krishna Rao. The President of this Association is Mr. Abdur Rahmon, a reactionary, of whose political principles one could never be too sure. The party is against the pernicious doctrine of communalism underlying The Miller Committee Report, but its President in days gone by was one of the ardent supporters of the Miller Committee Report, when this very Mr. H. Krishna Rao attacked it at the Legislative Council. The secretaries are Mr. Krishna Rao and Mr. M. P. Somashekara Rao, and the Treasurer, a by no means insignificant office, is Mr. Gopalswamy Iyer. When Mr. Gundappa of *the Karnatak* fame started the People's Convention, they caught hold of a non-Brahmin Mr. M. Chengiah Chetty to preside over it. So it is here. We would not wonder if this party had the same span of life as the Convention had. As regards its policy there is nothing that is not vague and platitudinous, such as, free and compulsory education, freedom of speech, economic and moral progress. If we can just peep into the inside of this party we find that it is formed as an opposition to the popular party which commands the majority in the Assembly. We welcome the party even as such, for it would keep the popular party more on the alert, and hope that it will not, like so many of its forerunners vanish as quickly as it came into existence.

ದಿವಾನರಭಾಷಣ.

ಈವೇಳೆ ಪ್ರಜಾಪ್ರತಿನಿಧಿಸಭಾಧಿವೇಶನದಲ್ಲಿ ದಿವಾನರು ಮಾಡಿದ ಭಾಷಣವು ಬಹಳ ವಿಚಾರಪುಷ್ಕಲವಾಗಿಯೂ, ಸಮಗ್ರವಾಗಿಯೂ ಇರುವುದರಿಂದ ದೀರ್ಘವಾಗಿ ಅಂದರೆ 75 ಪುಟಗಳುಳ್ಳದಾಗಿರುವುದು. ಇಂತಹ ಸಂದರ್ಭದಲ್ಲಿ ಭಾಷಣವು ಎರಡು ಭಾಗಗಳಾಗಿ ಮಾಡಲ್ಪಡುತ್ತಿದ್ದುದು ಹಿಂದೆ ವಾಡಿಕೆಯಾಗಿದ್ದಿತು. ಈ ಭಾಷಣದಲ್ಲಿ ಅನೇಕ ವಿಷಯಗಳು ಪುನರುಕ್ತಿಯಾಗಿರುವುದರಿಂದ, ಅವುಗಳು ಬಿಡಲ್ಪಟ್ಟಿದ್ದಲ್ಲಿ ಭಾಷಣವು ತಕ್ಕಮಟ್ಟಿಗೆ ಕಡಿಮೆಯಾಗುತ್ತಿದ್ದ ಸಂಭವವಿದ್ದಿತು. ಆದರೂ ಅನೇಕ ಪ್ರಾಮುಖ್ಯವಿಷಯಗಳು ಸಭಿಕರಿಗೆ ವಿಶದವಾಗಿಯೂ, ಸುಲಭವಾಗಿಯೂ ತಿಳಿಯುವಂತೆ ವಿವರಿಸಲ್ಪಟ್ಟಿರುವುದರಿಂದ, ಭಾಷಣವು ಜುಗುಪ್ಸಿತವಾಗಿರುವುದೆಂದು ಭಾವಿಸಲ್ಪಡಲಾಗದು. ಅಲ್ಲದೆ ದಿವಾನರು ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಿಷಯವನ್ನೂ ಪ್ರತಿಯೊಬ್ಬರೂ ನಿರಾಯಾಸದಿಂದ ತಿಳಿದುಕೊಳ್ಳುವಂತೆ ವಿವರಿಸಿ ಬೇಸರವಿಲ್ಲದೆ ಬರೆದಿರುವುದು ಅವರ ಕಾರ್ಯದಕ್ಷತೆಯನ್ನು ವ್ಯಕ್ತಗೊಳಿಸುತ್ತದಲ್ಲದೆ ಪ್ರಶಂಸನೀಯವಾಗಿರುವುದು ಅಷ್ಟೊಂದು ವಿಷಯಗಳನ್ನೂ ಸಮಾಲೋಚಿಸಲು ನಮಗಿರುವ ಅಲ್ಪಾವಕಾಶದಲ್ಲಿ ಸಾಧ್ಯವಿಲ್ಲವಾದ ಪ್ರಯುಕ್ತ ಮುಖ್ಯವಾದ ಕೆಲ ವಿಷಯಗಳನ್ನು ಕುರಿತು ಪ್ರಸ್ತಾವಿಸುವವರಾಗಿರುತ್ತೇವೆ.

ಪ್ರಸಕ್ತ ವರ್ಷದಲ್ಲಿ ಆಯುಕ್ತಿನ್ನ ವೆಚ್ಚವು ಹೆಚ್ಚಾಗಬಹುದೆಂದು ಮೊದಲು ನಿರೀಕ್ಷಿಸಲ್ಪಟ್ಟಿದ್ದು ಕಡೆಯಲ್ಲಿ ಆಯವು ಹೆಚ್ಚಾಗಿ 8 ಲಕ್ಷ ರೂ. ಮಿಗುವಂತಾದುದೂ, ಸಂಸ್ಥಾನದಲ್ಲಿ ಜನರು ಮಾದಕಪದಾರ್ಥಗಳನ್ನು ಉಪಯೋಗಿಸುವುದು ಕಡಿಮೆಯಾದುದೂ ಸಂತೋಷಪ್ರದಗಳಾಗಿವೆ. ವರಮಾನದ ತೆರಿಗೆಗೆ ಸಂಬಂಧಪಟ್ಟ ಅರ್ಜಿಗಳನ್ನೂ, ಅಪೀಲುಗಳನ್ನೂ ಹಿಡಿದು ವಿಚಾರಣೆಮಾಡಿ ವ್ಯವಸ್ಥೆಪಡಿಸುವ ವಿಚಾರವಾಗಿಯೂ, ಲೆಕ್ಕಗಳ ತನಿಖೆಯ ವಿಚಾರವಾಗಿಯೂ ಯುಕ್ತವಾದ ಅನುಜ್ಞೆಗಳು ಕೊಡಲ್ಪಟ್ಟಿರುವುದಾಗಿ ತಿಳುಹಲ್ಪಟ್ಟಿದೆ. ಇಷ್ಟಾದರೂ ಈ ವಿಚಾರದಲ್ಲಿ ಜನರಿಗಿನ್ನೂ ತೊಂದರೆಯು ತಪ್ಪಿಲ್ಲವೆಂಬ ದೂರು ಇರುವುದರಿಂದ ಇನ್ನಷ್ಟು ಸೌಖ್ಯವನ್ನು ಕಲ್ಪಿಸಿಕೊಡತಕ್ಕುದು ಆವಶ್ಯಕವು. ಸಿವಿಲ್‌ಕೋರ್ಟುಗಳಲ್ಲಿ ಮೊಕದ್ದಮೆಗಳು ತ್ವರಿತದಿಂದ ಬಗೆಹರಿಸಲ್ಪಡಬೇಕೆಂಬುದ್ದೇಶದಿಂದ ಕೋರ್ಟುಗಳ ಸಂಖ್ಯೆಯು ಹೆಚ್ಚಿಸಲ್ಪಟ್ಟಿರುವುದಾಗಿ ಹೇಳಲ್ಪಟ್ಟಿದೆ. ಇಷ್ಟಾದರೂ ವಿವಾದಗಳು ಜಾಗ್ರತೆ ಬಗೆಹರಿಸಲ್ಪಡುತ್ತಿಲ್ಲವೆಂಬ ದೂರು ಇನ್ನೂ ತಪ್ಪಲಿಲ್ಲವಾಗಿ, ಹೀಗೆ ನಿಧಾನವಾಗಲು ನಿಜವಾದಕಾರಣವೇನಿರುವುದೆಂಬುದನ್ನು ಕಂಡುಹಿಡಿದು ಅದರ ಪರಿಹಾರೋಪಾಯವನ್ನು ಕಲ್ಪಿಸುವುದು ಅತ್ಯವಶ್ಯವು. ಪ್ರಸಕ್ತ ವರ್ಷದಲ್ಲಿ ಜನರ ಮರಣ ಸಂಖ್ಯೆಯು ಹಿಂದಣ ವರ್ಷಕ್ಕಿನ್ನ ಅತ್ಯಧಿಕವಾಗಿರುವುದು ಭಯಂಕರವಾಗಿರುತ್ತದೆ ಮತ್ತು ಇದರ ಕಾರಣವು ಕಂಡುಹಿಡಿಯಲ್ಪಟ್ಟು ಇತಃಪರ ಜನರ ಮರಣಸಂಖ್ಯೆಯು ಹೆಚ್ಚದಿರಲು ತಕ್ಕ ಪ್ರಯತ್ನವು ಅಗತ್ಯವಾಗಿ ಮಾಡಲ್ಪಡತಕ್ಕುದಾಗಿದೆ. ವಿದ್ಯಾಭ್ಯಾಸದ ವಿಚಾರದಲ್ಲಿ ಪ್ರಸ್ತಾವಿಸುವಾಗ್ಗೆ, ದ್ರವ್ಯಾಭಾವದಿಂದ ಮಿಲ್ಲರ್‌ಕಮಿಟಿರಿಪೋರ್ಟಿನಮೇಲೆ ಹುಟ್ಟಿರುವ ಸರ್ಕಾರಿಯ ಅಪ್ಪಣೆಯಲ್ಲಿ ಕಂಡ ವಿಧಾನಗಳೆನ್ನೆಲ್ಲಾ ಅನುಷ್ಠಾನಕ್ಕೆ ತರಲಾಗಲಿಲ್ಲವೆಂದು ಹೇಳಲ್ಪಟ್ಟಿದೆ. ವರಮಾನದತೆರಿಗೆಯನ್ನು ವಿಧಿಸುವಾಗ್ಗೆ, ಅದರಿಂದಾಗುವ ಉತ್ಪನ್ನವೆಲ್ಲವೂ ವಿದ್ಯಾಭ್ಯಾಸಕ್ಕೇ ವಿನಿಯೋಗಿಸಲ್ಪಡುವುದೆಂದು ವಾಗ್ದಾನಮಾಡಲ್ಪಟ್ಟಿದ್ದುದರಮೇಲೆ, ಆ ತೆರಿಗೆಯನ್ನು ವಿಧಿಸಲು ಪ್ರಜಾಪ್ರತಿನಿಧಿಸಭೆಯಲ್ಲೂ ನ್ಯಾಯವಿಧಾಯಕಸಭೆಯಲ್ಲೂ ಅನುಮೋದನವು ಕೊಡಲ್ಪಟ್ಟಿತು. ಅದರಂತೆ ವರಮಾನದ ತೆರಿಗೆಯುತ್ಪನ್ನವೆಲ್ಲವೂ ವಿದ್ಯಾಭ್ಯಾಸಕ್ಕೆ ವಿನಿಯೋಗಿಸಲ್ಪಡುವಂತಾಗಿದ್ದಲ್ಲಿ ವಿದ್ಯಾಭಿವೃದ್ಧಿಗೆ ದುಡ್ಡಿನ ಅಭಾವದತೊಂದರೆಯು ಉಂಟಾಗುತ್ತಿರಲಿಲ್ಲವು. ಇದೂ ಅಲ್ಲದೆ ಒಟ್ಟು 8 ಡಿಸ್ಟ್ರಿಕ್ಟುಗಳಲ್ಲಿ 5 ಡಿಸ್ಟ್ರಿಕ್ಟಿನವರು ಈ ವಿದ್ಯಾಭ್ಯಾಸದ ತೆರಿಗೆಯನ್ನು ವಿಧಿಸಿರುವರಾದರೂ ಉಳಿದ 3 ಡಿಸ್ಟ್ರಿಕ್ಟಿನವರು ಮಾತ್ರ ಇನ್ನೂ ವಿಧಿಸಲೊಪ್ಪದಿರುವುದು ಬಹಳ ಖೇದಕರವಾಗಿದೆ. ಆದುಕಾರಣ ದಿವಾನರು ಸೂಚಿಸುವಂತೆ ಈ ವಿದ್ಯಾಭ್ಯಾಸದ ತೆರಿಗೆಯನ್ನು ಎಲ್ಲ ಡಿಸ್ಟ್ರಿಕ್ಟ್ ಬೋರ್ಡಿನವರೂ ಮ್ಯುನಿಸಿಪಾಲಿಟಿಯವರೂ ವಿಧಿಸುವಂತೆ ನಿರ್ಬಂಧಪಡಿಸುವುದು ಅತ್ಯಗತ್ಯವಾಗಿರುವುದು; ಇದರ ವಿನಾ ಬೇರೊಂದುಪಾಯವಿಲ್ಲವು. ವಿದ್ಯಾಭ್ಯಾಸದ ಆವಶ್ಯಕತೆಯೂ ಮೊದಲಿಗಿನ್ನ ಈಗ ಪ್ರತಿನಿತ್ಯದಲ್ಲೂ ಹೆಚ್ಚಾಗುತ್ತಿರುವುದಾದರೂ ಸಾಕಾದಷ್ಟು ಪ್ರೋತ್ಸಾಹವು ಕೊಡಲ್ಪಡುತ್ತಿಲ್ಲವಾದುದರಿಂದ, ವಿದ್ಯಾಭ್ಯಾಸದ ಶಾಖೆಯ ಕೆಲಸವು ಕುಂಠಿತವಾಗದಂತೆ ಮಾಡಲ್ಪಡುವುದಾಗಿ ನಿರೀಕ್ಷಿಸುತ್ತೇವೆ. ಕೃಷ್ಣರಾಜಸಾಗರಜಲಾಶಯನಿರ್ಮಾಣವು ವೈದ್ಯುತಕೆಲಸಗಳಿಗೆ ಮುಖ್ಯಸಾಧನವಾಗಿರುವುದರಿಂದ ಇವೆರಡರ ಉತ್ಪನ್ನದ ಲೆಕ್ಕಗಳು ಒಟ್ಟುಗೂಡಿಸಲ್ಪಡುವುದಾಗಿ ತಿಳಿಸಲ್ಪಟ್ಟಿದೆ. ಆದರೆ ವೈದ್ಯುತಶಾಖೆಯಿಂದ ಗಮನೀಯವಾದಷ್ಟು ಉತ್ಪನ್ನವಾಗದಿರುವುದು ಮಾತ್ರ ಖೇದಕರವಾಗಿದೆ. ಮೈಸೂರುಸರ್ಕಾರದವರಿಂದಲೂ ಮದ್ರಾಸ್ ಮತ್ತು ಸದರ್ನ್‌ಮರಾಟಾರೈಲ್ವೆಕಂಪೆನಿಯವರಿಂದಲೂ ನಮ್ಮ ಸೀಮೆಯಲ್ಲಿ ನಡೆಯಿಸಲ್ಪಡುತ್ತಿರುವ ಲೋಹಮಾರ್ಗಗಳ ಉತ್ಪನ್ನವು ಚೆನ್ನಾಗಿರುತ್ತದೆಂದು ತಿಳಿಸಲ್ಪಟ್ಟಿರುವುದಷ್ಟೆ? ಆದರೆ ನಮ್ಮ ಸರ್ಕಾರದವರಿಂದ ನಡಿಸಲ್ಪಡುತ್ತಿರುವ ರೈಲಿನುತ್ಪನ್ನದ ಲೆಕ್ಕವು ಕಂಪೆನಿಯವರ ಲೆಕ್ಕದ ಜತೆಗೆ ಸೇರಿಸಲ್ಪಡದೆ ಪ್ರತ್ಯೇಕವಾಗಿ ತಿಳುಹಲ್ಪಟ್ಟಿದ್ದಲ್ಲಿ ಆದಾಯಕರವಾಗಿರುವುದೇ ಇಲ್ಲವೇ ಎಂಬುದು ವ್ಯಕ್ತವಾಗುತ್ತಿದ್ದಿತು. ಪೂರ್ವಾಪರ ವಿಚಾರವಿಲ್ಲದೆ ಸ್ಥಾಪಿಸಲ್ಪಟ್ಟು ಬಕಾಸುರನಂತೆ ಪರಿಣಮಿಸಿರುವ ಭದ್ರಾವತಿಯ ಕಬ್ಬುನದ ಕಾರ್ಖಾನೆಯು ದಿವಾನರ ನಿರೀಕ್ಷಣೆಯಂತೆ ಹೇಗಾದರೂ ಫಲದಾಯಕವಾಗಿ ಪರಿಣಮಿಸುವಂತಾಗಲೆಂದು ನಾವೂ ಕೋರುತ್ತೇವೆ. ಕೃಷ್ಣರಾಜಸಾಗರಜಲಾಶಯದಿಂದ ಎತ್ತರವಾದ ಪ್ರದೇಶಗಳಿಗೆ ಕಾಲುವೆಗಳ ಮೂಲಕ ನೀರನ್ನೊದಗಿಸುವುದು ಮತ್ತು ಮೇಕೆದಾಟಿನ ಕೆಳಭಾಗದಲ್ಲಿ ಕಾವೇರಿನದಿಯ ಜಲಪಾತದಿಂದ ವಿದ್ಯುಚ್ಛಕ್ತಿಯುತ್ಪಾದನವನ್ನು ಮಾಡುವುದು-ಇಂತಹ ಬಂಡವಾಳದ ಕಾಮಗಾರಿಗಳಿಗಾಗಿ ಹಣವನ್ನು ಒದಗಿಸಬೇಕಾದ ವಿಷಯವು ಜಾಗ್ರತೆಯಾಗಿಯೂ, ಪ್ರಬಲವಾಗಿಯೂ ಸರ್ಕಾರದವರಿಂದ ಅತ್ಯಾಸಕ್ತಿಪೂರ್ವಕವಾಗಿ ಪರ್ಯಾಲೋಚಿಸಲ್ಪಡುತ್ತಿದೆ ಎಂದು ದಿವಾನರು ಹೇಳಿರುವರು. ಆದರೆ ಈ ಕಾರ್ಯಗಳ ಸಾಧನೆಗಾಗಿ ಎಂ ಗೂ ಹಣವು ಸಾಲವಮಾಡಲ್ಪಡತಕ್ಕದಾಗಿ ನಾವು ಒತ್ತಿ ಹೇಳುತ್ತೇವೆ. ಡಿಸ್ಟ್ರಿಕ್ಟಿನ ಕಾರ್ಯಾಡಳಿತವು ಬಹುಮಟ್ಟಿಗೆ ಉತ್ತಮಗೊಳಿಸಲ್ಪಟ್ಟಿರುವುದಾಗಿ ದಿವಾನರು ಹೇಳಿರುತ್ತಾರೆ. ಆದರೆ ಆರೀತಿ ಉತ್ತಮವಾದ ಏರ್ಪಾಟೇನೂ ಆಗಿರುವುದು ನಮಗೆ ಗೋಚರವಾಗಿಲ್ಲವು. ಸರ್ಕಾರಿಯುದ್ಯೋಗಗಳ ವಿನಿಯೋಗವಿಚಾರದಲ್ಲಿ ಪೂರ್ವಕ್ಕಿನ್ನ ವಿಶೇಷವಾಗಿ ಎಚ್ಚರಿಕೆಯು ತೆಗೆದುಕೊಳ್ಳಲ್ಪಟ್ಟಿರುವುದೆಂದು ಸೂಚಿಸಲ್ಪಟ್ಟಿದೆ. ಆದರೆ 1923 ನೆಯ ಜುಲೈ ತಿಂಗಳಿಂದ 1924 ನೆಯ ಜೂನ್ ತಿಂಗಳ ಕಡೆಯವರೆಗೆ ವಿನಿಯೋಗವಾದ 343 ಉದ್ಯೋಗಗಳಲ್ಲಿ 167 ಉದ್ಯೋಗಗಳುಮಾತ್ರ ಹಿಂದುಳಿದ ಪಂಗಡದವರಿಗೆ ಕೊಡಲ್ಪಟ್ಟಿರುವುದನ್ನು ನೋಡಿದರೆ, ಶೇಕಡ 50 ರಷ್ಟು ಕೂಡ ಈ ವರ್ಗದವರಿಗೆ ಕೊಡಲ್ಪಟ್ಟಿಲ್ಲವೆಂಬುದು ತಾನಾಗಿ ವ್ಯಕ್ತವಾಗುತ್ತದೆ. ಇದೂ ಅಲ್ಲದೆ ಶೇಕದಾರಿ ಉದ್ಯೋಗಸ್ಥಾನವು ಉತ್ತಮಗೊಳಿಸಲ್ಪಡುವುದಕ್ಕಾಗಿ ಪ್ರತಿವರ್ಷದಲ್ಲೂ 10 ಜನರು ಪ್ರೊಬೇಷನರಿ ಶೇಕದಾರರುಗಳಾಗಿ ನಿಯಮಿಸಲ್ಪಡಬೇಕೆಂದು ಸಂಕಲ್ಪಿಸಲ್ಪಟ್ಟು ಈ 10 ಸ್ಥಾನಗಳಲ್ಲಿ ⅓ ಭಾಗವು ಬ್ರಾಹ್ಮಣರಿಗೆ ಕಾದಿಡಲ್ಪಟ್ಟಿರುವುದರಕಾರಣವೇನೆಂಬುದು ಗೊತ್ತಾಗುವುದಿಲ್ಲವು. ಇದರಿಂದ ಒಟ್ಟು ಪ್ರಜಾಸಂಖ್ಯೆಯಲ್ಲಿ ಶೇಕಡ 4 ರಂತಿರುವ ಬ್ರಾಹ್ಮಣರಿಗೆ 33⅓ ಉದ್ಯೋಗಸ್ಥಾನಗಳು ಮೀಸಲಾಗಿಡಲ್ಪಟ್ಟಿರುವುದು ಯಾವ ನ್ಯಾಯವೆಂಬುದನ್ನು ಸರ್ಕಾರದವರೇ ತಿಳಿಸಬೇಕಾಗಿದೆ. ಈ ಶೇಕದಾರರುಗಳು ಯಾವಾಗಲೂ ರೈತರುಗಳ ಸಮೀಪವರ್ತಿಗಳಾಗಿದ್ದು ಅವರ ಕಷ್ಟಸುಖಗಳನ್ನು ಬಲ್ಲವರಾಗಿ ಕೆಲಸಮಾಡಬೇಕಾಗಿರುವುದರಿಂದ, 10ರಲ್ಲಿ 9 ಸ್ಥಾನಗಳೂ ಹಿಂದುಳಿದವರಿಗೆ ಕಾದಿಡಲ್ಪಡಬೇಕಾದುದು ಅತ್ಯಾವಶ್ಯಕವು ಮತ್ತು ಹೇಗಾದರೂ ಬ್ರಾಹ್ಮಣರಿಗೆ ತಮ್ಮ ಜನಸಂಖ್ಯಾನುಗುಣವಾಗಿ ಸಲ್ಲಬೇಕಾಗಿರುವುದಕ್ಕಿನ್ನ ಹೆಚ್ಚಾಗಿಯೇ ದೊರಕುವಂತಾಗುವುದು. ಇದರಂತೆಯೇ ಈಚೆಗೆ ಕಲ್ಪಿಸಲ್ಪಟ್ಟ 7 ಸ್ಪೆಷಲ್ ಮ್ಯಾಜಿಸ್ಟ್ರೇಟ್ ಸ್ಥಾನಗಳಲ್ಲಿ 2 ಸ್ಥಾನಗಳು ಅಲ್ಪಸಂಖ್ಯಾಕರಾದ ಬ್ರಾಹ್ಮಣರಿಗೆ ಕೊಡಲ್ಪಟ್ಟಿರುವುದೂ ಅನ್ಯಾಯವಾಗಿರುವುದೆಂದು ಹೇಳಬೇಕಾದುದಿಲ್ಲವು. ಸಿವಿಲ್‌ಸರ್ವಿಸ್ ಉದ್ಯೋಗಗಳ ವಿನಿಯೋಗವಿಚಾರದಲ್ಲಿ ಕೆಲ ನಿಬಂಧನೆಗಳು ಮಾಡಲ್ಪಟ್ಟಿರುವುದಾಗಿ ತಿಳಿಸಲ್ಪಟ್ಟಿರುತ್ತದೆ. ಈ ನಿಬಂಧನೆಯಲ್ಲಿರತಕ್ಕ ಸಾಧಕಬಾಧಕಗಳನ್ನು ಕುರಿತು ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆಯು ನಡೆಯುತ್ತಿರುವುದು. ಇದರ ಫಲಿತಾಂಶವು ಮುಂದಣ ಸಂಚಿಕೆಯಲ್ಲಿ ತಿಳಿಸಲ್ಪಡುವುದು. ಭಟ್ಕಲ್ ರೇವೆಯ ನಿರ್ಮಾಣದಿಂದ ಸಂಸ್ಥಾನದ ವ್ಯಾಪಾರಾಭಿವೃದ್ಧಿಯಾಗಿ ರಾಜಾದಾಯವು ಹೆಚ್ಚುವುದರಿಂದ ಆ ಪ್ರಯತ್ನವು ನಡಿಸಬೇಕಾಗಿರುತ್ತದೆಂದು ಹೇಳಲ್ಪಟ್ಟಿದೆ. ಈ ಪ್ರಯತ್ನವು ವಿಶೇಷ ಲಾಭಕರವಾಗಿರುವುದೆನ್ನುವುದರಲ್ಲಿ ಸಂಶಯವಿಲ್ಲವಾದರೂ, ತಕ್ಕ ದ್ರವ್ಯಾನುಕೂಲದಿಂದಲೇ ನಡೆಯಬೇಕಾಗಿರುವ ಪ್ರಯುಕ್ತ ಈಗಿನ ದುಡ್ಡಿನ ಅಭಾವದದೆಸೆಯಿಂದ ಕೈಕೊಳ್ಳಲ್ಪಡತಕ್ಕುದಾಗಿಲ್ಲವೆಂದು ಹೇಳಬೇಕಾಗಿಲ್ಲವು. ನಮ್ಮ ಸಂಸ್ಥಾನದಿಂದ ಇಂಡ್ಯಾಸರ್ಕಾರದವರಿಗೆ ಸಲ್ಲುತ್ತಿರುವ ಪೊಗದಿಯ ಮೊಬಲಗನ್ನು ಕಡಿಮೆಮಾಡಿಸುವ ವಿಚಾರದಲ್ಲಿ ಇಂಡ್ಯಾಸರ್ಕಾರದವರೊಡನೆ ತಕ್ಕ ಪತ್ರವ್ಯವಹಾರವನ್ನು ನಡೆಯಿಸಿ ವಿಶೇಷಪ್ರಯತ್ನಮಾಡಲ್ಪಟ್ಟಿರುವುದು ಸಂತೋಷಪ್ರದವಾಗಿದೆ ಮತ್ತು ಆ ಪ್ರಯತ್ನವು ಸಫಲವಾಗಲೆಂದು ಕೋರುತ್ತೇವೆ. ಸಂಸ್ಥಾನಾಭಿವೃದ್ಧಿಕಾರ್ಯಗಳನ್ನು ನಮ್ಮ ಸರ್ಕಾರದವರು ವಿಶೇಷ ಎಚ್ಚರಿಕೆಯಿಂದಲೂ, ದಕ್ಷತೆಯಿಂದಲೂ ನಡೆಯಿಸಿಕೊಂಡು ಬರುತ್ತಿರುವುದು ಸಂತೋಷಪ್ರದವಾಗಿದೆ. ಆದರೆ ಎಲ್ಲ ಅಭಿವೃದ್ಧಿಗೂ ಬಹುಭಾಗದ ಜನರ ವಿದ್ಯಾಭಿವೃದ್ಧಿಯೇ ಮೂಲವಾಗಿರುವುದರಿಂದ, ಅತ್ತಕಡೆಗೆ ಸರ್ಕಾರದವರು ಹೆಚ್ಚು ಗಮನಕೊಡುವುದು ಅತ್ಯಂತ ಆವಶ್ಯಕವಾಗಿರುವುದು.

ಸ್ವದೇಶದ ವೃತ್ತಾಂತಗಳು

ಮುಷಿರ್-ಉಲ್-ಮುಲ್ಕ್ ಮಿ॥ ಹಂಸಾಹುಸೇನ್‌ರವರು ತಮ್ಮ ಕುಮಾರರ ವಿವಾಹವನ್ನು ಈ ತಾ॥ 23 ರಲ್ಲಿ ರಾಜಧಾನಿಯಲ್ಲಿ ಬೆಳಸುವವರಾಗಿರುವರು.

ಡೆಪ್ಯುಟಿಕಮಿಷನರುಗಳಾದ ಮ॥ ಬಿ. ರಾಮಸ್ವಾಮಯ್ಯನವರು ಮೈಸೂರು ಡಿ॥ ನಿಂದ ಚಿತ್ರದುರ್ಗ ಡಿ॥ ಗೂ, ಮ॥ ನಾನಾಸ್ವಾಮಿರಾಯರು ಚಿತ್ರದುರ್ಗ ಡಿ॥ ನಿಂದ ಹಾಸನ ಡಿ॥ ಗೂ, ಎ. ವಿ. ರಾಮನಾಥನ್‌ರವರು ಹಾಸನ ಡಿ॥ ನಿಂದ ಮೈಸೂರು ಡಿ॥ ಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ದಿವಾನ್‌ರಾದ ಮ॥ ಎ. ಆರ್. ಬಾನರ್ಜಿಯವರ ಉದ್ಯೋಗದವಧಿಯು ಇನ್ನೂ ಎರಡು ವರ್ಷಕಾಲದವರೆಗೂ, ಒಂದನೆಯ ಕೌನ್ಸಿಲರಾದ ಮುಷಿರ್-ಉಲ್-ಮುಲ್ಕ್ ಮಿ॥ ಹಂಸಾಹುಸೇನ್‌ರವರ ಉದ್ಯೋಗದವಧಿಯು 1926 ನೇಯ ಮಾರ್ಚಿ ತಿಂಗಳಕಡೆಯವರೆಗೂ ಹೆಚ್ಚಿಸಲ್ಪಟ್ಟಿರುವುದಾಗಿ ಕೇಳುತ್ತೇವೆ.

ಮೈಸೂರು ವಿಶ್ವವಿದ್ಯಾಲಯದ ವೈಸ್‌ಚಾನ್ಸಲರಾದ ಮ॥ ಬ್ರಜೇಂದ್ರನಾಥಶೀಲ್‌ರವರಿಗೆ ರಾಜತಂತ್ರಪ್ರವೀಣ ಎಂಬ ಪ್ರಶಸ್ತಿಯು ಶ್ರೀಮನ್ಮಹಾರಾಜರವರಿಂದ ಅನುಗ್ರಹಿಸಲ್ಪಟ್ಟಿತೆಂಬುದಕ್ಕೆ ಬದಲಾಗಿ ರಾಜಪ್ರವೀಣ ಎಂದು ಹಸ್ತದೋಷದಿಂದ ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುವುದಕ್ಕಾಗಿ ವಿಷಾದಿಸುತ್ತೇವೆ.

ಬಾಳೆಹೊನ್ನೂರು ಸಂಸ್ಥಾನ ಪೀಠಾಧಿಕಾರಸ್ಥಾನಕ್ಕೆ ಸರ್ವವಿಧದಲ್ಲೂ ಯೋಗ್ಯರಾದ ವಟುವನ್ನು ಆರಿಸಿ ಪಟ್ಟವನ್ನು ಕಟ್ಟುವ ವಿಚಾರವಾಗಿ ರಾಜಧಾನಿಯಲ್ಲಿ ಸ್ಥಳಪರಸ್ಥಳಗಳ ವೀರಶೈವ ದೊಡ್ಡಮನುಷ್ಯರುಗಳಿಂದ ನಡೆಸಲ್ಪಟ್ಟ ಸಭೆಗಳ ನಡವಳಿಕೆಗಳು ಈ ಪತ್ರಿಕೆಯ ಬೇರೆಕಡೆ ಮುದ್ರಿಸಲ್ಪಟ್ಟಿವೆ. ಬಹಳ ಚರ್ಚಾಸ್ಪದವಾಗಿರುವ ಈ ವಿಚಾರವು ನಿರಾಕ್ಷೇಪಕರವಾಗಿಯೂ ಬಹುಮತದಿಂದಲೂ ಇತ್ಯರ್ಥಗೊಳಿಸಲ್ಪಡಬೇಕಾಗಿರುವುದರಿಂದ ಉಭಯ ಸಭೆಗಳಲ್ಲಾದ ನಿರ್ಧಾರದಂತೆ, ವೀರಶೈವ ಮಹಾಸಭೆಯು ಬೆಂಗಳೂರಿನಲ್ಲಿ ನಡೆದ ಕೂಡಲೆ ವಟುವನ್ನು ಆರಿಸುವಿಕೆಯು ಅತ್ಯಗತ್ಯವೂ ಅವಸರವೂ ಆಗಿರುವುದೆಂದು ನಾವಾದರೂ ಅಭಿಪ್ರಾಯಪಡುತ್ತೇವೆ.

ರಾಜಧಾನಿಯ ಹೊಸಮಠದ ಶ್ರೀಬಸವಲಿಂಗಸ್ವಾಮಿಗಳ ಅನುಗ್ರಹದಿಂದಲೂ, ವೀರಶೈವರ ಉದಾರಾಶ್ರಯದಿಂದಲೂ, ಸರ್ಕಾರಿಯ ಗ್ರ್ಯಾಂಟಿನಿಂದಲೂ, ವೇ॥ ಶಿರಿ ಗುರುಶಾಂತಶಾಸ್ತ್ರಿಗಳ ಅಧ್ಯಾಪಕತ್ವದಿಂದಲೂ ನಡೆಯಿಸಲ್ಪಡುತ್ತಿರುವ ಶ್ರೀಶಂಕರವಿಲಾಸಸಂಸ್ಕೃತಪಾಠಶಾಲಾವಿದ್ಯಾರ್ಥಿಗಳ ಪಾರಿತೋಷಿಕವಿನಿಯೋಗಸಮಾರಂಭೋತ್ಸವವು ಕಳೆದ ತಾ॥ 13 ರ ಸಾಯಂಕಾಲದಲ್ಲಿ ಅರಮನೆಯ ಮುಜರಾಯಿ ಭಕ್ಷಿಯವರಾದ ರಾಜಸಭಾಭೂಷಣ ಮ॥ ಎಚ್. ಚಿಕ್ಕಲಿಂಗರಾಜ ಅರಸಿನವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಪರಸ್ಥಳಗಳಿಂದ ಬಂದಿರುವ ವೀರಶೈವಪ್ರಜಾಪ್ರತಿನಿಧಿಗಳೂ, ಸ್ಥಳದ ವೀರಶೈವದೊಡ್ಡಮನುಷ್ಯರುಗಳೂ ಸಭೆಗೆ ದಯಮಾಡಿಸಿದ್ದರು.

ರಾಜಧಾನಿಗೆ ದಸರಾಮಹೋತ್ಸವಕ್ಕಾಗಿ ಬಂದಿದ್ದ ನಾಟಿಕೋಟಿಜನರು ತುಲಾಸಂಕ್ರಮಣಕ್ಕಾಗಿ ತಲಕಾವೇರಿಗೆ ಕಳೆದ ತಾ॥ 16 ರಲ್ಲಿ ಮೋಟಾರು ಬಂಡಿಯಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ, ಅವುಗಳಲ್ಲಿ ಒಂದು ಸಣ್ಣ ಮೋಟಾರುಬಂಡಿಯು ಹುಣಸೂರಿನ ಸಮೀಪದಲ್ಲಿ ಒಂದು ಸೇತುವೆಗೋ ಮರಕ್ಕೋ ತಾಕಲಬಿದ್ದು ಹಳ್ಳಕ್ಕೆ ಬಿದ್ದು ಹೋಯಿತೆಂದೂ, ಅದರೊಳಗೆ ಕುಳಿತಿದ್ದವರಲ್ಲಿ ಒಬ್ಬ ಹೆಂಗುಸು ಕೂಡಲೆ ಮೃತಳಾದಳೆಂದೂ, ಉಳಿದ 3-4 ಜನರಿಗೆ ಪೆಟ್ಟು ಬಿದ್ದಿರುವುದೆಂದೂ, ಮಡಕೇರಿಯಿಂದ ಬರುತ್ತಿದ್ದ ಮಿ॥ ಪಾಲಂಜಿಯವರ ಮೋಟಾರುಮೇಲುಬಂಡಿಯಲ್ಲಿ ಆ ಪೆಟ್ಟನ್ನುತಿಂದುಬಿದ್ದವರು ರಾಜಧಾನಿಗೆ ಸಾಗಿಸಲ್ಪಟ್ಟು ಆಸ್ಪತ್ರೆಯಲ್ಲಿ ಉಪಚರಿಸಲ್ಪಡುತ್ತಿರುವರೆಂದೂ ಕೇಳುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಆಫಿಷಿಯಲ್ ಪ್ರೆಸಿಡೆಂಟರಾಗಿಯೂ, ಟ್ರಸ್ಟ್ ಬೋರ್ಡಿನ ಚೇರ್‌ಮನ್ನರಾಗಿಯೂ 6 ತಿಂಗಳವರೆಗೆ ನಿಯಮಿಸಲ್ಪಟ್ಟಿರುವ ಮ॥ ನ್ಯಾಪತಿ ಮಾಧವರಾಯರು ಈ ತಾ॥ 15 ರಲ್ಲಿ ಮ॥ ಕೆ. ಮೈಲಾರರಾಯರಿಂದ ಛಾರ್ಜನ್ನು ವಹಿಸಿಕೊಂಡು ಪ್ರತಿನಿತ್ಯದಲ್ಲೂ ಬೆಳಗಿನವೇಳೆ ಊರಿನಲ್ಲೆಲ್ಲಾ ಸಂಚರಿಸಿ ಶುಚೀಕರಣ ಮೊದಲಾದ ಹೊರಗಣಕೆಲಸಗಳನ್ನು ಪ್ರತ್ಯಕ್ಷವಾಗಿನೋಡಿ ತಿಳಿಯುತ್ತಿರುವುದಾಗಿಯೂ, ಮಧ್ಯಾಹ್ನ 11 ಗಂಟೆಗೆ ಸರಿಯಾಗಿ ಆಫೀಸಿಗೆಬಂದು ಕಾಗದಪತ್ರಗಳನ್ನು ಸ್ವತಃ ನೋಡಿ ಕೆಲಸಮಾಡುತ್ತಿರುವುದಾಗಿಯೂ, ಪ್ರತಿಯೊಬ್ಬ ಮ್ಯುನಿಸಿಪಲ್ ಕೌನ್ಸಿಲರ ಪರಿಚಯವನ್ನು ಮಾಡಿಕೊಂಡು ಅವರ ಮನೋಭಾವವನ್ನು ತಾವು ತಿಳಿದುಕೊಂಡು ತಮ್ಮ ಅಭಿಪ್ರಾಯವನ್ನು ಅವರಿಗೆ ತಿಳಿಸಿ ಪರಸ್ಪರ ಅನ್ಯೋನ್ಯಭಾವದಿಂದಲೂ, ವಿಶ್ವಾಸದಿಂದಲೂ ಪ್ರಜಾಹಿತಕಾರ್ಯಗಳನ್ನು ಮಾಡಬೇಕೆಂಬ ಕುತೂಹಲವುಳ್ಳವರಾಗಿರುವರೆಂದೂ ಕೇಳಿ ಸಂತೋಷಿಸುತ್ತೇವೆ. ಇವರು ಇನ್ನೂ ಯವ್ವನಸ್ಥರಾಗಿಯೂ, ಮೇಧಾವಿಗಳಾಗಿಯೂ, ಲವಲವಿಕೆಯಿಂದ ಕೆಲಸಮಾಡಬಲ್ಲವರಾಗಿಯೂ ಇರುವುದರಿಂದ ತಾವು ಸಂಕಲ್ಪಿಸಿರುವಂತೆ ಮ್ಯುನಿಸಿಪಲ್ ಕೌನ್ಸಿಲರುಗಳಕೂಡ ಸೌಹಾರ್ದದಿಂದ ಕೆಲಸಮಾಡುತ್ತಬಂದಲ್ಲಿ ಈವರೆಗಿದ್ದ ಆನರರಿ ಪ್ರೆಸಿಡೆಂಟರುಗಳಿಂದ ನಡೆಯಲ್ಪಟ್ಟ ಅವಿವೇಕಗಳೆಲ್ಲವೂ ಪರಿಮಾರ್ಜನೆಗೊಂಡು ರಾಜಧಾನಿಯ ಮ್ಯು॥ ಕೌನ್ಸಿಲು ನಿಜವಾಗಿಯೂ ಆದರ್ಶಪ್ರಾಯವಾಗಿ ಪರಿಣಮಿಸುವುದರಲ್ಲಿ ತಿಲಮಾತ್ರ ಅಭ್ಯಂತರವಿಲ್ಲವು. ಆದರೆ ಮ॥ ಕೆ. ಮೈಲಾರರಾಯರ ಪರಮಾಪ್ತರಂತೆ ನಟಿಸಿ ಅವರ ಪ್ರೆಸಿಡೆಂಟ್ ಪದವಿಗೆ ತಿಲೋದಕವನ್ನು ಬಿಡಿಸಿದಂತಹ ಹಿತಶತ್ರುಗಳಬಳಿಗೆ ಬೀಳದೆ ಎಚ್ಚರವಾಗಿರಬೇಕೆಂದು ಕೋರುತ್ತೇವೆ.

ಪ್ರತಿವರ್ಷದಲ್ಲೂ ಶ್ರೀಮನ್ಮಹಾರಾಜರವರ ವಿಜಯಯಾತ್ರೋತ್ಸವವಾದ 8 ನೆಯ ದಿವಸದಲ್ಲಿ ನಡೆಯುವ ಶ್ರೀಚಾಮುಂಡೇಶ್ವರೀ ಅಮ್ಮನವರ ರಥೋತ್ಸವವು ಕಳೆದಬುಧವಾರ ಬಹಳ ವಿಜೃಂಭಣೆಯಿಂದ ನಡೆಯಿತು. ಶ್ರೀಮನ್ಮಹಾರಾಜರವರೂ ರಾಣೀವಾಸದವರೂ ಆ ದಿವಸ ಬೆಳಗ್ಗೆ ಮೋಟಾರುಬಂಡಿಗಳಲ್ಲಿ ಲಲಿತಾದ್ರಿಮಾರ್ಗವಾಗಿ ಬೆಟ್ಟಕ್ಕೆ ಚಿತ್ತೈಸಿ ಶ್ರೀಅಮ್ಮನವರ ಅರ್ಚನಾದಿಗಳನ್ನೂ ರಥೋತ್ಸವವನ್ನೂ ಪರಾಮರ್ಶಿಸಿ ಸಾಯಂಕಾಲದವರೆಗೂ ಅಲ್ಲೇ ಇದ್ದು ಸಿಂಹವಾಹನೋತ್ಸವಾನಂತರ ರಾಜಧಾನಿಗೆ ದಯಮಾಡಿಸಿದರು. ಶ್ರೀಅಮ್ಮನವರ ರಥಾರೋಹಣಾನಂತರ ಶ್ರೀಮನ್ಮಹಾರಾಜರವರು ಮಡಿಯಿಂದ ರಥದಹಗ್ಗವನ್ನು ಸ್ಪರ್ಶಮಾಡಿ ಕೊಂಚ ಜಗ್ಗಿದಮೇಲೆ ರಥವು ಸಾವಿರಾರು ಜನರಿಂದೆಳೆಯಲ್ಪಟ್ಟು ದೇವಸ್ಥಾನಪ್ರದಕ್ಷಿಣೆಯಿಂದ ಸ್ವಸ್ಥಾನವನ್ನು ಸೇರುವಲ್ಲಿ ಮಧ್ಯಾಹ್ನ 12 ಗಂಟೆಯಾಗಿದ್ದಿತು. ಆಗ 21 ಗುಂಡುಗಳು ಹಾರಿಸಲ್ಪಟ್ಟುವು. ಈವೇಳೆ ಭಕ್ತಾದಿಗಳ ಸಮೂಹವು ಬಹಳವಾಗಿ ಸೇರಿದ್ದಿತು. ಆ ದಿವಸ ರಾತ್ರಿ ಅರಮನೆಯ ಮೇಲೂ ಕೋಟೆಯಬಾಗಿಲುಗಳಮೇಲೂ ಸಾವಿರಾರು ವಿದ್ಯುದ್ದೀಪಗಳು ಹೊತ್ತಿಸಲ್ಪಟ್ಟಿದ್ದುವು. ಆ ರಾತ್ರಿ ಮಳೆಬಂದುದರಿಂದ ಬೆಟ್ಟದಮೇಲಿದ್ದ ಜನರಿಗೆ ಕೊಂಚ ತೊಂದರೆಯಾಯಿತು. ಬೆಟ್ಟದಮೇಲಿರುವ ಅರಮನೆಯಲ್ಲಿ ಬ್ರಾಹ್ಮಣರಿಗೆ ಊಟಮಾಡಿಸಲ್ಪಟ್ಟು ದಕ್ಷಿಣೆಯೂ ಕೊಡಲ್ಪಟ್ಟುದಾಗಿ ಕೇಳುತ್ತೇವೆ. ಮೊನ್ನೆ ಶುಕ್ರವಾರ ರಾತ್ರಿ ದೇವಗೆರೆಯಲ್ಲಿ ಶ್ರೀಅಮ್ಮನವರ ತೆಪ್ಪೋತ್ಸವವು ನಡೆಯಿತು. ತೆಪ್ಪವು ಪುಷ್ಪಮಾಲಿಕೆಗಳಿಂದಲೂ ನಾನಾಬಣ್ಣಗಳ ವಿದ್ಯುದ್ದೀಪಾವಳಿಗಳಿಂದಲೂ ಅಲಂಕೃತವಾಗಿದ್ದುದರಿಂದ ಅತ್ಯಂತ ನೇತ್ರಾನಂದಕರವಾಗಿದ್ದಿತಲ್ಲದೆ ಅರಮನೆಯ ಕರ್ಣಾಟಕಬ್ಯಾಂಡಿನವರು ಬಹುನಿಪುಣತೆಯಿಂದನುಡಿಸುತ್ತಿದ್ದ ರಾಗಗಳು ಮನೋಹರವಾಗಿದ್ದುವು. ಈ ತೆಪ್ಪೋತ್ಸವಸಮಾರಂಭಕ್ಕೂ ಜನಸಮೂಹವು ವಿಶೇಷವಾಗಿ ಸೇರಿದ್ದಿತು. ಆದರೆ ಈ ರಾತ್ರಿಯೂ ಮಳೆಯು ಬಂದು ಉತ್ಸವವನ್ನು ಕೊಂಚ ಭಂಗಪಡಿಸಿತು.

ಬಾಳೆಹೊನ್ನೂರು ಪೀಠಾಧಿಕಾರಿಗಳನ್ನು ಆರಿಸುವ ವಿಚಾರದಲ್ಲಿ ಮೈಸೂರಿನಲ್ಲಿ ನಡೆದ ಮೀಟಿಂಗುಗಳು.

ಹಾಸ್ಟಲ್ಲಿನಲ್ಲಿ ನಡೆದ ಮೀಟಿಂಗು.

1914ನೇ ಅಕ್ಟೋಬರ್ ತಾ॥ 12ರ ಸಾಯಂಕಾಲ ಮೈಸೂರು ಸಾಹುಕಾರ್ ಕಟ್ಟಿಳ್ಳಿ ಚೆನ್ನಬಸವಪ್ಪನವರ ಹಾಸ್ಟಲಿನಲ್ಲಿ ಈ ಕೆಳಗೆ ಕಂಡ ಸ್ಥಳಪರಸ್ಥಳಗಳ ವೀರಶೈವದೊಡ್ಡಮನುಷ್ಯರುಗಳು ರೆಪ್ರೆಜೆಂಟೇಟಿವ್ ಮೆಂಬರ್ ಮ॥ ಕೋಲಾರದ ಸಾಹುಕಾರ್ ಚಿಕ್ಕಚನ್ನಂಜಪ್ಪಶೆಟ್ಟರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ವಿಚಾರವಾಗಿ ಸಭೆಸೇರಿದ್ದು ನಡೆಸಿದ ಪ್ರೊಸೀಡಿಂಗ್ಸು—

ಮ॥ ಗಳಾದ (1) ಬೆಂಗಳೂರು ಅಡ್ವೋಕೇಟ್ ಜಿ. ಪರಮಶಿವಯ್ಯ ಬಿ.ಎ., ಎಲ್‌ಎಲ್.ಬಿ., ಯವರು ರೆಪ್ರೆಜೆಂಟೇಟಿವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಮೆಂಬರ್ (2) ತುಮಕೂರಿನ ಅಡ್ವೋಕೇಟ್ ಜಿ. ರುದ್ರಪ್ಪ, ಬಿ.ಎ.ಎಲ್‌ಎಲ್.ಬಿ., ಯವರು ರೆಪ್ರೆಜೆಂಟೇಟಿವ್ ಮತ್ತು ಲೆ॥ ಕೌನ್ಸಿಲ್‌ಮೆಂಬರು (3) ತಿಪಟೂರಿನ ಸಾಹುಕಾರ್ ಡಿ. ಎಸ್. ಮಲ್ಲಪ್ಪನವರು ರೆಪ್ರೆಜೆಂಟೇಟಿವ್ ಮತ್ತು ಲೆ॥ ಕೌನ್ಸಿಲ್‌ಮೆಂಬರು (4) ಮೈಸೂರಿನ ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರು (5) ಬೆಂಗಳೂರಿನ ತೂಬಗೆರೆ ನಂಜಪ್ಪನವರು ರೆಪ್ರೆಜೆಂಟೇಟಿವ್ ಮೆಂಬರು (6) ಹಾಸನದ ಕೇಣಿ ಮಹಾದೇವಪ್ಪನವರು ರೆಪ್ರೆ॥ ಮೆಂಬರು (7) ಶ್ರೀರಂಗಪಟ್ಟಣದ ಸಿದ್ಧಲಿಂಗದೇವರು ಇನಾಮ್ದಾರರು ಮತ್ತು ಆನರರಿ ಲೆಕ್ಚರರು (8) ಯಡೆಹಳ್ಳಿ ಸಾಹುಕಾರ್ ಇಂ॥ ಶಾಂತಪ್ಪಶೆಟ್ಟರು (9) ಅರಸೀಕೆರೆ ಸಾಹುಕಾರ್ ಮರುಳಸಿದ್ಧಪ್ಪಶೆಟ್ಟರು ರೆ॥ ಮೆಂಬರು (10) ಬೆಂಗಳೂರು ಇನ್ಕಂಟ್ಯಾಕ್ಸ್ ಇನ್‌ಸ್ಪೆಕ್ಟರು ಮ॥ ಜಿ. ಕೆ. ರುದ್ರಾರ್ಯರು (11) ಹಲ್ಯೂರು ಸಾಹುಕಾರ್ ರುದ್ರಪ್ಪಶೆಟ್ಟರು ರೆ॥ ಮೆಂಬರು (12) ಯಡತೊರೆ ಬಳೆಸಿದ್ಧಲಿಂಗಶೆಟ್ಟರು ರೆ॥ ಮೆಂಬರು (13) ಬೆಂಗಳೂರು ಗುರುಸಂಜಬೊಡೆಯರು ವರ್ತಕರು (14) ಚಿತ್ರದುರ್ಗದ ಸಾಣಿಹಾಲಪ್ಪನವರು ರೆ॥ ಮೆಂಬರು (15) ಚಿತ್ರದುರ್ಗದ ಎಸ್. ವೀರಭದ್ರಪ್ಪನವರು ರೆ॥ ಮೆಂಬರು (16) ಭರ್ಮನಾಯಕನದುರ್ಗದ ಬಿ. ಪಾಡಿನಮಲ್ಲಪ್ಪನವರು ರೆ॥ ಮೆಂಬರು (17) ಶಿಕಾರಿಪುರದ ಸೂರಣಗಿಸಿದ್ದಬಸಪ್ಪನವರು ರೆ॥ ಮೆಂಬರು (18) ಬೆಂಗಳೂರ ಟಿ. ರಾಚಪ್ಪನವರು, ಆನರರಿ ಮ್ಯಾಜಿಸ್ಟ್ರೇಟರು (19) ಸೊರಬದ ಚೆನ್ನಶೇಖರಪ್ಪನವರು ರೆ॥ ಮೆಂಬರ್ (20) ಚಿತ್ರದುರ್ಗದ ಜಗದ್ಗುರು ಮುರುಘಾಮಠದ ಏಜಂಟ್ ಲಿಂಗಪ್ಪನವರು (21) ಯಡತೊರೆ ಜಮೀನ್ದಾರ್ ಬಳೆಭದ್ರಶೆಟ್ಟರು (22) ಬೀರೂರಿನ ಉಜ್ಜಿನಿಮಠದ ಎಂ ಶಿವಲಿಂಗಪ್ಪಯ್ಯನವರು ರೆ॥ ಮೆಂಬರು (23) ಹುನ್ನಮಾರನಹಳ್ಳಿಮಠದ ಏಜಂಟ್ ತೋಂಟದಾರ್ಯರು ರೆ॥ ಮೆಂಬರು (24) ಗುಬ್ಬಿಯ ಜಿ. ಎಸ್. ಮುರುಘಪ್ಪನವರು ರೆ॥ ಮೆಂಬರು (25) ದಾವಣಗೆರೆಯ ಸಾಹುಕಾರ್ ಉರುಕೊಂಡೆ ಚೆನ್ನಬಸಪ್ಪನವರು ರೆ॥ ಮೆಂಬರು (26) ಶಿಕಾರಿಪುರದ ಪುಟ್ಟಮಲ್ಲಪ್ಪನವರು ರೆ॥ ಮೆಂಬರು (27) ತುಮಕೂರಿನ ಕನ್ನಯ್ಯಶೆಟ್ಟರು, ಮರ್ಚೆಂಟ್ (28) ಆಲ್ದೂರಿನ ರಾಮಪ್ಪಗೌಡರು ರೆ॥ ಮೆಂಬರು (29) ಮೈಸೂರಿನ ವೈ. ವಿರೂಪಾಕ್ಷಯ್ಯನವರು ಮೈಸೂರು ಸ್ಟಾರ್ ಎಡಿಟರ್ (30) ಮೈಸೂರಿನ ನಿಟ್ರೆಬಸಪ್ಪನವರು, ಮರ್ಚೆಂಟ್ (31) ದಾವಣಗೆರೆಯ ಕೆಂಡಕಲ್ ಚೆನ್ನಬಸಪ್ಪನವರು ರೆ॥ ಮೆಂಬರು (32) ಹೊಳಲ್ಕೆರೆಯ ಶಂಭನೂರು ಭಿಕ್ಷಪ್ಪನವರು ರೆ॥ ಮೆಂಬರು (33) ಬಿಳ್ಕೀಡು ಚರಂತಿಮಠದ ರುದ್ರಾರಾಧ್ಯರು (34) ಹಾವೇರಿ ವೀರಭದ್ರಪ್ಪನವರು, ಮರ್ಚೆಂಟ್ (35) ಬಾಳೂರು ಬಿ. ಎಂ. ದೇವೇಗೌಡರು ರೆ॥ ಮೆಂಬರು (36) ಯಳಂದೂರುಪೇಟೆ ಕಾಚೇನಹಳ್ಳಿ ಮಲ್ಲಪ್ಪನವರು ಜಮೀನ್ದಾರ್ (37) ಮೈಸೂರಿನ ಆಸ್ಥಾನ ವಿದ್ವಾನ್ ಶಿರಿ ಗುರುಶಾಂತಶಾಸ್ತ್ರಿಗಳು (38) ಜಗಳೂರಿನ ಮಹಾಲಿಂಗಪ್ಪನವರು, ರೆ॥ ಮೆಂಬರು (39) ಹಿರಿಯೂರಿನ ಮುರುಘಪ್ಪನವರು, ರೆ॥ ಮೆಂಬರು (40) ಆಲೂರಿನ ನಂಜುಂಡಪ್ಪಶೆಟ್ಟರು, ರೆ॥ ಮೆಂಬರು (41) ಮೈಸೂರಿನ ಸೋಮಯ್ಯನವರು, ಮರ್ಚೆಂಟ್ (42) ಮೈಸೂರಿನ ಇನ್ಶೂರೆನ್ಸ್ ಕಂಪೆನಿ ಎಂ. ಎಲ್. ನಾಗಣ್ಣನವರು (43) ನಗರ ತಾ॥ ಕಳಲೇ ವೀರಭದ್ರಪ್ಪನವರು ರೆ॥ ಮೆಂಬರು (44) ನಾಗವಾಲದ ಜಿ. ಮಲ್ಲಣ್ಣನವರು, ರೆ॥ ಮೆಂಬರು (45) ಮೈಸೂರಿನ ಭಕ್ತಿ ಸೋಮಶೇಖರಪ್ಪನವರು (46) ಗುಬ್ಬಿಯ ಜಿ. ಮುರುಘಪ್ಪನವರು, ಮರ್ಚೆಂಟ್ (47) ಮೈಸೂರಿನ ಗುಬ್ಬಿಸೆಟ್ಟರ ಚೆನ್ನಬಸಪ್ಪನವರು (48) ಸಾಗರದ ದಳವಾಯಿ ಬಸವಲಿಂಗಪ್ಪನವರು ರೆ॥ ಮೆಂಬರು (49) ಶಿರಿ ಚೆನ್ನಬಸಪ್ಪನವರು, ಮರ್ಚೆಂಟ್ (50) ನಗರದ ಗುರುಲಿಂಗಪ್ಪನವರು, ರೆ॥ ಮೆಂಬರು (51) ಕೊರಟಗೆರೆ ತಾ॥ ಸಾಗ್ಗೆರೆ ರೇವಣ್ಣನವರು (52) ಮೂಡಿಗೆರೆ ತಾ॥ ಚಿಣ್ಣಗದ ದೇವಪ್ಪಗೌಡರು, ರೆ॥ ಮೆಂಬರು (52) ಬೌರಿಂಗ್‌ಪೇಟೆಯ ಚೆನ್ನಬಸವಪ್ಪನವರು, ರೆ॥ ಮೆಂಬರು (54) ಆನೆಕಲ್ ತಾ॥ ಜಿಗಣಿಯ ಹೊನ್ನಗಂಗಪ್ಪನವರು, ರೆ॥ ಮೆಂಬರು (55) ಬೆಂಗಳೂರಿನ ಜಿ. ಎಸ್. ಮಲ್ಲಿಕಾರ್ಜುನಪ್ಪನವರು, ಮರ್ಚೆಂಟ್ (56) ಯಡೆಹಳ್ಳಿ ಶಾಂತಪ್ಪಶೆಟ್ಟರ ಅಡಿವೆಪ್ಪನವರು, ಜಮೀನ್ದಾರ್.

ಬಾಳೆಹೊನ್ನೂರು ಸಂಸ್ಥಾನಮಠವು ವೀರಶೈವಮತಸ್ಥಾಪಕರುಗಳಾದ ಪಂಚಾಚಾರ್ಯರುಗಳಲ್ಲಿ ಪ್ರಮುಖರಾದ ಶ್ರೀರೇಣುಕಾಚಾರ್ಯರ ಪೀಠಸ್ಥಲವಾಗಿಯೂ, ಪ್ರಖ್ಯಾತವಾಗಿಯೂ ಇರುವುದರಿಂದ ಈ ಪೀಠದ ಗೌರವ ಪ್ರತಿಷ್ಠೆಗಳನ್ನು ಕಾಪಾಡಿಕೊಂಡುಬರುವ ಸಾಮರ್ಥ್ಯವುಳ್ಳವರಾಗಿಯೂ ಈಗ ಮಠದಲ್ಲುಂಟಾಗಿರುವ ಅಂತಃಕಲಹ ಮತ್ತು ಅನೈಕಮತ್ಯಗಳನ್ನು ಹೋಗಲಾಡಿಸಿ ಒಟ್ಟು ಸಮಾಜಾಭಿವೃದ್ಧಿಯನ್ನು ಪಡಿಸುವಲ್ಲಿ ಆಸಕ್ತರಾಗಿಯೂ ವಿದ್ಯಾವಂತರಾಗಿಯೂ ಕುಲಶೀಲಸಂಪನ್ನರಾಗಿಯೂ ಇರುವವರೊಬ್ಬರು ಬಹುಜನಸಮ್ಮತಿಯಿಂದ ಆರಿಸಲ್ಪಟ್ಟು ಪಟ್ಟಾಧಿಕಾರಿಗಳಾಗಿ ಮಾಡಲ್ಪಡತಕ್ಕುದು ಅತ್ಯಾವಶ್ಯಕವಾಗಿರುವುದೆಂದೂ, ಬೆಂಗಳೂರಿನಲ್ಲಿ ನಡೆಯುವ ಮಹಾಸಭೆಗೆ ಎಲ್ಲಾದೇಶದಿಂದ ಪ್ರಮುಖವೀರಶೈವರು ಬರುತ್ತಾರಾದ್ದರಿಂದ ಆ ಸಮಯದಲ್ಲಿ ವಟುವನ್ನು ಆರಿಸುವ ಕಾರ್ಯವನ್ನು ಇಟ್ಟುಕೊಳ್ಳುವುದು ನಿರಾಕ್ಷೇಪವೂ ಅನುಕೂಲವೂ ಆಗಿರುವುದೆಂದೂ ಮ॥ ಗಳಾದ ಸಿದ್ಧಲಿಂಗದೇವರು, ಜಿ. ಪರಮಶಿವಯ್ಯನವರು, ಜಿ. ರುದ್ರಪ್ಪನವರು, ಚಿತ್ರದುರ್ಗದ ತಾ॥ ಹಂದಿಗಲ್ ಚೆನ್ನಬಸಪ್ಪನವರು ಮತ್ತೆ ಕೆಲ ದೊಡ್ಡಮನುಷ್ಯರುಗಳಿಂದ ಬಹಳ ಯುಕ್ತಿಯುಕ್ತವಾಗಿ ಭಾಷಣಮಾಡಲ್ಪಟ್ಟಿತು. -ಬಾಳೆಹೊನ್ನೂರುಮಠವು ಶಿಥಿಲವಾಗಿಯೂ ಅನಾಯಕವಾಗಿಯೂ ಇರುವುದರಿಂದ ಅಲ್ಲಿಯ ನಿತ್ಯೋತ್ಸವ ಪರ್ವೋತ್ಸವಾದಿಗಳೂ ಭೂಮಿಕಾಣಿಗಳ ಆಡಳಿತವೂ ನಿಂತುಹೋಗಿ ಬಹಳ ಅನರ್ಥಕ್ಕೆ ಕಾರಣವಾಗಿದೆ. ಇದೇರೀತಿ ಇನ್ನೂ ಕೆಲಕಾಲ ನಡೆದುಕೊಂಡುಬಂದಲ್ಲಿ ಮಠವು ಸಂಪೂರ್ಣವಾಗಿ ಬಿದ್ದುಹೋಗುತ್ತದೆ ಮತ್ತು ಭೂಮಿಕಾಣಿಗಳು ಪಾಳುಬಿದ್ದು ಪರರ ಪಾಲಾಗುತ್ತವೆ; ಅಲ್ಲದೆ ಹೊಸಸ್ವಾಮಿಗಳನ್ನು ಪಟ್ಟಕಟ್ಟುವಾಗ್ಗೆ ನಾಲ್ಕುಸಿಂಹಾಸನದವರೊಪ್ಪಿದ ವಟುಗಳನ್ನೂ ಶಿಷ್ಯಜನರನ್ನೂ ಮಠಕ್ಕೆ ಬರಮಾಡಿಕೊಂಡು ಕರ್ತರ ಗದ್ದಿಗೆಯಬಳಿ ಚೀಟಿಯನ್ನು ಹಾಕಿ ಯಾವ ವಟುವಿನ ಹೆಸರಿಗೆ ಚೀಟಿ ಬರುತ್ತದೋ ಆ ವಟುವಿಗೆ ಪಟ್ಟಕಟ್ಟುವ ಪದ್ಧತಿಯಾಗಿರುವುದು. ಈಗಲೂ ಅದೇರೀತಿ ವಟುಗಳನ್ನು ಮಠಕ್ಕೆ ಬರಮಾಡಿಕೊಂಡು ಜನರೆಲ್ಲರೂ ಅಲ್ಲಿಗೆ ಹೋಗಿ ಚೀಟಿಹಾಕಿ ಯಾರಹೆಸರಿಗೆ ಚೀಟಿ ಬರುತ್ತದೋ ಅವರಿಗೆ ಪಟ್ಟಕಟ್ಟಬೇಕಲ್ಲದೆ ಬೇರೆಕಡೆ ಜನರು ಸೇರಿ ಓಟುಗಳನ್ನುಕೊಟ್ಟು ಆರಿಸುವುದು ಸಾಧ್ಯವಲ್ಲ ಮತ್ತು ಅದರಿಂದ ಯೋಗ್ಯರಾದವರು ದೊರಕುವುದಿಲ್ಲ" ಎಂದು ಮ॥ ಇಂ. ಶಾಂತಪ್ಪಶೆಟ್ಟರು ಸಭಿಕರಿಗೆ ತಿಳಿಸಿದರು. ತರುವಾಯ, ಶ್ರೀರಂಗಪಟ್ಟಣದ ಮ॥ ಸಿದ್ಧಲಿಂಗದೇವರು - ಅಖಿಲಭಾರತೀಯ ವೀರಶೈವ ಮಹಾಸಭೆಯ ಹತ್ತನೆಯಧಿವೇಶನವು ಬೆಂಗಳೂರಿನಲ್ಲಿ ನಡೆದಕೂಡಲೆ ಬಾಳೆಹೊನ್ನೂರು ಶ್ರೀ ಜಗದ್ಗುರು ಪೀಠಾಧಿಕಾರಿಗಳನ್ನು ಆರಿಸುವ ಕೆಲಸವು ಬೆಂಗಳೂರಿನಲ್ಲೇ ನಡೆಯಬೇಕು" ಎಂದು ಸೂಚಿಸಿದುದನ್ನು ತುಮಕೂರು ಅಡ್ವೋಕೇಟ್ ಮ॥ ಜಿ. ರುದ್ರಪ್ಪನವರು ಅನುಮೋದಿಸಿದರು. ಇದನ್ನು ಇನ್ಕಂಟ್ಯಾಕ್ಸ್ ಇನ್‌ಸ್ಪೆಕ್ಟರಾದ ಮ॥ ಜಿ. ಕೆ. ರುದ್ರಾರ್ಯರು, ಮ॥ ಇಂ. ಶಾಂತಪ್ಪಶೆಟ್ಟರು ಮತ್ತೆ ಕೆಲರು ವಿರೋಧಿಸಿ ಚಿಕ್ಕಮಗಳೂರಿನಲ್ಲಿ ಸ್ವಾಮಿಗಳ ಎಲೆಕ್ಷನ್ನಾಗಬೇಕೆಂದು ಸರ್ಕಾರದವರು ಆರ್ಡರ್‌ಮಾಡಿರುವುದರಿಂದಲೂ, ಚಿಕ್ಕಮಗಳೂರು ಬಾಳೆಹೊನ್ನೂರಿಗೆ ಸಮೀಪವಾಗಿರುವುದರಿಂದಲೂ ಅಲ್ಲೇ ಎಲೆಕ್ಷನ್ ನಡೆಯಬೇಕೆಂದೂ ವಾದಿಸಲಾಗಿ, ಮ॥ ಸಿದ್ಧಲಿಂಗದೇವರ ಸೂಚನೆಯು ಓಟಿಗೆ ಹಾಕಲ್ಪಟ್ಟು ಮ॥ ಗಳಾದ ಜಿ. ಕೆ. ರುದ್ರಾರ್ಯರು, ಇಂ. ಶಾಂತಪ್ಪಶೆಟ್ಟರು, ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರು, ವೇ॥ ಶಿರಿಗುರುಶಾಂತಶಾಸ್ತ್ರಿಗಳು ಮೊದಲಾಗಿ 18 ಜನರು ಪ್ರತಿಕೂಲವಾಗಿಯೂ, 36 ಜನರು ಅನುಕೂಲವಾಗಿಯೂ ಓಟುಗಳನ್ನು ಕೊಟ್ಟುದರಮೇಲೆ ಬಹುಮತದಂತೆ (1) ಬೆಂಗಳೂರಿನಲ್ಲಿ ವೀರಶೈವ ಮಹಾಸಭೆಯು ಪೂರೈಸಿದ ಕೂಡಲೆ ಶ್ರೀ ಬಾಳೆಹೊನ್ನೂರು ಪೀಠಾಧಿಕಾರಿಗಳನ್ನು ಆರಿಸುವಿಕೆಯು ಬೆಂಗಳೂರಿನಲ್ಲೇ ನಡೆಯಬೇಕೆಂದೂ, (2) ಈ ರೆಜ್ಯುಲೇಷನ್ನನ್ನು ಮುಜರಾಯಿ ಕಮಿಷನರಿಗೆ ಸಭಾಧ್ಯಕ್ಷರು ಕೂಡಲೆ ಕಳುಹಿಸುವುದಲ್ಲದೆ ಈ ಸಭೆಯ ನಡವಳಿಕೆಯನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂದೂ ತೀರ್ಮಾನಿಸಲ್ಪಟ್ಟಿತು. ತರುವಾಯ ಸಭಾಧ್ಯಕ್ಷರಿಗೆ ವಂದನೆಯು ಅರ್ಪಿಸಲ್ಪಟ್ಟು ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

(ರುಜು) ವಿ. ಆರ್. ಚಿಕ್ಕಚನ್ನಂಜಪ್ಪಶೆಟ್ಟಿ,
ಕೋಲಾರ.

ತಾ॥ 12-10-24

ಪಾಠಶಾಲೆಯಲ್ಲಿ ನಡೆದ ಮೀಟಿಂಗು.

1924 ನೇ ಇಸವಿ ಅಕ್ಟೋಬರ್ ತಾ॥ 14 ರಲ್ಲು ಮೈಸೂರಿನಲ್ಲಿರುವ ಶ್ರೀ ಶಂಕರವಿಲಾಸಪಾಠಶಾಲೆಯಲ್ಲಿ ಮೈಸೂರು ವೀರಶೈವ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು ಮತ್ತು ಇತರ ವೀರಶೈವ ಮಹಾಜನಗಳು ಕಲೆ ಸೇರಿ ನಡೆಸಿದ ನಡವಳಿಕೆಗಳು.

ಮೀಟಿಂಗಿನಲ್ಲಿ ಹಾಜರಿದ್ದವರ ಹೆಸರುಗಳು.

ಮ॥ ಗಳಾದ (1) ಮೈಸೂರಿನ ಭಕ್ತಿ ಸೋಮಶೇಖರಪ್ಪನವರು, (2) ಹರಿಹರದ ರಾಚಪ್ಪನವರು, ರೆಪ್ರೆಜೆಂಟೇಟೀವ್ ಮೆಂಬರ್ (3) ದಾವಣಗೆರೆ ತಾ॥ ಕಂದಗಲ್ಲಿನ ಕಡಕಟ್ಟಿ ಚನ್ನಬಸಪ್ಪನವರು, ರೆ॥ ಮೆಂಬರ್ (4) ಚಿತ್ರದುರ್ಗದ ಸಾಹುಕಾರ್ ವೀರಭದ್ರಪ್ಪನವರು, ರೆ॥ ಮೆಂಬರ್ (5) ದಾವಣಗೆರೆಯ ಉರುಕೊಂಡೆ ಚನ್ನಬಸಪ್ಪನವರು, ರೆ॥ ಮೆಂಬರ್ (6) ಚಿತ್ರದುರ್ಗದ ಸಾಟಿಪಾಲಪ್ಪನವರು, ರೆ॥ ಮೆಂಬರ್ (7) ಬೀರೂರಿನ ಎಚ್. ಎಂ. ಶಿವಲಿಂಗಪ್ಪಯ್ಯನವರು, ರೆ॥ ಮೆಂಬರ್ (8) ರಾಜಶೇಖರಯ್ಯ, ಮೈಸೂರು ಶಂಕರವಿಲಾಸಪಾಠಶಾಲೆಯ ವಿದ್ಯಾರ್ಥಿ (9) ಸಿದ್ಧಮಲ್ಲಸ್ವಾಮಿ, ಶ॥ ಪಾ॥ ವಿದ್ಯಾರ್ಥಿ (10) ಗುರುಶಾಂತಸ್ವಾಮಿ, ಶ॥ ಪಾ॥ ವಿದ್ಯಾರ್ಥಿ (11) ಗುರುನಾಥಯ್ಯ, ಶ॥ ಪಾ॥ ವಿದ್ಯಾರ್ಥಿ (12) ಸಿದ್ಧಲಿಂಗಸ್ವಾಮಿ, ಶ॥ ಪಾ॥ ವಿದ್ಯಾರ್ಥಿ (13) ಬಸವಲಿಂಗಸ್ವಾಮಿ, ಶ॥ ಪಾ॥ ವಿದ್ಯಾರ್ಥಿ (14) ರುದ್ರಯ್ಯ, ಶ॥ ಪಾ॥ ವಿದ್ಯಾರ್ಥಿ (15) ಆಲೂರಿನ ಎ. ಎಸ್. ನಂಜುಂಡಪ್ಪನವರು, ರೆ॥ ಮೆಂಬರ್ (16) ಹಾಸನದ ಕೆ. ಮಹಾದೇವಪ್ಪನವರು, ರೆ॥ ಮೆಂಬರ್ (17) ಬೆಂಗಳೂರಿನ ಟಿ. ರಾಚಪ್ಪನವರು, ಆನರರಿ ಮ್ಯಾಜಿಸ್ಟ್ರೇಟ್ ಮತ್ತು ಕಂಟ್ರ್ಯಾಕ್ಟರ್ (18) ನರಸಿಂಹರಾಜಪುರದ ಸಾಹುಕಾರ್ ಮತ್ತು ಜಮೀನ್ದಾರ್ ರಾಂಭಟ್ಟಶೆಟ್ಟರು, (19) ಮೈಸೂರಿನ ಆಸ್ಥಾನ ವಿದ್ವಾನ್ ಶ್ರೀನಂದೀಶಾಂತಶಾಸ್ತ್ರಿಗಳು, (20) ದಾವಣಗೆರೆಯ ತಲಿಗೆಮಠದ ಚಂದ್ರಶೇಖರಶಾಸ್ತ್ರಿಗಳು, (21) ಮೈಸೂರಿನ ಅಡ್ವೋಕೇಟ್ ಎಂ. ಪಿ. ಭೋಗಯ್ಯನವರು, ಬಿ.ಎ.,ಬಿ.ಎಲ್. (22) ಮೈಸೂರಿನ ರಿಟೈರ್ಡ್ ಸರ್ಜನ್ ಡಾ॥ ಟಿ.ಎಸ್. ಸಿದ್ದಪ್ಪನವರು, (23) ಶಿರಾಳಕೊಪ್ಪದ ಸಾರಂಗಿ ಸಿದ್ದಪ್ಪನವರು, ರೆ॥ ಮೆಂಬರ್ (24) ಬೆಂಗಳೂರಿನ ಇನ್‌ಕಂಟ್ಯಾಕ್ಸ್ ಇನ್ಸ್‌ಪೆಕ್ಟರ್ ಜಿ.ಕೆ. ರುದ್ರಾರಾಧ್ಯರು, (25) ಅರಸೀಕೆರೆಯ ಸಾಹುಕಾರ್ ಶಿವಪ್ಪನವರು, ರೆ॥ ಮೆಂಬರ್ (26) ಅರಸೀಕೆರೆಯ ಸಾಹುಕಾರ್ ಮುರುಳಿ ಸಿದ್ದಪ್ಪನವರು, ರೆ॥ ಮೆಂಬರ್ (27) ಮೈಸೂರಿನ ಸಾಹುಕಾರ್ ದಾಸಪ್ಪನವರು, (28) ತುಮಕೂರಿನ ಜಿ. ರುದ್ರಪ್ಪನವರು, ಎಂ. ಎ., ಎಲ್ ಎಲ್. ಬಿ. ರೆ॥ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಮೆಂಬರ್ (29) ತಿಪಟೂರಿನ ಡಿ.ಎಸ್. ಮಲ್ಲಪ್ಪನವರು, ರೆ॥ ಮತ್ತು ಲೆ॥ ಮೆಂಬರ್ (30) ಕೋಲಾರದ ಬಿ.ಆರ್. ಚಿಕ್ಕಚನ್ನಂಜಪ್ಪನವರು, ರೆ॥ ಮೆಂಬರ್ (31) ಹೊಳಲ್ಕೆರೆಯ ನಾಡಿಗಮಲ್ಲಪ್ಪನವರು, ರೆ॥ ಮೆಂಬರ್ (32) ಹಾವೇರಿ ವೀರಭದ್ರಪ್ಪನವರು ವರ್ತಕರು, (33) ದೇವನಹಳ್ಳಿ ತಾ॥ ಹುಣಸನಹಳ್ಳಿ ತೋಂಟದಾರ್ಯರು ರೆ॥ ಮೆಂಬರ್ (34) ಮೂಡಿಗೆರೆ ತಾ॥ ಚಿನ್ನಿಗದ ಚನ್ನಗಿರಿದೇವಪ್ಪಗೌಡರು, ರೆ॥ ಮೆಂಬರ್ ಮತ್ತು ಕಾಫಿಪ್ಲಾಂಟರ್ (35) ಆಲೂರ್ ರಾಮಪ್ಪಗೌಡರು, ರೆ॥ ಮೆಂಬರ್ ಮತ್ತು ಕಾಫಿಪ್ಲಾಂಟರ್ (36) ಮೈಸೂರಿನ ಕೋರಿಬಸಪ್ಪಶೆಟ್ಟರು, ಮರ್ಚೆಂಟ್ (37) ಮೈಸೂರಿನ ಸೋಮಯ್ಯನವರು, ಮರ್ಚೆಂಟ್ (38) ಮೈಸೂರು ಲೈಫ್ ಇನ್ಶೂರೆನ್ಸ್ ಕಂಪೆನಿ ಮ್ಯಾನೆಜಿಂಗ್ ಡೈರೆಕ್ಟರ್ ಎಂ. ಎಲ್. ನಾಗಪ್ಪನವರು (39) ಗೌರ್ನಮೆಂಟ್ ಮಿಡ್ಲ್ ಸ್ಕೂಲ್ ಹೆಡ್ಮಾಸ್ಟರ್ ಎಂ. ಪಿ. ಲಿಂಗಪ್ಪಯ್ಯನವರು, (40) ಮೈಸೂರು ಅರಮನೆ ಮರಾಮತ್ ಇಲಾಖಾ ಅಕೌಂಟೆಂಟ್ ಚನ್ನಪ್ಪನವರು, (41) ಜಿ ಪರಮಶಿವಯ್ಯನವರು, ಬಿ. ಎ., ಎಲ್‌ಎಲ್. ಬಿ., ರೆ॥ ಮತ್ತು ಲೆ॥ ಮೆಂಬರ್

ಮೈಸೂರು ವೀರಶೈವ ಅಸೋಸಿಯೇಷನ್ ಪ್ರೆಸಿಡೆಂಟರಾದ ಮ॥ ಟಿ. ಎಸ್. ಸಿದ್ದಪ್ಪನವರು ಕಳುಹಿಸಿದ್ದ ನೋಟೀಸನ್ನು ಓದಲಾಯಿತು. ಮ॥ ಎಂ. ಪಿ. ಭೋಗಯ್ಯನವರು ಅಗ್ರಾಸನವನ್ನು ವಹಿಸಬೇಕೆಂದು ಮ॥ ಎಂ. ಎಲ್. ನಾಗಪ್ಪನವರು ಸೂಚಿಸಿದ್ದನ್ನು ಸರ್ವರೂ ಅಂಗೀಕರಿಸಲಾಗಿ ಮ॥ ಭೋಗಯ್ಯನವರು ಅಗ್ರಾಸನವನ್ನು ವಹಿಸಿದರು. ಇದೇ ತಿಂಗಳು ತಾ॥ 12 ರಲ್ಲಿ ಮ॥ ಕಬ್ಬಳ್ಳಿ ಚನ್ನಬಸಪ್ಪನವರ ಹಾಸ್ಟಲ್ಲಿನಲ್ಲಿ ನಡೆದ ಮೀಟಿಂಗಿನ ನೋಟೀಸು ಅನೇಕ ವೀರಶೈವಜನಗಳಿಗೆ ತಲುಪದೆ ಇದ್ದುದರಿಂದ ಇತರ ವೀರಶೈವರಿಗೆ ಸಹ ಆ ಮೀಟಿಂಗಿನಲ್ಲಿ ನಡೆದ ವಿಷಯವನ್ನು ತಿಳಿಯಪಡಿಸುವದಕ್ಕಾಗಿ ಈ ದಿವಸ ಒಂದು ಮೀಟಿಂಗನ್ನು ನಡೆಸಬೇಕೆಂದು ನಿಶ್ಚೈಸಿ ಮಹಾಜನಗಳನ್ನು ಸೇರಿಸಲಾಗಿದೆ. ಆದ್ದರಿಂದ ಆ ಮೀಟಿಂಗಿನಲ್ಲಿ ನಡೆದ ನಿರ್ಧಾರಗಳು ಊರ್ಜಿತವಾದವುಗಳಲ್ಲ ಎಂಬುದಾಗಿ ಸೂಚಿಸುತ್ತೇನೆ ಎಂಬ ಪ್ರಪೋಜಲನ್ನು ಡಾಕ್ಟರ್ ಸಿದ್ದಪ್ಪನವರು ಪ್ರಪೋಜ್‌ಮಾಡಿದ್ದನ್ನು ಮ॥ ಎಂ. ಎಲ್. ನಾಗಪ್ಪನವರು ಸೆಕೆಂಡ್‌ಮಾಡಿದರು.

ಈ ಮಧ್ಯೆ ಮೀಟಿಂಗಿಗೆ ಬಂದವರು—ಮ॥ ಗಳಾದ (42) ಪರೆಗಿನ ನಂಜಪ್ಪನವರು (43) ಎ. ಮಹಾದೇವಯ್ಯನವರು ಮೈಸೂರು (44) ಬಿ. ರಾಚಪ್ಪನವರು, ಸೆಕೆಂಡ್‌ಇಯರ್ ಬಿ.ಎ; (45) ಕೆ. ಎಸ್. ಬಸವಯ್ಯನವರು ಎ. ಫಿಫ್ತ್ ಕ್ಲಾಸ್ ಮಹಾರಾಜಾಕಾಲೇಜ್ ಹಾಸ್ಟಲ್ (46) ಬಿ. ಮುರುಘಪ್ಪ ಸೆಕೆಂಡ್‌ಇಯರ್ ಬಿ ಎ; ಮ॥ ಕಾ॥ (47) ಆರ್. ದೊಡ್ಡಪ್ಪ ಯು. ಫ. ಕ್ಲಾಸ್ ಶಾರದಾವಿಲಾಸ ಹೈಸ್ಕೂಲು (48) ಚಂದ್ರಶೇಖರಯ್ಯ, III ಫಾರಂ ಮರಿಮಲ್ಲಪ್ಪನವರ ಹೈಸ್ಕೂಲ್ (49) ಬಿ. ಬಸಪ್ಪ III ಇಯರ್ ಬಿ. ಎ. ಮ॥ ಕಾಲೇಜು. ಮ॥ ಸಿದ್ದಪ್ಪನವರು ಅಂದರೆ ಮೊಲ್ಲಂದ ಪ್ರಪೋಜಿಷನ್ ಸೂಚಿಸಿದವರು ಮೀಟಿಂಗಿನ ಅನುಮತಿಯನ್ನು ಪಡೆದು ತಮ್ಮ ಪ್ರಪೋಜಿಷನ್ ವಾಪಸ್ ತೆಗೆದುಕೊಂಡಿರುತ್ತಾರೆ.

2ನೇ ಪ್ರಪೋಜಿಷನ್—ಬಾಳೆಹೊನ್ನೂರು ಸಂಸ್ಥಾನಪೀಠಾಧಿಕಾರಕ್ಕೆ ಚುನಾಯಿಸಲ್ಪಡುವುದಕ್ಕಾಗಿ ಇತರ ನಾಲ್ಕು ಸಿಂಹಾಸನಾಧಿಪತಿಗಳು ಅಂದರೆ ಉಜ್ಜನಿ, ಕಾಶಿ, ಪರ್ವತ, ಹಿಮವತ್ಕೇದಾರ ಈ ನಾಲ್ಕು ಪೀಠಾಧಿಕಾರಿಗಳು ಚುನಾಯಿಸುವ ಯೋಗ್ಯರಾದ ವಟುಗಳನ್ನು ಬಾಳೆಹೊನ್ನೂರುಸಂಸ್ಥಾನಕ್ಕೆ ಬರಮಾಡಿಕೊಂಡು ವಿದ್ಯಾವಂತರಿಂದ ಪರೀಕ್ಷೆ ಮಾಡಿಸಿ ಮುಜರಾಯಿ ಕಮೀಷನರವರು, ಅರಮನೆ ಇಲಾಖಾ ಮುಜರಾಯಿ ಭಕ್ಷಿಯವರು, ಮ॥ ಕೆ.ಪಿ. ಪುಟ್ಟಣ್ಣಶೆಟ್ಟರು, ಇವರುಗಳು, ವಿದ್ವಾಂಸರುಗಳಿಂದ ಪರೀಕ್ಷಿಸಿ ಉತ್ತಮತರಗತಿಯಲ್ಲಿ ತೇರ್ಗಡೆಹೊಂದಿದ ವಟುವನ್ನು ಬಾಳೆಹೊನ್ನೂರು ಸಂಸ್ಥಾನಕ್ಕೆ ನೇಮಿಸಬೇಕಾಗಿ ಮ॥ ಡಾಕ್ಟರ್ ಟಿ. ಎಸ್. ಸಿದ್ದಪ್ಪನವರು ಸೂಚಿಸಿದ್ದನ್ನು ಮ॥ ಎಂ. ಪಿ. ಲಿಂಗಪ್ಪನವರು ಸೆಕೆಂಡ್‌ಮಾಡಿದರು.

ಇಷ್ಟರಲ್ಲಿ ಮೀಟಿಂಗಿಗೆ ಹೊಸದಾಗಿ ಬಂದವರು—ಮ॥. ಗಳಾದ (50) ಗುಬ್ಬಿ ಜಿ. ಎಲ್. ಮುರುಗೆಪ್ಪನವರು ರೆ॥ ಮೆಂಬರು (51) ಗುಬ್ಬಿ ಮ್ಯುನಿಸಿಪಲ್ ಕೌನ್ಸಿಲರ್ ಜಿ. ಮುರುಗೆಪ್ಪನವರು (52) ಕೆ. ಸುಬ್ರಾಯಪ್ಪನವರು V ಫಾರಂ ಶಾರದಾವಿಲಾಸ ಹೈಸ್ಕೂಲ್ (53) ಕೆ. ಕೊಟ್ಟೂರಯ್ಯನವರು ಎಂಟ್ರನ್ಸ್ ಕ್ಲಾಸ್, ಡಿ. ಬನುಮಯ್ಯನವರ ಹೈಸ್ಕೂಲು (54) ಟಿ. ಎ. ಸಿದ್ದಪ್ಪ V ಫಾರಂ ಶಾ. ವಿ. ಹೈ (55) ಎಸ್. ಮುರಿಗೆಪ್ಪಶಾಸ್ತ್ರಿ VI ಫಾರಂ ಎಂ.ಎಂ. ಹೈಸ್ಕೂಲ್ (56) ಬಿ. ಕಲ್ಲಪ್ಪ ಶೇಕದಾರ್ (ಸ್ಪೆಷಲ್) ಮೈಸೂರು (57) ಆರ್. ಮಾದಪ್ಪ V ಫಾರಂ ಶಾ॥ ವಿ॥ ಹೈ॥ (58) ಬಾಲಗಂಗಾಧರಂ VI ಫಾರಂ ಎಂ.ಎಂ. ಹೈ॥ (59) ಎಚ್. ಸಿ. ಜಂಬುಕೇಶ್ವರಯ್ಯ III ಇಯರ್ ಬಿ.ಎ. ಮ॥ ಕಾಲೇಜ್ (60) ಆರ್. ಬಸಪ್ಪಾಜಿ III ಇಯರ್ ಬಿ.ಎ. ಮ॥ ಕಾ॥ ಮ॥ ಗಳಾದ ಪರಮಶಿವಯ್ಯನವರು, ಬಿ. ರಾಚಪ್ಪನವರು ಮತ್ತು ಡಿ. ಎಸ್. ಮಲ್ಲಪ್ಪನವರು ಈ ಪ್ರಪೋಜಿಷನ್ನನ್ನು ಅಪೋಜ್‌ಮಾಡಿದರು. ಆಗ ಓಟಿಗೆ ಹಾಕಲು ಈ ಪ್ರಪೋಜಿಷನ್ನನ್ನು 17 ಜನರು ಅನುಮೋದಿಸಿದರು ಮತ್ತು 34 ಜನರು ಅಪೋಜ್‌ಮಾಡಿದರು. ಮ॥ ಎಂ. ಪಿ. ಲಿಂಗಪ್ಪಯ್ಯನವರು ಈ ಸಮಯದಲ್ಲಿ ಮೀಟಿಂಗ್‌ಬಿಟ್ಟು ಸ್ಕೂಲಿಗೆ ಹೋಗಲು ಹೊತ್ತಾಗುತ್ತದೆಂದು ಹೇಳಿ ಹೊರಟುಹೋದರು. ಚೇರ್ಮನ್‌ರವರು ಮ॥ ಸಾಹುಕಾರ್ ಕಬ್ಬಳ್ಳಿ ಚನ್ನಬಸಪ್ಪನವರ ಹಾಸ್ಟಲ್‌ನಲ್ಲಿ 12ನೇ ತಾರೀಖಿನಲ್ಲಿ ಮಾಡಿರುವ ತೀರ್ಮಾನವು ಈ ಕೆಳಗೆ ಕಂಡ ಬದಲಾವಣೆಗಳೊಡನೆ ಜಾರಿಗೆ ಬರತಕ್ಕದ್ದೆಂದು ಸೂಚಿಸಿದರು:—

1. ಡಿಸ್ಟ್ರಿಕ್ಟ್‌ವಾರ್ ಜನಸಂಖ್ಯೆ ಮೇಲೆ ಲಿಂಗಾಯತ ಪ್ರತಿನಿಧಿಗಳನ್ನು ಚುನಾವಣೆಮಾಡತಕ್ಕದ್ದು.

2. ವಟುಗಳು ತಮ್ಮ ಅಪ್ಲಿಕೇಷನ್ನುಗಳನ್ನು ಕಳುಹಿಸಲು ನ್ಯೂಸ್ ಪೇಪರಿನಲ್ಲಿ ಪ್ರಕಟಿಸತಕ್ಕದ್ದು ಮತ್ತು ಕಾನ್ಫರೆನ್ಸಿಗೆ ಹಾಜರಾಗಬೇಕು.

3. ವಟುಗಳನ್ನು ಪರೀಕ್ಷಿಸಬೇಕು. ಇದನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

ಈ ಪ್ರೊಸೀಡಿಂಗ್ಸನ್ನು ಮುಜರಾಯಿ ಕಮೀಷನರಿಗೆ ಕಳುಹಿಸುವದಕ್ಕೂ ಮತ್ತು ನ್ಯೂಸ್‌ಪೇಪರಿಗೆ ಕಳುಹಿಸುವದಕ್ಕೂ ಸಹ ಚೇರ್ಮನ್‌ರವರಿಗೆ ಅಧಿಕಾರಕೊಡಲಾಯಿತು. ಚೇರ್ಮನ್‌ರವರಿಗೆ ವಂದನೆಗಳು ಅರ್ಪಿಸಲ್ಪಟ್ಟನಂತರ ಮೀಟಿಂಗು ಮುಕ್ತಾಯವಾಯಿತು.

(ರುಜು) ಎಂ. ಪಿ. ಭೋಗಯ್ಯ ಚೇರ್ಮನ್.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ

ದಿವಾನ್‌ಸಾಹೇಬರವರು ಮಾಡಿದ ಭಾಷಣದ ಮುಖ್ಯಾಂಶ.

(ದಸರಾ ಅಧಿವೇಶನ)

10ನೆಯ ಅಕ್ಟೋಬರ್ 1924

(ಕಳೆದವಾರದ ಶೇಷ.)

ಭೂಗರ್ಭ ಶೋಧನೆಯ ಮತ್ತು ಗಣಿಗಳ ಇಲಾಖೆ.

ಈ ಇಲಾಖೆಗೆ ಪ್ರಸಕ್ತವರ್ಷದಲ್ಲಿ ಚಿನ್ನದ ಮೇಲಣ ರಾಜಾಯವನ್ನು ಬಿಟ್ಟು 1,09,452 ರೂ. ಹುಟ್ಟುವಳಿಯು ಬಂದಿತು. ಸರ್ಕಾರಕ್ಕೆ ಪೂರ್ತಿಯಾಗಿ ಉಳಿಸಿಟ್ಟುಕೊಂಡಿದ್ದ ಕ್ರೋಮ್ ಅದುರಿನ ವಿಚಾರದಲ್ಲಿದ್ದ ಅಡಚಣೆಗಳನ್ನು ಸ್ವಲ್ಪಮಟ್ಟಿಗೆ ಕಡಮೆಮಾಡಿ ಈ ಖನಿಜವನ್ನು ರೂಢಿಸುವುದಕ್ಕೆ ಲೈಸೆನ್ಸುಗಳನ್ನು ಕೊಡಬಹುದೆಂದೂ, ಆದರೆ ಒಂದೊಂದು ಸಲಕ್ಕೆ 1 ವರ್ಷಕ್ಕೆ ಮೀರದಂತೆಯೂ. ಒಟ್ಟಿನಲ್ಲಿ 3 ವರ್ಷಗಳಿಗೆ ಮೀರದಂತೆಯೂ, ಅವಧಿಯನ್ನು ಗೊತ್ತುಮಾಡಿ, ಕೆಲವು ಷರತ್ತುಗಳಿಗೆ ಒಳಪಡಿಸಬೇಕೆಂದೂ, ವಿಧಾಯಕವಾಗಿ ಅನುಜ್ಞೆಯನ್ನು ಕೊಡಲಾಯಿತು. ಹಿಂದಣವರುಷದಂತೆಯೇ ಪ್ರಸಕ್ತವರ್ಷದಲ್ಲಿ 5 ಚಿನ್ನದ ಗಣಿಗಳಲ್ಲಿ ಕೆಲಸವು ನಡೆದು ಸರಿಸುಮಾರಾಗಿ 2,58,91,665 ರೂ. ಬೆಲೆಯಾಗುವ 428,973.256 ಔನ್ಸ್‌ಗಳಷ್ಟು ಚಿನ್ನವು ಉತ್ಪತ್ತಿಯಾಯಿತು; ಆದರೆ ಹಿಂದಣ ವರುಷದಲ್ಲಿ 431,860.68 ಔನ್ಸ್‌ಗಳಷ್ಟು ಚಿನ್ನವು ಉತ್ಪತ್ತಿಯಾಗಿದ್ದಿತು. ಸರ್ಕಾರಕ್ಕೆ ಪಾವತಿ ಮಾಡಬೇಕಾದ ರಾಜಾಯವು ಸರಿಸುಮಾರಾಗಿ 14,01,324 ರೂಗಳು.

ಪಬ್ಲಿಕ್ ವರ್ಕ್ಸ್ ಇಲಾಖೆ.

ಲೋಕಲ್ ಬೋರ್ಡುಗಳಿಗೆ ಕೊಟ್ಟ ಮೊಬಲಗೂ, ಕಂಟ್ರಿಬ್ಯೂಷನ್ ಮೊಬಲಗೂ ಸೇರಿ ಎಲ್ಲಾ ಬಾಬುಗಳಿಂದಲೂ, ಪಬ್ಲಿಕ್‌ವರ್ಕ್ಸ್ ಇಲಾಖೆಯ ಕಾಮಗಾರಿಗಳ ಒಟ್ಟು ವೆಚ್ಚವು ಪ್ರಸಕ್ತವರ್ಷದಲ್ಲಿ ಸುಮಾರು 26,98,219 ರೂ. ತಗುಲಿತು. ಇದರಲ್ಲಿ 9,66,535 ರೂ. ನೀರಾವರಿ ಕಾಮಗಾರಿಗಳಿಗಾಗಿಯೂ, 17,31,684 ರೂ. ರಸ್ತೆಗಳು ಮತ್ತು ಕಟ್ಟಡಗಳಿಗಾಗಿಯೂ ವೆಚ್ಚವಾದುವು. ಕಡೂರು, ಹಾಸನ ಮತ್ತು ಶಿವಮೊಗ್ಗ ಡಿ॥ ಗಳಲ್ಲಿ ರಸ್ತೆಗಳಿಗೂ, ಸೇತುವೆಗಳಿಗೂ, ಪ್ರವಾಹಗಳಿಂದುಂಟಾದ ನಷ್ಟವನ್ನು ದುರಸ್ತುಮಾಡುವುದಕ್ಕಾಗಿ 94,270 ರೂ. ವರೆಗೆ ಅಂದಾಜುಗಳನ್ನು ಮಂಜೂರ್ಮಾಡಲಾಯಿತು. ನೀರಾವರಿ ಕಾಮಗಾರಿಗಳ ನಷ್ಟವನ್ನು ಸರಿಪಡಿಸುವುದಕ್ಕಾಗಿ ತಯಾರಾದ ಅಂದಾಜುಗಳಿಗೆ 54,000 ರೂ. ವರೆಗೆ ಮುಟ್ಟಿದುವು ಕೋಲಾರ ಮತ್ತು ತುಮಕೂರು ಡಿ॥ ಗಳಲ್ಲಿ ದುರ್ಭಿಕ್ಷದ ದೆಸೆಯಿಂದ ಕಷ್ಟಪಡುತ್ತಿದ್ದವರಿಗೆ ಕೂಲಿಯನ್ನು ದೊರಕಿಸಿ ಸಹಾಯ ಮಾಡುವುದಕ್ಕಾಗಿ ನಡೆಸಿದ ಕೆರೆಗಳ ದುರಸ್ತಿ ಮತ್ತು ರಸ್ತೆಗಳ ಕಾಮಗಾರಿಗಳಿಗಾಗಿ 50,255 ರೂ. ವೆಚ್ಚವಾದುವು.

ಚಿಂತಾಮಣಿ, ಕೋಲಾರ, ಮೊಳಕಾಲ್ಮೂರು, ಕೊಪ್ಪ, ಶಿವಮೊಗ್ಗ, ಮತ್ತು ಚಿಕ್ಕಮಗಳೂರು ಟೌನುಗಳಿಗೆ ನೀರು ಸರಬರಾಯಿ ಮಾಡುವ "ಸ್ಕೀಮು" ಗಳ ಸಂಬಂಧದಲ್ಲಿ ಪ್ರಸಕ್ತವರ್ಷದಲ್ಲಿ ಕೆಲಸವು ನಡೆಯಿತು; ಮತ್ತು ಕೋಲಾರದ ಚಿನ್ನದ ಗಣಿಗಳ ನೀರು ಸರಬರಾಯಿ ಕಾಮಗಾರಿಗಳ ಸಂಬಂಧದಲ್ಲಿ ದೊಡ್ಡದೊಡ್ಡ ಹೊಸ ಕೊಳವೆಗಳನ್ನು ಜೋಡಿಸುವ ಕೆಲಸವೂ ನಡೆಯುತ್ತಿದ್ದಿತು. ಮೈಸೂರು ಸಿಟಿಯ ನೀರು ಸರಬರಾಯಿಯ ವಿಚಾರವಾಗಿ ಕೆಲವು ಮೇಲ್ಪಾಡಿನ ಕಾಮಗಾರಿಗಳನ್ನು ಕ್ಷಿಪ್ರದಲ್ಲಿಯೇ ನಡೆಸುವುದಕ್ಕಾಗಿ 4,34.280 ರೂ. ವರೆಗೆ ವೆಚ್ಚವಾಗುವ ಒಂದು ಏರ್ಪಾಡು ಮಂಜೂರ್ಮಾಡಲ್ಪಟ್ಟಿತು. ಕಡೂರು, ಮೂಡಗೆರೆ ಮತ್ತು ದೊಡ್ಡಬಳ್ಳಾಪುರದ ಟೌನುಗಳಿಗೆ ನೀರು ಸರಬರಾಯಿ ಏರ್ಪಾಡಿನ ವಿಚಾರವಾಗಿ ತನಿಖೆಯ ಕ್ರಮಗಳು ಜರುಗುತ್ತಿದ್ದುವು. ತುಮಕೂರು ಟೌನಿನ ನೀರು ಸರಬರಾಯಿ ಏರ್ಪಾಡನ್ನು ಮಂಜೂರ್ಮಾಡಲಾಗಿದೆ; ಆದರ ತಪಶೀಲು ವಿಚಾರಗಳನ್ನು ಶಿಲ್ಪಕಲಾಕೋವಿದರೊಬ್ಬರಿಂದ ಕೂಲಂಕಷವಾಗಿ ಪರಿಶೋಧನೆ ಮಾಡಿಸುವುದೊಂದು ಕೆಲಸವು ಉಳಿದಿರುತ್ತದೆ.

ಗಂಧದ ಎಣ್ಣೆಯ ಕಾರ್ಖಾನೆಗಳು.

ಬೆಂಗಳೂರು ಮೈಸೂರುಗಳಲ್ಲಿರುವ ಎರಡು ಕಾರ್ಖಾನೆಗಳಲ್ಲಿಯೂ ವರುಷವೆಲ್ಲಾ ಕೆಲಸವು ನಡೆದು ಫಾರೆಸ್ಟ್ ಇಲಾಖೆಯಿಂದ ಒದಗಿಸಲ್ಪಟ್ಟ ಸುಮಾರು 1,500 ಟನ್ನುಗಳ ಗಂಧದಮರದಿಂದ 1,47,674 ಪೌಂಡುಗಳ ಗಂಧದ ಎಣ್ಣೆಯು ಪ್ರಸಕ್ತವರ್ಷದಲ್ಲಿ ತಯಾರಾಯಿತು, ಮತ್ತು 1,65,112 ಪೌಂಡುಗಳವರೆಗೆ ಗಂಧದ ಎಣ್ಣೆಯು ಮಾರಾಟವಾಯಿತು. ಈ ಪೈಕಿ 23,905 ಪೌಂಡು ಎಣ್ಣೆಯು ಸ್ಥಳದಲ್ಲಿಯೇ ಮಾರಾಟವಾಯಿತು. ಪ್ರಸಕ್ತವರ್ಷದಲ್ಲಿ ಈ ಬಾಬಿನಲ್ಲಿ ಒಟ್ಟು ಹುಟ್ಟುವಳಿಯು 27.26 ಲಕ್ಷ ರೂ. ಗಂಧದ ಎಣ್ಣೆಯ ಮಾರಾಟಕ್ಕಾಗಿ ಲಂಡನ್ ಪಟ್ಟಣದ ಮೆಸರ್ಸ್ ವಿರ್ಥ್ ಅಂಡ್ ಸನ್ಸ್ ಕಂಪೆನಿಯವರೊಡನೆ ಮಾಡಿಕೊಂಡ ಒಪ್ಪಂದವು 1923 ನೆಯ ಇಸ್ವಿ ಆಗಸ್ಟ್ ತಿಂಗಳ ಅಖೈರಿಗೆ ತೀರಿಹೋಯಿತು. ಈ ಕಂಪೆನಿಯವರಿಗೆ ಬದಲಾಗಿ ಅದೇ ಇಸ್ವಿಯ ಸೆಪ್ಟಂಬರ್ ತಿಂಗಳ ಲಾಗಾಯಿತು ಮೈಸೂರಿನ ಮೆಸರ್ಸ್ ಎಸ್ಸೆನ್ಷಿಯಲ್ ಪ್ರಾಡಕ್ಟ್ ಕಂಪೆನಿಯವರನ್ನು ಗಂಧದ ಎಣ್ಣೆಯ ಮಾರಾಟಕ್ಕಾಗಿ ಏಜಂಟರನ್ನಾಗಿ ನೇಮಿಸಿಕೊಳ್ಳಲಾಯಿತು.

ಮೂಲಧನದ ಕಾಮಗಾರಿಗಳು.

ಕೃಷ್ಣರಾಜಸಾಗರ.

ಪ್ರಸಕ್ತವರ್ಷದಲ್ಲಿ ಕೃಷ್ಣರಾಜಸಾಗರದ ಕಾಮಗಾರಿಯ ಬಗೆ ಮೂ ಲಧನದ ವೆಚ್ಚಕ್ಕಾಗಿ, ಅಣೆಯ ಕಾಮಗಾರಿಗೋಸ್ಕರ 6.01 ಲಕ್ಷ ಮತ್ತು ನಾಲಾಗಳ ಬಡಾವಣೆಗೋಸ್ಕರ 47,500 ರೂ. ಅಂತು 6.68 ಲಕ್ಷ ರೂ. ಗ್ರಾಂಟನ್ನು ಕೊಡಲಾಯಿತು. ಈ ಕಾಮಗಾರಿಗೆ ಪ್ರಸಕ್ತವರ್ಷದಲ್ಲಿ ಒಟ್ಟು 5.48 ಲಕ್ಷ ರೂ. ಪ್ರಾರಂಭದಿಂದಲೂ 19 24 ನೆಯ ವರ್ಷದ ಅಖೈರಿನವರೆಗೆ 219.78 ಲಕ್ಷ ರೂ. ವೆಚ್ಚವಾಗಿ ತ್ತವೆ. ಪ್ರಸಕ್ತವರ್ಷದಲ್ಲಿ ಹೊಸ ನಾಲಾಗಳಿಂದ ಸಾಗುವಳಿಯಾದ ವಿ ಸ್ತೀರ್ಣವು 17,720 ಎಕರೆಗಳು ಎಂದರೆ ಹಿಂದಿನ ವರ್ಷಕ್ಕಿಂತಲೂ ಸುಮಾ 1000 ಎಕರೆಗಳು ಹೆಚ್ಚಾದಂತಾಯಿತು.

ವಿದ್ಯುಚ್ಛಕ್ತಿಯ ಇಲಾಖೆ.

ಈ ಇಲಾಖೆಯ ಒಟ್ಟು ಹುಟ್ಟುವಳಿಯು, ಬಡ್ಡಿಯನ್ನೂ ಡಿಪ್ರಿ ಯೇಷನ್ ಫಂಡನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ, ಪ್ರಸಕ್ತ ವರ್ಷ 45,11,066 ರೂ. ಗಳಾಯಿತು; ಅದರ ಹಿಂದಿನ ವರ್ಷದಲ್ಲಿ ಹುಟ್ಟುವಳಿಯು 42,21,220 ರೂ. ಗಳಾಗಿದ್ದಿತು. ಈರೀತಿ ಹುಟ್ಟು ಯು ಹೆಚ್ಚಿದುದಕ್ಕೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸತಕ್ಕವರ ಸಂ ಯು ಅಧಿಕವಾದುದೂ, ಮತ್ತು ಹಿಂದಿನ ಗಿರಾಕಿಗಳು ಹೆಚ್ಚು ಹೆಚ್ಚಾ ಶಕ್ತಿಯನ್ನು ಉಪಯೋಗಿಸಿದುದೂ ಕಾರಣಗಳಾಗಿವೆ ಇಲಾಖೆಯ ಕೆ ವನ್ನು ನಡೆಸುವುದಕ್ಕೆ ತಗಲಿದ ಒಟ್ಟು ವೆಚ್ಚವು ಡಿಪ್ರೀಸಿಯೇಷನ್ ಫಂ ಗೆ ಜಮೆ ಕಟ್ಟಲ್ಪಟ್ಟ 6,26,921 ರೂ. ಸೇರಿ 13,89,841 ರೂ. ಡಿಪ್ರೀಸಿಯೇಷನ್ ಫಂಡು ಪ್ರಸಕ್ತ ವರ್ಷದ ಅಖೈರಿನಲ್ಲಿ 45.74 ಲ ರೂ. ಇದ್ದಿತು. ಅಂತು, ಒಟ್ಟಿನಲ್ಲಿ ನಿವ್ವಳ ಹುಟ್ಟುವಳಿಯು 1922 ರಲ್ಲಿ 27,98,109 ರೂ. ಗಳಾದುದಕ್ಕೆ ಪ್ರತಿಯಾಗಿ ಪ್ರಸಕ್ತವರ್ಷ 31,05,925 ರೂ. ಗಳಾಯಿತು.

ಲೆಕ್ಕಾಚಾರಗಳನ್ನು ಒಟ್ಟುಗೂಡಿಸುದುದರ ಫಲಿತಾಂಶಗಳು.—ವಿದ್ಯು ಚ್ಛಕ್ತಿಯ ಕಾಮಗಾರಿ ಮತ್ತು ಕೃಷ್ಣರಾಜಸಾಗರದ ಏರ್ಪಾಡು, ಇವ ಡರ ಮೂಲಧನದ ಲೆಕ್ಕಗಳನ್ನೂ ಹುಟ್ಟುವಳಿಯ ಲೆಕ್ಕಗಳನ್ನೂ ಒಟ್ಟು ಗೂಡಿಸತಕ್ಕುದೆಂದು 1924 ನೆಯ ಸೆಪ್ಟಂಬರ್ ತಾ॥ 1 ನೆಯ ಮಕ್ಕಾ ಪಿ. ಡಬ್ಲಿಯು, 115-126-ಕೆ. ಎಸ್.ಎಸ್. 723-734 ನೆಯ ನಂಬ ಸರ್ಕಾರಿ ಹುಕುಮಿನಲ್ಲಿ ನಮೂದಿಸಲ್ಪಟ್ಟ ಕೆಲವು ಕಾರಣಗಳಿಗಾಗಿ ಸರ ಹುಕುಮಿನಪ್ರಕಾರ ಈಚೆಗೆ ತೀರ್ಮಾನವಾಗಿರುತ್ತದೆ. ಕೃಷ್ಣರಾಜಸಾಗ ಪ್ರಾಜೆಕ್ಟಿನ ಉದ್ದೇಶಗಳು ಯಾವುವೆಂದರೆ :—

(1) ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವುದಕ್ಕಾಗಿ ಅವಿಚ್ಛಿನ್ನ ಗಿ ತಕ್ಕಷ್ಟು ನೀರು ಸರಬರಾಯಾಗುವಂತೆ ಏರ್ಪಡಿಸಿಕೊಳ್ಳುವುದು;

(2) ಗಣಿಯ ಕೆಲಸದ ಕಂಪೆನಿಗಳವರಿಗೆ ಹೆಚ್ಚು ವಿದ್ಯುಚ್ಛಕ್ತಿಯು ಬೇಕಾಗಿರುವುದರಿಂದಲೂ, ಬೆಂಗಳೂರು ಮತ್ತು ಮೈಸೂರು ನಗರಗಳ ದೀಪಗಳಿಗಾಗಿಯೂ, ಕೈಗಾರಿಕೆಗಳಿಗಾಗಿಯೂ ಹೆಚ್ಚು ಹೆಚ್ಚಾಗಿ ವಿದ್ಯುಚ್ಛ ಕ್ತಿಯು ಏಕಪ್ರಕಾರವಾಗಿ ಅವಶ್ಯವಾಗುತ್ತಿರುವುದರಂದಲೂ, ಅದನ್ನು ಅ ಧಿಕವಾಗಿ ಉತ್ಪತ್ತಿಮಾಡಲು ತಕ್ಕಷ್ಟು ನೀರು ಒದಗುವಂತೆ ಮಾಡುವುದು;

(3) ಕಾವೇರಿ ತೀರದಲ್ಲಿ ಅನುಕೂಲವಾದ ಪ್ರದೇಶಗಳಲ್ಲಿ ಹೆಚ್ಚು ವಿಸ್ತೀರ್ಣದ ಜಮೀನುಗಳ ಸಾಗುವಳಿಗೆ ನೀರು ಸರಬರಾಯಿಮಾಡುವುದು.

ಕೃಷ್ಣರಾಜಸಾಗರದ ಜಲಾಶಯವನ್ನು ಕಟ್ಟುವ ಕೆಲಸವು 1911-12 ರಲ್ಲಿ ಪ್ರಾರಂಭವಾಯಿತು; ಆವರುಷದಲ್ಲಿ ಕಾವೇರಿಯ ವಿದ್ಯುಚ್ಛಕ್ತಿಯ ಏರ್ಪಾಡಿನ ನಿವ್ವಳ ವರಮಾನವು ಸುಮಾರು $10\frac{1}{2}$ ಲಕ್ಷ ರೂ. ಗಳಾಗಿ ದ್ದುವು. ಅದಕ್ಕೆ ಪ್ರತಿಯಾಗಿ ಪ್ರಸಕ್ತ ವರುಷದ ಒಟ್ಟು ಹುಟ್ಟುವಳಿಯು (ನೀರಾವರಿಯಿಂದ ದೊರೆತ 1,50,000 ರೂ. ಸೇರಿ) 46,61,000 ರೂ. ಕಾವೇರಿ ನದಿಯ ನೀರಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಏರ್ಪಾಡು, ಮತ್ತು ಕೃಷ್ಣರಾಜಸಾಗರದ ಏರ್ಪಾಡು, ಇವೆರಡಕ್ಕೂ ಪರ ಸ್ಪರವಾಗಿ ಪ್ರಬಲವಾದ ಮತ್ತು ಪ್ರತ್ಯೇಕಿಸಲಳವಲ್ಲದ ಅನುಬಂಧವಿರುತ್ತ ದೆಯಾಗಿ ಇನ್ನು ಮುಂದೆ ಇವುಗಳನ್ನು ಒಂದು ಒಟ್ಟುಗೂಡಿಸಿದ ಏರ್ಪಾಡ ನ್ನಾಗಿ ಭಾವಿಸಬೇಕಾಗಿರುತ್ತದೆ. ಈ ಏರ್ಪಾಡಗಾಗಿ 1923-24 ನೆಯ ಸಾಲಿನ ಅಖೈರುವರೆಗೆ ತಗಲಿರುವ ಒಟ್ಟು ಮೂಲಧನದ ವೆಚ್ಚವು ಸುಮಾರು $409\frac{1}{2}$ ಲಕ್ಷ ರೂ. ಆಗುವುದು. ಪ್ರಸಕ್ತ ವರ್ಷದಲ್ಲಿ, ಕೆಲಸ ನಡೆಸುವ ವೆಚ್ಚವನ್ನು ವಜಾಕೊಟ್ಟಮೇಲೆ ಒಟ್ಟಿನಲ್ಲಿ 30,29,000 ರೂ. ನಿವ್ವಳ ವರಮಾನವು ಬಂದಿತು, ಎಂದರೆ ವೆಚ್ಚಮಾಡಿದ $409\frac{1}{2}$ ಲಕ್ಷ ರೂ. ಮೂಲ ಧನಕ್ಕೆ ಶೇಕಡಾ 7.39 ರಂತೆ ಪ್ರತಿಫಲವು ದೊರೆತಂತಾಯಿತು.

ರೈಲು ಮಾರ್ಗಗಳು.

ಮದರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರ ಆಡಳಿತದಲ್ಲಿಯೂ, ನಮ್ಮ ಆಡಳಿತದಲ್ಲಿಯೂ, ಇದ್ದ ಎಲ್ಲಾ ಲೈನುಗಳಿಂದಲೂ ಒಟ್ಟು ಹುಟ್ಟುವಳಿಯು ತಿದ್ದುಪಾಟಾದ ಅಂದಾಜಿನಲ್ಲಿ ನಿರೀಕ್ಷಿಸಿದ್ದ 74 ಲಕ್ಷ ರೂ. ಗೆ ಬದಲಾಗಿ 76 ಲಕ್ಷ ರೂ. ಗಳಾಗಿಯೂ, ಕೆಲಸ ನಡೆಸುವ ವೆಚ್ಚವು ತಿದ್ದುಪಾಟಾದ ಅಂದಾಜಿನಲ್ಲಿ ನಿರೀಕ್ಷಿಸಿದ್ದ 60 ಲಕ್ಷ ರೂ. ಗೆ ಬದಲಾಗಿ 57 ಲಕ್ಷ ರೂ. ಗಳಾಗಿಯೂ ಇದ್ದುವು. ಹುಟ್ಟುವಳಿಯು ಹೆಚ್ಚಿದುದೂ, ವೆಚ್ಚವು ತಗ್ಗಿದುದೂ, ಈ ಎರಡೂ ಸೇರಿ ನಿವ್ವಳ ವರಮಾನವು ತಿದ್ದುಪಾಟಾದ ಅಂದಾಜಿನಲ್ಲಿ ನಿರೀಕ್ಷಿಸಿದ್ದ ಪ್ರಮಾಣಕ್ಕಿಂತಲೂ ಸುಮಾರು 5 ಲಕ್ಷ ರೂ. ಗಳಷ್ಟು ಅಧಿಕವಾಗುವುದಕ್ಕೆ ಸಹಾಯವಾಯಿತು.

ಸರ್ಕಾರದ ಆಡಳಿತದಲ್ಲಿದ್ದ ಲೈನುಗಳನ್ನು ಸರಿಯಾದ ಸ್ಥಿತಿಯಲ್ಲಿ ಕಾಪಾಡಿಕೊಂಡಿರುವುದಕ್ಕೂ, ರೈಲುಗಳನ್ನು ಎಂದಿನಂತೆ ಕ್ರಮವಾಗಿ ಬರುತ್ತಿರುವಂತೆ ಮಾಡುವುದಕ್ಕೂ, ಪ್ರಸಕ್ತವರ್ಷದಲ್ಲಿ ಒಟ್ಟು ಹುಟ್ಟುವಳಿಯಲ್ಲಿ ಶೇಕಡಾ 78 ರಂತೆಯೂ, ಅದರ ಹಿಂದಿನ ವರುಷದಲ್ಲಿ ಶೇಕಡಾ 76 ರಂತೆಯೂ ವೆಚ್ಚವಾಯಿತು; ಆದರೆ ಹೊಸ ಕಂಬಿಗಳೇ ಮುಂತಾದುವುಗಳನ್ನು ಹಾಕಿ ರೈಲು ಮಾರ್ಗವನ್ನು ಸರಿಮಾಡಿಸಿದ ವೆಚ್ಚವನ್ನೂ, ಹೊಸ ರೈಲುಗಾಡಿಗಳೇ ಮುಂತಾದುವುಗಳಿಗೆ ಮುಟ್ಟಿದ ವೆಚ್ಚವನ್ನೂ ಇದರಲ್ಲಿ ಸೇರಿಸಿಯೇ ಇಲ್ಲ. ಹೀಗೆ ಕೆಲಸನಡೆಸುವ ಖರ್ಚುಗಳ ಶೇಕಡಾವಾರು ಅಧಿಕವಾದುದಕ್ಕೆ ಪ್ರಯಾಣಿಕರಿಂದಲೂ, ಸರಕುಗಳನ್ನು ಸಾಗಿಸುವುದರಿಂದಲೂ ಆದ ಹುಟ್ಟುವಳಿಯು ಕಡಮೆಯಾದುದೇ ಕಾರಣವು. ಸರ್ಕಾರದ ಆಡಳಿತದಲ್ಲಿರುವ ಲೈನುಗಳ ಹುಟ್ಟುವಳಿಗೂ ವೆಚ್ಚಕ್ಕೂ ಇರುವ ದಾಮಾಷಾಯಿಯು ಇನ್ನೂ ಅತ್ಯಂತ ಅಧಿಕವಾಗಿಯೇ ಇರುತ್ತದೆ. ಆದಕಾರಣ, ಈಗ ಒಟ್ಟು ಹುಟ್ಟುವಳಿಯಲ್ಲಿ ಶೇಕಡಾ 78 ರಂತೆ ಇರುವ ವೆಚ್ಚವನ್ನು ಇನ್ನೂ ಬಹಳ ಮಟ್ಟಿಗೆ ತಗ್ಗಿಸಬೇಕಾಗಿದೆ. ಆದಾಗ್ಯೂ, ಮೇಲೆ ನಮೂದಿಸಿರುವ ಲೆಕ್ಕಗಳಿಂದ ಪ್ರಸಕ್ತಸಾಲಿನಲ್ಲಿ ವಸ್ತುತಃ ಆದ ವೆಚ್ಚವಾಗಲಿ ಅಥವಾ ಸಂಪಾದಿಸಿದ ಒಟ್ಟು ಆದಾಯವಾಗಲಿ ಗೊತ್ತಾಗುವುದಿಲ್ಲ. ಮೇಲ್ಕಂಡ ವೆಚ್ಚದ ಮೊಬಲಗಿನಲ್ಲಿ ಹಿಂದಿನ ವರುಷಗಳ ವೆಚ್ಚಕ್ಕೆ ಖರ್ಚುಹಾಕತಕ್ಕುದಾಗಿದ್ದು, ಈಗ ಲೆಕ್ಕದ ಪುಸ್ತಕಗಳಲ್ಲಿ ದಾಖಲ್ಮಾಡಿ, 1923-24ಕ್ಕೆ ಖರ್ಚು ಹಾಕಿರತಕ್ಕ 1,19,716 ರೂ. ಸೇರಿರುತ್ತದೆ ಅಲ್ಲದೆ ರೈಲುಗಾಡಿಗಳನ್ನು ಸ್ಟೇಷನ್ನುಗಳಲ್ಲಿ ಒಂದು ಲೈನಿನಿಂದ ಮತ್ತೊಂದು ಲೈನಿಗೆ ತರುವುದೇ ಮುಂತಾದ ವೆಚ್ಚಗಳಿಗಾಗಿ ಮದರಾಸ್ ಮತ್ತು ಸದರನ್ ಮರಾಟಾ ಕಂಪೆನಿಯವರಿಂದ ಬರಬೇಕಾಗಿರುವ ಸುಮಾರು 57,000 ರೂ. ಗಳನ್ನು ಪ್ರಸಕ್ತ ಸಾಲಿನ ...ಮ್ಮ ಖರ್ಚಿನಲ್ಲಿ ಹೆಚ್ಚಾಗಿ ಸೇರಿಸಿದೆ. ಈ ಮೊಬಲಗುಗಳನ್ನು ಸೇರಿಸದೆಹೋದರೆ ಈ ಬಾಬಿನ ಕೆಲಸವನ್ನು ನಡೆಸುವುದಕ್ಕಾಗಿ ವಸ್ತುತಃ ಆಗಿರುವ ಖರ್ಚು 22,66,142 ರೂ. ಆಗುತ್ತದೆ. ಕಬ್ಬಿಣದ ಕಾರ್ಖಾನೆಯೇ ಮುಂತಾದುವುಗಳಿಂದ 10,000 ರೂ. ವರೆಗೆ ಬರಬೇಕಾದ ಬಾಕಿಗಳು ನಿಂತುಹೋಗಿರುತ್ತವೆ. ಇವೂ ಸೇರಿದರೆ, ವರಮಾನವು 31,49,371 ರೂ. ಗೆ ಏರುತ್ತದೆ. ಇದನ್ನು ವಸ್ತುತಃ ಆಗಿರುವ 22,66,142 ರೂ. ವೆಚ್ಚದ ಮೊಬಲಗಿನೊಂದಿಗೆ ಹೋಲಿಸಿ ನೋಡಿದರೆ, ಕೆಲಸ ನಡೆಸುವುದಕ್ಕೆ ತಗಲಿದ ವೆಚ್ಚದ ದಾಮಾಷಾಯಿಯು ಶೇಕಡಾ 77.81 ರಿಂದ 71.95 ಕ್ಕೆ ಇಳಿಯುತ್ತದೆ. ಈ ಲೈನುಗಳ ಪೈಕಿ ಕೆಲವು ಇನ್ನೂ ಆರಂಭದೆಶೆಯಲ್ಲಿಯೇ ಇರುತ್ತವೆ; ಅವುಗಳ ಪೈಕಿ ಜನಸಂಚಾರವನ್ನೂ, ಸಾಮಾನುಗಳು ಸಾಗುವುದನ್ನೂ, ಇನ್ನೂ ಹೆಚ್ಚಾಗಿ ಅಭಿವೃದ್ಧಿಪಡಿಸುವ ಕೆಲಸಕ್ಕೆ ಗಮನವನ್ನು ಕೊಡಬೇಕಾಗಿದೆ. ಮೈಸೂರು ಸರ್ಕಾರದ ರೈಲುಮಾರ್ಗಗಳು ಹಿಂತಿನಂತೆ ಮೇ ಇನ್ನೂ ಒಟ್ಟು 402 ಮೈಲಿಗಳಷ್ಟು ಮಾತ್ರವೇ ಇರುತ್ತವೆ; ಇಷ್ಟು ಸ್ವಲ್ಪದೂರದ ರೈಲುಮಾರ್ಗದ ಸಲುವಾಗಿ ಸಂಪೂರ್ಣವಾದ ಸಿಬ್ಬಂದಿಯನ್ನು ಇಟ್ಟುಕೊಂಡಿರಬೇಕಾಗಿರುವುದರಿಂದ ಮೇಲ್ವಿಚಾರಣೆಯ ವೆಚ್ಚಗಳ ದಾಮಾಷಾಯಿಯಾಗಿ ಹೆಚ್ಚಲು ಕಾರಣವಾಗಿದೆ. ನಮ್ಮ ಲೈನುಗಳ ವಿಷಯದಲ್ಲಿ ಈ ಅನಾನುಕೂಲವೊಂದು ಇದೆ. ಹುಟ್ಟುವಳಿಯನ್ನು ಹೆಚ್ಚಿಸುವುದು, ವೆಚ್ಚವನ್ನು ತಗ್ಗಿಸುವುದು ಮತ್ತು ಓಪನ್ ಲೈನಿನ ದೂರವನ್ನು ಹೆಚ್ಚಿಸುವುದು—ಈ ಮೂರು ವಿಷಯಗಳಿಗೂ ನಾವು ಸರಿಯಾದ ಗಮನವನ್ನು ಕೊಟ್ಟಲ್ಲಿ, ರೈಲ್ವೆಯ ಆಡಳಿತದಿಂದ ಹಣಕಾಸಿನ ವಿಷಯದಲ್ಲಿ ನಮಗೆ ತೃಪ್ತಿಕರವಾದ ಫಲಿತಾಂಶಗಳು ದೊರೆಯುವುವು.

ನಮ್ಮ ರೈಲ್ವೆಯ ಆಡಳಿತವು ಪ್ರಾರಂಭದಿಂದ ಪ್ರಸಕ್ತ ವರುಷದ ಅಖೈರಿನವರೆಗೆ ಹಣಕಾಸಿನ ವಿಚಾರದಲ್ಲಿ ಹೇಗೆ ಪರಿಣಮಿಸಿರುತ್ತದೆಯೆಂಬುದನ್ನು ಈಗ ಸಂಕ್ಷೇಪವಾಗಿ ವಿವರಿಸಬಹುದಾಗಿದೆ. ಎಲ್ಲಾ ಲೈನುಗಳಿಗೂ ಸೇರಿ ಪ್ರಸಕ್ತವರ್ಷದ ಅಖೈರಿನವರೆಗೆ ತಗಲಿದ ಮೂಲಧನದ ವೆಚ್ಚವು ಒಟ್ಟಿನಲ್ಲಿ 484 ಲಕ್ಷ ರೂ. ಆಯಿತು. ಆದಿಯಿಂದ ಪ್ರಸಕ್ತವರುಷದ ಅಂತ್ಯದವರೆಗೆ ಈ ಲೈನುಗಳ ಒಟ್ಟು ಹುಟ್ಟುವಳಿಯು 1,172 ಲಕ್ಷ ರೂ. ಇದರಲ್ಲಿ ರಕ್ಷಣೆ ಮತ್ತು ಕೆಲಸ ನಡೆಸುವ ಬಗೆ ತಗಲಿದ 785 ಲಕ್ಷ ರೂ. ಗಳನ್ನು ವಜಾಮಾಡಿದಲ್ಲಿ ಉಳಿಯುವ 387 ಲಕ್ಷ ರೂ. ಮೂಲಧನಕ್ಕೆ ...ದಿಂದ ಪ್ರತಿಫಲವಾಗಿರುತ್ತದೆ. ಅದೇ ಕಾಲಕ್ಕೆ ಮೂಲಧನಕ್ಕೆ ಬಿದ್ದ ಬಡ್ಡಿಯು 426 ಲಕ್ಷ ರೂ. ಎಂದರೆ ನಿವ್ವಳ ವರಮಾನಕ್ಕಿಂತಲೂ 39 ಲಕ್ಷ ರೂ. ನಷ್ಟು ಅಧಿಕವಾಗುವುದು. ಆದಕಾರಣ ಮೇಲ್ಕಂಡ ಕಾಲದಲ್ಲಿ ...39 ಲಕ್ಷ ರೂ. ಅಲ್ಪವಾದ ವ್ಯತ್ಯಾಸವನ್ನು ಗಮನಕ್ಕೆ ತೆಗೆದುಕೊಳ್ಳದೆ ಇರುವ ಪಕ್ಷಕ್ಕೆ ಆದಾಯವೆಚ್ಚಗಳು ಕೇವಲ ಅಲ್ಲಿಗಲ್ಲಿಗೆ ಸರಿಹೋದಂತೆ ಆಗುತ್ತದೆ. ಈ ಸ್ಥಿತಿಯು ತಕ್ಕಮಟ್ಟಿಗೆ ತೃಪ್ತಿಕರವಾಗಿರುವುದಾಗಿ ಭಾವಿಸಬಹುದಾದರೂ, ಇದನ್ನು ವಿಶೇಷವಾಗಿ ಉತ್ತಮಪಡಿಸಲು ಅವಕಾಶವಿರುತ್ತದೆಂದು ಯೋಚಿಸುತ್ತೇವೆ. ನಮ್ಮ ರೈಲುಮಾರ್ಗಗಳಿಗಾಗಿ ಸುಮಾರು 5 ಕೋಟಿ ರೂ. ಯನ್ನು ವೆಚ್ಚಮಾಡಿರುತ್ತೇವೆ; ಆದರೆ ಅವುಗಳ ಆಡಳಿತದ ವಿಷಯದಲ್ಲಿ ಇದುವರೆಗೂ ರೂಢಿಯಾಗಿರುವ ಸ್ಥಿತಿಗಳಿಗನುಸಾರವಾಗಿ, ಈ ಭಾರಿ ಸ್ವತ್ತಿನ ಸವೆದುಹೋದ ಭಾಗಗಳನ್ನು ಸಂಪಡಿಸುವುದಕ್ಕೇ ಆಗಲಿ, ಸಂಸ್ಥಾನಕ್ಕೆ ಒಳ್ಳೇ ವರಮಾನವನ್ನು ತರುವುದರ ಜತೆಗೆ ಪ್ರಜೆಗಳಿಗೆ ತೃಪ್ತಿಕರವಾದ ಪ್ರಯಾಣ ಸೌಕರ್ಯಗಳನ್ನೊದಗಿಸುವಂತೆ ಈ ಮೂಲಧನದ ಆಸ್ತಿಯನ್ನು ಸಮರ್ಪಕವಾದ ರೀತಿಯಲ್ಲಿ ಕಾಪಾಡಿಕೊಂಡಿರುವುದಕ್ಕೇ ಆಗಲಿ, ತಕ್ಕ ಏರ್ಪಾಡುಗಳನ್ನು ಮಾಡಿರುವುದಿಲ್ಲ. ಈ ನ್ಯೂನತೆಯನ್ನು ನಿವಾರಣೆ ಮಾಡುವುದಕ್ಕಾಗಿ, ಒಂದು ಡಿಪ್ರೀಸಿಯೇಷನ್ ಫಂಡನ್ನು ಶೇಖರಿಸಿಡುವುದು ಕೇವಲ ಆವಶ್ಯಕವಾಗಿರುತ್ತದೆ; ಆದುದರಿಂದ, ಚಾಲ್ತಿ ಸಾಲಿನಿಂದ ಅಂಥಾ ಒಂದು ರಿಜರ್ವನ್ನು ಏರ್ಪಡಿಸುವುದಕ್ಕೆ ಪ್ರಾರಂಭಿಸಿದ್ದೇವೆಂದು ತಿಳಿಸಲು ಸಂತೋಷವಾಗಿದೆ. ಸುಮಾರು 5 ಕೋಟಿ ರೂ. ನ ಮೂಲಧನಕ್ಕೆ ಪ್ರಸಕ್ತವರ್ಷದಲ್ಲಿ ದೊರೆತ ನಿವ್ವಳ ಆದಾಯವು ಶೇಕಡಾ 3.9 ರಂತೆ ಆಗುವುದು. ಈ ದರವು ಬಹಳ ಕಡಮೆ ಆದಕಾರಣ, ಇಂಡಿಯಾ ದೇಶದಲ್ಲಿ ರೈಲ್ವೆಗಳಿಂದ ಶೇಕಡಾ ಸುಮಾರು $5\frac{1}{2}$ ರಂತೆ ನಿವ್ವಳ ಆದಾಯವನ್ನು ನಿರೀಕ್ಷಿಸುವುದು ಯುಕ್ತವಾಗಿರುತ್ತದೆಂದು ಇಂಚ್‌ಕೇಪ್ ಕಮಿಟಿಯವರು ಅಭಿಪ್ರಾಯಪಟ್ಟಿರುವುದರಿಂದ, ಅದನ್ನು ಶೇಕಡಾ $5\frac{1}{2}$ ಗೆ ಹೆಚ್ಚಿಸುವುದಕ್ಕೆ ಪ್ರಬಲವಾದ ಪ್ರಯತ್ನಗಳನ್ನು ನಾವು ಮಾಡಬೇಕಾಗಿದೆ. ಸಾಮಾನ್ಯ ಹುಟ್ಟುವಳಿಗಳಿಂದ ರೈಲ್ವೆಗಳಿಗೆ ದ್ರವ್ಯಸಹಾಯವನ್ನು ಮಾಡುವುದು ಯುಕ್ತವಲ್ಲ; ಆದಕಾರಣ, ಒಟ್ಟಿನಲ್ಲಿ ನಮ್ಮ ರೈಲ್ವೆಗಳನ್ನು ಅವುಗಳ ವರಮಾನದಿಂದಲೇ ಅವುಗಳ ವೆಚ್ಚವು ಏಳುವಂತೆಯೂ, ...ಗಾಡಿಗಳು, ಕಟ್ಟಡಗಳು, ಯಂತ್ರಸಾಮಗ್ರಿಗಳು ಮುಂತಾದುವುಗಳನ್ನೆಲ್ಲಾ ಸಮರ್ಪಕವಾಗಿಟ್ಟುಕೊಂಡು, ರೈಲ್ವೆಗಳಿಗೆ ವೆಚ್ಚವಾಗಿರುವ ಭಾರೀ ಬಂಡವಾಳಕ್ಕೆ ತಕ್ಕಷ್ಟು ಪ್ರತಿಫಲವನ್ನೂ ಸರ್ಕಾರದವರಿಗೆ ಕೊಡುವಂತೆಯೂ, ಮಾಡುವುದಕ್ಕೋಸ್ಕರ ನಾವು ಮೇಲೆ ಸೂಚಿಸಿರುವ ಮಾರ್ಗಗಳಲ್ಲಿ ತಕ್ಕಂತೆ ಕೆಲಸಗಳನ್ನು ನಡೆಸಬೇಕಾಗಿರುವುದಲ್ಲದೆ, ಹಾಲಿ ಇರತಕ್ಕ ರೈಲ್ವೆಲೈನುಗಳನ್ನು ಉತ್ತಮವಾದ ಸ್ಥಿತಿಯಲ್ಲಿ ರಕ್ಷಣೆಮಾಡಿಕೊಂಡಿರುವುದಕ್ಕೂ ತಕ್ಕ ದ್ರವ್ಯವನ್ನು ಒದಗಿಸಿಕೊಳ್ಳಬೇಕಾಗಿದೆ.

ದ್ರವ್ಯಾನುಕೂಲತೆಯು ಇದೆಯೋ ಇಲ್ಲವೇ ಎಂಬ ಅಂಶವನ್ನು ಗಮನಕ್ಕೆ ತಂದುಕೊಳ್ಳದೆ ಹೊಸಹೊಸದಾಗಿ ರೈಲ್ವೆ ಮಾರ್ಗಗಳನ್ನು ಕಲ್ಪಿಸುವ ಬಗ್ಗೆ ಮಂಜೂರ್ಮಾಡಿದ್ದ ಕಾರ್ಯಕ್ರಮವನ್ನು ಅದಕ್ಕೆ ಹಣವನ್ನೊದಗಿಸುವುದಕ್ಕೆ ಹಿಂದೆ ತೀರ್ಮಾನವಾಗಿದ್ದ ಉಳಿತಾಯಗಳೇನೂ ಸಂಸ್ಥಾನದಲ್ಲಿ ಇಲ್ಲದಿದ್ದುದರಿಂದಲೂ, ವರ್ಷೇವರ್ಷೇ ಆಯಕ್ಕಿಂತಲೂ ವ್ಯಯವೇ ಹೆಚ್ಚಾಗುತ್ತಲಿದ್ದ ಅನಾನುಕೂಲಸ್ಥಿತಿಯನ್ನು ಸರ್ಕಾರದವರು ಎದುರಿಸಬೇಕಾಗಿದ್ದುದರಿಂದಲೂ, ಮುಂದುವರಿಸದೆ ನಿಲ್ಲಿಸಬೇಕಾಯಿತು; ಕಡೂರು ಡಿಸ್ಟ್ರಿಕ್ಟಿನಲ್ಲಿ ಅವಶ್ಯವಾಗಿ ಬೇಕಾದ ರೈಲ್ವೆಯ ಸೌಕರ್ಯಕ್ಕೆ ಶೀಘ್ರದಲ್ಲಿ ಗಮನವನ್ನು ಕೊಡಬೇಕಾಗಿರುತ್ತದೆ. ಮೈಸೂರು ಡಿ॥ ಬೋರ್ಡಿನವರು ರಾಜನಗೂಡಿನಿಂದ ಚಾಮರಾಜನಗರಕ್ಕೆ ರೈಲು ಹಾಕುವುದನ್ನು ತಾವೇ ವಹಿಸಲು ಮುಂದುವರಿದಿರುವುದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಈ ರೈಲ್ವೆಯನ್ನು ಹಾಕುವುದಕ್ಕೆ ಸರ್ಕಾರದ ಭರವಸೆಯುಳ್ಳ ಸಾಲವನ್ನೆತ್ತಲು ಅವರಿಗೆ ಅಪ್ಪಣೆಯನ್ನು ಕೊಟ್ಟಿದೆ; ಅವಶ್ಯಕವಾದ ಮೊಬಲಗನ್ನು ಅವರು ಸಾಲವಾಗಿ ಪಡೆಯುತ್ತಾರೆಂಬುದರಲ್ಲಿ ಸಂದೇಹವೇನೂ ಇಲ್ಲವೆಂದು ಭಾವಿಸಿದೆ. ಮೊದಲೇ ಮಂಜೂರಾಗಿರತಕ್ಕ ಕಾಮಗಾರಿಗಳಿಗೆ ಪ್ರಕೃತ ನಿಷ್ಕರ್ಷೆಯನ್ನು ಕೊಡಬೇಕಾಗಿರುತ್ತದೆ. ಹೊಸರೈಲ್ವೆ ಲೈನುಗಳ ಕೈಗೊಳ್ಳುವ ವಿಚಾರದಲ್ಲಿಯಾದರೋ ಅಂತಹವುಗಳು ಅನೇಕವಾಗಿ ಸೂಚಿಸಲ್ಪಟ್ಟಿವೆ; ಆದರೆ ನಮ್ಮ ಹಣಕಾಸಿನ ಸಾಮಾನ್ಯಸ್ಥಿತಿಯನ್ನು ಸರಿಮಾಡಿಕೊಂಡು, ಹಾಲಿ ಹುಟ್ಟುವಳಿಯೇನನ್ನೂ ಕೊಡದಿರುವ ಬಂಡವಾಳದ ಕಾಮಗಾರಿಗಳಿಗಾಗಿ ಈಗಾಗಲೇ ಮಾಡಿರುವ ಸಾಲಗಳ ಮೊತ್ತವನ್ನು ಕಡಮೆಮಾಡಿಕೊಂಡಮೇಲೂ ರೈಲ್ವೆಗಳ ಅಭಿವೃದ್ಧಿಗೆ ಸಾಧಾರಣವಾದ ಹೆಚ್ಚು ವೆಚ್ಚವನ್ನು ಮಾಡಬೇಕಾಗಿರುತ್ತದೆ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆ.

ವಿಜನ್ಸಿ ವಿಷಯದಲ್ಲಿ ಮ್ಯಾನೇಜಿಂಗ್ ಏಜೆಂಟರಾಗಿ ಮೊದಲಿನಲ್ಲಿ ನೇಮಕಮಾಡಲ್ಪಟ್ಟಿದ್ದ "ಟಾಟಾ ಐರನ್ ಅಂಡ್ ಸ್ಟೀಲ್ ಕಂಪೆನಿ" ಯವರೊಡನೆ 1917 ನೆಯ ಇಸವಿಯಲ್ಲಿ ಮಾಡಿಕೊಂಡಿದ್ದ ಒಪ್ಪಂದವು ಪರಸ್ಪರ ನಮ್ಮವರಿಂದ ರದ್ದು ಮಾಡಲ್ಪಟ್ಟಿ [illegible] ಯನ್ನು ಈ ವರುಷದ ಜೂನ್ ತಿಂಗಳಲ್ಲಿ ಪುನರ್ವ್ಯವಸ್ಥೆ ಮಾಡಲಾಯಿತು. ಪ್ರಕೃತದಲ್ಲಿ ಈ ಸಭೆಯ ಮೆಂಬರುಗಳನ್ನೆಲ್ಲಾ ಈಗ ಸರ್ಕಾರದವರೇ ನೇಮಕಮಾಡುತ್ತಾರೆ.

ಕಬ್ಬಿಣದ ಕಾರ್ಖಾನೆಗಾಗಿ ಪ್ರಸಕ್ತವರ್ಷದಲ್ಲಿ ಮುಟ್ಟಿದ ಮೂಲಧನದ ವೆಚ್ಚವು $10\frac{1}{2}$ ಲಕ್ಷ ರೂ. ಮತ್ತು ಈ ಏರ್ಪಾಡಿಗಾಗಿ ಪ್ರಾರಂಭದಿಂದ ಪ್ರಸಕ್ತವರ್ಷದ ಅಖೈರಿನವರೆಗೆ ಆಗಿರುವ ಮೂಲಧನದ ವೆಚ್ಚವು 176.96 ಲಕ್ಷ ರೂ.

ದಾಸ್ತಾನಿದ್ದ ಸಾಮಾನುಗಳಿಗೆ ಚಾಲ್ತಿ ದರಗಳ ಪ್ರಕಾರ ಬೆಲೆಯನ್ನು ಕಟ್ಟಲಾಗಿ, ಸದರಿ ವರುಷದ ಹುಟ್ಟುವಳಿಯು 12,11,071 ರೂ. ಗಳಾಯಿತು; ವೆಚ್ಚವು 16,77,205 ರೂ. ಗಳಾಯಿತು. ಈ ರೀತಿಯಾಗಿ ಕೆಲಸದಲ್ಲಿ 4,66,134 ರೂ. ಗಳ ನಷ್ಟವುಂಟಾಯಿತು. ಈ ನಷ್ಟದಲ್ಲಿ ಬ್ಲಾಸ್ಟ್ ಫರ್ನೆಸ್ಸ್ ಕೆಟ್ಟುಹೋಗಿ ಕೆಲಸಗಳು ನಿಂತುಹೋಗಿದ್ದಾಗ ಸಿಬ್ಬಂದಿಗಾಗಿ ಸುಮ್ಮನೆ ವೆಚ್ಚಮಾಡಬೇಕಾಗಿ ಬಂದ 1,29,971 ರೂ ಗಳು ಸೇರಿರುತ್ತವೆ. ಕಬ್ಬಿಣವನ್ನು ತಯಾರ್ಮಾಡಲು ತಗಲುವ ಖರ್ಚಿಗಿಂತಲೂ ಕಬ್ಬಿಣದ ಮಾರಾಟದ ಧಾರಣೆಯು ಬಹುಕಡಮೆಯಾಗಿ ಅಸಾಧಾರಣವಾದ ರೀತಿಯಲ್ಲಿ ತಗ್ಗಿದುದೇ, ಈ ನಷ್ಟಕ್ಕೆ ಮುಖ್ಯಕಾರಣವಾಗಿದೆ. ಕಬ್ಬಿಣದ ಉತ್ಪತ್ತಿಯು ದಿನೇದಿನೇ ಹೆಚ್ಚಿದುದೂ, ಕಬ್ಬಿಣದ ತಯಾರಿಗೆ ಮುಟ್ಟುವ ಖರ್ಚು ದಿನಕ್ರಮೇಣ ಕಡಮೆಯಾದುದೂ ಸಹ, ಪ್ರಸಕ್ತವರ್ಷದಲ್ಲಿ ನಡೆದ ಕೆಲಸದ ಫಲಿತಾಂಶಗಳಾಗಿ ಕಂಡುಬಂದುವು.

ಕೀಲೆಣ್ಣೆಯನ್ನು ಭಟ್ಟಿ ಇಳಿಸುವ ಯಂತ್ರವನ್ನೂ, ಮತ್ತು ಮಿಥೈಲ್ ಆಲ್ಕೋಹಾಲನ್ನು ಶುದ್ಧಿಮಾಡುವುದಕ್ಕಾಗಿ ಯಂತ್ರಸಾಮಗ್ರಿಗಳನ್ನೂ, ಸ್ಥಾಪಿಸಲು ಸರ್ಕಾರದವರು ಮಂಜೂರಾತಿಯನ್ನು ಕೊಟ್ಟಿರುತ್ತಾರೆ. ಸದರಿ ಯಂತ್ರಸಾಮಗ್ರಿಗಳನ್ನು ಅಮೇರಿಕಾ ದೇಶದಿಂದ ತರಿಸುವುದಕ್ಕೆ ಏರ್ಪಾಡುಮಾಡಿದೆ. ಮುಂದಣ ಜೂನ್ ತಿಂಗಳ ಅಖೈರಿನೊಳಗಾಗಿಯೇ ಸದರಿ ಯಂತ್ರಗಳಿಂದ ಕೆಲಸವು ಆರಂಭಿಸಲಾಗುವುದೆಂದು ನಿರೀಕ್ಷಿಸಿದೆ. ಎರಕದ ಸಾಮಾನುಗಳನ್ನು, ಅದರಲ್ಲಿಯೂ ವಿಶೇಷವಾಗಿ, ದಕ್ಷಿಣ ಇಂಡಿಯಾ ದೇಶದಲ್ಲಿ ಗಿರಾಕಿ ಸಿಕ್ಕುವ ಎರಕದ ಕಬ್ಬಿಣದ ಕೊಳವೆಗಳನ್ನು ತಯಾರ್ಮಾಡುವುದಕ್ಕಾಗಿ 3 ಲಕ್ಷ ರೂ. ಗಳ ಅಂದಾಜು ಖರ್ಚಿನಲ್ಲಿ ಎರಕದ ಕಾರ್ಖಾನೆಯನ್ನು ಅಭಿವೃದ್ಧಿಪಡಿಸಬೇಕೆಂದು ತೀರ್ಮಾನಿಸಿದೆ. ಈ ಕಾರ್ಖಾನೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಒಂದು ಕಾರ್ಯಕ್ರಮವನ್ನು ರಚಿಸಲಾಗಿದೆ. ಅದು ಈಗ [illegible] ಪರಿಶೀಲನೆಯಲ್ಲಿದೆ.

ನಿರಂತರವೂ ಗಮನದಲ್ಲಿಟ್ಟುಕೊಂಡಿರುವ ವಿಶೇಷವಿಚಾರಗಳು.

ಚಾಲ್ತಿ ವರುಷದೊಡನೆ ಮುಗಿಯುವ ಮೂರು ವರುಷಗಳ ಅಖೈರಿನಲ್ಲಿ ಸ್ಥಿತಿಗತಿಗಳು ಹೇಗಿರುವುವೆಂಬುದನ್ನು ಈಗ ನಾವು ಸಂಗ್ರಹಿಸಿ ತಿಳಿಸುತ್ತೇವೆ. ಹುಟ್ಟುವಳಿಯ ಲೆಕ್ಕವು ಒಟ್ಟಿನಲ್ಲಿ ಪೂರ್ತಿಯಾಗಿ ಸಮತೂಕಕ್ಕೆ ಬಂದಿರುತ್ತದೆ; ಸಾಮಾನ್ಯಾಡಳಿತದ ಆಯವ್ಯಯಗಳ ಬಾಬಿನಲ್ಲಿಯೂ, ಲಾಭಕರವಾದ ಕಾಮಗಾರಿಗಳ ಆಯವ್ಯಯಗಳ ಬಾಬಿನಲ್ಲಿಯೂ, ನಮ್ಮ ನಿರೀಕ್ಷಣೆಗಳು ಬಹುಮಟ್ಟಿಗೆ ನೆರವೇರಿರುತ್ತವೆ; ನಾವು ಅನೇಕವೇಳೆ ಅಂಗೀಕಾರಮಾಡಿಕೊಂಡಿರುವಂತೆ [illegible] ಹಣವು ಕಡಮೆಯಾಗುವುದಾದರೆ, ಆಗ್ಗೆ ಸಾಮಾನ್ಯಾಡಳಿತದ ಬಾಬಿನ ಆಯವ್ಯಯಗಳು ಸಮತೂಕಕ್ಕೆ ಬಂದು ಸದರಿ ಬಾಬಿನ ಹುಟ್ಟುವಳಿಯಿಂದಲೇ ಅದರ ವೆಚ್ಚವು ಕಳೆಯುವಂತಾಗುವುದೆಂದು ಭರವಸೆಯಿಡಬಹುದಾಗಿದೆ. ಲಾಭಕರವಾದ ಕಾಮಗಾರಿಗಳ ಬಾಬಿನ ಆಯವ್ಯಯಗಳ ವಿಚಾರದಲ್ಲಿ ಹಿಂದೆ ಆದಾಯಕ್ಕಿಂತಲೂ ವೆಚ್ಚವು 8 ಲಕ್ಷ ರೂ. ಹೆಚ್ಚಾಗುತ್ತಿದ್ದುದನ್ನು ತಪ್ಪಿಸಿ, ಈಗ ಸದರಿ ಬಾಬಿನ ಆಯವ್ಯಯವನ್ನು, ವೆಚ್ಚವು ಕಳೆದು 7 ಲಕ್ಷ ರೂ. ಮಿಗುತಾಯವಾಗುವ ಸ್ಥಿತಿಗೆ ತರಲಾಗಿದೆ. ಸಾಲೀಯಾನಾ ಹುಟ್ಟುವಳಿಯಿಂದ ಪ್ರತಿವರ್ಷವೂ ಪ್ರತ್ಯೇಕವಾಗಿ ತೆಗೆದು ಲೋನ್ ಸಿಂಕಿಂಗ್ ಫಂಡುಗಳಿಗೆ ಜಮೆ ಕಟ್ಟುತ್ತಿರುವ ಮೊಬಲಗು ಅದರಮೇಲಿನ ಬಡ್ಡಿಯೊಂದಿಗೆ ಚಾಲ್ತಿ ಸಾಲಿನ ಅಖೈರಿಗೆ ಒಟ್ಟು 92 ಲಕ್ಷ ರೂ. ಬರುವುದು. ಈ ಮೊಬಲಗಿಗೆ ಚಕ್ರಬಡ್ಡಿಯೂ ಸೇರಿದರೆ 350 ಲಕ್ಷ ರೂ. ಸಾಲದ ಪೈಕಿ ಮೂರರಲ್ಲಿ ಒಂದು ಭಾಗಕ್ಕಿಂತಲೂ ಹೆಚ್ಚಾಗಿ ಸಾಲವನ್ನು ತೀರಿಸಲು ತಕ್ಕಷ್ಟು ಹಣವು ಒದಗಿಸಲ್ಪಟ್ಟದೆಯೆಂದು ಹೇಳಬಹುದಾಗಿದೆ.

ಲಾಭಕರವಾದ ಎಲ್ಲಾ ಕಾಮಗಾರಿಗಳ ಹುಟ್ಟುವಳಿಯ, ಆಡಳಿತಗಳನ್ನೇ ಒಂದು ಬಾಬಾಗಿ ಪರಿಗಣಿಸಿ ಅವುಗಳಿಗೆ ಒದಗಿಸಿರುವ ಮೂಲಧನದಮೇಲಿನ ಬಡ್ಡಿಗೂ ಮತ್ತು ಸಿಂಕಿಂಗ್ ಫಂಡಿಗೂ ಕೊಡಬೇಕಾದ ಮೊಬಲಗನ್ನು ಸದರಿ ಬಾಬಿನಿಂದಲೇ ಸಂದಾಯಮಾಡತಕ್ಕುದೆಂದು ವಿಧಾಯಕ ಮಾಡಬೇಕೆಂಬುದು ನಮ್ಮ ಉದ್ದೇಶವಾಗಿರುತ್ತದೆ. ಮೇಲ್ಕಂಡ ಮೇರೆ ಆಯವ್ಯಯಗಳನ್ನು ಪ್ರತ್ಯೇಕಿಸುವ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ಅನುಸರಿಸಬೇಕೆಂದಿರುವ ಕಾರ್ಯಕ್ರಮಕ್ಕಿಂತಲೂ ನಾವು ಸದರೀ ವಿಚಾರದಲ್ಲಿ ಅನುಸರಿಸಬೇಕೆಂದಿರುವುದರಲ್ಲಿ ವಿಶೇಷಾಂಶ [illegible]; ಎಂದರೆ, ಲಾಭಕರವಾದ ಕಾಮಗಾರಿಗಳ ಆಯವ್ಯಯಗಳ ಒಟ್ಟು ಬಾಬನ್ನೇ ಸಾಮಾನ್ಯಾಡಳಿತದ ಆಯವ್ಯಯಗಳ ಬಾಬಿನಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿ, ಸ್ವತಂತ್ರವಾಗಿಡಬೇಕೆಂಬುದೇ ನಮ್ಮ ಉದ್ದೇಶವಾಗಿರುತ್ತದೆ; ಇಲ್ಲಿನ ಕಾರ್ಯಕ್ರಮದಲ್ಲಿ ಒಂದು ಬಾಬಿನಿಂದ ಮತ್ತೊಂದು ಬಾಬಿಗೆ ಮೊಬಲಗನ್ನು ಪಾವತಿಮಾಡಬೇಕೆಂಬ ನಿಯಮವೇ ಇರುವುದಿಲ್ಲ. ಅಲ್ಲದೆ ಲಾಭಕರವಾದ ಕಾಮಗಾರಿಗಳ ಬಾಬಿನಲ್ಲಿ ವೆಚ್ಚವು ಕಳೆದು ಮಿಗುತಾಯವಾಗುವ ಒಟ್ಟು ಮೊಬಲಗನ್ನು ಹಾಲಿ ಇರುವ ಕಾಮಗಾರಿಗಳ ಮೇಲ್ಪಾಡಿಗೂ, ಮತ್ತು ಲಾಭಕರವಾದ ಹೊಸ ಕಾಮಗಾರಿಗಳಿಗೆ ಹಣವನ್ನು ಒದಗಿಸುವುದಕ್ಕೂ, ವಿನಿಯೋಗಿಸಬೇಕೆಂಬುದೇ ನಮ್ಮ ಉದ್ದೇಶವಾಗಿರುತ್ತದೆ.

ಅತ್ಯವಶ್ಯವಾಗಿ ನೆರವೇರಿಸಬೇಕಾದ "ರಿನ್ಯೂಯಲ್ ಕಾಮಗಾರಿಗಳನ್ನು" ಎಂದರೆ, ಶಿಥಿಲವಾಗಿದ್ದ ಹಳೆಯ ಕಂಬಿಗಳೇ ಮುಂತಾದುವುಗಳಿಗೆ ಬದಲಾಗಿ ಹೊಸ ಲೈನುಗಳನ್ನು ಒದಗಿಸುವ ಕೆಲಸವನ್ನು ನೆರವೇರಿಸುವುದು ಅಸಾಧ್ಯವಾಗಿ ಬಹುಕಾಲದವರೆಗೂ ನಿಂತು ಹೋದುದೇ ಅದರ ಪರಿಣಾಮ ಫಲವಾಯಿತು. ರೈಲ್ವೆಗಳಿಗೆ ಚಾಲ್ತಿ ವರುಷದ ಲಾಗಾಯಿತು ಒಂದು ಡಿಪ್ರೀಸಿಯೇಷನ್ ಫಂಡನ್ನು ಏರ್ಪಡಿಸುವುದರ ಮೂಲಕ ಈ ನ್ಯೂನತೆಯನ್ನು ಪರಿಹರಿಸಲಾಗಿದೆ. ಹೀಗೆ ಮಾಡಿರುವುದು, ರೈಲ್ವೆಬಾಬಿನ ಆಯವ್ಯಯಗಳನ್ನು ಸಾಮಾನ್ಯಾಡಳಿತದ ಬಾಬಿನ ಆಯವ್ಯಯಗಳಿಂದ ಪ್ರತ್ಯೇಕಿಸುವುದಕ್ಕಾಗಿ ನಡೆಸಬೇಕಾದ ಮುಖ್ಯ ಕಾರ್ಯಗಳಲ್ಲೊಂದಾಗಿರುತ್ತದೆ.

ಇದುವರೆಗೂ ಹುಟ್ಟುವಳಿಯ ಬಾಬಿನ ಆಡಳಿತವನ್ನು ಕುರಿತು ಸಾಮಾನ್ಯವಾಗಿ ಪ್ರಸ್ತಾಪಿಸಿದ್ದಾಯಿತು. ಈಗ ಮೂಲಧನದ ಕಾಮಗಾರಿಗಳ ಆಯವ್ಯಯದ ವಿಚಾರವನ್ನು ಕುರಿತು ಕೆಲವು ಸಂಗತಿಗಳನ್ನು ತಿಳಿಸುತ್ತೇವೆ. ದೇಶದ ಸಾಂಪತ್ತಿಕ ಸಾಧನಗಳ ಅಭಿವೃದ್ಧಿಗೆ ಮೂಲಧನದ ಕಾಮಗಾರಿಗಳನ್ನು ನಡೆಸಬೇಕಾದುದು ಅತ್ಯಾವಶ್ಯಕ; ಅಂಥಾ ಕಾಮಗಾರಿಗಳಿಗಾಗಿ ನಿರಂತರವೂ ಹಣವನ್ನು ಒದಗಿಸುತ್ತಲೇ ಇರಬೇಕಾಗುವುದು. ರೈಲು ಮಾರ್ಗಗಳು, ನೀರಾವರಿ ಕಾಮಗಾರಿಗಳು, ವಿದ್ಯುಚ್ಛಕ್ತಿಯ ಏರ್ಪಾಡುಗಳು, ಕೈಗಾರಿಕೆಯ ಕೆಲಸಗಳು ಇವೇ ಮೊದಲಾದ ಅನೇಕ ಬಂಡವಾಳದ ಕಾಮಗಾರಿಗಳು ನಮ್ಮಲ್ಲಿ ಈಗ ನಡೆಯುತ್ತಾ ಇವೆ. ಅವುಗಳಲ್ಲಿ ಕೆಲವು ಬಾಬುಗಳಿಂದ ಇನ್ನೂ ಆದಾಯವು ಬರುವುದಕ್ಕೆ ಪ್ರಾರಂಭವಾಗಿಲ್ಲದೇ ಇದ್ದರೂ ಪ್ರತಿವರ್ಷವೂ ಅವುಗಳಿಗಾಗಿ ಬಂಡವಾಳವನ್ನು ಹಾಕುತ್ತಲೇ ಇರಬೇಕಾಗಿದೆ. ಹಣಕಾಸಿಗೆ ಮುಗ್ಗಟ್ಟಾಗಿರುವುದರಿಂದ ಹೊಸದಾಗಿ ರೈಲುಹಾಕಿಸುವ ಕೆಲಸವನ್ನು ಇನ್ನೂ ಸ್ವಲ್ಪ ಕಾಲ ನಿಲ್ಲಿಸಿರಬೇಕಾಗಿರುತ್ತದೆ. ಸಂಸ್ಥಾನದಲ್ಲಿ ಇನ್ನೂ ಅನೇಕ ಸ್ಥಳಗಳಿಗೆ ರೈಲುಹಾಕಿಸುವುದು ಆವಶ್ಯಕ. ಅವುಗಳ ಪೈಕಿ ಲಾಭದಾಯಕವಾಗಿ ಪರಿಣಮಿಸಬಹುದಾದ ಸ್ಥಳಗಳಲ್ಲಿ ಕಾಮಗಾರಿಯನ್ನು ಪ್ರಾರಂಭಮಾಡುವುದು ಯುಕ್ತವಾಗಿದೆ. ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಬೇಕೆಂಬುದಾಗಿ ದರಖಾಸ್ತುಗಳು ದಿನೇದಿನೇ ಹೆಚ್ಚು ಹೆಚ್ಚಾಗಿ ಬರುತ್ತಾ ಇವೆ. ಹೀಗೆ ವಿದ್ಯುಚ್ಛಕ್ತಿಯು ಬೇಕಾಗಿರುವ ಕಡೆಗಳಿಗೆಲ್ಲಾ ಅದನ್ನು ಒದಗಿಸಲು ಅನುಕೂಲಿಸುವಂತೆ ಈಗಿರುವುದಕ್ಕಿಂತಲೂ ಹೆಚ್ಚಾಗಿ ಅದನ್ನು ಉತ್ಪತ್ತಿಮಾಡಬೇಕಾದುದು ಅವಶ್ಯವಾಗಿರುತ್ತದೆ. ಇದರಿಂದ ಸಂಸ್ಥಾನದ ಹುಟ್ಟುವಳಿಯು ಹೆಚ್ಚುತ್ತದೆ; ಅಲ್ಲದೆ ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಯುವ ಕಾರ್ಯಕಲಾಪಗಳಿಗೆ ಹೆಚ್ಚು ಪ್ರೋತ್ಸಾಹವನ್ನುಂಟುಮಾಡಿದಂತಾಗುತ್ತದೆ. ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಈಗ ಎರಡು ಏರ್ಪಾಡುಗಳು ಪರ್ಯಾಲೋಚನೆಯಲ್ಲಿವೆ:—

(1) ಕೃಷ್ಣರಾಜಸಾಗರದ ಅಣೆಕಟ್ಟಿನ ಬಳಿಯಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವುದು, (2) ಮೇಕೆದಾಟಿನ ಕೆಳಭಾಗದಲ್ಲಿ ಕಾವೇರಿನದಿಯಲ್ಲಿ ಮತ್ತೊಂದುಕಡೆ ವಿದ್ಯುಚ್ಛಕ್ತಿಯನ್ನುತ್ಪತ್ತಿಮಾಡುವುದು. ಮದ್ರಾಸ್ ಸರ್ಕಾರದವರೊಡನೆ ಈಚೆಗೆ ಮಾಡಿಕೊಂಡ ಒಪ್ಪಂದದ ಮೇರೆಗೆ, ಮೇಲುಮಟ್ಟದ ನಾಲೆಯ ಕೆಳಗೆ 1,25,000 ಎಕರೆಗಳ ಜತೆಗೆ ಇನ್ನೂ ಹೆಚ್ಚಾಗಿ 1,10,000 ಎಕರೆಗಳಿಗೆ ನೀರು ಕೊಡುವುದಕ್ಕೆ ತಕ್ಕ ಏರ್ಪಾಡು ಮಾಡಲು ಸಾಧ್ಯವಾಗುತ್ತದೆ. ಬಹಳವಾಗಿ ಮೂಲಧನವನ್ನು ಹಾಕಿ ಕಟ್ಟಿಸಿರುವ ಈ ಅಣೆಕಟ್ಟಿನಲ್ಲಿ ಶೇಖರಿಸಿರುವ ಅತ್ಯಧಿಕ ಪರಿಮಾಣದ ನೀರನ್ನು ಜಮೀನು ಸಾಗುವಳಿ ಬಗ್ಗೆ ಉಪಯೋಗಿಸಬೇಕು. ನೀರು ಯಾವಯಾವ ಪ್ರದೇಶಕ್ಕೆ ಬೇಕೋ, ಅಯಾ ಸ್ಥಳಗಳಿಗೆಲ್ಲಾ ಅದನ್ನು ಸಾಗಿಸಲು ನಾಲೆಗಳನ್ನು ತೋಡಿಸುವ ವಿಷಯವನ್ನು ಶೀಘ್ರದಲ್ಲಿಯೇ ವ್ಯವಸ್ಥೆ ಮಾಡಬೇಕಾಗಿದೆ. ಇದನ್ನೆಲ್ಲಾ ನೋಡಿದರೆ ಮೊದಲು ಆರಂಭಿಸಲ್ಪಟ್ಟು ಈಗ ನಿರ್ವಾಹವಿಲ್ಲದೆ ನಡೆಸಬೇಕಾಗಿರುವ ಕಾಮಗಾರಿಗಳಿಗೋಸ್ಕರವೂ, ಮತ್ತು ಲಾಭಕರವಾಗಿ ಪರಿಣಮಿಸುವುವೆಂಬ ಅಥವಾ ಪ್ರಜೆಗಳಿಗೆ ಪ್ರಯೋಜನವನ್ನುಂಟುಮಾಡುವುವೆಂಬ ಕಾರಣದಿಂದ ನೆರವೇರಿಸತಕ್ಕುದು ಯುಕ್ತವಾಗಿರುವ ಕಾಮಗಾರಿಗಳಿಗೋಸ್ಕರವೂ, ಬಹಳವಾಗಿ ಬಂಡವಾಳವನ್ನೊದಗಿಸಿ ಕೆಲಸ ಮಾಡಬೇಕಾಗಿದೆಯೆಂಬುದು ವ್ಯಕ್ತವಾಗುತ್ತದೆ. ವೆಚ್ಚಮಾಡಿದ ಹಣಕ್ಕೆ ಸಂಪೂರ್ಣವಾಗಿ ಪ್ರತಿಫಲವನ್ನು ಕೊಡತಕ್ಕ ಕಾಮಗಾರಿಗಳಿಗಾಗಿ ಸಾಲಮಾಡಿ ಹಣ ಒದಗಿಸುವುದೇನೋ ನ್ಯಾಯಸಮ್ಮತವಾಗಿರಬಹುದು. ಆದರೆ, ದೇಶಾಭ್ಯುದಯಕ್ಕೆ ಅತ್ಯವಶ್ಯವಾಗಿದ್ದಾಗ್ಯೂ ಬಂಡವಾಳದಮೇಲೆ ಪೂರಾ ಬಡ್ಡಿಯನ್ನು ಕೊಡುವುದಕ್ಕೂ ಸಹ ತಕ್ಕಷ್ಟು ಉತ್ಪತ್ತಿಯೂ ಬರಲಾರದಂಥಾ ನೀರಾವರಿಕಾಮಗಾರಿಗಳಿಗೆ ಸಾಲಮಾಡಿ ಬಂಡವಾಳವನ್ನು ಒದಗಿಸುವುದು ಅನುಚಿತ; ಏನಿದ್ದರೂ, ಅದನ್ನು ಇತರ ವಿಧದಲ್ಲಿ ಒದಗಿಸುವ ಮಾರ್ಗವನ್ನು ಹುಡುಕುವುದೇ ಯುಕ್ತವಾಗಿರುತ್ತದೆ. ಶೀಘ್ರದಲ್ಲಿಯೇ ನಡೆಸಬೇಕಾಗಿರುವ ಬಂಡವಾಳದ ಕಾಮಗಾರಿಗಳಿಗಾಗಿ ಹಣವನ್ನು ಒದಗಿಸಬೇಕಾದ ವಿಷಯವನ್ನು ಜಾಗ್ರತೆಯಾಗಿಯೂ, ಮತ್ತು ಪ್ರಬಲವಾಗಿಯೂ ಯೋಚನೆ ಮಾಡಬೇಕಾಗಿದೆ. ಈ ಅಂಶವನ್ನು ಸರ್ಕಾರದವರು ಅತ್ಯಾಸಕ್ತಿಯಿಂದ ಪರ್ಯಾಲೋಚನೆಯಲ್ಲಿಟ್ಟುಕೊಂಡಿರುತ್ತಾರೆ.

ಕಾವೇರಿನದಿಯ ನೀರಿಗೆ ಸಂಬಂಧಪಟ್ಟ ಪಂಚಾಯಿತಿಯ ವಿಚಾರ.

1924ನೇ ಇಸವಿ ಫೆಬ್ರವರಿ 12ನೇ ತಾರೀಖಿನ ದಿನ ಬೆಂಗಳೂರಿನಲ್ಲಿ ಇಂಜನಿಯರಿಂಗ್ ಆಫೀಸರುಗಳು ಅಖೈರಾಗಿ ಮತ್ತೊಂದುಸಾರಿ ಸಭೆ ಸೇರತಕ್ಕುದೆಂದು ಒಪ್ಪಂದವಾಯಿತು. ಮೂರು ದಿವಸಗಳವರೆಗೆ ಆಮೂಲಾಗ್ರವಾಗಿ ಚರ್ಚೆಯು ನಡೆದ ನಂತರ, ಉಭಯ ಸರ್ಕಾರಗಳ ಇಂಜನಿಯರಿಂಗ್ ಆಫೀಸರುಗಳೂ ಆ ತಾರೀಖಿನವರೆಗೆ ಒಪ್ಪಿ ರುಜುಮಾಡಿದ್ದ ಎಲ್ಲಾ ಚರ್ಚಾಂಶಗಳ ತೀರ್ಮಾನಗಳನ್ನೂ ಒಳಗೊಂಡ ಒಂದು ಸಮಗ್ರವಾದ ಒಪ್ಪಂದವು ಬರೆಯಲ್ಪಟ್ಟಿತು. ಇದನ್ನು ಉಭಯ ಸರ್ಕಾರದವರೂ ಅಂಗೀಕರಿಸಿದರು; ಮೈಸೂರು ಸರ್ಕಾರದವರ ಪರವಾಗಿ ಅದಕ್ಕೆ ರುಜು ಮಾಡುವುದಕ್ಕಾಗಿ ಮದ್ರಾಸಿಗೆ ಹೋಗಬೇಕೆಂದು ಶ್ರೀಮನ್ಮಹಾರಾಜರವರು ನಮಗೆ ಆಜ್ಞಾಪಿಸಿದರು. ಈ ಒಪ್ಪಂದವು ಇಂಡಿಯಾ ಸ್ಟೇಟ್ ಸೆಕ್ರಿಟರಿಯವರಿಂದ ಮಂಜೂರಾಗಿ ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಟ್ಟಿರುವುದರಿಂದ, ಈ ವಿಷಯದಲ್ಲಿ ಮತ್ತೇನನ್ನೂ ಹೇಳಬೇಕಾದ ಪ್ರಕೃತವಿರುವುದಿಲ್ಲ. ಈ ಹದಿನಾಲ್ಕು ವರುಷಗಳಿಂದಲೂ ನಡೆಯುತ್ತಿದ್ದ ವಿವಾದವು ಈ ಒಪ್ಪಂದದಿಂದ ತೀರ್ಮಾನಕ್ಕೆ ಬಂದು ಕೊನೆಮುಟ್ಟಿತು; ಈ ತೀರ್ಮಾನವು ನಡೆದುದು, ಉಭಯ ಸರ್ಕಾರದವರೂ ತಮ್ಮತಮ್ಮ ಹಿತಸಾಧನೆಯ ಅಂಶಗಳನ್ನೂ, ತಮ್ಮ ಹಕ್ಕು ಬಾಧ್ಯತೆಗಳನ್ನೂ ಉಳಿಸಿ ಕಾಪಾಡಿಕೊಳ್ಳುವುದರಲ್ಲಿ ಪರಸ್ಪರವಾಗಿ ಆದರ ಪುರಸ್ಸರವಾದ ಸಹಕಾರಭಾವದಿಂದ ಕೂಡಿ ವರ್ತಿಸುವರೆಂಬುದಕ್ಕೆ ನಿದರ್ಶಕವಾಗಿರುತ್ತದೆ; ಈ ತೀರ್ಮಾನದಲ್ಲಿ ವ್ಯವಸ್ಥೆಯಾದ ಹಕ್ಕು ಬಾಧ್ಯತೆಗಳೇ ಮುಂತಾದ ವಿಚಾರಗಳ ದೆಸೆಯಿಂದ ಶ್ರೀಮನ್ಮಹಾರಾಜರವರ ಪ್ರಜೆಗಳಿಗೂ, ಮದರಾಸು ಸರ್ಕಾರಕ್ಕೆ ಸೇರಿದ ಪ್ರಜೆಗಳಿಗೂ, ಉಭಯತ್ರರಿಗೂ ಅಭ್ಯುದಯವೂ, ಮೇಲ್ಮೆಯೂ, ಉಂಟಾಗುವುದರಲ್ಲಿ ಲೇಶವೂ ಸಂಶಯವಿಲ್ಲ.

ಮಲೆನಾಡು ಅಭಿವೃದ್ಧಿಯ ಏರ್ಪಾಡು.

ಕಳೆದ ಅಕ್ಟೋಬರಿನಲ್ಲಿ ನಾವು ಮಾಡಿದ ಭಾಷಣದಲ್ಲಿ ವಾಗ್ದಾನಮಾಡಿದ್ದ ಪ್ರಕಾರ, ಮಲೆನಾಡಿನ ಅಭಿವೃದ್ಧಿಯ ವಿಷಯವನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಿ ನೋಡಿ, ಸದರಿ ವಿಚಾರದಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮವನ್ನು ಸೂಚಿಸಿ, ಈಚೆಗೆ ಸ್ಪಷ್ಟವಾಗಿ ಒಂದು ಸರ್ಕಾರಿ ಹುಕುಮನ್ನು ಸಾದರ್ಮಾಡಲಾಗಿದೆ. ಈಚಿನ ಸಾಲುಗಳಲ್ಲಿ ಹಣಕಾಸಿನ ಮುಗ್ಗಟ್ಟಿನ ದೆಸೆಯಿಂದ ಕಡಮೆಯಾಗಿ ಗ್ರಾಂಟು ಮೊಬಲಗನ್ನು ಕೊಟ್ಟುಕೊಂಡೇ ಈ ಕೆಲಸವನ್ನು ನೆರವೇರಿಸಬೇಕಾಗಿದ್ದಿತು. ಆದರೆ, ಚಾಲ್ತಿ ಸಾಲಿನಲ್ಲಿ ಈ ಏರ್ಪಾಡಿಗಾಗಿ ಕೊಡತಕ್ಕ ಗ್ರಾಂಟನ್ನು 45,000 ರೂ. ಗಳಿಂದ, 1,03,000 ರೂ. ಗಳಿಗೆ ಹೆಚ್ಚಿಸಲಾಗಿದೆ. ಪಬ್ಲಿಕ್‌ವರ್ಕ್ಸ್ ಸರ್ವೆಯನ್ನು ಮಾಡುವಂತ ಈ ಹುಕುಮಿನಲ್ಲಿ ವಿಧಾಯಕಮಾಡಿರುವುದರ ಜತೆಗೆ, ರಸ್ತೆ ವಗೈರೆಗಳನ್ನು ಉತ್ತಮಪಡಿಸುವುದು, ಕೈಗಾರಿಕೆ ಪಾಠಶಾಲೆಗಳಲ್ಲಿ ಕಸಬುದಾರಿ ತರಗತಿಗಳನ್ನು ಸ್ಥಾಪಿಸುವುದು, ವಿಶೇಷ ಸ್ವಭಾವದ ವಿದ್ಯಾರ್ಥಿವೇತನಗಳನ್ನು ಕೊಡುವುದು, ಮತ್ತು ಹೈಸ್ಕೂಲು ವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸುವುದು, ಇವುಗಳಿಗೂ ಅವಕಾಶವನ್ನು ಕಲ್ಪಿಸಲಾಗಿದೆ, ಪ್ರತಿಯೊಂದು ಮಲೆನಾಡು ಡಿಸ್ಟ್ರಿಕ್ಟಿನಲ್ಲಿಯೂ ಆವಶ್ಯಕವೆಂದು ಒಂದು ಮಾದರಿ ತಾಲ್ಲೂಕಿನ ಸಾಂಪತ್ತಿಕಸ್ಥಿತಿಗಳ ಪರಿಶೀಲನೆಯನ್ನಾದರೂ ಕೂಲಂಕಷವಾಗಿ ನೆರವೇರಿಸಬೇಕೆಂದೂ ವಿಧಾಯಕ ಮಾಡಿದೆ; ಈ ಕೆಲಸಕ್ಕಾಗಿ ಪ್ರತ್ಯೇಕವಾಗಿ ಒಬ್ಬ ಆಫೀಸರನ್ನು ನೇಮಕ ಮಾಡಲಾಗುವುದೆಂದೂ ಸಹ ಸದರಿ ಹುಕುಮಿನಲ್ಲಿ ವಿಧಾಯಕ ಮಾಡಲಾಗಿದೆ.

ರಿಟ್ರೆಂಚ್‌ಮೆಂಟ್.

ಈಗ ದೊರೆತಿರುವ ಲೆಕ್ಕಗಳಿಂದ, ಹಿಂದುಳಿದ ಸಂಗತಿಗಳಿಗೆ ಸಂಬಂಧಪಟ್ಟ [illegible] ಹೊಸದಾಗಿ [illegible] ಸೇರಿಸಿಕೊಳ್ಳುವ ವಿಚಾರದಲ್ಲಿ [illegible] ಗೊತ್ತಾಗುತ್ತದೆ.

ಪಾಠಶಾಲೆಯಲ್ಲಿ ನಡೆದ ಮೀಟಿಂಗು.

1924 ನೇ ಇಸವಿ ಅಕ್ಟೋಬರ್ ತಾ|| 14 ರಲ್ಲು ಮೈಸೂರಿನಲ್ಲಿರುವ ಶ್ರೀ ಶಂಕರವಿಲಾಸಪಾಠಶಾಲೆಯಲ್ಲಿ ಮೈಸೂರು ವೀರಶೈವ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು ಮತ್ತು ಇತರ ವೀರಶೈವ ಮಹಾಜನಗಳು ಕಲೆ ಸೇರಿ ನಡೆಸಿದ ನಡವಳಿಕೆಗಳು.

ಮೀಟಿಂಗಿನಲ್ಲಿ ಹಾಜರಿದ್ದವರ ಹೆಸರುಗಳು.

ಮ|| ಗಳಾದ (1) ಮೈಸೂರಿನ ಭಕ್ತಿಸೋಮಶೇಖರಪ್ಪನವರು, (2) ಹರಿಹರದ ರಾಚಪ್ಪನವರು, ರೆಪ್ರಜೆಂಟೇಟೀವ್ ಮೆಂಬರ್ (3) ದಾವಣಗೆರೆ ತಾ|| ಕಂದಗಲ್ಲಿನ ಕಣಕಟ್ಟೆ ಚನ್ನಬಸಪ್ಪನವರು, ರೆ|| ಮೆಂಬರ್ (4) ಚಿತ್ರದುರ್ಗದ ಸಾಹುಕಾರ್ ವೀರಭದ್ರಪ್ಪನವರು, ರೆ|| ಮೆಂಬರ್ (5) ದಾವಣಗೆರೆಯ ಉರುಕೊಂಡೆ ಚನ್ನಬಸಪ್ಪನವರು, ರೆ|| ಮೆಂಬರ್ (6) ಚಿತ್ರದುರ್ಗದ ಸಾಟಿಹಾಲಪ್ಪನವರು, ರೆ|| ಮೆಂಬರ್ (7) ಬೀರೂರಿನ ಎಚ್. ಎಂ. ಶಿವಲಿಂಗಪ್ಪಯ್ಯನವರು, ರೆ|| ಮೆಂಬರ್ (8) ರಾಜಶೇಖರಯ್ಯ, ಮೈಸೂರು ಶಂಕರವಿಲಾಸಪಾಠಶಾಲೆಯ ವಿದ್ಯಾರ್ಥಿ (9) ಸಿದ್ಧಮಲ್ಲಸ್ವಾಮಿ, ಶ|| ಪಾ|| ವಿದ್ಯಾರ್ಥಿ (10) ಗುರುಶಾಂತಸ್ವಾಮಿ, ಶ|| ಪಾ|| ವಿದ್ಯಾರ್ಥಿ (11) ಗುರುನಾಥಯ್ಯ, ಶ|| ಪಾ|| ವಿದ್ಯಾರ್ಥಿ (12) ಸಿದ್ಧಲಿಂಗಸ್ವಾಮಿ, ಶ|| ಪಾ|| ವಿದ್ಯಾರ್ಥಿ (13) ಬಸವಲಿಂಗಸ್ವಾಮಿ, ಶ|| ಪಾ|| ವಿದ್ಯಾರ್ಥಿ (14) ರುದ್ರಯ್ಯ, ಶ|| ಪಾ|| ವಿದ್ಯಾರ್ಥಿ (15) ಆಲೂರಿನ ಎ. ಎಸ್. ನಂಜುಂಡಪ್ಪನವರು, ರೆ|| ಮೆಂಬರ್ (16) ಹಾಸನದ ಕೆ. ಮಹಾದೇವಪ್ಪನವರು, ರೆ|| ಮೆಂಬರ್ (17) ಬೆಂಗಳೂರಿನ ಬಿ. ರಾಚಪ್ಪನವರು, ಆನರರಿ ಮ್ಯಾಜಿಸ್ಟ್ರೇಟ್ ಮತ್ತು ಕಂಟ್ರಾಕ್ಟರ್ (18) ನರಸಿಂಹರಾಜಪುರದ ಸಾಹುಕಾರ್ ಮತ್ತು ಜಮೀನ್ದಾರ್ ಶಾಂತಪ್ಪಶೆಟ್ಟರು, (19) ಮೈಸೂರಿನ ಆಸ್ಥಾನವಿದ್ವಾನ್ ಶ್ರೀಗುರುಶಾಂತಶಾಸ್ತ್ರಿಗಳು, (20) ದಾವಣಗೆರೆಯ ತಲಿಗಮಠದ ಚಂದ್ರಶೇಖರಶಾಸ್ತ್ರಿಗಳು, (21) ಮೈಸೂರಿನ ಅಡ್ವೋಕೇಟ್ ಎಂ. ಪಿ. ಭೋಗಯ್ಯನವರು, ಬಿ.ಎ.,ಬಿ.ಎಲ್. (22) ಮೈಸೂರಿನ ರಿಟೈರ್ಡ್ ಸರ್ಜನ್ ಡಾ|| ಟಿ.ಎಸ್. ಸಿದ್ಧಪ್ಪನವರು, (23) ಶಿರಾಳಕೊಪ್ಪದ ಸಾರಂಗಿ ಸಿದ್ದಪ್ಪನವರು, ರೆ|| ಮೆಂಬರ್ (24) ಬೆಂಗಳೂರಿನ ಇನ್ಕಂಟ್ಯಾಕ್ಸ್ ಇನ್ಸ್ಪೆಕ್ಟರ್ ಜಿ.ಕೆ. ರುದ್ರಾರಾಧ್ಯರು, (25) ಅರಸೀಕೆರೆಯ ಸಾಹುಕಾರ್ ಶಿದ್ದಪ್ಪನವರು, ರೆ|| ಮೆಂಬರ್ (26) ಅರಸೀಕೆರೆಯ ಸಾಹುಕಾರ್ ಮುದ್ದುಳಿ ಸಿದ್ದಪ್ಪನವರು, ರೆ|| ಮೆಂಬರ್ (27) ಮೈಸೂರಿನ ಸಾಹುಕಾರ್ ದಾಸಪ್ಪನವರು, (28) ತುಮಕೂರಿನ ಜಿ. ರುದ್ರಪ್ಪನವರು, ಎಂ. ಎ., ಎಲ್ ಎಲ್. ಬಿ. ರೆ|| ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಮೆಂಬರ್ (29) ತಿಪಟೂರಿನ ಡಿ.ಎಸ್. ಮಲ್ಲಪ್ಪನವರು, ರೆ|| ಮತ್ತು ಲೆ|| ಮೆಂಬರ್ (30) ಕೋಲಾರದ ವಿ.ಆರ್. ಚಿಕ್ಕಚನ್ನಂಜಪ್ಪನವರು, ರೆ|| ಮೆಂಬರ್ (31) ಹೊಳಲ್ಕೆರೆಯ ನಾಡಿಗಮಲ್ಲಪ್ಪನವರು, ರೆ|| ಮೆಂಬರ್ (32) ಹಾವೇರಿ ವೀರಭದ್ರಪ್ಪನವರು ವರ್ತಕರು, (33) ದೇವನಹಳ್ಳಿ ತಾ|| ಹುಣಸನಾರನಹಳ್ಳಿ ತೋಂಟದಾರ್ಯರು ರೆ|| ಮೆಂಬರ್ (34) ಮೂಡಿಗೆರೆ ತಾ|| ಚಿನ್ನಿಗದ ಚನ್ನಗಿರಿದೇವಪ್ಪಗೌಡರು, ರೆ|| ಮೆಂಬರ್ ಮತ್ತು ಕಾಫಿಪ್ಲಾಂಟರ್ (35) ಆಲೂರ್ ರಾಮಪ್ಪಗೌಡರು, ರೆ|| ಮೆಂಬರ್ ಮತ್ತು ಕಾಫಿಪ್ಲಾಂಟರ್ (36) ಮೈಸೂರಿನ ಕೋರಿಬಸಪ್ಪಶೆಟ್ಟರು, ಮರ್ಚೆಂಟ್ (37) ಮೈಸೂರಿನ ಸೋಮಯ್ಯನವರು, ಮರ್ಚೆಂಟ್ (38) ಮೈಸೂರು ಲೈಫ್ ಇನ್ಶೂರೆನ್ಸ್ ಕಂಪೆನಿ ಮ್ಯಾನೇಜಿಂಗ್ ಡೈರೆಕ್ಟರ್ ಎಂ. ಎಲ್. ನಾಗಪ್ಪನವರು (39) ಗೌರ್ನಮೆಂಟ್ ಮಿಡ್ಲ್ ಸ್ಕೂಲ್ ಹೆಡ್ಮಾಸ್ಟರ್ ಎಂ. ಪಿ. ಲಿಂಗಪ್ಪಯ್ಯನವರು, (40) ಮೈಸೂರು ಅರಮನೆ ಮರಾಮತ್ ಇಲಾಖಾ ಅಕೌಂಟೆಂಟ್ ಚನ್ನಪ್ಪನವರು, (41) ಜಿ. ಪರಮಶಿವಯ್ಯನವರು, ಬಿ. ಎ., ಎಲ್‌ಎಲ್. ಬಿ., ರೆ|| ಮತ್ತು ಲೆ|| ಮೆಂಬರ್

ಮೈಸೂರು ವೀರಶೈವ ಅಸೋಸಿಯೇಷನ್ ಪ್ರೆಸಿಡೆಂಟರಾದ ಮ|| ಟಿ. ಎಸ್. ಸಿದ್ಧಪ್ಪನವರು ಕಳುಹಿಸಿದ್ದ ನೋಟೀಸನ್ನು ಓದಲಾಯಿತು. ಮ|| ಎಂ. ಪಿ. ಭೋಗಯ್ಯನವರು ಅಗ್ರಾಸನವನ್ನು ವಹಿಸಬೇಕೆಂದು ಮ|| ಎಂ. ಎಲ್. ನಾಗಪ್ಪನವರು ಸೂಚಿಸಿದ್ದನ್ನು ಸರ್ವರೂ ಅಂಗೀಕರಿಸಲಾಗಿ ಮ|| ಭೋಗಯ್ಯನವರು ಅಗ್ರಾಸನವನ್ನು ವಹಿಸಿದರು. ಇದೇ ತಿಂಗಳು ತಾ|| 12 ರಲ್ಲಿ ಮ|| ಕಬ್ಬಳ್ಳಿ ಚನ್ನಬಸಪ್ಪನವರ ಹಾಸ್ಟಲಿನಲ್ಲಿ ನಡೆದ ಮೀಟಿಂಗಿನ ನೋಟೀಸು ಅನೇಕ ವೀರಶೈವಜನಗಳಿಗೆ ತಲುಪದೆ ಇದ್ದುದರಿಂದ ಇತರ ವೀರಶೈವರಿಗೆ ಸಹ ಆ ಮೀಟಿಂಗಿನಲ್ಲಿ ನಡೆದ ವಿಷಯವನ್ನು ತಿಳಿಯಪಡಿಸುವದಕ್ಕಾಗಿ ಈ ದಿವಸ ಒಂದು ಮೀಟಿಂಗನ್ನು ನಡೆಸಬೇಕೆಂದು ನಿಶ್ಚೈಸಿ ಮಹಾಜನಗಳನ್ನು ಸೇರಿಸಲಾಗಿದೆ ಆದ್ದರಿಂದ ಆ ಮೀಟಿಂಗಿನಲ್ಲಿ ನಡೆದ ನಿರ್ಧಾರಗಳು ಊರ್ಜಿತವಾದವುಗಳಲ್ಲ ಎಂಬುದಾಗಿ ಸೂಚಿಸುತ್ತೇನೆ ಎಂಬ ಪ್ರಪೋಜಲನ್ನು ಡಾಕ್ಟರ್ ಸಿದ್ಧಪ್ಪನವರು ಪ್ರಪೋಜ್ ಮಾಡಿದ್ದನ್ನು ಮ|| ಎಂ. ಎಲ್. ನಾಗಪ್ಪನವರು ಸೆಕೆಂಡ್ ಮಾಡಿದರು.

ಈ ಮಧ್ಯೆ ಮೀಟಿಂಗಿಗೆ ಬಂದವರು—ಮ|| ಗಳಾದ (42) ಪರೋಗ ನಂಜಪ್ಪನವರು (43) ಎ. ಮಹಾದೇವಯ್ಯನವರು ಮೈಸೂರು (44) ಬಿ. ರಾಚಪ್ಪನವರು, ಸೆಕೆಂಡ್‌ಇಯರ್ ಬಿ.ಎ; (45) ಕೆ. ಎಸ್. ಬಸವಯ್ಯನವರು ಎ. ಡಬ್ಲ್ಯು ಕ್ಲಾಸ್ ಮಹಾರಾಜಾಕಾಲೇಜ್ ಹಾಸ್ಟಲ್ (46) ಬಿ. ಮರುಳಪ್ಪ ಸೆಕೆಂಡ್‌ಇಯರ್ ಬಿ.ಎ; ಮ|| ಕಾ|| (47) ಆರ್. ದೇವಪ್ಪ ಯು. ಡಿ. ಕ್ಲಾಸ್ ಶಾರದಾವಿಲಾಸ ಹೈಸ್ಕೂಲು (48) ಚಂದ್ರಶೇಖರಯ್ಯ, III ಫಾರಂ ಮರಿಮಲ್ಲಪ್ಪನವರ ಹೈಸ್ಕೂಲ್ (49) ಬಿ. ಬಸಪ್ಪ III ಇಯರ್ ಬಿ. ಎ. ಮ|| ಕಾಲೇಜು. ಮ|| ಶಿದ್ಧಪ್ಪನವರು ಅಂದರೆ ಮೊದಲ್ನೆಂದ ಪ್ರಪೋಜಿಷನ್ ಸೂಚಿಸಿದವರು ಮೀಟಿಂಗಿನ ಅನುಮತಿಯನ್ನು ಪಡೆದು ತಮ್ಮ ಪ್ರಪೋಜಿಷನ್ ವಾಪಸ್ ತೆಗೆದುಕೊಂಡಿರುತ್ತಾರೆ.

2ನೇ ಪ್ರಪೋಜಿಷನ್—ಬಾಳೆಹೊನ್ನೂರು ಸಂಸ್ಥಾನಪೀಠಾಧಿಕಾರಕ್ಕೆ ಚುನಾಯಿಸಲ್ಪಡುವುದಕ್ಕಾಗಿ ಇತರ ನಾಲ್ಕು ಸಿಂಹಾಸನಾಧಿಪತಿಗಳು ಅಂದರೆ ಉಜ್ಜನಿ, ಕಾಶಿ, ಪರ್ವತ, ಹಿಮವತ್ಕೇದಾರ ಈ ನಾಲ್ಕು ಪೀಠಾಧಿಕಾರಿಗಳು ಚುನಾಯಿಸುವ ಯೋಗ್ಯರಾದ ವಟುಗಳನ್ನು ಬಾಳೆಹೊನ್ನೂರುಸಂಸ್ಥಾನಕ್ಕೆ ಬರಮಾಡಿಕೊಂಡು ವಿದ್ಯಾವಂತರಿಂದ ಪರೀಕ್ಷೆಮಾಡಿಸಿ ಮುಜರಾಯಿ ಕಮಿಷನರವರು, ಅರಮನೆ ಇಲಾಖಾ ಮುಜರಾಯಿ ಭಕ್ಷಿಯವರು, ಮ|| ಕೆ.ಪಿ. ಪುಟ್ಟಣ್ಣಶೆಟ್ಟರು, ಇವರುಗಳು, ವಿದ್ವಾಂಸರುಗಳಿಂದ ಪರೀಕ್ಷಿಸಿ ಉತ್ತಮತರಗತಿಯಲ್ಲಿ ತೇರ್ಗಡೆಹೊಂದಿದ ವಟುವನ್ನು ಬಾಳೆಹೊನ್ನೂರು ಸಂಸ್ಥಾನಕ್ಕೆ ನೇಮಿಸಬೇಕಾಗಿ ಮ|| ಡಾಕ್ಟರ್ ಟಿ. ಎಸ್. ಶಿದ್ಧಪ್ಪನವರು ಸೂಚಿಸಿದ್ದನ್ನು ಮ|| ಎಂ. ಪಿ. ಲಿಂಗಪ್ಪನವರು ಸೆಕೆಂಡ್ ಮಾಡಿದರು.

ಇಷ್ಟರಲ್ಲಿ ಮೀಟಿಂಗಿಗೆ ಹೊಸದಾಗಿ ಬಂದವರು—ಮ|| ಗಳಾದ (50) ಗುಬ್ಬಿ ಜಿ. ಎಲ್. ಮುರುಗೆಪ್ಪನವರು ರೆ|| ಮೆಂಬರು (51) ಗುಬ್ಬಿ ಮ್ಯುನಿಸಿಪಲ್ ಕೌನ್ಸಿಲರ್ ಜಿ. ಮುರುಗೆಪ್ಪನವರು (52) ಕೆ. ಸುಬ್ರಾಯಪ್ಪನವರು V ಫಾರಂ ಶಾರದಾವಿಲಾಸ ಹೈಸ್ಕೂಲ್ (53) ಕೆ. ಕೊಟ್ರಪ್ಪಯ್ಯನವರು ಎಂಟ್ರೆನ್ಸ್ ಕ್ಲಾಸ್, ಡಿ. ಬನುಮಯ್ಯನವರ ಹೈಸ್ಕೂಲು (54) ಟಿ. ಎ. ಸಿದ್ಧಪ್ಪ V ಫಾರಂ ಶಾ. ವಿ. ಹೈ (55) ಎಸ್. ಮುರಿಗೆಪ್ಪಶಾಸ್ತ್ರಿ VI ಫಾರಂ ಎಂ.ಎಂ. ಹೈಸ್ಕೂಲ್ (56) ಬಿ. ಕಲ್ಲಪ್ಪ ಶೇಕದಾರ್ (ಸ್ಪೆಷಲ್) ಮೈಸೂರು (57) ಆರ್. ಮಾದಪ್ಪ V ಫಾರಂ ಶಾ|| ವಿ|| ಹೈ|| (58) ಬಾಲಗಂಗಾಧರಂ VI ಫಾರಂ ಎಂ.ಎಂ. ಹೈ|| (59) ಎಚ್. ಸಿ. ಜಂಬುಕೇಶ್ವರಯ್ಯ III ಇಯರ್ ಬಿ.ಎ. ಮ|| ಕಾಲೇಜ್ (60) ಆರ್. ಬಸಪ್ಪಾಜಿ III ಇಯರ್ ಬಿ.ಎ. ಮ|| ಕಾ||

ಮ|| ಗಳಾದ ಪರಮಶಿವಯ್ಯನವರು, ಟಿ. ರಾಚಪ್ಪನವರು ಮತ್ತು ಡಿ. ಎಸ್. ಮಲ್ಲಪ್ಪನವರು ಈ ಪ್ರಪೋಜಿಷನ್ನನ್ನು ಅಪೋಜ್ ಮಾಡಿದರು. ಆಗ ವೋಟಿಗೆ ಹಾಕಲು ಈ ಪ್ರಪೋಜಿಷನ್ನನ್ನು 17 ಜನರು ಅನುಮೋದಿಸಿದರು ಮತ್ತು 34 ಜನರು ಅಪೋಜ್ ಮಾಡಿದರು. ಮ|| ಎಂ. ಪಿ. ಲಿಂಗಪ್ಪಯ್ಯನವರು ಈ ಸಮಯದಲ್ಲಿ ಮೀಟಿಂಗ್‌ಬಿಟ್ಟು ಸ್ಕೂಲಿಗೆ ಹೋಗಲು ಹೊತ್ತಾಗುತ್ತದೆಂದು ಹೇಳಿ ಹೊರಟುಹೋದರು. ಚೇರ್ಮನ್‌ರವರು ಮ|| ಸಾಹುಕಾರ್ ಕಬ್ಬಳ್ಳಿ ಚನ್ನಬಸಪ್ಪನವರ ಹಾಸ್ಟಲ್‌ನಲ್ಲಿ 12ನೇ ತಾರೀಖಿನಲ್ಲಿ ಮಾಡಿರುವ ತೀರ್ಮಾನವು ಈ ಕೆಳಗೆ ಕಂಡ ಬದಲಾವಣೆಗಳೊಡನೆ ಜಾರಿಗೆ ಬರತಕ್ಕದ್ದೆಂದು ಸೂಚಿಸಿದರು—

1. ಡಿಸ್ಟ್ರಿಕ್ಟ್‌ವಾರ್ ಜನಸಂಖ್ಯೆ ಮೇಲೆ ಲಿಂಗಾಯಿತ ಪ್ರತಿನಿಧಿಗಳನ್ನು ಚುನಾವಣೆಮಾಡತಕ್ಕದ್ದು.

2. ವಟುಗಳು ತಮ್ಮ ಅಪ್ಲಿಕೇಷನ್ನುಗಳನ್ನು ಕಳುಹಿಸಲು ನ್ಯೂಸ್ ಪೇಪರಿನಲ್ಲಿ ಪ್ರಕಟಿಸತಕ್ಕದ್ದು ಮತ್ತು ಕಾನ್ಫರೆನ್ಸಿಗೆ ಹಾಜರಾಗಬೇಕು.

3. ವಟುಗಳನ್ನು ಪರೀಕ್ಷಿಸಬೇಕು. ಇದನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

ಈ ಪ್ರೊಸೀಡಿಂಗ್ಸನ್ನು ಮುಜರಾಯಿ ಕಮಿಷನರಿಗೆ ಕಳುಹಿಸುವದಕ್ಕೂ ಮತ್ತು ನ್ಯೂಸ್‌ಪೇಪರಿಗೆ ಕಳುಹಿಸುವದಕ್ಕೂ ಸಹ ಚೇರ್ಮನ್‌ರವರಿಗೆ ಅಧಿಕಾರಕೊಡಲಾಯಿತು. ಚೇರ್ಮನ್‌ರವರಿಗೆ ವಂದನೆಗಳು ಅರ್ಪಿಸಲ್ಪಟ್ಟನಂತರ ಮೀಟಿಂಗು ಮುಕ್ತಾಯವಾಯಿತು.

(ರುಜು) ಎಂ. ಪಿ. ಭೋಗಯ್ಯ ಚೇರ್ಮನ್.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ

ದಿವಾನ್‌ಸಾಹೇಬರವರು ಮಾಡಿದ ಭಾಷಣದ ಮುಖ್ಯಾಂಶ.

(ದಸರಾ ಅಧಿವೇಶನ)

10ನೆಯ ಅಕ್ಟೋಬರ್ 1924

(ಕಳೆದವಾರದ ಶೇಷ.)

ಭೂಗರ್ಭ ಶೋಧನೆಯು ಮತ್ತು ಗಣಿಗಳ ಇಲಾಖೆ.

ಈ ಇಲಾಖೆಗೆ ಪ್ರಸಕ್ತವರ್ಷದಲ್ಲಿ ಚಿನ್ನದ ಮೇಲಣ ರಾಜಾಯವನ್ನು ಬಿಟ್ಟು 1,09,452 ರೂ. ಹುಟ್ಟುವಳಿಯು ಬಂದಿತು. ಸರ್ಕಾರಕ್ಕೆ ಪೂರ್ತಿಯಾಗಿ ಉಳಿಸಿಟ್ಟುಕೊಂಡಿದ್ದ ಕ್ರೋಮ್ ಅದುರಿನ ವಿಚಾರದಲ್ಲಿದ್ದ ಅಡಚಣೆಗಳನ್ನು ಸ್ವಲ್ಪಮಟ್ಟಿಗೆ ಕಡಮೆಮಾಡಿ ಈ ಖನಿಜವನ್ನು ರೂಢಿಸುವುದಕ್ಕೆ ಲೈಸೆನ್ಸುಗಳನ್ನು ಕೊಡಬಹುದೆಂದೂ, ಆದರೆ ಒಂದೊಂದು ಸಲಕ್ಕೆ 1 ವರ್ಷಕ್ಕೆ ಮೀರದಂತೆಯೂ, ಒಟ್ಟಿನಲ್ಲಿ 3 ವರ್ಷಗಳಿಗೆ ಮೀರದಂತೆಯೂ, ಅವಧಿಯನ್ನು ಗೊತ್ತುಮಾಡಿ, ಕೆಲವು ಷರತ್ತುಗಳಿಗೆ ಒಳಪಡಿಸಬೇಕೆಂದೂ, ವಿಧಾಯಕವಾಡಿ ಅನುಜ್ಞೆಯನ್ನು ಕೊಡಲಾಯಿತು. ಹಿಂದಣವರುಷದಂತೆಯೇ ಪ್ರಸಕ್ತವರ್ಷದಲ್ಲಿ 5 ಚಿನ್ನದ ಗಣಿಗಳಲ್ಲಿ ಕೆಲಸವು ನಡೆದು ಸರಿಸುಮಾರಾಗಿ 2,58,91,665 ರೂ. ಬೆಲೆಯಾಗುವ 428,973.256 ಔನ್ಸ್‌ಗಳಷ್ಟು ಚಿನ್ನವು ಉತ್ಪತ್ತಿಯಾಯಿತು ; ಆದರೆ ಹಿಂದಣ ವರುಷದಲ್ಲಿ 431,860.68 ಔನ್ಸ್‌ಗಳಷ್ಟು ಚಿನ್ನವು ಉತ್ಪತ್ತಿಯಾಗಿದ್ದಿತು. ಸರ್ಕಾರಕ್ಕೆ ಪಾವತಿ ಮಾಡಬೇಕಾದ ರಾಜಾಯವು ಸರಿಸುಮಾರಾಗಿ 14,01,324 ರೂಗಳು.

ಪಬ್ಲಿಕ್ ವರ್ಕ್ಸ್ ಇಲಾಖೆ.

ಲೋಕಲ್ ಬೋರ್ಡುಗಳಿಗೆ ಕೊಟ್ಟ ಮೊಬಲಗೂ, ಕಂಟ್ರಿಬ್ಯೂಷನ್ ಮೊಬಲಗೂ ಸೇರಿ ಎಲ್ಲಾ ಬಾಬುಗಳಿಂದಲೂ, ಪಬ್ಲಿಕ್‌ವರ್ಕ್ಸ್ ಇಲಾಖೆಯ ಕಾಮಗಾರಿಗಳ ಒಟ್ಟು ವೆಚ್ಚವು ಪ್ರಸಕ್ತವರ್ಷದಲ್ಲಿ ಸುಮಾರು 26,98,219 ರೂ. ತಗುಲಿತು. ಇದರಲ್ಲಿ 9,66,535 ರೂ. ನೀರಾವರಿ ಕಾಮಗಾರಿಗಳಿಗಾಗಿಯೂ, 17,31,684 ರೂ. ರಸ್ತೆಗಳು ಮತ್ತು ಕಟ್ಟಡಗಳಿಗಾಗಿಯೂ ವೆಚ್ಚವಾದುವು. ಕಡೂರು, ಹಾಸನ ಮತ್ತು ಶಿವಮೊಗ್ಗಾ ಡಿ|| ಗಳಲ್ಲಿ ರಸ್ತೆಗಳಿಗೂ, ಸೇತುವೆಗಳಿಗೂ, ಪ್ರವಾಹಗಳಿಂದುಂಟಾದ ನಷ್ಟವನ್ನು ದುರಸ್ತುಮಾಡುವುದಕ್ಕಾಗಿ 94,270 ರೂ. ವರೆಗೆ ಅಂದಾಜುಗಳನ್ನು ಮಂಜೂರ್ಮಾಡಲಾಯಿತು. ನೀರಾವರಿ ಕಾಮಗಾರಿಗಳ ನಷ್ಟವನ್ನು ಸರಿಪಡಿಸುವುದಕ್ಕಾಗಿ ತಯಾರಾದ ಅಂದಾಜುಗಳಿಗೆ 54,000 ರೂ. ವರೆಗೆ ಮುಟ್ಟಿದುವು ಕೋಲಾರ ಮತ್ತು ತುಮಕೂರು ಡಿ|| ಗಳಲ್ಲಿ ದುರ್ಭಿಕ್ಷದ ದೆಸೆಯಿಂದ ಕಷ್ಟಪಡುತ್ತಿದ್ದವರಿಗೆ ಕೂಲಿಯನ್ನು ದೊರಕಿಸಿ ಸಹಾಯಮಾಡುವುದಕ್ಕಾಗಿ ನಡೆಸಿದ ಕೆರೆಗಳ ದುರಸ್ತಿ ಮತ್ತು ರಸ್ತೆಗಳ ಕಾಮಗಾರಿಗಳಿಗಾಗಿ 50,255 ರೂ. ವೆಚ್ಚವಾದುವು.

ಚಿಂತಾಮಣಿ, ಕೋಲಾರ, ಮೊಳಕಾಲ್ಮೂರು, ಕೊಪ್ಪ, ಶಿವಮೊಗ್ಗಾ, ಮತ್ತು ಚಿಕ್ಕಮಗಳೂರು ಟವನುಗಳಿಗೆ ನೀರು ಸರಬರಾಯಿ ಮಾಡುವ "ಸ್ಕೀಮು" ಗಳ ಸಂಬಂಧದಲ್ಲಿ ಪ್ರಸಕ್ತವರ್ಷದಲ್ಲಿ ಕೆಲಸವು ನಡೆಯಿತು; ಮತ್ತು ಕೋಲಾರದ ಚಿನ್ನದ ಗಣಿಗಳ ನೀರು ಸರಬರಾಯಿ ಕಾಮಗಾರಿಗಳ ಸಂಬಂಧದಲ್ಲಿ ದೊಡ್ಡದೊಡ್ಡ ಹೊಸ ಕೊಳವೆಗಳನ್ನು ಜೋಡಿಸುವ ಕೆಲಸವೂ ನಡೆಯುತ್ತಿದ್ದಿತು. ಮೈಸೂರು ಸಿಟಿಯ ನೀರು ಸರಬರಾಯಿಯ ವಿಚಾರವಾಗಿ ಕೆಲವು ಮೇಲ್ಪಾಡಿನ ಕಾಮಗಾರಿಗಳನ್ನು ಕ್ಷಿಪ್ರದಲ್ಲಿಯೇ ನಡೆಸುವುದಕ್ಕಾಗಿ 4,34,280 ರೂ. ವರೆಗೆ ವೆಚ್ಚವಾಗುವ ಒಂದು ಏರ್ಪಾಡು ಮಂಜೂರ್ಮಾಡಲ್ಪಟ್ಟಿತು. ಕಡೂರು, ಮೂಡಗೆರೆ ಮತ್ತು ದೊಡ್ಡಬಳ್ಳಾಪುರದ ಟವನುಗಳಿಗೆ ನೀರು ಸರಬರಾಯಿ ಏರ್ಪಾಡಿನ ವಿಚಾರವಾಗಿ ತನಿಖೆಯ ಕ್ರಮಗಳು ಜರುಗುತ್ತಿದ್ದುವು. ತುಮಕೂರು ಟವನಿನ ನೀರು ಸರಬರಾಯಿ ಏರ್ಪಾಡನ್ನು ಮಂಜೂರ್ಮಾಡಲಾಗಿದೆ; ಅದರ ತಪಶೀಲು ವಿಚಾರಗಳನ್ನು ಶಿಲ್ಪಕಲಾಕೋವಿದರೊಬ್ಬರಿಂದ ಕೂಲಂಕಷವಾಗಿ ಪರಿಶೋಧನೆ ಮಾಡಿಸುವುದೊಂದು ಕೆಲಸವು ಉಳಿದಿರುತ್ತದೆ.

ಗಂಧದ ಎಣ್ಣೆಯ ಕಾರ್ಖಾನೆಗಳು.

ಬೆಂಗಳೂರು ಮೈಸೂರುಗಳಲ್ಲಿರುವ ಎರಡು ಕಾರ್ಖಾನೆಗಳಲ್ಲಿಯೂ ವರುಷವೆಲ್ಲಾ ಕೆಲಸವು ನಡೆದು ಫಾರೆಸ್ಟ್ ಇಲಾಖೆಯಿಂದ ಒದಗಿಸಲ್ಪಟ್ಟ ಸುಮಾರು 1,500 ಟನ್ನುಗಳ ಗಂಧದಮರದಿಂದ 1,47,674 ಪೌಂಡುಗಳ ಗಂಧದ ಎಣ್ಣೆಯು ಪ್ರಸಕ್ತವರ್ಷದಲ್ಲಿ ತಯಾರಾಯಿತು, ಮತ್ತು 1,65,112 ಪೌಂಡುಗಳವರೆಗೆ ಗಂಧದ ಎಣ್ಣೆಯು ಮಾರಾಟವಾಯಿತು. ಈ ಪೈಕಿ 23,905 ಪೌಂಡು ಎಣ್ಣೆಯು ಸ್ಥಳದಲ್ಲಿಯೇ ಮಾರಾಟವಾಯಿತು. ಪ್ರಸಕ್ತವರ್ಷದಲ್ಲಿ ಈ ಬಾಬಿನಲ್ಲಿ ಒಟ್ಟು ಹುಟ್ಟುವಳಿಯು 27.26 ಲಕ್ಷ ರೂ. ಗಂಧದ ಎಣ್ಣೆಯ ಮಾರಾಟಕ್ಕಾಗಿ ಲಂಡನ್ ಪಟ್ಟಣದ ಮೆಸರ್ಸ್ ವಿಥೆನ್ ಅಂಡ್ ಸನ್ಸ್ ಕಂಪೆನಿಯವರೊಡನೆ ಮಾಡಿಕೊಂಡ ಒಪ್ಪಂದವು 1923 ನೆಯ ಇಸ್ವಿ ಆಗಸ್ಟ್ ತಿಂಗಳ ಆಖೈರಿಗೆ ತೀರಿಹೋಯಿತು. ಈ ಕಂಪೆನಿಯವರಿಗೆ ಬದಲಾಗಿ ಅದೇ ಇಸ್ವಿಯ ಸೆಪ್ಟಂಬರ್ ತಿಂಗಳ ಲಾಗಾಯಿತು ಮೈಸೂರಿನ ಮೆಸರ್ಸ್ ಎಸ್ಸೆನ್ಷಿಯೇರ್ ಪ್ರಾಡಕ್ಟ್ಸ್ ಕಂಪೆನಿಯವರನ್ನು ಗಂಧದ ಎಣ್ಣೆಯ ಮಾರಾಟಕ್ಕಾಗಿ ಏಜಂಟರನ್ನಾಗಿ ನೇಮಿಸಿಕೊಳ್ಳಲಾಯಿತು.

ಮೂಲಧನದ ಕಾಮಗಾರಿಗಳು.

ಕೃಷ್ಣರಾಜಸಾಗರ.

ಪ್ರಸಕ್ತವರ್ಷದಲ್ಲಿ ಕೃಷ್ಣರಾಜಸಾಗರದ ಕಾಮಗಾರಿಯ ಬಗ್ಗೆ ಮೂಲಧನದ ವೆಚ್ಚಕ್ಕಾಗಿ, ಅಣೆಯ ಕಾಮಗಾರಿಗೋಸ್ಕರ 6.01 ಲಕ್ಷ ರೂ. ಮತ್ತು ನಾಲಾಗಳ ಬಡಾವಣೆಗೋಸ್ಕರ 47,500 ರೂ. ಅಂತು 6.68 ಲಕ್ಷ ರೂ. ಗ್ರಾಂಟನ್ನು ಕೊಡಲಾಯಿತು. ಈ ಕಾಮಗಾರಿಗೆ ಪ್ರಸಕ್ತವರ್ಷದಲ್ಲಿ ಒಟ್ಟು 5.48 ಲಕ್ಷ ರೂ. ಪ್ರಾರಂಭದಿಂದಲೂ 1923-24 ನೆಯ ವರ್ಷದ ಆಖೈರಿನವರೆಗೆ 219.78 ಲಕ್ಷ ರೂ. ವೆಚ್ಚವಾಗಿರುತ್ತವೆ. ಪ್ರಸಕ್ತವರ್ಷದಲ್ಲಿ ಹೊಸ ನಾಲಾಗಳಿಂದ ಸಾಗುವಳಿಯಾದ ವಿಸ್ತೀರ್ಣವು 17,720 ಎಕರೆಗಳು ಎಂದರೆ ಹಿಂದಿನ ವರ್ಷಕ್ಕಿಂತಲೂ ಸುಮಾರು 1000 ಎಕರೆಗಳು ಹೆಚ್ಚಾದಂತಾಯಿತು.

ವಿದ್ಯುಚ್ಛಕ್ತಿಯ ಇಲಾಖೆ.

ಈ ಇಲಾಖೆಯ ಒಟ್ಟು ಹುಟ್ಟುವಳಿಯು, ಬಡ್ಡಿಯನ್ನೂ ಡಿಪ್ರಿಸಿಯೇಷನ್ ಫಂಡನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ, ಪ್ರಸಕ್ತ ವರ್ಷದಲ್ಲಿ 45,11,066 ರೂ. ಗಳಾಯಿತು ; ಅದರ ಹಿಂದಿನ ವರ್ಷದಲ್ಲಿ ಸದರಿ ಹುಟ್ಟುವಳಿಯು 42,21,220 ರೂ. ಗಳಾಗಿದ್ದಿತು. ಈರೀತಿ ಹುಟ್ಟುವಳಿಯು ಹೆಚ್ಚಿದುದಕ್ಕೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸತಕ್ಕವರ ಸಂಖ್ಯೆಯು ಅಧಿಕವಾದುದೂ, ಮತ್ತು ಹಿಂದಿನ ಗಿರಾಕಿಗಳು ಹೆಚ್ಚು ಹೆಚ್ಚಾಗಿ ಶಕ್ತಿಯನ್ನು ಉಪಯೋಗಿಸಿದುದೂ ಕಾರಣಗಳಾಗಿವೆ ಇಲಾಖೆಯ ಕೆಲಸವನ್ನು ನಡೆಸುವುದಕ್ಕೆ ತಗಲಿದ ಒಟ್ಟು ವೆಚ್ಚವು ಡಿಪ್ರೀಸಿಯೇಷನ್ ಫಂಡಿಗೆ ಜಮೆ ಕಟ್ಟಲ್ಪಟ್ಟ 6,26,921 ರೂ. ಸೇರಿ 13,89,841 ರೂ. ಡಿಪ್ರೀಸಿಯೇಷನ್ ಫಂಡು ಪ್ರಸಕ್ತ ವರ್ಷದ ಆಖೈರಿನಲ್ಲಿ 45.74 ಲಕ್ಷ ರೂ. ಇದ್ದಿತು. ಅಂತು, ಒಟ್ಟಿನಲ್ಲಿ ನಿವ್ವಳ ಹುಟ್ಟುವಳಿಯು 1922-23 ರಲ್ಲಿ 27,98,109 ರೂ. ಗಳಾದುದಕ್ಕೆ ಪ್ರತಿಯಾಗಿ ಪ್ರಸಕ್ತವರ್ಷದಲ್ಲಿ 31,05,925 ರೂ. ಗಳಾಯಿತು.

ಲೆಕ್ಕಾಚಾರಗಳನ್ನು ಒಟ್ಟುಗೂಡಿಸುದುದರ ಫಲಿತಾಂಶಗಳು.—ವಿದ್ಯುಚ್ಛಕ್ತಿಯ ಕಾಮಗಾರಿ ಮತ್ತು ಕೃಷ್ಣರಾಜಸಾಗರದ ಏರ್ಪಾಡು, ಇವೆರಡರ ಮೂಲಧನದ ಲೆಕ್ಕಗಳನ್ನೂ ಹುಟ್ಟುವಳಿಯ ಲೆಕ್ಕಗಳನ್ನೂ ಒಟ್ಟುಗೂಡಿಸತಕ್ಕದೆಂದು 1924 ನೆಯ ಸೆಪ್ಟಂಬರ್ ತಾ|| 1 ನೆಯ ಮಕಂ ಪಿ. ಡಬ್ಲ್ಯು, 115-126-ಕೆ. ಎಸ್.ಎಸ್. 723-734 ನೆಯ ನಂಬರು ಸರ್ಕಾರಿ ಹುಕುಮಿನಲ್ಲಿ ನಮೂದಿಸಲ್ಪಟ್ಟ ಕೆಲವು ಕಾರಣಗಳಿಗಾಗಿ ಸದರಿ ಹುಕುಮಿನಪ್ರಕಾರ ಈಚೆಗೆ ತೀರ್ಮಾನವಾಗಿರುತ್ತದೆ. ಕೃಷ್ಣರಾಜಸಾಗರ ಪ್ರಾಜೆಕ್ಟಿನ ಉದ್ದೇಶಗಳು ಯಾವುವೆಂದರೆ :—

(1) ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವುದಕ್ಕಾಗಿ ಅವಿಚ್ಛಿನ್ನವಾಗಿ ತಕ್ಕಷ್ಟು ನೀರು ಸರಬರಾಯಾಗುವಂತೆ ಏರ್ಪಡಿಸಿಕೊಳ್ಳುವುದು ;

(2) ಗಣಿಯ ಕೆಲಸದ ಕಂಪೆನಿಗಳವರಿಗೆ ಹೆಚ್ಚು ವಿದ್ಯುಚ್ಛಕ್ತಿಯು ಬೇಕಾಗಿರುವುದರಿಂದಲೂ, ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ದೀಪಗಳಿಗಾಗಿಯೂ, ಕೈಗಾರಿಕೆಗಳಿಗಾಗಿಯೂ ಹೆಚ್ಚು ಹೆಚ್ಚಾಗಿ ವಿದ್ಯುಚ್ಛಕ್ತಿಯು ಏಕಪ್ರಕಾರವಾಗಿ ಅವಶ್ಯವಾಗುತ್ತಿರುವುದರಿಂದಲೂ, ಅದನ್ನು ಅಧಿಕವಾಗಿ ಉತ್ಪತ್ತಿಮಾಡಲು ತಕ್ಕಷ್ಟು ನೀರು ಒದಗುವಂತೆ ಮಾಡುವುದು;

(3) ಕಾವೇರಿ ತೀರದಲ್ಲಿ ಅನುಕೂಲವಾದ ಪ್ರದೇಶಗಳಲ್ಲಿ ಹೆಚ್ಚು ವಿಸ್ತೀರ್ಣದ ಜಮೀನುಗಳ ಸಾಗುವಳಿಗೆ ನೀರು ಸರಬರಾಯಿಮಾಡುವುದು.

ಕೃಷ್ಣರಾಜಸಾಗರದ ಜಲಾಶಯವನ್ನು ಕಟ್ಟುವ ಕೆಲಸವು 1911-12 ರಲ್ಲಿ ಪ್ರಾರಂಭವಾಯಿತು ; ಆವರುಷದಲ್ಲಿ ಕಾವೇರಿಯ ವಿದ್ಯುಚ್ಛಕ್ತಿಯ ಏರ್ಪಾಡಿನ ನಿವ್ವಳ ವರಮಾನವು ಸುಮಾರು 10½ ಲಕ್ಷ ರೂ. ಗಳಾಗಿದ್ದುವು. ಅದಕ್ಕೆ ಪ್ರತಿಯಾಗಿ ಪ್ರಸಕ್ತ ವರುಷದ ಒಟ್ಟು ಹುಟ್ಟುವಳಿಯು (ನೀರಾವರಿಯಿಂದ ದೊರೆತ 1,50,000 ರೂ. ಸೇರಿ) 46,61,000 ರೂ. ಕಾವೇರಿ ನದಿಯ ನೀರಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಏರ್ಪಾಡು, ಮತ್ತು ಕೃಷ್ಣರಾಜಸಾಗರದ ಏರ್ಪಾಡು, ಇವೆರಡಕ್ಕೂ ಪರಸ್ಪರವಾಗಿ ಪ್ರಬಲವಾದ ಮತ್ತು ಪ್ರತ್ಯೇಕಿಸಲಳವಲ್ಲದ ಅನುಬಂಧವಿರುತ್ತದೆಯಾಗಿ ಇನ್ನು ಮುಂದೆ ಇವುಗಳನ್ನು ಒಂದು ಒಟ್ಟುಗೂಡಿಸಿದ ಏರ್ಪಾಡನ್ನಾಗಿ ಭಾವಿಸಬೇಕಾಗಿರುತ್ತದೆ. ಈ ಏರ್ಪಾಡಗಾಗಿ 1923-24 ನೆಯ ಸಾಲಿನ ಆಖೈರುವರೆಗೆ ತಗಲಿರುವ ಒಟ್ಟು ಮೂಲಧನದ ವೆಚ್ಚವು ಸುಮಾರು 409½ ಲಕ್ಷ ರೂ. ಆಗುವುದು. ಪ್ರಸಕ್ತ ವರ್ಷದಲ್ಲಿ, ಕೆಲಸ ನಡೆಸುವ ವೆಚ್ಚವನ್ನು ವಜಾಕೊಟ್ಟಮೇಲೆ ಒಟ್ಟಿನಲ್ಲಿ 30,29,000 ರೂ. ನಿವ್ವಳ ವರಮಾನವು ಬಂದಿತು, ಎಂದರೆ ವೆಚ್ಚಮಾಡಿದ 409½ ಲಕ್ಷ ರೂ. ಮೂಲಧನಕ್ಕೆ ಶೇಕಡಾ 7.39 ರಂತೆ ಪ್ರತಿಫಲವು ದೊರೆತಂತಾಯಿತು.

ರೈಲು ಮಾರ್ಗಗಳು.

ಮದರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರ ಆಡಳಿತದಲ್ಲಿಯೂ, ನಮ್ಮ ಆಡಳಿತದಲ್ಲಿಯೂ, ಇದ್ದ ಎಲ್ಲಾ ಲೈನುಗಳಿಂದಲೂ ಒಟ್ಟು ಹುಟ್ಟುವಳಿಯು ತಿದ್ದುಪಾಟಾದ ಅಂದಾಜಿನಲ್ಲಿ ನಿರೀಕ್ಷಿಸಿದ್ದ 74 ಲಕ್ಷ ರೂ. ಗೆ ಬದಲಾಗಿ 76 ಲಕ್ಷ ರೂ. ಗಳಾಗಿಯೂ, ಕೆಲಸ ನಡೆಸುವ ವೆಚ್ಚವು ತಿದ್ದುಪಾಟಾದ ಅಂದಾಜಿನಲ್ಲಿ ನಿರೀಕ್ಷಿಸಿದ್ದ 60 ಲಕ್ಷ ರೂ. ಗೆ ಬದಲಾಗಿ 57 ಲಕ್ಷ ರೂ. ಗಳಾಗಿಯೂ ಇದ್ದುವು. ಹುಟ್ಟುವಳಿಯು ಹೆಚ್ಚಿದುದೂ, ವೆಚ್ಚವು ತಗ್ಗಿದುದೂ, ಈ ಎರಡೂ ಸೇರಿ ನಿವ್ವಳ ವರಮಾನವು ತಿದ್ದುಪಾಟಾದ ಅಂದಾಜಿನಲ್ಲಿ ನಿರೀಕ್ಷಿಸಿದ್ದ ಪ್ರಮಾಣಕ್ಕಿಂತಲೂ ಸುಮಾರು 5 ಲಕ್ಷ ರೂ. ಗಳಷ್ಟು ಅಧಿಕವಾಗುವುದಕ್ಕೆ ಸಹಾಯವಾಯಿತು.

ಸರ್ಕಾರದ ಆಡಳಿತದಲ್ಲಿದ್ದ ಲೈನುಗಳನ್ನು ಸರಿಯಾದ ಸ್ಥಿತಿಯಲ್ಲಿ ಕಾಪಾಡಿಕೊಂಡಿರುವುದಕ್ಕೂ, ರೈಲುಗಳನ್ನು ಎಂದಿನಂತೆ ಕ್ರಮವಾಗಿ ಬಿಡುತ್ತಿರುವಂತೆ ಮಾಡುವುದಕ್ಕೂ, ಪ್ರಸಕ್ತವರ್ಷದಲ್ಲಿ ಒಟ್ಟು ಹುಟ್ಟುವಳಿಯಲ್ಲಿ ಶೇಕಡಾ 78 ರಂತೆಯೂ, ಅದರ ಹಿಂದಿನ ವರುಷದಲ್ಲಿ ಶೇಕಡಾ 76 ರಂತೆಯೂ ವೆಚ್ಚವಾಯಿತು ; ಆದರೆ ಹೊಸ ಕಂಬಿಗಳೇ ಮುಂತಾದುವುಗಳನ್ನು ಹಾಕಿ ರೈಲು ಮಾರ್ಗವನ್ನು ಸರಿಮಾಡಿಸಿದ ವೆಚ್ಚವನ್ನೂ, ಹೊಸ ರೈಲುಗಾಡಿಗಳೇ ಮುಂತಾದುವುಗಳಿಗೆ ಮುಟ್ಟಿದ ವೆಚ್ಚವನ್ನೂ ಇದರಲ್ಲಿ ಸೇರಿಸಿಯೇ ಇಲ್ಲ. ಹೀಗೆ ಕೆಲಸನಡೆಸುವ ಖರ್ಚುಗಳ ಶೇಕಡಾವಾರು ಅಧಿಕವಾದುದಕ್ಕೆ ಪ್ರಯಾಣಿಕರಿಂದಲೂ, ಸರಕುಗಳನ್ನು ಸಾಗಿಸುವುದರಿಂದಲೂ ಆದ ಹುಟ್ಟುವಳಿಯು ಕಡಮೆಯಾದುದೇ ಕಾರಣವು. ಸರ್ಕಾರದ ಆಡಳಿತದಲ್ಲಿರುವ ಲೈನುಗಳ ಹುಟ್ಟುವಳಿಗೂ ವೆಚ್ಚಕ್ಕೂ ಇರುವ ದಾಮಾಷಾಯಿಯು ಇನ್ನೂ ಅತ್ಯಂತ ಅಧಿಕವಾಗಿಯೇ ಇರುತ್ತದೆ. ಆದಕಾರಣ, ಈಗ ಒಟ್ಟು ಹುಟ್ಟುವಳಿಯಲ್ಲಿ ಶೇಕಡಾ 78 ರಂತೆ ಇರುವ ವೆಚ್ಚವನ್ನು ಇನ್ನೂ ಬಹಳ ಮಟ್ಟಿಗೆ ತಗ್ಗಿಸಬೇಕಾಗಿದೆ. ಆದಾಗ್ಗ್ಯೂ, ಮೇಲೆ ನಮೂದಿಸಿರುವ ಲೆಕ್ಕಗಳಿಂದ ಪ್ರಸಕ್ತಸಾಲಿನಲ್ಲಿ ವಸ್ತುತಃ ಆದ ವೆಚ್ಚವಾಗಲಿ ಅಥವಾ ಸಂಪಾದಿಸಿದ ಒಟ್ಟು ಆದಾಯವಾಗಲಿ ಗೊತ್ತಾಗುವುದಿಲ್ಲ. ಮೊದಲ್ನೆಂದ ವೆಚ್ಚದ ಮೊಬಲಗಿನಲ್ಲಿ ಹಿಂದಿನ ವರುಷಗಳ ವೆಚ್ಚಕ್ಕೆ ಖರ್ಚುಹಾಕತಕ್ಕುದಾಗಿದ್ದು, ಈಗ ಲೆಕ್ಕದ ಪುಸ್ತಕಗಳಲ್ಲಿ ದಾಖಲ್ಮಾಡಿ, 1923-24ಕ್ಕೆ ಖರ್ಚುಹಾಕತಕ್ಕ 1,19,716 ರೂ. ಸೇರಿರುತ್ತದೆ ಅಲ್ಲದೆ ರೈಲುಗಾಡಿಗಳನ್ನು ಸ್ಟೇಷನ್ನುಗಳಲ್ಲಿ ಒಂದು ಲೈನಿನಿಂದ ಮತ್ತೊಂದು ಲೈನಿಗೆ ತರುವುದೇ ಮುಂತಾದ ವೆಚ್ಚಗಳಿಗಾಗಿ ಮದರಾಸ್ ಮತ್ತು ಸದರನ್ ಮರಾಟಾ ಕಂಪೆನಿಯವರಿಂದ ಬರಬೇಕಾಗಿರುವ ಸುಮಾರು 57,000 ರೂ. ಗಳನ್ನು ಪ್ರಸಕ್ತ
ಲಿನ ತಮ್ಮ ಖರ್ಚಿನಲ್ಲಿ ಹೆಚ್ಚಾಗಿ ತೋರಿಸಿದೆ. ಈ ಮೊಬಲಗುಗಳನ್ನು ಸೇರಿಸದೆಹೋದರೆ ಈ ಬಾಬಿನ ಕೆಲಸವನ್ನು ನಡೆಸುವುದಕ್ಕಾಗಿ ವಸ್ತುತಃ ಆಗಿರುವ ಖರ್ಚು 22,66,142 ರೂ. ಆಗುತ್ತದೆ. ಕಬ್ಬಿಣದ ಕಾರ್ಖಾನೆಯೇ ಮುಂತಾದುವುಗಳಿಂದ 10,000 ರೂ. ವರೆಗೆ ಬರಬೇಕಾದ ಬಾಕಿಗಳು ಸಂತುಹೋಗಿರುತ್ತವೆ. ಇವೂ ಸೇರಿದರೆ, ವರಮಾನವು 31,49,371 ರೂ. ಗೆ ಏರುತ್ತದೆ. ಇದನ್ನು ವಸ್ತುತಃ ಆಗಿರುವ 22,66,142 ರೂ. ವೆಚ್ಚದ ಮೊಬಲಗಿನೊಂದಗೆ ಹೋಲಿಸಿ ನೋಡಿದರೆ, ಕೆಲಸ ನಡೆಸುವುದಕ್ಕೆ ತಗಲಿದ ವೆಚ್ಚದ ದಾಮಾಷಾಯಿಯು ಶೇಕಡಾ 77.81 ರಿಂದ 71.95 ಕ್ಕೆ ಇಳಿಯುತ್ತದೆ. ಈ ಲೈನುಗಳ ಪೈಕಿ ಕೆಲವು ಇನ್ನೂ ಆರಂಭದೆಶೆಯಲ್ಲಿಯೇ ಇರುತ್ತವೆ; ಅವುಗಳ ಪೈಕಿ ಜನಸಂಚಾರವನ್ನೂ, ಸಾಮಾನುಗಳು ಸಾಗುವುದನ್ನೂ, ಇನ್ನೂ ಹೆಚ್ಚಾಗಿ ಅಭಿವೃದ್ಧಿಪಡಿಸುವ ಕೆಲಸಕ್ಕೆ ಗಮನವನ್ನು ಕೊಡಬೇಕಾಗಿದೆ. ಮೈಸೂರು ಸರ್ಕಾರದ ರೈಲುಮಾರ್ಗಗಳು ಹಿಂತಿನಂತೆಯೇ ಇನ್ನೂ ಒಟ್ಟು 402 ಮೈಲಿಗಳಷ್ಟು ಮಾತ್ರವೇ ಇರುತ್ತವೆ ; ಇಷ್ಟು ಸ್ವಲ್ಪದೂರದ ರೈಲುಮಾರ್ಗದ ಸಲುವಾಗಿ ಸಂಪೂರ್ಣವಾದ ಸಿಬ್ಬಂದಿಯನ್ನು ಇಟ್ಟುಕೊಂಡಿರಬೇಕಾಗಿರುವುದರಿಂದ ಮೇಲ್ವಿಚಾರಣೆಯ ವೆಚ್ಚಗಳು ದಾಮಾಷಾಯಿಯಾಗಿ ಹೆಚ್ಚಲು ಕಾರಣವಾಗಿದೆ. ನಮ್ಮ ಲೈನುಗಳ ವಿಷಯದಲ್ಲಿ ಈ ಅನಾನುಕೂಲವೊಂದು ಇದೆ. ಹುಟ್ಟುವಳಿಯನ್ನು ಹೆಚ್ಚಿಸುವುದು, ವೆಚ್ಚವನ್ನು ತಗ್ಗಿಸುವುದು ಮತ್ತು ಓಪನ್ ಲೈನಿನ ದೂರವನ್ನು ಹೆಚ್ಚಿಸುವುದು—ಈ ಮೂರು ವಿಷಯಗಳಿಗೂ ನಾವು ಸರಿಯಾದ ಗಮನವನ್ನು ಕೊಟ್ಟಲ್ಲಿ, ರೈಲ್ವೆಯ ಆಡಳಿತದಿಂದ ಹಣಕಾಸಿನ ವಿಷಯದಲ್ಲಿ ನಮಗೆ ತೃಪ್ತಿಕರವಾದ ಫಲಿತಾಂಶಗಳು ದೊರೆಯುವುವು.

ನಮ್ಮ ರೈಲ್ವೆಯ ಆಡಳಿತವು ಪ್ರಾರಂಭದಿಂದ ಪ್ರಸಕ್ತವರುಷದ ಆಖೈರಿನವರೆಗೆ ಹಣಕಾಸಿನ ವಿಚಾರದಲ್ಲಿ ಹೇಗೆ ಪರಿಣಮಿಸಿರುತ್ತದೆಯೆಂಬುದನ್ನು ಈಗ ಸಂಕ್ಷೇಪವಾಗಿ ವಿವರಿ ಬಹುದಾಗಿದೆ. ಎಲ್ಲಾ ಲೈನುಗಳಿಗೂ ಸೇರಿ ಪ್ರಸಕ್ತವರ್ಷದ ಆಖೈರಿನವರೆಗೆ ತಗಲಿದ ಮೂಲಧನದ ವೆಚ್ಚವು ಒಟ್ಟಿನಲ್ಲಿ 434 ಲಕ್ಷ ರೂ. ಆಯಿತು. ಆದಿಯಿಂದ ಪ್ರಸಕ್ತವರುಷದ ಅಂತ್ಯದವರೆಗೆ ಈ ಲೈನುಗಳ ಒಟ್ಟು ಹುಟ್ಟುವಳಿಯು 1,172 ಲಕ್ಷ ರೂ. ಇದರಲ್ಲಿ ರಕ್ಷಣೆ ಮತ್ತು ಕೆಲಸ ನಡೆಸುವ ಬಗ್ಗೆ ತಗಲಿದ 785 ಲಕ್ಷ ರೂ. ಗಳನ್ನು ವಜಾಮಾಡಿದಲ್ಲಿ ಉಳಿಯುವ 387 ಲಕ್ಷ ರೂ. ಮೂಲಧನಕ್ಕೆ ಬಂದ ಪ್ರತಿಫಲವಾಗಿರುತ್ತದೆ. ಅದೇ ಕಾಲಕ್ಕೆ ಮೂಲಧನಕ್ಕೆ ಬಿದ್ದ ಬಡ್ಡಿಯು 426 ಲಕ್ಷ ರೂ. ಎಂದರೆ ನಿವ್ವಳ ವರಮಾನಕ್ಕಿಂತಲೂ 39 ಲಕ್ಷ ರೂ. ನಷ್ಟು ಅಧಿಕವಾಗುವುದು. ಆದಕಾರಣ ಮೊದಲ್ನೆಂಡ ಕಾಲದಲ್ಲಿ, ಈ 39 ಲಕ್ಷ ರೂ. ಅಲ್ಪವಾದ ವ್ಯತ್ಯಾಸವನ್ನು ಗಮನಕ್ಕೆ ತೆಗೆದುಕೊಳ್ಳದೆ ಇರುವ ಪಕ್ಷಕ್ಕೆ ಆದಾಯವೆಚ್ಚಗಳು ಕೇವಲ ಅಲ್ಲಿಗಲ್ಲಿಗೆ ಸರಿಹೋದಂತೆ ಆಗುತ್ತದೆ. ಈ ಸ್ಥಿತಿಯು ತಕ್ಕಮಟ್ಟಿಗೆ ತೃಪ್ತಿಕರವಾಗಿರುವುದಾಗಿ ಭಾವಿಸಬಹುದಾದರೂ, ಇದನ್ನು ವಿಶೇಷವಾಗಿ ಉತ್ತಮಪಡಿಸಲು ಅವಕಾಶವಿರುತ್ತದೆಂದು ಯೋಚಿಸುತ್ತೇವೆ. ನಮ್ಮ ರೈಲುಮಾರ್ಗಗಳಿಗಾಗಿ ಸುಮಾರು 5 ಕೋಟಿ ರೂ. ಯನ್ನು ವೆಚ್ಚಮಾಡಿರುತ್ತೇವೆ; ಆದರೆ ಅವುಗಳ ಆಡಳಿತದ ವಿಷಯದಲ್ಲಿ ಇದುವರೆಗೂ ರೂಢಿಯಾಗಿರುವ ಸ್ಥಿತಿಗಳಿಗನುಸಾರವಾಗಿ, ಈ ಭಾರಿ ಸ್ವತ್ತಿನ ಸವೆದುಹೋದ ಭಾಗಗಳನ್ನು ಸರಿಪಡಿಸುವುದಕ್ಕೇ ಆಗಲಿ, ಸಂಸ್ಥಾನಕ್ಕೆ ಒಳ್ಳೇ ವರಮಾನವನ್ನು ತರುವುದರ ಜತೆಗೆ ಪ್ರಜೆಗಳಿಗೆ ತೃಪ್ತಿಕರವಾದ ಪ್ರಯಾಣ ಸೌಕರ್ಯಗಳನ್ನೊದಗಿಸುವಂತೆ ಈ ಮೂಲಧನದ ಆಸ್ತಿಯನ್ನು ಸಮರ್ಪಕವಾದ ರೀತಿಯಲ್ಲಿ ಕಾಪಾಡಿಕೊಂಡಿರುವುದಕ್ಕೇ ಆಗಲಿ, ತಕ್ಕ ಏರ್ಪಾಡುಗಳನ್ನು ಮಾಡಿರುವುದಿಲ್ಲ. ಈ ನ್ಯೂನತೆಯನ್ನು ನಿವಾರಣೆ ಮಾಡುವುದಕ್ಕಾಗಿ, ಒಂದು ಡಿಪ್ರೀಸಿಯೇಷನ್ ಫಂಡನ್ನು ಶೇಖರಿಸಿಡುವುದು ಕೇವಲ ಆವಶ್ಯಕವಾಗಿರುತ್ತದೆ; ಆದುದರಿಂದ, ಚಾಲ್ತಿಸಾಲಿನಿಂದ ಅಂಥಾ ಒಂದು ರಿಜರ್ವನ್ನು ಏರ್ಪಡಿಸುವುದಕ್ಕೆ ಪ್ರಾರಂಭಿಸಿದ್ದೇವೆಂದು ತಿಳಿಸಲು ಸಂತೋಷವಾಗಿದೆ. ಸುಮಾರು 5 ಕೋಟಿ ರೂ. ನ ಮೂಲಧನಕ್ಕೆ ಪ್ರಸಕ್ತವರ್ಷದಲ್ಲಿ ದೊರೆತ ನಿವ್ವಳ ಆದಾಯವು ಶೇಕಡಾ 3.9 ರಂತೆ ಆಗುವುದು. ಈ ದರವು ಬಹಳ ಕಡಮೆ ಆದಕಾರಣ, ಇಂಡಿಯಾ ದೇಶದಲ್ಲಿ ರೈಲ್ವೆಗಳಿಂದ ಶೇಕಡಾ ಸುಮಾರು 5½ ರಂತೆ ನಿವ್ವಳ ಆದಾಯವನ್ನು ನಿರೀಕ್ಷಿಸುವುದು ಯುಕ್ತವಾಗಿರುತ್ತದೆಂದು ಇಂಚ್‌ಕೇಪ್ ಕಮಿಟಿಯವರು ಅಭಿಪ್ರಾಯಪಟ್ಟಿರುವುದರಿಂದ, ಅದನ್ನು ಶೇಕಡಾ 5½ ಗೆ ಹೆಚ್ಚಿಸುವುದಕ್ಕೆ ಪ್ರಬಲವಾದ ಪ್ರಯತ್ನಗಳನ್ನು ಮಾಡಬೇಕಾಗಿದೆ. ಸಾಮಾನ್ಯ ಹುಟ್ಟುವಳಿಗಳಿಂದ ರೈಲ್ವೆಗಳಿಗೆ ದ್ರವ್ಯಸಹಾಯವನ್ನು ಮಾಡುವುದು ಯುಕ್ತವಲ್ಲ; ಆದಕಾರಣ, ಒಟ್ಟಿನಲ್ಲಿ ನಮ್ಮ ರೈಲ್ವೆಗಳನ್ನು ಅವುಗಳ ವರಮಾನದಿಂದಲೇ ಅವುಗಳ ವೆಚ್ಚವು ನಿಲುವಂತೆಯೂ, ಗಾಡಿಗಳು, ಕಟ್ಟಡಗಳು, ಯಂತ್ರಸಾಮಗ್ರಿಗಳು ಮುಂತಾದುವುಗಳನ್ನೆಲ್ಲಾ ಸಮರ್ಪಕವಾಗಿಟ್ಟುಕೊಂಡು, ರೈಲ್ವೆಗಳಿಗೆ ವೆಚವಾಗಿರುವ ಭಾರೀ ಬಂಡವಾಳಕ್ಕೆ ತಕ್ಕಷ್ಟು ಪ್ರತಿಫಲವನ್ನೂ ಸರ್ಕಾರದವರಿಗೆ ಕೊಡುವಂತೆಯೂ, ಮಾಡುವುದಕ್ಕೋಸ್ಕರ ನಾವು ಮೇಲೆ ಸೂಚಿಸಿರುವ ಮಾರ್ಗಗಳಲ್ಲಿ ತಕ್ಕಂತೆ ಕೆಲಸಗಳನ್ನು ನಡೆಸಬೇಕಾಗಿರುವುದಲ್ಲದೆ, ಹಾಲಿ ಇರತಕ್ಕ ರೈಲ್ವೆಲೈನುಗಳನ್ನು ಉತ್ತಮವಾದ ಸ್ಥಿತಿಯಲ್ಲಿ ರಕ್ಷಣೆಮಾಡಿಕೊಂಡಿರುವುದಕ್ಕೂ ತಕ್ಕ ದ್ರವ್ಯವನ್ನು ಒದಗಿಸಿಕೊಳ್ಳಬೇಕಾಗಿದೆ.

ದ್ರವ್ಯಾನುಕೂಲತೆಯು ಇದೆಯೋ ಇಲ್ಲವೇ ಎಂಬ ಅಂಶವನ್ನು ಗಣನೆಗೆ ತಂದುಕೊಳ್ಳದೆ ಹೊಸಹೊಸದಾಗಿ ರೈಲ್ವೆ ಮಾರ್ಗಗಳನ್ನು ಕಲ್ಪಿಸುವುದಕ್ಕೆ ಬಗ್ಗೆ ಮಂಜೂರ್ಮಾಡಿದ್ದ ಕಾರ್ಯಕ್ರಮವನ್ನು ಅದಕ್ಕೆ ಹಣವನ್ನೊದಗಿಸುವುದಕ್ಕೆ ಹಿಂದೆ ಶೇಖರವಾಗಿದ್ದ ಉಳಿತಾಯಗಳೇನೂ ಸಂಸ್ಥಾನದಲ್ಲಿ ಇಲ್ಲದಿದ್ದುದರಿಂದಲೂ, ವರ್ಷೇವರ್ಷೇ ಆಯಕ್ಕಿಂತಲೂ ವ್ಯಯವೇ ಹೆಚ್ಚಾಗುತ್ತಲಿದ್ದ ಅನಾನುಕೂಲಸ್ಥಿತಿಯನ್ನು ಸರ್ಕಾರದವರು ಎದುರಿಸಬೇಕಾಗಿದ್ದುದರಿಂದಲೂ, ಮುಂದುವರಿಸದೆ ನಿಲ್ಲಿಸಬೇಕಾಯಿತು ; ಕಡೂರು ಡಿಸ್ಟ್ರಿಕ್ಟಿನಲ್ಲಿ ಅವಶ್ಯವಾಗಿ ಬೇಕಾದ ರೈಲ್ವೆಯ ಸೌಕರ್ಯಕ್ಕೆ ಶೀಘ್ರದಲ್ಲಿ ಗಮನವನ್ನು ಕೊಡಬೇಕಾಗಿರುತ್ತದೆ. ಮೈಸೂರು ಡಿ|| ಬೋರ್ಡಿನವರು ನಂಜನಗೂಡಿನಿಂದ ಚಾಮರಾಜನಗರಕ್ಕೆ ರೈಲು ಹಾಕುವುದನ್ನು ತಾವೇ ವಹಿಸಲು ಮುಂದುವರಿದಿರುವುದಕ್ಕಾಗಿ ಅವರನ್ನು ಅಭಿನಂಧಿಸಬೇಕಾಗಿದೆ. ಈ ರೈಲ್ವೆಯನ್ನು ಹಾಕುವುದಕ್ಕೆ ಸರ್ಕಾರದ ಭರವಸೆಯುಳ್ಳ ಸಾಲವನ್ನೆತ್ತಲು ಅವರಿಗೆ ಅಪ್ಪಣೆಯನ್ನು ಕೊಟ್ಟಿದೆ ; ಆವಶ್ಯಕವಾದ ಮೊಬಲಗನ್ನು ಅವರು ಸಾಲವಾಗಿ ಪಡೆಯುತ್ತಾರೆಂಬುದರಲ್ಲಿ ಸಂದೇಹವೇನೂ ಇಲ್ಲವೆಂದು ಭಾವಿಸಿದೆ. ಮೊದಲೇ ಮಂಜೂರಾಗಿರತಕ್ಕ ಕಾಮಗಾರಿಗಳಿಗೆ ಪ್ರಥಮಪ್ರಾಶಸ್ತ್ಯವನ್ನು ಕೊಡಬೇಕಾಗಿರುತ್ತದೆ. ಹೊಸರೈಲ್ವೆ ಲೈನುಗಳ ಕೆಲಸವನ್ನು ಕೈಗೊಳ್ಳುವ ವಿಚಾರದಲ್ಲಿಯಾದರೋ ಅಂತಹುವುಗಳು ಅನೇಕವಾಗಿ ಸೂಚಿಸಲ್ಪಟ್ಟಿವೆ ; ಆದರೆ ನಮ್ಮ ಹಣಕಾಸಿನ ಸಾಮಾನ್ಯಸ್ಥಿತಿಯನ್ನು ಸರಿಮಾಡಿಕೊಂಡು, ಹಾಲಿ ಹುಟ್ಟುವಳಿಯೇನನ್ನೂ ಕೊಡದಿರುವ ಬಂಡವಾಳದ ಕಾಮಗಾರಿಗಳಿಗಾಗಿ ಈಗಾಗಲೇ ಮಾಡಿರುವ ಸಾಲಗಳ ಮೊತ್ತವನ್ನು ಕಡಮೆಮಾಡಿಕೊಂಡಮೇಲೂ ರೈಲ್ವೆಗಳ ಅಭಿವೃದ್ಧಿಗೆ ಸಾಧ್ಯವಾದ ಹೆಚ್ಚು ವೆಚ್ಚವನ್ನು ಮಾಡಬೇಕಾಗಿರುತ್ತದೆ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆ.

ಏಜನ್ಸಿಯ ವಿಷಯದಲ್ಲಿ ಮ್ಯಾನೇಜಿಂಗ್ ಏಜೆಂಟರಾಗಿ ಮೊದಲಿನಲ್ಲಿ ನೇಮಕಮಾಡಲ್ಪಟ್ಟಿದ್ದ "ಟಾಟಾ ಐರನ್ ಅಂಡ್ ಸ್ಟೀಲ್ ಕಂಪೆನಿ" ಯವರೊಡನೆ 1917 ನೆಯ ಇಸವಿಯಲ್ಲಿ ಮಾಡಿಕೊಂಡಿದ್ದ ಒಪ್ಪಂದವು ಪರಸ್ಪರ ಸಮ್ಮತಿಯಿಂದ ರದ್ದು ಮಾಡಲ್ಪಟ್ಟ ಕಾರಣ ಅಡ್ವೈಸರಿ ಸಭೆ
ಯನ್ನು ಈ ವರುಷದ ಜೂನ್ ತಿಂಗಳಲ್ಲಿ ಪುನರ್ವ್ಯವಸ್ಥೆ ಮಾಡಲಾಯಿತು. ಪ್ರಕೃತದಲ್ಲಿ ಈ ಸಭೆಯ ಮೆಂಬರುಗಳನ್ನೆಲ್ಲಾ ಈಗ ಸರ್ಕಾರದವರೇ ನೇಮಕಮಾಡುತ್ತಾರೆ.

ಕಬ್ಬಿಣದ ಕಾರ್ಖಾನೆಗಾಗಿ ಪ್ರಸಕ್ತವರ್ಷದಲ್ಲಿ ಮುಟ್ಟಿದ ಮೂಲಧನದ ವೆಚ್ಚವು 10½ ಲಕ್ಷ ರೂ. ಮತ್ತು ಈ ಏರ್ಪಾಡಿಗಾಗಿ ಪ್ರಾರಂಭದಿಂದ ಪ್ರಸಕ್ತವರ್ಷದ ಆಖೈರಿನವರೆಗೆ ಆಗಿರುವ ಮೂಲಧನದ ವೆಚ್ಚವು 176.96 ಲಕ್ಷ ರೂ.

ದಾಸ್ತಾನಿದ್ದ ಸಾಮಾನುಗಳಿಗೆ ಚಾಲ್ತಿದರಗಳ ಪ್ರಕಾರ ಬೆಲೆಯನ್ನು ಕಟ್ಟಲಾಗಿ, ಸದರಿ ವರುಷದ ಹುಟ್ಟುವಳಿಯು 12,11,071 ರೂ. ಗಳಾಯಿತು; ವೆಚ್ಚವು 16,77,205 ರೂ. ಗಳಾಯಿತು. ಈ ರೀತಿಯಾಗಿ ಕೆಲಸದಲ್ಲಿ 4,66,134 ರೂ. ಗಳ ನಷ್ಟವುಂಟಾಯಿತು. ಈ ನಷ್ಟದಲ್ಲಿ ಬ್ಲಾಸ್ಟ್ ಫರ್ನೆಸ್ಸ್ ಕೆಟ್ಟುಹೋಗಿ ಕೆಲಸಗಳು ನಿಂತುಹೋಗಿದ್ದಾಗ ಸಿಬ್ಬಂದಿಗಾಗಿ ಸುಮ್ಮನೆ ವೆಚ್ಚಮಾಡಬೇಕಾಗಿ ಬಂದ 1,29,971 ರೂ. ಗಳು ಸೇರಿರುತ್ತವೆ. ಕಬ್ಬಿಣವನ್ನು ತಯಾರ್ಮಾಡಲು ತಗಲುವ ಖರ್ಚಿಗಿಂತಲೂ ಕಬ್ಬಿಣದ ಮಾರಾಟದ ಧಾರಣೆಯು ಬಹುಕಡಮೆಯಾಗಿ ಅಸಾಧಾರಣವಾದ ರೀತಿಯಲ್ಲಿ ತಗ್ಗಿದುದೇ, ಮಿಕ್ಕ ನಷ್ಟಕ್ಕೆ ಮುಖ್ಯಕಾರಣವಾಗಿದೆ. ಕಬ್ಬಿಣದ ಉತ್ಪತ್ತಿಯು ದಿನೇದಿನೇ ಹೆಚ್ಚಿದುದೂ, ಕಬ್ಬಿಣದ ತಯಾರಿಗೆ ಮುಟ್ಟುವ ಖರ್ಚು ದಿನಕ್ರಮೇಣ ಕಡಮೆಯಾದುದೂ ಸಹ, ಪ್ರಸಕ್ತವರ್ಷದಲ್ಲಿ ನಡೆದ ಕೆಲಸದ ಫಲಿತಾಂಶಗಳಾಗಿ ಕಂಡುಬಂದುವು.

ಕೀಲೆಣ್ಣೆಯನ್ನು ಭಟ್ಟಿ ಇಳಿಸುವ ಯಂತ್ರವನ್ನೂ, ಮತ್ತು ಮಿಥೈಲ್ ಆಲ್ಕೋಹಾಲನ್ನು ಶುದ್ಧಿಮಾಡುವುದಕ್ಕಾಗಿ ಯಂತ್ರಸಾಮಗ್ರಿಗಳನ್ನೂ, ಸ್ಥಾಪಿಸಲು ಸರ್ಕಾರದವರು ಮಂಜೂರಾತಿಯನ್ನು ಕೊಟ್ಟಿರುತ್ತಾರೆ. ಸದರಿ ಯಂತ್ರಸಾಮಗ್ರಿಗಳನ್ನು ಅಮೇರಿಕಾ ದೇಶದಿಂದ ತರಿಸುವುದಕ್ಕೆ ಏರ್ಪಾಡುಮಾಡಿದೆ. ಮುಂದಣ ಜೂನ್ ತಿಂಗಳ ಆಖೈರಿನೊಳಗಾಗಿಯೇ ಸದರಿ ಯಂತ್ರಗಳಿಂದ ಕೆಲಸವನ್ನು ಆರಂಭಿಸಲಾಗುವುದೆಂದು ನಿರೀಕ್ಷಿಸಿದೆ. ಎರಕದ ಸಾಮಾನುಗಳನ್ನು, ಅದರಲ್ಲಿಯೂ ವಿಶೇಷವಾಗಿ, ದಕ್ಷಿಣ ಇಂಡಿಯಾ ದೇಶದಲ್ಲಿ ಗಿರಾಕಿ ಸಿಕ್ಕುವ ಎರಕದ ಕಬ್ಬಿಣದ ಕೊಳವೆಗಳನ್ನು ತಯಾರ್ಮಾಡುವುದಕ್ಕಾಗಿ 3 ಲಕ್ಷ ರೂ. ಗಳ ಅಂದಾಜು ಖರ್ಚಿನಲ್ಲಿ ಎರಕದ ಕಾರ್ಖಾನೆಯನ್ನು ಅಭಿವೃದ್ಧಿಪಡಿಸಬೇಕೆಂದು ತೀರ್ಮಾನಿಸಿದೆ. ಈ ಕಾರ್ಖಾನೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಒಂದು ಕಾರ್ಯಕ್ರಮವನ್ನು ರಚಿಸಲಾಗಿದೆ. ಅದು ಈಗ ನಿಪುಣರ ಪರಿಶೀಲನೆಯಲ್ಲಿದೆ.

ನಿರಂತರವೂ ಗಮನದಲ್ಲಿಟ್ಟುಕೊಂಡಿರುವ ವಿಶೇಷವಿಚಾರಗಳು.

ಚಾಲ್ತಿವರುಷದೊಡನೆ ಮುಗಿಯುವ ಮೂರು ವರುಷಗಳ ಆಖೈರಿನಲ್ಲಿ ಸ್ಥಿತಿಗತಿಗಳು ಹೇಗಿರುವುವೆಂಬುದನ್ನು ಈಗ ನಾವು ಸಂಗ್ರಹಿಸಿ ತಿಳಿಸುತ್ತೇವೆ. ಹುಟ್ಟುವಳಿಯ ಲೆಕ್ಕವು ಒಟ್ಟಿನಲ್ಲಿ ಪೂರ್ತಿಯಾಗಿ ಸಮತೂಕಕ್ಕೆ ಬಂದಿರುತ್ತದೆ; ಸಾಮಾನ್ಯಾಡಳಿತದ ಆಯವ್ಯಯಗಳ ಬಾಬಿನಲ್ಲಿಯೂ, ಲಾಭಕರವಾದ ಕಾಮಗಾರಿಗಳ ಆಯವ್ಯಯಗಳ ಬಾಬಿನಲ್ಲಿಯೂ, ನಮ್ಮ ನಿರೀಕ್ಷಣೆಗಳು ಬಹುಮಟ್ಟಿಗೆ ನೆರವೇರಿರುತ್ತವೆ ; ನಾವು ಅನೇಕವೇಳೆ ಅರಿಕೆಮಾಡಿಕೊಂಡಿರುವಂತೆ ಪೊಗದಿಯ ಹಣವು ಕಡಮೆಯಾಗುವುದಾದರೆ, ಆಗ್ಗ ಸಾಮಾನ್ಯಾಡಳಿತದ ಬಾಬಿನ ಆಯವ್ಯಯಗಳು ಸಮತೂಕಕ್ಕೆ ಬಂದು ಸದರಿ ಬಾಬಿನ ಹುಟ್ಟುವಳಿಯಿಂದಲೇ ಅದರ ವೆಚ್ಚವು ಕಳೆಯುವಂತಾಗುವುದೆಂದು ಭರವಸೆಯಿಡಬಹುದಾಗಿದೆ. ಲಾಭಕರವಾದ ಕಾಮಗಾರಿಗಳ ಬಾಬಿನ ಆಯವ್ಯಯಗಳ ವಿಚಾರದಲ್ಲಿ ಹಿಂದೆ ಆದಾಯಕ್ಕಿಂತಲೂ ವೆಚ್ಚವು 8 ಲಕ್ಷ ರೂ. ಹೆಚ್ಚಾಗುತ್ತಿದ್ದುದನ್ನು ತಪ್ಪಿಸಿ, ಈಗ ಸದರಿ ಬಾಬಿನ ಆಯವ್ಯಯವನ್ನು, ವೆಚ್ಚವು ಕಳೆದು 7 ಲಕ್ಷ ರೂ. ಮಿಗುತಾಯವಾಗುವ ಸ್ಥಿತಿಗೆ ತರಲಾಗಿದೆ. ಸಾಲೀಯಾನಾ ಹುಟ್ಟುವಳಿಯಿಂದ ಪ್ರತಿವರ್ಷವೂ ಪ್ರತ್ಯೇಕವಾಗಿ ತೆಗೆದು ಲೋನ್ ಸಿಂಕಿಂಗ್ ಫಂಡುಗಳಿಗೆ ಜಮೆ ಕಟ್ಟುತ್ತಿರುವ ಮೊಬಲಗು ಅದರಮೇಲಿನ ಬಡ್ಡಿಯೊಂದಿಗೆ ಚಾಲ್ತಿಸಾಲಿನ ಆಖೈರಿಗೆ ಒಟ್ಟು 92 ಲಕ್ಷ ರೂ. ಬರುವುದು. ಈ ಮೊಬಲಗಿಗೆ ಚಕ್ರಬಡ್ಡಿಯೂ ಸೇರಿದರೆ 350 ಲಕ್ಷ ರೂ. ಸಾಲದ ಪೈಕಿ ಮೂರರಲ್ಲಿ ಒಂದು ಭಾಗಕ್ಕಿಂತಲೂ ಹೆಚ್ಚಾಗಿ ಸಾಲವನ್ನು ತೀರಿಸಲು ತಕ್ಕಷ್ಟು ಹಣವು ಒದಗಿಸಲ್ಪಟ್ಟಿದೆಯೆಂದು ಹೇಳಬಹುದಾಗಿದೆ.

ಲಾಭಕರವಾದ ಎಲ್ಲಾ ಕಾಮಗಾರಿಗಳ ಹುಟ್ಟುವಳಿಯ ಆಡಳಿತವನ್ನೇ ಒಂದು ಬಾಬಾಗಿ ಪರಿಗಣಿಸಿ ಅವುಗಳಿಗೆ ಒದಗಿಸಿರುವ ಮೂಲಧನದಮೇಲಿನ ಬಡ್ಡಿಗೂ ಮತ್ತು ಸಿಂಕಿಂಗ್ ಫಂಡಿಗೂ ಕೊಡಬೇಕಾದ ಮೊಬಲಗನ್ನು ಸದರಿ ಬಾಬಿನಿಂದಲೇ ಸಂದಾಯಮಾಡತಕ್ಕುದೆಂದು ವಿಧಾಯಕಮಾಡಬೇಕೆಂಬುದು ನಮ್ಮ ಉದ್ದೇಶವಾಗಿರುತ್ತದೆ. ಮೊದಲ್ನೆಂದ ಮೇರೆ ಆಯವ್ಯಯಗಳನ್ನು ಪ್ರತ್ಯೇಕಿಸುವ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ಅನುಸರಿಸಬೇಕೆಂದಿರುವ ಕಾರ್ಯಕ್ರಮಕ್ಕಿಂತಲೂ ನಾವು ಸದರೀ ವಿಚಾರದಲ್ಲಿ ಅನುಸರಿಸಬೇಕೆಂದಿರುವುದರಲ್ಲಿ ವಿಶೇಷಾಂಶವೊಂದುಂಟು; ಎಂದರೆ, ಲಾಭಕರವಾದ ಕಾಮಗಾರಿಗಳ ಆಯವ್ಯಯಗಳ ಒಟ್ಟು ಬಾಬನ್ನೇ ಸಾಮಾನ್ಯಾಡಳಿತದ ಆಯವ್ಯಯಗಳ ಬಾಬಿನಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿ, ಸ್ವತಂತ್ರವಾಗಿಡಬೇಕೆಂಬುದೇ ನಮ್ಮ ಉದ್ದೇಶವಾಗಿರುತ್ತದೆ; ಇಲ್ಲಿನ ಕಾರ್ಯಕ್ರಮದಲ್ಲಿ ಒಂದು ಬಾಬಿನಿಂದ ಮತ್ತೊಂದು ಬಾಬಿಗೆ ಮೊಬಲಗಳನ್ನು ಪಾವತಿಮಾಡಬೇಕೆಂಬ ನಿಯಮವೇ ಇರುವುದಿಲ್ಲ. ಅಲ್ಲದೆ ಲಾಭಕರವಾದ ಕಾಮಗಾರಿಗಳ ಬಾಬಿನಲ್ಲಿ ವೆಚ್ಚವು ಕಳೆದು ಮಿಗುತಾಯವಾಗುವ ಒಟ್ಟುಮೊಬಲಗನ್ನು ಹಾಲಿ ಇರುವ ಕಾಮಗಾರಿಗಳ ಮೇಲ್ಪಾಡಿಗೂ, ಮತ್ತು ಲಾಭಕರವಾದ ಹೊಸ ಕಾಮಗಾರಿಗಳಿಗೆ ಹಣವನ್ನು ಒದಗಿಸುವುದಕ್ಕೂ, ವಿನಿಯೋಗಿಸಬೇಕೆಂಬುದೇ ನಮ್ಮ ಉದ್ದೇಶವಾಗಿರುತ್ತದೆ.

ಅತ್ಯವಶ್ಯವಾಗಿ ನೆರವೇರಿಸಬೇಕಾದ "ರಿನ್ಯೂಯಲ್ ಕಾಮಗಾರಿಗಳನ್ನು" ಎಂದರೆ, ಶಿಥಿಲವಾಗಿದ್ದ ಹಳೆಯ ಕಂಬಿಗಳೇ ಮುಂತಾದುವುಗಳಿಗೆ ಬದಲಾಗಿ ಹೊಸ ಲೈನುಗಳನ್ನು ಒದಗಿಸುವ ಕೆಲಸವನ್ನು ನೆರವೇರಿಸುವುದು ಅಸಾಧ್ಯವಾಗಿ ಬಹುಕಾಲದವರೆಗೂ ನಿಂತು ಹೋದುದೇ ಅದರ ಪರಿಣಾಮ ಫಲವಾಯಿತು. ರೈಲ್ವೆಗಳಿಗೆ ಚಾಲ್ತಿ ವರುಷದ ಲಾಗಾಯಿತು ಒಂದು ಡಿಪ್ರೀಸಿಯೇಷನ್ ಫಂಡನ್ನು ಏರ್ಪಡಿಸುವುದರ ಮೂಲಕ ಈ ನ್ಯೂನತೆಯನ್ನು ಪರಿಹರಿಸಲಾಗಿದೆ. ಹೀಗೆ ಮಾಡಿರುವುದು, ರೈಲ್ವೆಬಾಬಿನ ಆಯವ್ಯಯಗಳನ್ನು ಸಾಮಾನ್ಯಾಡಳಿತದ ಬಾಬಿನ ಆಯವ್ಯಯಗಳಿಂದ ಪ್ರತ್ಯೇಕಿಸುವುದಕ್ಕಾಗಿ ನಡೆಸಬೇಕಾದ ಮುಖ್ಯ ಕಾರ್ಯಗಳಲ್ಲೊಂದಾಗಿರುತ್ತದೆ.

ಇದುವರೆಗೂ ಹುಟ್ಟುವಳಿಯ ಬಾಬಿನ ಆಡಳಿತವನ್ನು ಕುರಿತು ಸಾಮಾನ್ಯವಾಗಿ ಪ್ರಸ್ತಾಪಿಸಿದುದಾಯಿತು. ಈಗ ಮೂಲಧನದ ಕಾಮಗಾರಿಗಳ ಆಯವ್ಯಯದ ವಿಚಾರವನ್ನು ಕುರಿತು ಕೆಲವು ಸಂಗತಿಗಳನ್ನು ತಿಳಿಸುತ್ತೇವೆ. ದೇಶದ ಸಾಂಪತ್ತಿಕ ಸಾಧನಗಳ ಅಭಿವೃದ್ಧಿಗೆ ಮೂಲಧನದ ಕಾಮಗಾರಿಗಳನ್ನು ನಡೆಸಬೇಕಾದುದು ಅತ್ಯಾವಶ್ಯಕ ; ಅಂಥಾ ಕಾಮಗಾರಿಗಳಿಗಾಗಿ ನಿರಂತರವೂ ಹಣವನ್ನು ಒದಗಿಸುತ್ತಲೇ ಇರಬೇಕಾಗುವುದು. ರೈಲು ಮಾರ್ಗಗಳು, ನೀರಾವರಿ ಕಾಮಗಾರಿಗಳು, ವಿದ್ಯುಚ್ಛಕ್ತಿಯ ಏರ್ಪಾಡುಗಳು, ಕೈಗಾರಿಕೆಯ ಕೆಲಸಗಳು ಇವೇ ಮೊದಲಾದ ಅನೇಕ ಬಂಡವಾಳದ ಕಾಮಗಾರಿಗಳು ನಮ್ಮಲ್ಲಿ ಈಗ ನಡೆಯುತ್ತಾ ಇವೆ. ಅವುಗಳಲ್ಲಿ ಕೆಲವು ಬಾಬುಗಳಿಂದ ಇನ್ನೂ ಆದಾಯವು ಬರುವುದಕ್ಕೆ ಪ್ರಾರಂಭವಾಗಿ
ಲ್ಲದೇ ಇದ್ದರೂ ಪ್ರತಿವರ್ಷವೂ ಅವುಗಳಿಗಾಗಿ ಬಂಡವಾಳವನ್ನು ಹಾಕುತ್ತಲೇ ಇರಬೇಕಾಗಿದೆ. ಹಣಕಾಸಿಗೆ ಮುಗ್ಗಟ್ಟಾಗಿರುವುದರಿಂದ ಹೊಸದಾಗಿ ರೈಲುಹಾಕಿಸುವ ಕೆಲಸವನ್ನು ಇನ್ನೂ ಸ್ವಲ್ಪ ಕಾಲ ನಿಲ್ಲಿಸಿರಬೇಕಾಗಿರುತ್ತದೆ. ಸಂಸ್ಥಾನದಲ್ಲಿ ಇನ್ನೂ ಅನೇಕ ಸ್ಥಳಗಳಿಗೆ ರೈಲುಹಾಕಿಸುವುದು ಆವಶ್ಯಕ. ಅವುಗಳ ಪೈಕಿ ಲಾಭದಾಯಕವಾಗಿ ಪರಿಣಮಿಸಬಹುದಾದ ಸ್ಥಳಗಳಲ್ಲಿ ಕಾಮಗಾರಿಯನ್ನು ಪ್ರಾರಂಭಮಾಡುವುದು ಯುಕ್ತವಾಗಿದೆ. ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಬೇಕೆಂಬುದಾಗಿ ದರಖಾಸ್ತುಗಳು ದಿನೇದಿನೇ ಹೆಚ್ಚು ಹೆಚ್ಚಾಗಿ ಬರುತ್ತಾ ಇವೆ. ಹೀಗೆ ವಿದ್ಯುಚ್ಛಕ್ತಿಯು ಬೇಕಾಗಿರುವ ಕಡೆಗಳಿಗೆಲ್ಲಾ ಅದನ್ನು ಒದಗಿಸಲು ಅನುಕೂಲಿಸುವಂತೆ ಈಗಿರುವುದಕ್ಕಿಂತಲೂ ಹೆಚ್ಚಾಗಿ ಅದನ್ನು ಉತ್ಪತ್ತಿಮಾಡಬೇಕಾದುದು ಆವಶ್ಯವಾಗಿರುತ್ತದೆ. ಇದರಿಂದ ಸಂಸ್ಥಾನದ ಹುಟ್ಟುವಳಿಯು ಹೆಚ್ಚುತ್ತದೆ; ಅಲ್ಲದೆ ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಯುವ ಕಾರ್ಯಕಲಾಪಗಳಿಗೆ ಹೆಚ್ಚು ಪ್ರೋತ್ಸಾಹವನ್ನುಂಟುಮಾಡಿದಂತಾಗುತ್ತದೆ. ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಈಗ ಎರಡು ಏರ್ಪಾಡುಗಳು ಪರ್ಯಾಲೋಚನೆಯಲ್ಲಿವೆ:—

(1) ಕೃಷ್ಣರಾಜಸಾಗರದ ಅಣೆಕಟ್ಟಿನ ಬಳಿಯಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವುದು, (2) ಮೇಕೆದಾಟಿನ ಕೆಳಭಾಗದಲ್ಲಿ ಕಾವೇರೀನದಿಯಲ್ಲಿ ಮತ್ತೊಂದುಕಡೆ ವಿದ್ಯುಚ್ಛಕ್ತಿಯನ್ನುತ್ಪತ್ತಿಮಾಡುವುದು. ಮದ್ರಾಸ್ ಸರ್ಕಾರದವರೊಡನೆ ಈಚೆಗೆ ಮಾಡಿಕೊಂಡ ಒಪ್ಪಂದದ ಮೇರೆಗೆ, ಮೇಲುಮಟ್ಟದ ನಾಲೆಯ ಕೆಳಗೆ 1,25,000 ಎಕರೆಗಳ ಜತೆಗೆ ಇನ್ನೂ ಹೆಚ್ಚಾಗಿ 1,10,000 ಎಕರೆಗಳಿಗೆ ನೀರು ಕೊಡುವುದಕ್ಕೆ ತಕ್ಕ ಏರ್ಪಾಡು ಮಾಡಲು ಸಾಧ್ಯವಾಗುತ್ತದೆ. ಬಹಳವಾಗಿ ಮೂಲಧನವನ್ನು ಹಾಕಿ ಕಟ್ಟಿಸಿರುವ ಈ ಅಣೆಕಟ್ಟಿನಲ್ಲಿ ಶೇಖರಿಸಿರುವ ಅತ್ಯಧಿಕ ಪರಿಮಾಣದ ನೀರನ್ನು ಜಮೀನು ಸಾಗುವಳಿ ಬಗ್ಗೆ ಉಪಯೋಗಿಸಬೇಕು. ನೀರು ಯಾವಯಾವ ಪ್ರದೇಶಕ್ಕೆ ಬೇಕೋ, ಆಯಾ ಸ್ಥಳಗಳಿಗೆಲ್ಲಾ ಅದನ್ನು ಸಾಗಿಸಲು ನಾಲೆಗಳನ್ನು ತೋಡಿಸುವ ವಿಷಯವನ್ನು ಶೀಘ್ರದಲ್ಲಿಯೇ ವ್ಯವಸ್ಥೆ ಮಾಡಬೇಕಾಗಿದೆ. ಇದನ್ನೆಲ್ಲಾ ನೋಡಿದರೆ ಮೊದಲು ಆರಂಭಿಸಲ್ಪಟ್ಟು ಈಗ ನಿರ್ವಾಹವಿಲ್ಲದೆ ನಡೆಸಬೇಕಾಗಿರುವ ಕಾಮಗಾರಿಗಳಿಗೋಸ್ಕರವೂ, ಮತ್ತು ಲಾಭಕರವಾಗಿ ಪರಿಣಮಿಸುವುವೆಂಬ ಅಥವಾ ಪ್ರಜೆಗಳಿಗೆ ಪ್ರಯೋಜನವನ್ನುಂಟುಮಾಡುವುವೆಂಬ ಕಾರಣದಿಂದ ನೆರವೇರಿಸತಕ್ಕುದು ಯುಕ್ತವಾಗಿರುವ ಕಾಮಗಾರಿಗಳಿಗೋಸ್ಕರವೂ, ಬಹಳವಾಗಿ ಬಂಡವಾಳವನ್ನೊದಗಿಸಿ ಕೆಲಸ ಮಾಡಬೇಕಾಗಿದೆಯೆಂಬುದು ವ್ಯಕ್ತವಾಗುತ್ತದೆ. ವೆಚ್ಚಮಾಡಿದ ಹಣಕ್ಕೆ ಸಂಪೂರ್ಣವಾಗಿ ಪ್ರತಿಫಲವನ್ನು ಕೊಡತಕ್ಕ ಕಾಮಗಾರಿಗಳಿಗಾಗಿ ಸಾಲಮಾಡಿ ಹಣ ಒದಗಿಸುವುದೇನೋ ನ್ಯಾಯಸಮ್ಮತವಾಗಿರಬಹುದು. ಆದರೆ, ದೇಶಾಭ್ಯುದಯಕ್ಕೆ ಅತ್ಯವಶ್ಯವಾಗಿದ್ದಾಗ್ಗೂ ಬಂಡವಾಳದಮೇಲೆ ಪೂರ್ತಾ ಬಡ್ಡಿಯನ್ನು ಕೊಡುವುದಕ್ಕೂ ಸಹ ತಕ್ಕಷ್ಟು ಉತ್ಪತ್ತಿಯೂ ಬರಲಾರದಂಥಾ ನೀರಾವರಿಕಾಮಗಾರಿಗಳಿಗೆ ಸಾಲಮಾಡಿ ಬಂಡವಾಳವನ್ನು ಒದಗಿಸುವುದು ಅನುಚಿತ ; ಏನಿದ್ದರೂ, ಅದನ್ನು ಇತರ ವಿಧದಲ್ಲಿ ಒದಗಿಸುವ ಮಾರ್ಗವನ್ನು ಹುಡುಕುವುದೇ ಯುಕ್ತವಾಗಿರುತ್ತದೆ. ಶೀಘ್ರದಲ್ಲಿಯೇ ನಡೆಸಬೇಕಾಗಿರುವ ಬಂಡವಾಳದ ಕಾಮಗಾರಿಗಳಿಗಾಗಿ ಹಣವನ್ನು ಒದಗಿಸಬೇಕಾದ ವಿಷಯವನ್ನು ಜಾಗ್ರತೆಯಾಗಿಯೂ, ಮತ್ತು ಪ್ರಬಲವಾಗಿಯೂ ಯೋಚನೆ ಮಾಡಬೇಕಾಗಿದೆ. ಈ ಅಂಶವನ್ನು ಸರ್ಕಾರದವರು ಅತ್ಯಾಸಕ್ತಿಯಿಂದ ಪರ್ಯಾಲೋಚನೆಯಲ್ಲಿಟ್ಟುಕೊಂಡಿರುತ್ತಾರೆ.

ಕಾವೇರಿನದಿಯ ನೀರಿಗೆ ಸಂಬಂಧಪಟ್ಟ ಪಂಚಾಯತಿಯ ವಿಚಾರ.

1924ನೇ ಇಸವಿ ಫೆಬ್ರವರಿ 12ನೇ ತಾರೀಖಿನ ದಿನ ಬೆಂಗಳೂರಿನಲ್ಲಿ ಇಂಜನಿಯರಿಂಗ್ ಆಫೀಸರುಗಳು ಆಖೈರಾಗಿ ಮತ್ತೊಂದುಸಾರಿ ಸಭೆ ಸೇರತಕ್ಕುದೆಂದು ಒಪ್ಪಂದವಾಯಿತು. ಮೂರು ದಿವಸಗಳವರೆಗೆ ಆಮೂಲಾಗ್ರವಾಗಿ ಚರ್ಚೆಯು ನಡೆದ ನಂತರ, ಉಭಯ ಸರ್ಕಾರಗಳ ಇಂಜನಿಯರಿಂಗ್ ಆಫೀಸರುಗಳೂ ಆ ತಾರೀಖಿನವರೆಗೆ ಒಪ್ಪಿ ರುಜುಮಾಡಿದ್ದ ಎಲ್ಲಾ ಚರ್ಚಾಂಶಗಳ ತೀರ್ಮಾನಗಳನ್ನೂ ಒಳಗೊಂಡ ಒಂದು ಸಮಗ್ರವಾದ ಒಪ್ಪಂದವು ಬರೆಯಲ್ಪಟ್ಟಿತು. ಇದನ್ನು ಉಭಯ ಸರ್ಕಾರದವರೂ ಅಂಗೀಕರಿಸಿದರು ; ಮೈಸೂರು ಸರ್ಕಾರದವರ ಪರವಾಗಿ ಅದಕ್ಕೆ ರುಜು ಮಾಡುವುದಕ್ಕಾಗಿ ಮದ್ರಾಸಿಗೆ ಹೋಗಬೇಕೆಂದು ಶ್ರೀಮನ್ಮಹಾರಾಜರವರು ನಮಗೆ ಆಜ್ಞಾಪಿಸಿದರು. ಈ ಒಪ್ಪಂದವು ಇಂಡಿಯಾ ಸ್ಟೇಟ್ ಸೆಕ್ರಿಟರಿಯವರಿಂದ ಮಂಜೂರಾಗಿ ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಟ್ಟಿರುವುದರಿಂದ, ಈ ವಿಷಯದಲ್ಲಿ ಮತ್ತೇನನ್ನೂ ಹೇಳಬೇಕಾದ ಪ್ರಕೃತವಿರುವುದಿಲ್ಲ. ಈ ಹದಿನಾಲ್ಕು ವರುಷಗಳಿಂದಲೂ ನಡೆಯುತ್ತಿದ್ದ ವಿವಾದವು ಈ ಒಪ್ಪಂದದಿಂದ ತೀರ್ಮಾನಕ್ಕೆ ಬಂದು ಕೊನೆಮುಟ್ಟಿತು ; ಈ ತೀರ್ಮಾನವು ನಡೆದುದು, ಉಭಯ ಸರ್ಕಾರದವರೂ ತಮ್ಮತಮ್ಮ ಹಿತಸಾಧನೆಯ ಅಂಶಗಳನ್ನೂ, ತಮ್ಮ ಹಕ್ಕು ಬಾಧ್ಯತೆಗಳನ್ನೂ ಉಳಿಸಿ ಕಾಪಾಡಿಕೊಳ್ಳುವುದರಲ್ಲಿ ಪರಸ್ಪರವಾಗಿ ಆದರ ಪುರಸ್ಸರವಾದ ಸಹಕಾರಭಾವದಿಂದ ಕೂಡಿ ವರ್ತಿಸುವರೆಂಬುದಕ್ಕೆ ನಿದರ್ಶಕವಾಗಿರುತ್ತದೆ ; ಈ ತೀರ್ಮಾನದಲ್ಲಿ ವ್ಯವಸ್ಥೆಯಾದ ಹಕ್ಕು ಬಾಧ್ಯತೆಗಳೇ ಮುಂತಾದ ವಿಚಾರಗಳ ದೆಸೆಯಿಂದ ಶ್ರೀಮನ್ಮಹಾರಾಜರವರ ಪ್ರಜೆಗಳಿಗೂ, ಮದರಾಸು ಸರ್ಕಾರಕ್ಕೆ ಸೇರಿದ ಪ್ರಜೆಗಳಿಗೂ, ಉಭಯತ್ರರಿಗೂ ಅಭ್ಯುದಯವೂ, ಮೇಲ್ಮೆಯೂ, ಉಂಟಾಗುವುದರಲ್ಲಿ ಲೇಶವೂ ಸಂಶಯವಿಲ್ಲ.

ಮಲೆನಾಡು ಅಭಿವೃದ್ಧಿಯ ಏರ್ಪಾಡು.

ಕಳೆದ ಅಕ್ಟೋಬರಿನಲ್ಲಿ ನಾವು ಮಾಡಿದ ಭಾಷಣದಲ್ಲಿ ವಾಗ್ದಾನಮಾಡಿದ್ದ ಪ್ರಕಾರ, ಮಲೆನಾಡಿನ ಅಭಿವೃದ್ಧಿಯ ವಿಷಯವನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಿ ನೋಡಿ, ಸದರಿ ವಿಚಾರದಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮವನ್ನು ಸೂಚಿಸಿ, ಈಚೆಗೆ ಸ್ಪಷ್ಟವಾಗಿ ಒಂದು ಸರ್ಕಾರಿ ಹುಕುಮನ್ನು ಸಾದರ್ಮಾಡಲಾಗಿದೆ. ಈಚಿನ ಸಾಲುಗಳಲ್ಲಿ ಹಣಕಾಸಿನ ಮುಗ್ಗಟ್ಟಿನ ದೆಸೆಯಿಂದ ಕಡಮೆಯಾಗಿ ಗ್ರಾಂಟು ಮೊಬಲಗನ್ನು ಕೊಟ್ಟುಕೊಂಡೇ ಈ ಕೆಲಸವನ್ನು ನೆರವೇರಿಸಬೇಕಾಗಿದ್ದಿತು. ಆದರೆ, ಚಾಲ್ತಿ ಸಾಲಿನಲ್ಲಿ ಈ ಏರ್ಪಾಡಿಗಾಗಿ ಕೊಡತಕ್ಕ ಗ್ರಾಂಟನ್ನು 45,000 ರೂ. ಗಳಿಂದ, 1,03,000 ರೂ. ಗಳಿಗೆ ಹೆಚ್ಚಿಸಲಾಗಿದೆ. ಪಬ್ಲಿಕ್‌ವರ್ಕ್ಸ್ ಸರ್ವೆಯನ್ನು ಮಾಡುವಂತೆ ಈ ಹುಕುಮಿನಲ್ಲಿ ವಿಧಾಯಕಮಾಡಿರುವುದರ ಜತೆಗೆ, ರಸ್ತೆ ವಗೈರೆಗಳನ್ನು ಉತ್ತಮಪಡಿಸುವುದು, ಕೈಗಾರಿಕೆ ಪಾಠಶಾಲೆಗಳಲ್ಲಿ ಕಸಬುದಾರಿ ತರಗತಿಗಳನ್ನು ಸ್ಥಾಪಿಸುವುದು, ವಿಶೇಷ ಸ್ವಭಾವದ ವಿದ್ಯಾರ್ಥಿವೇತನಗಳನ್ನು ಕೊಡುವುದು, ಮತ್ತು ಹೈಸ್ಕೂಲು ವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸುವುದು, ಇವುಗಳಿಗೂ ಅವಕಾಶವನ್ನು ಕಲ್ಪಿಸಲಾಗಿದೆ, ಪ್ರತಿಯೊಂದು ಮಲೆನಾಡು ಡಿಸ್ಟ್ರಿಕ್ಟಿನಲ್ಲಿಯೂ ಕಡಿಮೆಪಕ್ಷ ಒಂದು ಮಾದರಿ ತಾಲ್ಲೂಕಿನ ಸಾಂಪತ್ತಿಕಸ್ಥಿತಿಗಳ ಪರಿಶೀಲನೆಯನ್ನಾದರೂ ಕೂಲಂಕಷವಾಗಿ ನೆರವೇರಿಸಬೇಕೆಂದೂ ವಿಧಾಯಕ ಮಾಡಿದೆ ; ಈ ಕೆಲಸಕ್ಕಾಗಿ ಪ್ರತ್ಯೇಕವಾಗಿ ಒಬ್ಬ ಆಫೀಸರನ್ನು ನೇಮಕ ಮಾಡಲಾಗುವುದೆಂದೂ ಸಹ ಸದರಿ ಹುಕುಮಿನಲ್ಲಿ ವಿಧಾಯಕ ಮಾಡಲಾಗಿದೆ.

ರಿಟ್ರೆಂಚ್‌ಮೆಂಟ್.

ಈಗ ದೊರೆತಿರುವ ಲೆಕ್ಕಗಳಿಂದ, ಹಿಂದಣ ವರ್ಷಗಳಿಗೆ ಸಂಬಂಧಪಟ್ಟ [illegible] ಹೊಸದಾಗಿ ಕೆಲವು [illegible] ವಿಚಾರದಲ್ಲಿ ಸಾಲವನ್ನು [illegible] ಗೊತ್ತಾಗುತ್ತದೆ.

1923 ನೆಯ ಇಸವಿ ಜುಲೈ 1 ನೇ ತಾರೀಖಿನ ಲಾಗಾಯತು 1924 ನೆಯ ಇಸವಿ ಜೂನ್ 30 ನೆಯ ತಾರೀಖಿನ ವರೆಗೆ ಬೋರ್ಡಿನವರಿಗೆ ವರದಿಮಾಡಿರುವ 343 ಕೆಲಸಗಳ ಪೈಕಿ, 167 ಕೆಲಸಗಳನ್ನು ಹಿಂದುಳಿದ ಪಂಗಡಗಳಿಗೆ ಸೇರಿದ ಉಮೇದುವಾರರುಗಳಿಗೆ ಕೊಡಲಾಯಿತು. ಈಚೆಗೆ ದಕ್ಷತೆಯಲ್ಲಿ ಕಡಮೆಯಾಗಿಹೋಗುತ್ತಿರುವಂತೆ ಕಂಡುಬರುತ್ತಿರುವ ಶೇಕದಾರಿ ನೌಕರಿಯನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿ, ಪ್ರತಿವರ್ಷವೂ 10 ಶೇಕದಾರಿ ಪ್ರೊಬೇಷನರುಗಳನ್ನು ಸೀದಾ ಹೊಸದಾಗಿ ಕೆಲಸಕ್ಕೆ ಸೇರಿಸಿಕೊಳ್ಳತಕ್ಕ ಏರ್ಪಾಡೊಂದನ್ನು ಸರ್ಕಾರದವರು ಮಂಜೂರ್ಮಾಡಿರುತ್ತಾರಲ್ಲದೆ ಚುನಾಯಿಸಲ್ಪಡತಕ್ಕ ಪ್ರತಿಮೂರು ಮಂದಿಗಳಲ್ಲಿ ಇಬ್ಬರು ಹಿಂದುಳಿದ ಪಂಗಡಗಳಿಗೆ ಸೇರಿದವರಾಗಿರಬೇಕೆಂದು ಹುಕುಂ ಮಾಡಿರುತ್ತಾರೆ. ಹಾಸನ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಜುಡಿಷಿಯಲ್ ಅಧಿಕಾರವನ್ನು ಪ್ರತ್ಯೇಕಿಸುವ ಏರ್ಪಾಡನ್ನು ಆಚರಣೆಗೆ ತಂದುದರಿಂದ ಉಂಟಾದ ಖಾಲೀ ಸ್ಥಾನಗಳನ್ನು ಭರ್ತಿಮಾಡುವುದರಲ್ಲಿ, ಏಳು ಹುದ್ದೆಗಳ ಪೈಕಿ ಐದನ್ನು, ನೇರವಾಗಿ ಹೊಸಬರನ್ನು ಕೆಲಸಕ್ಕೆ ನೇಮಕ ಮಾಡುವುದರ ಮೂಲಕವಾಗಿ ಹಿಂದುಳಿದ ಪಂಗಡಗಳ ಜನರಿಗೆ ಕೊಡಲಾಗಿದೆ. ರಾಜ್ಯಾಡಳಿತ ವಿಧಾನದಲ್ಲಿ ವಿಸ್ತರಿಸಲು ಯತ್ನವಿಲ್ಲದಂತೆ ಒದಗಿರುವ ಈಗಿನ ಪರಿಮಿತ ಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಇದುವರೆಗೆ ಸಾಧಿಸಿರುವ ಅಭಿವೃದ್ಧಿಯು ಬಹುಮಟ್ಟಿಗೆ ಸಮರ್ಪಕವಾಗಿರುವುದೆಂದು ಸರ್ಕಾರದವರು ಭಾವಿಸುತ್ತಾರೆ.

ನಮ್ಮ ಈಗಿನ ವಿದ್ಯಾಭ್ಯಾಸದ ಪದ್ಧತಿಯ ಮೂಲಕ ಉತ್ತೀರ್ಣರಾಗುವ ಗ್ರಾಜುಯೇಟುಗಳ ಮತ್ತು ಅಂಡರ್ ಗ್ರಾಜ್ಯುಯೇಟುಗಳ ಸಂಖ್ಯೆಯು ಹೆಚ್ಚಿ ಅವರಿಗಾಗಲಿ ಅಥವಾ ಸಂಸ್ಥಾನಕ್ಕಾಗಲಿ ಪ್ರಯೋಜನಕರವಾಗುವಂತೆ ಸರ್ಕಾರದ ನೌಕರಿಗೆ ತೆಗೆದುಕೊಳ್ಳಲು ಸಾಧ್ಯವಿಲ್ಲದಷ್ಟು ಮಟ್ಟಿಗೆ ಮಿತಿಮೀರಿ ಹೋಗಿರುತ್ತದೆ. ಹಣ ಕಾಸಿನ ಮುಗ್ಗಟ್ಟಿನ ದೆಸೆಯಿಂದ ಸರ್ಕಾರಿ ಇಲಾಖೆಗಳಲ್ಲಿ ಖರ್ಚನ್ನು ಖೋತಾಮಾಡಿದ ಕಾರಣ ಹೊಸಬರನ್ನು ಸರ್ಕಾರಿ ನೌಕರಿಗೆ ತೆಗೆದುಕೊಳ್ಳುವ ಅವಕಾಶವು ಬಹುಮಟ್ಟಿಗೆ ಕಡಮೆಯಾಗಿ ಹೋಗಿದೆ. ವಿದ್ಯಾವಂತರಾದ ಯುವಕರು ನಿರುದ್ಯೋಗಿಗಳಾಗಿರುವ ವಿಷಯವು ದಿನ ದಿನವೂ ಪ್ರಬಲವಾಗುತ್ತಾ ತೊಂದರೆಗೆಡುತ್ತಿದೆ. ವ್ಯಾಸಂಗಕ್ರಮವು ಕಾರ್ಯತಃ ಪ್ರಯೋಜನಕರವಾಗಿ ಪರಿಣಮಿಸುವಂತೆ ಅದರಲ್ಲಿ ತಿದ್ದುಪಾಟುಮಾಡುವುದೇ ಈ ದುರವಸ್ಥೆಯ ಪರಿಹಾರೋಪಾಯಗಳಲ್ಲೊಂದಾಗಿದೆ. ಇದರಿಂದ, ವಿದ್ಯಾರ್ಥಿಗಳ ಶಕ್ತಿ ಸಾಮರ್ಥ್ಯಗಳು ವಿಶೇಷ ಕಾರ್ಯಕಾರಿಯಾದ ಮತ್ತು ಲಾಭಕರವಾದ ಉದ್ಯೋಗಗಳಿಗೆ ಪ್ರಯೋಗಿಸಲ್ಪಡುವಂತಾಗುವುದು. ವಿದ್ಯಾಭ್ಯಾಸದ ಪಾಠಕ್ರಮದಲ್ಲಿ ಸ್ವಂತವಾಗಿ ಪ್ರಯೋಗಗಳನ್ನು ಮಾಡಿ ವಿಜ್ಞಾನ ವಿದ್ಯಾವ್ಯಾಸಂಗವನ್ನು ಮಾಡುವ ಕ್ರಮವನ್ನು ಸೇರಿಸುವುದರಿಂದ ವಿದ್ಯಾಭ್ಯಾಸ ವಿಚಾರದಲ್ಲಿ ವ್ಯಾಪಕತೆಯು ಹೆಚ್ಚಾಗುತ್ತದೆ; ಅಲ್ಲದೆ ಕೇವಲ ಪುಸ್ತಕ ಪಾಠವಾಗಿ ಪರಿಣಮಿಸುವ ನ್ಯೂನತೆಯು ಪರಿಹಾರವಾಗಲು ಕಾರಣವಾಗುತ್ತದೆ; ಮತ್ತು ಕಸಬುದಾರಿ ಶಿಕ್ಷಣವು ಅತಿಪ್ರಾಮುಖ್ಯವಾದುದೆಂಬ ವಿಚಾರವನ್ನು ಅಂಗೀಕರಿಸಲಾಗಿದೆ, ಎಸ್.ಎಸ್.ಎಲ್.ಸಿ. ಪಾಠಕ್ರಮದಲ್ಲಿ ಐಚ್ಛಿಕವಾದ ಕಸಬುದಾರಿ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿ ಈಚೆಗೆ ತಿದ್ದುಪಾಟು ಮಾಡಲಾಗಿದೆ. ಎಂಟ್ರೆನ್ಸ್ ಮತ್ತು ಯೂನಿವರ್ಸಿಟಿ ತರಗತಿಗಳಲ್ಲಿ ಕಸಬುದಾರಿ ಪಾಠಕ್ರಮವು ಇನ್ನೂ ಮುಂದುವರಿಯುವಂತೆ ಮಾಡುವ ವಿಚಾರವೂ ಸಹ ಪರ್ಯಾಲೋಚನೆಯಲ್ಲಿದೆ.

ವಿದ್ಯಾಭ್ಯಾಸಕ್ರಮದ ಪರಿಷ್ಕರಣ.

ವಿದ್ಯಾಭ್ಯಾಸದ ಮೆಮೋರ್ಯಾಂಡಂ ನೋಟಿಸ್ ಹುಕುಮಿನಲ್ಲಿ ವಿವರಿಸಿರುವ ಬಾಬುಗಳಿಗೋಸ್ಕರ 1920-21 ರಲ್ಲಿ ಬಡ್ಜೆಟ್ಟಿನಲ್ಲಿ ಒದಗಿಸಿದ್ದ 37 ಲಕ್ಷ ರೂ. ಗಳ ಸ್ಟೇಟ್ ಗ್ರ್ಯಾಂಟಿಗಿಂತಲೂ ಹೆಚ್ಚಾಗಿ 21,35,000 ರೂ. ಗಳು ವೆಚ್ಚವಾಗಬೇಕಾಗಬಹುದೆಂದು ಅಂದಾಜಾಗಿದ್ದಿತು. ದ್ರವ್ಯಾನುಕೂಲತೆಯಿಲ್ಲದೆ ಕಷ್ಟವಾಗಿದ್ದ ಕಾರಣ ಮುಂದೆ ಕೆಲವು ವರುಷಗಳವರೆಗೆ ಸ್ಟೇಟ್‌ಫಂಡುಗಳಿಂದ ಈ ಮೊತ್ತವನ್ನು ಒದಗಿಸುವುದು ಅಸಾಧ್ಯವೆಂದು ತೋರಿಬಂದಿತು. ಆದುದರಿಂದ, ಸದರಿ ಮೆಮೋರ್ಯಾಂಡಂ ಹುಕುಮಿನಲ್ಲಿ ನಮೂದಿಸಿದ್ದ ಪರಿಷ್ಕರಣಗಳನ್ನು ಆಚರಣೆಗೆ ತರಲು ಅವಶ್ಯವಾಗುವ ವೆಚ್ಚಕ್ಕೆ ಡಿಸ್ಟ್ರಿಕ್ಟ್ ಬೋರ್ಡುಗಳೂ, ಮುನಿಸಿಪಾಲಿಟಿಗಳೂ, ವಿದ್ಯಾಭ್ಯಾಸದ ತೆರಿಗೆಯನ್ನು ಹಾಕುವುದರ ಮೂಲಕವೂ, ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಹಿಂದೆಯೇ ವಹಿಸಿಕೊಟ್ಟಿದ್ದ ಮೊಹತರ್ಫಾ ಮತ್ತು ಜನರಲ್ ಲೋಕಲ್ ಫಂಡಿನಿಂದ ಬರುವ ವರಮಾನವನ್ನು ಪುನಃ ಸರ್ಕಾರದವರ ಸ್ವಾಧೀನಕ್ಕೆ ತೆಗೆದುಕೊಳ್ಳುವುದರಿಂದಲೂ, ಹಣವನ್ನು ಒದಗಿಸಬೇಕೆಂಬ ಉದ್ದೇಶವಿದ್ದಿತು. ಆದರೆ, ಮೊಹತರ್ಫಾ ಮತ್ತು ಜನರಲ್ ಲೋಕಲ್ ಫಂಡು ಬಾಬಿನಿಂದ ಬರುವ ವರಮಾನವನ್ನು ಸರ್ಕಾರದವರು ಹಾಗೆ ಸ್ವಾಧೀನಕ್ಕೆ ತೆಗೆದುಕೊಳ್ಳುವುದರಿಂದ ತಮ್ಮ ದ್ರವ್ಯಾನುಕೂಲತೆಗೆ ಕುಂದಕವುಂಟಾಗುವುದೆಂದು ಡಿಸ್ಟ್ರಿಕ್ಟ್ ಬೋರ್ಡುಗಳವರು ಆಕ್ಷೇಪಮಾಡಿಕೊಂಡುದರಮೇಲೆ ಸದರಿ ಕ್ರಮವನ್ನನುಸರಿಸದೆ ಬಿಟ್ಟುಬಿಡಲಾಯಿತು. ಡಿಸ್ಟ್ರಿಕ್ಟುಗಳಲ್ಲಿಯೂ, ಮುನಿಸಿಪಾಲಿಟಿಗಳಲ್ಲಿಯೂ, ವಿದ್ಯಾಭ್ಯಾಸದ ಸೆಸ್ಸನ್ನು ಹಾಕುವುದರಿಂದ 12½ ಲಕ್ಷ ರೂಪಾಯಿಗಳ ವರಮಾನವು ಬರುವದೆಂದು ನಿರೀಕ್ಷಿಸಲಾಗಿದ್ದಿತು. ಈ ವಿಷಯದಲ್ಲಿ ಸರ್ಕಾರದವರಿಗಿದ್ದ ನಿರೀಕ್ಷಣೆಯು ಸಫಲವಾಗಿ ಈಡೇರಲಿಲ್ಲ. ಏಕೆಂದರೆ, ವಿದ್ಯಾಭ್ಯಾಸದ ಸೆಸ್ಸನ್ನು ಇದುವರೆಗೆ ಐದು ಡಿಸ್ಟ್ರಿಕ್ಟುಗಳಲ್ಲಿ ಮಾತ್ರವೇ ವಸೂಲುಮಾಡುತ್ತಾ ಇದೆ. ಇದೂ ಅಲ್ಲದೆ, ವಿದ್ಯಾಭ್ಯಾಸದ ಮೆಮೋರ್ಯಾಂಡಂನೋಟಿಸ್ ಹುಕುಮಿನಲ್ಲಿ ವಿಧಾಯಕವಾದಂತೆ ರೂಪಾಯಿಗೆ ಒಂದಾಣೆಗೆ ಬದಲಾಗಿ ಅರ್ಧಾಣೆಯಂತೆ ಸೆಸ್ಸನ್ನು ಹಾಕಿದೆ. ಉಳಿದ ಡಿಸ್ಟ್ರಿಕ್ಟುಗಳವರೂ, ಪ್ರಾಯಶಃ, ಸರಿಸುಮಾರಾಗಿ ಎಲ್ಲಾ ಮುನಿಸಿಪಾಲಿಟಿಗಳವರೂ, ಈ ತೆರಿಗೆಯನ್ನು ಹಾಕುವ ವಿಷಯದಲ್ಲಿ ಇನ್ನೂ ಸಮ್ಮತಿಸಿಯೇ ಇಲ್ಲ. ಮೇಲೆ ಸೂಚಿಸಿದ ಐದು ಡಿಸ್ಟ್ರಿಕ್ಟುಗಳಲ್ಲಿ ವಿದ್ಯಾಭ್ಯಾಸದ ಸೆಸ್ಸಿನಿಂದ ಬರುವುದಾಗಿ ಅಂದಾಜುಮಾಡಿದ್ದ ಹಣವು ವರುಷಕ್ಕೆ ಸುಮಾರು 2,92,000 ರೂ. ಗಳು ಮಾತ್ರವೇ ಆಗಿದೆ. ವಿದ್ಯಾಭ್ಯಾಸದ ಮೆಮೋರ್ಯಾಂಡಂನೋಟಿಸ್ ಹುಕುಮಿನ ಪ್ರಕಾರ, ಕೆಲಸಗಳನ್ನು ನಡೆಸಲು ಮುಖ್ಯ ಸಾಧನವಾದ ದ್ರವ್ಯಾನುಕೂಲತೆಯೇ ಹೀಗೆ ಮಿತಿಮೀರಿ ಕಡಮೆಯಾಗಿ ಹೋಗಿರುತ್ತದೆ. ಈ ಕಾರಣದಿಂದ, ಈ ಸಮಗ್ರ ವಿಷಯವನ್ನು, ಅದರಲ್ಲಿಯೂ, ಮುಖ್ಯವಾಗಿ ಗ್ರಾಮಾಂತರಗಳ ಏಡೆಡ್ ಪ್ರೈಮರಿ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳನ್ನಾಗಿ ಮಾರ್ಪಡಿಸುವ ವಿಷಯವನ್ನು ಪುನಃ ಪರ್ಯಾಲೋಚಿಸಿ ಈಗಿನ ಸ್ಥಿತಿಗೆ ತಕ್ಕಂತೆ ಕೆಲಸಮಾಡಬೇಕಾಗಬಂದಿದೆ. ಆದರೂ, ಡಿಸ್ಟ್ರಿಕ್ಟು ಬೋರ್ಡುಗಳಿಂದ ಒದಗಿಸಲ್ಪಟ್ಟ ಪರಿಮಿತಸಹಾಯದ ಮೂಲಕವೂ, ಸಾಮಾನ್ಯ ಹುಟ್ಟುವಳಿಯಿಂದ ಸರ್ಕಾರದವರು ಒದಗಿಸಿದ ಮೊಬಲಗಿನ ಮೂಲಕವೂ, ಮೆಮೋರ್ಯಾಂಡಂ ಹುಕುಮಿನಲ್ಲಿ ವಿವರಿಸಿರುವ ಕಾರ್ಯಕ್ರಮದಲ್ಲಿನ ಅತ್ಯಂತ ಮುಖ್ಯವಾದ ಬಾಬುಗಳಲ್ಲಿ ಕೆಲವನ್ನು ನೆರವೇರಿಸುವ ಕೆಲಸವು ತೃಪ್ತಿಕರವಾಗಿ ಮುಂದುವರಿದಿರುತ್ತದೆ.

ವಿದ್ಯಾಭ್ಯಾಸವಿಚಾರದ ಪರಿಶೀಲನೆ.—ಪ್ರೈಮರಿಸ್ಕೂಲುಗಳ ವಿಷಯದಲ್ಲಿ ಸಂಸ್ಥಾನಕ್ಕೆ ಆಗಬೇಕಾಗಿರುವುದನ್ನು ಅಂದಾಜು ಮಾಡುವುದಕ್ಕಾಗಿಯೂ, ಹಾಲಿ ಇರುವ ಸ್ಕೂಲುಗಳನ್ನು ಮಾರ್ಪಡಿಸಿ ಪುನಃ ಹಂಚುವ ಬಗ್ಗೆ ಉಪಯುಕ್ತವಾದ ಕಾರ್ಯಕ್ರಮದ ಪಟ್ಟಿಯನ್ನು ತಯಾರ್ಮಾಡಲು ಸೌಲಭ್ಯವನ್ನು ಕಲ್ಪಿಸುವುದಕ್ಕಾಗಿಯೂ, ಕೈಗೊಂಡ ವಿದ್ಯಾಭ್ಯಾಸ ವಿಷಯಕವಾದ ಪರಿಶೀಲನೆಯ ಕೆಲಸವು ಮುಗಿದಿದೆ ಮತ್ತು ಇಲಾಖೆಯವರು ಕಳುಹಿಸಿದ ವರದಿಯು ಪರ್ಯಾಲೋಚನೆಯಲ್ಲಿದೆ.

ಪ್ರೈಮರಿ ಸ್ಕೂಲುಗಳು.—ಪ್ರೈಮರಿ ಸ್ಕೂಲುಗಳನ್ನು ನಾಲ್ಕು ವರ್ಷಗಳ ವ್ಯಾಸಂಗಕ್ರಮಕ್ಕೆ ಅನುಕೂಲವಾಗುವಂತೆ ಹೊಸರೀತಿಯಲ್ಲಿ ಏರ್ಪಡಿಸಿ ವ್ಯಾಸಂಗದ ಪಾಠಕ್ರಮವನ್ನು ಅದೇ ರೀತಿಯಲ್ಲಿ ಪರಿಷ್ಕರಿಸಿರುವುದಲ್ಲದೆ ಬೋಧನೆಯು ದೇಶಭಾಷೆಯಲ್ಲಿ ನಡೆಯುವಂತೆ ವಿಧಾಯಕ ಮಾಡಲಾಗಿದೆ. ಪಕ್ಕಾ ಮಿಡಲ್ ಸ್ಕೂಲುಗಳಲ್ಲಿರುವ ಪ್ರೈಮರಿ ಶಾಖೆಗಳನ್ನು ಪ್ರತ್ಯೇಕಿಸಿ ಅವುಗಳನ್ನು ಪ್ರತ್ಯೇಕ ಸ್ಕೂಲುಗಳನ್ನಾಗಿ ಏರ್ಪಡಿಸಿದೆ.

ಮಿಡ್ಲ್ ಸ್ಕೂಲುಗಳು.—ನಾನಾ ವಿಧವಾಗಿದ್ದ ಮಿಡ್ಲ್ ಸ್ಕೂಲುಗಳನ್ನು ಬದಲಾಯಿಸಿ ಅವೆಲ್ಲವೂ ಏಕರೀತಿಯಲ್ಲಿರುವಂತೆ ಹೊಸ ಮಾದರಿಯಲ್ಲಿ ವ್ಯವಸ್ಥೆಗೊಳಿಸಿರುವುದಲ್ಲದೆ ಅವುಗಳಲ್ಲಿ ಒಟ್ಟು ನಾಲ್ಕು ವರುಷಕಾಲ ವ್ಯಾಸಂಗವು ನಡೆಯುವಂತೆ ತರಗತಿಗಳನ್ನೇರ್ಪಡಿಸಲಾಗಿದೆ. ಅಲ್ಲದೆ, ಅಲ್ಲಿ ಎರಡು ಭಾಷೆಗಳನ್ನು ಕಲಿಸಬೇಕೆಂದೂ, ಇಂಗ್ಲಿಷ್ ಭಾಷೆಯನ್ನು ನಿರ್ಬಂಧಕವಾದ ದ್ವಿತೀಯ ಭಾಷೆಯಾಗಿಟ್ಟುಕೊಳ್ಳಬೇಕೆಂದೂ, ವಿಧಾಯಕ ಮಾಡಲಾಗಿರುತ್ತದೆ. ಇಂಗ್ಲೀಷನ್ನು ದ್ವಿತೀಯ ಭಾಷೆಯನ್ನಾಗಿ ತೆಗೆದುಕೊಂಡು ದೇಶಭಾಷೆಯಲ್ಲಿ ಲೋವರ್‌ಸೆಕೆಂಡರಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತರಬೇತುಮಾಡುವ ಇನ್‌ಕಂಪ್ಲೀಟ್ ಮಿಡ್ಲ್‌ಸ್ಕೂಲುಗಳೆಂದು ಕರೆಯಲ್ಪಡುವ ಹೊಸಮಾದರಿಯ ಸ್ಕೂಲುಗಳನ್ನು ಸ್ಥಾಪಿಸಲಾಗಿದೆ. ಅವುಗಳನ್ನು ಅನಂತರದಲ್ಲಿ ಮಿಡ್ಲ್‌ಸ್ಕೂಲುಗಳನ್ನಾಗಿ ಮಾರ್ಪಡಿಸಿ ಅಭಿವೃದ್ಧಿಗೆ ತರುವ ಉದ್ದೇಶದಿಂದ ಸದ್ಯಕ್ಕೆ ಈ ರೀತಿಯಲ್ಲಿರುವಂತೆ ಏರ್ಪಡಿಸಿದೆ. ನಾಲ್ಕು ವರುಷಗಳಕಾಲ ಮಿಡ್ಲ್ ಸ್ಕೂಲುತರಗತಿಗಳಲ್ಲಿ ವ್ಯಾಸಂಗಮಾಡುವುದಕ್ಕೆ ಪರಿಷ್ಕೃತವಾದ ಪಾಠಕ್ರಮವನ್ನು ಸಾದರ್‌ಮಾಡಿದೆ. ಪ್ರಾಥಮಿಕ ವಿಜ್ಞಾನಶಾಸ್ತ್ರವನ್ನೂ (ಎಲಿಮೆಂಟರಿಸೈನ್ಸ್) ನಕ್ಷೆ ಬರೆಯುವುದನ್ನೂ (ಡ್ರಾಯಿಂಗ್) ವ್ಯಾಸಂಗವಿಷಯಗಳನ್ನಾಗಿ ಅದರಲ್ಲಿ ಸೇರಿಸಿದೆ. ಹೊಸಮಾದರಿಯಲ್ಲಿ ಸ್ಕೂಲುಗಳನ್ನು ಸ್ಥಾಪಿಸುವ ಏರ್ಪಾಡಿನ ಸಂಬಂಧದಲ್ಲಿ ಮಿಡ್ಲ್ ಮತ್ತು ಪ್ರೈಮರಿ ಸ್ಕೂಲುಗಳ ಸಿಬ್ಬಂದಿಯ ವಿಷಯದಲ್ಲಿ ಅವಶ್ಯವಾಗಿರುವ ಬದಲಾವಣೆಗಳನ್ನು ಸಾವಧಾನಪೂರ್ವಕವಾಗಿ ಪರಿಶೋಧಿಸಲಾಗಿದೆ; ಮತ್ತು ಉಪಾಧ್ಯಾಯರು ಮುಂತಾದ ಸಿಬ್ಬಂದಿಯು ವಿಶೇಷ ಹೆಚ್ಚಾಗಿದ್ದಂತೆ ಕಂಡುಬಂದ ಸ್ಥಳಗಳಲ್ಲಿ ಅದನ್ನು ಕಡಮೆಮಾಡುವುದರಿಂದಲೂ, ಅದು ಕೇವಲ ಕಡಮೆಯಾಗಿದ್ದಂತೆ ಕಂಡುಬಂದ ಸ್ಥಳಗಳಲ್ಲಿ ಅವಶ್ಯಕತೆಗಳಿಗೆ ತಕ್ಕಂತೆ ಅದನ್ನು ಹೆಚ್ಚಿಸುವುದರಿಂದಲೂ, ಎಲ್ಲಾ ಸ್ಕೂಲುಗಳಲ್ಲಿಯೂ ಸಿಬ್ಬಂದಿಯನ್ನು ಸರಿಪಡಿಸಿದೆ. ಮತ್ತು ಪ್ರತಿಯೊಂದು ಸ್ಕೂಲಿನ ತರಗತಿಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಗನುಸಾರವಾಗಿ ಆಯಾ ಸ್ಕೂಲಿನ ಸಿಬ್ಬಂದಿಯನ್ನು ಗೊತ್ತುಮಾಡಲಾಗಿದೆ.

ವಿದ್ಯಾಭ್ಯಾಸದ ಸೆಸ್ಸನ್ನು ಉಪಯೋಗಿಸಿಕೊಳ್ಳುವುದು.—ವಿದ್ಯಾಭ್ಯಾಸದ ಸೆಸ್ಸನ್ನು ವಸೂಲ್ಮಾಡಿರುವ ಐದು ಡಿಸ್ಟ್ರಿಕ್ಟುಗಳಲ್ಲಿ ಮೊಬಲಗನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಬಂದ ಸಲಹೆಗಳನ್ನು ಮಂಜೂರುಮಾಡಿ 644 ಏಡೆಡ್ ಪ್ರೈಮರಿ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳಾಗಿ ಮಾರ್ಪಡಿಸುವುದಕ್ಕೂ, 127 ಹೊಸ ಸ್ಕೂಲುಗಳನ್ನು ಸ್ಥಾಪಿಸುವುದಕ್ಕೂ, 103 ಸ್ಕೂಲುಗಳ ಸಿಬ್ಬಂದಿಯನ್ನು ಉತ್ತಮಸ್ಥಿತಿಗೆ ತರುವುದಕ್ಕೂ, 64 ಪ್ರೈಮರಿ ಸ್ಕೂಲುಗಳನ್ನು ಇನ್‌ಕಂಪ್ಲೀಟ್ ಮಿಡಲ್ ಸ್ಕೂಲುಗಳನ್ನಾಗಿಯೂ 46 ಇನ್‌ಕಂಪ್ಲೀಟ್ ಮಿಡಲ್ ಸ್ಕೂಲುಗಳನ್ನು ಪಕ್ಕಾ ಮಿಡಲ್ ಸ್ಕೂಲುಗಳನ್ನಾಗಿಯೂ ಮಾರ್ಪಡಿಸುವುದಕ್ಕೂ, ಸ್ಟೇಟ್ ಫಂಡಿನಿಂದ ಮಂಜೂರಾದವುಗಳ ಜತೆಗೆ ಇನ್ನೂ 24 ಸ್ಕೂಲುಗಳಲ್ಲಿ (ಸಿದ್ಧಾಂತ ರೂಪದಲ್ಲಿ ಕಲಿತುದನ್ನು ಪ್ರಯೋಗರೂಪದಲ್ಲಿ ತೋರಿಸಿ ಶಿಕ್ಷಣ ಕೊಡುವ) ರೂಢಿಭಾಗದ ತರಗತಿಗಳನ್ನು ಏರ್ಪಡಿಸುವುದಕ್ಕೂ, ಏರ್ಪಾಡುಮಾಡಲಾಗಿದೆ.

ಹೈಸ್ಕೂಲುಗಳು.—ಬೆಂಗಳೂರು ಪಟ್ಟಣದ ಮಲ್ಲೇಶ್ವರದ ಎಕ್ಸ್‌ಟೆನ್‌ಷನ್‌ನಲ್ಲಿ ಒಂದು ಹೈಸ್ಕೂಲನ್ನು ಹೋದವರುಷ ಹೊಸದಾಗಿ ಸ್ಥಾಪಿಸಲಾಯಿತು; ಮತ್ತು ಹಾಲಿ ಸಾಲಿನಲ್ಲಿ ತಿಪಟೂರಿನಲ್ಲಿ ಒಂದು ಹೈಸ್ಕೂಲು, ಟ್ರೇನಿಂಗ್ ಕಾಲೇಜಿನ ಸಂಬಂಧದಲ್ಲಿ ಮೈಸೂರಿನಲ್ಲಿ ಒಂದು ಹೈಸ್ಕೂಲು, ಅಂತು ಎರಡು ಹೈಸ್ಕೂಲುಗಳನ್ನು ಹೊಸದಾಗಿ ಸ್ಥಾಪಿಸಲಾಗಿದೆ.

ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟಿನ ಏರ್ಪಾಡು.—ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟಿನ ಏರ್ಪಾಡಿನ ಮುಖ್ಯಾಂಶಗಳನ್ನು ತಿದ್ದುಪಾಟುಮಾಡಲಾಗಿದೆ. ಇದರ ಮೇರೆಗೆ ಈಗ ಎಲ್ಲಾ ವಿದ್ಯಾರ್ಥಿಗಳೂ ಇಂಗ್ಲೀಷು, ದ್ವಿತೀಯ ಭಾಷೆ, ಎಲಿಮೆಂಟರಿ ಮ್ಯಾಥಮ್ಯಾಟಿಕ್ಸ್ (ಪ್ರಾಥಮಿಕ ಗಣಿತ), ಇಂಗ್ಲೆಂಡ್ ಮತ್ತು ಇಂಡಿಯಾ ದೇಶಗಳ ಚರಿತ್ರೆ, ಭೂಗೋಳ, ಪ್ರಾಕೃತಿಕಭಾಗವೂ ಭೌತಿಕ ರಸಾಯನ ಶಾಸ್ತ್ರಗಳೂ ಸೇರಿ ಒಟ್ಟು ವಿಜ್ಞಾನ ಶಾಸ್ತ್ರದ ಸುಲಭ ಪಾಠಗಳು, ಇವುಗಳನ್ನು ಪಾಠಕ್ರಮದಲ್ಲಿ ಕ್ಲುಪ್ತಗೊಳಿಸುವ ರೀತಿಯಲ್ಲಿ ವ್ಯಾಸಂಗ ಮಾಡತಕ್ಕದಾಗಿದೆ. ಇದಲ್ಲದೆ ಗಣಿತವನ್ನಾಗಲಿ, ಸಂಸ್ಕೃತ, ಫ್ರೆಂಚ್ ಮುಂತಾದುವುಗಳಲ್ಲಿ ಯಾವುದಾದರೂ ಒಂದನ್ನಾಗಲಿ, ಅಥವಾ ಯಾವುದಾದರೂ ಕಸಬುದಾರಿ ವಿದ್ಯೆಯನ್ನಾಗಲಿ, ಹೆಚ್ಚು ವಿಷಯವನ್ನಾಗಿ ವ್ಯಾಸಂಗ ಮಾಡಬೇಕು. ಹಾಲಿ ಸ್ಕೂಲು ವರುಷದ IV ನೆಯ ಮತ್ತು V ನೆಯ ಫಾರಂಗಳಲ್ಲಿ ಪರಿಷ್ಕೃತವಾದ ಈ ಹೊಸವಿಧದ ಪಾಠಕ್ರಮವನ್ನೇ ಜಾರಿಯಲ್ಲಿ ತರಲಾಗಿದೆ.

ಕೈಗಾರಿಕೆಯ ಪಾಠಶಾಲೆಗಳು.—ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆಯ ಡೈರೆಕ್ಟರವರಿಗೆ ಕೈಗಾರಿಕೆಯ ಬಾಬಿನಲ್ಲಿ ಸಂಸ್ಥಾನದಲ್ಲಿನ ಅವಶ್ಯಕತೆಗೆ ತಕ್ಕಂತೆ ಕೈಗಾರಿಕೆಯ ಪಾಠಶಾಲೆಗಳ ಕೆಲಸಗಳನ್ನು ಸರಿಯಾಗಿ ಸಜ್ಜುಗೊಳಿಸುವುದಕ್ಕೆ ಹೆಚ್ಚು ಅವಕಾಶವಿರುವ ಪ್ರಯುಕ್ತ, ಈ ಪಾಠಶಾಲೆಗಳು ಸದರಿ ಅಫೀಸರವರ ಮೇಲ್ವಿಚಾರಣೆಗೆ ವರ್ಗಾಯಿಸಲ್ಪಟ್ಟಿವೆ. ಮೈಸೂರಿನಲ್ಲಿದ್ದ ಸಿವಿಲ್ ಇಂಜನೀಯರಿಂಗ್ ಸ್ಕೂಲನ್ನು ಬೆಂಗಳೂರಿಗೆ ವರ್ಗಾಯಿಸಿ ಅದನ್ನು ಮೆಕ್ಯಾನಿಕಲ್ ಇಂಜನೀಯರಿಂಗ್ ಸ್ಕೂಲಿನೊಡನೆ ಸಮ್ಮಿಳಿತಮಾಡಿ ಸೇರಿಸಲಾಗಿದೆ.

ಇನ್‌ಸ್ಪೆಕ್ಷನ್ ಅಫೀಸರುಗಳು.—ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳ ಸಂಖ್ಯೆಯನ್ನು 45 ಕ್ಕೆ ಹೆಚ್ಚಿಸಿ ರೇಂಜುಗಳನ್ನು ಯುಕ್ತರೀತಿಯಲ್ಲಿ ಪುನಃ ವಿಂಗಡಿಸಲಾಗಿದೆ. ಮೇಲು ದರ್ಜೆಯ ಇನ್‌ಸ್ಪೆಕ್ಟರುಗಳ ಗ್ರೇಡನ್ನೂ ಕೂಡ ಈಚೆಗೆ ತಿದ್ದುಪಾಟು ಮಾಡಲಾಗಿದೆ. (ಸಶೇಷ.)

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ವೀರಶೈವ ಧರ್ಮಸಂಗ್ರಹ.

ಮಾಸಪತ್ರಿಕೆ.

ಒಂದು ವರ್ಷಕ್ಕೆ ವರ್ಗಣಿ ಅಂಚೆವೆಚ್ಚಸೇರಿ 2—8—0.

ಈ ಪತ್ರಿಕೆಯು ಎರಡನೆಯ ವರ್ಷವು ಈ ರಕ್ತಾಕ್ಷಿ ಸಂ॥ ಆಶ್ವೀಜಮಾಸದಿಂದ ಪ್ರಾರಂಭವಾಗುವುದು. ಎರಡನೆಯ ವರ್ಷದಲ್ಲಿ ವಾಚಕರ ಪ್ರಯೋಜನಾರ್ಥವಾಗಿ ಎರಡು ಫಾರಮ್ಮುಗಳಿಂದ ಮೂರು ಫಾರಮ್ಮಿಗೆ ಹೆಚ್ಚಿಸಿ ವೀರಶೈವಮತ ಪ್ರಾಚೀನತೆ, ವೀರಶೈವ ವೈದಿಕತ್ವ, ಲಿಂಗಧಾರಣವಿಚಾರ, ಶಕ್ತಿವಿಶಿಷ್ಟಾದ್ವೈತ, ಶಿವದೀಕ್ಷೆ, ಶಿವಪೂಜೆಯಕ್ರಮ, ವೀರಶೈವಾಚಾರ, ವೀರಶೈವ ವೈದಿಕವಿದ್ಯಾವಶ್ಯಕತೆ, ವೀರಶೈವ ಬ್ರಹ್ಮಚಾರಿಶಿಕ್ಷೆ, ವೀರಶೈವ ಸ್ತ್ರೀಧರ್ಮ ಮೊದಲಾದ ವಿಚಾರಗಳನ್ನು ಪ್ರಮಾಣಗಳ ಉದಾಹರಣೆಯಿಂದ ಉಪನ್ಯಾಸರೂಪವಾಗಿಯೂ, ಬಸವರಾಜೀಯ ಮೊದಲಾದ ಗ್ರಂಥಗಳನ್ನು ಕನ್ನಡಟಿಪ್ಪಣದೊಡನೆಯೂ ಪ್ರಕಟಿಸುವೆವು.

ವೀರಶೈವ ಧರ್ಮಾಭಿಮಾನಿಗಳು ಈ ಪತ್ರಿಕೆಗೆ ಚಂದಾದಾರರೂ, ಪೋಷಕರೂ ಆಗಿ ಇದು ಚಿರಕಾಲ ನಡೆಯುವಂತೆ ಸಹಾಯಕಾರಿಗಳಾಗಬೇಕಾಗಿ ಅತ್ಯಂತ ವಿಧೇಯತೆಯಿಂದ ಪ್ರಾರ್ಥಿಸುವೆವು.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಅಷ್ಟಾವರಣ ವಿಚಾರದರ್ಪಣ (ಪ್ರಶ್ನೋತ್ತರ ರೂಪ)			೦-೧೪-
ಕೊಡಗೂಸು ಕಥೆ (ಶಿವಕಥೆಯನ್ನು ಮಾಡುವವರಿಗೆಯೋಗ)			೦- ೪-
ವೇಮನಾರಾಧ್ಯರ ಕಥೆ	೦-೪-೦	ಶಿವಗೀತೆ (ಕನ್ನಡ ವಚನ)	೦- ೪-
ಶಿವಾಧಿಕ್ಯ	೦-೨-೦	ಸಿದ್ಧಲಿಂಗೇಶ್ವರಸ್ತೋತ್ರ	೦- ೦-
ನಕ್ಷತ್ರಮಾಲಿಕೆ	೦-೦-೬	ಜಯದೇವ ಭಜನಾನಂದಿನಿ	೦- ೨-
ಗುರುಭಜನ	೦-೧-೦	ಶಿವಸ್ತುತಿ ಮಣಿಮಾಲಾ	೦- ೦-

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ :—

ಸಂಪಾದಕ ಎಸ್. ವೀರಪ್ಪಶಾಸ್ತ್ರೀ, ಮಾಗಡಿ.
[24—5] ಬೆಂಗಳೂರು ಡಿ

ಜಾನುವಾರಿನಮೇಲೆ ಫೀಸು.

ದಕ್ಷಿಣ ಕನ್ನಡಾ ಜಿಲ್ಲಾ ಉಪ್ಪಿನಂಗಡಿ ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರುಷ 1924 ನೇ ಇಸವಿ ನವಂಬರು 11 ರಿಂದ 26 ನೇ ತಾರೀಕುವರೆಗೆ ಜರಗುವದು. ಅಂದರೆ ಸಂತೆಯು ಕಾರ್ತೀಕ ಪೂರ್ಣಿಮಿದಿವಸ ಪ್ರಾರಂಭವಾಗಿ ಸುಬ್ರಹ್ಮಣ್ಯ ಅಮಾವಾಸ್ಯೆ ದೀಪೋತ್ಸವದಪರಿಯಂತ ಜರಗುವದು. ಸಂತೆಗೆ ತಂದ ಪ್ರತಿ ಒಂದು ಜಾನುವಾರಿನಮೇಲೆ ಎರಡಾಣೆ ಫೀಸು ವಸೂಲ್ಮಾಡಲಾದೀತು. [4—2]

ಪುತ್ತೂರು, 1924ನೇ ಇಸವಿ, ಆಗೋಸ್ತು 8 ನೇ ತಾರೀಕು. } ಕೆ. ಎನ್. ಜೋಯಿಕುಟ್ಟಿ, ರೆವಿನ್ಯೂ ಡಿವಿಜನಲ್ ಆಫೀಸರರು.

---

18 ಕ್ಯಾರೆಕ್ಟ ಗೋಲ್ಡ್‌ಪ್ಲೇಟ ರೇಡಿಯಂ ರಿಸ್ಟವಾಚ್.

ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಅವಶ್ಯವಾಗಿರಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ.

ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಈ ಗಡಿಯಾರವು ಸ್ವಿಜರ್‌ಲ್ಯಾಂಡ್ ದೇಶದಲ್ಲಿ ಮಜಬೂತಾದ ಮೂವ್‌ಮೆಂಟ್ಸ್‌ಗಳಿಂದ ತಯಾರಾದದ್ದು. ಇದರ ಬಣ್ಣವು ಭಂಗಾರಕ್ಕೆ ಸಮನಾಗಿರುವದು. 3 ವರುಷ ಗ್ಯಾರಂಟಿ. ಕ್ರಯ 1ಕ್ಕೆ 8—8—0, ಪ್ಲೇನ್‌ಡೈಯಲ್ 7—0—0.

ವಿಳಾಸ—ಎಟೋನಿಯಾ ಅಂಡ್ ಕೊ,
[4—4] ಪೋ|| ಬಾ|| ನಂ. 66, ಮದರಾಸು.

೧೯೨೪ನೆಯ ಇಸವಿ ಅಕ್ಟೋಬರ್ ತಾ|| ೧೯ ರಿಂದ ೧೯೨೪ ನೆಯ ಇಸವಿ ಅಕ್ಟೋಬರ್ ತಾ|| ೨೫ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಆಶ್ವಯುಜ ಬಹುಳ ಷಷ್ಠಿಯಿಂದ ಆಶ್ವಯುಜ ಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾ
19	ಭಾನು	ಷಷ್ಠಿ	8-34	ಆರ್ದ್ರಾ	35-54	3
20	ಸೋಮ	ಸಪ್ತ	13-35	ಪುನ	42-3	4
21	ಮಂಗಳ	ಅಷ್ಟ	17-57	ಪುಷ್ಯ	47-23	5
22	ಬುಧ	ನವ	21-22	ಆಶ್ಲೇ	51-42	6
23	¹ಗುರು	ದಶ	23-36	ಮಖಾ	54-48	7
24	²ಶುಕ್ರ	ಏಕಾ	24-31	ಪುಬ್ಬ	56-38	8
25	³ಶನಿ	ದ್ವಾದ	24-9	ಉತ್ತ	57-11	9

(1) ಶ್ರೀರಂಗಪಟ್ಟಣದಲ್ಲಿ ಅಶ್ವತೀರ್ಥೋತ್ಸವ. (2) ಸರ್ವತ್ರಏ ದಶಿ. (3) ಶನಿಪ್ರದೋಷ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿ[illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGSITERED NO. M.124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ನುಹಿತೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಧನಪಥಕಲ್ಪತಾವಕಾರಾ ಪಕ್ಷಜ್ಞ ಸಹೃತ್ತ ನೋಹರಾಜೀಯೂಡ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರೀಮಾಥೀಷ್ಟದೀಲ ಪಾಠಕಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಬೆತ್ತಿಲಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

REGISTERED NO. M. 124.

ಸಂಪುಟ ೩೭] ಮೈಸೂರು ಸ್ಟಾರ್ ಸ ೧೯[illegible] ಇಸವಿ ಅಕ್ಟೋಬರ್ ತಾರೀಖು ೨೬ ನೆಯ ಭಾನುವಾರ. [ಸಂಚಿಕೆ ೪೩

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆನ್ಜಾ
ಪ್ಲೇಗುಜ್ವರ

SITHARAGHAVA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕಲಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
37 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನ್‌ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ: — ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—46] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕದೀಕ್ಷಾವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎ.ಆರ್. ಕರಿಬಸವಶಾಸ್ತ್ರಿ
[50—40] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಮೈಸೂರು ಎಂ. ಎಸ್. ಶಿದ್ದಪ್ಪ ಬ್ರದರ್ಸ್‌ರವರ ವಿಜ್ಞಾಪನೆ.
ನಮ್ಮ ಕಂಪನಿಯ ಕ್ಯಾಲೆಂಡರುಗಳನ್ನು ಉಪಯೋಗಿಸುತ್ತಲಿರುವ ಗಿರಾಕಿಗಳಲ್ಲಿ
ವಿನಂತಿ.

1925 ನೇ ಇಸವಿಯ ಸಚಿತ್ರ ಷೀಟ್ ಕ್ಯಾಲೆಂಡರುಗಳು.

1925ನೇ ಇಸವಿಯ ಷೀಟ್ ಕ್ಯಾಲೆಂಡರ್ 1 ಕ್ಕೆ 0-1-0. 50 ಕ್ಯಾಲೆಂಡರ್‌ಗಳಿಗೆ 1-2-0. 100 ಕ್ಯಾಲೆಂಡರ್‌ಗಳಿಗೆ 2-0-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರ್‌ಗಳ ಪೂರ್ತಾ ಮೊಬಲಗು ಮಣಿಯಾರ್ಡರ್ ಮೂಲಕ ರವಾನಿಸಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜು ಯಾವ ಖರ್ಚೂ ಇಲ್ಲದಂತೆ ನೀವಿದ್ದೆಡೆಗೆ ರವಾನಿಸಲಾಗುತ್ತೆ. ಮೇಲ್ಕಂಡ ಕ್ಯಾಲೆಂಡರ್‌ನಲ್ಲಿ ಇಂಗ್ಲೀಷ್ ಮತ್ತು ಕನ್ನಡ ತಿಂಗಳು, ತಾರೀಖು, ವಾರ, ತಿಥಿ ನಕ್ಷತ್ರ, ಆಯಾಯ ದಿವಸದಲ್ಲಿ ನಡೆಯತಕ್ಕ ಹಬ್ಬವೇ ಮೊದಲಾದ ಮುಖ್ಯ ದಿವಸಗಳು, ರಾಹುಕಾಲ, ಗುಳಿಕಾಲ ಮಳೇನಕ್ಷತ್ರ, ಅರಮನೆಯಲ್ಲಿ ನಡೆಯತಕ್ಕ ಉತ್ಸವಗಳೂ. ಶ್ರೀಮನ್ ಮಹಾರಾಜರವರು, ಶ್ರೀಮನ್ ಯುವರಾಜರವರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರವರ ಭಾವಚಿತ್ರಗಳನ್ನಿಟ್ಟು ನಯವಾದ ಬಿಳೀ ದಪ್ಪ ಕಾಗದದಲ್ಲಿ ಅಂದವಾಗಿ ಪ್ರಿಂಟ್ ಮಾಡಿಸಿದ್ದೇವೆ.

1925 ನೇ ಇಸವಿಯ (ಮಂತ್ಲಿ ಟೇರಾಫ್) ತಿಂಗಳಿಗೊಂದು ಷೀಟಿನಂತೆ ಹರಿದುಬಿಡುವಂತೆ ತಯಾರಿಸಿರುವ ಕ್ಯಾಲೆಂಡರ್ 1 ಕ್ಕೆ 0-3-0, 3 ಕ್ಯಾಲೆಂಡರಿಗೆ 0-6-0, 12 ಕ್ಯಾಲೆಂಡರಿಗೆ 1-6-0. ತಮಗೆ ಬೇಕಾದಷ್ಟು ಕಾಪಿಗಳ ಪೂರ್ತಾಮೊಬಲಗನ್ನೂ ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜ್ ಯಾವ ಖರ್ಚೂ ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. [50—4]

ಮಣಿಯಾರ್ಡರ್ ರವಾನಿಸುವ ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ತಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—7] ಪೋ. ಬಾ. ೫೧೧, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ, ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ವಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
35 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಲ್ಲದರಲ್ಲಿ ಪುರಾತನ ಕಾರಖಾನೆಯು.

ಸೂಚನೆ:—ಯಾವದೊಂದು ಮಾಲು ಗುಣಕಾರಿಯಾಗಿರುವದೆಂದು ತಿಳಿದಕೂಡಲೆ ಎಲ್ಲ ಕಡೆಗೂ ಅದರ ನಕಲು ಮಾಡಲಿಕ್ಕೆ ಆರಂಭವಾಗುತ್ತದೆ. ಆದರೆ ಹೆಸರಿಗೆ ತಕ್ಕಂತೆ ಗುಣಕ್ಕೆ ಮಾತ್ರ ಪಾತ್ರವಾಗುವದಿಲ್ಲ. ಈಗೀಗ ಇಲ್ಲಿ ನಕಲೀ ಔಷಧಿಯ ಕಾರಖಾನೆಗಳು ಹೊರಡಹತ್ತಿರುವವು. ಅದ್ದರಿಂದ ಗಿರಾಕಿಗಳು ನಮ್ಮ ಟ್ರೇಡಮಾರ್ಕನ್ನು ನೋಡಿ ತಕ್ಕೊಳ್ಳಬೇಕು ಸರ್ಕಾರದಲ್ಲಿ ರಿಜಿಸ್ಟರ್‌ಆದಂಥ ಸುವರ್ಣಪದಕ ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦, ೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವುದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.—ಪರಮಾ ಹಾಗೂ ಗಾಡಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇರೋಗ ವಿದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟಲಿಯ ಕಿಮ್ಮತ್ತು ೧| ರೂಪಾಯಿ ಮೂರುಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುತ್ತೇವೆ. ಅಂದರೆ ಟಪಾಲುಖರ್ಚು ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತ್ತು ೧೧—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲು ಖರ್ಚ ಬೇರೆ ಬೀಳುವದು. ಪ್ಯಾಕಿಂಗ ಚಾರ್ಜು ೧ ಬಾಟ್ಲಿಗೆ ೧—೪—೦, ೩ ಬಾಟ್ಲಿಗೆ ೩—೦—೦, ಡಜನಿಗೆ ೧೩—೦—೦

ಮ್ಯಾನೇಜರ—ದ್ರಾಕ್ಷಾರ್ಕಮಧು ಅಫೀಸು,
[13-10] ಪೋ. ನಿಪ್ಪಾಣಿ, ಜಿ. ಬೆಳಗಾಂವ.

1923 ನೆಯ ಇಸವಿ ಜುಲೈ 1 ನೇ ತಾರೀಖಿನ ಲಾಗಾಯತು 1924 ನೆಯ ಇಸವಿ ಜೂನ್ 30 ನೆಯ ತಾರೀಖಿನ ವರೆಗೆ ಬೋರ್ಡಿನವರಿಗೆ ವರದಿಯಾಗಿರುವ 343 ಕೆಲಸಗಳ ಪೈಕಿ, 167 ಕೆಲಸಗಳನ್ನು ಹಿಂದುಳಿದ ಪಂಗಡಗಳಿಗೆ ಸೇರಿದ ಉಮೇದುವಾರರುಗಳಿಗೆ ಕೊಡಲಾಯಿತು. ಈಚೆಗೆ ದಕ್ಷತೆಯಲ್ಲಿ ಕಡಮೆಯಾಗಿಹೋಗುತ್ತಿರುವಂತೆ ಕಂಡುಬರುತ್ತಿರುವ ಶೇಕದಾರಿ ನೌಕರಿಯನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿ, ಪ್ರತಿವರ್ಷವೂ 10 ಶೇಕದಾರಿ ಪ್ರೊಬೇಷನರುಗಳನ್ನು ನೀದಾ ಹೊಸದಾಗಿ ಕೆಲಸಕ್ಕೆ ಸೇರಿಸಿಕೊಳ್ಳತಕ್ಕ ಏರ್ಪಾಡೊಂದನ್ನು ಸರ್ಕಾರದವರು ಮಂಜೂರ್ಮಾಡಿರುತ್ತಾರಲ್ಲದೆ ಚುನಾಯಿಸಲ್ಪಡತಕ್ಕ ಪ್ರತಿಮೂರು ಮಂದಿಗಳಲ್ಲಿ ಇಬ್ಬರು ಹಿಂದುಳಿದ ಪಂಗಡಗಳಿಗೆ ಸೇರಿದವರಾಗಿರಬೇಕೆಂದು ಹುಕುಂ ಮಾಡಿರುತ್ತಾರೆ. ಹಾಸನ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಜುಡಿಷಿಯಲ್ ಅಧಿಕಾರವನ್ನು ಪ್ರತ್ಯೇಕಿಸುವ ಏರ್ಪಾಡನ್ನು ಆಚರಣೆಗೆ ತಂದುದರಿಂದ ಉಂಟಾದ ಖಾಲೀಸ್ಥಾನಗಳನ್ನು ಭರ್ತಿಮಾಡುವುದರಲ್ಲಿ, ಏಳು ಹುದ್ದೆಗಳ ಪೈಕಿ ಐದನ್ನು, ನೇರವಾಗಿ ಹೊಸಬರನ್ನು ಕೆಲಸಕ್ಕೆನೇಮಕ ಮಾಡುವುದರ ಮೂಲಕವಾಗಿ ಹಿಂದುಳಿದ ಪಂಗಡಗಳ ಜನರಿಗೆ ಕೊಡಲಾಗಿದೆ. ರಾಜ್ಯಾಡಳಿತ ವಿಧಾನದಲ್ಲಿ ವಿಸ್ತರಿಸಲು ಯತ್ನವಿಲ್ಲದಂತೆ ಒದಗಿರುವ ಈಗಿನ ಪರಿಮಿತ ಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಇದುವರೆಗೆ ಸಾಧಿಸಿರುವ ಅಭಿವೃದ್ಧಿಯು ಬಹುಮಟ್ಟಿಗೆ ಸಮರ್ಪಕವಾಗಿರುವುದೆಂದು ಸರ್ಕಾರದವರು ಭಾವಿಸುತ್ತಾರೆ.

ನಮ್ಮ ಈಗಣ ವಿದ್ಯಾಭ್ಯಾಸದ ಪದ್ಧತಿಯ ಮೂಲಕ ಉತ್ತೀರ್ಣರಾಗುವ ಗ್ರಾಜುಯೇಟುಗಳ ಮತ್ತು ಅಂಡರ್ ಗ್ರಾಜ್ಯುಯೇಟುಗಳ ಸಂಖ್ಯೆಯು ಹೆಚ್ಚಿ, ಅವರಿಗಾಗಲಿ ಅಥವಾ ಸಂಸ್ಥಾನಕ್ಕಾಗಲಿ ಪ್ರಯೋಜನಕರವಾಗುವಂತೆ ಸರ್ಕಾರದ ನೌಕರಿಗೆ ತೆಗೆದುಕೊಳ್ಳಲು ಸಾಧ್ಯವಿಲ್ಲದಷ್ಟು ಮಟ್ಟಿಗೆ ಮಿತಿಮೀರಿ ಹೋಗಿರುತ್ತದೆ. ಹಣ ಕಾಸಿನ ಮುಗ್ಗಟ್ಟಿನ ದೆಸೆಯಿಂದ ಸರ್ಕಾರಿ ಇಲಾಖೆಗಳಲ್ಲಿ ಖರ್ಚನ್ನು ಜೋತಾಮಾಡಿದ ಕಾರಣ ಹೊಸಬರನ್ನು ಸರ್ಕಾರಿ ನೌಕರಿಗೆ ತೆಗೆದುಕೊಳ್ಳುವ ಅವಕಾಶವು ಬಹುಮಟ್ಟಿಗೆ ಕಡಮೆಯಾಗಿ ಹೋಗಿದೆ. ವಿದ್ಯಾವಂತರಾದ ಯುವಕರು ನಿರುದ್ಯೋಗಿಗಳಾಗಿರುವ ವಿಷಯವು ದಿನ ದಿನವೂ ಪ್ರಬಲವಾಗುತ್ತಾ ತೊಂದರೆಗೊಡುತ್ತಿದೆ. ವ್ಯಾಸಂಗಕ್ರಮವು ಕಾರ್ಯತಃ ಪ್ರಯೋಜನಕರವಾಗಿ ಪರಿಣಮಿಸುವಂತೆ ಅದರಲ್ಲಿ ತಿದ್ದುಪಾಟುಮಾಡುವುದೇ ಈ ದುರವಸ್ಥೆಯ ಪರಿಹಾರೋಪಾಯಗಳಲ್ಲೊಂದಾಗಿದೆ. ಇದರಿಂದ, ವಿದ್ಯಾರ್ಥಿಗಳ ಶಕ್ತಿ ಸಾಮರ್ಥ್ಯಗಳು ವಿಶೇಷ ಕಾರ್ಯಕಾರಿಯಾದ ಮತ್ತು ಲಾಭಕರವಾದ ಉದ್ಯೋಗಗಳಿಗೆ ಪ್ರಯೋಗಿಸಲ್ಪಡುವಂತಾಗುವುದು. ವಿದ್ಯಾಭ್ಯಾಸದ ಪಾಠಕ್ರಮದಲ್ಲಿ ಸ್ವಂತವಾಗಿ ಪ್ರಯೋಗಗಳನ್ನು ಮಾಡಿ ವಿಜ್ಞಾನ ವಿದ್ಯಾವ್ಯಾಸಂಗವನ್ನು ಮಾಡುವ ಕ್ರಮವನ್ನು ಸೇರಿಸುವುದರಿಂದ ವಿದ್ಯಾಭ್ಯಾಸ ವಿಚಾರದಲ್ಲಿ ವ್ಯಾಪಕತೆಯು ಹೆಚ್ಚಾಗುತ್ತದೆ; ಅಲ್ಲದೆ ಕೇವಲ ಪುಸ್ತಕ ಪಾಠವಾಗಿ ಪರಿಣಮಿಸುವ ನ್ಯೂನತೆಯು ಪರಿಹಾರವಾಗಲು ಕಾರಣವಾಗುತ್ತದೆ; ಮತ್ತು ಕಸಬುದಾರಿ ಶಿಕ್ಷಣವು ಅತಿಪ್ರಾಮುಖ್ಯವಾದುದೆಂಬ ವಿಚಾರವನ್ನು ಅಂಗೀಕರಿಸಲಾಗಿದೆ, ಎಸ್.ಎಸ್.ಎಲ್.ಸಿ. ಪಾಠಕ್ರಮದಲ್ಲಿ ಐಚ್ಛಿಕವಾದ ಕಸಬುದಾರಿ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿ ಈಚೆಗೆ ತಿದ್ದುಪಾಟು ಮಾಡಲಾಗಿದೆ. ಎಂಟ್ರೆನ್ಸ್ ಮತ್ತು ಯೂನಿವರ್ಸಿಟಿ ತರಗತಿಗಳಲ್ಲಿ ಕಸಬುದಾರಿ ಪಾಠಕ್ರಮವು ಇನ್ನೂ ಮುಂದುವರಿಯುವಂತೆ ಮಾಡುವ ವಿಚಾರವೂ ಸಹ ಪರ್ಯಾಲೋಚನೆಯಲ್ಲಿದೆ.

ವಿದ್ಯಾಭ್ಯಾಸಕ್ರಮದ ಪರಿಷ್ಕರಣ.

ವಿದ್ಯಾಭ್ಯಾಸದ ಮೆಮೊರ್ಯಾಂಡಂ ಮೇಲಣ ಹುಕುಮಿನಲ್ಲಿ ವಿವರಿಸಿರುವ ಬಾಬುಗಳಿಗೋಸ್ಕರ 1920-21 ರಲ್ಲಿ ಬಡ್ಜೆಟ್ಟಿನಲ್ಲಿ ಒದಗಿಸಿದ್ದ 37 ಲಕ್ಷ ರೂ. ಗಳ ಸ್ಟೇಟ್ ಗ್ರ್ಯಾಂಟಿಗಿಂತಲೂ ಹೆಚ್ಚಾಗಿ 21,35,000 ರೂ. ಗಳು ವೆಚ್ಚವಾಗಬೇಕಾಗಬಹುದೆಂದು ಅಂದಾಜಾಗಿದ್ದಿತು. ದ್ರವ್ಯಾನುಕೂಲತೆಯಿಲ್ಲದೆ ಕಷ್ಟವಾಗಿದ್ದ ಕಾರಣ ಮುಂದೆ ಕೆಲವು ವರುಷಗಳವರೆಗೆ ಸ್ಟೇಟ್‌ಫಂಡುಗಳಿಂದ ಈ ಮೊತ್ತವನ್ನು ಒದಗಿಸುವುದು ಅಸಾಧ್ಯವೆಂದು ತೋರಿಬಂದಿತು. ಆದುದರಿಂದ, ಸದರಿ ಮೆಮೊರ್ಯಾಂಡಂ ಹುಕುಮಿನಲ್ಲಿ ನಮೂದಿಸಿದ್ದ ಪರಿಷ್ಕರಣಗಳನ್ನು ಆಚರಣೆಗೆ ತರಲು ಆವಶ್ಯಕವಾಗುವ ವೆಚ್ಚಕ್ಕೆ ಡಿಸ್ಟ್ರಿಕ್ಟ್ ಬೋರ್ಡುಗಳೂ, ಮ್ಯುನಿಸಿಪಾಲಿಟಿಗಳೂ, ವಿದ್ಯಾಭ್ಯಾಸದ ತೆರಿಗೆಯನ್ನು ಹಾಕುವುದರ ಮೂಲಕವೂ, ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಹಿಂದೆಯೇ ವಹಿಸಿಕೊಟ್ಟಿದ್ದ ಮೊಹತರ್ಫಾ ಮತ್ತು ಜನರಲ್ ಲೋಕಲ್ ಫಂಡಿನಿಂದ ಬರುವ ವರಮಾನವನ್ನು ಪುನಃ ಸರ್ಕಾರದವರ ಸ್ವಾಧೀನಕ್ಕೆ ತೆಗೆದುಕೊಳ್ಳುವುದರಿಂದಲೂ, ಹಣವನ್ನೊದಗಿಸಬೇಕೆಂಬ ಉದ್ದೇಶವಿದ್ದಿತು. ಆದರೆ, ಮೊಹತರ್ಫಾ ಮತ್ತು ಜನರಲ್ ಲೋಕಲ್ ಫಂಡು ಬಾಬಿನಿಂದ ಬರುವ ವರಮಾನವನ್ನು ಸರ್ಕಾರದವರು ಹೀಗೆ ಸ್ವಾಧೀನಕ್ಕೆ ತೆಗೆದುಕೊಳ್ಳುವುದರಿಂದ ತಮ್ಮ ದ್ರವ್ಯಾನುಕೂಲತೆಗೆ ಕುಂದಕವುಂಟಾಗುವುದೆಂದು ಡಿಸ್ಟ್ರಿಕ್ಟ್ ಬೋರ್ಡುಗಳವರು ಆಕ್ಷೇಪಿಸಿಕೊಂಡುದರಮೇಲೆ ಸದರಿ ಕ್ರಮವನ್ನನುಸರಿಸದೆ ಬಿಟ್ಟುಬಿಡಲಾಯಿತು. ಡಿಸ್ಟ್ರಿಕ್ಟುಗಳಲ್ಲಿಯೂ, ಮ್ಯುನಿಸಿಪಾಲಿಟಿಗಳಲ್ಲಿಯೂ, ವಿದ್ಯಾಭ್ಯಾಸದ ಸೆಸ್ಸನ್ನು ಹಾಕುವುದರಿಂದ 12½ ಲಕ್ಷ ರೂಪಾಯಿಗಳ ವರಮಾನವು ಬರುವದೆಂದು ನಿರೀಕ್ಷಿಸಲಾಗಿದ್ದಿತು. ಈ ವಿಷಯದಲ್ಲಿ ಸರ್ಕಾರದವರಿಗಿದ್ದ ನಿರೀಕ್ಷಣೆಯು ಪೂರ್ತಿಯಾಗಿ ಈಡೇರಲಿಲ್ಲ. ಏಕೆಂದರೆ, ವಿದ್ಯಾಭ್ಯಾಸದ ಸೆಸ್ಸನ್ನು ಇದುವರೆಗೆ ಐದು ಡಿಸ್ಟ್ರಿಕ್ಟುಗಳಲ್ಲಿ ಮಾತ್ರವೇ ವಸೂಲುಮಾಡುತ್ತಾ ಇದೆ. ಇದು ಅಲ್ಲದೆ, ವಿದ್ಯಾಭ್ಯಾಸದ ಮೆಮೊರ್ಯಾಂಡಂಮೇಲಣ ಹುಕುಮಿನಲ್ಲಿ ವಿಧಾಯಕವಾದಂತೆ ರೂಪಾಯಿಗೆ ಒಂದಾಣೆಗೆ ಬದಲಾಗಿ ಅರ್ಧಾಣೆಯಂತೆ ಸೆಸ್ಸನ್ನು ಹಾಕಿದೆ. ಉಳಿದ ಡಿಸ್ಟ್ರಿಕ್ಟುಗಳವರೂ, ಪ್ರಾಯಶಃ, ಸರಿಸುಮಾರಾಗಿ ಎಲ್ಲಾ ಮ್ಯುನಿಸಿಪಾಲಿಟಿಗಳವರೂ, ಈ ತೆರಿಗೆಯನ್ನು ಹಾಕುವ ವಿಷಯದಲ್ಲಿ ಇನ್ನೂ ಸಮ್ಮತಿಸಿಯೇ ಇಲ್ಲ. ಮೇಲೆ ಸೂಚಿಸಿದ ಐದು ಡಿಸ್ಟ್ರಿಕ್ಟುಗಳಲ್ಲಿ ವಿದ್ಯಾಭ್ಯಾಸದ ಸೆಸ್ಸಿನಿಂದ ಬರುವುದಾಗಿ ಅಂದಾಜು ಮಾಡಿದ್ದ ಹಣವು ವರುಷಕ್ಕೆ ಸುಮಾರು 2,92,000 ರೂ. ಗಳು ಮಾತ್ರವೇ ಆಗಿದೆ. ವಿದ್ಯಾಭ್ಯಾಸದ ಮೆಮೊರ್ಯಾಂಡಂಮೇಲಣ ಹುಕುಮಿನ ಪ್ರಕಾರ, ಕೆಲಸಗಳನ್ನು ನಡೆಸಲು ಮುಖ್ಯ ಸಾಧನವಾದ ದ್ರವ್ಯಾನುಕೂಲತೆಯೇ ಹೀಗೆ ಮಿತಿಮೀರಿ ಕಡಮೆಯಾಗಿ ಹೋಗಿರುತ್ತದೆ. ಈ ಕಾರಣದಿಂದ, ಈ ಸಮಗ್ರ ವಿಷಯವನ್ನು, ಅದರಲ್ಲಿಯೂ, ಮುಖ್ಯವಾಗಿ ಗ್ರಾಮಾಂತರಗಳ ಏಡೆಡ್ ಪ್ರೈಮರಿ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳನ್ನಾಗಿ ಮಾರ್ಪಡಿಸುವ ವಿಷಯವನ್ನು ಪುನಃ ಪರ್ಯಾಲೋಚಿಸಿ ಈಗಿನ ಸ್ಥಿತಿಗೆ ತಕ್ಕಂತೆ ಕೆಲಸಮಾಡಬೇಕಾಗಬಂದಿದೆ. ಆದರೂ, ಡಿಸ್ಟ್ರಿಕ್ಟ್ ಬೋರ್ಡುಗಳಿಂದ ಒದಗಿಸಲ್ಪಟ್ಟ ಪರಿಮಿತಸಹಾಯದ ಮೂಲಕವೂ, ಸಾಮಾನ್ಯ ಹುಟ್ಟುವಳಿಯಿಂದ ಸರ್ಕಾರದವರು ಒದಗಿಸಿದ ಮೊಬಲಗಿನ ಮೂಲಕವೂ, ಮೆಮೊರ್ಯಾಂಡಂ ಹುಕುಮಿನಲ್ಲಿ ವಿವರಿಸಿರುವ ಕಾರ್ಯಕ್ರಮದಲ್ಲಿನ ಅತ್ಯಂತ ಮುಖ್ಯವಾದ ಬಾಬುಗಳಲ್ಲಿ ಕೆಲವನ್ನು ನೆರವೇರಿಸುವ ಕೆಲಸವು ತೃಪ್ತಿಕರವಾಗಿ ಮುಂದುವರಿದಿರುತ್ತದೆ.

ವಿದ್ಯಾಭ್ಯಾಸವಿಚಾರದ ಪರಿಶೀಲನೆ.—ಪ್ರೈಮರಿಸ್ಕೂಲುಗಳ ವಿಷಯದಲ್ಲಿ ಸಂಸ್ಥಾನಕ್ಕೆ ಆಗಬೇಕಾಗಿರುವುದನ್ನು ಅಂದಾಜು ಮಾಡುವುದಕ್ಕಾಗಿಯೂ, ಹಾಲಿ ಇರುವ ಸ್ಕೂಲುಗಳನ್ನು ಮಾರ್ಪಡಿಸಿ ಪುನಃ ಹಂಚುವ ಬಗ್ಗೆ ಉಪಯುಕ್ತವಾದ ಕಾರ್ಯಕ್ರಮದ ಪಟ್ಟಿಯನ್ನು ತಯಾರ್ಮಾಡಲು ಸೌಲಭ್ಯವನ್ನು ಕಲ್ಪಿಸುವುದಕ್ಕಾಗಿಯೂ, ಕೈಗೊಂಡ ವಿದ್ಯಾಭ್ಯಾಸ ವಿಷಯಕವಾದ ಪರಿಶೀಲನೆಯ ಕೆಲಸವು ಮುಗಿದಿದೆ ಮತ್ತು ಇಲಾಖೆಯವರು ಕಳುಹಿಸಿದ ವರದಿಯು ಪರ್ಯಾಲೋಚನೆಯಲ್ಲಿದೆ.

ಪ್ರೈಮರಿ ಸ್ಕೂಲುಗಳು.—ಪ್ರೈಮರಿ ಸ್ಕೂಲುಗಳನ್ನು ನಾಲ್ಕು ವರ್ಷಗಳ ವ್ಯಾಸಂಗಕ್ರಮಕ್ಕೆ ಅನುಕೂಲವಾಗುವಂತೆ ಹೊಸರೀತಿಯಲ್ಲಿ ಏರ್ಪಡಿಸಿ ವ್ಯಾಸಂಗದ ಪಾಠಕ್ರಮವನ್ನು ಅದೇ ರೀತಿಯಲ್ಲಿ ಪರಿಷ್ಕರಿಸಿರುವುದಲ್ಲದೆ ಬೋಧನೆಯು ದೇಶಭಾಷೆಯಲ್ಲಿ ನಡೆಯುವಂತೆ ವಿಧಾಯಕ ಮಾಡಲಾಗಿದೆ. ಪಕ್ಕಾ ಮಿಡಲ್ ಸ್ಕೂಲುಗಳಲ್ಲಿರುವ ಪ್ರೈಮರಿ ಶಾಖೆಗಳನ್ನು ಪ್ರತ್ಯೇಕಿಸಿ ಅವುಗಳನ್ನು ಪ್ರತ್ಯೇಕ ಸ್ಕೂಲುಗಳನ್ನಾಗಿ ಏರ್ಪಡಿಸಿದೆ.

ಮಿಡ್ಲ್ ಸ್ಕೂಲುಗಳು.—ನಾನಾ ವಿಧವಾಗಿದ್ದ ಮಿಡ್ಲ್ ಸ್ಕೂಲುಗಳನ್ನು ಬದಲಾಯಿಸಿ ಅವೆಲ್ಲವೂ ಏಕರೀತಿಯಲ್ಲಿರುವಂತೆ ಹೊಸ ಮಾದರಿಯಲ್ಲಿ ವ್ಯವಸ್ಥೆಗೊಳಿಸಿರುವುದಲ್ಲದೆ ಅವುಗಳಲ್ಲಿ ಒಟ್ಟು ನಾಲ್ಕು ವರುಷ ಕಾಲ ವ್ಯಾಸಂಗವು ನಡೆಯುವಂತೆ ತರಗತಿಗಳನ್ನೇರ್ಪಡಿಸಲಾಗಿದೆ. ಅಲ್ಲದೆ, ಅಲ್ಲಿ ಎರಡು ಭಾಷೆಗಳನ್ನು ಕಲಿಸಬೇಕೆಂದೂ, ಇಂಗ್ಲಿಷ್ ಭಾಷೆಯನ್ನು ನಿರ್ಬಂಧಕವಾದ ದ್ವಿತೀಯ ಭಾಷೆಯನ್ನಾಗಿಟ್ಟುಕೊಳ್ಳಬೇಕೆಂದೂ, ವಿಧಾಯಕ ಮಾಡಲಾಗಿರುತ್ತದೆ. ಇಂಗ್ಲೀಷನ್ನು ದ್ವಿತೀಯ ಭಾಷೆಯನ್ನಾಗಿ ತೆಗೆದುಕೊಂಡು ದೇಶಭಾಷೆಯಲ್ಲಿ ಲೋವರ್‌ಸೆಕೆಂಡರಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತರಬೇತುಮಾಡುವ ಇನ್‌ಕಂಪ್ಲೀಟ್ ಮಿಡ್ಲ್ ಸ್ಕೂಲುಗಳೆಂದು ಕರೆಯಲ್ಪಡುವ ಹೊಸಮಾದರಿಯ ಸ್ಕೂಲುಗಳನ್ನು ಸ್ಥಾಪಿಸಲಾಗಿದೆ. ಅವುಗಳನ್ನು ಅಖೈರಿನಲ್ಲಿ ಮಿಡ್ಲ್‌ಸ್ಕೂಲುಗಳನ್ನಾಗಿ ಮಾರ್ಪಡಿಸಿ ಅಭಿವೃದ್ಧಿಗೆ ತರುವ ಉದ್ದೇಶದಿಂದ ಸದ್ಯಕ್ಕೆ ಈ ರೀತಿಯಲ್ಲಿರುವಂತೆ ಏರ್ಪಡಿಸಿದೆ. ನಾಲ್ಕು ವರುಷಗಳಕಾಲ ಮಿಡ್ಲ್ ಸ್ಕೂಲುತರಗತಿಗಳಲ್ಲಿ ವ್ಯಾಸಂಗಮಾಡುವುದಕ್ಕೆ ಪರಿಷ್ಕೃತವಾದ ಪಾಠಕ್ರಮವನ್ನು ಸಾದರ್ಪಡಿಸಿದೆ. ಪ್ರಾಥಮಿಕ ವಿಜ್ಞಾನಶಾಸ್ತ್ರವನ್ನೂ (ಎಲಿಮೆಂಟರಿಸೈನ್ಸ್) ನಕ್ಷೆಬರೆಯುವುದನ್ನೂ (ಡ್ರಾಯಿಂಗ್) ವ್ಯಾಸಂಗವಿಷಯಗಳನ್ನಾಗಿ ಅದರಲ್ಲಿ ಸೇರಿಸಿದೆ. ಹೊಸಮಾದರಿಯಲ್ಲಿ ಸ್ಕೂಲುಗಳನ್ನು ಸ್ಥಾಪಿಸುವ ಏರ್ಪಾಡಿನ ಸಂಬಂಧದಲ್ಲಿ ಮಿಡ್ಲ್ ಮತ್ತು ಪ್ರೈಮರಿ ಸ್ಕೂಲುಗಳ ಸಿಬ್ಬಂದಿಯ ವಿಷಯದಲ್ಲಿ ಅವಶ್ಯವಾಗಿರುವ ಬದಲಾವಣೆಗಳನ್ನು ಸಾವಧಾನಪೂರ್ವಕವಾಗಿ ಪರಿಶೋಧಿಸಲಾಗಿದೆ; ಮತ್ತು ಉಪಾಧ್ಯಾಯರು ಮುಂತಾದ ಸಿಬ್ಬಂದಿಯು ವಿಶೇಷ ಹೆಚ್ಚಾಗಿದ್ದಂತೆ ಕಂಡುಬಂದ ಸ್ಥಳಗಳಲ್ಲಿ ಅದನ್ನು ಕಡಮೆಮಾಡುವುದರಿಂದಲೂ, ಅದು ಕೇವಲ ಕಡಮೆಯಾಗಿದ್ದಂತೆ ಕಂಡುಬಂದ ಸ್ಥಳಗಳಲ್ಲಿ ಆವಶ್ಯಕತೆಗಳಿಗೆ ತಕ್ಕಂತೆ ಅದನ್ನು ಹೆಚ್ಚಿಸುವುದರಿಂದಲೂ, ಎಲ್ಲಾ ಸ್ಕೂಲುಗಳಲ್ಲಿಯೂ ಸಿಬ್ಬಂದಿಯನ್ನು ಸರಿಪಡಿಸಿದೆ. ಮತ್ತು ಪ್ರತಿಯೊಂದು ಸ್ಕೂಲಿನ ತರಗತಿಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಗನುಸಾರವಾಗಿ ಆಯಾ ಸ್ಕೂಲಿನ ಸಿಬ್ಬಂದಿಯನ್ನು ಗೊತ್ತುಮಾಡಲಾಗಿದೆ.

ವಿದ್ಯಾಭ್ಯಾಸದ ಸೆಸ್ಸನ್ನು ಉಪಯೋಗಿಸಿಕೊಳ್ಳುವುದು.—ವಿದ್ಯಾಭ್ಯಾಸದ ಸೆಸ್ಸನ್ನು ವಸೂಲ್ಮಾಡಿರುವ ಐದು ಡಿಸ್ಟ್ರಿಕ್ಟುಗಳಲ್ಲಿ ಮೊಬಲಗನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಬಂದ ಸಲಹೆಗಳನ್ನು ಮಂಜೂರು ಮಾಡಿ 644 ಏಡೆಡ್ ಪ್ರೈಮರಿ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳಾಗಿ ಮಾರ್ಪಡಿಸುವುದಕ್ಕೂ, 127 ಹೊಸ ಸ್ಕೂಲುಗಳನ್ನು ಸ್ಥಾಪಿಸುವುದಕ್ಕೂ, 103 ಸ್ಕೂಲುಗಳ ಸಿಬ್ಬಂದಿಯನ್ನು ಉತ್ತಮಸ್ಥಿತಿಗೆ ತರುವುದಕ್ಕೂ, 64 ಪ್ರೈಮರಿ ಸ್ಕೂಲುಗಳನ್ನು ಇನ್‌ಕಂಪ್ಲೀಟ್ ಮಿಡಲ್ ಸ್ಕೂಲುಗಳನ್ನಾಗಿಯೂ 46 ಇನ್‌ಕಂಪ್ಲೀಟ್ ಮಿಡಲ್ ಸ್ಕೂಲುಗಳನ್ನು ಪಕ್ಕಾ ಮಿಡಲ್ ಸ್ಕೂಲುಗಳನ್ನಾಗಿಯೂ ಮಾರ್ಪಡಿಸುವುದಕ್ಕೂ, ಸ್ಟೇಟ್ ಫಂಡಿನಿಂದ ಮಂಜೂರಾದವುಗಳ ಜತೆಗೆ ಇನ್ನೂ 24 ಸ್ಕೂಲುಗಳಲ್ಲಿ (ಸಿದ್ಧಾಂತ ರೂಪದಲ್ಲಿ ಕಲಿತುದನ್ನು ಪ್ರಯೋಗರೂಪದಲ್ಲಿ ತೋರಿಸಿ ಶಿಕ್ಷಣ ಕೊಡುವ) ರೂಢಿಭಾಗದ ತರಗತಿಗಳನ್ನು ಏರ್ಪಡಿಸುವುದಕ್ಕೂ, ಏರ್ಪಾಡುಮಾಡಲಾಗಿದೆ.

ಹೈಸ್ಕೂಲುಗಳು—ಬೆಂಗಳೂರು ಪಟ್ಟಣದ ಮಲ್ಲೇಶ್ವರದ ಎಕ್ಸ್‌ಟೆನ್‌ಷನ್‌ನಲ್ಲಿ ಒಂದು ಹೈಸ್ಕೂಲನ್ನು ಹೋದವರುಷ ಹೊಸದಾಗಿ ಸ್ಥಾಪಿಸಲಾಯಿತು; ಮತ್ತು ಚಾಲ್ತಿ ಸಾಲಿನಲ್ಲಿ ತಿಪಟೂರಿನಲ್ಲಿ ಒಂದು ಹೈಸ್ಕೂಲು, ಟ್ರೇನಿಂಗ್ ಕಾಲೇಜಿನ ಸಂಬಂಧದಲ್ಲಿ ಮೈಸೂರಿನಲ್ಲಿ ಒಂದು ಹೈಸ್ಕೂಲು, ಅಂತು ಎರಡು ಹೈಸ್ಕೂಲುಗಳನ್ನು ಹೊಸದಾಗಿ ಸ್ಥಾಪಿಸಲಾಗಿದೆ.

ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟಿನ ಏರ್ಪಾಡು.—ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟಿನ ಏರ್ಪಾಡಿನ ಮುಖ್ಯಾಂಶಗಳನ್ನು ತಿದ್ದುಪಾಟುಮಾಡಲಾಗಿದೆ. ಇದರ ಮೇರೆಗೆ ಈಗ ಎಲ್ಲಾ ವಿದ್ಯಾರ್ಥಿಗಳೂ ಇಂಗ್ಲೀಷು, ದ್ವಿತೀಯ ಭಾಷೆ, ಎಲಿಮೆಂಟರಿ ಮ್ಯಾಥಮ್ಯಾಟಿಕ್ಸ್ (ಪ್ರಾಥಮಿಕ ಗಣಿತ), ಇಂಗ್ಲೆಂಡ್ ಮತ್ತು ಇಂಡಿಯಾ ದೇಶಗಳ ಚರಿತ್ರೆ, ಭೂಗೋಳ, ಪ್ರಾಕೃತಿಕಭಾಗವೂ ಭೌತಿಕ ರಸಾಯನ ಶಾಸ್ತ್ರಗಳೂ ಸೇರಿ ಒಟ್ಟು ವಿಜ್ಞಾನ ಶಾಸ್ತ್ರದ ಸುಲಭ ಪಾಠಗಳು, ಇವುಗಳನ್ನು ಪಾಠಕ್ರಮದಲ್ಲಿ ಕ್ಲುಪ್ತಗೊಳಿಸುವ ರೀತಿಯಲ್ಲಿ ವ್ಯಾಸಂಗ ಮಾಡತಕ್ಕದಾಗಿದೆ. ಇದಲ್ಲದೆ ಗಣಿತವನ್ನಾಗಲಿ, ಸಂಸ್ಕೃತ, ಫ್ರೆಂಚ್ ಮುಂತಾದುವುಗಳಲ್ಲಿ ಯಾವುದಾದರೂ ಒಂದನ್ನಾಗಲಿ, ಅಥವಾ ಯಾವುದಾದರೂ ಕಸಬುದಾರಿ ವಿದ್ಯೆಯನ್ನಾಗಲಿ, ಹೆಚ್ಚು ವಿಷಯವನ್ನಾಗಿ ವ್ಯಾಸಂಗ ಮಾಡಬೇಕು. ಚಾಲ್ತಿ ಸ್ಕೂಲು ವರುಷದ IV ನೆಯ ಮತ್ತು V ನೆಯ ಫಾರಂಗಳಲ್ಲಿ ಪರಿಷ್ಕೃತವಾದ ಈ ಹೊಸವಿಧದ ಪಾಠಕ್ರಮವನ್ನೇ ಜಾರಿಯಲ್ಲಿ ತರಲಾಗಿದೆ.

ಕೈಗಾರಿಕೆಯ ಪಾಠಶಾಲೆಗಳು.—ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆಯ ಡೈರೆಕ್ಟರವರಿಗೆ ಕೈಗಾರಿಕೆಯ ಬಾಬಿನಲ್ಲಿ ಸಂಸ್ಥಾನದಲ್ಲಿನ ಆವಶ್ಯಕತೆಗೆ ತಕ್ಕಂತೆ ಕೈಗಾರಿಕೆಯ ಪಾಠಶಾಲೆಗಳ ಕೆಲಸಗಳನ್ನು ಸರಿಯಾಗಿ ಸಜ್ಜುಗೊಳಿಸುವುದಕ್ಕೆ ಹೆಚ್ಚು ಅವಕಾಶವಿರುವ ಪ್ರಯುಕ್ತ, ಈ ಪಾಠಶಾಲೆಗಳು ಸದರಿ ಆಫೀಸರವರ ಮೇಲ್ತನಿಖೆಗೆ ವರ್ಗಾಯಿಸಲ್ಪಟ್ಟಿವೆ. ಮೈಸೂರಿನಲ್ಲಿದ್ದ ಸಿವಿಲ್ ಇಂಜನೀಯರಿಂಗ್ ಸ್ಕೂಲನ್ನು ಬೆಂಗಳೂರಿಗೆ ವರ್ಗಾಯಿಸಿ ಅದನ್ನು ಮೆಕ್ಯಾನಿಕಲ್ ಇಂಜನೀಯರಿಂಗ್ ಸ್ಕೂಲಿನೊಡನೆ ಸಮ್ಮಿಳಿತಮಾಡಿ ಸೇರಿಸಲಾಗಿದೆ.

ಇನ್ಸ್‌ಪೆಕ್ಟಿಂಗ್ ಆಫೀಸರುಗಳು.—ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳ ಸಂಖ್ಯೆಯನ್ನು 45 ಕ್ಕೆ ಹೆಚ್ಚಿಸಿ ರೇಂಜುಗಳನ್ನು ಯುಕ್ತರೀತಿಯಲ್ಲಿ ಪುನಃ ವಿಂಗಡಿಸಲಾಗಿದೆ. ಮೇಲು ದರ್ಜೆಯ ಇನ್ಸ್‌ಪೆಕ್ಟರುಗಳ ಗ್ರೇಡನ್ನೂ ಕೂಡ ಈಚೆಗೆ ತಿದ್ದುಪಾಟು ಮಾಡಲಾಗಿದೆ. (ಸಶೇಷ.)

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೭—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೭—೦
ವೃಷಪಂಚಕ	೦—೪—೦	೦—೭—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ವೀರಶೈವ ಧರ್ಮಸಂಗ್ರಹ.

ಮಾಸಪತ್ರಿಕೆ.

ಒಂದು ವರ್ಷಕ್ಕೆ ವರ್ಗಣಿ ಅಂಚೆವೆಚ್ಚಸೇರಿ 2—8—0.

ಈ ಪತ್ರಿಕೆಯ ಎರಡನೆಯ ವರ್ಷವು ಈ ರಕ್ತಾಕ್ಷಿ ಸಂ-ಆಶ್ವೀಜಮಾಸದಿಂದ ಪ್ರಾರಂಭವಾಗುವುದು. ಎರಡನೆಯ ವರ್ಷದಲ್ಲಿ ವಾಚಕರ ಪ್ರಯೋಜನಾರ್ಥವಾಗಿ ಎರಡು ಫಾರಮ್ಮುಗಳಿಂದ ಮೂರು ಫಾರಮ್ಮಿಗೆ ಹೆಚ್ಚಿಸಿ ವೀರಶೈವಮತ ಪ್ರಾಚೀನತೆ, ವೀರಶೈವ ವೈದಿಕತ್ವ, ಲಿಂಗಧಾರಣವಿಚಾರ, ಶಕ್ತಿವಿಶಿಷ್ಟಾದ್ವೈತ, ಶಿವದೀಕ್ಷೆ, ಶಿವಪೂಜೆಯಕ್ರಮ, ವೀರಶೈವಾಚಾರ, ವೀರಶೈವ ವೈದಿಕವಿದ್ಯಾವಶ್ಯಕತೆ, ವೀರಶೈವ ಬ್ರಹ್ಮಚಾರಿಶಿಕ್ಷೆ, ವೀರಶೈವ ಸ್ತ್ರೀಧರ್ಮ ಮೊದಲಾದ ವಿಚಾರಗಳನ್ನು ಪ್ರಮಾಣಗಳ ಉದಾಹರಣೆಯಿಂದ ಉಪನ್ಯಾಸರೂಪವಾಗಿಯೂ, ಬಸವರಾಜೀಯ ಮೊದಲಾದ ಗ್ರಂಥಗಳನ್ನು ಕನ್ನಡಟಿಪ್ಪಣಿಯೊಡನೆಯೂ ಪ್ರಕಟಿಸುವೆವು.

ವೀರಶೈವ ಧರ್ಮಾಭಿಮಾನಿಗಳು ಈ ಪತ್ರಿಕೆಗೆ ಚಂದಾದಾರರೂ, ಪೋಷಕರೂ ಆಗಿ ಇದು ಚಿರಕಾಲ ನಡೆಯುವಂತೆ ಸಹಾಯಕಾರಿಗಳಾಗಬೇಕಾಗಿ ಅತ್ಯಂತ ವಿಧೇಯತೆಯಿಂದ ಪ್ರಾರ್ಥಿಸುವೆವು.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಅಷ್ಟಾವರಣ ವಿಚಾರದರ್ಪಣ (ಪ್ರಶ್ನೋತ್ತರ ರೂಪ)			೦-೧೪-೦
ಕೊಡಗೂಸು ಕಥೆ (ಶಿವಕಥೆಯನ್ನು ಮಾಡುವವರಿಗೆಯೋಗ್ಯ)			೦- ೪-೦
ವೇಮನಾರಾಧ್ಯರ ಕಥೆ	೦-೪-೦	ಶಿವಗೀತೆ (ಕನ್ನಡ ವಚನ)	೦- ೪-೦
ಶಿವಾಧಿಕ್ಯ	೦-೨-೦	ಸಿದ್ಧಲಿಂಗೇಶ್ವರಸ್ತೋತ್ರ	೦- ೦-೬
ನಕ್ಷತ್ರಮಾಲಿಕೆ	೦-೦-೬	ಜಯದೇವ ಭಜನಾನಂದಿನಿ	೦- ೨-೦
ಗುರುಭಜನ	೦-೧-೦	ಶಿವಸ್ತುತಿ ಮಣಿಮಾಲಾ	೦- ೦-೩

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ :—

ಸಂಪಾದಕ ಎಸ್. ವೀರಪ್ಪಶಾಸ್ತ್ರೀ, ಮಾಗಡಿ.
[24—5] ಬೆಂಗಳೂರು ಡಿ

ಜಾನುವಾರಿನಮೇಲೆ ಫೀಸು.

ದಕ್ಷಿಣ ಕನ್ನಡಾ ಜಿಲ್ಲಾ ಉಪ್ಪಿನಂಗಡಿ ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರುಷ 1924 ನೇ ಇಸವಿ ನವಂಬರು 11 ರಿಂದ 26 ನೇ ತಾರೀಕುವರೆಗೆ ಜರಗುವದು. ಅಂದರೆ ಸಂತೆಯು ಕಾರ್ತೀಕ ಪೂರ್ಣಿಮಿದಿವಸ ಪ್ರಾರಂಭವಾಗಿ ಸುಬ್ರಹ್ಮಣ್ಯ ಅಮಾವಾಸ್ಯೆ ದೀಪೋತ್ಸವದಪರಿಯಂತ ಜರಗುವದು. ಸಂತೆಗೆ ತಂದ ಪ್ರತಿ ಒಂದು ಜಾನುವಾರಿನಮೇಲೆ ಎರಡಾಣೆ ಫೀಸು ವಸೂಲ್ಮಾಡಲಾದೀತು. [4—2]

ಪುತ್ತೂರು, 1924ನೇ ಇಸವಿ, ಆಗೋಸ್ತು 8 ನೇ ತಾರೀಕು. } ಕೆ. ಎನ್. ಜೋಯಿಕುಟ್ಟಿ, ರೆವಿನ್ಯೂ ಡಿವಿಜನಲ್ ಆಫೀಸರರು.

18 ಕ್ಯಾರೆಕ್ಟ್ ಗೋಲ್ಡ್‌ಪ್ಲೇಟ್ ರೇಡಿಯಂ ರಿಸ್ಟ್‌ವಾಚ್,

ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಅವಶ್ಯವಾಗಿರಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ.

ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಈ ಗಡಿಯಾರವು ಸ್ವಿಜರ್‌ಲ್ಯಾಂಡ್ ದೇಶದಲ್ಲಿ ಮಜಬೂತಾದ ಮೂವ್ಮೆಂಟ್ಸ್‌ಗಳಿಂದ ತಯಾರಾದದ್ದು. ಇದರ ಬಣ್ಣವು ಭಂಗಾರಕ್ಕೆ ಸಮನಾಗಿರುವದು. 3 ವರುಷ ಗ್ಯಾರಂಟಿ. ಕ್ರಯ 1ಕ್ಕೆ 8—8—0, ಪ್ಲೇನ್‌ಡೈಯಲ್ 7—0—0.

ವಿಳಾಸ—ಎಟೋನಿಯಾ ಅಂಡ್ ಕೊ,
[4—4] ಪೋ|| ಬಾ|| ನಂ. 65, ಮದರಾಸು.

೧೯೨೪ನೆಯ ಇಸವಿ ಅಕ್ಟೋಬರ್ ತಾ|| ೧೯ ರಿಂದ ೧೯೨೪ ನೆಯ ಇಸವಿ ಅಕ್ಟೋಬರ್ ತಾ|| ೨೫ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಆಶ್ವಯುಜ ಬಹುಳ ಷಷ್ಠಿಯಿಂ ಆಶ್ವಯುಜ ಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಂ ಮಾ
19	ಭಾನು	ಷಷ್ಠಿ	8-34	ಆರ್ದ್ರಾ	35-54	3
20	ಸೋಮ	ಸಪ್ತ	13-35	ಪುನ	42-3	4
21	ಮಂಗಳ	ಅಷ್ಟ	17-57	ಪುಷ್ಯ	47-23	5
22	ಬುಧ	ನವ	21-22	ಆಶ್ಲೇ	51-42	6
23	¹ಗುರು	ದಶ	23-36	ಮಖಾ	54-48	7
24	²ಶುಕ್ರ	ಏಕಾ	24-31	ಪುಬ್ಬ	56-38	8
25	³ಶನಿ	ದ್ವಾದ	24-9	ಉತ್ತ	57-11	9

(1) ಶ್ರೀರಂಗಪಟ್ಟಣದಲ್ಲಿ ಅಶ್ವತೀರ್ಥೋತ್ಸವ. (2) ಸರ್ವತ್ರಏ ದಶಿ. (3) ಶನಿಪ್ರದೋಷ.

ಮೈಸೂರು : ವೈ. ಏಕಾಂಬರಯ್ಯನವರಿಂದ ಶ್ರೀ ಎಲೆಕ್ಟ್ರಿ
ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGSITERED NO. M.124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ಸಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಪ್ಸಿತದೀಲ ಪಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತ ಲೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೩-೧೦-೦]

REGISTERED NO. M. 124.

ಸಂಪುಟ ೩೭] ಮೈಸೂರು ಸ್ಟಾರ್ ಸಃ ೧೯ ಇಸವಿ ಅಕ್ಟೋಬರ್ ತಾರೀಖು ೨೬ ನೆಯ ಭಾನುವಾರ. [ಸಂಚಿಕೆ ೪೩

ಬಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHARAGHAVA
VAIDYASALA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲೂಯೆನ್ಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	

ಗೋಷಾಸ್ತ್ರೀಯರಿಗೂ ತಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಬಾಳ್ಯದ ವೆಂಕಟಾಚಲಪಂಡಿತ,
37 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನ್‌ಫ್ಲುಯೆನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಳುವು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಟಿನ್ನು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಟಿನ್ನು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಟಿನ್ನು ಬಾಟ್ಲು ೧ ಕ್ಕೆ ರೂ. ೨—೮—೦ ರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—46] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

ಸಟೀಕಶಿವಯೋಗಪ್ರದೀಪಿಕೆ ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

ಪಾಲ್ಕುರಿಕೆ ಸೋಮೇಶ್ವರಪುರಾಣ ಬೆಲೆ ೧—೦—೦.

ಪಂಚಶ್ಲೋಕೀ ಬೆಲೆ ೧—೦—೦.

ಸೌಂದರಪುರಾಣ ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

ಸಟೀಕವಿವಾಹವಿಧಿ ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಆಸ್ಥಾನ ವಿದ್ವಾನ್ ಎಚ್.ಆರ್. ಕರಿಬಸವಶಾಸ್ತ್ರಿ
[50—40] ಅಂಡ್ ಸನ್ಸ್, ಜೆ.ಪಿ. ಮಂಡಲಿ, ಮೈಸೂರು.

ಮೈಸೂರು ಎಂ. ಎಸ್. ಶಿದ್ದಪ್ಪ ಬ್ರದರ್ಸ್‌ರವರ ವಿಜ್ಞಾಪನೆ.
ನಮ್ಮ ಕಂಪನಿಯ ಕ್ಯಾಲೆಂಡರುಗಳನ್ನು ಉಪಯೋಗಿಸುತ್ತಲಿರುವ ಗಿರಾಕಿಗಳಲ್ಲಿ
ವಿನಂತಿ.

1925 ನೇ ಇಸವಿಯ ಸಚಿತ್ರ ಶೀಟ್ ಕ್ಯಾಲೆಂಡರುಗಳು.

1925ನೇ ಇಸವಿಯ ಶೀಟ್ ಕ್ಯಾಲೆಂಡರ್ 1 ಕ್ಕೆ 0-1-0. 50 ಕ್ಯಾಲೆಂಡರ್‌ಗಳಿಗೆ 1-2-0. 100 ಕ್ಯಾಲೆಂಡರ್‌ಗಳಿಗೆ 2-0-0. ನಿಮಗೆ ಬೇಕಾದಷ್ಟು ಕ್ಯಾಲೆಂಡರ್‌ಗಳ ಪೂರಾ ಮೊಬಲಗು ಮಣಿಯಾರ್ಡರ್ ಮೂಲಕ ರವಾನಿಸಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜು ಯಾವ ಖರ್ಚೂ ಇಲ್ಲದಂತೆ ನೀವಿದ್ದೆಡೆಗೆ ರವಾನಿಸಲಾಗುತ್ತೆ. ಮೇಲ್ಕಂಡ ಕ್ಯಾಲೆಂಡರ್‌ನಲ್ಲಿ ಇಂಗ್ಲೀಷ್ ಮತ್ತು ಕನ್ನಡ ತಿಂಗಳು, ತಾರೀಖು, ವಾರ, ತಿಥಿ ನಕ್ಷತ್ರ, ಆಯಾಯ ದಿವಸದಲ್ಲಿ ನಡೆಯತಕ್ಕ ಹಬ್ಬವೇ ಮೊದಲಾದ ಮುಖ್ಯ ದಿವಸಗಳು, ರಾಹುಕಾಲ, ಗುಳಿಕಾಲ ಮಳೇನಕ್ಷತ್ರ, ಅರಮನೆಯಲ್ಲಿ ನಡೆಯತಕ್ಕ ಉತ್ಸವಗಳೂ. ಶ್ರೀಮನ್ ಮಹಾರಾಜರವರು, ಶ್ರೀಮನ್ ಯುವರಾಜರವರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರವರ ಭಾವಚಿತ್ರಗಳನ್ನಿಟ್ಟು ನಯವಾದ ಬಿಳೀ ದಪ್ಪ ಕಾಗದದಲ್ಲಿ ಅಂದವಾಗಿ ಪ್ರಿಂಟ್ ಮಾಡಿಸಿದ್ದೇವೆ.

1925 ನೇ ಇಸವಿಯ (ಮಂತ್ಲಿ ಟೇರಾಫ್) ತಿಂಗಳಿಗೊಂದು ಶೀಟಿನಂತೆ ಹರಿದುಬಿಡುವಂತೆ ತಯಾರಿಸಿರುವ ಕ್ಯಾಲೆಂಡರ್ 1 ಕ್ಕೆ 0-3-0, 3 ಕ್ಯಾಲೆಂಡರಿಗೆ 0-6-0, 12 ಕ್ಯಾಲೆಂಡರಿಗೆ 1-6-0. ತಮಗೆ ಬೇಕಾದಷ್ಟು ಕಾಪಿಗಳ ಪೂರಾಮೊಬಲಗನ್ನೂ ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜ್ ಯಾವ ಖರ್ಚೂ ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. [50—4]

ಮಣಿಯಾರ್ಡರ್ ರವಾನಿಸುವ ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುದ್ದಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—7] ಪೋ. ಬಾ. ೫೧೦, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ, ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
35 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಲ್ಲದರಲ್ಲಿ ಪುರಾತನ ಕಾರಖಾನೆಯು.

ಸೂಚನೆ:—ಯಾವದೊಂದು ಮಾಲು ಗುಣಕಾರಿಯಾಗಿರುವದೆಂದು ತಿಳಿದಕೂಡಲೆ ಎಲ್ಲ ಕಡೆಗೂ ಅದರ ನಕಲು ಮಾಡಲಿಕ್ಕೆ ಆರಂಭವಾಗುತ್ತದೆ. ಆದರೆ ಹೆಸರಿಗೆ ತಕ್ಕಂತೆ ಗುಣಕ್ಕೆ ಮಾತ್ರ ಪಾತ್ರವಾಗುವದಿಲ್ಲ. ಈಗೀಗ ಇಲ್ಲಿ ನಕಲೀ ಔಷಧಿಯ ಕಾರಖಾನೆಗಳು ಹೊರಡಹತ್ತಿರುವವು. ಆದ್ದರಿಂದ ಗಿರಾಕಿಗಳು ನಮ್ಮ ಟ್ರೇಡಮಾರ್ಕನ್ನು ನೋಡಿ ತಕ್ಕೊಳ್ಳಬೇಕು ಸರ್ಕಾರದಲ್ಲಿ ರಿಜಿಸ್ಟರ್‌ಆದಂಥ ಸುವರ್ಣಪದಕ ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦, ೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.—ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇರೋಗ ಇದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟಲಿಯ ಕಿಮ್ಮತ್ತು ೧| ರೂಪಾಯಿ ಮೂರುಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲುಖರ್ಚು ಹೆಚ್ಚು ಬೀಳುವದಿಲ್ಲ. ಹತ್ತು ಬಾಟಲಿಗಳ ಕಿಮ್ಮತ್ತು ೧೧—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲು ಖರ್ಚು ಬೇರೆ ಬೀಳುವದು. ಟಪಾಲಿನ ಖರ್ಚು:—೧ ಬಾಟ್ಲಿಗೆ ೧—೪—೦, ೩ ಬಾಟ್ಲಿಗೆ ೩—೦—೦, ೮ ಬಾಟ್ಲಿಗೆ ೧೩—೦—೦

ಮ್ಯಾನೇಜರ—ದ್ರಾಕ್ಷಾರ್ಕಮಧು ಆಫೀಸು,
[12-10] ಪೋ. ನಿಪ್ಪಾಣಿ, ಜಿ. ಬೆಳಗಾಂವ.

NOTICE.

Wanted a qualified nurse for the Hubli Dispensary from the 1st week of November 1924. Pay Rs. 30 to 40 per month with free quarters. Private practice allowed.

Candidates should apply in their own hand writing before 31st October 1924 stating their age, caste and qualifications with credentials. They should also state whether they have any previous practice and if so for how many years?

(2)
K. K. Nadirsha, L.C.E.,
Chief Officer
Hubli Municipality.
Hubli,
13th Oct. 1924.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಅಕ್ಟೋಬರ್ ತಾ|| ೨೬ ನೆಯ ಭಾನುವಾರ.

THE REPRESENTATIVE ASSEMBLY DASARA SESSION.

The duration of Dasara Session of the Mysore Representative Assembly had to be extended from 8 days as had been fixed by the Statute to 11 days owing to the increased volume of work. As the Dewan remarked, in future it may become necessary to set apart 15 days for the Session. It is a salutory feature that in spite of the extension the attendance of the members was very good, a matter which might stand comparison with any other record of a popular House. The Dewan has paid a fine tribute to the members for their hearty co-operation, their readiness to compromise where it was desirable, and their willingness to abide by the rulings of the Chair. We cannot let the opportunity go without congratulating the Dewan-President for the very able, pleasant and tactful handling of the House which so largely contributed to the success of the Session. We are only sorry there need not have been such a tremendous haste on the part of a member from Magadi to call out cheers to His Highness immediately after the Dewan's concluding address, before letting any member of the Assembly to reciprocate the very fine sentiments which the courteous Dewan expressed towards the House.

This Session has been one of the most momentous, in recent years, for more than one reason. For one thing it showed how growingly keen the representatives are becoming in the affairs of the State, and how they would without hesitation carry through the measures which they believe to be for the interests of the country in spite of any opposition either from the official side or the non-official minority. They have been able to make the Government concede certain points which they were disinclined to at the beginning. It is equally commendable on their part to sober down their demands whenever necessary as in the case of the resolutions with regard to the reconstitution of the Mysore Civil Service. The carrying through of the resolutions for the nomination of two candidates to every one appointed through the competitive examination, the admission of non-Brahmins into the Mysore Sanskrit College, the reservation of 75 per cent of the freeships for backward classes and the increase of the percentage reserved for the backward classes as under the Miller Committee Report from 50 to 75, are some of the victories for the popular party which they could well be proud of. We cannot forget the splendid foundation laid by the late Mr. M. Basaviah of blessed memory and his friends during those early years of the movement. It is pleasant to recall the stages of cavil, abuse and derision here, and foreboding of worse things elsewhere which the movement has passed through and to see it forcing its way into its rightful place. We have so often said that the redemption to this land must come through the levelling process for which the movement stands and we are glad that its first fruits are so encouraging. We only hope that the leaders of the movement will keep firm to their righteous faith and will strive unceasingly for the cause.

SUCCESSOR TO BALEHONNUR MUTT.

We have adverted to this subject more than once in these columns, and we are glad to know that the leading gentlemen of the Lingayet Community have been evincing of late much interest in the matter. We have already published last week the proceedings of the two meetings held in Mysore of the Lingayet members of the Representative Assembly, the Legislative Council, and the Lingayet gentlemen of Mysore City passing some resolutions regarding the arrangements to be made for the election of a successor to the above *mutt*. The net result of their deliberations seems to be that the arrange ment for the election should be so arranged as to give full opportunity to the members of the community both in and outside Mysore to be present on the occasion. We need hardly say that out of 37 lakhs of Lingayets in India, there are very few who do not owe allegiance to this institution, and the consensus of opinion of the leading members of the community is that the successor should be elected from amongst the candidates for the place by means of votes to be taken at a representative meeting of the members of the community from different parts of India. Hitherto various attempts appear to have been made by interested parties, self-constituted leaders of the community, to bring in their own nominees without trying to ascertain the views of the community in the matter. As a matter of fact, the last of such attempts was resorted to without giving due publicity to the arrangements made, and consequently it ended in nothing. It is a surprise of surprises that Government should have been a party to such arrangements. They are fully aware that a few gentlemen have been trying their best to get their own nominee to the place, and yet they have not made any attempt to ascertain the views of the community in the matter except in a dubious and questionable way.

We are just now being informed that Government have ordered—we do not know at whose instance—that a successor should be elected at Chikmagalore and a report be made to Government before the end of this month. We are at a loss to know why Government have fixed for the meeting such an out of the way place like Chiikmagalore which has no easy means of communication. We are constrained to believe that Government in doing this have been influenced by the views of certain individuals of the community who are interested to have their own way in the matter. If not, Government would not have flouted at the suggestions of the leading members of the community embodied in the proceedings of the two meetings held at Mysore, the copies of which we hear have already been submitted to Government. When the conjoint action of both Government and of some leading gentlemen of the community headed by Dewan Bahadur Rajasabhabhushana Mr. K. P. Puttanna Chetty has failed, how Government could take upon the themselves the whole responsibility in such a vexed question we are unable to understand. There cannot be any objection whatever for the installation ceremoney to take place in Balehonnur itself. But it is incumbent on all who are really interested in the welfare of the institution to see that every facility is afforded to elect a suitable candidate acceptable to every section of the community, which would avoid future troubles in the matter. The suggestion embodied in the proceedings of the two meetings held in Mysore that the election should be held at Bangalore immediately after the Tenth Sessions of the All-India Veerashiva Conference seems to be the most desirable and feasible under the circumstances. We hope that Government will pay due regard to the considered opinion of the leading members of the community and avoid further complications in the matter which are sure to arise otherwise. We have to finally state that Government have no authority to interfere at this stage when the leaders themselves are trying to bring the matter to a successfull termination and their only function is to accord approval to the accredited nominee of the community.

NOTES AND COMMENTS.

A Notable Wedding.

We are glad to announce that Mushir-ul-Mulk Mir Humza Husein, First Member of Council celeberated the marriage of his eldest son Mr. Mir Safdar Husein with the daughter of Agha Mirza Ahmed Shirazi with great *eclact* on Thursday the 23rd instant at his residence in Edga, Mysore, which was attended by the *elite* of the City and a number of distinguished visitors from outside. In the evening there was a music party arranged in two well decorated spacious shamianes one for gentlemen and the other for ladies. We offer our heartiest congratulations to the bride and bridegroom and wish them long life, unbroken joy and continued prosperity.

Intolerable:—

When the question of admission of non-Brahmin students to the Mysore Sanskrit College was being discussed in the Assembly the Second Members of Council asked Mr. D. S. Mallappa the mover of the proposition whether the Lingayet Pandits would teach Veda to Musalmans. This reminds one of the incident which took place some years ago under similar circumstances, when the late Mr. T. Ananda Rao the then Dewan of Mysore asked some of the Lingayet members of the Assembly whether they would allow......to take water from wells used by them. How long can this sort of behaviour on behalf of the responsible officers be tolerated?

ಶ್ರೀ ಬಾಳೇಹೊನ್ನೂರುಸಂಸ್ಥಾನಪೀಠಾಧಿಕಾರ.

ಈ ಪೀಠಾಧಿಕಾರಿಗಳನ್ನು ಗೊತ್ತುಮಾಡುವ ವಿಚಾರವಾಗಿ ಈವರೆಗೂ ನಡೆದಿರುವ ಪತ್ರವ್ಯವಹಾರಗಳೂ, ಅರಸೀಕೆರೆ ಮತ್ತು ಬೆಂಗಳೂರುಗಳಲ್ಲಿ ನಡೆದ ಸಭೆಗಳ ವಿಫಲಾಂಶಗಳೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿಯೇ ಇರುತ್ತವೆ. ಈ ಬಾಳೆಹಳ್ಳಿಯ-ರಾಂಭಾಪುರೀ-ಜಗದ್ಗುರುಪೀಠವು ವೀರಶೈವ ಮುಖ್ಯಾಚಾರ್ಯಪೀಠಗಳೊಳಗೆ ಒಂದಾಗಿರುತ್ತದೆ. ಇದು ಆಸೇತು ಹಿಮಾಚಲಾಂತದೇಶಗಳಲ್ಲಿರುವ ವೀರಶೈವರ ಧಾರ್ಮಿಕಸಾಮ್ರಾಜ್ಯರಕ್ಷಣೆಯ ಮಹಾಸಂಸ್ಥಾನವಾಗಿ ಪುರಾತನ ಪ್ರಸಿದ್ಧವಾಗಿದೆ. ಇದರ ಅಧಿಕಾರವು ವೀರಶೈವಮಂಡಲದಮೇಲೆಲ್ಲಾ ಎಷ್ಟರಮಟ್ಟಿಗೆ ಹೊತ್ತಿರುವುದೋ, ಅದರ ರಕ್ಷಣೆಯ ಭಾರವೂ ಅದರ ಶಿಷ್ಯಮಂಡಲದಮೇಲೆಲ್ಲಾ ಅಷ್ಟರಮಟ್ಟಿಗೆ ಹೊತ್ತಿರುತ್ತದೆ. ಅದುಕಾರಣವೇ ಇಂತಹ ಸಂಸ್ಥಾನದ ವಿಷಯದಲ್ಲಿ ಸಮಾಜದ ಜನರು ಅಭಿಮಾನಾದರಗಳನ್ನು ವಹಿಸಿ, ಕಾಲಗತಿವೈಚಿತ್ರ್ಯದಿಂದ ಈ ಪೀಠಕ್ಕೆ ಒದಗಿರುವ ಗ್ಲಾನಿಯು ತಪ್ಪಿಹೋಗಿ ಪೂರ್ವೋನ್ನತಿಯನ್ನು ಅದಕ್ಕೆ ತಂದುಕೊಡಲು ಸರ್ವವಿಧದಲ್ಲೂ ಸಮರ್ಥರಾಗಿಯೂ, ಪೀಠಾಚಾರ್ಯರು ಮುಖ್ಯ ಗಮನವಲ್ಲಿಡಬೇಕಾದ ಮತಧಾರ್ಮಿಕಾದ್ಯಭಿವೃದ್ಧಿಗಳಲ್ಲಿ ತತ್ಪರರಾಗಿಯೂ, ಸಮಾಜಕ್ಕೆ ಮಹೋತ್ಸಾಹರೂಪವಾಗಿ ಹುಟ್ಟಿಸಲ್ಪಟ್ಟಿರುವ ವಿರಕ್ತಪಟ್ಟಾಧಿಕಾರಿಗಳ ವಿಷಮಕಲಹಕ್ಕೆ ಕಿಂಚಿನ್ಮಾತ್ರವೂ ಅವಕಾಶಕೊಡದೆ ಅದರ ಶಾಂತಿಗಾಗಿ ಸಾಹಸಪಡತಕ್ಕವರಾಗಿಯೂ ಇರತಕ್ಕವರು ಈ ಪೀಠಕ್ಕೆ ಬಂದರೆ ಸಮಾಜಕ್ಕೆ ಹಿತವಾಗುವುದೆಂಬ ಸದುದ್ದೇಶದಿಂದಲೇ ಅಂತಹ ಗುಣೋಪೇತನಾದ ವಟುವನ್ನು ನಿರಾಕ್ಷೇಪವಾಗಿ ಬಹುಜನಸಮ್ಮತಿಯಿಂದ ಆರಿಸಿ ಪಟ್ಟಕಟ್ಟಬೇಕೆಂದು ಪ್ರಯತ್ನಿಸುತ್ತಿದಾರೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಈ ಸಂಸ್ಥಾನಪೀಠಾಧಿಕಾರಿಗಳನ್ನು ಹೊಸದಾಗಿ ನಿಯಮಿಸುವ ಕಾಲದಲ್ಲಿ, ಸಂಸ್ಥಾನದ ಅಭಿಮಾನಶಾಲಿಗಳೂ ಸಮಾಜದಪ್ರಮುಖರೂ ಯೋಗ್ಯರಾದ ವಟುಗಳನ್ನು ಮಠಕ್ಕೆ ಬರಮಾಡಿಕೊಂಡು ಶ್ರೀಕರ್ತರಗದ್ದಿಗೆಯ ಬಳಿ ಚೀಟಿಗಳನ್ನು ಹಾಕಿ, ಯಾವ ವಟುವಿನ ಹೆಸರಿಗೆ ಚೀಟಿಯು ತೇಲುತ್ತದೋ ಆ ವಟುವನ್ನು ಮೈಸೂರು ಸರ್ಕಾರದವರಪ್ಪಣೆಯನ್ನು ಪಡೆದು ವಿಧ್ಯುಕ್ತವಾಗಿಯೂ, ಮಠದ ಗೌರವಕ್ಕೆ ತಕ್ಕಂತೆಯೂ ಪಟ್ಟಾಧಿಕಾರಿಗಳನ್ನಾಗಿ ಮಾಡುವುದು ಪೂರ್ವದಿಂದಲೂ ನಡೆದು ಬಂದಿರುವ ಆಚರಣೆಯಾಗಿರುತ್ತದೆಂದು ನರಸಿಂಹರಾಜಪುರದ ಮ|| ಇಂ. ಶಾಂತಪ್ಪಶೆಟ್ಟರು ಮತ್ತೆ ಕೆಲವರು ಹೇಳಿ ಆ ಪ್ರಕಾರ ನಡಿಸಲು ಸಾಹಸಪಡುತ್ತಿದ್ದಾರೆ. ಕಾಲಸ್ಥಿತಿಯ ವ್ಯತ್ಯಾಸದಿಂದ ಮೂಢಭಕ್ತಿಯು ಕಡಿಮೆಯಾಗಿ ಪ್ರಾಜ್ಞಭಕ್ತಿಯು ತಲೆಯೆತ್ತುತ್ತಿರುವ ಈ ಸಮಯದಲ್ಲಿ, ಯಾವವಿಧದ ಉತ್ಕೃಷ್ಟಯೋಗ್ಯತೆಯಿಲ್ಲದಿದ್ದರೂ ಗುರುಗಳೆಂಬ ಅಭಿಮಾನವೊಂದರಿಂದಲೇ ಕಾಣಿಕೆಕಪ್ಪಗಳನ್ನಿತ್ತು ಮರ್ಯಾದಿಸುವ ಜನರು ಕಡಿಮೆಯಾಗುತ್ತಿರುವರು. ಹೀಗಾಗುವುದರಿಂದ ಧರ್ಮರಕ್ಷಣಾಧಿಕಾರಿಗಳಲ್ಲಿ ಕರ್ತವ್ಯಜ್ಞಾನವೂ, ಕರ್ತವ್ಯತತ್ಪರತೆಯೂ ಹೆಚ್ಚಲು ಅವಕಾಶವಾಗಿ ಅದರಿಂದ ಸಮಾಜಕ್ಕೆ ವಿಶೇಷಲಾಭವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮೂಢಭಕ್ತಿಯನ್ನನುಸರಿಸಿ ಚೀಟಿಯನ್ನು ಹಾಕಿ ತನ್ಮೂಲಕ ಅಧಿಕಾರಿಗಳನ್ನು ಗೊತ್ತುಮಾಡುವುದು ಖಂಡಿತವಾಗಿಯೂ ನಿರಾಕ್ಷೇಪವೂ, ಸರ್ವಜನಸಮ್ಮತವೂ ಆಗಿರುವುದಿಲ್ಲವೆಂದು ಹೇಳಬೇಕಾದ ಅಗತ್ಯವಿಲ್ಲವು. ಈರೀತಿ ಚೀಟಿಯನ್ನು ಹಾಕಿ ವಟುವನ್ನು ಆರಿಸುವುದಾಗಲಿ, ಎಲ್ಲೋ ಕೆಲ ಜನರು ಒಂದು ಕಡೆ ಸೇರಿ ತಮಗೆ ಬೇಕಾದವನ್ನು ಗೊತ್ತುಮಾಡುವುದಾಗಲಿ ಸಮಾಜದ ಬಹುಜನಸಮ್ಮತವಾಗಿರದೆ ಅನರ್ಥಕಾರಿಯಾಗಿ ಪರಿಣಮಿಸುವುದರಿಂದ, ಬೆಂಗಳೂರಿನಲ್ಲಿ ನೆರೆಯುವುದಾಗಿರುವ ಅಖಿಲವೀರಶೈವಮಹಾಸಭೆಗೆ ಭರತಖಂಡದ ನಾನಾಭಾಗಗಳಿಂದ ವೀರಶೈವಪ್ರಮುಖಪ್ರತಿನಿಧಿಗಳೂ, ವಿದ್ವಾಂಸರುಗಳೂ, ಸಮಾಜಾಭಿಮಾನಶಾಲಿಗಳೂ ಬರುತ್ತಾರಾದುದರಿಂದ, ಆವೇಳೆಯಲ್ಲಿ ಅಂದರೆ ಮಹಾಸಭಾಕಾರ್ಯಗಳು ಮುಗಿದೊಡನೆಯೇ ಶ್ರೀಮದ್ರಂಭಾಪುರೀಸಂಸ್ಥಾನಪೀಠಾಧಿಕಾರಸ್ಥಾನಕ್ಕೆ, ಪ್ರಕಟನಪತ್ರಿಕೆಯದ್ವಾರ ವಿದ್ಯಾಕುಲಶೀಲಸಂಪನ್ನರಾದ ವಟುಗಳು ಬರಮಾಡಲ್ಪಟ್ಟು ಅವರುಗಳಲ್ಲುತ್ತಮರಾದವರೊಬ್ಬರು ಸರ್ವಾನುಮತದಿಂದ ಆರಿಸಲ್ಪಡತಕ್ಕುದು ನಿರಾಕ್ಷೇಪವೂ, ಸುಸಾಧ್ಯವೂ ಆಗಿರುತ್ತದೆಂದು ದಸರಾಮಹೋತ್ಸವಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದ ಮೈಸೂರು ಸೀಮೆಯ ಎಲ್ಲ ಡಿಸ್ಟ್ರಿಕ್ಟುಗಳ ವೀರಶೈವಪ್ರತಿನಿಧಿಗಳೂ, ರಾಜಧಾನಿಯ ಪ್ರಮುಖ ವೀರಶೈವರೂ ಎರಡು ಸಭೆಗಳನ್ನು ನಡಿಸಿ ಮಾಡಿದ ತೀರ್ಮಾನಗಳು ಸರ್ಕಾರದವರಿಗೆ ತಿಳುಹಲ್ಪಟ್ಟಿರುವ ವಿಚಾರವು ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದು.

ಮೇಲ್ಕಂಡ ವೀರಶೈವಪ್ರಮುಖರ ಸಭೆಯಲ್ಲಾದ ತೀರ್ಮಾನವು ಸರ್ಕಾರಕ್ಕೆ ಆ ಕೂಡಲೆ ತಿಳುಹಲ್ಪಟ್ಟಿರುವುದಾದರೂ, ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರವರು ಈ ಅಕ್ಟೋಬರ್ ತಿಂಗಳೊಳಗಾಗಿ ಮಠದ ವಿಜಂಟರನ್ನು ಮತ್ತೆ ಕೆಲವರನ್ನು ಚಿಕ್ಕಮಗಳೂರಿಗೆ ಬರಮಾಡಿಕೊಂಡು ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ನಡೆಯಿಸಿ ಬಾಳೆಹೊನ್ನೂರು ಸಂಸ್ಥಾನಮಠಕ್ಕೆ ಒಬ್ಬ ವಟುವನ್ನು ಗೊತ್ತುಮಾಡಬೇಕೆಂದು ಮೈಸೂರು ಸರ್ಕಾರದವರು ಅಪ್ಪಣೆಮಾಡಿರುವುದಾಗಿ ತಿಳಿಯಬರುತ್ತದೆ. ಈ ವೀರಶೈವಮುಖ್ಯಧರ್ಮರಕ್ಷಣಾಧಿಕಾರಪೀಠಕ್ಕೆ ಎಂತಹವರು ಸ್ವಾಮಿಗಳಾಗಿ ಆರಿಸಲ್ಪಡಬೇಕೆಂಬುದು ಆ ಪೀಠದ ಅಶೇಷಶಿಷ್ಯರ ಹಾಗೂ ಅಭಿಮಾನಶಾಲಿಗಳ ಆಶಯವಾಗಿರುತ್ತದೆಂಬುದನ್ನು ಸರ್ಕಾರದವರು ಅರಿತಿರುವರಾದರೂ ಬಹುಜನ ವೀರಶೈವರು ಸೇರಲು ಮಾರ್ಗಾನುಕೂಲವೂ, ಕಾಲವಿಳಂಬವೂ ಇಲ್ಲದರೀತಿಯಲ್ಲಿ ಮೀಟಿಂಗನ್ನು ಮಾಡಬೇಕಾದ ಕಾರಣವೂ ಅವಸರವೂ ಏನಿದ್ದಿತೋ ನಮಗೆ ಬೇರೆ ತಿಳಿಯದು. ಇದೂ ಅಲ್ಲದೆ ಬ್ರಾಹ್ಮಣಮಠಾಧಿಕಾರಿಗಳನ್ನು ನಿಯಮಿಸುವ ಸಂದರ್ಭದಲ್ಲಿ, ಒಬ್ಬಸ್ಪೆಷಲ್ ಆಫೀಸರನ್ನು ನಿಯಮಿಸಿ ಆಮತೀಯರ ಬಹುಜನಾಭಿಪ್ರಾಯವನ್ನನುಸರಿಸಿ ಕಾರ್ಯವನ್ನು ನಡಿಸುವಂತೆ ಈ ವೀರಶೈವಪ್ರಮುಖಮಠಾಧಿಕಾರಿಗಳನ್ನು ಆರಿಸುವ ವಿಚಾರದಲ್ಲಿ ನಡಿಸದೆ, ಮತ್ತು ಬಹುಜನರು ಸೇರಲು ಅನುಕೂಲಿಸುವಂತೆ ಪ್ರಕಟಣೆಯನ್ನು ಮಾಡದೆ "ಬಂದಷ್ಟು ಜನರು ಬರಲಿ, ನಾವೇನೋ ಸಭೆಯನ್ನು ಮಾಡಿ ಯಾರೋ ಒಬ್ಬರನ್ನು ಅಧಿಕಾರಿಯನ್ನಾಗಿ ಗೊತ್ತುಮಾಡಿದರಾಯಿತು" ಎಂದು ಭಾವಿಸಿರುವುದಾಗಿ, ಅವರ ಈಗಣ ಏರ್ಪಾಟಿನಿಂದ ಊಹಿಸಬೇಕಾಗಿರುತ್ತದೆ. ಈ ಬಾಳೆಹೊನ್ನೂರುಸಂಸ್ಥಾನಮಠವು ವೀರಶೈವರಿಗೆ ಸೇರಿದುದಾದುದರಿಂದ ಎಲ್ಲೋ ಕೊಂಚ ಮಾಸಾಶನವೂ, ಕೆಲ ಇನಾಮತಿ ಭೂಮಿಕಾಣಿಗಳೂ ಇದಕ್ಕೆ ಇರುವುದರವಿನಾ ಸಾವಿರಾರು ರೂಪಾಯಿ ವರಮಾನವುಳ್ಳ ಜಹಗೀರಿಯಾಗಲಿ, ಮಾಸಾಶನವಾಗಲಿ ಇರುವುದಿಲ್ಲವು. ಇಂತಹುದರಲ್ಲಿ ಸರ್ಕಾರದವರು ಈರೀತಿ ಬಹುಜನ ವೀರಶೈವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಸ್ವೇಚ್ಛೆಯಿಂದ ಯಾವುದೋ ಒಂದು ಅಭುಕ್ತಮೂಲೆಯಲ್ಲಿ ಮೀಟಿಂಗನ್ನು ಮಾಡಿ ವಟುವನ್ನು ಆರಿಸುವ ಅಧಿಕಾರವೇನಿರುವುದೋ ಅದನ್ನು ಅವರೇ ವ್ಯಕ್ತಗೊಳಿಸಬೇಕಾಗಿದೆ. ಈಗಣ ಸಮಾಜದ ಪರಿಸ್ಥಿತಿಯಲ್ಲಿ ಪೈರಿನೊಳಗೆ ಬೆಳೆದ ಕಳೆಗಳಂತೆ ಪೂಜ್ಯವರ್ಗದವರಲ್ಲಿ ಕಲಹೋತ್ಪಾದನೆ ಮಾಡತಕ್ಕುದೇ ಮುಖ್ಯಕರ್ತವ್ಯವೆಂದು ತಿಳಿದ, ಮತ್ತು ಸಮಾಜಕ್ಕೆ ಇದರಿಂದ ಎಷ್ಟು ಅನರ್ಥವಾಗುವುದೆಂಬುದನ್ನು ಪರ್ಯಾಲೋಚಿಸದೆ ಇರುವ ಜಾಣರು ಬೇರೆ ಮೂಡಿರುವ ಈ ಸಮಯದಲ್ಲಿ ಮುಖ್ಯಾಚಾರ್ಯಪೀಠಗಳಿಗೆ ಅಧಿಕಾರಿಗಳನ್ನು ನಿಯಮಿಸುವ ಕೆಲಸವು ಸಾಧಾರಣವಾಗಿರುವುದಿಲ್ಲ. ದೂರಾಲೋಚನೆಯಿಲ್ಲದೆ ಕಾರ್ಯವನ್ನು ನೆರವೇರಿಸಿ, ಉತ್ತರೋತ್ತರ ಅದರಿಂದ ಸಮಾಜಕ್ಕೆ ಘಾತವುಂಟಾದರೆ ಆ ದುಷ್ಫಲಕ್ಕೆ ಅದರ ಮೂಲಚಾಲಕರೆಲ್ಲರೂ ಭಾಗಿಗಳಾಗಬೇಕಾಗುತ್ತದೆ. ಶಾಖಾಮಠಗಳಿಗೆ ಉತ್ತರಾಧಿಕಾರಿಗಳನ್ನು ನಿಯಮಿಸಬೇಕಾದಾಗ್ಗೇ ಬಹಿರಂಗ ಪ್ರಕಟನೆಗಳ ಮೂಲಕ ಯೋಗ್ಯವಟುಗಳನ್ನು ಅಪೇಕ್ಷಿಸಿ ಬರಮಾಡಿಕೊಂಡು ಬಹುಜನಸಮ್ಮತಿಯಿಂದ ಕಾರ್ಯವನ್ನು ನೆರವೇರಿಸುವ ಯೋಗ್ಯಪದ್ಧತಿಯು ಅಲ್ಲಲ್ಲಿ ಆಚರಣೆಗೆ ಬಂದಿರುವಾಗ್ಗೆ, ಇಂತಹ ಮುಖ್ಯಪೀಠಗಳಿಗೆ ಅಧಿಕಾರಿಗಳನ್ನು ನಿಯಮಿಸುವ ವಿಚಾರದಲ್ಲಿ ಅಂತಹ ನಿರಾಕ್ಷೇಪ ಮಾರ್ಗವನ್ನು ಅನುಸರಿಸದೆ ಹೋಗುವುದು ಯೋಗ್ಯವಲ್ಲವು. ಹಿಂದೆ ಕಾಶಿಯಲ್ಲಿ ಶಬ್ದಶಾಸ್ತ್ರವನ್ನು ಅಭ್ಯಾಸಮಾಡಿ ಪೂರ್ಣಪಾಂಡಿತ್ಯವನ್ನು ಪಡೆದು, ರಾಜಧಾನಿಗೆ ಬಂದು ಮಹಾವಿದ್ವತ್ಸಭೆಯಲ್ಲಿ ವಾಕ್ಯಾರ್ಥವನ್ನು ನಡೆಯಿಸಿ ವಿದ್ವದಗ್ರಗಣ್ಯರಿಂದ ಪ್ರಶಸ್ತಿಪತ್ರವನ್ನು ಪಡೆದಿದ್ದ ಮತ್ತು ಶಮದಮಾದಿಗುಣಸಂಪತ್ತಿನಿಂದಲೂ, ಸಮಾಜಾಭಿಮಾನವಿಶೇಷದಿಂದಲೂ ಸರ್ವಜನಚಿತ್ತಾಕರ್ಷಕರಾಗಿದ್ದ ಕೈ|| ಮಲ್ಲಿನಾಥಶಾಸ್ತ್ರಿಗಳು ಇದೇ ಬಾಳೇಹೊನ್ನೂರುಪೀಠದ ಸ್ಥಿರಪಟ್ಟಾಧಿಕಾರಕ್ಕೆ ನಿಯಮಿಸಲ್ಪಡುವಾಗಲೂ ನೆರದಿದ್ದ ಸಭೆಯಲ್ಲಿ ವಿಪರೀತ ಚರ್ಚೆಗಳು ನಡೆದು, ಕಡೆಗೆ ಅತ್ಯಂತ ಪ್ರಯಾಸದಿಂದ ಕೊನೆಗಂಡರೂ ಇಂದು ಆಗಬೇಕಾದ ಕಾರ್ಯವು ಮಾರನೆಯದಿನ ನೆರವೇರಬೇಕಾಗಿ ಬಂದಿತು. ಇದು ನಡೆದು ಕಾಲು ಶತಮಾನದ ಮೇಲಾಯಿತು. ಈಗಣ ಸಮಾಜದ ಪರಿಸ್ಥಿತಿಯಾದರೋ ಇನ್ನೂ ಬಹು ಸೂಕ್ಷ್ಮವಾಗಿದೆ. ಅದುಕಾರಣ ಇಂತಹ ದೊಡ್ಡ ಭಾರದ ಮತ್ತು ಜವಾಬ್ದಾರಿಯ ಕೆಲಸವನ್ನು ಯಾರಾದರು ನಾಲ್ಕಾರು ಜನರಾಗಲಿ, ಸರಕ್ಕರದವರಾಗಲಿ ವಹಿಸಿಕೊಂಡು ವಿಶೇಷ ನಿಷ್ಠುರಕ್ಕೂ, ಕಷ್ಟಕ್ಕೂ ಗುರಿಯಾಗುವುದಕ್ಕಿನ್ನ ದೇಶಮಧ್ಯದಲ್ಲಿರುವ ವೀರಶೈವವೃತ್ತಪತ್ರಿಕೆಗಳಲ್ಲಿ ಇಂತಿಂತಹ ಯೋಗ್ಯತೆಯುಳ್ಳವರು ಈ ಬಾಳೆಹೊನ್ನೂರು ಪೀಠಾಧಿಕಾರವನ್ನು ವಹಿಸುವುದಕ್ಕೆ ಬೇಕೆಂದೂ, ಉಮೇದುವಾರರುಗಳು ಇಂತಹವರಲ್ಲಿಗೆ ಇಂತಿಷ್ಟು ಅವಧಿಯಲ್ಲಿ ಬರೆದುಕೊಳ್ಳಬೇಕೆಂದೂ ಪ್ರಕಟಪಡಿಸಿ ಅಖಿಲವೀರಶೈವ ಮಹಾಸಭೆಯು ನಡೆಯುವ ಸಮಯಕ್ಕೆ ಅವರುಗಳನ್ನು ಬೆಂಗಳೂರಿಗೆ ಬರಮಾಡಿಕೊಂಡು, ಪರೀಕ್ಷೆಮಾಡಲು ಯೋಗ್ಯತಾಸಂಪನ್ನರಾದ ಕೆಲ ದೊಡ್ಡಮನುಷ್ಯರುಳ್ಳ ಸಂಘದ (ಕಮಿಟಿಯ) ಮೂಲಕ ಆ ಉಮೇದುವಾರರಲ್ಲಿ ಉತ್ತಮ ತರಗತಿಯವರಾದವರನ್ನು ನಿರ್ಧರಗೊಳಿಸಿಕೊಂಡು, ಅವರುಗಳಲ್ಲಿ ಪ್ರತಿಯೊಬ್ಬರ ಯೋಗ್ಯತಾಂಶವನ್ನೂ ಆ ಕಾಲದಲ್ಲಿ ಸೇರಿರುವ ಮಹಾಜನ ಸಮೂಹಕ್ಕೆ ತಿಳಿಸಿ, ಅವರುಗಳ ಓಟುಗಳನ್ನು ತೆಗೆದುಕೊಳ್ಳಲು ಏರ್ಪಡಿಸಿ, ಹೆಚ್ಚು ಓಟುಗಳು ಯಾರಿಗೆ ಬರುತ್ತವೋ ಅಂತಹ ವಟುವನ್ನು ಮಹಾಪೀಠಾಧಿಕಾರಕ್ಕೆ ಪಟ್ಟಕಟ್ಟಲು ನಿರ್ಧರಿಸಿ ಚರ್ಚಾಸ್ಪದವಾದ ಈ ಸಮಸ್ಯೆಯನ್ನು ಸಾಂಗಗೊಳಿಸುವುದು ಸರ್ವಸಂಮತವಾದ ಮಾರ್ಗವೆಂದು ನಮಗೆ ತೋರುತ್ತದೆ.

ಮೈಸೂರು ಸಂಸ್ಕೃತಮಹಾಪಾಠಶಾಲೆಗೆ ಎಲ್ಲವರ್ಗದವರ ಪ್ರವೇಶ.

ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ಸಂಸ್ಕೃತ ಮಹಾಪಾಠಶಾಲೆಗಳಿಗೆ ಎಲ್ಲವರ್ಗದ ವಿದ್ಯಾರ್ಥಿಗಳು ಸೇರಿಸಲ್ಪಡುವ ವಿಚಾರದಲ್ಲಿ ಬಹುಕಾಲದಿಂದಲೂ ನಡೆಯುತ್ತಿದ್ದ ಚರ್ಚಾಂಶವನ್ನು ಬಗೆಹರಿಸಲು ನಿಯುಕ್ತವಾಗಿದ್ದ ಒಂದೇವರ್ಗದ ಕಮಿಟಿಯವರು ಬೆಂಗಳೂರು ಮಹಾಪಾಠಶಾಲೆಗೆ ಎಲ್ಲ ವರ್ಗದ ವಿದ್ಯಾರ್ಥಿಗಳು ಸೇರಿಸಲ್ಪಡಬಹುದೆಂದೂ, ಮೈಸೂರಿನ ಮಹಾಪಾಠಶಾಲೆಯು ಮಾತ್ರ ಬ್ರಾಹ್ಮಣವಿದ್ಯಾರ್ಥಿಗಳಿಗೋಸ್ಕರ ಕಾದಿಡಲ್ಪಡಬೇಕೆಂದೂ ಮಾಡಿದ್ದ ತೀರ್ಮಾನವನ್ನು ಅನುಸರಿಸಿ ಸರ್ಕಾರದವರು ಅಪ್ಪಣೆಮಾಡಿರುತ್ತಾರಷ್ಟೆ? ಇದರಮೇಲೆ "ಮೈಸೂರಿನಲ್ಲಿರತಕ್ಕ ಸಂಸ್ಕೃತಕಾಲೇಜಿಗೆ ಎಲ್ಲಾಜಾತಿಗಳ ಮತ್ತು ಪಂಗಡಗಳ ವಿದ್ಯಾರ್ಥಿಗಳನ್ನೂ ಸೇರಿಸಿಕೊಳ್ಳಬೇಕೆಂದು ಈ ಸಭೆಯವರು ಪ್ರಾರ್ಥಿಸುತ್ತಾರೆ" ಎಂದು ಅರಸೀಕೆರೆ ತಾಲ್ಲೂಕು ಮೆಂಬರುಗಳಾದ ಮ|| ಮರುಳಸಿದ್ದಪ್ಪನವರು ಮತ್ತು ಮ|| ರುದ್ರಪ್ಪನವರು ಇವರುಗಳಿಂದ ಸೂಚಿಸಲ್ಪಟ್ಟಿದ್ದ ನಿರ್ಣಯವು ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಲ್ಪಟ್ಟಾಗ, ತಿಪಟೂರಿನ ಮ|| ಡಿ.ಎಸ್. ಮಲ್ಲಪ್ಪನವರು ಮತ್ತೆ ಕೆಲಮೆಂಬರುಗಳು ಈ ನಿರ್ಣಯವನ್ನು ಪುಷ್ಟೀಕರಿಸಿ ಮಾತನಾಡಿದುದರಮೇಲೆ ಓಟಿಗೆ ಹಾಕಲ್ಪಡುವಲ್ಲಿ 91 ಮೆಂಬರುಗಳು ಅನುಕೂಲವಾಗಿಯೂ ಮ|| ಗಳಾದ ಎಂ. ವೆಂಕಟಕೃಷ್ಣಯ್ಯನವರು, ಬಿ. ನರಸಿಂಗರಾಯರು, ಕರ್ಣಿಕ ಕೃಷ್ಣಮೂರ್ತಿರಾಯರು ಮತ್ತು ಗುಬ್ಬಿಯ ರಾಜಗೋಪಾಲಯ್ಯಂಗಾರ್ರು ಈ ನಾಲ್ವರು ಪ್ರತಿಕೂಲವಾಗಿಯೂ ಓಟುಮಾಡಲಾಗಿ, ಈ ನಿರ್ಣಯವು ಬಹುಮತದಿಂದ ಪ್ಯಾಸ್‌ಮಾಡಲ್ಪಟ್ಟಿತು. ಈ ವಿಚಾರವು ಚರ್ಚಿಸಲ್ಪಡುತ್ತಿರುವಾಗ್ಗೆ "ನಿಮ್ಮ ಲಿಂಗಾಯಿತಪಂಡಿತರು ಮುಸಲ್ಮಾನರಿಗೆ ವೇದಪಾಠವನ್ನು ಹೇಳಲು ಸಮ್ಮತಿಸುತ್ತಾರೆಯೇ?" ಎಂದು ಎರಡನೆಯ ಕೌನ್ಸಿಲರಾದ ಮ|| ಕೆ.ಆರ್. ಶ್ರೀನಿವಾಸಯ್ಯಂಗಾರರು ಪ್ರಶ್ನಿಸಿದುದನ್ನು ನೋಡಿ ನಮಗೆ ಬಹಳ ಖೇದವಾಗುತ್ತದೆ. ಗತಿಸಿದ ಸರ್ ಟಿ. ಆನಂದರಾಯರು, ಪ್ರಜಾಪ್ರತಿನಿಧಿಸಭೆಯಲ್ಲಿ ಇದೇ ಸಂಸ್ಕೃತ ಮಹಾಪಾಠಶಾಲೆಗಳಿಗೆ ವೀರಶೈವರನ್ನು ಸೇರಿಸುವ ವಿಚಾರದಲ್ಲಿ ಚರ್ಚೆನಡೆಯುವಾಗ್ಗೆ, ಲಿಂಗಾಯಿತರು ತಾವುಪಯೋಗಿಸುವ ಬಾವಿಯಲ್ಲಿ ಪಂಚಮರು ನೀರನ್ನುಪಯೋಗಿಸಲು ಸಮ್ಮತಿಸುವರೆ? ಎಂದು ಪ್ರಶ್ನಿಸಿ ಇಡೀ ವೀರಶೈವಸಮಾಜಕ್ಕೆ ಮಹತ್ತರವಾದ ಮನಃಕ್ಲೇಶವನ್ನುಂಟುಮಾಡಿದ್ದುದು ಮ|| ಶ್ರೀನಿವಾಸಯ್ಯಂಗಾರರು ಈವೇಳೆ ಮುಸಲ್ಮಾನರ ಉಪಮಾನವನ್ನು ಕೊಟ್ಟುದುದರಿಂದ ಸ್ಮೃತಿಪಥಕ್ಕೆ ತರಲ್ಪಡತಕ್ಕುದಾಗಿದೆ. ಬಹು ಉತ್ತರವಾದಿತ್ವವನ್ನುಳ್ಳ ದೊಡ್ಡಅಧಿಕಾರಿಗಳು ಈರೀತಿ ಒಂದು ಸಮಾಜದವರ ಮನಸ್ಸಿಗೆ ಅತ್ಯಂತ ಖೇದವನ್ನುಂಟುಮಾಡುವ ಮಾತುಗಳನ್ನಾಡುವುದು ಯುಕ್ತವಾಗಿಲ್ಲವು, ಮತ್ತು ಸಹಿಸಲಶಕ್ಯವಾಗಿರುವದು. ಅದುಕಾರಣ ಇತಃಪರ ಇಂತಹ ಅಸಭ್ಯಕರವಾದ ಶಬ್ದಪ್ರಯೋಗವನ್ನು ಯಾರೂ ಮಾಡದಂತೆ ಎಚ್ಚರಗೊಳಿಸಲ್ಪಡುವುದು ಅತ್ಯವಶ್ಯವಾಗಿರುತ್ತದೆ.

ಪ್ರಜಾಪ್ರತಿನಿಧಿಸಭೆಯ ದಶರಾಧಿವೇಶನ

ಕಳೆದ ಮಂಗಳವಾರ ಮುಕ್ತಾಯಗೊಂಡ ಈ ಅಧಿವೇಶನವು ೮ ದಿನಗಳವರೆಗೆ ನಡೆಯಬೇಕಾಗಿ ಮೊದಲು ಗೊತ್ತುಮಾಡಲ್ಪಟ್ಟಿದ್ದಿತಾದರೂ, ವಿಷಯಬಾಹುಳ್ಯ ಮತ್ತು ಮಹತ್ತ್ವಗಳಿಂದ ನಿರ್ವಾಹವಿಲ್ಲದೆ 11 ದಿನಗಳವರೆಗೆ ನಡೆಯಬೇಕಾಗಿ ಬಂದಿತು. ನಿಯಮವನ್ನನುಸರಿಸಿ ವಿಷಯಗಳ ಚರ್ಚೆ ಮೊದಲಾದುವನ್ನು ನಡೆಯಿಸಬೇಕೆಂದು ಅಧ್ಯಕ್ಷರು ಹೇಳಿದುದನ್ನು ಪ್ರತಿನಿಧಿಗಳು ಸಂಮಾನಿಸಿ ಬಹಳ ಶಾಂತಿಯಿಂದಲೂ ವಿಚಕ್ಷಣೆಯಿಂದಲೂ ವಿಷಯಗಳನ್ನು ನಿವೇದಿಸಿ ಸಭಾಕಾರ್ಯವು ಸುಲಲಿತವಾಗಿಯೂ, ಹಿತಕರವಾಗಿಯೂ ನಡೆಯಲು ಸಾಹಾಯ್ಯಕರಿಸಿದುದಕ್ಕಾಗಿ ಪ್ರತಿನಿಧಿಗಳಿಗೆ ದಿವಾನರು ತಮ್ಮ ಉಪಸಂಹಾರಭಾಷಣದಲ್ಲಿ ವಂದನೆಯನ್ನು ತಿಳಿಸಿರುತ್ತಾರೆ. ಪ್ರತಿನಿಧಿಗಳು ಯಾರ ಮುಖದಾಕ್ಷಿಣ್ಯಕ್ಕೂ ದರ್ಪಕ್ಕೂ ಹೆದರದೆ ತಾವು ತಂದ ವಿಷಯಗಳನ್ನು ಯುಕ್ತಿಯುಕ್ತವಾಗಿಯೂ, ಸರ್ಕಾರದವರು ಸಮ್ಮತಿಸುವಂತೆಯೂ ಪ್ರತಿಪಾದಿಸಿ, ಫಸಲು ನಷ್ಟವಾದವೇಳೆಯಲ್ಲಿ ಅರ್ಧಕಂದಾಯವನ್ನೂ ಮಾರನೆಯ ವರ್ಷವೂ ನಷ್ಟವಾದಲ್ಲಿ ಪೂರಾ ಕಂದಾಯವನ್ನೂ ರಿಮಿಷನ್‌ಮಾಡುವುದು, ಸರ್ಕಾರಿಕೆಲಸದಲ್ಲಿ ಹಿಂದುಳಿದ ಪಂಗಡದವರ ಪ್ರಾತಿನಿಧ್ಯವನ್ನು ಶೇಕಡ 50 ರಿಂದ 75ಕ್ಕೆ ಹೆಚ್ಚಿಸುವುದು; ಹೈಸ್ಕೂಲುಗಳಲ್ಲೂ ಕಾಲೇಜುಗಳಲ್ಲೂ ಹಿಂದುಳಿದಪಂಗಡಗಳ ವಿದ್ಯಾರ್ಥಿಗಳ ಸಂಖ್ಯೆಯು ಅವುಗಳಲ್ಲಿ ಗೊತ್ತುಮಾಡಲ್ಪಟ್ಟಿರುವ ಫ್ರೀಷಿಪ್ ಮತ್ತು ಹಾಫ್ ಫ್ರೀಷಿಪ್ಪಿಗೆ ಕಡಿಮೆಯಾಗಿದ್ದಲ್ಲಿ ಶೇಕಡ 75ರಷ್ಟು ಫ್ರೀಷಿಪ್ ಮತ್ತು ಹಾಫ್ ಫ್ರೀಷಿಪ್ಪುಗಳನ್ನು ಪ್ರತ್ಯೇಕವಾಗಿಡುವದು; ಮೈಸೂರು ಸಂಸ್ಕೃತಮಹಾಕಾಲೇಜಿಗೆ ಎಲ್ಲ ಪಂಗಡದ ವಿದ್ಯಾರ್ಥಿಗಳನ್ನು ಸೇರಿಸುವುದು ಮೊದಲಾಗಿ ಬಹುಪ್ರಜೋಪಯುಕ್ತವಾದ ವಿಷಯಗಳನ್ನು ಹೆಚ್ಚು ಓಟುಗಳನ್ನು ಪಡೆದು ಪ್ಯಾಸ್‌ಮಾಡಿಸಿರುವುದು ಸ್ತುತ್ಯವಾಗಿರುತ್ತದೆ. ದಿವಾನರು ಅತ್ಯಂತ ತಾಳ್ಮೆಯಿಂದಲೂ ವಿಚಕ್ಷಣೆಯಿಂದಲೂ ನಿರಾಯಾಸದಿಂದಲೂ ಸಭಾಕಾರ್ಯವನ್ನು ಜರುಗಿಸಿ ಎಲ್ಲಪ್ರತಿನಿಧಿಗಳ ಮನಸ್ಸಿಗೂ ಸಂತೋಷವನ್ನುಂಟುಮಾಡಿರುವುದು ಅವರ ಕಾರ್ಯದಕ್ಷತೆಯನ್ನೂ, ಬುದ್ಧಿಕುಶಲತೆಯನ್ನೂ ವ್ಯಕ್ತಗೊಳಿಸುತ್ತದಲ್ಲದೆ ಸರ್ವಜನಾಭಿನಂದನೀಯವಾಗಿರುತ್ತದೆ. ಆದರೆ, ಈರೀತಿಯಾಗಿ ಸಭಾಕಾರ್ಯವನ್ನು ಸರ್ವಜನಾಹ್ಲಾದಕರವಾಗಿ ನೆರವೇರಿಸಿದ ದಿವಾನರಿಗೆ ಪ್ರತಿನಿಧಿಗಳಪರವಾಗಿ ವಂದನೆಯು ತಿಳುಹಲ್ಪಡುವುದಕ್ಕೆ ಅವಕಾಶವಿಲ್ಲದಂತೆ, ಅವಸರದಿಂದ ಶ್ರೀಮನ್ಮಹಾರಾಜರವರ ಹೆಸರಿನಮೇಲೆ ತ್ರಿವಾರಜಯಘೋಷವನ್ನು ಓರ್ವವಾಗಾಡಂಬರದ ಪ್ರತಿನಿಧಿಯುಮಾಡಿ ಮುಕ್ತಾಯಗೊಳಿಸಿದುದು ಮಾತ್ರ ವಿಷಾದಸ್ಥಾನವಾಗಿರುತ್ತದೆ.

ಸ್ವದೇಶದ ವೃತ್ತಾಂತಗಳು

ಕಳೆದ ಭಾನುವಾರ ಉದಕಮಂಡಲಕ್ಕೆ ಚಿತ್ತೈಸಿದ್ದ ಶ್ರೀಮನ್ಮಹಾರಾಜರವರ ಸ್ವಾರಿಯು ಈ ದಿವಸ ರಾಜಧಾನಿಗೆ ಹಿಂದಿರುಗುವುದಾಗಿರುವುದು.

ಹಾಸನದ ರೈಲ್ವೆಸ್ಟೇಷನ್ನಿನ ಬಳಿ ಹೊಸದಾಗಿ ಕಟ್ಟಲ್ಪಟ್ಟಿರುವ ಪ್ರಯಾಣಿಕರ ವಸತಿಗೃಹ (ಮುಸಾಫರ್‌ಖಾನೆಯು) ಪ್ರವೇಶೋತ್ಸವವು ಆ ಡಿ|| ನ ಡೆಪ್ಯುಟಿಕಮಿಷನರಾಗಿದ್ದ ಮ|| ಎ. ವಿ. ರಾಮನಾಥನ್, ಬಿ. ಎ., ಯವರಿಂದ ಕಳೆದ ತಾ|| 23 ರ ಸಾಯಂಕಾಲ 5 ಗಂಟೆಯಲ್ಲಿ ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು.

ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಿಯವರೂ ಪ್ರಥಮರಾಜಕುಮಾರಿ ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರೂ ಕಳೆದ ಸೋಮವಾರ ಬೆಂಗಳೂರಿಗೆ ದಯಮಾಡಿಸಿದರು. ರಾಜಕುಮಾರಿಯವರ ದೇಹಸ್ಥಿತಿಯು ಡಾಕ್ಟರ್ ಟಿ. ಕೃಷ್ಣಯ್ಯಂಗಾರ್ಯರ ಚಿಕಿತ್ಸೆಯಿಂದ ಗುಣಮುಖವಾಗಿರುವುದೆಂದು ತಿಳುಹಲು ಸಂತೋಷವಾಗುತ್ತದೆ.

ಅಸಿಸ್ಟೆಂಟ್ ಕಮಿಷನರಾದ ಮಿ|| ಬಾಳರಾಜ ಅರಸಿನವರು ಈವರೆಗೂ ಕೈ|| ಸರದಾರ್ ಕಾಂತರಾಜಅರಸಿನವರ ಆಸ್ತಿಯ ಮೇಲ್ವಿಚಾರಣೆಗೋಸ್ಕರ ಸ್ಪೆಷಲ್ ಡ್ಯೂಟಿ ಆಫೀಸರಾಗಿ ನಿಯಮಿಸಲ್ಪಟ್ಟಿದ್ದರು. ಈಗ ಇವರಿಗೆ 1924ನೆ ಸೆಪ್ಟಂಬರ್ ತಾ|| 30 ರಿಂದ 15 ತಿಂಗಳುಗಳ ಮೇಲೆ 16 ದಿನಗಳ ಪ್ರಿವಿಲೆಜ್ ಮತ್ತು ಫರ್ಲೋ ರಜ ಕೊಡಲ್ಪಟ್ಟಿದೆ. ಇವರು ಪುನಃ ಪಾಶ್ಚಾತ್ಯದೇಶ ಸಂಚಾರಮಾಡಿಕೊಂಡು ಬರಲು ಇಷ್ಟರಲ್ಲೇ ಪ್ರಯಾಣಮಾಡುವವರಾಗಿರುವರೆಂದು ಕೇಳುತ್ತೇವೆ.

ರಾಜಧಾನಿಯ ಫಕೀರ್‌ಸಾಬಿ ಗರುಡಿಯ ಬಳಿ ಮಲ್ಲೇಶನೆಂಬುವವನ ಮನೆಯಲ್ಲಿ ಜೂಜಾಡುತ್ತಿದ್ದ 40 ಜನರನ್ನು ಇಸ್ಪೀಟು ಮೊದಲಾಗಿ ಜೂಜಿನ ಸಾಮಗ್ರಿಗಳೊಡನೆ ಪೊಲೀಸಿನವರು 1923 ನೆಯ ಅಕ್ಟೋಬರ್ ತಾ|| 23ರಲ್ಲಿ ಹಿಡಿದು ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದ್ದುದರಲ್ಲಿ ಒಬ್ಬೊಬ್ಬನಿಗೆ 50 ರೂ. ನಂತೆ 30 ಜನರಿಗೆ ಅರ್ಥದಂಡವು ವಿಧಿಸಲ್ಪಟ್ಟಿತು. ಜೂಜಾಡಲು ಮನೆಯನ್ನು ಕೊಟ್ಟು ಸಹಕರಿಸಿದ್ದ ಮೆಲ್ಲೇಶನು ಪೊಲೀಸರಿಗೆ ಸಿಕ್ಕದೆ ತಪ್ಪಿಸಿಕೊಂಡು ಹೋಗಿದ್ದನು. ಆದರೆ ಪೊಲೀಸರು ತಹತಿ ಅವನನ್ನು ಹಿಡಿದು ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವಲ್ಲಿ ಈ ಅಕ್ಟೋಬರ್ ತಾ|| 16 ರಲ್ಲಿ ಅವನಿಗೆ 2 ತಿಂಗಳ ಕಠಿಣ ಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟಿತು. ಅದರಮೇಲೆ ಅವನು ಹಚನ್ನುಕೋರ್ಟಿಗೆ ಅಪೀಲನ್ನು ಮಾಡಿ ಹೊಣೆಯಮೇಲೆ ಬಿಡಿಸಿಕೊಂಡಿರುವನು.

ಒಂದನೆಯ ಕೌನ್ಸಿಲರಾದ ಮುಷೀರ್-ಉಲ್-ಮುಲ್ಕ್ ಮಿ|| ಮಿರ್ ಹಂಸಾಹುಸೇನ್‌ರವರು ತಮ್ಮ ಜ್ಯೇಷ್ಠಕುಮಾರರಾದ ಮಿ|| ಸಫದರ್‌ಹುಸೇನ್, ಬಿ. ಎ., ಯವರಿಗೆ ಆಗಾಮಿರ್ಜಾ ಅಹಮ್ಮದ್‌ಷಿರಾಜಿಯವರ ಕುವರಿಯನ್ನು ತಂದು ಕಳೆದ ತಾ|| 23 ನೆಯ ಗುರುವಾರ ಪ್ರಾತಃಕಾಲ 9 ಗಂಟೆಯಲ್ಲಿ ವಿವಾಹಮಹೋತ್ಸವವನ್ನು ರಾಜಧಾನಿಯಲ್ಲಿರುವ ಸ್ವಗೃಹದಲ್ಲಿ ಅತಿವೈಭವದಿಂದ ನಡೆಯಿಸಿದರು. ಬೆಳಿಗ್ಗೆ ಲಗ್ನಕ್ಕೂ ರಾತ್ರಿ ಆರತಕ್ಷತೆಗೂ ದಯಮಾಡಿಸಿದ್ದ ಸ್ಥಳಪರಸ್ಥಳದ ಸರ್ಕಾರಿಯಧಿಕಾರಿಗಳು, ಅರಸುಮಕ್ಕಳು ಮ್ಯು|| ಕೌನ್ಸಿಲರುಗಳು, ರಾಯರುಗಳು, ಪ್ರತಿನಿಧಿಸಭಾಮೆಂಬರುಗಳು, ವರ್ತಕರುಗಳು ಮೊದಲಾದವರುಗಳಿಗೆ ಮಿ|| ಹಂಸಾಹುಸೇನ್‌ಸಾಹೇಬರವರೇ ಸ್ವತಃ ಪುಷ್ಪಹಾರಗಳನ್ನು ಹಾಕಿ ಫಲತಾಂಬೂಲಗಳನ್ನು ಕೊಡಿಸಿದರು. ಈ ಮಹೋತ್ಸವಕ್ಕಾಗಿ ಬೆಂಗಳೂರು ಚನ್ನಪಟ್ಟಣ ಮೊದಲಾದ ಸ್ಥಳಗಳಿಂದ ಅನೇಕ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ಲಗ್ನದ ಹಿಂದಣ ಸಾಯಂಕಾಲ ದಿವಾನರು ಚೀಫ್ ಸೆಕ್ರೆಟರಿಯವರು ಮತ್ತೆ ಕೆಲ ದೊಡ್ಡ ಅಧಿಕಾರಿಗಳು ಆಹ್ವಾನಿಸಲ್ಪಟ್ಟಿದ್ದು ವಿಶ್ವಾಸದಿಂದ ಸತ್ಕರಿಸಲ್ಪಟ್ಟರಂತೆ. ಲಗ್ನದ ದಿವಸ 500 ಜನರಿಗೆ ಮೇಲ್ಪಟ್ಟು ಬಂಧುಮಿತ್ರವರ್ಗದವರಿಗೆ ಸುಖಭೋಜನಮಾಡಿಸಲ್ಪಟ್ಟಿತು. ಬಂದಿದ್ದ ಅತಿಥಿಗಳೆಲ್ಲರೂ ಮಿ|| ಹಂಸಾಹುಸೇನರವರು ಮಾಡಿದ ಆದರಾತಿಶಯದಿಂದ ಸಂತುಷ್ಟರಾಗಿ ಅವರನ್ನು ವಂದಿಸಿ ಮಿ|| ಸಫದರ್‌ಹುಸೇನ್ ದಂಪತಿಗಳಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯಾಗಲೆಂದು ಮಂಗಳಾಶಾಸನವನ್ನು ಮಾಡಿದರು.

ಶ್ರೀಚಾಮುಂಡೇಶ್ವರೀಪ್ರಸೀದತು.

ಶ್ರೀ ಚಿಕ್ಕಲಿಂಗರಾಜಾಭಿನಂದನಪದ್ಯಗಳು.

ವೃತ್ತ|| ಸಾರಸ್ವ[illegible]ಪೂರ್ಣೇಂದುಪ್ರಭ[illegible] |
ಭೂರಿಪ್ರೇಮದಿನೊಲ್ದು ಕೇಳ್ದು ಪರಮಾನಂದಂಬಡುತ್ತಿರ್ಪರ್ ||
ಶ್ರೀರಾಮಾಯಣಸಂಗ್ರಹಾಖ್ಯಮಹಾಕಾವ್ಯಮುಂ[illegible]ಮುಂ |
ಚಾರುಶ್ರೀಚಿಕ್ಕಲಿಂಗರಾಜನೃಪ[illegible] ||೧||

ಕಂದ|| ರಾಮಾಯಣಸಂಗ್ರಹಮು |
[illegible] |
ಶ್ರೀಮ[illegible] |
[illegible] ||೨||

NOTICE.

Wanted a qualified nurse for the Hubli Dispensary from the 1st week of November 1924. Pay Rs. 30 to 40 per month with free quarters. Private practice allowed.

Candidates should apply in their own hand writing before 31st October 1924 stating their age, caste and qualifications with credentials. They should also state whether they have any previous practice and if so for how many years?

(2) K. K. Nadirsha, L.C.E.,
Hubli, Chief Officer
13th Oct. 1924. Hubli Municipality.

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ಅಕ್ಟೋಬರ್ ತಾ|| ೨೬ ನೆಯ ಭಾನುವಾರ.

THE REPRESENTATIVE ASSEMBLY DASARA SESSION.

The duration of Dasara Session of the Mysore Representative Assembly had to be extended from 8 days as had been fixed by the Statute to 11 days owing to the increased volume of work. As the Dewan remarked, in future it may become necessary to set apart 15 days for the Session. It is a salutory feature that in spite of the extension the attendance of the members was very good, a matter which might stand comparison with any other record of a popular House. The Dewan has paid a fine tribute to the members for their hearty co-operation, their readiness to compromise where it was desirable, and their willingness to abide by the rulings of the Chair. We cannot let the opportunity go without congratulating the Dewan-President for the very able, pleasant and tactful handling of the House which so largely contributed to the success of the Session. We are only sorry there need not have been such a tremendous haste on the part of a member from Magadi to call out cheers to His Highness immediately after the Dewan's concluding address, before letting any member of the Assembly to reciprocate the very fine sentiments which the courteous Dewan expressed towards the House.

This Session has been one of the most momentous, in recent years, for more than one reason. For one thing it showed how growingly keen the representatives are becoming in the affairs of the State, and how they would without hesitation carry through the measures which they believe to be for the interests of the country in spite of any opposition either from the official side or the non-official minority. They have been able to make the Government concede certain points which they were disinclined to at the beginning. It is equally commendable on their part to sober down their demands whenever necessary as in the case of the resolutions with regard to the reconstitution of the Mysore Civil Service. The carrying through of the resolutions for the nomination of two candidates to every one appointed through the competitive examination, the admission of non-Brahmins into the Mysore Sanskrit College, the reservation of 75 per cent of the freeships for backward classes and the increase of the percentage reserved for the backward classes as under the Miller Committee Report from 50 to 75, are some of the victories for the popular party which they could well be proud of. We cannot forget the splendid foundation laid by the late Mr. M. Basaviah of blessed memory and his friends during those early years of the movement. It is pleasant to recall the stages of cavil, abuse and derision here, and foreboding of worse things elsewhere which the movement has passed through and to see it forcing its way into its rightful place. We have so often said that the redemption to this land must come through the levelling process for which the movement stands and we are glad that its first fruits are so encouraging. We only hope that the leaders of the movement will keep firm to their righteous faith and will strive unceasingly for the cause.

SUCCESSOR TO BALEHONNUR MUTT.

We have adverted to this subject more than once in these columns, and we are glad to know that the leading gentlemen of the Lingayet Community have been evincing of late much interest in the matter. We have already published last week the proceedings of the two meetings held in Mysore of the Lingayet members of the Representative Assembly, the Legislative Council, and the Lingayet gentlemen of Mysore City passing some resolutions regarding the arrangements to be made for the election of a successor to the above *mutt*. The net result of their deliberations seems to be that the arrange ment for the election should be so arranged as to give full opportunity to the members of the community both in and outside Mysore to be present on the occasion. We need hardly say that out of 37 lakhs of Lingayets in India, there are very few who do not owe allegiance to this institution, and the consensus of opinion of the leading members of the community is that the successor should be elected from amongst the candidates for the place by means of votes to be taken at a representative meeting of the members of the community from different parts of India. Hitherto various attempts appear to have been made by interested parties, self-constituted leaders of the community, to bring in their own nominees without trying to ascertain the views of the community in the matter. As a matter of fact, the last of such attempts was resorted to without giving due publicity to the arrangements made, and consequently it ended in nothing. It is a surprise of surprises that Government should have been a party to such arrangements. They are fully aware that a few gentlemen have been trying their best to get their own nominee to the place, and yet they have not made any attempt to ascertain the views of the community in the matter except in a dubious and questionable way.

We are just now being informed that Government have ordered—we do not know at whose instance—that a successor should be elected at Chikmagalore and a report be made to Government before the end of this month. We are at a loss to know why Government have fixed for the meeting such an out of the way place like Chiikmagalore which has no easy means of communication. We are constrained to believe that Government in doing this have been influenced by the views of certain individuals of the community who are interested to have their own way in the matter. If not, Government would not have flouted at the suggestions of the leading members of the community embodied in the proceedings of the two meetings held at Mysore, the copies of which we hear have already been submitted to Government. When the conjoint action of both Government and of some leading gentlemen of the community headed by Dewan Bahadur Rajasabhabhushana Mr. K. P. Puttanna Chetty has failed, how Government could take upon the themselves the whole responsibility in such a vexed question we are unable to understand. There cannot be any objection whatever for the installation ceremoney to take place in Balehonnur itself. But it is incumbent on all who are really interested in the welfare of the institution to see that every facility is afforded to elect a suitable candidate acceptable to every section of the community, which would avoid future troubles in the matter. The suggestion embodied in the proceedings of the two meetings held in Mysore that the election should be held at Bangalore immediately after the Tenth Sessions of the All-India Veerashiva Conference seems to be the most desirable and feasible under the circumstances. We hope that Government will pay due regard to the considered opinion of the leading members of the community and avoid further complications in the matter which are sure to arise otherwise. We have to finally state that Government have no authority to interfere at this stage when the leaders themselves are trying to bring the matter to a successfull termination and their only function is to accord approval to the accredited nominee of the community.

NOTES AND COMMENTS.

A Notable Wedding.

We are glad to announce that Mushir-ul-Mulk Mir Humza Husein, First Member of Council celeberated the marriage of his eldest son Mr. Mir Safdar Husein with the daughter of Agha Mirza Ahmed Shirazi with great *eclact* on Thursday the 23rd instant at his residence in Edga, Mysore, which was attended by the *elite* of the City and a number of distinguished visitors from outside. In the evening there was a music party arranged in two well decorated spacious shamianes one for gentlemen and the other for ladies. We offer our heartiest congratulations to the bride and bridegroom and wish them long life, unbroken joy and continued prosperity.

Intolerable:—

When the question of admission of non-Brahmin students to the Mysore Sanskrit College was being discussed in the Assembly the Second Members of Council asked Mr. D. S. Mallappa the mover of the proposition whether the Lingayet Pandits would teach Veda to Musalmans. This reminds one of the incident which took place some years ago under similar circumstances, when the late Mr. T. Ananda Rao the then Dewan of Mysore asked some of the Lingayet members of the Assembly whether they would allow......to take water from wells used by them. How long can this sort of behaviour on behalf of the responsible officers be tolerated?

ಶ್ರೀ ಬಾಳೇಹೊನ್ನೂರುಸಂಸ್ಥಾನಪೀಠಾಧಿಕಾರ.

ಈ ಪೀಠಾಧಿಕಾರಿಗಳನ್ನು ಗೊತ್ತುಮಾಡುವ ವಿಚಾರವಾಗಿ ಈವರೆಗೂ ನಡೆದಿರುವ ಪತ್ರವ್ಯವಹಾರಗಳೂ, ಅರಸೀಕೆರೆ ಮತ್ತು ಬೆಂಗಳೂರುಗಳಲ್ಲಿ ನಡೆದ ಸಭೆಗಳ ವಿಫಲಾಂಶಗಳೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿಯೇ ಇರುತ್ತವೆ. ಈ ಬಾಳೆಹಳ್ಳಿಯ-ರಾಂಭಾಪುರೀ-ಜಗದ್ಗುರುಪೀಠವು ವೀರಶೈವ ಮುಖ್ಯಾಚಾರ್ಯಪೀಠಗಳೊಳಗೆ ಒಂದಾಗಿರುತ್ತದೆ. ಇದು ಆಸೇತು ಹಿಮಾಚಲಾಂತದೇಶಗಳಲ್ಲಿರುವ ವೀರಶೈವರ ಧಾರ್ಮಿಕಸಾಮ್ರಾಜ್ಯರಕ್ಷಣೆಯ ಮಹಾಸಂಸ್ಥಾನವಾಗಿ ಪುರಾತನ ಪ್ರಸಿದ್ಧವಾಗಿದೆ. ಇದರ ಅಧಿಕಾರವು ವೀರಶೈವಮಂಡಲದಮೇಲೆಲ್ಲಾ ಎಷ್ಟರಮಟ್ಟಿಗೆ ಹೊತ್ತಿರುವುದೋ, ಅದರ ರಕ್ಷಣೆಯ ಭಾರವೂ ಅದರ ಶಿಷ್ಯಮಂಡಲದಮೇಲೆಲ್ಲಾ ಅಷ್ಟರಮಟ್ಟಿಗೆ ಹೊತ್ತಿರುತ್ತದೆ. ಅದುಕಾರಣವೇ ಇಂತಹ ಸಂಸ್ಥಾನದ ವಿಷಯದಲ್ಲಿ ಸಮಾಜದ ಜನರು ಅಭಿಮಾನಾದರಗಳನ್ನು ವಹಿಸಿ, ಕಾಲಗತಿವೈಚಿತ್ರ್ಯದಿಂದ ಈ ಪೀಠಕ್ಕೆ ಒದಗಿರುವ ಗ್ಲಾನಿಯು ತಪ್ಪಿಹೋಗಿ ಪೂರ್ವೋನ್ನತಿಯನ್ನು ಅದಕ್ಕೆ ತಂದುಕೊಡಲು ಸರ್ವವಿಧದಲ್ಲೂ ಸಮರ್ಥರಾಗಿಯೂ, ಪೀಠಾಚಾರ್ಯರು ಮುಖ್ಯ ಗಮನವಲ್ಲಿಡಬೇಕಾದ ಮತಧಾರ್ಮಿಕಾದ್ಯಭಿವೃದ್ಧಿಗಳಲ್ಲಿ ತತ್ಪರರಾಗಿಯೂ, ಸಮಾಜಕ್ಕೆ ಮಹೋತ್ಸಾಹರೂಪವಾಗಿ ಹುಟ್ಟಿಸಲ್ಪಟ್ಟಿರುವ ವಿರಕ್ತಪಟ್ಟಾಧಿಕಾರಿಗಳ ವಿಷಮಕಲಹಕ್ಕೆ ಕಿಂಚಿನ್ಮಾತ್ರವೂ ಅವಕಾಶಕೊಡದೆ ಅದರ ಶಾಂತಿಗಾಗಿ ಸಾಹಸಪಡತಕ್ಕವರಾಗಿಯೂ ಇರತಕ್ಕವರು ಈ ಪೀಠಕ್ಕೆ ಬಂದರೆ ಸಮಾಜಕ್ಕೆ ಹಿತವಾಗುವುದೆಂಬ ಸದುದ್ದೇಶದಿಂದಲೇ ಅಂತಹ ಗುಣೋಪೇತನಾದ ವಟುವನ್ನು ನಿರಾಕ್ಷೇಪವಾಗಿ ಬಹುಜನಸಮ್ಮತಿಯಿಂದ ಆರಿಸಿ ಪಟ್ಟಕಟ್ಟಬೇಕೆಂದು ಪ್ರಯತ್ನಿಸುತ್ತಿದ್ದಾರೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಈ ಸಂಸ್ಥಾನಪೀಠಾಧಿಕಾರಿಗಳನ್ನು ಹೊಸದಾಗಿ ನಿಯಮಿಸುವ ಕಾಲದಲ್ಲಿ, ಸಂಸ್ಥಾನದ ಅಭಿಮಾನಶಾಲಿಗಳೂ ಸಮಾಜದಪ್ರಮುಖರೂ ಯೋಗ್ಯರಾದ ವಟುಗಳನ್ನು ಮಠಕ್ಕೆ ಬರಮಾಡಿಕೊಂಡು ಶ್ರೀಕರ್ತರಗದ್ದಿಗೆಯ ಬಳಿ ಚೀಟಿಗಳನ್ನು ಹಾಕಿ, ಯಾವ ವಟುವಿನ ಹೆಸರಿಗೆ ಚೀಟಿಯು ತೇಲುತ್ತದೋ ಆ ವಟುವನ್ನು ಮೈಸೂರು ಸರ್ಕಾರದವರಪ್ಪಣೆಯನ್ನು ಪಡೆದು ವಿಧ್ಯುಕ್ತವಾಗಿಯೂ, ಮಠದ ಗೌರವಕ್ಕೆ ತಕ್ಕಂತೆಯೂ ಪಟ್ಟಾಧಿಕಾರಿಗಳನ್ನಾಗಿ ಮಾಡುವುದು ಪೂರ್ವದಿಂದಲೂ ನಡೆದುಬಂದಿರುವ ಆಚರಣೆಯಾಗಿರುತ್ತದೆಂದು ನರಸಿಂಹರಾಜಪುರದ ಮ|| ಇಂ. ಶಾಂತಪ್ಪಶೆಟ್ಟರು ಮತ್ತೆ ಕೆಲವರು ಹೇಳಿ ಆ ಪ್ರಕಾರ ನಡಿಸಲು ಸಾಹಸಪಡುತ್ತಿದ್ದಾರೆ. ಕಾಲಸ್ಥಿತಿಯ ವ್ಯತ್ಯಾಸದಿಂದ ಮೂಢಭಕ್ತಿಯು ಕಡಿಮೆಯಾಗಿ ಪ್ರೌಢಭಕ್ತಿಯು ತಲೆಯೆತ್ತುತ್ತಿರುವ ಈ ಸಮಯದಲ್ಲಿ, ಯಾವವಿಧದ ಉತ್ಕೃಷ್ಟಯೋಗ್ಯತೆಯಿಲ್ಲದಿದ್ದರೂ ಗುರುಗಳೆಂಬ ಅಭಿಮಾನವೊಂದರಿಂದಲೇ ಕಾಣಿಕೆಕಪ್ಪಗಳನ್ನಿತ್ತು ಮರ್ಯಾದಿಸುವ ಜನರು ಕಡಿಮೆಯಾಗುತ್ತಿರುವರು. ಹೀಗಾಗುವುದರಿಂದ ಧರ್ಮರಕ್ಷಣಾಧಿಕಾರಿಗಳಲ್ಲಿ ಕರ್ತವ್ಯಜ್ಞಾನವೂ, ಕರ್ತವ್ಯತತ್ಪರತೆಯೂ ಹೆಚ್ಚಲು ಅವಕಾಶವಾಗಿ ಅದರಿಂದ ಸಮಾಜಕ್ಕೆ ವಿಶೇಷಲಾಭವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮೂಢಭಕ್ತಿಯನ್ನನುಸರಿಸಿ ಚೀಟಿಯನ್ನು ಹಾಕಿ ತನ್ಮೂಲಕ ಅಧಿಕಾರಿಗಳನ್ನು ಗೊತ್ತುಮಾಡುವುದು ಖಂಡಿತವಾಗಿಯೂ ನಿರಾಕ್ಷೇಪವೂ, ಸರ್ವಜನಸಮ್ಮತವೂ ಆಗಿರುವುದಿಲ್ಲವೆಂದು ಹೇಳಬೇಕಾದ ಅಗತ್ಯವಿಲ್ಲವು. ಈರೀತಿ ಚೀಟಿಯನ್ನು ಹಾಕಿ ವಟುವನ್ನು ಆರಿಸುವುದಾಗಲಿ, ಎಲ್ಲೋ ಕೆಲ ಜನರು ಒಂದು ಕಡೆ ಸೇರಿ ತಮಗೆ ಬೇಕಾದವನನ್ನು ಗೊತ್ತುಮಾಡುವುದಾಗಲಿ ಸಮಾಜದ ಬಹುಜನಸಮ್ಮತವಾಗಿರದೆ ಅನರ್ಥಕಾರಿಯಾಗಿ ಪರಿಣಮಿಸುವುದರಿಂದ, ಬೆಂಗಳೂರಿನಲ್ಲಿ ನೆರೆಯುವುದಾಗಿರುವ ಅಖಿಲವೀರಶೈವಮಹಾಸಭೆಗೆ ಭರತಖಂಡದ ನಾನಾಭಾಗಗಳಿಂದ ವೀರಶೈವಪ್ರಮುಖಪ್ರತಿನಿಧಿಗಳೂ, ವಿದ್ವಾಂಸರುಗಳೂ, ಸಮಾಜಾಭಿಮಾನಶಾಲಿಗಳೂ ಬರುತ್ತಾರಾದುದರಿಂದ, ಆವೇಳೆಯಲ್ಲಿ ಅಂದರೆ ಮಹಾಸಭಾಕಾರ್ಯಗಳು ಮುಗಿದೊಡನೆಯೇ ಶ್ರೀಮದ್ರಂಭಾಪುರೀಸಂಸ್ಥಾನಪೀಠಾಧಿಕಾರಸ್ಥಾನಕ್ಕೆ, ಪ್ರಕಟನಪತ್ರಿಕೆಯದ್ವಾರ ವಿದ್ಯಾಕುಲಶೀಲಸಂಪನ್ನರಾದ ವಟುಗಳು ಬರಮಾಡಲ್ಪಟ್ಟು ಅವರುಗಳಲ್ಲುತ್ತಮರಾದವರೊಬ್ಬರು ಸರ್ವಾನುಮತದಿಂದ ಆರಿಸಲ್ಪಡತಕ್ಕದು ನಿರಾಕ್ಷೇಪವೂ, ಸುಸಾಧ್ಯವೂ ಆಗಿರುತ್ತದೆಂದು ದಸರಾಮಹೋತ್ಸವಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದ ಮೈಸೂರು ಸೀಮೆಯ ಎಲ್ಲ ಡಿಸ್ಟ್ರಿಕ್ಟುಗಳ ವೀರಶೈವಪ್ರತಿನಿಧಿಗಳೂ, ರಾಜಧಾನಿಯ ಪ್ರಮುಖ ವೀರಶೈವರೂ ಎರಡು ಸಭೆಗಳನ್ನು ನಡಿಸಿ ಮಾಡಿದ ತೀರ್ಮಾನಗಳು ಸರ್ಕಾರದವರಿಗೆ ತಿಳುಹಲ್ಪಟ್ಟಿರುವ ವಿಚಾರವು ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದು.

ಮೇಲ್ಕಂಡ ವೀರಶೈವಪ್ರಮುಖರ ಸಭೆಯಲ್ಲಾದ ತೀರ್ಮಾನವು ಸರ್ಕಾರಕ್ಕೆ ಆ ಕೂಡಲೆ ತಿಳುಹಲ್ಪಟ್ಟಿರುವುದಾದರೂ, ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರವರು ಈ ಅಕ್ಟೋಬರ್ ತಿಂಗಳೊಳಗಾಗಿ ಮಠದ ಏಜಂಟರನ್ನು ಮತ್ತೆ ಕೆಲವರನ್ನು ಚಿಕ್ಕಮಗಳೂರಿಗೆ ಬರಮಾಡಿಕೊಂಡು ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ನಡೆಯಿಸಿ ಬಾಳೆಹೊನ್ನೂರು ಸಂಸ್ಥಾನಮಠಕ್ಕೆ ಒಬ್ಬ ವಟುವನ್ನು ಗೊತ್ತುಮಾಡಬೇಕೆಂದು ಮೈಸೂರು ಸರ್ಕಾರದವರು ಅಪ್ಪಣೆಮಾಡಿರುವುದಾಗಿ ತಿಳಿಯಬರುತ್ತದೆ. ಈ ವೀರಶೈವಮುಖ್ಯಧರ್ಮರಕ್ಷಣಾಧಿಕಾರಪೀಠಕ್ಕೆ ಎಂತಹವರು ಸ್ವಾಮಿಗಳಾಗಿ ಆರಿಸಲ್ಪಡಬೇಕೆಂಬುದು ಆ ಪೀಠದ ಅಶೇಷಶಿಷ್ಯರ ಹಾಗೂ ಅಭಿಮಾನಶಾಲಿಗಳ ಆಶಯವಾಗಿರುತ್ತದೆಂಬುದನ್ನು ಸರ್ಕಾರದವರು ಅರಿತಿರುವರಾದರೂ ಬಹುಜನ ವೀರಶೈವರು ಸೇರಲು ಮಾರ್ಗಾನುಕೂಲವೂ, ಕಾಲವಿಳಂಬವೂ ಇಲ್ಲದರೀತಿಯಲ್ಲಿ ಮೀಟಿಂಗನ್ನು ಮಾಡಬೇಕಾದ ಕಾರಣವೂ ಅವಸರವೂ ಏನಿದ್ದಿತೋ ನಮಗೆ ಬೇರೆ ತಿಳಿಯದು. ಇದೂ ಅಲ್ಲದೆ ಬ್ರಾಹ್ಮಣಮಠಾಧಿಕಾರಿಗಳನ್ನು ನಿಯಮಿಸುವ ಸಂದರ್ಭದಲ್ಲಿ, ಒಬ್ಬ ಸ್ಪೆಷಲ್ ಆಫೀಸರನ್ನು ನಿಯಮಿಸಿ ಅವತೀಯರ ಬಹುಜನಾಭಿಪ್ರಾಯವನ್ನನುಸರಿಸಿ ಕಾರ್ಯವನ್ನು ನಡಿಸುವಂತೆ ಈ ವೀರಶೈವಪ್ರಮುಖಮಠಾಧಿಕಾರಿಗಳನ್ನು ಆರಿಸುವ ವಿಚಾರದಲ್ಲಿ ನಡಿಸದೆ, ಮತ್ತು ಬಹುಜನರು ಸೇರಲು ಅನುಕೂಲಿಸುವಂತೆ ಪ್ರಕಟಣೆಯನ್ನು ಮಾಡದೆ "ಬಂದಷ್ಟು ಜನರು ಬರಲಿ, ನಾವೇನೋ ಸಭೆಯನ್ನುಮಾಡಿ ಯಾರೋ ಒಬ್ಬರನ್ನು ಅಧಿಕಾರಿಯನ್ನಾಗಿ ಗೊತ್ತುಮಾಡಿದರಾಯಿತು" ಎಂದು ಭಾವಿಸಿರುವುದಾಗಿ, ಅವರ ಈಗಣ ಏರ್ಪಾಟಿನಿಂದ ಊಹಿಸಬೇಕಾಗಿರುತ್ತದೆ. ಈ ಬಾಳೆಹೊನ್ನೂರುಸಂಸ್ಥಾನಮಠವು ವೀರಶೈವರಿಗೆ ಸೇರಿದುದಾದುದರಿಂದ ಎಲ್ಲೋ ಕೊಂಚ ಮಾಸಾಶನವೂ, ಕೆಲ ಇನಾಮತಿ ಭೂಮಿಕಾಣಿಗಳೂ ಇದಕ್ಕೆ ಇರುವುದರವಿನಾ ಸಾವಿರಾರು ರೂಪಾಯಿ ವರಮಾನವುಳ್ಳ ಜಹಗೀರಿಯಾಗಲಿ, ಮಾಸಾಶನವಾಗಲಿ ಇರುವುದಿಲ್ಲವು. ಇಂತಹುದರಲ್ಲಿ ಸರ್ಕಾರದವರು ಈರೀತಿ ಬಹುಜನ ವೀರಶೈವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಸ್ವೇಚ್ಛೆಯಿಂದ ಯಾವುದೋ ಒಂದು ಅಭುಕ್ತಮೂಲೆಯಲ್ಲಿ ಮೀಟಿಂಗನ್ನು ಮಾಡಿ ವಟುವನ್ನು ಆರಿಸುವ ಅಧಿಕಾರವೇನಿರುವುದೋ ಅದನ್ನು ಅವರೇ ವ್ಯಕ್ತಗೊಳಿಸಬೇಕಾಗಿದೆ. ಈಗಣ ಸಮಾಜದ ಪರಿಸ್ಥಿತಿಯಲ್ಲಿ ಪೈರಿನೊಳಗೆ ಬೆಳೆದ ಕಳೆಗಳಂತೆ ಪೂಜ್ಯವರ್ಗದವರಲ್ಲಿ ಕಲಹೋತ್ಪಾದನೆ ಮಾಡತಕ್ಕುದೇ ಮುಖ್ಯಕರ್ತವ್ಯವೆಂದು ತಿಳಿದ, ಮತ್ತು ಸಮಾಜಕ್ಕೆ ಇದರಿಂದ ಎಷ್ಟು ಅನರ್ಥವಾಗುವುದೆಂಬುದನ್ನು ಪರ್ಯಾಲೋಚಿಸದೆ ಇರುವ ಜಾಣರು ಬೇರೆ ಮೂಡಿರುವ ಈ ಸಮಯದಲ್ಲಿ ಮುಖ್ಯಾಚಾರ್ಯಪೀಠಗಳಿಗೆ ಅಧಿಕಾರಿಗಳನ್ನು ನಿಯಮಿಸುವ ಕೆಲಸವು ಸಾಧಾರಣವಾಗಿರುವುದಿಲ್ಲ. ದೂರಾಲೋಚನೆಯಿಲ್ಲದೆ ಕಾರ್ಯವನ್ನು ನೆರವೇರಿಸಿ, ಉತ್ತರೋತ್ತರ ಅದರಿಂದ ಸಮಾಜಕ್ಕೆ ಘಾತವುಂಟಾದರೆ ಆ ದುಷ್ಫಲಕ್ಕೆ ಅದರ ಮೂಲಚಾಲಕರೆಲ್ಲರೂ ಭಾಗಿಗಳಾಗಬೇಕಾಗುತ್ತದೆ. ಶಾಖಾಮಠಗಳಿಗೆ ಉತ್ತರಾಧಿಕಾರಿಗಳನ್ನು ನಿಯಮಿಸಬೇಕಾದಾಗ್ಗೇ ಬಹಿರಂಗ ಪ್ರಕಟನೆಗಳ ಮೂಲಕ ಯೋಗ್ಯವಟುಗಳನ್ನು ಅಪೇಕ್ಷಿಸಿ ಬರಮಾಡಿಕೊಂಡು ಬಹುಜನಸಮ್ಮತಿಯಿಂದ ಕಾರ್ಯವನ್ನು ನೆರವೇರಿಸುವ ಯೋಗ್ಯಪದ್ಧತಿಯು ಅಲ್ಲಲ್ಲಿ ಆಚರಣೆಗೆ ಬಂದಿರುವಾಗ್ಗೆ, ಇಂತಹ ಮುಖ್ಯಪೀಠಗಳಿಗೆ ಅಧಿಕಾರಿಗಳನ್ನು ನಿಯಮಿಸುವ ವಿಚಾರದಲ್ಲಿ ಅಂತಹ ನಿರಾಕ್ಷೇಪ ಮಾರ್ಗವನ್ನು ಅನುಸರಿಸದೆ ಹೋಗುವುದು ಯೋಗ್ಯವಲ್ಲವು. ಹಿಂದೆ ಕಾಶಿಯಲ್ಲಿ ಶಬ್ದಶಾಸ್ತ್ರವನ್ನು ಅಭ್ಯಾಸಮಾಡಿ ಪೂರ್ಣಪಾಂಡಿತ್ಯವನ್ನು ಪಡೆದು, ರಾಜಧಾನಿಗೆ ಬಂದು ಮಹಾವಿದ್ವತ್ಸಭೆಯಲ್ಲಿ ವಾಕ್ಯಾರ್ಥವನ್ನು ನಡೆಯಿಸಿ ವಿದ್ವದಗ್ರಗಣ್ಯರಿಂದ ಪ್ರಶಸ್ತಿಪತ್ರವನ್ನು ಪಡೆದಿದ್ದ ಮತ್ತು ಶಮದಮಾದಿಗುಣಸಂಪತ್ತಿನಿಂದಲೂ, ಸಮಾಜಾಭಿಮಾನವಿಶೇಷದಿಂದಲೂ ಸರ್ವಜನಚಿತ್ತಾಕರ್ಷಕರಾಗಿದ್ದ ಕೈ|| ಮಲ್ಲಿನಾಥಶಾಸ್ತ್ರಿಗಳು ಇದೇ ಬಾಳೇಹೊನ್ನೂರುಪೀಠದ ಸ್ಥಿರಪಟ್ಟಾಧಿಕಾರಕ್ಕೆ ನಿಯಮಿಸಲ್ಪಡುವಾಗಲೂ ನೆರದಿದ್ದ ಸಭೆಯಲ್ಲಿ ವಿಪರೀತ ಚರ್ಚೆಗಳು ನಡೆದು, ಕಡೆಗೆ ಅತ್ಯಂತ ಪ್ರಯಾಸದಿಂದ ಕೊನೆಗಂಡರೂ ಇಂದು ಆಗಬೇಕಾದ ಕಾರ್ಯವು ಮಾರನೆಯದಿನ ನೆರವೇರಬೇಕಾಗಿ ಬಂದಿತು. ಇದು ನಡೆದು ಕಾಲು ಶತಮಾನದ ಮೇಲಾಯಿತು. ಈಗಣ ಸಮಾಜದ ಪರಿಸ್ಥಿತಿಯಾದರೋ ಇನ್ನೂ ಬಹು ಸೂಕ್ಷ್ಮವಾಗಿದೆ. ಅದುಕಾರಣ ಇಂತಹ ದೊಡ್ಡ ಭಾರದ ಮತ್ತು ಜವಾಬ್ದಾರಿಯ ಕೆಲಸವನ್ನು ಯಾರಾದರು ನಾಲ್ಕಾರು ಜನರಾಗಲಿ, ಸರಕ್ಕಾರದವರಾಗಲಿ ವಹಿಸಿಕೊಂಡು ವಿಶೇಷ ನಿಷ್ಠುರಕ್ಕೂ, ಕಷ್ಟಕ್ಕೂ ಗುರಿಯಾಗುವುದಕ್ಕಿನ್ನ ದೇಶಮಧ್ಯದಲ್ಲಿರುವ ವೀರಶೈವವೃತ್ತಪತ್ರಿಕೆಗಳಲ್ಲಿ ಇಂತಿಂತಹ ಯೋಗ್ಯತೆಯುಳ್ಳವರು ಈ ಬಾಳೆಹೊನ್ನೂರು ಪೀಠಾಧಿಕಾರವನ್ನು ವಹಿಸುವುದಕ್ಕೆ ಬೇಕೆಂದೂ, ಉಮೇದುವಾರರುಗಳು ಇಂತಹವರಲ್ಲಿಗೆ ಇಂತಿಷ್ಟು ಅವಧಿಯಲ್ಲಿ ಬರೆದುಕೊಳ್ಳಬೇಕೆಂದೂ ಪ್ರಕಟಪಡಿಸಿ ಅಖಿಲವೀರಶೈವ ಮಹಾಸಭೆಯು ನಡೆಯುವ ಸಮಯಕ್ಕೆ ಅವರುಗಳನ್ನು ಬೆಂಗಳೂರಿಗೆ ಬರಮಾಡಿಕೊಂಡು, ಪರೀಕ್ಷೆಮಾಡಲು ಯೋಗ್ಯತಾಸಂಪನ್ನರಾದ ಕೆಲ ದೊಡ್ಡಮನುಷ್ಯರುಳ್ಳ ಸಂಘದ (ಕಮಿಟಿಯ) ಮೂಲಕ ಆ ಉಮೇದುವಾರರಲ್ಲಿ ಉತ್ತಮ ತರಗತಿಯವರಾದವರನ್ನು ನಿರ್ಧರಗೊಳಿಸಿಕೊಂಡು, ಅವರುಗಳಲ್ಲಿ ಪ್ರತಿಯೊಬ್ಬರ ಯೋಗ್ಯತಾಂಶವನ್ನೂ ಆ ಕಾಲದಲ್ಲಿ ಸೇರಿರುವ ಮಹಾಜನಸಮೂಹಕ್ಕೆ ತಿಳಿಸಿ, ಅವರುಗಳ ಓಟುಗಳನ್ನು ತೆಗೆದುಕೊಳ್ಳಲು ಏರ್ಪಡಿಸಿ, ಹೆಚ್ಚು ಓಟುಗಳು ಯಾರಿಗೆ ಬರುತ್ತವೋ ಅಂತಹ ವಟುವನ್ನು ಮಹಾಪೀಠಾಧಿಕಾರಕ್ಕೆ ಪಟ್ಟಕಟ್ಟಲು ನಿರ್ಧರಿಸಿ ಚರ್ಚಾಸ್ಪದವಾದ ಈ ಸಮಸ್ಯೆಯನ್ನು ಸಾಂಗಗೊಳಿಸುವುದು ಸರ್ವಸಮ್ಮತವಾದ ಮಾರ್ಗವೆಂದು ನಮಗೆ ತೋರುತ್ತದೆ.

ಮೈಸೂರು ಸಂಸ್ಕೃತಮಹಾಪಾಠಶಾಲೆಗೆ ಎಲ್ಲವರ್ಗದವರ ಪ್ರವೇಶ.

ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ಸಂಸ್ಕೃತ ಮಹಾಪಾಠಶಾಲೆಗಳಿಗೆ ಎಲ್ಲವರ್ಗದ ವಿದ್ಯಾರ್ಥಿಗಳು ಸೇರಿಸಲ್ಪಡುವ ವಿಚಾರದಲ್ಲಿ ಬಹುಕಾಲದಿಂದಲೂ ನಡೆಯುತ್ತಿದ್ದ ಚರ್ಚಾಂಶವನ್ನು ಬಗೆಹರಿಸಲು ನಿಯುಕ್ತವಾಗಿದ್ದ ಒಂದೇವರ್ಗದ ಕಮಿಟಿಯವರು ಬೆಂಗಳೂರು ಮಹಾಪಾಠಶಾಲೆಗೆ ಎಲ್ಲ ವರ್ಗದ ವಿದ್ಯಾರ್ಥಿಗಳು ಸೇರಿಸಲ್ಪಡಬಹುದೆಂದೂ, ಮೈಸೂರಿನ ಮಹಾಪಾಠಶಾಲೆಯು ಮಾತ್ರ ಬ್ರಾಹ್ಮಣವಿದ್ಯಾರ್ಥಿಗಳಿಗೋಸ್ಕರ ಕಾದಿಡಲ್ಪಡಬೇಕೆಂದೂ ಮಾಡಿದ್ದ ತೀರ್ಮಾನವನ್ನು ಅನುಸರಿಸಿ ಸರ್ಕಾರದವರು ಅಪ್ಪಣೆಮಾಡಿರುತ್ತಾರಷ್ಟೆ? ಇದರಮೇಲೆ "ಮೈಸೂರಿನಲ್ಲಿರತಕ್ಕ ಸಂಸ್ಕೃತಕಾಲೇಜಿಗೆ ಎಲ್ಲಾ ಜಾತಿಗಳ ಮತ್ತು ಪಂಗಡಗಳ ವಿದ್ಯಾರ್ಥಿಗಳನ್ನೂ ಸೇರಿಸಿಕೊಳ್ಳಬೇಕೆಂದು ಈ ಸಭೆಯವರು ಪ್ರಾರ್ಥಿಸುತ್ತಾರೆ" ಎಂದು ಅರಸೀಕೆರೆ ತಾಲ್ಲೂಕು ಮೆಂಬರುಗಳಾದ ಮ|| ಮರುಳಸಿದ್ದಪ್ಪನವರು ಮತ್ತು ಮ|| ರುದ್ರಪ್ಪನವರು ಇವರುಗಳಿಂದ ಸೂಚಿಸಲ್ಪಟ್ಟಿದ್ದ ನಿರ್ಣಯವು ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಲ್ಪಟ್ಟಾಗ, ತಿಪಟೂರಿನ ಮ|| ಡಿ.ಎಸ್. ಮಲ್ಲಪ್ಪನವರು ಮತ್ತೆ ಕೆಲಮೆಂಬರುಗಳು ಈ ನಿರ್ಣಯವನ್ನು ಪುಷ್ಟೀಕರಿಸಿ ಮಾತನಾಡಿದುದರಮೇಲೆ ಓಟಿಗೆ ಹಾಕಲ್ಪಡುವಲ್ಲಿ 91 ಮೆಂಬರುಗಳು ಅನುಕೂಲವಾಗಿಯೂ ಮ|| ಗಳಾದ ಎಂ. ವೆಂಕಟಕೃಷ್ಣಯ್ಯನವರು, ಬಿ. ನರಸಿಂಗರಾಯರು, ಕರ್ಣಿಕ ಕೃಷ್ಣಮೂರ್ತಿರಾಯರು ಮತ್ತು ಗುಬ್ಬಿಯ ರಾಜಗೋಪಾಲಯ್ಯಂಗಾರ್ರು ಈ ನಾಲ್ವರು ಪ್ರತಿಕೂಲವಾಗಿಯೂ ಓಟುಮಾಡಲಾಗಿ, ಈ ನಿರ್ಣಯವು ಬಹುಮತದಿಂದ ಪ್ಯಾಸ್‌ಮಾಡಲ್ಪಟ್ಟಿತು. ಈ ವಿಚಾರವು ಚರ್ಚಿಸಲ್ಪಡುತ್ತಿರುವಾಗ್ಗೆ "ನಿಮ್ಮ ಲಿಂಗಾಯಿತಪಂಡಿತರು ಮುಸಲ್ಮಾನರಿಗೆ ವೇದಪಾಠವನ್ನು ಹೇಳಲು ಸಮ್ಮತಿಸುತ್ತಾರೆಯೇ?" ಎಂದು ಎರಡನೆಯ ಕೌನ್ಸಿಲರಾದ ಮ|| ಕೆ.ಆರ್. ಶ್ರೀನಿವಾಸಯ್ಯಂಗಾರರು ಪ್ರಶ್ನಿಸಿದುದನ್ನು ನೋಡಿ ನಮಗೆ ಬಹಳ ಖೇದವಾಗುತ್ತದೆ. ಗತಿಸಿದ ಸರ್ ಟಿ. ಆನಂದರಾಯರು, ಪ್ರಜಾಪ್ರತಿನಿಧಿಸಭೆಯಲ್ಲಿ ಇದೇ ಸಂಸ್ಕೃತ ಮಹಾಪಾಠಶಾಲೆಗಳಿಗೆ ವೀರಶೈವರನ್ನು ಸೇರಿಸುವ ವಿಚಾರದಲ್ಲಿ ಚರ್ಚೆನಡೆಯುವಾಗ್ಗೆ, ಲಿಂಗಾಯಿತರು ತಾವುಪಯೋಗಿಸುವ ಬಾವಿಯಲ್ಲಿ ಪಂಚಮರು ನೀರನ್ನುಪಯೋಗಿಸಲು ಸಮ್ಮತಿಸುವರೆ? ಎಂದು ಪ್ರಶ್ನಿಸಿ ಇಡೀ ವೀರಶೈವಸಮಾಜಕ್ಕೆ ಮಹತ್ತರವಾದ ಮನಃಕ್ಲೇಶವನ್ನುಂಟುಮಾಡಿದ್ದುದು ಮ|| ಶ್ರೀನಿವಾಸಯ್ಯಂಗಾರರು ಈವೇಳೆ ಮುಸಲ್ಮಾನರ ಉಪಮಾನವನ್ನು ಕೊಟ್ಟುದುದರಿಂದ ಸ್ಮೃತಿಪಥಕ್ಕೆ ತರಲ್ಪಡತಕ್ಕುದಾಗಿದೆ. ಬಹು ಉತ್ತರವಾದಿತ್ವವನ್ನುಳ್ಳ ದೊಡ್ಡ ಅಧಿಕಾರಿಗಳು ಈರೀತಿ ಒಂದು ಸಮಾಜದವರ ಮನಸ್ಸಿಗೆ ಅತ್ಯಂತ ಖೇದವನ್ನುಂಟುಮಾಡುವ ಮಾತುಗಳನ್ನಾಡುವುದು ಯುಕ್ತವಾಗಿಲ್ಲವು, ಮತ್ತು ಸಹಿಸಲಶಕ್ಯವಾಗಿರುವದು. ಅದುಕಾರಣ ಇತಃಪರ ಇಂತಹ ಅಸಭ್ಯಕರವಾದ ಶಬ್ದಪ್ರಯೋಗವನ್ನು ಯಾರೂ ಮಾಡದಂತೆ ಎಚ್ಚರಗೊಳಿಸಲ್ಪಡುವುದು ಅತ್ಯವಶ್ಯವಾಗಿರುತ್ತದೆ.

ಪ್ರಜಾಪ್ರತಿನಿಧಿಸಭೆಯ ದಶರಾಧಿವೇಶನ

ಕಳೆದ ಮಂಗಳವಾರ ಮುಕ್ತಾಯಗೊಂಡ ಈ ಅಧಿವೇಶನವು 9 ದಿನಗಳವರೆಗೆ ನಡೆಯಬೇಕಾಗಿ ಮೊದಲು ಗೊತ್ತುಮಾಡಲ್ಪಟ್ಟಿದ್ದಿತಾದರೂ, ವಿಷಯಬಾಹುಳ್ಯ ಮತ್ತು ಮಹತ್ತ್ವಗಳಿಂದ ನಿರ್ವಾಹವಿಲ್ಲದೆ 11 ದಿನಗಳವರೆಗೆ ನಡೆಯಬೇಕಾಗಿ ಬಂದಿತು. ನಿಯಮವನ್ನನುಸರಿಸಿ ವಿಷಯಗಳ ಚರ್ಚೆ ಮೊದಲಾದುವನ್ನು ನಡೆಯಿಸಬೇಕೆಂದು ಅಧ್ಯಕ್ಷರು ಹೇಳಿದುದನ್ನು ಪ್ರತಿನಿಧಿಗಳು ಸಂಮಾನಿಸಿ ಬಹಳ ಶಾಂತಿಯಿಂದಲೂ ವಿಚಕ್ಷಣೆಯಿಂದಲೂ ವಿಷಯಗಳನ್ನು ನಿವೇದಿಸಿ ಸಭಾಕಾರ್ಯವು ಸುಲಲಿತವಾಗಿಯೂ, ಹಿತಕರವಾಗಿಯೂ ನಡೆಯಲು ಸಾಹಾಯ್ಯಕರಿಸಿದುದಕ್ಕಾಗಿ ಪ್ರತಿನಿಧಿಗಳಿಗೆ ದಿವಾನರು ತಮ್ಮ ಉಪಸಂಹಾರಭಾಷಣದಲ್ಲಿ ವಂದನೆಯನ್ನು ತಿಳಿಸಿರುತ್ತಾರೆ. ಪ್ರತಿನಿಧಿಗಳು ಯಾರ ಮುಖದಾಕ್ಷಿಣ್ಯಕ್ಕೂ ದರ್ಪಕ್ಕೂ ಹೆದರದೆ ತಾವು ತಂದ ವಿಷಯಗಳನ್ನು ಯುಕ್ತಿಯುಕ್ತವಾಗಿಯೂ, ಸರ್ಕಾರದವರು ಸಮ್ಮತಿಸುವಂತೆಯೂ ಪ್ರತಿಪಾದಿಸಿ, ಫಸಲು ನಷ್ಟವಾದವೇಳೆಯಲ್ಲಿ ಅರ್ಧಕಂದಾಯವನ್ನೂ ಮಾರನೆಯ ವರ್ಷವೂ ನಷ್ಟವಾದಲ್ಲಿ ಪೂರಾ ಕಂದಾಯವನ್ನೂ ರಿಮಿಷನ್ ಮಾಡುವುದು, ಸರ್ಕಾರಿಕೆಲಸದಲ್ಲಿ ಹಿಂದುಳಿದ ಪಂಗಡದವರ ಪ್ರಾತಿನಿಧ್ಯವನ್ನು ಶೇಕಡ 50 ರಿಂದ 75ಕ್ಕೆ ಹೆಚ್ಚಿಸುವುದು; ಹೈಸ್ಕೂಲುಗಳಲ್ಲೂ ಕಾಲೇಜುಗಳಲ್ಲೂ ಹಿಂದುಳಿದಪಂಗಡಗಳ ವಿದ್ಯಾರ್ಥಿಗಳ ಸಂಖ್ಯೆಯು ಅವುಗಳಲ್ಲಿ ಗೊತ್ತುಮಾಡಲ್ಪಟ್ಟಿರುವ ಫ್ರೀಷಿಪ್ ಮತ್ತು ಹಾಫ್ ಫ್ರೀಷಿಪ್ಪಿಗೆ ಕಡಿಮೆಯಾಗಿದ್ದಲ್ಲಿ ಶೇಕಡ 75ರಷ್ಟು ಫ್ರೀಷಿಪ್ ಮತ್ತು ಹಾಫ್ ಫ್ರೀಷಿಪ್ಪುಗಳನ್ನು ಪ್ರತ್ಯೇಕವಾಗಿಡುವದು; ಮೈಸೂರು ಸಂಸ್ಕೃತಮಹಾಕಾಲೇಜಿಗೆ ಎಲ್ಲ ಪಂಗಡದ ವಿದ್ಯಾರ್ಥಿಗಳನ್ನು ಸೇರಿಸುವುದು ಮೊದಲಾಗಿ ಬಹು ಪ್ರಯೋಜನಯುಕ್ತವಾದ ವಿಷಯಗಳನ್ನು ಹೆಚ್ಚು ಓಟುಗಳನ್ನು ಪಡೆದು ಪ್ಯಾಸ್‌ಮಾಡಿಸಿರುವುದು ಸ್ತುತ್ಯವಾಗಿರುತ್ತದೆ. ದಿವಾನರು ಅತ್ಯಂತ ತಾಳ್ಮೆಯಿಂದಲೂ ವಿಚಕ್ಷಣೆಯಿಂದಲೂ ನಿರಾಯಾಸದಿಂದಲೂ ಸಭಾಕಾರ್ಯವನ್ನು ಜರುಗಿಸಿ ಎಲ್ಲಪ್ರತಿನಿಧಿಗಳ ಮನಸ್ಸಿಗೂ ಸಂತೋಷವನ್ನುಂಟುಮಾಡಿರುವುದು ಅವರ ಕಾರ್ಯದಕ್ಷತೆಯನ್ನೂ, ಬುದ್ಧಿಕುಶಲತೆಯನ್ನೂ ವ್ಯಕ್ತಗೊಳಿಸುತ್ತದಲ್ಲದೆ ಸರ್ವಜನಾಭಿನಂದನೀಯವಾಗಿರುತ್ತದೆ. ಆದರೆ, ಈರೀತಿಯಾಗಿ ಸಭಾಕಾರ್ಯವನ್ನು ಸರ್ವಜನಾಹ್ಲಾದಕರವಾಗಿ ನೆರವೇರಿಸಿದ ದಿವಾನರಿಗೆ ಪ್ರತಿನಿಧಿಗಳಪರವಾಗಿ ವಂದನೆಯು ತಿಳುಹಲ್ಪಡುವುದಕ್ಕೆ ಅವಕಾಶವಿಲ್ಲದಂತೆ, ಅವಸರದಿಂದ ಶ್ರೀಮನ್ಮಹಾರಾಜರವರ ಹೆಸರಿನಮೇಲೆ ತ್ರಿವಾರಜಯಘೋಷವನ್ನು ಓರ್ವಮಾಗಾಡಂಬರದ ಪ್ರತಿನಿಧಿಯುಮಾಡಿ ಮುಕ್ತಾಯಗೊಳಿಸಿದುದು ಮಾತ್ರ ವಿಷಾದಸ್ಥಾನವಾಗಿರುತ್ತದೆ.

ಸ್ವದೇಶದ ವೃತ್ತಾಂತಗಳು

ಕಳೆದ ಭಾನುವಾರ ಉದಕಮಂಡಲಕ್ಕೆ ಚಿತ್ತೈಸಿದ್ದ ಶ್ರೀಮನ್ಮಹಾರಾಜರವರ ಸ್ವಾರಿಯು ಈ ದಿವಸ ರಾಜಧಾನಿಗೆ ಹಿಂದಿರುಗುವುದಾಗಿರುವುದು.

ಹಾಸನದ ರೈಲ್ವೆಸ್ಟೇಷನ್ನಿನ ಬಳಿ ಹೊಸದಾಗಿ ಕಟ್ಟಲ್ಪಟ್ಟಿರುವ ಪ್ರಯಾಣಿಕರ ವಸತಿಗೃಹ (ಮುಸಾಫರ್ಖಾನೆಯು) ಪ್ರವೇಶೋತ್ಸವವು ಆ ಡಿ|| ನ ಡೆಪ್ಯುಟಿಕಮಿಷನರಾಗಿದ್ದ ಮ|| ಎ. ವಿ. ರಾಮನಾಥನ್, ಬಿ. ಎ., ಯವರಿಂದ ಕಳೆದ ತಾ|| 23 ರ ಸಾಯಂಕಾಲ 5 ಗಂಟೆಯಲ್ಲಿ ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು.

ಮಹಾಮಾತೃಶ್ರೀ ವಾಣಿವಿಲಾಸ ಸನ್ನಿಧಿಯವರೂ ಪ್ರಥಮರಾಜಕುಮಾರಿ ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರೂ ಕಳೆದ ಸೋಮವಾರ ಬೆಂಗಳೂರಿಗೆ ದಯಮಾಡಿಸಿದರು. ರಾಜಕುಮಾರಿಯವರ ದೇಹಸ್ಥಿತಿಯು ಡಾಕ್ಟರ್ ಟಿ. ಕೃಷ್ಣಯ್ಯಂಗಾರ್ಯರ ಚಿಕಿತ್ಸೆಯಿಂದ ಗುಣಮುಖವಾಗಿರುವುದೆಂದು ತಿಳುಹಲು ಸಂತೋಷವಾಗುತ್ತದೆ.

ಅಸಿಸ್ಟೆಂಟ್ ಕಮಿಷನರಾದ ಮಿ|| ಬಾಳರಾಜ ಅರಸಿನವರು ಈವರೆಗೂ ಕೈ|| ಸರದಾರ್ ಕಾಂತರಾಜಅರಸಿನವರ ಆಸ್ತಿಯ ಮೇಲ್ವಿಚಾರಣೆಗೋಸ್ಕರ ಸ್ಪೆಷಲ್ ಡ್ಯೂಟಿ ಆಫೀಸರಾಗಿ ನಿಯಮಿಸಲ್ಪಟ್ಟಿದ್ದರು. ಈಗ ಇವರಿಗೆ 1924ನೆ ಸೆಪ್ಟಂಬರ್ ತಾ|| 30 ರಿಂದ 15 ತಿಂಗಳುಗಳ ಮೇಲೆ 16 ದಿನಗಳ ಪ್ರಿವಿಲೇಜ್ ಮತ್ತು ಫರ್ಲೋರಜ ಕೊಡಲ್ಪಟ್ಟಿದೆ. ಇವರು ಪುನಹ ಪಾಶ್ಚಾತ್ಯದೇಶ ಸಂಚಾರಮಾಡಿಕೊಂಡು ಬರಲು ಇಷ್ಟರಲ್ಲೇ ಪ್ರಯಾಣಮಾಡುವವರಾಗಿರುವರೆಂದು ಕೇಳುತ್ತೇವೆ.

ರಾಜಧಾನಿಯ ಫಕೀರ್‌ಸಾಬಿ ಗರಡಿಯ ಬಳಿ ಮಲ್ಲೇಶನೆಂಬುವವನ ಮನೆಯಲ್ಲಿ ಜೂಜಾಡುತ್ತಿದ್ದ 40 ಜನರನ್ನು ಇಸ್ಪೀಟು ಮೊದಲಾಗಿ ಜೂಜಿನ ಸಾಮಗ್ರಿಗಳೊಡನೆ ಪೋಲೀಸಿನವರು 1923 ನೆಯ ಅಕ್ಟೋಬರ್ ತಾ|| 23ರಲ್ಲಿ ಹಿಡಿದು ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದ್ದುದರಲ್ಲಿ ಒಬ್ಬೊಬ್ಬನಿಗೆ 50 ರೂ. ನಂತೆ 30 ಜನರಿಗೆ ಅರ್ಥದಂಡವು ವಿಧಿಸಲ್ಪಟ್ಟಿತು. ಜೂಜಾಡಲು ಮನೆಯನ್ನು ಕೊಟ್ಟು ಸಹಕರಿಸಿದ್ದ ಮಲ್ಲೇಶನು ಪೋಲೀಸರಿಗೆ ಸಿಕ್ಕದೆ ತಪ್ಪಿಸಿಕೊಂಡು ಹೋಗಿದ್ದನು. ಆದರೆ ಪೋಲೀಸರು ತಡಕಿ ಅವನನ್ನು ಹಿಡಿದು ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವಲ್ಲಿ ಈ ಅಕ್ಟೋಬರ್ ತಾ|| 16 ರಲ್ಲಿ ಅವನಿಗೆ 2 ತಿಂಗಳ ಕಠಿಣ ಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟಿತು. ಅದರಮೇಲೆ ಅವನು ಸೆಷನ್ಸುಕೋರ್ಟಿಗೆ ಅಪೀಲನ್ನು ಮಾಡಿ ಹೊಣೆಯಮೇಲೆ ಬಿಡಿಸಿಕೊಂಡಿರುವನು.

ಒಂದನೆಯ ಕೌನ್ಸಿಲರಾದ ಮುಶೀರ್-ಉಲ್-ಮುಲ್ಕ್ ಮಿ|| ಮೀರ್ ಹಂಸಾಹುಸೇನ್‌ರವರು ತಮ್ಮ ಜ್ಯೇಷ್ಠಕುಮಾರರಾದ ಮಿ|| ಸಫದರ್‌ಹುಸೇನ್, ಬಿ. ಎ., ಯವರಿಗೆ ಆಗಾಮಿರ್ಜಾ ಅಹಮ್ಮದ್‌ಶಿರಾಜಿಯವರ ಕುವರಿಯನ್ನು ತಂದು ಕಳೆದ ತಾ|| 23 ನೆಯ ಗುರುವಾರ ಪ್ರಾತಃಕಾಲ 9 ಗಂಟೆಯಲ್ಲಿ ವಿವಾಹಮಹೋತ್ಸವವನ್ನು ರಾಜಧಾನಿಯಲ್ಲಿರುವ ಸ್ವಗೃಹದಲ್ಲಿ ಅತಿವೈಭವದಿಂದ ನಡೆಯಿಸಿದರು. ಬೆಳಿಗ್ಗೆ ಲಗ್ನಕ್ಕೂ ರಾತ್ರಿ ಆರತಕ್ಷತೆಗೂ ದಯಮಾಡಿಸಿದ್ದ ಸ್ಥಳಪರಸ್ಥಳದ ಸರ್ಕಾರಿಯಧಿಕಾರಿಗಳು, ಅರಸುಮಕ್ಕಳು ಮ್ಯು|| ಕೌನ್ಸಿಲರುಗಳು, ಲಾಯರುಗಳು, ಪ್ರತಿನಿಧಿಸಭಾಮೆಂಬರುಗಳು, ವರ್ತಕರುಗಳು ಮೊದಲಾದವರುಗಳಿಗೆ ಮಿ|| ಹಂಸಾಹುಸೇನ್ ಸಾಹೇಬರವರೇ ಸ್ವತಃ ಪುಷ್ಪಾಹಾರಗಳನ್ನು ಹಾಕಿ ಫಲತಾಂಬೂಲಗಳನ್ನು ಕೊಡಿಸಿದರು. ಈ ಮಹೋತ್ಸವಕ್ಕಾಗಿ ಬೆಂಗಳೂರು ಚನ್ನಪಟ್ಟಣ ಮೊದಲಾದ ಸ್ಥಳಗಳಿಂದ ಅನೇಕ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ಲಗ್ನದ ಹಿಂದಣ ಸಾಯಂಕಾಲ ದಿವಾನರು ಚೀಫ್ ಸೆಕ್ರೆಟರಿಯವರು ಮತ್ತೆ ಕೆಲ ದೊಡ್ಡ ಅಧಿಕಾರಿಗಳು ಆಹ್ವಾನಿಸಲ್ಪಟ್ಟಿದ್ದು ದಿವ್ಯೌತಣದಿಂದ ಸತ್ಕರಿಸಲ್ಪಟ್ಟರಂತೆ. ಲಗ್ನದ ದಿವಸ 500 ಜನರಿಗೆ ಮೇಲ್ಪಟ್ಟು ಬಂಧುಮಿತ್ರವರ್ಗದವರಿಗೆ ಸುಖಭೋಜನಮಾಡಿಸಲ್ಪಟ್ಟಿತು. ಬಂದಿದ್ದ ಅತಿಥಿಗಳೆಲ್ಲರೂ ಮಿ|| ಹಂಸಾಹುಸೇನರವರು ಮಾಡಿದ ಆದರಾತಿಶಯದಿಂದ ಸಂತುಷ್ಟರಾಗಿ ಅವರನ್ನು ವಂದಿಸಿ ಮಿ|| ಸಫದರ್‌ಹುಸೇನ್ ದಂಪತಿಗಳಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯಾಗಲೆಂದು ಮಂಗಳಾಶಾಸನವನ್ನು ಮಾಡಿದರು.

ಶ್ರೀಚಾಮುಂಡೇಶ್ವರೀಪ್ರಸೀದತು.

ಶ್ರೀ ಚಿಕ್ಕಲಿಂಗರಾಜಾಭಿನಂದನಪದ್ಯಗಳು.

ವೃತ್ತ|| ಸಾರಜ್ಞ[illegible] |
[illegible] ||
ಶ್ರೀರಾಮಾಯಣ[illegible] |
[illegible]ಚಿಕ್ಕಲಿಂಗರಾಜ[illegible] ||೧||

ಕಂದ|| ರಾಮಾಯಣ[illegible] |
[illegible] |
[illegible] |
[illegible] ||೨||

ರಾಜಕವಿಭೂಷಣಾಂಕಿತ |
ರಾಜದ್ವಿರುದಪ್ರಶಸ್ತಿಯೊಡನವನೀಶಂ ||
ಭ್ರಾಜನ್ಮಣಿಹಾರಾಂಬರ |
ರಾಜಿಯನೀಚಿತ್ಕಲಿಂಗರಾಜಂಗಿತ್ತಂ ||೧||
ಬುಧಗರ್ವನಿಷದನಾನವ |
ನೊದವಿಸಿದೀತನವರೋಪಕೃತಿಪುಣ್ಯವೆಂತಾಂ ||
ಪದುಳದಿವರ್ಣಿಯನಾಂತಂ |
ತೊದವಿದಬಿರುದುಮಿವಿವಂಗೆಯೋಗ್ಯಂಜಗದೋಳ್ ||೨||
ಪಾಲಿರುವಾಗಳೆಹಬ್ಬಂ |
ಮೇಲೆನಿಪಂತೊಗೆದಪದವಿಸಿಂಸುಖಿವಿರ್ಗ ||
ಕಾಲದೊಳಿಸೈಥುವದೆಪುದ |
ನಾಲೋಚಿಸಿವಾಳ್ದನೀತನಂತುಪಕೃತಿಯಂ ||೩||
ನೃಪಸ್ನೆಹಧರ್ಮವಿಚಾರಾ |
ಧಿಪನಾಗಿಸಮಸ್ತಸುಕವಿಬುಧಾವಳಿಗಂ ||
ವಿಪುಲಸುರಭೂಜನಾದಿಗ |
ಮುಪಹತಿತಾನಿಲ್ಲದಂತೆರಂಜನೆಗೈವಂ ||೪||
ಶ್ರೀಯಂಚಿತಲಿಂಗರಸಂ |
ಗಾಯುಶ್ರೀಯಭಿವೃದ್ಧಿ ಸಿದ್ಧಿಯಂಸತತಂ ||
ಈಯುತಪೊರೆಗೆಶ್ವಾರಸ |
ತೋಯಧಿನಿವಾಧಿರಾಜಗೋತ್ರೆಯಮಿಲಿಂಗಂ ||೫||
ಜಯಮಕ್ಕೆಕೃಷ್ಣಭೂಪಂ |
ಗಯಮಕ್ಕೆಚಿರಾಯುಮಕ್ಕೆಭೂವಲಯಕ್ಕಾ ||
ಶಯಮೆನೆವುಳಿವೆಳೆಯಕ್ಕೆವಿ |
ನಯಭಕ್ತಿಗಳಿಳ್ಪುಬಾಳ್ಗೆಲೋಕವಿದಲ್ಲಂ ||೬||

ಪಂಡಿತ ಟಿ. ಎಂ. ಚಂದ್ರಶೇಖರಶಾಸ್ತ್ರಿ.
ತೆಲಿಗಿಮಠ, ದಾವಣಗೆರೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕಾರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ತಿರಸ್ಕೃತಲೇಖನಗಳು.

ಮ॥ ಗಳಾದ ಜಿ. ಕೆ. ರುದ್ರಾರ್ಯ, ಯಂ. ಸ. ಶಾಂತಪ್ಪಶೆಟ್ಟಿ ಮತ್ತು ಹಲ್ಲೂರು ಸಾಹುಕಾರ್ ಮುರುಗಶಿದ್ದಪ್ಪಶೆಟ್ಟಿ ಇವರುಗಳು— ಶ್ರೀಬಾಳೆಹೊನ್ನೂರು ಪೀಠಾಧಿಕಾರಿಗಳ ಚುನಾವಣೆಯ ವಿಚಾರವಾಗಿ ರಾಜಧಾನಿಯಲ್ಲಿ ವೀರಶೈವರೊಡ್ಡ ಮನುಷ್ಯರುಗಳಿಂದ ನಡಿಸಲ್ಪಟ್ಟ ಎರಡು ಸಭೆಗಳ ನಡವಳಿಕೆಗಳು, ಸಭಾಧ್ಯಕ್ಷರುಗಳಿಂದ ನಮ್ಮಲ್ಲಿಗೆ ಕಳುಹಲ್ಪಟ್ಟ ಪ್ರಕಾರ ಏಕಾವತ್ತಾಗಿ ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದರಿಂದ, ಅವುಗಳಲ್ಲಿರಬಹುದಾದ ನ್ಯೂನತೆಗಳನ್ನು ಆ ಅಧ್ಯಕ್ಷರುಗಳಿಗೆ ನೀವುಗಳೇ ಬರೆದು ಅವರುಗಳಿಂದ ಸರಿಪಡಿಸಿಕೊಳ್ಳಬಹುದಾಗಿದೆ.—ಸಂ.

ಹೊಸಪೇಟೆ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್.

ಈ ಗ್ರಾಮವು ತಾಲ್ಲೂಕಿನ ಮುಖ್ಯಸ್ಥಳವಿದ್ದು ಇಲ್ಲಿ ಹಾಗೂ ಈ ತಾಲ್ಲೂಕಿನಲ್ಲಿ ವೀರಶೈವ ಜನಾಂಗದವರ ವಸತಿಯಾದರೂ ವಿಶೇಷ ಇರುತ್ತದೆ. ಹೀಗಿದ್ದು ನಮ್ಮ ವೀರಶೈವಜನಾಂಗದವರಪೈಕಿ ಈವರೆಗೂ ರಾಜಕೀಯ ವಿದ್ಯೆಯಲ್ಲಿ ಒಬ್ಬರಾದರೂ ಉತ್ತೀರ್ಣರಾಗಿದ್ದಿಲ್ಲ. ಈ ವರುಷ ನಮ್ಮ ಸುದೈವದಿಂದ ಹೊಸಪೇಟೆ ನಿವಾಸಿಗಳಾದ ಸಾಲೂರು ಶ್ರೀ॥ ಶಿ. ಉದ್ದಾನಯ್ಯನವರೆಂಬುವವರು ಬಿ.ಎ., ಬಿ.ಎಲ್. ಪರೀಕ್ಷೆಯಲ್ಲಿ ಪಾಸಾಗಿಬಂದು ಸದ್ಯ ವಕೀಲಿ ಕೆಲಸವನ್ನು ಪ್ರಾರಂಭಮಾಡಿರುತ್ತಾರೆ. ಹೋದ ತಿಂಗಳು 21ನೇ ತಾರೀಖಿನ ದಿವಸ ಹೊಸಪೇಟೆಯ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್ (ಚುನಾವಣೆ) ಇದ್ದು ಚಿತ್ತವಾಡಿಗಿಯ ವಾರ್ಡಿಗೆ ಸದರಿ ಉದ್ದಾನಯ್ಯನವರು ಉಮೇದ್ವಾರರಾಗಿ ನಿಂತಿದ್ದರು. ಈ ತರುಣರಿಗೆ ನಿಷ್ಪಕ್ಷಪಾತಿಗಳಾದ ಅನೇಕ ಸ್ವಜನ ಪರಜನರು ಸಹಿತ ಸಂತೋಷದಿಂದ ತಮ್ಮ ತಮ್ಮ ಓಟುಗಳನ್ನು ಕೊಟ್ಟು ಪ್ರೋತ್ಸಾಹಿಸಿದರು. ಅದರಲ್ಲಿ ಕೆಲವು ಜನರು ತಮ್ಮ ಅಸೂಯಾಂಧತೆಯನ್ನು ವ್ಯಕ್ತಗೊಳಿಸಿದ್ದಲ್ಲದೆ ಅನೇಕ ಕೃತ್ಯಕಾರಸ್ಥಾನವನ್ನೆಸಗಿದರು. ಆದಾಗ್ಯೂ ದೈವಾನುಗ್ರಹದಿಂದ ಶ್ರೀ॥ ಶಿ. ಉದ್ದಾನಯ್ಯನವರೇ ಉತ್ತೀರ್ಣರಾಗಿ ಬಂದರೆಂದು ತಿಳುಹಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಈ ತರುಣರು ಇಂಥ ಸಾರ್ವಜನಿಕ ಕಾರ್ಯಗಳಲ್ಲಿ ಮುಕವರ್ಜಿಯಿಂದ ಕೆಲಸಮಾಡಿ ಜನರಸ್ತುತಿಗೆ ಪಾತ್ರರಾಗಿ ಇದಕ್ಕಿಂತಲೂ ಉನ್ನತವಾದ ಸ್ಥಾನವನ್ನು ಪಡೆಯತಕ್ಕ ಸಾಮರ್ಥ್ಯವನ್ನು ಜಗದೀಶನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಗುರುಭಕ್ತಕೇಸರಿ, ಚಿತ್ತವಾಡಿಗಿ ನಿವಾಸಿ.

ಸಾಗರ ತಾಲ್ಲೂಕು ಕೆಳದಿ.

ಈ ಕೆಳದಿಯ ಸಂಸ್ಥಾನ ಹಿರೇಮಠದಲ್ಲಿ ಪದ್ಧತಿಯಪ್ರಕಾರವಾಗಿ ವಿಜಯದಶಮಿಯ ಉತ್ಸವವು ಬಹುವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಈ ಕಾರ್ಯಕ್ಕಾಗಿ ತಳಿರುತೋರಣ ಮುಂತಾದವುಗಳಿಂದ ಅಲಂಕರಿಸಲ್ಪಟ್ಟ ಮಠವೂ, ಊರಿನಬೀದಿಗಳು ಶೋಭಿಸುತ್ತಿದ್ದುವು. ಶ್ರೀ॥ ಗೋಣಿಬೀಡು ಶ್ರೀ ಸ್ವಾಮಿಗಳೇ ಮುಂತಾದ ಶಿವಯೋಗಿಗಳ ಶಿವಾರ್ಚನೆಯು ವಾದ್ಯವೈಭವದೊಡನೆ ನೆರವೇರಿಸಲ್ಪಟ್ಟಿತು. ಮಧ್ಯಾಹ್ನದ ಗಣಾರಾಧನೆಯಾದನಂತರದಲ್ಲಿ ಈ ಪ್ರಾಂತದ ಅನೇಕ ಗ್ರಾಮಗಳ ಮುಖ್ಯಮುಖ್ಯರಾದ ವೀರಶೈವ ಮಹನೀಯರುಗಳು ಮಠಕ್ಕೆ ಸೇರಿದರು. ಈ ಸಂಸ್ಥಾನ ಪಟ್ಟಾಧ್ಯಕ್ಷರವರಾದ ಶ್ರೀ॥ ರೇವಣಸಿದ್ಧಸ್ವಾಮಿಗಳವರು ಸಕಲ ಭಕ್ತಸಂದಣಿಯ ಜಯಘೋಷದೊಡನೆ ಶುಭಪ್ರದವಾದ ಈ ಸಭೆಯಲ್ಲಿ ಶಿವಪುರಾಣದಲ್ಲಿನ ಶಿವಭಕ್ತಿ ಶಿವಪೂಜಾವಿಷಯಕವಾದ ಭಾಗವನ್ನು ಬಹುಸ್ವಾರಸ್ಯವಾಗಿ ಸಭಿಕರ ಮನಸ್ಸಿಗೆ ಆನಂದತೋರುವಂತೆ ವಿವರಣದೊಡನೆ ಅಪ್ಪಣೆಕೊಡಿಸಿದರು. ನಂತರ ಕನ್ಯಾಶುಲ್ಕನಿಷೇಧ, ವಿದ್ಯಾಪ್ರಸಾರ, ಐಕಮತ್ಯ, ಪ್ರಾಣಿದಯಾಪರತೆ, ಮುಂತಾದ ವಿಷಯಗಳಲ್ಲಿ ಮ॥ ಕಾಗೋಡು ಶಿವಲಿಂಗಪ್ಪನವರು, ಬರದವಳ್ಳಿ ಗುರಪ್ಪಗೌಡರು ಮುಂತಾಗಿ ಅನೇಕ ಜನರು ಉಪನ್ಯಾಸ ಮಾಡಿದರು. ಮಠದ ವಿಷಯಕವಾದ ಕೆಲವು ಸಂಗತಿಗಳಮೇಲೆ ನಿರ್ಧಾರವು ಮಾಡಲ್ಪಟ್ಟಿತು. ನಂತರ ಬಿರುದಾವಳಿಗಳಸಮೇತ ಪಲ್ಲಕ್ಕಿಯಲ್ಲಿ ಸ್ವಾಮಿಗಳವರ ಮೆರವಣಿಗೆಯೊಡನೆ ಸಕಲ ಭಕ್ತವೃಂದವೂ ಬನ್ನಿಮುಡಿಯುವ ಉದ್ದೇಶವಾಗಿ ದಯಮಾಡಿಸಿ ಪುನಃ ಮಠಕ್ಕೆ ಬಂದು ಸಿದ್ಧವಾಗಿದ್ದ ಸಿಂಹಾಸನದಲ್ಲಿ ಪಟ್ಟಾಧ್ಯಕ್ಷರವರು ಮುಹೂರ್ತಮಾಡಿದನಂತರ ಸಕಲ ಭಕ್ತರೂ ಸಾಷ್ಟಾಂಗಪ್ರಣಾಮಗಳನ್ನು ಮಾಡಿದರು. ನಂತರ ಮತಸಂಬಂಧ ಎಂದರೆ ಗುರು, ಲಿಂಗ, ಜಂಗಮ, ವಿಷಯಕವಾದ ಉಪನ್ಯಾಸಗಳು ಮುಂತಾದವು ನಡೆದು ಜಯಮಂಗಳಪದಗಳೊಡನೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಓರ್ವಪ್ರೇಕ್ಷಕ.

ನಿಷೇಧಪ್ರದರ್ಶನ ಜಾಹೀರಸಭೆಯು.

ಕಲಬುರ್ಗೆಯಲ್ಲಿಯ ಮುಸಲ್ಮಾನರು ಶ್ರಾವಣ ತಿಂಗಳಲ್ಲಿ ಮಾಡಿದ ಅತ್ಯಾಚಾರವನ್ನು ನಿಷೇಧಿಸುವದಕ್ಕಾಗಿ ತಾರೀಖು 29-9-1924 ಇಸ್ವಿಯ ಸಂಜೆಯ 5 ಘಂಟೆಗೆ ಶ್ರೀಮದ್ವೀರನಲಿಂಗಚರಚಕ್ರವರ್ತಿಗಳಾದ ಕೊಣ್ಣೂರ ಮಹಾಸ್ವಾಮಿಗಳವರ ಅಪ್ಪಣೆಯಮೇರೆಗೆ ಪ್ರಣವಸ್ವರೂಪಿಗಳೂ, ಧರ್ಮಾಭಿಮಾನಿಗಳೂ ಆದ ಶ್ರೀಶಂಕರಲಿಂಗ ಚರಮೂರ್ತಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಯು ಶ್ರೀಕ್ಷೇತ್ರ ಮರ್ಗಮಠದಲ್ಲಿ ನೆರವೇರಿತು. ಸಭೆಗೆ ಕೊಣ್ಣೂರ, ಗಿರಣಿ, ಸಾವಳಗಿಯಿಂದ ಜನರು ಬಂದಿದ್ದರು. ಮಿ॥ ಮಲ್ಲಿನಾಥ ಶಾಸ್ತ್ರಿಗಳವರು, ಮಿ॥ ಭೂಪಮೋಹರರವರು, ಮಿ॥ ಗದ್ದಿದ ಇಂಗ್ಲೀಷಶಾಲಾ ಮಾಸ್ತರರು, ಮಿ॥ ಶಿದ್ದಣ್ಣಕಳಮಾಸ್ತರರು ಕಲಬುರ್ಗೆಯ ಅತ್ಯಾಚಾರದ ವಿವೇಚನ, ಧರ್ಮಪರಿಪಾಲನೆ, ಧರ್ಮಗುರುಗಳ ಕರ್ತವ್ಯ, ಕಲಬುರ್ಗೆಯ ವಿಚಾರಣಾ ಕಮಿಟಿಯ ಪರಿಸ್ಥಿತಿ ಮೊದಲಾದವುಗಳ ವಿಷಯವಾಗಿ ಸುಲಲಿತವಾಗಿ ಹೇಳಿದರು. ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

1. ಹಿಂದೂಗಳ ಪೂಜ್ಯ ದೇವಾಲಯಗಳನ್ನು ಕುರಿತು ಕಲಬುರ್ಗೆಯಲ್ಲಿ ದುರಭಿಮಾನಿಗಳಾದ ಮುಸಲ್ಮಾನರು ಮಾಡಿದ ಅತ್ಯಾಚ್ಯಾರವನ್ನು ಈ ಸಭೆಯು ತೀವ್ರನಿಷೇಧಿಸುವದು. 2. ಈಗಿದ್ದ ಕಮಿಟಿಯಿಂದ ಹಿಂದೂಗಳಿಗೆ ಯೋಗ್ಯನ್ಯಾಯವು ದೊರೆಯುವ ಸಂಭವವಿಲ್ಲ, ಆದ್ದರಿಂದ ನೈಜಾಮ ಸಾಹೇಬ ಬಹಾದ್ದೂರರವರು ಹಿಂದೂಗಳಿಗೆ ನ್ಯಾಯದೊರೆಯುವಂತೆ ಕಮೀಟಿಯ ವ್ಯವಸ್ಥೆ ಮಾಡಬೇಕೆಂದು ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. 3. ಕಲಬುರ್ಗೆಯಂಥ ಧಾರ್ಮಿಕ ಅತ್ಯಾಚ್ಯಾರದ ಕೃತ್ಯಗಳಲ್ಲಿಯೂ, ಧರ್ಮಗುರುಗಳು ಧರಿಸಿದ ಮೌನವ್ರತವನ್ನು ಕಂಡು ಸಭೆಗೆ ವಿಷಾದವೆನಿಸುವದು. ಅವರುಗಳು ಇನ್ನಾದರೂ ಜಾಗ್ರತರಾಗಬೇಕೆಂದು ವಿನಂತಿಯು. ಮೊದಲಿನ 2 ಠರಾವುಗಳನ್ನು ನಾಮದಾರ ಗವ್ಹರ್ನರ್ ಜನರಲ್ ಇನ್ ಕೌನ್ಸಿಲ್‌ರವರಿಗೆ ಮತ್ತು ನಿಜಾಮ ಸಾಹೇಬರವರಿಗೆ ತಂತಿಯಿಂದ ತಿಳಿಸುವದರಲ್ಲಿ ಬಂತು. ಮಿ॥ ಗದ್ದಿದ ಮಾಸ್ತರರು ಅಧ್ಯಕ್ಷರ ಅಭಾರಮನ್ನಣೆಯನ್ನು ಮಾಡಿದ ಮೇಲೆ ಜಯಜಯಕಾರದೊಡನೆ ಸಭಾಕಾರ್ಯವು ಸಮಾಪ್ತಿಯಾಯಿತು.

ಓರ್ವಪ್ರೇಕ್ಷಕ.

ಮಳವಳ್ಳಿಟೌನ್ ವಿದ್ಯಮಾನ.

ಈಗ್ಗೆ 8-10 ದಿನಗಳಿಂದ ಕೊಂಚ ಮಳೆ ಆಗಿದೆ. ಇನ್ನೂ 1-2 ಹದ ಮಳೆಬಿದ್ದಲ್ಲಿ ಪೈರುಗಳಿಗೆ ಅನುಕೂಲವಾಗುತ್ತೆ. ಈ ಮಾಹೆ 14 ನೇ ತಾರೀಕಿನ ಸಂಪದಭ್ಯುದಯ ಪತ್ರಿಕೆಯಲ್ಲಿ ಇಲ್ಲಿನ ಮುನಿಸಿಪಲ್ ವೈಸ್‌ಪ್ರಸಿಡೆಂಟರ ಚುನಾವಣೆ ವಿಷಯದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ವ್ಯಾಜ್ಯವು, ಹಿಂದೆ ಇಲ್ಲಿ ಅಮಲ್ದಾರರಾಗಿದ್ದು ನಿಷ್ಪಕ್ಷಪಾತಿಗಳೂ ಜನಾನುರಾಗಿಗಳೂ ಎಂದು ಪ್ರಸಿದ್ಧಿಯನ್ನು ಪಡೆದಿದ್ದ ಮ॥ ಶಿದ್ಧರಾಮಪ್ಪನವರ ಕಾಲದಲ್ಲಿ ಉದ್ಭವವಾಯಿತು ಎಂದು ಬರೆದಿರುವದನ್ನು ನೋಡಲು ಬಹಳ ವಿಷಾದವಾಗುತ್ತದೆ. ಒಂದು ವೇಳೆ ಮ॥ ಶಿದ್ಧರಾಮಪ್ಪನವರ ಕಾರ್ಯದಕ್ಷತೆ ಜನಾನುರಾಗ ನಿಷ್ಪಕ್ಷಪಾತ ಇವುಗಳ ವಿಚಾರದಲ್ಲಿ ಅನುಮಾನಪಟ್ಟವರು ಈ ಕೆಳಗೆ ಕಂಡ ವಿಷಯಗಳನ್ನು ಗಮನಿಸಬೇಕು. ಮ॥ ಶಿದ್ಧರಾಮಪ್ಪನವರು ಮಳವಳ್ಳಿಗೆ ಅಮಲ್ದಾರರಾಗಿ ಬಂದಾಗ ಆಕ್ಟ್ರಾಯಿ ಉತ್ಪತ್ತಿ ತಿಂಗಳೊಂದಕ್ಕೆ 120-150 ರೂಪಾಯಿಗಳು ಇದ್ದದ್ದು ಇವರು ಟ್ರಾನ್ಸ್‌ಫರ್ ಆಗಿ ಹೋಗುವವರಿವಿಗೆ ಪ್ರತಿತಿಂಗಳಿನಲ್ಲೂ 500 ರೂಪಾಯಿನಿಂದ 600 ರೂಪಾಯಿವರಿವಿಗೆ ಏರಿತ್ತು. ಈಗಿರತಕ್ಕ ಅಮಲ್ದಾರ್ ಮ॥ ವೈ. ಶ್ರೀಕಂಠಯ್ಯನವರು ನಮ್ಮ ಟವನ್ನಿಗೆ ಕಾಲು ಊರಿದ ದಿನದ ಲಾಗಾಯಿತು ಡಿಟೊ ಉತ್ಪತ್ತಿ ತಿಂಗಳಿಗೆ 150-200 ರೂಪಾಯಿಗಿಳಿಯಿತು ಮತ್ತು ಮೊಹತರ್ಫಾ ವಸೂಲಿವಿಚಾರ ಹಿಂದೆ ಇದ್ದದ್ದಕ್ಕೆ ಹಾಲಿ ಈಗ ಇರತಕ್ಕದ್ದನ್ನು ಹೋಲಿಸಿ ನೋಡಿದರೆ ವ್ಯಕ್ತವಾಗುತ್ತೆ. ಮ॥ ಶಿದ್ಧರಾಮಪ್ಪನವರ ನಿಷ್ಪಕ್ಷಪಾತದ ವಿಚಾರ ಅಮಲ್ದಾರರಿಂದ ಮೈಸೂರು ಡಿಸ್ಟ್ರಿಕ್ಟು ಪೊಲೀಸ್ ಸೂಪರಿಂಟೆಂಡೆಂಟರಾಗಿ ಬಡ್ತಿಹೊಂದಿ ಹೋಗಿರುವದು ಮತ್ತೊಂದು ನಿದರ್ಶನವಾಗಿರುತ್ತೆ. ಮೊದಲು ವೈಸ್‌ಪ್ರೆಸಿಡೆಂಟ್ ಚುನಾವಣೆ ಆದಾಗ ಅಫಿಸಿಯಲ್ಸು ಓಟು ಕೊಡಕೂಡದು ಎಂದು ರೂಲ್ಸ್‌ನಲ್ಲಿ ವಿಶದವಾಗಿದ್ದರೂ, ತಮ್ಮ ಸ್ವಜಾತೀಯರಾದ ತಿಮ್ಮಣ್ಣಯ್ಯನವರೇ ಉತ್ತೀರ್ಣರಾಗಬೇಕೆಂಬ ದುರಾಸೆಯು ಮತ್ತು ಬ್ರಾಹ್ಮಣ ಬ್ರಾಹ್ಮಣೇತರರೆಂಬ ಬಿನ್ನಭಾವನೆಯು, ಅಮಲ್ದಾರರಲ್ಲಿ ತುಂಬಿತುಳುಕುತ್ತಿದ್ದದ್ದರಿಂದ, ಬ್ರಾಹ್ಮಣೇತರ ಇಬ್ಬರು ಮುನಿಸಿಪಲ್ ಮೆಂಬರುಗಳು ರೂಲ್ಸಿಗೆ ವಿರೋಧವಾಗಿ ಅಫಿಸಿಯಲ್ಸು ಓಟುಕೊಡಕೂಡದೆಂದು ನಿರೋಧಿಸಿದಾಗ್ಯೂ, ತಿಮ್ಮಣ್ಣಯ್ಯನವರಿಗೇನೆ ಓಟುಕೊಟ್ಟಿದ್ದಾರಲ್ಲವೇ? ರೂಲ್ಸಿನಲ್ಲಿ ವಿಶದವಾಗಿ ಇದ್ದರೂ ಅಮಲ್ದಾರರು ವಿರೋಧವಾಗಿ ಓಟು ಮಾಡಿರುವದು ನೋಡಿದರೆ ಅವರು ತಮ್ಮ ಜವಾಬ್ದಾರಿ ಅರಿತಿಲ್ಲವೊ? ಅಥವಾ ಜಾತಿದ್ವೇಷದಿಂದ ಓಟುಮಾಡಿದರೊ? ಇದನ್ನು ವಾಚಕರೇ ಯೋಚಿಸಬೇಕು. ಇಂತಾ ಅನನುಭವಿಗಳಾದವರನ್ನು ಜವಾಬ್ದಾರಿ ಆಫೀಸುಗಳಿಂದ ಸರ್ಕಾರದವರು ಜಾಗ್ರತೆಯಾಗಿ ವಜಾಮಾಡದೆ ಇದ್ದರೆ ಪ್ರಜಾಸಮುದಾಯಕ್ಕೆ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗುವದರಲ್ಲಿ ಸಂದೇಹವಿಲ್ಲ.

ನಿಷ್ಪಕ್ಷಪಾತಿ.

ವೀರಶೈವಮಹಾಸಭೆಯು.

ಯಾರ ಆಶೀರ್ವಾದದಿಂದ ಇಡೀ ವೀರಶೈವಸಮಾಜಕ್ಕೆ ವೀರಶೈವಮಹಾಸಭೆಯು ಕಲ್ಪತರುವಾಗಿ ಜನಿಸಿತೋ ಅಂಥಾ ಸಾಕ್ಷಾತ್ ನಿರಂಜನಮೂರ್ತಿಗಳಾದ ಶ್ರೀ ಹಾನಗಲ್ ಕುಮಾರಮಹಾಸ್ವಾಮಿಗಳ ವಿರಕ್ತವರ್ಗವನ್ನು ಹಳಿಯಲು ಬೀರೂರಿನಲ್ಲಿ ನೆರದಿದ್ದ ಮಹಾಸಭೆಯಲ್ಲಿ ಪ್ರಯತ್ನಿಸಲ್ಪಟ್ಟುದರಮೇಲೆ ಆ ತಪೋನಿಷ್ಠರ ತಪವಿಶೇಷದಿಂದ ಕಲ್ಪತರುವು ಬೂರಗದ ಮರವಾಗಿ ಬೀರೂರಿನಲ್ಲಿ ಬೇರುಬಿಟ್ಟುಕೊಂಡು ನಿಂತಿತು. ಇದರ ಬೇರನ್ನು ಬಿಡಿಸಿ ಮುಂದಕ್ಕೆ ಸಾಗಿಸಿಕೊಂಡು ಬರಬೇಕೆಂದು ಮೈಸೂರಿನವರೂ, ಹಾಂಸಭಾವಿಯವರೂ ಬಹಳ ಸಾಹಸಮಾಡಿದಾಗ್ಯೂ ಸಾಧ್ಯವಾಗದೆ ಹೋದುದನ್ನು ನಮ್ಮ ವೀರಶೈವಸಮಾಜಕ್ಕೆ ತಿಲಕಪ್ರಾಯರಾಗಿರುವ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ಬಹಳವಾಗಿ ಚಿಂತಿಸಿ ಅದನ್ನು ಬೀರೂರಿನಿಂದ ಹೇಗಾದರೂ ಬೇರುಬಿಡಿಸಿ ಮುಂದಕ್ಕೆ ಸಾಗಿಸಿ ಪೂರ್ವಸ್ಥಿತಿಗೆ ತರಬೇಕೆಂದು ಸಂಕಲ್ಪಮಾಡಿ ಈ 1924 ನೇ ಡಿಸೆಂಬರ್ ತಿಂಗಳ ಕಡೆಯಲ್ಲಿ ಮಹಾಸಭೆಯನ್ನು ಕೂಡಿಸಬೇಕೆಂದು ನಿರ್ಧರಿಸಿ ಅದಕ್ಕಾಗಿ ತಕ್ಕ ಪ್ರಯತ್ನ ನಡಿಸಿರುವರೆಂದೂ, ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತಮಂಡಳವನ್ನು ಏರ್ಪಡಿಸಿರುವರೆಂದೂ ಸಮಸ್ತ ವೀರಶೈವರೂ ಈ ಸ್ಟಾರ್ ಪತ್ರಿಕೆಯದ್ವಾರ ತಿಳಿದು ಸಂತೋಷಪಟ್ಟು ದಿ॥ ಬ॥ ಶೆಟ್ಟರನ್ನು ವಂದಿಸುತ್ತಿರುವರು. ಈಮಧ್ಯೆ ವೀರಶೈವಮಹಾಸಭೆಯನ್ನು ಕೂಡಿಸಬೇಕೆಂಬ ಕಾಲದಲ್ಲೇ ಬೆಳಗಾವಿನಲ್ಲಿ ಕೂಡುವ ರಾಷ್ಟ್ರೀಯ ಸಭೆಗೆ ಅನೇಕ ವೀರಶೈವರು ಹೋಗುವ ಸಂಭವವಿರುವದರಿಂದ, ಆಕಾಲದಲ್ಲಿ ಬಿಟ್ಟು ಬೇರೆಕಾಲ ಅಂದರೆ ಮುಂದಿನ ಬೇಸಿಗೆಯ ರಜಾಕಾಲದಲ್ಲಿ ವೀರಶೈವಮಹಾಸಭೆಯನ್ನು ಕೂಡಿಸುವದು ಒಳ್ಳೆಯದು, ಹಾಗಲ್ಲದೆ ಈಗಲೇ ಮಾಡುವದಾದರೆ ಸಭೆಕೂಡಿಸಿದವೆಂದಂತಾಗುವದಲ್ಲದೆ ಪ್ರಯೋಜನವಾಗುವದಿಲ್ಲ. ವಗೈರೆಯಾಗಿ ಧಾರವಾಡದ ವಿಜಯ ಮೊದಲಾದ ಕೆಲವು ಉತ್ತರದೇಶದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ವೀರಶೈವಸಮಾಜದಲ್ಲಿ ಅನೈಕಮತ್ಯವೂ, ದ್ವೇಷಾಸೂಯೆಗಳೂ ಹುಟ್ಟಿ ವಿಶೇಷ ಅನರ್ಥವಾಗುತ್ತಿರುವ ಈ ಸಮಯದಲ್ಲಿ ಮಹಾಸಭೆಯನೆಸದಿಂದ ನಾನಾ ದೇಶದ ವೀರಶೈವಪ್ರಮುಖರು ಅತಿ ಜಾಗ್ರತೆಯಾಗಿ ಒಂದುಕಡೆ ಸೇರಿ ಸಮಾಜಬಾಂಧವರು ಪರಸ್ಪರದ್ವೇಷಾಸೂಯೆಗಳನ್ನು ಬಿಟ್ಟು ಐಕಮತ್ಯದಿಂದ ನಡೆದುಕೊಳ್ಳುವ ಉಪಾಯವನ್ನು ಕಂಡುಹಿಡಿಯಲು ಸಾಧಕವಾಗುವಂತೆ ಬೆಂಗಳೂರಿನ ವೀರಶೈವಬಂಧುಗಳು ಮಹಾಸಭೆಯನ್ನು ತಮ್ಮಲ್ಲಿ ಕೂಡಿಸಲು ಏರ್ಪಡಿಸಿ ಸಮಾಜಕ್ಕೆ ವಿಶೇಷ ಉಪಕಾರವನ್ನು ಮಾಡಿರುತ್ತಾರೆ. ಈ ಸಮಯದಲ್ಲಿ ಪ್ರತಿಯೊಬ್ಬ ವೀರಶೈವನೂ ತನ್ನ ಸಮಾಜಾಭಿವೃದ್ಧಿಯಮೇಲೆ ಪೂರ್ಣ ಅಭಿಮಾನವಿಟ್ಟು ಯಾವ ಕೆಲಸವಿದ್ದಾಗ್ಯೂ ಬಿಟ್ಟು ಸಭಾಕಾಲಕ್ಕೆ ಬೆಂಗಳೂರಿಗೆ ಬಂದು ಯಥಾಶಕ್ತಿ ಸೇವೆಮಾಡತಕ್ಕದ್ದು ಮುಖ್ಯ ಧರ್ಮವಾಗಿದೆ. ಮನುಷ್ಯನು ತನ್ನ ಮತ್ತು ತನ್ನ ಸಮಾಜದ ಕಲ್ಯಾಣವನ್ನು ಮೊದಲುಮಾಡಿ ಆನಂತರ ಅನ್ಯರ ಕಲ್ಯಾಣಮಾಡಲು ಎಣಿಸುವದು ಅವನ ಧರ್ಮವಾಗಿದೆ. ಶಾಸ್ತ್ರವಚನವಾದರೂ ಆ ಪ್ರಕಾರವಾಗಿಯೇ ಇರುತ್ತದೆ. ಹೀಗಿದ್ದರೂ ತನ್ನ ಸಮಾಜಸೇವೆಯನ್ನು ಅಲಕ್ಷಿಸಿ ಬೇರೆ ಕಾರ್ಯದಲ್ಲುದ್ಯುಕ್ತನಾಗುವುದರಿಂದ, ಮನೆದೇವರನ್ನು ಉಪವಾಸವಿರಿಸಿ ಮಾರಮ್ಮನಿಗೆ ತಂಬಿಟ್ಟಿನ ಆರತಿಯನ್ನು ಮಾಡಿದಂತಾಗುತ್ತದಲ್ಲವೆ? ಈ ಮಹಾಸಭೆಯನ್ನು ಮೈಸೂರಿನವರು ಮಾಡಬೇಕೆಂದಾಗ ಹಾಂಸಭಾವಿಯವರು ಅಡ್ಡಬಂದದ್ದರಿಂದ ಮೊದಲನೆಯ ವಿಘ್ನವಾಯಿತು; ಹಾಂಸಭಾವಿಯವರು ಎತ್ನಿಸಿದಾಗ ರೋಗೋಪದ್ರವದ ನೆಪವುಂಟಾಗಿ ಎರಡನೆ ವಿಘ್ನವುಂಟಾಯಿತು. ಈಗ ಬೆಂಗಳೂರಿನವರು ಪ್ರಯತ್ನಿಸಿರುವಾಗ್ಗೆ ರಾಷ್ಟ್ರೀಯಮಹಾಸಭೆಯ ಅಡಚಣೆಯನ್ನೊಡ್ಡುವದರಿಂದ ಮೂರನೆಯ ವಿಘ್ನವಾಗುವುದು ಅಂದರೆ ಮಹಾಸಭೆಯು ನೆರೆಯಲು ನಿರಂತರ ವಿಘ್ನವಾಗುವದೆಂದು ಹೇಳಬೇಕಾದ್ದಿಲ್ಲ. ಸಮಾಜವು ಕಳೆದುಕೊಂಡಿರುವ ಕಣ್ಣನ್ನು ಮರಳಿ ಬರಮಾಡಿಕೊಳ್ಳುವ ಈ ಸುಸಮಯವನ್ನು ಹೋಗಲಾಡಿಸಿ ಇಡೀಸಮಾಜವೇ ಪೇಚಾಡುವಂತೆ ನಮ್ಮ ಉತ್ತರದೇಶದ ವೀರಶೈವಬಂಧುಗಳು ಮಾಡುವದು ಜಾಣತನವಲ್ಲ. ಆದ್ದರಿಂದ ಅವರುಗಳು, ಅನೈಕಮತ್ಯದಿಂದಲೂ ಅಂತಃಕಲಹದಿಂದಲೂ ಅಧೋಗತಿಗಿಳಿಯುತ್ತಿರುವ ತಮ್ಮ ಸಮಾಜಸುಧಾರಣೆಯ ವಿಚಾರದಲ್ಲಿ ಗಮನವಿಟ್ಟು, ಪ್ರತಿವರ್ಷದಲ್ಲೂ ಯಾವದಾದರೂ ಒಂದು ಕಡೆಯಲ್ಲಿ ನಿರ್ವಿಘ್ನವಾಗಿನಡಿಯುತ್ತಿರುವ ರಾಷ್ಟ್ರೀಯಸಭೆಯ ಸೇವೆಯನ್ನು ಮಾಡಲು ಅವಕಾಶವಿರುವದರಿಂದ ಈವೇಳೆ ಅಸ್ತಿತ್ವಕ್ಕೆ ಬರಲಿಕ್ಕಿರುವ ವೀರಶೈವ ಮಹಾಸಭೆಯು ಬೆಂಗಳೂರಿನ ವೀರಶೈವಬಂಧುಗಳು ನಿರ್ಧರಿಸಿರುವಂತೆ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಿರ್ವಿಘ್ನವಾಗಿ ನಡೆಯುವಂತೆಮಾಡಿ ಆ ಕೀರ್ತಿಯನ್ನು ತಮ್ಮ ಪಾಲಿಗೆ ತಂದುಕೊಳ್ಳುವವರಾಗಲೆಂದು ಕೋರುತ್ತೇನೆ. ಹಾಗಲ್ಲದೆ ಸಭೆಯು ನಡೆಯದಂತೆ ಮುಷ್ಕರಮಾಡುವದಾದಲ್ಲಿ ಕೈಗೆಬಂದ ತುತ್ತು ಬಾಯಿಗೆಬರದಂತಾಗಿ ಇಡೀಸಮಾಜವೇ ಪೇಚಾಡುವಂತಾಗುವುದರಲ್ಲಿ ಖಂಡಿತವಾಗಿಯೂ ಸಂಶಯವಿಲ್ಲ.

ಮಹಾಸಭಾಭಿಮಾನಿ.

ಕ್ರೈಸ್ತರ ಶುದ್ಧೀಕರಣ.

ಕಳೆದ 15 ನೇ ತಾ॥ ಬುಧವಾರ ನಂಜನಗೂಡು ತಾಲ್ಲೂಕು ಕಿರಗುಂದದ ಗ್ರಾಮದಲ್ಲಿ ಕ್ರೈಸ್ತರ ಶುದ್ಧೀಕರಣದ ಒಂದು ನವೀನಕಾರ್ಯವು ನಡೆಯಿತು. ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಿಕೊಳ್ಳಲ್ಪಟ್ಟಿದ್ದ ಮನೆಯನೆಂಬಾತನನ್ನು ಸಂಸಾರಸಮೇತ ಆತನ ಮನಃಪೂರ್ವಕವಾಗಿಯೂ ಸುತ್ತುಮುತ್ತಲಿನ ಸುಮಾರು 15-20 ಗ್ರಾಮದ ಮುಖಂಡರುಗಳ ಅನುಮತಿಯಿಂದಲೂ ಪುನಃ ಹಿಂದೂಮತಕ್ಕೆ ಸೇರಿಸಿಕೊಳ್ಳಲಾಯಿತು.

ಇದೇ ತಿಂಗಳು 1 ನೇ ತಾ॥ ನಮ್ಮ ಗ್ರಾಮರಕ್ಷಣಾಸಭೆಗೆ ಮೇಲ್ಕಂಡ ಮನೆಯನು ಅರ್ಜಿಯನ್ನು ಬರೆದು ಅದರಲ್ಲಿ ತಾನು ಕ್ರೈಸ್ತ ಪಾದ್ರಿಗಳಿಂದ ಹಣವನ್ನು ಕೊಡುತ್ತೇವೆಂಬ ಭರವಸೆಯಿಂದಲೂ, ಅವನಿಗೆ ಸಂಘದಲ್ಲಿ ಉತ್ತಮತರದ ಗೌರವವು ದೊರೆಯುವಂತೆ ಮಾಡುವುದಾಗಿಯೂ ಇವೇ ಮುಂತಾದ ಆಸೆಗಳಿಂದ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟನೆಂಬದಾಗಿಯೂ, ಆಶ್ರಯದಿಂದ ಇವನ ಕೋರಿಕೆಯು ಈಡೇರದೆ, ಈಗ ಅನೇಕ ವಿಧವಾದ ತೊಂದರೆಗಳಿಗೆ ಗುರಿಯಾಗಿರುವುದರಿಂದಲೂ, ತನ್ನನ್ನು ಪುನಃ ತಮ್ಮ ಜಾತಿಗೆ ಸೇರಿಸುವಂತೆ ಮಾಡಿಕೊಡಬೇಕೆಂದೂ ಪ್ರಾರ್ಥಿಸಿದನು. ಅದರಂತೆ ನಾನು ಈ ವಿಷಯವನ್ನು ಪರಿಶೀಲಿಸಿ ಅನೇಕ ಗ್ರಾಮಗಳಿಗೆಹೋಗಿ ಅಲ್ಲಿನ ಮುಖಂಡರುಗಳಕೂಡ ಮಾತನಾಡಿದ್ದರಲ್ಲಿ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟಿದ್ದ ಪಂಚಮರನ್ನು ಪುನಃ ಜಾತಿಗೆತೆಗೆದುಕೊಳ್ಳುವುದಕ್ಕೆ ಅವರೆಲ್ಲರೂ ಸಮ್ಮತಿಸಿದರು.

ಸುಮಾರು ಒಂದೂವರೆ ವರ್ಷಗಳ ಹಿಂದೆ ರೆವರೆಂಡ್ ಮಿ॥ ಸಾದೇಸಾಹೇಬರವರು ಕಿರಗುಂದದಗ್ರಾಮಕ್ಕೆ ಬಂದಿದ್ದಾಗ ಅಲ್ಲಿನ ಪ್ರಜೆಗಳಿಗೆ ಒಂದು ಉಪನ್ಯಾಸವನ್ನುಮಾಡಿ, ಅದರಲ್ಲಿ ಹಿಂದೂಮತವನ್ನು ಅನೇಕ ವಿಧವಾಗಿ ದೂಷಿಸಿ, ಕ್ರೈಸ್ತಮತವನ್ನು ಶ್ಲಾಘಿಸಿ, ನಮ್ಮ ಆಚಾರವ್ಯವಹಾರಗಳನ್ನು ಖಂಡಿಸಿ ವಿಗ್ರಹಾರಾಧನೆ, ನಾಮಧಾರಣೆ, ಶಿಖಾಧಾರಣೆ ಮುಂತಾದ ಆರ್ಯಪದ್ಧತಿಗಳನ್ನು ತಿರಸ್ಕರಿಸಿ, ಪಂಚಮರು ಕ್ರೈಸ್ತಮತಕ್ಕೆಸೇರಿದ ಮಾತ್ರದಿಂದಲೇ ಅವರಿಗೆ ಸಕಲ ಸನ್ಮಾನಗಳುಂಟಾಗಿ, ಗ್ರಾಮದ ಎಲ್ಲಾ ಬೀದಿಗಳಲ್ಲಿಯೂ ಓಡಾಡುವುದಕ್ಕೂ ಮತ್ತು ಇತರ ವಿಧವಾದ ಸಾಂಘಿಕ ಗೌರವಗಳನ್ನು ಪಡೆಯುವುದಕ್ಕೂ ಅನುಕೂಲವಾಗುವುದೆಂದು ಆಶತೋರಿಸಿ, ದುರ್ಬೋಧನೆಯನ್ನುಮಾಡಿದ್ದರು. ಈ ದುರ್ಬೋಧನೆಯಿಂದ ಸುಮಾರು 19 ಜನ ಅಜ್ಞರು ಮರುಳುಮಾಡಲ್ಪಟ್ಟು ಒಡನೆಯೇ ಕ್ರೈಸ್ತಮತಕ್ಕೆಸೇರಿಕೊಂಡರು. ಆ ಪೈಕಿ ಮೇಲ್ಕಂಡ ಮನೆಯನು ಮತ್ತು ಅವನ ಸಂಸಾರವೂ ಸೇರಿಸಲ್ಪಟ್ಟಿದ್ದರು. ಮನೆಯನಿಗೆ ಸುನಂದನೆಂಬ ನಾಮಧೇಯವೂ, ಇತರರುಗಳಿಗೂ ಅದೇ ವಿಧವಾದ ಬೇರೆಬೇರೆ ಹೆಸರುಗಳೂ ಕೊಡಲ್ಪಟ್ಟವು. ಅವನತಲೆ ಕ್ರಾಪ್‌ಮಾಡಲ್ಪಟ್ಟಿತು. ಪಾದ್ರಿಗಳ ಪದ್ಧತಿಪ್ರಕಾರ ಶಿಖಾಖಂಡನ, ಜ್ಞಾನಸ್ನಾನವೇ ಮುಂತಾದವುಗಳೊಡನೆ ಮನೆಯನು ಕ್ರೈಸ್ತಮತಕ್ಕೆಸೇರಿಸಲ್ಪಟ್ಟನು. ಉತ್ತರೋತ್ತರ ಸುನಂದನು ನಿರೀಕ್ಷಿಸಿಕೊಂಡಿದ್ದ ಯಾವ ಮಹತ್ಪ್ರಯೋಜನವೂ ಉಂಟಾಗದೆ ಅನೇಕ ವಿಧವಾದ ತೊಂದರೆಗಳೇ ಪ್ರಾಪ್ತವಾದುದರಿಂದ ತನ್ನ ಪೂರ್ವಸ್ಥಿತಿಯನ್ನೇ ಅವಲಂಬಿಸಬೇಕೆಂದು ಮನಸ್ಸನ್ನುಮಾಡಿ ಮೇಲ್ಕಂಡ ಪ್ರಕಾರ ಈ ಸಭೆಗೆ ಅರ್ಜಿಯನ್ನು ಹಾಕಿದನು. ಈತನನ್ನು ಶುದ್ಧಿಮಾಡಿ ಸ್ವಜಾತಿಗೆಸೇರಿಸುವುದಕ್ಕಾಗಿ ಸುತ್ತುಮುತ್ತಲಿನ 15-20 ಗ್ರಾಮದಪ್ರಜೆಗಳಿಂದಕೂಡಿದ ಒಂದು ಸಭೆಯು ಕಿರುಗುಂದದಗ್ರಾಮದಲ್ಲಿ ಕಳೆದ 15ನೇ ತಾ॥ ಬುಧವಾರದಿವಸ ಸೇರಿತ್ತು. ಆ ಕಾಲದಲ್ಲಿ ತಾಲ್ಲೂಕು ಅಮಲ್ದಾರರವರೂ, ಪೊಲೀಸ್ ಇನ್ಸ್‌ಪೆಕ್ಟರವರೂ, ತಾಲ್ಲೂಕು ಬೋರ್ಡು ವೈಸ್‌ಪ್ರೆಸಿಡೆಂಟರವರೂ, ಡಾಕ್ಟರವರೂ ಮತ್ತು ಮ॥ ಬಿ. ಎಸ್. ನಾಗೇಶರಾಯರವರೂ ಸಹ ದಯಮಾಡಿಸಿದ್ದರು. ಮೈಸೂರಿನ ಶ್ರೀಮಾನ್ ಗೋವಿಂದಾಚಾರ್‌ಸ್ವಾಮಿಗಳವರು ನನ್ನ ಪ್ರಾರ್ಥನೆಯಂತೆ ಅಲ್ಲಿಗೆ ದಯಮಾಡಿಸಿದ್ದರು. ಅನಂತರ ಅಲ್ಲಿ ಒಂದು ಶ್ರೀರಾಮಮಂದಿರವು ಸ್ಥಾಪಿಸಲ್ಪಟ್ಟಿತು. ಹಿಂದೂಮತದ ವಿಷಯದಲ್ಲಿ ಒಂದು ಉಪನ್ಯಾಸವು ಸ್ವಾಮಿಗಳವರಿಂದಮಾಡಲ್ಪಟ್ಟಿತು. ಸುನಂದನಿಗೆ ಶಿಖಾಧಾರಣೆ, ನಾಮಧಾರಣೆಗಳು, ಮಾಡಿಸಲ್ಪಟ್ಟು ಪದ್ಧತಿಪ್ರಕಾರ ಅವನು ಸಂಸಾರಸಮೇತ ಸ್ವಮತಕ್ಕೆ ಸೇರಿಸಲ್ಪಟ್ಟನು. ಅವನ ಜಾತಿಬಂಧುಗಳು ಸಾವಿರಾರು ಜನರ ಅನುಮತಿಯಿಂದಲೂ ಈ ಕಾರ್ಯವು ತೃಪ್ತಿಕರವಾಗಿ ಪರಿಣಮಿಸಿತು.

ಇದರಿಂದ ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಲ್ಪಟ್ಟಿದ್ದವರನ್ನು ತನರ ಅನುಮತಿಯಂತೆ ಸ್ವಜಾತಿಗೆ ಸೇರಿಸಿಕೊಳ್ಳುವ ಪ್ರಯತ್ನಕ್ಕೆ ಅಸ್ತಿಭಾರವು ಹಾಕಲ್ಪಟ್ಟಿತು. ಮತಾಂತರವನ್ನು ಸೇರಿ ಹಿಂದೂಜನಾಂಗವನ್ನು ಶಿಥಿಲಮಾಡುತ್ತಿರುವ ಜನರೆಲ್ಲರೂ ಈ ಮೂಲಕ ತಮ್ಮ ತಮ್ಮ ಸ್ವಜಾತಿಗಳನ್ನು ಪುನಃ ಅವಲಂಬಿಸುವರೆಂದು ನಂಬಲ್ಪಟ್ಟಿದೆ. ಪುನಃ ಸ್ವಜಾತಿಯನ್ನು ಸೇರಬೇಕೆಂದು ಬರುವವರಿಗೆ ವಿಶೇಷವಾದ ದಂಡವನ್ನು ಹೊರಿಸದೆ ಸಮಾಜದ ಗೌರವಕ್ಕಾಗಿ ಕೇವಲ 4 ಆಣೆಯನ್ನು ತೆಗೆದುಕೊಂಡು ಅವರನ್ನು ಪುನಃ ಸೇರಿಸಿಕೊಳ್ಳಬಹುದೆಂದು ತೀರ್ಮಾನವಾಗಿದೆ. ಈ ತೀರ್ಮಾನದಂತೆ ಮೇಲ್ಕಂಡ ಮನೆಯನು 4 ಆಣೆಯನ್ನು ತಪ್ಪುಕಾಣಿಕೆಯಾಗಿ ಕೊಟ್ಟಿರುತ್ತಾನೆ.

ಮೇಲ್ಕಂಡ ಕಾರ್ಯವೆಲ್ಲವೂ ಸಾಂಗವಾಗಿ ನಡೆದಮೇಲೆ ಸುಮಾರು ಒಂದೂವರೆ ಘಂಟೆಯಕಾಲ ಮೇಘರಾಜನಿಂದ ಪುಷ್ಪವೃಷ್ಟಿಯಾಗಿ ಜನರೆಲ್ಲರಿಗೂ ಆನಂದವನ್ನುಂಟುಮಾಡಿತು.

ಎಸ್. ರಾಮಚಂದ್ರರಾವ್ (ಸೆಕ್ರಿಟರಿ,)
ಗ್ರಾಮರಕ್ಷಣೆಸಭಾ, ತಗಡೂರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ

ದಿವಾನ್‌ಸಾಹೇಬರವರು ಮಾಡಿದ ಭಾಷಣದ ಮುಖ್ಯಾಂಶ.

(ದಸರಾ ಅಧಿವೇಶನ)

10ನೆಯ ಅಕ್ಟೋಬರ್ 1924

(ಕಳೆದವಾರದ ಶೇಷ.)

ವಿದ್ಯಾಭ್ಯಾಸದ ಮೆಮೊರ್ಯಾಂಡಂ ಮೇಲಣ ಸರ್ಕಾರೀ ಹುಕುಮಿನಲ್ಲಿ ಕಂಡ ಪರಿಷ್ಕರಣಗಳಲ್ಲಿ ಹೆಚ್ಚು ಸಂಖ್ಯೆಯವುಗಳನ್ನು ಆಚರಣೆಗೆ ತಂದಿರುವುದು ಮೇಲ್ಕಂಡ ವಿವರಣೆಯಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಏನಿದ್ದರೂ, ಕೆಲವನ್ನು ಹುಕುಮಿನಲ್ಲಿ ಇದ್ದಂತೆಯೇ ಆಚರಣೆಗೆ ತಂದಿದೆ. ಮತ್ತೆ ಕೆಲವನ್ನು ಅನುಕೂಲವಾದ ರೀತಿಯಲ್ಲಿ ಈಗಿನ ಸ್ಥಿತಿಗೆ ತಕ್ಕಂತೆ ಮಾರ್ಪಡಿಸಿ ಆಚರಣೆಗೆ ತರಲಾಗಿದೆ. ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಮತ್ತಷ್ಟು ಉದಾರ ಬುದ್ಧಿಯಿಂದ ಸರ್ಕಾರದವರೊಡನೆ ಏಕೀಭವಿಸಿ ಪ್ರಯತ್ನಮಾಡುವುದಾದರೆ ಅಭಿವೃದ್ಧಿಯ ಕಾರ್ಯಗಳು ಇನ್ನೂ ತೀವ್ರವಾಗಿ ನಡೆಯಬಹುದಾಗಿವೆ. ಕೆಲವು ಡಿಸ್ಟ್ರಿಕ್ಟುಗಳಲ್ಲಿ ಮಾತ್ರವೇ ಎಜುಕೇಷನ್ ತೆರಿಗೆಯನ್ನು ವಸೂಲ್ಮಾಡುತ್ತಿರುವುದರಿಂದ ವಿದ್ಯಾಭಿವೃದ್ಧಿಯ ಕಾರ್ಯಗಳು ಎಲ್ಲಾ ಕಡೆಗಳಲ್ಲಿಯೂ ಒಂದೇ ಸಮನಾಗಿ ನಡೆಯಲು ಅವಕಾಶವಿಲ್ಲದೆ ಸಮತೆಯು ತಪ್ಪಿರುತ್ತದೆ. ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಒಂದೇದರದಲ್ಲಿ ತೆರಿಗೆಯನ್ನು ವಸೂಲ್ಮಾಡಿದಲ್ಲಿ ವಿದ್ಯಾಭಿವೃದ್ಧಿಯು ಒಂದೇ ಸಮವಾಗಿ ನಡೆಯುವಂತೆ ಮಾಡಲು ಸಾಧ್ಯವಾಗುವುದು. ರೂಪಾಯಿಗೆ ಆರು ಪೈಗಳವರೆಗೆ ವಿದ್ಯಾಭ್ಯಾಸದ ಸೆಸ್ಸನ್ನು ವಸೂಲ್ಮಾಡಿದರೂ ಕೂಡ, ಕೇವಲ ಸರ್ಕಾರದ ಹಣ ಒಂದರಿಂದಲೇ ಪ್ರಾಥಮಿಕ ವಿದ್ಯಾಭ್ಯಾಸದ ವಿಶಿಷ್ಟ ವೆಚ್ಚವನ್ನೂ ಒದಗಿಸುವುದು ಅಸಾಧ್ಯವಾಗಿರುತ್ತದೆ. ಕೆಲವು ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಹಾಲಿ ವಸೂಲ್ಮಾಡುತ್ತಿರುವ ದರಗಳವರೆಗೆ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ವಸೂಲ್ಮಾಡಿಯೇ ತೀರಬೇಕೆಂದು ನಿರ್ಬಂಧವನ್ನು ಕಲ್ಪಿಸಿ ವರ್ತಿಸುವುದಾದರೆ ಮಾತ್ರವೇ ವಿದ್ಯಾಭಿವೃದ್ಧಿಯು ಇನ್ನೂ ಹೆಚ್ಚು ಹೆಚ್ಚಾಗಿ ಮುಂದುವರಿಯುವುದು ಸಾಧ್ಯವಾಗುತ್ತದೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಆಯವ್ಯಯಗಳನ್ನು ಹೇಗೆ ಕ್ರಮಗೊಳಿಸಬಹುದೆಂಬ ವಿಷಯವನ್ನು ಕಳೆದವರುಷವೆಲ್ಲಾ ಅತ್ಯಂತ ಆಸಕ್ತಿಯಿಂದ ಪರಿಶೀಲಿಸಿ ಮುಂದಟ್ಟುಮಾಡಿಕೊಳ್ಳಲಾಯಿತು. ಏಡೆಡ್ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳನ್ನಾಗಿ ಬದಲಾಯಿಸುವ ವಿಚಾರದಲ್ಲಿಯೂ, ಮತ್ತು ಅದೇ ಸಂಬಂಧವಾದ ಇತರ ವಿಚಾರಗಳಲ್ಲಿಯೂ, ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮದ ಫಲಿತಾಂಶವೆನಿಸಿ ಪ್ರಾಪ್ತವಾಗಿರುವ, ಎಂದರೆ, ಮೇಲೆವಿವರಿಸಿ ತಿಳಿಸಿದಂಥಾ ಕಷ್ಟಗಳನ್ನು ನಿವಾರಣೆ ಮಾಡಿಕೊಂಡು ಮುಂದೆ ಸಾಗುವುದಕ್ಕನುಕೂಲವಾದ ಮುಖ್ಯ ಮಾರ್ಗಗಳ ವಿಚಾರವು ಸರ್ಕಾರದವರ ಪ್ರಬಲವಾದ ಪ್ರಯಾಲೋಚನೆಯಲ್ಲಿರುತ್ತದೆ.

ಈ ಸಂಸ್ಥಾನದ ಗ್ರಾಮಗಳಲ್ಲೆಲ್ಲಾ ಪಂಚಾಯತಿ ಏರ್ಪಾಡನ್ನು ಜಾರಿಗೆ ತರುವ ಉದ್ದೇಶವಿರುವುದರಿಂದಲೂ, ಅದರಿಂದ ಲೋಕಲ್ ಬೋರ್ಡುಗಳ ಆಯವ್ಯಯಸ್ಥಿತಿಯು ಅಸಮರ್ಪಕವಾಗಿ ಪರಿಣಮಿಸುವುದರಿಂದಲೂ ಎಲ್ಲಾ ತಾಲ್ಲೂಕು ಬೋರ್ಡುಗಳನ್ನೂ ವಜಾಮಾಡುವುದೂ, ಮತ್ತು ಸ್ಥಳಾರೋಗ್ಯ, ರಸ್ತೆಗಳು, ವೈದ್ಯಸಹಾಯವೇ ಮುಂತಾದ ಬಾಬುಗಳಲ್ಲಿ ಡಿಸ್ಟ್ರಿಕ್ಟುಗಳಿಗೂ, ತಾಲ್ಲೂಕುಗಳಿಗೂ, ತಾಲ್ಲೂಕುಗಳಿಗೆ ಪರಸ್ಪರವಾಗಿಯೂ, ಗ್ರಾಮಾಂತರಗಳಿಗೆ ಪರಸ್ಪರವಾಗಿಯೂ, ಸಂಬಂಧಪಡುವ ಕೆಲಸಗಳಿಗೆಲ್ಲಾ ಗಮನಕೊಡುವಂತೆ ಡಿಸ್ಟ್ರಿಕ್ಟು ಬೋರ್ಡುಗಳಿಗೆ ಇನ್ನೂ ಧಾರಾಳವಾದ ಅವಕಾಶವನ್ನು ಕೊಡಬೇಕಾದುದೂ, ಅನುಕೂಲ ಕಾಣುವುದು ಮಾತ್ರವೇ ಅಲ್ಲದೆ ಆವಶ್ಯಕವೆಂದೂ ಸಹ ಸರ್ಕಾರದವರು ಭಾವಿಸಿರುತ್ತಾರೆ.

ಮ್ಯುನಿಸಿಪಾಲಿಟಿಗಳ ಮೇಲ್ಪಾಟು.

(1) ಮೈನರ್ ಮ್ಯುನಿಸಿಪಲ್ ಕೌನ್ಸಿಲುಗಳಲ್ಲಿನ ಚುನಾಯಿಸಲ್ಪಟ್ಟ ಮೆಂಬರುಗಳ ಸಂಖ್ಯೆಯನ್ನು ಆಯಾ ಕೌನ್ಸಿಲಿನ ಒಟ್ಟು ಮೆಂಬರುಗಳ ಸಂಖ್ಯೆಯನ್ನು $\frac{1}{3}$ನೇ ಭಾಗದಿಂದ $\frac{1}{2}$ಕ್ಕೆ ಹೆಚ್ಚಿಸತಕ್ಕದ್ದು;

(2) ಚುನಾವಣೆಗಳಲ್ಲಿ ವೋಟ್ ಮಾಡುವುದಕ್ಕಾಗಿ ಸ್ತ್ರೀಯರಿಗೆ ಓಟ್ ಮಾಡುವ ಅಧಿಕಾರವನ್ನು ಕೊಡತಕ್ಕದ್ದು;

(3) ಸಾಧಾರಣವಾಗಿ, ಸಿಟಿ ಮತ್ತು ಟೌನ್ ಮ್ಯುನಿಸಿಪಲ್ ಕೌನ್ಸಿಲುಗಳ ಪ್ರೆಸಿಡೆಂಟರುಗಳು, ಚುನಾಯಿಸಲ್ಪಡತಕ್ಕದ್ದು; ಮತ್ತು ಅವರು ಆಯಾ ಮ್ಯುನಿಸಿಪಲ್ ಕೌನ್ಸಿಲುಗಳಿಂದ ಚುನಾಯಿಸಲ್ಪಡುವುದಕ್ಕೆ ಬದಲಾಗಿ, ಓಟರುಗಳೆಲ್ಲರಿಂದಲೂ ಚುನಾಯಿಸಲ್ಪಡತಕ್ಕದ್ದು;

(4) ಸಿಟಿ ಮ್ಯುನಿಸಿಪಾಲಿಟಿಗಳು ಹೊರತು, ಮಿಕ್ಕ ಮ್ಯುನಿಸಿಪಲ್ ಆಫೀಸುಗಳನ್ನು ಡೆಪ್ಯುಟಿಕಮಿಷನರುಗಳು ತಣಿಖೆ ಮಾಡುವುದಕ್ಕಾಗಿ ಏರ್ಪಾಡು ಮಾಡತಕ್ಕದ್ದು.

ಮೇಜರ್ ಮತ್ತು ಮೈನರ್ ಕೆರೆಗಳ ದುರಸ್ತಿ.

ಮೇಜರ್ ಕೆರೆಗಳು.—ಸಂಸ್ಥಾನದಲ್ಲಿರುವ ಮೇಜರ್ ಕೆರೆಗಳ ಒಟ್ಟು ಸಂಖ್ಯೆಯು 2,566; ಇವುಗಳ ಪೈಕಿ 1,830 ಕೆರೆಗಳು ದುರಸ್ತು ಮಾಡಲ್ಪಟ್ಟಿವೆ. ಇನ್ನೂ ದುರಸ್ತಾಗಬೇಕಾದ ಕೆರೆಗಳು 700 ಕ್ಕಿಂತ ಹೆಚ್ಚಾಗಿವೆ. ಇವುಗಳಿಗಾಗಿ ಸುಮಾರು 50 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಆದುದರಿಂದ, ಈ ವೆಚ್ಚಕ್ಕಾಗಿ ಪ್ರತಿವರ್ಷವೂ ಸ್ವಲ್ಪ ಸ್ವಲ್ಪ ಹಣವನ್ನು ಒದಗಿಸುತ್ತಾ ಅನೇಕ ವರುಷಗಳಕಾಲ ಕೆಲಸಮಾಡಿಸಬೇಕಾಗುತ್ತದೆ.

ಕಳೆದವರುಷ (1923-24ರಲ್ಲಿ) ಮೇಜರ್ ಕೆರೆಗಳಿಗಾಗಿ 1,92,000 ರೂಪಾಯಿಗಳನ್ನು ಮಾತ್ರ ಮಂಜೂರ್ಮಾಡಲಾಯಿತು ಮತ್ತು 1,79,626 ರೂಪಾಯಿಗಳ ವೆಚ್ಚದಿಂದ ಕೆಲಸವು ನಡೆಯಿತು. ಚಾಲ್ತಿ ವರ್ಷದಲ್ಲಿ, ಮೇಜರ್ ಕೆರೆಗಳಿಗಾಗಿ ಮಂಜೂರ್ಮಾಡಿದ ಹಣವು 2,67,000 ರೂಪಾಯಿಗಳು. ಇನ್ನೂ ಹೆಚ್ಚು ಹಣಗಳನ್ನು ಒದಗಿಸಲು ದ್ರವ್ಯಾಭಾವದ ದೆಸೆಯಿಂದ ಅಸಾಧ್ಯವಾಗಿ ಪರಿಣಮಿಸಿತು. ಕೆಲಸವು ಇನ್ನೂ ಚೆನ್ನಾಗಿ ನಡೆಯಬೇಕಾದರೆ, ನೀರಾವರಿಯ ಕಾಮಗಾರಿಗಳ ಗ್ರ್ಯಾಂಟನ್ನು ಪ್ರತಿವರ್ಷವೂ ಕನಿಷ್ಠಪಕ್ಷ 5 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಬೇಕಾಗುವುದು.

ಮೈನರ್ ಕೆರೆಗಳು.—ಸಂಸ್ಥಾನದಲ್ಲಿ ದುರಸ್ತಾಗಬೇಕಾದ ಮೈನರ್ ಕೆರೆಗಳ ಒಟ್ಟು ಸಂಖ್ಯೆಯು 14,302. ಇದುವರೆಗೆ ದುರಸ್ತಾಗಿರುವ ಕೆರೆಗಳ ಸಂಖ್ಯೆಯು ಸುಮಾರು 1,000; ಮತ್ತು ದುರಸ್ತಿಯು ಶುರುಮಾಡಲ್ಪಟ್ಟಿರುವ ಕೆರೆಗಳ ಸಂಖ್ಯೆಯು 270. ಕೆಲಸವು ಬಹುನಿಧಾನವಾಗಿ ನಡೆಯುತ್ತಿದೆ; ಇನ್ನೂ ಹೆಚ್ಚು ಗ್ರ್ಯಾಂಟುಗಳನ್ನು ಕೊಡದೇ ಇದ್ದರೆ ಕೆಲಸವು ಅದೇ ರೀತಿ ನಿಧಾನವಾಗಿ ನಡೆಯಬೇಕಾಗುವುದು. 1923-24ನೇ ವರುಷದಲ್ಲಿ ಒದಗಿಸಿದ ಹಣವು 87,000 ರೂಪಾಯಿಗಳು ಮತ್ತು ವೆಚ್ಚಮಾಡಿದ ಮೊಬಲಗು 66,728 ರೂಪಾಯಿಗಳು.

ಈ ಮಧ್ಯೆ, ಕಂಟ್ರಿಬ್ಯೂಷನ್ನಿನ ವಸೂಲಿಯನ್ನು ನಿರ್ಬಂಧಕ ಮಾಡುವುದಕ್ಕಾಗಿ, ಸಲಹೆ ಮಾಡಲ್ಪಟ್ಟ ಒಂದು ತಿದ್ದುಪಾಟಾದ ರೆಗ್ಯುಲೇಷನು, ನ್ಯಾಯವಿಧಾಯಕಸಭೆಯವರ ಮುಂದೆ ತರಲ್ಪಟ್ಟು ಅವರಿಂದ ಕಾನೂನಾಗಿ ಅನುಮೋದಿಸಲ್ಪಟ್ಟಿದೆ. ಅಂದಾಜನ್ನು ಮಂಜೂರ್ಮಾಡಿದ ಕೂಡಲೆ, ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕಂಟ್ರಿಬ್ಯೂಷನ್ನಿನ ವಸೂಲಿಗಾಗಿ ಹಿಂದೆ ನಿರೀಕ್ಷಿಸುತ್ತಿದ್ದಂತೆ ನಿರೀಕ್ಷಿಸದೆ ಆಯಾ ಕಾಮಗಾರಿಯನ್ನು ನಡೆಸಲು ಅವರಿಗೆ ಈಗ ಸಂಪೂರ್ಣವಾಗಿ ಅವಕಾಶವಿರುತ್ತದೆ.

ಇನಾಂ ಕಮಿಷನ್ ಮತ್ತು ಸರ್ಕಾರಿ ಆಡಳಿತಕ್ಕೊಳಪಟ್ಟಿರುವ ಇನಾಂ ಗ್ರಾಮಗಳ ಅಭಿವೃದ್ಧಿ.

ಪ್ರಸಕ್ತವರ್ಷದಲ್ಲಿ ಇನಾಂ ಕಮಿಷನರವರ ವರದಿಯು ಸರ್ಕಾರದವರ ದೀರ್ಘಾಲೋಚನೆಯಲ್ಲಿದ್ದಿತು; ಸರ್ಕಾರದವರು ಇಷ್ಟರಲ್ಲೇ ಅದರ ವಿಚಾರವಾಗಿ ಹುಕುಂ ಸಾದರು ಮಾಡುವವರಾಗಿದ್ದಾರೆ. ಸರ್ಕಾರಿ ಆಡಳಿತಕ್ಕೆ ತೆಗೆದುಕೊಂಡಿರುವ ಇನಾಂ ಗ್ರಾಮಗಳ ಸ್ಥಿತಿಯನ್ನು ಉತ್ತಮಪಡಿಸುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಗ್ರಾಮಗಳ ಸ್ಥಿತಿಯನ್ನು ಮೇಲ್ಪಡಿಸುವುದಕ್ಕೆ ರೆವಿನ್ಯೂ ಆಫೀಸರುಗಳ ನಡೆವಳಿಕೆಯ ಬಗ್ಗೆ ತಪಶೀಲಾದ ತಿಳುವಳಿಕೆಗಳನ್ನು ಕೊಟ್ಟು ಈಚೆಗೆ ಹುಕುಂ ಸಾದರಾಗಿದೆ. ಮತ್ತು ಸರ್ಕಾರಿ ಆಡಳಿತದಲ್ಲಿರುವ ಇನಾಂ ಗ್ರಾಮಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕಮಾಡುವ ವಿಷಯವೂ ಕೂಡ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. "ಮೈನರುಗಳ" ಎಂದರೆ ಪ್ರಾಪ್ತವಯಸ್ಕರಲ್ಲದವರ ಆಸ್ತಿಯನ್ನು ರಕ್ಷಿಸಿ ಮೇಲ್ವಿಚಾರಣೆಯ ಕೆಲಸವನ್ನು ನೋಡಿಕೊಳ್ಳುವುದಕ್ಕಾಗಿ ಬ್ರಿಟಿಷ್ ಇಂಡಿಯಾದಲ್ಲಿ ಆಚರಣೆಯಲ್ಲಿರುವ "ಕೋರ್ಟ್ ಆಫ್ ವಾರ್ಡ್ಸ್" ರೆಗ್ಯುಲೇಷನ ಮಾದರಿಯಮೇಲೆ ಒಂದು ರೆಗ್ಯುಲೇಷನನ್ನು ರಚಿಸಿ ಕಾನೂನಾಗಿ ಆಚರಣೆಗೆ ತರುವ ವಿಚಾರವೂ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಮೈಸೂರು ಸಿವಿಲ್ ಸರ್ವಿಸ್ಸಿನ ಪುನರ್ವ್ಯವಸ್ಥೆ.

ಕಳೆದ ಅಕ್ಟೋಬರು ತಿಂಗಳಿನಲ್ಲಿ ನಾವು ಮಾಡಿದ ಭಾಷಣದಲ್ಲಿ, ಮೈಸೂರು ಸಿವಿಲ್ ಸರ್ವಿಸ್ಸನ್ನು ಪುನರ್ವ್ಯವಸ್ಥೆ ಮಾಡುವ ವಿಚಾರವು ಸರ್ಕಾರದವರ ತೀವ್ರವಾದ ಪರ್ಯಾಲೋಚನೆಯಲ್ಲಿದ್ದುದಾಗಿ ತಿಳಿಸಿದ್ದೆವು. ಆಗಿಂದೀಚೆಗೆ, ಹೊಸ ಉದ್ಯೋಗಸ್ಥರನ್ನು ಸದರಿ ಸರ್ವಿಸ್ಸಿಗೆ ಸೇರಿಸಿಕೊಳ್ಳಬೇಕಾದ ಆವಶ್ಯಕತೆಯು ವಿಶೇಷವಾಗಿ ಕಂಡುಬಂದುದರಿಂದ, ಮೈಸೂರುಸಂಸ್ಥಾನದಲ್ಲಿ ಹುಟ್ಟಿದ ಅಥವಾ ಬಹುಕಾಲದವರೆಗೆ ವಾಸಮಾಡಿರುವುದರ ಮೂಲಕ ಶ್ರೀಮನ್ಮಹಾರಾಜರವರ ಪ್ರಜೆಗಳೆನಿಸಿಕೊಂಡವರನ್ನು ಕನಿಷ್ಠ ಪಕ್ಷ ಇಬ್ಬರಿಗೆ ಕಡಮೆಯಿಲ್ಲದಂತೆ ಪ್ರೊಬೇಷನರಿ ಅಸಿಸ್ಟೆಂಟು ಕಮಿಷನರುಗಳನ್ನಾಗಿ ನೇಮಿಸತಕ್ಕ ಬಗ್ಗೆ ಚುನಾಯಿಸುವುದಕ್ಕಾಗಿ, ಒಂದು ಸ್ಪರ್ಧಾಪರೀಕ್ಷೆಯನ್ನು ಈ ತಿಂಗಳ ಆಖೈರಿನಲ್ಲಿ ನಡೆಸಬೇಕೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆ.

ಸಿವಿಲ್ ಸರ್ವಿಸ್ಸಿನ ನಿಬಂಧನೆಗಳನ್ನು ತಿದ್ದುಪಾಟು ಮಾಡಿದೆ: ಈ ತಿದ್ದುಪಾಟಿನ ಮುಖ್ಯ ಲಕ್ಷಣಗಳೇನೆಂದರೆ:—(1) ಸ್ಪರ್ಧಾಪರೀಕ್ಷೆಯ ಮೂಲಕವೂ, ಮತ್ತು ಕೆಳದರ್ಜೆಗಳ ಹುದ್ದೆಗಳಿಂದ ಬಡ್ತಿಯಮೂಲಕ ನೇಮಿಸಲ್ಪಟ್ಟ ಆಫೀಸರುಗಳೂ ಸೇರಿ, ಶ್ರೀಮನ್ಮಹಾರಾಜರವರಿಂದ ಚುನಾಯಿಸಲ್ಪಟ್ಟು ನೇಮಿಸಲ್ಪಡುವುದರ ಮೂಲಕವೂ, ಕೆಲಸಕ್ಕೆ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗೆ ಮಾತ್ರವೇ ಸಿವಿಲ್ ಸರ್ವಿಸ್ಸಿನ ಹುದ್ದೆಗಳನ್ನು ಇನ್ನು ಮುಂದೆ ಕೊಡಲಾಗುವುದು. (2) ರೆವಿನ್ಯೂ, ಅಕೌಂಟ್ಸ್, ಪೊಲೀಸ್, ಮುಂತಾದ ಹಲವು ಇಲಾಖೆಗಳಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೆ ಸೇರದ ಒಂದು ದರ್ಜೆಯನ್ನು ಏರ್ಪಡಿಸುವುದರ ಮೂಲಕ ಕೆಳದರ್ಜೆಗಳಲ್ಲಿನ ಆಫೀಸರುಗಳ ಬಡ್ತಿಯ ಸಂಭವವನ್ನು ಉತ್ತಮಪಡಿಸಿದೆ. (3) ಸಿವಿಲ್ ಸರ್ವಿಸ್ ದರ್ಜೆಯ ಹುದ್ದೆಗಳ ಸಂಖ್ಯೆಯನ್ನು ಈಗ 45ಕ್ಕೆ ತಗ್ಗಿಸಿದೆ; ಮತ್ತು ರೆವಿನ್ಯೂ, ಅಕೌಂಟ್ಸ್, ಪೊಲೀಸ್, ಎಕ್ಸೈಜ್, ಸರ್ವೇ ಮತ್ತು ಇನಾಂಕಮಿಷನ್ ಇಲಾಖೆಗಳಲ್ಲಿಯೂ, ಜನರಲ್ ಮತ್ತು ರೆವಿನ್ಯೂ ಸೆಕ್ರಿಟೇರಿಯಟ್ಟಿನಲ್ಲಿಯೂ, ಮತ್ತು ಕೋಆಪರೇಟಿವ್ ಇಲಾಖೆಯಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೂ ಮತ್ತು ತಲಬುಗಳಿಗೂ ಸರಿಸಮನಾದ ದರ್ಜೆಯೂ, ತಲಬುಗಳೂ ಇರುವ 31 ಹುದ್ದೆಗಳನ್ನು, ಆಯಾ ಇಲಾಖೆಯ ಕೆಳದರ್ಜೆಗಳಿಂದ ಬಡ್ತಿಮಾಡಲ್ಪಟ್ಟ ಆಫೀಸರುಗಳಿಗಾಗಿಯೂ ಮತ್ತು ಕೆಲವು ಸಂದರ್ಭಗಳಲ್ಲಿ ಆಯಾ ಇಲಾಖೆಗೆ ಸೀದಾ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗಾಗಿಯೂ, ಪ್ರತ್ಯೇಕಪಡಿಸಿ ಉಳಿಸಲಾಗಿದೆ. (4) ರೆವಿನ್ಯೂ ಇಲಾಖೆಯ ಮತ್ತು ಸೆಕ್ರಿಟೇರಿಯಟ್ಟಿನ ಹುದ್ದೆಗಳ ಪೈಕಿ ಹೆಚ್ಚು ಸಂಖ್ಯೆಯ ಹುದ್ದೆಗಳಿಗೆ ಸಿವಿಲ್ ಸರ್ವಿಸ್ಸಿನಿಂದ ಆಫೀಸರುಗಳನ್ನು ನೇಮಿಸುವುದು: ಮತ್ತು ಪರಸ್ಪರಸಂಬಂಧವುಳ್ಳ ಎಲ್ಲಾ ಇತರ ಇಲಾಖೆಗಳಲ್ಲಿನ ಹುದ್ದೆಗಳ ಪೈಕಿ ಬಹುಭಾಗದ ಹುದ್ದೆಗಳಿಗೆ ಸಿವಿಲ್ ಸರ್ವಿಸ್ ಅಲ್ಲದ ದರ್ಜೆಗೆ ಸೇರಿದ ಆಫೀಸರುಗಳನ್ನು ನೇಮಕಮಾಡುವುದು. (5) ಸಿವಿಲ್ ಸರ್ವಿಸ್ಸಿನ ಮೆಂಬರುಗಳಿಗೆ ದೊರೆಯಬಹುದಾದ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳ ಸಂಖ್ಯೆಯನ್ನು ಹನ್ನೊಂದರಿಂದ ಒಂಬತ್ತಕ್ಕೆ ತಗ್ಗಿಸಿದೆ; ಮತ್ತು ಸೀನಿಯರ್ ಸಬ್‌ಡಿವಿಜನ್ ಆಫೀಸರು, ಸೀನಿಯರ್ ಪೊಲೀಸ್ ಸೂಪರಿಂಟೆಂಡೆಂಟರು, ಎಂಬ ಎರಡು ಹುದ್ದೆಗಳನ್ನು ಆಯಾ ಇಲಾಖೆಯಲ್ಲಿನ ಸಿವಿಲ್ ಸರ್ವಿಸ್ ದರ್ಜೆಗೆ ಸೇರದ ಆಫೀಸರುಗಳ ಪುರೋಭಿವೃದ್ಧಿಗಾಗಿ ಕಲ್ಪಿಸಿದೆ. (6) ರೆವಿನ್ಯೂ, ಪೊಲೀಸ್, ಎಕ್ಸೈಜು ಇಲಾಖೆಗಳಲ್ಲಿನ ಮತ್ತು ಸೆಕ್ರಿಟೇರಿಯಟ್ಟಿನ ಮೇಲ್ಪಟ್ಟ ಹುದ್ದೆಗಳಾದ ರೆವಿನ್ಯೂ ಕಮಿಷನರ್, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್, ಎಕ್ಸೈಜ್ ಕಮಿಷನರ್, ಸರ್ಕಾರದ ಜನರಲ್ ಇಲಾಖಾ ಸೆಕ್ರಿಟರಿಗಳು, ಮತ್ತು ಡೆಪ್ಯುಟಿಕಮಿಷನರುಗಳೇ ಮುಂತಾದ ಹುದ್ದೆಗಳನ್ನು ನಿಶ್ಚಯವಾಗಿ ಸಿವಿಲ್ ಸರ್ವಿಸ್ಸಿನ ದರ್ಜೆಯಲ್ಲಿಯೇ ಸೇರಿಸಿದೆ; ಮತ್ತು ಸಿವಿಲ್ ಸರ್ವಿಸ್ಸಿಗೆ ಸೇರದೆ ಇರುವ ಆಫೀಸರುಗಳಿಗೆ ದೊರೆಯಬಹುದಾದ ಮೇಲ್ಪಟ್ಟ ಹುದ್ದೆಗಳನ್ನು ಸ್ಪಷ್ಟವಾಗಿ ಸೂಚಿಸಿದೆ.

ಮುಂದಣ ಆಲೋಚಿತ ವಿಚಾರಗಳು.

ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರಕೃತದಲ್ಲಿ ಆಸಕ್ತಿಯಿಂದ ಗಮನ ಕೊಡುತ್ತಿರುವ ದೊಡ್ಡ ದೊಡ್ಡ ವಿಷಯಗಳ ಪೈಕಿ ಕೆಲವನ್ನು ಈಗ ಸೂಚಿಸುತ್ತೇವೆ.

ಖನಿಜ ಸಂಪತ್ತನ್ನು ಅಭಿವೃದ್ಧಿಗೆ ತರುವುದು.—ಈ ಸಭೆಯಲ್ಲಿ ನಾವು ಒಂದೆರಡುವೇಳೆ ತಿಳಿಯಪಡಿಸಿರುವಂತೆ, ಮೈಸೂರುದೇಶದಲ್ಲಿ ಕೈಗಾರಿಕೆಯ ಅಭಿವೃದ್ಧಿಗೆ ಸ್ವಾಭಾವಿಕವಾದ ಸಾಧನಸಂಪತ್ತುಗಳು ಅಪರಿಮಿತವಾಗಿವೆ. ಮೈಸೂರುದೇಶದ ಖನಿಜ ಸಂಪತ್ತನ್ನೆಲ್ಲಾ ಇನ್ನೂ ಸಂಪೂರ್ಣವಾಗಿ ಉಪಯೋಗಪಡಿಸಿಕೊಂಡಿಲ್ಲ. ಆದರೆ ಕೈಗಾರಿಕೆಯು ಪ್ರಾಬಲ್ಯಕ್ಕೆ ಬರುವ ಸಂಭವಗಳು ಅಪರಿಮಿತವಾಗಿರುವ ದೇಶಗಳ ಪೈಕಿ ಮೈಸೂರುದೇಶಕ್ಕೆ ಉನ್ನತ ಸ್ಥಾನವು ದೊರೆಯುವಂತೆ ಮಾಡಲು ಇದುವರೆಗೆ ಪರಿಶೋಧನೆಯ ಮೂಲಕ ಗೊತ್ತಾಗಿರುವ ಅಂಶಗಳೇ ಸಾಕಾಗಿವೆ. ಮೈಸೂರುದೇಶದಲ್ಲಿ ಚಿನ್ನ ಮತ್ತು ಕಬ್ಬಿಣದ ಜತೆಗೆ ಅಮೂಲ್ಯವಾದ ಕ್ರೋಮ್ ಮತ್ತು ಮ್ಯಾಂಗನೀಸ್ ಲೋಹಗಳ ಅದರುಗಳು ಹೇರಳವಾಗಿರುವಂತೆ ಕಂಡುಬಂದಿದೆ. ಇದಲ್ಲದೆ, ಅಮೂಲ್ಯವಾದ ಇತರ ಖನಿಜ ವಸ್ತುಗಳಿರುವ ಚಿಹ್ನೆಗಳು ಯಥೇಷ್ಟವಾಗಿ ಕಂಡುಬರುತ್ತವೆ. ಅವುಗಳನ್ನು ಕಂಡುಹಿಡಿದು ರೂಢಿಸಿದಾಗ, ಮೈಸೂರುದೇಶವು ಕೈಗಾರಿಕೆಯ ವಿಚಾರದಲ್ಲಿ ಅಭ್ಯುದಯಸ್ಥಿತಿಗೆ ಬರುವುದು ಖಂಡಿತ. ಯುಕ್ತವೆನಿಸಿರುವ ವಾಣಿಜ್ಯ ತತ್ವಗಳಿಗನುಸಾರವಾಗಿ ಸಂಸ್ಥಾನದ ಖನಿಜ ಸಂಪತ್ತನ್ನು ರೂಢಿಸಿ ಅಭಿವೃದ್ಧಿಯನ್ನುಂಟುಮಾಡಲು ತಕ್ಕ ಪ್ರಯತ್ನಗಳು ನಡೆಯುತ್ತಾ ಇವೆ. ಹೀಗೆ ಮಾಡುವುದರಿಂದ ಸಂಸ್ಥಾನದ ಅಭಿವೃದ್ಧಿಗೋಸ್ಕರ ಹಿಂದೆ ಎಷ್ಟೋ ಚೆನ್ನಾಗಿ ಕೆಲಸ ನಡೆಸಿರುವ ಖಾಸಗಿಜನರ ಉದ್ಯಮಗಳಿಗೆ ಪ್ರತಿಬಂಧಕ ಬಾರದಂತೆಯೂ, ಒಟ್ಟು ಆದಾಯದಲ್ಲಿ ಇನ್ನೂ ಹೆಚ್ಚಿನ ಭಾಗವು ಸರ್ಕಾರದವರಿಗೆ ಸಲ್ಲುವಂತೆಯೂ ಆಗುತ್ತದೆ. ಈ ವಿಚಾರದಲ್ಲಿ ಈ ಸಭೆಯ ಮುಂದಣ ಅಧಿವೇಶನದಲ್ಲಿ ನಿರ್ಧರವಾದ ಸಂಗತಿಯನ್ನು ತಿಳಿಸಲು ಸಾಧ್ಯವಾಗುವುದೆಂದು ನಂಬಿರುತ್ತೇವೆ.

ವ್ಯಾಪಾರದ ಅನುಕೂಲತೆಯ ವಿಚಾರವಾಗಿ ಪರಿಶೋಧನೆ.—ಕಳೆದ ಜೂನ್ ತಿಂಗಳಲ್ಲಿ ನಡೆದ ಪುನರ್ವ್ಯವಸ್ಥಿತವಾದ ಸಂಪದಭ್ಯುದಯ ಸಮಾಜದ ಸಮಾರಂಭ ಭಾಷಣದಲ್ಲಿ "ಒಂದು ದೇಶದ ವ್ಯಾಪಾರದ ಪ್ರವರ್ಧಮಾನಸ್ಥಿತಿಯನ್ನು ಗೊತ್ತು ಮಾಡಬೇಕಾದರೆ ಆಮದಿಗಿಂತಲೂ ರಫ್ತು ಹೆಚ್ಚಾಗಿರಬೇಕೆಂಬುದು ಅರ್ಥಶಾಸ್ತ್ರದ ಒಂದು ಮೂಲತತ್ವವಾಗಿದೆ.........ಈ ತತ್ವದ ಪ್ರಕಾರ ಪರೀಕ್ಷೆಮಾಡಿ ನೋಡಿದರೆ, ಮೈಸೂರುದೇಶದ ವ್ಯಾಪಾರಸ್ಥಿತಿಯು ಸ್ವಲ್ಪವೂ ತೃಪ್ತಿಕರವಾಗಿಲ್ಲ...........ಆದುದರಿಂದ ಸರಿಯಾದ ರೀತಿಯಲ್ಲಿ ವ್ಯಾಪಾರವನ್ನು ಅಭಿವೃದ್ಧಿಪಡಿಸಿ,........ರಫ್ತನ್ನು ಹೆಚ್ಚಿಸುತ್ತಾ ಬಂದು ದೇಶವನ್ನು ಅಭ್ಯುದಯಸ್ಥಿತಿಗೆ ತರುವುದು ಅವಶ್ಯವಾಗಿದೆ" ಎಂದು ತಿಳಿಸಿದೆವು. ಈ ವಿಷಯವನ್ನು ಇನ್ನೂ ಹೆಚ್ಚಾಗಿ ಪರಿಶೋಧಿಸಲು ಉದ್ದೇಶಿಸಿದೆ. ಮತ್ತು ಈ ಉದ್ದೇಶಕ್ಕಾಗಿ ಈ ವಿಷಯವನ್ನು ಜಾಗರೂಕತೆಯಿಂದ ಪರಾಮರ್ಶಿಸಿ ಸರ್ಕಾರದವರು ಒಂದು ನಿರ್ದಿಷ್ಟವಾದ ಕ್ರಮವನ್ನು ಅನುಸರಿಸುವ ಬಗ್ಗೆ ಉಪಾಯಾಂತರಗಳನ್ನು ಸೂಚಿಸುವುದಕ್ಕೋಸ್ಕರವಾಗಿ ವಾಣಿಜ್ಯ ವಿಚಾರಗಳಲ್ಲಿ ನಿಪುಣರೆನಿಸಿರುವವರು ದಕ್ಷತೆಯಿಂದ ಕೆಲಸ ನಡೆಸುವ ಬಗ್ಗೆ ಅವರನ್ನೊಳಗೊಂಡ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ.

ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಏರ್ಪಾಡುಗಳು.—ಮೈಸೂರುದೇಶದಲ್ಲಿ ಖನಿಜ ಸಂಪತ್ತಿನ ಜತೆಗೆ ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಏರ್ಪಾಡುಗಳನ್ನು ಇನ್ನೂ ಅಭಿವೃದ್ಧಿಗೆ ತರಲು ಅತ್ಯಧಿಕವಾದ ಅವಕಾಶಗಳಿರುತ್ತವೆ. ಕೃಷ್ಣರಾಜಸಾಗರದ ಏರ್ಪಾಡಿನ ಸಹಾಯದೊಡನೆ ನಡೆಸುತ್ತಿರುವ ಶಿವಸಮುದ್ರದ ವಿದ್ಯುಚ್ಛಕ್ತಿಯ ಉತ್ಪತ್ತಿಯ ಏರ್ಪಾಡಿನಿಂದ ಮೈಸೂರು, ಬೆಂಗಳೂರು ಮತ್ತು ಕೋಲಾರ ಚಿನ್ನದಗಣಿ ಪ್ರದೇಶಗಳಲ್ಲಿ ನಡೆಯತಕ್ಕ ಕೈಗಾರಿಕೆಗಳಿಗೆ ಮಾತ್ರ ಪ್ರಯೋಜನವುಂಟಾಗುತಿದೆ. ಮದರಾಸು ಸರ್ಕಾರದವರು ಮೇಕೆದಾಟಿನ ನೀರಿನ ಸಂಬಂಧವಾದ ತಮ್ಮ ಹಕ್ಕುಗಳನ್ನು ಕೆಲವು ಷರತ್ತುಗಳಮೇಲೆ ಮೈಸೂರು ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತಾರೆ. ಕೋಲಾರದ ಚಿನ್ನದಗಣಿ ಪ್ರದೇಶಗಳಿಗೂ, ಇತರ ಕೈಗಾರಿಕೆಗಳಿಗೂ ದಿನೇದಿನೇ ಹೆಚ್ಚಾಗಿ ಬೇಕಾಗುತ್ತಿರುವ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿ ಸದರಿ ನೀರನ್ನು ಇನ್ನು ಸ್ವಲ್ಪಕಾಲದಲ್ಲಿಯೇ ಉಪಯೋಗಿಸಿಕೊಳ್ಳಬೇಕಾಗುವುದು. ಕೈಗಾರಿಕೆಯನ್ನು ಅಭಿವೃದ್ಧಿಗೆ ತರಲು ತಕ್ಕ ಸಾಧನಗಳು ಮಲೆನಾಡಿನಲ್ಲಿ ಮತ್ತೂ ಹೆಚ್ಚಾಗಿವೆ. ದೀಪದಕಡ್ಡಿಯನ್ನು ತಯಾರುಮಾಡುವ ಕಾರ್ಖಾನೆಯನ್ನೂ, ಕಾಗದದ ಕೈಗಾರಿಕೆಯನ್ನೂ, ಸಕ್ಕರೆಯ ಕಾರ್ಖಾನೆಯನ್ನೂ, ಖನಿಜ ವಸ್ತುಗಳ ಕೈಗಾರಿಕೆಗಳನ್ನೂ, ಇತರ ಮುಖ್ಯವಾದ ಎಷ್ಟೋ ಕೈಗಾರಿಕೆಗಳನ್ನೂ, ನಡೆಸುವುದಕ್ಕೆ ವಿಶೇಷವಾಗಿ ಅವಕಾಶವಿದೆ; ಇವುಗಳಿಗೆಲ್ಲಾ ಸುಲಭವೆಚ್ಚದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಆವಶ್ಯಕ. ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಬಗ್ಗೆ ಗೇರಸೊಪ್ಪೆಯಲ್ಲಿರುವ ಜಲಪಾತವನ್ನು ಉಪಯೋಗಕ್ಕೆ ತರುವ ವಿಷಯವು ಬಹುಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಏರ್ಪಾಡು ಎಷ್ಟರ ಮಟ್ಟಿಗೆ ಫಲಕಾರಿಯಾಗಿ ಪರಿಣಮಿಸಬಹುದೆಂಬ ಸಂಗತಿಯನ್ನು ಕೂಲಂಕಷವಾಗಿ ಪರಿಶೀಲಿಸತಕ್ಕ ಬಗ್ಗೆ ಸರ್ಕಾರದವರು ಈಚೆಗೆ ಹುಕುಂ ಮಾಡಿದರು; ಸದರಿ ಕೆಲಸಕ್ಕಾಗಿ ನೇಮಕವಾಗಿದ್ದ ಆಫೀಸರವರು ಕಳುಹಿಸಿದ ವರದಿಯು ಈಗತಾನೆ ತಲಪಿರುತ್ತದೆ. ಈ ಏರ್ಪಾಡನ್ನು ನೆರವೇರಿಸಲು ಬಹಳ ಭಾರೀ ವೆಚ್ಚವು ತಗಲುತ್ತದೆ. ಇದನ್ನು ನಡೆಸಿದಪಕ್ಷದಲ್ಲಿ, ಮಲೆನಾಡಿನಲ್ಲಿ ಭಾರಿ ಕೈಗಾರಿಕೆಗಳನ್ನಾರಂಭಿಸುವುದಕ್ಕೆ ಅವಕಾಶವು ದೊರೆಯುತ್ತದೆ. ಅಲ್ಲದೆ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ನಡೆಯುತ್ತಿರುವ ಕಬ್ಬಿಣದ ಭಟ್ಟಿಯ ಕೆಲಸದ ಸಂಬಂಧದಲ್ಲಿ ಅನೇಕ ಸಣ್ಣಪುಟ್ಟ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಅನುಕೂಲವಾಗುವುದು. ಚಾಲ್ತಿವರುಷದಲ್ಲಿ ಈ ಏರ್ಪಾಡನ್ನು ಸರ್ವತೋಮುಖವಾಗಿ ಮತ್ತು ಸಂಪೂರ್ಣವಾಗಿ ಪರಿಶೋಧಿಸಲಾಗುವುದು ಮತ್ತು ಮುಂದಣವರುಷದ ಈ ಸಭೆಯ ದಸರಾ ಅಧಿವೇಶನದಲ್ಲಿ ಇದರ ವಿಚಾರದಲ್ಲಿ ನಿರ್ಧರವಾಗಿ ತಿಳಿಸಲು ಸಾಧ್ಯವಾದೀತೆಂದು ಕೋರುತ್ತೇವೆ.

ಭಟ್ಕಲಿನ ರೇವು.—ಪಶ್ಚಿಮತೀರದಲ್ಲಿರುವ ಭಟ್ಕಲಿನಲ್ಲಿ ರೇವನ್ನು ಸ್ಥಾಪಿಸುವ ಬಗ್ಗೆ ಒಂದು ಪ್ರಾಜೆಕ್ಟನ್ನು ಕುರಿತು ಕಳೆದ ಅಕ್ಟೋಬರು ತಿಂಗಳಲ್ಲಿ ಈ ಸಭೆಯಲ್ಲಿ ನಾವು ಮಾಡಿದ ಭಾಷಣದಲ್ಲಿ ಸೂಚಿಸಿದ್ದೆವಷ್ಟೆ. ಸದರಿ ಪ್ರಾಜೆಕ್ಟನ್ನು ಕೈಬಿಟ್ಟಿಲ್ಲವೆಂದೂ, ದ್ರವ್ಯಾನುಕೂಲವು ಒದಗಿದಾಗ ಪಶ್ಚಿಮತೀರದವರೆಗೆ ರೈಲ್ವೆಯು ಬಡಾಯಿಸಲನುಕೂಲಿಸುವಂತೆ ಶಿವಮೊಗ್ಗಾ-ಆರಸಾಳು ಲೈನಿನ ಕಾಮಗಾರಿಯೇ ಮೊಟ್ಟಮೊದಲು ಕೈಗೊಳ್ಳುವ ರೈಲ್ವೆ ಕಾಮಗಾರಿಯೆಂದೂ ತಿಳಿಸಿದ್ದೆವು. ಭಟ್ಕಲ್ ರೇವಿನ ಮತ್ತು ಶಿವಮೊಗ್ಗಾದಿಂದ ಭಟ್ಕಲ್ ರೇವಿನವರೆಗೆ ರೈಲ್ವೆ ಲೈನನ್ನು ಹಾಕುವ ವಿಷಯವು ಕಳೆದ ವರುಷದಲ್ಲಿ ಸ್ವಲ್ಪವೂ ಮುಂದುವರಿಯಲಿಲ್ಲ; ಹಣವಿಲ್ಲದುದರ ದೆಸೆಯಿಂದ, ಪ್ರಕೃತದಲ್ಲಿ ಈ ಏರ್ಪಾಡುಗಳನ್ನು ಸರ್ಕಾರದವರು ಕೈಗೊಳ್ಳುವ ಸ್ಥಿತಿಯಲ್ಲಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ.

ಪಶ್ಚಿಮತೀರದವರೆಗೆ ನೇರವಾದ ಮತ್ತು ಸುಗಮವಾದ ಮಾರ್ಗವಿಲ್ಲದಿರುವುದರ ದೆಸೆಯಿಂದ ಸಂಸ್ಥಾನಕ್ಕೆ ವಿಶೇಷ ಅನಾನುಕೂಲವುಂಟಾಗಿದೆ. ಆದಕಾರಣ, ಇಂಥಾ ಮಾರ್ಗವೊಂದನ್ನು ಕಲ್ಪಿಸುವುದು ಅತ್ಯವಶ್ಯವಾಗಿದೆ. ವರುಷವೆಲ್ಲಾ ಅವಿಚ್ಛಿನ್ನವಾಗಿ ಕೆಲಸ ನಡೆಯುವ ರೇವಿಗೆ ಅತಿ ಸಮೀಪವಾದ ಮತ್ತು ನೇರವಾದ ಮಾರ್ಗವನ್ನು ಕಲ್ಪಿಸಿಕೊಂಡಲ್ಲಿ, ಸಂಸ್ಥಾನದ ವಾಣಿಜ್ಯ ಮತ್ತು ಕೈಗಾರಿಕೆಯ ಅಭಿವೃದ್ಧಿಗೆ ವಿಶೇಷವಾಗಿ ಸೌಲಭ್ಯವುಂಟಾಗುತ್ತದೆ. ಇದೂ ಅಲ್ಲದೆ, ಶಿವಮೊಗ್ಗೆಯಿಂದ ಭಟ್ಕಲ್ಲಿಗೆ ರೈಲ್ವೆ ಮಾರ್ಗವನ್ನೇರ್ಪಡಿಸಿ ಭಟ್ಕಲ್ ರೇವೆಯನ್ನು ಅನುಕೂಲಪಡಿಸಿಕೊಂಡಲ್ಲಿ, ಇದುವರೆಗೂ ರೂಢಿಸಲ್ಪಡದ ಸ್ವಾಭಾವಿಕವಾದ ಸಾಂಪತ್ತಿಕ ಸಾಧನಗಳು ಯಥೇಷ್ಟವಾಗಿರುವ ಮತ್ತು ಈಗ ಅಧೋಸ್ಥಿತಿಯು ತುಂಬಾ ಅತೃಪ್ತಿಕರವಾಗಿರುವ ಮಲೆನಾಡು ಪ್ರಾಂತ್ಯಗಳಲ್ಲೆಲ್ಲಾ [illegible] ಸುಮುಖವಾದ ಸಂಚಾರ ಸೌಲಭ್ಯವುಂಟಾಗಿ ಅಭಿವೃದ್ಧಿಗೆ ಮಾರ್ಗವಾಗುತ್ತದೆ.

ರಾಜಕವಿಭೂಷಣಾಂಕಿತ |
ರಾಜದ್ವಿರುದಪ್ರಶಸ್ತಿಯೊಡನವನೀಶಂ ||
ಭ್ರಾಜನ್ಮಣಿಹಾರಾಂಬರ |
ರಾಜಿಯನೀಚಿತ್ತಲಿಂಗರಾಜಂಗಿತ್ತಂ ||೧||

ಬುಧಗರ್ವನಿಪಸನ್ಮಾನವ |
ನೊದವಿಸಿದೀತನಸರೋಜಸತ್ಕೃತಿಪುಣ್ಯವೆಂತೊಂ ||
ಪದುಳದೆಮೂರ್ತಿಯನಾಂತಂ |
ತೊದವಿದಬಿರುದುಮಿವಿವಂಗೆಯೋಗ್ಯಂಜಗದೋಳ್ ||೨||

ಹಾಲಿರುವಾಗಳೆಹಬ್ಬಂ |
ಮೇಲೆನಿಸಂತೊಗೆದವಸದವಿಸಿರಿಸುಖವಿವರ್ತ ||
ಕಾಲದೊಳೆಸ್ಕೈಭವದೆಪದ |
ನಾಲೋಚಿಸಿವನಾಸ್ಪನೀತನಂಸುಕೃತಿಯಂ ||೩||

ನೃಪಸ್ಥಹಧರ್ಮವಿಚಾರಾ |
ಧಿಪನಾಗಿಸಮಸ್ತಸುಕವಿವಿಬುಧಾವಳಿಗಂ ||
ವಿಪುಲಸುರಪೂಜನಾದಿಗ |
ಮುಪಹತಿತಾನಿಲ್ಲದಂತೆರಂಜನೆಗೈವಂ ||೪||

ಶ್ರೀಯುಂಚಿತಲಿಂಗರಸಂ |
ಗಾಯುಕ್ತ್ರೀಯೊಳಭಿವೃದ್ಧಿಸಿದ್ಧಿಯುಸತತಂ ||
ಈಯುಸತೊರೆಗೆಕ್ಯಾಪಾರಸ |
ತೋಯಧಿಸರುವಾಧಿರಾಜಗೋವೆಯಲಿಂಗಂ ||೫||

ಜಯಮುಕ್ತ್ಯೆಕ್ಯಪ್ಲಭೂಪಂ |
ಗಯುಮುಕ್ತ್ಯಚಿರಾಯುಮುಕ್ಕೆಭೂವಲಯುಕ್ಕಾಕಿ ||
ಶಯುವೆಸೆಮುಳಿಬೆಳೆಯುಕ್ಕೆವಿ |
ನಯಭಕ್ತಿಗಳಾತ್ಮಬಾಳ್ಗಲೋಕವಿದಲ್ಲಂ ||೬||

ಪಂಡಿತ ಟಿ. ಎಂ. ಚಂದ್ರಶೇಖರಶಾಸ್ತ್ರಿ.
ತೆಲಿಗಿಮಠ, ದಾವಣಗೆರೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ತಿರಸ್ಕೃತಲೇಖನಗಳು.

ಮ|| ಗಳಾದ ಜಿ. ಕೆ. ರುದ್ರಪ್ಪ, ಯಂ. ಸ. ಶಾಂತಪ್ಪಶೆಟ್ಟಿ ಮತ್ತು ಹಲ್ಲೂರು ಸಾಹುಕಾರ್ ಮರುಳಸಿದ್ದಪ್ಪಶೆಟ್ಟಿ ಇವರುಗಳು— ಶ್ರೀಬಾಳೆಹೊನ್ನೂರು ಪೀಠಾಧಿಕಾರಿಗಳ ಚುನಾವಣೆಯ ವಿಚಾರವಾಗಿ ರಾಜಧಾನಿಯಲ್ಲಿ ವೀರಶೈವಮುಖ್ಯಮನುಷ್ಯರುಗಳಿಂದ ನಡಿಸಲ್ಪಟ್ಟ ಎರಡು ಸಭೆಗಳ ನಡವಳಿಕೆಗಳು, ಸಭಾಧ್ಯಕ್ಷರುಗಳಿಂದ ನಮ್ಮಲ್ಲಿಗೆ ಕಳುಹಲ್ಪಟ್ಟ ಪ್ರಕಾರ ಯಥಾವತ್ತಾಗಿ ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದರಿಂದ, ಅವುಗಳಲ್ಲಿರಬಹುದಾದ ನ್ಯೂನತೆಗಳನ್ನು ಆ ಅಧ್ಯಕ್ಷರುಗಳಿಗೆ ನೀವುಗಳೇ ಬರೆದು ಅವರುಗಳಿಂದ ಸರಿಪಡಿಸಿಕೊಳ್ಳಬಹುದಾಗಿದೆ.—ಸಂ.

ಹೊಸಪೇಟೆ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್.

ಈ ಗ್ರಾಮವು ತಾಲ್ಲೂಕಿನ ಮುಖ್ಯಸ್ಥಳವಿದ್ದು ಇಲ್ಲಿ ಹಾಗೂ ಈ ತಾಲ್ಲೂಕಿನಲ್ಲಿ ವೀರಶೈವ ಜನಾಂಗದವರ ವಸತಿಯಾದರೂ ವಿಶೇಷ ಇರುತ್ತದೆ. ಹೀಗಿದ್ದು ನಮ್ಮ ವೀರಶೈವಜನಾಂಗದವರಪೈಕಿ ಈವರೆಗೂ ರಾಜಕೀಯ ವಿದ್ಯೆಯಲ್ಲಿ ಒಬ್ಬರಾದರೂ ಉತ್ತೀರ್ಣರಾಗಿದ್ದಿಲ್ಲ. ಈ ವರುಷ ನಮ್ಮ ಸುದೈವದಿಂದ ಹೊಸಪೇಟೆ ನಿವಾಸಿಗಳಾದ ಸಾಹುಕಾರು ಶ್ರೀ|| ಶಿ. ಉದ್ದಾನಯ್ಯನವರೆಂಬುವವರು ಬಿ.ಎ., ಬಿ.ಎಲ್. ಪರೀಕ್ಷೆಯಲ್ಲಿ ಪಾಸಾಗಿಬಂದು ಸದ್ಯ ವಕೀಲಿ ಕೆಲಸವನ್ನು ಪ್ರಾರಂಭಮಾಡಿರುತ್ತಾರೆ. ಹೋದ ತಿಂಗಳು 21ನೇ ತಾರೀಖಿನ ದಿವಸ ಹೊಸಪೇಟೆಯ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್ (ಚುನಾವಣೆ) ಇದ್ದು ಚಿತ್ತವಾಡಿಗಿಯ ವಾರ್ಡಿಗೆ ಸದರಿ ಉದ್ದಾನಯ್ಯನವರು ಉಮೇದ್ವಾರರಾಗಿ ನಿಂತಿದ್ದರು. ಈ ತರುಣರಿಗೆ ನಿಷ್ಪಕ್ಷಪಾತಿಗಳಾದ ಅನೇಕ ಸ್ವಜನ ಪರಜನರು ಸಹಿತ ಸಂತೋಷದಿಂದ ತಮ್ಮ ತಮ್ಮ ಓಟುಗಳನ್ನು ಕೊಟ್ಟು ಪ್ರೋತ್ಸಾಹಿಸಿದರು. ಅದರಲ್ಲಿ ಕೆಲವು ಜನರು ತಮ್ಮ ಅಸೂಯಾಂಧತೆಯನ್ನು ವ್ಯಕ್ತಗೊಳಿಸಿದ್ದಲ್ಲದೆ ಅನೇಕ ಕುಪ್ರಚಾರವನ್ನು ನಡೆಸಿ ನಗಿಸಿದರು. ಅದಾಗ್ಯೂ ದೈವಾನುಗ್ರಹದಿಂದ ಶ್ರೀ|| ಶಿ. ಉದ್ದಾನಯ್ಯನವರೇ ಉತ್ತೀರ್ಣರಾಗಿ ಬಂದರೆಂದು ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಈ ತರುಣರು ಇಂಥ ಸಾರ್ವಜನಿಕ ಕಾರ್ಯಗಳಲ್ಲಿ ಮುತುವರ್ಜಿಯಿಂದ ಕೆಲಸಮಾಡಿ ಜನರಸ್ತುತಿಗೆ ಪಾತ್ರರಾಗಿ ಇದಕ್ಕಿಂತಲೂ ಉನ್ನತವಾದ ಸ್ಥಾನವನ್ನು ಪಡೆಯತಕ್ಕ ಸಾಮರ್ಥ್ಯವನ್ನು ಜಗದೀಶನು ಅನುಗ್ರಹಿಸಲೆಂದು ಹಾರೈಸುತ್ತೇನೆ.

ಗುರುಭಕ್ತಕೇಸರಿ, ಚಿತ್ತವಾಡಿಗಿ ನಿವಾಸಿ.

ಸಾಗರ ತಾಲ್ಲೂಕು ಕೆಳದಿ.

ಈ ಕೆಳದಿಯ ಸಂಸ್ಥಾನ ಹಿರೇಮಠದಲ್ಲಿ ಪದ್ಧತಿಯುಪ್ರಕಾರವಾಗಿ ವಿಜಯದಶಮಿಯ ಉತ್ಸವವು ಬಹುವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಈ ಕಾರ್ಯಕ್ಕಾಗಿ ತಳಿರುತೋರಣ ಮುಂತಾದವುಗಳಿಂದ ಅಲಂಕರಿಸಲ್ಪಟ್ಟ ಮಠವೂ, ಊರಿನಬೀದಿಗಳು ಶೋಭಿಸುತ್ತಿದ್ದುವು. ಶ್ರೀ|| ಗೋಣಿಬೀಡು ಶ್ರೀ ಸ್ವಾಮಿಗಳೇ ಮುಂತಾದ ಶಿವಯೋಗಿಗಳ ಶಿವಾರ್ಚನೆಯು ವಾದ್ಯವೈಭವದೊಡನೆ ನೆರವೇರಿಸಲ್ಪಟ್ಟಿತು. ಮಧ್ಯಾಹ್ನದ ಗಣಾರಾಧನೆಯಾದನಂತರದಲ್ಲಿ ಈ ಪ್ರಾಂತದ ಅನೇಕ ಗ್ರಾಮಗಳ ಮುಖ್ಯಮುಖ್ಯರಾದ ವೀರಶೈವ ಮಹನೀಯರುಗಳು ಮಠಕ್ಕೆ ಸೇರಿದರು. ಈ ಸಂಸ್ಥಾನ ಪಟ್ಟಾಧ್ಯಕ್ಷರವರಾದ ಶ್ರೀ|| ರೇವಣಸಿದ್ಧಸ್ವಾಮಿಗಳವರು ಸಕಲ ಭಕ್ತಸಂದಣಿಯ ಜಯಘೋಷದೊಡನೆ ಶುಭಪ್ರದವಾದ ಈ ಸಭೆಯಲ್ಲಿ ಶಿವಪುರಾಣದಲ್ಲಿನ ಶಿವಭಕ್ತಿ ಶಿವಪೂಜಾವಿಷಯಕವಾದ ಭಾಗವನ್ನು ಬಹುಸ್ವಾರಸ್ಯವಾಗಿ ಸಭಿಕರ ಮನಸ್ಸಿಗೆ ಆನಂದತೋರುವಂತೆ ವಿವರಣೆಯೊಡನೆ ಅಪ್ಪಣೆಕೊಡಿಸಿದರು. ನಂತರ ಕನ್ಯಾಶುಲ್ಕನಿಷೇಧ, ವಿದ್ಯಾಪ್ರಸಾರ, ಐಕಮತ್ಯ, ಪ್ರಾಣಿದಯಾಪರತೆ, ಮುಂತಾದ ವಿಷಯಗಳಲ್ಲಿ ಮ|| ಕಾಗೋಡು ಶಿವಲಿಂಗಪ್ಪನವರು, ಬರದವಳ್ಳಿ ಗುರುಪ್ಪಗೌಡರು ಮುಂತಾಗಿ ಅನೇಕ ಜನರು ಉಪನ್ಯಾಸ ಮಾಡಿದರು. ಮಠದ ವಿಷಯಕವಾದ ಕೆಲವು ಸಂಗತಿಗಳಮೇಲೆ ನಿರ್ಧಾರವು ಮಾಡಲ್ಪಟ್ಟಿತು. ನಂತರ ಬಿರುದಾವಳಿಗಳಸಮೇತ ಪಲ್ಲಕ್ಕಿಯಲ್ಲಿ ಸ್ವಾಮಿಗಳವರ ಮೆರವಣಿಗೆಯೊಡನೆ ಸಕಲ ಭಕ್ತವೃಂದವೂ ಬನ್ನಿಮುಡಿಯುವ ಉದ್ದೇಶವಾಗಿ ದಯಮಾಡಿಸಿ ಪುನಃ ಮಠಕ್ಕೆ ಬಂದು ಸಿದ್ಧವಾಗಿದ್ದ ಸಿಂಹಾಸನದಲ್ಲಿ ಪಟ್ಟಾಧ್ಯಕ್ಷರವರು ಮುಹೂರ್ತಮಾಡಿಸಿದನಂತರ ಸಕಲ ಭಕ್ತರೂ ಸಾಷ್ಟಾಂಗಪ್ರಣಾಮಗಳನ್ನು ಮಾಡಿದರು. ನಂತರ ಮತಸಂಬಂಧ ಎಂದರೆ ಗುರು, ಲಿಂಗ, ಜಂಗಮ, ವಿಷಯಕವಾದ ಉಪನ್ಯಾಸಗಳು ಮುಂತಾದವು ನಡೆದು ಜಯಮಂಗಳಪದಗಳೊಡನೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಓರ್ವಪ್ರೇಕ್ಷಕ.

ನಿಷೇಧಪ್ರದರ್ಶನ ಜಾಹೀರಸಭೆಯು.

ಕಲಬುರ್ಗೆಯಲ್ಲಿಯ ಮುಸಲ್ಮಾನರು ಶ್ರಾವಣ ತಿಂಗಳಲ್ಲಿ ಮಾಡಿದ ಅತ್ಯಾಚಾರವನ್ನು ನಿಷೇಧಿಸುವದಕ್ಕಾಗಿ ತಾರೀಖು 29-9-1924 ಇಸ್ವಿಯ ಸಂಜೆಯ 6 ಘಂಟೆಗೆ ಶ್ರೀಮದ್ವೀರಲಿಂಗಚರಚಕ್ರವರ್ತಿಗಳಾದ ಕೊಟ್ಟೂರ ಮಹಾಸ್ವಾಮಿಗಳವರ ಅಪ್ಪಣೆಯಮೇರೆಗೆ ಪ್ರಣವಸ್ವರೂಪಿಗಳೂ, ಧರ್ಮಾಭಿಮಾನಿಗಳೂ ಆದ ಶ್ರೀಸಂಗನಬಸವ ಚರಮೂರ್ತಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಯು ಶ್ರೀಕ್ಷೇತ್ರ ಮಠದಲ್ಲಿ ನೆರವೇರಿತು. ಸಭೆಗೆ ಕೊಟ್ಟೂರ, ಗಿರಣಿ, ಸಾವಳಗಿಯಿಂದ ಜನರು ಬಂದಿದ್ದರು. ಮಿ|| ಮಲ್ಲಿನಾಥಶಾಸ್ತ್ರಿಗಳವರು, ಮಿ|| ಭೂಪದೇವರವರು, ಮಿ|| ಗದ್ದಿಗದ ಇಂಗ್ಲೀಷಶಾಲಾ ಮಾಸ್ತರರು, ಮಿ|| ಶಿವ್ವನಾಳಮಾಸ್ತರರು ಕಲಬುರ್ಗೆಯ ಅತ್ಯಾಚಾರದ ವಿವೇಚನ, ಧರ್ಮಪರಿಪಾಲನೆ, ಧರ್ಮಗುರುಗಳ ಕರ್ತವ್ಯ, ಕಲಬುರ್ಗೆಯ ವಿಚಾರಣಾ ಕಮಿಟಿಯ ಪರಿಸ್ಥಿತಿ ಮೊದಲಾದವುಗಳ ವಿಷಯವಾಗಿ ಸುಲಲಿತವಾಗಿ ಹೇಳಿದರು. ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

1. ಹಿಂದೂಗಳ ಪೂಜ್ಯ ದೇವಾಲಯಗಳನ್ನು ಕುರಿತು ಕಲಬುರ್ಗೆಯಲ್ಲಿ ದುರಭಿಮಾನಿಗಳಾದ ಮುಸಲ್ಮಾನರು ಮಾಡಿದ ಅತ್ಯಾಚ್ಯಾರವನ್ನು ಈ ಸಭೆಯು ತೀವ್ರನಿಷೇಧಿಸುವದು. 2. ಈಗಿದ್ದ ಕಮಿಟಿಯಿಂದ ಹಿಂದೂಗಳಿಗೆ ಯೋಗ್ಯನ್ಯಾಯವು ದೊರೆಯುವ ಸಂಭವವಿಲ್ಲ, ಅದ್ದರಿಂದ ನೈಜಾಮು ಸಾಹೇಬ ಬಹಾದ್ದೂರರವರು ಹಿಂದೂಗಳಿಗೆ ನ್ಯಾಯದೊರೆಯುವಂತೆ ಕಮಿಟಿಯ ವ್ಯವಸ್ಥೆಮಾಡಬೇಕೆಂದು ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. 3. ಕಲಬುರ್ಗೆಯಂಥ ಧಾರ್ಮಿಕ ಅತ್ಯಾಚ್ಯಾರದ ಕೃತ್ಯಗಳಲ್ಲಿಯೂ, ಧರ್ಮಗುರುಗಳು ಧರಿಸಿದ ಮೌನವ್ರತವನ್ನು ಕಂಡು ಸಭೆಗೆ ವಿಷಾದವೆನಿಸುವದು. ಅವರುಗಳು ಇನ್ನಾದರೂ ಜಾಗ್ರತರಾಗಬೇಕೆಂದು ವಿನಂತಿಯು.

ಮೊದಲಿನ 2 ಠರಾವುಗಳನ್ನು ನಾಮದಾರ ಗವ್ಹರ್ನರ್ ಜನರಲ್ ಇನ್ ಕೌನ್ಸಿಲ್‌ರವರಿಗೆ ಮತ್ತು ನಿಜಾಮು ಸಾಹೇಬರವರಿಗೆ ತಂತಿಯಿಂದ ತಿಳಿಸುವದರಲ್ಲಿ ಬಂತು. ಮಿ|| ಗದ್ದಿಗದ ಮಾಸ್ತರರು ಅಧ್ಯಕ್ಷರ ಆಭಾರಮನ್ನಣೆಯನ್ನು ಮಾಡಿದ ಮೇಲೆ ಜಯಜಯಕಾರದೊಡನೆ ಸಭಾಕಾರ್ಯವು ಸಮಾಪ್ತಿಯಾಯಿತು.

ಓರ್ವಪ್ರೇಕ್ಷಕ.

ಮಳವಳ್ಳಿಟವರ್ ವಿದ್ಯಮಾನ.

ಈಗ್ಗೆ 8-10 ದಿನಗಳಿಂದ ಕೊಂಚ ಮಳೆ ಆಗಿದೆ. ಇನ್ನೂ 1-2 ಹದ ಮಳೆಬಿದ್ದಲ್ಲಿ ಪೈರುಗಳಿಗೆ ಅನುಕೂಲವಾಗುತ್ತೆ. ಈ ಮಾಹೆ 14 ನೇ ತಾರೀಕಿನ ಸಂಪದಭ್ಯುದಯ ಪತ್ರಿಕೆಯಲ್ಲಿ ಇಲ್ಲಿನ ಮುನ್ಸಿಪಲ್ ವೈಸ್‌ಪ್ರಸಿಡೆಂಟರ ಚುನಾವಣೆ ವಿಷಯದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ವ್ಯಾಜ್ಯವು, ಹಿಂದೆ ಇಲ್ಲಿ ಅಮಲ್ದಾರರಾಗಿದ್ದು ನಿಷ್ಪಕ್ಷಪಾತಿಗಳೂ ಜನಾನುರಾಗಿಗಳೂ ಎಂದು ಪ್ರಸಿದ್ಧಿಯನ್ನು ಪಡೆದಿದ್ದ ಮ|| ಶಿದ್ಧರಾಮಪ್ಪನವರ ಕಾಲದಲ್ಲಿ ಉದ್ಭವವಾಯಿತು ಎಂದು ಬರೆದಿರುವದನ್ನು ನೋಡಲು ಬಹಳ ವಿಷಾದವಾಗುತ್ತದೆ. ಒಂದು ವೇಳೆ ಮ|| ಶಿದ್ಧರಾಮಪ್ಪನವರ ಕಾರ್ಯದಕ್ಷತೆ ಜನಾನುರಾಗ ನಿಷ್ಪಕ್ಷಪಾತ ಇವುಗಳ ವಿಚಾರದಲ್ಲಿ ಅನುಮಾನಪಟ್ಟವರು ಈ ಕೆಳಗೆ ಕಂಡ ವಿಷಯಗಳನ್ನು ಗಮನಿಸಬೇಕು. ಮ|| ಶಿದ್ಧರಾಮಪ್ಪನವರು ಮಳವಳ್ಳಿಗೆ ಅಮಲ್ದಾರರಾಗಿ ಬಂದಾಗ ಆಕ್ಟ್ರಾಯಿ ಉತ್ಪತ್ತಿ ತಿಂಗಳೊಂದಕ್ಕೆ 120-150 ರೂಪಾಯಿಗಳು ಇದ್ದದ್ದು ಇವರು ಟ್ರಾನ್ಸ್‌ಫರ್ ಆಗಿ ಹೋಗುವವರಿವಿಗೆ ಪ್ರತಿತಿಂಗಳಿನಲ್ಲೂ 500 ರೂಪಾಯಿನಿಂದ 600 ರೂಪಾಯಿವರಿವಿಗೆ ಏರಿತು. ಈಗಿರತಕ್ಕ ಅಮಲ್ದಾರ್ ಮ|| ವೈ. ಶ್ರೀಕಂಠಯ್ಯನವರು ನಮ್ಮ ಟವನ್ನಿಗೆ ಕಾಲು ಊರಿದ ದಿನದ ಲಾಗಾಯಿತು ಡಿಟೊ ಉತ್ಪತ್ತಿ ತಿಂಗಳಿಗೆ 150-200 ರೂಪಾಯಿಗಳಿಯಿತು ಮತ್ತು ಮೊಹತರ್ಫಾ ವಸೂಲಿಚಾರ ಹಿಂದೆ ಇದ್ದದ್ದಕ್ಕೆ ಹಾಲಿ ಈಗ ಇರತಕ್ಕದ್ದನ್ನು ಹೋಲಿಸಿ ನೋಡಿದರೆ ವ್ಯಕ್ತವಾಗುತ್ತೆ. ಮ|| ಶಿದ್ಧರಾಮಪ್ಪನವರ ನಿಷ್ಪಕ್ಷಪಾತದ ವಿಚಾರ ಅಮಲ್ದಾರರಿಂದ ಮೈಸೂರು ಡಿಸ್ಟ್ರಿಕ್ಟು ಪೊಲೀಸ್ ಸೂಪರಿಂಟೆಂಡೆಂಟರಾಗಿ ಬಡ್ತಿಹೊಂದಿ ಹೋಗಿರುವದು ಮತೊಂದು ನಿದರ್ಶನವಾಗಿರುತ್ತೆ. ಮೊದಲು ವೈಸ್‌ಪ್ರೆಸಿಡೆಂಟ್ ಚುನಾವಣೆ ಆದಾಗ ಅಫಿಸಿಯಲ್ಸು ಓಟ್ಸು ಕೊಡಕೂಡದು ಎಂದು ರೂಲ್ಸ್‌ನಲ್ಲಿ ವಿಶದವಾಗಿದ್ದರೂ, ತಮ್ಮ ಸ್ವಜಾತೀಯರಾದ ತಿಮ್ಮಣ್ಣಯ್ಯನವರೇ ಉತ್ತೀರ್ಣರಾಗಬೇಕೆಂಬ ದುರಾಸೆಯು ಮತ್ತು ಬ್ರಾಹ್ಮಣ ಬ್ರಾಹ್ಮಣೇತರರೆಂಬ ಬಿನ್ನಭಾವನೆಯು, ಅಮಲ್ದಾರರಲ್ಲಿ ತುಂಬಿ ತುಳುಕುತ್ತಿದ್ದದ್ದರಿಂದ, ಬ್ರಾಹ್ಮಣೇತರ ಇಬ್ಬರು ಮುನ್ಸಿಪಲ್ ಮೆಂಬರುಗಳು ರೂಲ್ಸಿಗೆ ವಿರೋಧವಾಗಿ ಅಫಿಸಿಯಲ್ಸು ಓಟುಕೊಡಕೂಡದೆಂದು ನಿರೋಧಿಸಿದಾಗ್ಯೂ, ತಿಮ್ಮಣ್ಣಯ್ಯನವರಿಗೇನೆ ಓಟುಕೊಟ್ಟಿದ್ದಾರಲ್ಲವೇ? ರೂಲ್ಸಿನಲ್ಲಿ ವಿಶದವಾಗಿ ಇದ್ದರೂ ಅಮಲ್ದಾರರು ವಿರೋಧವಾಗಿ ಓಟು ಮಾಡಿರುವದು ನೋಡಿದರೆ ಅವರು ತಮ್ಮ ಜವಾಬ್ದಾರಿ ಅರಿತಿಲ್ಲವೊ? ಅಥವಾ ಜಾತಿದ್ವೇಷದಿಂದ ಓಟುಮಾಡಿದರೊ? ಇದನ್ನು ವಾಚಕರೇ ಯೋಚಿಸಬೇಕು. ಇಂತಾ ಅನಾನುಭವಿಗಳಾದವರನ್ನು ಜವಾಬ್ದಾರಿ ಆಫೀಸುಗಳಿಂದ ಸರ್ಕಾರದವರು ಜಾಗ್ರತೆಯಾಗಿ ವರ್ಜಾಮಾಡದೆ ಇದ್ದರೆ ಪ್ರಜಾಸಮುದಾಯಕ್ಕೆ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗುವದರಲ್ಲಿ ಸಂದೇಹವಿಲ್ಲ.

ನಿಷ್ಪಕ್ಷಪಾತಿ.

ವೀರಶೈವಮಹಾಸಭೆಯು.

ಯಾರ ಆಶೀರ್ವಾದದಿಂದ ಇಡೀ ವೀರಶೈವಸಮಾಜಕ್ಕೆ ವೀರಶೈವಮಹಾಸಭೆಯು ಕಲ್ಪತರುವಾಗಿ ಜನಿಸಿತೋ ಅಂಥಾ ಸಾಕ್ಷಾತ್ ನಿರಂಜನಮೂರ್ತಿಗಳಾದ ಶ್ರೀ ಹಾನಗಲ್ ಕುಮಾರಮಹಾಸ್ವಾಮಿಗಳ ವಿರಕ್ತವರ್ಗವನ್ನು ಹಳಿಯಲು ಬಿಜಾಪುರದಲ್ಲಿ ನೆರದಿದ್ದ ಮಹಾಸಭೆಯಲ್ಲಿ ಪ್ರಯತ್ನಿಸಲ್ಪಟ್ಟದರಮೇಲೆ ಆ ತಪೋನಿಷ್ಠರ ಶಾಪವಿಶೇಷದಿಂದ ಕಲ್ಪತರುವು ಬಾರಗದ ಮರವಾಗಿ ಬೀದರಿನಲ್ಲಿ ಬೇರುಬಿಟ್ಟುಕೊಂಡು ನಿಂತಿತು. ಇದರ ಬೇರನ್ನು ಬಿಡಿಸಿ ಮುಂದಕ್ಕೆ ಸಾಗಿಸಿಕೊಂಡು ಬರಬೇಕೆಂದು ಮೈಸೂರಿನವರೂ, ಹಾಂಸಭಾವಿಯವರೂ ಬಹಳ ಸಾಹಸಮಾಡಿದಾಗ್ಯೂ ಸಾಧ್ಯವಾಗದೆ ಹೋದುದನ್ನು ನಮ್ಮ ವೀರಶೈವಸಮಾಜಕ್ಕೆ ತಿಲಕಪ್ರಾಯರಾಗಿರುವ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ಬಹಳವಾಗಿ ಚಿಂತಿಸಿ ಅದನ್ನು ಬೀದರಿನಿಂದ ಹೇಗಾದರೂ ಬೇರುಬಿಡಿಸಿ ಮುಂದಕ್ಕೆ ಸಾಗಿಸಿ ಪೂರ್ವಸ್ಥಿತಿಗೆ ತರಬೇಕೆಂದು ಸಂಕಲ್ಪಮಾಡಿ ಈ 1924 ನೇ ಡಿಸೆಂಬರ್ ತಿಂಗಳ ಕಡೆಯಲ್ಲಿ ಮಹಾಸಭೆಯನ್ನು ಕೂಡಿಸಬೇಕೆಂದು ನಿರ್ಧರಿಸಿ ಅದಕ್ಕಾಗಿ ತಕ್ಕ ಪ್ರಯತ್ನ ನಡಿಸಿರುವರೆಂದೂ, ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತಮಂಡಳವನ್ನು ಏರ್ಪಡಿಸಿರುವರೆಂದೂ ಸಮಸ್ತ ವೀರಶೈವರೂ ಈ ಸ್ಟಾರ್ ಪತ್ರಿಕೆಯದ್ವಾರ ತಿಳಿದು ಸಂತೋಷಪಟ್ಟು ದಿ|| ಬ|| ಶೆಟ್ಟರನ್ನು ವಂದಿಸುತ್ತಿರುವರು. ಈಮಧ್ಯೆ ವೀರಶೈವಮಹಾಸಭೆಯನ್ನು ಕೂಡಿಸಬೇಕೆಂಬ ಕಾಲದಲ್ಲೇ ಬೆಳಗಾವಿಯಲ್ಲಿ ಕೂಡುವ ರಾಷ್ಟ್ರೀಯ ಸಭೆಗೆ ಅನೇಕ ವೀರಶೈವರು ಹೋಗುವ ಸಂಭವವಿರುವದರಿಂದ, ಆಕಾಲದಲ್ಲಿ ಬಿಟ್ಟು ಬೇರೆಕಾಲ ಅಂದರೆ ಮುಂದಿನ ಬೇಸಿಗೆಯ ರಜಾಕಾಲದಲ್ಲಿ ವೀರಶೈವಮಹಾಸಭೆಯನ್ನು ಕೂಡಿಸುವದು ಒಳ್ಳೆಯದು, ಹಾಗಲ್ಲದೆ ಈಗಲೇ ಮಾಡುವದಾದರೆ ಸಭೆಕೂಡಿಸಿದೆವೆಂದಂತಾಗುವದಲ್ಲದೆ ಪ್ರಯೋಜನವಾಗುವದಿಲ್ಲ, ವಗ್ಗೈರೆಯಾಗಿ ಧಾರವಾಡದ ವಿಜಯ ಮೊದಲಾದ ಕೆಲವು ಉತ್ತರದೇಶದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ವೀರಶೈವಸಮಾಜದಲ್ಲಿ ಅನೈಕಮತ್ಯವೂ, ದ್ವೇಷಾಸೂಯೆಗಳೂ ಹುಟ್ಟಿ ವಿಶೇಷ ಅನರ್ಥವಾಗುತ್ತಿರುವ ಈ ಸಮಯದಲ್ಲಿ ಮಹಾಸಭೆಯನೆಪದಿಂದ ನಾನಾ ದೇಶದ ವೀರಶೈವಪ್ರಮುಖರು ಅತಿ ಜಾಗ್ರತೆಯಾಗಿ ಒಂದುಕಡೆ ಸೇರಿ ಸಮಾಜಬಾಂಧವರು ಪರಸ್ಪರದ್ವೇಷಾಸೂಯೆಗಳನ್ನು ಬಿಟ್ಟು ಐಕಮತ್ಯದಿಂದ ನಡೆದುಕೊಳ್ಳುವ ಉಪಾಯವನ್ನು ಕಂಡುಹಿಡಿಯಲು ಸಾಧಕವಾಗುವಂತೆ ಬೆಂಗಳೂರಿನ ವೀರಶೈವಬಂಧುಗಳು ಮಹಾಸಭೆಯನ್ನು ತಮ್ಮಲ್ಲಿ ಕೂಡಿಸಲು ಏರ್ಪಡಿಸಿ ಸಮಾಜಕ್ಕೆ ವಿಶೇಷ ಉಪಕಾರವನ್ನುಮಾಡಿರುತ್ತಾರೆ. ಈ ಸಮಯದಲ್ಲಿ ಪ್ರತಿಯೊಬ್ಬವೀರಶೈವನೂ ತನ್ನ ಸಮಾಜಾಭಿವೃದ್ಧಿಯಮೇಲೆ ಪೂರ್ಣ ಅಭಿಮಾನವಿಟ್ಟು ಯಾವ ಕೆಲಸವಿದ್ದಾಗ್ಯೂ ಬಿಟ್ಟು ಸಭಾಕಾಲಕ್ಕೆ ಬೆಂಗಳೂರಿಗೆ ಬಂದು ಯಥಾಶಕ್ತಿ ಸೇವೆಮಾಡತಕ್ಕದ್ದು ಮುಖ್ಯ ಧರ್ಮವಾಗಿದೆ. ಮನುಷ್ಯನು ತನ್ನ ಮತ್ತು ತನ್ನ ಸಮಾಜದ ಕಲ್ಯಾಣವನ್ನು ಮೊದಲುಮಾಡಿ ಆನಂತರ ಅನ್ಯರ ಕಲ್ಯಾಣಮಾಡಲು ಎತ್ನಿಸುವದು ಅವನ ಧರ್ಮವಾಗಿದೆ. ಶಾಸ್ತ್ರವಚನವಾದರೂ ಆ ಪ್ರಕಾರವಾಗಿಯೇ ಇರುತ್ತದೆ. ಹೀಗಿದ್ದರೂ ತನ್ನ ಸಮಾಜಸೇವೆಯನ್ನು ಅಲಕ್ಷಿಸಿ ಬೇರೆ ಕಾರ್ಯದಲ್ಲುದ್ಯುಕ್ತನಾಗುವುದರಿಂದ, ಮನೆದೇವರನ್ನು ಉಪವಾಸವಿರಿಸಿ ಮಾರಮ್ಮನಿಗೆ ತಂಬಿಟ್ಟಿನ ಆರತಿಯನ್ನು ಮಾಡಿದಂತಾಗುತ್ತದಲ್ಲವೆ? ಈ ಮಹಾಸಭೆಯನ್ನು ಮೈಸೂರಿನವರು ಮಾಡಬೇಕೆಂದಾಗ ಹಾಂಸಭಾವಿಯವರು ಅಡ್ಡಬಂದದ್ದರಿಂದ ಮೊದಲನೆಯ ವಿಘ್ನವಾಯಿತು; ಹಾಂಸಭಾವಿಯವರು ಎತ್ನಿಸಿದಾಗ ರೋಗೋಪದ್ರವದ ನೆಪವುಂಟಾಗಿ ಎರಡನೆ ವಿಘ್ನವುಂಟಾಯಿತು. ಈಗ ಬೆಂಗಳೂರಿನವರು ಪ್ರಯತ್ನಿಸಿರುವಾಗ್ಗೆ ರಾಷ್ಟ್ರೀಯಮಹಾಸಭೆಯ ಅಡಚಣೆಯನ್ನೊಡ್ಡುವದರಿಂದ ಮೂರನೆಯ ವಿಘ್ನವಾಗುವುದು ಅಂದರೆ ಮಹಾಸಭೆಯು ನೆರೆಯಲು ನಿರಂತರ ವಿಘ್ನವಾಗುವದೆಂದು ಹೇಳಬೇಕಾದ್ದಿಲ್ಲ. ಸಮಾಜವು ಕಳೆದುಕೊಂಡಿರುವ ಕಣ್ಣನ್ನು ಮರಳಿ ಬರಮಾಡಿಕೊಳ್ಳುವ ಈ ಸುಸಮಯವನ್ನು ಹೋಗಲಾಡಿಸಿ ಇಡೀಸಮಾಜವೇ ಪೇಚಾಡುವಂತೆ ನಮ್ಮ ಉತ್ತರದೇಶದ ವೀರಶೈಬಂಧುಗಳು ಮಾಡುವದು ಜಾಣತನವಲ್ಲ. ಅದ್ದರಿಂದ ಅವರುಗಳು, ಅನೈಕಮತ್ಯದಿಂದಲೂ ಅಂತಃಕಲಹದಿಂದಲೂ ಅಧೋಗತಿಗಿಳಿಯುತ್ತಿರುವ ತಮ್ಮ ಸಮಾಜಸುಧಾರಣೆಯ ವಿಚಾರದಲ್ಲಿ ಗಮನವಿಟ್ಟು, ಪ್ರತಿವರ್ಷದಲ್ಲೂ ಯಾವದಾದರೂ ಒಂದು ಕಡೆಯಲ್ಲಿ ನಿರ್ವಿಘ್ನವಾಗಿನಡಿಯುತ್ತಿರುವ ರಾಷ್ಟ್ರೀಯಸಭೆಯ ಸೇವೆಯನ್ನು ಮಾಡಲು ಅವಕಾಶವಿರುವದರಿಂದ ಈವೇಳೆ ಅಸ್ತಿತ್ವಕ್ಕೆ ಬರಲಿಕ್ಕಿರುವ ವೀರಶೈವ ಮಹಾಸಭೆಯು ಬೆಂಗಳೂರಿನ ವೀರಶೈವಬಂಧುಗಳು ನಿರ್ಧರಿಸಿರುವಂತೆ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಿರ್ವಿಘ್ನವಾಗಿ ನಡೆಯುವಂತೆಮಾಡಿ ಆ ಕೀರ್ತಿಯನ್ನು ತಮ್ಮ ಪಾಲಿಗೆ ತಂದುಕೊಳ್ಳುವವರಾಗಲೆಂದು ಕೋರುತ್ತೇನೆ. ಹಾಗಲ್ಲದೆ ಸಭೆಯು ನಡೆಯದಂತೆ ಮುಷ್ಕರಮಾಡುವದಾದಲ್ಲಿ ಕೈಗೆಬಂದ ತುತ್ತು ಬಾಯಿಗೆಬರದಂತಾಗಿ ಇಡೀಸಮಾಜವೇ ಪೇಚಾಡುವಂತಾಗುವುದರಲ್ಲಿ ಖಂಡಿತವಾಗಿಯೂ ಸಂಶಯವಿಲ್ಲ.

ಮಹಾಸಭಾಭಿಮಾನಿ.

ಕ್ರೈಸ್ತರ ಶುದ್ಧೀಕರಣ.

ಕಳೆದ 15 ನೇ ತಾ|| ಬುಧವಾರ ನಂಜನಗೂಡು ತಾಲ್ಲೂಕು ಕಿರಗುಂದದ ಗ್ರಾಮದಲ್ಲಿ ಕ್ರೈಸ್ತರ ಶುದ್ಧೀಕರಣದ ಒಂದು ನವೀನಕಾರ್ಯವು ನಡೆಯಿತು. ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಿಕೊಳ್ಳಲ್ಪಟ್ಟಿದ್ದ ಮನೆಯನೆಂಬಾತನನ್ನು ಸಂಸಾರಸಮೇತ ಆತನ ಮನಃಪೂರ್ವಕವಾಗಿಯೂ ಸುತ್ತುಮುತ್ತಲಿನ ಸುಮಾರು 15-20 ಗ್ರಾಮದ ಮುಖಂಡರುಗಳ ಅನುಮತಿಯಿಂದಲೂ ಪುನಃ ಹಿಂದೂಮತಕ್ಕೆ ಸೇರಿಸಿಕೊಳ್ಳಲಾಯಿತು.

ಇದೇ ತಿಂಗಳು 1 ನೇ ತಾ|| ನಮ್ಮ ಗ್ರಾಮರಕ್ಷಣಾಸಭೆಗೆ ಮೇಲ್ಕಂಡ ಮನೆಯನು ಅರ್ಜಿಯನ್ನು ಬರೆದು ಅದರಲ್ಲಿ ತಾನು ಕ್ರೈಸ್ತಪಾದ್ರಿಗಳಿಂದ ಹಣವನ್ನು ಕೊಡುತ್ತೇವೆಂಬ ಭರವಸೆಯಿಂದಲೂ, ಅವನಿಗೆ ಸಂಘದಲ್ಲಿ ಉತ್ತಮತರದ ಗೌರವವು ದೊರೆಯುವಂತೆ ಮಾಡುವುದಾಗಿಯೂ ಇವೇ ಮುಂತಾದ ಆಸೆಗಳಿಂದ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟನೆಂಬದಾಗಿಯೂ, ಆಶ್ರಯದಿಂದ ಇವನ ಕೋರಿಕೆಯು ಈಡೇರದೆ, ಈಗ ಅನೇಕ ವಿಧವಾದ ತೊಂದರೆಗಳಿಗೆ ಗುರಿಯಾಗಿರುವುದರಿಂದಲೂ, ತನ್ನನ್ನು ಪುನಃ ತಮ್ಮ ಜಾತಿಗೆ ಸೇರಿಸುವಂತೆ ಮಾಡಿಕೊಡಬೇಕೆಂದೂ ಪ್ರಾರ್ಥಿಸಿದನು. ಅದರಂತೆ ನಾನು ಈ ವಿಷಯವನ್ನು ಪರಿಶೀಲಿಸಿ ಅನೇಕ ಗ್ರಾಮಗಳಿಗೆಹೋಗಿ ಅಲ್ಲಿನ ಮುಖಂಡರುಗಳಕೂಡ ಮಾತನಾಡಿದ್ದರಲ್ಲಿ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟಿದ್ದ ಪಂಚಮರನ್ನು ಪುನಃ ಜಾತಿಗೆತೆಗೆದುಕೊಳ್ಳುವುದಕ್ಕೆ ಅವರೆಲ್ಲರೂ ಸಮ್ಮತಿಸಿದರು.

ಸುಮಾರು ಒಂದೂವರೆ ವರ್ಷಗಳ ಹಿಂದೆ ರೆವರೆಂಡ್ ಮಿ|| ಸಾಡೇಸಾಹೇಬರವರು ಕಿರಗುಂದದಗ್ರಾಮಕ್ಕೆ ಬಂದಿದ್ದಾಗ ಅಲ್ಲಿನ ಪ್ರಜೆಗಳಿಗೆ ಒಂದು ಉಪನ್ಯಾಸವನ್ನುಮಾಡಿ, ಅದರಲ್ಲಿ ಹಿಂದೂಮತವನ್ನು ಅನೇಕ ವಿಧವಾಗಿ ದೂಷಿಸಿ, ಕ್ರೈಸ್ತಮತವನ್ನು ಶ್ಲಾಘಿಸಿ, ನಮ್ಮ ಆಚಾರವ್ಯವಹಾರಗಳನ್ನು ಖಂಡಿಸಿ ವಿಗ್ರಹಾರಾಧನೆ, ನಾಮಧಾರಣೆ, ಶಿಖಾಧಾರಣೆ ಮುಂತಾದ ಆರ್ಯಪದ್ಧತಿಗಳನ್ನು ತಿರಸ್ಕರಿಸಿ, ಪಂಚಮರು ಕ್ರೈಸ್ತಮತಕ್ಕೆಸೇರಿದ ಮಾತ್ರದಿಂದಲೇ ಅವರಿಗೆ ಸಕಲ ಸನ್ಮಾನಗಳುಂಟಾಗಿ, ಗ್ರಾಮದ ಎಲ್ಲಾ ಬೀದಿಗಳಲ್ಲಿಯೂ ಓಡಾಡುವುದಕ್ಕೂ ಮತ್ತು ಇತರ ವಿಧವಾದ ಸಾಂಘಿಕ ಗೌರವಗಳನ್ನು ಪಡೆಯುವುದಕ್ಕೂ ಅನುಕೂಲವಾಗುವುದೆಂದು ಆಶೆತೋರಿಸಿ, ದುರ್ಬೋಧನೆಯನ್ನುಮಾಡಿದ್ದರು. ಈ ದುರ್ಬೋಧನೆಯಿಂದ ಸುಮಾರು 19 ಜನ ಅಜ್ಞರು ಮರುಳುಮಾಡಲ್ಪಟ್ಟು ಒಡನೆಯೇ ಕ್ರೈಸ್ತಮತಕ್ಕೆಸೇರಿಕೊಂಡರು. ಆ ಪೈಕಿ ಮೇಲ್ಕಂಡ ಮನೆಯನು ಮತ್ತು ಅವನ ಸಂಸಾರವೂ ಸೇರಿಸಲ್ಪಟ್ಟಿದ್ದರು. ಮನೆಯನಿಗೆ ಸುನಂದನೆಂಬ ನಾಮಧೇಯವೂ, ಇತರರುಗಳಿಗೂ ಅದೇ ವಿಧವಾದ ಬೇರೆಬೇರೆ ಹೆಸರುಗಳೂ ಕೊಡಲ್ಪಟ್ಟವು. ಅವನತಲೆ ಕ್ರಾಪ್‌ಮಾಡಲ್ಪಟ್ಟಿತು. ಪಾದ್ರಿಗಳ ಪದ್ಧತಿಪ್ರಕಾರ ಶಿಖಾಖಂಡನ, ಜ್ಞಾನಸ್ನಾನವೇ ಮುಂತಾದವುಗಳೊಡನೆ ಮನೆಯನು ಕ್ರೈಸ್ತಮತಕ್ಕೆಸೇರಿಸಲ್ಪಟ್ಟನು. ಉತ್ತರೋತ್ತರ ಸುನಂದನು ನಿರೀಕ್ಷಿಸಿಕೊಂಡಿದ್ದ ಯಾವ ಮಹತ್ಪ್ರಯೋಜನವೂ ಉಂಟಾಗದೆ ಅನೇಕ ವಿಧವಾದ ತೊಂದರೆಗಳೇ ಪ್ರಾಪ್ತವಾದುದರಿಂದ ತನ್ನ ಪೂರ್ವದಸ್ಥಿತಿಯನ್ನೇ ಅವಲಂಬಿಸಬೇಕೆಂದು ಮನಸ್ಸನ್ನುಮಾಡಿ ಮೇಲ್ಕಂಡ ಪ್ರಕಾರ ಈ ಸಭೆಗೆ ಅರ್ಜಿಯನ್ನು ಹಾಕಿದನು. ಈತನನ್ನು ಶುದ್ಧಮಾಡಿ ಸ್ವಜಾತಿಗೆಸೇರಿಸುವುದಕ್ಕಾಗಿ ಸುತ್ತುಮುತ್ತಲಿನ 15-20 ಗ್ರಾಮದಪ್ರಜೆಗಳಿಂದಕೂಡಿದ ಒಂದು ಸಭೆಯು ಕಿರುಗುಂದದಗ್ರಾಮದಲ್ಲಿ ಕಳೆದ 15ನೇ ತಾ|| ಬುಧವಾರದಿವಸ ಸೇರಿತು. ಆ ಕಾಲದಲ್ಲಿ ತಾಲ್ಲೂಕು ಅಮಲ್ದಾರರವರೂ, ಪೊಲೀಸ್ ಇನ್ಸ್‌ಪೆಕ್ಟರವರೂ, ತಾಲ್ಲೂಕು ಬೋರ್ಡು ವೈಸ್‌ಪ್ರೆಸಿಡೆಂಟರವರೂ, ಡಾಕ್ಟರವರೂ ಮತ್ತು ಮ|| ಬಿ. ಎಸ್. ನಾಗೇಶರಾಯರವರೂ ಸಹ ದಯಮಾಡಿಸಿದ್ದರು. ಮೈಸೂರಿನ ಶ್ರೀಮಾನ್ ಗೋವಿಂದಾಚಾರ್‌ಸ್ವಾಮಿಗಳವರು ನನ್ನ ಪ್ರಾರ್ಥನೆಯಂತೆ ಅಲ್ಲಿಗೆ ದಯಮಾಡಿಸಿದ್ದರು. ಅನಂತರ ಅಲ್ಲಿ ಒಂದು ಶ್ರೀರಾಮಮಂದಿರವು ಸ್ಥಾಪಿಸಲ್ಪಟ್ಟಿತು. ಹಿಂದೂಮತದ ವಿಷಯದಲ್ಲಿ ಒಂದು ಉಪನ್ಯಾಸವು ಸ್ವಾಮಿಗಳವರಿಂದಮಾಡಲ್ಪಟ್ಟಿತು. ಸುನಂದನಿಗೆ ಶಿಖಾಧಾರಣೆ, ನಾಮಧಾರಣೆಗಳು, ಮಾಡಿಸಲ್ಪಟ್ಟು ಪದ್ಧತಿಪ್ರಕಾರ ಅವನು ಸಂಸಾರಸಮೇತ ಸ್ವಮತಕ್ಕೆ ಸೇರಿಸಲ್ಪಟ್ಟನು. ಅವನ ಜಾತಿಬಂಧುಗಳು ಸಾವಿರಾರು ಜನರ ಅನುಮತಿಯಿಂದಲೂ ಈ ಕಾರ್ಯವು ತೃಪ್ತಿಕರವಾಗಿ ಪರಿಣಮಿಸಿತು.

ಇದರಿಂದ ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಲ್ಪಟ್ಟಿದ್ದವರನ್ನು ಜನರ ಅನುಮತಿಯಂತೆ ಸ್ವಜಾತಿಗೆ ಸೇರಿಸಿಕೊಳ್ಳುವ ಪ್ರಯತ್ನಕ್ಕೆ ಅಸ್ತಿಭಾರವು ಹಾಕಲ್ಪಟ್ಟಿತು. ಮತಾಂತರವನ್ನು ಸೇರಿ ಹಿಂದೂಜನಾಂಗವನ್ನು ಶಿಥಿಲಮಾಡುತ್ತಿರುವ ಜನರೆಲ್ಲರೂ ಈ ಮೂಲಕ ತಮ್ಮ ತಮ್ಮ ಸ್ವಜಾತಿಗಳನ್ನು ಪುನಃ ಅವಲಂಬಿಸುವರೆಂದು ನಂಬಲ್ಪಟ್ಟಿದೆ. ಪುನಃ ಸ್ವಜಾತಿಯನ್ನು ಸೇರಬೇಕೆಂದು ಬರುವವರಿಗೆ ವಿಶೇಷವಾದ ದಂಡವನ್ನು ಹೊರಿಸದೆ ಸಮಾಜದ ಗೌರವಕ್ಕಾಗಿ ಕೇವಲ 4 ಆಣೆಯನ್ನು ತೆಗೆದುಕೊಂಡು ಅವರನ್ನು ಪುನಃ ಸೇರಿಸಿಕೊಳ್ಳಬಹುದೆಂದು ತೀರ್ಮಾನವಾಗಿದೆ. ಈ ತೀರ್ಮಾನದಂತೆ ಮೇಲ್ಕಂಡ ಮನೆಯನು 4 ಆಣೆಯನ್ನು ತಪ್ಪುಕಾಣಿಕೆಯಾಗಿ ಕೊಟ್ಟಿರುತ್ತಾನೆ.

ಮೇಲ್ಕಂಡ ಕಾರ್ಯವೆಲ್ಲವೂ ಸಾಂಗವಾಗಿ ನಡೆದಮೇಲೆ ಸುಮಾರು ಒಂದೂವರೆ ಘಂಟೆಯಕಾಲ ಮೋಹನರಾಜನಿಂದ ಪುಷ್ಪವೃಷ್ಟಿಯಾಗಿ ಜನರೆಲ್ಲರಿಗೂ ಆನಂದವನ್ನುಂಟುಮಾಡಿತು.

ಎಸ್. ರಾಮಚಂದ್ರರಾವ್ (ಸೆಕ್ರಿಟರಿ,)
ಗ್ರಾಮರಕ್ಷಣೆಸಭಾ, ತಗಡೂರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ

ದಿವಾನ್‌ಸಾಹೇಬರವರು ಮಾಡಿದ ಭಾಷಣದ ಮುಖ್ಯಾಂಶ.

(ದಸರಾ ಅಧಿವೇಶನ)

10ನೆಯ ಅಕ್ಟೋಬರ್ 1924

(ಕಳೆದವಾರದ ಶೇಷ.)

ವಿದ್ಯಾಭ್ಯಾಸದ ಮೆಮೊರ್ಯಾಂಡಂ ಮೇಲಣ ಸರ್ಕಾರೀ ಹುಕುಮಿನಲ್ಲಿ ಕಂಡ ಪರಿಷ್ಕರಣಗಳಲ್ಲಿ ಹೆಚ್ಚು ಸಂಖ್ಯೆಯವುಗಳನ್ನು ಆಚರಣೆಗೆ ತಂದಿರುವುದು ಮೇಲ್ಕಂಡ ವಿವರಣೆಯಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಏನಿದ್ದರೂ, ಕೆಲವನ್ನು ಹುಕುಮಿನಲ್ಲಿ ಇದ್ದಂತೆಯೇ ಆಚರಣೆಗೆ ತಂದಿದೆ. ಮತ್ತೆ ಕೆಲವನ್ನು ಅವಶ್ಯಕಂಡ ರೀತಿಯಲ್ಲಿ ಈಗಿನ ಸ್ಥಿತಿಗೆ ತಕ್ಕಂತೆ ಮಾರ್ಪಡಿಸಿ ಆಚರಣೆಗೆ ತರಲಾಗಿದೆ. ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಮತ್ತಷ್ಟು ಉದಾರ ಬುದ್ಧಿಯಿಂದ ಸರ್ಕಾರದವರೊಡನೆ ಏಕೀಭವಿಸಿ ಪ್ರಯತ್ನಮಾಡುವುದಾದರೆ ಅಭಿವೃದ್ಧಿಯ ಕಾರ್ಯಗಳು ಇನ್ನೂ ತೀವ್ರವಾಗಿ ನಡೆಯಬಹುದಾಗಿವೆ. ಕೆಲವು ಡಿಸ್ಟ್ರಿಕ್ಟುಗಳಲ್ಲಿ ಮಾತ್ರವೇ ಎಜುಕೇಷನ್ ತೆರಿಗೆಯನ್ನು ವಸೂಲ್ಮಾಡುತ್ತಿರುವುದರಿಂದ ವಿದ್ಯಾಭಿವೃದ್ಧಿಯ ಕಾರ್ಯಗಳು ಎಲ್ಲಾ ಕಡೆಗಳಲ್ಲಿಯೂ ಒಂದೇ ಸಮನಾಗಿ ನಡೆಯಲು ಅವಕಾಶವಿಲ್ಲದೆ ಸಮತೆಯು ತಪ್ಪಿರುತ್ತದೆ. ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಒಂದೇದರದಲ್ಲಿ ತೆರಿಗೆಯನ್ನು ವಸೂಲ್ಮಾಡಿದಲ್ಲಿ ವಿದ್ಯಾಭಿವೃದ್ಧಿಯು ಒಂದೇ ಸಮವಾಗಿ ನಡೆಯುವಂತೆ ಮಾಡಲು ಸಾಧ್ಯವಾಗುವುದು. ರೂಪಾಯಿಗೆ ಆರು ಪೈಗಳಮೇರೆಗೆ ವಿದ್ಯಾಭ್ಯಾಸದ ಸೆಸ್ಸನ್ನು ವಸೂಲ್ಮಾಡಿದರೂ ಕೂಡ, ಕೇವಲ ಸರ್ಕಾರದ ಹಣ ಒಂದರಿಂದಲೇ ಪ್ರಾಥಮಿಕ ವಿದ್ಯಾಭ್ಯಾಸದ ವಿಶಿಷ್ಟ ವೆಚ್ಚವನ್ನು ಒದಗಿಸುವುದು ಅಸಾಧ್ಯವಾಗಿರುತ್ತದೆ. ಕೆಲವು ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಹಾಲಿ ವಸೂಲ್ಮಾಡುತ್ತಿರುವ ದರಗಳಮೇರೆಗೆ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ವಸೂಲ್ಮಾಡಿಯೇ ತೀರಬೇಕೆಂದು ನಿರ್ಬಂಧವನ್ನು ಕಲ್ಪಿಸಿ ವರ್ತಿಸುವುದಾದರೆ ಮಾತ್ರವೇ ವಿದ್ಯಾಭಿವೃದ್ಧಿಯು ಇನ್ನೂ ಹೆಚ್ಚು ಹೆಚ್ಚಾಗಿ ಮುಂದುವರಿಯುವುದು ಸಾಧ್ಯವಾಗುತ್ತದೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಆಯವ್ಯಯಗಳನ್ನು ಹೇಗೆ ಕ್ರಮಗೊಳಿಸಬಹುದೆಂಬ ವಿಷಯವನ್ನು ಕಳೆದವರುಷವೆಲ್ಲಾ ಅತ್ಯಂತ ಆಸಕ್ತಿಯಿಂದ ಪರಿಶೀಲಿಸಿ ಮುಂದಟ್ಟುಮಾಡಿಕೊಳ್ಳಲಾಯಿತು. ಏಡೆಡ್ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳನ್ನಾಗಿ ಬದಲಾಯಿಸುವ ವಿಚಾರದಲ್ಲಿಯೂ, ಮತ್ತು ಅದೇ ಸಂಬಂಧವಾದ ಇತರ ವಿಚಾರಗಳಲ್ಲಿಯೂ, ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮದ ಫಲಿತಾಂಶವೆನಿಸಿ ಪ್ರಾಪ್ತವಾಗಿರುವ, ಎಂದರೆ, ಮೇಲೆವಿವರಿಸಿ ತಿಳಿಸಿದಂಥಾ ಕಷ್ಟಗಳನ್ನು ನಿವಾರಣೆ ಮಾಡಿಕೊಂಡು ಮುಂದೆ ಸಾಗುವುದಕ್ಕನುಕೂಲವಾದ ಮುಖ್ಯ ಮಾರ್ಗಗಳ ವಿಚಾರವು ಸರ್ಕಾರದವರ ಪ್ರಬಲವಾದ ಪ್ರಯಾಲೋಚನೆಯಲ್ಲಿರುತ್ತದೆ.

ಈ ಸಂಸ್ಥಾನದ ಗ್ರಾಮಗಳಲ್ಲೆಲ್ಲಾ ಪಂಚಾಯತರ ಏರ್ಪಾಡನ್ನು ಜಾರಿಗೆ ತರುವ ಉದ್ದೇಶವಿರುವುದರಿಂದಲೂ, ಅದರಿಂದ ಲೋಕಲ್ ಬೋರ್ಡುಗಳ ಆಯವ್ಯಯಸ್ಥಿತಿಯು ಅಸಮರ್ಪಕವಾಗಿ ಪರಿಣಮಿಸುವುದರಿಂದಲೂ ಎಲ್ಲಾ ತಾಲ್ಲೂಕು ಬೋರ್ಡುಗಳನ್ನೂ ವಜಾಮಾಡುವುದೂ, ಮತ್ತು ಸ್ವಾರೋಗ್ಯ, ರಸ್ತೆಗಳು, ವೈದ್ಯಸಹಾಯವೇ ಮುಂತಾದ ಬಾಬುಗಳಲ್ಲಿ ಡಿಸ್ಟ್ರಿಕ್ಟುಗಳಿಗೂ, ತಾಲ್ಲೂಕುಗಳಿಗೂ, ತಾಲ್ಲೂಕುಗಳಿಗೆ ಪರಸ್ಪರವಾಗಿಯೂ, ಗ್ರಾಮಾಂತರಗಳಿಗೆ ಪರಸ್ಪರವಾಗಿಯೂ, ಸಂಬಂಧಪಡುವ ಕೆಲಸಗಳಗೆಲ್ಲಾ ಗಮನಕೊಡುವಂತೆ ಡಿಸ್ಟ್ರಿಕ್ಟು ಬೋರ್ಡುಗಳಿಗೆ ಇನ್ನೂ ಧಾರಾಳವಾದ ಅವಕಾಶವನ್ನು ಕೊಡಬೇಕಾದುದೂ, ಅನುಕೂಲ ಕಾಣುವುದು ಮಾತ್ರವೇ ಅಲ್ಲದೆ ಆವಶ್ಯಕವೆಂದೂ ಸಹ ಸರ್ಕಾರದವರು ಭಾವಿಸಿರುತ್ತಾರೆ.

ಮ್ಯುನಿಸಿಪಾಲಿಟಿಗಳ ಮೇಲ್ಪಾಟು.

(1) ಮೈನರ್ ಮ್ಯುನಿಸಿಪಲ್ ಕೌನ್ಸಿಲುಗಳಲ್ಲಿನ ಚುನಾಯಿಸಲ್ಪಟ್ಟ ಮೆಂಬರುಗಳ ಸಂಖ್ಯೆಯನ್ನು ಆಯಾ ಕೌನ್ಸಿಲಿನ ಒಟ್ಟು ಮೆಂಬರುಗಳ ಸಂಖ್ಯೆಯನ್ನು $\frac{1}{3}$ನೇ ಭಾಗದಿಂದ $\frac{1}{2}$ಕ್ಕೆ ಹೆಚ್ಚಿಸತಕ್ಕದ್ದು;

(2) ಚುನಾವಣೆಗಳಲ್ಲಿ ವೋಟ್ ಮಾಡುವುದಕ್ಕಾಗಿ ಸ್ತ್ರೀಯರಿಗೆ ಓಟ್ ಮಾಡುವ ಅಧಿಕಾರವನ್ನು ಕೊಡತಕ್ಕದ್ದು;

(3) ಸಾಧಾರಣವಾಗಿ, ಸಿಟಿ ಮತ್ತು ಟೌನ್ ಮ್ಯುನಿಸಿಪಲ್ ಕೌನ್ಸಿಲುಗಳ ಪ್ರೆಸಿಡೆಂಟರುಗಳು, ಚುನಾಯಿಸಲ್ಪಡತಕ್ಕದ್ದು; ಮತ್ತು ಅವರು ಆಯಾ ಮ್ಯುನಿಸಿಪಲ್ ಕೌನ್ಸಿಲುಗಳಿಂದ ಚುನಾಯಿಸಲ್ಪಡುವುದಕ್ಕೆ ಬದಲಾಗಿ, ಓಟರುಗಳೆಲ್ಲರಿಂದಲೂ ಚುನಾಯಿಸಲ್ಪಡತಕ್ಕದ್ದು;

(4) ಸಿಟಿ ಮ್ಯುನಿಸಿಪಾಲಿಟಿಗಳು ಹೊರತು, ಮಿಕ್ಕ ಮ್ಯುನಿಸಿಪಲ್ ಆಫೀಸುಗಳನ್ನು ಡೆಪ್ಯುಟಿಕಮಿಷನರುಗಳು ತಪಾಸೆ ಮಾಡುವುದಕ್ಕಾಗಿ ಏರ್ಪಾಡು ಮಾಡತಕ್ಕದ್ದು.

ಮೇಜರ್ ಮತ್ತು ಮೈನರ್ ಕೆರೆಗಳ ದುರಸ್ತಿ.

ಮೇಜರ್ ಕೆರೆಗಳು.—ಸಂಸ್ಥಾನದಲ್ಲಿರುವ ಮೇಜರ್ ಕೆರೆಗಳ ಒಟ್ಟು ಸಂಖ್ಯೆಯು 2,566; ಇವುಗಳ ಪೈಕಿ 1,830 ಕೆರೆಗಳು ದುರಸ್ತು ಮಾಡಲ್ಪಟ್ಟಿವೆ. ಇನ್ನೂ ದುರಸ್ತಾಗಬೇಕಾದ ಕೆರೆಗಳು 700 ಕ್ಕಿಂತ ಹೆಚ್ಚಾಗಿವೆ. ಇವುಗಳಿಗಾಗಿ ಸುಮಾರು 50 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಆದುದರಿಂದ, ಈ ವೆಚ್ಚಕ್ಕಾಗಿ ಪ್ರತಿವರ್ಷವೂ ಸ್ವಲ್ಪ ಸ್ವಲ್ಪ ಹಣವನ್ನು ಒದಗಿಸುತ್ತಾ ಅನೇಕ ವರುಷಗಳಕಾಲ ಕೆಲಸಮಾಡಿಸಬೇಕಾಗುತ್ತದೆ.

ಕಳೆದವರುಷ (1923-24ರಲ್ಲಿ) ಮೇಜರ್ ಕೆರೆಗಳಿಗಾಗಿ 1,92,000 ರೂಪಾಯಿಗಳನ್ನು ಮಾತ್ರ ಮಂಜೂರ್ಮಾಡಲಾಯಿತು ಮತ್ತು 1,79,626 ರೂಪಾಯಿಗಳ ವೆಚ್ಚದಿಂದ ಕೆಲಸವು ನಡೆಯಿತು. ಚಾಲ್ತಿ ವರ್ಷದಲ್ಲಿ, ಮೇಜರ್ ಕೆರೆಗಳಿಗಾಗಿ ಮಂಜೂರ್ಮಾಡಿದ ಹಣವು 2,67,000 ರೂಪಾಯಿಗಳು. ಇನ್ನೂ ಹೆಚ್ಚು ಮೊಬಲಗನ್ನು ಒದಗಿಸಲು ದ್ರವ್ಯಾಭಾವದ ದೆಸೆಯಿಂದ ಅಸಾಧ್ಯವಾಗಿ ಪರಿಣಮಿಸಿತು. ಕೆಲಸವು ಇನ್ನೂ ಚೆನ್ನಾಗಿ ನಡೆಯಬೇಕಾದರೆ, ನೀರಾವರಿಯ ಕಾಮಗಾರಿಗಳ ಗ್ರಾಂಟನ್ನು ಪ್ರತಿವರ್ಷವೂ ಕನಿಷ್ಠಪಕ್ಷ 5 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಬೇಕಾಗುವುದು.

ಮೈನರ್ ಕೆರೆಗಳು.—ಸಂಸ್ಥಾನದಲ್ಲಿ ದುರಸ್ತಾಗಬೇಕಾದ ಮೈನರ್ ಕೆರೆಗಳ ಒಟ್ಟು ಸಂಖ್ಯೆಯು 14,302. ಇದುವರೆಗೆ ದುರಸ್ತಾಗಿರುವ ಕೆರೆಗಳ ಸಂಖ್ಯೆಯು ಸುಮಾರು 1,000; ಮತ್ತು ದುರಸ್ತಿಯು ಶುರುಮಾಡಲ್ಪಟ್ಟಿರುವ ಕೆರೆಗಳ ಸಂಖ್ಯೆಯು 270. ಕೆಲಸವು ಬಹುನಿಧಾನವಾಗಿ ನಡೆಯುತ್ತಿದೆ; ಇನ್ನೂ ಹೆಚ್ಚು ಗ್ರಾಂಟುಗಳನ್ನು ಕೊಡದೇ ಇದ್ದರೆ ಕೆಲಸವು ಅದೇ ರೀತಿ ನಿಧಾನವಾಗಿ ನಡೆಯಬೇಕಾಗುವುದು. 1923-24ನೇ ವರುಷದಲ್ಲಿ ಒದಗಿಸಿದ ಹಣವು 87,000 ರೂಪಾಯಿಗಳು ಮತ್ತು ವೆಚ್ಚಮಾಡಿದ ಮೊಬಲಗು 66,728 ರೂಪಾಯಿಗಳು.

ಈ ಮಧ್ಯೆ ಕಂಟ್ರಿಬ್ಯೂಷನ್ನಿನ ವಸೂಲಿಯನ್ನು ನಿರ್ಬಂಧಕ ಮಾಡುವುದಕ್ಕಾಗಿ, ಸಲಹೆ ಮಾಡಲ್ಪಟ್ಟ ಒಂದು ತಿದ್ದುಪಾಟಾದ ರೆಗ್ಯುಲೇಷನು, ನ್ಯಾಯವಿಧಾಯಕಸಭೆಯವರ ಮುಂದೆ ತರಲ್ಪಟ್ಟು ಅವರಿಂದ ಕಾನೂನಾಗಿ ಅನುಮೋದಿಸಲ್ಪಟ್ಟಿದೆ. ಅಂದಾಜನ್ನು ಮಂಜೂರ್ಮಾಡಿದ ಕೂಡಲೆ, ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕಂಟ್ರಿಬ್ಯೂಷನ್ನಿನ ವಸೂಲಿಗಾಗಿ ಹಿಂದೆ ನಿರೀಕ್ಷಿಸುತ್ತಿದ್ದಂತೆ ನಿರೀಕ್ಷಿಸದೆ ಆಯಾ ಕಾಮಗಾರಿಯನ್ನು ನಡೆಸಲು ಅವರಿಗೆ ಈಗ ಸಂಪೂರ್ಣವಾಗಿ ಅವಕಾಶವಿರುತ್ತದೆ.

ಇನಾಂ ಕಮಿಷನ್ ಮತ್ತು ಸರ್ಕಾರಿ ಆಡಳಿತಕ್ಕೊಳಪಟ್ಟಿರುವ ಇನಾಂ ಗ್ರಾಮಗಳ ಅಭಿವೃದ್ಧಿ.

ಪ್ರಸಕ್ತವರ್ಷದಲ್ಲಿ ಇನಾಂ ಕಮಿಷನಿನವರ ವರದಿಯು ಸರ್ಕಾರದವರ ದೀರ್ಘಾಲೋಚನೆಯಲ್ಲಿದ್ದಿತು; ಸರ್ಕಾರದವರು ಇಷ್ಟರಲ್ಲೇ ಅದರ ವಿಚಾರವಾಗಿ ಹುಕುಂ ನಾಮೆ ಮಾಡುವವರಾಗಿದ್ದಾರೆ. ಸರ್ಕಾರಿ ಆಡಳಿತಕ್ಕೆ ತೆಗೆದುಕೊಂಡಿರುವ ಇನಾಂ ಗ್ರಾಮಗಳ ಸ್ಥಿತಿಯನ್ನು ಉತ್ತಮಪಡಿಸುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಗ್ರಾಮಗಳ ಸ್ಥಿತಿಯನ್ನು ಮೇಲ್ಪಡಿಸುವುದಕ್ಕೆ ರೆವಿನ್ಯೂ ಆಫೀಸರುಗಳ ನಡವಳಿಕೆಯ ಬಗ್ಗೆ ತಪಶೀಲಾದ ತಿಳುವಳಿಕೆಗಳನ್ನು ಕೊಟ್ಟು ಈಚೆಗೆ ಹುಕುಂ ಸಾದರಾಗಿದೆ. ಮತ್ತು ಸರ್ಕಾರಿ ಆಡಳಿತದಲ್ಲಿರುವ ಇನಾಂ ಗ್ರಾಮಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕಮಾಡುವ ವಿಷಯವೂ ಕೂಡ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. "ಮೈನರುಗಳ" ಎಂದರೆ ಪ್ರಾಪ್ತವಯಸ್ಕರಲ್ಲದವರ ಆಸ್ತಿಯನ್ನು ರಕ್ಷಿಸಿ ಮೇಲ್ವಿಚಾರಣೆಯ ಕೆಲಸವನ್ನು ನೋಡಿಕೊಳ್ಳುವುದಕ್ಕಾಗಿ ಬ್ರಿಟಿಷ್ ಇಂಡಿಯಾದಲ್ಲಿ ಆಚರಣೆಯಲ್ಲಿರುವ "ಕೋರ್ಟ್ ಆಫ್ ವಾರ್ಡ್ಸ್" ರೆಗುಲೇಷನಿನ ಮಾದರಿಯ ಮೇಲೆ ಒಂದು ರೆಗ್ಯುಲೇಷನನ್ನು ರಚಿಸಿ ಕಾನೂನಾಗಿ ಆಚರಣೆಗೆ ತರುವ ವಿಚಾರವೂ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಮೈಸೂರು ಸಿವಿಲ್ ಸರ್ವಿಸ್ಸಿನ ಪುನರ್ವ್ಯವಸ್ಥೆ.

ಕಳೆದ ಅಕ್ಟೋಬರು ತಿಂಗಳಿನಲ್ಲಿ ನಾವು ಮಾಡಿದ ಭಾಷಣದಲ್ಲಿ, ಮೈಸೂರು ಸಿವಿಲ್ ಸರ್ವಿಸ್ಸನ್ನು ಪುನರ್ವ್ಯವಸ್ಥೆ ಮಾಡುವ ವಿಚಾರವು ಸರ್ಕಾರದವರ ತೀವ್ರವಾದ ಪರ್ಯಾಲೋಚನೆಯಲ್ಲಿದ್ದುದಾಗಿ ತಿಳಿಸಿದ್ದೆವು. ಆಗಿಂದೀಚೆಗೆ, ಹೊಸ ಉದ್ಯೋಗಸ್ಥರನ್ನು ಸದರಿ ಸರ್ವಿಸ್ಸಿಗೆ ಸೇರಿಸಿಕೊಳ್ಳಬೇಕಾದ ಅವಶ್ಯಕತೆಯು ವಿಶೇಷವಾಗಿ ಕಂಡುಬಂದುದರಿಂದ, ಮೈಸೂರುಸಂಸ್ಥಾನದಲ್ಲಿ ಹುಟ್ಟಿದ ಅಥವಾ ಬಹುಕಾಲದವರೆಗೆ ವಾಸಮಾಡಿರುವುದರ ಮೂಲಕ ಶ್ರೀಮನ್ಮಹಾರಾಜರವರ ಪ್ರಜೆಗಳೆನಿಸಿಕೊಂಡವರನ್ನು ಕನಿಷ್ಠ ಪಕ್ಷ ಇಬ್ಬರಿಗೆ ಕಡಮೆಯಿಲ್ಲದಂತೆ ಪ್ರೊಬೇಷನರಿ ಅಸಿಸ್ಟೆಂಟು ಕಮಿಷನರುಗಳನ್ನಾಗಿ ನೇಮಿಸತಕ್ಕ ಬಗ್ಗೆ ಚುನಾಯಿಸುವುದಕ್ಕಾಗಿ, ಒಂದು ಸ್ಪರ್ಧಾಪರೀಕ್ಷೆಯನ್ನು ಈ ತಿಂಗಳ ಅಖೈರಿನಲ್ಲಿ ನಡೆಸಬೇಕೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆ.

ಸಿವಿಲ್ ಸರ್ವಿಸ್ಸಿನ ನಿಬಂಧನೆಗಳನ್ನು ತಿದ್ದುಪಾಟು ಮಾಡಿದೆ; ಈ ತಿದ್ದುಪಾಟಿನ ಮುಖ್ಯ ಲಕ್ಷಣಗಳೇನೆಂದರೆ:—(1) ಸ್ಪರ್ಧಾಪರೀಕ್ಷೆಯ ಮೂಲಕವೂ, ಮತ್ತು ಕೆಳದರ್ಜೆಗಳ ಹುದ್ದೆಗಳಿಂದ ಬಡ್ತಿಯಮೂಲಕ ನೇಮಿಸಲ್ಪಟ್ಟ ಆಫೀಸರುಗಳೂ ಸೇರಿ, ಶ್ರೀಮನ್ಮಹಾರಾಜರವರಿಂದ ಚುನಾಯಿಸಲ್ಪಟ್ಟು ನೇಮಿಸಲ್ಪಡುವುದರ ಮೂಲಕವೂ, ಕೆಲಸಕ್ಕೆ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗೆ ಮಾತ್ರವೇ ಸಿವಿಲ್ ಸರ್ವಿಸ್ಸಿನ ಹುದ್ದೆಗಳನ್ನು ಇನ್ನು ಮುಂದೆ ಕೊಡಲಾಗುವುದು. (2) ರೆವಿನ್ಯೂ, ಅಕೌಂಟ್ಸ್, ಪೊಲೀಸ್, ಮುಂತಾದ ಹಲವು ಇಲಾಖೆಗಳಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೆ ಸೇರದ ಒಂದು ದರ್ಜೆಯನ್ನು ಏರ್ಪಡಿಸುವುದರ ಮೂಲಕ ಕೆಳದರ್ಜೆಗಳಲ್ಲಿನ ಆಫೀಸರುಗಳ ಬಡ್ತಿಯ ಸಂಭವವನ್ನು ಉತ್ತಮಪಡಿಸಿದೆ. (3) ಸಿವಿಲ್ ಸರ್ವಿಸ್ ದರ್ಜೆಯ ಹುದ್ದೆಗಳ ಸಂಖ್ಯೆಯನ್ನು ಈಗ 45ಕ್ಕೆ ತಗ್ಗಿಸಿದೆ; ಮತ್ತು ರೆವಿನ್ಯೂ, ಅಕೌಂಟ್ಸ್, ಪೊಲೀಸ್, ಎಕ್ಸೈಜ್, ಸರ್ವೇ ಮತ್ತು ಇನ್‌ಕಂಟ್ಯಾಕ್ಸ್ ಇಲಾಖೆಗಳಲ್ಲಿಯೂ, ಜನರಲ್ ಮತ್ತು ರೆವಿನ್ಯೂ ಸೆಕ್ರಿಟೇರಿಯೆಟ್ಟಿನಲ್ಲಿಯೂ, ಮತ್ತು ಕೋ ಆಪರೇಟಿವ್ ಇಲಾಖೆಯಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೂ ಮತ್ತು ತಲಬುಗಳಿಗೂ ಸರಿಸಮನಾದ ದರ್ಜೆಯೂ, ತಲಬುಗಳೂ ಇರುವ 31 ಹುದ್ದೆಗಳನ್ನು, ಆಯಾ ಇಲಾಖೆಯ ಕೆಳದರ್ಜೆಗಳಿಂದ ಬಡ್ತಿಮಾಡಲ್ಪಟ್ಟ ಆಫೀಸರುಗಳಿಗಾಗಿಯೂ ಮತ್ತು ಕೆಲವು ಸಂದರ್ಭಗಳಲ್ಲಿ ಆಯಾ ಇಲಾಖೆಗೆ ನೀದಾ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗಾಗಿಯೂ, ಪ್ರತ್ಯೇಕಪಡಿಸಿ ಉಳಿಸಲಾಗಿದೆ. (4) ರೆವಿನ್ಯೂ ಇಲಾಖೆಯ ಮತ್ತು ಸೆಕ್ರಿಟೇರಿಯಟ್ಟಿನ ಹುದ್ದೆಗಳ ಪೈಕಿ ಹೆಚ್ಚು ಸಂಖ್ಯೆಯ ಹುದ್ದೆಗಳಿಗೆ ಸಿವಿಲ್ ಸರ್ವಿಸ್ಸಿನಿಂದ ಆಫೀಸರುಗಳನ್ನು ನೇಮಿಸುವುದು: ಮತ್ತು ಪರಸ್ಪರಸಂಬಂಧವುಳ್ಳ ಎಲ್ಲಾ ಇತರ ಇಲಾಖೆಗಳಲ್ಲಿನ ಹುದ್ದೆಗಳ ಪೈಕಿ ಬಹುಭಾಗದ ಹುದ್ದೆಗಳಿಗೆ ಸಿವಿಲ್ ಸರ್ವಿಸ್ ಅಲ್ಲದ ದರ್ಜೆಗೆ ಸೇರಿದ ಆಫೀಸರುಗಳನ್ನು ನೇಮಕಮಾಡುವುದು. (5) ಸಿವಿಲ್ ಸರ್ವಿಸ್ಸಿನ ಮೆಂಬರುಗಳಿಗೆ ದೊರೆಯಬಹುದಾದ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳ ಸಂಖ್ಯೆಯನ್ನು ಹನ್ನೊಂದರಿಂದ ಒಂಬತ್ತಕ್ಕೆ ತಗ್ಗಿಸಿದೆ; ಮತ್ತು ಸೀನಿಯರ್ ಸಬ್‌ಡಿವಿಜನ್ ಆಫೀಸರು, ಸೀನಿಯರ್ ಪೊಲೀಸ್ ಸೂಪರಿಂಟೆಂಡೆಂಟರು, ಎಂಬ ಎರಡು ಹುದ್ದೆಗಳನ್ನು ಆಯಾ ಇಲಾಖೆಯಲ್ಲಿನ ಸಿವಿಲ್ ಸರ್ವಿಸ್ ದರ್ಜೆಗೆ ಸೇರದ ಆಫೀಸರುಗಳ ಪುರೋಭಿವೃದ್ಧಿಗಾಗಿ ಕಲ್ಪಿಸಿದೆ. (6) ರೆವಿನ್ಯೂ, ಪೊಲೀಸ್, ಎಕ್ಸೈಜು ಇಲಾಖೆಗಳಲ್ಲಿನ ಮತ್ತು ಸೆಕ್ರಿಟೇರಿಯಟ್ಟಿನ ಮೇಲ್ಪಟ್ಟ ಹುದ್ದೆಗಳಾದ ರೆವಿನ್ಯೂ ಕಮಿಷನರ್, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್, ಎಕ್ಸೈಜ್ ಕಮಿಷನರ್, ಸರ್ಕಾರದ ಜನರಲ್ ಇಲಾಖಾ ಸೆಕ್ರಿಟರಿಗಳು, ಮತ್ತು ಡೆಪ್ಯುಟಿಕಮಿಷನರುಗಳೇ ಮುಂತಾದ ಹುದ್ದೆಗಳನ್ನು ನಿಷ್ಕರ್ಷೆಯಾಗಿ ಸಿವಿಲ್ ಸರ್ವಿಸ್ಸಿನ ದರ್ಜೆಯಲ್ಲಿಯೇ ಸೇರಿಸಿದೆ; ಮತ್ತು ಸಿವಿಲ್ ಸರ್ವಿಸ್ಸಿಗೆ ಸೇರದೆ ಇರುವ ಆಫೀಸರುಗಳಿಗೆ ದೊರೆಯಬಹುದಾದ ಮೇಲ್ಪಟ್ಟ ಹುದ್ದೆಗಳನ್ನು ಸ್ಪಷ್ಟವಾಗಿ ಸೂಚಿಸಿದೆ.

ಮುಂದಣ ಆಶೋತ್ತರ ವಿಚಾರಗಳು.

ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರಕೃತದಲ್ಲಿ ಆಸಕ್ತಿಯಿಂದ ಗಮನ ಕೊಡುತ್ತಿರುವ ದೊಡ್ಡ ದೊಡ್ಡ ವಿಷಯಗಳ ಪೈಕಿ ಕೆಲವನ್ನು ಈಗ ಸೂಚಿಸುತ್ತೇವೆ.

ಖನಿಜ ಸಂಪತ್ತನ್ನು ಅಭಿವೃದ್ಧಿಗೆ ತರುವುದು.—ಈ ಸಭೆಯಲ್ಲಿ ನಾವು ಒಂದೆರಡುವೇಳೆ ತಿಳಿಯಪಡಿಸಿರುವಂತೆ, ಮೈಸೂರುದೇಶದಲ್ಲಿ ಕೈಗಾರಿಕೆಯ ಅಭಿವೃದ್ಧಿಗೆ ಸ್ವಾಭಾವಿಕವಾದ ಸಾಧನಸಂಪತ್ತುಗಳು ಅಪರಿಮಿತವಾಗಿವೆ. ಮೈಸೂರುದೇಶದ ಖನಿಜ ಸಂಪತ್ತನ್ನೆಲ್ಲಾ ಇನ್ನೂ ಸಂಪೂರ್ಣವಾಗಿ ಉಪಯೋಗಪಡಿಸಿಕೊಂಡಿಲ್ಲ. ಆದರೆ ಕೈಗಾರಿಕೆಯು ಪ್ರಾಬಲ್ಯಕ್ಕೆ ಬರುವ ಸಂಭವಗಳು ಅಪರಿಮಿತವಾಗಿರುವ ದೇಶಗಳ ಪೈಕಿ ಮೈಸೂರುದೇಶಕ್ಕೆ ಉನ್ನತ ಸ್ಥಾನವು ದೊರೆಯುವಂತೆ ಮಾಡಲು ಇದುವರೆಗೆ ಪರಿಶೋಧನೆಯ ಮೂಲಕ ಗೊತ್ತಾಗಿರುವ ಅಂಶಗಳೇ ಸಾಕಾಗಿವೆ. ಮೈಸೂರುದೇಶದಲ್ಲಿ ಚಿನ್ನ ಮತ್ತು ಕಬ್ಬಿಣದ ಜತೆಗೆ ಅಮೂಲ್ಯವಾದ ಕ್ರೋಮ್ ಮತ್ತು ಮ್ಯಾಂಗನೀಸ್ ಲೋಹಗಳ ಅದರುಗಳು ಹೇರಳವಾಗಿರುವಂತೆ ಕಂಡುಬಂದಿದೆ. ಇದಲ್ಲದೆ, ಅಮೂಲ್ಯವಾದ ಇತರ ಖನಿಜ ವಸ್ತುಗಳಿರುವ ಚಿಹ್ನೆಗಳು ಯಥೇಷ್ಟವಾಗಿ ಕಂಡುಬರುತ್ತವೆ. ಅವುಗಳನ್ನು ಕಂಡುಹಿಡಿದು ರೂಢಿಸಿದಾಗ, ಮೈಸೂರುದೇಶವು ಕೈಗಾರಿಕೆಯ ವಿಚಾರದಲ್ಲಿ ಉಚ್ಛ್ರಾಯಸ್ಥಿತಿಗೆ ಬರುವುದು ಖಂಡಿತ. ಯುಕ್ತವೆನಿಸಿರುವ ವಾಣಿಜ್ಯ ತತ್ವಗಳಿಗನುಸಾರವಾಗಿ ಸಂಸ್ಥಾನದ ಖನಿಜ ಸಂಪತ್ತನ್ನು ರೂಢಿಸಿ ಅಭಿವೃದ್ಧಿಯನ್ನುಂಟುಮಾಡಲು ತಕ್ಕ ಪ್ರಯತ್ನಗಳು ನಡೆಯುತ್ತಾ ಇವೆ. ಹೀಗೆ ಮಾಡುವುದರಿಂದ ಸಂಸ್ಥಾನದ ಅಭಿವೃದ್ಧಿಗೋಸ್ಕರ ಹಿಂದೆ ಎಷ್ಟೋ ಚೆನ್ನಾಗಿ ಕೆಲಸ ನಡೆಸಿರುವ ಖಾಸಗಿಜನರ ಉದ್ಯಮಗಳಿಗೆ ಪ್ರತಿಬಂಧಕ ಬಾರದಂತೆಯೂ, ಒಟ್ಟು ಆದಾಯದಲ್ಲಿ ಇನ್ನೂ ಹೆಚ್ಚಿನ ಭಾಗವು ಸರ್ಕಾರದವರಿಗೆ ಸಲ್ಲುವಂತೆಯೂ ಆಗುತ್ತದೆ. ಈ ವಿಚಾರದಲ್ಲಿ ಈ ಸಭೆಯ ಮುಂದಣ ಅಧಿವೇಶನದಲ್ಲಿ ನಿರ್ಧರವಾದ ಸಂಗತಿಯನ್ನು ತಿಳಿಸಲು ಸಾಧ್ಯವಾಗುವುದೆಂದು ನಂಬಿರುತ್ತೇವೆ.

ವ್ಯಾಪಾರದ ಅನುಕೂಲತೆಯ ವಿಚಾರವಾಗಿ ಪರಿಶೋಧನೆ.—ಕಳೆದ ಜೂನ್ ತಿಂಗಳಲ್ಲಿ ನಡೆದ ಪುನರ್ವ್ಯವಸ್ಥಿತವಾದ ಸಂಪದಭ್ಯುದಯ ಸಮಾಜದ ಸಮಾರಂಭ ಭಾಷಣದಲ್ಲಿ "ಒಂದು ದೇಶದ ವ್ಯಾಪಾರದ ಪ್ರವರ್ಧಮಾನಸ್ಥಿತಿಯನ್ನು ಗೊತ್ತುಮಾಡಬೇಕಾದರೆ ಆಮದಿಗಿಂತಲೂ ರಫ್ತು ಹೆಚ್ಚಾಗಿರಬೇಕೆಂಬುದು ಅರ್ಥಶಾಸ್ತ್ರದ ಒಂದು ಮೂಲತತ್ವವಾಗಿದೆ.........ಈ ತತ್ವದ ಪ್ರಕಾರ ಪರೀಕ್ಷೆಮಾಡಿ ನೋಡಿದರೆ, ಮೈಸೂರುದೇಶದ ವ್ಯಾಪಾರ ಸ್ಥಿತಿಯು ಸ್ವಲ್ಪವೂ ತೃಪ್ತಿಕರವಾಗಿಲ್ಲ............ಆದುದರಿಂದ ಸರಿಯಾದ ರೀತಿಯಲ್ಲಿ ವ್ಯಾಪಾರವನ್ನು ಅಭಿವೃದ್ಧಿಪಡಿಸಿ,........ರಫ್ತನ್ನು ಹೆಚ್ಚಿಸುತ್ತಾ ಬಂದು ದೇಶವನ್ನು ಉಚ್ಛ್ರಾಯಸ್ಥಿತಿಗೆ ತರುವುದು ಅವಶ್ಯವಾಗಿದೆ" ಎಂದು ತಿಳಿಸಿದೆವು. ಈ ವಿಷಯವನ್ನು ಇನ್ನೂ ಹೆಚ್ಚಾಗಿ ಪರಿಶೋಧಿಸಲುದ್ದೇಶಿಸಿದೆ. ಮತ್ತು ಈ ಉದ್ದೇಶಕ್ಕಾಗಿ ಈ ವಿಷಯವನ್ನು ಜಾಗರೂಕತೆಯಿಂದ ಪರಾಮರ್ಶಿಸಿ ಸರ್ಕಾರದವರು ಒಂದು ನಿರ್ದಿಷ್ಟವಾದ ಕ್ರಮವನ್ನು ಅನುಸರಿಸುವ ಬಗ್ಗೆ ಉಪಾಯಾಂತರಗಳನ್ನು ಸೂಚಿಸುವುದಕ್ಕೋಸ್ಕರವಾಗಿ ವಾಣಿಜ್ಯ ವಿಚಾರಗಳಲ್ಲಿ ನಿಪುಣರೆನಿಸಿರುವವರು ದಕ್ಷತೆಯಿಂದ ಕೆಲಸ ನಡೆಸುವಬಗ್ಗೆ ಅವರನ್ನೊಳಗೊಂಡ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ.

ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಏರ್ಪಾಡುಗಳು.—ಮೈಸೂರುದೇಶದಲ್ಲಿ ಖನಿಜ ಸಂಪತ್ತಿನ ಜತೆಗೆ ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಏರ್ಪಾಡುಗಳನ್ನು ಇನ್ನೂ ಅಭಿವೃದ್ಧಿಗೆ ತರಲು ಅತ್ಯಧಿಕವಾದ ಅವಕಾಶಗಳಿರುತ್ತವೆ. ಕೃಷ್ಣರಾಜಸಾಗರದ ಏರ್ಪಾಡಿನ ಸಹಾಯದೊಡನೆ ನಡೆಸುತ್ತಿರುವ ಶಿವಸಮುದ್ರದ ವಿದ್ಯುಚ್ಛಕ್ತಿಯ ಉತ್ಪತ್ತಿಯ ಏರ್ಪಾಡಿನಿಂದ ಮೈಸೂರು, ಬೆಂಗಳೂರು ಮತ್ತು ಕೋಲಾರ ಚಿನ್ನದಗಣಿ ಪ್ರದೇಶಗಳಲ್ಲಿ ನಡೆಯತಕ್ಕ ಕೈಗಾರಿಕೆಗಳಿಗೆ ಮಾತ್ರ ಪ್ರಯೋಜನವುಂಟಾಗುತ್ತದೆ. ಮದರಾಸು ಸರ್ಕಾರದವರು ಮೇಕೆದಾಟಿನ ನೀರಿನ ಸಂಬಂಧವಾದ ತಮ್ಮ ಹಕ್ಕುಗಳನ್ನು ಕೆಲವು ಷರತ್ತುಗಳಮೇಲೆ ಮೈಸೂರು ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತಾರೆ. ಕೋಲಾರದ ಚಿನ್ನದಗಣಿ ಪ್ರದೇಶಗಳಿಗೂ, ಇತರ ಕೈಗಾರಿಕೆಗಳಿಗೂ ದಿನೇದಿನೇ ಹೆಚ್ಚಾಗಿ ಬೇಕಾಗುತ್ತಿರುವ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿ ಸದರಿ ನೀರನ್ನು ಇನ್ನು ಸ್ವಲ್ಪಕಾಲದಲ್ಲಿಯೇ ಉಪಯೋಗಿಸಿಕೊಳ್ಳಬೇಕಾಗುವುದು. ಕೈಗಾರಿಕೆಯನ್ನು ಅಭಿವೃದ್ಧಿಗೆ ತರಲು ತಕ್ಕ ಸಾಧನಗಳು ಮಲೆನಾಡಿನಲ್ಲಿ ಮತ್ತೂ ಹೆಚ್ಚಾಗಿವೆ. ದೀಪದಕಡ್ಡಿಯನ್ನು ತಯಾರುಮಾಡುವ ಕಾರ್ಖಾನೆಯನ್ನೂ, ಕಾಗದದ ಕೈಗಾರಿಕೆಯನ್ನೂ, ಸಕ್ಕರೆಯ ಕಾರ್ಖಾನೆಯನ್ನೂ, ಖನಿಜವಸ್ತುಗಳ ಕೈಗಾರಿಕೆಗಳನ್ನೂ, ಇತರ ಮುಖ್ಯವಾದ ಎಷ್ಟೋ ಕೈಗಾರಿಕೆಗಳನ್ನೂ, ನಡೆಸುವುದಕ್ಕೆ ವಿಶೇಷವಾಗಿ ಅವಕಾಶವಿದೆ; ಇವುಗಳಿಗೆಲ್ಲಾ ಸುಲಭವೆಚ್ಚದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಅವಶ್ಯಕ. ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಬಗ್ಗೆ ಗೇರಸೊಪ್ಪೆಯಲ್ಲಿರುವ ಜಲಪಾತವನ್ನು ಉಪಯೋಗಕ್ಕೆ ತರುವ ವಿಷಯವು ಬಹುಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಏರ್ಪಾಡು ಎಷ್ಟರಮಟ್ಟಿಗೆ ಫಲಕಾರಿಯಾಗಿ ಪರಿಣಮಿಸಬಹುದೆಂಬ ಸಂಗತಿಯನ್ನು ಕೂಲಂಕಷವಾಗಿ ಪರಿಶೀಲಿಸತಕ್ಕ ಬಗ್ಗೆ ಸರ್ಕಾರದವರು ಈಚೆಗೆ ಹುಕುಂ ಮಾಡಿದರು; ಸದರಿ ಕೆಲಸಕ್ಕಾಗಿ ನೇಮಕವಾಗಿದ್ದ ಆಫೀಸರವರು ಕಳುಹಿಸಿದ ವರದಿಯು ಈಗತಾನೆ ತಲುಪಿರುತ್ತದೆ. ಈ ಏರ್ಪಾಡನ್ನು ನೆರವೇರಿಸಲು ಬಹಳ ಭಾರೀ ವೆಚ್ಚವು ತಗಲುತ್ತದೆ. ಇದನ್ನು ನಡೆಸಿದಪಕ್ಷದಲ್ಲಿ, ಮಲೆನಾಡಿನಲ್ಲಿ ಭಾರಿ ಕೈಗಾರಿಕೆಗಳನ್ನಾರಂಭಿಸುವುದಕ್ಕೆ ಅವಕಾಶವು ದೊರೆಯುತ್ತದೆ. ಅಲ್ಲದೆ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ನಡೆಯುತ್ತಿರುವ ಕಬ್ಬಿಣದ ಭಟ್ಟಿಯ ಕೆಲಸದ ಸಂಬಂಧದಲ್ಲಿ ಅನೇಕ ಸಣ್ಣಪುಟ್ಟ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಅನುಕೂಲವಾಗುವುದು. ಚಾಲ್ತಿವರುಷದಲ್ಲಿ ಈ ಏರ್ಪಾಡನ್ನು ಸರ್ವತೋಮುಖವಾಗಿ ಮತ್ತು ಸಂಪೂರ್ಣವಾಗಿ ಪರಿಶೋಧಿಸಲಾಗುವುದು ಮತ್ತು ಮುಂದಣವರುಷದ ಈ ಸಭೆಯ ದಸರಾ ಅಧಿವೇಶನದಲ್ಲಿ ಇದರ ವಿಚಾರದಲ್ಲಿ ನಿರ್ಧರವಾಗಿ ತಿಳಿಸಲು ಸಾಧ್ಯವಾದೀತೆಂದು ಕೋರುತ್ತೇವೆ.

ಭಟ್ಕಲಿನ ರೇವು.—ಪಶ್ಚಿಮತೀರದಲ್ಲಿರುವ ಭಟ್ಕಲಿನಲ್ಲಿ ರೇವನ್ನು ಸ್ಥಾಪಿಸುವ ಬಗ್ಗೆ ಒಂದು ಪ್ರಾಜೆಕ್ಟನ್ನು ಕುರಿತು ಕಳೆದ ಅಕ್ಟೋಬರು ತಿಂಗಳಲ್ಲಿ ಈ ಸಭೆಯಲ್ಲಿ ನಾವು ಮಾಡಿದ ಭಾಷಣದಲ್ಲಿ ಸೂಚಿಸಿದ್ದೆವಷ್ಟೆ. ಸದರಿ ಪ್ರಾಜೆಕ್ಟನ್ನು ಕೈಬಿಟ್ಟಿಲ್ಲವೆಂದೂ, ದ್ರವ್ಯಾನುಕೂಲವು ಒದಗಿದಾಗ ಪಶ್ಚಿಮತೀರದವರೆಗೆ ರೈಲ್ವೆಯು ಬಡಾಯಿಸಲನುಕೂಲಿಸುವಂತೆ ಶಿವಮೊಗ್ಗಾ-ಆರಸಾಳು ರೈಲಿನ ಕಾಮಗಾರಿಯೇ ಮೊಟ್ಟಮೊದಲು ಕೈಗೊಳ್ಳುವ ರೈಲ್ವೆ ಕಾಮಗಾರಿಯೆಂದೂ ತಿಳಿಸಿದ್ದೆವು. ಭಟ್ಕಲ್ ರೇವಿನ ಮತ್ತು ಶಿವಮೊಗ್ಗಾದಿಂದ ಭಟ್ಕಲ್ ರೇವಿನವರೆಗೆ ರೈಲ್ವೆ ಲೈನನ್ನು ಹಾಕುವ ವಿಷಯವು ಕಳೆದ ವರುಷದಲ್ಲಿ ಸ್ವಲ್ಪವೂ ಮುಂದುವರಿಯಲಿಲ್ಲ; ಹಣವಿಲ್ಲದುದರ ದೆಸೆಯಿಂದ, ಪ್ರಕೃತದಲ್ಲಿ ಈ ಏರ್ಪಾಡುಗಳನ್ನು ಸರ್ಕಾರದವರು ಕೈಗೊಳ್ಳುವ ಸ್ಥಿತಿಯಲ್ಲಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ.

ಪಶ್ಚಿಮತೀರದವರೆಗೆ ನೇರವಾದ ಮತ್ತು ಸುಗಮವಾದ ಮಾರ್ಗವಿಲ್ಲದಿರುವುದರ ದೆಸೆಯಿಂದ ಸಂಸ್ಥಾನಕ್ಕೆ ವಿಶೇಷ ಅನಾನುಕೂಲವುಂಟಾಗಿದೆ. ಆದಕಾರಣ, ಇಂಥಾ ಮಾರ್ಗವೊಂದನ್ನು ಕಲ್ಪಿಸುವುದು ಅತ್ಯವಶ್ಯವಾಗಿದೆ. ವರುಷವೆಲ್ಲಾ ಅವಿಚ್ಛಿನ್ನವಾಗಿ ಕೆಲಸ ನಡೆಯುವ ರೇವಿಗೆ ಅತ್ಯಂತ ಸಮೀಪವಾದ ಮತ್ತು ನೇರವಾದ ಮಾರ್ಗವನ್ನು ಕಲ್ಪಿಸಿಕೊಂಡಲ್ಲಿ, ಸಂಸ್ಥಾನದ ವಾಣಿಜ್ಯ ಮತ್ತು ಕೈಗಾರಿಕೆಯ ಅಭಿವೃದ್ಧಿಗೆ ವಿಶೇಷವಾಗಿ ಸೌಲಭ್ಯವುಂಟಾಗುತ್ತದೆ. ಇದೂ ಅಲ್ಲದೆ, ಶಿವಮೊಗ್ಗೆಯಿಂದ ಭಟ್ಕಲ್ಲಿಗೆ ರೈಲ್ವೆ ಮಾರ್ಗವನ್ನೇರ್ಪಡಿಸಿ ಭಟ್ಕಲ್ ರೇವೆಯನ್ನು ಅನುಕೂಲಪಡಿಸಿಕೊಂಡಲ್ಲಿ, ಇದುವರೆಗೂ ರೂಢಿಸಲ್ಪಡದ ಸ್ವಾಭಾವಿಕವಾದ ಸಾಂಪತ್ತಿಕ ಸಾಧನಗಳು ಯಥೇಷ್ಟವಾಗಿರುವ ಮತ್ತು ಈಗ ಆರ್ಥಿಕಸ್ಥಿತಿಯು ತುಂಬಾ ಅತೃಪ್ತಿಕರವಾಗಿರುವ ಮಲೆನಾಡು ಪ್ರಾಂತ್ಯಗಳಲ್ಲೆಲ್ಲಾ [illegible] ಸುಗಮವಾದ ಸಂಚಾರ ಸೌಲಭ್ಯವುಂಟಾಗಿ ಅಭಿವೃದ್ಧಿಗೆ ಮಾರ್ಗವಾಗುತ್ತದೆ.

ರಾಜಕವಿಭೂಷಣಾಂಕಿತ |
ರಾಜದ್ವಿರುದಪ್ರಶಸ್ತಿಯೊಡನವನೀಶಂ ||
ಭ್ರಾಜನ್ಮಣಿಹಾರಾಂಬರ |
ರಾಜಿಯನೀಚೆಕ್ಕಲಿಂಗರಾಜಂಗಿತ್ತಂ ||೧||
ಬುಧಗೇರ್ವಣಿಪಸನ್ಮಾನವ |
ನೊದವಿಸಿದೀತನಪರೋಪಕೃತಿಪುಣ್ಯಮೆತಾಂ ||
ಪದುಳದೆಮೂರ್ತಿಯನಾಂತು |
ತೊದವಿದಬಿರುದುಮಿದವಂಗೆಯೋಗ್ಯಂಜಗದೋಳ್ ||೨||
ಪಾಲಿರುವಾಗಳೆಹಬ್ಬಂ |
ಮೇಲೆನಿಪಂತೊಗೆದಪದವಿಸಿರಿಸುಖವಿರ್ಪಾ ||
ಕಾಲದೊಳೆಸೈಭವದೆಪುದ |
ನಾಲೋಚಿಸಿವೊಳ್ಪನೀತನಿಂತುಪಕೃತಿಯಂ ||೩||
ನೃಪಸಗೃಹಧರ್ಮವಿಚಾರಾ |
ಧಿಪನಾಗಿಸಮಸ್ತಸುಖವಿವಿಬುಧಾವಳಿಗಂ ||
ವಿಪುಲಸುರಭೂಜನಾದಿಗ |
ಮುಪಹತಿತಾನಿಲ್ಲದಂತೆರಂಜನೆಗೈವಂ ||೪||
ಶ್ರೀಯಂಚೆಕ್ಕಲಿಂಗರಸಂ |
ಗಾಯುಶ್ಶ್ರೀಯೊಳಭಿವೃದ್ಧಿಸಿದ್ಧಿಯನಿತತಂ ||
ಈಯುತೆಪೊರೆಗೆಕೃಪಾರಸ |
ತೋಯಧಿನಿರುಪಾಧಿರೂಪಗೋನೆಯಲಿಂಗಂ ||೫||
ಜಯಮಕ್ಕೆಕೃಷ್ಣಭೂಪಂ |
ಗೆಯುಮಕ್ಕೆಚಿರಾಯುಮಕ್ಕೆಭೂವಲಯಕ್ಕ್ಷಿತಿ ||
ಶಯಮೆನಿಸಮಳೆಬೆಳೆಯಕ್ಕೆವಿ |
ನಯಭಕ್ತಿಗಳಾಳ್ದುಬಾಳ್ಗಿಲೋಕವಿದೆಲ್ಲಂ ||೬||

ಪಂಡಿತ ಟಿ. ಎಂ. ಚಂದ್ರಶೇಖರಶಾಸ್ತ್ರಿ.
ತೆಲಗಿಮಠ, ದಾವಣಗೆರೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ತಿರಸ್ಕೃತಲೇಖಗಳು.

ಮ|| ಗಳಾದ ಜಿ. ಕೆ. ರುದ್ರಾರ್ಯ, ಯಂ. ಸ. ಶಾಂತಪ್ಪಶೆಟ್ಟಿ ಮತ್ತು ಹಲ್ಯಾರು ಸಾಹುಕಾರ್ ಮರುಳಸಿದ್ಧಪ್ಪಶೆಟ್ಟಿ ಇವರುಗಳು—ಶ್ರೀಬಾಳೆಹೊನ್ನೂರು ಪೀಠಾಧಿಕಾರಿಗಳ ಚುನಾವಣೆಯ ವಿಚಾರವಾಗಿ ರಾಜಧಾನಿಯಲ್ಲಿ ವೀರಶೈವದೊಡ್ಡಮನುಷ್ಯರುಗಳಿಂದ ನಡಿಸಲ್ಪಟ್ಟ ಎರಡು ಸಭೆಗಳ ನಡವಳಿಕೆಗಳು, ಸಭಾಧ್ಯಕ್ಷರುಗಳಿಂದ ನಮ್ಮಲ್ಲಿಗೆ ಕಳುಹಲ್ಪಟ್ಟ ಪ್ರಕಾರ ಯಥಾವತ್ತಾಗಿ ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದರಿಂದ, ಅವುಗಳಲ್ಲಿರಬಹುದಾದ ನ್ಯೂನತೆಗಳನ್ನು ಆ ಅಧ್ಯಕ್ಷರುಗಳಿಗೆ ನೀವುಗಳೇ ಬರೆದು ಅವರುಗಳಿಂದ ಸರಿಪಡಿಸಿಕೊಳ್ಳಬಹುದಾಗಿದೆ.—ಸಂ.

ಹೊಸಪೇಟೆ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್.

ಈ ಗ್ರಾಮವು ತಾಲ್ಲೂಕಿನ ಮುಖ್ಯಸ್ಥಳವಿದ್ದು ಇಲ್ಲಿ ಹಾಗೂ ಈ ತಾಲ್ಲೂಕಿನಲ್ಲಿ ವೀರಶೈವ ಜಾನಾಂಗದವರ ವಸತಿಯಾದರೂ ವಿಶೇಷ ಇರುತ್ತದೆ. ಹೀಗಿದ್ದು ನಮ್ಮ ವೀರಶೈವಜನಾಂಗದವರಪೈಕಿ ಈವರೆಗೂ ರಾಜಕೀಯ ವಿದ್ಯೆಯಲ್ಲಿ ಒಬ್ಬರಾದರೂ ಉತ್ತೀರ್ಣರಾಗಿದ್ದಿಲ್ಲ. ಈ ವರುಷ ನಮ್ಮ ಸುದೈವದಿಂದ ಹೊಸಪೇಟೆ ನಿವಾಸಿಗಳಾದ ಸಾಲ್ಡೂರು ಶ್ರೀ|| ಶಿ. ಉದ್ದಾನಯ್ಯನವರೆಂಬುವವರು ಬಿ.ಎ, ಬಿ.ಎಲ್. ಪರೀಕ್ಷೆಯಲ್ಲಿ ಪಾಸಾಗಿಬಂದು ಸದ್ಯಃ ವಕೀಲಿ ಕೆಲಸವನ್ನು ಪ್ರಾರಂಭಮಾಡಿರುತ್ತಾರೆ. ಹೋದ ತಿಂಗಳು 21ನೇ ತಾರೀಖಿನ ದಿವಸ ಹೊಸಪೇಟೆಯ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್ (ಚುನಾವಣೆ) ಇದ್ದು ಚಿತ್ತವಾಡಿಗಿಯ ವಾರ್ಡಿಗೆ ಸದರಿ ಉದ್ದಾನಯ್ಯನವರು ಉಮೇದ್ವಾರರಾಗಿ ನಿಂತಿದ್ದರು. ಈ ತರುಣರಿಗೆ ನಿಷ್ಪಕ್ಷಪಾತಿಗಳಾದ ಅನೇಕ ಸ್ವಜನ ಪರಜನರು ಸಹಿತ ಸಂತೋಷದಿಂದ ತಮ್ಮ ತಮ್ಮ ಓಟುಗಳನ್ನು ಕೊಟ್ಟು ಪ್ರೋತ್ಸಾಹಿಸಿದರು. ಆದರಲ್ಲಿ ಕೆಲವು ಜನರು ತಮ್ಮ ಅಸೂಯಾಂಧತೆಯನ್ನು ವ್ಯಕ್ತಗೊಳಿಸಿದ್ದಲ್ಲದೆ ಅನೇಕ ಕೃಷ್ಣಕಾರಸ್ಥಾನವನ್ನೆಸಗಿದರು. ಆದಾಗ್ಯೂ ದೈವಾನುಗ್ರಹದಿಂದ ಶ್ರೀ|| ಶಿ. ಉದ್ದಾನಯ್ಯನವರೇ ಉತ್ತೀರ್ಣರಾಗಿ ಬಂದರೆಂದು ತಿಳುಹಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಈ ತರುಣರು ಇಂಥ ಸಾರ್ವಜನಿಕ ಕಾರ್ಯಗಳಲ್ಲಿ ಮುತವರ್ಜಿಯಿಂದ ಕೆಲಸಮಾಡಿ ಜನರಸ್ತುತಿಗೆ ಪಾತ್ರರಾಗಿ ಇದಕ್ಕಿಂತಲೂ ಉನ್ನತವಾದ ಸ್ಥಾನವನ್ನು ಪಡೆಯತಕ್ಕ ಸಾಮರ್ಥ್ಯವನ್ನು ಜಗದೀಶನು ಅನುಗ್ರಹಿಸಲೆಂದು ಹಾರೈಸುತ್ತೇನೆ.

ಗುರುಭಕ್ತಕೇಸರಿ, ಚಿತ್ತವಾಡಿಗಿ ನಿವಾಸಿ.

ಸಾಗರ ತಾಲ್ಲೂಕು ಕೆಳದಿ.

ಈ ಕೆಳದಿಯ ಸಂಸ್ಥಾನ ಹಿರೇಮಠದಲ್ಲಿ ಪದ್ಧತಿಯಪ್ರಕಾರವಾಗಿ ವಿಜಯದಶಮಿಯ ಉತ್ಸವವು ಬಹುವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಈ ಕಾರ್ಯಕ್ಕಾಗಿ ತಳಿರುತೋರಣ ಮುಂತಾದವುಗಳಿಂದ ಅಲಂಕರಿಸಲ್ಪಟ್ಟ ಮಠವೂ, ಊರಿನಬೀದಿಗಳು ಶೋಭಿಸುತ್ತಿದ್ದುವು. ಶ್ರೀ|| ಗೋಣಿಬೀಡು ಶ್ರೀ ಸ್ವಾಮಿಗಳೇ ಮುಂತಾದ ಶಿವಯೋಗಿಗಳ ಶಿವಾರ್ಚನೆಯು ವಾದ್ಯವೈಭವದೊಡನೆ ನೆರವೇರಿಸಲ್ಪಟ್ಟಿತು. ಮಧ್ಯಾಹ್ನದ ಗಣಾರಾಧನೆಯಾದನಂತರದಲ್ಲಿ ಈ ಪ್ರಾಂತದ ಅನೇಕ ಗ್ರಾಮಗಳ ಮುಖ್ಯಮುಖ್ಯರಾದ ವೀರಶೈವ ಮಹನೀಯರುಗಳು ಮಠಕ್ಕೆ ಸೇರಿದರು. ಈ ಸಂಸ್ಥಾನ ಪಟ್ಟಾಧ್ಯಕ್ಷರವರಾದ ಶ್ರೀ|| ರೇವಣಸಿದ್ಧಸ್ವಾಮಿಗಳವರು ಸಕಲ ಭಕ್ತಸಂದಣಿಯ ಜಯಘೋಷದೊಡನೆ ಶುಭಪ್ರದವಾದ ಈ ಸಭೆಯಲ್ಲಿ ಶಿವಪುರಾಣದಲ್ಲಿನ ಶಿವಭಕ್ತಿ ಶಿವಪೂಜಾವಿಷಯಕವಾದ ಭಾಗವನ್ನು ಬಹುಸ್ವಾರಸ್ಯವಾಗಿ ಸಭಿಕರ ಮನಸ್ಸಿಗೆ ಆನಂದತೋರುವಂತೆ ವಿವರಣದೊಡನೆ ಅಪ್ಪಣೆಕೊಡಿಸಿದರು. ನಂತರ ಕನ್ಯಾಶುಲ್ಕನಿಷೇಧ, ವಿದ್ಯಾಪ್ರಸಾರ, ಐಕಮತ್ಯ, ಪ್ರಾಣಿದಯಾಪರತೆ, ಮುಂತಾದ ವಿಷಯಗಳಲ್ಲಿ ಮ|| ಕಾಗೋಡು ಶಿವಲಿಂಗಪ್ಪನವರು, ಬರದವಳ್ಳಿ ಗುರಪ್ಪಗೌಡರು ಮುಂತಾಗಿ ಅನೇಕ ಜನರು ಉಪನ್ಯಾಸ ಮಾಡಿದರು. ಮಠದ ವಿಷಯಕವಾದ ಕೆಲವು ಸಂಗತಿಗಳಮೇಲೆ ನಿರ್ಧಾರವು ಮಾಡಲ್ಪಟ್ಟಿತು. ನಂತರ ಬಿರುದಾವಳಿಗಳಸಮೇತ ಪಲ್ಲಕ್ಕಿಯಲ್ಲಿ ಸ್ವಾಮಿಗಳವರ ಮೆರವಣಿಗೆಯೊಡನೆ ಸಕಲ ಭಕ್ತವೃಂದವೂ ಬನ್ನಿಮುಡಿಯುವ ಉದ್ದೇಶವಾಗಿ ದಯಮಾಡಿಸಿ ಪುನಃ ಮಠಕ್ಕೆ ಬಂದು ಸಿದ್ಧವಾಗಿದ್ದ ಸಿಂಹಾಸನದಲ್ಲಿ ಪಟ್ಟಾಧ್ಯಕ್ಷರವರು ಮುಹೂರ್ತಮಾಡಿದನಂತರ ಸಕಲ ಭಕ್ತರೂ ಸಾಷ್ಟಾಂಗಪ್ರಣಾಮಗಳನ್ನು ಮಾಡಿದರು. ನಂತರ ಮಠಸಂಬಂಧ ಎಂದರೆ ಗುರು, ಲಿಂಗ, ಜಂಗಮ, ವಿಷಯಕವಾದ ಉಪನ್ಯಾಸಗಳು ಮುಂತಾದವು ನಡೆದು ಜಯಮಂಗಳಪದಗಳೊಡನೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಓರ್ವ ಪ್ರೇಕ್ಷಕ.

ನಿಷೇಧಪ್ರದರ್ಶನ ಜಾಹೀರಸಭೆಯು.

ಕಲಬುರ್ಗೆಯಲ್ಲಿಯ ಮುಸಲ್ಮಾನರು ಶ್ರಾವಣ ತಿಂಗಳಲ್ಲಿ ಮಾಡಿದ ಅತ್ಯಾಚಾರವನ್ನು ನಿಷೇಧಿಸುವದಕ್ಕಾಗಿ ತಾರೀಖು 29-9-1924 ಇಸ್ವಿಯ ಸಂಜೆಯ 5 ಘಂಟೆಗೆ ಶ್ರೀಮದ್ವಸಲಿಂಗಚರಚಕ್ರವರ್ತಿಗಳಾದ ಕೊಣ್ಣೂರ ಮಹಾಸ್ವಾಮಿಗಳವರ ಅಪ್ಪಣೆಯಮೇರೆಗೆ ಪ್ರಣವಸ್ವರೂಪಿಗಳೂ, ಧರ್ಮಾಭಿಮಾನಿಗಳೂ ಆದ ಶ್ರೀಸಂಪಗಾಂವ ಚರಮೂರ್ತಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಯು ಶ್ರೀಕ್ಷೇತ್ರ ಮರ್ಗಮಠದಲ್ಲಿ ನೆರವೇರಿತು. ಸಭೆಗೆ ಕೊಣ್ಣೂರ, ಗಿರಣಿ, ಸಾವಳಗಿಯಿಂದ ಜನರು ಬಂದಿದ್ದರು. ಮಿ|| ಮಲ್ಲಿನಾಥ ಶಾಸ್ತ್ರಿಗಳವರು, ಮಿ|| ಧೂಪದಾಳರವರು, ಮಿ|| ಗಡ್ಡದ ಇಂಗ್ಲೀಷಶಾಲಾ ಮಾಸ್ತರರು, ಮಿ|| ಶಿದ್ಧನಾಳಮಾಸ್ತರರು ಕಲಬುರ್ಗೆಯ ಅತ್ಯಾಚಾರದ ವಿವೇಚನ, ಧರ್ಮಪರಿಪಾಲನೆ, ಧರ್ಮಗುರುಗಳ ಕರ್ತವ್ಯ, ಕಲಬುರ್ಗೆಯ ವಿಚಾರಣಾ ಕಮೀಟಿಯ ಪರಿಸ್ಥಿತಿ ಮೊದಲಾದವುಗಳ ವಿಷಯವಾಗಿ ಸುಲಲಿತವಾಗಿ ಹೇಳಿದರು. ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

1. ಹಿಂದೂಗಳ ಪೂಜ್ಯ ದೇವಾಲಯಗಳನ್ನು ಕುರಿತು ಕಲಬುರ್ಗೆಯಲ್ಲಿ ದುರಭಿಮಾನಿಗಳಾದ ಮುಸಲ್ಮಾನರು ಮಾಡಿದ ಅತ್ಯಾಚ್ಯಾರವನ್ನು ಈ ಸಭೆಯು ತೀವ್ರನಿಷೇಧಿಸುವುದು. 2. ಈಗಿದ್ದ ಕಮಿಟಿಯಿಂದ ಹಿಂದೂಗಳಿಗೆ ಯೋಗ್ಯನ್ಯಾಯವು ದೊರೆಯುವ ಸಂಭವವಿಲ್ಲ, ಅದ್ದರಿಂದ ನೈಜಾಮ ಸಾಹೇಬ ಬಹಾದ್ದೂರರವರು ಹಿಂದೂಗಳಿಗೆ ನ್ಯಾಯದೊರೆಯುವಂತೆ ಕಮೀಟಿಯ ವ್ಯವಸ್ಥೆ ಮಾಡಬೇಕೆಂದು ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. 3. ಕಲಬುರ್ಗೆಯಂಥ ಧಾರ್ಮಿಕ ಅತ್ಯಾಚ್ಯಾರದ ಕೃತ್ಯಗಳಲ್ಲಿಯೂ, ಧರ್ಮಗುರುಗಳು ಧರಿಸಿದ ಮೌನವ್ರತವನ್ನು ಕಂಡು ಸಭೆಗೆ ವಿಷಾದವೆನಿಸುವದು. ಅವರುಗಳು ಇನ್ನಾದರೂ ಜಾಗ್ರತರಾಗಬೇಕೆಂದು ವಿನಂತಿಯು. ಮೊದಲಿನ 2 ಠರಾವುಗಳನ್ನು ನಾಮದಾರ ಗವ್ಹರ್ನರ್ ಜನರಲ್ ಇನ್ ಕೌನ್ಸಿಲ್‌ರವರಿಗೆ ಮತ್ತು ನಿಜ್ಞಾಮ ಸಾಹೇಬರವರಿಗೆ ತಂತಿಯಿಂದ ತಿಳಿಸುವದರಲ್ಲಿ ಬಂತು. ಮಿ|| ಗಡ್ಡದ ಮಾಸ್ತರರು ಅಧ್ಯಕ್ಷರ ಆಭಾರಮನ್ನಣೆಯನ್ನು ಮಾಡಿದ ಮೇಲೆ ಜಯಜಯಕಾರದೊಡನೆ ಸಭಾಕಾರ್ಯವು ಸಮಾಪ್ತಿಯಾಯಿತು.

ಓರ್ವಪ್ರೇಕ್ಷಕ.

ಮಳವಳ್ಳಿಟವನ್ ವಿದ್ಯಮಾನ.

ಈಗ್ಯೆ 8-10 ದಿನಗಳಿಂದ ಕೊಂಚ ಮಳೆ ಆಗಿದೆ. ಇನ್ನೂ 1-2 ಹದ ಮಳೆಬಿದ್ದಲ್ಲಿ ಪೈರುಗಳಿಗೆ ಅನುಕೂಲವಾಗುತ್ತೆ. ಈ ವಾರ 14 ನೇ ತಾರೀಕಿನ ಸಂಪದಭ್ಯುದಯ ಪತ್ರಿಕೆಯಲ್ಲಿ ಇಲ್ಲಿನ ಮ್ಯುನ್ಸಿಪಲ್ ವೈಸ್‌ಪ್ರಸಿಡೆಂಟರ ಚುನಾವಣೆ ವಿಷಯದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ವ್ಯಾಜ್ಯವು, ಹಿಂದೆ ಇಲ್ಲಿ ಅಮಲ್ದಾರರಾಗಿದ್ದು ನಿಷ್ಪಕ್ಷಪಾತಿಗಳೂ ಜನಾನುರಾಗಿಗಳೂ ಎಂದು ಪ್ರಸಿದ್ಧಿಯನ್ನು ಪಡೆದಿದ್ದ ಮ|| ಶಿದ್ಧರಾಮಪ್ಪನವರ ಕಾಲದಲ್ಲಿ ಉದ್ಭವವಾಯಿತು ಎಂದು ಬರೆದಿರುವದನ್ನು ನೋಡಲು ಬಹಳ ವಿಷಾದವಾಗುತ್ತದೆ. ಒಂದು ವೇಳೆ ಮ|| ಶಿದ್ಧರಾಮಪ್ಪನವರ ಕಾರ್ಯದಕ್ಷತೆ ಜನಾನುರಾಗ ನಿಷ್ಪಕ್ಷಪಾತ ಇವುಗಳ ವಿಚಾರದಲ್ಲಿ ಅನುಮಾನಪಟ್ಟವರು ಈ ಕೆಳಗೆ ಕಂಡ ವಿಷಯಗಳನ್ನು ಗಮನಿಸಬೇಕು. ಮ|| ಶಿದ್ಧರಾಮಪ್ಪನವರು ಮಳವಳ್ಳಿಗೆ ಅಮಲ್ದಾರರಾಗಿ ಬಂದಾಗ ಆಬ್ಕಾರಿಯ ಉತ್ಪತ್ತಿ ತಿಂಗಳೊಂದಕ್ಕೆ 120-150 ರೂಪಾಯಿಗಳು ಇದ್ದದ್ದು ಇವರು ಟ್ರಾನ್ಸ್‌ಫರ್ ಆಗಿ ಹೋಗುವವರಿವಿಗೆ ಪ್ರತಿತಿಂಗಳಿನಲ್ಲೂ 500 ರೂಪಾಯಿನಿಂದ 600 ರೂಪಾಯಿವರಿವಿಗೆ ಏರಿತ್ತು. ಈಗಿರತಕ್ಕ ಅಮಲ್ದಾರ್ ಮ|| ವೈ. ಶ್ರೀಕಂಠಯ್ಯನವರು ನಮ್ಮ ಟವನ್ನಿಗೆ ಕಾಲು ಊರಿದ ದಿನದ ಲಾಗಾಯಿತು ಡಿಟೋ ಉತ್ಪತ್ತಿ ತಿಂಗಳಿಗೆ 150-200 ರೂಪಾಯಿಗಳಿಯಿತು ಮತ್ತು ಮೊಹತರ್ಫಾ ವಸೂಲಿವಿಚಾರ ಹಿಂದೆ ಇದ್ದದ್ದಕ್ಕೆ ಹಾಲಿ ಈಗ ಇರತಕ್ಕದ್ದನ್ನು ಹೋಲಿಸಿ ನೋಡಿದರೆ ವ್ಯಕ್ತವಾಗುತ್ತೆ. ಮ|| ಶಿದ್ಧರಾಮಪ್ಪನವರ ನಿಷ್ಪಕ್ಷಪಾತದ ವಿಚಾರ ಅಮಲ್ದಾರರಿಂದ ಮೈಸೂರು ಡಿಸ್ಟ್ರಿಕ್ಟು ಪೋಲೀಸ್ ಸೂಪರಿಂಟೆಂಡೆಂಟರಾಗಿ ಬಡ್ತಿಹೊಂದಿ ಹೋಗಿರುವದು ಮತ್ತೊಂದು ನಿದರ್ಶನವಾಗಿರುತ್ತೆ. ಮೊದಲು ವೈಸ್‌ಪ್ರಸಿಡೆಂಟ್ ಚುನಾವಣೆ ಆದಾಗ ಅಫಿಸಿಯಲ್ಸು ಓಟ್ಸು ಕೊಡಕೂಡದು ಎಂದು ರೂಲ್ಸ್‌ನಲ್ಲಿ ವಿಶದವಾಗಿದ್ದರೂ, ತಮ್ಮ ಸ್ವಜಾತೀಯರಾದ ತಿಮ್ಮಣ್ಣಯ್ಯನವರೇ ಉತ್ತೀರ್ಣರಾಗಬೇಕೆಂಬ ದುರಾಸೆಯು ಮತ್ತು ಬ್ರಾಹ್ಮಣ ಬ್ರಾಹ್ಮಣೇತರರೆಂಬ ಬಿನ್ನಭಾವನೆಯು, ಅಮಲ್ದಾರರಲ್ಲಿ ತುಂಬಿ ತುಳುಕುತ್ತಿದ್ದದ್ದರಿಂದ, ಬ್ರಾಹ್ಮಣೇತರ ಇಬ್ಬರು ಮುನ್ಸಿಪಲ್ ಮೆಂಬರುಗಳು ರೂಲ್ಸಿಗೆ ವಿರೋಧವಾಗಿ ಅಫಿಸಿಯಲ್ಸು ಓಟುಕೊಡಕೂಡದೆಂದು ನಿರೋಧಿಸಿದಾಗ್ಯೂ, ತಿಮ್ಮಣ್ಣಯ್ಯನವರಿಗೇನೆ ಓಟುಕೊಟ್ಟಿದ್ದಾರಲ್ಲವೇ ? ರೂಲ್ಸಿನಲ್ಲಿ ವಿಶದವಾಗಿ ಇದ್ದರೂ ಅಮಲ್ದಾರರು ವಿರೋಧವಾಗಿ ಓಟುಮಾಡಿರುವದು ನೋಡಿದರೆ ಅವರು ತಮ್ಮ ಜವಾಬ್ದಾರಿ ಅರಿತಿಲ್ಲವೊ ? ಅಥವಾ ಜಾತಿದ್ವೇಷದಿಂದ ಓಟುಮಾಡಿದರೊ ? ಇದನ್ನು ವಾಚಕರೇ ಯೋಚಿಸಬೇಕು. ಇಂತಾ ಅನಾನುಭವಿಗಳಾದವರನ್ನು ಜವಾಬ್ದಾರಿ ಆಫೀಸುಗಳಿಂದ ಸರ್ಕಾರದವರು ಜಾಗ್ರತೆಯಾಗಿ ವಜಾಮಾಡದೆ ಇದ್ದರೆ ಪ್ರಜಾಸಮುದಾಯಕ್ಕೆ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗುವದರಲ್ಲಿ ಸಂದೇಹವಿಲ್ಲ.

ನಿಷ್ಪಕ್ಷಪಾತಿ.

ವೀರಶೈವಮಹಾಸಭೆಯು.

ಯಾರ ಆಶೀರ್ವಾದದಿಂದ ಇಡೀ ವೀರಶೈವಸಮಾಜಕ್ಕೆ ವೀರಶೈವಮಹಾಸಭೆಯು ಕಲ್ಪತರುವಾಗಿ ಜನಿಸಿತೋ ಅಂಥಾ ಸಾಕ್ಷಾತ್ ನಿರಂಜನಮೂರ್ತಿಗಳಾದ ಶ್ರೀ ಹಾನಗಲ್ ಕುಮಾರಮಹಾಸ್ವಾಮಿಗಳ ವಿರಕ್ತವರ್ಗವನ್ನು ಹಳಿಯಲು ಬಿರೂರಿನಲ್ಲಿ ನೆರವಿದ್ದ ಮಹಾಸಭೆಯಲ್ಲಿ ಪ್ರಯತ್ನಿಸಲ್ಪಟ್ಟುದರಮೇಲೆ ಆ ತಪೋನಿಷ್ಠರ ತಾಪವಿಶೇಷದಿಂದ ಕಲ್ಪತರುವು ಬೂರಗದ ಮರವಾಗಿ ಬೀರೂರಿನಲ್ಲಿ ಬೇರುಬಿಟ್ಟುಕೊಂಡು ನಿಂತಿತು. ಇದರ ಬೇರನ್ನು ಬಿಡಿಸಿ ಮುಂದಕ್ಕೆ ಸಾಗಿಸಿಕೊಂಡು ಬರಬೇಕೆಂದು ಮೈಸೂರಿನವರೂ, ಹಾಂಸಭಾವಿಯವರೂ ಬಹಳ ಸಾಹಸಮಾಡಿದಾಗ್ಯೂ ಸಾಧ್ಯವಾಗದೆ ಹೋದುದನ್ನು ನಮ್ಮ ವೀರಶೈವಸಮಾಜಕ್ಕೆ ತಿಲಕಪ್ರಾಯರಾಗಿರುವ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ಬಹಳವಾಗಿ ಚಿಂತಿಸಿ ಅದನ್ನು ಬೀರೂರಿನಿಂದ ಹೇಗಾದರೂ ಬೇರುಬಿಡಿಸಿ ಮುಂದಕ್ಕೆ ಸಾಗಿಸಿ ಪೂರ್ವಸ್ಥಿತಿಗೆ ತರಬೇಕೆಂದು ಸಂಕಲ್ಪಮಾಡಿ ಈ 1924 ನೇ ಡಿಸೆಂಬರ್ ತಿಂಗಳ ಕಡೆಯಲ್ಲಿ ಮಹಾಸಭೆಯನ್ನು ಕೂಡಿಸಬೇಕೆಂದು ನಿರ್ಧರಿಸಿ ಅದಕ್ಕಾಗಿ ತಕ್ಕ ಪ್ರಯತ್ನ ನಡಿಸಿರುವರೆಂದೂ, ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತಮಂಡಳವನ್ನು ಏರ್ಪಡಿಸಿರುವರೆಂದೂ ಸಮಸ್ತ ವೀರಶೈವರೂ ಈ ಸ್ಟಾರ್ ಪತ್ರಿಕೆಯದ್ವಾರ ತಿಳಿದು ಸಂತೋಷಪಟ್ಟು ದಿ|| ಬ|| ಶೆಟ್ಟರನ್ನು ವಂದಿಸುತ್ತಿರುವರು. ಈಮಧ್ಯೆ ವೀರಶೈವಮಹಾಸಭೆಯನ್ನು ಕೂಡಿಸಬೇಕೆಂಬ ಕಾಲದಲ್ಲೇ ಬೆಳಗಾವಿನಲ್ಲಿ ಕೂಡುವ ರಾಷ್ಟ್ರೀಯ ಸಭೆಗೆ ಅನೇಕ ವೀರಶೈವರು ಹೋಗುವ ಸಂಭವವಿರುವದರಿಂದ, ಆ ಕಾಲದಲ್ಲಿ ಬಿಟ್ಟು ಬೇರೆಕಾಲ ಅಂದರೆ ಮುಂದಿನ ಬೇಸಿಗೆಯ ರಜಾಕಾಲದಲ್ಲಿ ವೀರಶೈವಮಹಾಸಭೆಯನ್ನು ಕೂಡಿಸುವದು ಒಳ್ಳೆಯದು, ಹಾಗಲ್ಲದೆ ಈಗಲೇ ಮಾಡುವದಾದರೆ ಸಭೆಕೂಡಿಸಿದೆವೆಂದಾಗುವದಲ್ಲದೆ ಪ್ರಯೋಜನವಾಗುವದಿಲ್ಲ ವಸ್ತೈರೆಯಾಗಿ ಧಾರವಾಡದ ವಿಜಯ ಮೊದಲಾದ ಕೆಲವು ಉತ್ತರದೇಶದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ವೀರಶೈವಸಮಾಜದಲ್ಲಿ ಅನೈಕಮತ್ಯವೂ, ದ್ವೇಷಾಸೂಯೆಗಳೂ ಹುಟ್ಟಿ ವಿಶೇಷ ಅನರ್ಥವಾಗುತ್ತಿರುವ ಈ ಸಮಯದಲ್ಲಿ ಮಹಾಸಭೆಯನೆಪದಿಂದ ನಾನಾ ದೇಶದ ವೀರಶೈವಪ್ರಮುಖರು ಅತಿ ಜಾಗ್ರತೆಯಾಗಿ ಒಂದುಕಡೆ ಸೇರಿ ಸಮಾಜಬಾಂಧವರು ಪರಸ್ಪರದ್ವೇಷಾಸೂಯೆಗಳನ್ನು ಬಿಟ್ಟು ಐಕಮತ್ಯದಿಂದ ನಡೆದುಕೊಳ್ಳುವ ಉಪಾಯವನ್ನು ಕಂಡುಹಿಡಿಯಲು ಸಾಧಕವಾಗುವಂತೆ ಬೆಂಗಳೂರಿನ ವೀರಶೈವಬಂಧುಗಳು ಮಹಾಸಭೆಯನ್ನು ತಮ್ಮಲ್ಲಿ ಕೂಡಿಸಲು ಏರ್ಪಡಿಸಿ ಸಮಾಜಕ್ಕೆ ವಿಶೇಷ ಉಪಕಾರವನ್ನುಮಾಡಿರುತ್ತಾರೆ. ಈ ಸಮಯದಲ್ಲಿ ಪ್ರತಿಯೊಬ್ಬವೀರಶೈವನೂ ತನ್ನ ಸಮಾಜಾಭಿವೃದ್ಧಿಯಮೇಲೆ ಪೂರ್ಣ ಅಭಿಮಾನವಿಟ್ಟು ಯಾವ ಕೆಲಸವಿದ್ದಾಗ್ಯೂ ಬಿಟ್ಟು ಸಭಾಕಾಲಕ್ಕೆ ಬೆಂಗಳೂರಿಗೆ ಬಂದು ಯಥಾಶಕ್ತಿ ಸೇವೆಮಾಡತಕ್ಕದ್ದು ಮುಖ್ಯ ಧರ್ಮವಾಗಿದೆ. ಮನುಷ್ಯನು ತನ್ನ ಮತ್ತು ತನ್ನ ಸಮಾಜದ ಕಲ್ಯಾಣವನ್ನು ಮೊದಲುಮಾಡಿ ಅನಂತರ ಅನ್ಯರ ಕಲ್ಯಾಣಮಾಡಲು ಎತ್ನಿಸುವದು ಅವನ ಧರ್ಮವಾಗಿದೆ. ಶಾಸ್ತ್ರವಚನವಾದರೂ ಆ ಪ್ರಕಾರವಾಗಿಯೇ ಇರುತ್ತದೆ. ಹೀಗಿದ್ದರೂ ತನ್ನ ಸಮಾಜಸೇವೆಯನ್ನು ಅಲಕ್ಷಿಸಿ ಬೇರೆ ಕಾರ್ಯದಲ್ಲುದ್ಯುಕ್ತನಾಗುವುದರಿಂದ, ಮನೆದೇವರನ್ನು ಉಪವಾಸವಿರಿಸಿ ಮಾರಮ್ಮನಿಗೆ ತಂಬಿಟ್ಟಿನ ಆರತಿಯನ್ನು ಮಾಡಿದಂತಾಗುತ್ತದಲ್ಲವೆ ? ಈ ಮಹಾಸಭೆಯನ್ನು ಮೈಸೂರಿನವರು ಮಾಡಬೇಕೆಂದಾಗ ಹಾಂಸಭಾವಿಯವರು ಅಡ್ಡಬಂದದ್ದರಿಂದ ಮೊದಲನೆಯ ವಿಘ್ನವಾಯಿತು ; ಹಾಂಸಭಾವಿಯವರು ಎತ್ನಿಸಿದಾಗ ರೋಗೋಪದ್ರವ ನೆಪವುಂಟಾಗಿ ಎರಡನೆ ವಿಘ್ನವುಂಟಾಯಿತು. ಈಗ ಬೆಂಗಳೂರಿನವರು ಪ್ರಯತ್ನಿಸಿರುವಾಗ್ಗೆ ರಾಷ್ಟ್ರೀಯಮಹಾಸಭೆಯ ಅಡಚಣೆಯನ್ನೊಡ್ಡುವದರಿಂದ ಮೂರನೆಯ ವಿಘ್ನವಾಗುವುದು ಅಂದರೆ ಮಹಾಸಭೆಯು ನೆರೆಯಲು ನಿರಂತರ ವಿಘ್ನವಾಗುವದೆಂದು ಹೇಳಬೇಕಾದ್ದಿಲ್ಲ. ಸಮಾಜವು ಕಳೆದುಕೊಂಡಿರುವ ಕಣ್ಣನ್ನು ಮರಳಿ ಬರಮಾಡಿಕೊಳ್ಳುವ ಈ ಸುಸಮಯವನ್ನು ಹೋಗಲಾಡಿಸಿ ಇಡೀಸಮಾಜವೇ ಪೇಚಾಡುವಂತೆ ನಮ್ಮ ಉತ್ತರದೇಶದ ವೀರಶೈಬಂಧುಗಳು ಮಾಡುವದು ಜಾಣತನವಲ್ಲ. ಆದ್ದರಿಂದ ಅವರುಗಳು, ಅನೈಕಮತ್ಯದಿಂದಲೂ ಅಂತಃಕಲಹದಿಂದಲೂ ಅಧೋಗತಿಗಿಳಿಯುತ್ತಿರುವ ತಮ್ಮ ಸಮಾಜಸುಧಾರಣೆಯ ವಿಚಾರದಲ್ಲಿ ಗಮನವಿಟ್ಟು, ಪ್ರತಿವರ್ಷದಲ್ಲೂ ಯಾವದಾದರೂ ಒಂದು ಕಡೆಯಲ್ಲಿ ನಿರ್ವಿಘ್ನವಾಗಿನಡಿಯುತ್ತಿರುವ ರಾಷ್ಟ್ರೀಯಸಭೆಯ ಸೇವೆಯನ್ನು ಮಾಡಲು ಅವಕಾಶವಿರುವದರಿಂದ ಈವೇಳೆ ಅಸ್ತಿತ್ವಕ್ಕೆ ಬರಲಿಕ್ಕಿರುವ ವೀರಶೈವ ಮಹಾಸಭೆಯು ಬೆಂಗಳೂರಿನ ವೀರಶೈವಬಂಧುಗಳು ನಿರ್ಧರಿಸಿರುವಂತೆ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಿರ್ವಿಘ್ನವಾಗಿ ನಡೆಯುವಂತೆಮಾಡಿ ಆ ಕೀರ್ತಿಯನ್ನು ತಮ್ಮ ಪಾಲಿಗೆ ತಂದುಕೊಳ್ಳುವವರಾಗಲೆಂದು ಕೋರುತ್ತೇನೆ. ಹಾಗಲ್ಲದೆ ಸಭೆಯು ನಡೆಯದಂತೆ ಮುಷ್ಕರಮಾಡುವದಾದಲ್ಲಿ ಕೈಗೆಬಂದ ತುತ್ತು ಬಾಯಿಗೆಬರದಂತಾಗಿ ಇಡೀಸಮಾಜವೇ ಪೇಚಾಡುವಂತಾಗುವುದರಲ್ಲಿ ಖಂಡಿತವಾಗಿಯೂ ಸಂಶಯವಿಲ್ಲ.

ಮಹಾಸಭಾಭಿಮಾನಿ.

ಕ್ರೈಸ್ತರ ಶುದ್ಧೀಕರಣ.

ಕಳೆದ 15 ನೇ ತಾ|| ಬುಧವಾರ ನಂಜನಗೂಡು ತಾಲ್ಲೂಕು ಕಿರಗುಂದದ ಗ್ರಾಮದಲ್ಲಿ ಕ್ರೈಸ್ತರ ಶುದ್ಧೀಕರಣದ ಒಂದು ನವೀನಕಾರ್ಯವು ನಡೆಯಿತು. ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಿಕೊಳ್ಳಲ್ಪಟ್ಟಿದ್ದ ಮನೆಯನೆಂಬಾತನನ್ನು ಸಂಸಾರಸಮೇತ ಆತನ ಮನಃಪೂರ್ವಕವಾಗಿಯೂ ಸುತ್ತುಮುತ್ತಲಿನ ಸುಮಾರು 15-20 ಗ್ರಾಮದ ಮುಖಂಡರುಗಳ ಅನುಮತಿಯಿಂದಲೂ ಪುನಃ ಹಿಂದೂಮತಕ್ಕೆ ಸೇರಿಸಿಕೊಳ್ಳಲಾಯಿತು.

ಇದೇ ತಿಂಗಳು 1 ನೇ ತಾ|| ನಮ್ಮ ಗ್ರಾಮರಕ್ಷಣಾಸಭೆಗೆ ಮೇಲ್ಕಂಡ ಮನೆಯನು ಅರ್ಜಿಯನ್ನು ಬರೆದು ಅದರಲ್ಲಿ ತಾನು ಕ್ರೈಸ್ತಪಾದ್ರಿಗಳಿಂದ ಹಣವನ್ನು ಕೊಡುತ್ತೇವೆಂಬ ಭರವಸೆಯಿಂದಲೂ, ಅವನಿಗೆ ಸಂಘದಲ್ಲಿ ಉತ್ತಮತರದ ಗೌರವವು ದೊರೆಯುವಂತೆ ಮಾಡುವುದಾಗಿಯೂ ಇವೇ ಮುಂತಾದ ಆಸೆಗಳಿಂದ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟನೆಂಬದಾಗಿಯೂ, ಆಶ್ರಯದಿಂದ ಇವನ ಕೋರಿಕೆಯು ಈಡೇರದೆ, ಈಗ ಅನೇಕ ವಿಧವಾದ ತೊಂದರೆಗಳಿಗೆ ಗುರಿಯಾಗಿರುವುದರಿಂದಲೂ, ತನ್ನನ್ನು ಪುನಃ ತಮ್ಮ ಜಾತಿಗೆ ಸೇರಿಸುವಂತೆ ಮಾಡಿಕೊಡಬೇಕೆಂದೂ ಪ್ರಾರ್ಥಿಸಿದನು. ಅದರಂತೆ ನಾನು ಈ ವಿಷಯವನ್ನು ಪರಿಶೀಲಿಸಿ ಅನೇಕ ಗ್ರಾಮಗಳಿಗೆಹೋಗಿ ಅಲ್ಲಿನ ಮುಖಂಡರುಗಳಕೂಡ ಮಾತನಾಡಿದ್ದರಲ್ಲಿ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟಿದ್ದ ಪಂಚಮರನ್ನು ಪುನಃ ಜಾತಿಗೆತೆಗೆದುಕೊಳ್ಳುವುದಕ್ಕೆ ಅವರೆಲ್ಲರೂ ಸಮ್ಮತಿಸಿದರು.

ಸುಮಾರು ಒಂದೂವರೆ ವರ್ಷಗಳ ಹಿಂದೆ ರೆವರೆಂಡ್ ಮಿ|| ಸಾದೇಸಾಹೇಬರವರು ಕಿರಗುಂದದಗ್ರಾಮಕ್ಕೆ ಬಂದಿದ್ದಾಗ ಅಲ್ಲಿನ ಪ್ರಜೆಗಳಿಗೆ ಒಂದು ಉಪನ್ಯಾಸವನ್ನುಮಾಡಿ, ಅದರಲ್ಲಿ ಹಿಂದೂಮತವನ್ನು ಅನೇಕ ವಿಧವಾಗಿ ದೂಷಿಸಿ, ಕ್ರೈಸ್ತಮತವನ್ನು ಶ್ಲಾಘಿಸಿ, ನಮ್ಮ ಆಚಾರವ್ಯವಹಾರಗಳನ್ನು ಖಂಡಿಸಿ ವಿಗ್ರಹಾರಾಧನೆ, ನಾಮಧಾರಣೆ, ಶಿಖಾಧಾರಣೆ ಮುಂತಾದ ಆರ್ಯಪದ್ಧತಿಗಳನ್ನು ತಿರಸ್ಕರಿಸಿ, ಪಂಚಮರು ಕ್ರೈಸ್ತಮತಕ್ಕೆಸೇರಿದ ಮಾತ್ರದಿಂದಲೇ ಅವರಿಗೆ ಸಕಲ ಸನ್ಮಾನಗಳುಂಟಾಗಿ, ಗ್ರಾಮದ ಎಲ್ಲಾ ಬೀದಿಗಳಲ್ಲಿಯೂ ಓಡಾಡುವುದಕ್ಕೂ ಮತ್ತು ಇತರ ವಿಧವಾದ ಸಾಂಘಿಕ ಗೌರವಗಳನ್ನು ಪಡೆಯುವುದಕ್ಕೂ ಅನುಕೂಲವಾಗುವುದೆಂದು ಆಶತೋರಿಸಿ, ದುರ್ಬೋಧನೆಯನ್ನುಮಾಡಿದ್ದರು. ಈ ದುರ್ಬೋಧನೆಯಿಂದ ಸುಮಾರು 19 ಜನ ಅಜ್ಞರು ಮರುಳುಮಾಡಲ್ಪಟ್ಟು ಒಡನೆಯೇ ಕ್ರೈಸ್ತಮತಕ್ಕೆಸೇರಿಕೊಂಡರು. ಆ ಪೈಕಿ ಮೇಲ್ಕಂಡ ಮನೆಯನು ಮತ್ತು ಅವನ ಸಂಸಾರವೂ ಸೇರಿಸಲ್ಪಟ್ಟಿದ್ದರು. ಮನೆಯನಿಗೆ ಸುನಂದನೆಂಬ ನಾಮಧೇಯವೂ, ಇತರರುಗಳಿಗೂ ಅದೇ ವಿಧವಾದ ಬೇರೆಬೇರೆ ಹೆಸರುಗಳೂ ಕೊಡಲ್ಪಟ್ಟವು. ಅವನತಲೆ ಕ್ರಾಪ್‌ಮಾಡಲ್ಪಟ್ಟಿತು. ಪಾದ್ರಿಗಳ ಪದ್ಧತಿಪ್ರಕಾರ ಶಿಖಾಖಂಡನ, ಜ್ಞಾನಸ್ನಾನವೇ ಮುಂತಾದವುಗಳೊಡನೆ ಮನೆಯನು ಕ್ರೈಸ್ತಮತಕ್ಕೆಸೇರಿಸಲ್ಪಟ್ಟನು. ಉತ್ತರೋತ್ತರ ಸುನಂದನು ನಿರೀಕ್ಷಿಸಿಕೊಂಡಿದ್ದ ಯಾವ ಮಹತ್ಪ್ರಯೋಜನವೂ ಉಂಟಾಗದೆ ಅನೇಕ ವಿಧವಾದ ತೊಂದರೆಗಳೇ ಪ್ರಾಪ್ತವಾದುದರಿಂದ ತನ್ನ ಪೂರ್ವದಸ್ಥಿತಿಯನ್ನೇ ಅವಲಂಬಿಸಬೇಕೆಂದು ಮನಸ್ಸನ್ನುಮಾಡಿ ಮೇಲ್ಕಂಡ ಪ್ರಕಾರ ಈ ಸಭೆಗೆ ಅರ್ಜಿಯನ್ನು ಹಾಕಿದನು. ಈತನನ್ನು ಶುದ್ಧಿಮಾಡಿ ಸ್ವಜಾತಿಗೆಸೇರಿಸುವುದಕ್ಕಾಗಿ ಸುತ್ತುಮುತ್ತಲಿನ 15-20 ಗ್ರಾಮದಪ್ರಜೆಗಳಿಂದಕೂಡಿದ ಒಂದು ಸಭೆಯು ಕಿರುಗುಂದದಗ್ರಾಮದಲ್ಲಿ ಕಳೆದ 15ನೇ ತಾ|| ಬುಧವಾರದಿವಸ ಸೇರಿತ್ತು. ಆ ಕಾಲದಲ್ಲಿ ತಾಲ್ಲೂಕು ಅಮಲ್ದಾರರವರೂ, ಪೋಲೀಸ್ ಇನ್‌ಸ್ಪೆಕ್ಟರವರೂ, ತಾಲ್ಲೂಕು ಬೋರ್ಡು ವೈಸ್‌ಪ್ರೆಸಿಡೆಂಟರವರೂ, ಡಾಕ್ಟರವರೂ ಮತ್ತು ಮ|| ಬಿ. ಎಸ್. ನಾಗೇಶರಾಯರವರೂ ಸಹ ದಯಮಾಡಿಸಿದ್ದರು. ಮೈಸೂರಿನ ಶ್ರೀಮಾನ್ ಗೋವಿಂದಾಚಾರ್‌ಸ್ವಾಮಿಗಳವರು ನನ್ನ ಪ್ರಾರ್ಥನೆಯಂತೆ ಅಲ್ಲಿಗೆ ದಯಮಾಡಿಸಿದ್ದರು. ಅನಂತರ ಅಲ್ಲಿ ಒಂದು ಶ್ರೀರಾಮಮಂದಿರವು ಸ್ಥಾಪಿಸಲ್ಪಟ್ಟಿತು. ಹಿಂದೂಮತದ ವಿಷಯದಲ್ಲಿ ಒಂದು ಉಪನ್ಯಾಸವು ಸ್ವಾಮಿಗಳವರಿಂದಮಾಡಲ್ಪಟ್ಟಿತು. ಸುನಂದನಿಗೆ ಶಿಖಾಧಾರಣೆ, ನಾಮಧಾರಣೆಗಳು, ಮಾಡಿಸಲ್ಪಟ್ಟು ಪದ್ಧತಿಪ್ರಕಾರ ಅವನು ಸಂಸಾರಸಮೇತ ಸ್ವಮತಕ್ಕೆ ಸೇರಿಸಲ್ಪಟ್ಟನು. ಅವನ ಜಾತಿಬಂಧುಗಳು ಸಾವಿರಾರು ಜನರ ಅನುಮತಿಯಿಂದಲೂ ಈ ಕಾರ್ಯವು ತೃಪ್ತಿಕರವಾಗಿ ಪರಿಣಮಿಸಿತು.

ಇದರಿಂದ ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಲ್ಪಟ್ಟಿದ್ದವರನ್ನು ಜನರ ಅನುಮತಿಯಂತೆ ಸ್ವಜಾತಿಗೆ ಸೇರಿಸಿಕೊಳ್ಳುವ ಪ್ರಯತ್ನಕ್ಕೆ ಅಸ್ತಿಭಾರವು ಹಾಕಲ್ಪಟ್ಟಿತು. ಮತಾಂತರವನ್ನು ಸೇರಿ ಹಿಂದೂಜನಾಂಗವನ್ನು ಶಿಥಿಲಮಾಡುತ್ತಿರುವ ಜನರೆಲ್ಲರೂ ಈ ಮೂಲಕ ತಮ್ಮ ತಮ್ಮ ಸ್ವಜಾತಿಗಳನ್ನು ಪುನಃ ಅವಲಂಬಿಸುವರೆಂದು ನಂಬಲ್ಪಟ್ಟಿದೆ. ಪುನಃ ಸ್ವಜಾತಿಯನ್ನು ಸೇರಬೇಕೆಂದು ಬರುವವರಿಗೆ ವಿಶೇಷವಾದ ದಂಡವನ್ನು ಹೊರಿಸದೆ ಸಮಾಜದ ಗೌರವಕ್ಕಾಗಿ ಕೇವಲ 4 ಆಣೆಯನ್ನು ತೆಗೆದುಕೊಂಡು ಅವರನ್ನು ಪುನಃ ಸೇರಿಸಿಕೊಳ್ಳಬಹುದೆಂದು ತೀರ್ಮಾನವಾಗಿದೆ. ಈ ತೀರ್ಮಾನದಂತೆ ಮೇಲ್ಕಂಡ ಮನೆಯನು 4 ಆಣೆಯನ್ನು ತಪ್ಪುಕಾಣಿಕೆಯಾಗಿ ಕೊಟ್ಟಿರುತ್ತಾನೆ.

ಮೇಲ್ಕಂಡ ಕಾರ್ಯವೆಲ್ಲವೂ ಸಾಂಗವಾಗಿ ನಡೆದಮೇಲೆ ಸುಮಾರು ಒಂದೂವರೆ ಘಂಟೆಯಕಾಲ ಮೇಘರಾಜನಿಂದ ಪುಷ್ಪವೃಷ್ಟಿಯಾಗಿ ಜನರೆಲ್ಲರಿಗೂ ಆನಂದವನ್ನುಂಟುಮಾಡಿತು.

ಎಸ್. ರಾಮಚಂದ್ರರಾವ್ (ಸೆಕ್ರಟರಿ,)
ಗ್ರಾಮರಕ್ಷಣಸಭಾ, ತಗಡೂರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ

ದಿವಾನ್ ಸಾಹೇಬರವರು ಮಾಡಿದ ಭಾಷಣದ ಮುಖ್ಯಾಂಶ.

(ದಸರಾ ಅಧಿವೇಶನ)

10ನೆಯ ಅಕ್ಟೋಬರ್ 1924

(ಕಳೆದವಾರದ ಶೇಷ.)

ವಿದ್ಯಾಭ್ಯಾಸದ ಮೆಮೊರ್ಯಾಂಡಂ ಮೇಲಣ ಸರ್ಕಾರೀ ಹುಕುಮಿನಲ್ಲಿ ಕಂಡ ಪರಿಷ್ಕರಣಗಳಲ್ಲಿ ಹೆಚ್ಚು ಸಂಖ್ಯೆಯವುಗಳನ್ನು ಆಚರಣೆಗೆ ತಂದಿರುವುದು ಮೇಲ್ಕಂಡ ವಿವರಣೆಯಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಎನಿದ್ದರೂ, ಕೆಲವನ್ನು ಹುಕುಮಿನಲ್ಲಿ ಇದ್ದಂತೆಯೇ ಆಚರಣೆಗೆ ತಂದಿದೆ. ಮತ್ತೆ ಕೆಲವನ್ನು ಅವಶ್ಯಕಂಡ ರೀತಿಯಲ್ಲಿ ಈಗಿನ ಸ್ಥಿತಿಗೆ ತಕ್ಕಂತೆ ಮಾರ್ಪಡಿಸಿ ಆಚರಣೆಗೆ ತರಲಾಗಿದೆ. ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಮತ್ತಷ್ಟು ಉದಾರ ಬುದ್ಧಿಯಿಂದ ಸರ್ಕಾರದವರೊಡನೆ ಐಕ್ಯಭವಿಸಿ ಪ್ರಯತ್ನಮಾಡುವುದಾದರೆ ಅಭಿವೃದ್ಧಿಯ ಕಾರ್ಯಗಳು ಇನ್ನೂ ತೀವ್ರವಾಗಿ ನಡೆಯಬಹುದಾಗಿದೆ. ಕೆಲವು ಡಿಸ್ಟ್ರಿಕ್ಟುಗಳಲ್ಲಿ ಮಾತ್ರವೇ ಎಜುಕೇಷನ್ ತೆರಿಗೆಯನ್ನು ವಸೂಲ್ಮಾಡುತ್ತಿರುವುದರಿಂದ ವಿದ್ಯಾಭಿವೃದ್ಧಿಯ ಕಾರ್ಯಗಳು ಎಲ್ಲಾ ಕಡೆಗಳಲ್ಲಿಯೂ ಒಂದೇ ಸಮನಾಗಿ ನಡೆಯಲು ಅವಕಾಶವಿಲ್ಲದೆ ಸಮತೆಯು ತಪ್ಪಿರುತ್ತದೆ. ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಒಂದೇದರದಲ್ಲಿ ತೆರಿಗೆಯನ್ನು ವಸೂಲ್ಮಾಡಿದಲ್ಲಿ ವಿದ್ಯಾಭಿವೃದ್ಧಿಯು ಒಂದೇ ಸಮವಾಗಿ ನಡೆಯುವಂತೆ ಮಾಡಲು ಸಾಧ್ಯವಾಗುವುದು. ರೂಪಾಯಿಗೆ ಆರು ಪೈಗಳಮೇರೆಗೆ ವಿದ್ಯಾಭ್ಯಾಸದ ಸೆಸ್ಸನ್ನು ವಸೂಲ್ಮಾಡಿದರೂ ಕೂಡ, ಕೇವಲ ಸರ್ಕಾರದ ಹಣ ಒಂದರಿಂದಲೇ ಪ್ರಾಥಮಿಕ ವಿದ್ಯಾಭ್ಯಾಸದ ವಿಶಿಷ್ಟ ವೆಚ್ಚವನ್ನೂ ಒದಗಿಸುವುದು ಅಸಾಧ್ಯವಾಗಿರುತ್ತದೆ. ಕೆಲವು ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಹಾಲಿ ವಸೂಲ್ಮಾಡುತ್ತಿರುವ ದರಗಳಮೇರೆಗೆ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ವಸೂಲ್ಮಾಡಿಯೇ ತೀರಬೇಕೆಂದು ನಿರ್ಬಂಧವನ್ನು ಕಲ್ಪಿಸಿ ವರ್ತಿಸುವುದಾದರೆ ಮಾತ್ರವೇ ವಿದ್ಯಾಭಿವೃದ್ಧಿಯು ಇನ್ನೂ ಹೆಚ್ಚುಹೆಚ್ಚಾಗಿ ಮುಂದುವರಿಯುವುದು ಸಾಧ್ಯವಾಗುತ್ತದೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಆಯವ್ಯಯಗಳನ್ನು ಹೇಗೆ ಕ್ರಮಗೊಳಿಸಬಹುದೆಂಬ ವಿಷಯವನ್ನು ಕಳೆದವರುಷವೆಲ್ಲಾ ಅತ್ಯಂತ ಆಸಕ್ತಿಯಿಂದ ಪರಿಶೀಲಿಸಿ ಮುಂದಟ್ಟುಮಾಡಿಕೊಳ್ಳಲಾಯಿತು. ಏಡೆಡ್ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳನ್ನಾಗಿ ಬದಲಾಯಿಸುವ ವಿಚಾರದಲ್ಲಿಯೂ, ಮತ್ತು ಅದೇ ಸಂಬಂಧವಾದ ಇತರ ವಿಚಾರಗಳಲ್ಲಿಯೂ, ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮದ ಫಲಿತಾಂಶವೆನಿಸಿ ಪ್ರಾಪ್ತವಾಗಿರುವ, ಎಂದರೆ, ಮೇಲೆವಿವರಿಸಿ ತಿಳಿಸಿದಂಥಾ ಕಷ್ಟಗಳನ್ನು ನಿವಾರಣೆ ಮಾಡಿಕೊಂಡು ಮುಂದೆ ಸಾಗುವುದಕ್ಕನುಕೂಲವಾದ ಮುಖ್ಯ ಮಾರ್ಗಗಳ ವಿಚಾರವು ಸರ್ಕಾರದವರ ಪ್ರಬಲವಾದ ಪರ್ಯಾಲೋಚನೆಯಲ್ಲಿರುತ್ತದೆ.

ಈ ಸಂಸ್ಥಾನದ ಗ್ರಾಮಗಳಲ್ಲೆಲ್ಲಾ ಪಂಚಾಯತರ ಏರ್ಪಾಡನ್ನು ಜಾರಿಗೆ ತರುವ ಉದ್ದೇಶವಿರುವುದರಿಂದಲೂ, ಆದರಿಂದ ಲೋಕಲ್ ಬೋರ್ಡುಗಳ ಆಯವ್ಯಯಸ್ಥಿತಿಯು ಅಸಮರ್ಪಕವಾಗಿ ಪರಿಣಮಿಸುವುದರಿಂದಲೂ ಎಲ್ಲಾ ತಾಲ್ಲೂಕು ಬೋರ್ಡುಗಳನ್ನೂ ವಜಾಮಾಡುವುದೂ, ಮತ್ತು ಸ್ಥಳಾರೋಗ್ಯ, ರಸ್ತೆಗಳು, ವೈದ್ಯಸಹಾಯವೇ ಮುಂತಾದ ಬಾಬುಗಳಲ್ಲಿ ಡಿಸ್ಟ್ರಿಕ್ಟುಗಳಿಗೂ, ತಾಲ್ಲೂಕುಗಳಿಗೂ, ತಾಲ್ಲೂಕುಗಳಿಗೆ ಪರಸ್ಪರವಾಗಿಯೂ, ಗ್ರಾಮಾಂತರಗಳಿಗೆ ಪರಸ್ಪರವಾಗಿಯೂ, ಸಂಬಂಧಪಡುವ ಕೆಲಸಗಳಿಗೆಲ್ಲಾ ಗಮನಕೊಡುವಂತೆ ಡಿಸ್ಟ್ರಿಕ್ಟು ಬೋರ್ಡುಗಳಿಗೆ ಇನ್ನೂ ಧಾರಾಳವಾದ ಅವಕಾಶವನ್ನು ಕೊಡಬೇಕಾದ್ದೂ, ಅನುಕೂಲ ಕಾಣುವುದು ಮಾತ್ರವೇ ಅಲ್ಲದೆ ಆವಶ್ಯಕವೆಂದೂ ಸಹ ಸರ್ಕಾರದವರು ಭಾವಿಸಿರುತ್ತಾರೆ.

ಮ್ಯುನಿಸಿಪಾಲಿಟಿಗಳ ಮೇಲ್ಪಾಟು.

(1) ಮೈನರ್ ಮ್ಯುನಿಸಿಪಲ್ ಕೌನ್ಸಿಲುಗಳಲ್ಲಿನ ಚುನಾಯಿಸಲ್ಪಟ್ಟ ಮೆಂಬರುಗಳ ಸಂಖ್ಯೆಯನ್ನು ಆಯಾ ಕೌನ್ಸಿಲಿನ ಒಟ್ಟು ಮೆಂಬರುಗಳ ಸಂಖ್ಯೆಯನ್ನು $\frac{1}{3}$ನೇ ಭಾಗದಿಂದ $\frac{1}{2}$ಕ್ಕೆ ಹೆಚ್ಚಿಸತಕ್ಕದ್ದು ;

(2) ಚುನಾವಣೆಗಳಲ್ಲಿ ವೋಟ್ ಮಾಡುವುದಕ್ಕಾಗಿ ಸ್ತ್ರೀಯರಿಗೆ ಓಟ್ ಮಾಡುವ ಅಧಿಕಾರವನ್ನು ಕೊಡತಕ್ಕದ್ದು ;

(3) ಸಾಧಾರಣವಾಗಿ, ಸಿಟಿ ಮತ್ತು ಟೌನ್ ಮ್ಯುನಿಸಿಪಲ್ ಕೌನ್ಸಿಲುಗಳ ಪ್ರೆಸಿಡೆಂಟರುಗಳು, ಚುನಾಯಿಲ್ಪಡತಕ್ಕದ್ದು ; ಮತ್ತು ಅವರು ಆಯಾ ಮ್ಯುನಿಸಿಪಲ್ ಕೌನ್ಸಿಲುಗಳಿಂದ ಚುನಾಯಿಸಲ್ಪಡುವುದಕ್ಕೆ ಬದಲಾಗಿ, ಓಟರುಗಳೆಲ್ಲರಿಂದಲೂ ಚುನಾಯಿಸಲ್ಪಡತಕ್ಕದ್ದು ;

(4) ಸಿಟಿ ಮ್ಯುನಿಸಿಪಾಲಿಟಿಗಳು ಹೊರತು, ಮಿಕ್ಕ ಮ್ಯುನಿಸಿಪಲ್ ಆಫೀಸುಗಳನ್ನು ಡೆಪ್ಯುಟಿಕಮಿಷನರುಗಳು ತಣಿಖೆ ಮಾಡುವುದಕ್ಕಾಗಿ ಏರ್ಪಾಡು ಮಾಡತಕ್ಕದ್ದು.

ಮೇಜರ್ ಮತ್ತು ಮೈನರ್ ಕೆರೆಗಳ ದುರಸ್ತಿ.

ಮೇಜರ್ ಕೆರೆಗಳು.—ಸಂಸ್ಥಾನದಲ್ಲಿರುವ ಮೇಜರ್ ಕೆರೆಗಳ ಒಟ್ಟು ಸಂಖ್ಯೆಯು 2,566; ಇವುಗಳ ಪೈಕಿ 1,830 ಕೆರೆಗಳು ದುರಸ್ತು ಮಾಡಲ್ಪಟ್ಟಿವೆ. ಇನ್ನೂ ದುರಸ್ತಾಗಬೇಕಾದ ಕೆರೆಗಳು 700 ಕ್ಕಿಂತ ಹೆಚ್ಚಾಗಿವೆ. ಇವುಗಳಿಗಾಗಿ ಸುಮಾರು 50 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಆದುದರಿಂದ, ಈ ವೆಚ್ಚಕ್ಕಾಗಿ ಪ್ರತಿವರ್ಷವೂ ಸ್ವಲ್ಪ ಸ್ವಲ್ಪ ಹಣವನ್ನು ಒದಗಿಸುತ್ತಾ ಅನೇಕ ವರುಷಗಳಕಾಲ ಕೆಲಸಮಾಡಿಸಬೇಕಾಗುತ್ತದೆ.

ಕಳೆದವರುಷ (1923-24ರಲ್ಲಿ) ಮೇಜರ್ ಕೆರೆಗಳಿಗಾಗಿ 1,92,000 ರೂಪಾಯಿಗಳನ್ನು ಮಾತ್ರ ಮಂಜೂರ್ಮಾಡಲಾಯಿತು ಮತ್ತು 1,79,626 ರೂಪಾಯಿಗಳ ವೆಚ್ಚದಿಂದ ಕೆಲಸವು ನಡೆಯಿತು. ಚಾಲ್ತಿ ವರ್ಷದಲ್ಲಿ, ಮೇಜರ್ ಕೆರೆಗಳಿಗಾಗಿ ಮಂಜೂರ್ಮಾಡಿದ ಹಣವು 2,67,000 ರೂಪಾಯಿಗಳು. ಇನ್ನೂ ಹೆಚ್ಚು ಮೊಬಲಗನ್ನು ಒದಗಿಸಲು ದ್ರವ್ಯಾಭಾವದ ದೆಸೆಯಿಂದ ಅಸಾಧ್ಯವಾಗಿ ಪರಿಣಮಿಸಿತು. ಕೆಲಸವು ಇನ್ನೂ ಚೆನ್ನಾಗಿ ನಡೆಯಬೇಕಾದರೆ, ನೀರಾವರಿಯ ಕಾಮಗಾರಿಗಳ ಗ್ರಾಂಟನ್ನು ಪ್ರತಿವರ್ಷವೂ ಕನಿಷ್ಠಪಕ್ಷ 5 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಬೇಕಾಗುವುದು.

ಮೈನರ್ ಕೆರೆಗಳು.—ಸಂಸ್ಥಾನದಲ್ಲಿ ದುರಸ್ತಾಗಬೇಕಾದ ಮೈನರ್ ಕೆರೆಗಳ ಒಟ್ಟು ಸಂಖ್ಯೆಯು 14,302. ಇದುವರೆಗೆ ದುರಸ್ತಾಗಿರುವ ಕೆರೆಗಳ ಸಂಖ್ಯೆಯು ಸುಮಾರು 1,000; ಮತ್ತು ದುರಸ್ತಿಯು ಶುರುಮಾಡಲ್ಪಟ್ಟಿರುವ ಕೆರೆಗಳ ಸಂಖ್ಯೆಯು 270. ಕೆಲಸವು ಬಹುನಿಧಾನವಾಗಿ ನಡೆಯುತ್ತಿದೆ; ಇನ್ನೂ ಹೆಚ್ಚು ಗ್ರಾಂಟುಗಳನ್ನು ಕೊಡದೇ ಇದ್ದರೆ ಕೆಲಸವು ಅದೇ ರೀತಿ ನಿಧಾನವಾಗಿ ನಡೆಯಬೇಕಾಗುವುದು. 1923-24ನೇ ವರುಷದಲ್ಲಿ ಒದಗಿಸಿದ ಹಣವು 87,000 ರೂಪಾಯಿಗಳು ಮತ್ತು ವೆಚ್ಚಮಾಡಿದ ಮೊಬಲಗು 66,728 ರೂಪಾಯಿಗಳು.

ಈ ಮಧ್ಯೆ, ಕಂಟ್ರಿಬ್ಯೂಷನ್ನಿನ ವಸೂಲಿಯನ್ನು ನಿರ್ಬಂಧಕ ಮಾಡುವುದಕ್ಕಾಗಿ, ಸಲಹೆ ಮಾಡಲ್ಪಟ್ಟ ಒಂದು ತಿದ್ದುಪಾಟಾದ ರೆಗ್ಯುಲೇಷನು, ನ್ಯಾಯವಿಧಾಯಕಸಭೆಯವರ ಮುಂದೆ ತರಲ್ಪಟ್ಟು ಅವರಿಂದ ಕಾನೂನಾಗಿ ಅನುಮೋದಿಸಲ್ಪಟ್ಟಿದೆ. ಅಂದಾಜನ್ನು ಮಂಜೂರ್ಮಾಡಿದ ಕೂಡಲೆ, ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕಂಟ್ರಿಬ್ಯೂಷನ್ನಿನ ವಸೂಲಿಗಾಗಿ ಹಿಂದೆ ನಿರೀಕ್ಷಿಸುತ್ತಿದ್ದಂತೆ ನಿರೀಕ್ಷಿಸದೆ ಆಯಾ ಕಾಮಗಾರಿಯನ್ನು ನಡೆಸಲು ಅವರಿಗೆ ಈಗ ಸಂಪೂರ್ಣವಾಗಿ ಅವಕಾಶವಿರುತ್ತದೆ.

ಇನಾಂ ಕಮಿಷನ್ ಮತ್ತು ಸರ್ಕಾರಿ ಆಡಳಿತಕ್ಕೊಳಪಟ್ಟಿರುವ ಇನಾಂ ಗ್ರಾಮಗಳ ಅಭಿವೃದ್ಧಿ.

ಪ್ರಸಕ್ತವರ್ಷದಲ್ಲಿ ಇನಾಂ ಕಮಿಷನಿನವರ ವರದಿಯು ಸರ್ಕಾರದವರ ದೀರ್ಘಾಲೋಚನೆಯಲ್ಲಿದ್ದಿತು ; ಸರ್ಕಾರದವರು ಇಷ್ಟರಲ್ಲೇ ಅದರ ವಿಚಾರವಾಗಿ ಹುಕುಂ ಸಾದರು ಮಾಡುವವರಾಗಿದ್ದಾರೆ. ಸರ್ಕಾರಿ ಆಡಳಿತಕ್ಕೆ ತೆಗೆದುಕೊಂಡಿರುವ ಇನಾಂ ಗ್ರಾಮಗಳ ಸ್ಥಿತಿಯನ್ನು ಉತ್ತಮಪಡಿಸುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಗ್ರಾಮಗಳ ಸ್ಥಿತಿಯನ್ನು ಮೇಲ್ಪಡಿಸುವುದಕ್ಕೆ ರೆವಿನ್ಯೂ ಆಫೀಸರುಗಳ ನಡೆವಳಿಕೆಯ ಬಗ್ಗೆ ತಪಶೀಲಾದ ತಿಳವಳಿಕೆಗಳನ್ನು ಈಚಿಟ್ಟು ಈಚೆಗೆ ಹುಕುಂ ಸಾದರಾಗಿದೆ. ಮತ್ತು ಸರ್ಕಾರಿ ಆಡಳಿತದಲ್ಲಿರುವ ಇನಾಂ ಗ್ರಾಮಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕಮಾಡುವ ವಿಷಯವೂ ಕೂಡ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. "ಮೈನರುಗಳ" ಎಂದರೆ ಪ್ರಾಪ್ತವಯಸ್ಕರಲ್ಲದವರ ಆಸ್ತಿಯನ್ನು ರಕ್ಷಿಸಿ ಮೇಲ್ವಿಚಾರಣೆಯ ಕೆಲಸವನ್ನು ನೋಡಿಕೊಳ್ಳುವುದಕ್ಕಾಗಿ ಬ್ರಿಟಿಷ್ ಇಂಡಿಯಾದಲ್ಲಿ ಆಚರಣೆಯಲ್ಲಿರುವ "ಕೋರ್ಟ್ ಆಫ್ ವಾರ್ಡ್ಸ್" ರೆಗ್ಯುಲೇಷನಿನ ಮಾದರಿಯ ಮೇಲೆ ಒಂದು ರೆಗ್ಯುಲೇಷನನ್ನು ರಚಿಸಿ ಕಾನೂನಾಗಿ ಆಚರಣೆಗೆ ತರುವ ವಿಚಾರವೂ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಮೈಸೂರು ಸಿವಿಲ್ ಸರ್ವಿಸ್ಸಿನ ಪುನರ್ವ್ಯವಸ್ಥೆ.

ಕಳೆದ ಅಕ್ಟೋಬರು ತಿಂಗಳಿನಲ್ಲಿ ನಾವು ಮಾಡಿದ ಭಾಷಣದಲ್ಲಿ, ಮೈಸೂರು ಸಿವಿಲ್ ಸರ್ವಿಸ್ಸನ್ನು ಪುನರ್ವ್ಯವಸ್ಥೆ ಮಾಡುವ ವಿಚಾರವು ಸರ್ಕಾರದವರ ತೀವ್ರವಾದ ಪರ್ಯಾಲೋಚನೆಯಲ್ಲಿದ್ದುದಾಗಿ ತಿಳಿಸಿದ್ದೆವು. ಆಗಿಂದೀಚೆಗೆ, ಹೊಸ ಉದ್ಯೋಗಸ್ಥರನ್ನು ಸದರಿ ಸರ್ವಿಸ್ಸಿಗೆ ಸೇರಿಸಿಕೊಳ್ಳಬೇಕಾದ ಆವಶ್ಯಕತೆಯು ವಿಶೇಷವಾಗಿ ಕಂಡುಬಂದುದರಿಂದ, ಮೈಸೂರುಸಂಸ್ಥಾನದಲ್ಲಿ ಹುಟ್ಟಿದ ಅಥವಾ ಬಹುಕಾಲದವರೆಗೆ ವಾಸಮಾಡಿರುವುದರ ಮೂಲಕ ಶ್ರೀಮನ್ಮಹಾರಾಜರವರ ಪ್ರಜೆಗಳೆನಿಸಿಕೊಂಡವರನ್ನು ಕನಿಷ್ಠಪಕ್ಷ ಇಬ್ಬರಿಗೆ ಕಡಮೆಯಿಲ್ಲದಂತೆ ಪ್ರೊಬೇಷನರಿ ಅಸಿಸ್ಟೆಂಟು ಕಮಿಷನರುಗಳನ್ನಾಗಿ ನೇಮಿಸತಕ್ಕ ಬಗ್ಗೆ ಚುನಾಯಿಸುವುದಕ್ಕಾಗಿ, ಒಂದು ಸ್ಪರ್ಧಾಪರೀಕ್ಷೆಯನ್ನು ಈ ತಿಂಗಳ ಅಖೈರಿನಲ್ಲಿ ನಡೆಸಬೇಕೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆ.

ಸಿವಿಲ್ ಸರ್ವಿಸ್ಸಿನ ನಿಬಂಧನೆಗಳನ್ನು ತಿದ್ದುಪಾಟು ಮಾಡಿದೆ: ಈ ತಿದ್ದುಪಾಟಿನ ಮುಖ್ಯ ಲಕ್ಷಣಗಳೇನೆಂದರೆ :—(1) ಸ್ಪರ್ಧಾಪರೀಕ್ಷೆಯ ಮೂಲಕವೂ, ಮತ್ತು ಕೆಳದರ್ಜೆಗಳ ಹುದ್ದೆಗಳಿಂದ ಬಡ್ತಿಯಮೂಲಕ ನೇಮಿಸಲ್ಪಟ್ಟ ಆಫೀಸರುಗಳೂ ಸೇರಿ, ಶ್ರೀಮನ್ಮಹಾರಾಜರವರಿಂದ ಚುನಾಯಿಸಲ್ಪಟ್ಟು ನೇಮಿಸಲ್ಪಡುವುದರ ಮೂಲಕವೂ, ಕೆಲಸಕ್ಕೆ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗೆ ಮಾತ್ರವೇ ಸಿವಿಲ್ ಸರ್ವಿಸ್ಸಿನ ಹುದ್ದೆಗಳನ್ನು ಇನ್ನು ಮುಂದೆ ಕೊಡಲಾಗುವುದು. (2) ರೆವಿನ್ಯೂ, ಅಕೌಂಟ್ಸ್, ಪೋಲೀಸ್, ಮುಂತಾದ ಹಲವು ಇಲಾಖೆಗಳಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೆ ಸೇರದ ಒಂದು ದರ್ಜೆಯನ್ನು ಏರ್ಪಡಿಸುವುದರ ಮೂಲಕ ಕೆಳದರ್ಜೆಗಳಲ್ಲಿನ ಆಫೀಸರುಗಳ ಬಡ್ತಿಯ ಸಂಭವವನ್ನು ಉತ್ತಮಪಡಿಸಿದೆ. (3) ಸಿವಿಲ್ ಸರ್ವಿಸ್ ದರ್ಜೆಯ ಹುದ್ದೆಗಳ ಸಂಖ್ಯೆಯನ್ನು ಈಗ ಚಿಕ್ಕತಗ್ಗಿಸಿದೆ; ಮತ್ತು ರೆವಿನ್ಯೂ, ಅಕೌಂಟ್ಸ್, ಪೋಲೀಸ್, ಎಕ್ಸೈಜ್, ಸರ್ವೇ ಮತ್ತು ಇನ್‌ಕಂಟ್ಯಾಕ್ಸ್ ಇಲಾಖೆಗಳಲ್ಲಿಯೂ, ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನಲ್ಲಿಯೂ, ಮತ್ತು ಕೋ ಆಪರೇಟಿವ್ ಇಲಾಖೆಯಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೂ ಮತ್ತು ತಲಬುಗಳಿಗೂ ಸರಿಸಮನಾದ ದರ್ಜೆಯೂ, ತಲಬುಗಳೂ ಇರುವ 31 ಹುದ್ದೆಗಳನ್ನು, ಆಯಾ ಇಲಾಖೆಯ ಕೆಳದರ್ಜೆಗಳಿಂದ ಬಡ್ತಿಮಾಡಲ್ಪಟ್ಟ ಆಫೀಸರುಗಳಿಗಾಗಿಯೂ ಮತ್ತು ಕೆಲವು ಸಂದರ್ಭಗಳಲ್ಲಿ ಆಯಾ ಇಲಾಖೆಗೆ ನೇರಾ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗಾಗಿಯೂ, ಪ್ರತ್ಯೇಕಪಡಿಸಿ ಉಳಿಸಲಾಗಿದೆ. (4) ರೆವಿನ್ಯೂ ಇಲಾಖೆಯ ಮತ್ತು ಸೆಕ್ರೆಟೇರಿಯಟ್ಟಿನ ಹುದ್ದೆಗಳ ಪೈಕಿ ಹೆಚ್ಚು ಸಂಖ್ಯೆಯ ಹುದ್ದೆಗಳಿಗೆ ಸಿವಿಲ್ ಸರ್ವಿಸ್ಸಿನಿಂದ ಆಫೀಸರುಗಳನ್ನು ನೇಮಿಸುವುದು: ಮತ್ತು ಪರಸ್ಪರಸಂಬಂಧವುಳ್ಳ ಎಲ್ಲಾ ಇತರ ಇಲಾಖೆಗಳಲ್ಲಿನ ಹುದ್ದೆಗಳ ಪೈಕಿ ಬಹುಭಾಗದ ಹುದ್ದೆಗಳಿಗೆ ಸಿವಿಲ್ ಸರ್ವಿಸ್ ಅಲ್ಲದ ದರ್ಜೆಗೆ ಸೇರಿದ ಆಫೀಸರುಗಳನ್ನು ಮೊಕರರ್ಮಾಡುವುದು. (5) ಸಿವಿಲ್ ಸರ್ವಿಸ್ಸಿನ ಮೆಂಬರುಗಳಿಗೆ ದೊರೆಯಬಹುದಾದ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳ ಸಂಖ್ಯೆಯನ್ನು ಹನ್ನೊಂದರಿಂದ ಒಂಬತ್ತಕ್ಕೆ ತಗ್ಗಿಸಿದೆ; ಮತ್ತು ಸೀನಿಯರ್ ಸಬ್‌ಡಿವಿಜನ್ ಆಫೀಸರು, ಸೀನಿಯರ್ ಪೋಲೀಸ್ ಸೂಪರಿಂಟೆಂಡೆಂಟರು, ಎಂಬ ಎರಡು ಹುದ್ದೆಗಳನ್ನು ಆಯಾ ಇಲಾಖೆಯಲ್ಲಿನ ಸಿವಿಲ್ ಸರ್ವಿಸ್ ದರ್ಜೆಗೆ ಸೇರದ ಆಫೀಸರುಗಳ ಪುರೋಭಿವೃದ್ಧಿಗಾಗಿ ಕಲ್ಪಿಸಿದೆ. (6) ರೆವಿನ್ಯೂ, ಪೋಲೀಸ್, ಎಕ್ಸೈಜು ಇಲಾಖೆಗಳಲ್ಲಿನ ಮತ್ತು ಸೆಕ್ರೆಟೇರಿಯಟ್ಟಿನ ಮೇಲ್ಪಟ್ಟ ಹುದ್ದೆಗಳಾದ ರೆವಿನ್ಯೂ ಕಮಿಷನರ್, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್, ಎಕ್ಸೈಜ್ ಕಮಿಷನರ್, ಸರ್ಕಾರದ ಜನರಲ್ ಇಲಾಖಾ ಸೆಕ್ರೆಟರಿಗಳು, ಮತ್ತು ಡೆಪ್ಯುಟಿಕಮಿಷನರುಗಳೇ ಮುಂತಾದ ಹುದ್ದೆಗಳನ್ನು ನಿಷ್ಕರ್ಷೆಯಾಗಿ ಸಿವಿಲ್ ಸರ್ವಿಸ್ಸಿನ ದರ್ಜೆಯಲ್ಲಿಯೇ ಸೇರಿಸಿದೆ ; ಮತ್ತು ಸಿವಿಲ್ ಸರ್ವಿಸ್ಸಿಗೆ ಸೇರದೆ ಇರುವ ಆಫೀಸರುಗಳಿಗೆ ದೊರೆಯಬಹುದಾದ ಮೇಲ್ಪಟ್ಟ ಹುದ್ದೆಗಳನ್ನು ಸ್ಪಷ್ಟವಾಗಿ ಸೂಚಿಸಿದೆ.

ಮುಂದಣ ಆಲೋಚಿತರ ವಿಚಾರಗಳು.

ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರಕೃತದಲ್ಲಿ ಅತ್ಯಾಸಕ್ತಿಯಿಂದ ಗಮನ ಕೊಡುತ್ತಿರುವ ದೊಡ್ಡದೊಡ್ಡ ವಿಷಯಗಳ ಪೈಕಿ ಕೆಲವನ್ನು ಈಗ ಸೂಚಿಸುತ್ತೇವೆ.

ಖನಿಜ ಸಂಪತ್ತನ್ನು ಅಭಿವೃದ್ಧಿಗೆ ತರುವುದು.—ಈ ಸಭೆಯಲ್ಲಿ ನಾವು ಒಂದೆರಡುವೇಳೆ ತಿಳಿಸುಪಡಿಸಿರುವಂತೆ, ಮೈಸೂರುದೇಶದಲ್ಲಿ ಕೈಗಾರಿಕೆಯ ಅಭಿವೃದ್ಧಿಗೆ ಸ್ವಾಭಾವಿಕವಾದ ಸಾಧನಸಂಪತ್ತುಗಳು ಅಪರಿಮಿತವಾಗಿವೆ. ಮೈಸೂರುದೇಶದ ಖನಿಜ ಸಂಪತ್ತನ್ನೆಲ್ಲಾ ಇನ್ನೂ ಸಂಪೂರ್ಣವಾಗಿ ಉಪಯೋಗಪಡಿಸಿಕೊಂಡಿಲ್ಲ. ಆದರೆ ಕೈಗಾರಿಕೆಯು ಪ್ರಾಬಲ್ಯಕ್ಕೆ ಬರುವ ಸಂಭವಗಳು ಅಪರಿಮಿತವಾಗಿರುವ ದೇಶಗಳ ಪೈಕಿ ಮೈಸೂರುದೇಶಕ್ಕೆ ಉನ್ನತ ಸ್ಥಾನವು ದೊರೆಯುವಂತೆ ಮಾಡಲು ಇದುವರೆಗೆ ಪರಿಶೋಧನೆಯ ಮೂಲಕ ಗೊತ್ತಾಗಿರುವ ಅಂಶಗಳೇ ಸಾಕಾಗಿವೆ. ಮೈಸೂರುದೇಶದಲ್ಲಿ ಚಿನ್ನ ಮತ್ತು ಕಬ್ಬಿಣದ ಜತೆಗೆ ಅಮೂಲ್ಯವಾದ ಕ್ರೋಮ್ ಮತ್ತು ಮ್ಯಾಂಗನೀಸ್ ಲೋಹಗಳ ಅದುರುಗಳು ಹೇರಳವಾಗಿರುವಂತೆ ಕಂಡುಬಂದಿದೆ. ಇದಲ್ಲದೆ, ಅಮೂಲ್ಯವಾದ ಇತರ ಖನಿಜ ವಸ್ತುಗಳಿರುವ ಚಿಹ್ನೆಗಳು ಯಥೇಷ್ಟವಾಗಿ ಕಂಡುಬರುತ್ತವೆ. ಅವುಗಳನ್ನು ಕಂಡುಹಿಡಿದು ರೂಢಿಸಿದಾಗ, ಮೈಸೂರುದೇಶವು ಕೈಗಾರಿಕೆಯ ವಿಚಾರದಲ್ಲಿ ಅಭ್ಯುದಯಸ್ಥಿತಿಗೆ ಬರುವುದು ಖಂಡಿತ. ಯುಕ್ತವೆನಿಸಿರುವ ವಾಣಿಜ್ಯ ತತ್ವಗಳಿಗನುಸಾರವಾಗಿ ಸಂಸ್ಥಾನದ ಖನಿಜ ಸಂಪತ್ತನ್ನು ರೂಢಿಸಿ ಅಭಿವೃದ್ಧಿಯನ್ನುಂಟುಮಾಡಲು ತಕ್ಕ ಪ್ರಯತ್ನಗಳು ನಡೆಯುತ್ತಾ ಇವೆ. ಹೀಗೆ ಮಾಡುವುದರಿಂದ ಸಂಸ್ಥಾನದ ಅಭಿವೃದ್ಧಿಗೋಸ್ಕರ ಹಿಂದೆ ಎಷ್ಟೋ ಚೆನ್ನಾಗಿ ಕೆಲಸ ನಡೆಸಿರುವ ಖಾಸಗಿಜನರ ಉದ್ಯಮಗಳಿಗೆ ಪ್ರತಿಬಂಧಕ ಬಾರದಂತೆಯೂ, ಒಟ್ಟು ಆದಾಯದಲ್ಲಿ ಇನ್ನೂ ಹೆಚ್ಚಿನ ಭಾಗವು ಸರ್ಕಾರದವರಿಗೆ ಸಲ್ಲುವಂತೆಯೂ ಆಗುತ್ತದೆ. ಈ ವಿಚಾರದಲ್ಲಿ ಈ ಸಭೆಯ ಮುಂದಣ ಅಧಿವೇಶನದಲ್ಲಿ ಸಿದ್ಧರವಾದ ಸಂಗತಿಯನ್ನು ತಿಳಿಸಲು ಸಾಧ್ಯವಾಗುವುದೆಂದು ನಂಬಿರುತ್ತೇವೆ.

ವ್ಯಾಪಾರದ ಅನುಕೂಲತೆಯ ವಿಚಾರವಾಗಿ ಪರಿಶೋಧನೆ.—ಕಳೆದ ಜೂನ್ ತಿಂಗಳಲ್ಲಿ ನಡೆದ ಪುನರ್ವ್ಯವಸ್ಥಿತವಾದ ಸಂಪದಭ್ಯುದಯ ಸಮಾಜದ ಸಮಾರಂಭ ಭಾಷಣದಲ್ಲಿ "ಒಂದು ದೇಶದ ವ್ಯಾಪಾರದ ಪ್ರವರ್ಧಮಾನಸ್ಥಿತಿಯನ್ನು ಗೊತ್ತುಮಾಡಬೇಕಾದರೆ ಆಮದಿಗಿಂತಲೂ ರಫ್ತು ಹೆಚ್ಚಾಗಿರಬೇಕೆಂಬುದು ಅರ್ಥಶಾಸ್ತ್ರದ ಒಂದು ಮೂಲತತ್ವವಾಗಿದೆ.........ಈ ತತ್ವದ ಪ್ರಕಾರ ಪರೀಕ್ಷೆ ಮಾಡಿ ನೋಡಿದರೆ, ಮೈಸೂರುದೇಶದ ವ್ಯಾಪಾರಸ್ಥಿತಿಯು ಸ್ವಲ್ಪವೂ ತೃಪ್ತಿಕರವಾಗಿಲ್ಲ..........ಆದುದರಿಂದ ಸರಿಯಾದ ರೀತಿಯಲ್ಲಿ ವ್ಯಾಪಾರವನ್ನು ಅಭಿವೃದ್ಧಿಪಡಿಸಿ,........ರಫ್ತನ್ನು ಹೆಚ್ಚಿಸುತ್ತಾ ಬಂದು ದೇಶವನ್ನು ಅಭ್ಯುದಯಸ್ಥಿತಿಗೆ ತರುವುದು ಅವಶ್ಯವಾಗಿದೆ" ಎಂದು ತಿಳಿಸಿದೆವು. ಈ ವಿಷಯವನ್ನು ಇನ್ನೂ ಹೆಚ್ಚಾಗಿ ಪರಿಶೋಧಿಸಲುದ್ದೇಶಿಸಿದೆ. ಮತ್ತು ಈ ಉದ್ದೇಶಕ್ಕಾಗಿ ಈ ವಿಷಯವನ್ನು ಜಾಗರೂಕತೆಯಿಂದ ಪರಾಮರ್ಶಿಸಿ ಸರ್ಕಾರದವರು ಒಂದು ನಿರ್ದಿಷ್ಟವಾದ ಕ್ರಮವನ್ನು ಅನುಸರಿಸುವ ಬಗ್ಗೆ ಉಪಾಯಾಂತರಗಳನ್ನು ಸೂಚಿಸುವುದಕ್ಕೋಸ್ಕರವಾಗಿ ವಾಣಿಜ್ಯ ವಿಚಾರಗಳಲ್ಲಿ ನಿಪುಣರೆನಿಸಿರುವವರು ದಕ್ಷತೆಯಿಂದ ಕೆಲಸ ನಡೆಸುವಬಗ್ಗೆ ಅವರನ್ನೊಳಗೊಂಡ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ.

ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಏರ್ಪಾಡುಗಳು.—ಮೈಸೂರುದೇಶದಲ್ಲಿ ಖನಿಜ ಸಂಪತ್ತಿನ ಜತೆಗೆ ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಏರ್ಪಾಡುಗಳನ್ನು ಇನ್ನೂ ಅಭಿವೃದ್ಧಿಗೆ ತರಲು ಅತ್ಯಧಿಕವಾದ ಅವಕಾಶಗಳಿರುತ್ತವೆ. ಕೃಷ್ಣರಾಜಸಾಗರದ ಏರ್ಪಾಡಿನ ಸಹಾಯದೊಡನೆ ನಡೆಸುತ್ತಿರುವ ಶಿವಸಮುದ್ರದ ವಿದ್ಯುಚ್ಛಕ್ತಿಯ ಉತ್ಪತ್ತಿಯ ಏರ್ಪಾಡಿನಿಂದ ಮೈಸೂರು, ಬೆಂಗಳೂರು ಮತ್ತು ಕೋಲಾರ ಚಿನ್ನದಗಣಿ ಪ್ರದೇಶಗಳಲ್ಲಿ ನಡೆಯತಕ್ಕ ಕೈಗಾರಿಕೆಗಳಿಗೆ ಮಾತ್ರ ಪ್ರಯೋಜನವುಂಟಾಗುತ್ತಿದೆ. ಮದರಾಸು ಸರ್ಕಾರದವರು ಮೇಕೆದಾಟಿನ ನೀರಿನ ಸಂಬಂಧವಾದ ತಮ್ಮ ಹಕ್ಕುಗಳನ್ನು ಕೆಲವು ಷರತ್ತುಗಳಮೇಲೆ ಮೈಸೂರು ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತಾರೆ. ಕೋಲಾರದ ಚಿನ್ನದಗಣಿ ಪ್ರದೇಶಗಳಿಗೂ, ಇತರ ಕೈಗಾರಿಕೆಗಳಿಗೂ ದಿನೇದಿನೇ ಹೆಚ್ಚಾಗಿ ಬೇಕಾಗುತ್ತಿರುವ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿ ಸದರಿ ನೀರನ್ನು ಇನ್ನು ಸ್ವಲ್ಪ ಕಾಲದಲ್ಲಿಯೇ ಉಪಯೋಗಿಸಿಕೊಳ್ಳಬೇಕಾಗುವುದು. ಕೈಗಾರಿಕೆಯನ್ನು ಅಭಿವೃದ್ಧಿಗೆ ತರಲು ತಕ್ಕ ಸಾಧನಗಳು ಮಲೆನಾಡಿನಲ್ಲಿ ಮತ್ತೂ ಹೆಚ್ಚಾಗಿವೆ. ದೀಪದಕಡ್ಡಿಯನ್ನು ತಯಾರುಮಾಡುವ ಕಾರ್ಖಾನೆಯನ್ನೂ, ಕಾಗದದ ಕೈಗಾರಿಕೆಯನ್ನೂ, ಸಕ್ಕರೆಯ ಕಾರ್ಖಾನೆಯನ್ನೂ, ಖನಿಜವಸ್ತುಗಳ ಕೈಗಾರಿಕೆಗಳನ್ನೂ, ಇತರ ಮುಖ್ಯವಾದ ಎಷ್ಟೋ ಕೈಗಾರಿಕೆಗಳನ್ನೂ, ನಡೆಸುವುದಕ್ಕೆ ವಿಶೇಷವಾಗಿ ಅವಕಾಶವಿದೆ ; ಇವುಗಳಿಗೆಲ್ಲಾ ಸುಲಭವೆಚ್ಚದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಆವಶ್ಯಕ. ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಬಗ್ಗೆ ಗೇರಸೊಪ್ಪೆಯಲ್ಲಿರುವ ಜಲಪಾತವನ್ನು ಉಪಯೋಗಕ್ಕೆ ತರುವ ವಿಷಯವು ಬಹುಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಏರ್ಪಾಡು ಎಷ್ಟರ ಮಟ್ಟಿಗೆ ಫಲಕಾರಿಯಾಗಿ ಪರಿಣಮಿಸಬಹುದೆಂಬ ಸಂಗತಿಯನ್ನು ಕೂಲಂಕಷವಾಗಿ ಪರಿಶೀಲಿಸತಕ್ಕ ಬಗ್ಗೆ ಸರ್ಕಾರದವರು ಈಚೆಗೆ ಹುಕುಂ ಮಾಡಿದರು ; ಸದರಿ ಕೆಲಸಕ್ಕಾಗಿ ನೇಮಕವಾಗಿದ್ದ ಆಫೀಸರವರು ಕಳುಹಿಸಿದ ವರದಿಯು ಈಗತಾನೆ ತಲಪಿರುತ್ತದೆ. ಈ ಏರ್ಪಾಡನ್ನು ನೆರವೇರಿಸಲು ಬಹಳ ಭಾರೀ ವೆಚ್ಚವು ತಗಲುತ್ತದೆ. ಇದನ್ನು ನಡೆಸಿದಪಕ್ಷದಲ್ಲಿ, ಮಲೆನಾಡಿನಲ್ಲಿ ಭಾರಿ ಕೈಗಾರಿಕೆಗಳನ್ನಾರಂಭಿಸುವುದಕ್ಕೆ ಅವಕಾಶವು ದೊರೆಯುತ್ತದೆ. ಅಲ್ಲದೆ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ನಡೆಯುತ್ತಿರುವ ಕಬ್ಬಿಣದ ಭಟ್ಟಿಯ ಕೆಲಸದ ಸಂಬಂಧದಲ್ಲಿ ಅನೇಕ ಸಣ್ಣಪುಟ್ಟ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಅನುಕೂಲವಾಗುವುದು. ಚಾಲ್ತಿವರುಷದಲ್ಲಿ ಈ ಏರ್ಪಾಡನ್ನು ಸರ್ವತೋಮುಖವಾಗಿ ಮತ್ತು ಸಂಪೂರ್ಣವಾಗಿ ಪರಿಶೋಧಿಸಲಾಗುವುದು ಮತ್ತು ಮುಂದಣವರುಷದ ಈ ಸಭೆಯ ದಸರಾ ಅಧಿವೇಶನದಲ್ಲಿ ಇದರ ವಿಚಾರದಲ್ಲಿ ನಿರ್ಧರವಾಗಿ ತಿಳಿಸಲು ಸಾಧ್ಯವಾದೀತೆಂದು ಕೋರುತ್ತೇವೆ.

ಭಟ್ಕಳಿನ ರೇವು.—ಪಶ್ಚಿಮತೀರದಲ್ಲಿರುವ ಭಟ್ಕಲಿನಲ್ಲಿ ರೇವನ್ನು ಸ್ಥಾಪಿಸುವ ಬಗ್ಗೆ ಒಂದು ಪ್ರಾಜೆಕ್ಟನ್ನು ಕುರಿತು ಕಳೆದ ಅಕ್ಟೋಬರು ತಿಂಗಳಲ್ಲಿ ಈ ಸಭೆಯಲ್ಲಿ ನಾವು ಮಾಡಿದ ಭಾಷಣದಲ್ಲಿ ಸೂಚಿಸಿದ್ದೆವಷ್ಟೆ. ಸದರಿ ಪ್ರಾಜೆಕ್ಟನ್ನು ಕೈಬಿಟ್ಟಿಲ್ಲವೆಂದೂ, ದ್ರವ್ಯಾನುಕೂಲವು ಒದಗಿದಾಗ ಪಶ್ಚಿಮತೀರದವರೆಗೆ ರೈಲ್ವೆಯು ಬಡಾಯಿಸಲನುಕೂಲಿಸುವಂತೆ ಶಿವಮೊಗ್ಗಾ-ಆರಸಾಳು ರೈಲಿನ ಕಾಮಗಾರಿಯೇ ಮೊಟ್ಟಮೊದಲು ಕೈಗೊಳ್ಳುವ ರೈಲ್ವೆ ಕಾಮಗಾರಿಯೆಂದೂ ತಿಳಿಸಿದ್ದೆವು. ಭಟ್ಕಲ್ ರೇವಿನ ಮತ್ತು ಶಿವಮೊಗ್ಗಾದಿಂದ ಭಟ್ಕಲ್ ರೇವಿನವರೆಗೆ ರೈಲ್ವೆ ಲೈನನ್ನು ಹಾಕುವ ವಿಷಯವು ಕಳೆದ ವರುಷದಲ್ಲಿ ಸ್ವಲ್ಪವೂ ಮುಂದುವರಿಯಲಿಲ್ಲ ; ಹಣವಿಲ್ಲದುದರ ದೆಸೆಯಿಂದ, ಪ್ರಕೃತದಲ್ಲಿ ಈ ಏರ್ಪಾಡುಗಳನ್ನು ಸರ್ಕಾರದವರು ಕೈಗೊಳ್ಳುವ ಸ್ಥಿತಿಯಲ್ಲಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ.

ಪಶ್ಚಿಮತೀರದವರೆಗೆ ನೇರವಾದ ಮತ್ತು ಸುಗಮವಾದ ಮಾರ್ಗವಿಲ್ಲದಿರುವುದರ ದೆಸೆಯಿಂದ ಸಂಸ್ಥಾನಕ್ಕೆ ವಿಶೇಷ ಅನಾನುಕೂಲವುಂಟಾಗಿದೆ. ಆದಕಾರಣ, ಇಂಥಾ ಮಾರ್ಗವೊಂದನ್ನು ಕಲ್ಪಿಸುವುದು ಅತಿ ವಶ್ಯವಾಗಿದೆ. ವರುಷವೆಲ್ಲಾ ಅವಿಚ್ಛಿನ್ನವಾಗಿ ಕೆಲಸ ನಡೆಯುವ ರೇವಿಗೆ ಅತಿ ಅತಿ ಸಮೀಪವಾದ ಮತ್ತು ನೇರವಾದ ಮಾರ್ಗವನ್ನು ಕಲ್ಪಿಸಿಕೊಂಡಲ್ಲಿ, ಸಂಸ್ಥಾನದ ವಾಣಿಜ್ಯ ಮತ್ತು ಕೈಗಾರಿಕೆಯ ಅಭಿವೃದ್ಧಿಗೆ ವಿಶೇಷವಾಗಿ ಸೌಲಭ್ಯವುಂಟಾಗುತ್ತದೆ. ಇದೂ ಅಲ್ಲದೆ, ಶಿವಮೊಗ್ಗೆಯಿಂದ ಭಟ್ಕಳ್ಳಿಗೆ ರೈಲ್ವೆ ಮಾರ್ಗವನ್ನೇರ್ಪಡಿಸಿ ಭಟ್ಕಲ್ ರೇವೆಯನ್ನು ಅನುಕೂಲಪಡಿಸಿಕೊಂಡಲ್ಲಿ, ಇದುವರೆಗೂ ರೂಢಿಸಲ್ಪಡದ ಸ್ವಾಭಾವಿಕವಾದ ಸಾಂಪತ್ತಿಕ ಸಾಧನಗಳು ಯಥೇಷ್ಟವಾಗಿರುವ ಮತ್ತು ಈಗ ಅಧಿಕಸ್ಥಿತಿಯು ತುಂಬಾ ಅತೃಪ್ತಿಕರವಾಗಿರುವ ಮಲೆನಾಡು ಪ್ರಾಂತ್ಯಗಳಲ್ಲೆಲ್ಲಾ [illegible] ಸುಮುಖವಾದ ಸಂಪತ್ ಸೌಲಭ್ಯವುಂಟಾಗಿ ಅಭಿವೃದ್ಧಿಗೆ ಮಾರ್ಗವಾಗುತ್ತದೆ.

ರಾಜಕವಿಭೂಷಣಾಂಕಿತ |
ರಾಜದ್ವಿರುದಪ್ರಶಸ್ತಿಯೊಡನವನೀಶಂ ||
ಭ್ರಾಜನ್ಮಣಿಹಾರಾಂಬರ |
ರಾಜಿಯನೀಚಿತ್ಕಲಿಂಗರಾಜಂಗಿತ್ತಂ ||೧||
ಬುಧಗರ್ವನಿಪಸನ್ಮಾನವ |
ನೊದವಿಸಿದೀತನಪರೋಪಕೃತಿಪುಣ್ಯವೆತಾಂ ||
ಪದುಳದೆವೊರ್ತಿಯನಾಂತು |
ತೊದವಿದಬಿರುದುಮಿವಂಗೆಯೋಗ್ಯಂಜಗದೋಳ್ ||೨||
ಪಾಲಿರುವಾಗಳೆಹಬ್ಬಂ |
ಮೇಲೆನಿಪಂತೊಗೆದಪದವಿಸಿರಿಸುಬುಧರ್ಗೆ ||
ಕಾಲದೊಳೆಸೈಭುವದೆವುದ |
ನಾಲೋಚಿಸಿವನಾಳ್ವನೀತನಿಂತುಪಕೃತಿಯಂ ||೩||
ನೃಪಗೃಹಧರ್ಮವಿಚಾರಾ |
ಧಿಪನಾಗಿಸಮಸ್ತಸುಕವಿಬುಧಾವಳಿಗಂ ||
ವಿಪುಲಸುರಭೂಜನಾದಿಗ |
ಮುಪಹತಿತಾನಿಲ್ಲದಂತೆರಂಜನೆಗೈವಂ ||೪||
ಶ್ರೀಯಂಚಿತಲಿಂಗರಸಂ |
ಗಾಯುಶ್ರೀಯೊಳಭಿವೃದ್ಧಿಸಿದ್ಧಿಯಸತತಂ ||
ಈಯುತಪೊರೆಗೆಕೃಪಾರಸ |
ತೋಯಧಿನಿರುಪಾಧಿರೂಪಗೋನೆಯಲಿಂಗಂ ||೫||
ಜಯಮಕ್ಕೆಕೃಷ್ಣಭೂಪಂ |
ಗಯಮಕ್ಕೆಚಿರಾಯುಮಕ್ಕೆಭೂವಲಯಕ್ಕತಿ ||
ಶಯಮೆನೆನಮಿಳೆಬೆಳೆಯಕ್ಕೆವಿ |
ನಯಭಕ್ತಿಗಳಾಳ್ದುಬಾಳ್ಗಲೋಕವಿದೆಲ್ಲಂ ||೬||

ಪಂಡಿತ ಟಿ. ಎಂ. ಚಂದ್ರಶೇಖರಶಾಸ್ತ್ರಿ.
ತೆಲಗಿಮಠ, ದಾವಣಗೆರೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ತಿರಸ್ಕೃತಲೇಖಗಳು.

ಮ|| ಗಳಾದ ಜಿ. ಕೆ. ರುದ್ರಾರ್ಯ, ಯಂ. ಸ. ಶಾಂತಪ್ಪಶೆಟ್ಟಿ ಮತ್ತು ಹಲ್ಯಾಳರು ಸಾಹುಕಾರ್ ಮರುಳಸಿದ್ಧಪ್ಪಶೆಟ್ಟಿ ಇವರುಗಳು—ಶ್ರೀಬಾಳೆಹೊನ್ನೂರು ಪೀಠಾಧಿಕಾರಿಗಳ ಚುನಾವಣೆಯ ವಿಚಾರವಾಗಿ ರಾಜಧಾನಿಯಲ್ಲಿ ವೀರಶೈವದೊಡ್ಡಮನುಷ್ಯರುಗಳಿಂದ ನಡಿಸಲ್ಪಟ್ಟ ಎರಡು ಸಭೆಗಳ ನಡೆವಳಿಕೆಗಳು, ಸಭಾಧ್ಯಕ್ಷರುಗಳಿಂದ ನಮ್ಮಲ್ಲಿಗೆ ಕಳುಹಲ್ಪಟ್ಟ ಪ್ರಕಾರ ಯಥಾವತ್ತಾಗಿ ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದರಿಂದ, ಅವುಗಳಲ್ಲಿರಬಹುದಾದ ನ್ಯೂನತೆಗಳನ್ನು ಆ ಅಧ್ಯಕ್ಷರುಗಳಿಗೆ ನೀವುಗಳೇ ಬರೆದು ಅವರುಗಳಿಂದ ಸರಿಪಡಿಸಿಕೊಳ್ಳಬಹುದಾಗಿದೆ.—ಸಂ.

ಹೊಸಪೇಟೆ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್.

ಈ ಗ್ರಾಮವು ತಾಲ್ಲೂಕಿನ ಮುಖ್ಯಸ್ಥಳವಿದ್ದು ಇಲ್ಲಿ ಹಾಗೂ ಈ ತಾಲ್ಲೂಕಿನಲ್ಲಿ ವೀರಶೈವ ಜನಾಂಗದವರ ವಸತಿಯಾದರೂ ವಿಶೇಷ ಇರುತ್ತದೆ. ಹೀಗಿದ್ದು ನಮ್ಮ ವೀರಶೈವಜನಾಂಗದವರಪೈಕಿ ಈವರೆಗೂ ರಾಜಕೀಯ ವಿದ್ಯೆಯಲ್ಲಿ ಒಬ್ಬರಾದರೂ ಉತ್ತೀರ್ಣರಾಗಿದ್ದಿಲ್ಲ. ಈ ವರುಷ ನಮ್ಮ ಸುದೈವದಿಂದ ಹೊಸಪೇಟೆ ನಿವಾಸಿಗಳಾದ ಸಾಲ್ದೊರು ಶ್ರೀ|| ಶಿ. ಉದ್ದಾನಯ್ಯನವರೆಂಬುವವರು ಬಿ.ಎ., ಬಿ.ಎಲ್. ಪರೀಕ್ಷೆಯಲ್ಲಿ ಪಾಸಾಗಿಬಂದು ಸದ್ಯಃ ವಕೀಲಿ ಕೆಲಸವನ್ನು ಪ್ರಾರಂಭಮಾಡಿರುತ್ತಾರೆ. ಹೋದ ತಿಂಗಳು 21ನೇ ತಾರೀಖಿನ ದಿವಸ ಹೊಸಪೇಟೆಯ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್ (ಚುನಾವಣೆ) ಇದ್ದು ಚಿತ್ತವಾಡಿಗಿಯ ವಾರ್ಡಿಗೆ ಸದರಿ ಉದ್ದಾನಯ್ಯನವರು ಉಮೇದ್ವಾರರಾಗಿ ನಿಂತಿದ್ದರು. ಈ ತರುಣರಿಗೆ ನಿಷ್ಪಕ್ಷಪಾತಿಗಳಾದ ಅನೇಕ ಸ್ವಜನ ಪರಜನರು ಸಹಿತ ಸಂತೋಷದಿಂದ ತಮ್ಮ ತಮ್ಮ ಓಟುಗಳನ್ನು ಕೊಟ್ಟು ಪ್ರೋತ್ಸಾಹಿಸಿದರು. ಅದರಲ್ಲಿ ಕೆಲವು ಜನರು ತಮ್ಮ ಅಸೂಯಾಂಧತೆಯನ್ನು ವ್ಯಕ್ತಗೊಳಿಸಿದ್ದಲ್ಲದೆ ಅನೇಕ ಕೃಷ್ಣಕಾರಸ್ಥಾನವನ್ನೆಸಗಿದರು. ಆದಾಗ್ಯೂ ದೈವಾನುಗ್ರಹದಿಂದ ಶ್ರೀ|| ಶಿ. ಉದ್ದಾನಯ್ಯನವರೇ ಉತ್ತೀರ್ಣರಾಗಿ ಬಂದರೆಂದು ತಿಳುಹಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಈ ತರುಣರು ಇಂಥ ಸಾರ್ವಜನಿಕ ಕಾರ್ಯಗಳಲ್ಲಿ ಮುತವರ್ಜಿಯಿಂದ ಕೆಲಸವನಾಡಿ ಜನರಸ್ತುತಿಗೆ ಪಾತ್ರರಾಗಿ ಇದಕ್ಕಿಂತಲೂ ಉನ್ನತವಾದ ಸ್ಥಾನವನ್ನು ಪಡೆಯತಕ್ಕ ಸಾಮರ್ಥ್ಯವನ್ನು ಜಗದೀಶನು ಅನುಗ್ರಹಿಸಲೆಂದು ಹಾರೈಸುತ್ತೇನೆ.

ಗುರುಭಕ್ತಕೇಸರಿ, ಚಿತ್ತವಾಡಿಗಿ ನಿವಾಸಿ.

ಸಾಗರ ತಾಲ್ಲೂಕು ಕೆಳದಿ.

ಈ ಕೆಳದಿಯ ಸಂಸ್ಥಾನ ಹಿರೇಮಠದಲ್ಲಿ ಪದ್ಧತಿಯಪ್ರಕಾರವಾಗಿ ವಿಜಯದಶಮಿಯ ಉತ್ಸವವು ಬಹುವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಈ ಕಾರ್ಯಕ್ಕಾಗಿ ತಳಿರುತೋರಣ ಮುಂತಾದವುಗಳಿಂದ ಅಲಂಕರಿಸಲ್ಪಟ್ಟ ಮಠವೂ, ಊರಿನಬೀದಿಗಳು ಶೋಭಿಸುತ್ತಿದ್ದುವು. ಶ್ರೀ|| ಗೋಣಿಬೀಡು ಶ್ರೀ ಸ್ವಾಮಿಗಳೇ ಮುಂತಾದ ಶಿವಯೋಗಿಗಳ ಶಿವಾರ್ಚನೆಯು ವಾದ್ಯವೈಭವದೊಡನೆ ನೆರವೇರಿಸಲ್ಪಟ್ಟಿತು. ಮಧ್ಯಾಹ್ನದ ಗಣಾರಾಧನೆಯಾದನಂತರದಲ್ಲಿ ಈ ಪ್ರಾಂತದ ಅನೇಕ ಗ್ರಾಮಗಳ ಮುಖ್ಯಮುಖ್ಯರಾದ ವೀರಶೈವ ಮಹನೀಯರುಗಳು ಮಠಕ್ಕೆ ಸೇರಿದರು. ಈ ಸಂಸ್ಥಾನ ಪಟ್ಟಾಧ್ಯಕ್ಷರವರಾದ ಶ್ರೀ|| ರೇವಣಸಿದ್ಧಸ್ವಾಮಿಗಳವರು ಸಕಲ ಭಕ್ತಸಂದಣಿಯ ಜಯಘೋಷದೊಡನೆ ಶುಭಪ್ರದವಾದ ಈ ಸಭೆಯಲ್ಲಿ ಶಿವಪುರಾಣದಲ್ಲಿನ ಶಿವಭಕ್ತಿ ಶಿವಪೂಜಾವಿಷಯಕವಾದ ಭಾಗವನ್ನು ಬಹುಸ್ವಾರಸ್ಯವಾಗಿ ಸಭಿಕರ ಮನಸ್ಸಿಗೆ ಆನಂದತೋರುವಂತೆ ವಿವರಣೆಯೊಡನೆ ಅಪ್ಪಣೆಕೊಡಿಸಿದರು. ನಂತರ ಕನ್ಯಾಶುಲ್ಕನಿಷೇಧ, ವಿದ್ಯಾಪ್ರಸಾರ, ಐಕಮತ್ಯ, ಪ್ರಾಣಿದಯಾಪರತೆ, ಮುಂತಾದ ವಿಷಯಗಳಲ್ಲಿ ಮ|| ಕಾಗೋಡು ಶಿವಲಿಂಗಪ್ಪನವರು, ಬರದವಳ್ಳಿ ಗುರಪ್ಪಗೌಡರು ಮುಂತಾಗಿ ಅನೇಕ ಜನರು ಉಪನ್ಯಾಸ ಮಾಡಿದರು. ಮಠದ ವಿಷಯಕವಾದ ಕೆಲವು ಸಂಗತಿಗಳಮೇಲೆ ನಿರ್ಧಾರವು ಮಾಡಲ್ಪಟ್ಟಿತು. ನಂತರ ಬಿರುದಾವಳಿಗಳಸಮೇತ ಪಲ್ಲಕ್ಕಿಯಲ್ಲಿ ಸ್ವಾಮಿಗಳವರ ಮೆರವಣಿಗೆಯೊಡನೆ ಸಕಲ ಭಕ್ತವೃಂದವೂ ಬನ್ನಿಮುಡಿಯುವ ಉದ್ದೇಶವಾಗಿ ದಯಮಾಡಿಸಿ ಪುನಃ ಮಠಕ್ಕೆ ಬಂದು ಸಿದ್ಧವಾಗಿದ್ದ ಸಿಂಹಾಸನದಲ್ಲಿ ಪಟ್ಟಾಧ್ಯಕ್ಷರವರು ಮುಹೂರ್ತಮಾಡಿಸಿದನಂತರ ಸಕಲ ಭಕ್ತರೂ ಸಾಷ್ಟಾಂಗಪ್ರಣಾಮಗಳನ್ನು ಮಾಡಿದರು. ನಂತರ ಮತಸಂಬಂಧ ಎಂದರೆ ಗುರು, ಲಿಂಗ, ಜಂಗಮ, ವಿಷಯಕವಾದ ಉಪನ್ಯಾಸಗಳು ಮುಂತಾದವು ನಡೆದು ಜಯಮಂಗಳಪದಗಳೊಡನೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಒರ್ವ ಪ್ರೇಕ್ಷಕ.

ನಿಷೇಧಪ್ರದರ್ಶನ ಜಾಹೀರಸಭೆಯು.

ಕಲಬುರ್ಗೆಯಲ್ಲಿಯು ಮುಸಲ್ಮಾನರು ಶ್ರಾವಣ ತಿಂಗಳಲ್ಲಿ ಮಾಡಿದ ಅತ್ಯಾಚಾರವನ್ನು ನಿಷೇಧಿಸುವದಕ್ಕಾಗಿ ತಾರೀಖು 29-9-1924 ಇಸ್ವಿಯ ಸಂಜೆಯ 5 ಘಂಟೆಗೆ ಶ್ರೀಮದ್ಪನಲಿಂಗಚರಚಕ್ರವರ್ತಿಗಳಾದ ಕೊಣ್ಣೂರ ಮಹಾಸ್ವಾಮಿಗಳವರ ಅಪ್ಪಣೆಯಮೇರೆಗೆ ಪ್ರಣವಸ್ವರೂಪಿಗಳೂ, ಧರ್ಮಾಭಿಮಾನಿಗಳೂ ಆದ ಶ್ರೀಸಂಪಗಾಂವ ಚರಮೂರ್ತಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಯು ಶ್ರೀಕ್ಷೇತ್ರ ಮರ್ತ್ಯಮಠದಲ್ಲಿ ನೆರವೇರಿತು. ಸಭೆಗೆ ಕೊಣ್ಣೂರ, ಗಿರಣಿ, ಸಾವಳಗಿಯಿಂದ ಜನರು ಬಂದಿದ್ದರು. ಮಿ|| ಮಲ್ಲಿನಾಥ ಶಾಸ್ತ್ರಿಗಳವರು, ಮಿ|| ಧೂಪದಾಳರವರು, ಮಿ|| ಗಡ್ಡದ ಇಂಗ್ಲೀಷಶಾಲಾ ಮಾಸ್ತರರು, ಮಿ|| ಶಿದ್ಧನಾಳಮಾಸ್ತರರು ಕಲಬುರ್ಗೆಯ ಅತ್ಯಾಚಾರದ ವಿವೇಚನ, ಧರ್ಮಪರಿಪಾಲನೆ, ಧರ್ಮಗುರುಗಳ ಕರ್ತವ್ಯ, ಕಲಬುರ್ಗೆಯ ವಿಚಾರಣಾ ಕಮಿಟಿಯ ಪರಿಸ್ಥಿತಿ ಮೊದಲಾದವುಗಳ ವಿಷಯವಾಗಿ ಸುಲಲಿತವಾಗಿ ಹೇಳಿದರು. ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

1. ಹಿಂದೂಗಳ ಪೂಜ್ಯ ದೇವಾಲಯಗಳನ್ನು ಕುರಿತು ಕಲಬುರ್ಗೆಯಲ್ಲಿ ದುರಭಿಮಾನಿಗಳಾದ ಮುಸಲ್ಮಾನರು ಮಾಡಿದ ಅತ್ಯಾಚ್ಯಾರವನ್ನು ಈ ಸಭೆಯು ತೀವ್ರನಿಷೇಧಿಸುವುದು. 2. ಈಗಿದ್ದ ಕಮಿಟಿಯಿಂದ ಹಿಂದೂಗಳಿಗೆ ಯೋಗ್ಯನ್ಯಾಯವು ದೊರೆಯುವ ಸಂಭವವಿಲ್ಲ, ಆದ್ದರಿಂದ ನೈಜಾಮ ಸಾಹೇಬ ಬಹಾದ್ದೂರರವರು ಹಿಂದೂಗಳಿಗೆ ನ್ಯಾಯದೊರೆಯುವಂತೆ ಕಮಿಟಿಯ ವ್ಯವಸ್ಥೆ ಮಾಡಬೇಕೆಂದು ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. 3. ಕಲಬುರ್ಗೆಯಂಥ ಧಾರ್ಮಿಕ ಅತ್ಯಾಚ್ಯಾರದ ಕೃತ್ಯಗಳಲ್ಲಿಯೂ, ಧರ್ಮಗುರುಗಳು ಧರಿಸಿದ ಮೌನವ್ರತವನ್ನು ಕಂಡು ಸಭೆಗೆ ವಿಷಾದವೆನಿಸುವದು. ಅವರುಗಳು ಇನ್ನಾದರೂ ಜಾಗ್ರತರಾಗಬೇಕೆಂದು ವಿನಂತಿಯು. ಮೊದಲಿನ 2 ಠರಾವುಗಳನ್ನು ನಾಮದಾರ ಗವ್ಹರ್ನರ್ ಜನರಲ್ ಇನ್ ಕೌನ್ಸಿಲ್‌ರವರಿಗೆ ಮತ್ತು ನಿಜಾಮ ಸಾಹೇಬರವರಿಗೆ ತಂತಿಯಿಂದ ತಿಳಿಸುವದರಲ್ಲಿ ಬಂತು. ಮಿ|| ಗಡ್ಡದ ಮಾಸ್ತರರು ಅಧ್ಯಕ್ಷರ ಅಭಾರಮನ್ನಣೆಯನ್ನು ಮಾಡಿದ ಮೇಲೆ ಜಯಜಯಕಾರದೊಡನೆ ಸಭಾಕಾರ್ಯವು ಸಮಾಪ್ತಿಯಾಯಿತು.

ಓರ್ವಪ್ರೇಕ್ಷಕ.

ಮಳವಳ್ಳಿಟರ್ವ ವಿದ್ಯಮಾನ.

ಈಗ್ಗೆ 8-10 ದಿನಗಳಿಂದ ಕೊಂಚ ಮಳೆ ಆಗಿದೆ. ಇನ್ನೂ 1-2 ಹದ ಮಳೆಬಿದ್ದಲ್ಲಿ ಪೈರುಗಳಿಗೆ ಅನುಕೂಲವಾಗುತ್ತ. ಈ ಮಾಹೆ 14 ನೇ ತಾರೀಕಿನ ಸಂಪದಭ್ಯುದಯ ಪತ್ರಿಕೆಯಲ್ಲಿ ಇಲ್ಲಿನ ಮ್ಯುನಿಸಿಪಲ್ ವೈಸ್‌ಪ್ರಸಿಡೆಂಟರ ಚುನಾವಣೆ ವಿಷಯದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ವ್ಯಾಜ್ಯವು, ಹಿಂದೆ ಇಲ್ಲಿ ಅಮಲ್ದಾರರಾಗಿದ್ದು ನಿಷ್ಪಕ್ಷಪಾತಿಗಳೂ ಜನಾನುರಾಗಿಗಳೂ ಎಂದು ಪ್ರಸಿದ್ಧಿಯನ್ನು ಪಡೆದಿದ್ದ ಮ|| ಶಿದ್ಧರಾಮಪ್ಪನವರ ಕಾಲದಲ್ಲಿ ಉದ್ಭವವಾಯಿತು ಎಂದು ಬರೆದಿರುವದನ್ನು ನೋಡಲು ಬಹಳ ವಿಷಾದವಾಗುತ್ತದೆ. ಒಂದು ವೇಳೆ ಮ|| ಶಿದ್ಧರಾಮಪ್ಪನವರ ಕಾರ್ಯದಕ್ಷತೆ ಜನಾನುರಾಗ ನಿಷ್ಪಕ್ಷಪಾತ ಇವುಗಳ ವಿಚಾರದಲ್ಲಿ ಅನುಮಾನಪಟ್ಟವರು ಈ ಕೆಳಗೆ ಕಂಡ ವಿಷಯಗಳನ್ನು ಗಮನಿಸಬೇಕು. ಮ|| ಶಿದ್ಧರಾಮಪ್ಪನವರು ಮಳವಳ್ಳಿಗೆ ಅಮಲ್ದಾರರಾಗಿ ಬಂದಾಗ ಅಬ್ಕಾರಿಯ ಉತ್ಪತ್ತಿ ತಿಂಗಳೊಂದಕ್ಕೆ 120-150 ರೂಪಾಯಿಗಳು ಇದ್ದದ್ದು ಇವರು ಟ್ರಾನ್ಸ್‌ಫರ್ ಆಗಿ ಹೋಗುವವರಿವಿಗೆ ಪ್ರತಿತಿಂಗಳಿನಲ್ಲೂ 500 ರೂಪಾಯಿನಿಂದ 600 ರೂಪಾಯಿವರಿವಿಗೆ ಏರಿತ್ತು. ಈಗಿರತಕ್ಕ ಅಮಲ್ದಾರ್ ಮ|| ವೈ. ಶ್ರೀಕಂಠಯ್ಯನವರು ನಮ್ಮ ಟೌನ್ನಿಗೆ ಕಾಲು ಊರಿದ ದಿನದ ಲಾಗಾಯತು ಡಿಟೋ ಉತ್ಪತ್ತಿ ತಿಂಗಳಿಗೆ 150-200 ರೂಪಾಯಿಗಳಿಯಿತು ಮತ್ತು ಮೊಹತರ್ಫಾ ವಸೂಲಿವಿಚಾರ ಹಿಂದೆ ಇದ್ದದ್ದಕ್ಕೆ ಹಾಲಿ ಈಗ ಇರತಕ್ಕದ್ದನ್ನು ಹೋಲಿಸಿ ನೋಡಿದರೆ ವ್ಯಕ್ತವಾಗುತ್ತೆ. ಮ|| ಶಿದ್ಧರಾಮಪ್ಪನವರ ನಿಷ್ಪಕ್ಷಪಾತದ ವಿಚಾರ ಅಮಲ್ದಾರರಿಂದ ಮೈಸೂರು ಡಿಸ್ಟ್ರಿಕ್ಟು ಪೊಲೀಸ್ ಸೂಪರಿಂಟೆಂಡೆಂಟರಾಗಿ ಬಡ್ತಿಹೊಂದಿ ಹೋಗಿರುವದು ಮತ್ತೊಂದು ನಿದರ್ಶನವಾಗಿರುತ್ತೆ. ಮೊದಲು ವೈಸ್‌ಪ್ರೆಸಿಡೆಂಟ್ ಚುನಾವಣೆ ಆದಾಗ ಅಫಿಸಿಯಲ್ಸು ಓಟ್ಸು ಕೊಡಕೂಡದು ಎಂದು ರೂಲ್ಸ್‌ನಲ್ಲಿ ವಿಶದವಾಗಿದ್ದರೂ, ತಮ್ಮ ಸ್ವಜಾತೀಯರಾದ ತಿಮ್ಮಣ್ಣಯ್ಯನವರೇ ಉತ್ತೀರ್ಣರಾಗಬೇಕೆಂಬ ದುರಾಸೆಯು ಮತ್ತು ಬ್ರಾಹ್ಮಣ ಬ್ರಾಹ್ಮಣೇತರರೆಂಬ ಬಿನ್ನಭಾವನೆಯು, ಅಮಲ್ದಾರರಲ್ಲಿ ತುಂಬಿತುಳುಕುತ್ತಿದ್ದದ್ದರಿಂದ, ಬ್ರಾಹ್ಮಣೇತರ ಇಬ್ಬರು ಮ್ಯುನಿಸಿಪಲ್ ಮೆಂಬರುಗಳು ರೂಲ್ಸಿಗೆ ವಿರೋಧವಾಗಿ ಅಫಿಸಿಯಲ್ಸು ಓಟುಕೊಡಕೂಡದೆಂದು ನಿರೋಧಿಸಿದಾಗ್ಯೂ, ತಿಮ್ಮಣ್ಣಯ್ಯನವರಿಗೇನೆ ಓಟುಕೊಟ್ಟಿದ್ದಾರಲ್ಲವೇ? ರೂಲ್ಸಿನಲ್ಲಿ ವಿಶದವಾಗಿ ಇದ್ದರೂ ಅಮಲ್ದಾರರು ವಿರೋಧವಾಗಿ ಓಟು ಮಾಡಿರುವದು ನೋಡಿದರೆ ಅವರು ತಮ್ಮ ಜವಾಬ್ದಾರಿ ಅರಿತಿಲ್ಲವೊ? ಅಥವಾ ಜಾತಿದ್ವೇಷದಿಂದ ಓಟುಮಾಡಿದರೊ? ಇದನ್ನು ವಾಚಕರೇ ಯೋಚಿಸಬೇಕು. ಇಂತಾ ಅನಾನುಭವಿಗಳಾದವರನ್ನು ಜವಾಬ್ದಾರಿ ಆಫೀಸುಗಳಿಂದ ಸರ್ಕಾರದವರು ಜಾಗ್ರತೆಯಾಗಿ ವಜಾಮಾಡದೆ ಇದ್ದರೆ ಪ್ರಜಾಸಮುದಾಯಕ್ಕೆ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗುವದರಲ್ಲಿ ಸಂದೇಹವಿಲ್ಲ.

ನಿಷ್ಪಕ್ಷಪಾತಿ.

ವೀರಶೈವಮಹಾಸಭೆಯು.

ಯಾರ ಆಶೀರ್ವಾದದಿಂದ ಇಡೀ ವೀರಶೈವಸಮಾಜಕ್ಕೆ ವೀರಶೈವಮಹಾಸಭೆಯು ಕಲ್ಪತರುವಾಗಿ ಜನಿಸಿತೋ ಅಂಥಾ ಸಾಕ್ಷಾತ್ ನಿರಂಜನಮೂರ್ತಿಗಳಾದ ಶ್ರೀ ಹಾನಗಲ್ ಕುಮಾರಮಹಾಸ್ವಾಮಿಗಳ ವಿರಕ್ತವರ್ಗವನ್ನು ಹಳಿಯಲು ಬಿರೂರಿನಲ್ಲಿ ನೆರದಿದ್ದ ಮಹಾಸಭೆಯಲ್ಲಿ ಪ್ರಯತ್ನಿಸಲ್ಪಟ್ಟದರಮೇಲೆ ಆ ತಪೋನಿಷ್ಠರ ತಾಪವಿಶೇಷದಿಂದ ಕಲ್ಪತರುವು ಬೂರಗದ ಮರವಾಗಿ ಬೀರೂರಿನಲ್ಲಿ ಬೇರುಬಿಟ್ಟುಕೊಂಡು ನಿಂತಿತು. ಇದರ ಬೇರನ್ನು ಬಿಡಿಸಿ ಮುಂದಕ್ಕೆ ಸಾಗಿಸಿಕೊಂಡು ಬರಬೇಕೆಂದು ಮೈಸೂರಿನವರೂ, ಹಾಂಸಭಾವಿಯವರೂ ಬಹಳ ಸಾಹಸಮಾಡಿದಾಗ್ಯೂ ಸಾಧ್ಯವಾಗದೆ ಹೋದುದನ್ನು ನಮ್ಮ ವೀರಶೈವಸಮಾಜಕ್ಕೆ ತಿಲಕಪ್ರಾಯರಾಗಿರುವ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ಬಹಳವಾಗಿ ಚಿಂತಿಸಿ ಅದನ್ನು ಬೀರೂರಿನಿಂದ ಹೇಗಾದರೂ ಬೇರುಬಿಡಿಸಿ ಮುಂದಕ್ಕೆ ಸಾಗಿಸಿ ಪೂರ್ವಸ್ಥಿತಿಗೆ ತರಬೇಕೆಂದು ಸಂಕಲ್ಪಮಾಡಿ ಈ 1924 ನೇ ಡಿಸೆಂಬರ್ ತಿಂಗಳ ಕಡೆಯಲ್ಲಿ ಮಹಾಸಭೆಯನ್ನು ಕೂಡಿಸಬೇಕೆಂದು ನಿರ್ಧರಿಸಿ ಅದಕ್ಕಾಗಿ ತಕ್ಕ ಪ್ರಯತ್ನ ನಡಿಸಿರುವರೆಂದೂ, ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತಮಂಡಳವನ್ನು ಏರ್ಪಡಿಸಿರುವರೆಂದೂ ಸಮಸ್ತ ವೀರಶೈವರೂ ಈ ಸ್ಟಾರ್ ಪತ್ರಿಕೆಯದ್ವಾರ ತಿಳಿದು ಸಂತೋಷಪಟ್ಟು ದಿ|| ಬ|| ಶೆಟ್ಟರನ್ನು ವಂದಿಸುತ್ತಿರುವರು. ಈಮಧ್ಯೆ ವೀರಶೈವಮಹಾಸಭೆಯನ್ನು ಕೂಡಿಸಬೇಕೆಂಬ ಕಾಲದಲ್ಲೇ ಬೆಳಗಾಮಿನಲ್ಲಿ ಕೂಡುವ ರಾಷ್ಟ್ರೀಯ ಸಭೆಗೆ ಅನೇಕ ವೀರಶೈವರು ಹೋಗುವ ಸಂಭವವಿರುವದರಿಂದ, ಆಕಾಲದಲ್ಲಿ ಬಿಟ್ಟು ಬೇರೆಕಾಲ ಅಂದರೆ ಮುಂದಿನ ಬೇಸಿಗೆಯ ರಜಾಕಾಲದಲ್ಲಿ ವೀರಶೈವಮಹಾಸಭೆಯನ್ನು ಕೂಡಿಸುವದು ಒಳ್ಳೆಯದು, ಹಾಗಲ್ಲದೆ ಈಗಲೇ ಮಾಡುವದಾದರೆ ಸಭೆಕೂಡಿಸಿದೆವೆಂದೆಂತಾಗುವದಲ್ಲದೆ ಪ್ರಯೋಜನವಾಗುವದಿಲ್ಲ. ವಗೈರೆಯಾಗಿ ಧಾರವಾಡದ ವಿಜಯ ಮೊದಲಾದ ಕೆಲವು ಉತ್ತರದೇಶದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ವೀರಶೈವಸಮಾಜದಲ್ಲಿ ಅನೈಕಮತ್ಯವೂ, ದ್ವೇಷಾಸೂಯೆಗಳೂ ಹುಟ್ಟಿ ವಿಶೇಷ ಅನರ್ಥವಾಗುತ್ತಿರುವ ಈ ಸಮಯದಲ್ಲಿ ಮಹಾಸಭೆಯನೆಪದಿಂದ ನಾನಾ ದೇಶದ ವೀರಶೈವಪ್ರಮುಖರು ಅತಿ ಜಾಗ್ರತೆಯಾಗಿ ಒಂದುಕಡೆ ಸೇರಿ ಸಮಾಜಬಾಂಧವರು ಪರಸ್ಪರದ್ವೇಷಾಸೂಯೆಗಳನ್ನು ಬಿಟ್ಟು ಏಕಮತ್ಯದಿಂದ ನಡೆದುಕೊಳ್ಳುವ ಉಪಾಯವನ್ನು ಕಂಡುಹಿಡಿಯಲು ಸಾಧಕವಾಗುವಂತೆ ಬೆಂಗಳೂರಿನ ವೀರಶೈವಬಂಧುಗಳು ಮಹಾಸಭೆಯನ್ನು ತಮ್ಮಲ್ಲಿ ಕೂಡಿಸಲು ಏರ್ಪಡಿಸಿ ಸಮಾಜಕ್ಕೆ ವಿಶೇಷ ಉಪಕಾರವನ್ನುಮಾಡಿರುತ್ತಾರೆ. ಈ ಸಮಯದಲ್ಲಿ ಪ್ರತಿಯೊಬ್ಬವೀರಶೈವನೂ ತನ್ನ ಸಮಾಜಾಭಿವೃದ್ಧಿಯಮೇಲೆ ಪೂರ್ಣ ಅಭಿಮಾನವಿಟ್ಟು ಯಾವ ಕೆಲಸವಿದ್ದಾಗ್ಯೂ ಬಿಟ್ಟು ಸಭಾಕಾಲಕ್ಕೆ ಬೆಂಗಳೂರಿಗೆ ಬಂದು ಯಥಾಶಕ್ತಿ ಸೇವೆಮಾಡತಕ್ಕದ್ದು ಮುಖ್ಯ ಧರ್ಮವಾಗಿದೆ. ಮನುಷ್ಯನು ತನ್ನ ಮತ್ತು ತನ್ನ ಸಮಾಜದ ಕಲ್ಯಾಣವನ್ನು ಮೊದಲುಮಾಡಿ ಅನಂತರ ಅನ್ಯರ ಕಲ್ಯಾಣಮಾಡಲು ಎತ್ನಿಸುವದು ಅವನ ಧರ್ಮವಾಗಿದೆ. ಶಾಸ್ತ್ರವಚನವಾದರೂ ಆ ಪ್ರಕಾರವಾಗಿಯೇ ಇರುತ್ತದೆ. ಹೀಗಿದ್ದರೂ ತನ್ನ ಸಮಾಜಸೇವೆಯನ್ನು ಅಲಕ್ಷಿಸಿ ಬೇರೆ ಕಾರ್ಯದಲ್ಲುದ್ಯುಕ್ತನಾಗುವುದರಿಂದ, ಮನೆದೇವರನ್ನು ಉಪವಾಸವಿರಿಸಿ ಮಾರಮ್ಮನಿಗೆ ತಂಬಿಟ್ಟಿನ ಆರತಿಯನ್ನು ಮಾಡಿದಂತಾಗುತ್ತದಲ್ಲವೆ? ಈ ಮಹಾಸಭೆಯನ್ನು ಮೈಸೂರಿನವರು ಮಾಡಬೇಕೆಂದಾಗ ಹಾಂಸಭಾವಿಯವರು ಅಡ್ಡಬಂದದ್ದರಿಂದ ಮೊದಲನೆಯ ವಿಘ್ನವಾಯಿತು; ಹಾಂಸಭಾವಿಯವರು ಎತ್ನಿಸಿದಾಗ ರೋಗೋಪದ್ರವ ನೆಪವುಂಟಾಗಿ ಎರಡನೆ ವಿಘ್ನವುಂಟಾಯಿತು. ಈಗ ಬೆಂಗಳೂರಿನವರು ಪ್ರಯತ್ನಿಸಿರುವಾಗ್ಗೆ ರಾಷ್ಟ್ರೀಯಮಹಾಸಭೆಯ ಅಡಚಣೆಯನ್ನೊಡ್ಡುವದರಿಂದ ಮೂರನೆಯ ವಿಘ್ನವಾಗುವುದು ಅಂದರೆ ಮಹಾಸಭೆಯು ನೆರೆಯಲು ನಿರಂತರ ವಿಘ್ನವಾಗುವದೆಂದು ಹೇಳಬೇಕಾದ್ದಿಲ್ಲ. ಸಮಾಜವು ಕಳೆದುಕೊಂಡಿರುವ ಕಣ್ಣನ್ನು ಮರಳಿ ಬರಮಾಡಿಕೊಳ್ಳುವ ಈ ಸುಸಮಯವನ್ನು ಹೋಗಲಾಡಿಸಿ ಇಡೀಸಮಾಜವೇ ಪೇಚಾಡುವಂತೆ ನಮ್ಮ ಉತ್ತರದೇಶದ ವೀರಶೈಬಂಧುಗಳು ಮಾಡುವದು ಜಾಣತನವಲ್ಲ. ಆದ್ದರಿಂದ ಅವರುಗಳು, ಅನೈಕಮತ್ಯದಿಂದಲೂ ಅಂತಹಕಲಹದಿಂದಲೂ ಅಧೋಗತಿಗಿಳಿಯುತ್ತಿರುವ ತಮ್ಮ ಸಮಾಜಸುಧಾರಣೆಯ ವಿಚಾರದಲ್ಲಿ ಗಮನವಿಟ್ಟು, ಪ್ರತಿವರ್ಷದಲ್ಲೂ ಯಾವದಾದರೂ ಒಂದು ಕಡೆಯಲ್ಲಿ ನಿರ್ವಿಘ್ನವಾಗಿನಡಿಯುತ್ತಿರುವ ರಾಷ್ಟ್ರೀಯಸಭೆಯ ಸೇವೆಯನ್ನು ಮಾಡಲು ಅವಕಾಶವಿರುವದರಿಂದ ಈವೇಳೆ ಅಸ್ತಿತ್ವಕ್ಕೆ ಬರಲಿಕ್ಕಿರುವ ವೀರಶೈವ ಮಹಾಸಭೆಯು ಬೆಂಗಳೂರಿನ ವೀರಶೈವಬಂಧುಗಳು ನಿರ್ಧರಿಸಿರುವಂತೆ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಿರ್ವಿಘ್ನವಾಗಿ ನಡೆಯುವಂತೆಮಾಡಿ ಆ ಕೀರ್ತಿಯನ್ನು ತಮ್ಮ ಪಾಲಿಗೆ ತಂದುಕೊಳ್ಳುವವರಾಗಲೆಂದು ಕೋರುತ್ತೇನೆ. ಹಾಗಲ್ಲದೆ ಸಭೆಯು ನಡೆಯದಂತೆ ಮುಷ್ಕರಮಾಡುವದಾದಲ್ಲಿ ಕೈಗೆಬಂದ ತುತ್ತು ಬಾಯಿಗೆಬರದಂತಾಗಿ ಇಡೀಸಮಾಜವೇ ಪೇಚಾಡುವಂತಾಗುವುದರಲ್ಲಿ ಖಂಡಿತವಾಗಿಯೂ ಸಂಶಯವಿಲ್ಲ.

ಮಹಾಸಭಾಭಿಮಾನಿ.

ಕ್ರೈಸ್ತರ ಶುದ್ಧೀಕರಣ.

ಕಳೆದ 15 ನೇ ತಾ|| ಬುಧವಾರ ನಂಜನಗೂಡು ತಾಲ್ಲೂಕು ಕಿರಗುಂದದ ಗ್ರಾಮದಲ್ಲಿ ಕ್ರೈಸ್ತರ ಶುದ್ಧೀಕರಣದ ಒಂದು ನವೀನಕಾರ್ಯವು ನಡೆಯಿತು. ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಿಕೊಳ್ಳಲ್ಪಟ್ಟಿದ್ದ ಮನೆಯನೆಂಬಾತನನ್ನು ಸಂಸಾರಸಮೇತ ಆತನ ಮನಃಪೂರ್ವಕವಾಗಿಯೂ ಸುತ್ತುಮುತ್ತಲಿನ ಸುಮಾರು 15-20 ಗ್ರಾಮದ ಮುಖಂಡರುಗಳ ಅನುಮತಿಯಿಂದಲೂ ಪುನಃ ಹಿಂದೂಮತಕ್ಕೆ ಸೇರಿಸಿಕೊಳ್ಳಲಾಯಿತು.

ಇದೇ ತಿಂಗಳು 1 ನೇ ತಾ|| ನಮ್ಮ ಗ್ರಾಮರಕ್ಷಣಾಸಭೆಗೆ ಮೇಲ್ಕಂಡ ಮನೆಯನು ಅರ್ಜಿಯನ್ನು ಬರೆದು ಅದರಲ್ಲಿ ತಾನು ಕ್ರೈಸ್ತ ಪಾದ್ರಿಗಳಿಂದ ಹಣವನ್ನು ಕೊಡುತ್ತೇವೆಂಬ ಭರವಸೆಯಿಂದಲೂ, ಅವನಿಗೆ ಸಂಘದಲ್ಲಿ ಉತ್ತಮತರದ ಗೌರವವು ದೊರೆಯುವಂತೆ ಮಾಡುವುದಾಗಿಯೂ ಇವೇ ಮುಂತಾದ ಆಸೆಗಳಿಂದ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟನೆಂಬದಾಗಿಯೂ, ಆಶ್ರಯದಿಂದ ಇವನ ಕೋರಿಕೆಯು ಈಡೇರದೆ, ಈಗ ಅನೇಕ ವಿಧವಾದ ತೊಂದರೆಗಳಿಗೆ ಗುರಿಯಾಗಿರುವುದರಿಂದಲೂ, ತನ್ನನ್ನು ಪುನಃ ತಮ್ಮ ಜಾತಿಗೆ ಸೇರಿಸುವಂತೆ ಮಾಡಿಕೊಡಬೇಕೆಂದೂ ಪ್ರಾರ್ಥಿಸಿದನು. ಅದರಂತೆ ನಾನು ಈ ವಿಷಯವನ್ನು ಪರಿಶೀಲಿಸಿ ಅನೇಕ ಗ್ರಾಮಗಳಿಗೆಹೋಗಿ ಅಲ್ಲಿನ ಮುಖಂಡರುಗಳಕೂಡ ಮಾತನಾಡಿದ್ದರಲ್ಲಿ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟಿದ್ದ ಪಂಚಮರನ್ನು ಪುನಃ ಜಾತಿಗೆತೆಗೆದುಕೊಳ್ಳುವುದಕ್ಕೆ ಅವರೆಲ್ಲರೂ ಸಮ್ಮತಿಸಿದರು.

ಸುಮಾರು ಒಂದೂವರೆ ವರ್ಷಗಳ ಹಿಂದೆ ರೆವರೆಂಡ್ ಮಿ|| ಸಾಡೇಸಾಹೇಬರವರು ಕಿರಗುಂದದಗ್ರಾಮಕ್ಕೆ ಬಂದಿದ್ದಾಗ ಅಲ್ಲಿನ ಪ್ರಜೆಗಳಿಗೆ ಒಂದು ಉಪನ್ಯಾಸವನ್ನುಮಾಡಿ, ಅದರಲ್ಲಿ ಹಿಂದೂಮತವನ್ನು ಅನೇಕ ವಿಧವಾಗಿ ದೂಷಿಸಿ, ಕ್ರೈಸ್ತಮತವನ್ನು ಶ್ಲಾಘಿಸಿ, ನಮ್ಮ ಆಚಾರವ್ಯವಹಾರಗಳನ್ನು ಖಂಡಿಸಿ ವಿಗ್ರಹಾರಾಧನೆ, ನಾಮಧಾರಣೆ, ಶಿಖಾಧಾರಣೆ ಮುಂತಾದ ಆರ್ಯಪದ್ಧತಿಗಳನ್ನು ತಿರಸ್ಕರಿಸಿ, ಪಂಚಮರು ಕ್ರೈಸ್ತಮತಕ್ಕೆಸೇರಿದ ಮಾತ್ರದಿಂದಲೇ ಅವರಿಗೆ ಸಕಲ ಸನ್ಮಾನಗಳುಂಟಾಗಿ, ಗ್ರಾಮದ ಎಲ್ಲಾ ಬೀದಿಗಳಲ್ಲಿಯೂ ಓಡಾಡುವುದಕ್ಕೂ ಮತ್ತು ಇತರ ವಿಧವಾದ ಸಾಂಘಿಕ ಗೌರವಗಳನ್ನು ಪಡೆಯುವುದಕ್ಕೂ ಅನುಕೂಲವಾಗುವುದೆಂದು ಆಶೆತೋರಿಸಿ, ದುರ್ಬೋಧನೆಯನ್ನುಮಾಡಿದ್ದರು. ಈ ದುರ್ಬೋಧನೆಯಿಂದ ಸುಮಾರು 19 ಜನ ಅಜ್ಞರು ಮರುಳುಮಾಡಲ್ಪಟ್ಟು ಒಡನೆಯೇ ಕ್ರೈಸ್ತಮತಕ್ಕೆಸೇರಿಕೊಂಡರು. ಆ ಪೈಕಿ ಮೇಲ್ಕಂಡ ಮನೆಯನು ಮತ್ತು ಅವನ ಸಂಸಾರವೂ ಸೇರಿಸಲ್ಪಟ್ಟಿದ್ದರು. ಮನೆಯನಿಗೆ ಸುನಂದನೆಂಬ ನಾಮಧೇಯವೂ, ಇತರರುಗಳಿಗೂ ಅದೇ ವಿಧವಾದ ಬೇರೆಬೇರೆ ಹೆಸರುಗಳೂ ಕೊಡಲ್ಪಟ್ಟವು. ಅವನತಲೆ ಕ್ರಾಪ್‌ಮಾಡಲ್ಪಟ್ಟಿತು. ಪಾದ್ರಿಗಳ ಪದ್ಧತಿಪ್ರಕಾರ ಶಿಖಾಖಂಡನ, ಜ್ಞಾನಸ್ನಾನವೇ ಮುಂತಾದವುಗಳೊಡನೆ ಮನೆಯನು ಕ್ರೈಸ್ತಮತಕ್ಕೆಸೇರಿಸಲ್ಪಟ್ಟನು. ಉತ್ತರೋತ್ತರ ಸುನಂದನು ನಿರೀಕ್ಷಿಸಿಕೊಂಡಿದ್ದ ಯಾವ ಮಹತ್ಪ್ರಯೋಜನವೂ ಉಂಟಾಗದೆ ಅನೇಕ ವಿಧವಾದ ತೊಂದರೆಗಳೇ ಪ್ರಾಪ್ತವಾದುದರಿಂದ ತನ್ನ ಪೂರ್ವದಸ್ಥಿತಿಯನ್ನೇ ಅವಲಂಬಿಸಬೇಕೆಂದು ಮನಸ್ಸನ್ನುಮಾಡಿ ಮೇಲ್ಕಂಡ ಪ್ರಕಾರ ಈ ಸಭೆಗೆ ಅರ್ಜಿಯನ್ನು ಹಾಕಿದನು. ಈತನನ್ನು ಶುದ್ಧಮಾಡಿ ಸ್ವಜಾತಿಗೆಸೇರಿಸುವುದಕ್ಕಾಗಿ ಸುತ್ತುಮುತ್ತಲಿನ 15-20 ಗ್ರಾಮದಪ್ರಜೆಗಳಿಂದಕೂಡಿದ ಒಂದು ಸಭೆಯು ಕಿರುಗುಂದದಗ್ರಾಮದಲ್ಲಿ ಕಳೆದ 15ನೇ ತಾ|| ಬುಧವಾರದಿವಸ ಸೇರಿತ್ತು. ಆ ಕಾಲದಲ್ಲಿ ತಾಲ್ಲೂಕು ಅಮಲ್ದಾರರವರೂ, ಪೊಲೀಸ್ ಇನ್‌ಸ್ಪೆಕ್ಟರವರೂ, ತಾಲ್ಲೂಕು ಬೋರ್ಡು ವೈಸ್‌ಪ್ರೆಸಿಡೆಂಟರವರೂ, ಡಾಕ್ಟರವರೂ ಮತ್ತು ಮ|| ಬಿ. ಎಸ್. ನಾಗೇಶರಾಯರವರೂ ಸಹ ದಯಮಾಡಿಸಿದ್ದರು. ಮೈಸೂರಿನ ಶ್ರೀಮಾನ್ ಗೋವಿಂದಾಚಾರ್‌ಸ್ವಾಮಿಗಳವರು ನಮ್ಮ ಪ್ರಾರ್ಥನೆಯಂತೆ ಅಲ್ಲಿಗೆ ದಯಮಾಡಿದ್ದರು. ಅನಂತರ ಅಲ್ಲಿ ಒಂದು ಶ್ರೀರಾಮಮಂದಿರವು ಸ್ಥಾಪಿಸಲ್ಪಟ್ಟಿತು. ಹಿಂದೂಮತದ ವಿಷಯದಲ್ಲಿ ಒಂದು ಉಪನ್ಯಾಸವು ಸ್ವಾಮಿಗಳವರಿಂದಮಾಡಲ್ಪಟ್ಟಿತು. ಸುನಂದನಿಗೆ ಶಿಖಾಧಾರಣೆ, ನಾಮಧಾರಣೆಗಳು, ಮಾಡಿಸಲ್ಪಟ್ಟು ಪದ್ಧತಿಪ್ರಕಾರ ಅವನು ಸಂಸಾರಸಮೇತ ಸ್ವಮತಕ್ಕೆ ಸೇರಿಸಲ್ಪಟ್ಟನು. ಇವನ ಜಾತಿಬಂಧುಗಳು ಸಾವಿರಾರು ಜನರ ಅನುಮತಿಯಿಂದಲೂ ಈ ಕಾರ್ಯವು ಕೃತಿಶಿಖರವಾಗಿ ಪರಿಣಮಿಸಿತು. ಇದರಿಂದ ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಲ್ಪಟ್ಟಿದ್ದವರನ್ನು ಜನರ ಅನುಮತಿಯಂತೆ ಸ್ವಜಾತಿಗೆ ಸೇರಿಸಿಕೊಳ್ಳುವ ಪ್ರಯತ್ನಕ್ಕೆ ಅಸ್ತಿಭಾರವು ಹಾಕಲ್ಪಟ್ಟಿತು. ಮತಾಂತರವನ್ನು ಸೇರಿ ಹಿಂದೂಜನಾಂಗವನ್ನು ಶಿಥಿಲಮಾಡುತ್ತಿರುವ ಜನರೆಲ್ಲರೂ ಈ ಮೂಲಕ ತಮ್ಮ ತಮ್ಮ ಸ್ವಜಾತಿಗಳನ್ನು ಪುನಃ ಅವಲಂಬಿಸುವರೆಂದು ನಂಬಲ್ಪಟ್ಟಿದೆ. ಪುನಃ ಸ್ವಜಾತಿಯನ್ನು ಸೇರಬೇಕೆಂದು ಬರುವವರಿಗೆ ವಿಶೇಷವಾದ ದಂಡವನ್ನು ಹೊರಿಸದೆ ಸಮಾಜದ ಗೌರವಕ್ಕಾಗಿ ಕೇವಲ 4 ಆಣೆಯನ್ನು ತೆಗೆದುಕೊಂಡು ಅವರನ್ನು ಪುನಃ ಸೇರಿಸಿಕೊಳ್ಳಬಹುದೆಂದು ತೀರ್ಮಾನವಾಗಿದೆ. ಈ ತೀರ್ಮಾನದಂತೆ ಮೇಲ್ಕಂಡ ಮನೆಯನು 4 ಆಣೆಯನ್ನು ತಪ್ಪುಕಾಣಿಕೆಯಾಗಿ ಕೊಟ್ಟಿರುತ್ತಾನೆ.

ಮೇಲ್ಕಂಡ ಕಾರ್ಯವೆಲ್ಲವೂ ಸಾಂಗವಾಗಿ ನಡೆದಮೇಲೆ ಸುಮಾರು ಒಂದೂವರೆ ಘಂಟೆಯಕಾಲ ವೇಷರಾಜನಿಂದ ಪುಷ್ಪವೃಷ್ಟಿಯಾಗಿ ಜನರೆಲ್ಲರಿಗೂ ಆನಂದವನ್ನುಂಟುಮಾಡಿತು.

ಎಸ್. ರಾಮಚಂದ್ರರಾವ್ (ಸೆಕ್ರಟರಿ,)
ಗ್ರಾಮರಕ್ಷಣಸಭಾ, ಹಗಡೂರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ

ದಿವಾನ್‌ಸಾಹೇಬರವರು ಮಾಡಿದ ಭಾಷಣದ ಮುಖ್ಯಾಂಶ.

(ದಸರಾ ಅಧಿವೇಶನ)

10ನೆಯ ಅಕ್ಟೋಬರ್ 1924

(ಕಳೆದವಾರದ ಶೇಷ.)

ವಿದ್ಯಾಭ್ಯಾಸದ ಮಹೋರ್ಕಾಂಡಂ ಮೇಲಣ ಸರ್ಕಾರೀ ಹುಕುಮಿನಲ್ಲಿ ಕಂಡ ಪರಿಷ್ಕರಣಗಳಲ್ಲಿ ಹೆಚ್ಚು ಸಂಖ್ಯೆಯವುಗಳನ್ನು ಆಚರಣೆಗೆ ತಂದಿರುವುದು ಮೇಲ್ಕಂಡ ವಿವರಣೆಯಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಎಸಿದ್ದರೂ, ಕೆಲವನ್ನು ಹುಕುಮಿನಲ್ಲಿ ಇದ್ದಂತೆಯೇ ಆಚರಣೆಗೆ ತಂದಿದೆ. ಮತ್ತೆ ಕೆಲವನ್ನು ಅವಶ್ಯಕಂಡ ರೀತಿಯಲ್ಲಿ ಈಗಿನ ಸ್ಥಿತಿಗೆ ತಕ್ಕಂತೆ ಮಾರ್ಪಡಿಸಿ ಆಚರಣೆಗೆ ತರಲಾಗಿದೆ. ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಮತ್ತಷ್ಟು ಉದಾರ ಬುದ್ಧಿಯಿಂದ ಸರ್ಕಾರದವರೊಡನೆ ಏಕೀಭವಿಸಿ ಪ್ರಯತ್ನಮಾಡುವುದಾದರೆ ಅಭಿವೃದ್ಧಿಯ ಕಾರ್ಯಗಳು ಇನ್ನೂ ತೀವ್ರವಾಗಿ ನಡೆಯಬಹುದಾಗಿವೆ. ಕೆಲವು ಡಿಸ್ಟ್ರಿಕ್ಟುಗಳಲ್ಲಿ ಮಾತ್ರವೇ ಎಜುಕೇಷನ್ ತೆರಿಗೆಯನ್ನು ವಸೂಲ್ಮಾಡುತ್ತಿರುವುದರಿಂದ ವಿದ್ಯಾಭಿವೃದ್ಧಿಯ ಕಾರ್ಯಗಳು ಎಲ್ಲಾ ಕಡೆಗಳಲ್ಲಿಯೂ ಒಂದೇ ಸಮನಾಗಿ ನಡೆಯಲು ಅವಕಾಶವಿಲ್ಲದೆ ಸಮತೆಯು ತಪ್ಪಿರುತ್ತದೆ. ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಒಂದೇದರದಲ್ಲಿ ತೆರಿಗೆಯನ್ನು ವಸೂಲ್ಮಾಡಿದಲ್ಲಿ ವಿದ್ಯಾಭಿವೃದ್ಧಿಯು ಒಂದೇ ಸಮವಾಗಿ ನಡೆಯುವಂತೆ ಮಾಡಲು ಸಾಧ್ಯವಾಗುವುದು. ರೂಪಾಯಿಗೆ ಆರು ಪೈಗಳಮೇರೆಗೆ ವಿದ್ಯಾಭ್ಯಾಸದ ಸೆಸ್ಸನ್ನು ವಸೂಲ್ಮಾಡಿದರೂ ಕೂಡ, ಕೇವಲ ಸರ್ಕಾರದ ಹಣ ಒಂದರಿಂದಲೇ ಪ್ರಾಥಮಿಕ ವಿದ್ಯಾಭ್ಯಾಸದ ವಿಶಿಷ್ಟ ವೆಚ್ಚವನ್ನು ಒದಗಿಸುವುದು ಅಸಾಧ್ಯವಾಗಿರುತ್ತದೆ. ಕೆಲವು ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಹಾಲಿ ವಸೂಲ್ಮಾಡುತ್ತಿರುವ ದರಗಳಮೇರೆಗೆ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ವಸೂಲ್ಮಾಡಿಯೇ ತೀರಬೇಕೆಂದು ನಿರ್ಬಂಧವನ್ನು ಕಲ್ಪಿಸಿ ವರ್ತಿಸುವುದಾದರೆ ಮಾತ್ರವೇ ವಿದ್ಯಾಭಿವೃದ್ಧಿಯು ಇನ್ನೂ ಹೆಚ್ಚು ಹೆಚ್ಚಾಗಿ ಮುಂದುವರಿಯುವುದು ಸಾಧ್ಯವಾಗುತ್ತದೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಆಯವ್ಯಯಗಳನ್ನು ಹೇಗೆ ಕ್ರಮಗೊಳಿಸಬಹುದೆಂಬ ವಿಷಯವನ್ನು ಕಳೆದವರುಷವೆಲ್ಲಾ ಅತ್ಯಂತ ಆಸಕ್ತಿಯಿಂದ ಪರಿಶೀಲಿಸಿ ಮುಂದಟ್ಟುಮಾಡಿಕೊಳ್ಳಲಾಯಿತು. ಏಡೆಡ್ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳನ್ನಾಗಿ ಬದಲಾಯಿಸುವ ವಿಚಾರದಲ್ಲಿಯೂ, ಮತ್ತು ಅದೇ ಸಂಬಂಧವಾದ ಇತರ ವಿಚಾರಗಳಲ್ಲಿಯೂ, ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮದ ಫಲಿತಾಂಶವೆನಿಸಿ ಪ್ರಾಪ್ತವಾಗಿರುವ, ಎಂದರೆ, ಮೇಲೆವಿವರಿಸಿ ತಿಳಿಸಿದಂಥಾ ಕಷ್ಟಗಳನ್ನು ನಿವಾರಣೆ ಮಾಡಿಕೊಂಡು ಮುಂದೆ ಸಾಗುವುದಕ್ಕನುಕೂಲವಾದ ಮುಖ್ಯ ಮಾರ್ಗಗಳ ವಿಚಾರವು ಸರ್ಕಾರದವರ ಪ್ರಬಲವಾದ ಪ್ರರ್ಯಾಲೋಚನೆಯಲ್ಲಿರುತ್ತದೆ.

ಈ ಸಂಸ್ಥಾನದ ಗ್ರಾಮಗಳಲ್ಲೆಲ್ಲಾ ಪಂಚಾಯತರ ಏರ್ಪಾಡನ್ನು ಜಾರಿಗೆ ತರುವ ಉದ್ದೇಶವಿರುವುದರಿಂದಲೂ, ಅದರಿಂದ ಲೋಕಲ್ ಬೋರ್ಡುಗಳ ಆಯವ್ಯಯಸ್ಥಿತಿಯು ಅಸಮರ್ಪಕವಾಗಿ ಪರಿಣಮಿಸುವುದರಿಂದಲೂ ಎಲ್ಲಾ ತಾಲ್ಲೂಕು ಬೋರ್ಡುಗಳನ್ನೂ ವಜಾಮಾಡುವುದೂ, ಮತ್ತು ಸ್ಥಳಾರೋಗ್ಯ, ರಸ್ತೆಗಳು, ವೈದ್ಯಸಹಾಯವೇ ಮುಂತಾದ ಬಾಬುಗಳಲ್ಲಿ ಡಿಸ್ಟ್ರಿಕ್ಟುಗಳಿಗೂ, ತಾಲ್ಲೂಕುಗಳಿಗೂ, ತಾಲ್ಲೂಕುಗಳಿಗೆ ಪರಸ್ಪರವಾಗಿಯೂ, ಗ್ರಾಮಾಂತರಗಳಿಗೆ ಪರಸ್ಪರವಾಗಿಯೂ, ಸಂಬಂಧಪಡುವ ಕೆಲಸಗಳಿಗೆಲ್ಲಾ ಗಮನಕೊಡುವಂತೆ ಡಿಸ್ಟ್ರಿಕ್ಟು ಬೋರ್ಡುಗಳಿಗೆ ಇನ್ನೂ ಧಾರಾಳವಾದ ಅವಕಾಶವನ್ನು ಕೊಡಬೇಕಾದ್ದೂ, ಅನುಕೂಲ ಕಾಣುವುದು ಮಾತ್ರವೇ ಅಲ್ಲದೆ ಆವಶ್ಯಕವೆಂದೂ ಸಹ ಸರ್ಕಾರದವರು ಭಾವಿಸಿರುತ್ತಾರೆ.

ಮ್ಯುನಿಸಿಪಾಲಿಟಿಗಳ ಮೇಲ್ಪಾಟು.

(1) ಮೈನರ್ ಮ್ಯುನಿಸಿಪಲ್ ಕೌನ್ಸಿಲುಗಳಲ್ಲಿನ ಚುನಾಯಿಸಲ್ಪಟ್ಟ ಮೆಂಬರುಗಳ ಸಂಖ್ಯೆಯನ್ನು ಆಯಾ ಕೌನ್ಸಿಲಿನ ಒಟ್ಟು ಮೆಂಬರುಗಳ ಸಂಖ್ಯೆಯನ್ನು $\frac{1}{3}$ನೇ ಭಾಗದಿಂದ $\frac{1}{2}$ಕ್ಕೆ ಹೆಚ್ಚಿಸತಕ್ಕದ್ದು;

(2) ಚುನಾವಣೆಗಳಲ್ಲಿ ವೋಟ್ ಮಾಡುವುದಕ್ಕಾಗಿ ಸ್ತ್ರೀಯರಿಗೆ ಓಟ್ ಮಾಡುವ ಅಧಿಕಾರವನ್ನು ಕೊಡತಕ್ಕದ್ದು;

(3) ಸಾಧಾರಣವಾಗಿ, ಸಿಟಿ ಮತ್ತು ಟೌನ್ ಮ್ಯುನಿಸಿಪಲ್ ಕೌನ್ಸಿಲುಗಳ ಪ್ರೆಸಿಡೆಂಟರುಗಳು, ಚುನಾಯಿಲ್ಪಡತಕ್ಕದ್ದು; ಮತ್ತು ಅವರು ಆಯಾ ಮ್ಯುನಿಸಿಪಲ್ ಕೌನ್ಸಿಲುಗಳಿಂದ ಚುನಾಯಿಸಲ್ಪಡುವುದಕ್ಕೆ ಬದಲಾಗಿ, ಓಟರುಗಳೆಲ್ಲರಿಂದಲೂ ಚುನಾಯಿಸಲ್ಪಡತಕ್ಕದ್ದು;

(4) ಸಿಟಿ ಮ್ಯುನಿಸಿಪಾಲಿಟಿಗಳು ಹೊರತು, ಮಿಕ್ಕ ಮ್ಯುನಿಸಿಪಲ್ ಆಫೀಸುಗಳನ್ನು ಡೆಪ್ಯುಟಿಕಮಿಷನರುಗಳು ತನಿಖೆ ಮಾಡುವುದಕ್ಕಾಗಿ ಏರ್ಪಾಡು ಮಾಡತಕ್ಕದ್ದು.

ಮೇಜರ್ ಮತ್ತು ಮೈನರ್ ಕೆರೆಗಳ ದುರಸ್ತಿ.

ಮೇಜರ್ ಕೆರೆಗಳು.—ಸಂಸ್ಥಾನದಲ್ಲಿರುವ ಮೇಜರ್ ಕೆರೆಗಳ ಒಟ್ಟು ಸಂಖ್ಯೆಯು 2,566; ಇವುಗಳ ಪೈಕಿ 1,830 ಕೆರೆಗಳು ದುರಸ್ತು ಮಾಡಲ್ಪಟ್ಟಿವೆ. ಇನ್ನೂ ದುರಸ್ತಾಗಬೇಕಾದ ಕೆರೆಗಳು 700 ಕ್ಕಿಂತ ಹೆಚ್ಚಾಗಿವೆ. ಇವುಗಳಿಗಾಗಿ ಸುಮಾರು 50 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಆದುದರಿಂದ, ಈ ವೆಚ್ಚಕ್ಕಾಗಿ ಪ್ರತಿವರ್ಷವೂ ಸ್ವಲ್ಪ ಸ್ವಲ್ಪ ಹಣವನ್ನು ಒದಗಿಸುತ್ತಾ ಅನೇಕ ವರುಷಗಳಕಾಲ ಕೆಲಸಮಾಡಿಸಬೇಕಾಗುತ್ತದೆ.

ಕಳೆದವರುಷ (1923-24ರಲ್ಲಿ) ಮೇಜರ್ ಕೆರೆಗಳಿಗಾಗಿ 1,92,000 ರೂಪಾಯಿಗಳನ್ನು ಮಾತ್ರ ಮಂಜೂರ್ಮಾಡಲಾಯಿತು ಮತ್ತು 1,79,626 ರೂಪಾಯಿಗಳ ವೆಚ್ಚದಿಂದ ಕೆಲಸವು ನಡೆಯಿತು. ಚಾಲ್ತಿ ವರ್ಷದಲ್ಲಿ, ಮೇಜರ್ ಕೆರೆಗಳಿಗಾಗಿ ಮಂಜೂರ್ಮಾಡಿದ ಹಣವು 2,67,000 ರೂಪಾಯಿಗಳು. ಇನ್ನೂ ಹೆಚ್ಚು ಮೊಬಲಗನ್ನು ಒದಗಿಸಲು ದ್ರವ್ಯಾಭಾವದ ದೆಸೆಯಿಂದ ಅಸಾಧ್ಯವಾಗಿ ಪರಿಣಮಿಸಿತು. ಕೆಲಸವು ಇನ್ನೂ ಚೆನ್ನಾಗಿ ನಡೆಯಬೇಕಾದರೆ, ನೀರಾವರಿಯ ಕಾಮಗಾರಿಗಳ ಗ್ರಾಂಟನ್ನು ಪ್ರತಿವರ್ಷವೂ ಕನಿಷ್ಠಪಕ್ಷ 5 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಬೇಕಾಗುವುದು.

ಮೈನರ್ ಕೆರೆಗಳು.—ಸಂಸ್ಥಾನದಲ್ಲಿ ದುರಸ್ತಾಗಬೇಕಾದ ಮೈನರ್ ಕೆರೆಗಳ ಒಟ್ಟು ಸಂಖ್ಯೆಯು 14,302. ಇದುವರೆಗೆ ದುರಸ್ತಾಗಿರುವ ಕೆರೆಗಳ ಸಂಖ್ಯೆಯು ಸುಮಾರು 1,000; ಮತ್ತು ದುರಸ್ತಿಯು ಶುರುಮಾಡಲ್ಪಟ್ಟಿರುವ ಕೆರೆಗಳ ಸಂಖ್ಯೆಯು 270. ಕೆಲಸವು ಬಹುನಿಧಾನವಾಗಿ ನಡೆಯುತ್ತಿದೆ; ಇನ್ನೂ ಹೆಚ್ಚು ಗ್ರಾಂಟುಗಳನ್ನು ಕೊಡದೇ ಇದ್ದರೆ ಕೆಲಸವು ಅದೇ ರೀತಿ ನಿಧಾನವಾಗಿ ನಡೆಯಬೇಕಾಗುವುದು. 1923-24ನೇ ವರುಷದಲ್ಲಿ ಒದಗಿಸಿದ ಹಣವು 87,000 ರೂಪಾಯಿಗಳು ಮತ್ತು ವೆಚ್ಚಮಾಡಿದ ಮೊಬಲಗು 66,728 ರೂಪಾಯಿಗಳು.

ಈ ಮಧ್ಯೆ ಕಂಟ್ರಿಬ್ಯೂಷನ್ನಿನ ವಸೂಲಿಯನ್ನು ನಿರ್ಬಂಧಕ ಮಾಡುವುದಕ್ಕಾಗಿ, ಸಲಹೆ ಮಾಡಲ್ಪಟ್ಟ ಒಂದು ತಿದ್ದುಪಾಟಾದ ರೆಗ್ಯುಲೇಷನು, ನ್ಯಾಯವಿಧಾಯಕಸಭೆಯವರ ಮುಂದೆ ತರಲ್ಪಟ್ಟು ಅವರಿಂದ ಕಾನೂನಾಗಿ ಅನುಮೋದಿಸಲ್ಪಟ್ಟಿದೆ. ಅಂದಾಜನ್ನು ಮಂಜೂರ್ಮಾಡಿದ ಕೂಡಲೆ, ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕಂಟ್ರಿಬ್ಯೂಷನ್ನಿನ ವಸೂಲಿಗಾಗಿ ಹಿಂದೆ ನಿರೀಕ್ಷಿಸುತ್ತಿದ್ದಂತೆ ನಿರೀಕ್ಷಿಸದೆ ಆಯಾ ಕಾಮಗಾರಿಯನ್ನು ನಡೆಸಲು ಅವರಿಗೆ ಈಗ ಸಂಪೂರ್ಣವಾಗಿ ಅವಕಾಶವಿರುತ್ತದೆ.

ಇನಾಂ ಕಮಿಷನ್ ಮತ್ತು ಸರ್ಕಾರಿ ಆಡಳಿತಕ್ಕೊಳಪಟ್ಟಿರುವ ಇನಾಂ ಗ್ರಾಮಗಳ ಅಭಿವೃದ್ಧಿ.

ಪ್ರಸಕ್ತವರ್ಷದಲ್ಲಿ ಇನಾಂ ಕಮಿಷನಿನವರ ವರದಿಯು ಸರ್ಕಾರದವರ ದೀರ್ಘಾಲೋಚನೆಯಲ್ಲಿದ್ದಿತು; ಸರ್ಕಾರದವರು ಇಷ್ಟರಲ್ಲೇ ಅದರ ವಿಚಾರವಾಗಿ ಹುಕುಂ ನಾದರು ಮಾಡುವವರಾಗಿದಾರೆ. ಸರ್ಕಾರಿ ಆಡಳಿತಕ್ಕೆ ತೆಗೆದುಕೊಂಡಿರುವ ಇನಾಂ ಗ್ರಾಮಗಳ ಸ್ಥಿತಿಯನ್ನು ಉತ್ತಮಪಡಿಸುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಗ್ರಾಮಗಳ ಸ್ಥಿತಿಯನ್ನು ಮೇಲ್ಪಡಿಸುವುದಕ್ಕೆ ರೆವಿನ್ಯೂ ಆಫೀಸರುಗಳ ನಡೆವಳಿಕೆಯ ಬಗ್ಗೆ ತಪಶೀಲಾದ ತಿಳಿವಳಿಕೆಗಳನ್ನು ಕೊಟ್ಟು ಈಚೆಗೆ ಹುಕುಂ ನಾದರಾಗಿದೆ. ಮತ್ತು ಸರ್ಕಾರಿ ಆಡಳಿತದಲ್ಲಿರುವ ಇನಾಂ ಗ್ರಾಮಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕಮಾಡುವ ವಿಷಯವೂ ಕೂಡ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. "ಮೈನರುಗಳ" ಎಂದರೆ ಪ್ರಾಪ್ತವಯಸ್ಕರಲ್ಲದವರ ಆಸ್ತಿಯನ್ನು ರಕ್ಷಿಸಿ ಮೇಲ್ವಿಚಾರಣೆಯ ಕೆಲಸವನ್ನು ನೋಡಿಕೊಳ್ಳುವುದಕ್ಕಾಗಿ ಬ್ರಿಟಿಷ್ ಇಂಡಿಯಾದಲ್ಲಿ ಆಚರಣೆಯಲ್ಲಿರುವ "ಕೋರ್ಟ್ ಆಫ್ ವಾರ್ಡ್ಸ್" ರೆಗುಲೇಷನ ಮಾದರಿಯ ಮೇಲೆ ಒಂದು ರೆಗ್ಯುಲೇಷನನ್ನು ರಚಿಸಿ ಕಾನೂನಾಗಿ ಆಚರಣೆಗೆ ತರುವ ವಿಚಾರವೂ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಮೈಸೂರು ಸಿವಿಲ್ ಸರ್ವಿಸ್ಸಿನ ಪುನರ್ವ್ಯವಸ್ಥೆ.

ಕಳೆದ ಅಕ್ಟೋಬರು ತಿಂಗಳಿನಲ್ಲಿ ನಾವು ಮಾಡಿದ ಭಾಷಣದಲ್ಲಿ, ಮೈಸೂರು ಸಿವಿಲ್ ಸರ್ವಿಸ್ಸನ್ನು ಪುನರ್ವ್ಯವಸ್ಥೆ ಮಾಡುವ ವಿಚಾರವು ಸರ್ಕಾರದವರ ತೀವ್ರವಾದ ಪರ್ಯಾಲೋಚನೆಯಲ್ಲಿದ್ದುದಾಗಿ ತಿಳಿಸಿದ್ದೆವು. ಆಗಿಂದೀಚೆಗೆ, ಹೊಸ ಉದ್ಯೋಗಸ್ಥರನ್ನು ಸದರಿ ಸರ್ವಿಸ್ಸಿಗೆ ಸೇರಿಸಿಕೊಳ್ಳಬೇಕಾದ ಆವಶ್ಯಕತೆಯು ವಿಶೇಷವಾಗಿ ಕಂಡುಬಂದುದರಿಂದ, ಮೈಸೂರುಸಂಸ್ಥಾನದಲ್ಲಿ ಹುಟ್ಟಿದ ಅಥವಾ ಕ್ಲುಪ್ತಕಾಲದವರೆಗೆ ವಾಸವಾಗಿರುವುದರ ಮೂಲಕ ಶ್ರೀಮನ್ಮಹಾರಾಜರವರ ಪ್ರಜೆಗಳೆನಿಸಿಕೊಂಡವರನ್ನು ಕನಿಷ್ಠಪಕ್ಷ ಇಬ್ಬರಿಗೆ ಕಡಮೆಯಿಲ್ಲದಂತೆ ಪ್ರೊಬೇಷನರ್ ಅಸಿಸ್ಟೆಂಟು ಕಮಿಷನರುಗಳನ್ನಾಗಿ ನೇಮಿಸತಕ್ಕ ಬಗ್ಗೆ ಚುನಾಯಿಸುವುದಕ್ಕಾಗಿ, ಒಂದು ಸ್ಪರ್ಧಾಪರೀಕ್ಷೆಯನ್ನು ಈ ತಿಂಗಳ ಅಖೈರಿನಲ್ಲಿ ನಡೆಸಬೇಕೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆ.

ಸಿವಿಲ್ ಸರ್ವಿಸ್ಸಿನ ನಿಬಂಧನೆಗಳನ್ನು ತಿದ್ದುಪಾಟು ಮಾಡಿದೆ; ಈ ತಿದ್ದುಪಾಟಿನ ಮುಖ್ಯ ಲಕ್ಷಣಗಳೇನೆಂದರೆ:—(1) ಸ್ಪರ್ಧಾಪರೀಕ್ಷೆಯ ಮೂಲಕವೂ, ಮತ್ತು ಕೆಳದರ್ಜೆಗಳ ಹುದ್ದೆಗಳಿಂದ ಬಡ್ತಿಯಮೂಲಕ ನೇಮಿಸಲ್ಪಟ್ಟ ಆಫೀಸರುಗಳೂ ಸೇರಿ, ಶ್ರೀಮನ್ಮಹಾರಾಜರವರಿಂದ ಚುನಾಯಿಸಲ್ಪಟ್ಟು ನೇಮಿಸಲ್ಪಡುವುದರ ಮೂಲಕವೂ, ಕೆಲಸಕ್ಕೆ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗೆ ಮಾತ್ರವೇ ಸಿವಿಲ್ ಸರ್ವಿಸ್ಸಿನ ಹುದ್ದೆಗಳನ್ನು ಇನ್ನು ಮುಂದೆ ಕೊಡಲಾಗುವುದು. (2) ರೆವಿನ್ಯೂ, ಅಕೌಂಟ್ಸ್, ಪೊಲೀಸ್, ಮುಂತಾದ ಹಲವು ಇಲಾಖೆಗಳಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೆ ಸೇರದ ಒಂದು ದರ್ಜೆಯನ್ನು ಏರ್ಪಡಿಸುವುದರ ಮೂಲಕ ಕೆಳದರ್ಜೆಗಳಲ್ಲಿನ ಆಫೀಸರುಗಳ ಬಡ್ತಿಯ ಸಂಭವವನ್ನು ಉತ್ತಮಪಡಿಸಿದೆ. (3) ಸಿವಿಲ್ ಸರ್ವಿಸ್ ದರ್ಜೆಯ ಹುದ್ದೆಗಳ ಸಂಖ್ಯೆಯನ್ನು ಈಗ 45ಕ್ಕೆ ತಗ್ಗಿಸಿದೆ; ಮತ್ತು ರೆವಿನ್ಯೂ, ಅಕೌಂಟ್ಸ್, ಪೊಲೀಸ್, ಎಕ್ಸೈಜ್, ಸರ್ವೇ ಮತ್ತು ಇನ್‌ಕಂಟ್ಯಾಕ್ಸ್ ಇಲಾಖೆಗಳಲ್ಲಿಯೂ, ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನಲ್ಲಿಯೂ, ಮತ್ತು ಕೋ ಆಪರೇಟಿವ್ ಇಲಾಖೆಯಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೂ ಮತ್ತು ತಲಬುಗಳಿಗೂ ಸರಿಸಮನಾದ ದರ್ಜೆಯೂ, ತಲಬುಗಳೂ ಇರುವ 31 ಹುದ್ದೆಗಳನ್ನು, ಆಯಾ ಇಲಾಖೆಯ ಕೆಳದರ್ಜೆಗಳಿಂದ ಬಡ್ತಿಮಾಡಲ್ಪಟ್ಟ ಆಫೀಸರುಗಳಿಗಾಗಿಯೂ ಮತ್ತು ಕೆಲವು ಸಂದರ್ಭಗಳಲ್ಲಿ ಆಯಾ ಇಲಾಖೆಗೆ ಸೀದಾ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗಾಗಿಯೂ, ಪ್ರತ್ಯೇಕಪಡಿಸಿ ಉಳಿಸಲಾಗಿದೆ. (4) ರೆವಿನ್ಯೂ ಇಲಾಖೆಯ ಮತ್ತು ಸೆಕ್ರೆಟೇರಿಯಟ್ಟಿನ ಹುದ್ದೆಗಳ ಪೈಕಿ ಹೆಚ್ಚು ಸಂಖ್ಯೆಯ ಹುದ್ದೆಗಳಿಗೆ ಸಿವಿಲ್ ಸರ್ವಿಸ್ಸಿನಿಂದ ಆಫೀಸರುಗಳನ್ನು ನೇಮಿಸುವುದು: ಮತ್ತು ಪರಸ್ಪರಸಂಬಂಧವುಳ್ಳ ಎಲ್ಲಾ ಇತರ ಇಲಾಖೆಗಳಲ್ಲಿನ ಹುದ್ದೆಗಳ ಪೈಕಿ ಬಹುಭಾಗದ ಹುದ್ದೆಗಳಿಗೆ ಸಿವಿಲ್ ಸರ್ವಿಸ್ ಅಲ್ಲದ ದರ್ಜೆಗೆ ಸೇರಿದ ಆಫೀಸರುಗಳನ್ನು ಮೊಕರ್ರಾಡುವುದು. (5) ಸಿವಿಲ್ ಸರ್ವಿಸ್ಸಿನ ಮೆಂಬರುಗಳಿಗೆ ದೊರೆಯಬಹುದಾದ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳ ಸಂಖ್ಯೆಯನ್ನು ಹನ್ನೊಂದರಿಂದ ಒಂಬತ್ತಕ್ಕೆ ತಗ್ಗಿಸಿದೆ; ಮತ್ತು ಸೀನಿಯರ್ ಸಬ್‌ಡಿವಿಜನ್ ಆಫೀಸರು, ಸೀನಿಯರ್ ಪೊಲೀಸ್ ಸೂಪರಿಂಟೆಂಡೆಂಟರು, ಎಂಬ ಎರಡು ಹುದ್ದೆಗಳನ್ನು ಆಯಾ ಇಲಾಖೆಯಲ್ಲಿನ ಸಿವಿಲ್ ಸರ್ವಿಸ್ ದರ್ಜೆಗೆ ಸೇರದ ಆಫೀಸರುಗಳ ಪುರೋಭಿವೃದ್ಧಿಗಾಗಿ ಕಲ್ಪಿಸಿದೆ. (6) ರೆವಿನ್ಯೂ, ಪೊಲೀಸ್, ಎಕ್ಸೈಜು ಇಲಾಖೆಗಳಲ್ಲಿನ ಮತ್ತು ಸೆಕ್ರೆಟೇರಿಯಟ್ಟಿನ ಮೇಲ್ಪಟ್ಟ ಹುದ್ದೆಗಳಾದ ರೆವಿನ್ಯೂ ಕಮಿಷನರ್, ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್, ಎಕ್ಸೈಜ್ ಕಮಿಷನರ್, ಸರ್ಕಾರದ ಜನರಲ್ ಇಲಾಖಾ ಸೆಕ್ರೆಟರಿಗಳು, ಮತ್ತು ಡೆಪ್ಯುಟಿಕಮಿಷನರುಗಳೇ ಮುಂತಾದ ಹುದ್ದೆಗಳನ್ನು ನಿಷ್ಕರ್ಷೆಯಾಗಿ ಸಿವಿಲ್ ಸರ್ವಿಸ್ಸಿನ ದರ್ಜೆಯಲ್ಲಿಯೇ ಸೇರಿಸಿದೆ; ಮತ್ತು ಸಿವಿಲ್ ಸರ್ವಿಸ್ಸಿಗೆ ಸೇರದೆ ಇರುವ ಆಫೀಸರುಗಳಿಗೆ ದೊರೆಯಬಹುದಾದ ಮೇಲ್ಪಟ್ಟ ಹುದ್ದೆಗಳನ್ನು ಸ್ಪಷ್ಟವಾಗಿ ಸೂಚಿಸಿದೆ.

ಮುಂದಣ ಆಶೋತ್ತರ ವಿಚಾರಗಳು.

ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರಕೃತದಲ್ಲಿ ಅತ್ಯಾಸಕ್ತಿಯಿಂದ ಗಮನ ಕೊಡುತ್ತಿರುವ ದೊಡ್ಡದೊಡ್ಡ ವಿಷಯಗಳ ಪೈಕಿ ಕೆಲವನ್ನು ಈಗ ಸೂಚಿಸುತ್ತೇವೆ.

ಖನಿಜ ಸಂಪತ್ತನ್ನು ಅಭಿವೃದ್ಧಿಗೆ ತರುವುದು.—ಈ ಸಭೆಯಲ್ಲಿ ನಾವು ಒಂದೆರಡುವೇಳೆ ತಿಳಿಯಪಡಿಸಿರುವಂತೆ, ಮೈಸೂರುದೇಶದಲ್ಲಿ ಕೈಗಾರಿಕೆಯ ಅಭಿವೃದ್ಧಿಗೆ ಸ್ವಾಭಾವಿಕವಾದ ಸಾಧನಸಂಪತ್ತುಗಳು ಅಪರಿಮಿತವಾಗಿವೆ. ಮೈಸೂರುದೇಶದ ಖನಿಜ ಸಂಪತ್ತನ್ನೆಲ್ಲಾ ಇನ್ನೂ ಸಂಪೂರ್ಣವಾಗಿ ಉಪಯೋಗಪಡಿಸಿಕೊಂಡಿಲ್ಲ. ಆದರೆ ಕೈಗಾರಿಕೆಯು ಪ್ರಾಬಲ್ಯಕ್ಕೆ ಬರುವ ಸಂಭವಗಳು ಅಪರಿಮಿತವಾಗಿರುವ ದೇಶಗಳ ಪೈಕಿ ಮೈಸೂರುದೇಶಕ್ಕೆ ಉನ್ನತ ಸ್ಥಾನವು ದೊರೆಯುವಂತೆ ಮಾಡಲು ಇದುವರೆಗೆ ಪರಿಶೋಧನೆಯ ಮೂಲಕ ಗೊತ್ತಾಗಿರುವ ಅಂಶಗಳೇ ಸಾಕಾಗಿವೆ. ಮೈಸೂರುದೇಶದಲ್ಲಿ ಚಿನ್ನ ಮತ್ತು ಕಬ್ಬಿಣದ ಜತೆಗೆ ಅಮೂಲ್ಯವಾದ ಕ್ರೋಮ್ ಮತ್ತು ಮ್ಯಾಂಗನೀಸ್ ಲೋಹಗಳ ಅದಿರುಗಳು ಹೇರಳವಾಗಿರುವಂತೆ ಕಂಡುಬಂದಿದೆ. ಇದಲ್ಲದೆ, ಅಮೂಲ್ಯವಾದ ಇತರ ಖನಿಜ ವಸ್ತುಗಳಿರುವ ಚಿಹ್ನೆಗಳು ಯಥೇಷ್ಟವಾಗಿ ಕಂಡುಬರುತ್ತವೆ. ಅವುಗಳನ್ನು ಕಂಡುಹಿಡಿದು ರೂಢಿಸಿದಾಗ, ಮೈಸೂರುದೇಶವು ಕೈಗಾರಿಕೆಯ ವಿಚಾರದಲ್ಲಿ ಅಭ್ಯುದಯಸ್ಥಿತಿಗೆ ಬರುವುದು ಖಂಡಿತ. ಯುಕ್ತವೆನಿಸಿರುವ ವಾಣಿಜ್ಯ ತತ್ವಗಳಿಗನುಸಾರವಾಗಿ ಸಂಸ್ಥಾನದ ಖನಿಜ ಸಂಪತ್ತನ್ನು ರೂಢಿಸಿ ಅಭಿವೃದ್ಧಿಯನ್ನುಂಟುಮಾಡಲು ತಕ್ಕ ಪ್ರಯತ್ನಗಳು ನಡೆಯುತ್ತಾ ಇವೆ. ಹೀಗೆ ಮಾಡುವುದರಿಂದ ಸಂಸ್ಥಾನದ ಅಭಿವೃದ್ಧಿಗೋಸ್ಕರ ಹಿಂದೆ ಎಷ್ಟೋ ಚೆನ್ನಾಗಿ ಕೆಲಸ ನಡೆಸಿರುವ ಖಾಸಗಿಜನರ ಉದ್ಯಮಗಳಿಗೆ ಪ್ರತಿಬಂಧಕ ಬಾರದಂತೆಯೂ, ಒಟ್ಟು ಆದಾಯದಲ್ಲಿ ಇನ್ನೂ ಹೆಚ್ಚಿನ ಭಾಗವು ಸರ್ಕಾರದವರಿಗೆ ಸಲ್ಲುವಂತೆಯೂ ಆಗುತ್ತದೆ. ಈ ವಿಚಾರದಲ್ಲಿ ಈ ಸಭೆಯ ಮುಂದಣ ಅಧಿವೇಶನದಲ್ಲಿ ಸಿದ್ಧರವಾದ ಸಂಗತಿಯನ್ನು ತಿಳಿಸಲು ಸಾಧ್ಯವಾಗುವುದೆಂದು ನಂಬಿರುತ್ತೇವೆ.

ವ್ಯಾಪಾರದ ಅನುಕೂಲತೆಯ ವಿಚಾರವಾಗಿ ಪರಿಶೋಧನೆ.—ಕಳೆದ ಜೂನ್ ತಿಂಗಳಲ್ಲಿ ನಡೆದ ಪುನರ್ವ್ಯವಸ್ಥಿತವಾದ ಸಂಪದಭ್ಯುದಯ ಸಮಾಜದ ಸಮಾರಂಭ ಭಾಷಣದಲ್ಲಿ "ಒಂದು ದೇಶದ ವ್ಯಾಪಾರದ ಪ್ರವರ್ಧಮಾನಸ್ಥಿತಿಯನ್ನು ಗೊತ್ತುಮಾಡಬೇಕಾದರೆ ಆಮದಿಗಿಂತಲೂ ರಫ್ತು ಹೆಚ್ಚಾಗಿರಬೇಕೆಂಬುದು ಅರ್ಥಶಾಸ್ತ್ರದ ಒಂದು ಮೂಲತತ್ವವಾಗಿದೆ.........ಈ ತತ್ವದ ಪ್ರಕಾರ ಪರೀಕ್ಷೆಮಾಡಿ ನೋಡಿದರೆ, ಮೈಸೂರುದೇಶದ ವ್ಯಾಪಾರ ಸ್ಥಿತಿಯು ಸ್ವಲ್ಪವೂ ತೃಪ್ತಿಕರವಾಗಿಲ್ಲ............ಆದುದರಿಂದ ಸರಿಯಾದ ರೀತಿಯಲ್ಲಿ ವ್ಯಾಪಾರವನ್ನು ಅಭಿವೃದ್ಧಿಪಡಿಸಿ,........ರಫ್ತನ್ನು ಹೆಚ್ಚಿಸುತ್ತಾ ಬಂದು ದೇಶವನ್ನು ಅಭ್ಯುದಯಸ್ಥಿತಿಗೆ ತರುವುದು ಅವಶ್ಯವಾಗಿದೆ" ಎಂದು ತಿಳಿಸಿದೆವು. ಈ ವಿಷಯವನ್ನು ಇನ್ನೂ ಹೆಚ್ಚಾಗಿ ಪರಿಶೋಧಿಸಲು ಉದ್ದೇಶಿಸಿದೆ. ಮತ್ತು ಈ ಉದ್ದೇಶಕ್ಕಾಗಿ ಈ ವಿಷಯವನ್ನು ಜಾಗರೂಕತೆಯಿಂದ ಪರಾಮರ್ಶಿಸಿ ಸರ್ಕಾರದವರು ಒಂದು ನಿರ್ದಿಷ್ಟವಾದ ಕ್ರಮವನ್ನು ಅನುಸರಿಸುವ ಬಗ್ಗೆ ಉಪಾಯಾಂತರಗಳನ್ನು ಸೂಚಿಸುವುದಕ್ಕೋಸ್ಕರವಾಗಿ ವಾಣಿಜ್ಯ ವಿಚಾರಗಳಲ್ಲಿ ನಿಪುಣರೆನಿಸಿರುವವರು ದಕ್ಷತೆಯಿಂದ ಕೆಲಸ ನಡೆಸುವಬಗ್ಗೆ ಅವರನ್ನೊಳಗೊಂಡ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ.

ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಏರ್ಪಾಡುಗಳು.—ಮೈಸೂರುದೇಶದಲ್ಲಿ ಖನಿಜ ಸಂಪತ್ತಿನ ಜತೆಗೆ ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಏರ್ಪಾಡುಗಳನ್ನು ಇನ್ನೂ ಅಭಿವೃದ್ಧಿಗೆ ತರಲು ಅತ್ಯಧಿಕವಾದ ಅವಕಾಶಗಳಿರುತ್ತವೆ. ಕೃಷ್ಣರಾಜಸಾಗರದ ಏರ್ಪಾಡಿನ ಸಹಾಯದೊಡನೆ ನಡೆಸುತ್ತಿರುವ ಶಿವಸಮುದ್ರದ ವಿದ್ಯುಚ್ಛಕ್ತಿಯ ಉತ್ಪತ್ತಿಯ ಏರ್ಪಾಡಿನಿಂದ ಮೈಸೂರು, ಬೆಂಗಳೂರು ಮತ್ತು ಕೋಲಾರ ಚಿನ್ನದಗಣಿ ಪ್ರದೇಶಗಳಲ್ಲಿ ನಡೆಯತಕ್ಕ ಕೈಗಾರಿಕೆಗಳಿಗೆ ಮಾತ್ರ ಪ್ರಯೋಜನವುಂಟಾಗುತ್ತದೆ. ಮದರಾಸು ಸರ್ಕಾರದವರು ಮೇಕೆದಾಟಿನ ನೀರಿನ ಸಂಬಂಧವಾದ ತಮ್ಮ ಹಕ್ಕುಗಳನ್ನು ಕೆಲವು ಷರತ್ತುಗಳಮೇಲೆ ಮೈಸೂರು ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತಾರೆ. ಕೋಲಾರದ ಚಿನ್ನದಗಣಿ ಪ್ರದೇಶಗಳಿಗೂ, ಇತರ ಕೈಗಾರಿಕೆಗಳಿಗೂ ದಿನೇದಿನೇ ಹೆಚ್ಚಾಗಿ ಬೇಕಾಗುತ್ತಿರುವ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿ ಸದರಿ ನೀರನ್ನು ಇನ್ನು ಸ್ವಲ್ಪಕಾಲದಲ್ಲಿಯೇ ಉಪಯೋಗಿಸಿಕೊಳ್ಳಬೇಕಾಗುವುದು. ಕೈಗಾರಿಕೆಯನ್ನು ಅಭಿವೃದ್ಧಿಗೆ ತರಲು ತಕ್ಕ ಸಾಧನಗಳು ಮಲೆನಾಡಿನಲ್ಲಿ ಮತ್ತೂ ಹೆಚ್ಚಾಗಿವೆ. ದೀಪದಕಡ್ಡಿಯನ್ನು ತಯಾರುಮಾಡುವ ಕಾರ್ಖಾನೆಯನ್ನೂ, ಕಾಗದದ ಕೈಗಾರಿಕೆಯನ್ನೂ, ಸಕ್ಕರೆಯ ಕಾರ್ಖಾನೆಯನ್ನೂ, ಖನಿಜವಸ್ತುಗಳ ಕೈಗಾರಿಕೆಗಳನ್ನೂ, ಇತರ ಮುಖ್ಯವಾದ ಎಷ್ಟೋ ಕೈಗಾರಿಕೆಗಳನ್ನೂ, ನಡೆಸುವುದಕ್ಕೆ ವಿಶೇಷವಾಗಿ ಅವಕಾಶವಿದೆ; ಇವುಗಳಿಗೆಲ್ಲಾ ಸುಲಭವೆಚ್ಚದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಆವಶ್ಯಕ. ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಬಗ್ಗೆ ಗೇರಸೊಪ್ಪೆಯಲ್ಲಿರುವ ಜಲಪಾತವನ್ನು ಉಪಯೋಗಕ್ಕೆ ತರುವ ವಿಷಯವು ಬಹುಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಏರ್ಪಾಡು ಎಷ್ಟರ ಮಟ್ಟಿಗೆ ಫಲಕಾರಿಯಾಗಿ ಪರಿಣಮಿಸಬಹುದೆಂಬ ಸಂಗತಿಯನ್ನು ಕೂಲಂಕಷವಾಗಿ ಪರಿಶೀಲಿಸತಕ್ಕ ಬಗ್ಗೆ ಸರ್ಕಾರದವರು ಈಚೆಗೆ ಹುಕುಂ ಮಾಡಿದರು; ಸದರಿ ಕೆಲಸಕ್ಕಾಗಿ ನೇಮಕವಾಗಿದ್ದ ಆಫೀಸರವರು ಕಳುಹಿಸಿದ ವರದಿಯು ಈಗತಾನೆ ತಲಪಿರುತ್ತದೆ. ಈ ಏರ್ಪಾಡನ್ನು ನೆರವೇರಿಸಲು ಬಹಳ ಭಾರೀ ವೆಚ್ಚವು ತಗಲುತ್ತದೆ. ಇದನ್ನು ನಡೆಸಿದಪಕ್ಷದಲ್ಲಿ, ಮಲೆನಾಡಿನಲ್ಲಿ ಭಾರಿ ಕೈಗಾರಿಕೆಗಳನ್ನಾರಂಭಿಸುವುದಕ್ಕೆ ಅವಕಾಶವು ದೊರೆಯುತ್ತದೆ. ಅಲ್ಲದೆ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ನಡೆಯುತ್ತಿರುವ ಕಬ್ಬಿಣದ ಭಟ್ಟಿಯ ಕೆಲಸದ ಸಂಬಂಧದಲ್ಲಿ ಅನೇಕ ಸಣ್ಣಪುಟ್ಟ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಅನುಕೂಲವಾಗುವುದು. ಚಾಲ್ತಿವರುಷದಲ್ಲಿ ಈ ಏರ್ಪಾಡನ್ನು ಸರ್ವತೋಮುಖವಾಗಿ ಮತ್ತು ಸಂಪೂರ್ಣವಾಗಿ ಪರಿಶೋಧಿಸಲಾಗುವುದು ಮತ್ತು ಮುಂದಣವರುಷದ ಈ ಸಭೆಯ ದಸರಾ ಅಧಿವೇಶನದಲ್ಲಿ ಇದರ ವಿಚಾರದಲ್ಲಿ ನಿರ್ಧರವಾಗಿ ತಿಳಿಸಲು ಸಾಧ್ಯವಾದೀತೆಂದು ಕೋರುತ್ತೇವೆ.

ಭಟ್ಕಲಿನ ರೇವು.—ಪಶ್ಚಿಮತೀರದಲ್ಲಿರುವ ಭಟ್ಕಲಿನಲ್ಲಿ ರೇವನ್ನು ಸ್ಥಾಪಿಸುವ ಬಗ್ಗೆ ಒಂದು ಪ್ರಾಜೆಕ್ಟನ್ನು ಕುರಿತು ಕಳೆದ ಅಕ್ಟೋಬರು ತಿಂಗಳಲ್ಲಿ ಈ ಸಭೆಯಲ್ಲಿ ನಾವು ಮಾಡಿದ ಭಾಷಣದಲ್ಲಿ ಸೂಚಿಸಿದ್ದೆವಷ್ಟೆ. ಸದರಿ ಪ್ರಾಜೆಕ್ಟನ್ನು ಕೈಬಿಟ್ಟಿಲ್ಲವೆಂದೂ, ದ್ರವ್ಯಾನುಕೂಲವು ಒದಗಿದಾಗ ಪಶ್ಚಿಮತೀರದವರೆಗೆ ರೈಲ್ವೆಯು ಬಡಾಯಿಸಲನುಕೂಲಿಸುವಂತೆ ಶಿವಮೊಗ್ಗಾ-ಅರಸಾಳು ಲೈನಿನ ಕಾಮಗಾರಿಯೇ ಮೊಟ್ಟಮೊದಲು ಕೈಗೊಳ್ಳುವ ರೈಲ್ವೆ ಕಾಮಗಾರಿಯೆಂದೂ ತಿಳಿಸಿದ್ದೆವು. ಭಟ್ಕಲ್ ರೇವಿನ ಮತ್ತು ಶಿವಮೊಗ್ಗಾದಿಂದ ಭಟ್ಕಲ್ ರೇವಿನವರೆಗೆ ರೈಲ್ವೆ ಲೈನನ್ನು ಹಾಕುವ ವಿಷಯವು ಕಳೆದ ವರುಷದಲ್ಲಿ ಸ್ವಲ್ಪವೂ ಮುಂದುವರಿಯಲಿಲ್ಲ; ಹಣವಿಲ್ಲದುದರ ದೆಸೆಯಿಂದ, ಪ್ರಕೃತದಲ್ಲಿ ಈ ಏರ್ಪಾಡುಗಳನ್ನು ಸರ್ಕಾರದವರು ಕೈಗೊಳ್ಳುವ ಸ್ಥಿತಿಯಲ್ಲಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ.

ಪಶ್ಚಿಮತೀರದವರೆಗೆ ನೇರವಾದ ಮತ್ತು ಸುಗಮವಾದ ಮಾರ್ಗವಿಲ್ಲದಿರುವುದರ ದೆಸೆಯಿಂದ ಸಂಸ್ಥಾನಕ್ಕೆ ವಿಶೇಷ ಅನಾನುಕೂಲವುಂಟಾಗಿದೆ. ಆದಕಾರಣ, ಇಂಥಾ ಮಾರ್ಗವೊಂದನ್ನು ಕಲ್ಪಿಸುವುದು ಅತವಶ್ಯವಾಗಿದೆ. ವರುಷವೆಲ್ಲಾ ಅವಿಚ್ಛಿನ್ನವಾಗಿ ಕೆಲಸ ನಡೆಯುವ ರೇವಿಗೆ ಅತಿ ಸಮೀಪವಾದ ಮತ್ತು ನೇರವಾದ ಮಾರ್ಗವನ್ನು ಕಲ್ಪಿಸಿಕೊಂಡಲ್ಲಿ, ಸಂಸ್ಥಾನದ ವಾಣಿಜ್ಯ ಮತ್ತು ಕೈಗಾರಿಕೆಯ ಅಭಿವೃದ್ಧಿಗೆ ವಿಶೇಷವಾಗಿ ಸೌಲಭ್ಯವುಂಟಾಗುತ್ತದೆ. ಇದೂ ಅಲ್ಲದೆ, ಶಿವಮೊಗ್ಗೆಯಿಂದ ಭಟ್ಕಲ್ಲಿಗೆ ರೈಲ್ವೆ ಮಾರ್ಗವನ್ನೇರ್ಪಡಿಸಿ ಭಟ್ಕಲ್ ರೇವೆಯನ್ನು ಅನುಕೂಲಪಡಿಸಿಕೊಂಡಲ್ಲಿ, ಇದುವರೆಗೂ ರೂಢಿಸಲ್ಪಡದ ಸ್ವಾಭಾವಿಕವಾದ ಸಾಂಪತ್ತಿಕ ಸಾಧನಗಳು ಯಥೇಷ್ಟವಾಗಿರುವ ಮತ್ತು ಈಗ ಅಧೀಕಸ್ಥಿತಿಯು ತುಂಬಾ ಅತೃಪ್ತಿಕರವಾಗಿರುವ ಮಲೆನಾಡು ಪ್ರಾಂತ್ಯಗಳಲ್ಲಿ ಎಲ್ಲಾ [illegible] ಸುಮುಖವಾದ ಸಂಪೂರ್ಣ ಸೌಲಭ್ಯವುಂಟಾಗಿ ಅಭಿವೃದ್ಧಿಗೆ ಮಾರ್ಗವಾಗುತ್ತದೆ.

ರಾಜಕವಿಭೂಷಣಾಂಕಿತ |
ರಾಜದ್ವಿರುದಪ್ರಶಸ್ತಿಯೊಡನವನೀಶಂ ||
ಭ್ರಾಜನ್ಮಣಿಹಾರಾಂಬರ |
ರಾಜಿಯನೀಚಿಕ್ಕಲಿಂಗರಾಜಂಗಿತ್ತಂ ||೩||
ಬುಧಗೇಯನಿಪಸನ್ಮಾನವ |
ನೊದವಿಸಿದೀತನಪರೋಪಕೃತಿಪುಣ್ಯಮೆತಾಂ ||
ಪದುಳದಿಮೂರ್ತಿಯನಾಂತು |
ತೊದವಿದಬಿರುದುಮಿವಿವಂಗೆಯೋಗ್ಯಂಜಗದೊಳ್ ||೪||
ಪಾಲಿರುವಾಗಳೆಹಬ್ಬಂ |
ಮೇಲೆನಿಪಂತೊಗೆದಪದವಿಸಿರಿಸುಖವಿರ್ಪ ||
ಕಾಲದೊಳಿಸೈಭುವದೆವುದ |
ನಾಲೋಚಿಸಿವಾಳ್ದನೀತನಿಂತುಪಕೃತಿಯಂ ||೫||
ನೃಪಗೃಹಧರ್ಮವಿಚಾರಾ |
ಧಿಪನಾಗಿಸಮಸ್ತಸುಕವಿವಿಬುಧಾವಳಿಗಂ ||
ವಿಪುಲಸುರಪೂಜನಾದಿಗ |
ಮುಪಹತಿತಾನಿಲ್ಲದಂತೆರಂಜನೆಗೈವಂ ||೬||
ಶ್ರೀಯಂಚಿಕಲಿಂಗರಸಂ |
ಗಾಯುಶ್ಶ್ರೀಯೋಭಿವೃದ್ಧಿಸಿದ್ಧಿಯನಿತತಂ ||
ಈಯುತಪೊರೆಗೆಕ್ಕಪಾರಪ |
ತೋಯಧಿನಿರುಪಾಧಿರೂಪಗೋವೆಯಲಿಂಗಂ ||೭||
ಜಯಮಕ್ಕೆಕೃಷ್ಣಭೂಪಂ |
ಗಯಮಕ್ಕೆಚಿರಾಯುಮಕ್ಕೆಭೂವಲಯಕ್ಕಿ ||
ಶಯಮೆನೆಮಳೆಬೆಳೆಯಕ್ಕೆವಿ |
ನಯಭಕ್ತಿಗಳಾಳ್ದಬಾಳ್ಗೆಲೋಕವಿದೆಲ್ಲಂ ||೮||

ಪಂಡಿತ ಟಿ. ಎಂ. ಚಂದ್ರಶೇಖರಶಾಸ್ತ್ರಿ.
ತೆಲಗಿಮಠ, ದಾವಣಗೆರೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ತಿರಸ್ಕೃತಲೇಖಗಳು.

ಮ|| ಗಳಾದ ಜಿ. ಕೆ. ರುದ್ರಾರ್ಯ, ಯಂ. ಸ. ಶಾಂತಪ್ಪಶೆಟ್ಟಿ ಮತ್ತು ಹಲ್ಲೂರು ಸಾಹುಕಾರ್ ನುರುಳಸಿದ್ಧಪ್ಪಶೆಟ್ಟಿ ಇವರುಗಳು— ಶ್ರೀಬಾಳೆಹೊನ್ನೂರು ಪೀಠಾಧಿಕಾರಿಗಳ ಚುನಾವಣೆಯ ವಿಚಾರವಾಗಿ ರಾಜಧಾನಿಯಲ್ಲಿ ವೀರಶೈವದೊಡ್ಡಮನುಷ್ಯರುಗಳಿಂದ ನಡಿಸಲ್ಪಟ್ಟ ಎರಡು ಸಭೆಗಳ ನಡೆವಳಿಕೆಗಳು, ಸಭಾಧ್ಯಕ್ಷರುಗಳಿಂದ ನಮ್ಮಲ್ಲಿಗೆ ಕಳುಹಲ್ಪಟ್ಟ ಪ್ರಕಾರ ಯಥಾವತ್ತಾಗಿ ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದರಿಂದ, ಅವುಗಳಲ್ಲಿರಬಹುದಾದ ನ್ಯೂನತೆಗಳನ್ನು ಆ ಅಧ್ಯಕ್ಷರುಗಳಿಗೆ ನೀವುಗಳೇ ಬರೆದು ಅವರುಗಳಿಂದ ಸರಿಪಡಿಸಿಕೊಳ್ಳಬಹುದಾಗಿದೆ.—ಸಂ.

ಹೊಸಪೇಟೆ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್.

ಈ ಗ್ರಾಮವು ತಾಲ್ಲೂಕಿನ ಮುಖ್ಯಸ್ಥಳವಿದ್ದು ಇಲ್ಲಿ ಹಾಗೂ ಈ ತಾಲ್ಲೂಕಿನಲ್ಲಿ ವೀರಶೈವ ಜಾನಾಂಗದವರ ವಸತಿಯಾದರೂ ವಿಶೇಷ ಇರುತ್ತದೆ. ಹೀಗಿದ್ದು ನಮ್ಮ ವೀರಶೈವಜನಾಂಗದವರಪೈಕಿ ಈವರೆಗೂ ರಾಜಕೀಯ ವಿದ್ಯೆಯಲ್ಲಿ ಒಬ್ಬರಾದರೂ ಉತ್ತೀರ್ಣರಾಗಿದ್ದಿಲ್ಲ. ಈ ವರುಷ ನಮ್ಮ ಸುದೈವದಿಂದ ಹೊಸಪೇಟೆ ನಿವಾಸಿಗಳಾದ ಸಾಲ್ದೂರು ಶ್ರೀ|| ಶಿ. ಉದ್ದಾನಯ್ಯನವರೆಂಬುವವರು ಬಿ.ಎ., ಬಿ.ಎಲ್. ಪರೀಕ್ಷೆಯಲ್ಲಿ ಪಾಸಾಗಿಬಂದು ಸದ್ಯಃ ವಕೀಲಿ ಕೆಲಸವನ್ನು ಪ್ರಾರಂಭಮಾಡಿರುತ್ತಾರೆ. ಹೋದ ತಿಂಗಳು 21ನೇ ತಾರೀಖಿನ ದಿವಸ ಹೊಸಪೇಟೆಯ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್ (ಚುನಾವಣೆ) ಇದ್ದು ಚಿತ್ತವಾಡಿಗಿಯ ವಾರ್ಡಿಗೆ ಸದರಿ ಉದ್ದಾನಯ್ಯನವರು ಉಮೇದ್ವಾರರಾಗಿ ನಿಂತಿದ್ದರು. ಈ ತರುಣರಿಗೆ ನಿಷ್ಪಕ್ಷಪಾತಿಗಳಾದ ಅನೇಕ ಸ್ವಜನ ಪರಜನರು ಸಹಿತ ಸಂತೋಷದಿಂದ ತಮ್ಮ ತಮ್ಮ ಓಟುಗಳನ್ನು ಕೊಟ್ಟು ಪ್ರೋತ್ಸಾಹಿಸಿದರು. ಅದರಲ್ಲಿ ಕೆಲವು ಜನರು ತಮ್ಮ ಅಸೂಯಾಂಧತೆಯನ್ನು ವ್ಯಕ್ತಗೊಳಿಸಿದ್ದಲ್ಲದೆ ಅನೇಕ ಕೃಷ್ಣಕಾರಸ್ಥಾನವನ್ನೆಸಗಿದರು. ಆದಾಗ್ಯೂ ದೈವಾನುಗ್ರಹದಿಂದ ಶ್ರೀ|| ಶಿ. ಉದ್ದಾನಯ್ಯನವರೇ ಉತ್ತೀರ್ಣರಾಗಿ ಬಂದರೆಂದು ತಿಳುಹಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಈ ತರುಣರು ಇಂಥ ಸಾರ್ವಜನಿಕ ಕಾರ್ಯಗಳಲ್ಲಿ ಮುತವರ್ಜಿಯಿಂದ ಕೆಲಸಮಾಡಿ ಜನರಸ್ತುತಿಗೆ ಪಾತ್ರರಾಗಿ ಇದಕ್ಕಿಂತಲೂ ಉನ್ನತವಾದ ಸ್ಥಾನವನ್ನು ಪಡೆಯತಕ್ಕ ಸಾಮರ್ಥ್ಯವನ್ನು ಜಗದೀಶನು ಅನುಗ್ರಹಿಸಲೆಂದು ಹಾರೈಸುತ್ತೇನೆ.

ಗುರುಭಕ್ತಕೇಸರಿ, ಚಿತ್ತವಾಡಿಗಿ ನಿವಾಸಿ.

ಸಾಗರ ತಾಲ್ಲೂಕು ಕೆಳದಿ.

ಈ ಕೆಳದಿಯ ಸಂಸ್ಥಾನ ಹಿರೇಮಠದಲ್ಲಿ ಪದ್ಧತಿಯಪ್ರಕಾರವಾಗಿ ವಿಜಯದಶಮಿಯ ಉತ್ಸವವು ಬಹುವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಈ ಕಾರ್ಯಕ್ಕಾಗಿ ತಳಿರುತೋರಣ ಮುಂತಾದವುಗಳಿಂದ ಅಲಂಕರಿಸಲ್ಪಟ್ಟ ಮಠವೂ, ಊರಿನಬೀದಿಗಳು ಶೋಭಿಸುತ್ತಿದ್ದುವು. ಶ್ರೀ|| ಗೋಣಿಬೀಡು ಶ್ರೀ ಸ್ವಾಮಿಗಳೇ ಮುಂತಾದ ಶಿವಯೋಗಿಗಳ ಶಿವಾರ್ಚನೆಯು ವಾದ್ಯವೈಭವದೊಡನೆ ನೆರವೇರಿಸಲ್ಪಟ್ಟಿತು. ಮಧ್ಯಾಹ್ನದ ಗಣಾರಾಧನೆಯಾದನಂತರದಲ್ಲಿ ಈ ಪ್ರಾಂತದ ಅನೇಕ ಗ್ರಾಮಗಳ ಮುಖ್ಯಮುಖ್ಯರಾದ ವೀರಶೈವ ಮಹನೀಯರುಗಳು ಮಠಕ್ಕೆ ಸೇರಿದರು. ಈ ಸಂಸ್ಥಾನ ಪಟ್ಟಾಧ್ಯಕ್ಷರವರಾದ ಶ್ರೀ|| ರೇವಣಸಿದ್ಧಸ್ವಾಮಿಗಳವರು ಸಕಲ ಭಕ್ತಸಂದಣಿಯ ಜಯಘೋಷದೊಡನೆ ಶುಭಪ್ರದವಾದ ಈ ಸಭೆಯಲ್ಲಿ ಶಿವಪುರಾಣದಲ್ಲಿನ ಶಿವಭಕ್ತಿ ಶಿವಪೂಜಾವಿಷಯಕವಾದ ಭಾಗವನ್ನು ಬಹುಸ್ವಾರಸ್ಯವಾಗಿ ಸಭಿಕರ ಮನಸ್ಸಿಗೆ ಆನಂದತೋರುವಂತೆ ವಿವರಣದೊಡನೆ ಅಪ್ಪಣೆಕೊಡಿಸಿದರು. ನಂತರ ಕನ್ಯಾಶುಲ್ಕನಿಷೇಧ, ವಿದ್ಯಾಪ್ರಸಾರ, ಐಕಮತ್ಯ, ಪ್ರಾಣಿದಯಾಪರತೆ, ಮುಂತಾದ ವಿಷಯಗಳಲ್ಲಿ ಮ|| ಕಾಗೋಡು ಶಿವಲಿಂಗಪ್ಪನವರು, ಬರದವಳ್ಳಿ ಗುರಪ್ಪಗೌಡರು ಮುಂತಾಗಿ ಅನೇಕ ಜನರು ಉಪನ್ಯಾಸ ಮಾಡಿದರು. ಮಠದ ವಿಷಯಕವಾದ ಕೆಲವು ಸಂಗತಿಗಳಮೇಲೆ ನಿರ್ಧಾರವು ಮಾಡಲ್ಪಟ್ಟಿತು. ನಂತರ ಬಿರುದಾವಳಿಗಳಸಮೇತ ಪಲ್ಲಕ್ಕಿಯಲ್ಲಿ ಸ್ವಾಮಿಗಳವರ ಮೆರವಣಿಗೆಯೊಡನೆ ಸಕಲ ಭಕ್ತವೃಂದವೂ ಬನ್ನಿಮುಡಿಯುವ ಉದ್ದೇಶವಾಗಿ ದಯಮಾಡಿಸಿ ಪುನಃ ಮಠಕ್ಕೆ ಬಂದು ಸಿದ್ಧವಾಗಿದ್ದ ಸಿಂಹಾಸನದಲ್ಲಿ ಪಟ್ಟಾಧ್ಯಕ್ಷರವರು ಮುಹೂರ್ತಮಾಡಿಸಿದನಂತರ ಸಕಲ ಭಕ್ತರೂ ಸಾಷ್ಟಾಂಗಪ್ರಣಾಮಗಳನ್ನು ಮಾಡಿದರು. ನಂತರ ಮತಸಂಬಂಧ ಎಂದರೆ ಗುರು, ಲಿಂಗ, ಜಂಗಮ, ವಿಷಯಕವಾದ ಉಪನ್ಯಾಸಗಳು ಮುಂತಾದವು ನಡೆದು ಜಯಮಂಗಳಪದಗಳೊಡನೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಓರ್ವ ಪ್ರೇಕ್ಷಕ.

ನಿಷೇಧಪ್ರದರ್ಶನ ಜಾಹೀರಸಭೆಯು.

ಕಲಬುರ್ಗೆಯಲ್ಲಿಯ ಮುಸಲ್ಮಾನರು ಶ್ರಾವಣ ತಿಂಗಳಲ್ಲಿ ಮಾಡಿದ ಅತ್ಯಾಚಾರವನ್ನು ನಿಷೇಧಿಸುವದಕ್ಕಾಗಿ ತಾರೀಖು 29-9-1924 ಇಸ್ವಿಯ ಸಂಜೆಯ 5 ಘಂಟೆಗೆ ಶ್ರೀಮದ್ವೃಷಲಿಂಗಚರಚಕ್ರವರ್ತಿಗಳಾದ ಕೊಣ್ಣೂರ ಮಹಾಸ್ವಾಮಿಗಳವರ ಅಪ್ಪಣೆಯಮೇರೆಗೆ ಪ್ರಣವಸ್ವರೂಪಿಗಳೂ, ಧರ್ಮಾಭಿಮಾನಿಗಳೂ ಆದ ಶ್ರೀಸಂಪಗಾಂವ ಚರಮೂರ್ತಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಯು ಶ್ರೀಕ್ಷೇತ್ರ ಮರ್ಡೀಮಠದಲ್ಲಿ ನೆರವೇರಿತು. ಸಭೆಗೆ ಕೊಣ್ಣೂರ, ಗಿರಣೆ, ಸಾವಳಗಿಯಿಂದ ಜನರು ಬಂದಿದ್ದರು. ಮಿ|| ಮಲ್ಲಿನಾಥಶಾಸ್ತ್ರಿಗಳವರು, ಮಿ|| ಧೂಪದಾಳರವರು, ಮಿ|| ಗದ್ದಿದ ಇಂಗ್ಲೀಷಶಾಲಾ ಮಾಸ್ತರರು, ಮಿ|| ಶಿದ್ಧನಾಳಮಾಸ್ತರರು ಕಲಬುರ್ಗೆಯ ಅತ್ಯಾಚಾರದ ವಿವೇಚನ, ಧರ್ಮಪರಿಪಾಲನೆ, ಧರ್ಮಗುರುಗಳ ಕರ್ತವ್ಯ, ಕಲಬುರ್ಗೆಯ ವಿಚಾರಣಾ ಕಮೀಟಿಯ ಪರಿಸ್ಥಿತಿ ಮೊದಲಾದವುಗಳ ವಿಷಯವಾಗಿ ಸುಲಲಿತವಾಗಿ ಹೇಳಿದರು. ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

1. ಹಿಂದೂಗಳ ಪೂಜ್ಯ ದೇವಾಲಯಗಳನ್ನು ಕುರಿತು ಕಲಬುರ್ಗೆಯಲ್ಲಿ ದುರಭಿಮಾನಿಗಳಾದ ಮುಸಲ್ಮಾನರು ಮಾಡಿದ ಅತ್ಯಾಚ್ಯಾರವನ್ನು ಈ ಸಭೆಯು ತೀವ್ರನಿಷೇಧಿಸುವುದು. 2. ಈಗಿದ್ದ ಕಮಿಟಿಯಿಂದ ಹಿಂದೂಗಳಿಗೆ ಯೋಗ್ಯನ್ಯಾಯವು ದೊರೆಯುವ ಸಂಭವವಿಲ್ಲ, ಅದ್ದರಿಂದ ನೈಜಾಮ ಸಾಹೇಬ ಬಹಾದ್ದೂರರವರು ಹಿಂದೂಗಳಿಗೆ ನ್ಯಾಯದೊರೆಯುವಂತೆ ಕಮೀಟಿಯ ವ್ಯವಸ್ಥೆ ಮಾಡಬೇಕೆಂದು ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. 3. ಕಲಬುರ್ಗೆಯಂಥ ಧಾರ್ಮಿಕ ಅತ್ಯಾಚ್ಯಾರದ ಕೃತ್ಯಗಳಲ್ಲಿಯೂ, ಧರ್ಮಗುರುಗಳು ಧರಿಸಿದ ಮೌನವ್ರತವನ್ನು ಕಂಡು ಸಭೆಗೆ ವಿಷಾದವೆನಿಸುವದು. ಅವರುಗಳು ಇನ್ನಾದರೂ ಜಾಗ್ರತರಾಗಬೇಕೆಂದು ವಿನಂತಿಯು. ಮೊದಲಿನ 2 ಠರಾವುಗಳನ್ನು ನಾಮದಾರ ಗವ್ಹರ್ನರ್ ಜನರಲ್ ಇನ್ ಕೌನ್ಸಿಲ್‌ರವರಿಗೆ ಮತ್ತು ನಿಜ್ಯಾಮ ಸಾಹೇಬರವರಿಗೆ ತಂತಿಯಿಂದ ತಿಳಿಸುವದರಲ್ಲಿ ಬಂತು. ಮಿ|| ಗದ್ದಿದ ಮಾಸ್ತರರು ಅಧ್ಯಕ್ಷರ ಅಭಾರಮನ್ನಣೆಯನ್ನು ಮಾಡಿದ ಮೇಲೆ ಜಯಜಯಕಾರದೊಡನೆ ಸಭಾಕಾರ್ಯವು ಸಮಾಪ್ತಿಯಾಯಿತು.

ಓರ್ವಪ್ರೇಕ್ಷಕ.

ಮಳವಳ್ಳಿಟವರ್ ವಿದ್ಯಮಾನ.

ಈಗ್ಗೆ 8-10 ದಿನಗಳಿಂದ ಕೊಂಚ ಮಳೆ ಆಗಿದೆ. ಇನ್ನೂ 1-2 ಹದ ಮಳೆಬಿದ್ದಲ್ಲಿ ಪೈರುಗಳಿಗೆ ಅನುಕೂಲವಾಗುತ್ತೆ. ಈ ಮಾಹೆ 14 ನೇ ತಾರೀಕಿನ ಸಂಪದಭ್ಯುದಯ ಪತ್ರಿಕೆಯಲಿ ಇಲ್ಲಿನ ಮುನ್ಸಿಪಲ್ ವೈಸ್‌ಪ್ರಸಿಡೆಂಟರ ಚುನಾವಣೆ ವಿಷಯದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ವ್ಯಾಜ್ಯವು, ಹಿಂದೆ ಇಲ್ಲಿ ಅಮಲ್ದಾರರಾಗಿದ್ದು ನಿಷ್ಪಕ್ಷಪಾತಿಗಳೂ ಜನಾನುರಾಗಿಗಳೂ ಎಂದು ಪ್ರಸಿದ್ಧಿಯನ್ನು ಪಡೆದಿದ್ದ ಮ|| ಶಿದ್ಧರಾಮಪ್ಪನವರ ಕಾಲದಲ್ಲಿ ಉದ್ಭವವಾಯಿತು ಎಂದು ಬರೆದಿರುವದನ್ನು ನೋಡಲು ಬಹಳ ವಿಷಾದವಾಗುತ್ತದೆ. ಒಂದು ವೇಳೆ ಮ|| ಶಿದ್ಧರಾಮಪ್ಪನವರ ಕಾರ್ಯದಕ್ಷತೆ ಜನಾನುರಾಗ ನಿಷ್ಪಕ್ಷಪಾತ ಇವುಗಳ ವಿಚಾರದಲ್ಲಿ ಅನುಮಾನಪಟ್ಟವರು ಈ ಕೆಳಗೆ ಕಂಡ ವಿಷಯಗಳನ್ನು ಗಮನಿಸಬೇಕು. ಮ|| ಶಿದ್ಧರಾಮಪ್ಪನವರು ಮಳವಳ್ಳಿಗೆ ಅಮಲ್ದಾರರಾಗಿ ಬಂದಾಗ ಅಕ್ರ್ಯಾಯಿ ಉತ್ಪತ್ತಿ ತಿಂಗಳೊಂದಕ್ಕೆ 120-150 ರೂಪಾಯಿಗಳು ಇದ್ದದ್ದು ಇವರು ಟ್ರಾನ್ಸ್‌ಫರ್ ಆಗಿ ಹೋಗುವವರಿಗೆ ಪ್ರತಿತಿಂಗಳಿನಲ್ಲೂ 500 ರೂಪಾಯಿನಿಂದ 600 ರೂಪಾಯಿವರಿವಿಗೆ ಏರಿತ್ತು. ಈಗಿರತಕ್ಕ ಅಮಲ್ದಾರ್ ಮ|| ವೈ. ಶ್ರೀಕಂಠಯ್ಯನವರು ನಮ್ಮ ಟವನ್ನಿಗೆ ಕಾಲು ಊರಿದ ದಿನದ ಲಾಗಾಯಿತು ಡಿಟೊ ಉತ್ಪತ್ತಿ ತಿಂಗಳಿಗೆ 150-200 ರೂಪಾಯಿಗಿಳಿಯಿತು ಮತ್ತು ಮೊಹತರ್ಫಾ ವಸೂಲಿವಿಚಾರ ಹಿಂದೆ ಇದ್ದದ್ದಕ್ಕೆ ಹಾಲಿ ಈಗ ಇರತಕ್ಕದ್ದನ್ನು ಹೋಲಿಸಿ ನೋಡಿದರೆ ವ್ಯಕ್ತವಾಗುತ್ತೆ. ಮ|| ಶಿದ್ಧರಾಮಪ್ಪನವರ ನಿಷ್ಪಕ್ಷಪಾತದ ವಿಚಾರ ಅಮಲ್ದಾರರಿಂದ ಮೈಸೂರು ಡಿಸ್ಟ್ರಿಕ್ಟು ಪೊಲೀಸ್ ಸೂಪರಿಂಟೆಂಡೆಂಟರಾಗಿ ಬಡ್ತಿಹೊಂದಿ ಹೋಗಿರುವದು ಮತ್ತೊಂದು ನಿದರ್ಶನವಾಗಿರುತ್ತೆ. ಮೊದಲು ವೈಸ್‌ಪ್ರಸಿಡೆಂಟ್ ಚುನಾವಣೆ ಆದಾಗ ಅಫಿಸಿಯಲ್ಸು ಓಟ್ಸು ಕೊಡಕೂಡದು ಎಂದು ರೂಲ್ಸ್‌ನಲ್ಲಿ ವಿಶದವಾಗಿದ್ದರೂ, ತಮ್ಮ ಸ್ವಜಾತೀಯರಾದ ತಿಮ್ಮಣ್ಣಯ್ಯನವರೇ ಉತ್ತೀರ್ಣರಾಗಬೇಕೆಂಬ ದುರಾಸೆಯು ಮತ್ತು ಬ್ರಾಹ್ಮಣ ಬ್ರಾಹ್ಮಣೇತರರೆಂಬ ಬಿನ್ನಭಾವನೆಯು, ಅಮಲ್ದಾರರಲ್ಲಿ ತುಂಬಿ ತುಳುಕುತ್ತಿದ್ದದ್ದರಿಂದ, ಬ್ರಾಹ್ಮಣೇತರ ಇಬ್ಬರು ಮುನ್ಸಿಪಲ್ ಮೆಂಬರುಗಳು ರೂಲ್ಸಿಗೆ ವಿರೋಧವಾಗಿ ಅಫಿಸಿಯಲ್ಸು ಓಟುಕೊಡಕೂಡದೆಂದು ನಿರೋಧಿಸಿದಾಗ್ಯೂ, ತಿಮ್ಮಣ್ಣಯ್ಯನವರಿಗೇನೆ ಓಟುಕೊಟ್ಟಿದ್ದಾರಲ್ಲವೇ? ರೂಲ್ಸಿನಲ್ಲಿ ವಿಶದವಾಗಿ ಇದ್ದರೂ ಅಮಲ್ದಾರರು ವಿರೋಧವಾಗಿ ಓಟು ಮಾಡಿರುವದು ನೋಡಿದರೆ ಅವರು ತಮ್ಮ ಜವಾಬ್ದಾರಿ ಅರಿತಿಲ್ಲವೊ? ಅಥವಾ ಜಾತಿದ್ವೇಷದಿಂದ ಓಟುಮಾಡಿದರೊ? ಇದನ್ನು ವಾಚಕರೇ ಯೋಚಿಸಬೇಕು. ಇಂತಾ ಅನಾನುಭವಿಗಳಾದವರನ್ನು ಜವಾಬ್ದಾರಿ ಆಫೀಸುಗಳಿಂದ ಸರ್ಕಾರದವರು ಜಾಗ್ರತೆಯಾಗಿ ವಜಾಮಾಡದೆ ಇದ್ದರೆ ಪ್ರಜಾಸಮುದಾಯಕ್ಕೆ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗುವದರಲ್ಲಿ ಸಂದೇಹವಿಲ್ಲ.

ನಿಷ್ಪಕ್ಷಪಾತಿ.

ವೀರಶೈವಮಹಾಸಭೆಯು.

ಯಾರ ಆಶೀರ್ವಾದದಿಂದ ಇಡೀ ವೀರಶೈವಸಮಾಜಕ್ಕೆ ವೀರಶೈವಮಹಾಸಭೆಯು ಕಲ್ಪತರುವಾಗಿ ಜನಿಸಿತೋ ಅಂಥಾ ಸಾಕ್ಷಾತ್ ನಿರಂಜನಮೂರ್ತಿಗಳಾದ ಶ್ರೀ ಹಾನಗಲ್ ಕುಮಾರಮಹಾಸ್ವಾಮಿಗಳ ವಿರಕ್ತವರ್ಗವನ್ನು ಹಳಿಯಲು ಬಿರೂರಿನಲ್ಲಿ ನೆರದಿದ್ದ ಮಹಾಸಭೆಯಲ್ಲಿ ಪ್ರಯತ್ನಿಸಲ್ಪಟ್ಟುದರಮೇಲೆ ಆ ತಪೋನಿಷ್ಠರ ಶಾಪವಿಶೇಷದಿಂದ ಕಲ್ಪತರುವು ಬೂರಗದಮರವಾಗಿ ಬೀರೂರಿನಲ್ಲಿ ಬೇರುಬಿಟ್ಟುಕೊಂಡು ನಿಂತಿತು. ಇದರ ಬೇರನ್ನು ಬಿಡಿಸಿ ಮುಂದಕ್ಕೆ ಸಾಗಿಸಿಕೊಂಡು ಬರಬೇಕೆಂದು ಮೈಸೂರಿನವರೂ, ಹಾಂಸಭಾವಿಯವರೂ ಬಹಳ ಸಾಹಸಮಾಡಿದಾಗ್ಯೂ, ಸಾಧ್ಯವಾಗದೆ ಹೋದುದನ್ನು ನಮ್ಮ ವೀರಶೈವಸಮಾಜಕ್ಕೆ ತಿಲಕಪ್ರಾಯರಾಗಿರುವ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ಬಹಳವಾಗಿ ಚಿಂತಿಸಿ ಅದನ್ನು ಬೀರೂರಿನಿಂದ ಹೇಗಾದರೂ ಬೇರುಬಿಡಿಸಿ ಮುಂದಕ್ಕೆ ಸಾಗಿಸಿ ಪೂರ್ವಸ್ಥಿತಿಗೆ ತರಬೇಕೆಂದು ಸಂಕಲ್ಪಮಾಡಿ ಈ 1924 ನೇ ಡಿಸೆಂಬರ್ ತಿಂಗಳ ಕಡೆಯಲ್ಲಿ ಮಹಾಸಭೆಯನ್ನು ಕೂಡಿಸಬೇಕೆಂದು ನಿರ್ಧರಿಸಿ ಅದಕ್ಕಾಗಿ ತಕ್ಕ ಪ್ರಯತ್ನ ನಡಿಸಿರುವರೆಂದೂ, ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತಮಂಡಳವನ್ನು ಏರ್ಪಡಿಸಿರುವರೆಂದೂ ಸಮಸ್ತ ವೀರಶೈವರೂ ಈ ಸ್ಟಾರ್ ಪತ್ರಿಕೆಯದ್ವಾರ ತಿಳಿದು ಸಂತೋಷಪಟ್ಟು ದಿ|| ಬ|| ಶೆಟ್ಟರನ್ನು ವಂದಿಸುತ್ತಿರುವರು. ಈಮಧ್ಯೆ ವೀರಶೈವಮಹಾಸಭೆಯನ್ನು ಕೂಡಿಸಬೇಕೆಂಬ ಕಾಲದಲ್ಲೇ ಬೆಳಗಾವಿನಲ್ಲಿ ಕೂಡುವ ರಾಷ್ಟ್ರೀಯ ಸಭೆಗೆ ಅನೇಕ ವೀರಶೈವರು ಹೋಗುವ ಸಂಭವವಿರುವದರಿಂದ, ಆ ಕಾಲದಲ್ಲಿ ಬಿಟ್ಟು ಬೇರೆಕಾಲ ಅಂದರೆ ಮುಂದಿನ ಬೇಸಿಗೆಯ ರಜಾಕಾಲದಲ್ಲಿ ವೀರಶೈವಮಹಾಸಭೆಯನ್ನು ಕೂಡಿಸುವದು ಒಳ್ಳೆಯದು, ಹಾಗಲ್ಲದೆ ಈಗಲೇ ಮಾಡುವದಾದರೆ ಸಭೆಕೂಡಿಸಿದೆವೆಂದೆಂತಾಗುವದಲ್ಲದೆ ಪ್ರಯೋಜನವಾಗುವದಿಲ್ಲ ವಗೈರೆಯಾಗಿ ಧಾರವಾಡದ ವಿಜಯ ಮೊದಲಾದ ಕೆಲವು ಉತ್ತರದೇಶದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ವೀರಶೈವಸಮಾಜದಲ್ಲಿ ಅನೈಕಮತ್ಯವೂ, ದ್ವೇಷಾಸೂಯೆಗಳೂ ಹುಟ್ಟಿ ವಿಶೇಷ ಅನರ್ಥವಾಗುತ್ತಿರುವ ಈ ಸಮಯದಲ್ಲಿ ಮಹಾಸಭೆಯನೆಪದಿಂದ ನಾನಾ ದೇಶದ ವೀರಶೈವಪ್ರಮುಖರು ಅತಿ ಜಾಗ್ರತೆಯಾಗಿ ಒಂದುಕಡೆ ಸೇರಿ ಸಮಾಜಬಾಂಧವರು ಪರಸ್ಪರದ್ವೇಷಾಸೂಯೆಗಳನ್ನು ಬಿಟ್ಟು ಐಕಮತ್ಯದಿಂದ ನಡೆದುಕೊಳ್ಳುವ ಉಪಾಯವನ್ನು ಕಂಡುಹಿಡಿಯಲು ಸಾಧಕವಾಗುವಂತೆ ಬೆಂಗಳೂರಿನ ವೀರಶೈವಬಂಧುಗಳು ಮಹಾಸಭೆಯನ್ನು ತಮ್ಮಲ್ಲಿ ಕೂಡಿಸಲು ಏರ್ಪಡಿಸಿ ಸಮಾಜಕ್ಕೆ ವಿಶೇಷ ಉಪಕಾರವನ್ನುಮಾಡಿರುತ್ತಾರೆ. ಈ ಸಮಯದಲ್ಲಿ ಪ್ರತಿಯೊಬ್ಬವೀರಶೈವನೂ ತನ್ನ ಸಮಾಜಾಭಿವೃದ್ಧಿಯಮೇಲೆ ಪೂರ್ಣಅಭಿಮಾನವಿಟ್ಟು ಯಾವ ಕೆಲಸವಿದ್ದಾಗ್ಯೂ ಬಿಟ್ಟು ಸಭಾಕಾಲಕ್ಕೆ ಬೆಂಗಳೂರಿಗೆ ಬಂದು ಯಥಾಶಕ್ತಿ ಸೇವೆಮಾಡತಕ್ಕದ್ದು ಮುಖ್ಯ ಧರ್ಮವಾಗಿದೆ. ಮನುಷ್ಯನು ತನ್ನ ಮತ್ತು ತನ್ನ ಸಮಾಜದ ಕಲ್ಯಾಣವನ್ನು ಮೊದಲುಮಾಡಿ ಅನಂತರ ಅನ್ಯರ ಕಲ್ಯಾಣಮಾಡಲು ಎತ್ನಿಸುವದು ಅವನ ಧರ್ಮವಾಗಿದೆ. ಶಾಸ್ತ್ರವಚನವಾದರೂ ಆ ಪ್ರಕಾರವಾಗಿಯೇ ಇರುತ್ತದೆ. ಹೀಗಿದ್ದರೂ ತನ್ನ ಸಮಾಜಸೇವೆಯನ್ನು ಅಲಕ್ಷಿಸಿ ಬೇರೆ ಕಾರ್ಯದಲ್ಲುದ್ಯುಕ್ತನಾಗುವುದರಿಂದ, ಮನೆದೇವರನ್ನು ಉಪವಾಸವಿರಿಸಿ ಮಾರಮ್ಮನಿಗೆ ತಂಬಿಟ್ಟಿನ ಆರತಿಯನ್ನು ಮಾಡಿದಂತಾಗುತ್ತದಲ್ಲವೆ? ಈ ಮಹಾಸಭೆಯನ್ನು ಮೈಸೂರಿನವರು ಮಾಡಬೇಕೆಂದಾಗ ಹಾಂಸಭಾವಿಯವರು ಅಡ್ಡಬಂದದ್ದರಿಂದ ಮೊದಲನೆಯ ವಿಘ್ನವಾಯಿತು; ಹಾಂಸಭಾವಿಯವರು ಎತ್ನಿಸಿದಾಗ ರೋಗೋಪದ್ರವ ನೆಪವುಂಟಾಗಿ ಎರಡನೆ ವಿಘ್ನವುಂಟಾಯಿತು. ಈಗ ಬೆಂಗಳೂರಿನವರು ಪ್ರಯತ್ನಿಸಿರುವಾಗ್ಗೆ ರಾಷ್ಟ್ರೀಯಮಹಾಸಭೆಯ ಅಡಚಣೆಯನ್ನೊಡ್ಡುವದರಿಂದ ಮೂರನೆಯ ವಿಘ್ನವಾಗುವುದು ಅಂದರೆ ಮಹಾಸಭೆಯು ನೆರೆಯಲು ನಿರಂತರ ವಿಘ್ನವಾಗುವದೆಂದು ಹೇಳಬೇಕಾದ್ದಿಲ್ಲ. ಸಮಾಜವು ಕಳೆದುಕೊಂಡಿರುವ ಕಣ್ಣನ್ನು ಮರಳಿ ಬರಮಾಡಿಕೊಳ್ಳುವ ಈ ಸುಸಮಯವನ್ನು ಹೋಗಲಾಡಿಸಿ ಇಡೀಸಮಾಜವೇ ಪೇಚಾಡುವಂತೆ ನಮ್ಮ ಉತ್ತರದೇಶದ ವೀರಶೈಬಂಧುಗಳು ಮಾಡುವದು ಜಾಣತನವಲ್ಲ. ಅದ್ದರಿಂದ ಅವರುಗಳು, ಅನೈಕಮತ್ಯದಿಂದಲೂ ಅಂತಃಕಲಹದಿಂದಲೂ ಅಧೋಗತಿಗಿಳಿಯುತ್ತಿರುವ ತಮ್ಮ ಸಮಾಜಸುಧಾರಣೆಯ ವಿಚಾರದಲ್ಲಿ ಗಮನವಿಟ್ಟು, ಪ್ರತಿವರ್ಷದಲ್ಲೂ ಯಾವದಾದರೂ ಒಂದು ಕಡೆಯಲ್ಲಿ ನಿರ್ವಿಘ್ನವಾಗಿನಡಿಯುತ್ತಿರುವ ರಾಷ್ಟ್ರೀಯಸಭೆಯ ಸೇವೆಯನ್ನು ಮಾಡಲು ಅವಕಾಶವಿರುವದರಿಂದ ಈವೇಳೆ ಅಸ್ತಿತ್ವಕ್ಕೆ ಬರಲಿಕ್ಕಿರುವ ವೀರಶೈವ ಮಹಾಸಭೆಯು ಬೆಂಗಳೂರಿನ ವೀರಶೈವಬಂಧುಗಳು ನಿರ್ಧರಿಸಿರುವಂತೆ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಿರ್ವಿಘ್ನವಾಗಿ ನಡೆಯುವಂತೆಮಾಡಿ ಆ ಕೀರ್ತಿಯನ್ನು ತಮ್ಮ ಪಾಲಿಗೆ ತಂದುಕೊಳ್ಳುವವರಾಗಲೆಂದು ಕೋರುತ್ತೇನೆ. ಹಾಗಲ್ಲದೆ ಸಭೆಯು ನಡೆಯದಂತೆ ಮುಷ್ಕರಮಾಡುವದಾದಲ್ಲಿ ಕೈಗೆಬಂದ ತುತ್ತು ಬಾಯಿಗೆಬರದಂತಾಗಿ ಇಡೀಸಮಾಜವೇ ಪೇಚಾಡುವಂತಾಗುವುದರಲ್ಲಿ ಖಂಡಿತವಾಗಿಯೂ ಸಂಶಯವಿಲ್ಲ.

ಮಹಾಸಭಾಭಿಮಾನಿ.

ಕ್ರೈಸ್ತರ ಶುದ್ಧೀಕರಣ.

ಕಳೆದ 15 ನೇ ತಾ|| ಬುಧವಾರ ನಂಜನಗೂಡು ತಾಲ್ಲೂಕು ಕಿರಗುಂದದ ಗ್ರಾಮದಲ್ಲಿ ಕ್ರೈಸ್ತರ ಶುದ್ಧೀಕರಣದ ಒಂದು ನವೀನಕಾರ್ಯವು ನಡೆಯಿತು. ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಿಕೊಳ್ಳಲ್ಪಟ್ಟಿದ್ದ ಮನೆಯನೆಂಬಾತನನ್ನು ಸಂಸಾರಸಮೇತ ಆತನ ಮನಃಪೂರ್ವಕವಾಗಿಯೂ ಸುತ್ತುಮುತ್ತಲಿನ ಸುಮಾರು 15-20 ಗ್ರಾಮದ ಮುಖಂಡರುಗಳ ಅನುಮತಿಯಿಂದಲೂ ಪುನಃ ಹಿಂದೂಮತಕ್ಕೆ ಸೇರಿಸಿಕೊಳ್ಳಲಾಯಿತು.

ಇದೇ ತಿಂಗಳು 1 ನೇ ತಾ|| ನಮ್ಮ ಗ್ರಾಮರಕ್ಷಣಾಸಭೆಗೆ ಮೇಲ್ಕಂಡ ಮನೆಯನು ಅರ್ಜಿಯನ್ನು ಬರೆದು ಅದರಲ್ಲಿ ತಾನು ಕ್ರೈಸ್ತಪಾದ್ರಿಗಳಿಂದ ಹಣವನ್ನು ಕೊಡುತ್ತೇವೆಂಬ ಭರವಸೆಯಿಂದಲೂ, ಅವನಿಗೆ ಸಂಘದಲ್ಲಿ ಉತ್ತಮತರದ ಗೌರವವು ದೊರೆಯುವಂತೆ ಮಾಡುವುದಾಗಿಯೂ ಇವೇ ಮುಂತಾದ ಆಸೆಗಳಿಂದ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟನೆಂಬದಾಗಿಯೂ, ಆಶ್ರಯದಿಂದ ಇವನ ಕೋರಿಕೆಯು ಈಡೇರದೆ, ಈಗ ಅನೇಕ ವಿಧವಾದ ತೊಂದರೆಗಳಿಗೆ ಗುರಿಯಾಗಿರುವುದರಿಂದಲೂ, ತನ್ನನ್ನು ಪುನಃ ತಮ್ಮ ಜಾತಿಗೆ ಸೇರಿಸುವಂತೆ ಮಾಡಿಕೊಡಬೇಕೆಂದೂ ಪ್ರಾರ್ಥಿಸಿದನು. ಅದರಂತೆ ನಾನು ಈ ವಿಷಯವನ್ನು ಪರಿಶೀಲಿಸಿ ಅನೇಕ ಗ್ರಾಮಗಳಿಗೆಹೋಗಿ ಅಲ್ಲಿನ ಮುಖಂಡರುಗಳಕೂಡ ಮಾತನಾಡಿದ್ದರಲ್ಲಿ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟಿದ್ದ ಪಂಚಮರನ್ನು ಪುನಃ ಜಾತಿಗೆತೆಗೆದುಕೊಳ್ಳುವುದಕ್ಕೆ ಅವರೆಲ್ಲರೂ ಸಮ್ಮತಿಸಿದರು.

ಸುಮಾರು ಒಂದೂವರೆ ವರ್ಷಗಳ ಹಿಂದೆ ರೆವರೆಂಡ್ ಮಿ|| ಸಾಡೇಸಾಹೇಬರವರು ಕಿರಗುಂದದಗ್ರಾಮಕ್ಕೆ ಬಂದಿದ್ದಾಗ ಅಲ್ಲಿನ ಪ್ರಜೆಗಳಿಗೆ ಒಂದು ಉಪನ್ಯಾಸವನ್ನುಮಾಡಿ, ಅದರಲ್ಲಿ ಹಿಂದೂಮತವನ್ನು ಅನೇಕ ವಿಧವಾಗಿ ದೂಷಿಸಿ, ಕ್ರೈಸ್ತಮತವನ್ನು ಶ್ಲಾಘಿಸಿ, ನಮ್ಮ ಆಚಾರವ್ಯವಹಾರಗಳನ್ನು ಖಂಡಿಸಿ ವಿಗ್ರಹಾರಾಧನೆ, ನಾಮಧಾರಣೆ, ಶಿಖಾಧಾರಣೆ ಮುಂತಾದ ಆರ್ಯಪದ್ಧತಿಗಳನ್ನು ತಿರಸ್ಕರಿಸಿ, ಪಂಚಮರು ಕ್ರೈಸ್ತಮತಕ್ಕೆಸೇರಿದ ಮಾತ್ರದಿಂದಲೇ ಅವರಿಗೆ ಸಕಲ ಸನ್ಮಾನಗಳುಂಟಾಗಿ, ಗ್ರಾಮದ ಎಲ್ಲಾ ಬೀದಿಗಳಲ್ಲಿಯೂ ಓಡಾಡುವುದಕ್ಕೂ ಮತ್ತು ಇತರ ವಿಧವಾದ ಸಾಂಘಿಕ ಗೌರವಗಳನ್ನು ಪಡೆಯುವುದಕ್ಕೂ ಅನುಕೂಲವಾಗುವುದೆಂದು ಆಶೆತೋರಿಸಿ, ದುರ್ಬೋಧನೆಯನ್ನುಮಾಡಿದ್ದರು. ಈ ದುರ್ಬೋಧನೆಯಿಂದ ಸುಮಾರು 19 ಜನ ಅಜ್ಞರು ಮರುಳುಮಾಡಲ್ಪಟ್ಟು ಒಡನೆಯೇ ಕ್ರೈಸ್ತಮತಕ್ಕೆಸೇರಿಕೊಂಡರು. ಆ ಪೈಕಿ ಮೇಲ್ಕಂಡ ಮನೆಯನು ಮತ್ತು ಅವನ ಸಂಸಾರವೂ ಸೇರಿಸಲ್ಪಟ್ಟಿದ್ದರು. ಮನೆಯನಿಗೆ ಸುನಂದನೆಂಬ ನಾಮಧೇಯವೂ, ಇತರರುಗಳಿಗೂ ಅದೇ ವಿಧವಾದ ಬೇರೆಬೇರೆ ಹೆಸರುಗಳೂ ಕೊಡಲ್ಪಟ್ಟವು. ಅವನತಲೆ ಕ್ರಾಪ್‌ಮಾಡಲ್ಪಟ್ಟಿತು. ಪಾದ್ರಿಗಳ ಪದ್ಧತಿಪ್ರಕಾರ ಶಿಖಾಖಂಡನ, ಜ್ಞಾನಸ್ನಾನವೇ ಮುಂತಾದವುಗಳೊಡನೆ ಮನೆಯನು ಕ್ರೈಸ್ತಮತಕ್ಕೆಸೇರಿಸಲ್ಪಟ್ಟನು. ಉತ್ತರೋತ್ತರ ಸುನಂದನು ನಿರೀಕ್ಷಿಸಿಕೊಂಡಿದ್ದ ಯಾವ ಮಹತ್ಪ್ರಯೋಜನವೂ ಉಂಟಾಗದೆ ಅನೇಕ ವಿಧವಾದ ತೊಂದರೆಗಳೇ ಪ್ರಾಪ್ತವಾದುದರಿಂದ ತನ್ನ ಪೂರ್ವದಸ್ಥಿತಿಯನ್ನೇ ಅವಲಂಬಿಸಬೇಕೆಂದು ಮನಸ್ಸನ್ನುಮಾಡಿ ಮೇಲ್ಕಂಡ ಪ್ರಕಾರ ಈ ಸಭೆಗೆ ಅರ್ಜಿಯನ್ನು ಹಾಕಿದನು. ಈತನನ್ನು ಶುದ್ಧಿಮಾಡಿ ಸ್ವಜಾತಿಗೆಸೇರಿಸುವುದಕ್ಕಾಗಿ ಸುತ್ತುಮುತ್ತಲಿನ 15-20 ಗ್ರಾಮದಪ್ರಜೆಗಳಿಂದಕೂಡಿದ ಒಂದು ಸಭೆಯು ಕಿರುಗುಂದದಗ್ರಾಮದಲ್ಲಿ ಕಳೆದ 15ನೇ ತಾ|| ಬುಧವಾರದಿವಸ ಸೇರಿತ್ತು. ಆ ಕಾಲದಲ್ಲಿ ತಾಲ್ಲೂಕು ಅಮಲ್ದಾರರವರೂ, ಪೊಲೀಸ್ ಇನ್ಸ್‌ಪೆಕ್ಟರವರೂ, ತಾಲ್ಲೂಕು ಬೋರ್ಡು ವೈಸ್‌ಪ್ರಸಿಡೆಂಟರವರೂ, ಡಾಕ್ಟರವರೂ ಮತ್ತು ಮ|| ಬಿ. ಎಸ್. ನಾಗೇಶರಾಯರವರೂ ಸಹ ದಯಮಾಡಿಸಿದ್ದರು. ಮೈಸೂರಿನ ಶ್ರೀಮಾನ್ ಗೋವಿಂದಾಚಾರ್‌ಸ್ವಾಮಿಗಳವರು ನನ್ನ ಪ್ರಾರ್ಥನೆಯಂತೆ ಅಲ್ಲಿಗೆ ದಯಮಾಡಿಸಿದ್ದರು. ಅನಂತರ ಅಲ್ಲಿ ಒಂದು ಶ್ರೀರಾಮಮಂದಿರವು ಸ್ಥಾಪಿಸಲ್ಪಟ್ಟಿತು. ಹಿಂದೂಮತದ ವಿಷಯದಲ್ಲಿ ಒಂದು ಉಪನ್ಯಾಸವು ಸ್ವಾಮಿಗಳವರಿಂದಮಾಡಲ್ಪಟ್ಟಿತು. ಸುನಂದನಿಗೆ ಶಿಖಾಧಾರಣೆ, ನಾಮಧಾರಣೆಗಳು, ಮಾಡಿಸಲ್ಪಟ್ಟು ಪದ್ಧತಿಪ್ರಕಾರ ಅವನು ಸಂಸಾರಸಮೇತ ಸ್ವಮತಕ್ಕೆ ಸೇರಿಸಲ್ಪಟ್ಟನು. ಇವನ ಜಾತಿಬಂಧುಗಳು ಸಾವಿರಾರು ಜನರ ಅನುಮತಿಯಿಂದಲೂ ಈ ಕಾರ್ಯವು ತೃಪ್ತಿಕರವಾಗಿ ಪರಿಣಮಿಸಿತು. ಇದರಿಂದ ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಲ್ಪಟ್ಟಿದ್ದವರನ್ನು ಜನರ ಅನುಮತಿಯಂತೆ ಸ್ವಜಾತಿಗೆ ಸೇರಿಸಿಕೊಳ್ಳುವ ಪ್ರಯತ್ನಕ್ಕೆ ಅಸ್ತಿಭಾರವು ಹಾಕಲ್ಪಟ್ಟಿತು. ಮತಾಂತರವನ್ನು ಸೇರಿ ಹಿಂದೂಜನಾಂಗವನ್ನು ಶಿಥಿಲಮಾಡುತ್ತಿರುವ ಜನರೆಲ್ಲರೂ ಈ ಮೂಲಕ ತಮ್ಮ ತಮ್ಮ ಸ್ವಜಾತಿಗಳನ್ನು ಪುನಃ ಅವಲಂಬಿಸುವರೆಂದು ನಂಬಲ್ಪಟ್ಟಿದೆ. ಪುನಃ ಸ್ವಜಾತಿಯನ್ನು ಸೇರಬೇಕೆಂದು ಬರುವವರಿಗೆ ವಿಶೇಷವಾದ ದಂಡವನ್ನು ಹೊರಿಸದೆ ಸಮಾಜದ ಗೌರವಕ್ಕಾಗಿ ಕೇವಲ 4 ಆಣೆಯನ್ನು ತೆಗೆದುಕೊಂಡು ಅವರನ್ನು ಪುನಃ ಸೇರಿಸಿಕೊಳ್ಳಬಹುದೆಂದು ತೀರ್ಮಾನವಾಗಿದೆ. ಈ ತೀರ್ಮಾನದಂತೆ ಮೇಲ್ಕಂಡ ಮನೆಯನು 4 ಆಣೆಯನ್ನು ತಪ್ಪುಕಾಣಿಕೆಯಾಗಿ ಕೊಟ್ಟಿರುತ್ತಾನೆ.

ಮೇಲ್ಕಂಡ ಕಾರ್ಯವೆಲ್ಲವೂ ಸಾಂಗವಾಗಿ ನಡೆದಮೇಲೆ ಸುಮಾರು ಒಂದೂವರೆ ಘಂಟೆಯಕಾಲ ಮೇಘರಾಜನಿಂದ ಪುಷ್ಪವೃಷ್ಟಿಯಾಗಿ ಜನರೆಲ್ಲರಿಗೂ ಆನಂದವನ್ನುಂಟುಮಾಡಿತು.

ಎಸ್. ರಾಮಚಂದ್ರರಾವ್ (ಸೆಕ್ರಟರಿ,)
ಗ್ರಾಮರಕ್ಷಣಸಭಾ, ತಗಡೂರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ

ದಿವಾನ್ ಸಾಹೇಬರವರು ಮಾಡಿದ ಭಾಷಣದ ಮುಖ್ಯಾಂಶ.

(ದಸರಾ ಅಧಿವೇಶನ)

10ನೆಯ ಅಕ್ಟೋಬರ್ 1924

(ಕಳೆದವಾರದ ಶೇಷ.)

ವಿದ್ಯಾಭ್ಯಾಸದ ಮನೋರ್ಮ್ಯಾಂಡಂ ಮೇಲಣ ಸರ್ಕಾರೀ ಹುಕುಮಿನಲ್ಲಿ ಕಂಡ ಪರಿಷ್ಕರಣಗಳಲ್ಲಿ ಹೆಚ್ಚು ಸಂಖ್ಯೆಯವುಗಳನ್ನು ಆಚರಣೆಗೆ ತಂದಿರುವುದು ಮೇಲ್ಕಂಡ ವಿವರಣೆಯಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಏನಿದ್ದರೂ, ಕೆಲವನ್ನು ಹುಕುಮಿನಲ್ಲಿ ಇದ್ದಂತೆಯೇ ಆಚರಣೆಗೆ ತಂದಿದೆ. ಮತ್ತೆ ಕೆಲವನ್ನು ಅವಶ್ಯಕಂಡ ರೀತಿಯಲ್ಲಿ ಈಗಿನ ಸ್ಥಿತಿಗೆ ತಕ್ಕಂತೆ ಮಾರ್ಪಡಿಸಿ ಆಚರಣೆಗೆ ತರಲಾಗಿದೆ. ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಮತ್ತಷ್ಟು ಉದಾರ ಬುದ್ಧಿಯಿಂದ ಸರ್ಕಾರದವರೊಡನೆ ಏಕೀಭವಿಸಿ ಪ್ರಯತ್ನಮಾಡುವುದಾದರೆ ಅಭಿವೃದ್ಧಿಯ ಕಾರ್ಯಗಳು ಇನ್ನೂ ತೀವ್ರವಾಗಿ ನಡೆಯಬಹುದಾಗಿವೆ. ಕೆಲವು ಡಿಸ್ಟ್ರಿಕ್ಟುಗಳಲ್ಲಿ ಮಾತ್ರವೇ ಎಜುಕೇಷನ್ ತೆರಿಗೆಯನ್ನು ವಸೂಲ್ಮಾಡುತ್ತಿರುವುದರಿಂದ ವಿದ್ಯಾಭಿವೃದ್ಧಿಯ ಕಾರ್ಯಗಳು ಎಲ್ಲಾ ಕಡೆಗಳಲ್ಲಿಯೂ ಒಂದೇ ಸಮನಾಗಿ ನಡೆಯಲು ಅವಕಾಶವಿಲ್ಲದೆ ಸಮತೆಯು ತಪ್ಪಿರುತ್ತದೆ. ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಒಂದೇದರದಲ್ಲಿ ತೆರಿಗೆಯನ್ನು ವಸೂಲ್ಮಾಡಿದಲ್ಲಿ ವಿದ್ಯಾಭಿವೃದ್ಧಿಯು ಒಂದೇ ಸಮವಾಗಿ ನಡೆಯುವಂತೆ ಮಾಡಲು ಸಾಧ್ಯವಾಗುವುದು. ರೂಪಾಯಿಗೆ ಆರು ಪೈಗಳಮೇರೆಗೆ ವಿದ್ಯಾಭ್ಯಾಸದ ಸೆಸ್ಸನ್ನು ವಸೂಲ್ಮಾಡಿದರೂ ಕೂಡ, ಕೇವಲ ಸರ್ಕಾರದ ಹಣ ಒಂದರಿಂದಲೇ ಪ್ರಾಥಮಿಕ ವಿದ್ಯಾಭ್ಯಾಸದ ವಿಶಿಷ್ಟ ವೆಚ್ಚವನ್ನೂ ಒದಗಿಸುವುದು ಅಸಾಧ್ಯವಾಗಿರುತ್ತದೆ. ಕೆಲವು ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಹಾಲಿ ವಸೂಲ್ಮಾಡುತ್ತಿರುವ ದರಗಳಮೇರೆಗೆ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ವಸೂಲ್ಮಾಡಿಯೇ ತೀರಬೇಕೆಂದು ನಿರ್ಬಂಧವನ್ನು ಕಲ್ಪಿಸಿ ವರ್ತಿಸುವುದಾದರೆ ಮಾತ್ರವೇ ವಿದ್ಯಾಭಿವೃದ್ಧಿಯು ಇನ್ನೂ ಹೆಚ್ಚುಹೆಚ್ಚಾಗಿ ಮುಂದುವರಿಯುವುದು ಸಾಧ್ಯವಾಗುತ್ತದೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಆಯವ್ಯಯಗಳನ್ನು ಹೇಗೆ ಕ್ರಮಗೊಳಿಸಬಹುದೆಂಬ ವಿಷಯವನ್ನು ಕಳೆದವರುಷವೆಲ್ಲಾ ಅತ್ಯಂತ ಆಸಕ್ತಿಯಿಂದ ಪರಿಶೀಲಿಸಿ ಮುಂದಿಟ್ಟುಮಾಡಿಕೊಳ್ಳಲಾಯಿತು. ಏಡೆಡ್ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳನ್ನಾಗಿ ಬದಲಾಯಿಸುವ ವಿಚಾರದಲ್ಲಿಯೂ, ಮತ್ತು ಅದೇ ಸಂಬಂಧವಾದ ಇತರ ವಿಚಾರಗಳಲ್ಲಿಯೂ, ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮದ ಫಲಿತಾಂಶವೆನಿಸಿ ಪ್ರಾಪ್ತವಾಗಿರುವ, ಎಂದರೆ, ಮೇಲೆವಿವರಿಸಿ ತಿಳಿಸಿದಂಥಾ ಕಷ್ಟಗಳನ್ನು ನಿವಾರಣೆ ಮಾಡಿಕೊಂಡು ಮುಂದೆ ಸಾಗುವುದಕ್ಕನುಕೂಲವಾದ ಮುಖ್ಯ ಮಾರ್ಗಗಳ ವಿಚಾರವು ಸರ್ಕಾರದವರ ಪ್ರಬಲವಾದ ಪರ್ಯಾಲೋಚನೆಯಲ್ಲಿರುತ್ತದೆ.

ಈ ಸಂಸ್ಥಾನದ ಗ್ರಾಮಗಳಲ್ಲೆಲ್ಲಾ ಪಂಚಾಯತರ ಏರ್ಪಾಟನ್ನು ಜಾರಿಗೆ ತರುವ ಉದ್ದೇಶವಿರವುದರಿಂದಲೂ, ಅದರಿಂದ ಲೋಕಲ್ ಬೋರ್ಡುಗಳ ಆಯವ್ಯಯಸ್ಥಿತಿಯು ಅಸಮರ್ಪಕವಾಗಿ ಪರಿಣಮಿಸುವುದರಿಂದಲೂ ಎಲ್ಲಾ ತಾಲ್ಲೂಕು ಬೋರ್ಡುಗಳನ್ನೂ ವಜಾಮಾಡುವುದೂ, ಮತ್ತು ಸ್ಥಳಾರೋಗ್ಯ, ರಸ್ತೆಗಳು, ವೈದ್ಯಸಹಾಯವೇ ಮುಂತಾದ ಬಾಬುಗಳಲ್ಲಿ ಡಿಸ್ಟ್ರಿಕ್ಟುಗಳಿಗೂ, ತಾಲ್ಲೂಕುಗಳಿಗೂ, ತಾಲ್ಲೂಕುಗಳಿಗೆ ಪರಸ್ಪರವಾಗಿಯೂ, ಗ್ರಾಮಾಂತರಗಳಿಗೆ ಪರಸ್ಪರವಾಗಿಯೂ, ಸಂಬಂಧಪಡುವ ಕೆಲಸಗಳಿಗೆಲ್ಲಾ ಗಮನಕೊಡುವಂತೆ ಡಿಸ್ಟ್ರಿಕ್ಟು ಬೋರ್ಡುಗಳಿಗೆ ಇನ್ನೂ ಧಾರಾಳವಾದ ಅವಕಾಶವನ್ನು ಕೊಡಬೇಕಾದ್ದುದೂ, ಅನುಕೂಲ ಕಾಣುವುದು ಮಾತ್ರವೇ ಅಲ್ಲದೆ ಆವಶ್ಯಕವೆಂದೂ ಸಹ ಸರ್ಕಾರದವರು ಭಾವಿಸಿರುತ್ತಾರೆ.

ಮ್ಯುನಿಸಿಪಾಲಿಟಿಗಳ ಮೇಲ್ಪಾಟು.

(1) ಮೈನರ್ ಮ್ಯುನಿಸಿಪಲ್ ಕೌನ್ಸಿಲುಗಳಲ್ಲಿನ ಚುನಾಯಿಸಲ್ಪಟ್ಟ ಮೆಂಬರುಗಳ ಸಂಖ್ಯೆಯನ್ನು ಆಯಾ ಕೌನ್ಸಿಲಿನ ಒಟ್ಟು ಮೆಂಬರುಗಳ ಸಂಖ್ಯೆಯನ್ನು $\frac{1}{3}$ನೇ ಭಾಗದಿಂದ $\frac{1}{2}$ಕ್ಕೆ ಹೆಚ್ಚಿಸತಕ್ಕದ್ದು;

(2) ಚುನಾವಣೆಗಳಲ್ಲಿ ವೋಟ್ ಮಾಡುವುದಕ್ಕಾಗಿ ಸ್ತ್ರೀಯರಿಗೆ ಓಟ್ ಮಾಡುವ ಅಧಿಕಾರವನ್ನು ಕೊಡತಕ್ಕದ್ದು;

(3) ಸಾಧಾರಣವಾಗಿ, ಸಿಟಿ ಮತ್ತು ಟೌನ್ ಮ್ಯುನಿಸಿಪಲ್ ಕೌನ್ಸಿಲುಗಳ ಪ್ರೆಸಿಡೆಂಟರುಗಳು, ಚುನಾಯಿಲ್ಪಡತಕ್ಕದ್ದು; ಮತ್ತು ಅವರು ಆಯಾ ಮ್ಯುನಿಸಿಪಲ್ ಕೌನ್ಸಿಲುಗಳಿಂದ ಚುನಾಯಿಸಲ್ಪಡುವುದಕ್ಕೆ ಬದಲಾಗಿ, ಓಟರುಗಳೆಲ್ಲರಿಂದಲೂ ಚುನಾಯಿಸಲ್ಪಡತಕ್ಕದ್ದು;

(4) ಸಿಟಿ ಮ್ಯುನಿಸಿಪಾಲಿಟಿಗಳು ಹೊರತು, ಮಿಕ್ಕ ಮ್ಯುನಿಸಿಪಲ್ ಆಫೀಸುಗಳನ್ನು ಡೆಪ್ಯುಟಿಕಮಿಷನರುಗಳು ತನಿಖೆ ಮಾಡುವುದಕ್ಕಾಗಿ ಏರ್ಪಾಡು ಮಾಡತಕ್ಕದ್ದು.

ಮೇಜರ್ ಮತ್ತು ಮೈನರ್ ಕೆರೆಗಳ ದುರಸ್ತಿ.

ಮೇಜರ್ ಕೆರೆಗಳು.—ಸಂಸ್ಥಾನದಲ್ಲಿರುವ ಮೇಜರ್ ಕೆರೆಗಳ ಒಟ್ಟು ಸಂಖ್ಯೆಯು 2,566; ಇವುಗಳ ಪೈಕಿ 1,830 ಕೆರೆಗಳು ದುರಸ್ತು ಮಾಡಲ್ಪಟ್ಟಿವೆ. ಇನ್ನೂ ದುರಸ್ತಾಗಬೇಕಾದ ಕೆರೆಗಳು 700 ಕ್ಕಿಂತ ಹೆಚ್ಚಾಗಿವೆ. ಇವುಗಳಿಗಾಗಿ ಸುಮಾರು 50 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಆದುದರಿಂದ, ಈ ವೆಚ್ಚಕ್ಕಾಗಿ ಪ್ರತಿವರ್ಷವೂ ಸ್ವಲ್ಪ ಸ್ವಲ್ಪ ಹಣವನ್ನು ಒದಗಿಸುತ್ತಾ ಅನೇಕ ವರುಷಗಳಕಾಲ ಕೆಲಸಮಾಡಿಸಬೇಕಾಗುತ್ತದೆ.

ಕಳೆದವರುಷ (1923-24ರಲ್ಲಿ) ಮೇಜರ್ ಕೆರೆಗಳಿಗಾಗಿ 1,92,000 ರೂಪಾಯಿಗಳನ್ನು ಮಾತ್ರ ಮಂಜೂರ್ಮಾಡಲಾಯಿತು ಮತ್ತು 1,79,626 ರೂಪಾಯಿಗಳ ವೆಚ್ಚದಿಂದ ಕೆಲಸವು ನಡೆಯಿತು. ಚಾಲ್ತಿ ವರ್ಷದಲ್ಲಿ, ಮೇಜರ್ ಕೆರೆಗಳಿಗಾಗಿ ಮಂಜೂರ್ಮಾಡಿದ ಹಣವು 2,67,000 ರೂಪಾಯಿಗಳು. ಇನ್ನೂ ಹೆಚ್ಚು ಮೊಬಲಗನ್ನು ಒದಗಿಸಲು ದ್ರವ್ಯಾಭಾವದ ದೆಸೆಯಿಂದ ಅಸಾಧ್ಯವಾಗಿ ಪರಿಣಮಿಸಿತು. ಕೆಲಸವು ಇನ್ನು ಚೆನ್ನಾಗಿ ನಡೆಯಬೇಕಾದರೆ, ನೀರಾವರಿಯ ಕಾಮಗಾರಿಗಳ ಗ್ರಾಂಟನ್ನು ಪ್ರತಿವರ್ಷವೂ ಕನಿಷ್ಠಪಕ್ಷ 5 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಬೇಕಾಗುವುದು.

ಮೈನರ್ ಕೆರೆಗಳು.—ಸಂಸ್ಥಾನದಲ್ಲಿ ದುರಸ್ತಾಗಬೇಕಾದ ಮೈನರ್ ಕೆರೆಗಳ ಒಟ್ಟು ಸಂಖ್ಯೆಯು 14,302. ಇದುವರೆಗೆ ದುರಸ್ತಾಗಿರುವ ಕೆರೆಗಳ ಸಂಖ್ಯೆಯು ಸುಮಾರು 1,000; ಮತ್ತು ದುರಸ್ತಿಯು ಶುರುಮಾಡಲ್ಪಟ್ಟಿರುವ ಕೆರೆಗಳ ಸಂಖ್ಯೆಯು 270. ಕೆಲಸವು ಬಹುನಿಧಾನವಾಗಿ ನಡೆಯುತ್ತಿದೆ; ಇನ್ನೂ ಹೆಚ್ಚು ಗ್ರಾಂಟುಗಳನ್ನು ಕೊಡದೇ ಇದ್ದರೆ ಕೆಲಸವು ಅದೇ ರೀತಿ ನಿಧಾನವಾಗಿ ನಡೆಯಬೇಕಾಗುವುದು. 1923-24ನೇ ವರುಷದಲ್ಲಿ ಒದಗಿಸಿದ ಹಣವು 87,000 ರೂಪಾಯಿಗಳು ಮತ್ತು ವೆಚ್ಚಮಾಡಿದ ಮೊಬಲಗು 66,728 ರೂಪಾಯಿಗಳು.

ಈ ಮಧ್ಯೆ, ಕಂಟ್ರಿಬ್ಯೂಷನ್ನಿನ ವಸೂಲಿಯನ್ನು ನಿರ್ಬಂಧಕ ಮಾಡುವುದಕ್ಕಾಗಿ, ಸಲಹೆ ಮಾಡಲ್ಪಟ್ಟ ಒಂದು ತಿದ್ದುಪಾಟಾದ ರೆಗ್ಯುಲೇಷನು, ನ್ಯಾಯವಿಧಾಯಕಸಭೆಯವರ ಮುಂದೆ ತರಲ್ಪಟ್ಟು ಅವರಿಂದ ಕಾನೂನಾಗಿ ಅನುಮೋದಿಸಲ್ಪಟ್ಟಿದೆ. ಅಂದಾತನ್ನು ಮಂಜೂರ್ಮಾಡಿದ ಕೂಡಲೆ, ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕಂಟ್ರಿಬ್ಯೂಷನ್ನಿನ ವಸೂಲಿಗಾಗಿ ಹಿಂದೆ ನಿರೀಕ್ಷಿಸುತ್ತಿದ್ದಂತೆ ನಿರೀಕ್ಷಿಸದೆ ಆಯಾ ಕಾಮಗಾರಿಯನ್ನು ನಡೆಸಲು ಅವರಿಗೆ ಈಗ ಸಂಪೂರ್ಣವಾಗಿ ಅವಕಾಶವಿರುತ್ತದೆ.

ಇನಾಂ ಕಮಿಷನ್ ಮತ್ತು ಸರ್ಕಾರಿ ಆಡಳಿತಕ್ಕೊಳಪಟ್ಟಿರುವ ಇನಾಂ ಗ್ರಾಮಗಳ ಅಭಿವೃದ್ಧಿ.

ಪ್ರಸಕ್ತವರ್ಷದಲ್ಲಿ ಇನಾಂ ಕಮಿಷನರವರ ವರದಿಯು ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದಿತು; ಸರ್ಕಾರದವರು ಇಷ್ಟರಲ್ಲೇ ಅದರ ವಿಚಾರವಾಗಿ ಹುಕುಂ ನಾದರು ಮಾಡುವವರಾಗಿದಾರೆ. ಸರ್ಕಾರಿ ಆಡಳಿತಕ್ಕೆ ತೆಗೆದುಕೊಂಡಿರುವ ಇನಾಂ ಗ್ರಾಮಗಳ ಸ್ಥಿತಿಯನ್ನು ಉತ್ತಮಪಡಿಸುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಗ್ರಾಮಗಳ ಸ್ಥಿತಿಯನ್ನು ಮೇಲ್ಪಡಿಸುವುದಕ್ಕೆ ರೆವಿನ್ಯೂ ಆಫೀಸರುಗಳ ನಡೆವಳಿಕೆಯ ಬಗ್ಗೆ ತಪಶೀಲಾದ ತಿಳಿವಳಿಕೆಗಳನ್ನು ಕೊಟ್ಟು ಈಚೆಗೆ ಹುಕುಂ ಸಾದರಾಗಿದೆ. ಮತ್ತು ಸರ್ಕಾರಿ ಆಡಳಿತದಲ್ಲಿರುವ ಇನಾಂ ಗ್ರಾಮಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕಮಾಡುವ ವಿಷಯವೂ ಕೂಡ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. "ಮೈನರುಗಳ" ಎಂದರೆ ಪ್ರಾಪ್ತವಯಸ್ಕರಲ್ಲದವರ ಆಸ್ತಿಯನ್ನು ರಕ್ಷಿಸಿ ಮೇಲ್ವಿಚಾರಣೆಯ ಕೆಲಸವನ್ನು ನೋಡಿಕೊಳ್ಳುವುದಕ್ಕಾಗಿ ಬ್ರಿಟಿಷ್ ಇಂಡಿಯಾದಲ್ಲಿ ಆಚರಣೆಯಲ್ಲಿರುವ "ಕೋರ್ಟ್ ಆಫ್ ವಾರ್ಡ್ಸ್" ರೆಗ್ಯುಲೇಷನ ಮಾದರಿಯ ಮೇಲೆ ಒಂದು ರೆಗ್ಯುಲೇಷನನ್ನು ರಚಿಸಿ ಕಾನೂನಾಗಿ ಆಚರಣೆಗೆ ತರುವ ವಿಚಾರವೂ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಮೈಸೂರು ಸಿವಿಲ್ ಸರ್ವಿಸ್ಸಿನ ಪುನರ್ವ್ಯವಸ್ಥೆ.

ಕಳೆದ ಅಕ್ಟೋಬರು ತಿಂಗಳಿನಲ್ಲಿ ನಾವು ಮಾಡಿದ ಭಾಷಣದಲ್ಲಿ, ಮೈಸೂರು ಸಿವಿಲ್ ಸರ್ವಿಸ್ಸನ್ನು ಪುನರ್ವ್ಯವಸ್ಥೆ ಮಾಡುವ ವಿಚಾರವು ಸರ್ಕಾರದವರ ತೀವ್ರವಾದ ಪರ್ಯಾಲೋಚನೆಯಲ್ಲಿದ್ದುದಾಗಿ ತಿಳಿಸಿದ್ದೆವು. ಆಗಿಂದೀಚೆಗೆ, ಹೊಸ ಉದ್ಯೋಗಸ್ಥರನ್ನು ಸದರಿ ಸರ್ವಿಸ್ಸಿಗೆ ಸೇರಿಸಿಕೊಳ್ಳಬೇಕಾದ ಆವಶ್ಯಕತೆಯು ವಿಶೇಷವಾಗಿ ಕಂಡುಬಂದುದರಿಂದ, ಮೈಸೂರುಸಂಸ್ಥಾನದಲ್ಲಿ ಹುಟ್ಟಿದ ಅಥವಾ ಕ್ಲುಪ್ತಕಾಲದವರೆಗೆ ವಾಸಮಾಡಿರುವುದರ ಮೂಲಕ ಶ್ರೀಮನ್ಮಹಾರಾಜರವರ ಪ್ರಜೆಗಳೆನಿಸಿಕೊಂಡವರನ್ನು ಕನಿಷ್ಠ ಪಕ್ಷ ಇಬ್ಬರಿಗೆ ಕಡಮೆಯಿಲ್ಲದಂತೆ ಪ್ರೊಬೇಷನರಿ ಅಸಿಸ್ಟೆಂಟು ಕಮಿಷನರುಗಳನ್ನಾಗಿ ನೇಮಿಸತಕ್ಕ ಬಗ್ಗೆ ಚುನಾಯಿಸುವುದಕ್ಕಾಗಿ, ಒಂದು ಸ್ಪರ್ಧಾಪರೀಕ್ಷೆಯನ್ನು ಈ ತಿಂಗಳ ಅಖೈರಿನಲ್ಲಿ ನಡೆಸಬೇಕೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆ.

ಸಿವಿಲ್ ಸರ್ವಿಸ್ಸಿನ ನಿಬಂಧನೆಗಳನ್ನು ತಿದ್ದುಪಾಟು ಮಾಡಿದೆ; ಈ ತಿದ್ದುಪಾಟಿನ ಮುಖ್ಯ ಲಕ್ಷಣಗಳೇನೆಂದರೆ:—(1) ಸ್ಪರ್ಧಾಪರೀಕ್ಷೆಯ ಮೂಲಕವೂ, ಮತ್ತು ಕೆಳದರ್ಜೆಗಳ ಹುದ್ದೆಗಳಿಂದ ಬಡ್ತಿಯ ಮೂಲಕ ನೇಮಿಸಲ್ಪಟ್ಟ ಆಫೀಸರುಗಳೂ ಸೇರಿ, ಶ್ರೀಮನ್ಮಹಾರಾಜರವರಿಂದ ಚುನಾಯಿಸಲ್ಪಟ್ಟು ನೇಮಿಸಲ್ಪಡುವುದರ ಮೂಲಕವೂ, ಕೆಲಸಕ್ಕೆ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗೆ ಮಾತ್ರವೇ ಸಿವಿಲ್ ಸರ್ವಿಸ್ಸಿನ ಹುದ್ದೆಗಳನ್ನು ಇನ್ನು ಮುಂದೆ ಕೊಡಲಾಗುವುದು. (2) ರೆವಿನ್ಯೂ, ಅಕೌಂಟ್ಸ್, ಪೊಲೀಸ್, ಮುಂತಾದ ಹಲವು ಇಲಾಖೆಗಳಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೆ ಸೇರದ ಒಂದು ದರ್ಜೆಯನ್ನು ಏರ್ಪಡಿಸುವುದರ ಮೂಲಕ ಕೆಳದರ್ಜೆಗಳಲ್ಲಿನ ಆಫೀಸರುಗಳ ಬಡ್ತಿಯ ಸಂಭವವನ್ನು ಉತ್ತಮಪಡಿಸಿದೆ. (3) ಸಿವಿಲ್ ಸರ್ವಿಸ್ ದರ್ಜೆಯ ಹುದ್ದೆಗಳ ಸಂಖ್ಯೆಯನ್ನು ಈಗ 45ಕ್ಕೆ ತಗ್ಗಿಸಿದೆ; ಮತ್ತು ರೆವಿನ್ಯೂ, ಅಕೌಂಟ್ಸ್, ಪೊಲೀಸ್, ಎಕ್ಸೈಜ್, ಸರ್ವೇ ಮತ್ತು ಇನ್ಕಂಟಾಕ್ಸ್ ಇಲಾಖೆಗಳಲ್ಲಿಯೂ, ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯೆಟ್ಟಿನಲ್ಲಿಯೂ, ಮತ್ತು ಕೋ ಆಪರೇಟಿವ್ ಇಲಾಖೆಯಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೂ ಮತ್ತು ತಲಬುಗಳಿಗೂ ಸರಿಸಮನಾದ ದರ್ಜೆಯೂ, ತಲಬುಗಳೂ ಇರುವ 31 ಹುದ್ದೆಗಳನ್ನು, ಆಯಾ ಇಲಾಖೆಯ ಕೆಳದರ್ಜೆಗಳಿಂದ ಬಡ್ತಿಮಾಡಲ್ಪಟ್ಟ ಆಫೀಸರುಗಳಿಗಾಗಿಯೂ ಮತ್ತು ಕೆಲವು ಸಂದರ್ಭಗಳಲ್ಲಿ ಆಯಾ ಇಲಾಖೆಗೆ ನೇರಾ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗಾಗಿಯೂ, ಪ್ರತ್ಯೇಕಪಡಿಸಿ ಉಳಿಸಲಾಗಿದೆ. (4) ರೆವಿನ್ಯೂ ಇಲಾಖೆಯ ಮತ್ತು ಸೆಕ್ರೆಟೇರಿಯಟ್ಟಿನ ಹುದ್ದೆಗಳ ಪೈಕಿ ಹೆಚ್ಚು ಸಂಖ್ಯೆಯ ಹುದ್ದೆಗಳಿಗೆ ಸಿವಿಲ್ ಸರ್ವಿಸ್ಸಿನಿಂದ ಆಫೀಸರುಗಳನ್ನು ನೇಮಿಸುವುದು: ಮತ್ತು ಪರಸ್ಪರಸಂಬಂಧವುಳ್ಳ ಎಲ್ಲಾ ಇತರ ಇಲಾಖೆಗಳಲ್ಲಿನ ಹುದ್ದೆಗಳ ಪೈಕಿ ಬಹುಭಾಗದ ಹುದ್ದೆಗಳಿಗೆ ಸಿವಿಲ್ ಸರ್ವಿಸ್ ಅಲ್ಲದ ದರ್ಜೆಗೆ ಸೇರಿದ ಆಫೀಸರುಗಳನ್ನು ಮೊಕರರ್ ಮಾಡುವುದು. (5) ಸಿವಿಲ್ ಸರ್ವಿಸ್ಸಿನ ಮೆಂಬರುಗಳಿಗೆ ದೊರೆಯಬಹುದಾದ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳ ಸಂಖ್ಯೆಯನ್ನು ಹನ್ನೊಂದರಿಂದ ಒಂಬತ್ತಕ್ಕೆ ತಗ್ಗಿಸಿದೆ; ಮತ್ತು ಸೀನಿಯರ್ ಸಬ್‌ಡಿವಿಜನ್ ಆಫೀಸರು, ಸೀನಿಯರ್ ಪೊಲೀಸ್ ಸೂಪರಿಂಟೆಂಡೆಂಟರು, ಎಂಬ ಎರಡು ಹುದ್ದೆಗಳನ್ನು ಆಯಾ ಇಲಾಖೆಯಲ್ಲಿನ ಸಿವಿಲ್ ಸರ್ವಿಸ್ ದರ್ಜೆಗೆ ಸೇರದ ಆಫೀಸರುಗಳ ಪುರೋಭಿವೃದ್ಧಿಗಾಗಿ ಕಲ್ಪಿಸಿದೆ. (6) ರೆವಿನ್ಯೂ, ಪೊಲೀಸ್, ಎಕ್ಸೈಜು ಇಲಾಖೆಗಳಲ್ಲಿನ ಮತ್ತು ಸೆಕ್ರೆಟೇರಿಯಟ್ಟಿನ ಮೇಲ್ಪಟ್ಟ ಹುದ್ದೆಗಳಾದ ರೆವಿನ್ಯೂ ಕಮಿಷನರ್, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್, ಎಕ್ಸೈಜ್ ಕಮಿಷನರ್, ಸರ್ಕಾರದ ಜನರಲ್ ಇಲಾಖಾ ಸೆಕ್ರೆಟರಿಗಳು, ಮತ್ತು ಡೆಪ್ಯುಟಿಕಮಿಷನರುಗಳೇ ಮುಂತಾದ ಹುದ್ದೆಗಳನ್ನು ನಿಷ್ಕರ್ಷೆಯಾಗಿ ಸಿವಿಲ್ ಸರ್ವಿಸ್ಸಿನ ದರ್ಜೆಯಲ್ಲಿಯೇ ಸೇರಿಸಿದೆ; ಮತ್ತು ಸಿವಿಲ್ ಸರ್ವಿಸ್ಸಿಗೆ ಸೇರದೆ ಇರುವ ಆಫೀಸರುಗಳಿಗೆ ದೊರೆಯಬಹುದಾದ ಮೇಲ್ಪಟ್ಟ ಹುದ್ದೆಗಳನ್ನು ಸ್ಪಷ್ಟವಾಗಿ ಸೂಚಿಸಿದೆ.

ಮುಂದಣ ಆಕ್ಷೋತ್ತರ ವಿಚಾರಗಳು.

ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರಕೃತದಲ್ಲಿ ಆತ್ಯಾಸಕ್ತಿಯಿಂದ ಗಮನ ಕೊಡುತ್ತಿರುವ ದೊಡ್ಡದೊಡ್ಡ ವಿಷಯಗಳ ಪೈಕಿ ಕೆಲವನ್ನು ಈಗ ಸೂಚಿಸುತ್ತೇವೆ.

ಖನಿಜ ಸಂಪತ್ತನ್ನು ಅಭಿವೃದ್ಧಿಗೆ ತರುವುದು.—ಈ ಸಭೆಯಲ್ಲಿ ನಾವು ಒಂದೆರಡುವೇಳೆ ತಿಳಿಯಪಡಿಸಿರುವಂತೆ, ಮೈಸೂರುದೇಶದಲ್ಲಿ ಕೈಗಾರಿಕೆಯ ಅಭಿವೃದ್ಧಿಗೆ ಸ್ವಾಭಾವಿಕವಾದ ಸಾಧನಸಂಪತ್ತುಗಳು ಅಪರಿಮಿತವಾಗಿವೆ. ಮೈಸೂರುದೇಶದ ಖನಿಜ ಸಂಪತ್ತನ್ನೆಲ್ಲಾ ಇನ್ನೂ ಸಂಪೂರ್ಣವಾಗಿ ಉಪಯೋಗಪಡಿಸಿಕೊಂಡಿಲ್ಲ. ಆದರೆ ಕೈಗಾರಿಕೆಯು ಪ್ರಾಬಲ್ಯಕ್ಕೆ ಬರುವ ಸಂಭವಗಳು ಅಪರಿಮಿತವಾಗಿರುವ ದೇಶಗಳ ಪೈಕಿ ಮೈಸೂರುದೇಶಕ್ಕೆ ಉನ್ನತ ಸ್ಥಾನವು ದೊರೆಯುವಂತೆ ಮಾಡಲು ಇದುವರೆಗೆ ಪರಿಶೋಧನೆಯ ಮೂಲಕ ಗೊತ್ತಾಗಿರುವ ಅಂಶಗಳೇ ಸಾಕಾಗಿವೆ. ಮೈಸೂರುದೇಶದಲ್ಲಿ ಚಿನ್ನ ಮತ್ತು ಕಬ್ಬಿಣದ ಜತೆಗೆ ಅಮೂಲ್ಯವಾದ ಕ್ರೋಮ್ ಮತ್ತು ಮ್ಯಾಂಗನೀಸ್ ಲೋಹಗಳ ಅದುರುಗಳು ಹೇರಳವಾಗಿರುವಂತೆ ಕಂಡುಬಂದಿದೆ. ಇದಲ್ಲದೆ, ಅಮೂಲ್ಯವಾದ ಇತರ ಖನಿಜ ವಸ್ತುಗಳಿರುವ ಚಿಹ್ನೆಗಳು ಯಥೇಷ್ಟವಾಗಿ ಕಂಡುಬರುತ್ತವೆ. ಅವುಗಳನ್ನು ಕಂಡುಹಿಡಿದು ರೂಢಿಸಿದಾಗ, ಮೈಸೂರುದೇಶವು ಕೈಗಾರಿಕೆಯ ವಿಚಾರದಲ್ಲಿ ಉಚ್ಛ್ರಾಯಸ್ಥಿತಿಗೆ ಬರುವುದು ಖಂಡಿತ. ಯುಕ್ತವೆನಿಸಿರುವ ವಾಣಿಜ್ಯತತ್ವಗಳಿಗನುಸಾರವಾಗಿ ಸಂಸ್ಥಾನದ ಖನಿಜ ಸಂಪತ್ತನ್ನು ರೂಢಿಸಿ ಅಭಿವೃದ್ಧಿಯನ್ನುಂಟುಮಾಡಲು ತಕ್ಕ ಪ್ರಯತ್ನಗಳು ನಡೆಯುತ್ತಾ ಇವೆ. ಹೀಗೆ ಮಾಡುವುದರಿಂದ ಸಂಸ್ಥಾನದ ಅಭಿವೃದ್ಧಿಗೋಸ್ಕರ ಹಿಂದೆ ಎಷ್ಟೋ ಚೆನ್ನಾಗಿ ಕೆಲಸ ನಡೆಸಿರುವ ಖಾಸಗಿಜನರ ಉದ್ಯಮಗಳಿಗೆ ಪ್ರತಿಬಂಧಕ ಬಾರದಂತೆಯೂ, ಒಟ್ಟು ಆದಾಯದಲ್ಲಿ ಇನ್ನೂ ಹೆಚ್ಚಿನ ಭಾಗವು ಸರ್ಕಾರದವರಿಗೆ ಸಲ್ಲುವಂತೆಯೂ ಆಗುತ್ತದೆ. ಈ ವಿಚಾರದಲ್ಲಿ ಈ ಸಭೆಯ ಮುಂದಣ ಅಧಿವೇಶನದಲ್ಲಿ ಸಿದ್ಧರವಾದ ಸಂಗತಿಯನ್ನು ತಿಳಿಸಲು ಸಾಧ್ಯವಾಗುವುದೆಂದು ನಂಬುತ್ತೇವೆ.

ವ್ಯಾಪಾರದ ಅನುಕೂಲತೆಯ ವಿಚಾರವಾಗಿ ಪರಿಶೋಧನೆ.—ಕಳೆದ ಜೂನ್ ತಿಂಗಳಲ್ಲಿ ನಡೆದ ಪುನರ್ವ್ಯವಸ್ಥಿತವಾದ ಸಂಪದಭ್ಯುದಯ ಸಮಾಜದ ಸಮಾರಂಭ ಭಾಷಣದಲ್ಲಿ "ಒಂದು ದೇಶದ ವ್ಯಾಪಾರದ ಪ್ರವರ್ಧಮಾನಸ್ಥಿತಿಯನ್ನು ಗೊತ್ತುಮಾಡಬೇಕಾದರೆ ಆಮದಿಗಿಂತಲೂ ರಫ್ತು ಹೆಚ್ಚಾಗಿರಬೇಕೆಂಬುದು ಅರ್ಥಶಾಸ್ತ್ರದ ಒಂದು ಮೂಲತತ್ವವಾಗಿದೆ.........ಈ ತತ್ವದ ಪ್ರಕಾರ ಪರೀಕ್ಷೆಮಾಡಿ ನೋಡಿದರೆ, ಮೈಸೂರುದೇಶದ ವ್ಯಾಪಾರಸ್ಥಿತಿಯು ಸ್ವಲ್ಪವೂ ತೃಪ್ತಿಕರವಾಗಿಲ್ಲ...........ಆದುದರಿಂದ ಸರಿಯಾದ ರೀತಿಯಲ್ಲಿ ವ್ಯಾಪಾರವನ್ನು ಅಭಿವೃದ್ಧಿಪಡಿಸಿ,........ರಫ್ತನ್ನು ಹೆಚ್ಚಿಸುತ್ತಾ ಬಂದು ದೇಶವನ್ನು ಉಚ್ಛ್ರಾಯಸ್ಥಿತಿಗೆ ತರುವುದು ಅವಶ್ಯವಾಗಿದೆ" ಎಂದು ತಿಳಿಸಿದೆವು. ಈ ವಿಷಯವನ್ನು ಇನ್ನೂ ಹೆಚ್ಚಾಗಿ ಪರಿಶೋಧಿಸಲು ಉದ್ದೇಶಿಸಿದೆ. ಮತ್ತು ಈ ಉದ್ದೇಶಕ್ಕಾಗಿ ಈ ವಿಷಯವನ್ನು ಜಾಗರೂಕತೆಯಿಂದ ಪರಾಮರ್ಶಿಸಿ ಸರ್ಕಾರದವರು ಒಂದು ನಿರ್ದಿಷ್ಟವಾದ ಕ್ರಮವನ್ನು ಅನುಸರಿಸುವ ಬಗ್ಗೆ ಉಪಾಯಾಂತರಗಳನ್ನು ಸೂಚಿಸುವುದಕ್ಕೋಸ್ಕರವಾಗಿ ವಾಣಿಜ್ಯ ವಿಚಾರಗಳಲ್ಲಿ ನಿಪುಣರೆನಿಸಿರುವವರು ದಕ್ಷತೆಯಿಂದ ಕೆಲಸ ನಡೆಸುವಬಗ್ಗೆ ಅವರನ್ನೊಳಗೊಂಡ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ.

ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಏರ್ಪಾಡುಗಳು.—ಮೈಸೂರುದೇಶದಲ್ಲಿ ಖನಿಜ ಸಂಪತ್ತಿನ ಜತೆಗೆ ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಏರ್ಪಾಡುಗಳನ್ನು ಇನ್ನೂ ಅಭಿವೃದ್ಧಿಗೆ ತರಲು ಅತ್ಯಧಿಕವಾದ ಅವಕಾಶಗಳಿರುತ್ತವೆ. ಕೃಷ್ಣರಾಜಸಾಗರದ ಏರ್ಪಾಡಿನ ಸಹಾಯದೊಡನೆ ನಡೆಸುತ್ತಿರುವ ಶಿವಸಮುದ್ರದ ವಿದ್ಯುಚ್ಛಕ್ತಿಯ ಉತ್ಪತ್ತಿಯ ಏರ್ಪಾಡಿನಿಂದ ಮೈಸೂರು, ಬೆಂಗಳೂರು ಮತ್ತು ಕೋಲಾರ ಚಿನ್ನದಗಣಿ ಪ್ರದೇಶಗಳಲ್ಲಿ ನಡೆಯತಕ್ಕ ಕೈಗಾರಿಕೆಗಳಿಗೆ ಮಾತ್ರ ಪ್ರಯೋಜನವುಂಟಾಗುತ್ತದೆ. ಮದರಾಸು ಸರ್ಕಾರದವರು ಮೇಕೆದಾಟಿನ ನೀರಿನ ಸಂಬಂಧವಾದ ತಮ್ಮ ಹಕ್ಕುಗಳನ್ನು ಕೆಲವು ಷರತ್ತುಗಳಮೇಲೆ ಮೈಸೂರು ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತಾರೆ. ಕೋಲಾರದ ಚಿನ್ನದಗಣಿ ಪ್ರದೇಶಗಳಿಗೂ, ಇತರ ಕೈಗಾರಿಕೆಗಳಿಗೂ ದಿನೇದಿನೇ ಹೆಚ್ಚಾಗಿ ಬೇಕಾಗುತ್ತಿರುವ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿ ಸದರಿ ನೀರನ್ನು ಇನ್ನು ಸ್ವಲ್ಪಕಾಲದಲ್ಲಿಯೇ ಉಪಯೋಗಿಸಿಕೊಳ್ಳಬೇಕಾಗುವುದು. ಕೈಗಾರಿಕೆಯನ್ನು ಅಭಿವೃದ್ಧಿಗೆ ತರಲು ತಕ್ಕ ಸಾಧನಗಳು ಮಲೆನಾಡಿನಲ್ಲಿ ಮತ್ತೂ ಹೆಚ್ಚಾಗಿವೆ. ದೀಪದಕಡ್ಡಿಯನ್ನು ತಯಾರುಮಾಡುವ ಕಾರ್ಖಾನೆಯನ್ನೂ, ಕಾಗದದ ಕೈಗಾರಿಕೆಯನ್ನೂ, ಸಕ್ಕರೆಯ ಕಾರ್ಖಾನೆಯನ್ನೂ, ಖನಿಜ ವಸ್ತುಗಳ ಕೈಗಾರಿಕೆಗಳನ್ನೂ, ಇತರ ಮುಖ್ಯವಾದ ಎಷ್ಟೋ ಕೈಗಾರಿಕೆಗಳನ್ನೂ, ನಡೆಸುವುದಕ್ಕೆ ವಿಶೇಷವಾಗಿ ಅವಕಾಶವಿದೆ; ಇವುಗಳಿಗೆಲ್ಲಾ ಸುಲಭವೆಚ್ಚದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಆವಶ್ಯಕ. ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಬಗ್ಗೆ ಗೇರಸೊಪ್ಪೆಯಲ್ಲಿರುವ ಜಲಪಾತವನ್ನು ಉಪಯೋಗಕ್ಕೆ ತರುವ ವಿಷಯವು ಬಹುಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಏರ್ಪಾಡು ಎಷ್ಟರ ಮಟ್ಟಿಗೆ ಫಲಕಾರಿಯಾಗಿ ಪರಿಣಮಿಸಬಹುದೆಂಬ ಸಂಗತಿಯನ್ನು ಕೂಲಂಕಷವಾಗಿ ಪರಿಶೀಲಿಸತಕ್ಕ ಬಗ್ಗೆ ಸರ್ಕಾರದವರು ಈಚೆಗೆ ಹುಕುಂ ಮಾಡಿದರು; ಸದರಿ ಕೆಲಸಕ್ಕಾಗಿ ನೇಮಕವಾಗಿದ್ದ ಆಫೀಸರವರು ಕಳುಹಿಸಿದ ವರದಿಯು ಈಗತಾನೆ ತಲಪಿರುತ್ತದೆ. ಈ ಏರ್ಪಾಡನ್ನು ನೆರವೇರಿಸಲು ಬಹಳ ಭಾರೀ ವೆಚ್ಚವು ತಗಲುತ್ತದೆ. ಇದನ್ನು ನಡೆಸಿದಪಕ್ಷದಲ್ಲಿ, ಮಲೆನಾಡಿನಲ್ಲಿ ಭಾರಿ ಕೈಗಾರಿಕೆಗಳನ್ನಾರಂಭಿಸುವುದಕ್ಕೆ ಅವಕಾಶವು ದೊರೆಯುತ್ತದೆ. ಅಲ್ಲದೆ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ನಡೆಯುತ್ತಿರುವ ಕಬ್ಬಿಣದ ಭಟ್ಟಿಯ ಕೆಲಸದ ಸಂಬಂಧದಲ್ಲಿ ಅನೇಕ ಸಣ್ಣಪುಟ್ಟ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಅನುಕೂಲವಾಗುವುದು. ಚಾಲ್ತಿವರುಷದಲ್ಲಿ ಈ ಏರ್ಪಾಡನ್ನು ಸರ್ವತೋಮುಖವಾಗಿ ಮತ್ತು ಸಂಪೂರ್ಣವಾಗಿ ಪರಿಶೋಧಿಸಲಾಗುವುದು ಮತ್ತು ಮುಂದಣವರುಷದ ಈ ಸಭೆಯ ದಸರಾ ಅಧಿವೇಶನದಲ್ಲಿ ಇದರ ವಿಚಾರದಲ್ಲಿ ನಿರ್ಧಾರವಾಗಿ ತಿಳಿಸಲು ಸಾಧ್ಯವಾದೀತೆಂದು ಕೋರುತ್ತೇವೆ.

ಭಟ್ಕಲಿನ ರೇವು.—ಪಶ್ಚಿಮತೀರದಲ್ಲಿರುವ ಭಟ್ಕಲಿನಲ್ಲಿ ರೇವನ್ನು ಸ್ಥಾಪಿಸುವ ಬಗ್ಗೆ ಒಂದು ಪ್ರಾಜೆಕ್ಟನ್ನು ಕುರಿತು ಕಳೆದ ಅಕ್ಟೋಬರು ತಿಂಗಳಲ್ಲಿ ಈ ಸಭೆಯಲ್ಲಿ ನಾವು ಮಾಡಿದ ಭಾಷಣದಲ್ಲಿ ಸೂಚಿಸಿದ್ದೆವಷ್ಟೆ. ಸದರಿ ಪ್ರಾಜೆಕ್ಟನ್ನು ಕೈಬಿಟ್ಟಿಲ್ಲವೆಂದೂ, ದ್ರವ್ಯಾನುಕೂಲವು ಒದಗಿದಾಗ ಪಶ್ಚಿಮತೀರದವರೆಗೆ ರೈಲ್ವೆಯು ಬಡಾಯಿಸಲನುಕೂಲಿಸುವಂತೆ ಶಿವಮೊಗ್ಗಾ-ಆರಸಾಳು ಲೈಲಿನ ಕಾಮಗಾರಿಯೇ ಮೊಟ್ಟಮೊದಲು ಕೈಗೊಳ್ಳುವ ರೈಲ್ವೆ ಕಾಮಗಾರಿಯೆಂದೂ ತಿಳಿಸಿದ್ದೆವು. ಭಟ್ಕಲ್ ರೇವಿನ ಮತ್ತು ಶಿವಮೊಗ್ಗಾದಿಂದ ಭಟ್ಕಲ್ ರೇವಿನವರೆಗೆ ರೈಲ್ವೆ ಲೈನನ್ನು ಹಾಕುವ ವಿಷಯವು ಕಳೆದ ವರುಷದಲ್ಲಿ ಸ್ವಲ್ಪವೂ ಮುಂದುವರಿಯಲಿಲ್ಲ; ಹಣವಿಲ್ಲದುದರ ದೆಸೆಯಿಂದ, ಪ್ರಕೃತದಲ್ಲಿ ಈ ಏರ್ಪಾಡುಗಳನ್ನು ಸರ್ಕಾರದವರು ಕೈಗೊಳ್ಳುವ ಸ್ಥಿತಿಯಲ್ಲಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ.

ಪಶ್ಚಿಮತೀರದವರೆಗೆ ನೇರವಾದ ಮತ್ತು ಸುಗಮವಾದ ಮಾರ್ಗವಿಲ್ಲದಿರುವುದರ ದೆಸೆಯಿಂದ ಸಂಸ್ಥಾನಕ್ಕೆ ವಿಶೇಷ ಅನಾನುಕೂಲವುಂಟಾಗಿದೆ. ಅದಕಾರಣ, ಇಂಥಾ ಮಾರ್ಗವೊಂದನ್ನು ಕಲ್ಪಿಸುವುದು ಅತ್ಯವಶ್ಯಕವಾಗಿದೆ. ವರುಷವೆಲ್ಲಾ ಅವಿಚ್ಛಿನ್ನವಾಗಿ ಕೆಲಸ ನಡೆಯುವ ರೇವಿಗೆ ಅತ್ಯಂತ ಸಮೀಪವಾದ ಮತ್ತು ನೇರವಾದ ಮಾರ್ಗವನ್ನು ಕಲ್ಪಿಸಿಕೊಂಡಲ್ಲಿ, ಸಂಸ್ಥಾನದ ವಾಣಿಜ್ಯ ಮತ್ತು ಕೈಗಾರಿಕೆಯ ಅಭಿವೃದ್ಧಿಗೆ ವಿಶೇಷವಾಗಿ ಸೌಲಭ್ಯವುಂಟಾಗುತ್ತದೆ. ಇದೂ ಅಲ್ಲದೆ, ಶಿವಮೊಗ್ಗೆಯಿಂದ ಭಟ್ಕಲ್ಲಿಗೆ ರೈಲ್ವೆ ಮಾರ್ಗವನ್ನೇರ್ಪಡಿಸಿ ಭಟ್ಕಲ್ ರೇವೆಯನ್ನು ಅನುಕೂಲಪಡಿಸಿಕೊಂಡಲ್ಲಿ, ಇದುವರೆಗೂ ರೂಢಿಸಲ್ಪಡದ ಸ್ವಾಭಾವಿಕವಾದ ಸಾಂಪತ್ತಿಕ ಸಾಧನಗಳು ಯಥೇಷ್ಟವಾಗಿರುವ ಮತ್ತು ಈಗ ಆರ್ಥಿಕಸ್ಥಿತಿಯು ತುಂಬಾ ಅತೃಪ್ತಿಕರವಾಗಿರುವ ಮಲೆನಾಡು ಪ್ರಾಂತ್ಯಗಳಲ್ಲೆಲ್ಲಾ ಸ್ವಲ್ಪದಿಂದಷ್ಟು ಅಕ್ಕ ಸುಮುಖವಾದ ಸಂಚಾರ ಸೌಲಭ್ಯವುಂಟಾಗಿ ಅಭಿವೃದ್ಧಿಗೆ ಮಾರ್ಗವಾಗುತ್ತದೆ.

ರಾಜಕವಿಭೂಷಣಾಂಕಿತ |
ರಾಜದ್ವಿರುದಪ್ರಶಸ್ತಿಯೊಡನವನೀಶಂ ||
ಭ್ರಾಜನ್ಮಣಿಹಾರಾಂಬರ |
ರಾಜಿಯನೀಚಿಕ್ಕಲಿಂಗರಾಜಂಗಿತ್ತಂ ||೧||
ಬುಧರ್ಗೆವಸನಸನ್ಮಾನವ |
ನೊದವಿಸಿದೀತನಪರೋಪಕೃತಿಪುಣ್ಯಮೆತಾಂ ||
ಪದುಳದೆಮೂರ್ತಿಯನಾಂತು |
ತೊದವಿದಬಿರುದುಮಿದಿವಂಗೆಯೋಗ್ಯಂಜಗದೋಳ್ ||೨||
ಪಾಲಿರುವಾಗಳೆಹಬ್ಬಂ |
ಮೇಲೆನಿಪಂತೊಗೆದಪದವಿಸಿರಿಸುಖದಿವರ್ಗ ||
ಕಾಲದೊಳೆಸ್ಸೈಭವದೆಭದ |
ನಾಲೋಚಿಸಿವಾಳ್ಪನೀತನಿಂತುಪಕೃತಿಯಂ ||೩||
ನೃಪಗೃಹಧರ್ಮವಿಚಾರಾ |
ಧಿಪನಾಗಿಸಮಸ್ತಸುಕವಿವಿಬುಧಾವಳಿಗಂ ||
ವಿಪುಲಸುರಭೂಜನಾದಿಗ |
ಮುಪಹಿತಾನಿಲ್ಲದೆಂತರಂಜನೆಗೈವಂ ||೪||
ಶ್ರೀಯಂಚಿಕಲಿಂಗರಸಂ |
ಗಾಯುಶ್ಶ್ರೀಯೊಭಿವೃದ್ಧಿಸಿದ್ಧಿಯಸತತಂ ||
ಈಯುಶಪೊರೆಗೆಕೃಪಾರಸ |
ತೋಯಧಿನಿರುಪಾಧಿರೂಪಗೋತೆಯಲಿಂಗಂ ||೫||
ಜಯಮಕ್ಕೆಕ್ಷ್ಮಾಭೂಪಂ |
ಗಯುಮಕ್ಕೆಚಿರಾಯುಮಕ್ಕೆಭೂವಲಯಕ್ಕಿ ||
ಶಯುವೆನೆಮಳೆಬೆಳೆಯಕ್ಕೆವಿ |
ನಯಭಕ್ತಿಗಳಾಳ್ದಬಾಳ್ಗಿಲೋಕವಿದೆಲ್ಲಂ ||೬||

ಪಂಡಿತ ಟಿ. ಎಂ. ಚಂದ್ರಶೇಖರಶಾಸ್ತ್ರಿ.
ತೆಲಗಿಮಠ, ದಾವಣಗೆರೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ತಿರಸ್ಕೃತಲೇಖಗಳು.

ಮ|| ಗಳಾದ ಜಿ. ಕೆ. ರುದ್ರಾರ್ಯ, ಯಂ. ಸ. ಶಾಂತಪ್ಪ ಶೆಟ್ಟಿ ಮತ್ತು ಹಲ್ಕೂರು ಸಾಹುಕಾರ್ ಮರುಳಸಿದ್ದಪ್ಪ ಶೆಟ್ಟಿ ಇವರುಗಳು—ಶ್ರೀಬಾಳೆಹೊನ್ನೂರು ಪೀಠಾಧಿಕಾರಿಗಳ ಚುನಾವಣೆಯ ವಿಚಾರವಾಗಿ ರಾಜಧಾನಿಯಲ್ಲಿ ವೀರಶೈವದೊಡ್ಡಮನುಷ್ಯರುಗಳಿಂದ ನಡಿಸಲ್ಪಟ್ಟ ಎರಡು ಸಭೆಗಳ ನಡವಳಿಕೆಗಳು, ಸಭಾಧ್ಯಕ್ಷರುಗಳಿಂದ ನಮ್ಮಲ್ಲಿಗೆ ಕಳುಹಲ್ಪಟ್ಟ ಪ್ರಕಾರ ಯಥಾವತ್ತಾಗಿ ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದರಿಂದ, ಅವುಗಳಲ್ಲಿರಬಹುದಾದ ನ್ಯೂನತೆಗಳನ್ನು ಆ ಅಧ್ಯಕ್ಷರುಗಳಿಗೆ ನೀವುಗಳೇ ಬರೆದು ಅವರುಗಳಿಂದ ಸರಿಪಡಿಸಿಕೊಳ್ಳಬಹುದಾಗಿದೆ.—ಸಂ.

ಹೊಸಪೇಟೆ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್.

ಈ ಗ್ರಾಮವು ತಾಲ್ಲೂಕಿನ ಮುಖ್ಯಸ್ಥಳವಿದ್ದು ಇಲ್ಲಿ ಹಾಗೂ ಈ ತಾಲ್ಲೂಕಿನಲ್ಲಿ ವೀರಶೈವ ಜನಾಂಗದವರ ವಸತಿಯಾದರೂ ವಿಶೇಷ ಇರುತ್ತದೆ. ಹೀಗಿದ್ದು ನಮ್ಮ ವೀರಶೈವಜನಾಂಗದವರಪೈಕಿ ಈವರೆಗೂ ರಾಜಕೀಯ ವಿದ್ಯೆಯಲ್ಲಿ ಒಬ್ಬರಾದರೂ ಉತ್ತೀರ್ಣರಾಗಿದ್ದಿಲ್ಲ. ಈ ವರುಷ ನಮ್ಮ ಸುದೈವದಿಂದ ಹೊಸಪೇಟೆ ನಿವಾಸಿಗಳಾದ ಸಾಲೂರು ಶ್ರೀ|| ಶಿ. ಉದ್ದಾನಯ್ಯನವರೆಂಬುವವರು ಬಿ.ಎ, ಬಿ.ಎಲ್. ಪರೀಕ್ಷೆಯಲ್ಲಿ ಪಾಸಾಗಿಬಂದು ಸದ್ಯಃ ವಕೀಲಿ ಕೆಲಸವನ್ನು ಪ್ರಾರಂಭಮಾಡಿರುತ್ತಾರೆ. ಹೋದ ತಿಂಗಳು 21ನೇ ತಾರೀಖಿನ ದಿವಸ ಹೊಸಪೇಟೆಯ ಮ್ಯುನಿಸಿಪಲ್ ಕೌನ್ಸಿಲರ ಎಲೆಕ್ಷನ್ (ಚುನಾವಣೆ) ಇದ್ದು ಚಿತ್ತವಾಡಿಗಿಯ ವಾರ್ಡಿಗೆ ಸದರಿ ಉದ್ದಾನಯ್ಯನವರು ಉಮೇದ್ವಾರರಾಗಿ ನಿಂತಿದ್ದರು. ಈ ತರುಣರಿಗೆ ನಿಷ್ಪಕ್ಷಪಾತಿಗಳಾದ ಅನೇಕ ಸ್ವಜನ ಪರಜನರು ಸಹಿತ ಸಂತೋಷದಿಂದ ತಮ್ಮ ತಮ್ಮ ಓಟುಗಳನ್ನು ಕೊಟ್ಟು ಪ್ರೋತ್ಸಾಹಿಸಿದರು. ಅದರಲ್ಲಿ ಕೆಲವು ಜನರು ತಮ್ಮ ಅಸೂಯಾಂಧತೆಯನ್ನು ವ್ಯಕ್ತಗೊಳಿಸಿದ್ದಲ್ಲದೆ ಅನೇಕ ಕೃಷ್ಣಕಾರಸ್ಥಾನವನ್ನೆಸಗಿದರು. ಆದಾಗ್ಯೂ ದೈವಾನುಗ್ರಹದಿಂದ ಶ್ರೀ|| ಶಿ. ಉದ್ದಾನಯ್ಯನವರೇ ಉತ್ತೀರ್ಣರಾಗಿ ಬಂದರೆಂದು ತಿಳುಹಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಈ ತರುಣರು ಇಂಥ ಸಾರ್ವಜನಿಕ ಕಾರ್ಯಗಳಲ್ಲಿ ಮತವರ್ಜಿಯಿಂದ ಕೆಲಸಮಾಡಿ ಜನರಸ್ತುತಿಗೆ ಪಾತ್ರರಾಗಿ ಇದಕ್ಕಿಂತಲೂ ಉನ್ನತವಾದ ಸ್ಥಾನವನ್ನು ಪಡೆಯತಕ್ಕ ಸಾಮರ್ಥ್ಯವನ್ನು ಜಗದೀಶನು ಅನುಗ್ರಹಿಸಲೆಂದು ಹಾರೈಸುತ್ತೇನೆ.

ಗುರುಭಕ್ತಕೇಸರಿ, ಚಿತ್ತವಾಡಿಗಿ ನಿವಾಸಿ.

ಸಾಗರ ತಾಲ್ಲೂಕು ಕೆಳದಿ.

ಈ ಕೆಳದಿಯ ಸಂಸ್ಥಾನ ಹಿರೇಮಠದಲ್ಲಿ ಪದ್ಧತಿಯಪ್ರಕಾರವಾಗಿ ವಿಜಯದಶಮಿಯ ಉತ್ಸವವು ಬಹುವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಈ ಕಾರ್ಯಕ್ಕಾಗಿ ತಳಿರುತೋರಣ ಮುಂತಾದವುಗಳಿಂದ ಅಲಂಕರಿಸಲ್ಪಟ್ಟ ಮಠವೂ, ಊರಿನಬೀದಿಗಳು ಶೋಭಿಸುತ್ತಿದ್ದುವು. ಶ್ರೀ|| ಗೋಣಿಬೀಡು ಶ್ರೀ ಸ್ವಾಮಿಗಳೇ ಮುಂತಾದ ಶಿವಯೋಗಿಗಳ ಶಿವಾರ್ಚನೆಯು ವಾದ್ಯವೈಭವದೊಡನೆ ನೆರವೇರಿಸಲ್ಪಟ್ಟಿತು. ಮಧ್ಯಾಹ್ನದ ಗಣಾರಾಧನೆಯಾದನಂತರದಲ್ಲಿ ಈ ಪ್ರಾಂತದ ಅನೇಕ ಗ್ರಾಮಗಳ ಮುಖ್ಯಮುಖ್ಯರಾದ ವೀರಶೈವ ಮಹನೀಯರುಗಳು ಮಠಕ್ಕೆ ಸೇರಿದರು. ಈ ಸಂಸ್ಥಾನ ಪಟ್ಟಾಧ್ಯಕ್ಷರವರಾದ ಶ್ರೀ|| ರೇವಣಸಿದ್ಧಸ್ವಾಮಿಗಳವರು ಸಕಲ ಭಕ್ತಸಂದಣಿಯ ಜಯಘೋಷದೊಡನೆ ಶುಭಪ್ರದವಾದ ಈ ಸಭೆಯಲ್ಲಿ ಶಿವಪುರಾಣದಲ್ಲಿನ ಶಿವಭಕ್ತಿ ಶಿವಪೂಜಾವಿಷಯಕವಾದ ಭಾಗವನ್ನು ಬಹುಸ್ವಾರಸ್ಯವಾಗಿ ಸಭಿಕರ ಮನಸ್ಸಿಗೆ ಆನಂದತೋರುವಂತೆ ವಿವರಣದೊಡನೆ ಅಪ್ಪಣೆಕೊಡಿಸಿದರು. ನಂತರ ಕನ್ಯಾಶುಲ್ಕನಿಷೇಧ, ವಿದ್ಯಾಪ್ರಸಾರ, ಐಕಮತ್ಯ, ಪ್ರಾಣಿದಯಾಪರತೆ, ಮುಂತಾದ ವಿಷಯಗಳಲ್ಲಿ ಮ|| ಕಾಗೋಡು ಶಿವಲಿಂಗಪ್ಪನವರು, ಬರದವಳ್ಳಿ ಗುರಪ್ಪಗೌಡರು ಮುಂತಾಗಿ ಅನೇಕ ಜನರು ಉಪನ್ಯಾಸ ಮಾಡಿದರು. ಮಠದ ವಿಷಯಕವಾದ ಕೆಲವು ಸಂಗತಿಗಳಮೇಲೆ ನಿರ್ಧಾರವು ಮಾಡಲ್ಪಟ್ಟಿತು. ನಂತರ ಬಿರುದಾವಳಿಗಳಸಮೇತ ಪಲ್ಲಕ್ಕಿಯಲ್ಲಿ ಸ್ವಾಮಿಗಳವರ ಮೆರವಣಿಗೆಯೊಡನೆ ಸಕಲ ಭಕ್ತವೃಂದವೂ ಬನ್ನಿಮುಡಿಯುವ ಉದ್ದೇಶವಾಗಿ ದಯಮಾಡಿಸಿ ಪುನಃ ಮಠಕ್ಕೆ ಬಂದು ಸಿದ್ಧವಾಗಿದ್ದ ಸಿಂಹಾಸನದಲ್ಲಿ ಪಟ್ಟಾಧ್ಯಕ್ಷರವರು ಮುಹೂರ್ತಮಾಡಿಸಿದನಂತರ ಸಕಲ ಭಕ್ತರೂ ಸಾಷ್ಟಾಂಗಪ್ರಣಾಮಗಳನ್ನು ಮಾಡಿದರು. ನಂತರ ಮತಸಂಬಂಧ ಎಂದರೆ ಗುರು, ಲಿಂಗ, ಜಂಗಮ, ವಿಷಯಕವಾದ ಉಪನ್ಯಾಸಗಳು ಮುಂತಾದವು ನಡೆದು ಜಯಮಂಗಳಪದಗಳೊಡನೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಓರ್ವ ಪ್ರೇಕ್ಷಕ.

ನಿಷೇಧಪ್ರದರ್ಶನ ಜಾಹೀರಸಭೆಯು.

ಕಲಬುರ್ಗೆಯಲ್ಲಿಯ ಮುಸಲ್ಮಾನರು ಶ್ರಾವಣ ತಿಂಗಳಲ್ಲಿ ಮಾಡಿದ ಅತ್ಯಾಚಾರವನ್ನು ನಿಷೇಧಿಸುವದಕ್ಕಾಗಿ ತಾರೀಖು 29-9-1924 ಇಸ್ವಿಯ ಸಂಜೆಯ 5 ಘಂಟೆಗೆ ಶ್ರೀಮದ್ವಸನಲಿಂಗಚರಚಕ್ರವರ್ತಿಗಳಾದ ಕೊಣ್ಣೂರ ಮಹಾಸ್ವಾಮಿಗಳವರ ಅಪ್ಪಣೆಯಮೇರೆಗೆ ಪ್ರಣವಸ್ವರೂಪಿಗಳೂ, ಧರ್ಮಾಭಿಮಾನಿಗಳೂ ಆದ ಶ್ರೀಸಂಪಗಾಂವ ಚರಮೂರ್ತಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಯು ಶ್ರೀಕ್ಷೇತ್ರ ಮರ್ದೀಮಠದಲ್ಲಿ ನೆರವೇರಿತು. ಸಭೆಗೆ ಕೊಣ್ಣೂರ, ಗಿರಣೆ, ಸಾವಳಗಿಯಿಂದ ಜನರು ಬಂದಿದ್ದರು. ಮಿ|| ಮಲ್ಲಿನಾಥ ಶಾಸ್ತ್ರಿಗಳವರು, ಮಿ|| ಭೂಪದಾಳರವರು, ಮಿ|| ಗದ್ದದ ಇಂಗ್ಲೀಷಶಾಲಾ ಮಾಸ್ತರರು, ಮಿ|| ಶಿದ್ದನಾಳಮಾಸ್ತರರು ಕಲಬುರ್ಗೆಯ ಅತ್ಯಾಚಾರದ ವಿವೇಚನ, ಧರ್ಮಪರಿಪಾಲನೆ, ಧರ್ಮಗುರುಗಳ ಕರ್ತವ್ಯ, ಕಲಬುರ್ಗೆಯ ವಿಚಾರಣಾ ಕಮಿಟಿಯ ಪರಿಸ್ಥಿತಿ ಮೊದಲಾದವುಗಳ ವಿಷಯವಾಗಿ ಸುಲಲಿತವಾಗಿ ಹೇಳಿದರು. ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

1. ಹಿಂದೂಗಳ ಪೂಜ್ಯ ದೇವಾಲಯಗಳನ್ನು ಕುರಿತು ಕಲಬುರ್ಗೆಯಲ್ಲಿ ದುರಭಿಮಾನಿಗಳಾದ ಮುಸಲ್ಮಾನರು ಮಾಡಿದ ಅತ್ಯಾಚ್ಯಾರವನ್ನು ಈ ಸಭೆಯು ತೀವ್ರನಿಷೇಧಿಸುವುದು. 2. ಈಗಿದ್ದ ಕಮಿಟಿಯಿಂದ ಹಿಂದೂಗಳಿಗೆ ಯೋಗ್ಯನ್ಯಾಯವು ದೊರೆಯುವ ಸಂಭವವಿಲ್ಲ, ಆದ್ದರಿಂದ ನೈಜಾಮ ಸಾಹೇಬ ಬಹಾದ್ದೂರರವರು ಹಿಂದೂಗಳಿಗೆ ನ್ಯಾಯದೊರೆಯುವಂತೆ ಕಮಿಟಿಯ ವ್ಯವಸ್ಥೆ ಮಾಡಬೇಕೆಂದು ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. 3. ಕಲಬುರ್ಗೆಯಂಥ ಧಾರ್ಮಿಕ ಅತ್ಯಾಚ್ಯಾರದ ಕೃತ್ಯಗಳಲ್ಲಿಯೂ, ಧರ್ಮಗುರುಗಳು ಧರಿಸಿದ ಮೌನವ್ರತವನ್ನು ಕಂಡು ಸಭೆಗೆ ವಿಷಾದವೆನಿಸುವದು. ಅವರುಗಳು ಇನ್ನಾದರೂ ಜಾಗ್ರತರಾಗಬೇಕೆಂದು ವಿನಂತಿಯು. ಮೊದಲಿನ 2 ಠರಾವುಗಳನ್ನು ನಾಮದಾರ ಗವ್ಹರ್ನರ್ ಜನರಲ್ ಇನ್ ಕೌನ್ಸಿಲ್‌ರವರಿಗೆ ಮತ್ತು ನಿಜ್ಯಾಮ ಸಾಹೇಬರವರಿಗೆ ತಂತಿಯಿಂದ ತಿಳಿಸುವದರಲ್ಲಿ ಬಂತು. ಮಿ|| ಗದ್ದದ ಮಾಸ್ತರರು ಅಧ್ಯಕ್ಷರ ಅಭಾರಮನ್ನಣೆಯನ್ನು ಮಾಡಿದ ಮೇಲೆ ಜಯಜಯಕಾರದೊಡನೆ ಸಭಾಕಾರ್ಯವು ಸಮಾಪ್ತಿಯಾಯಿತು.

ಓರ್ವಪ್ರೇಕ್ಷಕ.

ಮಳವಳ್ಳಿಟವರ್ ವಿದ್ಯಮಾನ.

ಈಗ್ಗೆ 8-10 ದಿನಗಳಿಂದ ಕೊಂಚ ಮಳೆ ಆಗಿದೆ. ಇನ್ನೂ 1-2 ಹದ ಮಳೆಬಿದ್ದಲ್ಲಿ ಪೈರುಗಳಿಗೆ ಅನುಕೂಲವಾಗುತ್ತೆ. ಈ ಮಾಹೆ 14 ನೇ ತಾರೀಕಿನ ಸಂಪದಭ್ಯುದಯ ಪತ್ರಿಕೆಯಲ್ಲಿ ಇಲ್ಲಿನ ಮುನಿಸಿಪಲ್ ವೈಸ್‌ಪ್ರಸಿಡೆಂಟರ ಚುನಾವಣೆ ವಿಷಯದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ವ್ಯಾಜ್ಯವು, ಹಿಂದೆ ಇಲ್ಲಿ ಅಮಲ್ದಾರರಾಗಿದ್ದು ನಿಷ್ಪಕ್ಷಪಾತಿಗಳೂ ಜನಾನುರಾಗಿಗಳೂ ಎಂದು ಪ್ರಸಿದ್ಧಿಯನ್ನು ಪಡೆದಿದ್ದ ಮ|| ಶಿದ್ಧರಾಮಪ್ಪನವರ ಕಾಲದಲ್ಲಿ ಉದ್ಭವವಾಯಿತು ಎಂದು ಬರೆದಿರುವದನ್ನು ನೋಡಲು ಬಹಳ ವಿಷಾದವಾಗುತ್ತದೆ. ಒಂದು ವೇಳೆ ಮ|| ಶಿದ್ಧರಾಮಪ್ಪನವರ ಕಾರ್ಯದಕ್ಷತೆ ಜನಾನುರಾಗ ನಿಷ್ಪಕ್ಷಪಾತ ಇವುಗಳ ವಿಚಾರದಲ್ಲಿ ಅನುಮಾನಪಟ್ಟವರು ಈ ಕೆಳಗೆ ಕಂಡ ವಿಷಯಗಳನ್ನು ಗಮನಿಸಬೇಕು. ಮ|| ಶಿದ್ಧರಾಮಪ್ಪನವರು ಮಳವಳ್ಳಿಗೆ ಅಮಲ್ದಾರರಾಗಿ ಬಂದಾಗ ಅಕಾಪ್ರಿಯ ಉತ್ಪತ್ತಿ ತಿಂಗಳೊಂದಕ್ಕೆ 120-150 ರೂಪಾಯಿಗಳು ಇದ್ದದ್ದು ಇವರು ಟ್ರಾನ್ಸ್‌ಫರ್ ಆಗಿ ಹೋಗುವವರಿವಿಗೆ ಪ್ರತಿತಿಂಗಳಿನಲ್ಲೂ 500 ರೂಪಾಯಿನಿಂದ 600 ರೂಪಾಯಿವರಿವಿಗೆ ಏರಿತ್ತು. ಈಗಿರತಕ್ಕ ಅಮಲ್ದಾರ್ ಮ|| ವೈ. ಶ್ರೀಕಂಠಯ್ಯನವರು ನಮ್ಮ ಟವನ್ನಿಗೆ ಕಾಲು ಊರಿದ ದಿನದ ಲಾಗಾಯಿತು ಡಿಟೋ ಉತ್ಪತ್ತಿ ತಿಂಗಳಿಗೆ 150-200 ರೂಪಾಯಿಗಿಳಿಯಿತು ಮತ್ತು ಮೊಹತರ್ಫಾ ವಸೂಲಿವಿಚಾರ ಹಿಂದೆ ಇದ್ದದ್ದಕ್ಕೆ ಹಾಲಿ ಈಗ ಇರತಕ್ಕದ್ದನ್ನು ಹೋಲಿಸಿ ನೋಡಿದರೆ ವ್ಯಕ್ತವಾಗುತ್ತೆ. ಮ|| ಶಿದ್ಧರಾಮಪ್ಪನವರ ನಿಷ್ಪಕ್ಷಪಾತದ ವಿಚಾರ ಅಮಲ್ದಾರರಿಂದ ಮೈಸೂರು ಡಿಸ್ಟ್ರಿಕ್ಟು ಪೋಲೀಸ್ ಸೂಪರಿಂಟೆಂಡೆಂಟರಾಗಿ ಬಡ್ತಿಹೊಂದಿ ಹೋಗಿರುವದು ಮತ್ತೊಂದು ನಿದರ್ಶನವಾಗಿರುತ್ತೆ. ಮೊದಲು ವೈಸ್‌ಪ್ರೆಸಿಡೆಂಟ್ ಚುನಾವಣೆ ಆದಾಗ ಅಫಿಸಿಯಲ್ಸು ಓಟು ಕೊಡಕೂಡದು ಎಂದು ರೂಲ್ಸ್‌ನಲ್ಲಿ ವಿಶದವಾಗಿದ್ದರೂ, ತಮ್ಮ ಸ್ವಜಾತೀಯರಾದ ತಿಮ್ಮಣ್ಣಯ್ಯನವರೇ ಉತ್ತೀರ್ಣರಾಗಬೇಕೆಂಬ ದುರಾಸೆಯು ಮತ್ತು ಬ್ರಾಹ್ಮಣ ಬ್ರಾಹ್ಮಣೇತರರೆಂಬ ಬಿನ್ನಭಾವನೆಯು, ಅಮಲ್ದಾರರಲ್ಲಿ ತುಂಬಿ ತುಳುಕುತ್ತಿದ್ದದ್ದರಿಂದ, ಬ್ರಾಹ್ಮಣೇತರ ಇಬ್ಬರು ಮುನಿಸಿಪಲ್ ಮೆಂಬರುಗಳು ರೂಲ್ಸಿಗೆ ವಿರೋಧವಾಗಿ ಅಫಿಸಿಯಲ್ಸು ಓಟುಕೊಡಕೂಡದೆಂದು ನಿರೋಧಿಸಿದಾಗ್ಯೂ ತಿಮ್ಮಣ್ಣಯ್ಯನವರಿಗೇನೆ ಓಟುಕೊಟ್ಟಿದ್ದಾರಲ್ಲವೇ? ರೂಲ್ಸಿನಲ್ಲಿ ವಿಶದವಾಗಿ ಇದ್ದರೂ ಅಮಲ್ದಾರರು ವಿರೋಧವಾಗಿ ಓಟು ಮಾಡಿರುವದು ನೋಡಿದರೆ ಅವರು ತಮ್ಮ ಜವಾಬ್ದಾರಿ ಅರಿತಿಲ್ಲವೊ? ಅಥವಾ ಜಾತಿದ್ವೇಷದಿಂದ ಓಟುಮಾಡಿದರೊ? ಇದನ್ನು ವಾಚಕರೇ ಯೋಚಿಸಬೇಕು. ಇಂತಾ ಅನಾನುಭವಿಗಳಾದವರನ್ನು ಜವಾಬ್ದಾರಿ ಆಫೀಸುಗಳಿಂದ ಸರ್ಕಾರದವರು ಜಾಗ್ರತೆಯಾಗಿ ವಜಾಮಾಡದೆ ಇದ್ದರೆ ಪ್ರಜಾಸಮುದಾಯಕ್ಕೆ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗುವದರಲ್ಲಿ ಸಂದೇಹವಿಲ್ಲ.

ನಿಷ್ಪಕ್ಷಪಾತಿ.

ವೀರಶೈವಮಹಾಸಭೆಯು.

ಯಾರ ಆಶೀರ್ವಾದದಿಂದ ಇಡೀ ವೀರಶೈವಸಮಾಜಕ್ಕೆ ವೀರಶೈವಮಹಾಸಭೆಯು ಕಲ್ಪತರುವಾಗಿ ಜನಿಸಿತೋ ಅಂಥಾ ಸಾಕ್ಷಾತ್ ನಿರಂಜನಮೂರ್ತಿಗಳಾದ ಶ್ರೀ ಹಾನಗಲ್ ಕುಮಾರಮಹಾಸ್ವಾಮಿಗಳ ವಿರಕ್ತವರ್ಗವನ್ನು ಹಳಿಯಲು ಬಿರೂರಿನಲ್ಲಿ ನೆರವಿದ್ದ ಮಹಾಸಭೆಯಲ್ಲಿ ಪ್ರಯತ್ನಿಸಲ್ಪಟ್ಟುದರಮೇಲೆ ಆ ತಪೋನಿಷ್ಠರ ಶಾಪವಿಶೇಷದಿಂದ ಕಲ್ಪತರುವು ಬೂರಗದ ಮರವಾಗಿ ಬೀರೂರಿನಲ್ಲಿ ಬೇರುಬಿಟ್ಟುಕೊಂಡು ನಿಂತಿತು. ಇದರ ಬೇರನ್ನು ಬಿಡಿಸಿ ಮುಂದಕ್ಕೆ ಸಾಗಿಸಿಕೊಂಡು ಬರಬೇಕೆಂದು ಮೈಸೂರಿನವರೂ, ಹಾಂಸಭಾವಿಯವರೂ ಬಹಳ ಸಾಹಸಮಾಡಿದಾಗ್ಯೂ ಸಾಧ್ಯವಾಗದೆ ಹೋದುದನ್ನು ನಮ್ಮ ವೀರಶೈವಸಮಾಜಕ್ಕೆ ತಿಲಕಪ್ರಾಯರಾಗಿರುವ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ಬಹಳವಾಗಿ ಚಿಂತಿಸಿ ಅದನ್ನು ಬೀರೂರಿನಿಂದ ಹೇಗಾದರೂ ಬೇರುಬಿಡಿಸಿ ಮುಂದಕ್ಕೆ ಸಾಗಿಸಿ ಪೂರ್ವಸ್ಥಿತಿಗೆ ತರಬೇಕೆಂದು ಸಂಕಲ್ಪಮಾಡಿ ಈ 1924 ನೇ ಡಿಸೆಂಬರ್ ತಿಂಗಳ ಕಡೆಯಲ್ಲಿ ಮಹಾಸಭೆಯನ್ನು ಕೂಡಿಸಬೇಕೆಂದು ನಿರ್ಧರಿಸಿ ಅದಕ್ಕಾಗಿ ತಕ್ಕ ಪ್ರಯತ್ನ ನಡಿಸಿರುವರೆಂದೂ, ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತಮಂಡಳವನ್ನು ಏರ್ಪಡಿಸಿರುವರೆಂದೂ ಸಮಸ್ತ ವೀರಶೈವರೂ ಈ ಸ್ಟಾರ್ ಪತ್ರಿಕೆಯದ್ವಾರ ತಿಳಿದು ಸಂತೋಷಪಟ್ಟು ದಿ|| ಬ|| ಶೆಟ್ಟರನ್ನು ವಂದಿಸುತ್ತಿರುವರು. ಈಮಧ್ಯೆ ವೀರಶೈವಮಹಾಸಭೆಯನ್ನು ಕೂಡಿಸಬೇಕೆಂಬ ಕಾಲದಲ್ಲೇ ಬೆಳಗಾಮಿನಲ್ಲಿ ಕೂಡುವ ರಾಷ್ಟ್ರೀಯ ಸಭೆಗೆ ಅನೇಕ ವೀರಶೈವರು ಹೋಗುವ ಸಂಭವವಿರುವದರಿಂದ, ಆಕಾಲದಲ್ಲಿ ಬಿಟ್ಟು ಬೇರೆಕಾಲ ಅಂದರೆ ಮುಂದಿನ ಬೇಸಿಗೆಯ ರಜಾಕಾಲದಲ್ಲಿ ವೀರಶೈವಮಹಾಸಭೆಯನ್ನು ಕೂಡಿಸುವದು ಒಳ್ಳೆಯದು, ಹಾಗಲ್ಲದೆ ಈಗಲೇ ಮಾಡುವದಾದರೆ ಸಭೆಕೂಡಿಸಿದೆಂತಾಗುವದಲ್ಲದೆ ಪ್ರಯೋಜನವಾದು
ವದಿಲ್ಲ. ವಗ್ಯೈರೆಯಾಗಿ ಧಾರವಾಡದ ವಿಜಯ ಮೊದಲಾದ ಕೆಲವು ಉತ್ತರದೇಶದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ವೀರಶೈವಸಮಾಜದಲ್ಲಿ ಅನೈಕಮತ್ಯವೂ, ದ್ವೇಷಾಸೂಯೆಗಳೂ ಹುಟ್ಟಿ ವಿಶೇಷ ಅನರ್ಥವಾಗುತ್ತಿರುವ ಈ ಸಮಯದಲ್ಲಿ ಮಹಾಸಭೆಯನೆಪದಿಂದ ನಾನಾ ದೇಶದ ವೀರಶೈವಪ್ರಮುಖರು ಅತಿ ಜಾಗ್ರತೆಯಾಗಿ ಒಂದುಕಡೆ ಸೇರಿ ಸಮಾಜಬಾಂಧವರು ಪರಸ್ಪರದ್ವೇಷಾಸೂಯೆಗಳನ್ನು ಬಿಟ್ಟು ಐಕಮತ್ಯದಿಂದ ನಡೆದುಕೊಳ್ಳುವ ಉಪಾಯವನ್ನು ಕಂಡುಹಿಡಿಯಲು ಸಾಧಕವಾಗುವಂತೆ ಬೆಂಗಳೂರಿನ ವೀರಶೈವಬಂಧುಗಳು ಮಹಾಸಭೆಯನ್ನು ತಮ್ಮಲ್ಲಿ ಕೂಡಿಸಲು ಏರ್ಪಡಿಸಿ ಸಮಾಜಕ್ಕೆ ವಿಶೇಷ ಉಪಕಾರವನ್ನು ಮಾಡಿರುತ್ತಾರೆ. ಈ ಸಮಯದಲ್ಲಿ ಪ್ರತಿಯೊಬ್ಬ ವೀರಶೈವನೂ ತನ್ನ ಸಮಾಜಾಭಿವೃದ್ಧಿಯಮೇಲೆ ಪೂರ್ಣ ಅಭಿಮಾನವಿಟ್ಟು ಯಾವ ಕೆಲಸವಿದ್ದಾಗ್ಯೂ ಬಿಟ್ಟು ಸಭಾಕಾಲಕ್ಕೆ ಬೆಂಗಳೂರಿಗೆ ಬಂದು ಯಥಾಶಕ್ತಿ ಸೇವೆಮಾಡತಕ್ಕದ್ದು ಮುಖ್ಯ ಧರ್ಮವಾಗಿದೆ. ಮನುಷ್ಯನು ತನ್ನ ಮತ್ತು ತನ್ನ ಸಮಾಜದ ಕಲ್ಯಾಣವನ್ನು ಮೊದಲುಮಾಡಿ ಆನಂತರ ಅನ್ಯರ ಕಲ್ಯಾಣಮಾಡಲು ಎತ್ನಿಸುವದು ಅವನ ಧರ್ಮವಾಗಿದೆ. ಶಾಸ್ತ್ರವಚನವಾದರೂ ಆ ಪ್ರಕಾರವಾಗಿಯೇ ಇರುತ್ತದೆ. ಹೀಗಿದ್ದರೂ ತನ್ನ ಸಮಾಜಸೇವೆಯನ್ನು ಅಲಕ್ಷಿಸಿ ಬೇರೆ ಕಾರ್ಯದಲ್ಲುದ್ಯುಕ್ತನಾಗುವುದರಿಂದ, ಮನೆದೇವರನ್ನು ಉಪವಾಸವಿರಿಸಿ ಮಾರಮ್ಮನಿಗೆ ತಂಬಿಟ್ಟಿನ ಆರತಿಯನ್ನು ಮಾಡಿದಂತಾಗುತ್ತದಲ್ಲವೆ? ಈ ಮಹಾಸಭೆಯನ್ನು ಮೈಸೂರಿನವರು ಮಾಡಬೇಕೆಂದಾಗ ಹಾಂಸಭಾವಿಯವರು ಅಡ್ಡಬಂದದ್ದರಿಂದ ಮೊದಲನೆಯ ವಿಘ್ನವಾಯಿತು; ಹಾಂಸಭಾವಿಯವರು ಎತ್ನಿಸಿದಾಗ ರೋಗೋಪದ್ರವದ ನೆಪವುಂಟಾಗಿ ಎರಡನೆ ವಿಘ್ನವುಂಟಾಯಿತು. ಈಗ ಬೆಂಗಳೂರಿನವರು ಪ್ರಯತ್ನಿಸಿರುವಾಗ್ಗೆ ರಾಷ್ಟ್ರೀಯಮಹಾಸಭೆಯ ಅಡಚಣೆಯನ್ನೊಡ್ಡುವದರಿಂದ ಮೂರನೆಯ ವಿಘ್ನವಾಗುವುದು ಅಂದರೆ ಮಹಾಸಭೆಯು ನೆರೆಯಲು ನಿರಂತರ ವಿಘ್ನವಾಗುವದೆಂದು ಹೇಳಬೇಕಾದ್ದಿಲ್ಲ. ಸಮಾಜವು ಕಳೆದುಕೊಂಡಿರುವ ಕಣ್ಣನ್ನು ಮರಳಿ ಬರಮಾಡಿಕೊಳ್ಳುವ ಈ ಸುಸಮಯವನ್ನು ಹೋಗಲಾಡಿಸಿ ಇಡೀಸಮಾಜವೇ ಪೇಚಾಡುವಂತೆ ನಮ್ಮ ಉತ್ತರದೇಶದ ವೀರಶೈಬಂಧುಗಳು ಮಾಡುವದು ಜಾಣತನವಲ್ಲ. ಆದ್ದರಿಂದ ಅವರುಗಳು, ಅನೈಕಮತ್ಯದಿಂದಲೂ ಅಂತಃಕಲಹದಿಂದಲೂ ಅಧೋಗತಿಗಿಳಿಯುತ್ತಿರುವ ತಮ್ಮ ಸಮಾಜಸುಧಾರಣೆಯ ವಿಚಾರದಲ್ಲಿ ಗಮನವಿಟ್ಟು, ಪ್ರತಿವರ್ಷದಲ್ಲೂ ಯಾವದಾದರೂ ಒಂದು ಕಡೆಯಲ್ಲಿ ನಿರ್ವಿಘ್ನವಾಗಿನಡಿಯುತ್ತಿರುವ ರಾಷ್ಟ್ರೀಯಸಭೆಯ ಸೇವೆಯನ್ನು ಮಾಡಲು ಅವಕಾಶವಿರುವದರಿಂದ ಈವೇಳೆ ಅಸ್ತಿತ್ವಕ್ಕೆ ಬರಲಿಕ್ಕಿರುವ ವೀರಶೈವ ಮಹಾಸಭೆಯು ಬೆಂಗಳೂರಿನ ವೀರಶೈವಬಂಧುಗಳು ನಿರ್ಧರಿಸಿರುವಂತೆ ಡಿಶಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಿರ್ವಿಘ್ನವಾಗಿ ನಡೆಯುವಂತೆಮಾಡಿ ಆ ಕೀರ್ತಿಯನ್ನು ತಮ್ಮ ಪಾಲಿಗೆ ತಂದುಕೊಳ್ಳುವವರಾಗಲೆಂದು ಕೋರುತ್ತೇನೆ. ಹಾಗಲ್ಲದೆ ಸಭೆಯು ನಡೆಯದಂತೆ ಮುಷ್ಕರಮಾಡುವದಾದಲ್ಲಿ ಕೈಗೆಬಂದ ತುತ್ತು ಬಾಯಿಗೆಬರದಂತಾಗಿ ಇಡೀಸಮಾಜವೇ ಪೇಚಾಡುವಂತಾಗುವುದರಲ್ಲಿ ಖಂಡಿತವಾಗಿಯೂ ಸಂಶಯವಿಲ್ಲ.

ಮಹಾಸಭಾಭಿಮಾನಿ.

ಕ್ರೈಸ್ತರ ಶುದ್ಧೀಕರಣ.

ಕಳೆದ 15 ನೇ ತಾ|| ಬುಧವಾರ ನಂಜನಗೂಡು ತಾಲ್ಲೂಕು ಕಿರಗುಂದದ ಗ್ರಾಮದಲ್ಲಿ ಕ್ರೈಸ್ತರ ಶುದ್ಧೀಕರಣದ ಒಂದು ನವೀನಕಾರ್ಯವು ನಡೆಯಿತು. ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಿಕೊಳ್ಳಲ್ಪಟ್ಟಿದ್ದ ಮನೆಯನೆಂಬಾತನನ್ನು ಸಂಸಾರಸಮೇತ ಆತನ ಮನಃಪೂರ್ವಕವಾಗಿಯೂ ಸುತ್ತುಮುತ್ತಲಿನ ಸುಮಾರು 15-20 ಗ್ರಾಮದ ಮುಖಂಡರುಗಳ ಅನುಮತಿಯಿಂದಲೂ ಪುನಃ ಹಿಂದೂಮತಕ್ಕೆ ಸೇರಿಸಿಕೊಳ್ಳಲಾಯಿತು.

ಇದೇ ತಿಂಗಳು 1 ನೇ ತಾ|| ನಮ್ಮ ಗ್ರಾಮರಕ್ಷಣಾಸಭೆಗೆ ಮೇಲ್ಕಂಡ ಮನೆಯನು ಅರ್ಜಿಯನ್ನು ಬರೆದು ಅದರಲ್ಲಿ ತಾನು ಕ್ರೈಸ್ತ ಪಾದ್ರಿಗಳಿಂದ ಹಣವನ್ನು ಕೊಡುತ್ತೇವೆಂಬ ಭರವಸೆಯಿಂದಲೂ, ಅವನಿಗೆ ಸಂಘದಲ್ಲಿ ಉತ್ತಮತರದ ಗೌರವವು ದೊರೆಯುವಂತೆ ಮಾಡುವುದಾಗಿಯೂ ಇವೇ ಮುಂತಾದ ಆಸೆಗಳಿಂದ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟನೆಂಬದಾಗಿಯೂ, ಆಶ್ರಯದಿಂದ ಇವನ ಕೋರಿಕೆಯು ಈಡೇರದೆ, ಈಗ ಅನೇಕ ವಿಧವಾದ ತೊಂದರೆಗಳಿಗೆ ಗುರಿಯಾಗಿರುವುದರಿಂದಲೂ, ತನ್ನನ್ನು ಪುನಃ ತಮ್ಮ ಜಾತಿಗೆ ಸೇರಿಸುವಂತೆ ಮಾಡಿಕೊಡಬೇಕೆಂದೂ ಪ್ರಾರ್ಥಿಸಿದನು. ಅದರಂತೆ ನಾನು ಈ ವಿಷಯವನ್ನು ಪರಿಶೀಲಿಸಿ ಅನೇಕ ಗ್ರಾಮಗಳಿಗೆಹೋಗಿ ಅಲ್ಲಿನ ಮುಖಂಡರುಗಳಕೂಡ ಮಾತನಾಡಿದ್ದರಲ್ಲಿ ಕ್ರೈಸ್ತಮತಕ್ಕೆ ಸೇರಿಸಲ್ಪಟ್ಟಿದ್ದ ಪಂಚಮರನ್ನು ಪುನಃ ಜಾತಿಗೆತೆಗೆದುಕೊಳ್ಳುವುದಕ್ಕೆ ಅವರೆಲ್ಲರೂ ಸಮ್ಮತಿಸಿದರು.

ಸುಮಾರು ಒಂದೂವರೆ ವರ್ಷಗಳ ಹಿಂದೆ ರೆವರೆಂಡ್ ಮಿ|| ಸಾಡೇಸಾಹೇಬರವರು ಕಿರಗುಂದದಗ್ರಾಮಕ್ಕೆ ಬಂದಿದ್ದಾಗ ಅಲ್ಲಿನ ಪ್ರಜೆಗಳಿಗೆ ಒಂದು ಉಪನ್ಯಾಸವನ್ನುಮಾಡಿ, ಅದರಲ್ಲಿ ಹಿಂದೂಮತವನ್ನು ಅನೇಕ ವಿಧವಾಗಿ ದೂಷಿಸಿ, ಕ್ರೈಸ್ತಮತವನ್ನು ಶ್ಲಾಘಿಸಿ, ನಮ್ಮ ಆಚಾರವ್ಯವಹಾರಗಳನ್ನು ಖಂಡಿಸಿ ವಿಗ್ರಹಾರಾಧನೆ, ನಾಮಧಾರಣೆ, ಶಿಖಾಧಾರಣೆ ಮುಂತಾದ ಆರ್ಯಪದ್ಧತಿಗಳನ್ನು ತಿರಸ್ಕರಿಸಿ, ಪಂಚಮರು ಕ್ರೈಸ್ತಮತಕ್ಕೆಸೇರಿದ ಮಾತ್ರದಿಂದಲೇ ಅವರಿಗೆ ಸಕಲ ಸನ್ಮಾನಗಳುಂಟಾಗಿ, ಗ್ರಾಮದ ಎಲ್ಲಾ ಬೀದಿಗಳಲ್ಲಿಯೂ ಓಡಾಡುವುದಕ್ಕೂ ಮತ್ತು ಇತರ ವಿಧವಾದ ಸಾಂಘಿಕ ಗೌರವಗಳನ್ನು ಪಡೆಯುವುದಕ್ಕೂ ಅನುಕೂಲವಾಗುವುದೆಂದು ಆಶೆತೋರಿಸಿ, ದುರ್ಬೋಧನೆಯನ್ನುಮಾಡಿದ್ದರು. ಈ ದುರ್ಬೋಧನೆಯಿಂದ ಸುಮಾರು 19 ಜನ ಅಜ್ಞರು ಮರುಳುಮಾಡಲ್ಪಟ್ಟು ಒಡನೆಯೇ ಕ್ರೈಸ್ತಮತಕ್ಕೆಸೇರಿಕೊಂಡರು. ಆ ಪೈಕಿ ಮೇಲ್ಕಂಡ ಮನೆಯನು ಮತ್ತು ಅವನ ಸಂಸಾರವೂ ಸೇರಿಸಲ್ಪಟ್ಟಿದ್ದರು. ಮನೆಯನಿಗೆ ಸುನಂದನೆಂಬ ನಾಮಧೇಯವೂ, ಇತರರುಗಳಿಗೂ ಅದೇ ವಿಧವಾದ ಬೇರೆಬೇರೆ ಹೆಸರುಗಳೂ ಕೊಡಲ್ಪಟ್ಟವು. ಅವನಿಗೆ ಕ್ರಾಪ್‌ಮಾಡಲ್ಪಟ್ಟಿತು. ಪಾದ್ರಿಗಳ ಪದ್ಧತಿಪ್ರಕಾರ ಶಿಖಾಖಂಡನ, ಜ್ಞಾನಸ್ನಾನವೇ ಮುಂತಾದವುಗಳೊಡನೆ ಮನೆಯನು ಕ್ರೈಸ್ತಮತಕ್ಕೆಸೇರಿಸಲ್ಪಟ್ಟನು. ಉತ್ತರೋತ್ತರ ಸುನಂದನು ನಿರೀಕ್ಷಿಸಿಕೊಂಡಿದ್ದ ಯಾವ ಮಹತ್ಪ್ರಯೋಜನವೂ ಉಂಟಾಗದೆ ಅನೇಕ ವಿಧವಾದ ತೊಂದರೆಗಳೇ ಪ್ರಾಪ್ತವಾದುದರಿಂದ ತನ್ನ ಪೂರ್ವದಸ್ಥಿತಿಯನ್ನೇ ಅವಲಂಬಿಸಬೇಕೆಂದು ಮನಸ್ಸನ್ನುಮಾಡಿ ಮೇಲ್ಕಂಡ ಪ್ರಕಾರ ಈ ಸಭೆಗೆ ಅರ್ಜಿಯನ್ನು ಹಾಕಿದನು. ಈತನನ್ನು ಶುದ್ಧಿಮಾಡಿ ಸ್ವಜಾತಿಗೆಸೇರಿಸುವುದಕ್ಕಾಗಿ ಸುತ್ತುಮುತ್ತಲಿನ 15-20 ಗ್ರಾಮದಪ್ರಜೆಗಳಿಂದಕೂಡಿದ ಒಂದು ಸಭೆಯು ಕಿರುಗುಂದದಗ್ರಾಮದಲ್ಲಿ ಕಳೆದ 15ನೇ ತಾ|| ಬುಧವಾರದಿವಸ ಸೇರಿತ್ತು. ಆ ಕಾಲದಲ್ಲಿ ತಾಲ್ಲೂಕು ಅಮಲ್ದಾರರವರೂ, ಪೋಲೀಸ್ ಇನ್ಸ್‌ಪೆಕ್ಟರವರೂ, ತಾಲ್ಲೂಕು ಬೋರ್ಡು ವೈಸ್‌ಪ್ರೆಸಿಡೆಂಟರವರೂ, ಡಾಕ್ಟರವರೂ ಮತ್ತು ಮ|| ಬಿ. ಎಸ್. ನಾಗೇಶರಾಯರವರೂ ಸಹ ದಯಮಾಡಿಸಿದ್ದರು. ಮೈಸೂರಿನ ಶ್ರೀಮಾನ್ ಗೋವಿಂದಾಚಾರ್‌ಸ್ವಾಮಿಗಳವರು ನನ್ನ ಪ್ರಾರ್ಥನೆಯಂತೆ ಅಲ್ಲಿಗೆ ದಯಮಾಡಿಸಿದ್ದರು. ಅನಂತರ ಅಲ್ಲಿ ಒಂದು ಶ್ರೀರಾಮಮಂದಿರವು ಸ್ಥಾಪಿಸಲ್ಪಟ್ಟಿತು. ಹಿಂದೂಮತದ ವಿಷಯದಲ್ಲಿ ಒಂದು ಉಪನ್ಯಾಸವು ಸ್ವಾಮಿಗಳವರಿಂದಮಾಡಲ್ಪಟ್ಟಿತು. ಸುನಂದನಿಗೆ ಶಿಖಾಧಾರಣೆ, ನಾಮಧಾರಣೆಗಳು, ಮಾಡಿಸಲ್ಪಟ್ಟು ಪದ್ಧತಿಪ್ರಕಾರ ಅವನು ಸಂಸಾರಸಮೇತ ಸ್ವಮತಕ್ಕೆ ಸೇರಿಸಲ್ಪಟ್ಟನು. ಅವನ ಜಾತಿಬಂಧುಗಳು ಸಾವಿರಾರು ಜನರ ಅನುಮತಿಯಿಂದಲೂ ಈ ಕಾರ್ಯವು ತೃಪ್ತಿಕರವಾಗಿ ನಡೆಯಿತು.

ಇದರಿಂದ ಕ್ರೈಸ್ತಮತಕ್ಕೆ ಬಲಾತ್ಕಾರವಾಗಿ ಸೇರಿಸಲ್ಪಟ್ಟಿದ್ದವರನ್ನು ಜನರ ಅನುಮತಿಯಂತೆ ಸ್ವಜಾತಿಗೆ ಸೇರಿಸಿಕೊಳ್ಳುವ ಪ್ರಯತ್ನಕ್ಕೆ ಅಸ್ತಿಭಾರವು ಹಾಕಲ್ಪಟ್ಟಿತು. ಮತಾಂತರವನ್ನು ಸೇರಿ ಹಿಂದೂಜನಾಂಗವನ್ನು ಶಿಥಿಲಮಾಡುತ್ತಿರುವ ಜನರೆಲ್ಲರೂ ಈ ಮೂಲಕ ತಮ್ಮ ತಮ್ಮ ಸ್ವಜಾತಿಗಳನ್ನು ಪುನಃ ಅವಲಂಬಿಸುವರೆಂದು ನಂಬಲ್ಪಟ್ಟಿದೆ. ಪುನಃ ಸ್ವಜಾತಿಯನ್ನು ಸೇರಬೇಕೆಂದು ಬರುವವರಿಗೆ ವಿಶೇಷವಾದ ದಂಡವನ್ನು ಹೊರಿಸದೆ ಸಮಾಜದ ಗೌರವಕ್ಕಾಗಿ ಕೇವಲ 4 ಆಣೆಯನ್ನು ತೆಗೆದುಕೊಂಡು ಅವರನ್ನು ಪುನಃ ಸೇರಿಸಿಕೊಳ್ಳಬಹುದೆಂದು ತೀರ್ಮಾನವಾಗಿದೆ. ಈ ತೀರ್ಮಾನದಂತೆ ಮೇಲ್ಕಂಡ ಮನೆಯನು 4 ಆಣೆಯನ್ನು ತಪ್ಪುಕಾಣಿಕೆಯಾಗಿ ಕೊಟ್ಟಿರುತ್ತಾನೆ.

ಮೇಲ್ಕಂಡ ಕಾರ್ಯವೆಲ್ಲವೂ ಸಾಂಗವಾಗಿ ನಡೆದಮೇಲೆ ಸುಮಾರು ಒಂದೂವರೆ ಘಂಟೆಯಕಾಲ ಮೇಘರಾಜನಿಂದ ಪುಷ್ಪವೃಷ್ಟಿಯಾಗಿ ಜನರೆಲ್ಲರಿಗೂ ಆನಂದವನ್ನುಂಟುಮಾಡಿತು.

ಎಸ್. ರಾಮಚಂದ್ರರಾವ್ (ಸೆಕ್ರಿಟರಿ,)
ಗ್ರಾಮರಕ್ಷಣೆಸಭಾ, ತಗಡೂರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ

ದಿವಾನ್‌ಸಾಹೇಬರವರು ಮಾಡಿದ ಭಾಷಣದ ಮುಖ್ಯಾಂಶ.

(ದಸರಾ ಅಧಿವೇಶನ)

10ನೆಯ ಅಕ್ಟೋಬರ್ 1924

(ಕಳೆದವಾರದ ಶೇಷ.)

ವಿದ್ಯಾಭ್ಯಾಸದ ಮನೋರ್ಯ್ಯಾಂಡಂ ಮೇಲಣ ಸರ್ಕಾರೀ ಹುಕುಮಿನಲ್ಲಿ ಕಂಡ ಪರಿಷ್ಕರಣಗಳಲ್ಲಿ ಹೆಚ್ಚು ಸಂಖ್ಯೆಯವುಗಳನ್ನು ಆಚರಣೆಗೆ ತಂದಿರುವುದು ಮೇಲ್ಕಂಡ ವಿವರಣೆಯಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಏನಿದ್ದರೂ, ಕೆಲವನ್ನು ಹುಕುಮಿನಲ್ಲಿ ಇದ್ದಂತೆಯೇ ಆಚರಣೆಗೆ ತಂದಿದೆ. ಮತ್ತೆ ಕೆಲವನ್ನು ಆವಶ್ಯಕಂಡ ರೀತಿಯಲ್ಲಿ ಈಗಿನ ಸ್ಥಿತಿಗೆ ತಕ್ಕಂತೆ ಮಾರ್ಪಡಿಸಿ ಆಚರಣೆಗೆ ತರಲಾಗಿದೆ. ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಮತ್ತಷ್ಟು ಉದಾರ ಬುದ್ಧಿಯಿಂದ ಸರ್ಕಾರದವರೊಡನೆ ಏಕೀಭವಿಸಿ ಪ್ರಯತ್ನಮಾಡುವುದಾದರೆ ಅಭಿವೃದ್ಧಿಯ ಕಾರ್ಯಗಳು ಇನ್ನೂ ತೀವ್ರವಾಗಿ ನಡೆಯಬಹುದಾಗಿವೆ. ಕೆಲವು ಡಿಸ್ಟ್ರಿಕ್ಟುಗಳಲ್ಲಿ ಮಾತ್ರವೇ ಎಜುಕೇಷನ್ ತೆರಿಗೆಯನ್ನು ವಸೂಲ್ಮಾಡುತ್ತಿರುವುದರಿಂದ ವಿದ್ಯಾಭಿವೃದ್ಧಿಯ ಕಾರ್ಯಗಳು ಎಲ್ಲಾ ಕಡೆಗಳಲ್ಲಿಯೂ ಒಂದೇ ಸಮನಾಗಿ ನಡೆಯಲು ಅವಕಾಶವಿಲ್ಲದೆ ಸಮತೆಯು ತಪ್ಪಿರುತ್ತದೆ. ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಒಂದೇದರದಲ್ಲಿ ತೆರಿಗೆಯನ್ನು ವಸೂಲ್ಮಾಡಿದಲ್ಲಿ ವಿದ್ಯಾಭಿವೃದ್ಧಿಯು ಒಂದೇ ಸಮವಾಗಿ ನಡೆಯುವಂತೆ ಮಾಡಲು ಸಾಧ್ಯವಾಗುವುದು. ರೂಪಾಯಿಗೆ ಆರು ಪೈಗಳಮೇರೆಗೆ ವಿದ್ಯಾಭ್ಯಾಸದ ಸೆಸ್ಸನ್ನು ವಸೂಲ್ಮಾಡಿದರೂ ಕೂಡ, ಕೇವಲ ಸರ್ಕಾರದ ಹಣ ಒಂದರಿಂದಲೇ ಪ್ರಾಥಮಿಕ ವಿದ್ಯಾಭ್ಯಾಸದ ವಿಶಿಷ್ಟ ವೆಚ್ಚವನ್ನೂ ಒದಗಿಸುವುದು ಅಸಾಧ್ಯವಾಗಿರುತ್ತದೆ. ಕೆಲವು ಡಿಸ್ಟ್ರಿಕ್ಟು ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ಹಾಲಿ ವಸೂಲ್ಮಾಡುತ್ತಿರುವ ದರಗಳಮೇರೆಗೆ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ವಸೂಲ್ಮಾಡಿಯೇ ತೀರಬೇಕೆಂದು ನಿರ್ಬಂಧವನ್ನು ಕಲ್ಪಿಸಿ ವರ್ತಿಸುವುದಾದರೆ ಮಾತ್ರವೇ ವಿದ್ಯಾಭಿವೃದ್ಧಿಯು ಇನ್ನೂ ಹೆಚ್ಚು ಹೆಚ್ಚಾಗಿ ಮುಂದುವರಿಯುವುದು ಸಾಧ್ಯವಾಗುತ್ತದೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಆಯವ್ಯಯಗಳನ್ನು ಹೇಗೆ ಕ್ರಮಗೊಳಿಸಬಹುದೆಂಬ ವಿಷಯವನ್ನು ಕಳೆದವರುಷವೆಲ್ಲಾ ಅತ್ಯಂತ ಆಸಕ್ತಿಯಿಂದ ಪರಿಶೀಲಿಸಿ ಮುಂದಟ್ಟುಮಾಡಿಕೊಳ್ಳಲಾಯಿತು. ಏಡೆಡ್ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳನ್ನಾಗಿ ಬದಲಾಯಿಸುವ ವಿಚಾರದಲ್ಲಿಯೂ, ಮತ್ತು ಅದೇ ಸಂಬಂಧವಾದ ಇತರ ವಿಚಾರಗಳಲ್ಲಿಯೂ, ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮದ ಫಲಿತಾಂಶವೆನಿಸಿ ಪ್ರಾಪ್ತವಾಗಿರುವ, ಎಂದರೆ, ಮೇಲೆವಿವರಿಸಿ ತಿಳಿಸಿದಂಥಾ ಕಷ್ಟಗಳನ್ನು ನಿವಾರಣೆ ಮಾಡಿಕೊಂಡು ಮುಂದೆ ಸಾಗುವುದಕ್ಕನುಕೂಲವಾದ ಮುಖ್ಯ ಮಾರ್ಗಗಳ ವಿಚಾರವು ಸರ್ಕಾರದವರ ಪ್ರಬಲವಾದ ಪ್ರಯಾಲೋಚನೆಯಲ್ಲಿರುತ್ತದೆ.

ಈ ಸಂಸ್ಥಾನದ ಗ್ರಾಮಗಳಲ್ಲೆಲ್ಲಾ ಪಂಚಾಯತರ ಏರ್ಪಾಡನ್ನು ಜಾರಿಗೆ ತರುವ ಉದ್ದೇಶವಿರುವುದರಿಂದಲೂ, ಆದರಿಂದ ಲೋಕಲ್ ಬೋರ್ಡುಗಳ ಆಯವ್ಯಯಸ್ಥಿತಿಯು ಅಸಮರ್ಪಕವಾಗಿ ಪರಿಣಮಿಸುವುದರಿಂದಲೂ ಎಲ್ಲಾ ತಾಲ್ಲೂಕು ಬೋರ್ಡುಗಳನ್ನೂ ವಜಾಮಾಡುವುದೂ, ಮತ್ತು ಸ್ಥಳಾರೋಗ್ಯ, ರಸ್ತೆಗಳು, ವೈದ್ಯಸಹಾಯವೇ ಮುಂತಾದ ಬಾಬುಗಳಲ್ಲಿ ಡಿಸ್ಟ್ರಿಕ್ಟುಗಳಿಗೂ, ತಾಲ್ಲೂಕುಗಳಿಗೂ, ತಾಲ್ಲೂಕುಗಳಿಗೆ ಪರಸ್ಪರವಾಗಿಯೂ, ಗ್ರಾಮಾಂತರಗಳಿಗೆ ಪರಸ್ಪರವಾಗಿಯೂ, ಸಂಬಂಧಪಡುವ ಕೆಲಸಗಳಿಗೆಲ್ಲಾ ಗಮನಕೊಡುವಂತೆ ಡಿಸ್ಟ್ರಿಕ್ಟು ಬೋರ್ಡುಗಳಿಗೆ ಇನ್ನೂ ಧಾರಾಳವಾದ ಅವಕಾಶವನ್ನು ಕೊಡಬೇಕಾದುದೂ, ಅನುಕೂಲ ಕಾಣುವುದು ಮಾತ್ರವೇ ಅಲ್ಲದೆ ಆವಶ್ಯಕವೆಂದೂ ಸಹ ಸರ್ಕಾರದವರು ಭಾವಿಸಿರುತ್ತಾರೆ.

ಮ್ಯುನಿಸಿಪಾಲಿಟಿಗಳ ಮೇಲ್ಪಾಟು.

(1) ಮೈನರ್ ಮ್ಯುನಿಸಿಪಲ್ ಕೌನ್ಸಿಲುಗಳಲ್ಲಿನ ಚುನಾಯಿಸಲ್ಪಟ್ಟ ಮೆಂಬರುಗಳ ಸಂಖ್ಯೆಯನ್ನು ಆಯಾ ಕೌನ್ಸಿಲಿನ ಒಟ್ಟು ಮೆಂಬರುಗಳ ಸಂಖ್ಯೆಯನ್ನು $\frac{1}{3}$ನೇ ಭಾಗದಿಂದ $\frac{1}{2}$ಕ್ಕೆ ಹೆಚ್ಚಿಸತಕ್ಕದ್ದು;

(2) ಚುನಾವಣೆಗಳಲ್ಲಿ ವೋಟ್ ಮಾಡುವುದಕ್ಕಾಗಿ ಸ್ತ್ರೀಯರಿಗೆ ಓಟ್ ಮಾಡುವ ಅಧಿಕಾರವನ್ನು ಕೊಡತಕ್ಕದು;

(3) ಸಾಧಾರಣವಾಗಿ, ಸಿಟಿ ಮತ್ತು ಟೌನ್ ಮ್ಯುನಿಸಿಪಲ್ ಕೌನ್ಸಿಲುಗಳ ಪ್ರೆಸಿಡೆಂಟರುಗಳು, ಚುನಾಯಿಸಲ್ಪಡತಕ್ಕದು; ಮತ್ತು ಅವರು ಆಯಾ ಮ್ಯುನಿಸಿಪಲ್ ಕೌನ್ಸಿಲುಗಳಿಂದ ಚುನಾಯಿಸಲ್ಪಡುವುದಕ್ಕೆ ಬದಲಾಗಿ, ಓಟರುಗಳೆಲ್ಲರಿಂದಲೂ ಚುನಾಯಿಸಲ್ಪಡತಕ್ಕದು;

(4) ಸಿಟಿ ಮ್ಯುನಿಸಿಪಾಲಿಟಿಗಳು ಹೊರತು, ಮಿಕ್ಕ ಮ್ಯುನಿಸಿಪಲ್ ಆಫೀಸುಗಳನ್ನು ಡೆಪ್ಯುಟಿಕಮಿಷನರುಗಳು ತನಿಖೆ ಮಾಡುವುದಕ್ಕಾಗಿ ಏರ್ಪಾಡು ಮಾಡತಕ್ಕದು.

ಮೇಜರ್ ಮತ್ತು ಮೈನರ್ ಕೆರೆಗಳ ದುರಸ್ತಿ.

ಮೇಜರ್ ಕೆರೆಗಳು.—ಸಂಸ್ಥಾನದಲ್ಲಿರುವ ಮೇಜರ್ ಕೆರೆಗಳ ಒಟ್ಟು ಸಂಖ್ಯೆಯು 2,566; ಇವುಗಳ ಪೈಕಿ 1,830 ಕೆರೆಗಳು ದುರಸ್ತು ಮಾಡಲ್ಪಟ್ಟಿವೆ. ಇನ್ನೂ ದುರಸ್ತಾಗಬೇಕಾದ ಕೆರೆಗಳು 700 ಕ್ಕಿಂತ ಹೆಚ್ಚಾಗಿವೆ. ಇವುಗಳಿಗಾಗಿ ಸುಮಾರು 50 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಆದುದರಿಂದ, ಈ ವೆಚ್ಚಕ್ಕಾಗಿ ಪ್ರತಿವರ್ಷವೂ ಸ್ವಲ್ಪ ಸ್ವಲ್ಪ ಹಣವನ್ನು ಒದಗಿಸುತ್ತಾ ಅನೇಕ ವರುಷಗಳಕಾಲ ಕೆಲಸಮಾಡಿಸಬೇಕಾಗುತ್ತದೆ.

ಕಳೆದವರುಷ (1923-24ರಲ್ಲಿ) ಮೇಜರ್ ಕೆರೆಗಳಿಗಾಗಿ 1,92,000 ರೂಪಾಯಿಗಳನ್ನು ಮಾತ್ರ ಮಂಜೂರ್ಮಾಡಲಾಯಿತು ಮತ್ತು 1,79,626 ರೂಪಾಯಿಗಳ ವೆಚ್ಚದಿಂದ ಕೆಲಸವು ನಡೆಯಿತು. ಚಾಲ್ತಿ ವರ್ಷದಲ್ಲಿ, ಮೇಜರ್ ಕೆರೆಗಳಿಗಾಗಿ ಮಂಜೂರ್ಮಾಡಿದ ಹಣವು 2,67,000 ರೂಪಾಯಿಗಳು. ಇನ್ನೂ ಹೆಚ್ಚು ಮೊಬಲಗನ್ನು ಒದಗಿಸಲು ದ್ರವ್ಯಾಭಾವದ ದೆಸೆ
ಯಿಂದ ಅಸಾಧ್ಯವಾಗಿ ಪರಿಣಮಿಸಿತು. ಕೆಲಸವು ಇನ್ನೂ ಚೆನ್ನಾಗಿ ನಡೆಯಬೇಕಾದರೆ, ನೀರಾವರಿಯ ಕಾಮಗಾರಿಗಳ ಗ್ರಾಂಟನ್ನು ಪ್ರತಿವರ್ಷವೂ ಕನಿಷ್ಠಪಕ್ಷ 5 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಬೇಕಾಗುವುದು.

ಮೈನರ್ ಕೆರೆಗಳು.—ಸಂಸ್ಥಾನದಲ್ಲಿ ದುರಸ್ತಾಗಬೇಕಾದ ಮೈನರ್ ಕೆರೆಗಳ ಒಟ್ಟು ಸಂಖ್ಯೆಯು 14,302. ಇದುವರೆಗೆ ದುರಸ್ತಾಗಿರುವ ಕೆರೆಗಳ ಸಂಖ್ಯೆಯು ಸುಮಾರು 1,000; ಮತ್ತು ದುರಸ್ತಿಯು ಶುರುಮಾಡಲ್ಪಟ್ಟಿರುವ ಕೆರೆಗಳ ಸಂಖ್ಯೆಯು 270. ಕೆಲಸವು ಬಹುನಿಧಾನವಾಗಿ ನಡೆಯುತ್ತಿದೆ; ಇನ್ನೂ ಹೆಚ್ಚು ಗ್ರಾಂಟುಗಳನ್ನು ಕೊಡದೇ ಇದ್ದರೆ ಕೆಲಸವು ಅದೇ ರೀತಿ ನಿಧಾನವಾಗಿ ನಡೆಯಬೇಕಾಗುವುದು. 1923-24ನೇ ವರುಷದಲ್ಲಿ ಒದಗಿಸಿದ ಹಣವು 87,000 ರೂಪಾಯಿಗಳು ಮತ್ತು ವೆಚ್ಚಮಾಡಿದ ಮೊಬಲಗು 66,728 ರೂಪಾಯಿಗಳು.

ಈ ಮಧ್ಯೆ ಕಂಟ್ರಿಬ್ಯೂಷನ್ನಿನ ವಸೂಲಿಯನ್ನು ನಿರ್ಬಂಧಕ ಮಾಡುವುದಕ್ಕಾಗಿ, ಸಲಹೆ ಮಾಡಲ್ಪಟ್ಟ ಒಂದು ತಿದ್ದುಪಾಟಾದ ರೆಗ್ಯುಲೇಷನು, ನ್ಯಾಯವಿಧಾಯಕಸಭೆಯವರ ಮುಂದೆ ತರಲ್ಪಟ್ಟು ಅವರಿಂದ ಕಾನೂನಾಗಿ ಅನುಮೋದಿಸಲ್ಪಟ್ಟಿದೆ. ಅಂದಾಜನ್ನು ಮಂಜೂರ್ಮಾಡಿದ ಕೂಡಲೆ, ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕಂಟ್ರಿಬ್ಯೂಷನ್ನಿನ ವಸೂಲಿಗಾಗಿ ಹಿಂದೆ ನಿರೀಕ್ಷಿಸುತ್ತಿದ್ದಂತೆ ನಿರೀಕ್ಷಿಸದೆ ಆಯಾ ಕಾಮಗಾರಿಯನ್ನು ನಡೆಸಲು ಅವರಿಗೆ ಈಗ ಸಂಪೂರ್ಣವಾಗಿ ಅವಕಾಶವಿರುತ್ತದೆ.

ಇನಾಂ ಕಮಿಷನ್ ಮತ್ತು ಸರ್ಕಾರಿ ಆಡಳಿತಕ್ಕೊಳಪಟ್ಟಿರುವ ಇನಾಂ ಗ್ರಾಮಗಳ ಅಭಿವೃದ್ಧಿ.

ಪ್ರಸಕ್ತವರ್ಷದಲ್ಲಿ ಇನಾಂ ಕಮಿಷನರವರ ವರದಿಯು ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದಿತು; ಸರ್ಕಾರದವರು ಇಷ್ಟರಲ್ಲೇ ಅದರ ವಿಚಾರವಾಗಿ ಹುಕುಂ ನಾಮರು ಮಾಡುವವರಾಗಿದ್ದಾರೆ. ಸರ್ಕಾರಿ ಆಡಳಿತಕ್ಕೆ ತೆಗೆದುಕೊಂಡಿರುವ ಇನಾಂ ಗ್ರಾಮಗಳ ಸ್ಥಿತಿಯನ್ನು ಉತ್ತಮಪಡಿಸುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಗ್ರಾಮಗಳ ಸ್ಥಿತಿಯನ್ನು ಮೇಲ್ಪಡಿಸುವುದಕ್ಕೆ ರೆವಿನ್ಯೂ ಆಫೀಸರುಗಳ ನಡೆವಳಿಕೆಯ ಬಗ್ಗೆ ತಪಶೀಲಾದ ತಿಳುವಳಿಕೆಗಳನ್ನು ಕೊಟ್ಟು ಈಚೆಗೆ ಹುಕುಂ ಸಾದರಾಗಿದೆ. ಮತ್ತು ಸರ್ಕಾರಿ ಆಡಳಿತದಲ್ಲಿರುವ ಇನಾಂ ಗ್ರಾಮಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕಮಾಡುವ ವಿಷಯವೂ ಕೂಡ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. "ಮೈನರುಗಳ" ಎಂದರೆ ಪ್ರಾಪ್ತವಯಸ್ಕರಲ್ಲದವರ ಆಸ್ತಿಯನ್ನು ರಕ್ಷಿಸಿ ಮೇಲ್ವಿಚಾರಣೆಯ ಕೆಲಸವನ್ನು ನೋಡಿಕೊಳ್ಳುವುದಕ್ಕಾಗಿ ಬ್ರಿಟಿಷ್ ಇಂಡಿಯಾದಲ್ಲಿ ಆಚರಣೆಯಲ್ಲಿರುವ "ಕೋರ್ಟ್ ಆಫ್ ವಾರ್ಡ್ಸ್" ರೆಗ್ಯುಲೇಷನಿನ ಮಾದರಿಯ ಮೇಲೆ ಒಂದು ರೆಗ್ಯುಲೇಷನನ್ನು ರಚಿಸಿ ಕಾನೂನಾಗಿ ಆಚರಣೆಗೆ ತರುವ ವಿಚಾರವೂ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಮೈಸೂರು ಸಿವಿಲ್ ಸರ್ವಿಸ್ಸಿನ ಪುನರ್ವ್ಯವಸ್ಥೆ.

ಕಳೆದ ಅಕ್ಟೋಬರು ತಿಂಗಳಿನಲ್ಲಿ ನಾವು ಮಾಡಿದ ಭಾಷಣದಲ್ಲಿ, ಮೈಸೂರು ಸಿವಿಲ್ ಸರ್ವಿಸ್ಸನ್ನು ಪುನರ್ವ್ಯವಸ್ಥೆ ಮಾಡುವ ವಿಚಾರವು ಸರ್ಕಾರದವರ ತೀವ್ರವಾದ ಪರ್ಯಾಲೋಚನೆಯಲ್ಲಿದ್ದುದಾಗಿ ತಿಳಿಸಿದ್ದೆವು. ಆಗಿಂದೀಚೆಗೆ, ಹೊಸ ಉದ್ಯೋಗಸ್ಥರನ್ನು ಸದರಿ ಸರ್ವಿಸ್ಸಿಗೆ ಸೇರಿಸಿಕೊಳ್ಳಬೇಕಾದ ಆವಶ್ಯಕತೆಯು ವಿಶೇಷವಾಗಿ ಕಂಡುಬಂದುದರಿಂದ, ಮೈಸೂರುಸಂಸ್ಥಾನದಲ್ಲಿ ಹುಟ್ಟಿದ ಅಥವಾ ಬಹುಕಾಲದವರೆಗೆ ವಾಸಮಾಡಿರುವುದರ ಮೂಲಕ ಶ್ರೀಮನ್ಮಹಾರಾಜರವರ ಪ್ರಜೆಗಳೆನಿಸಿಕೊಂಡವರನ್ನು ಕನಿಷ್ಠಪಕ್ಷ ಇಬ್ಬರಿಗೆ ಕಡಮೆಯಿಲ್ಲದಂತೆ ಪ್ರೊಬೇಷನರಿ ಅಸಿಸ್ಟೆಂಟು ಕಮಿಷನರುಗಳನ್ನಾಗಿ ನೇಮಿಸತಕ್ಕ ಬಗ್ಗೆ ಚುನಾಯಿಸುವುದಕ್ಕಾಗಿ. ಒಂದು ಸ್ಪರ್ಧಾಪರೀಕ್ಷೆಯನ್ನು ಈ ತಿಂಗಳ ಅಖೈರಿನಲ್ಲಿ ನಡೆಸಬೇಕೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆ.

ಸಿವಿಲ್ ಸರ್ವಿಸ್ಸಿನ ನಿಬಂಧನೆಗಳನ್ನು ತಿದ್ದುಪಾಟು ಮಾಡಿದೆ; ಈ ತಿದ್ದುಪಾಟಿನ ಮುಖ್ಯ ಲಕ್ಷಣಗಳೇನೆಂದರೆ:—(1) ಸ್ಪರ್ಧಾಪರೀಕ್ಷೆಯ ಮೂಲಕವೂ, ಮತ್ತು ಕೆಳದರ್ಜೆಗಳ ಹುದ್ದೆಗಳಿಂದ ಬಡ್ತಿಯಮೂಲಕ ನೇಮಿಸಲ್ಪಟ್ಟ ಆಫೀಸರುಗಳೂ ಸೇರಿ, ಶ್ರೀಮನ್ಮಹಾರಾಜರವರಿಂದ ಚುನಾಯಿಸಲ್ಪಟ್ಟು ನೇಮಿಸಲ್ಪಡುವುದರ ಮೂಲಕವೂ, ಕೆಲಸಕ್ಕೆ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗೆ ಮಾತ್ರವೇ ಸಿವಿಲ್ ಸರ್ವಿಸ್ಸಿನ ಹುದ್ದೆಗಳನ್ನು ಇನ್ನು ಮುಂದೆ ಕೊಡಲಾಗುವುದು. (2) ರೆವಿನ್ಯೂ, ಅಕೌಂಟ್ಸ್, ಪೊಲೀಸ್, ಮುಂತಾದ ಹಲವು ಇಲಾಖೆಗಳಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೆ ಸೇರದ ಒಂದು ದರ್ಜೆಯನ್ನು ಏರ್ಪಡಿಸುವುದರ ಮೂಲಕ ಕೆಳದರ್ಜೆಗಳಲ್ಲಿನ ಆಫೀಸರುಗಳ ಬಡ್ತಿಯ ಸಂಭವವನ್ನು ಉತ್ತಮಪಡಿಸಿದೆ. (3) ಸಿವಿಲ್ ಸರ್ವಿಸ್ ದರ್ಜೆಯ ಹುದ್ದೆಗಳ ಸಂಖ್ಯೆಯನ್ನು [illegible]ಕ್ಕೆ ತಗ್ಗಿಸಿದೆ; ಮತ್ತು ರೆವಿನ್ಯೂ, ಅಕೌಂಟ್ಸ್, ಪೊಲೀಸ್, ಎಕ್ಸೈಜ್, ಸರ್ವೇ ಮತ್ತು ಇನ್‌ಕಂಟಾಕ್ಸ್ ಇಲಾಖೆಗಳಲ್ಲಿಯೂ, ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯೆಟ್ಟಿನಲ್ಲಿಯೂ, ಮತ್ತು ಕೋಆಪರೇಟಿವ್ ಇಲಾಖೆಯಲ್ಲಿಯೂ ಸಿವಿಲ್ ಸರ್ವಿಸ್ಸಿನ ದರ್ಜೆಗೂ ಮತ್ತು ತಲಬುಗಳಿಗೂ ಸರಿಸಮನಾದ ದರ್ಜೆಯೂ, ತಲಬುಗಳೂ ಇರುವ 31 ಹುದ್ದೆಗಳನ್ನು, ಆಯಾ ಇಲಾಖೆಯ ಕೆಳದರ್ಜೆಗಳಿಂದ ಬಡ್ತಿಮಾಡಲ್ಪಟ್ಟ ಆಫೀಸರುಗಳಿಗಾಗಿಯೂ ಮತ್ತು ಕೆಲವು ಸಂದರ್ಭಗಳಲ್ಲಿ ಆಯಾ ಇಲಾಖೆಗೆ ನೇರಾ ಸೇರಿಸಿಕೊಳ್ಳಲ್ಪಟ್ಟ ಆಫೀಸರುಗಳಿಗಾಗಿಯೂ, ಪ್ರತ್ಯೇಕಪಡಿಸಿ ಉಳಿಸಲಾಗಿದೆ. (4) ರೆವಿನ್ಯೂ ಇಲಾಖೆಯ ಮತ್ತು ಸೆಕ್ರೆಟೇರಿಯಟ್ಟಿನ ಹುದ್ದೆಗಳ ಪೈಕಿ ಹೆಚ್ಚು ಸಂಖ್ಯೆಯ ಹುದ್ದೆಗಳಿಗೆ ಸಿವಿಲ್ ಸರ್ವಿಸ್ಸಿನಿಂದ ಆಫೀಸರುಗಳನ್ನು ನೇಮಿಸುವುದು: ಮತ್ತು ಪರಸ್ಪರಸಂಬಂಧವುಳ್ಳ ಎಲ್ಲಾ ಇತರ ಇಲಾಖೆಗಳಲ್ಲಿನ ಹುದ್ದೆಗಳ ಪೈಕಿ ಬಹುಭಾಗದ ಹುದ್ದೆಗಳಿಗೆ ಸಿವಿಲ್ ಸರ್ವಿಸ್ ಅಲ್ಲದ ದರ್ಜೆಗೆ ಸೇರಿದ ಆಫೀಸರುಗಳನ್ನು ಮೊಕರರ್ ಮಾಡುವುದು. (5) ಸಿವಿಲ್ ಸರ್ವಿಸ್ಸಿನ ಮೆಂಬರುಗಳಿಗೆ ದೊರೆಯಬಹುದಾದ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳ ಸಂಖ್ಯೆಯನ್ನು ಹನ್ನೊಂದರಿಂದ ಒಂಬತ್ತಕ್ಕೆ ತಗ್ಗಿಸಿದೆ; ಮತ್ತು ಸೀನಿಯರ್ ಸಬ್‌ಡಿವಿಜನ್ ಆಫೀಸರು, ಸೀನಿಯರ್ ಪೊಲೀಸ್ ಸೂಪರಿಂಟೆಂಡೆಂಟರು, ಎಂಬ ಎರಡು ಹುದ್ದೆಗಳನ್ನು ಆಯಾ ಇಲಾಖೆಯಲ್ಲಿನ ಸಿವಿಲ್ ಸರ್ವಿಸ್ ದರ್ಜೆಗೆ ಸೇರದ ಆಫೀಸರುಗಳ ಪುರೋವೃದ್ಧಿಗಾಗಿ ಕಲ್ಪಿಸಿದೆ. (6) ರೆವಿನ್ಯೂ, ಪೊಲೀಸ್, ಎಕ್ಸೈಜು ಇಲಾಖೆಗಳಲ್ಲಿನ ಮತ್ತು ಸೆಕ್ರೆಟೇರಿಯಟ್ಟಿನ ಮೇಲ್ಪಟ್ಟ ಹುದ್ದೆಗಳಾದ ರೆವಿನ್ಯೂ ಕಮಿಷನರ್, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್, ಎಕ್ಸೈಜ್ ಕಮಿಷನರ್, ಸರ್ಕಾರದ ಜನರಲ್ ಇಲಾಖಾ ಸೆಕ್ರೆಟರಿಗಳು, ಮತ್ತು ಡೆಪ್ಯುಟಿಕಮಿಷನರುಗಳೇ ಮುಂತಾದ ಹುದ್ದೆಗಳನ್ನು ನಿಷ್ಕರ್ಷೆಯಾಗಿ ಸಿವಿಲ್ ಸರ್ವಿಸ್ಸಿನ ದರ್ಜೆಯಲ್ಲಿಯೇ ಸೇರಿಸಿದೆ; ಮತ್ತು ಸಿವಿಲ್ ಸರ್ವಿಸ್ಸಿಗೆ ಸೇರದೆ ಇರುವ ಆಫೀಸರುಗಳಿಗೆ ದೊರೆಯಬಹುದಾದ ಮೇಲ್ಪಟ್ಟ ಹುದ್ದೆಗಳನ್ನು ಸ್ಪಷ್ಟವಾಗಿ ಸೂಚಿಸಿದೆ.

ಮುಂದಣ ಆಲೋಚ್ಯರ ವಿಚಾರಗಳು.

ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರಕೃತದಲ್ಲಿ ಅತ್ಯಾಸಕ್ತಿಯಿಂದ ಗಮನ ಕೊಡುತ್ತಿರುವ ದೊಡ್ಡದೊಡ್ಡ ವಿಷಯಗಳ ಪೈಕಿ ಕೆಲವನ್ನು ಈಗ ಸೂಚಿಸುತ್ತೇವೆ.

ಖನಿಜ ಸಂಪತ್ತನ್ನು ಅಭಿವೃದ್ಧಿಗೆ ತರುವುದು.—ಈ ಸಭೆಯಲ್ಲಿ ನಾವು ಒಂದೆರಡುವೇಳೆ ತಿಳಿಯಪಡಿಸಿರುವಂತೆ, ಮೈಸೂರುದೇಶದಲ್ಲಿ ಕೈಗಾರಿಕೆಯ ಅಭಿವೃದ್ಧಿಗೆ ಸ್ವಾಭಾವಿಕವಾದ ಸಾಧನಸಂಪತ್ತುಗಳು ಅಪರಿಮಿತವಾಗಿವೆ. ಮೈಸೂರುದೇಶದ ಖನಿಜ ಸಂಪತ್ತನ್ನೆಲ್ಲಾ ಇನ್ನೂ ಸಂಪೂರ್ಣವಾಗಿ ಉಪಯೋಗಪಡಿಸಿಕೊಂಡಿಲ್ಲ. ಆದರೆ ಕೈಗಾರಿಕೆಯು ಪ್ರಾಬಲ್ಯಕ್ಕೆ ಬರುವ ಸಂಭವಗಳು ಅಪರಿಮಿತವಾಗಿರುವ ದೇಶಗಳ ಪೈಕಿ ಮೈಸೂರುದೇಶಕ್ಕೆ ಉನ್ನತ ಸ್ಥಾನವು ದೊರೆಯುವಂತೆ ಮಾಡಲು ಇದುವರೆಗೆ ಪರಿಶೋಧನೆಯ ಮೂಲಕ ಗೊತ್ತಾಗಿರುವ ಅಂಶಗಳೇ ಸಾಕಾಗಿವೆ. ಮೈಸೂರುದೇಶದಲ್ಲಿ ಚಿನ್ನ ಮತ್ತು ಕಬ್ಬಿಣದ ಜತೆಗೆ ಅಮೂಲ್ಯವಾದ ಕ್ರೋಮ್ ಮತ್ತು ಮ್ಯಾಂಗನೀಸ್ ಲೋಹಗಳ ಅದರುಗಳು ಹೇರಳವಾಗಿರುವಂತೆ ಕಂಡುಬಂದಿದೆ. ಇದಲ್ಲದೆ, ಅಮೂಲ್ಯವಾದ ಇತರ ಖನಿಜ ವಸ್ತುಗಳಿರುವ ಚಿಹ್ನೆಗಳು ಯಥೇಷ್ಟವಾಗಿ ಕಂಡುಬರುತ್ತವೆ. ಅವುಗಳನ್ನು ಕಂಡುಹಿಡಿದು ರೂಢಿಸಿದಾಗ, ಮೈಸೂರುದೇಶವು ಕೈಗಾರಿಕೆಯ ವಿಚಾರದಲ್ಲಿ ಅಭ್ಯುದಯಸ್ಥಿತಿಗೆ ಬರುವುದು ಖಂಡಿತ. ಯುಕ್ತವೆನಿಸಿರುವ ವಾಣಿಜ್ಯ ತತ್ವಗಳಿಗನುಸಾರವಾಗಿ ಸಂಸ್ಥಾನದ ಖನಿಜ ಸಂಪತ್ತನ್ನು ರೂಢಿಸಿ ಅಭಿವೃದ್ಧಿಯನ್ನುಂಟುಮಾಡಲು ತಕ್ಕ ಪ್ರಯತ್ನಗಳು ನಡೆಯುತ್ತಾ ಇವೆ. ಹೀಗೆ ಮಾಡುವುದರಿಂದ ಸಂಸ್ಥಾನದ ಅಭಿವೃದ್ಧಿಗೋಸ್ಕರ ಹಿಂದೆ ಎಷ್ಟೋ ಚೆನ್ನಾಗಿ ಕೆಲಸ ನಡೆಸಿರುವ ಖಾಸಗಿಜನರ ಉದ್ಯಮಗಳಿಗೆ ಪ್ರತಿಬಂಧಕ ಬಾರದಂತೆಯೂ, ಒಟ್ಟು ಆದಾಯದಲ್ಲಿ ಇನ್ನೂ ಹೆಚ್ಚಿನ ಭಾಗವು ಸರ್ಕಾರದವರಿಗೆ ಸಲ್ಲುವಂತೆಯೂ ಆಗುತ್ತದೆ. ಈ ವಿಚಾರದಲ್ಲಿ ಈ ಸಭೆಯ ಮುಂದಣ ಅಧಿವೇಶನದಲ್ಲಿ ಸರ್ಧರವಾದ ಸಂಗತಿಯನ್ನು ತಿಳಿಸಲು ಸಾಧ್ಯವಾಗುವುದೆಂದು ನಂಬಿರುತ್ತೇವೆ.

ವ್ಯಾಪಾರದ ಅನುಕೂಲತೆಯ ವಿಚಾರವಾಗಿ ಪರಿಶೋಧನೆ.—ಕಳೆದ ಜೂನ್ ತಿಂಗಳಲ್ಲಿ ನಡೆದ ಪುನರ್ವ್ಯವಸ್ಥಿತವಾದ ಸಂಪದಭ್ಯುದಯ ಸಮಾಜದ ಸಮಾರಂಭ ಭಾಷಣದಲ್ಲಿ "ಒಂದು ದೇಶದ ವ್ಯಾಪಾರದ ಪ್ರವರ್ಧಮಾನಸ್ಥಿತಿಯನ್ನು ಗೊತ್ತುಮಾಡಬೇಕಾದರೆ ಆಮದಿಗಿಂತಲೂ ರಫ್ತು ಹೆಚ್ಚಾಗಿರಬೇಕೆಂಬುದು ಅರ್ಥಶಾಸ್ತ್ರದ ಒಂದು ಮೂಲತತ್ವವಾಗಿದೆ.........ಈ ತತ್ವದ ಪ್ರಕಾರ ಪರೀಕ್ಷೆಮಾಡಿ ನೋಡಿದರೆ, ಮೈಸೂರುದೇಶದ ವ್ಯಾಪಾರಸ್ಥಿತಿಯು ಸ್ವಲ್ಪವೂ ತೃಪ್ತಿಕರವಾಗಿಲ್ಲ............ಆದುದರಿಂದ ಸರಿಯಾದ ರೀತಿಯಲ್ಲಿ ವ್ಯಾಪಾರವನ್ನು ಅಭಿವೃದ್ಧಿಪಡಿಸಿ,........ರಫ್ತನ್ನು ಹೆಚ್ಚಿಸುತ್ತಾ ಬಂದು ದೇಶವನ್ನು ಉಭ್ಯುದಯಸ್ಥಿತಿಗೆ ತರುವುದು ಅವಶ್ಯವಾಗಿದೆ" ಎಂದು ತಿಳಿಸಿದೆವು. ಈ ವಿಷಯವನ್ನು ಇನ್ನೂ ಹೆಚ್ಚಾಗಿ ಪರಿಶೋಧಿಸಲುದ್ದೇಶಿಸಿದೆ. ಮತ್ತು ಈ ಉದ್ದೇಶಕ್ಕಾಗಿ ಈ ವಿಷಯವನ್ನು ಜಾಗರೂಕತೆಯಿಂದ ಪರಾಮರ್ಶಿಸಿ ಸರ್ಕಾರದವರು ಒಂದು ನಿರ್ದಿಷ್ಟವಾದ ಕ್ರಮವನ್ನು ಅನುಸರಿಸುವ ಬಗ್ಗೆ ಉಪಾಯಾಂತರಗಳನ್ನು ಸೂಚಿಸುವುದಕ್ಕೋಸ್ಕರವಾಗಿ ವಾಣಿಜ್ಯ ವಿಚಾರಗಳಲ್ಲಿ ನಿಪುಣರೆನಿಸಿರುವವರು ದಕ್ಷತೆಯಿಂದ ಕೆಲಸ ನಡೆಸುವಬಗ್ಗೆ ಅವರನ್ನೊಳಗೊಂಡ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ.

ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಏರ್ಪಾಡುಗಳು.—ಮೈಸೂರುದೇಶದಲ್ಲಿ ಖನಿಜ ಸಂಪತ್ತಿನ ಜತೆಗೆ ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಏರ್ಪಾಡುಗಳನ್ನು ಇನ್ನೂ ಅಭಿವೃದ್ಧಿಗೆ ತರಲು ಅತ್ಯಧಿಕವಾದ ಅವಕಾಶಗಳಿರುತ್ತವೆ. ಕೃಷ್ಣರಾಜಸಾಗರದ ಏರ್ಪಾಡಿನ ಸಹಾಯದೊಡನೆ ನಡೆಸುತ್ತಿರುವ ಶಿವಸಮುದ್ರದ ವಿದ್ಯುಚ್ಛಕ್ತಿಯ ಉತ್ಪತ್ತಿಯ ಏರ್ಪಾಡಿನಿಂದ ಮೈಸೂರು, ಬೆಂಗಳೂರು ಮತ್ತು ಕೋಲಾರ ಚಿನ್ನದಗಣಿ ಪ್ರದೇಶಗಳಲ್ಲಿ ನಡೆಯತಕ್ಕ ಕೈಗಾರಿಕೆಗಳಿಗೆ ಮಾತ್ರ ಪ್ರಯೋಜನವುಂಟಾಗುತ್ತದೆ. ಮದರಾಸು ಸರ್ಕಾರದವರು ಮೇಕೆದಾಟಿನ ನೀರಿನ ಸಂಬಂಧವಾದ ತಮ್ಮ ಹಕ್ಕುಗಳನ್ನು ಕೆಲವು ಷರತ್ತುಗಳಮೇಲೆ ಮೈಸೂರು ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತಾರೆ. ಕೋಲಾರದ ಚಿನ್ನದಗಣಿ ಪ್ರದೇಶಗಳಿಗೂ, ಇತರ ಕೈಗಾರಿಕೆಗಳಿಗೂ ದಿನೇದಿನೇ ಹೆಚ್ಚಾಗಿ ಬೇಕಾಗುತ್ತಿರುವ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿ ಸದರಿ ನೀರನ್ನು ಇನ್ನು ಸ್ವಲ್ಪಕಾಲದಲ್ಲಿಯೇ ಉಪಯೋಗಿಸಿಕೊಳ್ಳಬೇಕಾಗುವುದು. ಕೈಗಾರಿಕೆಯನ್ನು ಅಭಿವೃದ್ಧಿಗೆ ತರಲು ತಕ್ಕ ಸಾಧನಗಳು ಮಲೆನಾಡಿನಲ್ಲಿ ಮತ್ತೂ ಹೆಚ್ಚಾಗಿವೆ. ದೀಪದಕಡ್ಡಿಯನ್ನು ತಯಾರುಮಾಡುವ ಕಾರ್ಖಾನೆಯನ್ನೂ, ಕಾಗದದ ಕೈಗಾರಿಕೆಯನ್ನೂ, ಸಕ್ಕರೆಯ ಕಾರ್ಖಾನೆಯನ್ನೂ, ಖನಿಜವಸ್ತುಗಳ ಕೈಗಾರಿಕೆಗಳನ್ನೂ, ಇತರ ಮುಖ್ಯವಾದ ಎಷ್ಟೋ ಕೈಗಾರಿಕೆಗಳನ್ನೂ, ನಡೆಸುವುದಕ್ಕೆ ವಿಶೇಷವಾಗಿ ಅವಕಾಶವಿದೆ; ಇವುಗಳಿಗೆಲ್ಲಾ ಸುಲಭವೆಚ್ಚದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಆವಶ್ಯಕ. ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಬಗ್ಗೆ ಗೇರಸೊಪ್ಪೆಯಲ್ಲಿರುವ ಜಲಪಾತವನ್ನು ಉಪಯೋಗಕ್ಕೆ ತರುವ ವಿಷಯವು ಬಹುಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಏರ್ಪಾಡು ಎಷ್ಟರ ಮಟ್ಟಿಗೆ ಫಲಕಾರಿಯಾಗಿ ಪರಿಣಮಿಸಬಹುದೆಂಬ ಸಂಗತಿಯನ್ನು ಕೂಲಂಕಷವಾಗಿ ಪರಿಶೀಲಿಸತಕ್ಕ ಬಗ್ಗೆ ಸರ್ಕಾರದವರು ಈಚೆಗೆ ಹುಕುಂ ಮಾಡಿದರು; ಸದರಿ ಕೆಲಸಕ್ಕಾಗಿ ನೇಮಕವಾಗಿದ್ದ ಆಫೀಸರವರು ಕಳುಹಿಸಿದ ವರದಿಯು ಈಗತಾನೆ ತಲಪಿರುತ್ತದೆ. ಈ ಏರ್ಪಾಡನ್ನು ನೆರವೇರಿಸಲು ಬಹಳ ಭಾರೀ ವೆಚ್ಚವು ತಗಲುತ್ತದೆ. ಇದನ್ನು ನಡೆಸಿದಪಕ್ಷದಲ್ಲಿ, ಮಲೆನಾಡಿನಲ್ಲಿ ಭಾರಿ ಕೈಗಾರಿಕೆಗಳನ್ನಾರಂಭಿಸುವುದಕ್ಕೆ ಅವಕಾಶವು ದೊರೆಯುತ್ತದೆ. ಅಲ್ಲದೆ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ನಡೆಯುತ್ತಿರುವ ಕಬ್ಬಿಣದ ಭಟ್ಟಿಯ ಕೆಲಸದ ಸಂಬಂಧದಲ್ಲಿ ಅನೇಕ ಸಣ್ಣಪುಟ್ಟ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಅನುಕೂಲವಾಗುವುದು. ಚಾಲ್ತಿವರುಷದಲ್ಲಿ ಈ ಏರ್ಪಾಡನ್ನು ಸರ್ವತೋಮುಖವಾಗಿ ಮತ್ತು ಸಂಪೂರ್ಣವಾಗಿ ಪರಿಶೋಧಿಸಲಾಗುವುದು ಮತ್ತು ಮುಂದಣವರುಷದ ಈ ಸಭೆಯ ದಸರಾ ಅಧಿವೇಶನದಲ್ಲಿ ಇದರ ವಿಚಾರದಲ್ಲಿ ನಿರ್ಧಾರವಾಗಿ ತಿಳಿಸಲು ಸಾಧ್ಯವಾದೀತೆಂದು ಕೋರುತ್ತೇವೆ.

ಭಟ್ಕಳಿನ ರೇವು.—ಪಶ್ಚಿಮತೀರದಲ್ಲಿರುವ ಭಟ್ಕಳಿನಲ್ಲಿ ರೇವನ್ನು ಸ್ಥಾಪಿಸುವ ಬಗ್ಗೆ ಒಂದು ಪ್ರಾಜೆಕ್ಟನ್ನು ಕುರಿತು ಕಳೆದ ಅಕ್ಟೋಬರು ತಿಂಗಳಲ್ಲಿ ಈ ಸಭೆಯಲ್ಲಿ ನಾವು ಮಾಡಿದ ಭಾಷಣದಲ್ಲಿ ಸೂಚಿಸಿದ್ದೆವಷ್ಟೆ. ಸದರಿ ಪ್ರಾಜೆಕ್ಟನ್ನು ಕೈಬಿಟ್ಟಿಲ್ಲವೆಂದೂ, ದ್ರವ್ಯಾನುಕೂಲವು ಒದಗಿದಾಗ ಪಶ್ಚಿಮತೀರದವರೆಗೆ ರೈಲ್ವೆಯು ಬಡಾಯಿಸಲನುಕೂಲಿಸುವಂತೆ ಶಿವಮೊಗ್ಗಾ-ಅರಸಾಳು ಲೈನಿನ ಕಾಮಗಾರಿಯೇ ಮೊಟ್ಟಮೊದಲು ಕೈಗೊಳ್ಳುವ ರೈಲ್ವೆ ಕಾಮಗಾರಿಯೆಂದೂ ತಿಳಿಸಿದ್ದೆವು. ಭಟ್ಕಲ್ ರೇವಿನ ಮತ್ತು ಶಿವಮೊಗ್ಗಾದಿಂದ ಭಟ್ಕಲ್ ರೇವಿನವರೆಗೆ ರೈಲ್ವೆ ಲೈನನ್ನು ಹಾಕುವ ವಿಷಯವು ಕಳೆದ ವರುಷದಲ್ಲಿ ಸ್ವಲ್ಪವೂ ಮುಂದುವರಿಯಲಿಲ್ಲ; ಹಣವಿಲ್ಲದುದರ ದೆಸೆಯಿಂದ, ಪ್ರಕೃತದಲ್ಲಿ ಈ ಏರ್ಪಾಡುಗಳನ್ನು ಸರ್ಕಾರದವರು ಕೈಗೊಳ್ಳುವ ಸ್ಥಿತಿಯಲ್ಲಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ.

ಪಶ್ಚಿಮತೀರದವರೆಗೆ ನೇರವಾದ ಮತ್ತು ಸುಗಮವಾದ ಮಾರ್ಗವಿಲ್ಲದಿರುವುದರ ದೆಸೆಯಿಂದ ಸಂಸ್ಥಾನಕ್ಕೆ ವಿಶೇಷ ಅನಾನುಕೂಲವುಂಟಾಗಿದೆ. ಅದಕಾರಣ, ಇಂಥಾ ಮಾರ್ಗವೊಂದನ್ನು ಕಲ್ಪಿಸುವುದು ಅತ್ಯವಶ್ಯವಾಗಿದೆ. ವರುಷವೆಲ್ಲಾ ಅವಿಚ್ಛಿನ್ನವಾಗಿ ಕೆಲಸ ನಡೆಯುವ ರೇವಿಗೆ ಅತ್ಯಂತ ಸಮೀಪವಾದ ಮತ್ತು ನೇರವಾದ ಮಾರ್ಗವನ್ನು ಕಲ್ಪಿಸಿಕೊಂಡಲ್ಲಿ, ಸಂಸ್ಥಾನದ ವಾಣಿಜ್ಯ ಮತ್ತು ಕೈಗಾರಿಕೆಯ ಅಭಿವೃದ್ಧಿಗೆ ವಿಶೇಷವಾಗಿ ಸೌಲಭ್ಯವುಂಟಾಗುತ್ತದೆ. ಇದೂ ಅಲ್ಲದೆ, ಶಿವಮೊಗ್ಗೆಯಿಂದ ಭಟ್ಕಳಿಗೆ ರೈಲ್ವೆ ಮಾರ್ಗವನ್ನೇರ್ಪಡಿಸಿ ಭಟ್ಕಳ್ ರೇವೆಯನ್ನು ಅನುಕೂಲಪಡಿಸಿಕೊಂಡಲ್ಲಿ, ಇದುವರೆಗೂ ರೂಢಿಸಲ್ಪಡದ ಸ್ವಾಭಾವಿಕವಾದ ಸಾಂಪತ್ತಿಕ ಸಾಧನಗಳು ಯಥೇಷ್ಟವಾಗಿರುವ ಮತ್ತು ಈಗ ಅಧಿಕಸ್ಥಿತಿಯು ತುಂಬಾ ಅತೃಪ್ತಿಕರವಾಗಿರುವ ಮಲೆನಾಡು ಪ್ರಾಂತ್ಯಗಳಲ್ಲೆಲ್ಲಾ [illegible] ಮುಖ್ಯವಾದ ಸಂಚಾರ ಸೌಲಭ್ಯವುಂಟಾಗಿ ಅಭಿವೃದ್ಧಿಗೆ ಮಾರ್ಗವಾಗುತ್ತದೆ.

ಭಟ್ಕಳ್ ರೇವಿನ ಅಭಿವೃದ್ಧಿಯಿಂದ ಇಂಡಿಯಾದೇಶದ ಪಶ್ಚಿಮಸಮುದ್ರತೀರದಲ್ಲಿ ಬ್ರಿಟಿಷ್ ಇಂಡಿಯಾಕ್ಕೆ ಸೇರಿದ ಮತ್ತಾವ ರೇವುಪಟ್ಟಣಕ್ಕೂ ಬಾಧಕವುಂಟಾಗುವುದಿಲ್ಲ. ಈ ರೇವಿನಿಂದ ಬಾಧಕವಾಗುವುದಕ್ಕೆ ಬದಲಾಗಿ ಅದರ ನೆರೆಹೊರೆಯಲ್ಲಿರುವ ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸಮುದ್ರತೀರ ಪ್ರದೇಶಗಳ ಅಭಿವೃದ್ಧಿಗೆ ಸಹಾಯವಾಗಬಹುದು. ಆದುದರಿಂದ, ನಮಗೆ ದ್ರವ್ಯಾನುಕೂಲತೆಯು ಒದಗಿದೊಡನೆಯೇ ಈ ಏರ್ಪಾಡುಗಳನ್ನು ಕೈಗೊಳ್ಳಲನುಕೂಲಿಸುವಂತೆ ತಕ್ಕ ಸೌಕರ್ಯಗಳನ್ನು ಇಂಡಿಯಾ ಸರ್ಕಾರದವರು ಕಲ್ಪಿಸಿಕೊಡುವರೆಂದು ನಿರೀಕ್ಷಿಸುತ್ತೇವೆ. ಇವುಗಳು ಯಾವುವೆಂದರೆ :—

(1) ಮೈಸೂರುಸಂಸ್ಥಾನದ ಸರಹದ್ದಿನಿಂದ ಸುಮಾರು 14 ಮೈಲಿಗಳ ದೂರದವರೆಗೆ ಈ ರೇವಿಗೆ ರೈಲ್ವೆ ಮಾರ್ಗವನ್ನು ಹಾಕಿಸಲು ಅನುಮತಿಯನ್ನು ಕೊಡುವುದು ;

(2) ಇದಕ್ಕಾಗಿ ಎರಡು ಚದರಮೈಲಿಗಳ ವಿಸ್ತೀರ್ಣದ ಜಮೀನನ್ನೂ, ತೀರದ ಮುಂಭಾಗವನ್ನೂ, ಶಾಶ್ವತವಾಗಿ ಅಥವಾ ಪುನಃ ನಮಗೆ ಯುಕ್ತ ತೋರಿದರೆ ಗುತ್ತಿಗೆಯ ಅವಧಿಯನ್ನು ನವೀಕರಿಸಿಕೊಳ್ಳಬಹುದೆಂಬ ಷರತ್ತಿನಮೇಲೆ 99 ವರುಷಗಳ ಅವಧಿಯವರೆಗೆ ಗುತ್ತಿಗೆಗೆ ಕೊಡುವುದು ;

(3) ರೈಲ್ವೇ ಲೈನಿಗೆ ಬೇಕಾಗುವ ಜಮೀನನ್ನು ಕೊಡುವುದು ;

(4) ರೈಲ್ವೆಗೂ, ರೇವಿಗೂ ಬೇಕಾಗುವ ಜಮೀನು ಮತ್ತು ತೀರದ ಮುಂಭಾಗದಮೇಲಿನ ಅಧಿಕಾರವನ್ನು ಕೊಡುವುದು.

ನಮ್ಮ ಕಬ್ಬಿಣದ ಕಾರ್ಖಾನೆಯು ಅಭಿವೃದ್ಧಿಗೆಬಂದು ಬೆಲೆಬಾಳುವ ಇನ್ನೂ ಇತರ ಖನಿಜ ವಸ್ತುಗಳನ್ನು ಅನ್ವೇಷಣಮಾಡಿ ಕಂಡುಹಿಡಿದರೆ ಈ ರೇವಿನ ಏರ್ಪಾಡು ಫಲಕಾರಿಯಾಗುವುದೆಂಬುದರಲ್ಲಿ ಲೇಶವೂ ಸಂದೇಹವಿಲ್ಲ.

ಪೊಗದಿ.—ಒಂದು ದೇಶೀಯ ಸಂಸ್ಥಾನದ ಪೊಗದಿಯೂ, ಅದರ ಸೈನ್ಯದ ಒಟ್ಟು ವೆಚ್ಚವೂ, ಎರಡೂ ಸೇರಿ ಅದರ ಒಟ್ಟು ಹುಟ್ಟುವಳಿಯಲ್ಲಿ ಶೇಕಡಾ 15 ರಷ್ಟಕ್ಕಿಂತ ಹೆಚ್ಚಾಗಿದ್ದರೆ, ಹಾಗೆ ಹೆಚ್ಚಾಗಿರುವಷ್ಟು ಮೊಬಲಗನ್ನು ಆಯಾಯ ಇಂಡಿಯಾದೇಶೀಯ ಸಂಸ್ಥಾನಗಳು ಕೊಡುವ ಪೊಗದಿಯ ಹಣದಲ್ಲಿ ಕಡಮೆಮಾಡುವುದಾಗಿ ಇಂಡಿಯಾ ಸರ್ಕಾರದವರು ಏರ್ಪಾಡನ್ನು ಮಾಡುವವರಾಗಿದ್ದಾರೆಂಬ ಸಂಗತಿಯನ್ನು ಕಳೆದ ಬಡ್ಜೆಟ್ ಅಧಿವೇಶನದ ನಮ್ಮ ಭಾಷಣದಲ್ಲಿ ಸೂಚಿಸಿರುತ್ತೇವೆ. ಸಾಲದಿಂದಲೂ, ವಾಣಿಜ್ಯ ಕಾರ್ಯಗಳಿಂದಲೂ, ಚಿನ್ನ ಮತ್ತು ಇತರ ಖನಿಜಗಳಮೇಲಿನ ರಾಜಾದಾಯದಿಂದಲೂ ಬರುವ ಉತ್ಪತ್ತಿಯೇ ಮೊದಲಾದ ವಿಶೇಷ ಸ್ವಭಾವದ ಹುಟ್ಟುವಳಿಯ ಬಾಬುಗಳನ್ನು ಬಿಟ್ಟರೆ, ಮೈಸೂರುಸಂಸ್ಥಾನದ ಒಟ್ಟು ಹುಟ್ಟುವಳಿಯು 267 ಲಕ್ಷ ರೂಪಾಯಿಗಳೆಂದು ಇಟ್ಟುಕೊಳ್ಳಬಹುದು. ಇದರಲ್ಲಿ ಶೇಕಡಾ 15 ರಷ್ಟು ಮೊಬಲಗು ಸುಮಾರು 40 ಲಕ್ಷ ರೂಪಾಯಿಗಳಾಗುವುವು. ಆದರೆ, ಸೈನ್ಯದ ವೆಚ್ಚವೂ, ಪೊಗದಿಯೂ, ಸೇರಿ 53 ಲಕ್ಷ ರೂಪಾಯಿಗಳವರೆಗೆ ಆಗುವುದು. ಈಗ ಪರ್ಯಾಲೋಚಿಸಲ್ಪಟ್ಟಿರುವ ರೀತಿಯಲ್ಲಿ ಸೈನ್ಯದ ಪುನರ್ವ್ಯವಸ್ಥೆಯ ಕೆಲಸವನ್ನು ನೆರವೇರಿಸಿದ ಪಕ್ಷಕ್ಕೆ ಸದರಿ ಮೊಬಲಗು 57 ಲಕ್ಷ ರೂಪಾಯಿಗಳಿಗೆ ಏರುತ್ತದೆ. ಇಂಡಿಯಾ ಸರ್ಕಾರದವರಿಂದ ಸೂಚಿಸಲ್ಪಟ್ಟಿರುವ ನಿಯಮಾನುಸಾರ ಪೊಗದಿಯು ಕಡಮೆಯಾಗುವ ವಿಷಯದಲ್ಲಿ, ಮೈಸೂರುಸಂಸ್ಥಾನದವರು ತಮಗಿರುವ ಹಕ್ಕನ್ನು ಸದರಿ ಸರ್ಕಾರದವರ ಪರ್ಯಾಲೋಚನೆಗೆ ಒಪ್ಪಿಸಿರುತ್ತಾರೆ. ಈ ವಿಷಯವಾಗಿ ನಾವು ಮಾಡಿಕೊಂಡಿರುವ ಅರಿಕೆಯನ್ನು ಕುರಿತು ಯಾವ ವಿವರಗಳನ್ನೂ ತಿಳಿಸುವುದು ಈಗಿನ ಸ್ಥಿತಿಯಲ್ಲಿ ನಮಗೆ ಸಾಧ್ಯವಲ್ಲ ; ಆದರೆ ಈಗ್ಗೆ ನೂರು ವರುಷಗಳಿಗೆ ಮೇಲ್ಪಟ್ಟಷ್ಟು ಹಿಂದೆಯೇ ಸಂಸ್ಥಾನದಮೇಲೆ ಹೊರಿಸಿದ್ದ ಪೊಗದಿಯನ್ನು, ಒಟ್ಟು ಇಂಡಿಯಾಚಕ್ರಾಧಿಪತ್ಯದ ನಾನಾ ಭಾಗಗಳವರು ಇಂಡಿಯಾದೇಶದ ರಕ್ಷಣೆಗೆ ಅವಶ್ಯವಾದ ಸೈನ್ಯಗಳ ವೆಚ್ಚದ ಬಗ್ಗೆ, ಎಷ್ಟೆಷ್ಟು ಹಣವನ್ನು ಕೊಡಬೇಕೆಂಬ ಸಾಮಾನ್ಯ ವಿಷಯಕ್ಕೆ ತಕ್ಕಷ್ಟು ಗಮನವನ್ನು ಕೊಟ್ಟು, ನಮ್ಮ ಆಯವ್ಯಯಗಳಮೇಲೆ ಬಿದ್ದಿರುವ ಪೊಗದಿಯ ಭಾರವನ್ನು ಕಡಮೆಮಾಡಿ ಸರಿಪಡಿಸಿದ ಹೊರತು, ಮೈಸೂರುಸಂಸ್ಥಾನದ ಹಣಕಾಸಿನ ವಿಷಯದಲ್ಲಿ ಯಥಾಪ್ರಕಾರ ದುಸ್ಥಿತಿಯಲ್ಲಿಯೇ ಇರುವುದೆಂದು ಸೂಚಿಸಿದರೆ ಸಾಕಾಗುವುದೆಂದು ಭಾವಿಸುತ್ತೇವೆ. ಮೈಸೂರುಸಂಸ್ಥಾನದವರ ಅರಿಕೆಯು ಈಗ ಇಂಡಿಯಾ ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ. ಈ ವಿಚಾರವು ರಾಜನೀತಿವಿಚಕ್ಷಣೆಯಿಂದಲೂ, ನ್ಯಾಯಸಮ್ಮತವಾಗಿಯೂ, ತೀರ್ಮಾನವಾಗುವುದೆಂದು ನಾವೆಲ್ಲರೂ ಹಾರೈಸೋಣ !

ಸುಂಕಗಳು.—ಮೈಸೂರುಸೀಮೆಗೆ ಸ್ವಂತ ರೇವುಪಟ್ಟಣವು ಇಲ್ಲದಿರುವುದರಿಂದ, ಈ ಸಂಸ್ಥಾನಕ್ಕೆ ಆಮದಾಗತಕ್ಕ ಎಲ್ಲಾ ವಿದೇಶೀಯ ಸರಕುಗಳಮೇಲೂ ಬ್ರಿಟಿಷ್ ಇಂಡಿಯಾ ಸರ್ಕಾರದವರು ಸುಂಕಗಳನ್ನು ಹಾಕಬಹುದಾಗಿದೆ. ಆಳಿದ ಮಹಾಸ್ವಾಮಿಯವರಿಗೆ ಸಾರ್ವಭೌಮ ಸರ್ಕಾರದವರು ಈ ಸಂಸ್ಥಾನದ ರಾಜ್ಯಭಾರವನ್ನು ವಹಿಸಿದ ಕಾಲದಲ್ಲಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸುಂಕಗಳಿಲ್ಲದೆ ಸರಕುಗಳ ರಫ್ತು ಮತ್ತು ಆಮದು (ಫ್ರೀಟ್ರೇಡ್) ಆಗಬಹುದೆಂಬುದಾಗಿ ಆಗ್ಗೆ ಬ್ರಿಟಿಷ್ ಸರ್ಕಾರದವರ ಉದ್ದೇಶವು ಕಂಡೋಕ್ತವಾಗಿದ್ದ ಕಾರಣ, ಸುಂಕಗಳು ಅತ್ಯಲ್ಪವಾಗಿದ್ದುವು. ಆಗಿನಿಂದೀಚೆಗೆ, ಅನೇಕ ವಿಧವಾದ ಸರಕುಗಳಮೇಲೆ ಸುಂಕವು ಹಾಕಲ್ಪಡುತ್ತಿರುವುದರಿಂದಲೂ, ಮತ್ತು ಸುಂಕದ ದರಗಳು ವಿಶೇಷವಾಗಿ ಹೆಚ್ಚಿಸಲ್ಪಟ್ಟಿರುವುದರಿಂದಲೂ, ಈ ಸಂಸ್ಥಾನದ ಪ್ರಜೆಗಳಮೇಲೆ ಅವರ ಶಕ್ತಿಗೆ ಮಿತಿಮೀರಿದಷ್ಟು ತೆರಿಗೆಗಳನ್ನು ಹೊರಿಸಿದಂತಾಗಿದೆ; ಅಲ್ಲದೆ, ಸಂಸ್ಥಾನದ ಆದಾಯಕ್ಕೂ ವಿಶೇಷ ಕುಂದಕವುಂಟಾಗುವಷ್ಟುಮಟ್ಟಿಗೆ ಸುಂಕಗಳ ಬಾಬಿನಲ್ಲಿ ಈ ಸಂಸ್ಥಾನದಿಂದ ಬಹಳ ಹಣವು ಈಗ ಕೈಬಿಟ್ಟು ಹೋಗುವಂತಾಗಿದೆ. ಉಪ್ಪಿನಮೇಲಣ ಸುಂಕದ ವಿಷಯದಲ್ಲಿ ಹೇಗೋ, ಹಾಗೆಯೇ ಈ ಸಂಸ್ಥಾನಕ್ಕೆ ಆಮದಾಗತಕ್ಕ ವಿದೇಶೀಯ ಸರಕುಗಳಮೇಲೆ ಸುಂಕಗಳನ್ನು ಹಾಕುವ ವಿಷಯದಲ್ಲಿಯೂ, ಮೈಸೂರು ಸರ್ಕಾರದವರು ಯಾವವಿಧದಲ್ಲಿ ಪ್ರವರ್ತಿಸುವುದಕ್ಕೂ ಅವಕಾಶವಿಲ್ಲದಂತಾಗಿದೆ. ಈ ಸಂಸ್ಥಾನದಲ್ಲಿ ಉಪಯೋಗಿಸಲ್ಪಡುವ ಸರಕುಗಳಮೇಲಣ ಸುಂಕದಿಂದ ಉತ್ಪತ್ತಿಯಾಗತಕ್ಕ ಹಣವೆಲ್ಲಾ ಮೈಸೂರುಸೀಮೆಯ ಪ್ರಜೆಗಳು ಪರೋಕ್ಷವಾಗಿ ಬ್ರಿಟಿಷ್ ಸರ್ಕಾರದ ಹುಟ್ಟುವಳಿಗೆ ಸೇರಿಸಿಕೊಡತಕ್ಕ ಮತ್ತೊಂದು ಮೊತ್ತವಾಗಿದೆ. ಹೊರಗಿನ ಸರಕುಗಳಮೇಲೆ ಸುಂಕವನ್ನು ಹೊರಿಸಿ ಇಂಡಿಯಾದೇಶದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕೆಂಬ ಕಾರ್ಯಕ್ರಮವನ್ನು ಇಂಡಿಯಾದೇಶದ ಸರ್ಕಾರದವರು ಈಚೆಗೆ ನಿರ್ಧಾರವಾಗಿ ಅವಲಂಬಿಸಿರುತ್ತಾರೆ; ಮತ್ತು ಆರೀತಿಯಾಗಿ ಅಭಿವೃದ್ಧಿಪಡಿಸಬೇಕಾದ ಎಲ್ಲಾ ಕೈಗಾರಿಕೆಗಳಿಗೂ ಎಷ್ಟುಮಟ್ಟಿಗೆ ಉತ್ತೇಜನವನ್ನು ಕೊಡಬೇಕೆಂಬ ಅಂಶವನ್ನು ಪರಿಶೀಲಿಸುವುದಕ್ಕಾಗಿ ಅವರು ಸುಂಕಗಳನ್ನು ನಿರ್ಣಯಿಸತಕ್ಕ ಒಂದು ಬೋರ್ಡನ್ನು (ಟ್ಯಾರಿಫ್ ಬೋರ್ಡನ್ನು) ನೇಮಕಮಾಡಿರುತ್ತಾರೆ. ಬ್ರಿಟಿಷ್ ಇಂಡಿಯಾದಲ್ಲಿನ ಕೈಗಾರಿಕೆಗಳ ಮತ್ತು ವಾಣಿಜ್ಯದಪರವಾದ ವಿಶೇಷೋದ್ದೇಶದಿಂದ, ಅಥವಾ ಕೊನೆಯಪಕ್ಷ, ಬಹುಮಟ್ಟಿಗೆ ಅಥವಾ ವಿಶೇಷೋದ್ದೇಶದ ದೆಸೆಯಿಂದ, ಹುಟ್ಟಿದ ಪ್ರೇರಣೆಯಿಂದ ರಚಿಸಲ್ಪಟ್ಟಿರುವ ಮೇಲ್ಕಂಡ ಕಾರ್ಯಕ್ರಮದ ದೇಶೀಯ ಸಂಸ್ಥಾನಗಳ ಪ್ರಯೋಜನಾಂಶಗಳೂ, ಅವುಗಳಲ್ಲಿ ಸರಕುಗಳನ್ನು ತಯಾರುಮಾಡುವ ಮತ್ತು ಸರಕುಗಳನ್ನು ಕೊಂಡು ಉಪಯೋಗಿಸುವ ಪ್ರಜೆಗಳ ಪ್ರಯೋಜನಗಳೂ, ಎಷ್ಟುಮಟ್ಟಿಗೆ ಕಾಪಾಡಲ್ಪಡಬಹುದೆಂಬುದನ್ನು ನೋಡಬೇಕಾಗಿದೆ. ಮುಂದಕ್ಕೆ ಅಂಥಾ ಎಲ್ಲಾ ವಿಚಾರಗಳನ್ನೂ ವ್ಯವಸ್ಥೆಪಡಿಸುವ ವಿಷಯದಲ್ಲಿ ಇಂಡಿಯಾ ಸರ್ಕಾರದವರು ದೇಶೀಯ ಸಂಸ್ಥಾನಗಳವರೊಡನೆ ಒಟ್ಟಿಗೆ ಕಲೆತು ಪರ್ಯಾಲೋಚನೆಗಳನ್ನು ಮಾಡುವುದು ಆವಶ್ಯಕವೆಂಬುದಾಗಿ ಮೈಸೂರು ಸರ್ಕಾರದವರು ಒತ್ತಿಹೇಳಿರುತ್ತಾರೆ. ಆದುದರಿಂದ, ಈ ಸಂಬಂಧದಲ್ಲಿ ಇಂಡಿಯಾದೇಶದ ಸಂಸ್ಥಾನಗಳ ಮುಂದಣ ಸ್ಥಿತಿಯ ವಿಚಾರವನ್ನು ಪ್ರಸ್ತಾಪಿಸಬೇಕಾಗಿದೆ.

ದೇಶೀಯ ಸಂಸ್ಥಾನಗಳ ಮುಂದಣ ಸ್ಥಿತಿ.—ಬ್ರಿಟಿಷ್ ಇಂಡಿಯಾ ಪ್ರಾಂತ್ಯಗಳ ಪ್ರಯೋಜನಗಳೂ, ಮತ್ತು ದೇಶೀಯ ಸಂಸ್ಥಾನಗಳ ಪ್ರಯೋಜನಗಳೂ, ಓತಪ್ರೋತವಾಗಿ ಕಲೆತುಹೋಗಿರುವುದರಿಂದ, ಸದರಿ ಸಂಸ್ಥಾನಗಳ ಸರ್ಕಾರಗಳಿಗೂ ಮತ್ತು ಪ್ರಜೆಗಳಿಗೂ ಬ್ರಿಟಿಷ್ ಇಂಡಿಯಾ ಸರ್ಕಾರದವರ ನಡೆವಳಿಕೆಗಳಿಂದಲೂ ಮತ್ತು ಕಾರ್ಯಕ್ರಮದಿಂದಲೂ ವಿಶೇಷವಾಗಿ ಬಾಧಕವುಂಟಾಗತಕ್ಕ ಅನೇಕ ವಿಚಾರಗಳಿವೆ. ಬ್ರಿಟಿಷ್ ಇಂಡಿಯಾದಲ್ಲಿನ ಒಟ್ಟು ವಿದ್ಯಮಾನಗಳು ಕ್ಷಿಪ್ರವಾಗಿ ಬದಲಾಯಿಸುತ್ತಲಿವೆ. ಮತ್ತು ದೇಶೀಯ ಸಂಸ್ಥಾನಗಳ ಸ್ಥಿತಿಯು ಈಗಿರುವಂತೆಯೇ ಇದ್ದ ಪಕ್ಷದಲ್ಲಿ, ಅವುಗಳ ಪ್ರಯೋಜನಗಳಿಗೆ ವಿಶೇಷ ಬಾಧಕವುಂಟಾಗುವುದೆಂದು ಹೇಳಿದರೆ ಅತ್ಯುಕ್ತಿಯೆನಿಸಲಾರದು. ಕ್ಷಿಪ್ರದಲ್ಲಾಗಲೀ, ಸಾವಕಾಶವಾಗಿಯಾಗಲೀ, ಜಾರಿಗೆ ತರಲ್ಪಡಬಹುದಾದ ಯಾವುದೊಂದು ರಾಜಕೀಯ ಸುಧಾರಣೆಗಳ ಹೊಸ ವ್ಯವಸ್ಥಾಕ್ರಮದಲ್ಲಾಗಲಿ, ಇಂಡಿಯಾದೇಶದ ಸಂಸ್ಥಾನಗಳು ತಮ್ಮತಮ್ಮ ಪ್ರಯೋಜನಗಳಿಗೂ ಮತ್ತು ಪುರೋಭಿವೃದ್ಧಿಗೂ, ಪ್ರಾಮುಖ್ಯಸಾಧನಗಳೆನಿಸುವ ಸಮಸ್ತ ವಿಷಯಗಳಲ್ಲಿಯೂ, ತಮ್ಮತಮ್ಮ ಪಕ್ಷವನ್ನು ಹಿಡಿದು ವಾದಿಸಿ ಕಾರ್ಯವನ್ನು ಸಾಧಿಸಿಕೊಳ್ಳಲನುಕೂಲಿಸುವಂತೆ ಸದರಿ ಸಂಸ್ಥಾನಗಳಿಗೆ ಸರಿಯಾದ ಸ್ಥಾನವನ್ನು ಕಲ್ಪಿಸತಕ್ಕ ಏರ್ಪಾಡುಗಳನ್ನು ಸೇರಿಸಬೇಕೆಂದು ನಾವು ಪದೇಪದೇ ವಿಜ್ಞಾಪಿಸಿಕೊಳ್ಳಬೇಕು. ಈ ವಿಚಾರವು ತೀವ್ರವಾದ ಆಸಕ್ತಿಯಿಂದ ಪರ್ಯಾಲೋಚಿಸಲ್ಪಡುತ್ತಿದೆ; ಮತ್ತು ಬ್ರಿಟಿಷ್ ಇಂಡಿಯಾಚಕ್ರಾಧಿಪತ್ಯದ ಮಂತ್ರಾಲೋಚನಾ ಸಭೆಗಳಲ್ಲಿ ಮೈಸೂರು ಸಂಸ್ಥಾನಕ್ಕೆ ಸರಿಯಾದ ಸ್ಥಾನವು ದೊರೆಯುವುದೆಂದು ದೃಢಪಡಿಸಿಕೊಳ್ಳುವುದಕ್ಕಾಗಿ ಸಮುಚಿತವಾದ ಸಲಹೆಗಳು ರಚಿಸಲ್ಪಡುತ್ತಾ ಇವೆ.

ಉಪಸಂಹಾರ.

ಬಹುಕಾಲದಿಂದಲೂ ಪ್ರಖ್ಯಾತವಾದ ಮತ್ತು ಘನವಾದ ಅಭಿವೃದ್ಧಿಯನ್ನು ಪಡೆದಿರುವ ಮೈಸೂರು ಸಂಸ್ಥಾನವು, ನಾವು ಪುನರ್ವಿಮರ್ಶೆಮಾಡುತ್ತಿರುವ ವರುಷದಲ್ಲಿ ರಾಜಕೀಯ ಸುಧಾರಣೆಗಳಿಂದುಂಟಾಗಿರುವ ಹೊಸ ಸ್ಥಿತಿಗತಿಗಳಿಗನುಸಾರವಾಗಿ ಮಾರ್ಪಡುತ್ತಾ ಇದೆ, ಸಂಸ್ಥಾನದ ಆಡಳಿತದಲ್ಲಿ ಪ್ರಜೆಗಳ ಮನೋಭಿಪ್ರಾಯಗಳಿಗೆ ಪ್ರಾಶಸ್ತ್ಯವು ದಿನೇದಿನೇ ಹೆಚ್ಚುತ್ತಾ ಇದೆ; ಮತ್ತು ಸರ್ಕಾರದವರೂ, ಪ್ರಜೆಗಳೂ, ಪರಸ್ಪರವಾಗಿ ಹೊಂದಿಕೆಯಿಂದಕೂಡಿ ವರ್ತಿಸುವುದು ಪ್ರತ್ಯಕ್ಷದಲ್ಲಿಯೂ ಉಭಯತಾಪಿ ಅನುಸರಿಸಬೇಕಾದ ಅಂಶವಾಗಿರುತ್ತದೆ. ಈ ಸ್ಥಿತಿಗತಿಗಳ ಸನ್ನಿವೇಶದಲ್ಲಿ, ಹೋದ ಸಂವತ್ಸರದಲ್ಲಿ ನಡೆದ ರಾಜ್ಯಾಡಳಿತದ ಕಾರ್ಯಗಳು ಹೊಸ ಶಕೆಯೊಂದನ್ನು ಆರಂಭಗೊಳಿಸಿರುತ್ತವೆ.

ಇನ್ನು ಮುಂದೆ ಇನ್ನೂ ಕಷ್ಟತರವಾದ ಹೊಸಹೊಸ ವಿಷಯಗಳನ್ನು ವ್ಯವಸ್ಥೆ ಮಾಡಬೇಕಾಗುವುದೆಂಬುದರಲ್ಲಿ ಸಂದೇಹವಿಲ್ಲ. ನಾವು ಮಾಡಬೇಕಾದ ಅಭಿವೃದ್ಧಿಯ ಏರ್ಪಾಡುಗಳಿಗೆ ಇನ್ನೂ ಹೆಚ್ಚಾಗಿ ಹಣವನ್ನು ವೆಚ್ಚಮಾಡಬೇಕಾಗಿರುವುದರಿಂದ ಇದಕ್ಕಾಗಿ ಹಣವನ್ನು ಒದಗಿಸಲು ಹೊಸ ಮಾರ್ಗಗಳನ್ನು ಕಂಡು ಹಿಡಿಯಬೇಕಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ವೃದ್ಧಿಪಡಿಸಬೇಕೆಂದು ಪದೇಪದೇ ಅರಿಕೆಗಳು ಬರುತ್ತಿರುವುದರಿಂದ ಅದಕ್ಕೆ ತಕ್ಕಷ್ಟು ಹಣವನ್ನು ಕೊಡಬೇಕಾಗಿದೆ. ದೇಶದ ಆವಶ್ಯಕತೆಗಳು ದಿನೇದಿನೇ ಹೆಚ್ಚುತ್ತಿರುವುದರಿಂದ ಅದಕ್ಕೆ ತಕ್ಕಂತೆ ಮೈಸೂರು ಯೂನಿವರ್ಸಿಟಿಯನ್ನು ಅಭಿವೃದ್ಧಿಗೊಳಿಸಬೇಕಾಗಿದೆ ವೈದ್ಯಸಹಾಯ, ಆರೋಗ್ಯಾಭಿವೃದ್ಧಿಕಾರ್ಯಗಳು, ನೀರಿನ ಸರಬರಾಯಿ, ಗ್ರಾಮಾಭಿವೃದ್ಧಿ ಮತ್ತು ನಗರಾಭಿವೃದ್ಧಿ ಕಾರ್ಯಗಳು, ವ್ಯವಸಾಯ ಕಾರ್ಯಕ್ಕೆ ನೀರನ್ನು ಸರಬರಾಯಿ ಮಾಡುವ ಕಾಮಗಾರಿಗಳು, ಸಂಚಾರಕ್ಕೆ ಅವಶ್ಯಕವಾದ ರಸ್ತೆ ಮೊದಲಾದುವುಗಳನ್ನು ಉತ್ತಮಪಡಿಸುವುದು, ಇವೇ ಮುಂತಾದ ಜನೋಪಯುಕ್ತವಾದ ಆವಶ್ಯಕ ಕಾರ್ಯಗಳಿಗೆ ಇನ್ನೂ ಹೆಚ್ಚು ಹಣವನ್ನು ಕೊಡುವುದು ಅಗತ್ಯವಾಗಿದೆ. ನಮ್ಮ ರೈಲ್ವೇ ಲೈನುಗಳನ್ನು ಇನ್ನೂ ಬಡಾಯಿಸಬೇಕಾಗಿದೆ. ಕೈಗಾರಿಕೆಗಳನ್ನು ವೃದ್ಧಿಪಡಿಸುವುದಕ್ಕೋಸ್ಕರ ಅಜಮಾಯಿಷಿಗಳಿಗಾಗಿಯೂ ಪರಿಶೋಧನೆಗಳಿಗಾಗಿಯೂ ಇನ್ನೂ ಹೆಚ್ಚಾಗಿ ಹಣವನ್ನು ವೆಚ್ಚಮಾಡಬೇಕಾಗಿದೆ. ಸಂಸ್ಥಾನದಲ್ಲಿ ವೆಚ್ಚವು ಕಳೆದು ಉಳಿದಿದ್ದ ಭಾರೀ ಮೊಬಲಗು ಖಜಾನೆಯಲ್ಲಿ ಶೇಖರವಾಗಿದ್ದ ಕಾಲದಲ್ಲಿ ದೇಶಾಭ್ಯುದಯಕ್ಕೆ ಆವಶ್ಯಕವಾದ ಏರ್ಪಾಡುಗಳನ್ನು ಕೈಗೊಂಡುದರದೆಸೆಯಿಂದ ಅವುಗಳಿಗಾಗಿ ಈಗ ವಿಶೇಷವಾಗಿ ಹಣವನ್ನು ವೆಚ್ಚಮಾಡಬೇಕಾಗಿರುತ್ತದೆ. ಆದಕಾರಣ, ವೆಚ್ಚವುಕಳೆದು ವರ್ಷೇವರ್ಷೇ ಭಾರೀ ಮೊಬಲಗು ಉಳಿಯುವಷ್ಟುಮಟ್ಟಿಗೆ ಆಯವ್ಯಯಸ್ಥಿತಿಯು ಉತ್ತಮವಾಗುವವರೆಗೆ ಯಾವ ಹೊಸ ಕಾಮಗಾರಿಗಳನ್ನಾಗಲಿ, ಏರ್ಪಾಡುಗಳನ್ನಾಗಲಿ, ಪ್ರಾರಂಭಿಸುವ ಸಂಭವವಿರುವುದಿಲ್ಲ. ಇದುವರೆಗೂ ಲಾಭವೇ ಬಾರದಿರುವ ಕೆಲವು ಭಾರಿಭಾರೀ ಏರ್ಪಾಡುಗಳಿಗೆ ಅವಶ್ಯವಾದ ಹಣವನ್ನೊದಗಿಸುವುದಕ್ಕಾಗಿ ತಕ್ಕ ಮಾರ್ಗಗಳನ್ನು ಹುಡುಕಲು ಸರ್ಕಾರದವರು ಕಳೆದ ಮೂರುವರ್ಷಗಳಲ್ಲಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನೆಲ್ಲಾ ಉಪಯೋಗಿಸಿದ್ದಾರೆ. ಪ್ರತಿ ವರ್ಷದಲ್ಲಿಯೂ ಹುಟ್ಟುವಳಿಗಿಂತಲೂ ವೆಚ್ಚವೇ ಹೆಚ್ಚಾಗುತ್ತಿದ್ದ ಸ್ಥಿತಿಯು ಒದಗಿದ್ದ ಕಷ್ಟಕಾಲದಲ್ಲಿ, ಇದ್ದ ಉಪಪತ್ತಿಗಳಿಂದಲೇ, ಎಷ್ಟೇಕಷ್ಟಪಟ್ಟು ರಾಜ್ಯಾಡಳಿತಗಳ ದಕ್ಷತೆಯು ಲೇಶವೂ ತಗ್ಗದಂತೆ ಕಾಪಾಡಿಕೊಳ್ಳಲಾಯಿತು. ನಮ್ಮ ಆಯವ್ಯಯ ಕ್ರಮವನ್ನು ಪೇಲ್ಮಡಿಸಿದುದರಿಂದ ಎಷ್ಟರಮಟ್ಟಿಗೆ ನಾವು ಕಾರ್ಯಗಳನ್ನು ಮುಂದುವರಿಸುವುದು ಸಾಧ್ಯವಾಯಿತೆಂಬುದು ಚಾಲ್ತಿವರ್ಷದ ಬಡ್ಜೆಟ್ಟಿನಿಂದ ವ್ಯಕ್ತವಾಗುತ್ತದೆ. ಆದರೆ, ಜನರು ಅದರಿಂದ ತೃಪ್ತರಾಗಿಲ್ಲ. ಅಲ್ಲದೆ, ಯಾವ ಇಲಾಖೆಗಳ ಆಡಳಿತವು ಪ್ರಜೆಗಳ ಭಾಗ್ಯಾಭಿವೃದ್ಧಿಗೂ, ವಿದ್ಯಾಭಿವೃದ್ಧಿಗೂ ಕಾರಣವಾಗಿರುವುದೋ ಅಂಥಾ ಇಲಾಖೆಗಳಿಗೆ ಹೆಚ್ಚುಹೆಚ್ಚಾಗಿ ಹಣವನ್ನು ವೆಚ್ಚಮಾಡಬೇಕೆಂದು ಪ್ರಜೆಗಳು ಕೋರುವವರಾಗಿದ್ದಾರೆ. ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರಕೃತ ಸ್ಥಿತಿಯಲ್ಲಿ ನೆರವೇರಬೇಕಾಗಿರುವ ಕಾರ್ಯಗಳನ್ನು ಚೆನ್ನಾಗಿ ಮನಗಂಡು ಮಾಡಿಕೊಂಡಿರುತ್ತಾರೆ. ಮೈಸೂರು ಸಂಸ್ಥಾನವು ಕ್ರಮವರಿತು ಬಹುಮುಖವಾಗಿ ಅಭ್ಯುದಯ ಹೊಂದುತ್ತಾ ಬಂದು ಹಿಂದೆ ಉಚಿತರೀತಿಯಲ್ಲಿ ಯಶಸ್ಸನ್ನು ಪಡೆದಿರುವುದಕ್ಕನುಸಾರವಾಗಿಯೇ, ಪುರೋಭಿವೃದ್ಧಿ ಮಾರ್ಗಗಳಿಗೆ ಯಾವುದೊಂದು ಪ್ರತಿಬಂಧಕವೂ ಇಲ್ಲದಂತೆ, ಇಲ್ಲಿನ ವಿದ್ಯಮಾನಗಳು ಕ್ಷಿಪ್ರದಲ್ಲೇ ಸುಮುಖರೂಪಕ್ಕೆ ಬರುವುವೆಂದು ಸರ್ಕಾರದವರು ಪೂರ್ಣಭರವಸೆಯನ್ನಿಟ್ಟುಕೊಂಡಿರುತ್ತಾರೆ. ಸಾರ್ವಭೌಮ ಸರ್ಕಾರದವರು ಪೊಗದಿಯ ವಿಷಯವನ್ನು ಅಭಿಮಾನಪೂರ್ವಕವಾಗಿ ಪರ್ಯಾಲೋಚಿಸಿ ವ್ಯವಸ್ಥೆ ಮಾಡುವರೆಂದು ನಂಬಿ ನಿರೀಕ್ಷಿಸಿಕೊಂಡಿದ್ದೇವೆ. ಮೈಸೂರು ಸಂಸ್ಥಾನದ ಕಬ್ಬಿಣದ ಕಾರ್ಖಾನೆಯಿಂದ ಕ್ಷಿಪ್ರದಲ್ಲಿಯೇ ಆದಾಯವು ಬರುವುದಕ್ಕೆ ಮೊದಲಾಗುವುದೆಂದು ಕುತೂಹಲದಿಂದ ನಿರೀಕ್ಷಿಸುತ್ತಿದ್ದೇವೆ. ಸಂಸ್ಥಾನದಲ್ಲಿ ದಿನೇದಿನೇ ಹೆಚ್ಚುತ್ತಿರುವ ಆವಶ್ಯಕತೆಗಳನ್ನೊದಗಿಸುವುದಕ್ಕೂ, ಪ್ರಜೆಗಳ ಮನೋರಥಗಳಲ್ಲಿ ಸಾಧ್ಯವಾದವುಗಳನ್ನೆಲ್ಲಾ ನೆರವೇರಿಸುವುದಕ್ಕೂ, ರಾಜ್ಯಾಡಳಿತ ಕ್ರಮದಲ್ಲಿ ವರುಷವರುಷವೂ, ಅವಕಾಶವು ಹೆಚ್ಚುತ್ತಾ ಬರಲೆಂಬುದೇ ನಮ್ಮ ಅಕಾಂಕ್ಷೆಯಾಗಿರುತ್ತದೆ. ಪ್ರಜಾಪಕ್ಷವಾಗಿ ಬಂದಿರುವ ಪ್ರತಿನಿಧಿಗಳಾದ ತಾವುಗಳು ನಮ್ಮ ಉದ್ದೇಶಗಳಲ್ಲಿಯೂ, ಪ್ರಯತ್ನಗಳಲ್ಲಿಯೂ ಭಾಗಿಗಳಾಗಿ ಇನ್ನೂ ಹೆಚ್ಚಾಗಿ ಸಹಕರಿಸುವರೆಂದು ನಿರೀಕ್ಷಿಸಿಕೊಂಡಿರುವೆವಲ್ಲದೆ, ನಮ್ಮಗಳ ಸಮ್ಮಿಳಿತವಾದ ಪ್ರಯತ್ನಗಳಿಂದ ಬಹುಮುಖವಾದ ಅಭಿವೃದ್ಧಿ ಕಾರ್ಯದಲ್ಲಿ, ಅಚಲವಾದ ಮತ್ತು ವಿಚಾರಪೂರ್ವಕವಾದ ಕಾರ್ಯಕ್ರಮಕ್ಕನುಸಾರವಾಗಿ ಕೆಲಸಗಳು ನೆರವೇರಿ, ತನ್ಮೂಲಕವಾಗಿ ಶ್ರೀಮನ್ಮಹಾರಾಜರವರ ಪ್ರಜೆಗಳಿಗೆ ಇತೋಪ್ಯತಿಶಯವಾದ ಸುಖಸಂತೋಷಾಭ್ಯುದಯಗಳು ಲಭಿಸುವಂತಾಗುವುದೆಂದು ದೃಢವಾಗಿ ನಂಬಿರುತ್ತೇವೆ.

ಎ. ಆರ್. ಬಾನರ್ಜಿ,
ಮೈಸೂರು ಸಂಸ್ಥಾನದ ದಿವಾನ್‌ರವರು.

ವೀರಶೈವ ಧರ್ಮಸಂಗ್ರಹ.
ಮಾಸಪತ್ರಿಕೆ.

ಒಂದು ವರ್ಷಕ್ಕೆ ವರ್ಗಣಿ ಅಂಚೆವೆಚ್ಚಸೇರಿ 2—8—0.

ಈ ಪತ್ರಿಕೆಯ ಎರಡನೆಯ ವರ್ಷವು ಈ ರಕ್ತಾಕ್ಷಿ ಸಂ॥ ಅಶ್ವೀಜಮಾಸದಿಂದ ಪ್ರಾರಂಭವಾಗುವುದು. ಎರಡನೆಯ ವರ್ಷದಲ್ಲಿ ವಾಚಕರ ಪ್ರಯೋಜನಾರ್ಥವಾಗಿ ಎರಡು ಪಾರಮ್ಮುಗಳಿಂದ ಮೂರು ಪಾರಮ್ಮಿಗೆ ಹೆಚ್ಚಿಸಿ ವೀರಶೈವಮತ ಪ್ರಾಚೀನತೆ, ವೀರಶೈವ ವೈದಿಕತ್ವ, ಲಿಂಗಧಾರಣವಿಚಾರ, ಶಕ್ತಿವಿಶಿಷ್ಟಾದ್ವೈತ, ಶಿವದೀಕ್ಷೆ, ಶಿವಪೂಜೆಯಕ್ರಮ, ವೀರಶೈವಾಚಾರ, ವೀರಶೈವ ವೈದಿಕವಿದ್ಯಾವಶ್ಯಕತೆ, ವೀರಶೈವ ಬ್ರಹ್ಮಚಾರಿಶಿಕ್ಷೆ, ವೀರಶೈವ ಸ್ತ್ರೀಧರ್ಮ ಮೊದಲಾದ ವಿಚಾರಗಳನ್ನು ಪ್ರಮಾಣಗಳ ಉದಾಹರಣೆಯಿಂದ ಉಪನ್ಯಾಸರೂಪವಾಗಿಯೂ, ಬಸವರಾಜೀಯ ಮೊದಲಾದ ಗ್ರಂಥಗಳನ್ನು ಕನ್ನಡಟಿಪ್ಪಣಿಯೊಡನೆಯೂ ಪ್ರಕಟಿಸುವೆವು.

ವೀರಶೈವ ಧರ್ಮಾಭಿಮಾನಿಗಳು ಈ ಪತ್ರಿಕೆಗೆ ಚಂದಾದಾರರೂ, ಪೋಷಕರೂ ಆಗಿ ಇದು ಚಿರಕಾಲ ನಡೆಯುವಂತೆ ಸಹಾಯಕಾರಿಗಳಾಗಬೇಕಾಗಿ ಅತ್ಯಂತ ವಿಧೇಯತೆಯಿಂದ ಪ್ರಾರ್ಥಿಸುವೆವು.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಅನ್ನಾವರಣ ವಿಚಾರದರ್ಪಣ (ಪ್ರಶ್ನೋತ್ತರ ರೂಪ)			೦-೧೪-೦
ಕೊಡಗೂಸು ಕಥೆ (ಶಿವಕಥೆಯನ್ನು ಮಾಡುವವರಿಗೆಯೋಗ)			೦-೪-೦
ವೇಮನಾರಾಧ್ಯರ ಕಥೆ	೦-೪-೦	ಶಿವಗೀತೆ (ಕನ್ನಡ ವಚನ)	೦-೪-೦
ಶಿವಾಧಿಕ್ಯ	೦-೨-೦	ಸಿದ್ಧಲಿಂಗೇಶ್ವರಸ್ತೋತ್ರ	೦-೦-೬
ನಕ್ಷತ್ರಮಾಲಿಕೆ	೦-೦-೬	ಜಯದೇವ ಭುಜಕಾನಂದಿನಿ	೦-೨-೦
ಗುರುಭಜನ	೦-೧-೦	ಶಿವಸ್ತುತಿ ಮಣಿಮಾಲಾ	೦-೦-೩

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ :—

ಸಂಪಾದಕ ಎಸ್. ವೀರಪ್ಪಶಾಸ್ತ್ರೀ, ಮಾಗಡಿ.
[24—6] ಬೆಂಗಳೂರು ಡಿ॥

ಜಾನುವಾರಿನಮೇಲೆ ಫೀಸು.

ದಕ್ಷಿಣ ಕನ್ನಡಾ ಜಿಲ್ಲಾ ಉಪ್ಪಿನಂಗಡಿ ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರುಷ 1924 ನೇ ಇಸವಿ ನವಂಬರು 11 ರಿಂದ 26 ನೇ ತಾರೀಕುವರೆಗೆ ಜರಗುವದು. ಅಂದರೆ ಸಂತೆಯು ಕಾರ್ತೀಕ ಪೂರ್ಣಿಮಿದಿವಸ ಪ್ರಾರಂಭವಾಗಿ ಸುಬ್ರಹ್ಮಣ್ಯ ಅಮಾವಾಸ್ಯೆ ದೀಪೋತ್ಸವದಪರಿಯಂತ ಜರಗುವದು. ಸಂತೆಗೆ ತಂದ ಪ್ರತಿ ಒಂದು ಜಾನುವಾರಿನಮೇಲೆ ಎರಡಾಣೆ ಫೀಸು ವಸೂಲ್ಮಾಡಲಾದೀತು. [4—3]

ಪುತ್ತೂರು, 1924ನೇ ಇಸವಿ, ಅಗೋಸ್ತು 8 ನೇ ತಾರೀಕು. } ಕೆ. ಎನ್. ಜೋಯಿಕುಟ್ಟಿ, ರೆವಿನ್ಯೂ ಡಿವಿಜನಲ್ ಆಫೀಸರರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯ ೦
ವ್ರತಪಂಚಕ	೦—೪ ೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಅಭಿನವ ಕಾಳಿದಾಸ ಕೈ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

೧೯೨೪ನೆಯ ಇಸವಿ ಅಕ್ಟೋಬರ್ ತಾ॥ ೨೬ ರಿಂದ ೧೯೨೪ ನೆಯ ಇಸವಿ ನವಂಬರ್ ತಾ॥ ೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮಸಂವತ್ಸರದ ಆಶ್ವಯುಜ ಬಹುಳ ತ್ರಯೋದಶಿಯಿಂದ ಕಾರ್ತೀಕ ಶುದ್ಧ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
26	[1] ಭಾನು	ತ್ರಯೋ	22-35	ಹಸ್ತ	56-39	10
27	[2] ಸೋಮ	ಚತು	19-51	ಚಿತ್ತ	54-51	11
28	[3] ಮಂಗಳ	ಅಮಾ	16-6	ಸ್ವಾತಿ	52-16	12
29	[4] ಬುಧ	ಪಾಡ್ಯ	11-34	ವಿಶಾ	48 53	13
30	ಗುರು	ಬಿದಿ	6-22	ಅನೂ	45-7	14
31	ಶುಕ್ರ	ತ-ಉ	0-41 54-12	ಜ್ಯೇಷ್ಠ	40-55	15
1	ಶನಿ	ಪಂಚ	48-48	ಮೂಲ	36-37	16.

(1) ಚಂದ್ರೋದಯಕಾಲೇಅಭ್ಯಂಗಸ್ನಾನಃ. (2) ನರಕಚತುರ್ದಶೀ, ಕೇದಾರೇಶ್ವರವ್ರತ. (3) ಕಾಮಧೇನುಪೂಜಾ, ಚಂದ್ರದೀಪದಾನಂ, ಬಲೀಂದ್ರಪೂಜಾ. (4) ಕೇವೆ ದೀಪಾವಳೀ.

ಮೈಸೂರು : ವೈ. ತಿರುಮಲೈಯ್ಯಂಗಾರವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED NO. M.124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾ ರ ಪ್ರಕಟಿಸಲ್ಪಡುವದು.

ಮಹಿಸೂರಪುರೀಕಾರಾ ಪರಮಧಿಗತರಾಜ[illegible] | ಘನಪಥಕೃತಾವತಾರಾ ಪಕ್ಷ[illegible] ನಕ್ಷತ್ರ ನೋಹರಾ[illegible] ||
ಶ್ರೀಮತ್ಕೃಷ್ಣನೃಪಾಲಸುತ್ತಮುಕಲಾಲೋಲಂಸುಧೀಪುಂಗವ | ಸ್ತೋತ್ರನಾಥೀಶ್ವದಶೀಲ ಪಾತಕಿತ ಸಾಧ್ವುಜ್ವಲಪಾಲಂವಲಂ ||
ಶಿವಾಪೋಷಿತಯುತಪ್ರಕಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕೆಯಂಸದಾಪುರಿಗೆ ಗೌರೀಕಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ ನೆಯ ಇಸವಿ ನವಂಬರ್ ತಾರೀಖು ೯ ನೆಯ ಭಾನುವಾರ. [ಸಂಚಿಕೆ ೪೫

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

CHITHARAGAVA
SALA

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕಲೀತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು

ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
39 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಟಿನ್ನು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಟಿನ್ನು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಟಿನ್ನು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ :—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[೫೦—೪೫] ಪೋಸ್ಟು ಬಾಕ್ಸು ನಂಬರು ೫೧೬, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

[illegible] ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

[illegible] ಬೆಲೆ ೧—೦—೦.

[illegible] ಬೆಲೆ ೧—೦—೦.

[illegible] ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

[illegible] ಬೆಲೆ ೦—೧೪—೦ ವಿ.ಪಿ. ಮೂಲಕ ೧-೬-೦.

ಅಸ್ಥಾನ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[೫೦—೪೫] ಅಂಡ್ ಸನ್ಸ್, ಜೆ.ಪಿ. ಮಂಡಳಿ, ಮೈಸೂರು.

ಮೈಸೂರು ಎಂ. ಎಸ್. ಶಿದ್ದಪ್ಪ ಬ್ರದರ್ಸ್‌ರವರ ವಿಜ್ಞಾಪನೆ.
ನಮ್ಮ ಕಂಪನಿಯ ಕ್ಯಾಲೆಂಡರುಗಳನ್ನು ಉಪಯೋಗಿಸುತ್ತಲಿರುವ ಗಿರಾಕಿಗಳಲ್ಲಿ
ವಿನಂತಿ.

1925 ನೇ ಇಸವಿಯ ಸಚಿತ್ರ ಷೀಟ್ ಕ್ಯಾಲೆಂಡರುಗಳು.

1925ನೇ ಇಸವಿಯ ಷೀಟ್ ಕ್ಯಾಲೆಂಡರ್ 1 ಕ್ಕೆ 0-1-0. 50 ಕ್ಯಾಲೆಂಡರ್‌ಗಳಿಗೆ 1-2-0. 100 ಕ್ಯಾಲೆಂಡರ್‌ಗಳಿಗೆ 2-0-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರ್‌ಗಳ ಪೂರ್ತಾ ಮೊಬಲಗು ಮಣಿಯಾರ್ಡರ್ ಮೂಲಕ ರವಾನಿಸಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜು ಯಾವ ಖರ್ಚೂ ಇಲ್ಲದಂತೆ ನೀವಿದ್ದೆಡೆಗೆ ರವಾನಿಸಲಾಗುತ್ತೆ. ಮೇಲ್ಕಂಡ ಕ್ಯಾಲೆಂಡರ್‌ನಲ್ಲಿ ಇಂಗ್ಲೀಷ್ ಮತ್ತು ಕನ್ನಡ ತಿಂಗಳು, ತಾರೀಖು, ವಾರ, ತಿಥಿ ನಕ್ಷತ್ರ, ಆಯಾಯ ದಿವಸದಲ್ಲಿ ನಡೆಯತಕ್ಕ ಹಬ್ಬವೇ ಮೊದಲಾದ ಮುಖ್ಯ ದಿವಸಗಳು, ರಾಹುಕಾಲ, ಗುಳಿಕಾಲ ಮಳೇನಕ್ಷತ್ರ, ಅರಮನೆಯಲ್ಲಿ ನಡೆಯತಕ್ಕ ಉತ್ಸವಗಳೂ. ಶ್ರೀಮನ್ ಮಹಾರಾಜರವರು, ಶ್ರೀಮನ್ ಯುವರಾಜರವರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರವರ ಭಾವಚಿತ್ರಗಳನ್ನಿಟ್ಟು ನಯವಾದ ಬಿಳೀ ದಪ್ಪ ಕಾಗದದಲ್ಲಿ ಅಂದವಾಗಿ ಪ್ರಿಂಟ್ ಮಾಡಿಸಿದ್ದೇವೆ.

1925 ನೇ ಇಸವಿಯ (ಮಂತ್ಲಿ ಟೇರಾಫ್) ತಿಂಗಳಿಗೊಂದು ಷೀಟಿನಂತೆ ಹರಿದುಬಿಡುವಂತೆ ತಯಾರಿಸಿರುವ ಕ್ಯಾಲೆಂಡರ್ 1 ಕ್ಕೆ 0-3-0. 3 ಕ್ಯಾಲೆಂಡರಿಗೆ 0-6-0, 12 ಕ್ಯಾಲೆಂಡರಿಗೆ 1-6-0. ತಮಗೆ ಬೇಕಾದಷ್ಟು ಕಾಪಿಗಳ ಪೂರ್ತಾಮೊಬಲಗನ್ನೂ ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜ್ ಯಾವ ಖರ್ಚೂ ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. [50—6]

ಮಣಿಯಾರ್ಡರ್ ರವಾನಿಸುವ ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಫ್ರೀಯಾಗಿ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ, ಸ್ಪಷ್ಟವಾಗಿ ಬರೆಯುವಂತೆ ಬೇಡಿಯಿದೆ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[೫೦—೯] ಪೋ. ಬಾ. ೩೧೦, ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗ್ಯೆರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ವಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಗನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದಬತ್ತಿ ಷಾಪ್,
37 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಲ್ಲದರಲ್ಲಿ ಪುರಾತನ ಕಾರಖಾನೆಯು.

ಸೂಚನೆ :—ಯಾವದೊಂದು ಮಾಲು ಗುಣಕಾರಿಯಾಗಿರುವದೆಂದು ತಿಳಿದಕೂಡಲೆ ಎಲ್ಲ ಕಡೆಗೂ ಅದರ ನಕಲು ಮಾಡಲಿಕ್ಕೆ ಆರಂಭವಾಗುತ್ತದೆ. ಆದರೆ ಹೆಸರಿಗೆ ತಕ್ಕಂತೆ ಗುಣಕ್ಕೆ ಮಾತ್ರ ಪಾತ್ರವಾಗುವದಿಲ್ಲ. ಈಗೀಗ ಇಲ್ಲಿ ನಕಲೀ ಔಷಧಿಯ ಕಾರಖಾನೆಗಳು ಹೊರಡುತ್ತಿರುವವು. ಆದ್ದರಿಂದ ಗಿರಾಕಿಗಳು ನಮ್ಮ ಟ್ರೇಡಮಾರ್ಕನ್ನು ನೋಡಿ ತಕ್ಕೊಳ್ಳಬೇಕು ಸರಕಾರದಲ್ಲಿ ರಿಜಿಸ್ಟರ್ ಆದಂಥ ಸುವರ್ಣಪದಕ ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦, ೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವುದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.—ಪರಮಾ ಹಾಗೂ [illegible]ನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣ ಬರುವದು. [illegible] ಇದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟಲಿಯ ಕಿಮ್ಮತ್ತು ೧| ರೂಪಾಯಿ ಮೂರುಬಾಟಲಿಗಳ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಸಾರ್ತಿಯಲ್ಲಿ [illegible]. [illegible] [illegible]. [illegible] ಕಿಮ್ಮತ್ತು ೧೧—೦—೦ ಮತ್ತು ೧ ಬಾಟಲಿ [illegible]. [illegible] ಬೇರೆ [illegible]. [illegible] ೧ [illegible] ೧—೪—೦, ೩ ಬಾಟ್ಲಿಗೆ ೩—೦—೦, [illegible] ೧೪—೦—೦

ಮ್ಯಾನೇಜರ—ದ್ರಾಕ್ಷಾ [illegible] ಆಫೀಸು,
[೧೦-೧೨] [illegible]

ಭಟ್ಕಲ್ ರೇವಿನ ಅಭಿವೃದ್ಧಿಯಿಂದ ಇಂಡಿಯಾದೇಶದ ಪಶ್ಚಿಮ ಸಮುದ್ರತೀರದಲ್ಲಿ ಬ್ರಿಟಿಷ್ ಇಂಡಿಯಾಕ್ಕೆ ಸೇರಿದ ಮುಖ್ಯ ರೇವುಪಟ್ಟಣಕ್ಕೂ ಬಾಧಕವುಂಟಾಗುವುದಿಲ್ಲ. ಈ ರೇವಿನಿಂದ ಬಾಧಕವಾಗುವುದಕ್ಕೆ ಬದಲಾಗಿ ಅದರ ನೆರೆಹೊರೆಯಲ್ಲಿರುವ ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸಮುದ್ರತೀರ ಪ್ರದೇಶಗಳ ಅಭಿವೃದ್ಧಿಗೆ ಸಹಾಯವಾಗಬಹುದು. ಆದುದರಿಂದ, ನಮಗೆ ದ್ರವ್ಯಾನುಕೂಲತೆಯು ಒದಗಿದೊಡನೆಯೇ ಈ ಏರ್ಪಾಡುಗಳನ್ನು ಕೈಗೊಳ್ಳಲನುಕೂಲಿಸುವಂತೆ ತಕ್ಕ ಸೌಕರ್ಯಗಳನ್ನು ಇಂಡಿಯಾ ಸರ್ಕಾರದವರು ಕಲ್ಪಿಸಿಕೊಡುವರೆಂದು ನಿರೀಕ್ಷಿಸುತ್ತೇವೆ. ಇವುಗಳು ಯಾವುವೆಂದರೆ :—

(1) ಮೈಸೂರುಸಂಸ್ಥಾನದ ಸರಹದ್ದಿನಿಂದ ಸುಮಾರು 14 ಮೈಲಿಗಳ ದೂರದವರೆಗೆ ಈ ರೇವಿಗೆ ರೈಲ್ವೆ ಮಾರ್ಗವನ್ನು ಹಾಕಿಸಲು ಅನುಮತಿಯನ್ನು ಕೊಡುವುದು ;

(2) ಇದಕ್ಕಾಗಿ ಎರಡು ಚದರಮೈಲಿಗಳ ವಿಸ್ತೀರ್ಣದ ಜಮೀನನ್ನೂ, ತೀರದ ಮುಂಭಾಗವನ್ನೂ, ಶಾಶ್ವತವಾಗಿ ಅಥವಾ ಪುನಃ ನಮಗೆ ಯುಕ್ತ ತೋರಿದರೆ ಗುತ್ತಿಗೆಯ ಅವಧಿಯನ್ನು ನವೀಕರಿಸಿಕೊಳ್ಳಬಹುದೆಂಬ ಷರತ್ತಿನಮೇಲೆ 99 ವರುಷಗಳ ಅವಧಿಯವರೆಗೆ ಗುತ್ತಿಗೆಗೆ ಕೊಡುವುದು ;

(3) ರೈಲ್ವೇ ಲೈನಿಗೆ ಬೇಕಾಗುವ ಜಮೀನನ್ನು ಕೊಡುವುದು ;

(4) ರೈಲ್ವೆಗೂ, ರೇವಿಗೂ ಬೇಕಾಗುವ ಜಮೀನು ಮತ್ತು ತೀರದ ಮುಂಭಾಗದಮೇಲಿನ ಅಧಿಕಾರವನ್ನು ಕೊಡುವುದು.

ನಮ್ಮ ಕಬ್ಬಿಣದ ಕಾರ್ಖಾನೆಯು ಅಭಿವೃದ್ಧಿಗೆಬಂದು ಬೆಲೆಬಾಳುವ ಇನ್ನೂ ಇತರ ಖನಿಜ ವಸ್ತುಗಳನ್ನು ಅನ್ವೇಷಣಮಾಡಿ ಕಂಡುಹಿಡಿದರೆ ಈ ರೇವಿನ ಏರ್ಪಾಡು ಫಲಕಾರಿಯಾಗುವುದೆಂಬುದರಲ್ಲಿ ಲೇಶವೂ ಸಂದೇಹವಿಲ್ಲ.

ಪೊಗದಿ.—ಒಂದು ದೇಶೀಯ ಸಂಸ್ಥಾನದ ಪೊಗದಿಯೂ, ಅದರ ಸೈನ್ಯದ ಒಟ್ಟು ವೆಚ್ಚವೂ, ಎರಡೂ ಸೇರಿ ಅದರ ಒಟ್ಟು ಹುಟ್ಟುವಳಿಯಲ್ಲಿ ಶೇಕಡಾ 15 ರಷ್ಟಕ್ಕಿಂತ ಹೆಚ್ಚಾಗಿದ್ದರೆ, ಹಾಗೆ ಹೆಚ್ಚಾಗಿರುವಷ್ಟು ಮೊಬಲಗನ್ನು ಆಯಾಯ ಇಂಡಿಯಾದೇಶೀಯ ಸಂಸ್ಥಾನಗಳು ಕೊಡುವ ಪೊಗದಿಯ ಹಣದಲ್ಲಿ ಕಡಮೆಮಾಡುವುದಾಗಿ ಇಂಡಿಯಾ ಸರ್ಕಾರದವರು ಏರ್ಪಾಡನ್ನು ಮಾಡುವವರಾಗಿದ್ದಾರೆಂಬ ಸಂಗತಿಯನ್ನು ಕಳೆದ ಬಜೆಟ್ ಅಧಿವೇಶನದ ನಮ್ಮ ಭಾಷಣದಲ್ಲಿ ಸೂಚಿಸಿರುತ್ತೇವೆ. ಸಾಲದಿಂದಲೂ, ವಾಣಿಜ್ಯ ಕಾರ್ಯಗಳಿಂದಲೂ, ಚಿನ್ನ ಮತ್ತು ಇತರ ಖನಿಜಗಳಮೇಲಿನ ರಾಜಾಯದಿಂದಲೂ ಬರುವ ಉತ್ಪತ್ತಿಯೇ ಮೊದಲಾದ ವಿಶೇಷ ಸ್ವಭಾವದ ಹುಟ್ಟುವಳಿಯ ಬಾಬುಗಳನ್ನು ಬಿಟ್ಟರೆ, ಮೈಸೂರುಸಂಸ್ಥಾನದ ಒಟ್ಟು ಹುಟ್ಟುವಳಿಯು 267 ಲಕ್ಷ ರೂಪಾಯಿಗಳೆಂದು ಇಟ್ಟುಕೊಳ್ಳಬಹುದು. ಇದರಲ್ಲಿ ಶೇಕಡಾ 15 ರಷ್ಟು ಮೊಬಲಗು ಸುಮಾರು 40 ಲಕ್ಷ ರೂಪಾಯಿಗಳಾಗುವುವು. ಆದರೆ, ಸೈನ್ಯದ ವೆಚ್ಚವೂ, ಪೊಗದಿಯೂ, ಸೇರಿ 53 ಲಕ್ಷ ರೂಪಾಯಿಗಳವರೆಗೆ ಆಗುವುದು. ಈಗ ಪರ್ಯಾಲೋಚಿಸಲ್ಪಟ್ಟಿರುವ ರೀತಿಯಲ್ಲಿ ಸೈನ್ಯದ ಪುನರ್ವ್ಯವಸ್ಥೆಯ ಕೆಲಸವನ್ನು ನೆರವೇರಿಸಿದ ಪಕ್ಷಕ್ಕೆ ಸದರಿ ಮೊಬಲಗು 57 ಲಕ್ಷ ರೂಪಾಯಿಗಳಿಗೆ ಏರುತ್ತದೆ. ಇಂಡಿಯಾ ಸರ್ಕಾರದವರಿಂದ ಸೂಚಿಸಲ್ಪಟ್ಟಿರುವ ನಿಯಮಾನುಸಾರ ಪೊಗದಿಯು ಕಡಮೆಯಾಗುವ ವಿಷಯದಲ್ಲಿ, ಮೈಸೂರುಸಂಸ್ಥಾನದವರು ತಮಗಿರುವ ಹಕ್ಕನ್ನು ಸದರಿ ಸರ್ಕಾರದವರ ಪರ್ಯಾಲೋಚನೆಗೆ ಒಪ್ಪಿಸಿರುತ್ತಾರೆ. ಈ ವಿಷಯವಾಗಿ ನಾವು ಮಾಡಿಕೊಂಡಿರುವ ಅರಿಕೆಯನ್ನು ಕುರಿತು ಯಾವ ವಿವರಗಳನ್ನೂ ತಿಳಿಸುವುದು ಈಗಿನ ಸ್ಥಿತಿಯಲ್ಲಿ ನಮಗೆ ಸಾಧ್ಯವಲ್ಲ ; ಆದರೆ ಈಗ್ಗೆ ನೂರು ವರುಷಗಳಿಗೆ ಮೇಲ್ಪಟ್ಟಷ್ಟು ಹಿಂದೆಯೇ ಸಂಸ್ಥಾನದಮೇಲೆ ಹೊರಿಸಿದ್ದ ಪೊಗದಿಯನ್ನು, ಒಟ್ಟು ಇಂಡಿಯಾಚಕ್ರಾಧಿಪತ್ಯದ ನಾನಾ ಭಾಗಗಳವರದಿ ಇಂಡಿಯಾದೇಶದ ರಕ್ಷಣೆಗೆ ಅವಶ್ಯವಾದ ಸೈನ್ಯಗಳ ವೆಚ್ಚದ ಬಗ್ಗೆ, ಎಷ್ಟೆಷ್ಟು ಹಣವನ್ನು ಕೊಡಬೇಕೆಂಬ ಸಾಮಾನ್ಯ ವಿಷಯಕ್ಕೆ ತಕ್ಕಷ್ಟು ಗಮನವನ್ನು ಕೊಟ್ಟು, ನಮ್ಮ ಆಯವ್ಯಯಗಳಮೇಲೆ ಬಿದ್ದಿರುವ ಪೊಗದಿಯ ಭಾರವನ್ನು ಕಡಮೆಮಾಡಿ ಸರಿಪಡಿಸಿದ ಹೊರತು, ಮೈಸೂರುಸಂಸ್ಥಾನವು ಹಣಕಾಸಿನ ವಿಷಯದಲ್ಲಿ ಯಥಾಪ್ರಕಾರ ದುಸ್ಥಿತಿಯಲ್ಲಿಯೇ ಇರುವುದೆಂದು ಸೂಚಿಸಿದರೆ ಸಾಕಾಗುವುದೆಂದು ಭಾವಿಸುತ್ತೇವೆ. ಮೈಸೂರುಸಂಸ್ಥಾನದವರ ಅರಿಕೆಯು ಈಗ ಇಂಡಿಯಾ ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ. ಈ ವಿಚಾರವು ರಾಜನೀತಿವಿಚಕ್ಷಣೆಯಿಂದಲೂ, ನ್ಯಾಯಸಮ್ಮತವಾಗಿಯೂ, ತೀರ್ಮಾನವಾಗುವುದೆಂದು ನಾವೆಲ್ಲರೂ ಹಾರೈಸೋಣ !

ಸುಂಕಗಳು.—ಮೈಸೂರುಸೀಮೆಗೆ ಸ್ವಂತ ರೇವುಪಟ್ಟಣವು ಇಲ್ಲದಿರುವುದರಿಂದ, ಈ ಸಂಸ್ಥಾನಕ್ಕೆ ಆಮದಾಗತಕ್ಕ ಎಲ್ಲಾ ವಿದೇಶೀಯ ಸರಕುಗಳಮೇಲೂ ಬ್ರಿಟಿಷ್ ಇಂಡಿಯಾ ಸರ್ಕಾರದವರು ಸುಂಕಗಳನ್ನು ಹಾಕಬಹುದಾಗಿದೆ. ಅಳಿದ ಮಹಾಸ್ವಾಮಿಯವರಿಗೆ ಸಾರ್ವಭೌಮ ಸರ್ಕಾರದವರು ಈ ಸಂಸ್ಥಾನದ ರಾಜ್ಯಭಾರವನ್ನು ವಹಿಸಿದ ಕಾಲದಲ್ಲಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸುಂಕಗಳಿಲ್ಲದೆ ಸರಕುಗಳ ರಫ್ತು ಮತ್ತು ಆಮದು (ಫ್ರೀಟ್ರೇಡ್) ಆಗಬಹುದೆಂಬುದಾಗಿ ಆಗ್ಗೆ ಬ್ರಿಟಿಷ್ ಸರ್ಕಾರದವರ ಉದ್ದೇಶವು ಕಂಠೋಕ್ತವಾಗಿದ್ದ ಕಾರಣ, ಸುಂಕಗಳು ಅತ್ಯಲ್ಪವಾಗಿದ್ದುವು. ಆಗಿನಿಂದೀಚೆಗೆ, ಅನೇಕ ವಿಧವಾದ ಸರಕುಗಳಮೇಲೆ ಸುಂಕವು ಹಾಕಲ್ಪಡುತ್ತಿರುವುದರಿಂದಲೂ, ಮತ್ತು ಸುಂಕದ ದರಗಳು ವಿಶೇಷವಾಗಿ ಹೆಚ್ಚಿಸಲ್ಪಟ್ಟಿರುವುದರಿಂದಲೂ, ಈ ಸಂಸ್ಥಾನದ ಪ್ರಜೆಗಳಮೇಲೆ ಅವರ ಶಕ್ತಿಗೆ ಮಿತಿಮೀರಿದಷ್ಟು ತೆರಿಗೆಗಳನ್ನು ಹೊರಿಸಿದಂತಾಗಿದೆ; ಅಲ್ಲದೆ, ಸಂಸ್ಥಾನದ ಆದಾಯಕ್ಕೂ ವಿಶೇಷ ಕುಂದಕವುಂಟಾಗುವಷ್ಟುಮಟ್ಟಿಗೆ ಸುಂಕಗಳ ಬಾಬಿನಲ್ಲಿ ಈ ಸಂಸ್ಥಾನದಿಂದ ಬಹಳ ಹಣವು ಈಗ ಕೈಬಿಟ್ಟು ಹೋಗುವಂತಾಗಿದೆ. ಉಪ್ಪಿನಮೇಲಣ ಸುಂಕದ ವಿಷಯದಲ್ಲಿ ಹೇಗೋ, ಹಾಗೆಯೇ ಈ ಸಂಸ್ಥಾನಕ್ಕೆ ಆಮದಾಗತಕ್ಕ ವಿದೇಶೀಯ ಸರಕುಗಳಮೇಲೆ ಸುಂಕಗಳನ್ನು ಹಾಕುವ ವಿಷಯದಲ್ಲಿಯೂ, ಮೈಸೂರು ಸರ್ಕಾರದವರು ಯಾವವಿಧದಲ್ಲಿ ಪ್ರವರ್ತಿಸುವುದಕ್ಕೂ ಅವಕಾಶವಿಲ್ಲದಂತಾಗಿದೆ. ಈ ಸಂಸ್ಥಾನದಲ್ಲಿ ಉಪಯೋಗಿಸಲ್ಪಡುವ ಸರಕುಗಳಮೇಲಣ ಸುಂಕದಿಂದ ಉತ್ಪತ್ತಿಯಾಗತಕ್ಕ ಹಣವೆಲ್ಲಾ ಮೈಸೂರುಸೀಮೆಯ ಪ್ರಜೆಗಳು ಪರೋಕ್ಷವಾಗಿ ಬ್ರಿಟಿಷ್ ಸರ್ಕಾರದ ಹುಟ್ಟುವಳಿಗೆ ಸೇರಿಸಿಕೊಡತಕ್ಕ ಮತ್ತೊಂದು ಮೊತ್ತವಾಗಿದೆ. ಹೊರಗಿನ ಸರಕುಗಳಮೇಲೆ ಸುಂಕವನ್ನು ಹೊರಿಸಿ ಇಂಡಿಯಾದೇಶದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕೆಂಬ ಕಾರ್ಯಕ್ರಮವನ್ನು ಇಂಡಿಯಾದೇಶದ ಸರ್ಕಾರದವರು ಈಚೆಗೆ ನಿರ್ಧಾರವಾಗಿ ಅವಲಂಬಿಸಿರುತ್ತಾರೆ ; ಮತ್ತು ಆರೀತಿಯಾಗಿ ಅಭಿವೃದ್ಧಿಪಡಿಸಬೇಕಾದ ಎಲ್ಲಾ ಕೈಗಾರಿಕೆಗಳಿಗೂ ಎಷ್ಟುಮಟ್ಟಿಗೆ ಉತ್ತೇಜನವನ್ನು ಕೊಡಬೇಕೆಂಬ ಅಂಶವನ್ನು ಪರಿಶೀಲಿಸುವುದಕ್ಕಾಗಿ ಅವರು ಸುಂಕಗಳನ್ನು ನಿರ್ಣಯಿಸತಕ್ಕ ಒಂದು ಬೋರ್ಡನ್ನು (ಟ್ಯಾರಿಫ್ ಬೋರ್ಡನ್ನು) ನೇಮಕಮಾಡಿರುತ್ತಾರೆ. ಬ್ರಿಟಿಷ್ ಇಂಡಿಯಾದಲ್ಲಿನ ಕೈಗಾರಿಕೆಗಳ ಮತ್ತು ವಾಣಿಜ್ಯದಪರವಾದ ವಿಶೇಷೋದ್ದೇಶದಿಂದ, ಅಥವಾ ಕೊನೆಯಪಕ್ಷ, ಬಹುಮಟ್ಟಿಗೆ ಅಥವಾ ವಿಶೇಷೋದ್ದೇಶದ ದೆಸೆಯಿಂದ, ಹುಟ್ಟಿದ ಪ್ರೇರಣೆಯಿಂದ ರಚಿಸಲ್ಪಟ್ಟಿರುವ ಮೇಲ್ಕಂಡ ಕಾರ್ಯಕ್ರಮದ ದೇಶೀಯ ಸಂಸ್ಥಾನಗಳ ಪ್ರಯೋಜನಾಂಶಗಳೂ, ಅವುಗಳಲ್ಲಿ ಸರಕುಗಳನ್ನು ತಯಾರುಮಾಡುವ ಮತ್ತು ಸರಕುಗಳನ್ನು ಕೊಂಡು ಉಪಯೋಗಿಸುವ ಪ್ರಜೆಗಳ ಪ್ರಯೋಜನಗಳೂ, ಎಷ್ಟುಮಟ್ಟಿಗೆ ಕಾಪಾಡಲ್ಪಡಬಹುದೆಂಬುದನ್ನು ನೋಡಬೇಕಾಗಿದೆ. ಮುಂದಕ್ಕೆ ಅಂಥಾ ಎಲ್ಲಾ ವಿಚಾರಗಳನ್ನೂ ವ್ಯವಸ್ಥೆಪಡಿಸುವ ವಿಷಯದಲ್ಲಿ ಇಂಡಿಯಾ ಸರ್ಕಾರದವರು ದೇಶೀಯ ಸಂಸ್ಥಾನಗಳವರೊಡನೆ ಒಟ್ಟಿಗೆ ಕಲೆತು ಪರ್ಯಾಲೋಚನೆಗಳನ್ನು ಮಾಡುವುದು ಅವಶ್ಯಕವೆಂಬುದಾಗಿ ಮೈಸೂರು ಸರ್ಕಾರದವರು ಒತ್ತಿಹೇಳಿರುತ್ತಾರೆ. ಆದುದರಿಂದ, ಈ ಸಂಬಂಧದಲ್ಲಿ ಇಂಡಿಯಾದೇಶದ ಸಂಸ್ಥಾನಗಳ ಮುಂದಣ ಸ್ಥಿತಿಯ ವಿಚಾರವನ್ನು ಪ್ರಸ್ತಾಪಿಸಬೇಕಾಗಿದೆ.

ದೇಶೀಯ ಸಂಸ್ಥಾನಗಳ ಮುಂದಣ ಸ್ಥಿತಿ.—ಬ್ರಿಟಿಷ್ ಇಂಡಿಯಾ ಪ್ರಾಂತ್ಯಗಳ ಪ್ರಯೋಜನಗಳೂ, ಮತ್ತು ದೇಶೀಯ ಸಂಸ್ಥಾನಗಳ ಪ್ರಯೋಜನಗಳೂ, ಹಿತಪ್ರೇರಿತವಾಗಿ ಕಲೆತುಹೋಗಿರುವುದರಿಂದ, ಸದರಿ ಸಂಸ್ಥಾನಗಳ ಸರ್ಕಾರಗಳಿಗೂ ಮತ್ತು ಪ್ರಜೆಗಳಿಗೂ ಬ್ರಿಟಿಷ್ ಇಂಡಿಯಾ ಸರ್ಕಾರದವರ ನಡೆವಳಿಕೆಗಳಿಂದಲೂ ಮತ್ತು ಕಾರ್ಯಕ್ರಮದಿಂದಲೂ ವಿಶೇಷವಾಗಿ ಬಾಧಕವುಂಟಾಗತಕ್ಕ ಅನೇಕ ವಿಚಾರಗಳಿವೆ. ಬ್ರಿಟಿಷ್ ಇಂಡಿಯಾದಲ್ಲಿನ ಒಟ್ಟು ವಿದ್ಯಮಾನಗಳು ಕ್ಷಿಪ್ರವಾಗಿ ಬದಲಾಯಿಸುತ್ತಲಿವೆ. ಮತ್ತು ದೇಶೀಯ ಸಂಸ್ಥಾನಗಳ ಸ್ಥಿತಿಯು ಈಗಿರುವಂತೆಯೇ ಇದ್ದಪಕ್ಷದಲ್ಲಿ, ಅವುಗಳ ಪ್ರಯೋಜನಗಳಿಗೆ ವಿಶೇಷ ಬಾಧಕವುಂಟಾಗುವುದೆಂದು ಹೇಳಿದರೆ ಅತ್ಯುಕ್ತಿಯೆನಿಸಲಾರದು. ಕ್ಷಿಪ್ರದಲ್ಲಾಗಲೀ, ಸಾವಕಾಶವಾಗಿಯಾಗಲೀ, ಜಾರಿಗೆ ತರಲ್ಪಡಬಹುದಾದ ಯಾವುದೊಂದು ರಾಜಕೀಯ ಸುಧಾರಣೆಗಳ ಹೊಸ ವ್ಯವಸ್ಥಾಕ್ರಮದಲ್ಲಾಗಲಿ, ಇಂಡಿಯಾದೇಶದ ಸಂಸ್ಥಾನಗಳು ತಮ್ಮ ತಮ್ಮ ಪ್ರಯೋಜನಗಳಿಗೂ ಮತ್ತು ಪುರೋವೃದ್ಧಿಗೂ, ಪ್ರಾಮುಖ್ಯಸಾಧನಗಳೆನಿಸುವ ಸಮಸ್ತ ವಿಷಯಗಳಲ್ಲಿಯೂ, ತಮ್ಮ ತಮ್ಮ ಪಕ್ಷವನ್ನು ಹಿಡಿದು ವಾದಿಸಿ ಕಾರ್ಯವನ್ನು ಸಾಧಿಸಿಕೊಳ್ಳಲನುಕೂಲಿಸುವಂತೆ ಸದರಿ ಸಂಸ್ಥಾನಗಳಿಗೆ ಸರಿಯಾದ ಸ್ಥಾನವನ್ನು ಕಲ್ಪಿಸತಕ್ಕ ಏರ್ಪಾಡುಗಳನ್ನು ಸೇರಿಸಬೇಕೆಂದು ನಾವು ಪದೇಪದೇ ವಿಜ್ಞಾಪಿಸಿಕೊಳ್ಳಬೇಕು. ಈ ವಿಚಾರವು ತೀವ್ರವಾದ ಆಸಕ್ತಿಯಿಂದ ಪರ್ಯಾಲೋಚಿಸಲ್ಪಡುತ್ತಿದೆ ; ಮತ್ತು ಬ್ರಿಟಿಷ್ ಇಂಡಿಯಾಚಕ್ರಾಧಿಪತ್ಯದ ಮಂತ್ರಾಲೋಚನಾ ಸಭೆಗಳಲ್ಲಿ ಮೈಸೂರು ಸಂಸ್ಥಾನಕ್ಕೆ ಸರಿಯಾದ ಸ್ಥಾನವು ದೊರೆಯುವುದೆಂದು ದೃಢಪಡಿಸಿಕೊಳ್ಳುವುದಕ್ಕಾಗಿ ಸಮರ್ಪಕವಾದ ಸಲಹೆಗಳು ರಚಿಸಲ್ಪಡುತ್ತಾ ಇವೆ.

ಉಪಸಂಹಾರ.

ಬಹುಕಾಲದಿಂದಲೂ ಪ್ರಖ್ಯಾತವಾದ ಮತ್ತು ಘನವಾದ ಅಭಿವೃದ್ಧಿಯನ್ನು ಪಡೆದಿರುವ ಮೈಸೂರು ಸಂಸ್ಥಾನವು, ನಾವು ಪುನರ್ವಿಮರ್ಶೆಮಾಡುತ್ತಿರುವ ವರುಷದಲ್ಲಿ ರಾಜಕೀಯ ಸುಧಾರಣೆಗಳಿಂದುಂಟಾಗಿರುವ ಹೊಸ ಸ್ಥಿತಿಗತಿಗಳಿಗನುಸಾರವಾಗಿ ಮಾರ್ಪಡುತ್ತಾ ಇದೆ, ಸಂಸ್ಥಾನದ ಆಡಳಿತದಲ್ಲಿ ಪ್ರಜೆಗಳ ಮನೋಭಿಪ್ರಾಯಗಳಿಗೆ ಪ್ರಾಶಸ್ತ್ಯವು ದಿನೇದಿನೇ ಹೆಚ್ಚುತ್ತಾ ಇದೆ; ಮತ್ತು ಸರ್ಕಾರದವರೂ, ಪ್ರಜೆಗಳೂ, ಪರಸ್ಪರವಾಗಿ ಹೊಂದಿಕೆಯಿಂದಕೂಡಿ ವರ್ತಿಸುವುದು ಪ್ರತ್ಯಕ್ಷದಲ್ಲಿಯೂ ಉಭಯತಾಪಿ ಅನುಸರಿಸಬೇಕಾದ ಅಂಶವಾಗಿರುತ್ತದೆ. ಈ ಸ್ಥಿತಿಗತಿಗಳ ಸನ್ನಿವೇಶದಲ್ಲಿ, ಹೋದ ಸಂವತ್ಸರದಲ್ಲಿ ನಡೆದ ರಾಜ್ಯಾಡಳಿತದ ಕಾರ್ಯಗಳು ಹೊಸ ಶಕೆಯೊಂದನ್ನು ಆರಂಭಗೊಳಿಸಿರುತ್ತವೆ.

ಇನ್ನು ಮುಂದೆ ಇನ್ನೂ ಕಷ್ಟತರವಾದ ಹೊಸಹೊಸ ವಿಷಯಗಳನ್ನು ವ್ಯವಸ್ಥೆ ಮಾಡಬೇಕಾಗುವುದೆಂಬುದರಲ್ಲಿ ಸಂದೇಹವಿಲ್ಲ. ನಾವು ಮಾಡಬೇಕಾದ ಅಭಿವೃದ್ಧಿಯ ಏರ್ಪಾಡುಗಳಿಗೆ ಇನ್ನೂ ಹೆಚ್ಚಾಗಿ ಹಣವನ್ನು ವೆಚ್ಚಮಾಡಬೇಕಾಗಿರುವುದರಿಂದ ಇದಕ್ಕಾಗಿ ಹಣವನ್ನು ಒದಗಿಸಲು ಹೊಸ ಮಾರ್ಗಗಳನ್ನು ಕಂಡು ಹಿಡಿಯಬೇಕಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ವೃದ್ಧಿಪಡಿಸಬೇಕೆಂದು ಪದೇಪದೇ ಅರಿಕೆಗಳು ಬರುತ್ತಿರುವುದರಿಂದ ಅದಕ್ಕೆ ತಕ್ಕಷ್ಟು ಹಣವನ್ನು ಕೊಡಬೇಕಾಗಿದೆ. ದೇಶದ ಅವಶ್ಯಕತೆಗಳು ದಿನೇದಿನೇ ಹೆಚ್ಚುತ್ತಿರುವುದರಿಂದ ಅದಕ್ಕೆ ತಕ್ಕಂತೆ ಮೈಸೂರು ಯೂನಿವರ್ಸಿಟಿಯನ್ನು ಅಭಿವೃದ್ಧಿಗೊಳಿಸಬೇಕಾಗಿದೆ. ವೈದ್ಯಸಹಾಯ, ಆರೋಗ್ಯಾಭಿವೃದ್ಧಿಕಾರ್ಯಗಳು, ನೀರಿನ ಸರಬರಾಯಿ, ಗ್ರಾಮಾಭಿವೃದ್ಧಿ ಮತ್ತು ನಗರಾಭಿವೃದ್ಧಿ ಕಾರ್ಯಗಳು, ವ್ಯವಸಾಯ ಕಾರ್ಯಕ್ಕೆ ನೀರನ್ನು ಸರಬರಾಯಿ ಮಾಡುವ ಕಾಮಗಾರಿಗಳು, ಸಂಚಾರಕ್ಕೆ ಅವಶ್ಯಕವಾದ ರಸ್ತೆ ಮೊದಲಾದುವುಗಳನ್ನು ಉತ್ತಮಪಡಿಸುವುದು, ಇವೇ ಮುಂತಾದ ಜನೋಪಯುಕ್ತವಾದ ಆವಶ್ಯಕ ಕಾರ್ಯಗಳಿಗೆ ಇನ್ನೂ ಹೆಚ್ಚು ಹಣವನ್ನು ಕೊಡುವುದು ಆಗತ್ಯವಾಗಿದೆ. ನಮ್ಮ ರೈಲ್ವೇ ಲೈನುಗಳನ್ನು ಇನ್ನೂ ಬಡಾಯಿಸಬೇಕಾಗಿದೆ. ಕೈಗಾರಿಕೆಗಳನ್ನು ವೃದ್ಧಿಪಡಿಸುವುದಕ್ಕೋಸ್ಕರ ಅಜಮಾಯಿಷಿಗಳಿಗಾಗಿಯೂ ಪರಿಶೋಧನೆಗಳಿಗಾಗಿಯೂ ಇನ್ನೂ ಹೆಚ್ಚಾಗಿ ಹಣವನ್ನು ವೆಚ್ಚಮಾಡಬೇಕಾಗಿದೆ. ಸಂಸ್ಥಾನದಲ್ಲಿ ವೆಚ್ಚವು ಕಳೆದು ಉಳಿದಿದ್ದ ಭಾರೀ ಮೊಬಲಗು ಖಜಾನೆಯಲ್ಲಿ ಶೇಖರವಾಗಿದ್ದ ಕಾಲದಲ್ಲಿ ದೇಶಾಭ್ಯುದಯಕ್ಕೆ ಅವಶ್ಯಕವಾದ ಏರ್ಪಾಡುಗಳನ್ನು ಕೈಗೊಂಡುದರದೆಸೆಯಿಂದ ಅವುಗಳಿಗಾಗಿ ಈಗ ವಿಶೇಷವಾಗಿ ಹಣವನ್ನು ವೆಚ್ಚಮಾಡಬೇಕಾಗಿರುತ್ತದೆ. ಆದಕಾರಣ, ವೆಚ್ಚವುಕಳೆದು ವರ್ಷೇವರ್ಷೇ ಭಾರೀ ಮೊಬಲಗು ಉಳಿಯುವಷ್ಟುಮಟ್ಟಿಗೆ ಆಯವ್ಯಯಸ್ಥಿತಿಯು ಉತ್ತಮವಾಗುವವರೆಗೆ ಯಾವ ಹೊಸ ಕಾಮಗಾರಿಗಳನ್ನಾಗಲಿ, ಏರ್ಪಾಡುಗಳನ್ನಾಗಲಿ, ಪ್ರಾರಂಭಿಸುವ ಸಂಭವವಿರುವುದಿಲ್ಲ. ಇದುವರೆಗೂ ಲಾಭವೇ ಬಾರದಿರುವ ಕೆಲವು ಭಾರಿಭಾರೀ ಏರ್ಪಾಡುಗಳಿಗೆ ಅವಶ್ಯವಾದ ಹಣವನ್ನೊದಗಿಸುವುದಕ್ಕಾಗಿ ತಕ್ಕ ಮಾರ್ಗಗಳನ್ನು ಹುಡುಕಲು ಸರ್ಕಾರದವರು ಕಳೆದ ಮೂರುವರ್ಷಗಳಲ್ಲಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನೆಲ್ಲಾ ಉಪಯೋಗಿಸಿದ್ದಾರೆ. ಪ್ರತಿ ವರ್ಷದಲ್ಲಿಯೂ ಹುಟ್ಟುವಳಿಗಿಂತಲೂ ವೆಚ್ಚವೇ ಹೆಚ್ಚಾಗುತ್ತಿದ್ದ ಸ್ಥಿತಿಯು ಒದಗಿದ್ದ ಕಷ್ಟಕಾಲದಲ್ಲಿ, ಇದ್ದ ಉಪಪತ್ತಿಗಳಿಂದಲೇ, ಎಷ್ಟೋ ಕಷ್ಟಪಟ್ಟು ರಾಜ್ಯಾಡಳಿತಗಳ ದಕ್ಷತೆಯು ಲೇಶವೂ ತಗ್ಗದಂತೆ ಕಾಪಾಡಿಕೊಳ್ಳಲಾಯಿತು. ನಮ್ಮ ಆಯವ್ಯಯ ಕ್ರಮವನ್ನು ಮೇಲ್ಪಡಿಸಿದುದರಿಂದ ಎಷ್ಟರಮಟ್ಟಿಗೆ ನಾವು ಕಾರ್ಯಗಳನ್ನು ಮುಂದುವರಿಸುವುದು ಸಾಧ್ಯವಾಯಿತೆಂಬುದು ಚಾಲ್ತಿವರ್ಷದ ಬಜೆಟ್ಟಿನಿಂದ ವ್ಯಕ್ತವಾಗುತ್ತದೆ. ಆದರೆ, ಜನರು ಅದರಿಂದ ತೃಪ್ತರಾಗಿಲ್ಲ. ಅಲ್ಲದೆ, ಯಾವ ಇಲಾಖೆಗಳ ಆಡಳಿತವು ಪ್ರಜೆಗಳ ಭಾಗ್ಯಾಭಿವೃದ್ಧಿಗೂ, ವಿದ್ಯಾಭಿವೃದ್ಧಿಗೂ ಕಾರಣವಾಗಿರುವುದೋ ಅಂಥಾ ಇಲಾಖೆಗಳಿಗೆ ಹೆಚ್ಚು ಹೆಚ್ಚಾಗಿ ಹಣವನ್ನು ವೆಚ್ಚಮಾಡಬೇಕೆಂದು ಪ್ರಜೆಗಳು ಕೋರುವವರಾಗಿದ್ದಾರೆ. ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರಕೃತ ಸ್ಥಿತಿಯಲ್ಲಿ ನೆರವೇರಬೇಕಾಗಿರುವ ಕಾರ್ಯಗಳನ್ನು ಚೆನ್ನಾಗಿ ಮುಂಪಟ್ಟು ಮಾಡಿಕೊಂಡಿರುತ್ತಾರೆ. ಮೈಸೂರು ಸಂಸ್ಥಾನವು ಕ್ರಮವರಿತು ಬಹುಮುಖವಾಗಿ ಅಭ್ಯುದಯ ಹೊಂದುತ್ತಾ ಬಂದು ಹಿಂದೆ ಉಚಿತರೀತಿಯಲ್ಲಿ ಯಶಸ್ಸನ್ನು ಪಡೆದಿರುವುದಕ್ಕನುಸಾರವಾಗಿಯೇ, ಪುರೋಭಿವೃದ್ಧಿ ಮಾರ್ಗಗಳಿಗೆ ಯಾವುದೊಂದು ಪ್ರತಿಬಂಧಕವೂ ಇಲ್ಲದಂತೆ, ಇಲ್ಲಿನ ವಿದ್ಯಮಾನಗಳು ಕ್ಷಿಪ್ರದಲ್ಲೇ ಸುಮುಖರೂಪಕ್ಕೆ ಬರುವುವೆಂದು ಸರ್ಕಾರದವರು ಪೂರ್ಣಭರವಸೆಯನ್ನಿಟ್ಟುಕೊಂಡಿರುತ್ತಾರೆ. ಸಾರ್ವಭೌಮ ಸರ್ಕಾರದವರು ಪೊಗದಿಯ ವಿಷಯವನ್ನು ಅಭಿಮಾನಪೂರ್ವಕವಾಗಿ ಪರ್ಯಾಲೋಚಿಸಿ ವ್ಯವಸ್ಥೆ ಮಾಡುವರೆಂದು ನಂಬಿ ನಿರೀಕ್ಷಿಸಿಕೊಂಡಿದ್ದೇವೆ. ಮೈಸೂರು ಸಂಸ್ಥಾನದ ಕಬ್ಬಿಣದ ಕಾರ್ಖಾನೆಯಿಂದ ಕ್ಷಿಪ್ರದಲ್ಲಿಯೇ ಆದಾಯವು ಬರುವುದಕ್ಕೆ ಮೊದಲಾಗುವುದೆಂದು ಕುತೂಹಲದಿಂದ ನಿರೀಕ್ಷಿಸುತ್ತಿದ್ದೇವೆ. ಸಂಸ್ಥಾನದಲ್ಲಿ ದಿನೇದಿನೇ ಹೆಚ್ಚುತ್ತಿರುವ ಅವಶ್ಯಕತೆಗಳನ್ನೊದಗಿಸುವುದಕ್ಕೂ, ಪ್ರಜೆಗಳ ಮನೋರಥಗಳಲ್ಲಿ ಸಾಧ್ಯವಾದವುಗಳನ್ನೆಲ್ಲಾ ನೆರವೇರಿಸುವುದಕ್ಕೂ, ರಾಜ್ಯಾಡಳಿತ ಕ್ರಮದಲ್ಲಿ ವರುಷವರುಷವೂ, ಅವಕಾಶವು ಹೆಚ್ಚುತ್ತಾ ಬರಲೆಂಬುದೇ ನಮ್ಮ ಆಕಾಂಕ್ಷೆಯಾಗಿರುತ್ತದೆ. ಪ್ರಜಾಪಕ್ಷವಾಗಿ ಬಂದಿರುವ ಪ್ರತಿನಿಧಿಗಳಾದ ತಾವುಗಳು ನಮ್ಮ ಉದ್ದೇಶಗಳಲ್ಲಿಯೂ, ಪ್ರಯತ್ನಗಳಲ್ಲಿಯೂ ಭಾಗಿಗಳಾಗಿ ಇನ್ನೂ ಹೆಚ್ಚಾಗಿ ಸಹಕರಿಸುವಿರೆಂದು ನಿರೀಕ್ಷಿಸಿಕೊಂಡಿರುವೆವಲ್ಲದೆ, ನಮ್ಮಗಳ ಸಮ್ಮಿಳಿತವಾದ ಪ್ರಯತ್ನಗಳಿಂದ ಬಹುಮುಖವಾದ ಅಭಿವೃದ್ಧಿ ಕಾರ್ಯದಲ್ಲಿ, ಅಚಲವಾದ ಮತ್ತು ವಿಚಾರಪೂರ್ವಕವಾದ ಕಾರ್ಯಕ್ರಮಕ್ಕನುಸಾರವಾಗಿ ಕೆಲಸಗಳು ನೆರವೇರಿ, ತನ್ಮೂಲಕವಾಗಿ ಶ್ರೀಮನ್ಮಹಾರಾಜರವರ ಪ್ರಜೆಗಳಿಗೆ ಇತೋಪ್ಯತಿಶಯವಾದ ಸುಖಸಂತೋಷಾಭ್ಯುದಯಗಳು ಲಭಿಸುವಂತಾಗುವುದೆಂದು ದೃಢವಾಗಿ ನಂಬಿರುತ್ತೇವೆ.

ಎ. ಆರ್. ಬಾನರ್ಜಿ,
ಮೈಸೂರು ಸಂಸ್ಥಾನದ ದಿವಾನ್‌ರವರು.

ವೀರಶೈವ ಧರ್ಮಸಂಗ್ರಹ.
ಮಾಸಪತ್ರಿಕೆ.

ಒಂದು ವರ್ಷಕ್ಕೆ ವರ್ಗಣಿ ಅಂಚೆವೆಚ್ಚಸೇರಿ 2—8—0.

ಈ ಪತ್ರಿಕೆಯ ಎರಡನೆಯ ವರ್ಷವು ಈ ರಕ್ತಾಕ್ಷಿ ಸಂ॥ ಆಶ್ವೀಜಮಾಸದಿಂದ ಪ್ರಾರಂಭವಾಗುವುದು. ಎರಡನೆಯ ವರ್ಷದಲ್ಲಿ ವಾಚಕರ ಪ್ರಯೋಜನಾರ್ಥವಾಗಿ ಎರಡು ಫಾರಮ್ಮುಗಳಿಂದ ಮೂರು ಫಾರಮ್ಮಿಗೆ ಹೆಚ್ಚಿಸಿ ವೀರಶೈವಮತ ಪ್ರಾಚೀನತೆ, ವೀರಶೈವ ವೈದಿಕತ್ವ, ಲಿಂಗಧಾರಣವಿಚಾರ, ಶಕ್ತಿವಿಶಿಷ್ಟಾದ್ವೈತ, ಶಿವದೀಕ್ಷೆ, ಶಿವಪೂಜೆಯಕ್ರಮ, ವೀರಶೈವಾಚಾರ, ವೀರಶೈವ ವೈದಿಕವಿದ್ಯಾವಶ್ಯಕತೆ, ವೀರಶೈವ ಬ್ರಹ್ಮಚಾರಿಶಿಕ್ಷೆ, ವೀರಶೈವ ಸ್ತ್ರೀಧರ್ಮ ಮೊದಲಾದ ವಿಚಾರಗಳನ್ನು ಪ್ರಮಾಣಗಳ ಉದಾಹರಣೆಯಿಂದ ಉಪನ್ಯಾಸರೂಪವಾಗಿಯೂ, ಬಸವರಾಜೀಯ ಮೊದಲಾದ ಗ್ರಂಥಗಳನ್ನು ಕನ್ನಡಟಿಪ್ಪಣಿಯೊಡನೆಯೂ ಪ್ರಕಟಿಸುವೆವು.

ವೀರಶೈವ ಧರ್ಮಾಭಿಮಾನಿಗಳು ಈ ಪತ್ರಿಕೆಗೆ ಚಂದಾದಾರರೂ, ಪೋಷಕರೂ ಆಗಿ ಇದು ಚಿರಕಾಲ ನಡೆಯುವಂತೆ ಸಹಾಯಕಾರಿಗಳಾಗಬೇಕಾಗಿ ಅತ್ಯಂತ ವಿಧೇಯತೆಯಿಂದ ಪ್ರಾರ್ಥಿಸುವೆವು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಆಪ್ತಾವರಣ ವಿಚಾರದರ್ಪಣ (ಪ್ರಶ್ನೋತ್ತರ ರೂಪ)			೦-೧೪-೦
ಕೊಡಗೂಸು ಕಥೆ (ಶಿವಕಥೆಯನ್ನು ಮಾಡುವವರಿಗೆಯೋಗ)			೦- ೪-೦
ವೇಮನಾರಾಧ್ಯರ ಕಥೆ	೦-೪-೦	ಶಿವಗೀತೆ (ಕನ್ನಡ ವಚನ)	೦- ೪-೦
ಶಿವಾಧಿಕ್ಯ	೦-೨-೦	ಸಿದ್ಧಲಿಂಗೇಶ್ವರಸ್ತೋತ್ರ	೦- ೦-೬
ನಕ್ಷತ್ರಮಾಲಿಕೆ	೦-೦-೬	ಜಯದೇವ ಭಜನಾನಂದಿನಿ	೦- ೨-೦
ಗುರುಭಜನ	೦-೧-೦	ಶಿವಸ್ತುತಿ ಮಣಿಮಾಲಾ	೦- ೦-೩

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ :—
ಸಂಪಾದಕ ಎಸ್. ವೀರಪ್ಪಶಾಸ್ತ್ರೀ, ಮಾಗಡಿ.
[24—6] ಬೆಂಗಳೂರು ಡಿ||

ಜಾನುವಾರಿನಮೇಲೆ ಫೀಸು.

ದಕ್ಷಿಣ ಕನ್ನಡಾ ಜಿಲ್ಲಾ ಉಪ್ಪಿನಂಗಡಿ ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರುಷ 1924 ನೇ ಇಸವಿ ನವಂಬರು 11 ರಿಂದ 26 ನೇ ತಾರೀಕುವರೆಗೆ ಜರಗುವದು. ಅಂದರೆ ಸಂತೆಯು ಕಾರ್ತೀಕ ಪೂರ್ಣಿಮಿದಿವಸ ಪ್ರಾರಂಭವಾಗಿ ಸುಬ್ರಹ್ಮಣ್ಯ ಅಮಾವಾಸ್ಯೆ ದೀಪೋತ್ಸವದಪರಿಯಂತ ಜರಗುವದು. ಸಂತೆಗೆ ತಂದ ಪ್ರತಿ ಒಂದು ಜಾನುವಾರಿನಮೇಲೆ ಎರಡಾಣೆ ಫೀಸು ವಸೂಲ್ಮಾಡಲಾದೀತು. [4—3]

ಪುತ್ತೂರು, 1924ನೇ ಇಸವಿ, ಅಗೋಸ್ತು 8 ನೇ ತಾರೀಕು. } ಕೆ. ಎನ್. ಜೋಯಿಕುಟ್ಟಿ, ರೆವಿನ್ಯೂ ಡಿವಿಜನಲ್ ಆಫೀಸರರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦	೦—೧೩—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯ ೦
ವ್ರತಪಂಚಕ	೦— ೪ ೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರಜನನ	೦— ೮—೦	೦—೧೩—೦
ಅಭಿನವ ಕಾಳಿದಾಸ ಕ್ಕೆ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧— ೦—೦	೧— ೬—೦

೧೯೨೪ನೆಯ ಇಸವಿ ಅಕ್ಟೋಬರ್ ತಾ|| ೨೬ ರಿಂದ ೧೯೨೪ ನೆಯ ಇಸವಿ ನವೆಂಬರ್ ತಾ|| ೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೬ನೆಯ ರಕ್ತಾಕ್ಷಿನಾಮಸಂವತ್ಸರದ ಆಶ್ವಯುಜ ಬಹುಳ ತ್ರಯೋದಶಿಯಿಂದ ಕಾರ್ತೀಕ ಶುದ್ಧ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
26	[1] ಭಾನು	ತ್ರಯೋ	22-35	ಹಸ್ತ	56-39	10
27	[2] ಸೋಮ	ಚತು	19-51	ಚಿತ್ತ	54-51	11
28	[3] ಮಂಗಳ	ಅಮಾ	16-6	ಸ್ವಾತಿ	52-16	12
29	[4] ಬುಧ	ಪಾಡ್ಯ	11-34	ವಿಶಾ	48-53	13
30	ಗುರು	ಬಿದಿ	6-22	ಅನೂ	45-7	14
31	ಶುಕ್ರ	ತ-ಚು	0-41 54-12	ಜ್ಯೇಷ್ಠ	40-55	15
1	ಶನಿ	ಪಂಚ	48-48	ಮೂಲ	36-37	16.

(1) ಚಂದ್ರೋದಯಕಾಲೀಅಭ್ಯಂಗಸ್ನಾನ. (2) ನರಕಚತುರ್ದಶೀ, ಕೇದಾರೇಶ್ವರವ್ರತ. (3) ಕಾಮಧೇನುಪೂಜಾ, ಚಂದ್ರದೀಪದಾನಂ, ಬಲೀಂದ್ರಪೂಜಾ. (4) ಶೇಷ ದೀಪಾವಳೀ.

ಮೈಸೂರು : ಸೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED NO. M.124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾ ರ ಪ್ರಕಟಿಸಲ್ಪಡುವದು.

ಮಹಿಸೂರಪುರೀಶಾಲಾ ಪರಮಧಿಗತರಾಜ[illegible]ಂ | ಭುವನಪಥಕೃತಾವತಾರಾ ಶಕ್ತ್ಯಾ ಸತ್ಕೃತ್ತ ಮೋಹರಾಜೀವಾ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಪಾಕರಿಕ ಸಾದ್ಗುಣ್ಯಲಾಲಂಪಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತೇಯುಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೭] ಮೈಸೂರು ಸ್ಟಾರ್ ಸನ್ ೧೯೨೪ನೆಯ ಇಸವಿ ನವೆಂಬರ್ ತಾರೀಖು ೯ ನೆಯ ಭಾನುವಾರ. [ಸಂಚಿಕೆ ೪೫

ಪಾಳ್ಯದವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಮನೆಮನೆಯಲ್ಲೂ ಇರಬೇಕಾದುದು,
ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆನ್ಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1—4—0, 12 ಸೀಸೆಗೆ 2—7—0, 25 ಸೀಸೆಗೆ 4—10—0 ಪೋಸ್ಟೇಜು ಬೇರೆ.

ಕಾಲರಾ ಔಷಧಿ.

ಸಿಕ್ಕಿದ ಔಷಧಿಗಳನ್ನು ಕೊಟ್ಟು ಗುಣವಾಗದೆ ಕೈ ಬಿಟ್ಟವೇಳೆಯಲ್ಲಿಯೂ ಈ ವೈಶ್ವಾನರಾಸವವು ಕಾಲರಾ ರೋಗಿಗಳಿಗೆ ಪ್ರಾಣದಾತೃವಾಗಿದೆ. ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವು ಸ್ವಾಧೀನಕ್ಕೆ ಬಂದು, ಕ್ರಮಕ್ರಮವಾಗಿ ಗುಣವಾಗುತ್ತದೆ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ರೋಗವು ಗುಣವಾಗುತ್ತದೆ. ಶೀತಭೇದಿ, ರಕ್ತಭೇದಿ, ಆಮಶಂಕೆಗಳಿಗೆ ಕೂಡ ದಿವ್ಯೌಷಧಿ. ಚಿಕ್ಕಸೀಸೆ 8 ಆಣೆ. ದೊಡ್ಡಸೀಸೆ 1 ರೂಪಾಯಿ.

ಪಾಳ್ಯದ ವೆಂಕಟಾಚಲಪಂಡಿತ,
39 ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನ್‌ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್,

(ನೀಲಗಿರಿ ಎಣ್ಣೆ)

ತಲೆನೋವು, ಕಣ್ಣುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ) ಹೆಂಗಸರ ಹೊಟ್ಟೆ ನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಅರ್ಧ ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೧—೮—೦ ವಿ. ಪಿ. ಚಾರ್ಜು ೦—೧೦—೦

ಒಂದು ಔನ್ಸು ಬಾಟ್ಲುಗಳು ಡಜನ್ ೧ ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೦—೧೨—೦.

೨೪ ಔನ್ಸು ಬಾಟ್ಲು ೧ ಕ್ಕೆ ರೂ. ೨—೮—೦ ಚಾರ್ಜು ರೂ. ೧—೧—೦.

ವಿಳಾಸ:—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
[50—4] ಪೋಸ್ಟು ಬಾಕ್ಸು ನಂಬರು ೩೧೬, ಮದರಾಸು.

ಉತ್ತಮ ವೀರಶೈವ ಗ್ರಂಥಗಳು.

ವೀರಶೈವ ಸಿದ್ಧಾಂತ ಶಿಖಾಮಣಿ ಬೆಲೆ ೧—೧೨—೦ ವಿ. ಪಿ. ಮೂಲಕ ಮನಿಯಾರ್ಡರ್ ಕಮಿಷನ್ ಸೇರಿ ೨—೪—೦.

ಪಂಡಿತಾರಾಧ್ಯಚರಿತಂ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ ಬೆಲೆ ೫—೦—೦ ವಿ.ಪಿ. ಮೂಲಕ ೫—೧೨—೦.

ವೀರಶೈವಧರ್ಮಶಿರೋಮಣಿ ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಬಸವರಾಜವಿಜಯ (ಚತುರ್ಥ ಮುದ್ರಣ) ಬೆಲೆ ೧—೨—೦ ವಿ. ಪಿ. ಮೂಲಕ ೧—೧೦—೦.

ಚನ್ನಬಸವೇಶವಿಜಯ ಬೆಲೆ ೧-೬-೦ ವಿ. ಪಿ. ಮೂಲಕ ೧-೧೪-೦.

[illegible] ಬೆಲೆ ೦—೧೪—೦ ವಿ.ಪಿ. ಮೂಲಕ ೧—೪—೦.

[illegible] ಬೆಲೆ ೧—೦—೦.

[illegible] ಬೆಲೆ ೧—೦—೦.

[illegible] ಬೆಲೆ ೧—೦—೦ ವಿ. ಪಿ. ಮೂಲಕ ೧-೮-೦.

[illegible] ಬೆಲೆ ೦—೧೪—೦ ವಿ.ಪಿ. ಮೂಲಕ ೧-೪-೦.

ಅಧ್ಯಾಪಕ ವಿದ್ವಾನ್ ಎ. ಆರ್. ಕರಿಬಸವಶಾಸ್ತ್ರಿ
[illegible] ಅಂಡ್ ಸನ್ಸ್, ಚಿ.ಪಿ. [illegible], ಮೈಸೂರು.

ಮೈಸೂರು ಎಂ. ಎಸ್. ಶಿದ್ದಪ್ಪ ಬ್ರದರ್ಸ್‌ರವರ ವಿಜ್ಞಾಪನೆ.
ನಮ್ಮ ಕಂಪನಿಯ ಕ್ಯಾಲೆಂಡರುಗಳನ್ನು ಉಪಯೋಗಿಸುತ್ತಲಿರುವ ಗಿರಾಕಿಗಳಲ್ಲಿ
ವಿನಂತಿ.

1925 ನೇ ಇಸವಿಯ ಸಚಿತ್ರ ಷೀಟ್ ಕ್ಯಾಲೆಂಡರುಗಳು.

1925ನೇ ಇಸವಿಯ ಷೀಟ್ ಕ್ಯಾಲೆಂಡರ್ 1 ಕ್ಕೆ 0-1-0. 50 ಕ್ಯಾಲೆಂಡರ್‌ಗಳಿಗೆ 1-2-0. 100 ಕ್ಯಾಲೆಂಡರ್‌ಗಳಿಗೆ 2-0-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರ್‌ಗಳ ಪೂರ್ತಾ ಮೊಬಲಗು ಮಣಿಯಾರ್ಡರ್ ಮೂಲಕ ರವಾನಿಸಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜು ಯಾವ ಖರ್ಚೂ ಇಲ್ಲದಂತೆ ನೀವಿದ್ದೆಡೆಗೆ ರವಾನಿಸಲಾಗುತ್ತೆ. ಮೇಲ್ಕಂಡ ಕ್ಯಾಲೆಂಡರ್‌ನಲ್ಲಿ ಇಂಗ್ಲೀಷ್ ಮತ್ತು ಕನ್ನಡ ತಿಂಗಳು, ತಾರೀಖು, ವಾರ, ತಿಥಿ ನಕ್ಷತ್ರ, ಆಯಾಯ ದಿವಸದಲ್ಲಿ ನಡೆಯತಕ್ಕ ಹಬ್ಬವೇ ಮೊದಲಾದ ಮುಖ್ಯ ದಿವಸಗಳು, ರಾಹುಕಾಲ, ಗುಳಿಕಾಲ ಮಳೇನಕ್ಷತ್ರ, ಅರಮನೆಯಲ್ಲಿ ನಡೆಯತಕ್ಕ ಉತ್ಸವಗಳೂ. ಶ್ರೀಮನ್ ಮಹಾರಾಜರವರು, ಶ್ರೀಮನ್ ಯುವರಾಜರವರು ಮತ್ತು ಶ್ರೀಮನ್ ಜಯಚಾಮರಾಜ ಒಡೆಯರವರ ಭಾವಚಿತ್ರಗಳನ್ನಿಟ್ಟು ನಯವಾದ ಬಿಳೀ ದಪ್ಪ ಕಾಗದದಲ್ಲಿ ಅಂದವಾಗಿ ಪ್ರಿಂಟ್ ಮಾಡಿಸಿದ್ದೇವೆ.

1925 ನೇ ಇಸವಿಯ (ಮಂತ್ಲಿಟೀರಾಫ್) ತಿಂಗಳಿಗೊಂದು ಷೀಟಿನಂತೆ ಹರಿದುಬಿಡುವಂತೆ ತಯಾರಿಸಿರುವ ಕ್ಯಾಲೆಂಡರ್ 1 ಕ್ಕೆ 0-3-0. 3 ಕ್ಯಾಲೆಂಡರಿಗೆ 0-6-0, 12 ಕ್ಯಾಲೆಂಡರಿಗೆ 1-6-0. ತಮಗೆ ಬೇಕಾದಷ್ಟು ಕಾಪಿಗಳ ಪೂರ್ತಾಮೊಬಲಗನ್ನೂ ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಮತ್ತು ಪೋಸ್ಟೇಜ್ ಯಾವ ಖರ್ಚೂ ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. [50—6]

ಮಣಿಯಾರ್ಡರ್ ರವಾನಿಸುವ ವಿಳಾಸ :—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ.

ಮ್ಯಾನೇಜರ್.

ಸುಲಭಕ್ರಯ ! ಸುಲಭಕ್ರಯ !!

ಡಾಕ್ಟರ್ ಜೇ ಬೀ ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ [illegible] ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

[illegible]

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[80—9] ಪೋ. ಬಾ. ನಂ. [illegible], ಮದರಾಸು.

ಸುಗಂಧದ್ರವ್ಯಗಳ ಕಾರ್ಖಾನಾ.

ಅಯ್ಯಾ ಮಹನೀಯರೇ! ನಾನು 40 ವರ್ಷಗಳಿಂದ ಊದುಬತ್ತಿ ಗಂಧದಬಿಲ್ಲೆ ವಗೈರೆ ಸುಗಂಧದ್ರವ್ಯಗಳನ್ನು ಸ್ವಂತ ಕಾರ್ಖಾನೆಯಲ್ಲಿ ತಯಾರುಮಾಡಿಸಿ ಬಿಕರಿಮಾಡುತ್ತಾ ಇದ್ದೇನೆ. ಈ ವಿಚಾರವು ಎಲ್ಲಾ ಕಡೆಯ ಮಹನೀಯರುಗಳಿಗೆ ತಿಳಿಯದೇ ಇರುವದರಿಂದ ಈ ಪತ್ರಿಕೆ ಮೂಲಕ ಪ್ರಚುರಪಡಿಸಿರುತ್ತೇನೆ. ಇಷ್ಟವುಳ್ಳವರು ಬೇಕಾದ ಸುಗಂಧದ ಸಾಮಾನುಗಳಿಗೆ ನನ್ನ ಕ್ಯಾಟಲಾಕನ್ನು ತರಿಸಿಕೊಂಡು ನೋಡಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆಂದು ಕೋರುತ್ತೇನೆ.

ಎಸ್. ಕಳ್ಳೆಪ್ಪ, ಊದುಬತ್ತಿ ಷಾಪ್,
37 ದೊಡ್ಡಪ್ಯಾಟೆ ಬೆಂಗಳೂರು ಸಿಟಿ.

ಎಲ್ಲದರಲ್ಲಿ ಪುರಾತನ ಕಾರಖಾನೆಯು.

ಸೂಚನೆ:—ಯಾವದೊಂದು ಮಾಲು ಗುಣಕಾರಿಯಾಗಿರುವದೆಂದು ತಿಳಿದಕೂಡಲೆ ಎಲ್ಲಾ ಕಡೆಗೂ ಅದರ ನಕಲು ಮಾಡಲಿಕ್ಕೆ ಆರಂಭವಾಗುತ್ತದೆ. ಆದರೆ ಹೆಸರಿಗೆ ತಕ್ಕಂತೆ ಗುಣಕ್ಕೆ ಮಾತ್ರ ಪಾತ್ರವಾಗುವದಿಲ್ಲ. ಈಗೀಗ ಇಲ್ಲಿ ನಕಲೀ ಔಷಧಿಯ ಕಾರಖಾನೆಗಳು ಹೊರಡಹತ್ತಿರುವವು. ಆದ್ದರಿಂದ ಗಿರಾಕಿಗಳು ನಮ್ಮ ಟ್ರೇಡಮಾರ್ಕನ್ನು ನೋಡಿ ತಕ್ಕೊಳ್ಳಬೇಕು. ಸರಕಾರದಲ್ಲಿ ರಿಜಿಸ್ಟರ್ ಆದಂಥ ಸುವರ್ಣಪದಕ ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦, ೭೦ ವರ್ಷದ ಮುದುಕರ ಕಾಮವಿಕಾರವು ಹೊಸ ತರುಣರಂತೆ ಪ್ರವರ್ಧಮಾನವಾಗುವುದು (ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ಷಂಡತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.—ಪರಮಾ ಹಾಗೂ [illegible]ನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ [illegible] ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. [illegible]

[illegible]

[13-13] [illegible]

MYSORE RAILWAYS.

NOTICE.

PACKING OF CONSIGNMENTS—CONDITION OF :—

For the information of those despatching traffic over the Mysore Railways, it is notified that, with effect from 1st October 1924, revised packing conditions in connection with the booking of consignments were introduced. The Railway Staff have received very clear and definite instructions to the effect that these packing conditions are to be strictly enforced and that, in the event of consignors not complying with the same, their consignments may only be accepted if Risk Note A. be executed.

Consignors, in their own interests, are advised to apply to the Station Master or the Chief Goods Clerk to show them the packing conditions, if any, that apply to the particular consignment they wish to despatch.

Full particulars of these conditions are in the hands of all Station Masters or Chief Goods Clerks and they have received instructions to assist consignors in every way by explaining fully the packing conditions necessary for any consignment.

Traffic Manager's Office,
Mysore.
3rd November 1924.

A. A. KHAN,
Traffic Manager,

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ನವೆಂಬರ್ ತಾ|| ೯ ನೆಯ ಭಾನುವಾರ.

THE BRITISH ELECTIONS.

The striking success of the Conservatives in the recent elections is a matter, which no part of the British Empire can view without cosiderable interest. Labour as was expected had only a brief spell of time and it is impossible to withhold an expression of sympathy for the retiring Labour Government, which it must be admitted strove with a singular devotion in the best interests of the Empire. With no clear majority for themselves and resting on the shifty support of the Liberal party, the position of Labour was never enviable. And when the Liberals began to coquet with the Conservatives, thinking that they would meet with the latter's admiration, they no doubt succeeded in ousting Labour but in the attempt lost their own feathers completely, and with a paltry strength of 37 or so in the Parliament are relegated to the back benches and are left to stew in their own juice. Labour on the other, though it has lost about 35 seats, has polled a very decent number of votes on the whole. They surely would have done very much but for the alliance of the Liberals with the Conservatives, and but for the sensation caused over the Campbell case and what was worse, the mysterious Zinovieff letter, of which the Conservatives made capital. In one way it is good that Liberals had a good wash out—a nemesis which was inevitable from their conduct—as it is likely to restore the old two party system, which is always more conducive to sound and stabler administration at the triangular contest. So far as we can see Liberals would find it a hard job to recover from their present catastrophe. But Labour, though far as yet from commanding the sinews of war to the same extent as their opponents and from the splendid organisation of their press, is still a powerful opposition now, with most of the members of its cabinet returned to the Parliament and with the advantage of experience in the administration which they lacked before would be making itself more effectively felt as an opposition, which in its turn will gain for it popular support. There is a world of difference between the sympathetic, imaginative leader Mr. Macdonald and the Imperialistic Mr. Baldwin. Mr. Baldwin has been talking a great deal of late about the welfare of India constituting one of the greatest and most sacred trusts with which the British Government is charged and is indicating a strong rule as opposed to "the nerveless and vacillating policy" of the Labour Government. We are afraid that that is not a very desirable way of going about things, especially in view of the present state of tension in India. A more conciliatory and sympathetic attitude would smoothen the working of his administration so far as India is concerned. There is a large section of Indian public which thinks, or, at any rate, says, that the change of Government in England is of no consequence to India. But there could hardly be any gainsaying that the prospect of the next instalment of reform was much brighter with Labourites in office than the Conservatives. The one interesting thing is that Conservatives can do what they would like with a clear majority of 210 over other parties, and let us wait and see.

THE BENGAL SITUATION.

The eyes of all India to day are turned towards Bengal. With 72 of its men arrested as anarchists and revolutionaries, some of whom, persons of rank and position, Bengal is once again the chief centre of interest in Indian politics as in days of the partition. The patriots and leaders of India are assembled in Calcutta to study and to solve the problem of Indian nationalism for that is the matter on hand. Viewing dispassionately, there was the revolutionary movement active and working, and that was to be put down. It was not a sudden discovery of Government when the 72 were arrested. They knew it for sometime past. It is not the intention of the Government to put down revolutionary crime in time that is found fault with so much by the leaders. It is the extraordinary powers which they invoke for the purpose on the one hand and the not taking into confidence many public men whose support the Government could expect in such cases, before the arrests were made that almost all Indians irrespective of parties take objection to. They also say that to take action in exterminating all revolutionary ideas and crimes without at the same time remedying promptly the causes of discontent which have admittedly led by to the formation and spread of such ideas is not true statesmanship, for no such movement has ever been put down by mere repression. We here are at a respectable distance from those fields and let us hope that things will take a happier turn erelong.

ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆ.

ನಾವು ಮೊದಲು ತಿಳುಹಿದ್ದಂತೆ ಬ್ರಿಟಿಷ್ ಪಾರ್ಲಿಮೆಂಟಿನ ಮೆಂಬರುಗಳ ಚುನಾವಣೆಯ ಕಾರ್ಯವೆಲ್ಲವೂ ಮುಗಿದು ಕನ್ಸರ್ವೆಟಿವ್ (ಅನುದಾರ) ಪಕ್ಷದವರಿಗೆ 407, ಲೇಬರ್ (ಕಾರ್ಮಿಕ) ಪಕ್ಷದವರಿಗೆ 152, ಲಿಬರಲ್ (ಉದಾರ) ಪಕ್ಷದವರಿಗೆ 41, ಇತರ ಸಾಮಾನ್ಯಪಕ್ಷದವರೆಲ್ಲರಿಗೂ 15 ಈ ಪ್ರಕಾರ ಸ್ಥಾನಗಳು ದೊರಕಿರುತ್ತವೆ. ಒಟ್ಟು 615 ಮೆಂಬರುಗಳ ಸ್ಥಾನಗಳಲ್ಲಿ ಕನ್ಸರ್ವೆಟಿವ್ ಪಕ್ಷದವರಿಗೆ ಕೊಂಚ ಕಡಿಮೆಯಾಗಿ ⅔ ಸ್ಥಾನಗಳು ದೊರಕಿರುವುದು ಆಶ್ಚರ್ಯಕರವಾಗಿರುವುದಲ್ಲದೆ, ಲೇಬರ್‌ಪಕ್ಷದವರಿಗೆ ಅವರ ನಿರೀಕ್ಷಣೆಯಂತೆ ಹೆಚ್ಚು ಸ್ಥಾನಗಳು ದೊರೆಯದಿದ್ದರೂ, ಲಿಬರಲ್‌ಪಕ್ಷದವರಿಗೆ ಅಪಜಯವಾಗಿರುವುದೂ ಅನುತಾಪಕರವಾಗಿರುತ್ತದೆ. ಲೇಬರ್ ಪಕ್ಷದವರಿಗೆ ಪಾರ್ಲಿಮೆಂಟಿನಲ್ಲಿ ಸಾಕಷ್ಟು ಸ್ಥಾನಬಲವಿಲ್ಲದೆ ಲಿಬರಲ್ ಪಕ್ಷದವರ ಸಹಾಯವನ್ನು ಅವಲಂಬಿಸಿದ್ದುದರಿಂದ ಅವರ ರಾಜ್ಯಾಡಳಿತವು ಬಹುಕಾಲ ನಡೆಯುವುದಿಲ್ಲನೆಂದು ಮೊದಲೇ ಊಹಿಸಲ್ಪಟ್ಟಿದ್ದಿತು. ಸಾಮ್ರಾಜ್ಯಹಿತಸಾಧನಾಪೇಕ್ಷೆಯಿಂದ ರಾಜಕಾರ್ಯನಿರ್ವಹಮಾಡುತಿದ್ದ ಲೇಬರ್‌ಪಕ್ಷದವರು ಅಧಿಕಾರನಿವೃತ್ತರಾದುದು ಅನುತಾಪಕರವಾಗಿದೆ. ಕನ್ಸರ್ವೆಟಿವ್‌ಪಕ್ಷದವರ ಪ್ರೀತಿಯನ್ನೂ ಸಹಾಯವನ್ನೂ ಹೊಂದಲಪೇಕ್ಷಿಸಿ, ಲಿಬರಲ್‌ಪಕ್ಷದವರು ಲೇಬರ್‌ಪಕ್ಷದವರನ್ನು ಅಧಿಕಾರನಿವೃತ್ತರನ್ನಾಗಿ ಮಾಡಲು ಪ್ರಯತ್ನಿಸಿ ಜಯಶೀಲರಾದರಾದರೂ, ಚುನಾವಣೆಯಲ್ಲಿ 37 ಸ್ಥಾನಗಳನ್ನು ಮಾತ್ರ ಸಂಪಾದಿಸಿ ತಮ್ಮ ಬುಡಕ್ಕೆ ತಾವೇ ನೀರನ್ನು ತಿದ್ದಿಕೊಂಡರು. ಲಿಬರಲ್‌ಪಕ್ಷದವರು ಇಷ್ಟು ಅತ್ಯಲ್ಪಸಂಖ್ಯೆಯಿಂದ ಸಭೆಯಲ್ಲಿದ್ದರೂ ಇಲ್ಲದಂತೆಯೇ ಆಗಿದೆ. ಮಾಡಿದ್ದುಣ್ಣೋ ಮಹಾರಾಯ ಎಂಬ ಗಾಥೆಯು ಇವರ ವಿಚಾರದಲ್ಲಿ ಚೆನ್ನಾಗಿ ಅನ್ವಯಿಸುವುದು. ಲೇಬರ್‌ಪಕ್ಷದವರಿಗೆ ಕಳೆದಸಾರಿಗಿನ್ನ 35 ಸ್ಥಾನಗಳು ಕಡಿಮೆಯಾಗಿದ್ದರೂ ಹೆಚ್ಚು ಓಟ್ಗಳು ಬಂದಿರುತ್ತವೆ. ಲಿಬರಲ್‌ಪಕ್ಷದವರು ಕನ್ಸರ್ವೆಟಿವ್ ಪಕ್ಷದವರಕೂಡ ಸೇರಿಕೊಳ್ಳದಿದ್ದಲ್ಲಿ, ಮತ್ತು ಕ್ಯಾಂಬಲ್ ವಿವಾದದ ಸಂಬಂಧದಲ್ಲೂ, ರಷ್ಯಾದ ಅನಾಯಕಪಂಗಡದವನಾದ ಜಿನೋವೀಫ್ ಎಂಬಾತನಿಂದ ಬರೆಯಲ್ಪಟ್ಟಿದ್ದ ಲೇಖದ ವಿಚಾರದಲ್ಲೂ ಲೇಬರ್‌ಸರ್ಕಾರದ ಮೇಲೆ ಅಪವಾದವು ಹೊರಿಸಲ್ಪಟ್ಟು ಗೊಂದಲವೆಬ್ಬಿಸಲ್ಪಡದಿದ್ದಲ್ಲಿ ಲೇಬರ್ ಪಕ್ಷದವರಿಗೇ ಅಧಿಕಸ್ಥಾನಗಳು ದೊರೆಯುತ್ತಿದ್ದುದರಲ್ಲಿ ಸಂದೇಹವಿರಲಿಲ್ಲವು. ಈ ಎರಡು ವಿಚಾರಗಳಲ್ಲಿ ಕನ್ಸರ್ವೆಟಿವುಗಳು ಬಹಳ ಸಾಹಸಪಟ್ಟು ಲೇಬರುಗಳ ಆಡಳಿತದಲ್ಲಿ ವಿಶ್ವಾಸವಿಲ್ಲವೆಂದು ಸೂಚನೆಯನ್ನು ತಂದು ಲಿಬರಲ್ಲುಗಳ ಸಹಾಯದಿಂದ ಪ್ಯಾಸ್‌ಮಾಡಿಸಿ ಲೇಬರುಗಳು ಅಧಿಕಾರದಿಂದ ನಿವೃತ್ತರಾಗುವಂತೆ ಅಸಮಸಾಹಸವನ್ನು ಮಾಡಿದರು. ಹೀಗೆ ಪಾರ್ಲಿಮೆಂಟಿನಲ್ಲಿ ಲಿಬರಲ್‌ಪಕ್ಷವು ಸ್ವಯಂ ಅಪರಾಧದಿಂದ ಇದ್ದರೂ ಇಲ್ಲದಂತಾಗಿ ಪೂರ್ವದಂತೆ ಎರಡು ಪಕ್ಷಗಳು ಮಾತ್ರ ಉಳಿಯುವಂತಾದುದು, ರಾಜ್ಯಾಡಳಿತವು ಸುಲಲಿತವಾಗಿಯೂ ಪ್ರಬಲವಾಗಿಯೂ ನಡೆಯಲವಕಾಶವಾಯಿತು. ಸಮರ್ಥರೂ ಅನುಭವಶಾಲಿಗಳೂ ಆದ ಲೇಬರ್‌ಪಕ್ಷದವರು ಮೆಂಬರುಗಳಾಗಿರುವುದರಿಂದಲೂ, ಹಿಂದಣರಾಜ್ಯಾಡಳಿತದ ಅನುಭವದಿಂದಲೂ ಕನ್ಸರ್ವೆಟಿವ್‌ಪ್ರಭುತ್ವದ ದೋಷೋದ್ಘಾಟನೆಮಾಡಿ ಅವರನ್ನು ಪ್ರತಿಭಟಿಸಿ ಪ್ರಜಾನುರಾಗವನ್ನು ಪಡೆಯಲು ಅವಕಾಶವಾಗಿರುವುದು. ಸಾನುಭೂತಿಗಳೂ, ಊಹಾಪೋಹವಿಚಕ್ಷಣರೂ, ಲೇಬರ್‌ಪಕ್ಷದ ಯಜಮಾನರೂ ಆದ ಮೆಕ್ಡೊನಾಲ್ಡರವರಿಗೂ, ರಾಜಕಠನೆಯ ಬಾಲ್ಡ್ವಿನ್ನರವರಿಗೂ ಮಹದಂತರವಿರುವುದು. ಭರತಖಂಡಕ್ಕೆ ಹಿತವನ್ನುಂಟುಮಾಡತಕ್ಕದು ಬ್ರಿಟಿಷ್‌ಪ್ರಭುತ್ವದವರಿಗೆ ಪವಿತ್ರಕರ್ತವ್ಯವಾಗಿರುತ್ತದೆಂದು ಬಾಲ್ಡ್ವಿನ್ನರವರು ಬಹಳವಾಗಿ ಪ್ರಸ್ತಾಪಿಸುತ್ತಿರುವರಲ್ಲದೆ, ಲೇಬರ್‌ಪ್ರಭುತ್ವದವರ ದುರ್ಬಲವೂ, ಚಂಚಲವೂ ಆದ ಪರಿಪಾಲನಕ್ರಮವನ್ನನುಸರಿಸದೆ ಮಹಾದರ್ಪದಿಂದ ಭರತಖಂಡವನ್ನು ಪರಿಪಾಲಿಸಬೇಕೆಂದು ಸೂಚಿಸುತ್ತಿರುವರು. ಭರತಖಂಡದ ಪ್ರಕೃತಸ್ಥಿತಿಯಲ್ಲಿ ಸಾನುಭೂತಿಯಿಂದಲೂ ಉಪಾಯದಿಂದಲೂ ರಾಜಕಾರ್ಯನಿರ್ವಹಮಾಡಲು ಸಾಧ್ಯವಲ್ಲದೆ ಬಾಲ್ಡ್ವಿನ್ನರವರು ಸೂಚಿಸುವಂತೆ ದರ್ಪಪ್ರದರ್ಶನದಿಂದ ಸಾಧ್ಯವಲ್ಲವೆಂದು ಹೇಳಬಲ್ಲೆವು. ಇಂಗ್ಲೆಂಡಿನ ಪ್ರಭುತ್ವದ ಬದಲಾವಣೆಯಿಂದ ಭರತಖಂಡಕ್ಕೆ ಯಾವ ಪ್ರಯೋಜನವೂ ಇಲ್ಲವೆಂಬುದು ಅನೇಕ ಪ್ರಮುಖಭಾರತೀಯರ ಅಭಿಪ್ರಾಯವಾಗಿರುತ್ತದೆ. ಆದರೆ ಕನ್ಸರ್ವೆಟಿವ್‌ಗಳಿಗೆ ಬದಲಾಗಿ ಲೇಬರು ಪಕ್ಷದವರಿಗೆ ಮರಳಿ ಪ್ರಭುತ್ವವು ಪ್ರಾಪ್ತವಾಗಿದ್ದಲ್ಲಿ ಭಾರತೀಯರಿಗೆ ರಾಜಕೀಯ ಸುಧಾರಣಾಫಲವು ವಿಶೇಷವಾಗಿ ಪ್ರಾಪ್ತವಾಗುತ್ತಿದ್ದುದರಲ್ಲಿ ಸಂಶಯವಿರಲಿಲ್ಲವು. ಕನ್ಸರ್ವೆಟಿವರು ಇತರ ಎಲ್ಲ ಪಕ್ಷದವರ ಸಂಖ್ಯೆಗಿನ್ನ ⅔ ಭಾಗದಷ್ಟು ಹೆಚ್ಚು ಸಂಖ್ಯೆಯ ಸ್ಥಾನಗಳನ್ನು ಸಂಪಾದಿಸಿಕೊಂಡಿರುವುದರಿಂದ ಒಂದು ಪಾರ್ಲಿಮೆಂಟಿನ ಪೂರ್ಣಕಾಲಾವಧಿಯಾದ ೫ ವರ್ಷಗಳವರೆಗೆ ಅವಿಚ್ಛಿನ್ನವಾಗಿ ಅಧಿಕಾರವನ್ನು ಮಾಡಬಹುದಾಗಿದೆ. ಆದರೆ ಇವರಿಂದ ದೇಶಕ್ಕೆ ಯಾವ ರೀತಿಯಲ್ಲಿ ಪ್ರಯೋಜನವಾಗುತ್ತದೆಂಬುದು ಮಾತ್ರ ನಿರೀಕ್ಷಣೀಯವಾಗಿದೆ.

ಬಂಗಾಳಾದ ಪ್ರಕೃತಸ್ಥಿತಿ.

ಬ್ರಿಟಿಷರ ಭರತಖಂಡದ ಪರಿಪಾಲನಕ್ರಮದಲ್ಲಿ ಭಾರತೀಯರಿಗೆ ಅವಿಶ್ವಾಸವೂ, ಅಸಹ್ಯವೂ ಉಂಟಾಗಿ ಅವರ ಆಳ್ವಿಕೆಯು ಸುಗಮವಾಗಿರದೆ ಕಷ್ಟತರವಾಗಿ ಪರಿಣಮಿಸಲೆಂಬ ಅಭಿಪ್ರಾಯದಿಂದ ಬಂಗಾಳಾದಲ್ಲಿ ಕೆಲಕಾಲದಿಂದಲೂ ರಹಸ್ಯಕೂಟಗಳು ಏರ್ಪಟ್ಟು ನಿರಪರಾಧಿಗಳಾದ ಅಧಿಕಾರಿಗಳನ್ನು ಕೊಲೆಮಾಡುವುದು ಸುಲಿಗೆಮಾಡುವುದು ಮೊದಲಾಗಿ ಅರಾಜಕಕೃತ್ಯಗಳು ನಡಿಸಲ್ಪಡುತ್ತಿರುವುವೆಂದು ಭಾವಿಸಲ್ಪಟ್ಟಿರುವುದಷ್ಟೆ? ಆದರೆ ಇತ್ತೀಚೆಗೆ ಭಾರತೀಯ ಪ್ರಸಿದ್ಧಮುಂದಾಳುಗಳು ರಹಸ್ಯಕೂಟಗಳಿಗೆ ಸೇರಿ ಅರಾಜಕಕೃತ್ಯಗಳು ಪ್ರಬಲತರವಾಗಿ ನಡೆಯಲು ಉತ್ತೇಜನವನ್ನು ಕೊಡುತ್ತಿದ್ದಾರೆಂಬುದರಮೇಲೆ ಬಂಗಾಳಾ ಸರ್ಕಾರದವರು ವೈಸರಾಯರಿಂದ ವಿಶೇಷಾಧಿಕಾರವನ್ನು ಪಡೆದು 72 ಜನ ಪ್ರಮುಖ ಬಂಗಾಳಿಗಳನ್ನು ಸೆರೆಹಿಡಿದಿರುವುದರಿಂದ, ಬಂಗಾಳಾ ವಿಭಜನಕಾಲದಲ್ಲಿ ಭಾರತೀಯರ ಮನಸ್ಸಿಗೆ ಉಂಟಾಗಿದ್ದಂತೆ ಅಸಮಾಧಾನವೂ, ಕಳವಳವೂ ಉಂಟಾಗಿ ಅವರ ದೃಕ್ಪಥವೆಲ್ಲವೂ ಅತ್ತಕಡೆಗೆ ಚಲಿಸಿರುವುದು. ಬಂಗಾಳಾದ ಈಗಣ ದುಸ್ಥಿತಿಯ ಪರಿಹಾರೋಪಾಯವನ್ನೂ, ಭರತಖಂಡದ ಜಾತೀಯತಾ ಸಮಸ್ಯೆಯನ್ನು ಪೂರ್ಣಗೊಳಿಸುವ ವಿಧಾನಗಳನ್ನೂ ಪರ್ಯಾಲೋಚನೆಯಿಂದ ಕಂಡುಹಿಡಿಯುವ ಉದ್ದೇಶದಿಂದ ಮಹಾತ್ಮಾ ಗಾಂಧಿಯವರು, ದಾಸರು, ನೆಹರು ಪ್ರಭೃತಿಗಳು ಕಲಕತ್ತಾದಲ್ಲಿ ಸೇರಿರುವರು. ನಿರ್ಮತ್ಸರಬುದ್ಧಿಯಿಂದ ವಿಚಾರಿಸಿದರೆ, ರಹಸ್ಯಕೂಟಗಳು ಬಂಗಾಳಾ ಪ್ರಾಂತದಲ್ಲಿ ಏರ್ಪಟ್ಟು ಅರಾಜಕಕೃತ್ಯಗಳು ನಡೆಯಿಸಲ್ಪಡುತ್ತಿರುವುದು ನಿಜವೆಂದೂ, ಅವುಗಳನ್ನು ಅಣಗಿಸಲು ತಕ್ಕ ಪ್ರಯತ್ನಮಾಡಲ್ಪಡುವುದು ಆವಶ್ಯಕವೆಂದೂ ಯಾರಿಗಾದರೂ ತೋರುವುದು. ಆದರೆ ಪ್ರಭುತ್ವದವರು ಈ ಸಂದರ್ಭದಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಅಸೆಂಬ್ಲಿ ಮೆಂಬರುಗಳ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಸ್ವತಂತ್ರಿಸಿ ವಿಶೇಷಾಧಿಕಾರವಿನಿಯೋಗದಿಂದ ವಿದ್ಯಾವಂತರೂ, ಪ್ರಖ್ಯಾತರೂ ಆದ ದೊಡ್ಡಮನುಷ್ಯರುಗಳನ್ನು ಸೆರೆಹಿಡಿದಿರುವುದರಿಂದ ಎಲ್ಲ ಪಕ್ಷಗಳ ಭಾರತೀಯರ ಮನಸ್ಸಿಗೆ ಖೇದವೂ ಅಸಮಾಧಾನವೂ ಉಂಟಾಗಿರುತ್ತದೆ. ಭಾರತೀಯರ ಅಸಮಾಧಾನಕ್ಕೆ ಕಾರಣವನ್ನು ಕಂಡುಹಿಡಿದು ಅದನ್ನು ಪರಿಹರಿಸಲು ಎತ್ನಿಸದೆ ಅರಾಜಕಪ್ರಯತ್ನವನ್ನು ಮೂಲೋತ್ಪಾಟನಮಾಡಬೇಕೆಂಬ ಸಂಕಲ್ಪದಿಂದ ಭಾರತೀಯರಿಗೆ ಮನೋಕ್ಷೋಭೆಯನ್ನುಂಟುಮಾಡತಕ್ಕ ಕಠಿಣಚರ್ಯೆಗಳನ್ನು ನಡಿಸತಕ್ಕುದು ರಾಜನೀತಿಯಲ್ಲವು. ಬಂಗಾಳಾ ವಾತಾವರಣದಿಂದ ಬಹಳ ದೂರದಲ್ಲಿರುವ ನಾವುಗಳು ಅಲ್ಲಿಯ ವಿಷಮಸ್ಥಿತಿಯು ಕೂಡಲೆ ಪರಿಹಾರವಾಗಿ ಜನರ ಮನಸ್ಸಿಗೆ ಶಾಂತಿಯುಂಟಾಗಲೆಂದು ಕೋರುವವರಾಗಿದ್ದೇವೆ.

ಅಮೇರಿಕೆಯ ಪಂಡಿತರೂ, ಭರತಖಂಡವೂ.

ಸ್ವಲ್ಪಕಾಲದ ಹಿಂದಿನವರೆಗೂ ಪಾಶ್ಚಾತ್ಯರು ಭಾರತೀಯರ ಸ್ಥಿತಿಗತಿಗಳನ್ನೂ ಮನೋಭಾವವನ್ನೂ ಸ್ವತಃ ತಿಳಿದುಕೊಂಡು ಹೋಗುವ ಉದ್ದೇಶದಿಂದ ಇಲ್ಲಿಗೆ ಬಂದು ಇಲ್ಲಿಯ ಪ್ರಮುಖಭಾರತೀಯರನ್ನು ಕಂಡು ಅವರಕೂಡ ಪ್ರಸ್ತಾಪಿಸದೆ ತಮ್ಮಿಷ್ಟಾನುಸಾರ ಸಂಚರಿಸಿಕೊಂಡು ಸ್ವದೇಶಕ್ಕೆ ಹಿಂದಿರುಗಿ ಹೋದಮೇಲೆ, ಭಾರತೀಯರು ಅನಾಗರಿಕರೆಂದೂ, ಕಲ್ಲನ್ನೂ ಮರವನ್ನೂ ಪೂಜಿಸತಕ್ಕವರೆಂದೂ, ಪಾಶ್ಚಾತ್ಯರ ದರ್ಶನಸಹವಾಸಗಳಾಗುವುದಕ್ಕೆ ಮೊದಲು ನಾಗರೀಕವೆಂದರೇನೆಂಬುದನ್ನು ಸಹ ತಿಳಿದಿರಲಿಲ್ಲವೆಂದೂ, ಈಗೀಗ ಅವರು ಕಣ್ಣುಬಿಡುತ್ತಲಿರುವರೆಂದೂ, ಪಾಶ್ಚಾತ್ಯರುಗಳಿಂದ ಭಾರತೀಯರು ಸುಶಿಕ್ಷಿತರಾದಾಗ್ಯೂ ಪ್ರಬಲರಾಗುವುದಿಲ್ಲವೆಂದೂ ಮನಸ್ವೀ ಗ್ರಂಥಗಳಲ್ಲೂ ವರ್ತಮಾನಪತ್ರಿಕೆಗಳಲ್ಲೂ ಬರೆದಿರುವರು. ಇದನ್ನೇ ಬ್ರಿಟಿಷ್ ಜನರೂ ಇತರ ದೇಶೀಯರೂ ನಿಜವೆಂದು ಭಾವಿಸುತ್ತಿರುವರು. ಆದರೆ ಈಗ ಹಿಂದೂಗಳ ವಿಜ್ಞಾನವನ್ನು ತಿಳಿಯುವ ಉದ್ದೇಶದಿಂದ ಅಮೇರಿಕೆಯ ಇಬ್ಬರು ಪಂಡಿತರುಗಳು ಭರತಖಂಡಕ್ಕೆ ಬಂದಿರುವರು. ಇವರು ಮಹಾತ್ಮಾಗಾಂಧಿಯವರ ದರ್ಶನಭಾಷಣಮಾಡಬೇಕೆಂದು ಅಲಹಾಬಾದಿನಲ್ಲಿರುವ ಸತ್ಯಾಗ್ರಹಾಶ್ರಮಕ್ಕೆ ಹೋಗಿದ್ದರು. ಆದರೆ ಮಹಾತ್ಮರು ಅಲ್ಲಿಲ್ಲದೆ ದಿಲ್ಲಿಗೆ ಹೋಗಿದ್ದಾರೆಂದು ತಿಳಿದು ಅಲ್ಲಿಂದ ದಿಲ್ಲಿಗೆ ಪ್ರಯಾಣಮಾಡಿದರು. ಮಹಾತ್ಮರು ಅಲ್ಲೂ ಇರದೆ ಕಲಕತ್ತೆಗೆ ಹೋಗಿದ್ದುದರಮೇಲೆ ಆ ಪಂಡಿತರುಗಳು ಕಲಕತ್ತಾಕ್ಕೆ ಹೋದರು. ಅಲ್ಲಿ ಅವರ ದರ್ಶನವನ್ನು ಮಾಡಿ ಅಮೇರಿಕೆಯಲ್ಲಿ ಅನೇಕರಿಗೆ ನಿಮ್ಮ ವಿಚಾರದಲ್ಲೂ ನಿಮ್ಮುದ್ಯಮವಿಚಾರದಲ್ಲೂ ಬಹಳ ಶ್ರದ್ಧೆಯುಳ್ಳವರಾಗಿರುವರೆಂದೂ, ಪ್ರಪಂಚದಲ್ಲಿರುವ ಆಧ್ಯಾತ್ಮಕಶ್ರೇಷ್ಠರುಗಳಲ್ಲಿ ನೀವೊಬ್ಬರೆಂದು ಭಾವಿಸಿರುತ್ತಾರೆಂದೂ ತಿಳಿಸಿದರು. ಹೀಗೆ ಮಹಾತ್ಮರ ನಡೆನುಡಿಗಳು ಪ್ರಪಂಚಕ್ಕೆ ಆದರ್ಶಪ್ರಾಯವಾಗಿರುವುದರಿಂದ ಭಾರತೀಯರು ಅವರನ್ನು ಹಿಂಬಾಲಿಸಿ ನಡೆಯತಕ್ಕುದು ಅತ್ಯಾವಶ್ಯಕವಾಗಿದೆ.

ಅಮೇರಿಕೆಯ ಪ್ರೆಸಿಡೆಂಟರು.

ಹಾರ್ಡಿಂಜ್‌ರವರ ಅಕಾಲಮರಣದಿಂದ ಬಿಡುವಾದ ಅಮೇರಿಕೆಯ ಪ್ರೆಸಿಡೆಂಟ್ ಸ್ಥಾನವನ್ನು ಕೂಲಿಡ್ಜ್‌ರವರು ವಹಿಸಿಕೊಂಡಿದ್ದರು. ಆದರೆ ಆ ಉಳಿದಿದ್ದ ಕಾಲಾವಧಿಯು ಪೂರೈಸಲಾಗಿ ಪ್ರೆಸಿಡೆಂಟರು ಹೊಸದಾಗಿ ಆರಿಸಲ್ಪಡಬೇಕಾಗಿ ಬಂದು ಅಭ್ಯರ್ಥಿಗಳಾಗಿ ನಿಂತಿದ್ದ ಜನರಲ್ಲಿ ಕೂಲಿಡ್ಜರವರಿಗೆ ಹೆಚ್ಚು ಓಟ್ಟುಗಳು ದೊರಕಿ ಅವರೇ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು. ಹಿಂದೆ ಪ್ರೆಸಿಡೆಂಟರಾಗಿದ್ದ ಗತಿಸಿದ ವಿಲ್ಸನ್ನರವರು ಪ್ರಪಂಚದಲ್ಲಿ ಶಾಶ್ವತಶಾಂತಿಯನ್ನೂ, ಸಖ್ಯವನ್ನೂ ಸ್ಥಾಪನಗೊಳಿಸಬೇಕೆಂಬ ಸಂಕಲ್ಪದಿಂದ ಪ್ರಯತ್ನಶೀಲರಾಗಿದ್ದರು. ಆದರೆ ಆ ಪ್ರಯತ್ನವು ನೆರವೇರಲಿಲ್ಲವಾಗಿ ಅಮೇರಿಕೆಯವರು ಅಂದಿನಿಂದಲೂ ಅನ್ಯರ ವ್ಯವಹಾರದಲ್ಲಿ ಕೈಹಾಕದೆ ತಮ್ಮ ಸ್ಥಿತಿಯನ್ನು ತಾವು ಸರಿಪಡಿಸಿಕೊಂಡಿದ್ದರೆ ಸಾಕೆಂಬ ಅವರ ದೃಕ್ಪಥವನ್ನೇ ಕೂಲಿಡ್ಜರವರು ಅನುಸರಿಸಿಕೊಂಡು ಬರುತ್ತಿರುವುದರಿಂದ, ಅವರ ಪರಿಪಾಲನವು ನಿರಾಯಾಸವಾಗಿ ನಡೆಯುತ್ತಿರುವುದು. ಫಿಲಿಫೈನಿಗೆ ಸಂಪೂರ್ಣಸ್ವಾತಂತ್ರ್ಯವು ಕೊಡಲ್ಪಡುವ ವಿಚಾರವು ಬಹಳ ಪ್ರಬಲವಾಗಿರುತ್ತದೆ. ಮೊದಮೊದಲು ಕೂಲಿಡ್ಜರವರು ಈ ವಿಚಾರದಲ್ಲಿ ವಿಮುಖರಾಗಿದ್ದವರು ಈಗ ಸಂಪೂರ್ಣಸ್ವಾತಂತ್ರ್ಯವನ್ನು ಕೊಡಲಿಷ್ಟಪಟ್ಟಿರುವುದಾಗಿ ವರ್ತಮಾನವಿದೆ. ಅಮೇರಿಕೆಯ ಯುನೈಟೆಡ್ ಸ್ಟೇಟ್ಸು ಎಲ್ಲಾ ಭಾಗದಲ್ಲೂ ಅಭಿವೃದ್ಧಿಯನ್ನು ಹೊಂದುತ್ತಿರುವುದಲ್ಲದೆ ಧನಧಾನ್ಯಸಮೃದ್ಧಿಯಲ್ಲಿ ಇತರ ಎಲ್ಲಾ ರಾಜ್ಯಗಳಿಗೂ ಅದ್ವಿತೀಯವಾಗಿರುವುದು. ಯುರೋಪ್ಯರ ಕಲ್ಲೋಲಪ್ರಕರಣದಲ್ಲಿ ಪ್ರವೇಶಿಸದೆ ಬಹಳ ಎಚ್ಚರಿಕೆಯಿಂದಿರುವ ವಿಚಾರದಲ್ಲಿ ಇತರ ದೇಶಗಳಿಗೆ ಮಾರ್ಗದರ್ಶಕವಾಗಿರುವುದು. ಈ ರೀತಿಯಾಗಿ ಎಲ್ಲ ವಿಚಾರದಲ್ಲೂ ಅನುಕೂಲವಾಗಿರುವ ಅಧಿಕಾರಸ್ಥಾನವನ್ನು ಕೂಲಿಡ್ಜರವರು ಮಾನವರ ಶ್ರೇಯಸ್ಸಿಗಾಗಿ ಉಪಯೋಗಿಸುವರೋ, ಇಲ್ಲ ಸ್ವಾರ್ಥಕ್ಕಾಗುಪಯೋಗಿಸುವರೋ ಮುಂದೆ ತಿಳಿಯತಕ್ಕುದಾಗಿದೆ.

ಹೊಸ ಪ್ರಭುತ್ವಾಂಗಕಾರಿಗಳ ರಚನಾಕ್ರಮ.

ಮುಖ್ಯಮಂತ್ರಿ ಮತ್ತು ಕಾಮನ್ಸ್‌ಸಭಾಧಿಪತಿ—ಮಿ|| ಬಾಲ್ಡ್ವಿನ್ನರವರು.
ಇಂಡ್ಯಾ ಸ್ಟೇಟ್ ಸೆಕ್ರೆಟರಿ—ಅರ್ಲ್ ಬರ್ಕನ್‌ಹೆಡ್‌ರವರು.
ಕೋಶಾಧಿಪತಿ—ಮಿ|| ವಿನ್‌ಸ್ಟನ್ ಚರ್ಚಿಲ್‌ರವರು.
ಫಾರಿನ್ ಸೆಕ್ರೆಟರಿ—ಮಿ|| ಆಸ್ಟಿನ್ ಚೇಂಬರ್ಲೇನ್‌ರವರು.
ಲಾರ್ಡ್ ಪ್ರಿವಿಸೀಲ್—ಲಾರ್ಡ್ ಸಾಲಿಸ್‌ಬರಿಯವರು.
ಕೌನ್ಸಿಲ್ ಲಾರ್ಡ್ ಪ್ರೆಸಿಡೆಂಟ್ ಮತ್ತು
ಹೌಸ್ ಅಫ್ ಲಾರ್ಡ್ಸ್ ನಾಯಕರು—ಮಾರ್ಕ್ವೆಸ್ ಕರ್ಜನ್‌ರವರು.
ಲಾರ್ಡ್ ಚಾನ್ಸಲರ್—ಲಾರ್ಡ್ ಕೇವ್‌ರವರು.
ಹೋಂ ಸೆಕ್ರೆಟರಿ—ಸರ್ ಡಬ್ಲ್ಯು. ಜಾಯ್ನ್‌ಸನ್ ಹಿಕ್ಸ್‌ರವರು.
ವಾರ್ ಸೆಕ್ರೆಟರಿ—ಸರ್ ಲೇಮಿಂಗ್ ವಾರಿಂಗ್‌ಟನ್ ಇವಾನ್ಸ್‌ರವರು.
ಅಡ್ಮಿರಾಲಿಟಿಯ ಫಸ್ಟ್ ಲಾರ್ಡ್—ಡಬ್ಲ್ಯು. ಸಿ. ಬ್ರಿಡ್ಜ್‌ಮ್ಯಾನ್‌ರವರು.
ಏರ್ ಸೆಕ್ರೆಟರಿ—ಸರ್ ಸ್ಯಾಮ್ಯುಯಲ್ ಹೋರ್‌ರವರು.
ವ್ಯಾಪಾರ ಬೋರ್ಡಿನ ಪ್ರೆಸಿಡೆಂಟ್—ಸರ್ ಫಿಲಿಫ್ ಲಾಯಿಡ್‌ಗ್ರೀಂರವರು.
ಹೆಲ್ತ್ ಮಿನಿಸ್ಟರ್—ಮಿ|| ನೆವಿಲ್ ಚೇಂಬರ್ಲೇನ್‌ರವರು.
ಸ್ಕಾಟ್ಲೆಂಡ್ ಸೆಕ್ರೆಟರಿ—ಸರ್ ಜಾನ್ ಗಿಲ್ಮೋರ್‌ರವರು.
ವ್ಯವಸಾಯ ಬೋರ್ಡಿನ ಪ್ರೆಸಿಡೆಂಟ್—[illegible]
ಲೇಬರ್ ಮಿನಿಸ್ಟರ್—ಸರ್ ಆರ್ಥರ್ ಸ್ಟೀಲ್ ಮೆಯಿಟ್ಲ್ಯಾಂಡ್‌ರವರು.
ಅಟರ್ನಿ ಜನರಲ್—ಸರ್ ಡಗ್ಲಾಸ್ ಹಾಗ್‌ರವರು.

ಮಿ|| ಚರ್ಚಿಲ್‌ರವರು ಕೋಶಾಧಿಪತಿಗಳಾಗಿ ನಿಯಮಿಸಲ್ಪಟ್ಟಿರುವುದರಿಂದ ರಾಜಕೀಯ ವಾತಾವರಣದಲ್ಲಿ ಬಹಳ ಅಸಮಾಧಾನವುಂಟಾಗಿದೆ.

ಸರ್ಕಾರಿ ಪಬ್ಲಿಸಿಟಿ ಆಫೀಸರಿಂದ.

ಪ್ರಸಿದ್ಧಪತ್ರಿಕೆ.

ಶಿವಸಮುದ್ರದಲ್ಲಿ ಸರ್ಕಾರಿ ಹಣವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡರೆಂಬ ಮೊಖದ್ದಮೆಯಲ್ಲಿ ಮಿ|| ಎಸ್. ಡಿ ಎಸ್. ಅಯ್ಯಂಗಾರ್ಯರ ಮೇಲೆ ತಪ್ಪು ಸಾಬೀತಾಗದೆ ಅವರನ್ನು ಬಿಡುಗಡೆ ಮಾಡಿದುದಕ್ಕಾಗಿ ಸದರಿ ತೀರ್ಮಾನದಮೇಲೆ ಚೀಫ್ ಕೋರ್ಟಿನಲ್ಲಿ ಸರ್ಕಾರದವರು ದಾಖಲ್ಮಾಡಿದ್ದ ಅಪೀಲನ್ನು ವಾಪಸುತೆಗೆದುಕೊಂಡರೆಂದು ಕೆಲವು ವರ್ತಮಾನಪತ್ರಿಕೆಗಳಲ್ಲಿ ಪ್ರ ಪ್ರಕಟಿಸಲ್ಪಟ್ಟಿರುವ ವಿವರವು ತಪ್ಪಾದುದು. ಅಪೀಲು ಯಾವುದೂ ದಾಖಲ್ಮಾಡಲ್ಪಟ್ಟೂ ಇರಲಿಲ್ಲ; ಮತ್ತು ವಾಪಸು ತೆಗೆದುಕೊಳ್ಳಲ್ಪಡಲೂ ಇಲ್ಲ.

ಕ್ರೋಂಲೋಹವನ್ನು ಸರ್ಕಾರಕ್ಕೆ ಉಳಿಸಿಕೊಳ್ಳುವ ವಿಷಯಕವಾದ ನಿಬಂಧನೆಗಳನ್ನು ಸ್ವಲ್ಪಮಟ್ಟಿಗೆ ಸಲೀಸುಮಾಡಿ ಸರ್ಕಾರದವರು ಹುಕುಮುಗಳನ್ನು 1924 ನೇ ಫೆಬ್ರವರಿ ತಿಂಗಳಿನಲ್ಲಿ ಸಾದರ್ಮಾಡಿದ್ದಾಗ್ಯೂ ಮತ್ತು ಆ ಕೂಡಲೆ ಲೈಸೆನ್ಸುಗಳಿಗಾಗಿ ದರಖಾಸ್ತುಗಳು ಮಾಡಲ್ಪಟ್ಟಿದ್ದಾಗ್ಯೂ, 1924 ನೇ ಅಕ್ಟೋಬರ್ 17 ನೇ ತಾರೀಖಿನವರೆಗೆ ಯಾವುದೊಂದು ಲೈಸೆನ್ಸೂ ಕೊಡಲ್ಪಟ್ಟಿಲ್ಲವೆಂಬುದಾಗಿ 1924 ನೇ ಅಕ್ಟೋಬರ್ 17 ನೇ ಮರುದಿನದ "ಡೆಯ್ಲಿ ಪೋಸ್ಟ್" ಪತ್ರಿಕೆಯಲ್ಲಿ "ಮೈಸೂರು ದೇಶದ ಮ್ಯಾಂಗನೀಸ್ ಮತ್ತು ಕ್ರೋಂಲೋಹಗಳ ಕೈಗಾರಿಕೆ" ಎಂಬ ಅಭಿಧಾನದಿಂದ ಪ್ರಕಟಿಸಲ್ಪಟ್ಟಿದ್ದ ಲೇಖನದ ವಿಚಾರವಾಗಿ, ಅದರ ಲೇಖಕರು ತಿಳಿಯಪಡಿಸಿರುವ ವಿವರವು ತಪ್ಪಾದುದೆಂದು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ತಿಳಿಸಲು ಅಪೇಕ್ಷಿಸುತ್ತಾರೆ. 17 ಬ್ಲಾಕುಗಳ ವಿಷಯದಲ್ಲಿ ಇಪ್ಪತ್ತು ದರಖಾಸ್ತುಗಳು ತಲಪಿದ್ದುವು ಇವುಗಳ ಪೈಕಿ, 14 ಬ್ಲಾಕುಗಳಿಗೆ ಸಂಬಂಧಪಟ್ಟ 13 ದರಖಾಸ್ತುಗಳು ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ವಿಲೆಮಾಡಲ್ಪಟ್ಟುವು. ಮುಖ್ಯವಾದ ಪ್ರದೇಶಗಳಲ್ಲಿರುವ 3 ಬ್ಲಾಕುಗಳಿಗೆ ಸಂಬಂಧಪಟ್ಟ ಮಿಕ್ಕ 7 ದರಖಾಸ್ತುಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ.

ಆರ್. ರಂಗರಾವ್,
ಸರ್ಕಾರದ ಪಬ್ಲಿಸಿಟಿ ಆಫೀಸರು.

ಸ್ವದೇಶದ ವೃತ್ತಾಂತಗಳು

ಪೋಲೀಸು ಸೂಪರಿಂಟೆಂಡೆಂಟರುಗಳಾದ ಮ|| ಜಿ. ಶಾಂತವೀರಪ್ಪ, ಬಿ.ಎ., ಯವರು ಹಾಸನದ ಡಿ|| ನಿಂದ ಫ್ರೆಂಚ್‌ರಾಕ್ಸಿಗೂ, ಅಲ್ಲಿದ್ದ ಮಿ|| ಡಸಿಂಗ್‌ರವರು ಹಾಸನ ಡಿ|| ಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ಕಳೆದವಾರ 1-2 ದಿನಗಳಲ್ಲಿ ಕೊಂಚ ಮಳೆಯಾಯಿತು ಮತ್ತು ಈ ವಾರದಲ್ಲಿ ಗುರುವಾರ ಬೆಳಿಗ್ಗೆ ತಕ್ಕ ಮಟ್ಟಿಗೆ ಮಳೆಬಂದಿತು. ಆದರೂ ದಗೆಯು ಮಾತ್ರ ಇನ್ನೂ ಕಡಿಮೆಯಾಗಲಿಲ್ಲವು. ಅಲ್ಲಲ್ಲಿ ಒಂದೊಂದು ಪ್ಲೇಗು ಮರಣವಾಗುತ್ತಿರುವುದಾಗಿ ತಿಳಿಯಬರುತ್ತದೆ.

ಬೆಂಗಳೂರು ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರ ಚುನಾವಣೆಯು ಕಳೆದ ಬುಧವಾರ ನಡೆದುದರಲ್ಲಿ ಮ|| ಬಿ. ಕೆ ಗರುಡಾಚಾರ್ಯರಿಗೆ 15 ಓಟುಗಳೂ, ಮಿ|| ಅಬ್ಬಾಸ್‌ಖಾನ್‌ರವರಿಗೆ 13 ಓಟುಗಳೂ ಬಂದು, ಹೆಚ್ಚುಸಂಖ್ಯೆಯನ್ನು ಪಡೆದ ಮ|| ಗರುಡಾಚಾರ್ಯರು ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು.

ರಾಜಧಾನಿಯ ಕೋಟೆಯೊಳಕ್ಕೆ ಜನರು ನಾಲ್ಕು ದಿಕ್ಕುಗಳ ಬಾಗಿಲುಗಳಿಂದಲೂ ನಿರಾತಂಕವಾಗಿ ಹೋಗಿಬರುತ್ತಿದ್ದರು. ಆದರೆ ಕಳೆದ ಶುಕ್ರವಾರದಿಂದ ಕೋಟೆಯೊಳಕ್ಕೆ ಯಾವ ಪ್ರಾಣಿಯೂ ಪ್ರವೇಶಿಸಗೊಳ್ಳಲ್ಪಡುತ್ತಿಲ್ಲವು. ಆದರೆ ಇದರ ಕಾರಣವೇನೆಂಬುದು ಮಾತ್ರ ಹೊರಪಟ್ಟಿಲ್ಲ.

ರಾಜಧಾನಿಯ ಎಲೆಕ್ಟ್ರಿಕ್‌ಪವರ್ ಮತ್ತು ಲೈಟ್ ಸೂಪರಿಂಟೆಂಡೆಂಟರಾದ ಮ|| ರಾಮಭದ್ರೇಗೌಡರು ಕಳೆದ ಗುರುವಾರ ರಾಜಧಾನಿಯ ಹಳೇಅಗ್ರಹಾರದಲ್ಲಿರುವ ಶ್ರೀಚಿಕ್ಕಬಸವೇಶ್ವರದೇವಸ್ಥಾನದಲ್ಲಿ ನಾಗರಶಿಲಾಪ್ರತಿಷ್ಠೆಯನ್ನು ವಿಧ್ಯುಕ್ತವಾಗಿಮಾಡಿಸಿ ನೂರಾರು ಜನ ಭಕ್ತಮಾಹೇಶ್ವರರುಗಳನ್ನು ಮೃಷ್ಟಾನ್ನಭೋಜನದಿಂದಲೂ ಭೂರಿದಕ್ಷಿಣೆಯಿಂದಲೂ ತೃಪ್ತಿಗೊಳಿಸಿದರು. ಅಲ್ಲದೆ ಕಳೆದ ಶುಕ್ರವಾರ ರಾತ್ರಿ ತಮ್ಮ ಮನೆಯಲ್ಲಿ ಮಿತ್ರಮಂಡಲಿಗೆ ಸುಖಭೋಜನಮಾಡಿಸಿ ತಮ್ಮ ವಿಶ್ವಾಸವನ್ನು ಪ್ರದರ್ಶಿಸಿದರು.

ರಾಜಧಾನಿಯ ಕೋಟೆಯೊಳಗೆ ವರಹಾಸ್ವಾಮಿಯ ದೇವಸ್ಥಾನದ ಉತ್ತರಪಾರ್ಶ್ವದಲ್ಲಿದ್ದ ಮಾರಮ್ಮನ ವಿಗ್ರಹವು ಕೋಟೆಯ ದಕ್ಷಿಣಭಾಗದ ಕೊತ್ತಲಿನಲ್ಲಿ ಗುಂಡಿನ ಮನೆಗಿದಿರಾಗಿ ಕಟ್ಟಲ್ಪಟ್ಟಿರುವ ಗುಡಿಗೆ ಸಾಗಿಸಲ್ಪಟ್ಟು ಪ್ರತಿಷ್ಠಿಸಲ್ಪಟ್ಟಿರುತ್ತದೆ. ಈ ದೇವರ ಸೇವೆಗೆ ಅನೇಕಜನರು ಮುಖ್ಯವಾಗಿ ಹೆಂಗುಸರೂ ಮಕ್ಕಳೂ ಪ್ರತ್ಯಹನಿತ್ಯದಲ್ಲೂ ಹೋಗುತ್ತಿರುವವಾದುದರಿಂದ, ಈ ಹೊಸ ಗುಡಿಯ ಬಳಿ ಪ್ರಕಾಶಮಾನವಾದ ವಿದ್ಯುದ್ದೀಪವೂ ನೀರಿನ ನಲ್ಲಿಯೂ ದೇವಸ್ಥಾನದ ಇದಿರಿಗಿರುವ ಕೈಪಿಡಿಗಳಮಧ್ಯೆ ಒಂದು ದ್ವಾರವೂ ಕಲ್ಪಿಸಲ್ಪಡುವುದು ಬಹಳ ಅವಶ್ಯಕವಾಗಿರುತ್ತದೆ.

1000 ರೂಪಾಯಿಗಳ 3 ನೋಟುಗಳು, 500 ರೂ. ನ 1 ನೋಟು, 100 ರೂ. ನ 13 ನೋಟುಗಳು ಮತ್ತು 50 ರೂ. ನ 4 ನೋಟುಗಳು ಈ ಪ್ರಕಾರ ಒಟ್ಟು 5000 ರೂ. ಗಳ ಅರ್ಧಭಾಗ ನೋಟುಗಳುಳ್ಳ ಒಂದು ಕವರು ಬೆಂಗಳೂರು ಅರ್ಕಾಟು ಶ್ರೀನಿವಾಸಾಚಾರ್ ಬೀದಿಯಲ್ಲಿರುವ ಪೋಸ್ಟಾಫೀಸಿನಲ್ಲಿ ರಿಜಿಸ್ಟರುಮಾಡಲ್ಪಟ್ಟುದಾಗಿಯೂ, ಉಳಿದ ಅರ್ಧಭಾಗ ನೋಟುಗಳು ಬೇರೊಂದು ಕವರಿನಲ್ಲಿಡಲ್ಪಟ್ಟು ಮ|| ಶಿವರುದ್ರಪ್ಪ ಮುರಿಗೆಪ್ಪ ಚಿಗಟೇರಿ ಕೊಯಮುತ್ತೂರು ಇವರ ಹೆಸರಿಗೆ ಕಳುಹಲ್ಪಡಲು ಸಿದ್ಧಗೊಳಿಸಲ್ಪಟ್ಟಿದ್ದುದು ಎಲ್ಲಿಯೋ ಕಳೆದು ಹೋಗಿರುವುದರಿಂದ, ಮೇಲೆ ಹೇಳಿದ 5000 ರೂ. ನ ಅರ್ಧನೋಟುಗಳನ್ನು ಗೊತ್ತುಮಾಡಿಕೊಟ್ಟವರಿಗೆ 100 ರೂ. ಬಹುಮಾನಕೊಡಲ್ಪಡುವುದಾಗಿಯೂ ಮ|| ಶಿವರುದ್ರಪ್ಪ ಮುರಿಗೆಪ್ಪ ಇವರು ಪ್ರಕಟಿಸಿರುತ್ತಾರಾದುದರಿಂದ ಅವನ್ನು ಕಂಡುಹಿಡಿದವರು ಮಾಲೀಕರಿಗೆ ತಿಳುಹಿಸಿ ಬಹುಮಾನ ಪಡೆಯಬಹುದಾಗಿದೆ.

ರಾಜಧಾನಿಯ ಟ್ರಸ್ಟ್‌ಬೋರ್ಡಿನ ಪೋಷಣೆಗಾಗಿ ಸರ್ಕಾರದಿಂದ ಕೊಡಲ್ಪಡುತ್ತಿರುವ ಹಣವು ಅದರ ವೆಚ್ಚಕ್ಕೆ ಸಾಲುವುದಿಲ್ಲವಾದುದರಿಂದ ವೆಚ್ಚವನ್ನು ಕಡಿಮೆಮಾಡುವ ಉಪಾಯವನ್ನು ಕಂಡುಹಿಡಿದು ಸೂಚಿಸುವುದಕ್ಕಾಗಿ ನಿರ್ಮಿಸಲ್ಪಟ್ಟಿದ್ದ ಸ್ಪೆಷಲ್ ಕಮಿಟಿಯವರು, ಬೋರ್ಡಿನ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳೆಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಿ ಈಗ ರಾಜಧಾನಿಯಲ್ಲಿ ಅಭಿವೃದ್ಧಿಕಾರ್ಯವೇನೂ ನಡೆಸಲ್ಪಡುತ್ತಿಲ್ಲವಾದುದರಿಂದ ಹೆಚ್ಚು ಸಂಬಳದ ಎಕ್ಸಿಕ್ಯೂಟಿವ್ ಇಂಜನೀಯರ ಆವಶ್ಯಕತೆಯಿಲ್ಲವೆಂದು, ಕೆಲ ಕೆಲಸಗಾರರನ್ನು ತೆಗೆದುಬಿಡಬೇಕೆಂದು, ಅನಾವಶ್ಯಕವೆಚ್ಚಗಳನ್ನು ನಿಲ್ಲಿಸಬೇಕೆಂದು ಮೊದಲಾಗಿ ವರದಿಮಾಡಿರುವರೆಂದು ಕೇಳುತ್ತೇವೆ. ಈಗಿರುವ ಎಕ್ಸಿಕ್ಯೂಟಿವ್ ಇಂಜನೀಯರು ಬಹುಕಾಲದಿಂದ ಈ ಆಫೀಸಿನಲ್ಲಿರುವುದರಿಂದಲೂ, ಇವರ ನಡವಳಿಕೆಗಳು ಕೈಕೆಳಗಣ ಕೆಲಸಗಾರರಿಗೂ, ಪ್ರಜೆಗಳಿಗೂ ಬಹಳ ಬೇಸರವನ್ನುಂಟುಮಾಡಿರುವುದರಿಂದಲೂ, ಸ್ಪೆಷಲ್ ಕಮಿಟಿಯವರು ಸೂಚಿಸಿರುವಂತೆ ಇವರನ್ನು ಕೂಡಲೆ ವರ್ಗಾಯಿಸುವುದು ಯುಕ್ತವಾಗಿರುತ್ತಾದುದರಿಂದ ಟ್ರಸ್ಟ್‌ಬೋರ್ಡಿನ ಹೊಸಚೇರ್ಮನ್ನರಾದ ಮ|| ಎನ್. ಮಾಧವರಾಯರು ಈ ವಿಚಾರದಲ್ಲಿ ಗಮನವಿಡುವವರಾಗಬೇಕು.

ಭರತಖಂಡದ ವೃತ್ತಾಂತಗಳು.

ಕನ್ನಾಟಿನ ಆರ್ಥರ್ ಯುವರಾಜ ದಂಪತಿಗಳು ಬರುವ ಡಿಸೆಂಬರ್ ಆದಿಭಾಗದಲ್ಲಿ ಭರತಖಂಡಕ್ಕೆ ಬರುವವರಾಗಿರುವರು.

ಕರಾಚಿಯ ಮ್ಯುನಿಸಿಪಲ್ ಕೌನ್ಸಿಲಿನವರು ಬೊಂಬಾಯಿ ಗೌರ್ನರವರಿಗೆ ಸ್ವಾಗತಪತ್ರವನ್ನು ಸಮರ್ಪಿಸಲು ನಿರಾಕರಿಸಿಬಿಟ್ಟರು.

ಅಖಿಲಭಾರತ ಪೋಸ್ಟಲ್ ಕಾನ್ಫರೆನ್ಸು ಈ ತಾ|| 23 ಮತ್ತು 24 ರಲ್ಲಿ ಬೊಂಬಾಯಿನಲ್ಲಿ ಶ್ರೀಯುತ ಎಂ. ಎ. ಜಿನ್ನರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ತಲಚೇರಿಯ ಮ್ಯುನಿಸಿಪಾಲಿಟಿಯವರೊಪ್ಪಿಸಿದ ಸ್ವಾಗತಪತ್ರಕ್ಕೆ ಮದ್ರಾಸ್ ಗೌರ್ನರವರು ಕೊಟ್ಟ ಉತ್ತರದಲ್ಲಿ ನಂಜನಗೂಡಿನಿಂದ ತಲಚೇರಿಗೆ ರೈಲ್ವೆಹಾಕುವ ವಿಚಾರದಲ್ಲಿ ವಿಶೇಷ ಭರವಸೆಯನ್ನು ಕೊಡಲಿಲ್ಲವಂತೆ.

ಮೌಲಾನಾಮಹಮ್ಮದಾಲಿಯವರು ಹೊರಡಿಸುತ್ತಿದ್ದ ಕಾಮರೇಡು ಪತ್ರಿಕೆಯು ಕೆಲಕಾಲದಿಂದಲೂ ನಿಂತುಹೋಗಿದ್ದು ಈಗ ಪುನಃ ಕಳೆದ ತಿಂಗಳಿಂದ ಮಹಮ್ಮದಾಲಿಯವರಿಂದಲೇ ಆರಂಭಿಸಲ್ಪಟ್ಟಿರುತ್ತದೆ.

ಅಮೃತಸರದಲ್ಲಿ ದೊಡ್ಡಮನುಷ್ಯರುಗಳು ಜೂಜಾಡುವುದು ಪ್ರಬಲವಾಗುತ್ತಿರುವುದರಮೇಲೆ ಕೆಲ ಪೊಲೀಸಿನವರು ಸ್ತ್ರೀವೇಷಗಳನ್ನು ಹಾಕಿಕೊಂಡು ಜೂಜುನಡೆಯುತ್ತಿದ್ದ ಮನೆಗೆನುಗ್ಗಿ 16 ಜನ ದೊಡ್ಡಮನುಷ್ಯರನ್ನು ಸೆರೆಹಿಡಿದಿರುವರು.

ಹೈದರಾಬಾದಿನಲ್ಲಿ ಪ್ಲೇಗುರೋಗವು ಅತ್ಯುಲ್ಬಣವಾಗಿ ಜನರು ನಿತ್ಯದಲ್ಲೂ ನೂರರಗಟ್ಟಲೆ ಸಾಯುತ್ತಿರುವುದರಿಂದ ಅಲ್ಲಿಯ ಕೋರ್ಟು ಕಚೇರಿಗಳೂ, ಸ್ಕೂಲುಗಳೂ ಮುಚ್ಚಲ್ಪಟ್ಟಿವೆ. ಕಳೆದ ತಿಂಗಳಲ್ಲಿ 2560 ಪ್ಲೇಗು ಮರಣಗಳಾಗಿದ್ದುವು.

ಹೈದರಾಬಾದಿನ ನೈಜಾಂರವರು ಲಾಹೋರಿನ ಟ್ರಿಬ್ಯೂನ್ ಎಂಬ ವೃತ್ತಪತ್ರಿಕೆಯನ್ನು ತಮ್ಮ ಸೀಮೆಗೆ ಯಾರೂ ತರಿಸಕೂಡದೆಂದು ಕಟ್ಟಪ್ಪಣೆಯನ್ನು ಮಾಡಿರುವರು. ರಾಜ್ಯಾಡಳಿತದ ದೋಷೋದ್ಘಾಟನೆಯನ್ನು ಮಾಡತಕ್ಕ ವೃತ್ತಪತ್ರಿಕೆಗಳಿಗೆ ಈರೀತಿ ಬಹಿಷ್ಕಾರ ಹಾಕುವುದರಿಂದ ಮದಾಂಧರಾದ ಅಧಿಕಾರಿಗಳ ನಿರಂಕುಶಪ್ರವರ್ತನಕ್ಕೆ ಸಹಾಯಮಾಡಿದಂತಾಗುವುದರವಿನಾ ಮತ್ತಾವ ಪುರುಷಾರ್ಥವೂ ಆಗುವುದಿಲ್ಲವು

ನೀಲಗಿರಿ ಪ್ರಾಂತಗಳಲ್ಲಿ ಕೂಲಿನಾಲಿ ಮಾಡಿಕೊಂಡು ಜೀವಿಸುವ ಮತ್ತು ಬೆಟ್ಟಗಳಲ್ಲಿ ವಾಸಿಸುವ ಬಡಪ್ರಜೆಗಳು ಪ್ರತಿ ವರ್ಷದಲ್ಲೂ ಮದ್ಯಪಾನಕ್ಕಾಗಿ ೬ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ವ್ಯಯಮಾಡುತ್ತಿರುವರಾದುದರಿಂದ, ಆ ಡಿಸ್ಟ್ರಿಕ್ಟು ಪ್ರದೇಶದಲ್ಲೆಲ್ಲೂ ಮದ್ಯವನ್ನು ಮಾರಕೂಡದಂತೆ ನಿಷೇಧಿಸಬೇಕಾಗಿ ಸರ್ಕಾರದವರಿಗೆ ಬಿನ್ನವಿಸಿಕೊಳ್ಳಬೇಕೆಂದು ನೀಲಗಿರಿಯ ಮದ್ಯಪಾನನಿರೋಧಕಸಂಘದವರು [illegible].

ಕೋಹಾಟಿನಲ್ಲಿ ಹಿಂದೂ ಮಹಮ್ಮದೀಯರುಗಳಿಗೆ ಮನಸ್ತಾಪವುಟ್ಟಿ ಹೊಡೆದಾಟಬಡಿದಾಟಗಳಾಗುತ್ತಿರುವುದರಮೇಲೆ, ಮಹಾತ್ಮಾ ಗಾಂಧಿಯವರು ಈ ಮಹಮ್ಮದೀಯ [illegible]

MYSORE RAILWAYS.

NOTICE.

PACKING OF CONSIGNMENTS—
CONDITION OF :—

For the information of those despatching traffic over the Mysore Railways, it is notified that, with effect from 1st October 1924, revised packing conditions in connection with the booking of consignments were introduced. The Railway Staff have received very clear and definite instructions to the effect that these packing conditions are to be strictly enforced and that, in the event of consignors not complying with the same, their consignments may only be accepted if Risk Note A. be executed.

Consignors, in their own interests, are advised to apply to the Station Master or the Chief Goods Clerk to show them the packing conditions, if any, that apply to the particular consignment they wish to despatch.

Full particulars of these conditions are in the hands of all Station Masters or Chief Goods Clerks and they have received instructions to assist consignors in every way by explaining fully the packing conditions necessary for any consignment.

Traffic Manager's Office,
Mysore.
3rd November 1924.

A. A. KHAN,
Traffic Manager,

ಮೈಸೂರು ಸ್ಟಾರ್.

೧೯೨೪ ನೆಯ ಇಸವಿ ನವಂಬರ್ ತಾ|| ೯ ನೆಯ ಭಾನುವಾರ.

THE BRITISH ELECTIONS.

The striking success of the Conservatives in the recent elections is a matter, which no part of the British Empire can view without cosiderable interest. Labour as was expected had only a brief spell of time and it is impossible to withhold an expression of sympathy for the retiring Labour Government, which it must be admitted strove with a singular devotion in the best interests of the Empire. With no clear majority for themselves and resting on the shifty support of the Liberal party, the position of Labour was never enviable. And when the Liberals began to coquet with the Conservatives, thinking that they would meet with the latter's admiration, they no doubt succeeded in ousting Labour but in the attempt lost their own feathers completely, and with a paltry strength of 37 or so in the Parliament are relegated to the back benches and are left to stew in their own juice. Labour on the other, though it has lost about 35 seats, has polled a very decent number of votes on the whole. They surely would have done very much but for the alliance of the Liberals with the Conservatives, and but for the sensation caused over the Campbell case and what was worse, the mysterious Zinovieff letter, of which the Conservatives made capital. In one way it is good that Liberals had a good wash out—a nemesis which was inevitable from their conduct—as it is likely to restore the old two party system, which is always more conducive to sound and stabler administration at the triangular contest. So far as we can see Liberals would find it a hard job to recover from their present catastrophe. But Labour, though far as yet from commanding the sinews of war to the same extent as their opponents and from the splendid organisation of their press, is still a powerful opposition now, with most of the members of its cabinet returned to the Parliament and with the advantage of experience in the administration which they lacked before would be making itself more effectively felt as an opposition, which in its turn will gain for it popular support. There is a world of difference between the sympathetic, imaginative leader Mr. Macdonald and the Imperialistic Mr. Baldwin. Mr. Baldwin has been talking a great deal of late about the welfare of India constituting one of the greatest and most sacred trusts with which the British Government is charged and is indicating a strong rule as opposed to "the nerveless and vacillating policy" of the Labour Government. We are afraid that that is not a very desirable way of going about things, especially in view of the present state of tension in India. A more conciliatory and sympathetic attitude would smoothen the working of his administration so far as India is concerned. There is a large section of Indian public which thinks, or, at any rate, says, that the change of Government in England is of no consequence to India. But there could hardly be any gainsaying that the prospect of the next instalment of reform was much brighter with Labourites in office than the Conservatives. The one interesting thing is that Conservatives can do what they would like with a clear majority of 210 over other parties, and let us wait and see.

THE BENGAL SITUATION.

The eyes of all India to day are turned towards Bengal. With 72 of its men arrested as anarchists and revolutionaries, some of whom, persons of rank and position, Bengal is once again the chief centre of interest in Indian politics as in days of the partition. The patriots and leaders of India are assembled in Calcutta to study and to solve the problem of Indian nationalism for that is the matter on hand. Viewing dispassionately, there was the revolutionary movement active and working, and that was to be put down. It was not a sudden discovery of Government when the 72 were arrested. They knew it for sometime past. It is not the intention of the Government to put down revolutionary crime in time that is found fault with so much by the leaders. It is the extraordinary powers which they invoke for the purpose on the one hand and the not taking into confidence many public men whose support the Government could expect in such cases, before the arrests were made that almost all Indians irrespective of parties take objection to. They also say that to take action in exterminating all revolutionary ideas and crimes without at the same time remedying promptly the causes of discontent which have admittedly led by to the formation and spread of such ideas is not true statesmanship, for no such movement has ever been put down by mere repression. We here are at a respectable distance from those fields and let us hope that things will take a happier turn erelong.

ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆ.

ನಾವು ಮೊದಲು ತಿಳುಹಿದ್ದಂತೆ ಬ್ರಿಟಿಷ್ ಪಾರ್ಲಿಮೆಂಟಿನ ಮೆಂಬರುಗಳ ಚುನಾವಣೆಯ ಕಾರ್ಯವೆಲ್ಲವೂ ಮುಗಿದು ಕನ್ಸರ್ವೇಟಿವ್ (ಅನುದಾರ) ಪಕ್ಷದವರಿಗೆ 407, ಲೇಬರ್ (ಕಾರ್ಮಿಕ) ಪಕ್ಷದವರಿಗೆ 152, ಲಿಬರಲ್ (ಉದಾರ) ಪಕ್ಷದವರಿಗೆ 41, ಇತರ ಸಾಮಾನ್ಯಪಕ್ಷದವರೆಲ್ಲರಿಗೂ 15 ಈ ಪ್ರಕಾರ ಸ್ಥಾನಗಳು ದೊರಕಿರುತ್ತವೆ. ಒಟ್ಟು 615 ಮೆಂಬರುಗಳ ಸ್ಥಾನಗಳಲ್ಲಿ ಕನ್ಸರ್ವೇಟಿವ್ ಪಕ್ಷದವರಿಗೆ ಕೊಂಚ ಕಡಿಮೆಯಾಗಿ ⅔ ಸ್ಥಾನಗಳು ದೊರಕಿರುವುದು ಆಶ್ಚರ್ಯಕರವಾಗಿರುವುದಲ್ಲದೆ, ಲೇಬರ್‌ಪಕ್ಷದವರಿಗೆ ಅವರ ನಿರೀಕ್ಷಣೆಯಂತೆ ಹೆಚ್ಚು ಸ್ಥಾನಗಳು ದೊರೆಯದಿದ್ದುದೂ, ಲಿಬರಲ್‌ಪಕ್ಷದವರಿಗೆ ಅಪಜಯವಾಗಿರುವುದೂ ಅನುತಾಪಕರವಾಗಿರುತ್ತದೆ. ಲೇಬರ್ ಪಕ್ಷದವರಿಗೆ ಪಾರ್ಲಿಮೆಂಟಿನಲ್ಲಿ ಸಾಕಷ್ಟು ಸ್ಥಾನಬಲವಿಲ್ಲದೆ ಲಿಬರಲ್ ಪಕ್ಷದವರ ಸಹಾಯವನ್ನು ಅವಲಂಬಿಸಿದ್ದುದರಿಂದ ಅವರ ರಾಜ್ಯಾಡಳಿತವು ಬಹುಕಾಲ ನಡೆಯುವುದಿಲ್ಲವೆಂದು ಮೊದಲೇ ಊಹಿಸಲ್ಪಟ್ಟಿದ್ದಿತು. ಸಾಮ್ರಾಜ್ಯಹಿತಸಾಧನಾಪೇಕ್ಷೆಯಿಂದ ರಾಜಕಾರ್ಯನಿರ್ವಾಹಮಾಡುತಿದ್ದ ಲೇಬರ್‌ಪಕ್ಷದವರು ಅಧಿಕಾರನಿವೃತ್ತರಾದುದು ಅನುತಾಪಕರವಾಗಿದೆ. ಕನ್ಸರ್ವೇಟಿವ್‌ಪಕ್ಷದವರ ಪ್ರೀತಿಯನ್ನೂ ಸಹಾಯವನ್ನೂ ಹೊಂದಲಪೇಕ್ಷಿಸಿ, ಲಿಬರಲ್‌ಪಕ್ಷದವರು ಲೇಬರ್‌ಪಕ್ಷದವರನ್ನು ಅಧಿಕಾರನಿವೃತ್ತರನ್ನಾಗಿ ಮಾಡಲು ಪ್ರಯತ್ನಿಸಿ ಜಯಶೀಲರಾದರಾದರೂ, ಚುನಾವಣೆಯಲ್ಲಿ 37 ಸ್ಥಾನಗಳನ್ನು ಮಾತ್ರ ಸಂಪಾದಿಸಿ ತಮ್ಮ ಬುಡಕ್ಕೆ ತಾವೇ ನೀರನ್ನು ತಿದ್ದಿಕೊಂಡರು. ಲಿಬರಲ್‌ಪಕ್ಷದವರು ಇಷ್ಟು ಅತ್ಯಲ್ಪಸಂಖ್ಯೆಯಿಂದ ಸಭೆಯಲ್ಲಿದ್ದರೂ ಇಲ್ಲದಂತೆಯೇ ಆಗಿದೆ. ಮಾಡಿದ್ದುಣ್ಣೋ ಮಹಾರಾಯ ಎಂಬ ಗಾದೆಯು ಇವರ ವಿಚಾರದಲ್ಲಿ ಚೆನ್ನಾಗಿ ಅನ್ವಯಿಸುವುದು. ಲೇಬರ್‌ಪಕ್ಷದವರಿಗೆ ಕಳೆದಸಾರಿಗಿನ್ನ 35 ಸ್ಥಾನಗಳು ಕಡಿಮೆಯಾಗಿದ್ದರೂ ಹೆಚ್ಚು ಓಟ್ಸುಗಳು ಬಂದಿರುತ್ತವೆ. ಲಿಬರಲ್‌ಪಕ್ಷದವರು ಕನ್ಸರ್ವೇಟಿವ್ ಪಕ್ಷದವರಕೂಡ ಸೇರಿಕೊಳ್ಳದಿದ್ದಲ್ಲಿ, ಮತ್ತು ಕ್ಯಾಂಬಲ್ ವಿವಾದದ ಸಂಬಂಧದಲ್ಲೂ, ರಷ್ಯಾದ ಅನಾಯಕಸಂಗಡದವನಾದ ಜೊನೋವಿಫ್ ಎಂಬಾತನಿಂದ ಬರೆಯಲ್ಪಟ್ಟಿದ್ದ ಲೇಖದ ವಿಚಾರದಲ್ಲೂ ಲೇಬರ್ ಸರ್ಕಾರದ ಮೇಲೆ ಅಪವಾದವು ಹೊರಿಸಲ್ಪಟ್ಟು ಗೊಂದಲವೆಬ್ಬಿಸಲ್ಪಡದಿದ್ದಲ್ಲಿ ಲೇಬರ್ ಪಕ್ಷದವರಿಗೇ ಅಧಿಕಸ್ಥಾನಗಳು ದೊರೆಯುತ್ತಿದ್ದುದರಲ್ಲಿ ಸಂದೇಹವಿರಲಿಲ್ಲವು. ಈ ಎರಡು ವಿಚಾರಗಳಲ್ಲಿ ಕನ್ಸರ್ವೇಟಿವರುಗಳು ಬಹಳ ಸಾಹಸಪಟ್ಟು ಲೇಬರುಗಳ ಆಡಳಿತದಲ್ಲಿ ವಿಶ್ವಾಸವಿಲ್ಲವೆಂದು ಸೂಚನೆಯನ್ನು ತಂದು ಲಿಬರಲ್ಲುಗಳ ಸಹಾಯದಿಂದ ಪ್ಯಾಸ್‌ಮಾಡಿಸಿ ಲೇಬರುಗಳು ಅಧಿಕಾರದಿಂದ ನಿವೃತ್ತರಾಗುವಂತೆ ಅಸಮಸಾಹಸವನ್ನು ಮಾಡಿದರು. ಹೀಗೆ ಪಾರ್ಲಿಮೆಂಟಿನಲ್ಲಿ ಲಿಬರಲ್‌ಪಕ್ಷವು ಸ್ವಯಂ ಅಪರಾಧದಿಂದ ಇದ್ದರೂ ಇಲ್ಲದಂತಾಗಿ ಪೂರ್ವದಂತೆ ಎರಡು ಪಕ್ಷಗಳು ಮಾತ್ರ ಉಳಿಯುವಂತಾದುದು, ರಾಜ್ಯಾಡಳಿತವು ಸುಲಲಿತವಾಗಿಯೂ ಪ್ರಬಲವಾಗಿಯೂ ನಡೆಯಲವಕಾಶವಾಯಿತು. ಸಮರ್ಥರೂ ಅನುಭವಶಾಲಿಗಳೂ ಆದ ಲೇಬರ್‌ಪಕ್ಷದವರು ಮೆಂಬರುಗಳಾಗಿರುವುದರಿಂದಲೂ, ಹಿಂದಣರಾಜ್ಯಾಡಳಿತದ ಅನುಭವದಿಂದಲೂ ಕನ್ಸರ್ವೇಟಿವ್‌ಪ್ರಭುತ್ವದ ದೋಷೋದ್ಘಾಟನೆಮಾಡಿ ಅವರನ್ನು ಪ್ರತಿಭಟಿಸಿ ಪ್ರಜಾನುರಾಗವನ್ನು ಪಡೆಯಲು ಅವಕಾಶವಾಗಿರುವುದು. ಸಾನುಭೂತಿಗಳೂ, ಊಹಾಪೋಹವಿಚಕ್ಷಣರೂ, ಲೇಬರ್‌ಪಕ್ಷದ ಯಜಮಾನರೂ ಆದ ಮೆಕ್ಡೊನಾಲ್ಡರವರಿಗೂ, ರಾಜಶಠನೆಯ ಬಾಲ್ಡ್‌ವಿನ್‌ರವರಿಗೂ ಮಹದಂತರವಿರುವುದು. ಭರತಖಂಡಕ್ಕೆ ಹಿತವನ್ನುಂಟುಮಾಡತಕ್ಕದು ಬ್ರಿಟಿಷ್‌ಪ್ರಭುತ್ವದವರಿಗೆ ಪವಿತ್ರಕರ್ತವ್ಯವಾಗಿರುತ್ತದೆಂದು ಬಾಲ್ಡ್‌ವಿನ್‌ರವರು ಬಹಳವಾಗಿ ಪ್ರಸ್ತಾಪಿಸುತ್ತಿರುವರಲ್ಲದೆ, ಲೇಬರ್‌ಪ್ರಭುತ್ವದವರ ದುರ್ಬಲವೂ, ಚಂಚಲವೂ ಆದ ಪರಿಪಾಲನಕ್ರಮವನ್ನನುಸರಿಸದೆ ಮಹಾದರ್ಪದಿಂದ ಭರತಖಂಡವನ್ನು ಪರಿಪಾಲಿಸಬೇಕೆಂದು ಸೂಚಿಸುತ್ತಿರುವರು. ಭರತಖಂಡದ ಪ್ರಕೃತಸ್ಥಿತಿಯಲ್ಲಿ ಸಾನುಭೂತಿಯಿಂದಲೂ ಉಪಾಯದಿಂದಲೂ ರಾಜಕಾರ್ಯನಿರ್ವಾಹಮಾಡಲು ಸಾಧ್ಯವಲ್ಲದೆ ಬಾಲ್ಡ್‌ವಿನ್‌ರವರು ಸೂಚಿಸುವಂತೆ ದರ್ಪಪ್ರದರ್ಶನದಿಂದ ಸಾಧ್ಯವಲ್ಲವೆಂದು ಹೇಳಬಲ್ಲೆವು. ಇಂಗ್ಲೆಂಡಿನ ಪ್ರಭುತ್ವದ ಬದಲಾವಣೆಯಿಂದ ಭರತಖಂಡಕ್ಕೆ ಯಾವ ಪ್ರಯೋಜನವೂ ಇಲ್ಲವೆಂಬುದು ಅನೇಕ ಪ್ರಮುಖಭಾರತೀಯರ ಅಭಿಪ್ರಾಯವಾಗಿರುತ್ತದೆ. ಆದರೆ ಕನ್ಸರ್ವೇಟಿವ್‌ಗಳಿಗೆ ಬದಲಾಗಿ ಲೇಬರು ಪಕ್ಷದವರಿಗೆ ಮರಳಿ ಪ್ರಭುತ್ವವು ಪ್ರಾಪ್ತವಾಗಿದ್ದಲ್ಲಿ ಭಾರತೀಯರಿಗೆ ರಾಜಕೀಯ ಸುಧಾರಣಾಫಲವು ವಿಶೇಷವಾಗಿ ಪ್ರಾಪ್ತವಾಗುತ್ತಿದ್ದುದರಲ್ಲಿ ಸಂಶಯವಿರಲಿಲ್ಲವು. ಕನ್ಸರ್ವೇಟಿವರು ಇತರ ಎಲ್ಲ ಪಕ್ಷದವರ ಸಂಖ್ಯೆಗಿನ್ನ ⅓ ಭಾಗದಷ್ಟು ಹೆಚ್ಚು ಸಂಖ್ಯೆಯ ಸ್ಥಾನಗಳನ್ನು ಸಂಪಾದಿಸಿಕೊಂಡಿರುವುದರಿಂದ ಒಂದು ಪಾರ್ಲಿಮೆಂಟಿನ ಪೂರ್ಣಕಾಲಾವಧಿಯಾದ 5 ವರ್ಷಗಳವರೆಗೆ ಅವಿಚ್ಛಿನ್ನವಾಗಿ ಅಧಿಕಾರವನ್ನು ಮಾಡಬಹುದಾಗಿದೆ. ಆದರೆ ಇವರಿಂದ ದೇಶಕ್ಕೆ ಯಾವ ರೀತಿಯಲ್ಲಿ ಪ್ರಯೋಜನವಾಗುತ್ತದೆಂಬುದು ಮಾತ್ರ ನಿರೀಕ್ಷಣೀಯವಾಗಿದೆ.

ಬಂಗಾಳದ ಪ್ರಕೃತಸ್ಥಿತಿ.

ಬ್ರಿಟಿಷರ ಭರತಖಂಡದ ಪರಿಪಾಲನಕ್ರಮದಲ್ಲಿ ಭಾರತೀಯರಿಗೆ ಅವಿಶ್ವಾಸವೂ, ಅಸಹ್ಯವೂ ಉಂಟಾಗಿ ಅವರ ಆಳ್ವಿಕೆಯು ಸುಗಮವಾಗಿರದೆ ಕಷ್ಟತರವಾಗಿ ಪರಿಣಮಿಸಲೆಂಬ ಅಭಿಪ್ರಾಯದಿಂದ ಬಂಗಾಳದಲ್ಲಿ ಕೆಲಕಾಲದಿಂದಲೂ ರಹಸ್ಯಕೂಟಗಳು ಏರ್ಪಟ್ಟು ನಿರಪರಾಧಿಗಳಾದ ಅಧಿಕಾರಿಗಳನ್ನು ಕೊಲೆಮಾಡುವುದು ಸುಲಿಗೆಮಾಡುವುದು ಮೊದಲಾಗಿ ಅರಾಜಕಕೃತ್ಯಗಳು ನಡಿಸಲ್ಪಡುತ್ತಿರುವುವೆಂದು ಭಾವಿಸಲ್ಪಟ್ಟಿರುವುದಷ್ಟೆ? ಆದರೆ ಇತ್ತೀಚೆಗೆ ಭಾರತೀಯ ಪ್ರಸಿದ್ಧಮುಂದಾಳುಗಳು ರಹಸ್ಯಕೂಟಗಳಿಗೆ ಸೇರಿ ಅರಾಜಕಕೃತ್ಯಗಳು ಪ್ರಬಲತರವಾಗಿ ನಡೆಯಲು ಉತ್ತೇಜನವನ್ನು ಕೊಡುತ್ತಿದ್ದಾರೆಂಬುದರಮೇಲೆ ಬಂಗಾಳಾ ಸರ್ಕಾರದವರು ವೈಸರಾಯರಿಂದ ವಿಶೇಷಾಧಿಕಾರವನ್ನು ಪಡೆದು 72 ಜನ ಪ್ರಮುಖ ಬಂಗಾಳಿಗಳನ್ನು ಸೆರೆಹಿಡಿದಿರುವುದರಿಂದ, ಬಂಗಾಳಾ ವಿಭಜನಕಾಲದಲ್ಲಿ ಭಾರತೀಯರ ಮನಸ್ಸಿಗೆ ಉಂಟಾಗಿದ್ದಂತೆ ಅಸಮಾಧಾನವೂ, ಕಳವಳವೂ ಉಂಟಾಗಿ ಅವರ ದೃಕ್ಪಥವೆಲ್ಲವೂ ಅತ್ತಕಡೆಗೆ ಚಲಿಸಿರುವುದು. ಬಂಗಾಳಾದ ಈಗಣ ದುಸ್ಥಿತಿಯ ಪರಿಹಾರೋಪಾಯವನ್ನೂ, ಭರತಖಂಡದ ಜಾತೀಯತಾ ಸಮಸ್ಯೆಯನ್ನು ಪೂರ್ಣಗೊಳಿಸುವ ವಿಧಾನಗಳನ್ನೂ ಪರ್ಯಾಲೋಚನೆಯಿಂದ ಕಂಡುಹಿಡಿಯುವ ಉದ್ದೇಶದಿಂದ ಮಹಾತ್ಮಾ ಗಾಂಧಿಯವರು, ದಾಸರು, ನೆಹರು ಪ್ರಭೃತಿಗಳು ಕಲಕತ್ತಾದಲ್ಲಿ ಸೇರಿರುವರು. ನಿರ್ಮತ್ಸರಬುದ್ಧಿಯಿಂದ ವಿಚಾರಿಸಿದರೆ, ರಹಸ್ಯಕೂಟಗಳು ಬಂಗಾಳಾ ಪ್ರಾಂತದಲ್ಲಿ ಏರ್ಪಟ್ಟು ಅರಾಜಕಕೃತ್ಯಗಳು ನಡೆಯಿಸಲ್ಪಡುತ್ತಿರುವುದು ನಿಜವೆಂದೂ, ಅವುಗಳನ್ನು ಅಣಗಿಸಲು ತಕ್ಕ ಪ್ರಯತ್ನಮಾಡಲ್ಪಡುವುದು ಆವಶ್ಯಕವೆಂದೂ ಯಾರಿಗಾದರೂ ತೋರುವುದು. ಆದರೆ ಪ್ರಭುತ್ವದವರು ಈ ಸಂದರ್ಭದಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಅಸೆಂಬ್ಲಿ ಮೆಂಬರುಗಳ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಸ್ವತಂತ್ರಿಸಿ ವಿಶೇಷಾಧಿಕಾರವಿನಿಯೋಗದಿಂದ ವಿದ್ಯಾವಂತರೂ, ಪ್ರಖ್ಯಾತರೂ ಆದ ದೊಡ್ಡಮನುಷ್ಯರುಗಳನ್ನು ಸೆರೆಹಿಡಿದಿರುವುದರಿಂದ ಎಲ್ಲ ಪಕ್ಷಗಳ ಭಾರತೀಯರ ಮನಸ್ಸಿಗೆ ಖೇದವೂ ಅಸಮಾಧಾನವೂ ಉಂಟಾಗಿರುತ್ತದೆ. ಭಾರತೀಯರ ಅಸಮಾಧಾನಕ್ಕೆ ಕಾರಣವನ್ನು ಕಂಡುಹಿಡಿದು ಅದನ್ನು ಪರಿಹರಿಸಲು ಎತ್ನಿಸದೆ ಅರಾಜಕಪ್ರಯತ್ನವನ್ನು ಮೂಲೋತ್ಪಾಟನಮಾಡಬೇಕೆಂಬ ಸಂಕಲ್ಪದಿಂದ ಭಾರತೀಯರಿಗೆ ಮನೋಕ್ಷೋಭೆಯನ್ನುಂಟುಮಾಡತಕ್ಕ ಕಠಿಣಚರ್ಯೆಗಳನ್ನು ನಡಿಸತಕ್ಕುದು ರಾಜನೀತಿಯಲ್ಲವು. ಬಂಗಾಳಾ ವಾತಾವರಣದಿಂದ ಬಹಳ ದೂರದಲ್ಲಿರುವ ನಾವುಗಳು ಅಲ್ಲಿಯ ವಿಷಮಸ್ಥಿತಿಯು ಕೂಡಲೆ ಪರಿಹಾರವಾಗಿ ಜನರ ಮನಸ್ಸಿಗೆ ಶಾಂತಿಯುಂಟಾಗಲೆಂದು ಕೋರುವವರಾಗಿದ್ದೇವೆ.

ಅಮೇರಿಕೆಯ ಪಂಡಿತರೂ, ಭರತಖಂಡವೂ.

ಸ್ವಲ್ಪಕಾಲದ ಹಿಂದಿನವರೆಗೂ ಪಾಶ್ಚಾತ್ಯರು ಭಾರತೀಯರ ಸ್ಥಿತಿಗತಿಗಳನ್ನೂ ಮನೋಭಾವವನ್ನೂ ಸ್ವತಃ ತಿಳಿದುಕೊಂಡು ಹೋಗುವ ಉದ್ದೇಶದಿಂದ ಇಲ್ಲಿಗೆ ಬಂದು ಇಲ್ಲಿಯ ಪ್ರಮುಖಭಾರತೀಯರನ್ನು ಕಂಡು ಅವರಕೂಡ ಪ್ರಸ್ತಾಪಿಸದೆ ತಮ್ಮಿಷ್ಟಾನುಸಾರ ಸಂಚರಿಸಿಕೊಂಡು ಸ್ವದೇಶಕ್ಕೆ ಹಿಂದಿರುಗಿ ಹೋದಮೇಲೆ, ಭಾರತೀಯರು ಅನಾಗರಿಕರೆಂದೂ, ಕಲ್ಲನ್ನೂ ಮರವನ್ನೂ ಪೂಜಿಸತಕ್ಕವರೆಂದೂ, ಪಾಶ್ಚಾತ್ಯರ ದರ್ಶನ ಸಹವಾಸಗಳಾಗುವುದಕ್ಕೆ ಮೊದಲು ನಾಗರೀಕವೆಂದರೇನೆಂಬುದನ್ನು ಸಹ ತಿಳಿದಿರಲಿಲ್ಲವೆಂದೂ, ಈಗೀಗ ಅವರು ಕಣ್ಣುಬಿಡುತ್ತಲಿರುವರೆಂದೂ, ಪಾಶ್ಚಾತ್ಯರುಗಳಿಂದ ಭಾರತೀಯರು ಸುಶಿಕ್ಷಿತರಾದಾಗ್ಯೂ ಪ್ರಬಲರಾಗುವುದಿಲ್ಲವೆಂದೂ ಮನಸ್ವೀ ಗ್ರಂಥಗಳಲ್ಲೂ ವರ್ತಮಾನಪತ್ರಿಕೆಗಳಲ್ಲೂ ಬರೆದಿರುವರು. ಇದನ್ನೇ ಬ್ರಿಟಿಷ್ ಜನರೂ ಇತರ ದೇಶೀಯರೂ ನಿಜವೆಂದು ಭಾವಿಸುತ್ತಿರುವರು. ಆದರೆ ಈಗ ಹಿಂದೂಗಳ ವಿಜ್ಞಾನವನ್ನು ತಿಳಿಯುವ ಉದ್ದೇಶದಿಂದ ಅಮೇರಿಕೆಯ ಇಬ್ಬರು ಪಂಡಿತರುಗಳು ಭರತಖಂಡಕ್ಕೆ ಬಂದಿರುವರು. ಇವರು ಮಹಾತ್ಮಾಗಾಂಧಿಯವರ ದರ್ಶನಭಾಷಣಮಾಡಬೇಕೆಂದು ಅಲಹಾಬಾದಿಲ್ಲಿರುವ ಸತ್ಯಾಗ್ರಹಾಶ್ರಮಕ್ಕೆ ಹೋಗಿದ್ದರು. ಆದರೆ ಮಹಾತ್ಮರು ಅಲ್ಲಿಲ್ಲದೆ ದಿಲ್ಲಿಗೆ ಹೋಗಿದ್ದಾರೆಂದು ತಿಳಿದು ಅಲ್ಲಿಂದ ದಿಲ್ಲಿಗೆ ಪ್ರಯಾಣಮಾಡಿದರು. ಮಹಾತ್ಮರು ಅಲ್ಲೂ ಇರದೆ ಕಲಕತ್ತೆಗೆ ಹೋಗಿದ್ದುದರಮೇಲೆ ಆ ಪಂಡಿತರುಗಳು ಕಲಕತ್ತಾಕ್ಕೆ ಹೋದರು. ಅಲ್ಲಿ ಅವರ ದರ್ಶನವನ್ನು ಮಾಡಿ ಅಮೇರಿಕೆಯಲ್ಲಿ ಅನೇಕರಿಗೆ ನಿಮ್ಮ ವಿಚಾರದಲ್ಲೂ ನಿಮ್ಮುದ್ಯಮವಿಚಾರದಲ್ಲೂ ಬಹಳ ಶ್ರದ್ಧೆಯುಳ್ಳವರಾಗಿರುವರೆಂದೂ, ಪ್ರಪಂಚದಲ್ಲಿರುವ ಆಧ್ಯಾತ್ಮಿಕಶ್ರೇಷ್ಠರುಗಳಲ್ಲಿ ನೀವೊಬ್ಬರೆಂದು ಭಾವಿಸಿರುತ್ತಾರೆಂದೂ ತಿಳಿಸಿದರು. ಹೀಗೆ ಮಹಾತ್ಮರ ನಡೆನುಡಿಗಳು ಪ್ರಪಂಚಕ್ಕೆ ಆದರ್ಶಪ್ರಾಯವಾಗಿರುವುದರಿಂದ ಭಾರತೀಯರು ಅವರನ್ನು ಹಿಂಬಾಲಿಸಿ ನಡೆಯತಕ್ಕುದು ಅತ್ಯಾವಶ್ಯಕವಾಗಿದೆ.

ಅಮೇರಿಕೆಯ ಪ್ರೆಸಿಡೆಂಟರು.

ಹಾರ್ಡಿಂಗ್‌ರವರ ಅಕಾಲಮರಣದಿಂದ ಬಿಡುವಾದ ಅಮೇರಿಕೆಯ ಪ್ರೆಸಿಡೆಂಟ್ ಸ್ಥಾನವನ್ನು ಕೂಲಿಡ್ಜ್‌ರವರು ವಹಿಸಿಕೊಂಡಿದ್ದರು. ಆದರೆ ಆ ಉಳಿದಿದ್ದ ಕಾಲಾವಧಿಯು ಪೂರೈಸಲಾಗಿ ಪ್ರೆಸಿಡೆಂಟರು ಹೊಸದಾಗಿ ಆರಿಸಲ್ಪಡಬೇಕಾಗಿ ಬಂದು ಅಭ್ಯರ್ಥಿಗಳಾಗಿ ನಿಂತಿದ್ದ ಜನರಲ್ಲಿ ಕೂಲಿಡ್ಜ್‌ರವರಿಗೆ ಹೆಚ್ಚು ಓಟ್ಸುಗಳು ದೊರಕಿ ಅವರೇ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು. ಹಿಂದೆ ಪ್ರೆಸಿಡೆಂಟರಾಗಿದ್ದ ಗತಿಸಿದ ವಿಲ್ಸನ್‌ರವರು ಪ್ರಪಂಚದಲ್ಲಿ ಶಾಶ್ವತಶಾಂತಿಯನ್ನೂ, ಸಖ್ಯವನ್ನೂ ಸ್ಥಾಪನಗೊಳಿಸಬೇಕೆಂಬ ಸಂಕಲ್ಪದಿಂದ ಪ್ರಯತ್ನಶೀಲರಾಗಿದ್ದರು. ಆದರೆ ಆ ಪ್ರಯತ್ನವು ನೆರವೇರಲಿಲ್ಲವಾಗಿ ಅಮೇರಿಕೆಯವರು ಅಂದಿನಿಂದಲೂ ಅನ್ಯರ ವ್ಯವಹಾರದಲ್ಲಿ ಕೈಹಾಕದೆ ತಮ್ಮ ಸ್ಥಿತಿಯನ್ನು ತಾವು ಸರಿಪಡಿಸಿಕೊಂಡಿದ್ದರೆ ಸಾಕೆಂಬ ಅವರ ದೃಕ್ಪಥವನ್ನೇ ಕೂಲಿಡ್ಜ್‌ರವರು ಅನುಸರಿಸಿಕೊಂಡು ಬರುತ್ತಿರುವುದರಿಂದ, ಅವರ ಪರಿಪಾಲನವು ನಿರಾಯಾಸವಾಗಿ ನಡೆಯುತ್ತಿರುವುದು. ಫಿಲಿಫೈನಿಗೆ ಸಂಪೂರ್ಣಸ್ವಾತಂತ್ರ್ಯವು ಕೊಡಲ್ಪಡುವ ವಿಚಾರವು ಬಹಳ ಪ್ರಬಲವಾಗಿರುತ್ತದೆ. ಮೊದಮೊದಲು ಕೂಲಿಡ್ಜ್‌ರವರು ಈ ವಿಚಾರದಲ್ಲಿ ವಿಮುಖರಾಗಿದ್ದವರು ಈಗ ಸಂಪೂರ್ಣಸ್ವಾತಂತ್ರ್ಯವನ್ನು ಕೊಡಲಿಷ್ಟಪಟ್ಟಿರುವುದಾಗಿ ವರ್ತಮಾನವಿದೆ. ಅಮೇರಿಕೆಯ ಯುನೈಟೆಡ್ ಸ್ಟೇಟ್ಸು ಎಲ್ಲಾ ಭಾಗದಲ್ಲೂ ಅಭಿವೃದ್ಧಿಯನ್ನು ಹೊಂದುತ್ತಿರುವುದಲ್ಲದೆ ಧನಧಾನ್ಯಸಮೃದ್ಧಿಯಲ್ಲಿ ಇತರ ಎಲ್ಲಾ ರಾಜ್ಯಗಳಿಗೂ ಅದ್ವಿತೀಯವಾಗಿರುವುದು. ಯುರೋಪ್ಯರ ಕಲ್ಲೋಲಪ್ರಕರಣದಲ್ಲಿ ಪ್ರವೇಶಿಸದೆ ಬಹಳ ಎಚ್ಚರಿಕೆಯಿಂದಿರುವ ವಿಚಾರದಲ್ಲಿ ಇತರ ದೇಶಗಳಿಗೆ ಮಾರ್ಗದರ್ಶಕವಾಗಿರುವುದು. ಈ ರೀತಿಯಾಗಿ ಎಲ್ಲ ವಿಚಾರದಲ್ಲೂ ಅನುಕೂಲವಾಗಿರುವ ಅಧಿಕಾರಸ್ಥಾನವನ್ನು ಕೂಲಿಡ್ಜ್‌ರವರು ಮಾನವರ ಶ್ರೇಯಸ್ಸಿಗಾಗಿ ಉಪಯೋಗಿಸುವರೋ, ಇಲ್ಲ ಸ್ವಾರ್ಥಕ್ಕಾಗುಪಯೋಗಿಸುವರೋ ಮುಂದೆ ತಿಳಿಯತಕ್ಕುದಾಗಿದೆ.

ಹೊಸ ಪ್ರಭುತ್ವಾಧಿಕಾರಿಗಳ ರಚನಾಕ್ರಮ.

ಮುಖ್ಯಮಂತ್ರಿ ಮತ್ತು ಕಾಮನ್ಸ್ ಸಭಾಧಿಪತಿ—ಮಿ|| ಬಾಲ್ಡ್‌ವಿನ್‌ರವರು.
ಇಂಡ್ಯಾ ಸ್ಟೇಟ್ ಸೆಕ್ರೆಟರಿ—ಲಾರ್ಡ್ ಬರ್ಕನ್‌ಹೆಡ್‌ರವರು.
ಕೋಶಾಧಿಪತಿ—ಮಿ|| ವಿನ್‌ಸ್ಟನ್ ಚರ್ಚಿಲ್‌ರವರು.
ಫಾರಿನ್ ಸೆಕ್ರೆಟರಿ—ಮಿ|| ಆಸ್ಟಿನ್ ಚೇಂಬರ್ಲೇನ್‌ರವರು.
ಲಾರ್ಡ್ ಪ್ರಿವಿಸೀಲ್—ಲಾರ್ಡ್ ಸಾಲಿಸ್‌ಬರಿಯವರು.
ಕೌನ್ಸಿಲ್ ಲಾರ್ಡ್ ಪ್ರೆಸಿಡೆಂಟ್ ಮತ್ತು
ಹೌಸ್ ಆಫ್ ಲಾರ್ಡ್ಸ್ ನಾಯಕರು—ಮಾರ್ಕ್ವಿಸ್ ಕರ್ಜನ್‌ರವರು.
ಲಾರ್ಡ್ ಚಾನ್ಸಲರ್—ಲಾರ್ಡ್ ಕೇವ್‌ರವರು.
ಹೋಂ ಸೆಕ್ರೆಟರಿ—ಸರ್ ಡಬ್ಲ್ಯು. ಜಾಯ್ನ್‌ಸನ್ ಹಿಕ್ಸ್‌ರವರು.
ವಾರ್ ಸೆಕ್ರೆಟರಿ—ಸರ್ ಲೇಮಿಂಗ್ ವಾರಿಂಗ್‌ಟನ್ ಇವಾನ್ಸ್‌ರವರು.
ಅಡ್ಮಿರಾಲ್ಟಿಯ ಫಸ್ಟ್ ಲಾರ್ಡ್—ಡಬ್ಲ್ಯು. ಸಿ. ಬ್ರಿಡ್ಜ್‌ಮ್ಯಾನ್‌ರವರು.
ಏರ್ ಸೆಕ್ರೆಟರಿ—ಸರ್ ಸ್ಯಾಮ್ಯುಯಲ್ ಹೋರ್‌ರವರು.
ವ್ಯಾಪಾರ ಬೋರ್ಡಿನ ಪ್ರೆಸಿಡೆಂಟ್—ಸರ್ ಫಿಲಿಫ್ ಲಾಯಿಡ್ ಗ್ರೀಂರವರು.
ಹೆಲ್ತ್ ಮಿನಿಸ್ಟರ್—ಮಿ|| ನೆವಿಲ್ ಚೇಂಬರ್ಲೇನ್‌ರವರು.
ಸ್ಕಾಟ್ಲೆಂಡ್ ಸೆಕ್ರೆಟರಿ—ಸರ್ ಜಾನ್ ಗಿಲ್ಮೊರ್‌ರವರು.
ವ್ಯವಸಾಯ ಬೋರ್ಡ್ ಪ್ರೆಸಿಡೆಂಟ್—ಲಾರ್ಡ್ ಎಡ್ವರ್ಡ್‌ವುಡ್‌ರವರು.
ಲೇಬರ್ ಮಿನಿಸ್ಟರ್—ಸರ್ ಆರ್ಥರ್ ಸ್ಟೀಲ್ ಮೇಟ್ಲ್ಯಾಂಡ್‌ರವರು.
ಅಟಾರ್ನಿ ಜನರಲ್—ಸರ್ ಡಗ್ಲಾಸ್ ಹಾಗ್‌ರವರು.

ಮಿ|| ಚರ್ಚಿಲ್‌ರವರು ಕೋಶಾಧಿಪತಿಗಳಾಗಿ ನಿಯಮಿಸಲ್ಪಟ್ಟಿರುವುದರಿಂದ ರಾಜಕೀಯ ವಾತಾವರಣದಲ್ಲಿ ಬಹಳ ಅಸಮಾಧಾನವುಂಟಾಗಿದೆ.

ಸರ್ಕಾರಿ ಪಬ್ಲಿಸಿಟಿ ಆಫೀಸರಿಂದ.
ಪ್ರಸಿದ್ಧಪತ್ರಿಕೆ.

ಶಿವಸಮುದ್ರದಲ್ಲಿ ಸರ್ಕಾರಿ ಹಣವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡರೆಂಬ ಮೊಖದ್ದಮೆಯಲ್ಲಿ ಮಿ|| ಎಸ್. ಡಿ. ಎಸ್. ಅಯ್ಯಂಗಾರ್ಯರ ಮೇಲೆ ತಪ್ಪು ಸಾಬೀತಾಗದೆ ಅವರನ್ನು ಬಿಡುಗಡೆ ಮಾಡಿದುದಕ್ಕಾಗಿ ಸದರಿ ತೀರ್ಮಾನದಮೇಲೆ ಚೀಫ್ ಕೋರ್ಟಿನಲ್ಲಿ ಸರ್ಕಾರದವರು ದಾಖಲ್ಮಾಡಿದ್ದ ಅಪೀಲನ್ನು ವಾಪಸುತೆಗೆದುಕೊಂಡರೆಂದು ಕೆಲವು ವರ್ತಮಾನಪತ್ರಿಕೆಗಳಲ್ಲಿ ಪ್ರ ಪ್ರಕಟಿಸಲ್ಪಟ್ಟಿರುವ ವಿವರವು ತಪ್ಪಾದುದು. ಅಪೀಲು ಯಾವುದೂ ದಾಖಲ್ಮಾಡಲ್ಪಟ್ಟೂ ಇರಲಿಲ್ಲ; ಮತ್ತು ವಾಪಸು ತೆಗೆದುಕೊಳ್ಳಲ್ಪಡಲೂ ಇಲ್ಲ.

ಕ್ರೋಂಲೋಹವನ್ನು ಸರ್ಕಾರಕ್ಕೆ ಉಳಿಸಿಕೊಳ್ಳುವ ವಿಷಯಕವಾದ ನಿಬಂಧನೆಗಳನ್ನು ಸ್ವಲ್ಪಮಟ್ಟಿಗೆ ಸಲೀಸುಮಾಡಿ ಸರ್ಕಾರದವರು ಹುಕುಮುಗಳನ್ನು 1924 ನೇ ಫೆಬ್ರುವರಿ ತಿಂಗಳಿನಲ್ಲಿ ಸಾದರ್ಮಾಡಿದ್ದಾಗ್ಯೂ ಮತ್ತು ಆ ಕೂಡಲೆ ಲೈಸೆನ್ಸುಗಳಿಗಾಗಿ ದರಖಾಸ್ತುಗಳು ಮಾಡಲ್ಪಟ್ಟಿದ್ದಾಗ್ಯೂ, 1924 ನೇ ಅಕ್ಟೋಬರ್ 17 ನೇ ತಾರೀಖಿನವರೆಗೆ ಯಾವುದೊಂದು ಲೈಸೆನ್ಸೂ ಕೊಡಲ್ಪಟ್ಟಿಲ್ಲವೆಂಬುದಾಗಿ 1924 ನೇ ಅಕ್ಟೋಬರ್ 17 ನೇ ಮದ್ರಾಸಿನ "ಡೆಯ್ಲಿ ಪೋಸ್ಟ್" ಪತ್ರಿಕೆಯಲ್ಲಿ "ಮೈಸೂರು ದೇಶದ ಮ್ಯಾಂಗನೀಸ್ ಮತ್ತು ಕ್ರೋಂಲೋಹಗಳ ಕೈಗಾರಿಕೆ" ಎಂಬ ಅಭಿಧಾನದಿಂದ ಪ್ರಕಟಿಸಲ್ಪಟ್ಟಿದ್ದ ಲೇಖನದ ವಿಚಾರವಾಗಿ, ಅದರ ಲೇಖಕರು ತಿಳಿಯಪಡಿಸಿರುವ ವಿವರವು ತಪ್ಪಾದುದೆಂದು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ತಿಳಿಸಲು ಅಪೇಕ್ಷಿಸುತ್ತಾರೆ. 17 ಬ್ಲಾಕುಗಳ ವಿಷಯದಲ್ಲಿ ಇಪ್ಪತ್ತು ದರಖಾಸ್ತುಗಳು ತಲಪಿದ್ದುವು. ಇವುಗಳ ಪೈಕಿ, 14 ಬ್ಲಾಕುಗಳಿಗೆ ಸಂಬಂಧಪಟ್ಟ 13 ದರಖಾಸ್ತುಗಳು ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ವಿಲೆಮಾಡಲ್ಪಟ್ಟುವು. ಮುಖ್ಯವಾದ ಪ್ರದೇಶಗಳಲ್ಲಿರುವ 3 ಬ್ಲಾಕುಗಳಿಗೆ ಸಂಬಂಧಪಟ್ಟ ಮಿಕ್ಕ 7 ದರಖಾಸ್ತುಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ.

ಆರ್. ರಂಗರಾವ್,
ಸರ್ಕಾರದ ಪಬ್ಲಿಸಿಟಿ ಆಫೀಸರು.

ಸ್ವದೇಶದ ವೃತ್ತಾಂತಗಳು

ಪೋಲೀಸು ಸೂಪರಿಂಟೆಂಡೆಂಟರುಗಳಾದ ಮ|| ಜಿ. ಶಾಂತವೀರಪ್ಪ, ಬಿ.ಎ., ಯವರು ಹಾಸನದ ಡಿ|| ನಿಂದ ಫ್ರೆಂಚ್‌ರಾಕ್ಸಿಗೂ, ಅಲ್ಲಿದ್ದ ಮಿ|| ಡಸಿಂಗ್‌ರವರು ಹಾಸನ ಡಿ|| ಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ಕಳೆದವಾರ 1-2 ದಿನಗಳಲ್ಲಿ ಕೊಂಚ ಮಳೆಯಾಯಿತು ಮತ್ತು ಈ ವಾರದಲ್ಲಿ ಗುರುವಾರ ಬೆಳಗ್ಗೆ ತಕ್ಕ ಮಟ್ಟಿಗೆ ಮಳೆಬಂದಿತು. ಆದರೂ ದಗೆಯು ಮಾತ್ರ ಇನ್ನೂ ಕಡಿಮೆಯಾಗಲಿಲ್ಲವು. ಅಲ್ಲಲ್ಲಿ ಒಂದೊಂದು ಪ್ಲೇಗು ಮರಣವಾಗುತ್ತಿರುವುದಾಗಿ ತಿಳಿಯಬರುತ್ತದೆ.

ಬೆಂಗಳೂರು ಮ್ಯುನಿಸಿಪಲ್‌ಕೌನ್ಸಿಲ್ ಪ್ರೆಸಿಡೆಂಟರ ಚುನಾವಣೆಯು ಕಳೆದ ಬುಧವಾರ ನಡೆದುದರಲ್ಲಿ ಮ|| ಬಿ. ಕೆ. ಗರುಡಾಚಾರ್ಯರಿಗೆ 15 ಓಟುಗಳೂ, ಮಿ|| ಅಬ್ಬಾಸ್‌ಖಾನ್‌ರವರಿಗೆ 13 ಓಟುಗಳೂ ಬಂದು, ಹೆಚ್ಚುಸಂಖ್ಯೆಯನ್ನು ಪಡೆದ ಮ|| ಗರುಡಾಚಾರ್ಯರು ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು.

ರಾಜಧಾನಿಯ ಕೋಟೆಯೊಳಕ್ಕೆ ಜನರು ನಾಲ್ಕು ದಿಕ್ಕುಗಳ ಬಾಗಿಲುಗಳಿಂದಲೂ ನಿರಾತಂಕವಾಗಿ ಹೋಗಿಬರುತ್ತಿದ್ದರು. ಆದರೆ ಕಳೆದ ಶುಕ್ರವಾರದಿಂದ ಕೋಟೆಯೊಳಕ್ಕೆ ಯಾವ ಪ್ರಾಣಿಯೂ ಪ್ರವೇಶಿಸಗೊಳ್ಳಲ್ಪಡುತ್ತಿಲ್ಲವು. ಆದರೆ ಇದರ ಕಾರಣವೇನೆಂಬುದು ಮಾತ್ರ ಹೊರಪಟ್ಟಿಲ್ಲ.

ರಾಜಧಾನಿಯ ಎಲೆಕ್ಟ್ರಿಕ್‌ಪವರ್ ಮತ್ತು ಲೈಟ್ ಸೂಪರಿಂಟೆಂಡೆಂಟರಾದ ಮ|| ರಾಮಭದ್ರೇಗೌಡರು ಕಳೆದ ಗುರುವಾರ ರಾಜಧಾನಿಯ ಹಳೇಅಗ್ರಹಾರದಲ್ಲಿರುವ ಶ್ರೀಚಿಕ್ಕಬಸವೇಶ್ವರದೇವಸ್ಥಾನದಲ್ಲಿ ನಾಗರಶಿಲಾಪ್ರತಿಷ್ಠೆಯನ್ನು ವಿಧ್ಯುಕ್ತವಾಗಿಮಾಡಿಸಿ ನೂರಾರು ಜನ ಭಕ್ತಮಾಹೇಶ್ವರರುಗಳನ್ನು ಮೃಷ್ಟಾನ್ನಭೋಜನದಿಂದಲೂ ಭೂರಿದಕ್ಷಿಣೆಯಿಂದಲೂ ತೃಪ್ತಿಗೊಳಿಸಿದರು. ಅಲ್ಲದೆ ಕಳೆದ ಶುಕ್ರವಾರ ರಾತ್ರಿ ತಮ್ಮ ಮನೆಯಲ್ಲಿ ಮಿತ್ರಮಂಡಲಿಗೆ ಸುಖಭೋಜನಮಾಡಿಸಿ ತಮ್ಮ ವಿಶ್ವಾಸವನ್ನು ಪ್ರದರ್ಶಿಸಿದರು.

ರಾಜಧಾನಿಯ ಕೋಟೆಯೊಳಗೆ ವರಹಾಸ್ವಾಮಿಯ ದೇವಸ್ಥಾನದ ಉತ್ತರಪಾರ್ಶ್ವದಲ್ಲಿದ್ದ ಮಾರಮ್ಮನ ವಿಗ್ರಹವು ಕೋಟೆಯ ದಕ್ಷಿಣಭಾಗದ ಕೊತ್ತಲಿನಲ್ಲಿ ಗುಂಡಿನ ಮನೆಗಿದಿರಾಗಿ ಕಟ್ಟಲ್ಪಟ್ಟಿರುವ ಗುಡಿಗೆ ಸಾಗಿಸಲ್ಪಟ್ಟು ಪ್ರತಿಷ್ಠಿಸಲ್ಪಟ್ಟಿರುತ್ತದೆ. ಈ ದೇವರ ಸೇವೆಗೆ ಅನೇಕಜನರು ಮುಖ್ಯವಾಗಿ ಹೆಂಗುಸರೂ ಮಕ್ಕಳೂ ಪ್ರತ್ಯಹನಿತ್ಯದಲ್ಲೂ ಹೋಗುತ್ತಿರುವವಾದುದರಿಂದ, ಈ ಹೊಸ ಗುಡಿಯ ಬಳಿ ಪ್ರಕಾಶಮಾನವಾದ ವಿದ್ಯುದ್ದೀಪವೂ ನೀರಿನ ನಲ್ಲಿಯೂ ದೇವಸ್ಥಾನದ ಇದಿರಿಗಿರುವ ಕೈಪಿಡಿಗಳಮಧ್ಯೆ ಒಂದು ದ್ವಾರವೂ ಕಲ್ಪಿಸಲ್ಪಡುವುದು ಬಹಳ ಅವಶ್ಯಕವಾಗಿರುತ್ತದೆ.

1000 ರೂಪಾಯಿಗಳ 3 ನೋಟುಗಳು, 500 ರೂ. ನ 1 ನೋಟು, 100 ರೂ. ನ 13 ನೋಟುಗಳು ಮತ್ತು 50 ರೂ. ನ 4 ನೋಟುಗಳು ಈ ಪ್ರಕಾರ ಒಟ್ಟು 5000 ರೂ. ಗಳ ಅರ್ಧಭಾಗ ನೋಟುಗಳುಳ್ಳ ಒಂದು ಕವರು ಬೆಂಗಳೂರು ಅರ್ಕಾಟು ಶ್ರೀನಿವಾಸಾಚಾರ್ ಬೀದಿಯಲ್ಲಿರುವ ಪೋಸ್ಟಾಫೀಸಿನಲ್ಲಿ ರಿಜಿಸ್ಟರುಮಾಡಲ್ಪಟ್ಟುದಾಗಿಯೂ, ಉಳಿದ ಅರ್ಧಭಾಗ ನೋಟುಗಳು ಬೇರೆಯೊಂದು ಕವರಿನಲ್ಲಿಡಲ್ಪಟ್ಟು ಮ|| ಶಿವರುದ್ರಪ್ಪ ಮುರಿಗೆಪ್ಪ ಚಿಗಟೇರಿ ಕೊಯಮುತ್ತೂರು ಇವರ ಹೆಸರಿಗೆ ಕಳುಹಲ್ಪಡಲು ಸಿದ್ಧಗೊಳಿಸಲ್ಪಟ್ಟಿದ್ದುದು ಎಲ್ಲಿಯೋ ಕಳೆದು ಹೋಗಿರುವುದರಿಂದ, ಮೇಲೆ ಹೇಳಿದ 5000 ರೂ. ನ ಅರ್ಧನೋಟುಗಳನ್ನು ಗೊತ್ತುಮಾಡಿಕೊಟ್ಟವರಿಗೆ 100 ರೂ. ಬಹುಮಾನಕೊಡಲ್ಪಡುವುದಾಗಿಯೂ ಮ|| ಶಿವರುದ್ರಪ್ಪ ಮುರಿಗೆಪ್ಪ ಇವರು ಪ್ರಕಟಿಸಿರುತ್ತಾರಾದುದರಿಂದ ಅವನ್ನು ಕಂಡುಹಿಡಿದವರು ಮಾಲೀಕರಿಗೆ ತಿಳುಹಿಸಿ ಬಹುಮಾನ ಪಡೆಯಬಹುದಾಗಿದೆ.

ರಾಜಧಾನಿಯ ಟ್ರಸ್ಟ್‌ಬೋರ್ಡಿನ ಪೋಷಣೆಗಾಗಿ ಸರ್ಕಾರದಿಂದ ಕೊಡಲ್ಪಡುತ್ತಿರುವ ಹಣವು ಅದರ ವೆಚ್ಚಕ್ಕೆ ಸಾಲುವುದಿಲ್ಲವಾದುದರಿಂದ ವೆಚ್ಚವನ್ನು ಕಡಿಮೆಮಾಡುವ ಉಪಾಯವನ್ನು ಕಂಡುಹಿಡಿದು ಸೂಚಿಸುವುದಕ್ಕಾಗಿ ಏರ್ಪಡಿಸಲ್ಪಟ್ಟಿದ್ದ ಸ್ಪೆಷಲ್‌ಕಮಿಟಿಯವರು, ಬೋರ್ಡಿನ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳೆಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಿ ಈಗ ರಾಜಧಾನಿಯಲ್ಲಿ ಅಭಿವೃದ್ಧಿಕಾರ್ಯವೇನೂ ನಡೆಸಲ್ಪಡುತ್ತಿಲ್ಲವಾದುದರಿಂದ ಹೆಚ್ಚು ಸಂಬಳದ ಎಕ್ಸಿಕ್ಯುಟಿವ್ ಇಂಜನೀಯರ ಆವಶ್ಯಕತೆಯಿಲ್ಲವೆಂದು, ಕೆಲ ಕೆಲಸಗಾರರನ್ನು ತೆಗೆದುಬಿಡಬೇಕೆಂದು, ಅನಾವಶ್ಯಕವೆಚ್ಚಗಳನ್ನು ನಿಲ್ಲಿಸಬೇಕೆಂದು ಮೊದಲಾಗಿ ವರದಿಮಾಡಿರುವರೆಂದು ಕೇಳುತ್ತೇವೆ. ಈಗಿರುವ ಎಕ್ಸಿಕ್ಯುಟಿವ್‌ಇಂಜನೀಯರು ಬಹಳಕಾಲದಿಂದ ಈ ಆಫೀಸಿನಲ್ಲಿರುವುದರಿಂದಲೂ, ಇವರ ನಡವಳಿಕೆಗಳು ಕೈಕೆಳಗಣ ಕೆಲಸಗಾರರಿಗೂ, ಪ್ರಜೆಗಳಿಗೂ ಬಹಳ ಬೇಸರವನ್ನುಂಟುಮಾಡಿರುವುದರಿಂದಲೂ, ಸ್ಪೆಷಲ್ ಕಮಿಟಿಯವರು ಸೂಚಿಸಿರುವಂತೆ ಇವರನ್ನು ಕೂಡಲೆ ವರ್ಗಾಯಿಸುವುದು ಯುಕ್ತವಾಗಿರುತ್ತಾದುದರಿಂದ ಟ್ರಸ್ಟ್‌ಬೋರ್ಡಿನ ಹೊಸಚೇರ್ಮನ್ನರಾದ ಮ|| ಎನ್. ಮಾಧವರಾಯರು ಈ ವಿಚಾರದಲ್ಲಿ ಗಮನವಿಡುವವರಾಗಬೇಕು.

ಭರತಖಂಡದ ವೃತ್ತಾಂತಗಳು.

ಕನ್ನಾಟಿನ ಆರ್ಥರ್ ಯುವರಾಜ ದಂಪತಿಗಳು ಬರುವ ಡಿಸೆಂಬರ್ ಆದಿಭಾಗದಲ್ಲಿ ಭರತಖಂಡಕ್ಕೆ ಬರುವವರಾಗಿರುವರು.

ಕರಾಚಿಯ ಮ್ಯುನಿಸಿಪಲ್ ಕೌನ್ಸಿಲಿನವರು ಬೊಂಬಾಯಿ ಗೌರ್ನರವರಿಗೆ ಸ್ವಾಗತಪತ್ರವನ್ನು ಸಮರ್ಪಿಸಲು ನಿರಾಕರಿಸಿಬಿಟ್ಟರು.

ಅಖಿಲಭಾರತ ಪೋಸ್ಟಲ್ ಕಾನ್‌ಫರೆನ್ಸು ಈ ತಾ|| 23 ಮತ್ತು 24 ರಲ್ಲಿ ಬೊಂಬಾಯಿನಲ್ಲಿ ಶ್ರೀಯುತ ಎಂ. ಎ. ಜಿನ್ನರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ತಲಚೇರಿಯ ಮ್ಯುನಿಸಿಪಾಲಿಟಿಯವರೊಪ್ಪಿಸಿದ ಸ್ವಾಗತಪತ್ರಕ್ಕೆ ಮದ್ರಾಸ್ ಗೌರ್ನರವರು ಕೊಟ್ಟ ಉತ್ತರದಲ್ಲಿ ನಂಜನಗೂಡಿನಿಂದ ತಲಚೇರಿಗೆ ರೈಲ್ವೆಹಾಕುವ ವಿಚಾರದಲ್ಲಿ ವಿಶೇಷ ಭರವಸೆಯನ್ನು ಕೊಡಲಿಲ್ಲವಂತೆ.

ಮೌಲಾನಾಮಹಮ್ಮದಾಲಿಯವರು ಹೊರಡಿಸುತ್ತಿದ್ದ ಕಾಮರೇಡು ಪತ್ರಿಕೆಯು ಕೆಲಕಾಲದಿಂದಲೂ ನಿಂತುಹೋಗಿದ್ದು ಈಗ ಪುನಃ ಕಳೆದ ತಿಂಗಳಿಂದ ಮಹಮ್ಮದಾಲಿಯವರಿಂದಲೇ ಆರಂಭಿಸಲ್ಪಟ್ಟಿರುತ್ತದೆ.

ಅಮೃತಸರದಲ್ಲಿ ದೊಡ್ಡಮನುಷ್ಯರುಗಳು ಜೂಜಾಡುವುದು ಪ್ರಬಲವಾಗುತ್ತಿರುವುದರಮೇಲೆ ಕೆಲ ಪೋಲೀಸಿನವರು ಸ್ತ್ರೀವೇಷಗಳನ್ನು ಹಾಕಿಕೊಂಡು ಜೂಜುನಡೆಯುತ್ತಿದ್ದ ಮನೆಗೆನುಗ್ಗಿ 16 ಜನ ದೊಡ್ಡಮನುಷ್ಯರನ್ನು ಸೆರೆಹಿಡಿದಿರುವರು.

ಹೈದರಾಬಾದಿನಲ್ಲಿ ಪ್ಲೇಗುರೋಗವು ಅತ್ಯುಲ್ಬಣವಾಗಿ ಜನರು ನಿತ್ಯದಲ್ಲೂ ನೂರರಗಟ್ಟಲೆ ಸಾಯುತ್ತಿರುವುದರಿಂದ ಅಲ್ಲಿಯ ಕೋರ್ಟು ಕಚೇರಿಗಳೂ, ಸ್ಕೂಲುಗಳೂ ಮುಚ್ಚಲ್ಪಟ್ಟಿವೆ. ಕಳೆದ ತಿಂಗಳಲ್ಲಿ 2569 ಪ್ಲೇಗು ಮರಣಗಳಾಗಿದ್ದುವು.

ಹೈದರಾಬಾದಿನ ನೈಜಾಂರವರು ಲಾಹೋರಿನ ಟ್ರಿಬ್ಯೂನ್ ಎಂಬ ವೃತ್ತಪತ್ರಿಕೆಯನ್ನು ತಮ್ಮ ಸೀಮೆಗೆ ಯಾರೂ ತರಿಸಕೂಡದೆಂದು ಕಟ್ಟಪ್ಪಣೆಯನ್ನು ಮಾಡಿರುವರು. ರಾಜ್ಯಾಡಳಿತದ ದೋಷೋದ್ಘಾಟನೆಯನ್ನು ಮಾಡತಕ್ಕ ವೃತ್ತಪತ್ರಿಕೆಗಳಿಗೆ ಈರೀತಿ ಬಹಿಷ್ಕಾರ ಹಾಕುವುದರಿಂದ ಮದಾಂಧರಾದ ಅಧಿಕಾರಿಗಳ ನಿರಂಕುಶಪ್ರವರ್ತನಕ್ಕೆ ಸಹಾಯಮಾಡಿದಂತಾಗುವುದರವಿನಾ ಮತ್ತಾವ ಪುರುಷಾರ್ಥವೂ ಆಗುವುದಿಲ್ಲವು

ನೀಲಗಿರಿ ಪ್ರಾಂತಗಳಲ್ಲಿ ಕೂಲಿನಾಲಿ ಮಾಡಿಕೊಂಡು ಜೀವಿಸುವ ಮತ್ತು ಬೆಟ್ಟಗಳಲ್ಲಿ ವಾಸಿಸುವ ಬಡಪ್ರಜೆಗಳು ಪ್ರತಿ ವರ್ಷದಲ್ಲೂ ಮದ್ಯಪಾನಕ್ಕಾಗಿ 8 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ವ್ಯಯಮಾಡುತ್ತಿರುವರಾದುದರಿಂದ, ಆ ಡಿಸ್ಟ್ರಿಕ್ಟು ಪ್ರದೇಶದಲ್ಲೆಲ್ಲೂ ಮದ್ಯವನ್ನು ಮಾರಕೂಡದಂತೆ ಏರ್ಪಡಿಸಬೇಕಾಗಿ ಸರ್ಕಾರದವರಿಗೆ ವಿಜ್ಞಾಪಿಸಿಕೊಳ್ಳಬೇಕೆಂದು ನೀಲಗಿರಿಯ ಮದ್ಯಪಾನನಿರೋಧಕಸಂಘದವರು ನಿಶ್ಚಯಿಸಿರುವರು.

ಕೋಹಾಟಿನಲ್ಲಿ ಹಿಂದೂ ಮಹಮ್ಮದೀಯರುಗಳಿಗೆ ಮನಸ್ತಾಪಹುಟ್ಟಿ ಹೋರಾಟಬಡಿದಾಟಗಳಾಗುತ್ತಿರುವುದರಮೇಲೆ, ಮಹಾತ್ಮಾ ಗಾಂಧಿಯವರು ಈ ಮಹಮ್ಮದೀಯ ಮಿತ್ರರು

ಗಳೊಡನೆ ಕೋರ್ಟಿಗೆಹೋಗಿ ಉಭಯ ಪಂಗಡದವರಿಗೂ ಹಿತಬೋಧೆಯನ್ನುಮಾಡಿ ಪರಸ್ಪರ ಸಖ್ಯವನ್ನುಂಟುಮಾಡಬೇಕೆಂಬುದ್ದೇಶದಿಂದ ಅಲ್ಲಿಗೆ ಹೋಗಿಬರಲು ಅವಕಾಶವನ್ನು ಕೊಡಬೇಕೆಂದು ವೈಸ್‌ರಾಯರನ್ನು ಕೇಳಿದ್ದರು. ಆದರೆ ಆರೀತಿ ಹೋಗಿಬರಲು ವೈಸ್‌ರಾಯರು ಅಪ್ಪಣೆಯನ್ನು ಕೊಡಲಿಲ್ಲವು.

ಈಗ ಭರತಖಂಡದ ವೈಸ್‌ರಾಯರಾಗಿರುವ ಲಾರ್ಡ್ ರೀಡಿಂಗ್‌ರವರಿಗೆ ಈಗತಾನೆ 65 ನೆಯ ವರ್ಷ ವಯಸ್ಸು ತುಂಬಿತು. ಇವರು ಲಾಯಿಡ್‌ಜಾರ್ಜ್, ಬೋನಾರ್‌ಲಾ ಬಾಲ್ಡ್ವಿನ್ ಮತ್ತು ರಾಮ್ಸೆ ಮೆಕ್ಡೋನಾಲ್ಡ್‌ರವರ ಮಂತ್ರಿತ್ವಕಾಲಗಳಿಂದಲೂ ಕೆಲಸಮಾಡಿಕೊಂಡಿರುವರಲ್ಲದೆ ಮುಂದೆ ಬರುವ ಬಾಲ್ಡ್ವಿನ್‌ರ ರಾಜ್ಯಾಧಿಕಾರ ಕಾಲದಲ್ಲೂ ಕೆಲಸಮಾಡಿಕೊಂಡಿರುವುದಾಗಿ ನಿರೀಕ್ಷಿಸಲ್ಪಟ್ಟಿದೆ. ಇಷ್ಟೊಂದು ಮಂತ್ರಿಗಳ ಕಾಲದಲ್ಲಿ ಲಾರ್ಡ್ ರೀಡಿಂಗ್‌ರವರ ಹಾಗೆ ಹಿಂದೆ ಯಾರೂ ವೈಸ್‌ರಾಯುದ್ಯೋಗದಲ್ಲಿರಲಿಲ್ಲವಂತೆ.

ಸಿಲೋನಿನ ಪೊಲೀಸು ಕೋರ್ಟಿನಲ್ಲಿ ಒಬ್ಬ ಸಾಕ್ಷಿಗಾರನು ವಿಚಾರಣೆಯ ಕಾಲದಲ್ಲಿ ಎಲೆಅಡಿಕೆಯನ್ನು ಹಾಕಿಕೊಂಡು ಅಗಿಯುತ್ತಿದ್ದುದು ತಪ್ಪೆಂದೂ, ಅದರಿಂದ ಕೋರ್ಟಿಗೆ ಅಪಮಾನಮಾಡಿದಂತಾಯಿತೆಂದೂ ನ್ಯಾಯಾಧೀಶನು ಕೋಪಿಸಿಕೊಳ್ಳಲು ಆ ಸಾಕ್ಷಿಗಾರನು ತಂಬಲವನ್ನು ಕೂಡಲೆ ನುಂಗಿಬಿಟ್ಟನಾದರೂ ಕ್ಷಮಿಸದೆ ಅರ್ಥದಂಡವನ್ನು ವಿಧಿಸಿದನು. ಅದರಮೇಲೆ ಆ ಸಾಕ್ಷಿಗಾರನು ಹೈಕೋರ್ಟಿಗೆ ಅಪೀಲುಮಾಡಿಕೊಂಡಿರುವಲ್ಲಿ, ಆ ಸಾಕ್ಷಿಗಾರನು ವಾಡಿಕೆಯಂತೆ ತಾಂಬೂಲವನ್ನು ಹಾಕಿಕೊಂಡು ಸೇವಿಸುತ್ತಿದ್ದನಲ್ಲದೆ ಕೋರ್ಟಿಗೆ ಅಪಮಾನಪಡಿಸಬೇಕೆಂದಲ್ಲವೆಂದು ತೀರ್ಮಾನಿಸಿ ಅರ್ಥದಂಡವನ್ನು ತಳ್ಳುಪಡಿಮಾಡಿದರು.

ಸುಬ್ರಹ್ಮಣ್ಯಅಯ್ಯರ್ ಎಂಬಾತನು ತನ್ನ ಜೀವನಾಂಶಕ್ಕಾಗಿ ತಿಂಗಳಿಗೆ 35 ರೂಪಾಯಿನಂತೆ ಸರ್ಕಾರಿ ಉದ್ಯೋಗದಲ್ಲಿರುವ ತನ್ನ ಮಗನಿಂದ ಕೊಡಿಸಬೇಕೆಂದು ಕಲ್ಲಿಕೋಟೆಯ ಮುನ್ಸಿಫ್‌ಕೋರ್ಟಿನಲ್ಲಿ ದಾವಾಮಾಡಿ ಡಿಕ್ರಿಪಡೆದುಕೊಂಡಿದ್ದನು. ಅದರಮೇಲೆ, ತನ್ನ ತಂದೆಗೆ ಕೆಲ ತಿಂಗಳ ಕೆಳಗೆ ಒಂದು ಮಗುವು ಹುಟ್ಟಿರುವ ಪ್ರಯುಕ್ತ ಅವನು ಸಂಪಾದಿಸಲಾರದ ಮುದಕನಾಗಿರುವುದಿಲ್ಲವಾದುದರಿಂದಲೂ, ಆತನು ತನ್ನ ಯೌವನಕಾಲದಲ್ಲಿ ವೃದ್ಧನಾದ ತನ್ನ ತಂದೆಯನ್ನು ಸಾಕಲಾರದೆ ಅಟ್ಟಿಬಿಟ್ಟಿದ್ದನಾದುದರಿಂದಲೂ ಈಗ ತನ್ನ ತಂದೆಯು ಜೀವನಾಂಶಪಡೆಯಲು ಅರ್ಹನಾಗಿಲ್ಲವೆಂದು ಸಬ್‌ಕೋರ್ಟಿನಲ್ಲಿ ಅಪೀಲನ್ನು ಮಾಡಿರುವನು. ಈ ವಿಚಿತ್ರವಿವಾದದ ಫಲಿತಾಂಶವನ್ನು ಬಹುಜನರು ಅತಿಕುತೂಹಲದಿಂದ ನಿರೀಕ್ಷಿಸಿಕೊಂಡಿರುವರು.

ತಿರುಚಿನಾಪಳ್ಳಿ ಮತ್ತು ತಂಜಾವೂರು ಡಿಸ್ಟ್ರಿಕ್ಟುಗಳಲ್ಲಿ ಸುಮಾರು 1000 ಎಕರೆಗಳ ತರೀಜಮೀನುಗಳಮೇಲೆ ಕಳೆದ ಮಹಾಪ್ರವಾಹದ ದೆಸೆಯಿಂದ ಕೆಲವು ಅಂಗುಲಗಳಿಂದ 5–6 ಅಡಿಗಳವರೆಗೂ ಮರಳುಬಿದ್ದಿರುತ್ತದೆ. ಇದನ್ನು ಮದ್ರಾಸ್ ಸರ್ಕಾರದವರು ತಾವೇ ತೆಗೆಯಿಸಿಕೊಡಲು ಸಾಧ್ಯವಿಲ್ಲವೆಂದೂ, ಜಮೀನ್ದಾರರಿಗೆ ಶೇಕಡ 6 ರಂತೆ ಕಡಿಮೆಬಡ್ಡಿಗೆ ಸಾಲವನ್ನು ಕೊಡುವೆವೆಂದೂ ತಿಳಿಸಿರುತ್ತಾರೆ. ಜಮೀನ್ದಾರರು ಈ ಭಾಗದಲ್ಲಿ ಪರಸ್ಪರ ಸಹಾಯಸಂಘಗಳನ್ನು ಏರ್ಪಡಿಸಿಕೊಂಡು, ಸರ್ಕಾರದವರು ಉಚಿತವಾಗಿ ತಮಗೆ ಕೊಡುವ ಟ್ರಾಂವೇಗಳ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯ ಆಫೀಸರ ಸಹಾಯದಿಂದ ಮರಳನ್ನು ತೆಗೆದುಹಾಕಬಹುದೆಂದೂ, ಜಮೀನಿನಮೇಲೆ ಎಷ್ಟು ಆಳವಾಗಿ ಮರಳು ಬಿದ್ದಿದೆ ಎಂಬುದನ್ನು ಸರ್ಕಾರದವರೇ ಸರ್ವೇಮಾಡಿಸಿ ಕೊಡುವರೆಂದೂ ಪ್ರಕಟವಾಗಿದೆ.

ಬರ್ಮಾದಲ್ಲಿ ಇಬ್ಬರು ಹುಡುಗರು ಒಂದು ಬಾವಿ ಬಳಿಯಿದ್ದ ಮರದರೆಂಬೆಯನ್ನು ಹಿಡಿದುಕೊಂಡು ಆಡುತ್ತಿರುವಾಗ್ಗೆ ಒಬ್ಬ ಹುಡುಗನು ನೀರುತುಂಬಿದ್ದ ಬಾವಿಯೊಳಕ್ಕೆ ಬಿದ್ದುಬಿಡಲು ಜತೆಹುಡುಗನು ಕೂಡಲೆ ಬಿದ್ದುಹೋಗಿದ್ದ ಹುಡುಗನು ತನ್ನ ಕಾಲನ್ನು ಹಿಡಿದುಕೊಂಡು ಬರಲೆಂದು ನೀರಿನೊಳಕ್ಕೆ ಬಿಟ್ಟು ತಾನು ಮರದರೆಂಬೆಗೆ ನೇತುಹಾಕಿಕೊಂಡಿದ್ದನು. ಆ ಬಿದ್ದುಹೋದ ಹುಡುಗನು ಮೇಲಿದ್ದವನ ಕಾಲನ್ನು ಹಿಡಿದುಕೊಂಡು ಮೇಲಕ್ಕೆ ಬರಲು ಪ್ರಯತ್ನಿಸುತ್ತಿರುವಾಗ್ಗೆ ರೆಂಬೆಯನ್ನು ಹಿಡಿದುಕೊಂಡಿದ್ದ ಹುಡುಗನು ಕೈಸೋತುಹೋಗಿ ರೆಂಬೆಯ ಪಟ್ಟನ್ನು ಬಿಟ್ಟುಬಿಡಲು ಇಬ್ಬರೂ ನೀರಿನೊಳಗೆ ಮುಳುಗಿಹೋಗುತ್ತಿರುವುದನ್ನು ಸಮೀಪದಲ್ಲಿದ್ದ 10 ವರ್ಷದ ಒಬ್ಬ ಹುಡುಗಿಯು ಆ ಹುಡುಗರಿಬ್ಬರನ್ನೂ ಹಿಡಿದುಕೊಂಡು ಮೇಲಕ್ಕೆಳದು ಬದುಕಿಸಿದಳು. ಅಲ್ಲಿಯ ಡೆಪ್ಯುಟಿಕಮೀಷನರು ಈ ವಿಷಯವನ್ನು ತಿಳಿದು ಪ್ರಾಣರಕ್ಷಣೆಗಾಗಿ ಪ್ರಯತ್ನಿಸಿದ ಹುಡುಗನಿಗೂ ಇಬ್ಬರ ಪ್ರಾಣವನ್ನು ಉಳಿಸಿದ ಆ ಹುಡುಗಿಗೂ ಸುವರ್ಣಪದಕಗಳನ್ನು ಬಹುಮಾನಿಸಿ ಅವರ ಸಾಹಸಬುದ್ಧಿಯನ್ನು ಕೊಂಡಾಡಿದರು.

ಮದ್ರಾಸು ಮ್ಯುನಿಸಿಪಲ್ ಪ್ರೆಸಿಡೆಂಟರ ಉದ್ಯೋಗದವಧಿಯು ಕಳೆದ ಅಕ್ಟೋಬರ್ ತಿಂಗಳಲ್ಲಿ ಪೂರೈಸಿದುದರಿಂದ ಹೊಸದಾಗಿ ಪ್ರೆಸಿಡೆಂಟರಾಗಿ ಚುನಾಯಿಸಲ್ಪಡಲು ಡಾಕ್ಟರ್ ಸಿ. ನಟೇಶಮೊದಲಿಯಾರರು ಮತ್ತು ಖಾನ್‌ಬಹದ್ದೂರ್ ಉಸ್ಮಾನ್‌ಸಾಹೇಬರವರು ಉಮೇದುವಾರರಾಗಿ ನಿಂತಿದ್ದರು. ಆದರೆ ಮಹಮ್ಮದೀಯರು ತಮ್ಮ ಜನರೊಬ್ಬರು ಈವೇಳೆ ಪ್ರೆಸಿಡೆಂಟರಾಗಬೇಕೆಂದು ಬಹಳ ಕುತೂಹಲರಾಗಿದ್ದುದರಮೇಲೆ ಡಾ|| ನಟೇಶಮೊದಲಿಯಾರರು ತಮ್ಮ ಅಭ್ಯರ್ಥಿತ್ವದಿಂದ ನಿವೃತ್ತರಾಗಲಾಗಿ, ಕಳೆದ ತಾ|| 4ರಲ್ಲಿ ನಡೆದ ಚುನಾವಣೆಯ ಮೀಟಿಂಗಿನಲ್ಲಿ ಖಾನ್‌ಬಹದ್ದೂರ್ ಸಾಹೇಬರು ನಿರಾಯಾಸದಿಂದ ಆರಿಸಲ್ಪಟ್ಟರು. ಇದರಿಂದ ಮದ್ರಾಸಿನ ಮಹಮ್ಮದೀಯರ ಮನಸ್ಸಿಗೆ ಪರಮಾನಂದವಾಗಿದೆ. ಇದೇ ರೀತಿ ಎಲ್ಲ ಕಡೆಯಲ್ಲೂ, ಎಲ್ಲ ಪ್ರಕರಣದಲ್ಲೂ ಉಭಯಜನಾಂಗದವರೂ ಸೌಹಾರ್ದದಿಂದ ನಡೆದುಕೊಂಡಲ್ಲಿ ಮಹಾತ್ಮಾಗಾಂಧಿಯವರ ಅಭೀಷ್ಟವಾದ ಮತ್ತು ಸ್ವರಾಜ್ಯಸಾಧಕವಾದ ಹಿಂದೂಮಹಮ್ಮದೀಯರ ಸಖ್ಯವು ಬಹುಸುಲಭವಾಗಿ ಕುದುರುವುದರಲ್ಲಿ ಅಭ್ಯಂತರವಿಲ್ಲವು.

ಬರುವ ಡಿಸೆಂಬರ್ ತಿಂಗಳಲ್ಲಿ ಭಾರತರಾಷ್ಟ್ರೀಯಮಹಾಸಭೆಯು ಬೆಳಗಾಮಿನಲ್ಲಿ ನಡೆಯಬೇಕಾಗಿ ನಿರ್ಧರವಾಗಿರುವುದಷ್ಟೆ? ಈ ಮಹಾಸಭಾಮಂಟಪವು ಅಲ್ಲಿಯ ರೈಲ್ವೆಸ್ಟೇಷನ್ನಿನಿಂದ 1 ಮೈಲಿ ದೂರದಲ್ಲಿರುವ 80 ಎಕರೆ ಪ್ರದೇಶದಲ್ಲಿ ರಚಿಸಲ್ಪಟ್ಟು ಆ ಮಂಟಪ ಪ್ರದೇಶವು ವಿಜಯನಗರವೆಂದು ನಾಮಕರಣಮಾಡಲ್ಪಡುವುದು. ಈ ಪ್ರದೇಶದಲ್ಲೇ ರೈಲುಮಾರ್ಗವು ಹಾದುಹೋಗಿರುವುದರಿಂದ, ಸಭೆಗೆ ಬರತಕ್ಕ ಪ್ರಯಾಣಿಕರ ಸೌಕರ್ಯಕ್ಕಾಗಿ ಬಂಡಿಯು ಅಲ್ಲಿ ನಿಲ್ಲುವಂತೇರ್ಪಡಿಸಲು ರೈಲ್ವೆಯಧಿಕಾರಿಗಳೊಪ್ಪಿರುವರಂತೆ. ಪ್ರೇಕ್ಷಕರು ಸಭಾಪ್ರವೇಶಕ್ಕೆ 30 ರೂ. ಯನ್ನೂ ವಾಸದ ಬಾಡಿಗೆಗೆ 4 ರೂ. ಯನ್ನೂ ಕೊಡಬೇಕಾಗಿಯೂ, ಪ್ರತಿನಿಧಿಗಳೂ ಸ್ವಾಗತಮಂಡಳದ ಮೆಂಬರುಗಳೂ ಇಳಿದುಕೊಳ್ಳಲು 3 ಕೊಠಡಿಗಳೂ, ಒಂದು ಅಡಿಗೆ ಮನೆ ಮತ್ತು ಒಂದು ಸ್ನಾನದಮನೆ ಇರತಕ್ಕ ವಸತಿಗಳಿಗೆ ಪ್ರತಿಯೊಬ್ಬರೂ 50 ರೂ. ಯನ್ನೂ ಒಂದುಹೊತ್ತಿನ ಊಟಕ್ಕೆ 1 ರೂ. ಯನ್ನೂ ಕೊಡಬೇಕಾಗಿ ಗೊತ್ತುಮಾಡಲ್ಪಟ್ಟಿದೆ. ಪ್ರೇಕ್ಷಕರು ಪ್ರವೇಶಧನವನ್ನು ಈ ತಿಂಗಳ ಕಡೆಯೊಳಗೆ ಕಳುಹಿಸಿಕೊಡಬೇಕಾಗಿ ಕೋರಲ್ಪಟ್ಟಿದ್ದಾರೆ. ಈ ರಾಷ್ಟ್ರೀಯ ಮಹಾಸಭೆಯು ನೆರೆಯುವಕಾಲದಲ್ಲೇ ವೈದ್ಯ, ಸಂಗೀತ ಮೊದಲಾದವುಗಳ ಮಹಾಸಭೆಗಳೂ ನಡೆಸಲ್ಪಡುವುವಾಗಿರುವುವು.

ವಿದೇಶದ ವೃತ್ತಾಂತಗಳು

ಈಸಲ ಅಮೆರಿಕೆಯಲ್ಲಿ 1,30,00,000 ಬೇಲು ಹತ್ತಿಯು ಉತ್ಪನ್ನವಾಗುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಈ ನವೆಂಬರ್ ತಾ|| 4 ರಲ್ಲಿ ಅಮೇರಿಕೆಯ ನ್ಯೂಯಾರ್ಕ್ನ ರೈಲುಬಂಡಿಯು ಒಂದು ಮೋಟಾರುಬಂಡಿಗೆ ತಾಕುಬಡಿದು 11 ಜನರು ಮಡಿದರು; ನಾಲ್ವರು ಪೆಟ್ಟನ್ನು ತಿಂದಿರುತ್ತಾರೆ. ಸತ್ತವರ ಶರೀರಗಳು ವಿಕಾರವಾಗಿರುವುದರಿಂದ ಅವರ ವಸ್ತ್ರಾಭರಣಗಳಿಂದ ಗುರ್ತಿಸಲ್ಪಡಬೇಕಾಗಿರುವುವಂತೆ. ಬದುಕಿರುವವರೂ ಬಹಳ ಅಪಾಯಸ್ಥಿತಿಯಲ್ಲಿರುವರು. ಈ ಅನಾಹುತದ ಕಾರಣವು ಮಾತ್ರ ಈವರೆಗೂ ಗೊತ್ತಾಗಿಲ್ಲವು.

ಚಿಕಾಗೋಪಟ್ಟಣದ ವಿಶ್ವವಿದ್ಯಾಲಯದಲ್ಲಿ ನೇತ್ರವೈದ್ಯನಾಗಿರುವ ಥಿಯೋಡರ್ ಎಂಬಾತನು ಕಪ್ಪೆ ಮತ್ತು ಇಲಿಗಳ ಕಣ್ಣುಗುಡ್ಡೆಯ ನರಗಳನ್ನು ಕತ್ತರಿಸಿಹಾಕಿ ಅವುಗಳ ಕಣ್ಣು ಕಾಣದಂತೆಮಾಡಿ ಅನಂತರ ಗುಡ್ಡೆಗಳನ್ನು ಬದಲಾಯಿಸಿ 4–8 ವಾರಗಳಲ್ಲಿ ಕಣ್ಣು ಕಾಣುವಂತೆ ಮಾಡುವುದರಮೂಲಕ ಪರೀಕ್ಷಿಸಿ ಪ್ರಾಣಿಗಳ ನೇತ್ರದೃಷ್ಟಿಯು ಹೋದನಂತರ ಅದನ್ನು ಪುನಃ ಬರಮಾಡುವುದು ಸಾಧ್ಯವೆಂದು ಹೇಳಿರುತ್ತಾನೆ.

ಜರ್ಮನರ ನೋಟುಗಳ ಬೆಲೆಯು ಕವಡೆಗಿನ್ನ ಕಡಿಮೆಯಾಗಿದ್ದವೇಳೆಯಲ್ಲಿ ಅಮೇರಿಕೆ ಮೊದಲಾದ ಪರರಾಜ್ಯದವರು ಬೇಕಾದಷ್ಟನ್ನು ಕೊಂಡುಕೊಂಡಿದ್ದರು. ಅವರಲ್ಲಿ ಲಕ್ಷ ಮಾರ್ಕುಗಳ 50 ನೋಟುಗಳನ್ನು ಒಂದೊಂದಕ್ಕೆ 1 ಸವರನ್ನಿನಂತೆ ಅಂದರೆ ¾ ರೂ. ಗೆ ಕೊಂಡುಕೊಂಡಿದ್ದ ಒಬ್ಬ ಫೋಚಿಯವನು ಒಂದೊಂದು ನೋಟಿಗೆ 450 ಸವರನ್ನಿನಂತೆ ಅಂದರೆ 337 ರೂ. ಗಳಂತೆಯೂ, ಮತ್ತೊಬ್ಬ ರೈತನು ಲಕ್ಷ ಮಾರ್ಕಿನ ನೋಟು 1 ಕ್ಕೆ 9 ರೂ ನಂತೆ ಕೊಂಡಿದ್ದ ನೋಟುಗಳನ್ನು ಒಂದಕ್ಕೆ 3750 ರೂ. ನಂತೆಯೂ ವಿಕ್ರಯಿಸಿರುವರು.

ಅಮೇರಿಕೆಗೆ ಸೇರಿದ ನ್ಯೂಯಾರ್ಕಿನಲ್ಲಿ ಓರ್ವ ತಲೆಬಡುಕ ಕಳ್ಳನು ಒಂದುದಿವಸ ಒಬ್ಬ ಶ್ರೀಮಂತನ ಮನೆಗೆ ನುಗ್ಗಿ, ನವರತ್ನಾಭರಣವನ್ನೂ ದ್ರವ್ಯವನ್ನೂ ಕೊಡದಿದ್ದಲ್ಲಿ ತನ್ನ ಕೈಯಲ್ಲಿರುವ ತುಪಾಕಿಯಿಂದ ಸುಟ್ಟುಬಿಡುತ್ತೇನೆಂದು ಆ ಶ್ರೀಮಂತನ ಮಗನನ್ನೂ ಕಾವಲಿದ್ದ ಸೇವಕನನ್ನೂ ಹೆದರಿಸಿದುದರಮೇಲೆ, ಶ್ರೀಮಂತ ಕುಮಾರನು ಆಭರಣಗಳನ್ನು ತೆಗೆಯುತ್ತಿರುವಾಗ್ಗೆ, ಆ ಕಳ್ಳನು ಕೈಯಲ್ಲಿಹಿಡಿದಿದ್ದ ತುಪಾಕಿಯನ್ನು ಅಜಾಗರೂಕತೆಯಿಂದ ತಿರುಗಿಸುತ್ತಿರುವಲ್ಲಿ ಆ ತುಪಾಕಿಯು ಹಾರಿ ಕಳ್ಳನಿಗೆ ತಗಲಿದುದರಿಂದ ಕೆಳಗೆಬಿದ್ದುಬಿಟ್ಟನು. ಆ ಕೂಡಲೆ ಅವನನ್ನು ಮನೆಯವರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಸಾಗಿಸಿದರು.

ಇಂಗ್ಲೆಂಡಿನ್ನಿನಲ್ಲಿ ಒಂದು ರೈಲ್ವೆ ಪ್ರಯಾಣಿಕರ ಬಂಡಿಯು ಹೋಗುತ್ತಿರುವಾಗ್ಗೆ ಇಂಜಿನ್ನು ಕಂಬಿಯನ್ನು ಬಿಟ್ಟು ಕೆಳಗೆ ಬಿದ್ದುದರಿಂದ ಬಂಡಿಯು ಮಗುಚಿಕೊಂಡು ಪ್ರಯಾಣಿಕರಲ್ಲಿ 12 ಜನರು ಸತ್ತರು ಮತ್ತು ಬಹಳ ಜನರಿಗೆ ಪೆಟ್ಟುಬಿದ್ದಿತು. ರಾತ್ರಿವೇಳೆಯಾಗಿದ್ದುದರಿಂದ ಮೃತರ ಶರೀರಗಳನ್ನು ಗುರ್ತಿಸಲ್ಪಡಲಾಗಲಿಲ್ಲವು. ಡ್ರೈವರೂ ಒಬ್ಬ ನೌಕಾಸೇನಾಧಿಪತಿಯೂ ಸತ್ತುಹೋದರು. ಒಬ್ಬನ ತಲೆಯು ಒಡೆದು ಹೋಯಿತು. ಇನ್ನೊಬ್ಬನಿಗೆ ಕಾಲುಗಳು ಕತ್ತರಿಸಲ್ಪಡಬೇಕಾಗಿ ಬಂದಿತು. ಈ ಪ್ರಯಾಣಿಕರಲ್ಲಿ ಬಹುಜನರು ಲಂಕಷೈರಿನ ಪ್ರಮುಖವರ್ತಕರಾಗಿದ್ದರು. ಸಿಗ್ನಲ್ಲುಕೊಟ್ಟಮನುಷ್ಯನು ಎಲ್ಲಿಗೋ ತಲೆಮರಿಸಿಕೊಂಡು ಹೋಗಿರುವನು.

ಟ್ಯೂರಿನ್ ಎಂಬಲ್ಲಿ ಒಂದು ರೈಲ್ವೆ ಇಂಜನ್ನು ಬಂಡಿಗಳನ್ನು ಒಂದುಕಡೆಯಿಂದ ಮತ್ತೊಂದುಕಡೆಗೆ ತೆಗೆದುಕೊಂಡು ಹೋಗಿಬಿಡುತ್ತಿರುವಾಗ್ಗೆ, ಕೆಲ ಮೃಗಗಳನ್ನು ತುಂಬಿದ್ದ ಬಂಡಿಗೆ ತಾಕುಬಡಿಯಲು ಒಳಗಿದ್ದ ಒಂದು ಸಿಂಹ, 3 ಕರಡಿಗಳು ಮತ್ತು ಒಂದು ಕಿರುಬ ಇಂತಿಷ್ಟು ತಪ್ಪಿಸಿಕೊಂಡು ಓಡಿಹೋದುವು. ಆದರೆ, ಸಿಂಹವು ಮಾತ್ರ ಪೆಟ್ಟನ್ನು ತಿಂದು ನಿಂತಿಬಿಟ್ಟುದರಿಂದ ಸೆರೆಹಿಡಿಯಲ್ಪಟ್ಟಿತು. ಕರಡಿಗಳು ಮಾರ್ಕೆಟ್ಟಿನ ಒಳ ಹೋಗಿನಿಂತುಕೊಳ್ಳಲು ಜನರು ಭಯಪಟ್ಟು ಚದರಿದರು. ಅವು ಅಲ್ಲಿ ತಮ್ಮ ಹಿಂಗಾಲುಗಳಮೇಲೆ ನಿಂತು ಕುಣಿಯುತ್ತಿರುವಾಗ್ಗೆ ಅವನ್ನು ಸಾಕಿದವನು ಬಂದು ಹಿಡಿದುಕೊಂಡನು. ಕಿರಬವು ಒಂದು ಚರಂಡಿಯೊಳಗೆ ನುಗ್ಗಿದ್ದು ಸ್ವಲ್ಪಹೊತ್ತಿನಮೇಲೆ ಹಿಡಿಯಲ್ಪಟ್ಟಿತು.

ಬೇಸಾಯ.

ಸರ್ವಜ್ಞಕವಿಯು ಬೇಸಾಯದ ಬಗ್ಗೆ ಎಂಟು ವಚನಗಳನ್ನು ರಚಿಸಿರುವನು. ಅವು ನಮ್ಮ ಒಕ್ಕಲಿಗ ಬಾಂಧವರಿಗೆ ಒಳ್ಳೆಉಪದೇಶಪರವಾದವುಗಳಿರುವದರಿಂದ ಅವುಗಳನ್ನು ಸಂಗ್ರಹಿಸಿದ್ದೇವೆ. ಒಕ್ಕಲಿಗರು ಅವುಗಳನ್ನು ಚೆನ್ನಾಗಿ ಓದಬೇಕಾಗಿ ವಿನಂತಿ ಅದೆ.

ಕೋಟಿವಿದ್ಯೆಗಳಲ್ಲಿ ಮೇಟಿವಿದ್ಯೆಯೆ ಮೇಲು |
ಮೇಟಿಯಿಂ ರಾಟೆ ನಡೆದುದಲ್ಲದೆ ದೇಶ |
ದಾಟವೇ ಕೆಡಗು ! ಸರ್ವಜ್ಞ ||೧||
ಎತ್ತೆಮ್ಮೆ ಹೂಡುವದು ಉತ್ತೊಮ್ಮೆ ಹರಗುವದು |
ಬಿತ್ತೊಮ್ಮೆ ಹರಗಿ ಕಳೆದೆಗೆದಾ ಬೆಳೆಯುತ |
ಸೈತ್ರವಹುದು ! ಸರ್ವಜ್ಞ ||೨||
ಉತ್ತೊಮ್ಮೆ ಹರಗದೇ ಬಿತ್ತೊಮ್ಮೆ ನೋಡದೇ |
ಹೊತ್ತಿರಿ ಹೋಳೆ ಹೋದರೆ ಅವತನ್ನ |
ಸೈತ್ರವಕುಡುವ ! ಸರ್ವಜ್ಞ ||೩||
ನಲ್ಲಿತ್ತ ಭಂಡಿ ಬಲವಿಲ್ಲದಾ ಆರಂಬ |
ಕಲ್ಲು ಕಳೆಗಳನು ಬಿಟ್ಟವ ಹೊಲದೊಳು |
ಹುಲ್ಲನೆ ಬೆಳೆವ ! ಸರ್ವಜ್ಞ ||೪||
ಹರಗದಾ ಉತ್ತಾಗಿ ಬರಡಾದ ಹಯನಾಗಿ |
ಹರಟಿಹೊಡೆಯುವ ಮಗನಾಗಿ ಹೊಲದಲ್ಲಿ |
ಕರಡ ಬೆಳದಿಹುದು ! ಸರ್ವಜ್ಞ ||೫||
ದಂಡು ಇಲ್ಲದ ಅರಸು ಕೊಂಡವಿಲ್ಲದ ಹೋಮ |
ಬಂಡಿಯಿಲ್ಲದನ ಬೇಸಾಯ ತಲೆಹೋದ |
ಮುಂಡದಂತಕ್ಕು ಸರ್ವಜ್ಞ ||೬||
ಹದಬೆದೆಯಲಾರಂಬ ಕದನದಲಿಕೂರಂಬ |
ನದಿಯಹಾಯುವಲಿ ಹರುಗೋಲ ಮರೆದಾತ |
ವಿಧಿಯಬೈದೇನು ? ಸರ್ವಜ್ಞ ||೭||
ಬೆಕ್ಕುಮನೆಯೊಳುಲೇಸು ಮುಕ್ಕುಕಲ್ಲಿಗೇಲೆಸು |
ನಕ್ಕುನಗಿಸುವಾ ನುಡಿಲೇಸು ಊರಿಗೆ |
ಒಕ್ಕಲಿಗಲೇಸು ! ಸರ್ವಜ್ಞ ||೮||

ಬಿ.ಬಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ತಿರಸ್ಕೃತಲೇಖಗಳು.

(1) ಓರ್ವಪ್ರಜಾಹಿತೈಷಿ ದೇವನಹಳ್ಳಿ.—ಸ್ಥಳೀಯ ಪೊಲೀಸು ಅಧಿಕಾರಿಗಳಿಂದ ಪ್ರಜೆಗಳಿಗೆ ತೊಂದರೆಯಾಗಿರುತ್ತದೆಂಬಂಶವನ್ನು ಪೊ|| ಸೂಪರಿಂಟೆಂಡೆಂಟರಿಗಾಗಲಿ ಪೊ|| ಇ|| ಜನರಲ್‌ರವರಿಗೆ ಬರೆದುಕೊಳ್ಳತಕ್ಕದು ಉತ್ತಮವು.

ಕೃತಜ್ಞತೆ.

ಬೆಳಗಾವಿಯಲ್ಲಿ ಜರುಗುವ ಕಾಂಗ್ರೆಸಿಗಾಗಿ, ಹರಿಹರದಲ್ಲಿ ಪ್ರಾರಂಭಿಸಲ್ಪಡುವ ವಾಲೆಂಟೀಯರ್ಸ್ ಟ್ರೇನಿಂಗ್ ಕ್ಯಾಂಪಿಗೆ ಸಹಾಯಾರ್ಥವಾಗಿ ತಿಪಟೂರಿನ ಪ್ರಮುಖ ವ್ಯಾಪಾರಸ್ಥರಾದ ಶ್ರೀಯುತ ಹೆಚ್. ಚನ್ನಯ್ಯ ಸಿ. ಭಾಸ್ಕರಶೆಟ್ಟರವರು 10 ರೂ. ಗಳನ್ನೂ, ಶ್ರೀಯುತ ಮಗನ್‌ಲಾಲ್ ನೇಲ್‌ಚಂದ್‌ಸೇಟ್‌ರವರು ಹತ್ತು ರೂ. ಗಳನ್ನೂ, ಶ್ರೀಯುತ ಡಿ. ಎಸ್. ಮಲ್ಲಪ್ಪನವರು 3 ರೂ. ಗಳನ್ನೂ ಮತ್ತು ಶ್ರೀಯುತ ಡಿ. ರಾಜಗೋಪಾಲಾಚಾರ್ ಸ್ಟೇಷನ್ ಮಾಸ್ಟರವರು 5 ರೂ. ಗಳನ್ನೂ ಸಂತೋಷಪೂರ್ವಕವಾಗಿ ಕೊಟ್ಟಿದ್ದನ್ನು ವಿನಯಪೂರ್ವಕವಾಗಿ ಸ್ವೀಕರಿಸಿ ಈ ಮೂಲಕ ಸ್ವತಃ ಮುತುವರ್ಜಿವಹಿಸಿ ಕೊಡಿಸಿಕೊಟ್ಟ ಶ್ರೀಯುತ ಭಾಸ್ಕರಶೆಟ್ಟರವರಿಗೂ ಮತ್ತು ಮೇಲ್ಕಂಡ ಮಹನೀಯರುಗಳಿಗೂ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇವೆ.

ಎಂ. ಕೆ. ನಾಯಕ್.

ಶೆಟ್ಟಿಹಳ್ಳಿ ಸ್ಕೂಲಿನ ಕುಂದುಕೊರತೆ.

ಕಡೂರು ತಾ|| ಬಿದರೆ ಹೋಬಳಿ ಶೆಟ್ಟಿಹಳ್ಳಿಯಲ್ಲಿ 70-80 ಮನೆಗಳೂ 500 ಕ್ಕೆ ಮೇಲ್ಪಟ್ಟು ಪ್ರಜಾಸಂಖ್ಯೆಯೂ ಇರುತ್ತದೆ. ಇಲ್ಲಿ ಸ್ಕೂಲಿಗೆ ಹೋಗುವ ವಯಸ್ಸಿನ ಬಾಲಕ ಬಾಲಿಕೆಯರ ಸಂಖ್ಯೆಯು 100 ಕ್ಕೆ ಮೇಲ್ಪಟ್ಟಿರುವದಾದರೂ 10 ವರ್ಷದಿಂದಲೂ 43 ವಿದ್ಯಾರ್ಥಿಗಳು ಮಾತ್ರ ಓದುತ್ತಿದ್ದಾರೆ. ಇದು ಸರ್ಕಾರಿ ಸ್ಕೂಲಾಗಿಲ್ಲವಾದ್ದರಿಂದ ಸರಿಯಾದ ಮೇಷ್ಟರು ದೊರೆಯದೆ ಅಭಿವೃದ್ಧಿಗೆ ಅವಕಾಶವಿಲ್ಲದಿದೆ. ಹಾಲಿಯಿರುವ ಮಾಷ್ಟರು ಮ|| ಮುರಿಗಪ್ಪನವರು ಗಟ್ಟಿಗರಾಗಿದ್ದರೂ ಸರಿ ಸ್ಕೂಲುಗಳಲ್ಲಿ ದೊರೆಯುವಷ್ಟು ಸಂಬಳ ದೊರೆಯದೆ 7 ರೂ. ಮಾತ್ರ ಬರುತ್ತಿರುವದರಿಂದ ಉತ್ಸಾಹವಿಲ್ಲದಿರುತ್ತಾರೆ. ಈ ಸ್ಕೂಲನ್ನು ಸರ್ಕಾರಿಯಾಗಿ ಮಾಡಬೇಕೆಂದು ಗ್ರಾಮಸ್ಥರು ಅನೇಕಸಲ ಪ್ರಾರ್ಥಿಸಿಕೊಂಡಾಗ್ಯೂ ಅವರಿಗಿನ್ನೂ ಜಯ ಬರಲಿಲ್ಲ. ರೂ. 1 ಕ್ಕೆ 6 ಪೈಸಂತೆ ಸೆಸ್‌ಕೊಡಲು ಈ ಗ್ರಾಮಸ್ಥರು ಸಿದ್ಧರಾಗಿರುವರು. ಆದ್ದರಿಂದ ಇನ್ಸ್‌ಪೆಕ್ಟರ್ ಜನರಲ್‌ರವರು ಈ ಪ್ರಾರ್ಥನೆಯನ್ನು ತಮ್ಮ ಚಿತ್ತಕ್ಕೆ ತಂದುಕೊಂಡು ಇಲ್ಲಿಯ ಸ್ಕೂಲನ್ನು ಸರ್ಕಾರಿ ಸ್ಕೂಲಾಗಿ ಮಾಡಿಕೊಡಬೇಕೆಂದು ಬೇಡುತ್ತೇನೆ.

ವಿದ್ಯಾಭಿಮಾನಿ.

ದುಃಖವಾರ್ತೆಯು.

[illegible] ಸಂಸ್ಕೃತ ಪಾಠಶಾಲಾಧ್ಯಾಪಕರಾದ [illegible] ಮೃತರವರು [illegible] ಶಾಂತ್ಯಾದಿ ಕರ್ಮಗಳಿಂದಲೂ, [illegible] ಮೊದಲಾದ ಉಪಚಾರಗಳಿಂದಲೂ ಗುಣಹೊಂದದೆ ಇದೇ ಕಾರ್ತಿಕ ಶುದ್ಧ ೧ ರಲ್ಲಿ ತಮ್ಮ ಇಹಲೋಕದ ಯಾತ್ರೆಯನ್ನು ಪೂರೈಸಿದರು. ಇವರು ಸುಶೀಲರೂ, ಪತಿಭಕ್ತಿ ಪರಾಯಣೆಯರೂ, ದಯಾವಂತರೂ ವಿದ್ಯಾರ್ಥಿಗಳ ವಿಷಯದಲ್ಲಿ ಬಹಳ ಪ್ರೇಮವುಳ್ಳವರೂ ಇದ್ದರಲ್ಲದೆ, ಇಲ್ಲಿಯ "ಮಹಿಳಾಜ್ಞಾನಮಂದಿರ" ಕ್ಕೆ ಹೋಗಿ ಆ ಮಂದಿರದಲ್ಲಿ ಸ್ತ್ರೀಯರ ಉಪನ್ಯಾಸಗಳನ್ನೂ ಅವರ ಶಾಣೀಕತೆಯನ್ನೂ ನೋಡಿ ಬಹಳ ಸುಧಾರಿಸಿದವರಾಗಿದ್ದರು, ಅಲ್ಲದೆ ಈ ಸಂಘಕ್ಕೆ ತಮ್ಮ ಶಕ್ತ್ಯನುಸಾರ ಧನಸಹಾಯ ಮಾಡುತ್ತಿದ್ದರು. ಇವರು ವಿದ್ಯೆಯಲ್ಲಿ ಕನ್ನಡ ಮಹಾರಾಷ್ಟ್ರ ಭಾಷೆಗಳನ್ನು ಅರಿತಿದ್ದರಲ್ಲದೆ ಸಂಸ್ಕೃತವನ್ನು ಸಾಧಾರಣ ತಿಳಿದಿದ್ದರು. ಇವರಿಗೆ ಜಯದೇವನೆಂಬ ಒಬ್ಬನೇ ಮಗನಿರುವನು. ಇವರು ಚಿಕ್ಕವಯಸ್ಸಿನಲ್ಲಿಯೇ ಭೌತಿಕ ಶರೀರವನ್ನು ತ್ಯಜಿಸಿದ್ದಕ್ಕಾಗಿ ಅತ್ಯಂತ ಖೇದವಾಗುತ್ತದೆ. ಇವರ ಅಂತ್ಯಕಾಲದಲ್ಲಿ ಶ್ರೀ ಹುಕ್ಕೇರಿಶಿವಲಿಂಗಸ್ವಾಮಿಗಳು, ಕುಂಟೋಜಿಮಠದ ಶ್ರೀ ಚನ್ನವೀರಸ್ವಾಮಿಗಳು, ಸಂಸ್ಕೃತಪಾಠಶಾಲಾ ವಿದ್ಯಾರ್ಥಿಗಳು, ಊರೊಳಗಿನ ಮುಖ್ಯಸ್ಥರಾದ ರಾ|| ರಾ|| ಚನ್ನಬಸಪ್ಪ ಅಣ್ಣಾವಡಿಕಿ, ರಾ|| ರಾ|| ಮಲ್ಲಿಕಾರ್ಜುನಪ್ಪ ಅಪ್ಪಾರಾವ್ ಪಾಟೀಲ ಮೊದಲಾದ ಪ್ರಮುಖರು ಇನ್ನೂ ಅನೇಕ ಭಕ್ತಜನರು ಮತ್ತು ವೇ|| ಮಲ್ಲಿಕಾರ್ಜುನಶಾಸ್ತ್ರಿಗಳು ಜೈನಾಪುರ ಮೊದಲಾಗಿ ಅನೇಕ ಶಾಸ್ತ್ರಿಗಳೂ ಕೂಡಿದ್ದರು. ಅದೇ ದಿವಸ ರಾತ್ರಿ 8 ಘಂಟೆಗೆ ಇವರ ಸಮಾಧಿಕಾರ್ಯವನ್ನು ಯಥಾವಿಧಿಯಾಗಿ ಪೂರೈಸಿದರು. ಇವರ ಪತಿಗಳಾದ ವೇ|| ಪಂ|| ಶಾಸ್ತ್ರಿಗಳಿಗೂ ಇವರ ಚಿರಂಜೀವಿಗೂ ಪರಮಾತ್ಮನು ವಿಯೋಗ ದುಃಖಶಾಂತಿಯನ್ನೀಯಲೆಂದು ಕೋರುತ್ತೇನೆ.

ದುಃಖಭಾಗೀ ಎಸ್. ಎಂ. ಧಾರವಾಡ.

ಮಾಲೂರು ಟವನ್ ಮ್ಯುನಿಸಿಪಲ್ ಕೌನ್ಸಿಲರ ಚುನಾವಣೆ.

ತಾ|| 30-9-24 ರಲ್ಲಿ ಈ ಟವನ್ ಮ್ಯುನಿಸಿಪಾಲಿಟಿಯ ಕೌನ್ಸಿಲರ ಚುನಾವಣೆಯು ನಡೆಯಿತು. ಎಲೆಕ್ಷನ್ ಆಫೀಸರ್ ಅಮಲ್ದಾರ್‌ರವರು ಬಹುಮುತುವರ್ಜಿಯಿಂದ ಸಮರ್ಪಕವಾಗಿ ನಡೆಸಿದರು. ಹಿಂದಿನ ಎಲೆಕ್ಷನ್‌ಗಳಲ್ಲಿದ್ದಂತೆ ಈ ಸಾರಿ ಉಮೇದುವಾರರು ಯಾವ ಲೋಪವನ್ನೂ ಕಂಡುಹಿಡಿಯಲು ಸಾಧ್ಯವಾಗಲಿಲ್ಲವಾಗಿ ಎಲ್ಲಾ ಉಮೇದುವಾರರೂ ತಮ್ಮ ತಮ್ಮ ಪ್ರಾತಿನಿಧ್ಯವನ್ನು ಪಡೆಯಲು ಬಹು ಪೋಟಾಪೋಟಿಯಿಂದ ಓಟರುಗಳಲ್ಲಿ ಹೇಳಿಕೊಂಡು ಕೆಲಸಮಾಡಿರುತ್ತಾರೆ. ಹೀಗಿದ್ದಾಗ್ಯೂ, ಹನ್ನೊಂದು ಜನ ಉಮೇದುವಾರರಾಗಿ ಬಹು ಕಡಿಮೆ ಸಂಖ್ಯೆ ಓಟುಗಳನ್ನು ಪಡೆದು ಅತೃಪ್ತರಾಗಿರುವರು. ಯೌವನಸ್ಥರೂ ವಿದ್ಯಾವಂತರೂ ಆದ 7 ಜನ ಹೊಸ ಉಮೇದುವಾರರ ಪೈಕಿ ಶ್ರದ್ಧಾಳುಗಳೂ ಪ್ರಜಾಸೇವೆಯಲ್ಲಿ ನಿರತರಾಗಲವಕಾಶವುಳ್ಳವರೂ, ಸ್ವದೇಶಾಭಿಮಾನಿಗಳೂ ನಿಷ್ಪೃಹರೂ ಆದ ಮೂವರನ್ನು ಹುಡುಕಿ ಬಹು ಎಚ್ಚರಿಕೆಯಿಂದಲೂ ದೂರದೃಷ್ಟಿಯಿಂದಲೂ ನಿರ್ದಾಕ್ಷಿಣ್ಯದಿಂದಲೂ ಓಟುಕೊಟ್ಟು ಚುನಾಯಿಸಿಕೊಂಡವರ ಪೈಕಿ ಮತದ ಮೆ|| ಎಂ. ವಿ. ರುದ್ರಯ್ಯನವರು 99 ಓಟುಗಳನ್ನು ಪಡೆದು ಒಂದನೆಯವರಾಗಿಯೂ, ಮೆ|| ಮಹಮದಾಲಿಸಾಬ್ ಎರಡನೆಯವರಾಗಿಯೂ, ಮ|| ಲಕ್ಷ್ಮಣರಾವ್ ಜೋಡಿದಾರ್ರು ನಾಲ್ಕನೆಯವರಾಗಿಯೂ, ಹಳಬರ ಪೈಕಿ ಶೆಟ್ಟಿ ನಂಜುಂಡಪ್ಪನವರೂ ಜಯಶೀಲರಾಗಿರುತ್ತಾರೆ. ಹೊಸದಾಗಿ ಚುನಾಯಿಸಲ್ಪಟ್ಟವರ ಪೈಕಿ ಯಾರೂ ಸ್ವತಃ ಕಂಟ್ರಾಕ್ಟರುಗಳು ಆಗಿರದೆಯೂ ಕಂಟ್ರಾಕ್ಟರುಗಳಿಗೆ ಅಭಿಮಾನಕರ್ತರಲ್ಲದೆಯೂ ಇರುವುದರಿಂದ ಇನ್ನು ಮುಂದೆಯಾದರೂ ಮ್ಯುನಿಸಿಪಾಲಿಟಿಯ ಕೆಲಸಗಳೆಲ್ಲವೂ ನಡೆದು ಅಭಿವೃದ್ಧಿ ಆಗುವುದೆಂದೂ ರೇಟುಪೇಯರು ನಿಷ್ಪಕ್ಷಪಾತವಾಗಿ ಎಲೆಕ್ಟೆಡ್ ಮೆಂಬರುಗಳಂತೆ ಯೋಗ್ಯರಾದವರನ್ನೇ ನಾಮಿನೇಟ್ ಮಾಡಲು ಗೌರ್ನಮೆಂಟಿಗೆ ಡೆಪ್ಯುಟಿಕಮಿಷನರು ಶಿಫಾರಸ್ಸು ಮಾಡುತ್ತಾರೆಂದೂ ನಂಬಿರುತ್ತಾರೆ. ಮತ್ತು ಈ ಮೆಂಬರುಗಳೆಲ್ಲರೂ ರೇಟುಪೇಯರುಗಳ ಹಿತಚಿಂತನೆಯಿಂದ ಮುತವರ್ಜಿವಹಿಸಿ ಕೆಲಸಮಾಡಿ ಅವರ ಕೃತಜ್ಞತೆಗೆ ಪಾತ್ರರಾಗುತ್ತಾರೆಂದು ನಂಬಿದೆ.

ಓಟರುಗಳ ಪ್ರತಿನಿಧಿ.

ಹುಲಗೇರಿಯ ವೀರಶೈವ ತರುಣರಿಗೆ ಎಚ್ಚರಿಕೆ.

ರಾಣಿಬನ್ನೂರ ತಾಲ್ಲೂಕು ಹುಲಗೇರಿಯು ವೀರಶೈವರ ದೊಡ್ಡ ವಸತಿಸ್ಥಳವಿದ್ದು ಇಲ್ಲಿಯ ಗ್ರಾಮ ಪಾಟೀಲರಾದ ಮಿ|| ಲಿಂಗನಗೌಡರು ಎರಡುಸಾರೆ ತಾಲ್ಲೂಕು ಲೋಕಲ್ ಬೋರ್ಡು ಚುನಾವಣೆಯಲ್ಲಿ ಲೋಕಮತದಿಂದ ಮೆಂಬರಾಗಿ ಆರಿಸಲ್ಪಟ್ಟು ಬಂದು ಗ್ರಾಮಾಭಿವೃದ್ಧಿಯ ಕಾರ್ಯಗಳನ್ನು ಅಂದರೆ ಗ್ರಾಮಸ್ವಚ್ಛತೆ (ಶ್ಯಾನಿಟೇಶನ್) ಕುಡಿಯುವನೀರಿನ ಕೆರೆ ಭಾವಿ ಕಾಮಗಾರಿಯ ರಿಪೇರಿ ಮತ್ತು ಅಸ್ಪೃಶ್ಯರಿಗೋಸ್ಕರ ಒಂದು ಕುಡಿಯುವ ನೀರಿನ ಹೊಸಭಾವಿಯನ್ನು ಶ್ಯಾನಿಟೇಶನ್ ಮತ್ತು ಲೋಕಲ್ ಬೋರ್ಡಿನ ಮುಖಾಂತರ ಸಾವಿರಾರು ರೂಪಾಯಿನ ಖರ್ಚಿನ ಬಿಲ್ ಪಾಸು ಮಾಡಿಸಿ ಕಟ್ಟಿಸಿಕೊಟ್ಟಿರುವದಲ್ಲದೆ ಬಡಬಗ್ಗರಿಗೆ ಪುಕ್ಕಟೆಯಾಗಿ ಔಷಧಗಳನ್ನು ಕೊಟ್ಟು ಪರೋಪಕಾರವನ್ನು ಮಾಡುತ್ತಿರುವದು ಸ್ತುತ್ಯವೇಸರಿ. ಹೋದವರ್ಷ ಈ ಗ್ರಾಮಕ್ಕೆ ದಾವಣಗೆರೆಯ ಶ್ರೀಮೃತ್ಯುಂಜಯ ಮಹಾಸ್ವಾಮಿಗಳವರು ದಯಮಾಡಿಸಿದಾಗ್ಗೆ ಇಂಥಾ ವೀರಶೈವರ ಅಭಿವೃದ್ಧಿ ಸ್ಥಳದಲ್ಲಿ ಒಂದು ವಾಚನಾಲಯವಿರುವದು ಅವಶ್ಯಕವೆಂದೂ, ಅದರಿಂದ ಅಶಿಕ್ಷಿತಬಾಂಧವರಿಗೂ ಸಾಧಾರಣ ಜ್ಞಾನೋದಯವಾಗಿ ಸಮಾಜಸೇವೆ ಮತ್ತು ದೇಶಸೇವೆ ಮಾಡತಕ್ಕ ಸ್ಫೂರ್ತಿ ಉತ್ಪನ್ನವಾಗುವದಲ್ಲದೆ ಪರಸ್ಪರ ಪ್ರೀತಿ ಒಕ್ಕಟ್ಟುಗಳು ಬೆಳೆಯಲಿಕ್ಕೆ ಕಾರಣವಾಗುತ್ತದೆಂದೂಹಿಸಿ ಶ್ರೀಬಸವೇಶ್ವರ ವಾಚನಾಲಯವೆಂಬ ನಾಮಧೇಯದಿಂದ ನಡೆಯಲು ಸ್ಥಾಪಿಸಿ, ಸದರಿ ಪಾಟೀಲರನ್ನು ಆ ಸಂಸ್ಥೆಯ ಚೇರ್ಮನ್ನರಾಗಿರುವಂತೆ ಅನುಜ್ಞೆಯನ್ನಿತ್ತು ಭಕ್ತಮಂಡಲಿಯವರಿಂದ ವಾಗ್ದಾನವನ್ನು ತೆಗೆದುಕೊಂಡು ತೆರಳಿದರು. ಶ್ರೀಗಳವರಲ್ಲಿ ಬಹು ಆತುರವನ್ನುತೋರಿಸಿದ ತರುಣರು ಮತ್ತು ವರ್ತಕಮಂಡಳಿಯವರು ಇದುವರೆಗೂ ತಮ್ಮ ವಾಗ್ದಾನದಂತೆ ಯಾವ ಕಾರ್ಯವನ್ನೂ ಪ್ರಾರಂಭಿಸದೆ ಸ್ವಾರ್ಥಪರರಾಗಿ ಸುಮ್ಮನೆ ನಿದ್ರಿಸುತ್ತಿರುವದನ್ನು ನೋಡಿ ತುಂಬಾ ವಿಷಾದಪಡಬೇಕಾಗಿದೆ. ಆದ್ದರಿಂದ ಕ್ಷುಲ್ಲಕ ವಿಷಯವಾಗಿ ಸ್ವಜಾತಿಯವರಲ್ಲಿ ಪಾರ್ಟಿಕಟ್ಟಿಕೊಂಡು ಸಾವಿರಾರು ರೂಪಾಯಿಗಳನ್ನು ಕೋರ್ಟುಕಚೇರಿಗಳಿಗಾಗಿ ಹಾಳುಮಾಡಿಕೊಳ್ಳದೆ ಸಮಾಜಸುಧಾರಣಾಸಂಘವನ್ನು ಏರ್ಪಡಿಸಿಕೊಂಡು ಸಮಾಜದಲ್ಲಿ ಐಕ್ಯತೆಯನ್ನುಂಟುಮಾಡಿ ಶ್ರೀಗಳವರಿಗೆ ಕೊಟ್ಟ ವಾಗ್ದಾನವನ್ನು ಶೀಘ್ರದಲ್ಲಿ ಪೂರ್ಣಮಾಡಿ ಗುರುಗಳ ಆಶೀರ್ವಾದವನ್ನು ಪಡೆದು ಕೀರ್ತಿಪಾತ್ರರಾಗಬೇಕಾಗಿ ತರುಣ ವೀರಶೈವರಿಗೆ ನನ್ನ ಸವಿನಯಪ್ರಾರ್ಥನೆಯು.

ಓರ್ವ ಸಮಾಜಸೇವಕ.

ತಿಪಟೂರಿನ ವೀರಶೈವ ವಿದ್ಯಾರ್ಥಿನಿಲಯ.

ಶ್ರೀ [illegible] ಮಠದ ಶ್ರೀಗಳವರು ವಿದ್ಯಾರ್ಥಿನಿಲಯವನ್ನು ಕಟ್ಟಿಸಲು ಪ್ರಶಸ್ತವಾದ ಸ್ಥಳವಿಲ್ಲವೆಂಬುದ್ದೇಶದಿಂದ ತಮ್ಮ ಮಠದ ಸ್ವಾಧೀನ [illegible] ಅ. ಪಿ. ಸಂಗಪ್ಪನವರಿಂದ ತಿಪಟೂರ್ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟ್ ಸಾಹೇಬರವರ ಸನ್ನಿಧಿಗೆ ಅರ್ಜಿಯನ್ನು ಹಾಕಿಸಲು [illegible] ತಾ|| 30-10-1924 ರಂದು ಮ್ಯುನಿಸಿಪಲ್ ಮೀಟಿಂಗಿನಲ್ಲಿ ಕೌನ್ಸಿಲರವರು ವಿದ್ಯಾರ್ಥಿನಿಲಯದ ಪುರೋಭಿವೃದ್ಧಿಯನ್ನು ಬಯಸಿ ಟವನ್ ಬಜಾವಣೆಗಾಗಿ ನಿರ್ಣಯಿಸಲ್ಪಟ್ಟಿರುವ ಪ್ರದೇಶದಲ್ಲಿ ಯಾವಾಗ್ಯೂ ವಿದ್ಯಾರ್ಥಿಗಳ ಆರೋಗ್ಯದ ವಿಷಯದಲ್ಲಿ ತೊಂದರೆಬಾರದಂತಿರುವ 4 ಬಂಗಾಲೆ ಸೈಟು 2 ಸುಪೀರಿಯರ್‌ಸೈಟು ಅಂತು 6 ಸೈಟುಗಳನ್ನು ಕೊಡಬಹುದೆಂದು ಅವರ ಪೂರ್ವಕವಾಗಿ ತೋರಿಸಿದ ಅಭಿಪ್ರಾಯವನ್ನು ಪ್ರೆಸಿಡೆಂಟ್ ಸಾಹೇಬರವರು ಚಾಲಕರಮೇಲಿರುವ ತಮ್ಮ ನಿಜವಾದ ಪ್ರೇಮವನ್ನು ಅನುಮೋದನೆಯ ಮೂಲಕವಾಗಿ ವ್ಯಕ್ತಗೊಳಿಸಿದರು. ಮರುದಿವಸವೇ ಬೆಂಗಳೂರ್ ಚಿಕ್ಕಪೇಟೆ ನೆಕ ದಂಗಡಿ ಶಂಬಲಿಂಗಪ್ಪನವರ ಮ|| ಸಿದ್ದರಾಮಣ್ಣನವರು ಪ್ರೆಸಿಡೆಂಟರಿಂದ ಉಚಿತಾರ್ಥವಾಗಿ ದಯಪಾಲಿಸಲ್ಪಟ್ಟ ಸೈಟಿನಲ್ಲಿ ಸಾವಿರಾರು ರೂಪಾಯಿಗಳ ಖರ್ಚಿನಿಂದ 1 ಗಾಲಿಯನ್ನು ಹಾಕುವ ಕಾಂಡ್ ಭಾವಿಯನ್ನು ತೆಗಿಸಿಕೊಡುವುದಾಗಿಯೂ ಮತ್ತು ಗುಬ್ಬಿ ತಾಲ್ಲೂಕ್ ದಂಡಿನಶಿವರದ ಸಂಮಠ ತುಳ್ಸೇಕೆರೆ ಗ್ರಾಮದ ಮ|| ಮೈಸೂರ್ ಸಿದ್ದರಾಮಪ್ಪನವರು ವಿದ್ಯಾರ್ಥಿನಿಲಯದ ಉಪಯೋಗಿಯಾದ 2 ದೊಡ್ಡ ಹಂಡೆಗಳನ್ನು ದಾನರೂಪವಾಗಿ ಕೊಟ್ಟರಲ್ಲದೆ ಕಟ್ಟಡಕ್ಕಾಗಿ (400) ನಾಲ್ಕುನೂರು ರೂಪಾಯಿಗಳ ಸಾಗುವಾನಿ ತೀರುಗಳನ್ನು ಕೊಡಿಸುವುದಾಗಿಯೂ ಒಪ್ಪಿ ತಮ್ಮ ಉದಾರಭಕ್ತಿಯನ್ನು ಶ್ರೀಗಳವರ ಸನ್ನಿಧಿಯಲ್ಲಿ ಪ್ರದರ್ಶಿಸಿದರು. ತಿಪಟೂರ್ ತಾಲ್ಲೂಕ್ ಹಿಂಡಿಸ್ಕೆರೆ ಗ್ರಾಮದ ಹೆಂಚಿನ ಕಾರ್ಖಾನೆ ಪ್ರೊಪ್ರೈಟರ್ ಮ|| ಶಾಮಶೆಟ್ಟರವರು 2000 ಎರಡು ಸಾವಿರ ಮಂಗಳೂರ್ ಹೆಂಚುಗಳನ್ನು ಕೊಡುತ್ತೇವೆಂಬದಾಗಿ ವಾಗ್ದಾನಮಾಡಿರುತ್ತಾರೆ. ಪ್ರೆಸಿಡೆಂಟರವರೂ ಕೌನ್ಸಿಲರವರೂ ಸೈಟುಗಳನ್ನು ಉಚಿತವಾಗಿ ದಯಪಾಲಿಸಿದುದಕ್ಕಾಗಿ ನಾನು ವಿನಯಪೂರ್ವಕವಾಗಿ ಅವರಿಗೆ ವಂದನೆಯನ್ನು ಸಮರ್ಪಿಸುತ್ತೇನೆ. ಸಮಾಜಾಭಿವೃದ್ಧಿಯ ವಿಷಯದಲ್ಲಿ ಮೇಲ್ಕಂಡ ಮಹನೀಯರು ತಮಗಿರುವ ಉದಾರಮನಸ್ಸನ್ನು ಪ್ರಕಟಿಸಿದುದಕ್ಕಾಗಿ ಇವರಿಗೆ ಶ್ರೇಯೋಭಿವೃದ್ಧಿಯನ್ನುಂಟುಮಾಡಲೆಂದು ಜಗದೀಶ್ವರನಾದ ಪರಮೇಶ್ವರನನ್ನು ಬೇಡಿಕೊಳ್ಳುತ್ತೇನೆ.

ವೀರಶೈವ ವಿದ್ಯಾರ್ಥಿನಿಲಯದ ಮೇನೇಜರ್
ಕೆ. ಎಂ. ಸಿದ್ಧರಾಮಪ್ಪ ಶಾಸ್ತ್ರಿ.

ಪ್ರಾಚೀನ ಮತ್ತು ಅಧುನಿಕ ಭಾರತಮಹಿಳೆಯರೂ ಪಾಶ್ಚಿಮಾತ್ಯಶಿಕ್ಷಣ ಪ್ರಭಾವವೂ.

ಈ ನಮ್ಮ ಭರತಖಂಡವು ಅತಿ ಪ್ರಾಚೀನಕಾಲದಿಂದಲೂ ಸುಧಾರಿಸಿದ ರಾಷ್ಟ್ರಗಳಲೊಂದಾಗಿ ಪ್ರಸಿದ್ಧಿಯನ್ನು ಹೊಂದಿದ್ದು ಇತಿಹಾಸಪ್ರಸಿದ್ಧವದೆ. ಈಗಿನ ಅಧುನಿಕ ಸುಧಾರಿಸಿದ ಪಾಶ್ಚಿಮಾತ್ಯದೇಶಗಳು ತೀರ ಹೀನದಶೆಯಲ್ಲಿದ್ದವೋ ಆ ಕಾಲದಲ್ಲಿ ಭಾರತಮಾತೆಯ ಉದರದಲ್ಲಿ ಮಹಾಮಹಾವಿದ್ವನ್ಮಣಿಗಳಾದ ಪತಿವ್ರತಾಮಹಿಳೆಯರು ಜನಿಸಿ ಪಾಪಭೀರುಗಳಾಗಿ ಪತಿವ್ರತಾಧರ್ಮದಿಂದ ನಡೆದು ಲೋಕಪೂಜ್ಯರಾಗಿ ಹೋದರೋ ಅಂಥವರ ಹೆಸರುಗಳು ಈವತ್ತಿನವರೆಗೆ ಅಜರಾಮರವಾಗಿ ಹಿಂದೂದೇಶದ ಯಾವತ್ತು ಭಾಷೆಗಳಲ್ಲಿ ಗದ್ಯಪದ್ಯಕಥಾರೂಪವಾಗಿ ಕಂಗೊಳಿಸುತ್ತಿವೆ. ಆಗಿನ ಕಾಲದಲ್ಲಿ ಸ್ತ್ರೀಯರಿಗೆ ವಿದ್ಯಾವ್ಯಾಸಂಗಮಾಡಲಿಕ್ಕೆ ಈಗಿನಂತೆ ಸ್ಕೂಲ್ ಕಾಲೇಜುಗಳೂ, ವಿಶ್ರಾಂತಿಗೃಹಗಳೂ, ಫ್ರೀಸಿಪ್ಪು ಇರದಿದ್ದರೂ ಅವರು ಈಗಿನವರಿಗಿಂತಲೂ ಪ್ರತಿಯೊಂದು ಶಾಸ್ತ್ರಗಳಲ್ಲಿಯೂ, ಕಲೆಗಳಲ್ಲಿಯೂ ಮಿಗಿಲಾಗಿದ್ದರೆಂದು ಕಂಡುಬರುತ್ತದೆ. ಯಾಕೆಂದರೆ ಆಗಿನಕಾಲದಲ್ಲಿ ಸ್ತ್ರೀಯರಿಗೆ ಈಗಿನಂತೆ ಬರಿ ಇಂದ್ರಜಾಲ, ಮಹೇಂದ್ರಜಾಲ ಮೋಹಕ ಶಿಕ್ಷಣವನ್ನು ಕೊಡದೆ ಇಹಪರಕ್ಕೆ ಸಾಧನಗಳಾದ ವಿಷಯಗಳನ್ನು ಅಂದರೆ ಪಾಕಶಾಸ್ತ್ರ, ಆರೋಗ್ಯಶಾಸ್ತ್ರ, ನೀತಿಶಾಸ್ತ್ರ, ಪತಿವ್ರತಾಧರ್ಮ ಮೊದಲಾದ ಸ್ತ್ರೀಯರಿಗೆ ಉಪಯುಕ್ತವಾದ ವಿಷಯಗಳನ್ನು ಕಲಿಸುತ್ತಿದ್ದರು. ಇದರಿಂದ ಅವರು, ತಾವು ಯಾರು ತಮ್ಮ ಕರ್ತವ್ಯವೇನು, ತಮಗೂ ಪುರುಷರಿಗೂ ಭೇದವೇನು ? ಎಂಬದನ್ನರಿತು ನೀತಿವಂತರಾಗಿ ಈ ಸಂಸಾರವೆಂಬ ನಾಟಕರೂಪವಾದ ರಥವನ್ನು ನಡೆಸಲಿಕ್ಕೆ ತಮ್ಮ ಪುರುಷರಿಗೆ ಸಹಾಯಕರಾಗಿ ಪತಿಭಕ್ತಿ, ದೈವಭಕ್ತಿಯುತರಾಗಿ ನಡೆದು ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಮೋಕ್ಷವನ್ನೂ ಪಡೆಯಲರ್ಹತೆಯುಳ್ಳವರಾಗಿರುತ್ತಿದ್ದರು. ಇಂಥ ಸತೀಲೆಯರಾದ ಸಾಧ್ವಿಮಣಿಗಳ ಪಾತಿವ್ರತ್ಯಪ್ರಭಾವದಿಂದ ದೇಶದಲ್ಲಿ ಕಾಲಕಾಲಕ್ಕೆ ತಕ್ಕಮಳೆಬೆಳೆಗಳಾಗಿ ಸುಖಸಂಪತ್ತುಗಳು ಹೆಚ್ಚಿ ಯಾವ ರೋಗಾದಿಗಳಿಗೂ ಆಸ್ಪದವಿಲ್ಲದೆ ಪೂರ್ಣಾಯುಗಳಾಗಿ ಜೀವಿಸುತ್ತಿದ್ದರು. ಆದರೆ ಈಗಿನ ಕಾಲದಲ್ಲಾದರೋ ಪಾಶ್ಚಿಮಾತ್ಯರ ಶಿಕ್ಷಣದಿಂದ ಸ್ತ್ರೀಯರು ಸ್ವಾತಂತ್ರ್ಯವೆಂಬ ವಾತಾವರಣದಲ್ಲಿ ಸಿಲ್ಕಿ ತಮ್ಮ ಸನಾತನವಾದ ಆರ್ಯಧರ್ಮವನ್ನು ಬಿಟ್ಟು ಪುರುಷರಂತೆ ಸ್ವಚ್ಛಂದವೃತ್ತಿಯಿಂದ ನಡೆಯತೊಡಗಿದ್ದಾರೆ. ಪುರುಷರೆಂದರೆ ಇವರಿಗೆ ಗಣನೆಯೇ ಇಲ್ಲ. ಇವರು ಸಂಪಾದಿಸುವ ಮೋಹಕ ಯಕ್ಷಿಣಿ ವಿದ್ಯೆಯು ಕೇವಲ ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವದರಲ್ಲಿರುತ್ತದೆಯೇ ಹೊರತು ಅದರಿಂದ ಪುರುಷರಿಗೆ ಯಾವತರದ ಸಹಾಯವಾಗದೆ ಮತ್ತಿಷ್ಟು ಕಷ್ಟಕ್ಕೆ ಗುರಿಯಾಗಬೇಕಾಗುವದು. ಹೆಂಡತಿಗಿಂತ ಗಂಡನು ವಿದ್ಯೆಯಲ್ಲಿ ಸ್ವಲ್ಪ ಹಿಂದೆ ಇದ್ದರೆ ತೀರಿತು ಅವನ ಸರ್ವಸ್ವಾತಂತ್ರ್ಯವೂ ಮಣ್ಣುಪಾಲಾದಂತೆಯೇ ತಿಳಿಯತಕ್ಕದ್ದು. ಅವನು ಇವರಮೇಲೆ ಯಾವತರದ ಅಧಿಕಾರವನ್ನು ಮಾಡಲಾಗದು. ಅವರು ನಾಟಕ, ಸಿನೇಮಾ, ವಾಕಿಂಗ್ ಮೊದಲಾದ ಕಡೆಗಳಲ್ಲಿ ಹೋದರೂ ಕೇಳಬಾರದು. ಅಡಿಗೆ ಮಾಡದಿದ್ದರೆ ಆಳಿನಿಂದ ಮಾಡಿಸಬೇಕು. ಅದಕ್ಕೆ ಶಕ್ತಿಯಿಲ್ಲದಿದ್ದರೆ ತಾನಾದರೂ ಮಾಡಬೇಕು. ಅದು ರುಚಿಯಾಗಿರದಿದ್ದರೆ ಬೇರೆ ಹೋಟೆಲಿನಿಂದ ತಂದುಕೊಟ್ಟು ಆ ಮೇಡಂಸಾಹೇಬರು ಉಂಡನಂತರ ಉಳಿದರೆ ಹಿಂದಿನಿಂದ ತಾನು ಊಟಮಾಡಬೇಕು. ಈ ಪ್ರಕಾರ ಪತಿಸೇವಾತತ್ಪರನಾಗಿದ್ದರೆ ಸರಿ, ಇದರಲ್ಲೇನಾದರೂ ತಪ್ಪಿನಡೆದರೆ (Remarriage) ಎರಡನೇ ವಿವಾಹಕ್ಕೆ ಪ್ರಾರಂಭವಾಗುವದು. ಶಿವ ಶಿವ ! ಪುರುಷರಿಗೆ ಎಂಥ ಗತಿ ಬಂದಿತು ? ಯಾವ ಕೈಹಿಡಿದು ಲಗ್ನವಾದ ಗಂಡನು ಪ್ರತ್ಯಕ್ಷ ದೇವತಾಸಮಾನನೆಂದು ಹೇಳುವ ಆರ್ಯರ ಪೂರ್ವದ ಶಾಸ್ತ್ರಗಳು ಎಲ್ಲಿ ಹೋದುವು ! ಕೇವಲ ಅನಿತ್ಯವಾದ ಈ ಮಾಯಾ ಸಂಸಾರವನ್ನು ನಿತ್ಯವೆಂದು ಭಾವಿಸಿ ವ್ಯರ್ಥವಾಗಿ ಅಧೋಗತಿಗೆ ಹೋಗಲು ನಮ್ಮ ಭಾರತ ಭಗಿನಿಯರು ಪ್ರಯತ್ನಿಸುವದನ್ನು ನೋಡಿ ತುಂಬಾ ವಿಷಾದಪಡಬೇಕಾಗಿದೆ. ಯಾವ ಭಾರತಮಾತೆಯ ಹೃದಯದಲ್ಲಿ ಸತೀಲೆಯರಾದ ಪತಿವ್ರತಾಶಿರೋಮಣಿಗಳುದಯಿಸಿ ಇಡೀ ಜಗತ್ತಿಗೇ ವಂದ್ಯರಾಗಿ ಹೋದರೋ ಅಂಥ ದುರ್ದೈವಿ ಮಾತೆಯ ಹೊಟ್ಟೆಯಲ್ಲಿ ಪಾಶ್ಚಿಮಾತ್ಯ ವಿದ್ಯಾಸ್ವಾತಂತ್ರ್ಯ ಪ್ರಭಾವದಿಂದ ಪತಿನಿಂದಾಪರರಾದ ಕನ್ಯಾರತ್ನಗಳು ಉದಯವಾದದ್ದು ಕಲಿಕಾಲ ಪ್ರಾಬಲ್ಯವಲ್ಲವೇ ? ಧನ್ಯ ಧನ್ಯ ! ಕಲಿಮಹಾರಾಜನೇ, ನೀನೇ ಧನ್ಯನು !! ನೀನೇ ಪಕ್ಷಪಾತಿಯು !!! ಯಾಕೆಂದರೆ ಇಲ್ಲಿಯವರೆಗೆ ಪುರುಷರು ಸ್ವಾತಂತ್ರ್ಯವನ್ನು ಅನುಭವಿಸಿದ್ದು ಇನ್ನು ಮೇಲೆ ಅದರ ಸರದಿಯು ಸ್ತ್ರೀಯರಿಗೆ ಬರತಕ್ಕದ್ದಾದಪ್ರಯುಕ್ತ ನ್ಯಾಯದೃಷ್ಟಿಯಿಂದ ವಿಚಾರಿಸಿಕೊಡುವದಕ್ಕಾಗಿ ಭೂಲೋಕಕ್ಕೆ ಬಂದಿರುತ್ತೀ. ಆ ಪ್ರಕಾರ ಶೀಘ್ರವಾಗಿ ಅವರಿಗೆ ಯಾವತ್ತು ಸ್ವಾತಂತ್ರ್ಯವನ್ನು ಕೊಡಿಸಿ ಅಬಲೆಯರೆಂಬ ಕಲಂಕವನ್ನು ದೂರಮಾಡಿ ಪ್ರಬಲೆಯರೆಂಬ ಬಿರುದನ್ನು ಕೊಟ್ಟು "ಸ್ತ್ರೀಸ್ವಾತಂತ್ರ್ಯ ಮಹಾರಾಣಿ" ಎಂಬ ಮುಕುಟದ [illegible] ಸ್ತ್ರೀ ಸಮಾಜದಿಂದ [illegible] ನನ್ನ ಮನಸ್ಸನ್ನು [illegible].

ಓರ್ವ [illegible].

ಬ್ರಾಹ್ಮಣೇತರೈಕ್ಯವು.

(ಲೇಖಕ,—ಸ್ವಾಮಿ ವಿರೂಪಾಕ್ಷ ಒಡೆಯರ್ ಪ್ರೊಫೆಸರ್, ಸಂಸ್ಕೃತಕಾಲೇಜು, ಇಂದೋರ.)

ನಮ್ಮಲ್ಲಿ ನಮ್ಮ ಕರ್ನಾಟಕದಲ್ಲಿ ನಮ್ಮ ಕರ್ನಾಟಕೀಯರ ಸುಯೋಗದಿಂದ ಸಮಸ್ತ ಮಾನವಪ್ರಾಣಿಗಳ ಹಿತಚಿಂತನೆಯನ್ನು ಮಾಡುವ ಸಮಸ್ತ ಭಾರತೀಯರ ಮಹಾಸಭೆಯು (ಕಾಂಗ್ರೆಸ್) ಕೂಡುವ ಸಮಯವು ಇದೇ ಡಿಸೆಂಬರದಲ್ಲಿ ಪ್ರಾಪ್ತವಾಗಿದ್ದು ಇಂಥಾ ಸುಸಂಧಿಯನ್ನು ಕರ್ನಾಟಕದೇಶೀಯರು ಎಂದೂ ಕಳೆಕೊಳ್ಳದೆ ತಮ್ಮ ಹಿತಾಹಿತಗಳನ್ನು ಸಮಸ್ತ ಭಾರತೀಯಪ್ರಮುಖರ ಮುಂದಿಡುವುದು ಅತಿ ಹಿತಕರವಾಗಿರುವುದು.

ಇನ್ನು ಒಂದಾನೊಂದು ವಿಶಿಷ್ಟಜಾತಿಯಾದ ಬ್ರಾಹ್ಮಣರಿಂದ ಬ್ರಾಹ್ಮಣೇತರರೆಂಬುವವರು ಹೆಜ್ಜೆಹೆಜ್ಜೆಗೂ ಹೊಂದುತ್ತಿರುವ ಅಪಮಾನ, ಅನ್ಯಾಯ, ಅನುಚಿತಸರ್ವಾದಿಗಳನ್ನು ಉತ್ತರದೇಶೀಯ ಪುಢಾರಿಗಳ ಎದುರಿನಲ್ಲಿ ತಂದು ಅದರಲ್ಲಿಯೂ ಈ ಕರ್ನಾಟಕೀಯ ಬ್ರಾಹ್ಮಣರು ಸ್ವಾರ್ಥಕಪರರಾಗಿ ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ, ರಾಜಕೀಯ ಮೊದಲಾದ ಸಮಸ್ತ ವಿಷಯಗಳಲ್ಲಿ ಮಾಡುತ್ತಿರುವ ದುರ್ಬುದ್ಧಿಯ ಜುಲುಮೆಯನ್ನು ಬೈಲಿಗೆ ತಂದು ತೋರಿಸುವ ಪ್ರಯತ್ನವಮಾಡುವುದು ಬ್ರಾಹ್ಮಣೇತರರ ಹಿತಕಾಂಕ್ಷಿಯೆನಿಸಿದ ಪ್ರತಿ ಒಬ್ಬ ಮನುಷ್ಯನ ಕರ್ತವ್ಯವಾಗಿರುವುದು. ಇದರಂತೆಯೇ ಈ ಬ್ರಾಹ್ಮಣರ ದುರ್ಬುದ್ಧಿಯನ್ನು ಹೋಗಲಾಡಿಸಲೋಸುಗ ಇದೇ ಕಾಂಗ್ರೆಸಿನಲ್ಲಿ ಈ ಬ್ರಾಹ್ಮಣಜಾತಿಯವರು ಪರರ ವಿಷಯದಲ್ಲಿ ಮಾಡುತ್ತಿರುವ ಅನ್ಯಾಯಕ್ಕಾಗಿ "ನಿಷೇಧ" ಅಥವಾ "ನಿಂದಾವ್ಯಂಜಕ" ಠರಾವು ಪಾಸಮಾಡಲ್ಪಡಬೇಕೆಂತಲೂ, ಈ ಬ್ರಾಹ್ಮಣರು ತಮ್ಮ ದುರ್ಬುದ್ಧಿಯನ್ನು ಇಷ್ಟರಿಂದ ಲಜ್ಜಿತರಾಗಿ ಬಿಡದಿದ್ದರೆ ಮುಂದಿನ ಕಾಂಗ್ರೆಸಿನಲ್ಲಿ ಸಮಸ್ತ ಬ್ರಾಹ್ಮಣೇತರ ಹಿಂದೂಗಳೂ ಹಾಗೂ ಮುಸಲ್ಮಾನರೂ ಸಹ ಈ ಬ್ರಾಹ್ಮಣರೊಡನೆ "ಅಸಹಕಾರ" ವನ್ನು ಹೂಡಬಹುದೆಂದು ಠರಾವು ಪಾಸುಮಾಡಲ್ಪಡುವದೆಂತಲೂ ಅದರಂತೆ ನಿಯಮವನ್ನು ಮಾಡಿಸಬೇಕೆಂದು ಕಾಂಗ್ರೆಸಿಗೆ ಸೇರಿರುವ ಬ್ರಾಹ್ಮಣೇತರ ಪುಢಾರಿಗಳು ಹಟಹಿಡಿಯತಕ್ಕದು. ಈ ಕಾಂಗ್ರೆಸಿನಲ್ಲಿ ಈ ಠರಾವನ್ನು ತರುವುದಕ್ಕಾಗಿ ಬ್ರಾಹ್ಮಣರು ವಿರೋಧಿಸಿದಲ್ಲಿ ಬ್ರಾಹ್ಮಣೇತರರೆಂಬುವವರು ಕಟ್ಟಾಣೆ ಆ ಕಾಂಗ್ರೆಸಿನಿಂದ ಹೊರಗೆ ಹೊರಟುಬರತಕ್ಕದು ಯಾಕೆಂದರೆ—ಇದರಿಂದ ಅವರಿಗೆ ಸ್ವಲ್ಪ ನಾಚಿಗೆಬಂದು ಅವರು ತಮ್ಮ ಸ್ವಾರ್ಥಕ ಬುದ್ಧಿಯನ್ನು ಬಿಡಬಹುದೇಹೊರ್ತು ಅನ್ಯಥಾ ಬಿಡಲಾರರು. ಇದುವರೆಗೂ ಬ್ರಾಹ್ಮಣೇತರರೆಂಬುವವರು ಈರೀತಿಯಾದ ಯಾವ ತೊಂದರೆ, ಅಪಮಾನಗಳನ್ನು ತರದೇ ಅವರು ಹೇಳಿದಂತೆ ಶಿರಬಗ್ಗಿ ನಡೆಯುತ್ತ ಹೋದುದರಿಂದ ಅವರ ಉಪದ್ವ್ಯಾಪವು ಮಿತಿಮೀರಿಹೋಗಿರುವದು. ಹ್ಯಾಗೆಂದರೆ,—ಯಾವನೇ ಬ್ರಾಹ್ಮಣೇತರನು ತನ್ನ ಗುಡಿ, ಮನೆಗಳಲ್ಲಿ ದೇವರಪೂಜಾದಿಗಳನ್ನು ಮಾಡುವುದರ ನಡುವೆ ಇವರ ದಲ್ಲಾಲಿಯು, ಲಗ್ನಾದಿಕಾರ್ಯಗಳಲ್ಲಿಯೂ ಇವರ ದಲ್ಲಾಲಿಯು, ಉತ್ಸವಾದಿಗಳಿಗೂ ಇವರ ಅಡ್ಡಿಯು, ಸಾರ್ವಜನಿಕ ದೇವರಮಂದಿರಗಳಲ್ಲಿ ದೇವರದರ್ಶನಕ್ಕೂ ಪ್ರತಿಬಂಧವು, ಇಂಥಾ ಹಿತಶತ್ರುಗಳಾದವರು ಸ್ವರಾಜ್ಯಸಂಪಾದಿಸಿ ಬ್ರಾಹ್ಮಣೇತರರ ಹಿತಮಾಡುವರಂತೆ ! ಈರೀತಿ ನಿರರ್ಥಕ ಉಪದ್ವ್ಯಾಪಿಗಳಾದವರ ವಿಷಯದಲ್ಲಿ ನಾವು ಮೇಲೆ ತೋರಿಸಿದಂತೆ ಇದೇ ಕಾಂಗ್ರೆಸಿನಲ್ಲಿ ಮೊದಲನೇ ಠರಾವನ್ನು ಪಾಸಮಾಡಕೊಳ್ಳದಿದ್ದಲ್ಲಿ ಆ ಕಾಂಗ್ರೆಸಿಗೆ ಸೇರಿದ ಬ್ರಾಹ್ಮಣೇತರ ಪುಢಾರಿಗಳು ಬ್ರಾಹ್ಮಣೇತರರ ಹಿತವಿಘಾತಕರೆಂದು ನಾವು ನಿಸ್ಸಂದೇಹವಾಗಿ ಹೇಳದೇ ಇರಲಾರೆವು. ಈ ಬ್ರಾಹ್ಮಣರು ಇತರರ ವಿಷಯವಾಗಿ ಬರೆದಿರುವ ಹಾಗೂ ಬರೆಯುತ್ತಿರುವ ಅಪಮಾನಕರಗಳಾದ ದುರ್ವಿಚಾರಗಳನ್ನು ಹಿಂದಕ್ಕೆ ನಾವು "ಬ್ರಾಹ್ಮಣವೈಚಿತ್ರ್ಯ" "ಬ್ರಾಹ್ಮಣೇಷ್ಟಭಾವ, ಹಾಗೂ ಬ್ರಾಹ್ಮಣಕೌಟಿಲ್ಯ, ಇವೇ ಮೊದಲಾದ ಲೇಖಗಳಲ್ಲಿ ತೋರಿಸಿದ್ದರೂ ಈ ಲೇಖದಲ್ಲಿಯೂ ಸ್ವಲ್ಪ ಮಟ್ಟಿಗೆ ತೋರಿಸುವೆವು. ಇದರಿಂದ ಬ್ರಾಹ್ಮಣರು ತಮ್ಮ ಕೆಲಸಸಾಧಿಸಲೋಸುಗ ಎಂಥಾ ಸವಿಮಾತುಗಳನ್ನು ಮೇಲೆ ಆಡಿ ತೋರಿಸುವರು ಹಾಗೂ ಅಂತರಂಗದಲ್ಲಿ ಇವರ ಸ್ಥಿತಿಹ್ಯಾಗಿರುತ್ತದೆಂಬುವುದು ಗೊತ್ತಾಗುವುದು.

ಇದು ಕಲಿಯುಗವಂತೆ. ಈ ಕಲಿಯುಗದಲ್ಲಿ ಆದಿ, ಅಂತ, ಅಂದರೆ ಬ್ರಾಹ್ಮಣ, ಶೂದ್ರ ಎಂಬೆರಡೇ ಜಾತಿಗಳು ಉಳಿಯುವುವೆಂದು ತಮ್ಮ ಶಾಸ್ತ್ರದಲ್ಲಿ ಬರೆದುಕೊಂಡಿರುವರು. ಇವರ ಈ ವಿಚಾರದಂತೆ ಬ್ರಾಹ್ಮಣರನ್ನು ಬಿಟ್ಟು ಇತರರು ಯಾರೇ ಇರಲಿ ಅವರು ಶೂದ್ರರಂತೆ, ಅರ್ಥಾತ್ ಬ್ರಾಹ್ಮಣಜಾತಿಕ ಸರ್ವರೂ ಅಂದರೆ ಬ್ರಾಹ್ಮಣರ ಮನೆಯ ತಾಯಿ ತಂಗಿ ಮೊದಲಾದ ಹೆಣ್ಣುಮಕ್ಕಳೂ ಹಾಗೂ ಇತರ ಎಲ್ಲಾ ಜಾತಿಯವರೂ ಇವರ ಪಾಲಿಗೆ ಶೂದ್ರರು. ಇನ್ನು ಶೂದ್ರರೆನಿಸಿಕೊಳ್ಳುವವರಾದವರ ವಿಷಯದಲ್ಲಿ "ಸಂಸ್ಕಾರಕೌಸ್ತುಭ" ವೆಂಬ ಸಂಸ್ಕೃತಪುಸ್ತಕದಲ್ಲಿ "ಅಮಂತ್ರಿಕಾತುಕಾರ್ಯೇಯಂ ಸ್ತ್ರೀಣಾಮಾವೃದಶೇಷತಃ" ಸಂಸ್ಕಾರ ಕೌಸ್ತುಭ, ಪಾನು ೧೧೫; ಇವೇ ಮೊದಲಾದವುಗಳು ಮನುಸ್ಮೃತಿವಾಕ್ಯಗಳಂತೆಂತಲೂ ಹಾಗೂ ಕೆಲವು ಪಾರಿಜಾತವೆಂಬ ಗ್ರಂಥದ ಆಧಾರಗಳನ್ನು ತೋರಿಸಿ "ಏವಂಚಸ್ತ್ರೀಣಾಮಮಂತ್ರಕ ಹೋಮಾದ್ಯನುಷ್ಠಾನಮೇವೋಚಿತಮಿತಿಪ್ರತಿಭಾತಿ" ಎಂಬದಾಗಿ ಸ್ತ್ರೀಯರ ವಿಷಯದಲ್ಲಿ ಯಾವದೇ ಕರ್ಮಗಳನ್ನು ಮಾಡಿದರೂ ಮಂತ್ರೋಚ್ಚಾರಣವಿಲ್ಲದೇ ಮಾಡಬೇಕೆಂದು ನಿರ್ಧರಿಸಿ ಹೇಳಿರುವನು. ಇದರಂತೆ ಸಾಯಣಾಚಾರ್ಯನು ವೇದಭಾಷ್ಯದ ಉಪೋದ್ಘಾತಪ್ರಕರಣದಲ್ಲಿ "ಸ್ತ್ರೀಶೂದ್ರೌನಾಧೀಯೀತಾಂ" ಎಂದು ಸ್ತ್ರೀಯರೂ ಶೂದ್ರರ ಸಮಾನರಾದ್ದರಿಂದ ಈರ್ವರೂ ಏನೊಂದು ವಿದ್ಯಾಧ್ಯಯನಮಾಡಬಾರದೆಂದು ಸ್ಪಷ್ಟವಾಗಿ ತಮ್ಮ ಮನೆಯ ಸ್ತ್ರೀಯರನ್ನುಕೂಡ ಲಕ್ಷಿಸದೇ ಸ್ತ್ರೀಯರು ವಿದ್ಯಾಬುದ್ಧಿಗಳನ್ನು ಕಲಿಯಬಾರದೆಂದು ನಿಷೇಧಿಸಿರುವನು. ಈ ಸಾಯಣಾದಿಗಳಿಗೆ ಇಷ್ಟು ಬುದ್ಧಿಯು ತೋಚಲಿಲ್ಲವಲ್ಲಾ ! ಯಾವ ಸ್ತ್ರೀಜಾತಿಯಿಂದಲೇ ನಾವು ಜನಿಸಿ ಅವರ ಗರ್ಭವಾಸದಲ್ಲಿ ಏನೊಂದು ಸಂಸ್ಕಾರಗಳಾಗುವವೋ ಅವೆಲ್ಲಾ ಆ ಗರ್ಭವಾಸಿಗಳಾದ ನಮಗೆ ಪೂರ್ಣಸಂಬಂಧಿಸುವವು. ಯಾಕೆಂದರೆ "ಆಹಾರಾಚಾರಚೇಷ್ಟಾಭಿರ್ಯಾದೃಶೀಭಿಃ ಸಮನ್ವಿತೌ | ಸ್ತ್ರೀಪುಂಸೌ ಸಮುಪೇಯಾತಾಂ ತಯೋಃ ಪುತ್ರೋಪಿತಾದೃಶಃ" || ಎಂಬುದಾಗಿ ಸುಶ್ರುತ ಮುನಿಗಳು ಮಕ್ಕಳ ಗುಣ ದುರ್ಗುಣಾದಿಗಳಿಗೆ ತಂದೆ ತಾಯಿಗಳೇ ಬಾಧ್ಯರೆಂದು ಹೇಳುವರೀತಿಯನ್ನಾದರೂ ಲಕ್ಷ್ಯಕ್ಕೆತಂದು, ಯಾವ ಗರ್ಭದಲ್ಲಿ ವಾಸಿಸುವರೋ, ಹಾಗೂ ಯಾವ ಸ್ತ್ರೀಜಾತಿಯು ಮಾಡಿದ ಅನ್ನವನ್ನು ಉಣ್ಣುವರೋ, ಹಾಗೂ ಯಾವ ಸ್ತ್ರೀಜಾತಿಯ ಸಹವಾಸದಲ್ಲಿರುವರೋ ಅಂಥಾ ಸ್ತ್ರೀಜಾತಿಯನ್ನೇ ಸಂಸ್ಕಾರ, ವಿದ್ಯಾಬುದ್ಧಿಗಳಿಂದ ರಹಿತಮಾಡಿಟ್ಟುಕೊಂಡಲ್ಲಿ, ಹಾಗೂ ಅವರ ಸಂಪರ್ಕದಲ್ಲಿದ್ದು ಅವರಿಂದ ಮಾಡಿದ ಅನ್ನಪಾನಾದಿಗಳನ್ನು ಸ್ವೀಕರಿಸುವವರಾದವರಿಗೆ, ಹಾಗೂ ಅಂಥಾ ಸಂಸ್ಕಾರಹೀನರಾದ ಶೂದ್ರಸ್ತ್ರೀಜಾತಿಯಲ್ಲಿ ಜನಿಸಿದವರಾದವರಿಗೆ ಬ್ರಾಹ್ಮಣರೆಂದು ಹ್ಯಾಗೆ ಕರೆಯತಕ್ಕದ್ದು ? ಹಾಗೂ ಇವರು ಬ್ರಾಹ್ಮಣರು ಹ್ಯಾಗಾಗುವರು ? ಅಂದಮೇಲೆ ಇಂಥಾ ತಮ್ಮ ತಾಯಿ, ತಂಗಿ, ಹೆಂಡಿರು, ಹೆಣ್ಣುಮಕ್ಕಳು, ಇವರಲ್ಲಿಯೇ ಶೂದ್ರತ್ವವನ್ನು ತೋರಿಸುವವರು ಪರರಲ್ಲಿ [illegible] ತೋರಿಸುವರಂತೆ ! ಹಾಗೂ ಪರರಿಗೆ [illegible] !!

ಇನ್ನು ಇದರಂತೆ "[illegible]" [illegible]

ಗಳೊಡನೆ ಕೋಹಾಟಿಗೆ ಹೋಗಿ ಉಭಯ ಪಂಗಡದವರಿಗೂ ಹಿತಬೋಧೆಯನ್ನುಮಾಡಿ ಪರಸ್ಪರ ಸಖ್ಯವನ್ನುಂಟುಮಾಡಬೇಕೆಂಬುದ್ದೇಶದಿಂದ ಅಲ್ಲಿಗೆ ಹೋಗಿಬರಲು ಅವಕಾಶವನ್ನು ಕೊಡಬೇಕೆಂದು ವೈಸ್‌ರಾಯರನ್ನು ಕೇಳಿದ್ದರು. ಆದರೆ ಆರೀತಿ ಹೋಗಿಬರಲು ವೈಸ್‌ರಾಯರು ಅಪ್ಪಣೆಯನ್ನು ಕೊಡಲಿಲ್ಲವು.

ಈಗ ಭರತಖಂಡದ ವೈಸ್‌ರಾಯರಾಗಿರುವ ಲಾರ್ಡ್ ರೀಡಿಂಗ್‌ರವರಿಗೆ ಈಗತಾನೆ 65 ನೆಯ ವರ್ಷ ವಯಸ್ಸು ತುಂಬಿತು. ಇವರು ಲಾಯಡ್‌ಜಾರ್ಜ್, ಬೊನಾರ್‌ಲಾ ಬಾಲ್ಡ್ವಿನ್ ಮತ್ತು ರಾಮ್ಸೆ ಮೆಕ್ಡೊನಾಲ್ಡ್‌ರವರ ಮಂತ್ರಿತ್ವಕಾಲಗಳಿಂದಲೂ ಕೆಲಸಮಾಡಿಕೊಂಡಿರುವರಲ್ಲದೆ ಮುಂದೆ ಬರುವ ಬಾಲ್ಡ್ವಿನ್ರ ರಾಜ್ಯಾಧಿಕಾರ ಕಾಲದಲ್ಲೂ ಕೆಲಸಮಾಡಿಕೊಂಡಿರುವುದಾಗಿ ನಿರೀಕ್ಷಿಸಲ್ಪಟ್ಟಿದೆ. ಇಷ್ಟೊಂದು ಮಂತ್ರಿಗಳ ಕಾಲದಲ್ಲಿ ಲಾರ್ಡ್ ರೀಡಿಂಗ್‌ರವರ ಹಾಗೆ ಹಿಂದೆ ಯಾರೂ ವೈಸ್‌ರಾಯುದ್ಯೋಗದಲ್ಲಿರಲಿಲ್ಲವಂತೆ.

ಸಿಲೋನಿನ ಪೋಲೀಸು ಕೋರ್ಟಿನಲ್ಲಿ ಒಬ್ಬ ಸಾಕ್ಷಿಗಾರನು ವಿಚಾರಣೆಯ ಕಾಲದಲ್ಲಿ ಎಲೆಅಡಿಕೆಯನ್ನು ಹಾಕಿಕೊಂಡು ಅಗಿಯುತ್ತಿದ್ದುದು ತಪ್ಪೆಂದೂ, ಅದರಿಂದ ಕೋರ್ಟಿಗೆ ಅಪಮಾನಮಾಡಿದಂತಾಯಿತೆಂದೂ ನ್ಯಾಯಾಧೀಶನು ಕೋಪಿಸಿಕೊಳ್ಳಲು ಆ ಸಾಕ್ಷಿಗಾರನು ತಂಬುಲವನ್ನು ಕೂಡಲೆ ನುಂಗಿಬಿಟ್ಟನಾದರೂ ಕ್ಷಮಿಸದೆ ಅರ್ಥದಂಡವನ್ನು ವಿಧಿಸಿದನು. ಅದರಮೇಲೆ ಆ ಸಾಕ್ಷಿಗಾರನು ಹೈಕೋರ್ಟಿಗೆ ಅಪೀಲುಮಾಡಿಕೊಂಡಿರುವಲ್ಲಿ, ಆ ಸಾಕ್ಷಿಗಾರನು ವಾಡಿಕೆಯಂತೆ ತಾಂಬೂಲವನ್ನು ಹಾಕಿಕೊಂಡು ಸೇವಿಸುತ್ತಿದ್ದನಲ್ಲದೆ ಕೋರ್ಟಿಗೆ ಅಪಮಾನಪಡಿಸಬೇಕೆಂದಲ್ಲವೆಂದು ತೀರ್ಮಾನಿಸಿ ಅರ್ಥದಂಡವನ್ನು ತಳ್ಳುಪಡಿ ಮಾಡಿದರು.

ಸುಬ್ರಹ್ಮಣ್ಯಅಯ್ಯರ್ ಎಂಬಾತನು ತನ್ನ ಜೀವನಾಂಶಕ್ಕಾಗಿ ತಿಂಗಳಿಗೆ 35 ರೂಪಾಯಿನಂತೆ ಸರ್ಕಾರಿ ಯುದ್ಯೋಗದಲ್ಲಿರುವ ತನ್ನ ಮಗನಿಂದ ಕೊಡಿಸಬೇಕೆಂದು ಕಲ್ಲಿಕೋಟೆಯ ಮುನ್ಸಿಫ್ ಕೋರ್ಟಿನಲ್ಲಿ ದಾವಾಮಾಡಿ ಡಿಕ್ರಿಪಡೆದುಕೊಂಡಿದ್ದನು. ಅದರಮೇಲೆ, ತನ್ನ ತಂದೆಗೆ ಕೆಲ ತಿಂಗಳ ಕೆಳಗೆ ಒಂದು ಮಗುವು ಹುಟ್ಟಿರುವ ಪ್ರಯುಕ್ತ ಅವನು ಸಂಪಾದಿಸಲಾರದ ಮುದಕನಾಗಿರುವುದಿಲ್ಲವಾದುದರಿಂದಲೂ, ಆತನು ತನ್ನ ಯೌವನಕಾಲದಲ್ಲಿ ವೃದ್ಧನಾದ ತನ್ನ ತಂದೆಯನ್ನು ಸಾಕಲಾರದೆ ಅಟ್ಟಿಬಿಟ್ಟಿದ್ದನಾದುದರಿಂದಲೂ ಈಗ ತನ್ನ ತಂದೆಯು ಜೀವನಾಂಶ ಪಡೆಯಲು ಅರ್ಹನಾಗಿಲ್ಲವೆಂದು ಸಬ್ ಕೋರ್ಟಿನಲ್ಲಿ ಅಪೀಲನ್ನು ಮಾಡಿರುವನು. ಈ ವಿಚಿತ್ರವಿವಾದದ ಫಲಿತಾಂಶವನ್ನು ಬಹು ಜನರು ಅತಿಕುತೂಹಲದಿಂದ ನಿರೀಕ್ಷಿಸಿಕೊಂಡಿರುವರು.

ತಿರುಚಿನಾಪಳ್ಳಿ ಮತ್ತು ತಂಜಾವೂರು ಡಿಸ್ಟ್ರಿಕ್ಟುಗಳಲ್ಲಿ ಸುಮಾರು 1000 ಎಕರೆಗಳ ತರೀಜಮೀನುಗಳಮೇಲೆ ಕಳೆದ ಮಹಾಪ್ರವಾಹದ ದೆಸೆಯಿಂದ ಕೆಲವು ಅಂಗುಲಗಳಿಂದ 5-6 ಅಡಿಗಳವರೆಗೂ ಮರಳುಬಿದ್ದಿರುತ್ತದೆ. ಇದನ್ನು ಮದ್ರಾಸ್ ಸರ್ಕಾರದವರು ತಾವೇ ತೆಗೆಯಿಸಿಕೊಡಲು ಸಾಧ್ಯವಿಲ್ಲವೆಂದೂ, ಜಮೀನ್ದಾರರಿಗೆ ಶೇಕಡ 6 ರಂತೆ ಕಡಿಮೆಬಡ್ಡಿಗೆ ಸಾಲವನ್ನು ಕೊಡುವುವೆಂದೂ ತಿಳಿಸಿರುತ್ತಾರೆ. ಜಮೀನ್ದಾರರು ಈ ಭಾಗದಲ್ಲಿ ಪರಸ್ಪರ ಸಹಾಯಸಂಘಗಳನ್ನು ಏರ್ಪಡಿಸಿಕೊಂಡು, ಸರ್ಕಾರದವರು ಉಚಿತವಾಗಿ ತಮಗೆ ಕೊಡುವ ಟ್ರಾಂವೇಗಳ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯ ಆಫೀಸರ ಸಹಾಯದಿಂದ ಮರಳನ್ನು ತೆಗೆದುಹಾಕಬಹುದೆಂದೂ, ಜಮೀನಿನಮೇಲೆ ಎಷ್ಟು ಆಳವಾಗಿ ಮರಳು ಬಿದ್ದಿದೆ ಎಂಬುದನ್ನು ಸರ್ಕಾರದವರೇ ಸರ್ವೇಮಾಡಿಸಿ ಕೊಡುವರೆಂದೂ ಪ್ರಕಟವಾಗಿದೆ.

ಬರ್ಮಾದಲ್ಲಿ ಇಬ್ಬರು ಹುಡುಗರು ಒಂದು ಬಾವಿ ಬಳಿಯಿದ್ದ ಮರದರೆಂಬೆಯನ್ನು ಹಿಡಿದುಕೊಂಡು ಆಡುತ್ತಿರುವಾಗ್ಗೆ ಒಬ್ಬ ಹುಡುಗನು ನೀರುತುಂಬಿದ್ದ ಬಾವಿಯೊಳಕ್ಕೆ ಬಿದ್ದುಬಿಡಲು ಜತೆಹುಡುಗನು ಕೂಡಲೆ ಬಿದ್ದುಹೋಗಿದ್ದ ಹುಡುಗನು ತನ್ನ ಕಾಲನ್ನು ಹಿಡಿದುಕೊಂಡು ಬರಲೆಂದು ನೀರಿನೊಳಕ್ಕೆ ಬಿಟ್ಟು ತಾನು ಮರದರೆಂಬೆಗೆ ನೇತುಹಾಕಿಕೊಂಡಿದ್ದನು. ಆ ಬಿದ್ದುಹೋದ ಹುಡುಗನು ಮೇಲಿದ್ದವನ ಕಾಲನ್ನು ಹಿಡಿದುಕೊಂಡು ಮೇಲಕ್ಕೆ ಬರಲು ಪ್ರಯತ್ನಿಸುತ್ತಿರುವಾಗ್ಗೆ ರೆಂಬೆಯನ್ನು ಹಿಡಿದುಕೊಂಡಿದ್ದ ಹುಡುಗನು ಕೈಸೋತುಹೋಗಿ ರೆಂಬೆಯ ಪಟ್ಟನ್ನು ಬಿಟ್ಟುಬಿಡಲು ಇಬ್ಬರೂ ನೀರಿನೊಳಗೆ ಮುಳುಗಿಹೋಗುತ್ತಿರುವುದನ್ನು ಸಮೀಪದಲ್ಲಿದ್ದ 10 ವರ್ಷದ ಒಬ್ಬ ಹುಡುಗಿಯು ಆ ಹುಡುಗರಿಬ್ಬರನ್ನೂ ಹಿಡಿದುಕೊಂಡು ಮೇಲಕ್ಕೆಳದು ಬದುಕಿಸಿದಳು. ಅಲ್ಲಿಯ ಡೆಪ್ಯುಟಿಕಮಿಷನರು ಈ ವಿಷಯವನ್ನು ತಿಳಿದು ಪ್ರಾಣರಕ್ಷಣೆಗಾಗಿ ಪ್ರಯತ್ನಿಸಿದ ಹುಡುಗನಿಗೂ ಇಬ್ಬರ ಪ್ರಾಣವನ್ನುಳಿಸಿದ ಆ ಹುಡುಗಿಗೂ ಸುವರ್ಣಪದಕಗಳನ್ನು ಬಹುಮಾನಿಸಿ ಅವರ ಸಾಹಸಬುದ್ಧಿಯನ್ನು ಕೊಂಡಾಡಿದರು.

ಮದ್ರಾಸು ಮ್ಯುನಿಸಿಪಲ್ ಪ್ರೆಸಿಡೆಂಟರ ಉದ್ಯೋಗದವಧಿಯು ಕಳೆದ ಅಕ್ಟೋಬರ್ ತಿಂಗಳಲ್ಲಿ ಪೂರೈಸಿದುದರಿಂದ ಹೊಸದಾಗಿ ಪ್ರೆಸಿಡೆಂಟರಾಗಿ ಚುನಾಯಿಸಲ್ಪಡಲು ಡಾಕ್ಟರ್ ಸಿ. ನಟೇಶಮೊದಲಿಯಾರರು ಮತ್ತು ಖಾನ್‌ಬಹದ್ದೂರ್ ಉಸ್ಮಾನ್‌ಸಾಹೇಬರವರು ಉಮೇದುವಾರರಾಗಿ ನಿಂತಿದ್ದರು. ಆದರೆ ಮಹಮ್ಮದೀಯರು ತಮ್ಮ ಜನರೊಬ್ಬರು ಈವೇಳೆ ಪ್ರೆಸಿಡೆಂಟರಾಗಬೇಕೆಂದು ಬಹಳ ಕುತೂಹಲರಾಗಿದ್ದುದರಮೇಲೆ ಡಾ|| ನಟೇಶಮೊದಲಿಯಾರರು ತಮ್ಮ ಅಭ್ಯರ್ಥಿತ್ವದಿಂದ ನಿವೃತ್ತರಾಗಲಾಗಿ, ಕಳೆದ ತಾ|| 4ರಲ್ಲಿ ನಡೆದ ಚುನಾವಣೆಯ ವೋಟಿಂಗಿನಲ್ಲಿ ಖಾನ್‌ಬಹದ್ದೂರ್ ಸಾಹೇಬರು ನಿರಾಯಾಸದಿಂದ ಆರಿಸಲ್ಪಟ್ಟರು. ಇದರಿಂದ ಮದ್ರಾಸಿನ ಮಹಮ್ಮದೀಯರ ಮನಸ್ಸಿಗೆ ಪರಮಾನಂದವಾಗಿದೆ. ಇದೇ ರೀತಿ ಎಲ್ಲ ಕಡೆಯಲ್ಲೂ, ಎಲ್ಲ ಪ್ರಕರಣದಲ್ಲೂ ಉಭಯಜನಾಂಗದವರೂ ಸೌಹಾರ್ದದಿಂದ ನಡೆದುಕೊಂಡಲ್ಲಿ ಮಹಾತ್ಮಾಗಾಂಧಿಯವರ ಅಭೀಷ್ಟವಾದ ಮತ್ತು ಸ್ವರಾಜ್ಯಸಾಧಕವಾದ ಹಿಂದೂಮಹಮ್ಮದೀಯರ ಸಖ್ಯವು ಬಹುಸುಲಭವಾಗಿ ಕುದುರುವುದರಲ್ಲಿ ಅಭ್ಯಂತರವಿಲ್ಲವು.

ಬರುವ ಡಿಸೆಂಬರ್ ತಿಂಗಳಲ್ಲಿ ಭಾರತರಾಷ್ಟ್ರೀಯಮಹಾಸಭೆಯು ಬೆಳಗಾಮಿನಲ್ಲಿ ನಡೆಯಬೇಕಾಗಿ ನಿರ್ಧರವಾಗಿರುವುದಷ್ಟೆ? ಈ ಮಹಾಸಭಾಮಂಟಪವು ಅಲ್ಲಿಯ ರೈಲ್ವೆಸ್ಟೇಷನ್ನಿನಿಂದ 1 ಮೈಲಿ ದೂರದಲ್ಲಿರುವ 80 ಎಕರೆ ಪ್ರದೇಶದಲ್ಲಿ ರಚಿಸಲ್ಪಟ್ಟು ಆ ಮಂಟಪ ಪ್ರದೇಶವು ವಿಜಯನಗರವೆಂದು ನಾಮಕರಣಮಾಡಲ್ಪಡುವುದು. ಈ ಪ್ರದೇಶದಲ್ಲೇ ರೈಲುಮಾರ್ಗವು ಹಾದುಹೋಗಿರುವುದರಿಂದ, ಸಭೆಗೆ ಬರತಕ್ಕ ಪ್ರಯಾಣಿಕರ ಸೌಕರ್ಯಕ್ಕಾಗಿ ಬಂಡಿಯು ಅಲ್ಲಿ ನಿಲ್ಲುವಂತೇರ್ಪಡಿಸಲು ರೈಲ್ವೆಯಧಿಕಾರಿಗಳೊಪ್ಪಿರುವರಂತೆ. ಪ್ರೇಕ್ಷಕರು ಸಭಾಪ್ರವೇಶಕ್ಕೆ 30 ರೂ. ಯನ್ನೂ ವಾಸದ ಬಾಡಿಗೆಗೆ 4 ರೂ. ಯನ್ನೂ ಕೊಡಬೇಕಾಗಿಯೂ, ಪ್ರತಿನಿಧಿಗಳೂ ಸ್ವಾಗತಮಂಡಳದ ಮೆಂಬರುಗಳೂ ಇಳಿದುಕೊಳ್ಳಲು 3 ಕೊಠಡಿಗಳೂ, ಒಂದು ಅಡಿಗೆಮನೆ ಮತ್ತು ಒಂದು ಸ್ನಾನದಮನೆ ಇರತಕ್ಕ ವಸತಿಗಳಿಗೆ ಪ್ರತಿಯೊಬ್ಬರೂ 50 ರೂ. ಯನ್ನೂ ಒಂದುಹೊತ್ತಿನ ಊಟಕ್ಕೆ 1 ರೂ. ಯನ್ನೂ ಕೊಡಬೇಕಾಗಿ ಗೊತ್ತುಮಾಡಲ್ಪಟ್ಟಿದೆ. ಪ್ರೇಕ್ಷಕರು ಪ್ರವೇಶಧನವನ್ನು ಈ ತಿಂಗಳ ಕಡೆಯೊಳಗೆ ಕಳುಹಿಸಿಕೊಡಬೇಕಾಗಿ ಕೋರಲ್ಪಟ್ಟಿದ್ದಾರೆ. ಈ ರಾಷ್ಟ್ರೀಯ ಮಹಾಸಭೆಯು ನೆರೆಯುವಕಾಲದಲ್ಲೇ ವೈದ್ಯ, ಸಂಗೀತ ಮೊದಲಾದವುಗಳ ಮಹಾಸಭೆಗಳೂ ನಡೆಸಲ್ಪಡುವುವಾಗಿರುವುವು.

ವಿದೇಶದ ವೃತ್ತಾಂತಗಳು

ಈಸಲ ಅಮೆರಿಕೆಯಲ್ಲಿ 1,30,00,000 ಬೇಲು ಹತ್ತಿಯು ಉತ್ಪನ್ನವಾಗುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಈ ನವೆಂಬರ್ ತಾ|| 4 ರಲ್ಲಿ ಅಮೇರಿಕೆಯ ನ್ಯೂಯೋರ್ಕ್‌ನ ರೈಲುಬಂಡಿಯು ಒಂದು ಮೋಟಾರುಬಂಡಿಗೆ ತಾಕುಬಡಿದು 11 ಜನರು ಮಡಿದರು; ನಾಲ್ವರು ಪೆಟ್ಟನ್ನು ತಿಂದಿರುತ್ತಾರೆ. ಸತ್ತವರ ಶರೀರಗಳು ವಿಕಾರವಾಗಿರುವುದರಿಂದ ಅವರ ವಸ್ತ್ರಾಭರಣಗಳಿಂದ ಗುರ್ತಿಸಲ್ಪಡಬೇಕಾಗಿರುವುವಂತೆ. ಬದುಕಿರುವವರೂ ಬಹಳ ಅಪಾಯಸ್ಥಿತಿಯಲ್ಲಿರುವರು. ಈ ಅನಾಹುತದ ಕಾರಣವು ಮಾತ್ರ ಈವರೆಗೂ ಗೊತ್ತಾಗಿಲ್ಲವು.

ಚಿಕಾಗೋಪಟ್ಟಣದ ವಿಶ್ವವಿದ್ಯಾಲಯದಲ್ಲಿ ನೇತ್ರವೈದ್ಯನಾಗಿರುವ ಥಿಯೋಡರ್ ಎಂಬಾತನು ಕಪ್ಪೆ ಮತ್ತು ಇಲಿಗಳ ಕಣ್ಣುಗುಡ್ಡೆಯ ನರಗಳನ್ನು ಕತ್ತರಿಸಿಹಾಕಿ ಅವುಗಳ ಕಣ್ಣುಕಾಣದಂತೆಮಾಡಿ ಅನಂತರ ಗುಡ್ಡೆಗಳನ್ನು ಬದಲಾಯಿಸಿ 4-8 ವಾರಗಳಲ್ಲಿ ಕಣ್ಣುಕಾಣುವಂತೆ ಮಾಡುವುದರಮೂಲಕ ಪರೀಕ್ಷಿಸಿ ಪ್ರಾಣಿಗಳ ನೇತ್ರದೃಷ್ಟಿಯು ಹೋದನಂತರ ಅದನ್ನು ಪುನಹ ಬರಮಾಡುವುದು ಸಾಧ್ಯವೆಂದು ಹೇಳಿರುತ್ತಾನೆ.

ಜರ್ಮನರ ನೋಟುಗಳ ಬೆಲೆಯು ಕವಡೆಗಿನ್ನ ಕಡಿಮೆಯಾಗಿದ್ದವೇಳೆಯಲ್ಲಿ ಅಮೇರಿಕೆ ಮೊದಲಾದ ಪರರಾಜ್ಯದವರು ಬೇಕಾದಷ್ಟನ್ನು ಕೊಂಡುಕೊಂಡಿದ್ದರು. ಅವರಲ್ಲಿ ಲಕ್ಷ ಮಾರ್ಕುಗಳ 50 ನೋಟುಗಳನ್ನು ಒಂದೊಂದಕ್ಕೆ 1 ಸವರನ್ನಿನಂತೆ ಅಂದರೆ ¾ ರೂ. ಗೆ ಕೊಂಡುಕೊಂಡಿದ್ದ ಒಬ್ಬ ಫೋಚಿಯನು ಒಂದೊಂದು ನೋಟಿಗೆ 450 ಸವರನ್ನಿನಂತೆ ಅಂದರೆ 337 ರೂ. ಗಳಂತೆಯೂ, ಮತ್ತೊಬ್ಬ ರೈತನು ಲಕ್ಷ ಮಾರ್ಕಿನ ನೋಟು 1 ಕ್ಕೆ 9 ರೂ ನಂತೆ ಕೊಂಡಿದ್ದ ನೋಟುಗಳನ್ನು ಒಂದಕ್ಕೆ 3750 ರೂ. ನಂತೆಯೂ ವಿಕ್ರಯಿಸಿರುವರು.

ಅಮೇರಿಕೆಗೆ ಸೇರಿದ ನ್ಯೂಯಾರ್ಕಿನಲ್ಲಿ ಓರ್ವ ತಲೆಬಡುಕ ಕಳ್ಳನು ಒಂದುದಿವಸ ಒಬ್ಬ ಶ್ರೀಮಂತನ ಮನೆಗೆ ನುಗ್ಗಿ, ನವರತ್ನಾಭರಣವನ್ನೂ ದ್ರವ್ಯವನ್ನೂ ಕೊಡದಿದ್ದಲ್ಲಿ ತನ್ನ ಕೈಯಲ್ಲಿರುವ ತುಪಾಕಿಯಿಂದ ಸುಟ್ಟುಬಿಡುತ್ತೇನೆಂದು ಆ ಶ್ರೀಮಂತನ ಮಗನನ್ನೂ ಕಾವಲಿದ್ದ ಸೇವಕನನ್ನೂ ಹೆದರಿಸಿದುದರಮೇಲೆ, ಶ್ರೀಮಂತ ಕುಮಾರನು ಆಭರಣಗಳನ್ನು ತೆಗೆಯುತ್ತಿರುವಾಗ್ಗೆ, ಆ ಕಳ್ಳನು ಕೈಯಲ್ಲಿಹಿಡಿದಿದ್ದ ತುಪಾಕಿಯನ್ನು ಅಜಾಗರೂಕತೆಯಿಂದ ತಿರುಗಿಸುತ್ತಿರುವಲ್ಲಿ ಆ ತುಪಾಕಿಯು ಹಾರಿ ಕಳ್ಳನಿಗೆ ತಗಲಿದುದರಿಂದ ಕೆಳಗೆಬಿದ್ದುಬಿಟ್ಟನು. ಆ ಕೂಡಲೆ ಅವನನ್ನು ಮನೆಯವರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಸಾಗಿಸಿದರು.

ಇಂಗ್ಲೆಂಡಿನ್ನಲ್ಲಿ ಒಂದು ರೈಲ್ವೆ ಪ್ರಯಾಣಿಕರ ಬಂಡಿಯು ಹೋಗುತ್ತಿರುವಾಗ್ಗೆ ಇಂಜಿನ್ನು ಕಂಬಿಯನ್ನು ಬಿಟ್ಟು ಕೆಳಗೆ ಬಿದ್ದುದರಿಂದ ಬಂಡಿಯು ಮಗುಚಿಕೊಂಡು ಪ್ರಯಾಣಿಕರಲ್ಲಿ 12 ಜನರು ಸತ್ತರು ಮತ್ತು ಬಹಳ ಜನರಿಗೆ ಪೆಟ್ಟುಬಿದ್ದಿತು. ರಾತ್ರಿವೇಳೆಯಾಗಿದ್ದುದರಿಂದ ಮೃತರ ಶರೀರಗಳನ್ನು ಗುರ್ತಿಸಲ್ಪಡಲಾಗಲಿಲ್ಲವು. ಡ್ರೈವರೂ ಒಬ್ಬ ನೌಕಾಸೇನಾಧಿಪತಿಯೂ ಸತ್ತುಹೋದರು. ಒಬ್ಬನ ತಲೆಯು ಒಡೆದು ಹೋಯಿತು. ಇನ್ನೊಬ್ಬನಿಗೆ, ಕಾಲುಗಳು ಕತ್ತರಿಸಲ್ಪಡಬೇಕಾಗಿ ಬಂದಿತು. ಈ ಪ್ರಯಾಣಿಕರಲ್ಲಿ ಬಹುಜನರು ಲಂಕಷೈರಿನ ಪ್ರಮುಖವರ್ತಕರಾಗಿದ್ದರು. ಸಿಗ್ನಲ್ಲುಕೊಟ್ಟಮನುಷ್ಯನು ಎಲ್ಲಿಗೋ ತಲೆಮರಿಸಿಕೊಂಡು ಹೋಗಿರುವನು.

ಟ್ಯೂರಿನ್ ಎಂಬಲ್ಲಿ ಒಂದು ರೈಲ್ವೆ ಇಂಜನ್ನು ಬಂಡಿಗಳನ್ನು ಒಂದುಕಡೆಯಿಂದ ಮತ್ತೊಂದುಕಡೆಗೆ ತೆಗೆದುಕೊಂಡು ಹೋಗಿಬಿಡುತ್ತಿರುವಾಗ್ಗೆ, ಕೆಲ ಮೃಗಗಳನ್ನು ಕೂಡಿದ್ದ ಬಂಡಿಗೆ ತಾಕುಬಡಿಯಲು ಒಳಗಿದ್ದ ಒಂದು ಸಿಂಹ, 3 ಕರಡಿಗಳು, ಮತ್ತು ಒಂದು ಕಿರುಬ ಇಂತಿಷ್ಟು ತಪ್ಪಿಸಿಕೊಂಡು ಓಡಿಹೋದುವು. ಆದರೆ, ಸಿಂಹವು ಮಾತ್ರ ಪೆಟ್ಟನ್ನು ತಿಂದು ನಿಂತಿಬಿಟ್ಟುದರಿಂದ ಸೆರೆಹಿಡಿಯಲ್ಪಟ್ಟಿತು. ಕರಡಿಗಳು ಮಾರ್ಕೆಟ್ಟಿನ ಒಳಹೋಗಿನಿಂತುಕೊಳ್ಳಲು ಜನರು ಭಯಪಟ್ಟು ಚದರಿದರು. ಅವು ಅಲ್ಲಿ ತಮ್ಮ ಹಿಂಗಾಲುಗಳಮೇಲೆ ನಿಂತು ಕುಣಿಯುತ್ತಿರುವಾಗ್ಗೆ ಅವನ್ನು ಸಾಕಿದವನು ಒಂದು ಹಿಡಿದುಕೊಂಡನು. ಕಿರುಬವು ಒಂದು ಚರಂಡಿಯೊಳಗೆ ನುಗ್ಗಿದ್ದು ಸ್ವಲ್ಪಹೊತ್ತಿನಮೇಲೆ ಹಿಡಿಯಲ್ಪಟ್ಟಿತು.

ಬೇಸಾಯ.

ಸರ್ವಜ್ಞಕವಿಯು ಬೇಸಾಯದ ಬಗ್ಗೆ ಎಂಟು ವಚನಗಳನ್ನು ರಚಿಸಿರುವನು. ಅವು ನಮ್ಮ ಒಕ್ಕಲಿಗ ಬಾಂಧವರಿಗೆ ಒಳ್ಳೆಉಪದೇಶಪರವಾದವುಗಳಿರುವದರಿಂದ ಅವುಗಳನ್ನು ಸಂಗ್ರಹಿಸಿದ್ದೇವೆ. ಒಕ್ಕಲಿಗರು ಅವುಗಳನ್ನು ಚೆನ್ನಾಗಿ ಓದಬೇಕಾಗಿ ವಿನಂತಿ ಅದೆ.

ಕೋಟಿವಿದ್ಯೆಗಳಲ್ಲಿ ಮೇಟಿವಿದ್ಯೆ ಮೇಲು |
ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ |
ದಾಟವೇ ಕೆಡಗು ! ಸರ್ವಜ್ಞ ||೧||
ಎತ್ತಿವೈ ಹೂಡುವದು ಉತ್ತೊವೈ ಹರಗುವದು |
ಬಿತ್ತೊವೈ ಹರಗಿ ಕಳೆದೆಗೆದಾ ಬೆಳೆಯುತ |
ನೈತ್ರವಹುದು ! ಸರ್ವಜ್ಞ ||೨||
ಉತ್ತೊವೈ ಹರಗದೇ ಬಿತ್ತೊವೈ ನೋಡದೇ |
ಹೊತ್ತೇರಿ ಹೊಲಕೆ ಹೋದರೆ ಅವತನ್ನ |
ನೈತ್ರವಸುಡುವ ! ಸರ್ವಜ್ಞ ||೩||
ನಲ್ಲಿತ್ತಭಂಡಿ ಬಲವಿಲ್ಲದಾ ಆರಂಬ |
ಕಲ್ಲು ಕಳೆಗಳನು ಬಿಟ್ಟವ ಹೊಲದೊಳು |
ಹುಲ್ಲನೆ ಬೆಳೆವ ! ಸರ್ವಜ್ಞ ||೪||
ಹರಗದಾ ಉತ್ತಾಗಿ ಬರಡಾದ ಹಯನಾಗಿ |
ಹರಟಿಹೊಡೆಯುವ ಮಗನಾಗಿ ಹೊಲದಲ್ಲಿ |
ಕರಡ ಬೆಳದಿಹುದು ! ಸರ್ವಜ್ಞ ||೫||
ದಂಡು ಇಲ್ಲದ ಅರಸು ಕೊಂಡವಿಲ್ಲದ ಹೋಮ |
ಬಂಡಿಯಿಲ್ಲದನ ಬೇಸಾಯ ತಲೆಹೋದ |
ಮುಂಡದಂತಕ್ಕು ಸರ್ವಜ್ಞ ||೬||
ಹದಬೆದೆಯಲಾರಂಬ ಕದನದಲಿಕೂರಿಂದ |
ನದಿಯಹಾಯುವಲಿ ಹರುಗೋಲ ಮರೆದಾತ |
ವಿಧಿಯಬೈದೇನು ? ಸರ್ವಜ್ಞ ||೭||
ಬೆಕ್ಕುಮನೆಯೊಳುಲೇಸು ಮುಕ್ಕುಕಲ್ಲಿಗೇಲೆಸು |
ನಕ್ಕನಗಿಸುವಾ ನುಡಿಲೇಸು ಊರಿಗೆ |
ಒಕ್ಕಲಿಗಲೇಸು ! ಸರ್ವಜ್ಞ ||೮||

ಬಿ. ಬಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ತಿರಸ್ಕೃತಲೇಖಗಳು.

(1) ಓರ್ವಪ್ರಜಾಹಿತೈಷಿ ದೇವನಹಳ್ಳಿ—ಸ್ಥಳೀಯ ಪೋಲೀಸು ಅಧಿಕಾರಿಗಳಿಂದ ಪ್ರಜೆಗಳಿಗೆ ತೊಂದರೆಯಾಗಿರುತ್ತದೆಂಬಂಶವನ್ನು ಪೊ|| ಸೂಪರಿಂಟೆಂಡೆಂಟರಿಗಾಗಲಿ ಪೊ|| ಇ|| ಜನರಲ್‌ರವರಿಗೆ ಬರೆದುಕೊಳ್ಳತಕ್ಕದ್ದು ಉತ್ತಮವು.

ಕೃತಜ್ಞತೆ.

ಬೆಳಗಾವಿಯಲ್ಲಿ ಜರುಗುವ ಕಾಂಗ್ರೆಸಿಗಾಗಿ, ಹರಿಹರದಲ್ಲಿ ಪ್ರಾರಂಭಿಸಲ್ಪಡುವ ವಾಲಂಟೀಯರ್ಸ್ ಟ್ರೇನಿಂಗ್ ಕ್ಯಾಂಪಿಗೆ ಸಹಾಯಾರ್ಥವಾಗಿ ತಿಪಟೂರಿನ ಪ್ರಮುಖ ವ್ಯಾಪಾರಸ್ಥರಾದ ಶ್ರೀಯುತ ಹೆಚ್. ಚನ್ನಯ್ಯ ಸಿ. ಭಾಸ್ಕರಶೆಟ್ಟರವರು 10 ರೂ. ಗಳನ್ನೂ, ಶ್ರೀಯುತ ಮಗನ್‌ಲಾಲ್ ವೇಲ್‌ಚಂದ್‌ಸೇಟ್‌ರವರು ಹತ್ತು ರೂ. ಗಳನ್ನೂ, ಶ್ರೀಯುತ ಡಿ. ಎಸ್. ಮಲ್ಲಪ್ಪನವರು 3 ರೂ. ಗಳನ್ನೂ ಮತ್ತು ಶ್ರೀಯುತ ಡಿ. ರಾಜಗೋಪಾಲಾಚಾರ್ ಸ್ಟೇಷನ್ ಮಾಸ್ಟರವರು 5 ರೂ. ಗಳನ್ನೂ ಸಂತೋಷಪೂರ್ವಕವಾಗಿ ಕೊಟ್ಟದ್ದನ್ನು ವಿನಯಪೂರ್ವಕವಾಗಿ ಸ್ವೀಕರಿಸಿ ಈ ಮೂಲಕ ಸ್ವತಃ ಮುತುವರ್ಜಿವಹಿಸಿ ಕೊಡಿಸಿಕೊಟ್ಟ ಶ್ರೀಯುತ ಭಾಸ್ಕರಶೆಟ್ಟರವರಿಗೂ ಮತ್ತು ಮೇಲ್ಕಂಡ ಮಹನೀಯರುಗಳಿಗೂ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ.

ಎಂ. ಕೆ. ನಾಯಕ್.

ಶೆಟ್ಟಿಹಳ್ಳಿ ಸ್ಕೂಲಿನ ಕುಂದುಕೊರತೆ.

ಕಡೂರು ತಾ|| ಬಿದರೆ ಹೋಬಳಿ ಶೆಟ್ಟಿಹಳ್ಳಿಯಲ್ಲಿ 70-80 ಮನೆಗಳೂ 500 ಕ್ಕೆ ಮೇಲ್ಪಟ್ಟ ಪ್ರಜಾಸಂಖ್ಯೆಯೂ ಇರುತ್ತವೆ. ಇಲ್ಲಿ ಸ್ಕೂಲಿಗೆ ಹೋಗುವ ವಯಸ್ಸಿನ ಬಾಲಕ ಬಾಲಿಕೆಯರ ಸಂಖ್ಯೆಯು 100 ಕ್ಕೆ ಮೇಲ್ಪಟ್ಟಿರುವದಾದರೂ 10 ವರ್ಷದಿಂದಲೂ 43 ವಿದ್ಯಾರ್ಥಿಗಳು ಮಾತ್ರ ಓದುತ್ತಿದ್ದಾರೆ. ಇದು ಸರ್ಕಾರಿ ಸ್ಕೂಲಾಗಿಲ್ಲವಾದ್ದರಿಂದ ಸರಿಯಾದ ಮೇಷ್ಟರು ದೊರೆಯದೆ ಅಭಿವೃದ್ಧಿಗೆ ಅವಕಾಶವಿಲ್ಲದಿದೆ. ಹಾಲಿಯಿರುವ ಮಾಷ್ಟರು ಮ|| ಮುರಿಗಪ್ಪನವರು ಗಟ್ಟಿಗರಾಗಿದ್ದರೂ ಸರಿ ಸ್ಕೂಲುಗಳಲ್ಲಿ ದೊರೆಯುವಷ್ಟು ಸಂಬಳ ದೊರೆಯದೆ 7 ರೂ. ಮಾತ್ರ ಬರುತ್ತಿರುವದರಿಂದ ಉತ್ಸಾಹವಿಲ್ಲದಿರುತ್ತಾರೆ. ಈ ಸ್ಕೂಲನ್ನು ಸರ್ಕಾರಿಯಾಗಿ ಮಾಡಬೇಕೆಂದು ಗ್ರಾಮಸ್ಥರು ಅನೇಕವೇಳೆ ಪ್ರಾರ್ಥಿಸಿಕೊಂಡಾಗ್ಯೂ ಅವರಿಗಿನ್ನೂ ದಯೆ ಬರಲಿಲ್ಲ. ರೂ. 1 ಕ್ಕೆ 6 ಪೈಸಂತೆ ಸೆಸ್‌ಕೊಡಲು ಈ ಗ್ರಾಮಸ್ಥರು ಸಿದ್ಧರಾಗಿರುವರು. ಆದ್ದರಿಂದ ಇನ್ಸ್‌ಪೆಕ್ಟರ್ ಜನರಲ್‌ರವರು ಈ ಪ್ರಾರ್ಥನೆಯನ್ನು ತಮ್ಮ ಚಿತ್ತಕ್ಕೆ ತಂದುಕೊಂಡು ಇಲ್ಲಿಯ ಸ್ಕೂಲನ್ನು ಸರ್ಕಾರಿ ಸ್ಕೂಲಾಗಿ ಮಾಡಿಸಿಕೊಡಬೇಕೆಂದು ಬೇಡುತ್ತೇನೆ.

ವಿದ್ಯಾಭಿಮಾನಿ.

ದುಃಖವಾರ್ತೆಯು.

[illegible] ಸಂಸ್ಕೃತ ಪಾಠಶಾಲಾ[illegible] [illegible] ದೀಕ್ಷಾಸ್ತ್ರಿಗಳು ಕಾಲವಾದ ಇವರ ಧರ್ಮಪತ್ನಿಯವರಾದ ಶ್ರೀ|| [illegible]

ಮೃತರವರು ಕ್ಷಯರೋಗಪೀಡಿತರಾಗಿ ಶಾಂತ್ಯಾದಿ ಕರ್ಮಗಳಿಂದಲೂ, ಔಷಧ ಮೊದಲಾದ ಉಪಚಾರಗಳಿಂದಲೂ ಗುಣಹೊಂದದೆ ಇದೇ ಕಾರ್ತಿಕ ಶುದ್ಧ ೧ ರಲ್ಲಿ ತಮ್ಮ ಇಹಲೋಕದ ಯಾತ್ರೆಯನ್ನು ಪೂರೈಸಿದರು. ಇವರು ಸುಶೀಲರೂ, ಪತಿಭಕ್ತಿ ಪರಾಯಣೆಯರೂ, ದಯಾವಂತರೂ ವಿದ್ಯಾರ್ಥಿಗಳ ವಿಷಯದಲ್ಲಿ ಬಹಳ ಪ್ರೇಮವುಳ್ಳವರೂ ಇದ್ದರಲ್ಲದೆ, ಇಲ್ಲಿಯ "ಮಹಿಳಾಜ್ಞಾನಮಂದಿರ" ಕ್ಕೆ ಹೋಗಿ ಆ ಮಂದಿರದಲ್ಲಿ ಸ್ತ್ರೀಯರ ಉಪನ್ಯಾಸಗಳನ್ನೂ ಅವರ ನಾಗರೀಕತೆಯನ್ನೂ ನೋಡಿ ಬಹಳ ಸುಧಾರಿಸಿದವರಾಗಿದ್ದರು, ಅಲ್ಲದೆ ಆ ಸಂಘಕ್ಕೆ ತಮ್ಮ ಶಕ್ತ್ಯನುಸಾರ ಧನಸಹಾಯ ಮಾಡುತ್ತಿದ್ದರು. ಇವರು ವಿದ್ಯೆಯಲ್ಲಿ ಕನ್ನಡ ಮಹಾರಾಷ್ಟ್ರ ಭಾಷೆಗಳನ್ನು ಅರಿತಿದ್ದರಲ್ಲದೆ ಸಂಸ್ಕೃತವನ್ನು ಸಾಧಾರಣ ತಿಳಿದಿದ್ದರು. ಇವರಿಗೆ ಜಯದೇವನೆಂಬ ಒಬ್ಬನೇ ಮಗನಿರುವನು. ಇವರು ಚಿಕ್ಕವಯಸ್ಸಿನಲ್ಲಿಯೇ ಭೌತಿಕಶರೀರವನ್ನು ತ್ಯಜಿಸಿದ್ದಕ್ಕಾಗಿ ಅತ್ಯಂತ ಖೇದವಾಗುತ್ತದೆ. ಇವರ ಅಂತ್ಯಕಾಲದಲ್ಲಿ ಶ್ರೀ ಹುಕ್ಕೇರಿಶಿವಲಿಂಗಸ್ವಾಮಿಗಳು, ಕುಂಟೋಜಮಠದ ಶ್ರೀ ಚನ್ನವೀರಸ್ವಾಮಿಗಳು, ಸಂಸ್ಕೃತಪಾಠಶಾಲಾ ವಿದ್ಯಾರ್ಥಿಗಳು, ಊರೊಳಗಿನ ಮುಖ್ಯಸ್ಥರಾದ ರಾ|| ರಾ|| ಚನ್ನಬಸಪ್ಪ ಅಣ್ಣಾ ಮ.ಡಿ.ಕೆ, ರಾ|| ರಾ|| ಮಲ್ಲಿಕಾರ್ಜುನಪ್ಪ ಅಪ್ಪಾರಾವ್ ಪಾಟೀಲ ಮೊದಲಾದ ಪ್ರಮುಖರು ಇನ್ನೂ ಅನೇಕ ಭಕ್ತಜನರು ಮತ್ತು ವೇ|| ಮಲ್ಲಿಕಾರ್ಜುನಶಾಸ್ತ್ರಿಗಳು ಜೈನಾಪೂರ ಮೊದಲಾಗಿ ಅನೇಕ ಶಾಸ್ತ್ರಿಗಳೂ ಕೂಡಿದ್ದರು. ಅದೇ ದಿವಸ ರಾತ್ರಿ 8 ಘಂಟೆಗೆ ಇವರ ಸಮಾಧಿಕಾರ್ಯವನ್ನು ಯಥಾವಿಧಿಯಾಗಿ ಪೂರೈಸಿದರು. ಇವರ ಪತಿಗಳಾದ ವೇ|| ಪಂ|| ಶಾಸ್ತ್ರಿಗಳಿಗೂ ಇವರ ಚಿರಂಜೀವಿಗೂ ಪರಮಾತ್ಮನು ವಿಯೋಗ ದುಃಖಶಾಂತಿಯನ್ನೀಯಲೆಂದು ಕೋರುತ್ತೇನೆ.

ದುಃಖಭಾಗೀ ಎಸ್. ಎಂ. ಧಾರವಾಡ.

ಮಾಲೂರು ಟವ್ನ್ ಮ್ಯುನಿಸಿಪಲ್ ಕೌನ್ಸಿಲರ ಚುನಾವಣೆ.

ತಾ|| 30-9-24 ರಲ್ಲು ಈ ಟವ್ನ್ ಮ್ಯುನಿಸಿಪಾಲಿಟಿಯ ಕೌನ್ಸಿಲರ ಚುನಾವಣೆಯು ನಡೆಯಿತು. ಎಲೆಕ್ಷನ್ ಏರ್ಪಾಟನ್ನು ಅಮಲ್ದಾರ್‌ರವರು ಬಹುಮುತುವರ್ಜಿಯಿಂದ ಸಮರ್ಪಕವಾಗಿ ನಡೆಸಿದರು. ಹಿಂದಿನ ಎಲೆಕ್ಷನ್‌ಗಳಲ್ಲಿದ್ದಂತೆ ಈ ಸಾರಿ ಉಮೇದುವಾರರು ಯಾವ ಲೋಪವನ್ನೂ ಕಂಡುಹಿಡಿಯಲು ಸಾಧ್ಯವಾಗಲಿಲ್ಲವಾಗಿ ಎಲ್ಲಾ ಉಮೇದುವಾರರೂ ತಮ್ಮ ತಮ್ಮ ಪ್ರಾತಿನಿಧ್ಯವನ್ನು ಪಡೆಯಲು ಬಹು ಪೋಟಾಪೋಟಿಯಿಂದ ಓಟರುಗಳಲ್ಲಿ ಹೇಳಿಕೊಂಡು ಕೆಲಸಮಾಡಿರುತ್ತಾರೆ. ಹೀಗಿದ್ದಾಗ್ಯೂ, ಹನ್ನೊಂದು ಜನ ಉಮೇದುವಾರರಾಗಿ ಬಹು ಕಮ್ಮಿ ಸಂಖ್ಯೆ ಓಟುಗಳನ್ನು ಪಡೆದು ಅತೃಪ್ತರಾಗಿರುವರು. ಯೌವನಸ್ಥರೂ ವಿದ್ಯಾವಂತರೂ ಆದ 7 ಜನ ಹೊಸ ಉಮೇದುವಾರರ ಪೈಕಿ ಶ್ರದ್ಧಾಳುಗಳೂ ಪ್ರಜಾಸೇವೆಯಲ್ಲಿ ನಿರತರಾಗಲವಕಾಶವುಳ್ಳವರೂ, ಸ್ವದೇಶಾಭಿಮಾನಿಗಳೂ ನಿಸ್ಪೃಹರೂ ಆದ ಮೂವರನ್ನು ಹುಡುಕಿ ಬಹು ಎಚ್ಚರಿಕೆಯಿಂದಲೂ ದೂರದೃಷ್ಟಿಯಿಂದಲೂ ನಿರ್ದಾಕ್ಷಿಣ್ಯದಿಂದಲೂ ಓಟುಕೊಟ್ಟು ಚುನಾಯಿಸಿಕೊಂಡವರ ಪೈಕಿ ಮಠದ ಮೆ|| ಎಂ. ವಿ. ರುದ್ರಯ್ಯನವರು 99 ಓಟುಗಳನ್ನು ಪಡೆದು ಒಂದನೆಯವರಾಗಿಯೂ, ಮೆ|| ಮಹಮದಾಲಿಸಾಬ್ ಎರಡನೆಯವರಾಗಿಯೂ, ಮ|| ಲಕ್ಷ್ಮಣರಾವ್ ಜೋಡಿದಾರ್ರು ನಾಲ್ಕನೆಯವರಾಗಿಯೂ, ಹಳಬರ ಪೈಕಿ ಶೆಟ್ಟಿ ನಂಜುಂಡಪ್ಪನವರೂ ಜಯಶೀಲರಾಗಿರುತ್ತಾರೆ. ಹೊಸದಾಗಿ ಚುನಾಯಿಸಲ್ಪಟ್ಟವರ ಪೈಕಿ ಯಾರೂ ಸ್ವತಃ ಕಂಟ್ರಾಕ್ಟರುಗಳು ಆಗಿರದೆಯೂ ಕಂಟ್ರಾಕ್ಟರುಗಳಿಗೆ ಅಭಿಮಾನಕರ್ತರಲ್ಲದೆಯೂ ಇರುವುದರಿಂದ ಇನ್ನು ಮುಂದೆಯಾದರೂ ಮ್ಯುನಿಸಿಪಾಲಿಟಿಯ ಕೆಲಸಗಳೆಲ್ಲವೂ ನಡೆದು ಅಭಿವೃದ್ಧಿ ಆಗುವುದೆಂದೂ ರೇಟುಪೇಯರು ನಿಷ್ಪಕ್ಷಪಾತವಾಗಿ ಎಲೆಕ್ಟೆಡ್ ಮೆಂಬರುಗಳಂತೆ ಯೋಗ್ಯರಾದವರನ್ನೇ ನಾಮಿನೇಟ್ ಮಾಡಲು ಗೌರ್ನ್ಮೆಂಟಿಗೆ ಡೆಪ್ಯುಟಿಕಮಿಷನರು ಶಿಫಾರ್ಸು ಮಾಡುತ್ತಾರೆಂದೂ ನಂಬಿರುತ್ತಾರೆ. ಮತ್ತು ಈ ಮೆಂಬರುಗಳೆಲ್ಲರೂ ರೇಟುಪೇಯರುಗಳ ಹಿತಚಿಂತನೆಯಿಂದ ಮುತವರ್ಜಿವಹಿಸಿ ಕೆಲಸಮಾಡಿ ಅವರ ಕೃತಜ್ಞತೆಗೆ ಪಾತ್ರರಾಗುತ್ತಾರೆಂದು ನಂಬಿದೆ.

ಓಟರುಗಳ ಪ್ರತಿನಿಧಿ.

ಹುಲಗೇರಿಯ ವೀರಶೈವ ತರುಣರಿಗೆ ಎಚ್ಚರಿಕೆ.

ರಾಣಿಬನ್ನೂರ ತಾಲ್ಲೂಕು ಹುಲಗೇರಿಯು ವೀರಶೈವರ ದೊಡ್ಡ ವಸತಿಸ್ಥಳವಿದ್ದು ಇಲ್ಲಿಯ ಗ್ರಾಮ ಪಾಟೀಲರಾದ ಮಿ|| ಲಿಂಗನಗೌಡರು ಎರಡು ಸಾರೆ ತಾಲ್ಲೂಕು ಲೋಕಲ್ ಬೋರ್ಡು ಚುನಾವಣೆಯಲ್ಲಿ ಲೋಕಮತದಿಂದ ಮೆಂಬರಾಗಿ ಆರಿಸಲ್ಪಟ್ಟು ಬಂದು ಗ್ರಾಮಾಭಿವೃದ್ಧಿಯ ಕಾರ್ಯಗಳನ್ನು ಅಂದರೆ ಗ್ರಾಮಸ್ವಚ್ಛತೆ (ಸ್ಯಾನಿಟೇಶನ್) ಕುಡಿಯುವನೀರಿನ ಕೆರೆ ಭಾವಿ ಕಾಮಗಾರಿಯ ರಿಪೇರಿ ಮತ್ತು ಅಶ್ವತ್ಥಕಟ್ಟೆಗೋಸ್ಕರ ಒಂದು ಕುಡಿಯುವ ನೀರಿನ ಹೊಸಭಾವಿಯನ್ನು ಶ್ಯಾನಿಟೇಶನ್ ಮತ್ತು ಲೋಕಲ್ ಬೋರ್ಡಿನ ಮುಖಾಂತರ ಸಾವಿರಾರು ರೂಪಾಯಿನ ಖರ್ಚಿನ ಬಿಲ್ ಪಾಸುಮಾಡಿಸಿ ಕಟ್ಟಿಸಿಕೊಟ್ಟಿರುವದಲ್ಲದೆ ಬಡಬಗ್ಗರಿಗೆ ಪುಕ್ಕಟೆಯಾಗಿ ಔಷಧಗಳನ್ನು ಕೊಟ್ಟು ಪರೋಪಕಾರವನ್ನು ಮಾಡುತ್ತಿರುವದು ಸುಪ್ರಸಿದ್ಧವೇ ಸರಿ. ಹೋದವರ್ಷ ಈ ಗ್ರಾಮಕ್ಕೆ ದಾವಣಗೆರೆಯ ಶ್ರೀಮೃತ್ಯುಂಜಯ ಮಹಾಸ್ವಾಮಿಗಳವರು ದಯಮಾಡಿಸಿದಾಗ್ಗೆ ಇಂಥಾ ವೀರಶೈವರ ಅಭಿವೃದ್ಧಿ ಸ್ಥಳದಲ್ಲಿ ಒಂದು ವಾಚನಾಲಯವಿರುವದು ಅವಶ್ಯಕವೆಂದೂ, ಅದರಿಂದ ಅಶಿಕ್ಷಿತಬಾಂಧವರಿಗೂ ಸಾಧಾರಣ ಜ್ಞಾನೋದಯವಾಗಿ ಸಮಾಜಸೇವೆ ಮತ್ತು ದೇಶಸೇವೆ ಮಾಡತಕ್ಕ ಸ್ಫೂರ್ತಿ ಉತ್ಪನ್ನವಾಗುವದಲ್ಲದೆ ಪರಸ್ಪರ ಪ್ರೀತಿವಾತ್ಸಲ್ಯಗಳು ಬೆಳೆಯಲಿಕ್ಕೆ ಕಾರಣವಾಗುತ್ತದೆಂದೂಹಿಸಿ ಶ್ರೀಬಸವೇಶ್ವರ ವಾಚನಾಲಯವೆಂಬ ನಾಮಧೇಯದಿಂದ ನಡೆಯಲು ಸ್ಥಾಪಿಸಿ, ಸದರಿ ಪಾಟೀಲರನ್ನು ಆ ಸಂಸ್ಥೆಯ ಚೇರ್ಮನ್ನರಾಗಿರುವಂತೆ ಅನುಜ್ಞೆಯನ್ನಿತ್ತು ಭಕ್ತಮಂಡಲಿಯವರಿಂದ ವಾಗ್ದಾನವನ್ನು ತೆಗೆದುಕೊಂಡು ತೆರಳಿದರು. ಶ್ರೀಗಳವರಲ್ಲಿ ಬಹು ಆತುರವನ್ನು ತೋರಿಸಿದ ತರುಣರು ಮತ್ತು ವರ್ತಕ ಮಂಡಳಿಯವರು ಇದುವರೆಗೂ ತಮ್ಮ ವಾಗ್ದಾನದಂತೆ ಯಾವ ಕಾರ್ಯವನ್ನೂ ಪ್ರಾರಂಭಿಸದೆ ಸ್ವಾರ್ಥಪರರಾಗಿ ಸುಮ್ಮನೆ ಮೈಮರೆತು ಕುಳಿತಿರುವದನ್ನು ನೋಡಿ ತುಂಬಾ ವಿಷಾದಪಡಬೇಕಾಗಿದೆ. ಆದ್ದರಿಂದ ಕ್ಷುಲ್ಲಕ ವಿಷಯವಾಗಿ ಸ್ವಜಾತಿಯವರಲ್ಲಿ ಪಾರ್ಟಿಕಟ್ಟಿಕೊಂಡು ಸಾವಿರಾರು ರೂಪಾಯಿಗಳನ್ನು ಕೋರ್ಟುಕಚೇರಿಗಳಿಗಾಗಿ ಹಾಳುಮಾಡಿಕೊಳ್ಳದೆ ಸಮಾಜಸುಧಾರಣಾಸಂಘವನ್ನು ಏರ್ಪಡಿಸಿಕೊಂಡು ಸಮಾಜದಲ್ಲಿ ಐಕ್ಯತೆಯನ್ನುಂಟುಮಾಡಿ ಶ್ರೀಗಳವರಿಗೆ ಕೊಟ್ಟ ವಾಗ್ದಾನವನ್ನು ಕ್ಷಿಪ್ರದಲ್ಲಿ ಪೂರ್ಣಮಾಡಿ ಗುರುಗಳ ಆಶೀರ್ವಾದವನ್ನು ಪಡೆದು ಕೀರ್ತಿಪಾತ್ರರಾಗಬೇಕಾಗಿ ತರುಣ ವೀರಶೈವರಿಗೆ ನನ್ನ ಸವಿನಯಪ್ರಾರ್ಥನೆಯು.

ಓರ್ವ ಸಮಾಜಸೇವಕ.

ತಿಪಟೂರಿನ ವೀರಶೈವ ವಿದ್ಯಾರ್ಥಿನಿಲಯ.

ಶ್ರೀ ಸಿದ್ಧಹಳ್ಳಿ ಮಠದ ಶ್ರೀಗಳವರು ವಿದ್ಯಾರ್ಥಿನಿಲಯವನ್ನು ಕಟ್ಟಿಸಲು ಪ್ರಶಸ್ತವಾದ ಸ್ಥಳಬೇಕೆಂಬುದ್ದೇಶದಿಂದ ತಮ್ಮ ಮಠದ ಸರ್ವಾಧಿಕಾರಿಗಳಾದ ಆರ್. ಪಿ. ಸಂಗಪ್ಪನವರಿಂದ ತಿಪಟೂರ್ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟ್ ಸಾಹೇಬರವರ ಸನ್ನಿಧಿಗೆ ಅರ್ಜಿಯನ್ನು ಹಾಕಿಸಿದ್ದುದರಮೇಲೆ ತಾ|| 30-10-24ರಲ್ಲಿ ಸೇರಿದ್ದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಕೌನ್ಸಿಲರವರು ವಿದ್ಯಾರ್ಥಿನಿಲಯದ ಅಭಿವೃದ್ಧಿಯನ್ನು ಬಯಸಿ ಟವ್ನ್ ಬಡಾವಣೆಗಾಗಿ ನಿರ್ಣಯಿಸಲ್ಪಟ್ಟಿರುವ ಪ್ರದೇಶದಲ್ಲಿ ಯಾವಾಗ್ಯೂ ವಿದ್ಯಾರ್ಥಿಗಳ ಆರೋಗ್ಯದ ವಿಷಯದಲ್ಲಿ ಕೊರತೆಬಾರದಂತಿರುವ 4 ಬಂಗಾಲೆ ಸೈಟು 2 ಸುಪೀರಿಯರ್ ಸೈಟು ಅಂತೂ 6 ಸೈಟುಗಳನ್ನು ಕೊಡಬಹುದೆಂದು ಅದರ ಪೂರ್ವಕವಾಗಿ ತೋರಿಸಿದ ಅಭಿಪ್ರಾಯವನ್ನು ಪ್ರೆಸಿಡೆಂಟ್ ಸಾಹೇಬರವರು ಬಾಲಕರಮೇಲಿರುವ ತಮ್ಮ ನಿಜವಾದ ಪ್ರೇಮವನ್ನು ಅನುಮೋದನೆಯ ಮೂಲಕವಾಗಿ ವ್ಯಕ್ತಗೊಳಿಸಿದರು. ಮರುದಿವಸವೇ ಬೆಂಗಳೂರ್ ಚಿಕ್ಕಪೇಟೆ [illegible] ದಂಗಡಿ ಕಂಬಿಮಲ್ಲಣ್ಣನವರ ಮ|| ಸಿದ್ಧರಾಮಣ್ಣನವರು ಪ್ರೆಸಿಡೆಂಟರಿಂದ ಉಚಿತಾರ್ಥವಾಗಿ ದಯಪಾಲಿಸಲ್ಪಟ್ಟ ಸೈಟಿನಲ್ಲಿ ಸಾವಿರಾರು ರೂಪಾಯಿಗಳ ಖರ್ಚಿನಿಂದ 1 ಗಾಲಿಯನ್ನು ಹಾಕುವ ಕಾಂಡ್ ಭಾವಿಯನ್ನು ತೆಗಿಸಿಕೊಡುವುದಾಗಿಯೂ ಮತ್ತು ಗುಬ್ಬಿ ತಾಲ್ಲೂಕ್ ದಂಡಿನಶಿವರದ ಸಂಭುತು ಹುಲ್ಲೇಕೆರೆ ಗ್ರಾಮದ ಮ|| ಮೈಸೂರ್ ಸಿದ್ಧರಾಮಪ್ಪನವರು ವಿದ್ಯಾರ್ಥಿನಿಲಯದ ಪಾಕೋಪಯೋಗಿಯಾದ 2 ದೊಡ್ಡ ಹಂಡೆಗಳನ್ನು ದಾನರೂಪವಾಗಿ ಕೊಟ್ಟರಲ್ಲದೆ ಕಟ್ಟಡಕ್ಕಾಗಿ (400) ನಾಲ್ಕು ನೂರು ರೂಪಾಯಿಗಳ ಸಾಗುವಾನೀ ತೀರುಗಳನ್ನು ಕೊಡಿಸುವುದಾಗಿಯೂ ಒಪ್ಪಿ ತಮ್ಮ ಉದಾರಭಕ್ತಿಯನ್ನು ಶ್ರೀಗಳವರ ಸನ್ನಿಧಿಯಲ್ಲಿ ಪ್ರದರ್ಶಿಸಿದರು. ತಿಪಟೂರ್ ತಾಲ್ಲೂಕ್ ಹಿಂಡಿಸ್ಗೆರೆ ಗ್ರಾಮದ ಹೆಂಚಿನ ಕಾರ್ಖಾನೆ ಪ್ರೊಪ್ರೈಟರ್ ಮ|| ಕಾಮಶೆಟ್ಟರವರು 2000 ಎರಡು ಸಾವಿರ ಮಿಷನ್ ಹೆಂಚುಗಳನ್ನು ಕೊಡುತ್ತೇವೆಂಬದಾಗಿ ವಾಗ್ದಾನಮಾಡಿರುತ್ತಾರೆ. ಪ್ರೆಸಿಡೆಂಟರವರೂ ಕೌನ್ಸಿಲರವರೂ ಸೈಟುಗಳನ್ನು ಉಚಿತವಾಗಿ ದಯಪಾಲಿಸಿದುದಕ್ಕಾಗಿ ನಾನು ವಿನಯಪೂರ್ವಕವಾಗಿ ಅವರಿಗೆ ವಂದನೆಯನ್ನು ಸಮರ್ಪಿಸುತ್ತೇನೆ. ಸಮಾಜಾಭಿವೃದ್ಧಿಯ ವಿಷಯದಲ್ಲಿ ಮೇಲ್ಕಂಡ ಮಹನೀಯರು ತಮಗಿರುವ ಉದಾರಮನಸ್ಸನ್ನು ಪ್ರಕಟಿಸಿದುದಕ್ಕಾಗಿ ಇವರಿಗೆ ಶ್ರೇಯೋಭಿವೃದ್ಧಿಯನ್ನುಂಟುಮಾಡಲೆಂದು ಜಗದೀಶ್ವರನಾದ ಪರಮೇಶ್ವರನನ್ನು ಬೇಡಿಕೊಳ್ಳುತ್ತೇನೆ.

ವೀರಶೈವ ವಿದ್ಯಾರ್ಥಿನಿಲಯದ ಮೇನೇಜರ್
ಕೆ. ಎಂ. ಸಿದ್ಧರಾಮಪ್ಪಶಾಸ್ತ್ರಿ.

ಪ್ರಾಚೀನ ಮತ್ತು ಆಧುನಿಕ ಭಾರತಮಹಿಳೆಯರೂ ಪಾಶ್ಚಿಮಾತ್ಯಶಿಕ್ಷಣ ಪ್ರಭಾವವೂ.

ಈ ನಮ್ಮ ಭರತಖಂಡವು ಅತಿ ಪ್ರಾಚೀನಕಾಲದಿಂದಲೂ ಸುಧಾರಿಸಿದ ರಾಷ್ಟ್ರಗಳಲ್ಲೊಂದಾಗಿ ಪ್ರಸಿದ್ಧಿಯನ್ನು ಹೊಂದಿದ್ದು ಇತಿಹಾಸಪ್ರಸಿದ್ಧವದೆ. ಯಾವ ಆಧುನಿಕ ಸುಧಾರಿಸಿದ ಪಾಶ್ಚಿಮಾತ್ಯ ದೇಶಗಳು ತೀರ ಹೀನದೆಶೆಯಲ್ಲಿದ್ದವೋ ಆ ಕಾಲದಲ್ಲಿ ಭಾರತಮಾತೆಯ ಉದರದಲ್ಲಿ ಮಹಾಮಹಾವಿದ್ವನ್ಮಣಿಗಳಾದ ಪತಿವ್ರತಾಮಹಿಳೆಯರು ಜನಿಸಿ ಪಾಪಭೀರುಗಳಾಗಿ ಪತಿವ್ರತಾಧರ್ಮದಿಂದ ನಡೆದು ಲೋಕಪೂಜ್ಯರಾಗಿ ಹೋದರೋ ಅಂಥವರ ಹೆಸರುಗಳು ಈವತ್ತಿನವರೆಗೆ ಅಜರಾಮರವಾಗಿ ಹಿಂದೂದೇಶದ ಯಾವತ್ತು ಭಾಷೆಗಳಲ್ಲಿ ಗದ್ಯಪದ್ಯಕಥಾರೂಪವಾಗಿ ಕಂಗೊಳಿಸುತ್ತಿವೆ. ಆಗಿನ ಕಾಲದಲ್ಲಿ ಸ್ತ್ರೀಯರಿಗೆ ವಿದ್ಯಾವ್ಯಾಸಂಗಮಾಡಲಿಕ್ಕೆ ಈಗಿನಂತೆ ಸ್ಕೂಲ್ ಕಾಲೇಜುಗಳೂ, ವಿಶ್ರಾಂತಿಗೃಹಗಳೂ, ಕ್ಲಬ್ಬುಗಳೂ ಇರದಿದ್ದರೂ ಅವರು ಈಗಿನವರಿಗಿಂತಲೂ ಪ್ರತಿಯೊಂದು ಶಾಸ್ತ್ರಗಳಲ್ಲಿಯೂ, ಕಲೆಗಳಲ್ಲಿಯೂ ಮಿಗಿಲಾಗಿದ್ದರೆಂದು ಕಂಡುಬರುತ್ತದೆ. ಯಾಕಂದರೆ ಆಗಿನಕಾಲದಲ್ಲಿ ಸ್ತ್ರೀಯರಿಗೆ ಈಗಿನಂತೆ ಬರೆ ಇಂದ್ರಜಾಲ, ಮಹೇಂದ್ರಜಾಲ ಮೋಹಕ ಶಿಕ್ಷಣವನ್ನು ಕೊಡದೆ ಇಹಪರಕ್ಕೆ ಸಾಧನಗಳಾದ ವಿಷಯಗಳನ್ನು ಅಂದರೆ ಪಾಕಶಾಸ್ತ್ರ, ಆರೋಗ್ಯಶಾಸ್ತ್ರ, ನೀತಿಶಾಸ್ತ್ರ, ಪತಿವ್ರತಾಧರ್ಮ ಮೊದಲಾದ ಸ್ತ್ರೀಯರಿಗೆ ಉಪಯುಕ್ತವಾದ ವಿಷಯಗಳನ್ನು ಕಲಿಸುತ್ತಿದ್ದರು. ಇದರಿಂದ ಅವರು, ತಾವು ಯಾರು ತಮ್ಮ ಕರ್ತವ್ಯವೇನು, ತಮಗೂ ಪುರುಷರಿಗೂ ಭೇದವೇನು ? ಎಂಬದನ್ನರಿತು ನೀತಿವಂತರಾಗಿ ಈ ಸಂಸಾರವೆಂಬ ನಾಟಕರೂಪವಾದ ರಥವನ್ನು ನಡಿಸಲಿಕ್ಕೆ ತಮ್ಮ ಪುರುಷರಿಗೆ ಸಹಾಯಕರಾಗಿ ಪತಿಭಕ್ತಿ, ದೈವಭಕ್ತಿಯುತರಾಗಿ ನಡೆದು ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಮೋಕ್ಷವನ್ನೂ ಪಡೆಯಲರ್ಹತೆಯುಳ್ಳವರಾಗಿರುತ್ತಿದ್ದರು. ಇಂಥ ಸಚ್ಛೀಲೆಯರಾದ ಸಾಧ್ವಿಮಣಿಗಳ ಪಾತಿವ್ರತ್ಯಪ್ರಭಾವದಿಂದ ದೇಶದಲ್ಲಿ ಕಾಲಕ್ಕೆ ತಕ್ಕ ಮಳೆಬೆಳೆಗಳಾಗಿ ಸುಖಸಂಪತ್ತುಗಳು ಹೆಚ್ಚಿ ಯಾವ ರೋಗಾದಿಗಳಿಗೂ ಆಸ್ಪದವಿಲ್ಲದೆ ಪೂರ್ಣಾಯುಗಳಾಗಿ ಜೀವಿಸುತ್ತಿದ್ದರು. ಆದರೆ ಈಗಿನ ಕಾಲದಲ್ಲಾದರೋ ಪಾಶ್ಚಿಮಾತ್ಯರ ಶಿಕ್ಷಣದಿಂದ ಸ್ತ್ರೀಯರು ಸ್ವಾತಂತ್ರ್ಯವೆಂಬ ವಾತಾವರಣದಲ್ಲಿ ಶಿಲ್ಕಿ ತಮ್ಮ ಸನಾತನವಾದ ಆರ್ಯಧರ್ಮವನ್ನು ಬಿಟ್ಟುಗೊಟ್ಟು ಪುರುಷರಂತೆ ಸ್ವಚ್ಛಂದವೃತ್ತಿಯಿಂದ ನಡೆಯತೊಡಗಿದ್ದಾರೆ. ಪುರುಷರೆಂದರೆ ಇವರಿಗೆ ಗಣನೆಯೇ ಇಲ್ಲ. ಇವರು ಸಂಪಾದಿಸುವ ಮೋಹಕ ಯಕ್ಷಿಣಿ ವಿದ್ಯೆಯು ಕೇವಲ ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವದರಲ್ಲಿರುತ್ತದೆಯೇ ಹೊರತು ಅದರಿಂದ ಪುರುಷರಿಗೆ ಯಾವತರದ ಸಹಾಯವಾಗದೆ ಮತ್ತಷ್ಟು ಕಷ್ಟಕ್ಕೆ ಗುರಿಯಾಗಬೇಕಾಗುವದು. ಹೆಂಡತಿಗಿಂತ ಗಂಡನು ವಿದ್ಯೆಯಲ್ಲಿ ಸ್ವಲ್ಪ ಹಿಂದೆ ಇದ್ದರೆ ತೀರಿತು ಅವನ ಸರ್ವಸ್ವಾತಂತ್ರ್ಯವು ಮಣ್ಣುಪಾಲಾದಂತೆಯೇ ತಿಳಿಯತಕ್ಕದ್ದು. ಅವನು ಇವರಮೇಲೆ ಯಾವತರದ ಅಧಿಕಾರವನ್ನು ಮಾಡಲಾಗದು. ಅವರು ನಾಟಕ, ಸಿನೇಮಾ, ವಾಕಿಂಗ್ ಮೊದಲಾದ ಕಡೆಗಳಲ್ಲಿ ಹೋದರೂ ಕೇಳಬಾರದು. ಅಡಿಗೆ ಮಾಡದಿದ್ದರೆ ಆಳಿನಿಂದ ಮಾಡಿಸಬೇಕು. ಅದಕ್ಕೆ ಶಕ್ತಿಯಿಲ್ಲದಿದ್ದರೆ ತಾನಾದರೂ ಮಾಡಬೇಕು. ಅದು ರುಚಿಯಾಗಿರದಿದ್ದರೆ ಬೇರೆ ಹೋಟ್ಲಿನಿಂದ ತಂದುಕೊಟ್ಟು ಆ ಮೇಡಂಸಾಹೇಬರು ಉಂಡನಂತರ ಉಳಿದರೆ ಹಿಂದಿನಿಂದ ತಾನು ಊಟಮಾಡಬೇಕು. ಈ ಪ್ರಕಾರ ಸತಿಸೇವಾತತ್ಪರನಾಗಿದ್ದರೆ ಸರಿ, ಇದರಲ್ಲೇನಾದರೂ ತಪ್ಪಿನಡೆದರೆ (Remarriage) ಎರಡನೇ ವಿವಾಹಕ್ಕೆ ಪ್ರಾರಂಭವಾಗುವದು. ಶಿವ ಶಿವ ! ಪುರುಷರಿಗೆ ಎಂಥ ಗತಿ ಬಂದಿತು ? ಯಾವ ಕೈಹಿಡಿದು ಲಗ್ನವಾದ ಗಂಡನು ಪ್ರತ್ಯಕ್ಷದೇವಸಮಾನವೆಂದು ಹೇಳುವ ಆರ್ಯರ ಪೂರ್ವದ ಶಾಸ್ತ್ರಗಳು ಎಲ್ಲಿ ಹೋದುವು ? ಕೇವಲ ಅನಿತ್ಯವಾದ ಈ ಮಾಯಾ ಸಂಸಾರವನ್ನು ನಿತ್ಯವೆಂದು ಭಾವಿಸಿ ವ್ಯರ್ಥವಾಗಿ ಅಧೋಗತಿಗೆ ಹೋಗಲು ನಮ್ಮ ಭಾರತ ಭಗಿನಿಯರು ಪ್ರಯತ್ನಿಸುವದನ್ನು ನೋಡಿ ತುಂಬಾ ವಿಷಾದಪಡಬೇಕಾಗಿದೆ. ಯಾವ ಭಾರತಮಾತೆಯ ಹೃದಯದಲ್ಲಿ ಸಚ್ಛೀಲೆಯರಾದ ಪತಿವ್ರತಾಶಿರೋಮಣಿಗಳುದಯಿಸಿ ಇಡೀ ಜಗತ್ತಿಗೇ ವಂದ್ಯರಾಗಿ ಹೋದರೋ ಅಂಥ ದುರ್ದೈವೀ ಮಾತೆಯ ಹೊಟ್ಟೆಯಲ್ಲಿ ಪಾಶ್ಚಿಮಾತ್ಯ ವಿದ್ಯಾಸ್ವಾತಂತ್ರ್ಯ ಪ್ರಭಾವದಿಂದ ಪತಿನಿಂದಾಪರರಾದ ಕನ್ಯಾರತ್ನಗಳು ಉದಯವಾದದ್ದು ಕಲಿಕಾಲ ಪ್ರಾಬಲ್ಯವಲ್ಲವೇ ? ಧನ್ಯ ಧನ್ಯ ! ಕಲಿಮಹಾರಾಜನೇ, ನೀನೇ ಧನ್ಯನು !! ನೀನೇ ನಿಷ್ಪಕ್ಷಪಾತಿಯು !!! ಯಾಕಂದರೆ ಇಲ್ಲಿಯವರೆಗೆ ಪುರುಷರು ಸ್ವಾತಂತ್ರ್ಯವನ್ನು ಅನುಭವಿಸಿದ್ದು ಇನ್ನು ಮೇಲೆ ಅದರ ಸರದಿಯು ಸ್ತ್ರೀಯರಿಗೆ ಬರತಕ್ಕದ್ದಾದಪ್ರಯುಕ್ತ ನ್ಯಾಯದೃಷ್ಟಿಯಿಂದ ವಿಚಾರಿಸಿಕೊಡುವದಕ್ಕಾಗಿ ಭೂಲೋಕಕ್ಕೆ ಬಂದಿರುತ್ತೀ. ಆ ಪ್ರಕಾರ ತೀವ್ರವಾಗಿ ಅವರಿಗೆ ಯಾವತ್ತು ಸ್ವಾತಂತ್ರ್ಯವನ್ನು ಕೊಡಿಸಿ ಅಬಲೆಯರೆಂಬ ಕಳಂಕವನ್ನು ದೂರಮಾಡಿ ಪ್ರಬಲೆಯರೆಂಬ ಬಿರುದನ್ನು ಕೊಟ್ಟು "ಸ್ತ್ರೀಣಾಂಸ್ವಾತಂತ್ರ್ಯಮರ್ಹತಿ" ಎಂಬ ಮನುವಿನ ಸಕಲ ಪಾಠವಾದ ಶ್ಲೋಕವನ್ನು ತಿದ್ದಿಸಿ ಆ ಸುಧಾರಿತ ಸ್ತ್ರೀಸಮಾಜದಿಂದ ಕೊಡಲ್ಪಡುವ ಹಾರ ಸಂಮಾನಾದಿಗಳನ್ನು ಸ್ವೀಕರಿಸಿ ನನ್ನ ಮನಸ್ಸನ್ನು ಸಂತೋಷಪಡಿಸಬೇಕಾಗಿ [illegible] ಬೇಡುತ್ತೇನೆ.

ಓರ್ವ [illegible].

ಬ್ರಾಹ್ಮಣೇತ್ಯೈಕ್ಯವು.

(ಲೇಖಕ,—ಸ್ವಾಮಿ ವಿರೂಪಾಕ್ಷ ಒಡೆಯರ್ ಪ್ರೊಫೇಸರ್,
ಸಂಸ್ಕೃತಕಾಲೇಜ, ಇಂದೋರ.)

ಸಧ್ಯಕ್ಕೆ ನಮ್ಮ ಕರ್ನಾಟಕದಲ್ಲಿ ನಮ್ಮ ಕರ್ನಾಟಕೀಯರ ಸುಯೋಗದಿಂದ ಸಮಸ್ತ ಮಾನವಪ್ರಾಣಿಗಳ ಹಿತಚಿಂತನೆಯನ್ನು ಮಾಡುವ ಸಮಸ್ತ ಭಾರತೀಯರ ಮಹಾಸಭೆಯು (ಕಾಂಗ್ರೆಸ್) ಕೂಡುವ ಸಮಯವು ಇದೇ ಡಿಶಂಬರದಲ್ಲಿ ಪ್ರಾಪ್ತವಾಗಿದ್ದು ಇಂಥಾ ಸುಸಂಧಿಯನ್ನು ಕರ್ನಾಟಕದೇಶೀಯರು ಎಂದೂ ಕಳೆಕೊಳ್ಳದೆ ತಮ್ಮ ಹಿತಾಹಿತಗಳನ್ನು ಸಮಸ್ತ ಭಾರತೀಯಪ್ರಮುಖರ ಮುಂದಿಡುವುದು ಅತಿ ಹಿತಕರವಾಗಿರುವುದು.

ಇನ್ನು ಒಂದಾನೊಂದು ವಿಶಿಷ್ಟಜಾತಿಯಾದ ಬ್ರಾಹ್ಮಣರಿಂದ ಬ್ರಾಹ್ಮಣೇತರರೆಂಬುವವರು ಹೆಜ್ಜೆಹೆಜ್ಜೆಗೂ ಹೊಂದುತ್ತಿರುವ ಅಪಮಾನ, ಅನ್ಯಾಯ, ಅನುತ್ಕರ್ಷಾದಿಗಳನ್ನು ಉತ್ತರದೇಶೀಯ ಪುಢಾರಿಗಳ ಎದುರಿನಲ್ಲಿ ತಂದು ಅದರಲ್ಲಿಯೂ ಈ ಕರ್ನಾಟಕೀಯ ಬ್ರಾಹ್ಮಣರು ಸ್ವಾರ್ಥೈಕಪರರಾಗಿ ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ, ರಾಜಕೀಯ ಮೊದಲಾದ ಸಮಸ್ತ ವಿಷಯಗಳಲ್ಲಿ ಮಾಡುತ್ತಿರುವ ದುರ್ಬುದ್ಧಿಯ ಜುಲುಮೆಯನ್ನು ಬೈಲಿಗೆ ತಂದು ತೋರಿಸುವ ಪ್ರಯತ್ನಮಾಡುವುದು ಬ್ರಾಹ್ಮಣೇತರರ ಹಿತಕಾಂಕ್ಷಿಯೆನಿಸಿದ ಪ್ರತಿ ಒಬ್ಬ ಮನುಷ್ಯನ ಕರ್ತವ್ಯವಾಗಿರುವುದು. ಇದರಂತೆಯೇ ಈ ಬ್ರಾಹ್ಮಣರ ದುರ್ಬುದ್ಧಿಯನ್ನು ಹೋಗಲಾಡಿಸಲೋಸುಗ ಇದೇ ಕಾಂಗ್ರೇಸಿನಲ್ಲಿ ಈ ಬ್ರಾಹ್ಮಣಜಾತಿಯವರು ಪರರ ವಿಷಯದಲ್ಲಿ ಮಾಡುತ್ತಿರುವ ಅನ್ಯಾಯಕ್ಕಾಗಿ "ನಿಷೇಧ" ಅಥವಾ "ನಿಂದಾವ್ಯಂಜಕ" ಠರಾವು ಪಾಸಮಾಡಲ್ಪಡಬೇಕೆಂತಲೂ, ಈ ಬ್ರಾಹ್ಮಣರು ತಮ್ಮ ದುರ್ಬುದ್ಧಿಯನ್ನು ಇಷ್ಟರಿಂದ ಲಜ್ಜಿತರಾಗಿ ಬಿಡದಿದ್ದರೆ ಮುಂದಿನ ಕಾಂಗ್ರೇಸಿನಲ್ಲಿ ಸಮಸ್ತ ಬ್ರಾಹ್ಮಣೇತರ ಹಿಂದೂಗಳೂ ಹಾಗೂ ಮುಸಲ್ಮಾನರೂ ಸಹ ಈ ಬ್ರಾಹ್ಮಣರೊಡನೆ "ಅಸಹಕಾರ" ವನ್ನು ಹೂಡಬಹುದೆಂದು ಠರಾವು ಪಾಸುಮಾಡಲ್ಪಡುವದೆಂತಲೂ ಅದರಂತೆ ನಿಯಮವನ್ನು ಮಾಡಬೇಕೆಂದು ಕಾಂಗ್ರೆಸಿಗೆ ಸೇರಿರುವ ಬ್ರಾಹ್ಮಣೇತರ ಪುಢಾರಿಗಳು ಹಟಹಿಡಿಯತಕ್ಕದು. ಈ ಕಾಂಗ್ರೇಸಿನಲ್ಲಿ ಈ ಠರಾವನ್ನು ತರುವುದಕ್ಕಾಗಿ ಬ್ರಾಹ್ಮಣರು ವಿರೋಧಿಸಿದಲ್ಲಿ ಬ್ರಾಹ್ಮಣೇತರರೆಂಬುವವರು ತಕ್ಷಣವೇ ಆ ಕಾಂಗ್ರೇಸಿನಿಂದ ಹೊರಗೆ ಹೊರಟುಬರತಕ್ಕದು ಯಾಕೆಂದರೆ—ಇದರಿಂದ ಅವರಿಗೆ ಸ್ವಲ್ಪ ನಾಚಿಗೆಬಂದು ಅವರು ತಮ್ಮ ಸ್ವಾರ್ಥೈಕ ಬುದ್ಧಿಯನ್ನು ಬಿಡಬಹುದೇಹೊರತು ಅನ್ಯಥಾ ಬಿಡಲಾರರು. ಇದುವರೆಗೂ ಬ್ರಾಹ್ಮಣೇತರರೆಂಬುವವರು ಈರೀತಿಯಾದ ಯಾವ ತೊಂದರೆ, ಅಪಮಾನಗಳನ್ನು ತರದೇ ಅವರು ಹೇಳಿದಂತೆ ಶಿರಬಾಗಿ ನಡಿಯುತ್ತ ಹೋದುದರಿಂದ ಅವರ ಉಪದ್ವ್ಯಾಪವು ಮಿತಿಮೀರಿಹೋಗಿರುವದು. ಹ್ಯಾಗೆಂದರೆ,—ಯಾವನೇ ಬ್ರಾಹ್ಮಣೇತರನು ತನ್ನ ಗುಡಿ, ಮನೆಗಳಲ್ಲಿ ದೇವಪೂಜಾದಿಗಳನ್ನು ಮಾಡುವುದರ ನಡುವೆ ಇವರ ದಲ್ಲಾಲಿಯು, ಲಗ್ನಾದಿಕಾರ್ಯಗಳಲ್ಲಿಯೂ ಇವರ ದಲ್ಲಾಲಿಯು, ಉತ್ಸವಾದಿಗಳಿಗೂ ಇವರ ಅಡ್ಡಿಯು, ಸಾರ್ವಜನಿಕ ದೇವರಮಂದಿರಗಳಲ್ಲಿ ದೇವದರ್ಶನಕ್ಕೂ ಪ್ರತಿಬಂಧವು, ಇಂಥಾ ಹಿತಶತ್ರುಗಳಾದಿವರು ಸ್ವರಾಜ್ಯಸಂಪಾದಿಸಿ ಬ್ರಾಹ್ಮಣೇತರರ ಹಿತಮಾಡುವರಂತೆ ! ಈರೀತಿ ನಿರರ್ಥಕ ಉಪದ್ವ್ಯಾಪಿಗಳಾದಿವರ ವಿಷಯದಲ್ಲಿ ನಾವು ಮೇಲೆ ತೋರಿಸಿದಂತೆ ಇದೇ ಕಾಂಗ್ರೇಸಿನಲ್ಲಿ ಮೊದಲನೇ ಠರಾವನ್ನು ಪಾಸಮಾಡಕೊಳ್ಳದಿದ್ದಲ್ಲಿ ಆ ಕಾಂಗ್ರೇಸಿಗೆ ಸೇರಿದ ಬ್ರಾಹ್ಮಣೇತರ ಪುಢಾರಿಗಳು ಬ್ರಾಹ್ಮಣೇತರರ ಹಿತವಿಘಾತಕರೆಂದು ನಾವು ನಿಸ್ಸಂದೇಹವಾಗಿ ಹೇಳದೇ ಇರಲಾರೆವು. ಈ ಬ್ರಾಹ್ಮಣರು ಇತರರ ವಿಷಯವಾಗಿ ಬರೆದಿರುವ ಹಾಗೂ ಬರೆಯುತ್ತಿರುವ ಅಪಮಾನಕರಗಳಾದ ದುರಾಚಾರಗಳನ್ನು ಹಿಂದಕ್ಕೆ ನಾವು "ಬ್ರಾಹ್ಮಣೀವೈಚಿತ್ರ್ಯ" "ಬ್ರಾಹ್ಮಣೀಸ್ವಭಾವ, ಹಾಗೂ ಬ್ರಾಹ್ಮಣೀಕೌಟಿಲ್ಯ, ಇವೇ ಮೊದಲಾದ ಲೇಖಗಳಲ್ಲಿ ತೋರಿಸಿದ್ದರೂ ಈ ಲೇಖದಲ್ಲಿಯೂ ಸ್ವಲ್ಪ ಮಟ್ಟಿಗೆ ತೋರಿಸುವೆವು. ಇದರಿಂದ ಬ್ರಾಹ್ಮಣರು ತಮ್ಮ ಕೆಲಸಸಾಧಿಸಲೋಸುಗ ಎಂಥಾ ಸವಿಮಾತುಗಳನ್ನು ಮೇಲೆ ಆಡಿ ತೋರಿಸುವರು ಹಾಗೂ ಅಂತರಂಗದಲ್ಲಿ ಇವರ ಸ್ಥಿತಿಹ್ಯಾಗಿರುತ್ತದೆಂಬುವುದು ಗೊತ್ತಾಗುವುದು.

ಇದು ಕಲಿಯುಗವಂತೆ. ಈ ಕಲಿಯುಗದಲ್ಲಿ ಆದಿ, ಅಂತ, ಅಂದರೆ ಬ್ರಾಹ್ಮಣ, ಶೂದ್ರ ಎಂಬೆರಡೇ ಜಾತಿಗಳು ಉಳಿಯುವುವೆಂದು ತಮ್ಮ ಶಾಸ್ತ್ರದಲ್ಲಿ ಬರೆದುಕೊಂಡಿರುವರು. ಇವರ ಈ ವಿಚಾರದಂತೆ ಬ್ರಾಹ್ಮಣರನ್ನು ಬಿಟ್ಟು ಇತರರು ಯಾರೇ ಇರಲಿ ಅವರು ಶೂದ್ರರಂತೆ, ಅರ್ಥಾತ್ ಬ್ರಾಹ್ಮಣಾತಿರಿಕ್ತ ಸರ್ವರೂ ಅಂದರೆ ಬ್ರಾಹ್ಮಣರ ಮನೆಯ ತಾಯಿ ತಂಗಿ ಮೊದಲಾದ ಹೆಣ್ಣುಮಕ್ಕಳೂ ಹಾಗೂ ಇತರ ಎಲ್ಲಾ ಜಾತಿಯವರೂ ಇವರ ಪಾಲಿಗೆ ಶೂದ್ರರು. ಇನ್ನು ಶೂದ್ರರೆನಿಸಿಕೊಳ್ಳುವವರಾದಿವರ ವಿಷಯದಲ್ಲಿ "ಸಂಸ್ಕಾರ ಕೌಸ್ತುಭ" ವೆಂಬ ಸಂಸ್ಕೃತಪುಸ್ತಕದಲ್ಲಿ "ಅಮಂತ್ರಿಕಾತುಕಾರ್ಯೇಯಂ ಸ್ತ್ರೀಣಾಮಾವೃದಶೇಷತಃ" ಸಂಸ್ಕಾರ ಕೌಸ್ತುಭ, ಪಾನು ೧೧೫ ; ಇವೇ ಮೊದಲಾದವುಗಳು ಮನುಸ್ಮೃತಿವಾಕ್ಯಗಳಂಟೆಂತಲೂ ಹಾಗೂ ಕೆಲವು ಪಾರಿಜಾತವೆಂಬ ಗ್ರಂಥದ ಆಧಾರಗಳನ್ನು ತೋರಿಸಿ "ಏವಂಚಸ್ತ್ರೀಣಾಮಮಂತ್ರಕಹೋಮಾದ್ಯನುಷ್ಠಾನಮೇವೋಚಿತಮಿತಿಪ್ರತಿಭಾತಿ" ಎಂಬದಾಗಿ ಸ್ತ್ರೀಯರ ವಿಷಯದಲ್ಲಿ ಯಾವದೇ ಕರ್ಮಗಳನ್ನು ಮಾಡಿದರೂ ಮಂತ್ರೋಚ್ಚಾರಣವಿಲ್ಲದೇ ಮಾಡಬೇಕೆಂದು ನಿರ್ಧರಿಸಿ ಹೇಳಿರುವನು. ಇದರಂತೆ ಸಾಯಣಾಚಾರ್ಯನು ವೇದಭಾಷ್ಯದ ಉಪೋದ್ಘಾತಪ್ರಕರಣದಲ್ಲಿ "ಸ್ತ್ರೀಶೂದ್ರನಾಧೀಯೇಶಾಂ" ಎಂದು ಸ್ತ್ರೀಯರೂ ಶೂದ್ರರ ಸಮಾನರಾದದರಿಂದ ಇವರ್ವರೂ ಏನೊಂದು ವಿದ್ಯಾಧ್ಯಯನಮಾಡಬಾರದೆಂದು ಸ್ಪಷ್ಟವಾಗಿ ತಮ್ಮ ಮನೆಯ ಸ್ತ್ರೀಯರನ್ನುಕೂಡ ಲಕ್ಷಿಸದೇ ಸ್ತ್ರೀಯರು ವಿದ್ಯಾಬುದ್ಧಿಗಳನ್ನು ಕಲಿಯಬಾರದೆಂದು ನಿಷೇಧಿಸಿರುವನು. ಈ ಸಾಯಣಾದಿಗಳಿಗೆ ಇಷ್ಟು ಬುದ್ಧಿಯು ತೋಚಲಿಲ್ಲವಲ್ಲಾ ! ಯಾವ ಸ್ತ್ರೀಜಾತಿಯಿಂದಲೇ ನಾವು ಜನಿಸಿ ಅವರ ಗರ್ಭವಾಸದಲ್ಲಿ ಏನೊಂದು ಸಂಸ್ಕಾರಗಳಾಗುವವೋ ಅವೆಲ್ಲಾ ಆ ಗರ್ಭವಾಸಿಗಳಾದ ನಮಗೆ ಪೂರ್ಣಸಂಬಂಧಿಸುವವು. ಯಾಕೆಂದರೆ "ಆಹಾರಾಚಾರಚೇಷ್ಟಾಭಿರ್ಯಾದೃಶೀಭಿಃ ಸಮನ್ವಿತೌ | ಸ್ತ್ರೀಪುಂಸೌ ಸಮುಪೇಯಾತಾಂ ತಯೋಃ ಪುತ್ರೋಪಿತಾದೃಶಃ" || ಎಂಬುದಾಗಿ ಸುಶ್ರುತ ಮುನಿಗಳು ಮಕ್ಕಳ ಸುಗುಣ ದುರ್ಗುಣಾದಿಗಳಿಗೆ ತಂದೆ ತಾಯಿಗಳೇ ಬಾಧ್ಯರೆಂದು ಹೇಳುವನೀತಿಯನ್ನಾದರೂ ಲಕ್ಷ್ಯಕ್ಕೆ ತಂದು, ಯಾವ ಗರ್ಭದಲ್ಲಿ ವಾಸಿಸುವರೋ, ಹಾಗೂ ಯಾವ ಸ್ತ್ರೀಜಾತಿಯು ಮಾಡಿದ ಅನ್ನವನ್ನು ಉಣ್ಣುವರೋ, ಹಾಗೂ ಯಾವ ಸ್ತ್ರೀಜಾತಿಯು ಸಹವಾಸದಲ್ಲಿರುವರೋ ಅಂಥಾ ಸ್ತ್ರೀಜಾತಿಯನ್ನೇ ಸಂಸ್ಕಾರ, ವಿದ್ಯಾಬುದ್ಧಿಗಳಿಂದ ರಹಿತಮಾಡಿಟ್ಟುಕೊಂಡಲ್ಲಿ, ಹಾಗೂ ಅವರ ಸಂಸರ್ಗದಲ್ಲಿದ್ದು ಅವರಿಂದ ಮಾಡಿದ ಅನ್ನಪಾನಾದಿಗಳನ್ನು ಸ್ವೀಕರಿಸುವವರಾದವರಿಗೆ, ಹಾಗೂ ಅಂಥಾ ಸಂಸ್ಕಾರಹೀನವಾದ ಶೂದ್ರಸ್ತ್ರೀಜಾತಿಯಲ್ಲಿ ಜನಿಸಿದವರಾದವರಿಗೆ ಬ್ರಾಹ್ಮಣರೆಂದು ಹ್ಯಾಗೆ ಕರೆಯತಕ್ಕದ್ದು ? ಹಾಗೂ ಇವರು ಬ್ರಾಹ್ಮಣರು ಹ್ಯಾಗಾಗುವರು ? ಅಂದಮೇಲೆ ಇಂಥಾ ತಮ್ಮ ತಾಯಿ, ತಂಗಿ, ಹೆಂಡರು, ಹೆಣ್ಣುಮಕ್ಕಳು, ಇವರಲ್ಲಿಯೇ ದಯೆಯನ್ನು ತೋರಿಸದವರಾದವರು ಪರರಲ್ಲಿ ದಯೆಯನ್ನು ತೋರಿಸುವರಂತೆ ! ಹಾಗೂ ಪರರಿಗೆ ಉಪಕಾರಮಾಡುವರಂತೆ !!

ಇನ್ನು ಇದರಂತೆ "[illegible]" ಎಂಬ [illegible] "[illegible]" [illegible]